ಕನ್ನಡ ಸಖಿ

೨೦ ೧೯೩೭

೨೧ ೧೯೩೮

ಕಸ್ತೂರಿ ಸಂಪುಟ

೨೦ ೧-೧೨ ಜನವರಿ - ಡಿಸೆಂಬರ
೧೯೭೫

೨೧ ೧-೧೨ ಜನವರಿ - ಡಿಸೆಂಬರ
೧೯೭೬



ಸಂಚಿಕೆ : ೧

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಚಪ್ಪ

ಜನವರಿ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು —ಬಿ. ಎಂ. ಶ್ರೀ.

ಸಂಪುಟ : ೩೦ ಜನವರಿ ೧೯೬೭ ಸಂಚಿಕೆ : ೧

ಕನ್ನಡ ಕುಲಬಾಂಧವರ ಸ್ವಾಗತ ಗೀತೆ

ಜಿ. ಎಸ್. ಶಿವರುದ್ರಪ್ಪ

ಸ್ವಾಗತ, ಸುಸ್ವಾಗತ. ಒಳಗೆ ದಯಮಾಡಿಸಿ
ಇದೆಲ್ಲವೂ ನಿಮ್ಮದೇ ಮಹಾಸ್ವಾಮಿ.
ನಾವು ಕನ್ನಡಿಗರು, ಯಾರು ಬಂದರು ಹೀಗೇ
ಅಭ್ಯಾಸವಾಗಿದೆ ನಡುಬಗ್ಗಿಸುವ ಡವಾಲಿ.

ನಿಮ್ಮ ಹಾಸಿಗೆ ಟ್ರಂಕುಗಳನ್ನು ನಾವೇ ಹೊತ್ತು
ತರುತ್ತೇವೆ; ಅದರಲ್ಲೇನು ಮಹಾ.
ಬನ್ನಿ, ಹಾಗೆಯೆ ಏನೂ ತರದೆ ಬಂದಿರಾ
ಇದ್ದೇ ಇದೆ ನಮ್ಮ ಹಾಸಿಗೆ ಹೊದಿಕೆ.
ನಿಮ್ಮ ಕಾಲೊತ್ತಿ, ನಾವು ಮೂಲೆಯಲ್ಲೇ ನಿಂತು
ಉಪಚಾರ ಮಾಡುತ್ತೇವೆ—ನಾವು ಕನ್ನಡಿಗರು.


ನಮಗೆ ನಮ್ಮದೆಂಬುವುದೇನೂ ಬೇಡಿ;
ನಾವು ಅಲಕ್ ನಿರಂಜನರು.
ಅಯ್ಯೋ ಈ ಜೀವನವೇನು ಮಹಾ, ಈ
ಲೌಕಿಕ ಭೋಗಗಳೆಲ್ಲ ನಶ್ವರ; ಹೀಗೆಂದು
ಹಾಡಿ ಹರಸಿದ್ದಾರೆ ತಂಬೂರಿ ದಾಸರು.
ನಾವು ವಿರಕ್ತರು—ಈ ಕನ್ನಡಿಗರು.

ಹೇಳಿ, ಯಾವ ಭಾಷೆಯನ್ನಾದರೂ ನಾವು
ಕಲಿಯಲು ತಯಾರು. ನಮ್ಮದಿರುತ್ತದೆ—
ಶತಮಾನಗಳಿಂದ ಇದ್ದೇ ಇದೆ ಬಿಡಿ.
ನಮ್ಮ ಔದಾರ್ಯ ನೀವು ಕಾಣಿರಿ ಸ್ವಾಮಿ.
ನಿಮ್ಮಂತೆ ಭಾಷೆ ಭಾಷೆ ಎಂದು ಬಡಕೊಂಡು
ಸಾಯುವವರಲ್ಲ—ನಾವು ಕನ್ನಡಿಗರು.

ನಮ್ಮದರಲ್ಲಿ ನಿಮಗೆ ಯಾವುದು ಬೇಕು?
ತಟ್ಟೆಯಲ್ಲಿಟ್ಟು ನೆಟ್ಟಗೇ ಕೊಟ್ಟುಬಿಡುತ್ತೇವೆ.
ಯಾವ ಕಾಲಕ್ಕೂ ನಾವು ತಣ್ಣಗೆ ಬದುಕಿದವರಪ್ಪ.
ಯಾವ ಕೆಚ್ಚಲಾದರೆ ಏನು ಮೂತಿ ಇಕ್ಕುತ್ತೇವೆ.
ನಮ್ಮ ಪ್ರಾರ್ಥನೆ ಇಷ್ಟೆ:
ಹಿಂದೆ ಬಂದರೆ ಒದೆಯಬೇಡಿ
ಮುಂದೆ ಬಂದರೆ ಹಾಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು.

ಕಣ್ಮರೆಯಾದ ವಿದ್ವನ್ಮಣಿ

ಹೆಮ್ಮಿಗೆ ದೇಶಿಕಾಚಾರ್ಯರ



ಪಂಡಿತ ದೇಶಿಕಾಚಾರ್ಯರು ನಿಘಂಟು ಕಚೇರಿಗೆ ಸೇರಿ ಸುಮಾರು ಹನ್ನೊಂದು ವರ್ಷಗಳಾದುವು.

ಶ್ರೀಮಾನ್ ದೇಶಿಕಾಚಾರ್ಯರು ನಿಘಂಟು ಕಚೇರಿಗೆ ಸೇರುವುದಕ್ಕೆ ಮುಂಚೆ ಕೋಲಾರದ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿದ್ದರು. ಅಲ್ಲಿ ಅವರು ತಮ್ಮ ವೃತ್ತಿಯ ಜೊತೆಗೆ ರಾಮಾಯಣ, ಮಹಾಭಾರತ ಮುಂತಾದುವುಗಳ ಪ್ರವಚನವನ್ನು ನಡೆಸಿ ಅತ್ಯಂತ ಜನ ಪ್ರಿಯರಾಗಿದ್ದರು. ನಿಘಂಟು ಕಚೇರಿಗೆ ನನ್ನನ್ನು ಸಂಪಾದಕರಿಗೆ ಪದವೀಧರ ಸಹಾಯಕನನ್ನಾಗಿಯೂ, ಶ್ರೀಮಾನ್ ದೇಶಿಕಾಚಾರ್ಯರನ್ನು ಪಂಡಿತ ಸಹಾಯಕರನ್ನಾಗಿಯೂ ಪರಿಷತ್ತು ನೇಮಿಸಿಕೊಂಡಿತು. ಮೊದ ಮೊದಲ ದಿನಗಳಲ್ಲಿ ಸಂಪಾದಕರು, ಪದವೀಧರ ಸಹಾಯಕರು, ಪಂಡಿತ ಸಹಾಯಕರು ಮೂರೇ ಜನರಿದ್ದುದರಿಂದ ನಮ್ಮ ಸಂಪರ್ಕ ಅತಿ ನಿಕಟವಾಗಿದ್ದಿತು.

ಆಜಾನುಬಾಹುವಾಗಿದ್ದ ಶ್ರೀ ದೇಶಿಕಾಚಾರ್ಯರ ನಡೆ ನುಡಿಗಳು ಅತ್ಯಂತ ಸರಳ. ಕಚ್ಚೆಪಂಚೆ, ಷರಟು, ಶಲ್ಯ, ಟೋಪಿ ಇವಿಷ್ಟೆ ಅವರ ದೈನಂದಿನ ಉಡುಪು.

ಕನ್ನಡ ನಿಘಂಟಿನ ಸಂಪಾದಕರಿಗೆ ಪಂಡಿತ ಸಹಾಯಕರಾಗಿ ಕೆಲಸಕ್ಕೆ ಸೇರಿದ ದೇಶಿಕಾಚಾರ್ಯರು ತಮ್ಮ ವಿಶೇಷವಾದ ಪಾಂಡಿತ್ಯದಿಂದ ಸಹಾಯಕ ಸಂಪಾದಕರಾಗಿ, ಉಪಸಂಪಾದಕರಾಗಿ ಕನ್ನಡ ನಿಘಂಟಿಗೆ ಚಿರಸ್ಮರಣೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಅಪಾರವಾದ ಪಾಂಡಿತ್ಯ, ನಿಷ್ಕೃಷ್ಟ ನಿರ್ದುಷ್ಟ ಸ್ಪಷ್ಟ ಅಭಿಪ್ರಾಯಗಳು ಸರ್ವರಿಗೂ ಮೆಚ್ಚುಗೆಯಾಗಿದ್ದವು. ಕಚೇರಿಯಲ್ಲಿ ಅವರ ಕೆಲಸ ಕಾರ್ಯಗಳು ಅತ್ಯಂತ ತೃಪ್ತಿಕರವಾಗಿರುತ್ತಿದ್ದುವು. ನಿಘಂಟಿನ ಕೆಲಸದಲ್ಲಿ ಅವರು ಆತ್ಮೀಯತೆಯನ್ನುಳ್ಳವರಾಗಿದ್ದರು. ವಿದ್ಯಾರ್ಥಿದೆಸೆಯಲ್ಲಿಯೇ ಹಲವಾರು ಹಳಗನ್ನಡ ಗ್ರಂಥಗಳನ್ನು, ಸಂಸ್ಕೃತ ಕಾವ್ಯಗಳನ್ನು ಓದುವ ಸುಯೋಗ ಒದಗಿ ಬಂದಿದ್ದ ಶ್ರೀಮಾನ್ ದೇಶಿಕಾಚಾರ್ಯರಿಗೆ ಮುಂದಿನ ವ್ಯಾಸಂಗಕ್ಕೆ ಭದ್ರವಾದ ಬುನಾದಿಯನ್ನು ಹಾಕಿದಂತಾಯಿತು. ವಿದ್ಯಾರ್ಥಿದೆಸೆಯಲ್ಲೇ ಮೈಸೂರು ಪ್ರಾಚ್ಯವಿದ್ಯಾಸಂಶೋಧನ ಸಂಸ್ಥೆಯಲ್ಲಿದ್ದ ಬಹುಮಟ್ಟಿನ ಎಲ್ಲ ಗ್ರಂಥಗಳನ್ನೂ ತಿರುವಿಹಾಕಿದ್ದುದಾಗಿ ಅವರೇ ಹೇಳಿದ್ದರು. ಈ ಮಾತು ಉತ್ಪ್ರೇಕ್ಷೆಯಲ್ಲವೆಂಬುದು ನಾವು ಪ್ರತಿದಿನವೂ ಅವರೊಡನೆ ನಡೆಸುತ್ತಿದ್ದ ಚರ್ಚೆ, ವಿಚಾರ ವಿನಿಮಯಗಳಿಂದ ಸುಸ್ಪಷ್ಟವಾಗುತ್ತಿದ್ದಿತು. ಸಂಸ್ಕೃತದಲ್ಲಾದರೊ ಅವರಿಗಿದ್ದ ಪಾಂಡಿತ್ಯ ಅದ್ವಿತೀಯವಾದುದು. ಶ್ರೀಮಾನ್ ದೇಶಿಕಾಚಾರ್ಯರು ಕೇವಲ ಛಾಂದಸ ಪಂಡಿತರಾಗಿರಲಿಲ್ಲ. ಇವರಿಗೆ ನಿಷ್ಕೃಷ್ಟವಾದ ಆಂಗ್ಲ-ಸಾಹಿತ್ಯ ಪರಿಚಯವೂ ಇದ್ದಿತು. ಇವರು (upper secondary) ಸ್ಕೂಲಿನಲ್ಲಿ ಇಂಗ್ಲಿಷ್ ಉಪಾಧ್ಯಾಯರಾಗಿದ್ದುದಲ್ಲದೆ ಮುಖ್ಯೋಪಾಧ್ಯಯರೂ ಆಗಿದ್ದರು. ಇವರಿಗೆ ಬಹುಶಃ ಇಂಗ್ಲಿಷ್ ಭಾಷಾ ಪರಿಚಯವಿಲ್ಲವೆಂದೇ ಭಾವಿಸಿದ್ದ ನನಗೆ, ಅವರ ಆಂಗ್ಲ ಭಾಷಾ ಪಾಂಡಿತ್ಯ-ಎಷ್ಟು ಆಳವಾದುದೆಂಬುದರ ಅನುಭವ ಕ್ರಮೇಣ ಉಂಟಾಯಿತು. ಕನ್ನಡ, ಸಂಸ್ಕೃತ ಇಂಗ್ಲಿಷ್ ಈ ಮೂರೂ ಭಾಷೆಗಳಲ್ಲಿ ಅವರಿಗೆ ಅಪರಿಮಿತವಾದ ಪಾಂಡಿತ್ಯವಿತ್ತು.

ಶ್ರೀ ಮಾನ್ ದೇಶಿಕಾಚಾರ್ಯರು ವೇಷಭೂಷಣಗಳಲ್ಲಿ ವೈದಿಕರಂತೆ ಕಂಡು ಬರುತ್ತಿದ್ದರೂ ಅವರು ಸಂಪೂರ್ಣ ಲೌಕಿಕರು. ಲೌಕಿಕರೊಡನೆ ಅವರು ಬೆರೆತುಕೊಳ್ಳುತ್ತಿದ್ದ ರೀತಿ, ಅವರು ಆಧುನಿಕ ವ್ಯವಹಾರ ಪ್ರಜ್ಞೆಯನ್ನು ಪಡೆದಿದ್ದರೆಂಬುದಕ್ಕೆ ಸಾಕ್ಷಿಯಾಗಿದ್ದಿತು.

ಲೋಕದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ದೃಢವಾದ ನಂಬಿಕೆ ಶ್ರೀಮಾನ್ ದೇಶಿಕಾಚಾರ್ಯರದು. ಅವರು ಶಬ್ದಗಳಿಗೆ ಅರ್ಥೈಸುತ್ತಿದ್ದ ರೀತಿ, ಅವ

(೩೦ನೇ ಪುಟ ನೋಡಿ

ಸಾಹಿತಿಯ ದಿನಚರಿಯಿಂದ

ದಿನಾಂಕ ೨೧-೧೧-೧೯೬೬
ಬೆಂಗಳೂರು

ನಿನ್ನೆಯ ದಿನ ಅಂಚೆಯಲ್ಲಿ ನನಗೊಂದು ಮಹತ್ವದ ಪತ್ರ ಬಂದಿದೆ. ಕೆಲವು ತಿಂಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಸಮಾರಂಭ ನಡೆಯಿತಷ್ಟೆ. ಈ ಉತ್ಸವದ ಅಂಗವಾಗಿ "ಕನ್ನಡ ಲೇಖಕರ ಸಮ್ಮೇಳನವೊಂದನ್ನು ೧೯೬೬ನೇ ಡಿಸೆಂಬರ್ ಎರಡನೇ ವಾರದಲ್ಲಿ (೮, ೯, ೧೦ರಂದು) ಏರ್ಪಡಿಸಲು ನಿಶ್ಚಯಿಸಿದೆ. ಈ ಸಮ್ಮೇಳನ ಮೂರು ದಿನಗಳು (ಮಾನಸಗಂಗೋತ್ರಿ) ಯಲ್ಲಿ ನಡೆಯಲಿದ್ದು ಇದರಲ್ಲಿ ಕರ್ಣಾಟಕದ ಸುಮಾರು ಐವತ್ತು ಅರವತ್ತು ಜನ ಪ್ರಖ್ಯಾತ ಲೇಖಕರು ಭಾಗವಹಿಸುತ್ತಾರೆ. ಈ ಸಮ್ಮೇಳನದ ಅಂಗವಾಗಿ (೧) ಜನಪದ ಸಾಹಿತ್ಯ–ಅದರ ವಿವಿಧ ಮುಖಗಳು, (೨) ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಒಲವು ನಿಲವುಗಳು (೩) ಇಂದಿನ ಕನ್ನಡದ ಪ್ರಾದೇಶಿಕ ಸ್ವರೂಪಗಳು– ಈ ಬಗ್ಗೆ ವಿಚಾರ ಗೋಷ್ಠಿಗಳನ್ನೂ, ಒಂದು ಕವಿ ಸಮ್ಮೇಳನವನ್ನೂ ನಡೆಸಲು ತೀರ್ಮಾನಿಸಿದೆ."—ಈ ಸಮ್ಮೇಳನದಲ್ಲಿ ಭಾಗವಹಿಸಲು ನನಗೆ ಬಂದ ಕರೆಯೋಲೆ ಅದು.

ನಿನ್ನೆಯೆಲ್ಲಾ ವಿಚಾರಮಾಡಿದೆ. ಇಂಥ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೂ ವಿಚಾರಿಸುವುದೇ ಎನ್ನಬಹುದು. ಆದರೆ ಈ ಬಾರಿ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ನಡೆಯುವ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಲು ಸಮ್ಮತಿಸಿ ಕೆಲವು ದಿನಗಳ ಹಿಂದೆ ನಾನು ಅವರಿಗೆ ಪತ್ರ ಬರೆದಿದ್ದೆ. ಈ ಸಮ್ಮೇಳನವು ನಡೆಯಲಿದ್ದುದು ಅದೇ ದಿನಾಂಕಗಳಲ್ಲಿ. ಕಡೆಗೆ ಯೋಚನೆ ಮಾಡಿ, ಧರ್ಮಸ್ಥಳದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಅಲ್ಲಿಗೆ ಹೋದರೆ ಆಯಿತು, ಮೈಸೂರಿನ ಸಾಹಿತ್ಯ ಸಮ್ಮೇಳವನ್ನು ತಪ್ಪಿಸಿಕೊಳ್ಳಬಾರದೆಂದು ನಿರ್ಧರಿಸಿ ಈ ದಿನ ಸಮ್ಮೇಳನದ ನಿರ್ದೇಶಕರಾದ ಪ್ರೊ. ದೇ. ಜವರೇಗೌಡರಿಗೆ ಕಾಗದ ಬರೆದಿದ್ದೇನೆ. ಶ್ರೀ ಮಂಜುನಾಥನ ಕೃಪೆಯೊಂದಿದ್ದರೆ ಎರಡೂ ಸಮ್ಮೇಳನಗಳಲ್ಲೂ ಭಾಗವಹಿಸುವ ಭಾಗ್ಯ ನನ್ನದಾಗುತ್ತದೆ!

ದಿನಾಂಕ ೨-೧೨-೧೯೬೬
ಬೆಂಗಳೂರು

ಈ ದಿನ ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ವಿಭಾಗದಿಂದ ಆಹ್ವಾನಪತ್ರ ಬಂದಿದೆ.

ಸಮ್ಮೇಳನದ ಉದ್ಘಾಟನಾ ಸಮಾರಂಭ ದಿನಾಂಕ ೮ನೇ ಡಿಸೆಂಬರ್ ೧೯೬೬, ಬೆಳಗ್ಗೆ ೧೦ ಗಂಟೆಗೆ ಉಪಕುಲಪತಿಗಳಾದ ಡಾ. ಕೆ.ಎಲ್. ಶ್ರೀಮಾಲಿಯವರಿಂದ. ಅದೇ ದಿನ ಮಧ್ಯಾಹ್ನ ಡಾ. ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಮೊದಲನೆಯ ಗೋಷ್ಠಿಯ ಕಾರ್ಯಕ್ರಮ. ಡಿಸೆಂಬರ್ ೯, ೧೯೬೬ ಬೆಳಗ್ಗೆ ೯ ಗಂಟೆಗೆ ಪ್ರೊ. ಸ. ಸ. ಮಾಳವಾಡರ ಅಧ್ಯಕ್ಷತೆಯಲ್ಲಿ ಎರಡನೆಯ ಗೋಷ್ಠಿ; ಡಿಸೆಂಬರ್ ೧೦, ೧೯೬೬ ಬೆಳಗ್ಗೆ ೯ ಗಂಟೆಗೆ ಪ್ರೊ. ವಿ. ಕೃ. ಗೋಕಾಕ ಅವರ ಅಧ್ಯಕ್ಷತೆಯಲ್ಲಿ ಮೂರನೆಯ ಗೋಷ್ಠಿ, ಅದೇ ದಿನ ಸಂಜೆ ಡಾ. ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಕವಿ ಸಮ್ಮೇಳನ ಮತ್ತು ಮುಕ್ತಾಯ ಸಮಾರಂಭ.

ಈ ಸಮ್ಮೇಳನದಲ್ಲಿ ಭಾಗವಹಿಸಲು ಸಮ್ಮತಿಸಿದ ಕೆಲವು ಲೇಖಕರ ಹೆಸರುಗಳಲ್ಲಿ ನನ್ನ ಹೆಸರೂ ಹಾಕಿದ್ದಾರೆ. ಎಂದ ಮೇಲೆ ಸಮ್ಮೇಳನಕ್ಕೆ ಹೋಗಲೇಬೇಕಾದ ಅನಿವಾರ್ಯ ಪ್ರಸಂಗ ಬಂದಿದೆ . . . .

ದಿನಾಂಕ ೭-೧೨-೧೯೬೬
ಮಾನಸಗಂಗೋತ್ರಿ

ಈ ಮಾತನ್ನು ನಾನು ಮೈಸೂರಿನ ಮಾನಸಗಂಗೋತ್ರಿಯ ಅತಿಥಿ ಗೃಹದಿಂದ ಬರೆಯುತ್ತಿದ್ದೇನೆ. ಈಗ ಸಮಯ ರಾತ್ರಿ ೧೧ ಗಂಟೆ. ಸ್ವಲ್ಪ ದೂರದಲ್ಲೇ ಎಲ್. ಗುಂಡಪ್ಪನವರು ಮಂಚದ ಮೇಲೆ ಮಲಗಿದ್ದಾರೆ. ಅವರ ಬಳಿ ಮಿರ್ಜಿ ಅಣ್ಣಾರಾಯರು ನಿದ್ರಿಸುತ್ತಿರುವ ಸದ್ದು ಕೇಳುತ್ತಿದೆ. ಪ್ರಶಾಂತವಾದ ರಾತ್ರಿ. ಚಂದ್ರನ ಮಬ್ಬು ಬೆಳಕಿನಲ್ಲಿ ಸಮೀಪದ ಕುಕ್ಕನಹಳ್ಳಿಯ ಕೆರೆಯ ನೀರು ಕಾಣುತ್ತಿದೆ. ದೂರದಲ್ಲಿ ಸದ್ದಿಲ್ಲದೆ ಚಳಿಯಲ್ಲಿ ಮಲಗಿದ

ಚಾಮುಂಡಿ ಬೆಟ್ಟದ ದೀಪಗಳ ಸಾಲು ಕಂಗೊಳಿಸುತ್ತಿವೆ. ಎಲ್ಲೆಲ್ಲೂ ಮೌನ. ತುಂಬಾ ಚಳಿ . . . .

ನಾನು ಸಂಜೆ ಬೆಂಗಳೂರಿನಿಂದ ೬-೧೫ಕ್ಕೆ ಹೊರಡುವ Non Stop Bus ನಲ್ಲಿ ಮೈಸೂರಿಗೆ ಬಂದೆ. ಈ ಮೊದಲು ಡಾ. ಹಾ. ಮಾ. ನಾಯಕರು ನಮಗೆ ಮಾನಸ ಗಂಗೋತ್ರಿಯ ಅತಿಥಿ ಗೃಹದಲ್ಲಿ ವಸತಿ ಕಲ್ಪಿಸಿರುವುದಾಗಿ ಬರೆದಿದ್ದರು. ಈ ಧೈರ್ಯದ ಮೇಲೆ ರಾತ್ರಿ ತಡವಾಗಿದ್ದರೂ, ನೇರ ಮಾನಸಗಂಗೋತ್ರಿಗೇ ಧಾವಿಸಿದೆ. ಆದರೆ ಅಂದು ನಾನು ಬರುವ ಬಗ್ಗೆ ಅವರಿಗೆ ಪತ್ರ ಬರೆದಿರಲಿಲ್ಲ. ಹೀಗಾಗಿ ನನಗಾಗಿ ಯಾರೂ ಕಾದಿರಲಿಲ್ಲ. ನನ್ನ 'ಬ್ಯಾಗು' ಹೊತ್ತುಕೊಂಡು ನಿರ್ಜನ ರಾತ್ರಿಯಲ್ಲಿ ಅತಿಥಿ ಗೃಹವನ್ನು ಮುಟ್ಟಿದ್ದಾಯಿತು. ಅಲ್ಲಿನ ಸ್ವಯಂಸೇವಕರು, ಡಾ. ನಾಯಕರು, ಪ್ರೊ. ಜವರೇಗೌಡರು ರಾತ್ರಿ ೧೧ರ ತನಕ ಅಲ್ಲೇ ಇದ್ದರೆಂದೂ ಕೊಂಚ ಮೊದಲೇ ಬಂದಿದ್ದರೆ ಊಟದ ವ್ಯವಸ್ಥೆ ಮಾಡಬಹುದಿತ್ತೆಂದೂ ತಿಳಿಸಿದರು. ನನಗೆ ಹೊಟ್ಟೆಯ ಚಿಂತೆ ಇರಲಿಲ್ಲ. ಆ ರಾತ್ರಿ ನೆಮ್ಮದಿಯಿಂದ ಮಲಗಲು ಅನುಕೂಲ ಸ್ಥಳ ಬೇಕಿತ್ತು, ಅಷ್ಟೆ. ಆ ಸ್ವಯಂಸೇವಕರಿಗೆ-ಆತ ಕನ್ನಡ ಎಂ. ಎ. ಕಲಿಯುತ್ತಿರುವ ವಿದ್ಯಾರ್ಥಿ-ಕೃತಜ್ಞತೆ ಸಲ್ಲಿಸಿ, ಅವರು ತೋರಿಸಿದ ಹಾಸಿಗೆಯ ಮೇಲೆ ಈಗಷ್ಟೇ ಹೊರಳಿದ್ದೇನೆ . . .

ವಿಶಾಲವಾದ ಕೋಣೆಯಲ್ಲಿ ಹತ್ತು ಮಂಚಗಳನ್ನು ಸಾಲಾಗಿ ಹಾಕಿದ್ದಾರೆ. ಅವುಗಳ ಮೇಲೆ ಈಗಷ್ಟೇ ಪೇಟೆಯಿಂದ ತಂದ ಮಗ್ಗುಲ ಹಾಸಿಗೆ, ಬೆಡ್‌ಷೀಟ್‌ಗಳು. ಸದ್ಯಕ್ಕೆ ಎಲ್ಲ ಬೆಡ್ಡುಗಳೂ ಖಾಲಿ ಇವೆ. ಕೃಷ್ಣಮೂರ್ತಿ ಪುರಾಣಿಕ, ಬೆಂಗಳೂರಿನಿಂದ ಎಂ. ಕೆ. ಇಂದಿರಾ ಬಂದಿದ್ದಾರಂತೆ. ಅವರು ಅತಿಥಿ ಗೃಹದ ಇನ್ನೊಂದು ಕಟ್ಟಡದಲ್ಲಿ ತಂಗಿದ್ದಾರಂತೆ. ಬೆಳಗಾದ ಮೇಲೆ ಅವರನ್ನು ನೋಡಬೇಕು . . .

ದಿನಾಂಕ ೮-೧೨-೧೯೬೬
ಮಾನಸಗಂಗೋತ್ರಿ

ನನಗೆ ಐದು ಗಂಟೆಗೇ ಎಚ್ಚರವಾಯಿತು. ಎಲ್. ಗುಂಡಪ್ಪನವರೊಂದಿಗೆ ಇನ್ನೊಂದು ಅತಿಥಿ ಗೃಹಕ್ಕೆ ಹೋಗಿ ಬಿಸಿನೀರಿನ ಸ್ನಾನ ಮುಗಿಸಿದೆ. ಹಾಗೇ ಪುರಾಣಿಕರ ಭೆಟ್ಟಿಮಾಡಿ ಬಂದೆ.

ಏಳೂವರೆ ಗಂಟೆಗೆ ರುಚಿಕರವಾದ, ಬಿಸಿಬಿಸಿಯಾದ ಫಲಾಹಾರ ನಮ್ಮ ಹಾದಿಯನ್ನು ಕಾಯುತ್ತಿತ್ತು. ಪ್ರೊ. ಜವರೇಗೌಡರೂ, ಹಾ. ಮಾ. ನಾಯಕರೂ ನಮ್ಮನ್ನು ಫಲಾಹಾರಕ್ಕೆ ಆಹ್ವಾನಿಸಿದರು. ಪ್ರೊಫೆಸರರಿಗೆ ಕೈಗೆ ಹಾಕಿದ್ದ ಪ್ಲಾಸ್ಟರ್ ಬಿಚ್ಚಿದ್ದಾರೆ. ಆದರೂ ಕೈಯನ್ನು ಇನ್ನೂ ಅತ್ತ ಇತ್ತ ಆಡಿಸಲು ಸಾಧ್ಯವಿಲ್ಲ. ದೇವರು ದೊಡ್ಡವನು. ಬರಹಗಾರರಿಗೆ ಬಲಗೈಯೇ ಆಧಾರ. ಅದು ಮುರಿದರೆ ಬದುಕಿನ ಅವಲಂಬನವೇ ಮುರಿದಂತೆ. ಜವರೇಗೌಡರಿಗೆ ಮೂಳೆಗಳು ಮುರಿದಿದ್ದ ಕೈ ಗುಣವಾಗಿದ್ದರೂ, ಇನ್ನೂ ಕೆಲವು ದಿನಗಳ ವಿಶ್ರಾಂತಿ ಅಗತ್ಯ, ಅಷ್ಟೇ. ಅವರ ಸಾಂಕ್ರಾಮಿಕವಾದ ಮುಗುಳ್ನಗೆ ಪ್ರೊ. ತೀ. ನಂ. ಶ್ರೀ ಅವರ ನೆನಪನ್ನು ತಂದಿತು. ಅವರ ಆತ್ಮೀಯತೆ ನನ್ನನ್ನು ಮೂಕನನ್ನಾಗಿ ಮಾಡಿತು. ನಾನು ರಾತ್ರಿ ಊಟವಿಲ್ಲದೆ ಮಲಗಬೇಕಾಗಿ ಬಂದ ಪರಿಸ್ಥಿತಿಗಾಗಿ ಅವರು ವಿಷಾದಿಸಿದರು. ಅದರಲ್ಲಿ ಅವರದು ಯಾವ ತಪ್ಪಿಲ್ಲವೆಂದು ಹೇಳಿ ಸಮಾಧಾನಪಡಿಸಿದೆ. ಪ್ರೊಫೆಸರರದು ಅಂತಹ ಸೌಜನ್ಯ!

ಪ್ರಾಥಃಕಾಲದ ಫಲಾಹಾರ ಮುಗಿಸಿ, ಡಾ. ಕೆ. ಎಲ್. ಶ್ರೀಮಾಲಿಯವರು ಉದ್ಘಾಟಿಸಲಿದ್ದ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಕಾರ್ಯಕ್ರಮದಲ್ಲಿ ಪಾಲುಗೊಳ್ಳಲು ಹೊರಟೆ.

ಮಾನಸಗಂಗೋತ್ರಿ ರಾಷ್ಟ್ರಕವಿ ಕುವೆಂಪು ಅವರ ಒಂದು ನನಸಾದ ದಿವ್ಯಕನಸು. ಅದನ್ನು ಆರಂಭಿಸಿದ ಸಮಯದಲ್ಲಿ ಅವರು ತಮ್ಮ ಕನಸನ್ನು ಹೀಗೆ ತೋಡಿಕೊಂಡಿದ್ದರು :

"ಇಲ್ಲೆಲ್ಲಾ ಕಟ್ಟಡಗಳ ಸಾಲು ಹರಿದಿರುತ್ತದೆ; ಅವುಗಳ ಮಧ್ಯೆ ರಸ್ತೆಗಳು ಹಾದುಹೋಗಿರುತ್ತವೆ; ಅಲ್ಲಿ ಒಂದೆಡೆಯಲ್ಲಿ ಸ್ನಾನಸರೋವರ; ಅಲ್ಲೆಲ್ಲಾ ಸ್ಮಾರಕ ಪೀಠಗಳು; ಎಲ್ಲೆಲ್ಲೂ ಎದ್ದು ಬೆಳೆದು ನಿಂತಿರುವ ಬೃಹದ್ ವೃಕ್ಷಗಳಿಗೆ ಒಂದೊಂದಕ್ಕೂ ಒಬ್ಬೊಬ್ಬ ಮಹರ್ಷಿಯ, ಮಹಾಕವಿಯ, ಮಹಾವಿಜ್ಞಾನಿಯ ಹೆಸರು ಬಂದಿರುತ್ತದೆ—ಇದು ವ್ಯಾಸಪೀಠ, ಇದು ವಾಲ್ಮೀಕಿ ಪೀಠ, ಇದು ಕಾಳಿದಾಸ ಪೀಠ, ಅಲ್ಲಿ ಷೇಕ್ಸ್‌ಪಿಯರ್ ಪೀಠ, ಇಲ್ಲಿ ಪಂಪ ನಾರಣಪ್ಪರ ಹೆಸರಿನ ಪೀಠಗಳು, ಹೀಗೆ ಇಡೀ ಕ್ಷೇತ್ರವೆ ಮಹಾವ್ಯಕ್ತಿಗಳ ಹೆಸರಿನಿಂದ ತುಂಬಿ ಭಾವಮಯ ಮನೋಮಯ ಶಕ್ತಿಗಳ ನೆಲೆಮನೆಯಾಗಿರುತ್ತದೆ.

"ಇನ್ನು ಐವತ್ತು ವರ್ಷಗಳಲ್ಲಿ ಮೈಸೂರಿಗೆ ಪ್ರೇಕ್ಷಕರಾಗಿ, ಯಾತ್ರಿಕರಾಗಿ ಬರುವವರು ಶ್ರವಣಬೆಳಗೊಳ, ಶಿವನಸಮುದ್ರ, ಬೇಲೂರು, ಹಳೆಯಬೀಡು, ಸೋಮನಾಥಪುರ, ಬೃಂದಾವನಗಳಿಗೆ ಮಾತ್ರವೆ ಅಲ್ಲದೆ ಮಾನಸ

ಗಂಗೋತ್ರಿಯ ಕ್ಷೇತ್ರಕ್ಕೂ ಬರುತ್ತಾರೆ; ಬಂದು ದರ್ಶಿಸಿ ಹೋಗುತ್ತಾರೆ.

"... ಈ ಮಾನಸಗಂಗೋತ್ರಿ ಎಲ್ಲ ಭಾಷಾಸ್ರೋತಗಳನ್ನೂ ತನ್ನೆಡೆಗೆ ಬರಮಾಡಿಕೊಳ್ಳಲಿ. ಎಲ್ಲ ಮತಧರ್ಮಗಳ ಪ್ರಾಚ್ಯ ಪಾಶ್ಚಾತ್ಯ ಮಹಾನದಿಗಳ ನೀರಿನಿಂದಲೂ ಅದು ಸಮೃದ್ಧವಾಗಲಿ. ಆದರೆ ಶೇಖರವಾದ ಆ ಜಲರಾಶಿಯನ್ನು ನಮ್ಮ ನಾಡಿನ ಜನತೆಗೆ ಹರಿಸಲು **ನಮ್ಮ ಪ್ರದೇಶ ಭಾಷಾ ಪಾತ್ರ**ಗಳನ್ನೇ ಕಾಲುವೆಯಾಗಿ ತೆಗೆದುಕೊಳ್ಳಲಿ ... ನಮ್ಮ ನಾಡಿನಲ್ಲಿ ಆ ಜಲರಾಶಿಯನ್ನು ಹರಿಸಲು ನಮ್ಮ ನುಡಿ ನಾಲೆಗಳೇ ಬೇಕು. ಹಾಗಾದರೆ, ಯಾವುದು ಕೆಲವರಲ್ಲಿಯೆ, ಎತ್ತರದಲ್ಲಿಯೇ ಉಳಿಯಬಹುದಿತ್ತೊ ಮಡುಗೊಂಡಿರುತ್ತಿದ್ದಿತೊ ಅದು ಸರ್ವವ್ಯಾಪಿಯಾಗುತ್ತದೆ" ಎಂದು ಅಪ್ಪಣೆಕೊಡಿಸಿದ್ದರು.

ದ್ರಷ್ಟಾರರಾದ ಅವರ ಕವಿವಾಣಿ ಇಂದು ಫಲಿಸಿತೆಂಬಂತೆ ಮಾನಸಗಂಗೋತ್ರಿಯ ಜ್ಞಾನವಾಹಿನಿ ಜನತೆಯನ್ನು ಮುಟ್ಟಲು ಕನ್ನಡ ಅಧ್ಯಯನ ಸಂಸ್ಥೆಯ ಮಹಾಪಾತ್ರವನ್ನು ಆರಿಸಿಕೊಂಡಿದೆ. ರಸಋಷಿ ಕುವೆಂಪುರವರು ಕಂಡ ಕಾಣ್ಕೆಯನ್ನು ನನಸುಮಾಡಲು ಕನ್ನಡ ಅಧ್ಯಯನದ ಸಂಸ್ಥೆ ಇಂದು ಕಂಕಣತೊಟ್ಟಿದೆ.

ಸದ್ಯದ ಯೋಜನೆಯಂತೆ ಪ್ರಸಾರಾಂಗ, ಅಚ್ಚುಕೂಟ, ಇಂಗ್ಲಿಷ್ ಕನ್ನಡ ಶಬ್ದಕೋಶ, ಪ್ರಾಚ್ಯ ಸಂಶೋಧನ ಸಂಸ್ಥೆ, ಸ್ನಾತಕೋತ್ತರ ಕನ್ನಡ ವಿಭಾಗಗಳು-ಒಂದೆಡೆ ಸೇರಿ ಕೆಲಸಮಾಡಲು ಅನುಕೂಲವಾಗುವಂತೆ ಜಯಲಕ್ಷ್ಮೀ ವಿಲಾಸ ಭವನವನ್ನು ಈ ಅಧ್ಯಯನ ಸಂಸ್ಥೆಗೆ ಬಿಟ್ಟುಕೊಡಲಾಗಿದೆ. ಮುಂದೆ ಸುಮಾರು ಹತ್ತುಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗಲಿರುವ ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಕಟ್ಟಡವು ಸಂಪೂರ್ಣಗೊಂಡ ಮೇಲೆ ಕುವೆಂಪು ಹೆಸರಿನ ಈ ಸಂಶೋಧನ ಸಂಸ್ಥೆಯನ್ನು ಅಲ್ಲಿಗೆ ವರ್ಗಾಯಿಸುವ ವಿಚಾರವಿದೆ.

ಅದರ ಆರಂಭೋತ್ಸವವನ್ನು ವಿಧ್ಯುಕ್ತವಾಗಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಕನ್ನಡ ಪ್ರಣತಿಯನ್ನು ಬೆಳಗಿಸುವುದರ ಮೂಲಕ ಸಾಂಕೇತಿಕವಾಗಿ ಉದ್ಘಾಟನೆ ಮಾಡಿದರು.

ಮುಂದೆ ವಿಶ್ವವಿದ್ಯಾನಿಲಯದ ಕಲಾಭವನ—ಹ್ಯೂಮಾನಿಟೀಸ್ ಬ್ಲಾಕಿನ—ಸಭಾಂಗಣದಲ್ಲಿ ಕನ್ನಡ ಬರಹಗಾರರ ಸಮ್ಮೇಳನವನ್ನು ಉಪಕುಲಪತಿಗಳು ಉದ್ಘಾಟಿಸಿದರು.

ಸುಂದರವಾದ ವೇದಿಕೆಯ ಮೇಲೆ 'ಸಿರಿಗನ್ನಡಂ ಗೆಲ್ಗೆ' ಎಂಬ ಭಿತ್ತಿಬರಹದ ಹಿನ್ನೆಲೆಯಲ್ಲಿ ಕನ್ನಡಕ್ಕಾಗಿ ದುಡಿದ ಕನ್ನಡ ಕುಲರಸಿಕರಾದ ಪಂಜೆಯವರು, ಬಸಪ್ಪಶಾಸ್ತ್ರಿಗಳು, ಲೂಯಿರೈಸರು, ಬಿ.ಎಂ. ಶ್ರೀ ಅವರು, ಕಿಟ್ಟೆಲ್, ವೆಂಕಣ್ಣಯ್ಯ ಮತ್ತು ತೀ. ನಂ. ಶ್ರೀ ಅವರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಇಂದು ನಮ್ಮೆಲ್ಲರ ಜತೆಯಲ್ಲಿ ವೇದಿಕೆಯ ಮೇಲೆ ಮಂಡಿಸಬೇಕಾಗಿದ್ದ ತೀ.ನಂ.ಶ್ರೀ. ಭಾವಚಿತ್ರವಾಗಿ ದಿವಂಗತರ ಸಾಲಿಗೆ ಸೇರಿಹೋದುದು ಒಂದು ವಿಧಿಯ ವಿಡಂಬನೆ. ಅವರ ಹೆಸರು ಎತ್ತಿದಾಗ ದೇ.ಜ.ಗೌ. ಅವರ ಕಣ್ಣು ಹನಿಗೂಡಿತ್ತು. ವೇದಿಕೆಯ ಅಕ್ಕ ಪಕ್ಕದಲ್ಲಿ ನಟರಾಜ ಸರಸ್ವತಿಯರ ಶಿಲ್ಪಕೃತಿಗಳು ಮೆರೆದಿದ್ದುವು.

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು"
"ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ"
"ಋತವೊಂದೆ ಗೆಲ್ವುದು, ಅನೃತಮಲ್ತು"
"ಮಾತೆಂಬುದು ಜ್ಯೋತಿರ್ಲಿಂಗ"
"ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ಕನ್ನಡವಾಗಿರು"

ಮೊದಲಾದ ಉದ್ಘೋಷ ಪ್ರೇಕ್ಷಕರನ್ನು ಸ್ವಾಗತಿಸಲು ನಿಂತಿದ್ದವು.

ಕನ್ನಡಕ್ಕಾಗಿ ದುಡಿದ ಸರ್ವಶ್ರೀ ಡಿ. ಎಲ್. ಎನ್. ಕೋ. ಶಿ. ಕಾರಂತ, ಎಸ್. ವಿ. ರಂಗಣ್ಣ, ತಿ.ತಾ.ಶರ್ಮ, ಗೊರೂರು, ಮರಿಯಪ್ಪ ಭಟ್ಟ, ಭೀಮಸೇನರಾವ್, ಎಂ. ವಿ. ಸೀ, ಪು.ತಿ.ನ., ಭಾರತೀಸುತ, ಇನಾಮ್ದಾರ್, ಮಿರ್ಜಿ ಅಣ್ಣಾರಾಯ, ಸಿಂಪಿ ಲಿಂಗಣ್ಣ ಮೊದಲಾದ ಮಹನೀಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರೊ. ಜವರೇಗೌಡರು ಸ್ವಾಗತ ಭಾಷಣ ಮಾಡುತ್ತಾ 'ಬೆಳಗ್ಗೆ ಆರಂಭವಾದ ಕನ್ನಡ ಅಧ್ಯಯನ ಸಂಸ್ಥೆ ಸಮಗ್ರ ಕನ್ನಡ ನಾಡಿನ ಭಾಷೆ ಮತ್ತು ಇತಿಹಾಸಗಳಿಗೆ ನಾಂದಿಯಾಗಲಿದೆ' ಎಂದು ಹೇಳಿದರು. ಅವರು ಕನ್ನಡಕ್ಕಾಗಿ ದುಡಿದ ಮಹನೀಯರೆಲ್ಲರ ಸ್ಮರಣೆ ಮಾಡಿ ಐವತ್ತು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದಾಗ ಆಳಿದ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರ ಹೊಂಗನಸು ಎಷ್ಟರಮಟ್ಟಿಗೆ ಇಂದು ಫಲಿಸಿದೆ ಎಂಬುದನ್ನು ತಿಳಿಸಿದರು.

ಇಂದು ಮಾನಸಗಂಗೋತ್ರಿ ಇಷ್ಟು ಅಲ್ಪಕಾಲದಲ್ಲಿ ಪ್ರಗತಿ ಪಥದಲ್ಲಿ ಸಾಗಲು ಉಪಕುಲಪತಿಗಳಾದ ಶ್ರೀ ಮಾಲಿ

ಅವರ ದುಡಿಮೆ, ಕಾರ್ಯದಕ್ಷತೆ, ದೂರಾಲೋಚನೆ, ಕನ್ನಡ ಭಾಷಾ ಪ್ರೇಮುಗಳೇ ಕಾರಣವೆಂದು ಸ್ಮರಿಸಿದರು.

"ಇಂದು ಶ್ರೀ ಮಾಲಿಯವರು ಹಚ್ಚಿದ ನಂದಾದೀವಿಗೆಯ ಎಣ್ಣೆ ಆರದಂತೆ, ಬಿರುಗಾಳಿ ಎರಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ನುಡಿದರು.

ಅನಂತರ ಆರಂಭ ಭಾಷಣ ಮಾಡಿದ ಉಪಕುಲಪತಿ ಶ್ರೀ ಮಾಲಿ ಅವರು ವಿಶ್ವವಿದ್ಯಾನಿಲಯದ ಆಶ್ರಯದಲ್ಲೂ ಲೇಖಕರ ಸಮ್ಮೇಳನ ನಡೆಯುತ್ತಿರುವುದು ಔಚಿತ್ಯಪೂರ್ಣವಾಗಿದೆ ಎಂದರು. ಏಕೆಂದರೆ ವಿಶ್ವವಿದ್ಯಾನಿಲಯ ಮತ್ತು ಲೇಖಕರು ಒಂದೇ ಆದರ್ಶದಿಂದ ಪ್ರೇರಿತರಾಗಿ ಕೆಲಸ ಮಾಡುತ್ತಾರೆ. ಇಬ್ಬರೂ ನಿರಂಕುಶಮತಿಗಳು, ವಿಶ್ವವಿದ್ಯಾನಿಲಯವು ತನ್ನಗುರಿಗಳಿಗಾಗಿ ಸತ್ಯ ಮತ್ತು ಜ್ಞಾನವನ್ನು ಇಟ್ಟುಕೊಂಡು, ಅದರ ಸಾಧನೆಗೆ ಅಡ್ಡಿಬರುವ ಯಾವುದೇ ಶಕ್ತಿಯನ್ನು ಪುರಸ್ಕರಿಸುವುದಿಲ್ಲ. ತನ್ನ ಉನ್ನತ ಆದರ್ಶಗಳನ್ನು, ತನ್ನ ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಅದು ಯಾರೊಬ್ಬರ ಹಂಗಿಗೂ ಒಳಗಾಗಬಾರದು. ಅಂತೆಯೇ ಲೇಖಕನೂ ದಾರ್ಶನಿಕನಿದ್ದಾನೆ. ಅವನ ದರ್ಶನ ಹಾಗೂ ಕನಸುಗಳು ಅವನಿಂದ ನಿರ್ಮಿತವಾಗುವ ಕಾವ್ಯ, ನಾಟಕ ಕಾದಂಬರಿಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಅವನ ಕಲ್ಪನೆಯನ್ನು ಯಾವಸತ್ತೆಯೂ ನಿಯಂತ್ರಿಸಲಾರದು, ಅವನು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸ್ವಾತಂತ್ರ್ಯ ಅತ್ಯಗತ್ಯ. ಅಂತೆಯೇ ಇತ್ತೀಚೆಗೆ ನೊಬೆಲ್ ಬಹುಮಾನ ಪಡೆದ ಒಬ್ಬ ಫ್ರೆಂಚ್ ಲೇಖಕನು ತನ್ನ ವಿಚಾರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದೆಂದು ಆ ಬಹುಮಾನವನ್ನು ತಿರಸ್ಕರಿಸಿದುದು ಮನನೀಯವಾಗಿದೆ. ಆಗ ಮಾತ್ರ ಲೇಖಕರು ಸಮಾಜಕ್ಕೆ ತಮ್ಮ ನಿಜವಾದ ಪಾತ್ರವನ್ನು ನಿರ್ವಹಿಸಲು ಸಮರ್ಥರಾದಾರು.

ಅದೇ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳು ಸರ್ವತಂತ್ರ ಸ್ವತಂತ್ರವಾಗಿ ಕೆಲಸ ಮಾಡಿದಾಗ ಮಾತ್ರವೇ ಅದು ತನ್ನ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸಲು ಸಾಧ್ಯ. ತನ್ನ ಕೆಲಸ ಕಾರ್ಯಗಳಿಗೆ ಬೇಕಾಗುವ ಹಣಕಾಸಿನ ಸಲುವಾಗಿ ಅದು ಸರಕಾರದ ಮುಖ ನೋಡಬೇಕೆಂಬುದೇನೋ ದಿಟ. ಆದರೆ ಅದು ತನ್ನ ಕಾರ್ಯಗಳಲ್ಲಿ ಕರ್ತವ್ಯದ ನಿರ್ವಹಣೆಯಲ್ಲಿ ಯಾರಿಗೂ ಬದ್ಧವಾಗಿರದಿದ್ದರೆ ಮಾತ್ರ ಅದರಿಂದ ಶ್ರೇಷ್ಠ ಕಾರ್ಯ ಸಾಧನೆಯಾದೀತು.

ಈ ವಿಶ್ವವಿದ್ಯಾನಿಲಯಕ್ಕೂ ಕನ್ನಡ ಬರಹಗಾರರಿಗೂ ಅವಿಭಾಜ್ಯವಾದ ನಂಟು ಇದೆ. ಲೇಖಕರು ವಿಶ್ವವಿದ್ಯಾನಿಲಯದ ಜ್ಞಾನ ಪ್ರಸಾರ ಕಾರ್ಯದಲ್ಲೂ ನೆರವಾದರೆ, ಅದು ಹೆಚ್ಚಿನ ಪ್ರಗತಿಯನ್ನು ಸಾಧಿಸಬಲ್ಲದು.

ದೇಶ ಭಾಷೆಗಳಿಗೆ ಪ್ರೋತ್ಸಾಹ ದೊರಕದಿದ್ದರೆ ಆ ಪ್ರದೇಶದ ದುರಂತವೇ ಸರಿ. ಯಾವುದೇ ಜನತೆಯಾಗಲಿ ತನ್ನ ದೇಶ ಭಾಷೆಯಲ್ಲಿ ತನ್ನ ವಿಚಾರಗಳನ್ನೆಲ್ಲಾ ಚೆನ್ನಾಗಿ ಅಭಿವ್ಯಕ್ತಗೊಳಿಸಬಲ್ಲದೇ ಹೊರತು ಅನ್ಯ ಭಾಷೆಗಳ ಮೂಲಕವಲ್ಲ. ಇದರಿಂದ ರಾಷ್ಟ್ರದ ಸಾಂಸ್ಕೃತಿಕ ? ಬೆಳವಣಿಗೆಗೆ ಸಾಧಕವಾಗುವುದಿಲ್ಲ.

ವಿಶ್ವವಿದ್ಯಾನಿಲಯವು ಉತ್ಸಾಹಶಾಲಿ ಕ್ರಿಯಾಶೀಲ ಕೆಲಸಗಾರರ ತಂಡದ ನೆರವು ಪಡೆದು ನಾಡು, ನುಡಿಗಳಿಗೆ ಅದ್ಭುತ ರೀತಿಯಲ್ಲಿ ಸೇವೆ ಸಲ್ಲಿಸಬಹುದು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ನೆರವಾಗುವ ಕೃತಿಗಳ ನಿರ್ಮಾಣ, ಹಸ್ತಪ್ರತಿಗಳ ಸಂರಕ್ಷಣೆ, ಸಂಸ್ಕರಣ, ವಿದೇಶಿ ಭಾಷೆಗಳಿಂದ ಶ್ರೇಷ್ಠ ಕೃತಿಗಳ ಭಾಷಾಂತರ ಮೊದಲಾದ ಕಾರ್ಯಗಳಲ್ಲಿ ಪ್ರಗತಿಯನ್ನು ಸಾಧಿಸಬಲ್ಲದು. ಹತ್ತು ವರ್ಷಗಳ ಅವಧಿಯಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲು ಬೇಕಾಗುವ ಎಲ್ಲ ಗ್ರಂಥಗಳನ್ನೂ ನಿರ್ಮಿಸಬಹುದು. ಈ ದೆಸೆಯಲ್ಲಿ ಇಂದು ಆರಂಭವಾದ ಕನ್ನಡ ಅಧ್ಯಯನ ಸಂಸ್ಥೆ ಮಹತ್ತರ ಪಾತ್ರ ವಹಿಸಬಹುದಾಗಿದೆ.

ಅಲ್ಲದೆ ವಿಶ್ವವಿದ್ಯಾನಿಲಯವು ಪ್ರತಿಭಾವಂತ ತರುಣರನ್ನು ಬೆಳಕಿಗೆ ತರಲು ನೆರವಾಗಬಹುದು. ಬದುಕಿನ ಮೌಲ್ಯಗಳನ್ನು ಉತ್ತಮ ಪಡಿಸುವುದರಲ್ಲಿ ಲೇಖಕರೂ, ವಿಶ್ವವಿದ್ಯಾನಿಲಯಗಳೂ ಕೂಡಿ ಕೆಲಸ ಮಾಡಬಹುದಾಗಿದೆ" ಎಂದರು.

ಶ್ರೀ ಮಾಲಿಯವರ ಕನ್ನಡ ಭಾಷಾ ಅಭಿಮಾನವನ್ನು ಕಂಡು ನನಗೆ ಆಶ್ಚರ್ಯವಾಯಿತು.

ಈ ಬಗ್ಗೆ ಆಮೇಲೆ ದೇ. ಜ. ಗೌ. ಅವರೊಡನೆ ಪ್ರಾಸಂಗಿಕವಾಗಿ ಮಾತು ತೆಗೆದಾಗ ಅವರು ಹೇಳಿದರು :

"ಶ್ರೀ ಮಾಲಿಯವರ ಕನ್ನಡದ ಅಭಿಮಾನ ಉಳಿದ ಕನ್ನಡಿಗರಲ್ಲಿ ಇದ್ದರೆ ಸಾಕಾಗಿದೆ. ಅವರು ಕನ್ನಡದ ವಿಷಯದಲ್ಲಿ ಕನ್ನಡಿಗರಿಗಿಂತ ಹೆಚ್ಚು ಕನ್ನಡಿಗರಾಗಿದ್ದಾರೆ"

"ಮಾನಸ ಗಂಗೋತ್ರಿಯ ನೆಲದ ಗುಣವೋ ಏನೋ!" ಎಂದೆ ನಾನು.

"ಹೌದು. ಅವರು ಲೋಕಾಭಿರಾಮವಾಗಿ ಮೊನ್ನೆ ಕುವೆಂಪುರವರ ಜತೆಯಲ್ಲಿ ಮಾತನಾಡುತ್ತಾ ಪ್ರಾದೇಶಿಕ ಭಾಷೆಯ ಬೆಳವಣಿಗೆಗೆ ತಮ್ಮಿಂದ ಸಾಧ್ಯವಾದ ಎಲ್ಲ ಸಹಕಾರವನ್ನು ನೀಡುವುದಾಗಿ ಹೇಳಿದರು. ಕನ್ನಡ ಅಧ್ಯಯ

ನದ ಕೇಂದ್ರ ಬಿಂಬವೇ ಅವರು. ಅವರ ಸತತೋತ್ಸಾಹ ನಮ್ಮನ್ನು ನಾಚಿಸುತ್ತಿದೆ. ಅಲೋಕದಿಂದ ಮಾನಸ ಗಂಗೋತ್ರಿಯವರೆಗೆ ಎಲ್ಲ ಪ್ರದೇಶವನ್ನೂ ಸ್ವಾಧೀನಕ್ಕೆ ತೆಗೆದುಕೊಂಡು ಈ ಪ್ರದೇಶದಲ್ಲಿ ಸುವ್ಯವಸ್ಥಿತವಾದ, ಸುಸಜ್ಜಿತವಾದ ಆದರ್ಶ ವಿಶ್ವವಿದ್ಯಾನಿಲಯವನ್ನು ನಿರ್ಮಿಸುವ ಹೊಂಗನಸು ಅವರದು. ತಾವು ದೆಹಲಿಗೆ ಹೋಗಿದ್ದಾಗ ಕನ್ನಡ ಅಧ್ಯಯನ ಸಂಸ್ಥೆಯ ಸಲುವಾಗಿ ಐದು ಲಕ್ಷ ರೂಪಾಯಿಗಳ ಗ್ರಾಂಟನ್ನು 'ರಿಲೀಜ್' ಮಾಡಿಸಿಕೊಂಡು ಬಂದಿದ್ದಾರೆ. ಇಷ್ಟರಲ್ಲೇ ಈ ಸಂಸ್ಥೆಯ ಶಂಖುಸ್ಥಾಪನೆ ಮಾನ್ಯ ಮುಖ್ಯಮಂತ್ರಿಗಳಿಂದ ಆಗಲಿದೆ" ಎಂದರು.

"ಇಂತಹ ಆಡಳಿತ ನಿಪುಣರನ್ನು ಕನ್ನಡದ ಅಭಿಮಾನಿಯನ್ನು ಪಡೆದ ನೀವೇ ಧನ್ಯರು"

—ನಾನು ಉದ್ಗಾರ ತೆಗೆದೆ.

ಆ ದಿನದ ಸಮಾರಂಭದಲ್ಲಿ ಹಾ. ಮಾ. ನಾಯಕರು ಹೇಳಿದ್ದ ಒಂದು ಮಾತು ನೆನಪಿಗೆ ಬಂದಿತು:

"ವಿಶ್ವವಿದ್ಯಾನಿಲಯದ ಹೃದಯ ಕನ್ನಡ"

ಈ ಮಾತನ್ನು ಉಪಕುಲಪತಿಗಳು ಚೆನ್ನಾಗಿ ಅರಿತಂತೆ ಕಾಣುತ್ತದೆ.

ಶ್ರೀ ಮಾಲಿಯವರು ಬಂದಿದ್ದ ಎಲ್ಲ ಲೇಖಕರಿಗೆ ಸೊಗಸಾದ, ಪುಷ್ಕಳವಾದ ಭೋಜನ ಕೂಟವನ್ನು ಏರ್ಪಡಿಸಿದ್ದರು.

ಈ ಊಟವನ್ನು ಅರಗಿಸುವಂತಹ ಭಾಷಣ ಮಾಲೆ ಸಭಾಂಗಣದಲ್ಲಿ ಏರ್ಪಟ್ಟಿತ್ತು.

ಅಂದಿನ ಸಮಾರಂಭದ ಅಧ್ಯಕ್ಷರಾದ ಕಡಲ ತೀರದ ಭಾರ್ಗವರೆನಿಸಿದ ಕೋ. ಶಿ. ಕಾರಂತರ ಪರಿಚಯ ಮಾಡಿಕೊಡುತ್ತಾ 'ರಸಿಕ' ಪರಮೇಶ್ವರ ಭಟ್ಟರು 'ಕಾರಂತರು ಒಬ್ಬ ವ್ಯಕ್ತಿಯಲ್ಲ-ಒಂದು ಸಂಸ್ಥೆ' ಎಂದರು. 'ಸಾಹಿತ್ಯ, ಸಂಗೀತ, ಚಿತ್ರ, ನರ್ತನ, ವಿಜ್ಞಾನ, ಇವು ಕಾರಂತರ ಪಂಚಮುಖವಾಗಿದ್ದರೂ, ಅವರು ತಮ್ಮ ಹುಚ್ಚು ಮನಸ್ಸಿನ ಹತ್ತು ಮುಖಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿ ಕೊಟ್ಟಿದ್ದಾರೆ"—ಎಂದರು.

ಅನಂತರ ವೇದಿಕೆಯ ಮೇಲೆ ಕುಳಿತ ವಿದ್ವಾಂಸರನ್ನು ಪರಿಚಯ ಮಾಡಿಕೊಡುತ್ತಾ "ನವಗ್ರಹಗಳಲ್ಲದಿದ್ದರೂ ಪಂಚ ಗ್ರಹಗಳು ಇಲ್ಲಿ ಸೇರಿವೆ" ಎಂದಾಗ ಅಧ್ಯಕ್ಷರಾದ ಕಾರಂತರು ಸಮಯ ಸ್ಫೂರ್ತಿಯಿಂದ ನಮ್ಮಲ್ಲಿ ಕೆಲವರು ರಾಹು ಕೇತು ಶನಿ ಗ್ರಹಗಳಾಗಿ ನಿಮ್ಮನ್ನು ಕಾಡಿದರೆ ಅದಕ್ಕೆ ನಾವು ಜವಾಬ್ದಾರರಲ್ಲ" ಎಂದು ಮಾತಿನ ಚಟಾಕಿಯನ್ನು ಹಾರಿಸಿದರು. ಅನಂತರ ಜನಪದ ಸಾಹಿತ್ಯ, ಅದರ ಸ್ವರೂಪವನ್ನು ಕುರಿತು ಡಾ. ಹಾ. ಮಾ. ನಾಯಕರು ವಿದ್ವತ್ ಪೂರ್ಣವಾದ ಒಂದು ಪ್ರಬಂಧವನ್ನು ಓದಿದರು.

"ಜನಪದ ಸಾಹಿತ್ಯವು ಇಂದು ಪಾಶ್ಚಾತ್ಯ ದೇಶಗಳಲ್ಲಿ ವಿಚಾರವಂತರ ಆಸಕ್ತಿಯನ್ನು ಸೆಳೆದಿದೆ. ಯೂರೋಪಿನಲ್ಲೂ ಅಮೇರಿಕಾದ ಇಂಡಿಯಾನದಲ್ಲೂ, ಕ್ಯಾಲಿಫೋರ್ನಿಯಾ, ಪೆನ್ಸಿಲ್‌ವೇನಿಯಾದಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಅದು ಅಧ್ಯಯನದ ವಿಷಯವಾಗಿದೆ. ಇಂಥದೊಂದು ಪ್ರಯತ್ನವನ್ನು ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೈಗೊಳ್ಳಲಾಗಿದೆ. ಇಲ್ಲಿ ಜಾನಪದ ಸಾಹಿತ್ಯವನ್ನು ಎಂ. ಎ. ಮಟ್ಟದಲ್ಲಿ ಅಭ್ಯಸಿಸುವ ವಿಷಯವಾಗಿ ತೆಗೆದುಕೊಳ್ಳಲಾಗಿದೆ" ಎಂದರು.

ಅನಂತರ ಜನಪದ ಸಾಹಿತ್ಯದ ಸ್ವರೂಪ, ವ್ಯಾಪ್ತಿ, ವಿವಿಧ ಮುಖಗಳನ್ನು ವಿವರವಾಗಿ ಚರ್ಚಿಸಿದರು.

ಇಂಗ್ಲಿಷಿನ Folkloreಅನ್ನು ಜನಪದ ಸಾಹಿತ್ಯವೆಂದು ಕರೆಯುವ ರೂಢಿಯಿದ್ದರೂ, ಇಂಗ್ಲಿಷಿನ ಪದದ ವ್ಯಾಪ್ತಿ ಕನ್ನಡ ಪದಕ್ಕಿಲ್ಲ. ಇಂಗ್ಲಿಷಿನಲ್ಲಿ Folklore ಎಂದರೆ ನಾಗರಿಕ ಜೀವನದ ಸಂಸ್ಕೃತಿಯ ಪ್ರಭಾವದಿಂದ ದೂರವಾದ ಸಂಸ್ಕೃತಿ, ಅಂದರೆ City-cultureಗೆ ವಿರುದ್ಧವಾದ ಜನಪದ ಸಂಸ್ಕೃತಿ. ಹೀಗಾಗಿ ಜಾನಪದ ಸಂಗೀತ, ನೃತ್ಯ, ಸಂಗೀತಗಳೂ ಇವೆ. ೧೮೪೦ರಲ್ಲಿ ವಿಲಿಯಂ ಜೋನ್ಸ್ ಎಂಬಾತನು ಈ ಜನಪದ ಸಾಹಿತ್ಯದ ಶಾಸ್ತ್ರೀಯ ಸಂಶೋಧನೆಗೆ ಆದ್ಯಪ್ರವರ್ತಕನಾದನು.

ಜನಪದ ಸಾಹಿತ್ಯ–ಜಾನಪದ ಸಾಹಿತ್ಯ ಇವುಗಳ ನಡುವೆ ಕನ್ನಡ ಕವಿಗಳು ವ್ಯತ್ಯಾಸವನ್ನೇ ಗುರುತಿಸುವ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ. ಈ ಪದಗಳಲ್ಲಿ ಸೂಕ್ಷ್ಮಭೇದವಿದ್ದಂತೆ ಅನಿಸುತ್ತದೆ. ಜಾನಪದ ಸಾಹಿತ್ಯವನ್ನು ಸ್ಥೂಲವಾಗಿ Folklore ಎಂದರೆ ಜನಪದವನ್ನು Folk ಎಂದು ಕರೆಯಬಹುದು.

ಇದನ್ನು ಕೆಲವರು ಗ್ರಾಮ ಸಾಹಿತ್ಯ,ಲೋಕವಾರ್ತಾ ಜನಸಂಸ್ಕೃತಿ ಎಂದು ಕರೆಯಲು ಹೊರಟಿದ್ದಾರೆ. ಡಾ. ಸುನೀತ ಕುಮಾರ ಚಟರ್ಜಿಯವರು ಇದಕ್ಕೆ ಲೋಕಾಯನ ಸಾಹಿತ್ಯವೆಂದು ಹೆಸರಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಜಾನಪದ ಸಾಹಿತ್ಯದ ವ್ಯಾಪ್ತಿಯಲ್ಲಿ ದೇವುಡು ಅವರು ಜಾನಪದ ವಾಙ್ಮಯವನ್ನೆಲ್ಲಾ ತುರುಕಲೆತ್ನಿಸಿದ್ದಾರೆ.

ಕಥೆ, ಗೀತ, ಒಗಟು, ಗಾದೆಗಳು, ಸೂಕ್ತಿ, ಮೋಹಿನಿ ಕಥೆಗಳು–ಎಲ್ಲ ಬರುತ್ತವೆ ಎಂದರು.

ಅನಂತರ ಅವರು ಜಾನಪದ ಸಾಹಿತ್ಯದ ವರ್ಗೀಕರಣದ ಬಗ್ಗೆ ಸಾಹಿತ್ಯದ ವಸ್ತು ವ್ಯಾಪ್ತಿಗಳ ಬಗ್ಗೆ ದೀರ್ಘವಾದ ಚರ್ಚೆ ನಡೆಸಿದರು.

ಜಾನಪದಸಾಹಿತ್ಯದ ಕೃತಿಯು ಆರಂಭದಲ್ಲಿ ಒಬ್ಬ ವ್ಯಕ್ತಿಯ ಕೃತಿಯೇ ಅಥವಾ ಹಲವು ವ್ಯಕ್ತಿಗಳ ಸಾಮೂಹಿಕ ರಚನೆಯೇ? ಎಂದು ಕೇಳಿದ ಕಾರಂತರ ಪ್ರಶ್ನೆಗೆ 'ಈ ಸಾಹಿತ್ಯ ಸಾಮೂಹಿಕ ಕೃತಿ' ಎಂದು ಅರ್ಥ ಬರುವಂತೆ ನಾಯಕರು ಪ್ರತಿಪಾದಿಸಿದರು. ಈ ಉತ್ತರ ಕಾರಂತರನ್ನು ತೃಪ್ತಿಗೊಳಿಸಿದಂತೆ ಕಾಣಲಿಲ್ಲ.

ಅನಂತರ ಮಾತನಾಡಿದ ಸಿಂಪಿ ಲಿಂಗಣ್ಣನವರು 'ಜನಪದ ಗೀತೆಗಳು ಮತ್ತು ಲಾವಣಿ'ಗಳನ್ನು ಕುರಿತು ಮಾತನಾಡಿದರು.

"ಜನಪದ ಸಾಹಿತ್ಯವೆಂದರೆ ಹಳೆಯ ಮಾತುಗಳ ಹೊಂದಾಣಿಕೆ. ಮಾತಿಗಿಂತ ಹಾಡು ಮೊದಲು. ಅದು ನಿಸರ್ಗದ ಅನುಕರಣೆ, ಪ್ರಕೃತಿಯ ಪ್ರಭಾವ–ಪರಿಣಾಮ. 'ಎಲಿಗೊಂದು ಮಾತುಕಲಿತೇನಾ' ಎಂದು ಒಬ್ಬ ಕವಿ ಹಾಡಿದ್ದಾನೆ. ಅವನ ಜೀವ ಹೋದಮೇಲೂ ಸಹ ಅವನು ಹಾಡಿದ ಗೀತ ನಿಂತಿತು. ಇದು ಜನಪದ ಸಾಹಿತ್ಯದ ಉಗಮ. ಹಾಡು ಜೀವನಕ್ಕೆ ಮೋದಕ, ಮಾದಕ. 'ಬದುಕು ಹಳತರೆ ಸಾಹಿತ್ಯವಾಗುವುದು' ಜನಪದ ಸಾಹಿತ್ಯ ಅವಿದ್ಯಾವಂತರು ನಿರ್ಮಿಸಿದ ಕಾವ್ಯ" ಎಂದು ಅಭಿಪ್ರಾಯಪಟ್ಟರು.

ಈ ಜನಪದ ಸಾಹಿತ್ಯ ತಾಯ ಮೊಲೆ ಹಾಲಿನಂತೆ. ಬದುಕನ್ನು ಬಂಗಾರಗೊಳಿಸುತ್ತದೆ. ಇಲ್ಲಿ ಸಾಮಾನ್ಯರ ಜೀವನ ಪ್ರಕೃತಿಯಲ್ಲಿ ತಾದಾತ್ಮ್ಯ ಹೊಂದುವುದನ್ನು ಕಾಣುತ್ತೇವೆ.

ಆದರೂ ಜನಪದ ಕವಿಗಳು ಜೀವನ ಒಂದು ಭ್ರಮೆಯೆಂಬುದನ್ನು ಮರೆಯಲಿಲ್ಲ. ಮರಣವು ಬಾಳಿನ ಕಟ್ಟಡವನ್ನು ಅಲುಗಿಸಿದಾಗ ಈ ಭಾವನೆ ಅವರ ಹೃದಯದಿಂದ ಹಾಡಾಗಿ ಹೊರಟಿರುವುದನ್ನು ನೋಡುತ್ತೇವೆ – ಉದಾಹರಣೆಗೆ ಜವರಾಯನ ಹಾಡು.

ಲಾವಣಿಯನ್ನು ಕುರಿತು ಹೇಳುತ್ತಾ ಸಿಂಪಿಯವರು 'ಅದು ಓಂಕಾರದ ಬೀಜ'ವೆಂದರು.

ಕಾದಲನಿಗೆ ದೇವರು ಒಲಿಯುವುದಿದ್ದರೆ ಹೆಣ್ಣಾಗಿ ಬರಬೇಕು. ಅಂತಹ ಕಾದಲನ ಕಣ್ಣಿಗೆ ಕಪ್ಪಹೆಣ್ಣೂ ರೂಪಸಿಯೇ.

ಅಂಥ ಒಬ್ಬ ರಸಿಕನಿಗೆ ಕಪ್ಪನೆಯ ಹೆಣ್ಣು ನೇರಿಳೆ ಹಣ್ಣಿನ ನೆನಪು ಹುಟ್ಟಿಸುತ್ತಾಳೆ. ಅವಳು ನಡೆದರೆ, ಕರಿಸೋಗೆ ಕುಣಿದಂತೆ, ಅವಳ ತೋಳು ಕರಿ ಕಾಜಿನ ಕಂಬ, ಮೂಗು ಕಾಡಿಗೆ ತೆನೆಯಾಗಿ ತೋರುತ್ತದೆ. ಕರಿ ವಿಷಕುಡಿದು ಶಂಕರನು ಗಂಗೆಯನ್ನು ತಲೆಗೇರಿಸಿಕೊಂಡ ಮೇಲೆ ಕಪ್ಪೆಂದು ಮೂದಲಿಸಲು ಬಂದೀತೆ? ಈ ಹಾಡಿನ ಸೊಗಸನ್ನು ಸಿಂಪಿಯವರ ಬಾಯಲ್ಲೇ ಕೇಳಿ ಆನಂದಿಸಬೇಕು.

ಅನಂತರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 'ಗಾದೆಗಳು ಮತ್ತು ಒಗಟು'ಗಳನ್ನು ಕುರಿತು ಮಾತನಾಡಿದರು.

ಸದೃಢ ಮೈಕಟ್ಟಿನ, ಉತ್ಸಾಹ ಯೌವನಗಳ, ಬೋಳ ತಲೆಯ ಗೊರೂರರಿಗೆ ಅರವತ್ತು ವರ್ಷಗಳು ತುಂಬಿವೆ ಎಂದರೆ ಯಾರಿಗಾದರೂ ಅಚ್ಚರಿಯಾದೀತು. ಅವರು ಸದ್ದುಗದ್ದಲವಿಲ್ಲದೆ ಕನ್ನಡಮ್ಮನ ಗುಡಿಯಲ್ಲಿ ಚಾಮರ ಬೀಸುತ್ತಾ ಬಂದಿದ್ದಾರೆ. ಇವರಿಗೆ ಷಷ್ಠ್ಯಬ್ಧಿ ಮಾಡುವ ವಿಚಾರ ಯಾರಿಗೂ ಬಂದಂತೆ ಕಾಣುವುದಿಲ್ಲ. ಏಕೆಂದರೆ ಇವರು ಸಾಹಿತ್ಯದ ಯಾವ ಪಕ್ಷಕ್ಕೂ ಸೇರಿದವರಲ್ಲ. ಗುಂಪುಕಟ್ಟಿ ಜಯಕಾರ ಹೇಳಿಸಿಕೊಳ್ಳುವುದು ಇವರ ಜಾಯಮಾನವೇ ಅಲ್ಲ.

[ಗೊರೂರ ಬೋಳು ತಲೆಯ ಮಾತು ಬಂದಾಗ, ಇಲ್ಲಿ ಒಂದು ತಮಾಷೆಯ ಸಂಗತಿಯನ್ನು ಹೇಳಲೇಬೇಕು.

ನಾನು ಕೃಷ್ಣಮೂರ್ತಿ ಪುರಾಣಿಕರ ಭೆಟ್ಟಿಗೆಂದು, ಹೋಗಿದ್ದೆನಷ್ಟೆ. ಆಮೇಲೆ ಸ್ನಾನಮಾಡಿ, ತಲೆ ಬಾಚಿಕೊಳ್ಳಲು ಅವರನ್ನು ಎಣ್ಣೆ ಕೇಳಿದೆ.

ಅವರು ಮುಗುಳ್ನಗುತ್ತಾ "you have approached a wrong person" ಎಂದರು.

ನಾನು ಏಕೆಂದು ಪ್ರಶ್ನಾರ್ಥಕ ಚಿಹ್ನೆಯಿಂದ ನೋಡಿದೆ. ಪುರಾಣಿಕರು ಮರು ಮಾತನಾಡದೆ ತಮ್ಮ ಮಿಂಚುತ್ತಿದ್ದ ಬಕ್ಕತಲೆಯನ್ನು ಕೈಯಿಂದ ಸವರಿಕೊಂಡರು.

ಪುರಾಣಿಕರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅನೇಕ ಕೃತಿಗಳನ್ನು ರಚಿಸಿದ ಸವ್ಯಸಾಚಿಗಳು. ಪದ್ಯ–ಗದ್ಯಗಳಿಂದ ಆರಂಭಿಸಿದ ಅವರ ಸಾಹಿತ್ಯದ ಬೇಸಾಯ, ಇಂದು ಕಾದಂಬರಿ ಕ್ಷೇತ್ರದಲ್ಲೂ ಹುಲುಸನ್ನು ಕಂಡಿದೆ. ಅವರು ಇದೀಗ ತಮ್ಮ ಅರವತ್ತನೆಯ ಕಾದಂಬರಿಯನ್ನು ಬರೆಯುತ್ತಿದ್ದಾರಂತೆ!

ಗೊರೂರರಂತೆ ಪುರಾಣಿಕರೂ ಹಾಸ್ಯ ರಸಿಕರು. ಉಡುಪಿಯ ಸಮ್ಮೇಳನದಲ್ಲಿ ಅವರನ್ನೇ ಪಡಕೋಣೆ ರಮಾ

ನಂದರಾಯರೆಂದು ಭ್ರಮಿಸಿ, ತಾವು ತೆಗೆದಿದ್ದ ರಮಾನಂದ ರಾಯರ ಫೋಟೋ ಪ್ರತಿಯನ್ನು ಅವರಿಗೇ ಕೊಟ್ಟು ಹೋಗಿದ್ದನಂತೆ ಒಬ್ಬ ಭೂಪ!

ಅವರು ಬೆಂಗಳೂರಿಗೆ ಬಂದಿದ್ದಾಗ ಒಮ್ಮೆ ಹೊಟ್ಟೆಯ ನೋವಾಯಿತಂತೆ. ಸಮೀಪದ ದವಾಖಾನೆಗೆ ಹೊಟ್ಟೆ ತೋರಿಸಿದಾಗ, ವೈದ್ಯ ಕೈ ಕೇಳಿದನಂತೆ. ಅವನು ವೈದ್ಯ ನಾಗಿರುವುದರ ಜತೆಗೆ ಹಸ್ತಸಾಮುದ್ರಿಕನಂತೆ. ಆರ್ಥತಾಸು ಕೈ ನೋಡಿ ಪುರಾಣಿಕರ ಭವಿಷ್ಯಕ್ಕೆ ಆರಂಭಿಸಿದನಂತೆ. ಕಡೆಗೆ ಬೇಸತ್ತ ಪುರಾಣಿಕರು "ಸ್ವಾಮಿ, ಕೈಯನ್ನೇನು ನೋಡುತ್ತೀರಿ. ನನಗೆ ಹೊಟ್ಟೆ ನೋವು. ಏನಾದರೂ ಔಷಧ . . ." ಎನ್ನುವ ಮೊದಲೇ ಆ ವೈದ್ಯ,

"ಹೊಟ್ಟೆಯನ್ನು ಯಾರಾದರೂ ತೋರಿಸುತ್ತಾರೆ ಬಿಡಿ. ನಿಮ್ಮ ಕೈ ನೋಡುವ ಭಾಗ್ಯ ನಮಗೆ ಯಾವಾಗ ಸಿಗ ಬೇಕು ರಾಯ್ರೆ!" ಎಂದು ನಕ್ಕರಂತೆ.

ಇಂಥವೇ ಕೆಲವು ಚುಟುಕಗಳ ಸಂಗ್ರಹ ಪುರಾಣಿಕ ರಲ್ಲಿದೆ.]

ಗೊರೂರರು ತಮ್ಮ ಭಾಷಣದಲ್ಲಿ "ಜನಜೀವನದ ಅನುಭವವನ್ನು ಮನಮುಟ್ಟುವಂತೆ, ಸ್ವಾರಸ್ಯವಾಗಿ ಹೇಳು ವುದೇ ಗಾದೆ" ಎಂದರು.

ಅದರ ವ್ಯಾಪ್ತಿ ಬಾಳಿನ ಎಲ್ಲ ಕ್ಷೇತ್ರಗಳನ್ನೂ ಆವರಿಸಿದೆ. ಅದು ಎಲ್ಲಾ ಸಂದರ್ಭದಲ್ಲೂ ಕಾಲೂರಿದೆ. ಅದು ಸರ್ವ ವ್ಯಾಪಿ. 'ಗಾದೆ ವೇದ ಸಮಾನ, ವೇದ ಗಾದೆಯ ಮಾತು, ಶಾಸ್ತ್ರ ತಿಳಿದವರ ಮಾತು, ಪುರಾಣ ಪುಂಡರ ಮಾತು' ಪ್ರಾಸ, ಅನುಪ್ರಾಸ, ಯಮಕ, ಶ್ಲೇಷೆಗಳಿಂದ ಕೂಡಿ ಗಾದೆಯು ಜ್ಞಾಪಕದಲ್ಲಿ ಇರಿಸಿಕೊಳ್ಳಲು ಅನು ಕೂಲವಾಗಿರುತ್ತದೆ.

"ಎಲ್ಲ ದಾನಕ್ಕಿಂತ ನಿಧಾನ ಒಳ್ಳೆಯದು,
ಗಂಡನೇ ಗಂಡ,
ಆಶ್ರಮಕ್ಕಿಂತ ಈ ಶ್ರಮ ಬಹುಶ್ರಮ,
ಎಮ್ಮೆಗೆ ಎರಡು ಕೋಡಾದರೆ ಹೆಮ್ಮೆಗೆ
ಎಂಟು ಕೋಡು,
ಒಂದೇ ನಾಮ ಸಾಲದೆ?"

ಈ ಗಾದೆಗಳಲ್ಲಿ ನಾಜೂಕು, ಚುರುಕು, ಮೊನೆ, ಕೊಂಕನ್ನು ಕಾಣುತ್ತೇವೆ.

ಗಾದೆ ಪುಟಕ್ಕೆ ಸಿಕ್ಕಿದ ಶಾಶ್ವತ ನಾಣ್ಯ. ಅದು ಗಾತ್ರ ದಲ್ಲಿ ವಾಮನ, ಅರ್ಥದಲ್ಲಿ ತ್ರಿವಿಕ್ರಮ. ಅದು ವಿವೇಕಿಗಳ ವಾಣಿ; ಜನವಾಣಿ; ದೇವವಾಣಿ.

ಜರ್ಮನಿಯಲ್ಲೂ ಇಪ್ಪತ್ತೈದು ಸಾವಿರ ಗಾದೆಗಳು ಇವೆ ಯಂತೆ. ಇಂಗ್ಲೆಂಡಿನಲ್ಲೂ ಒಂದೂವರೆ ಲಕ್ಷ ಗಾದೆಗಳಂತೆ.

ಯಹೂದ್ಯರಲ್ಲೂ ಮಾತಿಗೊಂದು ಗಾದೆ ಉಂಟಂತೆ.

ಅದೊಂದು ಸ್ವಯಂಪೂರ್ಣ ಖಂಡ ಕಾವ್ಯ; ನಿರ್ಜರ; ಅಮರ. ಗಾದೆಗಳಲ್ಲಿ ಜನಪದಜೀವನ ಪ್ರತಿಬಿಂಬಿತವಾಗಿವೆ.

'ಧರಣಿ ಮಳೆ ಧರೆಗೆ ಗಂಡ.'

ಹುಸೇನ್ (ಪುಬ್ಬೆ?) ಮಳೆ ಹುಸಿಯೋದಿಲ್ಲ.

ಗಾದೆ ಜೀವನದ ಕನ್ನಡಿ—'ಸೆರೆಮನೆಯಲ್ಲಿ ಚಿತ್ತಾರ ಬಿಡಿಸಿದ ಹಾಗೆ' ಅಂದಂದಿನ ಬಾಳಿನ ಚಿತ್ರೀಕರಣ.

'ಹೊಸ ಪೂಜಾರಿ, ಹುಚ್ಚು ತುಳಸಿ ಕೊಯ್ದ.'

ನರಕಕ್ಕೆ ಹೋದರೂ ನಾಮಧಾರಿಯನ್ನು ನಂಬಬೇಡ.

[ಈ ಮಾತು ಹೇಳಿದಾಗ ಗೊರೂರರು ನಾಮ ಹಾಕ ದಿದ್ದರೂ ನಗುವಿನ ಮಹಾಪೂರ ಹರಿಯಿತು.]

'ತುತ್ತೂರಿ ಊದಿದರೆ ತುಪ್ಪಟ ಬಿದ್ದೀತೆ?'

ಗಾದೆ ವಿರಾಟ ಪುರುಷನಂತೆ ಸರ್ವ ವ್ಯಾಪಿ.

'ಮಕ್ಕಳಿಲ್ಲದವನಿಗೆ ಹೆಗಲೇ ಮುದ್ದು ಕೂಸು. ಸಮ ಯಕ್ಕೊದಗದ ಅರ್ಥ ಸಹಸ್ರವಿದ್ದರೂ ವ್ಯರ್ಥ.

ಕೊಂಕಣಿಗರ ನೆರೆ ಸಲ್ಲ. (ಯಾಕೋ ಕಾಣೆ?)'

ಸುಂಕದಕಟ್ಟೆಯಲ್ಲಿ ಸೊಂಟವಿಲ್ಲದವನು ಎದ್ದರಾಳಲ್ಲ ಎಂದನಂತೆ.

ಈ ಇಂಗ್ಲಿಷಿನ ಗಾದೆಗಳನ್ನು ನೋಡಿ:

'Study new books from old teachers.'

'Husband is with seven sons.'

ಇನ್ನು ಒಗಟೆಗಳು: ಇದೂ ಜನಜೀವನದ ಅನುಭವ ದಿಂದ ಪ್ರೇರಿತವಾದರೂ ಇದರಲ್ಲಿ ಚಮತ್ಕಾರ ಹೆಚ್ಚು. ಕೇಳಿದ ರಸಿಕರಿಗೆ ವಿನೋದ. ಗುಟ್ಟಿನ ಸಮಸ್ಯೆಯಾದರೂ ಪ್ರಕಟವಾದಾಗ ಸ್ವಯಂಪ್ರಭೆಯಿಂದ ಬೆಳಗುತ್ತದೆ. ಇದು ಬುದ್ಧಿಗೆ ಆಹಾರ; ಹಬ್ಬ. ವೇದಗಳಲ್ಲೂ ಒಗಟೆ ಇದೆ:

'ವೃಷಭನಿಗೆ ಮೂರು ಕೊಂಬು.' ಕನಕದಾಸರ ಮುಂಡಿಗೆಗಳು ಪ್ರಖ್ಯಾತವಾಗಿವೆ. ಪುರಂದರ ದಾಸರಲ್ಲೂ ಒಗಟೆಗಳಿವೆ: 'ಮಡಿವಾಳನ ಶತ್ರು' (ಕೌಪೀನ).

ಅಲ್ಲಮನು ವರ್ಣಿಸುವ ಮುಗಿಲ ಬಣ್ಣದ ಪಕ್ಷಿಯನ್ನು ಜ್ಞಾಪಿಸಿಕೊಳ್ಳಬಹುದು.

'ಬೀದೀಲಿ ಹೋಗೋ ಬೋಳಾ, ನಿನಗೆ ಯಾರು ಹಚ್ಚಿ ದರು ಈ ಪಟ್ಟೇ ನಾಮ? (ಪಡುವಲ)

ಅಜ್ಜಿಗೆ ಮೈಯೆಲ್ಲಾ ಕಜ್ಜಿ (ಹಾಗಲ).

ಗೊರೂರರು ತಮ್ಮ ಭಾಷಣದ ಕೊನೆಯಲ್ಲಿ 'ಸಂಶೋ ಧಕನ ಬುದ್ಧಿಯಿಂದ ದೇಶದಲ್ಲಿ ಹರಡಿದ ಗಾದೆಗಳನ್ನು

ಸಂಗ್ರಹಿಸಬೇಕು, ಲೇಖಕರೂ, ಸಾಹಿತಿಗಳೂ ತಮ್ಮ ಕೃತಿಗಳಲ್ಲೂ, ಮಾತು ಕಥೆಗಳಲ್ಲೂ ಅವುಗಳನ್ನು ಉಪಯೋಗಿಸಬೇಕು. ಆಗ ಶೈಲಿಯಲ್ಲಿ ಗಾದೆಯೂ ಅಲಂಕಾರದ ಸ್ಥಾನ ಪಡೆಯುತ್ತದೆ' ಎಂದರು.

ಈ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಲು ಆನಂದ ಕಂದರೆಂದು ಹೆಸರಾದ ಬೆಟಗೇರಿ ಕೃಷ್ಣಶರ್ಮರು ಬರಬೇಕಾಗಿತ್ತು. ಆದರೆ ಅವರು ಏಕೋ ಬಂದಿರಲಿಲ್ಲ. ಅವರ ಸ್ಥಾನದಲ್ಲಿ ಮಿರ್ಜಿ ಅಣ್ಣಾರಾಯರು ನಿಂತು, ಜನಪದ ಕಥೆಗಳನ್ನು ಕುರಿತು ಭಾಷಣ ಮಾಡಿದರು.

ಜನಪದ ಕಥೆಗಳ ಉಗಮವೆಲ್ಲಿ? ಬಹುಶಃ ಹಿರಿಯರಾದ ಅಜ್ಜ ಅಜ್ಜಿಯರು ಮಕ್ಕಳ ತುಂಟತನವನ್ನು ತಡೆಯಲು, ಕೌತುಕವನ್ನು ತಣಿಸಲು ಹೇಳಿರಬೇಕು. ಅಜ್ಜಿ ಕಥೆಗಳು, ವಿದೇಶದಲ್ಲಿ ಕಿನ್ನರ ಕಥೆಗಳು—ನಮ್ಮ ಪಂಚತಂತ್ರದ ಹಿತೋಪದೇಶದ ಕಥೆಗಳನ್ನು ನೋಡಬಹುದು. ಕಥೆಯಲ್ಲಿ ಕಥೆ ಬೆಳೆದಿರುತ್ತವೆ. ಇವುಗಳ ವಸ್ತು ರಾಜರಾಣಿಯರು, ಇಲ್ಲವೇ ಪ್ರಾಣಿಗಳು.

'ಜನಪದ ಕಥೆಗಳು ಮುದುಕಿ ಹೂರಣ. ಅದನ್ನು ಅರಗಿಸಿಕೊಳ್ಳಬಹುದು; ಇಲ್ಲವೇ ತಿಪ್ಪೆಗೆ ಚೆಲ್ಲಬಹುದು.' ದೇವರಪರವಾದ ದೇವಸ್ಥಾನದ ಕಥೆಗಳು, ಸ್ಥಳಪುರಾಣಗಳ ಕಥೆಗಳು, ಊರಿನ ಕಥೆ. (ಉದಾ : ಕೂಸಿನ ಹಾಳ). ಮರುಳರ, ಮೂರ್ಖರ ಕಥೆಗಳು (ಗಾಂಪರೊಡೆಯರ ಕಥೆಗಳು; ಒಂಟೆಮೇಲಿನ ಶಾಣನ ಕಥೆ).

'ಜನಾಂಗ ಬೇರೆಯಾದರೂ, ಭಾವ ಎಲ್ಲೆಡೆಯಲ್ಲೂ ಒಂದೇ' ಎಂದು ಹೇಳಿ ತಮ್ಮ ಭಾಷಣ ಮುಗಿಸಿದರು.

ಅನಂತರ 'ಕುಮಾರರಾಮ ಸಾಂಗತ್ಯ' ಬರೆದು ಡಾಕ್ಟರೇಟ್ ಪಡೆದಿರುವ ಶ್ರೀ ಜಿ. ವರದರಾಜಾರಾವ್ ಅವರು 'ಜನಪದ ಸಾಹಿತ್ಯದಿಂದ ಕನ್ನಡ ಕವಿಗಳು ಪಡೆದ ಪ್ರೇರಣೆ'ಯನ್ನು ಕುರಿತು ತಮ್ಮ ಪ್ರಬಂಧವನ್ನು ಓದಿದರು.

ಜನಪದ ಸಾಹಿತ್ಯದ ಅಧ್ಯಯನ ೧೮೮೭ರಲ್ಲಿ ಫ್ಲೀಟ್‌ರಿಂದ ಆರಂಭವಾಯಿತೆನ್ನಬಹುದು. ಅವರು ಲಾವಣಿಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಮಧುರಚನ್ನ, ಮಾಸ್ತಿ, ಸಿಂಪಿ, ಬೆಟಗೇರಿ, ಗೊರೂರು, ಗದ್ದಗಿಮಠ, ಮತಿಘಟ್ಟ, ಕರೀಂಖಾನ್, ಎಲ್. ಗುಂಡಪ್ಪ ಮತ್ತು ಕರಾಕೃ ಅವರು ಜನಪದ ಗೀತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಜನಪದ ಸಾಹಿತ್ಯದ ಸಂವಾದಿಯಾದ ಇಂಗ್ಲಿಷಿನ Folk-lore ಎಂಬುದಕ್ಕೆ Belief, superstition legend, witch-craft, Practice of rituals of Common People of Civilized culture, Expression of Premitive mind ಎಂದೆಲ್ಲ ಅರ್ಥವ್ಯಾಪ್ತಿ ಇದೆ. ಇದನ್ನು ಜನಪದ ವಿಜ್ಞಾನವೆಂದು ಕರೆಯಬಹುದೆ?

ಜನಶ್ರುತಿ-ಪರಂಪರೆಯಿಂದ ಬಂದ ತಿಳಿವಳಿಕೆ. ಜನಪದ ಜೀವನ ವಿಜ್ಞಾನವೆನ್ನಬಹುದೆ? ಇದನ್ನು ವಿಚಾರ ಮಾಡಬೇಕಾಗಿದೆ.

ಇಲ್ಲಿ ಬಳಸುವ ಭಾಷೆ, ಆಯ್ದುಕೊಳ್ಳುವ ವಿಷಯ ಸಾಮಾನ್ಯ ಜನಜೀವನವನ್ನು ಅನುಸರಿಸುತ್ತದೆ.

ಚಂಪೂ ಕವಿಗಳ ಕೃತಿಗಳಲ್ಲೂ, ಪ್ರಾಚೀನ ಕನ್ನಡ ಶಾಸನಗಳಲ್ಲೂ ಅರಿತೋ ಅರಿಯದೆಯೋ ಜನಪದ ಜೀವನದ ತಂತು ಸೇರಿಕೊಂಡಿರುತ್ತದೆ. ಇದನ್ನು ಹುಡುಕುವುದು ಗಣಿಯಲ್ಲಿ ಬಂಗಾರವನ್ನು ಹೆಕ್ಕಿ ತೆಗೆಯುವಷ್ಟೇ ಕಷ್ಟದ ಕೆಲಸ.

ಕಪ್ಪೆ ಅರವಟ್ಟನನ್ನು ಕುರಿತ ಬಾದಾಮಿಯ ಶಾಸನದಲ್ಲಿ ಜಾನಪದ ಜೀವನದ ಚಿತ್ರಣ ಹಣಿಕಿದೆ. ಅಲ್ಲಿನ ಛಂದಸ್ಸು ಜನಪದ ಗಾಯತ್ರಿ ಎನಿಸಿದ ತ್ರಿಪದಿ. ಮೊದಲು ಅಂಶಗಣದಿಂದ ಕೂಡಿದ್ದು, ಅನಂತರ ಮಾತ್ರಾಗಣ ಘಟಿತವಾಯಿತು.

ಒನಕೆವಾಡು, ಬಾಜನಗಬ್ಬ ಹಿಂದೆ ಜನಪ್ರಿಯ ಸಾಹಿತ್ಯವಾಗಿರಬೇಕು. ತ್ರಿಪದಿಯನ್ನು ತ್ರಿಪಥೆಯಾದ ಜಾಹ್ನವಿ ಎಂದು ಕರೆಯಬಹುದು. ಮುಂದೆ ಸಾಂಗತ್ಯವು ಕಾವೇರಿ ತಾಯಿಯಂತೆ, ಜನಪದವನ್ನು ಧಾರಾಳವಾಗಿ ಮುಟ್ಟಿತು.

ವೀರಗಲ್ಲು ಮಾಸ್ತಿಕಲ್ಲುಗಳಲ್ಲೂ ಜನಪದ ಜೀವನವನ್ನು ಕಾಣಬಹುದು. ದಾನ ಧರ್ಮ, ಸ್ವಪ್ರತಿಷ್ಠೆಯನ್ನು ಹೇಳದೆ ಕಳ್ಳರಿಂದ ಗೋಸಂರಕ್ಷಣೆ ಮಾಡಿದ ವೀರರ ಕಥೆ ಮಹಾಸತಿಯರ ತ್ಯಾಗದ ಕಥೆಯನ್ನು ಇಲ್ಲಿ ಕಾಣುತ್ತೇವೆ. ಕಲಿತನ, ಕಾದಾಟಗಳು ಇವುಗಳ ವಸ್ತು, ವೀರರಸ-ಪ್ರಧಾನರಸ. ಈ ದತ್ತಿಗಳು ಜನಾನುರಾಗದ ಪ್ರತಿಧ್ವನಿ, ಇಲ್ಲಿ ಸದ್ಗತಿಗಾಗಿ ಹೆಮ್ಮೆಪಡುವ ದೃಷ್ಟಿಯನ್ನು ನೋಡುತ್ತೇವೆ. ಪ್ರಾಣತೆತ್ತ ಪ್ರಾಣಿಗಳಿಗಾಗಿಯೂ ಬರೆಸಿದ ಶಾಸನಗಳು ಇವೆ. ನೆತ್ತರಕೊಡಿಗೆ, ವೀರಗಲ್ಲು-ಅರ್ಥಪೂರ್ಣವಾಗಿದೆ. ವೀರರನ್ನು ಕೊಂಡಾಡುವ ಬಿರುದುಗಳಲ್ಲಿ (ಚಾಗವೆಡಂಗಿ, ಪೆಳವರಭಾವ, ಪರನಾರಿದೋರ, ಪರಾಂಗನಾ ಸಹೋದರ ... ಇತ್ಯಾದಿ) ಜನರ ಅಭಿಮಾನ, ಗೌರವಗಳು ಮೂಡಿವೆ.

ಕವಿರಾಜಮಾರ್ಗಕಾರನು ದಂಡಿ, ಭಾಮಹರನ್ನು ಅನುವಾದಿಸಲು ಹೊರಟಿದ್ದರೂ ಕನ್ನಡಿಗರ ನೈಸರ್ಗಿಕ

ಪ್ರತಿಭೆ, ಕಾವ್ಯರಸಿಕತೆಗಳ ಬಗ್ಗೆ ಎಡೆದೊರತಿದೆ. ವಾಸುಕಿಗೂ ಅಳಿಯಲಾಗದಷ್ಟು ಕನ್ನಡ ಕವಿಗಳು ಇದ್ದಂತೆ ಹೇಳುತ್ತಾನೆ. 'ಚದುರರ್, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಕನ್ನಡಿಗರನ್ನು ಕೊಂಡಾಡುತ್ತಾನೆ.

ಪಂಪ ಮಹಾಕವಿಯು ಪಂಡಿತರ ಮೆಚ್ಚಿಕೆಗಾಗಿ ಕೃತಿಗಳನ್ನು ನಿರ್ಮಿಸಿದರೂ, ಅವನು ದೇಸಿ ಶೈಲಿ, ಪ್ರಚಲಿತ ಜನಪದ ಭಾಷೆಯ ಗತ್ತು ಗಾಂಭೀರ್ಯಗಳನ್ನು ನಿರ್ಲಕ್ಷಿಸಿಲ್ಲ. ಉದಾ: ಭೀಮನು ಹೇಳುವ ಮಾತು: ಕೆಮ್ಮಗೆ ಮೀಸೆ ಹೊತ್ತೆನೇ.

ವಡ್ಡಾರಾಧನೆಯ ಅನೇಕ ಕಥೆಗಳಲ್ಲಿ ದೇಸಿ ಸೊಬಗನ್ನೂ ಜನಪದ ಜೀವನವನ್ನೂ ನಾವು ಕಾಣಬಹುದು. ಉದಾ: ಸುಕುಮಾರಸ್ವಾಮಿಯ ಕಥೆಯ ನಾಗಶ್ರೀ ಕಥೆ.

ರನ್ನನು ಕುರುಕುಲ ಲಲಾಮನು ವೈಶಂಪಾಯನ ಸರೋವರದಲ್ಲಿ ಅಡಗಿಕೊಳ್ಳುವಾಗ ಹಿಂದುಮುಂದಾಗಿ ಹೋದನು ಎಂದು ಮಾಡಿರುವ ವರ್ಣನೆಗೆ ಬೇರಾವ ಭಾರತದಲ್ಲೂ ಆಧಾರವಿಲ್ಲ. ಇದಕ್ಕೆ ಜನಪದ ಕಥೆಯೇ ಆಧಾರವಿರಬೇಕು.

ನಯಸೇನನ ಧರ್ಮಾಮೃತದಲ್ಲಿ ಗಾದೆಗಳ ಭಂಡಾರವೇ ಬಂದಿದೆ. ಅವನ ಚಿತ್ರಶಾಲೆಯ ವ್ಯಕ್ತಿಗಳು ಚಿರಪರಿಚಿತರಂತೆ ಕಾಣಿಸುತ್ತಾರೆ.

ಹರಿಹರ ಕವಿಯ ನೂತನ ಶರಣರ ಕಥೆಗಳಿಗೆ ಜನಶ್ರುತಿಯೇ ಆಧಾರವೆಂದು ತೋರುತ್ತದೆ.

ರಾಘವಾಂಕ ಗಾದೆಯನ್ನು ಕಾವ್ಯದಲ್ಲಿ ಬಳಸುವಲ್ಲಿ ಯಾರಿಗೂ ಕಡಮೆಯಿಲ್ಲ. ಉದಾ: ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು.

ಕುಮಾರ ವ್ಯಾಸನ ಗಂಡುಶೈಲಿಗೆ, ಕನ್ನಡದ ದೇಶಿಯೇ ಆಧಾರ. ಉದಾ: ಗಂಡರೋ ನೀವ್ ಭಂಡರೋ...

ಹರಿದಾಸರ ಕೀರ್ತನೆಗಳು, ಸಾಂಗತ್ಯಗಳಲ್ಲಿ ಜನಪದ ಜೀವನ ತದ್ವತ್ತಾಗಿ ಚಿತ್ರಿತವಾಗಿದೆ. ನಂಜುಂಡ ಕವಿಯ ಕುಮಾರರಾಮ ಸಾಂಗತ್ಯಕ್ಕೆ ಜನಪದ ಕಥೆಯೇ ಆಧಾರ. ಮಗನ ಮೇಲೆ ಮಲತಾಯಿಯ ಮೋಹಮಾಡಿದ ಅನಾಹುತವೇ ಇದರ ವಸ್ತು.

ಸರ್ವಜ್ಞನಂತೂ ಜನಪದ ಕವಿ ಆಗಿದ್ದಾನೆ. ಅವನ ಧಾಟಿ, ದೃಷ್ಟಿ, ಭಾಷೆ, ಜನಜೀವನದಿಂದ ಪಡೆದ ಸ್ಫೂರ್ತಿ.

ಆಧುನಿಕ ಸಾಹಿತ್ಯದಲ್ಲಿ ಬೇಂದ್ರೆಯವರು ಜನಪದ ಸಾಹಿತ್ಯದಿಂದ ಪ್ರಭಾವಿತರಾಗಿ ಅನೇಕ ಸುಂದರ ಕವಿತೆಗಳನ್ನು ಬರೆದಿದ್ದಾರೆ.

ಅಂದಿನ ಭಾಷಣ ಮಾಲೆಯ ಸಮಾರೋಪವನ್ನು ಮಾಡುತ್ತಾ ಕಾರಂತರು ಹೀಗೆಂದರು:

"ಜನಪದ ಸಾಹಿತ್ಯ ಜನಜೀವನದ ಮಾತುಗಳು. ಮಾತಿನ ಹಿಂದೆ ಅದಕ್ಕೆ ಪ್ರೇರಣೆ ಯಾವುದು? ಹೇಳುವುದು ಕಷ್ಟ. ಜನಪದವೆಂದರೇನು? ಕೇಳಿಕೆಗಳು, ಗಾದೆಮಾತುಗಳು. ಜನಪದ ಜೀವನದ ಸಂಸ್ಕೃತಿಯ ಚಿತ್ರಣವೇ ಜನಪದ ಸಾಹಿತ್ಯ. ಮತಧರ್ಮಗಳ ನಂಬಿಕೆಗಳು, ಮನಶ್ಶಾಸ್ತ್ರ, ಮಾನವಶಾಸ್ತ್ರ ಇವುಗಳಲ್ಲಿ ನಾವು ಜನಪದಸಾಹಿತ್ಯದ ಉಗಮವನ್ನು ಕಾಣುತ್ತೇವೆ.

ಜನಪದ ಜೀವನವು ಮಾತುಗಳ ಮೂಲಕ ಹೇಗೆ ಪ್ರಕಟವಾಗಿದೆಯೋ ಅದು Folk-lore. ಜಾನಪದ ಕವಿಗಳು ಹೇಗೆ ಜೀವನವನ್ನು ಚಿತ್ರಿಸಿದ್ದಾರೆ? ಎಷ್ಟು ವಿಧದ ಛಂದಸ್ಸು ಸಂಗೀತ ಈ ಜನತಾ ಕಾವ್ಯದೊಂದಿಗೆ ಕೂಡಿಕೊಂಡು ಬಂದವು? ಕೇವಲ ಒಬ್ಬ ವ್ಯಕ್ತಿ ತನ್ನ ಸುಖದುಃಖಗಳನ್ನು ತೋಡಿಕೊಳ್ಳುವುದರಲ್ಲಿ ಸೀಮಿತವಾಗದ ಕಾವ್ಯ ಜಾನಪದ ಸಾಹಿತ್ಯ. ಮನುಷ್ಯನ ಮನೋಧರ್ಮ, ಕಲ್ಪನೆ, ಗಾದೆಗಳು, ಒಗಟುಗಳು ಇವುಗಳ ಹಿನ್ನಲೆಯಲ್ಲಿ ವಿಚಾರಮಾಡಿದಾಗ ಮಾತ್ರ ಈ ಸಾಹಿತ್ಯ ಅರ್ಥವಾದೀತು. ಜನಪದ ಸಾಹಿತ್ಯ ಅನಕ್ಷರಸ್ಥರ ಸಾಹಿತ್ಯ. ಅವರು ತಮ್ಮ ಭಾವನೆಗಳನ್ನು ತೋಡಿಕೊಳ್ಳಲು ನಿರ್ಮಿಸಿದ ಸಾಹಿತ್ಯ. ಅಜ್ಜಿಯ ಕಥೆ, ಬೆಳೆದವರಿಗಾಗಿ ಹೇಳಿದ ಕಥೆ ಗ್ರಂಥಸ್ಥವಾಗಿಯೋ ಆಗದೆಯೋ ಬೆಳೆದಿರುತ್ತದೆ. ಇವುಗಳ ಹಿನ್ನಲೆ, ಸಂಕೇತವೇನು? ವಿವಿಧ ಭೂತಗಳು, ಹವಾಮಾನ, ನಕ್ಷತ್ರಗಳಿಗೆ ಅವರು ಕೊಟ್ಟ ಸ್ಥಾನ ಇವುಗಳನ್ನು ಅರಿಯುವುದು ಅವಶ್ಯಕ. ದೈವತ್ವವನ್ನು ಕಲ್ಪಿಸಿದ ಹಿಂದಿನವರ ಶಾಸ್ತ್ರವಿಧಿಗಳು, ಚೌಲ, ಮುಂಜಿ, ಭೂತದ ಪೂಜೆ, ಸ್ಥಳಪುರಾಣ, ಜನರಿಗೆ ಸಂಬಂಧಿಸಿದ ಕಥೆಗಳು ಅಜ್ಞಾತ ಕವಿಯಿಂದ ರಚಿತವಾಗಿ ಬರವಣಿಗೆಗೆ ಇಳಿದ ಸಾಹಿತ್ಯವಿದೆಂದು ಸ್ಥೂಲವಾಗಿ ಗುರುತಿಸಬಹುದು.

ಜನಪದ ಸಾಹಿತ್ಯದಲ್ಲಿ ಹೆಣ್ಣುಮಕ್ಕಳ ಪದಗಳಿವೆ. ಸಾವಿರ ಸ್ಥಳಿಕ ದೇವದೇವತೆಗಳ ಕಥೆಗಳಿವೆ. ಅವುಗಳನ್ನು ಹಾಡುವ ಸಂದರ್ಭಗಳೂ ಭಿನ್ನ. ಇವುಗಳ ಅರ್ಥವೇನು? ಅವುಗಳ ನಿರ್ಮಿತಿಯಲ್ಲಿ ಸ್ಥಳದ, ಧರ್ಮದ, ಸುತ್ತಲಿನ ಪರಿಸರದ ಪ್ರಭಾವ ಎಷ್ಟರಮಟ್ಟಿಗೆ ಬಿದ್ದಿದೆ? ಈ ಕ್ಷೇತ್ರದಲ್ಲಿ ಇನ್ನೂ ಕೆಲಸ ಆಗಬೇಕಾಗಿದೆ. ಪ್ರತಿಯೊಂದು ಹಳ್ಳಿಗೆ ಹೋಗಿ ಉಳಿದು ಬಂದಿರುವ ಜನಪದ ಸಾಹಿತ್ಯವನ್ನು ಬರೆದುಕೊಳ್ಳಬೇಕು. ಆ ಜಾನಪದ ಕಲ್ಪನೆಯನ್ನು

ಸ್ವಪ್ನ, ಉಪಮೆ, ಮತಧರ್ಮಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲೆತ್ನಿಸಿದರೆ ಮಾತ್ರ ಅವುಗಳು ಅರ್ಥವಾಗುವುದು. ಉದಾ: ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಜೋಕುಮಾರನ ಕಥೆ. ಈ ಹಾಡನ್ನು ಅರಿಯಲು ನಕ್ಷತ್ರಗಳ ಶಾಸ್ತ್ರ, ಹವಾಮಾನ, ಮಳೆ, ಬೆಳೆ, ಸುಗ್ಗಿ ಇವುಗಳನ್ನು ಅರಿಯುವುದು ಅವಶ್ಯಕವೆಂದು ಹೇಳಿದರು.

ಡಾ. ಶಿವರಾಮ ಕಾರಂತರು ಈ ಬಾರಿ ತುಂಬ ಲವಲವಿಕೆಯಿಂದ ಇದ್ದರು. ಅವರನ್ನು ನಾನು ಉಡುಪಿಯ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಕಂಡಿದ್ದಾಗ, ಒಂದು ರೀತಿಯಾಗಿ 'ಸಿನಿಕ' ರಾಗಿದ್ದರು. ಅವರು ಆಗಷ್ಟೇ ತಮ್ಮ ಮಗ ಹರ್ಷನನ್ನು ಕಳೆದುಕೊಂಡಿದ್ದರಂತೆ. ಅವರ ಬದುಕಿನಲ್ಲಿ ದುಃಖದ ಕಾರ್ಮೋಡ ಎದ್ದಿತ್ತು. ನಿರಾಶಾವಾದದ ಬಿರುಗಾಳಿ ಬೀಸುತ್ತಿತ್ತು. ಅಂತಹ ವಾತಾವರಣದಲ್ಲಿ ಅವರ ಮಾತುಕಥೆಗಳು ನಿರಾಶಾವಾದವನ್ನು ಪ್ರಕಟಿಸಿದ್ದವು. ಈ ಬಾರಿಯ ಕಾರಂತರಲ್ಲಿ ಹೆಚ್ಚು ಲವಲವಿಕೆ ಪ್ರಕಟವಾಗಿತ್ತು. ನಮ್ಮ ಜತೆಯಲ್ಲಿ ಅವಕಾಶ ಸಿಕ್ಕಿದಾಗ ಬಿಚ್ಚುಮನಸ್ಸಿನಿಂದ ಹರಟಿದ್ದರು.

ನಮ್ಮ ಅತಿಥಿ ಗೃಹದಲ್ಲಿ ನಮ್ಮೆಲ್ಲರ ವಸತಿಗೆ ಉತ್ತಮ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದರು–ಸಮ್ಮೇಳನದ ಕಾರ್ಯಚಾಲಕರು.

ಸಾಲಾಗಿ ಜೋಡಿಸಿದ್ದ ಬಿಳಿಯ ಹಾಸಿಗೆಗಳಿಂದ ಕೂಡಿದ ಮಂಚಗಳು ಸುಸಜ್ಜಿತವಾದ ಆಸ್ಪತ್ರೆಯ ನೆನಪನ್ನು ಅವರಿಗೆ ಹುಟ್ಟಿಸಿರಬೇಕು. ಅಂತಲೇ ಅವರು ಆ ದಿನ ನಮ್ಮಲ್ಲಿಗೆ ಬಂದವರೇ "Are all the patients in the bed" ಎಂದು ಉದ್ಗಾರ ತೆಗೆದಿದ್ದರು.

ಸದ್ಯ ಸಾಹಿತ್ಯದ ಹೆರಿಗೆಗೆ ಬಂದವರೆಂದು ನಮ್ಮನ್ನು ಅವರು ಬಾಯಿಬಿಟ್ಟು ಟೀಕಿಸಲಿಲ್ಲ, ಅಷ್ಟೇ ಸಂತೋಷ.

'ಅಲೋಕ'ದಲ್ಲಿ ಲೇಖಕರ ಸಲುವಾಗಿ Writers Home ಒಂದನ್ನು ವಿಶ್ವವಿದ್ಯಾನಿಲಯ ಸಜ್ಜುಗೊಳಿಸುವುದಾಗಿ ಯಾರೋ ಹೇಳಿದಾಗ, ಕಾರಂತರು "ಹೌದು, ಅಲ್ಲಿ Writer's 'ಹೋಮ' ಆಗುತ್ತದೆ" ಎಂದು ವ್ಯಂಗ್ಯ ತುಳುಕಿಸಿದ್ದರು.

ಇನ್ನೊಮ್ಮೆ ದೇ. ಜ. ಗೌ. ಅವರೊಡನೆ ಸಭಾಂಗಣದ ಬಳಿಗೆ ಬರುತ್ತಿರುವಾಗ, Humanities Block ನ ಮುಂದೆ ಇದ್ದ ತಾವರೆ ಕೊಳವನ್ನು ನೋಡಿ ಕಾರಂತರು ಮೆಚ್ಚಿಕೆ ಸೂಚಿಸಿದರು.

"ಈ ಕೊಳದಲ್ಲಿ ಹೂಗಳು ಅರಳಿದಾಗ ನೋಡಲು ಸೊಗಸು. ಆದರೆ ನಮ್ಮ ವಿದ್ಯಾರ್ಥಿಗಳು ಕಲ್ಲೆಸೆದು ಹಾಳು ಮಾಡುತ್ತಾರೆ" ಎಂದು ದೇ. ಜ. ಗೌ. ಅವರು ಲೋಕಾಭಿರಾಮವಾಗಿ ಹೇಳಿದರು.

"ಹೌದು, ಹೌದು, ನಮ್ಮ ಜನರೇ ಹಾಗೆ. ಯಾರನ್ನೂ ತಲೆ ಎತ್ತಲು ಬಿಡುವುದೇ ಇಲ್ಲ" ಎಂದರು ಕಾರಂತರು, ತಮ್ಮ ಸಹಜ ರೀತಿಯಲ್ಲಿ.

ಮೊದಲನೆಯ ದಿನದ ಚರ್ಚೆ ಮುಗಿದಮೇಲೆ ಸಂಜೆ ಮಹಾರಾಜಾ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಬಾಳಪ್ಪ ಹುಕ್ಕೇರಿ ಅವರಿಂದ ಜನಪದ ಗೀತೆಗಳು, ಮತ್ತು ಕಲಾಶಾಲೆಯ ಹೆಣ್ಣುಮಕ್ಕಳಿಂದ ನೃತ್ಯಗಳು ನಡೆದವು.

ದಿನಾಂಕ ೯–೧೨–೧೯೬೬

ಮಾನಸಗಂಗೋತ್ರಿ

ನನಗೆ ನಾಲ್ಕು ಗಂಟೆಗೇ ಎಚ್ಚರವಾಯಿತು. ಯಾರೋ ಉದಯರಾಗ ಹೇಳಿ ನನ್ನನ್ನು ನಿದ್ರೆಯಿಂದ ಎಚ್ಚರಿಸಿದಂತೆ ಭಾಸವಾಗಿ ಕಣ್ಣು ತೆರೆದೆ.

ಶ್ರೀ ಬಾಳಪ್ಪ ಹುಕ್ಕೇರಿ ಅವರು ಮಹಾರಾಷ್ಟ್ರದಲ್ಲಿ ಪ್ರಸಿದ್ಧವಾದ "ಘನಶ್ಯಾಮ ಸುಂದರ . . ." ಗೀತವನ್ನು ತಮ್ಮ ಇಂಪಾದ ಕಂಠದಲ್ಲಿ ಮೆಲ್ಲನೆ ಹೇಳಿಕೊಳ್ಳುತ್ತಿದ್ದರು.

ನಾನು ಅವರ ಹಾಡಿಕೆಗೆ ಪ್ರೋತ್ಸಾಹವನ್ನು ಕೊಟ್ಟೆ.

ಆಗ ಹಾಡಿನ ಹೊನಲು ಆರಂಭವಾಯಿತು : ನಿಜವಾದ ಬಾಳಪ್ಪನವರ ವ್ಯಕ್ತಿತ್ವದ ವಿರಾಟ ದರ್ಶನ.

ಅವರದು ಮಗುವಿನಂತಹ ಸ್ವಭಾವ. ಎಲ್ಲರೊಡನೆ ಬಡಬಡನೆ ಬಿಚ್ಚುಮಾತು. ಮಾತಿಗೆ ಮುಂಚೆ, "ಅಲ್ವೇನ್ರಿ ಸಾಹೇಬ್ರೆ" ಎಂಬ ಉದ್ಗಾರ. ಅವರ ಮಾತನ್ನು ಕೇಳುವುದೇ ಸೊಗಸು. ಅವರ ಕೋಮಲ ಕಂಠದಿಂದ ಬಸವ, ಅಲ್ಲಮಪ್ರಭು, ಮಹಾದೇವಿ, ಕನಕ, ಪುರಂದರ, ಹೆಣ್ಣುಮಕ್ಕಳ ಹಾಡುಗಳು, ಶರೀಫ ಸಾಹೇಬರ ವಚನಗಳು ಕೇಳುತ್ತಿದ್ದರೆ ನಾವು ಈ ಲೋಕವನ್ನು ಮರೆಯುತ್ತಿದ್ದೆವು. ನನಗಂತೂ ಅದೊಂದು ಅಪೂರ್ವ ರಸಾನುಭವ.

ನನ್ನಂತೆ ಅಲ್ಲಿದ್ದ ಎಷ್ಟು ಜನ ಸಾಹಿತಿಗಳು ಅವರ ಗಾಯನವನ್ನು ಮೆಚ್ಚಿಕೊಂಡರೋ ಕಾಣೆ. ಏಕೆಂದರೆ ಮರುದಿನ ಅವರಿಂದ ಗಾಯನ ಹೊರಡಲಿಲ್ಲ. ಅವರು ತಮ್ಮ ಸಮೀಪದಲ್ಲಿ ವಾಸ್ತವ್ಯ ಮಾಡಿದ್ದ ಬಸವರಾಜ ಕಟ್ಟೀಮನಿಗೆ ಹೆದರಿದಂತೆ ಕಾಣುತ್ತದೆ. ಹೇಗೋ ಬಾಯಿಗೆ ಬ್ರೇಕು ಹಾಕಿದ್ದರು.

ಈ ದಿನ ಬೆಳಗಿನ ಉಪಾಹಾರ ಮುಗಿದ ಮೇಲೆ ಪ್ರೊ. ಸ. ಸ. ಮಾಳವಾಡರ ಅಧ್ಯಕ್ಷತೆಯಲ್ಲಿ 'ಸ್ವಾತಂತ್ರ್ಯೋತ್ತ

ಕನ್ನಡ ಸಾಹಿತ್ಯದ ಒಲವು ನಿಲುವು'ಗಳನ್ನು ಕುರಿತು ಗೋಷ್ಠಿಯ ಕಾರ್ಯಕ್ರಮ ಆರಂಭವಾಯಿತು.

'ಭಾಷೆ, ಶೈಲಿ ಮತ್ತು ತಂತ್ರ'ಗಳನ್ನು ಕುರಿತು ಅನಾರೋಗ್ಯದಿಂದ ಇದ್ದರೂ ಡಾ. ಪ್ರಭುಶಂಕರರು ಬಂದು ತಮ್ಮ ಭಾಷಣವನ್ನು ಓದಿದರು.

ಅವರು ತಮ್ಮ ಭಾಷಣದಲ್ಲಿ ಸಾಹಿತ್ಯದ ಬಗೆಗೆ ನಿಷ್ಠುರವಾದ ಸತ್ಯವನ್ನು ಪ್ರಕಟಿಸುವುದಾಗಿ ಮೊದಲೇ ಎಚ್ಚರಿಕೆ ನೀಡಿ ತಮ್ಮ ವಿಚಾರಗಳನ್ನು ಸಭಿಕರ ಮುಂದೆ ಇಟ್ಟರು.

ಸ್ವಾತಂತ್ರ್ಯೋತ್ತರದ ಸಾಹಿತ್ಯದ ಹರವು ಹೆಚ್ಚು. ಸಾಹಿತ್ಯದ ಎಲ್ಲ ಪ್ರಕಾರದ ವ್ಯಾಪ್ತಿಯನ್ನು ಮಾಡಿಕೊಡುವುದು ಕಷ್ಟ. ಎರಡು ಪ್ರಮುಖ ಸಂಪ್ರದಾಯಕ್ಕೆ ಕುಠಾರಪ್ರಾಯವಾದ ಮಾತನ್ನು ಹೇಳಬಯಸುತ್ತೇನೆ. ೧) ಈ ಶತಮಾನದ ಆರಂಭದಲ್ಲಿ ಆರಂಭವಾದ ನವೋದಯ ಸಾಹಿತ್ಯ, ೨) ನವ್ಯ ಸಾಹಿತ್ಯ, ೩) ಸಮನ್ವಯ ಸಾಹಿತ್ಯ-ಇವುಗಳನ್ನು ಕುರಿತು ಕೆಲವು ಮಾತುಗಳನ್ನು ಆಡುತ್ತೇನೆ.

ಕುವೆಂಪುರವರ ರಾಮಾಯಣ ದರ್ಶನವು ಸ್ವಾತಂತ್ರ್ಯೋತ್ತರದಲ್ಲಿ ನಿರ್ಮಾಣವಾದರೂ, ಹಳೆಗನ್ನಡ, ನಡುಗನ್ನಡ ಶೈಲಿಯನ್ನು ಕಾಣುತ್ತೇವೆ. ವಸ್ತು ಪೌರಾಣಿಕವಾದರೂ ನವೀನ ದೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. ಇಲ್ಲಿನದು ಧ್ವನಿಪ್ರಪಂಚ, ವರ್ಣನೆಗಳು, ಮಹೋಪಮೆಗಳು. ಇದರದೇ ಒಂದು ಗುಂಪು. ಅವರ ಇತ್ತೀಚಿನ ಕಾವ್ಯಗಳಲ್ಲಿ ಕಾವ್ಯಸತ್ವ ತೀರಿತೇನೋ ಎಂದು ತಿಳಿದಿದ್ದವರಿಗೆ ಅವರ ಅನಿಕೇತನ, ಮನೆಮನೆಯ ತಪಸ್ವಿನಿಗೆ ಮೊದಲಾದವು ಉತ್ತಮ ಕವಿತೆಗಳನ್ನು ಬರೆಯುವ ಶಕ್ತಿ ಅವರಲ್ಲಿ ಉಡುಗಿಲ್ಲ ಎಂದು ಸಮಾಧಾನ ಹೇಳಿದವು. ಅವರ ಇತ್ತೀಚಿನ ಕವನ 'ಪ್ರೇತಕ್ಯೂ' ಅದ್ಭುತವಾದ ನವೀನ ಉಪಮೆಗಳಿಂದ ಕೂಡಿದ ಉಲ್ಲೇಖನಾರ್ಹ ಕವನ. ತಮ್ಮ ಹಿತವಾದ ಕನ್ನಡ, ತೀವ್ರವಾದ ಸಂವೇದನೆ, ನಾದಮಾಧುರ್ಯ ಕಲ್ಪನಾವಿಲಾಸ, ದರ್ಶನಗಳಿಂದ ನಮ್ಮ ಮನಸ್ಸನ್ನು ಸೂರೆಗೊಂಡಿದ್ದ ಬೇಂದ್ರೆ ಅವರ ಇತ್ತೀಚಿನ ಕವನಗಳು ನಮ್ಮನ್ನೆಲ್ಲ ನಿರಾಶೆಗೊಳಿಸುತ್ತವೆ. ಅವು ಶಬ್ದಗಳ ಗಡಿಬಿಡಿ, ಅತಿ ಆಧ್ಯಾತ್ಮಿಕತೆಗಳಿಂದ ಮುಚ್ಚಿದ ಬಾಗಿಲುಗಳಾಗಿವೆ.

ಪು.ತಿ.ನ. ಅವರ 'ಮಲೆದೇಗುಲ'ವನ್ನು ಬಿಟ್ಟರೆ ಅವರ ಕಾವ್ಯ ಕನ್ನಿಕೆ ಬಂಜೆ ಎಂದೇ ಹೇಳಬೇಕು. ಸಂಸ್ಕೃತ ಭೂಯಿಷ್ಠವಾದ ಶೈಲಿ, ಸಹೃದಯರ ಬಾಗಿಲನ್ನು ಮುಟ್ಟಲಿಲ್ಲ. ನವ್ಯ ಪಂಥಕ್ಕೆ ಇಳಿಯುವ ಮುನ್ನ ಕೆ.ಎಸ್.ನರಸಿಂಹಸ್ವಾಮಿ ತಮ್ಮ ಕವನಗಳ ತಿಳಿಯಾದ ಭಾಷೆ, ಕಾವ್ಯತಂತ್ರ, ನವುರಾದ ಭಾವನೆಗಳಿಂದ ಕಾವ್ಯ ರಸಿಕರ ಮನಸ್ಸನ್ನು ಸೂರೆಗೊಂಡಿದ್ದರು. ಮನೆಗೆ ಬಂದ ಹೆಣ್ಣು ಇದಕ್ಕೆ ಸಾಕ್ಷಿ. ಅವರ ಕವನಗಳನ್ನು ಕುರಿತು ಡಾ. ಶಿವರುದ್ರಪ್ಪನವರು ಹೇಳಿದಂತೆ "ಸುಲಲಿತ ವರ್ಣಶಿಲ್ಪಿ ನವ್ಯ ಕಾವ್ಯಕ್ಕೆ ತೊಡಗಿದಾಗ ಅಸ್ಪಷ್ಟತೆ ತಂದುಕೊಂಡು, ತನ್ನ ಕಾವ್ಯವನ್ನು ಶಿಲಾಲತೆಯನ್ನಾಗಿಸಿದ್ದಾನೆ."

ಜಿ. ಪಿ. ರಾಜರತ್ನಂ ಅವರ ನಾಗನ ಪದಗಳು ಋಜು ಶುದ್ಧಿ, ಆಡುಭಾಷೆಯ ಮೇಲಿನ ಪ್ರಭುತ್ವಗಳಿಂದ ನಮ್ಮ ಮೆಚ್ಚಿಗೆಗೆ ಪಾತ್ರವಾಗಿವೆ. ಬಿಂದಿಗೆ ಹಿಡಿದ ಹೆಣ್ಣು ಒಂದು ನಿದರ್ಶನ.

ಪರಮೇಶ್ವರಭಟ್ಟ ಅವರು ಇಂದ್ರಚಾಪ, ಚಂದ್ರವೀದಿಗಳಲ್ಲಿ ತಮ್ಮನ್ನು ತಾವು ಕಂಡಿದ್ದಾರೆ, ಗುರುತಿಸಿಕೊಂಡಿದ್ದಾರೆ. ಭಾಷೆ ಮೋಹಕವಾದುದು. ಛಂದಸ್ಸು-ಸಾಂಗತ್ಯ. ಕವಿಯ ಪ್ರತಿಭೆ ಮೆಚ್ಚುವಂತಿದೆ.

ವಿ ಕೃ. ಗೋಕಾಕರು ಇತ್ತೀಚಿಗೆ ಪ್ರಕಟಿಸಿದ 'ಇಂದಲ್ಲ ನಾಳೆ' ಒಂದು ವಿನೂತನವಾದ ಚಂಪೂಕೃತಿ. ಅವರು ಸಾಹಸಿಗರು. ಅವರ ಈ ಕೃತಿಯಲ್ಲಿ ಕಾವ್ಯವೆನ್ನಬಹುದಾದ ಒಂದು ಪಂಕ್ತಿಯನ್ನೂ ಹುಡುಕುವುದು ಕಷ್ಟವಾಗಿದೆ.

ಗೋಪಾಲಕೃಷ್ಣ ಅಡಿಗರು ತಾವು ನವೋದಯ ಕಾಲದಲ್ಲಿ ಪಡೆದ ಸಿದ್ಧಿಯಿಂದ ಬೇಸತ್ತು ನವ್ಯ ಮಾರ್ಗ ತುಳಿದಿದ್ದಾರೆ. 'ಯಾವ ಮೋಹನಮುರಳಿ ಕರೆಯಿತು ದೂರ ತೀರಕ್ಕೆ ನಿನ್ನನು . . .' ಅವರ ರಮ್ಯಕವನದ ಶಿರೋರತ್ನ. ಅವರಿಗೆ ಹಿಂದಣ ಸಂಪ್ರದಾಯದ ಪದಬಂಧ, ಪ್ರತಿಮಾವಿಧಾನ ಅಭಿವ್ಯಕ್ತಿಗೆ ಮಾಧ್ಯಮವಾಗಲಿಲ್ಲವೆನಿಸಿರಬೇಕು. ಅವರು ಎಲಿಯಟ್ ಕವಿಯಿಂದ ಸ್ಫೂರ್ತಿ ಪಡೆದು ನವ್ಯ ಪಂಥಕ್ಕೆ ತಿರುಗಿದರು.

ಅವರಂತೆ ಯೋಚಿಸಿದ ಇತರ ತರುಣರು—ರಾಮಚಂದ್ರಶರ್ಮ, ತೇಜಸ್ವಿ, ತರುಣರಲ್ಲದ ಕೆ. ಎಸ್. ನರಸಿಂಹಸ್ವಾಮಿ ಅಂಥವರೂ ನವ್ಯ ಕಾವ್ಯಕ್ಕೆ ತಿರುಗಿದರು.

ತಮ್ಮ ಸಮುದ್ರ ಗೀತೆಗಳಲ್ಲಿ ಕಾವ್ಯವನ್ನು ಆರಂಭಿಸಿದ ಗೋಕಾಕರು, ಸಮುದ್ರದ ಸ್ವಾತಂತ್ರ್ಯವು ನವ್ಯಕಾವ್ಯದಲ್ಲಿ ಹುಟ್ಟಿಬರಲಿ ಎಂದಿದ್ದಾರೆ.

ಆದರೆ ಇತ್ತೀಚಿನ ನವ್ಯ ಕವಿಗಳಲ್ಲಿ ಕಾವ್ಯ ಸೌಂದರ್ಯವು ಏಕೋ ಕಾಣೆಯಾಗಿದೆ. ನವ್ಯ ಕಾವ್ಯ ಹಾಗೂ ನವ್ಯ ಕಥೆಗಳ ವ್ಯತ್ಯಾಸ ಗುರುತಿಸುವುದು ಕಷ್ಟವಾಗಿದೆ. ಇವುಗಳಲ್ಲಿ ಬಳಕೆ ಮಾತು, ನವೀನ ಪದ ಪ್ರಯೋಗ, ಪ್ರತಿಮಾವಿಧಾನ, ಬುದ್ಧಿ ಪ್ರಾಧಾನ್ಯತೆ, ಪ್ರಾಮಾಣಿಕತೆ ಸಾಮಾಜಿಕ ಪ್ರಜ್ಞೆಗಳನ್ನು ಗುರುತಿಸಬಹುದಾದರೂ,

ಹೊಸ ಪೀಳಿಗೆಯ ಕವಿಗಳಲ್ಲಿ ಪ್ರತಿಭೆಯ ದಟ್ಟದಾರಿದ್ರ್ಯ ವನ್ನು ಕಾಣುತ್ತೇವೆ. ಅವರ ಇತ್ತೀಚಿನ ಕೆಲ ಕೃತಿಗಳನ್ನು ನೋಡಿದರೆ ಅವರು ಪಾಶ್ಚಾತ್ಯರ ಕೊಳೆತು ನಾರುತ್ತಿರುವ ಕಾಲು ಚೀಲಕ್ಕೆ ಕಾಲನ್ನು ಚಾಚಿದಂತೆ ತೋರುತ್ತದೆ. ಇಲ್ಲಿ ಅನಂತಮೂರ್ತಿ ಅವರ ಹೊಸ ಕ್ಷಿತಿಜವನ್ನು ನಿದರ್ಶನವಾಗಿ ತೆಗೆದುಕೊಳ್ಳಬಹುದು. ಇತ್ತೀಚಿನ ನವ್ಯ ಕಾವ್ಯದ ಕೆಲವು ವರ್ಣನೆಗಳು ಪುಸ್ತಕಕ್ಕಿಳಿಸಿದ ಕಕ್ಕಸು ಗೋಡೆಗಳಂತೆ ಕಾಣುತ್ತವೆ.

ಆಧುನಿಕ ನವ್ಯ ಕಾವ್ಯದ ಬಗೆಗೆ ಒಂದು ಮಾತಿನಲ್ಲಿ ಹೇಳಬಹುದಾದರೆ, ಅದು All subjects notes of a bad student ಎಂಬಂತೆ ಕಾಣುತ್ತದೆ.

ಪ್ರಗತಿಶೀಲ ಸಾಹಿತಿಗಳೇ ಈಗ ಸಂತರಾಗಿ ಕಾಣುತ್ತಿದ್ದಾರೆ. ಇದು ಕಾವ್ಯತತ್ವದ ಅಸ್ತಿತ್ವದ ಪ್ರಶ್ನೆ. ಇಂದಿನ ನವ್ಯ ಕಾವ್ಯವೆಂದು ಬರುತ್ತಿರುವ ಹಲವು ಕೃತಿಗಳು ಸಾಮಾನ್ಯ ಓದುಗನನ್ನು ಬೆದರಿಸುವ ಬೆದರು ಗೊಂಬೆಗಳೇ ಆಗಿವೆ.

ಮೊದಲು ಪರಂಪರೆಯ ಹಾದಿಯಲ್ಲಿ ನಡೆದು ನವ್ಯತೆಗೆ ಮನಸೋತ ಶಿವರುದ್ರಪ್ಪ ಮತ್ತು ಕಣವಿ ಇವರಲ್ಲಿ ರಮ್ಯ ಹಾಗೂ ನವ್ಯಕಾವ್ಯದ ರುಚಿ, ಶುಚಿಗಳನ್ನು ಕಾಣುತ್ತೇವೆ. ಇವರ ಕಾವ್ಯವನ್ನು ಯಾರಾದರೂ ಧೈರ್ಯವಾಗಿ, ಸಂತೋಷದಿಂದ ಓದಬಹುದಾಗಿದೆ. ಒಮ್ಮೊಮ್ಮೆ ಕಣವಿಯವರು ಅನುಕರಣದ ಪ್ರಲೋಭನೆಗೆ ಸಿಕ್ಕಿದಂತೆ ಕಾಣುತ್ತಾರೆ. ಶಿವರುದ್ರಪ್ಪನವರ ಕಾವ್ಯದಲ್ಲಿ ಅನಾವರಣ ಪ್ರಯತ್ನಪೂರ್ವಕ, ಅಸ್ಪಷ್ಟತೆ, ಕ್ಲಿಷ್ಟತೆ ಕಡಿಮೆ.

ಸಣ್ಣಕಥೆಗಳೆಂದು ಬರೆಯುತ್ತಿರುವ ಲಂಕೇಶ ಮತ್ತು ತೇಜಸ್ವಿ, ಅನಂತಮೂರ್ತಿ ಅವರ ಕೃತಿಗಳಲ್ಲಿ ಹದಕ್ಕೆ ತೆಗೆದುಕೊಳ್ಳದ ಅಪಕ್ವತೆ ಕಾಣುತ್ತದೆ. ಇದು ಹೆಳವನ ಕೈಗೆ ಬಂದ ಲಗಾಮಿನಂತೆ ತೋರುತ್ತದೆ.

ಆದರೆ ನವ್ಯ ಕಾದಂಬರಿಗಾರನೆನಿಸದಿದ್ದರೂ ಕಾರಂತರು ಸ್ವತಂತ್ರವಾದ ಪ್ರತಿಭೆ, ತೀಕ್ಷ್ಣಸಂವೇದನೆಗಳಿಂದ ತಮ್ಮದೇ ಒಂದು ಗುಂಪಾಗಿ ನಿಂತಿದ್ದಾರೆ.

ಪ್ರಶ್ನೆ : ಹಾಗಾದರೆ ಗೋಕಾಕರು ನವ್ಯ ಕಾವ್ಯಕ್ಕೆ ಸಲ್ಲಿಸಿದ ಕಾಣಿಕೆ ಏನೂ ಇಲ್ಲವೆ ?

ಉತ್ತರ: ಏನೂ ಇಲ್ಲ.

ಪ್ರಶ್ನೆ : ಬೇಂದ್ರೆ ಅವರ ಇತ್ತೀಚಿನ ಕೃತಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉತ್ತರ : ಅಜೀರ್ಣವಾದ ಆಧ್ಯಾತ್ಮ.

ಪ್ರಭುಶಂಕರರ ಭಾಷಣ ದೀರ್ಘ ಚರ್ಚೆಗೆ ಎಡೆ ಮಾಡಿಕೊಟ್ಟಿತು.

ಅದು ಸಭಿಕರಲ್ಲಿ ಮಿಶ್ರಿತ ಭಾವನೆಗಳನ್ನು ಉಂಟುಮಾಡಿತು. ಯುವರಾಜಾ ಕಾಲೇಜಿನ ನಾಯಕ್ ಎಂಬುವರು ನವ್ಯಕವಿಗಳ ಪಕ್ಷ ಕಟ್ಟಿ ಭಾಷಣಕಾರರ ಒಂದೊಂದು ಮಾತನ್ನೂ ಖಂಡಿಸಿದರು. ಸಭೆ ಗೊಂದಲದಲ್ಲಿ ಮುಗಿಯಬಹುದೆಂದು ಹೆದರಿದ ಅಧ್ಯಕ್ಷರು ಈ ವಾಗ್ವಾದವನ್ನು ಸಂಜೆಗೆ ಹಾಕಿದರು. ಸಂಜೆ ಇದೇ ವಿಷಯದ ಬಗ್ಗೆ ಪ್ರಭುಶಂಕರರ ಅನೇಕ ಟೀಕೆಗಳ ಬಗ್ಗೆ (ಆರೋಪಣೆ?) ಮತ್ತೆ ಬಿರುಸಿನ ಪ್ರಶ್ನೋತ್ತರ, ಚರ್ಚೆಗಳು ನಡೆದವು.

ಎಲ್ಲವನ್ನೂ ಕೇಳಿಕೊಂಡಿದ್ದ ಉಸ್ಮಾನಿಯ ಕಾಲೇಜಿನ ಹೆಚ್. ಬಿ. ಕುಲಕರ್ಣಿಯವರು ಎದ್ದು ಬಂದು ಈ ಚರ್ಚೆಯನ್ನು ಸಮಾರೋಪಗೊಳಿಸಿದರು. ತಾವು ಪ್ರಭುಶಂಕರ ಅವರ ಭಾಷಣವನ್ನು ಕೇಳಿ ಅವರಿಗೆ ಹೀಗೆ ಹೇಳಿದುದಾಗಿ ತಿಳಿಸಿದರು. " Mr. Prabhu Sankar, I completely disagree with you, but I like you, because you are honest." ಶ್ರೀಯುತರು ತಮ್ಮ ಸ್ಪಷ್ಟೋಕ್ತಿಗಳನ್ನು ಆಡಿದ್ದಾರೆ. ಆದರೆ ಅವರು ನವ್ಯ ಕಾವ್ಯವನ್ನು ಅಭ್ಯಾಸ ಮಾಡಲು ಪ್ರಯತ್ನಿಸಿದಂತೆ ಕಾಣುವುದಿಲ್ಲ. ಬಹುಶಃ ಅವರಿಗೆ ಆ ಬಗ್ಗೆ ಪೂರ್ವಗ್ರಹ ಇರಬಹುದು. ಕೆಲವರಿಗೆ ಮಾವಿನ ಹಣ್ಣು ಸೇರುವುದಿಲ್ಲ. ಅಂದಮಾತ್ರಕ್ಕೆ ಅದರಲ್ಲಿ ರುಚಿ ಇಲ್ಲವೆಂದಲ್ಲ. ಅವರ ಉದ್ಗ್ರಂಥ ಭಾವಗೀತೆಯನ್ನು ನಾನು ಓದಿದ್ದೇನೆ. ಆದರೆ ಅವರಲ್ಲಿ ವೈಜ್ಞಾನಿಕ ದೃಷ್ಟಿ ಸಾಲದೆಂದು ನನ್ನ ಭಾವನೆ" ಎಂದು ಹೇಳಿ ಪಾಶ್ಚಾತ್ಯ ದೇಶದಲ್ಲಿ ಈ ನವ್ಯಕಾವ್ಯ ಬೆಳೆದು ಬಂದ ರೀತಿಯನ್ನೂ ಇಂದಿನ ಅದರ ಸ್ಥಾನಮಾನವನ್ನೂ ಕುರಿತು ವಿದ್ವತ್ಪೂರ್ಣವಾಗಿ ಮಾತನಾಡಿದರು.

ನನಗೆ ಅವರ ನಿಷ್ಪಕ್ಷಪಾತವಾದ ಸಮತೋಲನ ವಿಮರ್ಶಾದೃಷ್ಟಿಯ ಭಾಷಣ ತುಂಬ ಹಿಡಿಸಿತು.

ಹೆಚ್. ಬಿ. ಕುಲಕರ್ಣಿ ಅವರು ಕನ್ನಡದಲ್ಲಿ ಹೇಮಂತ ಎಂಬ ಹೆಸರಿನಲ್ಲಿ 'ಭಗ್ನಮಂದಿರ' ವೆಂಬ ಉತ್ತಮ ಕಾದಂಬರಿಯನ್ನು ಬರೆದಿದ್ದಾರೆ. ಹೈದರಾಬಾದಿನಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಭಾಷೆಯ ರೀಡರ್ ಆಗಿದ್ದಾರೆ. ಅವರು ಸಾಹಿತ್ಯದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅಮೇರಿಕೆಯಲ್ಲಿ ಆರು ವರ್ಷ Visiting Professor ಆಗಿ ಲೇಕ್ ಸಿಟಿಯ ಯುಥ್ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿದ್ದಾರೆ. ತಮ್ಮ ಸಂಶೋಧನ ಪ್ರಬಂಧ—ಸ್ಟಿಫನ್ ಸ್ಪೆಂಡರನ ಮೇಲಿನ

ಗ್ರಂಥ ಇಂಗ್ಲೆಂಡಿನಲ್ಲಿ ಸದ್ಯದಲ್ಲೇ ಪ್ರಕಟಿಸಲಿದ್ದಾರೆ. ಇಂಥವರು ಮಾತನಾಡಿದರೆ ಕೇಳುವುದಕ್ಕೆ ಸ್ವಾರಸ್ಯವಿರುವುದಿಲ್ಲವೆ?

ಇವರು ಸ್ನೇಹಪರರು; ವಿನಯಶೀಲರು. ಹೊಸ ಪರಿಚಯಕ್ಕೆ ಲಜ್ಜಾಶೀಲರು. ಕನ್ನಡದಲ್ಲೇಕೆ ಈಚೆಗೆ ಏನನ್ನೂ ಬರೆಯುತ್ತಿಲ್ಲವೆಂದು ನಾನು ಅವರನ್ನು ಕೇಳಿದಾಗ, "ಈಗ ನನಗೆ ಕನ್ನಡವೇ ಮರೆತು ಹೋಗಿದೆ" ಎಂದು ಉತ್ತರ ಕೊಟ್ಟರು. ಆದರೆ ಅವರು ಧೂಮಕೇತು ಕವನ ಓದಿದಾಗ "ಈ ಮಾತು ಸುಳ್ಳು," ಅದು ಅವರ ಸೌಜನ್ಯ-ಎಂದು ತಿಳಿಯುವಂತಾಯಿತು.

ಬೆಳಗಿನ ಭಾಷಣದ 'ಬಿರುಮಳೆ' ನಿಂತ ಮೇಲೆ ಶ್ರೀ ಮಾಲಿ ಅವರ ಜತೆಯಲ್ಲಿ ಸಮ್ಮೇಳನಕ್ಕೆ ಬಂದಿದ್ದ ಅತಿಥಿಗಳೆಲ್ಲರ ಫೋಟೋ ಕಾರ್ಯಕ್ರಮವಿತ್ತು. ಇದಕ್ಕೆ ಕುವೆಂಪುರವರು ಬಂದು ಪಾಲುಗೊಂಡುದು ಒಂದು ವಿಶೇಷ.

ಮುಂದಿನ ಭಾಷಣಕಾರರು ಭಾಷಣಗಳನ್ನು ಮುಂದುವರೆಸುವ ಮುನ್ನ ಹೊರಗಿನಿಂದ ಬಂದಿದ್ದ ಎಲ್ಲ ಲೇಖಕರ ಪರಸ್ಪರ ಪರಿಚಯದ ಕಾರ್ಯಕ್ರಮವಿತ್ತು.

ಇದರಲ್ಲಿ ಭಾಗವಹಿಸಿದ ತಿ. ತಾ. ಶರ್ಮರು ತಾವು ಪತ್ರಿಕೋದ್ಯೋಮ ಕೈಗೊಳ್ಳಲು ಮಹಾರಾಜಾ ಕಾಲೇಜು ಹೇಗೆ ಕಾರಣವಾಯಿತೆಂಬುದನ್ನು ಸ್ವಾರಸ್ಯವಾಗಿ ತಿಳಿಸಿದರು.

ಸನ್ಯಾಸಿಯಾಗಲು ನಿರ್ಧರಿಸಿದ್ದ ಎಲ್. ಬಸವರಾಜು ಅವರು ಹೇಗೆ ಗೃಹಸ್ಥರಾದರೆಂಬುದನ್ನು ತಿಳಿಸಿದರು.

ಅವರು ಪರಿಷ್ಕರಿಸಿ ಪ್ರಕಟಿಸಿದ ಅಲ್ಲಮನ ವಚನ ಚಂದ್ರಿಕೆ, ಅಕ್ಕಮಹಾದೇವಿ ವಚನಗಳು, ಶಿವದಾಸ ಗೀತಾಂಜಲಿ-ಅವರ ಪಾಂಡಿತ್ಯಕ್ಕೆ ಸಾಕ್ಷಿ.

ಕೃಷ್ಣಮೂರ್ತಿ ಪುರಾಣಿಕರು, ತಾವು ನಾಲ್ಕು ಗಂಟೆಗೇ ಎದ್ದು 'ಚಾ' ಮಾಡಿಕೊಂಡು ಬೆಳಗಿನ ಒಂಭತ್ತರವರೆಗೆ ಹೇಗೆ ಕುಳಿತು ಇಷ್ಟೆಲ್ಲ ಕಾದಂಬರಿಗಳನ್ನು ಬರೆದರೆಂಬುದನ್ನು ವಿವರಿಸಿದರು.

ಪಾರ್ಶ್ವವಾಯುವಿನಿಂದ ಕೈಬೆರಳುಗಳ ಹತೋಟಿಯನ್ನು ಬಹುಮಟ್ಟಿಗೆ ಕಳೆದುಕೊಂಡಿದ್ದ ಎಂ. ವಿ. ಸೀತಾರಾಮಯ್ಯನವರು ತಾವು Dictionary ಕೆಲಸದಲ್ಲಿದ್ದಾಗ, ಕಾಪಿ ತೆಗೆಯುತ್ತಿದ್ದುದೇ ಇದಕ್ಕೆ ಕಾರಣವೆಂದು ತಮಾಷೆಯಾಗಿ ಹೇಳಿದರು.

ತಮ್ಮ ಪರಿಚಯದ ಸರದಿ ಬರುತ್ತಲೇ ಏಕೋ ಏನೋ ಬಸವರಾಜ ಕಟ್ಟೀಮನಿಯವರು ಅಲ್ಲಿಂದ ಕಣ್ಮರೆಯಾಗಿದ್ದರು. [ಅವರು ಇದ್ದುದು ನಮ್ಮ ಬ್ಲಾಕಿನಲ್ಲಿಯೇ. ತುಂಬ ಗಂಭೀರ ಸ್ವಭಾವದ ಲೇಖಕರು. ಒಬ್ಬರ ತಂಟೆ ಟೀಕೆಗೆ ಬಾರದ ಸಂಭಾವಿತರು. ಹೇಳಬೇಕಾದ ಕಹಿ ಮಾತು ಏನಿದ್ದರೂ ವ್ಯಕ್ತಿಶಃ ಹೇಳುವರೇ ಹೊರತು, ಅದನ್ನು ಡಂಗೂರ ಹಾಕುವುದಿಲ್ಲ. ಹೊಸ ಪೀಳಿಗೆಯ ಸಾಹಿತಿಗಳನ್ನು ಕಂಡರೆ ಹಿರಿ ಅಣ್ಣನ ಅಭಿಮಾನ.]

ಧಾರವಾಡದಿಂದ ಹೊರಡುತ್ತಿರುವ, ನವ್ಯಪಂಥೀಯರ ಮುಖಪತ್ರವೆನಿಸಿರುವ 'ಸಂಕ್ರಮಣ'ದ ಸಂಪಾದಕರಲ್ಲಿ ಒಬ್ಬರಾದ ಸಿದ್ಧಲಿಂಗಪಟ್ಟಣಶೆಟ್ಟರು ತನ್ನ ಪರಿಚಯವನ್ನು ವಿನೋದವಾಗಿ ಮಾಡಿಕೊಡುತ್ತಾ "ನನಗಿನ್ನೂ ಮದುವೆಯಾಗಿಲ್ಲ. ಆಗುವತನಕ ಏನನ್ನೂ ಬರೆಯಬಾರದೆಂದಿದ್ದೇನೆ" ಎಂದರು.

ಇನ್ನೊಂದು ಪ್ರಸಂಗದಲ್ಲಿ ಸಿ. ಪಿ. ಕೆ. ನನ್ನ ಜತೆಯಲ್ಲಿ ತಮಾಷೆಗೆ ಮಾತನಾಡುತ್ತಾ "ಮದುವೆಯಾದ ಮೇಲೆ ಏನನ್ನೂ ಬರೆಯಲಾಗುತ್ತಿಲ್ಲ. ಏನನ್ನಾದರೂ ಬರೆಯಬೇಕೆಂದಿದ್ದರೆ ಲೇಖಕರು ಮದುವೆಗೆ ಮುನ್ನ ಬರೆಯಬೇಕು" ಎಂದು ಹೇಳಿದ್ದಮಾತು ನೆನಪಿಗೆ ಬಂದಿತು.

ಮದುವೆಯ ಬಗ್ಗೆ ಇಬ್ಬರು ತರುಣ ಲೇಖಕರ ದೃಷ್ಟಿಕೋಣ ಸ್ವಾರಸ್ಯವಾಗಿದೆ.

ಇಷ್ಟೆಲ್ಲ ಮಾತಿನ ಕೋಲಾಹಲ ನಡೆದ ಮೇಲೆ ಅಂದಿನ ಊಟ ಅತಿಥಿಗಳಿಗೆ ತುಂಬಾ ರುಚಿಯಾಗಿ ಕಂಡಿದ್ದರೆ ಅಚ್ಚರಿ ಏನು?

ಮಧ್ಯಾಹ್ನ ಬೆಳಗ್ಗೆ ಆರಂಭವಾಗಿದ್ದ ಗೋಷ್ಠಿಯು ಮುಂದುವರಿಯಿತು.

ಎಂ. ವಿ. ಸೀತಾರಾಮಯ್ಯನವರು 'ವಸ್ತು, ಉದ್ದೇಶ, ಪಾತ್ರ'ಗಳನ್ನು ಕುರಿತು ಮಾತನಾಡುತ್ತಾ "ಹಂಡೆಯಲ್ಲಿ ಆತ್ಮಹತ್ಯಮಾಡಿಕೊಂಡವನಂತೆ" ತಮ್ಮ ಪಾಡಾಗಿದೆ ಎಂದರು.

ಯಾವ ವಿಷಯವನ್ನು ಕುರಿತು ಮಾತಾಡಿದರೂ ಮೊದಲು ಲಕ್ಷ್ಯ, ಅನಂತರ ಲಕ್ಷಣ. ಯಾವುದೇ ದೇಶದ, ಯಾವುದೇ ಕಾಲದ ಸಾಹಿತ್ಯವನ್ನು ನೋಡಿದರೂ ಬ್ರಹ್ಮಸೃಷ್ಟಿಯಲ್ಲಿ ಇಂತಹದೇ ವಸ್ತುವನ್ನು ಆರಿಸಿಕೊಳ್ಳಬೇಕೆಂದೇನೂ ಇಲ್ಲ. ಸಾಹಿತಿಯು ಸಮಾಜದ ಶಿಶು. ಎಲ್ಲರಿಗಿಂತಲೂ ಅವನು ತೀವ್ರ ಸಂವೇದನಾಶೀಲ. ಒಂದು ದೇಶದ ಸಾಹಿತ್ಯ ಸೃಷ್ಟಿಗೆ ಕವಿಪ್ರತಿಭೆ ಕಾರಣವಾದಂತೆ ಪ್ರಕೃತಿ, ಋತುಮಾನ, ಹವಾಮಾನವೂ ಕಾರಣವಾಗುತ್ತದೆ. ಹಿಂದಿನ ಕವಿಗಳು ಕಾವ್ಯನಿರ್ಮಿಸಲು ಅನೇಕ ಆದರ್ಶಗಳನ್ನು ಕಣ್ಣಮುಂದೆ ಇಟ್ಟುಕೊಂಡಿದ್ದರು: ಅರ್ಥ, ಕೀರ್ತಿ,

ಕಾಂತಾಸಮ್ಮಿತ ಉಪದೇಶ, ಇತ್ಯಾದಿ. ಆದರೆ ನಿಜವಾದ ಸಾಹಿತಿಯ ಗುರಿ ಎಲ್ಲ ಕಾಲಕ್ಕೂ ತ್ರಿಕಾಲ ಅಬಾಧಿತ ವಾದ ಸತ್ಯವನ್ನು ಚಿತ್ರಿಸುವುದೇ ಆಗಿದೆ. ಆದರೂ ಕೀರ್ತಿಯ ಪಿತ್ತ, ಧನದವಾಯು, ಅಹಂಕಾರದ ಅಮಲಿಗೆ ಬಲಿಯಾಗದ ಸಾಹಿತಿಯಾರಿದ್ದಾರೆ? ಕವಿಯು ನಿಸರ್ಗದ ಏಕಾಂತದಲ್ಲಿ ಹಾಡುವ ಕೋಗಿಲೆ. ಅವನೇ ಅವನಿಗೆ ಸ್ವಯಂ ಆಚಾರ್ಯ ಪುರುಷ.

ಸಾಹಿತ್ಯದ ಉದ್ದಿಶ್ಯವೇನು? ವಾಕ್ಯದಲ್ಲಿ ಸೂಚ್ಯವಾಗಿ ತಿಳಿಸುವುದೇ ಆಗಿದೆ. ಅದೇಸಾಹಿತ್ಯ ವಹಿಸುವ ಪಾತ್ರ. ಸಾಹಿತ್ಯ ವೈಯಕ್ತಿಕ ಕಾರ್ಯರೂಪವಾಗದೆ ಸಾಮಾಜಿಕ ಕಾರ್ಯ ಕಲಾಪವಾಗಿದೆ. ಅದು ಏಕಕಾಲದಲ್ಲಿ ಸ್ವನಿಷ್ಠವೂ ಅನ್ಯನಿಷ್ಠವೂ ಆಗಿ ಕಾರ್ಯ ನಿರ್ವಾಹಕಭಾರ ನಡೆಸು ತ್ತದೆ. ಸಾಹಿತ್ಯವು ನಿಯತಿಕೃತ, ನಿಯಮರಹಿತ, ನವ ನವೋನ್ಮೇಶಶಾಲಿನಿ. ಇದಮಿತ್ಥಂ ಎಂದು ಕವಿಯ ಬಗ್ಗೆ ಹೇಳುವುದು ಕಷ್ಟ.

ಆಧುನಿಕ ಕನ್ನಡ ಸಾಹಿತ್ಯವನ್ನು ಮೂರು ಗುಂಪಾಗಿ ವಿಂಗಡಿಸಬಹುದು. (೧) ಸ್ವಾತಂತ್ರ್ಯ ಪೂರ್ವದ ಸಾಹಿತ್ಯ (೨) ಜನರಂಜನೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡ ಹಳೆಯ ಹೊಸ ಲೇಖಕರ ರಮ್ಯ ಸಾಹಿತ್ಯ (೩) ಮೇಲಿನ ಮಾರ್ಗವನ್ನು ಒಪ್ಪದ ನವ್ಯಪಂಥ.

ಆರಂಭಕಾಲದ ರೊಮ್ಯಾಂಟಿಕ್ ಸಂಪ್ರದಾಯ ಇಂದು ನವ್ಯ ಮಾರ್ಗದಲ್ಲಿ ಸಾಗಿದೆ.

ಈ ಕಾಲದಲ್ಲ ಶಿವರುದ್ರಪ್ಪ, ಅಡಿಗ, ಸಿದ್ಧಯ್ಯ ಪುರಾಣಿಕರು ಪೂತ, ಹೂತ ಕವಿಗಳು. ಹಿಂದಿನ ಕವಿ ಗಳಲ್ಲಿ ಕಾವ್ಯ ವ್ಯಕ್ತಿನಿಷ್ಠೆ, ಅವರಲ್ಲಿ ಸಮಕಾಲೀನ ಪ್ರಜ್ಞೆ ಇಲ್ಲವೆಂಬ ಆರೋಪಬಂದಿದೆ. ಸಾಮಾಜಿಕ ಪ್ರಜ್ಞೆ ಎಂದರೇನು? ತನ್ನ ಕಾಲದ, ಯುಗಧರ್ಮದ ಪ್ರಭಾವ ದಿಂದ ಮೂಡಿದ ಕೃತಿ. ವಾಸ್ತವ ಪ್ರಜ್ಞೆ, ಸಮಕಾಲೀನ ಪ್ರಜ್ಞೆ ಒಂದೇ ನಾಣ್ಯದ ಎರಡು ಮುಖ. ಸಮಕಾಲೀನ ಪ್ರಜ್ಞೆ ನವ್ಯಕಾವ್ಯದ ಪ್ರಮುಖ ಲಕ್ಷಣವೆಂದೇ ಹೇಳು ತ್ತಾರೆ.

ಇಂದು ಕಾದಂಬರಿಯ ಹುಚ್ಚು ಹೊಳೆಹರಿದಿದೆ. ಸ್ವತಂತ್ರ್ಯ ಪೂರ್ವದ ಕಥೆಗಾರರಲ್ಲೂ, ಅನಂತರದ ಕಥೆ ಗಾರರಲ್ಲೂ ವಸ್ತುವೈವಿಧ್ಯ, ಸಾಂಪ್ರದಾಯಿಕ ಕಥನ ಕ್ರಮ, ಹೊಸ ತಿರುವು ಮುರುವುಗಳನ್ನು ನಾವು ಕಾಣು ತ್ತೇವೆ. ಉದಾ: ಶ್ರೀನಿವಾಸ, ಆನಂದ ಮುಂತಾದವರು. ಆ ಕಾಲದ ಕೃತಿಗಳಲ್ಲಿ ವಿಷಮದಾಂಪತ್ಯ ಜೀವನದ ಚಿತ್ರಣ, ದೀನದಲಿತರ ಚಿತ್ರಣ, ರಾಜಕೀಯ ಆಂದೋಳನ–ಎಲ್ಲವೂ ಬಂದಿದೆ.

ಇಂದಿನ ದಶಕವನ್ನು ಕಾದಂಬರಿ ಯುಗವೆಂದೇ ಕರೆಯ ಬಹುದು. ಕಾರಂತರ ಕೃತಿಗಳಲ್ಲಿ ಸಮಕಾಲೀನ ಜೀವನ ಯಥಾರ್ಥವಾಗಿ ಚಿತ್ರಿತವಾಗಿದೆ. ಇತ್ತೀಚೆಗೆ ಸ್ವಾನು ಭವದ ಭೂಮಿಕೆಯಮೇಲೆ, ಐತಿಹಾಸಿಕ ಮೌಲ್ಯವುಳ್ಳ ಸಾಮಾಜಿಕ ಕಾದಂಬರಿಗಳು ನಿರ್ಮಿತವಾಗುತ್ತಿವೆ. ಇದನ್ನು ತ.ರಾ.ಸು., ಅ.ನ.ಕೃ, ನಿರಂಜನ, ವ್ಯಾಸರಾಯ ಬಲ್ಲಾಳರ ಕೃತಿಗಳಲ್ಲಿ ನೋಡಬಹುದು. ಮನೋವಿಶ್ಲೇಷಣೆಯ ಚಿತ್ರವು ತ್ರಿವೇಣಿಯವರ ಕಾದಂಬರಿಗಳಲ್ಲಿ ಬಂದಿದೆ.

ನವ್ಯಕಾವ್ಯ, ಕಥೆ, ಕಾದಂಬರಿಗಳಲ್ಲಿ ಲೈಂಗಿಕ ವಿಷಯ ನಿರೂಪಣೆ ವಸ್ತುವಾಗಿದೆ. ಇದನ್ನು ವಾಸ್ತವತೆಯ ಇನ್ನೊಂದು ಮುಖವೆಂದು ಅದರ ಬೆಂಬಲಿಗರು ಹೇಳು ತ್ತಾರೆ. ಸಮಾಜದ ಆರೋಗ್ಯವನ್ನು ಕಾಪಾಡುವುದೇ ಅವರ ಗುರಿಯಾದರೂ, ಅವರ ಪ್ರಯತ್ನ ಹುಡುಗರ ಮನೆ ಯಲ್ಲಿ ಔಷಧಕ್ಕೆಂದು ಬ್ರಾಂದಿ ಶೀಷೆಯನ್ನು ಇಟ್ಟಂತೆ ಆಗಿದೆ.

ಜೀವನ ಕ್ಲಿಷ್ಟವಾಗಿದೆ, ಹಾಗೂ ಸಂಕೀರ್ಣವಾಗಿದೆ, ಎಂದು ನವ್ಯಕಾವ್ಯದವರು ಹೇಳುತ್ತಾರೆ. ಅಂತೆಯೆ ಅವುಗಳ ಅಭಿವ್ಯಕ್ತಿ ಸಾಹಿತ್ಯದಲ್ಲೂ ಸಂಕೀರ್ಣವಾಗು ತ್ತದೆ. ಆದರೆ ಅವು ಖಾಸಗಿ ಪ್ರತಿಮೆಗಳ ಮೂಲಕ ಅಸ್ಪಷ್ಟವಾಗಿ ವ್ಯಕ್ತವಾದರೆ ಮಾತ್ರ ಅದು ಮ್ಯೂಸಿಯ ಮ್ಮಿನ ವಸ್ತುಗಳಂತೆ, ಪಾಕಸಾಮುಗ್ರಿಗಳನ್ನು ಅಡಿಗೆ ಮಾಡದೆ ಬಡಿಸಿದಂತೆ ಆದೀತು. ಕವಿಯು ಉದ್ದೇಶಿಸಿದ ಗುರಿ ಸಾಧಿಸಿದಂತೆ ಆಗುವುದಿಲ್ಲ. ಹೀಗೆ ನಿರ್ಮಿಸಿದ ಕೃತಿ ಚಲಾವಣೆಗೆ ಬಾರದ ವಿದೇಶಿ ನಾಣ್ಯವಾಗುತ್ತದೆ. ಕಾವ್ಯವು ಟೀಕೆ ಟಿಪ್ಪಣಿಗಳ ನೆರವನ್ನು ಬೇಡಿದರೆ ಅದನ್ನು ವ್ಯಾಖ್ಯಾನ ವೆನ್ನಬೇಕಾದೀತು. ಇದು ವಿದ್ವಾಂಸರಿಗೆ ಸಂತೋಷ ವನ್ನುಂಟುಮಾಡಿದರೂ, ಸಾಮಾನ್ಯರ ಪಾಲಿಗೆ ತ್ರಾಸ ದಾಯಕವೇ ಸರಿ.

'ಸಮಕಾಲೀನ ಪ್ರಜ್ಞೆ' ಯನ್ನು ಕುರಿತು ಮಾತ ನಾಡಿದ ಡಾ. ಜಿ. ಎಸ್. ಶಿವರುದ್ರಪ್ಪನವರು ತಮ್ಮ ಭಾಷಣದಲ್ಲಿ ವಿವಿಧ ಸಾಹಿತ್ಯ ಪ್ರಕಾರದಲ್ಲಿ ಸಮಕಾಲೀನ ಪ್ರಜ್ಞೆ ಹೇಗೆ ಮೂಡಿದೆ ಎಂಬುದನ್ನು ಉದಾಹರಣೆಗಳಿಂದ ವಿವರಿಸಿದರು.

"ನಾಗರಿಕ ಜೀವನದ ಸಾಮಾಜಿಕ ಪ್ರಜ್ಞೆ ಕಾವ್ಯದಲ್ಲಿ ಹೆಚ್ಚಾಗಿದೆ. ಒಂದೊಂದು ಕಾಲದಮೇಲೆ ಬೀಳಬಹು ದಾದ ಒತ್ತಡ ಪರಿಣಾಮಗಳು ಸಮಕಾಲೀನ ಪ್ರಜ್ಞೆ

ಎನಿಸುತ್ತದೆ. ಉದಾ: ರಾಮಾಯಣ ದರ್ಶನದಲ್ಲಿ ಚಿತ್ರಿತವಾದ ಯಜ್ಞಕುಂಡದ ಉರಿಯನ್ನು ಕುವೆಂಪುರವರು ದೂರದರ್ಶಕ ಯಂತ್ರದಿಂದ ಕಾಣುವ ನಕ್ಷತ್ರಪುಂಜಕ್ಕೆ ಹೋಲಿಸಿದ್ದಾರೆ. ತ್ರೇತಾಯುಗದ ರಾಮಕಥೆಯಲ್ಲೂ ಅಟ್ಲಾಂಟಿಕ್ ಸಾಗರದ ವರ್ಣನೆ ಬಂದಿದೆ. ಅಂತರಂಗದ ಜೀವನದ ಆಧ್ಯಾತ್ಮಿಕ, ವೈಚಾರಿಕ, ನಾಗರಿಕ ಜೀವನದ ಹಿನ್ನೆಲೆ ಸಾಹಿತ್ಯದಲ್ಲಿ ಅಭಿವ್ಯಕ್ತವಾಗದಿದ್ದರೆ ಅದು ಜೀವಂತ, ಇಲ್ಲವೇ ವಾಸ್ತವ ಸಾಹಿತ್ಯವಾಗುವುದಿಲ್ಲ. ಗಂಡುಹೆಣ್ಣಿನ ಪ್ರಣಯದ ಮಧುರ ಬಾಂಧವ್ಯವನ್ನು-ಶೃಂಗಾರವನ್ನು-ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಕಾಣಬಹುದಾಗಿದೆ. ಸಮಕಾಲೀನ ಜೀವನಸ್ತರಗಳು ಮಹಾಕವಿಯ, ಮಹಾಕೃತಿಯಲ್ಲಿ ಮಾತ್ರ ಕಾಣಲು ಸಾಧ್ಯ. ಎಷ್ಟೋ ಬಾರಿ ಆ ವಿಮರ್ಶೆಯು ಪಾರಿಭಾಷಿಕವಾಗಿ ಅಪಾಯಕ್ಕೆ ಈಡಾದುದುಂಟು. ಪ್ರಕೃತಿಯಲ್ಲಿ ಕಾಣುವ ಸೂರ್ಯೋದಯ, ಚಂದ್ರೋದಯ, ಎಂತು ಸುಂದರವೋ ವಿಚಾರಶೀಲ ಪ್ರತಿಭಾವಂತ ಕವಿಗೆ ಬಚ್ಚಲೂ, ತಿಪ್ಪೆಯೂ, ತುಂಬೇ ಹೂವೂ ಕಾವ್ಯವಸ್ತುವಾಗಬಲ್ಲದು. ಸಾಹಿತ್ಯ ವಸ್ತುನಿಷ್ಠವಾಗಿ, ವಾಸ್ತವವೆನಿಸಬೇಕಾದರೆ ಎರಡೂ ಅಗತ್ಯ. ಅವನ ಕೃತಿ ಅವನ ಕಾಲದ ಯುಗಧರ್ಮವನ್ನು ಪ್ರತಿಬಿಂಬಿಸಬೇಕಾಗಿದೆ. ಸಾಹಿತ್ಯ ಸಾರ್ವತ್ರಿಕ, ಸರ್ವಕಾಲೀನ ಮೌಲ್ಯಗಳನ್ನು ಪಡೆದಿರಬೇಕಾದರೆ ಈ ಬಗೆಯ ಸಮಕಾಲೀನ ಪ್ರಜ್ಞೆ ತೀರ ಅವಶ್ಯಕ."

ನಿರಂಜನರು 'ಸಾಹಿತ್ಯದಲ್ಲಿ ರಾಜಕೀಯ ಪ್ರಭಾವ'ಗಳನ್ನು ಕುರಿತು ಮಾತನಾಡಬೇಕಾಗಿತ್ತು. ಆದರೆ ಅವರು ಬರಲಾಗುವುದಿಲ್ಲವೆಂದು ಕೊನೆ ಗಳಿಗೆಯಲ್ಲಿ ಟೆಲಿಗ್ರಾಂ ಕೊಟ್ಟಿದ್ದರಂತೆ. ಹೀಗಾಗಿ ಸುಜನಾ ಕಾವ್ಯನಾಮದ ಶ್ರೀ ನಾರಾಯಣಶೆಟ್ಟರು ಅವರ ಸ್ಥಾನದಲ್ಲಿ ನಿಂತು ಮಾತನಾಡಬೇಕಾಯಿತು.

[ಸಾಹಿತಿಗಳ ಪರಸ್ಪರ ಪರಿಚಯಮಾಡಿಕೊಡುತ್ತಾ ನಾರಾಯಣಶೆಟ್ಟರು ತಮ್ಮ ಕಾವ್ಯನಾಮವನ್ನು ಅನೇಕರು ಸ್ತ್ರೀಲಿಂಗವಾಚಕವೆಂದು ತಿಳಿದಿರುವರೆಂದೂ, ದೀರ್ಘಾಕ್ಷರ 'ನಾ' ಬದಲು 'ನ' ಕಾರವಿದ್ದರೆ, ಅದು ನಪುಂಸಕಲಿಂಗವಾದೀತೆಂದು ಹೆದರಿ, ಸ್ತ್ರೀಲಿಂಗ ಪರವಾದ ಸುಜನಾ ಎಂದು ತಾವು ವ್ಯವಹರಿಸುತ್ತಿರುವುದಾಗಿ ಹೇಳಿ ತಮ್ಮ ಹೆಸರಿನಮೇಲೆ ಕ್ಷ-ಕಿರಣ ಬೀರಿದುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.]

ಸ್ವಾತಂತ್ರ್ಯಾನಂತರದಲ್ಲಿ ಸಾಹಿತಿಗಳು ಹೇಗೆ ರಾಜಕೀಯ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ ವಿಚಾರಿಸಬೇಕಾಗಿದೆ. ಡಿ. ವಿ. ಜಿ. ಅವರು ತಮ್ಮ ಒಂದು ಗ್ರಂಥದಲ್ಲಿ ಜಾಗೃತ ಸಾಹಿತಿ ಲೋಕಾಂತರ ಪರಿವರ್ತನೆಯ ಕಡೆಗೆ ಗಮನ ಹರಿಸಬೇಕಾಗಿದೆ ಎಂದು ಬರೆದಿದ್ದಾರೆ. ಕಳೆದ ಶತಮಾನದಲ್ಲಿ ಮತ ತತ್ವಗಳು ಮಾಡಿದ ಪರಿಣಾಮವನ್ನು ರಾಜಕೀಯ ತತ್ವಗಳು ಇಪ್ಪತ್ತನೆಯ ಶತಮಾನದಲ್ಲಿ ಮಾಡಿವೆ. ಕಡ್ಡಾಯದ ಶಿಕ್ಷಣ ಜನಜಾಗೃತಿಯನ್ನುಂಟುಮಾಡಿದೆ. ದ್ರಷ್ಟಾರರೆನಿಸಿದ ಕವಿಗಳ ವಾಣಿ, ಗಾಂಧೀಜಿ ಪ್ರತಿಪಾದಿಸಿದ ಸರ್ವೋದಯ ತತ್ವ ನಮ್ಮ ದೇಶದ ಸಾಹಿತ್ಯದ ಮೇಲೆ ಪ್ರಭಾವ ಬೀರದೆ ಇಲ್ಲ. ಈಗ ಎಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟಾಚಾರದ ಮಾತು ಕೇಳುತ್ತಿದ್ದೇವೆ. ಇದು ಇರುವುದು ಹೊರಗಲ್ಲ, ವ್ಯಕ್ತಿಯ ಒಳಗೆ. ಈ ಬಗ್ಗೆ ಹಿಂದೆ ಎಚ್ಚರವಿರಲಿಲ್ಲ. ಈಗ ಕಾಲಸ್ಥಿತಿ ಬದಲಾಗಿದೆ. ಇದನ್ನು ಪು. ತಿ. ನ. ಅವರು ವಿಕಟಕವಿ ವಿಜಯದಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಈ ನಾಟಕದಲ್ಲಿ ಬರುವ ಪಂಡಿತನೊಬ್ಬನು ರೆಸಿಡೆಂಟನ ಮುಂದೆ ತೋಡಿಕೊಳ್ಳುವ ನೈರಾಶ್ಯಭಾವವನ್ನು ಇಲ್ಲಿ ಗಮನಿಸಬಹುದು. ಅಡಿಗ ಅವರು ಬರೆದ ನೆಹರು ನಿವೃತ್ತರಾಗಲಿಲ್ಲ ಕವನ ಸಾಹಿತ್ಯದ ಮೇಲೆ ಬಿದ್ದ ರಾಜಕೀಯದ ಪ್ರಭಾವಕ್ಕೆ ಸುಂದರ ಸಾಕ್ಷಿ.

ನಮ್ಮ ದೇಶದಲ್ಲಿ ಎಲ್ಲೆಲ್ಲೂ ನೈರಾಶ್ಯಭಾವನೆ ತುಂಬಿ, ಸಾಹಿತ್ಯದಲ್ಲಿ ಪ್ರಕಟವಾಗುತ್ತಿದ್ದರೂ ಅದು ಜಗತ್ತಿನಲ್ಲಿ ನಡೆಯುತ್ತಿರುವ ಕ್ರಾಂತಿಯ, ಉತ್ಕ್ರಾಂತಿಯ ಪ್ರತಿಧ್ವನಿಯೇ ಆಗಿದೆ. ಗೋಪಾಲಕೃಷ್ಣ ಅಡಿಗರು ಇಂದಿನ ಜಗತ್ತಿನ ಸ್ಥಿತಿಯನ್ನು ತಮ್ಮ 'ಗೊಂದಲಪುರ'ದಲ್ಲಿ ಚೆನ್ನಾಗಿ ವರ್ಣಿಸಿದ್ದಾರೆ. ಬದುಕು ಹಸನಾಗಲೆಂದು ನಾವು ಸ್ವಾತಂತ್ರ್ಯವನ್ನು ಬಯಸಿದೆವು. ಬ್ರಿಟಿಷರು ತೊಲಗಿದರೂ ದಾಸ್ಯಮನೋಭಾವ ನಮ್ಮಿಂದ ತೊಲಗಲಿಲ್ಲ. ನಾವು ಸ್ವಾತಂತ್ರ್ಯದ ಬೆಲೆಯನ್ನರಿಯಲಿಲ್ಲ. ನಿಜವಾದ 'ಸ್ವರಾಜ್ಯ'ದ ಸ್ಥಾಪನೆಗೆ ಬೇಕಾಗಿರುವುದು ಹುಮ್ಮಸ್ಸೇ ಹೊರತು ನೈರಾಶ್ಯ ಮನೋಭಾವವಲ್ಲ. ನಮಗೆ ಇಂದು ಹೊಸ ಆದರ್ಶ ಬೇಕಾಗಿದೆ. ನಾವು ಹೊಸಮನ್ವಂತರವನ್ನು ಸಾಧಿಸಿಕೊಳ್ಳಲು, ಜಗತ್ತಿನ ವೈಚಾರಿಕ ಕ್ರಾಂತಿಯನ್ನು ಸ್ವಾಗತಿಸಬೇಕಾಗಿದೆ. ಇಂದಿನ ಬದುಕು ಸರಳವಲ್ಲ, ಸಂಕೀರ್ಣ. ಅದರ ಬೇರೆ ಬೇರೆ ಶ್ರುತಿ, ಸ್ವರಗಳು, ಬದಲಾಗುತ್ತಿರುವ ರಾಜಕೀಯ ಮೌಲ್ಯಗಳು, ಆದರ್ಶಗಳು, ನಿತ್ಯಜೀವನದಲ್ಲಿ ಎಂತೋ ಸಾಹಿತ್ಯದ ಮೇಲೂ ಇಂದು ಪ್ರಭಾವ ಬೀರುತ್ತಿವೆ.

ಅನಂತರ ಪ್ರೊ. ಹರಿದಾಸಭಟ್ಟ ಅವರು ಕನ್ನಡದಲ್ಲಿ ಇದುವರೆಗೆ ಹರಿದುಬಂದ ವೈಚಾರಿಕ ಸಾಹಿತ್ಯ-ಶಾಸ್ತ್ರ ವಿಜ್ಞಾನಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು - ಕುರಿತು ಮಾತನಾಡಿದರು.

ಸಾಹಿತ್ಯಕ್ಕೆ ಶ್ರುತಿ, ಸ್ಮೃತಿಗಳು ಪ್ರಮಾಣವಾದರೆ ಶಾಸ್ತ್ರಕ್ಕೆ ಪ್ರತ್ಯಕ್ಷವೇ ಪ್ರಮಾಣ. ಹಿಂದೆಯೂ ವೈಚಾರಿಕ ಸಾಹಿತ್ಯವನ್ನು ನಿರ್ಮಿಸುವ ಲೇಖಕರೂ, ಪ್ರಕಟಿಸುವ ಪ್ರಕಾಶಕರೂ ಕಡಮೆ ಸಂಖ್ಯೆಯಲ್ಲಿ ಇದ್ದರು. ಈಗಲೂ ಅವರ ಸಂಖ್ಯೆ ಕಡಮೆಯೇ ಇದೆ.

ಮಿಂಚಿನ ಬಳ್ಳಿಯವರು ಸ್ವಾತಂತ್ರ್ಯಪೂರ್ವದಲ್ಲಿ ಅನೇಕ ವೈಚಾರಿಕ, ವೈಜ್ಞಾನಿಕ ಗ್ರಂಥಗಳನ್ನು ಪ್ರಕಟಿಸಿದರು. ಕಾರಂತರು ಬಾಲಪ್ರಪಂಚದ ಜತೆಗೇ ವಿಜ್ಞಾನ ಪ್ರಪಂಚವನ್ನು ಸೃಷ್ಟಿಸಿದ್ದಾರೆ. ವಿ. ಸೀ. ಅವರ ಹಣ ಪ್ರಪಂಚ, ಆರ್. ಎಲ್. ನರಸಿಂಹಯ್ಯನವರ ವೈಜ್ಞಾನಿಕ ಗ್ರಂಥಗಳು, ಹನುಮಂತರಾಯರ ವೈಚಾರಿಕ ಗ್ರಂಥಗಳು, ಗೌರೀಶ ಕಾಯ್ಕಿಣಿಯವರ ಮನಶ್ಶಾಸ್ತ್ರ ಗ್ರಂಥಗಳು ಇಲ್ಲಿ ಉಲ್ಲೇಖನಾರ್ಹ. ಇತಿಹಾಸ, ವಾಣಿಜ್ಯ, ತತ್ವಜ್ಞಾನ, ಪ್ರಪಂಚ ಪರಿಚಯ, ಗಾಂಧೀವಾದ, ಮಾರ್ಕ್ಸ್‌ವಾದ, ಮನೋವಿಜ್ಞಾನ-ಇವುಗಳನ್ನು ಕುರಿತು ಅನೇಕ ಗ್ರಂಥಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲೂ, ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲೂ ಪ್ರಕಟವಾಗಿವೆ. ೧೯೩೦ರಲ್ಲಿ ಕನ್ನಡವನ್ನು ಶಿಕ್ಷಣಮಾರ್ಗವಾಗಿ ತರಲು ಅಗತ್ಯವಾದ ಪಠ್ಯಪುಸ್ತಕಗಳ ಶಾಸ್ತ್ರಗ್ರಂಥಗಳ ಕೊರತೆಯನ್ನು ನೀಗಿಸಲು ಎನ್. ಎಸ್. ಸುಬ್ಬರಾಯರ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡ ಪ್ರಯತ್ನವು ಕುವೆಂಪುರವರ ಕಾಲದಲ್ಲಿ ತುಂಬು ಹೊನಲಾಗಿ ಹರಿಯಿತು. ಇಂದು ವೃತ್ತಪತ್ರಿಕೆಗಳಲ್ಲೂ, ವಿಶೇಷ ಸಂಚಿಕೆಗಳಲ್ಲೂ ವಿಚಾರ ಸಾಹಿತ್ಯ ವಿಪುಲವಾಗಿ ಬರುತ್ತಿದೆ. ಪ್ರಬುದ್ಧ ಕರ್ಣಾಟಕದ ವಿಜ್ಞಾನದ ಸಂಚಿಕೆಗಳು ಈ ದಿಸೆಯಲ್ಲಿ ಮಹತ್ತರ ಕಾರ್ಯ ಸಾಧಿಸುತ್ತಿವೆ. ಪತ್ರಿಕಾ ವ್ಯವಸಾಯದಲ್ಲೂ ವಿಚಾರ ಲೇಖನಗಳಿಂದ ತಿ. ತಾ. ಶರ್ಮರೂ, ಸಿದ್ದವ್ವನಹಳ್ಳಿ ಕೃಷ್ಣಶರ್ಮರೂ ಒಳ್ಳೆಯ ಕೆಲಸಮಾಡುತ್ತಿದ್ದಾರೆ.

ಕಾರಂತರು ವೈಜ್ಞಾನಿಕ ಸಾಹಿತ್ಯಕ್ಕೆ ನೀಡಿದ ಕಾಣಿಕೆ ಭಾರತದಲ್ಲೇ ಅಪೂರ್ವವಾದುದು. ವಿಶ್ವವಿದ್ಯಾನಿಲಯಗಳು ಮಾಡಲು ಸಾಧ್ಯವಾಗದ ಕೆಲಸವನ್ನು ಅವರೊಬ್ಬರೇ ಸಾಧಿಸಿದ್ದಾರೆ. ನಾಗೇಗೌಡರ 'ಪ್ರವಾಸಿ ಕಂಡ ಭಾರತ' ತನ್ನದೇ ಆದ ರೀತಿಯಲ್ಲಿ ಒಂದು ವಿಶಿಷ್ಟ ಕೃತಿಯಾಗಿದೆ.

ಸಾಹಿತ್ಯದಲ್ಲಿ ಜಗತ್ತಿನ ಆಗು ಹೋಗುಗಳ ಪ್ರತಿಕ್ರಿಯೆ ಇಲ್ಲದಿದ್ದರೆ, ಅದು ಜೀವಂತ ಸಾಹಿತ್ಯವೆನಿಸುವುದಿಲ್ಲ. ಆಧುನಿಕ ಶಾಸ್ತ್ರಜ್ಞಾನವೆಲ್ಲವೂ ದೇಶೀ ಭಾಷೆಯಲ್ಲಿ ಹರಿದು ಬಂದಾಗಲೇ ಅದು ಜನತೆಯನ್ನು ಮುಟ್ಟಲು ಸಾಧ್ಯ. ಅಂತಹ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯಗಳು ಆಕರ್ಷಿಸಿ ಅವರಿಂದ ಕೆಲಸಮಾಡಿಸಿಕೊಳ್ಳಬೇಕು. ಶೋಕಿಗಾಗಿ ಬರೆಯುವವರನ್ನು ವಿತ್ತಾಕರ್ಷಣೆಯಿಂದಲಾದರೂ ಆಕರ್ಷಿಸಿ ಈ ಕಾರ್ಯವನ್ನು ಸಾಧಿಸಬೇಕು.

ಅನಂತರ ಮಾತನಾಡಿದ ಡಾ. ತಿಪ್ಪೇರುದ್ರಸ್ವಾಮಿ ಅವರು ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವವನ್ನು ವಿಶ್ಲೇಷಿಸಿದರು.

ಸಾಹಿತ್ಯವನ್ನು ನಾವು ಮೂರು ಮಜಲಿನಲ್ಲಿ ಪರಿಗ್ರಹಿಸಬಹುದು. (೧) ಜ್ಞಾನ (೨) ವಿಜ್ಞಾನ (೩) ಪ್ರಜ್ಞಾನ. ಡಾರ್ವಿನನು ಪ್ರತಿಪಾದಿಸಿದ ವಿಕಾಸವಾದ ಹದಿನೆಂಟನೆ ಶತಮಾನದಲ್ಲಿ ಹಿಂದಿನ ಜಗತ್ತಿನ ಗೋಡೆಗಳನ್ನು ಕಳಚಿ ಬೀಳುವಂತೆ ಮಾಡಿತು. ಹಿಂದಿನ ಮತಧರ್ಮಗಳ ಶ್ರದ್ಧೆ ಕುಸಿಯಿತು. ವ್ಯವಸಾಯ, ಕೈಗಾರಿಕೆಗಳಲ್ಲಿ ಯಂತ್ರಯುಗದ ಆವಿಷ್ಕಾರದಿಂದ ಪ್ರಗತಿಯಾಗಿ ನಗರಗಳು ಬೆಳೆದವು. ವಿದ್ಯುತ್ ಸರ್ವವ್ಯಾಪಿಯಾದ ಶಕ್ತಿಯಾಯಿತು. ವೈಜ್ಞಾನಿಕ ಸಾಧನೆಗಳು ಹೆಚ್ಚಿದವು. ಅವುಗಳ ಪ್ರಯೋಜನ ಜೀವನಕ್ಕೆ ಅನಿವಾರ್ಯವೆನಿಸಿದವು. ಹದಿನೆಂಟನೆಯ ಶತಮಾನದಿಂದ ಆಚೆಗೆ ಧರ್ಮಕ್ಕಿಂತಲೂ ಜೀವನದ ಮೇಲೆ ವಿಜ್ಞಾನದ ಪ್ರಭಾವ ಹೆಚ್ಚಾಯಿತು.

ಇದರಿಂದ ಸಮಾಜ ಜೀವನದಲ್ಲಿ ಏರುಪೇರಾಯಿತು. ಮೌಲ್ಯಗಳ ಪುನರ್ವಿಮರ್ಶೆ ನಡೆಯಿತು. ರಾಜಕೀಯದಲ್ಲೂ ಕ್ಷೋಭೆ ನಡೆಯಿತು. ಹಿಂದಿನ ಜೀವನದ ಬೇರು ಅಲುಗಿದವು. ಜೊಳ್ಳು ಶ್ರದ್ಧೆಗಳು ಹಾರಿದವು. ಈ ಬಗೆಯ ಪ್ರಭಾವಕ್ಕೆ ಸಾಹಿತಿಯೂ ಒಳಗಾಗದೆ ಉಳಿಯಲಿಲ್ಲ.

ಸಾಹಿತಿಯದು ಸಮಾಜದಲ್ಲಿ ವಿಶಿಷ್ಟ ಸ್ಥಾನ. ಅವನ ಗುರಿ ದ್ವಂದ್ವಾತೀತವಾದ ಸತ್ಯದ ಸಾಧನೆ. ಸಾಹಿತ್ಯ ಮತ್ತು ವಿಜ್ಞಾನಗಳು ಪರಸ್ಪರ ವಿರುದ್ಧವಲ್ಲ-ಅವು ಪರಸ್ಪರ ಪೂರಕ. ಅಣು, ಗ್ರಹ, ನಕ್ಷತ್ರ, ಪ್ರಕೃತಿಯ ರಹಸ್ಯಗಳು ವಿಜ್ಞಾನಿಯ ವಸ್ತುವಾದಂತೆ ಸಾಹಿತ್ಯದ ವಸ್ತುವೂ ಹೌದು, ಇಬ್ಬರ ಗುರಿ ಮೂಲ ಸ್ವರೂಪವಾದ ಸತ್ಯ ಶೋಧನೆ. ಹಾಗೆ ನೋಡಿದರೆ ಸಾಹಿತಿಯ ಜವಾಬ್ದಾರಿ ಇನ್ನೂ ಹೆಚ್ಚಿನದು. ವಿಜ್ಞಾನಿ ಸರ್ವಶಕ್ತನೆಂದು ಬೀಗು

ವಾಗ ಅವನನ್ನು ಸಾಹಿತಿ ಎಚ್ಚರಿಸಬೇಕು; ಅವನು ಎಚ್ಚರಿಸಿಯೂ ಇದ್ದಾನೆ. ವಿಜ್ಞಾನವನ್ನು ಕಲೆಗೆ ಶತ್ರುವೆಂದು ತಿಳಿದ ಬ್ಲೇಕ್. ಕವಿ ಸ್ವಿಫ್ಟನಂತೂ ವಿಜ್ಞಾನ ಸಾಧನೆಯನ್ನು ವ್ಯಂಗವಾಗಿ ಟೀಕಿಸಿದ್ದುಂಟು.

ಆಧುನಿಕ ಸಮಾಜದಲ್ಲಿ ಜನಜೀವನದ ಎಲ್ಲ ಮುಖಗಳಲ್ಲಿ ವಿಜ್ಞಾನದ ಪ್ರಭಾವವನ್ನು ಕಾಣುತ್ತೇವೆ. ಮುದ್ರಣ ಯಂತ್ರ ಶೋಧನೆ, ಕಾಗದ ನಿರ್ಮಾಣ–ಜ್ಞಾನವನ್ನು ಎಲ್ಲೆಡೆಯಲ್ಲೂ ವಿಸ್ತರಿಸಿತು. ವಿಜ್ಞಾನದಿಂದ ಜನ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರಭಾವಿತರಾದರು. ಸಾಹಿತಿಗಳಲ್ಲಿ ವೈಜ್ಞಾನಿಕ ದೃಷ್ಟಿ ಬೆಳೆಯಿತು. ವಿಜ್ಞಾನಿಗಳೂ ಸಾಹಿತಿಗಳಾದರು. ಕಾನ್‌ಡಾಯಲನ 'ಲಾಸ್ಟ್‌ವರ್ಲ್ಡ್' ನಲ್ಲಿಯೂ, ಹೆಚ್.ಜಿ. ವೆಲ್ಸನ ಕಾದಂಬರಿಗಳಲ್ಲೂ ನಾವು ಈ ದೃಷ್ಟಿಯನ್ನು ನೋಡುತ್ತೇವೆ.

ಕನ್ನಡದ ಸಾಹಿತ್ಯದಲ್ಲಿ ವೈಜ್ಞಾನಿಕ ದೃಷ್ಟಿ ಅರಳಿದೆ ಎಂಬುದಕ್ಕೆ ಕುವೆಂಪು ಅವರ ಶಿಲಾತಪಸ್ವಿ ಸಾಕ್ಷಿ. ಕಣವಿ, ಅಡಿಗರ ಕೃತಿಗಳಲ್ಲೂ ವೈಜ್ಞಾನಿಕ ಪ್ರತಿಮೆಗಳು ಬಂದಿವೆ. ಕುವೆಂಪು ಅವರು ಯಂತ್ರರ್ಷಿಯಲ್ಲಿ ವಿಜ್ಞಾನಿಯ ಮಹಿಮೆಯನ್ನು ಹಾಡಿದ್ದಾರೆ: ಅವನು ದೇವತೆಯಾದರೆ ಸಮಾಜಕ್ಕೆ ಶಾಂತಿ ಸುಖಗಳನ್ನು ನೀಡಬಲ್ಲ. ದೈತ್ಯನಾದರೆ ಇರುವ ನೆಮ್ಮದಿಯನ್ನು ನಾಶಪಡಿಸಬಲ್ಲ. ಅವನು ರಾಮನೂ ಆಗಬಲ್ಲ; ರಾವಣನೂ ಆಗಬಲ್ಲ.

ಸಾಹಿತಿಯು ಈ ಸಂಘರ್ಷಣೆಯಲ್ಲಿ ಬೆ ರೆ ಯ ದೆ, ನಂಜುಂಡನಾಗಿ ನಿಲ್ಲಬೇಕು.

ಇಂದು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ವಸ್ತು ಭಾಷೆ ತಂತ್ರಗಳಲ್ಲಿ ವೈಜ್ಞಾನಿಕ ಪ್ರಭಾವವನ್ನು ಕಾಣುತ್ತೇವೆ. ನವ್ಯ ಸಾಹಿತ್ಯದಲ್ಲಿ ಇದು ಪಡಿಮೂಡಿದೆ; ಸಾಹಿತಿಯು ಧರ್ಮದ ಜತೆಗೇ ತನ್ನ ದೇಶದ ಧರ್ಮವನ್ನು ಕಡೆಗಣಿಸುವಂತಿಲ್ಲ. ವಿಕಾರವೇ ವಿನೂತನವೆಂಬ ಭ್ರಾಂತಿ ನವ್ಯವಲ್ಲ. ಆಧುನಿಕ ಸಾಹಿತ್ಯ ಪರೋಕ್ಷವಾಗಿ ವಿಜ್ಞಾನಕ್ಕೆ ಋಣಿಯಾಗಿದೆ. ಕುವೆಂಪು ಇಂದಿನ ಯುಗಧರ್ಮವನ್ನು ಅರಿತವರಂತೆ, ದ್ರಷ್ಟಾರರಾಗಿ ಹೇಳಿದ್ದಾರೆ: ವಿಜ್ಞಾನ ದೀವಿಗೆಯ ಹಿಡಿದು ಬನ್ನಿ!

ವಿಜ್ಞಾನ, ಸಾಹಿತ್ಯದೊಡಗೂಡಿದರೆ ಮಾ ನ ವ ನ ಬದುಕು ಸುಖ ನೆಮ್ಮದಿಗಳಿಂದ ಕೂಡಿ ಪ್ರಜ್ಞಾನವಾಗಬಲ್ಲದು.

ಇವರಾದ ಮೇಲೆ ಕೃಷ್ಣಮೂರ್ತಿಪುರಾಣಿಕರು ಕಾದಂಬರಿ ಪ್ರಪಂಚದ ಒಲವು ನಿಲವುಗಳನ್ನು ಕುರಿತು ಮಾತನಾಡಿದರು.

ಸಾಹಿತ್ಯ ಜನಜೀವನದ ವಾಣಿ. ಸ್ವಾತಂತ್ರ್ಯೋತ್ತರದ ಸಾಹಿತ್ಯವನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸಿದರೆ, ಅದು ಗೊಂದಲಪುರದಂತೆ ಕಾಣಿಸುವುದು. ಸ್ವಾತಂತ್ರ್ಯಕ್ಕೆ ಪೂರ್ವದ ಸಾಹಿತಿಗಳ ಆಕಾಂಕ್ಷೆ, ಕನಸು, ದೇಶವನ್ನು ಪರಕೀಯರ ಆಳ್ವಿಕೆಯಿಂದ ಮುಕ್ತಿಗೊಳಿಸುವುದು ಆಗಿತ್ತು. ಕವಿಯ ಅಂತಃಕರಣ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿತು. ಜಾತಿಮತ ಪಂಥಗಳ ಸಂಕುಚಿತ ಕಟ್ಟಳೆಗೆ ಸಿಲುಕದೆ ಲೇಖಕರು ಸಾಹಿತ್ಯ ಸೃಷ್ಟಿಸಿ, ಮಾಡಿ ಮಡಿದರು. ಅಂದಿನ ತಳಮಳ, ಕೆಚ್ಚು ನಮ್ಮ ಸಾಹಿತಿಗಳ ಕೃತಿಗಳಲ್ಲಿ-ರಾಮಣ್ಣ ಮಾಸ್ತರು, ಮೂರಾಬಟ್ಟೆ, ಮೆರವಣಿಗೆ, ರಾಷ್ಟ್ರಪುರುಷ ಮುಂತಾದ ಕಾದಂಬರಿಗಳಲ್ಲಿ ಕಾಣಬಹುದು.

ಸ್ವಾತಂತ್ರ್ಯೋತ್ತರದಲ್ಲಿ ಸಾಹಿತಿ ನವ್ಯಕ್ಕೆ ಮನಸೋತಿದ್ದಾನೆ. ಅಂದಿನ ಸಾಮಾಜಿಕ ಪ್ರಜ್ಞೆ ಇಂದಿಲ್ಲ. ಅಂದಿನ ಲೇಖಕರು ಕೀರ್ತಿ ಕಾಮನೆಗಳಾಗಿ ಬರೆಯಲಿಲ್ಲ. ಪ್ರಲೋಭಕ್ಕೆ ಬೀಳಲಿಲ್ಲ. ಇಂದು ಲೇಖಕ ರಾಜಕೀಯದ ಕೈವಾರಿಯಾಗಿದ್ದಾನೆ.

ಸ್ವಾತಂತ್ರ್ಯಾನಂತರ ದೂರ ಸರಿದಿದ್ದ ರಾಜಕಾರಣೀಗಳು ಪರಿಸ್ಥಿತಿಯ ಲಾಭ ಪಡೆದು ಮುಂದೆ ಬಂದರು. ಹೊಸನೀರು ಹಳೆಯನೀರನ್ನು ಕೊಚ್ಚಿಹೋಯಿತು. ಹೊಸ ಪರಿಸ್ಥಿತಿ ಆವರಣಗಳಲ್ಲಿ ಜೀವನದ ಮೌಲ್ಯಗಳು ಏರುಪೇರಾದವು. ಕಾದಂಬರಿಗಳಲ್ಲಿ ಸತ್ವ ಉಡುಗಿತು.

ನವ್ಯತೆಯ ಹೆಸರಿನಲ್ಲಿ ಅನೇಕ ಬಗ್ಗಡದ ಕೃತಿಗಳು ನಿರ್ಮಾಣವಾದವು. ಓದುವವರಿಗಿಂತ ಬರೆಯುವವರೇ ಹೆಚ್ಚಿದರು. ಅರಿವು ಗಾಳಿ ಬೆಳಕುಗಳಿದ್ದಂತೆ. ಅವು ಎಲ್ಲಿಂದ ಹೇಗೆ ಬೇಕಾದರೂ ಬರಲಿ. ಆದರೆ ಅವುಗಳಿಗೆ ಮುದ್ರೆ ಏಕೆ ಒತ್ತಬೇಕು. ಸರಸ್ವತಿ ಒಬ್ಬರ ಸ್ವತ್ತಲ್ಲ. ಅವಳು ಎಲ್ಲರ ತಾಯಿ.

ಇಂದು ಪ್ರಜಾಪ್ರಭುತ್ವದಲ್ಲಿ ನಾವು ಇದ್ದೇವೆ. ಆದರೆ ಅದರ ಹೊಣೆಗಾರಿಕೆ ಜ ನ ರಿ ಗಿ ಲ್ಲ. ಇದನ್ನು ತಿಳಿಸಿಕೊಡುವ ಕೆಲಸ ಸಾಹಿತಿಯದು. ಬರೆದರೆ ನಾಲ್ಕು ಮಂದಿಗೆ ತಿಳಿಯುವಂತೆ ಬರೆಯಬೇಕು. ಸಾ ಹಿ ತ್ಯ ದ ಪ್ರಯೋಜನ ಎಲ್ಲರಿಗೂ ಆಗಬೇಕು. ಸಮಾಜದ ಎಲ್ಲರಲ್ಲಿ ತಿಳಿವಳಿಕೆ ಮೂಡಿಸುವ ಕೆಲಸ ಸಾಹಿತಿಯದು. ಕಾದಂಬರಿಯು ಸಾಹಿತ್ಯದಲ್ಲಿ ರತ್ನ. ಹೊಸಸಂವೇದನೆ, ಸಾಮಾಜಿಕ ಪ್ರಜ್ಞೆ ಕಾದಂಬರಿಗಳಲ್ಲಿ ಅಭಿವ್ಯಕ್ತವಾಗಬೇಕು. ಸತ್ವಶಾಲಿಯಾದ ಕಾದಂಬರಿ ಜನಜೀವನವನ್ನು ಬದಲಿಸುತ್ತದೆ. ಅಬ್ಬರದ ರಾಜಕಾರಣದ ಕರಡಿಮುಜಲು ಅಡಗಿ ಸಾಹಿತ್ಯದ ಮಧುರವಾಣಿ, ತಂತ್ರೀನಾದ ಕೇಳಲಿ. ಸಂಸ್ಕೃ

ತಿಯ ಸಂವರ್ಧನೆಯ ಕಾರ್ಯ ಸಾಹಿತಿಯದು. ಸಾಹಿತ್ಯ ಜೀವನದಲ್ಲಿ ಹೊಸ ಆಸೆಯನ್ನು ತೋರಿಸುತ್ತದೆ. ಪ್ರಜಾರಾಜ್ಯದ ಸುಕ್ಷೇಮ ಬಿದ್ದಿರುವುದು ಸಾಹಿತಿಯ ಮೇಲೆ. ಇದನ್ನು ಅವನು ಮರೆಯಬಾರದು.

[ಪುರಾಣಿಕರು ಭಾಷಣದ ಕಾವಿನಲ್ಲಿ ತಮ್ಮ ಕಾದಂಬರಿಗಳು ಎರಡು ಲಕ್ಷ ಅರವತ್ತೈದು ಸಾವಿರ ಪ್ರತಿಗಳು ಮಾರಾಟವಾಗಿದ್ದರೂ, ನಡೆದು ಬಂದ ದಾರಿಯಲ್ಲಿ ವಿಮರ್ಶಕ ಕುರ್ತುಕೋಟಿಯವರಿಂದ ತಮಗೆ ಸಲ್ಲಬೇಕಾದ ಸ್ಥಾನಮಾನ ದೊರಕಲಿಲ್ಲವೆಂದು ವಿಷಾದಿಸಿದರು. ಇಂಥ ಬೆಲೆಯಿಲ್ಲದ ವಿಮರ್ಶೆಯಿಂದ ತಮ್ಮ ಜನಪ್ರಿಯತೆ ತಗ್ಗುವುದಿಲ್ಲವೆಂದು ಹೇಳಿದರು.

ಆಗ ಸಭಿಕರಲ್ಲಿ ಒಬ್ಬರು ಎದ್ದು ನಿಂತು ಸಾಹಿತ್ಯದ ಮೌಲ್ಯವನ್ನು ಅಳೆಯಲು ಜನಪ್ರಿಯತೆಯೊಂದು ಮಾನದಂಡವಾದರೆ ನರಸಿಂಹಯ್ಯನವರ ಕಾದಂಬರಿಗಳು ಇನ್ನೂ ಹೆಚ್ಚು ಜನಪ್ರಿಯವಾಗಿವೆ—ಎಂದು ಉದ್ಗಾರ ತೆಗೆದರು.]

ಸಂಜೆಯವರೆಗೆ ನಡೆದಿದ್ದ ಈ ಚರ್ಚೆಯಲ್ಲಿ ಪ್ರಮುಖವಾಗಿ ಕಂಡ ಅಂಶವಿಷ್ಟು : ನವ್ಯಕಾವ್ಯದ ಹೆಸರಿನಲ್ಲಿ ಒಳ್ಳೆಯ ಕೃತಿಗಳೂ ಬಂದಿವೆ, ಕೆಟ್ಟ ಕೃತಿಗಳೂ ಬಂದಿವೆ. ಇದನ್ನು ನಿರ್ಲಕ್ಷಿಸಿ, ನವ್ಯ ಪಂಥದ ಮೇಲೆ ಕೆಲವು ವಿಮರ್ಶಕರು ಗದಾಪ್ರಹಾರಕ್ಕೆಳೆಸಿದ್ದಾರೆ. ಅಡಿಗೆ ರುಚಿಯಾಗಿದೆಯೋ ಇಲ್ಲವೋ, ಅದು ಊಟದಲ್ಲಿ ಗೊತ್ತಾಗುತ್ತದೆ—ಎಂಬ ಆಂಗ್ಲ ನಾಣ್ಣುಡಿ ಇದೆ. ಕೆಲವು ಕಾಲದ ನಂತರ ನವ್ಯಕಾವ್ಯದ ಚರ್ಚೆಯ ಧೂಳು ಅಡಗಬಹುದು. ಆ ಮಾರ್ಗದಲ್ಲಿ ಬಗ್ಗಡ ನಿಂತು, ತಿಳಿಯಾದ ಕಾವ್ಯದ ಹೊನಲು ಹರಿಯಬಹುದು. ಇದಕ್ಕಾಗಿ ನವ್ಯತೆಯನ್ನೇ ಟೀಕಿಸುವ, ತಿರಸ್ಕರಿಸುವ ಮನೋಭಾವ ಸಲ್ಲದು. ಇದರಿಂದ ಸಾಹಿತ್ಯದ ಆರೋಗ್ಯವನ್ನು ಕಡೆಗಣಿಸಿದಂತೆ—ಎಂದು ನನಗೆ ಅನಿಸಿತು.

ಆ ಸಂಜೆ ಪೂರ್ಣಚಂದ್ರ ತೇಜಸ್ವಿ ಬರೆದಿದ್ದ 'ಯಮಳ ಪ್ರಶ್ನೆ' ನಾಟಕವನ್ನು ಸಿಂಧುವಳ್ಳಿ ಅನಂತಮೂರ್ತಿ ಗೆಳೆಯರು ತುಂಬ ಸೊಗಸಾಗಿ ಅಭಿನಯಿಸಿದರು.

ಇದೊಂದು ಸಮಸ್ಯಾತ್ಮಕ ನಾಟಕ. "ಈ ಜಗತ್ತೇ ಆಸ್ಪತ್ರೆ, ನಾವೆಲ್ಲರೂ ರೋಗಿಗಳು"—ಎಂಬ ಧ್ವನಿಯ ಸುತ್ತ ಈ ನಾಟಕವನ್ನು ಹೆಣೆದಿದ್ದಾರೆ. ನಾಟಕದ ಆರಂಭ ಸಾಮಾನ್ಯ ರೀತಿಯದಾದರೂ ಮುಕ್ತಾಯದಲ್ಲಿ ಅನಿರೀಕ್ಷಿತ ತಿರುವು ಇದೆ. ಕಲಾವಿದರ ಪ್ರತಿಭೆಯಿಂದ ಯಮಳ ಪ್ರಶ್ನೆ ನಾಟಕ ಸೊಗಸಾಗಿ ಪ್ರಯೋಗವಾಯಿತು.

ಆ ದಿನ ಊಟವಾದ ಮೇಲೆ ಕಾಸರಗೋಡಿನಿಂದ ಬಂದಿದ್ದ ಕಯ್ಯಾರ ಕಿಞ್ಞಣ್ಣ ರೈ ಅವರ ಜತೆಯಲ್ಲಿ ಮಾತನಾಡುತ್ತಿದ್ದಾಗ ಈ ಯಮಳ ಪ್ರಶ್ನೆಯ ಇನ್ನೊಂದು ಮುಖ ತಿಳಿಯಿತು.

ರೈ ಅವರು ಕಾಸರಗೋಡಿನವರು. ಸುಮಾರು ಒಂದು ಲಕ್ಷ ಕನ್ನಡಿಗರ ಹಿತಾಸಕ್ತಿಯನ್ನು ಕಡೆಗಣಿಸಿ, ಕನ್ನಡದ ಭೂಭಾಗವಾದ ಕಾಸರಗೋಡನ್ನು ಫಜಲಾಲಿ ಸಮಿತಿಯವರು, ಫಣಿಕ್ಕರರ ಒತ್ತಡಕ್ಕೆ ಬಿದ್ದು, ಕೇರಳಕ್ಕೆ ಒಪ್ಪಿಸಿಬಿಟ್ಟರೆಂದೂ, ಈ ಬಗ್ಗೆ ಕನ್ನಡನಾಡಿನ ಇತರ ಭಾಗದ ಜನ, ಕಾಸರಗೋಡಿನ ಕನ್ನಡಿಗರನ್ನು ಮರೆತುಬಿಟ್ಟಿರುವರೆಂದೂ ತಮ್ಮ ಅಳಲನ್ನು ತೋಡಿಕೊಂಡರು.

"ಈ ವಿವಾದಾಸ್ಪದ ಪ್ರದೇಶಗಳ ಗಡಿಯನ್ನು ಗುರುತಿಸುವ ಸಮಿತಿಯೊಂದು ನೇಮಕವಾಗಿದೆ. ಮಹಾಜನರ ಕಾಲದಲ್ಲಾದರೂ ಕಾಸರಗೋಡು ಕನ್ನಡನಾಡಿಗೆ ಬರುವಂತೆ ಆಗಲಿ" ಎಂದು ಹೇಳಿ ತಮ್ಮ ಆಶಾವಾದವನ್ನು ವ್ಯಕ್ತಪಡಿಸಿದರು.

ಜತೆಯಲ್ಲಿದ್ದ ಸ. ಸ. ಮಾಳವಾಡರು, "ಆದರೆ ಈ ಸಮಿತಿಯಿಂದ ಕಾಸರಗೋಡಿನ ಸಮಸ್ಯೆ ಬಗೆಹರಿಯುವುದೆಂದು ನಿಮಗನಿಸುವುದೆ?" ಎಂದು ಪ್ರಶ್ನಿಸಿದರು.

"ಏಕೆ ಬಗೆಹರಿಯಬಾರದು?"

"ಗಡಿಯನ್ನು ಗುರುತಿಸುವಲ್ಲಿ ಅವರು ಬೆಳಗಾವಿಯ ಬಗ್ಗೆ ಒಂದು ತತ್ವಕ್ಕೆ ಒಪ್ಪಿದರೆ, ಕಾಸರಗೋಡಿಗೆ ಇದನ್ನು ಅನ್ವಯಿಸಲು ಬಂದೀತೇ ಎಂದು ನನ್ನ ಶಂಕೆ". "ವಿಶಾಲ ಮೈಸೂರಿನವರಿಗೆ ಬೆಳಗಾವಿಯನ್ನು ಉಳಿಸಿಕೊಳ್ಳುವುದರಲ್ಲಿ ಇರುವ ಆಸಕ್ತಿ, ಕಾಸರಗೋಡಿನ ಬಗ್ಗೆ ಇಲ್ಲವೆಂಬುದೇನೋ ನಾ ಬಲ್ಲೆ. ಆದರೆ ಅವರು ಯಾವುದೇ ತತ್ವವನ್ನು ಅನುಸರಿಸಲಿ, ಹದಿನಾರಾಣೆ ಕನ್ನಡದ ನೆಲೆಯಾದ ಕಾಸರಗೋಡಿನ ಚಂದ್ರಗಿರಿ ಹೊಳೆಯ ಉತ್ತರಭಾಗವು ಕನ್ನಡಕ್ಕೆ ಸೇರಲೇಬೇಕು. ಅದು ಕನ್ನಡನಾಡಿನ ಅವಿಭಾಜ್ಯ ಭಾಗ. ಇದರಲ್ಲಿ ಯಾರಿಗೂ ಸಂಶಯವಿಲ್ಲ" ಎಂದರು ರೈ.

"ಹಾಗಿದ್ದರೆ, ನೀವೇಕೆ, ನಿಮ್ಮ ಜನನಾಯಕರೇಕೆ ಫಜಲ್ಲಾಲಿ ಸಮಿತಿ ಅವರು ಬಂದು ವಿಚಾರಣೆ ನಡೆಸಿದಾಗ ನಿಮ್ಮ ಹೇಳಿಕೆಯಲ್ಲಿ ಸತ್ಯಾಂಶ ತಿಳಿಸದೆ ಕಾಸರಗೋಡು ಕೇರಳಕ್ಕೆ ಸೇರಲು ಅವಕಾಶ ಮಾಡಿಕೊಟ್ಟಿರಿ?" ಎಂದು ನಾನು ಕೇಳಿದೆ.

"ಆ ಸಮಯಲ್ಲಿ ಫಜ್ಲಾಲಿ ಸಾಹೇಬರು ಕಾಸರಗೋಡಿನ ಉತ್ತರ ತಾಲ್ಲೂಕನ್ನು ಕನ್ನಡನಾಡಿಗೆ ಸೇರಿಸಬೇಕೆಂದು ಒಪ್ಪಿದ್ದರು. ಈ ಬಗ್ಗೆ ನಮಗೆ ಅನ್ಯಾಯವಾಗುವುದಿಲ್ಲವೆಂದು ಭರವಸೆಯನ್ನು ಕೊಟ್ಟಿದ್ದರು. ಆದರೆ

ಮುಂದೆ ಅವರ ವರದಿ ಪ್ರಕಟವಾದಾಗ, ಯಾರ ಪ್ರಭಾವ ಏನು ಕೆಲಸಮಾಡಿತೋ, ಅಂತೂ ಕಾಸರಗೋಡಿನ ಕನ್ನಡ ಪ್ರದೇಶ ಕನ್ನಡನಾಡಿನ ಕೈಬಿಟ್ಟು ಕೇರಳಕ್ಕೆ ಸೇರಿ ಹೋಯಿತು."

"ಈ ಬಗ್ಗೆ ನೀವು ಮಹಾರಾಷ್ಟ್ರದ ಜನ ಮಾಡಿದಂತೆ ಗದ್ದಲವೇಕೆ ಮಾಡಲಿಲ್ಲ?" ನಾನು ಕೇಳಿದೆ.

"ನಾವು ಕಾಸರಗೋಡಿನ ಪ್ರಶ್ನೆಯ ಮೇಲೆ ಕಳೆದ ಚುನಾವಣೆಯಲ್ಲಿ ಗೆದ್ದಿದ್ದೇವೆ. ಕೇರಳದಲ್ಲಿ ಕಾಂಗ್ರೆಸ್ಸಿನ ಸರಕಾರವಿದ್ದಿದ್ದರೆ, ಈ ಸಮಸ್ಯೆ ಎಂದೋ ಬಗೆಹರಿಯುತ್ತಿತ್ತು. ಆದರೆ, ಅಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಲಕ್ಷಣ ಕಾಣುವುದಿಲ್ಲ. ಹೀಗಾಗಿ ನಾವು ಸದ್ದುಗದ್ದಲವಿಲ್ಲದೆ ನಮ್ಮ ಬೇಡಿಕೆಗಳನ್ನು ಶಾಂತರೀತಿಯಲ್ಲಿ ಮಂಡಿಸುತ್ತಾ ಬಂದಿದ್ದೇವೆ. ಈ ಬಾರಿ ನಮಗೆ ನ್ಯಾಯ ದೊರಕಲೇಬೇಕು" ಎಂದು ರೈ ಅವರು ದೃಢನಿರ್ಧಾರದಲ್ಲಿ ಹೇಳಿದರು.

ಅನಂತರ ನಮ್ಮ ಮಾತು ಕಡೆಯುಸಿರು ಇರುವವರೆಗೂ ಕಾಸರಗೋಡು ಕನ್ನಡವೆಂದು ಹೇಳಿ ತಮ್ಮ ಕನಸು ನನಸಾಗುವುದನ್ನೇ ಹಂಬಲಿಸಿ, ಕಣ್ಮರೆಯಾದ ಕನ್ನಡ ತಪಸ್ವಿ ಮಂಜೇಶ್ವರದ ಗೋವಿಂದ ಪೈಗಳ ಮಧುರ ಸ್ಮರಣೆಗೆ ತಿರುಗಿತು.

ರೈ ಅವರು ಗೋವಿಂದ ಪೈಗಳ ಔದಾರ್ಯವನ್ನು ಮುಕ್ತಕಂಠದಿಂದ ಹೊಗಳಿದರು. ಅವರ ದೃಷ್ಟಿವೈಶಾಲ್ಯವನ್ನು ಸೂಚಿಸುವುದಕ್ಕಾಗಿ, "ಶ್ವಪಚನಂಬಿಟ್ಟು ದಿವಕೇರಲೆಂತು" ಎಂಬ ಅಷ್ಟಪಟ್ಟದಿಯನ್ನು ವಿವರಿಸಿದರು.

ಸತ್ಯನಿಷ್ಠನಾದ ಹರಿಶ್ಚಂದ್ರನು ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ವೀರಬಾಹುವಿನ ಆಳಾಗಿ, ಸ್ಮಶಾನ ಕಾಯಲು ನಿಂತನಷ್ಟೆ. ಆಗ ಚಂದ್ರಮತಿಯು ಸತ್ತ ಮಗನನ್ನು ಮಣ್ಣುಮಾಡಲು ಅವನಿರುವ ಸ್ಮಶಾನಕ್ಕೇ ಬರುವಳು. ಅವಳ ಬಳಿ ಹೆಣದ ಬಟ್ಟೆಯನ್ನು ಕೊಡಲು ಹಣವಿಲ್ಲದೆ, ತಾನುಟ್ಟ ಸೀರೆಯನ್ನೇ ಹರಿಯಲೆಂದು ಕೈಹಾಕಿದಳು. ದೇವತೆಗಳು ತಮ್ಮ ವಿಮಾನದಲ್ಲಿ 'ಗಿರ್ರನೆ ತಿರುಗಿ' ಬಂದು ಅವನಂಥ ಸತ್ಯಸಂಧನಿಗೆ ಭೂಲೋಕ ತಕ್ಕ ಸ್ಥಳವಲ್ಲವೆಂದೂ, ಸ್ವರ್ಗಕ್ಕೆ ಬರಬೇಕೆಂದೂ ಹೇಳಿದರು. ಆಗ ಹರಿಶ್ಚಂದ್ರನ ಬಾಯಲ್ಲಿ ಈ ಮಾತು ಬರುತ್ತದೆ. ತನ್ನ ಒಡೆಯನನ್ನು ಬಿಟ್ಟು ತಾನು ಒಬ್ಬನೇ ಸ್ವರ್ಗಕ್ಕೆ ಹೇಗೆ ಬರಲಿ? ಜತೆಯಲ್ಲಿ ಇರುವ ಶ್ವಪಚರೆಲ್ಲರ ಉದ್ಧಾರವಾಗದೆ, ತಾನು ಹೇಗೆ ಒಬ್ಬನೇ ಉದ್ಧಾರವಾಗಲಿ ಎಂಬುದು ಇನ್ನೊಂದು ಅರ್ಥ.

ಇದನ್ನು ಸುಂದರವಾಗಿ ವಿವರಿಸಿದರು ರೈ ಅವರು. ಅವರ ಹೆಸರು ಆಡಲು ತೊಡಕಿನದಾದರೂ ಕಿಞ್ಞಣ್ಣನೆಂದರೆ ಚಿಕ್ಕಣ್ಣನೆಂದು ತುಳುವಿನಲ್ಲಿ ಅರ್ಥವಂತೆ. (ಮೈಸೂರಿನವರಿಗೆ 'ಞ' ಉಚ್ಚಾರ ಬರುವುದಿಲ್ಲವೆಂದು ರೈಗಳ ಟೀಕೆ.)

ಅವರು ಗೋವಿಂದ ಪೈಗಳ ಒಂದು ಕೃತಿಯನ್ನು ಮೆಚ್ಚಿ ಕಾಗದ ಬರೆದಾಗ ಪೈಗಳು "ಕವಿಗೆ ಕವಿ ಮುನಿವಂ ಎಂಬ ಮಾತನ್ನು ನೀವು ಸುಳ್ಳಾಗಿಸಿದಿರಿ" ಎಂದು ಮಾರೋಲೆ ಬರೆದು ಶ್ರೀದೇವರನ್ನು ಆಶೀರ್ವದಿಸಲು ಬೇಡಿದ್ದರಂತೆ.

ಇಂಥ ರಸತಪಸ್ವಿಯನ್ನು ಪಡೆದ ಮಂಜೇಶ್ವರ ಕೇರಳದಲ್ಲಿ ಕಳೆದ ಹತ್ತು ವರ್ಷಗಳಿಂದ ಸೇರ್ಪಡೆಯಾಗಿರುವುದು ನಂಬಲೂ ಸಾಧ್ಯವಾಗದ ಮಾತು; ಕೆಲವು ಬಾರಿ ಸತ್ಯ ಕಲ್ಪನೆಗಿಂತಲೂ ಕೌತುಕವಾಗಿರುತ್ತದೆ—ಈ ಮಾತು ಕಾಸರಗೋಡಿನ ಬಗ್ಗೆ ಸತ್ಯವಾಗಿದೆ.

ನಾಳೆ ಮಹಾಜನರ ತೀರ್ಪು ಹೊರಬಿದ್ದಮೇಲೆ ಏನಾಗುತ್ತದೆಯೋ ನೋಡಬೇಕು ಎಂಬ ಕನಸನ್ನು ಹೊತ್ತು ಮಲಗಿದೆ.

ದಿನಾಂಕ ೧೦-೧೨-೧೯೬೬

ಮಾನಸಗಂಗೋತ್ರಿ

ಇಂದು ಸಮ್ಮೇಳನದ ಕೊನೆಯದಿನ.

ಬೆಳಗ್ಗೆ ಫಲಾಹಾರದನಂತರ ಸಭಾಭವನದಲ್ಲಿ ಪ್ರೊ. ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ 'ಇಂದಿನ ಕನ್ನಡದ ಪ್ರಾದೇಶಿಕ ರೂಪಗಳು' ಎಂಬ ವಿಚಾರಗೋಷ್ಠಿ ನಡೆಯಿತು.

ಪ್ರೊ. ವಿ. ಕೆ. ಗೋಕಾಕರು ಇಂದಿನ ಗೋಷ್ಠಿಗೆ ಅಧ್ಯಕ್ಷರಾಗಬೇಕಾಗಿತ್ತು. ಆದರೆ ಬೆಂಗಳೂರಿನಲ್ಲಿ ಅವರಿಗೆ ಅನಿವಾರ್ಯದ ಕೆಲಸವೊದಗಿ ಬರಲಾಗಲಿಲ್ಲ. ಹೀಗಾಗಿ ಈ ವರ್ಷದ ಅಕಾಡಮಿ ಪಾರಿತೋಷಕ ವಿಜೇತ 'ಮಾವಿನ ಕೆರೆಯ ರಂಗಯ್ಯ' ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು.

ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ,

"ನಮ್ಮ ತಾಯಿ ನುಡಿಯ ಮೂಲಕ ಜ್ಞಾನವಾಹಿನಿ ಹರಿದು ಬಂದಾಗಲೇ ಸೊಗಸು. ಅವಳು ರಣಚಂಡಿಯಾಗಿ ಬಂದು ನಮ್ಮ ಬಲಿದಾನ ಬೇಡಬಹುದು. ಅದಕ್ಕೆ

ನಾವು ಸಿದ್ಧರಾಗೋಣ. ನಮ್ಮ ನುಡಿ ಎಷ್ಟು ಲಕ್ಷಣವಾಗಿದೆ ಎಷ್ಟು ಸ್ಫೂರ್ತಿದಾಯಕವಾಗಿದೆ ಎಂಬುದನ್ನು ನಾವು ಮೊದಲು ಮನಗಾಣಬೇಕು. ನಾನು ಬಿ. ಎಂ. ಶ್ರೀ ಅವರು ಆರಂಭಿಸಿದ ಕೆಲಸವನ್ನು ಮುಂದುವರೆಸಿದ್ದೇನೆ. ಆದರೆ ಸೋತಿದ್ದೇನೆ. ಬಿ. ಎಂ. ಶ್ರೀ ಅವರ ಕಂಠಶ್ರೀ ನನಗೆ ಇಲ್ಲ. ಆದರೆ ಹನುಮಂತರಾಯರ ಸುಗ್ರೀವಾಜ್ಞೆಗೆ ಅಂಜಿ ನಾನು ಈ ಹಿಂದೆ ಕನ್ನಡದ ಕೆಲಸ ಮಾಡಿದ್ದೇನೆ. ಈಗ ಪ್ರೊ. ಜವರೇಗೌಡರ ಆಗ್ರಹಕ್ಕೆ ಮಣಿದು 'ಪಡೆ ನೋಡ ಬಂದವರಿಗೆ ಗುಡಿ ಹೊರಿಸಿದಂತೆ' ಆಗಿದ್ದರೂ ಈ ಕಾರ್ಯಕ್ಕೆ ಒಪ್ಪಿಕೊಂಡಿದ್ದೇನೆ" ಎಂದರು.

ಪ್ರೊ. ಜವರೇಗೌಡರು 'ಕನ್ನಡ ಭಾಷೆ-ಇಂದು' ಎಂಬ ವಿಷಯವನ್ನು ಕುರಿತು ಮಾತನಾಡಿದರು.

ಅವರೇ ಈ ಮೂರು ದಿನಗಳ ಕಾಲ ನಡೆದ ಸಾಹಿತಿಗಳ ಕೂಟಕ್ಕೆ ಕೇಂದ್ರ ಬಿಂದು. ಅವರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಮನವೊಲಿಸಿ ಸುಮಾರು ಹತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಈ ಸಮ್ಮೇಳನವನ್ನು ಚೆನ್ನಾಗಿ ಯೋಜಿಸಿ ಅನುಷ್ಠಾನಕ್ಕೆ ತಂದ ದಿಗ್ದರ್ಶಕರು. ಅವರ ಬಲಗೈಗೆ ಪೆಟ್ಟಾಗಿ ಇನ್ನೂ ಕೈಪಟ್ಟಿಯಲ್ಲಿದ್ದರೂ ಅವರ ಬಲಭುಜ, ಎಡಭುಜವಾಗಿ ದುಡಿದವರು ಡಾ. ಹಾರೋಗದ್ದೆ ಮಾನಪ್ಪ ನಾಯಕರು ಮತ್ತು ಡಾ. ಚಿದಾನಂದಮೂರ್ತಿ ಅವರು. ಅವರೆಲ್ಲರ ಕಾರ್ಯ ಕುಶಲತೆ ಸಹಕಾರಗಳನ್ನೆಲ್ಲ ನೆನೆದು ಒಮ್ಮೆ ದೇ. ಜ. ಗೌ. ಅವರು "ಇನ್ನು ಕೆಲವು ದಿನ ಇದೇ ರೀತಿಯಲ್ಲಿ ಪಟ್ಟಿಕಟ್ಟಿಕೊಂಡೇ ಇರೋಣವೆನಿಸುತ್ತದೆ" ಎಂದು ಉದ್ಗಾರ ತೆಗೆದಿದ್ದರು.

ತಮಗೆ ಬರೆಯಲಾಗದಿದ್ದರೂ, ತಾವು ಗುರುತು ಹಾಕಿಕೊಂಡುಬಂದಿದ್ದ ಅಂಶಗಳ ಮೇಲೆ ಸೊಗಸಾದ ಭಾಷಣದ ಚಪ್ಪರವನ್ನು ನಿರ್ಮಿಸಿದರು.

ಎರಡು ಸಾವಿರ ವರ್ಷಗಳ ಕನ್ನಡ ಭಾಷೆಯನ್ನು ಕುರಿತು ಮಾತನಾಡುವುದು ಕಷ್ಟದ ಕೆಲಸ [ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಕಷ್ಟದ ಕೆಲಸವೆಂದರೆ ಕ್ಷೌರ] ಇದು ವಿಕಾಸಗೊಳ್ಳುತ್ತಿರುವ ಭಾಷೆ. ಈ ಭಾಷೆಯ ಬೆಳವಣಿಗೆಗೆ ಅನೇಕ ಸಂಸ್ಕಾರ, ಆಚಾರ, ವಿಚಾರವುಳ್ಳ ಜನರು ಕಾರಣರಾಗಿದ್ದಾರೆ. ಯಾವುದೇ ಭಾಷೆಯನ್ನು ಮೂರು ಮಹಾಶಕ್ತಿಗಳು ಬೆಳಸಬಹುದು. ೧) ಮಹಾಕವಿ ೨) ರೈತ ಅಥವಾ ಕಾರ್ಮಿಕ ೩) ಪತ್ರಿಕೆಯವರು. ಇವರು ಬೆಳೆಸಿದ ಭಾಷೆಗೆ ಪಂಡಿತರು ಅಡ್ಡಕಟ್ಟೆಯನ್ನು ಕಟ್ಟಿ, ಯಾವುದು ಸರಿ, ಯಾವುದು ಸರಿಯಲ್ಲವೆಂದು ಹೇಳಬಹುದು.

ಹಿಂದೆ ಕನ್ನಡದಲ್ಲಿ ಅನೇಕ ಉಪಭಾಷೆಗಳು – ಶಿಷ್ಟ ಭಾಷೆಗಳು – ಇದ್ದಿರಬೇಕು. ಕವಿರಾಜಮಾರ್ಗಕಾರನು 'ಕನ್ನಡಂಗಳೊಳ್' ಎಂಬ ಮಾತನ್ನು ಬಳಸುತ್ತಾನೆ. ಇದಕ್ಕೆ ಪೋಷಕವಾಗಿ ಅವನು ಉತ್ತರ ದಕ್ಷಿಣ ಮಾರ್ಗಗಳನ್ನು ಕುರಿತು ಪ್ರಸ್ತಾಪಿಸಿದ್ದಾನೆ. ಗೋದಾವರಿಯಿಂದ ಮಾತ್ರವಲ್ಲ, ನರ್ಮದೆಯಿಂದ ಕಾವೇರಿಯವರೆಗೆ ಈ ನಾಡು ವಿಸ್ತರಿಸಿತ್ತು. ಈ ವಿಶಾಲವಾದ ಪ್ರದೇಶದಲ್ಲಿ ಕನ್ನಡವು ತೆಲುಗು, ತಮಿಳು, ಮಲೆಯಾಳಗಳ ಸಂಪರ್ಕವನ್ನು ಪಡೆದು, ಬೆಳೆಯಿತು.

ಕವಿಯು ತನ್ನ ಕಾವ್ಯದಲ್ಲಿ ಉಪಯೋಗಿಸಿದ ಪದಗಳ ದೇಶೀತನದಿಂದ ಅವನ ದೇಶ ಕಾಲಗಳನ್ನು ಗುರುತಿಸಬಹುದೆ? ಉದಾಹರಣೆಗೆ ಆಂಡಯ್ಯನ ಕನ್ನಡ ಓದಿದವರಿಗೆ ಅವನು ಬನವಾಸಿನಾಡಿನವನೆಂದು ಸುಲಭವಾಗಿ ಗೊತ್ತಾಗುತ್ತದೆ. ಅಂತೆಯೇ ಪಂಪ-ಪುಲಿಗೆರೆಯ ನಾಡಿನವನು, ಮುದ್ದಣ-ದಕ್ಷಿಣ ಕನ್ನಡ ಜಿಲ್ಲೆಯವನು. ಕಾರಂತರ ಕಾದಂಬರಿಗಳಿಂದಲೂ ಕುವೆಂಪುರವರ ಹೆಗ್ಗಡತಿಯಿಂದಲೂ ಅವರ ನೆಲೆವೀಡುಗಳನ್ನು ಗುರುತಿಸಬಹುದು.

ಕಾವ್ಯ ಶಾಸ್ತ್ರಗಳು ಆ ಕಾಲದ ಜನಜೀವನವನ್ನು ಚಿತ್ರಿಸುತ್ತವೆ. ಭಾಷಾ ಶಾಸ್ತ್ರದಲ್ಲಿ ಅವರ ಭಾಷೆಯನ್ನು ಶಿಷ್ಟ ಭಾಷೆಯೆಂದು ಕರೆಯುತ್ತಾರೆ. ಅಂದರೆ Standard dialect, kings English ಇಂಗ್ಲೆಂಡಿನಲ್ಲಿ ಶಿಷ್ಟ ಭಾಷೆ ಆಗಿರುವಂತೆ, ಅರಮನೆ ಗುರುಮನೆಗಳ ಭಾಷೆ ನಮ್ಮಲ್ಲಿ ಶಿಷ್ಟ ಭಾಷೆಯಾಗಿದೆ. ಕವಿರಾಜಮಾರ್ಗದಲ್ಲಿ ನೃಪತುಂಗನು ಕಿಸುವೊಳಲು, ಒಕ್ಕುಂದ, ಪುಲಿಗೆರೆ, ಪಟ್ಟದಕಲ್ಲು, ಲಕ್ಷ್ಮೇಶ್ವರಗಳಲ್ಲಿ ಆಡುವ ಜನಸಾಮಾನ್ಯರ ಭಾಷೆಯನ್ನು ತಿರುಳ್ಗನ್ನಡವೆಂದು ಕರೆದಿದ್ದಾರೆ. ಪಂಪನೂ ಪುಲಿಗೆರೆಯ ಕನ್ನಡವನ್ನು ತಿರುಳ್ಗನ್ನಡವೆಂದು ಹೇಳಿದ್ದಾನೆ. ವಚನ ಸಾಹಿತ್ಯಕ್ಕೆ ಕಲ್ಯಾಣವು ಕೇಂದ್ರವಾಗಿತ್ತು. ಅನಂತರ ಕನ್ನಡ ಸಾಹಿತ್ಯಕ್ಕೆ ವಿಜಯನಗರ ಕೇಂದ್ರವಾಯಿತು. ಮುಮ್ಮಡಿ ಕೃಷ್ಣರಾಜರ ಕಾಲಕ್ಕೆ–ಕೆಂಪು ನಾರಾಯಣನ ಮುದ್ರಾಮಂಜೂಷದ ಕಾಲಕ್ಕೆ – ಮೈಸೂರು ಶಿಷ್ಟ ಭಾಷೆಯ ಕೇಂದ್ರವೆನಿಸಿತು.

ಒಂದು ಭಾಷೆಯು ಬೆಳೆಯಲು ಕಾರಣಗಳು ಹಲವು. ಕನ್ನಡನಾಡು ಪುಣ್ಯ ಭೂಮಿ, ಕನ್ನಡ ಭಾಷೆ ಪುಣ್ಯವಂತ ಭಾಷೆ. ಇದು ಅನೇಕ ಧರ್ಮ ಹಾಗೂ ಸಂಸ್ಕೃತಿಗಳ ಸಂಗಮಕ್ಷೇತ್ರ. ಹೀಗಾಗಿ, ಹಲವಾರು ಭಾಷೆಯ ಜನ ಇಲ್ಲಿ ಕಾಣಸಿಗುತ್ತಾರೆ. ಕನ್ನಡ ಶಾರದೆಯ ಭಾಷಾ

ಸಂಸಾರ ದೊಡ್ಡದು. ಮರಾಟಿ, ತೆಲುಗು, ತಮಿಳು, ಸಂಸ್ಕೃತ, ಪ್ರಾಕೃತ—ಇತ್ತೀಚೆಗೆ ಉರ್ದು ಮತ್ತು ಇಂಗ್ಲಿಷ್ ಭಾಷೆಗಳಿಂದ ಪರಿಪುಷ್ಟವಾಗಿ ಬೆಳೆದ ಭಾಷೆ ಕನ್ನಡ. ಇದರಲ್ಲೂ ಅನ್ಯಭಾಷೆಯ ಪ್ರಕ್ರಿಯಗಳು ಸೇರಿಕೊಂಡಿವೆ. ಒಂದು ಕಾಲಕ್ಕೆ ಉತ್ತರ ಭಾರತದ ಗುಜರಾತಿನವರೆಗೆ, ನೇಪಾಳ, ಬಂಗಾಳದವರೆಗೆ ವ್ಯಾಪಿಸಿದ್ದ ಕನ್ನಡ ಅರಸುಮನೆತನಗಳು ಬಹು ಭಾಷಾ ಬಾಂಧವ್ಯವನ್ನು ಕನ್ನಡಕ್ಕೆ ಒದಗಿಸಿದ್ದಾರೆ. ಕೊಂಕಣಿ, ತುಳು ಭಾಷೆಗಳು ಕನ್ನಡದೊಂದಿಗೆ ನಿಕಟಬಾಂಧವ್ಯ ಪಡೆದು ಬೆಳೆದಿವೆ: ಕನ್ನಡ ಭಾಷೆಯನ್ನು ಬೆಳೆಸಿದೆ. ಮಹಾರಾಷ್ಟ್ರದ ಸಂತಕವಿ ಜ್ಞಾನೇಶ್ವರನ ಕೃತಿಯಲ್ಲೂ ಕನ್ನಡ ಶಬ್ದಗಳು ಸೇರಿಕೊಂಡಿವೆ. ಕನ್ನಡದ ಓದು ಮರಾಟಿಯಲ್ಲಿ ಓದಣೆ ಆಗಿದೆ. (ಶಂ. ಭಾಬಾ, ಜೋಶಿ), ಕುಮಾರವ್ಯಾಸನಲ್ಲಿ ಅನೇಕ ಮರಾಟಿ ಪದಗಳು ಸೇರಿರುವುದನ್ನು ನೋಡುತ್ತೇವೆ. ಇದರಿಂದ ಹೊರಪಡುವ ಅಂಶವೆಂದರೆ ಭಾಷೆಯು ವಿಷಯದಲ್ಲಿ ಮಡಿವಂತಿಕೆ ಸಲ್ಲದು; ಭಾಷೆಯ ಬೆಳೆವಣಿಗೆ ಇಬ್ಬಗೆಯ ಮಾರ್ಗದಲ್ಲಿ ನಡೆಯುತ್ತದೆ ಎಂಬ ಸಂಗತಿ.

ಕನ್ನಡ ಸಾಹಿತ್ಯದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂಬ ಪ್ರಭೇದ ಅನಂತರದ್ದು, ಇವೆಲ್ಲ ಆಂತರಿಕ ಬದಲಾವಣೆಯ ರೂಪಗಳು.

ಹೊಸಗನ್ನಡ ಕಾಲವನ್ನು ಮುದ್ರಾಮಂಜೂಷದಿಂದ ಗುರುತಿಸಬಹುದು. ಅದು ಭಾರತದಲ್ಲಿ ವಿದೇಶಿಯರಾದ ಇಂಗ್ಲಿಷರು ಪೋರ್ಚುಗೀಸ್ ಹಾಗೂ ಫ್ರೆಂಚರನ್ನು ಹಿಮ್ಮೆಟ್ಟಿಸಿ, ನೆಲೆಯೂರುತ್ತಿದ್ದ ಕಾಲ. ಅವರ ಭಾಷಾಸಂಪರ್ಕದಿಂದ ಅನೇಕ ಪೋರ್ಚುಗೀಸ್, ಫ್ರೆಂಚ್, ಇಂಗ್ಲಿಷ್, ಪರ್ಶಿಯನ್ ಪದಗಳು ಕನ್ನಡ ಶಬ್ದ ಭಂಡಾರಕ್ಕೆ ಸೇರಿದವು. ಅಲಮಾರು, ಪಾದ್ರಿ, ಖಡಾಖಡಿ, ಇಲಾಖೆ, ಇಜಾರ, ವಸೀಲಿ, ಸಾಹುಕಾರ, ಕಡೆಗೆ ಇಂದು ಜನಪ್ರಿಯವಾಗಿರುವ 'ಮಾಮೂಲು' ಎಲ್ಲವೂ ಅನ್ಯದೇಶೀ ಶಬ್ದಗಳೇ. ಕನ್ನಡ ನಾಡು ಹರಿದು ಹಂಚಿಹೋಗಿದ್ದುದು ಈಗ ಒಂದಾಗಿದೆ. ಆದರೂ ಒಂದೊಂದು ಪ್ರದೇಶದಲ್ಲೂ ಒಂದೊಂದು ಭಾಷಾ ವೈವಿಧ್ಯತೆ ಕಾಣಬಹುದು. ಬೀದರ್ ಪ್ರದೇಶದ ಕನ್ನಡದಲ್ಲಿ ಮರಾಟಿ ಶಬ್ದಗಳು ಹೆಚ್ಚು: ಸಾಡೆ ದೀಡ್ ರೂಪಾಯಿ. ಎಣಿಕೆಯಲ್ಲಿನ ಅನೇಕ ಶಬ್ದಗಳು ಮರಾಟಿ.

[ಇಲ್ಲಿ ಒಂದು ಸ್ವಾರಸ್ಯದ ಸಂಗತಿ ಹೇಳುತ್ತೇನೆ. ನಾವೆಲ್ಲ ಊಟಕ್ಕೆ ಕುಳಿತಿದ್ದಾಗ ಹುಕ್ಕೇರಿ ಬಾಳಪ್ಪನವರನ್ನು 'ಊಟ ಹೇಗಿದೆ?' ಎಂದು ದೇ. ಜ. ಗೌ. ಕೇಳಿದರು. ಅವರು ಭಕ್ಕರಿತಿನ್ನುವವರು. ಮೈಸೂರಿನ ಊಟ ಹಿಡಿಸಿತೋ ಇಲ್ಲವೋ ಕಾಣೆ. ಬಾಳಪ್ಪ ಅವರು ಸುಮ್ಮನೆ ನಕ್ಕರು.

"ಏಕೆ, ಸುಮಾರಾಗಿದೆಯೆ?" ಎಂದು ದೇ. ಜ. ಕೇಳಿದಾಗ ಅವರು ಮತ್ತಷ್ಟು ಖೊಳ್ಳನೆ ನಕ್ಕರು. ಅವರ ಕಡೆ ಸುಮಾರು ಎಂಬ ಶಬ್ದಕ್ಕೆ 'ಕೆಟ್ಟದೆ' ಎಂದು ಅರ್ಥವಂತೆ. ನಮ್ಮ ಕಡೆಯ 'ಸುಮಾರು' ಪದಕ್ಕೆ ಅವರ ಕಡೆ 'ಪರವಾಗಿಲ್ಲ' ಸಂವಾದಿಯಾದ ಪದ. ಚೆನ್ನಾಗಿದೆ ಎನ್ನಲು ಚಲೋ ಐತಿ, ತುಂಬ ಚೆನ್ನಾಗಿದೆ ಎನ್ನಲು ಭಯಂಕರ ಚಲೊಐತಿ.]

ಉತ್ತರ ದಕ್ಷಿಣ ಕರ್ನಾಟಕ ಮೈಸೂರು ಕನ್ನಡಗಳಲ್ಲಿ ಭಾಷೆಯ ರೂಪ ಅನೇಕ ವ್ಯತ್ಯಾಸ ಹೊಂದುತ್ತದೆ. ಮೈಸೂರಿನಲ್ಲಿ ಮನೆ—ಧಾರವಾಡದಲ್ಲಿ ಮನಿ. ನಮ್ಮ ಆನೆ ಅವರ ಆನಿ. ನಮ್ಮ ಟಾಕೀಸ್ ದ.ಕ. ಜಿಲ್ಲೆಯಲ್ಲಿ ಟಾಕೀಜ. ನಮ್ಮ ಆಯಿಲ್ ಕಂಪನಿ ಅವರಲ್ಲಿ ಓಯಿಲ್ ಕಂಪಿನಿ. ಮೈಸೂರು ವಿಭಾಗದಲ್ಲೇ ಉಳಿದಕಡೆ ಅಶ್ವತ್ಥ ವೃಕ್ಷವೆನಿಸಿಕೊಂಡ ಅರಳಿಮರ, ಕೋಲಾರದಲ್ಲಿ ತೆಲುಗಿನ ಪ್ರಭಾವದಿಂದ ರಾಗಿ ಮರವಾಗಿದೆ. ಮೈಸೂರಿನ ಬನ್ನಿರಿ . . . ಧಾರವಾಡದ ಬರ್ರಲ್ಲ . . . ಕಸುಬಿನ ಉಪಕರಣಗಳಲ್ಲೂ ಇದೇ ವ್ಯತ್ಯಾಸ; ನಮ್ಮ ನೇಗಿಲು ಧಾರವಾಡದ ಕಡೆ ರೆಂಟೆ. ಗಾಡಿ—ಚಕ್ಕಡಿ. ಅಳಿಲು—ಇಣಚಿ ಇತ್ಯಾದಿ. ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರಲ್ಲಿ ಮಾತನಾಡಿದಾಗ ಅವರ ನುಡಿಯಲ್ಲಿ ಒಂದು ಸಾವಿರ ಜಾತಿ ಮೀನುಗಳ ಹೆಸರು ಇರುವುದಾಗಿ ತಿಳಿಯಿತು.

ವ್ಯಕ್ತಿಗಳ ಇಲ್ಲವೇ ಸಮಾಜದ ಜ್ಞಾನಕ್ಷೇತ್ರ ವಿಶಾಲವಾದಂತೆಲ್ಲಾ ಹೊಸ ಹೊಸ ಮಾತುಗಳು ಸೃಷ್ಟಿಯಾಗುತ್ತವೆ. ಇಂಗ್ಲಿಷಿನ ಸಂಪರ್ಕದಿಂದ ಬಸ್ಸು, ರೈಲು, ಬ್ಯಾಂಕು ಮೊದಲಾದ ಪದಗಳು ಕನ್ನಡಕ್ಕೆ ಬಂದು ಅವು ಅಚ್ಚಕನ್ನಡ ಪದಗಳೇ ಆಗಿವೆ. ಪಾರಿಭಾಷಿಕ ಶಬ್ದಗಳು-ಮಾತುಗಳು-ಯಾರೊಬ್ಬರ ಸೊತ್ತಲ್ಲ. ನಮ್ಮ ಚಟ್ನಿ, ಇಡ್ಲಿ, ಅಭಿನಯ, ಧರ್ಮ ಇಂಗ್ಲಿಷ್ ಕೋಶಕ್ಕೆ ಹೋಗಿಲ್ಲವೆ?

ಸ್ಪುಟ್ನಿಕ್ ರಷ್ಯನ್ ಪದ. ಇದು ಹೋಗದೆ ಇರುವ ಭಾಷೆ ಜಗತ್ತಿನಲ್ಲಿ ಇಲ್ಲ. ಹೀಗೆ ಅನ್ಯಭಾಷೆಗಳಿಂದ ಪದಗಳನ್ನು ಹೀರಿಕೊಂಡಾಗಲೇ ಭಾಷೆ ಸಂಮೃದ್ಧವಾಗುತ್ತದೆ. ಅನೇಕ ಅರ್ಥಗಳಿಗೆ ಅನೇಕ ಪದಗಳು ಬೇಕಾಗುತ್ತದೆ. ಕುಡಿಯುವ ಲೋಟಕ್ಕೆ: ಗ್ಲಾಸ್, ಕಪ್ಪು, ಬಟ್ಟಲು, ಟಂಬ್ಲರ್, ಗಿಂಡಿ. ಹೀಗೆ ಭಾಷೆಗೆ ಅರ್ಥವ್ಯಾಪ್ತಿ

ಬೆಳೆದಷ್ಟು ಭಾಷೆ ಶ್ರೀಮಂತವಾಗುತ್ತದೆ.

ಪತ್ರಿಕಾ ವ್ಯವಸಾಯ ಮಾಡುವವರು ನಮ್ಮ ಭಾಷೆಯನ್ನು ಬೆಳೆಸಿದ್ದಾರೆ. ಉದಾ : ಘಟಿಕೋತ್ಸವ, ಭ್ರಷ್ಟಾಚಾರ, ಶೃಂಗಸಮ್ಮೇಳನ, ಇತ್ಯಾದಿ. ಬ್ಯಾಂಕಿನ ವ್ಯವಹಾರದಲ್ಲಿ ಚಾಲ್ತಿಲೆಖ್ಖ, ಜಂಟಿ ಕಾರ್ಯದರ್ಶಿ ಬಂದಿವೆ. ಕಂಟಿಂಜೆನ್ಸಿ ಇಂಗ್ಲಿಷ್ ಪದಕ್ಕೆ ನಮ್ಮಲ್ಲಿ ಸಾದಿಲ್‌ವಾರ್ ಎಂಬ ಸೊಗಸಾದ ಪದವಿರುವುದು ನನಗೆ ಬಹಳ ಕಾಲ ತಿಳಿದಿರಲಿಲ್ಲ. ಪದಗಳೂ ಕೊಟ್ಟ ಹೆಣ್ಣುಮಗಳಂತೆ. ಒಂದರ ಕುಲದಿಂದ ಹೊರಗಾದರೆ, ಮತ್ತೊಂದರ ಒಳಗು.

ಕರ್ನಾಟಕ ಏಕೀಕರಣದೊಂದಿಗೇ ಭಾಷಾಏಕೀಕರಣವಾಗುತ್ತಿದೆ. ಧಾರವಾಡದವರ ಮಾಡ್ಲಿಕ್ಕೆ ಹತ್ತು, ಬರ್ಲಿಕ್ಕೆ ಹತ್ತು, ಹೋಗೋಣು, ಬರೋಣು ನಮಗೆ ಅರ್ಥವಾಗುತ್ತಿದೆ. ನಮ್ಮ ಅನೇಕ ಪದಗಳೂ ಅವರಿಗೆ ರೂಢಿಗೆ ಬರುತ್ತಿವೆ. ಭಾಷಾಪ್ರಭೇದಗಳು ವಿದ್ಯಾಪ್ರಸಾರ ಹೆಚ್ಚಿದಂತೆ, ಸುಸಂಸ್ಕೃತವಾಗುತ್ತಿದೆ. ಇಷ್ಟಾದರೂ ಆಡುಮಾತು ತನ್ನ ವೈಶಿಷ್ಟ್ಯತೆ ಉಳಿಸಿಕೊಂಡೇ ಬರಬೇಕು. ಕನ್ನಡ ಸಂಮೃದ್ಧವಾದಭಾಷೆ ಅಲ್ಲವೆಂಬ ಮಾತು ಸುಳ್ಳಾಗುತ್ತಿದೆ. ಭಾರತೀಯ ಭಾಷೆಗಳಲ್ಲಿ ಕನ್ನಡಕ್ಕೆ ಸರಿಸಮಾನವಾಗಿ ನಿಲ್ಲುವ ಭಾಷೆ ಕಡಿಮೆ.

ಭಾಷಾಂತರ ಕಾರ್ಯದಲ್ಲಿ ಪರಭಾಷೆಯ ಸೂಕ್ಷ್ಮ ಭಾವನೆ, ವಿಚಾರಗಳನ್ನು ನಮ್ಮ ಭಾಷೆಯಲ್ಲಿ ಹೇಳುವ ಹೊಸ ಮಾತುಗಳ, ಹೊಸ ಅರ್ಥಗಳು ಪದಗಳು ಬೇಕು. ಈ ಆಹ್ವಾನವನ್ನು ಎದುರಿಸಿದಾಗ ನಮ್ಮ ಭಾಷೆ ಶ್ರೀಮಂತವಾಗಿ ಬೆಳೆಯುವುದು.

ಶ್ರೀ ಚಿದಾನಂದಮೂರ್ತಿ ಅವರು ಹಳೆಯ ಮೈಸೂರಿನ ಕನ್ನಡವನ್ನು ಕುರಿತು ಅನಂತರ ಮಾತನಾಡಿದರು.

ಕನ್ನಡನಾಡು ಒಂದಾದ ಮೇಲೆ ಹಳೆಯ ಮೈಸೂರು ಎಂಬುದು ಹುಟ್ಟಿಕೊಂಡಿದೆ. ನಮ್ಮ ನಾಡಿನಲ್ಲಿ ನಾಲ್ಕು ರೀತಿಯ ಉಪಭಾಷೆಗಳು ಇವೆ: ೧) ಮೈಸೂರು ಕನ್ನಡ ೨) ಧಾರವಾಡ ಕನ್ನಡ ೩) ಗುಲ್ಬರ್ಗ ಕನ್ನಡ ೪) ಮಂಗಳೂರು ಕನ್ನಡ. ಈ ಕನ್ನಡಗಳು ಮೇಲು ನೋಟಕ್ಕೆ ಸರಳವಾಗಿ ಕಂಡರೂ ಒಳಗೆ ಪ್ರಾದೇಶಿಕ ಭೇದವನ್ನು ಪಡೆದಿವೆ. ಈ ಭಾಷೆಯನ್ನು ಆಡುವ ಪ್ರದೇಶಗಳನ್ನು ಒಂದು ಗಡಿ ರೇಖೆಯನ್ನು ಎಳೆದು ವಿಂಗಡಿಸುವುದು ಸಾಧ್ಯವಿಲ್ಲ. ಒಂದು ಇನ್ನೊಂದನ್ನು ಛೇದಿಸುತ್ತದೆ. ಒಂದೊಂದಕ್ಕೂ ಹತ್ತಾರು ಉಪಭಾಷೆಗಳು ಇವೆ.

ಹಳೆಯ ಮೈಸೂರಿನ ಭಾಷಾ ವೈಲಕ್ಷಣಗಳನ್ನು ಗುರುತಿಸುವುದು ಕಷ್ಟ.

ಶಿಷ್ಟ ಭಾಷೆಯನ್ನು ಉಪಯೋಗಿಸುವ ಜನರಲ್ಲಿ ವೃತ್ತಪತ್ರಿಕೆ, ಶಿಕ್ಷಣಗಳಿಂದ ಒಳವ್ಯತ್ಯಾಸವನ್ನು ಕಳೆದುಕೊಂಡಿದ್ದರೂ ಜನಸಾಮಾನ್ಯರ ಆಡು ಭಾಷೆಯಲ್ಲಿ ಆಯಾ ಉಪಭಾಷೆಯ ವೈಲಕ್ಷಣಗಳು ಇನ್ನೂ ಉಳಿದುಕೊಂಡಿವೆ. ಅವಿದ್ಯಾವಂತರ ಮಾತಿನ ರೀತಿಗೂ ನಗರವಾಸಿಗಳ ಮಾತಿನ ರೀತಿಗೂ ವ್ಯತ್ಯಾಸವಿದೆ.

ಮೈಸೂರಿನ ಕನ್ನಡದಲ್ಲೂ ದಾವಣಗೆರೆ ಕನ್ನಡ ವಿಶಿಷ್ಟವಾಗಿದೆ. ಅಲ್ಲಿ ಗುಬ್ಬಿ ಗುಂಡಿ-ಕಾಮನಬಿಲ್ಲು-ಭೀಮನಬಿಲ್ಲಾಗುತ್ತದೆ. ಶೃಂಗೇರಿ ತೀರ್ಥಹಳ್ಳಿಗಳಲ್ಲಿ ನೊಣ—ನೊಳವಾಗುತ್ತದೆ. ಅಂತೆಯೆ ಮಸಿ ಕೆಲವು ಭಾಗದಲ್ಲಿ ಇದ್ದಿಲಾಗಿದೆ. ಸೊರಬದಕಡೆ ಗೋರೀಕಾಯಿ ಚವರೀಕಾಯಿಯಾಗಿದೆ. ಬೃಹಸ್ಪತಿವಾರ ಬೇಸ್ತವಾರ. ಬಾಯಾರಿಕೆ ಅರ್ಥದಲ್ಲಿ ಆಕ್ರಪದ ರೂಢಿಯಲ್ಲಿದೆ. (ಇದು ಅರಕೆಯ ಅಕ್ಷರ ಪಲ್ಲಟವೆನ್ನಬಹುದೇ ?)

ಧಾರವಾಡ, ಮೈಸೂರಿನ ನಡುವೆ–ದಾವಣಗೆರೆ ಇದೆ. ಅಲ್ಲಿನ ಕನ್ನಡದಲ್ಲಿ ಎರಡೂ ಕಡೆಯ ಪ್ರಭಾವ ನೋಡಬಹುದು. ಅಲ್ಲಿನ ಮಂಡಕ್ಕಿ ಉಳಿದೆಡೆ ಬುರುಗಲು ಇನ್ನು ಕೆಲವು ಕಡೆ (ಬೆಂಗಳೂರು) ಪುರಿ. ಅಂತೆಯೇ ಮೂಕು ಮಂಕಿ ಆಗಿದೆ. ಗಡಗಡ (ದಾವಣಗೆರೆಯಲ್ಲಿ ವೇಗವನ್ನು ಸೂಚಿಸುವ ಶಬ್ದ) ಉಳಿದೆಡೆಯಲ್ಲಿ ಬೇಗಬೇಗ, ಬಿರಬಿರನೆ ಆಗಿದೆ. ರಾಗಿ ಮುದ್ದೆ ಕೆಲವು ಕಡೆ ರಾಗಿ ಹಿಟ್ಟು ಆಗಿದೆ. ಸಾರು ಕೆಲವು ಕಡೆ ಎಸರಾಗಿದೆ. ಅರಸೀಕೆರೆಯಿಂದ ದಕ್ಷಿಣಕ್ಕೆ ಎಸರು ಸಹಜ ಪದ. ಹೀಗೆಯೇ ರಕ್ತ ಕೆಲವು ಕಡೆ ನೆತ್ತರವಾಗಿದೆ.

ಹಲಸಂದೆ ಒಂದೊಂದು ಕಡೆ ಒಂದೊಂದು ರೂಪಗಳಲ್ಲಿದೆ. ತೊಡಗುಣಿ, ತಟ್ಟಣ, ತಗಣಿಕಾಳು, ತಗಣಿ.

ಊಟದ ತಟ್ಟೆ : ಗಂಗಳ, ತಾಟು.

ಹಾಸನ ಅರಕಲಗೂಡು ಸಕಲೇಶಪುರಗಳ ಪ್ರದೇಶದಲ್ಲಿ ಚಿವಿ>ಕಿವಿ. ಚೆಂಪು>ಕೆಂಪು ಜಿಣ್ಣು>ಗಿಣ್ಣು ಇರ–ಇರವೆ. ಹಾವಿನ ಹೆಡೆ, ಹಾವಿನ ಸೆಡೆಗಳೂ ರೂಢಿಯಲ್ಲಿವೆ.

ದೀಪವನ್ನು ಆರಿಸು ಎನ್ನುವುದಕ್ಕೆ ಕೆಲವೆಡೆ ತುಂಬು ಎಂಬ ಪ್ರಯೋಗವಿದೆ. ಗೊತ್ತು-ಗೊಂತು. ಓತಿಕ್ಯಾತ ಓತಿಕಾಟ, ಹಂಡೇಕೇತ, ಹೆಂಟೆಗೊದ್ದ—ಇತ್ಯಾದಿ ರೂಪಗಳಲ್ಲಿದೆ. ಓದುವುದು ಶ್ರೀನಿವಾಸಪುರದ ಕಡೆ ಚದುವುದು ಆಗಿದೆ.

ಆರ್. ಸಿ. ಹಿರೇಮಠ ಅವರು ಬಾರದಿದ್ದ ಕಾರಣ ಅವರ ಭಾಷಣವನ್ನು ಚನ್ನವೀರಕಣವಿ ಅವರು ಓದಿದರು.

ಅವರು ಧಾರವಾಡದ ಭಾಷಾ ಪ್ರಭೇದವನ್ನು ಉದಾ

ಹರಣೆಗಳಿಂದ ವಿಸ್ತೃತವಾಗಿ ತಿಳಿಸಿ, "ಪ್ರಾದೇಶಿಕ ಪ್ರಭೇದವು ವಿಶಿಷ್ಟರೂಪ ತಳೆದಿದೆ. ಬರಹದ ಭಾಷೆ ಕೃತಿಮವಾಗಿದೆ, ವಾಸ್ತವ ಭಾಷೆಯನ್ನು ಗ್ರಾಮ್ಯವೆಂದು ಪರಿಗಣಿಸುವುದು ಅನ್ಯಾಯ. ಎಲ್ಲ ಪ್ರಾದೇಶಿಕ ಸ್ವರಗಳು ಸೇರಿದಾಗಲೇ ಸ್ವರಮೇಳವಾಗುವುದು" ಎಂದರು.

ಶ್ರೀ ಮರಿಯಪ್ಪಭಟ್ಟರು ಮಂಗಳೂರು ಕನ್ನಡ ಭಾಷಾ ಪ್ರಭೇದಗಳನ್ನು ಕುರಿತು ಸ್ವಾರಸ್ಯವಾಗಿ ಮಾತನಾಡಿದರು.

ಮಂಗಳೂರಿನ ಕನ್ನಡ ಉಳಿದವರ ಪಾಲಿಗೆ ಪುಸ್ತಕ ಓದಿದಂತೆ, ಗ್ರಂಥಸ್ಥ ಭಾಷೆಯಂತೆ ಕಂಡರೂ ಆಡು ಮಾತಿನಲ್ಲಿ ತನ್ನದೇ ಆದ ಭಾಷಾ ಪ್ರಭೇದ ಪಡೆದಿದೆ ಎಂದು ಹೇಳಿದರು.

ಸಂಬೋಧನೆಗೆ ಮಾರಾಯರೇ ಎಂದು ಸಾಮಾನ್ಯ ಬಳಕೆ. ನೀರನ್ನು ಒರೆಸುವ ಇಂಗ್ಲಿಷಿನ ಟವಲಿಗೆ ನೀರುಡೆ ಶಬ್ದ ತನ್ನದೇ ಆದ ಅರ್ಥ ವ್ಯಾಪ್ತಿಯಿಂದ ಸ್ವಾರಸ್ಯವಾಗಿದೆ.

ಹುಷಾರು ಎಂಬುದು ಗುಟ್ಟಿಗ, ಚುರುಕು ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ.

ಆಯ್ತು ಎಂಬ ಪದ ಮೈಸೂರಿನ ಕಡೆಯವರಿಗೆ ಥಕ್ಕನೆ ಅರ್ಥವಾಗುವುದಿಲ್ಲ.

'ಸ್ವಾಮಿ, ನೀವು ಊಟಕ್ಕೆ ಬನ್ನಿ' ಎಂದು ಅಂದರೆ ದ. ಕ. ಜಿಲ್ಲೆಯವನು 'ಆಯ್ತು' ಎನ್ನಬಹುದು.

ಇಲ್ಲಿ ಆಯ್ತು ಎಂದರೆ ಆಗಲಿ ಎಂದು ಅರ್ಥವೇ ಹೊರತು ಊಟ ಆಯಿತು ಎಂದಲ್ಲ. ಸೈಕಲ್ ಬಿಡು, ಬೀಡಿ ಎಳಿ (ಉಳಿದೆಡೆ ಸೇದು) ತಮಿಳಿನಲ್ಲಿ ಬೀಡಿ ಸಾಪಿಡು (ತಿನ್ನುವುದಾದರೂ ಹೇಗೆ?)

'ಏಕ್‌ದಂ ನಿದ್ರೆ ತೆಗೆತಾನೆ ಮಾರಾಯ' ಅಂದರೆ ಒಂದೇ ಸಮನೆ ನಿದ್ರಿಸುತ್ತಾನೆ ಎಂದೇ ಅರ್ಥ.

ವಿಶಿಷ್ಟಾರ್ಥಕ್ಕೆ: ಅವ ಅಧಿಕ ಇದ್ದಾನೆ. ಇಲ್ಲಿ ಅಧಿಕ ಪ್ರಸಂಗಿ ಇದ್ದಾನೆ ಎಂದು ದ. ಕ. ದಲ್ಲಿ ಅರ್ಥ. ನಿಮಗೆ ಎಲ್ಲಿ ಆಯಿತು? ನಿಮ್ಮದು ಯಾವ ಊರು ಎಂಬ ಅರ್ಥದಲ್ಲಿ. ಹೀಗೆ ಮಂಗಳೂರಿನ ಭಾಷಾ ಪ್ರಭೇದಗಳು ತುಳು, ಕೊಂಕಣಿಗಳಿಂದ ಪ್ರಭಾವಿತವಾಗಿ, ಕನ್ನಡ ಶಬ್ದಭಂಡಾರವನ್ನು ಸಂವೃದ್ಧಗೊಳಿಸಲು ಶಕ್ಯವಾಗಿವೆ.

ಇದಾದಮೇಲೆ ಪ್ರೊ. ಭೀಮಸೇನರಾಯರು 'ಗುಲ್ಬರ್ಗ, ರಾಯಚೂರುಗಳ ಕನ್ನಡ' ವನ್ನು ಕುರಿತು ಮಾತನಾಡಿದರು.

ಹೈದರಾಬಾದಿನವ ಮೈಸೂರಿನ ಪೋಸ್ಟಾಫೀಸಿಗೆ ಹೋಗಿ "ನಾಲ್ಕಾಣೆಗೆ ಟಿಕೀಟು ಕೊಡಿ" ಎಂದರೆ, ಅವನಿಗೆ ಅರ್ಥವಾಗದೆ "ರೈಲ್ವೇ ಸ್ಟೇಷನ್ನಿಗೆ ಹೋಗಿ" ಎಂದನಂತೆ.

ಹೈದರಾಬಾದಿನ ಕಡೆ ಟಿಕೀಟಿಗೆ ಸ್ಟಾಂಪು ಎಂಬ ಅರ್ಥವಿದೆ.

ತೀ. ನಂ. ಶ್ರೀ ಅವರು ನಲ್ಲಿಗಾಗಿ ಕಾಯುತ್ತಾ ನಿಂತ ಹೆಣ್ಣುಮಕ್ಕಳನ್ನು ನೋಡಿ ಒಬ್ಬ ನಳನಿಗಾಗಿ ಎಷ್ಟು ಮಂದಿ ದಮಯಂತಿಯರು ಕಾದಿದ್ದಾರೆ ಎಂದು ಉದ್ಗಾರ ತೆಗೆದರಂತೆ. ನಳ ಎಂದರೆ ನಲ್ಲಿ.

ಹೈದರಾಬಾದಿನ ಕಡೆ ಇರುವ ಕೆಲವು ಕನ್ನಡ ಗಾದೆಗಳು:

ಕುರಿ ತಿಂಬುವ ಹೋದರೆ ಕೋಣ ತಿಂಬುವ ಬಂದ.

ಇದ್ದ ಊರ ಬೀಗರು ಬಿದ್ದಗೋಡೆಗೆ ಸಮ.

ಯಾಕಳ್ತಿ ಬ್ರಾಹ್ಮಣ ಎಂದರೆ ಮುಂದೆ ಬರೋ ಏಕಾದಶಿಗೆ ಎಂದನಂತೆ.

ಮಿರ್ಜಿ ಅಣ್ಣಾರಾಯರು ಕೊಲ್ಲಾಪುರ, ಸತಾರಾಗಳಲ್ಲಿ ಕನ್ನಡನುಡಿಯ ವೈಲಕ್ಷಣಗಳನ್ನು ಸ್ವಾರಸ್ಯವಾಗಿ ವಿವರಿಸಿದರು. ಅವರ ನಿಸರ್ಗ ಇಂತಹ ಮಾತುಗಳ ರಸಕಬ್ಬವೇ ಆಗಿದೆ.

ಕಡೆಯದಾಗಿ ಅಣ್ಣಾಮಲೈ ವಿಶ್ವವಿದ್ಯಾನಿಲಯದ ಶ್ರೀ ಕುಶಾಲಪ್ಪಗೌಡರು ಮಾತನಾಡಿದರು.

ಕುಶಾಲಪ್ಪಗೌಡರು ಕೊಡಗಿನಲ್ಲಿ ಹುಟ್ಟಿ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪದವೀಧರರಾಗಿ ಈಗ ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರಾಗಿದ್ದಾರೆ. ವಡ್ಡಾರಾಧನೆಯ ವ್ಯಾಕರಣ ವಿಶೇಷಗಳನ್ನು ಕುರಿತು ಬರೆದ ಅವರ ಪ್ರಬಂಧಕ್ಕೆ M. Litt. ಪದವಿ ದೊರೆತಿದೆ. ಅವರು ವಡ್ಡಾರಾಧನೆಯ ಕೆಲವು ಪದಗಳನ್ನು ಕುರಿತು ಈಚೆಗೆ ಪ್ರಬುದ್ಧ ಕರ್ಣಾಟಕದಲ್ಲಿ ಒಂದು ವಿದ್ವತ್ಪೂರ್ಣ ಲೇಖನ ಬರೆದಿದ್ದಾರೆ.

ಅವರ ಭಾಷಣವನ್ನು ಪೂರ್ತಿ ಕೇಳಲು ಅವಕಾಶವಾಗಲಿಲ್ಲ.

ಮಧ್ಯಾಹ್ನದ ಕಾರ್ಯಕ್ರಮ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಕವಿಮೇಳ. ಕನ್ನಡನಾಡಿನ ಪ್ರಖ್ಯಾತ ಕವಿಗಳು ಕವಿಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಜವರೇಗೌಡರು ಆರಂಭದಲ್ಲೇ ಕುವೆಂಪು ಅವರಿಗೆ ವಂದನಾರ್ಪಣೆ ಮಾಡಿ, ಈ ಮೂರು ದಿನಗಳ ಉತ್ಸವ ತುಂಬ ಯಶಸ್ವಿಯಾಗಲು ನೆರವಾದ ಎಲ್ಲ ಮಿತ್ರರನ್ನೂ ಸ್ಮರಿಸಿದರು.

ಇಂಥ ಸಮ್ಮೇಳನಗಳಿಂದ ದೂರದಲ್ಲಿರುವ ಕವಿಗಳೂ, ಸಾಹಿತಿಗಳೂ ಒಂದೆಡೆ ಸೇರಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿ, ನಿಜವಾದ ಭಾವೈಕ್ಯತೆಗೆ ಕಾರಣರಾಗಬಹುದೆಂದು ಹೇಳಿದರು.

ಆರಂಭದಲ್ಲಿ ಹೆಚ್. ಬಿ. ಕುಲಕರ್ಣಿ ಅವರು ತಮ್ಮ ಧೂಮಕೇತು ಕವನವನ್ನು ಓದಿದರು.

ಧೂಮಕೇತುವನ್ನು ಕುರಿತು ಯಾವ ದೈತ್ಯನ ಅತ್ಯಾಚಾರದ ಶಿಶುವೋ ಎಂದು ಅವರು ತೆಗೆದ ಉದ್ಗಾರ ಸ್ವಾರಸ್ಯವಾಗಿತ್ತು.

ಸಮ್ಮೇಳನಕ್ಕೆ ಬರಲಾಗದಿದ್ದ ಗೋಕಾಕರ ಕವನವೊಂದನ್ನು ಅವರೇ ಓದಿದರು.

ಇಂದ್ರಚಾಪದಲ್ಲಿ ತಮ್ಮ ದುಃಖವನ್ನು ಕಾವ್ಯರಸವಾಗಿ ಮಾರ್ಪಡಿಸಿದ ಪರಮೇಶ್ವರ ಭಟ್ಟರು ತಾವು ನೂತನವಾಗಿ ಬರೆದಿದ್ದ 'ಸದಾಶಿವ ಗುರು' ಅಂಕಿತದ ವಚನಗಳನ್ನು ಓದಿದರು. ಇವು ಮಾವಿನಕೆರೆಯ ರಂಗಯ್ಯನ ವಚನಗಳಿಗೆ ಸವಾಲಿನಂತೆ ಇದ್ದವು.

ಜಿ. ಎಸ್. ಶಿವರುದ್ರಪ್ಪನವರು ವಿಶ್ವವಿದ್ಯಾನಿಲಯ ಹಾಗೂ ತಮ್ಮನ್ನು ಚಿತ್ರಿಸಿಕೊಂಡ ಕವನದಲ್ಲಿ ತಾವು ವಿಶ್ವವಿದ್ಯಾನಿಲಯವು ಬಿಟ್ಟ ಬಸವನೆಂದು ಹೇಳಿಕೊಂಡು, ಅದರಿಂದ ಪಡೆದ ಸ್ಫೂರ್ತಿ, ಋಣವನ್ನು ಸ್ಮರಿಸಿದರು. ಅವರು ಹಾಡಿದ ಕನ್ನಡಿಗನ ಔದಾರ್ಯವನ್ನು ತಿಳಿಸುವ ಕವನದುದ್ದಕ್ಕೂ ವ್ಯಂಗ್ಯದ ಚಟಾಕಿ ಹಾರುತ್ತಲೇ ಇತ್ತು.

ತೀ. ನಂ. ಶ್ರೀ ಅವರನ್ನು ಕುರಿತು ಹಾಡಿದ ಕಣವಿಯವರು ಅವರ ಅಕಾಲ ಮರಣದಿಂದ ಕನ್ನಡಮ್ಮನ ಮೂಗಿನ ನತ್ತು ಬಿದ್ದಿತೆಂದು ಕೊರಗಿದರು.

ಸಿ. ಪಿ. ಕೆ. ಅವರು ಗಡಿಯಾರದ ಮೇಲೂ, ಕೆ. ಎಸ್. ನರಸಿಂಹಸ್ವಾಮಿಯವರು ಕವಿಸಹೃದಯರ ಬಗೆಗೂ ಹಾಡಿದರು.

ಪು. ತಿ. ನ. ಅವರು ಮೊದಲೆರಡು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರು; ಬೆಂಗಳೂರಿನಿಂದ ಹೆಮ್ಮಿಗೆ ದೇಶಿಕಾಚಾರ್ಯರ ಅಸ್ವಸ್ಥತೆಯನ್ನು ತಿಳಿಯುತ್ತಲೇ ಬೆಂಗಳೂರಿಗೆ ತೆರಳಿದುದರಿಂದ ಅವರ ಕವನವನ್ನು ಡಾ. ಪ್ರಭುಶಂಕರ ಅವರು ಓದಿದರು. (ಆಸ್ಪತ್ರೆ ಸೇರಿದ ಹೆಮ್ಮಿಗೆ ದೇಶಿಕಾಚಾರ್ಯರು ಅದೇ ದಿನ ರಾತ್ರಿ ಆಪರೇಷನ್ ಆಗಿ, ದೈವಾಧೀನರಾದರು. ವಿದ್ವಾಂಸರ ಲೋಕದಿಂದ ಸೌಜನ್ಯಮೂರ್ತಿಯಾದ ಪಂಡಿತವಕ್ಕಿಯೊಂದು ಕಣ್ಮರೆಯಾಯಿತು. ಮೊದಲೇ ತೀ. ನಂ. ಶ್ರೀ ಅವರ ಅಕಾಲ ಮರಣದಿಂದ ಪರಿಷತ್ತಿನ ಕೋಶದ ಶ್ವಾಸ ಕಳೆದುಕೊಂಡಿತೆಂದು ಭಾವಿಸಿದ್ದ ಎಸ್. ಬಸವಾರಾಧ್ಯ ಅವರಿಗೆ ಈ ನಷ್ಟ ಭರಿಸುವುದು ಕಷ್ಟ.)

ಚಂದ್ರಶೇಖರ ಪಾಟೀಲರು ತಮ್ಮ ಇಪ್ಪತ್ತೆಂಟು ಎಂಬ ಸಾಂಕೇತಿಕ ಕವನವನ್ನು ಓದಿ, ನವ್ಯಕವಿತೆಯ ಸ್ವರವನ್ನು ಎತಿ ಕವಿಮೇಳದಲ್ಲಿ ವಿಭಿನ್ನ ದನಿಯನ್ನು ಕೂಡಿಸಿದರು.

ಸುಜನಾ ಅವರು ತಮ್ಮದೊಂದು ಕವನವನ್ನು ಓದಿದರು.

ಡಾ. ಕೆ. ವಿ ಪುಟ್ಟಪ್ಪನವರು ಕವಿಮೇಳದ ಮುಕ್ತಾಯ ಭಾಷಣವನ್ನು ಮಾಡಿದರು.

ಮಾನಸಗಂಗೋತ್ರಿ ಕುವೆಂಪುರವರ ಮಾನಸ ಕುವರಿ. ಅದರ ಯೋಜನೆ ಬೆಳೆವಣಿಗೆ, ಅದು ಇಂದು ಸಾಧಿಸಿರುವ ಪ್ರಗತಿ ಎಲ್ಲವೂ ಅವರ ಕರ್ತೃತ್ವ ಶಕ್ತಿಗೆ ಸಾಕ್ಷಿ.

ಈ ಮಾನಸಗಂಗೋತ್ರಿ ನಿರ್ಮಾಣಗೊಂಡ ಕಥೆಯನ್ನು ಅವರ ಮಾತಿನಲ್ಲಿ ಕೇಳೋಣ.

"ಈ ಜಯಲಕ್ಷ್ಮಿ ವಿಲಾಸವನ್ನು ಕೊಂಡುದ್ದಾದರೂ ಒಂದು ಅನಿರೀಕ್ಷಿತ ಘಟನೆ. ಯಾವುದೋ ದಿನ ಶ್ರೀ ಸರ್ದಾರ್ ಬಸವರಾಜ ಅರಸಿನವರನ್ನು ಆ ಸಾರಸ್ವತ ಶಕ್ತಿ ಯಾವ ಕಾರಣಕ್ಕೋ ಈ ತಮ್ಮ ಭವನವನ್ನು ಮಾರಬೇಕೆಂಬ ಭಾವನೆ ಅವರಲ್ಲಿ ಬಂದಿತು . . . . ಒಳ್ಳೆಯ ನೆರೆಹೊರೆಯನ್ನು ಬಯಸಿ ಶ್ರೀಯುತ ಅರಸಿನವರು ನಮಗೆ ಆ ಕಟ್ಟಡವನ್ನು ಕೊಡಲು ಮುಂದೆ ಬಂದರು.

"ಎರಡು ಮಹಾ ಸೌಧಗಳನ್ನು–ಒಂದು Humanities ಮತ್ತೊಂದು Science ಗೆ ನಿರ್ಮಿಸಲು ಮತ್ತು ಅವುಗಳ ಜತೆಯಲ್ಲಿ ಒಂದು ಮಹಾ ಪುಸ್ತಕಭಂಡಾರವನ್ನು ನಿರ್ಮಾಣಮಾಡಲು ವಿ. ವಿ. ಧ. ಸಹಾಯ ಮಂಡಲಿಯವರು ನೂರಕ್ಕೆ ನೂರು ನೆರವುಕೊಡುವುದಾಗಿ ಧೈರ್ಯವಿತ್ತರು . . .

"ಆ ಬೋಗಾದಿ ರಸ್ತೆಯಿಂದ ಸುಂಕದಕಟ್ಟೆಯವರೆಗೂ ಒಂದು ರಸ್ತೆ ಇದೆ. ಅಲ್ಲಿ ಒಂದುಕಡೆಯಿಂದ ಪ್ರೊಫೆಸರ್ಸ್ ಕ್ವಾರ್ಟರ್ಸ್, ರೀಡರ್ಸ್ ಕ್ವಾರ್ಟರ್ಸ್, ಲೆಕ್ಚರರ್ಸ್ ಕ್ವಾರ್ಟರ್ಸ್, ಹೀಗೆಯೇ ಆರೋಗ್ಯಕೇಂದ್ರ, ಸ್ಕೂಲ್, ಹಾಸ್ಟಲ್ ಎಲ್ಲಾ ನಿರ್ಮಾಣವಾಗಬೇಕಾಗುತ್ತದೆ . . ."

ಇಂತಹ ಮಹಾಕ್ಷೇತ್ರಕ್ಕೆ ಯೋಗ್ಯವಾದ ಹೆಸರೊಂದನ್ನು ಹುಡುಕತೊಡಗಿದೆ . . . ಕೊನೆಗೆ ಈ ಹೆಸರು ಹೊಳೆಯಿತು. ಅದನ್ನು ಯಾರಿಗೂ ಏಳೆಂಟು ದಿನ ಹೇಳದೆ ಹಾಗೆಯೇ ನಾನೇ ಮನನಮಾಡಿ ಒಂದು ರೀತಿಯಲ್ಲಿ ಅದಕ್ಕೆ ಶಕ್ತಿಯನ್ನು ಆಹ್ವಾನಿಸಿ, 'ಮಾನಸಗಂಗೋತ್ರಿ' ಎಂದು ಹೆಸರಿಟ್ಟದ್ದಾಯಿತು . . .

ಮಾನಸಗಂಗೋತ್ರಿ ಎಂಬುದು ಯಾವೊಂದು ಕಟ್ಟಡವೂ ಅಲ್ಲ. ಅದು ಇಡೀ ಕ್ಷೇತ್ರಕ್ಕೆ ಇಟ್ಟ ಹೆಸರು. ಮಾನಸಗಂಗೋತ್ರಿ ಭೌಗೋಲಿಕವೂ ಹೌದು, ಆಧ್ಯಾತ್ಮಿಕವೂ ಹೌದು . . . " ಎಂದು ಈ ಪುಣ್ಯಕ್ಷೇತ್ರದ ಬಗ್ಗೆ ಅವರು ಬರೆದಿದ್ದಾರೆ.

ಇಂದು ಆರು ವರ್ಷಗಳ ಅನಂತರ (ದಿನಾಂಕ ೨೮–೪–

೧೯೬೦ರಂದು ಮಾನಸಗಂಗೋತ್ರಿಯ ಪ್ರಾರಂಭೋತ್ಸವ) ಮಹಾಕವಿ ಕುವೆಂಪು ಅವರು ಕನ್ನಡ ಲೇಖಕರ ಇಂಥ ದೊಂದು ಸಮಾರಂಭಕ್ಕೆ ಆಗಮಿಸಿ, ಸಮಾರೋಪ ಭಾಷಣ ಮಾಡುತ್ತಿರುವುದು ಒಂದು ದೈವ ಲೀಲೆ.

ಅವರು ಆರಂಭದ ದಿನ ಅಪ್ಪಣೆ ಕೊಡಿಸಿದ ಅನೇಕ ಮಾತುಗಳನ್ನು ಈ ದಿನವೂ ಹೇಳಿದರು.

ಮಾನಸಗಂಗೋತ್ರಿಯ ಅತಿಮಾನಸ ಎತ್ತರದಿಂದ ಜ್ಞಾನಗಂಗೆಯು ಇಳಿದು ಜನತೆಯ ಹೃದಯಗಳನ್ನು ಮುಟ್ಟಬೇಕಾಗಿದೆ. ಇದು ಮೂರು ಮುಖವಾಗಿ ನಡೆಯ ಬೇಕಾಗಿದೆ. (೧) ಬೋಧನಾಂಗ, (೨) ಸಂಶೋಧನಾಂಗ (೩) ಪ್ರಸಾರಾಂಗ ಈ ಕಾಲುವೆಗಳ ಮೂಲಕ-ಪಾತ್ರಗಳಲ್ಲಿ-ಗಂಗೋತ್ರಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ.

ಈ ಮಾನಸಗಂಗೋತ್ರಿ ಆರು ವರ್ಷಗಳ ಹಿಂದೆ ಈ ಸ್ಥಳದಲ್ಲಿ ನಿರ್ಮಾಣವಾದಾಗ, ಈ ಬಗ್ಗೆ ನಾನೊಂದು ಭವ್ಯ ಕನಸನ್ನು ಕಟ್ಟಿ, ಮಾನಸಗಂಗೋತ್ರಿ ಎಂಬ ಮಂತ್ರದಲ್ಲಿ, ದೀಕ್ಷೆಕೊಟ್ಟಿದ್ದೆ. ಇಂದು ಈ ಐದಾರು ವರ್ಷಗಳ ಅವಧಿಯಲ್ಲೇ ಐವತ್ತು ವರ್ಷಗಳಲ್ಲಿ ಸಾಧಿಸಲಾಗುವುದೆಂದು ತಿಳಿದಿದ್ದ ಕನಸು ಶ್ರೀ ಮಾಲಿಯವರ ಸಾಹಸದ ಫಲವಾಗಿ ನನಸಾಗಿದೆ. ಇದು ಸಂತೋಷದ ವಿಚಾರ.

ಜನತೆಯು ವಿಶ್ವವಿದ್ಯಾನಿಲಯನ್ನು ಪೋಷಿಸುತ್ತದೆ. ಅವರಿಗೆ ವಿಶ್ವವಿದ್ಯಾನಿಲಯ ಋಣಿಯಾಗಿದೆ. ಈ ಋಣವನ್ನು ಹೇಗೆ ತೀರಿಸುವುದು ? ತಾನು ಅತಿಮಾನಸ ಎತ್ತರದಲ್ಲಿ ಪಡೆದ ಜ್ಞಾನಗಂಗೆಯನ್ನು ಜನಸಾಮಾನ್ಯರಿಗೆ-ಶ್ರೀ ಸಾಮಾನ್ಯನಿಗೆ ಮುಟ್ಟಿಸುವುದೊಂದೇ ದಾರಿ. ಇಲ್ಲಿ ಸ್ನಾತಕರು ತಾವು ಕಲಿತವಿದ್ಯೆಯನ್ನು, ಮಾಡಿದ ಸಂಶೋಧನೆಗಳನ್ನು ವೈಜ್ಞಾನಿಕ ವಿಚಾರಗಳನ್ನು ಅವರಿಗೆ ಮುಟ್ಟಿಸುವುದು.

ಈ ಪವಿತ್ರಕಾರ್ಯವನ್ನು ಬೋಧನಾಂಗದ ಮೂಲಕ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸಿ, ಅವರಲ್ಲಿ ಸೇವೆಯ ಮನೋಭಾವವನ್ನು ಬೆಳೆಸಿ, ದೀಕ್ಷೆಯನ್ನು ಕೊಡುವುದು ಒಂದು ದಾರಿ.

ಜನಸಾಮಾನ್ಯರನ್ನು ಪ್ರಚಾರೋಪನ್ಯಾಸಗಳ ಮೂಲಕ ಮುಟ್ಟುವುದು ಇನ್ನೊಂದು ದಾರಿ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಾಹಿತ್ಯದ ಜತೆಯಲ್ಲೇ ವೈಚಾರಿಕ, ವೈಜ್ಞಾನಿಕ ಸಂಗತಿಗಳನ್ನು ಯೋಗ್ಯರಿಂದ ತಿಳುಹಿಸಿಕೊಡುವುದು.

ಇವುಗಳಿಗೆ ಸಂವಾದಿಯಾಗಿ ದೇಶದ ಹೊರಗೆ ಒಳಗೆ ನಡೆದಿರುವ ಸಂಶೋಧನೆಗಳ ಫಲವನ್ನು ವಿದ್ಯಾರ್ಥಿಗಳಿಗೆ ದೊರಕಿಸಿಕೊಡಲು ಸಂಶೋಧನಾಂಗ ಕೆಲಸಮಾಡಬೇಕಾಗಿದೆ. ವಿಶ್ವವಿದ್ಯಾನಿಲಯದಿಂದ ಹೊರಗೆ ಹೋಗಿ ಜೀವನದ ವೃತ್ತಿಗಳಲ್ಲಿ ತೊಡಗಿದ ಪದವೀಧರರನ್ನು ವಿಶ್ವವಿದ್ಯಾನಿಲಯ ಮರೆತಿಲ್ಲ ವೆಂಬುದನ್ನು ತೋರಿಸಲು ಪ್ರಚಾರೋಪನ್ಯಾಸಗಳು ಮಹತ್ತರ ಪಾತ್ರವಹಿಸಬಲ್ಲದು. ಉದಾಹರಣೆಗೆ ಟ್ರ್ಯಾಕ್ಟರ್ ನಡೆಸುವುದು ಹೇಗೆ ಎಂಬುದನ್ನು ಕಲಿಸಿಕೊಡಲು, ಹೆಚ್ಚಿನ ಬೆಳೆ ತೆಗೆಯಲು ಇಂತಹ ಉಪನ್ಯಾಸಗಳು ನೆರವಾಗಬಲ್ಲವು.

ಇಂದು ದೇಶದ ಕೋಟಿ ಕೋಟಿ ಹಣವನ್ನು ವೆಚ್ಚಮಾಡಿದರೂ ಪರದೇಶದ ಮುಂದೆ ಅನ್ನಕ್ಕಾಗಿ ಬಾಯಿಬಿಡಬೇಕಾದ ವಿಚಿತ್ರ ಪರಿಸ್ಥಿತಿ ಒದಗಿದೆ. ಜನಸಾಮಾನ್ಯನಿಗೆ-ಹಳ್ಳಿಯ ರೈತನಿಗೆ-ಯಾಂತ್ರಿಕ ಶಿಕ್ಷಣಕೊಡುವ ಬದಲು ಶಿಕ್ಷಣದ ನೆಪದಲ್ಲಿ ಅನೇಕ ಗಂಟುಗಳನ್ನು ಕೊರಳಿಗೆ ಕಟ್ಟಿದ್ದಾರೆ. ನಮ್ಮ ಜನರ ತಲೆಯ ಮೇಲೆ ಮೌಢ್ಯದ ಚಪ್ಪಡಿ ಬಿದ್ದಿದೆ. ಅಜ್ಞಾನ, ಅಂಧಶ್ರದ್ಧೆ, ಸಂಪ್ರದಾಯದ ಶೃಂಖಲೆಗಳು ಅವನನ್ನು ಅರ ಜೀವಗೊಳಿಸಿವೆ. ಇವುಗಳಿಂದ ಅವನನ್ನು ವಿದ್ಯಾವಂತರು ಪಾರುಮಾಡಬೇಕು. ಜಾತಿಮತಗಳ ಮೌಢ್ಯದಿಂದ ಅವರನ್ನು ಬಿಡಿಸಬೇಕಾಗಿದೆ. ಸಾಹಿತ್ಯ ಇಂಥ ಪವಿತ್ರಕಾರ್ಯಕ್ಕೆ ವಿನಿಯೋಗವಾದ ಪ್ರಬಲಾಸ್ತ್ರವಾಗಬೇಕಾಗಿದೆ. ಕೆಲವು ಕಾಲ ಸಾಹಿತ್ಯ ಕೇವಲ ಪ್ರಚಾರದ ಸಾಧನವಾದರೂ ಸರಿಯೇ. ಜನರ ಮೌಢ್ಯದಿಂದ, ಬೇಡಿಕೆಗಳಿಂದ ಅವರನ್ನು ಜಾಗೃತಗೊಳಿಸುವ ಪವಿತ್ರ ಕೆಲಸ ಆಗಬೇಕಾಗಿದೆ.

ಇಂದು ಗೋವಧೆಯ ನಿರೋಧದ ಬಗ್ಗೆ ಚಳುವಳಿ ಎದ್ದಿದೆ. ಗೋವಧೆಯನ್ನು ನಿಲ್ಲಿಸಬೇಕೆ ? ಬೇಡವೇ ? ಎಂಬ ಚರ್ಚೆಗೆ ನಾನು ಹೋಗುವುದಿಲ್ಲ. ಹೊರ ದೇಶದ-ಗೋಮಾಂಸ ಭಕ್ಷಕ ದೇಶದ-ಗೋಸಂಪತ್ತನ್ನು ನೋಡಿದರೆ ಎಂತಹವರಿಗಾದರೂ ಸಂತೋಷವಾಗುತ್ತದೆ. ಆದರೆ ಗೋವಿನ ಅಂಗಾಂಗಗಳಲ್ಲಿ ದೇವತೆಗಳು ನೆಲೆಸಿವೆ ಎಂದು ಹೇಳುವ ಭಾರತೀಯನು ಗೋವನ್ನು ಹೇಗೆ ನಡೆಸಿಕೊಂಡಿದ್ದಾನೆ? ಸೀರಿಗೆ ಹಾಲನ್ನು ಬೆರೆಸುವ ನಮ್ಮ ಗೌಳಿ, ಸ್ವಾರ್ಥಕ್ಕಾಗಿ ಕರುವನ್ನು ಕೊಂದು ತಾಯಿ ಹಸುವನ್ನು ಸುಲಿಗೆಮಾಡುತ್ತಾನೆ. ಅದರ ಫಲವಾಗಿ ಅದು ಬಡಕಲಾಗಿ, ಕರೆಯುವುದು ನಿಂತಮೇಲೆ ಬೀದಿಗೆ ಹೊಡೆಯುತ್ತಾನೆ. ಅದು ಜೀವಂತವಿರುವಾಗಲೇ ಕಾಗೆ, ಹದ್ದುಗಳ ಪಾಲಾಗುತ್ತದೆ. ಇಂಥ ಪರಿಸ್ಥಿತಿ ನಮ್ಮಲ್ಲಿ ಇರುವಾಗ ಗೋವಧೆಯನ್ನು ಬಹಿಷ್ಕರಿಸುವ ಮಾತು ಎದ್ದಿದೆ. ಎಲ್ಲರೂ ಶಾಖಾಹಾರಿಗಳಾಗದೆ ದೇಶದ ಆಹಾರದ ಪರಿಸ್ಥಿತಿ ಇಷ್ಟು ಉಲ್ಬಣಿಸಿದೆ. ಇನ್ನು ಎಲ್ಲರೂ ಶಾಖಾಹಾರಿಗಳಾದರೆ ಅವರಿಗೆ ಯಾವ ಶಾಖೆಗಳನ್ನು ತರುವುದು; ಇದು ವಿಚಾರ ಮಾಡಬೇಕಾದ ಸಂಗತಿ.

ವೇದಗಳ ಕಾಲದಿಂದಲೂ ಭಾರತದಲ್ಲಿ Beef eating

ಇತ್ತು. ಭವಭೂತಿಯ ಒಂದು ನಾಟಕದಲ್ಲಿ ಇದರ ಪ್ರಸ್ತಾಪ ಬರುತ್ತದೆ. ಅದರಲ್ಲಿ ಒಬ್ಬ ವಟು ತನ್ನ ಪ್ರೀತಿಯ ಎಳೆ ಕರುವನ್ನು ತಿನ್ನಲು ಬಂದನೆಂದು ವಶಿಷ್ಠನನ್ನು ಹೆಬ್ಬುಲಿಗೆ ಹೋಲಿಸಿದ್ದಾನೆ. ಇಂಥ ವಿಚಾರಗಳಲ್ಲಿ ನಾವು ವೈಜ್ಞಾನಿಕವಾಗಿ ವಿಚಾರಮಾಡಬೇಕು.

ಇಂದು ಚೀನಾದೇಶದಲ್ಲಿ ಅವರು ತಮ್ಮ ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಅಣುಬಾಂಬು ತಯಾರಿಸುವ ಘಟ್ಟವನ್ನು ಮುಟ್ಟಿದ್ದಾರೆ. ಅವರು ಜ್ಞಾನಪ್ರಸಾರಕ್ಕೆ ದೇಶೀ ಭಾಷೆಯನ್ನು ಆರಿಸಿಕೊಂಡಿರುವುದೇ ಅವರ ಯಶಸ್ಸಿಗೆ ಕಾರಣ.

ನಮ್ಮ ದೇಶದ ಅನೇಕ ಸಮಸ್ಯೆಗಳಲ್ಲಿ ಜನಸಂಖ್ಯೆಯದೂ ಒಂದು. ಫ್ಯಾಮಿಲಿ ಪ್ಲಾನಿಂಗ್ ಬಗೆಗೆ ನಾನು ಬರೆದ ಒಂದು ಕವನದಲ್ಲಿ ಇದನ್ನು ವಿಡಂಬಿಸಿದ್ದೇನೆ. ಇದೊಂದು ಸಾಮಯಿಕವಾಗಿ ರಚಿಸಿದ ಕವನ. ಹೆಸರು ಪ್ರೇತಕ್ಯೂ. ನಾನು ಕವಿಮೇಳದ ಅಧ್ಯಕ್ಷತೆಯನ್ನು ವಹಿಸಿರುವುದರಿಂದ ಇದನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ.

ಕುವೆಂಪು ತಮ್ಮ ಕವನವನ್ನು ತಮ್ಮದೇ ಆದ ರೀತಿಯಲ್ಲಿ ಹಾಡಿದಾಗ, ಸಭೆಯಲ್ಲಿ ಹರ್ಷೋದ್ಗಾರ ಉಂಟಾಯಿತು. "ಸಮಕಾಲೀನ ಪ್ರಜ್ಞೆ ನಮ್ಮ ಹಳೆಯ ಕವಿಗಳಲ್ಲಿ ಇಲ್ಲ ಎಂಬುದಕ್ಕೆ ಇದೊಂದು ಸವಾಲು" ಎಂದು ಸಮೀಪದಲ್ಲಿ ಕುಳಿತಿದ್ದ ಎಸ್. ವಿ. ರಂಗಣ್ಣನವರು ಉದ್ಗಾರತೆಗೆದರು.

ರಾಷ್ಟ್ರಗೀತೆಯೊಡನೆ ಮುಕ್ತಾಯವಾದ ಈ ಸಮಾರಂಭ ನೆರೆದಿದ್ದ ಲೇಖಕರ ನೆನಪಿನಲ್ಲಿ ಚಿರಕಾಲ ಉಳಿಯುವ ಸಮ್ಮೇಳನವಾಯಿತು.

ಸಂಜೆ ಬೀಗರನ್ನು ಕಳುಹಿಸಿಕೊಡುವ ಸಂಭ್ರಮ, ವಿಷಾದ ಜವರೇಗೌಡ ಅವರಿಗೆ.

ಮಧ್ಯಾಹ್ನವೇ ಹಾ. ಮಾ. ನಾಯಕರು ಪಾದರಸದಂತೆ ಓಡಾಡಿ, ಬಂದಿದ್ದ ಎಲ್ಲ ಆಹ್ವಾನಿತರಿಗೆ ಸಲ್ಲಬೇಕಾಗಿದ್ದ ಪ್ರಯಾಣದ ಭತ್ತೆಯನ್ನು ಕೊಡಿಸಿದ್ದರು. ಈಗ ಉಳಿದದ್ದು ಪರಸ್ಪರ ಬೀಳ್ಕೊಡುಗೆ, ಅಷ್ಟೆ.

ಇಂಥ ಸಮಾರಂಭಗಳನ್ನು ಇಷ್ಟು ಚೆನ್ನಾಗಿ ಮಾಡಲು ಸಮರ್ಥರಾದವರು ವಿಶ್ವವಿದ್ಯಾನಿಲಯಗಳು ಮಾತ್ರ. ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಕನ್ನಡದ ಕೆಲಸವನ್ನು ಉಳಿದ ವಿಶ್ವವಿದ್ಯಾನಿಲಯಗಳು ಮುಂದುವರಿಸಲಿ ಎಂಬ ಆಶೋತ್ತರದೊಡನೆ ನಾನು ದೇ. ಜ. ಗೌ. ಅವರಿಂದ ಬೀಳ್ಕೊಂಡೆ.

ನಾನು ಧರ್ಮಸ್ಥಳಕ್ಕೆ ಅರಸೀಕೆರೆ ರೈಲಿನಲ್ಲಿ ಹೊರಡಬೇಕಾಗಿದ್ದುದರಿಂದ, ಮೂರು ದಿನ ನಮ್ಮನ್ನು ಮಾನಸ ಗಂಗೋತ್ರಿಗೆ ಕರೆಸಿಕೊಂಡು ದೇಹ ಮನಸ್ಸುಗಳಿಗೆ ರಸದೌತಣ ಕಲ್ಪಿಸಿಕೊಟ್ಟ ಎಲ್ಲ ಕಾರ್ಯಕರ್ತರಿಗೆ ನಮಸ್ಕಾರ ಹೇಳಿದೆ; ನನ್ನನ್ನೂ, ಸಿಂಪಿಲಿಂಗಣ್ಣ, ಮಿರ್ಜಿಅಣ್ಣಾರಾಯ, ಚಂದ್ರಶೇಖರ ಪಾಟೀಲ ಮತ್ತು ಪಟ್ಟಣಶೆಟ್ಟಿ ಅವರನ್ನೂ ಕರೆದೊಯ್ಯಲು ಸಿದ್ಧವಾಗಿ ನಿಂತಿದ್ದ ಜೀಪನ್ನು ಹತ್ತಿದೆ.

ಮುಬ್ಬುಕತ್ತಲೆಯಲ್ಲಿ ಮಾನಸಗಂಗೋತ್ರಿಯ ಬಣ್ಣ ಬಣ್ಣದ ದೀಪಾಲಂಕಾರ ಬೆಳಗುತ್ತಿತ್ತು.

ಮಾನಸಗಂಗೋತ್ರಿ ಕಣ್ಮರೆಯಾದ ಮೇಲೂ ಬಹು ಹೊತ್ತು ನಮ್ಮ ಪಾಲಿಗೆ ರಸದೌತಣ ಕಲ್ಪಿಸಿಕೊಟ್ಟ ವಿಶ್ವವಿದ್ಯಾನಿಲಯದ ಅಧಿಕಾರವರ್ಗವನ್ನು ನೆನೆಯುತ್ತಿತ್ತು ನಮ್ಮೆಲ್ಲರ ಮನಸ್ಸು.

—ಕೊ. ಶ್ರೀ.

ಸಿರಿಕನ್ನಡಂ ಗೆಲ್ಗೆ |
ಮಾನಸಗಂಗೋತ್ರಿ ಬಾಳ್ಗೆ ||

(ಈ ಲೇಖನದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ 'ಕನ್ನಡ ನುಡಿ' ಹೊಣೆಯಲ್ಲ)

—ಸಂ.

ಸಂಪಾದಕೀಯ

ಕನ್ನಡ ನುಡಿ

'ಕನ್ನಡ ನುಡಿ' ಈ ಸಂಚಿಕೆಯಿಂದ ತನ್ನ ೩೦ನೆಯ ವರುಷದ ಕಾರ್ಯವನ್ನಾರಂಭಿಸಿದೆ. ಪ್ರಸಿದ್ಧ ಕಾದಂಬರಿಕಾರ ಶ್ರೀ ಶ್ರೀನಿವಾಸರಾವ್ ಕೊರಟಿಯವರೂ ಜನಪ್ರಿಯ ಉಪಾಧ್ಯಾಯರಾದ ಶ್ರೀ ರಾಚಪ್ಪನವರೂ ಇನ್ನುಮುಂದೆ ಸಂಪಾದಕ ಕಾರ್ಯದ ಹೊಣೆಯನ್ನು ಹೊರಲು ಅದಕ್ಕೆ ತಮ್ಮ ಪಾಂಡಿತ್ಯದ ಮತ್ತು ಅನುಭವದ ಸಹಕಾರ ನೀಡಲು ದಯಮಾಡಿ ಒಪ್ಪಿದ್ದಾರೆ. 'ನುಡಿ'ಯ ರೂಪದಲ್ಲಿಯೂ ಮುಖಪತ್ರದ ನೋಟದಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿದ್ದೇವೆ. ಅನೇಕರ ಸಲಹೆಗಳನ್ನು ಪಡೆದು 'ನುಡಿ'ಯ ಒಳಸ್ವರೂಪಕ್ಕೂ ಕಳೆ ಹೆಚ್ಚುವಂತೆ ಪ್ರಯತ್ನ ಮಾಡುತ್ತೇವೆ. ಈ ಎಲ್ಲ ಕಾರ್ಯದಲ್ಲಿ ಕನ್ನಡ ಲೇಖಕರ ಸಹಕಾರವನ್ನೇ ನುಡಿಯು ನಿರೀಕ್ಷಿಸುತ್ತದೆ.

ಕಳೆದ ತಿಂಗಳು ಎರಡು ಕಡೆಗಳಲ್ಲಿ, ಮೈಸೂರಿನಲ್ಲಿ, ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆದು ಕನ್ನಡ ಸಾಹಿತ್ಯದ ರಸದೂಟವನ್ನು ಅಲ್ಲಲ್ಲಿ ಸೇರಿದ್ದ ಸಭೆಗಳಿಗೆ ಒದಗಿಸಿವೆ. ಮೈಸೂರಿನಲ್ಲಿ ಮಾನಸಗಂಗೋತ್ರಿಯಲ್ಲಿ ನಡೆದ ಕಾರ್ಯಕ್ರಮಗಳ ಹೊಸ ರೀತಿಯ ವರದಿಯೊಂದು ತಮಗೆ ಈ ಸಂಚಿಕೆಯಲ್ಲಿ ದೊರಕುತ್ತದೆ. ಇದರಿಂದ ಮೈಸೂರಿನ ಸಮ್ಮೇಳನದ ಪ್ರಯೋಜನದ ಅರಿವು ನಮಗಾಗುತ್ತದೆ.

ನಾಡಿನಲ್ಲಿ ಅಲ್ಲಲ್ಲಿ ಸಾಹಿತ್ಯ ಕಾರ್ಯಗಳು ಹೆಚ್ಚುತ್ತಿವೆ. ರಾಜಧಾನಿಯಲ್ಲಿ ನಾಟಕೋತ್ಸಾಹ ಹೆಚ್ಚಿದೆ. ಕಾಲೇಜು ತರುಣರು, ವೃತ್ತಿವಿಲಾಸಿಗಳು, ನಾಟ್ಯಸಂಘದ ಸದಸ್ಯರು ಇವರೆಲ್ಲ ಈ ಕಾರ್ಯದಲ್ಲಿ ಬಹುಮುಖ ಸೇವೆಯೆಸಗುತ್ತಿದ್ದಾರೆ. ಕನ್ನಡದ ಚಲನಚಿತ್ರದಲ್ಲಿ ಉತ್ಸಾಹ ಹೆಚ್ಚಿದೆ. ಗ್ರಂಥ ಪ್ರಕಟನೆಯಲ್ಲಿ ಗ್ರಂಥ ಲೇಖನದಲ್ಲಿ ಪ್ರಮಾಣ ಸಂತೋಷದಾಯಕವಾಗಿದೆ. ಕಳೆದ ವರ್ಷದ ಬೆಳೆ ಹುಲುಸಾಗಿದೆ. ಈ ಕಾರ್ಯಶೀಲತೆ ಅಭಿವೃದ್ಧಿಗೊಳ್ಳಲೆಂದು ನುಡಿ ಹಾರೈಸುತ್ತದೆ.

ಕವಿ ಬೇಂದ್ರೆ ಅವರಿಗೆ ಗೌರವ ಪ್ರಶಸ್ತಿ

ಅಂಬಿಕಾತನಯದತ್ತರೆಂದು ಖ್ಯಾತನಾಮರಾಗಿ ಕನ್ನಡ ನಾಡು-ನುಡಿಗಳ ಸೇವೆಯನ್ನು ಮಾಡುತ್ತ ಬಂದಿರುವ ವರಕವಿ ಶ್ರೀ ದ. ರಾ. ಬೇಂದ್ರೆಯವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಡಿಸೆಂಬರ್ ದಿನಾಂಕ ೧೫ರಂದು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿತು. ಈ ಸಂದರ್ಭದಲ್ಲಿ ಮಾತನಾಡುತ್ತಾ ಬೇಂದ್ರೆಯವರು "ಹಿಂದೆ ತಮ್ಮ ಕಾವ್ಯಕ್ಕೆ ಸಂದ ಗೌರವ ತಾಯಿ ಅಂಬಿಕೆಗೆ ಸಂದಿತೆಂದೂ, ಈಗ ಬಂದ ಗೌರವ ಚಾಮುಂಡಾಂಬಿಕೆಗೆ ಅರ್ಪಿತವಾಗಬೇಕು" ಎಂದೂ ಹೇಳಿದರು. ಇದು ತಮ್ಮ ಎಪ್ಪತ್ತನೆಯ ಹರೆಯದಲ್ಲಿ "ಪ್ರಜಾರಾಜ್ಯದ ಶ್ರೀ ಸಾಮಾನ್ಯನಿಗೆ ಸಂದ ಗೌರವ" ಎಂದರು.

ಕಂಬನಿ

ಕನ್ನಡ-ಕನ್ನಡ ಕೋಶದ ಉಪಸಂಪಾದಕರಾಗಿದ್ದ ಪಂಡಿತ ಹೆಮ್ಮಿಗೆ ದೇಶಿಕಾಚಾರ್ಯರು ಕಳೆದ ದಿನಾಂಕ ೧೦-೧೨-೧೯೬೬ರಂದು ಸ್ವರ್ಗಸ್ಥರಾದರು. ಪರಿಷತ್ತಿನ ವಿಚಾರದಲ್ಲಿ ತುಂಬ ಮಮತೆಯನ್ನು ಹೊಂದಿದ್ದ ಈ ಹಿರಿಯ ವಿದ್ವಾಂಸರು ನಿಧನ ಹೊಂದಿದುದರಿಂದ ಪರಿಷತ್ತಿಗೆ ತುಂಬಲಾರದ ನಷ್ಟವಾಗಿದೆ. ದಿವಂಗತರ ಆತ್ಮಕ್ಕೆ ಸದ್ಗತಿ ದೊರಕಲೆಂದು ನುಡಿ ಹಾರೈಸುತ್ತದೆ. ಅವರ ಸೇವೆಯನ್ನು ಕೃತಜ್ಞತೆಯಿಂದ ನೆನೆಯುತ್ತದೆ.

ಪರಿಷತ್ತಿನ ಸುದ್ದಿಗಳು

ಶ್ರವಣಬೆಳಗೊಳದಲ್ಲಿ

ನಲವತ್ತಾರನೆಯ

ಕನ್ನಡ ಸಾಹಿತ್ಯ ಸಮ್ಮೇಳನ

ಸ್ವಾಗತ ಸಮಿತಿಯ ರಚನೆ

ದಿನಾಂಕ ೨೫–೧೨–೧೯೬೬ರಂದು ಶ್ರವಣಬೆಳಗೊಳದಲ್ಲಿ ಶ್ರೀ ಸ್ವಸ್ತಿಶ್ರೀ ಚಾರುಕೀರ್ತಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರವಣಬೆಳಗೊಳ, ತಿಪಟೂರು, ಅರಸೀಕೆರೆ ಹಾಗೂ ಸುತ್ತಲಿನ ಪ್ರದೇಶಗಳಿಂದ ಆಗಮಿಸಿದ ಸಾಹಿತ್ಯಾಭಿಮಾನಿಗಳ ಸಭೆ ಸೇರಿತ್ತು. ಶ್ರೀಗೊಮ್ಮಟೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ೪೬ನೆಯ ಸಾಹಿತ್ಯ ಸಮ್ಮೇಳನವನ್ನು ನೆರವೇರಿಸಬೇಕೆಂದು ತೀರ್ಮಾನಿಸಿ, ಶ್ರೀಗಳವರ ನೇತೃತ್ವದಲ್ಲಿ ಹಾಸನ ಜಿಲ್ಲೆಯ ಪ್ರಮುಖ ಮಹನೀಯರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಶ್ರೀ ಟಿ. ತೋಂಟದಾರ್ಯರು ಪ್ರಧಾನ ಕಾರ್ಯದರ್ಶಿಗಳಾಗಿದ್ದಾರೆ. ಒಂದು ಕಾರ್ಯಸಮಿತಿಯನ್ನು ರಚಿಸಿ, ಕಾರ್ಯಕ್ರಮಗಳ ಯೋಜನೆಗಳನ್ನೂ ಹಣಕಾಸಿನ ವಿಚಾರಗಳನ್ನೂ ಚರ್ಚಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಶ್ರೀ ಜಿ. ವೆಂಕಟಸುಬ್ಬಯ್ಯನವರು, ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗಲಿ ಮತ್ತು ಶ್ರೀ ಹಂಪ. ನಾಗರಾಜಯ್ಯ ಇವರು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನಿತ್ತರು.

ಪರಿಷತ್ತಿನ ಅಧ್ಯಕ್ಷರಾದ

ಪ್ರೊ. ಜಿ. ವೆಂಕಟಸುಬ್ಬಯ್ಯನವರ

ಪ್ರವಾಸ

ಪ್ರೊ. ಜಿ. ವೆಂಕಟಸುಬ್ಬಯ್ಯನವರು ನವೆಂಬರ್ ತಿಂಗಳ ಕೊನೆಯ ವಾರದಲ್ಲಿಯೂ, ಡಿಸೆಂಬರ್ ತಿಂಗಳ ಮೊದಲೆರಡು ವಾರಗಳಲ್ಲಿಯೂ ಉತ್ತರ ದೇಶದಲ್ಲಿ ಸಾಹಿತ್ಯ ಪರವಾದ ಪ್ರವಾಸವನ್ನು ಕೈಗೊಂಡಿದ್ದರು.

ಈ ಪ್ರಯಾಣದಲ್ಲಿ ಆಗ್ರಾ ರೈಲ್ವೆ ನಿಲ್ದಾಣದಲ್ಲಿ ಕೆಲವರು ಕನ್ನಡಿಗರು ಹಾಜರಿದ್ದು ಅಧ್ಯಕ್ಷರ ದೆಹಲಿ ಪ್ರವಾಸಕ್ಕೆ ಶುಭವನ್ನು ಹಾರೈಸಿದರು.

೨೮–೧೧–೬೬ರಂದು ದೆಹಲಿಯಲ್ಲಿ "ಐ ಫಾಕ್ಸ್" ರಂಗಮಂದಿರದಲ್ಲಿ ನಡೆದ 'ಷೇಕ್ಸ್‌ಪಿಯರ್‌ಗೆ ನಮಸ್ಕಾರ' ಎಂಬ ಗ್ರಂಥವನ್ನು ಬಿಡುಗಡೆ ಮಾಡಿದ ಸಮಯದಲ್ಲಿ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಎ. ಎನ್. ಮೂರ್ತಿರಾಯರು ಮಾತನಾಡಿ ದೆಹಲಿಯ ಕನ್ನಡಿಗರ ಸಹಾಯ ಸಹಕಾರವನ್ನು ಬೇಡಿದರು. ಕೇಂದ್ರ ಸರಕಾರದ ವಿದ್ಯಾಮಂತ್ರಿಗಳನ್ನೂ ಉಪಮಂತ್ರಿಗಳನ್ನೂ ಕಾರ್ಯದರ್ಶಿಗಳನ್ನೂ ಭೇಟಿಮಾಡಿ ಅವರೊಡನೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೇಂದ್ರದ ಸಹಾಯ ದೊರಕುವ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡುಬಂದರು.

ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು, ಡಾ. ಸರೋಜಿನಿ ಮಹಿಷಿ ಮುಂತಾದ ಲೋಕಸಭಾಸದಸ್ಯರನ್ನೂ ಶ್ರೀ ಬಿ. ಗೋಪಾಲರೆಡ್ಡಿಯವರನ್ನೂ ಕಂಡು ದಕ್ಷಿಣ ಭಾಷಾ ಸಾಹಿತ್ಯಗಳ ಅಭಿವೃದ್ಧಿಗೆ ಎಲ್ಲರೂ ಕೂಡಿ ಹೇಗೆ ಶ್ರಮಿಸಬೇಕೆಂಬುದನ್ನು ಚರ್ಚಿಸಿದರು. ವಿಜ್ಞಾನ ಪಾರಿಭಾಷಿಕ ಕೋಶದ ಮುಖ್ಯ ಸಂಪಾದಕರ ಕಾರ್ಯದರ್ಶಿಗಳಾದ ಡಾ. ಚಕ್ರವರ್ತಿಯವರೊಡನೆ ವಿಚಾರ ವಿನಿಮಯ ಮಾಡಿದರು.

ದಕ್ಷಿಣದ ಸಾಹಿತ್ಯಗಳು ಕೇಂದ್ರದ ನೆರವನ್ನು ಹೆಚ್ಚುಹೆಚ್ಚು ಪ್ರಮಾಣದಲ್ಲಿ ಪಡೆಯಲು ಬೇಕಾದ ಒಂದು ಯೋಜನೆಯನ್ನು ಕೇಂದ್ರದ ವಿದ್ಯಾಸಚಿವ ಶಾಖೆಗೆ ಕಳುಹಿಸಿದ್ದಾರೆ. ಕನ್ನಡದ ಪ್ರತಿನಿಧಿಗಳಾದ ಲೋಕಸಭೆಯ

ಸದಸ್ಯರು ಈ ಬಗ್ಗೆ ಹೆಚ್ಚು ಆಸ್ಥೆ ವಹಿಸಿದರೆ ಕನ್ನಡ ಸಾಹಿತ್ಯ ಪರಿಷತ್ತು ಬಡತನದಲ್ಲಿ ತೊಳಲಬೇಕಾಗಿಲ್ಲ ವೆಂಬುದನ್ನು ಅವರಲ್ಲಿ ಕೆಲವರಿಗೆ ತಿಳಿಸಿಬಂದಿದ್ದಾರೆ.

ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರ ನೇತೃತ್ವದಲ್ಲಿ ನಡೆಯುತ್ತಿರುವ ದೆಹಲಿ ಕನ್ನಡ ಶಾಲೆಗೆ ಭೇಟಿಕೊಟ್ಟು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡಿದರು.

ದೆಹಲಿಯಲ್ಲಿ ಒಂದು ಕನ್ನಡ ಸಾಹಿತ್ಯ ಸಮ್ಮೇಳನ ವನ್ನು ನಡೆಸುವ ಬಗ್ಗೆ ಸೂಚನೆಯನ್ನು ಕೊಟ್ಟು ಅಧ್ಯಕ್ಷರು ಮುಂಬಯಿಗೆ ಪ್ರಯಾಣ ಮಾಡಿದರು.

ಮುಂಬಯಿಯಲ್ಲಿ ಕನ್ನಡದ ಪ್ರಮುಖ ಪ್ರತಿನಿಧಿ ಗಳನ್ನು ಭೇಟಿಮಾಡಿದರು. ಕಾರ್ಯಸಮಿತಿಯ ಸದಸ್ಯ ರಾದ ಶ್ರೀ ಅ. ನ. ಕೃಷ್ಣರಾಯರೂ ಇದೇ ಸಂದರ್ಭದಲ್ಲಿ ಮುಂಬಯಿಯಲ್ಲಿ ಇದ್ದುದರಿಂದ ಅಧ್ಯಕ್ಷರೂ ಶ್ರೀ ಕೃಷ್ಣ ರಾಯರೂ ಅನೇಕ ಕಡೆಗಳಲ್ಲಿ ಒಟ್ಟಿಗೆ ಕಲೆತು ಮುಂಬ ಯಿಯ ಕನ್ನಡಿಗರೊಡನೆ ವಿಚಾರವಿನಿಮಯ ಮಾಡಿದರು. ಮುಂಬಯಿಯ ಕನ್ನಡ ಸಂಘದವರು ಇಬ್ಬರಿಗೂ ಸತ್ಕಾರಕೂಟವನ್ನೇರ್ಪಡಿಸಿದ್ದರು. ಮೈಸೂರು ಸಂಘ, ವಡಾಲದಲ್ಲಿರುವ ಕನ್ನಡ ಶಾಲೆ, ಪೊದ್ದಾರ್ ಕಾಲೇಜು ಈ ಕಡೆಗಳಲ್ಲಿ ಇಬ್ಬರೂ ಉಪನ್ಯಾಸಗಳನ್ನು ಮಾಡಿದರು.

ವಾಣಿಜ್ಯೋದ್ಯಮಿಗಳಾದ ಶ್ರೀ ಜೆ. ಎನ್. ಐಯ್ಯರ್, ಶ್ರೀ ಉಪಾಧ್ಯಾಯ, ಶ್ರೀ ಎಸ್. ಎನ್. ಮೂಡಬಿದ್ರಿ ಅವರೂ ಹಿಂದೂಸ್ತಾನ್ ಲಿವರ್‌ನ ಮುಖ್ಯ ಇಂಜನಿಯರ್ ಶ್ರೀ ರಮಾನಂದ, ಮಹಾರಾಷ್ಟ್ರ ಸರ್ಕಾರದ ಡೆಪ್ಯುಟಿ ಕಾರ್ಯದರ್ಶಿ ಹೆಚ್. ನಂಜುಂಡಯ್ಯ, ಶ್ರೀ ಗುರುಮೂರ್ತಿ, ಶ್ರೀ ರಾಮಚಂದ್ರನ್, ಶ್ರೀ ಗೋಪಾಲಸ್ವಾಮಿ, ಶ್ರೀ ಗುರು ರಾಜಾರಾವ್, ಶ್ರೀ ಸೋಮಶೇಖರ್, ಮುಂತಾದ ಅನೇಕರು, ಅನೇಕ ಭೋಜನಕೂಟಗಳನ್ನು ಏರ್ಪಡಿಸಿ ಅಧ್ಯಕ್ಷರನ್ನು ಸತ್ಕರಿಸಿ ಕನ್ನಡ ಸಾಹಿತ್ಯ ಪರಿಷತ್ತಿಗೆ ತಮ್ಮ ಸಹಾಯಹಸ್ತವನ್ನು ನೀಡಿದ್ದಾರೆ. ಮತ್ತೊಮ್ಮೆ ಮುಂಬಯಿಗೆ ಬಂದು ಉಪನ್ಯಾಸ ಸಪ್ತಾಹಮಾಡಿ ತಮ್ಮ ಸಾಹಿತ್ಯ ತೃಷೆಯನ್ನು ತೃಪ್ತಿಪಡಿಸಬೇಕೆಂದೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಧನಸಹಾಯವನ್ನು ಕೂಡಿಸ ಬೇಕೆಂದೂ ಅಧ್ಯಕ್ಷರನ್ನು ಕೋರಲಾಗಿದೆ.

ಕವಿ-ಕೃತಿ ದರ್ಶನ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜಾಜಿ ನಗರದ ವಿದ್ಯಾವರ್ಧಕ ಸಂಘದವರು ಸಪ್ತರ್ಷಿಧಾಮದಲ್ಲಿ ಏರ್ಪಡಿಸಿದ ಕವಿ ಕೃತಿ ದರ್ಶನ ಮಾಲೆಯಲ್ಲಿ ದಿನಾಂಕ ೧೧-೧೨-೧೯೬೬ರಂದು ಸಂಜೆ ಐದು ಘಂಟೆಗೆ, ಪದ್ಮಶ್ರೀ ವಿನಾಯಕ ಕೃಷ್ಣ ಗೋಕಾಕ ಅವರ ಸಾಹಿತ್ಯೋಪಾಸನೆ' ಎನ್ನುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀ ಎಸ್. ಆರ್. ಮಳಗಿ ಅವರು ಅಂದಿನ ಸಭೆಯ ಅಧ್ಯಕ್ಷತೆ ಯನ್ನು ವಹಿಸಿದ್ದರು. ಶ್ರೀ ಆರ್. ಜಿ. ಕುಲಕರ್ಣಿ, ಶ್ರೀ ಕೆ. ಟಿ. ಪಾಂಡುರಂಗಿ, ಶ್ರೀ ಎಚ್. ಜಿ. ಸೂರ್ಯ ನಾರಾಯಣರಾಯರು ಕ್ರಮವಾಗಿ ವಿನಾಯಕರ ಪದ್ಯ ಸಾಹಿತ್ಯ, ಗೋಕಾಕರ ಬರವಣಿಗೆಗಳಲ್ಲಿ ಆಧ್ಯಾತ್ಮ, ಗೋಕಾಕರ ಕೃತಿಗಳಲ್ಲಿ ಜೀವನ ದೃಷ್ಟಿ-ಎನ್ನುವ ವಿಷ ಯದ ಮೇಲೆ ಉಪನ್ಯಾಸ ಮಾಡಿದರು.

ತೀ. ನಂ. ಶ್ರೀ. ಅವರ
ಷಷ್ಟ್ಯಬ್ದ ಸ್ಮರಣೆ

ದಿನಾಂಕ ೨೫-೧೨-೬೬ರಂದು ಭಾನುವಾರ ಸಂಜೆ ಐದು ಘಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜಾಜಿನಗರದ ವಿದ್ಯಾವರ್ಧಕ ಸಂಘದವರು "ಪ್ರೊ. ತೀ. ನಂ. ಶ್ರೀಕಂಠಯ್ಯ ಅವರ ಸಾಹಿತ್ಯ ಸಮರ್ಪಣೆ" ಎನ್ನುವ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಶ್ರೀ ತೀ. ನಂ. ಶ್ರೀ ಅವರ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆ ಎನ್ನುವ ವಿಷಯದ ಮೇಲೆ ಶ್ರೀ ಎಂ. ವಿ. ಸೀತಾರಾಮಯ್ಯ ಅವರು ಉಪನ್ಯಾಸ ಮಾಡಿದರು.

ಅಂದಿನ ಸಭೆಯ ಅಧ್ಯಕ್ಷತೆಯನ್ನು ಕವಿವರ್ಯ ಶ್ರೀ ಪು. ತಿ. ನ. ಅವರು ವಹಿಸಿದ್ದರು.

ಕನ್ನಡ ರತ್ನ ಪರೀಕ್ಷೆ
ಫಲಿತಾಂಶ

ಪ್ರಥಮ ವರ್ಗ (ಗುಣಾನುಕ್ರಮದಲ್ಲಿ)

೪೧೭, ೩೨೪, ೧೦೨, ೨೪೩, ೩೨೯, ೪೬೨, ೪೭೮, ೪೩೬, ೩೩೬, (೧೦೭-೪೭೯), ೨೬೩, (೨೧೭-೮೦).

ದ್ವಿತೀಯ ವರ್ಗ

೬, ೯, ೧೦, ೧೬, ೧೯, ೨೧, ೩೨, ೯೨, ೯೪, ೧೨೦, ೧೨೩, ೧೨೫, ೧೩೫, ೧೩೮, ೧೪೧, ೧೫೮, ೧೬೧, ೧೭೦, ೧೭೯, ೧೯೮, ೨೦೧, ೨೦೨, ೨೦೪, ೨೦೭, ೨೧೧, ೨೧೨,

೨೧೯, ೨೩೩, ೨೪೯, ೨೫೯, ೨೬೬, ೨೭೨, ೨೭೩, ೨೭೫, ೨೮೪, ೨೯೧, ೨೯೬, ೨೯೯, ೩೦೪, ೩೦೯, ೩೧೧, ೩೨೦, ೩೨೨, ೩೨೫, ೩೨೬, ೩೨೮, ೩೩೦, ೩೩೧, ೩೩೨, ೩೩೩, ೩೩೭, ೩೪೧, ೩೪೨, ೩೭೮, ೩೮೧, ೩೮೨, ೪೦೩, ೪೩೨, ೪೩೪, ೪೩೭, ೪೩೮, ೪೩೯, ೪೪೦, ೪೪೬, ೪೫೧, ೪೫೪, ೪೫೫, ೪೫೬, ೪೬೬, ೪೭೦, ೪೭೪, ೪೭೭, ೪೭೯,

ತೃತೀಯ ವರ್ಗ

೧, ೧೫, ೩೦, ೩೪, ೩೫, ೫೦, ೫೬, ೭೦, ೭೨, ೭೪, ೮೧, ೮೪, ೮೭, ೯೮, ೧೦೦, ೧೦೩, ೧೦೬, ೧೦೮, ೧೧೧, ೧೧೩, ೧೧೪, ೧೧೬, ೧೧೮, ೧೨೧, ೧೨೪, ೧೨೬, ೧೨೭, ೧೩೪, ೧೩೯, ೧೪೦, ೧೪೨, ೧೪೭, ೧೪೮, ೧೫೨, ೧೫೩, ೧೫೫, ೧೫೬, ೧೫೯, ೧೬೭, ೧೬೯, ೧೮೧, ೧೮೩, ೧೯೪, ೧೯೫, ೧೯೬, ೨೦೦, ೨೦೫, ೨೦೯, ೨೧೮, ೨೨೪, ೨೩೧, ೨೩೨, ೨೬೪, ೨೬೮, ೨೭೪, ೨೭೭, ೨೭೮, ೨೭೯, ೨೮೧, ೨೮೬, ೨೮೮, ೨೮೯, ೨೯೪, ೨೯೫. ೩೦೩, ೩೦೫, ೩೦೬, ೩೧೦, ೩೧೨, ೩೧೩, ೩೧೫, ೩೧೭, ೩೨೩, ೩೪೦, ೩೫೯, ೩೬೫, ೩೭೭, ೩೭೯, ೩೮೩, ೩೮೮, ೩೮೯, ೪೦೦, ೪೦೧, ೪೦೨, ೪೦೬, ೪೦೭, ೪೧೬, ೪೩೩, ೪೩೫, ೪೪೫, ೪೫೨, ೪೫೮, ೪೬೮, ೪೭೧, ೪೭೩, ೪೭೫.

ವಿ. ಸೂ: ೧೯೬೬ನೇ ಸಾಲಿನ ರತ್ನಪರೀಕ್ಷೆಯಲ್ಲಿ ತೇರ್ಗಡೆಯಾದವರ ಮೊದಲನೆಯ ಮೂರು ಕ್ರಮಾಂಕ ಮತ್ತು ಅಭ್ಯರ್ಥಿಗಳ ಹೆಸರುಗಳು ಈ ರೀತಿ ಇವೆ:

ಕ್ರಮಾಂಕ	ಕೇಂದ್ರ	ಹೆಸರು
೪೧೭	ತಿಪಟೂರು	ಎನ್. ಶಿವರಾಮಯ್ಯ
೩೨೪	ಶಿವಮೊಗ್ಗ	ಕೆ. ಎಸ್. ಮಂಜನಾಥ
೧೦೨	ಬೆಂಗಳೂರು	ಟಿ. ವಾಮನಭಟ್ಟ

ಕಣ್ಮರೆಯಾದ ವಿದ್ವನ್ಮಣಿ
ಹೆಮ್ಮಿಗೆ ದೇಶಿಕಾಚಾರ್ಯರ

(೨ನೆಯ ಪುಟದಿಂದ)

ಗಳ ವ್ಯುತ್ಪತ್ತಿಯನ್ನು ಊಹಿಸುತ್ತಿದ್ದ ವಿಧಾನ ನಿಜವಾಗಿಯೂ ಶ್ಲಾಘನೀಯವಾದುದು. ಅವರು ಯಾವೊಂದು ಶಬ್ದಕ್ಕೂ ಅರ್ಥ ತಿಳಿಯದೆ ಸಂಪೂರ್ಣವಾಗಿ ಒಪ್ಪಿಕೊಂಡುದನ್ನು ನಾನು ಕಂಡಿಲ್ಲ ಕೇಳಿಲ್ಲ.

ಶ್ರೀಮಾನ್ ದೇಶಿಕಾಚಾರ್ಯರು ಪ್ರತಿಭಾಸಂಪನ್ನರಾದ ಕವಿಗಳು. ಸಂಸ್ಕೃತ, ಹಳಗನ್ನಡ, ಹೊಸಗನ್ನಡ ಈ ಮೂರರಲ್ಲಿಯೂ ಲೀಲಾಜಾಲವಾಗಿ ಕಾವ್ಯವನ್ನು ರಚಿಸುವುದು ಅವರಿಗೆ ಕರತಲಾಮಲಕವಾಗಿದ್ದಿತು. ಇವರ ಕಂದಪದ್ಯಗಳು ರನ್ನ ಜನ್ನರ ಕಂದಗಳಂತೆ ಸುಲಲಿತವೂ ಸುಮಧುರವೂ ಆಗಿರುತ್ತವೆಂದು ಹಿರಿಯರೊಬ್ಬರು ಉಸುರಿದ ನೆನಪು ನನಗಿದೆ. ಇವರು ಆಶುಕವಿಗಳು, ಸುಪ್ರೌಢ ಹಳಗನ್ನಡದಲ್ಲಿ ಕಾವ್ಯವನ್ನು ಬರೆಯಬಲ್ಲರೆಂಬುದಕ್ಕೆ ಅವರ ವೇದಶೇಖರಮಲಸ್ತವಂ, ಮುಕುಂದಮಾಲಾಸ್ತೋತ್ರಗಳೇ ಸಾಕ್ಷಿ.

ಶ್ರೀಮಾನ್ ದೇಶಿಕಾಚಾರ್ಯರು ಕರ್ತವ್ಯ ಪ್ರಜ್ಞೆಯಲ್ಲಿ ನಿಮಗ್ನರಾಗಿ, ಬಾಹ್ಯ ಪ್ರಪಂಚವನ್ನೇ ಮರೆತಿರುತ್ತಿದ್ದರೆಂಬುದಕ್ಕೆ ಒಂದು ಪ್ರಸಂಗವನ್ನು ಜ್ಞಾಪಿಸಿಕೊಳ್ಳಬಹುದು. ಒಮ್ಮೆ ಅವರು ಅಭಿಮಾನಿಗಳೊಬ್ಬರು ಕೊಟ್ಟ ಬಾಳೆಯ ಹಣ್ಣನ್ನು ಮೇಜಿನ ಅರೆಯಲ್ಲಿ ಹಾಕಿದ್ದರು. ಕೆಲಸದ ನಡುವೆ ಅದನ್ನು ತಿನ್ನುವುದನ್ನಾಗಲೀ, ಮನೆಗೆ ಕೊಂಡೊಯ್ಯುವುದನ್ನಾಗಲೀ ಮರೆತುಬಿಟ್ಟರು. ಕಚೇರಿಗೆ ಬಂದರೂ ಎರಡು ಮೂರು ದಿನಗಳು ಅದನ್ನು ಗಮನಿಸಲೇ ಇಲ್ಲ. ಕೊನೆಗೊಮ್ಮೆ ತಮ್ಮ ಭಾಗವತವನ್ನು ಹುಡುಕುವ ಸಂದರ್ಭದಲ್ಲಿ ಅರೆಗೆ ಕೈ ಹಾಕಿದಾಗ ಆ ಭಾಗವತವೆಲ್ಲ ಅಸ್ತವ್ಯಸ್ತವಾಗಿ ಚಿಲ್ಲಾಪಿಲ್ಲಿಯಾಗಿದ್ದಿತು. ಚೂರು ಚೂರಾಗಿತ್ತು. ಅವರಿಟ್ಟಿದ್ದ ಬಾಳೆಯಹಣ್ಣಿಗಾಗಿ ಮೇಜಿನ ಅರೆಯೊಳಕ್ಕೆ ನುಗ್ಗಿ ಬಾಳೆಯ ಹಣ್ಣನ್ನು ತಿಂದುದಲ್ಲದೆ ಭಾಗವತವನ್ನೂ ಆ ದೆಶೆಗೆ ತಂದಿದ್ದಿತು.

ಶ್ರೀಮಾನ್ ದೇಶಿಕಾಚಾರ್ಯರು ಒಳ್ಳೆಯ ರಸಿಕರು; ವಾಗ್ಮಿಗಳು; ಉತ್ತಮ ವಿಮರ್ಶಕರು ಎಲ್ಲಕ್ಕಿಂತ ಮಿಗಿಲಾಗಿ, ಸರಳ ನಡೆನುಡಿಗಳನ್ನುಳ್ಳವರು. ಸದ್ಗುಣ ಸಂಪನ್ನರು ಇವರ ಸ್ನೇಹಿತವರ್ಗ ಅಪಾರವಾಗಿದ್ದಿತು. ನಿಘಂಟಿಗೆ ಅವರು ಸಲ್ಲಿಸಿರುವ ಸೇವೆ ಬಹುಕಾಲ ಸ್ಮರಿಸುವಂತಹುದು. ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

ಎನ್. ಬಸವಾರಾಧ್ಯ

Reg. No. B. G. 4—January 1967

Licensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೨

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಚಪ್ಪ

ಫೆಬ್ರವರಿ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ,

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಫೆಬ್ರುವರಿ ೧೯೬೭

ಸಂಪುಟ : ೩೦

ಸಂಚಿಕೆ : ೨

ಈ ಸಂಚಿಕೆಯಲ್ಲಿ . . .

ನಿರೀಕ್ಷೆ

ಮೂಲ: ರವೀಂದ್ರನಾಥ ಟಾಗೋರರ If thou speakest not. . . ಎಂಬ ಕವನ (ಗೀತಾಂಜಲಿ)

ಅನು: **ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

ನುಡಿಯದಿದ್ದರೇನು ನೀನು
ನಿನ್ನ ಮೌನವನ್ನೆ ನಾನು
ಹೃದಯದಲ್ಲಿ ತುಂಬಿ,
ವಿರಹದಲ್ಲಿ ಬೇಯುತಿರುವೆ
ಅಲುಗದಲೆಯೆ ಕಾಯುತಿರುವೆ
ನಿನ್ನನ್ನೇ ನಂಬಿ.

ಚುಕ್ಕಿಗಣ್ಣ ಬಿಚ್ಚಿ ಇರುಳು
ತಲೆ ತಗ್ಗಿಸಿ ತಾಳಿ,
ಕಾಯುವಂತೆ ಬಾಳುವೆನು
ನನ್ನ ನೋವ ಹೂಳಿ.

ಬೆಳಗು ಬಂದೆ ಬರುವುದು
ಇರುಳು ಹರಿದೆ ಹರಿವುದು;
ನಿನ್ನ ದನಿಯ ಸ್ವರ್ಣವರ್ಷ
ಆಗಸವನು ಭೇದಿಸಿ
ಜುಳಜುಳನೆಯೆ ತಿರೆಗಿಳಿವುದು
ವಿಶ್ವವನ್ನೆ ತೋಯಿಸಿ.

ನನ್ನ ಹಕ್ಕಿ ಗೂಡಿನಿಂದ
ಹರಿವ ಹಾಡುಗಳಲಿ,
ನಿನ್ನ ನುಡಿಗೆ ರೆಕ್ಕೆ ಬಂದು
ವನದ ತುಂಬ ಹೊರಳಿ,
ನನ್ನ ತೋಟದಲ್ಲಿ ಮೂಲೆ
ಮೂಲೆಯಲ್ಲು ಗಿಡಗುಂಪಲಿ
ನಿನ್ನ ಮಧುರದನಿ ಏಳ್ವುದು
ಹೂ ಮೈಯನು ತಾಳಿ

ದಿ|| ತೀ. ನಂ. ಶ್ರೀಯವರ ಒಂದು ಅಪ್ರಕಟಿತ ಕವನ

ಸಮಯ : ೧೯೬೫ರ ಮೇ ತಿಂಗಳ ಒಂದು ಸುಂದರ ಸಂಜೆ   ದಿನಾಂಕ : ೨೬   ಸ್ಥಳ : ತಿರುವನಂತಪುರ

ಕೇರಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಭಾಷಾವಿಜ್ಞಾನದ ಗ್ರೀಷ್ಮಶಾಲೆಯ ನಿರ್ದೇಶಕರು ಅಂದು ಅಖಿಲ ಭಾರತದ ಭಾಷೆಗಳ ಪದ್ಯವಾಚನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಕನ್ನಡದ ಪದ್ಯವೊಂದನ್ನು ಹಾಡಲು, ಶ್ರೀ ಕೆ. ಎಸ್. ಗುರುಬಸವೇಗೌಡರನ್ನು ಕೇಳಿಕೊಳ್ಳಲಾಗಿತ್ತು. ಅವರು ಶ್ರೀ. ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆ ಕವನ ಸಂಕಲನದಿಂದ 'ಹಳ್ಳಿಯ ಚೆಲುವೆ' ಎಂಬ ಪದ್ಯವನ್ನು ಹಾಡಲು ಒಪ್ಪಿಕೊಂಡರು. ಆದರೆ ಕನ್ನಡ ಭಾಷೆ ಬಾರದ ಅಂದಿನ ಸಭೆಗೆ ಮೊದಲು ಇಂಗ್ಲಿಷ್ ಅನುವಾದವನ್ನು ಓದಿಹೇಳಬೇಕಿತ್ತು. ಅದೃಷ್ಟವೆಂಬಂತೆ ಆ ಸಮಯದಲ್ಲಿ ದಿ|| ಆಚಾರ್ಯ ಶ್ರೀ. ತೀ. ನಂ. ಶ್ರೀ ಯವರು ವಿಶೇಷೋಪನ್ಯಾಸಕರಾಗಿ ಆಹ್ವಾನಿತರಾಗಿ ತಿರುವನಂತಪುರದಲ್ಲಿಯೇ ಇದ್ದರು. ಶ್ರೀ. ಗೌಡರು ಹೋಗಿ ತೀ. ನಂ. ಶ್ರೀ ಯವರನ್ನು ಸಹಾಯ ಮಾಡಲು ಪ್ರಾರ್ಥಿಸಿದೊಡನೆಯೇ ಅವರು ಎಂದಿನಂತೆ ಮುಗುಳ್ನಗೆಯ ಕಂಪನ್ನು ಬೀರುತ್ತಾ ಆ ಕ್ಷಣದಲ್ಲಿ ಕನ್ನಡ ಪದ್ಯವನ್ನು ಓದಿ ನಿಂತ ನಿಲುವಿನಲ್ಲೇ ಅದರ ಇಂಗ್ಲಿಷ್ ಅನುವಾದವನ್ನು ಹೇಳಿ ಬರೆಸಿದರು! ಅನಂತರ ಶ್ರೀ ಗೌಡರು ಸಭೆಯಲ್ಲಿ ಅನುವಾದವನ್ನು ಓದಿ, ಮೂಲಪದ್ಯವನ್ನು ಹಾಡಿದರು. ಸಭಿಕರು ಕನ್ನಡ ಪದ್ಯ ಸೊಗಸಾಗಿದೆಯೆಂದು ಇಂಗ್ಲಿಷ್ ಅನುವಾದದ ಮೂಲಕ ಅರ್ಥಮಾಡಿಕೊಂಡು ಹೊಗಳಿದರು. ತೀ.ನಂ.ಶ್ರೀಯವರು ಮಾಡಿದ ಇಂಗ್ಲಿಷ್ ಅನುವಾದವನ್ನು ಕನ್ನಡದ ಮೂಲ ಪದ್ಯದೊಡನೆ ಇಲ್ಲಿ ಕೊಟ್ಟಿದೆ.

ದಿ|| ತೀ. ನಂ. ಶ್ರೀ ಯವರ ಈ ಪದ್ಯ ಎಲ್ಲಿಯೂ ಅಚ್ಚಾಗಿಲ್ಲ. ಅವರ ಬರಹದ ಕಡತದಲ್ಲಿಯೂ ಇದು ಸೇರಿದಂತೆ ತೋರುವುದಿಲ್ಲ. ಆದುದರಿಂದ ಇದನ್ನು ಮೊಟ್ಟಮೊದಲನೆಯ ಬಾರಿಗೆ 'ಕನ್ನಡ ನುಡಿ'ಯಲ್ಲಿ ಪ್ರಕಟಿಸುತ್ತಿದ್ದೇವೆ. ತಮ್ಮ ಬಳಿ ಎರಡು ವರುಷದಿಂದ ಜೋಪಾನವಾಗಿ ಇಟ್ಟುಕೊಂಡಿದ್ದ ಈ ಇಂಗ್ಲಿಷ್ ಅನುವಾದವನ್ನು ನಾನು ಕೇಳಿದೊಡನೆಯೇ ಸಂತೋಷದಿಂದ ಕೊಟ್ಟು ಉಪಕರಿಸಿದ, ಪುಣೆಯ ಭಾಷಾವಿಜ್ಞಾನ ಕಾಲೇಜಿನಲ್ಲಿ ಸಂಶೋಧಕ ವಿದ್ಯಾರ್ಥಿಯಾಗಿರುವ ಗೆ|| ಗುರುಬಸವೇಗೌಡರಿಗೆ ಕೃತಜ್ಞತೆಗಳು.

—ಹಂಪನಾ

VILLAGE BEAUTY

INTRODUCTION

A village lover addresses the girl whom he wants to marry and describes her beauty in idealized terms.

First he describes her charm and then appeals to her to accept his hand, he promises her the fruit of all his labour and tells her that he demands only her love in return. He requests her not to refuse his appeal.

1. You are the fairest among all in NAVILUR that's why we two should wed tomorrow!

2. You are so very fair and so very slender ; you are like the bow of an archer and your thick dark eye-brows shade your dove-like eyes.

3. Your body is smoother than the silk you wear ; your words are sweater than of those of the parrot of the hills ; with your brimming youth, you are the girl of my love ; trust me, accept me, and live in happiness.

4. Every day I toil in the slushy paddy field ; all my labour turns into gold at the years end ; your plate will be filled with rice and milk ; listen to my words and live with me.

5. Your love is like the sky spread with stars ; your love is like the lotus-pond which is in full bloom at the dawn ; it is only love I ask of you ; don't say go away. O! mistress of my heart.

ಹಳ್ಳಿಯ ಚೆಲುವೆಗೆ

ಕೆ. ಎಸ್. ನರಸಿಂಹಸ್ವಾಮಿ

ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ|
ಅದಕೆ ನಮ್ಮಿಬ್ಬರಿಗೆ ನಾಳೆಯೇ ಮದುವೆ||

ಬೆಳ್ಳಬೆಳ್ಳಗೆ ತೆಳ್ಳತೆಳ್ಳಗಿಹೆ ನೀನು;
ಬೇಟೆಗಾರನ ಬಿಲ್ಲಿನಂತಿರುವೆ ನೀನು.
ಒತ್ತಾಗಿ ಕಪ್ಪಾಗಿ ಬೆಳೆದಿರುವ ಹುಬ್ಬು
ಪಾರಿವಾಳದ ಕಣ್ಗೆ ನೆರಳನಿತ್ತಿಹುದು
ನವಿಲೂರಿನೊಳಗೆಲ್ಲ . . .

ಉಟ್ಟ ರೇಸಿಮೆಗಿಂತ ನಿನ್ನ ಮೈ ನುಣುಪು;
ಬೆಟ್ಟದರಗಿಳಿಗಿಂತ ನಿನ್ನ ನುಡಿ ಇಂಪು;
ತುಂಬು ಹರೆಯದ ಹುಡುಗಿ ನೀನೊಲುಮೆಗೀಡು;
ನಂಬಿ ನನ್ನನು ವರಿಸಿ ಸಂತಸದಿ ಬಾಳು
ನವಿಲೂರಿನೊಳಗೆಲ್ಲ . . .

ಹಗಲೆಲ್ಲ ದುಡಿಯುವೆನು ಕೆಸರ ಗದ್ದೆಯಲಿ;
ಶ್ರಮವೆಲ್ಲ ಹೊನ್ನಹುದು ವರ್ಷದಂತ್ಯದಲಿ;
ನಿನ್ನ ತಟ್ಟೆಯ ತುಂಬ ಅನ್ನ ನೊರೆ ಹಾಲು;
ನನ್ನ ನುಡಿಯನು ಕೇಳು; ನನ್ನೊಡನೆ ಬಾಳು
ನವಿಲೂರಿನೊಳಗೆಲ್ಲ . . .

ನಿನ್ನೊಲುಮೆ ತಾರೆಗಳ ಹರಡಿರುವ ಬಾನು;
ಮುಂಬೆಳಗು ತೆರೆದಿಟ್ಟ ತಾವರೆಯ ಸರಸಿ.
ಪ್ರೀತಿಯೊಂದನೆ ನಿನ್ನ ಕೇಳುವುದು ನಾನು;
ಮುಂದೆ ಹೋಗೆನ್ನದಿರು ನನ್ನ ಮನದರಸಿ.
ನವಿಲೂರಿನೊಳಗೆಲ್ಲ . . .

ಕೆ. ಗೋಪಾಲಕೃಷ್ಣರಾಯರ ಸಾಹಿತ್ಯ ಸೇವೆ

ವೀಕ್ಷಕ

ಕನ್ನಡದ ಕಣ್ವಮುನಿ ಬಿ. ಎಂ. ಶ್ರೀ. ಅವರಿಂದ ಪ್ರಾರಂಭವಾದ ನವೋದಯ ಕಾಲದ ಕನ್ನಡ ಸಾಹಿತ್ಯದಲ್ಲಿ ತಮ್ಮ ಸಣ್ಣ ಕಥೆಗಳಿಂದ ಪಂಡಿತ ಹಾಗೂ ಪಾಮರರ ವಿಶೇಷ ಮನ್ನಣೆಗೆ ಪಾತ್ರರಾದ ಕೆಲವೇ ಕಥೆಗಾರರಲ್ಲಿ ಕೆ. ಗೋಪಾಲಕೃಷ್ಣರಾಯರ ಸ್ಥಾನ ಹಿರಿಯದು.

ಅವರಿನ್ನೂ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ, ಪ್ರೌಢ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೇ 'ಪತಂಗ' ಎಂಬ ನಾಟಕವನ್ನು ಬರೆದು ಶಾಲೆಯ ಕೈಬರಹದ ಪತ್ರಿಕೆಗೆ ಕಾಣಿಕೆಯಾಗಿ ನೀಡುವುದರ ಮೂಲಕ, ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅಡಿಯಿಟ್ಟರು.

ಶಾಲಾ ದಿನಗಳಲ್ಲಿ ಮೊಗ್ಗಾಗಿದ್ದ ಅವರ ಸಾಹಿತ್ಯ ಪ್ರತಿಭೆ ಮುಂದೆ 'Entrance Class' ನಲ್ಲಿ ಅಡಿಯಿಟ್ಟಾಗ ಅರಳಿ, ತನ್ನ ಸುಗಂಧವನ್ನು ಬೀರಲಾರಂಭಿಸಿತು. ಒಮ್ಮೆ ಪಶ್ಚಿಮವಾಹಿನಿಯಲ್ಲಿ ಪ್ರಶಾಂತವಾಗಿ ಹರಿಯುತ್ತಿದ್ದ ಕಾವೇರಿ ನದಿಯ ತಡಿಯಲ್ಲಿ, ತಂಗಾಳಿಗೆ ಮೈಯೊಡ್ಡಿ ಕುಳಿತಾಗ ಭಾವವಶರಾಗಿ ಗೋಪಾಲಕೃಷ್ಣರಾಯರು,

> "I sat under a banyan tree,
> Besides the ripling river Cauvery,
> The whether was fine,
> The wind was calm,
> The sun was setting in the west;
> How happy the blessed!"

ಎಂದು ಮೊದಲಾಗುವ ಖಳ ಪದ್ಯಗಳುಳ್ಳ ಕವನವನ್ನು ಇಂಗ್ಲಿಷಿನಲ್ಲಿ ರಚಿಸಿದರಂತೆ. ಹಾಗೆ ರಚಿಸಿದ ಕವನಗಳನ್ನು ಅವರ ಗುರುಗಳಾದ ಶ್ರೀ ಟಿ. ಎಸ್. ವೆಂಕಣ್ಣಯ್ಯನವರಲ್ಲಿಗೆ ಕೊಂಡೊಯ್ದು ತೋರಿಸಲು, ಅವರ ಕಾವ್ಯರಚನಾ ಸಾಮರ್ಥ್ಯವನ್ನು ಮೆಚ್ಚಿದ ಅವರು, ಆ ಶಕ್ತಿಯನ್ನು ಕನ್ನಡ ಸಾಹಿತ್ಯಕ್ಕೆ ಧಾರೆಯೆರೆಯುವಂತೆ ಬೋಧಿಸಿದರು. ಅಂದು ಇಂಗ್ಲಿಷಿನ ಹಂಬಲವನ್ನು ತೊರೆದ ಗೋ. ಕೃ. ರವರ ಸಾಹಿತ್ಯ ದೃಷ್ಟಿ ಕನ್ನಡದ ಕಡೆಗೆ ತಿರುಗಿತು.

ಆ ವೇಳೆಗೆ ಕಾಲೇಜಿನಲ್ಲಿ ಕುವೆಂಪು, ತೀ. ನಂ. ಶ್ರೀ. ಮೊದಲಾದವರು ಭಾಗವಹಿಸಿದ್ದ ವಿದ್ಯಾರ್ಥಿ ಕವಿ ಸಮ್ಮೇಳನ ನಡೆಯಿತು. ಅದರಲ್ಲಿ ಗೋ. ಕೃ. 'ಅನಾಥೆ' ಎಂಬ ಕವನವನ್ನು ಓದಿದರು. ಅದಕ್ಕೆ ಪಾರಿತೋಷಕವು ದೊರಕಿತು. 'ಪ್ರಬುದ್ಧ ಕರ್ನಾಟಕ' ದಲ್ಲಿ ಅಚ್ಚಾಗುವುದೇ ಒಂದು ಗೌರವವೆಂದು ಭಾವಿಸಿದ್ದ ಆ ಕಾಲದಲ್ಲಿ ಅವರ 'ಪ್ರಾರ್ಥನೆ' ಎಂಬ ಗೀತೆಗೆ ಆ ಗೌರವವು ಸಂದಿತು. ಇದಾದ ಮೇಲೆ ಗೋ. ಕೃ. ಅವರು ಕಾವ್ಯ ರಚನೆಯು ತಮ್ಮ ರಂಗವಲ್ಲವೆಂದು ಭಾವಿಸಿ, ತಮ್ಮ ಬರವಣಿಗೆಯನ್ನು ಸಣ್ಣ ಕಥೆ ಹಾಗೂ ನಾಟಕಗಳಿಗೆ ಮಾತ್ರ ಸೀಮಿತಗೊಳಿಸಿದರು.

ಈ ವೇಳೆಗಾಗಲೆ ಬೆಳಗಾವಿ ಸಮ್ಮೇಳನದಲ್ಲಿ ಇವರು ಬರೆದ 'ಬಂಗಾರದ ಡಾಬು' ಎಂಬ ಸಣ್ಣ ಕಥೆಗೆ 'ಮುದ್ದಣ ಸ್ವರ್ಣ ಪದಕ'ವು ದೊರೆಕಿತ್ತು. ಸಣ್ಣ ಕಥೆಗಳನ್ನು ಬರೆಯುವುದರೊಂದಿಗೇ 'ಅಪರಾಧಿ', 'ಕನ್ಯಾರ್ಥಿ', 'ಸಾಕು ಕೂಸು', 'ಆಸೆ-ನಿರಾಸೆ', 'ಚಿರ ಸಮಸ್ಯೆ' ಇವೇ ಮೊದಲಾದ ನಾಟಕಗಳೂ, 'ಕೆನ್‌ಸಿಂಗ್‌ಟನ್ ಪಾರ್ಕ್' ಎಂಬ ಕವಿತೆ, ಕಥೆ, ನಾಟಕ ಪ್ರಬಂಧಗಳನ್ನೊಳಗೊಂಡಿದ್ದ ಸಂಗ್ರಹವೂ ರಚಿತವಾಯಿತು. ಸಮಾಜದ ವಿವಿಧ ಸಮಸ್ಯೆಗಳನ್ನು ಮನೋಜ್ಞ ರೀತಿಯಲ್ಲಿ ವಿಶ್ಲೇಷಣ ಮಾಡಿ ತೋರಿಸುವ ಈ ನಾಟಕಗಳು, ಅವರ ಸಾಮಾಜಿಕ ಪ್ರಜ್ಞೆಯ ಕುರುಹಾಗಿ ನಿಂತಿವೆ.

'ಉಡುಗೊರೆ', 'ಬಂಗಾರದ ಡಾಬು', 'ನಟಿ', 'ಆಯ್ದ ಹತ್ತುಕಥೆಗಳು', 'ಕೆನ್‌ಸಿಂಗ್‌ಟನ್ ಪಾರ್ಕ್'—ಇವೇ ಮೊದಲಾದ ಸಂಕಲನಗಳಲ್ಲಿ ಗೋ. ಕೃ. ಅವರು ಬರೆದ ಸಣ್ಣ ಕಥೆಗಳು ಒಟ್ಟುಗೂಡಿ ಬಂದವು. ಗೋ. ಕೃ. ಅವರು, ಸಣ್ಣ ಕಥೆಗಳ ಜನಕರೆಂದು ಪ್ರಸಿದ್ಧರಾದ ಮಾಸ್ತಿಯವರ ಪ್ರಭಾವಕ್ಕೆ ಒಳಗಾಗಿ ಅವರ ಮಾರ್ಗಾನುಸಾರಿಗಳಾದರೂ, ಅನುಕರಣಶೀಲರಲ್ಲ. ಶ್ರೀನಿವಾಸರಂತೆಯೇ ಅವರ ಶೈಲಿ ಸರಳ. ಅವರ ಕಥಾ ಪ್ರಪಂಚ ವಿಶಾಲವಾದುದು. ಅವರ ಕಥೆಗಳಲ್ಲಿ ಹಲವಾರು ವೃತ್ತಿಗಳ, ವಿವಿಧ ಸ್ವಭಾವಗಳ, ಪಾತ್ರಗಳು ಬರುತ್ತಾರೆ. ಪಾತ್ರ ಸೃಷ್ಟಿಯಲ್ಲಿ ಗೋ. ಕೃ. ಎತ್ತಿದ ಕೈ. ಅವರ ಕಥೆಗಳಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ, ಕಥೆಗಾರರು ಹಿಂಬದಿಗೆ ಸರಿಯದೆ, ಓದುಗರೊಂದಿಗೆ ಕಲೆತು, ಬೆರೆತು, ಒಂದಾಗಿ ಸಲಿಗೆಯ ಮಾತುಗಳನ್ನಾಡುವಂತೆ ಕಥೆಯನ್ನು ನಿರೂಪಿಸುತ್ತಾರೆ. ಸರಳ

ಹಾಗೂ ಸಹಜ ಮಾತುಗಳಿಂದ ಕೂಡಿದ ಇವರ ಶೈಲಿ ಕೆಲವೆಡೆಯಂತೂ ಬಹಳ ಸುಂದರವಾಗಿದೆ.

ಇವರ ಅನೇಕ ಕಥೆಗಳಲ್ಲಿ 'ನಾನು' ಎಂದು ಪ್ರಥಮ ಪುರುಷ ವಾಚಕದಲ್ಲಿ ಕಥೆಯನ್ನು ಕಂಡು ಕೇಳಿದಂತೆ ನಿರೂಪಿಸಿದರೂ ಸಹ, ಕೆಲವು ಕಡೆಗಳಲ್ಲಿ ಅವರದೂ ಒಂದು ಮುಖ್ಯ ಪಾತ್ರವಾಗಿ ಬರುತ್ತದೆ. 'ಕೊಂದವರು ಯಾರು', 'ಮಾಗಡಿರಂಗ', ಮೊದಲಾದ ಕಥೆಗಳಲ್ಲಿ ಅವರ ಕರುಣಾಪೂರ್ಣ ಹೃದಯವನ್ನು ಕಾಣಬಹುದು. ಇವರು ಸೃಷ್ಟಿಸಿದ ಪಾತ್ರಗಳಲ್ಲಿ ಸಹಾನುಭೂತಿ, ದಯೆ, ಕರುಣೆ ಮೊದಲಾದ ಕೋಮಲಭಾವಗಳನ್ನು ಕಾಣಬಹುದು. ಇವರ ಕಥೆಗಳಲ್ಲಿ ಎಲ್ಲ ಕೋಮಿನ, ಎಲ್ಲ ಸಮಾಜದ ವ್ಯಕ್ತಿಗಳನ್ನೂ ಕಾಣಬಹುದಾಗಿದೆ.

ಹಿರಿಯ ಗುಣ ಯಾವ ಜಾತಿಯ ಆಸ್ತಿಯೂ ಅಲ್ಲ. ವಿದ್ಯಾವಂತನಾದ ಅಯ್ಯರ್ ಪಲ್ನಿಸಾಮಿಗೆ ದ್ರೋಹ ಬಗೆದರೆ, ಸಾಮಾನ್ಯನಾದ ಪಲ್ನಿ ತಾನು ಮೆಚ್ಚಿನೆಚ್ಚಿದ ಹೆಣ್ಣನ್ನು ಮದುವೆಯಾದ. ಮಾನವ ಸಹಜವಾದ ದೌರ್ಬಲ್ಯಕ್ಕೆ ಪಕ್ಕಾದರೂ ಕೊನೆಗೆ ವೈರಾಗ್ಯಮೂರ್ತಿಯಾಗಿ ಮೆರೆದ ಸುಶೀಲಾಸಂಕೇತ್, ಪರದೇಶದ ವ್ಯಾಮೋಹದಿಂದ ಕೂಡಿದ್ದರೂ ಸ್ವದೇಶ ಸೇವೆಗೆ ಹಿಂದಿರುಗಿದ ವಿಶ್ವೇಶ್ವರ—ಇವರೆಲ್ಲರೂ ಇವರ ಕಥೆಗಳಲ್ಲಿ ತಮ್ಮ ಆದರ್ಶ ಗುಣಗಳಿಂದ ಮೆರೆದಿದ್ದಾರೆ.

'ಕಂಡದ್ದು ನಾಲ್ಕು ಸಾರ್ತಿ' ಎಂಬ ಕಥೆಯಲ್ಲಿ ನಾವು ನಿತ್ಯಜೀವನದಲ್ಲಿ ಕಾಣುವ ಸತ್ಯಚಿತ್ರವನ್ನು ಕಾಣಬಹುದು. ಮೊದಲ ಬಾರಿ ಕಂಡಾಗ ಮುಗ್ಧಬಾಲಕಿ, ಕೊನೆಯಲ್ಲಿ ಯಾರಿಗೂ ಬೇಡದ ವಿಧವೆಯಾಗಿ ಕಾಣುವ ಚಿತ್ರ ಅತ್ಯಂತ ಕರುಣಾಜನಕವಾಗಿದೆ. ಪಲ್ನಿಸಾಮಿಯಲ್ಲಿ ಕಂಡುಬಂದ ವಿಚಾರ ಜಾಗೃತಿ, ಅದಕ್ಕೆ ವಿದ್ಯಾವಂತನಾದ ಅಯ್ಯರಿನಿಂದಾದ ಅನ್ಯಾಯ ನಿತ್ಯಜೀವನದಲ್ಲಿ ಕಾಣುವ ಸತ್ಯಚಿತ್ರವಾಗಿದೆ. 'ಇಂದಿನ ಕೆನ್‌ಸಿಂಗ್‌ಟನ್ ಪಾರ್ಕ್' ಭೆಟ್ಟಿಯ ಆತ್ಮಕಥೆ, 'ಮೇಲರಿಮೆಗೆ' ಒಳಗಾದ ಆಕೆಯ ತಾಯಿಯ ಅವಿವೇಕದಿಂದಾಗಿ, ವಿವಾಹ ಪೂರ್ವದಲ್ಲಿಯೆ ತಾಯಿಯಾಗಬೇಕಾಗಿ ಬಂದುದು, ಮುಂದಿನ ಆಕೆಯ ದುರಂತದ ಬಾಳು—ಅತ್ಯಂತ ಮಾರ್ಮಿಕವಾಗಿ ಮೂಡಿಬಂದಿದೆ.

ವಿದ್ಯಾರ್ಥಿ ದೆಸೆಯಲ್ಲಿದ್ದಾಗ 'ಅನಾಥೆ' ಎಂಬ ಕವನವನ್ನು ಬರೆದು, ಅದರ ನಂತರ ಕವಿತೆಗಳ ನಿರ್ಮಾಣಕ್ಕೆ ಇತಿಶ್ರೀ ಹಾಡಿದ ಗೋ.ಕೃ.ರವರಲ್ಲಿ ಸುಪ್ತವಾಗಿದ್ದ ಕಾವ್ಯ ಪ್ರತಿಭೆ, ಮತ್ತೆ ೧೯೫೫ರಲ್ಲಿ 'ಕುಮಾರಕೃಪ' ಎಂಬ ಹೆಸರಿನಲ್ಲಿ ಒಂದು ಕವನ ಸಂಕಲನ ಪ್ರಕಟಗೊಳ್ಳುವಂತೆ ಮಾಡಿತು.

"ಮಾನವೀಯತೆಯೊಂದೆ ಸಾಕು ನಮಗೆ, ಬಾನವರ ಸುಧೆಬೇಡ, ದಾನವರ ಬಲಬೇಡ" ಎಂದು ಮಾನವೀಯತೆಯನ್ನು ಎತ್ತಿಹಿಡಿದು, "ಹೃದಯ ವೈಶಾಲ್ಯವಿರಲಯ್ಯ ನಿನಗೆ| ಪದವಿ ಸಂಪದ ಕೀರ್ತಿ ಬೆಳೆದು ಬಂದಂತೆ"ಎಂದು ಹೃದಯ ವೈಶಾಲ್ಯವನ್ನು ಕೋರಿದ್ದಾರೆ. "ಚಿಂತೆಯನು ತೊಡೆಯುತ್ತ ಚಿಂತನೆಯ ನಡೆಸುತ್ತ, ಅಂತರಂಗವ ಶುದ್ಧಿಗೊಳಿಸಿ ಸದ್ಗತಿಗಳಿಸೈ" ಎಂದು ಅಂತರಂಗ ಶುದ್ಧಿಯನ್ನು ಸಾರಿ, "ಬೇಡುವೊಡೆ ನೀ ಬೇಡು ಜಗದೊಡೆಯ ಶ್ರೀನಿಧಿಯ" ಎಂದು ಬುದ್ಧಿ ಮಾತು ಹೇಳಿ, "ತನ್ನ ತಾನರಿಯ ಬೇಕಣ್ಣ" ಎಂದು ಆತ್ಮಶೋಧನೆಯ ಮಾರ್ಗವನ್ನು ತೋರಿದ್ದಾರೆ. "ಎಲ್ಲರಾರಾಧಿಸುವ ಸರ್ವೇಶನೊಬ್ಬನೆ, ಅಲ್ಲಾನು ಈಶ್ವರನು ಜ್ಯೂಸ ಜಗದೀಶ" ಎಂದು ಸರ್ವಧರ್ಮ ಸಮನ್ವಯ ಸೂತ್ರವನ್ನು ತಿಳಿಸಿದ್ದಾರೆ.

ವಿದ್ಯಾರ್ಥಿಗಳಾಗಿದ್ದಾಗಲೇ ಗೋ. ಕೃ. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಗೌರವ ಕಾರ್ಯದರ್ಶಿಗಳಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅನೇಕ ವರ್ಷಗಳು ಗೌರವ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದಾರೆ. ಈಗ ಮಾಸ್ತಿಯವರು ಬೆಳೆಸಿದ 'ಜೀವನ'ಮಾಸ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಸುಶೀಲಾ ಸಂಕೇತ್, ಶ್ರೀಧರ ಕವಿ ಎಂಬ ಕಥೆಗಳೂ, 'ಸೋದರಿಯರು' ಎಂಬ ನಾಟಕವೂ ಇಂಗ್ಲಿಷಿಗೂ, 'ಹಿಂದಿ ಹುಚ್ಚು' ಎಂಬ ಕಥೆ ಹಿಂದಿಗೂ ಭಾಷಾಂತರವಾಗಿವೆ. ಅರವತ್ತು ಗೀತೆಗಳಿಂದ ಕೂಡಿರುವ ಮತ್ತೊಂದು ಸಂಕಲನವು ಸೆಪ್ಟೆಂಬರ್ ೫ರಂದು, ಅವರ ಅರವತ್ತೊಂದನೆಯ ಹುಟ್ಟು ಹಬ್ಬದಂದು ಬಿಡುಗಡೆಯಾಯಿತು.

ನಾಡುನುಡಿಯ ಸೇವೆಯನ್ನೇ ತಮ್ಮ ಬಾಳ ಉಸಿರನ್ನಾಗಿ ಮಾಡಿಕೊಂಡಿರುವ ಗೋ.ಕೃ. ಅವರಿಗೆ ಅರವತ್ತು ವರ್ಷಗಳು ತುಂಬಿವೆ ಎಂದರೆ ನಂಬಲಾಗದ ಮಾತು. ಅವರ ಉತ್ಸಾಹ, ಕಾರ್ಯಕ್ಷಮತೆಗಳು ಅಂತಹವು. ಇವರ ಸಿದ್ಧ ಲೇಖನಿಯಿಂದ ಇನ್ನೂ ಹೆಚ್ಚಿನ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ.

ಕೃತಿಯಲ್ಲಿ ದೋಷ

ಜಿ. ಪಿ. ರಾಜರತ್ನಂ

ಮನುಷ್ಯ ಗುಣದೋಷಗಳ ಒಂದು ಮಿಶ್ರ. ಆದರಿಂದ ಅವನ ಕೃತಿಗಳಲ್ಲಿ ಅದೇ ಮಿಶ್ರ ಕಂಡುಬಂದರೆ, ಅದು ಅಸಹಜವೆನ್ನಲಾಗದು. ಆದ್ದರಿಂದಲೇ—

ಅವಧರಿಪುದು ವಿಬುಧರ್ : ದೋ
ಷವಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿ
ರ್ದುವುದು; ಗುಣಯುಕ್ತಮುಂ ದೋ
ಷವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ

ಎಂದು ಕೇಶಿರಾಜ ಕೇಳಿಕೊಂಡ ಹಾಗೆ ಪ್ರತಿ ಕವಿಯೂ ಕೇಳಿಕೊಳ್ಳುತ್ತಾನೆ.

ವಾಚಕರಲ್ಲಿ ಮೂರು ವರ್ಗ: ದೋಷಗಳನ್ನು ದೊಡ್ಡದು ಮಾಡದೆ ಇರುವ ಗುಣಗಳನ್ನು ಆಸ್ವಾದಿಸುವ ರಸಿಕ; ಗುಣಗಳನ್ನೂ ದೋಷಗಳನ್ನೂ ನಿಷ್ಪಕ್ಷಪಾತದಿಂದ ಕಂಡು ತೂಗಿ ಬೆಲೆ ಕಟ್ಟುವ ವಿಮರ್ಶಕ; ಮತ್ತು, ದೋಷಗಳನ್ನೇ ಕಾಣುತ್ತ, ಗುಣಗಳನ್ನು ಕಡೆಗಣಿಸಿ, ಬದನೇಕಾಯಿಯನ್ನು ಬ್ರಹ್ಮರಾಕ್ಷಸ ಮಾಡುವ ದೋಷೈಕದೃಕ್. ಈ ಮೂವರಲ್ಲಿ ಕೊನೆಯ ವರ್ಗವನ್ನು ಲೆಕ್ಕಿಸಬೇಕಾದ್ದಿಲ್ಲ. ಉಳಿದ ಇಬ್ಬರಿಗಾಗಿ, ಎಷ್ಟು ಕಣ್ಣಲ್ಲಿ ಕಣ್ಣಿಟ್ಟು ಕೃತಿ ರಚನೆ ಮಾಡಿದರೂ ಸಾಲದು. ಏಕೆಂದರೆ, ರಸಿಕರಲ್ಲಿಯೂ ವಿಮರ್ಶಕರಲ್ಲಿಯೂ ಕೆಲವರು—

ಅವಗುಣ(ಮ)ನಿತಾದೊಡಮಾ
ಕವಿತಾಬಂಧಮನಶೇಷಮಂ ದೂಷಿಸುಗುಂ
ಸವಿಲಾಸಲೋಲಲೋಚನ
ವಿವರಮನೆಡೆವೆತ್ತ ಕಸದವೋಲನವರತಂ

ಅದಱಿಂದಲಸದೆ, ಪೀನಂ
ಪದೆಯದೆ, ಪಾಂಗಱಿದು ದೋಷಮಂ ಪಿಂಗಿಸಿ, ತ
ಪ್ಪದೆ ಬಗೆದು ಪೇೞ್ವುದಾಗನು
ಮುದಾರ ನೃಪತುಂಗದೇವ ವಿದಿತಕ್ರಮದಿಂ

ಕವಿರಾಜಮಾರ್ಗಕಾರನು ಹೇಳಿದ ಇದೇ ಮಾತನ್ನು (I : ೪೩-೪೪) ಕಾವ್ಯಾವಲೋಕನಕಾರನೂ (೪೨೮-೨೯) ಹೇಳಿದ್ದಾನೆ:—

ಕೃತಿಸತಿಯ ಮೆಯ್ಯೊಳೆಳ್ಳನಿ
ತು ತಾನದೊಂದಱಿಯೆ ದೋಷಮಾಗೆ ತದಾವ
ರ್ಜಿತಮುಪ್ಪ ಕೀರ್ತಿಯುಂ ನಿಂ
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೋಲ್

ಅದಱಿಂದುಪೇಕ್ಷೆಗೆಯ್ಯದೆ
ಸದಭಿಮತೋದಾತ್ತಕೀರ್ತಿಯಂ ಬಯಸುವವಂ
ಪದವಾಕ್ಯಾರ್ಥಂಗಳೊಳೊಂ
ದದಂತು ಪಿಂಗಿಸುಗೆ ದೋಷಮಂ ಕೃತಿಯಿಂದಂ

ಪದದೋಷ, ವಾಕ್ಯದೋಷ, ಅರ್ಥದೋಷ, ಸಂಧಿದೋಷ, ಸಮಾಸದೋಷ, ಯತಿಭಂಗ, ಛಂದೋದೋಷ, ರಸಭಂಗ ಮೊದಲಾದ ಎಷ್ಟೋ ದೋಷಗಳನ್ನು ಲಾಕ್ಷಣಿಕರು ಹೆಸರಿಸಿದ್ದಾರೆ. ಲಕ್ಷ್ಯಗಳನ್ನು ಕೊಟ್ಟು ತೋರಿಸಿದ್ದಾರೆ. ಕವಿಯಾದವನಿಗೆ, ಪೂರ್ವಕಾವ್ಯರಚನೆಗಳನ್ನು ಬಲ್ಲವನಿಗೆ, ಇದೆಲ್ಲಾ ಗೊತ್ತಿರತ್ತದೆ. ಬೇಕುಬೇಕೆಂದೇ ಬುದ್ಧಿಪೂರ್ವಕವಾಗಿ ಯಾರು ತಮ್ಮ ಕೃತಿಗಳಲ್ಲಿ ದೋಷಗಳನ್ನು ತಂದು ನಿಲ್ಲಿಸುತ್ತಾರೆ? ಬರೆದವನಿಗೇ ಅರಿವಾಗದೆ ಎಡೆವಾಯ್ದು ಬಂದ ತಪ್ಪನ್ನು ಗಮನಿಸಿದ ವಾಚಕನಿಗೆ ಬರೆಯುವವನ ಕಷ್ಟಗಳ ಬಗ್ಗೆ ಸಹಾನುಭೂತಿ ಇರಬೇಡವೆ? ಈ ಸಂದರ್ಭದಲ್ಲಿ ರಾಘವಾಂಕನ ಮಾತು ಉಚಿತ, ಸಮಂಜಸ, ಯುಕ್ತಿಯುಕ್ತ ಎಂದು ಯಾರಿಗಾದರೂ ಎನ್ನಿಸದಿರದು.

ನಡೆವರೆಡಹದೆ ಕುಳಿತರೆಡಹುವರೆ? ಕಾವ್ಯಮಂ
ನಡಸುವಾತಂ ರಸಾವೇಶ ಮಱಹಾಲಸ್ಯ
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪು
ವನೆ? ಒಂದೆಡೆಡೆಯೊಳು
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ,
ಕಡೆತನಕ ಬಂದ ಲೇಸಿಂಗೆ ತಲೆದೂಗೆ, ತಲೆ
ಯೊಡೆವುದೇ? ಬೇನೆಯಱಿಯದ ನೀರಸರನೇಕೆ
ಪುಟ್ಟಿಸಿದನಬುಜಭವನು?

ಇದನ್ನೇ ಗೋವಿಂದ ಪೈ ಅವರು ತಮ್ಮ 'ಗಿಳಿವಿಂಡು' ಕೃತಿಯಲ್ಲಿ ಹೀಗೆ ಹೇಳಿದ್ದಾರೆ:—

ಬಿತ್ತರಿಸದೆ ತಾಂ ಕಾವ್ಯದ
ಗೊತ್ತರಿಯಲಳವೆ ಕವಿಗುದೆಯಂ? ಕವಿಯೆದೆಯಂ
ಗೆತ್ತಿರದ ವಿಮರ್ಶಕನೇಂ?
ಹೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ?

'ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಂ' ಎಂದು ಸುಭಾಷಿತ ಹೇಳುವುದು ಈ ಅರ್ಥದಲ್ಲೇ. 'ಒಂದೆರಡೆಡೆಯೊಳು ಎಡೆವಾಯ್ದು ಬಂದ' ತಪ್ಪಾದರೆ, ವಿಮರ್ಶಕನು ಇಲಿಯನ್ನು ಹುಲಿ ಮಾಡಬೇಕಾಗಿಲ್ಲ. 'ಪ್ರಮಾದೋ ಧೀಮತಾಮಪಿ' ಎಂಬುದನ್ನು ವಿಮರ್ಶಕ ಮರೆಯದಿದ್ದರೆ, ಅವನ ಮರ್ಯಾದೆ ಉಳಿಯುತ್ತದೆ. ಇಲ್ಲದೆ ಹೋದರೆ, ಅಂಥವರು ಷಡಕ್ಷರಿಯ (ರಾಜಶೇಖರವಿಳಾಸ I: ೪೬-೪೭) ವಿಡಂಬನೆಗೆ ಪಾತ್ರರಾಗಬೇಕಾಗುತ್ತದೆ:—

ಸಲೆ ಸತ್ಕೃತಿಯೊಳ್ ದೋಷದ
ನಲಸದೆ ನಡೆ ನೋಡಿ ನೋಡಿ ಕಾಣದೆ ಮನದೊಳ್
ಮಲಮಲನೆ ಮಱುಗುವೀ ಕೋ
ಟಲೆಯಿಂ ಖಳನೆಂತು ಬರ್ದುಕುವಂ ಭೂತಳದೊಳ್

ಅದಱಿಂ ದೋಷಾಭಾಸಮ
ನೊದವಿಪರೊಂದೆಡೆಗೆ ದುರ್ಜನಸ್ಸುಪ್ರೃತುಯೆಂ
ಬುದನನುಕರಿಸಿ ಕವೀಂದ್ರರ್
ಪದಪಿಂ ಕೃತಿಯೊಳ್ ಪರೋಪಕೃತಿಪರತಂತ್ರರ್

ಇದು ಚಮತ್ಕಾರದ ಮಾತು. ದೋಷವನ್ನು ಕುರಿತದ್ದಲ್ಲ, ದೋಷಾಭಾಸವನ್ನು ಕುರಿತದ್ದು. ಇಲ್ಲಿ ನಗೆಗೀಡಾಗುವವ ಕವಿಯಲ್ಲ, ಹಾಸ್ಯಾಸ್ಪದನಾಗತಕ್ಕವನು ವಿಮರ್ಶಕಂಮನ್ಯ. 'ದೋಷವಿದ್ದರೆ ಇತ್ತು!' ಎಂಬ ಧೋರಣೆಯಿಂದ ತಮ್ಮ ಕವಿತಾ ಪ್ರವಾಹವನ್ನು ಹರಿಯಿಸಿದ ಕವೀಂದ್ರರ ಮುಂದೆ 'ಖಳರಸನೆ ಮಿಡುಕದು.'

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ಱಕುಳಕ್ಷಳಂಗಳನಿದಱೊಳ್

ಎನ್ನುವಾಗ ಕೂಡ ಹರಿಹರ ಒಂದು ಱವನ್ನು ಬಳಸಿದ್ದಾನೆ, ಶಕಟರೇಫಗಳನ್ನು ಬಿಟ್ಟಿಲ್ಲ ಎಂಬುದನ್ನು ಗಮನಿಸಬಹುದು. ಇವನಂತೆ ರತ್ನಾಕರನಾದರೂ—

ರಳ ಕುಳ ಶಿಥಿಲಸಮಾಸ ಮುಂತಾದವ
ರೊಳಗಿಲ್ಲಿ ಕೆಲವುಳ್ಳರುಂಟು
ಕೆಲವಿಲ್ಲಾದರುವಿಲ್ಲವೇಕೆಂದರವರ
ಕೋಟಲೆಯೇಕೆ ಹಾಡುಗಬ್ಬದೊಳು

ಸಕಲ ಲಕ್ಷಣವು ವಸ್ತುಕಕೆ; ವರ್ಣಕಕಿಷ್ಟು
ವಿಕಳವಾದರು ದೋಷವಿಲ್ಲ;
ಸಕಲ ಲಕ್ಷಣಕಾಗಿ ಬಿರುಸುಮಾಡಿದರೆ ಪು
ಸ್ತಕದ ಬದನೆಕಾಯಹುದು!

ಚಂದಿರನೊಳಗೆ ಕಪ್ಪುಂಟು. ಬೆಳ್ದಿಂಗಳು
ಕಂದಿ ಕುಂದಿಹುದೊ ನಿರ್ಮಲವೊ?
ಸಂಧಿಸಿ ಶಬ್ದದೋಷಗಳೊಮ್ಮೆ ಸುಕಥೆಗೆ
ಬಂದರೆ ಧರ್ಮ ಮಾಸುವುದೇ?

'ದೋಷವಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿರ್ದುವುದು' ಎಂದು ಕೇಶಿರಾಜನಂತೆ ಕೇಳಿಕೊಂಡವರೂ ಇದ್ದಾರೆ! 'ಕೆಲವುಳ್ಳರುಂಟು!' ಎಂದು ಮುಂದುವರಿದವರೂ ಇದ್ದಾರೆ!

ಹರಿಹರನಂತೆ, ರತ್ನಾಕರನಂತೆ, ಅಡೆತಡೆಯಿಲ್ಲದ ಜಲಪಾತದಂತಹ ಧಾರಾಕಾವ್ಯವನ್ನು ಕೊಟ್ಟ ಕುಮಾರವ್ಯಾಸನ ಧೋರಣೆ ಅವನಿಗೇ ವಿಶಿಷ್ಟವಾದದ್ದು:—

ಹಲಗೆ ಬಳಪವ ಹಿಡಿಯದೊಂದ
ಗ್ಗಳಿಕೆ; ಪದವಿಟ್ಟಳಿಸದೊಂದ
ಗ್ಗಳಿಕೆ; ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ;
ಬಳಸಿ ಬರೆಯಲು ಕಂಠಪತ್ರದ
ಉಲುಹುಗೆಡದಗ್ಗಳಿಕೆ; ಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ.

ನಾರಣಪ್ಪನು ತಾನು ಏನೇ ವೀರನಾರಾಯಣನ ಆಶ್ರಯವನ್ನು ಹೇಳಿಕೊಂಡರೂ, 'ಪದವ ಇಟ್ಟು ಅಳಿಸುವ ಒಂದು ಅಗ್ಗಳಿಕೆ ಈತನಿಗೆ ಇದ್ದಿದ್ದರೆ, ಗದುಗಿನ ಭಾರತ ಇನ್ನಷ್ಟು ಚೆನ್ನಾಗುತ್ತಿತ್ತಲ್ಲವೆ?' ಎಂಬ ವಿಮರ್ಶಕರ ಬಾಯನ್ನು ಮುಚ್ಚುವುದು ಸಾಧ್ಯವಾಗಿಲ್ಲ.

ಎಂದರೆ, 'ಪದವ ಇಟ್ಟು ಅಳಿಸುವುದೇ ಒಂದು ಅಗ್ಗಳಿಕೆ' ಎಂದು ಯಾರೂ ತಿಳಿಯಬಾರದು. (ಇಡಬಾರದ ಪದಗಳನ್ನು ಇಟ್ಟು ಓದುಗರನ್ನು ಅಳಿಸುವವರು ಇಲ್ಲವೆಂದಲ್ಲ. ಅವರು ಹಾಗಿರಲಿ.) ಇಟ್ಟ ಪದಗಳನ್ನು ಅಳಿಸಿ

ಅಳಿಸಿ ಅಳಿಸಿ ಬರೆಯುವ ಕ್ಷುದ್ರ ಕವಿಗಳನ್ನು ಕುರಿತು ಷಡಕ್ಷರಿ ಹೇಳಿರುವ ಮಾತು (ರಾಜಶೇಖರವಿಳಾಸಂ I-೨೩) ಇಲ್ಲಿ ನೆನಪಾಗುತ್ತದೆ :

ಬರೆಬರೆದಂತದಂ ತೊಡೆದು, ತೊಟ್ಟನೆ ನಿಟ್ಟಿಸಿ,
ಮೆಲ್ಲನೊಂದುಮಂ
ಸರಸಪದಾರ್ಥಮಂ ತಡಕಿ ಕಾಣದೆ, ಕಳ್ದು
ಪರೋಕ್ತಿಯುಕ್ತಿಯಂ,
ವಿರಚಿಸುತಂತುಮಿಂತುಮಳಿಗಬ್ಬಮನಾಗಿಸಿ
ಕೇಳಿಸುತ್ತೆ, ಕಾ
ಲುರಿಚರ ತೋರ್ಪ ದುಷ್ಕವಿ
ಮಹಾಕವಿಮಧ್ಯದೊಳೊಪ್ಪಲಾರ್ಪನೇ?

'ಪರೋಕ್ತಿಯುಕ್ತಿಯಂ ಕಳ್ದು' ಕಾವ್ಯರಚನೆ ಮಾಡುವುದು ದೋಷ. ಇದು ತನ್ನ ಕೃತಿಯಲ್ಲಿ ಇಲ್ಲ ಎಂದೇ ಕುಮಾರವ್ಯಾಸ 'ಪರರ ಒಡ್ಡವದ ರೀತಿಯ ಕೊಳ್ಳದ ಅಗ್ಗಳಿಕೆ' ತನ್ನದು ಎಂದು ಹೇಳಿಕೊಂಡದ್ದು. ಷಡಕ್ಷರಿ (ರಾಜಶೇಖರವಿಳಾಸ : I-೩೨) ಹೇಳಿರುವ ಹಾಗೆ—

ಕಿಱಿಯ ಕೃತಿ ಪಿರಿದೆನಿಕ್ಕುಂ
ಪೆಱರರ್ಥಕೆ ಕೈದುಡಂಕದಿರೆ ಸತ್ಕವಿಗಂ ;
ಕಿಱಿಯ ಸಿರಿ ಪಿರಿದೆನಿಕ್ಕುಂ
ಪೆಱರರ್ಥಕೆ ಕೈದುಡುಂಕದಿರೆ ಮನುಜಂಗಂ.

ತಿಳಿದೂ ತಿಳಿದೂ ತಪ್ಪು ಬರೆಯುವ ಅವಿವೇಕಿಗಳ ಸುದ್ದಿ ಬೇಡ. ತಿಳಿವಳಿಕೆ ಸಾಲದೆ ಸಾಲುಸಾಲಿಗೂ ತಪ್ಪು ಬರೆಯುವ ಅಜ್ಞರ ಸುದ್ದಿ ಬೇಡ. ರಾಘವಾಂಕ ಹೇಳಿದ 'ರಸಾವೇಶ ಮಱಹು ಆಲಸ್ಯ'ಗಳು ಎಡೆಗೊಟ್ಟಾಗ 'ಒಂದೆರಡೆಡೆಯೊಳು ಎಡೆವಾಯ್ದು ಬಂದ' ತಪ್ಪುಗಳಾದರೆ, ರತ್ನಾಕರನೆಂದಂತೆ 'ಸಂಧಿಸಿ ದೋಷಗಳು ಒಮ್ಮೆ ಬಂದರೆ', ಅದರ ನಿವಾರಣೆಗೆ ಇರುವುದು ಒಂದೇ ದಾರಿ : ತಿಳಿದವರಿಗೆ ಅದನ್ನು ತೋರಿಸಿ, ತಿದ್ದಿಸುವುದು. ಕವಿರಾಜಮಾರ್ಗಕಾರನು (I-೮೫) ಹೇಳಿರುವ ಹಾಗೆ—

(ಕಾಣನೇ)ಗೆಯ್ದುಂ ತನ್ನ ದೋಷಮಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ :
ಪೂಣಿಗನಾದುದಱಿಂ ಪೆಱರಿಂ
ಜಾಣ(ರಿನೋದಿಸಿ) ಪೇೞ್ವುದು ಕಬ್ಬಮಂ.

ಹೀಗೆ ಮಾಡುವುದಕ್ಕೆ ಯಾರೂ ಏನೂ ಸಂಕೋಚಪಡಬೇಕಾದ್ದಿಲ್ಲ. ನಮ್ಮ ಪ್ರಾಚೀನ ಕವಿಶ್ರೇಷ್ಠರೇ ಈ ಮಾರ್ಗದಲ್ಲಿ ನಡೆದಿದ್ದಾರೆ. (ಪರಿಷತ್ತಿನ ಪ್ರಕಟನೆಯಾದ "ಕರ್ಣಾಟಕ ಕವಿಚರಿತೆ'ಯ ಪ್ರಥಮ ಸಂಪುಟ ನೋಡಿ.)

ಕವಿಚಕ್ರವರ್ತಿ ರನ್ನ ತನ್ನ ಸಾಹಸಭೀಮವಿಜಯವನ್ನು 'ವನರುಹಭವನೆನಿಸಿದ ದಂಡನಾಯಕರ ಕೇಶಿ ತಿರ್ದಿ ಪೇೞ್ದಿಂ' ಎಂದು ಹೇಳಿಕೊಂಡಿದ್ದಾನೆ (ಪುಟ ೫೩). ದುರ್ಗಸಿಂಹನ ಪಂಚತಂತ್ರವನ್ನು 'ಶ್ರೀ ಮಾದಿರಾಜ ಮುನಿಪುಂಗವರ್ ಉತ್ಸವದಿಂ ತಿರ್ದಿದರ್' (ಪುಟ ೭೬.) ಚಂದ್ರರಾಜನ ಮದನತಿಲಕವನ್ನು 'ತಿರ್ದಿ ಬರೆದವಂ ಬ್ರಹ್ಮಂ' (ಪುಟ ೮೨.) ಧಾರವಾಡ ಜಿಲ್ಲೆಯ ಒಂದು ಶಾಸನವನ್ನು 'ಸ್ಫುರಿತವಚೋವಿಭಾಸಿ ಚಟುವಾಣಿಯ ಸತ್ಕವಿರಾಜವಲ್ಲಭಂ ವಿರಚಿಸಿದಂ ವಿವೇಕನಿಧಿ'; ಅದನ್ನು 'ವಿಸ್ತರಿಸಿ ತಿರ್ದಿದರ್ ವಾಕ್ಪತಿ ಚಂದ್ರಭಟ್ಟರುಂ ಗುರು ಬಳಭದ್ರದೇವರುಂ' (ಪುಟ ೯೯.) ಭಾಸ್ಕರನೆಂಬ ಇನ್ನೊಬ್ಬ ಕವಿಯ ಶಾಸನವನ್ನು ಭಾಸ್ಕರಯ್ಯನೆಂಬ 'ಸಾಕ್ಷರನಿಳಯಂ ತಿೞ್ದಿ ಬರೆದಂ' (ಪುಟ ೧೪೬.) ಕೇಶವರಾಜ ಚಮೂಪನು ಬರೆದ ಶಾಸನವನ್ನು 'ತಿರ್ದಿ ನಿರಾಯಾಸದೆ ಬರೆದವನ್ ಸರಣಂ' (ಪುಟ ೩೪೫.) ಇತ್ಯಾದಿ.,

"ಅದಱಿಂದೆ . . . ಸದಭಿಮತೋದಾತ್ತ ಕೀರ್ತಿಯಂ ಬಯಸುವವಂ. . . . ಅಲಸದೆ . . . ಉಪೇಕ್ಷೆಗೆಯ್ಯದೆ . . . ಕಬ್ಬಮಂ . . . ಪೆಱರಿಂ ಜಾಣರಿನ್ ಓದಿಸಿ . . . ಪಾಂಗಱಿದು ದೋಷಮಂ ಪಿಂಗಿಸಿ . . . ತಪ್ಪದೆ ಬಗೆದು ಪೇೞ್ವುದು ಆಗಮಮ್—ಉದಾರ ನೃಪತುಂಗದೇವವಿದಿತಕ್ರಮದಿಂ."

ರಾಮಕಥೆಯ ಮಹತ್ವ

ಡಾ. ವಾಸು ಬಿ. ಪುತ್ರನ್

ರಾಮಾಯಣ ಮತ್ತು ಮಹಾಭಾರತ ಈ ಎರಡು ಕಾವ್ಯಗಳು ಭಾರತೀಯ ಸಂಸ್ಕೃತಿಯ ಚಿರಂತನ ಆಧಾರ ಸ್ತಂಭಗಳಾಗಿವೆ. ಕವೀಂದ್ರ ರವೀಂದ್ರನಾಥ ಠಾಗೋರರು, 'ಇವು ಗಂಗಾನದಿ ಮತ್ತು ಹಿಮಾಲಯದಂತೆ ಅಖಂಡ ಭಾರತದ ಗೌರವಮಯ ಸಂಪತ್ತು' ಎಂದಿರುವರು. ಅಲ್ಲದೆ ಇವುಗಳನ್ನು ಪ್ರಾಚೀನ ಗ್ರೀಕ್ ದೇಶದ ಹೋಮರ ಕವಿಯ 'ಇಲಿಯಡ್' ಕಾವ್ಯಕ್ಕೆ ಹೋಲಿಸಿರುವರು. ಈ ಹೋಲಿಕೆಯು ಸಾಹಿತ್ಯ ಕ್ಷೇತ್ರಕ್ಕೆ ಒಪ್ಪಬಹುದಾದರೂ ರಾಮಾಯಣ-ಮಹಾಭಾರತ ಮಹಾಕಾವ್ಯಗಳು ಭಾರತೀಯ ಜನಜೀವನದಲ್ಲಿ ಜಾಗ್ರತಗೊಳಿಸಿದ ಚೇತನ, ನೀಡಿದ ಪ್ರೇರಣೆ 'ಇಲಿಯಡ್'ನಿಂದ ಯುರೋಪಿಗೆ ದೊರೆಯಲಿಲ್ಲ ಎಂಬುದನ್ನು ನೆನೆಯಬೇಕು. ಈ ಕಾವ್ಯಗಳ ರಚನೆಯಾಗಿ ಸಾವಿರಾರು ವರ್ಷಗಳು ಕಳೆದು ಹೋದರೂ, ಭಾರತದ ಮೂಲೆ ಮೂಲೆಗಳಲ್ಲಿ, ಹಳ್ಳಿ-ಪಟ್ಟಣಗಳಲ್ಲಿ, ಧನಿಕ-ಬಡವರಲ್ಲಿ, ಸಾಹಿತಿ-ಸಾಮಾನ್ಯ ಜನತೆಯಲ್ಲಿ ಈ ಕಾವ್ಯಗಳಿಗೆ ಅಪ್ರತಿಮ ಮಹತ್ವವಿದೆ, ಸ್ಥಾನವಿದೆ. ಇವುಗಳನ್ನು ಪ್ರತಿಯೊಬ್ಬನೂ ಸಾನಂದ-ಶ್ರದ್ಧೆಯಿಂದ ಓದುತ್ತಾನೆ-ಕೇಳುತ್ತಾನೆ. ಇವುಗಳಲ್ಲಿ ಅಡಕವಾಗಿರುವ ತತ್ವಗಳೇ ಈ ಮಹತ್ವಕ್ಕೆ ಕಾರಣ. ಅಲ್ಲದೆ ಇಲ್ಲಿ ಬರುವ ಕಥೆ-ಜೀವನದ ವ್ಯಾಪಕ ಸಂದರ್ಭಗಳಲ್ಲಿ ಮಾನವೀಯತೆಯ ಚಿತ್ರಣ ಹಾಗೂ ಜೀವನದ ಪರಂಪರಾಗತ ಮೂಲ್ಯ-ಮೀಮಾಂಸೆಗೆ ಅವಕಾಶವನ್ನು ನೀಡುವ ಕಥೆ ಎಂಬುದೂ ಈ ಪ್ರಾಶಸ್ತ್ಯಕ್ಕೆ ಕಾರಣವೆನ್ನಬಹುದು.

ರಾಮಾಯಣ-ಮಹಾಭಾರತಗಳು ಈ ದೇಶದ ಅತ್ಯಂತ ಪ್ರಾಚೀನ ಮಹಾ ಕಾವ್ಯಗಳೆಂದು ಮೊದಲೇ ಹೇಳಲಾಗಿದೆ. ಆದರೆ ಇವುಗಳಲ್ಲಿ ಯಾವುದು ಪ್ರಥಮ ಕಾವ್ಯ? ಯಾವುದು ಯಾವುದಕ್ಕೆ ಆಧಾರ, ಪ್ರೇರಕಶಕ್ತಿ ಎಂಬ ಬಗ್ಗೆಯೂ ಸಾಕಷ್ಟು ಚರ್ಚೆ ನಡೆದಿದೆ ಮತ್ತು ಇವುಗಳನ್ನು ಕುರಿತು ಬೇರೆ ಬೇರೆ ಅಭಿಪ್ರಾಯಗಳಿವೆ. ಆದರೆ ರಾಮಾಯಣಕ್ಕೆ ಪ್ರಥಮ ಸ್ಥಾನವೆಂದರೆ ತಪ್ಪಾಗದು. ಕಾರಣ ರಾಮಾಯಣ ಆದಿಕಾವ್ಯ, ವಾಲ್ಮೀಕಿಯು ಆದಿಕವಿ ಎಂಬುದು ಬರೇ ಭಾರತಕ್ಕಷ್ಟೇ ಅಲ್ಲ, ವಿಶ್ವಸಾಹಿತ್ಯದಲ್ಲಿ ಈ ಗೌರವ ವಾಲ್ಮೀಕಿಗೆ ಸಲ್ಲತಕ್ಕದ್ದೆಂದು ಕೆಲವರು ಅಭಿಪ್ರಾಯ ಪಡುತ್ತಿರುವರು. ಅದಲ್ಲದೆ ಮಹಾಭಾರತದ ಅರಣ್ಯಪರ್ವ, ದ್ರೋಣಪರ್ವ, ಶಾಂತಿಪರ್ವ—ಈ ಮೂರು ಕಡೆಗಳಲ್ಲಿ ರಾಮಾಯಣದ ಕಥಾಂಶಗಳು ಬಂದಿವೆ. ಅಷ್ಟೇ ಅಲ್ಲದೆ ಮಹಾಭಾರತದಲ್ಲಿ ಬರುವ 'ರಾಮೋಪಾಖ್ಯಾನ'ದಲ್ಲಿಯೂ ರಾಮಾಯಣದ ಸಂಪೂರ್ಣ ಕಥೆ, ಸಂಕ್ಷಿಪ್ತ ರೂಪದಲ್ಲಿ ಹೇಳಲಾಗಿದೆ. ಅಲ್ಲಿ ದ್ರೌಪದಿ-ಹರಣ ಹಾಗೂ ಅವಳ ಪುನಃ ಪ್ರಾಪ್ತಿಯನಂತರದ ಶೋಕಾಕುಲನಾದ ಯುಧಿಷ್ಠಿರನಿಗೆ ಮಾರ್ಕಂಡೇಯ ಮುನಿ ರಾಮನ ಉದಾಹರಣೆ ಕೊಟ್ಟು ಧೈರ್ಯ ಹೇಳುವ ಪ್ರಯತ್ನ ಮಾಡುವುದನ್ನು ನೋಡಬಹುದು. ರಾಮಾಯಣದಲ್ಲಿ ಮಹಾಭಾರತದ ಯಾವ ಘಟನೆಗೂ ಸ್ಥಾನ ದೊರೆತಿಲ್ಲ. ಈ 'ರಾಮೋಪಾಖ್ಯಾನ' ಸ್ವತಂತ್ರ ಕೃತಿಯೇ? ರಾಮಾಯಣಕ್ಕೆ ಆಧಾರವೇ? ಅಥವಾ ಸಂಪೂರ್ಣ ರಾಮಾಯಣದ ವಿಕೃತ ಕೃತಿಯೇ? ಈ ಬಗ್ಗೆ ವಿಭಿನ್ನ ಆಧಾರಗಳನ್ನು ಕೊಟ್ಟು ವಿಭಿನ್ನ ವಿದ್ವಾಂಸರು ತಂತಮ್ಮ ಅಭಿಮತಗಳನ್ನು ವ್ಯಕ್ತಪಡಿಸಿರುವರು. ಆದರೂ ರಾಮಾಯಣವೇ 'ರಾಮೋಪಾಖ್ಯಾನ'ದ ಆಧಾರವೆಂದು ಅಧಿಕಾಂಶ ವಿದ್ವಾಂಸರು ಒಪ್ಪಿರುವರು.

ರಾಮಾಯಣ ಮತ್ತು ಮಹಾಭಾರತಗಳನ್ನಷ್ಟೇ ನೋಡಿದರೆ ನಿಜವಾಗಿಯೂ ಪ್ರಥಮ ಕಾವ್ಯ ದ್ವಿತೀಯಕ್ಕಿಂತ ಲೋಕಪ್ರಿಯವಾದುದು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಮಹಾಭಾರತದಲ್ಲಿ ಲೌಕಿಕ ಜೀವನದ ಚಿತ್ರಣವಿದೆ. ಆದರೆ ರಾಮಾಯಣದ ಕವಿಯು ವಾಚಕರನ್ನು ಲೌಕಿಕ ವಾತಾವರಣದಿಂದ ಕರ್ತವ್ಯ-ಚೇತನದಿಂದ ತುಂಬಿತುಳುಕಾಡುವ ಆದರ್ಶ ಲೋಕಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿರುವನು. ಕಾವ್ಯದ ನಾಯಕ ರಾಮ. ಅವನು ಭಾರತೀಯ ಆದರ್ಶದ ಪ್ರತಿಮೂರ್ತಿ. ಸಮಗ್ರ ದೇಶದ ಕಲ್ಯಾಣವೇ ಅವನ ಜೀವನದ ಮೂಲ ಸಿದ್ಧಾಂತ. ಭಾರತ ದೇಶಕ್ಕೆ 'ರಾಷ್ಟ್ರ' ರೂಪವನ್ನು ಕೊಡುವ ಕಲ್ಪನೆ ಮೊತ್ತಮೊದಲು ಅವನಲ್ಲಿ ಮೂಡಿರಬಹುದೆಂದು ಕಾಣುತ್ತಿದೆ. ಮಹರ್ಷಿ ಅಗಸ್ತ್ಯರು ವಿಂಧ್ಯಾಚಲವನ್ನು ದಾಟಿ ದಕ್ಷಿಣ ಭಾರತದಲ್ಲಿ ಪ್ರಾರಂಭಿಸಿದ ಕಾರ್ಯವನ್ನು ರಾಮನೇ ಪೂರ್ಣಗೊಳಿಸಿರಬೇಕು. ಭೀಲ್, ವಾನರ, ಕರಡಿ, ರಾಕ್ಷಸ, ಹದ್ದು ಮೊದಲಾದ ಹೀನ ಜಾತಿಗಳನ್ನು ಒಂದು ಸೂತ್ರಕ್ಕೆ ಒಳಪಡಿಸಿದ ಶ್ರೇಯಸ್ಸೂ ರಾಮನಿಗೆ

ಸಲ್ಲತಕ್ಕದ್ದು. ಲಂಕೆ, ಕಿಷ್ಕಿಂಧೆ ಮತ್ತು ಅಯೋಧ್ಯೆ ಇವು ಮೂರು ವಿಭಿನ್ನ ಸಂಸ್ಕೃತಿಯ ಕೇಂದ್ರಗಳು. ರಾಮನು ಲಂಕೆ ಮತ್ತು ಕಿಷ್ಕಿಂಧೆಯ ಸಂಸ್ಕೃತಿಗಳನ್ನು ನಷ್ಟಗೊಳಿಸಲಿಲ್ಲ; ಅಲ್ಲಿಯ ಪರಂಪರೆಯನ್ನಾಗಲೀ, ರೀತಿ-ನೀತಿಗಳನ್ನಾಗಲೀ ಅನಾದರದಿಂದ ಕಾಣಲಿಲ್ಲ. ಆತ ದೇಶದಲ್ಲಿ ಹರಡಿರುವ ವಿಭಿನ್ನ ಸಂಸ್ಕೃತಿಗಳನ್ನು ಒಂದುಗೂಡಿಸಿ, ಸಮನ್ವಯಾತ್ಮಕ ಭಾರತೀಯ ಸಂಸ್ಕೃತಿಗೆ ರೂಪವನ್ನಿತ್ತನು. ಆದುದರಿಂದ ರಾಮಕಥೆಯು ಭಾರತೀಯ ಸಂಸ್ಕೃತಿಯ ಬಾಹ್ಯದ ಅನೇಕತ್ವವನ್ನು ಅಂತರಂಗದ ಏಕತ್ವದ ಸೂತ್ರದಲ್ಲಿ ಹೆಣೆದ ಹಾಗೂ ಮಾನವೀಯ ಮೌಲ್ಯಗಳ ಗೌರವವನ್ನು ಅಭಿವೃದ್ಧಿಗೊಳಿಸಿದ ಕಥೆ ಎಂದು ಹೇಳಬೇಕಾಗಿದೆ.

ಈ ಕಥೆಯ ಮಹತ್ವವನ್ನು ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ದೃಷ್ಟಿಯಲ್ಲಿ ಅವಲೋಕಿಸಬಹುದು.

ಆದಿಕವಿ ವಾಲ್ಮೀಕಿ ರಾಮನನ್ನು ಒಬ್ಬ ಮಹಾಪುರುಷನ ರೂಪದಲ್ಲಿ ಚಿತ್ರಿಸಿದ್ದನು. "ರಾಮಾಯಣಂ ಮಹಾಕಾವ್ಯಮಾದೌ ವಾಲ್ಮೀಕಿನಾ ಕೃತಂ ತನ್ಮೂಲಂ ಸರ್ವಕಾವ್ಯಾನಾಮಿತಿಹಾಸ ಪುರಾಣಯೋ:" ಎಂದು ತನ್ನ ಕೃತಿಯನ್ನು ಸಮಗ್ರ ಮಹಾಕಾವ್ಯ, ಇತಿಹಾಸ ಹಾಗೂ ಪುರಾಣಗಳ ಮೂಲಾಧಾರ, ಮೂಲಸ್ರೋತ ಎಂದು ಸಿದ್ಧಗೊಳಿಸಿರುವನು. ಆದರೆ ಮೂಲ ರಾಮಾಯಣದ ಪುರುಷೋತ್ತಮನಾದ ರಾಮನು ಬರಬರುತ್ತಾ ಆಧ್ಯಾತ್ಮಿಕ ತತ್ವಗಳಿಂದ ಆವೃತ್ತನಾದನು, ವಿಷ್ಣುವಿನ ಅವತಾರನೆನಿಸಲ್ಪಟ್ಟನು. ಈ ತತ್ವಗಳನ್ನು ಪೋಷಿಸಿಕೊಳ್ಳಲಿಕ್ಕಾಗಿ ಕಾವ್ಯದಲ್ಲಿ ಸಾಕಷ್ಟು ಪ್ರಕ್ಷಿಪ್ತಾಂಶಗಳು ಸೇರಿಕೊಂಡವು. ಇದರಿಂದಾಗಿ ರಾಮತ್ವವು ಅಲೌಕಿಕ, ಆಧ್ಯಾತ್ಮಿತ, ಆರಾಧ್ಯ ತತ್ವವಾಗಿ ಪರಿಣಮಿಸಿತು. ಮತ್ತು ರಾಮನು ದುಷ್ಟ, ಅನ್ಯಾಯಿ, ಅಧರ್ಮಿ ಮೊದಲಾದವರ ಸಂಹಾರಕ್ಕಾಗಿ ಯಜ್ಞಕುಂಡದಲ್ಲಿ ಪಡೆದ ಪ್ರಸಾದದ ಬಲದಿಂದ ಅಯೋಧ್ಯೆಯಲ್ಲಿ ದಶರಥರಾಜನ ಪುತ್ರನಾಗಿ ಜನಿಸಿದನು. ಅವನೊಡನೆ ತತ್ವಗಳು (ಲಕ್ಷ್ಮಣ, ಭರತ, ಶತೃಘ್ನ) ಸಹಾಯಕರಂತೆ ಜನ್ಮತಾಳಿದುವು. ಸೀತೆಯು ರಾಮನ ಕ್ರಿಯಾಶಕ್ತಿ ಯಾ ಪ್ರಜನಶಕ್ತಿಯ ರೂಪದಲ್ಲಿ ಅವತಾರ ಪಡೆದಳು. ಅನ್ಯ ದೇವತೆಗಳು ಕೂಡಾ ವಾನರ ರೂಪದಲ್ಲಿ ಮರ್ತ್ಯಲೋಕಕ್ಕಿಳಿದರು. ಅಷ್ಟೇ ಅಲ್ಲದೆ ಈ ಕಾವ್ಯದ ರಚನೆಗಾಗಿ ಬ್ರಹ್ಮನು ಸರಸ್ವತಿಗೆ ಕವಿ-ಶಕ್ತಿಯಾಗಲು ವರವನ್ನಿತ್ತು-ಆದಿಕವಿಗೆ ಹೇಳಿದ್ದನು, "ಕುರು ರಾಮಕಥಾಂ ಪುಣ್ಯಾಂ ಶ್ಲೋಕ ಬದ್ಧಾಂ ಮನೋರಮಾಮ್" ಎಂದು. ಮುಂದೆ ಆಶೀರ್ವದಿಸುತ್ತಾ, "ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇಸ್ಥಾ ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ." ಎಂದರೆ ಪೃಥ್ವಿಯಲ್ಲಿ ನದಿಗಳು ಹರಿಯುತ್ತಿರುವವರೆಗೆ, ಪರ್ವತಗಳು ಅಚಲವಾಗಿರುವವರೆಗೆ ಅವನ ಕಾವ್ಯವು ಮೆರೆಯುವಂತೆ ವಚನವನ್ನಿತ್ತಿರುವನು; ಕಾವ್ಯದಲ್ಲಿ ವ್ಯಕ್ತವಾಗುವ ಯಾವ ಮಾತೂ ಅಸತ್ಯವಾಗದು ಎಂಬ ಆಶ್ವಾಸನೆಯನ್ನಿತ್ತಿರುವನು (ನ ತೇ ವಾಗಂಸತ್ಯಾ ಕಾವ್ಯೇ ಕಾಚಿದತ್ರ ಭವಿಷ್ಯತಿ) ಕಥೆಯು ಈ ಆಧ್ಯಾತ್ಮಿಕ ಪಕ್ಷವನ್ನು ಶ್ರದ್ಧಾವಂತ ಕವಿಗಳೂ, ಜನತೆಯೂ ನಿರಂತರ ನಂಬಿಕೊಂಡು ಬಂದಿದ್ದಾರೆ. ಅವರ ದೃಷ್ಟಿಯಲ್ಲಿ ಯಾವ ಪುರುಷನ ಪ್ರತಿಪಾದನೆ ವೇದಗಳಲ್ಲಿ ಆಗಿತ್ತೊ ಅವನೇ ದಾಶರಥಿಯಾಗಿ ಅವತರಿಸಿ, ಆದಿಕವಿ ವಾಲ್ಮೀಕಿಯ ಕಾವ್ಯನಾಯಕನಾಗಿ ಮೆರೆದನು :

ವೇದವೇದ್ಯೇ ಪರೇಪುಂಸಿ ಜಾತೇ ದಶರಥಾತ್ಮಜೇ|
ವೇದ: ಪ್ರಾಚೇತಸಾದಾಸೀತ್ ಸಾಕ್ಷಾತ್
ರಾಮಾಯಣಾತ್ಮನಾ ||

ಧಾರ್ಮಿಕ ದೃಷ್ಟಿಯಲ್ಲಿಯೂ ಈ ಕಥೆಗೆ ಮಹತ್ವಪೂರ್ಣ ಸ್ಥಾನವಿದೆ. ಈ ಕಾವ್ಯದ ನಾಯಕನು ಧರ್ಮೋದ್ಧಾರಕನು. ಅವನ ಅವತಾರದ ಮುಖ್ಯ ಉದ್ದೇಶವೆಂದರೆ, ಅಧರ್ಮಿ ರಾವಣಾದಿ ರಾಕ್ಷಸರ ಸಂಹಾರ. ಯಾವ ಉದ್ದೇಶದಿಂದ ಶ್ರೀ ಕೃಷ್ಣನು ಜನ್ಮತಾಳಿದ್ದನೋ (ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತ| ಅಭ್ಯುತ್ಥಾನಮಧರ್ಮಸ್ಯತದಾತ್ಮಾನಂ ಸೃಜಾಮ್ಯಹಂ || ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ) ಅದೇ ಉದ್ದೇಶದಿಂದ ರಾಮನೂ ಅವತರಿಸಿದ್ದನು. ತುಲಸೀದಾಸರು ಈ ಮಾತನ್ನು ತಮ್ಮ ಅಮರ ಕಾವ್ಯ 'ರಾಮಚರಿತ ಮಾನಸ'ದಲ್ಲಿ ಸ್ಪಷ್ಟವಾಗಿ ಹೇಳಿರುವರು (ಜಬ್ ಜಬ್ ಹೋಹಿ ಧರಮಕೈಹಾನೀ| ಬಾಢಹಿಂ ಅಸುರ ಅಧಮ ಅಭಿಮಾನೀ || ಕರಹಿ ಅನೀತಿ ಜಾಯಿನಹಿ ಬರನೀ || ಸೀದಹಿ ವಿಪ್ರಧೇನು ಸುರಧರನೀ || ತಬ್‌ತಬ್ ಪ್ರಭುಧರಿ ವಿವಿಧ ಶರೀರ ಹರಹಿ ಕೃಪಾನಿಧಿ ಸಜ್ಜನ ಪೀರಾ ||)

ರಾಮನಷ್ಟೇ ಏಕೆ? ಕಾವ್ಯದ ಅಧಿಕಾಂಶ ಪಾತ್ರಗಳು ಹೆಜ್ಜೆಹೆಜ್ಜೆಗೂ ಧರ್ಮವನ್ನು ಎತ್ತಿ ಹಿಡಿದವುಗಳು; ಧರ

ವಿಮುಖರಾಗಲು ಯಾರೂ ಸಿದ್ಧರಿಲ್ಲ, ಸರಿ, ಮಂಥರೆ ಹಾಗೂ ಕೈಕೆ ಇವರಿಬ್ಬರು ಈ ಪವಿತ್ರಭಾವನೆಗೆ ಅಪವಾದ ಆದರೂ ಆ ಘಟನೆಯ ಪರದೆಯ ಹಿಂದೆ ನಡೆದಿದ್ದ ದೇವತೆಗಳ ಕೈವಾಡವನ್ನು ನೋಡಿದರೆ ಈ ಎರಡು ಪಾತ್ರಗಳೂ ನಿರ್ದೋಷಿಗಳು-ಧರ್ಮ-ರೇಖೆಗಳನ್ನು ಇನ್ನಷ್ಟು ದೃಢಗೊಳಿಸುವ ಅಡಿಗಲ್ಲುಗಳು ಎನ್ನಲೂ ಬಹುದು. 'ಕುವೆಂಪು' ರವರ 'ರಾಮಾಯಣ ದರ್ಶನ'ದಲ್ಲಿ ಕ್ರಮೇಣ ಬೆಳೆದು ಬಂದ ಮಂಥರೆಯ ವ್ಯಕ್ತಿತ್ವ, ಮಾನವೋಚಿತ ಮನೋವೈಜ್ಞಾನಿಕ ವಿಚಾರದ ಬೆಳವಣಿಗೆ, ವಿಶುದ್ಧ ಆತ್ಮೀಯತೆ, ತ್ಯಾಗ ಮೊದಲಾದವುಗಳನ್ನು ನೋಡಿದರೆ ಮಂಥರೆಯನ್ನು ದೂಷಿಸಲು ಹಿಂಜರಿಯ ಬೇಕಾಗುತ್ತದೆ. ಕೈಕೆಯ ಆಂತರಿಕ ವೇದನೆಯನ್ನು ಪರೀಕ್ಷಿಸಿ, ವರ್ಣಿಸಿದ ಕವಿಗಳು ಬಹಳ ಕಡಿಮೆ. ಹಿಂದೀ ಕವಿ ಮೈಥಿಲೀ ಶರಣಗುಪ್ತರು ಈ ಕಡೆ ದೃಷ್ಟಿಬೀರಿರುವುದು ಶ್ಲಾಘನೀಯ ಕಾರ್ಯವೆನ್ನಬೇಕು. ಕೈಕೆಗೆ ಕೊಟ್ಟ ವಚನವನ್ನು ಹಿಂತೆಗೆಯಬೇಕೆಂಬ ಇಚ್ಛೆ ಇದ್ದರೂ ದಶರಥನು ಹಾಗೆ ಮಾಡುವುದಿಲ್ಲ-'ಧರ್ಮವಿಮುಖನಾದ' ಎಂಬ ಕಳಂಕದ ಭಯದಿಂದ ಭರತನು ರಾಮನಿಂದ ತ್ಯಜಿಸಲ್ಪಟ್ಟ ರಾಜ್ಯವನ್ನು ಗುರುಹಿರಿಯರು, ತಾಯಂದಿರು ಹಾಗೂ ಪ್ರಜೆಗಳು ಎಷ್ಟು ಹೇಳಿ ಕೇಳಿಕೊಂಡರೂ ಸ್ವೀಕರಿಸುವುದಿಲ್ಲ. ಜ್ಯೇಷ್ಠ ಪುತ್ರನಿಗೆ ಸಿಗತಕ್ಕ ರಾಜ್ಯವನ್ನು ಸ್ವೀಕರಿಸುವುದು ಅವನ ದೃಷ್ಟಿಯಲ್ಲಿ ಅನುಚಿತ, ಅಧರ್ಮ. ಕಾವ್ಯದಲ್ಲಿ ಬರುವ ಪಾತ್ರಗಳಲ್ಲಿ ಯಾರು ಅಧರ್ಮ ಪಥದಲ್ಲಿ ಕಾಲಿಡ ಬಯಸಿದರೋ ಅವರೆಲ್ಲರಿಗೆ ರಾಮನು ತಕ್ಕ ಶಿಕ್ಷೆಯನ್ನು ವಿಧಿಸಿದನು ಎಂಬುದಕ್ಕೆ ವಾಲಿ, ರಾವಣ, ಇಂದ್ರಪುತ್ರ ಜಯಂತ ಮೊದಲಾದವರ ಉದಾಹರಣೆಗಳು ಸಾಕು.

ಧರ್ಮಪಥದಲ್ಲಿ ನಡೆಯುವ ಪಾತ್ರಗಳು ರಾವಣ ಪಕ್ಷದಲ್ಲಿಯೂ ಇವೆ. ವಿಭೀಷಣನು ಇದಕ್ಕೆ ಉಚಿತ ಉದಾಹರಣೆ. ಮಾರೀಚ ಮಂಡೋದರಿ ಕುಂಭಕರ್ಣರಲ್ಲಿಯೂ ಧಾರ್ಮಿಕ ಭಾವನೆ ಇತ್ತು. ಸಂಕ್ಷೇಪವಾಗಿ ಹೇಳುವುದಾದರೆ ರಾಮ - ರಾವಣರ ಯುದ್ಧವೆಂದರೆ ಧರ್ಮ-ಅಧರ್ಮಗಳ ಯುದ್ಧ-ಅದರಲ್ಲಿ ಅಧರ್ಮಕ್ಕೆ ಅಪಜಯ. ವಾಲ್ಮೀಕಿ ರಾಮಾಯಣ ಅಂದು ಧರ್ಮಗ್ರಂಥವಾಗಿರದಿದ್ದರೂ ಅದರ ತಳಹದಿಯಲ್ಲಿಯೇ ರಚಿಸಲ್ಪಟ್ಟ ಮುಂದಿನ ಕೆಲವು ರಾಮಾಯಣಗಳು 'ಧರ್ಮಗ್ರಂಥ'ದ ಪದವಿಯನ್ನು ಪಡೆದಿವೆ.

ರಾಮಕಾವ್ಯವು ಧಾರ್ಮಿಕ ಗ್ರಂಥದೊಡನೆ ಇನ್ನೊಂದು ದೃಷ್ಟಿಯಲ್ಲಿ 'ಸಮಾಜ ಶಾಸ್ತ್ರ'ವೂ ಆಗಿದೆ. ಇದರಲ್ಲಿ ಸಾಮಾಜಿಕ ಕೌಟುಂಬಿಕ ಜೀವನದ ಅನೇಕ ಸುಂದರ ಚಿತ್ರಗಳಿವೆ. ಅಂದಿನ ಪಾತ್ರಗಳು ಇಂದಿಗೂ ಅವವುಗಳ ಕ್ಷೇತ್ರದಲ್ಲಿ ಸಾಮಾಜಿಕ ಸುಖ-ಶಾಂತಿಗೆ ಪ್ರೇರಕ ಶಕ್ತಿಗಳಾಗಿವೆ. ದಶರಥನಂತಹ ಪುತ್ರವತ್ಸಲ ತಂದೆ, ಕೌಸಲ್ಯೆ-ಸುಮಿತ್ರೆಯರಂತಹ ಆದರ್ಶ ಮಾತೆಯರು, ಸೀತೆ, ಮಂಡೋದರಿಯರಂತಹ ಪತಿಪರಾಯಣೆಯರು, ಊರ್ಮಿಳೆಯಂತಹ ತ್ಯಾಗಮೂರ್ತಿ ಪತ್ನಿ, (೧೪ ವರ್ಷ ಪತಿಯ ಪ್ರತೀಕ್ಷೆಯಲ್ಲಿ ತನ್ನ ಅಮೂಲ್ಯ ಯೌವನವನ್ನು ಕಳೆದುಕೊಂಡವಳು) ಲಕ್ಷ್ಮಣನಂಥ ಕರ್ತವ್ಯನಿಷ್ಠ ಹಾಗೂ ಭರತನಂತಹ ನಿಸ್ವಾರ್ಥ ಸಹೋದರರು, ಹನುಮಂತನಂತಹ ಸೇವಕ, ಸುಗ್ರೀವ, ಅಂಗದ, ವಿಭೀಷಣರಂತಹ ಪ್ರಿಯ ಮಿತ್ರರು ಇದಕ್ಕೆ ಸುಂದರ ಉದಾಹರಣೆ. ಇಂತಹ ಆದರ್ಶ ವ್ಯಕ್ತಿಗಳು ಇನ್ನಿತರ ಕಾವ್ಯಗಳಲ್ಲಿ ಸಿಗುವುದಿಲ್ಲ. ಸರಿ; ಈ ಕಾವ್ಯದಲ್ಲಿ ಸಾಮಾಜಿಕ ಜೀವನವನ್ನು ಕಲುಷಿತಗೊಳಿಸುವ ಪಕ್ಷವೂ ಇದೆ-ರಾವಣ, ಕೈಕೆ-ಮಂಥರೆಯಂತಹರು. ಆದರೆ ಈ ಪಕ್ಷ, ಜೀವನದ ಆದರ್ಶವನ್ನು ಎಲ್ಲಿಯೂ ಪರಾಜಿತಗೊಳಿಸುವುದಿಲ್ಲ.

ರಾಮನು ಶ್ರೀ ವಿಷ್ಣುವಿನ ಅವತಾರನೆನಿಸಿದರೂ ಬರೀ ಒಬ್ಬ ಮಹಾಪುರುಷನಂತೆ ವರ್ತಿಸುತ್ತಾನೆ-ದೇವನಂತಲ್ಲ; ಕಾವ್ಯದ ನಾಯಕನಾಗಿಯೂ ಸಾಮಾನ್ಯ ಜನತೆಯಿಂದ ದೂರವಾಗಿರುವುದಿಲ್ಲ; ಸೀತಾಹರಣದ ನಂತರ ಹಾಗೂ ಲಕ್ಷ್ಮಣನು ಲಂಕೆಯ ಯುದ್ಧರಂಗದಲ್ಲಿ ಮೂರ್ಛಿತನಾದಾಗ ಸಾಮಾನ್ಯ ಮಾನವನಂತೆ ಅತ ವಿಚಲಿತನಾದನು; ಅತ್ತು ಕಣ್ಣೀರು ಸುರಿಸಿದನು. ಇದರಿಂದ ಕಾವ್ಯದಲ್ಲಿ ವಾಚಕರ ಅಂತರಂಗವನ್ನು ದ್ರವಿತಗೊಳಿಸುವ ಮಾರ್ಮಿಕ ಭಾವನೆಯು ವ್ಯಕ್ತವಾಗಿದೆ. ರಾಮನಲ್ಲಿ ವ್ಯಕ್ತವಾಗಿರುವ ಆತ್ಮೀಯತೆಯನ್ನು ದಶರಥ, ಭರತ, ಸೀತೆ ಮೊದಲಾದವರಲ್ಲಿಯೂ ಕಾಣಬಹುದು. ದಶರಥನ ರಾಮ-ವಿಯೋಗದ ಮನೋವ್ಯಥೆ ಯಾರ ಹೃದಯವನ್ನು ವಿಚಲಿತಗೊಳಿಸಲಿಲ್ಲ? ಭರತನ ನಿಸ್ವಾರ್ಥ ಆಗ್ರಹ ಕೇಳಿ ಯಾರ ಕಣ್ಣಲ್ಲಿ ಆನಂದಾಶ್ರು ಹರಿಯಲಿಲ್ಲ? ಕೋಮಲೆಯೂ ಪವಿತ್ರೆಯೂ ಆದ ಸೀತೆಯ ಸುಖ-ದುಃಖದೊಡನೆ ಸಹಕರಿಸಲು ಎಷ್ಟು ಮನಸ್ಸು ಆತುರಗೊಳ್ಳಲಿಲ್ಲ?

ಈ ರೀತಿ, ಸುಮಾರು ೨,೫೦೦ ವರ್ಷಗಳ ಹಿಂದೆ ಈ ಕಥೆಯ ಆಧಾರದ ಮೇಲೆ ರಚಿಸಲ್ಪಟ್ಟ ಕಾವ್ಯಗಳಲ್ಲಿ ಇಂದಿಗೂ ರಾಮನ ಪಿತೃಭಕ್ತಿ, ಸೀತೆಯ ಪಾತಿವ್ರತ್ಯ, ಭರತ-ಲಕ್ಷ್ಮಣರ ಭ್ರಾತೃವತ್ಸ, ಹನುಮಂತನ ಸೇವಾತತ್ಪ

ರತಿ, ಸುಗ್ರೀವನ ಆಜ್ಞೆ-ಪಾಲನೆ, ವಿಭೀಷಣನ ಧರ್ಮ ಪರಾಯಣತೆ ಮುಂತಾದ ಉದಾತ್ತ ಭಾವನೆಗಳು ಆದರ್ಶ ಪಥವನ್ನು ತೋರಿಸುತ್ತವೆ.

ಸಾಹಿತ್ಯ ದೃಷ್ಟಿಯಲ್ಲಿ ನೋಡಿದರೆ ರಾಮಕಥೆ ಕವಿ-ಲೇಖಕರಿಗೆ 'ಕಾಮಧೇನು'ವೇ ಆಗಿದೆ. ಕಾರಣ ಇದರಲ್ಲಿ ನವೀನ ಭಾವನೆಗಳುಳ್ಳ ಸಾಹಿತ್ಯ ರಚನೆಗೆ ಸಾಕಷ್ಟು ಆಕರ ದೊರೆತಿರುವುದು. ಸಾಹಿತ್ಯ ಸೃಜನೆಗೆ ಬೇಕಾದ ಜೀವನದ ವಿರಾಟ-ಭೂಮಿಕೆ, ಸೂಕ್ಷ್ಮಭಾವ-ಭಂಗಿ, ಕೋಮಲ ಮಾನವ ಸಂಬಂಧ, ಕಠೋರ ಸಂಘರ್ಷ, ವಿರಳಿತ, ಹರ್ಷ-ವಿಷಾದ ಎಲ್ಲಾ ಮೂಲಭೂತ ಸಾಮಗ್ರಿಯು ಇಲ್ಲಿ ದೊರೆಯುತ್ತದೆ. ಮಾನವ ಜೀವನವನ್ನು ಈ ಕಥೆ ಪ್ರೇರೇಪಿಸಿದಷ್ಟು ಬಹುಶಃ ಬೇರೆ ಯಾವ ಕಥೆಯೂ ಪ್ರೇರೇಪಿಸಲಿಲ್ಲ. ಹೆಚ್ಚು ಕಡಮೆ ಯಾವ ಭಾಷೆಯೂ ಯಾವ ದೇಶವೂ ಈ ಕಥೆಗೆ ಅಪವಾದವಿಲ್ಲ. ಆದರಿಂದಾಗಿಯೆ ಭಾರತೀಯರು ಎಲ್ಲೆಲ್ಲಿ ಹೋದರೋ ಅಲ್ಲಲ್ಲಿ ರಾಮಕಥೆಯೂ ಹೋಯಿತು! ರಾಮನಾಮ ಮಾತ್ರವಲ್ಲ, ರಾಮಾಯಣವೂ ಮಹತ್ವಪೂರ್ಣ ಸ್ಥಾನ ಪಡೆಯಿತು. ದಕ್ಷಿಣ ಅಮೇರಿಕ, ಚಿಲಿ ಹಾಗೂ ಪೆರು ದೇಶಗಳಲ್ಲಿ ರಾಮ-ಸೀತೆಯರ ಹೆಸರಿನಲ್ಲಿ ಉತ್ಸವ ನಡೆಯುತ್ತಿದೆ. ಮಲಯಾ, ಇಂಡೋನೇಷಿಯದ ಅನೇಕ ದೇವಾಲಯಗಳಲ್ಲಿ ರಾಮಾಯಣದ ದೃಶ್ಯಗಳನ್ನು ಇಂದಿಗೂ ಅವಲೋಕಿಸಬಹುದು. ಥ್ಯಾಲೆಂಡ, ಬಾಲಿ ಮತ್ತು ಇಂಡೋನೇಷಿಯದ ಅನ್ಯ ಕೆಲವು ದ್ವೀಪಗಳ ಹಾಗೂ ಇಂಡೋಚೈನದ ಕಲಾಕಾರರು ರಾಮಾಯಣದ ಪಾತ್ರಗಳ ಚಿತ್ರಗಳನ್ನು ಬಿಡಿಸುವುದೆಂದರೆ ಅಭಿಮಾನವೆಂದುಕೊಂಡರು. ಟಿಬೇಟು, ಭೂತಾನ, ಪೂರ್ವ ತುರ್ಕಿಸ್ಥಾನ, ಬರ್ಮದಲ್ಲಿಯೂ ರಾಮಾಯಣದ ಕಥೆ ಸಾಕಷ್ಟು ಪ್ರಚಾರದಲ್ಲಿದೆ. ಈ ಎಲ್ಲಾ ಆಧಾರಗಳಿಂದ ವಿಶ್ವಸಾಹಿತ್ಯದಲ್ಲಿ ರಾಮ ಹಾಗೂ ರಾಮ ಕಥೆಯ ಬಗ್ಗೆ ಎಷ್ಟು ಆಕರ್ಷಣೆ ಇತ್ತೆಂದು ನಾವೇ ಕಲ್ಪಿಸಬಹುದು.

ವಿಭಿನ್ನ ಭಾಷೆಯ ಕವಿಗಳು ರಾಮಾಯಣದ ಕಥೆಯ ಮಹತ್ವವನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಗೊಳಿಸಿರುವರು. ಕನ್ನಡದ ಅಮರಕವಿ ಕುಮಾರವ್ಯಾಸ ಬಹುಶಃ ಮೊದಲು ರಾಮಾಯಣ ಬರೆಯ ಬಯಸಿದ್ದನೋ ಏನೋ ಎಂಬ ಸಂದೇಹ ಬರುವಂತೆ "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದು ಘೋಷಿಸಿ ಮಹಾಭಾರತವನ್ನು ಎತ್ತಿಕೊಂಡನು. ಕವಿಯ ಉಕ್ತಿಯಲ್ಲಿ ಸ್ವಲ್ಪ ಅತಿಶಯೋಕ್ತಿ ಇದ್ದರೂ ಅವನಿಗಿಂತ ಪೂರ್ವದಲ್ಲಿ ಸಾಕಷ್ಟು ರಾಮಾಯಣಗಳ ರಚನೆ ಆಗಿತ್ತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹಿಂದೀಕವಿ ತುಲಸಿದಾಸರು, "ರಾಮ-ಕಥಾ ಕೈ ಮಿತಿ ಜಗನಾಹಿಂ . . . ರಾಮಾಯನ ಸತಕೋಟಿ ಅಪಾರ" ಎಂದು ಶತಕೋಟಿ ರಾಮಾಯಣಗಳ ರಚನೆಯಾಗಿದೆ ಎಂದಿರುವರು. ಜಯದೇವನ "ಪ್ರಸನ್ನ ರಾಘವ" ನಾಟಕದಲ್ಲಿ ನಟ ಸೂತ್ರಧಾರರ ಸಂಭಾಷಣೆಯಲ್ಲಿಯೂ ಈ ವಿಷಯವನ್ನು ಒತ್ತಿ ಹೇಳಲಾಗಿದೆ—

ನಟ : ಕಥಂ ಪುನರಪಿ ಕವಯಃ
ಸರ್ವೇ ರಾಮಚಂದ್ರಮೇವ ವರ್ಣಯಂತಿ?

ಸೂತ್ರಧಾರ :

"ನಾಯಂ ಕವೀನಾಂ ದೋಷಃ | ಯತಃ
ಸ್ವಸೂಕ್ತಿನಾಂ ಪಾತ್ರಂ ರಘುತಿಲಕ ಮೇಕಂ
ಕಲಯತಾಂ ಕವೀನಾಂ ಕೋ ದೋಷಃ
ಸತು ಗುಣಗಣಾನಾಮೇವಗುಣಃ"

ರಾಮಾಯಣದ ಕಥೆಯನ್ನು ಕಾವ್ಯರಚನೆಗಾಗಿ ಎತ್ತಿಕೊಳ್ಳುವುದು ಕವಿಗಳ ದೋಷವಲ್ಲ—ಅದಕ್ಕೆ ರಾಮನ ಗುಣವೇ ಕಾರಣ ಎನ್ನುತ್ತಾನೆ ಜಯದೇವ!

ಕನ್ನಡ ಕಾವ್ಯಗಳಲ್ಲಿ ಸಂಪ್ರದಾಯ ಮತ್ತು ಪ್ರತಿಭಟನೆ

ಎನ್. ಬಸವಾರಾಧ್ಯ

ಸಂಪ್ರದಾಯವೆಂದರೆ ಹಿಂದಿನಿಂದ ನಡೆದು ಬಂದಿರುವ ಒಂದು ರೂಢಿ, ಪದ್ಧತಿ. ಇದನ್ನು ಯಾವುದೋ ಒಂದು ವಿಶಿಷ್ಟ ಪಂಗಡ ನಿರ್ಮಿಸುತ್ತದೆ. ಅಲ್ಲಿಂದ ಮುಂದಕ್ಕೆ ಈ ಸಂಪ್ರದಾಯ ಪರಂಪರಾನುಗತವಾಗಿ ನಡೆದುಕೊಂಡು ಬರುತ್ತದೆ. ಜನಸಾಮಾನ್ಯಕ್ಕೆ ಇದರ ಅನುಸರಣೆ ಕಷ್ಟವಾದಾಗ, ಕ್ಲಿಷ್ಟವಾದಾಗ, ಇದಕ್ಕೆ ಪ್ರತಿಭಟನೆ ಕಂಡು ಬರುತ್ತದೆ. ಆಗ ಹಿಂದಿನದಕ್ಕಿಂತ ಭಿನ್ನವಾದ ಒಂದು ನೂತನಮಾರ್ಗ ತಲೆದೋರುತ್ತದೆ. ಈ ಕ್ರಮ ಸೃಷ್ಟಿಯಲ್ಲಿ ಹೇಗೋ ಹಾಗೆಯೇ ಸಾಹಿತ್ಯಕ್ಷೇತ್ರದಲ್ಲಿಯೂ ಉಂಟಾಗುವುದು ಅನಿವಾರ್ಯವಾಗುತ್ತದೆ.

ಒಂದು ಸಾವಿರ ವರ್ಷಗಳಿಗಿಂತ ಹೆಚ್ಚು ಪ್ರಾಚೀನತೆಯುಳ್ಳ ಕನ್ನಡ ಸಾಹಿತ್ಯದಲ್ಲಿ ಈ ಸಂಪ್ರದಾಯ ಒಂದು ವಿಶಿಷ್ಟಪಾತ್ರವನ್ನು ನಿರ್ವಹಿಸಿದೆ. ಹನ್ನೆರಡನೆಯ ಶತಮಾನದವರೆಗೆ ರಚಿತವಾದ ಕಾವ್ಯಗಳೆಲ್ಲ ಪ್ರಾಚೀನ ಸಂಪ್ರದಾಯವನ್ನು ಸಂಪೂರ್ಣವಾಗಿ ಅನುಸರಿಸಿಕೊಂಡು ಬಂದಿವೆ. ಅಂದಿನ ರಾಜ ಮಹಾರಾಜರು ಕವಿಗಳಿಗೆ ಆಶ್ರಯವನ್ನು ಕೊಟ್ಟು ಅವರಿಂದ ಕೃತಿರಚನೆ ಮಾಡಿಸುತ್ತಿದ್ದರು. ಅದರಂತೆ ಆ ಕವಿಗಳು ತಮ್ಮ ಕೃತಿಗಳನ್ನು ರಾಜಾಸ್ಥಾನಕ್ಕೆ ಯೋಗ್ಯವಾಗುವಂತೆ ಪಂಡಿತ ಮಂಡಲಿಗೆ ಮೆಚ್ಚುಗೆಯಾಗುವಂತೆ ರಚಿಸುವುದು ಅನಿವಾರ್ಯವಾಗಿತ್ತು. ಸಂಸ್ಕೃತ ಭೂಯಿಷ್ಠವಾದ ಪ್ರೌಢ ಚಂಪೂಕೃತಿಗಳು ಜನಸಾಮಾನ್ಯಕ್ಕೆ ದುರವಗಾಹವಾದುವು. ಅದರ ಫಲವಾಗಿಯೇ ಹನ್ನೆರಡನೆಯ ಶತಮಾನದಲ್ಲಿ ಈ ಸಂಪ್ರದಾಯಕ್ಕೆ ತೀವ್ರವಾದ ಪ್ರತಿಭಟನೆಯುಂಟಾಯಿತು.

ಪ್ರಾಚೀನ ಸಂಪ್ರದಾಯದಂತೆ ಅಷ್ಟಾದಶವರ್ಣನೆಗಳು ಕಾವ್ಯಕ್ಕೆ ಅತ್ಯವಶ್ಯವಾದ ಅಂಗಗಳಾಗಿದ್ದುವು. ಕಾವ್ಯದ ಕಥಾವಸ್ತುವನ್ನು ಪುರಾಣೇತಿಹಾಸಗಳಿಂದಾಗಲಿ ಪ್ರಸಿದ್ಧವಾದ ಗ್ರಂಥಗಳಿಂದಾಗಲಿ ತೆಗೆದುಕೊಳ್ಳುವುದು ರೂಢಿಯಾಗಿತ್ತು. ಕವಿಸಮಯ ಅಲಂಕಾರಗಳು ಕಾವ್ಯದಲ್ಲೆಲ್ಲ ವಿಜೃಂಭಿಸುತ್ತಿದ್ದುವು. ಕಾವ್ಯದಲ್ಲಿ ಅನಿವಾರ್ಯವಾಗಿ ಇರಬೇಕಾಗಿದ್ದ ಅಷ್ಟಾದಶವರ್ಣನೆಗಳು ಇವು:

"ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹವೈರಿ ಮಿತ್ರರುದಯಂ ಋತುನಂದನನಂಬು
ಸೀಧುಕಾಂತಾರತಿ ಚಿಂತೆ ಮಂತ್ರ ಚರಯಾನ
ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ
ಬಣ್ಣಿಪರ್."

ಈ ಹದಿನೆಂಟು ವರ್ಣನೆಗಳನ್ನು ಸಂಪ್ರದಾಯ ಶರಣರಾದ ಕವಿಗಳು ತಪ್ಪದೆ ಉಳಿಸಿಕೊಂಡು ಬಂದಿದ್ದಾರೆ. ಇವು ಇಲ್ಲದ ಕಾವ್ಯಗಳು ಕಾವ್ಯಗಳೇ ಅಲ್ಲ ಎಂಬುದು ಅಂದಿನ ಮಂದಿಯ ಮನೀಷಿಗಳ ಅಭಿಮತವಾಗಿತ್ತು. ಅಂದಿನ ಕಾವ್ಯಗಳು ಎಷ್ಟರಮಟ್ಟಿಗೆ ಸಂಸ್ಕೃತ ಭೂಯಿಷ್ಠವಾಗಿರುತ್ತಿದ್ದುವು ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು:

"ಗಂಭೀರಸ್ಫಾರ ವೇಳಾ ಬಹಳ ಪರಿವೃತೋಲ್ಲೋಲ
ಕಲ್ಲೋಲಮಾಲಾ
ರಂಭ ಪ್ರೋಡ್ಡೀನ ಫೇನ ಪ್ರಬಳ ಜಲಚರೋಲ್ಲುಂಠ
ಪಾಠೀನ ಶುಂಭ
ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭರತ್ನಪ್ರವಾಳೋ
ಜ್ಜೃಂಭತ್ಪ್ರೋದ್ಭಾಸಿ ವೀಚೀನಿಚಯ ಘನ ಘನಾರಾವ
ರೌದ್ರಂ ಸಮುದ್ರಂ ‖"

ಇದು ಸಮುದ್ರದ ವರ್ಣನೆ. ಕನ್ನಡ ಕಾವ್ಯದಲ್ಲಿ ಬಂದಿರುವ ಸಮುದ್ರದ ವರ್ಣನೆ.

ಹನ್ನೊಂದನೆಯ ಶತಮಾನದ ಕೊನೆ ಮತ್ತು ಹನ್ನೆರಡನೆಯ ಶತಮಾನದ ಆದಿಯಲ್ಲಿ ಸಂಪ್ರದಾಯಕ್ಕೆ ಪ್ರತಿಭಟನೆಯುಂಟಾಯಿತು. ಬ್ರಹ್ಮಶಿವ, ನಯಸೇನ, ವೃತ್ತವಿಲಾಸ ಇವರು ಪ್ರಾಚೀನ ಸಂಪ್ರದಾಯದಿಂದ ಹೊರಚ್ಚಾಗಿ ನಿಂತರು. ಅನ್ಯಮತ ವಿಡಂಬನೆಯಲ್ಲಿ ತೊಡಗಿದರು. ಇವರ ಕಾಲಕ್ಕಾಗಲೇ ಕನ್ನಡಕಾವ್ಯಗಳಲ್ಲಿ ಕನ್ನಡ ಸಂಸ್ಕೃತ ಪದಗಳ ಕಲಬೆರಕೆಯುಂಟಾಗಿತ್ತು. ಆದ್ದರಿಂದಲೇ ನಯಸೇನ:

"ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ‖"

"ಸಕ್ಕದಮಂ ಪೇಳ್ವೊಡೆ ನೆರೆ
ಸಕ್ಕದಮಂ ಪೇಳ್ಗೆ ಸುದ್ದಗನ್ನಡದೊಳ್ ತಂ|
ದಿಕ್ಕುವುದೇ ಸಕ್ಕದಮಂ
ತುಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ‖"

ಈ ರೀತಿ ಪ್ರಶ್ನಿಸಿದ್ದಾನೆ.

ಇದಾದ ಮೇಲೆ ಹನ್ನೆರಡನೆಯ ಶತಮಾನದಲ್ಲಿ ಈ ಸಂಪ್ರದಾಯಕ್ಕೆ ಪ್ರಬಲವಾದ ಪ್ರತಿಭಟನೆಯುಂಟಾಗಿ ಅದು ಒಂದು ಹೊಸ ಹಾದಿಯನ್ನೇ ಹಿಡಿಯಿತು. ಇದಕ್ಕೆ ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳೇ ಕಾರಣವಾಗಿದ್ದುವು. ಹಿಂದಿನ ವ್ಯಾಕರಣ ಛಂಧಸ್ಸುಗಳ ನಿಯಮಗಳು ಸಡಿಲವಾದುವು. ಇದರ ಫಲವಾಗಿ ಅನೇಕ ವಚನಕಾರರು ಸುಲಭವಾದ ಸರಳವಾದ ಶೈಲಿಯಲ್ಲಿ ವಚನಗಳನ್ನು ರಚಿಸಿದರು. ಜನಸಾಮಾನ್ಯಕ್ಕೆ ಈ ವಚನಸಾಹಿತ್ಯ ಸುಲಭವಾಗಿ ಅರ್ಥವಾಗುವಂತಾಯಿತು. ಉದಾಹರಣೆಗೆ ವಚನಕಾರರಲ್ಲಿ ಅಗ್ರೇಶ್ವರನಾದ ಬಸವೇಶ್ವರನ ಒಂದು ವಚನವನ್ನು ನೋಡಬಹುದು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ ;
ಇದೇ ಕೂಡಲ ಸಂಗಮದೇವನನೊಲಿಸುವ ಪರಿ."

ಗಂಡಸರ ಮಾತಂತಿರಲಿ ಹೆಂಗಸರೂ ಕೂಡ ವಚನಗಳನ್ನು ರಚಿಸಿದುದು ಅಂದಿನ ಒಂದು ವೈಶಿಷ್ಟ್ಯ. ಈ ಸುಮಾರಿಗೆ ಹುಟ್ಟಿಕೊಂಡ ಮತ್ತೊಬ್ಬ ಭಕ್ತಕವಿ ಹರಿಹರ ಕನ್ನಡ ಸಾಹಿತ್ಯದಲ್ಲಿ ಒಂದು ಕ್ರಾಂತಿಯನ್ನೇ ಮಾಡಿದನು. ಭಾಷೆ, ವಿಷಯ, ಛಂದಸ್ಸು ಇವುಗಳಲ್ಲಿ ಒಂದು ಹೊಸಮಾರ್ಗವನ್ನೇ ತೆರೆದನು. "ರಗಳೆ" ಛಂದಸ್ಸಿನಲ್ಲಿ ತನ್ನ ಕಾವ್ಯಗಳನ್ನು ಬರೆದು "ರಗಳೆಯ ಕವಿ" ಎಂದು ಬಿರುದನ್ನು ಪಡೆದನು. ಅಲ್ಲದೆ ಹಿಂದಿನಿಂದ ಬಂದಿದ್ದ ಱಟಕುಳಕ್ಷಳಗಳನ್ನು ಪ್ರಾಸಸ್ಥಾನದಲ್ಲಿ ನೋಡಬೇಡ ಎಂದು ಘಂಟಾಘೋಷವಾಗಿ ಸಾರಿದನು.

"ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ |
ಕೂಡ ಕವಿತತಿ ವಿಚಾರಿಸ
ಬೇಡದಱುಂ ಱಟಕುಳಕ್ಷಳಂಗಳನಿದಱೊಳ್ ||"

ಜೈನಕವಿಗಳು ಸಾಮಾನ್ಯವಾಗಿ ತಮ್ಮ ಮತಪ್ರಚಾರಕ್ಕಾಗಿ, ಆಶ್ರಯದಾತ ಪ್ರಭುವಿನ ಪ್ರಶಂಸೆಗಾಗಿ, ಪಂಡಿತ ಮಂಡಲಿಯ ಮೆಚ್ಚುಗೆಗಾಗಿ ತಮ್ಮ ಕಾವ್ಯಗಳನ್ನು ಬರೆಯುತ್ತಿದ್ದುದು ಸಂಪ್ರದಾಯವಾಗಿತ್ತು. ಆದರೆ ಹರಿಹರನಾದರೋ ಈ ಸಂಪ್ರದಾಯವನ್ನು ಕಿತ್ತೊಗೆದು: "ಮನುಜರ ಮೇಲೆ ಸಾವವರ ಮೇಲೆ ಕನಿಷ್ಟರ ಮೇಲೆ ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಮೇಣ್ ಅನವರತಂ ಪೊಗಳ್ದು ಕೆಡಬೇಡಲೆ ಮಾನವ" ಎಂದು ಜನತೆಯನ್ನು ಎಚ್ಚರಿಸಿದ್ದಾನೆ. ಈತನಂತೆಯೇ ರಾಘವಾಂಕನೂ ಕೂಡ ತನ್ನ ಕೃತಿಗಳನ್ನೆಲ್ಲಾ ಷಟ್ಪದಿಗಳಲ್ಲೇ ರಚಿಸಿ ಸಂಪ್ರದಾಯದಲ್ಲಿ ಒಂದು ಹೊಸ ದಾಖಲೆಯನ್ನು ಸ್ಥಾಪಿಸಿದನು.

ಹರಿಹರ ರಾಘವಾಂಕರಾದ ಮೇಲೆ ಬಂದ ಆಂಡಯ್ಯ ಎಂಬ ಕವಿ ತನ್ನ 'ಕಬ್ಬಿಗರ ಕಾವ'ದಲ್ಲಿ ಸಂಸ್ಕೃತ ಶಬ್ದಗಳನ್ನೇ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ದೇಶ್ಯ ತದ್ಭವ ಶಬ್ದಗಳಿಂದಲೇ ತನ್ನ ಕಾವ್ಯವನ್ನು ರಚಿಸಿದನು. ಆ ತರುವಾಯ ಬಂದ ಕವಿಗಳಲ್ಲಿ ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರು ತಮ್ಮ ಕಾವ್ಯಗಳಲ್ಲಿ ದೇಶ್ಯ ಶಬ್ದಗಳ ಜೊತೆಗೆ ಅನ್ಯದೇಶ್ಯ ಶಬ್ದಗಳನ್ನೂ ವಿಪುಲವಾಗಿ ಬಳಸಿದರು. ಲಕ್ಷ್ಮೀಶನಾದರೋ ತನ್ನ ಕಾವ್ಯದ ಬಗ್ಗೆ "ವಿನೂತನ ಕವಿತೆಯೆಂದು ಕುಂದಿಟ್ಟು ಜರೆದೊಡೆ ಪೇಳ್ದವನೊಳಾವುದೂಣೆಯಂ" ಎಂದು ಪ್ರಶ್ನಿಸಿದ್ದಾನೆ. ಇವರಾದ ಮೇಲೆ ಬಂದ ರತ್ನಾಕರವರ್ಣಿ, ಗೋವಿಂದ ವೈದ್ಯ ಮೊದಲಾದ ಸಾಂಗತ್ಯಕಾರರು ತಮ್ಮ ದೇಶೀಯತನವನ್ನು ಉಳಿಸಿಕೊಂಡು ಬಂದರು.

ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ದಾಸಪಂಥ ತಲೆಯೆತ್ತಿ ಪ್ರಾಚೀನ ಸಂಪ್ರದಾಯ ಮಾರ್ಗವನ್ನೇ ಬದಿಗೊತ್ತಿತು. ವೇದಾಗಮ ಪುರಾಣಗಳಲ್ಲಿ ಅಡಗಿದ್ದ ಗಹನ ಗೂಢ ತತ್ತ್ವಗಳನ್ನು ದಾಸರು ತಮ್ಮ ಕೀರ್ತನೆ, ಪದ, ಸುಳಾದಿ, ಹಾಡುಗಳ ಮೂಲಕ ಕರ್ಣಾಟಕದ ಮನೆ ಮನೆಗೆ ತಲಪಿಸಿದರು. ಕರ್ಣಾಟಕ ಸಂಗೀತ ಪರಂಪರೆಗೆ ಸ್ಥಿರವಾದ ಬುನಾದಿಯನ್ನು ಹಾಕಿದರು. ಇವರಲ್ಲಿ ಪುರಂದರದಾಸ, ಕನಕದಾಸರು ಸುಪ್ರಸಿದ್ಧರು.

ಈ ಮಧ್ಯೆ ಹದಿನಾರನೆಯ ಶತಮಾನದಲ್ಲಿ ಚಂಪೂ ಮಾರ್ಗ ಮತ್ತೊಮ್ಮೆ ಪ್ರಾಚುರ್ಯಕ್ಕೆ ಬಂದಿತು. ಈ ಶತಮಾನದ ಧೀಮಂತ ಕವಿ ಷಡಕ್ಷರದೇವ ತನ್ನ ಕೃತಿಗಳನ್ನು ಸಂಸ್ಕೃತ ಭೂಯಿಷ್ಠವಾದ ಪ್ರೌಢ ಚಂಪೂಶೈಲಿಯಲ್ಲಿ ರಚಿಸಿದನು. ಈತನ ಪ್ರೌಢಶೈಲಿಗೆ ರಾಜಶೇಖರವಿಳಾಸದ ಒಂದು ಪದ್ಯವನ್ನು ನೋಡಬಹುದು.

ಅಂಭ: ಕುಂಭೀನ ಕುಂಭೀನಸನುಕರಮುಹಾಕೂರ್ಮ
ಕೀರ್ಣೋರ್ಮಿಮಾಲಾ
ಜೃಂಭದ್ದಂಭೋಳಿ ಹಸ್ತೌಹತ ಚಕಿತಗತಕ್ಷ್ಮಾಭೃ
ವಿಸ್ಫಾರ ವಿದ್ಯು-
ತ್ಸಂಭಿನ್ನಾಂಭೋಭೃದುದ್ಯತ್ತಟಚಟುಳಚಳನ್ಮೀನ ಫೇನ
ಪ್ರತಾನಂ
ಶುಂಭದ್ಗಂಭೀರಿಮಂ ರಂಜಿಸಿದುದಮಿಮ
ದತ್ತೇಂದ್ರಭದ್ರಂ ಸಮುದ್ರಂ.

ಇದು ಸಮುದ್ರದ ವರ್ಣನೆ. ಇಲ್ಲಿ ಸಮುದ್ರ ಎಂಬುದನ್ನು ಬಿಟ್ಟು ಸುಲಭವಾಗಿ ಮತ್ತೇನೂ ಅರ್ಥವಾಗುವಂತೆಯೇ ಇಲ್ಲ.

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಪರಿಚಯ ಪ್ರಭಾವದಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ದೃಷ್ಟಿಯುಂಟಾಗಿ ಹೊಸ ಹಾದಿ ನಿರ್ಮಾಣವಾಯಿತು. ಪ್ರಾಚೀನ ಸಂಪ್ರದಾಯ ಕೊನೆಗೊಂಡಿತು. ನೂತನ ಸಂಪ್ರದಾಯ ಅಸ್ತಿತ್ವಕ್ಕೆ ಬಂದಿತು.

ಕನ್ನಡ ಕಾವ್ಯಗಳಿಗೆ ಪ್ರಾಸ ಅನಿವಾರ್ಯವಾದ ಅಪರಿಹಾರ್ಯವಾದ ಅಂಗ. ಪ್ರಾಸವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಅದನ್ನು ಬರೆದವನು ಕವಿಯೇ ಅಲ್ಲ ಎಂಬ ಅಭಿಪ್ರಾಯ ಪ್ರಾಚೀನರಲ್ಲಿ ಬೇರೂರಿತ್ತು. "ಪ್ರಾಸವಿಲ್ಲದ ಹಾಡು ತಾಸು ಹಾಡಿದರೇನು?" ಎಂದು ದಾಸರು ಕೂಡ ಮೂಗು ಮುರಿದಿದ್ದಾರೆ. ಇದಕ್ಕೆ ಪ್ರತಿಭಟನೆಯೋ ಎನ್ನುವಂತೆ "ಪ್ರಾಸಕ್ಕೆ ದಾಸರಾಗಿ ಭಾವಕ್ಕೆ ಸಾವು ತಂದರು" ಎಂಬ ಹೊಸಪಂಥ ಹುಟ್ಟಿಕೊಂಡಿತು. ಈ ಪ್ರಾಸ ನಿಯಮವನ್ನು ಉಲ್ಲಂಘಿಸಿದ ಆಧುನಿಕರಲ್ಲಿ ಶ್ರೀ ಗೋವಿಂದ ಪೈಗಳವರೇ ಮೊದಲಿಗರು. ಅವರು ಪ್ರಾಸದ ಬಗ್ಗೆ "ಕನ್ನಡಕ್ಕೆ ಪ್ರಾಸವೇನೂ ವೇದವಾಕ್ಯವೂ ಅಲ್ಲ, ಶಾಶ್ವತವೂ ಅಲ್ಲ. ಅದನ್ನು ಬೇಕಾದಂತೆ ಬೇಕಾದಾಗ ಬಿಟ್ಟುಬಿಡಬಹುದು. ಅತ ಏವ ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ ಛಂದಸ್ಸನ್ನೂ ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂ ಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ. ಬೇಕಾದವರು ಈ ಹೊಸಹಾದಿ ಹಿಡಿಯಲಿ. ಬೇಡದವರು ಹಳೆಯ ಹಾದಿಯಲ್ಲಿಯೇ ನಡೆಯಲಿ. ಮತ್ತು ಇಂದು ಒಬ್ಬನೇ ನಡೆವ ಮೋಕೆದಾರಿಯೇ ಮುಂದೆ ತೇರು ಎಳೆವ ಹೆದ್ದಾರಿ" ಎಂದು ಒಂದು ಕಡೆ ಹೇಳಿದ್ದಾರೆ.

ಶತಮಾನಗಳ ಸಂಪ್ರದಾಯವನ್ನು ಹಳೆಯತನವನ್ನು ಕಿತ್ತೊಗೆಯಲು ಕನ್ನಡದ ಅಂತರಂಗದಲ್ಲಿಯೂ ಪ್ರತಿಭಟನೆ ಕ್ರಾಂತಿ ನಡೆಯುತ್ತಲೇ ಇತ್ತು. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ವಿಕ್ರಮವನ್ನು ಸ್ಥಾಪಿಸಿದವರು ದಿವಂಗತ ಬಿ. ಎಂ. ಶ್ರೀಕಂಠಯ್ಯನವರು. ಅವರ ಇಂಗ್ಲಿಷ್ ಗೀತೆಗಳು ಆಧುನಿಕ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸದೊಂದು ಹೆದ್ದಾರಿಯನ್ನು ನಿರ್ಮಿಸಿತು.

ಕನ್ನಡ ಕಾವ್ಯಪ್ರಪಂಚದಲ್ಲಿ ಹೊಸಮಾರ್ಗವು ತೆರೆದು ಸುಮಾರು ಅರ್ಧಶತಮಾನವಾಯಿತು. ಭಾಷೆ, ವಿಷಯ, ಛಂದಸ್ಸು ಇವುಗಳ ಪರಿವರ್ತನೆ ಕನ್ನಡಿಗರಿಗೆ ಒಗ್ಗಬೇಕಾದರೆ ಸಹಜವಾಗಿ ಕೆಲಕಾಲ ಕಳೆಯಬೇಕಾಗುತ್ತದೆ. "ಕಾವ್ಯರಮಣಿ ಪಾಂಡಿತ್ಯದ ಸಿಂಹಾಸನದಿಂದ ಇಳಿದು ಜನಮಧ್ಯದಲ್ಲಿ ವಿಹರಿಸಬೇಕಾದರೆ ಆಕೆ ಹೊಸಗನ್ನಡದ ಉಡುಗೆಯನ್ನೇ ಧರಿಸಬೇಕು. ಹೊಸಗನ್ನಡದಲ್ಲಿ ಕ್ಲಿಷ್ಟವಾದ ಸಂಸ್ಕೃತ ಪದಗಳಿಗೂ ಆಡಂಬರದ ಸಮಾಸಗಳಿಗೂ ಅವಕಾಶವಿಲ್ಲ. ಲೋಕದಲ್ಲಿ ಪರಮ ಪ್ರಿಯವಾದ ವಸ್ತುಗಳು ಕೂಡ ತಮ್ಮ ಕಾಲ ಕಳೆದಮೇಲೆ ಗತಿಸಲೇಬೇಕು" ಎಂಬ ಆಚಾರ್ಯ ತೀ.ನಂ.ಶ್ರೀ ಅವರ ನುಡಿ ಯಥಾರ್ಥವಾದುದು.

ಕಾಲಕ್ರಮದಲ್ಲಿ ಪ್ರಾಚೀನ ಸಂಪ್ರದಾಯ ಹೊಸ ಪ್ರತಿಭಟನೆಗೆ ಎಡೆಮಾಡಿಕೊಟ್ಟಿತು. ಹಳತು ಹೊಸದಕ್ಕೆ ನಾಂದಿಯಾಯಿತು. ಇದರಿಂದ ಕನ್ನಡ ಸಾಹಿತ್ಯ ಸರ್ವಾಂಗ ಪರಿಪೂರ್ಣವಾಯಿತು; ಈ ಪರಿವರ್ತನೆ ಕಾಲದೃಷ್ಟಿಯಿಂದ ಅನಿವಾರ್ಯವಾಯಿತು. ಇದು ಸೃಷ್ಟಿಯ ನಿಯಮ ಎನ್ನಬಹುದು.

(ಆಕಾಶವಾಣಿ ಕೃಪೆಯಿಂದ)

ತೆಲುಗು ಕವಿತೆಯಲ್ಲಿ ನವ್ಯತೆ

‘ದಿಗಂಬರ ಪೀಳಿಗೆ’

ಮೂಲ (ಹಿಂದೀ) : ದಂಡಮೂಡಿ ಮಹೀಧರ

ಅನುವಾದ : “ವಿದ್ಯಾರ್ಥಿ”

ಈಚೆಗೆ ಕೆಲಸಮಯದಿಂದ ತೆಲುಗು ಕವಿತೆಯಲ್ಲಿ ವಿವಿಧ ನವೀನ ಪ್ರವೃತ್ತಿಗಳ ದರ್ಶನವಾಗುತ್ತಿದೆ. ಈ ಪ್ರವೃತ್ತಿಗಳು ದೈನಂದಿಕ ನಿತ್ಯ ನೂತನ ಬದಲಾವಣೆಗಳಿಂದ ರೂಪಗೊಂಡು ಮುಂಬರುತ್ತಿವೆ. ಸಮಕಾಲೀನ ಕವಿಗಳಲ್ಲಿ ಅನೇಕರು ತಮ್ಮ ಹಿಂದಿನ ಕಾವ್ಯ ಪರಂಪರೆಯ ವಿದ್ರೋಹಿಗಳಾಗಿ ಭಾಷೆ, ಭಾವ, ಛಂದಸ್ಸು, ಅಭಿವ್ಯಂಜನೆ ಮತ್ತು ಕಾವ್ಯಪ್ರತೀಕಗಳಲ್ಲಿ ಹೊಸ ಹೊಸ ಪ್ರಯೋಗಗಳಿಗೆ ತಮ್ಮ ಕೃತಿಗಳಲ್ಲಿ ಆಶ್ರಯ ಕೊಡುತ್ತಿದ್ದಾರೆ.

ಈ ಬಗೆಯ ಕ್ರಾಂತಿದರ್ಶನ ತೆಲುಗು ಕವಿತೆಯಲ್ಲಿ ಶ್ರೀ. ಶ್ರೀ. ಕವಿಯೊಂದಿಗಾಯಿತು. (ಇವರ ಪೂರ್ಣನಾಮ ಶ್ರೀರಂಗಂ ಶ್ರೀನಿವಾಸರಾವ್. ಕಳೆದ ತಿಂಗಳು ಇವರ ‘ಖಡ್ಗಸೃಷ್ಟಿ’ ಕವನ ಸಂಕಲನಕ್ಕೆ ‘ಸೋವಿಯತ್ ದೇಶ’ ನೆಹರೂ ಪುರಸ್ಕಾರ ಸಮಿತಿಯ ಪ್ರಥಮ ಸಾಹಿತ್ಯಪುರಸ್ಕಾರ ಲಭಿಸಿದೆ) ತಮ್ಮ ‘ಮಹಾಪ್ರಸ್ಥಾನಂ’ ಸಂಕಲನದ ಮೂಲಕ ಶ್ರೀ. ಶ್ರೀ. ತೆಲುಗು ಕವಿತೆಯಲ್ಲಿ ನವ್ಯತೆಯ ನಾಂದಿಯನ್ನು ಹಾಡಿದರಲ್ಲದೆ ಅದರ ಆದ್ಯಪ್ರವರ್ತಕರೂ ಆದರು. ‘ಮಹಾಪ್ರಸ್ಥಾನಂ’ ಸಂಕಲನದ ಎಲ್ಲ ಕವನಗಳೂ ಸರ್ವದೃಷ್ಟಿಯಿಂದಲೂ ನವ್ಯ ಮಾರ್ಗವೊಂದನ್ನು ಪ್ರತಿನಿಧಿಸುತ್ತವೆ.

ಇದೇ ಮಾರ್ಗವನ್ನನುಸರಿಸಿ ಹಲವು ಕವಿಗಳು ನವ್ಯ ರಚನೆಯ ವಿಭಿನ್ನ ರೀತಿ-ನೀತಿಗಳನ್ನೂ, ಕಾವ್ಯಾಭಿವ್ಯಕ್ತಿಯ ಶೈಲಿಗಳನ್ನೂ ಸ್ವೀಕರಿಸಿ, ಹೊಸ ಮಾರ್ಗವೊಂದರ ಪರಿಚಾಯಕರಾಗಿದ್ದಾರೆ. ಸರ್ವಶ್ರೀ ಅ. ಸುಬ್ಬರಾವ್, ಕುಂದುರ್ತಿ ಆಂಜನೇಯುಲು, ಬೆಲ್ಲಮಕೊಂಡ ರಾಮದಾಸ್, ಎಲ್ಚೂರಿ ಸುಬ್ರಮಣ್ಯಂ, ಸೋಮಸುಂದರ್, ಬಾಲಗಂಗಾಧರ ತಿಲಕ್, ಬೈರಾಗಿ, ಸಿ. ನಾರಾಯಣರೆಡ್ಡಿ, ದಾಶರಥಿ, ಆರುದ್ರ, ರಮಣಾರೆಡ್ಡಿ, ಅಜಂತಾ—ಇವರು ಆ ಪೀಳಿಗೆಯ ಕೆಲವು ಪ್ರಖ್ಯಾತ ಕವಿಗಳು.

ಇವರ ನಂತರ ತೆಲುಗು ಕವಿತಾಧಾರೆಗೆ ನೂತನ ರೂಪವೊಂದನ್ನು ಕೊಡಲು ನವ್ಯ ಕವಿಗಳ ಹೊಸ ಗುಂಪೊಂದು ಪ್ರಯತ್ನಿಸುತ್ತಿದೆ. ಪೂರ್ವ ಪರಂಪರೆಯ ಬಗೆಗೆ ಅತೃಪ್ತ-ಅಸಂತೃಪ್ತರಾಗಿ, ನವ್ಯ ಕಾವ್ಯದಲ್ಲಿ ವಿಶ್ವಾಸವಿಟ್ಟು, ಕಾವ್ಯ ಸತ್ತ್ವ ಹಾಗೂ ಸತ್ಯಗಳನ್ನು ತಮ್ಮ ಪ್ರತಿಭೆಯ ಮೂಲಕ ದರ್ಶಿಸಲು ಇವರು ನಿಶ್ಚಯಿಸಿದ್ದಾರೆ. ವಿವಿಧ ಮಾನಸಿಕ ಸ್ತರಗಳಿಗೆ, ಪರಿಸ್ಥಿತಿಗಳಿಗೆ ಅತ್ಯಾಧುನಿಕವೆನ್ನಬಹುದಾದ ನವೀನ ಉಪಮೆಗಳನ್ನೀಯುತ್ತ, ನವೀನ ಭಾವನೆಗಳನ್ನು ಆ ಬಗೆಯಲ್ಲಿ ವ್ಯಕ್ತಪಡಿಸಲು ಸಂಕಲ್ಪಿಸಿ, ನವ್ಯಮಾರ್ಗವನ್ನು ಮುಂದುವರೆಸಲು ಸಹಕರಿಸುತ್ತಿದ್ದಾರೆ.

ನವಪೀಳಿಗೆಯ ಈ ಗುಂಪಿನಲ್ಲಿ ಬೆರೆತು, ಆಧುನಿಕ ತೆಲುಗು ಕವಿತೆಯ ನವ್ಯದಿಶೆಯನ್ನು ಗುರುತಿಸಿ, ಗ್ರಹಿಸಿ ನವ್ಯಸೃಷ್ಟಿಯ ಪರಂಪರೆಯನ್ನು ಸೃಜಿಸಲು, ಸ್ಥಿರೀಕರಿಸಲು ಬಯಸಿದ ಕವಿಗಳಿವರು : ಸರ್ವಶ್ರೀ ಗೋಪಾಲ ಚಕ್ರವರ್ತಿ, ಸುಪ್ರಸನ್ನ, ಸಂಪನ್ನಕುಮಾರ್, ಮಾದಿರಾಜು ರಂಗಾರಾವ್, ಅರಪಿರಾಲ್ ವಿಶ್ವಂ, ವರವರರಾವ್, ಕೇಶವರಾವ್, ಯಾದವರೆಡ್ಡಿ, ಮನಮೋಹನ ಸಹಾಯ್, ಬದ್ದಂ, ಭಾಸ್ಕರರೆಡ್ಡಿ, ರಾಘವಾಚಾರಿ, ಕಮ್ಮಿಸೆಟ್ಟಿ ವೆಂಕಟೇಶ್ವರರಾವ್ ಇತ್ಯಾದಿ.

ಮೇಲೆ ಉಲ್ಲೇಖಿಸಿದವರಲ್ಲಿ ಕಡೆಯ ಆರು ಜನ ಕವಿಗಳು— ಕೇಶವರಾವ್, ಯಾದವರೆಡ್ಡಿ, ಮನಮೋಹನ ಸಹಾಯ್, ಬದ್ದಂ ಭಾಸ್ಕರರೆಡ್ಡಿ, ರಾಘವಾಚಾರಿ, ಕಮ್ಮಿಸೆಟ್ಟಿ ವೆಂಕಟೇಶ್ವರರಾವ್— ತಮ್ಮ ಗುಂಪಿನಿಂದ ಹೊರಗಾಗಿ, ಬೇರೊಂದು ನೂತನ ಮಾರ್ಗಾನ್ವೇಷಣೆಯಲ್ಲಿ ತೊಡಗಿದ್ದಾರೆ. ಇವರು ‘ದಿಗಂಬರ ಪೀಳಿಗೆ’ ಎಂಬ ಹೆಸರಿನ ಹೊಸ ಆಂದೋಲನವನ್ನು ಪ್ರಾರಂಭಿಸಿದ್ದಾರೆ. ಸಮಾನವಯಸ್ಕರಾದ ಈ ತರುಣ ಕವಿಗಳು ಹಿಂದಿನ ಪರಂಪರಾವಾದಿ ಹಾಗೂ ಸಮಕಾಲೀನ ರೊಮ್ಯಾಂಟಿಕ್ ಸಂಪ್ರದಾಯದ ಕವಿಗಳನ್ನು ಹಿಂದೂಡಲು ಅವರ ವಿರುದ್ಧ ದನಿಯೆಬ್ಬಿಸಿ, ತೆಲುಗು ಕವಿತೆಯಲ್ಲಿ ಅತ್ಯಾಧುನಿಕ ಮಾರ್ಗವನ್ನು ಸ್ಥಾಪಿಸಲು ನಿಶ್ಚಯಿಸಿದ್ದಾರೆ.

ಅದಕ್ಕನುಗುಣವಾಗಿ ತಮ್ಮ ಕವಿತಾ ಮಾರ್ಗಕ್ಕೆ ದಿಗಂಬರ ಕವಿತೆ’ ಎಂದು ಸಂಜ್ಞೆಯಿತ್ತು, ‘ದಿಗಂಬರ-ಕವಲು’ ಎಂಬ ಹೆಸರಿನಲ್ಲಿ ಇಪ್ಪತ್ತೊಂದು ಕವಿತೆಗಳನ್ನೊಳಗೊಂಡ ಸಂಕಲನವನ್ನು ಪ್ರಕಟಿಸಿದ್ದಾರೆ.

'ದಿಗಂಬರ ಕವಲು' ಸಂಕಲನದ ಪ್ರಕಟಣೆ ತೆಲುಗು ಕವಿತೆಯ ಇತಿಹಾಸದಲ್ಲಿನ ಮಹತ್ವಪೂರ್ಣ ಘಟನೆಯಾಗಿದೆ. ಈ ಸಂಕಲನದಲ್ಲಿ ಕೇಶವರಾವ್, ಯಾದವರೆಡ್ಡಿ, ರಾಘವಾಚಾರಿ, ಭಾಸ್ಕರರಾವ್, ಮನಮೋಹನ ಸಹಾಯ್ ಮತ್ತು ಕಮ್ಮಿಸೆಟ್ಟಿ ವೆಂಕಟೇಶ್ವರರಾವ್—ಇವರ ಕವನಗಳಿವೆ. ಈ ಆರು ಮಂದಿಯೂ ತಮ್ಮ ಹೆಸರನ್ನು ಕ್ರಮಶಃ ಹೀಗೆ ಬದಲಾಯಿಸಿಕೊಂಡಿದ್ದಾರೆ: ನಗ್ನಮುನಿ, ನಿ ಖಿ ಲೇ ಶ್ವ ರ, ಜ್ವಾಲಾಮುಖಿ, ಚೇರಬಂಡರಾಜು, ಭೈರವಯ್ಯ, ಮತ್ತು ಮಹಾಸ್ವಪ್ನ.

ಈ ಕವನ ಸಂ ಕ ಲ ನ ದ ಉದ್ಘಾಟನೆ—ಬಿಡುಗಡೆಯ ಸಮಾರಂಭ—೧೯೬೫ನೇ ಮೇ ತಿಂಗಳ ೬ನೇ ದಿನಾಂಕ, ರಾತ್ರಿಯ ಹನ್ನೆರಡು ಗಂಟೆಗೆ ಸರಿಯಾಗಿ ನಾಮಪಲ್ಲೀ ಪಾಂಡು ಎಂಬ ರಿಕ್ಷಾವಾಲನ ಹಸ್ತದಿಂದ ನೆರವೇರಿಸಲ್ಪಟ್ಟಿತು. ತಮ್ಮ ಕವನ ಸಂಕಲನ, 'ದಿಗಂಬರ ಕವಲು'ವಿನ ಮುನ್ನುಡಿಯಲ್ಲಿ ಅವರು ಹೀಗೆ ಬರೆದಿದ್ದಾರೆ.

"ದಿಗಂಬರ ಪೀಳಿಗೆಯಲ್ಲಿ ನಮ್ಮ ಹೆಸರುಗಳಿಂದಲೇ ಪ್ರಸಿದ್ಧವಾಗುವ ಆರು ವರ್ಷಗಳಿರುತ್ತವೆ. ನಾವು ಸ್ವೀಕರಿಸುವ ಆರು ಋತುಗಳ ಹೆಸರು—ಆಶಾಋತು, ಜ್ವಾಲಾಋತು, ಅಶ್ರುಋತು, ಮದಿರಾಋತು, ವಿರಹಋತು ಮತ್ತು ವಿಷಾದ ಋತು. ಸ್ನೇಹವಾರ, ಉಚ್ಛೃಂಖಲವಾರ, ಕ್ರಾಂತಿವಾರ, ಸೃಷ್ಟಿವಾರ, ವಿಕಾಸವಾರ ಮತ್ತು ಅನಂತವಾರಗಳೇ ನಾವು ಪರಿಗಣಿಸಿರುವ ದಿನಗಳು.

"ಉಸಿರಾಡಬಲ್ಲ ಪ್ರತ್ಯೇಕ ವ್ಯಕ್ತಿಯ ಅಸ್ತಿತ್ವವನ್ನು ಅವಿಕೃತಗೊಳಿಸದಿರಲು ಹಾಗೂ ಅವನಲ್ಲಡಗಿರುವ ಅಶಾಂತಿ, ಅಸಂತೋಷವನ್ನು ಅಭಿವ್ಯಕ್ತಿಗೊಳಿಸುವುದರ ಮೂಲಕ ಅವನಲ್ಲಿ ಹೊಸ ಆಶಾಕಿರಣಗಳನ್ನು ಅಂಕುರಿಸುವುದೇ ನಮ್ಮ ಗುರಿ. ಅಶ್ಲೀಲತೆ, ಅಪರಾಧ, ವಿಕಾರಾದಿಗಳಿಂದ ಮಾನವನನ್ನು ಮುಕ್ತಗೊಳಿಸುವುದೇ ನಮ್ಮ ಧ್ಯೇಯವಾಗಿದೆ . . .

"ನವ್ಯ ಪಂಥದಲ್ಲಿ ಇಂದು ಅಗ್ರಪಂಕ್ತಿಯನ್ನು ಪಡೆದಿರುವ ಕವಿಗಳನ್ನು ಕಂಡು ಹುಬ್ಬುಗಂಟಿಕ್ಕಿ, ಮೂಗು ಮುರಿಯುವ, ಹಳೆಯ ಪರಂಪರೆಯಲ್ಲಿಯೇ ವಿಶ್ವಾಸವಿಟ್ಟು ಅದಕ್ಕೇ ಅಂಟಿಕೊಂಡಿರುವುದರಿಂದ ನವ್ಯಪಂಥದವರನ್ನು ಭ ರ್ತ್ಸ ನೆ ಯ ದೃಷ್ಟಿಯಿಂದ ಕಾಣುವ, ಹಳೆಯ ಸರಕನ್ನೇ ಪ್ರಕಾಶಿಸುವ ಪತ್ರಿಕಾ ವರ್ಗದವರೊಡನೆ ಒಪ್ಪಂದ ಮಾಡಿಕೊಂಡು, ಅವರ ಪ್ರಶಂಸೆಯಲ್ಲಿಯೇ ತೊಡಗಿರುವ, ಹಳೆಯ ಗ ಣಿ ಕೆ ಯ ಲ್ಲಿ ಸೇರಿಹೋಗಿ ಇಂದು ಹಳಸಾಗಿ ಕ್ಷೀಣಿಸಿದ ನಿಸ್ತೇಜ ಉಪಮೆ, ಪ್ರಾಸ, ಛಂದಗಳ ಬಂಧಗಳಲ್ಲಿಯೇ ಸಿಲುಕಿರಲು ಇಚ್ಛಿಸುವ ಆ ವಯೋವೃದ್ಧ 'ಅಂಗ್ಲ'ರಿಗೊಂದು ಮಾತು:

"ಇಂದು ಪರಿಸ್ಥಿತಿ ಬದಲಾಗಿದೆ . . . ತೆಲುಗು ಕವಿತೆಯ ದಿಕ್ಕು ಬದಲಾಗಿದೆ . . . ನವೀನ ಭಾವನೆಗಳೊಂದಿಗೆ ನವೀನ ಮೌಲ್ಯಮಾಪನಗಳ ಸ್ಥಾಪನೆಯಾಗಿದೆ; ನವಜೀವನ ಬೋಧನೆಯ ಮೌಲ್ಯ ನಿರ್ಣಯಕ್ಕಾಗಿ ಹೊಸ ಪೀಳಿಗೆಯ ಆಗಮನವಾಗಿದೆ.

"ದಿಗಂಬರ ಕವಿಗಳು ಆರು ಜ ನ ರಿ ದ್ದೇ ವೆ. ನಾವು ಮುಚ್ಚು-ಮರೆ ಬಯಸುವವರಲ್ಲ; ಸಹಜರೂಪದಿಂದ ಪ್ರಕಟಿತರಾಗಲಿಚ್ಛಿಸುತ್ತೇವೆ. ನಮ್ಮ ಬಳಿ ಇನಿತೂ ಮುಚ್ಚು-ಮರೆಯಿಲ್ಲ. ಕಾಪಟ್ಯರಹಿತರಾಗಿ ನೈಜವಾಗಿ ವರ್ತಿಸಿರೆಂದೇ ಸುತ್ತಲ ಜತೆಗಾರರಿಗೆ ನಮ್ಮ ಹೇಳಿಕೆ. ತಮ್ಮ ಮುಖದಲ್ಲಿನ ಕಪಟ ಮನೋಭಾವನೆಗಳನ್ನು ಕಳಚಿ ಬಿಸುಟು, ನೈಜಸ್ವರೂಪವನ್ನು ಜಗದೆದುರು ಪ್ರದರ್ಶಿಸಲಿ. ಸತ್ಯ ತನ್ನ ಯಥಾರ್ಥ ರೂಪದಲ್ಲಿಯೇ ಪ್ರಕಾಶಿತವಾಗಲಿ. ನಾವು ಅಪ್ರಯೋಜಕವಾದ ಮಾತುಗಳನ್ನರುಹಲಾರೆವು. ಜೀವನದಲ್ಲಿ ಗಳಿಸಿದ ಸಮಸ್ತ ಅನುಭವಗಳೊಂದಿಗೆ ನಮ್ಮನ್ನು ನಾವು ತೋರ್ಪಡಿಸಿಕೊಳ್ಳ ಬಯಸುತ್ತೇವೆ. ಶಂಕರಾಚಾರ್ಯರು ಹೀಗೆಂದಿದ್ದಾರೆ; ಜೀನ್‌ಪಾಲ್‌ಸಾರ್ತ್ರೆ ಹಾಗೆಂದಿದ್ದಾನೆ—ಈ ಬಗೆಯ ಉಕ್ತಿಗಳ ಉದ್ಧರಿಸುವಿಕೆಯಲ್ಲಿ ನಮಗೆ ತಿರಸ್ಕಾರ. ನಮ್ಮ ನಿಜ ಮನೋಸಂವೇದನೆಗಳನ್ನು ಸ್ವೀಕೃತ ಭಾ ವ ನೆ ಗ ಳ ಮೂಲಕ ವ್ಯಕ್ತಪಡಿಸಿ, 'ತಮ್ಮತನ'ವನ್ನು ಸರಿಯಾಗಿ ಕಂಡುಕೊಳ್ಳುವ, ಕಾಣಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಮ್ಮ ದಿಗಂಬರ ಕಂಠದಿಂದ ಹೇಳಲಿಚ್ಛಿಸುವುದನ್ನು ಧೈರ್ಯವಾಗಿಯೇ ಹೇಳುತ್ತೇವೆ . . ."

ಈ ಸಂಕಲನದಲ್ಲಿಯ ಪ್ರಪ್ರಥಮ ಕವಿತೆ ನಿಖಿಲೇಶ್ವರ ಕವಿಯ 'ಆತ್ಮಯೋನಿ'. ಇದರಲ್ಲಿ ಕವಿಯು ಸಂಪ್ರದಾಯವಾದಿ ಕವಿತೆಯನ್ನು ವಿರೋಧಿಸಿರುವುದನ್ನು ಸ್ಪಷ್ಟ ವಾ ಗಿ ಕಾಣುತ್ತೇವೆ. ಹಿಂದಿನ ಕವಿತೆಯನ್ನೆಲ್ಲಾ-ಕಾವ್ಯವನ್ನೆಲ್ಲಾ-ಇವರು ಆರಿ ತಣ್ಣಗಾಗಿರುವ, ಹಳಸಿದ ಚಪಾತಿ ಎಂದು ಕರೆದಿದ್ದಾರೆ. ಪ್ರಾಚೀನತೆಯ ಬಗೆಗೆ ಇವರಿಗೆ ಅ ಸ ಹ ನೆ, ದ್ವೇಷ. ಅದನ್ನೆಲ್ಲಾ ಭೂಮಿಯೊಳಗೆ ಹೂಳಲಿಚ್ಛಿಸುತ್ತಾರೆ ಕವಿ. ಅಷ್ಟೇ ಅಲ್ಲ: ಹಿಂದಿನ ಕಾವ್ಯಗಳೆಲ್ಲವೂ ಧ್ವಂಸವಾದಾಗ, ಆ ಅವಶೇಷದೊಳಗಿಂದ ಉಸಿರಾಡಬಲ್ಲ ಮಾನವನೊಬ್ಬನ—ದಿಗಂಬರ ಕ ವಿ ಯ—ಜನನವಾಗುವುದೆಂದೂ ಕವಿಯ. ಹೇಳಿಕೆ ಸಮಕಾಲೀನ ಆರ್ಥಿಕ ಅಸಮಾನತೆಯಚಿತ್ರವೊಂದನ್ನು 'ಸುಳ್ಳಲ್ಲ ನೀನು ಹೇಳಿದುದು' ಕವಿತೆಯ ಕೊನೆಯಲ್ಲಿ ಕವಿ ಹೀಗೆ ನೀಡಿದ್ದಾರೆ :

'ಗುಡಿಮಂದಿರಗಳಿಗೆ, ರಾಜಸಮಾಧಿಗಳಿಗೆ ಚಿನ್ನದ ಇಟ್ಟಿಗೆಗಳಿಂದ ಗೋಡೆಗಳು ನಿರ್ಮಿತವಾಗಿದ್ದರೆ, ಮಣ್ಣಿನ ಗೋಡೆ

ಯುಳ್ಳ ಮನೆಯ ಕಥೆಯನ್ನು ಕೇಳುವವರಾದರು ಯಾರು ?'

ಕವಿ ಜ್ವಾಲಾಮುಖಿ ಜ್ವಲಿಸುವ ಅಗ್ನಿಯಾಗಿ ಬಂದು ಈ ಸಮಾಜವನ್ನು ಬೂದಿ ಮಾಡಬಯಸಿದ್ದಾರೆ. ಇವರು ತಮ್ಮ 'ಸೂರ್ಯ-ಸ್ನಾನ' ಕವನದಲ್ಲಿ ದಿಗಂಬರದ ಜಯಕಾರ ಮಾಡಿ, ತಮ್ಮನ್ನು 'ಪೈಗಂಬರ್' ಎಂದು ಕರೆದುಕೊಂಡಿದ್ದಾರೆ! ನವಜಾಗೃತಿಗಾಗಿ ಧ್ವಂಸ-ರಚನೆ ಅನಿವಾರ್ಯವೆಂದು ಇವರ ಅಭಿಮತ. ರಾಜಕೀಯ ಮುಖಂಡರು, ಸನಾತನ ಧಾರ್ಮಿಕರು ಮತ್ತು ಕವಿಕಾಮುಖರುಗಳಿಂದ ತುಂಬಿದ ಬಜಾರಿನಲ್ಲಿ ನಿಂತು, ಕವಿ ಪ್ರತಿಯೊಬ್ಬನ ಕೆನ್ನೆಗೂ ಏಟು ಕೊಡುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಜನನ-ಮರಣ, ವ್ಯಾಧಿ-ವಾರ್ಧಕ್ಯ ರಹಿತವಾಗಿ ಈ ಜಗವಿಡೀ ದಿಗಂಬರವಾಗಿ ಅಣುವಿನ ಅಮೃತ ಸರಸ್ಸಿನಲ್ಲಿ ಮಾನವ ಜನಾಂಗವೆಲ್ಲ ಒಮ್ಮೆ 'ಸೂರ್ಯ-ಸ್ನಾನ' ಮಾಡಬೇಕೆಂಬ ಕರೆಯಿತ್ತಿದ್ದಾರೆ. ನಾವೆಲ್ಲರೂ ಛಲ-ಕಪಟಗಳ ಗಣಿಗಳಿಂದೂ, ಮಾನವತೆಯನ್ನೇ ಮರೆಸುವ ಅವಯವ ಯಂತ್ರಗಳಿಂದೂ ತಮ್ಮ 'ಅವಲೋಕನ' ಎಂಬ ಕವಿತೆಯಲ್ಲಿ ದೂರಿದ್ದಾರೆ.

'ದಿಗಂಬರ ಕವಿತೆ ಏನು?' ಎಂಬುದರ ಅರ್ಥವಿವರಣೆಯನ್ನು ಕವಿ ಭೈರವಯ್ಯ ತಮ್ಮ 'ದಿಗಂಬರ' ಕವನದಲ್ಲಿ ಹೀಗೆ ಬರೆಯುತ್ತಾರೆ—"ದಿಗಂಬರತೆಯ 'ಮಾಯೆ' ವಿವಸ್ತ್ರವಾಗಿ ಬೀದಿಯಲ್ಲಿ ವರ್ತಿಸುವುದಲ್ಲ; ಶಬ್ದಗಳ ಸಹಾಯದಿಂದಲೂ ಅಲ್ಲ. ಇದರಿಂದ ಮಾನವನ ಹೃದಯಾಂತರಾಳದಲ್ಲಿ ತುಂಬಿರುವ ಮಾಲಿನ್ಯತೆಯಿಂದ ಅವನಲ್ಲಿರುವ ಮಾನವತೆಯನ್ನು ಪ್ರತ್ಯೇಕಿಸಿ, ಅದನ್ನು ರಕ್ಷಿಸುವುದು; ಪವಿತ್ರ ಸ್ವರವನ್ನು ಪ್ರತಿಧ್ವನಿಸುವುದು; ಕಣ್ಣುಗುಡ್ಡೆಗಳ ಹಿಂದೆ ಅವಿತುಕೊಂಡಿರುವ ನಿರ್ಮಲಾಶ್ರುಗಳನ್ನು ಹರಿಸುವುದು; ಸಹಜ ಭಾವನೆಗಳನ್ನು ದೃಢೀಕರಿಸುವುದು; ತುಟಿಗಳ ಮೇಲೆ ಮೃದುಮಧುರ ನಗೆಯ ಹೊನಲನ್ನುಕ್ಕಿಸುವುದು; ಸತ್ಯ ರೂಪದಲ್ಲಿ; ನಗ್ನವಾಗಿ ಕೇಳಿಸುವುದು . . ."

ವಿಶ್ವವೆಲ್ಲವೂ ಒಂದು ನಗ್ನ ಶಿಲಾರೂಪ ತಾಳಿರುವಂತೆ ಕಾಣುವುದೆಂದು ಚೇರಬಂಡರಾಜು ತಿಳಿಸುತ್ತಾರೆ. ಅವರು ಭಗವಂತನಿಗೆ 'ನಗ್ನಪ್ರಿಯ'ನೆಂದು ನಿಜನಾಮಕರಣ ಮಾಡಲಿಚ್ಛಿಸುತ್ತಾರೆ. 'ಚಿತೆಯೇರೋಣ' ಎಂಬ ಕವನದಲ್ಲಿ, ಮುಂಬರುವ ಯುಗಕ್ಕಾಗಿ ನಾವೆಲ್ಲರೂ ಸ್ವಯಂ ಚಿತೆಯೇರ್ಪಡಿಸಿ, ಆಹುತಿಯಾಗಬೇಕೆಂಬ ಆದೇಶವನ್ನು ಕವಿ ನೀಡಿದ್ದಾರೆ.

'ಗ್ಲಾನಿರ್ಭವತಿ ಭಾರತ' ಕವಿತೆ ಮಹಾಸ್ವಪ್ನ ಕವಿಯ ಮನೋಧರ್ಮದ ಹಾಗೂ ಅಂತರಿಕ ವಿಶ್ವಾಸದ ನುಡಿಯಾಗಿ ಹೊರಹೊಮ್ಮಿದೆ. 'ವೃಕ್ಷಗಳು ಚಲಿಸುವಂತೆ ಮಾಡುವೆ—ಅಚಲ ಶಿಲೆಗಳಲಿ ಪ್ರಾಣಿಗೆ ಜನ್ಮ ನೀಡುವೆ—ಸಮಾಧಿಸ್ಥ ಶವಗಳಿಗೆ ಪ್ರಾಣವನ್ನೂಡುವೆ—ಕುರೂಪಿ ಶಿಲೆಗಳಿಗೆ ಸೌಂದರ್ಯ ಪ್ರದಾನ ಮಾಡುವೆ—ಮೃತಭಗವಂತನ ಬದುಕಿಸಲು ದಿಗಂಬರ ಕವಿ ನಾ ಬರುತಿರುವೆ' ಎಂದಿದ್ದಾರೆ ಕವಿ. ತಮ್ಮ ಇನ್ನೊಂದು ಕವನದಲ್ಲಿ 'ಜನಿಸುತಿರುವೆ, ನಾನು; ಹಲವು ಬಾರಿ ಜನಿಸುತಿರುವೆ' ಎಂದಿದ್ದಾರೆ.

ನಗ್ನಮುನಿ ಕವಿಗೆ ಆಧುನಿಕ ಸಮಾಜದ ವಿರುದ್ಧ ಪ್ರಬಲವಾದ ಆಕ್ರೋಶವಿದೆ. ಇಂದಿನ ಮಾನವನ ಕೃತ್ರಿಮ ಬಾಳಿನ ಬಗೆಗೆ ಅವರಿಗೆ ಅಸಹನೆ; ಕಾಪಟ್ಯ-ವಂಚನೆಗಳ ಸೋಗಿಗೆ, ನಕಲು ಭಾವನೆಗಳ ಬಗ್ಗೆ ದ್ವೇಷ. ಇವರ 'ಸುಖರೋಗಿ' ಕವನದಲ್ಲಿ ಈ ಭಾವನೆ ಚೆನ್ನಾಗಿ ಪ್ರತಿಬಿಂಬಿಸಿದೆ.

> ' ನಿನ್ನ ಮುಖದ ಭಾವನೆಗಳ ತೊರೆ—
> ದುರ್ಗಂಧ ಪೂರ್ಣ ವಸ್ತ್ರಗಳ ಕಳಚಿ ಬಿಸಡು,
> ನಿನ್ನ ಆತ್ಮದೆದುರು ನಿಂತು, ತನ್ನ ತಾನೆ ಕಾಣು.'

'ದಿಗಂಬರ ಪೀಳಿಗೆ'ಯ ಪ್ರತಿನಿಧಿಗಳ ಮೂಲಕ ಪ್ರಕಟವಾದ 'ದಿಗಂಬರ ಕವಲು' ಕವನ ಸಂಕಲವನ್ನೊಮ್ಮೆ ಆಮೂಲಾಗ್ರವಾಗಿ ಓದಿದಾಗ, ಒಂದು ಬಗೆಯ ಕ್ರಮಪೂರ್ಣ ಕ್ರಾಂತಿ ಭಾವನೆಗಳ ಪರಿಚಯವಾಗುತ್ತದೆ. ಕವಿತಾ ಮಾರ್ಗದ ಮಗ್ಗುಲನ್ನೇ ಹೊರಳಿಸಿ, ದಿಕ್ಕನ್ನೇ ಬದಲಾಯಿಸಿ ಬುಡಮೇಲು ಮಾಡಲಿಚ್ಛಿಸುವ ಸಂಕಲ್ಪದಲ್ಲಿ ಕವಿಗಳು ಅಸಂಯಮಿಗಳಾದಂತೆ ಕಂಡರೂ, ಅದೇ ಅವರ ಮೂಲ ಪ್ರೇರಣೆಯೂ ಆಗಿದೆ. ಬೌದ್ಧಿಕ ಬೆಳವಣಿಗೆಯ ಇಂದಿನ ಶೂನ್ಯತಾ ಯುಗದಲ್ಲಿನ ಸಮಾಜ ವ್ಯವಸ್ಥೆಯ ಔದಾಸೀನ್ಯಗಳು ದಿಗಂಬರ ಪೀಳಿಗೆಯವರನ್ನು ಹೇಗೆ ಬಾಹ್ಯಾವರಣವನ್ನೇ ಬದಲಿಸುವಂತೆ ಮಾಡಿತೆಂಬತ್ತ ಈ ಕವನಗಳು ನಮಗೆ ಆಶ್ವಾಸನೆ ನೀಡುತ್ತವೆ. ಸಂಕಲನದ ಎಲ್ಲ ಕವನಗಳನ್ನೂ ಓದಿದ ಮೇಲೆ ದಿಗಂಬರ ಪೀಳಿಗೆಯ ಕವಿಗಳು ನವೀನ ಮೌಲ್ಯಗಳ ಕಾಣ್ಕೆಯಿತ್ತು, ನವ್ಯಮಾರ್ಗದ ಸ್ಥಾಪನೆಯತ್ತ ಎಷ್ಟು ಸಚೇತನರಾಗಿದ್ದಾರೆಂಬ ಅಭಿಪ್ರಾಯವನ್ನು ಅದು ಸುಸ್ಪಷ್ಟಗೊಳಿಸುತ್ತದೆ. ಇವರ ಮುಂದಿನ ಕವನ ಸಂಕಲನಗಳು ತೆಲುಗು ಭಾಷೆಯಲ್ಲಿನ ಸಾಹಿತ್ಯದಲ್ಲಿ ನವಪೀಳಿಗೆಯ ಮೌಲ್ಯ ನಿರ್ದೇಶನಕ್ಕೂ ಅವಕಾಶವೊಂದನ್ನು ಕಲ್ಪಿಸಬಹುದೆಂಬ ಆಸೆಯನ್ನು ಮೂಡಿಸುತ್ತದೆ.

ಉಲ್ಲಾಳ್ ಪಾರಿತೋಷಕ ನಾಟಕ ಸ್ಪರ್ಧೆಯ ವಿಮರ್ಶೆ

ಪ್ರತಿಭೆಯ ಪ್ರಭಾವಳಿಯಲ್ಲಿ ಹೊಸಪ್ರಜ್ಞೆಯ ಪ್ರತಿಷ್ಠಾಪನೆ

ಚಿ. ಶ್ರೀನಿವಾಸರಾಜು

ನಾಟ್ಯ ಸಂಘವು ಪ್ರತಿವರ್ಷದಂತೆ ಈ ಬಾರಿಯೂ ತನ್ನ ಒಂಭತ್ತನೆಯ ಉಲ್ಲಾಳ್ ಪಾರಿತೋಷಕ ಅಂತರ ಕಾಲೇಜು ನಾಟಕ ಸ್ಪರ್ಧೆಯನ್ನು ಡಿಸೆಂಬರ್ ತಿಂಗಳ ಹತ್ತನೆಯ ತಾರೀಖಿನಂದು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಅಧ್ಯಕ್ಷತೆಯಲ್ಲಿ ಡಾ|| ಶ್ರೀಮಾಲಿ ಅವರಿಂದ ಉದ್ಘಾಟಿಸಲ್ಪಟ್ಟು ಹದಿನಾರನೆಯ ತಾರೀಖಿನವರೆಗೂ ನಡೆಸಿತು. ಈ ನಾಟಕ ಯಜ್ಞದ ಆರಂಭದಲ್ಲಿ ಶ್ರೀಮತಿ ಚಟೋಪಾದ್ಯಾಯ ಅವರು ನಾಟಕವನ್ನು ರಂಗಕ್ಕೆ ತರುವ ಅವಸರದಲ್ಲಿ ಅದರ ಗಾಂಭೀರ್ಯ, ಸತ್ವ ಕೆಳಗಿಳಿಯದಂತೆ ನೋಡಿಕೊಳ್ಳಲು ಶಾಸ್ತ್ರೀಯ ಅಭ್ಯಾಸದ ಅಗತ್ಯತೆಯ ಬಗ್ಗೆ ಗಮನ ಹರಿಸಬೇಕೆಂಬ ಸಲಹೆ, ಹಾಗೂ ಡಾ|| ಶ್ರೀಮಾಲಿ ಅವರು ವಿದ್ಯಾರ್ಥಿಗಳ ಮನಸ್ಸನ್ನು ರಚನಾತ್ಮಕ ದಾರಿಗೆ ತಿರುಗಿಸಲು ನಾಟಕ ಚಟುವಟಿಕೆ ಸಹಕಾರಿಯಾದೀತು ಎಂದು ನುಡಿದ ಮಾತುಗಳು ಉಪಯುಕ್ತವಾಗಿದ್ದುವು.

ಈ ಬಾರಿ ನಾಟಕೋತ್ಸವದ ಸ್ಪರ್ಧೆಗೆಂದು ಬಂದ ಹದಿನೇಳು ನಾಟಕಗಳಲ್ಲಿ ಪ್ರದರ್ಶಿಸಿದ್ದು ಹದಿಮೂರು. ಈ ವರ್ಷ ಮೊದಲ ಬಾರಿಗೆ ತಿಪಟೂರು ಮತ್ತು ತುಮಕೂರುಗಳಿಂದ ಪ್ರವೇಶ ಬಂದು, ಸ್ಪರ್ಧೆಯ ಪರಿಮಿತಿ, ವಿಶಾಲವಾದುದ್ದು ಸ್ವಾಗತಾರ್ಹವಾದರೂ ಸ್ಥಳೀಯ ಕಾಲೇಜುಗಳಲ್ಲಿ ಇದರ ಬಗ್ಗೆ ಆಸಕ್ತಿ ಕುಗ್ಗುತ್ತಿರುವುದು ಗಮನೀಯ ಅಂಶ.

ನಾಟಕೋತ್ಸವದ ಅಂಗವಾಗಿ ಹನ್ನೊಂದನೆಯ ತಾರೀಖು ನಡೆದ 'ಥಿಯೇಟರ್ ವರ್ಕ್‌ಷಾಪ್' ಕಾರ್ಯಕ್ರಮದಲ್ಲಿ ಶ್ರೀಗಳಾದ ಪರ್ವತವಾಣಿ, ಜಿ. ವಿ. ಶಿವಾನಂದ್, ಬಿ. ಎನ್. ನಾಣಿ ಮತ್ತು ಎ. ಎಲ್. ಶ್ರೀನಿವಾಸಮೂರ್ತಿ ಅವರುಗಳು ನಾಟಕದಲ್ಲಿನ ಸಂಭಾಷಣೆ, ಮೈ ಹಾಗು ಧ್ವನಿ ನಿಯಂತ್ರಣ, ಮೇಕಪ್ ಮತ್ತು ನೇಪಥ್ಯದ ಬಗ್ಗೆ ಶ್ರಿರಂಗರ ಅಧ್ಯಕ್ಷತೆಯಲ್ಲಿ ಮಾಡಿದ ಉಪನ್ಯಾಸಗಳು ವಿದ್ಯಾರ್ಥಿ ಕಲಾವಿದರಿಗೆ ಪ್ರಯೋಜನಕಾರಿಯಾಗಿತ್ತು.

ಈ ಹದಿಮೂರು ನಾಟಕಗಳ ವಿಮರ್ಶೆಯನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಅಂತಃಕರಣಪೂರಿತವಾಗಿ, ರಸಗ್ರಾಹಿಗಳಾಗಿ ವಿವೇಚಿಸಬೇಕಾದುದು ಅವಶ್ಯಕ. ಆದ್ದರಿಂದ ಈ ನಾಟಕಗಳನ್ನು ಒಂದೇ ಮಾನದಂಡ (Standard of Judgement) ದಿಂದಳೆದರೆ ಒಳಿತಾಗಲಾರದೆಂದು ಎರಡು ವಿಭಾಗಗಳನ್ನಾಗಿ ಮಾಡಿಕೊಂಡಿದೆ.

೧) ಗಂಭೀರ ನಾಟಕಗಳು
೨) ಹಾಸ್ಯ ನಾಟಕಗಳು

ಈ ಸ್ಪರ್ಧಾ ನಾಟಕಗಳ ಉದ್ದೇಶ ಸಾಫಲ್ಯದ ಅಂಶವನ್ನು ಗಮನಿಸಿದರೆ ನಮ್ಮ ವಿದ್ಯಾರ್ಥಿ ಮಿತ್ರರು ನಾಟಕಗಳ ಆಯ್ಕೆಯ ವಿಷಯದಲ್ಲಿ ಈ ಬಾರಿ ಸಾಕಷ್ಟು ಎಚ್ಚರ ವಹಿಸಿದ್ದಾರೆ. ತಾವು ಆಯ್ದುಕೊಂಡ ನಾಟಕ, ಸ್ಪರ್ಧೆಯ ದೃಷ್ಟಿಯಿಂದ, ಅಭಿನಯ-ರಂಗಸಜ್ಜಿಕೆಯ ಬಂಡವಾಳವನ್ನು ನೋಡಿಕೊಂಡು ಆರಿಸಿಕೊಂಡಿದ್ದಾರೆ. ಕೆಲವರ ಪ್ರಾಮಾಣಿಕ ಪ್ರಯತ್ನದ ಫಲವಾಗಿ ವಿಲಾಸದ ಜೊತೆಗೆ ವಿಚಾರವನ್ನು ಸಾಧಿಸುವ ಸತ್ವಶಾಲಿ ನಾಟಕಗಳನ್ನು ಈ ನಾಟಕೋತ್ಸವಗಳಲ್ಲಿ ಪ್ರಯೋಗಿಸುತ್ತಿರುವುದನ್ನು ಕಂಡರೆ, ಕನ್ನಡ ನಾಟಕಗಳ ಬೆಳವಣಿಗೆಯ ಹೊಸ ಪ್ರಜ್ಞೆಯು ಈ ವಿದ್ಯಾರ್ಥಿ ಪ್ರತಿಭೆಯ ಪ್ರಭಾವಳಿಯಲ್ಲಿ ಪ್ರತಿಷ್ಠಾಪನೆಯಾಗುವುದೆಂಬುದನ್ನು ಈ ನಾಟಕೋತ್ಸವಗಳಿಂದ ಧ್ವನಿತವಾಗುವುದು.

ಗಂಭೀರ ನಾಟಕಗಳು :

ಸರ್ಕಾರಿ ಲಾ ಕಾಲೇಜಿನ ವಿದ್ಯಾರ್ಥಿಗಳು ಡಾ|| ಹೆಚ್. ಕೆ. ರಂಗನಾಥ್ ಅವರ ಐತಿಹಾಸಿಕ ಏಕಾಂಕ 'ವಿಷಕನ್ಯೆ' ನಾಟಕವನ್ನು ಅಭಿನಯಿಸಿದರು. ನಾಟಕವು ಸಫಲತೆಯನ್ನು ಕಾಣಲು ರಂಗಮಂಚದ ಮೇಲೆ ವಾಸ್ತವಿಕ ದೃಶ್ಯ ಯೋಜನೆಯನ್ನು ಕಲ್ಪಿಸಿ, ನಾಟಕ ಕ್ರಿಯೆಗೆ ಅನುಕೂಲವಾಗುವಂತೆ ಅದ್ದೂರಿಯ ರಂಗಸಜ್ಜಿಕೆಯನ್ನು

ನಾಟಕಕ್ಕೆ ತಕ್ಕಂತೆ ಮಹತ್ವದ ರೀತಿಯಲ್ಲಿ, ಆಯಾ ಪಾತ್ರಗಳ ವ್ಯಕ್ತಿತ್ವಕ್ಕೆ ತಕ್ಕಂತೆ ಕಲಾತ್ಮಕವಾಗಿ, ವೇಷ-ಭೂಷಣಗಳನ್ನು ನಿಯೋಜಿಸಿದ್ದರು. ಅಷ್ಟು ಉತ್ತಮ ಹಿನ್ನೆಲೆ ಇದ್ದರೂ ನಾಟಕದ ನಡೆ 'ಚಂದ್ರಗುಪ್ತ' 'ಚಾಣಕ್ಯ' ಹಾಗೂ ಅನಾವಶ್ಯ ರೀತಿಯಲ್ಲಿ ರಂಗದ ಮೇಲಿದ್ದ 'ಸೇವಕಿ'ಯ ಅಭಿನಯದಿಂದ ಪೂರ್ಣ ರಸಸೃಷ್ಟಿಗೆ ಅಡ್ಡಿಯಾಗಿ ಪೇಲವವಾಯಿತು. ವಿರೋದಾತ್ತನಂತೆ ಕಾಣದ 'ಚಂದ್ರಗುಪ್ತ'ನ ಪಾತ್ರದ ಆಯ್ಕೆ ಒಂದು ಅಪವಾದ. ಚಾಣಕ್ಯನ ಮಾತುಗಳಲ್ಲಿನ ಅವಸರದ ಜೊತೆಗೆ 'ಸುವಾಸಿನಿ', 'ವಿನೋದ' ಮತ್ತು 'ಶಶಿ'ಯವರ ಮಾತುಗಳು ಸ್ಪಷ್ಟವಾಗಿ ಕೇಳದಿದ್ದರೂ, ಸುವಾಸಿನಿಯ ನೃತ್ಯ, ಬೇಗಿನ ರಂಗಸಜ್ಜಿಕೆಯ ಫಲವಾಗಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿ ನಾಟಕ ಸಫಲತೆಯನ್ನು ಕಂಡುಕೊಂಡಿತು.

ಸಾಹಿತ್ಯ ಸಂಪತ್ತಿನಿಂದ ಕೂಡಿದ್ದ ಎನ್. ಕೆ. ಮುಳುಕುಂಟೆ ಅವರ 'ವಿಪ್ಲವ' ನಾಟಕವನ್ನು ಶ್ರೀ ರೇಣುಕಾಚಾರ್ಯ ಸಂಜೆ ಕಾಲೇಜಿನವರು ಅವಶ್ಯಕವಾದ ರಂಗಸಜ್ಜಿಕೆಯ ಕೊರತೆ ಇದ್ದರೂ, ಅಭಿನಯದಿಂದ ಅದನ್ನು ಸಾಕಷ್ಟು ತುಂಬಿಕೊಂಡರು. ಕಳ್ಳನ ಅಭಿನಯದಲ್ಲಿ ಕೃತಕತೆ, ಪೊಲೀಸ್ ಅಧಿಕಾರಿ ಕೇಶವನಲ್ಲಿ ದರ್ಪದ ಕೊರತೆ ಕಂಡುಬಂದಿತು. ಒಂದು ವರ್ಗದ ಪ್ರೇಕ್ಷಕರಿಂದ ಅರ್ಥವಾಗದ ಅಸಹಕಾರದ ತೊಂದರೆ ಇದ್ದರೂ ತನ್ನ ಪಾತ್ರದಲ್ಲಿ ಲೀನವಾಗಿ, ರಸಸಂಸ್ಕಾರವನ್ನು ಹೊಂದಿ, ಭಾವಪೂರ್ಣ ಅಭಿನಯವನ್ನು ನೀಡಿದ 'ಗುರುದೇವ' ನನ್ನು ಮರೆಯಲಾಗದು. ಈ ನಾಟಕಕ್ಕೆ ಹಿನ್ನೆಲೆಯಾಗಿ ನೀಲಿ ಪರದೆಯನ್ನು ಉಪಯೋಗಿಸದೆ, ಬೆಳಕಿನ ವಿವರಣೆಯನ್ನು ಸಾಂಕೇತಿಕವಾಗಿ ಉಪಯೋಗಿಸಿಕೊಂಡಿದ್ದರೆ ಇನ್ನೂ ಉತ್ತಮ ವಾತಾವರಣ ನಿರ್ಮಾಣಗೊಂಡು ರಸನಿರ್ಮಿತಿಗೆ ಸಹಾಯವಾಗುತ್ತಿತ್ತು.

ಶ್ರೀ ಗಿರೀಶ ಕಾರ್ನಾಡರ 'ಹಿಟ್ಟಿನ ಹುಂಜ' ನಾಟಕವನ್ನು ಮೊದಲಬಾರಿಗೆ ಯಶಸ್ವಿಯಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಪ್ರಯೋಗ ಮಾಡಿದರು. ಯಾವುದೋ ಒಂದು ಅಭೂಕ್ತ ಮೂಲೆಯಲ್ಲಿ ಅಡಗಿ ಕುಳಿತಿದ್ದ 'ಯಶೋಧರಾ ಚರಿತೆ' ಯ ಕಥಾ ಭಾಗವನ್ನಾಯ್ದು, ಚಮತ್ಕಾರವಾದ ಸಂಭಾಷಣೆ, ಕುಶಲ ಪಾತ್ರ ಸೃಷ್ಟಿ, ಸಾಂಕೇತಿಕ ಪ್ರತಿಮೆಗಳಿಂದ ಅಲಂಕರಿಸಿದ ಈ ನಾಟಕವನ್ನ ಪ್ರಯೋಗಿಸುವುದರ ಬಗ್ಗೆ ಹೆಚ್ಚಿನ ಎಚ್ಚರ ವಹಿಸಿದ್ದರು. 'ಅಮೃತಮತಿ' ಪಾತ್ರದಲ್ಲಿ ಮೂಡಿ ಬರಬೇಕಾದ ವ್ಯಂಗ್ಯತೆಯ ಕೊರತೆ ಮತ್ತು ಕುಸಿದ ಧ್ವನಿ ಹಾಗೂ ಆಂಗೀಕಾಭಿನಯದ ಕೊರತೆ: ನಾಟಕದಲ್ಲಿ ಪ್ರಾಸಂಗಿಕವಾಗಿ ಬರುವ 'ಫ್ಲಾಷ್‌ಬ್ಯಾಕ್' (Flash Back) ತಂತ್ರದ ವಿಫಲತೆ; ಇದೇ ನಾಟಕಕ್ಕೆ ಕೇಂದ್ರಬಿಂದುವಾಗಿದ್ದು, ಸಾಂಕೇತಿಕವಾಗಿ ಕೊನೆಯಲ್ಲಿ ಕೂಗದ ಹಿಟ್ಟಿನ ಹುಂಜ; ನಾಟಕದ ವಸ್ತುವಿಗೆ ಪೋಷಿತವಾಗುವಂತೆ ಪ್ರಾಚೀನ ವಾತಾವರಣವನ್ನು ಸರಿಯಾದ ರೀತಿಯಲ್ಲಿ ಕಲ್ಪಿಸಿಕೊಳ್ಳಲು ಆಗದಂಥ 'ಅಮೃತಮತಿ'ಯ ವಸ್ತ್ರಾಲಂಕಾರ; ತಗ್ಗಿದ ಧ್ವನಿಯ ಕಾರಣದಿಂದ ಅರ್ಥಗರ್ಭಿತ ಮಾತುಗಳ ಸವಿಯನ್ನು ಪ್ರೇಕ್ಷಕರಿಗೆ ನೀಡದೆ ಇದ್ದರೂ ಕೂಡ ನಾಟಕ ವಿಫಲವಾಗಲಿಲ್ಲ. ರಂಗಪೀಠ ಮತ್ತು ರಂಗಶೀರ್ಷವನ್ನು ಪೂರ್ಣವಾಗಿ ಉಪಯೋಗಿಸಿಕೊಂಡ ರೀತಿ; ಅಷ್ಟಾವಂಕನ ಸಂಯಮಶೀಲ ಅಭಿನಯ; ಅತ್ಯುತ್ತಮ ನಿರ್ದೇಶನದ ಫಲವಾಗಿ ನಾಟಕದ ಕೊಂಡಿ ಕಳಚಿಕೊಳ್ಳದೆ ಪ್ರೇಕ್ಷರನ್ನು ನಾಟಕದಲ್ಲಿಯ ಸನ್ನಿವೇಶದ ಭಾವಲಹರಿಯಲ್ಲಿ ನಿಲ್ಲಿಸಿ ಯಶಸ್ವಿಯಾಯಿತು.

ಕೈಲಾಸಂ ಅವರ 'ಏಕಲವ್ಯ' ನಾಟಕವನ್ನು ಸೆಂಟ್ ಜೋಸೆಫ್ಸ್ ಕಾಲೇಜಿನವರು ಆರಿಸಿಕೊಂಡು ಪ್ರದರ್ಶನ ನೀಡಿದ್ದು, ಬೆಟ್ಟ ಗುದ್ದಿ ಮೈ ನೋಯಿಸಿಕೊಳ್ಳುವ ಪ್ರಯತ್ನ. ನಾಟಕದ ನಡೆಯನ್ನು ಸ್ಥಗಿತಗೊಳಿಸುವ ನಿರ್ದೇಶನ ಒಂದು ಕಡೆಯಿದ್ದರೆ, ಶಾಸ್ತ್ರೀಯವಾಗಿ ಪಾತ್ರಗಳ ಹಂಚಿಕೆಯನ್ನು ಮಾಡದೆ ಇದ್ದುದರ ಪರಿಣಾಮವಾಗಿ ದ್ರೋಣ, ಅರ್ಜುನ ಮತ್ತು ಭೀಷ್ಮ ಪಾತ್ರಧಾರಿಗಳು ತಮ್ಮ ವ್ಯಕ್ತಿತ್ವ ಗಾಂಭೀರ್ಯವನ್ನು ಕಳೆದುಕೊಂಡದ್ದರ ಜೊತೆಗೆ, ನಾಟಕದ ಸಾಲುಗಳನ್ನು ಸ್ಮರಣೆಗೆ ತಂದುಕೊಳ್ಳುವುದರಲ್ಲಿ ಅಭಿನಯವನ್ನು ಒತ್ತಟ್ಟಿಗಿದ್ದರು. ನಾಟಕದಲ್ಲಿನ 'ಏಕಾಗ್ರತೆ' ಶಿಥಿಲವಾಗುತ್ತಿದ್ದಂತೆ ಪ್ರೇಕ್ಷರ ತಾಳ್ಮೆಯೂ ಕೆಡುತ್ತಿತ್ತು. ನಾಟಕದಲ್ಲಿ ಜೀವ ತುಂಬಲು ಏಕಲವ್ಯ ತನ್ನ ಕರ್ತವ್ಯವನ್ನು ಕೈಲಾದಮಟ್ಟಿಗೆ ಪ್ರಯತ್ನಿಸಿದರೂ ಸೋಲನ್ನು ಎದುರುಗೊಳ್ಳಬೇಕಾಯಿತು.

ಬೆಂಗಳೂರು ಮೆಡಿಕಲ್ ಕಾಲೇಜಿನ ಕಲಾವಿದರು ಪ್ರದರ್ಶಿಸಿದ 'ಕುವೆಂಪು' ಅವರ 'ವಾಲ್ಮೀಕಿ ಭಾಗ್ಯ' ನಾಟಕ ಎಲ್ಲಾ ದೃಷ್ಟಿಯಿಂದಲೂ ಸಮರ್ಪಕವಾಗಿತ್ತು. ಸನ್ನಿವೇಶಕ್ಕೆ ತಕ್ಕಂತೆ ನಿಸರ್ಗ ಶೋಭಿತ ಛಾಯೆಯನ್ನು ಕೊಡುವುದರ ಜೊತೆಗೆ, ಹಿನ್ನೆಲೆಯಲ್ಲಿ ಮಧುರವಾಗಿ ಹಾಡಿದ ಶ್ಲೋಕಗಳು ಮತ್ತು ಅರಣ್ಯ ವಾತಾವರಣವನ್ನು ಸ್ಪಷ್ಟಮಾಡುವ ಧ್ವನಿಗಳಿಂದಲೂ ಯೋಜಿತ ವೇಷ-ಭೂಷಣ ನಾಟಕಕ್ಕೆ ಒಳ್ಳೆಯ ಮೆರುಗಿತ್ತರೂ ಸರಳ

ರಗಳೆಯ ಮಾಧುರ್ಯವನ್ನು ಪೂರ್ಣವಾಗಿ ಪ್ರೇಕ್ಷರಿಗೆ ಉಣಬಡಿಸಲಿಲ್ಲ. ವಾಲ್ಮೀಕಿಯ ಅಭಿನಯದಲ್ಲಿ ಕೇವಲ ಕರ್ತವ್ಯದೃಷ್ಟಿ ಕಂಡು ಬಂದುದರ ಜೊತೆಗೆ, ಸೀತಾ-ಲಕ್ಷ್ಮಣ ಪಾತ್ರಗಳಲ್ಲಿ ವಾಚಿಕಾಭಿನಯದ ಲಯ, ಅಲ್ಲಲ್ಲಿ ತಪ್ಪಿದರೂ ಮೇಲ್ಮಟ್ಟದ ಆಂಗೀಕಾಭಿನಯ ಮತ್ತು ಸಾತ್ವಿಕಾಭಿನಯಗಳಿಂದ ಈ ಡೊಂಕುಗಳನ್ನು ಮುಚ್ಚಿ, ಉತ್ತಮ ಕಲಾಸೃಷ್ಟಿಯನ್ನಾಗಿ ಮಾಡಿ, ಅಪೂರ್ವ ರಮಣೀಯತೆಯಿಂದ ನಾಟಕ ಸುಗಮವಾಗಿ ಸಾಗಿ, ಈ ನಾಟಕೋತ್ಸವ ಗೊಂಚಲಿನಲ್ಲಿ ಅರಳಿದ ಉತ್ತಮ ಕುಸುಮವಾಯಿತು.

ಶ್ರೀ ಸಿ. ವಿ. ಶಿವಶಂಕರ್ ಅವರ 'ರಣಪ್ರಚಂಡ' ನಾಟಕವನ್ನು ತುಮಕೂರು ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳು ಅಭಿನಯಿಸಿದರು. ಇಡೀ ನಾಟಕ 'ಬಯಲಾಟ-ಭಾಗವತರಾಟ'ದ ದರ್ಜೆಯಲ್ಲಿ ಸಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ನಾಟಕದಲ್ಲಿ ಹೊಯ್ಸಳ ಚಕ್ರವರ್ತಿ ವೀರಬಲ್ಲಾಳನ ಆಸ್ಥಾನದಲ್ಲಿ ಕೇವಲ ಮೂರು ಆಸನಗಳು, ಮಲ್ಲಿಕಾಫರನ ಗುಡಾರದಲ್ಲಿ ಒಂದು ಆಸನ, ಅರಣ್ಯ ದೃಶ್ಯಗಳನ್ನು ಕಂಡರೆ ನಾಟಕದಲ್ಲಿ ರಂಗಸಜ್ಜಿಕೆಯ ಅಭಾವವನ್ನು ಸಾರುತ್ತಿತ್ತು. ಮಿತಿ ಇಲ್ಲದ ಅಂಕಗಳಿರುವ ಈ ನಾಟಕದಲ್ಲಿ ಸನ್ನಿವೇಶದಿಂದ ಸನ್ನಿವೇಶಕ್ಕೆ ಪ್ರೇಕ್ಷರನ್ನು ಕರೆದುಕೊಂಡು ಹೋಗುವುದರಲ್ಲಿ ವಿಫಲರಾದವರಲ್ಲದೆ ಮಿತ್ರವಸು ಮತ್ತು ಕಲಾವತಿ ಆಗಾಗ ಪ್ರೇಕ್ಷಕ ದೃಷ್ಟಿರೇಖೆ (sight line) ಯಿಂದ ಹೊರಗುಳಿಯುತ್ತಿದ್ದರು. ಮಾತುಗಳನ್ನು ಕಂಠಪಾಟ ಮಾಡಿ ಒಪ್ಪಿಸುತ್ತಿದ್ದ ಕಲಾವತಿ ಪಾತ್ರದ ಆಯ್ಕೆ ಸರಿಯಿಲ್ಲದೆ ವೀರಬಲ್ಲಾಳನಿಗಿಂತ ಎತ್ತರವಾಗಿದ್ದಳು. ಮಿತ್ರವಸುವಿನ ಅಸ್ಪಷ್ಟ ಉಚ್ಚಾರಣೆ, ನಾಟಕ ದೃಶ್ಯ ಬದಲಾವಣೆಯ ಕಾಲದಲ್ಲಿ ಬರುವ ಅಪಕೃತ ಸಂಗೀತ ಬೇಸರಿಸುತ್ತಿದ್ದವು. ಮಲ್ಲಿಕಾಫರನ ಪಾತ್ರಕಲ್ಪನೆ ಹೇಗೆ ಅಸಂಸ್ಕೃತವಾಗಿದೆಯೋ ಅಭಿನಯವೂ ಹಾಗೇ ಇದ್ದಿತು. ಮಲ್ಲಿಕಾಫರನ ಗುಡಾರದಲ್ಲಿ ಸಂಜಯ ಮತ್ತು ಮಲ್ಲಿಕಾಫರ ಮಾಡುವ ಕೊಲೆಗಳು ನಗೆಗೀಡಾದುವು. ಕನ್ನಡ-ಕನ್ನಡ ಎಂದು ಪ್ರಾಸಬದ್ಧವಾಗಿ ಪೋಣಿಸಿದ್ದ ಅಸಂಬದ್ಧ ಸಾಲುಗಳನ್ನು ಕಂಠಪಾಟ ಮಾಡಿ, ಉಸಿರುಕಟ್ಟಿ ಮಾತುಗಳನ್ನು ಧುಮುಕಿಸುತ್ತಿದ್ದ ವೀರಬಲ್ಲಾಳನ ಪಾತ್ರ ಪ್ರೇಕ್ಷಕರ ಸಹನೆಯನ್ನು ಪರೀಕ್ಷಿಸುತ್ತಿತ್ತು. ಉತ್ತಮ ನಾಟಕವನ್ನು ಆರಿಸಿಕೊಂಡು ಸನ್ನಿವೇಶದ ಗಾಂಭೀರ್ಯವನ್ನು ಸೂಚಿಸುವ 'ಪ್ರಕಾಶಿಕೆ' 'ವೇಷಭೂಷಣ' 'ಹಿನ್ನೆಲೆಸಂಗೀತ' ಮತ್ತು 'ರಂಗಸಜ್ಜಿಕೆ' ಯನ್ನು ಭಾವನಾ ಪ್ರಪಂಚದ ಅರ್ಥಪೂರ್ಣತೆಗೆ ಹೊಂದಿಕೊಳ್ಳುವಂತೆ ನೀಡುವುದರ ಶಾಸ್ತ್ರೀಯ 'ಮಲ್ಲಸಾಧನೆ'ಯ ಅವಶ್ಯಕತೆ ಕಂಡುಬಂದಿತು.

ಹಾಸ್ಯ ನಾಟಕಗಳು :

ಮೈಸೂರು ಶಾರದಾ ವಿಲಾಸ ಕಾಲೇಜಿನವರು ಕೈಲಾಸಂ ಅವರ 'ಬಂಡ್ವಾಳ್ವಿಲ್ಲದ ಬಡಾಯಿ' ನಾಟಕವನ್ನು ಪ್ರಯೋಗಿಸುವುದರ ಹಿನ್ನೆಲೆಯಾಗಿ, ಕೈಲಾಸಂ ಅವರ ಜೀವನ-ಕೃತಿಗಳ ಬಗ್ಗೆ ಮಾಡಿದ ದೀರ್ಘ ಪ್ರಸ್ತಾವನೆ ಅನಗತ್ಯವಾಗಿ ಪ್ರೆಕ್ಷರ ತಾಳ್ಮೆಯನ್ನು ಕದಡಿತು. ಇನ್ನು ನಾಟಕದಲ್ಲಿ ಅಹೋಬ್ಲು ಕಾರೆಳೆಯುವುದು; ಜೀವು ಮಾತೊಪ್ಪಿಸುವುದು; ಬಾಳುವಿನ ತುಸು ಅತಿಯಾದ ಅಭಿನಯದ ಜೊತೆಗೆ ಮುದ್ಮಣಿಪಾತ್ರದ ಆಯ್ಕೆ ಬೇಸರ ತರುತ್ತಿದ್ದರೂ ನಾಟಕ ಪಾತ್ರಗಳ ಸಹಕಾರದಿಂದ, ಧೃತಿಗೆಡದೆ, ಹೆಚ್ಚಿನ ಅಭಾಸಗಳಿಗೆ ಅವಕಾಶ ಕೊಡದೆ ಅಭಿನಯದಿಂದ ಏಕತೆಯನ್ನು ಕಾಯ್ದುಕೊಳ್ಳುವುದರಲ್ಲಿ ಯಶಸ್ವಿಯಾಯಿತು.

ಶ್ರೀ ಅಶ್ವತ್ಥನಾರಾಯಣರಾವ್ ಅವರ ಬೆಗ್, ಬಾರೋ ಆರ್ ಸ್ಟೀಲ್' ನ್ಯಾಷನಲ್ ಕಾಲೇಜಿನವರ ಕಾಣಿಕೆ. ನಾಟಕ ಮೊದಲಿನಿಂದ ಕೊನೆಯವರೆಗೂ ಹಾಸ್ಯದ ಹೊನಲನ್ನು ಹರಿಸುತ್ತಾ ಸುಸಂಬದ್ಧವಾಗಿ ಸಾಗಿತು. ಸಂಯಮವೇ ಹಾಸ್ಯದ ಜೀವಾಳ. ಇದನ್ನು ಪ್ರತಿಯೊಬ್ಬ ಪಾತ್ರಧಾರಿಯೂ ಅರಿತು, ಸನ್ನಿವೇಶದೊಂದಿಗೆ ಬೆರತು, ಶುದ್ಧವಾದ ಉಚ್ಚಾರಣೆ, ಹಿತ-ಮಿತವಾದ ಸ್ಥಿಮಿತಪೂರ್ಣ ಅಭಿನಯದಿಂದ ಹಾಸ್ಯರಸವನ್ನು ಚೆನ್ನಾಗಿ ಉತ್ಪಾದಿಸಿ ಪ್ರೇಕ್ಷಕರಿಗೆ ರಸದೂಟವನ್ನು ಉಣಬಡಿಸಿ ತಮ್ಮ ಮೋಹಜಾಲದಲ್ಲಿ ಸೆರೆಹಿಡಿದರು. ವ್ಯವಸ್ಥಿತವಾದ ರಂಗಸಜ್ಜಿಕೆ ಇದ್ದರೂ, ಒಂದು ಕಡೆ ನಾಟಕ ನಡೆಯುತ್ತಿರುವಾಗ ಅದರ ಬೆಳಕು ಬೇರೊಂದು ಕಡೆ ಸಿದ್ಧವಾಗಿದ್ದ ರಂಗಸಜ್ಜಿಕೆಯ ಮೇಲೆ ಚೆಲ್ಲಿ ಅನಾವಶ್ಯಕವಾಗಿ ಪ್ರೇಕ್ಷರನ್ನು ಅತ್ತ ಸೆಳೆಯುತ್ತಿತ್ತು. ಈ ನಾಟಕದಲ್ಲಿ ಹನುಮಂತ, ರಾಮಣ್ಣ ಹಾಗೂ ಭೀಮಣ್ಣನವರ ಅಭಿನಯ ಅಚ್ಚುಕಟ್ಟಿನ ಜೊಕ್ಕತನಕ್ಕೆ ಸಾಕ್ಷಿಯಾಗಿತ್ತು. 'ಇಂಜನೀಯರಿಂಗ್ ವಿದ್ಯಾರ್ಥಿ'ಯ ಮಾತು ನುಗುವಿಕೆಯಲ್ಲಿ ಅಪಸ್ವರ, ಬೆಳಕಿನ ವಿತರಣೆಯನ್ನು ಸರಿಪಡಿಸಿಕೊಂಡಿದ್ದರೆ ಈ ನಾಟಕ ಇನ್ನೂ ಎತ್ತರದಲ್ಲಿ ನಿಲ್ಲುತ್ತಿತ್ತು.

ಎಸ್. ಜೆ. ಪಾಲಿಟೆಕ್ನಿಕ್ ವಿದ್ಯಾರ್ಥಿ ಕಲಾವಿದರು ನವರತ್ನರಾಂ ಅವರ 'ಮೀನಿನ ಹೆಜ್ಜೆ' ನಾಟಕವನ್ನು ಪ್ರಯೋಗಿಸಿದರು. ನಾಟಕ ಮೊದ-ಮೊದಲು ಆಸಕ್ತಿ

ಯನ್ನು ಕೆರಳಿಸಿದರೂ ಬರುಬರುತ್ತಾ ಸಪ್ಪೆಯಾಯಿತು. ರಂಗಣ್ಣನ ಚೊಕ್ಕ ಅಭಿನಯದೊಂದಿಗೆ, ಅಲ್ಲಲ್ಲಿ ಔಚಿತ್ಯದ ಎಲ್ಲೆಮೀರಿದ ಅಭಿನಯವಿದ್ದರೂ ರಸಿಕ ಪ್ರೇಕ್ಷಕವೃಂದ ವನ್ನು ರಂಜಿಸುವುದರಲ್ಲಿ ಬೋರ ಯಶಸ್ವಿಯಾದ. ರಂಗಣ್ಣ, ಬೋರ ಮತ್ತು ಗೀತಾಗೆ ಯಾವ ಯಾವ ಕೊಠಡಿ ಎಲ್ಲಿದೆ ಎಂಬುದರ ಅರಿವಿರಲಿಲ್ಲ. ಎರಡನೆಯ ಅಂಕದಲ್ಲಿ ಗೀತಾ ಒಳಕ್ಕೆ ಹೋಗುವ ಬದಲು ಹೊರಕ್ಕೆ ಹೋಗುತ್ತಾಳೆ. ರಂಗಣ್ಣ ಅಡಿಗೆ ಮನೆಯಿಂದ 'ಜ್ಯೂಸ್' ತಂದರೆ, ಬೋರ ಮತ್ತೊಂದು ಕಡೆಯಿಂದ 'ಜ್ಯೂಸ್' ತರುತ್ತಾನೆ. ಇಸ್ಪೆಕ್ಟರ್ ಮಾತಿನಲ್ಲಿ ಒದ್ದಾಟ, ಗಡಿಯಾರದ ಪೆಂಡುಲಮ್ಮಿನಂತೆ ಓಡಾಡುತ್ತಿದ್ದ ಡಾಕ್ಟರ್, ಗೀತಾ ಅಭಿನಯದಲ್ಲಿ ಗಾಬರಿ, ಕೃತಕತೆ, ತಲೆಹಾಕಿ ನಾಟಕದ ಪಥವನ್ನು ಬದಲಾಯಿಸಿತು. ಸೂಕ್ಷ್ಮ ಸಂವೇದನಗಳಿಂದ ಕೂಡಿದ ಸನ್ನಿವೇಶಗಳಿಗೆ ಹಿನ್ನೆಲೆ ಸಂಗೀತವು ಹಿತ-ಮಿತವಾಗಿ ಬೆರೆತರೆ ಮಾತ್ರ ಪ್ರೇಕ್ಷಕರ ಮೇಲೆ ಅಪೇಕ್ಷಿತ ಪರಿಣಾಮ ಉಂಟಾಗುವುದೆಂಬುದನ್ನು ಮರೆತು, ಭಾವಕ್ಕೆ ಹೊಂದದ ಸಂಗೀತದ ಆರ್ಭಟ ಅನುಚಿತ. ಅಂತೂ ನಾಟಕ ಮಂದಗಾಮಿಯಾಗಿ ಸಾಗಿ ಕೊನೆಮುಟ್ಟಿತು.

ಶ್ರೀ ಎ. ಎಸ್. ಮೂರ್ತಿ ಅವರ 'ಜಂಬದ ಕೋಳಿ' ನಾಟಕವನ್ನು ಅಭಿನಯಿಸಿದವರು ಪಾಲಿಟೆಕ್ನಿಕ್ ಫಾರ್ ವಿಮೆನ್ ವಿದ್ಯಾರ್ಥಿನಿಯರು. ನಾಟಕವನ್ನು ಚಲನ ಚಿತ್ರದ ರೀತಿಯಲ್ಲಿ ನಿರೂಪಿಸುವ ಆಕರ್ಷಕ ತಂತ್ರವನ್ನು ಇವರು ಬಳಸುವ ಆತುರದಲ್ಲಿ ಹೆಸರು ತಿರುಗು-ಮುರುಗಾಗಿ ಬಿದ್ದು, ನಾಟಕ ಪ್ರಾರಂಭದಲ್ಲೇ 'ಬಾಲಗ್ರಹ' ಪೀಡೆಗೆ ಪಕ್ಕಾಯಿತು. ರಂಗಸಜ್ಜಿಕೆಯಲ್ಲಿ ನೈಪುಣ್ಯತೆ ಸಾಲದೆ 'ಹೂದಾನಿ' ಯು ಸದಾ 'ಸುಶೀಲಾ'ಗೆ ಅಡ್ಡವಾಗಿರುತ್ತಿತ್ತು. ವಿಶಾಲವಾದ ರವೀಂದ್ರ ಕಲಾಕ್ಷೇತ್ರದ ರಂಗಭೂಮಿಯನ್ನು ಚಿಕ್ಕದಾಗಿ ಮಾಡಿಕೊಂಡು, ಸೋಫಾ ಸೆಟ್ಟುಗಳಿಂದ ಭರ್ತಿಮಾಡಿ ಪಾತ್ರಗಳ ಓಡಾಟಕ್ಕೆ ಅಡ್ಡಿಯಾಯಿತು. ರಂಗರಾವ್ ಸದಾ ತನ್ನ ಬುಷ್ ಷರಟಿನ ಕೊನೆಯನ್ನು ಎಳೆದುಕೊಳ್ಳುತ್ತಿದ್ದರ ಜೊತೆಗೆ ಸರೋಜ, ಸುಶೀಲಾ ಪಾತ್ರಗಳನ್ನುಳಿದು ಮಿಕ್ಕೆಲ್ಲ ಪಾತ್ರಗಳು 'ಗಿಣಿಪಾಠ'ದಂತೆ ಮಾತೊಪ್ಪಿಸುತ್ತಿದ್ದರು. ಇವರ ದೃಷ್ಟಿ ತಾದಾತ್ಮ್ಯಕ್ಕಿಂತಲೂ ಕರ್ತವ್ಯ ನಿರ್ವಹಣೆಗೆ ಹೆಚ್ಚಾಗಿ ಗಮನ ಕೊಡುತ್ತಿದ್ದರೂ, 'ಬಾಲಕನ್ನಿ' ಪ್ರೇಕ್ಷಕರ (ಒಂದು ವರ್ಗ) ಅರಸಿಕತೆಯ ಮಾತುಗಳಿಗೆ ಆಗಾಗ ಬೆದರಿದರೂ ನಾಟಕವನ್ನು ಎಲ್ಲೂ ಎಡವಿಸದೆ ತೂಗಿಸಿಕೊಂಡು ಹೋದದ್ದನ್ನು ಅಭಿನಂದಿಸಲೇಬೇಕು.

ಶಕುಂತಳಾದೇವಿ ಅವರ 'ಧರ್ಮರಾಯನ ಸನ್ನಿಧಿಯಲ್ಲಿ' ವಿಡಂಬನಾ ನಾಟಕವನ್ನು ರೇಣುಕಾಚಾರ್ಯ ಲಾ ಕಾಲೇಜಿನ ವಿದ್ಯಾರ್ಥಿಗಳು ಯಶಸ್ವಿಯಾಗಿಯೇ ಅಭಿನಯಿಸಿದರು. ಪಾತ್ರಗಳ ಅಭಿನಯಕ್ಕೆ ಪೂರ್ಣಾವಕಾಶವಿಲ್ಲದೆ ವರದಿ ನಾಟಕ (Report Play) ದಂತಿರುವ ಈ ನಾಟಕವನ್ನು ಆರಿಸಿಕೊಂಡಿದ್ದರಿಂದಲೇ ಇರಬೇಕು, ನಾಟಕ ಮೊದ-ಮೊದಲು ಪ್ರೇಕ್ಷಕರನ್ನು ತನ್ನ ರಸಸ್ಪರ್ಶದಿಂದ ಸೆರೆಹಿಡಿದರೂ ಬರುಬರುತ್ತಾ ಹಿಡಿತ ಸಡಿಲವಾಯಿತು. ವಿಚಾರಣೆಯನ್ನು ನಡೆಸುತ್ತಿದ್ದ ಚಿತ್ರಗುಪ್ತನ ಬಾಯಲ್ಲಿ ಮಾತುಗಳು ಮುರಿದು ಮುರಿದು ಬೀಳುತ್ತಿದ್ದುದರ ಜೊತೆಗೆ ವಿಚಾರಣೆ ಸಾಗಿದಂತೆಲ್ಲಾ ನಾಟಕದ ಕಾವು ಕಡಮೆಯಾಯಿತು. ನಾಟಕದ ಆರಂಭದಿಂದ ಕೊನೆಯವರೆಗೆ ದೇವದೂತರು ಮತ್ತು ಯಮದೂತ ಆಸನಗಳಿದ್ದೂ ಕೂಡದಿದ್ದದ್ದು ಆಶ್ಚರ್ಯ. ಯಮಧರ್ಮರಾಯ, ಸಾಹುಕಾರ ಸಂಗಪ್ಪ, ಭಾಗೀರಥಿಬಾಯಿ ಮತ್ತು ಅಮ್ಮಯಮ್ಮ ಪಾತ್ರಗಳ ಅಭಿನಯದ ಫಲವಾಗಿ ನಾಟಕ ನೀರಸವಾಗಲಿಲ್ಲ. ಡಾ|| ದೀನದಯಾಳುವಿನ ಅಭಿನಯ ಆತುರ, ನಿರ್ಮಲೆಯ ವಿಚಿತ್ರ ದುಗುಡ ಪ್ರದರ್ಶನದ ನ್ಯೂನತೆ ಇದ್ದರೂ, ನಾಟಕದಲ್ಲಿ ಇಲ್ಲದ ಜೀವವನ್ನು ವಿದ್ಯಾರ್ಥಿ ಕಲಾವಿದರು ತುಂಬಿ, ಪ್ರೇಕ್ಷಕರ ಆದರಕ್ಕೆ ಪಾತ್ರವಾಗುವಂತೆ ಪ್ರಯೋಗಿಸಿದರು.

ತಿಪಟೂರು ಕಲ್ಪತರು ಕಾಲೇಜಿನ ವಿದ್ಯಾರ್ಥಿ ಮಿತ್ರರ ಕಾಣಿಕೆ, ಪರ್ವತವಾಣಿ ಅವರ 'ಹಣಹದ್ದು'. ಹೆಚ್ಚಿನ ದೃಶ್ಯ ಬದಲಾವಣೆಗಳುಳ್ಳ ಈ ನಾಟಕವನ್ನು ಆರಿಸಿಕೊಂಡಿದ್ದರ ಜೊತೆಗೆ, ಯೋಗ್ಯ ರಂಗಸಜ್ಜಿಕೆ, ಅಭಿನಯದ ಪ್ರೇಕ್ಷಕರ ಸಹನೆಯನ್ನು ಕ್ಷಣ ಕ್ಷಣಕ್ಕೂ ಪರೀಕ್ಷಿಸುತ್ತಾ ಕೊನೆ ಮುಟ್ಟಿತು. ನಾಟಕದ ಕೆಲವೆಡೆಗಳಲ್ಲಿ ಪ್ರತಿಭೆಯ ಮಿಂಚು ಮಿಂಚಿ ಮಾಯವಾಗುತ್ತಿತ್ತು. ನಾಗಣ್ಣನ ಪಾತ್ರದ ಸಲ್ಲದ ಆತುರ; ಒಂಭತ್ತನೆ ಅಂಕದಲ್ಲಿ ಸಾಲಾಗಿ ನಿಂತ ಪಾತ್ರಗಳು; ಬಣ್ಣದ ಗೊಂಬೆಯಂತಿದ್ದು ಭಾಷಣಗಾರನಾಗಿದ್ದ ಪುಟ್ಟು; ರಂಗಮಂಚದ ಮೇಲೆ ಏನು ಮಾಡಬೇಕೆಂದು ತಿಳಿಯದೆ ಸಭಾಕಂಪದ ತಾಪಕ್ಕೆ ಸಿಲುಗಿದ ವಿಶ್ವ ಮತ್ತು ವಿಮಲ; ಅನಾವಶ್ಯಕ ಪಾತ್ರಗಳು ಎನ್ನುವಷ್ಟರಮಟ್ಟಿಗೆ ಕಂಡ ಜಲೀಲ್ ಮತ್ತು ತಿಮ್ಮ; ರಸ್ತೆ 'ಸೀನ್' ಬಂದಾಗಲೆಲ್ಲಾ 'ಡಿಮ್ಮರ್' (Dimmer) ಗಳನ್ನ ಸರಿಯಾಗಿ ಬಳಸದೆ, ಪಾತ್ರಗಳ ನೆರಳು ಹಿಂಬದಿಯ ಪರದೆಯ ಮೇಲೆ ಬಿದ್ದು ಆಗುತ್ತಿದ್ದ ಪರಿಣಾಮಗಳಿಂದ ಕೂಡಿದ ನ್ಯೂನತೆಗಳ ಮಾಲೆಯಿಂದಲಂಕೃತವಾಗಿ ತೆವಳುತ್ತಾ ನಾಟಕ ಶಿಥಿಲವಾಯಿತು.

ವೆಂಬಾರ್ ವೆಂಕಟಾಚಾರ್ ಅವರ 'ಸಾವಿನ ಸಮಸ್ಯೆ' ನಾಟಕ ಎಂ. ಇ. ಎಸ್. ಕಾಲೇಜಿನ ವಿದ್ಯಾರ್ಥಿ ಕಲಾವಿದರ ಕಾಣಿಕೆ. ತೆನಾಲಿ ರಾಮಕೃಷ್ಣನ ಸುತ್ತಾ ಹೆಣೆದಿರುವ ಈ ಹಾಸ್ಯ ನಾಟಕವನ್ನು, ಇವರು ಹಾಸ್ಯಾಸ್ಪದವಾಗಿ ಅಭಿನಯಿಸಿದರು ಚಿನ್ನಾದೇವಿ ಅರಮನೆ, ತೆನಾಲಿ ರಾಮಕೃಷ್ಣನ ಮನೆ ರಂಗಸಜ್ಜಿಕೆ ರಂಗಭೂಮಿಯ ಗಾಂಭಿರ್ಯವನ್ನು ಹಾಳುಮಾಡಿತು. ಎರಡನೆಯ ದೃಶ್ಯದಲ್ಲಿ ತಿಮ್ಮರಸುವಿನ ಮೇಲೆ ಸರಿಯಾಗಿ ಬೆಳಕು ಬೀಳದೆ ಸದಾ ಕತ್ತಲಲ್ಲಿ ಅಭಿನಯಿಸುತ್ತಿದ್ದ. ಈಶ್ವರಯ್ಯ ಅಫೀಮು ಸೇವಿಸಿದಾಗ ಮಾಡಿದ ಅಭಿನಯದಲ್ಲಿ ಅಂಕೆ, ಆತಂಕಗಳೊಂದೂ ಇದ್ದಹಾಗೆ ಕಾಣಲಿಲ್ಲ. ಶ್ರೀ ಕೃಷ್ಣದೇವರಾಯ ಎಡವಿ ರಂಗಪ್ರವೇಶ ಮಾಡಿದ್ದರ ಜೊತೆಗೆ. ಈಶ್ವರಯ್ಯನನ್ನು ತಂದು ಮಹಾರಾಜರ ಮುಂದೆ ಮಲಗಿಸಿದಾಗ ಟೋಫನ್ ಕಳಚಿಕೊಂಡಿದ್ದು ನಾಟಕದ ಸನ್ನಿವೇಶದ ಗಾಂಭಿರ್ಯವನ್ನೇ ವಿಘಾತಿಸಿತು. ರೂಪಸಂಪತ್ತಿಲ್ಲದ ಮಹಾರಾಣಿ ಚಿನ್ನಾದೇವಿ ಪಾತ್ರದಲ್ಲಿ ಅಭಿನಯಶೂನ್ಯತೆಯ ಜೊತೆಗೆ ಪಾರ್ವತಿಯ ಪಾತ್ರದ ಆಯ್ಕೆ ಸರಿಯಿಲ್ಲದೆ ಪೇಚಾಟಕ್ಕೆ ಸಿಕ್ಕಿ ನಾಟಕ ಮತ್ತಷ್ಟು ಮಂಕಾಯಿತು. ರಾಜಭಟರು ಮತ್ತು ರತ್ನ ವ್ಯಾಪಾರಿಗಳು ನಾಟಕಕ್ಕೂ ತಮಗೂ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದರು. ನಾಟಕಕ್ಕೆ ಕಾವ್ಯವೆಷ್ಟು ಮುಖ್ಯವೊ ನಟರೂ ಅಷ್ಟೇ ಮುಖ್ಯ ಅನ್ನುವುದನ್ನು ಪೂರ್ಣವಾಗಿ ಮರೆತಂತೆ ಕಾಣುತ್ತದೆ. ಇಡೀ ನಾಟಕ ಎಲ್ಲಾ ದೃಷ್ಟಿಯಿಂದಲೂ ಅಸಮರ್ಪಕವಾಗಿ, ಸಾಗುತ್ತಿರುವಾಗ ತನ್ನ ಅಭಿನಯ ಸಾಮರ್ಥ್ಯದಿಂದ, ಕುಸಿಯುತ್ತಿದ್ದ ನಾಟಕವನ್ನು ಎತ್ತಿ ಹಿಡಿಯುವ ಗೌರಿಯ ಪ್ರಯತ್ನ ಶ್ಲಾಘನೀಯವಾದರೂ, ಈ ಅಭಾಸಗಳ ಮೆರವಣಿಗೆಯಲ್ಲಿ ಮುಚ್ಚಿಹೋಯಿತು. ಈ ನಾಟಕವನ್ನು ನೋಡಿದವರಿಗೆಲ್ಲಾ ಕೈಲಾಸಂ ಅವರ 'ನಮ್ಮ ಕಂಪನಿ' ನಾಟಕ ನೆನಪಿಗೆ ಬಂದಿದ್ದರೆ ಆಶ್ಚರ್ಯವೇನಿಲ್ಲ.

ಸಹೃದಯರ ಆಸಕ್ತಿಯನ್ನು ಕೆರಳಿಸಿ, ನಾಟಕದ ವಿಚಾರಗಳ ಕಡೆಗೆ ಸೆಳೆದು, ನಾಟಕದ ಸನ್ನಿವೇಶಗಳು ಕುಸಿದು ಬೀಳದಂತೆ ಸಮನ್ವಯವನ್ನು ಕಂಡುಕೊಂಡು, ಪ್ರೇಕ್ಷಕರ ರಸಜ್ಞತೆಯನ್ನು ಕಲಕದೆ ಪ್ರಾಮಾಣಿಕ ಪ್ರಯೋಗಗಳನ್ನು ಮಾಡಿದ ನಾಟಕಗಳೆಂದರೆ 'ಕುವೆಂಪು' ಅವರ 'ವಾಲ್ಮೀಕಿಯ ಭಾಗ್ಯ' ಗಿರೀಶ ಕಾರ್ನಾಡರ 'ಹಿಟ್ಟಿನ ಹುಂಜ', ಅಶ್ವತ್ಥನಾರಾಯಣರಾವ್ ಅವರ 'ಬೇಗ್, ಬಾರೋ ಆರ್ ಸ್ಟೀಲ್' ಈ ಮೂರು ನಾಟಕಗಳ ಜೊತೆಗೆ ಕೈಲಾಸಂ ಅವರ 'ಬಂಡ್ವಾಳ್ವಿಲ್ಲದ ಬಡಾಯಿ' ಮತ್ತು ಶಕುಂತಳಾ ದೇವಿ ಅವರ 'ಧರ್ಮರಾಯನ ಸನ್ನಿಧಿಯಲ್ಲಿ' ನಾಟಕಗಳು ಮಸುಕು ಮಸಕಾಗಿ ಉಳಿಯುವುವು.

ಪ್ರದರ್ಶಿತವಾದ ಹದಿಮೂರು ನಾಟಕವನ್ನು ಸಮಗ್ರತೆಯಿಂದ ನೋಡಿದರೆ, ಲೋಪ-ದೋಷಗಳು ಹೆಚ್ಚಾಗಿ ಅಭಿನಯದಲ್ಲಿ ಕಂಡುಬರುವುದು. ನಾಟಕಗಳ ಆಯ್ಕೆ ಮತ್ತು ರಂಗಸಜ್ಜಿಕೆಯ ಜೊತೆಗೆ ಉತ್ತಮ ನಿರ್ದೇಶನ, ಸತತ ತಾಲೀಮು (Rehearsal) ರಂಗ ತಾಲೀಮುಗಳಲ್ಲಿ ಉದಾಸೀನತೆಯನ್ನು ತೋರದೆ ಶ್ರದ್ಧೆಯಿಂದ ನಡೆಸಬೇಕಾದುದು ಅವಶ್ಯಕ.

ಈ ಬಾರಿಯ ಉಲ್ಲಾಳ್ ಪಾರಿತೋಷಕದ ಅಂಗವಾಗಿ ಏರ್ಪಡಿಸಿದ್ದ 'ಥಿಯೇಟರ್ ವರ್ಕ್ ಷಾಪ್'ಗಳಂತಹ ಕಾರ್ಯಕ್ರಮಗಳ ಜೊತೆಗೆ ನಾಟಕದಲ್ಲಿ ಆಸಕ್ತ ಕಾಲೇಜು ಅಧ್ಯಾಪಕರನ್ನು ಹಾಗೂ ಪ್ರತಿಭಾವಂತ ವಿದ್ಯಾರ್ಥಿ ಕಲಾವಿದರನ್ನು ಗುರುತಿಸಿ, ಈ ಕಲೆಯ ಬಗ್ಗೆ ಶಾಸ್ತ್ರೀಯ ತರಬೇತಿಯ ಶಿಬಿರಗಳನ್ನು ನಡೆಸಿದರೆ ನಾಟಕೋತ್ಸವಗಳ ಮಟ್ಟ ಹೆಚ್ಚುತ್ತದೆ. ವಿದ್ಯಾವಂತ ಸಹೃದಯ ಗಣವನ್ನು ಬೆಳಸಿ, ರಂಗಭೂಮಿಯನ್ನು ಆಧುನಿಕ ದೃಷ್ಟಿಯಿಂದ ನೋಡುವ ಬೌದ್ಧಿಕ ಮಟ್ಟವನ್ನು ಹೆಚ್ಚಿಸಿ, ರಂಗಭೂಮಿ, ನಾಟಕ ಹಾಗು ಪ್ರೇಕ್ಷಕರಲ್ಲಿ ಸಮಭಾವ ನೆಲೆಸುವಂತೆ ಮಾಡಲು ಸಹಕಾರಿಯಾಗುವುದು.

ವಂಶವೃಕ್ಷ: ಈ ದಶಕದ ಒಂದು ಉತ್ತಮ ಕಾದಂಬರಿ

ಶೇಷನಾರಾಯಣ

'ವಂಶವೃಕ್ಷ' ಒಂದು ಬೃಹತ್ ಕಾದಂಬರಿ. ಇತ್ತೀಚೆಗೆ ಪ್ರಕಟವಾದ ಕೃತಿಗಳಲ್ಲಿ ಇದು ತನ್ನದೇ ಆದ ಸ್ಥಾನವನ್ನು ದೊರಕಿಸಿಕೊಂಡಿದೆ. ಕನ್ನಡದಲ್ಲಿ ಹೊರಬಂದಿರುವ ಶ್ರೇಷ್ಠ ಕಾದಂಬರಿಗಳಲ್ಲಿ ಇದೂ ಒಂದು ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಎರಡು ಕುಟುಂಬಗಳ ಹೃದಯಂಗಮ ಚಿತ್ರಣ ಈ ಕೃತಿಯ ವಸ್ತು. ಅನವಶ್ಯಕವಾದ ಪಾತ್ರಗಳ ಬೆಳೆವಣಿಗೆ ಇಲ್ಲದೆ, ಓದುಗನ ಚಿತ್ತವನ್ನು ಕಲಕುವ, ಒಂದೊಂದು ರೀತಿಯ ಸಂಘರ್ಷಕ್ಕೆ ಒಳಗಾಗಿರುವ ಜೀವಂತ ಪಾತ್ರಗಳು. ವಿಷಯ ನಿರೂಪಣಾ ಕೌಶಲದಲ್ಲಿ, ಭಾಷೆಯ ಬಳಸುವಿಕೆಯಲ್ಲಿ, ಶೈಲಿಯ ಓಟದಲ್ಲಿ ಪರಿಣಾಮಕಾರಿಯಾಗಿ, ಆಳವಾದ ಅಧ್ಯಯನದಿಂದ ಪ್ರತಿಭೆ ಪರಿಪಕ್ವಗೊಳ್ಳುವಾಗ ಒಂದು ಕೃತಿ ಹೇಗೆ ಪ್ರಬುದ್ಧವಾಗುತ್ತದೆ ಎನ್ನುವುದನ್ನು ನಾವು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಡಾ. ಸದಾಶಿವರಾಯರು, ಅವರ ಪತ್ನಿ ನಾಗಲಕ್ಷ್ಮಿ, ಸಂಶೋಧನೆಗೆ ನೆರವಾಗಲು ಬಂದು ಮತ್ತೊಬ್ಬ ಪತ್ನಿಯಾಗುವ ಸಿಂಹಳದ ರತ್ನೆ. ನಾಟಕಕಾರ ಸೋದರ ರಾಜಾರಾಯ–ಇವರು ಒಂದು ಕುಟುಂಬ; ಮಗನನ್ನು ಕಳೆದುಕೊಂಡಿರುವ ಶ್ರೀನಿವಾಸ ಶ್ರೋತ್ರಿಯರು, ಅವರ ಪುಟ್ಟ ಸೊಸೆ ಕಾತ್ಯಾಯನಿ, ಮೊಮ್ಮಗ ಚೀನಿ – ಇವರದು ಮತ್ತೊಂದು ಕುಟುಂಬ.

ಇಲ್ಲಿ ಯಾವುದನ್ನೂ ಧರ್ಮಕರ್ಮಗಳ ದೃಷ್ಟಿಯಿಂದಲೇ ತೂಗಿನೋಡುವ ಶ್ರೋತ್ರಿಯರು, ಯಾವುದನ್ನೂ ಯಾರನ್ನೂ ಕುರಿತು ಟೀಕಿಸುವ ಅಧಿಕಾರ ನಮಗಿಲ್ಲ ಎನ್ನುವ ಮನೋಭಾವ ಅವರಿಗೆ. ಆದರಿಂದಲೆ ತಮ್ಮ ಪುಟ್ಟ ಸೊಸೆ, ವಿಧವೆ, ಕಾತ್ಯಾಯನಿ ರಾಜಾರಾಯನನ್ನು ಎರಡನೆಯ ಸಲ ವಿವಾಹವಾಗಲೂ ಅವರು ಮೌನವನ್ನೆ ತಾಳುತ್ತಾರೆ. ಹಾಗೆಯೆ ಡಾ. ಸದಾಶಿವರಾಯರು ಸಹ. ಅವರಿಗೆ ಕನಸು ಮನಸ್ಸಿನಲ್ಲಿಯೂ ತಮ್ಮ ಗ್ರಂಥಗಳ ಪ್ರಕಟನೆಯೆ ಮುಖ್ಯ. ಸಂಶೋಧನೆಯಲ್ಲಿ ಹಗಲೂ ಇರುಳೂ ಅವರು ಧ್ಯಾನಾಸಕ್ತರಾಗಿರುವವರು. ಅದಕ್ಕಾಗಿಯೆ ತಮ್ಮ ಸಂಶೋಧನೆಗೆ ನೆರವಾಗಲು ಬಂದ ರತ್ನೆಯನ್ನೂ ಬಾಳಸಂಗತಿಯಾಗಿ ಮಾಡಿಕೊಳ್ಳಲು ಅವರು ಹಿಂಜರಿಯುವುದಿಲ್ಲ. ತಮ್ಮ ಮೊದಲ ಪತ್ನಿ ನಾಗಲಕ್ಷ್ಮಿಯನ್ನು ತೊರೆಯಲು ಅವರಿಗೆ ಅವಳ ಮೇಲೆ ಯಾವ ವಿಧವಾದ ದ್ವೇಷವೂ ಇಲ್ಲ.

ಏನಾದರಾಗಲಿ ಎಂದು ಸಹಿಸಿಕೊಂಡು ಹೋಗುವ ಶಕ್ತಿ, ತಾಳ್ಮೆ ನಾಗಲಕ್ಷ್ಮಿಗೆ ಇದೆ. ಶ್ರೀರಾಮ ನಾಮವೆ ಅವಳಿಗೆ ರಕ್ಷೆ. ಆದರೆ ಆ ಶಕ್ತಿ ಕಾತ್ಯಾಯನಿಗೆ ಇಲ್ಲ! ಕಾತ್ಯಾಯನಿ ಈ ಕಾದಂಬರಿಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತಾಳೆ. ಪ್ರಕೃತಿಗೆ ಧರ್ಮದ ಕಟ್ಟನ್ನು ಹಾಕುವುದು ಅಧರ್ಮ ಎನ್ನುವ ಧೈರ್ಯದಿಂದ ತನ್ನ ಮಗು ಚೀನಿಯನ್ನೂ ತೊರೆದು ರಾಜಾರಾಯನನ್ನು ಎರಡನೆಯ ಸಲ ಮದುವೆಯಾಗುತ್ತಾಳೆ. ಆದರೂ ಚಿತ್ತಕ್ಷೋಭೆಯಿಂದ ದುರಂತದಲ್ಲಿಯೆ ಅವಳ ಬಾಳು ಮುಗಿಯುತ್ತದೆ. ಬಿರುಗಾಳಿಯಂತೆ ಅವಳು ಬರುತ್ತಾಳೆ; ಹೋಗುತ್ತಾಳೆ. ಕಾತ್ಯಾಯನಿಯ ಚಿತ್ರ ಓದುಗನ ಮನ ಮಿಡಿಸುತ್ತದೆ.

ಕಾತ್ಯಾಯನಿ, ನಾಗಲಕ್ಷ್ಮಿ ಮತ್ತು ಸಿಂಹಳದ ಕರುಣಾರತ್ನೆ ಈ ಮೂರು ಪಾತ್ರಗಳು ಈ ಕೃತಿಯಲ್ಲಿ ಮೂರು ರತ್ನಗಳಂತೆಯೆ ಇವೆ. ಒಬ್ಬೊಬ್ಬರದು ಒಂದೊಂದು ಮುಖ. ಆದರೆ ಯಾವಲ್ಲಿಯೂ ವಿರೋಧಾಭಾಸವಿಲ್ಲ. ರತ್ನೆ ಮತ್ತು ಕಾತ್ಯಾಯನಿ ಪೂರ್ಣ ವಿದ್ಯಾಭ್ಯಾಸವನ್ನು ಪಡೆದವರು. ನಾಗಲಕ್ಷ್ಮಿ ಒಬ್ಬ ಸಂಶೋಧಕನ ಹಾಗೂ ಪಂಡಿತನ ಪತ್ನಿ ಅಷ್ಟೆ. ಆದರೆ ಅವಿದ್ಯಾವಂತೆ!

ಇಲ್ಲಿ ಲೇಖಕರು ತಮ್ಮ ಪ್ರೌಢಿಮೆಯಿಂದ ಈ ಮೂರು ಪಾತ್ರಗಳನ್ನೂ ಹೇಗೆ ಕಡೆದಿದ್ದಾರೆ ಎನ್ನುವುದು ಮುಖ್ಯ. ರತ್ನೆ ರಾಯರಿಗಾಗಿ ಸಂಶೋಧನೆಗಾಗಿ ತನ್ನ ನಾಡನ್ನೂ ಮನೆಮಠವನ್ನೂ ತೊರೆದು ಬಂದಳು. ಕಾತ್ಯಾಯನಿ ಪ್ರಕೃತಿಯ ಸೆಣಸಾಟಕ್ಕೆ ಈಡಾಗಿ ತನ್ನ ಮಗುವನ್ನೂ ಮನೆಯನ್ನೂ ತೊರೆದಳು. ಹೊಸ ಜೀವನದ ಅಧ್ಯಾಯವೊಂದನ್ನು ಪ್ರಾರಂಭಿಸಿದಳು. ನಾಗಲಕ್ಷ್ಮಿಯೋ ಅಸಹಾ

ಯಕಳಾಗಿ ಪತಿಯನ್ನು ರತ್ನೆಗೊಪ್ಪಿಸಿ ತಾನು ಇದ್ದಲ್ಲಿಯೆ ಉಳಿದಳು.

ಆದರೆ ರಾಯರ ಅಂತ್ಯಕಾಲದಲ್ಲಿ ನಾಗಲಕ್ಷ್ಮಿಯೆ ಅವರಿಗೆ ನೆರವಾದಳು. ಅವಳಿಗೆ ಶಾಂತಿ ಸಿಕ್ಕಿತು. ಈ ಶಾಂತಿ ಕಾತ್ಯಾಯನಿಯ ಪಾಲಿಗೆ ಇಲ್ಲ; ರತ್ನೆಗೂ ಇಲ್ಲ.

ಶ್ರೋತ್ರಿಗಳ ವಿಚಾರವೂ ಹಾಗೆಯೇ. ಅವರು ಸಂನ್ಯಾಸಿಯಾಗಿ ಹೊರಟು ಹೋಗುವ ಚಿತ್ರ ಓದುಗನ ಕಣ್ತುಂಬುತ್ತದೆ. ಆದರೆ ಅಂತ್ಯದಲ್ಲಿ ಅವರು ತಾವು ತಮ್ಮ ವಂಶದ ವೃಕ್ಷವಲ್ಲ ಎಂದು ಮರುಗುವಾಗ ಅವರ ಮರುಕದೊಂದಿಗೆ ನಮ್ಮ ಮರುಕವೂ ಸೇರಿಕೊಳ್ಳುತ್ತದೆ.

ಈ ಕೃತಿಗೆ ಹಿನ್ನುಡಿಯ ರೂಪದಲ್ಲಿ 'ಸಾಹಿತ್ಯ ಮತ್ತು ಮೌಲ್ಯಸಂವೇದನೆ' ಎನ್ನುವ ಹದಿನೇಳು ಪುಟಗಳ ಒಂದು ಪ್ರಬಂಧವನ್ನು ಲೇಖಕರು ಸೇರಿಸಿದ್ದಾರೆ.

ಇಂಥ ಒಂದು ಒಳ್ಳೆಯ ಕೃತಿಯನ್ನು ಜನತೆಗಿತ್ತುದಕ್ಕಾಗಿ ಲೇಖಕರನ್ನು ನಾವು ಅಭಿನಂದಿಸುವುದು ಎಷ್ಟು ಮುಖ್ಯವೊ ಹಾಗೆಯೆ ಹೆಚ್ಚು ಪುಟಗಳ ಈ ಕೃತಿಯನ್ನು ಬೆಳಕಿಗೆ ತರಲು ಶ್ರಮಿಸಿರುವ ಪ್ರಕಾಶಕರಾದ ಸಾಹಿತ್ಯ ಭಂಡಾರದವರನ್ನೂ ಅಭಿನಂದಿಸುವುದೂ ಅಷ್ಟೇ ನಮ್ಮ ಕರ್ತವ್ಯವೂ ಆಗಿದೆ.

ವಂಶವೃಕ್ಷ (ಕಾದಂಬರಿ) ಲೇಖಕರು: ಎಸ್. ಎಲ್. ಭೈರಪ್ಪ; ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ, ಪುಟಗಳು ೫೧೪, ಬೆಲೆ: ರೂ. ೮-೦೦.

ಸ್ವೀಕಾರ

ದೀಪಾವಳಿ ಸಂಚಿಕೆ: ವಿಶೇಷಾಂಕ

ಸಾಧನ; ದೀಪಾವಳಿ ಸಂಚಿಕೆ ವಿಶೇಷಾಂಕ ೧೯೬೬. ಸಂಪಾದಕರು: ಕೆ. ಆರ್. ಗಣೇಶರಾವ್ ಮತ್ತು ಗ. ಶ. ಸರ್ಪಕರ್ಣೇಶ್ವರ, ಪ್ರ: ಸಾಧನ ಕಾರ್ಯಾಲಯ, ಹೊನ್ನಾವರ; ಪುಟ: ೬೪; ಬೆಲೆ: ಬಿಡಿ ಸಂಚಿಕೆಗೆ ರೂ. ೧-೦೦, ೧೯೬೬.

ನಗುವನಂದ; ದೀಪಾವಳಿ ಸಂಚಿಕೆ ವಿಶೇಷಾಂಕ ೧೯೬೬. ಸಂಪಾದಕರು: ಸಿ. ಆರ್. ಕೃಷ್ಣರಾವ್, ಪ್ರ: ರಂಜನ್ ಪಬ್ಲಿಕೇಷನ್ಸ್. ನಂ. ೧೭೫, ೬ನೇ ಕ್ರಾಸ್, ಗಾಂಧಿನಗರ, ಬೆಂಗಳೂರು-೯ ಪುಟ: ೧೨೦, ಬೆಲೆ: ಬಿಡಿ ಸಂಚಿಕೆ ರೂ. ೧-೨೫, ೧೯೬೬.

ಷಟ್ಪದಿ:

ವೀರೇಶ ಚರಿತೆ; ಲೇ: ಮಹಾಕವಿ ರಾಘವಾಂಕ; ಸಂ: ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರೀ ಪ್ರ: ಶರಣ ಸಾಹಿತ್ಯ ಕಾರ್ಯಾಲಯ, ಬಳೇಪೇಟೆ. ಬೆಂಗಳೂರು-೨; ಪುಟ; ೨+೨೧+೪೪+೮; ಬೆಲೆ: ರೂ, ೩-೦೦, ೧೯೬೬.

ಲಿಪಿಶಿಕ್ಷಣ:

ನವನವಾಂಕ ಶ್ರೀನಿವಾಸ ಲಿಪಿ ಬೋಧಿನಿ; ಶೋಧಕರು: ಶ್ರೀ ಶ್ರೀ ಅಮಣಾಜೆಗುತ್ತು ಶೀನಪ್ಪ ಹೆಗ್ಗಡೆ, ಪೊಳಲಿ, ಪ್ರ: ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ, ಜಪ್ಪು, ಮಂಗಳೂರು-೨; ಪುಟ: ೧೮+೧೬ ಬೆಲೆ: ೧೯೬೬.

ವಚನ ಸಾಹಿತ್ಯ:

Thus Spake Basava; Author: Basava Samiti, Bangalore-9. Publisher: Basava Samiti, Bangalore-9; Page: 82; Rs. 0-50, 1965.

ಬಸವ ವಚನಾಮೃತ; ಲೇ: ಬಸವ ಸಮಿತಿ, ಸಂ: ಡಾ. ಎಲ್. ಬಸವರಾಜು; ಪ್ರ: ಬಸವಸಮಿತಿ, ಬೆಂಗಳೂರು-೯; ಪುಟ: vii+೧೧೧; ಬೆಲೆ: ರೂ. ೦-೫೦, ೧೯೬೬.

ಬಸವ ವಚನಾಮೃತಮು: (ತೆಲುಗು) ಅನು: ಪಾಡಾಲ ರಾಮಯ್ಯ; ಪ್ರ: ಬಸವ ಸಮಿತಿ, ಬಸವ ಸದನಮು, ಶ್ರೀ ಸರ್ಪಭೂಷಣ ಮಠ, ಬೆಂಗಳೂರು-೯; ಪುಟ: x ೫೬, ಬೆಲೆ: ರೂ. ೦-೨೫, ೧೯೬೫.

ಬಸವ ವಚನಾಮೃತ (ಸಂಸ್ಕೃತ) ಅನು: ಎಂ. ಜಿ. ನಂಜುಂಡಾರಾಧ್ಯರು, ಪ್ರ: ಬಸವ ಸಮಿತಿ, ಬೆಂಗಳೂರು-೯. ಪುಟ vii + ೪೪, ಬೆಲೆ: ರೂ. ೧೯೬೬.

ಬಸವ ವಚನಾಮೃತ (ತಮಿಳು) ಲೇ: ತಿರು ಸೋಮಸುಂದರ್ ಅಯ್ಯರ್ ವಿದ್ವಾನ್ ಪ್ರ; ಬಸವಸಮಿತಿ, ಬೆಂಗಳೂರು-೯, ಪುಟ: ೧೦೮, ಬೆಲೆ: ೧೯೬೬.

೪

ಸಂಪಾದಕೀಯ

ದೇಶಭಾಷೆಗಳ ಅಭಿವೃದ್ಧಿ ಯೋಜನೆ

ಭಾರತೀಯ, ಪ್ರಾದೇಶಿಕ ಭಾಷೆ, ಸಾಹಿತ್ಯಗಳ ಬೆಳವಣಿಗೆಯ ದೃಷ್ಟಿಯಿಂದ ಕೇಂದ್ರ ಸರಕಾರವು ಕೈಕೊಂಡ ಹಲವಾರು ಕ್ರಮಗಳಲ್ಲಿ ಇತ್ತೀಚಿನ 'ಭಾರತೀಯ ಭಾಷಾಭಿವೃದ್ಧಿ ಯೋಜನೆಯು' ಬಹು ಮುಖ್ಯವಾದುದು. ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ಕಾಗಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ ಪ್ರತಿರಾಜ್ಯದಲ್ಲಿ ಒಂದೊಂದು ಭಾಷಾಭಿವೃದ್ಧಿ ಸಂಸ್ಥೆಯನ್ನು ಏರ್ಪಡಿಸಲು ಯೋಜಿಸಲಾಗಿದೆ. ವಿಶ್ವವಿದ್ಯಾನಿಲಯಗಳು ಹಾಗೂ ರಾಜ್ಯಸರಕಾರದ ಭಾಷಾಭಿವೃದ್ಧಿ ಇಲಾಖೆಯು (Language Department) ಕೂಡಿಕೊಂಡು ಈ ಸಂಸ್ಥೆಯನ್ನು ರೂಪಿಸಬೇಕಾಗಿದೆ. ಪ್ರಾದೇಶಿಕ ಭಾಷೆಗಳಲ್ಲಿ ನಿಘಂಟು, ಆಕರಗಳು, ವ್ಯಾಕರಣ ಗ್ರಂಥಗಳು ಮೊದಲಾದವುಗಳನ್ನು ಸಿದ್ಧಪಡಿಸುವುದು, ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ರಚಿಸಿ ಪ್ರಕಟಿಸುವುದು, ಭಾಷಾ ಬೋಧನ ಕ್ರಮಕ್ಕೆ ಸಹಾಯವಾಗುವಂತೆ ವಿದ್ವದ್ಗೋಷ್ಠಿ, ಸಮ್ಮೇಳನಗಳನ್ನು ಏರ್ಪಡಿಸುವುದು—ಇವೇ ಮುಂತಾದ ಕಾರ್ಯಕ್ರಮಗಳನ್ನು ಈ ಸಂಸ್ಥೆಯು ಕೈಕೊಳ್ಳಲಿದೆ. ಕೇಂದ್ರ ಸರಕಾರದ ಈ ಯೋಜನೆಯನ್ನು ವಿದ್ವಾಂಸರು, ಸಾಹಿತ್ಯಾಭಿಮಾನಿಗಳು ಸಂತೋಷದಿಂದ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ.

ಈ ಯೋಜನೆಯನ್ವಯ ಸ್ಥಾಪಿತವಾಗಲಿರುವ ಕನ್ನಡ ಭಾಷಾಭಿವೃದ್ಧಿ ಸಂಸ್ಥೆಯಲ್ಲಿ ನಮ್ಮ ನಾಡಿನ ಎರಡು ವಿಶ್ವವಿದ್ಯಾನಿಲಯಗಳು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತ ಅಭಿವೃದ್ಧಿ ಇಲಾಖೆಯು ಸೇರಬೇಕಾಗುವುದು. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ಸಂಶೋಧನೆ ಮತ್ತು ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ವಿವಿಧ ಯೋಜನೆಗಳ ಮೂಲಕ ಪ್ರಶಂಸನೀಯ ಕಾರ್ಯ ಸಾಧಿಸುತ್ತಲಿವೆ. ಧನ, ಹಾಗೂ ಜನಬಲಗಳ ಸಹಾಯದಿಂದ ಎಂಥ ಯೋಜನೆಯನ್ನೂ ಯಶಸ್ವಿಗೊಳಿಸುವ ಸಾಮರ್ಥ್ಯವನ್ನು ನಮ್ಮ ಈ ವಿಶ್ವವಿದ್ಯಾನಿಲಯಗಳು ಪಡೆದಿದ್ದರೂ, ಅವುಗಳ ಕಾರ್ಯಕ್ಷೇತ್ರಗಳು ಕೆಲಮಟ್ಟಿಗೆ ಸೀಮಿತವಾಗಿರುವವು. ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ವಿಭಾಗಗಳಲ್ಲಿ ಸೇರ್ಪಡೆಯಾಗದೆ, ಬೇರೆ ಬೇರೆ ಕಡೆಗಳಲ್ಲಿ ವೈಯಕ್ತಿಕವಾಗಿಯೂ ಸಾಂಘಿಕವಾಗಿಯೂ ನಡೆಯುತ್ತಿರುವ ಸಂಶೋಧನ ಕಾರ್ಯಗಳನ್ನು ಸಂಯೋಜಿಸಿ ಅವುಗಳ ಪ್ರಯೋಜನವು ಜನತೆಗೆ ದೊರೆಯುವಂತೆ ಮಾಡುವುದೂ ಈ ಸಂಸ್ಥೆಯ ಉದ್ದೇಶವಾಗಿದೆ.

ಈ ದೃಷ್ಟಿಯಿಂದ, ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿರುವ ಭಾಷಾಭಿವೃದ್ಧಿಯ ಯೋಜನೆಗಳಿಗೂ ಈ ಸಂಸ್ಥೆಯು ಮನ್ನಣೆ ನೀಡುವುದು ಅಗತ್ಯ. ಅಖಿಲ ಕರ್ನಾಟಕದ ವಿದ್ವಾಂಸರ ಸಹಕಾರದಿಂದ ಪರಿಷತ್ತು ಹಲವು ಉಪಯುಕ್ತ ಕಾರ್ಯಗಳನ್ನು ಕೈಕೊಂಡಿದೆ. ಕನ್ನಡ-ಕನ್ನಡ ನಿಘಂಟು ಅಂಥವುಗಳಲ್ಲಿ ಒಂದು. ಬೇರೊಂದು ನಿಘಂಟಿನ ಯೋಜನೆಯನ್ನು ಕೈಕೊಳ್ಳುವುದು ಸುಲಭಸಾಧ್ಯವಲ್ಲದ ಸಂಗತಿ; ಹಾಗೆ ಮಾಡಿದಲ್ಲಿ ಅದು ಧನ ಹಾಗೂ ಕಾಲದ ಅಪವ್ಯಯವೇ ಎನಿಸುವುದು, ಆದುದರಿಂದ ಪರಿಷತ್ತಿನ ಆಶ್ರಯದಲ್ಲಿ ಸಿದ್ಧವಾಗುತ್ತಿರುವ ಈ ನಿಘಂಟು ಸರ್ವಾಂಗ ಪರಿಪೂರ್ಣವಾಗಿ ಬೇಗನೆ ಪ್ರಕಟವಾಗುವಂತೆ ಈ ಭಾಷಾಭಿವೃದ್ಧಿ ಸಂಸ್ಥೆಯು ನೆರವು ನೀಡಬೇಕು; ಪರಿಷತ್ತು ಯೋಜಿಸಿರುವ ಇತರ ಭಾಷಾಭಿವೃದ್ಧಿಯ ಕಾರ್ಯಗಳು, ಪ್ರಕಟಗೊಳ್ಳಬೇಕಾಗಿರುವ ವಿದ್ವದ್ಗ್ರಂಥಗಳು, ಆರ್ಥಿಕ ಕಾರಣಗಳಿಗಾಗಿ ಮೂಲೆಗುಂಪಾಗಬಾರದು. ಹಾಗೆ ನೋಡಬೇಕಾದುದು ಸಮಾಜದ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹೊಣೆ.

ಸುದ್ದಿ ಸಂಗ್ರಹ

ಸಾಹಿತ್ಯದ ನಾಯಕ ರತ್ನಗಳು

ಕರ್ನಾಟಕ ವಿಶ್ವವಾಣಿ ನಿಲಯದ ಆಶ್ರಯದಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯದ ಬಾಟನಿ ಹಾಲ್‌ನಲ್ಲಿ ಡಿಸೆಂಬರ್ ೨೧ರಿಂದ ನಾಲ್ಕು ದಿನಗಳು 'ಕನ್ನಡ ಸಾಹಿತ್ಯದ ನಾಲ್ಕು ರತ್ನಗಳು' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸಮಾಲೆಯೊಂದು ಏರ್ಪಟ್ಟಿತ್ತು. ಈ ಮಾಲೆಯ ಉಪನ್ಯಾಸಕಾರರಾಗಿ ನಾಡಿನ ಹಿರಿಯ ಕವಿಗಳಾದ ಡಾ. ದ. ರಾ. ಬೇಂದ್ರೆಯವರು ಡಿ. ೨೨ರಂದು ರತ್ನಾಕರವರ್ಣಿಯ ಭರತ ಹಾಗೂ ಚಾಮರಸನ ಅಲ್ಲಮ, ೨೩ರಂದು ಲಕ್ಷ್ಮೀಶನ ಕೃಷ್ಣ ಹಾಗೂ ಕುವೆಂಪು ಅವರ ರಾವಣ–ಈ ಪಾತ್ರಗಳ ವೈಶಿಷ್ಟ್ಯಗಳನ್ನು ಕುರಿತು ವಿವೇಚಿಸಿದರು. ೨೪ರಂದು ಕನ್ನಡ ಸಾಹಿತ್ಯದ ಹಿರಿಮೆ ಮತ್ತು ನಮ್ಮ ಕವಿಕೃತಿಗಳ ಬಗ್ಗೆ ಓದುಗರು ಅನುಸರಿಸಬೇಕಾದ ಸಹೃದಯದ ನಿಲುವೆಗಳನ್ನು ವಿವರಿಸಿದರು. ಈ ಸಂದರ್ಭದಲ್ಲಿ ಅವರು ಬಾಳಿನಲ್ಲಿ ಸಾಮರಸ್ಯವನ್ನು ತೋರಿಸಿ ಶಾಂತಿ, ಆನಂದಗಳತ್ತ ಓದುಗನನ್ನು ಮುನ್ನಡೆಸಿ, ಪರಿಪೂರ್ಣತೆಯ ದರ್ಶನ ಮಾಡಿಸುವುದೇ ಉತ್ತಮ ಸಾಹಿತ್ಯ ಗುರಿಯೆಂದೂ ನಮ್ಮ ಹಿರಿಯ ಕವಿಗಳು ಈ ಭಾವನೆಯಿಂದ ಬೆಳಕು ನೀಡುವಂತೆ ರಚಿಸಿರುವ ಎಲ್ಲ ಸತ್ಕೃತಿಗಳನ್ನೂ ನಾವು ಸಹೃದಯತೆಯಿಂದ ಓದಿ, ಪರಿಪೂರ್ಣತೆಯನ್ನು ಅರಸಬೇಕು ಎಂದು ಕರೆಯಿತ್ತರು. ಈ ಉಪನ್ಯಾಸ ಮಾಲೆಯ ಅಧ್ಯಕ್ಷತೆಯನ್ನು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಸಿ. ಹಿರೇಮಠ ಅವರು ವಹಿಸಿದ್ದರು.

ಮ. ಸು. ಕೃಷ್ಣಮೂರ್ತಿ ಅವರಿಗೆ ಡಾಕ್ಟರೇಟ್ ಗೌರವ ಪ್ರಶಸ್ತಿ

"ಕನ್ನಡ ಮತ್ತು ಹಿಂದೀ ಸಾಹಿತ್ಯಗಳ ಪ್ರಮುಖಧಾರೆಗಳ ತುಲನಾತ್ಮಕ ಅಧ್ಯಯನ" ಎಂಬ ವಿದ್ವತ್ಪ್ರಬಂಧಕ್ಕೆ ಮೈಸೂರು ವಿ. ವಿ. ನಿಲಯದವರು ಡಾಕ್ಟರೇಟ್ ಪ್ರಶಸ್ತಿ ನೀಡಿದ್ದಾರೆ. ಶ್ರೀಯುತರು ಕನ್ನಡ ಮತ್ತು ಹಿಂದಿಯಲ್ಲಿ ಎಂ. ಎ. ಪದವೀಧರರು. ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಹಿಂದಿಯಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಕುವೆಂಪು ಮತ್ತು ಬೇಂದ್ರೆಯವರ ಮೇಲೆ ಹಿಂದಿಯಲ್ಲಿ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಹಿಂದಿಯಲ್ಲಿ ಬರೆದಿದ್ದಾರೆ. ಗೋವಿನ ಕತೆ ಮೊದಲಾದ ಜನಪದ ಗೀತೆಗಳನ್ನು ಹಿಂದಿಗೆ ಅನುವಾದಿಸಿದ್ದಾರೆ.

ಶ್ರೀಯುತರು ತಮ್ಮ ಬೃಹತ್ಪ್ರಬಂಧದಲ್ಲಿ ಕನ್ನಡ ನಾಡಿನ ವೀರ ಪರಂಪರೆಯ ಪ್ರಭಾವವನ್ನು ರಾಜಾಸ್ಥಾನದ ವೀರ ಪರಂಪರೆಯ ಮೇಲೆ ಗುರುತಿಸಿದ್ದಾರೆ. ಔತ್ತರೇಯ ಸಂತ ಪರಂಪರೆಯ ಮೇಲೆ ವೀರಶೈವ ಪ್ರಭಾವವನ್ನು ತೋರಿಸಿ, ಬಸವಣ್ಣನವರಿಂದ ಕಬೀರನೇ ಮೊದಲಾದ ಸಂತ ಕವಿಗಳು ಪ್ರಭಾವಿತರಾಗಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಕನ್ನಡನಾಡಿನ ಭಾಗವತ ಸಂಪ್ರದಾಯದ ಪ್ರಭಾವವನ್ನು ತುಳಸೀದಾಸ ಮೊದಲಾದ ಭಕ್ತ ಕವಿಗಳ ಮೇಲೆ ಸಕಾರಣವಾಗಿ, ಸೋದಾಹರಣವಾಗಿ ತೋರಿಸಿಕೊಟ್ಟಿದ್ದಾರೆ.

ಶಾಸ್ತ್ರಿ ದಂಪತಿಗಳಿಗೆ ಸತ್ಕಾರ

ಜವಹರಲಾಲ್ ನೆಹರೂ ಜನ್ಮದಿನೋತ್ಸವದಂದು ಪ್ರತಿವರ್ಷ ಭಾರತ–ಸೋವಿಯತ್ ಮೈತ್ರಿ ಸ್ಥಾಪನೆಯ ಸದುದ್ದೇಶದಿಂದ ಶ್ರೇಷ್ಠ ಸಾಹಿತ್ಯ ಕೃತಿಗಳ ಪುರಸ್ಕಾರ ಯೋಜನೆಯೊಂದನ್ನು 'ಸೋವಿಯತ್ ದೇಶ' ನೆಹರೂ ಪುರಸ್ಕಾರ ಸಮಿತಿಯವರು ಕೈಗೊಂಡರು. ಕಳೆದ ನವೆಂಬರ್ ೧೫ರಂದು ಈ ಯೋಜನೆಯ ದ್ವಿತೀಯ ಪುರಸ್ಕಾರ ಕಾರ್ಯಕ್ರಮ ನಡೆದು, ಪಾರಿತೋಷಕಗಳ ವಿತರಣೆಯಾಯಿತು. ಈ ಸಂದರ್ಭದಲ್ಲಿ ಕನ್ನಡಿಗರಾದ ಡಾ. ಎಂ. ಎಸ್ ಶಾಸ್ತ್ರಿ ಮತ್ತು ಶ್ರೀಮತಿ ರಾಧಾಶಾಸ್ತ್ರಿ ದಂಪತಿಗಳ 'ನೆಹರೂ ಮತ್ತು ಸೋವಿಯತ್ ಯೂನಿಯನ್' ಕೃತಿಗಾಗಿ ಕನ್ನಡದಲ್ಲಿ ಪತ್ರಿಕೋದ್ಯಮಕ್ಕಾಗಿ ವಿಶೇಷ ಬಹುಮಾನವನ್ನು ನೀಡಿದುದು ಕನ್ನಡಿಗರಿಗೆಲ್ಲ ಗೌರವ ತರುವ ಸಂಗತಿಯಾಗಿದೆ. ಶಾಸ್ತ್ರಿ ದಂಪತಿಗಳ ಗೌರವಾರ್ಥವಾಗಿ 'ಇಸ್ಕಸ್' ಸಂಸ್ಥೆಯ ಆಶ್ರಯದಲ್ಲಿ ಇತ್ತೀಚೆಗೆ ಮಂಗಳೂರಿನಲ್ಲಿ ಸತ್ಕಾರ ಸಮಾರಂಭವನ್ನೇರ್ಪಡಿಸಲಾಗಿತ್ತು.

ಪೆನ್ ಸಮ್ಮೇಳನದಲ್ಲಿ ವಿ. ಸೀ.

ಡಿಸೆಂಬರ್ ೨೩ ರಂದು ಪ್ರಾರಂಭವಾದ 'ಪೆನ್' ಕಾನ್ಫರೆನ್ಸಿನಲ್ಲಿ ಕನ್ನಡವನ್ನು ಪ್ರತಿನಿಧಿಸಿ ಪ್ರೊ. ವಿ. ಸೀತಾರಾಮಯ್ಯನವರು ಭಾಗವಹಿಸಬೇಕಾಗಿದ್ದುದು, ಅನಿವಾರ್ಯ ಕಾರಣಗಳಿಂದಾಗಿ ಅವರು ಹೋಗಲಾಗದ್ದರಿಂದ

'Promotion of Literature' ಎಂಬ ಅವರ ಪ್ರಬಂಧ ವನ್ನು ಸಮ್ಮೇಳನದಲ್ಲಿ ಓದಲಾಯಿತು. ಈ ಬಾರಿ ಸಮ್ಮೇಳನ ಚಂಡಿಘಡದಲ್ಲಿ. ಡಾ. ರಾಧಾಕೃಷ್ಣನ್ ಅವರಿಂದ ಉದ್ಘಾಟಿಸಲ್ಪಡಬೇಕಿತ್ತು. ಆದರೆ ಅವರ ಅಸ್ವಸ್ಥತೆಯ ಕಾರಣದಿಂದಾಗಿ ಪಂಜಾಬಿನ ರಾಜ್ಯಪಾಲರಾದ ಧರ್ಮವೀರ ಸಹಾಯ್ ಅವರಿಂದ ಸಮ್ಮೇಳನದ ಉದ್ಘಾಟನೆಯಾಯಿತು.

ಡಾ. ರಂ. ಶ್ರೀ. ಮುಗಳಿ ಅವರಿಗೆ ಸತ್ಕಾರ

ಡಾ. ರಂ. ಶ್ರೀ. ಮುಗಳಿಯವರು ಕನ್ನಡ ನಾಡು – ನುಡಿಗಳಿಗೆ ಸಲ್ಲಿಸಿರುವ ಬಹುಮುಖ ಸೇವೆಯನ್ನು ನೆನೆದು, ಧಾರವಾಡದ ನಾಗರಿಕರು ಡಿಸೆಂಬರ್ ೩೦ ರಂದು ಅವರ ಷಷ್ಟ್ಯಬ್ದ ಸಮಾರಂಭವನ್ನೇರ್ಪಡಿಸಿ ಸತ್ಕರಿಸಿದರು. ಸಾಹಿತ್ಯ ಚರಿತ್ರಕಾರರಾಗಿ ಡಾ. ಮುಗಳಿಯವರ ಕಾಣಿಕೆ ಕನ್ನಡ ಸಾರಸ್ವತ ಭಂಡಾರಕ್ಕೆ ಬಹುಮೌಲ್ಯವಾದದ್ದು. ಕವಿಯಾಗಿ 'ರಸಿಕರಂಗ'ರು ಕನ್ನಡ ರಸಿಕರ ಅಭಿಮಾನಕ್ಕೆ ಪಾತ್ರರಾಗಿರುತ್ತಾರೆ. ಇಂಥ ಹಿರಿಯ ವ್ಯಕ್ತಿಯನ್ನು ಗೌರವಿಸುವುದರ ಮೂಲಕ ಕನ್ನಡಿಗರು ತಮ್ಮನ್ನೇ ಗೌರವಿಸಿಕೊಂಡಿದ್ದಾರೆ. ಷಷ್ಟ್ಯಬ್ದ ಸಮಾರಂಭದ ಅಂಗವಾಗಿ ವಿಚಾರ ಸಂಕೀರ್ಣ ಹಾಗೂ ಕವಿಗೋಷ್ಠಿಗಳು ನಡೆದವು. ಇದೇ ಸಂದರ್ಭದಲ್ಲಿ 'ರಸಿಕರಂಗ ದರ್ಶನ' ಎಂಬ ಸಂಭಾವನಾ ಗ್ರಂಥದ ಪ್ರಕಟಣೆಯಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀ ಎಸ್. ಎಸ್. ಒಡೆಯರ್ ಅವರು ವಹಿಸಿದ್ದರು. ಅವರು 'ರಸಿಕರಂಗ'ರನ್ನು 'ಅಳುನುಂಗಿ ನಗುವ ಸ್ವಭಾವದ ವ್ಯಕ್ತಿ' ಎಂದು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಅವರ ಸಾಹಿತ್ಯ ಸೇವೆ ನೂರು ಕಾಲ ನಡೆಯಲೆಂದು, ಕನ್ನಡ ಸಾರಸ್ವತ ಭಂಡಾರವನ್ನು ಅವರು ಸಂಪದ್ಭರಿತವನ್ನಾಗಿಸಲೆಂದು ಹಾರೈಸಿದರು.

ಮತ್ತೂರು ಕೃಷ್ಣಮೂರ್ತಿ ಅವರಿಗೆ ತಮಿಳು ಸಾಹಿತ್ಯ ಸಮ್ಮೇಳನದ ಗೌರವ

ಕಳೆದ ತಿಂಗಳು ಮದರಾಸಿನಲ್ಲಿ ನಡೆದ ೧೪ನೇ ತಮಿಳು ಸಾಹಿತ್ಯ ಸಮ್ಮೇಳನವು ಕನ್ನಡ ಲೇಖಕರಾದ ಶ್ರೀ ಮತ್ತೂರು ಕೃಷ್ಣಮೂರ್ತಿ ಅವರು ಕನ್ನಡ-ತಮಿಳು ಸಾಹಿತ್ಯಗಳಿಗಾಗಿ ಸಲ್ಲಿಸಿದ ಸೇವೆಯನ್ನು ಮನಗೊಂಡು, ಸ್ವರ್ಣಪದಕವನ್ನಿತ್ತು ಗೌರವಿಸಿತು. ಶ್ರೀಯುತರು ಕನ್ನಡ ಸಾಹಿತ್ಯಕ್ಕೆ ತಮಿಳಿನಿಂದ ವಿಖ್ಯಾತ ಲೇಖಕರಾದ ಸರ್ವ ಶ್ರೀ ಕಲ್ಕಿ, ಎಸ್.ವಿ.ವಿ., ಕೆ. ವಿ. ಜಗನ್ನಾಥನ್, ಅಖಿಲನ್, ರಾಜಾಜಿ, ದೇವನ್, ಸುಬ್ರಹ್ಮಣ್ಯ ಭಾರತಿ ಮೊದಲಾದವರ ಕೃತಿಗಳನ್ನು ಅನುವಾದಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಈ ಮೊದಲು ತಮಿಳು ಸಾಹಿತ್ಯ ಸಮ್ಮೇಳನವು ಶ್ರೀ ಎಲ್. ಗುಂಡಪ್ಪ, ಶ್ರೀ ಪು. ತಿ. ನರಸಿಂಹಾಚಾರ್ಯ ಅವರುಗಳನ್ನೂ ಇದೇ ರೀತಿಯಾಗಿ ಸನ್ಮಾನಿಸಿತ್ತು.

ಧರ್ಮಸ್ಥಳದಲ್ಲಿ ಸರ್ವಧರ್ಮ ಸಾಹಿತ್ಯ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ಡಿಸೆಂಬರ್ ೧೦ ಮತ್ತು ೧೧ನೇ ದಿನಾಂಕಗಳು ನಡೆದವು. ಸರ್ವಧರ್ಮ ಸಮ್ಮೇಳನವನ್ನು ಕಾಸರಗೋಡು ತಾಲ್ಲೂಕಿನ ಎಡನೂರು ಶ್ರೀ ಮಠಾಧೀಶ್ವರರಾದ ಶ್ರೀ ಕೇಶವಾನಂದ ಭಾರತಿ ಶ್ರೀ ಪಾದಂಗಳವರೂ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪದ್ಮಶ್ರೀ ಪ್ರೊ. ವಿನಾಯಕ ಕೃಷ್ಣ ಗೋಕಾಕ್ ಅವರೂ ವಹಿಸಿದ್ದರು.

ಸಾಹಿತ್ಯ ಸಮ್ಮೇಳನದಲ್ಲಿ ಹೆಸರಾಂತ ಲೇಖಕರಾದ ಸರ್ವಶ್ರೀ ರಂ. ಶ್ರೀ. ಮುಗಳಿ, ಕೆ. ಎಸ್. ಧರಣೇಂದ್ರಯ್ಯ, ಕೊರಟಿ ಶ್ರೀನಿವಾಸರಾವ್, ಜಿ. ಬ್ರಹ್ಮಪ್ಪ ಅವರು ಭಾಗವಹಿಸಿದ್ದರು.

ಎಂ. ಜಿ. ಎಂ. ಕಾಲೇಜಿನ ಗುರುರಾಜಾರಾಯರೂ ಮೈಸೂರು ಸರಕಾರದ ಭಾಷಾಂತರ ಇಲಾಖೆಯ ಕೇಶವ ಭಟ್ಟರೂ, ಶ್ರೀಮತಿ ವಿಮಲಾ ಮೊದಲಾದವರು ಈ ಸಮ್ಮೇಳನದಲ್ಲಿ ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಜನವರಿ ೮ರಂದು ಕೆಂಪು ತೋಟದ ಗ್ಲಾಸ್‌ಹೌಸಿನಲ್ಲಿ ನಡೆದ ಬೆಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಪದವೀ ಪ್ರದಾನ ಸಮಾರಂಭ ಒಂದು ವೈವಿಧ್ಯಪೂರ್ಣ ದೃಶ್ಯವಾಗಿತ್ತು. ರಾಷ್ಟ್ರದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಘಟಿಕೋತ್ಸವ ಭಾಷಣ ಮಾಡಿದರು.

ಎರಡು ಸಾವಿರಕ್ಕೂ ಹೆಚ್ಚಿನ ಪದವೀಧರರು ಪದವಿಗಳನ್ನು ಸ್ವೀಕರಿಸಿದರು. ಉಪಕುಲಪತಿ ಪ್ರೊ. ವಿ. ಕೆ. ಗೋಕಾಕರು ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕೆಂದರು. ಕುಲಪತಿಗಳಾದ ಶ್ರೀ ವಿ. ವಿ. ಗಿರಿಯವರು ಶ್ರೀಮತಿ ಇಂದಿರಾ ಗಾಂಧಿ ಅವರಿಗೆ ಗೌರವ ಪ್ರಶಸ್ತಿಯನ್ನು ನೀಡಿದರು.

ಪ್ರವಾಸಿ ತಂಡಕ್ಕೆ ನಾಲ್ವರು ಕನ್ನಡಿಗರು

ಭಾರತ – ವೆಸ್ಟ್ ಇಂಡೀಸ್ ಕ್ರಿಕೆಟ್ ಪಂದ್ಯಗಳಲ್ಲಿ ಅದ್ಭುತ ಆಟವಾಡಿ ಎಲ್ಲರನ್ನೂ ರಂಜಿಸಿದ ಚಂದ್ರಶೇಖರ್ ಪ್ರಸನ್ನ, ಸುಬ್ರಮಣ್ಯಂ ಮತ್ತು ವಿಕೆಟ್ ಕೀಪರ್ ಬುಧಿ ಕುಂದೆರನ್ ಇವರುಗಳನ್ನು ಇಂಗ್ಲೆಂಡ್ ಪ್ರವಾಸಕ್ಕಾಗಿ ಆಯಲ್ಪಟ್ಟ ಹದಿನಾರು ಮಂದಿ ಭಾರತದ ಆಟಗಾರರಲ್ಲಿ ಸೇರಿಸಿರುವುದು ಕನ್ನಡಿಗರಿಗೆಲ್ಲ ಹೆಮ್ಮೆಯನ್ನುಂಟು ಮಾಡಿದೆ. ಶ್ರೀಯುತರು ಉತ್ತಮ ಪ್ರದರ್ಶನದಿಂದ ಕನ್ನಡ ನಾಡಿಗೆ ಕೀರ್ತಿ ತರುವರೆಂದು ಆಶಿಸಲಾಗಿದೆ.

ಎ. ಕೆ. ರಾಮಾನುಜಂ ಅವರ ಕವನ ಸಂಕಲನ THE STRIDERS

ಮೈಸೂರಿನಲ್ಲಿ ಹುಟ್ಟಿ, ಮಹಾರಾಜಾ ಕಾಲೇಜಿನಲ್ಲಿ ಪದವೀಧರರಾಗಿ 'ಅಕ್ರೂರ' ಎಂಬ ಕಾವ್ಯನಾಮದಲ್ಲಿ ಅನೇಕ ಲೇಖನಗಳನ್ನು ಬರೆದು, ಭಾರತದ ಪ್ರತಿಭಾವಂತ ಇಂಗ್ಲಿಷ್ ಕವಿಗಳಲ್ಲಿ ಪ್ರಥಮ ಸಾಲಿನಲ್ಲಿ ನಿಲ್ಲುವ ಶ್ರೀ ರಾಮಾನುಜಂ ಅವರು 'ಸ್ಟ್ರೈಡರ್ಸ್' ಎಂಬ ಹೆಸರಿನಲ್ಲಿ ಒಂದು ಕವನ ಸಂಕಲನ ಪ್ರಕಟಿಸಿದ್ದಾರೆ. ಇದರ ಪ್ರಕಾಶಕರು ಲಂಡನಿನ ಆಕ್ಸ್‌ಫರ್ಡ ವಿಶ್ವವಿದ್ಯಾನಿಲಯದವರು. ಈಗ ಇವರು ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರರಾಗಿದ್ದಾರೆ. ಈ ಹಿಂದೆ ಇವರು ಅಕ್ಕಮಹಾದೇವಿಯವರ ವಚನಗಳನ್ನು ಮುಂಬಯಿಯ 'ಇಲೆಸ್ಟ್ರೇಟೆಡ್ ವೀಕ್ಲಿ' ವಾರಪತ್ರಿಕೆಯಲ್ಲಿ ಇಂಗ್ಲಿಷ್ ಭಾಷೆಗೆ ಅನುವಾದಿಸಿ, ಪ್ರಕಟಿಸಿದ್ದ ಸಂಗತಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಒಂದು ಪ್ರಕಟಣೆ

ದಿವಂಗತ ತೀ. ನಂ. ಶ್ರೀ. ಯವರ ಹಲವು ಅನುವಾದಿತ ಕವಿತೆಗಳು 'School Folk' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಪತ್ರಿಕೆಯು ಅಸ್ತಮಿಸಿರುವುದರಿಂದ ಹಳೆಯ ಸಂಚಿಕೆಗಳನ್ನುಳವರು ದಯವಿಟ್ಟು ಅವುಗಳಲ್ಲಿ **T. N. S. ಎಂಬ ಅಂಕಿತದಿಂದ ಕಂಡುಬರುವ ಕೃತಿಗಳನ್ನು ಪ್ರತಿಮಾಡಿಯಾಗಲಿ ಬೇರೆ ವಿಧದಲ್ಲಿಯಾಗಲಿ "ಕನ್ನಡ ನುಡಿ"ಗೆ ತಲುಪಿಸಬೇಕಾಗಿ ವಿನಂತಿ.** ಇದರಿಂದ ಪೂಜ್ಯರ ಕೃತಿಗಳ ಸಂಗ್ರಹಕ್ಕೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ.

'ದಂತದ ಬಾಚಣಿಗೆ' ಎಂಬ, ಅವರ ಒಂದು ಕವನವೂ ಬೇಕಾಗಿದೆ. ಅವರ ಯಾವುದೇ ಕೃತಿ ಕೈಬರಹದಲ್ಲಿರುವುದನ್ನೂ ಕಳುಹಿಸಿಕೊಡಬಹುದು.

'ಸಂಗೀತರತ್ನ' ಟಿ. ಚೌಡಯ್ಯನವರ ನಿಧನ

ಚೌಡಯ್ಯನವರಂತಹ ಸಂಗೀತ ಪರಿಣತರು ಇನ್ನಿಲ್ಲ ಎಂದರೆ ನಂಬುವುದು ಬಹು ಕಷ್ಟ. ಆದರೆ, ಕನ್ನಡಿಗರ ದುರ್ದೈವದಿಂದ ಅವರು ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಿನಾಂಕ ೧೯ರಂದು ಹೃದಯಾಘಾತಕ್ಕೊಳಗಾಗಿ ನಾದಬ್ರಹ್ಮನಲ್ಲಿ ಲೀನವಾದರು. ದಿವಂಗತರಿಗೆ ೭೬ ವರ್ಷ ವಯಸ್ಸಾಗಿತ್ತು. ೧೮೯೫ರಲ್ಲಿ ಅವರು ಮೈಸೂರಿನ ಸಮೀಪವಿರುವ ತಿರುಮಕೂಡಲಿನಲ್ಲಿ ಜನಿಸಿದರು. ಗಾನವಿಶಾರದ ದಿ. ಬಿಡಾರಂ ಕೃಷ್ಣಪ್ಪನವರ ಪ್ರಭಾವದಿಂದ ಸಂಗೀತಾಭ್ಯಾಸವನ್ನು ಪ್ರಾರಂಭಿಸಿ ಅವರ ಪಟ್ಟ ಶಿಷ್ಯರೂ ಆದರು. ಹದಿನೆಂಟರ ಹರೆಯಕ್ಕೇ ಗುರುಗಳಿಗೆ ಪಕ್ಕವಾದ್ಯ ನುಡಿಸುವಷ್ಟರ ಮಟ್ಟಿಗೆ ಪರಿಣತರಾಗಿದ್ದರು. ೧೯೪೦ರಲ್ಲಿ ಅವರಿಗೆ ಮೈಸೂರು ಆಸ್ಥಾನದಿಂದ 'ಸಂಗೀತರತ್ನ' ಪ್ರಶಸ್ತಿಯೂ, ೧೯೬೦ರಲ್ಲಿ ಶೃಂಗೇರಿ ಜಗದ್ಗುರುಗಳಿಂದ 'ಸಂಗೀತರತ್ನಾಕರ' ಪ್ರಶಸ್ತಿಯೂ ದೊರಕಿದವು. ಮದರಾಸ್ ಮ್ಯೂಸಿಕ್ ಅಕಾಡೆಮಿಯ ಅಧ್ಯಕ್ಷರಾದಾಗ ಅವರನ್ನು 'ಸಂಗೀತಕಲಾನಿಧಿ'ಯೆಂದೂ ಮೈಸೂರು ಸಂಗೀತ ಸಮ್ಮೇಳನದ ಅಧ್ಯಕ್ಷರಾದಾಗ 'ಗಾನ ಕಲಾ ಸಿಂಧು' ಎಂದೂ ಗೌರವಿಸಿದರು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ.

ಪರಿಷತ್ತಿನ ಸುದ್ದಿಗಳು

ಪರಿಷತ್ತು ನಡೆಸುವ ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲವು ವಿವರಗಳು

೧. ರತ್ನ ಪರೀಕ್ಷೆಯ ಕೇಂದ್ರಗಳು: ಬೆಂಗಳೂರು, ಮೈಸೂರು, ಹಾಸನ, ಮಂಗಳೂರು, ಬಿಜಾಪುರ, ಗುಲ್ಬರ್ಗ, ಧಾರವಾಡ ಮತ್ತು ಶಿವಮೊಗ್ಗ. ಈ ಕೇಂದ್ರಗಳಲ್ಲದೆ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಸ್ಥಳಗಳಲ್ಲಿ ಹೊಸ ಕೇಂದ್ರಗಳನ್ನು ತೆರೆಯಲಾಗುವುದು.

೨. ಕಾವ ಮತ್ತು ಜಾಣ: ಈ ಪರೀಕ್ಷೆಗಳಿಗೆ ಮೂವತ್ತು ವಿದ್ಯಾರ್ಥಿಗಳು ಕುಳಿತುಕೊಳ್ಳುವ ಕಡೆಗಳಿಗೆಲ್ಲಾ ಪರೀಕ್ಷಾ ಕೇಂದ್ರ ತೆರೆಯಲು ಅವಕಾಶ ಕೊಡಲಾಗುವುದು.

೩. ಈ ಸಲದಿಂದ ಪರೀಕ್ಷೆಗಳ ಅಂಕಪಟ್ಟಿ ಮತ್ತು ಪ್ರಶಸ್ತಿಪತ್ರಗಳನ್ನು ಪರೀಕ್ಷಾ ಫಲಿತಾಂಶ ಪ್ರಕಟವಾದ ಒಂದು ತಿಂಗಳಲ್ಲಿ ಅಂಚೆಯ ಮೂಲಕ ಪರಿಷತ್ತು ಕಳಿಸಿಕೊಡುತ್ತದೆ.

೪. ಪರಿಷತ್ತು ನಡಸುವ ಸಾಹಿತ್ಯ ಪರೀಕ್ಷೆಗಳಲ್ಲಿ ಪ್ರತಿಯೊಂದರಲ್ಲೂ ಮೊದಲ ಮೂರು ಸ್ಥಾನಗಳನ್ನು ಗಳಿಸುವವರಿಗೆ ಇನ್ನು ಮುಂದೆ ಬಹುಮಾನ ಕೊಡಲಾಗುವುದು.

೫. ಪರಿಷತ್ತಿನೊಡನೆ ಪರೀಕ್ಷೆ ಮುಂತಾದ ವಿಚಾರಗಳಲ್ಲಿ ಉತ್ತರ ಬಯಸುವವರು ಸಾಕಷ್ಟು ಅಂಚೆ ಚೀಟಿ ಇಟ್ಟು ಕಳಿಸಬೇಕು.

೬. ರತ್ನಪರೀಕ್ಷೆಯನ್ನು ಸರಕಾರ ಅಂಗೀಕರಿಸಿದೆ, ಅನುಮೋದಿಸಿದೆ: ಮೈಸೂರು ಸರಕಾರದ ವಿದ್ಯಾ ಇಲಾಖೆಯ ಆಜ್ಞೆ E. 15-1053-235/57-58 of 29-6-1966.

ಕವಿ–ಕೃತಿ ದರ್ಶನ
ರಾಜಾಜಿನಗರ ಉಪನ್ಯಾಸಮಾಲೆ

ರಾಜಾಜಿನಗರದ ವಿದ್ಯಾವರ್ಧಕ ಸಂಘದವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ, ಸಪ್ತರ್ಷಿಧಾಮದಲ್ಲಿ, ದಿನಾಂಕ ೬-೧-೬೭ರಂದು "ಡಾ. ಎ. ಆರ್. ಕೃಷ್ಣಶಾಸ್ತ್ರೀ ಅವರ ಕೃತಿಗಳು" ಎನ್ನುವ ಉಪನ್ಯಾಸಮಾಲೆಯನ್ನು ಏರ್ಪಡಿಸಿದ್ದರು. ಇದು ವಿದ್ಯಾವರ್ಧಕ ಸಂಘದವರು ಆಚರಿಸುತ್ತಿರುವ ಯಶಸ್ವೀ ಹದಿನೆಂಟನೆಯ ಉಪನ್ಯಾಸಮಾಲೆ.

ಕಿಕ್ಕಿರಿದ ಶ್ರೋತೃಗಳು ತುಂಬಿದ ಸಭೆಯು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟವರು, ಉಪನ್ಯಾಸಕರಾಗಿದ್ದವರು, ಶ್ರೀ ಜಿ. ಪಿ. ರಾಜರತ್ನಂ ಅವರು.

ವಿನಂತಿ

ಕನ್ನಡ ಸಾಹಿತ್ಯ ಪರಿಷತ್ತಿನ ೧೯೬೬ರ ಸದಸ್ಯತ್ವ ಡಿಸೆಂಬರ್ ತಿಂಗಳ ಕೊನೆಗೆ ಮುಗಿದಿರುವುದರಿಂದ, ೧೯೬೭ನೆಯ ವರ್ಷದ ಸದಸ್ಯತ್ವಕ್ಕಾಗಿ ಚಂದಾ ಹಣ ಆರು ರೂಪಾಯಿಗಳನ್ನು ಪರಿಷತ್ತಿನ ಕಛೇರಿಗೆ ಪಾವತಿ ಮಾಡಬೇಕಾಗಿ ಕೋರಿಕೆ.

ಪಂಪಮಹಾಕವಿ ರಸ್ತೆ — ಗೌರವ ಕಾರ್ಯದರ್ಶಿ
ಬೆಂಗಳೂರು-೧೮ — ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡಿಗರ ಕೂಟದವರಿಂದ ದಾಸ ಸಾಹಿತ್ಯದ ಆಚರಣೆ

ದಿನಾಂಕ ೨೯-೧-೬೭ನೆಯ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡಿಗರ ಕೂಟದವರಿಂದ ಸಾಹಿತ್ಯ ಪ್ರಕಾರಗಳ ಪರಿಶೀಲನೆಯ ಮಾಲೆಯಲ್ಲಿ 'ದಾಸ ಸಾಹಿತ್ಯ'ದ ಕಾರ್ಯಕ್ರಮ ನೆರವೇರಿತು.

ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಸಂಪದ್ಗಿರಿರಾಯರು ವಹಿಸಿದ್ದರು.

ಡಾ. ಎಂ. ವಿ. ಕೃಷ್ಣರಾವ್, ಪ್ರೊ. ಎಸ್. ಕೆ. ರಾಮಚಂದ್ರರಾವ್, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಕ. ರಾ. ಶ್ರೀನಿವಾಸಮೂರ್ತಿ – ಇವರುಗಳಿಂದ ದಾಸ ಸಾಹಿತ್ಯದ ಹಲವು ವಿಷಯಗಳ ಮೇಲೆ ಭಾಷಣಗಳಾದವು.

ಪರಿಷತ್ತಿಗೆ ಜರ್ಮನ್ ಪ್ರೊಫೆಸರರ ಭೇಟಿ

ದಿನಾಂಕ ೮-೧-೬೭ರಂದು ಪರಿಷತ್ತು ಮತ್ತು ನಿಘಂಟು ಕಚೇರಿಗಳಿಗೆ ಜರ್ಮನಿಯ ಪ್ರೊಫೆಸರ್ ಡಾ. ಹ್ಯಾನ್ಸ್ ಪೀಟರ್ ಸ್ಮಿತ್ ಅವರು ಆಗಮಿಸಿದ್ದರು.

ಈ ಮಹನೀಯರನ್ನು ಪರಿಷತ್ತಿನ ಅಧ್ಯಕ್ಷರೂ ಗೌರವ ಕಾರ್ಯದರ್ಶಿಗಳು ಸ್ವಾಗತಿಸಿ ಪರಿಷತ್ತಿನ ಕಾರ್ಯಕಲಾಪಗಳನ್ನು ವಿವರಿಸಿದರು.

ಇವರೊಡನೆ ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಕೆ. ಟಿ. ಪಾಂಡುರಂಗಿ, ಶ್ರೀ ಕೃಷ್ಣಸ್ವಾಮಿ ಮತ್ತು ಶ್ರೀ ಅ. ರಾ. ಮಿತ್ರ ಅವರೂ ಹಾಜರಿದ್ದರು.

ಕನ್ನಡ ನಿಘಂಟಿನ ಸಂಕ್ಷಿಪ್ತ ಸೂಚಿಯು ಬಿಡುಗಡೆ

ಭಾನುವಾರ ದಿ. ೨೨-೧-೧೯೬೭ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ನಿಘಂಟಿನ ಸಂಕ್ಷಿಪ್ತ ಸೂಚಿಯು ಬಿಡುಗಡೆಯು ನಿಘಂಟು ಸಂಪಾದಕ ಸಮಿತಿಯ ಉಪಾಧ್ಯಕ್ಷರಾದ ಡಾ. ರಂ. ಶ್ರೀ. ಮುಗಳಿಯವರ ಹಸ್ತದಿಂದ ನೆರವೇರಿತು. ಅವರು ತಮ್ಮ ಭಾಷಣದಲ್ಲಿ "ನಿಘಂಟಿನ ಮೊದಲಿನ ಎರಡು ಸಂಚಿಕೆಗಳು ಈ ಮೊದಲೇ ಪ್ರಕಟವಾಗಿದ್ದು ಮೂರನೆಯ ಸಂಚಿಕೆ ಅಚ್ಚಿನಲ್ಲಿದೆ, ನಿಘಂಟು ರಚಿಸುವಲ್ಲಿ ಅನುಸರಿಸಿದ ವಿಧಾನಗಳನ್ನು ವಿವರಿಸುವ ಈ ಸಂಕ್ಷಿಪ್ತ ಸೂಚಿಯು ಅದರಲ್ಲಿಯ ಪ್ರತಿಯೊಂದು ಅಂಶವನ್ನೂ ಶಾಸ್ತ್ರೀಯವಾಗಿ ತಿಳಿಯಪಡಿಸುತ್ತದೆ. ಇದರಿಂದ ನಿಘಂಟಿನ ಪ್ರಯೋಜನವು ಹೆಚ್ಚಿ ವಿದ್ವಾಂಸರಿಗೆ ಅನುಕೂಲವಾಗುವುದು. ನಿಘಂಟು ರಚನೆಯಲ್ಲಿ ಶ್ರಮಿಸಿದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು, ಶ್ರೀ ಡಿ. ಎಲ್. ನರಸಿಂಹಾಚಾರ್ಯರು, ದಿ. ತೀ. ನಂ. ಶ್ರೀಕಂಠಯ್ಯನವರು ಅವರ ಸೂಚನೆಗಳ ಆಧಾರದಿಂದ ಈ ಸಂಕ್ಷಿಪ್ತ ಸೂಚಿಯು ಸಿದ್ಧವಾಗಿದೆ. ನಿಘಂಟಿನ ಇತರ ಸಂಚಿಕೆಗಳನ್ನು ಬೇಗ ಹೊರತರಲು ಪರಿಷತ್ತು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡುತ್ತಲಿದೆ" ಎಂದು ಹೇಳಿ ಮುಂದಿನ ಸಂಚಿಕೆ ಶೀಘ್ರದಲ್ಲಿ ಪ್ರಕಟವಾಗಲೆಂದು ಹಾರೈಸಿದರು. ಪರಿಷತ್ತು ಮುಂದಿನ ಸಂಚಿಕೆಯ ಮುದ್ರಣವನ್ನು ಕೈಗೊಂಡಿರುವ ವಿಷಯವನ್ನು ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ತಿಳಿಸಿದರು.

ಸಂಗೀತರತ್ನ ಟಿ. ಚೌಡಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ

ದಿನಾಂಕ ೨೫-೧-೬೭ರಂದು ಸಂಗೀತರತ್ನ ಶ್ರೀಮಾನ್ ಟಿ. ಚೌಡಯ್ಯನವರ ಆಕಸ್ಮಿಕ ನಿಧನದ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿಯವರು ಪರಿಷತ್ತಿನ ಸಭಾಮಂದಿರದಲ್ಲಿ ಶೋಕಸೂಚಕ ಸಭೆಯನ್ನು ಏರ್ಪಡಿಸಿದ್ದರು.

ಬೆಂಗಳೂರು ವಿಜಯಾ ಸಂಗೀತ ಕಾಲೇಜಿನ ಪ್ರಿನ್ಸಿಪಾಲರಾದ ಸಂಗೀತ ವಿದ್ವಾನ್ ಶ್ರೀ ಎಲ್. ಎಸ್. ನಾರಾಯಣಸ್ವಾಮಿ ಭಾಗವತರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ನಿಘಂಟು ಬಿಡಿಸಂಚಿಕೆಯ ಮಾರಾಟ

ನಿಘಂಟು ಸಂಚಿಕೆಗಳನ್ನು ಬಿಡಿ ಬಿಡಿಯಾಗಿ ಮಾರಲು ಸರಕಾರವು ಸಮ್ಮತಿಯನ್ನು ನೀಡಿದೆಯೆಂದೂ, ನಾಲ್ಕು ರೂಪಾಯಿಗಳಿಗೆ ಒಂದರಂತೆ ಪರಿಷತ್ತಿನ ಕಚೇರಿಯಲ್ಲಿ ಇದು ಮಾರಾಟಕ್ಕೆ ದೊರೆಯುವುದೆಂದೂ ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ಹೇಳಿಕೆ ನೀಡಿದ್ದಾರೆ.

Reg. No. B. G. 4—February 1967

Licensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-



ಸಂಚಿಕೆ : ೩

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಮಾರ್ಚಿ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ,

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಮಾರ್ಚಿ ೧೯೬೭

ಸಂಪುಟ : ೩೦

ಸಂಚಿಕೆ : ೩

ಈ ಸಂಚಿಕೆಯಲ್ಲಿ . . .

ಸರಸ ಸಲ್ಲಾಪ

ಮುತ್ತುರತ್ನಗಳು ಕಡಲಾಳದಲಿ ಮುಳುಗಿಹವು:
    ಪಡೆಯಲವುಗಳ, ಮುಳುಗಿ ಹುಡುಕಬೇಕು;
ಸೆತ್ತೆಪಾಚಿಗಳು ತೇಲಾಡುತ್ತಲೈತಹವು:
    ಹಿಡಿಯಲವುಗಳ, ಕೈಯ ನೀಡೆ ಸಾಕು.

ಮನೆಯ ಮೇಲೆಲ್ಲೆಲ್ಲು ಕುಂಬಳವೆ: ಏನದರ
    ಬಳ್ಳಿಮೈಯೊಲೆತ, ಹಸುರುಡೆಯ ಮೆರೆತ,
ಹೊನ್ನಹೂ ತೊಡವ ಹೊರೆ! — ಇನಿತೆಲ್ಲ ಸಂಭ್ರಮವು
    ಒಂದೆರಡು ಕಾಯ ಹಡೆವಲ್ಲಿ ಮುಗಿತ!

ಅಳಿಲು ಕಚ್ಚಿದ ಹಣ್ಣು ಯುವಕ ಮೆಚ್ಚಿದ ಹೆಣ್ಣು
    ತನ್ನ ಬೆವರಿನ ಬೆಲೆಯು ಹೊನ್ನುಮಣ್ಣು
ಎಳೆಯ ಕರುವಿನ ಕಣ್ಣು ಈದ ಹಸುವಿನ ಗಿಣ್ಣು—
    ಮಿಗಿಲುಂಟೆ ಇಳೆಯೊಳಿವಕಿನ್ನು ಮುನ್ನು?

ಪಯಣದಲ್ಲೋದೇಕೆ? ಸುತ್ತಲೂ ತೆರೆದಿಹವು
    ಪ್ರಕೃತಿ ಲೇಖಿಸಿದ ಹೊತ್ತಗೆಯ ಹಾಳೆ:
ಬಗೆಬಗೆಯ ಬಣ್ಣದಕ್ಕರಗಳಿಂದೊಕ್ಕಣಿಸಿ
    ಬರೆದಿಹುದು ಬಾಳ್‌ಗಬ್ಬ ಸಾಲುಸಾಲೆ.

ಕಾಡ ಕುಸುಮಗಳ ಕಂಪನು ಹೊತ್ತ ಗಂಧವಹ
    ಊರಕೇರಿಯ ಹೊಕ್ಕು ಸುಳಿದಾಡಿದ;
ಹೆಣ್ಣುಗಂಡುಗಳ ಸೆಂಟಿನ ಸೊಗಡಿನಲಿ ಮುಳುಗಿ
    ತಲೆನೋವು ಹಿಡಿದು ಕಾಡಿಗೆ ಓಡಿದ!

—ಮೈವೆಂಸೀ ರಾಘವ

ಭೂಮಿಗೀತ

ಎಂ. ಗೋಪಾಲಕೃಷ್ಣ ಅಡಿಗ

ಹುಟ್ಟು :

ಮಲೆಘಟ್ಟ ಸೋಪಾನ ಕೆಳಪಟ್ಟಿಯಲಿ;
ಉರುಳು, – ಮೂರೇ ಉರುಳು, – ಕಡಲ ಕುದಿತದ ಎಣ್ಣೆ ಕೊಪ್ಪರಿಗೆ.
ತೆಂಗುಗರಿಗಳ ಬೀಸಿ ಕೈಚಾಚಿ ಕರೆದಳು;
ಅಡಿಕೆಕೊನೆಗಿಲಕಿ ಹಿಡಿದಾಡಿಸಿದಳು.
ಕಬ್ಬಿನಾಲೆಯ ತಿರುಪಿನಲ್ಲಿ ಕುಳಿತೆರೆದಳು ಅಜಸ್ರಧಾರೆಯ ಕರುಳತುಡಿತವನ್ನು;
ಭತ್ತ ಗೋಧುವೆ ರಾಗಿ ಜೋಳ ಮೊರ ಮೊರ ಮೌರಿಯಲ್ಲಿ ಮಾಂಸದ ಹಾಡನೂಡಿಸಿದಳು;
ಗಂಟೆ ಗೋರಟೆ ಜಾಜಿ ಮಂದಾರ ಮಲ್ಲಿಗೆಯ ಗಂಧಗಿರಿ ಶಿಖರದಲಿ ಮಲಗಿಸಿದಳು;
ಹಕ್ಕಿಗೊರಳಿಂದುಗುವ, ತುಂಬಿ ಮರ್ಮರವೊರೆವ, ಜಾಮೂನುನಾದದಲಿ ಜಾಳಿಸಿದಳು;
ಆಕಾಶದಲ್ಲಿ ಮೋಡದ ವಿಶ್ವರೂಪಕ್ಕೆ ಕೆಳಗೆ ಜೀವಜ್ಯೋತಿ ಕೂಡಿಸಿದಳು.

SONG OF THE EARTH

BIRTH :

On the bottom rung of the mountain slopes
roll, roll only thrice to reach the oil cauldron of the boiling sea.
She waved the coconut leaves and beckoned with her hands
and shook the rattle of the areca bunch.
She sat at the turning center of the sugarcane press
and bequeathed the eternal downpour of the heartbeat.
With paddy, wheat, ragi and corn,
out of winnowing fans she fed me a song of flesh.
She laid me down on a cliff of fragrances, of jasmine, bell-flowers and jaji.
She rinsed me in the sweetness of birdvoices and bee-sounds.
To the apocalypse of the cloud in the sky
she joined below the spark of life.

A. K. Ramanujan
M. G. Krishnamurthy

[ಮುಂಬಯಿಯ ಪೊಯಟ್ರಿ ಇಂಡಿಯಾ ಪತ್ರಿಕೆಯಿಂದ "Widely regarded as the greatest Indian poet of the twentieth century, writing in Kannada"—ಎಂದು ಪ್ರಶಂಸೆಗೆ ಪಾತ್ರರಾದ ಕನ್ನಡ 'ನವ್ಯ' ಕಾವ್ಯಪರಂಪರೆಯ ಹಿರಿಯಕವಿ ಶ್ರೀ ಗೋಪಾಲಕೃಷ್ಣ ಅಡಿಗರ ಜನಪ್ರಿಯ ಕವನವಾದ 'ಭೂಮಿಗೀತ' ದ ಇಂಗ್ಲಿಷ್ ಭಾಷಾಂತರವನ್ನು ಅದೇ 'Poetry India' ಪತ್ರಿಕೆಯು (ಸಂಪುಟ ೧, ಸಂಚಿಕೆ ೩) ಜುಲೈ-ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಿಸಿದೆ. ಇದನ್ನು ಅನುವಾದಿಸಿರುವವರು ಶ್ರೀ ಎ. ಕೆ. ರಾಮಾನುಜನ್ ಮತ್ತು ಶ್ರೀ ಎಂ. ಜಿ. ಕೃಷ್ಣಮೂರ್ತಿ. ಎ. ಕೆ. ರಾಮಾನುಜನ್ ಅವರು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಉಪಪ್ರಾಧ್ಯಾಪಕರಾಗಿದ್ದಾರೆ. ಇತ್ತೀಚಿನ ಅವರ ಆಂಗ್ಲ ಕವನ ಸಂಕಲನ The Striders ಪ್ರಸಿದ್ಧವಾಗಿದೆ. ಎಂ. ಜಿ. ಕೃಷ್ಣಮೂರ್ತಿ ಅವರು ಬರೋಡೆಯ ಎಂ. ಎಸ್. ವಿಶ್ವವಿದ್ಯಾನಿಲಯದ ಆಂಗ್ಲ ಭಾಷಾ ವಿಭಾಗದಲ್ಲಿ ಅಧ್ಯಾಪಕರಾಗಿದ್ದಾರೆ. ಇವರು ಇಂಗ್ಲಿಷ್ ಸಾಹಿತ್ಯದಲ್ಲಿ ಪಿ.ಎಚ್‌ಡಿ. ಪದವೀಧರರು. ಸಾಹಿತ್ಯಾಭ್ಯಾಸಿಗಳಿಗೆ ಹಾಗೂ ತರುಣ ಭಾಷಾಂತರಕಾರರಿಗೆ ಇದೊಂದು ನಿದರ್ಶನವಾಗಬಹುದೆಂದು ಇಲ್ಲಿ 'ಭೂಮಿಗೀತ' ದ ಅನುವಾದದ ಒಂದು ಭಾಗವನ್ನು ಪ್ರಕಟಿಸಿದೆ.

—ಸಂ.]

ಒಂದು ಪರಿಚಯ

ಸುಬೋಧ ರಾಮರಾಯರು

" ಸುಮನಾ "

ಆಚಾರ್ಯ 'ಶ್ರೀ'ಯವರನ್ನು ಕುರಿತು ಇನ್ನೊಬ್ಬ ಹಿರಿಯರು 'ಇಂಗ್ಲಿಷ್ ಗೀತಗಳು' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಅವರನ್ನು 'ಹೆಸರುವಾಸಿಗೆ ಇಷ್ಟಪಡದೆ ಗೋಪ್ಯವಾಗಿ ಭಾಷಾ ಸೇವೆಯನ್ನು ಮಾಡುತ್ತಿರುವ ವಿದ್ವಾಂಸರು' ಎಂದು ನಿರ್ದೇಶಿಸಿದ್ದಾರೆ. ಇದೇ ಮಾತು ಇತ್ತೀಚಿಗೆ ಎಪ್ಪತ್ತೈದು ಸಂವತ್ಸರಗಳು ತುಂಬಿದ ಜ್ಞಾನ ವೃದ್ಧ, ವಯೋವೃದ್ಧ ಶ್ರೀ ರಾಮರಾಯರಿಗೂ ಅಕ್ಷರಶಃ ಅನ್ವಯಿಸುತ್ತದೆ.

ಹೆಚ್ಚು ಜನಕ್ಕೆ ರಾಮರಾಯರೆಂದರೆ ಯಾರೆಂದು ತಿಳಿಯುವುದಿಲ್ಲ. ಆದರೆ 'ಸುಬೋಧ ರಾಮರಾಯ'ಎಂದರೆ ತಿಳಿಯದವರೂ ಕೂಡ ಗೌರವ ವ್ಯಕ್ತಪಡಿಸುವಂಥ ಹಿರಿಯ ವ್ಯಕ್ತಿತ್ವ ಅವರದು. ಅರವತ್ತು ವರ್ಷಗಳಿಂದಲೂ ನಿರಂತರವಾಗಿ ನಾಡು-ನುಡಿಯ ಸೇವೆಯನ್ನು ಮಾಡುತ್ತಾ ಬಂದಿರುವ ಅವರ ಸ್ಮರಣೆಯನ್ನು ಭಾಷಾಭಿಮಾನಿಗಳಾದ ಕನ್ನಡಿಗರು ಹೆಚ್ಚಾಗಿ ಮಾಡದಿರುವುದು ನಿಜಕ್ಕೂ ವಿಷಾದಕರ ಸಂಗತಿ. ಅವರು ಯಾವ ಸಮ್ಮೇಳನದ ಅಧ್ಯಕ್ಷರೂ ಆಗಿರಲಿಲ್ಲ; ವಿದ್ವತ್ಸಭೆಗಳಲ್ಲಿ ಗಂಟೆಗಟ್ಟಲೆ ಭಾಷಣ ಬಿಗಿಯಲಿಲ್ಲ; ಡಾಕ್ಟರೇಟು ಪಡೆಯಲಿಲ್ಲ; ಯಾವ ಮಹಾಕಾವ್ಯವನ್ನೂ ರಚಿಸಲಿಲ್ಲ. ಆದರೆ, ಅವರನ್ನು ಬಲ್ಲವರಿಗೆ ಅವರ ಬದುಕು, ಅವರ ಜೀವನಶ್ರದ್ಧೆ, ಕಷ್ಟಸಹಿಷ್ಣುತೆ, ಸತತಪರಿಶ್ರಮಗಳೇ ಒಂದು ಕಾವ್ಯ.

೨

ಸೌಮ್ಯವಾದ, ಗಂಭೀರ ಮುಖ; ಅದಕ್ಕೊಪ್ಪುವ ಬಿಳಿಯದಾದ ಮೀಸೆ; ಕನ್ನಡಕದ ಹಿಂದೆ ಹೊಳೆಯುವ ಅಂತಃಕರಣಭರಿತ ಕಣ್ಣುಗಳು; ವಿಶಾಲವಾದ ಹಣೆ. ಕುತ್ತಿಗೆ ಮುಚ್ಚುವ ಕ್ಲೋಸ್ ಕಾಲರ್ ಕೋಟು; ಎದ್ದು ಕಾಣುವ ಅಂಚಿಲ್ಲದ ಬಿಳಿಯ ಮೈಸೂರು ರುಮಾಲು; ಶುಭ್ರವಾದ ಬಿಳಿಯ ಧೋತ್ರ; ಹೊದೆದ ಒಂದು ಜರಿಯಂಚಿನ ಉತ್ತರೀಯ. ಒಟ್ಟಿನಲ್ಲಿ, ಮೊದಲ ನೋಟಕ್ಕೇ ಆಕರ್ಷಿಸುವಂತಹ ವ್ಯಕ್ತಿತ್ವ ಅವರದು. ಸಾಧಾರಣ ತೆಳುಕಾಯ. ಮೃದುಮನಸ್ಸು, ಕಾರ್ಯದಕ್ಷತೆ, ಕಷ್ಟಸಹಿಷ್ಣುತೆ, ಸರಸಪ್ರಿಯತೆ, ಸತ್ಯನಿಷ್ಠಾರತೆ, ಸೌಜನ್ಯತೆ, ನಿರಾಡಂಬರಪ್ರಿಯತೆ-ಇವುಗಳು ಪದಗಳಾಗಿ ಮಾತ್ರವಲ್ಲ, ಅವರ ವ್ಯವಹಾರದಲ್ಲಿ ಕಂಡು ಬರುವ ವಿಶೇಷ ಗುಣಗಳು-ಹಿಡಿದ ಕೆಲಸವನ್ನು ಕೊನೆಗಾಣಿಸುವ ದೃಢತೆ, ತರುಣರನ್ನೂ ನಾಚಿಸುವ ಉತ್ಸಾಹ-ಇವು ಅವರಲ್ಲಿ ಎದ್ದು ಕಾಣುವ ಕೆಲವು ವೈಶಿಷ್ಟ್ಯಗಳು. ಇವೇ ಅವರ ಯಶಸ್ವೀ ಬಾಳಿನ ರಹಸ್ಯವೆನ್ನಬಹುದು.

ಅವರು ಜನಿಸಿದುದು ೧೮೯೧ರಲ್ಲಿ. ಹುಟ್ಟಿದ ಸ್ಥಳ ಚಿಕ್ಕಮಗಳೂರಾದರೂ ಬೆಳೆದದ್ದೆಲ್ಲಾ ಹೊನ್ನಾಳಿಯಲ್ಲಿ. ೧೯೧೧ರಲ್ಲಿ ಶ್ರೀ ಕರ್ಪೂರ ಶ್ರೀನಿವಾಸರಾಯರ ಪರಿಚಯವಾಯಿತು. ಆ ಘಟನೆ ಇವರ ಬಾಳನಾವೆಯನ್ನು ನಡಸುವ ದಿಕ್ಸೂಚಿಯಾಗಿ ಮಾರ್ಪಟ್ಟಿತು. ೧೯೧೩ರಲ್ಲಿ ಅವರು ಬೆಂಗಳೂರಿಗೆ ಬಂದು ನೆಲಸಲೂ ಶ್ರೀನಿವಾಸರಾಯರ ಸಹಾಯ, ಸಹಕಾರಗಳೇ ಕಾರಣ. ಹೊಸದಾಗಿ ಬಂದಾಗ ಹಲವು ವರ್ಷಗಳು ದಂಡಿನ (Cantonment) ಒಂದು ಶಾಲೆಯಲ್ಲಿ ಅವರು ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರು.

ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಕಾಲ ಅದು. ಆಗಿನ್ನೂ ಆಚಾರ್ಯ 'ಶ್ರೀ'ಯವರು ನಾಡು ನುಡಿಯ ಪುಣ್ಯದಿಂದ ಕನ್ನಡದ ಉದ್ಧಾರಕ್ಕಾಗಿ ಕಂಕಣ ತೊಟ್ಟು, ಕ್ರಿಯಾತ್ಮಕ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರು.

ಸ್ವಭಾವತಃ ಭಾಷಾಭಿಮಾನಿಗಳಾದ ರಾಮರಾಯರು ೧೯೧೫ನೆಯ ಸೆಪ್ಟೆಂಬರ್ ತಿಂಗಳಿನಲ್ಲಿ ತಮ್ಮ 'ಸುಬೋಧ ಕುಸುಮಾಂಜಲಿ ಗ್ರಂಥಮಾಲೆ'ಯನ್ನು ಸ್ಥಾಪಿಸಿದರು. ೧೯೨೫ರಲ್ಲಿ 'ಸುಬೋಧ' ಮಾಸಪತ್ರಿಕೆಯನ್ನು ಪ್ರಾರಂಭಿಸಿ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿದರು. ೧೯೨೬ರಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಚಳುವಳಿ ನಡೆದಾಗ, ತಮ್ಮ ಉಪಾಧ್ಯಾಯ ಕೆಲಸಕ್ಕೆ ತಿಲಾಂಜಲಿ ನೀಡಿ, ಪ್ರಕಟನೆಯ ಕಾರ್ಯವನ್ನೇ ಸ್ವೀಕರಿಸಿ, ಭಾಷಾ ಸೇವೆಗೆ ತಮ್ಮನ್ನೇ ತೆತ್ತುಕೊಂಡರು. ಚಳುವಳಿ ಹೆಚ್ಚಾಗಿ,

ಪರಿಸ್ಥಿತಿಯ ಉಗ್ರತೆಯಿಂದ ದೇಶದಲ್ಲಿ ಅಲ್ಲೋಲ ಕಲ್ಲೋಲವಾದಾಗ, ಬ್ರಿಟಿಷ್ ಅಧಿಕಾರಶಾಹಿ ದೇಶೀಯ ಪತ್ರಿಕೆ ಹಾಗೂ ಬರಹಗಾರರ ಮೇಲೂ ಕ್ರಮ ತೆಗೆದುಕೊಳ್ಳುವಂತೆ ಆಜ್ಞೆ ಮಾಡಿತು. ಸಿ. ಐ. ಡಿ. ಗಳನ್ನಿಟ್ಟರೂ ರಾಮರಾಯರು ತಮ್ಮ ಕಾರ್ಯದಕ್ಷತೆಯನ್ನು ತ್ಯಜಿಸದೆ, ಎಲ್ಲಾ ಬಗೆಯ ಲೇಖನಗಳನ್ನೂ ಪ್ರಕಟಿಸಿದರು. ಪ್ರಕಟಿತವಾದ ಹಲವು ಲೇಖನಗಳ ಬಗೆಗೆ ಸರ್ಕಾರದಿಂದ ಪ್ರಶ್ನಮಾಲಿಕೆಗಳೇ ಬಂದಾಗ್ಯೂ ಅವರು ಹಿಂಜರಿಯಲಿಲ್ಲ, ಎದೆಗುಂದಲಿಲ್ಲ.

ಸುಮಾರು ೧೯೩೩-೩೪ರಲ್ಲಿ 'ನಗುವ-ನಂದ' ಎಂಬ ಹಾಸ್ಯ ಪ್ರಧಾನ ಮಾಸಿಕದ ಪ್ರಕಟಣೆಯನ್ನು ಕೈಗೊಂಡರು. ಇದೇ ಸಮಯದಲ್ಲಿ 'ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ'ಯನ್ನು ಸ್ಥಾಪಿಸಿ, ಹರಿದಾಸ ವಾಙ್ಮಯವನ್ನು ಸಂಗ್ರಹಿಸಿ, ಪರಿಷ್ಕರಿಸಿ, ಸಂಪಾದಿಸಿ ಪ್ರಕಟಿಸಿದರು. ೧೯೪೫ರಲ್ಲಿ ಮಾಧ್ವಯುವಕ ಸಂಘವನ್ನೂ, ಅದರ ಆಶ್ರಯದಲ್ಲಿ ವಿದ್ಯಾರ್ಥಿನಿಲಯವೊಂದನ್ನೂ ಸ್ಥಾಪಿಸುವುದರಲ್ಲಿ ನೆರವಾದರು. ಈ ಸಂಸ್ಥೆಗಳೊಡನೆ ಅವರು ಈಗಲೂ ಸಂಬಂಧವಿಟ್ಟುಕೊಂಡು ಬರುತ್ತಿದ್ದಾರೆ. ೧೯೪೪ ರಿಂದ ೫೦ ರವರೆಗೆ ಬೆಂಗಳೂರು ನಗರ ಮುನಿಸಿಪಲ್ ಕೌನ್ಸಿಲರಾಗಿ ಪ್ರಜಾಸೇವೆ ಸಲ್ಲಿಸಿದರು. ಈಗ ಎಪ್ಪತ್ತೈದರ ಹರೆಯದಲ್ಲಿ ವೃದ್ಧಾಪ್ಯ ಅವರನ್ನು ದೈಹಿಕವಾಗಿ ಕಳೆಗುಂದಿಸಿದ್ದರೂ ಅವರ ಚಿರಂತನ ಉತ್ಸಾಹವನ್ನು ಕುಗ್ಗಿಸಿಲ್ಲ. ಅವರು ಸಂಶೋಧನೆ, ಕೃತಿರಚನೆ, ಪ್ರಕಟಣೆ-ಇತ್ಯಾದಿಗಳಲ್ಲಿ ಈಗಲೂ ದುಡಿಯುತ್ತಿದ್ದಾರೆ.

೩

ರಾಮರಾಯರು ಮೊದಲು ಸಾಹಿತ್ಯ ಸೇವೆಯನ್ನು ಕೈಗೊಂಡುದು 'ಸುಬೋಧ ಕುಸುಮಾಂಜಲಿ ಗ್ರಂಥಮಾಲೆ'ಯಿಂದ. ಈ ಗ್ರಂಥಮಾಲೆ ಸ್ಥಾಪಿತವಾದ ಎಂಟು ವರ್ಷಗಳಲ್ಲಿ ಕೇವಲ ಹದಿನೈದು ಮಹಾಪುರುಷರ ಜೀವನ ಚರಿತೆಗಳು ಪ್ರಕಟಿತವಾಗಿದ್ದುವು. ಇಂದಿನವರೆಗೆ ಆ ಸಂಖ್ಯೆ ನೂರೈವತ್ತನ್ನು ಸಮಿಾಪಿಸಿದೆ. ಸ್ವದೇಶಾಭಿಮಾನ, ಭಾಷಾಭಿಮಾನ, ಧರ್ಮಾಭಿಮಾನಗಳನ್ನು ಹೆಚ್ಚಿಸಲು, ಸುಲಭ ಸರಳ ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಐವತ್ತು ಪುಟಗಳಿಗೆ ಮಿಾರದಂತೆ ನಮ್ಮ ದೇಶದ ವಿದೇಶಗಳ ಮಹಾಪುರುಷರನ್ನು ಕುರಿತು ಅವರ ಜೀವನ, ಸಾಧನೆಗಳನ್ನು ಸೂಕ್ಷ್ಮ ವಿಮರ್ಶೆಗಳೊಂದಿಗೆ ಬರೆದು ಪ್ರಕಟಿಸಿದರು. ಅವರ ನುಡಿಗಳಲ್ಲಿ ಗ್ರಂಥಮಾಲೆಯ ಉದ್ದೇಶ ಈ ರೀತಿಯಿದೆ:

"ಆರರಿಂದ ಹದಿನಾರರವರೆಗಿನ ನಮ್ಮ ನಾಡಿನ ಬಾಲಕ-ಬಾಲಕಿಯರಲ್ಲಿಯೂ, ಯುವಕ ಯುವತಿಯರಲ್ಲಿಯೂ, ಜನಸಾಮಾನ್ಯರಲ್ಲಿಯೂ ಗುಣಗ್ರಹಣ ಶೀಲತೆಯೂ, ಉದಾರ ಭಾವವೂ ಉಂಟಾಗಬೇಕೆಂಬ ಭಾವನೆಯಿಂದ... ಅವರಲ್ಲೂ ಬೀಜರೂಪವಾಗಿ ಅಡಗಿರುವ ವಿಚಿತ್ರ ಕಾರ್ಯ ಶಕ್ತಿಗಳು, ಈ ಬಗೆಯ ನೀರು ಗೊಬ್ಬರಗಳ ಸಹಾಯದಿಂದ ನೊಳಕೆಯಾಗಿ ಬೆಳೆಯಬೇಕಾದುದು ಅವಶ್ಯಕವು... ಆದುದರಿಂದ ಭಾರತೀಯ ಮಹನೀಯರ ಜೀವಿತಗಳೊಂದಿಗೆ ಪರದೇಶೀಯ ಮಹನೀಯರ ಜೀವಿತಗಳನ್ನೂ ಪ್ರಕಟಿಸಲು ಸಂಕಲ್ಪಿಸಿ, ಯೋಗ್ಯತಾನುಸಾರ ಹೆಣಗುತ್ತಿರುವುದು..."

ಸುಮಾರು ೬೦ ಪುಟಗಳಿದ್ದರೂ ಇವುಗಳ ಬೆಲೆ ಒಂದೊಂದಕ್ಕೆ ಕೇವಲ ನಾಲ್ಕಾಣೆ! ಈ ಗ್ರಂಥಮಾಲೆಯ ಆಶ್ರಯದಲ್ಲಿ ೨೬ ಭಗವದ್ಭಕ್ತರ, ೨೦ ಪೌರಾಣಿಕ ಮಹಾಪುರುಷರ, ೮ ಮತೋದ್ಧಾರಕರ, ೧೪ ಧರ್ಮೋದ್ಧಾರಕರ, ೨೫ ಮಹಿಳೆಯರ, ೧೯ ಚಾರಿತ್ರಿಕ ಮಹಾಪುರುಷರ, ೧೭ ಆಧುನಿಕ ಮಹಾಪುರುಷರ ಮತ್ತು ೭ ವಿದೇಶೀಯ ಮಹಾಪುರುಷರ ಜೀವನ ಚರಿತ್ರೆಗಳೂ, ಮೂರು ಕಾವ್ಯಗಳೂ ಪ್ರಕಾಶಿತವಾಗಿವೆ.

ಇವರ ದೃಷ್ಟಿ ವಿಶಾಲವಾದುದು: ಸ್ವದೇಶಕ್ಕೆ ಮಾತ್ರ ಸೀಮಿತವಾಗದೆ ವಿದೇಶದಲ್ಲೂ ಹರಿಸಿರುವುದನ್ನು ನೋಡಬಹುದು. ಅಷ್ಟೇ ಅಲ್ಲ, ಚರಿತ್ರೆ, ವಿಜ್ಞಾನ, ಮತಧರ್ಮ, ಕಾವ್ಯ ಪುರಾಣ, ಭಾರತ, ಭಾಗವತ, ರಾಮಾಯಣ, ಜಗತ್ತಿನ ಕಾವ್ಯೋತ್ಕೃಷ್ಟ ಆದರ್ಶಪಾತ್ರಗಳು, ಕಲಾಕಾರರು-ಇವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಆಡಂಬರ ಕಾಣದ ಸರಳ ಶೈಲಿ, ಹೇಳಬೇಕಾದುದನ್ನು ನೇರ ಮನಮುಟ್ಟುವಂತೆ ತಿಳಿಸುವ ವಿಧಾನ ಇವರ ಕಲೆಗಾರಿಕೆಯಾಗಿದೆ. ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಬಳಸದೆ, ಆರರಿಂದ ಅರವತ್ತರವರಿಗೂ ಪ್ರಿಯವಾಗುವಂತೆ, ಅರ್ಥವಾಗುವಂತೆ, ಪ್ರಭಾವ ಬೀರುವಂತೆ ತಮ್ಮ ಬಾಳಿನಲ್ಲಿ ಸ್ವೀಕರಿಸಿದ್ದ ಸರಳತೆಯನ್ನೇ ಇಲ್ಲಿಯೂ ಪ್ರತಿಬಿಂಬಿಸಿದ್ದಾರೆ. ಆರಂಭ ಹಾಗೂ ಮುಕ್ತಾಯ ಘಟ್ಟಗಳಲ್ಲಿ ಸೂಕ್ಷ್ಮವಾಗಿ ವಿಮರ್ಶಿಸಿ, ವಿಷಯ ಪ್ರತಿಪಾದನೆ ಮಾಡಿದ್ದಾರೆ. 'ಆಳವಾದ ಜ್ಞಾನವಿದ್ದೆಡೆಯಲ್ಲಿ ಅಬ್ಬರವಿರದು' ಎಂಬ ಮಾತು ರಾಮರಾಯರ ಶೈಲಿಗೆ ನಿದರ್ಶನವಾಗಿದೆ.

೪

'ಸುಬೋಧ' ಮಾಸಪತ್ರಿಕೆ ೧೯೨೫ರಲ್ಲಿ ಪ್ರಾರಂಭವಾಗಿ ಈಗಲೂ ನಡೆದುಕೊಂಡು ಬರುತ್ತಿದೆ. ಸಂಸ್ಕೃತಿ, ಸಾಹಿತ್ಯ, ಮನರಂಜನೆಗಳನ್ನು ಉದ್ದೇಶವಾಗಿಟ್ಟುಕೊಂಡು ಸ್ಥಾಪಿತವಾದ ಈ ಪತ್ರಿಕೆ ಆ ಕಾಲದಲ್ಲಿ ಆಲೂರರು ಸಂಪಾದಿಸಿ, ಪ್ರಕಟಿಸುತ್ತಿದ್ದ 'ಜಯ ಕರ್ನಾಟಕ'ದಷ್ಟೇ ಜನಪ್ರಿಯವಾಗಿತ್ತು.

ಇಂದು ಪ್ರಖ್ಯಾತರಾಗಿ ಭಾಷಾಸೇವೆ ಮಾಡುತ್ತಿರುವ ಹಲವಾರು ಹಿರಿಯ ಬರಹಗಾರರು – (ದಿ. ದೇವುಡು, ಗೋವಿಂದಪೈ ಸೇರಿಸಿಕೊಂಡು) ಸಿ. ಕೆ. ವೆಂ, ಕಾರಂತ, ರಾಜರತ್ನಂ, ವಿ. ಸೀ., ಬೇಂದ್ರೆ, ಡಿ. ವಿ. ಜಿ., ಮಾಸ್ತಿ, ಅ ನ ಕೃ., ಕೆ. ಗೋಪಾಲಕೃಷ್ಣರಾಯರು, ಭಾರದ್ವಾಜ, ಪರಮೇಶ್ವರ ಭಟ್ಟ, ಜವರೇಗೌಡ, ತ. ಸು. ಶಾಮರಾವ್ ಮೊದಲಾದವರು–ಸುಬೋಧ ಪತ್ರಿಕೆಗೆ ಬರೆಯುತ್ತಿದ್ದರು. ಅದು ಅನೇಕ ಶ್ರೇಷ್ಠ ದರ್ಜೆಯ ವಿಶೇಷ ಸಂಚಿಕೆಗಳನ್ನು ಹೊರಡಿಸಿರುವುದಲ್ಲದೆ ತನ್ನ ೪೩ನೆಯ ವರ್ಷಕ್ಕೆ ಅಡಿಯಿಡುತ್ತಿರುವುದು ಪತ್ರಿಕೆಯ ಮೌಲ್ಯಕ್ಕೆ ನಿದರ್ಶನವಾಗಿದೆ. ಹಲವಾರು ಪತ್ರಿಕೆಗಳು ಅನುದಿನವೂ ಜನಿಸಿ, ಸ್ಪರ್ಧೆಪೋಟಿ ನಡೆಸುತ್ತಿರುವ ಈ ಕಾಲದಲ್ಲಿಯೂ ಕನ್ನಡ ಪತ್ರಿಕಾ ಇತಿಹಾಸದಲ್ಲಿ 'ಸುಬೋಧ'ದ ಪ್ರಕಟಣೆ ಒಂದು ಚಿರಸ್ಮರಣೀಯ ಘಟನೆಯೆಂದರೆ ಅತಿಶಯೋಕ್ತಿಯಾಗದು.

೫

ಹರಿದಾಸ ವಾಙ್ಮಯಕ್ಕೆ ರಾಮರಾಯರು ಸಲ್ಲಿಸಿರುವ ಸೇವೆ ಮಹತ್ತರವಾದುದು ೧೯೨೪ರಿಂದ 'ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ'ಯ ಮೂಲಕ ಸುಮಾರು ೨೦೦೦ ಪುಟಗಳಿಗೂ ಮಿಕ್ಕು ಹರಿದಾಸ ವಾಙ್ಮಯವನ್ನು ರಾಮರಾಯರು ಪ್ರಕಟಿಸಿದ್ದಾರೆ. ಸಂಬಂಧಪಟ್ಟ ಹರಿದಾಸರ ವಿಷಯ, ಕೀರ್ತನ ಸಾಹಿತ್ಯಗಳ ಸಂಗ್ರಹಣೆಯಿಂದ ಮೊದಲಾಗಿ ಅವುಗಳನ್ನು ಸಂಶೋಧಿಸಿ ಪರಿಷ್ಕರಿಸಿ ಅಚ್ಚು ಹಾಕಿಸಿ ಪ್ರಕಟಿಸುವ ಸಾಹಸವನ್ನು ಕೈಗೊಂಡಿದ್ದಾರೆ. "ಜನತೆಗೆ ಭಕ್ತಿ, ಜ್ಞಾನ, ವೈರಾಗ್ಯ, ಲೋಕನೀತಿ, ಧರ್ಮಸೂಕ್ಷ್ಮ, ವೇದಶಾಸ್ತ್ರ ಪುರಾಣಾದಿಗಳ ಸಕಲ ಧರ್ಮ ರಹಸ್ಯಗಳೂ ತಿಳಿಯುವಂತೆ ಮೃದುಮಧುರ ತಿಳಿಗನ್ನಡ ಭಾಷೆಯಲ್ಲಿ ಬೋಧಿಸಿ, ಕರ್ನಾಟಕ ಸಂಗೀತ, ಸಾಹಿತ್ಯಗಳೆರಡನ್ನೂ ಉದ್ಧರಿಸಿದ ದಾಸವರ್ಯರ ಅಮೂಲ್ಯ ಕೀರ್ತನೆ ಪದ ಸುಳಾದಿಗಳನ್ನು ಸಂಗ್ರಹಿಸಿದರು."

ಈ ಮಾಲೆಯಲ್ಲಿ ಪುರಂದರ, ಕನಕ, ಜಗನ್ನಾಥ, ವಿಜಯ, ವಾದಿರಾಜಸ್ವಾಮಿ, ಶ್ರೀಪಾದರಾಯ, ವ್ಯಾಸರಾಯ, ಗೋಪಾಲದಾಸ ಇವರೇ ಮೊದಲಾದವರ ಕೀರ್ತನೆ, ಹಾಡುಗಬ್ಬಗಳೂ, ಹರಿಕಥಾಮೃತಸಾರ, ಹನುಮದ್ವಿಲಾಸ, ಕಾಳೀಯಮರ್ದನ ಮೊದಲಾದ ಕಾವ್ಯಗಳೂ ಪ್ರಕಾಶಿತವಾಗಿವೆ.

ಜೊತೆಗೆ ಭಾಗವತದ ಸರಳ ಕನ್ನಡಾನುವಾದವನ್ನು ನಾಲ್ಕು ಭಾಗಗಳಾಗಿ ರಚಿಸಿದ್ದಾರೆ. ಸಂಗ್ರಹ ರಾಮಾಯಣ, ಭಗವದ್ಗೀತೆಗಳನ್ನು ಕನ್ನಡಿಸಿದ್ದಾರೆ. 'ಸುಬೋಧ'ದಲ್ಲಿ ಈಗ ಇವರ 'ಮಹಾಭಾರತ ಕಥಾಸಾರ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ. ಅವರ ಈ ಮಹೋಪಕಾರ, ಕನ್ನಡದ ಸೇವೆಯನ್ನು ಶ್ರೀ ಪಂಚಮುಖಿ, ದಿ|| ವೇದವ್ಯಾಸಾಚಾರ್ಯರೊಡನೆ ಮಾತ್ರ ಹೋಲಿಸಬಹುದು. ವೀರಶೈವ ಸಾಹಿತ್ಯಕ್ಕೆ ಹಳಕಟ್ಟಿಯವರು ಹೇಗೋ ಹರಿದಾಸವಾಙ್ಮಯಕ್ಕೆ ರಾಮರಾಯರು ಹಾಗೆ. ಇದಕ್ಕಾಗಿ ಅವರು ಪಟ್ಟ ಆರ್ಥಿಕ, ದೈಹಿಕ, ಮಾನಸಿಕ ತೊಂದರೆಗಳೆಷ್ಟೋ. ಆದರೆ, ಅವರ ಸಹಿಷ್ಣುತೆ, ಸಹನೆ ಎಲ್ಲವನ್ನೂ ಇಕ್ಕಿಮೆಟ್ಟಿವೆ.

ರಾಮರಾಯರು ಕೆಲವು ಇಂಗ್ಲಿಷ್ ಕೃತಿಗಳನ್ನೂ ಅನುವಾದಿಸಿ ಪ್ರಕಟಿಸಿದ್ದಾರೆ. ಅವರು ಅನುವಾದಿಸಿರುವ ಹೆಲನ್ ಕೆಲರ್, ಫೋರ್ಡ ಜೀವನ ಚರಿತ್ರೆಗಳು ಉತ್ತಮ ಗ್ರಂಥಗಳಾಗಿವೆ.

ರಾಮರಾಯರ ಭಾಷಾಭಿಮಾನ ಯಾರಿಗೂ ಕಡಮೆಯದಲ್ಲ: ದೇಶಪ್ರೇಮ ಇತರರಲ್ಲಿ ನಾಚಿಕೆ ತರುವಂಥದು–

"ಇಂದಿನ ಕರ್ಣಾಟಕರು ತಮ್ಮ ಪೂರ್ವಜರ ಮಹತ್ವವನ್ನು ಹೇಳಿಕೊಂಡು ಗೌರವವನ್ನು ಅಪೇಕ್ಷಿಸಿದರೆ ಫಲವಿಲ್ಲ-ಅಲ್ಲ, ದೊರೆಯದು; ಅವರ ಅದ್ಭುತ ಕಾರ್ಯಗಳನ್ನು ಕೇಳಿ ಇಂದಿನವರು ಉತ್ತೇಜನಗೊಂಡು, ತಮ್ಮ ದೀರ್ಘ ಸುಷುಪ್ತ್ಯವಸ್ಥೆಯಿಂದ ಎಚ್ಚತ್ತು, ಕೊಡಹಿಕೊಂಡೇಳಬೇಕಾಗಿದೆ . . . ಅವರ ದೇಶಭಕ್ತಿ ಭಾಷಾಪ್ರೇಮಗಳನ್ನು ಕೇಳಿ ಅವರಂತೆಯೋ ತಾವೂ ಆಗಬೇಕಾಗಿದೆ. ಈಗಿನ ಸ್ಥಿತಿಯನ್ನು ಕಂಡು ಯಾರೂ ನಿರುತ್ಸಾಹಿಗಳಾಗಬೇಕಾದ ಕಾರಣವಿಲ್ಲ . . . ಆ ವೈಭವಸ್ಥಿತಿಯು ಪುನಃ ಪ್ರಾಪ್ತವಾಗುವಂತೆ ಪ್ರಯತ್ನಮಾಡತಕ್ಕುದು ಕರ್ತವ್ಯವಾಗಿದೆ . . . ಕರ್ಣಾಟಕವು ಬಡನಾಡಲ್ಲ . . . ಕರ್ಣಾಟಕದಲ್ಲಿ ಪ್ರತಿಯೊಬ್ಬ ಅಕ್ಷರಸ್ಥನ ಆದ್ಯ ಕರ್ತವ್ಯವು ತಾನು ಮೊದಲು ಮಾತೃಭಾಷಾ ವಾಚನಾಭಿರುಚಿಯನ್ನು ಗಳಿಸಿಕೊಂಡು, ತರುವಾಯ ವೈಭವದ ಉಚ್ಚಶಿಖರವನ್ನಡರಿ ವಿಖ್ಯಾತ

ವಾಗಿದ್ದ ತನ್ನ ಮಾತೃಭೂಮಿಯ ಪ್ರಾಚೀನ ಚರಿತ್ರೆಯನ್ನು ಪಾರಾಯಣ ಮಾಡಿ, ಅದರ ಸಾರವನ್ನು ಅನಕ್ಷರಸ್ಥರಾದ ಇತರ ಹಲವರಿಗೆ ಪುರಾಣವಾಗಿ ಹೇಳಿ, ತನ್ಮೂಲಕ ಇಂದು ದೇಶಭಕ್ತಿಯನ್ನು ಬೆಳಸಬೇಕಾಗಿದೆ.... ಭಾಷಾ ಏಕೀಕರಣ, ಸಂಸ್ಕೃತಿಯ ಏಕೀಕರಣಗಳನ್ನು ಗಳಿಸಿಕೊಂಡರೆ ಅದು ದೇಶೀಯ ಏಕೀಕರಣಕ್ಕೆ ಪೂರ್ವ. ಪೀಠಿಕೆಯಾಗದಿರದು . . ." ಎಂದು ಬರೆದಿದ್ದಾರೆ ('ಸಾರ್ವಭೌಮ ಪುಲಿಕೇಶಿಯ ಮುನ್ನುಡಿ' ೧೯೫೯)

ಸಂಪ್ರದಾಯ ನಿಷ್ಠೆ ಅವರಲ್ಲಿ ಹೆಚ್ಚಾಗಿ ಕಾಣುತ್ತದೆ ಎನ್ನುತ್ತಾರೆ ಕೆಲವರು. ಒಂದು ನಿಶ್ಚಿತ ಸಂಪ್ರದಾಯಕ್ಕೆ ಒಳಪಟ್ಟಿರುವುದೂ ಒಳ್ಳೆಯ ಲಕ್ಷಣವೇ ಅಲ್ಲವೆ? ಸರ್ವಧರ್ಮ ಸಹಿಷ್ಣುತೆ ಅವರ ಬಾಳಿನ ಹೆಗ್ಗುರಿ. ಇದಕ್ಕೆ ಅವರು ಬರೆದಿರುವ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಸಿಖ್ ಜನಾಂಗಗಳ ಸ್ಥಾಪಕರ, ಮತೋದ್ಧಾರಕರೆಲ್ಲರ ಜೀವನ ಚರಿತ್ರೆಗಳೇ ಸಾಕ್ಷಿ.

ನಾಲಗೆ ಕುಲವನ್ನು ತಿಳಿಸಬಲ್ಲುದಂತೆ. ಅಂತೆಯೆ ವ್ಯವಹಾರವು ವ್ಯಕ್ತಿಯ ನೈಜ ದರ್ಶನವನ್ನು ಪ್ರಕಾಶಿಸಬಲ್ಲುದು. ಪತ್ರಿಕೋದ್ಯಮದಲ್ಲಿ ಬಹುವರ್ಷಗಳಿಂದ ಸೇವೆ ಸಲ್ಲಿಸಿದವರಿಗಾಗಿ 'ಜರ್ನಲಿಸ್ಟ್ ಕಾಲೋನಿ'ಯ ರಚನೆಯಾಗಲು ಇವರು ವಹಿಸಿದ ಪಾತ್ರ ಅಲ್ಪವಲ್ಲ.

ಕಳೆದ ಬಾರಿ ವಿನೋಬಾಜಿ ಬೆಂಗಳೂರಿಗೆ ಬಂದಾಗ ಪ್ರಾರ್ಥನಾ ಸಭೆಯಲ್ಲಿ ಪುರಂದರದಾಸರ ಕೃತಿಗಳನ್ನು ಯಾರೋ ಹಾಡಿದರಂತೆ. ಅವರು ಅದಕ್ಕೆ ಮನಸೋತರಂತೆ. ಪುರಂದರರ ಕೃತಿಗಳೆಲ್ಲವನ್ನೂ ಬಯಸಿ ತಮ್ಮ ಆಪ್ತ ಕಾರ್ಯದರ್ಶಿಯವರನ್ನು ರಾಮರಾಯರ ಬಳಿಗಟ್ಟಿದರಂತೆ. ಮಾರನೆಯ ದಿನ ಪ್ರಾತಃಕಾಲದ ವಾಯುವಿಹಾರ ಸಮಯದಲ್ಲಿ ಶ್ರೀ ರಾಮರಾಯರಿಗೆ ವಿಶೇಷ ಸಂದರ್ಶನ ನೀಡಿ, ಅವರಿಂದ ಕೃತಿಗಳನ್ನು ಕೊಂಡು, ಅವರ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಒಮ್ಮೆ ಸಿಖ್ ಮತದ ಅಧಿಕಾರಿ ಒಬ್ಬನು ಇವರು ಬರೆದ ಗುರುಗೋವಿಂದಸಿಂಗ್, ಗುರುನಾನಕ್, ಸಿಖ್ ಧರ್ಮ ವೀರರ ಗ್ರಂಥಗಳನ್ನು ಓದಿಸಿ ಬಹು ಸಂತೋಷಪಟ್ಟನಂತೆ. ಮಿಲಿಟರಿ ಉಡಿಗೆಯಲ್ಲಿ ಅವನು ಇವರನ್ನು ಕಾಣಲು ಬಂದಾಗ ಎಲ್ಲರೂ ಗಾಬರಿಗೊಂಡರಂತೆ. ಆದರೆ ಅವನು ಮೆಚ್ಚುಗೆ ಸೂಚಿಸಲು ಬಂದಿದ್ದನಂತೆ.

ಇನ್ನೊಮ್ಮೆ ಇವರ ಕುಸುಮಾಂಜಲಿಯ ಗ್ರಂಥ ಪ್ರಕಟಣೆಗಳಿಂದ ಸಂತೋಷಪಟ್ಟ ಒಬ್ಬರು ಸಾವಿರ ರೂ.ಗಳ ಚೆಕ್ಕನ್ನು ತಮ್ಮ ಅಲ್ಪ ಕಾಣಿಕೆಯೆಂದು ಸ್ವೀಕರಿಸಬೇಕೆಂದು ಆಗ್ರಹಪೂರ್ವಕವಾಗಿ ಬೇಡಿ ಪತ್ರವೊಂದನ್ನು ಬರೆದಿದ್ದರಂತೆ. ರಾಮರಾಯರು ಅವರ ಕಾಣಿಕೆಯನ್ನು ತಾವು ಸಾಲವೆಂದು ಪರಿಗಣಿಸಿ, ಸ್ವೀಕರಿಸಿರುವುದಾಗಿಯೂ ಸ್ವಲ್ಪ ಅನುಕೂಲ ಪರಿಸ್ಥಿತಿ ಒದಗಿದಾಗ ಹಿಂದಿರುಗಿಸುವುದಾಗಿ ಹೇಳಿದಾಗ, ಆ ವ್ಯಕ್ತಿ ನಿರಾಕರಿಸಿದರಂತೆ. ರಾಯರ ನಿಸ್ವಾರ್ಥ ಅಂಥದು. ಅವರು ಬರಿಯ ವ್ಯಕ್ತಿಯಲ್ಲ, ಒಂದು ಶಕ್ತಿ.

ಕನ್ನಡಕ್ಕಾಗಿ ದುಡಿದ ಹಲವರನ್ನು ಆಂಗ್ಲರೊಂದಿಗೆ ಹೋಲಿಸಿ, ಅವರ ಸೇವೆಯ ಬೆಲೆಕಟ್ಟುವ ವಿಚಿತ್ರಚಟವೊಂದು ನಮ್ಮಲ್ಲಿ ಬೆಳೆದಿದೆ. ರಾಮರಾಯರು ಮಾಡಿದಂಥ ಕಾರ್ಯವನ್ನು ಆಂಗ್ಲರಾದ ವಿಲಿಯಂ ಸ್ಟೆಡ್, ಮದರಾಸಿನ ಶ್ರೀ ನಟೇಶನ್ ಮಾಡಿದ್ದಾರೆ. ರಾಮರಾಯರು ನಾಡು-ನುಡಿಗಳಿಗಾಗಿ ತಮ್ಮ ಜೀವನವನ್ನೇ ಧಾರೆಯೆರೆದಿದ್ದರೂ ಕನ್ನಡಿಗರಾರೂ ಆಲೂರರನ್ನುಳಿದು-ಅವರ ಸೇವೆಯನ್ನು ಗುರುತಿಸಿದಂತೆ ಕಾಣುವುದಿಲ್ಲ. ಅವರಿಗೆ ಸಲ್ಲಬೇಕಾದ ಪ್ರೋತ್ಸಾಹವನ್ನು ನೀಡಿಲ್ಲ. ಅವರ ಸಾಹಿತ್ಯದ ಸದುಪಯೋಗವನ್ನು ಹೆಚ್ಚು ಪಡೆದಿಲ್ಲ.

ಕಳೆದ ಮುವತ್ತು ವರ್ಷಗಳಿಂದ ದೊರಕದೆ ಇರುವ ಸುಬೋಧ ಕುಸುಮಾಂಜಲಿ ಗ್ರಂಥಗಳು ಮತ್ತೆ ಪ್ರಕಟವಾಗಬೇಕಾಗಿದೆ. ಇದರಲ್ಲಿ ಹೊರಬಂದ ಎಲ್ಲ ಜೀವನ ಚರಿತ್ರೆಗಳನ್ನೂ ಅತ್ಯುತ್ತಮ ಹಾಗೂ ಆಕರ್ಷಕ ರೇಖಾಚಿತ್ರಗಳೊಂದಿಗೆ ಪುನರ್ಮುದ್ರಣ ಮಾಡುವ ಯೋಜನೆಯನ್ನು ಸುಬೋಧ ಪ್ರಕಟನಾಲಯದವರು ಹಾಕಿಕೊಂಡಿರುವುದು ಸ್ತುತ್ಯವಾಗಿದೆ. ನೈತಿಕ ಅಧಃಪತನ ಹೆಚ್ಚುತ್ತಿರುವ ಈ ಕಾಲದಲ್ಲಿ ಅಂತಹ ಗ್ರಂಥಗಳು ಎಷ್ಟರಮಟ್ಟಿಗೆ ಉಪಯುಕ್ತವಾಗಬಲ್ಲವೆಂಬುದನ್ನು ಇಲ್ಲಿ ಹೇಳಬೇಕಾಗಿಲ್ಲ. ಈ ಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಕಾವ್ಯಾಂತರಂಗ ಮತ್ತು ಮತಭೇದಗಳು

ಟಿ. ಕೇಶವಭಟ್ಟ

ವೇದ-ಉಪನಿಷತ್ತು – ರಾಮಾಯಣ – ಮಹಾಭಾರತ ಮುಂತಾದ ಉದ್ಗ್ರಂಥಗಳ ರಚನೆಯ ಮೂಲಕ, ನಮ್ಮ ದೇಶದ ಸಾಹಿತ್ಯವು ಪ್ರಾರಂಭವಾಗಿ ಮುಂದುವರಿಯುತ್ತ ಬಂದಿದೆ. ನಮ್ಮ ಸಾಹಿತ್ಯಗಳಲ್ಲಿ ಕೆಲವು ಕರ್ತವ್ಯಾಕರ್ತವ್ಯಗಳನ್ನು ಬೋಧಿಸುವ ವಿಧಿನಿಷೇಧಗಳನ್ನುಳ್ಳವು–ಪ್ರಭುಸಮ್ಮಿತಗಳೆನಿಸಿವೆ. ನಮ್ಮ ಕರ್ತವ್ಯಾಕರ್ತವ್ಯಗಳಿಗೆ ಯಾವವು ಸಾಧಕಗಳಾಗಿವೆ? ಯಾವವು ಬಾಧಕವಾಗಿವೆ ಎಂಬ ವಿಚಾರವನ್ನು ಕಥೆಗಳ ಮೂಲಕ-ರಸ ಪ್ರಾಧಾನ್ಯವಿಲ್ಲದೆ ತಿಳಿಸುವವು, ಮುಖ್ಯವಾಗಿ ಪುರಾಣಗಳು—ಮಿತ್ರಸಮ್ಮಿತಗಳು. ಇವೆಲ್ಲಕ್ಕಿಂತ ವಿಶೇಷವಾಗಿ ಮನಸ್ಸಿಗೆ ಸಂತೋಷವಾಗುವಂತೆ, ಸುಂದರವಾದ ರೀತಿಯಲ್ಲಿ, ರಸಪ್ರಧಾನವಾಗಿ ಸನ್ನಿವೇಶ ವಿಷಯಗಳನ್ನು ವಿವರಿಸುವ ಮೂರನೆಯ ವರ್ಗದ ಸಾಹಿತ್ಯ—"ಕಾಂತಾಸಮ್ಮಿತ" ವೆನಿಸುವುದು. 'ಕಾವ್ಯ' ಎಂದು ಇದಕ್ಕೆ ಯೋಗ್ಯವಾದ ಹೆಸರು.

ಕಾವ್ಯಪಠನದಿಂದ ಆಗುವ ಸುಖ ಆಂತರಿಕ. ಕಾವ್ಯದ ಉದ್ದೇಶವೂ ಆನಂದವೇ. ಕಾವ್ಯಲಕ್ಷಣವನ್ನು ಹೇಳಿದವರಲ್ಲಿ ಒಬ್ಬನಾದ ಮಮ್ಮಟನು ಹೇಳಿರುವುದು ಹೀಗೆ—

> ಕಾವ್ಯಂ ಯಶಸೇಽರ್ಥಕೃತೇ |
> ವ್ಯವಹಾರವಿದೇ ಶಿವೇತರಕ್ಷತಯೇ ||
> ಸದ್ಯಃ ಪರನಿರ್ವೃತಯೇ |
> ಕಾಂತಾಸಮ್ಮಿತತಯೋಪದೇಶಯುಜೇ ||

ಕಾವ್ಯಪ್ರಯೋಜನಗಳಾಗಿ ಕೀರ್ತಿ, ಐಶ್ವರ್ಯ, ವ್ಯವಹಾರಜ್ಞಾನ–ಎಂಬೀ ಲೌಕಿಕ ವಿಚಾರಗಳನ್ನು ತಿಳಿಸಿ, ಒಡನೆಯೇ ಉಂಟಾಗುವ ಶ್ರೇಷ್ಠವಾದ ಆನಂದವೂ ಕಾಂತಾಸಮ್ಮಿತವಾದ ಉಪದೇಶವೂ ಕಾವ್ಯದಿಂದಲೇ ಲಭಿಸುವುದೆಂದು ಆತನು ನಿರೂಪಿಸಿದ್ದಾನೆ.

ಮಾನವನ ಹೃದಯದಲ್ಲಿರುವ ನೀಚಮಟ್ಟದ ಅಥವಾ ಪಾಶವಿಕವೆನಿಸುವ ಆನಂದವನ್ನು ಕೆರಳಿಸುವುದು ಕಾವ್ಯದ ಗುರಿಯಲ್ಲ. ಮಾನವನ ಸುಸಂಸ್ಕೃತ ಭಾವವನ್ನು ಅರಳಿಸಿ, ಅದಕ್ಕನುಗುಣವಾದ ಉದಾತ್ತ ಆನಂದವನ್ನು ಹುಟ್ಟಿಸುವುದು ಕಾವ್ಯದ ಒಂದು ಮುಖ್ಯಲಕ್ಷಣ. ಅವನನ್ನು ಸನ್ಮಾರ್ಗಪ್ರವರ್ತಕನಾಗಿ ಮಾಡಲು ತಕ್ಕ ಉಪದೇಶವನ್ನೀಯುವುದೂ ಕಾವ್ಯನಿಹಿತವಾಗಿರುವ ವಿಷಯವೇ. ಆ ಉಪದೇಶವೆಂಬುದು ರಸಪ್ರಧಾನವಾದುದು—ಎಂಬುದಿಲ್ಲಿ ತಿಳಿದುಬರುವ ವಿಷಯ.

ಕಾವ್ಯವು ಸಾಹಿತ್ಯಪ್ರಭೇದವೇ ಆಗಿರುವುದರಿಂದ ಸಾಹಿತ್ಯದ ಲಕ್ಷಣ ಕಾವ್ಯಕ್ಕೂ ಅನ್ವಿತವಾಗುವುದು. ಪ್ರಚಲಿತವಾಗಿ 'ಸಾಹಿತ್ಯ' ಎಂಬುದನ್ನು "ಹಿತ" ದಿಂದ ಕೂಡಿದುದೂ "ಸಹಿತ" ವೆಂತಲೂ "ಸಹಿತ" ದ ಭಾವವೇ ಸಾಹಿತ್ಯವೆಂತಲೂ ವಿವರಣೆ ಮಾಡುತ್ತಾರೆ. ಈ ವಿವರಣೆ ಕನ್ನಡದ ಮೊದಲನೆಯ ಲಕ್ಷಣ ಗ್ರಂಥವಾಗಿರುವ ಕವಿರಾಜಮಾರ್ಗದಲ್ಲಿ ಹೇಳಿರುವುದಕ್ಕೆ ಸರಿಹೋಗುತ್ತದೆ. ಅಲ್ಲಿ ಹೀಗೆ ಹೇಳಿದೆ:—

> "ಪಾಪಮಿದು ಪುಣ್ಯಮಿದು ಹಿತ
> ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ
> ಖೋಪಾತ್ತಮಿದೆಂದಱಿಪುಗು
> ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್"

ಮನುಷ್ಯನು ಮಾಡುವ ಕರ್ಮಗಳಲ್ಲಿ ಪಾಪಕರವು ಯಾವುದು? ಪುಣ್ಯಪ್ರದ ಯಾವುದು? ಹಿತವಾದುದಾವುದು? ಅಹಿತವಾವುದು? ಸುಖದುಃಖಕಾರಕಗಳು ಯಾವುವು? ಎಂಬುದನ್ನು ತಿಳಿಸುತ್ತ ಅವನಿಗೆ ಕರ್ತವ್ಯಾಕರ್ತವ್ಯ ಜ್ಞಾನವನ್ನು ಉಂಟುಮಾಡುವಂಥದು 'ಕಾವ್ಯ' ಎಂಬ ಅಭಿಪ್ರಾಯವು ಇಲ್ಲಿದೆ. ಇದರಿಂದ ಈ ವಿವರಣೆಯಲ್ಲಿ ಕಾವ್ಯವು 'ಉಪದೇಶ ಪ್ರಧಾನ' ಎಂದಂತಾಯಿತು. ಆದರೆ ಲಾಕ್ಷಣಿಕರು ಬೇರೆ ವಿಧವಾಗಿ ಕಾವ್ಯದ ಅಂತರಂಗವನ್ನು ಗುರುತಿಸಿದ್ದಾರೆ, ಚರ್ಚಿಸಿದ್ದಾರೆ.

ಪ್ರಾಚೀನ ಲಾಕ್ಷಣಿಕರಲ್ಲಿ ಶ್ರೇಷ್ಠನೆನಿಸಿರುವ ಭಾಮಹನು ತನ್ನ ಕಾವ್ಯಾಲಂಕಾರದಲ್ಲಿ "ಶಬ್ದ ಮತ್ತು ಅರ್ಥ ಎಂಬಿವೆರಡೂ ಸೇರಿ ಕಾವ್ಯವಾಗುತ್ತದೆ"–ಎಂದು ಹೇಳಿ, ಕಾವ್ಯಪ್ರಭೇದಗಳನ್ನು ವಿವರಿಸಿದ್ದಾನೆ. "ಶಬ್ದಾರ್ಥಗಳು ನಿರ್ದುಷ್ಟವಾಗಿಯೂ ಅಲಂಕಾರಯುಕ್ತವಾಗಿಯೂ ಇರಬೇಕೆಂದು ವಿವರಿಸಿದ್ದಾನೆ. ಇದೂ ಅಲ್ಲದೆ, ಎಲ್ಲ ಕಾವ್ಯವೂ ವಕ್ರೋಕ್ತಿಯಿಂದ ಕೂಡಿರಬೇಕು. ವಕ್ರೋಕ್ತಿ–

ಎಂದರೆ, ಕಾವ್ಯದಲ್ಲಿ ಬರುವ ಶಬ್ದದಲ್ಲಿಯೂ ಅರ್ಥದಲ್ಲಿಯೂ ಲೋಕರೂಢಿಗೆ ಮೀರಿರುವ ಅತಿಶಯತೆ" ಎಂದು ವಿವರಿಸಿದ್ದಾನೆ. ವಕ್ರೋಕ್ತಿಯಿಲ್ಲದಿರುವುದಕ್ಕೆ ಉದಾಹರಣೆ ಕೊಡುತ್ತ-ಸೂರ್ಯನು ಅಸ್ತಮಿಸಿದನು, ಚಂದ್ರನು ಪ್ರಕಾಶಿಸುತ್ತಾನೆ, ಹಕ್ಕಿಗಳು ಗೂಡನ್ನು ಸೇರುತ್ತಿವೆ—ಇಂತಹ ಮಾತು ಕಾವ್ಯವೆನಿಸುವುದೆ? ಎಂದು ಪ್ರಶ್ನಿಸಿ, ಇಂಥದನ್ನು 'ವಾರ್ತೆ' ಎನ್ನುತ್ತಾರೆ—ಎಂದಿದ್ದಾನೆ.

ಸುಮಾರು ಇವನ ಕಾಲದವನೇ ಆಗಿರುವ ದಂಡಿ, 'ಕಾವ್ಯಾದರ್ಶ' ವೆಂಬ ತನ್ನ ಲಕ್ಷಣ ಗ್ರಂಥದಲ್ಲಿ ಮೇಲಿನ ವಿಚಾರದಲ್ಲಿ ತನಗಿರುವ ಮತಭೇದವನ್ನು ಅಭಿವ್ಯಕ್ತಗೊಳಿಸಿದ್ದಾನೆ. ಕಾಲಾವಸ್ಥೆಯನ್ನು ತಿಳಿಸುವ ಸಂದರ್ಭದಲ್ಲಿ ಇಂತಹ-"ಸೂರ್ಯನು ಉದಯಿಸಿದನು, ಚಂದ್ರನು ಪ್ರಕಾಶಿಸುತ್ತಾನೆ" ಇತ್ಯಾದಿಯಾಗಿ ಹೇಳತಕ್ಕ ಮಾತುಗಳಿಗೂ ಔಚಿತ್ಯವುಂಟೆಂದು ಹೇಳುತ್ತಾನೆ. ದಂಡಿಯು ಹೀಗೆ ಸ್ವಭಾವೋಕ್ತಿಗೆ ಪ್ರಾಶಸ್ತ್ಯವನ್ನಿತ್ತು-ಇಷ್ಟವಾದ ಅರ್ಥದಿಂದ ಕೂಡಿದ ಪದಸಮೂಹವೇ 'ಕಾವ್ಯಶರೀರ' ವೆಂದೂ ಹತ್ತು ಗುಣಗಳೇ ಕಾವ್ಯದ ಪ್ರಾಣಗಳೆಂದೂ ಹೇಳಿ, ಗುಣಗಳ ಪ್ರಾಶಸ್ತ್ಯವನ್ನು ಮುಂದೆ ತಂದಿದ್ದಾನೆ.

ಮುಂದೆ "ಕಾವ್ಯಾಲಂಕಾರ ಸೂತ್ರವೃತ್ತಿ" ಯನ್ನು ಬರೆದಿರುವ ವಾಮನನು "ಕಾವ್ಯಂ ಗ್ರಾಹ್ಯಮಲಂಕಾರಾತ್ ಸೌಂದರ್ಯಮಲಂಕಾರಃ" ಎಂದಿರುತ್ತಾನೆ. 'ಕಾವ್ಯ ಸೌಂದರ್ಯವನ್ನು ಉಂಟುಮಾಡತಕ್ಕವು ಗುಣಗಳು, ಅವನ್ನು ಹೆಚ್ಚಿಸುವವು ಅಲಂಕಾರಗಳು'—ಎಂದಿದ್ದಾನೆ. ಅಲಂಕಾರವೆಂದರೆ ಸೌಂದರ್ಯ ಎಂದೂ ವಿವರಿಸಿದ್ದಾನೆ. ಕಾವ್ಯದ ಆತ್ಮವು ರೀತಿ-"ರೀತಿರಾತ್ಮಾ ಕಾವ್ಯಸ್ಯ" ಎಂದು ಹೇಳಿ ಹತ್ತು ಶಬ್ದಗಳನ್ನೂ ಹತ್ತು ಅರ್ಥಗುಣಗಳನ್ನೂ ವಿವರಿಸಿದ್ದಾನೆ. ಇಂತಹ ಶಬ್ದ-ಅರ್ಥಗುಣಗಳಿಂದ ಕೂಡಿರುವ ಪದರಚನೆಯನ್ನು 'ರೀತಿ' ಎಂದು ಕರೆದಿದ್ದಾನೆ. ಈ ಶಬ್ದಗುಣಗಳೂ ಅರ್ಥಗುಣಗಳೂ ಕಾವ್ಯ ಸೌಂದರ್ಯಕ್ಕೆ ಕಾರಣಗಳಾದ ಉಕ್ತಿವೈಚಿತ್ರ್ಯಗಳೇ ಆಗಿವೆಯೆಂಬುದನ್ನು ಇಲ್ಲಿ ತಿಳಿದುಕೊಳ್ಳಬಹುದು.

ಮಮ್ಮಟನು ತನ್ನ "ಕಾವ್ಯಪ್ರಕಾಶ" ದಲ್ಲಿ ಮೇಲಿನ ವಿವರಣೆಗಳನ್ನು ಸ್ವಲ್ಪ ಬೆಳೆಸಿದ್ದಾನೆ—"ತದದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ, ಪುನಃ ಕ್ವಾಪಿ"—ದೋಷವಿಲ್ಲದೆಯೂ ಗುಣ-ಅಲಂಕಾರಗಳಿಂದ ಕೂಡಿಯೂ ಇರುವ ಶಬ್ದಾರ್ಥಗಳೇ "ಕಾವ್ಯ". ಕೆಲವೆಡೆ ಅಲಂಕಾರವಿಲ್ಲದಿದ್ದರೂ ಕಾವ್ಯವಾಗಬಲ್ಲುದು-ಎಂದಿದ್ದಾನೆ. ಇವನ ಅಭಿಪ್ರಾಯವನ್ನೇ ಈಚಿಗಿನ ಹಲವಾರು ಲಾಕ್ಷಣಿಕರು ಸಮರ್ಥಿಸಿದ್ದಾರೆ.

ಕಾವ್ಯದಲ್ಲಿ ಯಾವುದು ಮುಖ್ಯ-ಅಲಂಕಾರಗಳೆ? ಗುಣಗಳೇ? ಎಂಬೀ ಪ್ರಶ್ನೆಯಲ್ಲಿ ಭಾಮಹನೂ, ಅವನನ್ನು ಅನುಸರಿಸಿ ಉದ್ಭಟ ಮೊದಲಾದವರೂ ಅಲಂಕಾರಗಳೇ ಕಾವ್ಯದಲ್ಲಿ ಮುಖ್ಯವೆಂದು ಪ್ರತಿಪಾದಿಸಿದ್ದಾರೆ. ಗುಣಗಳ ವಿಚಾರವನ್ನು ಅವರು ಎತ್ತಿಲ್ಲ. ದಂಡಿ ತನ್ನೊಲವನ್ನು ಗುಣಗಳ ಕಡೆಗೇ ಬೀರಿದ್ದಾನೆ. ಇವನನ್ನೇ ಅನುಸರಿಸಿದವನು ವಾಮನನು.

ಕಾವ್ಯಲಕ್ಷಣಕಾರರು ಹೀಗೆ ಅಲಂಕಾರ ರೀತಿಗಳಿಗೇ ಪ್ರಾಶಸ್ತ್ಯ ಕೊಟ್ಟಿದ್ದರೂ ಈ ಅಲಂಕಾರ ರೀತಿಗಳು ಅರ್ಥಗರ್ಭತ್ವವನ್ನು ತಾಳಿರುವ ಮೂಲಕ ರಸವೂ ಅಲ್ಲಿ ಸಮಾವೇಶವಾಗುತ್ತದೆ-ಎಂಬುದೂ ನಿಜ. "ಕಾಂತಿ" ಎಂಬ ಶಬ್ದಗುಣದಲ್ಲಿ "ದೀಪ್ತರಸತ್ವಂ ಕಾಂತಿಃ" ಎಂಬ ವಿವರಣೆಯಿಂದ 'ರಸ' ಅಭಿವ್ಯಕ್ತವಾಗುವುದು ಸ್ಪಷ್ಟವಿದೆ. "ರಸವದ್" ಅಲಂಕಾರ ಎಂಬುದೂ ಇದೆ. ಹೀಗಿದ್ದರೂ ರಸಕ್ಕೆ ನೇರವಾದ ಪ್ರಾಶಸ್ತ್ಯವು ಕಾಣುವುದಿಲ್ಲ. ಒಂಬತ್ತನೆಯ ಶತಮಾನದ ಆನಂದವರ್ಧನನ "ಧ್ವನ್ಯಾಲೋಕ"ದ ಮೂಲಕ ಮುಂದೆ ರಸಕ್ಕಿರುವ ಮಹತ್ವವು ಪ್ರಕಟವಾಗಿದೆ-

ಕಾವ್ಯಸ್ಯಾತ್ಮಾ ಸ ಏವಾರ್ಥಃ
ತಥಾಚಾದಿಕವೇಃ ಪುರಾ
ಕ್ರೌಂಚದ್ವಂದ್ವ ವಿಯೋಗೋತ್ಥಃ
ಶೋಕಃ ಶ್ಲೋಕತ್ವಮಾಗತಃ

ಒಬ್ಬ ಬೇಡನು ಕ್ರೌಂಚಪಕ್ಷಿ ದಂಪತಿಗಳಲ್ಲಿ ಒಂದನ್ನು ಕೊಂದಾಗ, ಇನ್ನೊಂದು ವಿರಹವ್ಯಥೆಯಿಂದ ಆಕ್ರಂದಿಸಿತು. ಅದನ್ನು ಕಂಡ ವಾಲ್ಮೀಕಿಯ ಬಾಯಿಂದ—

"ಮಾನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ"

ಎಂಬ ಪ್ರಸಿದ್ಧ ಶ್ಲೋಕವು ಪಾದಬದ್ಧ ಲಯಬದ್ಧವಾದವಾದ ಛಂದಸ್ಸಿನಿಂದ ಹೊರಟಿತು. ಶೋಕವೇ ಇಲ್ಲಿ ಶ್ಲೋಕವಾಯಿತು. ಈ ಉದಾಹರಣದಿಂದ ಆನಂದವರ್ಧನನು "ರಸವೇ ಕಾವ್ಯದ ಜೀವಾಳ"—ಎಂಬ ಭಾವನೆಯನ್ನು ಸ್ಪಷ್ಟಪಡಿಸುತ್ತಾನೆ. ಕಾವ್ಯಕ್ಕೆ ಧ್ವನಿಯೇ

ಆತ್ಮನೆಂದೂ ರಸವೇ ಪ್ರಾಣವೆಂದೂ ಈ ಲಾಕ್ಷಣಿಕನ ಅಭಿಪ್ರಾಯ. 'ಧ್ವನಿ' ಎಂದರೇನು? ಯಾವುದಾದರೊಂದು ಮುಖ್ಯವಾದ ಅರ್ಥವನ್ನು ಅಭಿವ್ಯಕ್ತವಾಗಿ-ನೇರವಾಗಿ ಹೇಳದೆ, ಶ್ರೋತೃವು ಅರ್ಥಮಾಡಿಕೊಳ್ಳುವಂತೆ ಹೇಳುವ ಉಕ್ತಿವೈಚಿತ್ರ್ಯವು ಧ್ವನಿಯೆನಿಸುವುದು. ಇದಕ್ಕೆ ಕಾಳಿದಾಸನ ಅಭಿಜ್ಞಾನ ಶಾಕುಂತಲದಲ್ಲಿ ಒಂದು ಒಳ್ಳೆಯ ಉದಾಹರಣವಿದೆ—

ಶಕುಂತಳೆ ಪತಿಗೃಹಕ್ಕೆ ಹೊರಡುವ ಸಂದರ್ಭದಲ್ಲಿ, ತಾನು ನಿತ್ಯವೂ ನೀರೆರೆದು ಪ್ರೀತಿಯಿಂದ ಸಾಕಿ ಬೆಳೆಸಿದ 'ವನಜ್ಯೋತ್ಸ್ನೆ' ಎಂಬ ಬಳ್ಳಿಯನ್ನು ತನ್ನ ಸಖಿಯರಿಗೆ ವಹಿಸಿಕೊಡುತ್ತ, "ಇದನ್ನು ನಿಮ್ಮಿಬ್ಬರ ಕೈಗೆ ಕೊಟ್ಟೆ" ಎನ್ನುತ್ತಾಳೆ. ಆಗ ಆ ಸಖಿಯರು "ಇದನ್ನೇನೋ ನಮ್ಮ ಕೈಗೆ ಕೊಟ್ಟೆ. ನಮ್ಮನ್ನು ಯಾರ ಕೈಗೆ ಕೊಟ್ಟೆ?" ಎಂದು ಕೇಳುತ್ತ, ಕಣ್ಣೀರು ಸುರಿಸುವರು. ಇಲ್ಲಿ ವಾಚ್ಯಾರ್ಥವಾಗಿ ಒಂದು ಪ್ರಶ್ನೆ ಮಾತ್ರವಿದ್ದರೂ ಆ ವಾಚ್ಯಕ್ಕೆ ಮೀರಿದ ವಿಯೋಗವ್ಯಥೆ ಅಪಾರವಾಗಿ ತುಂಬಿಕೊಂಡಿದೆ. ಸಖಿಯರು ಇಲ್ಲಿ "ನಮಗೆ ಬಹಳ ವ್ಯಸನವಾಗುತ್ತಿದೆ, ಇದನ್ನು ಹೇಗೆ ಸಹಿಸಲಿ!" ಎಂದು ಹೃದಯದ ಆಳದಿಂದ ಹೇಳಿದ ಅರ್ಥವು ಅವರ ಮಾತಿನ ಶಬ್ದಗಳಿಗೆ ಅತೀತವಾಗಿ ಧ್ವನಿತವಾಗಿದೆ.

ಧ್ವನಿಗೂ ರಸಕ್ಕೂ ಪ್ರಾಶಸ್ತ್ಯ ಹೆಚ್ಚಿದನಂತರ, ಲಾಕ್ಷಣಿಕರಲ್ಲಿ ಇನ್ನೊಬ್ಬ ಪ್ರಮುಖನಾದ ವಿಶ್ವನಾಥನು ತನ್ನ "ಸಾಹಿತ್ಯ ದರ್ಪಣ" ದಲ್ಲಿ "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂದು ಉದ್ಘೋಷಿಸಿದನು. ಗುಣ-ಅಲಂಕಾರ ರೀತಿಗಳು ರಸಕ್ಕೆ ಹಿರಿಮೆಯನ್ನು ತರತಕ್ಕವೆಂದು ಹೇಳಿದನು. ಶ್ರೇಷ್ಠಕಾವ್ಯವಾಗಬೇಕಾದರೆ, ವಸ್ತುವೇನೋ ಮುಖ್ಯವೆ. ಅದಕ್ಕಿಂತಲೂ ಪ್ರಯೋಗಗೊಳ್ಳುವ ಶಬ್ದಗಳು, ಅವು ಪ್ರಕಟಿಸುವ ಗುಣ-ರೀತಿ-ರಸಗಳು ಇನ್ನೂ ಮುಖ್ಯ. ಕಾಳಿದಾಸನು ಒಂದು ಜಿಂಕೆಯ ಓಟವನ್ನು ಬಹಳ ಸೊಗಸಾಗಿ, ಕಣ್ಣಿಗೆ ಕಟ್ಟುವಂತೆ ವರ್ಣಿಸಿರುವುದನ್ನು ಕಾಣಬಹುದು—

ಗ್ರೀವಾಭಂಗಾಭಿರಾಮಂ ಮುಹುರನುಪತತಿ
ಸ್ಯಂದನೇ ಬದ್ಧದೃಷ್ಟಿಃ
ಪಶ್ಚಾರ್ಧೇನ ಪ್ರವಿಷ್ಟಃ ಶರಪತನಭಯಾದ್ಭೂಯಸಾ
ಪೂರ್ವಕಾಯಂ
ದರ್ಭೈರರ್ಧಾವಲೀಢೈಃ ಶ್ರಮವಿವೃತ ಮುಖಭ್ರಂ
ಶಿಭಿಃ ಕೀರ್ಣವರ್ತ್ಮಾ
ಪಶ್ಯೋದಗ್ರಪ್ಲುತತ್ವಾದ್ವಿಯತಿ ಬಹುತರಂ
ಸ್ತೋಕಮುರ್ವ್ಯಾಂ ಪ್ರಯಾತಿ ||

ಜಿಂಕೆ ತನ್ನ ಕೊರಲನ್ನು ಕೊಂಕಿಸಿ, ಬೆನ್ನಟ್ಟಿ ಬರುವ ರಥದ ಕಡೆಗೆ ನೋಡುತ್ತ ದುಷ್ಯಂತನ ಬಾಣವು ಎಲ್ಲಿ ತನಗೆ ತಗಲುವುದೋ ಎಂಬ ಅಂಜಿಕೆಯಿಂದ ತನ್ನ ದೇಹದ ಹಿಂಭಾಗವನ್ನು ಸಂಕುಚಿಸಿಕೊಂಡಿದೆ. ಅರ್ಧ ತಿಂದ ಹುಲ್ಲು ಅದು ದಣಿವಿನಿಂದ ತೆರೆದ ಬಾಯಿಯಿಂದ ಅಲ್ಲಲ್ಲಿ ದಾರಿಯುದ್ದಕ್ಕೂ ಜಗುಳಿ ಬೀಳುತ್ತಿದೆ. ಅದು ಹಾರಿ, ಕುಪ್ಪಳಿಸಿ, ನಾಗಾಲೋಟ ಓಡುವುದನ್ನು ನೋಡಿದರೆ, ನೆಲ ಮುಟ್ಟದೆ ಆಕಾಶದಲ್ಲೇ ಹಾರಿಹೋಗುವಂತೆ ತೋರುವುದು. ಈ ವರ್ಣನೆಯೊಂದು ಕಲಾತ್ಮಕವಾದ ಸ್ವಭಾವೋಕ್ತಿಯ ನೈಜಚಿತ್ರಣವಾಗಿದೆ. ಇಲ್ಲಿ ಭಯಾನಕ ರಸವು ನಿಗೂಢವಾಗಿದೆ.

ಕಾವ್ಯದಲ್ಲಿ ಬರುವ ರೀತಿ-ಗುಣ-ಅಲಂಕಾರಗಳು ಚಮತ್ಕಾರಕವಾಗಿದ್ದು ಕವಿಯ ಬುದ್ಧಿ-ಭಾವಶಕ್ತಿಗಳನ್ನು ವ್ಯಕ್ತಗೊಳಿಸಿ, ಸಹೃದಯ ಹೃದಯಕ್ಕೆ ಆನಂದವನ್ನೂ ಆಶ್ಚರ್ಯವನ್ನೂ ಕೊಡುತ್ತವೆ. ಈ ಗುಣ-ರೀತಿ-ಅಲಂಕಾರಗಳಲ್ಲಿ ಯಾವುದು ಇಲ್ಲದಿದ್ದರೂ ರಸವಿದ್ದರೆ ಸೊಗಸೆನಿಸಲು ಸಾಕಾಗುತ್ತದೆ. "ರಸವಿಲ್ಲದ ಕಾವ್ಯಂ ನೀರಸಂ" ಎಂದು ಕವಿ ಸಾಳ್ವನು ಹೇಳಿರುವುದು ಯಥಾರ್ಥಕ. ಅರ್ಥಾಲಂಕಾರಗಳು ರಸಪುಷ್ಟಿಯನ್ನು ಮಾಡುವ ಕಡೆಗಳಲ್ಲೇ ಅವುಗಳಿಂದ ನಮಗೆ ಕಾವ್ಯಾನಂದವುಂಟಾಗುವುದು. ಗುಣಗಳೂ ರಸಪೋಷಕವಾಗಿದ್ದರೆ ಮಾತ್ರ ಆನಂದವುಂಟಾಗುವುದು. ಆದುದರಿಂದಲೇ ನವೀನಾಲಂಕಾರಿಕರು ಗುಣಗಳನ್ನು "ರಸಧರ್ಮಗಳು" ಎಂದು ಕರೆದರು. ಕೇವಲ ರೀತಿ – ಗುಣ – ಅಲಂಕಾರಗಳಿಂದ ಕೂಡಿರುವ ಶಬ್ದಾರ್ಥವು ಒಂದುವೇಳೆ "ಚಿತ್ರಕಾವ್ಯ" ವಾಗಬಹುದೇ ವಿನಾ, ಉತ್ತಮ ಕಾವ್ಯವೆನಿಸದೆಂದು 'ಧ್ವನ್ಯಾಲೋಕ' ವು ಸಾರಿದೆ. ಕಾವ್ಯದಲ್ಲಿ ರಸವೇ ರಾಮಣೀಯಕವೆಂದೂ, ರಸವಿದ್ದರೆ ಮಾತ್ರ ಅರ್ಥವು ಇಷ್ಟವಾಗುವುದೆಂದೂ ಆ ರಸ ಕೂಡ, ಧ್ವನಿತವಾಗಿದ್ದರೆ ಇನ್ನೂ ಒಳ್ಳೆಯದೆಂದೂ ಹೇಳಬಹುದು. "ರಸಜೀವ, ಭಾವಪೊಡಲು" ಎಂಬ ಕವಿ ರಾಘವಾಂಕನ ವಾಣಿಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಈ ವಿವರಣೆಯಲ್ಲಿಯೂ ನಾವು ಅತಿರೇಕಕ್ಕೆ ಹೋಗುವುದು ವಿಹಿತವಲ್ಲ. "ರಸವಿಲ್ಲದಿದ್ದರೆ ಕಾವ್ಯವೇ ಆಗುವುದಿಲ್ಲ" ಎಂಬ ತೀರ್ಮಾನವು ಅಷ್ಟು ಉಚಿತವಲ್ಲ. ಏಕೆಂದರೆ

ಆಗ ಜಿಂಕೆಯ ಓಟ, ಬಾಲಲೀಲೆ, ಜಲಪಾತ-ಇತ್ಯಾದಿ ವರ್ಣನೆಗಳಿಗೆ ಕಾವ್ಯದಲ್ಲಿ ಸ್ಥಾನವೇ ದೊರಕಲಾರದು. ಕೇವಲ ವಸ್ತ್ವಲಂಕಾರ ಪ್ರಧಾನವಾದ ಕಾವ್ಯಗಳಿಗಿಂತ, ರಸಪ್ರಧಾನವಾದ ಕಾವ್ಯಗಳು ಅಧಿಕ-ಆನಂದದಾಯಕಗಳೆಂದು ಮಾತ್ರ ಹೇಳಬಹುದು.

ಒಟ್ಟಿನಲ್ಲಿ ಕಾವ್ಯವು ಶಬ್ದರೂಪವೆಂದೂ ಅದು ಅರ್ಥ-ಭಾವಗಳನ್ನುಳ್ಳುದೆಂದೂ ರಮಣೀಯಾರ್ಥವುಳ್ಳುದೆಂದೂ ಎಲ್ಲರೂ ಒಪ್ಪುತ್ತಾರೆ. ದೋಷಗಳಿರಬಾರದೆಂದು ಬೇರೆ ಹೇಳಬೇಕಾಗಿಲ್ಲ. ಇಷ್ಟು ತಿಳಿದುಕೊಂಡನಂತರ ನಿರ್ದಿಷ್ಟವಾಗಿ ಕಾವ್ಯದ ಅಂತರಂಗವನ್ನು ಯಾವುದೆಂದು ಹೇಳುವುದು? ಅಲಂಕಾರವೊಂದನ್ನೆ ತೆಗೆದುಕೊಂಡರೆ ಸಾಕೆ? ಗೊಂಬೆಗೆ ಶೃಂಗಾರಮಾಡಿದಂತೆ ಅಥವಾ ಸುಂದರವಾಗಿ ಬರೆದ ಚಿತ್ರದಂತೆ ಕಾವ್ಯವಿದ್ದರಾಯಿತೆ? ಕಣ್ಣಿಗೆ ಆಕರ್ಷಣೆಯೊಂದೆ ಕಾವ್ಯಲಕ್ಷಣವೆ? ಅದಕ್ಕೆ ಸಜೀವತ್ವ ಬರುವುದು ಹೇಗೆ? ಗುಣ-ರೀತಿಗಳಿಂದ ಕಂಗೊಳಿಸುವ ಶಬ್ದ-ಅರ್ಥ - ಭಾವಗಳಿವೆಯೆನ್ನೋಣ—ರಸಯುಕ್ತವಾಗಿಯೇ ಇರಬಹುದು. ಆದರೆ ಆ ಕಾವ್ಯವು 'ಹಿತ' ಕರವಲ್ಲದಿದ್ದರೆ? ಮಂಗಲಕರವಾಗಿಲ್ಲದಿದ್ದರೆ? ಉದಾತ್ತಕರವಾದ ಆನಂದವನ್ನು ಹುಟ್ಟಿಸದಿದ್ದರೆ ಪ್ರಯೋಜನವೇನು? ಅಥವಾ ಕೇವಲ ಉಪದೇಶಾತ್ಮಕವಾಗಿದ್ದರೆ ಅದು ಹೇಗೆ ಉತ್ತಮ ಕಾವ್ಯವೆನಿಸೀತು? ಇದಕೆಲ್ಲ ತೀರ್ಮಾನವೇನು?

ಕಾವ್ಯದಲ್ಲಿ ರಸವಿರಬೇಕು. ಉದಾತ್ತಭಾವನೆಗಳಿರಬೇಕು. ಅಲಂಕಾರ, ಶಬ್ದಗುಣ-ಅರ್ಥಗುಣಗಳನ್ನುಳ್ಳ ರೀತಿ-ಇವೂ ಇರಬೇಕು. ಉಕ್ತಿವೈಚಿತ್ರ್ಯಗಳೂ ಇರಬೇಕು-ಎನ್ನಬೇಕಾಗುತ್ತದೆ. ಇಷ್ಟೆಲ್ಲ ಇದ್ದೂ ಅಮಂಗಲ ಪರಿಹಾರಕವಾಗಿ, ಉತ್ತಮವಾದ ಆನಂದವನ್ನು ವೃದ್ಧಿ ಮಾಡುವಂಥದಾಗಿ, ಸನ್ಮಾರ್ಗದರ್ಶಿಯಾಗಿ ಇರಬೇಕು. ಇವೆಲ್ಲ ಗುಣಲಕ್ಷಣಗಳಿಂದ ಕೂಡಿದ ರಚನೆಯೇ ಅಂತರಂಗ ಬಹಿರಂಗ ಶುದ್ಧಿಯುಳ್ಳ ಕಾವ್ಯವೆನಿಸೀತು.

(ಆಕಾಶವಾಣಿ ಕ ಪೆ)

ಕನ್ನಡನಾಡಿನ ಲೇಖಕರಲ್ಲಿ . . .

ಕನ್ನಡ ನುಡಿಯನ್ನು ಕರ್ಣಾಟಕದ ಗೆಜೆಟಿಯರ್ ಮಟ್ಟಕ್ಕೆ ಏರಿಸಲು ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ವಿದ್ವಾಂಸರಿಂದ ಕಥೆ, ಕವನ, ಪ್ರಬಂಧ, ವ್ಯಕ್ತಿಚಿತ್ರ, ಕನ್ನಡಕ್ಕಾಗಿ ದುಡಿದ ವ್ಯಕ್ತಿಗಳ ಪರಿಚಯ ಲೇಖನ, ವಿಮರ್ಶೆ ಮತ್ತು ಸಮಕಾಲೀನ ಸಾಹಿತ್ಯದ ವಿವಿಧ ಮುಖಗಳನ್ನು ಚಿತ್ರಿಸುವ ಲೇಖನಗಳಿಗೆ ಸ್ವಾಗತವಿದೆ.

ಪ್ರಕಾಶಕರಲ್ಲಿ . . .

ಕನ್ನಡ ಜ್ಞಾನ ದೇಗುಲವಾದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದೇಶದಲ್ಲಿ ಪ್ರಕಟವಾಗುವ ಎಲ್ಲ ಕನ್ನಡ ಗ್ರಂಥಗಳೂ ದೊರಕುವಂತೆ ಆಗಲು ನಾಡಿನ ಎಲ್ಲ ಪ್ರಕಾಶಕರು ನುಡಿ ಮತ್ತು ಪರಿಷತ್ಪತ್ರಿಕೆಗೆ ಎರಡು ಪ್ರತಿಗಳನ್ನು ವಿಮರ್ಶೆಗೆ ಕಳುಹಿಸಬೇಕಾಗಿ ಪ್ರಾರ್ಥನೆ. ಒಂದು ಪ್ರತಿ ಸರಸ್ವತಿ ಭಂಡಾರಕ್ಕೂ, ಇನ್ನೊಂದು ಪ್ರತಿ ವಿಮರ್ಶೆಗೂ ಮೀಸಲಾಗುವುದು.

—ಸಂ.

ತರುಣ ಸಾಹಿತಿಗಳನ್ನು ಕುರಿತು

ಮರಾಠಿ ಮೂಲ: **ಸಾನೆ ಗುರೂಜಿ** *

ಕನ್ನಡ ಅನುವಾದ: **ಮ. ಗ. ಶೆಟ್ಟಿ**

ಅನೇಕ ವರ್ಷಗಳಿಂದ ಮನಸ್ಸಿನಲ್ಲಿ ಕೂಡಿದ ಭಾವನೆ ಮತ್ತು ವಿಚಾರಗಳನ್ನು ಹೊರಹಾಕುತ್ತಿದ್ದೇನೆ. ನಾನು ಭಾವನಾವಶನಾಗಿ ಕುಣಿಕುಣಿಯುತ್ತ ಬರೆದೆ. ಬರೆಯುವಾಗ ಅತ್ತೆ, ಸಂತಾಪಗೊಂಡೆ, ರೋಮಾಂಚಿತನಾದೆ. ಬಂಕಿಮಚಂದ್ರರು ಅತ್ಯಂತ ಸುಂದರವಾಗಿ ಬರೆದ ದಿನ, ಇನ್ನಷ್ಟು ಬೇಕು ಎಂದು ಹಾಕಿಸಿಕೊಂಡು ಉಣ್ಣುತ್ತಿದ್ದರಂತೆ. ಬಂಕಿಮ್ ಸಾಹಿತ್ಯ ಸಮ್ರಾಟನಾದರೂ ಸಾಮಾನ್ಯ ಮನುಷ್ಯ. ಆದರೂ ನಾನು ಚನ್ನಾಗಿ ಬರೆದ ದಿನ ನಾನೂ ಸೋತು ಸುಣ್ಣವಾದ ಹಾಗೆ ಅನುಭವವಾಗುತ್ತಿತ್ತು. ನಾನು ನನ್ನ ಬರಹದಲ್ಲಿ ರಕ್ತವನ್ನೇ ತುಂಬುತ್ತಿದ್ದೆ; ಪ್ರಾಣವನ್ನೇ ತುಂಬುತ್ತಿದ್ದೆ. ಮಿಲ್ಟನ್ನನೂ ಸಹ "ಮಹಾಸಾಹಿತ್ಯವೆಲ್ಲ ರಕ್ತದಿಂದ ಲೇಬರೆದದ್ದು ಎಂದಿದ್ದಾನೆ. ನನ್ನ ಸಾಹಿತ್ಯ ಹೇಗೇ ಇರಲಿ, ಅದರಲ್ಲಿ ಪ್ರಾಣವಿದೆ; ರಕ್ತವಿದೆ, ಕಣ್ಣೀರಿದೆ. ನಾನು ಮತ್ತು ನನ್ನ ಸಾಹಿತ್ಯ ಒಂದೇ ಜೀವನದ ಎರಡು ರೂಪಗಳಾಗಿವೆ.

ಸಾಹಿತ್ಯದ ಉಪಾಸನೆ ಮಾಡುವ ನೀವು ಉತ್ಕಟವಾಗಿ ಅಭ್ಯಾಸಮಾಡಿ. ಔಪಚಾರಿಕವಾಗಿ ಬರೆಯಬೇಡಿ. ಬರೆಯಬೇಕಾದಾಗ ನಿಮ್ಮ ಪ್ರಾಣವನ್ನು ತುಂಬಿರಿ. ಗಯಟೆ "ಅನುಭವದ ಹೊರತು ನಾನೇನೂ ಬರೆದಿಲ್ಲ" ಎಂದು ಹೇಳಿದ್ದಾನೆ. ಜೀವನವೇ ಆಗಲಿ, ಕಲೆಯೇ ಆಗಲಿ, ಸತ್ಯದ ಅಧಿಷ್ಠಾನದಿಂದ ಕೂಡಿದಾಗ ಮಾತ್ರ ಅದಕ್ಕೆ ಬೆಲೆ. ಸ್ವತ: ನೀವು ಸತ್ಯರೂಪರಾಗಿರಿ.

ಮನುಷ್ಯನ ಹೃದಯದಲ್ಲಿದ್ದುದನ್ನು ಕೃತಿಯಲ್ಲಿ ತಂದಾಗಲೇ ಆತನ ಭಾಗ್ಯ ಬೆಳಗುತ್ತದೆ. ಭಾರತೀಯ ಜೀವನದ ಎಲ್ಲ ಕ್ಷೇತ್ರದಲ್ಲಿಯೂ ಇಂದು ಸತ್ಯದ, ಉತ್ಕಟತೆ ಮತ್ತು ಪ್ರಾಮಾಣಿಕತೆಯ ನಿತಾಂತ ಅವಶ್ಯಕತೆಯಿದೆ.

ದೇಶಬಂಧು ಚಿತ್ತರಂಜನದಾಸರು "ಸಾಗರ ಸಂಗೀತ" ವೆಂಬ ಕಾವ್ಯ ಬರೆದರು. ಅವರ ತಾಯಿ ಕಾಯಿಲೆಯಾದ ಒಂದು ಸಂದರ್ಭದಲ್ಲಿ ದೇಶಬಂಧು ಮನೆಯಲ್ಲಿರಲಿಲ್ಲ. ಅವರ ತಾಯಿ "ಮಗನಿಲ್ಲದಿದ್ದರೆ ಆತ ಬರೆದ ಸಾಗರ ಸಂಗೀತವನ್ನು ತನ್ನಿ. ಅದರಲ್ಲಿ ಚಿತ್ತರಂಜನನೇ ಇದ್ದಾನೆ" ಎಂದಳಂತೆ. ನನ್ನ ಪುಸ್ತಕದಲ್ಲಿ ನಾನಿದ್ದೇನೆ ಎಂಬ ಆತ್ಮ ವಿಶ್ವಾಸವುಳ್ಳ ಲೇಖಕನೇ ಧನ್ಯ.

ದೊಡ್ಡ ವಿಚಾರದಲ್ಲಿಯೇ ಸುಖವಿದೆ; ಕ್ಷುದ್ರವಿಚಾರದಲ್ಲಿ ಇಲ್ಲ. ಇಂದು ಉಪಾಸನೆಯನ್ನುಮಾಡಿ, ಅಭ್ಯಾಸ ಮಾಡಿ; ತಪಶ್ಚರ್ಯೆಯನ್ನು ಮಾಡಿ; ಯಾವ ಸಾಹಿತ್ಯವನ್ನು ನೀವು ನಾಳೆ ಸೃಷ್ಟಿಮಾಡಲಿರುವಿರೋ ಅದರಲ್ಲಿ ವಿಶಾಲತೆ ಒಡಮೂಡಲಿ. ಇಂದೇ ಬ್ರಹ್ಮ ವಿದ್ಯೆಯ ಆವಾಹನೆಯಾಗಲಿ, ಸಾಹಿತ್ಯದಲ್ಲಿ ಉದಾತ್ತವಿಚಾರ, ಉದಾರ ಭಾವನೆಯ ಮಳೆ ಸುರಿಯಲಿ. ಜಿಜ್ಞಾಸೆಯ ಬಣ್ಣ ಬೆರೆಯಲಿ.

ಬ್ರಹ್ಮ ಎಂದರೆ ದೊಡ್ಡ ವಸ್ತು. ಕ್ಷುದ್ರ ವಿಚಾರ ಜ್ಞಾನೇಶ್ವರರಿಗೆ ಸಲ್ಲದು. ದೊಡ್ಡ ವಿಚಾರಗಳನ್ನು ಎದುರಿಗಿಟ್ಟು ಸಮಾಜದಲ್ಲಿಯ ವಿಷಮತೆ ಅನ್ಯಾಯ, ಪಾಪ ಇವುಗಳ ಕತ್ತಲೆಯನ್ನು ಹೊಡೆದೋಡಿಸುವುದು – ಪ್ರತಿಯೊಬ್ಬರಿಗೂ ಕರ್ತವ್ಯದ ಅರಿವು ಮಾಡಿಕೊಡುವುದು ಅವರಿಗೆ ಬೇಕಾಗಿತ್ತು. ಸ್ವಧರ್ಮಾಚರಣೆಯೆಂದರೇನು? ತನ್ನಲ್ಲಿಯ ಗುಣ ಧರ್ಮಗಳ ವಿಕಾಸವನ್ನು ಸಾಧಿಸಿ ಅದರ ಮೂಲಕ ಸಮಾಜಸೇವೆ ಮಾಡುವುದು; ಆದರೆ ವಿಕಾಸವನ್ನು ಸಾಧಿಸಲು ಸಮಾಜದಲ್ಲಿ ಒಲವು ಬೇಕು; ಸಮತೆ, ಸ್ವಾತಂತ್ರ್ಯ, ಉಚ್ಚವಿಚಾರ, ಬಂಧುಭಾವ ಬೇಕು. ಬ್ರಹ್ಮವಿದ್ಯೆಯಿದ್ದರೆ ಸಮಾಜದಲ್ಲಿ ಬಡವರಾಗಲೀ ದುಃಖಿತರಾಗಲೀ ಶೋಷಿತರಾಗಲೀ ಇರಲಾರರು.

ಸಮಾಜವನ್ನು ಸುಖಿಯನ್ನಾಗಿ ಮಾಡಬೇಕೆಂದೂ, ನಿಮ್ಮ ಕಲೆಯನ್ನು ಆನಂದಕ್ಕಾಗಿ ಬಳಸಬೇಕೆಂದೂ ಬಯಸುವಿರಾದರೆ ಪ್ರತಿಯೊಬ್ಬರ ಜೀವನವನ್ನೂ ಸುಖಮಯವಾಗಿ ಮಾಡಲು ಮೂಲಕ್ಕೇ ಕೈ ಹಾಕಿರಿ. ಉಪವಾಸವಿರುವ ಮನುಷ್ಯನಿಗೆ ಎರಡು ಬಿಸ್ಕೀಟಿನಿಂದ ಹೊಟ್ಟೆ ತುಂಬಲಾರದು. ಅವನಿಗೆ ಸಾಕಷ್ಟು ಹೊಟ್ಟೆಗೆ ಬೇಕು.

---

* ದಿವಂಗತ ಸಾನೆ ಗುರೂಜಿ ಅವರು ಮಹಾರಾಷ್ಟ್ರದ ತರುಣ ಸಾಹಿತಿಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಅನುವಾದ.

ಭೂಮಿಯಲ್ಲಿ ಚೆನ್ನಾಗಿ ಬೆಳೆ ಬರಬೇಕಾದರೆ ಅದನ್ನು ಆಳವಾಗಿ ಹೂಳಬೇಕು. ಕಾಯಿಪಲ್ಲೆ ಬೆಳೆಯುವಾಗ ಬೇಕಿಲ್ಲ. ಹೊಟ್ಟೆ ತುಂಬಲು ಅಕ್ಕಿ, ಗೋಧಿ, ಜೋಳ ಬೇಕು; ಕಾಯಿಪಲ್ಲೆ ಸಾಲದು. ಹಾಗೆಯೇ ಸಮಾಜದ ಮೂಲವನ್ನೇ ತಿದ್ದಬೇಕಾಗಿದ್ದರೆ ಆಳವಾಗಿ ಲೆಖ್ಖಣಿಕೆ ಹಿಡಿಯಬೇಕು.

ಸಮಾಜದಲ್ಲಿಯ ಅಲ್ಪ ಪ್ರಮಾಣದ ಸುಖಲೋಲುಪ ಸಂಸಾರವನ್ನು ಬಣ್ಣಿಸಿ ನಿಮ್ಮ ಲೆಖ್ಖಣಿಕೆ ಕೃತಕೃತ್ಯ ವಾಯಿತೆಂದು ಭಾವಿಸಬೇಡಿ. ನಿಮ್ಮ ಲೆಖ್ಖಣಿಕೆ ಸಮಸ್ತ ಜನತೆಯ ಪ್ರತಿನಿಧಿಯಾಗಲಿ. ಎದುರಿನಲ್ಲಿಯೇ ಸಂಕಟ ದಲ್ಲಿದ್ದ ದುಃಖಿತರ ಅಪಾರ ಸಮುದಾಯವಿದೆ. ಭಗ್ನವಾದ ವಿರಾಟ್ ಸಂಸಾರಗಳಿವೆ. ನಿಮ್ಮ ಮನೋಬುದ್ಧಿ ಅನು ಕಂಪದಿಂದಲೂ, ಸಂವೇದನೆಯಿಂದಲೂ ಕೂಡಿದ್ದರೆ ವಾತಾವರಣದಲ್ಲಿಯ ಈ ಅದೃಶ್ಯಗಾಳಿ ನಿಮಗೆ ಗೋಚರ ವಾದೀತು. ಅಣುವನ್ನು ತುಂಡು ತುಂಡು ಮಾಡಿ ಶಾಸ್ತ್ರಜ್ಞರು ಅವುಗಳ ಸುಪ್ತವಾದ ಶಕ್ತಿಯನ್ನು ಹೊರ ತೆಗೆಯುವಂತೆ ಸಂಸಾರದ ಸುತ್ತುಮುತ್ತಲೂ ಪಸರಿಸಿರುವ ವಿಚಾರದ ಬಿರುಗಾಳಿಯ ಶಕ್ತಿಯನ್ನು ಕಂಡುಹಿಡಿದು, ಅವುಗಳನ್ನು ಮನೆಮನೆಗೆ ಮುಟ್ಟಿಸಿ ಕ್ರಾಂತಿಯನ್ನು ಸಾಧಿಸತರುವ ಕೆಲಸ ಸಾಹಿತಿಗಳ ಮುಂದಿದೆ. ಜನತೆಯ ಮನಸ್ಸನ್ನು ತಿದ್ದುವ ಕೆಲಸ ಬಹು ದೊಡ್ಡದು. ನಿಜವಾದ ಸುಧಾರಣೆಯಾಗಬೇಕಾಗಿದ್ದರೆ ಕ್ರಾಂತಿಯಾಗಬೇಕಾಗು ತ್ತದೆ– ಅಂತರ್ಬಾಹ್ಯಕ್ರಾಂತಿ; ಮಾನಸಿಕ ಮತ್ತು ಸಾಮಾಜಿಕ ಕ್ರಾಂತಿ. ಈ ಕ್ರಾಂತಿಯನ್ನು ಸಂಘಟಿಸಿ ಜನತೆಯನ್ನು ಶಾಶ್ವತವಾದ ಸುಖದ ಕಡೆಗೆ ಒಯ್ಯುವುದು ನಮ್ಮ ಮುಂದಿರುವ ಬಹು ದೊಡ್ಡ ಹೊಣೆಗಾರಿಕೆಯಾಗಿದೆ.

ನೂತನ ಸಮಾಜ ನಿರ್ಮಾಣವಾಗಬೇಕಾಗಿದೆ. ಗೊಂದಲ ದೂರವಾಗಬೇಕಾಗಿದೆ. ವಿಷಯುಕ್ತ ಹುಲ್ಲು ಗಳನ್ನು ನಾಶಮಾಡಿ; ಅಜ್ಞಾನ, ಭ್ರಮೆಗಳನ್ನು ದೂರ ಮಾಡಿ. ಬನ್ನಿ, ನೀವು ಈ ಕೆಲಸಕ್ಕಾಗಿ ಕಂಕಣಬದ್ಧರಾಗಿರಿ. ವಾಲ್ಟೇರನು "ರೂಢಿಯ ವಿರುದ್ಧ ಧ್ವಜವನ್ನು ಎತ್ತಿ ಹಿಡಿದು ಮುಂದೆ ಬರುವವನೇ ಮಾನವ ಜಾತಿಯ ಉಪಕಾರಕರ್ತನಾಗುತ್ತಾನೆ" ಎಂದು ಹೇಳಿದ್ದಾನೆ. ಅದ ರಿಂದ ಜನತೆಯ ಹೃದಯವನ್ನು ಅಲ್ಲಾಡಿಸಿ, ಅವರ ಬುದ್ಧಿ ಯನ್ನು ಬಡಿದೆಬ್ಬಿಸಿ ಕ್ರಾಂತಿಯನ್ನು ಸಾಧಿಸಬೇಕಾಗಿದೆ. ಅಡ್ಡಹೆಸರು, ಜಾತಿ, ಧರ್ಮ ಇವುಗಳ ಆಚೆಗೆ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಸಾಮಾಜಿಕ, ರಾಜಕೀಯ, ಆರ್ಥಿಕ ಶೈಕ್ಷಣಿಕ, ಸಾಹಿತ್ಯದಲ್ಲೆಲ್ಲ ನಡೆದಿರುವ ರೂಢಿಗಳನ್ನು ಕಿತ್ತೊಗೆಯಲು ಬನ್ನಿ. ಸರಂಜಾಮುಶಾಹಿ – ಜಮೀನು ದಾರಿ, ವೈಯಕ್ತಿಕ-ಲಾಭದಾಸೆ, ಶೋಷಣೆ-ಯಾವವೂ ಬೇಡ. ಇದರ ಸಿದ್ಧಿಗಾಗಿ ನಿಮ್ಮ ಲೆಖ್ಖಣಿಕೆ ಸಿದ್ಧವಾಗಲಿ. ಇಂತಹ ಕ್ರಾಂತಿಕಾರಕ ಯುಗದೊಡನೆ ನೀವು ಪಾಲು ಗಾರರಾರಿ. ಜೀವನದ ಪೂರ್ಣತೆ ಅನಂತತೆಯಲ್ಲಿದೆ. ಒಂದು ಕೋಣೆಯಲ್ಲಿ ಕುಳಿತು ನಿಮ್ಮ ಜೀವನವನ್ನೇ ಚಿಂತಿಸುತ್ತ ಕೂಡಬೇಡಿ. ನಿಮ್ಮ ಆತ್ಮ ಸುತ್ತಮುತ್ತಲಿನ ಜನತೆಯ ಆತ್ಮದಲ್ಲಿ ವಿಲೀನವಾಗಲಿ. ವಿಶಾಲ ಸಹಾನು ಭೂತಿಯ ಹೊರತು ದೊಡ್ಡ ಸಾಹಿತ್ಯ ನಿರ್ಮಾಣವಾಗ ಲಾರದು. ನಿಮ್ಮ ಇಂದಿನ ಸ್ಫೂರ್ತಿ ಸಾಮುದಾಯಿಕ ವಾಗಿ, ಎಲ್ಲರ ಸ್ಫೂರ್ತಿಯೂ ನಿಮ್ಮ ಮುಖಾಂತರ ಪ್ರಕಟವಾಗಲಿ. ನಿಮ್ಮ ಉದ್ಧಾರ ಜನತೆಯ ಉದ್ಧಾರ– ನಿಮ್ಮ ಗಾನ ದೇಶದ ನಾಲ್ವತ್ತು ಕೋಟಿ ಜನತೆಯ ಸಾಮೂಹಿಕ ಗಾನವಾಗಲಿ.

ಯಾವ ಕಲೆಯೂ ಸುಲಭವಲ್ಲ; ಅವಕ್ಕೆಲ್ಲ ಸಾಧನೆ ಬೇಕು. ಅನೇಕ ವರ್ಷಗಳ ಪ್ರಯತ್ನ ಬೇಕು. ಕಲೆ ಯೆಂದರೆ ಪೂರ್ಣತೆ; ಪರಿಪೂರ್ಣತೆಯನ್ನು ಬಯಸುತ್ತದೆ. ತುಂಬ ಓದಿರಿ; ಉತ್ತಮೋತ್ತಮ ಮಾದರಿ–ಬರಹಗಳನ್ನು ಓದಿರಿ. ಪ್ರಾಚೀನ ಕಾವ್ಯಗಳನ್ನೋದಿ, ಅರ್ವಾಚೀನ ವಾಗ್ಘಟಗಳನ್ನು ಅಭ್ಯಾಸ ಮಾಡಿ. ಸ್ವಭಾಷೆಯ ಜೊತೆಗೆ ಪರಭಾಷೆಯ ವಾಙ್ಮಯವನ್ನೂ ಅಭ್ಯಾಸಮಾಡಿ. ಜ್ಞಾನದ ಕ್ಷೇತ್ರದಲ್ಲಿ ಸೀಮೆ, ಸರಹದ್ದುಗಳಿಲ್ಲ. ಇಡೀ ಜಗತ್ತಿನ ವಾಙ್ಮಯ ನಿಮ್ಮ ಮುಂದೆ ಇದೆ. ವಟವೃಕ್ಷ ತನ್ನ ಬೇರುಗ ಳನ್ನು ದೂರ ದೂರ ಇಳಿಬಿಟ್ಟು ತಂಪನ್ನು ಸಂಗ್ರಹಿಸುವಂತೆ ಮಹಾನ್ ಸಾಹಿತಿ ತನಗೆ ಬೇಕಾದುದನ್ನು ಎಲ್ಲೆಲ್ಲಿಂದಲೋ ಸಂಗ್ರಹಿಸಿ, ತನ್ನ ಭಾವನೆಯ ಮೂಸೆಯಲ್ಲಿಟ್ಟು, ತನ್ನ ವೈಶಿಷ್ಟ್ಯ ಮತ್ತು ವ್ಯಕ್ತಿತ್ವದ ಬಾಣದಿಂದ ಹೊಡೆಯು ತ್ತಿರುತ್ತಾನೆ. ಹುಟ್ಟಿದಾಗಲೇ ಎಲ್ಲರೂ ಕಲಿತು ಬರುವು ದಿಲ್ಲ. ಶೇಕ್ಸಪಿಯರನು ಅನೇಕ ಹಳೆಯ ಕತೆಗಳನ್ನಾಯ್ದು ಇದ್ದಲಿನಿಂದ ಮುತ್ತು ತಯಾರಿಸಿದ. ಕಾಲಿದಾಸ ಮಹಾ ಭಾರತದಿಂದ ಶಾಕುಂತಲವನ್ನಾಯ್ದು ತನ್ನ ಅಭಿನವ ವಾಗ್ವಿಲಾಸದಿಂದ ನೂತನ ರೂಪವನ್ನಿತ್ತ. ಉಪನಿಷತ್ತು, ಕಬೀರರ ವಚನಗಳ ಪರಿಣಾಮ ರವೀಂದ್ರರ ಮೇಲೆ ಪ್ರಭಾವ ಬೀರಿತ್ತು.

ದೊಡ್ಡ ದೊಡ್ಡ ಪುಸ್ತಕಗಳನ್ನು ಓದಿದರೆ ಸಾಲದು. ಜೀವನ ಗ್ರಂಥವನ್ನೂ ತೆರೆದು ಓದಿರಿ. ಪ್ರತಿಯೊಂದು ಪ್ರಾಣಿಯೂ ವಿಶ್ವಗ್ರಂಥದ ಒಂದೊಂದು ಪುಟ. ಪ್ರತಿ ಯೊಂದು ಜೀವನವೂ ಒಂದೊಂದು ಮಹಾಕಾವ್ಯ. ಆ

ಜೀವನವನ್ನು ಕಣ್ಣುಬಿಟ್ಟು ನೋಡಿ. ಜನಕ್ಕೆ ಅನ್ನ ಕೊಡುವ ಒಕ್ಕಲಿಗ-ಅವನ ಮಕ್ಕಳು ಎರಡೆರಡು ದಿನ ಸೌತೇಕಾಯಿ ತಿಂದು, ಎಂಟೆಂಟು ದಿನ ಮಾವಿನಮಿಡಿ ತಿಂದು ಬದುಕುವ ಪಾಳಿಯೇಕೆ-ಎಂದು ನೋಡಿ. ಸಾಹಿತ್ಯಿಕನೆಂದರೆ ಸಹಾನುಭೂತಿಯ ಸಾಗರ; ಸಹಾನುಭೂತಿ ನಿಮ್ಮಲ್ಲಿ ಎಷ್ಟೆಷ್ಟು ಹಿರಿದೊ ಅಷ್ಟಷ್ಟು ದೊಡ್ಡ ಪ್ರಮಾಣದ ಸಾಹಿತಿಗಳಾಗುವಿರಿ.

ದರಿದ್ರ ನಾರಾಯಣನಲ್ಲಿ ಒಂದಾಗಿ. ಅವರ ಸಮಸ್ಯೆಗಳನ್ನು ಅಭ್ಯಾಸ ಮಾಡಿ. ಅನ್ಯಾಯ, ಬಲಾತ್ಕಾರ, ವ್ಯಸನ, ಉಪವಾಸ, ಅಜ್ಞಾನ ಎಲ್ಲವನ್ನೂ ತಿಳಿದುಕೊಳ್ಳಿ. ಇದು ಕ್ರಾಂತಿಯ-ಪ್ರಗತಿಯ ಯುಗ. ವ್ಯಕ್ತಿಗತ ಸ್ಫೂರ್ತಿಯನ್ನು ಸಾಮುದಾಯಕವನ್ನಾಗಿ ಮಾಡಿ, ಎಲ್ಲರ ಮನೋಬುದ್ಧಿಯ ಸುತ್ತಮುತ್ತಲೂ ಇರುವ ಬಂಧನಗಳನ್ನು ಮುರಿದು ಹಾಕಿರಿ. ತಮ್ಮತನದ ಅರಿವಿನಿಂದ ಕೂಡಿದ ಈ ಕೋಟ್ಯಾವಧಿ ಬಂಧುಗಳು ಕ್ರಾಂತಿ ಹಾಗೂ ನವ ಸಮಾಜ ರಚನೆಯ ಕಡೆಗೆ ಮುಂದುವರಿಯಲೆಂದು ನೀವು ಭಾವಪೂರ್ಣವಾಗಿ ಜ್ಞಾನ ವಿಜ್ಞಾನದ ಸಂದೇಶವನ್ನು ಅವರಿಗೆ ಮುಟ್ಟಿಸಿರಿ.

ಇಂದಿನ ಜನಜೀವನವನ್ನು ಪರಿಶೀಲಿಸಿ ಅದರಲ್ಲಿ ದುಷ್ಟ ಭ್ರಷ್ಟ ಅಂಶಗಳನ್ನು ಕಿತ್ತೊಗೆಯಲು ಆಹ್ವಾನಿಸುತ್ತಿದ್ದೇನೆ. ಕೇವಲ ಪುಸ್ತಕದಲ್ಲಿ ಜನಜೀವನವನ್ನು ಓದಿ ಸಂತೃಪ್ತರಾಗಬೇಡಿ. ಪ್ರತ್ಯಕ್ಷವಾಗಿ ಅಡ್ಡಾಡಿ, ಓಡಾಡಿ ಅವರಲ್ಲಿ ಸಮರಸರಾಗಿರಿ. ಭಾರತ ಇತಿಹಾಸದ ಹಳೆಯ ಪುಟಗಳನ್ನು ಮಗುಚಿ ಹಾಕಿ, ಹೊಸದೃಷ್ಟಿ ಪಡೆಯಿರಿ. ಸಾವಿರಾರು ವರುಷಗಳಲ್ಲಿ ಏರಿಳಿತವನ್ನು ಕಂಡ ಭಾರತದ ಆತ್ಮದೊಡನೆ ತಾದಾತ್ಮ್ಯತೆ ಹೊಂದಿರಿ. ಪಂಡಿತ ಜವಹರಲಾಲರು 'ಡಿಸ್‌ಕವರಿ ಆಫ್ ಇಂಡಿಯಾ'ವನ್ನು ಜೈಲಿನಲ್ಲಿ ಬರೆದರು. ಭಾರತದ ಅಖಂಡ ವಿಕಾಸಮಾನ ಆತ್ಮದ ದರ್ಶನವನ್ನು ಅನಂತ ಕಾಲ ಖಂಡದಲ್ಲಿ ತಿರುಗಾಡಿ ಪಡೆದರು. ಹಳೆಯ ಇತಿಹಾಸ, ಪರಂಪರೆ, ದಂತಕಥೆ, ಆಖ್ಯಾಯಿಕೆಗಳ ಅಭ್ಯಾಸ ಮಾಡಿದಾಗ ನಮ್ಮಲ್ಲಿ ನವ ದೃಷ್ಟಿ ಮೂಡಿ ಬಂದೀತು.

ಚಿಕ್ಕ ವಿಷಯಗಳಲ್ಲಿಯೂ ಮಹಾನ್ ಅರ್ಥ ದೊರೆಯುತ್ತದೆ. ಮೊನ್ನೆ ಮೊನ್ನೆ ವಿನೋಬಾಜಿ "ವಿರಾಟ ಪುರುಷನಿಗೆ ಸಾವಿರಾರು ತಲೆ, ಸಾವಿರಾರು ಕೈಗಳೆಂದು ವರ್ಣನೆಯಿದೆ. ಆದರೆ ಹೃದಯ ಮಾತ್ರ ಒಂದೇ ಒಂದು. ಒಂದೇ ಹೃದಯದವರಾಗಿ" ಎಂದರು ವಿನೋಬಾರಿಗೆ ಪ್ರಾಚೀನ ಮಹಾಮಂತ್ರದಿಂದ ಉಚ್ಚ ವಿಚಾರ ದೊರೆಯಿತು. ವೇದ, ರಾಮಾಯಣ, ಮಹಾಭಾರತ, ಉಪನಿಷತ್ತಿನ ತಿಳಿಯದ ನೂರಾರು ಕತೆಗಳು ಇವೆ. ಈ ಸಾರಸ್ವತ ಸಾಗರದಲ್ಲಿ ಮೇಲಿಂದ ಮೇಲೆ ಮುಳುಕು ಹಾಕುತ್ತ ಬನ್ನಿ. ಅಲ್ಲಿ ಕಲ್ಪನೆಯ ಅಪಾರ ಭಂಡಾರವಿದೆ. ಈ ಹಳೆಯ ಕಾಲ್ಪನಿಕ ಇತಿಹಾಸ, ಸುಳ್ಳು ದಂತಕತೆಗಳೇಕೆ ಎಂದು ಮೂಗು ಮುರಿಯ ಬೇಡಿ. ಒಂದು ದೃಷ್ಟಿಯಿಂದ ನೋಡಿದಾಗ ನಮ್ಮೆಲ್ಲರ ಜೀವನವೂ ಕಾಲ್ಪನಿಕವೇ. ಕೆಲವೊಂದು ವಿಚಾರ, ಕೆಲವೊಂದು ಧ್ಯೇಯಗಳ ಪೂಜೆ ಮಾಡುತ್ತಿದ್ದೇವೆ. ನಮ್ಮ ಕೃತಿಗಳಲ್ಲಿಯೇ ಏನಾದರೊಂದು ಸತ್ಯವನ್ನು ಪ್ರಕಟಪಡಿಸುತ್ತಿದ್ದೀರಿ. ಅದರಂತೆಯೇ ಆಖ್ಯಾಯಿಕೆ ದಂತಕಥೆ ಇವು ಸತ್ಯದ ಪ್ರತೀಕಗಳೇ ಆಗಿರುವುದರಿಂದ ಅವುಗಳನ್ನು ತುಚ್ಛವೆಂದು ಎಣಿಸಬೇಡಿ.

ಭಾರತದ ಭವ್ಯ ಇತಿಹಾಸದ ಅಭ್ಯಾಸಮಾಡಿ. ಅದರಿಂದ ಸಾಮರ್ಥ್ಯವುಂಟಾದೀತು. ಎರಡನೆಯದಾಗಿ ಇಂದಿನ ಇತಿಹಾಸವನ್ನು ವಿಶಾಲದೃಷ್ಟಿಯಿಂದ ಕಂಡುಕೊಳ್ಳಿರಿ. ಮೂರನೆಯದಾಗಿ ನಿಸರ್ಗವನ್ನು ಪ್ರೀತಿಸಿರಿ. ನಿಸರ್ಗವೇ ನಿಮ್ಮ ತಾಯಿ. ಶೇಕ್ಸಪಿಯರ್ ಭೂಮಿಯ ಹತ್ತಿರವೇ ಶಿಕ್ಷಣ ಪಡೆದ. ಹುಟ್ಟುವ ಮಕ್ಕಳ ಪೋಷಣೆಯಾಗಲೆಂದೇ ತಾಯಿಯ ಸ್ತನದಲ್ಲಿ ನಿಸರ್ಗವೇ ಹಾಲನ್ನಿಟ್ಟಿದೆಯೆಂದು ನನಗೆ ಅನಿಸುತ್ತದೆ. ಆದರೆ ಹುಡುಗರ ಮನೋಬುದ್ಧಿಯ ಪೋಷಣೆಯಾಗಲು ಯಾವ ಯೋಜನೆಯಿದೆ? "ಸಮುದ್ರವಸನೇ ದೇವಿ ಪರ್ವತಸ್ತನ ಮಂಡಲೇ" ಈ ಸೃಷ್ಟಿಮಾತೆ ಮನೋಬುದ್ಧಿಯ ಪೋಷಣೆ ಮಾಡುವಳು. ಶೇಕ್ಸಪಿಯರನೂ ಸಹ ಹೊಳೆಗಳಲ್ಲಿ ಪುಸ್ತಕ, ಪಾಷಾಣಗಳಲ್ಲಿ ಪ್ರವಚನವೆಂದು ಸಾರಿದ-"Books in Brooks, sermons in stones". ಆತ ನಿಸರ್ಗದ ಬಳಿಯಲ್ಲಿ ಕಲಿತು ಮಹಾನ್ ಕವಿಯಾದ. ನಿಸರ್ಗವನ್ನು ಪ್ರೀತಿಸಿದ ಹೊರತು ನಿಮ್ಮ ಸಾಹಿತ್ಯಕ್ಕೆ ಭವ್ಯತೆ ವ್ಯಾಪಕತೆ ಬರಲಾರದು; ನಾವೀನ್ಯ, ಮಾಧುರ್ಯ ಬರಲಾರದು. ಆ ನಿಸರ್ಗದ ಸೌಂದರ್ಯ ಪ್ರತೀತಿ ನಿಮ್ಮ ಅಂಗಾಂಗಗಳಲ್ಲಿ ತುಂಬಿಕೊಳ್ಳಲಿ.

ಸೃಷ್ಟಿಯ ಸಹೃದಯ ಮಿತ್ರರಾಗಿರಿ. ಹಸಿರು ಹುಲ್ಲಿನ ಮೇಲೆ ಮುತ್ತಿನಂತೆ ಮಿನುಗುವ ಹನಿಗಳನ್ನು ನೋಡಿರಿ. ಉಷಃಕಾಲದಲ್ಲಿ ಮರದಿಂದ ತೊಟ್ಟಿಕ್ಕುವ ಹನಿಗಳನ್ನು ನೋಡಿ. ಅವು ಅಶ್ರುಬಿಂದುಗಳೇ ಎಂದೆನಿಸುತ್ತಿವೆ. ಒಂದು ಗುಡ್ಡದ ಮೇಲೆ ಮಳೆ ಬೀಳುತ್ತಿರುವಾಗ ಪಕ್ಕದ ಗುಡ್ಡದ ಮೇಲೆ ಮೈಚಾಚಿ ಮಲಗಿರುವ ಬಿಸಿಲನ್ನು ನೋಡಿ. ಆ ನೀಲ ಗುಡ್ಡ, ಆಳವಾದ ದರಿ, ನದಿ,

ಹೊಳೆ, ಕೆರೆ, ಗಿಡಬಳ್ಳಿ, ಹೂವು ಎಲ್ಲವನ್ನೂ ಗಮನಿಸಿ. ಒಂದು ಸಣ್ಣ ಹೂವನ್ನು ನೋಡಿ; ಅದೆಷ್ಟು ಸುಂದರ! ಟೆನಿಸನ್ನನು "ಒಂದು ಹೂವನ್ನು ಅರಿತರೆ ವಿಶ್ವವನ್ನೇ ಅರಿತಂತೆ" ಎಂದು ಉದ್ಗರಿಸಿದ್ದಾನೆ. ಹೂವುಗಳ ಮೇಲಿನ ನಕ್ಷೆಯನ್ನು ಪರಾಂಬರಿಸಿರಿ. ಹೂವಿನ ಹಿಂದಿಂದೇ ಓಡಿ; ಕೋಗಿಲೆಯನ್ನು ಹುಡುಕಿಕೊಂಡು ಅಲೆದಾಡಿ; ಕುಣಿಯುವ ನವಿಲನ್ನು ನೋಡಿ. ಆಕಳು, ಎತ್ತು, ಬೆಕ್ಕುಗಳ ಕಣ್ಣುಗಳನ್ನು ನೋಡಿ; ಎಂತಹ ಸೌಂದರ್ಯ; ಎಂತಹ ಆನಂದ!!

ಕೆಳಗಿನ, ಮೇಲಿನ ವಿಶ್ವವನ್ನು ನೋಡಿ. ಆಕಾಶದಲ್ಲಿ ರಾತ್ರಿಯಲ್ಲಿ ಕಾಣುವ ಕಾವ್ಯವನ್ನು ಓದಿ. ವೇದದ ಋಷಿಗಳು ಮಧ್ಯಾಹ್ನದ ನಿಗಿನಿಗಿ ಆಕಾಶದ ವರ್ಣನೆಯನ್ನು ಮಾಡಿದ್ದಾರೆ. ನಸುಕಿನ ಸೂರ್ಯೋದಯವನ್ನೇ ಕಾಣದ ನಾವು ಮಧ್ಯಾಹ್ನದ ಉರಿಬಿಸಿಲನ್ನು ತಡೆಯುವದೆಂತು? ನಿಮಗೆ ಎಂದಾದರೂ ನಕ್ಷತ್ರಗಳ ಆಕರ್ಷಣೆಯಾಗಿದೆಯೇ? ಮಿಣುಕು ಹುಳಗಳನ್ನು ಕಂಡಿರುವಿರಾ?

ಎತ್ತರವಾದ ಗುಡ್ಡದ ಮೇಲೆ ಕುಳಿತು, ಎದುರಿನ ದೂರದ ದಿಗಂತವನ್ನು ಕಂಡಾಗ ಈ ವಿಶಾಲ ಸೃಷ್ಟಿ ನಿಮ್ಮನ್ನು ತೊಟ್ಟಿಲಲ್ಲಿಟ್ಟು ತೂಗುವಂತೆ ಭಾಸವಾದೀತು. ಆ ಅನಂತ ಸೃಷ್ಟಿಯಲ್ಲಿ ನಾನು ಬೆಳೆಯುತ್ತಿದ್ದೇನೆ, ಅನಂತನಾಗುತ್ತಿದ್ದೇನೆ ಎನ್ನುವ ಭಾವನೆ ಬರುತ್ತದೆ. ಅರಬಸ್ತಾನದಲ್ಲಿಯ ರಾತ್ರಿಕಾಲದ ಅನಂತ ನಿಶ್ಶಬ್ದ ಆಕಾಶವೇ ಪೈಗಂಬರರ ಬಾಯಿಂದ ಕುರಾನನ್ನು ಹೇಳಿಸಿತು. ಭಾರತದ ಹೊಳೆ ಹಳ್ಳ, ಪರ್ಜನ್ಯಧಾರೆ, ಅರಣ್ಯಗಳು ವೇದೋಪನಿಷತ್ತುಗಳಿಗೆ ಜನ್ಮವಿತ್ತವು. ರವೀಂದ್ರನಾಥರು ನಿಸರ್ಗದ ಬಳಿಯಲ್ಲಿ ಕಲಿತರು. ನಿಸರ್ಗದಲ್ಲಿಯ ಗಂಧ, ಬಣ್ಣ, ಪ್ರಕಾಶಗಳ ಆನಂದವನ್ನು ಸವಿದು ಗೀತಾಂಜಲಿಯನ್ನು ಬರೆದರು. ಬಾಲ್ಯದಲ್ಲಿ ಅವರು ತಂದೆಯ ಜೊತೆಗೆ ಹಿಮಾಲಯದ ಅಪಾರ ಸೌಂದರ್ಯ, ಉದಾತ್ತ ಗಾಂಭೀರ್ಯಗಳನ್ನು ಸವಿದರು. ದೊಡ್ಡವರಾದ ಬಳಿಕ ಪದ್ಮಾನದಿಯಲ್ಲಿ ಬೋಟಿನಲ್ಲಿ ಕುಳಿತು ನಾಲ್ಕು ನಾಲ್ಕು ತಿಂಗಳು ಜಗತ್ತಿನ ವಿಚಾರವಿಲ್ಲದೆ ಕಳೆಯುತ್ತಿದ್ದರು. ಗಾಳಿ, ತೆರೆ, ಪಕ್ಷಿ, ಆಕಾಶ, ಉದಯಾಸ್ತಗಳ ಬಳಿಯಲ್ಲೇ ಸುಳಿದರು. ಅವರ ಕಾವ್ಯಗಳಲ್ಲಿ ಇವೆಲ್ಲವುಗಳ ಸುಗಂಧ ಸಮರಸವಾಗಿದೆ.

ಸೃಷ್ಟಿಯ ಅಂತರಂಗದಲ್ಲಿ ಹಣುಕಿಹಾಕಿ. ಅಲ್ಲಿ ನಿಮಗೆ ಅನೇಕ ಧ್ವನಿಗಳು ಕೇಳಿಸುವವು. ರವೀಂದ್ರನಾಥರೊಮ್ಮೆ ಸಾಯಂಕಾಲ ತಿರುಗಾಡಲು ಹೊರಟರು. ಬಿರುಗಾಳಿಯೆದ್ದಿತು. ವೃಕ್ಷಗಳು ಕುಣಿಯತೊಡಗಿದವು. ಧೂಳಿನ ಗುಲಾಲ ಚಿಮ್ಮಿತು. ವಿಶಾಲ ನೃತ್ಯ ಪ್ರಾರಂಭವಾಯಿತು. ರವೀಂದ್ರನಾಥರು ತಮ್ಮ ರೇಶಿಮೆಯ ಬಟ್ಟೆಯನ್ನು ಮರೆತು ಧೂಳಿನಲ್ಲಿ ಕುಳಿತರು. ಅವರ ಹೃದಯವೂ ಕುಣಿಯತೊಡಗಿತು. ಬಿರುಗಾಳಿ ನಿಂತಿತು. ರವೀಂದ್ರರು ಕಣ್ಣು ತೆರೆದರು. ಒಂದು ಅಮರ ಗೀತೆಯನ್ನು ಬರೆದು, ಸಾಯಂಕಾಲ ಪ್ರಾರ್ಥನೆಯ ಸಮಯ ಹಾಡಿದರು.

ಸೃಷ್ಟಿಯ ಈ ಮಹಾನ್ ಗಾನವನ್ನು ಕೇಳಬೇಕಾದರೆ ಸೃಷ್ಟಿಯ ಪರಿಚಯ ಬೆಳೆಸಿಕೊಳ್ಳಿ; ಆಗ ನಿಮಗೆ ಅವಳ ಅನಂತ ಭಾಷೆ, ಅನಂತ ಛಂದಸ್ಸು ಗೋಚರವಾದೀತು. ನಸುಕಿನಲ್ಲಿ ಏಳಿ, ಹೊರಗೆ ಬನ್ನಿ; ಗಾಳಿ ಶರೀರಕ್ಕೆ ತಾಕಲಿ. ಎಲೆ ಹುಲ್ಲುಗಳನ್ನು ನೋಡಿ. ಅರುಣ ಪ್ರಕಾಶ ಹೇಗೆ ಹೇಗೆ ಪಸರಿಸುತ್ತಿದೆ? ಜೀವನಕ್ಕೆ ಮಂಗಲಕರವಾದ ಪ್ರಾತಃಸ್ನಾನವಾಗಲಿ. ನಿಸರ್ಗ ಪ್ರೇಮಿಯಾದ ಅಮೆರಿಕನ್ ಗ್ರಂಥಕಾರ ಥೋರೋ "ಎರಡು ತಾಸು ಹೊಲದಲ್ಲಿ ಕೆಲಸ ಮಾಡಿ, ನಿಮ್ಮ ಹೊಟ್ಟೆಯ ನೋವು ಇಲ್ಲದಂತಾದೀತು. ನಿಮ್ಮ ಬರಹದಲ್ಲಿ ತೇಜಸ್ಸು, ನವಜೀವನ—ಎಲ್ಲವೂ ಬರಲಿ," ಎಂದಿದ್ದಾನೆ.

ಎಳೆಯರಾದ ನೀವು ಸೃಷ್ಟಿಯಿಂದ ದೂರ ಸರಿಯುವ ತಪ್ಪನ್ನು ಎಂದಿಗೂ ಮಾಡಬೇಡಿ. ಜಿಜ್ಞಾಸೆ, ಕೌತುಕ ವೃತ್ತಿಯಲ್ಲಿಯೇ ಸಾಹಿತ್ಯದ ಆತ್ಮವಿದೆ. ಪ್ರತಿಯೊಂದು ವಸ್ತುವಿನ ಬಳಿಗೆ ಹೋಗುವುದು, ಅದನ್ನು ನೋಡುವುದು ಅದರ ಹತ್ತಿರ ಮಾತನಾಡುವುದು,-ಈ ಮೂಲಕ ಸಂತೋಷವನ್ನು ಅನುಭವಿಸಿ ಪ್ರಗತಿ ಸಾಧಿಸಿರಿ. ಜೀವನವನ್ನು ಅನುಭವದಿಂದ ಸಮೃದ್ಧಗೊಳಿಸಿರಿ. ಸೃಷ್ಟಿಯ ಸಾನ್ನಿಧ್ಯದಲ್ಲಿಯ ಅನುಭವ ಮಾನವೀ ಜೀವನದ ಅನುಭವ ಪಡೆಯಿರಿ. ಒಕ್ಕಲಿಗರಾಗಿ, ಜೀವನವನ್ನು ಅನುಭವಿಸಿ ನೋಡಿ. ಬಿರುಗಾಳಿಯಲ್ಲಿ ತಿರುಗಾಡಿ ನೋಡಿ; ಎತ್ತರವಾದ ಪರ್ವತವನ್ನು ಏರಿ ಕಂದರದಲ್ಲಿ ಇಳಿಯಿರಿ. ಒಬ್ಬ ಚೀನಿ ಚಿತ್ರಗಾರ ಬಿರುಗಾಳಿಯಲ್ಲಿ ಮುಸಲಧಾರಾ ಮಳೆಯಲ್ಲಿ ಸಮುದ್ರ ಹೇಗೆ ಕಾಣುತ್ತಿದೆಯೆಂದು ನೋಡಲು ಹೋದನಂತೆ. ತಲೆಯ ಮೇಲೆ ಗಾಳಿ, ತೆರೆಗಳ ತುಷಾರ ಮತ್ತು ನೊರೆಗಳ ಮಳೆ ಆತನ ದೇಹದಮೇಲೆ ಆಗುತ್ತಿತ್ತು. ಮೇಲಿನಿಂದ ಎಡಬಿಡದೆ ಮಳೆ ಸುರಿಯುತ್ತಿತ್ತು. ಆ ಚಿತ್ರಕಾರ ನಿಂತೇ ಇದ್ದ. ದೇಹವನ್ನೆಲ್ಲ ಕಣ್ಣು ಕಿವಿಯನ್ನಾಗಿ ಮಾಡಿ ನೋಡುತ್ತಿದ್ದ; ಕೇಳುತ್ತಿದ್ದ.

ಉತ್ಕಟತೆಯ ಹೊರತು ಏನೂ ದೊರೆಯದು. ಸಾಹಸ, ದೊಡ್ಡ ದೊಡ್ಡ ವಿಚಾರ, ವಿಶಾಲಧ್ಯೇಯ, ಅಪಾರ ಅಭ್ಯಾಸ, ಬೇಕಾದಷ್ಟು ಅನುಭವಗಳಿಸಿ ಜೀವನವನ್ನು ಸರ್ವದೃಷ್ಟಿಯಿಂದಲೂ ಸಮೃದ್ಧ ಹಾಗೂ ಉದಾತ್ತ ವನ್ನಾಗಿ ಮಾಡಿಕೊಳ್ಳಿ. ನೀವು ನಿರ್ಭಯರಾದರೆ ನಿಮಗೆ ಯಾವ ಕೊರತೆಯೂ ಆಗಲಾರದು. ಕಲ್ಪನೆ, ಉಪಮೆ, ದೃಷ್ಟಾಂತ ಎಲ್ಲವೂ ಒಂದರ ಹಿಂದೊಂದು ನೆನಪಾದೀತು. ಒಂದು ವಿಷಯ ನೆನಪುಮಾಡಿಕೊಟ್ಟರೆ ಅಂತಹ ಸಹಸ್ರಾರು ಘಟನೆಗಳನ್ನು ಹೇಳಬಲ್ಲವನೇ ದೊಡ್ಡ ಕವಿ. ಸಂಸಾರ ಕ್ಷಣಭಂಗುರವೆಂದು ಹೇಳಿದರೆ ಕ್ಷಣ ಭಂಗುರವಾದ ಅನೇಕ ಸಂಗತಿಗಳು ತನ್ನಿಂದ ತಾನೇ ಆತನಿಗೆ ನೆನಪಾಗುವುದು. ಜ್ಞಾನೇಶ್ವರರ ಎದುರು ಇಂತಹ ಸಮಯದಲ್ಲಿ ಇಡೀ ನಿಸರ್ಗ, ಇಡೀ ಸೃಷ್ಟಿಯೇ ಎದುರು ನಿಲ್ಲುತ್ತಿತ್ತು. ಯಾಕೆಂದರೆ ಅವರು ಇಡೀ ದೇಶ ವನ್ನು ಸಂಚರಿಸಿದ್ದರು. ಅದರಿಂದಲೇ ಅವರ ಜ್ಞಾನೇಶ್ವರಿ ಯಲ್ಲಿ ಎಲ್ಲ ಭಾಗದ ಶಬ್ದಗಳೂ ಸಮಾವೇಶವಾಗಿವೆ. ಶೇಕ್ಸಪಿಯರ, ವಿಕ್ಟರ ಹ್ಯಗೋ ಅವರಿಗೆ ಶಬ್ದಗಳ ಕೊರತೆ ಯಾಗುತ್ತಿರಲಿಲ್ಲ. ಎಲ್ಲ ದಂಧೆಯವರೂ ಅವರಿಗೆ ಗೊತ್ತಿದ್ದರು. ಎಲ್ಲರೊಡನೆಯೂ ಮಿತ್ರತ್ವ ಅವರಿಗಿತ್ತು.

ಎಲ್ಲ ಪ್ರದೇಶಗಳಿಂದಲೂ ಶಬ್ದಗಳನ್ನು ಕೂಡಹಾಕಿ. ಹಳತು ಹೊಸತು ಎಲ್ಲ ಬರಲಿ. ಬಹಿಷ್ಕಾರ ಹಾಕುತ್ತ ಕೂಡಬೇಡಿ. ಕ್ಷುದ್ರ–ದರಿದ್ರ ಅಹಂಕಾರ ಬೇಡ. ಪ್ರತಿಯೊಂದು ಶಬ್ದದ ಮೇಲೆಯೂ ನಮ್ಮ ಭಾಷೆಯ ಮುದ್ರೆಯನ್ನೊತ್ತೋಣ. ಇಂಗ್ಲಿಷಿನ ಬೋಟ ಶಬ್ದ ಕನ್ನಡ ದಲ್ಲಿ ಬೋಟೆ ಆಗಿದೆ. ಎಲ್ಲವನ್ನೂ ಅರಗಿಸಿಕೊಂಡು ಹೃಷ್ಟ ಪುಷ್ಟವಾಗಿರಿ. ಸಂಸ್ಕೃತ ಧಾತುವಿನಿಂದ ನೂರಾರು ಶಬ್ದ ಗಳು ಉರ್ದುವಿನಲ್ಲಿಯೂ ಬಂದಿವೆ. ಇಂದು ಜಗತ್ತು ಹತ್ತಿರಕ್ಕೆ ಬಂದಿದೆ. ಇಷ್ಟೊಂದು ದ್ವೇಷ ಮತ್ಸರ ಕಟ್ಟಿ ಕೊಂಡು ಎಲ್ಲಿಗೆ ಹೋಗುವಿರಿ?

ಈ ರೀತಿ ಸಿದ್ಧತೆ ಮಾಡಿಕೊಳ್ಳುತ್ತಲೇ ಬರೆಯುವ ಅಭ್ಯಾಸವನ್ನಿಟ್ಟುಕೊಳ್ಳಿ. ಮನಸ್ಸಿನಲ್ಲಿ ಭಾವನೆಗಳು ತುಂಬಿದೆಯೆಂದು ಅನಿಸಿದೊಡನೆಯೇ ಬರೆಯಿರಿ. ಅರಳುವ ಮೊದಲು ಮೊಗ್ಗು, ಗಂಧ ಬಣ್ಣಗಳನ್ನು ತನ್ನಲ್ಲಿ ತುಂಬಿ ಕೊಂಡಿರುತ್ತದೆ. ಎಲ್ಲವನ್ನು ತುಂಬಿಕೊಂಡೇ ನಿಮ್ಮ ಮನಸ್ಸು ಅರಳಲಿ. ಉತ್ತರೋತ್ತರವಾಗಿ ಅಧಿಕಾಧಿಕ ಸಾಮರ್ಥ್ಯ, ಆತ್ಮವಿಶ್ವಾಸ ಬರಲಿ.

ಬಾಲಕರು ಬರೆದ ಇಲ್ಲವೇ ಬಾಲಕರಿಗಾಗಿ ಬರೆದ ಸಾಹಿತ್ಯ ದೇಶ ಭಾಷೆಗಳಲ್ಲಿ ಕಡಮೆ. ಜೀವನದ ಅನೇಕ ವಿಷಯಗಳನ್ನು ವಿವೇಚಿಸುವ ಬಾಲಸಾಹಿತ್ಯ, ವಿಶ್ವದ ಕಲ್ಪನೆಯನ್ನು ಕೊಡುವ ಸಾಹಿತ್ಯ ನಮ್ಮಲ್ಲಿ ಇಲ್ಲ. ಕತೆ ಗಳಿಂದ ಮಕ್ಕಳಿಗೆ ಆನಂದ – ಅವರ ಭಾವನೆಗಳಿಗೆ ಸುಂದರ ರೂಪ ಬರುತ್ತದೆ. ಅವರ ಕಲ್ಪನಾಶಕ್ತಿ ಜಾಗ್ರತವಾಗು ತ್ತದೆ. ಅಷ್ಟರಿಂದಲೇ ಇಪ್ಪತ್ತನೆ ಶತಮಾನದ ಜೀವನಕ್ಕೆ ಸಾಲದು. ಮಕ್ಕಳಿಗಾಗಿ ಅನೇಕ ವಿಷಯಗಳ ಮೇಲೆ ಸಹಸ್ರಾರು ಪುಸ್ತಕಗಳನ್ನು ತಯಾರಿಸಬೇಕಾದೀತು. ಅದಕ್ಕೆ ಶಿಕ್ಷಕರು, ಪ್ರಾಧ್ಯಾಪಕರು, ಲೇಖಕರು–ಇವರೆಲ್ಲರ ಸಹಕಾರ್ಯ ಬೇಕು ; ಸರಕಾರದ ನೆರವು ಬೇಕು.

ಸಮುದ್ರದ ತರಂಗಗಳಂತೆಯೇ ೨೦೦–೨೫೦ ವರ್ಷ ಗಳಿಗೆ ಇತಿಹಾಸದಲ್ಲಿಯೂ ಒಂದೊಂದು ತೆರೆಯೇಳುತ್ತದೆ. ಅತಿ ಪ್ರಾಚೀನ ಕಾಲವನ್ನೇ ತೆಗೆದುಕೊಳ್ಳಿ. ಈಜಿಪ್ತ, ಬ್ಯಾಬಿಲೋನ, ಮೊಹೆಂಜೋದಾರಗಳಲ್ಲಿ ಒಂದೇ ಸಂಸ್ಕೃತಿಯ ತೆರೆ ಎದ್ದಿತು. ಅದರ ಅನಂತರ ಎರಡೂವರೆ ಸಾವಿರ ವರ್ಷಗಳ ಮೇಲೆ ವೈಚಾರಿಕ ಪ್ರವಾಹ ಹರಿದುದನ್ನು ನೋಡುತ್ತೇವೆ. ಗ್ರೀಸದೇಶದಲ್ಲಿ ಸಾಕ್ರೆಟೀಸ ಮತ್ತು ಪ್ಲೆಟೋ, ಇಲ್ಲಿ ಭಗವಾನ್ ಬುದ್ಧ ಮತ್ತು ಮಹಾವೀರ, ಚೀನದಲ್ಲಿ ಲಾಓಟ್ಸೆ ಮತ್ತು ಕನ್ ಫೂಷಿಯಸ್. ಹುಡುಗ ರಿಗೆ ಈ ತರಂಗಗಳ ಭವ್ಯತೆಯನ್ನು ತಿಳಿಸಿಕೊಡಿ. ಆಮೇಲೆ ಹದಿನೈದನೆಯ ಶತಮಾನದಲ್ಲಿ ಧರ್ಮಸುಧಾರಣೆಯ ಪ್ರವಾಹವನ್ನು ನೋಡಿ. ಯೂರೋಪಿನಲ್ಲಿ ಲೂಥರ ಹಿಂದೂಸ್ತಾನದಲ್ಲಿಯ ಸಾಧುಸಂತರು. ಅದರ ನಂತರ ಸ್ವಾತಂತ್ರ್ಯದ ಪ್ರವಾಹ ಬಂದಿತು. ಜಗತ್ತಿನಲ್ಲಿ ಎಲ್ಲೆಡೆ ಯಲ್ಲಿಯೂ ಸ್ವಾತಂತ್ರ್ಯಕ್ಕಾಗಿ ಯುದ್ಧ ನಡೆದಿದೆ. ಇವೆಲ್ಲ ವಿಚಾರಗಳಲ್ಲಿ ಮಕ್ಕಳ ಮನಸ್ಸು ಮಿಂದು ಶುಚಿಯಾಗಲಿ.

ನಾಡಿನಲ್ಲೆಲ್ಲ ಸುತ್ತಿ ಪರಂಪರಾಗತ ಸಾಹಿತ್ಯ ಕೂಡಿಸಿರಿ. ಜರ್ಮನಿಯಲ್ಲಿಯ ಗ್ರಿಮ್ ಸಹೋದರರು ಹನ್ನೆರಡು ವರ್ಷ ಸುತ್ತಾಡಿ ಕೂಡಿಸಿದ ಕತೆ ಜಗತ್ತಿನ ಮಕ್ಕಳಿಗೆಲ್ಲ ಸಂತೋಷ ಕೊಡುತ್ತಿವೆ.

ನೀವು ಒಂದೆರಡು ಕತೆಗಳನ್ನು ಕೂಡಿಸಿ ಕೃತಾರ್ಥ ರಾದೆವೆಂದು ಕುಣಿಯಬೇಡಿ. ಹದಿನಾರು ವಯಸ್ಸಿನ ಜ್ಞಾನದೇವ ಹತ್ತು ಸಾವಿರ ಓವಿಗಳನ್ನು ಬರೆದರು. ತುಕಾರಾಮ, ಕನಕದಾಸ, ಪುರಂದರದಾಸರು ಬರೆದು ದೆಷ್ಟೋ! ಅಲ್ಪಸ್ವಲ್ಪ ಬರೆದುದಕ್ಕೇ ಪ್ರದರ್ಶನ ಸಮಾ ರಂಭವೆಂದು ಕುಣಿಯುವದೆಷ್ಟು?

ತರುಣರೇ, ನಾಳಿನ ಮನ್ವಂತರ ನಿಮ್ಮದು. ನಾಳಿನ ಧ್ಯೇಯ ನಿಮ್ಮ ಸುತ್ತುಮುತ್ತು ಪ್ರದಕ್ಷಿಣೆ ಹಾಕುತ್ತಲಿದೆ. ಎಲ್ಲ ತರದ ಸಂಕುಚಿತತೆ, ಜಾತೀಯತೆ, ಪ್ರಾಂತೀಯತೆ

ಯನ್ನು ಬಿಟ್ಟು ಏಳಿ! ಎದ್ದೇಳಿ!! ವೇದದಲ್ಲಿ ಸರಸ್ವತೀ ದೇವಿ

"ಅಹಂ ರಾಷ್ಟ್ರೀ ಸಂಗಮನೀ ಜನಾನಾಂ"

'ನಾನು ವಾಣೀ – ರಾಷ್ಟ್ರಕ್ಕಾಗಿ ಇದ್ದೇನೆ. ಸಕಲ ಲೋಕದ ಸಂಗಮವನ್ನು ಸ್ನೇಹ ಸಮ್ಮೇಲನವನ್ನು ಏರ್ಪಡಿಸುವವಳು ನಾನಿದ್ದೇನೆ' ಎಂದು ಋಷಿಯ ಮಾತು ನಿಮ್ಮ ಕಿವಿಗಳಲ್ಲಿ ನಿನದಿಸಲಿ. "ಬರವಣಿಗೆಯಿಂದ ಪ್ರೀತಿ ಹೆಚ್ಚಿ, ನಿಜವಾದ ಮೈತ್ರಿಯುಂಟಾಗಲಿ" ಎಂದು ಜ್ಞಾನೇಶ್ವರರು ಅಂದಿದ್ದಾರೆ. ಗಯಟೆ ದ್ವೇಷ ಬೆಳೆಯುವ ಹಾಡನ್ನು ಹಾಡಲಾರನೆಂದು ಹೇಳಿದ್ದಾನೆ.

ಇಂದಿನವರೆಗೂ ಜಗತ್ತನ್ನು ವಾಙ್ಮಯವೇ ಬೆಳೆಸಿದೆ, ತಿದ್ದಿದೆ, ಆನಂದವನ್ನಿತ್ತಿದೆ. ಮನುಷ್ಯತ್ವವನ್ನು ನೀಡಿದೆ. ವಾಙ್ಮಯದಿಂದಲೇ ಸಹೃದಯತೆ, ಉದಾರತೆ, ಬಂಧುತ್ವ, ಪುರುಷಾರ್ಥ, ಪಾವಿತ್ರ್ಯ, ಪ್ರೇಮ, ನ್ಯಾಯ ನಿರ್ಮಾಣವಾಗಿದೆ. ಭಾರತೀಯರ ಮನೋರಚನೆ, ಆಚಾರ ವಿಚಾರಕ್ಕೆಲ್ಲ ರೂಪುಕೊಟ್ಟವರಾರು? ರಾಮಾಯಣ, ಮಹಾಭಾರತ, ಭಾಗವತ, ಕಬೀರನ ವಚನ, ತುಲಸೀ ರಾಮಾಯಣ, ಗೋಪಿಚಂದನ, ಬಸವಣ್ಣನ ವಚನ, ಮೀರಾಬಾಯಿಯ ಭಜನ, ಜ್ಞಾನೇಶ್ವರನ ಓವಿ, ತುಕಾರಾಮರ ಅಭಂಗ, ದಾಸರ ಕೀರ್ತನೆಗಳು ಹೆಂಗಸರ ಹಾಡು–ಕತೆಗಳು– ಈ ಎಲ್ಲ ವಾಙ್ಮಯಗಳು ಭಾರತೀಯ ಜೀವನಕ್ಕೆ ಮೆರುಗನ್ನಿತ್ತಿವೆ.

ಹಿಂದಿನವರು ತಮ್ಮ ಕಾಲಾನುಸಾರವಾಗಿ ಧ್ಯೇಯವನ್ನು ರೂಪಿಸಿದರು. ವಿಚಾರದ ಆವಾಹನೆಮಾಡಿದರು. ಇಂದಿನ ಯುಗಧರ್ಮಕ್ಕೆ ಬೇಕಾದ ಹಾಡು ಕತೆ, ವಿಚಾರಗಳನ್ನು ನೀವು ಕೊಡುತ್ತ ಬನ್ನಿ. ನಿಮ್ಮ ಜವಾಬ್ದಾರಿ ಹೆಚ್ಚಿದೆ. ನೀವು ಬರೆಯುವ ಗೀತ, ಕತೆ, ನಾಟಕ, ನಿಬಂಧಗಳಿಂದ ಜನತೆಯ ಬುದ್ಧಿಗೆ ಸಂಸ್ಕಾರ ದೊರೆಯಲಿ: ಆಡುವ ಮಾತು, ಬರೆದ ಬರಹ ನಯವಾಗಿರಲಿ. ಸಾದಿ ಹೇಳಿದ್ದಾನೆ: "ಬಿಳಿಯುದರ ಮೇಲೆ ಕಲೆಮಾಡುವ ಮೊದಲು ನೂರು ಸಲ ವಿಚಾರಮಾಡು." ಅಮೃತ ಕೊಡಲುಬರದಿದ್ದರೆ ಹಾಲುಕೊಡಿ, ಅದೂ ಸಾಧ್ಯವಿಲ್ಲದಿದ್ದರೆ ಸ್ವಚ್ಛ ನೀರುಕೊಡಿ; ಹೆಂಡ ಕೊಡಬೇಡಿ.

ಕಾರಂತರ ನಾಟಕಗಳು

ಎಚ್. ವಿ. ಶ್ರೀನಿವಾಸ ಶರ್ಮ

ಶ್ರೀ ಕೋ. ಶಿವರಾಮ ಕಾರಂತರು ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಅವತಾರಗಳನ್ನೆತ್ತಿದ ಯುಗಪುರುಷರು. ನಾಟಕ ಕ್ಷೇತ್ರದಲ್ಲಂತೂ ನಡೆಸಿರುವ ಸಾಹಸ ಹಾಗೂ ಕೃಷಿ ಅಸಾಧಾರಣ. ಅವರು ಸ್ಪಷ್ಟವಾದಿ ಹಾಗೂ ಪ್ರಯೋಗಶೀಲರು. ಅವರ ಬಹುಮುಖ ಅನುಭವದಲ್ಲಿ ಕೈಗೆ ನಿಲುಕದ ವಸ್ತುವಿಲ್ಲ. ರಾಜಕೀಯ, ಸಾಮಾಜಿಕ, ಧಾರ್ಮಿಕ, ಕಲಾಕ್ಷೇತ್ರಗಳಲ್ಲಿ ಕಾಣಬರುವ ತೊಡಕು, ದೋಷ, ಕಷ್ಟ, ಸುಖ, ಮೋಡಿ, ವಂಚನೆ, ಹುಳುಕು ಕೊಳಕು–ಇವುಗಳನ್ನು ಹೊರಗೆಡಹುವುದು, ಇಲ್ಲವೆ ನಿವಾರಣೆ ಮಾಡುವುದು, ಸುಧಾರಿಸುವುದು–ಈ ಕೆಲಸಗಳಿಗಾಗಿ ದುಡಿಯುವಾಗ ಹುಟ್ಟಿಕೊಂಡ ಕೃತಿಗಳೆಂದರೆ, ನಾಟ್ಯರೂಪ, ಅಣಕವಾಡು, ಗೀತಾ ನಾಟಕ, ಪೌರಾಣಿಕ ನಾಟಕ, ಸಾಮಾಜಿಕ ನಾಟಕ, ಛಾಯಾಚಿತ್ರ, ಇವೇ ಮುಂತಾದುವು. "ಜೀವನದಲ್ಲಿ ಯಾರಿಗೂ ಯಾರೂ ಹೆದರಬೇಕಾಗಿಲ್ಲ. ನಾವೆಣಿಸಿರುವ ಮಟ್ಟದಲ್ಲಿ ಜನ ಸರಳವಾಗಿರುವುದಿಲ್ಲ. ಜನರ ಪ್ರತಿಯೊಂದು ಮಾತಿಗೂ ಬೆಲೆ ಕೊಡುತ್ತಾ ಹೋದರೆ ಬದುಕು ಸಾಗುವುದು ಕಷ್ಟ."—ಈ ಮನೋಭಾವವಿರುವ ಕಾರಂತರು, ತಮ್ಮ ಕೃತಿಗಳಲ್ಲೂ ಅದನ್ನೇ ತೋರಿಸುವ ಸ್ವಾತಂತ್ರ್ಯ, ಮನೋಸ್ಥೈರ್ಯ, ನಿಷ್ಠೆ ಉಳ್ಳವರು. ತಾವು ಕಂಡದ್ದನ್ನು, ಅನುಭವಿಸಿದುದನ್ನು ಧೈರ್ಯವಾಗಿ ಚಿತ್ರಿಸುವ ವಜ್ರಕಠಿಣ ಶಕ್ತಿ ಅವರದು. ಸಮಯ ಬಂದರೆ ಉದ್ರೇಕದಿಂದ ಬೈಗಳು, ನಿಂದೆಯ ಮಾತುಗಳನ್ನೇ ನಾಟಕದಲ್ಲಿ ಪ್ರಯೋಗಿಸುವುದೂ ಉಂಟು. ಅವರ ಮಾತು ಹರಿತ, ಚೂಪು, ಅಷ್ಟೇ ಅರ್ಥಗರ್ಭಿತ; ಯೋಚಿಸಿದರೆ ಒಳ್ಳೆಯ ಸುಧಾರಣೆಯ ಸೂಚನೆ ಆ ಮಾತಿನಲ್ಲಿ ವ್ಯಕ್ತವಾಗದೇ ಇಲ್ಲ. ಘಟನೆಗಳನ್ನು ತಂದೊಡ್ಡಿ ಒಂದೊಂದಕ್ಕೆ ಆಗುವ ಘರ್ಷಣೆಯಾಗಲೀ, ಆಸ್ಫೋಟವಾಗಲೀ, ಆಂದೋಳನವಾಗಲಿ, ನಾಟಕರಂಗದಲ್ಲಿ ಕಾಣಬರುವುದು ಅಪರೂಪ. ಏನಿದ್ದರೂ ಅಲ್ಲಿ ಮಾನಸಿಕ ಘರ್ಷಣೆಗೇ ಪ್ರಧಾನಪಾತ್ರ. ವ್ಯಕ್ತಿ ವ್ಯಕ್ತಿಗಳ ವಿಕಾಸ, ಒಳತೋಟ, ಸ್ವಭಾವಗಳ ಚಿತ್ರಣ, ಚಿರಂತನವಾದ ಹುಟ್ಟು ಸಾವಿನ ಹೋರಾಟ, ಬದುಕು–ಬಾಳ್ವೆಯ ವಿಚಾರ–ಈ ಚಿಂತನವೇ ನಮಗೆ ಎದ್ದು ಕಾಣುತ್ತದೆ ಎಂದು ಹೇಳಿದರೆ ಒಪ್ಪುವ ಮಾತೇ ಸರಿ.

ಕಾರಂತರ ಮನೋರಂಗದಲ್ಲಿ ಬಂದು ಹೋಗುವ ಪಾತ್ರಗಳ ವೈವಿಧ್ಯ ಬಲು ರಮ್ಯ. ಇಡೀ ನಾಟಕಗಳಲ್ಲಿ ಒಂದು ಪಾತ್ರದಂತೆ ಮತ್ತೊಂದಿಲ್ಲ. ಒಂದು ಪಾತ್ರದ ಸ್ವಭಾವ ಮತ್ತೊಂದು ಪಾತ್ರಕ್ಕಿಲ್ಲ. ಅವರ ಪಾತ್ರಗಳು ಹಲವಾರು ಜನದ ಸಮೂಹ. ವೇಷಹಾಕಿದ ಭಿಕ್ಷುಕರು. ತಾಲ್ಲೂಕುಕಚೇರಿ ಆಫೀಸರು, ವೇದಪುರಾಣ ಪಠಣಕಾರರು, ನಾಟಕ ಕಂಪೆನಿಯವರು, ವ್ಯಾಪಾರಿಗಳು, ಗ್ರಾಮಾಧಿಕಾರಿಗಳು, ರಾಜಕೀಯ ಪಟುಗಳು, ಪೂಜಾರಿಗಳು, ಶ್ರೀಮಂತರು, ಗುರುಗಳು, ಮಠಾಧಿಕಾರಿಗಳು, ತಾಲ್ಲೂಕುಬೋರ್ಡು ಪ್ರೆಸಿಡೆಂಟರು, ಶಾಲಾ ಉಪಾಧ್ಯಾಯ, ವೃತ್ತಪತ್ರಿಕೆಗಾರರು, ಪುರಾಣ, ಚಾರಿತ್ರಿಕ ವ್ಯಕ್ತಿಗಳು, ಎಲ್ಲರೂ ಬಂದು ಹಾದುಹೋಗಬೇಕು. ಸಾಮಾನ್ಯವಾಗಿ ಕೈಲಾಸಂ ನಾಟಕದ ಪಾತ್ರಗಳಂತೆ ಮಧ್ಯಮ ವರ್ಗದ, ಕೀಳುವರ್ಗದ ಜನರೇ ಇಲ್ಲಿ ಪ್ರಧಾನ ವ್ಯಕ್ತಿಗಳಾಗಿ ಭಾಗವಹಿಸುವವರು ಎಂದೇ ಹೇಳಬಹುದು. ಒಬ್ಬೊಬ್ಬರಿಗೂ ತಮ್ಮದೇ ಆದ ವಿಶಿಷ್ಟ ಸ್ಥಾನಮಾನಗಳುಂಟು. ಅವರ ಸುತ್ತ ನಲಿಯುವ ಈ ಪಾತ್ರಗಳು, ಅವರ ತಾಳಕ್ಕೆ ಮಣಿದು ಆಡುವುದನ್ನು ಕಾಣಬಹುದು.

ಅವರಿಗೆ ನಾಟಕ ಬರೆಯುವುದೆಂದರೆ ನೀರುಹರಿದಂತೆ. "ಮನಸ್ಸಿಗೆ ತೋಚಿದ್ದನ್ನು ಗೀಚುವ ಸ್ವಭಾವ ನನ್ನದು.... ನಾನೇ ವಿವಿಧ ಪಾತ್ರಗಳಂತೆ ಮನೋರಾಜ್ಯದಲ್ಲಿ ನಟಿಸುತ್ತಾ ಕುಳಿತು ಬರೆಯುತ್ತಿದ್ದೆನೇ ಹೊರತು, ಹಣೆತುರಿಸಿ, ಯೋಚನೆಮಾಡಿ ಬರೆಯುವುದೆಂಬುದಿಲ್ಲ"—ಕಾರಂತರ ಈ ಮಾತನ್ನು ಕೇಳಿದರೆ ಅವರ ರಚನಾಮಾರ್ಗ ಸ್ಪಷ್ಟವಾದೀತು. ಬರೆಯುವಾಗ, ಬರೆದುದನ್ನು ಆಡುವಾಗ, ಆಡಿಸುವಾಗ, ತಾವೇ ಅದರಲ್ಲಿ ಮುಳುಗಿ ಸ್ನಾನಮಾಡಿ ಒಂದೊಂದು ಸನ್ನಿವೇಶ, ಪಾತ್ರ, ಸಂಭಾಷಣೆಗಳಲ್ಲೂ ಬರುವ ಕುಂದುಕೊರತೆಗಳನ್ನು ಕಂಡುಕೊಂಡು, ತಿದ್ದುತ್ತಾ ಕೊನೆಗೆ ಅತ್ಯುತ್ಕೃಷ್ಟವಾದ ಕೃತಿಯಾಗುವಂತೆ ಮಾಡುವುದು, ಹಾಗೂ ಹೊಸ ಹೊಸ ಪ್ರಯೋಗಗಳನ್ನು ಮಾಡಿ ನೋಡುವುದು ಅವರ ಮತ್ತೊಂದು ಮಾರ್ಗ. ಇದಕ್ಕಾಗಿ ಬೇಸರಪಟ್ಟವರಲ್ಲ. ದೈಹಿಕ ಶ್ರಮಕ್ಕಾಗಲಿ, ಮಾನಸಿಕ ನೋವಿಗಾಗಲೀ, ಬಳಲಿ

ಕೂತವರಲ್ಲ. ಜಯಗಳಿಸುವವರೆಗೆ ಬಿಡದೆ ಸತತ ಹೋರಾಟ ನಡೆಸುವ ಹಠವಾದಿ ಹಾಗೂ ಆಶಾವಾದಿ.

ಕಾರಂತರಿಗೆ ಈ ನಾಟಕದ ಹುಚ್ಚು ಹಿಡಿಯಲು ಕಾರಣ 'ನಾಟಕಗಳಿಂದಲೇ ಸಮಾಜ ಉದ್ಧಾರವಾಗಬಹುದು' ಎಂಬ ಭ್ರಮೆ. 'ಸಮಾಜ ಸುಧಾರಣೆಗೆ ನಾಟಕವೂ ಒಂದು ಸಾಧನವಾಗಲಾರದೆ' ಎಂಬ ಬಲವತ್ತರವಾದ ಆಸೆ ಅವರಿಗೆ ಇತ್ತು. ಇಷ್ಟಕ್ಕೆಲ್ಲಾ ಅವರಿದ್ದ ಸನ್ನಿವೇಶ, ವಾತಾವರಣದ ಪ್ರಭಾವವೂ ಕಾರಣವಾಗಿರಬಹುದು. ೧೯೧೩ರಿಂದಲೇ ಆಗ್ಗೆ ಹೆಸರಾಂತ ನಾನಾ ನಾಟಕ ಕಂಪೆನಿಗಳು ತಮ್ಮ ಊರಿಗೆ ಬಂದಾಗ, ಅವು ನಿರ್ವಹಿಸುತ್ತಿದ್ದ ನಾಟಕಗಳನ್ನು ಕದ್ದಾದರೂ ಹೋಗಿ ನೋಡುವ ಅಭ್ಯಾಸ ಅವರದು. 'ರಾಜರಾಜೇಶ್ವರಿ ನಾಟಕ ಮಂಡಲಿ' ಯವರು ಪ್ರದರ್ಶಿಸಿದ 'ಕಾಳಿದಾಸ', 'ಪ್ರಭಾವತಿ ದರ್ಬಾರ್', 'ಯುವತೀ ವಿಜಯ' ಮುಂತಾದ ನಾಟಕಗಳೂ, ವರದಾಚಾರ್ಯರ ಕಂಪೆನಿ, ಗುಬ್ಬಿ ಕಂಪೆನಿ, ಶಿರಹಟ್ಟಿ ವೆಂಕೋಬರಾಯರ ಕಂಪೆನಿ, ಗದುಗಿನ ಗರೂಡ ಸದಾಶಿವರಾಯರ ಕಂಪೆನಿ ಅವರ ಮೇಲೆ ಅಪಾರ ಪ್ರಭಾವವನ್ನು ಬೀರಿರಬಹುದು ಎಂದು ನಾವು ತಿಳಿಯಬಹುದು. ಹೀಗೆ ನಾಟಕದ ಹುಚ್ಚು ಕೆರಳುತ್ತಿದ್ದಂತೆಯೇ ನಾಟಕಗಳ ರಚನೆಯೂ ಸಾಗುತ್ತಲೇ ಇತ್ತು. ಅವುಗಳನ್ನು ಈ ಕಂಪೆನಿಯಲ್ಲಾಗಲೀ, ಶಾಲೆಗಳಲ್ಲಿಯಾಗಲೀ, ತಮ್ಮದೇ ಒಂದು ತಂಡವನ್ನು ಕಟ್ಟಿಕೊಂಡಾಗಲೀ, ಆಡಿಸಿ, ಆಡಿ ನೋಡುವುದು ಅವರ ಹುಚ್ಚಿನಲ್ಲಿ ಒಂದು.

'ಆಡುಮುಟ್ಟದ ಸೊಪ್ಪಿಲ್ಲ' ಎಂಬಂತೆ, ಅವರ ನಾಟಕಕ್ಕೆ ಹಲವು ವಿಧ ಪಾತ್ರಗಳಿರುವಂತೆ ವಸ್ತುಗಳೂ ಅಷ್ಟೇ ವಿಧ. ಸ್ತ್ರೀ ಪಾವಿತ್ರ್ಯ, ದೇಶಪ್ರೇಮ, ಬಂಡವಾಳಶಾಯಿ, ಸತ್ಯ, ಅಹಿಂಸೆ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಬಾಲವಿಧವಾ ಸಮಸ್ಯೆ, ಆಹಾರ ಸಮಸ್ಯೆ, ಸಾಂಸಾರಿಕ ಅವ್ಯವಸ್ಥೆ, ಜಾತೀಯತೆ, ಮೂಢನಂಬಿಕೆ, ಗುಪ್ತರೋಗಗಳು–ಹೀಗೆ ಅವರ ನಾಟಕಗಳ ವಸ್ತುವಿನ ಹರವು. ಈ ವಸ್ತುಗಳನ್ನು ಉಪಯೋಗಿಸಿಕೊಂಡ ಅವರ ನಾಟಕಗಳನ್ನು ಹೀಗೆ ವಿಂಗಡಿಸಬಹುದು.

ನಾಟ್ಯರೂಪಗಳು; ಗೀತಾ ನಾಟಕಗಳು; ಚಿಕ್ಕ ಚಿಕ್ಕ ಗದ್ಯ ನಾಟಕಗಳು, ದೀರ್ಘ ಗದ್ಯ ನಾಟಕಗಳು; ಮಕ್ಕಳ ನಾಟಕಗಳು.

ಅವರು ಬರೆದಿರುವ ನಾಟಕಗಳು ಸುಮಾರು ೫೬ರ ವರೆಗೆ ತಿಳಿದುಬಂದರೂ, ತಿಳಿಯದೇ ಇರುವ, ಅವರಲ್ಲೇ ಗುಪ್ತವಾಗಿದ್ದು, ಲೋಕರಂಗಕ್ಕೆ ಬಾರದೆ ಇರುವ ನಾಟಕಗಳು ಅನೇಕ ಇರಬಹುದು. ಈಗ ಗೊತ್ತಾಗಿರುವ ನಾಟಕಗಳಲ್ಲಿ, ಪ್ರಕಟವಾಗದೆ ಹಸ್ತಪ್ರತಿಯಲ್ಲೇ ಇರುವ ನಾಟಕಗಳು ಸುಮಾರು ಹದಿನಾರೆಂದು ಹೇಳಬಹುದು.

ಆರಂಭದ ನಾಟಕಗಳು (೧೯೨೫–೩೦)

'ನಿಷಾಮುಹಿಮೆ', 'ಸತೀಸಂಯುಕ್ತೆ' (ಐದು ಅಂಕದ ನಾಟಕ) ನಾಟಕಗಳನ್ನು ಕಂಪೆನಿಗಳಲ್ಲಿ ಆಡಿಸಿ ನೋಡಿದ ಕಾರಂತರು, ಆ ಕಾಲದಲ್ಲೇ 'ಸೇವಾಸದನ', 'ಸುಖವೆಲ್ಲಿ' 'ಹೊಣೆಯಾರು' ನಾಟಕಗಳನ್ನು ರಚಿಸಿ ಆಡಿಸುವುದರ ಮೂಲಕ ವಿಜಯಗಳಿಸಿದರು. ಇಷ್ಟೇ ಅಲ್ಲದೆ 'ಬೆವರಿಗೆ ಜಯವಾಗಲಿ', 'ಸಿಡಿಲು ಮಿಂಚು', 'ಹೇಗಾದರೇನು', 'ಸಾವಿರ ಮಿಲಿಯ', 'ನಾಟಕವೆಂಬ ನಾಟಕ', 'ಅಧಿಕ ಪ್ರಸಂಗಿಯ ಕೀಟಲೆ', 'ತಿಮ್ಮಪ್ಪನ ಒಗ್ಗರಣೆ' ಹಾಗೂ, ಐದು ಅಂಕದ ಚಾರಿತ್ರಿಕ ನಾಟಕವಾದ 'ವಿಜಯದಶಮಿ', ವಿಜಯನಗರದ ಸಾಳ್ವ ತಿಮ್ಮನ ಚರಿತ್ರೆಯಾದ ಐದು ಅಂಕದ ನಾಟಕ 'ಕಠಾರಿಭೈರವ', ಮೂರು ಅಂಕದ ಚಾರಿತ್ರಿಕ ನಾಟಕ 'ಜ್ವಾಲಾಬಂಧನ', ಬಾಹುಬಲಿ–ಭರತರ ಚರಿತ್ರೆಯ ಆಧಾರದ ನಾಟಕ 'ವಿಜಯ', ಮೂರು ಅಂಕದ ನಾಟಕ 'ವಿಜಯನಗರದ ಸೂರ್ಯ', ಗುಬ್ಬಿ ಕಂಪೆನಿಗಾಗಿಯೇ ಬರೆದು, ನಿರ್ದೇಶಿಸಿ ಆಡಿಸಲು ಪ್ರಯತ್ನಿಸಿದ 'ಗದಾಯುದ್ಧ'—ಈ ನಾಟಕಗಳು ಸುಮಾರು ೧೯೨೫–೧೯೩೦ರ ಅವಧಿಯಲ್ಲಿ ಹುಟ್ಟಿಕೊಂಡವು ಎಂದು ಹೇಳಬಹುದು. ಆದರೆ ಇವುಗಳಲ್ಲಿ ಹಲವು ಅಚ್ಚುಮನೆಯನ್ನು ಸೇರಿ ಹೊರಬಂದಿಲ್ಲವೆಂಬುದೇ ಒಂದು ವಿಷಾದದ ಹಾಗೂ ವ್ಯಸನದ ವಿಷಯ.

ಇದರ ಜೊತೆಗೆ ಹಲವಾರು ನೃತ್ಯರೂಪ ಚಿತ್ರಗಳನ್ನು ಪ್ರಯೋಗಮಾಡಿ ತೋರಿಸುವುದೂ ಅವರ ಮೊದಲ ಕಾರ್ಯವಾಗಿತ್ತು. 'ಶೀಲಭಂಗ' ಒಂದು ನೃತ್ಯರೂಪಕ. ಅಲಸೂರು ಸರೋವರದಲ್ಲಿ ನೌಕಾವಿಹಾರಕ್ಕೆಂದು ಹೋದಾಗ, ಕಿತ್ತುತಂದ ಹೂವೊಂದು ಮನೆಗೆ ಬರುವಷ್ಟರಲ್ಲಿ ಬಾಡಿಹೋಗುತ್ತದೆ. ಇದನ್ನೇ ಕುರಿತು ಯೋಚಿಸುತ್ತಿದ್ದಾಗ ಪ್ರತಿಭೆಗೆ ಮಿಂಚಿದುದೇ ಆ ಹೂವಿನ 'ಶೀಲಭಂಗ'. ಒಬ್ಬಳು 'ಕನ್ಯೆ' ಹೂವಾಗಿಯೂ, ಹೂವನ್ನು ಮೆಚ್ಚುವವ 'ಸೂರ್ಯ' ನಾಗಿಯೂ ಪಾತ್ರಗಳನ್ನು ತಂದು ಜೊತೆಗೆ 'ಕವಿ' ಯನ್ನೂ ಸೂರ್ಯನೊಡನೆ ಸೇರಿಸಿ ಇಬ್ಬರ ದೃಷ್ಟಿಕೋನದಲ್ಲಿ 'ಹೂವು' ಕಾಣುತ್ತಿದ್ದಂತೆಯೇ, ಪೂಜಾರಿ

ಯಿಂದ ಹೂವಿಗೆ ಆದ 'ಶೀಲಭಂಗ' ವೇ ಈ ನೃತ್ಯ ಯೋಜನೆ. 'ಮೇಘ ಮಯೂರ' ಎರಡು ಹೆಣ್ಣು ನವಿಲುಗಳು ಒಂದು ಗಂಡು ನವಿಲನ್ನು ಅನಾದರಿಸುವುದೇ ಈ ನೃತ್ಯರೂಪಕ. ಹಲಸಂಗಿ ಊರಿನ ಬಳಿ ಒಂದು ಹಳ್ಳದ ಹತ್ತಿರದ ಬೇವಿನ ಮರಗಳ ತೋಪಿನಲ್ಲಿ ನವಿಲುಗಳ ನರ್ತನವನ್ನು ನೋಡಿ ಸ್ಫೂರ್ತಿಗೊಂಡ ಪರಿಣಾಮ ಈ ನೃತ್ಯರೂಪಕ. ಇಲ್ಲೆಲ್ಲಾ ಭಾವಕ್ಕೆ ಪ್ರಾಧಾನ್ಯವೇ ಹೊರತು ಮತ್ತೇನಲ್ಲ. ಬೆಳ್ಳಾವೆಯ ಶಾಂತಿ ಶಿಬಿರದಲ್ಲಿ 'ಬೌದ್ಧ ಯಾತ್ರೆ' ಯೆಂಬ ಸುದೀರ್ಘ ನಾಟ್ಯರೂಪ ಚಿತ್ರಣವನ್ನು ಅಲ್ಲೇ ಬರೆದು ಆಡಿಸಿರುವುದೂ ಉಂಟು. ಅಷ್ಟೇ ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಪಾಠಪ್ರವಚನಗಳಿಗೆ, ಚಿತ್ರವನ್ನು ತೋರಿಸುವ ಉದ್ದೇಶದಿಂದ ಭರತಖಂಡದ ಆಗು ಹೋಗುಗಳಿಗೆ ಕಾರಣಕರ್ತರಾದ ವ್ಯಕ್ತಿಗಳ, ಘಟನೆಗಳ ಆಧಾರದ ಮೇಲೆ 'ಪರಿವರ್ತನ ಭಾರತ' ಎಂಬ ನಾಟ್ಯರೂಪವನ್ನು ಆಡಿಸಿದ ಖ್ಯಾತಿ ಕಾರಂತರದು. ಇದರಲ್ಲಿ ೬೦–೭೦ ಮಂದಿ ನಟರು ಬಂದು ಹೋಗುತ್ತಿದ್ದ ರಂತೆ. ಬುದ್ಧನ ಅಹಿಂಸಾ ತತ್ವದಿಂದ ಗಾಂಧಿಯತನಕ ಹರಿದುಬಂದ ಘಟನೆ, ಸನ್ನಿವೇಶಗಳ ಚಿತ್ರಣ ಮಕ್ಕಳ ಮನಸ್ಸಿಗೆ ಹಿಡಿಸುವ ಕಾರ್‍ಯವೇ ಇದು. ಅಂತಹದೇ 'ದೆಹಲಿಯ ದೌರ್ಭಾಗ್ಯ' ಮತ್ತೊಂದು 'ಪ್ರಾಚೀನ ಮಾನವನ ಜೀವನ ಚಿತ್ರ.'—ಹೀಗೆ ಇತಿಹಾಸದ ಜೀವನ ಚಿತ್ರಗಳು, ಪುರಾತನ ಮಾನವರ ಜೀವನ, ಚರಿತ್ರೆಯ ಹಾಗೂ ಭೂವಿವರಣೆಯ ಶಿಕ್ಷಣಗಳನ್ನು ರಸವತ್ತಾಗಿ ಮಾಡಲು ಸಹಾಯಕವಾಯಿತು ಎಂದು ಕಾರಂತರೇ ಅಭಿಪ್ರಾಯಪಟ್ಟಿದ್ದಾರೆ. 'ರಾತ್ರಿಂ ದಿವ' ಒಂದು ಸೊಗಸಾದ ನೃತ್ಯಯೋಜನೆ. ರಾತ್ರಿ, ದಿನಗಳ ಸೊಗಸನ್ನು ಹೇಳುತ್ತ, ತೋರಿಸುತ್ತ, ನಿದ್ರಾದೇವಿ, ಸೂರ್ಯ, ಇವರ ಸರಸ ಕಾದಾಟದಲ್ಲಿ ಕೊನೆಯಾಗುವ ಭಾವ ಇದರಲ್ಲಿ ವ್ಯಕ್ತವಾಗುತ್ತದೆ. ಕಾರಂತರು ಪ್ರಯೋಗಶೀಲರೆಂಬುದಕ್ಕೆ 'ನದಿ', 'ಚಿತ್ರಾಂಗದ', 'ಭೀಷ್ಮವಿಜಯ' 'ಅಭಿಮನ್ಯು ವಧೆ', 'ಅಂದು–ಇಂದು', 'ಆಲಿಬಾಬ ಕತೆ' 'ಅಲ್ಲಾವುದ್ದೀನನ ವಿಚಿತ್ರ ದೀಪ' 'ಹಸನ್ ಪರ್ವಿನಾ' 'ಕೀಚಕ ವಧೆ', 'ಇಂದ್ರಕೀಲಕ', 'ಪಂಚವಟಿ' ಇವೇ ಮುಂತಾದ ಭಾವಪ್ರಧಾನವಾದ ನೃತ್ಯರೂಪಕಗಳೇ ಸಾಕ್ಷಿ. ಮಕ್ಕಳಿಗಾಗಿ ಪತಂಗ–ಹೂಗಳ ಸರಸಾಟ, ಮಿಣುಕು ಹುಳುಗಳ ಆಟಗಳನ್ನು ಆಡಿಸಿ ತೋರಿಸಿದರು. ತಮ್ಮ ತಂಡದವರೊಡನೆ, ಸಮಯೋಚಿತವಾಗಿ ಪ್ರವಾಸಗಳನ್ನು ಕೈಗೊಂಡು ಡಂಗುರ ಹೊಡೆದ ಸಾಹಸಿ ಕಾರಂತರು.

ಗದ್ಯ ನಾಟಕಗಳು

ಕಾರಂತರ ಆರಂಭದ ಕೃತಿಗಳನ್ನು ಪರಿಚಯಮಾಡಿಕೊಂಡ ಮೇಲೆ, ಅವರ ಗದ್ಯನಾಟಕಗಳ ಹಾಗೂ ಅಚ್ಚಾಗಿರುವ ನಾಟಕಗಳ ಕಡೆ ಗಮನ ಕೊಡೋಣ. ಸುಮಾರು ೧೯೩೩–೧೯೩೭ರ ಅವಧಿಯಲ್ಲಿ ಹೊರಬಂದ 'ಐಯ್ದು ನಾಟಕ' ಸಂಕಲನದ ನಾಟಕಗಳಲ್ಲಿ (೧) ನಾರದ ಗರ್ವಭಂಗ (೧೯೩೩), (೨) ಹಣೆಬರಹ (೧೯೩೩), (೩) ಹಿರಿಯಕ್ಕನ ಚಾಳಿ (೧೯೩೪), (೪) ನಾಲ್ಕನೆ ಪಿಶಾಚಿ (೧೯೩೪), (೫) ಕಟ್ಟೆಪುರಾಣ (೧೯೩೩)—ಇವು ಸೇರಿವೆ. ಭೂಲೋಕಕ್ಕೆ ಬಂದ ನಾರದನ ಗರ್ವಭಂಗವಾಗುವ ತಮಾಷೆಯಾದ ನಾಟಕ 'ನಾರದ ಗರ್ವಭಂಗ' ವಾದರೆ, ಹಣೆಬರಹ ಹಾಗೂ ಜಾತಕ, ಜ್ಯೋತಿಷ್ಯಗಳನ್ನು ನಂಬಿ ಕೆಟ್ಟವರ ಚಿತ್ರಣ 'ಹಣೆಬರಹ' ದಲ್ಲಿದೆ. ಸೋಮಾರಿಯಾಗಿ, ಮಾಡಲು ಕೆಲಸವಿಲ್ಲದೆ ಕಟ್ಟೆಯ ಮೇಲೆ ಕುಳಿತು ಪರರ ವಿಚಾರವನ್ನೇ ಎತ್ತಿ ಆಡುತ್ತಿರುವ ವಿಷಯವೇ 'ಕಟ್ಟೆಪುರಾಣ'. ಮನೆಯಲ್ಲಿ ದೊಡ್ಡವರ ಚಾಳಿಯನ್ನೇ ಮಕ್ಕಳೂ ಅನುಸರಿಸುವರೆಂಬ ಒಂದು ನೋಟ 'ಹಿರಿಯಕ್ಕನ ಚಾಳಿ' ಯ ವಸ್ತುವಾದರೆ, 'ನಾಲ್ಕನೆ ಪಿಶಾಚಿ' ಯಲ್ಲಿ ಗಂಡಸರು ಸ್ವತಂತ್ರರಾಗಿ ನಡೆದುಕೊಂಡು ಗುಪ್ತರೋಗಗಳನ್ನು ಸಂಪಾದಿಸಿ, ತಾವು ನೋಯುವುದೂ ಅಲ್ಲದೆ ಮನೆಯ ಹೆಂಗಸು, ಹಾಗೂ ಮಕ್ಕಳನ್ನೂ ಹೇಗೆ ಭಯಂಕರ ರೋಗದಲ್ಲಿ ಮುಳುಗಿಸಿ, ತಾವು ಮಾತ್ರ ಹೇಗೆ ತಾತ್ಸಾರ ಭಾವದಿಂದ ಮೆರೆಯುವರೆಂಬುದು ಚಿತ್ರಿತವಾಗಿರುತ್ತದೆ.

ನಾರದ ಗರ್ವಭಂಗ

ಹೆಸರು ಕೇಳಿದ ತಕ್ಷಣವೇ ನಮಗೆ ಮೊದಲು ತೋರುವುದು, ಈ ನಾಟಕ ಶುದ್ಧ ಪೌರಾಣಿಕವಾಗಿರಬಹುದು ಎಂದು. ಆದರೆ ಇದೊಂದು ಹಾಸ್ಯ ಸಾಮಾಜಿಕ ನಾಟಕ. ೧೯೩೩ನೇ ಇಸವಿ, ನಾನಾ ಬಣ್ಣಗಳನ್ನು ಬಳಿದುಕೊಂಡು, ಕಿಂಕಾಪಿನ ಡ್ರೆಸ್ಸುಧರಿಸಿ, ಕಿರೀಟ, ಬಿಲ್ಲುಬಾಣ ಗದೆ ಕತ್ತಿಗಳನ್ನು ಝಳಪಿಸುತ್ತ, ರಂಗಮಂಟಪದಲ್ಲಿ ಮೆರೆಯುತ್ತಿದ್ದ ನಟರ ಅಟ್ಟಹಾಸ ವೈಭವಗಳ ಕಾಲ. ಪ್ರಥಮತಃ ಆರಂಭಕ್ಕೆ ೧೯೨೯ರಲ್ಲೇ 'ಕರ್ಣಾರ್ಜುನ' ನಾಟಕ ಬರೆದ ಕಾರಂತರು ಪೌರಾಣಿಕ ನಾಟಕವನ್ನು ವಿಡಂಬನೆ ಮಾಡುವ ಹೆಜ್ಜೆಯನ್ನು ಇಟ್ಟಿರಲಾರರು ಎಂಬುದಕ್ಕೆ ಅವರ ಮಾತೇ ಸಾಕ್ಷಿ: "ತಿಳಿಯದ ಭೀಮಸೇನನ ಮೀಸೆ ಎಳೆಯುವುದಕ್ಕಿಂತ ತಿಳಿದ ರಾಮಾಚಾರಿಯ ಮೀಸೆ ಎಳೆಯಬಾರದೆ...

ಎಂದು ಪೌರಾಣಿಕ ನಾಟಕವನ್ನು ಗೇಲಿಮಾಡಿದಾಗ ಅರಿಯದ ಜನ 'ಅಹುದು' ಎಂದು ತಲೆ ಹಾಕುತ್ತಾರೆ. ಇಬ್ಸನ್‌ನ ಮಾದರಿಯವರು, 'ಷಾ'ನ ಮಾದರಿಯವರು ನಮಗೆ ಬೇಕು... ನಮಗೆ ಬೇಕಾದ್ದು ಇಂದಿನ ಜೀವನ ಸಮಸ್ಯೆಯನ್ನು ಚಿತ್ರಿಸುವ ನಾಟಕಗಳು' ಎಂದು ಜನ ಘೋಷಿಸಿದರೂ ಆ ಮಾತು ಕೇವಲ ಸತ್ಯವಲ್ಲ, ಅಂಶ ಸತ್ಯ. ಎಂದೆಂದಿಗೂ ಸತ್ಯವಾಗಬಹುದಾದ ಕೆಲವು ಚಿರಸಮಸ್ಯೆಗಳಿವೆ. ಆ ಸಮಸ್ಯೆಗಳು ಸಾಹಿತ್ಯಕ್ಕೆ ವಸ್ತುವಾದಾಗ ಅವು ಚಿರಕಾವ್ಯಗಳಾಗಿವೆ. ಪೌರಾಣಿಕ ನಾಟಕಗಳು ಎಂಬಿವು ಈ ಜಾತಿಗೆ ಸೇರಿದವು"–ಶಿವರಾಮ ಕಾರಂತ. ಪ್ರಥಮ ನಾಟ್ಯ ಸಮ್ಮೇಲನಾಧ್ಯಕ್ಷ ಭಾಷಣದಲ್ಲಿ ಹೀಗೆ ನುಡಿದ ಅವರು ಯಾವ ಪೌರಾಣಿಕ ಕತೆಯನ್ನಾಗಲೀ, ಸಮಸ್ಯೆಗಳನ್ನಾಗಲೀ ಇಲ್ಲಿ ತೆಗೆದುಕೊಂಡಿಲ್ಲ. ಪರಮ ಪತಿವ್ರತೆಯಾದ ನರ್ಮದಾದೇವಿಯವರ ದರ್ಶನಕ್ಕಾಗಿ ನಾರದ ಭೂಲೋಕಕ್ಕೆ ಬರುವನು. ಶ್ರೀಮನ್ನಾರಾಯಣನ ಆಜ್ಞೆಯಂತೆ ಅವಳ ಆದರ್ಶ ಚರಿತ್ರೆಯನ್ನು ತಿಳಿದು ಹೋಗಲು ಬಂದ ನಾರದನನ್ನು ಭೂಲೋಕದ ಜನ ನೋಡಿ, ನಾಟಕದ ಕಂಪೆನಿಯಿಂದ ಓಡಿಬಂದ ಹುಚ್ಚ ನಾರದನೆಂದೇ ತಿಳಿಯುತ್ತಾರೆ. ಅವನನ್ನು ಅವಹೇಳನಕ್ಕೆ ಗುರಿಮಾಡುತ್ತಾರೆ. ನಾರದ ತಂಬೂರಿಯನ್ನು ಕಳೆದುಕೊಂಡು ಶುಭ್ರವಸ್ತ್ರಗಳಿಗೆ ಬದಲಾಗಿ ಸೂಟುಧಾರಿಯಾಗಿ ತಿರುಗಬೇಕಾದ ಪ್ರಸಂಗ ಬರುತ್ತದೆ. ಯಾರ ಆದರ್ಶ ಚರಿತ್ರೆಯನ್ನು ತಿಳಿಯಲು ಬಂದಿದ್ದನೋ ಆ ಸಾಧ್ವೀಮಣಿ ನಿರ್ಮಲದೇವಿಯೇ ಗಾನಕ್ಕೆ ಸೋತು ವ್ಯಾಮೋಹಗೊಳ್ಳುವ ಸನ್ನಿವೇಶವನ್ನು ಕಾಣುತ್ತಾನೆ. ಅವಳ ಇಷ್ಟವನ್ನು ಈಡೇರಿಸಲಾರದ ನಾರದಮುನಿ ಅವಳ ಆಗ್ರಹಕ್ಕೆ ಗುರಿಯಾಗಿ ಅವಮಾನ ಹೊಂದಿ ಬೀದಿಯಲ್ಲಿ ಓಡಿಹೋಗುವಾಗ, ನಾಟಕದ ಕಂಪೆನಿಯ ಮ್ಯಾನೇಜರ್‌ರೊಬ್ಬನ ಕೈಗೆ ಸಿಕ್ಕಿ, ನಾಟಕದಲ್ಲಿ ಭಾಗವಹಿಸಲು ಬಲವಂತವಾಗಿ ಒಪ್ಪಿ ಕರಾರು ಪತ್ರಕ್ಕೆ ಸಹಿ ಹಾಕಬೇಕಾಗುತ್ತದೆ. ಈ ನಾಟಕದ ಕಂಪೆನಿಯ ನಾರದನ ಡ್ರೆಸ್ಸು ಸಿಕ್ಕಿದ ಮೇಲೆ ತಂತಿ ಇಲ್ಲದ ತಂಬೂರಿಯಾದರೂ ಚಿಂತೆಯಿಲ್ಲವೆಂದು ನಿರ್ಧರಿಸಿ ಭೂಲೋಕವನ್ನೇ ಬಿಟ್ಟು ಓಡಿಹೋಗಬೇಕಾಗುತ್ತದೆ ನಾರದ.

ಇದು ನಾಟಕದ ಹಂದರ. ಇನ್ನು ಪಾತ್ರಗಳಲ್ಲಿ ಕೃಷ್ಣರಾವ್ ಕಲಿಯುಗದ ನಾರದ. ಇವನು ವಾಮನರಾವ್ ಹಾಗೂ ಭೋಜರಾವ್ ಇಬ್ಬರು ಗೃಹಸ್ಥರ ನಡುವೆ ಜಗಳ ತಂದು ಹಾಕಿ ತಮಾಷೆ ನೋಡುವ ವ್ಯಕ್ತಿ. ವಾಮನರಾಯ ಚಮೇಲಿ ಎಂಬ ವೇಶ್ಯೆಮನೆಗೆ ಹೋಗಿಬಂದ ಕಾರಣಕ್ಕಾಗಿ, ಅವನ ಹೆಂಡತಿ ತವರೂರಿಗೆ ನಡೆದಳೆಂದು ಊರೆಲ್ಲಾ ಹಬ್ಬಿಸಿ, ಈ ವಿಷಯವನ್ನು ಭೋಜರಾಯನೇ ತನಗೆ ಹೇಳಿದನೆಂದು ವಾಮರಾಯನ ಬಳಿ ಈ ನಾರದ ಹೇಳಿ ಕೆರಳಿಸುತ್ತಾನೆ. ಇದೇ ಕೆಲಸವನ್ನು ಭೋಜರಾಯನೇ ಮಾಡಿದನೆಂದು, ಅವನ ಹೆಂಡತಿ ತವರೂರಿಗೆ ಹೋಗಲು ಅದೇ ಕಾರಣವೆಂದು, ವಾಮನರಾಯನ ಪ್ರಚಾರವೆಂದೂ ಇವನಲ್ಲಿ ಹೇಳುವುದು, ಕೆರಳಿಸುವುದು. ಇದು ಭೂಲೋಕದ ನಾರದನ ಕಾರ್ಯ. ಆದರೆ ಅವರಿಬ್ಬರೂ ಸಂಧಿಸಿದಾಗ ತನ್ನ ಗುಟ್ಟು ಬಯಲಾಯಿತೆಂದು ತಪ್ಪಿಸಿಕೊಂಡು ಓಡುತ್ತಾನೆ ಕಲಿಯುಗದ ನಾರದ. ಆ ಸಮಯಕ್ಕೆ ನರ್ಮದೆಯ ಮನೆ ಹುಡುಕುತ್ತಾ ಬರುವ ದೇವಲೋಕದ ನಾರದನ ಪ್ರವೇಶ.

ಈ ಲೋಕದ ಮಾರ್ಪಾಟುಗಳೆಲ್ಲಾ ನಾರದನಿಗೆ ಹೊಸದು. ಅರ್ಥವಾಗುವುದಿಲ್ಲ. ನಡತೆಗಳು ವಿಚಿತ್ರವೆನ್ನಿಸುತ್ತದೆ. 'ಲೇ' ಎಂದರೆ ನಾರದನಿಗೆ ಅವಮಾನ. 'ಭೋ ಸ್ವಾಮಿನ್' ಎನ್ನಲು ಏನು ಸಂಕಟ ಎಂದುಕೊಳ್ಳುತ್ತಾನೆ. ಮಾನವರ ಜಗಳದ ಮಧ್ಯೆ ಪ್ರವೇಶಿಸಿ, 'ಮಾನವರೇ ಶಾಂತಿಃ ಶಾಂತಿಃ ಶಾಂತಿಃ' ಎಂದು ಸಮಾಧಾನ ಮಾಡುವ ಸನ್ನಿವೇಶ ಬಲು ರಮ್ಯ.

ಭೋಜ: ನಿನ್ನ ಕಲಿಯುಗದ ನಾರದನ ಕೆಲಸಕ್ಕೆ ರಾಜಿನಾಮೆ ಕೊಟ್ಟೆನೆಂದು ಬೊಗಳಿದ ಹೊರತು ಬಿಡುವುದಿಲ್ಲ.

ನಾರದ: ಹಾ! ಈ ಮನುಷ್ಯ ನನ್ನನ್ನೆಲ್ಲಿಯೋ ಕಂಡು, ನಾರದನು ಬಂದಿರಬೇಕೆಂದು ಹೇಳಿರಬಹುದೆ... ಮಾನವರೇ ಶಾಂತಿಃ ಶಾಂತಿಃ ಶಾಂತಿಃ.

ಭೋಜ: ಸುಮ್ಮನಿರಯ್ಯ ನಿನ್ನದೇನು ಗಲಭೆ? ಶಾಂತಿಃ ಶಾಂತಿಯಂತೆ. ನಿನ್ನ ಅಜ್ಜನ ಶಾಂತಿಯೋ... ಮುತ್ತಜ್ಜನದೋ... ಪಿಜ್ಜನದೋ...

ನಾರದ: ನನ್ನ ಅಜ್ಜನ ಶಾಂತಿಯೆ? ಅಂದರೆ ನನ್ನ ಪಿತನ ಪಿತನಾದ ಮಹಾವಿಷ್ಣುವಿನ ಶಾಂತಿಯಾದಂತಾಯಿತು.

ವಾಮನ: ಹೋಗಯ್ಯ... ನಿನಗೇಕೆ ತಲೆಹರಟೆ? ಈ ನಾರದನ ಗುಟ್ಟೇನುಗೊತ್ತು ನಿನಗೆ? ನೀನೇಕೆ ಬಂದೆ? ಇದೇನು ಮೊಹರಮ್ ಸಮಯವೆ?

ನಾರದ: 'ಮೊಹರಮ್' ಎಂದರೆ! ಸ್ವಾಮಿ, ನಾನು ನಾರದ. ಅವನಲ್ಲ.

ಹೀಗೆ ಭೂಲೋಕಕ್ಕೆ ಇಳಿದುಬಂದ ನಾರದ ಜನರ ದೃಷ್ಟಿಯಲ್ಲಿ ಹಗಲುವೇಷದವನಂತೆ ಕಾಣುತ್ತಾನೆ. ಅದು ಮೊಹರಮ್ ಹಬ್ಬದ ಬಣ್ಣದ ವೇಷ. "ನಾಟಕದ ಕಂಪೆನಿಯಿಂದ ತಪ್ಪಿಸಿಕೊಂಡು ಬಂದೆಯೇನು? ..... ಬೀದಿಯಮೇಲೂ ಬೇರೆ ಉಡುಗೆ ಹಾಕಬಾರದೆ ...ನಿನ್ನ ಕಾವಿಯೋ! ತಂಬೂರಿಯೋ! ತಂಬೂರಿ ಬುರುಡೆಯೋ! ತಲೆ ಬುರುಡೆಯೋ! ದೊಂಬಿದಾಸನ ಹಾಗಿದ್ದೀಯಾ" ಇದು ಭೋಜರಾಯನ ಅಪಹಾಸ್ಯ ಮಾತು. ಅವನ ಸಂಗೀತಕ್ಕೆ ಕೊಟ್ಟ ಬಳುವಳಿಯೆಂದರೆ ಕೋಗಿಲೆ ಮರಿ. "ಪ್ರಾಯಶಃ ಇದು ನಾಟಕ ಕಂಪೆನಿಯ ಪ್ರಾಣಿಯೇ ಇರಬೇಕು" ಎಂಬ ಶ್ಲಾಘನೆಯ ಮಾತು. ಕೊನೆಗೆ ಕಂಪೆನಿಯವರು ಸಂಬಳ ಕೊಡದೆ ಹುಚ್ಚು ಹಿಡಿದು ಹೀಗೆ ಬಂದವನೇ ಸರಿ ಎಂಬುದೇ ಅವರ ಅಂತಿಮ ತೀರ್ಮಾನ. ಅವನಿಗೆ ದುಡ್ಡು ಕೊಟ್ಟು "ಇದೋ, ಇನ್ನೊಂದಾಣೆ ಕಾಸು. ಬಿಸಿ ಬಿಸಿ ಅಂಬೋಡೆ ತೆಗೆದುಕೋ" ಎನ್ನುವಾಗಲಂತೂ ನಾರದನು ಸಿಕ್ಕಿದ ಪೇಚನ್ನು ನೋಡಿ ನಿಜಕ್ಕೂ ನಗು ಬಾರದೇ ಇರದು.

ಶಿವರಾಮ ಕಾರಂತರು, ಹಳೆಯ ಸಂಪ್ರದಾಯವನ್ನು ಮೀರಿ,ಹೊಸಹೆಜ್ಜೆಯಿಟ್ಟು ನವನಾಗರಿಕತೆಯಲ್ಲಿ ಬಿದ್ದಿರುವ ಜನತೆಯ ರೀತಿ ನೀತಿಗಳನ್ನು ಹೊರತರಲು ನಾರದನನ್ನು ಈ ಒದ್ದಾಟಕ್ಕೆ ಸಿಕ್ಕಿಸುತ್ತಾರೋ ಏನೋ ಎನ್ನಿಸುತ್ತದೆ. ಹಳೇ ಸಂಪ್ರದಾಯದ ಪ್ರತೀಕ ದೇವಮುನಿ ನಾರದ. ಕಂಪೆನಿ ನಾಟಕದ ತಳಹದಿಯೇ ಕಿತ್ತುಹೋಗಿ, ಮೇಲ್ಭಾವಣಿ ಮಾತ್ರ ತೇಲಾಡುತ್ತಿದ್ದು ಜನತೆಯ ದೃಷ್ಟಿಯೂ ಭೀಮನ ಮೀಸೆಯನ್ನು ಮರೆತು ರಾಮಾಚಾರಿಯ ಮೀಸೆಯನ್ನು ಕಾಣುವ, ಎಳೆಯುವ ಕಡೆ ಹೋಗುತ್ತಿದೆ ಎಂಬುದನ್ನು ತೋರಿಸುವ ಪ್ರಯತ್ನವೂ ಇದರಲ್ಲಿ ಇರಬಹುದು ಎನ್ನಿಸುತ್ತದೆ. ನಾರದನು ಹಾಡುವ ಭಕ್ತಿಗೀತೆ, ವಿಷ್ಣು ಧ್ಯಾನಗೀತೆ ಈ ಜನಕ್ಕೆ ಹಿಡಿಸುವುದಿಲ್ಲ. "ಶ್ರೀ ಹರಿಗೆ ಪ್ರಿಯವಾದ ಹಾಡನ್ನು ಹಾಡಲೇ" ಎಂಬುದು ನಾರದನ ಆಕಾಂಕ್ಷೆಯಾದರೆ "ಅದು ಬೇಡವಯ್ಯಾ ಮೌಲಾ ಬೋಲಾ ಹಾಡು, ನನಾನಾ ಮುಜೆ ಮೇರೆ.... ಇದು ಬರುವುದಿಲ್ಲವೇನಯ್ಯಾ" ಎನ್ನುತ್ತಾನೆ ಸಾಬ್‌ಜಾನ್. ಅದು ಅವನ ಅಭಿರುಚಿ. "ಹಳೇ ಹಾಡಿಗೆ ಒಂದಾಣೆ ಮಾತ್ರ ಬೆಲೆ. ಆದರೆ ಈ ಹೊಸ ಹಾಡಿಗೆ ಒಂದು ರೂಪಾಯಿ ಬೆಲೆ"—ಇದು ಅವನು ಬೆಲೆ ಕಟ್ಟುವ ವೈಖರಿ. ಇವನ ಈ ಭಕ್ತಿ ಪರವಾದ ಹಾಡು, ಹಳೆಯ ನಾಟಕದ ಧಾಟಿಯ ಮಾತು, ಸಂಭಾಷಣೆಯಿಂದಾಗಿ, ಖಂಡಿತವಾಗಿಯೂ ತಲೆಮಾತ್ರ ಸರಿಯಿಲ್ಲವೆಂದೇ ಜನತಿಳಿಯುತ್ತಾರೆ. ನರ್ಮದೆಯನ್ನು ನಾರದ ಮಹರ್ಷಿ 'ನರ್ಮದಾತಾಯಿ' ಎಂದು ಕರೆಯುವುದು, ಅವಳ ಗಂಡನಿಗೆ ಹಿಡಿಸುವುದಿಲ್ಲ. ಅವಳು ತಾಯಿಯಲ್ಲ; ಬಾಯಿ ಎಂದು ತಿದ್ದುತ್ತಾನೆ. 'ಭೋ ಸ್ವಾಮಿನ್' ಬದಲು 'ಮಿಸ್ಟರ್ ನಾರದ್' ಎನ್ನುತ್ತಾನೆ. ಕೊನೆಗೆ ಪವಿತ್ರವಾದ, ನಾದಬ್ರಹ್ಮವೆಂದೇ ತಿಳಿದ 'ತಂಬೂರಿ'ಗೆ ಬದಲು ಭೂಲೋಕದ 'ಹಾರ್ಮೋನಿಯಂ'ಯನ್ನು ಅವನಿಗೆ ಹಿಡಿಸುತ್ತಾನೆ. ಪಂಚೆ, ವಸ್ತ್ರಗಳ ಬದಲಾಗಿ ಕೋಟು, ಷರಾಯಿ ಧರಿಸುವಂತೆ ಮಾಡುತ್ತಾನೆ. ಹೀಗೆ ಕಾಲಕ್ರಮೇಣ ಸಮಾಜದಲ್ಲಿ ಆಗುತ್ತಿದ್ದ ಮನೋಬದಲಾವಣೆಯ ಹಿನ್ನೆಲೆಯಲ್ಲಿ ಈ ನಾಟಕ ಸೃಷ್ಟಿಯಾಗಿರಬಹುದೆ ಎಂಬ ಯೋಚನೆ ಬರುತ್ತದೆ. ಇದು ಆಧುನಿಕ ಸಂಪ್ರದಾಯಕ್ಕೆ ಮರುಳಾಗಿ, ಪೌರಾಣಿಕ ಹಾಗೂ ಹಳೆಯ ಸಂಪ್ರದಾಯವನ್ನು ಬಿಟ್ಟು ವಿಡಂಬನೆಯೂ ಇರಬಹುದು ಎನ್ನಿಸುತ್ತದೆ. "ನಾರದ, ಇದು ಕಲಿಯುಗ, ನಿಮ್ಮ ಕೆಲಸವಾಗಬೇಕಾದರೆ ನೀವು ಇಲ್ಲಿಯ ಜನರಿಗೆ ತಕ್ಕಂತೆ ಇರಬೇಕು. ಅಲ್ಲದೆ ನಿಮ್ಮ ಈ ಕಾವಿ, ತಂಬೂರಿಗಳನ್ನು ಕಂಡರೆ ಭಿಕ್ಷೆ ಎತ್ತಲುಬಂದ ತಿರುಕನೆಂದು ತಿಳಿದಾರು" ಎಂಬ ಮಾತಿನಿಂದಾಗಲಿ, "ಕಾಲಕ್ಕೆ ಸರಿಯಾಗಿ ವೇಷ ಭೂಷಣಗಳನ್ನು ಮಾಡಿಕೊಳ್ಳಿರಿ. ಆ ತಂಬೂರಿಯು ಬೇಡ. ಇಲ್ಲಿ ಕೊಡಿರಿ." ಎಂಬ ಮಾತಿನಿಂದಾಗಲಿ ಇದು ಸ್ಪಷ್ಟ. ದೇವಲೋಕದಲ್ಲಿ 'ದೇವಿ' ಎಂದು ಸಂಭೋಧಿಸುತ್ತಿದ್ದ ನಾರದನಿಗೆ ಇಲ್ಲಿ 'ಮಿಸೆಸ್' ಎಂಬ ಹೊಸ ಪದವನ್ನು ಕಲಿಯುವಂತಾಗುತ್ತದೆ. 'ಮಿಸೆಸ್'ಗೂ 'ಮಿಸ್'ಗೂ ಇರುವ ಅರ್ಥ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತಾನೆ. ವಿಷಯ ವಾಸನೆಯುಳ್ಳ ಹಿಂದೂಸ್ಥಾನಿ 'ಗಜಲ'ನ್ನು ಚಮೇಲಿಯಿಂದ ಕೇಳಿದ ನಾರದನಿಗೆ ಇದೆಂತಹ ಹಾಡು ಎನ್ನಿಸುತ್ತದೆ. ಯಾರ ಪಾತಿವ್ರತ್ಯದ ಪರೀಕ್ಷೆಗೆ ಬಂದಿದ್ದನೋ, ಆ ನರ್ಮದಾ ದೇವಿಯೇ ತನಗೆ ಒಲಿದು ಬರುವುದನ್ನು ಕಾಣುತ್ತಾನೆ. ಅವಳ ಮುಂದೆ ಕುಳಿತು ಹಾರ್ಮೋನಿಯಂ ಶ್ರುತಿಯಲ್ಲಿ ಭಕ್ತಿಪರವಾದ ಹಾಡೊಂದನ್ನು ಹಾಡಬೇಕಾದಾಗ, ತಂಬೂರಿ ಇಲ್ಲದೆ ಹಾಡುವ ಅಭ್ಯಾಸ ಅವನಿಗೆ ಇರುವುದಿಲ್ಲ. ಆದರೂ ನರ್ಮದಾದೇವಿಯೇ ಅವನಿಗೆ ಅಭ್ಯಾಸ ಮಾಡಿಸುತ್ತಾಳೆ. "ಇಡೀ ದಿನ ದೇವರ ಭಜನೆಯನ್ನು ಯಾರು ಕೇಳುತ್ತಿರಬೇಕು" ಎಂದು ನಾರದನಿಗೆ ಒಂದು 'ಗಜಲು' ಹಾಡನ್ನು ಕಲಿಸಬಾರದೆ ಎನ್ನುವ ಅಭಿಪ್ರಾಯ ಚಮೇಲಿಯದು.

ಇದೊಂದು ದೃಷ್ಟಿಯಾದರೆ ನಾಟಕಕಾರರು ಮತ್ತೊಂದು ದೃಷ್ಟಿಯನ್ನು ಸೆಳೆಯುತ್ತಾರೆ. ಅದೇ, ಕಲಿಯುಗದಲ್ಲಿ ಪಾತಿವ್ರತ್ಯ. ವೈಕುಂಠದವರೆಗೂ ಸಾಧ್ವೀಮಣಿ, ಪತಿವ್ರತೆ ಎಂದು ಹೆಸರನ್ನು ಪ್ರಸರಿಸಿದ್ದ ನರ್ಮದಾ ತನ್ನ ಆತ್ಮ ಪರೀಕ್ಷೆಗಾಗಿ ಬಂದ ನಾರದನ ಗಾನ, ಕಂಠ, ರೂಪಗಳಿಗೆ ಸೋತು, ಗಂಡನಿಲ್ಲದ ವೇಳೆಯಲ್ಲಿ "ನಾರದರೇ ಸತ್ಯ ಹೇಳಲೆ ನಿಮ್ಮನ್ನು ಕಂಡು ನಾನು ಮೋಹಿತಳಾಗಿರುವೆನು" ಎಂದು ಅವನ ಕೈಹಿಡಿದು ಬಲಾತ್ಕಾರಿಸುವ ದೃಶ್ಯ ಬಲು ಚೆನ್ನಾಗಿದೆ. ನಾರದನ ಶಾಪಕ್ಕೆ ಭೂಲೋಕದ ಸ್ತ್ರೀಯರು ಹೆದರುವುದಿಲ್ಲ. 'ಹೆಂಗಸನ್ನು ಶಪಿಸುವೆಯಾ' ಎಂಬ ತಿರುಗುಬಾಣವನ್ನು ಎಸೆಯುತ್ತಾಳೆ ನರ್ಮದಾ ಸಾಧ್ವಿ. ಮೇಲೆ ಬಿದ್ದುಬಂದ ಹೆಂಗಸಿನ ಇಚ್ಛೆಯನ್ನು ಪೂರೈಸದಿದ್ದರೆ ಅವನು ಕೆಡುವುದು ಖಂಡಿತವೆಂದೇ ಬೆದರಿಕೆ ಹಾಕುತ್ತಾಳೆ. ಯಾವುದಕ್ಕೂ ಮಣಿಯದ ನಾರದನ ಬಾಯಿಂದ 'ತಾಯಿ ತಾಯಿ' ಎಂಬ ಶಬ್ದವನ್ನು ಕೇಳಿದಾಗಲಂತೂ ನರ್ಮದೆಯ ಕಿಚ್ಚು ಅತಿಯಾಗುತ್ತದೆ. ಕೊನೆಗೆ 'ಥೂ ಪಾಪಿ ಒಬ್ಬಂಟಿಗಳೇ ಆದ ಅಬಲೆಯ ಮೇಲೆ ಕೈಮಾಡುವೆಯಾ? ನಾರದ ದೂರ ಸರಿ ಕೈಬಿಡು' ಎಂದು ಕೂಗಿ ಅಬ್ಬರಿಸಿ ಓಡಿ ಬಂದ ಗಂಡನೊಡನೆ "ನನ್ನ ಪಾತಿವ್ರತ್ಯವು ಕರಗಿ ನೀರಾಗುತ್ತಿತ್ತು" ಎಂದು ಹೇಳಿ ಗೋಳಾಡುತ್ತಾಳೆ. "ಹರಿಹರಿ ಎಂಥ ಅವಸ್ಥೆ ಇದು" ಎಂದು ಕನಲುತ್ತಾ ಕಂಬಿಕೀಳಬೇಕಾಗುತ್ತದೆ ನಾರದ. ಇಲ್ಲಿಗೆ ನಾಟಕದ ಎರಡು ಅಂಕಗಳು ಮುಗಿಯುತ್ತವೆ.

(ಇಲ್ಲಿ, ಊರ್ವಶಿ–ಅರ್ಜುನರ ಪ್ರಸಂಗ ನೆನಪಿಗೆ ಬರುವುದು ಸಹಜ: ಅದು ದೇವಲೋಕ; ಮಾನವ ಹಾಗೂ ಅಪ್ಸರ ಪಾತ್ರಗಳು, ಇಲ್ಲಿ ಭೂಲೋಕ; ದೇವ ಹಾಗೂ ಮಾನವರ ಪ್ರಸಂಗ ಅಷ್ಟೆ.)

ನರ್ಮದೆಯ ಚರಿತ್ರೆಯನ್ನು ಅರಿತುಕೊಂಡು ನಾರದನಿಗೆ ಯಾವ ಹೆಂಗಸನ್ನು ಕಂಡರೂ ಅನುಮಾನವೇ ಹುಟ್ಟುತ್ತದೆ. ಹೀಗೆ ಓಡಿಹೋಗುವಾಗ ನಾಟಕ ಮಂಡಲಿಯ ಯಜಮಾನ ಹರಿಶ್ಚಂದ್ರರಾವ್‌ನ ಕೈಗೆ ಸಿಕ್ಕಿಬೀಳುತ್ತಾನೆ. ನಾರದನ ಭೂಮಿಕೆಯನ್ನು ಮಾಡಲು ಕೀರ್ತನಕಾರರೊಬ್ಬರು ಬೇಕಾಗಿತ್ತೆಂದು ತಿಳಿಸುತ್ತಾ, ೧೦೦-೨೦೦ ರೂ. ಅಡ್ವಾನ್ಸ್ ಕೊಡಲು ಹೋಗುತ್ತಾನೆ ಯಜಮಾನ. 'ಅಡ್ವಾನ್ಸ್' ಪದ ನಾರದನಿಗೆ ಅರ್ಥವಾಗುವುದಿಲ್ಲ. ಹೇಗಾದರಾಗಲಿ ಸಾವಿರದ ಐನೂರು ರೂ. ವೆಚ್ಚಮಾಡಿ ಸಿದ್ಧಪಡಿಸಿರುವ ನಾರದನ ಡ್ರೆಸ್ಸನ್ನು ಕೊಡುವುದಾಗಿ ತಿಳಿಸಿದಾಗ ಈ ನಾರದನಿಗೆ ಸಂತೋಷವಾಗುತ್ತದೆ. ಕಾರಣ ಸಧ್ಯ ತನ್ನ ಪರಾಯಿ ಹೋದರೆ ಸಾಕೆಂಬುದು ಅವನ ತಕ್ಷಣದ ಹಂಬಲ. ಒಪ್ಪುತ್ತಾನೆ. ಕರಾರು ಪತ್ರಕ್ಕೆ ಸಹಿಹಾಕುತ್ತಾನೆ. ನಾಟಕದ ವೇಷಧಾರಿ ನಾರದನಾಗಿ ಬೀದಿಯಲ್ಲಿ ನಡೆಯುವಾಗಲೇ ಮತ್ತೊಮ್ಮೆ ಭೋಜರಾಯ, ವಾಮನರಾಯರ ಕೈಗೆ ಸಿಕ್ಕಿ, ಅಲ್ಲಿಂದ ಹೇಗೋ ಪರಾರಿಯಾಗುತ್ತಾನೆ ನಾರದ. ಹರಿಶ್ಚಂದ್ರನ ಕೂಗಾಟದೊಡನೆ ನಾಟಕ ಮುಗಿಯುತ್ತದೆ. "ನಿನ್ನ ಮೇಲೆ ದಾವ ಮಾಡಿ, ನಿನ್ನಿಂದ ನಷ್ಟ ವಸೂಲು ಮಾಡದಿದ್ದರೆ ನಾನು ನಾಟಕ ಕಂಪೆನಿ ಯಜಮಾನನೇ ಅಲ್ಲ.... ಲೇ ಬೇರೆ ಕಂಪೆನಿಯಲ್ಲಿ ಎಲ್ಲಾದರೂ ಪಾರ್ಟು ಮಾಡಿದಿ, ನಿನ್ನ ಗತಿ ಮೋಕ್ಷವಾಯಿತು, ತಿಳಿ"

ಈ ನಾಟಕದಲ್ಲಿ ಅವಾಸ್ತವಿಕತೆ ಕಂಡುಬಂದರೂ ಪಾತ್ರ ಪಾತ್ರಗಳ ಬಾಯಿಂದ ಬರುವ ಮಾತು–ಪ್ರತಿ ಮಾತು, ಪ್ರೇಕ್ಷಕರನ್ನು ಮತ್ತೆ ಮತ್ತೆ ಕಚಗುಳಿ ಇಡುವುದರಿಂದ ತುಸು ಹೊತ್ತು ನಾರದನ ಸ್ಥಿತಿಯನ್ನು ಕಂಡು ನಗು ಬಾರದೇ ಇರದು. ಇಷ್ಟಾದರೆ ಈ ನಾಟಕದ ಗುರಿ ಮುಟ್ಟಿದಂತೆ ಸರಿ.

[ಸಶೇಷ]

ಇಬ್ಬರು ಕನ್ನಡಿಗರಿಗೆ ರಾಷ್ಟ್ರಾಧ್ಯಕ್ಷರ ಸನ್ಮಾನ

ಈ ವರ್ಷದ ಜನವರಿಯಲ್ಲಿ ನಡೆದ ಗಣರಾಜ್ಯೋತ್ಸವ ದಿನದಂದು ಭಾರತದ ರಾಷ್ಟ್ರಾಧ್ಯಕ್ಷರು ಇಬ್ಬರು ಕನ್ನಡಿಗರಿಗೆ ಪ್ರಶಸ್ತಿಗಳನ್ನು ಇತ್ತು ಸನ್ಮಾನಿಸಿದರು.

ಇವರಲ್ಲಿ 'ಪದ್ಮಭೂಷಣ' ಪದವಿಯನ್ನು ಕರ್ಣಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳೂ, ಖ್ಯಾತಿವೆತ್ತ ಶಿಕ್ಷಣವೇತ್ತರೂ ಆದ ಡಾ. ದಾದಾಸಾಹೇಬ ಚಿಂತಾಮಣಿ ಪಾವಟೆ ಅವರಿಗೆ ಕೊಡಲಾಯಿತು.

ಇದೇ ಸಂದರ್ಭದಲ್ಲಿ ಹಳೆಯ ಮೈಸೂರಿನ ನಿವೃತ್ತ ಇಂಜಿನಿಯರಾದ ಪಟ್ಟದಕಲ್ಲು ರಾಘವೇಂದ್ರರಾಯರಿಗೆ 'ಪದ್ಮವಿಭೂಷಣ' ಪ್ರಶಸ್ತಿಯನ್ನು ಕೊಡಲಾಯಿತು. ಇವರು ಭಾರತದ ರಕ್ಷಣಾಶಾಖೆಯಲ್ಲಿ ಕೆಲಸ ಮಾಡಿ, ಈಗ ಏಷ್ಯನ್ ಅಭಿವೃದ್ಧಿ ಬ್ಯಾಂಕಿಗೆ ಭಾರತದ ಡೈರೆಕ್ಟರಾಗಿ ನೇಮಕಗೊಂಡಿದ್ದಾರೆ.

ಹೊನ್ನಾವರದಲ್ಲಿ ಕವಿ ಸಮ್ಮೇಳನ

ಕೇಂದ್ರ ವಾರ್ತಾ ಇಲಾಖೆಯ ಆಶ್ರಯದಲ್ಲಿ ಫೆಬ್ರುವರಿ ೫ರಂದು ಹೊನ್ನಾವರದ ಕಾಲೇಜಿನ ಆವರಣದಲ್ಲಿ ಕವಿ ಸಮ್ಮೇಳನವೊಂದನ್ನು ಏರ್ಪಡಿಸಲಾಗಿದ್ದು, ಶ್ರೀ ಪು.ತಿ.ನ. ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಸೀ. ಅವರು ತಮ್ಮ ಭಾಷಣದಲ್ಲಿ ಕವಿಗಳು ದೇಶಕ್ಕೆ ಚೇತನ-ಸ್ಫೂರ್ತಿಯನ್ನು ಸೂಚಿಸುವರೆಂದೂ, ಅವರ ಒಂದು ಹಾಡಿನಿಂದ ಬದುಕಿನ ನಿರಾಸೆ-ದುಃಖಗಳು ತೊಡೆದುಹೋಗುವುದೆಂದೂ ತಿಳಿಸಿದರು. ಜನತೆಯನ್ನು ರಾಷ್ಟ್ರನಿರ್ಮಾಣದಲ್ಲಿ ತೊಡಗುವಂತೆ ಕರೆ ನೀಡುವುದೇ ಕವಿಯ ಕೆಲಸವೆಂದೂ, ಮಾತಿನ ಹಿಂದಿನ ಭಾವವೇ ಮಾನವತೆಯ ಭಾವವೆಂದೂ ಸಮ್ಮೇಳನದ ಉದ್ಘಾಟಕರಾದ ಕವಿ ಶ್ರೀ ಬೇಂದ್ರೆಯವರು ತಿಳಿಸಿ, ತಮ್ಮ 'ವರ್ಧಂತಿ' ಕವನವನ್ನೋದಿದರು. ಜನಪ್ರಿಯ ಕವಿ ಶ್ರೀ ಕೆ. ಎಸ್. ನ., ಪ್ರೊ. ಬಿ. ಎಚ್. ಶ್ರೀಧರ, ಅಕಬರ ಆಲಿ, ಎಸ್. ಆರ್. ಯಕ್ಕುಂಡಿ, ಜಿ. ಆರ್. ಪಾಂಡೇಶ್ವರ, ಗೌರೀಶ ಕಾಯ್ಕಿಣಿ- ಇವರು ಕವನಗಳನ್ನೋದಿದರು. ಪು. ತಿ. ನ. ಅವರು ಅಧ್ಯಕ್ಷ ಭಾಷಣಮಾಡಿ 'ಧೃತಿ ಮತ್ತು ಮತಿ' ಎಂಬ ಕವನವನ್ನು ಓದಿದರು. ಕೇಂದ್ರವಾರ್ತಾ ಇಲಾಖೆಯ ಅಧಿಕಾರಿಗಳಾದ ಶ್ರೀ ವೆಂಕೋಬರಾಯರು ಭಾಗವಹಿಸಿದ್ದವರೆಲ್ಲರನ್ನೂ ಆಭಾರ ಮನ್ನಿಸಿದರು.

ಪು. ತಿ. ನ. ಅವರಿಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ

ಕರ್ನಾಟಕದ ಹಿರಿಯ ಕವಿಗಳೂ, ಹಲವಾರು ಗೀತ ರೂಪಕಗಳ ಕರ್ತೃಗಳೂ, ಪ್ರಬಂಧಕಾರರೂ ಆದ ಶ್ರೀ ಪು. ತಿ. ನರಸಿಂಹಾಚಾರ್ಯರಿಗೆ ಪ್ರಸ್ತುತ ವರ್ಷದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿರುವುದು ಕನ್ನಡಿಗರೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ. ಶ್ರೀಯುತರ 'ಹಂಸ ದಮಯಂತಿ ಮತ್ತು ಇತರ ಗೀತರೂಪಕಗಳು' ಗ್ರಂಥಕ್ಕೆ ಬಹುಮಾನ ದೊರತಿದೆ. ಶ್ರೀ ಪು.ತಿ. ನ.ಅವರು ಕನ್ನಡದಲ್ಲಿ ಗೀತರೂಪಕಗಳ ಪ್ರಯೋಗ ನಡೆಸಿ, ಸಫಲತೆ ಗಳಿಸಿರುವರಲ್ಲದೆ, ಅದನ್ನು ಜನಪ್ರಿಯಗೊಳಿಸಲು ಬಹುವಾಗಿ ಶ್ರಮಿಸಿದ್ದಾರೆ. ಇದು ಕನ್ನಡ ನಾಡಿಗೆ, ಕನ್ನಡ ಸಾಹಿತ್ಯಕ್ಕೆ ಸಂದ ಗೌರವವಾಗಿದೆ.

ಆಚಾರ್ಯ ಡಿ.ಎಲ್.ಎನ್. ಅವರಿಗೆ ಉಪಾಯನ ಗ್ರಂಥ ಸಮರ್ಪಣೆ

ಕನ್ನಡ ಸಾಹಿತ್ಯಕ್ಕೆ ಹಲವಾರು ದಶಕಗಳಿಂದ ಬಹು ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿರುವ, ಕನ್ನಡದ ಸಂಚಾರಿ ಅರ್ಥಕೋಶವೆಂದು ಸುವಿಖ್ಯಾತರಾಗಿರುವ ಕನ್ನಡದ ಹಿರಿಯ ವಿದ್ವಾಂಸರಾದ ಆಚಾರ್ಯ ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ಯರನ್ನು ಅವರ ಮಿತ್ರರು, ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ಫೆಬ್ರುವರಿ ೧೨ರಂದು ಮೈಸೂರಿನಲ್ಲಿ ಸಂಭಾವನಾ ಗ್ರಂಥವನ್ನು ಅರ್ಪಿಸುವುದರ ಮೂಲಕ ತಮ್ಮ ಪ್ರೀತಿ, ಗೌರವ, ಕೃತಜ್ಞತೆಗಳನ್ನು ಅರ್ಪಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನ ಶತಮಾನೋತ್ಸವ ಸಭಾಭವನದಲ್ಲಿ ಏರ್ಪಡಿಸಲಾಗಿದ್ದ ಈ ಸನ್ಮಾನ ಸಮಾರಂಭದಲ್ಲಿ ಆಚಾರ್ಯರಿಗೆ ಶಾಲು ಹೊದೆಸಿ, 'ಉಪಾಯನ' ಎಂಬ ಸಂಭಾವನಾ ಗ್ರಂಥವನ್ನು ಸಮರ್ಪಿಸಿದರು. ಆಚಾರ್ಯ ಡಿ. ಎಲ್. ಎನ್. ಅವರ ನಿಷ್ಕೃಷ್ಟವಾದ ಪಾಂಡಿತ್ಯ ಹಾಗೂ ಅವರ ಸದ್ಗುಣಗಳ ಪರಿಚಯವನ್ನು ಸರ್ವ ಶ್ರೀ ಶಿವಮೂರ್ತಿಶಾಸ್ತ್ರಿ, ದೇ. ಜ. ಗೌ., ಕೆ. ವೆಂಕಟರಾಮಪ್ಪ ಮರಿಯಪ್ಪಭಟ್, ಸ. ಸ. ಮಾಳವಾಡ ಇವರು ಮಾಡಿಕೊಟ್ಟರು. ಈ ಸಮಾ

ರಂಭದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಶ್ರೀಮಾಲಿಯವರು ವಹಿಸಿದ್ದರು.

' ಕನ್ನಡ ಭಾರತೀ 'ಯ ವಿಶಿಷ್ಟ ಕೊಡುಗೆ " ಷೇಕ್ಸ್‌ಪಿಯರನಿಗೆ ನಮಸ್ಕಾರ."

ಕನ್ನಡನಾಡು, ನುಡಿ, ಸಾಹಿತ್ಯಗಳಿಗೆ ಬಹುಮುಖ ಸೇವೆ ಸಲ್ಲಿಸುತ್ತಿರುವ ಹಲವಾರು ಸಂಸ್ಥೆಗಳಲ್ಲಿ, ದೆಹಲಿಯಲ್ಲಿ ಸ್ಥಾಪಿತವಾಗಿರುವ ಕನ್ನಡ ಭಾರತಿಯೂ ಒಂದಾಗಿದೆ. ನಮ್ಮ ರಾಷ್ಟ್ರದ ರಾಜಧಾನಿಯಾದ ನವದೆಹಲಿಯಲ್ಲಿ ಕನ್ನಡಕ್ಕಾಗಿ ಶ್ರಮಿಸುತ್ತಿರುವ ಈ ಸಂಸ್ಥೆ ಇತ್ತೀಚೆಗೆ ಷೇಕ್ಸ್‌ಪಿಯರ್‌ನ ನಾಲ್ಕನೆಯ ಶತಮಾನೋತ್ಸವದ ಸವಿನೆನಪಿನಲ್ಲಿ, ಆ ಮಹಾಕವಿಗೆ ಗೌರವವನ್ನರ್ಪಿಸಲು ಉದ್ಗ್ರಂಥವೊಂದನ್ನು ಪ್ರಕಟಿಸಿದೆ. ಕಳೆದ ವರ್ಷ ಇದೇ ಸಂಸ್ಥೆಯವರು ಡಾ. ಡಿ. ವಿ. ಜಿ ಯವರ ಷೇಕ್ಸ್‌ಪಿಯರ್ ನಾಟಕಾನುವಾದ ' ಮ್ಯಾಕ್‌ಬೆತ್ ' ಅಭಿನಯಿಸಿದ್ದರು. ಈ ವರ್ಷ ' ಷೇಕ್ಸ್‌ಪಿಯರಿಗೆ ನಮಸ್ಕಾರ ' ಗ್ರಂಥವನ್ನು ಪ್ರಕಟಿಸಿದ್ದಾರೆ. ಕನ್ನಡದ ಹಿರಿಯ ಸಾಹಿತಿಗಳ ಲೇಖನಗಳೊಂದಿಗೆ, ಷೇಕ್ಸ್‌ಪಿಯರನ ಬಗ್ಗೆ ಸಮಗ್ರ ದೃಷ್ಟಿಯನ್ನು ಪರಿಚಯ ಮಾಡಿಕೊಡುವ ಈ ಗ್ರಂಥವನ್ನು ಶ್ರೀ ಎಸ್. ಬಾಲೂರಾವ್ ಸಂಪಾದಿಸಿದ್ದಾರೆ. ಇದರ ಬೆಲೆ ೨೫ ರೂ. ಇದನ್ನು ಪ್ರಕಟಿಸಿದ ' ಕನ್ನಡ ಭಾರತೀ ' ಯವರು ಈ ಮಹೋದ್ಯಮಕ್ಕಾಗಿ ಅಭಿನಂದನಾರ್ಹರು.

ಶ್ರೀಮಾಲಿ ಅವರ ಕನ್ನಡ ಸೇವೆ

ಮೈಸೂರಿನ ಉಪಕುಲಪತಿಗಳಾದ ಡಾ. ಶ್ರೀಮಾಲಿ ಅವರು ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಸಲುವಾಗಿ ವಿಶೇಷವಾದ ಆಸ್ಥೆ ತೆಗೆದುಕೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅವರ ನೇತೃತ್ವದಲ್ಲಿ ಸುಮಾರು ಐದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ರೂಪುಗೊಳ್ಳುತ್ತಿದೆ. ಶ್ರೀಯುತರು ಮಾನಸಸಂಗೋತ್ರಿಯ ಜಯಲಕ್ಷ್ಮಿ ವಿಲಾಸ ಭವನವನ್ನು ಕನ್ನಡದ ವಿಭಾಗಕ್ಕೆ ಬಿಟ್ಟುಕೊಟ್ಟಿದ್ದಾರೆ.

ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಮಟ್ಟದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೆಲವೊಂದು ಕಲಾವಿಭಾಗಗಳಲ್ಲಿ ಇಂಗ್ಲಿಷ್ ಭಾಷೆಯ ಜತೆಗೆ ಕನ್ನಡದಲ್ಲೂ ಉತ್ತರ ಪತ್ರಿಕೆಗಳನ್ನು ಬರೆಯಲು ಅವಕಾಶ ಕಲ್ಪಿಸಿಕೊಟ್ಟಿರುವರೆಂದು ತಿಳಿದು ಬಂದಿದೆ. ಅವರ ಈ ಪ್ರಯತ್ನ ಯಶಸ್ವಿಯಾಗಲೆಂದೂ, ಇತರ ಎರಡು ವಿಶ್ವವಿದ್ಯಾನಿಲಯಗಳಲ್ಲೂ ಈ ಪ್ರಯೋಗಕ್ಕೆ ಯೋಗ್ಯ ಪ್ರೋತ್ಸಾಹ ದೊರಕಲೆಂದೂ ಹಾರೈಸುತ್ತೇವೆ.

ಶ್ರೀ ಶೇಷಾದ್ರಿ ಗವಾಯಿ ಅವರಿಗೆ ಅಭಿನಂದನೆ

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀ ಅರವಿಂದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರಾದ, ಶ್ರೀ ಸಿದ್ಧಾರೂಢ ಉಭಯಗಾನ ವಿದ್ಯಾಮಂದಿರದ ಸಂಚಾಲಕರೂ ಆದ ಶ್ರೀ ಶೇಷಾದ್ರಿಗವಾಯಿ ಅವರಿಗೆ ಕಳೆದ ತಿಂಗಳು ಅವರ ಶಿಷ್ಯರೂ ಅಭಿಮಾನಿಗಳೂ ಸೇರಿ ಸನ್ಮಾನಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪದ್ಮಶ್ರೀ ವಿ. ಕೆ. ಗೋಕಾಕ ಅವರು ಅಧ್ಯಕ್ಷತೆ ವಹಿಸಿದ್ದರು. ಗವಾಯಿಗಳಿಗೆ ' ಸಂಗೀತ ಕಲಾರತ್ನ ' ಎಂಬ ಪ್ರಶಸ್ತಿಯೊಡನೆ ಅಭಿನಂದನಾ ಪತ್ರವನ್ನು ಒಪ್ಪಿಸಲಾಯಿತು.

ಸುಬೋಧ ಸಾಹಿತ್ಯದ ಪುನರ್ಮುದ್ರಣ ಯೋಜನೆ

ಕನ್ನಡ ನಾಡಿನ ಯುವಜನಾಂಗದ ಶೀಲ ಸಂಸ್ಕೃತಿಗಳ ಬೆಳವಣಿಗೆಯನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ೧೯೧೫ರಲ್ಲಿ ಸಂಸ್ಥಾಪಿತವಾದ ' ಸುಬೋಧ ಕುಸುಮಾಂಜಲಿ ಗ್ರಂಥಮಾಲೆ 'ಯು ರಾಷ್ಟ್ರಜೀವನದ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಪರಿಶ್ರಮವಹಿಸಿ ತಮ್ಮ ಜೀವಿತ ಪ್ರತಿಭೆಯನ್ನು ಬೆಳಗಿಸಿದ ಮಹಾಪುರುಷರ, ಮಹಿಳೆಯರ ಅನುಕರಣೀಯ ಆದರ್ಶ ಜೀವನ ಚರಿತ್ರೆಗಳನ್ನು – ನೂರ ನಲವತ್ತಕ್ಕೂ ಮಿಕ್ಕು ಪ್ರಕಟಿಸಿರುವುದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಆದರೆ ಇಂದು ಗ್ರಂಥಮಾಲೆಯ ಪ್ರತಿಗಳು ದುರ್ಲಭವಾಗಿವೆ. ಸುಲಭ ಸರಳ ಸರ್ವಗ್ರಾಹ್ಯವಾದ, ತಿಳಿಗನ್ನಡದಲ್ಲಿ ಬರೆದ, ಆ ಕೈಹೊತ್ತಿಗೆಗಳನ್ನು ಪುನರ್ಮುದ್ರಣ ಮಾಡುವ ಸದುದ್ದೇಶದಿಂದ ಸುಬೋಧ ಪ್ರಕಟನಾಲಯದವರು ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಈ ಯೋಜನೆ ಯಶಸ್ವಿಯಾಗಿ ಕನ್ನಡ ಜನತೆಗೆ ಅತ್ಯವಶ್ಯವಾಗಿ ಬೇಕಾಗಿರುವ ಸುಬೋಧ ಕುಸುಮಾಂಜಲಿ ಗ್ರಂಥಗಳು ಪುನರ್ಮುದ್ರಣವಾಗಿ ದೊರಕಲೆಂದು ಹಾರೈಸುತ್ತೇವೆ.

ವಿಮರ್ಶನರಂಗ

ಶ್ರೀಮದಾಂಡಾಳ್ ದೇವೀ ಮಹಿಮಾದರ್ಶ– ಆಕೃತಿ ಕ್ರೌನ್ ೧/೮, ಪುಟಗಳು ೧೦×೧೬, ಬೆಲೆ ರೂ. ೦-೫೦, ಲೇಖಕರು ಮತ್ತು ಪ್ರಕಾಶಕರು—ಬಿ. ಎಸ್. ಎಸ್. ಕೌಶಿಕ್, ಶ್ರೀ ವಾಲ್ಮೀಕಿ ಗಮಕಪಾಠಶಾಲೆ, ಮೈಸೂರು.

ಇದೊಂದು ಭಕ್ತಿಯ ಅಥವಾ ಭಕ್ತೆಯ ಕಥಾವಸ್ತುವುಳ್ಳ ಲಘುಕಾವ್ಯ. ದಕ್ಷಿಣ ಭಾರತದ ವಿಲ್ಲಿಪುತ್ತೂರಿನಲ್ಲಿದ್ದ ವಿಷ್ಣುಚಿತ್ತರೆಂಬ ಹರಿಭಕ್ತರಿಗೆ ದೊರೆತ ಹೆಣ್ಣುಮಗು 'ಗೋದೆ'. ಆಕೆಯ ಭಕ್ತಿಗೊಲಿದ ಶ್ರೀಹರಿ ಆಕೆ ಮುಡಿದ ಹೂಗಳನ್ನೇ ಪ್ರೀತಿಯಿಂದ ಸ್ವೀಕರಿಸುತ್ತಿದ್ದನಂತೆ. ಶ್ರೀರಂಗನಾಥನನ್ನೆ ಗಂಡನನ್ನಾಗಿ ತಿಳಿದು ಭಕ್ತಿ ಸಲ್ಲಿಸಿದವಳು ಆಕೆ. ಜನರು ಆಕೆಯನ್ನು "ಆಂಡಾಳ್ ದೇವಿ" ಎಂದು ಕರೆದರಂತೆ. ಆಕೆ ಬರೆದ ಶ್ಲೋಕಗಳು 'ತಿರುಪ್ಪಾವೈ' ಎಂದು ಪ್ರಸಿದ್ಧವಾದವು. ಭಕ್ತಿಯಲ್ಲಿ ಶಬರಿಗೆ, ಮೀರೆಗೆ, ಮಹಾದೇವಿಯಕ್ಕನಿಗೆ ಬಹಳವಾಗಿ ಹೋಲುವ ಆಕೆಯ ಕಥನವನ್ನು ಇಲ್ಲಿ ೫೫ ಭಾಮಿನಿ ಷಟ್ಪದಿಗಳಲ್ಲಿ ಕೊಡಲಾಗಿದೆ. ಪದ್ಯಭಾಗದ ೧೬ ಪುಟಗಳಲ್ಲಿ ೮ನೇ ಪುಟದ ನಂತರದ ಪುಟಗಳು ಯದ್ವಾತದ್ವವಾಗಿ ಪುಸ್ತಕವನ್ನು ಕೆಡಿಸಿದ ಉತ್ತರದಾಯಿತ್ವವು ಮುದ್ರಕರಿಗೆ ಸಲ್ಲುವಂತಿದೆ. ಲಕ್ಷ್ಮೀಶಗೊಂದಿಸು, ಒಟಪತ್ರ, ರತಿಪತೀಪಿತ-ಇಂತಹ ಪದದೋಷಗಳನ್ನು ನಿವಾರಿಸಬೇಕಿತ್ತು. ಕೆಲವು ಪದ್ಯಗಳಲ್ಲಿ ಒಂದೊಂದು ಪಾದವು ಮುಳ್ಳುಚುಚ್ಚಿ ಕುಂಟುವಂತೆ ಆದುದೂ ಇದೆ. ನಡೆವಾಗ ಎಡವುದು ಸಹಜವಾಗಿರುವಂತೆ, ಈ ಅಲ್ಪ ಕೊರತೆಗಳಿದ್ದರೂ ಭಕ್ತಿಜನ್ಯವಾದ ಉತ್ಸಾಹವು ಇರುವುದು ಪ್ರಶಂಸನೀಯ.

* * *

ಕಾಮ್ಯವ ಕರುಣಿಪ ಕಟೀಲು–ಆಕೃತಿ ಕ್ರೌನ್ ೧/೮, ಪುಟಗಳು ೬೦, ಬೆಲೆ ೦-೫೦. ಲೇಖಕರು–ಕೊಡತ್ತೂರು ಅನಂತಪದ್ಮನಾಭ ಉಡುಪ. ಪ್ರಕಾಶಕರು–ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ.

ದಕ್ಷಿಣ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿರುವ ಕಟೀಲಿನ ಪರಿಚಯಾತ್ಮಕ ಸಚಿತ್ರ ಪುಸ್ತಕವಿದು. ಸ್ಥಳಪುರಾಣ, ನಡೆದ ಮತ್ತು ನಡೆಯುತ್ತಿರುವ ವಿವಿಧ ಉತ್ಸವಗಳು–ಸೇವೆಗಳು, ವಿದ್ಯೆ-ಕಲೆ ಮುಂತಾದವುಗಳಿಗೆ ಪ್ರೋತ್ಸಾಹ ಇತ್ಯಾದಿ ವಿಷಯಗಳನ್ನೊಳಗೊಂಡಿದೆ. ಯಾತ್ರಿಕರಿಗೆ, ಭಕ್ತಿ ಶ್ರದ್ಧೆಗಳುಳ್ಳ ಕನ್ನಡಿಗರಿಗೆ ಇದೂ ಒಂದು ಉಪಯುಕ್ತವೆನಿಸಬಹುದಾದ ಪ್ರಕಟಣೆ.

* * *

ಗಯಾಕ್ಷೇತ್ರ ಮಹಾತ್ಮೆ–ಆಕೃತಿ ಕ್ರೌನ್ ೧/೮, ಪುಟಗಳು ೨೦+೧೦೪, ಬೆಲೆ ರೂ. ೧-೫೦. ಲೇಖಕರು: ಶಾಸ್ತ್ರರತ್ನ ವೇದಾಂತ ವಿಶಾರದ ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು. ಪ್ರಕಾಶಕರು: ಸಿ. ಆರ್. ವೆಂಕಟೇಶ ವಿಠ್ಠಲಾಚಾರ್ಯರು. ಆಡಿಟರ್, ನಂ. ೨೯, ಹಯವದನ ಸದನ, ೬ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮.

ಇದರಲ್ಲಿ ಔರ್ಧ್ವದೇಹಿಕಗಳಾದ ಶ್ರಾದ್ಧಾದಿಗಳ ಔಚಿತ್ಯವನ್ನು ವಿವರಿಸಿ, ಅಂತಹ ಕಾರ್ಯಗಳಿಗೆ ಅತಿ ಪುಣ್ಯಕರವೆನಿಸುವ ಗಯಾಕ್ಷೇತ್ರದ ವಿವರಣೆಯನ್ನು ಶಾಸ್ತ್ರಾಧಾರ ಸಹಿತವಾಗಿ ಕೊಟ್ಟಿದೆ. ಅನೇಕ ಶ್ರುತಿ–ಸ್ಮೃತಿ–ಇತಿಹಾಸ–ಪುರಾಣಗಳ ವಾಕ್ಯೋದಾಹರಣೆಗಳಿಂದ ಇಲ್ಲಿನ ವಿಚಾರಗಳೆಲ್ಲವೂ ಮನನೀಯವಾಗಿವೆ. ಉತ್ತರ ಭಾರತ ತೀರ್ಥಯಾತ್ರಿಕರಿಗಂತೂ ಇದು ಕೈಗನ್ನಡಿ. ಇತರರಿಗೆ ಮನಸ್ಸಂಸ್ಕಾರಕ್ಕೂ ಧರ್ಮಾಭಿಮಾನ-ರಾಷ್ಟ್ರಾಭಿಮಾನಗಳ ಜಾಗೃತಿಗೂ ಈ ಗ್ರಂಥವು ನೆರವಾಗಬಲ್ಲುದು. ಗಯೆಯ ಸ್ಥಳಪುರಾಣ, ತೀರ್ಥ ವಿಶೇಷಗಳು, ದೇವತಾ ವಿಶೇಷಗಳು, ಅಲ್ಲಿ ಆಚರಿಸುವ ಕ್ರಿಯಾವಿಶೇಷಗಳು ಇವೆಲ್ಲ ಸಾಂಗವಾಗಿ ಒಂದೇ ಕಡೆ ಇಲ್ಲಿ ದೊರೆಯುವುದರಿಂದ ಆಚಾರಶೀಲರು ತೆಗೆದಿಟ್ಟುಕೊಳ್ಳುವ ಪುಸ್ತಕ ಇದಾಗಿರುವುದರಲ್ಲಿ ಸಂಶಯವಿಲ್ಲ.

* * *

ಹೊಂಬುಜಕ್ಷೇತ್ರ ಮಹಾತ್ಮ್ಯೆ ಎಂಬ ಶ್ರೀ ಪದ್ಮಾವತೀ ಪುರಾಣ ಅಥವಾ ಜಿನದತ್ತರಾಯ ಚರಿತ ನಾಟಕಂ. ಆಕೃತಿ ಕ್ರೌನ್ ೧/೮, ಪುಟಗಳು ೧೦+೭೮. ಬೆಲೆ ರೂ. ೧-೨೫. ಲೇಖಕರು: ಯು. ವಾಸುದೇವನಾಯಕ್, ಕಡಿರುದ್ಯಾವರ, ಬೆಳ್ತಂಗಡಿ, ದ. ಕ. ಪ್ರಕಾಶಕರು: ಶ್ರೀ ಎಂ. ಡಿ. ಅಧಿಕಾರಿ, ಮೇನೇಜರ್, ವರಂಗ ಮಠ.

ಜೈನಮತ ಪ್ರಭಾವದಿಂದ ಮೆರೆವ ಹೊಂಬುಜಕ್ಷೇತ್ರದ ಇತಿಹಾಸ-ಪುರಾಣ ಕಥೆಯೇ ಈ ನಾಟಕದ ವಸ್ತು.

ವಸ್ತುಘಟನೆಗಳಲ್ಲಿ ಪದ್ಮಾವತೀದೇವಿಯ ಪ್ರತ್ಯಕ್ಷ-ಪರೋಕ್ಷ ಪಾತ್ರಗಳು ಕಾಣಿಸುತ್ತಿದ್ದು, ಆಕೆಯಿಂದಲೇ ಸದ್ಧರ್ಮದ ಕಡೆಗೆ ಪರಿಣಾಮಕಾರಿಯಾದ ಪ್ರೇರಣೆ ಕಂಡು ಬರುವುದರಿಂದ ಇದು 'ಪದ್ಮಾವತೀ ಪುರಾಣ' ಎಂಬ ನಾಮಧೇಯಕ್ಕೂ ಅರ್ಹವಾಗಿದೆ. ಇದರ ಕಥಾನಾಯಕನು ಜಿನದತ್ತನು. ಪದ್ಮಾವತೀ ದೇವಿಯ ಭಕ್ತನು. ಸಾಕರರಾಯ ಶ್ರೀಯಲಾದೇವಿಯರ ಪುತ್ರನು. ಸಾಕರರಾಯನು ಒಬ್ಬ ಭಿಲ್ಲವನ ಮಗಳನ್ನು ಕಾಮಮೋಹದಿಂದ ಸ್ವೀಕರಿಸಿ, ಆಕೆಯ ಮೋಹಕ್ಕಾಗಿ ಧರ್ಮವನ್ನು ಬಲಿಗೊಟ್ಟು ಮಾಂಸ ಸೇವನೆಗಳಿದು, ನರಮಾಂಸಾಶಿಯೂ ಆಗುವನು. ಆಕೆಯಲ್ಲಿ ಜನಿಸಿದ ಮಾರಿದತ್ತನಿಗೆ ರಾಜ್ಯವನ್ನು ಕೊಡುವುದಕ್ಕಾಗಿ ಜಿನದತ್ತನ ವಧೆಗೂ ಮನಸ್ಸು ಮಾಡುವನು. ಆದರೆ ಪದ್ಮಾವತಿಯ ಕೃಪೆಯಿಂದ ಮಾರಿದತ್ತನೇ ಹತನಾಗಿ ಜಿನದತ್ತನು ರಾಜನಾಗಿ ಮೆರೆಯುವನು. ಕಥಾವಸ್ತು ಸೊಗಸಾಗಿದೆ, ಉದ್ಬೋಧಕವಾಗಿದೆ. ಘಟನೆಗಳು ರೋಮಾಂಚಕವಿವೆ. ದೃಶ್ಯಗಳಲ್ಲಿ ಹೆಚ್ಚಿನವು ತೀರಾ ಚಿಕ್ಕವಾಗಿದ್ದು, ಕಣ್ಣಮುಂದೆ ಕಟ್ಟುವ ಚಿತ್ರವನ್ನು ಪರಿಭಾವಿಸಿ ರಸಗ್ರಹಣ ಮಾಡುವುದರೊಳಗೆ ಮರೆಯಾಗುತ್ತವೆ. ಮೊದಲು ಯಕ್ಷಗಾನವಾಗಿ ಬರೆದು, ಆಮೇಲೆ ನಾಟಕಕ್ಕೆ ಪರಿವರ್ತಿಸಿದುದೇ ಇದಕ್ಕೆ ಕಾರಣವಿರಬಹುದು. ನಾಟಕತಂತ್ರದಲ್ಲಿ ಅಷ್ಟು ಪಳಗಿದ ಕೈ ಅಲ್ಲವೆನಿಸುವಂತಿದೆ. ಈ ಪುಸ್ತಕಕ್ಕೆ ವಿದ್ಯಾವಿಭೂಷಣ, ಪಂಡಿತ ಭುಜಬಲ ಶಾಸ್ತ್ರಿಗಳು ಸುಂದರವಾದ ಮುನ್ನುಡಿ ಬರೆದು ಶೋಭೆಯನ್ನು ಉಂಟುಮಾಡಿದ್ದಾರೆ.

* * *

ಪಾರಿಭಾಷಿಕ ಶಬ್ದ ಮತ್ತು ಅನುವಾದ-ಆಕೃತಿ ಕ್ರೌನ್ ೧/೮, ಪುಟಗಳು ೬+೫೬, ಬೆಲೆ ರೂ. ೧-೫೦. ಲೇಖಕರು: ಕೆ. ಬಿ. ಮಾನಪ್ಪ, ಜನರಲ್ ಸೆಕ್ರೆಟರಿ, ಮೈಸೂರು ಹಿಂದೀ ಪ್ರಚಾರ ಪರಿಷತ್, ಬೆಂಗಳೂರು ೪.

ಇದರಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಹಿಂದೀ-ಕನ್ನಡ-ಇಂಗ್ಲಿಷ್‌ಗಳಲ್ಲಿ 'ರಾಷ್ಟ್ರಪತಿ' ಶಬ್ದದಿಂದ ಪ್ರಾರಂಭವಾದ ವಿವಿಧ ಶಾಸನ-ಅಧಿಕಾರ-ವಿಭಾಗ-ವ್ಯವಹಾರಗಳಿಗೆ ಸಂಬಂಧಿಸುವ ಶಬ್ದಗಳಿವೆ. ಎರಡನೆ ಭಾಗದಲ್ಲಿ ವರ್ಣಕ್ರಮದಲ್ಲಿ ಇಂಗ್ಲಿಷ್ ಶಬ್ದಗಳನ್ನು ಕೊಟ್ಟು ಅದಕ್ಕೆ ಕನ್ನಡ-ಹಿಂದೀ ರೂಪಗಳ ಪಾರಿಭಾಷಿಕಗಳನ್ನು ಕೊಟ್ಟಿದೆ. ಮೂರನೆ ಭಾಗವು ಅನುವಾದಕ್ಕೆ ಮೀಸಲು. ದೇಶಿಯ ಭಾಷೆಗಳಿಗೆಲ್ಲ ಒಪ್ಪಿಗೆಯಾಗುವ ಪಾರಿಭಾಷಿಕ ಶಬ್ದನಿರ್ಣಯವು ಅತಿ ಆವಶ್ಯಕ. ಆದರೆ ಅವುಗಳ ರಚನೆ ಅತಿ ಕಠಿಣ. ಎಷ್ಟೇ ಯತ್ನಿಸಿ ಸಿದ್ಧ ಮಾಡಿದರೂ ಅದು ಪರಿಷ್ಕೃತವಾಯಿತೆಂದು ಒಪ್ಪುವುದು ಕಷ್ಟ. ಈ ಕಷ್ಟಕಾರ್ಯಕ್ಕೆ ಏಕಾಂಗಿಯಾಗಿ ಮಾನ್ಯ ಲೇಖಕರು ಕೈಯಿಕ್ಕಿದ್ದಾರೆ. ಸಾಹಸವನ್ನು ಮೆಚ್ಚಬಹುದಾದರೂ ಕೆಲವನ್ನು ಹೀಗೇಕೆ? ಎಂದು ಪ್ರಶ್ನಿಸಲು ಎಡೆಯಿದೆ. ಪರಕ್ಕಿ, ಥಾನ್‌ಬೀನ್, ಥೂಟಾ, ಜೋಡನಾ, ಪಹಚಾನ, ದೌರಾ, ತೈಹಿಸಾಬ-ಇತ್ಯಾದಿಗಳಿಗೆ ಸ್ಥಾನಿಯಾಗಿ ಉತ್ತಮ ಸಂಸ್ಕೃತ ಪದಗಳ ಆಯ್ಕೆ ಚೆನ್ನಾಗುತ್ತಿತ್ತು. ಇಂಗ್ಲಿಷಿನ 'breakfast' ಎಂಬುದಕ್ಕೆ "ಮಧ್ಯಾಹ್ನ ಭೋಜನ" ಎಂಬುದೂ 'Dinner' ಎಂಬುದಕ್ಕೆ "ರಾತ್ರಿ ಭೋಜನ" ಎಂಬುದೂ ಸರಿಯೆ? ಒಬ್ಬೊಬ್ಬರಾಗಿ ಪಾರಿಭಾಷಿಕ ಶಬ್ದರಚನೆಗೆ ಕೈಯಿಕ್ಕಿದಾಗ ಹೀಗಾಗುವುದು ಅಸಹಜವಲ್ಲವೆಂದು ಈ ಪ್ರಶ್ನೆಗಳಿಗೆ ಪರಿಹಾರ ಹೇಳಬೇಕಾದೀತು. ಪಾರಿಭಾಷಿಕ ಪದ ಪ್ರಯೋಗದ ದಿಶೆಗೆ ಇದು ಮೊದಲ ಮೆಟ್ಟಿಲಾಗಬಹುದು.

* * *

ನವನವಾಂಕ ಶ್ರೀನಿವಾಸ ಲಿಪಿ ಬೋಧಿನಿ-ಆಕೃತಿ ಕ್ರೌನ್ ೧/೮, ಪುಟಗಳು ೩೦. ಬೆಲೆ-ಕಾಣಿಸಿಲ್ಲ. ಶೋಧಕರು: ಅವ್ಯಂಜಿಗುತ್ತು ಶೀನಪ್ಪ ಹೆಗ್ಗಡೆ, ಪೊಳಲಿ. ಪ್ರಕಾಶಕರು: ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ. ಜಪ್ಪು, ಮಂಗಳೂರು ೨.

ಈ ಲಿಪಿಯು ಕನ್ನಡದ ಒಂದರಿಂದ ಒಂಬತ್ತರವರೆಗಿನ ಅಂಕ ಚಿಹ್ನೆಗಳಿಂದಲೂ ಅವಕ್ಕೆ ಸೇರಿಸುವ ಗೆರೆಗಳಿಂದಲೂ ನಿರ್ಧಾರವಾಗುವ ಅಕ್ಷರ ಸಂಜ್ಞೆಗಳಿಂದ ಸಿದ್ಧವಾಗಿದೆ. ಈ ಲಿಪಿಯ ಉಪಲಬ್ಧತೆಯನ್ನೂ ಪ್ರಾಕಟಣೇತಿಹಾಸವನ್ನೂ ತಿಳಿಸುತ್ತ, ಇದು ತನಗೆ ೧೯೧೨ರಲ್ಲಿ ಪೊಳಲಿ ದೇವಸ್ಥಾನದಲ್ಲಿ ಹಳೆಕನ್ನಡ ಅಕ್ಷರಗಳಲ್ಲಿ ಸಿಕ್ಕಿದ ಸಂಸ್ಕೃತ ಶ್ಲೋಕದ ಆಧಾರದಿಂದ ತಾನಿದನ್ನು ಸಂಶೋಧಿಸಿದಂತೆ ಈ ಶೋಧಕರು ಹೇಳಿದ್ದಾರೆ. ತುಳುನಾಡ ಇತಿಹಾಸ ಸಂಗ್ರಹಮಾಡುವಾಗ ತುಳು ಜಾನಪದಗಳಲ್ಲಿಯೂ ಈ ಲಿಪಿಗಳ ಸೂತ್ರ ದೊರೆಯಿತೆಂದೂ ಇದು ತುಳು ಲಿಪಿಯಾಗಿರಬೇಕೆಂದೂ ೧೯೧೭ರಲ್ಲಿ "ನವನವಾಂಕ ಶ್ರೀನಿವಾಸ ಲಿಪಿ" ಎಂಬ ಪುಸ್ತಕವನ್ನು ಪ್ರಕಟಿಸಿರುವಂತೆಯೂ ಹೇಳಿದ್ದಾರೆ. 'ಸಿರಿಭೂವಲಯ' ಗ್ರಂಥದ ಅಂಕಲಿಪಿಯ ಉಲ್ಲೇಖನವನ್ನಿವರು ಮಾಡಿದ್ದರೂ ಅದರಂತೆ ಇದು ಇಲ್ಲ. ಈ ನವಾಂಕ ಲಿಪಿಯು ಯಾವ ಗ್ರಂಥವೂ ಶೋಧಕರಿಗೆ ದೊರೆತಿರುವಂತೆಯೂ ಕಾಣುವುದಿಲ್ಲ. ಈ ಲಿಪಿಯು ೨೭ ಮೂಲ ವರ್ಣಗಳುಳ್ಳುದಾಗಿ ಇಂಗ್ಲಿಷ್ ಟೈಪ್‌ರೈಟಂ

ಗಿಂತಲೂ ಸುಲಭವಾಗಿ ಅಂದರೆ, ೮೪ ಕೀಗಳಿರುವ ಯಂತ್ರವನ್ನು ೫೦ಕ್ಕಿಂತ ಕಡಿಮೆ ಕೀಗಳಿಂದ ತಯಾರಿಸಬಹುದೆಂದು ತಿಳಿಸಿದ್ದಾರೆ. ಕುಶಲ ಶಿಲ್ಪಿ ಶ್ರೀ ಪಿ. ಅನಂತಾಚಾರ್ಯರು ಈ ಲಿಪಿಯ ಮುದ್ರಾಕ್ಷರವನ್ನೂ ತಯಾರಿಸಿರುವುದಾಗಿ ತಿಳಿದುಬರುತ್ತದೆ. ಈ ಲಿಪಿಯ ಮೂಲದ ಕುರಿತು, ವ್ಯಾವಹಾರಿಕತೆಯ ಕುರಿತು ಇನ್ನಷ್ಟು ಶೋಧನೆಯೂ ಸಾಧನೆಯೂ ಆವಶ್ಯಕ. ಈ ಪುಸ್ತಕವನ್ನು ಕೊಳ್ಳುವವರು ತಮ್ಮ ಶಕ್ತ್ಯಾನುಸಾರ ಧನಸಹಾಯ ನೀಡಬೇಕೆಂದೂ, ಆ ಧನದಿಂದ ದಿ. ಶಾನಪ್ಪ ಹೆಗ್ಗಡೆಯವರ 'ಹೆಗಡೇರ ತುಳುನಾಡು' ಎಂಬ ದೊಡ್ಡ ಗ್ರಂಥದ ಪ್ರಕಟಣೆ ಸಫಲವಾದೀತೆಂದೂ ಪ್ರಕಾಶಕರು ದಿವಂಗತರ ಮೊಮ್ಮಗ ಹಾರೈಸಿದ್ದಾರೆ.

ಟಿ. ಕೇಶವಭಟ್ಟ

ಸ್ವರೂಪ: (ಕಾದಂಬರಿ) ಲೇಖಕರು: ಪೂರ್ಣಚಂದ್ರ ತೇಜಸ್ವಿ; ಪ್ರಕಾಶಕರು: ಸಹ್ಯಾದ್ರಿ ಪ್ರಕಾಶನ ಮಲೆನಾಡು, ಪುಟಗಳು: ೬೮; ಬೆಲೆ: ರೂ. ೨-೦೦.

ಗೆಳೆಯ ಹೇಮಂತನೊಂದಿಗೆ ಇಲ್ಲಿನ ನಾಯಕ ಶ್ರೀನಿವಾಸ ಶಿಕಾರಿಗೆ ಕಾಡಿಗೆ ಹೋಗುತ್ತಾನೆ. ಅಲ್ಲಿ ಪೊದೆಯ ಬಳಿ ಬಂದೂಕನ್ನು ಇಟ್ಟುಕೊಂಡು ಕುಳಿತುಕೊಳ್ಳುತ್ತಾನೆ. ಬೇಟೆ ಇನ್ನೂ ಆಗಿಲ್ಲ; ಮಿಕ ಸಿಕ್ಕಿಲ್ಲ. ಆಗ ಅವನು ತನ್ನ ಆತ್ಮಕಥೆಯನ್ನು ಹೇಮಂತನಿಗೆ ಹೇಳಿಕೊಂಡು ಹೋಗುತ್ತಾನೆ. ಇದು ಈ ಕೃತಿಯ ವಸ್ತು.

ಇಲ್ಲಿ ಶ್ರೀನಿವಾಸ ಏನು ಹೇಳುತ್ತಾನೆ? ಅದು ಯಾರಿಗೂ ಅರ್ಥವಾಗುವಂತಿಲ್ಲ ತನ್ನ ಅಧಃಪತನಕ್ಕೆ ಲೋಕವೆ ಹೊಣೆ ಎನ್ನುತ್ತಾನೆ. ತನ್ನ ವಿದ್ಯಾಭ್ಯಾಸ, ಕಾಲೇಜು, ಸಾಮಾಜಿಕ ರಾಜಕೀಯ ಆಧ್ಯಾತ್ಮಿಕ-ಹೀಗೆ ಎಲ್ಲ ಪ್ರಶ್ನೆ ಬರುತ್ತದೆ.

ಈತ ಎಲ್ಲ ವಿಷಯಗಳನ್ನೂ ಚರ್ಚೆಗೆ ತೆಗೆದುಕೊಳ್ಳುವಾಗ ಇನ್ನು ಮೇನಕೆ ಬಾರದೆ ಇರುತ್ತಾಳೆಯೇ? ಅವಳೂ ಬರುತ್ತಾಳೆ. ಹೇಗೆ ಬರುತ್ತಾಳೆ? ಹಲ್ಲಿ ಬಾಲವನ್ನು ಅಲ್ಲಾಡಿಸುವ ಹಾಗೆ ಎದೆಯನ್ನು ಕುಣಿಸಿಕೊಂಡು ಬರುತ್ತಾಳೆ. ಎಂಥ ಸುಂದರವಾದ ಉಪಮೆ!

ಇದಕ್ಕೆ ಆರು ಪುಟಗಳ ಮುನ್ನುಡಿಯನ್ನು ಶ್ರೀ ಶ್ರೀರಾಮು ಎನ್ನುವವರು ಬರೆದಿದ್ದಾರೆ. ಅದರಲ್ಲಿ ಅವರು ಬಹಳ ಜೋರಾಗಿಯೆ ತಮ್ಮ ಮಿತ್ರರ ಬೆನ್ನನ್ನು ಚಪ್ಪರಿಸಿದ್ದಾರೆ. ಈ ಕಿರು ಕಾದಂಬರಿಯ ಸತ್ವಲೋಕಾತಿಕ್ರಾಂತವೂ ಆಧ್ಯಾತ್ಮಿಕವೂ ಆಗುತ್ತದಂತೆ. ಹೇಗೆ ಆಗುತ್ತದೊ ಈ ವಿಮರ್ಶಕನಿಗಂತೂ ಅರ್ಥವಾಗುತ್ತ ಇಲ್ಲ.

ಶೇಷನಾರಾಯಣ

ಸ್ವೀಕಾರ

ಕವನ

ವಾಣಿಶ್ರೀ: ಲೇ: ವಸಂತ ಪಾಟೀಲ, ಜಿ. ಎಚ್; ಪ್ರ: ಕಾವ್ಯಕಲಾಪ ಪ್ರಕಾಶನ ಹುಬ್ಬಳ್ಳಿ, ಧಾರವಾಡ; ಪುಟ v+೫೨; ಬೆಲೆ: ರೂ. ೧-೨೫, ೧೯೬೬.

ಹರಳು-ಮುತ್ತು: ಲೇ: ಜಿ. ಎಸ್. ಅನ್ನದಾನಿ ಗೂಡೂರ; ಪ್ರ: ಮಿತ್ರಭಾರತಿ ಪ್ರಕಾಶನ, ವಿಜಾಪುರ; ಪುಟ ೪೩; ಬೆಲೆ: ರೂ. ೧-೦೦, ೧೯೬೬.

ಸಣ್ಣ ಕತೆಗಳು

ಕ್ರಾಂತಿ ಚೇತನ: ಲೇ: ಖಲೀಲ ಜಿಬ್ರಾನ; ಪ್ರ: ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ ಜಿಲ್ಲೆ; ಪುಟ: ೮+೧೨೨; ಬೆಲೆ: ರೂ. ೧-೫೦, ೧೯೬೬.

ದೇವ ಮಂದಿರದಲ್ಲಿ; ಲೇ: ಪಿ. ವಿಜಯಕುಮಾರ್; ಪ್ರ: ಶ್ರೀ ಶಿವಲಿಂಗೇಶ್ವರ ಪ್ರಕಾಶನ, ಸಿದ್ಧಗಂಗಾ; ಪುಟ: ೧೪೪, ಬೆಲೆ: ರೂ. ೨-೦೦, ೧೯೬೬.

ಪರ್ಣಕುಟಿ: ಲೇ: ದಯಾನಂದ ತೊರ್ಕೆ; ಪ್ರ: ಸಾಹಿತ್ಯ ಕಲಾ ಕುಂಜ, ಮಹಾರಾಷ್ಟ್ರ ಮಹಿಳಾ ವಿದ್ಯಾಲಯ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು-೪ ಪುಟ: ೮೮; ಬೆಲೆ: ರೂ. ೧-೫೦, ೧೯೬೬.

ಮಾಸ ಪತ್ರಿಕೆ:

ಲಹರಿ: ಸಂಪಾದಕರು: ಬಿ. ಎನ್. ಶ್ರೀರಾಮು; ಪ್ರ: ಬಿ. ಎನ್. ಶ್ರೀರಾಮು; ನಂ. ೨/೪೩೪, ನೂರಡಿ ರಸ್ತೆ, ಮೈಸೂರು-೪; ಪುಟ: ೪೨; ಬೆಲೆ: ೧-೫೦, ೧೯೬೬.

ನಾಟಕ :

ವಿಜಯ ದುಂದುಭಿ: ಲೇ: ಕುಂದಾನಿ ಸತ್ಯನ್; ಪ್ರ: ಸುರಭಿ ಪ್ರಕಾಶನ, ಕೃಷ್ಣ ಬಿಲ್ಡಿಂಗ್ಸ್, ತ್ಯಾಗರಾಜ ರಸ್ತೆ, ಮೈಸೂರು-೪; ಪುಟ: ii+೯೮; ಬೆಲೆ: ರೂ. ೨-೦೦, ೧೯೬೬.

ದೊಡ್ಡ ದೇಶದ ದೊಡ್ಡ ಜನ; ಲೇ: ಎಚ್. ವಿ. ನಾಯರಾಜ್; ಪ್ರ: ತಾ. ರಾ. ನಾಗರಾಜ, ತಾರಾನಿವಾಸ ತಿಪಟೂರು; ಪುಟ: x+೪೦; ಬೆಲೆ: ರೂ. ೧-೦೦, ೧೯೬೬. (ಆಕಾರ: ಕ್ರಾ. ಅಷ್ಟದಳ)

ಪುನರ್ಜನ್ಮ: ಲೇ: 'ಹರಿದಾಸ'; ಪ್ರ: ವೀಣಾ ಪ್ರಕಟಣಾಲಯ, ಬೆಳ್ತಂಗಡಿ, ದ. ಕ.; ಪುಟ; ii+೧೧೦ ಆಕಾರ: ಕ್ರಾ. ಅಷ್ಟದಳ; ಬೆಲೆ: ರೂ. ೨-೦೦, ೧೯೬೬

ವಚನ ಸಾಹಿತ್ಯ :

ಶಿವಲಿಂಗ ಚಾರಿತ್ರ; ಸಂಪಾದಕರು: ಎಂ. ಜಿ. ನಂಜುಂಡಾರಾಧ್ಯ; ಪ್ರ: ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಭಂಡಾರ, ನಂ. ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪; ಪುಟ: iii+೭೨ ಆಕಾರ: ಕ್ರಾ. ಅಷ್ಟದಳ; ಬೆಲೆ: ರೂ. ೦-೭೫, ೧೯೬೬.

ಪ್ರತಿಭಾ ಸಿದ್ಧರು ಪಂಡಿತಾರಾಧ್ಯರು; ಲೇ: ಶ್ರೀ. ಜ. ಚ. ನಿ.; ಪ್ರ: ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಭಂಡಾರ, ನಂ. ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪; ಪುಟ: x+iv+೮೮ ಆಕಾರ ಕ್ರಾ. ಅಷ್ಟದಳ; ಬೆಲೆ: ರೂ. ೨-೦೦, ೧೯೬೬.

ಲಿಪಿ ಶಿಕ್ಷಣ :

ನವನವಾಂಕ ಶ್ರೀನಿವಾಸ ಲಿಪಿ ಬೋಧಿನಿ; ಸಂಶೋಧಕರು: ಅಮುಣಂಜೆಗುತ್ತು ಶೀನಪ್ಪ ಹೆಗ್ಗಡೆ; ಪ್ರ: ಎ. ಬಾಲಕೃಷ್ಣಶೆಟ್ಟಿ, ಪೊಳಲಿ ಜಪ್ಪು, ಮಂಗಳೂರು-೩ ಪುಟ: ೧೮+೧೬ (ಬೆಲೆ ಹಾಕಿಲ್ಲಾ) ೧೯೬೬.

ನೆನಪಿನ ಹೊತ್ತಗೆ :

ಷೇಕ್ಸ್ಪಿಯರಿಗೆ ನಮಸ್ಕಾರ; ಸಂಪಾದನ ಮತ್ತು ಮುದ್ರಣ ವಿನ್ಯಾಸ: ಶಾ. ಬಾಲುರಾವ್; ಪ್ರ: ಕನ್ನಡ ಭಾರತೀ, ನಂ. ೪/೧೦ ವೆಸ್ಟರ್ನ್ ಎಕ್ಸ್‌ಟೆನ್‌ಷನ್, ಕರೋಲ್ ಬಾಗ್, ಹೊಸದಿಲ್ಲಿ-೫; ಪುಟ: iv+೩೯೨; ಬೆಲೆ: ರೂ. ೨೫-೦೦, ೧೯೬೬.

ಸ್ಮರಣ ಸಂಚಿಕೆ :

ನಿವೇದನ: (ಸ್ಮರಣ ಸಂಚಿಕೆ ೧೯೬೬) ಸಂಪಾದಕರು ಮತ್ತು ಪ್ರಕಾಶಕರು: ಶ್ರೀ ಸರಸ್ವತೀ ಕಲಾನಿಕೇತನ್, ನೈ. ೧೭೦, ೧೬ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೯೮ (ಬೆಲೆ ಇಲ್ಲಾ) ೧೯೬೬.

ವ್ಯಕ್ತಿ ಚಿತ್ರಗಳು :

ಸಾಹಿತ್ಯ ಯಾತ್ರಿಕರು; ಲೇ: ಬಾಳೇಶ ಲಕ್ಸೆಟ್ಟಿ; ಪ್ರ: ಉದಯ ಪ್ರಕಾಶನ, ಗೋಕಾಕ, ಬೆಳಗಾವಿ ಜಿಲ್ಲೆ; ಪುಟ: xv+೬೫, ಆಕಾರ ಕ್ರಾ. ಅಷ್ಟದಳ, ಬೆಲೆ: ರೂ. ೧-೨೫, ೧೯೬೬.

ಜೀವನ ಚರಿತ್ರೆ :

ಸ್ಮೃತಿ ಚಿತ್ರಗಳು: [ಸಂಕ್ಷಿಪ್ತ] ಲಕ್ಷ್ಮೀಬಾಯಿ ಟಿಳಕ; ಸಂಪಾದಕರು: ದೇವದತ್ತನಾರಾಯಣ ಟಿಳಕ; ಕನ್ನಡ ಅನುವಾದ: ದ. ಬಾ. ಕುಲಕರ್ಣಿ, ಪ್ರ: ಸಾಹಿತ್ಯ ಅಕಾಡೆಮಿ, ದೆಹಲಿ; ಪುಟ: ೫೧೦; ಬೆಲೆ: ರೂ. ೧೦-೦೦, ೧೯೬೬.

ಲೇಖನ :

ಕೆನಡಾದಲ್ಲಿ ಕನ್ನಡಿಗ: ಲೇ; ಡಾ|| ವಿ. ಶೆಟ್ಟಿ, ಪ್ರ: ಜಿ.ವಿ. ಪೆಂಡಕೂರ್, ರಾಮನಗರ, ಪೆಂಡಕೂರು; ಹೆಗರಿಬೊಮ್ಮನಹಳ್ಳಿ ಪೋಸ್ಟ್, ಬಳ್ಳಾರಿ; ಪುಟ: ೧೪೩; ಆಕಾರ: ಕ್ರಾ. ಅಷ್ಟದಳ; ಬೆಲೆ: ರೂ.೧-೫೦, ೧೯೬೬.

ಸಂಪಾದಕೀಯ

" ಅತಿತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ|
ನುತಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದಪೇಂ
ಕ್ಷಿತಿ ಸಂಪೂಜ್ಯಮೊಗೊಮ್ಮಟೇಶ್ವರ ಜಿನಶ್ರೀರೂಪಮಾತ್ಮೋಪಮಂ|| "

ಬಾಹುಬಲಿಸ್ವಾಮಿಗೆ ಮಹಾಮಸ್ತಕಾಭಿಷೇಕ

ಕರ್ನಾಟಕದ ಶಿಲ್ಪಕಲಾ ವೈಭವವನ್ನು ಪ್ರಪಂಚಕ್ಕೆ ಸಾರುತ್ತಿರುವ ಶ್ರವಣಬೆಳಗೊಳ ಶ್ರೀಕ್ಷೇತ್ರದ ಐತಿಹಾಸಿಕ ಮಹತ್ವ ತಿಳಿದ ವಿಷಯವೇ ಆಗಿದೆ.

ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಮಹಾಪುರುಷ ಚಾವುಂಡರಾಯ ನಿರ್ಮಿಸಿದ ಗೊಮ್ಮಟಸ್ವಾಮಿಯ ಮಹಾ ಮಸ್ತಕಾಭಿಷೇಕವು ಕಾಲ ಕಾಲಕ್ಕೆ ಅಂದಿನಿಂದ ತಪ್ಪದೆ ನಡೆದು ಬರುತ್ತಿದೆ. ಈ ತಿಂಗಳು ಮೂವತ್ತನೆಯ ತಾರೀಖಿನಂದು ಇನ್ನೊಂದು ಅಂಥ ಸಂಭ್ರಮದ ಅಭಿಷೇಕ ಪೂಜೆ ನಡೆಯುತ್ತಿರುವುದು ಭಾರತೀಯರ, ವಿಶೇಷವಾಗಿ ಕನ್ನಡಿಗರ ಸಂತಸವನ್ನು ಹೆಚ್ಚಿಸುವ ಸಂಗತಿ. ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯಬೇಕಾದ ಈ ಮಹಾಪೂಜೆ ೧೯೬೭ರ ಅನಂತರ ಇದೀಗ ನಡೆಯಲಿದೆ. ಸುಮಾರು ೧೮-೨೦ ಲಕ್ಷ ಜನ ಭಕ್ತ ಚೇತನಗಳು ಶ್ರೀ ಸ್ವಾಮಿಯ ಸಂದರ್ಶನಕ್ಕೆ ಸೇರುವ ನಿರೀಕ್ಷೆ ಇದೆ. ಗೊಮ್ಮಟೇಶ್ವರನ ಸಾನಿಧ್ಯವು ಕವಿಗಳು, ಕಲಿಗಳು, ಮುನಿಗಳು ಭವ್ಯಾತ್ಮರಿಗೆಲ್ಲ ಕೇಂದ್ರ ಸ್ಥಾನವಾಗಿದೆ. 'ಜಿನಶಾಸನ'ದ ಮೂಲಕ ಧರ್ಮ, ಕಲೆ, ಸಂಸ್ಕೃತಿಗಳ ಇತಿಹಾಸವನ್ನು ಶ್ರವಣಬೆಳಗೊಳವು ನಿರಂತರವಾಗಿ ಸಾರುತ್ತಲಿದೆ. ಶ್ರವಣಬೆಳಗೊಳದ ಕೀರ್ತಿಗಂಗೆ ಹಿಮಾಚಲದಷ್ಟೇ ಶಾಶ್ವತವಾದುದು, ಪಾವನವಾದುದು.

ಇಂಥ ಮಹಾ ಕ್ಷೇತ್ರದಲ್ಲಿ ಕನ್ನಡ ಭಾಷೆ-ಸಂಸ್ಕೃತಿಯ ಆರಾಧಕರೆಲ್ಲ ಸಮ್ಮಿಲಿತರಾಗುವ ಸುಯೋಗ ಈ ವರ್ಷದ ಮೇ ತಿಂಗಳಲ್ಲಿ ಅಲ್ಲಿ ಸೇರಲಿರುವ ೫೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬರಲಿದೆ. ಸಮ್ಮೇಳನದ ವಿವಿಧ ಗೋಷ್ಠಿಗಳು, ಸಂಘ-ಸಂಸ್ಥೆಗಳ ಉಪಸಮ್ಮೇಳನ, ಕನ್ನಡದ ಸಾಹಿತ್ಯ ಕೃತಿಗಳನ್ನು ಸೋದರ ಭಾಷೆಗಳಿಗೆ ಪರಿವರ್ತಿಸಿ ಭಾಷಾ-ಬಾಂಧವ್ಯವನ್ನು ಬೆಳೆಸುತ್ತಿರುವ ಸಾಹಿತಿಗಳ ಗೌರವ, ಮೊದಲಾದ ಕಾರ್ಯಕ್ರಮಗಳು ಏರ್ಪಡಲಿವೆ. ಶ್ರೀ ಶ್ರೀ ಶ್ರೀ ಚಾರುಕೀರ್ತಿ ಸ್ವಾಮಿಗಳ ಅನುಗ್ರಹ, ಸ್ವಾಗತ ಸಮಿತಿಯ ಉತ್ಸಾಹ, ಹಾಗೂ ಇತರ ಭಾಷಾಭಿಮಾನಿಗಳ ಅಭಿಮಾನದಿಂದ ಈ ಸಮ್ಮೇಳನವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಗೊಮ್ಮಟ ಸ್ವಾಮಿಗೆ ಮಹಾಮಸ್ತಕಾಭಿಷೇಕವಾಗುವ ಈ ಸಂದರ್ಭದಲ್ಲಿ ಜನತೆಯೊಡನೆ 'ನುಡಿ'ಯೂ ತನ್ನ ಭಕ್ತಿ ಗೌರವಗಳನ್ನು ಸಲ್ಲಿಸುತ್ತದೆ.

ಅಭಿನಂದನೆಗಳು

ಈ ವರ್ಷದ ಪ್ರಜಾರಾಜ್ಯೋತ್ಸವದ ಸಂದರ್ಭದಲ್ಲಿ ನಾಡಿನ ಮಹಾವ್ಯಕ್ತಿಗಳಿಗೆ ಸಂದ ಗೌರವದಲ್ಲಿ ಕನ್ನಡವೂ ಪಾಲುಗೊಂಡಿದೆ. ಹಿಂದೆ ಮೈಸೂರು ರಾಜ್ಯದ ಮುಖ್ಯ ಕಾರ್ಯದರ್ಶಿಗಳೂ, ಕೇಂದ್ರ ಸರಕಾರದ ರಕ್ಷಣಾ ಶಾಖೆಯ ಕಾರ್ಯದರ್ಶಿಗಳೂ ಆಗಿ ದಕ್ಷ ಆಡಳಿತಗಾರರೆಂದು ಹೆಸರು ಪಡೆದ ಶ್ರೀ ಪಿ. ವಿ. ಆರ್. ರಾವ್ ಅವರಿಗೆ 'ಪದ್ಮವಿಭೂಷಣ' ಪ್ರಶಸ್ತಿ ದೊರೆತಿದೆ. ಅದರಂತೆ ಶಿಕ್ಷಣವೇತ್ತರೆಂದು ದೇಶ ವಿದೇಶಗಳಲ್ಲಿ ಕೀರ್ತಿ ಪಡೆದಿರುವ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಶ್ರೇಯೋಭಿವೃದ್ಧಿಗೆ ಅಹರ್ನಿಶಿ ಶ್ರಮಿಸುತ್ತಿರುವ ಶ್ರೀ ಡಿ. ಸಿ. ಪಾವಟೆ ಅವರಿಗೆ 'ಪದ್ಮಭೂಷಣ' ಪ್ರಶಸ್ತಿ ದೊರೆತಿದೆ. ಕನ್ನಡದ ಈ ಸುಪುತ್ರರಿಗೆ 'ನುಡಿ'ಯು ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಪರಿಷತ್ತಿನ ಸುದ್ದಿಗಳು

ಪ್ರೊ. ಗೋಕಾಕರ ಅಧ್ಯಕ್ಷತೆಯಲ್ಲಿ ಕವಿಕೃತಿ ದರ್ಶನದ ಹತ್ತೊಂಬತ್ತನೆಯ ಉಪನ್ಯಾಸಮಾಲೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜಾಜಿ ನಗರದ ವಿದ್ಯಾವರ್ಧಕ ಸಂಘದವರು ಪ್ರತಿ ತಿಂಗಳೂ ಏರ್ಪಡಿಸುವ ಕವಿಕೃತಿದರ್ಶನದ ಹತ್ತೊಂಬತ್ತನೆಯ ಉಪನ್ಯಾಸಮಾಲೆ ದಿನಾಂಕ ೧೨–೨–೧೯೬೭ರಂದು ನೆರವೇರಿತು. ವಿಷಯ: ಡಾ. ರಂ. ಶ್ರೀ. ಮುಗಳಿ ಅವರ ಸಾಹಿತ್ಯಾರಾಧನೆ. ಸ್ಥಳ: ಸಂಘದ 'ಸಪ್ತರ್ಷಿಧಾಮ'

ಈ ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪದ್ಮಶ್ರೀ ವಿ.ಕೃ. ಗೋಕಾಕ ಅವರು ವಹಿಸಿದ್ದರು.

'ವಿಮರ್ಶಾತ್ಮಕ ಸಾಹಿತ್ಯ', 'ನಾಟಕಗಳು ಮತ್ತು ಕಾದಂಬರಿಗಳು', 'ಕವಿ ರಸಿಕರಂಗ' ಎನ್ನುವ ವಿಷಯಗಳ ಮೇಲೆ ಕ್ರಮವಾಗಿ ಶ್ರೀ ಎಂ. ವಿ. ಸೀತಾರಾಮಯ್ಯ ಡಾ|| ಜಿ. ಎಸ್. ಶಿವರುದ್ರಪ್ಪ ಮತ್ತು ಶ್ರೀ ಎಸ್. ಅನಂತನಾರಾಯಣ ಇವರುಗಳು ಉಪನ್ಯಾಸಕರಾಗಿದ್ದರು.

ತುಂಬಿದ ಈ ಸಭೆಯಲ್ಲಿ ಶ್ರೋತೃಗಳು ಕಿಕ್ಕಿರಿದು ನೆರೆದಿದ್ದರು.

ಗಾಂಧಿ ಸಾಹಿತ್ಯ ಸಂಘದಲ್ಲಿ ಹೊಸ ಕಾರ್ಯಕ್ರಮ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸಪ್ತರ್ಷಿಧಾಮದ ಸಂಚಾಲಕರು ಕನ್ನಡ ನಾಡು ನುಡಿಗಳ ಬಗೆಗೆ ಸೇವೆ ಸಲ್ಲಿಸಿದ ಮಹನೀಯರನ್ನು ಕುರಿತು, ನಾಡಿನ ಉದ್ದಾಮ ಪಂಡಿತರಿಂದ ನಿಯೋಜಿತ ಕ್ರಮದಲ್ಲಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ಸರಿಯಷ್ಟೆ. ಈ ಕಾರ್ಯಕ್ರಮದ ಉಪಯುಕ್ತತೆಯನ್ನು ಮನಗಂಡು ಪರಿಷತ್ತಿನ ಅಭಿಮಾನಿಗಳು ಹಲವರು ಕನ್ನಡನಾಡಿನ ದಿವಂಗತ ಸಾಹಿತಿಗಳ ಕೃತಿಗಳ ಬಗ್ಗೆ ಪರಿಚಯಮಾಡಿಸಿಕೊಡಲು ಅಪೇಕ್ಷಿಸುತ್ತಿದ್ದರು. ಅವರೆಲ್ಲರ ಆಶಯದಂತೆ, ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಗಾಂಧಿ ಸಾಹಿತ್ಯ ಸಂಘದವರು ಈ ದಿಸೆಯಲ್ಲಿ ಕಾರ್ಯಕ್ರಮವೊಂದನ್ನು ಯೋಜಿಸಿದ್ದಾರೆಂದು ತಿಳಿಸಲು ಹರ್ಷಿಸುತ್ತೇವೆ. ಗಾಂಧಿ ಸಾಹಿತ್ಯ ಸಂಘದವರು ತಮ್ಮ ಯೋಜನೆಯ ಪ್ರಥಮ ಕಾರ್ಯಕ್ರಮವಾಗಿ ದಿವಂಗತ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ (ಮುದ್ದಣ) ಕೃತಿಗಳನ್ನು ಮಾಡಿಕೊಡಲಿದ್ದಾರೆ.

ವಿನಂತಿ

ಕನ್ನಡ ಸಾಹಿತ್ಯ ಪರಿಷತ್ತಿನ ೧೯೬೬ರ ಸದಸ್ಯತ್ವ ಡಿಸೆಂಬರ್ ತಿಂಗಳ ಕೊನೆಗೆ ಮುಗಿದಿರುವುದರಿಂದ, ೧೯೬೭ನೆಯ ವರ್ಷದ ಸದಸ್ಯತ್ವಕ್ಕಾಗಿ ಚಂದಾ ಹಣ ಆರು ರೂಪಾಯಿಗಳನ್ನು ಪರಿಷತ್ತಿನ ಕಛೇರಿಗೆ ಪಾವತಿ ಮಾಡಬೇಕಾಗಿ ಕೋರಿಕೆ.

ಪಂಪಮಹಾಕವಿ ರಸ್ತೆ — ಗೌರವ ಕಾರ್ಯದರ್ಶಿ
ಬೆಂಗಳೂರು–೧೮ — ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರಿನಲ್ಲಿ ಕನ್ನಡ ಲೇಖಕಿಯರ ಸಂಘ

ಚಿತ್ರಾ ಕಲಾವಿದರು, ಬೆಂಗಳೂರು ಇವರು 'ಕನ್ನಡ ಲೇಖಕಿಯರ ಸಂಘ' ರೂಪಿಸಲು ಯೋಜಿಸಿದ್ದಾರೆ. ಕನ್ನಡ ಮಹಿಳಾ ಲೇಖಕರ ಸಂಘಟನೆ ಸಾಹಿತ್ಯ ರಚನೆಯಲ್ಲಿ ಪ್ರತಿಭೆ ಮತ್ತು ಆಸಕ್ತಿಯಿರುವವರಿಗೆ ಪ್ರೋತ್ಸಾಹ, ವ್ಯಕ್ತಿ, ಸಮಾಜ ರಾಷ್ಟ್ರದ ಪ್ರಗತಿಗೆ ಅನುಕೂಲವಾಗುವಂತಹ ಲೇಖನಗಳನ್ನು ಪ್ರಸ್ತುತ ಸಮಸ್ಯಗಳ ಬಗ್ಗೆ ಅವರು ಬರೆಯುಲು ಮಾರ್ಗದರ್ಶನ, ಅವರಿಂದ ರಚಿತವಾದ ಕೃತಿಗಳನ್ನು ತಿದ್ದುಪಡಿ ಮಾಡುವುದು ಮತ್ತು ಕರ್ನಾಟಕದ ಪತ್ರಿಕೆಗಳಲ್ಲಿ ಪ್ರಕಟನೆಗೆ ಏರ್ಪಡಿಸುವುದು, ಸಾಹಿತ್ಯ ಪ್ರಿಯರ ಉಪಯೋಗಕ್ಕಾಗಿ ಪುಸ್ತಕ ಭಂಡಾರವನ್ನು ಬೆಳೆಸುವುದು, ಸಾಹಿತ್ಯ ವಿಚಾರದಲ್ಲಿ ಸಭೆ ಚರ್ಚೆ ವಿಚಾರ ವಿನಿಮಯ ಕಾರ್ಯಕ್ರಮಗಳು ಈ ಸಂಘದ ಉದ್ದಿಶ್ಯವಾಗಿದೆ. ಆ ಸಾಹಿತ್ಯದಲ್ಲಿ ಆಸಕ್ತಿಯಿರುವವರು ಸದಸ್ಯರಾಗಲು ಕೋರಿದೆ. ವಿವರಗಳಿಗೆ ಬರೆಯಿರಿ: **ಶ್ರೀಮತಿ ಹೆಚ್. ಆರ್. ಇಂದಿರ,** ಸಂಚಾಲಕಿ, ಕನ್ನಡ ಲೇಖಕಿಯರ ಸಂಘ, ಚಿತ್ರಾ ಕಲಾವಿದರು, (ಸಾಹಿತ್ಯ ವಿಭಾಗ) ಕಲಾಮಂದಿರ, **ಬೆಂಗಳೂರು–೪**

Statement about ownership and other particulars about

KANNADA NUDI (Kannada)

(to be published in the first issue every year after last day of February)

FORM IV


(SEE RULE 8)

1. *Place of Publication*	....	BANGALORE
2. *Periodicity of its Publication*	....	MONTHLY
3. *Printer's Name*		B. M. SRIKANTIA PRESS (Kannada Sahitya Parishat)
Nationality	....	INSTITUTION
Address	....	Kannada Sahitya Parishat, Pampamahakavi Road, Chamarajapet, Bangalore-18
4. *Publisher's Name*	....	KANNADA SAHITYA PARISHAT
Nationality	....	REGISTERED PUBLIC CULTURAL INSTITUTION
Address	....	Pampamahakavi Road, Chamarajapet, BANGALORE-18
5. *Editors' Name*	....	(1) G. Venkatasubbiah (2) Srinivasa Rao Korati (3) N. Rachappa
Nationality	....	INDIAN
Address	....	(1) 115, II, Block, Jayanagar, Bangalore-11 (2) 22/12 'Anadanilaya', Chamarajapet west Bangalore-18 (3) Hosalli Extension, Magadi Road Bangalore-23
7. *Registration No.*	....	R. N. 13252/57
6. *Names and Addresses of individuals who own the newspapers and partners or shareholders holding more than one per-cent of the total capital.*		KANNADA SAHITYA PARISHAT, BANGALORE

I, G. Venkatasubbiah, hereby declare that the particulars given above are true to the best of my knowledge and belife.

24th March 1967
Bangalore

G. VENKATASUBBIAH
President, Kannada Sahitya Parishat





ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೪

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಏಪ್ರಿಲ್ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ,
ಬೆಂಗಳೂರು-೧೮

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ-ಕನ್ನಡ ನಿಘಂಟು

ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ "ಕನ್ನಡ ನಿಘಂಟು" ಡೆಮ್ಮಿ ಚತುಷ್ಪತ್ರ ಆಕಾರದ ಸುಮಾರು ೫,೦೦೦ ಪುಟಗಳನ್ನು ಒಳಗೊಂಡು, ಒಂದೊಂದು ಸಂಪುಟದಲ್ಲೂ ಸುಮಾರು ೧೨೫೦ ಪುಟಗಳಿರುವ ನಾಲ್ಕು ಸಂಪುಟಗಳಲ್ಲಿ (Volumes) ಪ್ರಕಟವಾಗುವಂತೆ ಏರ್ಪಡಿಸಿದ್ದು ಮೊದಲ ಸಂಪುಟದ ಎರಡನೆಯ ಸಂಚಿಕೆ ಈಗಾಗಲೇ ಪ್ರಕಟವಾಗಿದೆ.

ನಿಘಂಟಿನ ಒಟ್ಟು ಬೆಲೆ ೧೨೦ ರೂಪಾಯಿಗಳು; ಮುಂಗಡವಾಗಿ ಹಣ ಸಲ್ಲಿಸುವ ಗ್ರಾಹಕರಿಗೆ ೧೦೦ ರೂಪಾಯಿಗಳ ರಿಯಾಯಿತಿ ದರದಲ್ಲಿ ಅದನ್ನು ಒದಗಿಸಲಾಗುತ್ತದೆ. ನಿಘಂಟು ಸಿದ್ಧವಾದಂತೆಲ್ಲ ೯೬ ಪುಟಗಳುಳ್ಳ ಸಂಚಿಕೆಗಳ (Fascicules) ರೂಪದಲ್ಲಿ ಅದನ್ನು ಮುಂಗಡವಾಗಿ ೧೦೦ ರೂಪಾಯಿಗಳ ರಿಯಾಯಿತಿಯ ಬೆಲೆಯನ್ನು ಸಲ್ಲಿಸಿರುವ ಗ್ರಾಹಕರಿಗೆ ತಲುಪಿಸಲಾಗುವುದು. ನಿಘಂಟಿನ ಸಂಪುಟಗಳನ್ನಾಗಲಿ ಸಂಚಿಕೆಗಳನ್ನಾಗಲಿ ಬಿಡಿ ಬಿಡಿಯಾಗಿ ವಿಕ್ರಯಿಸುವುದಿಲ್ಲ. ಮುಂಗಡ ಹಣ ನೂರು ರೂಪಾಯಿಗಳನ್ನು ಹತ್ತು ರೂ.ಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಪಾವತಿ ಮಾಡಬಹುದು. ಆದರೆ ಪೂರ್ತ ಹಣ ಸಂದಾಯ ವಾಗುವವರೆಗೆ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ.

ನಿಘಂಟಿನ ಎರಡನೆಯ ಸಂಪುಟವು ಪ್ರಕಟವಾದ ಕೂಡಲೆ **ರಿಯಾಯಿತಿಯ ದರದಲ್ಲಿ** ಅದನ್ನು ವಿಕ್ರಯಿಸುವುದನ್ನು ನಿಲ್ಲಿಸಲಾಗುತ್ತದೆ; ಆ ಮುಂದೆ ಪೂರ್ಣವಾದ ಬೆಲೆಯನ್ನು ಕೊಡಬೇಕಾಗುತ್ತದೆ.

ನಿಘಂಟಿನ ಒಂದು ಸಂಪುಟವು ಸಿದ್ಧವಾದ ಬಳಿಕ ಅದರ ರಕ್ಷಾಕವಚವನ್ನು (Binding Case) ಮುಂಗಡವಾಗಿ ಬೆಲೆ ಸಲ್ಲಿಸಿರುವ ಗ್ರಾಹಕರಿಗೆ ಉಚಿತವಾಗಿ ಒದಗಿಸಲಾಗುವುದು.

ಸಂಚಿಕೆಗಳನ್ನೂ ರಕ್ಷಾಕವಚಗಳನ್ನೂ ಕಳಿಸಲು ಅಂಚೆವೆಚ್ಚವನ್ನು ಗ್ರಾಹಕರೇ ಸಲ್ಲಿಸತಕ್ಕದ್ದು.

ಗ್ರಾಹಕರು ಮುಂಗಡ ಬೆಲೆಯ ಜೊತೆಗೆ ಹತ್ತು ರೂಪಾಯಿಗಳನ್ನು ಅಂಚೆವೆಚ್ಚ, ರವಾನೆ ವೆಚ್ಚ ಗಳಿಗಾಗಿ ಸಲ್ಲಿಸಬೇಕು. ಸಂಚಿಕೆಗಳನ್ನು "ರಿಜಿಸ್ಟರ್ಡ್ ಪೋಸ್ಟ್" ಮೂಲಕ ಕಳಿಸಬೇಕೆಂದು ಗ್ರಾಹಕರು ಅಪೇಕ್ಷಿಸಿದಲ್ಲಿ ಆ ವಿಷಯವನ್ನು ಅವರು ಲಿಖಿತರೂಪದಲ್ಲಿ ಮೊದಲೇ ತಿಳಿಸಬೇಕು. ಹಾಗೆ ಮಾಡದಿದ್ದರೆ ಸಂಚಿಕೆಗಳನ್ನು "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಸಮೇತವಾಗಿ ಸಾದಾ ಟಪಾಲಿನ ಮೂಲಕ ಕಳಿಸ ಲಾಗುವುದು. ಸಂಚಿಕೆಗಳನ್ನು ಪರಿಷತ್ತಿನ ಕಚೇರಿಯಲ್ಲೇ ತೆಗೆದುಕೊಳ್ಳಲು ಅಪೇಕ್ಷಿಸುವವರು ಮುಂಚಿತವಾಗಿ ತಿಳಿಸಿ ಆ ರೀತಿ ಮಾಡಬಹುದು; ಅಂಥವರು ಅಂಚೆವೆಚ್ಚವನ್ನು ಕೊಡಬೇಕಾಗುವುದಿಲ್ಲ.

ನಿಘಂಟಿನ ಬಿಡಿಸಂಚಿಕೆಗಳನ್ನು ಪ್ರತಿ ಒಂದಕ್ಕೆ **ನಾಲ್ಕು** ರೂಪಾಯಿಗಳಂತೆ ಪಡೆಯಬಹುದು.

ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

ಈ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ವ್ಯವಹಾರ ಮಾಡಬಹುದು.

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಏಪ್ರಿಲ್ ೧೯೬೭

ಸಂಪುಟ : ೩೦

ಸಂಚಿಕೆ : ೪

ಈ ಸಂಚಿಕೆಯಲ್ಲಿ . . .

ಚೈತ್ರ ಚೆಲುವು

ಚೈತ್ರ ಸೃಷ್ಟಿಯ ಚೆಲುವು ಕರೆದಿದೆ
ಕಟ್ಟಿ ಚಿಗುರಿನ ತೋರಣ,
ಹಾಲು ಜೇನಿನ ಮಧುರ ಸಂಗಮ
ನಿನ್ನ ಬರವಿನ ಕಾರಣ!

ಕಂಪ ತರುತಿಹ ತಂಪು ಗಾಳಿಯು
ಬೀಸೆ ಇಳೆ ಘಮಘಮಿಸಿತು,
ಹಸಿರು ಗಿಡಮರ ದಾರಿಯೆಡಬಲ
ಫಲವಳಿಯ ತಾ ಕಟ್ಟಿತು.

ಮಲ್ಲಿಗೆಯ ಹೂವರಳಿ ನಿಂತಿದೆ
ನೆಲಕು ಹೂವಿನ ಹಾಸಿಗೆ,
ಕೊರಳ ಕುಣಿಸುತ ಜಾಜಿ ಕರೆದಿದೆ
ಕಳೆಯೆ ಬೇಸರ ಬೇಸಗೆ!

ಕೋಗಿಲೆಯು ಸು-ಸ್ವರದಿ ಹಾಡಿದೆ,
ನಿನ್ನ ಸ್ವಾಗತ ಗೀತೆಯ
ಮಾಮರವು ಫಲ ತುಂಬಿ ಬೀಸಿದೆ
ನಿನ್ನ ದಾರಿಗೆ ಚಾಮರ!

ಗತ ವಸಂತವ ನೆನೆದು ನೊಂದಿಹ
ಜನದ ಕತ್ತಲು ಕಳೆಯಲು
ಬೇಗ ಬಾ ತಡವೇತಕೀ ಪರಿ?
ಬಾರೊ ನಗುವನು ತುಂಬಲು

ಹಸಿರು ಉಡಿಗೆಯನುಟ್ಟು ನಾರೀ-
ಮಣಿಯರೆತ್ತುವರಾರತಿ;
ನಿನ್ನ ಹಾಡುತ ನಿನ್ನನೇ ಕೊಂ-
ಡಾಡಿ ನಿನ್ನಯ ಕೀರುತಿ!

ಗೋಪಾಲಕೃಷ್ಣ ಹೆಗ್ಗಡೆ

ಗೊಲ್ಗೊಥಾ

ಎಂ. ಗೋವಿಂದ ಪೈ

ಅಂದಿದೊ ವಸಂತಪೂರ್ಣಿಮಿಯ ಭೃಗುವಾರದಾ
ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳಿವಿಲ್ಲ;
ನೋಡೊಂದೆ ಬರವೋಡ ಬಾನಗಲ ಚಾಚಿ ನೋ
ಹನ ಕಾಲದಾ ಪ್ರಲಯಮೇಘವೆನೆ ಮುಚ್ಚಿಹುದು;
ಬೇಗೆಯಂ ತಡೆಯಲಾಗದು, ಗಾಳಿ ಸೂಸದಿಳೆ
ಯುಬ್ಬಸದೊಳೇದುತಿದೆ, ಮರಗಳಲಿ ಕದಲದೆಲೆ,
ಹಕ್ಕಿಗಳ ಉಸಿರಿಲ್ಲ; ನಟ್ಟಿರುಳೊಳಂತೆ ಮನೆ
ಮನೆಯೊಳುಸಿಕನೆ ಸಂತಮಿರತಕ್ಕ ಜನಪದಂ
ಧಗೆಯ ಹೆಬ್ಬಾವಂತೆ ಹೊರಟು ತಿಂತಿಣಿವರಿದು
ಬಂತು ಶಲಭಸಮೂಹದಂತೆ ಯೆರೂಸಲೇಮ್
ನಗರದಗಸೆಯ ಹೊರಗಿರುವ ಕಪಾಲಸ್ಥಾನ
ವೆಂಬುವಾ ಗೊಲ್ಗೊಥಾ ಗಿರಿಗೆ. ಬಂದಿಗಳಿಂದ
ಹೊರಿಸಿ ತಂದಾ ಮೂರು ಸಿಲುಬೆಗಳ ನಟ್ಟರಾ
ಗೊಲ್ಗೊಥದ ಶಿಖರದಲಿ, ಯೇಸುವಂ ನಡುವೆ ಮೇ
ಡೆಡಬಲದೊಳಾ ಕಳ್ಳರಿಬ್ಬರಂ ಸಿಲುಬೆಗಳಿ
ಗಿಕ್ಕಿ, ಕೈಕಾಲ್ಗಳಿಗೆ ಮೊಳೆ ಜಡಿದು, ಯೆಹೂದ್ಯ
ರರಸನೀ ನಜರಾಯ ಯೇಸುವೆಂದಾ ಬರೆದ
ಹಲಗೆಯಂ ತಲೆಗಡೆಗೆ ತೂಗಿದರು. ಹದ್ದು ಬಿಗಿ
ವಿಡಿದ ಲಾವಿಗೆಯಂತೆ, ಪಡುವಣದಿ ಬಿಳಿಯ ಬಿದಿ
ಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ,
ಮರಣವೃಕ್ಷದೊಳಮೃತಫಲದಂತೆ ತೂಗುತಿರೆ,
ತನ್ನ ಬೇನೆಯನಣಂ ಗಣಿಸದವನುಸುರಿದಂ—
ನರದೇಹವೆತ್ತವನಿಗಾ ತನುವ ಗುಣಧರ್ಮ
ವಹ ಬೇನೆ ಇಲ್ಲದಿಹುದೆಂತು? ತಾನಾರ ತನು
ಮನಮನಿನಿಸಾದೊಡಂ ನೋಯಿಸಿಲ್ಲೆಂದು ಸಾ
ವಿರ ಚೇಳ್ಗಳೊಮ್ಮಿಗಕಟಾ ಕಡಿದ ಯಾತನೆಯ
ಸಿಲುಬೆಯಳಲುರಿಯ ತಣ್ಣನೆ ತಳೆದು, ತಾಯ ಮೊಗ
ನೋಡೆ ಮಗು ಬೆಸಲಳನೋತು ಸೈರಿಸುವಂತೆ,
ಚೂಣಿಯ ಭಟಂ ಗಾಯದಳಲ ಲೆಕ್ಕಿಸದೆ ಮುಂ
ಗಾದಾಡಿ ಮಡಿದು ಜಯುವಡುವಂತೆ, ನರನರಂ
ಗಳಲಿ ಕುದಿಕುದಿವ ವೇಗನೆ ಸೋಸಿ, ತನ್ನ ತೊರೆ
ದರ್ಭಕರ ಹಂಬಲಿಸುವ ಮುಮೂರ್ಷು ತಾಯಂತೆ,
ತನ್ನ ಕಡಿವವರ್ಗೆ ತಣ್ನೆಳಲೀವ ಮರದಂತೆ,
ತನ್ನಳಲನವರ ಹಂಬಲದಿ ಮರೆತುಸುರಿದುಂ—
'ಕ್ಷಮಿಸಿವರನೆಲೆ ತಂದೆ! ತಾವೇನನೆಸಗಿದಪೆ
ವೆಂದರಿಯರಿವರು' ನೆರೆದವರದಂ ಕೇಳಿ 'ಹಾ!
ನಮಗಾಗಿ ಕ್ಷಮೆಯ ಯಾಚಿಸುವುದಂತಿರಲಿ; ನೀ
ದೇವಸುತನಾಗಿದ್ದರೀ ಸಿಲುಬೆಯಿಂದಿಳಿದು
ಬಾರ ನೋಡುವ!' ಎಂದು ಜಟಕರಿಸೆ, ಯಾಜಕರು
'ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರ
ಕ್ಷಿಸಲಾರನಾದನೆ? ಯೆಹೂದ್ಯರರಸಂತೆ! ತಾ
ನಿಳಿತರಲಿ ಸಿಲುಬೆಯಿಂದೊಡನೆ ನಂಬುವೆವಿವನ!
ದೇವರೊಳೆ ಭರವಸಿಗನಂತೆ! ಕಾಂಬೆವು ದೇವ
ರೀತನಂ ರಕ್ಷಿಸಲಿ! ದೇವಸುತ ತಾನೆಂದ
ನಲ್ಲ?' ಎಂದಣಕಿದರು.

[ದಿ. ಗೋವಿಂದ ಪೈ ಅವರ 'ಗೊಲ್ಗೊಥಾ' ಖಂಡಕಾವ್ಯವನ್ನು ಸಂಪೂರ್ಣವಾಗಿ ಇಂಗ್ಲಿಷಿಗೆ ಮಂಗಳೂರಿನ ಶ್ರೀಪಾಮೋದ ಬಾಳಿಗ ಅವರೂ, ಅದರ ಕೆಲವು ಭಾಗಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಶ್ರೀ ಬಿ. ಚಂದ್ರಶೇಖರ್ ಅವರೂ ಭಾಷಾಂತರಿದ್ದಾರೆ. ಅವರ ಅನುವಾದಗಳಿಂದ ಈ ಭಾಗವನ್ನು ಆರಿಸಿಕೊಡಲಾಗಿದೆ. ಇವುಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಲೇಖಕರಿಗೂ ಮೈಸೂರಿನ ಕಾವ್ಯಾಲಯದವರಿಗೂ 'ನುಡಿ' ಕೃತಜ್ಞವಾಗಿದೆ.

—ಸಂ]

GOLGOTHA

M. Govinda Pai

It was spring-time, propitious midday of the full-moon Friday.
Dead was the noon! No sign of the sun anywhere in the sky!
Oh, look, a single colossal clod of barren cloud spreading
Its outstretched mantle to overcast the whole of the wide blue sky
Like that threatening thunderhead of deluge in Noah's time!
Unbearable was the heat of that noon; the wind had stopped blowing;
The world was choked and gasped for breath in asthmatic fits!
No stir in the leaves on trees ever still! Birds were breathless!
The populace wonted to stay and rest at home as at midnight
Was all out, like a huge python oppressed by the blazing heat,
Only to break up into parts and groups like locust storms
To swarm up on the mound of Golgotha, renowned now as Calvary;
Atop that 'hill of skull' three crosses borne by the prisoners themselves
Were planted right and straight. Jesus in the middle, and a thief
Each to his right and left, all the three were crucified cruelly
By nails hit harsh into palms and feet. Over the head of Jesus
On the cross, was hung a board with writing, both convincing
And conflicting—'Jesus of Nazareth, the King of the Jews'!
Like a frail quail caught in the talons of a flying falcon
Like the second day's setting moon of fortnight bright
Like an arrow pulled full back and held tight in a full-bent bow;
Like an ambrosial fruit on the tree of death and decay, Jesus swayed,
Caring naught for agony, anguish and torture. He be thought:
Having once taken the human form, could anyone of the kind avoid
Excruciating bodily pains, which mortals are prone to?
His consciousness knew not the slightest injury caused
Either psychic or physical, overt or covert to anybody,
But touched him to the quick like the deadly stings
Of scorpions in thousands all at once. Bearing all the soaring
Anguish of the Cross calmly, like a unique child at birth
Enduring the travail of painful parturition to behold the face
Of its loving mother; like a maimed soldier at the front
Caring no whit for the pangs of death, fighting withal for victory
And the glory attached to it by keeping his virility
Seething in every vein of his body; like a pitiable mother
Dying deserted, craving for the very children who had forsaken her;
Like the majestic tree providing cool shade for its hewers
Smiting mercilessly at the root, stock and branch to fell it down;

Setting all agony to naught, wishing well to those who wished him ill,
Jesus prayed—" Father, forgive them, for they know not what they do,"
Hearing this from the lips of Jesus nailed fast to the cross,
The throng assembled below, jeered at him saying, " Let go
That beseeching forgiveness for us ; instead, come down
Now from the cross, if you are indeed the Son of God ! "
The priests and scribes mocked at him—" Alas, for the Saviour
Of men and all ! He cannot save himself ! King of Israel indeed !
Let him come down from the cross now, then shall we believe him !
What's more, doesn't he proclaim itself the Son of God ? ".

—DAMODAR BALIGA

[Freely rendered into English by Sri Damodar Baliga, Mangalore ; published during the 38th International Eucharistic Congress at Bombay, 1964]

* * *

That auspicious noon of the full-moon Friday
Of Spring there was not a trace of the sun,
When, look ! a barren cloud
Stretched out over all the sky,
Seeming like the deluge cloud of Noah's time.
The heat was unbearable. Not a stir of air.
The earth gasped in asthmatic fits and on trees
The birds were breathless amidst still leaves.
The people who should have stayed
At home in quiet comfort as at midnight
Came out of doors, like heat-oppressed pythons,
Gathered in groups, swelled into a locust-swarm
And came beyond the city gate of Jerusalem
To the hill Golgotha, that place of a skull.
On the hill-top they planted the three crosses
Which they had made the prisoners carry.
Jesus between the two thieves,
One to his right and one left,
They nailed palm and foot to the crosses.
They hung at his head a board inscribed
" This is Jesus of Nazareth, King of the Jews."
Like a quail caught in an eagle's talon,
Like the western crescent moon of the bright fortnight,
Like an arrow on the bent bow, he hung,
Like the fruit of eternal life on the tree of death.
He ignored his torment,
For how can one bearing mortal body
Be without its property of pain ?

He had not caused the slightest pain
Of body or of mind to anyone.
Calmly enduring the burning smart of crucifixion-
That stung like a thousand scorpions-
As the baby gladly bears pangs of travail
In hope of looking on its mother's face ;
The soldier that in the van, ignoring keen wounds,
Fights on, and, dying, gains victory ;
The dying mother that bears the agony
Boiling in every nerve and, craving fondly
For children who have forsaken her,
Blesses them ; the tree offering cool shade
To those who hew her down ;-
So forgetting his own anguish
In loving-kindness for them he said,
"Father, forgive them, they know not
What they do." The multitude heard
And laughed scornfully and cried,
"Ah, let alone asking forgiveness for us.
Descend from the cross, let us see
If you are the son of God."
The priests mocked at him and sneered,
"He saved others, cannot he
Save himself? He is the King of the Jews,
It seems! Let him descend
From the cross and we shall believe.
Did he not say
That he was the son of God? Let's see
If God will save him now!"

—B. CHANDRASEKHARA

[Translation of the last section of M. Govinda Pai's Kannada Poem, Golgotha, by B. Chandrasekhara ; The Literary Half-yearly, January 1961, Vol. 2, No. 1]

ಆಚಾರ್ಯ ಡಿ. ಎಲ್. ಎನ್.

ಎಸ್. ಬಸವಾರಾಧ್ಯ

ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ರತ್ನತ್ರಯ' ರಲ್ಲಿ ಒಬ್ಬರೆನಿಸಿದ ಆಚಾರ್ಯ ಡಿ. ಎಲ್. ಎನ್. ಅವರು ಕಳೆದ ನಾಲ್ಕು ದಶಕಗಳಿಂದ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನಮಾಡಿ ಸರ್ವರ ಪ್ರಶಂಸೆಗೂ ಪಾತ್ರರಾಗಿದ್ದಾರೆ. ಸರ್ವರಿಂದಲೂ ಗೌರವಿಸಲ್ಪಟ್ಟಿದ್ದಾರೆ; ಕನ್ನಡ ನಾಡು ನುಡಿಗಳಿಗೆ ಅವರು ಸಲ್ಲಿಸಿರುವ ಸಲ್ಲಿಸುತ್ತಿರುವ ಸೇವೆ ಆಚಂದ್ರಾರ್ಕತಾರಂಬರವಾಗಿ ನಿಲ್ಲತಕ್ಕದ್ದಾಗಿದೆ. ಪ್ರಕೃತ ನನ್ನ ಅವರ ಗುರುಶಿಷ್ಯ ಸಂಬಂಧ; ನನ್ನ ಅವರ ನಿಘಂಟಿನ ಸಂಬಂಧ–ಇವನ್ನು ಕುರಿತು ಸಂಕ್ಷೇಪವಾಗಿ ಪ್ರಸ್ತಾಪಮಾಡುತ್ತೇನೆ.

ನಾನು ಆಚಾರ್ಯ ಡಿ. ಎಲ್. ಎನ್. ಅವರನ್ನು ಕಂಡದ್ದು ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ; ಬೆಂಗಳೂರು ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದಾಗ. ನಮ್ಮ ತರಗತಿಯ ಅಂದಿನ ಮಿತ್ರರು ಸ್ವಲ್ಪಮಟ್ಟಿಗೆ ತುಂಟರಾಗಿದ್ದರು. ಕನ್ನಡ ತರಗತಿಗಳೆಂದರೆ ಅವರಿಗೆ ಲಕ್ಷ್ಯವೇ ಇರಲಿಲ್ಲ. ಹೀಗಾಗಿ ಒಬ್ಬಿಬ್ಬರು ಕನ್ನಡ ಅಧ್ಯಾಪಕರನ್ನು ತರಗತಿಯಿಂದ ಉಚ್ಚಾಟನೆ ಮಾಡಿದ್ದರು. ಕೊನೆಗೆ ಅಂದು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಆಚಾರ್ಯ ತೀ. ನಂ. ಶ್ರೀಕಂಠಯ್ಯನವರು ಡಿ. ಎಲ್. ಎನ್. ಅವರನ್ನು ನಮ್ಮ ತರಗತಿಗೆ ಕರೆತಂದು "ನೀವು ಬಹಳ ತುಂಟರು. ಅದಕ್ಕಾಗಿ ಶ್ರೀ ಡಿ. ಎಲ್. ನರಸಿಂಹಾಚಾರ್ಯರನ್ನು ಕರೆತಂದಿದ್ದೀನಿ. ಅವರ ಪಾಂಡಿತ್ಯವನ್ನು ಸದುಪಯೋಗಪಡಿಸಿಕೊಳ್ಳುವುದು ನಿಮಗೆ ಬಿಟ್ಟದ್ದು" ಎಂದು ಹೇಳಿ ಹೊರಟು ಹೋದರು. ಮೊದಲನೆಯ ದಿನವೇ ಡಿ. ಎಲ್. ಎನ್. ಅವರ ಪಾಠಪ್ರವಚನಗಳನ್ನು ಕೇಳಿದ ನಮ್ಮ ತರಗತಿಯ ವಿದ್ಯಾರ್ಥಿಗಳು ಎಳ್ಳಷ್ಟು ಗದ್ದಲವನ್ನೂ ಮಾಡಲಿಲ್ಲ. ಅಂದಿನಿಂದ ಮುಂದಕ್ಕೆ ಅವರು ನಮ್ಮ ತರಗತಿಗೆ ಒಗ್ಗಿಹೋದರು. ಆದರೂ ಒಬ್ಬಿಬ್ಬ ವಿದ್ಯಾರ್ಥಿಗಳು ಕೇಳುತ್ತಿದ್ದ ಪ್ರಶ್ನೆಗಳಿಗೆ ಅವರು ಕೊಡುತ್ತಿದ್ದ ವ್ಯಾಕರಣಬದ್ಧವಾದ ಉತ್ತರ ವಿಶಿಷ್ಟರೀತಿಯದಾಗಿತ್ತು.

ಇಂಟರ್‌ಮೀಡಿಯೇಟ್ ಪರೀಕ್ಷೆ ಮುಗಿದ ಮೇಲೆ ಮುಂದಿನ ವ್ಯಾಸಂಗಕ್ಕಾಗಿ ನಾನು ಮೈಸೂರಿಗೆ ತೆರಳಿದೆ. ಕರ್ಮಧರ್ಮಸಂಯೋಗದಿಂದ 'ಕನ್ನಡ ಆನರ್ಸ್' ವಿಭಾಗವನ್ನೇ ತೆಗೆದುಕೊಳ್ಳಬೇಕಾಯಿತು. ಇಂಥ ಗುರುಶ್ರೇಷ್ಠರ ಪಾಠಪ್ರವಚನಗಳನ್ನು ಕೇಳಿದ ಫಲವಾಗಿಯೋ ಎಂಬಂತೆ ನನಗೆ ಆ ವರ್ಷ "Subject Scholarship" ಸಹ ಪ್ರಾಪ್ತವಾಯಿತು. ಎರಡನೆಯ ವರ್ಷಕ್ಕೆ ಮೈಸೂರಿಗೆ ಆಚಾರ್ಯ ಡಿ. ಎಲ್. ಎನ್. ಅವರ ಆಗಮನವಾಯಿತು. ಹರಿಹರನ 'ಗಿರಿಜಾ ಕಲ್ಯಾಣ'ವನ್ನು ಅವರು ನಮಗೆ ಬೋಧಿಸಬೇಕಾಗಿತ್ತು. ಪ್ರಾರಂಭದ ದಿನವೇ ಅವರು ಹರಿಹರನ ಬಗ್ಗೆ ಕೊಟ್ಟ ಉಪನ್ಯಾಸವನ್ನು ಕೇಳಿ ನಾನು ದಿಙ್ಮೂಢನಾದೆ. ಅಂದು ಅದೆಷ್ಟು ವಿಷಯಗಳನ್ನು ಲೀಲಾಜಾಲವಾಗಿ ಅಸ್ಖಲಿತವಾಗಿ ಸಮಗ್ರವಾಗಿ ನಿರೂಪಿಸಿದರು! ಅಂದಿನ ಅವರ ಉಪನ್ಯಾಸ ನನ್ನ ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರಿತು. ಹಾಗೆಯೇ ಕುಮಾರವ್ಯಾಸನ ಬಗ್ಗೆಯೂ ಅವರು ಕೊಟ್ಟ ಉಪನ್ಯಾಸಗಳನ್ನು ಕೇಳಿದ ನನಗೆ ಅವರಲ್ಲಿ ಅಪಾರ ಗೌರವ ಮೂಡಿತು. ಆಚಾರ್ಯರಿಗೆ ಬೋಧೆಮಾಡಲು ಯಾವ ವಿಷಯವಾದರೇನಂತೆ? ವ್ಯಾಕರಣವಾಗಲಿ, ಅಲಂಕಾರಶಾಸ್ತ್ರವಾಗಲಿ, ಛಂದಸ್ಸಾಗಲಿ, ಸಾಹಿತ್ಯ ಚರಿತ್ರೆಯಾಗಲಿ, ಭಾಷಾಶಾಸ್ತ್ರವಾಗಲಿ ಅಚ್ಚುಕಟ್ಟಾಗಿ ಪಾಠವನ್ನು ಹೇಳುತ್ತಿದ್ದರು.

ಒಮ್ಮೆ ತರಗತಿಯಲ್ಲಿ ಒಂದು ಸ್ವಾರಸ್ಯ ನಡೆಯಿತು. ಡಿ. ಎಲ್. ಎನ್. ಅವರು ಛಂದಸ್ಸನ್ನು ಹೇಳಿಕೊಡುತ್ತಿದ್ದರು. ವೃತ್ತಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಲು ಬೀಜಸೂತ್ರಗಳಿರುವುದು ಸರಿಯಷ್ಟೆ. ತೋಟಕ ಎಂಬ ವೃತ್ತಕ್ಕೆ "ಅದು ತೋಟಕವೊಪ್ಪಿರೆ ನಾಲ್ಸಗಣಂ" ಎಂಬ ಸೂತ್ರವನ್ನು ಹೇಳಿಕೊಟ್ಟರು. ನನ್ನ ಮಿತ್ರರೊಬ್ಬರು ಮಾರನೆಯದಿನ ತರಗತಿಯಲ್ಲಿ ತೋಟಕವೃತ್ತಕ್ಕೆ 'ಕುರಿಯು ಗೊಬ್ಬರಮುತ್ತಮುಂ ತೋಟಕೆ' ಎಂಬ ಸೂತ್ರವನ್ನು ಇಟ್ಟುಕೊಳ್ಳಬಾರದೆ ಸಾರ್" ಎಂದು ಪ್ರಶ್ನೆ ಕೇಳಿದರು. ಅದನ್ನು ಕೇಳಿದ ಡಿ. ಎಲ್. ಎನ್. ಅವರಿಗೆ

* ದಿನಾಂಕ ೧೨–೩–೧೯೬೭ರಂದು ರಾಜಾಜಿನಗರದ ಸಪ್ತರ್ಷಿ ಧಾಮದಲ್ಲಿ ಮಾಡಿದ ಭಾಷಣ.

ತಡೆಯಲಾರದ ಸಿಟ್ಟು ಬಂತು. ಹಿಂದಿನ ಛಂದೋಕಾರರನ್ನು ತಿದ್ದಲು ಪ್ರಯತ್ನಿಸಿದ ಆ ನನ್ನ ಮಿತ್ರರನ್ನು ಚೆನ್ನಾಗಿ ಮೂದಲಿಸಿದರು. ತರಗತಿಯಲ್ಲಿದ್ದವರೆಲ್ಲಾ ಗೊಂಬೆಗಳಂತಾದರು. ಕೆಲವು ದಿನ ಕಳೆದ ಮೇಲೆ ಯಥಾಸ್ಥಿತಿಯಾಯಿತು.

ವ್ಯಾಸಂಗವನ್ನು ಮುಗಿಸಿಕೊಂಡು ನಾನು ಮೈಸೂರು ಪ್ರಾಚ್ಯವಿದ್ಯಾಸಂಶೋಧನ ಸಂಸ್ಥೆಯಲ್ಲಿ ಉದ್ಯೋಗವನ್ನು ಕೈಕೊಂಡೆ. ಆಗಾಗ ಡಿ. ಎಲ್. ಎನ್. ಅವರನ್ನು ಕಾಣುತ್ತಿದ್ದೆ. ಕೆಲವು ಅಪ್ರಕಟಿತ ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸುವ ಬಗ್ಗೆ ಅವರ ಸಲಹೆಯನ್ನು ಪಡೆದುಕೊಳ್ಳುತ್ತಿದ್ದೆ. ಅವರೂ ಸಹ ನಮ್ಮ ಸಂಸ್ಥೆಗೆ ಒಂದಲ್ಲ ಒಂದು ವಿಷಯಕ್ಕಾಗಿ ಆಗಿಂದಾಗ್ಯೆ ಬರುತ್ತಿದ್ದರು.

ಈ ಮಧ್ಯೆ ನಾನು ಮತ್ತು ನನ್ನ ಮಿತ್ರರೊಬ್ಬರು 'ಹರಿಶ್ಚಂದ್ರಕಾವ್ಯ'ದ ಸಂಪಾದನಾ ಕಾರ್ಯವನ್ನು ಕೈಕೊಂಡೆವು. ಕಚೇರಿಯ ಕೆಲಸದ ಅವಧಿ ಮುಗಿದ ಮೇಲೆ ಅಲ್ಲೇ ಆ ಕೆಲಸವನ್ನು ಮಾಡುತ್ತಿದ್ದೆವು. ಆಚಾರ್ಯ ಡಿ. ಎಲ್. ಎನ್. ಅವರು ಗಾಳಿಸೇವನೆಗಾಗಿ ನಮ್ಮ ಸಂಸ್ಥೆಯ ಬಳಿಯಿದ್ದ "ಕೌಟಲ್ಯಸ್ಥಳ"ಕ್ಕೆ ಬಂದು ಕೂಡುತ್ತಿದ್ದರು. ಹೀಗಿರುವಲ್ಲಿ ಒಂದು ದಿನ ಕಚೇರಿಯ ಒಳಕ್ಕೆ ಬಂದರು. ನಾವು ಪಾಠಾಂತರಗಳನ್ನು ಗುರುತಿಸಿಕೊಳ್ಳುತ್ತಿದ್ದ ರೀತಿಯನ್ನು ಸ್ವಲ್ಪ ಹೊತ್ತು ನೋಡುತ್ತಾ ನಿಂತರು. ಆಗ ನಾನು "ಏನು ಸಾರ್ ತಾವು ಬಂದುಬಿಟ್ಟಿರಲ್ಲಾ" ಎಂದು ಔಪಚಾರಿಕವಾಗಿ ಪ್ರಶ್ನಿಸಿದೆ. ಅದಕ್ಕೆ ಅವರು "ನಿಮ್ಮಿಂದ ಏನಾದರೂ ಕಲಿತುಕೊಳ್ಳೋದು ಇದ್ರೆ ನೋಡೋಣ ಅಂತ ಬಂದೆ" ಎಂದು ಹೇಳಿದ್ದನ್ನು ಕೇಳಿ ನಾನು ಅವಾಕ್ಕಾದೆ. "ನಮ್ಮಿಂದ ತಾವು ಕಲಿತುಕೊಳ್ಳಬೇಕಾದುದು ಏನಿದೆ ಸಾರ್" ಎಂದಾಗ ಅವರು "ಪ್ರತಿಯೊಬ್ಬರಿಂದಲೂ ಕಲಿತುಕೊಳ್ಳಬೇಕಾದುದು ಇದೆಯಯ್ಯ" ಎಂದು ಹೇಳಿ ಮುಗುಳುನಗೆ ನಗುತ್ತಾ ಹೊರಟುಹೋದರು. ಹರಿಶ್ಚಂದ್ರಕಾವ್ಯದ ಸಂಪಾದನಾಕಾರ್ಯ ಮುಗಿದ ಮೇಲೆ ಅದನ್ನು ಅವರ ಬಳಿಗೆ ಒಯ್ದು ಪರಾಂಬರಿಸಿ ಕೊಡಬೇಕೆಂದು ಪ್ರಾರ್ಥಿಸಿಕೊಂಡೆ. ಅವರು ಅತ್ಯಂತ ಆಸ್ಥೆಯಿಂದ ಆ ಕಾವ್ಯವನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಸರಿಯಾದ ಪಾಠಾಂತರಗಳನ್ನೂ ಗುರುತುಮಾಡಿಕೊಟ್ಟರು. ಇಂದಿಗೂ ಆ ಕಾವ್ಯದ ಸಂಸ್ಕರಣದ ಬಗ್ಗೆ ಅವರಿಗೆ ಅಪಾರವಾದ ಅಭಿಮಾನವಿದೆ.

ಕೆಲವು ದಿನಗಳಾದ ಮೇಲೆ ಒಂದು ಪ್ರಕರಣ ನಡೆಯಿತು. ಒಂದುದಿನ ಸಂಜೆ ಆಚಾರ್ಯರು ಗಾಳಿಸೇವನೆಗಾಗಿ ಹೊರಟಿದ್ದಾಗ ನನ್ನ ಅವರ ಭೇಟಿಯಾಯಿತು. ಆಗ ಅವರು ಮಾತಿಗೆ ಮಾತಾಡುತ್ತಾ "ನಿಘಂಟಿನ ಕೆಲಸ ಮಾಡೋದಕ್ಕೆ ಬರ್ತೀಯೇನಯ್ಯಾ" ಎಂದು ಕೇಳಿದರು. ನಿಘಂಟಿನ ಕೆಲಸ ಎಂದರೆ ಏನು ಎಂಬುದರ ಅರಿವು ಆಗ ನನಗಿರಲಿಲ್ಲ. "ಆಗಲಿ ಸಾರ್, ಬರ್ತೀನಿ" ಎಂದುಬಿಟ್ಟೆ. ಆಚಾರ್ಯರಿಗೆ ಬಹಳ ಸಂತೋಷವಾದಂತೆ ಕಂಡುಬಂದಿತು. ಏಕೆಂದರೆ ನಿಘಂಟಿನ ಕೆಲಸಕ್ಕೆ ಬರಲು ಯಾರೂ ಒಪ್ಪಿಕೊಂಡಿರಲಿಲ್ಲವಂತೆ. ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿದ್ದ ನಿಘಂಟಿನ ಕೆಲಸಕ್ಕೆ ಡಿ. ಎಲ್. ಎನ್. ಅವರು ಬಂದ ಮೇಲೆ ಅಚಿರದಲ್ಲೇ ನನ್ನನ್ನೂ ಆ ಕೆಲಸಕ್ಕೆ ಪರಿಷತ್ತಿಗೆ ಬರಮಾಡಿಕೊಂಡರು.

ಕನ್ನಡ ನಿಘಂಟು ಕಚೇರಿಯನ್ನು ಸೇರಿದ ನನಗೆ ಒಂದು ಹೊಸಲೋಕವನ್ನೇ ಪ್ರವೇಶಮಾಡಿದಂತಾಯಿತು. ಪ್ರತಿಯೊಂದು ಶಬ್ದದೊಡನೆ ಕಡಿದಾಟ, ಬಡಿದಾಟ, ಹೊಡೆದಾಟ ಮಾಡಬೇಕಾಯಿತು. ನನಗೆ ಮೂಡುತ್ತಿದ್ದ ಸಂದೇಹಗಳಿಗೆಲ್ಲಾ ಆಚಾರ್ಯರು ಸಮರ್ಪಕವಾದ ಪರಿಹಾರಗಳನ್ನು ಸೂಚಿಸುತ್ತಿದ್ದುದೇ ಅಲ್ಲದೆ ನಿಘಂಟಿನ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತಿದ್ದರು. ಹೀಗೆ ಎರಡು ವರ್ಷಗಳು ಕಳೆದ ಮೇಲೆ ಆಚಾರ್ಯರು ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಹಿಂತಿರುಗಿದರು.

ಕೆಲವು ವರ್ಷಗಳು ಕಳೆದ ಮೇಲೆ ನಿಘಂಟಿನ ಸಂಪಾದಕತ್ವದ ಹೊಣೆಗಾರಿಕೆ ನನ್ನ ಮೇಲೇ ಬಿತ್ತು. ಆಚಾರ್ಯ ತೀ. ನಂ. ಶ್ರೀ ಅವರು ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿಯೂ ಆಚಾರ್ಯ ಡಿ. ಎಲ್. ಎನ್. ಅವರು ಉಪಾಧ್ಯಕ್ಷರಾಗಿಯೂ ನನಗೆ ಮಾರ್ಗದರ್ಶನ ಮಾಡುತ್ತಿದ್ದರು. ಈ ಮಹಾಮಹೋಪಾಧ್ಯಾಯರ ಮಧ್ಯೆ ನಿಂತು ಉಭಯತ್ರರಿಗೂ ತೃಪ್ತಿಕರವಾಗುವಂತೆ ನಿಘಂಟಿನ ಕಾರ್ಯವನ್ನು ನಾನು ನಿರ್ವಹಿಸಬೇಕಾಗಿತ್ತು. ಶಬ್ದಗಳ ವಿವಿಧಾರ್ಥಗಳು, ಪ್ರಾಚೀನ ಪ್ರಯೋಗಗಳು, ವ್ಯುತ್ಪತ್ತಿ, ಜ್ಞಾತಿಶಬ್ದಗಳು—ಇವೇ ಮೊದಲಾದ ಅಂಶಗಳಲ್ಲಿ ಆಚಾರ್ಯದ್ವಯರಿಗೆ ಜಿಜ್ಞಾಸೆ ಬಿದ್ದುಬಿಡುತ್ತಿತ್ತು. ಆಗ ಯಾವುದಾದರೂ ಒಂದು ಮಧ್ಯವರ್ತಿಮಾರ್ಗವನ್ನು ಹುಡುಕಿ ಇಬ್ಬರಿಗೂ ಸಮಾಧಾನವಾಗುವಂತೆ ಮಾಡಬೇಕಾಗುತ್ತಿತ್ತು. ಈ ಸಂದರ್ಭಗಳಲ್ಲಿ ವ್ಯಕ್ತಪಡುತ್ತಿದ್ದ ಆಚಾರ್ಯದ್ವಯರ ಅಪಾರವಾದ ಪಾಂಡಿತ್ಯ, ನಿಶ್ಚಿತ ಜ್ಞಾನ, ಅಸಾಧಾರಣ ಸ್ಮರಣಶಕ್ತಿ ಮುಂತಾದುವನ್ನು

ನೋಡಿ ನಾನು ಮಂತ್ರಮುಗ್ಧನಾಗುತ್ತಿದ್ದೆ. ನಾನು ಇವರಲ್ಲಿ ಕಲಿತದ್ದು ಅಪಾರ; ಕಲಿಯಬೇಕಾಗಿರುವುದು ಅನಂತ.

ಆಚಾರ್ಯ ಡಿ. ಎಲ್. ಎನ್. ಅವರ ಸಂಸ್ಕಾರ ಅತ್ಯುಚ್ಚಮಟ್ಟದ್ದು. ಸರ್ವರನ್ನೂ ಸಮಾನವಾಗಿ ಕಾಣುವ ಮನೋಧರ್ಮ ಅವರದು. ಜಾತಿ-ಮತಗಳಿಂದ ಅವರು ಬಹುದೂರ. ಯಾರಿಗೂ ಎಂದೂ ಕೆಡುಕನ್ನು ಮಾಡಬೇಕೆಂದು ಕನಸುಮನಸಿನಲ್ಲಿಯೂ ಯೋಚಿಸಿದವರಲ್ಲ. ವಿದ್ಯಾರ್ಥಿಗಳೆಂದರೆ ಆಚಾರ್ಯರಿಗೆ ಪಂಚಪ್ರಾಣ. ಅಂತೆಯೇ ಪಾಠಪ್ರವಚನ ಅವರಿಗೆ ಅತ್ಯಂತ ಪ್ರಿಯ. ಅದರಲ್ಲಿಯೇ ತಮ್ಮ ಜೀವನದ ಸಾರ್ಥಕತೆಯನ್ನೆಲ್ಲಾ ಕಂಡುಕೊಂಡಿದ್ದಾರೆ.

ಆಚಾರ್ಯ ಡಿ. ಎಲ್. ಎನ್. ಅವರು ಹೇಗೆ ಶಿಷ್ಯವಾತ್ಸಲ್ಯಪ್ರಪೂರ್ಣರೋ ಹಾಗೆಯೇ ಸರಸಸಜ್ಜನಸಂಪನ್ನರು. ಶ್ರೀಯುತರ ಶಿಷ್ಯರು, ಅಭಿಮಾನಿಗಳು, ಮಿತ್ರರು ಅಸಂಖ್ಯಾತ. ಆಚಾರ್ಯರು ಗೊಡ್ಡು ಪಂಡಿತರಲ್ಲ. ಲೌಕಿಕರಲ್ಲಿ ಲೌಕಿಕರು; ವೈದಿಕರಲ್ಲಿ ವೈದಿಕರು. ಒಳ್ಳೆಯ ರಸಿಕರು.

ಆಚಾರ್ಯರ ಹಾಸ್ಯಪ್ರವೃತ್ತಿಗೆ ಒಂದು ಉದಾಹರಣೆಯನ್ನು ಕೊಡಬಹುದು: ಒಮ್ಮೆ ಎಂ. ಎ. ಪರೀಕ್ಷೆ ಆದ ಮೇಲೆ ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತರ ಬರೆಯದ ಒಬ್ಬ ವಿದ್ಯಾರ್ಥಿ ಆಚಾರ್ಯರ ಬಳಿ ಬಂದು "ಪರೀಕ್ಷೆಯಲ್ಲಿ ನಾನು ಚೆನ್ನಾಗಿ ಬರೆದಿಲ್ಲ ಸಾರ್. ಬಹಳ ಹೆದರಿಕೆ ಆಗ್ತಾ ಇದೆ. ಏನು ಮಾಡಲಿ ಸಾರ್" ಎಂದು ಗೋಗರೆದನು. ಅದನ್ನು ಕೇಳಿದ ಆಚಾರ್ಯರು "ಅದಕ್ಕೆ ಏಕಯ್ಯಾ ಯೋಚನೆ ಮಾಡುತ್ತೀಯಾ? ನಿನ್ನ ಹಣೆಯ ಮೇಲೆ ಬರೆದಿರುವುದಾಗುತ್ತದೆ ಹೋಗು" ಎಂದು ಹೇಳಿದರಂತೆ. ಅವರ ಮಾತಿನಿಂದ ಸಮಾಧಾನಗೊಂಡ ವಿದ್ಯಾರ್ಥಿ ತುಸುಹೊತ್ತಿನ ಮೇಲೆ "ನನ್ನ ಹಣೆಯ ಮೇಲೆ ಏನು ಬರೆದಿದೆ" ಎಂದು ಯೋಚಿಸಿದ. ಹಣೆಯ ಮೇಲೆ ಮೂರು ನಾಮಗಳಿದ್ದವು. ಆತನಿಗೆ ಪರೀಕ್ಷೆಯಲ್ಲಿ ಏನಾಯಿತೆಂದು ಹೇಳಬೇಕಾದ ಅಗತ್ಯವಿಲ್ಲ.

ಒಮ್ಮೆ ಆಚಾರ್ಯರು ನಿಘಂಟಿನ ಸಭೆಗಾಗಿ ಕಚೇರಿಗೆ ಬಂದರು. ನೇರವಾಗಿ ನಾನು ಕೂತಿದ್ದ ಮೇಜಿನ ಬಳಿ ಬಂದು ಅರೆಯನ್ನು ಈಚೆಗೆ ಎಳೆದು ಏನನ್ನೋ ಹುಡುಕುತ್ತಾ ಇದ್ದರು. ಗಾಬರಿಗೊಂಡ ನಾನು ಏನೋ ಮಹತ್ತರವಾದ ಕಾಗದ ಪತ್ರಗಳನ್ನು ಮರೆತುಹೋಗಿರಬಹುದೆಂದು ಭಾವಿಸಿ "ಏನು ಸಾರ್ ಹುಡುಕುತ್ತಾ ಇದ್ದೀರಿ" ಎಂದು ಕೇಳಿದೆ. ಅದಕ್ಕೆ ಅವರು "ಈ ಹಳೇ ಡಬ್ಬಿಗಳಲ್ಲಿ ಎಲ್ಲಾದರೂ ನಶ್ಯ ಇದೆಯೇನೋ ಎಂದು ಹುಡುಕ್ತಾ ಇದೀನಿ" ಎಂದರು. ಅವರು ಉಪಯೋಗಿಸಿ ಬಿಟ್ಟಿದ್ದ ಖಾಲಿ ನಶ್ಯದ ಡಬ್ಬಗಳನ್ನೆಲ್ಲಾ ನಾನು ಹಾಗೆಯೇ ಇಟ್ಟಿದ್ದೆ. ಆದರೆ ಅಂದು ಯಾವ ಡಬ್ಬಿಯಲ್ಲಿಯೂ ಒಂದು ಚಿಟಿಕೆ ನಶ್ಯವೂ ಸಿಕ್ಕಲಿಲ್ಲ. ಕೂಡಲೆ ನಶ್ಯವನ್ನು ತರಿಸಿಕೊಟ್ಟದ್ದಾಯಿತು.

ಕನ್ನಡ ಸಾಹಿತ್ಯ ಸರಸ್ವತಿಯ ನೇತ್ರದ್ವಯಗಳೆಂದರೆ ಆಚಾರ್ಯ ತೀ. ನಂ. ಶ್ರೀ ಮತ್ತು ಆಚಾರ್ಯ ಡಿ. ಎಲ್. ಎನ್. ಈ ಎರಡು ಕಣ್ಣುಗಳಲ್ಲಿ ಆಚಾರ್ಯ ತೀ. ನಂ. ಶ್ರೀ ಅವರು ಕೆಲವು ತಿಂಗಳ ಹಿಂದೆ ದಿವಂಗತರಾದರು. ಒಂದು ಕಣ್ಣು ಕುರುಡಾಯಿತು. ಉಳಿದಿರುವುದು ಮತ್ತೊಂದೇ ಕಣ್ಣು; ಆಚಾರ್ಯ ಡಿ. ಎಲ್. ಎನ್. ಉಳಿದಿರುವ ಈ ಒಂದು ಕಣ್ಣಿನಿಂದಲೇ ಎರಡೂ ಕಣ್ಣುಗಳ ಕಾಂತಿಯನ್ನು ಕಂಡುಕೊಳ್ಳಬೇಕಾಗಿದೆ; ಈ ಕಣ್ಣನ್ನು ಜೋಪಾನವಾಗಿ ಉಳಿಸಿಕೊಳ್ಳಬೇಕಾಗಿದೆ.

ಆಚಾರ್ಯ ತೀ. ನಂ. ಶ್ರೀ ಮತ್ತು ಡಿ. ಎಲ್. ಎನ್. ಅವರು ಪರಮ ಮಿತ್ರರು. ಡಿ. ಎಲ್. ಎನ್. ಬಗ್ಗೆ ಅವರು ಮುಕ್ತಕಂಠದಿಂದ ಹೇಳಿರುವುದನ್ನು ಅವರ ಮಾತುಗಳಲ್ಲೇ ಕೇಳಿ: "ಡಿ. ಎಲ್. ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ. ಎಲ್. ಎನ್. ಎನ್ನುವುದು ಕನ್ನಡ ಬಲ್ಲವರಲ್ಲೆಲ್ಲಾ ಈಗ ರೂಢಿಯ ಭಾವನೆಯಾಗಿದೆ. ಪಾಂಡಿತ್ಯದ ಗಳಿಕೆಗಾಗಿ, ಬೆಳವಳಿಗೆಗಾಗಿ, ಏಳಿಗೆಗಾಗಿ ಜೀವಮಾನವನ್ನೇ ತೇಯುತ್ತಿರುವವರು ನರಸಿಂಹಾಚಾರ್ಯರು. ಪಾಂಡಿತ್ಯ ಎನ್ನುವುದು ಕೇವಲ ಸಮಯಸ್ಫೂರ್ತಿಯಿಂದ ಮಿಂಚುವ ವಸ್ತುವಲ್ಲ. ನಿರಂತರವಾದ ವ್ಯಾಸಂಗವೇ ಅದನ್ನು ಸಾಧಿಸುವ ರಾಜಮಾರ್ಗ. ಕಣಕಣವಾಗಿ ವಿಷಯ ಸಂಗ್ರಹಮಾಡಿ, ಸಂಶೋಧನೆಮಾಡಿ, ತನ್ನ ಕಣಜವನ್ನು ತುಂಬಿಕೊಳ್ಳಬೇಕು. ಈ ತುಣುಕುಗಳು ಎಲ್ಲಿ ದೊರೆಯುತ್ತವೆ?-ಯಾವ ನಿಘಂಟಿನಲ್ಲಿ ಯಾವ ಓಲೆಗರಿಯ ಪ್ರತಿಯಲ್ಲಿ, ಯಾವ ಶಾಸನದಲ್ಲಿ, ಯಾವ ಶಾಸ್ತ್ರಗ್ರಂಥದಲ್ಲಿ, ಯಾವ ಭಾಷೆಯ ಯಾವ ಸಂಶೋಧನ ಪತ್ರಿಕೆಯಲ್ಲಿ, ಯಾವ ಪ್ರದೇಶದ ಮನೆಮಾತಿನಲ್ಲಿ?-ಎಂದು ಕಣ್ಣು ಕಿವಿಗಳನ್ನು ತೆರೆದುಕೊಂಡೇ ಗಮನವಿಡಬೇಕು. ಒಂದು ಶಬ್ದದ ಮೂಲವನ್ನು ಪರಿಶೋಧಿಸುವುದಕ್ಕಾಗಿ, ಅದರ ಅರ್ಥವನ್ನು ನಿರ್ಣಯಿಸುವುದಕ್ಕಾಗಿ ನರಸಿಂಹಾಚಾರ್ಯರು ಪಟ್ಟಿರುವ ಶ್ರಮವನ್ನು ಅವರೇ ಬಲ್ಲರು. ಫಲ ದೊರೆತಾಗ ಅವರಿಗೆ ಯಾವ ಆನಂದ

ದೊರೆಯಿತೆಂಬುದನ್ನು ಅವರ ಮುಖ ನೋಡಿಯೇ ಅರಿಯಬೇಕು; ಆ ಆನಂದದಲ್ಲಿ ನಾವೂ ಭಾಗಿಗಳಾಗಬೇಕು.

* * *

ನರಸಿಂಹಾಚಾರ್ಯರಂಥ ದೊಡ್ಡಮನಸ್ಸಿನ ಪ್ರಿಯ ಮಿತ್ರರನ್ನು ಪಡೆದಿರುವುದು ನನ್ನ ಭಾಗ್ಯವಿಶೇಷ. ವಿದ್ವತ್ತಿನ ವಿಷಯವಾಗಿ ಅವರೂ ನಾನೂ ಹಲವು ಸಲ ಬಿರುಸಾಗಿಯೇ ಚರ್ಚೆಮಾಡಿದ್ದೇವೆ. ಕಾದಾಡಿದ್ದೇವೆ ಕೂಡ! ಎಷ್ಟೋ ವಿಚಾರಗಳಲ್ಲಿ ಅಭಿಪ್ರಾಯ ಭೇದಗಳನ್ನು ಜೋಕೆಯಿಂದ ಉಳಿಸಿಕೊಂಡು ಬಂದಿದ್ದೇವೆ. ಆದರೆ ಇದೊಂದೂ ಸ್ನೇಹದ ನಿರ್ಮಲತೆಯನ್ನು ಕದಡಿಲ್ಲ. ಹಾಗೆ ನೋಡಿದರೆ ಕಾಲಚಕ್ರ ಉರುಳಿದಂತೆಲ್ಲ ಸಂಕೋಚದ ತೆರೆಗಳು ಸರಿದು, ಮನಸ್ಸುಗಳು ಬಲು ಹತ್ತಿರಕ್ಕೆ ಬಂದಿವೆ. ನರಸಿಂಹಾಚಾರ್ಯರಂಥ ಮಿತ್ರರನ್ನು ನೆನೆದಾಗ "ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ" ಎಂದು ಚಿಕ್ಕಂದಿನಲ್ಲಿ ಓದಿದ ಸುಭಾಷಿತದ ಪಂಕ್ತಿ ನೆನಪಾಗುತ್ತದೆ. ಈ ಸನ್ಮಿತ್ರನ ಅಪರಂಜಿಯಂಥ ಮನಸ್ಸಿನ ಅರಿವು ಕನ್ನಡಿಗರಿಗೆಲ್ಲ ಚೆನ್ನಾಗಿ ಉಂಟಾಗಲಿ"†

ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗಾಗಿ, ಕೃಶವಾಗುತ್ತಿರುವ ಸಂಶೋಧನೆಯ ಪುನರುತ್ಥಾನಕ್ಕಾಗಿ, ಜಂಗಮ ವಿಶ್ವಕೋಶದಂತಿರುವ ಆಚಾರ್ಯ ಡಿ. ಎಲ್. ಎನ್. ಅವರು ನೂರುಕಾಲ ಬಾಳುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

† ಜ್ಞಾನೋಪಾಸಕ ಮುನ್ನುಡಿ.

ಸದಾಶಿವಗುರು ವಚನಗಳು

ಪತಿ ಮಾತಿಲಿಯಾದರೆ, ಸತಿ ಗಯ್ಯಾಳಿ!
ಸತಿ ಮೂದೇವಿಯಾದರೆ, ಪತಿ ವಚನಕೋವಿದ!
ಧಾತಾರನು ಎಂಥ ವಂಚನಕೋವಿದ ಸದಾಶಿವಗುರು.

ಹಲವು ಕದಳಿಯ ನಡುವೆ ಒಂದು ಕಂಗು ಎದ್ದು ಕಾಣುವ ಹಾಗೆ
ಹಲವು ಕುಬ್ಜರ ನಡುವೆ ಒಬ್ಬ ನಿಡಿಯ ಎದ್ದು ಕಾಣುವ ಹಾಗೆ
ಹಲವರ ಸಾಮಾನ್ಯತೆಯ ನಡುವೆ
ಒಬ್ಬರ ಅಸಾಮಾನ್ಯತೆ ಎದ್ದು ಕಾಣುವುದು ಸದಾಶಿವಗುರು.

ಶಂಖದ ಕೊಂಕು ಕಾರಣವಾಗಿ ಅದರ ನಾದ ಹಿರಿದಾಯಿತ್ತು
ಕೊಂಬಿನಕೊಂಕು ಕಾರಣವಾಗಿ ಅದರ ನಾದ ಹಿರಿದಾಯಿತ್ತು
ಮನದ ಡೊಂಕು ಕಾರಣವಾಗಿ ನನ್ನ ವಚನ ಹಿರಿದಾಯಿತ್ತು
ಸದಾಶಿವಗುರು.

'ಉಪ್ಪು ಕಡಲು'
—ಎಸ್. ವಿ. ಪರಮೇಶ್ವರಭಟ್ಟ

ಕವಿ-ಪ್ರವಾದಿ-ಗೀಬ್ರಾನ್

ನೀಲತ್ತಹಳ್ಳಿ ಕಸ್ತೂರಿ

"ಕವಿಯೆ, ನೀನೀ ಬದುಕಿನ ಬದುಕು.
ಯುಗಯುಗಗಳ ಕಾಠಿಣ್ಯವ ಗೆದ್ದಿಹೆ ನೀನು.
ಕವಿಯೆ, ನೀನಾಳುವೆ ಹೃದಯವನೊಂದು ದಿನ."

"ನೀನು ನನ್ನ ಸೋದರ, ಏಕೆಂದರೆ ನೀನು ಮಾನವ. ನಾವಿಬ್ಬರೂ ಒಂದೇ ಪರಮಾತ್ಮನ ಮಕ್ಕಳು. ನಾವಿಬ್ಬರೂ ಒಂದೇ ಸಮ. ಒಂದೇ ಮಣ್ಣಿನಿಂದ ಆದವರು."

"ಆತ್ಮವನಾಕರ್ಷಿಸುವುದು ಚೆಲುವು
ಪಡೆವುದಲ್ಲ, ನೀಡುವುದೆ ಅದರೊಲವು"

"ಉತ್ಸಾಹ ಇಲ್ಲದ ಬದುಕು ಕತ್ತಲು.
ಅರಿವು ಇಲ್ಲದ ಉತ್ಸಾಹ ಕುರುಡು
ಕೆಲಸ ಇಲ್ಲದ ಅರಿವು ವ್ಯರ್ಥ
ಪ್ರೀತಿ ಇಲ್ಲದ ಕೆಲಸ ಶೂನ್ಯ."

ಇಂಥ ಅನೇಕ ನುಡಿಮುತ್ತುಗಳನ್ನು ಆಯ್ದುಕೊಂಡು ಮಾಲಾಬಂಧವನ್ನಾಗಿ ಮಾಡಿಕೊಟ್ಟವನು ಖಲೀಲ್ ಗೀಬ್ರಾನ್. "ಆಯ್ದು" ಎಂದೆನಲ್ಲವೇ ? ಈ ಮಾತುಗಳು, ಈ ಕಾವ್ಯ ಗೀಬ್ರಾನ್ ರಚಿಸಿದ್ದಲ್ಲವೇ, ಕೇವಲ ಆರಿಸಿದ್ದೇ? ಆರಿಸಿದ್ದಲ್ಲದೆ ಮತ್ತೇನು ? ಎಲ್ಲ ದಿವ್ಯ ಕಾವ್ಯದ ಮೂಲವೂ ಎಲ್ಲೋ. ಆದರೆ ಅವು ಹೊರಬರುವುದು ಅಂಥ ಕಾವ್ಯವನ್ನು ಕಂಡು ಮಾತಿನ ರೂಪದಲ್ಲಿ ಕೊಡಬಲ್ಲ ಕವಿಯೊಬ್ಬನ ಮೂಲಕ. ಕವಿ ಅಂಥ ದಿವ್ಯವಾಣಿಯ ವಾಹಕ. ವೀರನಾರಾಯಣ ಕವಿ, ಕುಮಾರವ್ಯಾಸನೋ ಲಿಪಿಕಾರ. ಕವಿ ಬೇಂದ್ರೆ ಹೇಳುತ್ತಾರಲ್ಲ ಅಂದ ಕವಿತೆ ಬಂದ ಕವಿತೆ ಎಂದು. ಅಂದ ಕವಿತೆ ಸಂಜೆ ಹೊತ್ತಿಗೆ ಮೂರು ಮೊಳ—ಹೊಸೆದು ತೀಡಿ ತಿಣಿಕಿ ಬರೆದ ಸಾಲುಗಳು. ನಾನು ರಚಿಸಿದ್ದು ಎಂದು ಕೊಳ್ಳುತ್ತೇನೆ. ಆದರೆ ನಿಜವಾದ ಕವಿತೆ ದಿವ್ಯಸ್ಫೂರ್ತಿಪಡೆದ ಕಾವ್ಯ ಎಲ್ಲಿಂಪಲೊ ಬರುತ್ತದೆ. ಎಲ್ಲೋ ಬೆಳಗುತ್ತದೆ. ಒಳಗಣ್ಣು ಉಳ್ಳ ಕವಿ ಅದನ್ನು ಕಾಣುತ್ತಾನೆ. ಕಂಡ ಆ ದೃಶ್ಯವನ್ನು ಆ ಕಣಸನ್ನು ಮಾತಿನ ಮೂಲಕ ನಮಗೆ ಕೊಡುತ್ತಾನೆ. ಅಂಥ ಕವಿತೆ ಶ್ರೇಷ್ಠ. ಅಂಥ ಕವಿ ಶ್ರೇಷ್ಠ. ಅಂಥ ಕಾವ್ಯ ಕೇವಲ ಕವಿಯ ಕೃತಿ ಮಾತ್ರವೇ ಅಲ್ಲದೆ ಅದರಲ್ಲಿ ದಿವ್ಯತೆಯ ಕೈಚಳಕ ಇರುವುದರಿಂದ, ಕವಿಯೊಂದಿಗೆ ಅದೂ ಸಾಯುವುದಿಲ್ಲ. ಆತನ ನಂತರವೂ ಉಳಿಯುತ್ತದೆ. ಅದರ ಸತ್ಯ ಕೇವಲ ತತ್ಕಾಲದ್ದು ಮಾತ್ರವಲ್ಲ. ಲೋಕದ ಉದಯದಿಂದ ಇಂದಿನವರೆಗೂ ನಡೆದು ಬಂದಿರುವ, ಹಾಗೂ ಮುಂದೆಯೂ ನಡೆಯುವ ಚಿರಂತನ ಚಿರನೂತನವಾದ ಸತ್ವ. ಅಂತೇ ಆ ಕಾವ್ಯ ಚಿರಂಜೀವಿ. ಆ ದೀಪ ಆರದ ದೀಪ; ಅದರ ತೈಲ ತೀರದ ತೈಲ.

ಗೀಬ್ರಾನ್ ಅಂಥವನೊಬ್ಬ ಕವಿ. ಆತನ ಕಾವ್ಯ ಅಂಥ ದಿವ್ಯ ಕಾವ್ಯ. ಬದುಕು ಬಿಡಿ ಬಿಡಿ ಅಲ್ಲ. ಇಡೀ ಒಂದು ಅಖಂಡ. ವಿವಿಧ ರೂಪಗಳನ್ನು ಒಳಗೊಂಡು ವಿವಿಧ ಬಗೆಗಳನ್ನು ತೋರಿದರೂ ಮೂಲತಃ ಒಂದೇ. ಈ ಮಾತಿಗೆ ಉದಾಹರಣೆ ಖಲೀಲ್ ಗೀಬ್ರಾನ್. ಏಕೆಂದರೆ ಆತ ಕವಿ ಮಾತ್ರ ಅಲ್ಲ, ಆತ ಕಲೆಗಾರ. ಚಿತ್ರಕಲೆಯಲ್ಲಿ ಸಿದ್ಧಹಸ್ತ. ಬದುಕಿನ ಒಳ ಸತ್ವವನ್ನು ಕಾಣುವ ದಾರ್ಶನಿಕ. ಅನುಭವದ ಪರಿಸರದಲ್ಲಿ ದಿವ್ಯತೆಯನ್ನು, ಜೀವದ ಆಟದಲ್ಲಿ ಪರಮಾತ್ಮನ ಲೀಲೆಯನ್ನು ಕಾಣುವ ಅನುಭಾವಿ. ಲೋಕದ ಮಟ್ಟದಿಂದ ಮೇಲೆ ಎತ್ತರದಲ್ಲಿ ನಿಂತು, ನಿನ್ನೆ ಇಂದು ನಾಳೆಗಳನ್ನು ಅವಲೋಕಿಸಿ ಭವಿಷ್ಯ ನುಡಿವ ಪ್ರವಾದಿ ಆತ. ಆತನದು ಬಹುಮುಖ ಚೇತನ. ಆತ ಕವಿತೆ ಬರೆದಿದ್ದಾನೆ. ಕಾದಂಬರಿ ಬರೆದಿದ್ದಾನೆ. ಅನುಭಾವಯುತವಾದ ಕತೆಗಳನ್ನು ವಚನಗಳನ್ನು ಬರೆದಿದ್ದಾನೆ. ಚಿತ್ರಗಳನ್ನೂ ಬರೆದಿದ್ದಾನೆ. ಆತನ ಈ ಎಲ್ಲಾ ಕೃತಿಗಳಲ್ಲೂ ಒಂದೇ ಮಧುರಭಾವ ಸತ್ಯ, ಶಿವ, ಸೌಂದರ್ಯ ಹಾಗೂ ಮಾನವೀಯ ಅನುಕಂಪ ಪ್ರತಿಫಲಿತವಾಗಿವೆ. ಒಂದೊಂದು ಕೃತಿಯೂ ಕರುಣೆಯ ಜೇನಿನಲ್ಲಿ ಅದ್ದಿದ ಹಣ್ಣಿನ ಹೋಳು. ಮಾನವನ ಹಕ್ಕುಬಾಧ್ಯತೆಗಳು, ದೀನದಲಿತರ ಉದ್ಧಾರ ಹಾಗೂ ಬದುಕಿನ ಅಂತಿಮ ಗುರಿಯ ಅರಿವು ಈ ಬಗ್ಗೆ ಗೀಬ್ರಾನ್ ಭಾವಪೂರ್ಣವಾಗಿ ಹೃದಯಂಗಮವಾಗಿ ಬರೆದಿದ್ದಾನೆ. ಹೀಗಾಗಿ "ಗೀಬ್ರಾನಿಸಂ" ಎಂಬ ಪಂಥವೇ ತಲೆ ಎತ್ತಿಬಿಟ್ಟಿತು.

ಈ ಕವಿ ಹುಟ್ಟಿದ್ದು ಲೆಬೆನಾನ್ ದೇಶದಲ್ಲಿ. ಲೆಬೆನಾನ್ ಒಂದು ಅರಬ್ ದೇಶ. ಪೌರ್ವಾತ್ಯ ಪರಂಪರೆಗೆ ಸೇರಿದ್ದು.

ಆ ದೇಶದ ಈಚೆಗೆ ಪೈಗಂಬರ್ ಮುಹಮ್ಮದರ ನಾಡು. ಆಚೆಗೆ ಏಸುಸ್ವಾಮಿಯ ಬೀಡು. ವಿಶ್ವದ ಪವಿತ್ರ ಸ್ಥಳಗಳಲ್ಲಿ ಒಂದಾದ ಜೆರೂಸಲೆಂ ಹತ್ತಿರವೇ ಇದೆ. ದೊರೆ ಸಾಲೋಮನ್ ದೇವಾಲಯವನ್ನು ಕಟ್ಟಲು ಉಪಯೋಗಿಸಿದ ದೇವದಾರು ಮರಗಳ ಅಡವಿ ಅಲ್ಲೇ ಇದೆ. ಏಸುಸ್ವಾಮಿಯ ಜೀವಿತದಲ್ಲಿ ಆತನ ಪಾದಸ್ಪರ್ಶದಿಂದ ಪುನೀತಗೊಂಡು ಆತನ ದಿವ್ಯವಾಣಿಯನ್ನು ಮಾರ್ನೊಳಗಿಸಿದ ಆ ಸಿನಾಯ್ ಬೆಟ್ಟ, ಆ ಜೋರ್ಡಾನ್ ನದಿ, ಆ ಕೊಳ್ಳ ಎಲ್ಲ ಅಲ್ಲೆ ಸಮೀಪದಲ್ಲಿ. ಇತ್ತ ಈ ಕಡೆ ಅರೇಬಿಯಾದ ಮರಳು ಕಾಡಿನ ಬರಡಿನಲ್ಲಿ ಚೈತನ್ಯದ ತಂಪು ಬುಗ್ಗೆಯಾಗಿ ಅವತರಿಸಿದ ಪೈಗಂಬರ್ ಮುಹಮ್ಮದರ ನೆನಪು ತರುವ ಸ್ಥಳಗಳು. ಇಂಥ ಸನ್ನಿವೇಶದಲ್ಲಿ ಉದಿಸಿದ ಗೀಬ್ರಾನನ ಆತ್ಮ ಈ ಎರಡೂ ವಿಚಾರ ಧಾರೆಗಳಿಂದ ತತ್ವದರ್ಶನಗಳಿಂದ ಹದವಾಯಿತು. ಮೆದುವಾಯಿತು. ಆ ವಾತಾವರಣ ಈ ಕವಿ ಕೋಗಿಲೆಯ ತೊಟ್ಟಿಲಾಯಿತು.

ಕವಿಯ ಜನ್ಮ ೧೮೮೩ರಲ್ಲಿ. ಬಾಲ್ಯದ ಕಲಿಕೆ ಅದೇ ಬ್ಶಾರಿ ಊರಿನಲ್ಲಿ. ಅರಾಬಿಕ್ ಹಾಗೂ ಸಿರ್‌ನಾಕ್ ಭಾಷೆಗಳಲ್ಲಿ. ಹನ್ನೆರಡನೆಯ ವಯಸ್ಸಿಗೇ ಅಮೆರಿಕಾಕ್ಕೆ ಪ್ರಯಾಣ. ಬಾಸ್ಟನ್ ನಗರದಲ್ಲಿ ವಾಸ. ಮತ್ತೆ ಹದಿನೈದಕ್ಕೆ ತಾಯಿನಾಡಿಗೆ ಬಂದ. ಮದ್ರಸಾತ್ ಅಲ್ ಹಿಕ್‌ಮತ್ ಎಂಬ ಪ್ರಖ್ಯಾತ ಜ್ಞಾನಮಂದಿರದಲ್ಲಿ ಅಭ್ಯಾಸ ಮಾಡಿದ. ಸಿರಿಯಾ ಲೆಬೆನಾನ್‌ಗಳಲ್ಲೆಲ್ಲಾ ಸಂಚರಿಸಿದ. ಐತಿಹಾಸಿಕ ಸ್ಥಳಗಳು, ಭಗ್ನಾವಶೇಷಗಳು, ಪ್ರಾಚೀನ ನಾಗರಿಕತೆಯ ಅವಶೇಷಗಳು ಎಲ್ಲವನ್ನು ನೋಡಿ ಬಂದ. ಮತ್ತೆ ೧೯೦೨ರಲ್ಲಿ ಲೆಬೆನಾನ್ ಬಿಟ್ಟವನು ಪುನಃ ಹಿಂದಿರುಗಲಿಲ್ಲ. ಮುಂದೆ ಆತ ಕಲಿತದ್ದು ಚಿತ್ರಕಲೆ. ಪ್ಯಾರಿಸ್ಸಿನ ಲಲಿತಕಲಾ ಪರಿಷತ್ತಿನಲ್ಲಿ ಕಲಾವಿದ ರೊಡಿನ್ ಬಳಿ. ಆತನ ಲೇಖನಿಯಂತೆಯೆ ಕುಂಚವೂ ಅಸಾಮಾನ್ಯ ಆಯಿತು. ಆತನ ಪ್ರತಿಭೆ ಚಿತ್ರಕಲೆಯಲ್ಲೂ ಅರಳಿತು, ಮೆರೆಯಿತು. ಆತನ ಕಲಾಕೃತಿಗಳು ಸರ್ವೋತ್ಕೃಷ್ಟ ಎನಿಸಿಕೊಂಡವು. ಗುರು ರೊಡಿನ್ನನೇ ಗೀಬ್ರಾನನ್ನು ಈ ಯುಗದ "ವಿಲಿಯಂ ಬ್ಲೇಕ್" ಎಂದು ಕರೆದ. ಆತನ ಚಿತ್ರಕಲೆ ವಿಶ್ವದ ನಾನಾ ಕಡೆ ಪ್ರದರ್ಶಿತವಾಯಿತು. ಖ್ಯಾತಿ ಲೋಕವಿಸ್ತರವಾಯಿತು. ಪೌರ್ವಾತ್ಯ ದೇಶದ ಈ ಮಹಾಪುರುಷನ ಹೆಸರು ಪೂರ್ವ–ಪಶ್ಚಿಮ ಗೋಳಗಳಲ್ಲೆಲ್ಲ ಹಬ್ಬಿತು. ಆತನ ಲೇಖನ ಕೃತಿಗಳು ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಭಾಷೆಗಳಿಗೆ ಅನುವಾದಗೊಂಡವು.

ಮುಂದೆ ಗೀಬ್ರಾನ್ ಅಮೆರಿಕಾದಲ್ಲಿ ನೆಲಸಿದ. ಸುಮಾರು ಇಪ್ಪತ್ತು ವರ್ಷ, ೧೯೩೧ರಲ್ಲಿ ಆತನು ಕೊನೆಯುಸಿರು ಎಳೆಯುವವರೆಗೂ ಅಲ್ಲೆ ಇದ್ದ. ಇಂಗ್ಲಿಷಿನಲ್ಲಿ ಬರೆದದ್ದೂ ಅಲ್ಲೇ. ಮೊದಲ ಬರೆಹಗಳು ಅರಾಬಿಕ್ ಭಾಷೆಯಲ್ಲಿ. ತನ್ನ ನಲ್ಮೆಯ ತಾಯಿನುಡಿಯಲ್ಲಿ ಗೀಬ್ರಾನ್ ಅತ್ಯಂತ ಮಧುರವಾದ ಬಂಧುರವಾದ, ಸುಂದರವಾದ ಭಾವಗಳನ್ನು ತೋಡಿಕೊಂಡಿದ್ದಾನೆ.

ಆತನ ಪ್ರಕಟಿತ ಕೃತಿಗಳು ಇವು:

The Madman, Twenty Drawings, The Forerunner, The prophet, Sand and Foam, Jesus the Son of Man, The Earth Gods, The Wanderer The Garden of the Prophet, Prose Poems. Nymphs of the Valley, Spirits Rebellions, Tears and Laughter. ಇವಲ್ಲದೆ ಗೀಬ್ರಾನನನ್ನೇ ಕುರಿತು ಆತನ ಸಮೀಪವರ್ತಿಯಾಗಿದ್ದ ಬಾರ್ಬರ್ ಯುಂಗ್ ಬರೆದ ಪುಸ್ತಕ "The Man from Lebanon" —ಇದು ಗೀಬ್ರಾನ್ ಸಾರಸ್ವತ ಲೋಕ.

ಮಾನವನ ನೋವು ನಲಿವು ಆತನ ಹೃದಯಾಂತರಾಳದಲ್ಲಿ ಹುದುಗಿರುವ ನೋವಿನ ಛಾಯೆ, ಆಸೆ ಆಕಾಂಕ್ಷೆ, ಬದುಕಿನ ಆಳ ಅಗಲದಲ್ಲೆಲ್ಲಾ ಆವರಿಸಿರುವ ಪರಮ ಸತ್ಯಗಳು, ಮಾನವನ ಸಂಕಟ, ಕಣ್ಣೀರುಗಳಿಂದಲೇ ಮೂಡುವ ಒಂದು ಬಗೆಯ ಹೃದ್ಯ ಶಾಂತಿ ನಲಿವು, ಬದುಕಿನ ಲೀಲೆಯಲ್ಲೂ ಕಾಣುವ ದಿವ್ಯಾತ್ಮದ ಕೈಚಳಕ, ಬದುಕಿನ ಬಗ್ಗೆ ಅನಾಸಕ್ತಿಯುತವಾದರೂ ತೀವ್ರವಾದ ಆಸ್ಥೆ, ಪ್ರೇಮ, ಮಾನವೀಯ ಅನುಕಂಪ, ವಿಶ್ವಮಾನವತ್ವ—ಇವು ಗೀಬ್ರಾನನ ಕೃತಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಭಾವತರಂಗಗಳು.

ಆತನ ಭಾವಮಾಧುರ್ಯಕ್ಕೆ ತಕ್ಕಂತೆ ಅವನ ಶೈಲಿ. ಛಂದೋಬದ್ಧವಾದ ಪದ್ಯವೂ ಉಂಟು. ಸಲೀಸಾಗಿ ನಡೆವ ವಚನವೂ ಉಂಟು. ಗದ್ಯವೂ ಉಂಟು. ಗದ್ಯವಾಗಲಿ, ಪದ್ಯವಾಗಲಿ, ಎಲ್ಲದರಲ್ಲೂ ಒಂದು ಲಯ ಉಂಟು. ಹೊರ ನೋಟಕ್ಕೆ ವಿನಹ, ಇದು ಗದ್ಯ ಇದು ಪದ್ಯ ಎಂದು ಬೇರೆ ಮಾಡಿ ಹೇಳುವಂತಿಲ್ಲ. ಏಕೆಂದರೆ ಎರಡೂ ಅಷ್ಟೇ ಮಧುರ, ಲಯಬದ್ಧ. ಒಂದು ಖಂಡುಗದಷ್ಟು ಗದ್ಯದಲ್ಲಿ ಹೇಳಬಹುದಾದ್ದನ್ನು ಒಂದು ಬಳ್ಳದಷ್ಟು ಪದ್ಯದಲ್ಲಿ ಹೇಳಬಹುದು ಎಂದು ಕವಿ ಪು. ತಿ. ನ. ಎನ್ನುತ್ತಾರೆ. ಆದರೆ ಗೀಬ್ರಾನ್ ಗದ್ಯದಲ್ಲೂ ಪದ್ಯದಲ್ಲಿ ಹೇಳು

ವಷ್ಟೇ ಬಿಗಿಯಾಗಿ, ಧ್ವನಿಪೂರ್ಣವಾಗಿ ಹೇಳುವುದರಲ್ಲಿ ಸಮರ್ಥ. ಮುಟ್ಟಿದರೆ ರಸ ಒಸರುವಷ್ಟು ಮೃದು ಮಧುರ ವಾದ ಭಾಷೆ-ಬರಹ.

ಈತನ ಇನ್ನೊಂದು ವೈಶಿಷ್ಟ್ಯ ಎಂದರೆ ಪ್ರತಿಮಾ ವಿಧಾನದ ಬಳಕೆ, ಉಪಮೆಗಳ ಬಳಕೆ. ಸಮರ್ಥರಾದ ಕವಿಗಳೆಲ್ಲರೂ ಈ ಎರಡು ಅಲಂಕಾರಗಳನ್ನು ಮುಖ್ಯ ವಾಗಿ ಉಪಯೋಗಿಸಿಕೊಳ್ಳುತ್ತಾರೆ. ಅದರಲ್ಲೂ ಅನು ಭಾವಿಗಳು, ಪರತತ್ವದ ವಿಷಯವನ್ನು ಹೇಳುವವರು ಈ ಅಲಂಕಾರಗಳನ್ನು ಬಳಸುವುದು ಹೆಚ್ಚು. ಸಾಧಾರಣ, ಸಾಮಾನ್ಯ ಎಂದು ನಮಗೆ ತೋರುವ ಶಬ್ದದ ಹಿಂದೆ ಅಪಾರ ಅರ್ಥವನ್ನು ಅಲೌಕಿಕ ಭಾವವನ್ನು ಇಡು ತ್ತಾರೆ. ಇಂಥ ಉಪಮೆ, ಪ್ರತಿಮಾ ಅಲಂಕಾರಗಳ ರಚನೆ ಯಲ್ಲಿ ಗೀಬ್ರಾನ್ ಸಿದ್ಧ ಹಸ್ತ. ಈ ವಿಷಯದಲ್ಲಿ ಆತ ಸಾಮ್ರಾಟನೇ ಎನ್ನಬೇಕು.

ಮೇಲೆ ಹೆಸರಿಸಿದ ಆತನ ಕೃತಿಗಳು ಎಲ್ಲವನ್ನೂ ಪರಿ ಚಯ ಮಾಡಿಕೊಳ್ಳುವುದು ಈ ಬರಹಕ್ಕೆ ಮೀರಿದ್ದು. ಅಂತೆಯೆ ಒಂದೆರಡರ ಪ್ರಸ್ತಾಪ ಮಾಡಿ ತೃಪ್ತಿಗೊಳ್ಳಬೇ ಕಾಗಿದೆ. ಕೇವಲ ರುಚಿಗೆ ಕೊಡುವ ಪಾಕ ಅಷ್ಟೆ. ಹೊಟ್ಟೆ ತುಂಬಿಸಲು ಅಲ್ಲ. ರುಚಿಕಂಡ ಓದುಗರು ಆ ಅನಂತ ರಸಪಾಕದತ್ತ ಗಮನ ಹರಿಸಿ ಸವಿಯಬಹುದು. ಮನನ ಮಾಡಬಹುದು. ಅಲ್ಲಿ ಕಿವಿಗೆ ಹಿತವಾದ ಮಾತು ಇದೆ. ಮನಸ್ಸಿಗೆ ಹಿತವಾದ ವಿಚಾರ ಇದೆ. ಹೃದಯಕ್ಕೆ ಹಿತ ವಾದ ಭಾವ ಇದೆ. ಇಹಕ್ಕೆ ಬೇಕಾದ, ಇಲ್ಲಿ ಸಲ್ಲಲು ದಾರಿ ತೋರುವಂಥ ವಿಚಾರ ಇದೆ. ಪರಕ್ಕೆ ಬೇಕಾದ, ಅಲ್ಲಿ ಸಲ್ಲಲು ಬೇಕಾದ ಭಾವ ಇದೆ.

ಗೀಬ್ರಾನನ ಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದುದು "The Prophet". ಅದು ಸುಮಾರು ಇಪ್ಪತ್ತೆಂಟು ಗದ್ಯ ಕಾವ್ಯಗಳ ಸಂಗ್ರಹ. ಅಲ್ಲಿ ಕವಿ ಒಬ್ಬ ಪ್ರವಾದಿ ಆಗಿ ದ್ದಾನೆ. ಪ್ರವಾದಿ ಈ ಲೋಕದಲ್ಲಿ ಹುಟ್ಟಿ ಬೆಳೆದರೂ, ತನ್ನ ಸುತ್ತಲ ವಾತಾವರಣದಿಂದ ಮೇಲೆ ನಿಂತು, ಭೂತ ಭವಿಷ್ಯಗಳನ್ನು ಕಂಡುಕೊಂಡು ತನ್ನ ಸುತ್ತಲ ಜನತೆಗೆ ದಾರಿ ದೀಪ ಆಗುತ್ತಾನೆ. ನೋವಿನಲ್ಲಿ ಇರುವವರಿಗೆ ಸಾಂತ್ವನದ ನಲವನ್ನು ಕೊಡುತ್ತಾನೆ. ಇಹದ ಸಂಕಟ ದಲ್ಲಿ ತೊಳಲುತ್ತಿರುವವರಿಗೆ ಪರತತ್ವದ ಕಾಣ್ಕೆಯನ್ನು ನೀಡಿ ಅವರ ದುಃಖದ ಭಾರವನ್ನು ಕಡಮೆ ಮಾಡುತ್ತಾನೆ. ಇಂಥ ಪ್ರವಾದಿ ಈಗ ಈ ಲೋಕದಿಂದ ಆಚೆ ಸರಿವ ಕಾಲ ಬಂದಿದೆ. ಆತನಿಗಾಗಿ ದೋಣಿ ಬಂದಿದೆ. ಪ್ರವಾದಿ ಹೊರಟಿದ್ದಾನೆ, ಮುಂದಿನ ಅನಂತಯಾನಕ್ಕೆ. ಆತನ ಜೀವದ ಜೀವ ಆದ ಆ ಜನ ಹಿಂದೆಯೆ ಹೊರಟಿದ್ದಾರೆ. "ನಾನು ಬಿಟ್ಟು ಹೋಗುತ್ತಿರುವುದು, ಹಳೆಯ ಬಟ್ಟೆ ಯಂಥ ಬದುಕನ್ನಷ್ಟೇ ಅಲ್ಲ, ನನ್ನ ಚರ್ಮವನ್ನೇ ಸುಲಿದು ಬಿಟ್ಟು ಹೋಗುತ್ತಿದ್ದೇನೆ. ನನ್ನ ಹಿಂದೆ ನಿಲ್ಲುವುದು ಒಂದು ವಿಚಾರ ಮಾತ್ರ ಅಲ್ಲ, ಹಸಿವು ನೀರಡಿಕೆಗಳಿಂದ ಸವಿ ಗೊಂಡ ಹೃದಯವನ್ನೇ ನಿಮ್ಮಲ್ಲಿ ಬಿಟ್ಟು ಹೋಗುತ್ತಿದ್ದೇನೆ" ಎನ್ನುತ್ತಾನೆ ಪ್ರವಾದಿ. ಏಕೆಂದರೆ ಆತನ ಜೀವ ಜನ ರೊಂದಿಗೆ ಅಷ್ಟು ಬೆಸೆದುಕೊಂಡಿದೆ. ಆದರೆ ಹಾಗೆಂದು ನಿಲ್ಲಲಾದೀತೇ? ಗಗನ ಗಾಮಿಯಾದ ಗರುಡ ಗೂಡನ್ನು ಬಿಟ್ಟು ಹಾರಲೇ ಬೇಕು. ನದಿಗೆ ಸಾಗರದಲ್ಲೆ ಮುಕ್ತಿ, ಸಾರ್ಥ್ಯಕ್ಯ ನಡುವೆ ನಿಲ್ಲಬಾರದು. ನಿಲ್ಲಲಾರದು. ಅಂತೇ ಪ್ರವಾದಿಯ ಬಾಳ ಹೊಳೆ ಈಗ ಅನಂತ ಸಾಗರದಲ್ಲಿ ಅನಂತಬಿಂದುವಾಗಿ ಸೇರಿಹೋಗುತ್ತದೆ. ಇಂಥ ಸನ್ನಿ ವೇಶದಲ್ಲಿ ಆತನ ಜೀವದ ಜೀವವಾದ ಆ ಜನ, ಜೊತೆಯ ಜನ ಹಿಂದೆಯೆ ಬರುತ್ತಾರೆ ದುಃಖ ಭಾರದಿಂದ ಬಾಗಿ. ಪ್ರವಾದಿ ಅವರನ್ನು ಸಾಂತ್ವನಗೊಳಿಸುತ್ತಾನೆ. ಅವರು ಕೊನೆಯ ಬಾರಿಗೆ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡು ತ್ತಾನೆ. ಪ್ರವಚನ ಮಾಡುತ್ತಾನೆ. ತಾನು ಕಂಡು ಕೊಂಡ ದಿವ್ಯ ಜ್ಞಾನವನ್ನು ಅವರಿಗೆ ಹಂಚಿ ಕೊಡು ತ್ತಾನೆ. ಹೀಗೆ ಹೇಳುವ ವಿಷಯಗಳು ಬದುಕಿನ ಎಲ್ಲಾ ಅಂಶಗಳನ್ನು ಒಳಗೊಂಡವು. ಪ್ರೇಮ, ಮದುವೆ, ಮಕ್ಕಳು, ದಾನ, ತಿಂಡಿತೀರ್ಥ, ಕೆಲಸ, ಸುಖದುಃಖ, ಮನೆ, ಉಡುಗೆ, ಕೊಡುವಿಕೆ, ಕೊಳ್ಳುವಿಕೆ, ತಪ್ಪು, ಶಿಕ್ಷೆ, ಕಾನೂನು, ಸ್ವಾತಂತ್ರ್ಯ, ವಿವೇಕ, ರಾಗ, ನೋವು, ಆತ್ಮಜ್ಞಾನ, ಉಪದೇಶ, ಸ್ನೇಹ, ಮಾತುಗಾರಿಕೆ, ಕಾಲ, ಒಳಿತು, ಕೆಡಕು, ಪ್ರಾರ್ಥನೆ, ಭೋಗ, ಸೌಂದರ್ಯ, ಮತ ಹಾಗೂ ಮರಣ,—ಹೀಗೆ ಹುಟ್ಟಿನಿಂದ ಸಾವಿನವರೆಗೆ ನಮ್ಮ ಬದು ಕಿನಲ್ಲಿ ಬರುವ ನಾನಾ ಭಾವತರಂಗಗಳನ್ನು, ಸನ್ನಿವೇಶ ಗಳನ್ನು ಕುರಿತು ಪ್ರವಾದಿ ಚಿಂತನಮಯವಾದ ಪ್ರವಚನ ನೀಡುತ್ತಾನೆ. ವಿಯೋಗ ದುಃಖದಿಂದ ನೊಂದ ಜನದ ಎದೆ ಸಮಾಧಾನ ಪಡುತ್ತದೆ.

"ಒಂದೇಗಳಿಗೆ ಅನಂತಾಕಾಶದಲ್ಲಿ ವಿಶ್ರಾಂತಿ. ಮತ್ತೆ ಒಬ್ಬ ತಾಯಿಗೆ ಹುಟ್ಟುತ್ತೇನೆ ಮತ್ತೆ ನಿಮ್ಮಲ್ಲಿಗೆ ಬರುತ್ತೇನೆ" ಎಂದು ಭರವಸೆ ಇತ್ತು ಪ್ರವಾದಿ ತನಗಾಗಿ ಬಂದ ದಿವ್ಯ ನೌಕೆಯನ್ನು ಏರಿ ಅನಂತಸಾಗರದಲ್ಲಿ ತೇಲಿ ಹೋಗುತ್ತಾನೆ.

"ಪ್ರವಾದಿ" ಪುಸ್ತಕಕ್ಕೆ ಜೊತೆಯಾದುದು "Garden of the Prophet". ಇದರಲ್ಲೂ ಪ್ರವಾದಿಯ

ಚಿಂತನೆ, ಭಾವನೆಗಳು ಮೃದು ಮಧುರವಾಗಿ ವ್ಯಕ್ತಗೊಂಡಿವೆ; ಬದುಕಿಗೆ ದಾರಿ ದೀಪವಾಗುವ, ಮನನೀಯವಾಗುವ ವಿಚಾರಗಳು ಮೂಡಿ ಬಂದಿವೆ. ಒನ್ಮೆ ಓದಿದರೂ, ಮತ್ತೆ ಮನಸ್ಸಿನಲ್ಲಿ ನೆನಪಿನ ಅಲೆ ಎಬ್ಬಿಸಿ ಮೆಲಕು ಹಾಕುವಂತೆ ಮಾಡಿ, ಪರಿಣಾಮಕಾರಕವಾಗುವ ಭಾವನೆಗಳು ಈ ಎರಡು ಗ್ರಂಥಗಳಲ್ಲಿ ಅಡಕವಾಗಿವೆ. ವಿಚಾರಪ್ರಿಯರಿಗೆ ಯೋಗ್ಯ ವಿಚಾರಗಳೂ ಇಲ್ಲಿವೆ. ಕಾವ್ಯಾಭ್ಯಾಸಿಗಳಿಗೆ ಕಲಾಮಯ ಕಾವ್ಯವೂ ಇದೆ.

"Jesus the son of Man" ಒಂದು ವಿಶಿಷ್ಟ ಗ್ರಂಥ. ಏಸುಸ್ವಾಮಿಯ ಬಗ್ಗೆ ಲೆಕ್ಕವಿಲ್ಲದಷ್ಟು ಗ್ರಂಥಗಳು ಬಂದಿವೆ. ಆತನ ಜೀವಿತ ಕಾರ್ಯ ತತ್ವಗಳ ಬಗ್ಗೆ ಹೇರಳ ವಿವರಣೆ ಸಿಗುತ್ತದೆ. ಆದರೆ ಗೀಬ್ರಾನ್ ಹೇಳುವ ರೀತಿ ಬೇರೆ. ಜೀಸಸ್ ಆಗಿಹೋಗಿ ೧೯೦೦ ವರ್ಷ ಆದವು. ಈಗ, ದೂರದ ಲೆಬೆನಾನ್‌ನಲ್ಲಿ ಕುಳಿತ ಒಬ್ಬ ಭಾವುಕ ಹಿಂದಿನ ಆ ದಿನಗಳನ್ನು ನೆನೆಸಿಕೊಳ್ಳುತ್ತಾನೆ. ಏಸುವಿನ ಜೊತೆಯಲ್ಲಿ ಬದುಕಿದ ಶಿಷ್ಯರು, ಬಂಧುಗಳು, ಜನ, ದೊರೆಗಳು, ಕೊನೆಗೆ ಜೊತೆಗೇ ಶಿಲುಬೆಗೇರಿದವರು ಒಟ್ಟಿನಲ್ಲಿ ಏಸುವಿನ ಬದುಕಿನಲ್ಲಿ ಸುಳಿದಾಡಿದ, ಅಥವಾ ಸಂಬಂಧಪಟ್ಟ ವ್ಯಕ್ತಿಗಳ ಅಂತರಂಗವನ್ನು ಒಳಹೊಕ್ಕು ಅವರ ಭಾವನೆಗಳನ್ನು ಅರಿತು ಮಧುರವಾದ ಭಾಷೆಯಲ್ಲಿ ನಮಗೆ ಹೇಳುತ್ತಾನೆ. ಏಸುವಿನ ಬಗ್ಗೆ, ತಾಯಿ ಮೇರಿ ಏನೆಂದುಕೊಂಡಿರಬಹುದು, ಶಿಷ್ಯರಾದ ಪೀಟರ್, ಜಾನ್ ಮುಂತಾದವರ ವಿಚಾರ ಏನು, ದ್ರೋಹ ಮಾಡಿದ ಜೂಡಾಸ್‌ನ ಮನಸ್ಸು ಹೇಗೆ, ವಿಚಾರಣೆಗೆ ಗುರಿಮಾಡಿದ ಯೆಹೂದ್ಯರು, ವಿಚಾರಿಸಿದ ದೊರೆ ಪಿಲಾತ, ಆತನ ರಾಣಿ, ಏಸುವಿನಿಂದ ಬೆಳಕನ್ನು ಕಂಡುಕೊಂಡ ಮೇರಿ ಮ್ಯಾಗ್ಡಲೀನ್, ಜೊತೆಗೇ ಶಿಲುಬೆ ಹೊತ್ತು ಮರಣ ಪಡೆದ ಕಳ್ಳರು ಹೀಗೆ ಅನೇಕ ಮಂದಿ ತಮ್ಮ ತಮ್ಮ ಅಂತರಂಗವನ್ನು ತೋಡಿಕೊಳ್ಳುತ್ತಾರೆ. ಆಯಾ ಜನರ ಮಾತಿನಲ್ಲಿಯೇ ಏಸುವಿನ ಬದುಕನ್ನು ಚಿತ್ರಿಸುವ ವಿಚಿತ್ರಸೃಷ್ಟಿ ಈ ಗ್ರಂಥ. ಪ್ರತ್ಯಕ್ಷವಾಗಿ ಏಸುವಿನ ಬದುಕನ್ನು ವರ್ಣಿಸುವುದಿಲ್ಲ. ಆದರೆ ಪರೋಕ್ಷವಾಗಿ ಒಬ್ಬೊಬ್ಬರ ಆತ್ಮನಿವೇದನವೂ ಆ ದಿವ್ಯಾತ್ಮನ ಬದುಕಿನ ಎಳೆಗಳನ್ನು ನೇಯುತ್ತಾ ಹೋಗುತ್ತದೆ. ಕೊನೆಗೆ ನಮ್ಮ ಕಣ್ಣ ಮುಂದೆ ನಿಲ್ಲುವುದು "ಮಾನವ ಪುತ್ರ" ಏಸುಸ್ವಾಮಿಯ ದೇವಸದೃಶವಾದ ಭವ್ಯ ಚಿತ್ರ.

ಗೀಬ್ರಾನನ ಕೊನೆಯ ಕೃತಿ "Tears and Laughter" "ಕಂಬನಿ ಹಾಗೂ ನಗೆ" "It is my fervent hope that my whole life on this earth will ever be tears and laughter (ನನ್ನ ಇಹಲೋಕದ ಜೀವನವೆಲ್ಲ ಸದಾ ಕಂಬನಿ ಹಾಗೂ ನಗೆ ಆಗಿರುವುದು ಎಂದೇ ನನ್ನ ಕಳಕಳಿಯ ನಂಬಿಕೆ)—ಇದೇ ಈ ಗ್ರಂಥಕ್ಕೆ ಕವಿ ಬರೆದಿರುವ ನಾಂದೀ ವಾಕ್ಯ. ಗೀಬ್ರಾನನ ಪರಿಣತಮತಿಯ ಪರಿಪಕ್ವ ಫಲ ಈ ಗ್ರಂಥ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಬದುಕಿನ ನೋವು ನಲಿವುಗಳಿಂದ ಪಡೆದ ಸತ್ಯ, ಆನಂದ ಇಲ್ಲಿ ಮೂವತ್ತು ಕಾವ್ಯ ಖಂಡಗಳಲ್ಲಿ ಮೂಡಿ ಬಂದಿದೆ. ಅವುಗಳಲ್ಲಿ ಕೆಲವು ಪದ್ಯ ಕೆಲವು ಗದ್ಯ. ಅನುಭಾವಮಯವಾದ ಒಂದೆರಡು ಕಥೆಗಳೂ ಉಂಟು. ಅಲೆಯ ಹಾಡು, ಮಳೆಯ ಹಾಡು, ಕವಿ, ಹೃದಯದ ಹಾಡು, ಹೂವಿನ ಹಾಡು, ಪ್ರೇಮದ ಹಾಡು, ಮಾನವನ ಹಾಡು, ಸಾವಿನ ಚೆಲುವು ಮೊದಲಾದವು ಬಹು ಸುಂದರವಾದ ಪದ್ಯಗಳು. ಇವುಗಳಲ್ಲಿ ಮಧುರ ಭಾವಗಳಷ್ಟೇ ಅಲ್ಲ ಮನನೀಯ ವಿಚಾರಗಳೂ ತುಂಬಿವೆ. ಮಾನವೀಯ ಅನುಕಂಪ, ವಿಶ್ವಭ್ರಾತೃತ್ವ ಭಾವ, ಲೋಕದ ಹಲವು ಅನೀತಿಗಳ ಬಗ್ಗೆ ವಿಡಂಬನ, ಮೇಲಾಗಿ ಬದುಕಿನ ಬಗ್ಗೆ ಅತೀವ ಗೌರವ, ಶ್ರದ್ಧೆ, ಆಸ್ಥೆ ಇಲ್ಲಿ ಎದ್ದು ಕಾಣುವ ಅಂಶಗಳು. ಎಲ್ಲವೂ ದಿವ್ಯದ ಸೃಷ್ಟಿ. ಎಲ್ಲ ಸೃಷ್ಟಿಯಲ್ಲೂ ದಿವ್ಯದ ಲೀಲೆ ಉಂಟು. ಮಾನವನ ರಾಗ ದ್ವೇಷಯುತ ಬುದ್ಧಿ ಈ ದಿವ್ಯ ಸೃಷ್ಟಿಯನ್ನು ಕೆಡಿಸುವುದು ಸಲ್ಲದು. ಸೃಷ್ಟಿಯ ಸೊಬಗನ್ನು ಸವಿದು ಅದಕ್ಕೆ ಭಂಗ ಬಾರದಂತೆ ತಾನೂ ಬದುಕಿದರೆ ಜನ್ಮ ಸಾರ್ಥಕವಾಗುತ್ತದೆ. ನೋವಿರಲಿ ನಲವಿರಲಿ, ಎರಡೂ ದೇವನ ಆಟವೇ. ಎಲ್ಲವೂ ಒಳಿತಿಗೇ, ಅಂತೆಯೆ ಎಲ್ಲವನ್ನೂ ಸಂತೋಷದಿಂದ ಅನುಭವಿಸೋಣ—ಎನ್ನುವ ಶುಭದೃಷ್ಟಿ ಈ ಕವಿಯದು. ನೋಡಲು ಚಿಕ್ಕದಾದ ಈ ಗ್ರಂಥ ಮಹತ್ವಪೂರ್ಣವಾದುದು. ಮನವನ್ನು ಎಚ್ಚರಿಸುವ, ಎದೆಯನ್ನು ಕರಗಿಸುವ ಭಾವಸಂಕಲನ ಇದು.

ಮೊದಲೇ ಹೇಳಿದಂತೆ ಗೀಬ್ರಾನ್ ತುಂಬ ಜನಪ್ರಿಯ ಕವಿ. ಆತನ ಗ್ರಂಥಗಳು ಲಕ್ಷಗಟ್ಟಲೆ ಮಾರಾಟವಾಗಿವೆ. ಇಪ್ಪತ್ತಕ್ಕೂ ಹೆಚ್ಚಿನ ಭಾಷೆಗಳಿಗೆ ಅನುವಾದಗೊಂಡಿವೆ. ಮಾನವ ಪುತ್ರ ಜೀಸಸ್ ಹಾಗೂ ಪ್ರವಾದಿ ಮೊದಲಾದ ಗ್ರಂಥಗಳು ಕನ್ನಡಕ್ಕೂ ಬಂದಿವೆ. ಬರಬೇಕಾದವೂ ಇನ್ನೂ ಬಹಳ ಇವೆ.

ಈ ಜನಪ್ರಿಯತೆಗೆ ಕಾರಣ, ಗೀಬ್ರಾನನ ಅತೀವ ಮಾನವೀಯ ಕಾರುಣ್ಯ ಹಾಗೂ ಸುಮಕೋಮಲ ಭಾವ. ತಳಮಳಿಸುವ ಹೃದಯಗಳಿಗೆ ತಂಪನ್ನು ಶಾಂತಿಯನ್ನು

ಎರೆವ ದಿವ್ಯ ಕಾವ್ಯ. ಅದರಲ್ಲೂ ಪಾಶ್ಚಾತ್ಯ ನಾಗರೀಕತೆ, ಔದ್ಯೋಗಿಕ ಯುಗದ ಆತುರ, ಗೊಂದಲ, ಅಶಾಂತಿ ಗಳಿಂದ ಜರ್ಝರಿತರಾದವರಿಗೆ, ಪೌರ್ವಾತ್ಯ ಜ್ಞಾನವನ್ನು ಮನಮುಟ್ಟುವಂತೆ ಬೀರುವ ಈ ಕೃತಿಗಳು ವಿಶೇಷವಾಗಿ ಹೃದ್ಯವಾಗುತ್ತದೆ. ಅಂತೆಯೆ ವಿಮರ್ಶಕ ಜಾರ್ಜ್ ರಸ್ಲ್ ಎಂದದ್ದು: "I do not think the East has spoken with as beautiful a voice as in the "Prophet" of Kahlil Gibran, since the Gitanjali of Tagore" (ಠಾಕೂರರ "ಗೀತಾಂಜಲಿ" ಯ ನಂತರ ಖಲೀಲ್ ಗೀಬ್ರಾನನ "ಪ್ರವಾದಿ" ಯಲ್ಲಿನಷ್ಟು ಸುಂದರವಾಗಿ ಪೌರ್ವಾತ್ಯ ವಾಣಿ ಮೂಡಿ ಬಂದಿಲ್ಲ ಎಂದು ನನ್ನ ಭಾವನೆ.)

ಈಗ ಒಂದೆರಡು ವಚನಗಳು :

(೧) ಇದು "ಮದುವೆ" ಯನ್ನು ಕುರಿತದ್ದು—

Love one another, but make not a bond of Love—
Let it rather be a moving sea between the shores of your souls.
Sing and dance together and be joyous. but let each one of you be alone.
Even as the strings of thc lute are alone, though they quiver with the same music.

ಪರಸ್ಪರ ಪ್ರೇಮ ಇರಲಿ, ಆದರೆ ಪ್ರೇಮ ಬಂಧನ
ಆಗದಿರಲಿ,
ಅದು ನಿಮ್ಮ ಆತ್ಮದ ದಂಡೆಗಳ ನಡುವೆ ಹರಿವ
ಕಡಲು ಆಗಿರಲಿ.
ಒಟ್ಟಿಗೆ ಹಾಡಿರಿ, ಕುಣಿಯಿರಿ, ಆದರೆ ಪ್ರತ್ಯೇಕವಾಗಿರಿ,
ವಾದ್ಯದ ತಂತಿಗಳು ಒಂದೇ ಗಾನಕ್ಕೆ ಮಿಡಿದರೂ,
ಇರುವುದು ಬೇರೆ ಬೇರೆ ಅಲ್ಲವೇ ?

(2) What death takes away,
No man can restore,
What heaven has blessed,
No man can punish.
What love has joined,
No man can divide,
What Eternity has willed,
No man can alter.

ಜೀವವನೊಯ್ಯುವ ಸಾವಿನ ಕೈಯನು
ತಡೆಯುವ ಮಾನವನಿಲ್ಲ,
ದೇವರ ಹರಕೆಯು ಕಾಪಿನೊಳಿರುವುದ
ದಂಡಿಪ ಆಳಿಲ್ಲ ;
ಪ್ರೇಮದ ನೆಳಲಲಿ ಒಂದಾದವರನು
ಅಗಲಿಪರಾರಿಲ್ಲ,
ಅನಂತ ದೇವನ ಅಣತಿಗಳನು
ಬದಲಿಪ ಮಾನವನಿಲ್ಲ.

ಕೊನೆಯದು ಕವಿ ವಾಣಿ :—

Poet, you are the life of this life, and you have triumphed over ages despite their territtoriee,
Poet, you will one day rule the hearts and therefore your Kingdom has no ending,
Poet, examine your Crown of thorns ; you will find concealed in it a budding wreath of laurel.

ಕವಿಯೆ, ನೀನೀ ಬದುಕಿನ ಬದುಕು,
ಕಾಲದಳತೆಯನು ಮೀರಿ ನಿಂತಿರುವೆ
ಕಾಲಕಾಲದಾ ಕಾಠಿಣ್ಯವ ಗೆದ್ದು,
ಕವಿಯೆ, ನೀನಾಳುವೆ ಹೃದಯವನೊಂದು ದಿನ,
ಅದಕೇ ಅಂತ್ಯವ ಕಾಣದು ನಿನ್ನಯ ರಾಜ್ಯ,
ಕವಿಯೆ, ನೋಡದೊ ನಿನ್ನಯ ಮುಳ್ಳಿನ ಮುಕುಟವ,
ಕಾಣುವೆ ನೀ ಆ ಮುಳ್ಳಿನ ಮರೆಯಲಿ ನಲವಿನ
ನಸುಮೊಗ್ಗಿನ ದಂಡೆಯನು.

ಕವಿಯ ಕನಸು ನನಸಾಗಲಿ, ಎಂಬುದು ಇಲ್ಲಿನ ಭರತ ವಾಕ್ಯ.

ಸಂಸ್ಕೃತ ನಾಟಕಗಳಲ್ಲಿ ಸ್ತ್ರೀ

ದಯಾನಂದ ತೋರ್ಕೆ

ಸಂಸ್ಕೃತ ಸಾಹಿತ್ಯದಲ್ಲಿ ಸ್ತ್ರೀಯರ ಸ್ಥಾನ ವಿಶಿಷ್ಟವಾದುದು.

ನಾಟಕದ ಮೂಲೋತ್ಪತ್ತಿ ಯಾವ ದೇಶದಿಂದಾಯಿತೆಂದು ನಿಶ್ಚಿತವಾಗಿ ಹೇಳಲಾಗದಿದ್ದರೂ ಪಾಶ್ಚಿಮಾತ್ಯರು ಮಾತ್ರ ತಮ್ಮ ನಾಟಕಗಳು ಗ್ರೀಕ ದೇಶದಿಂದಲೇ ಜನ್ಮತಳೆದವೆಂದು ಭಾವಿಸುತ್ತಾರೆ. ಆದರೆ ಸಂಸ್ಕೃತ ನಾಟಕಗಳು ಯಾವ ಮೂಲದಿಂದಲೂ ಹುಟ್ಟದೆ ಸ್ವತಂತ್ರವಾಗಿ ರೂಪಗೊಂಡವು. ಭಾರತದ ಭಾಷೆಗಳಿಗೆಲ್ಲ ಸಂಸ್ಕೃತವೇ ಬಹುಮಟ್ಟಿಗೆ ತಾಯಿ. ಪ್ರೊ. ವೆಬರರವರು ಸಂಸ್ಕೃತ-ಗ್ರೀಕ ನಾಟಕಗಳ ಮಧ್ಯೆ ಸಂಬಂಧ ಕಲ್ಪಿಸಿದರೂ (ಗ್ರೀಕ ನಾಟಕಗಳ ಪ್ರಭಾವ ಸಂಸ್ಕೃತ ನಾಟಕಗಳ ಮೇಲಾಯಿತೆಂದು ಇವರ ಅಭಿಪ್ರಾಯ), ಇವೆರಡರಲ್ಲಿ ಸಾಮ್ಯ ಎಲ್ಲಿಯೂ ಕಂಡುಬರುವುದಿಲ್ಲ. ಗ್ರೀಕ ನಾಟಕಗಳಲ್ಲಿ ತತ್ವಕ್ಕೆ ಪ್ರಾಮುಖ್ಯತೆಯಿದ್ದರೆ ಸಂಸ್ಕೃತ ನಾಟಕಗಳಲ್ಲಿ ಪ್ರಣಯಕ್ಕೆ ಆ ಸ್ಥಾನ ಇರುವುದನ್ನು ನಾವು ಗಮನಿಸಬಹುದು. ಸಂಸ್ಕೃತ ನಾಟಕಗಳಲ್ಲಿ ಪ್ರಣಯ ನಿರೂಪಣೆ (Romance) ಸುಂದರವಾಗಿದ್ದು ಇಲ್ಲಿ ನೃತ್ಯ-ಸಂಗೀತಗಳಿಗೂ ಹೆಚ್ಚು ಅವಕಾಶವಿದೆ.

ಭಾರತೀಯ ನಾರಿ ಸಮಾಜದಲ್ಲಿ ವಿಶಿಷ್ಟ ಸ್ಥಾನ ಪಡೆದವಳಾಗಿದ್ದಾಳೆ. ಧರ್ಮದ ರಕ್ಷಣೆ ಸ್ತ್ರೀಯಿಂದಲೇ ಎನ್ನುವುದು ಜನರ ಕಲ್ಪನೆ. ಸುಖ-ಸಂತೋಷಗಳಿಗಂತೂ ಸರಿಯೇ ಸರಿ. ಕವಿಗಳು, ಕಲಾಕಾರರು ಸ್ತ್ರೀಯನ್ನು ವೈವಿಧ್ಯ ಪೂರ್ಣವಾಗಿ ರೂಪಿಸಿದಂತೆ, ನಾಟಕಕಾರರೂ ಹಲವು ಗುಣ ಧರ್ಮದ ಸ್ತ್ರೀಯರನ್ನು ತಮ್ಮ ನಾಟಕಗಳಲ್ಲಿ ನಿರ್ಮಿಸಿದ್ದಾರೆ.

ಸಂಸ್ಕೃತ ನಾಟಕಗಳನ್ನು ಕೂಲಂಕಶವಾಗಿ ಅವಲೋಕಿಸಿದಾಗ ಅವುಗಳಲ್ಲಿ ಸ್ತ್ರೀ ಹೆಚ್ಚಾಗಿ ಕಂಡು ಬರುವದು ಪ್ರಣಯಿನಿಯಾಗಿ, ಧರ್ಮಪತ್ನಿಯಾಗಿ. ಇದರ ಹೊರತು ಬೇರೆ ಬಗೆಯ ಸ್ತ್ರೀ ಪಾತ್ರ ನಾಟಕಕಾರರನ್ನಾಲೀ ಪ್ರೇಕ್ಷಕರನ್ನಾಗಲೀ ಆಕರ್ಷಿಸಿದಂತಿಲ್ಲ. ಸಮಾಜದ ಸಮಸ್ಯೆಗಳೊಂದಿಗೆ ಸ್ತ್ರೀಯರ ಸಂಬಂಧವೇ ನಾಟಕದ ಮೂಲ ಧ್ಯೇಯದಂತಿದೆ. ಬಹು ತರವಾದ ನಾಟಕಗಳಲ್ಲಿ ಎತ್ತಿಕೊಂಡ ಸಮಸ್ಯೆಗಳೆಲ್ಲ ಒಂದೇ ಮೂಲದವುಗಳು.

ನಾಟಕಗಳಲ್ಲಿ ಮೊದಲು ಸ್ತ್ರೀ ಪಾತ್ರಗಳ ಸೃಷ್ಟಿಯಾದದ್ದು ಭಾಸನಿಂದ. ಅನಂತರ ಅಶ್ವಘೋಷ, ಶೂದ್ರಕ ಇವರುಗಳು ತಮ್ಮ ನಾಟಕಗಳಲ್ಲಿ ಸ್ತ್ರೀಪಾತ್ರ ರಚನೆಯನ್ನು ಸುಂದರವಾಗಿ ಮಾಡಿದರು. ಆದರೆ ನಾಟಕ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಪ್ರಾರಂಭವಾದದ್ದು ಕಾಳಿದಾಸನಿಂದ. ಈತ ನಿರ್ಮಿಸಿದ ಪಾತ್ರಗಳಲ್ಲಿ ಹೊಸ ಜೀವ ತುಂಬಿಕೊಂಡಿತು.

ಕೆಲವು ನಾಟಕಗಳಲ್ಲಿಯ ಸ್ತ್ರೀ ಪಾತ್ರಗಳನ್ನು ಅವಲೋಕಿಸೋಣ. ರಾಮಾಯಣದ ಕಥೆಯಲ್ಲಿ ಗಮನಿಸಬೇಕಾದುದೆಂದರೆ ಹದಿನಾಲ್ಕು ವರ್ಷ ಗಂಡನ ಅಗಲುವಿಕೆಯಿಂದ ವಿರಹ ವೇದನೆಯಲ್ಲಿ ಬಳಲಿದ ಲಕ್ಷ್ಮಣನ ಹೆಂಡತಿ ಊರ್ಮಿಳೆಗೆ ಎಲ್ಲಿಯೂ ಪ್ರಾಮುಖ್ಯತೆಯಿಲ್ಲದಿರುವದು. ಇದರಿಂದಾಗಿ ಲಕ್ಷ್ಮಣ ಅವಿವಾಹಿತನೇ ಆಗಿದ್ದನೇನೋ ಅನ್ನಿಸುವದು. ರಾಮನ ಮದುವೆಯ ಪ್ರಸಂಗ ಸುಂದರವಾಗಿ ಚಿತ್ರಿತವಾಗಿದ್ದರೂ ಲಕ್ಷ್ಮಣನ ಮದುವೆಯ ಬಗೆಗೆ ಎಲ್ಲಿಯೂ ಪ್ರಸ್ತಾಪವಿಲ್ಲ. 'ಪ್ರತಿಮಾ' ನಾಟಕದಲ್ಲಿ ಶೂರ್ಪಣಖಿಯ ವೃತ್ತಾಂತದ ಉಲ್ಲೇಖವಿಲ್ಲ. ಕೈಕೇಯಿಯ ಪಾತ್ರ ಸೌಮ್ಯವಾಗಿದ್ದು ಭಾಸ ಆಕೆಯನ್ನು ಎತ್ತಿ ಹಿಡಿದಿದ್ದಾನೆ (ದಶರಥನ ವಚನ ಪರಿಪಾಲನೆಗಾಗಿ ಆಕೆ ರಾಮನ ವನವಾಸಕ್ಕಾಗಿ ಹಠ ತೊಟ್ಟಳೆನ್ನುವದು ಇವನ ಹೇಳಿಕೆ). ರಾಮಾಯಣದಲ್ಲಿ ಸೀತೆ, ರಾಮನ ಹೊರತಾಗಿ ಉಳಿದವರಿಗೆಲ್ಲ ತಾಯಿಯಾಗಿದ್ದಾಳೆ. ಅಂದಿನಿಂದಲೂ ಸ್ತ್ರೀ ಗಂಡನನ್ನು ದೇವರೆಂದು ಭಾವಿಸುತ್ತ ಬಂದಿದ್ದಾಳೆ. ಸೀತೆ ರಾಮನನ್ನು, ಊರ್ಮಿಳೆ ಲಕ್ಷ್ಮಣನನ್ನು, ಹಿಡಿಂಬೆ ಭೀಮನನ್ನು ಪ್ರತ್ಯಕ್ಷ ದೇವರ ಅವತಾರವೆಂದೇ ಭಾವಿಸಿದ್ದರು.

'ಮೃಚ್ಛಕಟಿಕ'ದಲ್ಲಿ ಬರುವ ಸ್ತ್ರೀ ಪಾತ್ರಗಳು ಮೂರೇ ಮೂರು. ವಸಂತಸೇನಾ ಮತ್ತು ಇಬ್ಬರು ಸೇವಕಿಯರು (ಮದನಿಕೆ ಮತ್ತು ರಾಧಿಕೆ) ಕಥೆ ರೂಪುಗೊಂಡದ್ದು ಚಾರುದತ್ತ-ವಂಸತಸೇನೆಯರ ಪ್ರಣಯದ ಸುತ್ತ. ಸ್ತ್ರೀಯನ್ನು ಪೇಟೆಯಲ್ಲಿ ವಿಕ್ರಯಿಸುತ್ತಿದ್ದ ಸಂಗತಿ ಮೊದಲು ಗೊತ್ತಾಗುವದು ಇದೇ ನಾಟಕದಿಂದ. ಆದರೆ ವಸಂತಸೇನಾ ತನ್ನ ಮಾನ ರಕ್ಷಣೆಗಾಗಿ ಹೋರಾಡಿದಳು. ಈಕೆಯ ನಡತೆ ಸ್ತ್ರೀ ಜಾತಿಗೆ ಮಾದರಿಯಾದುದು.

ಶೂದ್ರಕನ 'ಮೃಚ್ಛಕಟಿಕ'ದಲ್ಲಿಯ ಸ್ತ್ರೀ ಪಾತ್ರ ರಚನೆ ವಿಶಿಷ್ಟವಾದುದು. ಬ್ರಾಹ್ಮಣ ಸ್ತ್ರೀಯ ಉಚ್ಚ ಸಂಸ್ಕೃತಿಯನ್ನಿಲ್ಲಿ ಅರಿಯಬಹುದು.

ಕಾಳಿದಾಸ ತನ್ನ ನಾಟಕಗಳಲ್ಲಿ ಸ್ತ್ರೀಗೆ ವಿಶಿಷ್ಟ ಸ್ಥಾನ ಕಲ್ಪಿಸಿದ್ದಾನೆ. ಹೆಣ್ಣನ್ನು ಬಹುಮುಖವಾಗಿ ಕಂಡ ಇವನ ದೃಷ್ಟಿಯಲ್ಲಿ ಅವಳ ಬಗ್ಗೆ ಗೌರವವಿದೆ. ಈ ದಿಶೆಯಲ್ಲಿ ಇವನ 'ಅಭಿಜ್ಞಾನ ಶಾಕುಂತಲ' ವಿಶಿಷ್ಟ ಸ್ಥಾನಗಳಿಸುತ್ತದೆ. 'ಮಾಲವಿಕಾಗ್ನಿಮಿತ್ರ' ದಲ್ಲಿಯ ಧಾರಿಣಿ, ಮಾಲವಿಕೆ, ಬಕುಲಾವಲಿಕೆ, ನಿಪುಣಿಕೆ ಈ ಸ್ತ್ರೀ ಪಾತ್ರಗಳು ಸಜೀವವಾಗಿದ್ದು, ನೈಜ ಜೀವನದ ಚಿತ್ರವನ್ನೀಯುತ್ತವೆ. 'ವಿಕ್ರಮೋರ್ವಶೀಯ'ದ ಊರ್ವಶಿ ಒಬ್ಬ ಕಾಮದೇವತೆ. ಹೆಣ್ಣು ಗೌರವಾನ್ವಿತ ಕುಟುಂಬದವಳಾಗಿದ್ದರೂ ಪ್ರಣಯಭರಿತಳಾದಾಗ ತನ್ನೆಲ್ಲ ಸಂಸ್ಕೃತಿ ಸಮಾಜವನ್ನು ಕಡೆಗಣಿಸಿ ವರ್ತಿಸಬಹುದಾದ ನೀತಿ ಊರ್ವಶಿಯ ಪಾತ್ರದಿಂದ ಸ್ಪಷ್ಟವಾಗುತ್ತದೆ. ಪುರೂರವ ತನ್ನ ಮೇಲಿನ ಪ್ರೀತಿಯನ್ನು ಕಡಿಮೆಗೊಳಿಸಿದಾಗ ಆಕೆ ವರ್ತಿಸುವ ರೀತಿಯೇ ಇದಕ್ಕೆ ಸಾಕ್ಷಿ. ಆಗ ವಿದೂಷಕ "ನಿನಗೆ ಅರಸನ ಮೇಲೆ ಅಷ್ಟು ಆಳವಾದ ಪ್ರೀತಿಯಿತ್ತೆ ?" ಎಂದು ಚುಚ್ಚುಮಾತು ಕೇಳುತ್ತಾನೆ. ಆದರೆ 'ಮಾಲವಿಕಾಗ್ನಿಮಿತ್ರ'ದ ಮಾಲವಿಕೆಯು ಮುಗ್ಧ ಹೆಣ್ಣು. ಆಕೆ ಗಂಡನನ್ನು ಪ್ರೀತಿಸುತ್ತಿದ್ದುದು ಪವಿತ್ರ ಹೃದಯದಿಂದ. ಸಚ್ಚಾರಿತ್ರ್ಯ, ತಾಯ್ತನದ ಹಿರಿಮೆ, ಸ್ತ್ರೀಯ ಕರ್ತವ್ಯಗಳಿಗೆಲ್ಲ ಮಾಲವಿಕೆ ಉತ್ತಮ ಉದಾಹರಣೆಯಾಗುವಂತೆ ಕಾಳಿದಾಸ ಅವಳನ್ನು ಸೃಷ್ಟಿಸಿದ್ದಾನೆ. ಅಗ್ನಿಮಿತ್ರ ಮಾಲವಿಕೆಯನ್ನು ಮೊದಲು ಸಂಧಿಸಿದಾಗಲೇ ಇಬ್ಬರಲ್ಲೂ ಪ್ರಣಯಾಂಕುರವಾಗುತ್ತದೆ. ಇಬ್ಬರೂ ಮದುವೆ ಮಾಡಿಕೊಂಡಾಗ, ಅಗ್ನಿಮಿತ್ರನ ಮೊದಲನೆಯ ಹೆಂಡತಿ ಧಾರಿಣಿ ಗಂಡನ ಮೇಲೆ ಕೋಪಿಸಿಕೊಳ್ಳುವುದಿಲ್ಲ. ಅವಳು ಕೂಡ ಒಬ್ಬ ಸಹನಶೀಲ, ಸಚ್ಚಾರಿತ್ರ್ಯದ ಹೆಣ್ಣು. ಇವಳು ಪ್ರತಿಯೊಬ್ಬರ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುವಂತೆ ಕಾಳಿದಾಸ ಇವಳನ್ನು ರೂಪಿಸಿದ್ದಾನೆ. ಕಾಳಿದಾಸನೇ ಇವಳನ್ನು "ಮಹಾದೇವಿ" "ಗೃಹಿಣಿ" ಎಂದೆಲ್ಲ ಹೊಗಳಿದ್ದಾನೆ.

ಕಾಳಿದಾಸನ ಪಾತ್ರಸೃಷ್ಟಿ 'ಅಭಿಜ್ಞಾನ ಶಾಕುಂತಲ' ದಲ್ಲಿ ಹೊಸ ಹೊಳಪನ್ನು ಹೊಂದಿದೆ. ಇದರಲ್ಲಿ ಶಕುಂತಲೆ ದುರಂತ ಹೆಣ್ಣಾಗಿ ಚಿತ್ರಿತವಾಗಿದ್ದಾಳೆ. ಓದುಗರಾಗಲೀ, ಪ್ರೇಕ್ಷಕರಾಗಲೀ ನಿಟ್ಟುಸಿರು ಬಿಡುವಂಥ ಕರುಣಾಪ್ರಧಾನವಾದ ಪಾತ್ರ ಇವಳದು. ಈಕೆಯ ಮೂಲಕ ಕಾಳಿದಾಸ ಕಾಲುಜಾರುವ ತರುಣಿಯರನ್ನು ಎಚ್ಚರಿಸಿದ್ದಾನೆ.

ಶಕುಂತಲೆಯನ್ನು ಹಲವು ಪಾತ್ರಗಳಲ್ಲಿ ಕಾಣಬಹುದು. ಈಕೆ ಸ್ತ್ರೀಸಮಾಜದ ಕೈಗನ್ನಡಿ. ಕನ್ಯೆ, ವಧು, ತಿರಸ್ಕೃತ ಹೆಣ್ಣು, ತಾಯಿ, ಕೊನೆಗೆ ಸಂತೃಪ್ತ ಹೆಣ್ಣು. ಈಕೆಯ ಪಾತ್ರಸೃಷ್ಟಿ ವೈವಿಧ್ಯಪೂರ್ಣವಾಗಿದೆ. ಒಂದೊಂದರಲ್ಲೂ ಭಾವನೆಯ ತೀವ್ರತೆ ಅಗಾಧವಾಗಿದೆ. ಆಕೆ ಗಾಂಧರ್ವ ವಿವಾಹ ಮಾಡಿಕೊಂಡ ತಪ್ಪನ್ನು ಕಾಳಿದಾಸ ಅವಳ ಮೇಲೆ ಹಾಕದೆ, ಅದು ಅವಳ ನಂಬಿಕೆಯ ಮುಗ್ಧ ಸ್ವಭಾವವೆಂದು ಹೇಳಿರುವುದರಲ್ಲಿ ಔಚಿತ್ಯವಿದೆ.

ಕಾಳಿದಾಸ ಕೇವಲ ಮನರಂಜನೆಗಾಗಿ ನಾಟಕಗಳನ್ನು ಬರೆದಿಲ್ಲ. ವ್ಯಕ್ತಿಯ ಮೇಲೆ ಪರಿಣಾಮವಾಗಲೆಂದು ಪ್ರತಿ ಪಾತ್ರದಲ್ಲೂ ಜೀವ ತುಂಬಲು ಯತ್ನಿಸಿದ್ದಾನೆ. ಅದಕ್ಕೆಂದೇ ಅವನ ನಾಟಕಗಳು ಜನಪ್ರಿಯವಾಗಿವೆ. ಅವನ ದೃಷ್ಟಿಯಲ್ಲಿ ಸ್ತ್ರೀ ದೇವಿಗೆ ಸಮಾನಳಾದವಳು. "ಹೆಣ್ಣಿಗೆ ಮೊದಲ ಸ್ಥಾನ"ದ ಪಾಠ ಕಲಿಸಿದವನೂ ಇವನೇ. ಇವನು ಸ್ತ್ರೀಯನ್ನು ಕಂಡ ದೃಷ್ಟಿ 'ಮಾಲವಿಕಾಗ್ನಿಮಿತ್ರ' ದಲ್ಲಿಯ ಬಕುಲಾವಲಿಕಾ, ನಿಪುಣಿಕಾ, ಜ್ಯೋತ್ಸ್ನಿಕಾ, ಕೌಮುದಿಕಾ ಪಾತ್ರಗಳಲ್ಲಿ ಸ್ಪಷ್ಟವಾಗಿದೆ.

ಕಾಳಿದಾಸ ಚಿತ್ರಿಸಿದ ಸತ್ಯವತಿ, ಗೌತಮಿ, ಸುವ್ರತ, ದಾಕ್ಷಾಯಿಣಿ, ಪಾರಿವ್ರಾಜಿಕಾ ಇವರುಗಳದು ಗಂಭೀರವಾದ ನಿಲುವಾದರೂ, ಪ್ರೇಮಮಯಿಗಳು. ಗೌತಮಿ ಒಬ್ಬ ಆದರ್ಶ ತಾಯಿ, ಪವಿತ್ರ ಹೃದಯದವಳು.

ಶ್ರೀಹರ್ಷ, ವಿಶಾಖದತ್ತ, ಭವಭೂತಿ, ಭಟ್ಟನಾರಾಯಣ, ರಾಜಶೇಖರ ಮುಂತಾದವರು ತಮ್ಮ ತಮ್ಮ ನಾಟಕಗಳಲ್ಲಿ ಸ್ತ್ರೀಪಾತ್ರಗಳನ್ನು ಹಲವು ಬಗೆಯಾಗಿ ರೂಪಿಸಿದ್ದಾರೆ. ಶ್ರೀಹರ್ಷನ ಸ್ತ್ರೀ ಪಾತ್ರಗಳು ಮುಖ್ಯವಾಗಿ ತರುಣರನ್ನು ಸೆಳೆಯುತ್ತವೆ. ಪ್ರಿಯದರ್ಶಿಕಾ, ರತ್ನಾವಳಿ ಮತ್ತು ಮಲಯವತಿ ಇವರುಗಳು ಇವನ ನಾಯಕಿಯರು. ಇವನ ನಾಟಕಗಳಲ್ಲಿ 'ನಾಟ್ಯಶಾಸ್ತ್ರ' ದ ಅಂಶವಿರುವದರಿಂದಲೇ ಅವು ತರುಣ ಜನಾಂಗವನ್ನು ಆಕರ್ಷಿಸುತ್ತಿರಬೇಕು. ಅಲ್ಲದೆ ಇವುಗಳಲ್ಲಿ ಸಂಗೀತ, ನೃತ್ಯಗಳನ್ನಳವಡಿಸಲೂ ಅವಕಾಶವಿದೆ. ಇದಕ್ಕೂ ಕಾರಣವಿಲ್ಲದಿಲ್ಲ. ಶ್ರೀಹರ್ಷ ಒಬ್ಬ ರಾಜ. ಈತ ಬೆಳೆದದ್ದು ವೈಭವಪರಿಸರದಲ್ಲಿ. ಇದರ ಪರಿಣಾಮ ಇವನ ನಾಟಕಗಳ ಮೇಲಾಗಿದೆ. ಇವನ ವಾಸವದತ್ತೆ ಸ್ತ್ರೀ ಸಮಾಜದ ಕೈಗನ್ನಡಿ.

ಸಂಸ್ಕೃತ ನಾಟಕಗಳಲ್ಲಿ ಸ್ತ್ರೀಪಾತ್ರ, ಪೋಷಣೆ ಸಚ್ಚಾರಿತ್ರ್ಯದ ಸುತ್ತ ಆಗಿದೆ. ಮಲಯವತಿಯಂಥವರು ಧಾರ್ಮಿಕ

ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿದ್ದು ಗಂಡನನ್ನು ಪಡೆಯಲು, ವಾಸವದತ್ತೆಯಂಥವರು ಪೂಜಿಸಿದ್ದು ಕೈಹಿಡಿದ ಗಂಡನಿಗೆ ಒಳಿತಾಗಲೆಂದು. ಮಲಯವತಿಯ ಪಾತ್ರ ರಚನೆ 'ನಾಗಾನಂದ' ದಲ್ಲಿ ಅಪೂರ್ವವಾಗಿ ಚಿತ್ರಿತವಾಗಿದೆ. ಕಥಾವಸ್ತು ಪ್ರಣಯ ಪ್ರಸಂಗದ್ದಾದರೂ ತಾತ್ವಿಕ (Philosophical) ಪಾಠವಿದೆ ಇದರಲ್ಲಿ. ಎಲ್ಲ ನಾಟಕಗಳಲ್ಲಿಯಂತೆ ಕಥಾನಾಯಕಿ ಇಲ್ಲಿ ಹಿರಿಯ ಸ್ಥಾನ (main part) ಗಳಿಸದೆ ಕೇವಲ ನೆರಳಾಗಿ ನಿಂತು ಪ್ರಭಾವ ಬೀರಿದೆ. ಇದರಲ್ಲಿಯ ತತ್ವಗಳು ಬುದ್ಧನ ತತ್ವಗಳಿಗೆ ಸರಿಸಮನಾದುದು.

'ಮುದ್ರಾರಾಕ್ಷಸ' ದಲ್ಲಿ ಸ್ತ್ರೀ ಪಾತ್ರಗಳಿಗೆ ಪ್ರಾಮುಖ್ಯತೆಯಿಲ್ಲ. ಇಲ್ಲಿರುವುದು ಕೇವಲ ಎರಡೇ ಎರಡು ಬಗೆಯ ಸ್ತ್ರೀಪಾತ್ರಗಳು—ಸೇವಕಿಯರು (ಸೊನೋತ್ತರಾ ಮತ್ತು ವಿಜಯಾ) ಮತ್ತು ಚಂದನದಾಸನ ಪತ್ನಿ. ಉಳಿದವೆಲ್ಲ ಪುರುಷ ಪಾತ್ರಗಳು.

ಭವಭೂತಿ ಚಿತ್ರಿಸಿದ ಸ್ತ್ರೀ ಪಾತ್ರಗಳಲ್ಲಿ ಎರಡು ವಿಭಾಗಗಳನ್ನು ಮಾಡಬಹುದು. ಮೊದಲನೆಯದು, ಆರ್ಯ ಕುಲದ ಸೀತೆ ಮತ್ತು ಊರ್ಮಿಳೆ; ಅನಾರ್ಯ ಕುಲದ ಸೂರ್ಪಣಖಿ, ತ್ರಿಜಾತ ಮತ್ತು ಅಲಕಾ. ಮೊದಲನೆಯ ಗುಂಪಿನವರು ಪತಿಪರಾಯಣೆಯರು, ಶಾಂತ ಸ್ವಭಾವದವರು. ಎರಡನೆಯ ಗುಂಪಿನವರು ಗಡುಸು ಮತ್ತು ಕೋಪಾವಿಷ್ಟ ಸ್ವಭಾವದವರು.

ಭವಭೂತಿ 'ಮಹಾವೀರ ಚರಿತ್ರೆ' ಯಲ್ಲಿ ತನ್ನಿಷ್ಟ ಬಂದಂತೆ ರಾಮಾಯಣದ ಕಥೆಯನ್ನು ಬದಲಿಸಿಕೊಂಡಿದ್ದಾನೆ. ಅವನ ಕೈಲಿ ಸೀತೆ, ಮಂಡೋದರಿ, ಶೂರ್ಪಣಕಿ ಇವರುಗಳು ಹೊಸ ರೂಪು ಹೊಂದಿದ್ದಾರೆ. ಆದರೆ ಭಾಸ ಮತ್ತು ಕಾಳಿದಾಸ ಚಿತ್ರಿಸಿದ ಈ ಪಾತ್ರಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಭವಭೂತಿಯ ಸೀತೆಯಲ್ಲಿ ಸ್ಥೈರ್ಯ-ಧೈರ್ಯವಿಲ್ಲ. ಯುದ್ಧಕ್ಕೆ ಹೆದರಿದ ಆಕೆ ರಾಮನನ್ನು ಯುದ್ಧಕ್ಕೆ ಹೋಗಬೇಡವೆಂದು ಅತ್ತು-ಕರೆದು ತಡೆಯುತ್ತಾಳೆ! ಶ್ರಮನಾ ಮತ್ತು ಅಲಕಾ ಇವರು ರಾಮ ಮತ್ತು ಕುಬೇರ ಇವರ ಸುದ್ದಿವಾಹಕರಾಗಿ ಚಿತ್ರಿತವಾಗಿದ್ದಾರೆ. ಆದರೆ ಮೂಲ ರಾಮಾಯಣದಲ್ಲಿಲ್ಲದ ಇವರು ಭವಭೂತಿಯ ಕಲ್ಪನೆಯ ಪಾತ್ರವಾಗಿದ್ದಾರೆ.

'ಮಾಲತೀ ಮಾಧವ' ನಾಟಕದಲ್ಲಿ ಭೂರಿವಸುವಿನ ಮಗಳು ಮಾಲತಿಯೇ ಇದರಲ್ಲಿಯ ನಾಯಕಿ. ಆ ಸುಂದರ ಹೆಣ್ಣಿನ ಸುತ್ತ ಅವಳ ಪ್ರಣಯದ ಕಥೆ ಹೆಣೆಯಲ್ಪಟ್ಟದೆ. ಬೌದ್ಧ ಸನ್ಯಾಸಿನಿ ಕಮಂಡಕಿಯ ಮೂಲಕ ಈಕೆ ಮಾಧವನನ್ನು ಕೂಡುತ್ತಾಳೆ. ಈ ನಾಟಕದಲ್ಲಿ ಸ್ತ್ರೀ ಪಾತ್ರಗಳು ಹೇರಳವಾಗಿವೆ. ಮಾಲತಿ ಬೆಳೆದದ್ದು ಉಚ್ಚ ಸಂಸ್ಕೃತಿಯಲ್ಲಿ. ಹೀಗಾಗಿ ಅವಳದೆಲ್ಲ ಹಿರಿಮೆಯ ಗುಣ. ಸೌಮ್ಯಸ್ವಭಾವದ ಈಕೆ ಅನ್ಯರೆದುರು ಉದ್ಧಟಳಾಗಿ ವರ್ತಿಸುವವಳಲ್ಲ. ಹಿತಚಿಂತಕರ ಅಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸುವವಳೂ ಅಲ್ಲ. ಹೀಗಾಗಿ ತನ್ನ ಪ್ರೇಮವನ್ನು ಅಂತರಂಗದಲ್ಲೇ ಹುದುಗಿಸಿಟ್ಟುಕೊಂಡು ಒಳಗೊಳಗೆ ಚಡಪಡಿಸಿದಳು. ಆಗ ಕಮಂಡಕಿ ಪ್ರಣಯಿಗಳನ್ನು (ಮಾಲತಿ-ಮಾಧವರನ್ನು) ಕೂಡಿಸಲು ಮುಂದಾಗಬೇಕಾಯಿತು. ಮಾಲತಿಯ ಪಾತ್ರಸೃಷ್ಟಿ ಈ ನಾಟಕದಲ್ಲಿ ಎಷ್ಟು ಉತ್ಕೃಷ್ಟವಾಗಿದೆಯೆಂದರೆ ಈಕೆ ಇನ್ನೊಬ್ಬರೊಡನೆ ಮಾತನಾಡುವಾಗ ತೀರ ಮೃದುವಾಗಿ, ಭಯಮಿಶ್ರಿತಳಾಗಿ ಮಾತನಾಡುತ್ತಿದ್ದಳಂತೆ.

ಮಾಲತಿಯ ಪ್ರೇಮ ಪ್ರಕರಣದಲ್ಲಿ ಕಮಂಡಕಿಯ ಪಾತ್ರ ಹಿರಿದಾದುದು. ಈಕೆ ಮಾಲತಿಗೆ ಹಿರಿಯರ ಮನಸ್ಸಿನ ವಿರುದ್ಧವಾಗಿಯಾದರೂ ಪ್ರೇಮಿಸಿದವನನ್ನೇ ಮದುವೆಯಾಗಲು ಬೋಧಿಸುತ್ತಾಳೆ. ಅದಕ್ಕಾಗಿ ಶಕುಂತಲೆ, ಊರ್ವಶಿ, ವಾಸವದತ್ತೆಯರ ಉದಾಹರಣೆಗಳನ್ನು ಕೊಟ್ಟು ಮನಃಪರಿವರ್ತನೆ ಮಾಡುತ್ತಾಳೆ. ಈ ವಿಷಯದಲ್ಲಿ ಭವಭೂತಿ ಹೊಸ ಹಾದಿಯನ್ನೇ ತುಳಿದಿದ್ದಾನೆನ್ನಲಡ್ಡಿಯಿಲ್ಲ.

ವಶಿಷ್ಠಮುನಿಯ ಪತ್ನಿ ಅರುಂಧತಿಯ ಚಿತ್ರಣ 'ಉತ್ತರ ರಾಮ ಚರಿತ್ರೆ' ಯಲ್ಲಿ ವಿಶಿಷ್ಟವಾಗಿದೆ. ಈ ಪಾತ್ರ ರಚನೆಯಲ್ಲಿ ಭವಭೂತಿ ಕಾಳಿದಾಸನನ್ನು ಸ್ಮರಿಸಿದ್ದಾನೆ. ಅರುಂಧತಿ ಸ್ತ್ರೀ ಸಮಾಜಕ್ಕೆಲ್ಲ ಗುರುವಿದ್ದಂತೆ. ಈಕೆಯ ಮೂಲಕ ಭವಭೂತಿ ಸ್ತ್ರೀಯರನ್ನು ಗೌರವಿಸಿದ್ದಾನೆ. ಸ್ತ್ರೀಗೆ ಮಾನ್ಯತೆಯನ್ನೀಯುವ ಉದ್ದೇಶ್ಯದಿಂದಲೇ ಈತ ಮೂಲ ಕಥೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡಂತಿದೆ.

ಭಟ್ಟನಾರಾಯಣ ತನ್ನ 'ವೇಣೀ ಸಂಹಾರ' ದಲ್ಲಿ ಮಹಾಭಾರತದಲ್ಲಿ ದುಃಶ್ಯಾಸನ ದ್ರೌಪದಿಯ ಮುಡಿ ಸೆಳೆದ ಸಂದರ್ಭವನ್ನೆತ್ತಿಕೊಂಡು ನಾಟಕ ನಿರ್ಮಿಸಿದ್ದಾನೆ. ಇದರಲ್ಲಿ ದ್ರೌಪದಿಯಲ್ಲದೆ, ಭಾನುಮತಿ ಮತ್ತು ಗಾಂಧಾರಿ ಇವರೂ ಗಮನೀಯ ಸ್ಥಾನ ಗಳಿಸಿದ್ದಾರೆ. ದುಃಶ್ಯಾಸನನ ಎದೆ ಬಗಿದು ಭೀಮ ಅವನ ರಕ್ತದಿಂದ ದ್ರೌಪದಿಯ ಮುಡಿ ಬಿಗಿಯುವದರೊಂದಿಗೆ ಇದರಲ್ಲಿಯ ಕಥೆ ಮುಗಿಯುತ್ತದೆ. ಈ ನಾಟಕದಲ್ಲಿ ಪ್ರಣಯಕ್ಕೆ ಅವಕಾಶವಿಲ್ಲ. ಮುಖ್ಯ ಕಥೆ ಕೌರವ-ಪಾಂಡವರ ಬಡಿದಾಟದ ಮೇಲೆ

ಅವಲಂಬಿಸಿದೆ. ನಾಟಕದುದ್ದಕ್ಕೂ ದ್ವೇಷ, ಅಸೂಯೆಗಳದೇ ಚಿತ್ರಣ. ಇದರಲ್ಲಿ ದ್ರೌಪದಿ ಕಾಣಿಸಿಕೊಳ್ಳುವದು ಒಬ್ಬ ದುಃಖಿತ ಹೆಣ್ಣಾಗಿ. ಈ ಪಾತ್ರ ಅಭಿನಯಿಸುವವರು ಕಣ್ಣೀರನ್ನು ಸುರಿಸಿಯೇ ಸುರಿಸಬೇಕಾಗುವದು. ಅಣ್ಣ–ತಮ್ಮಂದಿರ ದ್ವೇಷದ ಜ್ವಾಲಾಮುಖಿಯಲ್ಲಿ ಆಕೆ ಸಿಲುಕುವದರಿಂದ ಅವಳ ಪಾತ್ರ ಸಂಸ್ಕೃತದ ಉಳಿದ ನಾಟಕಗಳಲ್ಲಿಯ ಸ್ತ್ರೀ ಪಾತ್ರಗಳಿಗಿಂತ ವಿಶಿಷ್ಟವಾದುದಾಗಿದೆ.

ಇದೇ ನಾಟಕದಲ್ಲಿ ಬರುವ ದುರ್ಯೋಧನನ ಹೆಂಡತಿ ಭಾನುಮತಿ ಅಪರಿಮಿತ ಪತಿಪರಾಯಣೆ. ಆಕೆ ಪತಿಯಲ್ಲಿ ಅದೆಷ್ಟು ಭಕ್ತಿಯುಳ್ಳವಳಾಗಿದ್ದಳೆಂದರೆ, ಆತ ಎಂಥ ಕೆಟ್ಟ ಕೆಲಸಮಾಡಿದರೂ ಅದು ಅವಳಿಗೆ ತಪ್ಪಾಗಿ ಕಾಣುತ್ತಿರಲಿಲ್ಲ. ದುರ್ಯೋಧನ ದ್ರೌಪದಿಯನ್ನು ಹಿಂಸಿಸಲು ಆಜ್ಞೆ ವಿಧಿಸಿದ್ದು ಭಾನುಮತಿಗೇನೂ ತಪ್ಪಾಗಿ ತೋರಲಿಲ್ಲ. ದ್ರೌಪದಿಯು ಮುಡಿ ಸೆಳೆಯಲ್ಪಟ್ಟಾಗ ಆಕೆ ದ್ರೌಪದಿ ಮುಡಿ ಬಿಗಿದಿದ್ದೇ ತಪ್ಪೆಂದು ಅಭಿಪ್ರಾಯಪಟ್ಟಳು! ಇದರಿಂದಾಗಿ ಭಾನುಮತಿಯ ಪತಿಪರಾಯಣತೆಯಲ್ಲೂ ನಾವು ಮೂರ್ಖತೆಯನ್ನು ಕಾಣುತ್ತೇವೆ. ಈ ನಾಟಕದಲ್ಲಿಯ ಇವಳ ವಿಶಿಷ್ಟ ವರ್ತನೆಯನ್ನು ಗಮನಿಸಿದಾಗ ಈಕೆ ಭಟ್ಟನಾರಾಯಣನ ಕಲ್ಪನೆಯ ಹೆಣ್ಣೆನ್ನುವದು ಸ್ಪಷ್ಟವಾಗುವದು. ಅಲ್ಲದೆ ಈ ಬಗೆಯ ಪಾತ್ರ ಸೃಷ್ಟಿಯಾಗಿರುವದು ಇದೊಂದೇ ನಾಟಕದಲ್ಲಿ. ನಾಟಕಕಾರ ಇವಳನ್ನು ಸೃಷ್ಟಿಸುವಲ್ಲಿ ತನ್ನ ಸ್ವಾತಂತ್ರ್ಯವನ್ನು ಪೂರ್ಣ ಉಪಯೋಗಿಸಿಕೊಂಡಿದ್ದಾನೆ.

ಮಹಾಭಾರತದಲ್ಲಿ ದ್ರೌಪದಿ ಪ್ರಧಾನಳಾದಂತೆ, ರಾಮಾಯಣದಲ್ಲಿ ಸೀತೆ ಪ್ರಧಾನ ಸ್ತ್ರೀಯಾಗಿದ್ದಾಳೆ. ಶಕ್ತಿಭದ್ರನ 'ಆಶ್ಚರ್ಯ ಚೂಡಾಮಣಿ' ಯಲ್ಲಿ ಶೂರ್ಪಣಖಿ, ಮಂಡೋದರಿ ಮತ್ತು ಸೀತೆಯ ಪಾತ್ರಗಳು ಎದ್ದು ಕಾಣುತ್ತವೆ. ಇಲ್ಲಿ ಶೂರ್ಪಣಖಿಯದು ರಾಕ್ಷಸ ವರ್ತನೆ, ರಾಕ್ಷಸ ಕನ್ಯೆಯಾದರೂ ಮಂಡೋದರಿಯದು ಸಹೃದಯದ ನಡವಳಿಕೆ.

ಮುರಾರಿಯ 'ಅನರ್ಘ್ಯ ರಾಘವ' ದಲ್ಲಿ ಶೂರ್ಪಣಖಿ ಮತ್ತು ಶ್ರಮಣ ಇವರು ಅಯೋಧ್ಯೆ, ಮತ್ತು ಮಿಥಿಲೆಯ ಗುಪ್ತ ಸಂಗತಿಗಳನ್ನು ತಿಳಿದುಕೊಳ್ಳುವ ಗುಪ್ತಚಾರಿಣಿಯರಾಗಿ ಮೂಡಿಬಂದಿದ್ದಾರೆ. ಈ ನಾಟಕದಲ್ಲಿ ಸೀತೆ ರಂಗದ ಮೇಲೆ ಕಾಣಿಸಿಕೊಳ್ಳುವದು ಕೊನೆಯಲ್ಲಿ. ಅಂದರೆ ರಾಮ ಅಯೋಧ್ಯೆಗೆ ಮರಳುವ ಸಮಯದಲ್ಲಿ. ಜಯದೇವನ 'ಪ್ರಸನ್ನ ರಾಘವ' ದಲ್ಲಿ ರಾಮ–ಸೀತೆಯರ ಪ್ರಣಯದ ಸುಂದರ ನಿರೂಪಣೆಯಿದೆ. ಇಲ್ಲಿ ಸೀತೆ ತುಂಬ ಮುಗ್ಧ ಹೆಣ್ಣಾಗಿ ರೂಪುಗೊಂಡಿದ್ದಾಳೆ.

ಪ್ರಣಯ, ರಾಸಕ್ರೀಡೆಯ ಸುಂದರ ಚಿತ್ರಣ ಸಿಗುವದು ಶ್ರೀ ಕೃಷ್ಣನ ಕಥೆಗಳಲ್ಲಿ. ವೃಷಭಾನುಜ, ಕಂಸವಧ, ಮನೋನುರಂಜನ, ಗೀತಗೋವಿಂದ, ರುಕ್ಮಿಣೀ ಪರಿಣಯ ಇವುಗಳಲ್ಲಿ ಶ್ರೀಕೃಷ್ಣನ ರಾಸಕ್ರೀಡೆಯ ಸುಂದರ ವರ್ಣನೆಯಿದೆ. ರಾಧಾ–ಕೃಷ್ಣರ ನಡುವಿನ ಕೊಂಡಿಯಾಗಿ ವಿಲಾಸವತಿ, ಕುಬ್ಜೆ, ಯಶೋಧ ಈ ಸ್ತ್ರೀ ಪಾತ್ರಗಳೂ ಸೃಷ್ಟಿಗೊಂಡಿವೆ. ಶ್ರೀಕೃಷ್ಣನ ತಾಯಿ ದೇವಕಿ ಒಬ್ಬ ಧಾರ್ಮಿಕ ಹೆಣ್ಣಾಗಿ ರೂಪುಗೊಂಡಿದ್ದಾಳೆ. ಇವಳು ಮಮತೆಯ ಮಾತೆಯೂ ಹೌದು.

ಕೃಷ್ಣ–ರಾಧೆಯರ ಪ್ರೇಮ ಪ್ರಕರಣದಲ್ಲಿ ನಾವೊಂದು ಹೊಸ ಸಂಗತಿಯನ್ನು ಗಮನಿಸಬಹುದು. ಇದುವರೆಗಿನ ಸಂಸ್ಕೃತದ ಯಾವ ನಾಟಕದಲ್ಲೂ ಮದುವೆಯಾದ ಸ್ತ್ರೀ ಪರಪುರುಷನನ್ನು ಮೋಹಿಸಿದ ಚಿತ್ರಣವಿಲ್ಲ. ಆದರೆ ಆಗಲೇ ಮದುವೆಯಾಗಿದ್ದ ರಾಧೆ ಪರಪುರುಷನಾದ ಶ್ರೀ ಕೃಷ್ಣನನ್ನು ಮೋಹಿಸುತ್ತಾಳೆ. ಇವಳ ಬೆಂಬಲಕ್ಕಿದ್ದವರು ಪರಿವ್ರಾಜಿಕಾ ಮತ್ತು ಪೂರ್ಣಮಸಿ ಎಂಬ ಸಖಿಯರು. ರಾಧೆ ಕೃಷ್ಣನ ಮೋಹಕ ರೂಪಕ್ಕೆ ಮರುಳಾಗುತ್ತಾಳೆ. ಮುಂದೆ ಜೀವಾತ್ಮ–ಪರಮಾತ್ಮ ಒಂದಾಗುವಂತೆ ರಾಧಾ–ಕೃಷ್ಣ ಒಂದಾಗುತ್ತಾರೆ. ಪರಪುರುಷ ಇಲ್ಲಿ ಪ್ರೇಮ ರೂಪಕವಾಗಿ ಬಂದಿದೆ.

ರಾಮವರ್ಮನ 'ರುಕ್ಮಿಣೀ ಪರಿಣಯ' ದ ರುಕ್ಮಿಣಿ ಬಹು ಸ್ಫುರದ್ರೂಪಿ, ಜಾಣ ಮತ್ತು ಪ್ರೇಮಮಯಿ ಹೆಣ್ಣು. ಈಕೆ ಕೃಷ್ಣನನ್ನು ಪ್ರೀತಿಸುತ್ತಿದ್ದುದು ಬಾಲ್ಯದಿಂದಲೇ.

ರಾಮಚಂದ್ರ ಸವಾರಿಯ 'ನಳ ವಿಲಾಸ' ದಲ್ಲಿಯ ದಮಯಂತಿ ದುರಂತದಿಂದ ಕುಗ್ಗುವ ಹೆಣ್ಣಲ್ಲ. ಇವಳ ಸುತ್ತ ಕಪಿಂಜಲಾ, ಮಕಾರಿಕಾ, ಲಂಬಸ್ತನಿ ಮುಂತಾದ ಸ್ತ್ರೀ ಪಾತ್ರಗಳು ರಚಿತವಾಗಿವೆ. ಕಪಿಂಜಲಾ, ಮಕಾರಿಕಾ ಇವರುಗಳು ತಮ್ಮ ರಾಜ–ರಾಣಿಯರ ನಿಷ್ಠ ಸೇವಕಿ ಸೇವಕಿಯರು. ಲಂಬಸ್ತನಿ ಭೀರುಸ್ವಭಾವದ ಹೆಣ್ಣು. ಇವಳ ವ್ಯಕ್ತಿಚಿತ್ರಣ ಈ ನಾಟಕದಲ್ಲಿ ಬಹು ವಿನೋದಪೂರ್ಣವಾಗಿ ಚಿತ್ರಿತವಾಗಿದೆ.

ಹೀಗೆ ಸಂಸ್ಕೃತ ನಾಟಕಗಳಲ್ಲಿ ಸ್ತ್ರೀ ಪಾತ್ರಗಳು ನಾನಾ ವಿಧವಾಗಿ ಚಿತ್ರಿತವಾಗಿವೆ. ಎಲ್ಲವೂ ಆಯಾ ನಾಟಕಕಾರನ ದೃಷ್ಟಿಗನುಗುಣವಾದ ರಚನೆಯಾಗಿದೆ.

ಕಾರ್ಪಣ್ಯಯೋಗ

ಮ. ಸು. ಕೃಷ್ಣಮೂರ್ತಿ

'ಕಡ್ಡಾಯ ಉಳಿತಾಯ ಯೋಜನೆ', 'ರಾಷ್ಟ್ರೀಯ ಉಳಿತಾಯ ಯೋಜನೆ', 'ಅಧಿಕ ಉಳಿತಾಯ ಯೋಜನೆ' ಮೊದಲಾದ ಯೋಜನೆಗಳನ್ನು ನೋಡಿದರೆ ನಮ್ಮ ಜನರಲ್ಲಿ ಕಾರ್ಪಣ್ಯ ಕಮ್ಮಿಯಾಗಿದೆ, ಔದಾರ್ಯ ಹೆಚ್ಚಾಗಿದೆ, ನಾವೆಲ್ಲ ಕರ್ಣ, ದಧೀಚಿ, ಬಲಿ ಮೊದಲಾದ ವರ ಪಂಕ್ತಿಯಲ್ಲಿ ನಿಲ್ಲಲಿದ್ದೇವೆ, ಕೊಡುಗೈದೊರೆಗಳಾಗಿ ದ್ದೇವೆ. ಆದ್ದರಿಂದ ಈಗ ಕೊಂಚ ಕೈ ಮೊಟಕುಮಾಡಿ ಜಿಪುಣತನವನ್ನು ತೋರಬೇಕಾದುದು ನಮ್ಮ ರಾಷ್ಟ್ರದ ಅಗತ್ಯಗಳಲ್ಲಿ ಒಂದಾಗಿದೆ ಎನ್ನುವುದು ಸ್ಪಷ್ಟವಾಗುತ್ತದ ಲ್ಲವೆ? ಇಲ್ಲದಿದ್ದರೆ 'ಹೆಚ್ಚು ಹಣ ಉಳಿಸಿ' ಎಂದು ಸರಕಾರ ಏಕೆ ಹೇಳುತ್ತಿತ್ತು?

ನಮ್ಮ ಹಿಂದಿನ ಜನ ಹೀಗೆ ಹೇಳುತ್ತಿರಲಿಲ್ಲ. ದಾನ ಮಾಡಿ, ಸಂಗ್ರಹ ಮಾಡಬೇಡಿ, ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ ಎಂದು ಹೇಳುತ್ತಿದ್ದರು. ಯಾವ ಪುರಾಣ ಪುಣ್ಯಕಥೆಗಳಲ್ಲಿ ನೋಡಲಿ ದಾನದ ಮಹಿಮೆಯೋ ಮಹಿಮೆ. ಯಾವ ಸುಭಾಷಿತದಲ್ಲಿ ನೋಡಲಿ 'ದಾನ ಪದ್ಧತಿ' ಯನ್ನು ಕುರಿತ ಪದ್ಯಮಾಲೆಗಳೇ. ಅಷ್ಟೇ ಅಲ್ಲ ಎಲ್ಲ ಕವಿಗಳೂ ಕೃಪಣರನ್ನು ನಿಂದಿಸಿದ್ದೂ ನಿಂದಿಸಿದ್ದೇ. ವೀರರಸದಲ್ಲಿ ದಾನವೀರತ್ವ ಬಂತು. ಎಲ್ಲ ಸಾಹಿತ್ಯದಲ್ಲೂ, ನೀತಿಶಾಸ್ತ್ರದಲ್ಲೂ ಲೋಭ ಮಹಾಪಾಪ ಎಂಬ ಬೋಧೆ ತಾನೇ ತಾನಾಗಿದೆ. ಇದರಿಂದಲೇ ಏನೋ ಇಂದು ನಮ್ಮ ದೇಶ ದಿವಾಳಿ ತೆಗೆದಿದೆ.

ಆದರೆ ಯಾವುದನ್ನು ನಮ್ಮ ಹಿರಿಯರು ನಿಂದಿಸಿದ್ದರೋ ಅದೇ ಇಂದು ನಮ್ಮ ರಾಷ್ಟ್ರಧರ್ಮವಾಗಿದೆ. ದಾನಮಾಡಿ ಬರಿಗೈಯಾಗಿ ಇಂದು ನಮ್ಮ ರಾಷ್ಟ್ರ ಬರಿದಾಗಿದೆ, ತಿರುಪೆಗೆ ಹೊರಟಿದೆ. ಇಂದು ನಮ್ಮ ರಾಷ್ಟ್ರ ಸ್ವಾವಲಂಬಿ ಯಾಗಬೇಕಾದರೆ ನೀವು ಕೊಂಚ ಕಾರ್ಪಣ್ಯವನ್ನು ಕಲಿ ಯಬೇಕಾಗಿದೆ. ದಾನವೀರರ ಸಂಖ್ಯೆ ಕಡಿಮೆಯಾಗ ಬೇಕಾಗಿದೆ.

ಈ ಕಾರ್ಪಣ್ಯ ನಮ್ಮ ಹಿರಿಯರು ಭಾವಿಸಿದ್ದಂತೆ ಅಷ್ಟು ಕೆಟ್ಟದ್ದೇ ಎಂಬುದನ್ನು ನೋಡಬೇಕು. 'ಜಿಪುಣ ತಾನೂ ತಿನ್ನ ಪರರಿಗೂ ಕೊಡ' ಎಂದು ಹೇಳುತ್ತಾರೆ. ಭರ್ತೃಹರಿ ಹೇಳಿದ ವಿದ್ಯೆ ಹೂತಿಟ್ಟ ಹಣ ಎಂದು. ಆದರೆ ಹಣವನ್ನು ಹೂತಿಡುವುದೇ ಕೆಲವರಿಗೆ ವಿದ್ಯೆಯಾಗಿತ್ತು. ಅದು ಇಂದಿಗೂ ಬೆಳೆದುಬಂದಿದೆ. ಜಿಪುಣ ತಾನು ತಿನ್ನ ಎನ್ನುವುದು ನಿಜ, ಅದರೆ ಪರರಿಗೂ ಕೊಡ ಎನ್ನುವುದು ಸುಳ್ಳು. ಸಂಸ್ಕೃತದಲ್ಲಿ ಸುಭಾಷಿತವೊಂದಿದೆ:

> "ಪಿಬಂತಿನದ್ಯಃ ಸ್ವಯಮೇವ ನೋದಕಂ
> ಸ್ವಯಂ ನ ಖಾದಂತಿ ಫಲಾನಿ ವೃಕ್ಷಾ!
> ಧಾರಾಧರೋ ವರ್ಷತಿ ನಾತ್ಮಹೇತವೇ
> ಪರೋಪಕಾರಿಯ ಸತಾಂ ವಿಭೂತಯಃ"

ನದಿಗಳು ತಮ್ಮ ನೀರನ್ನು ತಾವೇ ಕುಡಿಯುವುದಿಲ್ಲ. ಇತರರಿಗಾಗಿ ಜಲವನ್ನು ಶೇಖರಿಸುತ್ತವೆ. ಮರಗಳು ತಮ್ಮ ಹಣ್ಣನ್ನು ತಾವೇ ತಿನ್ನುವುದಿಲ್ಲ, ಇತರರಿಗಾಗಿ ಹಣ್ಣು ಬಿಡುತ್ತವೆ. ಈರೀತಿ ಸತ್ಪುರುಷರೂ ಕೂಡ ಪರೋಪಕಾರಕ್ಕಾಗಿ ಐಶ್ವರ್ಯವನ್ನು ಕೂಡಿಡುತ್ತಾರೆ.

ಗಿಡಮರಗಳು, ನದಿಗಳು ಪರರಿಗಾಗಿ ತಮ್ಮ ಐಶ್ವರ್ಯ ವನ್ನು ಸಂಗ್ರಹಿಸಿ 'ಸತ್' ವ್ಯಕ್ತಿಗಳ ಗುಂಪಿಗೆ ಸೇರಿದರೆ ತಾವು ಒಂದು ಕಿಲುಬು ಕಾಸನ್ನೂ ಬಳಸದೆ ಅದನ್ನು ಸರ್ಪಕಾವಲಿನಂತೆ ಕಾದು ಅನಂತರ ಪ್ರಾಣಬಿಟ್ಟು ಅದನ್ನು ಇನ್ನೊಬ್ಬರ ಪಾಲುಮಾಡುವ ಕೃಪಣರು ಸಜ್ಜನ ರಲ್ಲವೆ? ಸಜ್ಜನರು ಮಾತ್ರವೇ ಅಲ್ಲ ಮಹಾಪುರುಷರು ಎಂದು ಹೇಳಬೇಕು.

ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ತಮ್ಮ ಹೆಂಡತಿ ಮೈತ್ರೇಯಿಗೆ ಆತ್ಮಸ್ವರೂಪವನ್ನು ಬೋಧಿ ಸುತ್ತ 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ಎನ್ನುತ್ತಾರೆ. ಎಂದರೆ ಮನುಷ್ಯನಿಗೆ ಎಲ್ಲಕ್ಕಿಂತಲೂ ಮಿಗಿಲಾಗಿ ಪ್ರಿಯವಾದದ್ದು ಆತ್ಮ. ಆ ಆತ್ಮನಿಗೆ ಯಾರ ಯಾರ ವಸ್ತುಗಳು ಪ್ರಿಯವಾಗುತ್ತವೋ ಅವೆಲ್ಲವೂ ಮನುಷ್ಯನಿಗೆ ಪ್ರಿಯ ಎಂದು. ಆದರೆ ಕೃಪಣರು ಆ ಭೂಮಿಕೆಯನ್ನು ದಾಟಿ ಲಕ್ಷ್ಮಿಯನ್ನು ಉಪಾಸಿಸುತ್ತಾರೆ. ಆದ್ದರಿಂದ ಅವರನ್ನು ಸಜ್ಜನರು, ಮಹಾಪುರುಷರು ಎಂದು ಕರೆಯುವುದರಲ್ಲಿ ಅಭ್ಯಂತರವೇ ಇಲ್ಲ.

ಜಿಪುಣರನ್ನು ಕುರಿತು ಯೋಚಿಸಿದಾಗಲೆಲ್ಲ ಹೊಟೇಲು ಮಾಲಿಕರ ನೆನಪು ಬರುತ್ತದೆ. ಹೊಟೇಲು ಮಾಲಿಕ

ಒಬ್ಬ ಆದರ್ಶ ಜಿಪುಣ ಇಲ್ಲವೆ ಯೋಗಿ ಎನ್ನಬೇಕು. ಭಗವದ್ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ಹೀಗೆ ಹೇಳಿದೆ:

ದುಃಖೇಷ್ವನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಃ|
ವೀತರಾಗ ಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ||

ಹೋಟಲಿನ ಗಲ್ಲದ ಮೇಲೆ ಕುಳಿತಿರುವ ಮಾಲಿಕ ನಿಜವಾದ ಅರ್ಥದಲ್ಲಿ ಸ್ಥಿತಪ್ರಜ್ಞ. ಅವನ ಮುಖದಲ್ಲಿ ವೀತರಾಗ ಕಳೆ ಎದ್ದು ಕಾಣುತ್ತದೆ. ಅವನಿಗೆ ಯಾರ ಮೇಲೂ ಕರುಣೆಯಿಲ್ಲ. ತನಗೆ ಬರುವ ಹಣ ಬಂದುಬಿಟ್ಟರೆ ಸಾಕು. ತಿಂಡಿ ತಿಂದವರ ಮನಸ್ಸು ತೃಪ್ತಿಹೊಂದಿತೆಂದು ಅವನಿಗೆ ಸಂತೋಷವಿಲ್ಲ. ಹಳಸಿದ ತಿಂಡಿ ತಿಂದು ಯಾರಾದರೂ ವಾಂತಿ ಮಾಡಿಕೊಂಡರು ಎಂಬ ಚಿಂತೆ ಅವನಿಗಿಲ್ಲ. ಅವನ ಗಲ್ಲದ ಮೇಲೆ ಲಕ್ಷ್ಮಿ ಬಂದು ಕುಣಿದಾಡಿದರೆ ಸಾಕು ಅವನಿಗೆ ಪರಿಪೂರ್ಣ ತೃಪ್ತಿ. ಈ ಮುಕ್ತನಿಗೆ ಯಾವ ತೊತ್ತು ತೊಡರುಗಳೂ ಇಲ್ಲ. ಗೆಳೆಯ ಬಂದ ಎಂದು ತಿಂಡಿಕೊಡಿಸುವ ಹವ್ಯಾಸಕ್ಕೆ ಅವನು ಹೋಗುವುದಿಲ್ಲ. ಭಿಕ್ಷುಕರಿಗೆಲ್ಲ ಹಣ ಕೊಟ್ಟು ಭಾರತದಲ್ಲಿ ಸೋಮಾರಿಗಳ ಸಂಖ್ಯೆಯನ್ನು ಬೆಳೆಸುವನಲ್ಲ. ನನ್ನ ಗೆಳೆಯನೊಬ್ಬ ಹೊಟೇಲು ಇಟ್ಟಿದ್ದ. ಅವನ ಬಾಯಿಂದ ಔದಾರ್ಯದ ಮಳೆ ಸುರಿಯುತ್ತಿತ್ತು. ಆದರೆ ಒಂದು ದಿನವೂ ಆ ಪುಣ್ಯಾತ್ಮ ನನ್ನನ್ನು ತನ್ನ ಹೋಟಲಿಗೆ ಕರೆದೊಯ್ದುದವನಲ್ಲ. ಕೇಳಿದರೆ ಹೇಳುತ್ತಿದ್ದ–'ನಮ್ಮ ಹೋಟಲಿಗೆ ನಾವೇ ಹೋಗಬಾರದು; ಆದ್ದರಿಂದ ನಾನೂ ಕೂಡ ಬೇರೆ ಹೋಟಲಿಗೆ ಹೋಗಿ ಕಾಫಿ ಕುಡಿದು ಬರುತ್ತೇನೆ' ಎನ್ನುತ್ತಿದ್ದ. ನಿಜವಿದ್ದರೂ ಇರಬಹುದು, ತನ್ನ ಹೋಟಲಿನ ಶುಚಿರುಚಿಯ ಭಂಡವಾಳ ಅವನಿಗೆ ಗೊತ್ತು.

ಜಿಪುಣರನ್ನು ನೆನೆದಾಗಲೆಲ್ಲ ಸಂಸ್ಕೃತ ಸಾಹಿತ್ಯದ ಕೆಲವು ಲೋಭಿಗಳ ಚಿತ್ರ ನನ್ನ ಕಣ್ಣಮುಂದೆ ಎದ್ದು ನಿಲ್ಲುತ್ತದೆ. ಯಶಸ್ತಿಲಕ ಚಂಪುವಿನಲ್ಲೊಂದು ಕಾಣುತ್ತದೆ. ಒಬ್ಬ ಜಿಪುಣನ ಚಿತ್ರ ಬರುತ್ತದೆ. ಆತ ಪರಮ ಲೋಭಿ. ಒಂದು ದಿನ ಅವನು ಎಲ್ಲೋ ಹೋಗಿದ್ದವನು ಮನೆಗೆ ಮರುಳುತ್ತಾನೆ. ಪಕ್ಕದ ಮನೆಯ ಮಕ್ಕಳು ಅಭ್ಯಂಜನ ಮಾಡಲು ಮೈಗೆ ಎಣ್ಣೆ ಒತ್ತಿಕೊಂಡು ನಿಂತಿರುತ್ತವೆ. ಅದನ್ನು ಕಂಡು ಅವನ ಬುದ್ಧಿ ಚಿಗುರುತ್ತದೆ. ಅವನು ತನ್ನ ಮಕ್ಕಳನ್ನು ಕೂಗಿ ಹೇಳುತ್ತಾನೆ. 'ಲೋ, ಹೋಗಿರೋ, ಆ ಮಕ್ಕಳ ಜೊತೆ ಗುದ್ದಾಡ ಹೋಗಿ, ನಿತ್ಯ ಗುದ್ದಾಡುತ್ತಿರಲ್ಲ. ಇಂದೇಕೆ ಸುಮ್ಮನಿದ್ದೀರಿ. ಬೇಗ ಹೋಗಿ ಅವರು ಬಚ್ಚಲು ಮನೆಗೆ ಹೋದಾರು. ಎಂದು. ಅವನ ಉದ್ದೇಶ ತನ್ನ ಮಕ್ಕಳು ಎಣ್ಣೆ ತೊಡೆದುಕೊಂಡು ನಿಂತ ನೆರೆಮನೆಯ ಮಕ್ಕಳೊಡನೆ ತೆಕ್ಕೆಬಿದ್ದು ಹೋರಾಡಿದರೆ ಅವರ ಮೈಯಿನ ಎಣ್ಣೆ ಇವರ ದೇಹಕ್ಕೆ ಬರುತ್ತದೆ ಎಂದು. ಜಿಪುಣತನದ ಇದಕ್ಕಿಂತ ಉದಾರ ಚಿತ್ರವನ್ನು ಬೇರೆಲ್ಲಿ ಕಾಣೋಣ? ಈ ಕೃಪಣನ ಚಿತ್ರದಲ್ಲಿ ಕವಿ ತೋರಿಸಿರುವ ಔದಾರ್ಯವನ್ನು ಮೆಚ್ಚಿಕೊಳ್ಳಲು ನಮಗೆ ಕಾರ್ಪಣ್ಯ ಬೇಡ.

ಜಿಪುಣನಾದ ಕೊಣವೇಗೌಡನ ಚಿತ್ರ ಕನ್ನಡ ಜಾನಪದ ಸಾಹಿತ್ಯದಲ್ಲಿ ಅಮರವಾಗಿದೆ. ಜಿಪುಣರನ್ನು ದುಂಬಿಗೆ ಹೋಲಿಸಿ ಅವರ ಸ್ವಭಾವವನ್ನು ಸರ್ವಜ್ಞ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾನೆ:

ಕೊಟ್ಟುಂಬ ಕಾಲದಲಿ ಕೊಟ್ಟುಣಲಿಕರಿಯದೆ|
ಹುಟ್ಟೆಯ ಒಳಗೆ ಜೇನಿಕ್ಕಿ ಪರರಿಂಗೆ|
ಬಿಟ್ಟುಹೋದಂತೆ ಸರ್ವಜ್ಞ||

ಜೇನುನೊಣ ತಾನು ತಂದ ಕುಸುಮ ರಸವನ್ನು ತಾನೇ ಉಂಡಿದ್ದರೆ ಲೋಕಕ್ಕೇನು ದೊರೆಯುತ್ತಿತ್ತು? ಮಧುಕರೀ ವೃತ್ತಿಯಿಂದ ಮಧು ಸಂಗ್ರಹಿಸಿ ನಮಗೆ ಅದನ್ನು ದಾನ ಮಾಡುವ ಜೇನು ಹುಳುವಿಗೆ ನಿಜಕ್ಕೂ ನಾವು ಋಣಿಗಳು. ಹಾಗೆಯೇ ಹಲವು ಕಡೆಯಿಂದ ಧನಕನಕವನ್ನು ಸಂಗ್ರಹಿಸಿ ಶುನಕನಂತೆ ಅದನ್ನು ಕಾಯ್ದು ಇತರರಿಗಾಗಿ ಬಿಟ್ಟು ಹೋಗುವ ಧನಿಕ ಲೋಭಿಗಳೂ ವಂದ್ಯರಲ್ಲವೆ?

ಲೋಭ ಪ್ರೀತಿಗಳು ಒಂದೇ ನಾಣ್ಯದ ಎರಡು ಮುಖಗಳು. ಯಾವುದೋ ಒಂದು ವಿಶಿಷ್ಟ ವಸ್ತುವಿನ ಮೇಲೆ ಉಂಟಾಗುವ ಆಸಕ್ತಿ ಲೋಭವೆನಿಸುತ್ತದೆ. ಅದೇ ವ್ಯಕ್ತಿಯ ಮೇಲೆ ಉಂಟಾಗುವ ಆಸಕ್ತಿ ರುಚಿ ಇಲ್ಲವೆ ಪ್ರೀತಿ ಎನ್ನಿಸಿಕೊಳ್ಳುತ್ತದೆ. ಲೋಭ ಸಾಮಾನ್ಯೋನ್ಮುಖವಾದರೆ ಪ್ರೀತಿ ವಿಶೇಷೋನ್ಮುಖವಾಗುತ್ತದೆ. ಮೂಲದಲ್ಲಿ ಲೋಭ ಮತ್ತು ಪ್ರೇಮ ಎರಡೂ ಒಂದೊ ಎಂದು ಭಾಷಾಶಾಸ್ತ್ರ ಹೇಳುತ್ತದೆ. ಇಂಗ್ಲೀಷಿನ (love) ಸ್ಯಾಕ್ಸನ್ನಿನ 'ಲುಫು' (lufu) ಮತ್ತು ಲ್ಯಾಟಿನ್ನಿನ 'ಲುಬೆತ್' (Lubet) ಮತ್ತು ಸಂಸ್ಕೃತದ 'ಲೋಭ' ಧಾತು 'ಲುಭ್'ಗೂ ರಕ್ತಸಂಬಂಧವಿದೆ ಎನ್ನುವುದು ಸ್ಪಷ್ಟ.

ಈ ರೀತಿ ಒಂದು ವಸ್ತು ಮನುಷ್ಯನಲ್ಲಿ ಕೆರಳಿಸುವ ಪ್ರೇಮಭಾವನೆಯೇ ಲೋಭವೆನಿಸುತ್ತದೆ. ಒಂದು ಲೋಹದ ತುಂಡಿನ ಗರ್ಭದಲ್ಲಿ ಅದೆಂಥ ಸುಖದ ಭಂಡಾರ ಅಡಗಿದೆ! ಧನಸಂಚಯದಲ್ಲಿ ಅನೇಕರ ಗುರಿ ಧನವೇ

ಹೊರತು ಅದರಿಂದ ದೊರೆಯುವ ಸುಖವಲ್ಲ. ಅವರು ಅತ್ಯಂತ ಹಿರಿಯ ಸುಖಕ್ಕಾಗಿ ಅಥವಾ ಅತ್ಯಂತ ದೊಡ್ಡ ಕಷ್ಟನಿವಾರಣೆಗಾಗಿ ಕೂಡ ಕಾಸು ಬಿಚ್ಚಬಯಸುವುದಿಲ್ಲ. ಲಕ್ಷ್ಮಿಯ ಮೂರ್ತಿ ಲೋಹಮಯವಾಯಿತು. ಅದರ ಉಪಾಸಕರೆಲ್ಲ ಕಲ್ಲಿನವರಾದರು. ಇಂದು ರಾಜಧರ್ಮ, ಆಚಾರಧರ್ಮ ಎಲ್ಲದರ ಮೇಲೆ ಹೊನ್ನಿನ ಬಣ್ಣ ಚೆಲ್ಲಿದೆ. "ಸರ್ವೇಗುಣಾಃ ಕಾಂಚನಮಾಶ್ರೀಯಂತಿ" ಅಷ್ಟೇ ಅಲ್ಲ ಇಂದು ಲೋಕದಲ್ಲಿ ಬ್ರಾಹ್ಮಣ ಧರ್ಮ, ಕ್ಷತ್ರಿಯ ಧರ್ಮ ಮತ್ತು ಶೂದ್ರ ಧರ್ಮ ಎಲ್ಲ ಅಳಿದು ಹೋಗಿ ಬರಿಯ ವಹಿದ್ಧರ್ಮ ತಾನೇ ತಾನಾಗಿದೆ. ಸ್ವಾಮಿ ವಿವೇಕಾನಂದರು ಒಮ್ಮೆ ಹೇಳಿದರು—'ಒಂದಾನೊಂದು ಕಾಲದಲ್ಲಿ ಬ್ರಾಹ್ಮಣರ ರಾಜ್ಯ ನಡೆಯಿತು, ಅನಂತರ ಕ್ಷತ್ರಿಯರ ರಾಜ್ಯ, ಈಗ ವೈಶ್ಯರ ರಾಜ್ಯ ನಡೆಯುತ್ತಿದೆ. ಕೊನೆಗೆ ಶೂದ್ರರ ರಾಜ್ಯ (ಕಮ್ಯೂನಿಸಂ) ಬಂದೇ ಬರುತ್ತದೆ.' ಎಂದು. ಆದರೆ ಇಂದಿನ ಸ್ಥಿತಿಯನ್ನು ನೋಡಿದರೆ ವಣಿಗ್ಧರ್ಮದ ಭವಿಷ್ಯ ಇನ್ನೂ ಉಜ್ವಲವಾಗಿರುವಂತೆ ಕಾಣುತ್ತದೆ. ಇಂದು ವ್ಯಾಪಾರ ರಾಜಕಾರಣದ ಪ್ರಧಾನ ಅಂಗವಾಗಿ ಹೋಗಿದೆ. ಹಿಂದೆ ಇಂಗ್ಲೀಷರ ಕಾಲದಲ್ಲಿ 'Flag follows the trade' ಎಂಬ ಮಾತು ಗಾದೆ ಮಾತಾಗಿ ಹೋಗಿತ್ತು. ದೊಡ್ಡ ದೊಡ್ಡ ರಾಜ್ಯಗಳು ಇಂದು ತಮ್ಮ ದೇಶದ ಸರುಕನ್ನು ಮಾರುವ ವ್ಯಾಪಾರಿಗಳಾಗಿ ಪರಿಣಮಿಸಿವೆ. ಕ್ಷತ್ರಿಯರ ರಾಜ್ಯವಿದ್ದಾಗ ಒಂದು ರಾಜ್ಯ ಮತ್ತೊಂದು ರಾಜ್ಯದ ಮೇಲೆ ಕೇವಲ ವಿಜಯದ ಕೀರ್ತಿಗಾಗಿ ಜೈತ್ರಯಾತ್ರೆ ನಡೆಸುತ್ತಿತ್ತು. ಆದರೆ ಈಗ ಎಲ್ಲೆಲ್ಲೂ ಆರ್ಥಿಕ ಸಾಮ್ರಾಜ್ಯವಾದ Economic Superialism ತಾನೇ ತಾನಾಗಿದೆ. ಜೈನರ ಪ್ರಕಾರ ಚಕ್ರವರ್ತಿಯ ಆಯುಧಾಗಾರದಲ್ಲಿ ಚಕ್ರರತ್ನ ಉದ್ಭವಿಸುತ್ತಿತ್ತು. ಅದನ್ನು ಮುಂದಿಟ್ಟುಕೊಂಡು ಆ ಚಕ್ರವರ್ತಿ ವಿಜಯ ಯಾತ್ರೆಗಾಗಿ ಹೊರಡುತ್ತಿದ್ದ. ಆದರೆ ಈಗಿನ ಕಾಲವಾಗಿದ್ದರೆ ಚಕ್ರವರ್ತಿಯ ಆಯುಧಾಗಾರದಲ್ಲಿ ತಕ್ಕಡಿಯೊಂದು ಹುಟ್ಟುತ್ತಿತ್ತೆಂದು ಕಾಣುತ್ತದೆ. ಅವನು ಅದನ್ನು ಹಿಡಿದುಕೊಂಡು ವ್ಯಾಪಾರದ ಹೆಸರಿನಲ್ಲಿ ಲೋಕವನ್ನು ಗೆದ್ದುಬರುತ್ತಿದ್ದನೋ ಏನೋ. ಇಂದಿನ ಶಾಸಕರ ಕೈಯಲ್ಲಿ ರಾಜದಂಡವಿಲ್ಲ. ರಾಜತ್ವವೇ ಹೋದ ಮೇಲೆ ದಂಡ ದಂಡವಲ್ಲವೆ? ಆದರೆ ಅದರ ಬದಲಿಗೆ ತಕ್ಕಡಿ ಬಂದಿದೆ. ನ್ಯಾಯದೇವತೆಯ ಕೈಯಲ್ಲಿ ತಕ್ಕಡಿ ಇದೆಯಂತೆ. ಅದು ಧರ್ಮಾಧರ್ಮವನ್ನು ಅಳೆಯುವುದಕ್ಕಾಗಿ ಎಂದು ಕೇಳಿದ್ದೇವೆ. ಆದರೆ ಇಂದು ನಾವೆಲ್ಲ (ಅ)ನ್ಯಾಯ ದೇವತೆಗಳಾಗಿದ್ದೇವೆ. ನಮ್ಮೆಲ್ಲರ ಕೈಯಲ್ಲೂ ಒಂದು ತಕ್ಕಡಿಯಿದೆ ಧರ್ಮಾಧರ್ಮವನ್ನು ತೂಗಲಲ್ಲ, ಲಾಭ ನಷ್ಟವನ್ನು ತೂಗಿನೋಡಲು. ಒಬ್ಬರನ್ನು ಪ್ರೀತಿಸಿದರೆ, ಒಬ್ಬರ ಮೇಲೆ ದಯೆದೋರಿದರೆ, ಒಬ್ಬರಿಗೆ ಅಯ್ಯೋ ಎಂದರೆ ಏನು ಲಾಭ ಎಂದು ನಾವು ತೂಗಿನೋಡುತ್ತಿದ್ದೇವೆ. ತೂಗುವುದು, ಕೂಗುವುದು ಇಂದು ಯುಗಧರ್ಮವಾಗಿದೆ.

ಒಂದು ಲೋಭದಿಂದ ಇನ್ನೊಂದು ಲೋಭನಿವಾರಣೆಯ ಸಂದರ್ಭವೂ ಉಂಟು. ಹಣ ತನ್ನ ಉಪಾಸಕನಿಗೆ ಹೇಳುತ್ತದೆ:

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ|
ಅಹಂತ್ವಂಸರ್ವ ಪಾಪೇಭ್ಯೋ ಮೋಕ್ಷ
ಶಿಷ್ಯಾಮಿ, ಮಾಶುಚ ||"

ಅಷ್ಟೇ ಅಲ್ಲ. ಅದು ತನಗಿಂತ ಶ್ರೇಷ್ಠವಾದ ಉಪಾಸ್ಯವಸ್ತು ಬೇರೊಂದಿಲ್ಲ ಎಂದು ಹೇಳುತ್ತದೆ:

"ಮತ್ತಃ ಪರಂತರಂ ನಾನ್ಯತ್ಕಿಂಚಿದಸ್ತಿ ಧನಂಜಯ"

ಈ ರೀತಿ ಲೋಭಿಗೆ ಹಣವೇ ದೇವರು, ಹಣವೇ ಮೋಕ್ಷ. ಲೋಭಿಗಳ ದಮನ ಯೋಗಿಗಳ ಇಂದ್ರಿಯ ನಿಗ್ರಹಕ್ಕಿಂತ ಯಾವ ರೀತಿಯಲ್ಲೂ ಕಡಮೆಯಿಲ್ಲ. ಲೋಭದ ಬಲದಿಂದಲೇ ಅವರು ಕಾಮ ಕ್ರೋಧಗಳನ್ನು ಗೆಲ್ಲುತ್ತಾರೆ, ಸುಖದ ವಾಸನೆಯನ್ನೇ ತ್ಯಜಿಸುತ್ತಾರೆ. ಮಾನಾಪಮಾನಗಳಲ್ಲಿ ಸಮಭಾವವಿಟ್ಟಿರುತ್ತಾರೆ. ಅಷ್ಟೇ ಅಲ್ಲ ಜಿಪುಣರು ಅದ್ಭುತ ಪವಾಡಪುರುಷರು. ಚಂಚಲೆಯಾದ ಲಕ್ಷ್ಮಿಯ ಕಾಲನ್ನೇ ಅವರು ಮುರಿದು ಹಾಕಿರುತ್ತಾರೆ. ಜಿಪುಣರ ಮುಂದೆ ನೂರು ರೂಪಾಯಿ, ಹತ್ತು, ಐದು, ಎರಡು, ಒಂದು ಮೊದಲಾದ ನೋಟುಗಳು, ಚಿಲ್ಲರೆ ಪೈಸಗಳು ತಮ್ಮ ದುಷ್ಟ ಶಕ್ತಿಯನ್ನೆಲ್ಲ ಕಳೆದುಕೊಂಡು ನಿರ್ವೀರ್ಯವಾಗಿ ಬಿದ್ದಿರುತ್ತವೆ. ಈ ರೀತಿ ಹಾವಿನ ಹಲ್ಲ ಕಳೆದು ಅದರೊಡನೆ ಆಟವಾಡುವ ಹಾವಾಡಿಗರನ್ನು ಜಿಪುಣರು ಹೋಲುತ್ತಾರೆ. ಹಣದ ಶಕ್ತಿಯನ್ನೆಲ್ಲ ನಾಶಮಾಡಿರುವುದನ್ನು ನೋಡಿದರೆ ಋಷ್ಯಾಶ್ರಮದ ನೆನಪು ಬಾರದಿರದು. ಹಿಂದೆ ಋಷಿಗಳ ಆಶ್ರಮದಲ್ಲಿ ಹುಲಿ ಹುಲ್ಲೆ, ಸಿಂಹ ಗೋವು ಮೊದಲಾದವು ತಮ್ಮ ನೈಸರ್ಗಿಕ ವೈರಭಾವವನ್ನು ಮರೆತು ಸ್ನೇಹಭಾವದಿಂದ ಇರುತ್ತಿದ್ದವಂತೆ. ಹಣ ಹುಲಿ, ಸಿಂಹಗಳಿಗಿಂತ ಭಯಂಕರವಾದುದು. ಅದರ ಶಕ್ತಿಯನ್ನು ಉಡುಗಿಸಬೇಕಾದರೆ ಕೃಪಣರು ನಿಜಕ್ಕೂ ಮಹಾ ಪುರುಷರು. ಪವಾಡ ಪುರುಷರು.

[ಸಶೇಷ.]

ಇಂದಿನ ಕಾವ್ಯಗಳ ಒಲವು ಮತ್ತು ನಿಲವು

ಶ್ರೀಲೇಖ

ಕವಿಪ್ರತಿಭೆ ಅನಂತವಾದದ್ದು; ಅಸಾಧ್ಯವಾದ ಘಟನೆಗಳನ್ನು ಸಹ ಆ ಪ್ರತಿಭೆ ಅದ್ಭುತವಾಗಿ ವರ್ಣಿಸಬಲ್ಲುದು; ಆ ಕಲ್ಪನಾ ಪ್ರತಿಭೆ ಸುಂದರ ಪ್ರಪಂಚವನ್ನು ನಿರ್ಮಾಣ ಮಾಡಬಲ್ಲುದು. ಅಂತಹ ಕಲ್ಪನೆ ಪ್ರತಿಭೆಗಳು ಈ ದಶಕದ ಕವಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಮತ್ತು ಆ ಅಭಿವ್ಯಕ್ತಿಗೆ ಹೇಗೆ ಸ್ವಾಗತ ದೊರಕಿದೆ ಎಂಬುದನ್ನು ನೋಡೋಣ.

ಕಾವ್ಯವೆಂದರೇನು? ಪ್ರಾಚೀನರ ಸಿದ್ಧಾಂತ ಸರಣಿಯಂತೆ 'ಕಾವ್ಯ' ಎಂಬ ಹೆಸರಿಗೆ ಪಾತ್ರವಾಗುವ ರಚನೆ ಎಲ್ಲಕ್ಕೂ ಮೊದಲು ದೋಷವರ್ಜಿತವಾಗಿರಬೇಕು. ಆನಂದವರ್ಧನನು ಹೇಳಿರುವಂತೆ ಧ್ವನಿಯನ್ನೇ ಆತ್ಮವನ್ನಾಗಿ, ರಸವನ್ನೇ ಪ್ರಾಣವನ್ನಾಗಿ ಹೊಂದಿರಬೇಕು. ಅಂದರೆ ಕಾವ್ಯದ ಹೊರಮೈ ಶಬ್ದ, ಅದರ ಒಳಮೈ ಅರ್ಥ ಅಥವಾ ಪ್ರತಿಪಾದ್ಯ ವಿಷಯ. ಈ ಶಬ್ದಾರ್ಥಗಳ ಸಾಹಿತ್ಯ ಅಥವಾ ಸಾರ್ಥಕ್ಯವೇ ಕಾವ್ಯದ ಮರ್ಮ. ಹರಿಹರನು ಕಾವ್ಯರಸಾಸ್ವಾದನದಿಂದಾಗಬೇಕಾದ ಆನಂದದ ಕಡೆಗೂ, ರಾಘವಾಂಕ ಸೌಖ್ಯದ ಕಡೆಗೂ, ನಯಸೇನ ಸಹಜತೆಯ ಕಡೆಗೂ ಗಮನ ಸೆಳೆದರೆ, ಆಂಗ್ಲ ವಿಮರ್ಶನಕಾರ ಲೀ ಹಂಟ್ ಕಾವ್ಯದಲ್ಲಿ ಸತ್ಯ, ಸೌಂದರ್ಯ, ಶಕ್ತಿ ಇವುಗಳ ಔಚಿತ್ಯವನ್ನು ಬಣ್ಣಿಸುತ್ತಾನೆ.

ಈ ದೃಷ್ಟಿಯಿಂದ ನವ್ಯಕಾವ್ಯದ ಹಿನ್ನೆಲೆ ಏನು?

"ಹೊಸ ಜನಾಂಗ ಬಂದು, ಹೊಸ ಸಮಸ್ಯೆಗಳು ಸಾಮಾಜಿಕವಿರಲಿ, ವೈಯಕ್ತಿಕವಿರಲಿ-ತಲೆದೋರಿದಾಗ, ಅದೇ ಜೀವನ ಅದೇ ವಿದ್ಯಮಾನಗಳು ಕವಿಯ ಹೃದಯದಲ್ಲಿ ಹೊಸ ಬಗೆಯ ಪ್ರತಿಕ್ರಿಯೆಯನ್ನು ಹುಟ್ಟಿಸುತ್ತವೆ. ತಲೆಮಾರಿನಿಂದ ತಲೆಮಾರಿಗೆ ಈ ರೀತಿ ಜೀವನ ಮತ್ತು ಪದ್ಯಕಾವ್ಯಗಳಲ್ಲಿ ಮಾರ್ಪಾಟು ತಲೆದೋರುತ್ತ ಬಂದಿದೆ" ಎಂದು ಗೋಪಾಲಕೃಷ್ಣ ಅಡಿಗರು ಒಂದು ಕಡೆ ಹೇಳಿದ್ದಾರೆ. ಕವಿಗಳು ಜೀವನವನ್ನು ಕಾಣುವ ದೃಷ್ಟಿ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತ ಹೋಗಿದೆ. ಈ ವ್ಯತ್ಯಾಸದ ಪ್ರತಿಬಿಂಬವೇ ಸಾಹಿತ್ಯದ ಬದಲಾವಣೆ.

ಆರಂಭದ ನವೋದಯ ಕಾವ್ಯವು ಭಾವಗೀತೆ, ಸಾನೆಟ್, ಪ್ರಗಾಥ, ಸರಳ ರಗಳೆ, ಕಥನ ಕವನಗಳು, ಮಹಾಕಾವ್ಯ ಮತ್ತು ಮಹಾಕಾವ್ಯ ಖಂಡಗಳು, ವಿಡಂಬನ, ಅಣಕವಾಡು ಮೊದಲಾದವುಗಳಿಗೆ ರೂಪವನ್ನು ತಳೆದು ಈಗ ನವ್ಯಕಾವ್ಯದ ಮಜಲಿನಲ್ಲಿ ನಿಂತಿದೆ.

ನವ್ಯಕಾವ್ಯದ ಪ್ರಮುಖ ಲಕ್ಷಣಗಳನ್ನು ಶ್ರೀ ಗೋಕಾಕ್ ಅವರ ಮಾತುಗಳಲ್ಲಿ ಹೀಗೆ ಸಂಗ್ರಹಿಸಬಹುದು:

೧. ಬಳಕೆ ಮಾತು, ೨. ಛಂದಸ್ಸಿನ ನವೀನಪ್ರಯೋಗ ಅಥವಾ ಸ್ವಚ್ಛಂದ ಪ್ರಯೋಗ, ೩. ಪ್ರತಿಮಾ ಪ್ರಾಧಾನ್ಯ, ೪. ವಾಸ್ತವಿಕ ಚಿತ್ರ ಸೃಷ್ಟಿ, ೫. ಪಾರಿಭಾಷಿಕ ಶೈಲಿ, ೬. ವಸ್ತುವಿನ ಆಯ್ಕೆಯಲ್ಲಿನ ಸ್ವಾತಂತ್ರ್ಯ, ೭. ಬೌದ್ಧಿಕ ಪ್ರಾಧಾನ್ಯ, ೮. ವ್ಯಕ್ತ್ಯತೀತ ಮೌಲ್ಯ.

ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಕಾವ್ಯದ ಭಾಷೆ ಆಡುಮಾತಿನ ಸಮೀಪಕ್ಕೆ ಬಂದಿತ್ತು. ಅಲ್ಲಿಂದ ಮುಂದೆ ಈ ಗುಣ ಸಾಹಿತ್ಯದಲ್ಲೂ ಮರೆಯಾಗಿ ಈಗ ನವ್ಯಕಾವ್ಯದಲ್ಲಿ ಪುನರ್ಜನ್ಮ ಕಂಡುಕೊಂಡಿದೆ. ಆಯಾ ಭಾವಗಳಿಗೆ ತಕ್ಕಂತೆ ಭಾಷೆಯು ಬಳಕೆಯಾಗಿದೆ. ಅಡಿಗರ 'ಧೂಮಲೀಲೆ' ಎಂಬ ಕವನವನ್ನು ಇದಕ್ಕೆ ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು. ಈ ಕವನ ಸಿಗರೇಟಿನ ಹೊಗೆಯ ವರ್ಣನೆಯಿಂದ ಪ್ರಾರಂಭವಾಗಿ ಹಾಗೆಯೇ ಬೆಳೆಯುತ್ತ ಕವನದ ಕೊನೆಯಲ್ಲಿ ಮನುಷ್ಯ ಜೀವನ ಎಷ್ಟು ಕ್ಷಣಿಕ ಎಂಬುದರ ಹಂತವನ್ನು ತಲಪುತ್ತದೆ:

"ಸಿಗರೇಟು ತೀರುತಿದೆ ಹೊಗೆಯು ಏರುತಿದೆ;
ಕುಡಿವ ಸೊಗಸುಗಾರ
ಯಾವನವನು? ಕಾಣಿಸದು ಕುಡಿವ ಬಾಯ್
ಹಿಡಿದ ಬೆರಳಯುಗಳ.
ಸಿಗರೇಟು ತೀರುತಿದೆ ಹೊಗೆಯು ಏರುತಿದೆ,
ಹೊಗೆಯೆ ಮೊದಲು ಕೊನೆಯು!
ಈ ಬಾಳ ನನೆಯು, ಕೊನೆಯು!"

ಈ ಹತ್ತು ವರ್ಷಗಳಲ್ಲಿ ಮುಕ್ತಛಂದದ ಪ್ರಯೋಗ ಹೆಚ್ಚಾಗಿ ನಡೆದಿದೆ. ಅಂದರೆ ಈ ಪಂಕ್ತಿಗಳ ಉದ್ದ ಭಾವದ ಓಟಕ್ಕೆ ತಕ್ಕಂತಿರುತ್ತವೆ; ಓದಲು ಹಗುರವಾಗಿರುತ್ತವೆ. ಅವರು ಪಾಲಿಸುವ ಒಂದು ಕ್ರಾಂತಿತತ್ತ್ವ—"ಸ್ಫೂರ್ತಿಯ ಸಹಜ ಅಭಿವ್ಯಕ್ತಿಗೂ, ಸಾಂಪ್ರದಾಯಿಕ ನಿಯಮ

ಪಾಲನೆಗೂ ವ್ಯತ್ಯಾಸ ಬಂದರೆ ಆ ನಿಯಮಗಳನ್ನು ಅವರು ಬದಿಗೊತ್ತಿ ನೇರವಾದ ಅಭಿವ್ಯಕ್ತಿಯನ್ನು ಉಪಾಸಿಸುತ್ತಾರೆ. ರೂಢಿಗೊಂಡ ಛಂದಸ್ಸಿನ ತಾನ-ವಿತಾನಗಳಲ್ಲಿ ಸಹ ಅವರು ನವೀನ ಲಹರಿಗಳನ್ನೂ ಏರಿಳಿತಗಳನ್ನೂ ಗುರುತಿಸಿ ಮೂಡಿಸಿ ಓದುಗನ ಮನ ಸೆಳೆಯುತ್ತಾರೆ."

ಪ್ರತಿಮಾ ವಿಧಾನ ನವ್ಯಕಾವ್ಯದ ವಿಶೇಷಾಂಶವಾಗಿದೆ. "ಪ್ರತೀಕಗಳೇ ನವ್ಯಕಾವ್ಯದಲ್ಲಿ ಅರ್ಥದ ಮೈಲುಗಲ್ಲುಗಳಾಗುತ್ತವೆ. ಅರ್ಥದ ರಹದಾರಿಯಿರದೆ ಬರಿ ಮೈಲಿಗಲ್ಲಿನಿಂದ ಮೈಲಿಗಲ್ಲಿಗೆ ಜಿಗಿಯುವಂತೆ ನಮಗೆ ಭಾಸವಾಗುತ್ತದೆ. ಭಾವಾವೇಶಕ್ಕಿಂತ ಭಾವಸಂಯಮ ಹೆಚ್ಚಾಗಿರುವ ಕಾವ್ಯದಲ್ಲಿ ಹೀಗಾಗುವುದು ಸಾಧ್ಯ. ಅರ್ಥವನ್ನೆಲ್ಲಾ ಪ್ರತಿಮಾಸೃಷ್ಟಿಯಲ್ಲಿ ಬಚ್ಚಿಡಲು ನವ್ಯಕವಿಯು ಹವಣಿಸುವಂತೆ ನಮಗೆ ತೋರುತ್ತದೆ"–ಎಂದು ಶ್ರೀ ಗೋಕಾಕರು ಹೇಳುತ್ತಾರೆ.

ಶ್ರೀ ಅಡಿಗರ 'ಭೂಮಿಗೀತ' ಎಂಬ ಕವನದಲ್ಲಿ ಈ ಬಗೆಯ ಪ್ರತಿಮೆಗಳು ತಂದ ಸೊಗಸನ್ನು ಕಾಣಬಹುದು:

"ಒಂದು ವಿದ್ಯುತ್ತಂತಿ—
....
ದಾರಿ ಸಾಗುವದೆಂತೋ ನೋಡಬೇಕು.."

ಈ ಕವನದಲ್ಲಿನ ಪ್ರತಿಮೆಗಳು ಸೃಷ್ಟಿಯ ವಿಕಾಸ ಕ್ರಮವನ್ನು ಧ್ವನಿಸುತ್ತವೆ. ಜ್ಞಾನದ ಅಂತಃಸ್ಫುರಣವೇ ವಿದ್ಯುತ್ತಂತಿ. ಬೇಕಾದಾಗ ಬೇಕಾದಷ್ಟು ಜ್ಞಾನಪ್ರಕಾಶವನ್ನು ಕೊಡುವುದು 'ಸ್ವಿಚ್ಚು!' ಮೂಲದ ಕರ್ಭೇರಿ ಎನ್ನುವುದು ಸೃಷ್ಟಿಯ ಮೂಲ. ಮಣ್ಣಿನಿಂದಾದ ಜಡದೇಹದಲ್ಲಿ ಜ್ಞಾನವಿಲ್ಲದ ಜೀವ ಸವಾರಿಮಾಡುತ್ತಿದೆ ಎನ್ನುವುದು 'ಹೆಳವನ ಹೆಗಲಮೇಲೆ ಕುರುಡ ಕೂತಿದ್ದಾನೆ', ಎಂಬುದರಿಂದ ಸೂಚಿತವಾಗಿದೆ.

ಇದೇ ರೀತಿಯಲ್ಲಿ ಗೋಕಾಕರ 'ವ್ಯಕ್ತಿತ್ವ' ಎಂಬ ಕವನ ಸೃಷ್ಟಿವಿಕಾಸ ಅಥವಾ ವ್ಯಕ್ತಿತ್ವ ವಿಕಾಸವನ್ನು ಕುರಿತ ಚಿಂತನವಾಗಿ, ಪ್ರತಿಮೆ ಹಾಗೂ ಅರ್ಥಗಳ ಸಂಗಮವನ್ನು ಕಾಣುತ್ತೇವೆ.

ಕೆ. ಎಸ್. ನ. ಅವರ 'ಮನೆಯಿಂದ ಮನೆಗೆ' ಎಂಬ ಕವನ ಇನ್ನೊಂದು ದೃಷ್ಟಿಯಿಂದ ಸ್ವಾರಸ್ಯವಾಗಿದೆ. ಪ್ರತಿವರ್ಷವೂ ವರ್ಗವಾಗಿ ಬೇರೆ ಹೊಸ ಮನೆ ಹುಡುಕುವ ಅಗತ್ಯವಿರುವ ಒಂದು ಸಾಧಾರಣ ಸಂಸಾರದ ಚಿತ್ರಣದಿಂದ ಕವನ ಆರಂಭವಾಗಿ, ಕೊನೆಯಲ್ಲಿ ಕಡೆಯ ಮನೆಗೆ ಹೊಸದು ಹಳೆಯದು ಎಲ್ಲ ಯಾತ್ರೆ ಹೊರಟಿರುವ ಚಿತ್ರವನ್ನು ಮುಂದೆ ನಿಲ್ಲಿಸಿ ಇನ್ನೊಂದು ಸ್ತರದ ಅರ್ಥದ ನೆಲೆಗೆ ಮನಸ್ಸನ್ನು ಕೊಂಡೊಯ್ಯುತ್ತಾರೆ.

'ಹಿಮಗಿರಿಯ ಕಂದರ' ಎಂಬ ಗೋಪಾಲಕೃಷ್ಣ ಅಡಿಗರ ಕವನದ ಒಂದು ಭಾಗದಲ್ಲಿ:

"ಪೋಂ ಪೋಂ ಪೋಂ-ಕಾರು;
....
ಎಂದ ಎದೆ ರಿಪೇರಿ?"

ಅದೇ ಕವಿಯ 'ಗೊಂದಲಪುರ' ದ ಒಂದು ಭಾಗ:

"ಎಂಥ ಶಕೆ ಅಂತೀಯ!...
....
ಒಳಗೆ ಟ್ರೋಜನ್ ಕುದುರೆ, ಯವನ ವಿಕಾರ;"

ಎಂಬ ಪ್ರತಿಮೆಗಳು ಬಂದಿವೆ. ಈ ಉದಾಹರಣೆಗಳಿಂದ ಇಂದಿನ ನವ್ಯಕಾವ್ಯದಲ್ಲಿ ಪದ ಪ್ರಯೋಗ ಪ್ರತಿಮೆಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು. ಪದವಿನ್ಯಾಸ, ಜೋಡಣೆಗಳು ಓದಿಕೆಗಿಂತ ಶ್ರವಣಕ್ಕೆ ಹಿತವಾದದ್ದು. ಇಂದಿನ ಜೀವನದ ಸಾಮಾನ್ಯ ಕ್ಷೇತ್ರಗಳಲ್ಲಿ ನಡೆಯುವ ಸಂಗತಿಗಳಲ್ಲಿ ಕಾವ್ಯಶಕ್ತಿಯನ್ನು ಕಂಡುಕೊಂಡು ಅದನ್ನು ಕಾವ್ಯದಲ್ಲಿ ಇಳಿಸುವಿಕೆ ಮತ್ತು ನಿಸ್ಪೃಷ್ಟವಾದ ಪದ ಪ್ರಯೋಗಗಳು, ವಿಶೇಷ ಪ್ರತಿಮಾ ಸಾಧನೆಯಿಂದ ಬಂದವು ಎನ್ನುವುದರಲ್ಲಿ ಸಂದೇಹವಿಲ್ಲ.

ಕೆಲವುಸಲ ಕವಿಗಳು ಬೆಳಸುವ ವೈಯಕ್ತಿಕ ಪ್ರತಿಮೆಗಳಿಂದ, ವಿಚಿತ್ರ ಪದಪ್ರಯೋಗಗಳಿಂದ ಓದುಗರಿಗೆ ಅರ್ಥ ತೋರದೆ ಗೊಂದಲದಲ್ಲಿ ಬೀಳುತ್ತಾರೆ. ಯಾವ ಕಾವ್ಯ ಹೃದಯವನ್ನು ಮುಟ್ಟಿ ಹೊಸ ಹೊಸ ಭಾವನೆಗಳ ಪ್ರೇರಕ ಶಕ್ತಿಯಾಗಬೇಕೋ ಅದರೊಡನೆಯೇ ಆ ಹೃದಯವನ್ನು ಉನ್ನತಿಗೊಯ್ಯಬೇಕೋ ಆ ಕಾವ್ಯ ಈ ರೀತಿಯಾಗಿ ವಿಫಲವಾಗುತ್ತದೆ. ಈ ತೆರನ ಜನಮನ ಪ್ರತಿಕ್ರಿಯೆ ನವ್ಯಕಾವ್ಯಕ್ಕೆ ಒಳ್ಳೆಯದಲ್ಲ. ವಿದ್ವಾಂಸರಿಗೆ, ಕಾವ್ಯ ವಿಮರ್ಶನಕಾರರಿಗೆ ಮಾತ್ರ ಅರ್ಥವಾಗತಕ್ಕ ನವ್ಯಕಾವ್ಯ 'Art is for art's sake' ಎಂಬಂತೆ ನಡೆದು ತನ್ನ ನಿಲುವಿಗೇ ಧಕ್ಕೆ ತಂದುಕೊಳ್ಳುತ್ತದೆ. ಕವಿ ತನ್ನ ಮನಸ್ಸಿಗೆ ತೋರಿದಂತೆ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೋಗುತ್ತಾನೆ; ಅದರೊಡನೆ ಅವನ ವಿಚಾರಸರಣಿ ಓದುಗರಿಗೆ ಕ್ಲಿಷ್ಟವಾಗುತ್ತ ಹೋಗುತ್ತದೆ. ಕಾವ್ಯ-ಹೊರಬರುವನಕ ಕವಿಯದು, ಹೊರಬಂದ ಬಳಿಕ ಸಹೃದಯ ಓದುಗನದು. ಕಾವ್ಯದ ಮುನ್ನಡೆ ಸರ್ವಜನವೇದ್ಯ

ವಾಗುವಂತಿರಬೇಕು. ಓದುತ್ತಿದ್ದಂತೆ ಅರ್ಥ ಹೊಳೆಯ ಬೇಕು, ಭಾವ ಸ್ಫುರಿಸಬೇಕು. ಕಾವ್ಯದೃಷ್ಟಿ ಎರಡು ಬಗೆಯದು-ಮೊದಲನೆಯದಾಗಿ ಕವಿಯದು. ಎರಡನೆಯ ದಾಗಿ ಸಹೃದಯನದು. ಸಹೃದಯನ ರಸಗ್ರಹಣವೇ ಕಾವ್ಯದ ಪರಮಗುರಿ. ಆಗಲೇ ಅದು ಸಾರ್ಥಕವಾಗು ವುದು.

ನಮ್ಮದು ಕವಿ-ಸಹೃದಯರಿಗೆ ಪರಸ್ಪರ ಪೂರಕವಾಗಿರ ಬೇಕಾದ ಕಾವ್ಯ ಅಂಥದರಲ್ಲಿ ಕಲೆ ಕಲೆಗೋಸುಗ, ರಚಿತವಾದ ಕಾವ್ಯ ಅರ್ಥವಾಗದಿದ್ದರೆ ಬೇಡ, ಅರ್ಥವಾ ದವರಿಗೆ ಆಗಲಿ ಎಂದು ಕಾವ್ಯಪ್ರಿಯರ ಬುದ್ಧಿಮತ್ತೆ ಯನ್ನೇ ಪೇಚಿಗೆ ಒಳಗುಮಾಡಿಸುವುದು ಅಹಂಕೃತಿಯಾ ಗುತ್ತದೆ. ಇದರಿಂದ ಕಾವ್ಯದ ಉದ್ದೇಶ್ಯ ವಿಫಲವಾಗು ತ್ತದೆ. ಆದುದರಿಂದ ರಚನೆಯಾಗುವ ಕಾವ್ಯಗಳು ರಸಿಕರಿಗೆ, ವಿಮರ್ಶಕರಿಗೆ, ವಿದ್ವಾಂಸರಿಗೆ ಮಾತ್ರ ಅರ್ಥ ವಾಗತಕ್ಕ ಖಾಸಗೀ ಭಾಷೆಯಾಗದೆ ಸಮಾನ ಧರ್ಮಿಗಳಿಗೆ ಸಹೃದಯರಿಗೆ ಪ್ರಿಯವಾಗುವಂತಿರಬೇಕು.

ಇಂದು ನಾವು ಪಂಪ, ಹರಿಹರ, ರಾಘವಾಂಕ, ರನ್ನ, ಕುಮಾರವ್ಯಾಸರನ್ನು ದಿನಂಪ್ರತಿ ನೆನೆಸಿಕೊಳ್ಳುವುದಕ್ಕೆ ಕಾರಣ ಅವರ ಕೃತಿಗಳ ಹೃದಯಂಗಮ ಶೈಲಿ, ಅವುಗಳ ನಿತ್ಯನೂತನ ಸೌಂದರ್ಯ. ರಸಿಕನ ಹೃದಯ ಕಾವ್ಯದ ಓದಿನನಂತರ ವಿಕಸಿತವಾಗಬೇಕು. ಈ ಗುರಿ ಇಂದಿನ ಕವಿಗಳದಾಗಬೇಕು. 'ವಸ್ತುವಿನಿಂದ ಕವಿತ್ವಕ್ಕೆ ಉನ್ನತಿ ಯಾಗಲಿ ಅವನತಿಯಾಗಲಿ ಲಭಿಸದು. ಆ ವಸ್ತುವಿನ ವಿಷಯದಲ್ಲಿ ಕವಿಯ ಮನಸ್ಸು ನಿಲ್ಲುವ ನೆಲೆಯ ಬೆಲೆ ಯಿಂದ ಆ ಕಾವ್ಯಕ್ಕೆ ಬೆಲೆ'-ಎಂದು ಪು. ತಿ. ನ. ಅವರು ಹೇಳುವುದನ್ನು ಇಂದಿನ ಕವಿಗಳು ಗಮನಿಸುವುದು ಅಗತ್ಯ.

'ನಿಯತಿಕೃತ ನಿಯಮರಹಿತಾಂ ಹ್ಲಾದೈಕಮಯೀಾಂ ಅನನ್ಯ ಪರತಂತ್ರಾಂ'-ಎಂದು ಮಮ್ಮಟಭಟ್ಟ ಕವಿಧರ್ಮ ವನ್ನು ಕುರಿತು ಹೇಳಿದ್ದಾನೆ. ಹಾಗೆ ಕಾವ್ಯರಚನೆ ಯಶಸ್ವಿಯಾಗಿ ನಡೆದು ವಿಷಯವನ್ನು ಪ್ರತಿಪಾದಿಸಬೇಕು.

ಕಾವ್ಯವು ಸಮಾಜದ ಕನ್ನಡಿ. ಜನಜೀವನವನ್ನೇ ಇಂದಿನ ಕಾವ್ಯ ಪ್ರತಿಬಿಂಬಿಸುತ್ತಿರುವುದು. ಜನತೆ ಎಚ್ಚೆತ್ತು ಸಂಸ್ಕೃತಿಯ ಮಾರ್ಗದಲ್ಲಿ ಮುಂದುವರಿದರೆ ಕಾವ್ಯ ಉತ್ತಮವಾಗುತ್ತದೆ. ಕಾವ್ಯ ಉತ್ತಮವಾದರೆ ಅದನ್ನೋದುವ ಜನಾಂಗ ಉತ್ತಮವಾಗುತ್ತದೆ. ಕವಿತೆಗೆ ಜನತೆ ಜನಪದ ಉದಾತ್ತವಾಗುವುದಕ್ಕೆ ಕವಿ ಪ್ರಯತ್ನ ಪಡಬೇಕಾಗಿರುವುದು ಅವಶ್ಯ. ಒಟ್ಟಿನಲ್ಲಿ ಕವಿ-ಸಹೃದಯ ಇವರೀರ್ವರ ದೃಷ್ಟಿ ಸಮನ್ವಯ ನಾಡಿನ ಕಲ್ಯಾಣ ವನ್ನುಂಟುಮಾಡಲು ಸಹಾಯಕ.

ಹಿಂದಿನ ಕವಿಗಳ ಕಾವ್ಯರಚನೆ ಸೌಂದರ್ಯಾನ್ವೇಷಣೆ ಯಿಂದ ಕೂಡಿದುದಾಗಿತ್ತು. ಇಂದಿನವು ಸತ್ಯಾನ್ವೇಷಣೆ ಯಿಂದ ಕೂಡಿದವುಗಳಾಗಿವೆ. ಕವನಗಳಲ್ಲಿನ ಜಟಿಲತೆ ಮಾಯವಾಗಬೇಕು. ಇನ್ನೊಂದು ಅಂಶ-ಇಂದಿನ ಕಾವ್ಯಗಳಲ್ಲಿನ ಬುದ್ಧಿಪ್ರಾಧಾನ್ಯ ಹೃದಯಂಗಮತೆ ಯಾಗಬೇಕು. ಕಾವ್ಯದಲ್ಲಿ ಹೃದಯಂಗಮತೆ ಪ್ರಧಾನ ವಾದ ಗುಣ. ಬುದ್ಧಿಪ್ರಾಧಾನ್ಯತೆ ಹೊಂದದ ಕಾವ್ಯ ಜನ ಪ್ರಿಯವಾಗುವುದಿಲ್ಲ. "ಬುದ್ಧಿಪ್ರಾಧಾನ್ಯತೆ ಮುಖ್ಯವಾಗಿ ದ್ದಲ್ಲಿ ಆ ಕೃತಿ ಕಾವ್ಯದ ಬದಲು ಶಾಸ್ತ್ರವಾಗುತ್ತದೆ. ಇವೆರಡರ ಹಿತಮಿತವಾದ ಮಿಲನ ಉತ್ತಮ ಕಾವ್ಯಕ್ಕೆ ದಾರಿಮಾಡಿಕೊಡುತ್ತದೆ"-ಎಂದು ಡಿ. ವಿ. ಜಿ. ಅವರು ಹೇಳಿರುವುದನ್ನು ಗಮನಿಸಬೇಕು.

ಸಾಹಿತ್ಯ ವಿಕಾಸವು ಕ್ರಮವಾಗಿ ಆಗತಕ್ಕದ್ದು. ಆದುದರಿಂದ, ಹಿಂದಿನವರು ಇಂದಿನವರ ದೃಷ್ಟಿಯ ಅರ್ಥ ಮಾಡಿಕೊಂಡು, ಇಂದಿನವರೂ ಹಿಂದಿನವರ ರಚನೆಗಳಿಗೆ ಗೌರವಕೊಟ್ಟು ಸೌಹಾರ್ದತೆಯಿಂದ ನಡೆದುಕೊಂಡಲ್ಲಿ ಸಾಹಿತ್ಯ ಬೆಳೆಯುತ್ತದೆ; ಬೆಳಗುತ್ತದೆ.

ಅಕ್ಕಮಹಾದೇವಿ ವಾಙ್ಮಯ ದರ್ಶಕ

ಎಸ್. ಆರ್. ಗುಂಜಾಳ

ಶಿಕ್ಷಣ ಪ್ರಸಾರವು ಹೆಚ್ಚಾದಂತೆ ಜ್ಞಾನಕೋಟಿಯ ಪ್ರತಿಯೊಂದು ಶಾಖೆಯ ಸೂಕ್ಷ್ಮಾಂಶದ ಬಗೆಗೆ ಹೆಚ್ಚೆಚ್ಚು ಸಂಶೋಧನೆ ನಡೆಯುವದು ಸಹಜವಾಗಿದೆ. ಇಂದಿಗೆ ಐವತ್ತು ವರ್ಷಗಳ ಹಿಂದೆ ಅಕ್ಕಮಹಾದೇವಿಯ ಬಗೆಗೆ ಎಷ್ಟೋ ವಿಷಯಗಳು ತಿಳಿದಿರಲಿಲ್ಲ. ಆದರೆ ಇಂದು ಆಕೆಯ ಜೀವನ, ಸಾಹಿತ್ಯ ಇತ್ಯಾದಿಗಳನ್ನು ಕುರಿತು ಅನೇಕ ವಿಷಯಗಳು ಬೆಳಕಿಗೆ ಬಂದಿವೆ. ಇಂದು ಆಕೆಯ ಹೆಸರನ್ನು ಕೇಳದ ಕನ್ನಡಿಗನಿಲ್ಲ. ನಾಡಿನಾದ್ಯಂತ 'ಅಕ್ಕನ ಬಳಗ'ಗಳು ರೂಪುಗೊಂಡಿವೆ. 'ಅಕ್ಕನ ಜಯಂತಿ' ಪ್ರತಿವರ್ಷವೂ ವಿಶೇಷ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಜಯಂತಿಯ ದಿನ ಎಲ್ಲೆಡೆಗಳಲ್ಲಿ ಸಭೆ ಸಮ್ಮೇಳನಗಳು ಜರುಗುತ್ತವೆ. ಅಲ್ಲಿ ವಿದ್ವಜ್ಜನರು ಆಕೆಯ ಬಗೆಗೆ ವಿಚಾರಪೂರ್ಣವಾದ ಭಾಷಣಗಳನ್ನು ಮಾಡುವದು ರೂಢಿಯಾಗಿದೆ. ಜನತೆಯಲ್ಲಿಯೂ ಅಕ್ಕನನ್ನು ಆತ್ಮೀಯತೆಯಿಂದ ಹೆಚ್ಚೆಚ್ಚು ಅರಿತುಕೊಳ್ಳಬೇಕೆಂಬ ಕುತೂಹಲ ಹೆಚ್ಚಾಗಿದೆ. ಕಾರಣ ಸಂಶೋಧಕರು, ವಿಮರ್ಶಕರು, ಸಾಹಿತಿಗಳು ಅಕ್ಕನ ಜೀವನ ಕೃತಿಗಳನ್ನು ಕುರಿತು ಚರಿತ್ರೆ, ಕಾವ್ಯ, ಕಾದಂಬರಿ, ಕಥೆ, ನಾಟಕ-ರೂಪಕ, ಲೇಖನ ಇತ್ಯಾದಿಗಳನ್ನು ಬರೆದಿರುವರು. ತೆಲುಗು, ಮರಾಠಿ, ಹಿಂದೀ ಭಾಷೆಗಳಲ್ಲಿ ಅಕ್ಕನ ತತ್ವ-ಪ್ರಣಾಲಿ ಪ್ರಕಟವಾಗಿದೆ. ಹೀಗೆ ಅಕ್ಕನ ಮೇಲೆ ಬರೆಯಲ್ಪಟ್ಟ ಸಮಗ್ರ ವಾಙ್ಮಯವನ್ನು ಒಂದೆಡೆ ಸಂಗ್ರಹಿಸಿ ಅದರ ವಿವರಣಾತ್ಮಕ ದರ್ಶಕವನ್ನು ಸಿದ್ಧಪಡಿಸುವ ಯೋಜನೆಯು ನಮ್ಮ ಮನದಲ್ಲಿ ಅಂಕುರಿಸಿದೆ. ಪ್ರಸ್ತುತದಲ್ಲಿ ಕೇವಲ ಕನ್ನಡ ಅದರಲ್ಲಿಯೂ ನಮಗೆ ದೊರೆತಷ್ಟು—ಗ್ರಂಥಗಳ ವಿವರಣಾತ್ಮಕ ದರ್ಶಕವನ್ನು ಸಿದ್ಧಪಡಿಸಿ ಕೊಟ್ಟಿರುವೆವು.

ಪ್ರತಿಯೊಂದು ಗ್ರಂಥಕ್ಕೆ ಅದರ ಶಿರೋನಾಮೆ, ಲೇಖಕ, ಸಂಪಾದಕ—ಸ್ಥಳ, ಪ್ರಕಾಶಕನ ಹೆಸರು, ಪ್ರಕಟಿತ ವರುಷ, ಪುಟ, ಬೆಲೆ, ಗ್ರಂಥದಲ್ಲಿ ಅಡಕವಾದ ವಿಷಯದ ಸಂಕ್ಷೇಪ ವರ್ಣನೆ—ಇವಿಷ್ಟು ವಿವರಗಳನ್ನು ಕೊಟ್ಟಿರುವೆವು. ಗ್ರಂಥದ ಭಾಷೆ, ಶೈಲಿ, ವಿಷಯ ಇತ್ಯಾದಿಗಳ ಬಗೆಗೆ ಸಾಧ್ಯವಾದ ಮಟ್ಟಿಗೆ ನಮ್ಮ ಅಭಿಪ್ರಾಯಗಳನ್ನು ಹೇಳದೆ ಗ್ರಂಥಕರ್ತ, ಸಂಪಾದಕ, ಮುನ್ನುಡಿಕಾರ—ಇವರ ಮಾತುಗಳನ್ನೇ ಅವತರಣಿಕೆ ಚಿಹ್ನೆಗಳಲ್ಲಿ ಎತ್ತಿ ಕೊಟ್ಟಿರುವೆವು. ಇದು ಅಕ್ಕನ ಸಮಗ್ರ ಜೀವನ ಮತ್ತು ಸಾಹಿತ್ಯ ಕೃತಿಗಳನ್ನು ಅರಿತುಕೊಳ್ಳುವಲ್ಲಿ ಜಿಜ್ಞಾಸುಗಳಿಗೆ, ಸಂಶೋಧಕರಿಗೆ ಅತ್ಯಂತ ಪ್ರಯೋಜನಕ್ಕೆ ಬೀಳುವದೆಂದು ನಮ್ಮ ಬಲವಾದ ನಂಬಿಕೆ. ನಮ್ಮ ಅವಲೋಕನಕ್ಕೆ ಸಿಕ್ಕದೆಹೋದ ಗ್ರಂಥಗಳ ನಾಮ ನಿರ್ದೇಶನ ಮಾತ್ರ ಮಾಡಲಾಗಿದೆ.

೧. **ಅಕ್ಕನ ಅಚ್ಚ ಬಾಳು :**

ಶ್ರೀ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ
ನಾಲತವಾಡ, ಶ್ರೀ ಶಿ. ಶಿ. ಚಿತ್ತರಗಿ, ೧೯೫೩ ;
ಪುಟ ೭+೮೪=೯೧ : ಬೆಲೆ ೧-೦೦.
ಸನ್ಮಾರ್ಗ ಗ್ರಂಥಭಾಂಡಾರ ಪುಸ್ತಕ ಮಾಲೆ ೫

ವರ್ಣನೆ : " ಆಧ್ಯಾತ್ಮಿಕ ಬಾಳಿಂದು ಆರಂಭಿಸಿದ್ದರೂ ಗ್ರಂಥವೆಲ್ಲ ವೇದಾಂತದ ಜಟಿಲ ಮಾತುಗಳಿಂದ ತುಂಬಿಕೊಂಡಿಲ್ಲ. ಹುಟ್ಟು ಬೆಳವಣಿಗೆಗಳ ಪ್ರಕರಣಗಳನ್ನು ದಾಟಿ ಮದುವೆಯ ಪ್ರಕರಣಕ್ಕೆ ಬಂದೊಡನೆ ಇದೇನು ಆಧ್ಯಾತ್ಮಿಕ ಗ್ರಂಥವೋ ಅಥವಾ ಸರಸವಾದ ಸರಳವಾದ ಲಲಿತ ಗ್ರಂಥವೋ ಎಂದೆನ್ನುವಷ್ಟು ಸುಂದರವಾಗಿ ಓದುಗರಿಗೆ ಓದುವ ಉತ್ಸಾಹ ಹುಟ್ಟುವಂತೆ ಲೇಖಕರು ಗ್ರಂಥವನ್ನು ಬರೆದಿದ್ದಾರೆ. ಅಕ್ಕನ ವಚನವು ಆಧ್ಯಾತ್ಮಿಕವಾಗಿದ್ದರೂ ಹೇಗೆ ರುಚಿಕಟ್ಟಾಗಿದೆಯೋ ಹಾಗೆ ಅದರ ಉದರದಿಂದ ಜನಿಸಿದ ಇವರ ಗ್ರಂಥವೂ ರುಚಿಕಟ್ಟಾಗಿದೆ ಶೈಲಿಯು ಸರಳವಾಗಿ ಓಡುತ್ತದೆ. ವಚನಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಆಯ್ದು ಜೋಡಿಸಿದ ಇವರ ಚಾತುರ್ಯವು ಹೆಚ್ಚು ಮೆಚ್ಚತಕ್ಕದ್ದಾಗಿದೆ. ಅಕ್ಕನ ಬಾಳು-ಬಟ್ಟೆ-ಭಾಷೆಗಳನ್ನು ಯಾವ ದೃಷ್ಟಿಯಿಂದ ದಿಟ್ಟಿಸಬೇಕೆಂಬುದನ್ನು ಒಳ್ಳೇ ಯುಕ್ತಿ-ಯುಕ್ತವಾಗಿ ಎತ್ತಿ ತೋರಿಸಿದ್ದಾರೆ. ಅಕ್ಕನಂತಹ ಆಧ್ಯಾತ್ಮಿಕ ಶೌರ್ಯವನ್ನು ಕಂಡುಂಡು ನಲಿಯಲು ಒಳಗಣ್ಣು ಅವಶ್ಯವಾಗಿ ಬೇಕೆಂಬುದನ್ನು ಚಿತ್ತಾಕರ್ಷಕವಾಗಿ ಚಿತ್ರಿಸಿದ್ದಾರೆ. ಅಲ್ಲಲ್ಲಿ ಐತಿಹಾಸಿಕ ಕುರುಹುಗಳನ್ನು ಅಡಿ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. ಅವುಗಳಲ್ಲಿ ನಿಲಾಂಬಿಕೆಯ ವಿಚಾರ, ಅಕ್ಕನ ಗುರುವಿನ ವಿಚಾರ ಬಹು ಪ್ರಾಮುಖ್ಯವಾದುವು. 'ಅಕ್ಕನ ಬಾಳು' ಒಳ್ಳೆ ಆಳ

ವಾದುದು, ಅಗಾಧವಾದುದು. ಅದು ಅಳತೆಗೋಲಿಗೆ ಅಟುಕುವಂತಹದಲ್ಲ. ಆದರೂ ಗ್ರಂಥಕಾರರು ಅಟುಕಿಸಲು ಯತ್ನಿಸಿದ್ದಾರೆ. ಯಶಸ್ವಿಯಾಗಿದ್ದಾರೆ.

—ಶ್ರೀ ಮಹಾದೇವ ಸ್ವಾಮಿಗಳು ಸರ್ಪಭೂಷಣಮಠ ಅವರ 'ಮೆಚ್ಚೋಲೆ'ಯಿಂದ

೨. ಅಕ್ಕನ ಐತಿಹಾಸಿಕ ಜೀವನ ದರ್ಶನ:

ಕೊಟಗಿ (ತೋಟಪ್ಪ ಶಿವಬಸಪ್ಪ)
ಗದಗ, ಕರ್ತೃ, ೧೯೫೭:
ಪುಟ ೨೦+೧೨೨=೧೪೨;
ಬೆಲೆ: ರೂ. ೧-೫೦.

ವರ್ಣನೆ: "ಭಕ್ತಿ, ಜ್ಞಾನ, ವೈರಾಗ್ಯಗಳು ಮುಪ್ಪುರಿಯಾಗಿ ಮೈಗೂಡಿದ ಅಕ್ಕ ಮಾನವೀಯನ್ನು ಮೀರಿನಿಂತ ದಿವ್ಯ ಮೂರುತಿಯಾಗಿದ್ದಾಳೆ. ಆ ನೈಜ ಚಿತ್ರವನ್ನು, ನೀತಿ ಮುಕ್ತಿಯನ್ನು ಬಯಸುವ ಸಾಧಕರ ಮನೋಭಿತ್ತಿಯಲ್ಲಿ ಮೂಡಿಸಲು ಶ್ರೀ ತೋಟಪ್ಪನವರು (ಇದರಲ್ಲಿ) ಪ್ರಯತ್ನ ಪಟ್ಟಿರುವದು ಶ್ಲಾಘನೀಯ ವಿಷಯ."

—ಶ್ರೀ ನವಿಲುಗುಂದ ಬಸವಲಿಂಗಸ್ವಾಮಿಗಳು

೩. ಅಕ್ಕನ ಗೀತೆ:

ಮಲ್ಲಾಬಾದಿ (ವೀರಭದ್ರಪ್ಪ), ಸಂ.
ದಾವಣಗೆರೆ, ಪಂಪಸಾಹಿತ್ಯ ಪ್ರಕಟನಾಲಯ, ೧೯೬೦;
ಪುಟ ೪೬; ಬೆಲೆ: ಅಮೂಲ್ಯ.
ಪ್ರೇಮದ ಬಳ್ಳಿಯ ಬಳಗದ ಪುಷ್ಪ, ೩

ವರ್ಣನೆ: ಇದರಲ್ಲಿ ಮಹಾದೇವಿ ಅಕ್ಕನ ೬೬ ವಚನಗಳನ್ನು ಸಂಸ್ಕರಿಸಿ ಸಂಗ್ರಹಿಸಲಾಗಿದೆ.

೪. ಅಕ್ಕನ ಚರಿತ್ರೆ:

ಅಂಗಡಿ (ಕ. ಬ.)

೫. ಅಕ್ಕನ ಪ್ರವಚನ:

ಶ್ರೀ ಲಿಂಗಾನಂದ ಸ್ವಾಮಿಗಳು;
ದಾವಣಗೆರೆ, ಕರ್ತೃ, ೧೯೬೨;
ಪುಟ: xvi+೫೨೪=೫೪೦;
ಬೆಲೆ: ರೂ. ೫-೦೦.
ಸಂವಿಧಾನ ಗ್ರಂಥಮಾಲಾ, ೫

ವರ್ಣನೆ: ಜನನದಿಂದ ಐಕ್ಯದವರೆಗಿನ ಅಕ್ಕನ ಜೀವನದ ಅನೇಕ ಮುಖಗಳನ್ನು ೩೧ ಪ್ರಕರಣಗಳಲ್ಲಿ ಪ್ರವಚನಗಳ ರೂಪದಲ್ಲಿ ಪಡಿಮೂಡಿಸಲಾಗಿದೆ.

೬. ಅಕ್ಕನ ಬಾಳು ಮತ್ತು ಸಾಹಿತ್ಯ:

ಶ್ರೀ ಜಚನಿ, ಗುಪ್ತನಾಮ;
ಬೆಂಗಳೂರು, ಶ್ರೀ ಶೈಲಜಗದ್ಗುರು,
ನಿಡುಮಾಮಿಡಿ ಪುಸ್ತಕ ಭಾಂಡಾರ, ೧೯೫೭;
ಪು. viii+೨೦೦+೧೧=೨೧೯;
ಬೆಲೆ: ರೂ. ೧-೭೫.

ವರ್ಣನೆ: ೧. ಅಕ್ಕನ ಇಹಜೀವನ ಮತ್ತು ಆಧ್ಯಾತ್ಮಿಕ ಜೀವನದ ವಿಕಾಸ—ಇವುಗಳನ್ನು ಸರಳ ಭಾಷೆಯಲ್ಲಿ ಸುಂದರ ಶೈಲಿಯಲ್ಲಿ ಸಂಶೋಧನ ದೃಷ್ಟಿಯಿಂದ ವಿವರಿಸಲಾಗಿದೆ. ೨. ಅಕ್ಕನ ೧೬೩ ಸ್ಥಳಕಟ್ಟಿನ ವಚನಗಳನ್ನು ಪರಿಷ್ಕರಿಸಿ ಕೊಡಲಾಗಿದೆ. ೩. ಲಿಂಗೈಕ್ಯ ಶ್ರೀ ಗೌರೀಶಂಕರ ಸ್ವಾಮಿಗಳ 'ಅಕ್ಕ ಮಹಾದೇವಿ' ಎಂಬ ಅಪ್ರಕಟಿತ-ಅಪೂರ್ಣ ಚಂಪೂಕಾವ್ಯ ಮತ್ತು ಶ್ರೀ ಮಾ. ನಂ. ನಂಜಪ್ಪನವರ 'ಮಹಾದೇವಿಯಕ್ಕ' ಗ್ರಂಥ'—ಇವುಗಳಿಂದ ಆಯ್ದು ಅಕ್ಕನ ೫೭ ಹೆಚ್ಚಿನ ವಚನಗಳನ್ನು ಸಂಗ್ರಹಿಸಿ ಕೊಡಲಾಗಿದೆ. ೪. ಅಕ್ಕನ ಸೃಷ್ಟಿಯ ವಚನವಿದೆ. ೫. ಅಕ್ಕನ 'ಯೋಗಾಂಗ ತ್ರಿವಿಧಿ' ಯಿದೆ ಅದರಲ್ಲಿ ೬೭ ತ್ರಿಪದಿಗಳಿವೆ. ೬, 'ಅಕ್ಕಗಳ ಷೋಡಶಸ್ಥಲ ನಿರ್ದೇಶ ವಚನ', 'ಅಕ್ಕಗಳು ನಿರೂಪಿಸಿದ ಕೊರವಂಜಿ ಪದ', 'ಅಕ್ಕನ ಆರತಿ ಹಾಡು', 'ಸುಮನ ಸಾರಾಯ ಶರಣೀ ಹಾಡು' ಶ್ರೀ ಮಹಾದೇವಿಯಕ್ಕನ ಲಾವಣಿ ಪದ—ಇವುಗಳನ್ನು ಜೋಡಿಸಿ ಕೊಡಲಾಗಿದೆ. ಕೊನೆಯಲ್ಲಿ ಅಕ್ಕನ ವಚನಗಳ ವರ್ಣಾನುಕ್ರಮಣಿಕೆಯನ್ನು ಕೊಟ್ಟಿದೆ.

ಶ್ರೀ ಶರಣಬಸಪ್ಪ—ಮಹಾದೇವಿ ದಂಪತಿಗಳು, ಲೇಖಕರು, ಮತ್ತು ಲಿಂಗಾನುಭವದಲ್ಲಿ ಲೀನಳಾದ ಅಕ್ಕ ಮಹಾದೇವಿ—ಇವರುಗಳ ವರ್ಣ ಚಿತ್ರಗಳಿವೆ.

(ಮುಂದುವರಿಯುವುದು)

ವಿಮರ್ಶನರಂಗ

ಶ್ರೀ ಮಹದೇಶ್ವರ ಸುಪ್ರಭಾತ ಸ್ತೋತ್ರಮ್:

ರಚನೆ: ಮಾ. ನಂ. ನಂಜಪ್ಪ; ಪ್ರ: ಕಲ್ಯಾಣಭವನ ಸಾಹಿತ್ಯ ಭಾಂಡಾರ, ಚಿಕ್ಕಪೇಟೆ, ಬೆಂಗಳೂರು. ಬೆಲೆ: ೧-೩೦.

ಚಿಕ್ಕದಾದರೂ ಚೊಕ್ಕ ಕೃತಿಯಾದ ಈ ಸ್ತೋತ್ರ ಮಲೆಯ ಮಹದೇಶ್ವರನನ್ನು ಕುರಿತದ್ದು. ಈ ಸ್ತೋತ್ರದ ಜೊತೆಗೆ ಮಲೆಯ ಮಹದೇಶ್ವರನ ಐತಿಹಾಸಿಕ ಸಾಂಸ್ಕೃತಿಕ ಹಿನ್ನೆಲೆಯನ್ನು ಕೊಟ್ಟಿದ್ದರೆ ಭಕ್ತರಿಗೆ ಉಪಯುಕ್ತವಾಗುತ್ತಿತ್ತು. ಈ ಚಿಕ್ಕ ಪುಸ್ತಿಕೆಯಲ್ಲೂ ತಪ್ಪುಗಳಿರುವುದು ಶೋಚನೀಯ. (ಪು. ೮ ಪ. ೧೩) ಸ್ತೋತ್ರ ಸರಳವಾಗಿದ್ದು ಅರ್ಥವಾಗುವಂತಿದೆ.

* * *

ಶಿರಹಟ್ಟಿಯ ಪೂಜ್ಯ ಫಕೀರಸ್ವಾಮಿಗಳ ಪರಿಚಯಾತ್ಮಕ ವಿವರಣೆ:

ಲೇ: ಮಹಾರುದ್ರಪ್ಪ ಮಹಾಲಿಂಗಪ್ಪ ಮಿರ್ಜಿ: ಪ್ರ: ಗುರುಸಿದ್ಧಪ್ಪ ಮಹಾಲಿಂಗಪ್ಪ ಮಿರ್ಜಿ. ಬಿ.ಎ., ಎಲ್ಎಲ್. ಬಿ., ದಾಜೀಬಾನ್‌ಪೇಟೆ, ಹುಬ್ಬಳ್ಳಿ. ಬೆಲೆ—?

ಭಾರತ ದೇಶ ಮಹಿಮರ ಲೀಲೆ-ಪವಾಡಗಳಿಂದ ಕಿಕ್ಕಿರಿದುಹೋಗಿ ಬಹಳಸಾರಿ ಅಂಧಾನುಸರಣೆಗೆ ದಾರಿಮಾಡುತ್ತದೆ. ಆಗ ವಿಚಾರಕ್ಕಿಂತ ಪವಾಡಕ್ಕೇ ಬೆಲೆ ಕೊಡುವ ದೌರ್ಭಾಗ್ಯ ಒದಗುತ್ತದೆ. ಇದಕ್ಕೆ ಉದಾಹರಣೆ ಮೇಲಿನ ಪುಸ್ತಿಕೆ. ಸ್ವಾಮಿಗಳ ಬರೀ ಪವಾಡ ಮಹಿಮೆ, ಲೀಲೆಗಳಿಗೆ ಬದಲಾಗಿ ಅವರ ತತ್ತ್ವ ವಿಚಾರ ಸೇರಿದ್ದರೆ ಚೆನ್ನಾಗಿತ್ತೆನಿಸದಿರದು. ಗದ್ಯದ ಶೈಲಿ ಕ್ಲಿಷ್ಟತೆಯಿಂದ ತುಂಬಿದೆ. ಪೂರ್ಣವಿರಾಮ ಅಲ್ಪವಿರಾಮಗಳಿಲ್ಲದ ವಾಕ್ಯಗಳು ಪುಟಗಟ್ಟಲೆ ಓಡಿ ಓದುಗರ ಸಹನೆಯನ್ನು ಪರೀಕ್ಷೆ ಮಾಡುತ್ತದೆ.

* * *

ವೇದಾಂತ-ಶಿವಸಿದ್ಧಾಂತ:

ಲೇ: ಜ. ಚ. ನಿ.; ಪ್ರ: ಶಿವಾದ್ವೈತ ಪ್ರಚಾರಕ ಕೇಂದ್ರ, ಗಿರಿಯಾಪುರ. ಬೆಲೆ: ೫೦ ಪೈಸೆ.

ವೇದಾಂತಕ್ಕೂ-ಶಿವಾದ್ವೈತಕ್ಕೂ ಇರುವ ವ್ಯತ್ಯಾಸವನ್ನು ತೋರಿಸಲು ಯತ್ನಿಸುವಲ್ಲಿ ಸಫಲರಾಗಿಲ್ಲವೆಂದೇ ಹೇಳಬೇಕು. ಕಾರಣ ಕೇವಲ ೯೦ ಪುಟದ ಈ ಸಣ್ಣ ಪುಸ್ತಿಕೆಯ ಪರಿಮಿತಿಯಲ್ಲಿ ಅಳೆದು ತೂಗಲು ಸಾಧ್ಯವಾಗದ ವಿಷಯ ವ್ಯಾಪ್ತಿಯಿಂದ. ಶಿವಾದ್ವೈತ-ಬ್ರಹ್ಮಾದ್ವೈತಗಳ ಪರಂಪರೆ, ಅವರವರ ವಸ್ತು ವಿವೇಕ, ಮಾಯಾವಾದ ಮೀಮಾಂಸೆ, ಎರಡು ಸಿದ್ಧಾಂತಗಳ ಪ್ರಕ್ರಿಯೆಗಳು, ಜೀವ-ಜಗತ್ತಿನ ಬಗ್ಗೆ ಅವರವರ ದೃಷ್ಟಿ ಸೃಷ್ಟಿ-ಸ್ಥಿತಿಗಳು, ಭೋಗವಿರಾಗವಾದ, ಜ್ಞಾನಾಜ್ಞಾನ ಕ್ರಿಯಾದಿಗಳು, ಮುಕ್ತಿ-ಐಕ್ಯ ಮುಂತಾದ ವಿಷಯಗಳ ವಿವರಣೆ ಮಾಡಹೊರಟ ಗ್ರಂಥಕರ್ತರು ಒಂದು ರೀತಿಯಲ್ಲಿ ತಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದಾರೆ. ಗ್ರಂಥದಲ್ಲಿ ಹೆಚ್ಚಾಗಿ ಶಬ್ದಾಡಂಬರಕ್ಕೆ ಎಡೆಕೊಟ್ಟಿದ್ದಾರೆ. ವಿಷಯ ವಿವರಣೆ, ವಿಮರ್ಶೆ ಜಿಜ್ಞಾಸೆ, ಪೃಥಕ್ಕರಣೆಗಳ ಕಡೆ ಗಮನ ಹರಿಸಿಲ್ಲ. ಅತಿ ಚಿಕ್ಕಹೊತ್ತಿಗೆಗಳಲ್ಲಿ ಮಹತ್ತಾದ ವಿಚಾರಗಳನ್ನು ಕುರಿತು ಬರೆಯ ಹೊರಟವರ ಪಾಡೆಲ್ಲ ಇಷ್ಟೆ ಆಗುವುದು ಸಹಜ. ವಿಷಯ ಸ್ಪಷ್ಟವಾಗುವುದರ ಬದಲು ಅನೇಕ ಕಡೆ ಸಂದಿಗ್ಧವಾಗುತ್ತದೆ.

* * *

ಅಭಯವಾಣಿ:

ಲೇ. ಶ್ರೀ ಜ. ಚ. ನಿ. ಪ್ರ. ಶ್ರೀ ಶೈಲಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೬, ಹ. ಬ. ಸಮಾಜ ರಸ್ತೆ, ಬೆಂಗಳೂರು-೪. ಬೆಲೆ: ರೂ. ೧-೫೦.

ಆಧ್ಯಾತ್ಮ ವಿಷಯಗಳನ್ನು ಬೇರೆ ಬೇರೆ ಧಾರ್ಮಿಕ ಅಭಿಪ್ರಾಯಗಳನ್ನು ಸೊಗಸಾದ 'ಭಾವಶೈಲಿ' ಯಲ್ಲಿ ಬರೆದ ಪುಸ್ತಕವಿದು. ಆದರೆ ಯಾವ ವಿಷಯವನ್ನು ಯಾವ 'ರೂಪ' ದಲ್ಲಿಳಿಸಿದಾಗ 'ಸಾರ್ಥಕ' ವಾಗುತ್ತದೆ ಎಂಬ ಅಂಶ ಗಮನದಲ್ಲಿರಬೇಕು. ತತ್ವ ಪ್ರತಿಪಾದನೆಯನ್ನು ಭಾವಗೀತ ಶೈಲಿಯಲ್ಲಿ ಬರೆದರೆ ಬಹಳಸಾರಿ ಆಭಾಸವಾಗುತ್ತದೆ. ಅಭಯವಾಣಿಯಲ್ಲಿನ ತತ್ವದ ವಿಚಾರಧಾರೆಯನ್ನು ಸರಳ ಸ್ಪಷ್ಟವಾದ ಗದ್ಯ ಶೈಲಿಯಲ್ಲಿ ನಿರೂಪಿಸಿದ್ದರೆ ಹೆಚ್ಚು ಬೆಲೆ ಕಟ್ಟುತ್ತಿತ್ತು. ಭಾವಗೀತ ಶೈಲಿಯಲ್ಲಿ ಓಡುವ ಈ ಪುಸ್ತಕ ಆ ಶೈಲಿಗಾಗಿಯೇ ಸ್ವಲ್ಪ ಹೊತ್ತು ಓದುಗರನ್ನು ಸೆರೆ ಹಿಡಿಯುತ್ತದೆ.

* * *

ಮಕ್ಕಳಿವರೇನಮ್ಮ :

ಲೇ. ಸಿಂಪಿಲಿಂಗಣ್ಣ. ಪ್ರ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ಬಿಜಾಪುರ ಜಿಲ್ಲೆ. ಪು: ೯೩. ಬೆಲೆ : ರೂ. ೧–೨೫.

ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಪರಿಸ್ಥಿತಿಯ ಚಿತ್ರಣವನ್ನು ಕಳಕಳಿಯಿಂದ ಚಿತ್ರಿಸಿರುವ ಈ ಕೃತಿ ಅಲ್ಲಲ್ಲಿ ವ್ಯಂಗ್ಯಾತ್ಮಕ ಚಿತ್ರವನ್ನೂ ಒದಗಿಸುತ್ತದೆ. ನಾರದ ಮತ್ತು ನಾಡಿನ ತಾಯಿಯ ಸಂಭಾಷಣಾ ರೂಪವಾಗಿರುವ ಈ ಕೃತಿ ಸಿಂಪಿಲಿಂಗಣ್ಣನವರ ಸರಳವಾದ ಶೈಲಿಯಿಂದ ಸಮಾಜದ ನೈಜವಾದ ಸ್ಥಿತಿಯ ಅಣಕ ನೋಟವನ್ನು ನಮಗೊದಗಿಸುತ್ತದೆ. ಎಚ್ಚರಗೊಂಡು ತಿಳಿದವರು ಎಂದು ತಿಳಿದುಕೊಂಡ ತಿಳಿಗೇಡಿಗಳ ವ್ಯವಹಾರವನ್ನು ಚಿತ್ರಿಸುತ್ತದೆ. ಅವನತಿಗಿಳಿದಿರುವ ಹಳ್ಳಿಗಳ ಸ್ಥಿತಿ, ಅಲ್ಲಿನ ಅಸ್ತವ್ಯಸ್ತ ಆರೋಗ್ಯ ಸುಧಾರಣೆಗಳು, ಬುಡಮೇಲಾಗಿರುವ ಶಿಕ್ಷಣಪದ್ಧತಿ, ವಿದ್ಯಾವಂತರೆನಿಸಿದ ಅಕ್ಷರಸ್ಥರ ಅನಾಗರಿಕ ಪ್ರವೃತಿಗಳು, ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುವ ರಾಜಕೀಯ ಭ್ರಷ್ಟಾಚಾರ, ದೇಶದಲ್ಲಿ ಸುಸಂಸ್ಕೃತರ ಸುವಿಚಾರಗಳ ಕೊರತೆ ಮುಂತಾದವುಗಳನ್ನು ಮರ್ಮಘಾತವಾಗುವಂತೆ ಚಿತ್ರಿಸಿರುವ ಈ ಕೃತಿಯಲ್ಲಿ ನಾವು ಕಡೆಯಪಕ್ಷ ಸ್ವಾತಂತ್ರ್ಯಗಳಿಸಿದ ನಂತರದ ಕನ್ನಡನಾಡಿನ ದುರವಸ್ಥೆಯನ್ನಾದರೂ ಗಮನಿಸಬಹುದು.

* * *

ಮುಸುಕು-ನಸುಕು (ಕವನಗಳು) :

ಕವಿ : ವೇಣುಗೋಪಾಲ ಸೊರಬ ; ಪ್ರ. ಸವಿತಾ ಪ್ರಕಾಶನ, ಕನಕಪುರ. ಬೆಲೆ : ರೂ. ೨–೦೦.

"ಕ್ರಿಯಾತ್ಮಕ ಕವಿಚೇತನವೊಂದು ಸಂದರ್ಭಕ್ಕೆ ತಕ್ಕ ಹಾಗೆ ವಿವಿಧ ಒತ್ತಡಗಳನ್ನು ಎದುರಿಸಿ ಸೈರಿಸಿ ತನ್ನ ಒಳತುಮುಲಗಳ"ನ್ನು ಅಭಿವ್ಯಕ್ತಿಗೊಳಿಸಿದ ಪ್ರತಿಫಲವೇ ಮುಸುಕು–ನಸುಕು.

ಕವನಗಳ ರಚನೆಯಲ್ಲಿ ಲಯ–ಗತಿಗಳನ್ನು ಸಹಜವಾಗಿಯೇ ಗಮನಿಸಬೇಕು. ತೀವ್ರಾನುಭವವು ಅಭಿವ್ಯಕ್ತವಾಗುವಾಗ ಗಮನಿಸಬೇಕಾದ ಕಾವ್ಯ ಪ್ರಜ್ಞೆ ಬಹು ಮುಖ್ಯ. ಪ್ರತಿಮೆ (images) ಗಳು ಕವನದಲ್ಲಿ ಬಿಡಿಬಿಡಿಯಾಗಿ ನಿಂತಿರಬಾರದು. ಸಮನ್ವಯಗೊಂಡು ಕಾವ್ಯದಲ್ಲಿ ಒಂದಾಗಿ ಬೆಸೆದಿರಬೇಕು (fuse) ಈ ಕವನ ಸಂಗ್ರಹದಲ್ಲಿ ಅಲ್ಲಲ್ಲಿ ಒಂದೊಂದು 'ಬೆಳೆದ ನೆಲ ಬವಳಿ ಬಂದಂತಾಗಿ ತೆರೆ ತೆರೆ ಬೀಸಿ ಜೋಳ ತೆನೆ ದಾಟಿತು– ಮುಂತಾದ ಗಮನಾರ್ಹ ಸಾಲುಗಳನ್ನು ಸಂಧಿಸುತ್ತೇವೆ.

ಬೆಳೆಯುವ ಪ್ರಜ್ಞೆಯುಳ್ಳ ಕವಿಗೆ ಬರೆದುದೆಲ್ಲ ಅಚ್ಚಾಗಬೇಕೆಂಬ ಹುಚ್ಚು ಹಂಬಲವಿರಬಾರದು. ಸೊರಬ ಅವರು ಸೂಕ್ಷ್ಮ ಸಂವೇದನಾಶೀಲರು. ಆದರೆ ಅದನ್ನು ಅಭಿವ್ಯಕ್ತಗೊಳಿಸುವಾಗ ಕಾವ್ಯ ಅವರಿಗಿನ್ನೂ ಒಲಿದಿಲ್ಲವೆನಿಸುತ್ತದೆ. ಎದ್ದು ಕಾಣುವ ವ್ಯಕ್ತಿತ್ವ ಇಲ್ಲ ಈ ಸಂಗ್ರಹದಲ್ಲಿ. ಸೊರಬ ಅವರು ಈ ಚೊಚ್ಚಲು ಕೃತಿಗಿಂತ ಮುಂಬರುವ ಕೃತಿಗಳು ಒಳ್ಳೆಯವಾಗಬಲ್ಲವು.

—ಎಂ. ಚಂದ್ರಶೇಖರ್

ಸ್ವೀಕಾರ

ಕಾದಂಬರಿ :

ಗೆಜ್ಜೆಪೂಜೆ; ಲೇ: ಎಂ. ಕೆ. ಇಂದಿರಾ; (ಪ್ರ: ಗೀತಾ ಪಬ್ಲಿಕೇಷನ್ಸ್, ಸೌರಾಷ್ಟ್ರಪೇಟೆ, ಬೆಂಗಳೂರು–೨; ಪುಟ: ೨೯೮; ಆಕಾರ: ಕ್ರಾ. ಅಷ್ಟದಳ–ಬೆಲೆ: ರೂ. ೨–೦೦, ೧೯೬೬.

ಜೋಡಿಹಕ್ಕಿ ; ಲೇ : ಶಾರದೆ ; ಪ್ರ : ಸುರಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು–೫ ; ಪುಟ: vi+೧೬೪ ; ಆಕಾರ : ಕ್ರಾ. ಅಷ್ಟದಳ ಬೆಲೆ ; ೩–೦೦, ೧೯೬೬.

ಕಥಾಸಂಕಲನ :

ಮುಕ್ತಿ : ಲೇ : ಬಿ. ಪಿ. ಶಿವಾನಂದರಾವ್ ; ಪ್ರ: ಎಂ. ಎಂ. ಜಿ. ಸಾಹಿತ್ಯ ಪ್ರಕಾಶನ, ಕಲ್ಸಂಕ, ಉಡುಪಿ (ದ. ಕ.) ; ಪುಟ : ೪೯ : ಆಕಾರ : ಕ್ರೌನ್ ಅಷ್ಟದಳ; ಬೆಲೆ: ರೂ. ೦–೫೦, ೧೯೬೭.

ತತ್ವ :

ಒಂದೇ ದಾರಿ : ಲೇ: ಶ್ರೀ ರಣವೀರಜೀ ; ಪ್ರ : ಕೆ. ರಾಮಕೃಷ್ಣಪ್ಪ, ಕೋಶಾಧ್ಯಕ್ಷ, ಸಿಟಿ ಆರ್ಯ ಸಮಾಜ,

ಮೈಸೂರು; ಪುಟ: ೬+೨೧೨; ಬೆಲೆ: ರೂ. ೧-೦೦, ೧೯೫೬.

ಶಿಕ್ಷಣ :

ಕಥನ ಕಲೆ ಅಥವಾ ಶಿಕ್ಷಣ ವಿಧಾನದಲ್ಲಿ ಕಥನದ ಪ್ರಯೋಜನ: ಲೇ: ಗಜೇಂದ್ರಗಡ ಶಾಮರಾಯರು; ಪ್ರ: ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಪುಟ: ೧೦೩; ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೧-೭೫, ೧೯೬೬.

ವಿಮರ್ಶೆ :

ಸತ್ಯ ಮತ್ತು ಸೌಂಧರ್ಯ: ಲೇ: ಡಾ.ಎಸ್.ಎಲ್. ಭೈರಪ್ಪ; ಪ್ರ: ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಪುಟ: ೧೭+೨೮೫+೩; ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೭-೫೦, ೧೯೬೬.

ಪ್ರಬಂಧ :

ಕೊಂತಿಪೂಜೆ: ಲೇ: ಡಿ. ಲಿಂಗಯ್ಯ; ಪ್ರ: ದಿನಕರ ಪ್ರಕಾಶನ, ಪೀಹಳ್ಳಿ, ಕೊಡಿಯಾಲ ಪೋಸ್ಟ್, ಮಂಡ್ಯ ಮಾರ್ಗ; ಪುಟ: ೩೨; ಬೆಲೆ: ರೂ. ೧-೦೦, ೧೯೬೭.

ಜೀವನ ಚರಿತ್ರೆ :

ಯತಿವರರು: ಲೇ: ಕೆ. ಎಸ್. ಪದ್ಮನಾಭಾಚಾರ್ಯ ಪ್ರ: ಯುಗಪುರುಷ ಪ್ರಕಟನಾಲಯ ಕಿನ್ನಿಗೋಳಿ ದ.ಕ.; ಪುಟ: ೧೯೨; ಆಕಾರ: ಕ್ರೌನ್ ಅಷ್ಟದಳ ಬೆಲೆ: ರೂ. ೨-೭೫, ೧೯೬೭.

ಉಪನ್ಯಾಸಗ್ರಂಥಮಾಲೆ :

ವಿಷಮಜ್ವರ: ಲೇ: ಡಾ. ಪಿ. ಎಸ್. ಶಂಕರ್ ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ: viii+೮೩; ಬೆಲೆ: ರೂ. ೦-೭೫, ೧೯೬೬.

ಪಂಚಾಯತಿ ರಾಜ್ಯ: ಲೇ: ಎಸ್. ಜಿ. ಕರಭಂಟ ನಾಳ ಮತ್ತು ಕೆ. ಡಿ. ಬಸವ; ಪ್ರ: ಕರ್ನಾಟಕ ವಿಶ್ವ ವಿಶ್ವವಿದ್ಯಾಲಯ ಧಾರವಾಡ; ಪುಟ: v+೬೬: ಬೆಲೆ: ರೂ. ೦-೭೫, ೧೯೬೬.

ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರ ಗಳು: ಲೇ: ಬಿ. ಸಿ. ಜವಳಿ; ಪ್ರ: ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ; ಪುಟ: v+೯೯; ಬೆಲೆ: ರೂ. ೦-೭೫, ೧೯೬೬.

ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ: ಲೇ; ಬಿ. ಬಿ. ಮಹೀಶವಾಡಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ: ix+೭೧; ಬೆಲೆ: ರೂ. ೦-೭೫, ೧೯೬೬.

ವಿಶೇಷಾಂಕ :

ಪರಿಮಳ (ಭಕ್ತಿ ಕುಸುಮಾಂಜಲಿ) ಜನವರಿ ೧೯೬೭; ಲೇ: ವಿದ್ಯಾವೈಭವ ವೇದಾಂತ ಶಿರೋಮಣಿ ರಾಜಾ ಎಸ್. ಗುರುರಾಜಾಚಾರ್ಯರು; ಪ್ರ: ಪರಿಮಳ ಪಬ್ಲಿ ಷಿಂಗ್ ಹೌಸ್, ನಂಜನಗೂಡು; ಪುಟ: viii+೮+೧೦೭; ೧೯೬೭.

Mysore State, 1956-66. The Director of Publicity and Infosrmation Govt. of Mysore Vidhana Soudha, Bangalore-1. Page: 213+xxvi. Rs. 6-00, 1966.

ದೇವರ ಸ್ತೋತ್ರ :

ನೆಗಳ್ದ ಶಿರಿಗನ್ನಡಂನಲ್ಗೆ: ಲೇ: ಬಿ. ಗಂಗಾಧರಶಾಸ್ತ್ರಿ: ಪ್ರ: ಗೌರಿಶಂಕರನಿಲಯ, ಎಸ್. ನಂ. ೧೮೦, ಹೊಸ ಬಡಾವಣೆ ವಿದ್ಯಾರಣ್ಯಪುರ, ಮೈಸೂರು-೪; ಪುಟ: vii+ii+೩೨+೪೫; ಆಕಾರ: ಕ್ರೌನ್ ಅಷ್ಟದಳ ಬೆಲೆ: ರೂ. ೧-೦೦, ೧೯೬೭.

ವಚನ ಸಾಹಿತ್ಯ :

ತ್ರಿಷಷ್ಠಿಪುರಾತನ ಚಾರಿತ್ರಂ (ಭಾಗ ೧, ೨ ಮತ್ತು ೩) ಕವಿಚಕ್ರವರ್ತಿ ಸುರಂಗಕೃತ; ಸಂ: ಡಾ. ಆರ್. ಸಿ. ಹಿರೇಮಠ, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರ ವಾಡ; ಪುಟ: ೪+೮೩೪; ಬೆಲೆ: ರೂ. ೧೨-೦೦, ೧೯೬೬.

ಸಂಸ್ಕೃತಿ

ಭಾರತ ಸಂಸ್ಕೃತಿಯ ಸಂಘಟನೆ; ಲೇ: ಸಿಂಪಿ ಲಿಂಗಣ್ಣ; ಪ್ರ: ಮಿಂಚಿನ ಬಳ್ಳಿಕಾರ್ಯಾಲಯ, ಧಾರ ವಾಡ; ಪುಟ: ೨+೩+೨+೧೦೩; ಆಕಾರ: ಕ್ರೌ ಅಷ್ಟದಳ; ಬೆಲೆ: ರೂ. ೧-೫೦, ೧೯೬೭.

ಕವನ

ಪುಣ್ಯಭೂಮಿ: ಲೇ: ವಿನಾಯಕ; ಪ್ರ: ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು-೫; ಪುಟ: ೬೦; ಆಕಾರ: ಕ್ರೌ ಅಷ್ಟದಳ; ಬೆಲೆ: ರೂ. ೨-೦೦, ೧೯೬೬.

ಸುದ್ದಿ ಸಂಗ್ರಹ

ಕೇಂದ್ರದಲ್ಲಿ ನಾಲ್ವರು ಕನ್ನಡಿಗ ಮಂತ್ರಿಗಳು

ಎರಡೂವರೆ ಕೋಟಿಗೂ ಹೆಚ್ಚಿನ ಪ್ರಜಾಸಂಖ್ಯೆ ಇರುವ ಕನ್ನಡನಾಡಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಇದುವರೆಗೂ ಯೋಗ್ಯ ರೀತಿಯ ಪ್ರಾತಿನಿಧ್ಯ ದೊರಕದೆ ಕನ್ನಡಿಗರ ಹಿತಾಸಕ್ತಿ ಕಡೆಗಣಿಸಲಾಗಿದೆ ಎಂಬ ಭಾವನೆ ಜನ ಸಾಮಾನ್ಯರಲ್ಲಿ ಬೆಳೆದು ಬಂದಿತ್ತು. ಇದನ್ನು ನಿವಾರಿಸಲೆಂಬಂತೆ ನೂತನವಾಗಿ ಪ್ರಧಾನ ಮಂತ್ರಿಯಾಗಿ ಆಯ್ಕೆಗೊಂಡ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಮಂತ್ರಿ ಮಂಡಲಕ್ಕೆ ನಾಲ್ವರು ಕನ್ನಡಿಗರನ್ನು ಆರಿಸಿಕೊಂಡು, ಅವರಿಗೆ ಹೊಣೆಗಾರಿಕೆಯ ಇಲಾಖೆಗಳನ್ನು ಒಪ್ಪಿಸಿದ್ದಾರೆ. ಡಾ. ವಿ. ಕೆ. ಆರ್. ವಿ. ರಾವ್ (ಸಾರಿಗೆ ಮತ್ತು ನೌಕಾ ಸಾರಿಗೆ) ಸಿ. ಎಂ. ಪುಣಚ್ಚ (ರೈಲ್ವೆ) ಅವರು ಕ್ಯಾಬಿನೆಟ್ ಸಚಿವರಾಗಿಯೂ, ಎಂ. ಎಸ್. ಗುರುಪಾದಸ್ವಾಮಿ (ಅಣುಶಕ್ತಿ) ಅವರು ಸ್ಟೇಟ್ ಸಚಿವರಾಗಿಯೂ ಶ್ರೀಮತಿ ಡಾ. ಸರೋಜಿನಿ ಮಹಿಷಿ (ಖಾತೆರಹಿತ) ಉಪಸಚಿವೆಯಾಗಿಯೂ ಆಯ್ಕೆಗೊಂಡಿರುವುದು ಕನ್ನಡಿಗರೆಲ್ಲರ ಸಂತೋಷಕ್ಕೆ ಕಾರಣವಾಗಿದೆ.

ಶಿಕ್ಷಣಮಂತ್ರಿ ಶ್ರೀ ಕೆ. ವಿ. ಶಂಕರಗೌಡ

ಮಹಾ ಚುನಾವಣೆಗಳ ನಂತರ ಮತ್ತೆ ಅಧಿಕಾರಕ್ಕೆ ಬಂದ ಶ್ರೀ ನಿಜಲಿಂಗಪ್ಪನವರು ತಮ್ಮ ಮಂತ್ರಿ ಮಂಡಲದ ಶಿಕ್ಷಣದ ಇಲಾಖೆಯನ್ನು ಹೆಸರಾಂತ ಸಮಾಜ ಸೇವಕರೂ, ಹಿರಿಯ ಕಾಂಗ್ರೆಸಿಗರೂ, ಸಹಕಾರ ಕ್ಷೇತ್ರದಲ್ಲಿ ದುಡಿದವರೂ, ರೈತರ ಬಂಧುವೂ ಆಗಿರುವ ಶ್ರೀ ಕೆ. ವಿ. ಶಂಕರಗೌಡ ಅವರಿಗೆ ಒಪ್ಪಿಸಿರುವುದು ಸಂತೋಷದ ಸಂಗತಿಯಾಗಿದೆ. ಶ್ರೀಯುತರು ರಾಜಕಾರಣಿಗಳಾಗಿರುವಂತೆ ಪತ್ರಿಕಾ ಸಂಪಾದಕರಾಗಿದ್ದು, 'ಕಾಂಗ್ರೆಸ್ ಸಂದೇಶ' ಪತ್ರಿಕೆಯನ್ನು ನಡೆಸುತ್ತಿದ್ದರು. ಮಂಡ್ಯದಲ್ಲಿ ಸ್ಥಾಪಿತವಾಗಿರುವ ಇಂಜನಿಯರಿಂಗ್ ಕಾಲೇಜು ಅವರ ಪ್ರಯತ್ನದ ಫಲವಾಗಿದೆ. ಅವರು ಕರ್ನಾಟಕ ಸಹಕಾರಿ ಮುದ್ರಣಾಲಯದ ಅಧ್ಯಕ್ಷರಾಗಿಯೂ, ಮಂಡ್ಯದ ಸಕ್ಕರೆ ಕಾರ್ಖಾನೆ, ಭದ್ರಾವತಿ ಕಬ್ಬಿಣ ಕಾರ್ಖಾನೆ ಮತ್ತು ಅಸಿಟೇಟ್ ಕಾರ್ಖಾನೆಗಳ ಡೈರೆಕ್ಟರಾಗಿದ್ದು ಸೇವೆ ಸಲ್ಲಿಸಿದ್ದಾರೆ. ಇವರಿಗೆ ರಂಗಭೂಮಿಯಲ್ಲೂ ಪರಿಶ್ರಮವುಂಟು. ಸ್ವಯಂ ಕಲಾವಿದರಾದ ಇವರಿಂದ ನಾಡು ನುಡಿಗಳಿಗೆ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದಾಗಿದೆ.

The Mysore Orientalist

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನ ಸಂಸ್ಥೆಯವರು 'The Mysore Orientalist' ಎಂಬ ಹೆಸರಿನ ಷಣ್ಮಾಸಿಕ ಪತ್ರಿಕೆಯೊಂದನ್ನು ಪ್ರಕಟಿಸಲು ನಿಶ್ಚಯಿಸಿ ಈಗ ಅದರ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಸಂಸ್ಥೆಯ ಡೈರೆಕ್ಟರ್ ಆದ ಶ್ರೀ ಡಾ. ಜಿ. ಮರುಳ ಸಿದ್ದಯ್ಯನವರು ಇದರ ಸಂಪಾದಕರಾಗಿದ್ದಾರೆ. ವಿದ್ವತ್ಪೂರ್ಣ ಮತ್ತು ಸಂಶೋಧನಾತ್ಮಕ ಲೇಖನಗಳ ಪ್ರಕಟನೆಗೆ ಈ ಪತ್ರಿಕೆ ಮೀಸಲಾಗಿದೆ. ಪ್ರಥಮ ಸಂಚಿಕೆಯು ಡಾ. ಪಿ. ವಿ. ಕಾಣೆ, ಡಾ. ಕೆ. ಎಂ. ಮುನಶಿ, ಡಾ. ವಿ. ರಾಘವನ್ ಮೊದಲಾದವರ ಲೇಖನಗಳನ್ನೂ, ಹಾರೈಕೆಯನ್ನೂ ಹೊತ್ತು, ಸರ್ವಾಂಗ ಸುಂದರವಾಗಿ ಪ್ರಕಟವಾಗಿದೆ. ಇದರ ವಾರ್ಷಿಕ ಚಂದಾ ೧೨ ರೂಪಾಯಿ.

ಕೊರವಂಜಿಯ 'ಶುಭಮಂಗಳಂ'

ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಕನ್ನಡ ನಾಡಿನ ಏಕೈಕ ಹಾಸ್ಯ ಮಾಸಪತ್ರಿಕೆಯಾಗಿ ಅಸಂಖ್ಯಾತ ಲೇಖಕರನ್ನು ಬೆಳಕಿಗೆ ತಂದು, ಕನ್ನಡ ಸಾಹಿತ್ಯದಲ್ಲಿ ಕೊರತೆ ಇದ್ದ ವಿನೋದ ಹಾಗೂ ವಿಡಂಬನ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದ, ಎಲ್ಲರ ಚಿರ ಪರಿಚಿತ 'ಕೊರವಂಜಿ' ಈ ತಿಂಗಳು ತನ್ನ ತಾತ್ಕಾಲಿಕ 'ಶುಭಮಂಗಳ'ವನ್ನು ಹಾಡಿರುವುದು ಕನ್ನಡಿಗರ ದುರ್ದೈವ. ಹಾಸ್ಯ ಸಾಹಿತ್ಯಕ್ಕೇ ಮೀಸಲಾದ ಒಂದು ಪತ್ರಿಕೆಯು, ತನ್ನ ಕಾಲುಶತಮಾನದ ಸೇವೆಯ ಕೊನೆಯಲ್ಲಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ, ನಿಲ್ಲಬೇಕಾಗಿ ಬಂದಿರುವುದು ಶೋಚನೀಯ. ಈ ಪತ್ರಿಕೆ ಮತ್ತೆ ಸರ್ವಾಂಗ ಸುಂದರವಾಗಿ ಹೊರ ಬರಲು ನಾಡಿನ ಸಾಹಿತ್ಯಾಭಿಮಾನಿಗಳೂ, ಕೊಡುಗೈಯ ದಾನಿಗಳೂ ನೆರವಾಗುವರೆಂದು ನಿರೀಕ್ಷಿಸಬಹುದಾಗಿದೆ.

ಶ್ರೀ ಪ. ಸು. ಭಟ್ಟರ ಆಗಮನ

ಈ ತಿಂಗಳ ಮೊದಲ ವಾರದಲ್ಲಿ ಪಶ್ಚಿಮ ಜರ್ಮನಿ ಸರಕಾರದಿಂದ ಆಹ್ವಾನಿತರಾಗಿ, ಲಿಪಿಗ್ ಮೇಳದಲ್ಲಿ ಭಾಗ ವಹಿಸಲು ಭಾರತ ತಂಡದ ನಾಯಕರಾಗಿ ವಿದೇಶಕ್ಕೆ ತೆರಳಿದ್ದ ಕನ್ನಡ ಲೇಖಕರಾದ ಶ್ರೀ ಪ. ಸು. ಭಟ್ಟರು, ತಮ್ಮ ಪ್ರವಾಸದಿಂದ ಹಿಂದಿರುಗಿದ್ದಾರೆ. ಇವರು ಪಶ್ಚಿಮ ಜರ್ಮನಿ ಹಾಗೂ ಯೂರೋಪ್ ದೇಶಗಳ ಸಾಹಿತ್ಯ ಸಂಸ್ಕೃತಿಗಳನ್ನು ಅಧ್ಯಯನ ಮಾಡಿ ಬಂದಿದ್ದಾರೆ.

ಸಂಪಾದಕೀಯ

ನೂತನ ಸರಕಾರಕ್ಕೆ ಅಭಿನಂದನೆಗಳು

ಭಾರತದ ಆದ್ಯಂತ ಸಾರ್ವತ್ರಿಕ ಚುನಾವಣೆ ನಡೆದು ಹೊಸ ಹೊಸ ವ್ಯಕ್ತಿಗಳು ಪಕ್ಷಗಳು ಪ್ರತಿಪಕ್ಷಗಳು ಆಡಳಿತ ಸೂತ್ರವನ್ನು ಕೈಕೊಂಡಿರುವುದು ಎಲ್ಲರಿಗೂ ತಿಳಿದ ವಿಷಯ. ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರವು ಅಧಿಕಾರ ಕಳೆದುಕೊಂಡಿದೆ. ಮತ್ತೆ ಕೆಲವು ಕಡೆಗಳಲ್ಲಿ ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ. ಪ್ರಜಾತಂತ್ರವು ಹೊಸದಾಗಿ ಪ್ರಯೋಗವಾಗುತ್ತಿರುವ ನಮ್ಮ ನಾಡಿನಲ್ಲಿ ಇಪ್ಪತ್ತು ವರುಷಗಳು ಸಂದಿದ್ದರೂ ಜನಸಾಮಾನ್ಯನಿಗೆ ಓಟಿನ ಪವಿತ್ರತೆಯು ಅರಿವಾಗಿದೆಯೆಂದು ಹೇಳುವುದು ಕಷ್ಟ. ವಿದ್ಯೆಯು ಜನಸಾಮಾನ್ಯನ ಕಣ್ಣನ್ನು ತೆರೆಸುವತನಕ ನಮ್ಮ ಪ್ರಯೋಗ ಮುಂದುವರಿಯುತ್ತಲೇ ಇರಬೇಕು ನಿಜ. ಆದರೆ ಆದಷ್ಟು ಬೇಗ ವಿದ್ಯಾ ಪ್ರಚಾರಕ್ಕೆ ಪ್ರಾಧಾನ್ಯವನ್ನು ನೀಡಿ ಈ ರಾಜ್ಯತಂತ್ರ ಚಿರಸ್ಥಾಯಿಯಾಗುವಂತೆ ಮಾಡ ಬೇಕಾದುದು ಎಲ್ಲ ಪಕ್ಷಗಳ ಕರ್ತವ್ಯ.

ಸಾಹಿತ್ಯವು ಈ ದೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು. ಕತೆ ಕಾದಂಬರಿಗಳ ಮೂಲಕ ಅಭಿಮತದ ಪವಿತ್ರತೆಯನ್ನು ವಿಶದಪಡಿಸುವ ಪ್ರಯತ್ನಗಳು ಬೇಕಾದಷ್ಟು ನಮ್ಮಲ್ಲಿ ನಡೆದಿವೆ; ಕವನಗಳು ಕಹಳೆಗಳನ್ನೂದಿ ಜನರನ್ನು ಎಚ್ಚರಿಸಿವೆ; ಪ್ರಬಂಧಗಳು ನಗಿಸಿ ಚುಚ್ಚಿವೆ; ಹರಟೆಗಳು ಕಚಗುಳಿಯಿಟ್ಟು ವಿಡಂಬಿಸಿವೆ; ಅಣಕವಾಡಿನ ಪ್ರವಾಹವೇ ಹರಿದು ಜನಮನವನ್ನು ಶುದ್ಧಗೊಳಿಸಿದೆ. ಇದು ಮೌನದಲ್ಲಿ ನಡೆಯುವ ಮಹಾಕಾರ್ಯ. ಸಾಹಿತ್ಯದ ಸತ್ವ ಬಹಿರಂಗವಾಗಿ ಕಾಣುವುದಿಲ್ಲ. ಅಂತರಂಗದಲ್ಲಿ ಅದಕ್ಕೆ ಇರುವ ಪ್ರಭಾವವನ್ನು ಪ್ರದರ್ಶಿಸುವುದಕ್ಕಾಗುವುದಿಲ್ಲ. ಆದುದರಿಂದ ಸಾಹಿತ್ಯದ ಅಭಿವೃದ್ಧಿಗೆ ಪ್ರಚಾರಕ್ಕೆ ಎಲ್ಲ ಸರಕಾರಗಳೂ ಆದ್ಯಗಮನವನ್ನು ನೀಡಬೇಕಾದುದು ಬಹು ಮುಖ್ಯ.

ನಮ್ಮ ಮೈಸೂರು ಸರಕಾರವು ಈ ದಿಕ್ಕಿನಲ್ಲಿ ಕಳೆದ ಅಧಿಕಾರಾವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದೆ. ಇದಕ್ಕೆ ನಾವು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರನ್ನೂ ವಿದ್ಯಾಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರನ್ನೂ ಹಣಕಾಸಿನ ಸಚಿವ ಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನೂ ಅಭಿನಂದಿಸಬೇಕು. ಅವರ ವಿದ್ಯಾಪಕ್ಷಪಾತ, ಸಾಹಿತ್ಯಪ್ರೇಮಗಳಿಂದ ಈ ಕೆಲಸ ಸಾಧ್ಯವಾಯಿತು. ಈ ಮಹನೀಯರು ಕನ್ನಡ ಸಾಹಿತ್ಯ ಪರಿಷತ್ತಿಗೆ ವಾರ್ಷಿಕ ಧನಸಹಾಯವನ್ನು ಏಳೂವರೆ ಸಾವಿರ ರೂಪಾಯಿಗಳಿಂದ ಇಪ್ಪತ್ತೈದು ಸಾವಿರ ರೂಪಾಯಿ ಗಳಿಗೆ ಏರಿಸಿ ಪರಿಷತ್ತಿಗೆ ಜೀವದಾನ ಮಾಡಿದರು. ಅದಕ್ಕಾಗಿ ಅವರಿಗೆ 'ನುಡಿ' ಕೃತಜ್ಞತೆ ಗಳನ್ನು ಸಮರ್ಪಿಸುತ್ತದೆ.

ನೂತನ ವಿದ್ಯಾಮಂತ್ರಿಗಳಾದ ಶ್ರೀ ಕೆ. ವಿ. ಶಂಕರಗೌಡರು ಸ್ವತಃ ಸಾಹಿತ್ಯಪ್ರೇಮಿಗಳು, ಕಲಾಭಿಮಾನಿಗಳು, ವಾಚನಶೀಲರು. ಅಲ್ಲದೆ ಹಲವು ಕಲೆಗಳಲ್ಲಿ ಪಳಗಿದವರು. ಶುದ್ಧವಾದ ಕನ್ನಡದಲ್ಲಿ ಅಚ್ಚುಕಟ್ಟಾಗಿ ಭಾಷಣ ಮಾಡಬಲ್ಲ, ಗ್ರಂಥಗಳ ಬಗ್ಗೆ ಆಸಕ್ತಿಯಿಂದ ವಿಮರ್ಶೆ ಮಾಡಬಲ್ಲ ಶ್ರೀಯುತರು ಪ್ರಸಿದ್ಧ ವಿದ್ಯಾಪಕ್ಷಪಾತಿಗಳು. ಅವರಿಗೆ 'ಕನ್ನಡ ನುಡಿ' ಅಭಿನಂದನೆ ಗಳನ್ನು ಸಲ್ಲಿಸುತ್ತದೆ. ಶ್ರೀಯುತರ ಅಧಿಕಾರಾವಧಿಯಲ್ಲಿ ನಾಡಿನಲ್ಲಿ ವಿದ್ಯಾಪ್ರಚಾರ ಹೆಚ್ಚಿ, ಸಾಹಿತ್ಯದ ಸುಗ್ಗಿ ಉಂಟಾಗಿ ನಮ್ಮ ಭಾಷಾಸಾಹಿತ್ಯ ಬೆಳಗಲಿ ಎಂದು 'ನುಡಿ' ಹಾರೈಸುತ್ತದೆ.

ಪರಿಷತ್ತಿನ ಸುದ್ದಿಗಳು

ಕವಿ–ಕೃತಿ ಸ್ಮರಣೆ

ಪರಿಷತ್ತಿನ ಆಶ್ರಯದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದವರು ಕವಿ–ಕೃತಿ ಸ್ಮರಣೆಯ ಮೊದಲನೆಯ ಉಪನ್ಯಾಸ ಮಾಲೆಯನ್ನು ದಿನಾಂಕ ೨೬–೨–೬೭ ರಂದು ಏರ್ಪಡಿಸಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಟಿ. ಕೇಶವಭಟ್ಟ ಅವರು ಉಪನ್ಯಾಸಕರಾಗಿದ್ದರು.

ಕವಿ-ಕೃತಿ ದರ್ಶನ

ರಾಜಾಜಿನಗರದ ವಿದ್ಯಾವರ್ಧಕ ಸಂಘದವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರತಿ ತಿಂಗಳೂ ಏರ್ಪಡಿಸುವ ಕವಿ-ಕೃತಿ ದರ್ಶನದ ಇಪ್ಪತ್ತನೆಯ ಉಪನ್ಯಾಸ ಮಾಲೆ ದಿನಾಂಕ ೧೨-೩-೧೯೬೭ರಂದು ಡಾ. ರಂ. ಶ್ರೀ. ಮುಗಳಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿಷಯ: ಆಚಾರ್ಯ 'ಡಿ. ಎಲ್. ನರಸಿಂಹಾಚಾರ್ ಅವರ ಸಾಹಿತ್ಯಸೇವೆ.'

'ಡಿ. ಎಲ್. ಎನ್. ಅವರು', 'ಡಿ. ಎಲ್. ಎನ್. ಅವರ ಕೃತಿಗಳು' ಮತ್ತು 'ಕನ್ನಡ ಗ್ರಂಥ ಸಂಪಾದನೆ' ಎನ್ನುವ ವಿಷಯಗಳ ಮೇಲೆ ಕ್ರಮವಾಗಿ ಶ್ರೀ ಎನ್. ಬಸವಾರಾಧ್ಯ, ಶ್ರೀ ಹಂಪ. ನಾಗರಾಜಯ್ಯ, ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಇವರುಗಳು ಉಪನ್ಯಾಸಕರಾಗಿದ್ದರು.

ವಿಚಾರ ಸಾಹಿತ್ಯ

ದಿನಾಂಕ ೨೪–೩–೬೭ನೆಯ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡಿಗರ ಕೂಟದವರಿಂದ ಸಾಹಿತ್ಯ ಪ್ರಕಾರಗಳ ಪರಿಶೀಲನೆಯ ಮಾಲೆಯಲ್ಲಿ 'ವಿಚಾರ ಸಾಹಿತ್ಯ'ದ ಕಾರ್ಯಕ್ರಮ ನೆರವೇರಿತು.

ಶ್ರೀ ಎಮ್. ಎಸ್. ಕೃಷ್ಣಮೂರ್ತಿ, ಶ್ರೀ ಎಚ್.ಎಲ್. ಕೃಷ್ಣಮೂರ್ತಿ, ಶ್ರೀ ತಿ. ತಾ. ಶರ್ಮ ಇವರುಗಳು ಕ್ರಮವಾಗಿ 'ಧಾರ್ಮಿಕ ಸಾಹಿತ್ಯ' 'ಪತ್ರಿಕಾ ಸಾಹಿತ್ಯ' ಮತ್ತು 'ರಾಜಕೀಯ ಸಾಹಿತ್ಯ' ಎನ್ನುವ ವಿಷಯಗಳ ಮೇಲೆ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ತಿ. ತಾ. ಶರ್ಮ ಅವರು ವಹಿಸಿದ್ದರು.

ಎರಡನೆಯ ಉಪನ್ಯಾಸಮಾಲೆ

ದಿನಾಂಕ ೨೬–೩–೬೭ರಂದು ಗಾಂಧೀ ಸಾಹಿತ್ಯ ಸಂಘದವರು ಪರಿಷತ್ತಿನ ಆಶ್ರಯದಲ್ಲಿ ತಮ್ಮ ಎರಡನೆಯ ಉಪನ್ಯಾಸ ಮಾಲೆಯನ್ನು ಏರ್ಪಡಿಸಿದ್ದರು.

ವಿಷಯ: ದಿ. ಕೆರೂರ ವಾಸುದೇವಾಚಾರ್ಯ ಅವರ ಕೃತಿಗಳು. ಉಪನ್ಯಾಸಕರು: ಪ್ರೊ. ಆದ್ಯ ರಂಗಾಚಾರ್ಯ ಸ್ಥಳ: ಮಲ್ಲೇಶ್ವರದ ಎಂಟನೆಯ ಕ್ರಾಸಿನಲ್ಲಿರುವ ಗಾಂಧೀ ಸಾಹಿತ್ಯ ಸಂಘ.

ಗಮಕ ಪ್ರವೇಶ ಪರೀಕ್ಷೆಗಳ ಫಲಿತಾಂಶ

೧೯೬೬–೬೭

ಮೊದಲನೆಯ ತರಗತಿ

(ಅಂಕಗಳ ಅನುಕ್ರಮದಲ್ಲಿ)

೧೮, ೯೪, ೧೧೮, ೧೪೨, (೧೬೯, ೧೧೬,), ೮, ೧೭೬, ೧೨, ೧೨೪, (೧೩, ೨೯, ೩೩), (೧೩೮, ೧೫೫, ೧೫೭, ೧೭೫), ೧೪೮, ೧೬, ೨೪, (೨೦, ೧೨೭, ೧೪೦), ೧೦೨, ೩೪, ೫೫, ೫, ಮತ್ತು ೨೮, ೧೪೯.

ಎರಡನೆಯ ತರಗತಿ

೭, ೯, ೨೧, ೨೩, ೨೫, ೨೬, ೩೦, ೩೧, ೩೬, ೫೩, ೫೮, ೫೯, ೬೩, ೬೮, ೭೩, ೭೭, ೭೯, ೮೦, ೮೨, ೯೧, ೯೩, ೯೭, ೯೯, ೧೦೦, ೧೦೧, ೧೦೯, ೧೧೫, ೧೧೭, ೧೧೯, ೧೨೦, ೧೨೩, ೧೨೮, ೧೩೦, ೧೩೨, ೧೩೪, ೧೩೭, ೧೩೯, ೧೪೧, ೧೪೩, ೧೫೨, ೧೬೧, ೧೬೭, ೧೭೦, ೧೭೩, ೧೭೯.

ಮೂರನೆಯ ತರಗತಿ

೧, ೩, ೪, ೬, ೧೭, ೧೯, ೨೭, ೩೨, ೩೫, ೩೮, ೪೦, ೪೧, ೪೩, ೪೫, ೪೯, ೫೦, ೫೧, ೫೨, ೫೪, ೫೬, ೫೭, ೬೨, ೬೫, ೬೬, ೬೭, ೬೯, ೭೦, ೭೪, ೭೮, ೮೧, ೮೪, ೮೫, ೮೭, ೮೮, ೮೯, ೯೨, ೯೫, ೯೬, ೧೦೩, ೧೦೫, ೧೦೭, ೧೦೮, ೧೧೦ ೧೧೨, ೧೧೪, ೧೨೧, ೧೨೨, ೧೨೫, ೧೨೬, ೧೨೯, ೧೩೧, ೧೩೫, ೧೩೬, ೧೪೪, ೧೫೪, ೧೫೮, ೧೫೯, ೧೬೦, ೧೬೨, ೧೬೩, ೧೬೪, ೧೬೫, ೧೬೬, ೧೬೮, ೧೭೧, ೧೭೨, ೧೭೪, ೧೭೭, ೧೭೮.

ನರಸಿಂಹರಾಜ ಕಾಲೋನಿ ಕೇಂದ್ರದ ವಿದ್ಯಾರ್ಥಿನಿ ಶ್ರೀಮತಿ ಎಚ್. ಶಾರದಮ್ಮ (ರಿ. ನಂ. ೧೮) ಇವರು ಪ್ರಥಮ ತರಗತಿಯಲ್ಲಿ ಮೊದಲಿಗರಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು

		ರೂ. ಪೈ
೧.	ಕನ್ನಡದ ಬಾವುಟ (ಐದನೆಯ ಮುದ್ರಣ ೧೯೫೮)	೨=೦೦
೨.	ಸೀತಾ ಪರಿತ್ಯಾಗ (ಜೈಮಿನಿ ಭಾರತದಿಂದ ೧೯೬೧)	೦=೬೫
೩.	ಜೇಮ್ಸ್ ಏಬ್ರಹಾಮ್ ಗಾರ್ಫೀಲ್ಡನ ಚರಿತ್ರೆ : ಕ್ಯಾಲಿಕೋ ಪ್ರತಿ (೧೯೩೦)	೧=೫೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ (೧೯೩೮)	೧=೦೦
೪.	ಜ್ಯೋತಿರ್ವಿನೋದಿನಿ (೧೯೩೧)	೨=೦೦
೫.	ಹೂಮಾಲೆ (೧೯೪೩)	೦=೬೩
೬.	ಕನ್ನಡ ನಾಡಿನ ಚರಿತ್ರೆ: ಭಾಗ ೧	
	,, ಭಾಗ ೨ (ಎರಡನೆಯ ಮುದ್ರಣ ಅಚ್ಚಿನಲ್ಲಿದೆ)	೨=೦೦
	,, ಭಾಗ ೩ (,, ೧೯೫೯)	೧=೨೫
೭.	ಸರ್ವೋದಯ (೧೯೪೯)	೦=೩೨
೮.	ಸಂಕಲನ (೧೯೪೯)	೦=೬೩
೯.	ಅರುಂಧತಿ (೧೯೫೧)	೦=೨೫
೧೦.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ ೧೯೫೨)	೨=೦೦
೧೧.	ಹರಿದಾಸ ಸಾಹಿತ್ಯ-ಇಂಗ್ಲಿಷ್ ಉಪೋದ್ಘಾತದೊಡನೆ (೧೯೫೨)	೧೦=೦೦
೧೨.	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ (೧೯೫೨)	೮=೦೦
೧೩.	ಗಾಳಿಯಲ್ಲಿನ ಅಗೋಚರ ಶತ್ರುಗಳು (೧೯೫೪)	೧=೨೫
೧೪.	ನಕ್ಷತ್ರದರ್ಶನ (೧೯೫೪)	೧=೫೦
೧೫.	ಹರಿದಾಸ ಕೃತಿಮಂಜರಿ (೧೯೫೫)	೧=೨೫
೧೬.	ಪ್ಲೇಟೋವಿನ ಆದರ್ಶರಾಜ್ಯ (೧೯೫೬)	೧=೩೮
೧೭.	ವಾಚನ ಕಾವ್ಯಮಂಜರಿ (೧೯೫೫)	೦=೧೯
೧೮.	ಚೀರಮ ಕಾವ್ಯಂ (೧೯೫೬)	೨=೦೦
೧೯.	ಅನುಭವ ಮುಕುರಂ (೧೯೫೬)	೦=೩೮
೨೦.	ಆಧುನಿಕ ಗದ್ಯ ಸಾಹಿತ್ಯ (ಎರಡನೆಯ ಮುದ್ರಣ ೧೯೬೧)	೨=೫೦
೨೧.	ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ ೧೯೫೮)	೪=೦೦
೨೨.	ಕಾದಂಬರಿ-ಸಾಮಾನ್ಯ ಮನುಷ್ಯ (೧೯೫೭)	೧=೦೦
೨೩.	ಉದ್ಭಟದೇವ ಚರಿತೆ (೧೯೫೭)	೧=೫೦
೨೪.	ತ್ರಿಪುರದಹನ ಸಾಂಗತ್ಯ (೧೯೫೯)	೦=೭೫
೨೫.	ಮೂರು ಸ್ಪರ್ಧಾ ನಾಟಕಗಳು (೧೯೫೯)	೨=೭೫
೨೬.	ಕಾವ್ಯ ಸೌರಭ (೧೯೬೨)	೨=೦೦
೨೭.	**ಕರ್ಣಾಟಕ ಕವಿಚರಿತೆ (೧ನೆ ಭಾಗ) ....**	**೧೨=೦೦**
	,, ,, ಲೈಬ್ರರಿ ಪ್ರತಿಗಳು	**೧೫=೦೦**
೨೮.	ಕಾವ್ಯಗಾಯನ ಕಲಾ ಸಂಗ್ರಹ	೧=೨೫

ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆ ವಿನಾ ಮಿಕ್ಕೆಲ್ಲ ಪುಸ್ತಕಗಳಿಗೆ ಶೇ. 25ರಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

Reg. No. B. G. 4—April 1967

Licensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೫

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಮೇ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ,

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ-ಕನ್ನಡ ನಿಘಂಟು

ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ "ಕನ್ನಡ ನಿಘಂಟು" ಡೆಮ್ಮಿ ಚತುಷ್ಪತ್ರ ಆಕಾರದ ಸುಮಾರು ೫,೦೦೦ ಪುಟಗಳನ್ನು ಒಳಗೊಂಡು, ಒಂದೊಂದು ಸಂಪುಟದಲ್ಲೂ ಸುಮಾರು ೧೨೫೦ ಪುಟಗಳಿರುವ ನಾಲ್ಕು ಸಂಪುಟಗಳಲ್ಲಿ (Volumes) ಪ್ರಕಟವಾಗುವಂತೆ ಏರ್ಪಡಿಸಿದ್ದು ಮೊದಲ ಸಂಪುಟದ ಎರಡನೆಯ ಸಂಚಿಕೆ ಈಗಾಗಲೇ ಪ್ರಕಟವಾಗಿದೆ.

ನಿಘಂಟಿನ ಒಟ್ಟು ಬೆಲೆ ೧೨೦ ರೂಪಾಯಿಗಳು; ಮುಂಗಡವಾಗಿ ಹಣ ಸಲ್ಲಿಸುವ ಗ್ರಾಹಕರಿಗೆ ೧೦೦ ರೂಪಾಯಿಗಳ ರಿಯಾಯಿತಿ ದರದಲ್ಲಿ ಅದನ್ನು ಒದಗಿಸಲಾಗುತ್ತದೆ. ನಿಘಂಟು ಸಿದ್ಧವಾದಂತೆಲ್ಲ ೯೬ ಪುಟಗಳುಳ್ಳ ಸಂಚಿಕೆಗಳ (Fascicules) ರೂಪದಲ್ಲಿ ಅದನ್ನು ಮುಂಗಡವಾಗಿ ೧೦೦ ರೂಪಾಯಿಗಳ ರಿಯಾಯಿತಿಯ ಬೆಲೆಯನ್ನು ಸಲ್ಲಿಸಿರುವ ಗ್ರಾಹಕರಿಗೆ ತಲುಪಿಸಲಾಗುವುದು. ಮುಂಗಡ ಹಣ ನೂರು ರೂಪಾಯಿಗಳನ್ನು ಹತ್ತು ರೂ.ಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಪಾವತಿ ಮಾಡಬಹುದು. ಆದರೆ ಪೂರ್ತ ಹಣ ಸಂದಾಯವಾಗುವವರೆಗೆ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ.

ನಿಘಂಟಿನ ಎರಡನೆಯ ಸಂಪುಟವು ಪ್ರಕಟವಾದ ಕೂಡಲೆ **ರಿಯಾಯಿತಿಯ ದರದಲ್ಲಿ** ಅದನ್ನು ವಿಕ್ರಯಿಸುವುದನ್ನು ನಿಲ್ಲಿಸಲಾಗುತ್ತದೆ; ಆ ಮುಂದೆ ಪೂರ್ಣವಾದ ಬೆಲೆಯನ್ನು ಕೊಡಬೇಕಾಗುತ್ತದೆ.

ನಿಘಂಟಿನ ಒಂದು ಸಂಪುಟವು ಸಿದ್ಧವಾದ ಬಳಿಕ ಅದರ ರಕ್ಷಾಕವಚವನ್ನು (Binding Case) ಮುಂಗಡವಾಗಿ ಬೆಲೆ ಸಲ್ಲಿಸಿರುವ ಗ್ರಾಹಕರಿಗೆ ಉಚಿತವಾಗಿ ಒದಗಿಸಲಾಗುವುದು.

ಸಂಚಿಕೆಗಳನ್ನೂ ರಕ್ಷಾಕವಚಗಳನ್ನೂ ಕಳಿಸಲು ಅಂಚೆವೆಚ್ಚವನ್ನು ಗ್ರಾಹಕರೇ ಸಲ್ಲಿಸತಕ್ಕದ್ದು.

ಗ್ರಾಹಕರು ಮುಂಗಡ ಬೆಲೆಯ ಜೊತೆಗೆ ಹತ್ತು ರೂಪಾಯಿಗಳನ್ನು ಅಂಚೆವೆಚ್ಚ, ರವಾನೆ ವೆಚ್ಚಗಳಿಗಾಗಿ ಸಲ್ಲಿಸಬೇಕು. ಸಂಚಿಕೆಗಳನ್ನು "ರಿಜಿಸ್ಟರ್ಡ್ ಪೋಸ್ಟ್" ಮೂಲಕ ಕಳಿಸಬೇಕೆಂದು ಗ್ರಾಹಕರು ಅಪೇಕ್ಷಿಸಿದಲ್ಲಿ ಆ ವಿಷಯವನ್ನು ಅವರು ಲಿಖಿತರೂಪದಲ್ಲಿ ಮೊದಲೇ ತಿಳಿಸಬೇಕು. ಹಾಗೆ ಮಾಡದಿದ್ದರೆ ಸಂಚಿಕೆಗಳನ್ನು "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಸಮೇತವಾಗಿ ಸಾದಾ ಟಪಾಲಿನ ಮೂಲಕ ಕಳಿಸಲಾಗುವುದು. ಸಂಚಿಕೆಗಳನ್ನು ಪರಿಷತ್ತಿನ ಕಚೇರಿಯಲ್ಲೇ ತೆಗೆದುಕೊಳ್ಳಲು ಅಪೇಕ್ಷಿಸುವವರು ಮುಂಚಿತವಾಗಿ ತಿಳಿಸಿ ಆ ರೀತಿ ಮಾಡಬಹುದು; ಅಂಥವರು ಅಂಚೆವೆಚ್ಚವನ್ನು ಕೊಡಬೇಕಾಗುವುದಿಲ್ಲ.

ನಿಘಂಟಿನ ಬಿಡಿಸಂಚಿಕೆಗಳನ್ನು ಪ್ರತಿ ಒಂದಕ್ಕೆ **ನಾಲ್ಕು** ರೂಪಾಯಿಗಳಂತೆ ಪಡೆಯಬಹುದು.

ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

ಈ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ವ್ಯವಹಾರ ಮಾಡಬಹುದು.

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು
—ಬಿ.ಎಂ.ಶ್ರೀ

ಮೇ ೧೯೬೭

ಸಂಪುಟ : ೩೦

ಸಂಚಿಕೆ : ೫

ಈ ಸಂಚಿಕೆಯಲ್ಲಿ . . .

ಮುಕ್ತಿಶ್ರೀ ಪದತಲ

ಕೆಂದಾವರೆಗಳ ಸಂದಣಿ-
ಯಿಂದ ಚೆಂದವಾಗಿರುವ
ಮಂದಾನಿಲ ಚುಂಬಿಸೆ ನಸು
ನಗೆಯಿಂದಲಿ ಮೆರೆವ
ನಲ್‌ಗೆರೆಗಳ ನಗೆಯ ಬೀಡು
ಶ್ರವಣ ಬೆಳುಗೊಳ.

ಮುಂಜಾನೆಯೆ ಎದ್ದೇರಲು
ಅರುಣೋದಯದಂದ
ಸಂಜೆಯವರೆಗಲ್ಲಿರಲು
ಸಂಧ್ಯಾರಾಗದ ಚೆಂದ
ಇರುಳಾಗಲು ಮಿನುಗಿ ನಗುವ
ತಾರಕೆಗಳ ವೃಂದ-
ಚೆಲುವಿನ ಈ ಚಾರುಹಾಸ
ಹೂವರಳುವುದೆಲ್ಲಿ?
ಮನುಮದನನ ಮೋಹದ ನೆಲೆ
ಶ್ರವಣ ಬೆಳುಗೊಳದಲಿ!

ಈ ಚೆಲುವಿನ ಹೂಬಳ್ಳಿಯು
ಹಬ್ಬಿಸಿ ಕುಡಿನಗೆಯಲ್ಲಿ
ಒಲುಮೆಯ ಗೆಲುವನು ಬೀರುತ
ನೋಟದ ಒಳಬಗೆಯಲ್ಲಿ
ತಪದುನ್ನತಿಯನು ತೋರುತ
ನಿಂತಿಹ ನಿಡುನಿಲುವಿನಲಿ;
ತ್ಯಾಗದ ವೈರಾಗ್ಯದ ಪರಿ
ಕೆತ್ತಿರೆ ಬತ್ತಲೆಯಲ್ಲಿ
ಕೈವಲ್ಯದ ಮಹಾಕಾವ್ಯ
ಮೂಡಿರೆ ಮಹಮೌನದಲಿ;
ಜಗವ ಗೆಲುವ ಮುಗುಳುನಗೆಯ
ಶಾಂತಿಮಂತ್ರವುಸುರುವ
ಗೊಮ್ಮಟಮುನಿ ಚೆಲುವಿನ ಖನಿ
ನಿರಾಲಂಬ ನಿಂತಿರುವ
ಶ್ರವಣಬೆಳುಗೊಳ
ಮುಕ್ತಿಶ್ರೀ ಪದತಲ!


ನ್ಯೆವೆಂಸೀ ರಾಘವ

[ರಚನೆ: ಶ್ರವಣಬೆಳ್ಗೊಳವನ್ನು ಮೊದಲು ಸಂದರ್ಶಿದಾಗ: ಸು. ೧೯೩೦; ಈಗ ಸ್ವಲ್ಪ ತಿದ್ದುಪಾಟು ಮಾಡಿದೆ.]

ಡಾ|| ಆದಿನಾಥ ನೇಮಿನಾಥ ಉಪಾಧ್ಯೆ

ಹಂಪ. ನಾಗರಾಜಯ್ಯ

ಶ್ರವಣಬೆಳ್ಗೊಳ ಶತಶತಮಾನಗಳಿಂದ ಇತಿಹಾಸ ಪ್ರಸಿದ್ಧವಾದ ಯಾತ್ರಾಕ್ಷೇತ್ರ. ಅದು ಎರಡು ಸಾವಿರ ವರುಷಗಳಿಂದ ನಿರಂತರವಾಗಿ ಭವ್ಯರಾದ ಭಕ್ತವೃಂದದ ಬೃಹದ್ ಬಯಕೆಗಳನ್ನು ಈಡೇರಿಸಿದ ಪರಮಪವಿತ್ರ ತೀರ್ಥಕ್ಷೇತ್ರ. ಜೊತೆಗೆ ಅದು ಅವಿಚ್ಛಿನ್ನವಾಗಿ ಕಲಾಭಿಮಾನಿಗಳಿಗೆ ಅವರ ಕಣ್‌ಮನಗಳನ್ನು ತಣಿಸುತ್ತ ಬಂದಿರುವ ಕಲಾಕ್ಷೇತ್ರ. ಅನೇಕ ಜನ ಸವಣರೂ, ಆರ್ಯಿಕೆಯರೂ, ರಾಜಮಹಾರಾಜರೂ ಸಿದ್ಧಿಯನ್ನೂ ಮುಕ್ತಿಯನ್ನೂ ಪಡೆದ ಸಿದ್ಧಕ್ಷೇತ್ರ. ಸಲ್ಲೇಖನ ಪಡೆದು ಸಮಾಧಿ ಮರಣವನ್ನಪ್ಪಿದ ಧರ್ಮಾತ್ಮರ, ತ್ಯಾಗಿ ಹಾಗೂ ದಾನಿಗಳಾಗಿ ಮೆರೆದ ಭವ್ಯಾತ್ಮರ, ಮುನಿ ಹಾಗೂ ಮಹಾತ್ಮರ ಶ್ರೀಪಾದ ಸ್ಪರ್ಶದಿಂದ ಪಾವನವಾದ ಪುಣ್ಯಕ್ಷೇತ್ರ. ಧೀರೋದಾತ್ತ ಬಾಳುವೆಯನ್ನು ನಡಸಿದವರ ಉತ್ಕೃಷ್ಟ ಚರಿತೆಯನ್ನು ಬಿತ್ತರಿಸುವ ಹತ್ತಾರು ಶಿಲಾಫಲಕಗಳನ್ನು ನೆತ್ತಿಯಲ್ಲಿ ಹೊತ್ತು ನಿಂತ ಶಾಸನಕ್ಷೇತ್ರ. ಔನ್ನತ್ಯವೂ, ನುತಸೌಂದರ್ಯವೂ, ಊರ್ಜಿತಾತಿಶಯವೂ ಒಂದೆಡೆ ಸೇರಿ ಮೂರು ಮಹಾಗುಣಗಳು ಮುಪ್ಪುರಿಗೊಂಡು ಸಾಕ್ಷಾತ್ ತ್ರಿಲೋಕಾಧಿಪತಿಯಂತೆ ಮನಮೋಹಕವಾದ ಮುಗುಳ್ನಗೆಯಿಂದ ಮೆರೆಯುತ್ತಿರುವ ಗೊಮ್ಮಟ ಜಿನನಿರುವ ಶಿಲ್ಪಕ್ಷೇತ್ರ. ಇಷ್ಟು ಚರಿತ್ರಾರ್ಹ ಪ್ರೇಕ್ಷಣೀಯ ಸ್ಥಳದಲ್ಲಿ ಈ ಸಲದ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅರ್ಥಗರ್ಭಿತವಾಗಿದೆ, ಸಾಹಿತ್ಯಾರಾಧಕರಿಗೆ ಆನಂದದ ಆಹ್ವಾನವಾಗಿದೆ. ಈ ಸಮ್ಮೇಳನಕ್ಕೆ ಡಾ. ಆ. ನೇ. ಉಪಾಧ್ಯೆಯವರನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿರುವುದಂತೂ ಅತ್ಯಂತ ಔಚಿತ್ಯಪೂರ್ಣವಾಗಿದ್ದು ಸಮಯೋಚಿತವಾಗಿದೆ. ಇತಿಹಾಸ ಪ್ರಸಿದ್ಧವಾದ ಪುಣ್ಯಕ್ಷೇತ್ರದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಕಲೆ, ಶಿಲ್ಪ, ಇತಿಹಾಸ, ಧರ್ಮ, ಸೌಂದರ್ಯ ಮತ್ತು ಸಾಹಿತ್ಯ ಒಂದೆಡೆ ಸೇರಿದಂತಾಗಿದೆ. ಡಾ. ಉಪಾಧ್ಯೆಯವರು ಅಧ್ಯಕ್ಷರಾಗಿರುವುದು ಈ ಗುಣಸಮುದಾಯದ ಶೋಭೆಯನ್ನು ವೆಗ್ಗಳಿಸಿದಂತಾಗಿದೆ.



ಆಸೇತು ಹಿಮಾಚಲದವರೆಗಿನ ವಿಶಾಲ ಭಾರತದಲ್ಲಿರುವ ಪಂಡಿತಮಂಡಳಿಯಲ್ಲಿ ಇಂದು ಪ್ರತಿಯೊಬ್ಬರ ಗೌರವ ಪ್ರಶಂಸೆಗಳಿಗೆ ಪಾತ್ರರಾಗಿ ಎಲ್ಲರ ವಿಶ್ವಾಸ ಮನ್ನಣೆಗಳನ್ನು ಗಳಿಸಿಕೊಂಡಿರುವ ಸರ್ವಜನಾದರಣೀಯ ವಿದ್ವಾಂಸವರೇಣ್ಯರೆಂದರೆ ಡಾ. ಆದಿನಾಥ ನೇಮಿನಾಥ ಉಪಾಧ್ಯೆ. ವಿದ್ವತ್‌ಪ್ರಪಂಚದಲ್ಲಿ ಅವರ ಹೆಸರು ಬಹು ಹಿರಿಯ ಹೆಸರು. ಅಕ್ಕರಿಗರಲ್ಲಿ ಅವರು ಅಜಾತಶತ್ರುವೆಂದು

ಅಗ್ರಗಣ್ಯರಾಗಿದ್ದಾರೆ; ಸಾಹಿತಿಗಳ ಸಮಾಜದಲ್ಲಿ ಸರಸ ಸಜ್ಜನರಾದ ಸಮ್ಯಗ್ಜನಾಂಗವೆಂದೂ ಗುಣೈಕ ಪಕ್ಷಪಾತಿಯೆಂದೂ ಕೀರ್ತಿತರಾಗಿದ್ದಾರೆ. ಡಾ. ಉಪಾಧ್ಯೆ ಸರಳತೆಗೊಂದು ಸುಂದರ ಸಾಕ್ಷಿ. ಮಿತವಾದ, ಆದರೆ ತುಂಬ ಹಿತವಾದ ಮಾತು. ಶುಚಿಯಾದ ನುಡಿಯಂತೆ ನಡೆಯೂ ನಿರ್ಮಲ. ನಿರಾಡಂಬರವಾದ ಉಡಿಗೆ ತೊಡಿಗೆ. ಸಾಧಾರಣ ಎತ್ತರದ ಶರೀರ. ಕಚ್ಚೆ ಪಂಚೆ, ಕೋಟು, ಕೈಯ್ಯಲ್ಲೊಂದು ಕೊಡೆ, ತಲೆಯಮೇಲೊಂದು ಕರಿಯ ಟೋಪಿ—ಇದು ಅವರ ಉಡುಪು. ಹಿಂದೆ ಕಟ್ಟುತ್ತಿದ್ದ ಪೇಟ ಈಗಿಲ್ಲ. ಅವರನ್ನು ಕಾಣಲು ಬಂದವರಲ್ಲಿ ಅಪಾರ ಗೌರವವನ್ನು ಒಡನೆಯೇ ಮೂಡಿಸುವ ಗಂಭೀರವಾದ ಅಕಳಂಕ ಮುಖಮುದ್ರೆ. ಎಣ್ಣೆಗೆಂಪಿನ ಮೈಬಣ್ಣದ ಒಪ್ಪವಾದ ದೇಹಾಕೃತಿ. ಹಿತಮಿತವಾದ ಮಾತಿನ ಮಧ್ಯೆ ಮಿಂಚುವ ನಿಷ್ಕಲ್ಮಶ ನಗೆ. ಸದಾ ಹಾಕಿಕೊಂಡಿರುವ ಕನ್ನಡಕದ ಹಿಂದೆ ಪರಿಣತ ಪಾಂಡಿತ್ಯದ ಪಕ್ವಫಲದಂತೆ ಫಳಫಳ ಹೊಳೆಯುವ ತೀಕ್ಷ್ಣ ಕಣ್ಣುಗಳು. ಮುದ್ದಾದ ಶುದ್ಧಾಕ್ಷರಗಳನ್ನು ಬರೆಯಲೆಂದೇ ತಿದ್ದಿಮಾಡಿದಂತಿರುವ ದುಂಡಾದ ಹಸ್ತ. ನಡೆ, ನುಡಿ, ಬರವಣಿಗೆ ಎಲ್ಲದರಲ್ಲೂ ಪಾದರಸದಂತೆ ಚುರುಕು. ಇದಿಷ್ಟು ಹೊರನೋಟಕ್ಕೆ ಕಾಣುವ ಉಪಾಧ್ಯೆಯವರ ಒಂದು ಸ್ಥೂಲಚಿತ್ರ.

ಆದಿನಾಥ ನೇಮಿನಾಥ ಉಪಾಧ್ಯೆಯವರು ಇಂದು ವಿವಾದಾಸ್ಪದ ಗಡಿಪ್ರದೇಶವಾದ ಬೆಳಗಾಂ ಜಿಲ್ಲೆಯ ಸದಲಗಿ ಎಂಬ ಗ್ರಾಮದಲ್ಲಿ ೬-೨-೧೯೦೬ರಂದು ಹುಟ್ಟಿದರು. ಜೈನಮನೆತನವೊಂದರಲ್ಲಿ ಜನಿಸಿದ ಉಪಾಧ್ಯೆಯವರು ಹುಟ್ಟಿನಿಂದ ಅಚ್ಚ ಕನ್ನಡಿಗರು, ಬೆಳವಣಿಗೆಯಿಂದ ಮರಾಠಿಗರು, ಬದುಕಿನಿಂದ ಬರವಣಿಗೆಯಿಂದ ಸ್ವಚ್ಛ ಬಾರತೀಯರು. ಆದಿನಾಥ ನೇಮಿನಾಥರ ಶೈಶವ ಸಣ್ಣ ಹಳ್ಳಿಯಾದ ಸದಲಗಿಯಲ್ಲೇ ಸಾಗಿತು. ಬಾಲ್ಯದೊಡನೆ ಪ್ರಾಥಮಿಕ ವ್ಯಾಸಂಗವೂ ಆ ಹಳ್ಳಿಯಲ್ಲೇ ಆಯಿತು. ಚಿಕ್ಕಚಿಕ್ಕ ಮಕ್ಕಳೊಡನೆ ನಕ್ಕು ನಲಿದಾಡುತ್ತಾ ಆಗ ಅವರು ಕಲಿತದ್ದು ಚೊಕ್ಕ ಕನ್ನಡ. ಇಂದಿಗೂ ಅವರ ಭಾಷಣ ಹಾಗೂ ಬರವಣಿಗೆಯಲ್ಲಿ ದೇಸಿಗನ್ನಡದ ಸೊಗಡು ಸೂಸುವುದನ್ನು ಗಮನಿಸಬಹುದು. ಸದಲಗದ ಶಾಲೆಯಲ್ಲಿ ಕಲಿತದ್ದು ಆದಮೇಲೆ ಅವರು ಸೆಕೆಂಡರಿ ವ್ಯಾಸಂಗಕ್ಕಾಗಿ ಹುಟ್ಟೂರನ್ನು ಬಿಟ್ಟು ಹತ್ತಿರದ ಬೆಳಗಾಮಿಗೆ ಹೊರಟರು. ಬೆಳಗಾಮಿಗೆ ಬಂದಮೇಲೆ ಅಲ್ಲಿನ ಜಿ. ಎ. ಪ್ರೌಢಶಾಲೆಯಲ್ಲಿ (G. A. High School) ಮುಂದಿನ ವ್ಯಾಸಂಗವನ್ನು ನಡೆಸಿದರು. ಈ ಪ್ರೌಢಶಾಲಾಭ್ಯಾಸಾನಂತರ ಅವರು ಕಾಲೇಜಿನ ಶಿಕ್ಷಣಕ್ಕಾಗಿ ಕೊಲ್ಲಾಪುರಕ್ಕೆ ಹೋದರು.

ಬೆಳಗಾವಿಯಿಂದ ಕೊಲ್ಲಾಪುರಕ್ಕೆ ಬಂದ ಆದಿನಾಥ ನೇಮಿನಾಥರು ಅಲ್ಲಿನ ಸುಪ್ರಸಿದ್ಧ ರಾಜಾರಾಮ ಕಾಲೇಜಿನಲ್ಲಿ ಓದು ಮುಂದುವರಿಸಿದರು. ೧೯೨೪ರಿಂದ ೧೯೨೬ರ ತನಕ ಅವರು ರಾಜಾರಾಮ ಕಾಲೇಜಿನಲ್ಲಿ ಓದಿ ಅನಂತರ ಕೊಲ್ಲಾಪುರ ಬಿಟ್ಟು ಸಾಂಗಲಿಗೆ ಹೊರಟರು. ಸಾಂಗಲಿಯ ವಿಲ್ಲಿಂಗಡನ್ ಕಾಲೇಜಿನಲ್ಲಿ ಎರಡು ವರ್ಷ ಅಭ್ಯಾಸ ಮಾಡಿದರು. ಅಲ್ಲಿ ಸಂಸ್ಕೃತ ಆನರ್ಸ್ ಮತ್ತು ಅರ್ಧಮಾಗಧೀ ಪ್ರಾಕೃತ ಭಾಷೆ ಹಾಗೂ ಸಾಹಿತ್ಯಗಳನ್ನು ತಮ್ಮ ವ್ಯಾಸಂಗದ ಪ್ರಧಾನ ವಿಷಯವಾಗಿ ತೆಗೆದುಕೊಂಡು ಹೆಚ್ಚು ಅಂಕಗಳನ್ನು ಗಳಿಸಿ ೧೯೨೮ರಲ್ಲಿ ಪದವೀಧರರಾದರು. ಮುಂದೆ ಸ್ನಾತಕೋತ್ತರ ತರಗತಿಗಳಿಗೆ ಸಂಬಂಧಿಸಿದ ಶ್ರೇಷ್ಠ ಉಪನ್ಯಾಸಗಳನ್ನು ಪುಣೆಯ ಭಂಡಾರಕರ ಸಂಸ್ಥೆಯಲ್ಲಿ ಕೇಳಿದರು. ಅವುಗಳಲ್ಲಿ ಅತಿಮುಖ್ಯವಾದ ವಿದ್ವತ್ಪೂರ್ಣ ಉಪನ್ಯಾಸಗಳೆಂದರೆ ದಿವಂಗತ ಡಾ. ವಿ. ಎಸ್. ಸುಕ್ತಂಕರರ ಭಾಷಣಗಳು. ಮಹಾಭಾರತದ ಆಧಾರಭೂತವಾದ ಮೂಲಗ್ರಂಥವನ್ನು ಸಂಶೋಧನಾತ್ಮಕವಾಗಿ ಸಿದ್ಧಪಡಿಸಿದ ಮಹಾಜ್ಞಾನಿಯೆಂಬ ಹೆಸರುಪಡೆದ ಸುಕ್ತಂಕರರು ತೌಲನಿಕ ಭಾಷಾಶಾಸ್ತ್ರವನ್ನು ಕುರಿತು ನೀಡಿದ ಉಪನ್ಯಾಸಗಳು ಉಪಾಧ್ಯೆಯವರ ಮೇಲೆ ವಿಶೇಷ ಪ್ರಭಾವವನ್ನುಂಟುಮಾಡಿದುವು. ಅವರ ಅಂತರಂಗ ಡಾ. ಸುಕ್ತಂಕರರನ್ನು ಆಚಾರ್ಯರನ್ನಾಗಿ ಅಂಗೀಕರಿಸಿತಲ್ಲದೆ, ಅವರನ್ನೇ ತಮ್ಮ ಮುಂದಿನ ಗುರಿಯನ್ನಾಗಿ ಮಾಡಿಕೊಂಡರು. ಪುಣೆಯಲ್ಲಿದ್ದಷ್ಟು ಕಾಲ ಇವರಿಬ್ಬರ ನಡುವೆ ಅನೇಕ ಉಪಯುಕ್ತ ಸಂದರ್ಶನಗಳು ನಡೆದುವು, ಅನಂತರದಲ್ಲೂ ಡಾ. ಸುಕ್ತಂಕರರು ಬದುಕಿರುವ ತನಕ ಹಲವಾರು ಪತ್ರಗಳ ವ್ಯವಹಾರವೂ ಆಯಿತು.

ಸಂಸ್ಕೃತ, ಪ್ರಾಕೃತ ಹಾಗೂ ಅರ್ಧಮಾಗಧೀ ಭಾಷೆಗಳಲ್ಲಿ ಅವರಿಗೆ ಮೊದಲಿನಿಂದಲೂ ಮಮತೆ ಮೂಡಿತ್ತು. ಅಂದಿನ ವಿದ್ವದ್ವರೇಣ್ಯರ ಸಖ್ಯದಿಂದಾಗಿ ಆ ವಿಭಾಗದಲ್ಲಿನ ಅವರ ಒಲವು ದಿನೇದಿನೇ ಇತೋಪ್ಯತಿಶಯವಾಗಿ ವರ್ಧಿಸಿತು. ಈ ಪ್ರಾಚೀನ ಸಾಹಿತ್ಯ ಸಂಪದ್ಯುಕ್ತ ಭಾಷೆಗಳನ್ನೇ ಮತ್ತೆ ತಮ್ಮ ವ್ಯಾಸಂಗದ ಮುಖ್ಯ ವಿಷಯಗಳನ್ನಾಗಿ ಆರಿಸಿಕೊಂಡು ಎಂ.ಎ. ಪದವಿಯಲ್ಲಿ, ಪ್ರಪ್ರಥಮ ಶ್ರೇಣಿಯಲ್ಲಿ, ೧೯೩೦ರಲ್ಲಿ ತೇರ್ಗಡೆಯಾದರು. ಹಿರಿಯ ಪದವಿಯನ್ನು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿ ಗಳಿಸಿ

ಕೊಂಡ ಆದಿನಾಥ ನೇಮಿನಾಥರು ಹಿಂದೆ ಅವರು ಕಾಲೇಜು ಶಿಕ್ಷಣವನ್ನು ಆರಂಭಿಸಿದಾಗ ವಿದ್ಯಾರ್ಥಿಯಾಗಿ ಕಲಿತ ಕಾಲೇಜಿನಲ್ಲೇ ಅಧ್ಯಾಪಕರಾಗುವ ಅಪೂರ್ವ ಅವಕಾಶ ಪಡೆದರು. ೧೯೩೦ರಲ್ಲೇ ಆ ಅದೃಷ್ಟ ದೊರೆಯಿತು. ಅವರು ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಅರ್ಧಮಾಗಧೀ ಮತ್ತು ಪ್ರಾಕೃತ ಶಾಖೆಯ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ೧೯೩೦ರಲ್ಲಿ ಅಲ್ಲಿ ಅಧ್ಯಾಪಕರಾಗಿ ನೇಮಕಗೊಂಡ ಮೇಲೆ ಅದುವರೆಗೆ ತಾವು ಕಲಿತ ಜ್ಞಾನವನ್ನು ಪ್ರಾಮಾಣಿಕ ನಿಷ್ಠೆಯಿಂದ ಜ್ಞಾನಪಿಪಾಸುಗಳಿಗೆ ಧಾರೆಯೆರೆಯತೊಡಗಿದರು. ಆ. ನೇ. ಉಪಾಧ್ಯೆಯವರು ಆರ್ಷೇಯ ಸಾಹಿತ್ಯ, ಸಂಸ್ಕೃತಿಗಳ ಸಂಪನ್ನ ಸಜ್ಜನರ ಸಹವಾಸದಲ್ಲಿ, ಸ್ವಲ್ಪ ಸಾಂಪ್ರದಾಯಿಕ ರೀತಿಯಲ್ಲಿ ಬೆಳೆದುಬಂದವರು; ಪ್ರಾಮಾಣಿಕ ಪ್ರಯತ್ನದಲ್ಲಿ ನಂಬಿಕೆಯುಳ್ಳವರು. ಅವರು ನಿರ್ವಂಚನೆಯಿಂದ ನಡಸಿದ ಜ್ಞಾನಯಾಗದಲ್ಲಿ ಪಾಲುಗೊಂಡ ಪರಿಮಿತ ವಿದ್ಯಾರ್ಥಿವೃಂದ ಸಂತೃಪ್ತಿಯಿಂದ ತಣಿಯಿತು. ಅವರ ದಕ್ಷತೆ, ಅಚಲಿತವಾದ ನಿಷ್ಠೆ, ಪ್ರಾಮಾಣಿಕತೆ ಹಾಗೂ ಪಾಂಡಿತ್ಯಗಳನ್ನು ಕಂಡ ಕಾಲೇಜಿನ ಸಹೋದ್ಯೋಗಿಗಳೂ, ಅಧಿಕಾರಿಗಳೂ ಸಂಪ್ರೀತರಾದರು. ಇದರ ಫಲವಾಗಿ ಕೇವಲ ಮೂರು ವರುಷಗಳಲ್ಲಿ ಅವರಿಗೆ ರಾಜಾರಾಮ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿ ಪ್ರಾಪ್ತವಾಯಿತು. ಕೊಲ್ಲಾಪುರದ ಕಾಲೇಜಿನಲ್ಲಿ, ಕಿಶೋರನಾಗಿ ಕಲಿತ ಕಾಲೇಜಿನಲ್ಲಿ, ೧೯೩೩ರಲ್ಲಿ ಉಪಾಧ್ಯೆಯವರು ಪ್ರಾಕೃತ ಪ್ರಾಧ್ಯಾಪಕರಾದರು. ಅವರ ಹಂಗಾಮಿ ಹುದ್ದೆಯನ್ನು ಖಾಯಂಗೊಳಿಸಲಾಯಿತು. ೧೯೩೨ರಲ್ಲಿ ಅವರ ವಿವಾಹವಾಯಿತು. ಈಗ ಅವರಿಗೆ ಮೂವರು ಗಂಡು ಮಕ್ಕಳೂ, ಒಬ್ಬ ಮಗಳೂ ಇದ್ದಾರೆ.

ಉಪಾಧ್ಯೆಯವರು ತಪಸ್ವಿಯಂತೆ ನಿರಂತರವಾಗಿ ಜ್ಞಾನೋಪಾಸಕರಾಗಿ ಸರಸ್ವತಿಯ ಸೇವೆಗೈದಿದ್ದಾರೆ. ಪ್ರಾಧ್ಯಾಪಕವೃತ್ತಿ ಲಭಿಸಿದ ಮೇಲೂ ಅವರು ತಮ್ಮ ಅಭ್ಯಾಸವನ್ನು ಅವಿಚ್ಛಿನ್ನವಾಗಿ ಮುಂದುವರಿಸಿದರು. ಪ್ರಾಚೀನ ಪ್ರಾಕೃತ ಸಂಸ್ಕೃತ ಅಪಭ್ರಂಶ ಕೃತಿಗಳನ್ನೂ ಸಂಶೋಧನಾತ್ಮಕ ಲೇಖನಗಳನ್ನೂ ಒಂದೇಸಮನೆ ಪ್ರಕಟಿಸತೊಡಗಿದರು. ಡಾ|| ಪಿ. ಎಲ್. ವೈದ್ಯರು ದರ್ಭಾಂಗದ ಮಿಥಿಲಾ ಸಂಘದ ಡೈರೆಕ್ಟರ್‌ರಾಗಿದ್ದು ಆ ಕ್ಷೇತ್ರದಲ್ಲಿ ನುರಿತ ವಿದ್ವಾಂಸರಾಗಿದ್ದರು. ಅವರು ಉಪಾಧ್ಯೆಯವರಿಗೆ ಪ್ರಾಕೃತಕ್ಕೆ ಪ್ರವೇಶ ದೊರಕಿಸಿಕೊಟ್ಟ ಆಚಾರ್ಯರಾದರು. ಕೇವಲ ತರಗತಿಯ ನಾಲ್ಕು ಗೋಡೆಯ ನಡುವೆ ಮಾತ್ರ ಬೋಧಿಸಿದ ಶಾಲಾಮಾಸ್ತರರಾಗದೆ ಡಾ. ವೈದ್ಯರು ತಮ್ಮ ಸ್ವಂತ ಪುಸ್ತಕ ಭಂಡಾರವನ್ನೇ ಉಪಾಧ್ಯೆಯವರ ವ್ಯಾಸಂಗಕ್ಕೆ ತೆರೆದುಕೊಟ್ಟರು. ಅವರಿಗೆ ಈ ಶಿಷ್ಯೋತ್ತಮನಲ್ಲಿ ಅಪಾರ ಮಮತೆಯಿತ್ತು. ಶಿಷ್ಯವಾತ್ಸಲ್ಯದ ಜೊತೆಗೆ ಬೆಳೆಯುವ ಪೈರಿನ ಗುಣವನ್ನು ಮೊಳಕೆಯ ಎಳೆತನದಲ್ಲೇ ಗುರುತಿಸಿ ಸಾಕಷ್ಟು ಪ್ರೋತ್ಸಾಹ ಉತ್ತೇಜನವಿತ್ತು ಉಪಕರಿಸಿದರು. ಡಾ. ಎಸ್. ಕೆ. ಬೆಲ್ವಾಲ್ಕರರೂ ನೆರವುನೀಡತೊಡಗಿದರು. ಡಾ. ಬೆಲ್ವಾಲ್ಕರರ ಬಳಿ ಪುಣೆಯ ಭಂಡಾರಕರ ಪ್ರಾಚ್ಯ ಸಂಶೋಧನಾಲಯದಲ್ಲಿ ಉಪಾಧ್ಯೆಯವರು ಅಥರ್ವವೇದವನ್ನೂ, ಕೆಲವು ಉಪನಿಷತ್ತುಗಳನ್ನೂ ಅಭ್ಯಾಸಮಾಡಿದ್ದರು. ಪ್ರಾರಂಭದಲ್ಲಿ ಉಪಾಧ್ಯೆಯವರಿಗೆ ಈ ಇಬ್ಬರು ಗುರುಗಳು—ಡಾ. ಪಿ. ಎಲ್. ವೈದ್ಯ ಮತ್ತು ಡಾ. ಎಸ್. ಕೆ. ಬೆಲ್ವಾಲ್ಕರ್—ಉಪಾಧ್ಯೆಯವರಿಗೆ ಬಗೆಬಗೆಯಾಗಿ ನೆರವಾಗಿ ಸ್ನೇಹಾಭಿಮಾನಗಳಿಂದ ಮಾರ್ಗದರ್ಶನವಿತ್ತರು. ಜೊತೆಗೆ ಮಹಾಭಾರತದ ಘನತೆವೆತ್ತ ಸಂಪಾದಕರಾಗಿ ಡಾ. ವಿ. ಸುಕ್ತಂಕರರ ಸ್ಫೂರ್ತಿಯ ಬೆಂಗಾವಲಿತ್ತು.

೧೯೨೯ರಿಂದಲೇ ಉಪಾಧ್ಯೆಯವರು ಲೇಖನ ಬರೆಯಲಾರಂಭಿಸಿದ್ದರು. ೧೯೨೯ರ ಹೊತ್ತಿಗೆ ಭಾರತದಾದ್ಯಂತ ಇರುವ ಅನೇಕ ಪ್ರಸಿದ್ಧ ಪತ್ರಿಕೆಗಳಲ್ಲಿ ಮೂವತ್ತೈದು ಪಾಂಡಿತ್ಯಪೂರ್ಣವಾದ ಪ್ರೌಢ ಲೇಖನಗಳನ್ನು ಪ್ರಕಟಿಸಿದ್ದರು. ಅವರಿಗೆ ಹಳೆಯ ತಾಳೆಯ ಗ್ರಂಥಗಳನ್ನು ಸಂಗ್ರಹಿಸುವ ಆಸಕ್ತಿಯೂ ವಿಶೇಷವಾಗಿತ್ತು. ಭಾರತೀಯ ಭಾಷೆಗಳಲ್ಲಿ ಎಷ್ಟೋ ಹಳೆಯ ಗ್ರಂಥಗಳು ಹಸ್ತಪ್ರತಿಯ ರೂಪದಲ್ಲೇ ಉಳಿದು ಕಾಲನ ಅವಜ್ಞೆಯಿಂದಾಗಿ ಅಳಿದು ಹೋಗುತ್ತಿರುವುದನ್ನು ಕಂಡ ಉಪಾಧ್ಯೆಯವರು ಅವನ್ನು ಕರುಣಾಳುವಿನಂತೆ ಕೈಹಿಡಿದು ಉದ್ಧರಿಸತೊಡಗಿದರು. ಪ್ರಾಕೃತವಿಭಾಗದ ಪ್ರಾಧ್ಯಾಪಕವೃತ್ತಿ ಪ್ರಾಪ್ತವಾದ ಮರುವರುಷವೇ "ಪಂಚಸುತ್ತಮ್" (=ಪಂಚಸೂತ್ರಂ) ಎಂಬ ಪ್ರಾಕೃತ ಗ್ರಂಥವನ್ನು ಪ್ರಕಟಿಸಿದರು. ಡಾ|| ಎಂ. ವಿಂಟರ್‌ನಿಟ್ಸ್, ಡಾ|| ಎಲ್.ಡಿ. ಬಾರ್ನೆಟ್, ಡಾ|| ಉ. ಸ್ಕಬ್ರಿಂಗ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಇದರ ಶಾಸ್ತ್ರೀಯ ಚೊಕ್ಕತನವನ್ನು ಮುಕ್ತಕಂಠದಿಂದ ಪ್ರಶಂಸಿದ್ದಾರೆ. ೧೯೩೫ರಲ್ಲಿ ರಾಯಲ್ ಅಷ್ಟದಳಾಕಾರದ ಆರುನೂರು ಪುಟಗಳಲ್ಲಿ ಕುಂದುಕುಂದಾಚಾರ್ಯರ ಪ್ರವಚನ ಸಾರವನ್ನು ಹೊರತಂದರು. ಈ ಅದ್ಭುತ ಸಂಪಾದನೆಯನ್ನು ಕುರಿತು ಮೇಲೆ ಹೆಸರಿಸಿದ ಸೂರಿಗಳಲ್ಲದೆ ಡಾ|| ಎ. ಬಿ. ಕೀತ್, ಡಾ|| ಎಸ್. ಕೆ. ಚಟರ್ಜಿ,

ದಿ|| ಪ್ರೊ|| ಎಂ. ಹಿರಿಯಣ್ಣ, ಡಾ|| ಬಿ. ಎಲ್. ಆತ್ರೇಯ ಡಾ|| ಆರ್. ಶಾಮಾಶಾಸ್ತ್ರಿ, ರಾ. ನರಸಿಂಹಾಚಾರ್ಯ ಮುಂತಾದ ಮಹನೀಯರು ಮನಬಿಚ್ಚಿ ಕೊಂಡಾಡಿದ್ದಾರೆ. ಅನಂತರ ಪರಮಾತ್ಮ ಪ್ರಕಾಶ, ವರಾಂಗಚರಿತವೆಂಬ ಅಪಭ್ರಂಶ ಹಾಗೂ ಸಂಸ್ಕೃತ ಕಾವ್ಯಗಳನ್ನು ಅಚ್ಚು ಹಾಕಿಸಿದರು.

ಅಧ್ಯಾಪಕರಾಗಿದ್ದುಕೊಂಡು ತರಗತಿಗಳ ಉಪನ್ಯಾಸಕ್ಕೆ ತಕ್ಕ ಸಿದ್ಧತೆ ಮಾಡಿಕೊಳ್ಳುವುದರ ಜೊತೆಗೆ ತಮಗೆ ದೊರೆತ ಬಿಡುವಿನ ವೇಳೆಯಲ್ಲಿ ಈ ಸಾರಸ್ವತ ಸಂಶೋಧನ ಸೇವೆಯನ್ನು ಸದ್ದುಗದ್ದಲವಿಲ್ಲದೆ ಎಲೆಯಮರೆಯ ಕಾಯಿಯಂತೆ ಮುಂದುವರಿಸಿದರು. ಇದರ ಫಲವಾಗಿ ಮುಂಬಯಿ ವಿಶ್ವವಿದ್ಯಾನಿಲಯುದವರು ಪ್ರಾಧ್ಯಾಪಕ ಆ.ನೇ. ಉಪಾಧ್ಯೆಯವರಿಗೆ ೧೯೩೯ರಲ್ಲಿ 'ಡಿ. ಲಿಟ್' ಗೌರವ ಪದವಿಯನ್ನಿತ್ತು ಸನ್ಮಾನಿಸಿದರು. ಅಲ್ಲದೆ ಅವರ ಅವಿಶ್ರಾಂತವಾದ ಜ್ಞಾನ ದಾಹವನ್ನು ಕಂಡ ಮುಂಬಯಿ ವಿಶ್ವವಿದ್ಯಾನಿಲಯ ೧೯೩೯ರಿಂದ ೧೯೪೨ರವರೆಗೆ ಮೂರು ವರುಷಕಾಲ ಅವರಿಗೆ ಸ್ಪ್ರಿಂಜರ್ ಸಂಶೋಧನಾ ವಿದ್ಯಾರ್ಥಿವೇತನವನ್ನು (Springer Research Fellowship) ನೀಡಿತು. ಈ ಮಧ್ಯೆ ೧೯೪೧ರಲ್ಲಿ ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ಮೇಳದಲ್ಲಿ ಪ್ರಾಕೃತ ಪಾಳಿ ಮತ್ತು ಬೌದ್ಧ ಜೈನ-ಧರ್ಮ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಸಾಹಿತಿಗಳ ವಿಶೇಷ ಮನ್ನಣೆಗೆ ಪಾತ್ರರಾಗಿದ್ದರು. ಕೊಲ್ಹಾಪುರ ಸಂಸ್ಥಾನ ರಾಜ್ಯ ಪುನರ್ವಿಂಗಡೆಯ ತರುವಾಯ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ ಮೇಲೆ ಅವರನ್ನೂ ಅಲ್ಲಿನ ವಿದ್ಯಾ ಇಲಾಖೆಯಲ್ಲೇ ಸೇರಿಸಿಕೊಳ್ಳಲಾಯಿತು. ತಾವು ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದಂದಿನಿಂದ ಯಾವ ವರ್ಗಾವಣೆಯೂ ಇಲ್ಲದೆ ಒಂದೇ ಸಮನೆ ಅದೇ ಕಾಲೇಜಿನಲ್ಲಿ ಕರ್ಮಯೋಗಿಯಂತೆ ಫಲಪ್ರದವಾಗಿ ಕಾಲ ಕಳೆದರು. ತಮ್ಮ ಮೂರು ದಶಕಗಳ ಅಕಳಂಕ ಅಧ್ಯಾಪಕ ವೃತ್ತಿಯಿಂದ ೧೯೬೨ರಲ್ಲಿ ನಿವೃತ್ತರಾದರು. ಆದರೆ ಇದು ವಿಶ್ರಾಂತಿ ಪಡೆದು ಆರಾಮ ಜೀವನ ನಡಸಲು ಕೊಟ್ಟ ಪರವಾನಿಗೆಯೆಂದು ಅವರು ಭಾವಿಸಲಿಲ್ಲ. ವೃತ್ತಿಯಿಂದ ನಿವೃತ್ತರಾದರೂ ಸಾರಸ್ವತ ಲೋಕಕ್ಕೆ ಸಲ್ಲಿಸುತ್ತಿದ್ದ ಸೇವೆಯಿಂದ ಬಿಡುಗಡೆ ಪಡೆಯಲಿಲ್ಲ. ಸೋಮಾರಿಯಂತೆ ಸುಮ್ಮನೆ ಮಾತುಕತೆಗಳಲ್ಲಿ, ಒಣಹರಟೆಗಳಲ್ಲಿ ನೀರಸ ಭಾಷಣಗಳಲ್ಲಿ ಕಾಲಕಳೆಯುವುದು ಅವರ ಮನೋವೃತ್ತಿಗೆ ಒಗ್ಗದ ಮಾತು.

೧೯೬೨ರಲ್ಲಿ ಡಾ|| ಆ.ನೇ. ಉಪಾಧ್ಯೆಯವರು ಪ್ರಾಧ್ಯಾಪಕತನದಿಂದ 'ಪಿಂಚಣಿ' ಪಡೆದಮೇಲೆ ಭಾರತದ ವಿಶ್ವವಿದ್ಯಾನಿಲಯುದ ಧನಸಹಾಯ ಆಯೋಗದವರ ಉದಾರ ನೆರವಿನಿಂದ ತಮ್ಮ ಸಾಹಿತ್ಯ ಸಂಶೋಧನೆಯನ್ನು ಪುನಃ ಮುಂದುವರಿಸಿದರು. ಇದಲ್ಲದೆ ಅವರು ಪುಣೆಯ ಶಿವಾಜಿ ವಿಶ್ವವಿದ್ಯಾನಿಲಯಕ್ಕೆ ಕಲಾ ವಿಭಾಗದ 'ಡೀನ್' ಆಗಿದ್ದಾರೆ. (Dean of Faculty of Arts) ಅವರು ೧೯೩೦ರಿಂದ ಇದುವರೆಗೂ ಬಹುಮಟ್ಟಿಗೆ ಎಲ್ಲ ಭಾರತೀಯ ಪ್ರಾಚ್ಯ ಸಮ್ಮೇಳನದ (All India Oriental conferences) ಕಾರ್ಯಕಲಾಪಗಳಲ್ಲೂ ತಪ್ಪದೆ ಭಾಗವಹಿಸಿ ವಿಪುಲವಾದ ಸಾಹಿತ್ಯಿಕ ಪ್ರಬಂಧಗಳನ್ನು ಓದಿದ್ದಾರೆ. ಅಖಿಲ ಭಾರತ ಪ್ರಾಚ್ಯಮೇಳದ ಸಂಸ್ಮರಣ ಸಂಪುಟಗಳ ಪುಟಗಳನ್ನು ತಿರುವಿ ಹಾಕಿದರೆ ಉಪಾಧ್ಯೆಯವರ ಲೇಖನ ಅಲ್ಲಿ ಕಡ್ಡಾಯವಾಗಿ ಕಾಣುತ್ತದೆ. ಭಾರತೀಯ ವಿದ್ವಾಂಸನಿಗೆ ಈ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಸಿಗುವುದು ಹೆಮ್ಮೆಯ ಮಾತು. ಅದರ ವಿವಿಧ ವಿಭಾಗ ಹಾಗೂ ಗೋಷ್ಠಿಗಳ ಅಧ್ಯಕ್ಷಸ್ಥಾನ ದೊರೆತರಂತೂ ಅದನ್ನೊಂದು ಅದೃಷ್ಟವೆಂದು ಆತ ಪರಿಗಣಿಸುತ್ತಾನೆ. ಇನ್ನೂ ಇಡೀ ಸಮ್ಮೇಳನದ ಮುಖ್ಯ ಅಧ್ಯಕ್ಷಸ್ಥಾನ ದೊರೆತರಂತೂ ಅದು ಪೂರ್ವ ಸುಕೃತವೆಂದೇ ಸೂರಿಗಳ ಅಭಿಪ್ರಾಯ. ಡಾ|| ಆ. ನೇ. ಉಪಾಧ್ಯೆಯವರು ಮೊದಲಲ್ಲಿ ಈ ಪ್ರಾಚ್ಯ ಮೇಳಗಳಲ್ಲಿ ಭಾಗವಹಿಸುತ್ತಿದ್ದು, ಅನಂತರ ಅದರ ವಿಭಾಗಾಧ್ಯಕ್ಷರಾಗಿದ್ದು ಕಡೆಗೆ ೧೯೬೬ರ ನವಂಬರ್ ತಿಂಗಳು ಅಲಿಘರ್ (Aligarh) ನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯಕೂಟಕ್ಕೆ ಸಮಗ್ರಾಧಿವೇಶನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಭಾರತೀಯನಿಗೆ ಸಲ್ಲುವ ಬಹುದೊಡ್ಡ ಗೌರವಕ್ಕೆ ಪಾತ್ರರಾದರು ಅಖಂಡ ಭಾರತದ ಮಹಾಮನ್ನಣೆಗೆ ಪಾತ್ರರಾದ ಕನ್ನಡಿಗರನ್ನು ಇಷ್ಟು ಕಾಲಾನಂತರವಾದರೂ ಕನ್ನಡನಾಡು ಗೌರವಿಸುತ್ತಿರುವುದು ಅಭಿನಂದನೀಯ.

ಸದಭಿರುಚಿಯ ಶುಚಿಜೀವನದ ಶೀಲವೃದ್ಧರೂ, ವಾಗ್ದೇವಿಯ ಉಪಾಸನೆಯಲ್ಲೇ ಹಣ್ಣಾದ ಜ್ಞಾನವೃದ್ಧರೂ, ಅರವತ್ತುಮೂರನೆಯ ವರುಷಕ್ಕೆ ಅಡಿಯಿಡುವ ವಯೋವೃದ್ಧರೂ ಆದ ಆದಿನಾಥ ನೇಮಿನಾಥ ಉಪಾಧ್ಯೆಯವರು ಒಬ್ಬ ಶಿಸ್ತಿನ ಸಿಪಾಯಿಯ ಕಾರ್ಯದಕ್ಷ ಜೀವನವನ್ನು ಸಾಗಿಸುತ್ತ ಬಂದಿದ್ದಾರೆ. ಅವರು ಕರ್ಮಯೋಗಿಯಂತೆ ಜ್ಞಾನೋಪಾಸಕರಾಗಿ ಕಳೆದ ಕೆಲವಾರು ದಶಕಗಳಿಂದ ಎಡೆಬಿಡದೆ ನಡೆಸುತ್ತ ಬಂದಿರುವ ವ್ಯಾಸಂಗದ

ಫಲವಾಗಿ ವಿದ್ಯೆಯ ಗೌರೀಶಂಕರವಾಗಿ ಬೆಳೆದಿದ್ದಾರೆ. ಸಮಯವನ್ನು ಸುಮ್ಮನೆ ಕಳೆಯುವುದೆಂದರೆ ಅವರಿಗೆ ಕಷ್ಟ. ಪ್ರವಾಸಮಾಡುವಾಗಲೂ ಹೊಸ ಪುಸ್ತಕಗಳನ್ನು ಓದುತ್ತಿರುತ್ತಾರೆ. ರೈಲ್ವೇಸ್ಟೇಷನ್ನಿನ ಟ್ರೈನಿನಲ್ಲಿ ಬರುವಿಕೆಗಾಗಿ ಕಾಯಬೇಕಾದರೆ, ಅಚ್ಚಿನ ಕರಡು ಪ್ರತಿಯನ್ನು ನಿಲ್ದಾಣದಲ್ಲೇ ಕುಳಿತು ತಿದ್ದುತ್ತಾರೆ. ಅವರ ಎಲ್ಲ ಬರೆಹದಲ್ಲೂ ಪ್ರಕಾಶಿಸುವ ಪ್ರಪ್ರಥಮ ಆಕರ್ಷಕ ಗುಣವೆಂದರೆ ಅಚ್ಚುಕಟ್ಟು. ಕಡೆಗೆ ಸ್ನೇಹಿತರಿಗೆ ಬರೆಯುವ ಕಾಗದದಲ್ಲೂ ಈ ನಯವಿನಯಗಳು ಪ್ರಕಟವಾಗುತ್ತದೆ. ಅವರು ಯಾರಿಗೆ ಬರೆಯಬೇಕಾದರೂ ಸಾಮಾನ್ಯವಾಗಿ ಇಂಗ್ಲಿಷಿನಲ್ಲೇ ಪತ್ರವ್ಯವಹಾರ ಮಾಡುವುದಲ್ಲದೆ ಟೈಪ್ ಮಾಡಿರುತ್ತಾರೆ. ಟೈಪ್ ಮಾಡಿದ ಮೇಲೆ ಒಮ್ಮೆ ಆ ಮೂಲಾಗ್ರ ಓದಿ ತಪ್ಪಿದ್ದರೆ ತಿದ್ದಿ, ಅದರ ಒಂದು ಪ್ರತಿ ತಾವಿಟ್ಟುಕೊಂಡು ಇನ್ನೊಂದನ್ನು ಅಂಚೆಗೆ ರವಾನಿಸುವರು. ಏಳೆಂಟು ಬಗೆಯ ಪೆನ್ನು, ಪೆನ್ಸಿಲ್‌ಗಳ ನೆರವಿನಿಂದ ಅತ್ಯಂತ ವ್ಯವಸ್ಥಿತವಾದ ಬರವಣಿಗೆ ಹಾಗೂ ಕರಡು ಪ್ರತಿ ತಿದ್ದಾಣಿಕೆ ನಡೆಸುವರು. ಅವರ ಮನೆಯಲ್ಲಿ ವಿದ್ವಾಂಸರೂ, ವಿದ್ವಾಂಸರಾಗ ಬಯಸುವವರೂ ಒಮ್ಮೆ ಅವರು ಬಳಸುವ ಸ್ವಂತ ಗ್ರಂಥಾಲಯ, ನಿತ್ಯಕುಳಿತು ಬರೆಯುವ ಕುರ್ಚಿ ಮೇಜು ಇಟ್ಟಿರುವ ಅಂದ ಚಂದಗಳನ್ನು ಅವಶ್ಯ ನೋಡಬೇಕು.

ಡಾ. ಆ. ನೇ. ಉಪಾಧ್ಯೆಯವರ ಪ್ರತಿಯೊಂದು ಪುಸ್ತಕ ಅಥವಾ ಲೇಖನದ ಪುಟಪುಟವೂ ಪರಿಪಕ್ವ ಪ್ರಕಾಂಡ ಪಾಂಡಿತ್ಯದ ಪ್ರಖರತೆಯನ್ನು ಪ್ರದರ್ಶಿಸುವುದರ ಜೊತೆಗೆ, ಪರಿಶುದ್ಧನಾದ ಪಂಡಿತನ ಪ್ರಾಮಾಣಿಕ ಪ್ರಯತ್ನದ ಪ್ರತಿಬಿಂಬವನ್ನೂ ಪ್ರತಿಫಲಿಸುತ್ತದೆ. ಅವರಿಗೆ ಯಾವುದರಲ್ಲೂ ಆತುರವಿಲ್ಲ, ನಿದಾನವಾದರೂ ಅಚ್ಚುಕಟ್ಟಾಗಿರಬೇಕೆಂಬ ತುಂಬು ಹಂಬಲದ ಹೊರತು. ಅವರು ಕೀರ್ತಿಕಾಮಿಯಲ್ಲ, ಪ್ರತಿಫಲಾಪೇಕ್ಷೆಯನ್ನೇ ಗುರಿಯಾಗುಳ್ಳವರಲ್ಲ. ಹೆಸರುವಾಸಿಯಾಗಲು ಬಯಸದೆ ಗೋಪ್ಯವಾಗಿ ತಮ್ಮ ಪಾಡಿಗೆ ತಾವು ಸಾಹಿತ್ಯಸೇವೆ ಸಲ್ಲಿಸುತ್ತಲಿರುವುದಲ್ಲದೆ ತರುಣರಿಗೆ ತಕ್ಕ ಪ್ರೋತ್ಸಾಹವನ್ನೂ ನೀಡುತ್ತಲಿದ್ದಾರೆ. ಅಪೇಕ್ಷಿಸುವವರಿಗೆಲ್ಲ ಅಗತ್ಯ ಸಂಶೋಧಕ ಸಾಮಗ್ರಿಯನ್ನೂ, ಇತರ ಉಲ್ಲೇಖನೀಯ ಅಂಕಿ ಅಂಶಗಳನ್ನೂ ಒದಗಿಸಿದ್ದಾರೆ. ಅನೇಕ ಸಂಘ ಸಂಸ್ಥೆ ಹಾಗೂ ಗ್ರಂಥಮಾಲೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸಂಪಾದಕರಾಗಿ ದುಡಿದಿದ್ದಾರೆ.

ಅವರು ಹುಟ್ಟು ಕನ್ನಡಿಗರಾದರೂ ಅವರ ಕಾರ್ಯಕ್ಷೇತ್ರ ಪರಿಮಿತಿಯ ಬಂಧನದಲ್ಲಿ ಸೀಮಿತಗೊಳ್ಳದೆ ಬೃಹದ್ ಭಾರತವನ್ನೇ ತನ್ನದೆಂದು ತೆಬ್ಬಿಕೊಳ್ಳುವ ವೈಶಾಲ್ಯ ಪಡೆದಿದೆ. ಕನ್ನಡ, ತಮಿಳು, ಹಿಂದಿ, ಮರಾಠಿ, ಅಪಭ್ರಂಶ, ಸಂಸ್ಕೃತ, ಪ್ರಾಕೃತ ಭಾಷೆಯ ಗ್ರಂಥಮಾಲೆಗಳ ಸಂಪಾದಕ ಮಂಡಲಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ವಾರಣಾಸಿಯ ಭಾರತೀಯ ಜ್ಞಾನಪೀಠ, ವಿದಿಶಾದಲ್ಲಿರುವ ಶೇಟ್ ಲಕ್ಷ್ಮೀಚಂದ್ರ ಶಿತಾಬ್‌ರಾಯಿಾ ಗ್ರಂಥಮಾಲೆ, ಸೊಲ್ಲಾಪುರದ ಜೀವರಾಜ ಗ್ರಂಥಮಾಲೆ, ಬಿಹಾರಿನ ವೈಶಾಲಿ ಸಂಸ್ಥೆ, ಪಂಜಾಬಿನ ವಿಶ್ವೇಶ್ವರಾನಂದ ವೈದಿಕ ಸಂಸ್ಥೆ, ವೈಶಾಲಿಯ ಪ್ರಾಕೃತ ಪುಸ್ತಕ ಸಮಿತಿ–ಮುಂತಾದ ಗ್ರಂಥಮಾಲೆ ಹಾಗೂ ಸಂಸ್ಥೆಗಳಲ್ಲಿ ಗೌರವ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಗಯಾ, ಮುಂಬಯಿಾ, ಬಿಹಾರ್, ಪೂನಾ, ನಾಗಪುರ ಮತ್ತು ಶಿವಾಜಿ ವಿಶ್ವವಿದ್ಯಾಲಯಗಳ ಸದಸ್ಯರಾಗಿದ್ದಾರೆ. ಬರೋಡದ ಪ್ರಸಿದ್ಧ ಪ್ರಾಚ್ಯಾಲಯದವರೂ, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದವರೂ ಅವರನ್ನು ಸಂದರ್ಶಕ ಆಚಾರ್ಯರನ್ನಾಗಿ, ಆಹ್ವಾನಿಸಿ ಸತ್ಕರಿಸಿವೆ.

ಕಳೆದ ನಲವತ್ತು ವರ್ಷಳಿಂದ ಅವಿಶ್ರಾಂತವಾಗಿ ದೇಶೀಯ ಭಾಷೆಗಳಲ್ಲಿ ದುಡಿಯುತ್ತ ಬಂದಿರುವ ಡಾ|| ಉಪಾಧ್ಯೆಯವರು ಕನ್ನಡಕ್ಕೆ ಕೊಟ್ಟಿರುವ ಕೊಡುಗೆ ಕಡಮೆಯೇನೂ ಇಲ್ಲ. ಮೇಲು ಮೇಲಿನ ತೇಲು ನೋಟಕ್ಕೆ ಅವರು ಕೇವಲ ಕನ್ನಡೇತರ ಸಾಹಿತ್ಯಕ್ಕೇ ಸೇವೆಸಲ್ಲಿಸಿರುವಂತೆ ತಟ್ಟನೆ ದೂರದಿಂದ ನೋಡುವ ಆತುರ ಮತಿಗಳಿಗೆ ತೋರುತ್ತದೆ. ಆದರೆ ಒಳಹೊಕ್ಕು ಪರಿಕಿಸಿ ನೋಡಿದರೆ ಕನ್ನಡಕ್ಕೂ ಅವರು ಎಷ್ಟು ಮಹದುಪಕಾರ ಮಾಡಿದ್ದಾರೆಂಬುದು ಮನದಟ್ಟಾಗುತ್ತದೆ. ನೇರವಾಗಿ ಅವರು ಕನ್ನಡಕ್ಕೆ ಸೇವೆ ಸಲ್ಲಿಸಿರುವುದು, ಅವರ ಬೃಹದ್ ಬರೆಹದೊಡನೆ ತುಲನೆ ಮಾಡಿದರೆ, ಸ್ವಲ್ಪವೆಂಬುದು ನಿಜ. ಆದರೆ ಸಂಖ್ಯೆಗಿಂತಲೂ ಗುಣ ಹಾಗೂ ಅದರ ಪರಿಣಾಮ ಮುಖ್ಯ. ಅವರು ತಮ್ಮ ಇಂಗ್ಲಿಷ್ ಬರೆಹದ ಮೂಲಕ ಕನ್ನಡ ಬಾರದ ವಿದ್ವಾಂಸರ ಗಮನವನ್ನು ಕನ್ನಡದ ಹಿರಿಮೆಯತ್ತ ಸೆಳೆದಿದ್ದಾರೆ. ಕನ್ನಡದಲ್ಲಿ ಅವರು ಬರೆದಿರುವ ಪುಸ್ತಕ ಮತ್ತು ಲೇಖನಗಳೂ ಕೆಲವೇ ಆದರೂ ಹೆಚ್ಚು ವಿಷಯಗಳನ್ನೊಳಗೊಂಡ ಸಂಶೋಧಕ ಸಾಮಗ್ರಿಯಾಗಿದೆ. ಕಳೆದ ಕೆಲವು ದಶಕಗಳಿಂದ ಕನ್ನಡದ ಅನೇಕಾನೇಕ ವಿದ್ವಾಂಸರು ಆದಿನಾಥ ನೇಮಿನಾಥರ ಅನಂತ ಜ್ಞಾನದ ಪರಮ ಪ್ರಯೋಜನ ಪಡೆದಿದ್ದಾರೆ. ಕನ್ನಡನಾಡಿನ ಹಿರಿಯ ಸಾಹಿತಿಗಳಾದ, ದಿವಂಗತರಾದ ಮಂಜೇಶ್ವರ ಗೋವಿಂದ ಪೈ, ಕೆ. ಜಿ. ಕುಂದಣಗಾರ್,

ಪ್ರೊ.ಎಂ. ಹಿರಿಯಣ್ಣ, ರಾ. ನರಸಿಂಹಾಚಾರ್, ಡಾ.ಆರ್. ಶಾಮಾಶಾಸ್ತ್ರಿ ಮುಂತಾದ ಮಹನೀಯರು ಉಪಾಧ್ಯೆಯವರ ವಾಙ್ಮಯ ಸೇವೆಯನ್ನು ಹೊಗಳಿದ್ದಾರೆ. ಅದರಲ್ಲಿಯೂ ಮಹಾಮಹೋಪಾಧ್ಯಾಯ ರಾವ್‌ಬಹಾದ್ದೂರ್ ಪ್ರಾಕ್ತನವಿಮರ್ಶಾ ವಿಚಕ್ಷಣ ದಿ. ರಾ. ನರಸಿಂಹಾಚಾರ್ಯರು ಉಪಾಧ್ಯೆಯವರ ಪ್ರವಚನಸಾರವನ್ನು ಕುರಿತು "Almost every page bears abundent testimony to your vast erudition and deep research . . . exhibit a rare scholarship and a thorough grasp of the subject" ಎಂದು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

ಡಾ. ಆ. ನೇ. ಉಪಾಧ್ಯೆಯವರು ಕನ್ನಡಕ್ಕೆ ಕೊಟ್ಟ ಕಾಣಿಕೆಯ ಮಹತ್ವವನ್ನು ಅವಶ್ಯ ಪರಿಭಾವಿಸಬೇಕು. ಕನ್ನಡದ ಉಪಲಬ್ಧ ಗದ್ಯಗ್ರಂಥಗಳಲ್ಲಿ ಬಹಳ ಹಳೆಯ ಹಾಗೂ ಮೊಟ್ಟಮೊದಲನೆಯ ಕೃತಿಯಾದ ವಡ್ಡಾರಾಧನೆಯ ಕಾಲ, ಕರ್ತೃ, ಕೃತಿಗಳ ವಿಚಾರದಲ್ಲಿ ಸ್ವೋಪಜ್ಞ ವೈದುಷ್ಯದ ವಿಶೇಷಾಂಶಗಳನ್ನು ವಿದ್ವಾಂಸರ ಗಮನಕ್ಕೆ ತಂದವರಲ್ಲಿ ಅವರು ಅಗ್ರಗಣ್ಯರೆಂದು ಮಾನ್ಯರಾಗಿದ್ದಾರೆ. ಪ್ರಾಕೃತ ಮತ್ತು ಪಾಳಿ ಭಾಷೆಗಳ ಸಾಹಿತ್ಯ ಸಂಪತ್ತನ್ನು ಸೋದಾಹರಣಪೂರ್ವಕವಾಗಿ ನಿರೂಪಿಸಿ ಕನ್ನಡದ ಕೆಲವು ಲೇಖನಗಳನ್ನೂ, ಪುಸ್ತಕವನ್ನೂ ಬರೆದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದವರು ಇವರ ಕನ್ನಡ ಪುಸ್ತಕವನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಮತ್ತು ಪ್ರಬುದ್ಧ ಕರ್ನಾಟಕದ ಹಳೆಯ ಸಂಚಿಕೆಗಳಲ್ಲಿ ಉಪಾಧ್ಯೆಯವರ ಕನ್ನಡ ಲೇಖನಗಳನ್ನು ನೋಡಬಹುದು. ಕನ್ನಡದ ಹಲವು ಹಳೆಯ ಓಲೆಗರಿ ಗ್ರಂಥಗಳನ್ನು ಸಂಗ್ರಹಿಸಿಟ್ಟು, ಅವನ್ನು ಆಮೂಲಾಗ್ರ ಓದಿ ಹೊಸ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ವಡ್ಡಾರಾಧನೆ, ಧರ್ಮಪರೀಕ್ಷೆ, ಮುಂತಾದ ಹಳಗನ್ನಡ ಗ್ರಂಥಗಳ ತಾಳೆಯೋಲೆಯ ಅಭ್ಯಾಸದಿಂದ ಉಪಯುಕ್ತ ಅಂಶಗಳನ್ನು ವಿವರಿಸಿ ವಿದ್ವಾಂಸರ ಮನ್ನಣೆ ಪಡೆದಿದ್ದಾರೆ. ಪ್ರಾಕೃತ ಭಾಷೆಯಲ್ಲಿರುವ ಕನ್ನಡ ಪದಗಳನ್ನು ಗುರುತಿಸಿ ಮುವ್ವತ್ತೈದು ವರ್ಷದ ಹಿಂದೆಯೇ ಲೇಖನ ಬರೆದು ಭಾಷಾಶಾಸ್ತ್ರಕಾರರ ಗಮನ ಸೆಳೆದಿದ್ದಾರೆ. ಆಚಾರ್ಯ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ತಮ್ಮ ಅನೇಕ ಗ್ರಂಥಗಳಲ್ಲೂ, ಲೇಖನಗಳಲ್ಲೂ ಉಪಾಧ್ಯೆಯವರು ಕನ್ನಡಕ್ಕೆ ಪರ್ಯಾಯವಾಗಿ ಮಾಡಿರುವ ಮಹೋಪಕಾರದತ್ತ ಬೆರಳುಮಾಡಿ ತೋರಿಸಿದ್ದಾರೆ. ಇತ್ತೀಚೆಗೆ ಪ್ರಕಟವಾದ ಧರ್ಮಾಮೃತ ಸಂಗ್ರಹ ಮತ್ತು ಲೀಲಾವತಿ ಗ್ರಂಥಗಳ ಪೀಠಿಕಾಪ್ರಕರಣದಲ್ಲಿ ಪ್ರಾಧ್ಯಾಪಕ ದೇ. ಜವರೇಗೌಡರು ಉಪಾಧ್ಯೆಯವರ ಕೃತಿಗಳಲ್ಲಿ ಕನ್ನಡಕ್ಕೆ ಸಂಬಂಧಿಸಿದ ಉಲ್ಲೇಖಗಳು ಅದೆಷ್ಟು ವಿಪುಲವಾಗಿದೆಯೆಂಬದನ್ನು ಸ್ಪಷ್ಟಪಡಿಸಿದ್ದಾರೆ. ಡಾ. ಆದಿನಾಥ ನೇಮಿನಾಥರು ಕನ್ನಡ ಸಾಹಿತಿಗಳಿಗೆ ಮಾಡಿರುವ ಮತ್ತೊಂದು ಸಹಾಯವಿದೆ. ಅದು ಆರ್ಥಿಕರೂಪದ ನೆರವು. ಪ್ರಾಚೀನವಾದ ಹಳಗನ್ನಡ ಜೈನ ಗ್ರಂಥಗಳನ್ನು ಹೊಸಗನ್ನಡಕ್ಕೆ ಅನುವಾದಮಾಡಿ ಕೊಟ್ಟವರಿಗೆ ಸಂಭಾವನೆಗಾಗಿ ಕನ್ನಡ ಬಾರದ ಕನ್ನಡೇತರ ಶ್ರೀಮಂತರಿಂದ ಮೂರುವರೆ ಲಕ್ಷ ರೂಪಾಯಿ ತೆಗೆಸಿಟ್ಟಿದ್ದಾರೆ. ಇದರಿಂದ ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳು ಉದ್ಧಾರವೂ ಸಾಧ್ಯವಿದೆ.

ಡಾ|| ಆ. ನೇ. ಉಪಾಧ್ಯೆಯವರು ನಿಜವಾಗಿಯೂ ಸಾಹಿತ್ಯ ಸೀಮೆಯ 'ಆನೆ'ಯೇ ಆಗಿದ್ದಾರೆ. ಅವರು ಬಹುಭಾಷಾ ವಿಶಾರದರು. ಹುಟ್ಟನಿಂದ ಅವರು ಕನ್ನಡಿಗರೆಂದು ಹಿಂದೆಯೇ ಹೇಳಿದೆ. ಅವರು ಕನ್ನಡದ ಜೊತೆಗೆ ಅಲ್ಲಿನ ಎಲ್ಲರ ನೆರೆಹೊರೆಯವರ ಮನೆಮಾತಾದ ಮರಾಠಿಯನ್ನು ಬಾಲ್ಯದಿಂದಲೇ ಕಲಿತರು. ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮದ ಜೊತೆಗೆ ಹೆಚ್ಚಾಗಿ ಓದಿದ್ದೂ ಇಂಗ್ಲಿಷ್ ಭಾಷೆಯನ್ನೇ. ಆದರೆ ಅವರ ಅಭ್ಯಾಸದುದ್ದಕ್ಕೂ ಐಚ್ಛಿಕ ವಿಷಯವಾಗಿ ಸಂಸ್ಕೃತ, ಅರ್ಧಮಾಗಧೀ ಮತ್ತು ಪ್ರಾಕೃತ ಭಾಷೆಗಳನ್ನೇ ಓದಿದರು. ಪಾಳಿಯನ್ನೂ ಚೆನ್ನಾಗಿ ಕಲಿತರು. ಹಿಂದಿಯಲ್ಲಿ ಭಾಷಣ, ಬರವಣಿಗೆಗೆ ಬೇಕಾದ ವಿಶೇಷ ಜ್ಞಾನವಿತ್ತು. ಇದರಿಂದಾಗಿ ಅವರಿಗೆ ಅಂತರರಾಷ್ಟ್ರೀಯ ವ್ಯವಹಾರ ಭಾಷೆಯಾದ ಇಂಗ್ಲಿಷಿನ ಜೊತೆಗೆ ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ, ಪಾಳಿ, ಪ್ರಾಕೃತ, ಅಪಭ್ರಂಶ, ಅರ್ಧಮಾಗಧಿ ಮುಂತಾದ ಬಹುಸಂಖ್ಯೆಯ ಭಾರತೀಯ ಭಾಷೆಗಳ ನಿಕಟ ಪರಿಚಯವಾಯಿತು. ಇಂಗ್ಲಿಷ್ ಭಾಷೆಯಲ್ಲಿ ಉಪಾಧ್ಯೆಯವರಿಗೆ ಇರುವ ಪ್ರಭುತ್ವ ಪಟುತ್ವಗಳ ಪರಿಚಯ ಪಡೆಯಬೇಕಾದರೆ ಅವರ ಪುಸ್ತಕಗಳ ಪಾಂಡಿತ್ಯಪೂರ್ಣ ಪೀಠಿಕೆಯನ್ನು ಪಠಿಸಬೇಕು. ಎಲ್ಲ ಸಂಸ್ಕೃತ, ಪ್ರಾಕೃತ. ಅಪಭ್ರಂಶ ಕೃತಿಗಳಿಗೂ ಇಂಗ್ಲಿಷಿನಲ್ಲೇ ಪ್ರಸ್ತಾವನೆ ಬರೆದಿದ್ದಾರೆ.

ಉಪಾಧ್ಯೆಯವರು ಸಂಪಾದಕರಾಗಿ ಸಿದ್ಧಪಡಿಸಿರುವ ಗ್ರಂಥಗಳೆಲ್ಲ ಬಹುಮಟ್ಟಿಗೆ ಡೆಮ್ಮಿ ಆಕಾರದಲ್ಲಿನ ಐದುನೂರು ಆರುನೂರು ಪುಟ ಪ್ರಮಾಣದ ಬೃಹದ್ ಗ್ರಂಥಗಳು. ಅವರು ಬರೆದಿರುವ ಯಾವುದೇ ಪುಸ್ತಕವನ್ನು ಆರಿಸಿಕೊಂಡರೂ ಆ ಕೃತಿಯ ಉದ್ದಕ್ಕೂ ಒಂದು ಬಗೆಯ

ಅಪೂರ್ವ ಒಪ್ಪ ಓರಣ ಎದ್ದು ಕಾಣುತ್ತದೆ. ಎಲ್ಲ ಗ್ರಂಥಕ್ಕೂ ವಿಸ್ತಾರವಾದ ಪ್ರಸ್ತಾವನೆಯಿರುತ್ತದೆ. ಅವರು ಬರೆಯುವ ಸುದೀರ್ಘ ಪೀಠಿಕೆಯೆಂಬುದು ಪ್ರಕಾಶಿಸುವ ಪಾಂಡಿತ್ಯದ ಪುಂಜ. ಪ್ರತಿಯೊಂದು ಪುಸ್ತಕಕ್ಕೂ ಆ ಗ್ರಂಥಕ್ಕೆ ಸಂಬಂಧಿಸಿದ ವಿಚಾರಗಳನ್ನೆಲ್ಲ ಸಮಗ್ರ ದೃಷ್ಟಿಯಿಂದ ಸಮೀಕ್ಷಿಸಿ, ಜ್ಞಾತಿಭಾಷೆಗಳಲ್ಲಿ ಕಂಡು ಬರುವ ಸಮಾನ ವಸ್ತುವನ್ನು ಆಯ್ದು ರಚಿಸಿದ ಕೃತಿಗಳೊಡನೆ ಹೋಲಿಸಿ ಅದರ ವಿಶಿಷ್ಟ ತೌಲನಿಕ ವಿಚಾರಧಾರೆಯನ್ನು ಹರಿಸುವ ಪೀಠಿಕೆಗಳು ಉಪಾಧ್ಯೆಯವರ ಮತಿಶ್ರೀಯ ಮಣಿದರ್ಪಣವಾಗಿದೆ. ಅವರು ವಿವರವಾಗಿ ವಿವೇಚಿಸುವ ಕವಿ ಕಾಲ ಕೃತಿಗಳ ವಿಚಾರಚರ್ಚೆ ಆಯಾ ಮೂಲಕೃತಿಯ ಮೌಲ್ಯವನ್ನು ಮುಮ್ಮಡಿಯಾಗಿ ಹೆಚ್ಚಿಸುತ್ತದೆ. ಕಾವ್ಯದ ಮಹತ್ವ ಧರ್ಮ ನಿರೂಪಣೆಗೆ ಇತಿಹಾಸ ಮತ್ತು ಇತರ ವಿಭಾಗಗಳಿಗೆ ಭಾಷಾಶಾಸ್ತ್ರ ಛಂದಸ್ಸು ಶಬ್ದಕೋಶ ಸಮಾಜಶಾಸ್ತ್ರಗಳಿಗೆ ಸೇರಬಹುದಾದ ಅಂಶಗಳನ್ನೆಲ್ಲ ಕ್ರೋಡೀಕರಿಸಿ ಕೊಟ್ಟಿರುತ್ತಾರೆ. ಪೀಠಿಕೆಗೆ ಪೋಷಕವಾಗಿ ಪುಸ್ತಕದ ಕಡೆಯಲ್ಲಿ ಪರಿಶಿಷ್ಟಗಳಿದ್ದು ಪರಿಶೋಧಕರಿಗೆ ಪರಮ ಪ್ರಯೋಜನಕಾರಿಯಾಗಿರುತ್ತದೆ.

ಪ್ರಾಧ್ಯಾಪಕ ಆದಿನಾಥ ನೇಮಿನಾಥ ಉಪಾಧ್ಯೆಯವರು ಸಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ, ಗ್ರಂಥ ಸಂಪಾದನಾ ಶಾಸ್ತ್ರದ ನಿಯಮಗಳಿಗೆ ಅನುಸಾರವಾಗಿ ಶುದ್ಧವಾಗಿ ಸಿದ್ಧಪಡಿಸಿರುವ ಎಲ್ಲ ಗ್ರಂಥಗಳ ಹಾಗೂ ಲೇಖನಗಳ ಪೂರ್ಣಪರಿಚಯವಿರಲಿ, ಅಲ್ಪಸ್ವಲ್ಪ ಪರಿಚಯವೂ ಈ ಪುಟ್ಟಲೇಖನದ ಪರಿಮಿತಿಗೆ ಮೀರಿದ್ದು. ಕೇವಲ ಕೆಲವೇ ಕೆಲವು ಕೃತಿಗಳನ್ನು ಕಿರಿದರಲ್ಲಿ ಪರಿಚಯಿಸುವ ಪ್ರಯತ್ನಮಾಡಿದೆ. ಓದುಗರ ರುಚಿ ಅಭಿರುಚಿಗಳ ಆಸ್ವಾದನೆಗೆಂದು ಕೊಡುವ ಈ ಪರಿಮಿತ ಪರಿಚಯದ ಪಾಕವಷ್ಟರಿಂದಲೇ ಸಹೃದಯರು ಮೂಲಬರಹದ ಅಪರಿಮಿತ ರಸಪಾಕದತ್ತ ಜ್ಞಾನತೃಷ್ಣೆಯಿಂದ ಧಾವಿಸುವಂತಾದರೆ ಸಾಕು. ಪುಸ್ತಕಗಳ ಪರಿಚಯವನ್ನು ಅವು ಪ್ರಕಟವಾದ ಕಾಲಾನುಕ್ರಮದಲ್ಲೇ ಕೊಟ್ಟಿದೆ;

೧. **ಪಂಚಸುತ್ತಮ್:** ಪ್ರಾಕೃತಗ್ರಂಥ, ಕವಿ ಯಾರೆಂಬುದು ತಿಳಿಯದು; ಇದನ್ನು ಹರಿಭದ್ರನ ಸಂಸ್ಕೃತ ವ್ಯಾಖ್ಯದಿಂದ ಆಯ್ದು ಸೇರಿಸಿದ ಕೆಲವು ಭಾಗಗಳೊಡನೆ ಸಂಪಾದಿಸಿದ್ದಾರೆ. ೧೯೩೪.

೨. **ಪ್ರವಚನ ಸಾರ:** ಪ್ರಾಕೃತಗ್ರಂಥ, ಕುಂದಕುಂದಾಚಾರ್ಯರು ಇದರ ಗ್ರಂಥಕರ್ತರು. ಅಮೃತಚಂದ್ರ ಮತ್ತು ಜಯಸೇನರ ಎರಡು ಸಂಸ್ಕೃತ ವ್ಯಾಖ್ಯಾನಗಳೊಡನೆ ಪಾಂಡೇ ಹೇಮರಾಜರ ಹಿಂದೀ ಭಾಷಾನುವಾದದಿಂದ ಈ ಗ್ರಂಥವನ್ನು ಸಿದ್ಧಪಡಿಸಿದೆ. ಡೆಮ್ಮಿ ಆರುನೂರು ಪುಟದ ಈ ಪುಸ್ತಕ ಬೊಂಬಾಯಿಯ ರಾಯಚಂದ್ರ ಜೈನ ಶಾಸ್ತ್ರಮಾಲೆಯಲ್ಲಿ ೧೯೩೫ರಲ್ಲಿ ಅಚ್ಚಾಗಿದ್ದು ೧೯೬೪ರಲ್ಲಿ ಪುನರ್ಮುದ್ರಣವಾಗಿದೆ.

೩. **ಪರಮಾತ್ಮ ಪ್ರಕಾಶ:** ಅಪಭ್ರಂಶಕೃತಿ, ಯೋಗೀಂದುದೇವ ಇದರ ಲೇಖಕ. ಬ್ರಹ್ಮದೇವನ ಸಂಸ್ಕೃತ ಟೀಕಾ, ದೌಲತರಾಮನ ಹಿಂದಿ ವ್ಯಾಖ್ಯಾನ ಮತ್ತು ಯೋಗಸಾರದ ಮೂಲಪಾಠ-ಇವೆಲ್ಲ ಇದರಲ್ಲಿವೆ. ೫೩೫ ಪುಟದ ಈ ಪ್ರೌಢಕೃತಿಯ ಮೊದಲ ಮುದ್ರಣ ೧೯೩೭ರಲ್ಲೂ, ಎರಡನೆಯ ಮುದ್ರಣ ೧೯೬೦ರಲ್ಲೂ ಆಗಿದೆ.

೪. **ವರಾಂಗಚರಿತ:** ಕ್ರಿ. ಶ. ಏಳನೆಯ ಶತಮಾನಕ್ಕೆ ಸೇರಿದ ಸಂಸ್ಕೃತ ಪುರಾಣ ಕಾವ್ಯ. ಜಟಸಿಂಹನಂದಿ ಕವಿ ರಚಿತ ಕಾವ್ಯ. ಎರಡು ತಾಳೆಯೋಲೆಯ ಪ್ರತಿಗಳ ಆಧಾರಗಳ ನೆರವಿನಿಂದ ಈ ಕಾವ್ಯವನ್ನು ಮೊಟ್ಟಮೊದಲನೆಯ ಸಲ ಪ್ರಕಟಿಸಿದ್ದಾರೆ. ಐನೂರು ಪುಟ ಪ್ರಮಾಣದ ಈ ಪುಸ್ತಕದ ಮುದ್ರಣ ೧೯೩೮. ಪಾಶ್ಚಾತ್ಯ ಪೌರ್ವಾತ್ಯ ಸಾಹಿತಿಗಳು ಈ ಪುಸ್ತಕವನ್ನೂ, ಪೀಠಿಕೆಯನ್ನೂ ಪ್ರಶಂಸಿಸಿದ್ದಾರೆ.

೫. **ಕಂಸವಹೋ:** ಪ್ರಾಕೃತಪದ್ಯ, ರಾಮಪಾಣಿವಾದಕೃತ ಪ್ರಾಚೀನ ಪ್ರೌಢ ಶೈಲಿಯ ಕಾವ್ಯ. ಮೂಲ ಗ್ರಂಥದ ಪ್ರಾಕೃತ ಪದ್ಯಗಳಿಗೆ ಸಂಸ್ಕೃತ ಛಾಯೆಯೂ ಇವೆ. ಇದು ಹಿಂದೀ ಗ್ರಂಥರತ್ನಾಕರ ಕಾರ್ಯಾಲಯ, ಹೀರಾಬಾಗ್, ಮುಂಬಯಿ-೪ ಅವರ ಪ್ರಕಟನೆ, ೧೯೪೦.

೬. **ಉಷಾಣಿರುದ್ಧಮ್:** ಪ್ರಾಕೃತ ಪದ್ಯ, ರಾಮಪಾಣಿವಾದ ಕೃತವೆಂದು ನಂಬಿಕೆ. ಗ್ರಂಥಸಂಪಾದನಾ ಶಾಸ್ತ್ರ ನಿಯಮದಂತೆ ಉಪಯುಕ್ತ ಪಾಠಾಂತರಗಳೊಡನೆ ಮುಂಬಯಿ ವಿಶ್ವವಿದ್ಯಾಲಯದ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ, ೧೯೪೧.

೭. **ತಿಲೋಯಪಣ್ಣತ್ತಿ:** ಪ್ರಾಕೃತಗ್ರಂಥ, ಯತಿವೃಷಭ ರಚಿತ, ಭಾಗ-೧, ೧೯೩೪. (ಡಾ. ಹೀರಾಲಾಲ್ ಜೈನ್ ಅವರೊಡನೆ). ಜೈನ ಧರ್ಮದ ದೃಷ್ಟಿಯಲ್ಲಿ ತ್ರಿಲೋಕಾಕೃತಿಯನ್ನು ಕೊಡುವ ಕೃತಿಯಿದು.

(೨೪ ನೆಯ ಪುಟ

ದಕ್ಷಿಣ ಭಾರತದಲ್ಲಿ ಜೈನಧರ್ಮ

ಮಿರ್ಜಿ ಅಣ್ಣಾರಾಯರು

ಮೌರ್ಯ ಚಂದ್ರಗುಪ್ತನ ಸಮಯದಲ್ಲಿ ಉತ್ತರ ಭಾರತದಲ್ಲಿ ಹನ್ನೆರಡು ವರುಷಗಳ ಭಯಂಕರ ಬರಗಾಲ ಬೀಳಲು, ಜೈನಾಚಾರ್ಯನಾದ ಭದ್ರಬಾಹುವು ತನ್ನ ದೊಡ್ಡ ಸಂಘದೊಡನೆ ದಕ್ಷಿಣ ಭಾರತಕ್ಕೆ ಪ್ರಯಾಣ ಬೆಳೆಸಿದನು. ಹೀಗೆ ದೊಡ್ಡ ಸಂಘ ಸಹಿತ ಆಚಾರ್ಯನು ದಕ್ಷಿಣಕ್ಕೆ ಬರಬೇಕಾದರೆ ದಕ್ಷಿಣದಲ್ಲಿ ಬಹುಜನ ಶ್ರಾವಕರಿದ್ದು ಆ ಮೊದಲು ಜೈನ ಧರ್ಮವು ಒಳ್ಳೆ ಊರ್ಜಿತಾವಸ್ಥೆಯಲ್ಲಿ ಇರಬೇಕು ಎಂದಂತಾಯಿತು. ಭದ್ರಬಾಹುವಿಗೆ ಅಂಥ ವಿಶ್ವಾಸವಿಲ್ಲದಿದ್ದರೆ ನೇರವಾಗಿ ದಕ್ಷಿಣ ಭಾಗಕ್ಕೆ ತನ್ನ ಮುನಿಸಂಘವನ್ನು ಸಂರಕ್ಷಣೆಗಾಗಿ ತರುತ್ತಿರಲಿಲ್ಲ. ಇಲ್ಲಿ ಮುನಿಗಳನ್ನು ರಕ್ಷಿಸುವ ಜೈನಶ್ರಾವಕರು ಇದ್ದರೆಂತಲೇ ಮುನಿಸಂಘವು ಬಿಹಾರದಿಂದ ಕರ್ನಾಟಕದ ಶ್ರವಣಬೆಳ್ಗೊಳಕ್ಕೆ ಬಂತು.

ದಕ್ಷಿಣ ಭಾರತದೊಡನೆ ಜೈನಧರ್ಮಕ್ಕಿರುವ ಸಂಬಂಧವು ಬಹು ಪ್ರಾಚೀನವಾಗಿದೆ. ಪ್ರಾಗೈತಿಹಾಸಿಕ ಗ್ರಂಥಗಳಾದ ಪುರಾಣಗಳನ್ನು ಐತಿಹಾಸಿಕ ದೃಷ್ಟಿಯಿಂದ ಅಭ್ಯಸಿಸಿದರೆ ಈ ಸಂಗತಿಯು ಮನದಟ್ಟಾಗುವುದು. ಮನುಗಳಲ್ಲಿ ಸತ್ಯವ್ರತನೆಂಬುವನು ದಕ್ಷಿಣ ದೇಶದ ದ್ರಾವಿಡರ ಒಡೆಯನೆಂಬುದು ಭಾಗವತದಿಂದ ತಿಳಿದುಬರುತ್ತದೆ. ದಕ್ಷಿಣಕೋಸಲದ ಪೋತಲಿಯು ಭುಜಬಲಿಯ ರಾಜಧಾನಿಯಾಗಿತ್ತು. ಭುಜಬಲಿಯ ಅದ್ವಿತೀಯ ತಪಸ್ಸಿನ ಕುರುಹುಗಳಂತೆ ನಿಂತ ಭವ್ಯ-ಸುಂದರ ಮೂರ್ತಿಗಳು ಮೂರು ದಕ್ಷಿಣದಲ್ಲಿಯೇ ಇವೆ. ದಕ್ಷಿಣ ಭಾರತದ ಕೊಂಗು, ವೆಂಗಡ, ಶಂಕಟ, ಕರ್ಣಾಟ, ಕುಟಚಾದ್ರಿಗಳ ಮಧ್ಯದಲ್ಲಿಯೇ ಋಷಭದೇವನು ನಿರ್ವಾಣ ಹೊಂದಿದನು ಎಂದು ಭಾಗವತವು ಹೇಳುವುದು. ಜೈನಾಗಮಗಳು ಋಷಭನ ನಿರ್ವಾಣವನ್ನು 'ಕೈಲಾಸ ಪರ್ವತ'ವೆಂದು ಹೇಳುವುವು. ಶೈವರ ಶಿವನ ವಾಸಸ್ಥಾನವೂ ಕೈಲಾಸವೇ ಆಗಿದೆ. ಪುರಾತನ ಕಾಲದಿಂದಲೂ ದಕ್ಷಿಣದಲ್ಲಿಯೇ ನೆಲಸಿದ ಶೈವರ ದೇವನಾದ ಶಿವನ ಕೈಲಾಸವು ದಕ್ಷಿಣದಲ್ಲಿರುವುದೇ ಸಮಂಜಸವಾಗಿದೆ. ಜೈನ-ಶೈವ ಆಗಮಗಳು ಹೇಳುವ—ಭಾಗವತವು ನಿರ್ದೇಶಿಸುವ—ಕೈಲಾಸ ಪರ್ವತವು ದಕ್ಷಿಣ ಭಾರತದಲ್ಲಿಯೇ ಇದ್ದರೂ ಇರಬಹುದು. ಇಲ್ಲಿಂದಲೇ ಆದಿತೀರ್ಥಂಕರ ಋಷಭದೇವನು ನಿರ್ವಾಣವನ್ನೂ ಹೊಂದಿರಬಹುದು. ಆದರೆ ಆ ಮಾನವನ್ನು ದಕ್ಷಿಣ ಭಾರತಕ್ಕೆ ಎಳೆದುಕೊಳ್ಳಬೇಕೆಂಬ ಆರ್ಹತರಾಜರು ದಕ್ಷಿಣ ಕರ್ಣಾಟಕದಲ್ಲಿ ಭಾಗವತ ಪುರಾಣದ ಪೂರ್ವ ಕಾಲದಲ್ಲಿಯೇ ಇದ್ದರು, ಎಂದರೆ ನೇಮಿ-ಪಾರ್ಶ್ವನಾಥರ ಮಧ್ಯ ಕಾಲದಲ್ಲಿಯೇ ದಕ್ಷಿಣವು ಜೈನ ದೃಷ್ಟಿಯನ್ನೊಳಗೊಂಡಿತ್ತು ಎಂದಾಗುವುದು.* ದ್ವಾರಕೆಯ ನಾಶವನ್ನು ಮೊದಲೆ ತಿಳಿದುಕೊಂಡು ನೇಮಿನಾಥನು ಪಲ್ಲವದೇಶಕ್ಕೆ ಬಂದನೆಂದು ಜೈನಾಗಮಗಳು ಹೇಳುತ್ತಿವೆ. ಜೈನಧರ್ಮ ಪ್ರಸಾರದ ದೃಷ್ಟಿಯಿಂದ ದಕ್ಷಿಣ ಭಾರತವನ್ನು ತಮಿಳು ಮತ್ತು ಕರ್ನಾಟಕ ಎಂದು ಎರಡು ಭಾಗವನ್ನಾಗಿ ವಿಭಾಗಿಸಲಾಗುದು.

ತಮಿಳುಪ್ರಾಂತದಲ್ಲಿ ಜೈನಧರ್ಮ

ಭಗವಾನ್ ನೇಮಿನಾಥನು ಪಲ್ಲವದೇಶಕ್ಕೆ ಬಂದ ಸಂಗತಿಯನ್ನು ಹಿಂದೆ ಉಲ್ಲೇಖಿಸಲಾಗಿದೆ. ಆ ಪಲ್ಲವದೇಶವು ತಮಿಳುನಾಡಿನಲ್ಲಿಯೇ ಇರುವುದು. ಅದರಂತೆ ಜೈನಾಗಮಗಳು ಮೇಲಿಂದಮೇಲೆ ಉಲ್ಲೇಖಿಸುವ ದಕ್ಷಿಣ ಮಧುರೆಯೂ ತಮಿಳು ಸೀಮೆಯಲ್ಲಿಯೇ ಇದೆ. ಈ ತಮಿಳು ಪ್ರಾಂತದಲ್ಲಿ ಚೋಳ ಮತ್ತು ಪಾಂಡ್ಯ ರಾಜರು ಜೈನ ಧರ್ಮಕ್ಕೆ ಚೆನ್ನಾಗಿ ಆಶ್ರಯವಿತ್ತರು. ಸಾಮ್ರಾಟ್ ಖಾರವೇಲನ ರಾಜ್ಯಾಭಿಷೇಕದ ಕಾಲಕ್ಕೆ ಪಾಂಡ್ಯರಾಜ್ಯನು ಕೆಲವು ಹಡಗುಗಳನ್ನು ತುಂಬಿ ಅನ್ನ ಧಾನ್ಯವನ್ನು ಕಳಿಸಿದ್ದನೆಂದು ಖಾರವೇಲನ ಶಿಲಾಲೇಖದಿಂದ ತಿಳಿಯುತ್ತದೆ. ಸಾಮ್ರಾಟ್ ಖಾರವೇಲನು ಜೈನನು. ಪಾಂಡ್ಯರಾಜನೂ ಜೈನನಿದ್ದನು. ಆ ಕಾಲಕ್ಕೆ ಪಾಂಡ್ಯರ ರಾಜಧಾನಿಯಾದ ಮಧುರೆಯು ದಕ್ಷಿಣಭಾರತದಲ್ಲಿ ಜೈನರ ಕೇಂದ್ರಸ್ಥಾನವಾಗಿತ್ತು. ಈ ಪಾಂಡ್ಯರ ನಾಡಿನಲ್ಲಿಯೇ ಉತ್ತರ ಭಾರತದಲ್ಲಿ ಬರಗಾಲ ಬೀಳಲು ಎಂಟುಸಾವಿರ ಜೈನಮುನಿಗಳು ಬಂದು ನಿಂತಿದ್ದರೆಂದು ತಮಿಳು ಗ್ರಂಥವಾದ 'ನಾಲಿಡಿಯಂ' ಸಂಬಂಧದ ಕತೆಯು ಹೇಳುವುದು. ಆ ಕತೆಯಲ್ಲಿ

* ಪ್ರೊ. ಡಿ. ಆರ್. ಬೇಂದ್ರೆ "ಜಯಂತಿ" ಅಗಸ್ಟ್ ೧೯೪೮.

ಪಾಂಡ್ಯರಾಜನು ಜೈನಮುನಿಗಳು ಉತ್ತರದೇಶಕ್ಕೆ ಹೋಗುವೆನೆಂದರೂ ಒಪ್ಪಲಿಲ್ಲವೆಂಬ ಆಖ್ಯಾಯಿಕೆ ಇದೆ. ಜೈನಾಚಾರ್ಯ ಪೂಜ್ಯಪಾದನ ಶಿಷ್ಯನಾದ ವಜ್ರನಂದಿಯು ಮಧುರೆಯಲ್ಲಿ ಒಂದು ವಿಶಾಲ ಜೈನ ಸಂಘವನ್ನು ಸ್ಥಾಪಿಸಿದ್ದನು ತಮಿಳು ವೇದವೆನಿಸುವ 'ಕುರಳ್' ಗ್ರಂಥವನ್ನು ರಚಿಸಿದ ಆಚಾರ್ಯನು ಜೈನನಾಗಿದ್ದಾನೆ. ಅವನ ಹೆಸರುಗಳಲ್ಲಿ ಕುಂಟಕುಂದನೆಂಬುದೂ ಒಂದಾಗಿದೆ. ಪಲ್ಲವ ವಂಶದ ಶಿವಸ್ಕಂಧವರ್ಮ ರಾಜನು ಇವನ ಶಿಷ್ಯನಾಗಿದ್ದನು. ಕ್ರಿ. ಶ. ಹತ್ತನೆಯ ಶತಮಾನದವರೆಗೆ ಆಳಿದ ಬಲಾಢ್ಯ ಪಲ್ಲವ ಆರಸರೆಲ್ಲ ಜೈನರನ್ನು ಆದರದಿಂದ ಕಾಣುತ್ತ ಬಂದರು. ಅವರ ರಾಜಧಾನಿಯಾದ ಕಾಂಚಿಯು ಎಲ್ಲ ಧರ್ಮಗಳ ನೆಲೆವೀಡಾಗಿದ್ದಿತು. ಏಳನೆಯ ಶತಮಾನದಲ್ಲಿ ಬಂದ ಚೀನದ ಪ್ರವಾಸಿಯಾದ ಹುಯೆನ್‌-ತ್ಸಾಂಗನು ಕಾಂಚಿಯಲ್ಲಿ ತಳವೂರಿದ ಜೈನಧರ್ಮವನ್ನು ಕಂಡು, ಅದನ್ನೂ ಉಲ್ಲೇಖಿಸಿದ್ದಾನೆ. ಅದರಿಂದ ಆಗ ಕಾಂಚಿಯೂ ಜೈನರ ಮುಖ್ಯಸ್ಥಳವಾಗಿತ್ತೆಂದು ಗೊತ್ತಾಗುವುದು. ಇಲ್ಲಿ ಜೈನ ರಾಜವಂಶಗಳು ಬಹಳ ಕಾಲದವರೆಗೆ ರಾಜ್ಯವಾಳಿದ್ದುವು. ಈ ರೀತಿ ತಮಿಳು ದೇಶದ ಪ್ರತಿಯೊಂದು ಅಂಗದಲ್ಲಿ ಜೈನರು ಮುಖ್ಯ ಭಾಗ ವಹಿಸಿದ್ದರು. ದಕ್ಷಿಣದ ಕಲಾಕೌಶಲ್ಯಗಳ ಮೇಲೆ ಜೈನರ ಪ್ರಭಾವವು ತುಂಬವಾಗಿವೆ; ಆದರೆ ಅದಕ್ಕೂ ಹೆಚ್ಚು ತಮಿಳು ಸಾಹಿತ್ಯದ ಮೇಲೆ ಇವೆ, ಎಂದು ಸರ್ ವಾಲ್ಟರ್ ಇಲಿಯಟ್‌ನ ಮತವಾಗಿದೆ.* ಬಿಷಪ್ ಕಾಲ್ಡವೆಲ್ಲನು ಕೂಡ ಜೈನರ ಉನ್ನತಿಯ ಯುಗವೇ ತಮಿಳು ಸಾಹಿತ್ಯದ ಮಹಾಯುಗವೆಂದು ಹೇಳುತ್ತಾನೆ.†

ಒಂದು ಕಾಲದಲ್ಲಿ ತೆಲಗು ಮತ್ತು ತಮಿಳು ಸೀಮೆಯಿಂದ ಒಡಿಸಾದ ವರೆಗಿನ ಎಲ್ಲ ಪ್ರದೇಶದಲ್ಲಿಯೂ ಜೈನಧರ್ಮದ ಪ್ರಭಾವವು ಹೆಚ್ಚಾಗಿದ್ದಿತು. ಇಂದಿನ ವಿಶಾಖಪಟ್ಟಣ, ಕೃಷ್ಣಾ, ನೆಲ್ಲೂರು ಮೊದಲಾದ ಭಾಗಗಳಲ್ಲಿ ಪ್ರಾಚೀನ ಕಾಲದಲ್ಲಿ ಜೈನಧರ್ಮವು ವಿಶೇಷವಾಗಿ ಹಬ್ಬಿದ್ದಿತೆಂಬುದು, ಶ್ರೀ ಶೇಷಗಿರಿರಾಯರು ಸಂಗ್ರಹಿಸಿದ "Andhra Karnata Jainism" ಎಂಬ ಗ್ರಂಥದಿಂದ ತಿಳಿದುಬರುವಂತಿದೆ. ಅದರೂ ಜೈನಧರ್ಮದ ಮಹತ್ವಪೂರ್ಣ ಸ್ಥಾನವು ಕರ್ನಾಟಕ ಪ್ರಾಂತದ ಇತಿಹಾಸದಲ್ಲಿ ದೊರೆಯುತ್ತದೆ.

ಕರ್ನಾಟಕದಲ್ಲಿ ಜೈನ ಧರ್ಮ

ಹದಿನೈದನೆಯ ಶತಮಾನದ ಒಂದು ಶಾಸನದಲ್ಲಿ ಕವಿಯು ಕರ್ನಾಟಕವನ್ನು ಕುರಿತು ಹೀಗೆ ಬಣ್ಣಿಸಿದ್ದಾನೆ :—

‡ ಜಿನ ಧರ್ಮಾವಾಸವಾದತ್ತು ಮಳವಿನಯ
ದಾಗಾರವಾದತ್ತು ಪದ್ಮಾ
ಸನನಿರ್ಪಾ ಪದ್ಮಮಾದತ್ತತಿವಿಶದ
ಯಶೋಧಾಮದತ್ತುವಿದ್ಯಾ
ಧನ ಜನ್ಮಸ್ಥಾನಮಾದತ್ತಸನು ತರಳ
ಗಂಭೀರ ಸದ್ಗೇಹವಾದ
ತ್ತೆನಿಸಲ್ಕಿಂಚುಳ್ಳ ನಾನಾ ಮಹಿಮೆಯೊಳೆನಗುಂ
ಚಾರುಕರ್ಣಾಟದೇಶಂ

ಈ ವರ್ಣನೆಯು ಕವಿಕಲ್ಪಿತವಿಲ್ಲ. ಇದರಲ್ಲಿ ಎಷ್ಟೋ ಪಾಲು ಸತ್ಯವಾಗಿದೆ. ಜೈನಧರ್ಮವು ಕ್ರಿ. ಶ. ಪೂರ್ವದಿಂದಲೂ ಕರ್ನಾಕದಲ್ಲಿ ಪ್ರಚಲಿತವಿತ್ತು. ಈ ಪ್ರಾಂತವು ದಿಗಂಬರ ಸಂಪ್ರದಾಯಕ್ಕೆ ಪ್ರಾಚೀನಕಾಲದಿಂದಲೂ ಮುಖ್ಯ ಸ್ಥಾನವಾಗಿದೆ. ಶ್ರವಣಬೆಳ್ಗೊಳದ ಒಂದು ಶಾಸನದಲ್ಲಿ, ಉತ್ತರದಿಂದ ದಕ್ಷಿಣ ದೇಶಕ್ಕೆ ಸಂಘಸಹಿತ ಬಂದ ಭದ್ರಬಾಹುಸ್ವಾಮಿಗಳೂ ಅವರ ಶಿಷ್ಯನಾದ ಚಂದ್ರಗುಪ್ತ ಮೌರ್ಯನೂ ಕಟವಪ್ರ ಅಥವಾ ಕಳ್ವಪ್ಪು (ಚಂದ್ರಗಿರಿ) ಎಂಬ ಬೆಟ್ಟದಲ್ಲಿ ಸಲ್ಲೇಖನ ವ್ರತದಿಂದ ಸಮಾಧಿಯನ್ನು ಹೊಂದಿದರೆಂದು ಹೇಳಿದೆ. ಈ ಸೀಮೆಯಲ್ಲಿ ಮೌರ್ಯ ಸಾಮ್ರಾಜ್ಯದ ತರುವಾಯ ಆಂಧ್ರ ವಂಶದವರು ರಾಜ್ಯವಾಳಿದರು. ಆಂಧ್ರ ರಾಜರಿಂದಲೂ ಜೈನಧರ್ಮಕ್ಕೆ ಆಶ್ರಯವು ದೊರೆತಂತೆ ತೋರುತ್ತದೆ. ಆಂಧ್ರರ ನಂತರ ಕದಂಬರೂ ಪಲ್ಲವರೂ ಕರ್ನಾಟಕವನ್ನಾಳಿದರು. ಕದಂಬರ ಅನೇಕ ಶಿಲಾಶಾಸನಗಳು ದೊರೆತಿವೆ. ಅವುಗಳಲ್ಲಿ ಹಲವು ಜೈನರಿಗೆ ದಾನ ಕೊಟ್ಟ ಸಂಗತಿಯನ್ನು ವಿವರಿಸುತ್ತವೆ. ಈ ರಾಜವಂಶದ ಧರ್ಮವು ಜೈನವಾಗಿದ್ದಿತು. ಬನವಾಸಿಯ ಪ್ರಾಚೀನ ಕದಂಬರೂ ಚಾಲುಕ್ಯರೂ—ಪಲ್ಲವರ ನಂತರ ತುಳುವ ದೇಶದ ಮೇಲೆ ರಾಜ್ಯ ಮಾಡಿದವರು—ನಿಸ್ಸಂದೇಹವಾಗಿ ಜೈನರಿದ್ದರೆಂದ

---

* Coins of Southern India (London 1886) ಪುಟ ೩೮, ೪೦, ೧೨೬.

† "Comparative Grammer of the Dravidian or South Indian family of languages" (ಮೂರನೆಯ ಆವೃತ್ತಿ ಲಂಡನ್ ೧೯೧೩)

‡ ಶಾಸನ ಪದ್ಯಮಂಜರಿ ೨೫೦.

ಗೊತಾಗುತ್ತದೆ.* ಪ್ರಾಚೀನ ಪಲ್ಲವರೂ ಜೈನರಾಗಿರುವುದು ಸಂಭವವಿದೆ. ಕದಂಬರಂತೆ ಕರ್ನಾಟಕದ ಚಾಲುಕ್ಯರೂ ಜೈನಧರ್ಮದ ಮುಖ್ಯ ಆಶ್ರಯದಾತರಾಗಿದ್ದರು.† ಚಾಲುಕ್ಯರು ಹಲವು ಜೈನಮಂದಿರಗಳನ್ನು ಕಟ್ಟಿಸಿದರು. ಅವುಗಳ ಜೀರ್ಣೋದ್ಧಾರ ಮಾಡಿದರು, ಅವುಗಳಿಗೆ ದಾನ ದತ್ತಿಗಳನ್ನು ಕೊಟ್ಟರು.

ಗಂಗರಾಜರು ಜೈನಧರ್ಮದ ಅನುಯಾಯಿಗಳು. ಇವರು ಮೈಸೂರಿನ ಮಧ್ಯ ದಕ್ಷಿಣಭಾಗಗಳಲ್ಲಿ ತಮ್ಮ ರಾಜ್ಯವನ್ನು ಆರಂಭಿಸಿದರು. ಆದರೆ ಕರ್ನಾಟಕದ ರಾಜ್ಯವನ್ನು ಅತ್ಯುನ್ನತ ಶಿಖರಕ್ಕೇರಿಸಲು ಗಂಗರು ಕಾರಣರಾದರು. ಮೌರ್ಯದಿಂದ ಕನ್ನಡ ನಾಡಿನಲ್ಲಿ ವಿಕಾಸ ಹೊಂದುತ್ತಿರುವ ಜೈನಧರ್ಮವನ್ನು ಮುಂದುವರಿಸುವ ಕರ್ತವ್ಯ ಭಾರವು ಗಂಗರ ಮೇಲೆ ಬಿತ್ತು. ಈ ಮನೆತನದ ಸಂಬಂಧವನ್ನು ಉತ್ತರದ ಸೂರ್ಯವಂಶದೊಡನೆ ಹೇಳುವರಾದರೂ, ಗಂಗರಲ್ಲಿ ಮೊತ್ತಮೊದಲಿನ ಐತಿಹಾಸಿಕ ಪುರುಷರು ಮಾಧವ ಮತ್ತು ದಡಿಗ. ಇವರ ತಂದೆ ಪದ್ಮನಾಭ. ಇವರು ಕಡಪಾ ಜಿಲ್ಲೆಯ ಗಂಗಪೇರೂರು ಎಂಬ ಊರಿನವರು. ಜೈನಾಚಾರ್ಯನಾದ ಸಿಂಹನಂದಿಯು ಇವರ ಗುರುವು. ಮಾಧವನು, ಮೊದಲನೆಯ ಕೊಂಗುಣಿವರ್ಮ ಮಹಾರಾಜನಾಗಿ ಸುಮಾರು ಕ್ರಿ. ಶ. ೩೫೦ರಲ್ಲಿ ಆಳಿದನು. ಜೈನ ಗುರುವಾದ ಸಿಂಹನಂದಿಯ ಸಹಾಯದಿಂದ ಸ್ಥಾಪಿಸಿದ ರಾಜ್ಯವೇ ಮುಂದೆ ಗಂಗವಾಡಿ ೯೬೦೦೦ ಎಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಇದರ ರಾಜಧಾನಿಯು ಮೊದಲು ಕುವಲಾಲಪುರ (ಕೋಲಾರ) ವಾಗಿದ್ದು ಆಮೇಲೆ ನಾಲ್ಕನೆಯ ಶತಮಾನದ ಆರಂಭದಲ್ಲಿ ಕೊಂಗುಣಿವರ್ಮನ ಮೊಮ್ಮಗನಾದ ಹರಿವರ್ಮನ ಕಾಲದಲ್ಲಿ ಕಾವೇರಿ ತೀರದಲ್ಲಿರುವ ತಲಕಾಡಿಗೆ ವರ್ಗವಾಯಿತು. ಇವರೆಲ್ಲ ಜೈನಮತದ ಅರಸರಾಗಿದ್ದರು. ಈ ಮನೆತನದ ಅವಿನೀತ ಎಂಬುವನು ಕ್ರಿ. ಶ. ೪೭೫ರಲ್ಲಿ ರಾಜ್ಯವಾಳಿದನು. ಇವನು ಬಹಳ ವಿದ್ಯಾವಂತನೂ, ನ್ಯಾಯಪಕ್ಷಪಾತಿಯೂ, ಉದಾರಿಯೂ ಇದ್ದನು. ಇವನು ಜೈನನಿದ್ದರೂ ಸಹ ಹಿಂದೂ ಮತವನ್ನು ಆದರದಿಂದ ಕಾಣುತ್ತಿದ್ದನು. ಜೈನ ಪಂಡಿತ ವಿಜಯಕೀರ್ತಿಯು ಇವನ ಗುರುವಾಗಿದ್ದನು. ಜೈನ ಗುರುವಾದ ಭದ್ರವಾಹುವು ಉತ್ತರದಿಂದ ಯಾವ ಪುನ್ನಾಡಿಗೆ ಬಂದನೋ ಆ ಪುನ್ನಾಡಿನ-ಹದಿನಾಡಿನ-ದೊರೆಯಾದ ಸ್ಕಂಧವರ್ಮನ ಮಗಳನ್ನು ಈ ಅವಿನೀತನು ಮದುವೆಯಾಗಿದ್ದನು. ಅದರಿಂದ ಪುನ್ನಾಡ ದೊರೆಗಳೂ ಜೈನರಾಗಿದ್ದರೆಂಬುದನ್ನು ಇಲ್ಲಿ ಬೇರೆಯಾಗಿ ಹೇಳಬೇಕಾಗಿಲ್ಲ. ಈ ಅವಿನೀತನ ಮಗನೇ ದುರ್ವಿನೀತನು. ಈತನ ಕಾಲವು ಕ್ರಿ. ಶ. ೪೮೨. ತಂದೆಯಂತೆಯೇ ದುರ್ವಿನೀತನೂ ವಿದ್ಯಾವಂತನಾಗಿದ್ದನು. ಇವನು ಭಾರವಿಯ ಕಿರಾತಾರ್ಜುನೀಯದ ಹದಿನೈದನೆಯ ಸರ್ಗಕ್ಕೆ ವ್ಯಾಖ್ಯಾನ ಬರೆದನೆಂದು ಪ್ರತೀತಿಯಿದೆ. ಇವನ ಗುರುವು ಪ್ರಸಿದ್ಧ ಜೈನಾಚಾರ್ಯನಾದ ಪೂಜ್ಯಪಾದನಾಗಿದ್ದನು. ಗಂಗ ಮನೆತನದ ರಾಜರು ಪಲ್ಲವ, ಚೋಳ, ಚಾಲುಕ್ಯರನ್ನು ಒತ್ತಿಟ್ಟು, ಕರ್ನಾಟಕದ ರಾಜ್ಯವನ್ನು ಮುನ್ನೂರು ವರುಷಗಳವರೆಗೆ ಒಳ್ಳೇ ವೈಭವದಿಂದ ಆಳಿದರು. ತಮ್ಮ ರಾಜ್ಯದ ಒಂದು ಶಾಖೆಯನ್ನು ಕಲಿಂಗದಲ್ಲಿ (೬ನೆಯ ಶತಮಾನದಲ್ಲಿ)ಯೂ ಇನ್ನೊಂದು ಶಾಖೆಯನ್ನು ನೇಪಾಳದಲ್ಲಿ (ಕ್ರಿ. ಶ. ೮೮೯ರಲ್ಲಿ) ಯೂ ಸ್ಥಾಪಿಸಿ, ಕನ್ನಡ ನಾಡಿಗೂ ಜೈನಧರ್ಮಕ್ಕೂ ಕೀರ್ತಿಯನ್ನು ಗಳಿಸಿಕೊಟ್ಟರು. ದುರ್ವಿನೀತನ ಮಗನಾದ ಮುಷ್ಕರನ ನೆನಪಿಗಾಗಿ ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ) ದೊಳಗಿನ 'ಮೊಕ್ಕರ' ಬಸದಿಯನ್ನು ಕಟ್ಟಲಾಗಿದೆ. ಇದೇ ಮನೆತನದ ಎರಡನೆಯ ಮಾರಸಿಂಹನು ಪ್ರಸಿದ್ಧ ಜೈನನಾಗಿದ್ದನು. ಇವನ ಪ್ರತಾಪದ ವರ್ಣನೆಯನ್ನು ಶ್ರವಣಬೆಳ್ಗೊಳ ಶಿಲಾಲೇಖ ನಂ. ೩೮ರಲ್ಲಿ (ಸಂ. ೮೬೬) ಮಾಡಲಾಗಿದೆ. ಇವನು ಚೇರ, ಚೋಳ, ಪಾಂಡ್ಯರಾಜರನ್ನು ಪೂರ್ಣವಾಗಿ ಸೋಲಿಸಿದ್ದನೆಂದು ಪ್ರಸಿದ್ಧವಾಗಿದೆ. ಈತನು ಜೈನಸಿದ್ಧಾಂತದ ನಿಜವಾದ ಅನುಯಾಯಿಯು. ಅದರಿಂದ ಇವನು ಒಳ್ಳೇ ವೈಭವದಂದ ರಾಜ್ಯವಾಳಿ ಕೊನೆಗೆ ರಾಜ್ಯಪದವನ್ನು ಬಿಟ್ಟು, ಜೈನಾಚಾರ್ಯನಾದ ಅಜಿತಸೇನ ಗುರುವಿನ ಹತ್ತಿರ ಹೋಗಿ ಜಿನದೀಕ್ಷೆಯನ್ನು ತಕ್ಕೊಂಡನು. ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿ ಕ್ರಿ. ಶ. ೯೭೫ರಲ್ಲಿ ಸಲ್ಲೇಖನವ್ರತದಿಂದ ಪ್ರಾಣತ್ಯಾಗ ಮಾಡಿದನು.

ಈ ಮಾರಸಿಂಹನಿಗೆ ಚಾವುಂಡರಾಯನೆಂಬ ಪ್ರಸಿದ್ಧ ಮಂತ್ರಿಯಿದ್ದನು. ಮಾರಸಿಂಹನ ಅನಂತರ ಅವನ ಮಗ

---

* Early Kadambas of Banvasi and chalu-kyas,who succeeded pallavas as over-lords of Tulu a were undoutedly Jains and it is probable that early pallavas are the same"

—ಎಪಿಗ್ರಾಫೀ ರಿಪೋರ್ಟ್ ೧೯೨೨-೨೩.

† ಸ್ಮಿಥ್-ಅರ್ಲಿ ಹಿಸ್ಟ್ರೀ ಆಫ್ ಇಂಡಿಯಾ, ಪುಟ ೪೪೪.

ನಾದ ರಾಜಮಲ್ಲನ ಮಂತ್ರಿಯೂ ಸೇನಾಪತಿಯೂ ಆಗಿ ಚಾಮುಂಡರಾಯನು ಕೆಲಸ ಮಾಡಿದನು. ಈ ಸೇನಾಪತಿಯ ಶೌರ್ಯದಿಂದಲೇ ಗಂಗರಿಗೆ ಅನೇಕ ವಿಜಯಗಳು ಅಂದು ಪ್ರಾಪ್ತವಾದುವು. ಶ್ರವಣಬೆಳ್ಗೊಳದ ಒಂದು ಶಿಲಾಲೇಖದಲ್ಲಿ ಚಾಮುಂಡರಾಯನನ್ನು ಬಹಳ ಕೊಂಡಾಡಲಾಗಿದೆ. ಅವನಿಗೆ ಸಮರ ಧುರಂಧರ, ವೀರಮಾರ್ತಾಂಡ, ರಣರಂಗಸಿಂಹ, ತ್ರಿಭುವನವೀರ, ವೈರಿಕುಲಕಾಲದಂಡ, ಸತ್ಯಯುಧಿಷ್ಠಿರ, ಸುಭಟಚೂಡಾಮಣಿ—ಇತ್ಯಾದಿ ಪದವಿಗಳಿದ್ದುವು. ಇವು ಚಾಮುಂಡರಾಯನ ಶೌರ್ಯ, ಧಾರ್ಮಿಕತೆಗಳಿಗೆ ಪ್ರತೀಕವಾಗಿವೆ. ಇವನಿಗೆ ಮನೆಯಲ್ಲಿ ಹಿರಿಯರು ಪ್ರೀತಿಯಿಂದ ಗೊಮ್ಮಟನೆಂದು ಕರೆಯುತ್ತಿದ್ದರು. ಅದರಿಂದ ಶ್ರವಣಬೆಳ್ಗೊಳದ ವಿಂಧ್ಯಗಿರಿಯ ಮೇಲೆ ಇವನು ಸ್ಥಾಪಿಸಿದ ಬಾಹುಬಲಿಯ ಲೋಕೋತ್ತರ ಮೂರ್ತಿಗೆ "ಗೋಮಟೇಶ್ವರ" ಎಂದು ಹೆಸರಾಯಿತು. ಇವನಿಗಾಗಿ ಇವನ ಗುರುವಾದ ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರು ಸಂಗ್ರಹಿಸಿದ ಜೈನ ತತ್ವಜ್ಞಾನದ ಗ್ರಂಥಕ್ಕೆ "ಗೊಮ್ಮಟಸಾರ" ಎಂದು ಹೆಸರಿಟ್ಟರು. ಹೀಗೆ ಚಾಮುಂಡರಾಯನು ಆ ಕಾಲದ ರಾಜಕೀಯ ಧಾರ್ಮಿಕ ಕಾರ್ಯಗಳಿಗೆಲ್ಲ ನೇತೃವಾಗಿದ್ದನು, ಗಂಗರಾಜ್ಯವು ಉನ್ನತಿಗೇರಲು ಸತತ ಪ್ರಯತ್ನಿಸುತ್ತಿದ್ದನು. ಮುಪ್ಪಿನ ಕಾಲದಲ್ಲಂತೂ ಇವನ ಜೀವನವು ಕೇವಲ ಜೈನಧರ್ಮದ ಸೇವೆಗೆಂದೇ ಮೀಸಲಾಗಿದ್ದಿತು. ಇವನು ಕನ್ನಡದಲ್ಲಿ "ತ್ರಿಷಷ್ಠಿ ಲಕ್ಷಣ" ಮಹಾಪುರಾಣವನ್ನು ಬರೆದನು. ಅದಕ್ಕೆ "ಚಾಮುಂಡರಾಯ ಪುರಾಣ"ವೆಂದೂ ಹೆಸರಿದೆ. ಸಂಸ್ಕೃತದಲ್ಲಿ ಇವನು "ಚಾರಿತ್ರಸಾರ"ವೆಂಬ ಗ್ರಂಥವನ್ನು ಬರೆದಿದ್ದಾನೆ. ಈತನಿಂದ ಜೈನಸಾಹಿತ್ಯ—ಸಂಸ್ಕೃತಿಗಳ ವಿಕಾಸಕ್ಕೆ ತುಂಬ ನೆರವಾಯಿತು. ಈ ಗೊಮ್ಮಟರಾಯ –ಚಾಮುಂಡರಾಯ–ನ ವ್ಯಕ್ತಿತ್ವವು ಶ್ರವಣಬೆಳ್ಗೊಳದ ಗೊಮ್ಮಟ ಮೂರ್ತಿಗಿಂತಲೂ ಉನ್ನತವಾಗಿತ್ತು. ಎಂತಲೇ ಅವನು ಮಾಡಿದ ಕಾರ್ಯಗಳು ಜೈನಧರ್ಮವು ಇರುವವರೆಗೂ ಇರುವಂತಹವಿದೆ. ಇಷ್ಟೇ ಅಲ್ಲ, ಧರ್ಮದ ವಿಕಾಸಕ್ಕೆ ನೆರವಾಗುವಂತೆಯೂ ಇವೆ.

ಕನ್ನಡನಾಡನ್ನಾಳಿದ ಹೊಯ್ಸಳ ಅರಸರೂ ಕೂಡ ಜೈನಧರ್ಮವನ್ನು ಪೋಷಿಸಿದರು. ಈ ಮನೆತನದ ಬಲ್ಲಾಳ ರಾಜನನ್ನು ಒಂದು ಅಸಾಧ್ಯ ರೋಗದಿಂದ ಚಾರುಕೀರ್ತಿ ಎಂಬ ಜೈನ ಆಚಾರ್ಯರು ಉಳಿಸಿದರು. ಅದರಿಂದ ಚಾರುಕೀರ್ತಿಗೆ "ಬಲ್ಲಾಳ ಜೀವರಕ್ಷಕ" ಎಂಬ ಪದವಿಯನ್ನು ಕೊಡಲಾಗಿತ್ತೆಂದು ಶ್ರವಣಬೆಳ್ಗೊಳದ ಒಂದು ಶಿಲಾಲೇಖದಿಂದ ತಿಳಿಯುತ್ತದೆ. ಈ ಬಲ್ಲಾಳ ಭೂಪನು ಮರಿಯಣ್ಣ ದಂಡನಾಯಕನ ಮೂರು ಮಂದಿ ಹೆಣ್ಣುಮಕ್ಕಳನ್ನು ಒಂದೇಕಾಲಕ್ಕೆ ವಿವಾಹವಾದನು. ಈ ಮರಿಯಣ್ಣನು ಶುಭಚಂದ್ರಾಚಾರ್ಯನ ನೇತೃತ್ವದಲ್ಲಿ ಬೆಳಗೆರೆ ಪಟ್ಟಣದಲ್ಲಿ ಕಟ್ಟಿಸಿದ ನವೀನ ಜಿನಮಂದಿರದಲ್ಲಿ ಪಂಚಕಲ್ಯಾಣಿಕ ಮಹೋತ್ಸವವನ್ನು ನೆರವೇರಿಸಿದರು. ಮುಂದೆ ಆಳಿದ ಬಿಟ್ಟಿದೇವನಿಗೆ ಗಂಗರಾಜನು ಪ್ರಧಾನ ಮಂತ್ರಿಯೂ ಮುಖ್ಯ ಸೇನಾಪತಿಯೂ ಆಗಿದ್ದನು. ಈ ಗಂಗರಾಜನು ಜೈನನಾಗಿದ್ದನು. ಶುಭಚಂದ್ರ ಸಿದ್ಧಾಂತದೇವನ ಶಿಷ್ಯನಾಗಿದ್ದನು. ಈತನು ತನ್ನ ತಾಯಿಯ ಸ್ಮರಣಾರ್ಥವಾಗಿ ಶ್ರವಣಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು. ಅದಕ್ಕೆ "ಕತ್ತಲೆ ಬಸದಿ" ಎಂದು ಹೆಸರಿದೆ.

ಉತ್ತಮ ಹುಲ್ಲನು ಹೊಯ್ಸಳರಾಜರ ಕೋಶಾಧಿಕಾರಿಯು. ಇವನು ಮಲಧಾರಿ ಸ್ವಾಮಿಯ ಶಿಷ್ಯನು. ಆ ಕಾಲದಲ್ಲಿ ಜೈನಸಮಾಜದಲ್ಲಿ ಪ್ರಸಿದ್ಧವಾದ ಮನೆತನವಿದು. ಇವನು ಶ್ರವಣಬೆಳ್ಗೊಳದಲ್ಲಿ ಚತುರ್ವಿಂಶತಿ ಜಿನಮಂದಿರವನ್ನು ನಿರ್ಮಿಸಿದನು. ಆ ಜಿನಮಂದಿರಕ್ಕೆ ನರಸಿಂಹರಾಜನು "ಭದ್ರಚೂಡಾಮಣಿ" ಎಂದು ಹೆಸರಿಟ್ಟನು. ಹೀಗೆ ಹೊಯ್ಸಳ ರಾಜ್ಯವೂ ಕರ್ನಾಟಕದಲ್ಲಿ ಜೈನಧರ್ಮದ ಆಧಾರಸ್ತಂಭವಾಗಿತ್ತು.

ಕರ್ನಾಟಕವನ್ನು ಕ್ರಿ. ಶ. ೭೫೦ರಿಂದ ೯೭೩ರ ವರೆಗೆ ಆಳಿದ ಮಾನ್ಯಖೇಟದ ರಾಷ್ಟ್ರಕೂಟರ ಮನೆತನವು ಜೈನಧರ್ಮದ ಇತಿಹಾಸಕ್ಕೊಂದು ಕಳೆಯನ್ನು ತಂದುಕೊಟ್ಟಿತು. ಈ ಮನೆತನದ ಮೊದಲನೆಯ ಅಮೋಘವರ್ಷನು ಜೈನ ಧರ್ಮಿಯಾಗಿದ್ದನು. ಈ ಅಮೋಘವರ್ಷನಿಗೆ ನೃಪತುಂಗ, ಅತಿಶಯ ಧವಳ ಮೊದಲಾದ ಬಿರುದುಗಳಿದ್ದುವು. ಇವನು ಭಗವದ್ ಜಿನಸೇನಾಚಾರ್ಯರ ಶಿಷ್ಯನಾಗಿದ್ದನು. ರಾಷ್ಟ್ರಕೂಟರ ಸಾಮಂತದಲ್ಲಿಯೂ ಅನೇಕ ಜನರು ಜೈನರಿದ್ದರು.

ಇವರಂತೆಯೇ ಚಾಲುಕ್ಯ ರಾಜರಿಂದಲೂ ಕರ್ನಾಟಕದಲ್ಲಿ ಜೈನಧರ್ಮದ ಏಳಿಗೆಗೆ ತುಂಬ ಸಹಾಯವು ಒದಗಿದೆ. ಕಲಚೂರಿಯಲ್ಲಂತೂ ಜೈನರಿದ್ದರೆಂದು ಪ್ರೊ. ರಾಮಸ್ವಾಮಿ ಅಯ್ಯಂಗಾರರು ಸಿದ್ಧಮಾಡಿದ್ದಾರೆ. ವಿಜಯನಗರ ರಾಜ್ಯದಲ್ಲಂತೂ ಮಲ್ಲಪ್ಪ, ಬೈಚಪ್ಪ, ಇರುಗುಪ್ಪ ಮೊದಲಾದ ಜೈನವೀರರು ನಾಡಿನ ಸೇವೆಯನ್ನು ಸಲ್ಲಿಸಿದರು. ಇದೇ ಸುಮಾರಿಗೆ ಮುಂಡಪ್ಪ ದಂಡನಾಯಕನ ಆಶ್ರಯದಲ್ಲಿದ್ದ ಮಧುರ ಕವಿಯು ಧರ್ಮನಾಥ ತೀರ್ಥಂಕರ ಪುರಾಣವನ್ನು ರಚಿಸಿದನು.

ಕನ್ನಡನಾಡಿನ ವಿವಿಧ ಭಾಗಗಳಲ್ಲಿ ಆಳುತ್ತಿದ್ದ ಸಾಮಂತರಾಜರಲ್ಲಿ ಶೇನವಾರರೂ, ಸಾಳುವರೂ, ಚಂಗಾಳ್ವರೂ, ಕೊಂಗಾಳ್ವರೂ, ಶಾಂತರಸರೂ ಮೊದಲಾದವರು ಜೈನರಾಗಿದ್ದರು. ಈ ಶಾಂತರಸರ ಮನೆತನದಲ್ಲಿ ಕಾರ್ಕಳದ ಗೊಮ್ಮಟ ಮೂರ್ತಿಯನ್ನೂ ವೇಣೂರಿನ ಗೊಮ್ಮಟ ಮೂರ್ತಿಯನ್ನೂ ಸ್ಥಾಪಿಸಿದ ಅರಸರು ಆಗಿ ಹೋದರು. ಸುಮಾರು ಒಂದು ಸಾವಿರ ವರುಷಗಳವರೆಗೆ ಶಾಂತರಸರು ಜೈನಧರ್ಮಕ್ಕೆ ಆಶ್ರಯವನ್ನು ಕೊಟ್ಟರು. ಇವರ ಆಶ್ರಯದಲ್ಲಿ ಅನೇಕ ಜೈನ ಕವಿಗಳು ಪ್ರಸಿದ್ಧಿಗೆ ಬಂದರು. ಜೈನ ಸಾಹಿತ್ಯಸಂಸ್ಕೃತಿಗಳು ಉನ್ನತಿಯನ್ನು ಹೊಂದಿದವು. ಕನ್ನಡ ಅರಸರ ಕವಿಯಲ್ಲಿ ಸಿಂಹನಂದಿ ಆಚಾರ್ಯರು ಗಂಗವಂಶದ ಸ್ಥಾಪಕನಾದ ಮಾಧವನಿಗೆ ಉಪದೇಶಿಸಿದ —"ಕೊಟ್ಟ ಮಾತನ್ನು ಮುರಿಯದಿರು, ಮದ್ಯ ಮಾಂಸ ಸೇವಿಸದಿರು, ಹೆರವರ ಹೆಣ್ಣಿಗೆ ಮನಸೋಲದಿರು, ಕೀಳು ತನಕ್ಕೆ ಇಳಿಯಬೇಡ, ದೀನರಕ್ಷಕನಾಗು, ಕಾಳಗದಲ್ಲಿ ಕಾಲ್ತೆಗೆಯದಿರು, ಜೈನಧರ್ಮವನ್ನು ಬಿಡಬೇಡ. ಇದಕ್ಕೆ ತಪ್ಪಿದರೆ ನಿನ್ನ ಕುಲವು ಹಾಳಾಗುವುದು ನಿಶ್ಚಿತ. ಈ ಮಾತುಗಳು ಎಲ್ಲಿಯವರೆಗೆ ಕನ್ನಡ ಅರಸರ ಮನದಲ್ಲಿ ಪ್ರತಿಧ್ವನಿಗೈಯ್ಯುತ್ತಿದ್ದವೋ ಅಲ್ಲಿಯವರೆಗೆ ಅವರು ಉನ್ನತಿಯ ಶಿಖರದಲ್ಲಿ ಮೆರೆಯುತ್ತಿದ್ದರು.

ನುಡಿದುದನಾರೊಳಂ ನುಡಿದು ತೆಪ್ಪಿದೊಡಂ ಜಿನಶಾನನಕ್ಕೊಡಂ
ಬಡದೊಡಮಾನ್ಯನಾರಿಗೆರೆದಟ್ಟಿದೊಡಂ ಮಧುಮಾಂಸ ಸೇವೆಗೆ
ಯ್ದೊಡಮಕುಲೀನರಪ್ಪವರ ಕೊಳ್ಕೊಡೆಯಾದೊಡ
ಮರ್ಥಿಗರ್ಥಮಂ
ತುಡದೊಡಮಾಹವಾಂಗಣದೊಳಗಣದೊಳೋಡಿದೊಡಂ
ರೆಡುಗುಂ ಕುಲವ್ರಂತ

ನಮನ

ಯಾವ ಜೀವಿಯ ಭವ್ಯ ಭಾವನೆಯೋ
ಮೂರ್ತಿಗೊಂಡಿಹುದಿಲ್ಲಿ
ದಿವ್ಯರೂಪವ ಕಂಡಂಥ ಹೃದಯ ತಾ
ಭವ್ಯವಾಗುವಂದದಲ್ಲಿ

ಮುಗುಳು ನಗೆಯ ಅರ್ಥವದೇನೋ
ಗುಂಗುರುಗುರುಳು, ನಿಲಿಂಪ ದೃಷ್ಟಿಯ ಅಂತರ್ಯವೇನೋ
ಜಗದ ಜನ ಮಾಯೆಯಲ್ಲಿ ಸಿಲುಕಿಹರೆನುತ
ಮುಗುಳು ನಗೆಯ ಚಲುತಿಹೆ-ಜಿನನಾಥ

ಸುರನರೋರಗ ಸೇವಿತ ಪಾವನ ಮಸ್ತಕ
ಯಕ್ಷ ಕಿನ್ನರ ಕಿಂಪುರುಷ ಪೂಜಿತ ಪಾದಪಂಕಜ
ಸೃಷ್ಟಿದೇವಿ ತನ್ನ ಬೆಡಗ ನಿಟ್ಟಿಪ ಮಣಿದರ್ಪಣವೊ
ನಿನ್ನ ವದನಾರವಿಂದ–ಜಿನನಾಥ

ನಿನ್ನ ಜೀವಿತಕೆ ತಕ್ಕ ಸಾಕ್ಷಿ ಈ ಶಿಲ್ಪ
ಕೇವಲಿ ನೀನಾಗಿರೆ ಆ ಭವ್ಯತೆಯ
ಸಾಕ್ಷಾತ್ಕಾರವೆ ಈ ಶಿಲ್ಪ ಕಾವ್ಯವಾಗಿರಲು
ಯಾವುದನು, ಏನೆಂದು ಬಣ್ಣಿಸಲಿ–ಜಿನನಾಥ

ನಿನ್ನ ಬಾಳನರಿತು ಬುದ್ಧಿಭಾವ ಶುದ್ಧಿಯಲಿ
ನಿನ್ನಲ್ಲೇ ಐಕ್ಯಗೊಂಡಿಹ ಅವ್ಯಕ್ತ ಶಿಲ್ಪಿಗಿದೋ
ನನ್ನ ನಮನವಿದೆ–ಹೃದಯ ಸಂಪದವೆಲ್ಲ
ಅವನ ಪದತಲದಲಿಟ್ಟು ನಮಿಸುವೆ–ಜಿನನಾಥ

ಮಧುರ

ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ

ಕೆ. ವೆಂಕಟರಾಯಾಚಾರ್ಯ

ಕನ್ನಡದಲ್ಲಿ ಸಾಹಿತ್ಯ ಗ್ರಂಥಗಳನ್ನು ಮೊದಲಾಗಿ ರಚಿಸಿದವರು ಯಾರು ಎಂಬೀ ವಿಷಯ ನಿರ್ಧಾರಿತವಾಗಿಲ್ಲ, ಚರ್ಚಾಸ್ಪದವಾಗಿದೆ. ಕ್ರಿ. ಪೂ. ಮೂರನೆಯ ಶತಕದಲ್ಲಿದ್ದ ಅಶೋಕ ಮಹಾರಾಜನು ಬೌದ್ಧಮತ ಪ್ರಸಾರಕ್ಕಾಗಿ ಬನವಾಸಿ, ಮಹಿಷಮಂಡಲ (ಮೈಸೂರು) ಗಳಿಗೆ ಬೌದ್ಧ ಸನ್ಯಾಸಿಗಳನ್ನು ಕಳುಹಿಸಿದನೆಂದು ಗ್ರಂಥಾಂತರಗಳಿಂದ ತಿಳಿಯುತ್ತದೆ. ಆದರೆ ಅವರು ಹಾಗೂ ಅವರ ಅನುಯಾಯಿಗಳು ಆಗಲೆ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿದ್ದರೆಂದು ದೃಢವಾಗಿ ಹೇಳಲು ತಕ್ಕ ಆಧಾರಗಳಿಲ್ಲ, ಇದುವರೆಗೆ ದೊರೆತಿಲ್ಲ. ಅಶೋಕನ ಶಿಲಾ ಶಾಸನಗಳಾದರೋ ಕನ್ನಡ (ದೇಶ)ದಲ್ಲಿ ದೊರಕಿದ್ದರೂ, ಕನ್ನಡ ಭಾಷೆಯಲ್ಲಿಲ್ಲ; ಪ್ರಾಕೃತಭಾಷೆಯಲ್ಲಿವೆ. ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನ ಕಾಲದಲ್ಲಿ ಕನ್ನಡದ ಶ್ರವಣಬೆಳುಗೊಳಕ್ಕೆ ವಲಸೆ ಬಂದಿರುವ ಭದ್ರಬಾಹುವಿನ ಕಾಲದಿಂದ ಜೈನಮತ ಕನ್ನಡದಲ್ಲಿ ಹರಡಲು ತೊಡಗಿತ್ತೆಂದು ಐತಿಹಾಸಿಕಾಧಾರಗಳಿಂದ ತಿಳಿಯಬರುತ್ತದೆ. (ಪ್ರಾಗೈತಿಹಾಸಿಕ ಗ್ರಂಥಗಳಲ್ಲಿ ತತ್ಪೂರ್ವಕಾಲೀನ ಮಹಾ ಪುರುಷರ ವಿಚಾರಗಳಿದ್ದರೂ, ಅವುಗಳ ಸಂಪೂರ್ಣ ವಿವರಣ ಖಚಿತವಾಗಿಲ್ಲ) ಅದುಕ್ಕಾರಣ, ಸಂಸ್ಕೃತದಲ್ಲಿ ಹಾಗೂ ಪ್ರಾಕೃತದಲ್ಲಿ ಇದ್ದಂತೆ ಕನ್ನಡ ಭಾಷೆಯಲ್ಲೂ ಮೊತ್ತ ಮೊದಲಾಗಿ ಜೈನಮತೀಯ ಸಾಹಿತ್ಯ ಗ್ರಂಥಗಳೇ ಬರೆಯ ತೊಡಗಿದುವೆನ್ನಬಹುದು. ಈ ಬಗ್ಗೆ ಬಲ್ಲವರು ಸಾಕಷ್ಟು ವಿವೇಚಿಸಿ ಬರೆಯಬೇಕಾಗಿದೆ; ಅದನ್ನು ಅವರ ಪಾಲಿಗೆ ಬಿಟ್ಟು ಇದೀಗ 'ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ' ಎಂಬ ಚಿಕ್ಕ ಪರಿಚಯಾತ್ಮಕ ಲೇಖನಕ್ಕೆ ತೊಡಗಿದೆ.

ಕನ್ನಡದ ಜೈನಗ್ರಂಥಗಳಲ್ಲಿ–ಪೂರ್ಣವಾಗಿ ದೊರೆತವುಗಳಲ್ಲಿ ಕವಿರಾಜಮಾರ್ಗವೇ ಮೊದಲ ಹೊತ್ತಗೆಯೆಂದು ಅನೇಕ ವಿದ್ವಾಂಸರ ಆಶಯವಿದೆ. ಈ ಕವಿರಾಜಮಾರ್ಗವನ್ನು ರಾಷ್ಟ್ರಕೂಟ ಮನೆತನದ ಅಮೋಘವರ್ಷ–ನೃಪತುಂಗನ ಸಭಾಸದನಾದ ಶ್ರೀವಿಜಯ ಹಾಗೂ ಜಯಾಳ್ವನೆಂಬ ಹೆಸರಿನ ಮಹಾಕವಿ ರಚಿಸಿರಬೇಕೆಂದು ಹೇಳುತ್ತಾರೆ (ಶ್ರೀ ಮುಳಿಯ ತಿಮ್ಮಪ್ಪಯ್ಯ: ಕವಿರಾಜಮಾರ್ಗ ವಿವೇಕ, ಡಾ. ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ). 'ಶ್ರೀ ವಿಜಯರ ಕವಿಮಾರ್ಗಂ' ಎಂಬ ದುರ್ಗಸಿಂಹನ ಮಾತು ಹಾಗೂ ಇತರ ವಾಕ್ಯಗಳಿಂದ ಶ್ರೀ–ವಿಜಯರೆಂಬ ಈರ್ವರು ಜತೆಯಾಗಿ ಇದನ್ನು ರಚಿಸಿರಬೇಕೆಂದು ಊಹಿಸಲೆಡೆಯಿದೆ. (ಶ್ರೀ ಕೆ. ವೆಂಕಟರಾಯಾಚಾರ್ಯ: ಸಾಹಿತ್ಯದ ಹಿನ್ನೆಲೆ) "ಈತನು ಮತದಲ್ಲಿ ಜೈನನಾಗಿದ್ದರೂ, ಸಾಮಾನ್ಯವಾಗಿ ನೃಪತುಂಗನಂತೆ 'ಉದಾರ ಮತ' ನೇ ಆಗಿದ್ದನೆಂದು ತೋರುತ್ತದೆ." ಈ ಗ್ರಂಥದಲ್ಲಿ ರಾಮಾಯಣ ಕಥೆಯ ಪದ್ಯಗಳಲ್ಲಿ ಮುಖ್ಯವಾಗಿ ಎರಡು (೨–೯೩, ೧೩೦))–'ಲಕ್ಷ್ಮೀಧರ' (ಲಕ್ಷ್ಮಣ), 'ತಾರಾದಿವಿಜಯೋದಯಾ' ಎಂಬ ಪ್ರಯೋಗಗಳಿಂದ ಜೈನಸಂಪ್ರದಾಯದವುಗಳೆಂದು ತೋರುವುವು. ತತ್ಪೂರ್ವಕ ಕನ್ನಡದಲ್ಲಿ ಜೈನ ರೀತಿಯ ರಾಮಾಯಣ ಕೃತಿಗಳಿದ್ದುವೆಂದು ಇದರಿಂದ ತಿಳಿಯಬರುತ್ತವೆ. ಇದರಲ್ಲಿ ಹಲವು ಇತರ ಕೃತಿಗಳ ಉದಾಹರಣಗಳೂ ಇವೆ. ಅಂತೆಯೆ, ಕನ್ನಡದ ವಿಸ್ತಾರವು 'ಕಾವೇರಿಯಿಂದಮಾ ಗೋದಾವರಿವರಮಿರ್ದ' ಕನ್ನಡವೆಂದುದು ಗಮನೀಯವು. ನೃಪತುಂಗನ ತಂದೆಯ ಕಾಲಕ್ಕೇ ಅಷ್ಟು ವಿಸ್ತಾರವಾಗಿತ್ತೆಂದು ಇತರ ಆಧಾರಗಳಿಂದಲೂ ವಿದ್ವಾಂಸರು ವಿವರಿಸುತ್ತಾರೆ. (ಶ್ರೀ. ಶಂ. ಬಾ. ಜೋಶಿ: ಹಾಲುಮತ ದರ್ಶನ). ಕನ್ನಡ ಸಾಹಿತ್ಯದ ವ್ಯಾಕರಣ, ಛಂದಸ್ಸು, ಅಲಂಕಾರಗಳಲ್ಲದೆ ಜನರ ಆಚಾರ ವಿಚಾರಗಳ ವಿವರಣದಿಂದಲೂ ಈ ಗ್ರಂಥಕ್ಕೆ ಅಗ್ರಸ್ಥಾನವಿದೆ!

ಇತ್ತೀಚೆಗೆ ಪ್ರಕಟವಾದ 'ಸಿರಿಭೂವಲಯ' ವು ಈಯೆಡೆಯಲ್ಲಿ ಸ್ಮರಿಸತಕ್ಕುದು. 'ಭಾರತೀಯ ಸಂಸ್ಕೃತಿಗೆ ಅಲ್ಲದೆ ವಿಶ್ವ ಸಂಸ್ಕೃತಿಗೂ ಈ ಗ್ರಂಥ ಪರಮೋಪಕಾರ ಮಾಡುತ್ತದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು' ಎಂದು ವಿದ್ವಾಂಸರೊಬ್ಬರು ಬರೆದಿದ್ದಾರೆ. ಈ ಕವಿಯ ಮಾತಿನಂತೆ ಮೂಲಭಾಷೆ 'ಕರ್ಮಾಟ'. ಈ ಹೆಸರು ತೀರಾ ಹೊಸತು. ಇದರ ಮೂಲ ಅರ್ಥ ಪ್ರಯೋಗಾಂತರಗಳು ಸಂಶೋಧನೀಯಗಳಾಗಿವೆ. ಈ ಗ್ರಂಥ ಮತ್ತು ಇದರ ಭಾಷೆ, ಹಾಗೂ ಲೇಖನ ರೂಪ ಮತ್ತು ವಿಷಯಾಂತರಗಳ ಉದಾಹರಣಗಳ ಸಾಧುತ್ವವು ಇನ್ನೂ ಹೆಚ್ಚು ತಿಳಿಯುವಂತೆ ತಿಳಿಸಬೇಕಾಗಿದೆ. ಇಂತಹ ಪ್ರಾಚೀ

ಗ್ರಂಥಗಳ ಪ್ರಕಟನೆಯಿಂದ ಹೆಚ್ಚಿನ ವಿಚಾರಗಳು ತಿಳಿಯುತ್ತವೆಂಬುದಕ್ಕೆ ಸಂದೇಹವಿಲ್ಲ. (ಇದರ ಕಾಲವಿಚಾರದಲ್ಲಿ ಅದೊಂದು ಲೇಖನ ಪ್ರಕಟವಾಗಿದೆ—ಶ್ರೀ ಎಸ್. ಶ್ರೀಕಂಠಶಾಸ್ತ್ರಿ: ಅಭಿವಂದನೆ. ಪುಟ ೫೬೨).

ಇನ್ನು ಹೇಳಬಹುದಾದ ಗ್ರಂಥವೆಂದರೆ 'ವಡ್ಡಾರಾಧನೆ'. ಧಾರ್ಮಿಕ ತತ್ತ್ವಗಳನ್ನು ಅಳವಡಿಸಿದ ಜೈನ ಕತೆಗಳ ಸಂಗ್ರಹವಿದು. ಗದ್ಯಶೈಲಿಯಲ್ಲಿ ಕನ್ನಡದ ವಿಶಿಷ್ಟ ಕೃತಿಯಿದು. 'ಕನ್ನಡ ದೇಸಿಗೆ ವಿಶೇಷವಾದ ರೀತಿಯಲ್ಲಿ ಪ್ರಾಧಾನ್ಯವನ್ನು ಕೊಟ್ಟು, ಆದರೂ ಸಂಸ್ಕೃತವನ್ನು ತ್ಯಾಗಮಾಡದ ಒಂದು ಸಮನ್ವಯ' ಪ್ರಯೋಗ ಇದರಲ್ಲಿದೆ. ಅಲ್ಲಲ್ಲಿ ಪ್ರಾಕೃತಭಾಷೆಯ ಶ್ಲೋಕಾದಿಗಳಿವೆ. ಇದರಲ್ಲಿ ಕಥನದ ಕಲೆಗಾರಿಕೆಯೂ ಹೊಸತಿದೆ. ಒಟ್ಟಾರೆ, "ಕನ್ನಡದ ಸಾಹಿತ್ಯ ಚರಿತ್ರೆಯಲ್ಲೆ ಚಿರಂತನವಾಗಿ ನೆನೆಯತಕ್ಕ ವೈಶಿಷ್ಟ್ಯಪೂರ್ಣವಾದ ಕೃತಿಯಾಗಿದೆ." ಇದರ ಕವಿಯು ಯಾವ ನೆಲೆಯವನೆಂದು ವಿಚಾರಣೀಯವು. ಈ ಬಗೆಗೆ ಶ್ರೀ ಕೆ. ಜಿ. ಕುಂದಣಗಾರರು ಬರೆದುದು ಹೀಗಿದೆ: "ಈ ಎಲ್ಲ ಆಧಾರಗಳಿಂದ ವಡ್ಡಾರಾಧನೆಕಾರನು ದಕ್ಷಿಣ ಕನ್ನಡ ಜಿಲ್ಲೆಯವನಾಗಿ ಕೆಲವು ಕಾಲ ಮಲೆನಾಡು ಪ್ರದೇಶದಲ್ಲಿ ವಾಸವಾಗಿರಬಹುದು ಅಥವಾ ಮಲೆನಾಡು ಪ್ರದೇಶದವನಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕಾಲ ವಾಸವಾಗಿರಬಹುದು." (ಉಪಾಯನ: ಪುಟ ೪೭).

ಅಸಗನ ಹಲವು ಧಾರ್ಮಿಕ ಗ್ರಂಥಗಳು ಸಂಸ್ಕೃತದಲ್ಲಿವೆ. ಕನ್ನಡದಲ್ಲಿ ಇವನ 'ಕುಮಾರ ಸಂಭವ'ದ ಪದ್ಯಗಳು ಗುರುತಿಸಲಾಗಿವೆ. ಜಯಕೀರ್ತಿಯು 'ಛಂದೋನುಶಾಸನ' ದಲ್ಲಿ ಇವನ ಕೃತಿಯನ್ನು ಹೆಸರಿಸಿದ್ದಾನೆ. ಒಂದನೆಯ ಗುಣವರ್ಮನ ಧಾರ್ಮಿಕ ಗ್ರಂಥವಾದ 'ಹರಿವಂಶ' ವು ಜೈನಸಂಪ್ರದಾಯದಂತೆ ಬರೆದಿರಬೇಕು. ಇನ್ನೊಂದು 'ಶೂದ್ರಕ' ಕಾವ್ಯವು ಪೂರ್ತಿ ದೊರಕಿಲ್ಲವಾದರೂ ಲೌಕಿಕ ಕಾವ್ಯವಾಗಿ, ಅಗಣ ರಾಜಕೀಯ ವಿಚಾರಧ್ವನಿ ಬೆರೆತಿದೆ. ಪಂಪ, ಪೊನ್ನ, ರನ್ನ, ಜನ್ನ ಮುಂತಾದವರು ಈ ರಹದಾರಿಯಲ್ಲಿ ನಡೆಯಲು ಇದು ತಾನೇ 'ಕೋಳಿಕೂಗು' ಆಗಿದೆ!

ಆದಿಪಂಪನು 'ಆದಿಪುರಾಣ' ವನ್ನು ಧಾರ್ಮಿಕ ಸಂಪ್ರದಾಯದಂತೆ ಬರೆದನು. ಇದರ ಕೆಲವು ಪದ್ಯ ಹಾಗೂ ಕಥನಗಳಿಂದ ಇದು ಜೈನಪುರಾಣ ಕಾವ್ಯವೆನ್ನಬಹುದು. ಕಾವ್ಯಧರ್ಮ ಮತ್ತು ಧರ್ಮಗಳೆರಡನ್ನು ಸಮನ್ವಯಿಸಿದ ದೃಷ್ಟಿಯಲ್ಲಿದೆ. ಈತನು ರಚಿಸಿದ 'ಸಮಸ್ತ ಭಾರತ' ಅಥವಾ 'ವಿಕ್ರಮಾರ್ಜುನ ವಿಜಯ' ದಲ್ಲಿ ಚಾರಿತ್ರಿಕ ವಿಚಾರ ಬೆರೆತಿದೆ. ಇದು ಅಗಣ ಚಾರಿತ್ರಿಕಾಭ್ಯಾಸುಗಳಿಗೆ ಪರಮೋಪಕಾರವಾಗಿದೆ. ವ್ಯಾಸ ಭಾರತದಲ್ಲಿ ಈತನಿಗೆ ಕಾಣುವ ಹಲವಾರು ಸಮಸ್ಯಾತ್ಮಕ ಹಾಗೂ ವಿಸಂಗತಿ ರೀತಿಯ ಘಟ್ಟಗಳು ಇಲ್ಲಿ ಕಾಣಲಾರವು. ಈತನ ಉದ್ದೇಶಕ್ಕೆ ತಕ್ಕ ಸಂಗ್ರಹಣವಾದಂತಿದೆ: "ಕತೆ ಪಿರಿದಾದೊಡಂ ಕತೆಯ ಮೆಯ್ಗಿಡವೀಯದೆಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ" ವೆಂದು ಈತನು ಬರೆಯತೊಡಗಿದನು. 'ಸಮಸ್ತ ಭಾರತ' ವೆಂದರೆ ಲೌಕಿಕ ಹಾಗೂ ಚಾರಿತ್ರಿಕ ವಿಷಯಗಳ ಸಮಸ್ತರೂಪವೆಂದು ಹೇಳಲಡ್ಡಿಯಿಲ್ಲ! ಇದರಲ್ಲಿ ಹಲವಾರು ಹಿಂದಣ ಕೃತಿಗಳ ಛಾಯೆ ಕಂಡುಬಂದರೂ, ಪ್ರತ್ಯೇಕವಾದ ಸರಸತೆ ಮತ್ತು ನವೀನತೆಯಿಂದ ಕೂಡಿದೆ. ಮಹಾಭಾರತ ಗ್ರಂಥದಲ್ಲಿ ಪ್ರಮುಖರಾದ ಎಂಟು ಮಂದಿಯ ಎಂಟು ಗುಣಗಳನ್ನು ಇವನು ಹಾಡಿದ್ದಾನೆ:

"ಛಲದೊಳ್ ದುರ್ಯೋಧನಂ,
ನನ್ನಿಯೊಳಿನ ತನಯಂ,
ಗಂಡಿನೊಳ್ ಭೀಮಸೇನಂ,
ಬಲದೊಳ್ ಮದ್ರೇಶನ್.
ಅತ್ಯುನ್ನತಿಯೊಳಮರ ಸಿಂಧೂದ್ಭವಂ,
ಚಾಪವಿದ್ಯಾ ಬಲದೊಳ್ ಕುಂಭೋದ್ಭವಂ,
ಸಾಹಸದ ಮಹಿಮೆಯೊಳ್ ಫಲ್ಗುಣಂ,
ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ,
ಮಿಗಿಲವರ್ಗಳಿನೀ ಭಾರತಂ ಲೋಕಪೂಜ್ಯಂ."

•

"ಪಂಪನ ಪದ್ಯದಲ್ಲಿ ಕೃಷ್ಣನ ಹೆಸರು ಕಾಣಿಸದಿರುವುದಕ್ಕೆ ಕಾರಣ, ಅವನು ಈ ಪಂಕ್ತಿಗೆ ಕೆಳಗಿನ ಅಗಣ್ಯನೆಂದಲ್ಲ; ಅದಕ್ಕೆ ಮೀರಿದ ಮಹಾಮಹಿಮನೆಂದು. ಇಲ್ಲಿ ಪಂಪನ ಮೌನವು ಶ್ರೀಕೃಷ್ಣನ ಲೋಕೋತ್ತರತ್ವಕ್ಕೆ ಉತ್ತಮ ಧ್ವನಿಯ ಕಾಣಿಕೆ" ಯೆಂದಿದೆ. (ಶ್ರೀ ತೀ. ನಂ. ಶ್ರೀಕಂಠಯ್ಯ: ಅಭಿವಂದನೆ: ಪುಟ ೫೫೯). ಈ ಕೃತಿಯ ರಚನೆಯಿಂದ ಪಂಪನು ಧರ್ಮಪುರವೆಂಬ ಅಗ್ರಹಾರವನ್ನು ಉಚಿತವಾಗಿ ಪಡೆದನೆಂದರೆ ಈ ಗ್ರಂಥದ ಮಹತ್ತ್ವ ತಿಳಿಯುತ್ತದೆ (ನಾಡೋಜ ಪಂಪ: ಶ್ರೀ ಮುಳಿಯ ತಿಮ್ಮಪ್ಪಯ್ಯ).

ಆ ಕಾಲದ 'ಕವಿಚಕ್ರವರ್ತಿ' ಯಾದ ಪೊನ್ನನ ಶಾಂತಿಪುರಾಣ ಮತ್ತು ಭುವನೈಕ ರಾಮಾಭ್ಯುದಯಗಳು ಪಂಪನಂತೆ ಲೋಕೋತ್ತರ ಹಾಗೂ ಲೌಕಿಕ ಪರಿಣತಿ ರೀತಿಯಲ್ಲಿ ಬರೆದವು. ಇವನು ಜಿನಾಕ್ಷರಮಾಲೆ, ಗತಪ್ರತ್ಯಾಗತ

ಗಳನ್ನು ಬರೆದನು. ಶಾಂತಿಪುರಾಣವು ಸಂಪ್ರದಾಯ ನಿಷ್ಠತೆಯಿಂದ ಬರೆದುದು. ಕಾವ್ಯಧರ್ಮವು ಪಂಪನಷ್ಟು ಉಜ್ವಲವಾಗಿಲ್ಲದಿದ್ದರೂ ಧಾರ್ಮಿಕ ವಿಚಾರ ರೀತಿಯಿಂದ ಇದು "ಪುರಾಣ ಚೂಡಾಮಣಿ" ಎಂದು ಶ್ಲಾಘನೆ ಗೊಂಡಿದೆ. ಹಾಗಾಗಿ, "ಇದು ಶ್ರೇಷ್ಠ ಪುರಾಣವಲ್ಲ". "ಶಾಂತಿಪುರಾಣವು ಶ್ರೇಷ್ಠ ಕೃತಿಯೆಂದು ಹೊಗಳುವವರು ಪಂಡಿತರಾದರೂ ಇರಬೇಕು, ಮೂರ್ಖರಾದರೂ ಇರಬೇಕು" ಎನ್ನುವುದು ಸಾಧುವಲ್ಲ!

ಪಂಪ, ಪೊನ್ನ, ರನ್ನರೆಂಬವರು ಹತ್ತನೆಯ ಶತಕದ ರತ್ನತ್ರಯರೆಂದು ಪ್ರಸಿದ್ಧರಾದವರು. ರನ್ನನ ಕೃತಿಗಳಲ್ಲಿ ದೊರೆತವು ಅಜಿತಪುರಾಣ, ಸಾಹಸಭೀಮ ವಿಜಯ (ಗದಾಯುದ್ಧ), ಮತ್ತು ರನ್ನ ನಿಘಂಟು. ಇನ್ನು ದೊರಯದವು ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆಗಳು ಪೌರಾಣಿಕಗಳೇ ಇರಬೇಕೆಂದು ಬಲ್ಲವರು ಊಹಿಸುತ್ತಾರೆ (ಶ್ರೀ ಗೋವಿಂದಪೈ: ಮೂರು ಉಪನ್ಯಾಸಗಳು). 'ಚಕ್ರೇಶ್ವರ ಚರಿತೆ' ಯೆಂದರೆ ಬಾಹುಬಲಿ-ಭರತರ ಕತೆಯಾಗಿರಬೇಕೆಂದಿದ್ದಾರೆ. ಅಜಿತಪುರಾಣ, ಗದಾಯುದ್ಧಗಳ ರ್ತೃಕ 'ರನ್ನನೊಬ್ಬನೇ' ಎಂದೂ ಬೇರೆ ಬರೆದಿದ್ದಾರೆ!

ಈ ಕವಿರತ್ನತ್ರಯರು ಲೌಕಿಕವನ್ನು ಮತ್ತೆ ಬರೆದರು. ಅಲೌಕಿಕವನ್ನು ಮತ್ತೆ ಬರೆದರೆನ್ನುವುದು ಸೂಕ್ತವೋ ಅಲ್ಲವೋ ಎಂದು ಪರಿಶೀಲಿಸಬೇಕು. ಅಜಿತಪುರಾಣವು 'ಪುರಾಣ ತಿಲಕ' ವೆಂದು ರನ್ನ ಕವಿಯ ಆಶಯ ಸತ್ಯವಿದೆ. ಗದಾಯುದ್ಧವು ಖಂಡಕಾವ್ಯವಾದರೂ, 'ಸಿಂಹಾವಲೋಕನ' ಕ್ರಮದಿಂದ ಮಹಾಭಾರತದ ಕಥಾಂತರ ಹಾಗೂ ವ್ಯಕ್ತಿವಿಚಾರಗಳನ್ನು ನಿರೀಕ್ಷಿಸಿ, ವಿಮರ್ಶಿಸಿ ಬರೆದುದು. ಇದರಲ್ಲಿ ಹೆಚ್ಚಾಗಿ ಪಂಪನ ಸರಣಿ ಆಧಾರವಾಗಿದ್ದರೂ, ಇತರ ಹಲವು ಕೃತಿಗಳ ಸಾರವನ್ನೊಳಗೊಂಡು ಹೊಸತನದಿಂದಲೆ ಹೆಣೆದು ಚಿರಕಾಲ ರಾರಾಜಿಸುವುದರಲ್ಲಿ ಅನುಮಾನವಿಲ್ಲ! "ದುರ್ಯೋಧನನು ದೊಡ್ಡ ವೀರನೂ ತೇಜಸ್ವಿಯೂ ಮಾನಿಯೂ ಎಂಬುದನ್ನು ರನ್ನನು ಬಾಯ್ತುಂಬ ಹೊಗಳಿದ್ದರೂ, ಅವನ ದುಷ್ಟ ವೃತ್ತಿಗಳಿಂದಲೂ ದುರ್ವ್ಯಾಪಾರದಿಂದಲೂ ತನ್ನ ನಾಶಕ್ಕೆ ತಾನೆ ಕಾರಣನಾದನೆಂದೂ ರನ್ನನು ತೋರಿದ್ದಾನೆ." ಅದೇನೆಂದರೆ,

"ತುರುವಂ ಕಳಚುವ ಕೃಷ್ಣೆಯ |
ನಿರಿಯಂ ಪಿಡಿದುರ್ಚವೇಳ್ವ ಕೊಳನಂ ಪಿಂದುಂ |
ಪೆರಗಾಗಿ ಪುಗುವ ದುರ್ಣಯ |
ಮುರಿಪವೆ ಕೌರವನ ರಾಜ್ಯದಾಯುದ ಕೇಡಂ ||"

ಗಂಗರಸನ ಮಂತ್ರಿಯಾದ ಚಾವುಂಡರಾಯನು ಶ್ರವಣಬೆಳುಗೊಳದಲ್ಲಿ ಗೋಮಟೇಶ್ವರನ ಅಮೋಘ ಶಿಲ್ಪಾಕೃತಿಯನ್ನು ನಿಲಿಸಿದನು. ಅಂತೆಯೆ, 'ಚಾವುಂಡರಾಯ ಪುರಾಣ' ವನ್ನು ಸಾಹಿತ್ಯ ಭಾಂಡಾರದಲ್ಲಿ ಬೆಳಗಿಸಿದನು. ಇದು ಮುಖ್ಯತಃ ಕನ್ನಡ ಗದ್ಯಶೈಲಿಗೆ ಹೆಸರಾದುದು. ಇಲ್ಲಿ ಅರುವತ್ತು ಮೂರು ಶಲಾಕಾಪುರುಷರ ಕತೆಗಳಿವೆ. ಕವಿಯ ಸಾಹಸದ ಪರಿವೆ ತುಸು ಇಲ್ಲಿ ವ್ಯಕ್ತವಾಗುತ್ತದೆ. ವಡ್ಡಾರಾಧನೆಗಿಂತ ಮುಂದೆ ಗದ್ಯಬಂಧವು ಹರಿದು ಸಾಗಿದುದನ್ನು ಇಲ್ಲಿ ಕಣ್ಣಾರೆ ನೋಡಬಹುದಾಗಿದೆ.

ಕನ್ನಡದಲ್ಲಿ 'ಛಂದೋಂಬುಧಿ' ಯನ್ನು ಹರಿಯಿಸಿದವನು ಮೊದಲನೆಯ ನಾಗವರ್ಮನು. ಚಂಪೂ ರೀತಿಯ 'ಕಾದಂಬರಿ' ಯು ಬಾಣನ ಗದ್ಯಕೃತಿಯನ್ನು ಚೆಂದಗೊಳಿಸಿದ ರೀತಿಯಾಗಿದೆ. ಅದು ಅನುವಾದವಷ್ಟೆ ಅಲ್ಲದೆ ಕೇವಲ ಭಾಷಾಂತರವಲ್ಲ. ಬಾಣನ ಬೃಹತ್ಕಾದಂಬರಿ ಚಿತ್ರವನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸಿದ್ದು; ಛಾಯಾಯಂತ್ರಕಾರನಾಗಿರದೆ, ಸುರೂಪಗೊಳಿಸಿದ ಕಲಾವಿದನೆನ್ನಬಹುದು! ಪಂಪ-ಚಾವುಂಡರಾಯರಂತೆ ನಾಗವರ್ಮನು ಯುದ್ಧ ವೀರನೆಂಬುದು ಎರಡೂ ಗ್ರಂಥಗಳಿಂದ ತಿಳಿಯುತ್ತದೆ"! 'ಅರಸಂ ರಕ್ಕಸ ಗಂಗಂ' ಎಂಬುದರಿಂದ, ಇವನು ಕೊನೆಗೆ ಜೈನನಾಗಿರಬಹುದೆಂದು ತೋರುತ್ತದೆ!

ಇದುವರೆಗೆ ಹತ್ತನೆಯ ಶತಕದ ತನಕ ಸುಪ್ರಸಿದ್ಧರಾದ ಹತ್ತು ಮಂದಿಯ ಕನ್ನಡದ ಉತ್ಕೃಷ್ಟ ಕೃತಿಗಳ ಪರಿಚಯ ಕಿಂಚಿತ್ತಾಗಿ ಬರೆದಿದೆ. ಈತನಕ ಸ್ವಮತೀಯ ಪ್ರಚಾರದೊಂದಿಗೆ ಸಾಹಿತ್ಯಾಭಿವೃದ್ಧಿಯ ಕುರುಹು ಹೆಚ್ಚು ಕಂಡು ಬಂದಿದೆ. ಇನ್ನು ಮುಂದಿನಲ್ಲಿ ಪರಮತವಿಡಂಬನೆ ಹಾಗೂ ಸ್ವ-ಪರ ಸಂಘರ್ಷಣೆಗೂ ಹೆಚ್ಚಾಗಿ ಹೆಜ್ಜೆಯಿಟ್ಟುದು ಕಾಣುವುದು. ಪಂಪಮಹಾಕವಿಯೇ ತನ್ನ ಹಿಂದಲ ಮಂದಿ 'ಯಾಗಧೂಮದಿಂದ ಮಸುಳಿದರೆಂದು' ಹೇಳಿದ್ದಾನೆ. ಅದನ್ನೇ ಬ್ರಹ್ಮ ಶಿವನು ಮುನ್ನಡೆಯಿಸಿ, ವಿಡಂಬನಾತ್ಮಕವಾಗಿ ಪರಮತಗಳನ್ನು ಹೀಗಳೆಯತೊಡಗಿದ್ದಾನೆ. ಭಾರತೀಯ ಗ್ರಂಥಗಳಲ್ಲಿ ಹೇಳಿದ ರಾಮ-ಕೃಷ್ಣರ ಕತೆಗಳಿಗೂ ಜೈನಪುರಾಣಗಳಲ್ಲಿ ಹೇಳಿದವುಗಳಿಗೂ ತುಂಬ ಅಂತರವಿದೆ. ಕೆಲವು ವ್ರತಾದಿಗಳು ವಿಶೇಷ ರೀತಿಯಲ್ಲಿ ಉಲ್ಲೇಖಿಸಲಾಗಿದೆ.

ಪರಮತವನ್ನು ತಿಳಿದು, ಪ್ರೀತಿಸುವ ಸೌಹಾರ್ದವು ಅಶೋಕನ ಶಿಲಾಶಾಸನಗಳ ಕಾಲದಿಂದಲೂ ಚಾರಿತ್ರಿಕವಾಗಿ ತಿಳಿಯುತ್ತದೆ. ವೈಷ್ಣವ, ಶೈವ, ಜೈನ, ಬೌದ್ಧಗಳೆಂಬವು 'ಚತುಸ್ಸಮಯ' ಗಳೆಂದು ಬಲು ಪ್ರಾಚೀನ

ದಲ್ಲೇ ಸಮ್ಮಾನ್ಯವಾಗಿದ್ದವು. ಕಾಲಾನುಕ್ರಮದಲ್ಲಿ ಇವು ಒಂದರಮೇಲೊಂದು ಹೋರಾಡಿ ವಿರುದ್ಧಭಾವವನ್ನು ಪ್ರಚುರಿಸಿದವು. ಇಂದಿನಂತೆ ಹಿಂದಿನಲ್ಲೂ ಆಂತರಿಕ ಕಲಹಗಳಿದ್ದುವೆಂದು, ಅದೇ ಭಾವನೆಯನ್ನು ಇದೀಗಲೂ ಒಳಗಿಂದೊಳಗೆ ಪ್ರಸಾದಿಸುವುದು ಚೆನ್ನಲ್ಲವೆಂದು ಕಾಣುತ್ತದೆ. 'ಯಂ ಶೈವಾಃ ಸಮುಪಾಸತೇ ಶಿವ ಇತಿ, ಬ್ರಹ್ಮೇತಿ ವೇದಾಂತಿನೋ' ಇತ್ಯಾದಿ ಶೈವ, ವೇದಾಂತಿ, ಬೌದ್ಧ, ನೈಯಾಯಿಕ, ಜೈನ, ಮೀಮಾಂಸಕರಾದರೂ ಪ್ರತ್ಯೇಕಶಃ ಹೇಳುವ ಪರವಸ್ತುವೊಂದೆಂದು ನಡುಗಾಲದ ಬೇಲೂರ ಶಿಲಾಶಾಸನದಿಂದಲೂ ತಿಳಿಯುತ್ತದೆ. ಆ ಮೊದಲೂ ನಾಲ್ಕು ಪಂಗಡಗಳಲ್ಲಿ ಸಮರಸತೆಯನ್ನು ಕಾಣುವ ಹೇಳಿಕೆಯಿದೆ. 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬುದು ಪ್ರತಿಯೊಬ್ಬನಿಗೂ ಅನ್ವಯಿಸುತ್ತದೆ. ಧಾರ್ಮಿಕಾಚರಣಾದಿಗಳು ಪ್ರತ್ಯೇಕಶಃ ನಿರೂಪಗೊಂಡಿದ್ದರೂ, ಅವುಗಳ ನಿಲುಮೆ ಸಾಮಾಜಿಕರ ಇಹಪರ ಸೌಖ್ಯವರ್ಧನೆಗೆಡೆಮಾಡುತ್ತದೆ. ಸಾಹಿತ್ಯ ಕೃತಿಗಳಲ್ಲಿ ಹೊಸತನವುಳ್ಳವುಗಳನ್ನು ಕೆಲವನ್ನು ಇಲ್ಲಿ ಸೂಚಿಸಲೆಳಸಿದೆ. ಈ ಲೇಖನದ ಪರಿಮಿತಿಗೆ ಒಳಪಡದ ಅವೆಲ್ಲಾ ಕೃತಿಗಳ ವಿಚಾರ ಕವಿಚರಿತೆ, ಸಾಹಿತ್ಯ ಚರಿತ್ರೆಗಳಿಂದಲೂ; ವಿಶೇಷ ಲೇಖನಗಳಿಂದಲೂ ತಿಳಿಯಬೇಕೆಂದು ಹಾರೈಸುತ್ತೇನೆ.

ಶ್ರೀಧರಾಚಾರ್ಯನು 'ಜಾತಕ ತಿಲಕ'ವನ್ನು ಬರೆದವನು. "ಶಾಸ್ತ್ರ ಹಾಗೂ ಕಾವ್ಯ ಇವುಗಳ ಮೇಳವಿಕೆ ಇವನ ಬರವಣಿಗೆಯಲ್ಲಿ ಸ್ಫುಟವಾಗಿದೆ." 'ಸುಕುಮಾರ ಚರಿತ'ದ ಶಾಂತಿನಾಥನು ಲಕ್ಷ್ಮನೃಪನ ಮಂತ್ರಿಯಾಗಿದ್ದನು.

'ಅಭಿನವ ಪಂಪ'ನೆಂದು ಹೆಸರಾಂತ ನಾಗಚಂದ್ರನ 'ಮಲ್ಲಿನಾಥ ಪುರಾಣ'ಕ್ಕಿಂತಲೂ 'ರಾಮಚಂದ್ರ ಚರಿತ'ವೇ ಸುಪ್ರಸಿದ್ಧವಾಗಿದೆ. ಇದು ತಾನೇ ಕನ್ನಡದಲ್ಲಿ ಪೂರ್ತಿಯಾಗಿ ದೊರೆತ ಮೊದಲನೆಯದಾದ ಜೈನ ರಾಮಾಯಣವು. ಇದು 'ಪರಿಪಕ್ವ ಕೃತಿ'ಯೆಂದು ಹೆಸರುಗೊಂಡಿದೆ. ರಾವಣನ ಉದಾತ್ತ ಸ್ವರೂಪ ಇಲ್ಲಿ ವಿಶದವಾಗಿದೆ. ದಾರ್ಶನಿಕ ದೃಷ್ಟಿಭೇದದಿಂದ ಭಾರತೀಯ ಕೃತಿಗಿಂತ ಇದು ಬೇರೆತನ ಹಾಗೂ ಅಂತರವಾಗಿ ಕಾಣುತ್ತದೆ. ಇದು ವಿಮಲಸೂರಿಯ 'ಪಉಮಚರಿಯ (ಪದ್ಮ ಚರಿತ)' ಎಂಬುದರ ಆಧಾರದ ಮೇಲೆ ರಚಿತವಾಗಿ 'ಪಂಪ ರಾಮಾಯಣ'ವೆಂದು ಹೆಸರಿಸಲಾಗುತ್ತಿದೆ.

ಬ್ರಹ್ಮಶಿವನ 'ಸಮಯ ಪರೀಕ್ಷೆ'ಯು ತನ್ನ ಹೆಸರಿಗೆ ತಕ್ಕಂತೆ, ಇತರ ಮತ ಪುರಾಣಗಳಲ್ಲಿ ಹಾಗೂ ಲೋಕಾಚರಣಗಳಲ್ಲಿ ತನಗೆ ಕಂಡ ದೋಷಗಳನ್ನು ತೋರಿಸಿ, ಜೈನಮತವೇ ಸರ್ವಶ್ರೇಷ್ಠವೆಂದು ಸಾರಿದೆ. ಇದರೆಲ್ಲಾ ಮಾತುಗಳು ಕವಿಯ ಸ್ವಗತಾಶಯದವು. ಕನ್ನಡದಲ್ಲಿ ವಿಡಂಬನ ಸಾಹಿತ್ಯಕ್ಕೆ ನಯಸೇನನಿಗಿಂತ ಹೆಚ್ಚುಗಾರಿಕೆ ಇವನಿಂದ ದೊರೆತಿದೆ.

ಕನ್ನಡಭಾಷೆಯ ಪ್ರಸಾರಣಕ್ಕಾಗಿ ಸಂಸ್ಕೃತದಲ್ಲಿ ವ್ಯಾಕರಣವನ್ನು ಬರೆದವನು ಎರಡನೆಯ ನಾಗವರ್ಮನು. ಹಾಗೂ ಇವನು ಕನ್ನಡ ಭಾಷೆಯಲ್ಲಿಯೂ ವ್ಯಾಕರಣ ಮತ್ತು ಗುಣರಸ ದೋಷಗಳನ್ನೂ ಅಲಂಕಾರಗಳನ್ನೂ ವಿವರಿಸಿದ 'ಕಾವ್ಯಾವಲೋಕನ'ವನ್ನೂ ಬರೆದನು. ವಸ್ತುಕೋಶವೆಂಬ ಚಿಕ್ಕ ನಿಘಂಟನ್ನೂ ಬರೆದಿದ್ದಾನೆ. ಶಾಸ್ತ್ರೀಯ ದೃಷ್ಟಿಯಲ್ಲಿ ಕವಿಪ್ರತಿಭೆಯ ದ್ಯೋತಕಗಳಾದ ಹಲವು ವಿಚಾರಗಳನ್ನು ಹೆಣೆದನೆಂದು ಹೇಳಲಡ್ಡಿಯಿಲ್ಲ. 'ಕವಿರಾಜಮಾರ್ಗ'ಕ್ಕಿಂತ ಹೆಚ್ಚಿನ ಅಲಂಕಾರಗಳನ್ನು ಹೇಳಿದ್ದಾನೆ. 'ಅಭಿನವಶರ್ವವರ್ಮನೆಂದಪುದುರ್ವರೆ ನಾಗವರ್ಮನಂ' ಎಂದು ಹೇಳಿಕೊಂಡಿದ್ದಾನೆ.

> "ಶ್ರುತದೇವೀ ಮಕರಂದ ಕಲ್ಪಲಪನಂ,
> ವಾಕ್ ಶ್ರೀನಿವಾಸಾಂಬುಜಾಯಿತವಕ್ತ್ರಂ,
> ರಸಭಾವಭಾಸುರ ಸಮುದ್ಯದ್ ಭಾರತೀ ನರ್ತನೋಚಿತ
> ರಂಗಪ್ರತಿಮಾನನಂ,
> ಪ್ರವಿಲಸದ್‌ವಾಕ್ ಸುಂದರೀ ಕುಂಕುಮಾಂಕಿತ
> ಕೇಳೀಭವನಾಜಿರೋಪಮಮುಖಂ,
> ಭೂಭಾಗದೊಳ್ ನಾಕಿಗಂ"

ಅಂದರೆ, ಕವಿಯು 'ಚತುರ್ಮುಖ'ನಾಗಿದ್ದಾನೆಂಬುದಕ್ಕೆ ಬೇಕಾದ ನಾಲ್ಕು ಮೋರೆಗಳೇನೆಂಬುದು ಹೇಳಿ, ಇವನಲ್ಲಿ ಅವು ಸೇರಿವೆಯೆಂದಿದೆ. (ರನ್ನನೂ ಈ ಬಗೆ ಬೇರೆ ವಿವರಿಸಿದ್ದಾನೆ: 'ರಸಮುಂ ಭಾವಮುಮುಂ ಕಾಳಸಮುಂ,' ಇ.)

ಜನ್ನನ ಕಾವ್ಯ 'ಯಶೋಧ ಚರಿತೆ,' ಹಿಂಸಾಪ್ರವೃತ್ತಿ ಮಾನಸಿಕವಾದರೂ ದೋಷವಿದೆಯೆಂಬುದನ್ನು ವರ್ಣಿಸಲಾಗಿದೆ. ಇದು ವಾದಿರಾಜನ ಸಂಸ್ಕೃತದ ಯಶೋಧರ ಚರಿತೆಯಿಂದ ಪ್ರೇರಿತವಾಗಿದ್ದರೂ, ಕವಿಯ ಕಲಾಕುಂಚದಿಂದ ಮೂಲದ ಕಾಂತಿ ಹೆಚ್ಚಿಸಿ ಮೆರೆದಿದೆ. ಇವನ ಅನಂತನಾಥ ಪುರಾಣವು ಶಾಸ್ತ್ರಾನುಸಾರ ಮಹಾಕಾವ್ಯವೆಂಬಂತೆ 'ಪುರಾಣ ಕಾವ್ಯ'ವೆನ್ನಬಹುದು. 'ಪರಿಣತ ವಯಸ್ಸಿನಲ್ಲಿ ಬರೆದರೂ ಇದು ಪರಿಪಕ್ವ ಕೃತಿಯಲ್ಲ'ವೆಂಬುದು ಚೆನ್ನಾಗದು; ಪೌರಾಣಿಕ ನಿಯಮಾನುಸಾರತಃ ಬರೆದುದೇ ಅದಕ್ಕೆ ಕಾರಣವಾಗಿದೆ.

ರಾಜಾದಿತ್ಯನು ವ್ಯವಹಾರಗಣಿತ ಮೊದಲಾದ ಗಣಿತ ಗ್ರಂಥಗಳ ಕರ್ತೃ. ಇವನು ಹನ್ನೆರಡನೆಯ ಶತಕದ ಕೊನೆ ಹಾಗೂ ಹದಿಮೂರನೆಯ ಶತಕದಾದಿಯಲ್ಲಿ ಇದ್ದಿರಬಹು ದೆಂಬ ಡಾ. ವೆಂಕಟಸುಬ್ಬಯ್ಯನವರ ಹೇಳಿಕೆ ಕವಿಚರಿತೆ ಕಾರರಿಗೆ ಒಪ್ಪಿತವು (ಕ. ಚ. ೩-೪೦). ಇವನು ಬರೆದ ಲೀಲಾವತಿಯು ಭಾಸ್ಕರಾಚಾರ್ಯನ ಸಂಸ್ಕೃತಗ್ರಂಥದ ಅನು ವಾದವಿರಬೇಕು; ಬಲ್ಲವರು ಇತ್ತ ತುಸ ಅವಧಾನವಿಡ ಬೇಕಾಗುವುದು.

'ತತ್ಸಮ, ತದ್ಭವ, ದೇಸಿ'ಯೆಂಬ ಮೂರ್ಬಗೆಯುಳ್ಳ ಅಚ್ಚಗನ್ನಡದಲ್ಲಿ ಚಿಕ್ಕದಾದ 'ಕಬ್ಬಿಗರ ಕಾವ'ವನ್ನು ಬರೆದ ಆಂಡಯ್ಯನಂತೆ ಬೇರೆಯಾರೂ ಮುಂಬರಿಸಿಲ್ಲ! ತಮಿಳು ಮೊದಲಾದವುಗಳಲ್ಲಿ ಇಂತಹ ಕೃತಿಗಳನೇಕಶಃ ಇವೆ. ಇದರಲ್ಲಿ ರಾಜಕೀಯ ಚರಿತೆ-ಕದಂಬ ಕಾಮನ ವಿಚಾರ ಬೆರೆತಿದೆಯೆಂದು ವಿದ್ವಾಂಸರಲ್ಲಿ ತುಸ ಮತ ಭೇದವಿದೆ. (ಶ್ರೀಮುಳಿಯ ತಿಮ್ಮಪ್ಪಯ್ಯನವರು ಮತ್ತು ಶ್ರೀ ಸದಾನಂದ ನಾಯಕರ ಲೇಖನ-ಪುಸ್ತಕ ನೋಡಿರಿ). ಅವನ ಕೃತಿ ಬರೀ ಚಮತ್ಕೃತಿಯಲ್ಲ, ಕಾವ್ಯದೃಷ್ಟಿಯಿಂದ ಶೈಲಿಯ ದೃಷ್ಟಿಯಿಂದ ವೈಚಿತ್ರ್ಯತಕ್ಕ ಸತ್ಕೃತಿಯಾಗಿದೆ."

ಮಲ್ಲಿಕಾರ್ಜುನನು ಹಲವಾರು ಕವಿಗಳ ಗ್ರಂಥಗಳಿಂದ ಹದಿನೆಂಟು ಬಗೆಯ ಬಣ್ಣನೆಯ ಚಮತ್ಕಾರ ಪದ್ಯಗಳನ್ನು ಆರಿಸಿ ಸಂಕಲಿಸಿದ 'ಸೂಕ್ತಿ ಸುಧಾರ್ಣವ'ವು ಸಾಹಿತ್ಯಾ ಭ್ಯಾಸಿಗಳಿಗೊಂದು ಕೈಕಂಬದಂತಿದೆ. ಇದೇ ತರಹದಲ್ಲಿ (೧೬ನೆಯ ಶತಕದ) ಅಭಿನವವಾದಿ ವಿದ್ಯಾನಂದನು 'ಕಾವ್ಯಸಾರ'ವನ್ನು ಸಂಗ್ರಹಿಸಿದ್ದಾನೆ. ಇಂದೂ ಇಂತಹ ಸಂಕಲನ ಕಾರ್ಯ ನಡೆಯತಕ್ಕುದೆಂದು - ಪಾಠ್ಯೇತರ ಪುಸ್ತಕಗಳಾಗಿರತಕ್ಕುವೆಂದು ಆಶಿಕೆಯಾಗಿದೆ.

ಕೇಶಿರಾಜನ 'ಶಬ್ದಮಣಿ ದರ್ಪಣವು'ವು ಕನ್ನಡದ ವ್ಯಾಕರಣಗ್ರಂಥ. ಈ ಬೆಳಕನ್ನು ಮುಂದಿನವರು ಹೆಚ್ಚು ಬೆಳಗಿಲ್ಲ. ವಿವೇಚಕರಿಲ್ಲದೆ ಈ ಕೃತಿ 'ಜೀರ್ಣಮಂಗೇ ಸುಭಾಷಿತಂ.' ಕನ್ನಡತನವು ಇದರಲ್ಲಿ ತುಂಬಿದೆ. ಇವನು ಬರೆದನೆಂಬ ಬೇರೆ ಹೊತ್ತಗೆಗಳು ದೊರೆಕಿಲ್ಲ 'ಗಮಕ ಸಮಾಸದಿಂ' ಇತ್ಯಾದಿ ಕನ್ನಡ ಭಾಷೆಯ-ಸಾಹಿತ್ಯದ ಹೆಗ್ಗಳಿಕೆಯನ್ನು ಇವನು ಸಾರಿದ್ದಾನೆ.

ಕುಮುದೇಂದುವಿನ ರಾಮಾಯಣದಲ್ಲಿ ವಿವಿಧಷಟ್ಪದಿ ಗಳು, ವಿವಿಧರಾಗಗಳಿಂದ ಹೇಳುವಂತೆ ಅಳವಡಿಸಿವೆ. ಕುಮಾರ ಪದ್ಮರಸನಿಗಿಂತ ಪ್ರಯೋಗ ವೈವಿಧ್ಯ ಹಾಗೂ ಸಂಗೀತದ ಪ್ರಭಾವ ಇವನಲ್ಲಿ ಹೆಚ್ಚು ಮಾಡಿದೆ. ಇವನಿಗೆ 'ಕವಿರಾಜ ಶಿಖಾಮಣಿ' ಯೆಂಬುದು ಉಳಿದನೇಕರ ಬಿರುದಿನಂತೆ ಕೇವಲ ಶ್ಲಾಘನೆಯೆನ್ನುವುದು' ಸರಿಯಲ್ಲ! ಇದರಲ್ಲಿ ಜೈನರಾಮಾಯಣ ಹೇಳಿದೆ, ಕತೆ ನಿಮಿತ್ತಮಾತ್ರ, ಸಂಗೀತ ಹಾಗೂ ನೃತ್ತಗಳ ಪ್ರಯೋಜನ ಗಮನೀಯ.

೧ನೆಯ ಮಂಗರಾಜ 'ಖಗೇಂದ್ರಮಣಿದರ್ಪಣ' ಎಂಬ ವೈದ್ಯಗ್ರಂಥ ಬರೆದವನು. ಅಭಿನವ ಚಂದ್ರನ ಅಶ್ವಶಾಸ್ತ್ರವೂ, ಬಾಚರಸನ ಅಶ್ವವೈದ್ಯವೂ ಸಾರ್ಥಕ ನಾಮಗಳಾಗಿವೆ. ಭಾಸ್ಕರನ ಜೀವಂಧರ ಚರಿತೆಯಲ್ಲಿ ಕುಮಾರವ್ಯಾಸನ ಪ್ರಭಾವ ಕಾಣುವುದು. ಆದರೆ ಕುಮಾರ ವ್ಯಾಸನು ಇ. ೧೩೦೦ರ ಹೊತ್ತಿನವನು, ಭಾಸ್ಕರನು ಇ. ೧೪೨೪ರವನು, ಕಾಲವಿಚಾರಕ್ಕೆ ಈ ವಿಚಾರ ಹೊಂದಿಕೆಯಿಲ್ಲ; ಶೈಲಿಯ ಬಗೆಗೆ ಇದು ಉಲ್ಲೇಖನೀಯ ವಾಗಿದೆ.

ಶ್ರೀಧರದೇವನ ವೈದ್ಯಾಮೃತ, ೩ನೆಯ ಮಂಗರಸನ ಸೂಪಶಾಸ್ತ್ರ, ಶುಭಚಂದ್ರ ಮತ್ತು ಮಾಧವದೇವನ ಶಕುನ ಶಾಸ್ತ್ರಗಳು ವಿಷಯದ ರೀತಿಯಲ್ಲಿ ಹೊಸತಾಗಿವೆ. ಶಿಶುಮಾಯಣನು 'ತ್ರಿಪುರದದಹನ, ಅಂಜನಾಚರಿತೆ' ಗಳನ್ನು ಸಾಂಗತ್ಯದಲ್ಲಿ ಬರೆದವನು. ಜನತೆಯಲ್ಲಿ ಪ್ರಾಚುರ್ಯವಿದ್ದ ಹಾಡಿನ ಮಟ್ಟದ ಸಾಂಗತ್ಯವನ್ನು ಆರಿಸಿದುದರಿಂದಾಗಿ, 'ಅವನೊಬ್ಬ ಲಕ್ಷಜ್ಞಾನವಿಲ್ಲದವ' ನೆನ್ನಲಾಗದು. ಸಾಂಗತ್ಯದಲ್ಲಿ ತಿಳಿಗನ್ನಡದ ಪ್ರಭಾವ ದಿಂದ ಬರೆದ ಜೈನಕವಿಗಳಲ್ಲಿ ಇವನೇ ಮೊದಲಿಗನು. ಇವನು ೧೫ನೆಯ ಶತಕದಲ್ಲಿದ್ದಿರಬೇಕೆಂದು ಶ್ರೀ ಎಂ. ಗೋವಿಂದ ಪೈಗಳು ಬರೆದಿದ್ದಾರೆ.

ಸಾಳ್ವನ ಶಾರದಾವಿಲಾಸ, ರಸರತ್ನಾಕರ, ಜೈನ ಭಾರತ, ವೈದ್ಯಸಾಂಗತ್ಯಗಳು ಒಂದೊಂದು ತರದಲ್ಲಿ ಹೆಸ ರಿಸತಕ್ಕುವು. ಜೈನಭಾರತದಲ್ಲಿ ಒಂದು ಪರ್ವ 'ಉದ್ದಂಡ ಷಟ್ಪದಿ'ಯಲ್ಲಿದೆ. ವಾರ್ಧಿಕ ಷಟ್ಪದಿಯ ರೂಪಾಂತರವಿದು, ರಾಘವಾಂಕನು ವೀರೇಶ ಚರಿತೆಯನ್ನು ಹೀಗೆ ಬರೆದನು. ಬೇರೆ ಯಾರೂ ಇದನ್ನು ಅಷ್ಟು ಹೆಚ್ಚಾಗಿ ಬಳಸಿಲ್ಲ!

ರತ್ನಾಕರವರ್ಣಿಯು ಸಾಂಗತ್ಯದಲ್ಲಿ ಭರತೇಶವೈಭವ ಬರೆದನು. ಇದು ಪುರಾಣದೃಷ್ಟಿಗಿಂತಲೂ ಹೆಚ್ಚಾಗಿ ಕಾವ್ಯದೃಷ್ಟಿಯಲ್ಲಿ ಕವಿಯಿಸಿದದು. ಭರತನು ಭೋಗ ಯೋಗಗಳೆರಡನ್ನು ಸಾಂಗವಾಗಿ, ಸಮನ್ವಯಿಸಿ, ಅನುಭವಿಸಿದ ಮಹಾತ್ಮನೆಂದು ಇಲ್ಲಿ ಚಿತ್ರಿತವಾಗಿಗೆ. ಶೃಂಗಾರ ಹಾಗೂ ಆಧ್ಯಾತ್ಮಿಕತೆಗಳನ್ನು ಇಲ್ಲಿ ಸಮ್ಮಿಳಿತ ವಾಗಿ ಕಾಣಬಹುದು. "ಭಾಮಿನಿಷಟ್ಪದಿಗಳಿಗೆ ಕುಮಾರ ವ್ಯಾಸನು ಹೇಗೊ ರಗಳೆಗಳಿಗೆ ಹರಿಹರನು ಹೇಗೊ, ಸಾಂಗತ್ಯಕ್ಕೆ ರತ್ನಾಕರನು ಹಾಗೆ,"

" ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು |
ರಯ್ಯ ಮಂಚಿದಿಯೆನೆ ತೆಲುಗ |
ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು|
ಮೆಯ್ಯುಬ್ಬಿ ಕೇಳ ಬೇಕಣ್ಣ ‖ "

ಎಂದು ಕವಿಭಣಿತಿಯಾಗಿದೆ. ಇವನು ತೌಳವ ಪ್ರದೇಶ ದವನಾದುದರಿಂದ (ವಡ್ಡಾರಾಧನೆಯಂತೆ) ಇದರಲ್ಲಿ ಕೆಲವು ತುಳುನುಡಿಗಳು ಹೊಸೆದಿವೆ. ಕನ್ನಡದ ಬೆರಳೆಣಿಕೆಯ ಸರಳರೀತಿಯ ಮಹಾಕವಿಗಳಲ್ಲಿ ಇವನೊಬ್ಬನು ! ದೇವೋತ್ತಮನ ನಾನಾರ್ಥ ರತ್ನಾಕರ, ಶೃಂಗಾರ ಕವಿಯ ಕರ್ಣಾಟಕ ಸಂಜೀವನಗಳು ಶಬ್ದಾರ್ಥ ಕೋಶಗಳು. ಗುಣಚಂದ್ರನ ಛಂದಸ್ಸಾರ, ಪದ್ಮಣನ ಹಯಸಾರಗಳು ಆಯಾ ಹೆಸರಿನಿಂದಲೆ ತಿಳಿಯತಕ್ಕ ವಸ್ತುಕಗಳು.

ಸಂಸ್ಕೃತ ವ್ಯಾಕರಣ ಪಾಣಿನಿಯ ರೀತಿಯಲ್ಲಿ ಕನ್ನಡ ಭಾಷೆಯ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದನು, ಭಟ್ಟಾ ಕಲಂಕನು. ಈತ 'ಕನ್ನಡದ ಪಾಣಿನಿ 'ಯೆನ್ನಲಡ್ಡಿ ಯಿಲ್ಲ. ನಾಗವರ್ಮನ ಭಾಷಾಭೂಷಣ ಸರಲ, ಬಾಲ ಕರಿಗೂ ಸುಲಭಾವಗಾಹ್ಯವು. ಇದು ಅಖಂಡ ಪಂಡಿತರಿ ಗೇನೇ ಮೀಸಲು. ಕನ್ನಡವು (ಭಾಷೆ) ಎಲ್ಲಿಡೆಯವರಿಗೆ ತಿಳಿಯಲು ಇದು ಹೆದ್ದಾರಿಯಾಗಿದೆ. ಇದರ ಪ್ರಯೋಗ ಗಳು ನಂಬತಕ್ಕವೇಅಲ್ಲವೆಂದು ಎಂಬುದು ಚೆನ್ನಲ್ಲ. ಕೇಶಿ ರಾಜನ ಶಬ್ದಮಣಿದರ್ಪಣಕ್ಕಿಂತ ಇಲ್ಲಿ ತುಸ ಬೇರೆ ನಿಟ್ಟಿ ನಲ್ಲಿ ನಿರವಿಸಿಯದೆ !

ಚಂದ್ರಮನು ಕಾರ್ಕಳದ ಗೋಮಟೇಶ್ವರನ ಮಸ್ತಕಾಭಿಷೇಕದ ಸವಿನೆನಹಿಗಾಗಿ ಆ ಸ್ಥಾಪನೆಯ ಚರಿತೆ ಸಾಂಗತ್ಯದಲ್ಲಿ ಬರೆದನು. ಧರಿಣಿಪಂಡಿತನು ಬಸವಣ್ಣ ಬಿಜ್ಜಳರ ಚರಿತೆ ಬರೆದನು. ಇದು ಚಾರಿತ್ರಿಕ ವಿಚಾರಗಳಿಗೆ ಸರಿಯೋ ಅಲ್ಲವೋ ತಿಳಿಯತಕ್ಕುದಾಗಿದೆ. ಜೈನಕವಿಯು ವೀರಶೈವಗುರುಚರಿತೆ ಬರೆದುದೆಂದರೆ, ಮನೋವೈಶಾಲ್ಯ ಹಾಗೂ ಸಾಮರಸ್ಯಗಳು ಸುವ್ಯಕ್ತ ವಾಗುತ್ತವೆ. ಗಂಗನು ಕುಮುಟರಾಮನ ಕತೆ ಬರೆದನು. ಇತ್ತೀಚೆಗೆ ಕಾದಂಬರಿ, ನಿಬಂಧನೆ ನಾಟಕ, ಸಣ್ಣ ಕತೆ ಗಳಲ್ಲಿ ಈ ಕತೆ ಹರಹಿದೆ. ಚೆನ್ನಮ್ಮಾಜಿಯ ಕಾಲದಲ್ಲಿ (೧೬-೧೭ಶ.) ಪದ್ಮನಾಭನು ಜಿನದತ್ತರಾಯ ಚರಿತೆ ಮೊದಲಾದುವನ್ನು ಬರೆದನು. ಇತ್ತೀಚೆಗೆ ಈ ವಸ್ತು ಬಳಸಿ ನಾಟಕ ಮಾಡುತ್ತಾರೆ. "ಕಥಾರಚನೆ, ಪಾತ್ರ ವರ್ಣನೆ, ಶೈಲಿಗಳ ದೃಷ್ಟಿಯಿಂದ ಇದು ಮೇಲ್ತರದ ಕಾವ್ಯವಾಗಿರುವುದೇ ಅಲ್ಲದೆ, ಬೇರೊಂದು ದೃಷ್ಟಿ ಯಿಂದಲೂ ಗಮನಾರ್ಹವಾಗಿದೆ. ಮನಸಿಜನ ಮಾಯೆಯ ಒಂದು ಮುಖವನ್ನು ಜನ್ನನು (ಯಶೋಧರದಲ್ಲಿ) ತೋರಿಸಿದ್ದರೆ, ಅದರ ಇನ್ನೊಂದು ಮುಖವನ್ನು ಪದ್ಮ ನಾಭನು (ಜಿನದತ್ತರಾಯಚರಿತವಲ್ಲಿ) ಪ್ರದರ್ಶಿಸಿದ್ದಾನೆ" (ಬಾಗಿನ-ದಲ್ಲಿ ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಲೇಖನ).

ಚಂದ್ರಶೇಖರ ಅಥವಾ ಶಂಕರನು ಸಾಂಗತ್ಯದಲ್ಲಿ ಬರೆದ ರಾಮಚಂದ್ರಚರಿತವು ಅರೆವಾಸಿ (೧೬ ಆಶ್ವಾಸ) ಮಾತ್ರವಿದ್ದು, ಪದ್ಮನಾಭನು ಅದನ್ನು ಮುಂದುವರಿಸಿ (೩೭ ಆಶ್ವಾಸದನಕ) ಪೂರೈಸಿದ್ದಾನೆ. ಇನ್ನು ಪಾಯಣ್ಣನ ಅಹಿಂಸಾಚರಿತೆ ಸುರಾಲನ ಪದ್ಮಾವತಿ ಚರಿತೆಗಳು ಆಗಾಗ ಬೆಳಗಿವೆ. ಇನ್ನು ಕೊನೆಯದಾಗಿ ದೇವಚಂದ್ರನ 'ರಾಜಾವಳೀ ಕತೆ' ಮರೆಯಲಾಗದುದು. ಮೈಸೂರ ೩ನೆಯ ಕೃಷ್ಣರಾಜನ ಆಶ್ರಯದಲ್ಲಿದ್ದ ಇವನು ಆತನಕ ಬಾಳಿ ಹೆಸರುಗೊಂಡ ಕನ್ನಡದ ಹಲವು ರಾಜರು ಗುರು ಗಳು, ಕವಿಗಳು, ಕವಯಿತ್ರಿಯರು ಮೊದಲಾದವರ ಚರಿತೆ ಗಳನ್ನು ಕೇಳಿದಷ್ಟು ಸಂಗ್ರಹಿಸಿದ್ದಾನೆ. ಚಾರಿತ್ರಿಕ ಹಾಗೂ ಕಾಲ್ಪನಿಕ ವಿಚಾರಗಳು ಜೊತೆಯಾಗಿದ್ದು ಸಮಾಲೋಚ ನೀಯವಾಗಿದೆ.

'ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ 'ಯಾಗಿ ಕೆಲವು ಮಂದಿಯ (೧೯ನೆಯ ಶತಮಾನದತನಕ) ಕೃತಿಗಳ ಕಿಂಚಿತ್ಪರಿಚಯವಿಲ್ಲದೆ, ಈ ಶತಕದ ಕೃತಿಗಳ ವಿಚಾರ ಬೇರೆ ಬರೆಯತಕ್ಕುದಾಗಿದೆ. 'ಕಂಡುಗಮಂ ಬಳ್ಳ ದೊಳೆಳೆದ' ರೀತಿಯಾಗಿ ಬರೆದುದರಲ್ಲಿ ಹೆಸರಿಸದ ಕೃತಿ ಗಳು ನೀರಸಗಳೆಂದು ಭಾವಿಸಬಾರದು. ಕನ್ನಡ ಭಾಷೆಯ ಸಾಹಿತ್ಯವೆಂದರೆ ಕೆವಲ ಮತೀಯವಲ್ಲ, ಕೆವಲ ರಸ ಸಂಪ್ರದಾಯವಲ್ಲ; ಹಲವಾರು ವಿಷಯಾಂಶಗಳು ಸಮಾವೇಶಗೊಳ್ಳಲಿವೆ. ಮನುಷ್ಯನೆಂದರೆ ಆತ್ಮದೊಂದಿಗೆ ಕೈಕಾಲು ಹೊಟ್ಟೆ ಎದೆ ಬೆನ್ನು ಕುತ್ತಿಗೆ ಮುಖ, ತಲೆ ಮೊದಲಾದ ಅಂಗೋಪಾಂಗಗಳಿವೆ. ಸಾಹಿತ್ಯದಲ್ಲೂ ಅಂತಹ ಅಂಗೋಪಾಂಗಗಳಿವೆ, ಅವುಗಳ ಸುಮಧುರ ರಸಾಸ್ವಾದನೆ ರಸಿಕರಿಗೆ ಸಮಾದರಣೀಯವಾಗಿದೆ. ನಮ್ಮತನದ ಹೆಚ್ಚಳಕ್ಕೆ ಹಲವು ವಿಷಯಗಳ ಪರಿಜ್ಞಾನ ದಿಂದ ನಾವು ಸಂಸ್ಕಾರಗೊಳ್ಳಬೇಕಾಗಿದೆ !

ವಿ. ಸೂ : ಆಧಾರಗ್ರಂಥಗಳು : ಕನ್ನಡಕವಿ ಚರಿತೆ (ಸಂ ೧-೩). ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಕೈಪಿಡಿ (ಸಂ. ೧-೩). ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ. ಕನ್ನಡ ಜೈನ ವಾಙ್ಮಯ ಇತ್ಯಾದಿ.

ಸಂಸ್ಕೃತ ಭಾಷೆಯ ವ್ಯಾಸಂಗ

ದೇ. ಜವರೇಗೌಡ

ಜಗತ್ತಿನ ಮಹಾ ಪ್ರಾಚೀನ ಭಾಷೆಗಳಲ್ಲಿ ಸಂಸ್ಕೃತವೂ ಒಂದೆಂಬುದು ಭಾರತೀಯರಿಗೆ ಹೆಮ್ಮೆಯ ವಿಷಯವಾಗಿದೆ. ಗೀರ್ವಾಣ ಭಾಷೆಯೆಂದು, ಮೋಕ್ಷಸಾಧನ ಭಾಷೆಯೆಂದು, ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ಪ್ರತಿಬಿಂಬಿಸುವ ಏಕೈಕ ಭಾಷೆಯೆಂದು, ಲೋಕದ ಉಳಿದೆಲ್ಲ ಭಾಷೆಗಳಿಗೆ ಮಾತೃಭಾಷೆಯೆಂದು, ರಾಷ್ಟ್ರಭಾಷೆಯೆಂದು, ಅದು ನಾನಾರೀತಿಯಿಂದ ಪ್ರಕೀರ್ತಿತವಾಗಿದೆ. ಈ ಕೀರ್ತನೆಯಲ್ಲಿ ಅರ್ಧಭಾಗ ಸತ್ಯವೂ ಅರ್ಧಭಾಗ ಅಭಿಮಾನಾತಿರೇಕವೂ ಸೇರಿಕೊಂಡಿವೆ. ಮೇಲಿನ ಭಾವಾತಿರೇಕದ ಮಾತುಗಳನ್ನು ವಿಚಾರದ ಒರೆಗಲ್ಲಿಗೆ ತಿಕ್ಕಿ ನೋಡಿದಾಗ ಅವು ಸಂಪೂರ್ಣ ಸತ್ಯವಲ್ಲವೆಂಬ ಸಂಗತಿ ಸಿದ್ಧವಾಗುತ್ತದೆ. ಈ ಎಲ್ಲ ಶ್ಲಾಘನೆಯ ಹಿಂದೆ ಸ್ವಾರ್ಥಪರತೆ, ಮಾನವೀಯ ದೃಷ್ಟಿಸಾಹಿತ್ಯ, ಪಾಳೆಯಗಾರಿಕೆಯ ಪ್ರವೃತ್ತಿ, ಮೊದಲಾದ ಹಾನಿಕಾರಕ ಶಕ್ತಿಗಳು ಹುದುಗಿವೆಯೆಂಬ ಸಂಗತಿ ನಿರ್ವಿಕಾರ ಮನೋಭಾವದ ವೈಜ್ಞಾನಿಕ ದೃಷ್ಟಿಗೆ ಮೈದೋರದಿರದು.

ಸಾಮ್ರಾಜ್ಯದ, ಅನ್ಯಾಕ್ರಮಣದ ಮತ್ತು ಸುಲಿಗೆಯ ಕಾಲ ಬಹು ಬೇಗನೆ ಹಿಂದು ಹಿಂದಕ್ಕೆ ಸರಿಯುತ್ತಿದೆ. ಒಬ್ಬ ಮತ್ತೊಬ್ಬನನ್ನು ಕಟ್ಟಿ ಆಳಬೇಕೆಂಬ ಮನೋಭಾವನೆ ಬಹು ಹಿಂದಿನಿಂದ ಮಾನವನಲ್ಲಿ ಬೆಳೆದುಬಂದಿದೆ. ಈ ಮನೋಭಾವನೆ ಅನಾಗರಿಕವಾದುದಾದರೂ ನಾಗರಿಕ ಮಾನವನ ಸಹಜ ಲಕ್ಷಣವಾಗಿ ಪರಿಣಮಿಸಿದೆ. ಒಮ್ಮೊಮ್ಮೆ ಒಂದೊಂದು ಶಕ್ತಿಪ್ರಭಾವ ಸಾಮಾನ್ಯ ಜನತೆಯನ್ನು ದಾಸ್ಯಕ್ಕೀಡುಮಾಡಿದೆ. ರಾಜಕೀಯ ಆರ್ಥಿಕ ಸಾಂಸ್ಕೃತಿಕ ಶಕ್ತಿಗಳು ಪ್ರಭುತ್ವ ನಡೆಸಿದಂತೆ ವರ್ಣ ಭಾಷಾ ಸಂಬಂಧವಾದ ಶಕ್ತಿವಿಶೇಷಗಳೂ ನಿರಂಕುಶ ಪ್ರಭುತ್ವ ನಡೆಸಿವೆ. ವರ್ಣ ಪ್ರಭುತ್ವಕ್ಕೆ ಒಮ್ಮೆ ಭಾರತ, ಮತ್ತೊಮ್ಮೆ ಅಮೆರಿಕ, ಈಗಂತು ದಕ್ಷಿಣ ಆಫ್ರಿಕ ನಿದರ್ಶನಗಳಾಗಿವೆ. ಹೀಗೆಯೇ ಭರತಖಂಡದಲ್ಲಿ ಭಾಷಾಪ್ರಭುತ್ವ ಅರಾಷ್ಟ್ರೀಯವೆನ್ನುವಂತೆ ನಾಡಿನ ಬಹುಭಾಗ ಜನವನ್ನು ಅಜ್ಞಾನದ ಅಂಧಕೂಪಕ್ಕೆ ನೂಕುವಷ್ಟರ ಮಟ್ಟಿಗೆ ಪಾಳೆಯಗಾರಿಕೆ ನಡೆಸಿದೆ. ಹಿಂದೆ ಗೀರ್ವಾಣ ಭಾಷೆ, ನಡುವೆ ಆಂಗ್ಲ ಭಾಷೆ, ಈಗ ಹಿಂದಿ ದವಲತ್ತು ನಡೆಸಿ ಇತರ ಭಾಷಾವ್ಯವಹಾರಗಳ ಹಿಂದುಳಿಕೆಗೆ ಕಾರಣವಾಗಿವೆ. ಮತೀಯ ಮತ್ತು ರಾಜಕೀಯ ಕಾರಣಗಳು ಭಾಷೆಗಳ ಏಳಿಳಿತಗಳನ್ನು ನಿರ್ಧರಿಸುತ್ತವೆನ್ನುವುದಕ್ಕೆ ಇತಿಹಾಸ ಅನೇಕ ನಿದರ್ಶನಗಳನ್ನೊದಗಿಸುತ್ತದೆ. ಈ ದಿನ ಇಂಗಿಷ್ ಹಿಂದಿ ಭಾಷೆಗಳ ಮೇಲಣ ಅಸಮಾಧಾನಕ್ಕೆ ಈ ಸಾಮ್ರಾಜ್ಯಶಾಹೀ ಮನೋಭಾವನೆಯೇ ಪ್ರಮುಖ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

ಜಾತಿ ಮತ್ತು ವರ್ಣವ್ಯವಸ್ಥೆಗಳು ಭಾಷೈಕ್ಯಕ್ಕೆ ಮತ್ತು ರಾಷ್ಟ್ರೀಯತ್ವಕ್ಕೆ ಹೇಗೆ ಮಾರಕವಾದುವೋ ಸಂಸ್ಕೃತ ಭಾಷೆಗೆ ಸಂದ ಗೀರ್ವಾಣ ಭಾಷೆಯೆಂಬ ಅನಧಿಕೃತ ಬಿರುದೂ ಭಾಷಾಕ್ಷೇತ್ರದಲ್ಲಿ ಮಡಿವರ್ಗವನ್ನು ಸೃಷ್ಟಿಸಿ ಹಾನಿಕಾರಕವಾಯಿತು. ಗೀರ್ವಾಣ ಭಾಷೆಯೆಂದರೆ ದೇವತೆಗಳು ಮಾತಾಡುವ ಭಾಷೆಯಷ್ಟೆ? ಆ ದೇವತೆಗಳು ಇಲ್ಲಿಯವರೋ ಮೇಲಿನವರೋ? ಮೇಲಿನವರಾದರೆ ಅವರ ಭಾಷೆಯನ್ನು ಕೇಳಿದವರು ಯಾರು? ಸಂಸ್ಕೃತ ಭಾಷೆಮಾತ್ರವಲ್ಲ ತೊದ ಮೊದಲುಗೊಂಡು ಪ್ರಪಂಚದ ಸರ್ವಭಾಷೆಗಳೂ ಗೀರ್ವಾಣ ಭಾಷೆಯೆಂಬ ಸತ್ಯಸಂಗತಿ ಆಧುನಿಕ ಮತಿಗೆ ಹೊಳೆಯದಿರದು. ಮಹಾಪುರಾಣದಲ್ಲಿ ಪ್ರಸಿದ್ಧವಾಗಿರುವ

" ದೇವಾ ದೈವೀಂ ನರಾನಾರೀಂ ಶಬರಾಶ್ಚಾಪಿ ಶಾಬರೀಂ
ತಿರ್ಯಂಚೋಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಂ "

ಎಂಬ ಮಹಾವಾಣಿಯೂ, ಭಟ್ಟಾಕಳಂಕನ

" ಸರ್ವಭಾಷಾಮಯಿ ಭಾಷಾ ಪ್ರವೃತ್ತಾ
ಯನ್ಮುಖಾಂಬುಜಾತ್ "

ಎಂಬ ಧೀರವಾಣಿಯೂ ಸಂಸ್ಕೃತವೊಂದೇ ಗೀರ್ವಾಣ ಭಾಷೆಯೆಂಬ ಭ್ರಮೆಯನ್ನು ನಿರಸನಗೊಳಿಸುತ್ತವೆ.

ಅದು ಮೋಕ್ಷದ ಭಾಷೆಯೆನ್ನುವ ಮಾತು ಭ್ರಾಂತಿಯುಕ್ತವಾಗಿದೆ. ವೇದೋಪನಿಷತ್ತುಗಳು ಭಾಷ್ಯ ವ್ಯಾಖ್ಯಾನಗಳು ಆ ಭಾಷೆಯಲ್ಲಿರುವುದರಿಂದ ಆ ಭಾವನೆಗೆ ಅವಕಾಶವಾಗಿದೆ. 'ಸೋಹಂ', 'ಕೋಹಂ', 'ಕ್ರತು ಆಯಾತಃ', 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಸೂತ್ರಗಳು ಕೇವಲ ಪಠನಮಾತ್ರದಿಂದ ಸ್ವರ್ಗಕ್ಕೊಯ್ಯುವ ಸೋಪಾನಗಳಾಗಲಾರವು. ಸತ್ತಮೇಲೆ ಮನುಷ್ಯ ಏನಾಗುತ್ತಾನೆಯೋ ಗೊತ್ತಿಲ್ಲ. ಮೇಲಿನ ಮಂತ್ರೋಚ್ಚಾರಣೆಯಿಂದ ಸ್ವರ್ಗಕ್ಕೇರುತ್ತಾನೆಂದೇ ಭಾವಿಸೋಣ. ನೂರಕ್ಕೊಬ್ಬನನ್ನು ಮಾತ್ರ ಸ್ವರ್ಗಕ್ಕೊಯ್ಯುವ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಉಚ್ಚರಿಸಬಾರದ ಮಂತ

ಖಂಡಿತ ಪೂಜ್ಯವಾಗಲಾರದು. ಆ ಮಂತ್ರ ಪತಿತೋದ್ಧಾರಕ್ಕಾಗಿ ವಿನಿಯೋಗವಾದಾಗ ಪವಿತ್ರವೆನಿಸಿಕೊಳ್ಳುತ್ತದೆ. ಆಚರಣೆಗೆ ಬಾರದೆ ಕೇವಲ ಪಠನ ರೂಪದಲ್ಲುಳಿದ ಮಂತ್ರಗಳು, ಭ್ರಾಂತಿಜನಕವಾದ ಭಾವನೆಗಳು ಮೌಢ್ಯಪ್ರಸಾರಕ್ಕೆ ಸಾಧನವಾದುವೇ ಹೊರತಾಗಿ ದೀನದಲಿತೋದ್ಧಾರಕ್ಕೆ ವೈಜ್ಞಾನಿಕ ಮತಿಯ ವಿಕಾಸಕ್ಕೆ ನಿಮಿತ್ತವಾಗಲಿಲ್ಲ. ಸಂಸ್ಕೃತವನ್ನು ಕಲಿತವರಿಗೆ ಮಾತ್ರ ಮೋಕ್ಷ ಸಿಗುವುದಾದರೆ ಉಳಿದವರ ಗತಿಯೇನು? ಹಾಗಾದರೆ ಆಂಗ್ಲರು, ಮುಸ್ಲಿಮರು ಚೀನೀಯರು ಯುರೋಪೀಯರು, ಆಫ್ರಿಕರು—ಇವರಿಗೆ ನರಕ ಕಟ್ಟಿಟ್ಟ ಬುತ್ತಿಯೆ? ಆದ್ದರಿಂದಲೇ ಈ ಭ್ರಮೆಯನ್ನು ಮನಗಂಡ ಮಹಲಿಂಗರಂಗ (೧೭೦೦)ನಂಥವರು ದಿಟ್ಟತನದಿಂದ ಉದ್ಗಾರ ತೆಗೆದದ್ದು.

> ಲಲಿತವಹ ಕನ್ನಡದ ನುಡಿಯಲಿ
> ತಿಳಿದು ತನ್ನೊಳು ತನ್ನ ಮೋಕ್ಷವ
> ಗಳಿಸಿಕೊಂಡರೆ ಸಾಲದೇ ಸಂಸ್ಕೃದಲಿನ್ನೇನು?

ಸಂಸ್ಕೃತ ಪರಿಪೂರ್ಣಭಾಷೆಯೆಂಬ ಮಾತೂ ಅಂಗೀಕಾರಅರ್ಹವಲ್ಲ. ಅದು ಒಂದಾನೊಂದು ಕಾಲಕ್ಕೆ ಸಮೃದ್ಧವಾದ ಭಾಷೆಯಾಗಿತ್ತು, ನಿಜ, ಈ ಹೊತ್ತಿಗೂ ಆ ಮಾತು ತಕ್ಕಮಟ್ಟಿಗೆ ನಿಜ. ಸುತ್ತಮುತ್ತಣ ಭಾಷೆಗಳಿಂದ ಶಬ್ದಸಾಮಗ್ರಿಯನ್ನು ಸಾಕಷ್ಟು ಜೀರ್ಣಿಸಿಕೊಂಡು ಪುಷ್ಟಿಗೊಂಡಿದೆ. ದರ್ಶನನೀತಿ ಧರ್ಮ ಮೊದಲಾದ ಗಹನ ವಿಷಯಗಳ ಅಭಿವ್ಯಕ್ತಿಗೆ ಅದು ಸಮರ್ಥ ಸಾಧನವಾಗಿದೆ. ಆದರೆ ಭಾಷೆ ಸಾರ್ವಜನಿಕರ ಸ್ವತ್ತಾಗುವತನಕ ಮೈತುಂಬಿಕೊಂಡು ಸರ್ವವ್ಯಾಪಕವಾಗಿ ಬೆಳೆಯಲಾರದು, ಅದು ಹುರಿಹುರಿಯಾಗಿ ಗರಿಗರಿಯಾಗಿ ವೀರ್ಯವತ್ತಾಗಿ ಹೊರವಾಗಿ ವಿಕಾಸಗೊಳ್ಳಲಾರದು. ಸಂಸ್ಕೃತ ಭಾಷೆ ಬೆಳೆಯುವಾಗ ಜನಸಾಮಾನ್ಯದ ಸ್ವತ್ತಾಗಲಿಲ್ಲ, ಜನವಾಣಿಯಾಗಲಿಲ್ಲ, ಜನಜೀವನದಿಂದ ಹೊಮ್ಮಲಿಲ್ಲ. ಜೊತೆಗೆ ಅದರ ಬೆಳೆವಣಿಗೆ ಸಾವಿರ ವರ್ಷಕ್ಕೆ ಹಿಂದೆಯೇ ನಿಂತುಹೋಯಿತು. ಅಲ್ಲಿಂದೀಚೆಗೆ ಅದು ರೂಪಾಂತರಹೊಂದಲಿಲ್ಲ, ಹೊಸ ಹೊಸ ವರ್ಚಸ್ಸು ಪಡೆಯಲಿಲ್ಲ, ಹಳೆಯ ಪೊರೆಗಳಚಿ ಮಿಂಚುನುಣುಪುಗಳನ್ನು ಪಡೆಯಲಿಲ್ಲ. ಸಾವಿರ ವರ್ಷಗಳಿಂದೀಚೆಗೆ ಜಗತ್ತು ಎಷ್ಟು ಬದಲಾವಣೆ ಹೊಂದಿದೆ? ಅಂದಿನ ಸಮಾಜವೇ ಬೇರೆ ಇಂದಿನ ಸಮಾಜವೇ ಬೇರೆ. ಅದೆಲ್ಲ ಇರಲಿ, ವೈಜ್ಞಾನಿಕ ಯುಗದ ಮಾನವನ ಅನುಭವಾಭೀಪ್ಸೆಗಳನ್ನು ಭಾವಾಲೋಚನೆಗಳನ್ನು ಸಂಸ್ಕೃತ ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸಲಾರದು. ಇಂಗ್ಲಿಷ್ ಶಬ್ದಗಳಿಗೆ ಸಂಸ್ಕೃತದಲ್ಲಿ ಸರಿಸಮನಾದ ಪದಗಳನ್ನು ಜೋಡಿಸಬೇಕಾದರೆ ತುಂಬ ಪಾಡುಪಡಬೇಕಾಗುತ್ತದೆ.

ಒಂದು ಪಕ್ಷ ಅದು ಸಮೃದ್ಧವಾದ ಭಾಷೆಯೆಂದೊಪ್ಪಿಕೊಂಡರೂ ನಿಷ್ಕೃಷ್ಟವಾದ ನಿಖರವಾದ ಭಾಷೆಯಲ್ಲವೆಂಬ ಮಾತಿನಲ್ಲಿ ತುಸುವಾದರೂ ಹುರುಳಿಲ್ಲದಿಲ್ಲ. 'ಹರಿ' ಎಂಬ ಪದಕ್ಕೆ ಗಣನೆಯಿಲ್ಲದಷ್ಟು ವಿರೋದಾರ್ಥಗಳಿವೆ. ಮನೋಗತವನ್ನು ಮುಚ್ಚಿ ಹೇಳಲು ಇಂಥ ಮಾತುಗಳು ಸುಲಭವಾಗಿ ಒದಗಿಬರುತ್ತವೆ. ವಿಷ್ಣು, ಶಿವ, ಬ್ರಹ್ಮ, ಯಮ, ಸೂರ್ಯ, ಚಂದ್ರ, ಮನುಷ್ಯ, ಅಗ್ನಿ, ವಾಯು, ಕುದುರೆ, ಕೋತಿ, ಕಪ್ಪೆ, ಗಿಳಿ, ಹಾವು, ಹಸುರು, ಕಂದು, ಇನ್ನೆಷ್ಟೋ ಅರ್ಥ ಸಂಪತ್ತನ್ನು ಪಡೆದಿರುವ ಆ ಮಾತನ್ನು ನಿಷ್ಕೃಷ್ಟವಾಗಿ ಬಳಸಲು ಸಾಧ್ಯವಾದೀತೆ? 'ದೇವ' ಎನ್ನುವ ಪದಕ್ಕೆ ದಡ್ಡ ಎಂತಲೂ ಅರ್ಥವುಂಟು; ವಿಷ ಎನ್ನುವ ಪದಕ್ಕೆ 'ನೀರು' ಎಂತಲೂ ಅರ್ಥವುಂಟು. ಶ್ಲೇಷಾರ್ಥದ ಪದ್ಯಗಳು ಅನೇಕ ವೇಳೆ ದಾರಿತಪ್ಪಿಸಿ ಓದುಗನನ್ನು ದಿಗ್ಭ್ರಮೆಗೊಳಿಸುವುದುಂಟು ನಿದರ್ಶನಾರ್ಥವಾಗಿ ಕೆಳಗಿನ ಪದ್ಯವನ್ನು ಗಮನಿಸಬಹುದು :

> "ಕೇಶವಂ ಪತಿತಂ ದೃಷ್ಟ್ವಾ ಪಾಂಡವಾ ಹರ್ಷಮುಪಾಗತಾಃ
> ರುದಂತಿ ಕೌರವಾಃ ಸರ್ವೇ ಹಾ ಕೇಶವ ಕಥಂಗತಃ"

ನೀರಿನಲ್ಲಿ ಬಿದ್ದ ಶವವನ್ನು ನೋಡಿ ಕಾಗೆಗಳು ಸಂತೋಷಗೊಂಡುವಂತೆ; ನರಿಗಳು ತಮಗೆ ಆ ಹೆಣ ಸಿಗಲಿಲ್ಲವೆಂದು ಗೋಳಾಡಿದುವಂತೆ. ಇದು ಒಂದರ್ಥ ಮತ್ತೊಂದು ಪ್ರಸಿದ್ಧಾರ್ಥ. ಇದರಲ್ಲಿ ಬುದ್ಧಿಯ ಚಮತ್ಕಾರವೂ ಉಂಟು. ಭಾಷೆಯ ನುಣುಚುಗುಣವೂ ಉಂಟು. ಬುದ್ಧಿಯ ಚಮತ್ಕಾರ ಹೆಚ್ಚಿದಂತೆಲ್ಲ ಭಾಷೆಯ ನುಣುಚುತನವೂ ಅಧಿಕಗೊಳ್ಳುತ್ತದೆ. ಈ ನುಣುಚು ಜಾರುಗುಣ ಅಧಿಕ ಪ್ರಮಾಣದಲ್ಲಿದ್ದದ್ದರಿಂದಲೇ ಒಬ್ಬೊಬ್ಬ ಆಚಾರ್ಯರು ತಮ್ಮ ಸಿದ್ಧಾಂತಗಳ ಸ್ಥಾಪನೆಗಾಗಿ ಬೇರೆ ಬೇರೆ ವ್ಯಾಖ್ಯಾನಗಳನ್ನು ಬರೆದದ್ದು. ಭಾಷೆಗೆ ನಿಷ್ಕೃಷ್ಟತೆಯಿದ್ದಿದ್ದರೆ ಈ ವಿವಿಧ ವ್ಯಾಖ್ಯಾನಗಳಿಗೆ ಅವಕಾಶ ಕಡಿಮೆಯಾಗುತ್ತಿತ್ತು.

ಲೋಕದ ಉಳಿದೆಲ್ಲ ಭಾಷೆಗಳಿಗೆ ಅದು ಮಾತೃ ಭಾಷೆಯೆಂಬ ಮಾತಿಗೆ ವೈಜ್ಞಾನಿಕ ವಾದದ ಬೆಂಬಲವಿಲ್ಲ. ಅದು ಜಗತ್ತಿನ ಅತಿದೊಡ್ಡ ಭಾಷಾ ಕುಟುಂಬಕ್ಕೆ ಸೇರಿರುವ ಭಾಷೆ, ನಿಜ. ಆದರೆ ಅದಕ್ಕೆ ಹೊಕ್ಕುಳ ಸಂಬಂಧವಿಲ್ಲದ ಭಾಷೆಗಳು ಭರತಖಂಡದಲ್ಲಿಯೇ ಬೇಕಾದಷ್ಟಿವೆ. ದಕ್ಷಿಣದ ಭಾಷೆಗಳಿಗೂ ಅದಕ್ಕೂ ಜಾತಿಸಂಬಂಧವಿಲ್ಲವೆನ್ನುವ ವಿಷಯ ಈಗ ನಿರ್ಣಿತವಾಗಿದೆ. ಈ ಎರಡು

ಭಾಷಾವರ್ಗಗಳಿಲ್ಲಿ ಕೊಳುಕೊಡೆಯ ಸಂಬಂಧವಿದ್ದು ಒಂದು ಮತ್ತೊಂದರ ಅಭ್ಯುದಯಕ್ಕೆ ಕಾರಣವಾಗಿದೆ.

ಸಾವಿರ ವರ್ಷಗಳ ಹಿಂದೆ ಅದು ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ಪ್ರತಿಬಿಂಬಿಸುವ ಏಕೈಕ ಭಾಷೆಯಾಗಿತ್ತು, ನಿಜ. ಆಗಲೂ ಮಧ್ಯಮ ಮತ್ತು ಉತ್ತಮ ವರ್ಗದ ಹಾಗೂ ರಾಜಾಸ್ಥಾನದ ಸಂಸ್ಕೃತಿಯನ್ನು ಆಚಾರ ವ್ಯವಹಾರಗಳನ್ನು ಅದು ಪ್ರತಿಬಿಂಬಿಸುತ್ತಿತ್ತೆ ಹೊರತಾಗಿ ಜನಸಾಮಾನ್ಯದ ಸ್ವತ್ತನ್ನು ಪ್ರತಿಬಿಂಬಿಸಲಿಲ್ಲ. ರಾಮಾಯಣ ಮಹಾಭಾರತಾದಿ ಇತಿಹಾಸ ಕಾವ್ಯಗಳು ಸರ್ವಜನಪ್ರಿಯವಾದುದರಿಂದ ಅವು ರಾಷ್ಟ್ರೀಯ ಕಾವ್ಯಗಳಾಗಿ ಪರಿಣಮಿಸಿವೆ. ಆ ಕಾವ್ಯಗಳ ನಿರ್ಮಾಣ ಕಾರ್ಯದಲ್ಲಿ ನಾಡಿನ ಎಲ್ಲ ಭಾಗಗಳ ಜನ ಒಂದಲ್ಲ ಒಂದು ರೀತಿಯಿಂದ ಕಾಣಿಕೆ ಸಲ್ಲಿಸಿದ್ದಾರೆ. ಸಂಸ್ಕೃತ ಗ್ರಂಥಗಳಲ್ಲಿ ಅಡಕವಾಗಿರುವ ಸಾರಸರ್ವಸ್ವವನ್ನೀಗ ದೇಶಭಾಷೆಗಳು ಹೀರಿಕೊಂಡಿವೆ. ಸಂಸ್ಕೃತ ಭಾಷೆಯಲ್ಲಿ ನಿವಿಷ್ಟವಾಗಿರುವ ಭಾರತೀಯ ಸಂಸ್ಕೃತಿಯನ್ನು ದೇಶಭಾಷೆಗಳು ಪ್ರಸಾರ ಮಾಡಿ ಮೆರೆಸದಿದ್ದರೆ ಅದು ಮೂಲೆಗುಂಪಾಗುತ್ತಿತ್ತು. ಮೇಲಾಗಿ ಸಂಸ್ಕೃತ ಭಾಷೆಯ ಬೆಳವಣಿಗೆ ಮುರುಟಿ ಹೋದೊಡನೆಯೆ ಭಾರತೀಯ ಸಂಸ್ಕೃತಿಯ ವಿಕಾಸ ನಿಂತು ಹೋಗಲಿಲ್ಲ. ದೇಶ ವಿದೇಶೀಯ ಸಂಸ್ಕೃತಿ ನಾಗರಿಕತೆಗಳ ಸಂಪರ್ಕ ಸಂಘರ್ಷಣೆಗಳಿಂದ ಅದು ನಿತ್ಯನೂತನವಾಗಿ ಪ್ರೋಜ್ವಲವಾಗಿ ವಿಕಾಸಗೊಳ್ಳುತ್ತಿದೆ. ಆ ಸಂಸ್ಕೃತಿಯ ವಿಕಾಸಗೊಳ್ಳುತ್ತಿದೆ. ಆ ಸಂಸ್ಕೃತಿಯ ವಿಕಾಸ ಪ್ರಕಾಶನ ಇಂದಿನ ಜೀವಂತ ಭಾಷೆಗಳಿಂದ ಮಾತ್ರ ಸಾಧ್ಯ ಇದಲ್ಲದೆ ಸಂಸ್ಕೃತವೊಂದೇ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಏಕೈಕ ಭಾಷೆಯೆನ್ನುವುದಾದರೆ ಆ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಭಾಷೆಗಳಿಗೆ ಅಪಚಾರವೆಸಗಿದಂತಾಗುತ್ತದೆ.

ಸಂಸ್ಕೃತವೊಂದೇ ರಾಷ್ಟ್ರಭಾಷೆ, ಅದು ಸಂಪರ್ಕಭಾಷೆಯಾಗತಕ್ಕದ್ದೆಂದು ಇನ್ನೂ ಕೆಲವರು ಹೇಳಿಕೊಂಡು ಬಾಯಿಚಪ್ಪರಿಸಿಕೊಳ್ಳುತ್ತಿದ್ದಾರೆ. ವೃದ್ಧ ತನ್ನ ಯೌವನವನ್ನು ನೆನೆಸಿಕೊಂಡಂತೆ ಜನ ಏನೇನೋ ಗುಣಾಕಾರ ಹಾಕಿಕೊಳ್ಳುತ್ತಿದ್ದಾರೆ, ಮನಸ್ಸಿನಲ್ಲಿ ಮಂಡಿಗೆ ಸವಿಯುತ್ತಿದ್ದಾರೆ. ಹಿಂದಿ ಇಂಗ್ಲಿಷ್ ಭಾಷೆಗಳ ವಾರಸುದಾರರಂತೆ, ಅವರು ಬೆಂದ ಮನೆಯಲ್ಲಿ ಹಿರಿದದ್ದೆ ಲಾಭವೆನ್ನುವಂತೆ ಭಾಷಾ ಸಮಸ್ಯೆಯನ್ನು ಕ್ಲಿಷ್ಟಗೊಳಿಸುತ್ತಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಕೇವಲ ಹಿಡಿಮಂದಿಯ ವ್ಯವಹಾರ ಭಾಷೆಯಾಗಿದ್ದದ್ದು ಈಗ ಜನಸಾಮಾನ್ಯರ ವ್ಯವಹಾರ ಭಾಷೆಯಾಗಲು ಸಾಧ್ಯವಾದೀತೆ? ಮೊಮ್ಮಗನಿಗೆ ಹೆಣ್ಣು ನೋಡಲು ಹೋದ ಅಜ್ಜ ಆ ಹೆಣ್ಣಿನ ರೂಪರಾಶಿಯನ್ನು ನೋಡಿ ತಾನೇ ಮದುವೆಯಾಗಲು ಬಯಸಿದಂತಾಗಿದೆ ಆ ಜನರ ಪಾಡು. ಸ್ಪೃಶ್ಯಾಸ್ಪೃಶ್ಯ ಮನೋಭಾವನೆ ಮಡಿವೈಲಿಗೆಯ ಭ್ರಾಂತಿ ದೃಢವಾಗಿ ಬೇರೂರಿರುವ ರಾಷ್ಟ್ರದಲ್ಲಿ ಆ ಭಾಷೆ ಸಾರ್ವಜನಿಕವಾಗಲು ಸಾಧ್ಯವೆ? ಇತ್ತೀಚಿನವರೆಗೂ ಶೂದ್ರರು ಆ ಭಾಷೆಯನ್ನು ಓದುವಂತಿರಲಿಲ್ಲ. ಹೈಸ್ಕೂಲುಗಳಲ್ಲಿ ಸಂಸ್ಕೃತವನ್ನು ತೆಗೆದುಕೊಂಡ ಶೂದ್ರ ವಿದ್ಯಾರ್ಥಿಗಳು ಇತ್ತೀಚಿನವರೆಗೂ ಪಂಡಿತರ ತಿರಸ್ಕಾರಕ್ಕೆ ಗುರಿಯಾಗುತ್ತಿದ್ದುದುಂಟು. ಗಾಯತ್ರೀ ಮಂತ್ರವನ್ನು ಸ್ತ್ರೀಯರು ಪಠಿಸಬಾರದೆಂಬ ಮೌಢ್ಯ ಭಾವನೆ ೧೯೬೭ನೆಯ ವರ್ಷದಲ್ಲಿಯೂ ಉಚ್ಚವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿದೆ. ಸಂಸ್ಕೃತವನ್ನು ಸಂಪರ್ಕ ಭಾಷೆಯ ಪಟ್ಟಕ್ಕೇರಿಸಬೇಕೆಂಬುದು ವ್ಯರ್ಥ ಸಾಹಸವಾಗುತ್ತದೆ. ಇರುವ ಪರಿಸ್ಥಿತಿಗೆ ಹೊಂದಿಕೊಂಡು ಅನಾವಶ್ಯಕವಾಗಿ ಸಮಸ್ಯೆಗಳನ್ನು ಕ್ಲಿಷ್ಟಗೊಳಿಸದೆ, ಅತಿಮುಖ್ಯವಾದ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ದೈಹಿಕ ಮತ್ತು ಬೌದ್ಧಿಕ ಶಕ್ತಿಗಳನ್ನು ವಿನಿಯೋಗಿಸುವುದರಿಂದ ರಾಷ್ಟ್ರಕಲ್ಯಾಣ ಸಾಧಿತವಾಗುತ್ತದೆ. ಸಾಮಾನ್ಯ ಜನತೆಯ ಕಲ್ಯಾಣವನ್ನು ನಿರ್ಲಕ್ಷಿಸಿದ ಪಟ್ಟಭದ್ರ ಹಿತಾಸಕ್ತರಾದ ಜನರಿಂದ ಈ ಸಮಸ್ಯೆ ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಸಂಸ್ಕೃತ ಈಗ ತಾನು ಹೆತ್ತು-ಹೊತ್ತು ಸಾಕಿದ ಮಕ್ಕಳ ಮೂಲಕ, ಔರಸ ಪುತ್ರಿಯಾದ ಹಿಂದಿಯ ಮೂಲಕ ತನ್ನ ವೈಭವವನ್ನು ಕಾಣಬೇಕಾಗಿದೆ.

ಈ ಸಂದರ್ಭದಲ್ಲಿ ಎಂದೋ ಹೇಳಿದ ಡಿ. ವಿ. ಜಿ.ಯವರ ಪ್ರವಾದಿ ದೃಷ್ಟಿಯ ಮಾತುಗಳು ಮನನೀಯವಾಗಿವೆ: "ಸಂಸ್ಕೃತವು ಪ್ರಾಚೀನತಮವೂ ಪೂಜ್ಯತಮವೂ ಆದ ಭಾಷೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದರ ಉಪಕಾರವು ನಮಗೆ ಇನ್ನು ಮುಂದೆಯೂ ಬೇಕಾಗಿದೆ. ಆದರೆ ಆ ಭಾಷೆಯ ಬೆಲೆಗೂ ಒಂದು ಮಿತಿಯುಂಟೆಂಬುದನ್ನು ಮಾತ್ರ ಮರೆಯಲಾಗದು . . . ಅದು ತಿಳಿಸಬೇಕಾದುದನ್ನು ತಿಳಿಸಿ ಮುಗಿಸಿದೆ. ಇನ್ನು ಮೇಲೆ ಹೊಸದಾಗಿ ಅದು ಏನನ್ನೂ ತಿಳಿಸುವಂತಿಲ್ಲ. ಅದು ಪುನಃ ಸಾಮಾನ್ಯ ಜನದ ದಿನಚರಿಯ ಭಾಷೆಯಾಗಿ ಹೊಸಹೊಸ ಶಾಸ್ತ್ರಗಳು ಅದರಲ್ಲಿ ಹುಟ್ಟುವ ಕಾಲವು ಮತ್ತೊಮ್ಮೆ ಬರುವುದಾದರೆ ಅದನ್ನು ಯಾರೂ ಬೇಡವೆನ್ನುವುದಿಲ್ಲ. ಸದ್ಯಕ್ಕೆ ಅಂಥಾ ಕಾಲದ ಸೂಚನೆಗಳಲ್ಲಿಯೂ ಕಾಣಬರುತ್ತಿಲ್ಲ. ಅಂಥಾ ಕಾಲವನ್ನುಂಟಾಗಿಸ

ಬೇಕೆಂಬ ಪ್ರಯತ್ನವು ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸುವ ಪ್ರಯತ್ನದಂತೆ-ಗಂಗಾಪ್ರವಾಹವನ್ನು ಬೇರೊಂದು ಮಾರ್ಗದಲ್ಲಿ ಹರಿಯಿಸಬೇಕೆಂಬ ಪ್ರಯತ್ನದಂತೆ-ವಿಪರೀತ ಸಾಹಸವಾಗಿ ಕಾಣುತ್ತದೆ." (ಜೀವನ ಸೌಂದರ್ಯ ಮತ್ತು ಸಾಹಿತ್ಯ ಪುಟ ೧೨). ಈ ಮಾತು ಸರ್ವದೇಶಗಳಿಗೂ ಸರ್ವಕಾಲಕ್ಕೂ ಸರ್ವ ಭಾಷೆಗಳಿಗೂ ಅನ್ವಯವಾಗತಕ್ಕುವು. ಹಿಂದೆ ಸಂಸ್ಕೃತ ಮಾಡಿದ ಕೆಲಸವನ್ನು, ತಂದೆ ಮಾಡಿಬಿಟ್ಟ ಕೆಲಸವನ್ನು ಮಗ ಮುಂದುವರಿಸುವಂತೆ-ಈಗ ದೇಶ ಭಾಷೆಗಳು ಮಾಡಬೇಕಾಗಿದೆ. ಈ ಮಾತು ಇಂಗ್ಲಿಷ್ ಭಾಷೆಗೂ ಸರಿಸಮನಾಗಿ ಅನ್ವಯಿಸುತ್ತದೆ.

ಸಂಸ್ಕೃತವನ್ನು ಅಲ್ಲಗಳೆಯುವ ದೃಷ್ಟಿಯಿಂದ ಮೇಲಿನ ವಾದವನ್ನು ಮುಂದೆ ದೂಡಿಲ್ಲ. ಸಂಸ್ಕೃತ ಬೇರೆ, ದೇಶ-ಭಾಷೆ ಬೇರೆಯೆಂಬ ಭಾವನೆಯನ್ನು ನಾವೀಗ ಮರೆಯಬೇಕಾಗಿದೆ. ಮಗನ ಮೂಲಕ ತಂದೆ ಉಳಿಯುವಂತೆ ದೇಶಭಾಷೆಗಳ ಮೂಲಕ ಸಂಸ್ಕೃತ ಉಳಿಯಬೇಕಾಗಿದೆ. ಆದರೆ ಅದು ಹೇಗೆ ಉಳಿದಿರಬೇಕೆಂಬುದನ್ನು ಈಗ ನಿರ್ಧರಿಸಬೇಕಾಗಿದೆ. ದೇಶ ಭಾಷೆಗಳ ಪ್ರೌಢಿಮೆಗೆ ಸಂಸ್ಕೃತಕಾರಣವಾಗಿರುವಾಗ ಅವುಗಳ ಪೋಷಣೆಗೆ ಸಂಸ್ಕೃತದ ಅಮೃತಹಾರ ಅತ್ಯಾವಶ್ಯಕ. ನಾಡಿನ ಪ್ರತಿಯೊಬ್ಬ ವಿದ್ಯಾರ್ಥಿಯೂ ಅಷ್ಟೋ ಇಷ್ಟೋ ಸಂಸ್ಕೃತವನ್ನು ಕಲಿಯಬೇಕಾದುದ್ದು ಅನಿವಾರ್ಯ. ಪ್ರತಿಯೊಬ್ಬ ಭಾರತೀಯನಿಗೂ ಸಂಸ್ಕೃತದ ಬಗ್ಗೆ ಅಭಿಮಾನ ಪೂಜ್ಯಭಾವನೆಗಳು ಮೂಡುವಂತಾಗಬೇಕು. ಆಗ ಅದು ಸಿಜವಾಗಿಯೂ ರಾಷ್ಟ್ರಭಾಷೆಯಾಗುತ್ತದೆ. ಜನಸಂಪರ್ಕವನ್ನಪೇಕ್ಷಿಸದೆ ವಿವಿಕ್ತ ಮನೋಭಾವದಿಂದ 'ಮಡಿ' ಭಾವನೆಯಿಂದ ಶಾಲಿನೊಳಗೆ ಬೆಚ್ಚಗಿರುವುದಾದರೆ ಅದು ಅಖಂಡ ಭಾರತವನ್ನೂ ಪ್ರತಿಸಿಧಿಸುವ ಭಾಷೆಯಾಗಲಾರದು ಆಗ ಅದರಿಂದ ನಾಡಿಗೆ ಏನೂ ಪ್ರಯೋಜನವೊದಗುವುದಿಲ್ಲ.

ತ್ರಿಭಾಷಾ ಸೂತ್ರದ ಧೃತರಾಷ್ಟ್ರ ಮುಷ್ಟಿಯಲ್ಲಿ ಸಂಸ್ಕೃತ ಅಪ್ಪಚ್ಚಿಯಾಗುವ ದುಸ್ಥಿತಿ ಈಗ ಸಂಪ್ರಾಪ್ತವಾಗಿದೆ. ನೌಕರಿಯೇ ವಿದ್ಯಾಭ್ಯಾಸದ ಏಕೈಕ ಗುರಿಯಾಗಿರುವಾಗ ಸಂಸ್ಕೃತವನ್ನು ಕೇಳುವವರಿಲ್ಲ. ಅದರ ಕಲಿಕೆಯೆಲ್ಲ ಸಂಪ್ರದಾಯ ಪದ್ಧತಿಯ ಪಾಠಶಾಲೆಗಳಿಗೆ ಸೀಮಿತವಾಗಿದೆ; ಕೇವಲ ಪುರೋಹಿತರಿಗೆ ಮತ್ತು ಪೀಠಾಧಿಪತಿಗಳಿಗೆ ಮೀಸಲಾಗಿದೆ. ಸಂಸ್ಕೃತ ವಿದ್ವಾಂಸರಿಗೆ ಸಾಕಷ್ಟು ಉತ್ತೇಜನವಿಲ್ಲ. ಸಂಸ್ಕೃತ ಪುನರ್ಜನ್ಮ ಪಡೆಯಬೇಕಾದರೆ ಧೈರ್ಯದಿಂದ ಈಗಿನ ತ್ರಿಭಾಷಾ ಸೂತ್ರವನ್ನು ತುಸು ಮಾರ್ಪಡಿಸಬೇಕು. ಮಕ್ಕಳಿಗೆ ಕನ್ನಡ ವರ್ಣಮಾಲೆಯ ಜೊತೆಗೆ ನಾಗರಿ ಲಿಪಿಯನ್ನೂ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯ ಜೊತೆಗೆ ಕಲಿಸಬೇಕು. ಸಂಸ್ಕೃತದ ಸುಲಭ ಪಾಠಗಳನ್ನು ಬೋಧಿಸಬೇಕು. ಅಮರಸುಭಾಷಿತಗಳನ್ನು ಕಂಠಪಾಠಮಾಡಿಸಬೇಕು. ಹೈಸ್ಕೂಲಿನಲ್ಲಿ ಇಂಗ್ಲಿಷಿನ ಭಾರವನ್ನು ತುಸು ಕಡಮೆಮಾಡಿ ದೇಶಭಾಷೆ ಅಥವಾ ಹಿಂದಿಯ ಭಾಗವಾಗಿ ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಸಬೇಕು. ದೇಶಭಾಷೆ (ಮಾತೃಭಾಷೆ) ಅಥವಾ ಹಿಂದಿಗೆ ವಾರಕ್ಕೆ ಆರು ಪೀರಿಯಡ್ಡು ಒದಗಿಸಿ ಅವುಗಳಲ್ಲಿ ಎರಡು ಸಂಸ್ಕೃತಕ್ಕೆ ಮೀಸಲಾಗಿರಬೇಕು. ಕನ್ನಡ ಅಥವಾ ಹಿಂದಿಯ ಪ್ರಶ್ನಪತ್ರಿಕೆಗಳಲ್ಲಿ ಸಂಸ್ಕೃತ ಪ್ರಶ್ನೆಗಳನ್ನೂ ಸೇರಿಸಬೇಕು. ಹೈಸ್ಕೂಲಿನಲ್ಲಿ ಸಂಸ್ಕೃತವನ್ನು ಐಚ್ಛಿಕಭಾಷೆಯಾಗಿ ಕಲಿಸಬೇಕು. ಅದರ ಭಾಗವಾಗಿ ಎರಡು ಪೀರಿಯಡ್ಡು ದೇಶಭಾಷೆ ಅಥವಾ ಮಾತೃಭಾಷೆಯನ್ನು ಕಲಿಸಬೇಕು. ಪ್ರೀಯೂನಿವರ್ಸಿಟಿ ದರ್ಜೆಯ ನಂತರ ವಿದ್ಯಾರ್ಥಿ ಯಾವ ಭಾಷೆಯನ್ನಾದರೂ ಐಚ್ಛಿಕವಾಗಿ ಆರಿಸಿಕೊಳ್ಳುವ ಅವಕಾಶವಿರಬೇಕು. ಯಾವೊಂದು ಭಾಷೆಯನ್ನೂ ಕಡ್ಡಾಯವಾಗಿ ಕಲಿಸಬಾರದು. ಇದರಿಂದ ವಿದ್ಯಾರ್ಥಿಗಳಿಗೆ ಕ್ಲೇಶ, ಅನಿಷ್ಟ; ಇದು ಶಿಕ್ಷಣ ಶಾಸ್ತ್ರದ ಮೂಲ ಸೂತ್ರಗಳಿಗೂ ವಿರುದ್ಧ.

ದುರದೃಷ್ಟವಶಾತ್ ಉನ್ನತ ಮಟ್ಟದಲ್ಲಿ ಸಂಸ್ಕೃತದ ಅಂಗವಾಗಿ ದೇಶಭಾಷೆಯನ್ನೂ ಕಲಿಸುವ ಪರಿಪಾಠವಿಲ್ಲ. ಇದರಿಂದ ಸಂಸ್ಕೃತ ಕಲಿತವರ ಮನಸ್ಸಿನಲ್ಲಿ ಮಡಿ-ಮೈಲಿಗೆ ಭಾವನೆ ಸಹಜವಾಗಿ ಮೂಡುತ್ತದೆ. ಸಂಸ್ಕೃತ ಕಲಿತವರು ಸಾಮಾನ್ಯವಾಗಿ ದೇಶಭಾಷೆ ಮೂಲಕವೇ ಸಂಶೋಧನ ಲೇಖನಾದಿ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಸಂಸ್ಕೃತ ಕಲಿತಪ್ಪರಿಂದಲೆ ಕನ್ನಡದಲ್ಲಿ ಪ್ರಭುತ್ವ ಒದಗುವುದಿಲ್ಲ; ಬೆಳೆಯುತ್ತಿರುವ ಭಾಷೆಯಲ್ಲಿ ಪಾಂಡಿತ್ಯ ಕೈಗೂಡುವುದಿಲ್ಲ. ಈ ದೃಷ್ಟಿಯಿಂದ ಉಚ್ಚತರಗತಿಗಳಲ್ಲಿಯೂ ಸಂಸ್ಕೃತದ ಅಂಗವಾಗಿ ಕನ್ನಡವನ್ನು ಕಲಿಸುವಂತೆ ಏರ್ಪಾಡಾಗಬೇಕು-ಕನ್ನಡ ಮತ್ತು ಹಿಂದಿ ಶಾಲೆಗಳಲ್ಲಿ ಅವುಗಳ ಅಂಗವಾಗಿ ಸಂಸ್ಕೃತವನ್ನು ಕಲಿಸುವಂತೆ. ಇಂಥ ಏರ್ಪಾಡಿನಿಂದ ಎರಡು ಭಾಷೆಗಳಿಗೂ ಪ್ರಯೋಜನ ಒದಗುವುದಲ್ಲದೆ ಭಾವೈಕ್ಯ ಸಾಮರಸ್ಯಗಳ ಸಿದ್ಧಿ ಸುಲಭವಾಗುತ್ತದೆ. ಆಗ ದೇವವಾಣಿ ಜನವಾಣಿಯಾಗಿ ರಾಷ್ಟ್ರವಾಣಿಯಾಗಿ ಪರಮ ಪೂಜನೀಯವಾಗುತ್ತದೆ.

[ಮಾನಸ ಗಂಗೋತ್ರಿಯ ಸಂಸ್ಕೃತ ಶಾಖೆಯ ಆಶ್ರಯದಲ್ಲಿ ೨೦-೩-೬೭ರಂದು ಮಾಡಿದ ಭಾಷಣ]

ಡಾ|| ಆದಿನಾಥ ನೇಮಿನಾಥ ಉಪಾಧ್ಯೆ

(೮ನೆಯ ಪುಟದಿಂದ ಮುಂದುವರಿದುದು)

೮. **ಬೃಹತ್ ಕಥಾಕೋಶ:** ೧೫೭ ಸಂಸ್ಕೃತ ಕಥಾ ಸಂಕಲನ, ಮಹಾಕವಿ ಹರಿಷೇಣ ಬರೆದದ್ದು, ಕಾಲ ಕ್ರಿ. ಶ. ೯೩೨. ಶಿವಾರ್ಯನ ಪ್ರಾಕೃತ ಭಗವತೀ ಆರಾಧನಕ್ಕೆಸಂಬಂಧಿಸಿದ ಸಂಸ್ಕೃತ ಕಥಾಗುಚ್ಛವಿದು. ಹತ್ತನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿದ ಈ ಅತ್ಯುತ್ತಮ ಕಥನಕಾವ್ಯವನ್ನು ಪ್ರಪ್ರಥಮವಾಗಿ ಪ್ರಕಟಿಸಿ ಪ್ರಕಾಶಕ್ಕೆ ತಂದ ಶ್ರೇಯಸ್ಸು ಡಾ. ಉಪಾಧ್ಯೆಯವರದು. ಬೃಹತ್ಕಥಾಕೋಶದ ಪ್ರಸ್ತಾವನೆ ಅವರ ಪರಮ ಪರಿಣತ ಪ್ರಜ್ಞೆಯ ಪರಿಪಕ್ವ ಫಲವೆಂದು ವಿಶ್ವಾದ್ಯಂತ ವಿಮರ್ಶಕೋತ್ತಮರು ಅಭಿಪ್ರಾಯಿಸಿದ್ದಾರೆ. ರಾಯಲ್ ಅಷ್ಟದಳಾಕೃತಿಯ ೫೬೦ ಪುಟಗಳ ಈ ಕೃತಿ ೧೯೪೩ರಲ್ಲಿ ಅಚ್ಚಾಗಿದೆ.

೯. **ಧೂರ್ತಾಖ್ಯಾನ:** ಪ್ರಾಕೃತ ವಿಡಂಬನ ಕಾವ್ಯ, ಹರಿಭದ್ರ ರಚಿತ, ಕ್ರಿ. ಶ. ಎಂಟನೆಯ ಶತಮಾನದ ಕೆಲವು ಜೈನ ಕಥೆಗಳು ಈ ಕಾವ್ಯದಲ್ಲಿ ಕಮನೀಯವಾಗಿ ಕೂಡಿಕೊಂಡಿವೆ. ೧೯೪೪.

೧೦. **ಚಂದ್ರಲೇಖಾ:** ಪ್ರಾಕೃತ ನಾಟಕ, ರುದ್ರದಾಸ ನಾಟಕಕಾರ. ಇದರಲ್ಲಿ ಪ್ರಾಕೃತ ಪಾಠದೊಡನೆ ಸಂಸ್ಕೃತ ಛಾಯೆಯನ್ನೂ ಕೊಟ್ಟಿದ್ದಾರೆ. ಅತ್ಯಂತ ಆಧಾರಯುತವಾಗಿ ಸಂಪಾದಿತವಾಗಿರುವ ಶಾಸ್ತ್ರಶುದ್ಧ ಕೃತಿ. ಸಂಸ್ಕೃತ ಕರ್ಪೂರಮಂಜರಿಯೆಂಬ ಕೃತಿಯನ್ನು ಬಹುವಾಗಿ ಹೋಲುವ ಪ್ರಾಕೃತ ಸಟ್ಟಕ ಚಂದ್ರಲೇಖಾ. ಇದನ್ನು ಸುಮಾರು ಆರು ಇತರ ಸಟ್ಟಕಗಳೊಡನೆ ತುಲನೆಮಾಡಿ ಆ ಹಿನ್ನೆಲೆಯಲ್ಲಿ ಇದರ ಸ್ಥಾನವೇನೆಂಬುದನ್ನು ನಿರ್ಧರಿಸಿದ್ದಾರೆ. ೧೯೪೫.

೧೧. **ಲೀಲಾವಈ ಕಹಾ:** ಪ್ರಾಕೃತ ಪದ್ಯ ಕಾವ್ಯ, ಕ್ರಿ. ಶ. ಎಂಟನೆಯ ಶತಮಾನಕ್ಕೆ ಸೇರಿದ ಕುತೂಹಲ ಕವಿಯ ಉತ್ಕೃಷ್ಟ ಕಾವ್ಯ. ಅನಾಮಧೇಯ ಲೇಖಕನ ಸಂಸ್ಕೃತ ವ್ಯಾಖ್ಯಾನವನ್ನೂ ಕೊಟ್ಟಿದ್ದಾರೆ. ಸಾತವಾಹನ ಮತ್ತು ಲೀಲಾವತೀ ರಾಣಿಯರ ಪ್ರಣಯವನ್ನು ಚಿತ್ತರಿಸುವ ಈ ಶೃಂಗಾರ ಕಾವ್ಯ ರಾಯಲ್ ಅಷ್ಟದಳಾಕಾರದ ೫೦೦ ಪುಟವಿದ್ದು ೧೯೪೯ರಲ್ಲಿ ಮುದ್ರಣವಾಗಿದೆ.

೧೨. **ತಿಲೋಯಪಣ್ಣತ್ತಿ** (ಭಾಗ ೨) ; ೧೯೫೧. (ವಿವರಗಳಿಗೆ ನೋಡಿ ೭ನೆಯ ಸಂಖ್ಯೆಯ ಪುಸ್ತಕ.)

೧೩. **ಆನಂದಸುಂದರೀ:** ಪ್ರಾಕೃತ ನಾಟಕ, ಘನಶ್ಯಾಮಕೃತ. ಪ್ರಾಕೃತ ಮೂಲಕೃತಿಯೊಡನೆ ಭಟ್ಟನಾಥನ ಸಂಸ್ಕೃತ ವ್ಯಾಖ್ಯಾನವನ್ನೂ ಇತ್ತಿದ್ದಾರೆ. ಹೆಚ್ಚು ಪ್ರಮಾಣಯುಕ್ತವಾದ ಈ ಪುಸ್ತಕ ಮೊದಲ ಬಾರಿಗೆ ಅಚ್ಚಾಗಿದೆ, ೧೯೫೫

೧೪. **ಜಂಬೂದೀವ ಪಣ್ಣತ್ತೀ** (ಜಂಬೂದ್ವೀಪ ಪ್ರಜ್ಞಪ್ತಿ), ಪದ್ಮನಂದಿಕೃತ ಪ್ರಾಕೃತ ಕೃತಿ (ಡಾ|| ಹೀರಾಲಾಲ್ ಜೈನ್ ಅವರು ಸಹಸಂಪಾದಕರು) ಪ್ರಾಕೃತದಿಂದ ಪಂಡಿತ ಬಾಲಚಂದ್ರ ಹಿಂದಿಗೆ ಮಾಡಿದ ಅನುವಾದವೂ ಇದೆ. ಜೈನರ ಲೋಕಾಕಾರ ಕಥನವನ್ನು ಕೊಡುವ ಕೃತಿ, ೧೯೫೭.

೧೫. **ಕುವಲಯಮಾಲಾ ಕಹಾ:** ಪ್ರಾಕೃತ ಕಥಾ ಗ್ರಂಥ, ಉದ್ಯೋತನ ಸೂರಿಕೃತ. ಇದು ನೀತಿಪ್ರಧಾನವಾದ ಶ್ರೇಷ್ಠ ಪ್ರಾಕೃತ ಚಂಪೂ ಕಾವ್ಯ. ಸುರಮ್ಯ ಶೈಲಿಯ ಸೊಗಸಿನಿಂದ ಶೋಭಿಸುವ ಈ ಕೃತಿ ಭಾಷಾಶಾಸ್ತ್ರದ ದೃಷ್ಟಿಯಿಂದ ಅಭ್ಯಸನೀಯವಾಗಿದೆ, ೧೯೬೬.

೧೬. **ಕತ್ತಿಗೆಯಾಣುಪ್ಪೆಖ್ಖಾ:** (ಕಾರ್ತಿಕೇಯಾನುಪ್ರೇಕ್ಷಾ) ಪ್ರಾಕೃತ ಜೈನ ಗ್ರಂಥ, ಸ್ವಾಮಿಕುಮಾರ ಕವಿ ಬರೆದದ್ದು. ಶುಭಚಂದ್ರನ ಸಂಸ್ಕೃತ ವ್ಯಾಖ್ಯಾನದೊಡನೆ ಇದನ್ನು ಮೊದಲಸಲ ಸಿದ್ಧಪಡಿಸಿದ್ದಾರೆ. ಮೂಲಪಾಠ, ಕವಿಕಾಲ ಮತ್ತು ವ್ಯಾಖ್ಯಾನಗಳನ್ನು ಕುರಿತು ವಿಪುಲವಾದ ವಿವೇಚನೆಯಿದೆ, ಅನೇಕ ಅನುಬಂಧಗಳಿವೆ. ಡಬಲ್ ಕ್ರೌನ್ ೬೦೦ ಪುಟ, ರಾಜಚಂದ್ರ ಜೈನಶಾಸ್ತ್ರಮಾಲಾ ಪ್ರಕಟನೆ, ಮುಂಬಯಿ, ೧೯೬೦.

೧೭. **ಪಾಲಿ ಮತ್ತು ಪ್ರಾಕೃತ:** ಕನ್ನಡದಲ್ಲಿ ಬರೆದ ಸ್ವತಂತ್ರ ಕೃತಿ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಕಟಣೆ, ೧೯೬೬

೧೮. **ಷಟ್ಖಂಡಾಗಮ;** ಧವಳಾಸಮೇತ, ೫೦೦ಪುಟಗಳ ಹದಿಮೂರು ಸಂಪುಟಗಳು ಡಾ|| ಹೀರಾಲಾಲ್ ಜೈನ್ ಅವರೊಡನೆ ಸಿದ್ಧಪಡಿಸಿದೆ, ಹಿಂದಿ ಅನುವಾದ ಸಮೇತ, ೧೬೩೯-೧೯೫೬

೧೯. **ಸಿಂಗಾರ ಮಂಜರಿ:** ಪ್ರಾಕೃತ ನಾಟಕ, ವಿಶ್ವೇಶ್ವರ ಕೃತ. ಮೊಟ್ಟಮೊದಲನೆಯ ಸಲ ಅತ್ಯಂತ ಆಧಾರಯುತವಾಗಿ ಮನೋಜ್ಞವಾದ ಮುನ್ನುಡಿಯೊಡನೆ ಮುದ್ರಿಸಿದ್ದಾರೆ. ಇದು ಪ್ರಥಮಪ್ರಕಟನೆಯಾಗಿ

(೬೨ನೆಯ ಪುಟ)

ಅನಾದಿ ಯುಗಾದಿ

ಕಯ್ಯಾರ ಕಿಞ್ಞಣ್ಣ ರೈ

೧

ಮಣಿವೆ ನಿನಗೆ—
ಅನಾದಿ ಯುಗಾದಿಯ ಚೇತನವೆ
ವಿಜಯಜೀವನ ನಿಕೇತನವೆ
ಅನಂತನವೀನ ಚಿರಂತನವೆ
ಮಣಿವೆ ನಿನಗೆ ಮಂಗಲದಿನವೆ
ಅನಾದಿ ಯುಗಾದಿಯ ಚೇತನವೆ

ಬಂಗಾರದ ಜಿಂಕೆಯ ಮರಿಯೆ
ಕಹಿಬಾಳಿಗೆ ಸವಿ ಸವರಿರುವೆ
ಅಶೋಕದಿ ಶೋಕಿಪ ಸಿರಿಯೆ
ವರುಷಕ್ಕೊಮ್ಮೆ ಹರುಷವ ತರುವೆ
ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನಗೆ ಮಂಗಲದಿನವೆ

೨

ದಿವ್ಯಸುಪ್ರಭಾತ—
ನಿಶಾಪಟದ ಮುಸುಕ ತೆಗೆದು
ಉಷಾ ನಟಿಯು ಬಂದಳು
ಬೆಳ್ಳಿತಾರೆ ಮಿಸುಗೆ ಮೋರೆ
ಉಲ್ಲಸದಲಿ ನಿಂದಳು !

ಕಂಪಿತ ಕಲಕಂಠದಿಂದ
ಪಕ್ಷಿ ಲಕ್ಷ ಕೂಜನ
ಮಂದಗಂಧ ಶೀತವಾತ
ರಮ್ಯತೆ ರೋಮಾಂಚನ !

ಪೂರ್ವಗಿರಿಯ ಕೋಡು ನೋಡು
ಅರುಣಕಿರಣ ತಬ್ಬಿದೆ
ಮಣ್ಣುಕಲ್ಲು ಮರದಗೆಲ್ಲು
ಹೊನ್ನಬಣ್ಣ ಹಬ್ಬಿದೆ

ಬಾನು ಬಯಲು ಕಾನು ಕಡಲು
ಸೌಂದರ್ಯದಿ ಮಿಂದಿದೆ
ಸಗ್ಗ ಬುವಿಗೆ ತಗ್ಗಿ ಬರಲು
ಸುಗ್ಗಿ ಹಿಗ್ಗಿ ನಿಂದಿದೆ

ಎದೆಯ ಕದವ ತೆರೆಯುತಿರೆ
ಬಳಿಗೆ ಬೆಳಕು ಹರಿಯಿತು
ಹೂಗಳೆಸಳು ಬಿರಿಯುತಿರೆ
ತುಂಬಿಹಾಡು ಮೊರೆಯಿತು

ಎಂಥ ದಿವ್ಯ ಸುಪ್ರಭಾತ !
ಇದು ಯುಗಾದಿಗಾದಿಯು
ಹೊಸತು ವರ್ಷಕೆನಿತು ಹರ್ಷ
ನವ್ಯತೆಗೆ ಬುನಾದಿಯು
ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನಗೆ ಮಂಗಲದಿನವೆ

೩

ಮನೆಯ ಮನವ ಬೆಳಗಿ—
ಮುಂಜಾವದಿ ಮಿಂದು ಬನ್ನಿ
ಹಣ್ಣುಕಾಯಿ ಹೊನ್ನು ತನ್ನಿ
ಭಕ್ತಿಯಿಂದ ಬಂದು ಸುತ್ತು
ಒಡೆಯನಡಿಗೆ ಕಾಣ್ಕೆಯಿತ್ತು—
ಶಿರವಬಾಗಿ ನಿಲುವುದು
ವರವು ನಿಮಗೆ ಸಲುವುದು

ಹಿರಿಯರವರು ಪಾದಹಿಡಿ
ಕಿರಿಯರಿವರು ಹರಕೆಕೊಡಿ
ಬಂಧುಬಳಗವೊಂದೆನುಡಿ
ಮನೆಯ ಮನವ ಬೆಳಗಿಬಿಡಿ
ಯುಗಾದಿಯಂದುಯೆಲ್ಲರು
ಕೂಡಿ ಬಾಳಬಲ್ಲರು

ವೀಳ್ಯದೆಲೆಯ ನೂರು ಸೂಡಿ
ರಸಬಾಳೆಯ ಹೇರು ನೋಡಿ

ತೆಂಗು ಕಂಗು ತುಂಬುಗೊನೆಯು
ಹಣ್ಣು ಹಲಸು ತಿಣ್ಣ ಹೊರೆಯು
ಹೊತ್ತು ತಂದರಿಂದಿಗೆ
ಕಾಣ್ಕೆಯಿಾ ಯುಗಾದಿಗೆ !

ತಂದೆತಾಯಿ ತವರು ನೆನೆದು
ಮಗಳು ಮುದ್ದು ಬಂದಳಿಂದು
ಅಳಿಯ ಬಳಿಯೊಳಿಹನು ನಿಂದು
ಮದುವೆಯಾಗಿ ವರುಷವೊಂದು-
ಸಂದಿತೀ ಯುಗಾದಿಗೆ
ಬಸಿರಿಯಿಾಕೆ-ನಾಚಿಕೆ

ಬಂದರವರು, ಬಂದರಿವರು
ಬಂದರವರು ಭರದಲಿ
ನದಿಗಳಿಂದ ನದಗಳಿಂದ
ಹರಿದ ನೀರು ಕಡಲಲಿ
ಎಲ್ಲ ಬಂದು ಕೂಡಲಿ
ಇಲ್ಲಿ ಹಬ್ಬ ಮಾಡಲಿ

ಉಪ್ಪು ಮೆಣಸು ಸಿಹಿಯು ಕಹಿಯು
ಚಿಗುರುಕಾರಯೆಲ್ಲ ರುಚಿಯು
ಕೂಡಿಮಾಡಿದಡುಗೆ ಬಡಿಸಿ
ಬಂದವರಿಗೆ ಮೊದಲು ತಿನಿಸಿ !
ಭಕ್ಷ್ಯಭೋಜ್ಯ ಚಿತ್ತ್ರರ
ಬದುಕಿನೊಂದು ಚಿತ್ತ್ರರ

ಹರಕುಚಿಂದಿ ಹರಿದುಬಿಟ್ಟು,
ಹೊಸತು ಪಟ್ಟೆ ಬಟ್ಟೆಯುಟ್ಟು
ಸಂಕಟಗಳ ಸಾಯೆಸುಟ್ಟು,
ಬಾಳಬೆಳಗೆ ಪಣವತೊಟ್ಟು,
ನುಗ್ಗಿ ಮುಂದೆ ಹೋಗಿರಿ
ಹಿಗ್ಗಿ ಹೆಜ್ಜೆ ಹಾಕಿರಿ

ಮನಕೆ ಸುಖವ ತಂದಿಹುದು
ಭುವಿಗೆ ಭಾಗ್ಯ ಬಂದಿಹುದು
ಚಿಂತೆ ಸಂತೆ ಸಂದಿಹುದು
ನಮ್ಮಯೇಳ್ಗೆ ಮುಂದಿಹುದು
ಈ ಯುಗಾದಿ ದಿನದಲಿ
ನೆನೆವುದಿದನು ಮನದಲಿ

ಬೆಳಕಿನಲ್ಲಿ ಮಿಂದವರೆ
ಕೊಳಕನೆಲ್ಲ ತೊಳೆದವರೆ
ಬದುಕಿನಲ್ಲಿ ಬೆಂದವರೆ
ಸಾವುನೋವು ಕಳೆದವರೆ
ಇದೊ ಯುಗಾದಿ ಬಂದಿದೆ
ಹೊಸ ಹುರುಪನು ತಂದಿದೆ !
ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನಗೆ ಮಂಗಲದಿನವೆ

೪

ಯುಗಯುಗಗಳ ನಾಂದಿ—
ವಿಕ್ರಮಾಂಕ ದೊರೆಗೆ ಮಿಗಿಲು
ಶಾತವಾಹನಾಂಕನೆನಲು
ಯುಗಪುರುಷನ ಕೀರ್ತಿಯಿಂದೆ
ನವರತ್ನದ ಕಾಂತಿ ಕುಂದೆ !
ತೊಡಗಿತಾ ಯುಗಾದಿಯು
ಶಕವರುಷಕೆ ಆದಿಯು

ರೋಗಶೋಕ ಮುಪ್ಪುಮರಣ
ಕರುಣೆಕರುಳ ಕೊರೆಯುತಿರೆ
ಧರೆಯ ಸಿರಿಯ ಮಡದಿ ಮಗನ
ಮೋಹಮಮತೆ ಮರೆಯುತಿರೆ
ಬುದ್ಧ ಬೆಳಕ ಬೀರಿದ
ಹೊಸ ಯುಗವನೆ ಸಾರಿದ

ಕೈಗೆ ಕಾಲ್ಗೆ ಮೊಳೆಯ ಜಡಿಯೆ
ಶಿಲುಬೆಗಿಕ್ಕಿ ಸಾಯೆಬಡಿಯೆ
ಅವರ ತಪ್ಪ ಕ್ಷಮಿಸುಯೆಂದು
ಮೊರೆಯನಿಟ್ಟ ತಂದೆಗಂದು !
ಕ್ರಿಸ್ತ ಸತ್ತು ಬದುಕಿದ
ಯುಗವೊಂದನು ತೊಡಗಿದ

ಅರೇಬಿಯದ ಮರಳುಧರೆಗೆ
ಧರ್ಮಾಮೃತ ಧಾರೆಸುರಿಸೆ
ಹಚ್ಚೆಹಸಿರು ಹೆಜ್ಜೆನೆಲಕೆ
ಶಾಂತಿ ಸೋದರತೆಯ ಮೆರೆಸೆ
ನಬಿಯನುಡಿಯುದನಿಸಿತು
ಯುಗನವೀನವೆನಿಸಿತು !

ದ್ವೇಷದಲ್ಲಿ ಪ್ರೀತಿಯನ್ನು
ಮೋಸದಲ್ಲಿ ನೀತಿಯನ್ನು
ಭೀರುವಿನಲಿ ವೀರತೆಯನು
ಅಡಿಮೆಯಲ್ಲಿ ಬಿಡುಗಡೆಯನು
ತಂದ ತಾತ ಗಾಂಧಿಯು !
ನವಯುಗಕವ ನಾಂದಿಯು !
ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನಗೆ ಮಂಗಲದಿನವೆ

೫

ಮೊರೆಯುತಿದೆ ಕೇಳಿ—
ಆನೆ ಕುದುರೆ ತೇರು ಜೋಡಿ
ಸಾವಿರ ಕಾಲಾಳು ಕೂಡಿ
ಯಾರ ಮನೆಯೊ ಸೂರೆಗೈದ
ಯಾವನೊಬ್ಬ ಶೂರನಿದ್ದ !
ಪಟ್ಟವಣೆಯನೇರಿದ
ಯುಗಾದಿಹಬ್ಬ ಸಾರಿದ

ಸಿಂಹಾಸನ ನಡುಗುತಿತ್ತು
ರಾಜಮಕುಟ ಕಳಚಿಬಿತ್ತು
ಕ್ರಾಂತಿಗರ್ಭದಾಳ ಸೀಳಿ :
ಚಿಮ್ಮಿಗು ಮೊರೆಯುತಿದೆ ಕೇಳಿ
ಸಮತೆಗಿಹುದೆ ಹಾದಿಯು ?
ಜನತೆಗದೆ ಯುಗಾದಿಯು !

ನೋಯುವಂತೆ ಹೊಡೆದವರು
ನೋಯದಂತೆ ತಡೆದವರು
ಸ್ವರ್ಗದಲ್ಲಿ ಬಿದ್ದವರು
ನರಕದಿಂದ ಯೆದ್ದವರು
ನಡೆದುಬಂದ ದಾರಿ
ಯುಗಾದಿಯೆಂದು ಸಾರಿ !
ಅನಾದಿ ಯುಗಾದಿಯ ಚೇತನವೆ
ಮಣಿವೆ ನಿನಗೆ ಮಂಗಲದಿನವೆ

೬

ಇಂದು ಸುದಿನ—
ನಿನ್ನೆಯ ಕಣ್ಣೀರ ಕುಡಿದು
ನೋವ ನೆನೆದು ಮರುಗದಿರಿ
ನಾಳೆಯೊಂದು ಬಾಳಿಗೆಂದು
ಬುತ್ತಿ ಹೊತ್ತು ತಿರುಗದಿರಿ
ಇಂದು ಸುದಿನ ಬಂದಿದೆ
ಹೊಸತು ಸುಖವ ತಂದಿದೆ

ಬೇವುಬೆಲ್ಲ ಬೆರಸಿತಿಂದು
ಬದುಕಿಗೆ ಭರವಸೆಯತಂದು
ಆಳದ ಪಾತಾಳ ಸಿಗಿದು
ಅಗಲದ ಗಗನಕ್ಕೆ ನೆಗೆದು–
ಜೀವಧ್ವಜವು ಹಾರಲಿ !
ಶ್ರೀಯುಗಾದಿಗೇರಲಿ !

ಅನಾದಿ ಯುಗಾದಿಯ ಚೇತನವೆ
ವಿಜಯ ಜೀವನ ನಿಕೇತನವೆ
ಅನಂತ ನವೀನ ಚಿರಂತನವೆ
ಮಣಿವೆ ನಿನಗೆ ಮಂಗಲದಿನವೆ !

[ದಿನಾಂಕ ೧೦-೪-೧೯೬೭ರಂದು ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಪ್ರಸಾರಿತವಾದ ಕವನ]

ಕನ್ನಡ ಸಾಹಿತ್ಯದ ಪಕ್ಷಿನೋಟ

ಪ್ರಾಚೀನ ಕನ್ನಡ ಮತ್ತು ಹಳಗನ್ನಡ ಯುಗ

(ಪ್ರಾರಂಭದಿಂದ ೧೨ನೆಯ ಶತಮಾನದ ವರೆಗೆ)

ಎಂ. ಎ. ಸಿಂಗಮ್ಮ

ಕನ್ನಡ ಸಾಹಿತ್ಯ ಬಹು ಪ್ರಾಚೀನವಾದುದಾದರೂ ಅದರ ಪ್ರಾರಂಭ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಶಾಸನಗಳಿಂದ, ನೃಪತುಂಗನ 'ಕವಿರಾಜಮಾರ್ಗ'ದಿಂದ, ಮುಂದಿನ ಕವಿಗಳ ಕಾವ್ಯಗಳಿಂದ ಹಿಂದಿನ ಸಾಹಿತ್ಯಚರಿತ್ರೆಯನ್ನು ಕೆಲಮಟ್ಟಿಗೆ ಊಹಿಸಬಹುದಾಗಿದೆ.

ಈಗ ದೊರಕಿರುವ ಶಾಸನಗಳಲ್ಲಿ ಮೊದಲನೆಯದಾದ ೫ನೇ ಶತಮಾನದ ಹಲ್ಮಿಡಿ ಶಾಸನದಲ್ಲಿ ಕನ್ನಡ ಪದಗಳಿಗಿಂತ ಸಂಸ್ಕೃತ ಪದಗಳೇ ಹೆಚ್ಚಾಗಿವೆ. ೭ನೇ ಶತಮಾನದ ಬಾದಾಮಿ ಶಾಸನದಲ್ಲಿ ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿಗಳಿವೆ. ಅದೇ ಕಾಲದ ಶ್ರವಣಬೆಳಗೊಳದ ಶಾಸನಗಳಲ್ಲಿ ಸಂಸ್ಕೃತ ಭೂಯಿಷ್ಠವಾದ ವೃತ್ತಗಳಿವೆ. ಈ ಶಾಸನಗಳ ಪ್ರಾಚೀನ ಭಾಷೆ ಬಹುಮಟ್ಟಿಗೆ ತಮಿಳನ್ನು ಹೋಲುತ್ತದೆ.

ಸಾಮಾನ್ಯವಾಗಿ ಜೈನ ಕವಿಗಳೆಲ್ಲಾ ಸ್ಮರಿಸಿರುವ ಸಮಂತಭದ್ರ, ಕವಿಪರಮೇಷ್ಠಿ ಮತ್ತು ಪೂಜ್ಯಪಾದರು ಸುಮಾರು ೨ರಿಂದ ೬ನೆಯ ಶತಮಾನದೊಳಗೆ ಇದ್ದಂತೆಯೂ, ಸಂಸ್ಕೃತ ಗ್ರಂಥಗಳನ್ನು ರಚಿಸಿರುವಂತೆಯೂ ತಿಳಿದಿದೆ; ಕನ್ನಡದಲ್ಲಿ ಬರೆದಿದ್ದಾರೋ ಇಲ್ಲವೋ ತಿಳಿಯದು. ಕ್ರಿ. ಶ. ೬೫೦ರಲ್ಲಿ ಶ್ರೀವರ್ಧದೇವ ಅಥವಾ ತುಂಬಲೂರಾಚಾರ್ಯನು 'ಚೂಡಾಮಣಿ' ಎಂಬ ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನ ರೂಪವಾದ ಉದ್ಗ್ರಂಥವನ್ನು ಬರೆದಂತೆ ತೋರುತ್ತದೆ. ಸುಮಾರು ೮೦೦ರಲ್ಲಿದ್ದ ಗಂಗರಾಜ ಸೈಗೊಟ್ಟ ಶಿವಮಾರನು ಕನ್ನಡಕ್ಕೇ ಮೊದಲನೆಯ ಅಷ್ಟಕವಾದ ಗಜಾಷ್ಟಕವನ್ನು ಬರೆದಂತೆ ಶಾಸನವಿದೆ. ನೃಪತುಂಗನು ತನ್ನ ಕಾವ್ಯದಲ್ಲಿ ಪೂರ್ವಕವಿಗಳನ್ನು ಸ್ಮರಿಸುತ್ತ ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತರು ಪ್ರಸಿದ್ಧ ಗದ್ಯಕಾರರೆಂದೂ, ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲಾದಿಗಳು ಪ್ರಸಿದ್ಧ ಪದ್ಯಕಾರರೆಂದೂ ನುಡಿದಿದ್ದಾನೆ. ಇವರಲ್ಲಿ ದುರ್ವಿನೀತನು ಸುಮಾರು ೬೦೦ರಲ್ಲಿದ್ದ ಉಭಯ ಭಾಷಾ ಗ್ರಂಥಕರ್ತನಾದ ಗಂಗರಾಜನಿರಬೇಕೆಂಬ ಊಹೆಯಿದೆ; ಶ್ರೀವಿಜಯನೇ 'ಕವಿರಾಜಮಾರ್ಗ'ದ ಕರ್ತೃವಿರಬಹುದೆಂಬ ಒಂದು ಸಂದೇಹವೂ ಇದೆ; ಉಳಿದವರ ವಿಷಯ ಹೆಚ್ಚೇನೂ ತಿಳಿದಿಲ್ಲ. ಇದಲ್ಲದೆ ಈ ಗ್ರಂಥದಲ್ಲಿ ಚತ್ತಾಣ, ಬೆದಂಡೆ ಮೊದಲಾದ ಅಚ್ಚಗನ್ನಡ ಛಂದಸ್ಸಿನ ಪರಿಚಯವಿದೆ. ಯಾವುದೋ ರಾಮಾಯಣದ ಪದ್ಯಗಳ ಉದ್ಧರಣವಿದೆ. ಈ ದೃಷ್ಟಿಯಿಂದ ನೋಡಿದರೆ ಈ ವೇಳೆಗಾಗಲೇ ಕನ್ನಡ ಸಾಕಷ್ಟು ಅಭಿವೃದ್ಧಿ ಹೊಂದಿದ್ದಿತೆಂಬುದೂ, ಸಂಸ್ಕೃತ ಮತ್ತು ಕನ್ನಡ ಮಿಶ್ರಿತವಾದ ಪ್ರೌಢಶೈಲಿಯ ಕಾವ್ಯರಚನೆ ಸುಮಾರು ೬ನೆಯ ಶತಮಾನದಿಂದಲೇ ಸಾಗಿದ್ದಿತೆಂಬುದೂ ನಿರ್ವಿವಾದ.

ಹಳಗನ್ನಡ ಯುಗದ ಪ್ರಾರಂಭವೆಂದು ಕರೆಯಬಹುದಾದ ೯ನೆಯ ಶತಮಾನದಲ್ಲಿ ದೊರೆಯುವ ಏಕೈಕ ಗ್ರಂಥ ಮತ್ತು ಕನ್ನಡ ಸಾಹಿತ್ಯದ ಮೊದಲನೆಯ ಉಪಲಬ್ಧ ಗ್ರಂಥ ಎಂದರೆ ರಾಷ್ಟ್ರಕೂಟರಾಜ ನೃಪತುಂಗನ 'ಕವಿರಾಜಮಾರ್ಗ.' ಇದು ಲಕ್ಷಣ ಗ್ರಂಥವಾದರೂ ಕಾವ್ಯಗುಣಗಳಿಂದ ತುಂಬಿದೆ. ಇದರಲ್ಲಿ ಕನ್ನಡನಾಡು, ನುಡಿ ಮತ್ತು ಕನ್ನಡಿಗರಿಗೆ ಸಂಬಂಧಿಸಿದ ಅನೇಕ ಮುಖ್ಯಾಂಶಗಳಿವೆ. ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಂತೂ ಇದರ ಸ್ಥಾನ ಅತ್ಯಮೂಲ್ಯ. ಅನೇಕ ಸಂಸ್ಕೃತ ಮತ್ತು ಕನ್ನಡ ಕಾವ್ಯಗಳನ್ನು ರಚಿಸಿರಬಹುದಾದ ಅಸಗನೂ, ಪಂಪನ ಗುರುವಿನ ಗುರುವಾದ ಕವಿ ಗುಣನಂದಿಯೂ, ಹರಿವಂಶ ಮತ್ತು ಶೂದ್ರಕ ಎಂಬ ಪ್ರೌಢ ಚಂಪೂ ಗ್ರಂಥಗಳನ್ನು ರಚಿಸಿದ ಒಂದನೆಯ ಗುಣವರ್ಮನೂ ಈ ಶತಮಾನದ ಕೊನೆಯಲ್ಲಿದ್ದಂತೆ ಉಲ್ಲೇಖಗಳಿವೆ. ಒಂದು ಲೌಕಿಕ ಮತ್ತು ಒಂದು ಧಾರ್ಮಿಕ ಗ್ರಂಥವನ್ನು ಬರೆಯುವ ಪಂಪ-ರನ್ನರ ಮಾರ್ಗಕ್ಕೆ ಗುಣವರ್ಮನೇ ಮೇಲ್ಪಂಕ್ತಿ ಹಾಕಿದ್ದಿರಬೇಕು.

ಹತ್ತನೆಯ ಶತಮಾನ ಕನ್ನಡ ಸಾಹಿತ್ಯದ ಸುವರ್ಣಯುಗ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದಲ್ಲಿ ಪಂಡಿತರಾದ ಕವಿಗಳು ಮಾತ್ರವಲ್ಲದೆ ಕಲಿಗಳೂ ಆಗಿ ರಾಜಾಶ್ರಯದಲ್ಲಿದ್ದು ಉತ್ತಮೋತ್ತಮ ಕಾವ್ಯರಚನೆ ಮಾಡಿದ ಕನ್ನಡ ಸಾಹಿತ್ಯದ ರತ್ನತ್ರಯರಿದ್ದ ಕಾಲ ಅದು. ಜೈನ ಧರ್ಮಕ್ಕೆ ಪ್ರೋತ್ಸಾಹವಿದ್ದ ಕಾಲ. ಅಂದಿನ ರಾಜಕೀಯ ಮತ್ತು ಧಾರ್ಮಿಕ ಹೋರಾಟಗಳ ಫಲವಾಗಿ ಇವರ ಕಾವ್ಯಗಳಲ್ಲಿ ರೌದ್ರ ಮತ್ತು ಶಾಂತ ರಸಗಳು ಮುಖ್ಯವಾಗಿವೆ.

ಈ ಶತಮಾನದ ಅನೇಕ ಹಿರಿಮೆಗಳಲ್ಲಿ ಸುಮಾರು ೯೨೦ ರಲ್ಲಿ ರಚಿತವಾದ ಶಿವಕೋಟ್ಯಾಚಾರನ 'ವಡ್ಡಾರಾಧನೆ'ಯೂ ಒಂದು. ಇದು ಕನ್ನಡದ ಮೊದಲನೆಯ ಗದ್ಯ ಗ್ರಂಥ. ಜೈನ ಧರ್ಮದ ಹಿರಿಮೆಯನ್ನು ಸಾರುವ ೧೯ ಗದ್ಯ ಕತೆಗಳನ್ನುಳ್ಳ ಈ ಗ್ರಂಥ ಕಥನ ಶೈಲಿಯಲ್ಲಿ, ಕಲೆಗಾರಿಕೆಯಲ್ಲಿ, ಮಾತುಗಾರಿಕೆಯಲ್ಲಿ ಇಂದಿಗೂ ಮಾದರಿಯಾಗಿ ನಿಲ್ಲಬಲ್ಲುದು.

ಕಾಲದೃಷ್ಟಿ ಮತ್ತು ಕಾವ್ಯದೃಷ್ಟಿ ಎರಡರಿಂದಲೂ ಕನ್ನಡದ ಆದಿಕವಿ ಸಾಮ್ರಾಟ ಪಂಪ (ಕ್ರಿ.ಶ. ೯೪೧) ರತ್ನತ್ರಯರಲ್ಲಿ ಮೊದಲಿಗ. ವೈದಿಕ ಪೂರ್ವಜರನ್ನು ಹೊಂದಿ ಜೈನ ಧರ್ಮೀಯನಾದ ಇವನಲ್ಲಿ ಎರಡೂ ಸಂಸ್ಕಾರಗಳೂ ಸೇರಿವೆ. ಇವನ 'ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ' ಮತ್ತು 'ಆದಿಪುರಾಣ'ಗಳಲ್ಲಿ ಒಂದು ಲೌಕಿಕ ಕಾವ್ಯ, ಇನ್ನೊಂದು ಧಾರ್ಮಿಕ ಕಾವ್ಯ. ನೀರಸ ಭವಾವಳಿಗಳಿಂದ ಕೂಡಿದ ಪುರಾಣ ಕಾವ್ಯವೂ ಇವನ ಪ್ರತಿಭೆಯ ಫಲವಾಗಿ ರಸಪೂರ್ಣವಾಗಿದೆ—ಇದ್ದಲು ವಜ್ರವಾದಂತೆ. ಬಹುಜನ ಪ್ರಿಯವಾದ ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನನೇ ನಾಯಕ. ತನ್ನ ಆಶ್ರಯದಾತ ಅರಿಕೇಸರಿಗೂ ಅವನಿಗೂ ಅಭೇದ ಕಲ್ಪಿಸಿದ್ದಾನೆ. ಇವನ ಪಾಂಚಾಲಿ ಪಂಚವಲ್ಲಭೆಯಲ್ಲ, ಪಾರ್ಥನೊಬ್ಬನಿಗೇ ಪತ್ನಿ. ಈ ಮಾರ್ಪಾಡುಗಳಿಂದ ಕೆಲವೆಡೆ ಆಭಾಸವಾಗಿದ್ದರೂ ಈ ಕಾವ್ಯ ಉಳಿದ ವಿಷಯಗಳಲ್ಲಿ ಸರ್ವಾಂಗ ಸುಂದರವಾಗಿದೆ. ಈತನ ಸನ್ನಿವೇಶ ರಚನೆ, ಪಾತ್ರಚಿತ್ರಣ ಪ್ರಶಂಸಾರ್ಹ. ಇವನ 'ಕರ್ಣರಸಾಯನ'ನಾದ ಕರ್ಣ, ಅಭಿಮಾನಧನ ಸುಯೋಧನ ಮರೆಯಲಾರದ ಪಾತ್ರಗಳು. ಇವನ ಹಿತಮಿತ ಮೃದುವಚನ, ಕಿರಿದರೊಳು ಪಿರಿದರ್ಥವನ್ನಿಡುವ ಜಾಣ್ಮೆ, ಗಂಭೀರ ಶೈಲಿ ಅನುಕರಣ ಯೋಗ್ಯ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪಂ' ಎಂಬ ನಾಗರಾಜ ಕವಿಯ ಮಾತು ಅತಿಶಯೋಕ್ತಿಯಲ್ಲ.

ರತ್ನತ್ರಯರಲ್ಲಿ ಎರಡನೆಯವನು ಪೊನ್ನ (ಕ್ರಿ.ಶ. ೯೫೦). ಇವನ ಕಾವ್ಯಗಳಲ್ಲಿ 'ಶಾಂತಿಪುರಾಣ' ಮತ್ತು 'ಜಿನಾಕ್ಷರಮಾಲೆ' ದೊರೆತಿವೆ; 'ಭುವನೈಕ ರಾಮಾಭ್ಯುದಯ' ಮತ್ತು 'ಗತಪ್ರತ್ಯಾಗತಕಾವ್ಯ'ಗಳು ದೊರೆತಿಲ್ಲ. ಜಿನಾಕ್ಷರಮಾಲೆ ಕಕಾರದಿಂದ ಳಕಾರದವರೆಗಿನ ಅಕ್ಷರಗಳಿಂದ ಪ್ರಾರಂಭವಾಗುವ ಕಂದಗಳ ಸ್ತೋತ್ರಮಾಲೆ. 'ಪುರಾಣ ಚೂಡಾಮಣಿ' ಯೆಂದು ಅವನೇ ಕರೆದುಕೊಂಡಿರುವ ಶಾಂತಿಪುರಾಣ ಬರಿಯ ಜನ್ಮಾವಳಿಗಳಿಂದ ಕೂಡಿ ರಸಹೀನವಾಗಿದೆ. ಆದರೂ ಇದು ಮತಧರ್ಮ ಕಾವ್ಯಧರ್ಮಗಳನ್ನೊಳಗೊಂಡ ಪ್ರೌಢ ಜೈನ ಪುರಾಣವೆಂಬುದು ನಿಜ. ಇವನು ಉತ್ತಮ ಕವಿಯಲ್ಲದಿದ್ದರೂ ದೊಡ್ಡ ಪಂಡಿತ. ಸಲ್ಲದ ಆತ್ಮಪ್ರಶಂಸೆಯ ಅತಿರೇಕವಿದೆ ಇವನಲ್ಲಿ. ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣನ ಆಶ್ರಯದಲ್ಲಿದ್ದುದರಿಂದ 'ಕವಿ ಚಕ್ರವರ್ತಿ' ಬಿರುದನ್ನು ಪಡೆದಿದ್ದಾನಾದರೂ ಪಂಪನ ಸಮಕ್ಕೆ ಎಂದಿಗೂ ಬರಲಾರ.

ರತ್ನತ್ರಯರಲ್ಲಿ ಮೂರನೆಯವನಾದ ರನ್ನ (ಕ್ರಿ.ಶ. ೯೯೩) ಕನ್ನಡದ 'ಕವಿರತ್ನ'. ಇವನು ಜಾತಿಯಲ್ಲಿ ವೈಶ್ಯ, ಧರ್ಮದಲ್ಲಿ ಜೈನ, ವೃತ್ತಿಯಲ್ಲಿ ಬಳೆಗಾರ, ಕರ್ಮದಲ್ಲಿ ಕವಿ. ಬೆಳಕಿಗೆ ಬಂದಿರುವ ಇವನ ಗ್ರಂಥಗಳು 'ಸಾಹಸ ಭೀಮವಿಜಯ ಅಥವಾ ಗದಾಯುದ್ಧ', 'ಅಜಿತ ಪುರಾಣ' ಸಣ್ಣನಿಘಂಟು 'ರನ್ನಕಂದು', ಬಾರದುವು 'ಪರಶುರಾಮ ಚರಿತ', 'ಚಕ್ರೇಶ್ವರ ಚರಿತ'. ಭವಾವಳಿಗಳ ತೊಡಕಿಲ್ಲದ ಅಜಿತ ಪುರಾಣ, ಆದಿಪುರಾಣಕ್ಕೆ ಸರಿತೂಗಲಾರದಾದರೂ ಇಲ್ಲಿ ಬರುವ ವೈರಾಗ್ಯ ವರ್ಣನೆ ಎಂತಹ ನಾಸ್ತಿಕನೂ ತಲೆದೂಗುವಂತಿದೆ. ಇವನ ಕೀರ್ತಿಗೆ ಮುಖ್ಯಕಾರಣ ಇವನ 'ಗದಾಯುದ್ಧ'. ಪಂಪನಂತೆಯೇ ತನ್ನ ನಾಯಕ ಭೀಮ ಮತ್ತು ಆಶ್ರಯದಾತ ಸತ್ಯಾಶ್ರಯರನ್ನು ಒಂದುಮಾಡಿ ಹೇಳಿದ್ದಾನೆ. ಇದು ಗಾತ್ರದಲ್ಲಿ ಕಿರಿದಾದರೂ ಬಹು ಹಿರಿಯ ಗುಣಗಳನ್ನೊಳಗೊಂಡಿದೆ —ವಾಮನತ್ವದಲ್ಲಿ ತ್ರಿವಿಕ್ರಮತ್ವ ಅಡಗಿರುವಂತೆ ಪಂಪಭಾರತದ ಕೇವಲ ಎರಡು ಆಶ್ವಾಸಗಳನ್ನು ವಿಸ್ತರಿಸಿ 'ಸಿಂಹಾವಲೋಕನ' ಕ್ರಮದಿಂದ ಭಾರತದ ಕತೆಯನ್ನು ಹೇಳಿದ್ದಾನೆ. ಇದರಲ್ಲಿ ವ್ಯಾಸ, ಭಾಸ, ಭಟ್ಟನಾರಾಯಣರಿಂದ ಸನ್ನಿವೇಶ ಕಲ್ಪನೆಗಳನ್ನು ಎರವಲಾಗಿ ಪಡೆದಿದ್ದಾನೆ. ಪಂಪನಿಂದೆಷ್ಟೋ ಭಾವನೆಗಳನ್ನೂ, ಪ್ರಯೋಗಗಳನ್ನೂ ಹಾಗೆಯೇ ತೆಗೆದುಕೊಂಡಿದ್ದಾನೆ. ಆದರೂ ಇವನ ಕಾವ್ಯ ಸ್ವತಂತ್ರ ಮತ್ತು ಉಜ್ವಲವಾಗಿದೆ. ಹಳೆಯ ವಜ್ರವನ್ನೇ ಸಾಣೆಹಿಡಿದು ಹೊಸ ಪಟ್ಟೆಗಳನ್ನು ಕೊಟ್ಟು ದೇದೀಪ್ಯಮಾನವಾಗಿಸಿದ್ದಾನೆ. ಇಲ್ಲಿ ಭೀಮ ನಾಯಕನಾದರೂ ದುರಂತನಾಯಕ ದುರ್ಯೋಧನನಲ್ಲೇ ಕವಿಯ ಪಕ್ಷಪಾತ. ರೌದ್ರ– ಕರುಣ ರಸಗಳ ನಿರೂಪಣೆಯಲ್ಲಿ, ಸುಯೋಧನ ಪಾತ್ರದ ಮಹೋನ್ನತಿಯಲ್ಲಿ ಮುಖ್ಯವಾಗಿ ನಾಟಕೀಯತೆಯಲ್ಲಿ ರನ್ನ ಪಂಪನನ್ನೂ ಮೀರಿಸಿ

ದವನು. ಈ ಕಾವ್ಯದಲ್ಲಿ 'ಸ್ಥೂಲದೃಷ್ಟಿಗೆ ಕೃತಿಚೌರ್ಯ ಕಂಡರೂ, ಸೂಕ್ಷ್ಮ ವಿಮರ್ಶೆಗೆ ಕೃತಿರತ್ನವೇ ತೋರುವುದು'. ಇವನ 'ಕವಿಚಕ್ರವರ್ತಿ' ಬಿರುದು ಸಾರ್ಥಕ. ಇವನು 'ವರಕವಿ, ಚಿರಕವಿ, ಮಹಾಕವಿ.'

ಚಾವುಂಡರಾಯ (ಕ್ರಿ.ಶ. ೯೭೮) ಗಂಗರಾಚಮಲ್ಲನಲ್ಲಿ ಮಂತ್ರಿ ಮತ್ತು ಸೇನಾಪತಿಯಾಗಿದ್ದ ವೀರ. ಇವನ ಜೈನ ಗ್ರಂಥ 'ತ್ರಿಷಷ್ಟಿ ಲಕ್ಷಣ ಪುರಾಣ ಅಥವಾ ಚಾವುಂಡರಾಯ ಪುರಾಣ' ಹಳಗನ್ನಡದ ಎರಡೇ ಎರಡು ಗದ್ಯ ಗ್ರಂಥಗಳಲ್ಲಿ ಒಂದು. ಇವನ ದೃಷ್ಟಿ ಧರ್ಮನಿಷ್ಠವೇ ಹೊರತು ಸೌಂದರ್ಯ ನಿಷ್ಠವಲ್ಲ. ಆದರೂ ಸರಳ ಗದ್ಯ ಶೈಲಿಯಲ್ಲಿ, ಕ್ವಚಿತ್ತಾಗಿ ಬರುವ ಪದ್ಯಗಳಲ್ಲಿ ಇವನ ಪ್ರತಿಭೆ ಮಿಂಚಿ ಮಾಯವಾಗಿದೆ. ಇವನು ಸ್ವತಃ ಕವಿಯಷ್ಟೇ ಅಲ್ಲದೆ ರನ್ನ ಮೊದಲಾದ ಕವಿಗಳಿಗೂ ಆಶ್ರಯ ಕೊಟ್ಟ ಉದಾರಿ. ಎಲ್ಲಕ್ಕಿಂತಲೂ ಇವನ ಹೆಸರು ಶಾಶ್ವತವಾಗಿ ನಿಲ್ಲಲು ಕಾರಣ ಶ್ರವಣಬೆಳಗೊಳದಲ್ಲಿ ಇವನು ಪ್ರತಿಷ್ಠಾಪಿಸಿರುವ ಅಪೂರ್ವ ಗೋಮಟೇಶ್ವರ ವಿಗ್ರಹ.

ಬ್ರಾಹ್ಮಣ ಕವಿ ಒಂದನೆಯ ನಾಗವರ್ಮ (ಕ್ರಿ.ಶ.೯೦೦) ಒಂದು ಹೊಸ ಸಂಪ್ರದಾಯವನ್ನೇ ಆರಂಭಿಸಿದವನು. ಇವನ 'ಛಂದೋಂಬುಧಿ' ಈಗ ದೊರೆತಿರುವ ಮೊದಲನೆಯ ಛಂದೋಗ್ರಂಥ. ಲಕ್ಷಣವನ್ನು ಹೇಳುವ ಪದ್ಯವನ್ನೇ ಲಕ್ಷ್ಯವಾಗಿಯೂ ಹೇಳಿರುವ ಪಂಡಿತ ಇವನು. ಇದು ವ್ಯಾಸಂಗಿಗಳಿಗೆ ಉಪಯುಕ್ತ ಗ್ರಂಥ. ಬಾಣನ ಕಾದಂಬರಿಯನ್ನು ಕನ್ನಡದಲ್ಲಿ ಅನುವಾದಿಸಿ, ಸಂಸ್ಕೃತ ಗದ್ಯವನ್ನು ಕನ್ನಡ ಚಂಪುವಿನಲ್ಲಿ ಬರೆಯುವ ಸಂಪ್ರದಾಯಕ್ಕೆ ಮೇಲ್ಪಂಕ್ತಿ ಹಾಕಿದ್ದಾನೆ. ಆ ತೊಡಕಾದ ಕತೆಯನ್ನು ಸ್ವಾರಸ್ಯ ಕೆಡಿಸದಂತೆ ಸರಳ ಸುಂದರವಾಗಿ ಪರಿವರ್ತಿಸಿದ್ದಾನೆ. ಕಥಾ ದೃಷ್ಟಿಯಿಂದಲೇ ಅಲ್ಲದೆ ಕವಿತಾ ದೃಷ್ಟಿಯಿಂದಲೂ ಇದು ಉತ್ತಮವೆನಿಸಿದೆ.

೧೦ನೆಯ ಶತಮಾನಕ್ಕೆ ಹೋಲಿಸಿದರೆ ೧೧ನೆಯ ಶತಮಾನ ಸಾಹಿತ್ಯ ದೃಷ್ಟಿಯಿಂದ ಬಹು ಸಾಧಾರಣವಾಗಿ ತೋರುತ್ತದೆ. ಇದನ್ನು ಕನ್ನಡ ಸಾಹಿತ್ಯದ ಬರಡುಗಾಲವೆಂದು ಕರೆಯುವುದೂ ಉಂಟು. ಈ ಕಾಲದ ಜನಪ್ರಿಯ ಗ್ರಂಥ ದುರ್ಗಸಿಂಹನ 'ಪಂಚತಂತ್ರ' (ಕ್ರಿ.ಶ. ೧೦೩೧) ಈ ಬ್ರಾಹ್ಮಣ ಕವಿ ಚಾಲುಕ್ಯರಾಜ ಜಯಸಿಂಹನ ದಂಡನಾಯಕ. ವಸುಭಾಗಭಟ್ಟನ ಸಂಸ್ಕೃತ ಗ್ರಂಥದ ಆಧಾರದಿಂದ ರಚಿತವಾದ ಇದು ಚಂಪುವಾದರೂ ಇಲ್ಲಿ ಗದ್ಯಕ್ಕೇ ಪ್ರಾಧಾನ್ಯ. ಕತೆಯೊಳಗೆ ಕತೆ ಬಂದು ಇದರ ಶೈಲಿ ವಿಜಾತೀಯವಾಗಿದೆ, ನೂತನವಾಗಿದೆ. ಬ್ರಾಹ್ಮಣ ಕವಿ ಚಂದ್ರರಾಜನ (ಕ್ರಿ. ಶ. ೧೦೨೫) 'ಮದನತಿಲಕ' ಕನ್ನಡದಲ್ಲಿ ಮೊದಲನೆಯ ಕಾಮ ಶಾಸ್ತ್ರ. ಸಂಕಲನದಂತಿರುವ ಈ ಚಂಪೂ ಗ್ರಂಥದಲ್ಲಿ ಅನೇಕ ಚಿತ್ರಬಂಧಗಳಿವೆ. ಇಲ್ಲಿ ಪಾಂಡಿತ್ಯ ಪ್ರದರ್ಶನಕ್ಕೇ ಪ್ರಾಶಸ್ತ್ಯ. 'ಜಾತಕತಿಲಕ'ವೆಂಬ ಕನ್ನಡದ ಮೊದಲನೆಯ ಜ್ಯೋತಿಷ್ಯ ಗ್ರಂಥಕರ್ತೃ ಜೈನ ಶ್ರೀಧರಾಚಾರ್ಯನ (ಕ್ರಿ. ಶ. ೧೦೪೯) ಗ್ರಂಥದಲ್ಲಿ ಶಾಸ್ತ್ರ ಹಾಗೂ ಕಾವ್ಯಗಳ ಮೇಳ ಕಂಡುಬರುತ್ತದೆ.

ಈ ಶತಮಾನದ ಉತ್ತರಾರ್ಧದಲ್ಲಿ ಮತ್ತೆ ಹಿಂದಿನ ಚಂಪೂ ಪರಂಪರೆಯನ್ನು ಮುಂದುವರಿಸಿದವನು ಶಾಂತಿನಾಥ (ಕ್ರಿ.ಶ. ೧೦೬೮) ತೀರ್ಥಂಕರರು ಮತ್ತು ಚಕ್ರವರ್ತಿಗಳ ಪುರಾಣವನ್ನು ಮಾತ್ರ ಚಂಪುವಿನಲ್ಲಿ ಬರೆಯುತ್ತಿದ್ದ ಸಂಪ್ರದಾಯವನ್ನು ಮುರಿದು ಜೈನ ಕಥಾಪರಂಪರೆಯಲ್ಲಿದ್ದ 'ಸುಕುಮಾರ ಚರಿತೆ'ಯನ್ನು ಬರೆದಿದ್ದಾನೆ. ಇದರಲ್ಲಿ ವಡ್ಡಾರಾಧನೆಯ ಛಾಯೆ ಇದೆ. ಪ್ರೌಢಿಮೆಯಿಂದ ಸರಳ ಸೌಂದರ್ಯಕ್ಕೆ ತಿರುಗುತ್ತಿದ್ದ ಚಂಪೂರೂಪಕ್ಕೆ ಇದು ನಿದರ್ಶನವಾಗಿದೆ. ಇವನು ಶಾಸನವನ್ನೂ ಬರೆದಿದ್ದಾನೆ. ಅದ್ವೈತಿ ನಾಗವರ್ಮಾಚಾರ್ಯನ (ಕ್ರಿ.ಶ. ೧೦೭೧) 'ಚಂದ್ರಚೂಡಾಮಣಿ ಶತಕ ಅಥವಾ ಜ್ಞಾನಸಾರ' ಕನ್ನಡದ ಆದ್ಯ ಶತಕ. ಅಷ್ಟೇ ಅಲ್ಲದೆ ಧಾರ್ಮಿಕ-ತಾತ್ವಿಕ ವಿಷಯವನ್ನು ಕುರಿತು ಬ್ರಾಹ್ಮಣ ಕವಿ ಬರೆದ ಪ್ರಥಮ ಕೃತಿ. ಈ ಕಾಲದ ಇತರರು ಅನೇಕ ಶಾಸನಗಳನ್ನು ರಚಿಸಿದ್ದಾರೆ. ಗ್ರಂಥ ವೈವಿಧ್ಯದ ದೃಷ್ಟಿಯಿಂದ ನೋಡಿದರೆ ಈ ಶತಮಾನವು ಅಷ್ಟೇನೂ ಬರಡಲ್ಲವೆಂದು ಹೇಳಬಹುದು.

(ಆಕಾಶವಾಣಿ ಕೃಪೆಯಿಂದ)

ಕನ್ನಡ ಕಲಿ ಕವಿ ಚಾವುಂಡರಾಯ

ಸಂಗಮನಾಥ ಜಿ. ಹಂಡಿ

ಕನ್ನಡ ಕವಿಚರಿತ್ರೆಯಲ್ಲಿ ಕಣ್ಣಾಡಿಸಿದಾಗ ಧರ್ಮನಿಷ್ಠ ಕವಿಗಳನ್ನು ಕಾಣುವುದಲ್ಲದೆ ಕ್ವಚಿತ್ತಾಗಿ ಕನ್ನಡ ಕಲಿಗಳನ್ನೂ ಕಾಣುವೆವು. ಕಲಿ-ಕವಿಗಳಾದರೂ ಧರ್ಮ ಬಿಟ್ಟು ಬೇರ್ಪಟ್ಟವರಲ್ಲ. ಸ್ವಧರ್ಮ ಭೂಮಿಯಲಿ ನಿಂತು ಸ್ವಸ್ವಾಮಿ ಸೇವಾನಿರ್ವಹಣೆಯ ಕಾರಣಕ್ಕಾಗಿ ಶೌರ್ಯಾಸಕ್ತರಾದ ಸಾತ್ವಿಕ ಜೀವಿಗಳವರು. ಸ್ವಧರ್ಮಪ್ರೇಮ, ಸ್ವಸ್ವಾಮಿ ಸೇವಾ ಕರ್ಮ ಸಹಿತರಾದ ಕೆಲವೇ ಕನ್ನಡ ಕವಿಗಳಲ್ಲಿ ಚಾವುಂಡರಾಯನೂ ಒಬ್ಬನು. ಚಾವುಂಡರಾಯನು ಗಂಗರಸ ರಾಚಮಲ್ಲನ ಓಲಗದಲ್ಲಿ ನಿಂದಿರಲು ದಂಡಾಧೀಶ, ಕುಳ್ಳಿರಲು ಮಂತ್ರಿ, ಬರೆಯತೊಡಗಲು ಕವಿ, ಕಣ್ಮುಚ್ಚಲು ಜಿನೋಪಾಸಕನಾಗಿ ಹಲವು ಡಳದ ಬಡುಕನ್ನು ಬಾಳಿದ್ದಾನೆ. ಬ್ರಹ್ಮಕ್ಷತ್ರ ಕುಲೋದಯನಾದ ಚಾವುಂಡರಾಯನ ಗುರು ಅಜಿತಸೇನಾಚಾರ್ಯ, ತಂದೆ ಮಹಾಬಲಯ್ಯ, ತಾಯಿ ಕಾಳಲಾದೇವಿ, ಧರ್ಮಪತ್ನಿ ಅಜಿತಾದೇವಿ, ಮಗು ಜಿನದೇವಣ,-ಈ ಸಮುದಾಯ ಮಧ್ಯದ ಜೀವನ ಸುಖಮಯವಾದುದು. ಕ್ರಿ. ಶ. ೯೬೧ ರಿಂದ ೯೭೪ರ ವರೆಗೆ ಆಳಿದ ನೊಳಂಬ ಕುಲಾಂತಕ ಮಾರಸಿಂಹ, ಕ್ರಿ. ಶ. ೯೭೪ರಿಂದ ೯೭೭ರ ಅವಧಿಯ ಜಗದೇಕವೀರ ರಾಚಮಲ್ಲ ಸತ್ಯವಾಕ್ಯ, ಕ್ರಿ. ಶ. ೯೭೭ ರಿಂದ ೯೮೪ರ ಸಮಯದ ರಕ್ಕಸ ಗಂಗರಾಜ ಮಲ್ಲಂದಿರರ ಆಳಿಕೆಗಳಲ್ಲಿ ಸಚಿವ, ಸೇನಾಪತಿ ಆಗಿ ಬಾಳಿದ ಅನುಭವ ವೈವಿಧ್ಯಪೂರ್ಣವಾದುದು. ಸಚಿವ, ಸೇನಾಪತಿಯಾಗಿ ಬಾಳಲು ಅವನಲ್ಲಿದ್ದ ಕಲಿತನದ ಉಕ್ಕು ಸಮರಾಂಗಣದ ಸೊಕ್ಕುಗಳ ದರ್ಶನ ದೊರೆಯಬೇಕಾದರೆ ಚಾವುಂಡರಾಯನೇ ಹೇಳಿಕೊಂಡ ಬಿರುದುಗಳೇ ಆಧಾರಗಳು. "ಆಳ್ದನ ಬೆಸದಿಂ ಖೇಡಗ ಕಾಳೆಗದೊಳ್ ವಜ್ಜಳದೇವನಂ ಗೆಲ್ದ ಸಾಹಸದಿಂ ಸಮರ ಧುರಂಧರಂ, ಗೊನೂರ ಬಯಲೊಳ್ ಬಂದೊಡ್ಡಿದನೊಳಂಬರ ಕಾಳೆಗದೊಳ್ ಜಗದೇಕವೀರಂ, ಮುಂತೆ ತನ್ನ ಬಲಮಂ ಮೆರೆದುದಱಿಂ ವೀರಮಾರ್ತಾಂಡಂ, ಉಚ್ಚಂಗಿಯ ಕೋಟೆಯೊಳ್, ರಾಜಾದಿತ್ಯನೊಳ್ ಒರ್ವನೇಟಣವಂ ಮೆಱೆದುದರಿಂದೆ ರಣರಂಗಸಿಂಗಂ ಬಾಯಲೂರ ಕೋಟೆಯೊಳ್ ತ್ರಿಭುವನ ವೀರನಂಕೊಂದು ಗೋವಿಂದರಸಂ ಪುಗಿಸಿದುದಱಿಂ ವೈರಿಕುಲಕಾಲದಂಡಂ, ನೃಪಕಾಮನ ಕೋಟೆಯೊಳ್ ರಾಜ ಬಾಸಶಿವರ ಕೊಣಾಂಕ ಮೊದಲಾದ ಒಂದೆ ಮೆಯ್ಯೊಳ್ ಪೆಣೆದಿಱಿದುದಱಿಂ ಭುಜವಿಕ್ರಮಂ, ತನ್ನ ತಮ್ಮನಂ ನಾಗವರ್ಮನಂ ಕೊಂದ ಪಗೆಗೆ ಚಲದಂತ ಗಂಗಂ, ಗಂಗರ ಭಟನೆನಿಸಿದ ಮುದುರಾಚಯನಂ ಕೊಂದುದಱಿಂ ಸಮರಪರಶುರಾಮಂ, ಜಟ್ಟಿಗರನಟ್ಟಿದ ದಂಡಿನೊಳೆ ನಿಷ್ಕಂಟಕಂ ಮಾಡಿದುದಱಿಂ ಪ್ರತಿಪಕ್ಷರಾಕ್ಷಸಂ, ವೀರ ಭಟಕೋಟಿಯಂ ಕೊಂದುದರಿಂ ಭಟಮಾರಿ, ನಿಶ್ಶಂಕಾದಿ ಗುಣಪರಿರಕ್ಷಣೈಕ ಕಾರಣನಪ್ಪುದಱಿಂ ಗುಣವಂ ಕಾವಂ, ಸತ್ಯ ತ್ಯಾಗಾದಿ ಸಮನ್ವಿತನಪ್ಪುದಱಿಂ ಸಮ್ಯಕ್ತ್ವರತ್ನಾಕರಂ, ಪರಾಂಗನಾ ಪರದ್ರವ್ಯ ಪರಾಙುಖನಪ್ಪುದಱಿಂ ಶೌಚಾಭರಣಂ, ಪರಿಹಾಸದೊಳಂ ಸೂನೃತ ವಚನನಪ್ಪುದಱಿಂ ಸತ್ಯಯುಧಿಷ್ಠಿರಂ, ಅತಿ ಪ್ರಚಂಡ ವೀರ ಮಾಂಡಲಿಕ ಶಿಖಂಡ ಮಂಡನ ಮಣಿಯಪ್ಪುದಱಿಂ, ಸುಭಟಚೂಡಾಮಣಿ." ಅಜಿತಸೇನಾಚಾರ್ಯರ ಶಿಷ್ಯನಾಗಿ ಅಜಿತಸೇನಾಪತಿಯಾಗಿದ್ದಾನೆ. ಇದು ಆತ್ಮಸ್ತುತಿಯಲ್ಲ. ಕವಿ ರನ್ನನು ತನ್ನ ಅಜಿತಪುರಾಣದಲ್ಲಿ "ಅಜಿತಶೌರ್ಯಸ್ವಾಮಿ ಚಾವುಂಡರಾಯ ವರದಂ" ಎಂದು ಶೌರ್ಯಸ್ವಭಾವವನ್ನು ನಿರೂಪಿಸಿದ್ದಾನೆ. ಆದುದರಿಂದ ಚಾವುಂಡರಾಯನ ಭುಜಾವಾಸದಲ್ಲಿ ವೀರಶ್ರೀ ಬೀಡುಬಿಟ್ಟಿದ್ದಾಳೆ. ಸ್ವಸ್ತುತಿ-ರನ್ನೋಕ್ತಿಗಳರ್ಥಕ್ಕೆ ಸಾಮರ್ಥ್ಯವನ್ನೀಯುವ ಸಾಧನೆಯೊಂದಿದೆ, ಕ್ರಿ.ಶ. ಸು. ೧೫೫೦ರಲ್ಲಿದ್ದ ಪಿರಿಯಪಟ್ಟಣದ ದೊಡ್ಡಯ್ಯನ ಭುಜಬಲಿ ಶತಕದಲ್ಲಿ ಬಂದ 'ಚಾಮುಂಡರಾಜ' ಎಂಬುದು. ಚಾಮುಂಡನೆಂದರೆ ದುರ್ಗೆಯ ಭಯಂಕರ ರೂಪ ಎಂದು ಶಬ್ದಕೋಶಾರ್ಥ. ಇವೆಲ್ಲವುಗಳ ಬೆಳಕಿನಿಂದ ಚಾವುಂಡರಾಯನು ಪ್ರತಿಪಕ್ಷ ರಾಕ್ಷಸನಾಗಿ ರಣರಂಗಸಿಂಗನಾಗಿ ಸುಭಟ ಚೂಡಾಮಣಿಯಾಗಿ ಬಾಳಿದ ಬಾಳ್ವೆ ಬೆಳಗುತ್ತಿದೆ.

ಚಾವುಂಡರಾಯನು ಸಮರಧುರಂಧರನಿದ್ದಂತೆ ಸಮ್ಯಕ್ತ್ವರತ್ನಾಕರನೂ ಆಗಿದ್ದಾನೆ. ಅರುಹನಾರಾಧನೆಯೇ ಅವನು ಸಾಧಿಸಬೇಕಾದ ಸಾಧನೆ. ಉಗ್ರಕರ್ಮಮಳಮಂ ಶೋಧಿಸಲು, ಆಪ್ತವರ್ಗಮಂ ಬೋಧಿಸಲು, ಅಕ್ಷಯಮೋಕ್ಷಲಕ್ಷ್ಮಿಯಂ ಸಾಧಿಸಲು ಚಿತ್ತವಿಶುದ್ಧಿಯಂ ಜಿನೇಂದ್ರಪಾದಪದ್ಮಜಂ ಪೂಜಿಸಿದ್ದಾನೆ. ಈ ಪೂಜಾಪುಣ್ಯಪ್ರಾಪ್ತಿ ಪ್ರತಿಪ್ರಜೆಗೂ ಪೂರೈಸಲು ಶ್ರವಣಬೆಳುಗೊಳದಲ್ಲಿ ಮುಗಿಲುಮುಟ್ಟುವ ಭೂಮಾನುಭೂತಿಯ ತ್ಯಾಗಯೋಗಮೂರ್ತಿ

ಬಾಹುಬಲಿಯನ್ನು ಕೊರೆಯಿಸಿದ್ದಾನೆ. ತನ್ನ ಹೃನ್ಮನದ ಜಿನನನ್ನು ಅನ್ಯರ ಮನೆಯಲ್ಲಿಯೂ ನೆಲೆಯೂರಿಸಿದ್ದಾನೆ. ಚಂದ್ರಗಿರಿಯ ಕಗ್ಗಲ್ಲನ್ನು ಕಲಾನೆಲೆಯನ್ನಾಗಿರಿಸಿದ್ದಾನೆ ಶಿಲ್ಪ ಕಲಾಪ್ರೇಮಿಗಳಿಗೆ; ಸಮಸ್ತಭಾರತ ಜೈನರ ಪವಿತ್ರಯಾತ್ರಾ ಸ್ಥಾನವನ್ನಾಗಿರಿಸಿದ್ದಾನೆ. ಚಾವುಂಡರಾಯನ ಧರ್ಮದೃಷ್ಟಿಯ ಸೃಷ್ಟಿ ಬಾಹುಬಲಿ ದೇವನು ಇಂದು ವಿಶ್ವಕಲಾವಿದರ ಕಣ್ಣು ಕೋರೈಸಿ ಮನಮೋಹಗೊಳಿಸಿ ಶರಣ್ಬೊಗಿಸಿಕೊಂಡಿದ್ದಾನೆ. ಇದರಿಂದಾಗಿ ಕಲೆಗೆ ಧರ್ಮಸಂಕಲೆ ಇಲ್ಲ ಎಂಬ ಸಾರ್ವ ಧಾರ್ಮಿಕ ಸತ್ಯವನ್ನು ಎತ್ತಿತೋರಿಸಿದ್ದಾನೆ, ಕಲಾಕೋವಿದ ಚಾವುಂಡರಾಯ. ಕಗ್ಗಲ್ಲಿನಲ್ಲಿಯೂ ಕಲಾ ಸೌಂದರ್ಯ ಕಂಡು "ಸತ್ಯಂ ಶಿವಂ ಸುಂದರಂ" ಎಂಬ ತತ್ವಕ್ಕೆ ಸೂತ್ರ ವನ್ನು ಕೊರೆಸಿದ್ದಾನೆ, ಆವನ ಸೌಂದರ್ಯ ದೃಷ್ಟಿಯ ಈ ಕಲಾ ಸೃಷ್ಟಿಯು ಕೈವಲ್ಯಬೋಧ ರಮಾಮಾಕ್ತಿಕಹಾರ ಯಷ್ಟಿಗಾಗಿ ಎಂಬುದು ಮರೆಯಕೂಡದು. ಕ್ರಿ. ಶ. ೯೮೩ ಮಾರ್ಚಿ ೧೩ನೆಯ ದಿನಾಂಕ ರವಿವಾರದಂದು ಪರಮಗುರು ಅಜಿತಸೇನಾಚಾರ್ಯರ ಅಧಿನೇತೃತ್ವದಲ್ಲಿ,-ತನ್ನರಸ ರಾಜ ಮಲ್ಲನ ಸಮ್ಮುಖದಲ್ಲಿ, ನಡೆದ ಈ ಲೋಕವಿಖ್ಯಾತ ಕೀರ್ತಿ ಸ್ಥಾಯಿ ಭುಜಬಲಿಯ ಮೂರ್ತಿ ಪ್ರತಿಷ್ಠಾಪನೆಯ ಪವಿತ್ರ ಮುಹೂರ್ತದಲ್ಲಿ ಸ್ವಕುಟುಂಬ ಪರಿವಾರ ಸಮೇತನಾಗಿ ಆನಂದಾವೇಶದಿಂದ ಓಡಾಡಿದ ಚಾವುಂಡರಾಯನ ಸಡಗರ, ಸಂಭ್ರಮ, ಅಬ್ಬಬ್ಬಾ ಎನ್ನುವಂತಿದೆ. ಎಂಥ ಪುಣ್ಯಶಾಲಿ; ಧನ್ಯನೆಂದುಕೊಂಡಿರಬೇಕು. ಸ್ವಾರ್ಜನೆಯೆಲ್ಲ ಸತ್ಪಾತ್ರಕ್ಕೆ ಸಂದಿದೆ. ಕೊಡುಗೈ ದೊರೆಯಾಗಿ ದಾನಧಾರೆಯನೆರೆದಿರ ಬೇಕು; ಬಡಬಗ್ಗರಿಗೆ ದೀನರಿಗೆ ದಾನ ನೀಡಿ ತಣಿಸಿದಷ್ಟೂ ತೃಪ್ತಿಪಡೆದಿರಬೇಕು. ಧರ್ಮಾನುರಾಗದಿಂದ ಕರ್ಮಕ್ಷಯ ವಾಗಿ ಆನಂದ ಅಕ್ಷಯಗೊಂಡಿರಲು ಸಾಕು. ಈ ಭಾಗ್ಯ ಕನ್ನಡ ಕವಿಗಳಲ್ಲಿ ನಾಗಚಂದ್ರನನ್ನು ಬಿಟ್ಟರೆ ಇನ್ನಾರಿಗಿದೆ? ನಾಗಚಂದ್ರನು ಉಕ್ಕಿಬಂದಾನಂದವನ್ನು ತನ್ನ ಕಾವ್ಯದಲ್ಲಿ ತೋಡಿಕೊಂಡನು. ಆದರೆ ಚಾವುಂಡರಾಯನ ಕಾವ್ಯ ವೀಣೆಯಲ್ಲಿ ಆ ಪುಣ್ಯವಾಣಿಯಿಲ್ಲ. ಮಾಡಿದನೆಂಬುದು ಮನದಲಿ ಹೊಳೆದರೆ ಏಡಿಕಾಡಿಸಿತು ಶಿವನ ಡಂಗುರವೆಂದು ಮನತಣಿದು ಮೌನವಾಗಿರಬೇಕು. ಅನಂತರ ಕಾವ್ಯ ಕಟ್ಟುವ ಕಾರ್ಯಕ್ಕೆ ಕೈಹಾಕಲೇ ಇಲ್ಲ. ಆದರೆ ನೋಡಿ ದವರು ಆಡದೆಯೇ ಬಿಡುತ್ತಾರೆಯೇ? ಕಣ್ಣಾರೆ ಕಂಡು ಪುಣ್ಯಭಾಗಿಯಾದ ಚಾವುಂಡರಾಯ ಕಾರುಣ್ಯಶಿಶು, ಕನ್ನಡ ಕವಿರತ್ನ "ಚಕ್ರೇಶ್ವರ ಚರಿತ್ರೆ" ಯೆಂಬ ಈ ಮಹೋತ್ಸವ ವರ್ಣನಾ ಶ್ರೀಕಾವ್ಯ ಹಾಡಿ ಕೃತಾರ್ಥನಾದ. ಆದರೆ ಪುಣ್ಯ ಹೀನರಾದ ನಮ್ಮ ಕಣ್ಣಿಗೆ ಕಾಣದೆ ಚಕ್ರೇಶ್ವರ ಚರಿತೆಯು ಕಾಲಗರ್ಭದಲ್ಲಿ ಅವಿತುಕೊಂಡಿದೆ; ಕವಿಯ ಪ್ರತಿಭೆಗೆ ತ್ರಿಕಾಲಜ್ಞಾನವಿರುತ್ತದೆಂಬ ಮಾತಿನಂತೆ ಕವಿರತ್ನನು ತನ್ನಿ ನ್ನೊಂದು ಕಾವ್ಯ "ಅಜಿತನಾಥ ಪುರಾಣ" ದಲ್ಲಿ "ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ' ಎಂದು ಬರೆದು ಕೃತಜ್ಞನಾದನು. ಕೇಳಿದ ಆನಂದ ಬಾಹುಳ್ಯನೊಬ್ಬನು ತಡೆಯದೆಯೇ ಕ್ರಿಸ್ತಶಕ ೧೧೮೦ರಲ್ಲಿ ಶ್ರವಣಬೆಳುಗೊಳದ ಕಲ್ಲುಕಾವ್ಯದೊಳು "ಸ್ಥಿರಜಿನಶಾಸನೋ ದ್ಧರಣರಾದಿಯೊಳಾರೆನೆ ರಾಚಮಲ್ಲ ಭೂವರ ವರಮಂತ್ರಿ ಚಾವುಂಡರಾಯನೆ" ಎಂದು ಉದ್ಗರಿಸಿದ. ಅದೇ ಕಾಲದ ಕವಿ ಬ್ರಹ್ಮಶಿವನು "ಅತಿಧವಳಕೀರ್ತಿ ಲಕ್ಷ್ಮೀಪತಿಯಂ; ಜಿನಸಮಯ ವಾರ್ಧಿವರ್ಧನ ತಾರಾಪತಿಯಂ, ಕೊರ್ತ್ತ ಅನಿಶಂ, ರಾಜಿತನಂ; ರಾಯನಂ, ಉದಾರಿಯಂ ಪೊಗಳ ದರ್ ಆರ್" ಎಂದು ಹೊಗಳಿ ಹೊಗರೇರಿದನು. ಕ್ರಿ. ಶ. ೧೩೩೦ರಲ್ಲಿ ಕವಿ ದೊಡ್ಡಯ್ಯನು ತನ್ನ "ಬಾಹುಬಲಿ ಚರಿತ್ರೆ" ಯಲ್ಲಿ "ಶ್ರೀಮಚ್ಚಾಮುಂಡರಾಜೋ ಬೆಳುಗೊಳನಗರೇ ಗೋಮಟೇಶ ಪ್ರತಿಷ್ಠಾಮ್" ಎಂದು ಸವಿಸ್ತಾರ ವೈಭವ ವರ್ಣನೆಯನ್ನೇ ಹಾಡಿದ. ಹೀಗೆ ಹಲವರು ಹಲವಾಗಿ ಹಾಡಿದರು. "ಗುಣವಂ ಕಾವಂ ಸತ್ಯ ಯುಧಿಷ್ಠಿರಂ" ಆದ ಚಾವುಂಡರಾಯನ ಜಿನವರೇಣ್ಯ ಬಾಹುಬಲಿಯ ಮೂರ್ತಿ ಪ್ರತಿಷ್ಠಾಪನೆಯ ಭಕ್ತಿಪರಾಕ್ರಮ ಪ್ರಸಂಗವನ್ನು ಭಾವ ದುಂಬಿ, ಕೊರಳ್ದುಂಬಿ ಹಾಡಿ ಧನ್ಯರಾಗಿದ್ದಾರೆ, ಆಳರಸ ರಾಚಮಲ್ಲನಂತೂ ಚಾವುಂಡರಾಯನ ಈ ಅನನ್ಯಯ ಕೃತಿ ಕೀರ್ತಿಗಳಿಗಾಗಿ ಮನಮೆಚ್ಚಿ ಕೊಂಡಾಡದಿರುವನೇ!;"ರಾಯ" ಎಂಬ ಬಿರುದುಕೊಟ್ಟು, ಸತ್ಕರಿಸಿದನು. ತಾನೂ ಸನ್ಮಾನಿತ ನಾದನು. ಈ ಅತರ್ಕ್ಯ ಕೀರ್ತಿಗೆ ತನ್ನ ಕೀರ್ತಿಯನ್ನು ಕೀಲಿಸಿದನು. ತನ್ನ ಮಂತ್ರಿಯ ಮಹತಿಯನರಿತು ತಲೆ ದೂಗಿದನು ತಲೆಬಾಗಿದನು. ಪ್ರಜಾಕೋಟಿಯಂತೂ ಅಕ್ಕ ರತೆಯಿಂದ "ಅಣ್ಣಾ" ಎಂದು ಕೂಗಿ ಕೂಗಿ ಕುಣಿದಾಡಿದರು. "ಗೊಮ್ಮಟೇಶ್ವರನ ಎತ್ತರ ನಿಮ್ಮ ಕೀರ್ತಿ" ಎಂದು ಚರಣಾ ಗ್ರದೊಳ್ ಮೈಯನಿಕ್ಕಿದರು, ಆ ಮಣ್ಣನ್ನು ಮೈಗೆ ಮೆತ್ತಿ ಕೊಂಡರು. ನಾಡನಾಗರಿಕರಿಗೆ ಅಣ್ಣನಾಗಿ, ರಾಚರಸನಿಗೆ ರಾಯನಾಗಿ ಮೆರೆದರೂ ಸದಾ ಮೊರೆ ಆರುಹನಲ್ಲಿ, ಹೊರೆ ದೊರೆ ರಾಚಮಲ್ಲನಲ್ಲಿ! ಹೀಗೆ ಜಿನಚರಣ ನಖಮಯೂಖ ಚಂದ್ರಿಕಾಚಕೋರ ಚಾವುಂಡರಾಯನ ಚಿತ್ತಧರ್ಮದಿಂದ ಎತ್ತರಗೊಂಡಿದೆ; ಬಿತ್ತರಗೊಂಡಿದೆ.

ಶಿಲ್ಪಶ್ರೀ ಗೊಮ್ಮಟೇಶ್ವರ ಪ್ರತಿಷ್ಠಾಪನೆಯಿಂದ ಮೂಕ ಕಾವ್ಯ ಸೃಜಿಸಿದ ಚಾವುಂಡರಾಯನು ಮಾತನಾಡುವ ಅರವ ತ್ಮೂರು ಶಲಾಕಾಪುರುಷರನ್ನು ಶಬ್ದಶ್ರೀ "ತ್ರಿಷಷ್ಟಿಲಕ್ಷಣ

ಮಹಾಪುರಾಣ" ದಲ್ಲಿ ಸಂಸ್ಥಾಪಿಸಿ ಕವಿಯಾಗಿದ್ದಾನೆ. ಈ ಪುರಾಣವು ಗುಣಭದ್ರ ಕವಿಯ ಸಂಸ್ಕೃತ "ತ್ರಿಷಷ್ಟಿಪುರುಷ ಪ್ರತಿಬದ್ಧ ಪುರಾಣ" ದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಧರ್ಮ, ಕಾವ್ಯಧರ್ಮಗಳ ಮೇಳೈಸಿ ಹೇಳಿದ ಪಂಪನ ಆದಿ ಪುರಾಣದ ಎತ್ತರವನ್ನೇರದಿದ್ದರೂ ಧರ್ಮಧ್ವಜವನ್ನು ದರ್ಶಿಸಿದೆ. ಚಾವುಂಡರಾಯನ ಉದ್ದೇಶ, ಭವ್ಯಕೋಟಿಗೆ ನಿರಂತರ ಸೌಖ್ಯವನ್ನೀಯುವದು. ಕಾವ್ಯಸೌಂದರ್ಯ ದಾಸ್ವಾದನೆಗಿಂತಲೂ ಧರ್ಮದರ್ಶನವು ಮಿಗಿಲೆನ ಬಗೆಯಲ್ಲಿ ಕಾವ್ಯಾಂಶಕಾರಣದಿಂದ ಕವಿಚರಿತ್ರೆಯಲ್ಲಿ ಉನ್ನತಸ್ಥಾನವಿರ ದಿದ್ದರೂ ಪುರಾಣದಲ್ಲಿ ಬಳಸಿದ ಗದ್ಯಕ್ಕಾಗಿ ವಿಶಿಷ್ಟಸ್ಥಾನ ವಿದೆ. ವಡ್ಡಾರಾಧನೆಯ ವಾದವಿವಾದ ಬದಿಗಿಟ್ಟರೆ ಗದ್ಯ ಗ್ರಂಥ ರಚಿಸಿದವರಲ್ಲಿ ಮೊದಲಿಗನೆಂಬ ಸ್ಥಾನ ಮೀಸಲಾಗಿದೆ.

ಕಥಾನಿರೂಪಣಕ್ಕೊಳಪಟ್ಟ ಗದ್ಯ, ಶಾಸ್ತ್ರವಿವರಣೆಯ ಕೈಯಲ್ಲಿ ಕೈಯಿಟ್ಟು ಹೊಂದಿಕೊಂಡಿದೆ. ಹತ್ತನೆಯ ಶತ ಮಾನದ ಆಡುನುಡಿಯನ್ನು ಹಿಡಿದಿಟ್ಟುಕೊಂಡಿದೆ. ವ್ಯಾಕರಣ ವಿಶಿಷ್ಟ ಪ್ರಕ್ರಿಯೆಗಳ ಪ್ರತಿಧ್ವನಿಯಿದೆ. ಗದ್ಯವಂತೂ ಕೃತ್ರಿ ಮತೆಗಿಂತಲೂ ಸಹಜತೆಯಿಂದ ತುಂಬಿಕೊಂಡಿದೆ. ಸಂಸ್ಕೃತ ಭೂಯಿಷ್ಟ ಗಂಭೀರಶೈಲಿಯೊಂದಿಗೆ ಕನ್ನಡದ ಸಹಜ, ಸರಳ ದೇಶೀಯತೆಯು ಸೊಗಸಾಗಿ ಸರಸವಾಡುತ್ತಿದೆ. ಕನ್ನಡ ಬಂಧುವಾಚಕ ಪದಗಳನ್ನೆಲ್ಲ ಅಚ್ಚಗನ್ನಡದಲ್ಲಿ ನಿರೂಪಿಸಿ ದುದು ಶೈಲಿಯ ವೈಶಿಷ್ಟ್ಯ. ಗ್ರಂಥದಲ್ಲಿ ಅಲ್ಲಲ್ಲಿ ಬರುವ ಪ್ರಾಕೃತಗಾಹೆ, ಸಂಸ್ಕೃತವೃತ್ತಗಳನ್ನು ಗಮನಿಸಿದರೆ ಚಾವುಂಡರಾಯನ ತ್ರಿಭಾಷಾ ಪ್ರಭುತ್ವ ಪ್ರಕಟಗೊಳ್ಳು ತ್ತದೆ. ಕನ್ನಡ ಗದ್ಯ ಪೈರು ತೆನೆತುಂಬಿ ಮುನ್ನಡೆಯಲು ಚಾವುಂಡರಾಯ ದುಡಿದ ದೇಣಿಗೆ ಕನ್ನಡ ಭಾಷೇತಿಹಾಸಕ್ಕೆ ಭೂಷಣವಾಗಿದೆ.

ಚಾವುಂಡರಾಯನು ತಾನು ಕವಿಯಾಗಿ ಬಾಳುವುದಲ್ಲದೆ ಕನ್ನಡ ಕವಿ ರನ್ನನಿಗಾಶ್ರಯವಿತ್ತು ಕವಿಕುಲಕ್ಕೆ ಆದರ್ಶ ಪ್ರಾಯನಾಗಿದ್ದಾನೆ. ಈ ಸದಾಶ್ರಯಾರ್ಣವದಲ್ಲಿ ರತ್ನ ದೊರಕಿ ಕನ್ನಡಿಗರ ಕಣ್ಮನಗಳನ್ನು ಬೆಳಗಿತು, ಕನ್ನಡ ಭಾಷೆ ಯಲ್ಲಿ ಸಿಡಿಲ್ನುಡಿಗಳ ಗುಡುಗು ಹೊಡೆಯಿತು. ರನ್ನನು ಶಕ್ತಿಕವಿಯಾಗುವುದಕ್ಕೆ ಚಾವುಂಡರಾಯನ ಸ್ನೇಹಪೂರಿತ ಸಹವಾಸವು ಬಲುಮಟ್ಟಿಗೆ ಕಾರಣವಾಗಿರಬಹುದು. ರನ್ನನು ತನ್ನ ಗದಾಯುದ್ಧದಲ್ಲಿ ಸುಯೋಧನ–ಕರ್ಣರ ಮಧುರ ಮೈತ್ರಿಯ ಮೂಲಕಾರಣವಾಗಿ, ಸುಯೋಧನನ ಸ್ನೇಹನಿಷ್ಠೆ ಯಂತೆ ಕರ್ಣನ ಸ್ವಾಮಿನಿಷ್ಠೆಯನ್ನೂ ನಿರೂಪಿಸಿದ್ದಾನೆ. ಈ ಬಂಧುರ ಬಾಂಧವ್ಯದ ಹೊಂದಿಕೆಗೆ ತನ್ನ ಹಾಗು ಚಾವುಂಡರಾಯನ ಒಸಗೆಯ ಬೆಸಿಗೆಯು ಕೊಂಡಿಯಾಗಿರ ಬಹುದು. ದೊರೆಯಾಗಿದ್ದರೂ ಕಂಗಾಲಾದ ತನಗೆ ಅಂಗಾಧಿ ಪತ್ಯವನ್ನೊದಗಿಸಿದ ದೊರೆ ಸುಯೋಧನನ ನೆರವನ್ನು ನೆನೆ ಯುವ ಕರ್ಣನಂತೆ ಕವಿಯಾದ ತಾನೂ ಕಂಗಾಲಾದ ಕರುಣಾದ್ರ ಹೃದಯದ ಕವಿ ಚಾವುಂಡರಾಯನು ನೀಡಿದ ನೆರವನ್ನು ರನ್ನನು ಅಜಿತನಾಥ ಪುರಾಣದಲ್ಲಿ ಮೇಲಿಂದ ಮೇಲೆ ನೆನಪಿಸುತ್ತಾನೆ. ಕಾವ್ಯದಲ್ಲಿ ಸ್ಮರಿಸಿ ಸಂತೃಪ್ತನಾ ಗದೆ ಹುಟ್ಟಿದ ಮಗನಿಗೆ ಚಾವುಂಡರಾಯನ ಹೆಸರಿಟ್ಟು ದಿನವೂ ಮನೆಯಲ್ಲಿ ಕೂಗಿ ಕರೆಕರೆದು ನಾಮಸ್ಮರಣೆ ಮಾಡು ತ್ತಾನೆ. ಹೆರರು ಹೆತ್ತು ಹೆಸರಿಡುವಷ್ಟು ಪುಣ್ಯ ಪರೋಪ ಕಾರ ಕನ್ನಡ ಕವಿ ಇನ್ನೊಬ್ಬನಿಲ್ಲ; ಚಾವುಂಡರಾಯನನ್ನು ಬಿಟ್ಟರೆ. ಕನ್ನಡದಲ್ಲಿ ಛಂದೋಂಬುಧಿ ಬರೆದ ಬ್ರಾಹ್ಮಣ ಕವಿ ನಾಗವರ್ಮನ ಮಸ್ತಕದ ಮೇಲೂ ತನ್ನ ಔದಾರ್ಯದ ಹಸ್ತವಿಟ್ಟ ಚಾವುಂಡರಾಯನ ಕವಿ ಪೋಷಕಗುಣದೊಂದಿಗೆ ಸರ್ವ ಧರ್ಮ ಸಮನ್ವಯದ ವಿಶಾಲದೃಷ್ಟಿಯೂ ಗಮನಾರ್ಹ ವಾದುದು. ನಾಗವರ್ಮನು ತನ್ನ "ಛಂದೋಂಬುಧಿ" ಯಲ್ಲಿ "ನೃಪನಣ್ಣ" ಎಂಬ "ಮಂಡಲಿಕರ ಮಂತ್ರಿ ಸಂಧಿ ವಿಗ್ರಹಿರಾಯಂ ಕೊಂಡಾಡಿ ಪೊರೆದ" ಎಂದು ಕೃತಜ್ಞನಾಗಿ ನೆನಪಿಸಿಕೊಳ್ಳುತ್ತಾನೆ, ಚಾವುಂಡರಾಯನನ್ನು. ರಾಚ ಮಲ್ಲ, ಚಾವುಂಡರಾಯ, ರನ್ನ, ನಾಗವರ್ಮ ಈ ನಾಲ್ವರ ಮಮತೆಯ ಮೈತ್ರಿಗೆ ಮೂಲಕಾರಣ ಅಜಿತಸೇನಾಚಾರ್ಯ ಗುರುಗಳಡಿಯಲ್ಲಿ ಒಡಗೂಡಿ ಓಡಿಯಾಡಿರಬಹುದು. ಚಾವುಂಡರಾಯನು ತನ್ನ ಪುರಾಣದಲ್ಲಿ "ಪೆರ್ಮಾಡಿಯು ಮಣ್ಣನುಮಜಿತಸೇನದೇವರಗುಡ್ಡರ್" ಎಂದು ಹೇಳಿ ಕೊಳ್ಳುತ್ತಾನೆ. "ಪೆರ್ಮಾಡಿ ಎಂದರೆ ಮಾರಸಿಂಹ, "ಅಣ್ಣನುಂ" ಎಂದರೆ ಚಾವುಂಡರಾಯನೆಂದು ಗ್ರಹಿಕೆ. ಅದರಂತೆ ನಾಗವರ್ಮನು "ಗುರುಗಳ್‌ನೆಗೆಟ್ದಜಿತಸೇನದೇವ" ನೆಂದೂ, ರನ್ನನು "ಗುರುಗಳಜಿತಸೇನಾಚಾರ್ಯರಿಂದ್ರಾದಿ ವಂದ್ಯ ಚರಿತರ್" ಎಂದೂ ತಾವು ಅಜಿತಸೇನಾಚಾರ್ಯರ ಶಿಷ್ಯರೆಂದು ಭಕ್ತಿಪೂರ್ವಕವಾಗಿ ಹೇಳಿಕೊಂಡಿದ್ದಾರೆ. ಈ ಶಿಷ್ಯ ಸಮುದಾಯದ ಸ್ನೇಹವು ನಾಲ್ವರಲ್ಲಿಯೂ ಸಂಪರ್ಕ ವುಂಟುಮಾಡಿದೆ.

ಅಂದು ರನ್ನ, ನಾಗವರ್ಮ ಕವಿಗಳಿಗೆ ಚಾವುಂಡರಾ ಯನು ರಾಜಾಶ್ರಯವಿತ್ತು ಪೋಷಕನಾಗಿದ್ದರೆ, ಇಂದು ಹೊಸಗನ್ನಡ ಕವಿಗಳಿಗೆ ಗೊಮ್ಮಟೇಶ್ವರ ಮೂರ್ತಿಯ ಕಥಾ ವಸ್ತುವನ್ನು ಪೂರೈಸಿ ಪ್ರೇರಕನಾಗಿದ್ದಾನೆ. ಇರಿಯಲ್ಬಲ್ಲವ ನಾಗಿ ಕಲಿಯೂ, ಪೊರೆಯಲ್ಬಲ್ಲವನಾಗಿ ಮಂತ್ರಿಯೂ, ಬರೆ ಯಲ್ಬಲ್ಲವನಾಗಿ ಕವಿಯೂ, ಅರಿಯಲ್ಬಲ್ಲವನಾಗಿ ಜಿನ ಧರ್ಮಾರಾಧಕನೂ ಆಗಿದ್ದಾನೆ. ಒಟ್ಟಿನಲ್ಲಿ ಚಾವುಂಡ

ರಾಯನು ಪ್ರಜಾಪರಿಪಾಲಕ; ಸೇನಾ ಮೇಲ್ವಿಚಾರಕ; ಸಾಹಿತ್ಯಾರಾಧಕ; ಧರ್ಮೋಪಾಸಕ; ಕವಿಪೋಷಕ; ಶಿಲ್ಪ ಕಲಾ ಪ್ರೇರಕ ಆಗಿದ್ದಾನೆ. ಈ ವೈವಿಧ್ಯಮಯ ವೈಭವದ ಜೀವನದಿಂದಾಗಿ ಕನ್ನಡ ನುಡಿ, ನಾಡು, ಇತಿಹಾಸ, ಸಾಹಿತ್ಯ; ಕವಿಚರಿತ್ರೆಗಳಲ್ಲಿ ಅವನ ಸ್ಥಾನ ಉನ್ನತವಾದುದಾಗಿದೆ. ಶಿಲ್ಪಶ್ರೀ ಗೊಮ್ಮಟ ಪ್ರತಿಷ್ಠಾಪನೆಯಿಂದ ಅವನ ಕೀರ್ತಿ ಅಮರವಾಗಿದೆ. ಆದುದರಿಂದ ಚಾವುಂಡರಾಯನೇ ಹೇಳಿದಂತೆ "ಮಂದರ ಸಮುದ್ರ ಉರ್ವಿದಿಗಂತಗಳಿಂ ಪಿರಿದು ಉಗ್ರ ಅರಿ ಜಯಾರ್ಜಿತ ಯಶಂ ಶ್ರೀವೀರ ಮಾರ್ತಾಂಡನಾ" ಎಂಬ ಉಕ್ತಿ. ಅಕ್ಷರಶಃ ಸತ್ಯ ಸಜೀವವಾಗಿದೆ.

(ಆಕಾಶವಾಣಿ ಕೃಪೆಯಿಂದ)

ಸೋಮಾರಿ ಜೀವಕ್ಕೆ ನೂರಾರು ಉಂಟು

ಬರಲಿಲ್ಲ ನೀಯೆಂದು ಕುಸಿದು ಬೀಳುವುದಿಲ್ಲ
ಬರುವುದಾದರೆ, ಎಳೆಬಿಸಿಲ ಮೊನೆಯಲ್ಲಿ ಬೆರೆತ
ಎಳನಾಗರೆಯ ವೈಯಾರವಿರಲಿ,
ಹೊಟ್ಟೆತುಂಬಾ ಮೇದು ಕೆಂಧೂಳಿಯಲಿ ಮಿಂದು
ಬಾಲ ಮೇಲೆತ್ತಿ ಸುಮ್ಮಾನದಲಿ ಕುಣಿವ ಹೋರಿಗರುವಂತಿರಲಿ,
ಉಬ್ಬಿ ಒಳಗಿಳಿದು ಒಂದೊಂದನವುಕಿ ಪಂಜದಲಿ ಬಗೆವ
ದಪ್ಪದಪ್ಪನೆಯ ತೆರೆಗಳಪ್ಪಳಿಕೆ ಸುಳಿಯಲ್ಲಿ ರೌದ್ರವೆ ತುಂಬಿರಲಿ,
ಕುದುರೆಮುಖ ನೆತ್ತಿಯಲಿ ಬಾನಹತ್ತಿರದಲ್ಲಿ
ಹಾಯಾಗಿ ಬೆಳೆದ ಹೆಗ್ಗಾಡಿನಡಿಯಲ್ಲಿ
ಜತೆಗೂಡಿ ನಲಿವ ಸಿಡಿಮೌನವಿರಲಿ,
ಮುಂಗಾರು ಮಳೆಯ ತಣ್ಣನೆಯ ಶೀತದಲಿ
ಮೈಕೊರೆವ ಚಳಿಯ ಬೇನೆ ಬೈರಿಗೆಯಿರಲಿ
ಏನಾದರಿರಲಿ
ಯಾವುದಾದರು ಇರಲಿ
ತುಂಬಿದಾಗಲೆ ಬರಲಿ.
ಬರಲಿಲ್ಲವೆನ್ನು
ಮಾತು ಮುಗಿಯುವ ಮೊದಲೆ ಹೊರಡುವಳ ಜಡೆಹಿಡಿದು
'ದಮ್ಮಯ್ಯ, ಕಂಡಾರು ಬಿಡಿ' ಎನುವ ಅವರೆಗು ಚೇಡಿಸುವೆ.
ಮುಂಬೆಟ್ಟನಲಿ ನಿಂತು ಎದೆ ಹಿಗ್ಗಲಿಸಿ
ದಂಡೆ ಬಸ್ಕಿಯ ಹೊಡೆದು ಕಸರತ್ತು ಮಾಡುವೆ.
ಅಕ್ಕರೆಯ ಮುದ್ದು ಮುಖ ಕಿಲಕಿಲನೆ ನಕ್ಕಾಗ, ಅಂಬೆಗಾಲಿಕ್ಕಾಗ
ಚೈತನ್ಯ ಬೆಳೆವರೆಗು ಮುದ್ದಾಡುವೆ.
ಮಿತ್ರರನು ಸೇರಿ ಸರ್ಕಾರಕ್ಕೆ ಬಹಿಷ್ಕಾರ ಹಾಕಿ
ಗಾಳಿ ಗುದ್ದುವ ಕೆಲಸ ಮಾಡೆ ಮಾಡುವೆ.
ಸೋಮಾರಿ ಜೀವಕ್ಕೆ ಈ ಎಲ್ಲ ಇರುವಾಗ
ಅವಳಿಲ್ಲವೇನೆಂದು ಸಂನ್ಯಾಸಿಯಾಗುವೆನೆ?

ಕೆ. ಎನ್. ಶಿವಪ್ಪ

ಅಪಭ್ರಂಶದ ಇಬ್ಬರು ಜೈನಸಂತರು

ಡಾ. ಮ. ಸು. ಕೃಷ್ಣಮೂರ್ತಿ

ಭಾರತೀಯ ಸಮಾಜದಲ್ಲಿ ಹಲವು ಕಡೆ ಸ್ಥಿತಿಸ್ಥಾಪಕ ಪುರಾಣ ಪಂಥದ ರೂಢಿವಾದೀ ಪ್ರವೃತ್ತಿ ಮತ್ತು ರೂಢಿ ವಿರೋಧೀ ನವೋನ್ಮೇಷಶಾಲಿನೀ ಶಕ್ತಿಗಳ ಸಂಘರ್ಷ ಕಂಡು ಬರುತ್ತದೆ. ಅದರ ಅಭಿವ್ಯಕ್ತಿ ಧಾರ್ಮಿಕ ಸಾಹಿತ್ಯದಲ್ಲಿ, ಆಯಾ ಯುಗಗಳ ಸಾಹಿತ್ಯದಲ್ಲಿ ಕಂಡುಬರುತ್ತದೆ. ಈ ನವೋನ್ಮೇಷದ ಅಭಿವ್ಯಕ್ತಿ ಅಪಭ್ರಂಶದ ಜೈನಸಂತರಲ್ಲಿ ತುಂಬ ಸಹಜವಾಗಿ ಕಂಡುಬರುತ್ತದೆ. 'ಆಚಾರಾಂಗ ಸೂತ್ರ' ದಲ್ಲಿ 'ಸಂತ' ಎಂದರೆ 'ಶಾಂತ' 'ಸಮಯುಕ್ತ', 'ಕ್ರೋಧಾದಿ ರಹಿತ' ಎಂದು ಹೇಳಿದೆ. ಭಗವದ್ಗೀತೆಯ 'ಸಮತ್ವಂ ಯೋಗ ಉಚ್ಯತೇ' ಎಂಬ ಮಾತೂ ಇದೇ ಅರ್ಥವನ್ನೇ ಹೇಳುತ್ತದೆ. ಈ ರೀತಿ ಸರ್ವಜನ ಸರ್ವಪಂಥ ಸಮಾದರ ಭಾವನೆಯಿಂದ ಕೂಡಿದ ಈ ಸಂತರು ತಮ್ಮ ಸುತ್ತಣ ಸಮಾಜದ ರೂಢಿಗಳನ್ನು ವಿರೋಧಿಸಿ ಬಾಹ್ಯಾ ಡಂಬರವನ್ನು ಖಂಡಿಸಿ ಜನಸಾಮಾನ್ಯರಿಗೆ ಸದಾಚಾರ, ಸ್ವಾನುಭೂತಿ, ಚಿತ್ತಶುದ್ಧಿ, ಆಧ್ಯಾತ್ಮಿಕ ಸಾಮ್ಯವಾದ ಮತ್ತು ಜೀವನ್ಮುಕ್ತಿಯ ಸಂದೇಶವನ್ನು ಸರಳವೂ ನೇರವೂ ಆದ ಶೈಲಿಯಲ್ಲಿ ನೀಡಿದ್ದಾರೆ. ಜೈನ ಪ್ರಬಂಧಕಾವ್ಯಗಳ ಮೇಲೆ ಅದು ರಾಮಾಯಣವಾಗಲೀ, ಮಹಾಭಾರತವಾಗಲೀ, ಹರಿವಂಶವಾಗಲಿ ಅವರ ಧಾರ್ಮಿಕ ಮುದ್ರೆ ಬಿದ್ದಿರುತ್ತದೆ. ಆದರೆ ಸಂತ ಯಾವ ಒಂದು ಸಂಪ್ರದಾಯ ವಿಶೇಷದ ಕಟ್ಟಿಗೂ ಸಿಲುಕದ ತತ್ತ್ವಕಾಮ, ಸತ್ಯಕಾಮ. ಅವನು ಅನಿಕೇತನ. ಹಿಂಡನಗಲಿದ ಗಜದಂತೆ ಅವನು ವಿಶ್ವಪರಿಭ್ರಮಣ ಮಾಡು ತ್ತಿರುವಾಗ ತಾನು ಕಂಡ ಸತ್ಯವನ್ನು ಮೆಚ್ಚಿ ಹೊಗಳು ತ್ತಾನೆ. ಅಸತ್ಯ ಅನ್ಯಾಯಗಳನ್ನು ಕಂಡಾಗ ನಿರ್ದಾಕ್ಷಿಣ್ಯ ವಾಗಿ ಖಂಡಿಸುತ್ತಾನೆ. ಈ ರೀತಿ ಸಾರಸಂಗ್ರಹ (eclict) ಯಾದ ಸಂತನ ವಾಣಿ ಸಮಯನಿರಪೇಕ್ಷವೂ, ಸಾರ್ವಕಾಲಿ ಕವೂ ಆಗಿರುತ್ತದೆ. ಉದ್ದೇಶದ ವ್ಯಾಪಕತೆ ಮತ್ತು ವಿಚಾರ ಸಹಿಷ್ಣುತೆಯಿಂದ ತುಂಬಿರುವ ಈ ಸಂತರ ವಾಣಿ, ಪಾರಿ ಭಾಷಿಕ ಪದಾವಳಿ ಮತ್ತು ಶೈಲಿ ಕೂಡ ಸಹಜ, ಸಾಮಾನ್ಯ ಮತ್ತು ಜನಪದ ಭಂಡಾರಕ್ಕೆ ಹತ್ತಿರವಾದವು. ಮಾನವ ತೆಯ ಸಾಮಾನ್ಯಭಾವಭೂಮಿಕೆಯ ಮೇಲೆ ನಿಂತಿರುವ ಈ ಸಂತರ ವಾಣಿ ಸಾರ್ವಕಾಲಿಕ, ಸಾರ್ವಲೌಕಿಕ.

ಅಪಭ್ರಂಶದ ಜೈನಸಂತರಲ್ಲಿ ಜೋಯಿಂದು ಅಥವಾ ಯೋಗೀಂದ್ರ ಮತ್ತು ಮುನಿರಾಮ ಇವರಿಬ್ಬರೂ ಮೂರ್ಧ ನ್ಯರು. ಡಾ. ಎ. ಎನ್. ಉಪಾಧ್ಯೆ ಅವರು ಇವರಿಬ್ಬರೂ ಒಬ್ಬರೇ ಎಂದೂ, 'ರಾಮಸಿಂಹ' ಯೋಗೀಂದ್ರನ ಪರಂ ಪರಾಗತ ಹೆಸರಿರಬೇಕೇಂದೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ಯೋಗೀಂದ್ರ ಮತ್ತು ರಾಮಸಿಂಹರ ಗ್ರಂಥಗಳ ಭಾವ ಸಾಮ್ಯ ಭಾಷಾಸಾಮ್ಯ ಮತ್ತು ಯೋಗೀಂದ್ರನ ಖ್ಯಾತಿಯ ಕಾರಣದಿಂದ ಇಬ್ಬರೂ ಒಬ್ಬರೇ ಇರಬೇಕೆಂಬ ಭ್ರಾಂತಿ ಯುಂಟಾಗಿದೆ.

'ಪರಮಾತ್ಮ ಪ್ರಕಾಶ' 'ಯೋಗಸಾರ' ಜೋಇಂದು ವಿನ ಪ್ರಸಿದ್ಧ ಗ್ರಂಥಗಳು. ಹೇಮಚಂದ್ರನ ವ್ಯಾಕರಣ ನಿಯಮಗಳನ್ನು ಈತನು ಪಾಲಿಸದೇ ಇರುವುದರಿಂದ ಈತ ಆತನಿಗಿಂತ ಹಿಂದಿನವನು ಮತ್ತು ಚಂಡನ ಪ್ರಾಕೃತ ಲಕ್ಷಣದಲ್ಲಿ ಪರಮಾರ್ಥಪ್ರಕಾಶದ ಒಂದು ದೋಹೆ ಉದ್ಧೃತವಾಗಿರುವುದರಿಂದ ಈತನ ಕಾಲ ಕ್ರಿ. ಶ. ಆರನೆಯ ಶತಮಾನವೆಂದು ಡಾ. ಉಪಾಧ್ಯೆ ಅವರು ಊಹಿಸಿದ್ದಾರೆ. ಭಾಷೆಯ ಆಧಾರದ ಮೇಲೆ ರಾಹುಲ ಸಾಂಕೃತ್ಯಾಯನ ಅವರು ಈತನ ಕಾಲ ಕ್ರಿ. ಶ. ೧೦೦೦ ಎಂದು ನಿರ್ಧರಿಸಿ ದ್ದಾರೆ. ಈತ ರಾಜಾಸ್ಥಾನದವನಿರಬೇಕು.

ಈತನ 'ಪರಮಪ್ಪಯಾಸು' (ಪರಮಾತ್ಮ ಪ್ರಕಾಶ) ದಲ್ಲಿ ಎರಡು ಅಧಿಕಾರಗಳಿವೆ. ಭಟ್ಟಪ್ರಭಾಕರನೆಂಬುವನು ಪ್ರಾಯಶಃ ಯೋಗೀಂದ್ರನ ಶಿಷ್ಯನಿರಬೇಕು. ಆತನನ್ನು ಆತ್ಮ ಪರಮಾತ್ಮರ ಬಗೆಗೆ ಪ್ರಶ್ನಿಸುತ್ತಾನೆ. ಆ ಪ್ರಶ್ನೆಗಳಿಗೆ ಉತ್ತರರೂಪವಾಗಿದೆ ಈ ಗ್ರಂಥ. ಪ್ರಥಮಾಧಿಕಾರದಲ್ಲಿ ಬಹಿರಾತ್ಮ ಅಂತರಾತ್ಮ, ಮತ್ತು ಪರಮಾತ್ಮರ ಸ್ವರೂಪ, ವಿಕಲ ಸಕಲ ಪರಮಾತ್ಮರ ಸ್ವರೂಪ ಮೊದಲಾದವುಗಳ ಚರ್ಚೆಯಿದೆ. ಎರಡನೆಯ ಅಧಿಕಾರದಲ್ಲಿ ಮೋಕ್ಷಸ್ವರೂಪ, ಮೋಕ್ಷಫಲ, ಮೊದಲಾದವುಗಳ ವಿವೇಚನೆಯಿದೆ.

'ಯೋಗಸಾರ' 'ಪರಮಾತ್ಮ ಪ್ರಕಾಶ' ಕ್ಕಿಂತ ಚಿಕ್ಕದು, ಇದರಲ್ಲಿ ೧೦೮ ಪದ್ಯಗಳಿವೆ. ಇದರಲ್ಲೂ ಕೂಡ ಪರಮಾತ್ಮ ಪ್ರಕಾಶದಂತೆಯೇ ವೈರಾಗ್ಯ, ಪರಮಾತ್ಮ ಸ್ವರೂಪ ಮೊದಲಾದವುಗಳ ನಿರೂಪಣೆಯಿದೆ. ಇದು ಪರ ಮಾತ್ಮ ಪ್ರಕಾಶಕ್ಕಿಂತ ಹೆಚ್ಚು ಸರಳ ಹಾಗೂ ಮುಕ್ತ.

ಪರಮಾತ್ಮ ಸ್ವರೂಪವನ್ನು ಜೋಯಿಂದು ತುಂಬ ಸುಂದರವಾಗಿ ಬಣ್ಣಿಸಿದ್ದಾನೆ:

"ದೇಹ ವಿಭಿಣ್ಣ ಉ ಣಾಣಮಉ ಜೋ ಪರಮಪ್ಪುಣಿ ಏ ಇ।
ಪರಮ ಸಮಾಹಿ ಪರಿಠ್ಠಿಯಉ ಪಂಡಿಉಸೋ ಜಿ ಹವೇ ಇ॥"

ದೇಹ ಆತ್ಮಕ್ಕಿಂತ ಭಿನ್ನವಾದುದು, ಪರಮ ಸಮಾಧಿಯಲ್ಲಿ ನಿಂತು ಆತ್ಮ ಮತ್ತು ಶರೀರದಲ್ಲಿ ಭೇದವನ್ನು ಕಾಣುವನೇ ಪಂಡಿತ.

ಆ ಪರಮಾತ್ಮ ದೇಹ ಭಿನ್ನವಾದರೂ ಈ ದೇಹದಲ್ಲೇ ಇದ್ದಾನೆ. ಈ ಪರತತ್ವಾನುಭೂತಿಯಿಂದಲೇ ಪೂರ್ವಜನ್ಮ ಕರ್ಮಕ್ಷಯ:

" ಜೇ ದಿಟ್ಠೇ ತುಟ್ಟಂತಿಲಹು, ಕಮ್ಮಇಂ ಪುವ್ವ ಕಿಯಾಇಂ।
ಸೋ ಪರು ಜಾಣಹಿ ಜೋಇಯಾ, ದೇಹಿ ವಸಂತುಣ
ಕಾ ಇ॥ "

ಇಂಥ ವಿಮಲಸ್ವಭಾವದ ಪರಮಾತ್ಮನನ್ನು ಬಿಟ್ಟು, ತೀರ್ಥ ಯಾತ್ರೆ, ಮೊದಲಾದವು ವ್ಯರ್ಥ!

" ಅಣ್ಣುಜಿ ತಿತ್ಥು ಮ ಜಾಹಿ ಜಿಯ ಅಣ್ಣುಜಿ ಗುರುಅಮಸೇವಿ।
ಅಣ್ಣುಜಿ ದೇ ಉಮ ಚಿಂತಿ ತುಹುಂ ಅಪ್ಪಾ ವಿಮಲು
ಮುಏವಿ॥ "

"ಇಂಥ ಪರಮಾತ್ಮನನ್ನು ಬಿಟ್ಟು, ತೀರ್ಥಯಾತ್ರೆ, ಗುರುಸೇವೆ, ಅಥವಾ ಬೇರಾವ ದೇವರ ಚಿಂತೆಯೂ ವ್ಯರ್ಥ."

ಆ ಆತ್ಮತತ್ವ ದೇವಾಲಯದಲ್ಲಿಲ್ಲ, ಶಿಲೆಯಲ್ಲೂ ಇಲ್ಲ, ಲೇಪ್ಯದಲ್ಲಾಗಲೀ, ಚಿತ್ರದಲ್ಲಾಗಲೀ ಇಲ್ಲ. ಆ ಅಕ್ಷಯ, ನಿರಂಜನ, ಜ್ಞಾನಮಯ ಶಿವ ಸಮಚಿತ್ತದಲ್ಲಿ ನೆಲೆನಿಂತಿದ್ದಾನೆ. ಸಮದರ್ಶಿಗಳಾದ ಯೋಗಿಗಳಿಗೆ ಗಮ್ಯನಾಗಿದ್ದಾನೆ:

ದೇಉಣ ದೇಉಲೇ ಣವಿ ಸಿಲಏ, ಣವಿ ಲಿಪ್ಪಇ ಣವಿ ಚಿತ್ತಿ।
ಅಖಉ ಣಿರಂಜಣು ಣಾಣಮಉ, ಸಿಉ ಸಂಠಿಉ
ಸಮ-ಚಿತ್ತಿ॥

ಪರಮಾತ್ಮನ ನಿರಂಜನ ಸ್ವರೂಪವನ್ನು ಕವಿ ಇನ್ನಿಲ್ಲದಂತೆ ವರ್ಣಿಸುತ್ತಾನೆ:

ಜಾಸು ಣ ವಣ್ಣು ಣಗಂಧು ರಸು, ಜಾಸುಣ
ಸದ್ದು ಣ ಫಾಸು।
ಜಾಸು ಣ ಜಮ್ಮಣು ಮರಣು ಣವಿ, ಣಾಉಣಿ
ರಂಜಣು ತಾಸು॥
ಜಾಸುಣ ಕೋಹು ಣ ಮೋಹು ಮಉ, ಜಾಸುಣ ಮಾಯ ಣ
ಮಾಣು।
ಜಾಸುಣ ಠಾಣು ಣ ಝಾಣು ಜಿಯ, ಸೋಜಿ
ಣಿರಂಜಣು ಜಾಣು॥
ಅತ್ಥಿ ಣ ಪುಣ್ಣು ಣ ಪಾಉಜಸು ಅತ್ಥಿ ಣ ಹಂಸು ವಿಸಾಉ।
ಅತ್ಥಿ ಣ ಏಕ್ಕುವಿ ದೋಸುಜಸು, ಸೋಜಿ ಣಿರಂಜಣು ಭಾಉ॥

ಯಾವುದಕ್ಕೆ ವರ್ಣವಾಗಲೀ, ಗಂಧವಾಗಲೀ, ರಸವಾಗಲೀ ಇಲ್ಲವೋ, ಶಬ್ದ, ಸ್ಪರ್ಶಗಳಿಲ್ಲವೋ ಜನ್ಮಮರಣ ರಹಿತವಾದ ಆ ಪರತತ್ವದ ಹೆಸರೇ ನಿರಂಜನ. ಕ್ರೋಧ, ಮೋಹ, ಮದವಿಲ್ಲದ, ಮಾಯೆ, ಮಾನಾಭಿಮಾನಗಳಿಂದ ದೂರವಾದ, ಸ್ಥಾನ ಧ್ಯಾನಗಳಿಲ್ಲದ, ಪರವಸ್ತುವೇ ನಿರಂಜನ. ಪಾಪ ಪುಣ್ಯಗಳ ಲೇಪವಿಲ್ಲದ, ಹರ್ಷವಿಷಾದಗಳಿಂದ ದೂರವಾದ ದೋಷರಹಿತವಾದ ವಸ್ತುವೇ ನಿರಂಜನ.

ಈ ನಿರಂಜನ ತತ್ತ್ವವನ್ನೇ 'ಶಿವ' ಎಂದೂ ಜೋಇಂದು ಕರೆದಿದ್ದಾನೆ:

ಣಿಚ್ಚುಣಿರಂಜಣು ಣಾಣಮಉ, ಪರಮಾಸಾಂದ ಸಹಾಉ।
ಜೋ ಏಹಉ ಸೋ ಸಂತ ಸಿಉ, ತಾಸು ಮುಣಿಜ್ಜಹಿ
ಜಾವು॥

ನಿತ್ಯನಿರಂಜನನೂ, ಜ್ಞಾನಮಯನೂ, ಪರಮಾನಂದ ಸ್ವಭಾವನೂ ಆದ ಶಾಂತ ಶಿವನನ್ನು ಭಾವಿಸು.

ಜೋ ಣಿಯಭಾಉ ಣ ಪರಿಹರಇ ಜೋ ಪರಭಾಉ
ಣ ಲೇಇ।
ಜಾಣಇ ಣ ಸಯಲುವಿ ಣಿಚ್ಚುಪರ, ಸೋಸಿವು ಸಂತ
ಹವೇಇ॥

ಯಾರು ತನ್ನ ನಿಜಭಾವವನ್ನು ಕಳೆದುಕೊಳ್ಳುವುದಿಲ್ಲವೋ ಪರಭಾವವನ್ನು ಗ್ರಹಿಸುವುದಿಲ್ಲವೋ, ಅಂಥ ಸತ್ಯನಾದ ಪರವಸ್ತುವೇ ಶಾಂತ ಶಿವ ಎನ್ನಿಸಿಕೊಳ್ಳುತ್ತದೆ.

ಇಂಥ ಪರಮ ತತ್ತ್ವದ ಮೇಲೆ ಒಂದು ಕ್ಷಣವಾದರೂ ಅನುರಕ್ತನಾದರೆ ನಮ್ಮ ಎಲ್ಲ ಪಾಪಗಳೂ ಕಿಡಿಯಿಂದ ಮರ ಮುಟ್ಟುಗಳ ಬೆಟ್ಟವೇ ಸುಟ್ಟು ಬೂದಿಯಾಗುವಂತೆ ನಶಿಸಿ ಹೋಗುತ್ತದೆ:

ಜ ಇ ಣಿ ವಿಸದ್ಧು ವಿಟವಿ ಕರಇ ಪರಮಪ್ಪ ಇ ಅಣುಕಾಉ।
ಅಗ್ಗೀ ಕಣೀ ಜಿಮ ಕಟ್ಠಗಿರೀ ಡಹಇ ಅಸೇಸು ವಿ ಪಾಉ॥

ಬರಿಯ ಶಾಸ್ತ್ರಜ್ಞಾನದಿಂದ ಆತ್ಮಜ್ಞಾನ ದೊರೆಯುವುದೆನ್ನುವುದು ಸುಳ್ಳು. ಇದನ್ನೇ ಉಪನಿಷತ್ತಿನಲ್ಲೂ 'ನಾಯಮಾತ್ಮಾ ಪ್ರವಚನೇನ ಲಭ್ಯಃ' ಎಂದು ಹೇಳಿದೆ. ಜ್ಞಾನಪ್ರಾಪ್ತಿಗೆ ಶಾಸ್ತ್ರ ನೆರವಾಗಬಹುದು, ನಿಜ. ಆದರೆ ಅದು ಜ್ಞಾನದ ತುತ್ತತುದಿಯಾಗಲಾರದು. ಈ ಶಾಸ್ತ್ರಗಳಿಂದಲೇ ಇಲ್ಲದ ತಾರತಮ್ಯ, ಧರ್ಮಾಂಧತೆ, ಸಂಕುಚಿತ ಮನೋಭಾವನೆ ಬೆಳೆಯಬಹುದು. ಆದ್ದರಿಂದ ಸಂತರು ಅಕ್ಷರಜ್ಞಾನವನ್ನು ಪುಸ್ತಕೀಯಜ್ಞಾನವನ್ನು ಹೀಗಳೆದಿದ್ದಾರೆ:

ದೇವಹಂ ಸತ್ಥಹಂ ಮುಣಿವರಹಂ ಭತ್ತಿಎ ಪುಣ್ಣು ಹವೇಇ |
ಕಮ್ಮಕ್ಖಉ ಪುಣಿ ಹೋಇಣವಿ, ಅಜ್ಜಉ ಸಂತಿ ಭಣೇಇ ||

ದೇವ-ಶಾಸ್ತ್ರ ಮುನಿವರರ ಭಕ್ತಿಯಿಂದ ಪುಣ್ಯವೇನೋ ದೊರೆಯುವುದು, ಆದರೆ ಕರ್ಮಕ್ಷಯವಾಗಲಾರದು.

ಸತ್ಥ ಪಢಂತುವಿ ಹೋಇ ಜಡು, ಜೋಣ ಹಣೇಇ ವಿಯಪ್ಪು |
ದೇಹಿ ವಸಂತವಿ ಣಿಮ್ಮಲಉ, ಣವಿ ಮಣ್ಣಇ ಪರಮಪ್ಪು ||

ಶಾಸ್ತ್ರವನೋದಿದಡೆ ಜಡನಾಗುವನು, ವಿಕಲ್ಪವ ಕಳೆಯಲಾರ. ದೇಹದಲ್ಲೇ ನೆಲೆನಿಂತಿರುವ ನಿರ್ಮಲ ಪರಮಾತ್ಮನನ್ನು ಆತ ಕಾಣ.

ಇದೇ ರೀತಿ ತೀರ್ಥಯಾತ್ರೆ ಕೂಡ ವ್ಯರ್ಥ.

ತಿತ್ಥ ಇಂ ತಿತ್ಥು ಭಮಂತಹಂ, ಮೂಢಹಂ ಮೋಕ್ಖ ಣ ಹೋಇ |
ಣಾಣ ವಿವಜ್ಜಿಉ ತೀಣಜಿಯ, ಮುಣಿವರು ಹೋಇ ಣಸೋಇ ||

ತೀರ್ಥಕ್ಷೇತ್ರಗಳಿಗೆ ಅಲೆಯುವ ಮೂರ್ಖನಿಗೆ ಮೋಕ್ಷವಿಲ್ಲ. ಜ್ಞಾನವಿವರ್ಜಿತನಾದ ಜೀವ ಮುನಿವರನಾಗಲಾರ, ಮೋಕ್ಷ ಪಡೆಯಲಾರ.

ಇಂಥ ಮೋಕ್ಷವನ್ನು ಪಡೆಯಬೇಕಾದರೆ ಸತ್ಸಂತ ಅತ್ಯಗತ್ಯ. ಸಂಸರ್ಗದಿಂದ ಗುಣನಾಶ ಇಲ್ಲವೇ ವಿಕಾಸ ಸಂಭವ. ದುರ್ಜನರ ಸಂಗದಿಂದ ಎಂಥ ಪ್ರತಿಭಾವಂತನೂ ನಾಶವಾಗುವನು ಎಂಬುದನ್ನು ಕವಿ ಅತ್ಯಂತ ಸುಂದರವಾದ ಹೋಲಿಕೆಯಿಂದ ಸ್ಪಷ್ಟಪಡಿಸಿದ್ದಾನೆ.

ಭಲ್ಲಾಹಂ ವಿ ಣಾಸಂತಿ ಗುಣ ಜಹಂ ಸಂಸಗ್ಗ ಖಲೇಹಿಂ |
ವಇಸಾಣರು ಲೋಹಹಂ ಮಿಲಿಉ ತೇಪಿಟ್ಟಿಯಇ ಘಣೇಹಿಂ ||

ಸಜ್ಜನರ ಗುಣಗಳೂ ಕೂಡ ನೀಚರ ಸಂಸರ್ಗದಿಂದ ನಾಶವಾಗುತ್ತವೆ. ವೈಶ್ವಾನರ ಅಗ್ನಿ ಮಲಿನ ಲೋಹದ ಸಂಸರ್ಗದಿಂದ ಸುತ್ತಿಗೆಯ ಬಡಿತಕ್ಕೆ ಸಿಕ್ಕಿ ನಾಶವಾಗುತ್ತದೆ.

ಆನುರಾಗ, ಆಸಕ್ತಿ ಎನ್ನುವುದು ಜೀವಿಗಳ ನಾಶಕ್ಕೆ ಮೂಲ. ಆದ್ದರಿಂದ ಈ ರಾಗಬಂಧನವನ್ನು ಕತ್ತರಿಸಿ ವೀತರಾಗನಾಗುವುದಕ್ಕಾಗಿ ಮಾನವ ಹೆಣಗಬೇಕು. ಆಸಕ್ತಿಯೇ ಬಂಧನ, ಅನಾಸಕ್ತಿಯೇ ಮೋಕ್ಷ ಎನ್ನುವುದನ್ನು ಕವಿ ತುಂಬ ಸುಂದರವಾಗಿ ಬಣ್ಣಿಸಿದ್ದಾನೆ.

ರೂವಿ ಪಯಾಂಗಾ ಸದ್ದಿಮಯ, ಫಾಸಹಿಣಾಸಂತಿ |
ಅಲಿ ಉಲ ಗಂಧಹಿಂ ಮಚ್ಛರಸಿ, ಕಿಮ ಅಣುರಾಉ ಕರಂತಿ||

ರೂಪಿನಿಂದ ಪತಂಗ, ಶಬ್ದದಿಂದ ಜಿಂಕೆ, ಸ್ಪರ್ಶದಿಂದ ಆನೆ ನಾಶವಾಗುತ್ತಿದೆ. ಅಲಿಕುಲದ ನಾಶಕ್ಕೆ ಗಂಧವೇ ಕಾರಣವಾಗುತ್ತದೆ, ಮೀನಿಗೆ ರಸವೇ ಮುಳಿವಾಗುತ್ತದೆ. ಅನುರಾಗ ಏನನ್ನು ತಾನೆ ಮಾಡುವುದಿಲ್ಲ!

ಧರ್ಮ ಬರಿಯ ಬಾಹ್ಯಾಡಂಬರಗಳಿಂದ ಉಂಟಾಗದು. ವಿಷಯ ಸುಖಗಳತ್ತ ಹರಿಯುವ ಮನಸ್ಸನ್ನೇ ಆತ್ಮದತ್ತ ತಿರುಗಿಸಿದಾಗ ನಿರ್ವಾಣ. ಈ ರೀತಿ ವಿಷಯ ವಾಸನೆಗಳ ಉನ್ನಯನ (Sublimation) ದಿಂದಲೇ ಮೋಕ್ಷ ಸಾಧ್ಯ ಎಂಬುದನ್ನು ಈ ದೋಹೆಯಲ್ಲಿ ನೋಡಬಹುದು :

ಧಮ್ಮು ಣ ಪಢಿಯ ಇಂ ಹೋಇ, ಧಮ್ಮು ಣ ಪೋತ್ಥಾ ಪಿಚ್ಛಿಯನ್ನಂ |
ಧಮ್ಮು ಣ ಮಢಿಯ ಪಯೇಸಿ, ಧಮ್ಮು ಣ ಮತ್ಥಾ ಲುಂಚಯ ಇಂ ||

" ಧರ್ಮ ಓದುವುದರಿಂದ ಉಂಟಾಗದು, ಪುಸ್ತಕಗಳಿಂದಲೂ ದೊರೆಯದು, ಮಠಪ್ರವೇಶದಿಂದಲೂ ಧರ್ಮ ದೊರೆಯದು, ಮುಂಡೆ ಬೋಳಿಸಿಕೊಳ್ಳುವುದರಿಂದಲೂ ಧರ್ಮ ಅನುಭವಕ್ಕೆ ಬಾರದು."

ಜೀಹಇ ಮಣ ವಿಸಯಹಂ ರಮಇ ತಿವಿ ಜಇ ಅಪ್ಪಮುಣೇಇ |
ಜೋಇ ಭಣಇ ಹೋ ಜೋಇಯಹು, ಲಹುಣ ವ್ವಾಣು ಲಹೇಇ ||

"ಎಲೈ ಯೋಗಿಗಳೇ ಕೇಳಿ,ವಿಷಯ ಸುಖಗಳಲ್ಲಿ ರಮಿಸುವ ಮನಸ್ಸನ್ನು ಆತ್ಮದತ್ತ ತಿರುಗಿಸಿಗಾಗ, ತಕ್ಷಣ ನಿರ್ವಾಣ ಲಭಿಸುತ್ತದೆ."

ಒಂದು ರೀತಿಯಲ್ಲಿ ನೋಡಿದರೆ ಪಾಪ ಪುಣ್ಯಕ್ಕಿಂತಲೂ ಶ್ರೇಷ್ಠ. ಏಕೆಂದರೆ ಪಾಪದಿಂದಲೇ ಜೀವಿಗಳು ದುಃಖಕ್ಕೆ ಗುರಿಯಾಗುತ್ತಾರೆ. ಆ ದುಃಖದಿಂದ ಸುದ್ಬುದ್ಧಿ ಹುಟ್ಟುತ್ತದೆ. ಆದರಿಂದ ಈ ಸದ್ಬುದ್ಧಿಗಾಗಿ ಪುಣ್ಯವನ್ನು ತೊರೆಯಲೂ ನೀವು ಸಿದ್ಧರಾಗಬೇಕು :

" ವರ ಜೀಯ ಪಾವ ಇಂ ಸುಂದರ ಇಂ ಣಾಣಿಯತಾ ಇಂ ಭಣಂತಿ ||
ಜೀವಹಂ ದುಕ್ಖಣಂ ಜಣಿವಿಲಹು ಸಿವಮಇಂ ಜಾಇಂ ಕುಣಂತಿ ||

ನಿರ್ಮಲವಾದ ಚಿತ್ತದಲ್ಲಿ ದೇವರು ನೆಲೆಸುತ್ತಾನೆ. ನಿರ್ಮಲಚಿತ್ತ ಮತ್ತು ದೇವನ ಸಂಬಂಧವನ್ನು ಕವಿ ಹಂಸ ಮತ್ತು ನೀರಿನ ಸಂಬಂಧಕ್ಕೆ ಹೋಲಿಸಿದ್ದಾನೆ.

ಣಿಯ-ಮಣಿ ಣಿಮ್ಮಲಿ ಣಾಣಿಯಹಂ, ಣಿವಸಹಿ ದೇಉ ಅಣಾಇ ||
ಹಂಸಾ ಸರಿಪವರಿ ಲೀಣು ಜಿಮ, ಏಹಉ ಪಡಿಹಾಇ ||

ಜ್ಞಾನದಿಂದ ನಿರ್ಮಲವಾದ ಚಿತ್ತದಲ್ಲಿ ದೇವರು ನೆಲೆಸುತ್ತಾನೆ. ನಿರ್ಮಲ ಸರೋವರದಲ್ಲಿ ಹಂಸ ನೆಲೆಸುವಂತೆ.

ಜೋಇಂದುವಿನದು ವಿಶ್ವದಷ್ಟು ವಿಶಾಲವಾದ ಮನಸ್ಸು. ಅವನಿಗೆ ತನ್ನ ಧರ್ಮವೇ ಧರ್ಮ, ತನ್ನ ದೇವರೇ ದೇವರು ಎಂಬ ಹಟವಾಗಲೀ, ದುರಭಿಮಾನವಾಗಲೀ ಇಲ್ಲ. ದೇವ ನೊಬ್ಬ ನಾಮ ಹಲವು ಎಂಬ ತತ್ವವನ್ನು ಕವಿ ಮಾತಿನಿಂದ ಬೋಧಿಸದೇ ಅನುಷ್ಠಾನಕ್ಕೆ ತಂದುಕೊಂಡಿದ್ದ ಮಹಾ ಪುರುಷ ಅವನ ಆ ವಿಶ್ವದೇವ ವರ್ಣನೆಯನ್ನು ನೋಡಬೇಕು.

ಸೋ ಸಿವಸಂಕರು ವಿಣ್ಹು ಸೋ, ಸೋರುದ್ದ ವಿ ಸೋ ಬುದ್ಧ |
ಸೋ ಜಿಣು ಈಸರು ಬಂಭುಸೋ, ಸೋ ಅಣಂತು ಸೋ ಸಿದ್ಧು ||

ಏವಂಹಿ ಲಕ್ಖಣ ಲಕ್ಖಿಯಉ, ಜೋ ಪರ ಣಿಕ್ಕಲು ದೇಉ |
ದೇಹಹಂ ಮಜ್ಝ ಹಿಂ ಸೋವಸಹಿ, ತಾಸು ಣವಿಜ್ಜ ಇ ಭೇಉ ||

"ಅವನೆ ಶಿವಶಂಕರ ಅವನೆ ವಿಷ್ಣು, ಅವನೇ ರುದ್ರ ಅವನೆ ಬುದ್ಧ
ಅವನೆ ಜಿನ, ಈಶ್ವರ, ಬ್ರಹ್ಮ, ಅವನೇ ಅನಂತ ಅವನೇ ಸಿದ್ಧ"

ಇಂಥ ಲಕ್ಷಣದಿಂದ ಲಕ್ಷಿತನಾಗಿಹ ಪರ ನಿಷ್ಕಲದೇವ |
ದೇಹ ಮಧ್ಯದಲೆ ವಾಸಿಸುವ ಆತಗೆ ಇಲ್ಲವಾವ ಭೇದ ||

ಮುನಿರಾಮಸಿಂಹನ ವಿಷಯವಾಗಿಯೂ ಹೆಚ್ಚು ವಿಷಯ ತಿಳಿದಿಲ್ಲ. ಈತನ ಗ್ರಂಥದ ಕೆಲವು ಪದ್ಯಗಳು ಹೇಮಚಂದ್ರ ನಿಂದ ಉದ್ಧೃತವಾಗಿದೆ. ಆದ್ದರಿಂದ ಆತ ಹೇಮಚಂದ್ರನಿ ಗಿಂತ ಹಿಂದಿರಬೇಕು. ಈತನ ಕೆಲವು ದೋಹೆಗಳು 'ಸಾವಯ ಧಮ್ಮ ದೋಹಾ'ದಲ್ಲೂ ದೊರೆಯುತ್ತವೆ. ಬಹುಶಃ ಈತ ಈ ಗ್ರಂಥದಿಂದ ಅವುಗಳನ್ನು ಆರಿಸಿಕೊಂಡಿರಬೇಕು. ಆದ್ದ ರಿಂದ ಮುನಿರಾಮ 'ಸಾವಯಧಮ್ಮ'ದ ಲೇಖಕ ದೇವ ಸೇನ (ಕ್ರಿ. ಶ. ೯೩೭) ನಿಗಿಂತ ಈಚೆಗೆ ಎಂದರೆ ಕ್ರಿ. ಶ. ೧೦೦೦ ರದ ಸರಿಸುಮಾರಿನಲ್ಲಿದ್ದಿರಬೇಕು. ಈತನು ಜೈನ ಕುಲದವನು, ರಾಜಾಸ್ಥಾನಿಯಿರಬೇಕೆಂದು ಮಹಾಪಂಡಿತ ರಾಹುಲಸಾಂಕೃತ್ಯಾಯನ ಅವರು ಊಹಿಸಿದ್ದಾರೆ. ಈತನ ಗ್ರಂಥ 'ಪಾಹುಡದೋಹಾ'.

'ಪಾಹುಡದೋಹಾ' ಇನ್ನೂರಿಪ್ಪತ್ತು ಪದ್ಯಗಳ ಒಂದು ಚಿಕ್ಕ ಕೃತಿ. ಇದರ ಸಂಪಾದಕ ಶ್ರೀ ಹೀರಾಲಾಲ್ ಜೈನರ ಪ್ರಕಾರ ಜೈನರು 'ಪಾಹುಡ' ಶಬ್ದವನ್ನು 'ಯಾವುದಾದರೂ ಒಂದು ವಿಷಯ ಪ್ರತಿಪಾದನೆ' ಎಂಬ ಅರ್ಥದಲ್ಲಿ ಬಳಸಿ ದ್ದಾರೆ. ಕುಂದಕುಂದಾಚಾರ್ಯನ ಎಲ್ಲ ಗ್ರಂಥಗಳಿಗೂ 'ಪಾಹುಡ' ಎಂಬ ಹೆಸರಿದೆ. ಇದರಿಂದ ಧಾರ್ಮಿಕ ಸಿದ್ಧಾಂತ ಸಂಗ್ರಹವನ್ನು ಪಾಹುಡ ಎಂದು ಕರೆಯುತ್ತಿದ್ದರೆಂದು ಕಾಣುತ್ತದೆ. 'ಪಾಹುಡ'ದ ಸಂಸ್ಕೃತರೂಪ ಪ್ರಾಭೃತ. (ಕನ್ನಡದಲ್ಲಿ ಶ್ಯಾಮಕುಂದಾಚಾರ್ಯನು ಒಂದು 'ಪ್ರಾಭೃತ' ವನ್ನು ಬರೆದಿದ್ದಾನೆ) ಎಂದರೆ, 'ಉಡುಗೊರೆ', 'ಬಹುಮಾನ' ಎಂದು ಅರ್ಥ. ಇದರ ಪ್ರಕಾರ ದೋಹೆಗಳ, ಉಡುಗೊರೆ ಎಂದು ಈ ಗ್ರಂಥದ ಹೆಸರನ್ನು ಅರ್ಥೈಸ ಬಹುದು.

ಈ ಗ್ರಂಥದ ವಿಷಯವೂ ಕೂಡ ಅಧ್ಯಾತ್ಮ ಚಿಂತನೆ. ಇದರಲ್ಲಿ ಅನುಭವವೂ ಬರುತ್ತದೆ. ರಾಮಸಿಂಹ ಒಬ್ಬ ಅನುಭಾವಿ ಸಂತ. ಆದ್ದರಿಂದ ಆತನ ಅನುಭವಮಂಡಿತ ದೋಹೆಗಳು ಇಲ್ಲಿ ಅತ್ಯಂತ ಸಹಜವಾಗಿ ಮೂಡಿಬಂದಿವೆ. ಕಳಕಳಿಯಿಂದ ಕೂಡಿದೆ. 'ಪಾಹುಡ ದೋಹ'ದ ಅನು ಭವವನ್ನು ಕುರಿತು ಶ್ರೀ ಹೀರಾಲಾಲ್ ಜೈನರು ಹೀಗೆ ಹೇಳುತ್ತಾರೆ. ಈ ದೋಹೆಗಳಲ್ಲಿ ಯೋಗಿಗಳ ಆಗಮ, ಅಚಿತ–ಚಿತ, ದೇಹ–ದೇವಲೀ, ಶಿವಶಕ್ತಿ ಸಂಕಲ್ಪ–ವಿಕಲ್ಪ ಸಗುಣ–ನಿರ್ಗುಣ, ಅಕ್ಷರ–ಬೋಧ–ವಿಬೋಧ, ವಾಮ– ದಕ್ಷಿಣ ಮಧ್ಯ, ಎರಡು ಮಾರ್ಗಗಳು, ರವಿ, ಶಶಿ, ಪವನ, ಕಾಲ ಮೊದಲಾದ ಶಬ್ದಗಳು ಬರುತ್ತವೆ. ಅವುಗಳ ಗಹನ ಪ್ರಯೋಗ ನಮಗೆ ಯೋಗ ಮತ್ತು ತಾಂತ್ರಿಕ ಗ್ರಂಥಗಳ ನೆನಪು ತರದಿರದು.

ಇವುಗಳ ಭಾಷೆ ಸಾಂಕೇತಿಕ. ಈ ದೃಷ್ಟಿಯಿಂದ ಈ ದೋಹೆಗಳನ್ನು ಬೌದ್ಧಸಿದ್ಧರ 'ಚರ್ಯಾಪದ' ಮತ್ತು 'ದೋಹಾಕೋಷ' ಗಳೊಡನೆ ಹೋಲಿಸಬಹುದು.

ಅಪಭ್ರಂಶದ ಅತ್ಯಂತ ಜನಪ್ರಿಯ ಆಧ್ಯಾತ್ಮಿಕ ಮುಕ್ತಕ ಗ್ರಂಥ 'ಪಾಹುಡ ದೋಹಾ.' ರಾಮಸಿಂಹನ ವಿಚಾರಗಳು ಜೋಯಿಂದುವಿನ ವಿಚಾರಗಳಂತೆ ತುಂಬ ಉದಾತ್ತ, ತುಂಬ ವ್ಯಾಪಕ. ಅನುಭಾವದಲ್ಲಂತೂ ಆತ ಜೋಯಿಂದುವಿ ಗಿಂತಲೂ ಒಂದು ಹೆಜ್ಜೆ ಮುಂದು. ಅವನ ದೃಷ್ಟಿಯೂ ಅಷ್ಟೆ ಅತ್ಯಂತ ವಿಶಾಲ, ನಿರ್ದಿಗಂತ. ರಾಮಸಿಂಹನ ಮನಸ್ಸು ಎಷ್ಟೊಂದು ಉದಾರವೆಂದರೆ ಅವನು ಬೆಳಕನ್ನು ನೀಡುವವರು ಯಾರೇ ಆಗಲಿ ಅವರನ್ನು ತನ್ನ ಗುರುವೆಂದು ಭಾವಿಸುತ್ತಾನೆ. ಗುರುವಿನ ಕೆಲಸ ಬೆಳಕು ನೀಡುವುದು. ಆ ಬೆಳಕನ್ನು ನೀಡುವವನು ಸೂರ್ಯನಾಗಬಹುದು, ಚಂದ್ರ ನಾಗಬಹುದು, ಅದು ಯಾವ ಮೂಲೆಯಿಂದ ಬೇಕಾದರೂ ಬರಬಹುದು. ನಾವು ಅದನ್ನು ಸ್ವೀಕರಿಸಬೇಕು, ಅದಕ್ಕೆ ಮೈಯೊಡ್ಡಿ ನಿಲ್ಲಬೇಕು, ಕೈಚಾಚಬೇಕು ಆಗಲೇ ನಮ್ಮ ದೇಹ, ಆತ್ಮಗಳಿಗೆ ತುಷ್ಟಿ, ಪುಷ್ಟಿ.

ಬೆಳಕು ಮತ್ತು ಜ್ಞಾನವನ್ನು ಅರಸುವ ಇಂಥ ಸಂತರು ಪುಸ್ತಕಜ್ಞಾನ ಅಥವಾ ಕಥಿತಜ್ಞಾನಕ್ಕೆ ಪುರಸ್ಕಾರ ನೀಡ ದಿರುವುದು ಸಹಜವೇ. ಆತ್ಮಜ್ಞಾನವನ್ನುಂಟುಮಾಡದ ವ್ಯಾಖ್ಯಾನಗಳು, ಗ್ರಂಥಗಳು ವ್ಯರ್ಥ, ಭಾರ.

ಪಕ್ಖಾನಡಾ ಕುರಂತು ಬಹು ಅಪ್ಪಿ ಣ ದಿಣ್ಣು ಣು ಚಿತ್ತು |
ಕಣಹಿಂ ಜಿ ರಹಿಉ ಪಯಾಲು ಜಿಮ, ಪರ ಸಂಗಹಿಉ ಬಹುತ್ತು ||

"ತುಂಬ ವ್ಯಾಖ್ಯಾನ ಮಾಡುತ್ತೀಯೆ, ಆದರೆ ಆತ್ಮನತ್ತ ದತ್ತಚಿತ್ತನಾಗಲಿಲ್ಲ. ಗಟ್ಟಿಯನ್ನು ಬಿಟ್ಟು ಜೊಳ್ಳನ್ನು ಸಂಗ್ರಹಿಸಿದಂತೆ ಇವೆಲ್ಲವೂ ವ್ಯರ್ಥ."

ಪಂಡಿಯ ಪಂಡಿಯ ಪಂಡಿಯಾ, ಕಣುಛಂಡಿವಿ ತುಸು ಕಂಡಿಯಾ |
ಅತ್ಥೇ ಗಂಥೇ ತುಟ್ಠೋಸಿ, ಪರಮತ್ಥು ಣ ಜಾಣಹಿ ಮೂಢೋಸಿ ||

"ಪಂಡಿತ, ಪಂಡಿತ, ಎಲೋ ಪಂಡಿತನೇ, ಕಾಳನ್ನು ಬಿಟ್ಟು ಹೊಟ್ಟನ್ನು ಕುಟ್ಟುತ್ತಿದ್ದೀಯಲ್ಲಾ. ಗ್ರಂಥದಿಂದ ಅರ್ಥದಿಂದ ನೀನು ಹಿಗ್ಗಿ ಹೋಗಿದ್ದೀಯೆ. ಪರಮಾರ್ಥ ವನ್ನೇ ಅರಿಯದ ಮೂಢ ನೀನು."

ಎಷ್ಟು ಓದಿದರೇನು ಪ್ರೇಮದ ಒಂದಕ್ಷರವನ್ನು ಓದದ ವನು ನಿಜಕ್ಕೂ ಮೂರ್ಖ, ಆ ಓದು ಬರಿಯ ಕಂಠ ಶೋಷಣೆ."

ಬಹುಯಇಂ ಪಡಿಯಇಂ ಮೂಢಪರ, ತಾಲೂ ಸುಕ್ಕ ಇ ಜೇಂ |
ಏಕ್ಕುಜಿ ಅಕ್ಖರು ತಂ ಪಢಹು, ಸಿವಪುರಿ ಗಮ್ಮಇ ಜೇಣ ||

"ಅಯ್ಯೋ ಮೂಢ, ತುಂಬ ಓದಿ ನೀನು ಗಂಟಲು ಒಣ ಗಿಸಿಕೊಂಡೆ. ಅದೆಲ್ಲವನ್ನು ಬಿಟ್ಟು ಒಂದೇ ಒಂದು ಅಕ್ಷರ ವನ್ನು (ಪ್ರೇಮ) ಓದು. ಶಿವಪುರಕ್ಕೆ ಹೋಗಬಲ್ಲೆ."

ತೀರ್ಥಯಾತ್ರೆ ಮಾಡುವುದು ಪ್ರಭುವಿನ ಸರ್ವವ್ಯಾಪಕತೆ ಯನ್ನು ಪ್ರಶ್ನಿಸಿದಂತಲ್ಲವೆ? ದೇವರು ಇಲ್ಲಿಲ್ಲ, ತೀರ್ಥಕ್ಷೇತ್ರ ದಲ್ಲಿದ್ದಾನೆ ಎನ್ನುವುದಕ್ಕಿಂತ ದೊಡ್ಡ ಭ್ರಮೆಯಿಲ್ಲ. ದೇವ ರನ್ನು ಹುಡುಕಿಕೊಂಡು ನಾವು ಅಲೆಯುತ್ತಿರುತ್ತೇವೆ. ನಮ್ಮೊಳಗೇ ಇರುವ ದೇವರೂ ನಮ್ಮ ಜೊತೆಯಲ್ಲೇ ಅಲೆ ಯುತ್ತಿರುತ್ತಾನೆ. ಹೀಗಿರುವಾಗ ನಾವು ದೇವರನ್ನು ಕಾಣು ವುದೆಂತು? ಈ ಕಣ್ಣಾಮುಚ್ಚಾಲೆ ಮುಗಿಯುವುದೆಂತು?

"ಜೋ ಪಯಿಂ ಜೋ ಇಉಂ ಜೋ ಇಯಾಂ ತಿತ್ಥ ಇಂತಿತ್ಥ ಭಮೇ ಇ |
ಸಿಉ ಪಇಂ ಸಿಹುಂ ಹ ಹಿಂಡಿಯ ಲಹಿವಿ ಣಸಕ್ಕಿಉ ತೋಇ ||"

"ಎಲೆ ಯೋಗಿಯೇ ಯಾರನ್ನು ಕಾಣಲು ನೀನು ತೀರ್ಥ ದಿಂದ ತೀರ್ಥಕ್ಷೇತ್ರಕ್ಕೆ ಅಲೆಯುತ್ತಿದ್ದಿಯೋ ಆ ಶಿವ ನಿನ್ನ ಜೊತೆಯಲ್ಲೇ ಅಲೆಯುತ್ತಿದ್ದಾನೆ. ಇಷ್ಟಾದರೂ ನೀನು ಅವನನ್ನು ಕಾಣಲಿಲ್ಲವಲ್ಲ?"

ಇದೇ ರೀತಿ ಬಾಹ್ಯಾಡಂಬರ ಕೂಡ ದೇವರಿಂದ ನಮ್ಮನ್ನು ದೂರ ಮಾಡುತ್ತದೆ. ಮನ ಬೋಳಿಸದೆ ಮಂಡೆ ಬೋಳಿಸು ವವನನ್ನು ಕುರಿತು ಕವಿ ಆಡುವ ಈ ಮಾತು ಅದೆಷ್ಟು ಸಹಜ :—

"ಮುಂಡಿಯ ಮುಂಡಿಯ ಮುಂಡಿಯಾ ಸಿರು ಮುಂಡಿಉ ಚಿತ್ತು ಣ ಮುಂಡಿಯಾ |
ಚಿತ ಹಂ ಮುಂಡಣ ಜಿಂ ಕಿಯಉ ಸಂಸಾರಹಂ ಖಂಡಣು ತಿಂಕಿಯಉ ||

"ಮಂಡೆಯನ್ನು ಬೋಳಿಸಿದ್ದೂ ಬೋಳಿಸಿದೆ. ಮನ ವನ್ನು ಮಾತ್ರ ಬೋಳಿಸಲಿಲ್ಲ. ಯಾರು ಚಿತ್ತವನ್ನು ಮುಂಡಿಸಬಲ್ಲರೋ ಅವರೇ ಲೋಕವನ್ನು ಖಂಡಿಸಬಲ್ಲರು."

ಇಷ್ಟೇ ಅಲ್ಲ ಕವಿ ದೇವರಿಗೆ ಫಲಪುಷ್ಪಗಳನ್ನು ಅರ್ಪಿಸು ವುದೂ ತಪ್ಪು ಎನ್ನುತ್ತಾನೆ. ಗಿಡದಲ್ಲಿ ಬಿಟ್ಟಿರುವ ಸುಂದರ ವಾದ ಹೂಗಳನ್ನು ತರೆದು ತಂದು ಪೂಜೆ ಮಾಡುವುದರಿಂದ ಶಿವ ತೃಪ್ತನಾಗುತ್ತಾನೆಯೆ? ಅವುಗಳನ್ನು ಹಾಗೇ ಬಿಟ್ಟಿರು ವುದಕ್ಕಿಂತ ದೊಡ್ಡ ಪೂಜೆಯಿಲ್ಲ. ಹೂವನ್ನು ಕೀಳುವುದೂ ಹಿಂಸೆಯಲ್ಲವೇ?

"ಪತ್ತಿಯ ತೋಡಿ ಮಜೋಇಯಾ ಫಲಹಿಂ ಜಿಹತ್ಥು ಮವಾಹಿ |
ಜಸು ಕಾರಣಿ ತೋಡೇಹಿ ತುಹುಂ ಸೋಸಿಉ ಏತ್ಥು ಚಡಾಹಿ ||"

"ಪತ್ರೆಗಳನ್ನು ಕಿತ್ತು ದೇವರನ್ನು ಪೂಜಿಸುತ್ತೀಯೆ, ಫಲವನ್ನು ಕಿತ್ತು ಅರ್ಪಿಸುತ್ತೀಯೆ. ಶಿವನಿಗೆ ಪತ್ರಪುಷ್ಪ ಫಲಗಳು ಅಷ್ಟೊಂದು ಪ್ರಿಯವಾದರೆ ಅವನನ್ನೇ ಏಕೆ ಮರದ ಮೇಲಕ್ಕೆ ಹತ್ತಿಸಿಬಿಡಬಾರದು?"

ಹಾಗಾದರೆ ನಿಜವಾದ ಪೂಜೆ ಯಾವುದು? ಮನಸ್ಸನ್ನು ಆತ್ಮದಲ್ಲಿ ಲೀನಗೊಳಿಸುವುದೇ ದೊಡ್ಡ ಪೂಜೆ.

"ಮಣು ಮಿಲಿಯಉ ಪರಮೇಸರಹೋ ಪರಮೇಸರ ಜಿ ಮಣಸೂಸ |
ಬಿಣ್ಣಿ ವಿ ಸಮರಸಿ ಹುಇ ರಹಿಯ, ಪುಂಜ ಚಡಾವ ಉಂಕಸ್ಸ ||"

"ಮನಸ್ಸು ಪರಮೇಶ್ವರನಲ್ಲಿ ಬೆರೆತು, ಅದು ಪರಮಾತ್ಮನೇ ಆಗಿ ಸಮರಸವಾದ ಬಳಿಕ ಯಾರನ್ನು ತಾನೆ ಪೂಜಿಸಬೇಕು? ಈ ಅದ್ವೈತದ ಮುಂದೆ ಬೇರಾವ ಪೂಜೆ ನಿಂತೀತು?"

ಇಂಥ ಆತ್ಮರತಿ, ಸಮರಸವನ್ನು ಸಾಧಿಸಿದವನಿಗೆ ದೇಹವೇ ದೇಗುಲ. ಈ ಆತ್ಮಜ್ಞಾನ, ಅನುಭವಸಾಕ್ಷಿಕ ಜ್ಞಾನವೇ ಎಲ್ಲಕ್ಕಿಂತಲೂ ಮಿಗಿಲಾದುದೇ ಅಲ್ಲ, ಅದು ಎಲ್ಲರಿಗೂ ಗ್ರಾಹ್ಯವೂ ಹೌದು. ಈ ಅನುಭವ ಸಾಕ್ಷಿಕಜ್ಞಾನ ಇದೇ

ದೇಹ, ಇದೇ ಮನಸ್ಸಿನಿಂದ ಸಾಧ್ಯ? ಆದ್ದರಿಂದ ಈ ದೇಹ, ಮನಗಳು ಉಪೇಕ್ಷಣೀಯ ವಸ್ತುಗಳಲ್ಲ. ಆದ್ದರಿಂದ ಈ ಸಂತರು ಧರ್ಮೋಪದೇಶಕರು ಯಾವುದನ್ನು ಅಪವಿತ್ರ ಎಂದು ಹೀಗಳೆದರೋ ಆ ದೇಹವನ್ನು 'ದೇವಲ್' ಅಥವಾ ದೇವಮಂದಿರ ಎಂದು ಕರೆದರು.

" ಮೂಢಾ ಜೋವಇ ದೇವಲಇಂ ಲೋಯಇಂ
ಜಾಇಂ ಕಿಯಾಇಂ |
ದೇಹ ಣ ಪಿಚ್ಛಇ ಅಪ್ಪಣಿಯ ಜಹಿಂ ಸಿಉ ಸಂತು
ಠಿಯಾಇಂ ||

" ಮೂಢ, ನೀನು ಮನುಷ್ಯ ನಿರ್ಮಿತವಾದ ದೇವಾಲಯಗಳನ್ನು ಅರಸುತ್ತೀಯೆ. ಶಾಂತಶಿವ ನೆಲೆ ನಿಂತಿರುವ ನಿನ್ನ ದೇಹವನ್ನೇಕೆ ನೀನು ನೋಡಲೊಲ್ಲೆ ? "

" ದೇಹಾದೇವಲ್ಲಿ ಜೋ ವಸಇ ಸತ್ತಿಹಿ ಸಹಿಯಉ ದೇಉ|
ಕೋ ತಹಿಂ ಜೋಇಯ ಸಂತಸಿಉ. ಸಿಗ್ಘು ಗವೇ ಸಹಿ ಭೇಉ||

" ದೇಹ ದೇಗುಲದ ಶಕ್ತಿಸಮೇತ ವಾಸಮಾಡುತ್ತಿದ್ದಾನೆ. ಎಲೆ ಯೋಗಿ ಆ ಶಕ್ತಿ ಶಿವನನ್ನು ಬೇಗ ಅರಸು."

ಇಂಥ ಆತ್ಮಜ್ಞಾನ ಲಭಿಸಬೇಕಾದರೆ ಸತ್ಸಂಗ ಅಗತ್ಯ. ಪುಸ್ತಕ ಜ್ಞಾನವಂತೂ ನಿಷ್ಪ್ರಯೋಜಕವಾಯಿತು. ಇನ್ನು ಆತ್ಮಜ್ಞಾನ ಕುಳಿತಲ್ಲೇ ಬಿಡುವುದೇ? ಅದು ಸತ್ಸಂಗದಿಂದ ಮಾತ್ರ ಸಾಧ್ಯ. ಅಂಥ ಸಂಸರ್ಗದಿಂದ ಜ್ಞಾನವನ್ನು ಪಡೆದು ಅನಾಸಕ್ತಿಯನ್ನು ತಡೆಯಬೇಕು. ಲೋಕ ಪರಲೋಕ ಎರಡನ್ನೂ ಸಾಧಿಸುತ್ತೇನೆ ಎನ್ನುವುದು ಅಸಾಧ್ಯ. ಈ ಸತ್ಸಂಗವನ್ನು ಕವಿ ತುಂಬ ಹೊಗಳಿದ್ದಾನೆ.

" ಬೇ ಪರಥೇಹಿಂ ಣಗಮ್ಮಇ ಬೇ ಮುಹಸೂಈಣಾ
ಸಿಜ್ಜಯೇ ಕರಾಥಾ|
ಬಿಣ್ಣಿಣಹುಂತಿ ಆಯಾಣಾ ಇಂದಿಯ ಸೋಕ್ಖಂ
ಚ ಮೋಕ್ಖಂ ಚ ||

" ಎರಡು ದಾರಿಗಳಲ್ಲೂ ಹೋಗಲು ಸಾಧ್ಯವಿಲ್ಲ. ಎರಡು ಬಾಯುಳ್ಳ ಸೂಜಿಯಿಂದ ಕಂಥೆಯನ್ನು ಹೊಲಿಯುವುದು ಸಾಧ್ಯವೆ? ಎಲೆ ಅಜ್ಞಾನಿ, ಇಂದ್ರಿಯ ಸುಖ ಮತ್ತು ಮೋಕ್ಷ ಎರಡನ್ನೂ ಒಟ್ಟಿಗೇ ಸಾಧಿಸಲಾಗುವುದಿಲ್ಲ.

ಬರಿಯ ವಿಷಯ ತ್ಯಾಗವೇ ಸಾಲದು. ವಿಷಯ ತ್ಯಾಗ ಮಾಡಿದ ಮೇಲೆ ಅವುಗಳನ್ನು ಮರೆತೂ ಚಿಂತಿಸಬಾರದು. ಹಾಗೆ ಚಿಂತಿಸಿದರೆ ಆ ತ್ಯಾಗ ನಿರರ್ಥಕ."

" ಸಪ್ಪಿಂ ಮುಕ್ಕೀ ಕಂಚುಲಿಯ ಜಂ ವಿಸು ತಂಣ ಮುವಇ|
ಭೋಯಹಂ ಭಾವು ಣ ಪರಿಹರಇ ಲಿಂಗಗಹಣು ಕರೇಇ||"

" ಹಾವು ಪೊರೆಯನ್ನು ಕಳೆಯುತ್ತದೆ. ಆದರೂ ವಿಷವನ್ನು ತೊರೆಯಲಾರದು. ಇದೇ ರೀತಿ ವಿಷಯ ಭೋಗಗಳ ಪರಿತ್ಯಾಗದಿಂದ ವಿಷಯ ವಾಸನೆ ಮತ್ತು ಭೋಗಭಾವಗಳು ಅಳಿಯದಿದ್ದರೆ ಏನು ಪ್ರಯೋಜನ?

ಆತ್ಮದರ್ಶನ ಮಾಡಿಸದ ಜಪ, ತಪ, ಸಾಧನೆಯೆಲ್ಲ ವ್ಯರ್ಥ.

" ಹಲಿಸಹಿಕಾಇಂ ಕರಇ ಸೋದಪಣು |
ಜಹಿಂ ಪಡಿಬಿಂಬುಣ ದೀಸಇ ಅಪ್ಪಣು ||

" ನಮ್ಮ ಮುಖವೇ ಕಾಣಿಸದ ಕನ್ನಡಿಯನ್ನಿಟ್ಟುಕೊಂಡು ಏನು ಮಾಡೋಣ? ಕನ್ನಡಿಯ ಉದ್ದೇಶ ಮುಖವನ್ನು ಪ್ರತಿಬಿಂಬಿಸುವುದು ಅದೇ ಇಲ್ಲದಿದ್ದರೆ ಅದು ಇದ್ದು ತಾನೆ ಏನು ಪ್ರಯೋಜನ? "

ದಯವಿಲ್ಲದ ಧರ್ಮವಾವುದು, ದಯೇ ಧರ್ಮದ ಮೂಲವಯ್ಯ ಎಂದು ಬಸವಣ್ಣವನರು ಹೇಳುವಂತೆ ಕವಿ ದಯೆ, ಅಹಿಂಸೆ ಎಲ್ಲ ಧರ್ಮದ ಮರ್ಮ ಎಂದು ಸಾರಿದ್ದಾನೆ.

" ದಹವಿಹು ಜಿಣವರ ಭಾಸಿಯಉ ಧಮ್ಮು
ಅಹಿಂಸಾ ಸಾರು | "

" ದಶವಿಧ ಧರ್ಮದ ಸಾರವೇ ಅಹಿಂಸೆ ಎಂದು ಜಿನವರರು ಹೇಳುತ್ತಾರೆ."

" ಜೀವವಹಂತಿ ಣಾರಯಗಇ ಅಭಯ ಪದಾಣೇಂ ಸಗ್ಗು |
ಬೇ ಪಹ ಜವಲಾ ದರಿಸಿಯಇಂ ಜಹಿಂ ಭಾವಇ
ತಹಿಂ ಲಗ್ಗು || "

" ಜೀವವಧೆಯಿಂದ ನರಕಕ್ಕೆ ಹೋಗುತ್ತೀವೆ, ಅಭಯ ಪ್ರಧಾನ ಮಾಡುವುದರಿಂದ ಸ್ವರ್ಗ ಲಭಿಸುತ್ತದೆ. ಎರಡು ದಾರಿಗಳನ್ನೂ ಹೇಳಿದ್ದೇನೆ. ನಿನಗೆ ಇಷ್ಟವಾದುದನ್ನು ಮಾಡು."

" ದಯಾ ವಿಹೀಣಉ ಧಮ್ಮಡಾ ಣಾಣಿಯಕಹ
ವಿಣಜೋಇ "

" ದಯೆಯಿಲ್ಲದ ಧರ್ಮ ಯಾವುದೂ ಇಲ್ಲ ಎಂದು ಬಲ್ಲವರು ನುಡಿದಿದ್ದಾರೆ."

ಸತಿಪತಿ ಭಾವವ್ಯಂಜಕವಾದ ಪದ್ಯಗಳೂ 'ಪಾಹುಡ ದೋಹಾದಲ್ಲಿವೆ. ನಿರ್ಗುಣನೂ ನಿರಾಕಾರನೂ ಆದ ಪ್ರಭು ನಮ್ಮ ದೇಹದಲ್ಲೇ ವಾಸಿಸುತ್ತಿರುವಾಗ ಮಿಲನಕಾತರತೆ ಎಂದೆಂದಿಗೂ ಮುಗಿಯದು. ಆ ಒಳತೋಟಿ ಹೇಳತೀರದು. ಆ ಕುಲುಮೆಯಿಂದ ಸಿಡಿದ ಕಿಡಿಯನ್ನು ನೋಡಬೇಕು :

" ಹಉಂ ಸಗುಣೀ ಪಿಉಣಿಗ್ಗುಣಉ ಣಿಲ್ಲಕ್ಖಣು ಣೀಸಂಗು |
ಏಕಹಿಂ ಅಂಗಿ ವಸಂತಯಹಂ ಮಿಲಿಹುಣ ಅಂಗಿಹಿಂ
ಅಂಗು || "

" ನಾನು ಸಗುಣಿ, ನಲ್ಲ, ನಿರ್ಗುಣಿ, ನಿರ್ಲಕ್ಷಣ,

ನಿಸ್ಸಂಗ. ಒಂದೇ ದೇಹದಲ್ಲಿ ನೆಲಸಿರುವ ನಬ್ಬಿಬ್ಬರ ಅಂಗ ಸಂಗವಾಗುವುದೆಂತು ?"

ಈ ರೀತಿಯ ತದಾಕಾರ ಪರಿಣತಿಯ ಬಯಕೆ, ಐಕ್ಯ ಕಾಲಾನೆ ಅನುಭಾವದ ಅತೀವ ಮಾರ್ಮಿಕ ಪ್ರಸಂಗ, ಅತೀವ ಕಾವ್ಯಮಯ ಸನ್ನಿವೇಶ.

ಜೋಇಂದುವಿನಂತೆ ರಾಮಸಿಂಹನೂ ಶಿವಶಕ್ತಿಯ ರನ್ನು ಹಲವು ಸಾರಿ ಉಲ್ಲೇಖಿಸಿದ್ದಾನೆ.

" ಸಿವ ವಿಣು ಸಂತಿಣ ವಾವರಇ, ಸಿಉಪುಣು ಸಂತಿವಿಹೀಣು
ದೋಹಿಂ ಮಿ ಜಾಣಹಿಂ ಸಯಲಿಜಗು, ಬುಜ್ಝ ಇ
ಮೋಹವಿಹೀಣು ॥ "

"ಶಿವನಿಲ್ಲದೆ ಶಕ್ತಿಯ ವ್ಯಾಪಾರವಿಲ್ಲ. ಶಕ್ತಿವಿಹೀನ ನಾದ ಶಿವನೆಲ್ಲಿ ? ಈ ಎರಡನ್ನೂ ಇಡೀ ಜಗತ್ತೇ ಬಲ್ಲದು. ಮೋಹ ವಿಲೀನರಾದ ಜನರೇ, ಯೋಚಿಸಿ.

ಈ ರೀತಿ ಈ ಈರ್ವರು ಸಂತರೂ ಆತ್ಮಜ್ಞಾನವೇ ಮೋಕ್ಷ ಎಂದು ಹೇಳಿ ಜನಸಾಮಾನ್ಯರಿಗೆ 'ಸಮರಸ'ದ ಹಾದಿಯನ್ನು ತೋರಿಸಿ ಕೊಟ್ಟಿದ್ದಾರೆ. ದೇಹವೇ ದೇಗುಲ ಎಂಬುದನ್ನು ಅರಿತು ಎಂಥ ಪಾಮರನೂ ಆತ್ಮಗೌರವ ವನ್ನು ಅನುಭವಿಸಬಲ್ಲ. ಒಬ್ಬನೇ ಪರಮಾತ್ಮ ಜಾತಿ, ವರ್ಣ ಭೇದಗಳಿಲ್ಲದೆ ಎಲ್ಲ ದೇಹ ದೇಗುಲಗಳಲ್ಲಿ ವಾಸ ಮಾಡಿದರೆ ಅವನೊಡನೆ ಸಮರಸ ಭಾವವನ್ನು ಸ್ಥಾಪಿಸಲು ಸದಾಚಾರದ ಹಾದಿಯನ್ನು ಹಿಡಿಯಬೇಕು. ಈ ರೀತಿ ಶುಚಿ, ಋಜು ಜೀವನವನ್ನು ಬಳಿ 'ಸಮರಸ'ದತ್ತ ಸಾಗುತ್ತ ಆತ್ಮಸಾರವನ್ನು ಪ್ರತಿಯೊಬ್ಬನೂ ಅನುಭವಿಸ ಬಲ್ಲ. ಪೂಜೆ, ತೀರ್ಥಯಾತ್ರೆ, ಶಾಸ್ತ್ರಾಧ್ಯಯನ ಮೊದ ಲಾದವುಗಳಿಗಿಂತ ಸ್ವಾನುಭೂತಿ ದೊಡ್ಡದು, ಶುಚಿ ಜೀವ ನವೇ ಪರಮಪದ ಸೋಪಾನ ಎಂದು ಹೇಳಿ ಈ ಸಂತರು ತಮ್ಮ ಕಾಲದ ಜನಜೀವನವನ್ನು ಹಸನು ಮಾಡಿದರು. ಈ ದೇಹ ಹೇಯವಲ್ಲ, ಶಿವನ ಮಂದಿರ ಎಂದು ಹೇಳಿ ಆತ್ಮಪ್ರತ್ಯಯವನ್ನು ಬಿತ್ತಿದರು. ಚಿತ್ತಶುದ್ಧಿ, ಸಹಿಷ್ಣುತೆ, ಮೊದಲಾದ ಉಚ್ಚಭಾವನೆಗಳನ್ನು ಬಿತ್ತಿ ಈ ಲೋಕ ವನ್ನೇ ದೇವಲೋಕವನ್ನಾಗಿ ಮಾಡಿ ತೋರಿಸಿದರು. ಮುಂದೆ ಬಂದ ಸಂತ ಕಬೀರ, ದಾದೂ, ನಾನಕ್ ಮೊದ ಲಾದ ಸಂತರ ಮೇಲೂ ಇವರ ಪ್ರಭಾವ ಬಿದ್ದಿದೆ ಎಂದರೆ ಈ ಸಂತರ ಮಹತ್ವದ ಅರಿವಾದೀತು. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಸಂತರು ಲೋಕವಾಣಿಯಾದ ಅಪಭ್ರಂಶ ವನ್ನು ಜ್ಞಾನದ ಆಲೋಕವಾಣಿಯನ್ನಾಗಿಸಿದರು.

ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯ ರಚನೆಯ ಗುದ್ದಲೀ ಪೂಜೆ ಮಾಡಿದವರು ಜೈನರು. ಆದರೆ ಜೈನ ಯುಗದಲ್ಲಿ ಇಂಥ ಮುಕ್ತಿಕಗಳು ದೊರೆಯುವುದಿಲ್ಲ. ರತ್ನಾಕರನ ಕೆಲವು ಹಾಡುಗಳಲ್ಲಿ ಮೊದಲ ಬಾರಿಗೆ ಇಂಥ ಭಾವಗಳು ನಮಗೆ ಕಂಡುಬರುತ್ತವೆ. ಪಂಪನೇ ಮೊದಲಾದ ಜೈನ ಕವಿಗಳಿಗೆ ಪ್ರಾಕೃತ, ಅಪಭ್ರಂಶ ಮೊದಲಾದ ಭಾಷೆಗಳ ಜ್ಞಾನವಿತ್ತು ಎನ್ನುವುದಕ್ಕೆ ಬೇಕಾದಷ್ಟು ಆಧಾರಗಳಿವೆ. ರಾಷ್ಟ್ರಕೂಟರ ಕಾಲದಲ್ಲಂತೂ ಕನ್ನಡನಾಡು ಅಪಭ್ರಂಶ ಸಾಹಿತ್ಯದ ಕೇಂದ್ರವಾಗಿತ್ತು. 'ಅಪಭ್ರಂಶದ ಕವಿ ಸಾರ್ವ ಭೌಮ' ಎನ್ನಿಸಿಕೊಂಡ ಪುಷ್ಪದಂತ ರಾಷ್ಟ್ರಕೂಟರ ಮಂತ್ರಿ ಭರತನ ಆಶ್ರಿತನಾಗಿದ್ದ. ಪೊನ್ನನ ಸಮಕಾಲೀನನಾಗಿದ್ದ ಪುಷ್ಪದಂತನ 'ಮಹಾಪುರಾಣ'ದಲ್ಲಿ ನೂರಾರು ಕನ್ನಡ ಶಬ್ದಗಳಿವೆ. ಹೀಗಿರುವಾಗ ಅಪಭ್ರಂಶದ ವ್ಯಾಸಂಗ ಕನ್ನಡ ನಾಡಿನಲ್ಲಿ ನಡೆದಿರಲಿಲ್ಲ ಎನ್ನಲಾಗದು. ಹಾಗೆ ನಡೆದಿದ್ದರೆ ಕನ್ನಡದಲ್ಲೂ ಏಕೆ ಇಂಥ ಜೈನ ಸಂತ ವಾಙ್ಮಯ ಬರಲಿಲ್ಲ ಅಥವಾ ಒಬ್ಬಿಬ್ಬರು ಇಂಥ ಮುಕ್ತಕ ಗಳನ್ನು ಬರೆದಿದ್ದು ಅವು ಕಾಲಿಕ ಕವಲಿತವಾಗಿರಬೇಕು. ಈ ದಿಶೆಯಲ್ಲಿ ವಿದ್ವಾಂಸರು ಸಂಶೋಧನೆ ನಡೆಸಬೇಕಾ ದುದು ಅಗತ್ಯ. 'ಜೈನರು ಒಂದು ರೀತಿಯಲ್ಲಿ ಶಿವೋಪಾಸ ಕರು' ಎಂದು ಬೇಂದ್ರೆಯವರು ಒಂದೆಡೆ ಹೇಳಿದ್ದಾರೆ. ಮೇಲ್ಕಂಡ ಸಂತರ ವಾಣಿಯಲ್ಲಿ ಬರುವ ಶಿವಶಕ್ತಿಗಳು ಶೈವ ಧರ್ಮದ ಪ್ರಭಾವ ಸೂಚಕಗಳೋ ಇಲ್ಲವೆ ಜೈನ ಧರ್ಮದಲ್ಲಿ ಶಿವ ಬೇರುಬಿಟ್ಟನೋ ಎಂಬುದೂ ವಿವೇಚ ನೀಯ.

ನಾಟ್ಯಶಾಸ್ತ್ರ

ಡಾ. ಕೆ. ಕೃಷ್ಣಮೂರ್ತಿ

ಗಹನವಾದ ವೇದಾಂತ ವಿಚಾರವಿರಲಿ, ಜಟಿಲವಾದ ಶಬ್ದ ವ್ಯಾಕರಣವಿರಲಿ, ಲಲಿತವಾದ ಕಲಾ ಕಲಾಪಗಳೇ ಇರಲಿ,—ಎಲ್ಲವನ್ನೂ ಕೂಲಂಕಷವಾಗಿ ಪರೀಕ್ಷೆಗೆ ಗುರಿ ಪಡಿಸಿ ತತ್ವದ ತಿರುಳನ್ನು ತರ್ಕಶುದ್ಧವಾಗಿ ಲಕ್ಷಣ ಹೇಳಿ ಸೂತ್ರ, ವೃತ್ತಿ, ಭಾಷ್ಯ ಈ ಅನುಕ್ರಮದಲ್ಲಿ ಆಧಾರಭೂತ ವಾದ ಪ್ರಮಾಣ ಗ್ರಂಥಗಳ ರಚನೆ ಮಾಡುವ ಪದ್ಧತಿ ಭಾರತದಲ್ಲಿ ಕ್ರಿ. ಶ. ಕ್ಕೂ ಮೊದಲೇ ಆರಂಭವಾಗಿದ್ದಿತು. ಇವೇ ಶಾಸ್ತ್ರಗಳು. ಒಂದೊಂದು ವಿದ್ಯಾಸ್ಥಾನದಲ್ಲೂ ಋಷಿ ಗಳೇ ಮೊತ್ತ ಮೊದಲ ಶಾಸ್ತ್ರ ಪ್ರವರ್ತಕರು ಎಂದರೆ ಸೂತ್ರಕಾರರು ಸಂಗ್ರಹವಾಗಿದ್ದರೂ ಸಂದಿಗ್ಧವಾಗಿರದೆ ವಿಶ್ವತೋಮುಖವಾಗಿದ್ದರೂ ನಿಸ್ಸಾರಭಾಗಕ್ಕೆ ಎಡೆಗೊಡದೆ ಗಾತ್ರದಂತೆ ಗುಣದಲ್ಲಿಯೂ ಮಹತ್ತಾಗಿರುವದು ಸೂತ್ರ ಗಳ ಲಕ್ಷಣ. ಧರ್ಮ, ಅರ್ಥ, ಕಾಮ, ಮೋಕ್ಷ ಇವೆಲ್ಲ ಪುರುಷಾರ್ಥಗಳ ವಿಶಿಷ್ಟ ಪ್ರತಿಪಾದನೆಗಾಗಿ ಬೇರೆ ಬೇರೆ ಶಾಸ್ತ್ರಗಳಿವೆ. ಈ ಶಾಸ್ತ್ರಗಳು ಪ್ರಾಯಃ ಪ್ರೌಢವಾಗಿದ್ದು ವಿದ್ವತ್ ಜನರಿಗೆ ಮಾತ್ರ ಮೆಚ್ಚಾಗುವದೇ ಹೆಚ್ಚು.

ಆದರೆ ಭರತ ಮುನಿಯ ನಾಟ್ಯಶಾಸ್ತ್ರ ಈ ನಿಯಮಕ್ಕೆ ಒಂದು ಸುಂದರ ಅಪವಾದದಂತಿದೆ. ನಾಟಕ ಕಲೆಯಂತೆ ಸಂಗೀತ, ನಾಟ್ಯ, ಅಭಿನಯ, ಶಿಲ್ಪ, ಮುಂತಾದ ಎಲ್ಲ ಲಲಿತ ಕಲೆಗಳ ನಿಯಮಗಳನ್ನು ಸಮರ್ಥವಾಗಿಯೂ ಸಾರ್ಥಕವಾಗಿಯೂ ವಿಶ್ಲೇಷಿಸುವ ನಾಟ್ಯಶಾಸ್ತ್ರ ಲೋಕ ರಂಜನೆಗೆ ಬೇಕಾದ ಕಲಾವಿಲಾಸಗಳ ರಹಸ್ಯೋಪನಿಷತ್ತು ಆಗಿರುವದರಿಂದ ಇದು ಐದನೆಯ ವೇದವೆಂದು ಇದಕ್ಕೆ ಮನ್ನಣೆ ಇದೆ. ಕಾಲಿದಾಸ, ಭವಭೂತಿಗಳಂತಹ ಕವಿ ಗಳು ದಂಡಿ ಭಾಮಹರಂತಹ ಕಾವ್ಯ ಲಾಕ್ಷಣಿಕರು ನಾಟ್ಯ ವೃತ್ತಿಯ ವಿಲಾಸಿನಿಯರು ಸಂಗೀತದ ಆರಾಧಕರು, ನಾಟ್ಯಗೃಹ ಶಿಲ್ಪಿಗಳು ಮುಂತಾಗಿ ಕಲಾವಿದರೆಲ್ಲರ ಶಿಕ್ಷಣಕ್ಕೆ ಭಾರತದಲ್ಲಿ, ಅಷ್ಟೇ ಏಕೆ, ಇಡೀ ವಿಶ್ವದಲ್ಲಿ ಅದ್ವಿ ತೀಯವಾದ ಏಕೈಕ ಉದ್ಗ್ರಂಥ ಭರತನ ಈ ನಾಟ್ಯ ಶಾಸ್ತ್ರ. ಕಲಾವಿದರ ಪ್ರತಿಭೆಗೆ ಪ್ರಚೋದಕವೂ, ಪ್ರಬೋಧಕವೂ ಆಗಿರುವಂತೆ ರಸಿಕರ ರಸಾಸ್ವಾದಕ್ಕೂ ಈ ಶಾಸ್ತ್ರದ ಪರಿಚಯ ಪ್ರಯೋಜಕವಾಗಿದೆ.

'ನಾಟ್ಯ' ಎಂದರೆ ನಟವೃತ್ತ. ಅಭಿನಯ ಮಾಡುವ ವನ ಕ್ರಿಯೆಗಳೆಲ್ಲ ನಾಟ್ಯವೇ. ಆ ಕ್ರಿಯೆಗಳಿಗೆ ನಿಯತ ನಿಯಮಗಳನ್ನು ಮುಖ್ಯವಾಗಿ ವಿಧಿಸುವ ಗ್ರಂಥವೇ ನಾಟ್ಯಶಾಸ್ತ್ರ.

ನಾಟ್ಯಸ್ಯ=ನಟವೃತ್ತಸ್ಯ ಶಾಸ್ತ್ರಂ=ಶಾಸನೋಪಾಯಂ ಗ್ರಂಥಂ ಎಂಬುದು ಅಭಿನವ ಗುಪ್ತರ ವ್ಯಾಖ್ಯಾನ. ನಟ ಕ್ರಿಯೆಯಲ್ಲೂ ಮಿಕ್ಕ ಬೇರೆ ಕಲಾಕರ್ಮಗಳಲ್ಲೂ ಸಮಾನ ವಾಗಿ ಸೇರಿಬಂದಿರುವ ಮರ್ಮ ಯಾವದೊಂದಿದೆಯೋ ಅದಕ್ಕೆ ಭರತ ಮುನಿಗಳ ನಾಮಕರಣ 'ರಸ' ಎಂದು. ಲೋಕದಲ್ಲಿ ಕೋಪ, ದ್ವೇಷ, ಅಸೂಯೆ, ಕಾಮ, ಪ್ರೇಮ ಶೋಕ, ಹಾಸ್ಯ ಮುಂತಾದ ಚಿತ್ತವೃತ್ತಿಗಳ ಪ್ರಭಾವ ಮತ್ತೊಬ್ಬರ ಮೇಲೆ ಪ್ರತಿಕ್ಷಣವೂ ಆಗುತ್ತಿರುವದನ್ನು ನೋಡುತ್ತೇವೆ. ನಮ್ಮ ಮನಸ್ಸಿನಲ್ಲಿಯೇ ಇವುಗಳ ಅನು ಭವವನ್ನು ಪಡೆದಿರುತ್ತೇವೆ. ಆದರೆ ಒಂದು ಕಾವ್ಯವನ್ನು ಓದುತ್ತ ಮೈಮರೆವಾಗ,ಒಂದು ಸಂಗೀತ ರಾಗದಲ್ಲಿ ತನ್ಮಯ ರಾದಾಗ, ಒಂದು ಅಭಿನಯದ ಚಾತುರ್ಯದಿಂದ ಪರವಶರಾ ದಾಗ ಲೋಕದ ಚಿತ್ತವೃತ್ತಿಗಳ ನಂಜಿನ ಮೊನೆ ಎಲ್ಲಿಯೋ ಅಡಗಿ ಶುದ್ಧ ಸಾತ್ವಿಕ ಪ್ರಶಾಂತಿಯ ಆನಂದಾನುಭವ ವನ್ನು ಪಡೆಯುತ್ತೇವೆ. ಲೋಕದ ನವ ವಿವಾಹಿತ ಮಿಥುನ ದಲ್ಲಿ ಇರುವ ಭಾವ ಪ್ರೇಮ ಇಲ್ಲವೇ ಕಾಮ. ರಸವಲ್ಲ. ಕಾಳಿದಾಸನ ದುಷ್ಯಂತ ಶಕುಂತಲೆಯರ ನಾಟಕದಲ್ಲಿ ಇರು ವದೆಲ್ಲ ಶೃಂಗಾರ ರಸವೆ.

ಚಿತ್ರದ ಕುದುರೆ ನಿಜವಾದ ಕುದುರೆಯಲ್ಲ. ಕೇವಲ ಕುದುರೆಯ ಅನುಕರಣ. ಮುಖಚಂದ್ರವೆನ್ನುವಾಗ ಮುಖಕ್ಕೆ ಚಂದ್ರನ ಅಧ್ಯಾರೋಪವಿದೆ. ಇದು ರೂಪಕದ ಕ್ರಮ. ಸುಂದರಿ ಬಂದಳು ಎನ್ನುವ ಬದಲು "ಕಳಂಕ ಇಲ್ಲದ ಚಂದ್ರ ಉದಯಿಸಿದ್ದಾನೆ" ಎಂದರೆ ಅತಿಶ ಯೋಕ್ತಿಗೆ ಮೂಲವಾದ ಅಧ್ಯವಸಾಯವಿದೆ. ಚಂದ್ರನು ಉದಿಸಿದನೋ ಎಂಬಂತೆ ಭಾಸವಾಯಿತು ಎಂದರೆ ಉತ್ಪ್ರೇಕ್ಷೆ. ಇದರಂತೆ ಕನಸು, ಮಾಯೆ, ಇಂದ್ರಜಾಲ ಮುಂತಾದವುಗಳ ಅನುಭವದಲ್ಲಿ ಬರುವ ಭ್ರಾಂತಿ ಎಲ್ಲ ರಿಗೂ ಪರಿಚಿತ. ಈ ಲೋಕದಲ್ಲಿ ನಮಗೆ ಗೊತ್ತಿರುವ ಈ ಎಲ್ಲ ಅನುಭವಗಳಲ್ಲಿ ಒಂದರಲ್ಲೂ ಒಳಗಾಗದ ಅದರಿಂದಲೇ ಅಲೌಕಿಕವೆನಿಸುವ ಲೌಕಿಕವೆಂದು ಈ ಶಾಸ್ತ್ರ ತೀರ್ಮಾನಿ

ಸಿರುವ, ಕಲಾಸೌಂದರ್ಯ ಬೋಧವೇ 'ರಸ' ರಸವು ಸತ್ಯವೂ ಅಲ್ಲ ಅಸತ್ಯವೂ ಅಲ್ಲ, ವಿಕಾರವಲ್ಲ, ಅನುಕಾರವೂ ಅಲ್ಲ. ಸಾದೃಶ್ಯವಲ್ಲ ಉತ್ಪ್ರೇಕ್ಷೆಯೂ ಅಲ್ಲ ಅಧ್ಯಾರೋಪವೂ ಅಲ್ಲ ಅಧ್ಯವಸಾಯವೂ ಅಲ್ಲ ಸಂಶಯವಲ್ಲ ಭ್ರಾಂತಿಯೂ ಅಲ್ಲ. ಹಾಗಾದರೆ ಅದೇನು? ಅನುಭವದಲ್ಲಿ ರಸಿಕರಿಗೆ ಮಾತ್ರ ಸ್ವಯಂವೇದ್ಯವಾದ ಆನಂದಾನುಭವವೇ ರಸ. ಈ ರಸ ಪ್ರಕ್ರಿಯೆ ಮುವತ್ತಾರು ಅಧ್ಯಾಯಗಳ, ಹತ್ತಾರು ಸಾವಿರ ಶ್ಲೋಕಗಳು ನಾಟ್ಯಶಾಸ್ತ್ರ ಗ್ರಂಥಕ್ಕೆಲ್ಲ ಐಕ್ಯವನ್ನೂ ಸಾರ್ಥಕ್ಯವನ್ನೂ ಕಲ್ಪಿಸುವ ಜೀವ ಜೀವಾಳ "ತತ್ರ ನಾಟ್ಯಂ ನಾಮ ಲೌಕಿಕ ಪದಾರ್ಥವ್ಯತಿರಿಕ್ತಂ ತದನುಕಾರ ಪ್ರತಿ ಬಿಂಬಾಲೇಖ್ಯ ಸಾದೃಶ್ಯಾರೋಪಾಧ್ಯವಸಾಯೋತ್ಪ್ರೇಕ್ಷಾ ಸ್ವಪ್ನ ಮಾಯೇಂದ್ರಜಾಲಾದಿ ವಿಲಕ್ಷಣಂ ತದ್ಗ್ರಾಹತಸ್ಯ ಸಮ್ಯಗ್ ಜ್ಞಾನ ಭ್ರಾಂತಿ ಸಂಶಯಾನವಧಾರಣಾನಧ್ಯವ ಸಾಯವಿಜ್ಞಾನಭಿನ್ನ ವೃತ್ತಾಂತಾಸ್ವಾದನ ರೂಪ ಸಂವೇದನಸವೇದ್ಯಂ ವಸ್ತು ರಸಸ್ವಭಾವಮಿತಿವಕ್ಷ್ಯಾಮಃ" ಇದು ಅಭಿನವ ಗುಪ್ತರು ಒಪ್ಪುವ ಭಟ್ಟನಾಯಕನ ವ್ಯಾಖ್ಯೆ.

ಇದನ್ನೇ ಭರತನು—ರಸವನ್ನು ಬಿಟ್ಟರೆ ಮತ್ತೆ ಯಾವುದಕ್ಕೂ ಇಲ್ಲಿ ಜಾಗವೇ ಇಲ್ಲ—"ನಹಿ ರಸಾದೃತೇ ಕಶ್ಚಿದರ್ಥಃ ಪ್ರವರ್ತತೇ" ಎಂದು ಸೂತ್ರ ರೂಪದಲ್ಲಿ ಹೇಳಿದ್ದಾನೆ. ರಸಸ್ವರೂಪವನ್ನು "ವಿಭಾವ ಅನುಭಾವ ಸಂಯೋಗಾದ್ ರಸನಿಷ್ಪತ್ತಿಃ" ಎಂದು ವಿವರಿಸಿದ್ದಾನೆ. ಈ ಸೂತ್ರದ ವಿವರಣೆ ಭಾರತೀಯ ಸೌಂದರ್ಯ ಶಾಸ್ತ್ರವಾಗಿ ರೂಪಗೊಂಡಿದೆ. ಒಂದು ಮಾತಿನಲ್ಲಿ ಇಷ್ಟೇ ಹೇಳಬಹುದು—ಯಾವದೇ ಮನೋವೃತ್ತಿಯಿರಲಿ, "ಇದು ನನ್ನದು, ನಿನ್ನದು, ಮೂರನೆಯವರದು" ಎಂಬ ವೈಯಕ್ತಿಕ ಮತ್ತು ಲೌಕಿಕ ಸಂಬಂಧಗಳನ್ನು ಹರಿದುಕೊಂಡು, ಅಲೌಕಿಕ ಅಥವಾ ನಾಟ್ಯಮಾತ್ರ ಲಭ್ಯ ರಸವೆನಿಸುವದು ಯಾವಾಗ? ಲೌಕಿಕ ಕಾರಣಗಳು ಅಲೌಕಿಕ 'ವಿಭಾವ'ಗಳಾಗಿಯೂ, ಲೌಕಿಕ ಕಾರ್ಯಗಳು ಅಲೌಕಿಕ 'ಅನುಭಾವ'ಗಳಾಗಿಯೂ, ಲೌಕಿಕ ಸಹಕಾರಿಗಳು ಅಲೌಕಿಕ 'ಸಂಚಾರಿ ಭಾವಗಳಾಗಿಯೂ' ಸಾಧಾರಣೀಕರಣಗೊಂಡು ಸಮ್ಮಿಲಿತವಾದಾಗ ರಸದ ನಿಷ್ಪತ್ತಿ. ಕವಿ, ರಸಿಕ ಇಬ್ಬರ ದೃಷ್ಟಿಯಿಂದಲೂ ಇದು ಸರಿ. ಸ್ಥಾಯಿಭಾವದ ಪರಿಪುಷ್ಟಿ ರೂಪವೇ ರಸ. ಇದು ನಿಷ್ಪನ್ನವಾಗಲು ಬೇಕಾಗುವ ಕವಿ ಹಾಗೂ ನಟನ ಕೌಶಲ ಎಷ್ಟು ಬಗೆಯದು ಎಂಬುದರ ನಿರ್ವಚನವೇ ಉಳಿದ ಶಾಸ್ತ್ರ. ಹೀಗೆ ನಾಟ್ಯಶಾಸ್ತ್ರದ ಮಹಾಮಂದಿರದಲ್ಲಿ ಪ್ರತಿಷ್ಠಿತವಾಗಿರುವ ಮೂಲ ಪ್ರತಿಮೆಯೇ ರಸ.

ಗ್ರಂಥದ ಮುಖ್ಯ ಪ್ರಕ್ರಿಯೆಗಳನ್ನೆಲ್ಲ ಭರತನೇ ಆರನೆಯ ಅಧ್ಯಾಯದ ಆದಿಯಲ್ಲಿ ಹೀಗೆ ಸಂಗ್ರಹಿಸಿದ್ದಾನೆ:

ರಸಾ ಭಾವಾ ಹ್ಯಭಿನಯಾಃ ಧರ್ಮೀವೃತ್ತ ಪ್ರವೃತ್ತಯಃ |
ಸಿದ್ಧಿಃ ಸ್ವರಾಸ್ತಥಾತೋದ್ಯಂ ಗಾನಂ ರಂಗಶ್ಚ ಸಂಗ್ರಹಃ ||

ರಸ ಭಾವಗಳಾದ ಮೇಲೆ ಆಂಗಿಕ ವಾಚಿಕ, ಆಹಾರ್ಯ ಸಾತ್ವಿಕ ಮುಂತಾದ ನಾಲ್ಕು ಅಭಿನಯಗಳ ವಿಸ್ತೃತ ವೃತ್ತಾಂತ ಬರುತ್ತದೆ. ನಾಟಕದ ವಸ್ತು ರೂಪದಲ್ಲಿ ಮುಖ ಪ್ರತಿಮುಖ ಮುಂತಾದ ಸಂಧಿಗಳು ಒಂದೊಂದರ ಸಂಧಿ ಅಂಗಗಳೂ ರೂಪಿತವಾಗಿವೆ. ನೇಪಥ್ಯ ರಚನೆ, ಅಲಂಕಾರಗಳು ರಂಗಸಜ್ಜಿಕೆ ಇತ್ಯಾದಿಗಳ ಸ್ಪಷ್ಟ ನಿರ್ದೇಶವಿದೆ. ನಾಯಕ ನಾಯಿಕೆಯರ ಭೇದಗಳು ನಾಟಕ ಪ್ರಕರಣ, ಪ್ರಹಸನ ಮುಂತಾದ ಹತ್ತು ಬಗೆಯ ರೂಪಕಗಳು, ಕೈಶಿಕಿ, ಅರಭಟಿ ಮುಂತಾದ ವೃತ್ತಗಳು, ಗೌಣ ಪಾತ್ರಗಳ ಸ್ವರೂಪ, ಗೀತ ವಾದ್ಯ ವಿಧಿ, ಆಂಗಿಕಾಭಿನಯದ ಹಸ್ತಮುದ್ರೆಗಳು, ಸ್ವರ, ಶ್ರುತಿ, ಛಂದೋ ಲಕ್ಷಣಗಳು, ಗುಣ ಅಲಂಕಾರ ದೋಷ ವಿವೇಚನೆಗಳು—ಇವು ಭಾರತದ ಕಲೆಯ ವಿಶ್ವಕೋಶದಂತಿರುವ ನಾಟ್ಯಶಾಸ್ತ್ರದಲ್ಲಿ ಪ್ರತಿಪಾದ್ಯವಾಗಿರುವ ಕೆಲವು ಶೀರ್ಷಿಕೆಗಳು ಮಾತ್ರ. ಇವನ್ನೆಲ್ಲ ವಿವರಿಸಲು ಇಲ್ಲಿ ಸಮಯವಿಲ್ಲ.

ನಾಟ್ಯಶಾಸ್ತ್ರದ ಉತ್ಪತ್ತಿಯನ್ನು ಕುರಿತು ಭರತನ ನಿರೂಪಣೆ ಶಾಸ್ತ್ರದ ಆದಿಯಲ್ಲೇ ಕಥಾರೂಪವಾಗಿ ಬರುತ್ತದೆ—

ತ್ರೇತಾಯುಗದ, ವೈವಸ್ವತ ಮನ್ವಂತರದಲ್ಲಿ ಲೋಕವೆಲ್ಲ ಕಾಮ, ಲೋಭ, ಈರ್ಷ್ಯಾ, ಕ್ರೋಧ, ದುಃಖಗಳ ಸುಳಿಯಲ್ಲಿ ಸಿಲುಕಿ ಬಿಡುಗಡೆಗೆ ದಾರಿ ಕಾಣದೇ ಇದ್ದಾಗ —ದೇವ, ದಾನವ, ಗಂಧರ್ವಾದಿಗಳು ಬ್ರಹ್ಮನ ಬಳಿಗೆ ಹೋಗಿ ರಂಜನೆಗೆ ಉಪಾಯವನ್ನು ಸೃಷ್ಟಿಸಬೇಕೆಂದು ಬಿನ್ನವಿಸಿಕೊಂಡರಂತೆ. ಆಗ ಒಂದೊಂದು ವೇದದಿಂದ ಒಂದೊಂದು ಭಾಗವನ್ನು ಅಳವಡಿಸಿ, ಲೋಕೋಪಕಾರಕ್ಕಾಗಿ ನಾಟ್ಯ ವೇದವನ್ನು ನಿರ್ಮಿಸಿದನಂತೆ. ಭರತನ ನೂರು ಪುತ್ರರು—ಶಾಂಡಿಲ್ಯ, ವಾತ್ಸಲ್ಯ, ಕೌಹಲ ಮುಂತಾದವರು ಇದರ ಅಭ್ಯಾಸ ಮಾಡಿದರಂತೆ; ಅಪ್ಸರೆಯರಾದ ರಂಭೆ, ಊರ್ವಶಿ, ಮುಂತಾದವರು ದೇವ ಲೋಕದಲ್ಲಿ ಮೊದಲನೆ ನಾಟ್ಯ ಪ್ರದರ್ಶನವನ್ನು ಆಡಿ ತೋರಿ

ಸಿದರಂತೆ. ಒಮ್ಮೆ ಈ ಪ್ರಯೋಗಕಾಲದಲ್ಲಿ ದಾನವರಿಂದ ವಿಘ್ನ ಬಂದಂತೆಯೂ ಪೂರ್ವರಂಗದ ಕರ್ಮಗಳಿಂದ ಅವು ನಿವಾರಣೆಯಾದವು ಎಂದೂ ಕಾಣುತ್ತದೆ. ನಾಟ್ಯದಲ್ಲಿ ಸೇರದಿರುವ ವಿಷಯವೇ ಇಲ್ಲ:—

ನ ತಜ್ಞಾನಂ ನ ತಚ್ಛಿಲ್ಪಂ ನಸಾ ವಿದ್ಯಾ ನಸಾಕಲಾ!
ನಾಸೌ ಯೋಗೋ ನ ತತ್ಕರ್ಮ ನಾಟ್ಯೇಸ್ಮಿನ್
ಯನ್ನ್ ದೃಶ್ಯತೇ ||

ನಾಟ್ಯಶಾಸ್ತ್ರದ ಕಾಲ ಕ್ರಿಸ್ತಶಕದ ಆದಿಭಾಗದಲ್ಲಿ ಎಂದು ವಿದ್ವಾಂಸರ ಅಭಿಪ್ರಾಯ. ಮೊದಲು ಗ್ರಂಥ ಸಣ್ಣದಾಗಿದ್ದು ಕಾಲದಿಂದ ಕಾಲಕ್ಕೆ ಬೆಳೆಯುತ್ತ ಈಗಿನ ಬೃಹತ್ ಪ್ರಮಾಣವನ್ನು ತಾಳಿರಬೇಕೆಂದು ಅನಿಸುತ್ತದೆ. ಇದರ ಮೇಲೆ ಅಭಿನವ ಗುಪ್ತರು ಬರೆದಿರುವ ಅಭಿನವ ಭಾರತಿ ಎಂಬ ಭಾಷ್ಯ ಸರ್ವಾಂಗ ಸುಂದರವಾಗಿದೆ. ಇವರ ಹಿಂದಿನ ಕೃತಿಗಳನ್ನೆಲ್ಲ ಅದು ಮರೆಯಾಗಿಸಿದೆ. ಈಗ ನಾಟ್ಯಶಾಸ್ತ್ರದ ಫಲಶ್ರುತಿ:-ವೇದ ಪಾರಾಯಣ, ಯಜ್ಞಾಚರಣೆ ದಾನಧರ್ಮ, ಪೂಜೆ, ಇವೆಲ್ಲವುಗಳಿಗಿಂತ ಹೆಚ್ಚಿನ ಫಲ ನಾಟ್ಯಶಾಸ್ತ್ರದಿಂದ ಉಂಟಾಗುತ್ತದೆ ಎಂದು ಹೇಳಿ ನಟರ ವೃತ್ತಿಯನ್ನು ಭರತನು ಬಾಯಿತುಂಬ ಬಣ್ಣಿಸುತ್ತಾನೆ.

ಯಾ ಗತಿರ್ವೇದ ವಿದುಷಾಂ ಯಾ ಗತಿ
ರ್ಯಜ್ಞಕಾರಿಣಾಂ |
ಯಾ ಗತಿರ್ದಾನ ಶೀಲಾನಾಂ ತಾಂ ಗತಿಂ
ಪ್ರಾಪ್ನುರಿಯಾದಿ ಸಃ ||
ದಾನ ಧರ್ಮೇಷು ಸರ್ವೇಷು ಕೀರ್ತ್ಯತೆ ತು
ಮಹತ್ ಫಲಂ ||
ಪ್ರೇಕ್ಷಣೀಯ ಪ್ರದಾನಂ ಹಿ ಸರ್ವದಾನೇಷು ಶಸ್ಯತೆ ||
ನ ತಥಾ ಗಂಧ ಮಾಲ್ಯೇನ ದೇವಾಸ್ತುಷ್ಯಂತಿ
ಪೂಜಿತಾಃ |
ಯಥಾ ನಾಟ್ಯಪ್ರಯೋಗಸ್ಥೈರ್ನಿತ್ಯಂ ತುಷ್ಯಂತಿ
ಮಂಗಲೈಃ ||

ಗೊಮ್ಮಟೇಶನಿಗೆ

ನೆಲದ ಮೇಲೆ ಬದುಕಿ ಬಾಳಿದವರಲ್ಲಿ
ನೀನು ಕಲ್ಲಾಗಿ ನೆಲಮುಗಿಲ ಗೆಳೆಯನಾಗಿ
ತುಟಿಯನಲುಗಿಸದೆ ಕಂಬನಿಯ ಮಿಡಿಯದೆ
ನಿಟ್ಟುಸಿರ ಬಿಡದೆ ನಿಂತೇ ಇರುವೆ ಮೌನದಲ್ಲಿ

ನೆಲದ ಕಮಲದ ಮೇಲೆ ನೀನು ನಿಂತಿರುವಲ್ಲಿ
ಶತಶತಮಾನಗಳ ಬದುಕರಳಿ ಮಣ್ಣಾಗಿ
ಮುಗಿಲಿಗೇರುವ ಗೆಯ್ಮೆ ಸಾಗುತ್ತಲೇ ಇದೆ:
ನಿರ್ವಿಣ್ಣನಾಗಿ ನಿಂತಿರುವೆ ನೀನು ಧ್ಯಾನದಲ್ಲಿ

ಚೆಂಮುಗಿಲ ಗೆಳೆತನದಿಂದ ಮುಂಗುರುಳಲ್ಲಿ
ಗಾಳಿ ಬೆರಳಾಡಿಸಲು ಬೆಳಕು ಮಿಂಚಿ ಗೊಂಚಲಾಗಿ
ನೆಲದಾಸೆಗಳ ಬಳ್ಳಿ ಮೈಬಳಸಿ ಬೆಳೆಯುತ್ತಿದೆ:
ನಿಶ್ಚಿಂತನಾಗಿ ನಿಂತಿರುವೆ ನೀನು ಶಾಂತಿಯಲ್ಲಿ

ನಿನ್ನಂತೆಯೇ ನಾನು ಹುಟ್ಟಿ ಬೆಳೆದೆನು ಇಲ್ಲಿ
ನನಗಾಸೆ ನಿನ್ನಂತೆ ನಿಂತು ಮೈಮರೆಯುವಲ್ಲಿ.

ಕ. ವೆಂ. ರಾಜಗೋಪಾಲ

ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರಣಯ ನಿರೂಪಣೆ

ದೇವೇಂದ್ರಕುಮಾರ ಹಕಾರಿ

ಕನ್ನಡ ಕಸ್ತೂರಿ ಎನ್ನುವ ಮಾತೊಂದು ಇದೆ. ಅದೊಂದು ಸುಂದರ ಭಾವನೆ. ಆದರೆ ಜೀವನದಲ್ಲಿ ಪ್ರಣಯ ಅಥವಾ ಪ್ರೇಮ ಒಂದು ಭಾವನೆಯಲ್ಲ. ಅದು ಜೀವನದ ಸ್ವಭಾವ ಪ್ರೇಮವಿಲ್ಲದ ಬದುಕು ಶುಷ್ಕ-ನಿಶ್ಚೇಷ್ಟಿತ-ವಿದ್ಯುತ್ ಇಲ್ಲದ ಯಂತ್ರದಂತೆ. ಪ್ರೇಮ, ಪ್ರಪಂಚದಲ್ಲಿ ಅಂತಃಪ್ರವಾಹಿ. ಅದಕ್ಕಿರುವ ಅಗಣಿತ ಮುಖಗಳಲ್ಲಿ ಪ್ರಣಯ ನಮಗೆ ಪ್ರಸ್ತುತ ಹುಚ್ಚು ಸಾಹಸಗಳ ನಿಚ್ಚಣಿಕೆಯನ್ನಿಟ್ಟು ಮುಗಿಲಿಗೇರುವ ದಿಟ್ಟತನ ಪೌರುಷದ ಮದ ತಲೆಗೇರಿ ತಾನೂ ಗೋಳವನ್ನು ಸುತ್ತುವ ಕ್ಷಿಪಣಿಯೋ ಎನ್ನುವ ಅಭಾಸ. ಶಾರೀರಿಕ ಬೆಳವಣಿಗೆಯ ಜೊತೆ ಕಣ್ಣು ಚಿವುಟಿ ಕರೆಯುತ್ತದೆ ಬದುಕು-ಬದುಕಿನ ರಂಗು-ರಂಗಿನ ಹಿನ್ನೆಲೆಯಲ್ಲಿ ರಾಗ-ರಾಗರಂಜನೆಯಲ್ಲಿ ಅನುರಾಗ. ಅಂಶಾಂಶದಲ್ಲಿ ಅನುರಾಗದ ಪಾರಜ ಹರಿಯುತ್ತದೆ. ಏರುಂಜವ್ವನದಲ್ಲಿಯೇ ಈ ಪ್ರಣಯದ ಊರುಣಿಗೆ.

ಪ್ರೇಮ ದೇವತ್ತ್ವಕ್ಕೆ ಸಾಧನ ಎಂದು ಹೇಳುತ್ತಾರೆ. ಪ್ರೇಮ ಜೀವನದ ಸಾಧನೆ-ಜೀವನ ವಿಕಾಸಕ್ಕೆ ಸಾಧನ ಮಾಡಿಕೊಳ್ಳಬೇಕು ಎನ್ನುವುದು ಕಂಡರಿದ ಸತ್ಯ. ಸಾಧನೆ ಯಾವುದೇ ಆದರೂ ಕಾಮದ ಕಿಚ್ಚನ್ನು-ಅನುರಾಗದ ಕಡಲ ಕಿಡಿಗಳನ್ನು-ಪ್ರಣಯದ ಜ್ವಾಲೆಗಳನ್ನು ಅರಗಿಸಿಕೊಳ್ಳದೆ-ಸಹಿಸಿಕೊಳ್ಳದೆ ಅನುಭವಿಸದೆ ಯಾವುದೂ ಸಾಧ್ಯವಿಲ್ಲ. ಬರಡಾಗಿರುವ ಕಾಡುಮೇಡು ಬಂಜರಾಗಿರುವ ನೆಲಮುಗಿಲು, ಚೈತ್ರದ ಲಾಸ್ಯದಲ್ಲಿ ಒಂದೇ ಬಾರಿಗೆ ಮೈಮುರಿದು ಶ್ರಾವಣದ ಲಾವಣ್ಯದಲ್ಲಿ ತಿಲ್ಲಾಣವನ್ನಾಡುವಂತೆ ಪ್ರಣಯದ ಪ್ರಥಮ ಚರಣ. ನೆಟ್ಟಗೆ ಹಾದಿಹಿಡಿದು ಮನೆಗೆ ಹೋಗುವ ಮುಗ್ಧೆಯ ಮೈಯಲ್ಲಿ ಕಚಕುಳಿಯಿಟ್ಟು ಸೆರಗು ಜಗ್ಗುವ ಮಳ್ಳಗಾಳಿಯಂತೆ ಹಾದಿಯಲ್ಲಿ ಗುಡುಗಿ, ಮಿಂಚು ಹೊಡೆದು ಪಾಪ ಆ ಬಡಪಾಯಿಯ ಕಣ್ಣಿಗೆ ಕತ್ತಲು ತುಂಬಿ, ಮುಂದೇನೂ ಕಾಣಿಸದಂತೆ ಮಾಡುವ ಮುಂಗಾರ ಹಾವಳಿಯಂತೆ ಈ ಪ್ರೇಮದ ದಾಳಿ.

ಹರೆಯ ಬಂದಾಗ ಹೆಣ್ಣು ಗಂಡುಗಳ ಹೃದಯಸ್ತರಗಳಲ್ಲಿ ಇದ್ದಕ್ಕಿದ್ದಂತೆ ನೂರು ನೋವು-ಸಾವಿರ ಬಯಕೆ ಕೆರಳಿ ನಿಲ್ಲುತ್ತದೆ. ಕಾತರ ಹಂಬಲು ಕಳವಳ ನಿರೀಕ್ಷೆಗಳು ಅವರ ಹೃದಯದಲ್ಲಿ ಪ್ರತಿಸ್ಪಂದಿಸುತ್ತದೆ. ಮಿಲನದಲ್ಲಿ ಸಾಂತ್ವನ ಪಡೆಯುತ್ತದೆ. ಈ ದೇಹಕ್ಕೆ-ಜೀವಕ್ಕೆ ಒಂದು ಅರ್ಥ-ಒಂದು ಉದ್ದೇಶ ಇರುವಂತೆ ತೋರುತ್ತದೆ. ಕಾಮದ ಉದ್ವೇಗ ಉದ್ರೇಕಗಳಾಗಲಿ ಮಿಲನದ ಸಾಂತ್ವನ ವಿಶ್ರಾಂತಿಗಳಾಗಲಿ ಪ್ರಣಯದ ಪೂರ್ಣ ಸ್ವರೂಪವಲ್ಲ. ಬೆಂಕಿ ಸುಟ್ಟು ಬೆಳಗುವಂತೆ ಪ್ರಣಯವಾಗಿ ಪ್ರೇಮವಾಗುತ್ತದೆ. ಅದು ಬದುಕಿಗೆ ಬೆಳಕೂ ಹೌದು-ಶಾಖವೂ ಅಹುದು. ಬದುಕು ವಿಸ್ತಾರಗೊಂಡಂತೆ ಅವರ ಪ್ರೇಮ ವಿಕಾಸಗೊಳ್ಳುತ್ತದೆ. ವಿಕಸನವೇ ಪ್ರಣಯದ ಪೂರ್ಣ ಗುರಿ.

ಪ್ರಣಯಿನಿಯ ಬೆನ್ನುಹತ್ತಿ ಬಾವಿ ಬೀಳುವುದಾಗಲಿ ರೈಲುಕಂಬಿಗೆ ಕತ್ತು ಕೊಡುವುದಾಗಲಿ ಅದು ನೀರಲ್ಲೊಗೆದ ಕೆಂಡ. ಉರಿ ಆರಬಾರದು. ಆ ಉರಿ ಸುಟ್ಟು ನಾಶ ಮಾಡಲೂಬಾರದು. ಅದು ಬೆಳಕಾಗಬೇಕು ಅಷ್ಟೆ. ಆದುದರಿಂದ ಪ್ರಣಯ ದುರ್ಬಲರ-ಚಂಚಲ ಪ್ರವೃತ್ತಿಯುಳ್ಳವರ-ಹೇಡಿಗಳ ಗಂಟಲಿಗಿಳಿಯುವ ತುತ್ತಲ್ಲ.

ಉರ್ದು ಸಾಹಿತ್ಯದ ಮಹಾಕವಿ ಮೀರ್ ಹೇಳುವಂತೆ 'ಪ್ರಣಯ ಹಿರಿವೇದನೆಯು ಪ್ರಣಯವೇ ಔಷಧಿಯು.'

ಮಧುರಚೆನ್ನ, ಅಂಬಿಕಾತನಯದತ್ತ ಇವರ ಪ್ರಣಯ ಗೀತೆಗಳು ಜನಪದ ಜೀವನ-ಜನಪದ ಸಾಹಿತ್ಯವೆರಡರಿಂದಲೂ ಪುಷ್ಟಿಗೊಂಡು-ಶರಣರ ಅನುಭಾವ ಸಾಹಿತ್ಯದ ಕುಲುಮೆಯಲ್ಲಿ ಅಪರಂಜಿಯಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಅಚ್ಚಳಿಯದ ಸ್ಥಾನ ಗಳಿಸುತ್ತವೆ. 'ನಿಲ್ಲು ನಿಲ್ಲೆಲೆ ನವಿಲೆ ನಿನ್ನ ಕಣ್ಣುಗಳೇನು ಕಣ್ಣ ಬಣ್ಣಗಳೇನು ಎಣಿಸಲಾರೆ' ಎಂದು ನಿಸರ್ಗದ ನೂರು ಮುಖಗಳಲ್ಲಿ ನಲ್ಲನನ್ನು ಹುಡುಕುವ 'ನನನಲ್ಲ' ದ ಬೇಟ ಪ್ರಣಯವಿಕ್ಷಿಪ್ತಚಿತ್ತದಿಂದ ಸುರಿಯುವ ಬೆಂಕಿಮಳೆ. ವಿರಹದ ಅಗ್ನಿರಸ ಹರಿಸಿ ಅಗ್ನಿದಿವ್ಯದತ್ತ ಆಧ್ಯಾತ್ಮದ ಅನಂತ ದೃಷ್ಟಿಯತ್ತ ಬದುಕಿಗೆ ತೋರುಬೆರಳಾಗುವಲ್ಲಿ ಮಧುರಚೆನ್ನರ ಕಾವ್ಯ ತನ್ನ ಅಭಿವ್ಯಕ್ತಿಯನ್ನು ಕಂಡಿದೆ.

ನಿಸರ್ಗದ ಹಿನ್ನೆಲೆ ಬೇಂದ್ರೆಯವರ ಕಲ್ಪನೆಗೆ ಮಾದಕ ಚೆಲುವನ್ನು ನೀಡುತ್ತದೆ. ಪ್ರಾಯ ಚಿಗುರಿದಾಗ:

'ಮಾವೆಲ್ಲ ಕಾತಿತ್ತು ಮಲ್ಲಿಗೆ ಹೂತಿತ್ತು, ಕೋಗಿಲೆ
ಕೂತಿತ್ತು ಕಾಣದೊಲೆ
ಕಾವಿನಕಾಹುರಕೆ ಸುಗ್ಗಿಯನೇಭರವೊ ಮೈಜುಮ್ಮು
ರುಮ್ಮು ಜುಮ್ಮು ಎನ್ನುತಿರೆ
ದಿಕ್ಕುದಿಕ್ಕಿಗೆ ನುಗ್ಗಿ ಪಂಚಮದಿಂಚರ, ಮುತ್ತಿಟ್ಟು
ಮರಮರಳಿ ಬರುತಲಿರೆ
ಮಲಮಲ ಎನ್ನುವ ಮಲ್ಲಿಗೆಯಂದದಿ ಚಿಗುರು
ಪ್ರಾಯದ ಮನ ಮಲರುತಿದೆ'

(ಸಖೀಗೀತ)

ಯಾವ ಗಂಡೊ, ಯಾವ ಹೆಣ್ಣೊ ಹೊತ್ತು ಹಡೆದು ಎತ್ತಿ ಆಡಿಸಿದವರು ಬೆಳೆಸಿದವರು ಬೇರೆ ಬೇರೆ ಆದರೇ ಆ ಗಂಡಿಗೆ ಒಂದು ಹೆಣ್ಣು ದೊರೆಯಿತು. 'ಕೃಪೆಯೊ ಕಾಮದೇವನಾ ಬಂತು ಬೇರೆ ಬೇರೆ ಬತ್ತಿ, ದೀಪಹತ್ತಿ ಬೆಳಗುತಿಹುದು ಸ್ನೇಹವಾ' ಸ್ನೇಹದಲ್ಲಿ ಒಮ್ಮುಖವಾದ ನಲ್ಲ-ನಲ್ಲೆಯರ ಬದುಕು 'ಅಂಟೆಗಂಟು' ನಂಟು ಚಿಗಿಯುತ್ತದೆ. ನಲ್ಲೆ ನಡೆದುಬಂದರೆ 'ಸೀಗೆಹುಣ್ಣಿಮೆ ಮುಂದೆ ಸೋಗಿನ ಚಂದ್ರರು ಸಾಗಿಬಂದಂತೆ.' ಅವನು ಹುಬ್ಬು ಹಾರಿಸಿದರೆ ಅವಳಿಗೆ ಹಬ್ಬ. ಕಣ್ಣರೆವೆ ಎತ್ತಿದರೆ ಹುಣ್ಣಿವಿ. ಬೆಳು ದಿಂಗಳು ಬದುಕಿನ ಒಂದು ಮುಖ. ವಿರಹ ಅಗಲುವಿಕೆ ಅದೂ ಉಂಟು. ಅದರಿಂದ ಬೆಂದು ನೊಂದ ನಲ್ಲೆ ಹೇಳುತ್ತಾಳೆ 'ಒಲುಮೆಯು ನಚ್ಚೊಂದು ಕುಲುಮೆಯು ಕಿಚ್ಚವ್ವ' ಇಲ್ಲಿ ಹೇಳಿರುವುದು ಒಲುಮೆಯು ನಚ್ಚು-ಮನ ಸಾರೆ ಪ್ರೀತಿ. ಕಳ್ಳ ನಚ್ಚಲ್ಲ. ಬಲುಮೆಯು ನಚ್ಚು ಅಲ್ಲ. ಬದುಕು ಕುಲುಮೆಯ ಕಿಚ್ಚಾದರೆ ಜೀವಿಸಿರುವುದು ಸಾಧ್ಯವೇ. ಇತ್ತ ನಲ್ಲನಿಗೂ ಅಷ್ಟೆ. ಅವನಿಗೆ 'ಬಂದಿತು ಶ್ರಾವಣ ಹೃದಯವಿದ್ರಾಣವ' ಗುಡುಗಿದರೆ ನಡುಗು ಬರುತ್ತದೆ. ಹಗಲೇ ಇರುಳಾಗುತ್ತದೆ. ಮತ್ತೆ ಮಿಲನ ಕಾಲ ಕಳೆದಂತೆ ಚಿಂತೆ ವ್ಯಸನ ವಾಸ್ತವ ಜೀವನದ ಕಿಟಕಿಯಿಂದ ತೂರಿ ನುಗ್ಗುತ್ತದೆ. ಮನಸ್ಸು ಘಾಸಿ. ಛಿದ್ರಛಿದ್ರ. ಮತ್ತೆ ಕೆಳೆ. ಚೆಲುವಿನ ಅಬ್ಬರ ಇಳಿದು ಒಲವಿನ ವಿದ್ಯುತ್ತು ಬೆಳಕು ಚೆಲ್ಲುತ್ತದೆ. ಇದುರಿಗೇ ಚೆಲುವೆ. ಆ ಚೆಲುವು ತನ್ನದು. ತಾನೇ ಆ ಚೆಲುವು. ಚೆಲುವು ಬರಿ ಕಣ್ಣಿನ ತುತ್ತಲ್ಲ. ಕಣ್ಣಿಗೂ ಕಣ್ಣಾಗಿ ಒಳಗಿದೆ. ಒಲುವಾಗಿ ಹೊಮ್ಮುತಿದೆ. ಬಡತನವಿರಲಿ, ಸಿರಿತನವಿರಲಿ ಒಲವೇ ಅವರ ಬದುಕು. ಅದು ಆನಂದ. ಪ್ರಾಣದ ಸೂತ್ರವಾಗಿ ಆನಂದದ ಪ್ರತಿಮೆಯಾಗಿ ಬಾಳು ಸೊಗಸುತ್ತದೆ. ಜೀವನ ರಸರಂಗವಾಗುತ್ತದೆ. ರಸವೇ ಜನನ ವಿರಸ ಮರಣ, ಸಮರಸವೇ ಜೀವನ ಎನ್ನುವ ಚಿರಂತನ ಶುದ್ಧಿಯಲ್ಲಿ ಬೇಂದ್ರೆಯವರ ಪ್ರಣಯ ಶ್ರದ್ಧೆ ಆವಿಷ್ಕಾರಗೊಳ್ಳುತ್ತದೆ. ನಲ್ಲನಲ್ಲೆಯರ ಅಂತರಂಗದ ಕಳವಳ ಬೇಗುದಿ-ಅವರ ವೈಮನಸುಗಳ ಸೆಣಸಾಟ-ಮತ್ತು ಹೊಂದಿಕೆ ಇವೆಲ್ಲ ಅವಸ್ಥೆಗಳ ರಮಣೀಯ ಮತ್ತು ಅಷ್ಟೇ ಪ್ರಾಮಾಣಿಕ ಚಿತ್ರಣ ಅಂಬಿಕಾತನಯದತ್ತರ ವೈಶಿಷ್ಟ್ಯವಾಗಿದೆ. ಪ್ರಣಯ ಕೇವಲ ಮೇಲು ನೋಟದ ಆಟವಲ್ಲ. ಅದು ಬದುಕಿನ ಅಂತಸ್ಸತ್ತ್ವ ಎನ್ನುವ ಪ್ರೇಮ ಪ್ರಜ್ಞೆ ಅವರ ಪ್ರಣಯ ಗೀತೆಗಳ ಕಣ್ಣು.

ಪ್ರೇಮಕ್ಕೆ ಬದುಕನ್ನು ಒಗ್ಗಿಸಿ ಜೀವನವನ್ನು ಹಿಗ್ಗಿಸುವಲ್ಲಿ ಬೇಂದ್ರೆಯವರ ಕಾವ್ಯ ಒಂದು ಮಹತ್ತ್ವದ ಹೆಜ್ಜೆಯನ್ನಿರಿಸಿದೆ.

ಕವಿ ನಿಸರ್ಗದ ಮಗು ಎನ್ನುವ ಮಾತು-ನಿಸರ್ಗಕ್ಕೆ ಸೌಂದರ್ಯ ಸಹಜವಾದಂತೆ ಜೀವನಕ್ಕೆ ಪ್ರೇಮ ಸಹಜ ಎನ್ನುವ ಮಾತು ಕುವೆಂಪು ಅವರ ಕಾವ್ಯವನ್ನು ಓದಿದಾಗ ಅನುಭವಕ್ಕೆ ಬರುತ್ತದೆ. ಅವರ 'ಷೋಡಶಿ'ಯಲ್ಲಿ ಬರುವ ಹುಡುಗಿ ಬೃಂದಾವನ ರಾಧೆ-ಕೃಷ್ಣರ ಕಥೆ ಕೇಳಿದ ಬೆಡಗಿ. ಅವಳು ತನ್ನ ಹೃದಯದಲ್ಲಿಯೇ ಬೃಂದಾವನವಿದೆ. ಶಾಮಸುಂದರೂ ಇದ್ದಾನೆ ಎಂದು ಹೇಳುತ್ತಾಳೆ. ಪ್ರೇಮದ ಸವಿಯಾದ ಎಲರು ತೀಡಿದಾಗ ಅವಳಿಗುಂಟಾಗುವ ಭಾವಪ್ರಪಂಚದಲ್ಲಿ ನಿಸರ್ಗವೇ ಪ್ರತಿಸ್ಪಂದಿಸುತ್ತದೆ. ಅವಳು ಪ್ರಿಯನ ಬರವನ್ನು ನಿರೀಕ್ಷಿಸುತ್ತಾಳೆ. ಉದಯದಂತೆ ನಲಿದು, ಸಂಜೆಯಂತೆ ಮೆರೆದು ಚಿತ್ತವನ್ನೇ ಚುಂಬಿಸಿ ನಲ್ಲ ಬರುತ್ತಾನೆ. ಒಲುಮೆಯ ಕಣ್ಣು ಮುಚ್ಚಿದರೆ ಜೀವಕ್ಕೆ ಬೆಳಕಿಲ್ಲ ಎನ್ನುವ ಎಚ್ಚರಿಕೆ ಮೂಡುತ್ತದೆ. ನಲ್ಲನಲ್ಲೆಯರು ಪರಸ್ಪರ ಜೀವನ ಸ್ಫೂರ್ತಿಯಾಗಿ ನಿಲ್ಲುತ್ತಾರೆ. ಅವಳ ಎಳನಗೆಯಲ್ಲಿಯೆ ತಿಳಿ ಬಾನು ಬಿರಿಮುಗುಳು ಹಿಮಮಣಿಯ ಮಿಂಚು. ಅವಳು ಹೂಕೊಯ್ಯುತ್ತ ಮೆರೆದುದು ಹೀಗೆ:

ಹೂವೇ ಹೂಗಳ ಕೊಯ್ವಂತೆ ಮಾಲೆಯೆ ಮಾಲೆಯ
ನೆಯ್ವಂತೆ
ಚೆಲ್ವೇ ಚೆಲ್ವನು ಗೆಲ್ವಂತೆ ಮೆರೆದಳು ಆ ಕಾಂತೆ.

ಹೀಗೆ ಪ್ರೇಮಕಾಶ್ಮೀರದಲ್ಲಿ ವಿಹರಿಸಿ, ಜೇನಿನುಸುಕಿನಲ್ಲಿ ಸುತ್ತಾಡಿ ಚಂದ್ರಮಂಚವೇರುತ್ತಾರೆ. ಅವನು ಅವಳಿಗೆ ಜೇನು, ಅವಳು ಅವನಿಗೆ ಜೇನು. ಇಬ್ಬರೂ ರಸದೇವಗಂಗೆಯಲ್ಲಿ ಮೀನು. ಇದು ಅನಂತಕಾಲದ ದೈವಲೀಲೆ. ಕಾಮದೇವನ ಆಟ ಇಂದು ನನಸಾಗಿ ಪ್ರೇಮದಲ್ಲಿ ಅರಳಿದೆ. ಪ್ರಣಯಲೀಲೆ ಕೇವಲ ಭೋಗರಂಗವಲ್ಲ. ಶಿವ ಪಾರ್ವತಿಯರ ದಿವ್ಯಪ್ರೇಮಕ್ಕೆ ಸಂಕೇತ. ಇದೊಂದು

ಶಿವ ಶಿವಾಣಿಯಾಟ. ಮಾನವ ಪ್ರೇಮ ದಿವ್ಯಪ್ರೇಮದಲ್ಲಿ ಪರಿಪೂರ್ಣತೆ ಪಡೆಯಬೇಕು. ಪ್ರೇಮವೇ ದೇವರು-ಅಂತ ದೈವತ್ತ್ವ ಸುಖವನ್ನು ಪ್ರಣಯಿಗಳು ಹೊಂದಬೇಕು. ವ್ಯಷ್ಟಿಪ್ರೇಮದ ಚೇತನದಲ್ಲಿ ಸಮಷ್ಟಿಪ್ರೇಮದ ಪರಮಾನಂದವನ್ನು ಅನುಭವಿಸಬೇಕು ಎನ್ನುವ ಆಧ್ಯಾತ್ಮ ಸಂಕೇತವನ್ನು ರೂಪಿಸುವ ವಜ್ರನಿಷ್ಠೆ ಕುವೆಂಪು ಅವರದು. ಇಂತಹ ಶ್ರೀಮಂತ ಪ್ರಣಯದ ಭಾವಸಮೃದ್ಧಿಯೇ ಕುವೆಂಪು ಕಾವ್ಯದ ಅಭಿವ್ಯಕ್ತಿ.

ಈಶ್ವರ ಸಣಕಲ್, ಪು. ತಿ. ನ., ಆರ್. ಸಿ. ಹಿರೇಮಠ, ತೀ. ನಂ. ಶ್ರೀ., ವೀ. ಸೀ. ಪರಮೇಶ್ವರಭಟ್ಟ ಇವರ ಗೀತೆಗಳು ಪ್ರೇಮದ ಮಧುರ ಮತ್ತು ರಮಣೀಯ ಚಿತ್ರಗಳನ್ನು ನೀಡಿ ಪ್ರಣಯದ ನಾದವನ್ನು ಮಿಡಿಯುತ್ತವೆ. ಕಡೆಂಗೋಡ್ಲು ಶಂಕರಭಟ್ಟರ ದೃಷ್ಟಿಯಲ್ಲಿ ಪ್ರಣಯ 'ಸ್ವಚ್ಛಂದ ಸಾಹಸವ ಹೇರಿ ಬರುತಿಹ ನಾವೆ' ಇದಕ್ಕೆ ಆಘಾತಗಳೇ ಬಹಳ. ಅವರ ದುರ್ದೈವ ದುರ್ವಿಪಾಕದಿಂದ ಶಾಪಗ್ರಸ್ತವಾದ ಪ್ರಣಯ. ಪ್ರಣಯಕ್ಕಿರುವ ಮೃತ್ಯು ಪ್ರಜ್ಞೆಯ ನಿರೂಪಣೆಯಲ್ಲಿ ಇವರ ಪ್ರತಿಭೆ ಪರಿಪುಷ್ಟವಾಗಿದೆ. ಕಾವ್ಯಾನಂದರ ಒಲವು ಕರುಣೆಯ ಶ್ರಾವಣವನ್ನೇ ತರುತ್ತದೆ. ಅವರ ಪ್ರಣಯಿನಿ ನಡೆದರೆ ನೆಲಕ್ಕು ನವಿರು. ಕೋಲ್ಮಿಂಚು ಪ್ರಣಯಿನಿಯ ಕರೆ. ನೆಲ ಮುಗಿಲುಗಳ ಅಂತರವನ್ನು ಬಿಲ್ಲಿನಂತೆ ಬಾಗಿಸಿ ಹೊಂದಿಸುವಲ್ಲಿ-ಬದುಕಿನ ಆಳವನ್ನು ಅಳೆಯುವಲ್ಲಿ ಕಾವ್ಯಾನಂದ ನಿರೂಪಣೆ ಹೊಸ ಅರ್ಥದ ತಿರುವುಗಳನ್ನು ಕಾಣುತ್ತದೆ-ನೂತನ ಅಭಿವ್ಯಕ್ತಿಯ ಉನ್ಮುಖವನ್ನು ರೂಪಿಸುತ್ತದೆ.

ವಿನಾಯಕ, ಕೆ. ಎಸ್. ನರಸಿಂಹಸ್ವಾಮಿ, ಶಿವರುದ್ರಪ್ಪ, ಅಡಿಗ, ರಾಮಚಂದ್ರಶರ್ಮ, ಚೆನ್ನವೀರಕಣವಿ, ಸಿದ್ದಣ್ಣಮಸಳಿ ಮೊದಲಾದವರ ಕಾವ್ಯ ಸೃಷ್ಟಿಯಲ್ಲಿ ಪ್ರಣಯದನಾಡಿ ನಮಗೆ ಬಹು ಹತ್ತಿರದಲ್ಲಿ ಮಿಡಿಯುತ್ತದೆ—ಇವರ ಗೀತೆಗಳಲ್ಲಿ ಬಾನಲೆಯುವ-ಹೂಗಳಲ್ಲಿ-ಜೇನಿನಲ್ಲಿ-ಪಯರುಗಳಲ್ಲಿ ಉಂಡಾಡಿಯಾಗಿರುವ ಪ್ರಣಯ ಅಲ್ಲೆಲ್ಲ ಅಲೆದಾಡಿ ಬಂದು ಇಲ್ಲಿ ಒಂದು ಹದವಾದ ನೆಲೆಯನ್ನು ಪಡೆಯುತ್ತದೆ. ಇಲ್ಲಿ ಬರುವ ನಲ್ಲ ನಲ್ಲೆಯರನ್ನು ಕುವೆಂಪು ಬೇಂದ್ರೆ ಮಧುರಚೆನ್ನರಲ್ಲಿ ಕಂಡ ನೆನಪು ನಮಗೆ. ಆದರೆ ಇವರ ಪ್ರಣಯಿಗಳಿಗೆ ಮಣ್ಣಿನ ವಾಸನೆಯ ಮೇಲೆಯೇ ಹೆಚ್ಚು ಪ್ರೀತಿ.

ವಿನಾಯಕರ ಕಾವ್ಯ ಪ್ರೇಮದ ನವಿಲುಗರಿಯ ಬಣ್ಣವನ್ನು ವಣಿಸುವ ಗೊಡವೆಗೆ ಹೋಗುವುದಿಲ್ಲ. ಬಂದರೂ ಅಲ್ಲಷ್ಟು ಇಲ್ಲಷ್ಟು. ಪ್ರೇಮದ ನವುರುಭಾವ ಚಿತ್ರಕ್ಕಿಂತ ಜೀವನ ಸಂಘರ್ಷದಲ್ಲಿ ಸೆಣಸುವ ಮಾನವ ಚೇತನದ ತೇಜಸ್ಸೇ ಅವರಿಗೆ ಗುರಿ. ಮಾನವ ಚೇತನದ ಅಂತಃಸತ್ತ್ವ ಪ್ರಚೋದನೆಯೇ ಅವರ ಅಭಿವ್ಯಕ್ತಿಗೆ ಕೇಂದ್ರ.

ನರಸಿಂಹಸ್ವಾಮಿ – ಶಿವರುದ್ರಪ್ಪ – ಚೆನ್ನವೀರಕಣವಿ ಮೊದಲಾದವರ ಪ್ರಣಯ ನಿರೂಪಣೆ ಬದುಕನ್ನು ಒಳಗೆ ಎಳೆದುಕೊಳ್ಳುತ್ತದೆ. ಇವರ ನಲ್ಲ ನಲ್ಲೆಯರು ಬದುಕಿನ ಜಟಿಲತೆಗಳನ್ನು ತಮ್ಮ ಉಡಿಯಲ್ಲಿ-ಚುಂಗಿನಲ್ಲಿ ಕಟ್ಟಿಕೊಂಡೇ ಬರುತ್ತಾರೆ. ಮೈಸೂರು ಮಲ್ಲಿಗೆ ವಾಸನೆ ಅವರಿಗೆ ಬಲುಹಿತ. ಮಧುಚಂದ್ರದ ಪಯಣ ಕೈಕೊಳ್ಳುವ ಸಾಹಸ. ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ ಎಂದು ಕೇಳುವ ಹುಡುಗಾಟ. ಜಡೆಯುದ್ದಕ್ಕೂ ಚಿಂತೆಯಿಳಿದ ಕಾತರ. ಕಣಿವೆ ಕಂದರಗಳನು ಪ್ರೀತಿಯ ತೋಳಿನಲಿ ತಬ್ಬುವ ಹಂಬಲು. ಚೆಲುವೆ ಹತ್ತಿರ ಇಲ್ಲದಾಗ ಎಲ್ಲವೂ ಶೂನ್ಯ. ಕಣವಿ ಅವರ ವಿರಹಿಸಂಜೆ ವಿರಹಿಯ ಹೃದಯ ಸಂಕೇತಕ್ಕೆ ಒಂದು ಒಳ್ಳೆಯ ಮಾದರಿ. ಪ್ರತಿಮಾ ವಿಧಾನದಲ್ಲಿ ಇದೊಂದು ಕಲಾತ್ಮಕ ಚಿತ್ರ. ನೋಡಿ ವಿರಹಿಸಂಜೆ :

> " ವಿರಹಿಗಾಯಿತು ಸಂಜೆ
> ಸೊರಗಿ ಹೋದಂತೆಯೆ ಬಾನಬಂಜೆ—
> ರಾಗವಿರಹಿತವಾಯ್ತು ಅವಳಕೆನ್ನೆ,
> ನಿಶೆಯು ಬರೆಯಿತು ದೊಡ್ಡದೊಂದು ಸೊನ್ನೆ."

ಇಂತಹ ವಾಸ್ತವ ವಿರಹದ ತೀವ್ರತೆಯನ್ನೂ ನಾವು ಕಾಣುತ್ತೇವೆ.

> " ಬಿಡಿಸಿದಷ್ಟೂ ಬಾಳುಬರಿಗುಂಜು ತೊಡಕು
> ಕಂಡಕಡೆಯಲ್ಲಿ ಕರುಣೆಯನೆ ಹುಡುಕು "

ಪ್ರಣಯಕ್ಕೆ-ದಾಂಪತ್ಯಕ್ಕೆ ಸೂತ್ರಪ್ರಾಯವಾಗಿ ಬರುವ ಕಾವ್ಯ ಜೀವಂತ ಕಾವ್ಯ. ಇಂದಿನ ಬದುಕು ಅನೇಕ ಹೋರಾಟಗಳಿಗೆ ಅಣಿಯಾಗಿ ನಿಂತಿದೆ. ಬಾಳುವುದೇ ಒಂದು ಸಾಹಸವಾಗಿ ನೂರು ಸಮಸ್ಯೆಗಳ ಬಲಿಯಲ್ಲಿ ಸಿಕ್ಕ ಗಂಡು ಹೆಣ್ಣುಗಳ ದೃಷ್ಟಿಯಲ್ಲಿ ಪ್ರೇಮದ ನೆಲೆ ಏನು ಬೆಲೆ ಏನು ಎನ್ನುವುದನ್ನು ನಾವು ನಿರ್ಧರಿಸಬೇಕಾಗಿದೆ. 'ಜೇನು ಹೂವು ಸುಖದ ಸುಪ್ಪತ್ತಿಗೆ, ಮಲ್ಲಿಗೆ ಮೀನು ನವಿಲುಗರಿಗಳು ಎಳೆದ ಗೆರೆಯನ್ನು ದಾಟಿ ಬದುಕಿನ ಪ್ರತಿಕ್ರಿಯೆ ಸಾಗಿದೆ. ಜೀವನದ ಮೌಲ್ಯಗಳು ತತ್ತರಿಸುತ್ತಿವೆ.

ಗಲ್ಲಕ್ಕೆ ಗಲ್ಲ ಹಚ್ಚಿಯೋ, ಮಂಚದ ಮೇಲೆ ಕುಳಿತೋ ಹೊಲಗದ್ದೆಗಳ ಹಚ್ಚಹಸುರಿನ ನಡುವೆಯೋ ನಲ್ಲನಲ್ಲೆಯರು ಸವಿಸುಖ ಹಂಚಿಕೊಳ್ಳುವ ಮಂದಗಮನ ಬದುಕಿ

ನಲ್ಲಿಲ್ಲ. ಜೀವನದಲ್ಲಿ ಹೊಮ್ಮಿರುವ ವಿವಿಧವೃತ್ತಿ ಪ್ರವೃತ್ತಿಗಳನ್ನು ಎದುರಿಸುವಲ್ಲಿ ರೂಢಿಸಿಕೊಳ್ಳುವಲ್ಲಿ–ವಾಸ್ತವತೆಯ ಗರಗಸದಿಂದ ಒಲವಿನ ಹದ ಪಡೆಯುವ ಜೇಡ ಪರೆಯಂತಹ ತೇಲಾಟ ಕಳೆದು ವಿದ್ಯುತ್ತಿನ ಎದೆಯನ್ನು ಮುಟ್ಟುವ ಸಾಮರ್ಥ್ಯ. ಈ ಮೇಲಿನ ಕವಿಗಳ ಗೀತೆಗಳಲ್ಲಿ ಮೂಡುತ್ತಲಿದೆ.

ಮಾಯಾಮಂದಿರದ ಮಹಿಷವಾಡಿ, ನೆಲಸಂಪಿಗೆ ಅರಳಿಸಿದ ಸವದಿ, ಚೈತ್ಯಾಕ್ಷಿಯನ್ನು ಕಂಡ ಪಂಚಾಕ್ಷರಿ ಹಿರೇಮಠ, ಬಾನುಲಿಯನ್ನು ಕೇಳಿದ ಕೇಳಿಸಿದ ಚಂದ್ರಶೇಖರ ಪಾಟೀಲ, ರಸವಂತಿಯನ್ನು ಸೃಷ್ಟಿಸಿದ ಗೋವಿಂದರಾಜ, ಮೊದಲಾದವರ ಗೀತೆಗಳಲ್ಲಿ ಆ ಬಗೆಯ ನಾದ ಕೇಳಿಬರುತ್ತಲಿದೆ.

ಆದರೆ ಇನ್ನೂ ಮನಸ್ಸಿಗೆ ಯಾವುದೂ ಖಚಿತವಿಲ್ಲ. 'ನಾನು ಪ್ರೀತಿಸಿದೆನೇ ನಿನ್ನ?' ಅಥವಾ ಬರಿ ಕನಸೊ' ಎನ್ನುವ ಭ್ರಮೆ ಇಲ್ಲಿಯ ಪ್ರಣಯಿಗೆ. ಅವಳ ನೆನಪೇ ಕಾವ್ಯವಾಗಿ ಹರಿದುಬರುತ್ತದೆ. 'ನೀನೇ ಬೇಕು'ಎನ್ನುವ ಪರಿತಾಪವೂ ಕಾಣುತ್ತಿದೆ.

'ಬಾಳಿನಲಿ ಬರಲೇಳು ನೂರು ವಿರಸದ ಭಾವ' ಚೆಲುವೆ ನಿನ್ನ ಪ್ರೇಮವಿದ್ದರೆ ಸಾಕು ಎನ್ನುತ್ತಾರೆ. ಇಲ್ಲಿ ಬರುವ ಪ್ರಣಯಗಳು ಇನ್ನೂ ಪಾಡುಗಾಯಿ ಪ್ರಣಯ ಇನ್ನೂ ಅಷ್ಟು ಒಗರು ಆದರೂ 'ಬರಲೇಳು' ಎನ್ನುವ ಸಾಹಸ ಸೂಚ್ಯವಾಗಿದೆ. ಮೆಚ್ಚತಕ್ಕದ್ದು.

ಪ್ರಣಯ ಜೀವನದಲ್ಲಿ ಒಂದು ಭಾವವಲ್ಲ ಅದು ಜೀವನದ ಸ್ವಭಾವ ಎಂದು ಹೇಳಿದೆ. T. S. Eliot ಒಂದು ಕಡೆ.

ಪ್ರೇಮ ಎಂದರೇನು? ಅದು ನಮಗೆ ಅನುಚಿತ ಎನ್ನುತ್ತಾನೆ. 'Love is the unfamiliar name, Behind the hands that wove, the intolerable shirt of flame which human power cannot remove. ಪ್ರೇಮ ಅದೊಂದು ಜ್ವಾಲೆಗಳ ಅಂಗಿ. ಅದನ್ನು ಮಾನವ ಶಕ್ತಿ ಜೀವನದಿಂದ ನಿರ್ಮೂಲಗೊಳಿಸಲು ಸಾಧ್ಯವಿಲ್ಲ.

'We only live, only suspire
consumed by either tire or fire'

ಇಂತಹ ಸಾಂದ್ರವಾದ ತೀವ್ರಾನುಭವದ, ಒಟ್ಟೊಟ್ಟಾಗಿ ಸಿಡಿಯುವ ಮನಸ್ಸಿನ ದೌರ್ಬಲ್ಯವನ್ನು ಎತ್ತಿ ನೆಲಕ್ಕಪ್ಪಳಿಸಿ ಕ್ಷುದ್ರತೆಯನ್ನು–ಮಾದಕತೆಯನ್ನು ಕೊಲ್ಲುವ ಸತ್ತ್ವಯುತವಾದ ಪ್ರೇಮಾವಿಷ್ಕಾರದ ಅಭಿವ್ಯಕ್ತಿಗಾಗಿ ನಮ್ಮ ಕಾವ್ಯ ಇನ್ನೂ ನಿರೀಕ್ಷಿಸಬೇಕಾಗಿದೆ.

ಪ್ರೇಮ ಜೀವನದ ಸಂಕೇತ. ಸಮಷ್ಟಿ ಚೇತನದ ಪ್ರತೀಕ. ಸಮಷ್ಟಿಚೇತನದ ನಾದಸಂಕೇತವನ್ನು ಶಬ್ದ ಸಂಕೇತದಲ್ಲಿ ಅಭಿವ್ಯಕ್ತಿಗೊಳಿಸುವುದು ಅನಂತತೆಯ ಸೃಜನಾತ್ಮಕ ಕಣ್ಣು ಪಡೆದ ಕವಿಗೇ ಸಾಧ್ಯ. ಬಹುಶಃ ಅರವಿಂದರಂತಹರಿಗೆ ಅದು ಸಾಧ್ಯವಾಗಿರಬೇಕು. ಸಾವಿತ್ರಿಯ ವರ್ಣನೆ ಮಾಡುತ್ತ ಅವರು ಕೊಡುವ ಈ ಚಿತ್ರ 'At once she was stillness and word' ಎನ್ನುವ ಮಾತು ಏಕ ಕಾಲಕ್ಕೆ ನೆಲಮುಗಿಲು ತುಂಬಿ ರಣರಣಿಸುತ್ತದೆ. ಓದುವುದನ್ನು ಬಿಟ್ಟು ಒಂದು ನಿಮಿಷ ಅದೇ ಮಾತನ್ನು ಮತ್ತೆ ಮತ್ತೆ ನಿರುಕಿಸಬೇಕಾಗುತ್ತದೆ.

'ಏಕಕಾಲಕ್ಕೆ ಅವಳು ಮೌನವೂ ಅಹುದು–ಮಂತ್ರವೂ ಅಹುದು.' ಇಂತಹ ಸಮೃದ್ಧ ಪ್ರಜ್ಞಾಚೇತಸ್ಸಿನ ಲಾವಾರಸದಲ್ಲಿ ಅದ್ದಿ ಬರಬೇಕಾಗಿದೆ ಕನ್ನಡದ ಕಾವ್ಯ.

'At once she was stillness and sound.'

ಸದಾಶಿವಗುರು ವಚನ

ಹನುಮ ಹಾರಿದ ರಭಸಕೆ ಗಿರಿಯ ಶೃಂಗವೆ ಮುರಿದು ಹಾರಿತ್ತು
ಹನುಮಕ್ಕ ಹಾರಿದ ರಭಸಕೆ ಬಳಿಯು ಉಳ್ಳಿಯ ಸಿಪ್ಪೆ ಹಾರಿತ್ತು
ಪ್ರತಿಕ್ರಿಯೆ ಘನತೆಗೆ ತಕ್ಕಂತೆ ಸದಾಶಿವಗುರು.

'ಉಪ್ಪು ಕಡಲು'
—ಎಸ್. ವಿ. ಪರಮೇಶ್ವರಭಟ್ಟ

ನಡುಗನ್ನಡ ಯುಗ

ಕೆ. ಮರುಳಸಿದ್ದಪ್ಪ

ವಿಸ್ತಾರವಾದ ಸಾಹಿತ್ಯವೊಂದರ ಇತಿಹಾಸವನ್ನು ಅಭ್ಯಾಸ ಸೌಕರ್ಯಕ್ಕನುಗುಣವಾಗಿ ಹಲವು ಯುಗಗಳನ್ನಾಗಿ ವಿಭಾಗಿಸಿಕೊಳ್ಳುವ ಸಂಪ್ರದಾಯ ಜಗತ್ತಿನ ಎಲ್ಲ ಸಾಹಿತ್ಯಗಳಲ್ಲೂ ಪ್ರಚಲಿತವಿದೆ. ಹಾಗೆ ವಿಭಾಗಿಸಿಕೊಳ್ಳುವಲ್ಲಿ ನಿರ್ದಿಷ್ಟವಾದ ಕಾಲದ ವ್ಯಾಪ್ತಿಯೊಂದನ್ನು ಒಂದು ಯುಗವೆಂದು ನಿರ್ದೇಶಿಸಬೇಕಾದರೆ, ಆ ಕಾಲದ ಸಾಹಿತ್ಯದಲ್ಲಿ ವಸ್ತು, ಭಾಷೆ ಹಾಗೂ ಸಂವೇದನೆಗಳು ಒಂದು ಏಕಸೂತ್ರತೆಗೆ ಬದ್ಧವಾಗಿರಬೇಕೆಂಬ ಅಂಶವನ್ನು ಒಪ್ಪಿಕೊಂಡು— ಕನ್ನಡ ಸಾಹಿತ್ಯವನ್ನು ಸ್ಥೂಲವಾಗಿ ಹಳಗನ್ನಡ ಪೂರ್ವಕಾಲ, ಹಳಗನ್ನಡಕಾಲ, ನಡುಗನ್ನಡಕಾಲ, ಸಂಕ್ರಮಣಕಾಲ ಹಾಗೂ ಹೊಸಗನ್ನಡಕಾಲ ಎಂಬುದಾಗಿ ಐದು ವಿಭಾಗ ಮಾಡಬಹುದಾಗಿದೆ.

ಈ ವಿಭಾಗದ ಹಿನ್ನಲೆಯಲ್ಲಿ 'ನಡುಗನ್ನಡಯುಗ'ವೆಂದು ಗುರುತಿಸಬಹುದಾದ ಕಾಲದ ವ್ಯಾಪ್ತಿ ಹಾಗೂ ವೈಶಿಷ್ಟ್ಯಗಳನ್ನು ಮುಂದೆ ಗಮನಿಸಬಹುದು.

ಪಂಪ ಪೂರ್ವಸಾಹಿತ್ಯವೆಲ್ಲವನ್ನೂ ಹಳಗನ್ನಡ ಪೂರ್ವ ಸಾಹಿತ್ಯವೆಂಬ ವಿಭಾಗದಡಿಯಲ್ಲಿ ಗುರುತಿಸಬಹುದಾದರೂ ಒಂದು ಪರಂಪರೆಯಾಗಿ ಗಮನಿಸಬಹುದಾದ ಸಾಹಿತ್ಯ ಸೃಷ್ಟಿಯ ಗಾತ್ರ ಅಥವಾ ಗುಣ ಅಂದಿನ ಸಾಹಿತ್ಯಕ್ಕೆ ಇಲ್ಲವೆನ್ನಬಹುದು; ಇದ್ದರೂ ನಮಗೆ ಅಂಥ ಕಾವ್ಯಗಳು ಇನ್ನೂ ದೊರೆತಿಲ್ಲ. ಮುಂದೆ ಬಂದ ಪ್ರೌಢ ಸಾಹಿತ್ಯ ಸಂಪ್ರದಾಯಕ್ಕೆ ತಕ್ಕ ನೆಲೆಗಟ್ಟು ಆ ಕಾಲದಲ್ಲಿ ಸ್ಥಾಪಿತವಾಯಿತು. ಕನ್ನಡದ ಆದಿ ಮಹಾಕವಿ ಎನ್ನಿಸಿಕೊಂಡ ಪಂಪನ ಪ್ರತಿಭೆ 'ಮುನ್ನಿನ ಕಬ್ಬಿಲ್ಲಮೆಮನಿಕ್ಕಿ ಮೆಟ್ಟು'ವಂತೆ ವಿಕಾಸಗೊಳ್ಳಲು ತಕ್ಕ ಹಿನ್ನಲೆಯನ್ನು ಅದು ಕಲ್ಪಿಸಿಕೊಟ್ಟಿತು.

ಕನ್ನಡ ಭಾಷೆಯ ಸಾಧ್ಯತೆಯನ್ನು ಸೂರೆಮಾಡಿದ ಮಹಾಕವಿಗಳಲ್ಲಿ ಅಗ್ರಮನ್ನಣೆಗೆ ಪಾತ್ರನಾಗುವ ಪಂಪ ಮರೆಯಲಾಗದ ಒಂದು ಸಂಪ್ರದಾಯವನ್ನು ನಿರ್ಮಿಸಿದ. ಈ ಸಂಪ್ರದಾಯದ ಮಾರ್ಗದಲ್ಲಿಯೇ ಮುನ್ನಡೆದು ಸುಪ್ರಸಿದ್ಧರಾದ ಕವಿಗಳಲ್ಲಿ ರನ್ನ, ನಾಗವರ್ಮ ಮತ್ತು ನಾಗಚಂದ್ರ ಮುಂತಾದವರು ಮುಖ್ಯರು. ಕಾವ್ಯದ ವಸ್ತುವನ್ನು ಲೌಕಿಕ ಆಗಮಿಕ ಎಂದು ವಿಭಾಗಿಸಿ ಸಾಹಿತ್ಯ ನಿರ್ಮಾಣ ಮಾಡಿದ ಪಂಪನ ಈ ಚಂಪೂ ಸಂಪ್ರದಾಯ ಸುಮಾರು ಎರಡೂವರೆ ಶತಮಾನಗಳವರೆಗೆ ಕನ್ನಡದ ಕಾವ್ಯ ಕ್ಷೇತ್ರದಲ್ಲಿ ತನ್ನ ಪ್ರಭಾವವನ್ನು ಉಳಿಸಿಕೊಂಡು ಬಂದಿತು. ಮುಂದೆ ಹನ್ನೆರಡನೆಯ ಶತಕದ ಆದಿಭಾಗದಲ್ಲಿ ಕನ್ನಡ ನಾಡಿನಲ್ಲುಂಟಾದ ಧಾರ್ಮಿಕ ಜಾಗೃತಿ ಹಾಗೂ ತತ್ಪರಿಣಾಮವಾಗಿ ಬದಲಾದ ಯುಗ ಮೌಲ್ಯಗಳು, ಸಾಹಿತ್ಯ ಕ್ಷೇತ್ರದಲ್ಲಿ ಅದ್ಭುತವಾಗಿ ಮಿಂಚಿನ ಪರಿವರ್ತನೆಗೆ ಕಾರಣವಾದವು. ಅಲ್ಲಿಯವರೆಗೆ ಕಾವ್ಯಸೃಷ್ಟಿಯ ಸ್ಫೂರ್ತಿ ಕೇಂದ್ರವಾಗಿದ್ದ ವೀರರಸದ ಸ್ಥಾನದಲ್ಲಿ ಭಕ್ತಿರಸದ ಪ್ರವೇಶವಾಯಿತು. ಬೌದ್ಧ ಧರ್ಮ ಹಾಗೂ ಜೈನ ಧರ್ಮಗಳ ದಾಳಿಯಿಂದ ಮತ್ತು ಶುಷ್ಕವಾದ ಸಂಪ್ರದಾಯ ಭರದಿಂದ ಶಿಥಿಲವಾಗಿ ಜನತೆಯನ್ನು ಶೋಷಿಸುತ್ತಿದ್ದ ವೈದಿಕ ಧರ್ಮಕ್ಕೆ ಉಗ್ರವಾದ ಪ್ರತಿಭಟನಾ ರೂಪವಾಗಿ ತಲೆ ಎತ್ತಿದ ವೀರಶೈವ ಧರ್ಮವು ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ ಮುಂತಾದ ಶಿವಶರಣರ ನೇತೃತ್ವದಲ್ಲಿ ಒಂದು ಸ್ವತಂತ್ರ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಿಕೊಳ್ಳಲು ಅನುವಾಯಿತು. ಆದ್ದರಿಂದ ವಚನ ಸಾಹಿತ್ಯದ ಸಂಪ್ರದಾಯ ಹಿಂದಿನ ಸಾಹಿತ್ಯ ಪರಂಪರೆಯಿಂದ ತೀವ್ರ ಭಿನ್ನವಾಗಿರುವುದು ಅನಿವಾರ್ಯವಾಯಿತು. ಸಾಹಿತ್ಯ, ಧರ್ಮ ಪ್ರಚಾರದ ಅಂಗವಾಗಿ ಬಂದಕಾರಣ ಭಾಷೆ ಆಡುನುಡಿಗೆ ಸಮೀಪಿಸಲಾಯಿತು. ವಚನಗಳ ಮೂಲಕ ಮೊತ್ತ ಮೊದಲಿಗೆ ಅಚ್ಚಗನ್ನಡ ಭಾಷೆಯ ಕಸುವು ಎಂಥದೆಂಬುದರ ಅರಿವು ಸಾಹಿತ್ಯ ಕ್ಷೇತ್ರದಲ್ಲಾಯಿತು. ಪ್ರತಿಕೂಲ ಪರಿಸ್ಥಿತಿಯಲ್ಲಿ ಸೆಣಸಿ ಬದುಕಬೇಕಾಗಿದ್ದ ಹೊಸಪಂಥವೊಂದು ನೆಲೆಗೊಳ್ಳಬೇಕಾದರೆ ಇರಬೇಕಾದ ಸಾಮರ್ಥ್ಯ, ಕೆಚ್ಚು ಹಾಗೂ ಹಂಬಲವನ್ನು ನಾವು ಅಲ್ಲಿ ಕಾಣಬಹುದು. ಅಲ್ಲದೆ, ವಚನಕಾರರೆಲ್ಲರೂ ಸಹ ಶ್ರೇಷ್ಠ ಅನುಭವಿಗಳೂ ಆಗಿದ್ದುದರ ಪರಿಣಾಮವಾಗಿ ಅವರ ವ್ಯಕ್ತಿತ್ವದ ಉನ್ನತಿಯ ನಿಚ್ಚಳವಾದ ಪ್ರಭಾವ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆಯಿತು. 'ಮಾತೆಂಬುದು

ಜ್ಯೋತಿರ್ಲಿಂಗ' ಎಂಬ ಉಕ್ತಿಗೆ ಪ್ರಯೋಗದಂತಿವೆ. ಅವರ ವಚನಗಳು.

ತೀವ್ರವೆನ್ನಬಹುದಾದ ಧಾರ್ಮಿಕನಿಷ್ಠೆ ಹಾಗೂ ಅನ್ಯ ಮತ ದೂಷಣೆಯನ್ನು ವಚನಕಾರರೆಲ್ಲರಲ್ಲಿಯೂ ನಾವು ಕಾಣ ಬಹುದಾದರೂ ಅಂದಿನ ದೇಶಕಾಲಗಳ ಹಿನ್ನಲೆಯಲ್ಲಿ ಅದು ಅಪರಿಹಾರ್ಯವೆನ್ನಬಹುದು. ಆದರೆ ಪ್ರಭುದೇವ ಮತ್ತು ಅಕ್ಕಮಹಾದೇವಿಯ ವಚನಗಳು ಈ ಮಾತಿಗೆ ಅಪವಾದ ಗಳಾಗಿ ನಿಲ್ಲುತ್ತವೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ವಚನ ಕಾರರಿಂದಾಗಿ ಒಂದು ಭಾಷೆ ಪಡೆಯಬಹುದಾದ ಪರಮ ಸಾರ್ಥಕ ಸ್ಥಿತಿಯನ್ನು ಮುಟ್ಟಿತು ಎಂದರೆ ತಪ್ಪಾಗಲಾರದು.

ಹನ್ನೆರಡನೆಯ ಶತಮಾನದ ಅಂತ್ಯ ಭಾಗದಲ್ಲೂ ನಡೆದಿರ ಬಹುದಾದ ಕಲ್ಯಾಣದ ಕ್ರಾಂತಿಯಿಂದಾಗಿ, ಶಿವಶರಣರು ತಾವು ಸ್ಥಾಪಿಸಿದ ಅನುಭವಗೋಷ್ಠಿ ತಮ್ಮೆದುರಿಗೇ ಜರ್ಝರಿತ ವಾಗುತ್ತಿರುವ ದುರಂತ ಸನ್ನಿವೇಶವನ್ನು ಎದುರಿಸಬೇಕಾ ಯಿತು. ಧಾರ್ಮಿಕ ವಾದ ಅಲ್ಲೋಲಕಲ್ಲೋಲ ಪರಿಸ್ಥಿ ತಿಯ ಜೊತೆಗೆ ಅಂದಿನ ರಾಜಕೀಯ ಅಸ್ಥಿರತೆಯೂ ಸೇರಿ ಕೊಂಡು ಸಾಹಿತ್ಯದ ಅಭಿವೃದ್ಧಿ ಕುಂಠಿತವಾದಂತೆ ಕಂಡು ಬರುತ್ತದೆ. ಇಡೀ ವಾತಾವರಣದಲ್ಲಿಯೇ ಒಂದು ಬಗೆಯ ಮಬ್ಬು ಕವಿದಿದ್ದ ಆ ಕಾಲದಲ್ಲೂ ಸಾಹಿತ್ಯಕ್ಕೆ ಮತ್ತೊಮ್ಮೆ ನವಚೇತನವನ್ನು ತುಂಬಿದ ಶ್ರೇಯಸ್ಸು ಹರಿ ಹರನದು. ಆಗತಾನೇ ಆಗಿಹೋದ ಧಾರ್ಮಿಕ ಜಾಗೃತಿಯ ಸ್ಫೂರ್ತಿಯೇ ಅವನ ಸಾಹಿತ್ಯ ನಿರ್ಮಿತಿಯ ಹಿನ್ನೆಲೆ. ಪಂಪ ನಂತೆ ಹರಿಹರನೂ ಕೂಡ ಕನ್ನಡ ಸಾಹಿತ್ಯದಲ್ಲಿ ಒಂದು ಪರಂಪರೆಯನ್ನು ಕಲ್ಪಿಸಿದ ಮಹಾಕವಿ. ಮುಂದೆ ಬಂದ ವೀರಶೈವ ಕವಿಗಳೆಲ್ಲ ಆತ ಹಾಕಿದ ಗೆರೆಯನ್ನು ದಾಟದೆ ಕೃತಿ ರಚನೆ ಮಾಡಿದ್ದಾರೆ.

'ಮನುಜರ ಮೇಲೆ, ಸಾವವರ ಮೇಲೆ ತನತನಗಿಂದ್ರ ಚಂದ್ರ ಬಲಿದಧೀಚಿಯೆಂದು ಪೊಗಳ್ದು ಕೆಡಬೇಡೆಲೆ ಮಾನವ, ನೀನಹರ್ನಿಶಂ ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ'—ಎಂಬುದು ಹರಿಹರ ಕಾವ್ಯಪರಂಪರೆಯ ದಿಕ್ಸೂಚಿಯಾಗಿ ಮುಂದೆ ಪರಿಣಮಿಸಿತು. ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾ ಕಲ್ಯಾಣ ಮತ್ತು ನೂರಕ್ಕೂ ಮಿಗಿಲಾಗಿರುವ 'ಶಿವಶರಣರ ರಗಳೆಗಳು' ಹರಿಹರನ ಕಾವ್ಯನಿರ್ಮಿತಿಯ ವಿಸ್ತಾರವಾದ ಹರಹನ್ನು ಸೂಚಿಸುವುದಾದರೂ ಅವನ ಕೀರ್ತಿ ಚಿರಸ್ಥಾಯಿ ಯಾಗಿ ನಿಂತಿರುವುದು ಶಿವಶರಣರ ರಗಳೆಗಳಿಂದ. ಅಲ್ಲದೆ ರಗಳೆಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮನ್ನಣೆಯ ಸ್ಥಾನ ವನ್ನು ದೊರಕಿಸಿ ಕೊಟ್ಟವನೂ ಹರಿಹರ. ಒಟ್ಟಾರೆ ಅವನೆಲ್ಲ ಕೃತಿಗಳಿಗೂ ನಿರ್ಭರವಾದ ಭಕ್ತಿ ಹಾಗೂ ಅದಮ್ಯವಾದ ಉತ್ಸಾಹಗಳೇ ಸ್ಥಾಯಿಯಾಗಿ ಪರಿಣಮಿಸಿವೆ. ಅವನ ಕಾವ್ಯ ಕ್ರಿಯೆಯಲ್ಲಿ ಕಂಡುಬರುವ ನಿಚ್ಚಳವಾದ ವ್ಯಕ್ತಿತ್ವ ಪರಿಪಾಕ ಹಾಗೂ ಕಡಿವಾಣವಿಲ್ಲವೆಂದೆನಿಸಬಹುದಾದ ಸಂಭ್ರಮ ಹಾಗೂ ಭಾವನಿರ್ಭರತೆಗಳು ವಿಸ್ಮಯವನ್ನು ಹುಟ್ಟಿಸು ವಂಥವು. ಹೀಗೆ ಭಾಷೆ, ವಸ್ತು, ಕಾವ್ಯೋದ್ದೇಶ ಮುಂತಾದ ಎಲ್ಲ ದೃಷ್ಟಿಗಳಿಂದಲೂ ಸ್ವತಂತ್ರ ಪರಂಪರೆಯೊಂದರ ನಿರ್ಮಾತೃ ಎಂಬ ಕಾರಣದಿಂದ ಮಾತ್ರವಲ್ಲದೆ ವ್ಯಕ್ತಿವಿಶಿಷ್ಟತೆ ಯಿಂದಲೂ ಆತನ ಸ್ಥಾನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಿರಿದಾದುದು ಎಂಬುದರಲ್ಲಿ ಸಂದೇಹವಿಲ್ಲ.

ಹರಿಹರನ ಸೋದರಳಿಯನೂ ಶಿಷ್ಯನೂ ಆಗಿದ್ದ ರಾಘ ವಾಂಕ ಕನ್ನಡದ ಪ್ರತಿಭಾವಂತ ಕವಿಗಳಲ್ಲಿ ಗಣನೀಯನಾದ ವ್ಯಕ್ತಿ; ಹರಿಹರನ ಮಾರ್ಗದಲ್ಲಿ ಅಡಿಯಿಟ್ಟ ಪ್ರಥಮ ಶಿಷ್ಯ ಹಾಗೂ ಪ್ರಯೋಗಶೀಲನಾದ ಸಮರ್ಥ ಕವಿ. ಕನ್ನಡ ಸಾಹಿ ತ್ಯದಲ್ಲಿ ಆತ ಷಟ್ಪದಿಯ ಆದ್ಯ ಪ್ರವರ್ತಕನಾಗಿ ನಿಲ್ಲುತ್ತಾನೆ; ಕುಮಾರವ್ಯಾಸನನ್ನು ಬಿಟ್ಟರೆ ಷಟ್ಪದಿಯನ್ನು ಇವನಷ್ಟು ಚಮತ್ಕಾರವಾಗಿ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬಳಸಿ ಕೊಂಡ ಇನ್ನೊಬ್ಬ ಕನ್ನಡ ಕವಿ ಇಲ್ಲವೆಂದರೂ ತಡೆಯು ತ್ತದೆ. ಸಂಪ್ರದಾಯದಿಂದ ಭಿನ್ನವೆನಿಸಬಹುದಾದ ಸ್ವತಂತ್ರ ದೃಷ್ಟಿಯುಳ್ಳ ರಾಘವಾಂಕನ ಕಾವ್ಯಸಿದ್ಧಿಯ ಹೆಗ್ಗುರುತು 'ಹರಿಶ್ಚಂದ್ರ ಕಾವ್ಯ.' ಈ ಕಾವ್ಯ ಧಾರ್ಮಿಕ ಶ್ರದ್ಧೆಯುಳ್ಳ ಮುಂದಿನ ವೀರಶೈವ ಕವಿಗಳ ವಿಶೇಷ ಮನ್ನಣೆಗೆ ಪಾತ್ರವಾಗದಿದ್ದರೂ ಕನ್ನಡ ಸಾಹಿತ್ಯದಲ್ಲಿಯೇ ಬೆರಳೆಣಿಕೆ ಯಲ್ಲಿ ಹೆಸರಿಸಬಹುದಾದ ಮಹಾ ಕಾವ್ಯಗಳಲ್ಲಿ ಒಂದು. ಉಳಿದ ಕೃತಿಗಳಲ್ಲಿ 'ಸಿದ್ಧರಾಮ ಪುರಾಣ'ದ ಹೊರತು ಮಿಕ್ಕೆಲ್ಲವೂ 'ಮತೀಯ ಪ್ರಜ್ಞೆ'ಗೆ ಹೆಚ್ಚು ರುಚಿಸುವ ಮಾದ ರಿಗೆ ಸೇರಿದ್ದು, ರಾಘವಾಂಕನಂಥ ಪ್ರಯೋಗ ಪರಿಣತ ಮತಿಯೂ ಸಂಪ್ರದಾಯದ ಎದುರು ತತ್ತರಿಸಿಬಿದ್ದ ದುರಂತ ಕತೆಗೆ ಸಾಕ್ಷಿಯಾಗಿದೆ.

ರಾಘವಾಂಕನು ಕಾವ್ಯರಚನೆ ಮಾಡಿದ ಸರಿಸುಮಾರಿ ನಲ್ಲಿಯೇ ಪ್ರಸಿದ್ಧಿಗೆ ಬಂದ ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಸೋಮರಾಜ ಮುಂತಾದ ವೀರಶೈವ ಕವಿ ಗಳನ್ನೂ ರುದ್ರಭಟ್ಟ, ದೇವಕವಿ ಮುಂತಾದ ಬ್ರಾಹ್ಮಣ ಕವಿ ಗಳನ್ನು ಕೇವಲ ಹೆಸರಿಸಿ ಕೈ ಬಿಡಬಹುದು. ಹದಿಮೂರನೇ ಶತಮಾನದಲ್ಲಿ ಸಹ ಹರಿಹರ ರಾಘವಾಂಕರಂಥ ಶ್ರೇಷ್ಠ ಕವಿ ಗಳನ್ನು ಬಿಟ್ಟರೆ ಸಂಖ್ಯೆಯ ದೃಷ್ಟಿಯಿಂದ ಹೆಚ್ಚು ಪ್ರಮಾಣ

ದಲ್ಲಿ ಸಾಹಿತ್ಯ ಕೃಷಿಮಾಡಿದವರು ಜೈನ ಕವಿಗಳೇ ಎಂಬ ಅಂಶವನ್ನು ಇಲ್ಲಿ ಮರೆಯುವಂತಿಲ್ಲ. ಅವರಲ್ಲಿ ನೇಮಿಚಂದ್ರ, ಅಗ್ಗಳ, ಬಂಧುವರ್ಮ, ಪಾರ್ಶ್ವಪಂಡಿತ, ಜನ್ನ, ಕಮಲಭವ, ಆಂಡಯ್ಯ, ಮಲ್ಲಿಕಾರ್ಜುನ, ಕೇಶಿರಾಜ, ಕುಮುದೇಂದು, ರಟ್ಟಕವಿ, ಹಸ್ತಿಮಲ್ಲ, ನಾಗರಾಜ, ಮಂಗರಾಜ, ಆಯಕ ದರ್ಮ ಮುಂತಾದವರನ್ನು ಹೆಸರಿಸಬಹುದು. ನೇಮಿಚಂದ್ರ, ಜನ್ನ ಮತ್ತು ಆಂಡಯ್ಯ—ಈ ಮೂವರು ವಿಶೇಷವಾಗಿ ಗಮನಿಸಬಹುದಾದ ಕವಿಗಳೆನ್ನಬಹುದು.

ಅದರಲ್ಲಿ ಜನ್ನ, ತನ್ನ ವ್ಯಕ್ತಿತ್ವ ವಿಶಿಷ್ಟತೆಯಿಂದಾಗಿ ಹೆಚ್ಚು ಮನ್ನಣೆಯನ್ನು ಪಡೆಯಬಹುದಾದ ಪ್ರತಿಭಾವಂತ ಕವಿ. ಅವನ ಎರಡು ಕಾವ್ಯಗಳಾದ ಅನಂತನಾಥ ಪುರಾಣ ಹಾಗೂ ಯಶೋಧರ ಚರಿತೆಗಳಲ್ಲಿ ಒಂದು ಚಂಪೂ ಕೃತಿಯಾಗಿದ್ದರೆ ಮತ್ತೊಂದು ಕಂದವೃತ್ತಗಳಲ್ಲಿ ರಚಿತವಾಗಿದೆ. ಅವನ ಕಾವ್ಯೋದ್ದೇಶದಲ್ಲಿ ಧಾರ್ಮಿಕ ದೃಷ್ಟಿಯೇ ಪ್ರಧಾನ, ಉಳಿದದ್ದು ಗೌಣ—ಎಂದು ಜನ್ನನೇ ಹೇಳಿಕೊಂಡಿದ್ದರೂ ಸಹ ಅವನೆರಡು ಕಾವ್ಯಗಳಲ್ಲಿಯೂ ಹೆಣ್ಣು ಗಂಡಿನ ಪ್ರೇಮಕಾಮಗಳ ಆಳವಾದ ಹಾಗೂ ಮೂಲಕ್ಕೆ ಕೈ ಹಾಕುವ ವಿಶ್ಲೇಷಕ ಪ್ರವೃತ್ತಿಯೇ ಅವನ ಕವಿಕರ್ಮದ ರಹಸ್ಯವಾಗಿದೆ. ಅದು ಧರ್ಮವಿರುದ್ಧ ಮತ್ತು ದುರಂತಮುಖವಾದ ಕಾಮವೆನ್ನಿಸಬಹುದಾದರೂ ಅಲ್ಲಿ ಮಾನವನ ಮೂಲಭೂತ ಸ್ವಭಾವಗಳ ತಳಕ್ಕೇ ಪಾತಾಳ ಗರಡಿ ಹಾಕುವ ಸಾಹಸಪ್ರವೃತ್ತಿ ಇದೆ ಯಾದುದರಿಂದಲೇ ಜನ್ನನ ಕಾವ್ಯದ ವಸ್ತುದೃಷ್ಟಿ ಸರ್ವಕಾಲಿಕ ವೆನ್ನಿಸಿದೆ.

ಹದಿಮೂರು ಮತ್ತು ಹದಿನಾಲ್ಕನೇ ಶತಕದ ಕನ್ನಡ ಸಾಹಿತ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಶಾಸ್ತ್ರಪ್ರಧಾನ ಕೃತಿಗಳ ರಚನೆ. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ, ಕೇಶಿರಾಜನ ಶಬ್ದಮಣಿದರ್ಪಣ ಹಾಗೂ ಮಂಗರಾಜನ ಖಗೇಂದ್ರ ಮಣಿದರ್ಪಣ ಮುಂತಾದ ಉತ್ತಮ ಶಾಸ್ತ್ರ ಗ್ರಂಥಗಳ ರಚನೆ ಆಗ ಜೈನ ಕವಿಗಳಿಂದ ನಡೆಯಿತು. ಅದರಲ್ಲೂ ಕೇಶಿರಾಜನ ಶಬ್ದಮಣಿದರ್ಪಣ ಇಂದಿಗೂ ಪ್ರಮಾಣಭೂತವಾಗಿ ಉಳಿದುಬಂದಿರುವ ಹಳಗನ್ನಡ ವ್ಯಾಕರಣ. ಇನ್ನೂ ಶಾಸ್ತ್ರಕಾರರಲ್ಲಿ ರಟ್ಟಕವಿ, ನಾಗರಾಜ ಮತ್ತು ಆಯತವರ್ಮರು ಗಮನಿಸಬಹುದಾದವರು.

ನಡುಗನ್ನಡ ಯುಗದ ಅಂತ್ಯ ಹಾಗೂ ಸಂಕ್ರಮಣ ಕಾಲದ ಆರಂಭ ಎನ್ನಬಹುದಾದ ಮಧ್ಯಂತರ ಕಾಲದಲ್ಲಿ ಕುಮಾರವ್ಯಾಸ ಕನ್ನಡದ ನಾಯಕ ಕವಿಗಳಲ್ಲಿ ಯಾರಿಗೂ ದ್ವಿತೀಯನೆನ್ನಿಸಿಕೊಳ್ಳದ ಸರ್ವಂಕಷವಾದ ಪ್ರತಿಭೆಯುಳ್ಳ ಮಹಾಕವಿ. ಅವನ ಕಾವ್ಯದ ಔನ್ನತ್ಯ ಹಾಗೂ ರಸಪರಿಪಾಕದ ದೃಷ್ಟಿಯಿಂದ ಅವನೊಡನೆ ಹೋಲಿಕೆಗೆ ಅರ್ಹರಾದ ಕವಿಗಳು ಕನ್ನಡದಲ್ಲಿ ಪಂಪ ಮತ್ತು ಹರಿಹರರನ್ನು ಬಿಟ್ಟರೆ ಯಾರೂ ಇಲ್ಲವೆನ್ನಬಹುದಾಗಿದೆ. ಚಂಪೂ ಸಾಹಿತ್ಯಾಪ್ರಾಕಾರ ಪಂಪನಿಂದ ಧನ್ಯತೆಯ ಚರಮಸೀಮೆಯನ್ನು ಮುಟ್ಟಿದಂತೆ ಕುಮಾರವ್ಯಾಸನಿಂದ ಷಟ್ಪದಿ ಉದ್ಧಾರವಾಯಿತು. ಗದುಗಿನ ಭಾರತ ವಿಕ್ರಮಾರ್ಜುನ ವಿಜಯಕ್ಕೆ ಸಮಾನಕೃತಿ ಮಾತ್ರವಲ್ಲ ವಿಕ್ರಮಾರ್ಜುನ ವಿಜಯಕ್ಕಲ್ಲದೆ ಹಳಗನ್ನಡ ಮತ್ತಾವ ಕಾವ್ಯಕ್ಕೂ ಇಲ್ಲದ ಜನಪ್ರಿಯತೆಯನ್ನು ಗಳಿಸಿಕೊಂಡ ಮಹಾಕಾವ್ಯ. ಸಮಗ್ರ ಭಾರತವನ್ನು ಪಂಪನಂಥ ಕವಿ ನಿರೂಪಿಸಿದ ಬಳಿಕ ಅದೇ ವಸ್ತುವನ್ನಾರಿಸಿಕೊಂಡು ಅಷ್ಟೇ ಉನ್ನತವಾದ ಮಹಾಕೃತಿಯನ್ನು ರಚಿಸಿದ ಕೀರ್ತಿ ಕುಮಾರವ್ಯಾಸನದಾಗಿದೆ. ಬಹುಶಃ ಅವರಿಬ್ಬರಲ್ಲಿಯೂ ಮಹಾಭಾರತವನ್ನು ಕುರಿತು ಇದ್ದ ಭಿನ್ನದೃಷ್ಟಿಕೋಳದೇ ಇಂಥ ಒಂದು ವಿಸ್ಮಯಕ್ಕೆ ಅವಕಾಶ ಮಾಡಿಕೊಟ್ಟಿತೆನ್ನಬಹುದು. ಪಂಪ, ಭಾರತವನ್ನು ಲೌಕಿಕ ಕಾವ್ಯವೆನ್ನುವ ದೃಷ್ಟಿಯಿಂದ ನೋಡಿದರೆ ಕುಮಾರವ್ಯಾಸನದು ಭಾಗವತ ದೃಷ್ಟಿ ಭಾರತ ಯುದ್ಧ ದೈವೀಶಕ್ತಿ ಮತ್ತು ಅಸುರೀಶಕ್ತಿಗಳ ನಡುವೆ ಆದ ಸಂಗ್ರಾಮ; ಈ ಸಂಗ್ರಾಮದ ಸೂತ್ರಧಾರ ಶ್ರೀಕೃಷ್ಣ; ಅವನೇ ಕಾವ್ಯ ನಾಯಕ-ಇದು ಕುಮಾರವ್ಯಾಸನ ಕಾವ್ಯದೃಷ್ಟಿ. ಆದುದರಿಂದಲೇ ಗದುಗಿನ ಭಾರತ, ಪಾತ್ರಸೃಷ್ಟಿ, ಸಂವಿಧಾನ, ಹಾಗೂ ಪ್ರಕರಣ ವಿನ್ಯಾಸ ಮುಂತಾಗಿ ಎಲ್ಲ ಬಗೆಯಿಂದಲೂ ಸ್ವತಂತ್ರವಾದ ಸರ್ವಗ್ರಾಹಿಯಾದ ಮಹಾಕಾವ್ಯವಾಗಿ ಪರಿಣಮಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕುಮಾರವ್ಯಾಸನ ರೂಪಕಶಕ್ತಿ ಬೆರಗುಬಿಡಿಸುವಂಥದು, ಬಸವಣ್ಣರವರನ್ನು ಬಿಟ್ಟರೆ ಈ ದಿಸೆಯಲ್ಲಿ ಅವನಿಗೆ ಹೊಯ್‌ಕೈಯ್ಯಾಗಿ ನಿಲ್ಲಬಲ್ಲವರು ವಿರಳವೇ ಎನ್ನಬಹುದು. ನೆನೆದ ಅರ್ಥವನ್ನು ಸ್ಫುರಿಸುವಂತೆ ಶಬ್ದದ ಜೀವಾಳವನ್ನೇ ಹಿಡಿದು ತೋರಿಸಬಲ್ಲ ಸಹಜ ಕವಿ ಆತನಾಗಿರುವುದರಿಂದಲೇ ಯಾವ ಕಾಲಕ್ಕೂ ಅವನ ಸ್ಥಾನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಭದ್ರವಾಗಿ ಉಳಿದಿದೆ.

ಹೀಗೆ ಸ್ಥೂಲವಾಗಿ ನಡುಗನ್ನಡ ಗಡಿಯನ್ನು ಹನ್ನೆರಡನೇ ಶತಮಾನದ ಆದಿಯಿಂದ ಹದಿನೈದನೇ ಶತಮಾನದವರೆಗೆ—ಎಂದು ಗುರಿಪಡಿಸಿದ ಬಳಿಕ ಈ ಯುಗದ ವೈಶಿಷ್ಟ್ಯಗಳೆನಿಸಿದ ಕೆಲವು ಅಂಶಗಳನ್ನು ಗಮನಿಸಬಹುದು.

ಪಂಪ ಸಂಪ್ರದಾಯದಲ್ಲಿ ಸಾಹಿತ್ಯವು ರಾಜಾಸ್ಥಾನದ ಮತ್ತು ಪಂಡಿತರ ಸೊತ್ತಾಗಿದ್ದರೆ ಹನ್ನೆರಡನೇ ಶತಮಾನ

ದಲ್ಲಿ ಸಾಹಿತ್ಯ ರಾಜಾಶ್ರಯು ಸಾಹಿತ್ಯಾಭಿವೃದ್ಧಿಗೆ ಅಗತ್ಯ ಎನ್ನುವ ಬದಲು ನರಸ್ತುತಿ ಅಪಮಾನಕರ ಎಂಬ ನಂಬಿಕೆ ತಲೆ ಎತ್ತಿತು. ಆ ಕಾಲದಲ್ಲಿ ಸಾಹಿತ್ಯದ ಸ್ಫೂರ್ತಿ ಕೇಂದ್ರ ವೀರ ರಸವಾಗಿದ್ದರೆ ಈಗ ಭಕ್ತಿರಸವಾಗಿ ಪರಿಣಮಿಸಿತು. ಭಾಷೆ ಯಲ್ಲಿ ದೇಶೀ ಶೈಲಿ ಹಾಗೂ ಸುಲಭ ಛಂದೋಲಯಗಳು ಜನಪ್ರಿಯತೆ ದೊರಕಿಸಿಕೊಂಡವು. ನಡುಗನ್ನಡ ಯುಗದಲ್ಲಿ ಕಾವ್ಯರಚನೆ ಮಾಡಿದ ಜೈನಕವಿಗಳು ಈ ಮಾತಿಗೆ ಅಪವಾದ ವಾಗಿ ಉಳಿಯಬಹುದಾದರೂ ಸಹ ಕುಮಾರವ್ಯಾಸನ ಬಳಿಕವು ಈ ದೇಸಿ ನಿಷ್ಠೆ ಹಾಗೂ ಜನಸಂಮುಖತೆ ಹೆಚ್ಚು ಪ್ರಿಯ ವಾಗಿ ಉಳಿದದ್ದು, ಈ ಯುಗ ಮುಂದಿನ ಸಾಹಿತ್ಯಕ್ಕೆ ಒದಗಿಸಿಕೊಟ್ಟ ಪ್ರೇರಣೆಯ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳ ಅಂಶವಾಗಿ ಪರಿಣಮಿಸಿದೆ.

ಅರ್ಥ

ವ್ಯರ್ಥವಾಯಿತುಯೆಂದು ಸುಳ್ಳೆಕಂಬನಿ ಮಿಡಿಸಿ
ಅನರ್ಥವೇ ಆಯ್ತೆಂದು ಗುಡುಗಿ ನಡುಕವ ಹಿಡಿಸಿ
ಬಂತು ಅರ್ಥವು ಮುಗುಳು ಮುಗುಳು ನಗುತ
ಅರ್ಥ ಮಾಡುವ ಮಂದಿ
ಅರ್ಥ ಹಚ್ಚುವ ಮಂದಿ
ಅರ್ಥವಾದವರಂತೆ ಗೋಣು ಹಾಕುವ ಮಂದಿ
ಮಿಕೀ ಮಿಕೀ ಮೊಕನೋಡಿ
ಕೂಗಿದರು "ಡಿಕ್ಶನರಿ ಲಗು ತಾ ಲಗು ತಾ"
ಶಬ್ದಕೋಶದಿ ಅವರ ಕಣ್ಣು ಹುಗಿದಿರುವಾಗ
ಅರ್ಥಹೇಳಿತು ನನ್ನ ಕಿವಿಯ ಜಗ್ಗಿ
"ದ್ವಂದ್ವಗಳ ದಾಂಪತ್ಯವೆಂತು ಬಲ್ಲೆಯ ಮಗನೆ ?
ಅಳದೆ, ನಡುಗದೆ, ನಗದೆ ತಿಳಕೊ ಹಿಗ್ಗಿ"
ಅರ್ಥವಾಗುವದೆನಗೆ ಈಗೀಗ ತುಸು ತುಸೂ
ಅಂಕಲಿಪಿ ಮಗ್ಗಿ !

ವಿ. ಜಿ. ಭಟ್ಟ

ಕನ್ನಡ ಸಾಹಿತ್ಯದ ಪಕ್ಷಿನೋಟ

ಹೊಸಗನ್ನಡ ಯುಗ

ಎಂ. ವಿ. ಸೀತಾರಾಮಯ್ಯ

ಸುಮಾರು ೧೫೦೦ ವರ್ಷಗಳ ಹರವುಳ್ಳ ಕನ್ನಡ ಸಾಹಿತ್ಯದಲ್ಲಿ ಹಳಗನ್ನಡ ಯುಗ, ನಡುಗನ್ನಡ ಯುಗ, ಹೊಸಗನ್ನಡ ಯುಗ ಎಂದು ಸ್ಥೂಲವಾಗಿ ಮೂರು ಅವಸ್ಥಾಭೇದಗಳನ್ನು ಗುರುತಿಸಬಹುದು. ಭಾಷೆಯ ದೃಷ್ಟಿಯಿಂದ ಈ ಬಗೆಯ ವಿಭಜನೆ ಅಷ್ಟು ಸಮಂಜಸವಾಗಿ ಕಾಣದು. ೯ನೆಯ ಶತಮಾನದ 'ಕವಿರಾಜಮಾರ್ಗ'ದಲ್ಲಿಯೆ ಹಳಗನ್ನಡದ ಉಲ್ಲೇಖವಿದೆ. 'ಪಲಗನ್ನಡದೆ ಪುದುಂಗೊಳೆ ಕೊೞೆ ಸಕ್ಕದಮಂ ತಗುಳ್ಚಿ' ಬರೆಯುವ ರೀತಿಯನ್ನು ಅಲ್ಲಗಳೆಯುವ ಪದ್ಯವೊಂದು ೧೩ನೆಯ ಶತಮಾನದ ಕೇಶಿರಾಜನ 'ಶಬ್ದಮಣಿದರ್ಪಣ'ದಲ್ಲಿ ಉದಾಹೃತವಾಗಿದೆ. ಈತನಿಗೂ ಹಿಂದೆ ನಯಸೇನನು 'ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂತಿಸಿ, ಕೂಡಲಾರದಕ್ಕಟ ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ' ಎಂದು ಶುದ್ಧ ಕನ್ನಡದಲ್ಲಿ ಬರೆಯಲಾರದ ಸಂಸ್ಕೃತ ವಿಮೋಹಿಗಳನ್ನು ಹಳಿದಿದ್ದಾನೆ. ಎಂದಮೇಲೆ, ಬಹು ಹಿಂದೆಯೇ ಕವಿಗಳು ತಮ್ಮ ಕಾಲದ ಕನ್ನಡವನ್ನು ಹೊಸಗನ್ನಡ ಎಂದು ಭಾವಿಸಿದ್ದರು. ಅಲ್ಲದೆ, ಇಂದಿನ ಹೊಸಗನ್ನಡದ ಯುಗದಲ್ಲೂ ಮುದ್ದಣನ 'ರಾಮಾಶ್ವಮೇಧ', ಮುಳಿಯ ತಿಮ್ಮಪ್ಪಯ್ಯನವರ 'ಸೊಬಗಿನ ಬಳ್ಳಿ', ಶ್ರೀ'ಯವರ 'ಅಶ್ವತ್ಥಾಮನ್', ಕೆ. ವಿ. ರಾಘವಾಚಾರ್ಯರ 'ಅಂತಿಗೊನೆ', ಟಿ. ಕೇಶವಭಟ್ಟರ 'ಸತ್ತ್ವಾವಲೋಕನಂ', ಕೊಳಂಬೆ ಪುಟ್ಟಣ್ಣಗೌಡರ 'ಕಾಲೂರಚೆಲುವೆ' ತಮ್ಮ ತಮ್ಮ ರೀತಿಯಲ್ಲಿ ಹಳಗನ್ನಡದ ಮಾಸದ ಹೊಸತನವನ್ನು ನಿಚ್ಚಳವಾಗಿ ಬೆಳಗುತ್ತಿವೆ; ಒಬ್ಬಿಬ್ಬರನ್ನು ಬಿಟ್ಟು, ಕುವೆಂಪು ಮುಂತಾದ ಹೊಸಕನ್ನಡ ಕವಿಗಳ ಕವಿತೆಯಲ್ಲಿ ನಡುಗನ್ನಡದ ವರ್ಣಚ್ಛಾಯೆಯೇ ವಿಜೃಂಭಿಸುತ್ತಿದೆ. 'ದಯೆಯೇ ಧರ್ಮದ ಮೂಲವಯ್ಯ', 'ಈಸಬೇಕು ಇದ್ದು ಜೈಸಬೇಕು' ಎಂಬಂಥ ನುಡಿನಡೆ ಕಿವಿಗೆ ಬಿದ್ದಾಗ, ಕನ್ನಡದ ಅಚ್ಚತನ ಅಂದಿಗೂ ಇಂದಿಗೂ ಒಂದೇ ಎನ್ನಬೇಕಾಗುತ್ತದೆ. ಆದ್ದರಿಂದ, ಕನ್ನಡ ಸಾಹಿತ್ಯದ ಹೊಸತನವನ್ನು, ಆಧುನಿಕತೆಯನ್ನು, ಭಾಷಾ ಸ್ವರೂಪದಿಂದ ಮಾತ್ರ ಗುರುತಿಸಲಾಗದು; ಬೇರೆಯ ಲಕ್ಷಣಗಳಿಂದಲೇ ಗುರುತಿಸಬೇಕು.

ಹೊಸಗನ್ನಡ ಸಾಹಿತ್ಯದಲ್ಲಿ ಯಾರಿಗಾದರೂ ಮೇಲುನೋಟಕ್ಕೆ ಕಾಣುವ ಲಕ್ಷಣ ಎಂದರೆ, ಅದರ ಗದ್ಯಶೈಲಿ. ಹಳಗನ್ನಡ ನಡುಗನ್ನಡ ಯುಗಗಳಲ್ಲಿ ಗದ್ಯದ ಬರವಣಿಗೆ ಇರಲಿಲ್ಲವೆಂದಲ್ಲ. ಚಂಪೂ ಕಾವ್ಯಗಳಲ್ಲಿ, ಹರಿಹರನ ಒಂದೆರಡು ರಗಳೆಗಳಲ್ಲಿ ಗದ್ಯ ಪದ್ಯದೊಂದಿಗೆ ಸೆಣಸಿದೆ; ವಚನ ಸಾಹಿತ್ಯದಲ್ಲಿ ಗದ್ಯದ್ದೇ ಸಾರ್ವಭೌಮತ್ವ. ಆದರೂ ಶಾಸ್ತ್ರ ಗ್ರಂಥಗಳನ್ನು ಕೂಡ ಪದ್ಯದಲ್ಲಿ ಬರೆಯುತ್ತಿದ್ದ ಆ ಯುಗಗಳ ಲಕ್ಷಣಗಳಲ್ಲಿ ಗದ್ಯ ಶೈಲಿ ಸೇರುವುದಿಲ್ಲ. ಹೊಸಗನ್ನಡ ಯುಗವನ್ನು ಪರ್ಯಾಯವಾಗಿ ಗದ್ಯದ ಯುಗ ಎಂದೂ ಕರೆಯಬಹುದು. ಗದ್ಯದ ವ್ಯಾಪಕವಾದ ಬಳಕೆ ಮೈಸೂರ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಅವರ ಹೆಸರಿನಲ್ಲಿ ರಚನೆಯಾಗಿರುವ ಸುಮಾರು ೫೦ ಗ್ರಂಥಗಳಲ್ಲಿ 'ವಾಣೀವಿಲಾಸ ಭಾರತ'ವು ಅಂದಿಗೆ ಜನಪ್ರಿಯವಾಗಿ, ಧಾರ್ಮಿಕ ಗ್ರಂಥಗಳನ್ನು ಗದ್ಯದಲ್ಲಿ ಬರೆಯುವ ಸಂಪ್ರದಾಯಕ್ಕೆ ಶ್ರೀಕಾರ ಹಾಕಿತು. ಈ ಸಂಪ್ರದಾಯವನ್ನು ಅನುಸರಿಸಿ, ೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ದೇವಶಿಖಾಮಣಿ ಅಳಸಿಂಗಾಚಾರ್ಯರು ಸಂಸ್ಕೃತದಿಂದ ಅನುವಾದಿಸಿದ ರಾಮಾಯಣ, ಭಾರತ, ಭಾಗವತಗಳು ಇಂದಿಗೂ ಜನಪ್ರಿಯವಾಗಿವೆ. ಈ ಸಂಪ್ರದಾಯ ಇನ್ನೂ ಮುಂದುವರಿಯುತ್ತಿದೆ ಎನ್ನುವುದಕ್ಕೆ, ಕಾಲಕ್ಕೆ ತಕ್ಕ ಸಹಜ ಸುಂದರ ಶೈಲಿಯಲ್ಲಿ ಎ. ಆರ್. ಕೃಷ್ಣಶಾಸ್ತ್ರಿಗಳು ಬರೆದಿರುವ 'ವಚನ ಭಾರತ', ಕುವೆಂಪು ರಚಿಸಿರುವ 'ಜನಪ್ರಿಯ ರಾಮಾಯಣ' ಇವು ನಿದರ್ಶನಗಳು. ಆರಂಭ ಕಾಲದಲ್ಲಿ ಕನ್ನಡ ಗದ್ಯವನ್ನು ಹೊಸತಾಗಿಸಲು ಹವಣಿಸಿದ ಮೊದಲ ಕೃತಿಗಳಲ್ಲಿ ಪ್ರಮುಖ ಸ್ಥಾನ ಮುಮ್ಮಡಿ ಕೃಷ್ಣರಾಜರ ಆಸ್ಥಾನದ ಕೆಂಪುನಾರಾಯಣನ 'ಮುದ್ರಾ ಮಂಜೂಷ'ಕ್ಕೆ ಸಲ್ಲಬೇಕು. ಇದು ಪಾಶ್ಚಾತ್ಯ ಪ್ರಭಾವದ ಸೋಂಕಿಲ್ಲದ ಪ್ರಪ್ರಥಮ ಕನ್ನಡ ಕಾದಂಬರಿ ಎಂಬ ಕೀರ್ತಿಗೂ ಪಾತ್ರವಾಗಿದೆ. ಬಿ. ವೆಂಕಟಾಚಾರ್ಯರ ಕಾದಂಬರಿಗಳ ಮೂಲಕ ಪರೋಕ್ಷವಾಗಿ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾದ ಮುದ್ದಣನು ಹೊಸಗನ್ನಡ ಯುಗದ

ಹೊಸ್ತಿಲಮೇಲೆ ನಿಂತು, ತನ್ನ 'ರಾಮಾಶ್ವಮೇಧ'ದಲ್ಲಿ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಗದ್ಯದ ಗುಡಿಯನ್ನು ಎತ್ತಿಹಿಡಿದನು. ಹೀಗೆ ಬೆಳೆದುಬಂದ ಕನ್ನಡ ಗದ್ಯದಲ್ಲಿ ಇಂದು ಕಂಡುಬರುತ್ತಿರುವ ಗತಿಗಮಕ ವಿಲಾಸಗಳ ವೈವಿಧ್ಯಕ್ಕೆ ಇಂಗ್ಲಿಷು ಗದ್ಯ ಸಾಹಿತ್ಯದ ಪ್ರಭಾವವೂ ಸ್ವಲ್ಪ ಮಟ್ಟಿಗೆ ಕಾರಣ.

ಆದರೂ ಹೊಸಗನ್ನಡ ಸಾಹಿತ್ಯದ ಹೊಸತನ ಎದ್ದು ಕಾಣುವುದು. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಅದರಲ್ಲಿ ಮೂಡಿ ಬೆಳೆದ ವಿವಿಧ ಪ್ರಕಾರಗಳಲ್ಲಿ. ಹಳಗನ್ನಡ ನಡುಗನ್ನಡ ಸಾಹಿತ್ಯಗಳಲ್ಲಿ ಕಂಡುಬರದ ಭಾವಗೀತೆ, ಕಾದಂಬರಿ, ಸಣ್ಣ ಕಥೆ, ನಾಟಕ, ಲಲಿತ ಪ್ರಬಂಧ, ಹರಟೆ, ಜೀವನ ಚರಿತೆ—ಪತ್ರಿಕಾ ಲೇಖನ—ಇನ್ನೆಲ್ಲ ಈ ಶತಮಾನದ ಪ್ರಾರಂಭದಿಂದ ಪಡುವಣ ಗಾಳಿ ಬೀಸತೊಡಗಿದ ಮೇಲೆ ಕನ್ನಡ ಸಾಹಿತ್ಯ ವೃಕ್ಷದಲ್ಲಿ ಬಿಟ್ಟು, ಬಿಡುತ್ತಿರುವ, ಹೊಸ ಕೆಂಪಿನ ಹೊಸರುಚಿಯ ಹೂ ಹಣ್ಣುಗಳು.

ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಬಿ. ವೆಂಕಟಚಾರ್ಯರು ಬಂಕಿಮಚಂದ್ರರ ಬಂಗಾಳಿ ಕಾದಂಬರಿಗಳನ್ನೂ ಗಳಗನಾಥರು ಹರಿನಾರಾಯಣ ಆಪ್ಟೆಯವರ ಮರಾಠಿ ಕಾದಂಬರಿಗಳನ್ನೂ ವಿಪುಲ ಸಂಖ್ಯೆಯಲ್ಲಿ ಅನುವಾದ ಮಾಡಿದರಲ್ಲದೆ, ಹಲಕೆಲವು ಸ್ವತಂತ್ರ ಕಾದಂಬರಿಗಳನ್ನೂ ಬರೆದರು. ಇವುಗಳಲ್ಲಿ ಬಹು ಸಂಖ್ಯೆಯವು ಸರ್ ವಾಲ್ಟರ್ ಸ್ಕಾಟ್‌ನ ಕಾದಂಬರಿಗಳ ಮಾದರಿಯಲ್ಲಿ ಗತಕಾಲದ ಐತಿಹಾಸಿಕ ಹಿನ್ನೆಲೆಯನ್ನಿಟ್ಟುಕೊಂಡು ಬರೆದ ವೀರರಮ್ಯ ಕಾದಂಬರಿಗಳು. ಇವು ಆ ಕಾಲದಲ್ಲಿ ಜಾಗೃತವಾದ ರಾಷ್ಟ್ರಭಕ್ತಿಯನ್ನು ಉದ್ದೀಪನಗೊಳಿಸಲು ನೆರವಾದವು. ಇದೇ ಕಾಲದಲ್ಲಿಯೇ ಕಾದಂಬರಿಯ ಸಹೋದರ ಎನ್ನಬಹುದಾದ ಸ್ವತಂತ್ರ ಸಣ್ಣಕಥೆಯ ಪ್ರಕಾರದ ಪ್ರಾದುರ್ಭಾವವಾಯಿತು. ಸಣ್ಣಕಥೆಗೆ ಹಾದಿಮಾಡಿಕೊಟ್ಟ ಮೊಮ್ಮೊದಲಿಗರಲ್ಲಿ ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ. ಎನ್. ಕಾಮತರು ಪ್ರಮುಖರು. ಕನ್ನಡದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂಬ ಮನ್ನಣೆ ೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯನು ಬರೆದ 'ಇಂದಿರಬಾಯಿ'ಗೆ ಸಲ್ಲುತ್ತದೆ. ಕೆರೂರರ 'ಯದುಮಹಾರಾಜ' ಮೊತ್ತಮೊದಲಿನ ಸ್ವತಂತ್ರ ಐತಿಹಾಸಿಕ ಕಾದಂಬರಿಯಾದರೆ, ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಸರ್ವಾಂಗ ಸುಂದರವಾದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ. ಈ ಸುಮಾರಿನಲ್ಲಿಯೇ ನಂಜನಗೂಡಿನ ತಿರುಮಲಾಂಬಾ ಅವರು ತಮ್ಮ 'ಸತೀ ಹಿತೈಷಿಣೀ ಗ್ರಂಥಮಾಲೆ'ಯ ಮೂಲಕ ಅನೇಕ ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಬರೆದು ಪ್ರಕಟಿಸಿದರು. ಇವು ಸಾಧಾರಣ ಕೃತಿಗಳಾದರೂ, ವಿಪುಲ ಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿರುವ ಮೊಮ್ಮೊದಲಿನ ಬರೆಹಗಾರ್ತಿ ಎಂಬ ಕಾರಣದಿಂದ ಇವರನ್ನು ನೆನೆಯಬೇಕು.

ಈ ಶತಮಾನದ ಮೂರನೆಯ ದಶಕದ ಮಧ್ಯಭಾಗದಲ್ಲಿ, ಕಾದಂಬರಿ ಕೆಲವು ಕಾಲ ತನ್ನ ಸ್ಥಾನವನ್ನು ಸಣ್ಣಕಥೆಗೆ ತೆರವು ಮಾಡಿಕೊಟ್ಟಂತೆ ಕಾಣುತ್ತದೆ. 'ಶ್ರೀನಿವಾಸ' ಎಂದು ಹೆಸರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಣ್ಣಕಥೆಯ ಕ್ಷೇತ್ರದಲ್ಲಿ ಆದ್ಯರಲ್ಲದಿದ್ದರೂ ಸಣ್ಣಕಥೆಯ ಸೀಮಾಪುರುಷರಾಗಿದ್ದಾರೆ. ಅರುವತ್ತಕ್ಕೂ ಮೀರಿರುವ ಅವರ ಕಥೆಗಳಲ್ಲಿ ಕಂಡುಬರುವ ಕಲೆಗಾರಿಕೆಯ ಅಚ್ಚುಕಟ್ಟು, ಗದ್ಯದ ಸರಳ ಸೌಂದರ್ಯ, ಕಥನದ ಜೆಡುರು, ವಸ್ತುವೈವಿಧ್ಯ, ಪಾತ್ರವೈವಿಧ್ಯ, ಸಾರ್ವಕಾಲಿಕವಾದ ಮಾನವೀಯತಾ ಪ್ರಜ್ಞೆ, ಸಂಸ್ಕೃತಿಯ ಅಭಿಮಾನ, ಲೋಕಾನುಭವ, ತಾತ್ವಿಕಮಟ್ಟದ ಜೀವನ ದರ್ಶನ—ಇಷ್ಟೊಂದು ಗುಣಗಳ ಸಹಯೋಗ ಈವರೆಗಿನ ಯಾವ ಸಣ್ಣ ಕಥೆಗಾರರಲ್ಲಿಯೂ ಕಾಣಬಂದಿಲ್ಲ. ಅವರು ಇತರ ಸಾಹಿತ್ಯ ಪ್ರಕಾರಗಳಲ್ಲಿ—ವಿಶೇಷವಾಗಿ ಕವಿತೆ, ಮತ್ತು ವಿಮರ್ಶಾಕ್ಷೇತ್ರಗಳಲ್ಲಿ—ಸಾಧಿಸಿರುವ ಮೇಲ್ಪಟ್ಟದ ಸಿದ್ಧಿಯನ್ನು ಓದುಗರ ದೃಷ್ಟಿಯಲ್ಲಿ ಕಣ್ಮರೆಮಾಡುವ ಮಟ್ಟಿಗೆ ಉಜ್ವಲವಾಗಿದೆ ಅವರ ಕಥೆಗಳ ಗುಣೋತ್ಕರ್ಷ. ಹೊಸ ಕವಿತೆಯೊಂದಿಗೆ ಹೊಯಿಕೈಯಾಗಿ ಜನಮನವನ್ನು ಸೆಳೆದ ಆ ಪೀಳಿಗೆಯ ಪ್ರಸಿದ್ಧ ಕಥೆಗಾರರಲ್ಲಿ ಆನಂದ, ಗೋಪಾಲಕೃಷ್ಣರಾಯರು, ಆನಂದಕಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ್—ಈ ಕೆಲವರನ್ನು ಹೆಸರಿಸಬಹುದು. ಮೃದುಹಾಸ್ಯ ಬೆರೆತ ದಾಂಪತ್ಯಜೀವನ ಶೃಂಗಾರವನ್ನು 'ನ ಭೂತೋ ನ ಭವಿಷ್ಯತಿ' ಎನ್ನುವಮಟ್ಟಿಗೆ ನಿರೂಪಣೆ ಮಾಡಿದ್ದಾರೆ. ಹಾಸ್ಯಭರಿತವಾಗಿ ಹಳ್ಳಿಯ ಜೀವನವನ್ನು ಚಿತ್ರಿಸುವುದರಲ್ಲಿ ಗೊರೂರರು ಎತ್ತಿದ ಕೈ. ಅತಿ ಪ್ರಯೋಗ ಶೀಲತೆಗೂ ನಾವೀನ್ಯದ ಮೋಹಕ್ಕೂ ಒಳಗಾಗದೆ ಸಣ್ಣಕಥೆಯ ಹಿರಿಯ ಸಂಪ್ರದಾಯವನ್ನು ವಿವಿಧ ಮುಖಗಳಲ್ಲಿ ಬೆಳೆಸಿಕೊಂಡು ಬಂದ ಕಥೆಗಾರರ ಬಳಗ ದೊಡ್ಡದಾಗಿಯೇ ಇದೆ.

ಈ ಶತಮಾನದ ಮೂರನೆಯ ದಶಕದ ಕೊನೆಯ ಭಾಗದಲ್ಲಿ ಗುಪ್ತಗಾಮಿನಿಯಾಗಿದ್ದ ಕಾದಂಬರಿಯ ಹೊಳೆ ಇದ್ದಕ್ಕಿದ್ದಂತೆ ಚಿಲುಮೆ ಚಿಮ್ಮಿ, ಸುಮಾರು ಎರಡು ದಶಕಗಳ ಕಾಲ ತನ್ನ ಪಾತ್ರವನ್ನೂ ಗಾತ್ರವನ್ನೂ ವಿಸ್ತರಿಸಿಕೊಂಡು ಗಂಭೀರವಾಗಿ ಹರಿದು, ಆ ಬಳಿಕ ಇತರ ಸಾಹಿತ್ಯ ಪ್ರಾಕಾರಗಳನ್ನು ಕೊಚ್ಚಿಕೊಂಡು ಧಾವಿಸುವ ಹುಚ್ಚು ಹೊಳೆಯಾಗಿ

ಪರಿಣಮಿಸಿ, ಈಗ ತನ್ನ ಉರುಬನ್ನು ಸ್ವಲ್ಪಮಟ್ಟಿಗೆ ತಗ್ಗಿಸಿಕೊಂಡಿದೆಯೆನ್ನಬೇಕು. ಈಚಿನ ಸ್ವಾತಂತ್ರ್ಯೋತ್ತರದ ಕಾಲವನ್ನು 'ಕಾದಂಬರೀ ಯುಗ' ಎಂದು ನಿರ್ದೇಶಿಸಿದರೂ ಸಲ್ಲುತ್ತದೆ. ಕನ್ನಡ ಸಾಮಾಜಿಕ ಕಾದಂಬರಿಯನ್ನು ಉನ್ನತ ಮಟ್ಟಕ್ಕೆ ಏರಿಸಿದವರಲ್ಲಿ ಶಿವರಾಮಕಾರಂತರು ಅಗ್ರಗಣ್ಯರು; ಅವರ 'ಮರಳಿ ಮಣ್ಣಿಗೆ' ಒಂದು ಮಹಾಕೃತಿ. ಸಣ್ಣ ಕಥೆಯಲ್ಲಿ ಮಾಸ್ತಿ ಸಾಧಿಸಿರುವ ಸಿದ್ಧಿಯನ್ನು ಇವರು ಕಾದಂಬರಿಯಲ್ಲಿ ಸಾಧಿಸಿದ್ದಾರೆ. 'ಸಂಧ್ಯಾರಾಗ' ಮುಂತಾದ ಕೆಲ ಕಾದಂಬರಿಗಳಲ್ಲಿ ಸಿದ್ಧಿಯ ಹಾದಿಯನ್ನು ಗುರುತಿಸಿಕೊಂಡ ಅ. ನ. ಕೃಷ್ಣರಾಯರು ಜನಪ್ರಿಯತೆಗೆ ಸೋಂತು, ಕಾದಂಬರಿಗಳ ಸಂಖ್ಯಾಬಾಹುಳ್ಯತೆಯಿಂದಾಗಿ ಕಾದಂಬರೀ ಕ್ಷೇತ್ರದ ಅತಿರಥರೆನ್ನಿಸಿಕೊಂಡಿದ್ದಾರೆ ಇದೇ ಮಾತನ್ನು ಹೆಚ್ಚುಕಡಮೆ ಕೃಷ್ಣಮೂರ್ತಿ ಪುರಾಣಿಕರ ಬಗೆಗೂ ಆಡಬಹುದು. ತ. ರಾ. ಸು. ಕಲಾವಂತಿಕೆಯ ಶಿಲ್ಪದಿಂದಲೂ ಕಾವ್ಯಮಯ ಗದ್ಯದಿಂದಲೂ ಜನಪ್ರಿಯರಾದ ಕಾದಂಬರಿಕಾರರು. ಸ್ವಾತಂತ್ರ್ಯ ಸಂಗ್ರಾಮದಿಂದ ಸ್ಫೂರ್ತಿಪಡೆದು, ಆ ಅವಿಸ್ಮರಣೀಯ ಭಾರತದ ಐತಿಹಾಸಿಕ ಘಟನೆಗಳನ್ನು ಯಶಸ್ವಿಯಾಗಿ ಚಿತ್ರಿಸಿದವರಲ್ಲಿ ಬಸವರಾಜ ಕಟ್ಟೀಮನಿ, ನಿರ್ಜಿ ಅಣ್ಣಾರಾಯರು, ನಿರಂಜನ—ಇವರು ಪ್ರಮುಖರು; ಇವರುಗಳ 'ಮಾಡಿ ಮಡಿದರು', 'ರಾಷ್ಟ್ರ ಪುರುಷ', 'ಕಲ್ಯಾಣಸ್ವಾಮಿ' ಹಾಗೂ 'ಅಪರಂಪಾರ'—ಈ ಕೃತಿಗಳು ಪ್ರಸಿದ್ಧವಾಗಿವೆ. ಕನ್ನಡ ಕಾದಂಬರಿಯ ಬೆರಗುಗೊಳಿಸುವ ಬಿತ್ತರಕ್ಕೆ ಹೆಮ್ಮೆಪಡಬಹುದಾದಂತಹ ಎತ್ತರದ ಕೋಡು ಮೂಡಿಸಿದಕೀರ್ತಿ ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಕಾನೂರು ಸುಬ್ಬಮ್ಮ', ಮಾಸ್ತಿಯವರ 'ಚೆನ್ನಬಸವ ನಾಯಕ', ಕೆ. ವಿ. ಅಯ್ಯರರ 'ಶಾಂತಲಾ' ಮುಂತಾದ ಹಲವು ಕೃತಿಗಳಿಗೆ ಸಲ್ಲಬೇಕು. ಆನಂದಕಂದ, ದೇವುಡು, ವೀರಕೇಸರಿ ಮುಂತಾದವರು ಬೆಳಸಿದ ಐತಿಹಾಸಿಕ ಕಾದಂಬರಿ ಕ್ಷೇತ್ರವನ್ನು ಕೊರಟಿ ಶ್ರೀನಿವಾಸರಾಯರು ಇನ್ನಷ್ಟು ವಿಸ್ತಾರಗೊಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಮಹಿಳೆಗೆ ಗಣ್ಯಸ್ಥಾನ ದೊರಕಿಸಿಕೊಟ್ಟ ಕೀರ್ತಿ ದಿ॥ ತ್ರಿವೇಣಿಯವರದು. ಹೇಗೂ, ಹೊಸಗನ್ನಡ ಯುಗದ ಕಾದಂಬರಿಯ ಹುಲುಸು ಬೆಳೆಯ ಕಡೆಗೆ ಕೈನೀಡಿ ತೋರಿಸಬಹುದೆ ಹೊರತು, ಕಳೆಯನ್ನು ಕಿತ್ತು ಬೆಳೆಯನ್ನು ಬೇರ್ಪಡಿಸಿ, ಅದನ್ನು ಕೊಯ್ಲು ಮಾಡಿ ಒಕ್ಕುವ ಕೆಲಸ ಒಬ್ಬ ವಿಮರ್ಶಕನಿಂದ ಆಗದ ಕೆಲಸ.

ಕಾವ್ಯ ಪ್ರಪಂಚದಲ್ಲಿ ಕ್ರಾಂತಿಯು ಮಾತು ಹರಿಹರನ ಕಾಲದಷ್ಟು ಹಿಂದಿನದು. ಚಂಪೂ ಮಾರ್ಗವನ್ನು ತೊರೆದು ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ ಮುಂತಾದ ದೇಸಿ ಛಂದಸ್ಸಿನಲ್ಲಿ ಕಾವ್ಯರಚನೆ ಮಾಡಿದ ಹಿಂದಿನ ಕವಿಗಳು ಕಾವ್ಯಕ್ಕೆ ಹೊಸ ಮೆರುಗನ್ನೇ ಕೊಟ್ಟರು. ಅನೇಕ ಶತಮಾನಗಳ ಕಾಲ ಜೀವನದಿಯಾಗಿದ್ದ ಕನ್ನಡ ಕವಿತೆ ೧೯ನೆಯ ಶತಮಾನದ ಹೊತ್ತಿಗೆ ಮುಂಬರಿಯದೆ ನಿಂತು ನಾರುವ ಸ್ಥಿತಿಗೆ ಬಂತು. ಬತ್ತಿದ ಹೊಳೆಗೆ ಹೊಸನೀರು ಬಂದು ಕೂಡಿಕೊಳ್ಳತೊಡಗಿದ್ದು. ಈ ಶತಮಾನದ ೨-೩ನೆಯ ದಶಕಗಳಲ್ಲಿ. ಕನ್ನಡ ಕಾವ್ಯಪ್ರಪಂಚದಲ್ಲಿ ಕ್ರಾಂತಿಯ ಮಾತು ಕೇಳಿಬಂದದ್ದು ಆಗ—೧೯೨೧ರಲ್ಲಿ, ಬಿ. ಎಂ. ಶ್ರೀಯವರ 'ಇಂಗ್ಲಿಷ್ ಗೀತಗಳು' ಪ್ರಕಟವಾದಾಗ. ಅವರು ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬೈರನ್ ಮುಂತಾದ ಇಂಗ್ಲಿಷ್ ಕವಿಗಳ ಭಾವಗೀತೆಗಳ ಮಾದರಿಯನ್ನು ನಮ್ಮ ಮುಂದಿಟ್ಟರು. ಹಟ್ಟಿಯಂಗಡಿ ನಾರಾಯಣರಾಯರ ಪ್ರಯತ್ನಗಳೂ ಇದೇ ಜಾಡಿನಲ್ಲಿ ಸಾಗಿದ್ದವು. ಪಂಜೆ, ಪೈ, ಡಿ.ವಿ.ಜಿ. ಮುಂತಾದವರೂ ಸ್ವಂತ ಪ್ರಯತ್ನಗಳನ್ನು ನಡಸುತ್ತಿದ್ದರು. ಆಗ ಜಾಗೃತವಾಗುತ್ತಿದ್ದ ರಾಷ್ಟ್ರಾಭಿಮಾನ ಒಂದು ಕಡೆ, ಪಾಶ್ಚಾತ್ಯ ವಿದ್ಯೆಯಿಂದ ಮೂಡಿದ್ದ ಸ್ವತಂತ್ರ ವಿಚಾರದೃಷ್ಟಿ ಇನ್ನೊಂದು ಕಡೆ ಈ ಹೊಸ ಪ್ರೇರಣೆಗಳಿಂದ ಹೊಸ ಅಭಿವ್ಯಕ್ತಿಗಾಗಿ ಹಾತೊರೆಯುತ್ತಿದ್ದ ಅಂದಿನ ಪೀಳಿಗೆಯ ತರುಣ ಕವಿಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ 'ಇಂಗ್ಲಿಷು ಗೀತಗಳಿಂದ ಸ್ಫೂರ್ತಿಗೊಂಡು', ಆಧುನಿಕ ಕವಿತೆಯನ್ನು ನಿರ್ಮಿಸಿದರು. ಇದನ್ನು 'ರೊಮ್ಯಾಂಟಿಕ್' ಕಾವ್ಯ ಎಂದು ನಿರ್ದೇಶಿಸುವುದು ರೂಢಿಯಾಗಿದೆ. ಸಾಂಪ್ರದಾಯಿಕವೂ ವಸ್ತುನಿಷ್ಠವೂ ಆದ 'ಕ್ಲಾಸಿಕಲ್' ಮಾರ್ಗವನ್ನು ಬಿಟ್ಟು ಸ್ವತಂತ್ರವೂ ಆತ್ಮನಿಷ್ಠವೂ ಆದ ಹೊಸ ಮಾರ್ಗವೇ ರೊಮ್ಯಾಂಟಿಕ್ ಪಂಥ. ಕನ್ನಡದಲ್ಲಿ ಇದು ಈಗ ಸಂಪ್ರದಾಯ ಮಾರ್ಗವಾಗಿಬಿಟ್ಟಿದೆ! ವಾಸ್ತವವಾಗಿ, ಕನ್ನಡದ ಹೊಸಕವಿತೆ ಛಂದಸ್ಸಿನಮಟ್ಟಿಗೆ ಹಳೆಯ ರಗಳೆ ಷಟ್ಪದಿಗಳ ಕಟ್ಟಡವನ್ನೆ ತನ್ನ ಸ್ವತಂತ್ರ ಅಭಿವ್ಯಕ್ತಿಗೆ ತಕ್ಕಂತೆ ಮಾರ್ಪಡಿಸಿಕೊಂಡಿತೆ ಹೊರತು, ಮಾತ್ರಾಗಣ ವಿನ್ಯಾಸದ ಮೇಲೆ ನಿಂತ ನಿಯತಲಯಬದ್ಧತೆಯನ್ನಾಗಲಿ ಕನ್ನಡಕ್ಕೆ ವಿಶಿಷ್ಟವೆನಿಸಿದ ಪ್ರಾಸವನ್ನಾಗಲಿ ಬಿಟ್ಟುಕೊಡಲಿಲ್ಲ. ಈ ಹೊಸ ಮಾರ್ಗದ ಕವಿಗಳು ಪ್ರಾಚೀನ ಕಾವ್ಯಗಳ ಸಾರಸತ್ವವನ್ನು ಹೀರಿಕೊಂಡವರೂ ಆದ್ದರಿಂದ, ಅವರ ಕವಿತೆ ಹಳೆಯ ಕಾವ್ಯಮಾರ್ಗದಿಂದ ಕಡಿದುಹೋದಂತೆ ಇಲ್ಲವೆ ಸಿಡಿದು ನಿಂತಂತೆ ಕಾಣುವುದಿಲ್ಲ. ಈ ಮಾತಿಗೆ ಸಾಕ್ಷ್ಯವನ್ನೊದಗಿಸುವ ಕೃತಿಸಮುದಾಯ ಶೈಲಪಂಕ್ತಿಯಲ್ಲಿ ಕುವೆಂಪು ಅವರ 'ರಾಮಾಯಣ ದರ್ಶನ' ಶಿಖರಪ್ರಾಯವಾಗಿ ನಿಂತಿದೆ. ಜಾನಪದ ಧಾಟಿಗೆ ಅಭಿಜಾತ ಸಾಹಿತ್ಯ ಶೈಲಿಯ ಬೆಲೆ ತಂದುಕೊಟ್ಟು,

ಜನಜೀವನದ ಉಸಿರನ್ನು ಹೊಸಕವಿತೆಯ ಪ್ರಾಣವಾಗಿಸಿದ ವರಕವಿ ಬೇಂದ್ರೆ; ಪ್ರಕೃತಿ ಪ್ರೇಮಕ್ಕೆ ಭಕ್ತಿಯ ತೀರ್ಥವನ್ನು ಚಿಮುಕಿಸಿ, ಹೊಸ ಕವಿತೆಯನ್ನು ಗೀತರೂಪಕ್ಕೆ ಹೂಡಿಕೊಂಡ ಪು. ತಿ. ನರಸಿಂಹಾಚಾರ್; ಕತೆಗಳಿಗೆಮಾತ್ರ ಮೀಸಲಾಗಿದ್ದ ದಾಂಪತ್ಯ ಶೃಂಗಾರವನ್ನು ಮನೆಮಾತಿನ ಪದ್ಯಗಳಲ್ಲಿ ಜನಪ್ರಿಯಗೊಳಿಸಿದ ನರಸಿಂಹಸ್ವಾಮಿ; ಹೆಂಡ ಕುಡುಕನ ಭಾಷೆಯಲ್ಲಿ ಸಾಮಾನ್ಯ ಮಾನವನ ಜೀವನ ದರ್ಶನವನ್ನು ಮುಂದಿಟ್ಟ ರಾಜರತ್ನಂ: ಸಮುದ್ರದಾಚೆಯೀಚಿನ, ದ್ಯಾವಾಪೃಥ್ವಿಗಳ ಅನಂತವ್ಯಾಪ್ತಿಯ ಕೇಂದ್ರಬಿಂದುವಾದ ವಿಶ್ವಮಾನವನ ದರ್ಶನವನ್ನು ಕಾವ್ಯದಲ್ಲಿ ಕಾಣಲು 'ಪಯಣ' ಮಾಡಿದ್ದಲ್ಲದೆ ನವ್ಯಪಂಥದ ಕಡೆಗೆ ಕೈತೋರಿದ 'ವಿನಾಯಕ' —ಇವರು ಹೊಸಕಾವ್ಯದಲ್ಲಿ ಸಿದ್ಧಿಪಡೆದವರಲ್ಲಿ ಅಗ್ರಗಣ್ಯರು. ವಿನಾಯಕರು ಪ್ರವರ್ತಿಸಿದ ನವ್ಯಕಾವ್ಯ ಪಂಥದಲ್ಲಿ ಹೆಸರು ಮಾಡಿದ ಅಗ್ರಗಣ್ಯಕವಿ ಗೋಪಾಲಕೃಷ್ಣ ಅಡಿಗ. ನವ್ಯಕಾವ್ಯ ಅರ್ಥವಾಗದ ಕಾವ್ಯ ಎಂದು ಮುಂತಾಗಿ ಆಕ್ಷೇಪಿಸುವವರೂ ಉಂಟು. ಆ ಸಂಬಂಧದ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಈ ನವ್ಯಕಾವ್ಯದ ಪ್ರಭಾವ ಕಥಾಪ್ರಪಂಚಕ್ಕೂ ಹರಿದು, ನವ್ಯ ಕಥಾಪ್ರಕಾರವೂ ಹುಟ್ಟಿದೆ. ಅದರಲ್ಲಿ ಅರ್ಥಕ್ಲೇಶ ಅಷ್ಟಿಲ್ಲ. ಈ ಪ್ರಕಾರದಲ್ಲಿ ಹೆಸರಾದವರೆಂದರೆ ಸದಾಶಿವ, ಅನಂತಮೂರ್ತಿ, ರಾಜಲಕ್ಷ್ಮಿ ಇವರು.

ಕನ್ನಡ ನಾಟಕ ಮೊದಲು ಸಂಸ್ಕೃತ ನಾಟಕಗಳ ಅನುವಾದ ರೂಪವಾಗಿ ೧೯ನೆಯ ಶತಮಾನದ ಕಡೆಯ ಭಾಗ ಮತ್ತು ಈ ಶತಮಾನದ ಆದಿಬಾಗದಲ್ಲಿ ಬೆಳೆದು, ಕನ್ನಡ ರಂಗಭೂಮಿಯನ್ನು ಕಟ್ಟಿತು. ಬಸವಪ್ಪಶಾಸ್ತ್ರಿ, ಚುರಮುರಿ ಇವರ ಶಾಕುಂತಲದ ಅನುವಾದಗಳು ಪ್ರಸಿದ್ಧವಾಗಿವೆ. ಹುಯಿಲಗೋಳ ನಾರಾಯಣರಾಯರು, ಗರೂಡ ಸದಾಶಿವರಾಯರು, ಬೆಳ್ಳಾವೆ ನರಹರಿಶಾಸ್ತ್ರಿಗಳು, ಬಿ. ಪುಟ್ಟಸ್ವಾಮಯ್ಯ ಇವರೆಲ್ಲ ಸಾಂಪ್ರದಾಯಕ ರೀತಿಯಲ್ಲಿ ರಂಗ ನಾಟಕಗಳನ್ನು ಬರೆದು, ಕನ್ನಡ ರಂಗಭೂಮಿಯನ್ನು ಜೀವಂತವಾಗಿಟ್ಟ ಮಹನೀಯರು. ನಾಟಕ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿದವರೆಂದರೆ, ಕೈಲಾಸಂ, 'ಕನ್ನಡಕ್ಕೊಬ್ಬನೆ ಕೈಲಾಸಂ' ಎಂದು ಖ್ಯಾತರಾದ ಅವರನ್ನೂ ಅವರ ನಾಟಕಗಳನ್ನೂ ಇಲ್ಲಿ ಪರಿಚಯ ಮಾಡಿಕೊಡಬೇಕಾದ ಅಗತ್ಯವಿಲ್ಲ. ಅಂತೆಯೇ ಶ್ರೀರಂಗರ ವಿಚಾರ. ಕಲಾವಿಲಾಸಿ ರಂಗಭೂಮಿಗೆ ಯೋಗ್ಯ ನಾಟಕಗಳನ್ನು ವಿಪುಲವಾಗಿ ಬರೆದವರಲ್ಲಿ ಕ್ಷೀರಸಾಗರ, ಕೈವಾರ ರಾಜಾರಾವ್, ಪರ್ವತವಾಣಿ, ದಾಶರಥಿ ದೀಕ್ಷಿತ್, ಎ. ಎಸ್. ಮೂರ್ತಿ ಇವರು ಪ್ರಮುಖರು. ಈ ಎಲ್ಲರ ಹೊಸ ನಾಟಕಗಳು ಸುಶಿಕ್ಷಿತ ವಿದ್ಯಾವಂತರಿಗೆ ಮಾತ್ರ ಹಿಡಿಸತಕ್ಕವು. ಜನತೆಯ ರಂಗಭೂಮಿಗೂ ಹೊಸ ನಾಟಕಕ್ಕೂ ನಡುವೆ ಬಿಟ್ಟಿರುವ ಅಂತರ ಇನ್ನೂ ತುಂಬಿಲ್ಲ.

ಹೊಸಗನ್ನಡ ಯುಗದಲ್ಲಿ ಸಾಧನೆಯಾಗಿರುವ ಇನ್ನೊಂದು ಮಹತ್ಕಾರ್ಯ ಎಂದರೆ, ಹಳೆಯ ಕಾವ್ಯಗಳಿಗೆ ಬೆಲೆ ಕಟ್ಟುವ ವಿಮರ್ಶೆಯದು. ಬಿ. ಎಂ. ಶ್ರೀ., ಕೃಷ್ಣಶಾಸ್ತ್ರಿ; ಎಸ್. ವಿ. ರಂಗಣ್ಣ, ತೀ, ನಂ. ಶ್ರೀ., ಡಿ. ಎಲ್. ನರಸಿಂಹಾಚಾರ್, ರಂ. ಶ್ರೀ. ಮುಗಳಿ ಮುಂತಾದವರು ಈ ಕ್ಷೇತ್ರದಲ್ಲಿ ಮರೆಯಲಾಗದ ಸೇವೆ ಸಲ್ಲಿಸಿ, ಪುರಾತನ ನೂತನ ಯುಗಗಳ ನಡುವೆ ನಿತ್ಯವ್ಯವಹಾರಕ್ಕೆ ಸೇತುಗಟ್ಟಿದ್ದಾರೆ. ನರಸಿಂಹಾಚಾರ್ಯರ 'ಕವಿಚರಿತ್ರೆ'ಯಲ್ಲಿ ಪೂರಣಗೊಳ್ಳದಿದ್ದ ಸಾಹಿತ್ಯ ಸಮೀಕ್ಷೆಯ ಸಾಹಸ ಕಾರ್ಯವನ್ನು ಮುಗಳಿಯವರು ತಮ್ಮ ಸಾಹಿತ್ಯ ಚರಿತ್ರೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಜೀವನ ಚರಿತ್ರೆಯ ವಿಭಾಗದಲ್ಲಿ ಸ್ವತಂತ್ರವಾದ ರಚನೆ ಕಡಮೆ. ಪುಟ್ಟಣ್ಣನವರ ಕುಣಿಗಲ್ ರಾಮಾಶಾಸ್ತ್ರಿಗಳ ಚರಿತ್ರೆ, ಡಿ. ವಿ. ಜಿ. ಅವರ ರಂಗಾಚಾರ್ಲು, ಈ ಸಂಪ್ರದಾಯದಲ್ಲಿ ನಿರ್ಮಿತವಾದ ಶ್ರೇಷ್ಠಕೃತಿ ಎಂದರೆ ಸಿ. ಕೆ. ವೆಂಕಟರಾಮಯ್ಯನವರ 'ಆಳಿದ ಮಹಾಸ್ವಾಮಿಯವರು.' ಪದ್ಯದಲ್ಲಿ ಭಾವಗೀತೆ ಹೇಗೋ, ಗದ್ಯದಲ್ಲಿ ಲಲಿತಪ್ರಬಂಧ ಮತ್ತೂ ಹರಟೆ ಹಾಗೆ ಈ ಸಾಹಿತ್ಯ ಪ್ರಕಾರದಲ್ಲಿ ಉತ್ತಮ ರಚನೆಗಳು ಬಂದಿದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ಬರಹಗಾರರನ್ನು ಆಕರ್ಷಿಸಿಲ್ಲ.

ಒಂದು ಮಾತಿನಲ್ಲಿ ಹೊಸಗನ್ನಡ ಸಾಹಿತ್ಯದ ಹೊಸ ಯುಗದ ಪ್ರಯಾಣ ಪ್ರಾರಂಭವಾಗಿ ಸುಮಾರು ಐದು ದಶಕಗಳಾಗಿವೆ; ಸವೇಗವಾದ ಈ ಅಣುಯುಗದಲ್ಲಿ ಅವರ ಗತಿಗಮಕಗಳಿಗೆ ಇನ್ನು ಯಾವ ಹೊಸ ತಿರುವುಮುರುವುಗಳು ಬಂದಾವೋ, ಹೇಳಲಾಗದು.

['ಆಕಾಶವಾಣಿ'ಯ ಬೆಂಗಳೂರು ಕೇಂದ್ರದಿಂದ ಬಿತ್ತರವಾದ ಭಾಷಣ ಸಣ್ಣಪುಟ್ಟ ಮಾರ್ಪಾಟುಗಳೊಂದಿಗೆ ಪ್ರಕಟವಾಗಿದೆ.

—ಲೇಖಕ]

ಮೈಸೂರು-ಮಹಾರಾಷ್ಟ್ರ ಗಡಿ ವಿವಾದ

ಮಹಾಜನ ಆಯೋಗಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಒಪ್ಪಿಸಿದ ಮನವಿ

ಮೈಸೂರು-ಮಹಾರಾಷ್ಟ್ರ ಗಡಿ ವಿವಾದ ಪರಿಶೀಲನೆಗಾಗಿ ನಿಯುಕ್ತವಾದ ಮಹಾಜನ ಆಯೋಗಕ್ಕೆ ಪರಿಷತ್ತಿನ ಪರವಾಗಿ ದಿ. ೨೫-೨-೧೯೬೭ರಂದು ಒಂದು ಮನವಿಯನ್ನು ಕಳಿಸಲಾಯಿತು. ಈ ಗಡಿ ವಿವಾದದ ಸ್ವರೂಪ, ಅದರ ಬೆಳವಣಿಗೆ, ಪರಿಹಾರ ಸೂತ್ರಗಳು—ಇವನ್ನು ಕುರಿತು ವಿಸ್ತೃತವಾಗಿ ಅದರಲ್ಲಿ ವಿವೇಚಿಸಲಾಗಿದೆ. ಮನವಿಯ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ:

ಮಹಾರಾಷ್ಟ್ರದ ಬೇಡಿಕೆ:

ಕಾರವಾರ ಜಿಲ್ಲೆಯ ಕಾರವಾರ, ಸುಪಾ, ಹಲ್ಯಾಳ, ತಾಲೂಕುಗಳು; ಬೆಳಗಾವಿ ಜಿಲ್ಲೆಯ ಖಾನಾಪುರ, ಬೆಳಗಾವಿ, ಚಿಕ್ಕೋಡಿ ತಾಲೂಕುಗಳು; ಹಾಗೂ ಅಥಣಿ, ಹುಕ್ಕೇರಿ ತಾಲೂಕಿನ ಕೆಲವು ಹಳ್ಳಿಗಳು; ಬಿದರ ಜಿಲ್ಲೆಯ ಹುಮ್ನಾಬಾದ, ಭಾಲ್ಕಿ, ಸಂತಪುರ, ಆಳಂದ ತಾಲೂಕಿನ ಕೆಲವು ಭಾಗ.

ಬಹುಜನ ಭಾಷೆ ಮರಾಠಿ, ಹಾಗೂ ಮಹಾರಾಷ್ಟ್ರದೊಂದಿಗೆ ಇರುವ ಭೌಗೋಲಿಕ ಸಂಲಗ್ನತೆ–ಈ ಆಧಾರಗಳ ಮೇಲೆ ಬೇಡಿಕೆಯನ್ನು ಮಂಡಿಸಲಾಗಿದೆ.

ಮಹಾಜನ ಆಯೋಗಕ್ಕೆ ಕೇಂದ್ರವು ನಿರ್ದೇಶಿಸಿದ ಪರಿಪತ್ರದಲ್ಲಿ, ರಾಜ್ಯ ಪುನರ್ವಿಂಗಡನೆಯ ಸೂತ್ರಗಳನ್ನು ಆಧರಿಸಿ ಈ ಗಡಿ ವಿವಾದಗಳಿಗೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ಸೂಚಿಸಿರುವುದರಿಂದ, ರಾ. ಪು. ಆಯೋಗವು ಗಡಿ ಸಮಸ್ಯೆಯ ವಿಷಯವಾಗಿ ತಾಳಿದ ಧೋರಣೆಯನ್ನು ಗಮನಿಸಬೇಕು.

ದೇಶದ ಐಕ್ಯ, ಆರ್ಥಿಕ ಅಭಿವೃದ್ಧಿ ಹಾಗೂ ಆಡಳಿತೆಯ ಅನುಕೂಲತೆಗಳು ರಾ. ಪು. ಆಯೋಗವು ಇರಿಸಿಕೊಂಡಿದ್ದ ಸೂತ್ರಗಳಲ್ಲಿ ಮುಖ್ಯವಾದವು. ಭಾಷೆಯ ಏಕತೆಯು ಸಾಂಸ್ಕೃತಿಕ ಸಮಗ್ರತೆಯನ್ನು ರೂಪಿಸುವ ಸಾಧನ ನಿಜ; ಆದರೆ ಭಾಷೆಯೇ ಮುಖ್ಯವಲ್ಲ ಎಂಬುದು ಅವರ ನಿಲುವು. ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಸಹಾಯಕವಲ್ಲದ ಯಾವ ಬದಲಾವಣೆಗಳನ್ನೂ ಒಪ್ಪಲಾಗದು ಎಂಬುದು ಅವರ ನಿಶ್ಚಿತ ಅಭಿಪ್ರಾಯ.

ಮಹಾಜನ ಆಯೋಗವು ಈ ಸೂತ್ರಗಳನ್ನೇ ಅನುಸರಿಸಬೇಕಾಗಿರುವುದರಿಂದ ಕೇವಲ ಭಾಷೆಯನ್ನೇ ಆಧರಿಸಿದ ಮಹಾರಾಷ್ಟ್ರದ ಬೇಡಿಕೆಗಳು ಇವುಗಳಿಗೆ ವಿರೋಧವಾಗಿವೆ ಎಂಬುದನ್ನು ಲಕ್ಷಿಸಬೇಕು. ಅಲ್ಲದೆ ಗಡಿ ನಿರ್ಣಯದಲ್ಲಿ ಭಾಷೆಯೇ ಏಕಮಾತ್ರ ಆಧಾರವಾಗಲಾರದು ಎಂಬ ಅಂಶವನ್ನು, ಭಾರತದಲ್ಲಿ ಬೇರೆ ಬೇರೆ ಪ್ರಾಂತ ರಚನೆಗಾಗಿ ನಿಯುಕ್ತವಾದ ಹಲವಾರು ಆಯೋಗಗಳು ಒಪ್ಪಿಕೊಂಡಿವೆ.

ಭಾಷೆಯ ದೃಷ್ಟಿಯಿಂದ ಸಾಮಾನ್ಯವಾಗಿ ಗಡಿಪ್ರದೇಶಗಳು ಸಮ್ಮಿಶ್ರ. ಒಂದು ಭಾಷೆಯು ಅಲ್ಪ ಬಹುಮತ ಪಡೆದಿದ್ದರೆ ಅದೊಂದೇ ಕಾರಣದಿಂದ ಆ ಪ್ರದೇಶವನ್ನು ಬೇರೆ ರಾಜ್ಯಕ್ಕೆ ವರ್ಗಾಯಿಸುವುದು ನ್ಯಾಯವಲ್ಲ. ಈ ಸಂದರ್ಭದಲ್ಲಿ ರಾ. ಪು. ಆಯೋಗದ ನೀತಿಯೇ—ಅಂದರೆ ಶೇಕಡಾ ೭೦ಕ್ಕಿಂತ ಹೆಚ್ಚು ಜನ ಮಾತನಾಡುವ ಭಾಷೆಯ ರಾಜ್ಯಕ್ಕೆ ಆ ತಾಲೂಕನ್ನು ಸೇರಿಸುವುದು—ಯೋಗ್ಯವಾದುದು.

ಗ್ರಾಮಘಟಕವನ್ನು ಆಧರಿಸುವ 'ಪಾಟಸ್ಕರ್ ಸೂತ್ರ'ಕ್ಕೆ ಮಹಾರಾಷ್ಟ್ರವು ಕಟ್ಟುಬಿದ್ದಿದೆ. ಸುತ್ತುಮುತ್ತಲಿನ ಪ್ರದೇಶಗಳನ್ನು ಆರ್ಥಿಕ ಹಾಗೂ ಆಡಳಿತದ ಸೌಕರ್ಯಗಳಿಗಾಗಿ ಗ್ರಾಮವು ಅವಲಂಬಿಸಬೇಕಾಗುವುದರಿಂದ ಅದಕ್ಕೆ ಪ್ರತ್ಯೇಕ ಅಸ್ತಿತ್ವ ಇಲ್ಲ. ಆದುದರಿಂದ 'ಗ್ರಾಮಘಟಕವು' ಸೂಕ್ತ ಮಾರ್ಗವಲ್ಲ.

ದ್ವಿಭಾಷಾ ಪ್ರದೇಶಗಳೆಂದು ಪರಿಗಣಿತವಾದ ಗಡಿಭಾಗಗಳು ಸಾಮಾನ್ಯ ಬಹುಮತದಿಂದ (ಅಂದರೆ ಶೇ. ೫೧) ತಮ್ಮ ಭವಿತವ್ಯ ನಿರ್ಧರಿಸುವುದು ಅಸಾಧ್ಯ. ಶೇಕಡಾ ೭೦ಕ್ಕಿಂತ ಹೆಚ್ಚು ಜನ ಬೇರೆ ಭಾಷೆಯವರಿದ್ದರೆ ಮಾತ್ರ ಅಂಥ ತಾಲೂಕುಗಳನ್ನು ಆಯಾ ರಾಜ್ಯಗಳಿಗೆ ಸೇರಿಸಬಹುದು. (ಪರಸ್ಪರ ಸಮ್ಮತಿ ಇದ್ದರೆ ರಾಜ್ಯ ಸರಕಾರಗಳು ಕಡಮೆ ಶೇಕಡಾ ಪ್ರಮಾಣದ ಕೆಲವು ಹಳ್ಳಿಗಳನ್ನು ವರ್ಗಾಯಿಸಬಹುದು.)

ಮಹಾರಾಷ್ಟ್ರದ ಇಂದಿನ ಬೇಡಿಕೆ ಹೊಸದಲ್ಲ. ರಾ. ಪು. ಆಯೋಗದ ಚರ್ಚೆಯ ಸಮಯದಲ್ಲಿ ಅವರು ಲೋಕಸಭೆಯಲ್ಲಿ ಮಂಡಿಸಿದ ಈ ಸಂಬಂಧವಾದ ೧೭ ಸೂಚನೆಗಳು ತಿರಸ್ಕೃತವಾದವು.

ಚಾರಿತ್ರಿಕ ಹಿನ್ನೆಲೆ:

ಚಾರಿತ್ರಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ಈ ಭಾಗವೆಲ್ಲ ಕನ್ನಡ ನಾಡಿನ ಅವಿಭಾಜ್ಯ ಅಂಗ. ಚಾಲುಕ್ಯ, ರಾಷ್ಟ್ರಕೂಟ, ರಟ್ಟ, ಯಾದವ, ವಿಜಯನಗರ—ಹೀಗೆ ರಾಜ್ಯ-ಸಾಮ್ರಾಜ್ಯಗಳ ಭಾಗವಾಗಿ ಬೆಳಗಾವಿಯು ಬೆಳೆದು ಬಂದಿದೆ. ಪೇಶವಾಯಿ ಆಧಿಪತ್ಯದಿಂದ ಬ್ರಿಟಿಷ್ ಅಂಕಿತಕ್ಕೆ ಬಂದಾಗಲೇ ಮರಾಠಿ ಸಂಸ್ಕೃತಿಯ ಪ್ರಭಾವ ಅಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಬ್ರಿಟಿಷ್ ಆಳಿಕೆಯಲ್ಲಿ ಅದು ಮೊದಲಿನಿಂದಲೂ ಕರ್ನಾಟಕದ ಒಂದು ಭಾಗವಾಗಿ, ಜಿಲ್ಲಾ ಕೇಂದ್ರವಾಗಿ ಮುಂದುವರಿದಿದೆ. ೧೯೨೧ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನಲ್ಲಿ ಸೇರ್ಪಡೆ ಹೊಂದಿ ರಾಷ್ಟ್ರೀಯ ಜೀವನದಲ್ಲಿ ಸಮಗ್ರ ಕರ್ನಾಟಕದ ಆಶೋತ್ತರಗಳನ್ನೇ ಬೆಳಗಾವಿಯು ಪ್ರತಿಬಿಂಬಿಸುತ್ತ ಬಂದಿದೆ. ಬೆಳಗಾವಿಯ ಬಗ್ಗೆ ಮಹಾರಾಷ್ಟ್ರೀಯರ ಬೇಡಿಕೆ ಉದ್ಭವಿಸಿದ್ದು ೧೯೪೮ರ ನಂತರವೇ ಎನ್ನಬಹುದು.

ಆರ್ಥಿಕ, ಶೈಕ್ಷಣಿಕವಾಗಿ ಬೆಳಗಾವಿಯು ಕನ್ನಡ ಪ್ರದೇಶದೊಂದಿಗೆ ತಾದಾತ್ಮ್ಯ ಹೊಂದಿದ ಬಗೆಯನ್ನು ಅನೇಕ ಆಧಾರಗಳಿಂದ ಮನವಿಯಲ್ಲಿ ವಿವೇಚಿಸಲಾಗಿದೆ.

ಇವೆಲ್ಲ ಕರ್ನಾಟಕದ ಪ್ರದೇಶಗಳು :

ಕನ್ನಡ ಸಂಸ್ಕೃತಿಯ ಪುನರುತ್ಥಾನದಲ್ಲಿ ಬೆಳಗಾವಿಯ ಸ್ಥಾನ ಹಿರಿದಾಗಿತ್ತು. ಹೊಸಗನ್ನಡದ ಮೂಲಪುರುಷರಾದ ಡೆಪ್ಯುಟಿ ಚನ್ನಬಸಪ್ಪ, ವೆಂಕಟರಂಗೋಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದವರು ಕಳೆದ ಶತಮಾನದಲ್ಲಿ ಬೆಳಗಾವಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿರಿಸಿಕೊಂಡಿದ್ದರು. ಸುಬುದ್ಧಿ ಪ್ರಕಾಶ (೧೮೪೯) ಜ್ಞಾನ ಮಂಜರಿ, ಮೊದಲಾದ ಹಲವಾರು ಪತ್ರಿಕೆಗಳು ಬೆಳಗಾವಿಯಲ್ಲಿ ಆ ಕಾಲದಲ್ಲಿ ಜನ್ಮ ತಾಳಿದ್ದವು. ಬೆಳಗಾವಿಯ ಬರಹಗಾರರಲ್ಲಿ ಮರಾಠಿಗರಿಗಿಂತ ಕನ್ನಡಿಗರೇ ಹೆಚ್ಚು.

ಭಾಷಿಕ ಬಹುಮತವು ಮಹಾರಾಷ್ಟ್ರೀಯರ ಬೇಡಿಕೆಗೆ ಮುಖ್ಯ ಆಧಾರ. ಆದರೆ ಜನಗಣತಿಯು—ವಿಶೇಷವಾಗಿ ೧೯೬೧ರದು—ನ್ಯಾಯಸಮ್ಮತ ರೀತಿಯಲ್ಲಿ ನಡೆಯಲಿಲ್ಲ ಎಂಬುದನ್ನು ಅಂದಿನ ಮುಖ್ಯಾಧಿಕಾರಿಗಳಿಗೆ ಸಾಧಾರಪೂರ್ವಕ ತೋರಿಸಿಕೊಡಲಾಗಿತ್ತು.

ಬೆಳಗಾವಿಯ ಮರಾಠಿಶಾಲೆಗಳ ಬಹುಸಂಖ್ಯೆಯು ಅವರ ಬೇಡಿಕೆಗೆ ಇನ್ನೊಂದು ಬೆಂಬಲ ಸೂಚಿಸುತ್ತದೆ. ಆದರೆ ಬೇರೆ ಬೇರೆ ಕಾರಣಗಳಿಂದ ಕನ್ನಡಿಗರನ್ನೊಳಗೊಂಡ, ಮುಸಲ್ಮಾನ್, ಕ್ರಿಶ್ಚಿಯನ್, ಕೊಂಕಣಿ ಮೊದಲಾದ ಇತರ ಭಾಷಿಕರು ಮರಾಠಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವ ನಿದರ್ಶನಗಳು ಸಾಕಷ್ಟಿವೆ. ಮರಾಠಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವವರೆಲ್ಲ ಮಹಾರಾಷ್ಟ್ರೀಯರೆಂದಾಗಲಿ ಅಥವಾ ಅವರೆಲ್ಲ ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಅಭಿಪ್ರಾಯದವರೆಂದಾಗಲಿ ಹೇಳಲಾಗದು. ಬೆಳಗಾವಿಯ ಮುನಸಿಪಲ್ ಆಡಳಿತದ ಮರಾಠೀ ಅಭಿಮಾನವೂ ಕನ್ನಡದ ಮೇಲಿನ ಅನುದಾರ ಧೋರಣೆಯೂ ಅಲ್ಲಿಯ ಶೈಕ್ಷಣಿಕ ಚಿತ್ರವನ್ನು ವಿಕೃತಗೊಳಿಸಿದೆ ಎಂದು ಹೇಳಬಹುದು.

ಸಾರ್ವತ್ರಿಕ ಚುನಾವಣೆಗಳ ಪರಿಣಾಮಗಳನ್ನು ತಮ್ಮ ಬೇಡಿಕೆಯ ಆಧಾರವೆಂದು ಮಹಾರಾಷ್ಟ್ರಿಯರು ಎಣಿಸುತ್ತಾರೆ. ಆದರೆ ಇದು ಗ್ರಾಹ್ಯವಲ್ಲ. ಒಂದು ರಾಜಕೀಯ ಪಕ್ಷವನ್ನು ಸೋಲಿಸುವುದಕ್ಕಾಗಿ ಇತರ ಅನೇಕ ಪಕ್ಷಗಳು ಒಗ್ಗೂಡಬಹುದು. ಬೆಳಗಾವಿಯ ಚುನಾವಣೆಗಳಲ್ಲಿ ಹೀಗೆ ಆದುದು, ರಿಪಬ್ಲಿಕನ್ ಪಕ್ಷದ ಇತ್ತೀಚಿನ ಹೇಳಿಕೆಗಳಿಂದ ಸ್ಪಷ್ಟವಾಗಿದೆ. ಬೆಳಗಾವಿಯ ಪ್ರಸ್ತುತ ಸ್ಥಾನವನ್ನು ಒಪ್ಪಿಕೊಂಡ ಅನೇಕ ಮತದಾರರು ಅಧಿಕಾರರೂಢ ಪಕ್ಷಕ್ಕೆ ವಿರೋಧವಾಗುವ ರೀತಿಯಲ್ಲಿ ವರ್ತಿಸಿದ ಅನೇಕ ನಿದರ್ಶನಗಳು ಇವೆ. ಈ ಕಾರಣಗಳಿಂದ ಚುನಾವಣೆಯ ಪರಿಣಾಮಗಳನ್ನು ಭಾಷಾವಾದ ಜಾತೀಯ ವಾದಗಳಿಗಾಗಿ ಬಳಸುವುದು ರಾಷ್ಟ್ರಹಿತದ ದೃಷ್ಟಿಯಿಂದ ತೀರ ಘಾತುಕ.

ಮೇಲೆ ಹೇಳಿದಂತೆ, ಭಾಷಿಕ ಬಹುಮತವು ಅಲ್ಪವಾಗಿದ್ದ ಪಕ್ಷದಲ್ಲಿ ಆಡಳಿತದ ಅನುಕೂಲತೆಯನ್ನು ಮುಖ್ಯ ಆಧಾರವಾಗಿ ಇಟ್ಟುಕೊಳ್ಳಬೇಕು. ಬೆಳಗಾವಿಯ ಸಮಸ್ಯೆ ಎದ್ದಾಗಲೆಲ್ಲ ಭಾಷಾವಾದದಿಂದ ಅಲಿಪ್ತರಾದ ಅಧಿಕಾರಿಗಳು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ೧೯೩೯ರಲ್ಲಿ ಬೆಳಗಾವಿಯ ಮಾಮಲೇದಾರರೊಬ್ಬರು ಸರಕಾರಕ್ಕೆ ಒಪ್ಪಿಸಿದ ತಮ್ಮ ವರದಿಯಲ್ಲಿ ಆಡಳಿತದ ದೃಷ್ಟಿಯಿಂದ ಬೆಳಗಾವಿಯು ಕರ್ನಾಟಕದ ಭಾಗ ಎಂದು ಸ್ಪಷ್ಟಪಡಿಸಿದ್ದಾರೆ.

ಕಾರವಾರ ಜಿಲ್ಲೆಯ ಪ್ರದೇಶವನ್ನು ಮಹಾರಾಷ್ಟ್ರವು ಬೇಡುತ್ತಿರುವುದು ಕೊಂಕಣಿಯು ಮರಾಠಿಯ ಉಪಭಾಷೆ

ಎಂಬ ಅಭಿಪ್ರಾಯದ ಆಧಾರದ ಮೇಲೆ. ಆದರೆ ಈ ಅಭಿಪ್ರಾಯವು ಬಹುಜನ ಕೊಂಕಣಿಗರಿಗೆ ಒಪ್ಪಿತವಾಗಿಲ್ಲ. ಭಾಷಾಶಾಸ್ತ್ರಜ್ಞರು ಕೊಂಕಣಿಯು ಸ್ವತಂತ್ರ ಭಾಷೆ ಎನ್ನುತ್ತಾರೆ.

ಈ ಕಾರಣಗಳಿಂದ ವಿವಾದಗ್ರಸ್ತ ಪ್ರದೇಶವೆಂದು ಮಹಾರಾಷ್ಟ್ರೀಯರು ಕೇಳುತ್ತಿರುವ ಮೈಸೂರಿನ ಭಾಗವು ಕರ್ನಾಟಕದಲ್ಲಿಯೇ ಉಳಿಯಬೇಕಾದದ್ದು ಸೂಕ್ತ.

ಮಹಾರಾಷ್ಟ್ರದಲ್ಲಿರುವ ಕನ್ನಡ ಪ್ರದೇಶ

ಗಡಹಿಂಗ್ಲಜ, ಶಿರೋಳ, ಜತ್ತ, ಮಂಗಳವೇಡೆ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ ತಾಲೂಕುಗಳ ಕೆಲವು ಭಾಗಗಳನ್ನು, ಕರ್ನಾಟಕಕ್ಕೆ ವರ್ಗಾಯಿಸುವುದಕ್ಕೆ ಮಹಾರಾಷ್ಟ್ರ ಸರಕಾರವು ಸಮ್ಮತಿ ಸೂಚಿಸಿದೆ. ಆದರೆ ಸೊಲ್ಲಾಪುರ ನಗರ ಹಾಗೂ ಇನ್ನೂ ಇತರ ಕೆಲವು ಪ್ರದೇಶಗಳು ನ್ಯಾಯವಾಗಿ ಕರ್ನಾಟಕಕ್ಕೆ ಸೇರಬೇಕು. ಒಟ್ಟಾರೆ ರಾಜಕೀಯ ಒತ್ತಾಯ, ಹಾಗೂ ಉದ್ವೇಗ ಭಾವನೆಗಳಿಗೆ ಎಡೆಗೊಡದೆ, ರಾಷ್ಟ್ರಹಿತ, ಸಾಂಸ್ಕೃತಿಕ ಭಾವೈಕ್ಯ, ಆಡಳಿತೆಯ ಅನುಕೂಲ ಇವೇ ಮೊದಲಾದ ತತ್ವಗಳನ್ನು ಅನುಲಕ್ಷಿಸಿ ಈ ಗಡಿ ವಿವಾದವನ್ನು ಪರಿಶೀಲಿಸಬೇಕು.

ಮನವಿಯಲ್ಲಿ ವಿವಾದ ಪರಿಹಾರಕ್ಕಾಗಿ ಕೆಲವು ಸೂತ್ರಗಳನ್ನು ಸೂಚಿಸಲಾಗಿದೆ.

* * *

ದಿನಾಂಕ ೧೯-೪-೬೭ರಂದು ಬೆಂಗಳೂರಿನಲ್ಲಿ ಮಹಾಜನ ಆಯೋಗವನ್ನು ಕಂಡು ಮೇಲ್ಕಾಣಿಸಿದ ಮನವಿಗೆ ಪೂರಕವಾಗಿ ಮತ್ತೊಂದು ಸಾಕ್ಷ್ಯವನು ಪರಿಷತ್ತಿನ ಪರವಾಗಿ ಒಪ್ಪಿಸಲಾಯಿತು. ನಿಯೋಗದಲ್ಲಿ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ಹಾಗೂ ಕಾರ್ಯದರ್ಶಿ ಶ್ರೀ ವೆಂಕಟೇಶ ಸಾಂಗಲಿ ಅವರು ಇದ್ದರು. ಸಾಕ್ಷಿಯ ವಿವರ ಗಳನ್ನು ಸಂಕ್ಷೇಪವಾಗಿ ಕೆಳಗೆ ಕೊಡಲಾಗಿದೆ :

ಅಖಿಲ ಕರ್ನಾಟಕದ ಸಾಹಿತಿಗಳ, ವಿದ್ವಾಂಸರ, ಹಾಗೂ ಸಂಸ್ಕೃತಿ ಪ್ರೇಮಿಗಳ ಏಕಮೇವ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಐವತ್ತು ವರ್ಷಗಳಿಂದಲೂ ಬೆಳಗಾವಿ, ಕಾರವಾರ, ಕಾಸರಗೋಡು, ಸೊಲ್ಲಾಪುರ ಮೊದಲಾದ ಗಡಿ ಪಟ್ಟಣಗಳೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿ ಕನ್ನಡ ಭಾಷಾ-ಸಾಹಿತ್ಯದ ಪ್ರಚಾರವನ್ನು ಕೈಕೊಂಡಿದೆ. ಬೆಳಗಾವಿಯಲ್ಲಿ ಸಮ್ಮೇನಳದ ಮೂರು ಅಧಿವೇಶನಗಳೂ, ಕಾರವಾರದಲ್ಲಿ ಎರಡು ಅಧಿವೇಶನಗಳೂ, ಕಾಸರಗೋಡು, ಸೊಲ್ಲಾಪುರಗಳಲ್ಲಿ ಒಂದೊಂದು ಸಲವೂ ಸೇರಿ ಆಯಾ ಜನತೆಯ ಕನ್ನಡಾಭಿಮಾನವನ್ನು ವ್ಯಕ್ತಪಡಿಸಿವೆ.

ಬೆಳಗಾವಿಯಲ್ಲಿ ಮೊದಲ ಸಾಹಿತ್ಯ ಸಮ್ಮೇಳನ ನೆರೆದದ್ದು ೧೯೨೫ರಲ್ಲಿ. ಬೆನಗಲ್ ರಾಮರಾಯರು ಅಧ್ಯಕ್ಷರು. ಬೆಳಗಾವಿ ಜಿಲ್ಲೆಯ ಭಾಷೆ ಕನ್ನಡವೆಂದೂ, ಜನತೆಯ ಅನುಕೂಲತೆಗಾಗಿ ಅಲ್ಲಿ ಕನ್ನಡ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ ಒಂದು ನಿರ್ಣಯವನ್ನು ಸಮ್ಮೇಳನದಲ್ಲಿ ಸ್ವೀಕರಿಸಲಾಯಿತು. ೧೯೨೯ರಲ್ಲಿ ಎರಡನೆಯ ಸಲ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿತ್ತು. ಇದೇ ಸಂದರ್ಭದಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವೂ ನಡೆದಿತ್ತು.

ಭಾಷಾವಿವಾದವು ಬೆಳಗಾವಿಯಲ್ಲಿ ಸುಮಾರು ೧೯೨೫-೨೯ರಲ್ಲಿ ತೀವ್ರ ಸ್ವರೂಪ ತಾಳಿತು. ಬೃಹನ್ಮಹಾರಾಷ್ಟ್ರ ಆಂದೋಲನವು, ಮಹಾರಾಷ್ಟ್ರ ಜನತೆಯ ಸೀಮಾವಿಸ್ತಾರ ದಾಹದ ಸಂಕೇತವಾಗಿ ಕನ್ನಡಿಗರಲ್ಲಿ ಒಂದು ಬಗೆಯ ಕಳವಳವನ್ನುಂಟು ಮಾಡಿದ್ದೇ ಇದಕ್ಕೆ ಕಾರಣ. ಶಿವಾಜಿ ಮಹಾರಾಜನ ತ್ರಿಶತಸಾಂವತ್ಸರಿಕೋತ್ಸವ ಸಮಾರಂಭಕ್ಕಾಗಿ ಪುಣೆಯಲ್ಲಿ ಯೋಜಿತವಾದ ಕೇಂದ್ರ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಗಳನ್ನೂ ಸೇರಿಸಲಾಗಿತ್ತು. ಆ ಸಮಿತಿಯ ಕಾರ್ಯವ್ಯಾಪ್ತಿಯಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರದ ಒಂದು ಘಟಕವೆಂದು ಗುರುತಿಸಿದ್ದರಿಂದ ಕರ್ನಾಟಕದ ಕೆಲವು ಧುರೀಣರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಇದರ ಪರಿಣಾಮವಾಗಿ ಕನ್ನಡ-ಮರಾಠಿ ಗುಂಪುಗಳಲ್ಲಿ ವಿರಸಭಾವವು ತಲೆಯೆತ್ತಿ ೧೯೨೯ರಲ್ಲಿ ಬೆಳಗಾವಿಯಲ್ಲಿ ಸೇರಿದ್ದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡಿಗರು ತೀವ್ರ ವಿರೋಧವನ್ನು ಪ್ರದರ್ಶಿಸುವಂತಾಯಿತು. ಆಗ ಮಹಾರಾಷ್ಟ್ರದ ಧುರೀಣರು, ಬೆಳಗಾವಿಯು ಕರ್ನಾಟಕದ ಭಾಗವೆಂಬ ಅಂಶವನ್ನು ಒಪ್ಪಿ ಒಂದು ಸಾರ್ವಜನಿಕ ಪ್ರಕಟನೆಯ ಮೂಲಕ ಪ್ರಸಿದ್ಧಪಡಿಸಿದರು.

ಬೆಳಗಾವಿಯು ಕರ್ನಾಟಕದ ಭಾಗವೆಂಬ ಸಂಗತಿಯನ್ನು ಲೋ. ಟಿಳಕ, ನಂ ಚಿಂ. ಕೇಳಕರ ಮೊದಲಾದ ಮಹಾ

ರಾಷ್ಟ್ರದ ಮುಖಂಡರು ಮೊದಲಿನಿಂದಲೂ ಒಪ್ಪಿದ್ದಾರೆ. ೧೯೩೮ರ ಜೂನ್ ತಿಂಗಳಲ್ಲಿ ಬೆಳಗಾವಿಯ 'ಕರ್ನಾಟಕ ವೃತ್ತ' ಪತ್ರಿಕೆಗೆ ಕೇಳಕರರು ನಿಡಿದ್ದ ಒಂದು ಹೇಳಿಕೆಯಲ್ಲಿ (ಅದರ ಪೂರ್ತಿ ಪಾಠವನ್ನು ಸಾಕ್ಷಿಯ ಸಮಯದಲ್ಲಿ ಆಯೋಗಕ್ಕೆ ಒಪ್ಪಿಸಲಾಗಿದೆ). ಬೆಳಗಾವಿ ಮಾತ್ರವಲ್ಲ; ಉತ್ತರ ಕರ್ನಾಟಕದ ಎಲ್ಲ ದೇಶಿಯ ಸಂಸ್ಥಾನಗಳ ಭಾಷಸಮಸ್ಯೆಯ ಯಥಾರ್ಥ ಸ್ವರೂಪವು ಬಿಂಬಿಸಲ್ಪಟ್ಟಿದೆ. ಈ ಭಾಗದ ದೇಶಭಾಷೆಯು ಕನ್ನಡ; ದಕ್ಷಿಣ ಮಹಾರಾಷ್ಟ್ರವೆಂಬ ಹೆಸರು ಕೇವಲ ಪರಿಸ್ಥಿತಿವಶದಿಂದ ಪ್ರಾಪ್ತವಾದುದು. ಪ್ರಜೆಗಳ ಭಾಷೆ ಕನ್ನಡವಾದುದರಿಂದ ಈ ಭಾಗವು ಉತ್ತರ ಕರ್ನಾಟಕವೇ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.*

೧೯೨೯ರಲ್ಲಿ ಬೆಳಗಾವಿಯಲ್ಲಿ ಸೇರಿದ್ದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಬೆಳಗಾವಿಯುಕರ್ನಾಟಕದ ಭಾಗ, ಇಲ್ಲಿಯ ಬಹುಜನ ಭಾಷೆ ಕನ್ನಡವೆಂಬ ಅರ್ಥದ ನಿರ್ಣಯವು ಮಂಡಿಸಲ್ಪಟ್ಟಿತ್ತು; ಆದರೆ ರಾಜಕೀಯ ಸ್ವರೂಪದ ಅಂಥ ಚರ್ಚೆ ಸಾಹಿತ್ಯ ಸಮ್ಮೇಳನದಲ್ಲಿ ಕೂಡದು ಎಂಬ ತಾಂತ್ರಿಕ ಕಾರಣದಿಂದ ಆ ನಿರ್ಣಯವು ನಿಯಮಬಾಹ್ಯವಾಯಿತು. ಈ ಕಾರಣದಿಂದಲೇ ಮಹಾರಾಷ್ಟ್ರದ ಮುಂದಾಳುಗಳು ಹಿಂದೆ ಹೇಳಿದ ಪ್ರಕಟನೆಯನ್ನು ಹೊರಡಿಸಿ ಬೆಳಗಾವಿಯು ಕರ್ನಾಟಕದ ಭಾಗವೆಂದು ಸಾರಿದರು.

ಒಂಭತ್ತು ವರ್ಷಗಳನಂತರ ಅದೇ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಮುಂಬಯಿ ಅಧಿವೇಶನದಲ್ಲಿ ಬೆಳಗಾವಿ, ಕಾರವಾರ, ನಿಪ್ಪಾಣಿ ಮೊದಲಾದ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ನಿರ್ಣಯವಾದುದು ಆಶ್ಚರ್ಯಕರವೇ ಸರಿ.

ಬೆಳಗಾವಿಯಲ್ಲಿ ೧೯೨೯ರಲ್ಲಿ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮೂರನೆಯ ಸಲ ಸಮ್ಮೇಳನವು ಸೇರಿ, ಬೆಳಗಾವಿಯು ಎಂದೆಂದಿಗೂ ಕನ್ನಡ ಎಂದು ಘೋಷಿಸಿತು.

ಇತರ ಭಾಷೆಗಳೊಂದಿಗೆ ಕನ್ನಡವು ತುಂಬ ಗೌರವದಿಂದಲೂ, ಉದಾರ ಭಾವದಿಂದಲೂ ನಡೆದುಕೊಂಡಿದೆ. ನಮ್ಮ ಸಾಹಿತ್ಯ ಸಮ್ಮೇಳನಾಧ್ಯಕ್ಷರಲ್ಲಿ ಕೊಂಕಣಿ, ಮರಾಠಿ, ತೆಲುಗು, ತಮಿಳು ಮಾತೃಭಾಷೆಯವರೂ ಇದ್ದಾರೆ. ಮರಾಠಿಗರಿಗೆ ಕರ್ನಾಟಕದಲ್ಲಿ ಸಾಂಸ್ಕೃತಿಕ ವಿಕಾಸಕ್ಕೆ ಆಸ್ಪದವಿಲ್ಲ ಎಂಬ ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ಹೇಳಿಕೆಯು ಸತ್ಯಕ್ಕೆ ದೂರ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

"ಬೆಳಗಾವಿ ಜಿಲ್ಲೆ ಕನ್ನಡವಾಗಿದ್ದರೂ, ಬೆಳಗಾವಿ ಪಟ್ಟಣವು ಮರಾಠಿ; ಮರಾಠಿ ಧುರೀಣರು ಇದುವರೆಗೆ ಬಳಸಿದ ಬೆಳಗಾವಿ ಪದವು ಜಿಲ್ಲೆಗೆ ಅನ್ವಯಿಸುವುದೇ ಹೊರತು, ಪಟ್ಟಣಕ್ಕಲ್ಲ" ಎಂಬ ವಾದದಲ್ಲಿ ಹುರುಳಿಲ್ಲ. ಕನ್ನಡ ಮರಾಠಿ ಭಾಷಾವಾದಕ್ಕೆ ಬೆಳಗಾವಿಯೇ ತೊಟ್ಟಿಲು. ಈ ಭಾಷಾವಿವಾದದಲ್ಲಿ ಬೆಳಗಾವಿಯ ಬಗ್ಗೆ ಬಂದ ಉಲ್ಲೇಖನಗಳು ಬೆಳಗಾವಿಯ ಪಟ್ಟಣವನ್ನು ಕುರಿತೇ ಆಗಿವೆ ಎಂಬುದು ನಿಃಸಂಶಯ.

[* ಬೆಂಗಳೂರಿನ ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಕರ್ನಾಟಕದ ಶ್ರೇಷ್ಠಪತ್ರಿಕಾಕರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು 'ಕೇಳಕರರು ಕರ್ನಾಟಕದ ಮೇಲೆ ಮಾಡಿದ ಮಹದುಪಕಾರ' ಎಂಬ ಸಂಪಾದಕೀಯವನ್ನು ಈ ಸಂದರ್ಭದಲ್ಲಿಯೇ ಬರೆದಿದ್ದರು.] — ವೆಂ.

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿದ ಬಲವಿಲ್ಲ
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು
ಯಾವ ಮಂಕೋ ಕವಿದು ಹುದುಗಿರುವೆವಲ್ಲ?

ತೀ. ನಂ. ಶ್ರೀ

ಸಮ್ಮೇಳನಾಧ್ಯಕ್ಷರಿಗೆ ಅಭಿನಂದನೆಗಳು

ಡಾ|| ಆದಿನಾಥ ಉಪಾಧ್ಯೆ ಅವರು ಕರ್ನಾಟಕದ ಪಂಡಿತ ಪ್ರಪಂಚದಲ್ಲಿ ಮಾತ್ರವೇ ಅಲ್ಲ, ದೇಶ ವಿದೇಶಗಳಲ್ಲಿಯೂ ಹಿರಿಯ ಸ್ಥಾನ ಪಡೆದವರು. ಅಂಥವರು ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಹೊಂದಿದುದು ವಿದ್ವತ್ಪ್ರಪಂಚಕ್ಕೆ ಕರ್ನಾಟಕವು ಸಲ್ಲಿಸುತ್ತಿರುವ ಗೌರವ; ಅಧ್ಯಕ್ಷಪದವನ್ನು ಒಪ್ಪಿಕೊಂಡದ್ದು ತಾಯ್ನುಡಿಯ ಮೇಲಿನ ಅವರ ಅಭಿಮಾನದ ಸಂಕೇತ. ಸಮ್ಮೇಳನಾಧ್ಯಕ್ಷರಾಗಿ ಚುನಾಯಿತರಾಗಿರುವ ಡಾ|| ಉಪಾಧ್ಯೆಯವರನ್ನು 'ನುಡಿ'ಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಕನ್ನಡ ನಾಡು-ನುಡಿಯ ಹಿರಿಯ ಸೇವಕರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟದಲ್ಲಿ, ಕನ್ನಡ ಜನತೆಯ ಪರವಾಗಿ ಸತ್ಕರಿಸುವುದು ಪರಿಷತ್ತಿಗೆ ಪರಮ ಸಂತೋಷ. ಈ ಸ್ಥಾನಕ್ಕೆ ಅರ್ಹರಾದ ಪೂಜ್ಯ ವ್ಯಕ್ತಿಗಳು ಇನ್ನೂ ಹಲವರು ಇದ್ದಾರೆ. ಇಂಥ ಎಲ್ಲ ಮಹನೀಯರಿಗೆ ಗೌರವ ಸಲ್ಲಬೇಕು ಎಂಬುದು ಕನ್ನಡದ ಬಗ್ಗೆ ನಿಜವಾದ ಸದ್ಭಾವನೆಯುಳ್ಳ ಎಲ್ಲರ ಅಪೇಕ್ಷೆಯೂ ಆಗಿದೆ. ನಾಡು-ನುಡಿಯ ಅಭಿಮಾನ ಬೆಳೆದು ಸಮ್ಮೇಳನಗಳು ವರ್ಷಕ್ಕೆ ಎರಡು ಸಲ ನಡೆಯುವಂತಾಗಲಿ; ಕನ್ನಡ ನಾಡು-ನುಡಿಗಾಗಿ ಸರ್ವಸ್ವವನ್ನೂ ಅರ್ಪಿಸಿದ ಹಿರಿಯರೆಲ್ಲರೂ ಸಮ್ಮೇಳನಾಧ್ಯಕ್ಷರಾಗುವ ಸುಸಂದರ್ಭ ಒದಗುವಂತಾಗಲಿ. ಸಾಹಿತಿಗಳು ಅಂಥ ವಾತಾವರಣ ಸೃಷ್ಟಿಸಲಿ ಎಂದು 'ನುಡಿ'ಯು ಹಾರೈಸುತ್ತದೆ.

ಗಡಿ ವಿವಾದ

ಮೈಸೂರು-ಮಹಾರಾಷ್ಟ್ರ-ಕೇರಳ ಗಡಿವಿವಾದ ಪರಿಹಾರಕ್ಕಾಗಿ ಕೇಂದ್ರ ಸರಕಾರದಿಂದ ನಿಯೋಜಿತವಾದ ಮಹಾಜನ ಆಯೋಗವು ಸಾಕ್ಷಿ ಸಂಗ್ರಹ ಕಾರ್ಯವನ್ನು ಇದೀಗ ಪೂರೈಸಿದೆ. ಬೆಳಗಾವಿ, ಸೊಲ್ಲಾಪುರ ಮತ್ತು ಕಾಸರಗೋಡು ಪ್ರದೇಶಗಳಲ್ಲಿ ಭಾಷಿಕ ಸಾಂಸ್ಕೃತಿಕ ಅಭಿಯೋಗಕ್ಕೆ ತುತ್ತಾಗಿ ಕಳೆದ ಅನೇಕ ದಶಕಗಳಿಂದ ತಲ್ಲಣಿಸಿದ ಕನ್ನಡಿಗರು ಇದೀಗ ಮತ್ತೊಂದು ಪರೀಕ್ಷೆಗೆ ಗುರಿಯಾಗಿದ್ದಾರೆ. ತಾವು ಮಂಡಿಸಿದ ಸಾಕ್ಷಿ ಪುರಾವೆಗಳ ಪರಿಣಾಮವನ್ನು ಅವರು ಕುತೂಹಲದಿಂದ ನಿರೀಕ್ಷಿಸುತ್ತಲಿದ್ದಾರೆ. ನಿರ್ಣಯ ಎಂತೇ ಬರಲಿ, ಅದರ ಪರಿಣಾಮಗಳು ಮಾತ್ರ ತುಂಬ ದೂರಗಾಮಿ ಎಂಬುದರಲ್ಲಿ ಸಂದೇಹವಿಲ್ಲ.

ಮೈಸೂರಿನ ಪರವಾಗಿಯೇ ಆಯೋಗವು ತೀರ್ಮಾನಿಸಿದರೂ, ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷೆ ಸಂಸ್ಕೃತಿಗೆ ಆಗುತ್ತಲಿರುವ ಅನ್ಯಾಯ ಅಪಮಾನಗಳನ್ನು ಪ್ರತಿರೋಧಿಸಿ, ಯಶಸ್ವಿಯಾಗುವ ಶಕ್ತಿಯನ್ನು ಕನ್ನಡ ಜನತೆಯು ಪಡೆಯುವಂತಾಗುವವರೆಗೆ ಈ ಸಮಸ್ಯೆಗೆ ಪೂರ್ಣ ವಿರಾಮವಿಲ್ಲ. ಆಂಧ್ರ, ಮದ್ರಾಸು ರಾಜ್ಯಗಳೊಂದಿಗೆ ಇದ್ದ ಗಡಿವಿಭಾಗಕ್ಕೂ ಈ ಮಾತು

ಅನ್ವಯಿಸುವುದು. ಗಡಿ ಪ್ರದೇಶಗಳ ಜನ ಎಚ್ಚರಿಯ ಬೇಕು. ನಾಡು – ನುಡಿಯ ಅಭಿಮಾನದಿಂದ ಪ್ರೇರಿತರಾದ ಧ್ಯೇಯನಿಷ್ಠ, ದಕ್ಷ, ಯುವಜನಾಂಗವು ಮುಂದೆ ಬಂದು ಶಕ್ತಿಯುತವಾದ ಸಂಘಜೀವನವನ್ನು ನಿರ್ಮಿಸಬೇಕು; ಬೇರೆ ಬೇರೆ ಸಂಘಸಂಸ್ಥೆಗಳು ಹುಟ್ಟಬೇಕು. ಕನ್ನಡದ ಉಳಿವಿಗೆ ಇದೇ ದಾರಿ.

ಮಹಾರಾಷ್ಟ್ರದ ಬೇಡಿಕೆಯು ಅಗ್ರಾಹ್ಯವೆಂದು ಸಾಧಾರ ಪೂರ್ವಕವಾಗಿ ವಾದಿಸಿ ಪರಿಷತ್ತು ಮನವಿಗಳನ್ನು ಅರ್ಪಿಸಿದೆ. (ವಿವರಗಳನ್ನು ಇದೇ ಸಂಚಿಕೆಯಲ್ಲಿ ಬೇರೆಡೆಗೆ ಕೊಡಲಾಗಿದೆ.) ಕಾಸರಗೋಡನ್ನು ಕುರಿತ ಪ್ರತ್ಯೇಕ ಮನವಿಯು ಇಷ್ಟರಲ್ಲಿಯೇ ಹೋಗಲಿದೆ. ಅದರ ಪರಿಣಾಮವನ್ನು ಕಾದು ನೋಡಬೇಕು.

(೨೪ನೆ ಪುಟದಿಂದ ಮುಂದುವರೆದುದು)

ಪುಣೆ ವಿಶ್ವವಿದ್ಯಾನಿಲಯದ ಪತ್ರಿಕೆಯಲ್ಲಿ ಪ್ರಕಟವಾಗಿದೆ, ೧೯೬೦.

೨೦. **ಪಂಚವಿಂಶತಿ:** ಸಂಕಲನ ಗ್ರಂಥ, ಪದ್ಮನಂದಿ ಕವಿ ಬರೆದದ್ದು, ೧೨ನೆಯ ಶತಮಾನಕ್ಕೆ ಸೇರಿದ್ದ. ೨೪ ಸಂಸ್ಕೃತ ಮತ್ತು ಎರಡು ಪ್ರಾಕೃತ ಪ್ರಕರಣಗಳ ಮೋಕ್ಷ, ಧರ್ಮ, ಅಧ್ಯಾತ್ಮ, ನೀತಿ, ನ್ಯಾಯ, ಪ್ರಾರ್ಥನೆ, ಮತ ಮುಂತಾದ ಪ್ರಕ್ರಿಯೆಗಳ ಸಣ್ಣ ಪುಟ್ಟ ಪ್ರಕರಣಗಳಿಂದ ದೊಡ್ಡ ಪ್ರಕರಣದವರೆಗಿನ ವಿವರಗಳನ್ನು ಅಜ್ಞಾತ ಲೇಖಕನೊಬ್ಬನ ವ್ಯಾಖ್ಯಾನ ಸಮೇತ ಕೊಟ್ಟಿದೆ. ಇದರೊಡನೆ ಪಂಡಿತ ಬಾಲಚಂದ್ರರ ನವೀನ ಹಿಂದಿ ಭಾಷಾಂತರವೂ ಇದೆ. ಪೀಠಿಕೆ ಇಂಗ್ಲಿಷ್ ಮತ್ತು ಹಿಂದಿ ಎರಡರಲ್ಲೂ ಇದೆ. ಸಹ ಸಂಪಾದಕರು ಡಾ|| ಎಚ್. ಎಲ್. ಜೈನ್. ಪುಟ ೩೫೬, ಸೋಲಾಪುರ ೧೯೬೨.

೨೧. **ಆತ್ಮಾನುಶಾಸನ:** ಸಂಸ್ಕೃತ ಕಾವ್ಯ, ಗುಣಭದ್ರ ಕವಿಯದು, ಕ್ರಿ. ಶ. ಒಂಬತ್ತನೆಯ ಶತಮಾನದ ನಡುಗಾಲ. ಆತ್ಮಾನುಶಾಸನ ಮತೀಯ ಹಾಗೂ ನೀತಿಪ್ರಧಾನ ಕಾವ್ಯವಾದರೂ ಸುಂದರವಾದ ಸಂಸ್ಕೃತ ಪದ್ಯಗಳಿರುವ ಉತ್ತಮ ಕಾವ್ಯವೆಂಬ ಕೀರ್ತಿಗೆ ಪಾತ್ರವಾಗಿದೆ. ಗುಣಭದ್ರಕವಿ ಕನ್ನಡ ನಾಡಿನವನು, ಮಹಾಪುರಾಣದ ಉತ್ತರಾರ್ಧವಾದ ಉತ್ತರ ಪುರಾಣವನ್ನು ಬರೆದವನು. ಆತ ಜಿನಸೇನಾಚಾರ್ಯರ ಶಿಷ್ಯೋತ್ತಮ, ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಗುರುವಾಗಿದ್ದವನು. ಆತ್ಮಾನುಶಾಸನವನ್ನು ಶುದ್ಧಪಾಠದೊಡನೆ ಕೊಟ್ಟಿರುವುದಲ್ಲದೆ ಅದಕ್ಕೆ ಪ್ರಭಾಚಂದ್ರ ಬರೆದ ಸಂಸ್ಕೃತ ವ್ಯಾಖ್ಯಾನವನ್ನಿತ್ತು ಓದುಗರಿಗೆ ಅನುಕೂಲಿಸಿದ್ದಾರೆ. ಜೊತೆಗೆ ಹೊಸದಾಗಿ ಹಿಂದಿ ಅನುವಾದವನ್ನು ಸೇರಿಸಿದ್ದಾರೆ. ಇಂಗ್ಲಿಷ್ ಮತ್ತು ಹಿಂದಿ ಪೀಠಿಕೆಯೂ, ಉಪಯುಕ್ತ ಪರಿಶಿಷ್ಟವೂ ಗ್ರಂಥದ ಪ್ರಯೋಜನವನ್ನು ಇಮ್ಮಡಿಸಿವೆ. (ಸಹ ಸಂಪಾದಕರು ಡಾ|| ಎಚ್. ಎಲ್. ಜೈನ್) ಪುಟ ೩೪೧, ೧೯೬೧ ಮತ್ತು ಪಂಡಿತ ಬಾಲಚಂದ್ರಶಾಸ್ತ್ರಿ.

೨೨. **ಜ್ಞಾನಪೀಠ ಪೂಜಾಂಜಲಿ:** ಸ್ತೋತ್ರ ಸಂಗ್ರಹ, ಸಂಸ್ಕೃತ, ಪ್ರಾಕೃತ ಮತ್ತು ಹಿಂದಿಯಲ್ಲಿ ರಚಿತವಾಗಿರುವ ಉತ್ತಮ ಪೂಜಾ ಪದ್ಯಗಳ ಪ್ರಾರ್ಥನಾ ಪದ್ಯಗಳ ಪುಂಜ. ಇದನ್ನು ಪಂಡಿತ ಫೂಲಚಂದ್ರಶಾಸ್ತ್ರಿಯವರ ಹಿಂದಿ ಅನುವಾದದ ಸಮೇತ ಅಚ್ಚುಕಟ್ಟಾಗಿ, ಆಕರ್ಷಕವಾಗಿ ಅಚ್ಚು ಮಾಡಿಸಿದ್ದಾರೆ. ಕ್ರೌನ್ ಆಕಾರದಲ್ಲಿ ೫೪೦ ಪುಟಗಳ ಈ ಪ್ರಶಂಸನೀಯ ಪುಸ್ತಕ ಭಾರತೀಯ ಜ್ಞಾನ ಪೀಠದ ಪ್ರಕಟನೆ, ೧೯೫೭.

೨೩. **ಪುಸ್ತಕಗಳು ಮತ್ತು ಲೇಖನಗಳು:** (Books and papers), ಎಂಬತ್ತು ಪುಟದ ಈ ಪುಸ್ತಕದಲ್ಲಿ ಡಾ|| ಉಪಾಧ್ಯೆಯ'ವರು ಅಡಕವಾಗಿ ತಮ್ಮ ಮೂರು ದಶಕಗಳ ಮಹತ್ ಸಾಧನೆಯ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ಕಾಶೀ ಹಿಂದೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ|| ವಿ. ಎಸ್. ಅಗರವಾಲರ ಮುನ್ನುಡಿಯಿದೆ. ಉಪಾಧ್ಯೆಯವರ ಲೇಖನ ವ್ಯವಸಾಯದ ಆಳನಿರಾಳವನ್ನು ಕಾಣಬಯಸುವ ಕುತೂಹಲಿಗಳು ಇದನ್ನು ಅವಶ್ಯ ಅವಲೋಕಿಸಬೇಕು. ಕೊಲ್ಲಾಪುರ, ೧೯೫೭.

ಇಷ್ಟು ಪುಸ್ತಕಗಳಲ್ಲದೆ ಇನ್ನೂ ಕೆಲವು ಕೃತಿಗಳು ಅಚ್ಚಿಗೆ ಸಿದ್ಧವಾಗಿವೆ. ಡಾ|| ಉಪಾಧ್ಯೆಯವರು ಸುಮಾರು ೧೫೦ ಲೇಖನಗಳನ್ನು ಭಾರತಾದ್ಯಂತ ಪ್ರಕಟವಾಗುವ ವಿವಿಧ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಇಂಗ್ಲಿಷ್, ಹಿಂದಿ, ಮರಾಠಿ, ಕನ್ನಡ ಮುಂತಾದ ಬೇರೆಬೇರೆ ಭಾಷೆಗಳಲ್ಲಿ ಪ್ರಕಟವಾಗಿರುವ ಅವರ ಎಲ್ಲ ಲೇಖನಗಳ ಉಲ್ಲೇಖ ಸಾಧ್ಯವಿಲ್ಲವಾಗಿ ಕೇವಲ ಕೆಲವು ಕನ್ನಡ ಲೇಖನಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ದೇಶಿಕೋಶಗಳಲ್ಲಿನ ಕನ್ನಡ ಪದಗಳು, ೧೯೩೧
೨. ಚಿನ್ಮಯ ಚಿಂತಾಮಣಿ (ದಿವಂಗತ ಕೆ. ಜಿ. ಕುಂದಣಗಾರರೊಡನೆ), ಇದು ಕಲ್ಯಾಣಕೀರ್ತಿ ಕವಿಯ ಕಿರುಕಾವ್ಯ, ೧೯೩೦.
೩. ಜ್ಞಾನ ಭಾಸ್ಕರಚರಿತೆ (ಕುಂದಣಗಾರರೊಡನೆ) ಪೀಠಿಕೆಯೊಡನೆ ಪ್ರಕಟವಾಗಿರುವ ಆತ್ಮಜ್ಞಾನವನ್ನು ಕುರಿತ ಕನ್ನಡ ಕಾವ್ಯ.
೪. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ; ಪ್ರಬುದ್ಧ ಕರ್ನಾಟಕ, ೧೯೪೨ (ಅನುವಾದ ಪ್ರಾ|| ಡಿ. ಎಲ್. ಎನ್.)
೫. ಜಟಾಸಿಂಹನಂದಿಯ ವರಾಂಗ ಚರಿತೆ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೧೯೪೨.
೬. ಕವಿ ಪರಮೇಶ್ವರ ಅಥವಾ ಪರಮೇಷ್ಠಿ, ಪ್ರಬುದ್ಧ ಕರ್ನಾಟಕ, ೧೯೪೭

೭. ಪ್ರಾಕೃತ ಭಾಷೆಯಲ್ಲಿ ಜೈನಸಾಹಿತ್ಯ, ಸರ್ವಧರ್ಮ ಸಮ್ಮೇಳನ ರಜತ ಮಹೋತ್ಸವದ ವಿಶೇಷಾಂಕ, ೧೯೫೭.

೮. ಚಾವುಂಡರಾಯ ಮತ್ತು ಆತನ ಹಿಂದಿನ ಕೃತಿ ಕರ್ತರು (ಅನುವಾದ ಶ್ರೀ ಶಿವಣ್ಣ) ಪ್ರಬುದ್ಧ. ಕರ್ಣಾಟಕ, ೧೯೬೬.

೯. ರನ್ನಕವಿಯ ಕಾಲ, ದೇಶ ಮತ್ತು ವ್ಯಕ್ತಿತ್ವ, ವಿವೇಕಾಭ್ಯುದಯ, ೧೯೬೬. ಇದನ್ನು ಮೊದಲು ಕರ್ನಾಟಕ ವಿಶ್ವವಿದ್ಯಾನಿಲಯದವರು ಪ್ರಕಟಿಸಿದ್ದರು.

೧೦. ವಾಸೀಚಂದನಕಲ್ಪ, ಉಪಾಯನ, ೧೯೬೭.

ಡಾ. ಉಪಾಧ್ಯೆಯವರ ಒಟ್ಟು ಬರವಣಿಗೆ ಸುಮಾರು ಒಂದು ಲಕ್ಷ ಪುಟದಷ್ಟಿದೆ! ಒಬ್ಬ ಸಾಹಿತಿ ತನ್ನ ಬಹುಮುಖೀ ಪ್ರತಿಭೆಯಿಂದ ಎಷ್ಟು ಲೇಖನ ವ್ಯವಸಾಯ ಮಾಡಬಹುದೆಂಬುದಕ್ಕೆ ಅವರು ಜೀವಂತ ಸಾಕ್ಷಿಯಾಗಿದ್ದಾರೆ. ಇಂಥ ಒಬ್ಬ ಹಿರಿಯ ಸಾಹಿತಿಯನ್ನು ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಯ್ಕೆ ಮಾಡಿರುವುದು ಸಂಶೋಧಕ ಸಾಹಿತಿಗಳಿಗೊಂದು ಸಂತಸದ ಸುಗ್ಗಿ, ಕನ್ನಡಿಗರಿಗೊಂದು ಹೆಮ್ಮೆ. ಶ್ರವಣಬೆಳ್ಗೊಳದಲ್ಲಿ ಇವರು ಅಧ್ಯಕ್ಷರಾಗಿರುವುದು ಶಿಲಾ ಗೊಮ್ಮಟನಿರುವ ಕ್ಷೇತ್ರದಲ್ಲಿ ಕಲಾ ಗೊಮ್ಮಟನನ್ನು ನಿಲ್ಲಿಸಿದಂತಾಗಿದೆ.

ಪರಿಷತ್ತಿನ ಸುದ್ದಿಗಳು

ಆಚಾರ್ಯ ತೀ. ನಂ. ಶ್ರೀ. ಅವರ ಭಾವಚಿತ್ರ ಅನಾವರಣ

ತಾ. ೧೯-೪-೧೯೬೭ನೆಯ ಬುಧವಾರ ಸಂಜೆ ೬-೩೦ ಘಂಟೆಗೆ ಪರಿಷನ್ಮಂದಿರದಲ್ಲಿ ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀಮಾನ್ ಹೆಚ್. ಹೊಂಬೇಗೌಡರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಪದ್ಮಶ್ರೀ ವಿ. ಕೃ. ಗೋಕಾಕ್ ಅವರು ಆಚಾರ್ಯ ತೀ. ನಂ. ಶ್ರೀಕಂಠಯ್ಯನವರ ಭಾವ ಚಿತ್ರವನ್ನು ಅನಾವರಣ ಮಾಡಿದರು. ಈ ಭಾವಚಿತ್ರವನ್ನು ತೀ. ನಂ. ಶ್ರೀ. ಅವರ ಮಿತ್ರರೂ ಮತ್ತು ಶಿಷ್ಯರೂ ಪರಿಷತ್ತಿಗೆ ಕಾಣಿಕೆಯಾಗಿ ಕೊಟ್ಟಿರುತ್ತಾರೆ.

ಪ್ರಾರ್ಥನೆಯಾದನಂತರ ಪರಿಷತ್ತಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅತಿಥಿಗಳಿಗೂ ಸಭಾಸದರಿಗೂ ಸ್ವಾಗತವನ್ನು ಬಯಸಿದರು.

ಶ್ರೀ ಹೀ. ಚಿ. ಶಾಂತವೀರಯ್ಯನವರು ಮತ್ತು ಶ್ರೀ ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಆಚಾರ್ಯ ತೀ. ನಂ. ಶ್ರೀ. ಅವರ ಪಾಂಡಿತ್ಯ, ಪ್ರತಿಭೆ, ಯಾವ ಕಾರ್ಯದಲ್ಲಿಯೂ ಅವರಿಗಿದ್ದ ಅಚ್ಚುಕಟ್ಟುತನ, ಕನ್ನಡ ನಿಘಂಟಿನ ಕಾರ್ಯದಲ್ಲಿ ಅವರಿಗಿದ್ದ ಆಸಕ್ತಿ, ಅದರ ಪರಿಣಾಮವಾಗಿ ಅವರು ನಿಘಂಟಿಗೆ ಕೊಟ್ಟ ಖಚಿತರೂಪ ಮುಂತಾದ ವಿಚಾರಗಳನ್ನು ಕುರಿತು ಮಾತನಾಡಿದರು.

ಶ್ರೀ ಕೆ. ನಿಸಾರ್ ಅಹಮದ್ ಮತ್ತು ಶ್ರೀ ಕೆ. ಎಸ್. ಶಿವಪ್ಪ ಇವರುಗಳು ದಿವಂಗತ ತೀ. ನಂ. ಶ್ರೀ. ಅವರ ಬಗ್ಗೆ ಬರೆದಿದ್ದ ಕವನವಾಚನ ಮಾಡಿದರು.

ಪದ್ಮಶ್ರೀ ವಿ. ಕೃ. ಗೋಕಾಕರು ಭಾವಚಿತ್ರವನ್ನು ಅನಾವರಣಮಾಡಿ, ಈ ರೀತಿ ಮಾತನಾಡಿದರು :

ದಿವಂಗತ ತೀ. ನಂ. ಶ್ರೀಕಂಠಯ್ಯನವರು ಬಹಳ ಹಿರಿಯ ವ್ಯಕ್ತಿಗಳು. ಅವರ ಭಾವಚಿತ್ರವನ್ನು ಸುಮ್ಮನೆ ಗೋಡೆಗೆ ತಗಲಿ ಹಾಕಿದರೆ ಸಾಲದು. ಅವರ ಜೀವನ ಸ್ಫೂರ್ತಿಯು ಜಾಗೃತವಾಗಿರುವಂತೆ ನೋಡಿಕೊಳ್ಳಬೇಕು. ತೀ. ನಂ. ಶ್ರೀ. ಅವರು ಪಾಂಡಿತ್ಯಕ್ಕೆ ಮಿತ ಭಾಷೆಗೆ ಆದರ್ಶರಾದವರು. ರಸಮಯ ವಿಚಾರ ವಿನಿಮಯವೇ ಅವರ ಮಾತಿನ ವೈಶಿಷ್ಟ್ಯ. ಅವರು ಕವಿಗಳೂ ಹೌದು. ತಮ್ಮ ಕವಿತೆಗಳಲ್ಲಿ ಸೃಜತೆಯ ಹಾಗೂ ಔಚಿತ್ಯದ ಸಂಪ್ರದಾಯವನ್ನು ಹಾಕಿದ್ದಾರೆ.

ತೀ. ನಂ. ಶ್ರೀ. ಅವರು ಶ್ರೇಷ್ಠ ವಿಮರ್ಶನಕಾರರಾಗಿದ್ದರು. ಹೊಸ ಹಾದಿ, ಹೊಸ ಮಾತು, ಹೊಸ ಛಂದಸ್ಸು- ಇವುಗಳ ಬಗ್ಗೆ ಅವರು ಏನು ಹೇಳಿದ್ದರೋ ಸಾಹಿತ್ಯ ಅದನ್ನು ಮೀರಿ ಮುಂದುವರೆದಿಲ್ಲ. ವಿಮರ್ಶೆ ಎನ್ನುವುದಕ್ಕೆ ತೀ. ನಂ. ಶ್ರೀ. ಅವರ ವಿಮರ್ಶೆಯೇ ಪ್ರಮಾಣ; ಅದಕ್ಕಿಂತ ಬೇರೆ ಪ್ರಮಾಣ ಇಲ್ಲ. ವಿಮರ್ಶೆ ಎನ್ನು

ವುದು ಅದಕ್ಕಿಂತ ಮುಂದೆ ಹೋಗಲಾರದು. ಸತ್ಯ ದರ್ಶನದಲ್ಲಿ ಅವರ ಮಾತೇ ಪ್ರಮಾಣ. He has said the last word on the subject— ಅವರ ವಿಮರ್ಶಾ ಲೇಖನಗಳನ್ನು ಪರಿಷತ್ತು ಒಟ್ಟುಗೂಡಿಸಿ ಅಚ್ಚುಮಾಡಿ ಜನರು ಅವರ ಮಾರ್ಗವನ್ನು ಅನುಸರಿಸುವಂತೆ ಮಾಡ ಬೇಕು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿ, ಪ್ರಾಚೀನ ಅರ್ವಾಚೀನ ಸಾಹಿತ್ಯಗಳನ್ನು ತುಲನೆ ಮಾಡಿ, ಹಳೆಗನ್ನಡ ಹೊಸ ಗನ್ನಡಗಳ ತಿರುಳನ್ನು ತಿಳಿದು, ವಿಶಿಷ್ಟ ಸಾಹಿತ್ಯ ಪ್ರಜ್ಞೆ ಯಿಂದ ಅವರು 'ಭಾರತೀಯ ಕಾವ್ಯ ಮೀಮಾಂಸೆ' ಎನ್ನುವ ಗ್ರಂಥವನ್ನು ಬರೆದರು. ಇದು ಭಾಷಾಶಾಸ್ತ್ರ ಅಲಂಕಾರಶಾಸ್ತ್ರದ ದೃಷ್ಟಿಯಿಂದ ಕನ್ನಡ ನಾಡಿಗೆ, ಭಾರತಕ್ಕೆ ಮಾತ್ರವಲ್ಲ—ಇಡೀ ಪ್ರಪಂಚಕ್ಕೇ ಒಂದು ಮಾದರಿ ಗ್ರಂಥವಾಗಿದೆ. ಇಂಗ್ಲಿಷಿನಲ್ಲಿ ವಿಮರ್ಶೆ, ಕಾವ್ಯಮೀಮಾಂಸ ಶಾಸ್ತ್ರಕ್ಕೆ Bradley ಹೇಗೋ ಕನ್ನಡಕ್ಕೆ ಹಾಗೂ ಭಾರತದ ಭಾಷೆಗಳಿಗೆ ತೀ. ನಂ. ಶ್ರೀ. ಅವರು ಆಚಾರ್ಯರು.

ಕನ್ನಡ-ಕನ್ನಡ ನಿಘಂಟಿನ ಕೆಲಸವಂತೂ ಅವರ ಉತ್ತೇಜನ ಮತ್ತು ಸತತ ಶ್ರಮದಿಂದಲೇ ಪ್ರಾರಂಭವಾದದ್ದು. ಅವರ ಪಾಂಡಿತ್ಯವನ್ನೆಲ್ಲಾ ಅದರಲ್ಲಿ ಎರಕ ಹೊಯ್ದು ಅವರು ಅದನ್ನು ಮುಂದುವರಿಸಿಕೊಂಡು ಬಂದಿದ್ದರು. ಅವರ ಕಾವ್ಯಮಯ ಜೀವನದ ಭಾಗವಾಗಿಯೇ ಕನ್ನಡ ನಿಘಂಟು ನಡೆಯುತ್ತಿತ್ತು. ಆ ಕಾರ್ಯ ಮುಗಿಯುವ ಮೊದಲೇ ಅವರು ಅಮರರಾದುದು ದೊಡ್ಡ ನಷ್ಟವಾಗಿದೆ.

ತೀ ನಂ. ಶ್ರೀ ಅವರು ಕಾವ್ಯದಿಂದ ನಿಘಂಟಿನವರೆಗೆ ಸಾಹಿತ್ಯ ಸಂಸ್ಕೃತಿಯ ಸಾಹಸದಿಂದ ಸಾಹಿತ್ಯ ಗಿರಿಯನ್ನು ಹತ್ತಿದವರು. ಅವರ ನಿರ್ಲಿಪ್ತತೆ ವಿಮರ್ಶನಾದೃಷ್ಟಿ, ಪಾಂಡಿತ್ಯ,ಸಹೃದಯತೆಗಳನ್ನು ಕನ್ನಡ ಜನತೆ ಮರೆಯದ ಹಾಗೆ ಈ ಭಾವಚಿತ್ರ ಅವರ ಚಿರಂತನ ಸ್ಮರಣೆಯಾಗಿ, ಸಾಧನೆಯ ಆದರ್ಶವಾಗಿರಲಿ—ಎಂದು ಹಾರೈಸುತ್ತೇನೆ.

ಅನಂತರ ಅಧ್ಯಕ್ಷತೆ ವಹಿಸಿದ್ದ ಶ್ರೀಮಾನ್ ಹೊಂಬೇಗೌಡರವರು ದಿವಂಗತ ತೀ. ನಂ. ಶ್ರೀ. ಅವರ ಕನ್ನಡದ ಅಭಿಮಾನ, ಪಾಠ ಹೇಳುವಾಗ ಪ್ರದರ್ಶಿತವಾಗುತ್ತಿದ್ದ ಪಾಂಡಿತ್ಯ, ನಿರಾಡಂಬರವಾದ ಜೀವನದ ರೀತಿ, ಹಿತಮಿತ ವಾದ ಮಾತಿನ ಸರಣಿ ಇವುಗಳನ್ನು ಹೇಳಿ, ಅವರಿಗೆ ಪ್ರಿಯವಾಗಿದ್ದ ನಿಘಂಟನ್ನು ಬೇಗನೆ ಪ್ರಕಟಿಸುವುದೇ ಅವರಿಗೆ ನಾವು ಸಲ್ಲಿಸಬೇಕಾದ ಕಾಣಿಕೆ ಎಂದು ಹೇಳಿದರು.

ಶ್ರೀ ವೆಂಕಟೇಶ ಸಾಂಗಲಿಯವರಿಂದ ವಂದನಾರ್ಪಣೆಯಾದ ಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭ ಮುಕ್ತಾಯವಾಯಿತು.

ಯುಗಾದಿ ಉತ್ಸವ

ತಾ. ೧೦-೪-೧೯೬೭ನೆಯ ಸೋಮವಾರ ಸಂಜೆ ೬-೩೦ ಘಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀ ಪ್ಲವಂಗ ನಾಮ ಸಂವತ್ಸರದ ಯುಗಾದಿ ಉತ್ಸವವು ನಡೆಯಿತು. ಶ್ರೀ ಕೆ. ಗೋಪಾಲಕೃಷ್ಣರಾಯರು ಉತ್ಸವದ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ನಂತರ ಪಂಡಿತ ಎಂ. ವಿ. ಚಕ್ರವರ್ತಿಗಳು ರಾಮಾಯಣದ ಸಂದೇಶವನ್ನು ಕುರಿತು ಮಾತನಾಡಿದರು. ಶ್ರೀಮತಿ ಕಮಲಾ ರಾಮಕೃಷ್ಣ ಅವರು ಕಾವ್ಯವಾಚನ ಮಾಡಿದರು. ವೇ. ಶ್ರೀ. ಎಸ್. ಕೆ. ಪೂರ್ಣಬೋಧಾಚಾರ್ಯರು ಪಂಚಾಂಗ ಶ್ರವಣ ಮಾಡಿದರು. ಶ್ರೀ ಕೆ. ಗೋಪಾಲಕೃಷ್ಣರಾಯರು ಹೊಸವರುಷದ ಶುಭಾಶಯಗಳನ್ನು ಸರ್ವರಿಗೂ ಕೋರಿ ಪ್ಲವಂಗ ಸಂವತ್ಸರವು ಪರಿಷತ್ತಿಗೆ ಶ್ರೇಯಸ್ಸುಂಟು ಮಾಡಲೆಂದು ಹಾರೈಸಿದರು. ವಂದನಾರ್ಪಣೆಯಾದನಂತರ ಕಾರ್ಯಕ್ರಮ ಮುಕ್ತಾಯ ವಾಯಿತು.

ಮೂರನೆಯ ಉಪನ್ಯಾಸಮಾಲೆ

ದಿನಾಂಕ ೨೩-೪-೬೭ರಂದು ಗಾಂಧೀ ಸಾಹಿತ್ಯ ಸಂಘ ದವರು ಪರಿಷತ್ತಿನ ಆಶ್ರಯದಲ್ಲಿ ತಮ್ಮ ಮೂರನೆಯ ಉಪನ್ಯಾಸ ಮಾಲೆಯನ್ನು ಏರ್ಪಡಿಸಿದ್ದರು.

ವಿಷಯ: ದಿ. ವೆಂಕಟೇಶ ತಿರುಕೋ ಕುಲಕರ್ಣಿ (ಗಳಗನಾಥ) ಅವರ ಕೃತಿಗಳು. ಉಪನ್ಯಾಸಕರು: ಪ್ರೊ|| ಎಸ್. ಆರ್. ಮುಗಳಿಯವರು.

ಸ್ಥಳ: ಮಲ್ಲೇಶ್ವರದ ಎಂಟನೆಯ ಕ್ರಾಸಿನಲ್ಲಿರುವ ಗಾಂಧೀ ಸಾಹಿತ್ಯ ಸಂಘ.

ಪರಿಷತ್ತಿನ ಅಧ್ಯಕ್ಷರ ಕಾರ್ಯಕ್ರಮ: ಚಲನಚಿತ್ರದ ಪ್ರದರ್ಶನದ ಉದ್ಘಾಟನೆ

ಕೇಂದ್ರ ವಾರ್ತಾ ಪ್ರಚಾರ ಶಾಖೆಯ ಹಾಗೂ ರಾಜ್ಯ ಸರಕಾರದ ಪ್ರಚಾರದ ಆಶ್ರಯದಲ್ಲಿ ದಿನಾಂಕ ೨೩-೪-೬೭

ರಂದು ತುಮಕೂರಿನಲ್ಲಿ ಚಲನಚಿತ್ರದ ಪ್ರದರ್ಶನದ ಸಪ್ತಾಹವನ್ನು ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಉದ್ಘಾಟನೆ ಮಾಡಿದರು.

ತುಮಕೂರು ಜಿಲ್ಲಾ ಬರೆಹಗಾರರ ಸಂಘ

ದಿನಾಂಕ ೨೩-೪-೬೭ರಂದು ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ತುಮಕೂರು ಜಿಲ್ಲಾ ಬರೆಹಗಾರರ ಸಂಘದವರ 'ಜಿಲ್ಲಾ ಬರಹಗಾರರು' ಎಂಬ ಹೊತ್ತಗೆಯನ್ನು ಬಿಡುಗಡೆ ಮಾಡಿ ಉಪನ್ಯಾಸ ಮಾಡಿದರು. ಪರಿಷತ್ತಿನ ಚಟುವಟಿಕೆಯ ಬಗ್ಗೆ ಜಿಲ್ಲಾ ಬರಹಗಾರರ ಸಂಘದವರು ತಮ್ಮ ಮೆಚ್ಚುಕೆಯನ್ನು ವ್ಯಕ್ತಪಡಿಸಿದರು.

ಭಾಷಣ ಕಲಾ ತರಗತಿ ಪರೀಕ್ಷೆಯ ಫಲಿತಾಂಶ-೧೯೬೬

ಮೊದಲನೆಯ ತರಗತಿ

ಕ್ರಮಾಂಕ-೪

ಎರಡನೆಯ ತರಗತಿ

೩, ೧೯, ೨೦, ೨೧, ೨೩.

ಮೂರನೆಯ ತರಗತಿ

೬, ೯, ೧೬, ೨೪.

ಗಮಕ ಪ್ರೌಢಪರೀಕ್ಷೆಗಳು

ಪರಿಷತ್ತು ಕಳೆದ ವರ್ಷ ಒಂದು ಪ್ರಕಟಣೆಯನ್ನು ಹೊರಡಿಸಿ, ಸ್ವಂತ ವ್ಯಾಸಂಗಿಗಳ ಉಪಯೋಗಕ್ಕಾಗಿ (ಪಠ್ಯ ಭಾಗಗಳನ್ನು ಗೊತ್ತುಮಾಡಿ) ಗಮಕ ಪ್ರೌಢ ಪರೀಕ್ಷೆಯೊಂದನ್ನು ೧೯೬೭ನೆಯ ಜನವರಿ ತಿಂಗಳಿನಲ್ಲಿ ನಡೆಸುವುದಾಗಿ ತಿಳಿಯಪಡಿಸಿದ್ದಿತಷ್ಟೆ. ಇದಕ್ಕೆ ಯಾರಾದರೂ ವಿದ್ಯಾರ್ಥಿಗಳು ಸ್ವಂತ ಅಭ್ಯಾಸದಿಂದ ಈ ಪರೀಕ್ಷೆಗೆ ಪಾಠ ಪ್ರವಚನಗಳನ್ನು ಇದುವರೆಗೆ ಮಾಡಿಕೊಂಡಿದ್ದ ಪಕ್ಷದಲ್ಲಿ, ತಾವು ಅಭ್ಯಾಸಮಾಡಿರುವ ಪಾಠಭಾಗಗಳ ವಿವರಣೆಯೊಂದಿಗೆ ಪರಿಷತ್ತಿನ ಗೌರವ ಕಾರ್ಯದರ್ಶಿಗಳಿಗೆ ಕೂಡಲೇ ಬರೆದುಕೊಂಡಲ್ಲಿ ಮತ್ತು ಇಂತಹ ವಿದ್ಯಾರ್ಥಿಗಳ ಸಂಖ್ಯೆಯು ಹತ್ತಕ್ಕೆ ಕಡಮೆಯಿಲ್ಲದಿದ್ದ ಪಕ್ಷದಲ್ಲಿ, ಅವರಿಗಾಗಿ, ಗಮಕ ಪ್ರೌಢಪರೀಕ್ಷೆಯನ್ನು ೧೯೬೭ನೆಯ ಜೂನ್ ತಿಂಗಳ ಮೊದಲನೆಯ ವಾರದಲ್ಲಿ ನಡೆಸಲು ಪರಿಶೀಲಿಸಲಾಗುವುದು. ಹಾಗೂ ಈ ವಿಷಯದಲ್ಲಿ ಅವರಿಗೆ ಮುಂದೆ ತಿಳಿಸಲಾಗುವುದು.

೧೯೬೭ರ ಗಮಕ ಪ್ರೌಢಪರೀಕ್ಷೆಗಳು

ಪರಿಷತ್ತು ಗಮಕ ಪ್ರೌಢ ಪರೀಕ್ಷೆಗಳನ್ನು ಸ್ವಂತ ವ್ಯಾಸಂಗಿಗಳ ಪ್ರಯೋಜನಕ್ಕಾಗಿ ೧೯೬೭ನೆಯ ಜನವರಿ ತಿಂಗಳಿನಲ್ಲಿ ನಡೆಸುವುದಕ್ಕಾಗಿ ತಿಳಿಸಿ ಪಠ್ಯ ವಿಷಯಗಳನ್ನು ಹಿಂದೆಯೇ ಗೊತ್ತುಮಾಡಿ ಪ್ರಕಟಪಡಿಸಲಾಗಿದ್ದಿತಷ್ಟೆ. ಆ ಪ್ರಕಟಣೆಯ ಪ್ರಕಾರ ನಿಮ್ಮ ಕೇಂದ್ರ ಸಂಘ ಮಂಡಲಿಯಲ್ಲಿ ಮೇಲ್ಕಂಡ ಪರೀಕ್ಷೆಗೆ ಎಷ್ಟು ಮಂದಿ ಸ್ವಂತ ವ್ಯಾಸಂಗಿಗಳು ಈ ಕಲೆಯನ್ನು ಅಭ್ಯಾಸ ಮಾಡುತ್ತಿದ್ದಾರೆ? ಅವರಿಗೆ ಪಾಠ ಪ್ರವಚನಗಳು ಇದೇ ತಾ. ೩೧ನೆಯ ಮಾರ್ಚಿ ೧೯೬೭ರ ಹೊತ್ತಿಗೆ ಎಷ್ಟು ನಡೆದಿದೆ ಎಂಬ ವಿಷಯದಲ್ಲಿ ಕೂಡಲೇ ಪರಿಷತ್ತಿನ ಗೌರವ ಕಾರ್ಯದರ್ಶಿಗಳ ವಿಳಾಸಕ್ಕೆ ಪತ್ರವನ್ನು ಬರೆಯಲು ಕೋರಿದೆ.

ಉತ್ತರದಲ್ಲಿ ಯಾವ ಭಾಗಗಳು ಪಾಠವಾಗಿದೆಯೆಂಬುದನ್ನೂ ವಿವರವಾಗಿ [೧. ಸಾಹಿತ್ಯ, ೨. ಗಮಕ ಮತ್ತು ೩. ಸಂಗೀತ ವಿಭಾಗಗಳಿಗೆ] ತಿಳಿಸತಕ್ಕದ್ದು. ಬರೆಯಲು ಪಟ್ಟಿಯ ರೂಪದಲ್ಲಿದ್ದರೆ ಉತ್ತಮ.

ಈ ಪತ್ರಕೆ ಉತ್ತರವು, ನಿಮ್ಮಿಂದ ಪರಿಷತ್ತಿಗೆ ೨೫-೪-೧೯೬೭ರೊಳಗಾಗಿ ಬಾರದಿದ್ದಲ್ಲಿ, ಮೇಲ್ಕಂಡು ಪರೀಕ್ಷೆಗೆ ಕುಳಿತುಕೊಳ್ಳಲು ಅಪೇಕ್ಷಿಸುವ ವಿದ್ಯಾರ್ಥಿಗಳ ಯಾರೂ ನಿಮ್ಮ ಸಂಸ್ಥೆಯಿಂದ ಇಲ್ಲವೆಂದು ಭಾವಿಸಿ, ಈ ವಿಷಯವನ್ನು ಇಷ್ಟಕ್ಕೇ ಕೈಬಿಡಲಾಗುವುದು. ಉತ್ತರವು ನಿಮ್ಮಿಂದ ಬಂದರೆ, ಮೇಲ್ಕಂಡ ಪರೀಕ್ಷೆಯನ್ನು ೧೯೬೭ರ ಜೂನ್ ತಿಂಗಳ ಮೊದಲನೆಯ ವಾರದಲ್ಲಿ ನಡೆಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ, ನಿಮಗೆ ತಿಳಿಸಲಾಗುವುದು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು

		ರೂ. ಪೈ
೧.	ಕನ್ನಡದ ಬಾವುಟ (ಐದನೆಯ ಮುದ್ರಣ ೧೯೫೮)	೨=೦೦
೨.	ಸೀತಾ ಪರಿತ್ಯಾಗ (ಜೈಮಿನಿ ಭಾರತದಿಂದ ೧೯೬೧)	೦=೬೫
೩.	ಜೇಮ್ಸ್ ಏಬ್ರಹಾಮ್ ಗಾರ್‌ಫೀಲ್ಡನ ಚರಿತ್ರೆ: ಕ್ಯಾಲಿಕೋ ಪ್ರತಿ (೧೯೩೦)	೧=೫೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ (೧೯೩೮)	೧=೦೦
೪.	ಜ್ಯೋತಿರ್ವಿನೋದಿನಿ (೧೯೩೧)	೨=೦೦
೫.	ಹೂಮಾಲೆ (೧೯೪೩)	೦=೬೩
೬.	ಕನ್ನಡ ನಾಡಿನ ಚರಿತ್ರೆ: ಭಾಗ ೧	
	,, ಭಾಗ ೨ (ಎರಡನೆಯ ಮುದ್ರಣ ಅಚ್ಚಿನಲ್ಲಿದೆ)	೨=೦೦
	,, ಭಾಗ ೩ (,, ೧೯೫೯)	೧=೨೫
೭.	ಸರ್ವೋದಯ (೧೯೪೯)	೦=೩೨
೮.	ಸಂಕಲನ (೧೯೪೯)	೦=೬೩
೯.	ಅರುಂಧತಿ (೧೯೫೧)	೦=೨೫
೧೦.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ ೧೯೫೨)	೨=೦೦
೧೧.	ಹರಿದಾಸ ಸಾಹಿತ್ಯ–ಇಂಗ್ಲಿಷ್ ಉಪೋದ್ಘಾತದೊಡನೆ (೧೯೫೨)	೧೦=೦೦
೧೨.	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ (೧೯೫೨)	೮=೦೦
೧೩.	ಗಾಳಿಯಲ್ಲಿನ ಅಗೋಚರ ಶತ್ರುಗಳು (೧೯೫೪)	೧=೨೫
೧೪.	ನಕ್ಷತ್ರ ದರ್ಶನ (೧೯೫೪)	೧=೫೦
೧೫.	ಹರಿದಾಸ ಕೃತಿಮಂಜರಿ (೧೯೫೫)	೧=೨೫
೧೬.	ಪ್ಲೇಟೋವಿನ ಆದರ್ಶರಾಜ್ಯ (೧೯೫೬)	೧=೩೮
೧೭.	ವಾಚನ ಕಾವ್ಯಮಂಜರಿ (೧೯೫೫)	೦=೧೯
೧೮.	ಚೇರಮ ಕಾವ್ಯಂ (೧೯೫೬)	೨=೦೦
೧೯.	ಅನುಭವ ಮುಕುರಂ (೧೯೫೬)	೦=೩೮
೨೦.	ಆಧುನಿಕ ಗದ್ಯ ಸಾಹಿತ್ಯ (ಎರಡನೆಯ ಮುದ್ರಣ ೧೯೬೧)	೨=೫೦
೨೧.	ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ ೧೯೫೮)	೪=೦೦
೨೨.	ಕಾದಂಬರಿ–ಸಾಮಾನ್ಯ ಮನುಷ್ಯ (೧೯೫೭)	೧=೦೦
೨೩.	ಉದ್ಭಟದೇವ ಚರಿತೆ (೧೯೫೭)	೧=೫೦
೨೪.	ತ್ರಿಪುರದಹನ ಸಾಂಗತ್ಯ (೧೯೫೯)	೦=೭೫
೨೫.	ಮೂರು ಸ್ಪರ್ಧಾ ನಾಟಕಗಳು (೧೯೫೯)	೨=೭೫
೨೬.	ಕಾವ್ಯ ಸೌರಭ (೧೯೬೨)	೨=೦೦
೨೭.	**ಕರ್ಣಾಟಕ ಕವಿಚರಿತೆ (೧ನೆ ಭಾಗ)**	**೧೨=೦೦**
	,, ,, ಲೈಬ್ರರಿ ಪ್ರತಿಗಳು	**೧೫=೦೦**
೨೮.	ಕಾವ್ಯಗಾಯನ ಕಲಾ ಸಂಗ್ರಹ	೧=೨೫

ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆ ವಿನಾ ಮಿಕ್ಕೆಲ್ಲ ಪುಸ್ತಕಗಳಿಗೆ ಶೇ. 25ರಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

Reg. No. B. G. 4—May 1967 pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೬–೭
ಸಂಪುಟ : ೩೦

ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ
ಶ್ರೀನಿವಾಸರಾವ್ ಕೊರಟಿ
ಆರ್. ರಾಜಪ್ಪ

ಜೂನ್-ಜುಲೈ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ.

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ-ಕನ್ನಡ ನಿಘಂಟು

ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ "ಕನ್ನಡ ನಿಘಂಟು" ಡೆಮ್ಮಿ ಚತುಷ್ಪತ್ರ ಆಕಾರದ ಸುಮಾರು ೫,೦೦೦ ಪುಟಗಳನ್ನು ಒಳಗೊಂಡು, ಒಂದೊಂದು ಸಂಪುಟದಲ್ಲೂ ಸುಮಾರು ೧೨೫೦ ಪುಟಗಳಿರುವ ನಾಲ್ಕು ಸಂಪುಟಗಳಲ್ಲಿ (Volumes) ಪ್ರಕಟವಾಗುವಂತೆ ಏರ್ಪಡಿಸಿದ್ದು ಮೊದಲ ಸಂಪುಟದ ಎರಡನೆಯ ಸಂಚಿಕೆ ಈಗಾಗಲೇ ಪ್ರಕಟವಾಗಿದೆ.

ನಿಘಂಟಿನ ಒಟ್ಟು ಬೆಲೆ ೧೨೦ ರೂಪಾಯಿಗಳು; ಮುಂಗಡವಾಗಿ ಹಣ ಸಲ್ಲಿಸುವ ಗ್ರಾಹಕರಿಗೆ ೧೦೦ ರೂಪಾಯಿಗಳ ರಿಯಾಯಿತಿ ದರದಲ್ಲಿ ಅದನ್ನು ಒದಗಿಸಲಾಗುತ್ತದೆ. ನಿಘಂಟು ಸಿದ್ಧವಾದಂತೆಲ್ಲ ೯೬ ಪುಟಗಳುಳ್ಳ ಸಂಚಿಕೆಗಳ (Fascicules) ರೂಪದಲ್ಲಿ ಅದನ್ನು ಮುಂಗಡವಾಗಿ ೧೦೦ ರೂಪಾಯಿಗಳ ರಿಯಾಯಿತಿಯ ಬೆಲೆಯನ್ನು ಸಲ್ಲಿಸಿರುವ ಗ್ರಾಹಕರಿಗೆ ತಲುಪಿಸಲಾಗುವುದು. ಮುಂಗಡ ಹಣ ನೂರು ರೂಪಾಯಿಗಳನ್ನು ಹತ್ತು ರೂ.ಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಪಾವತಿ ಮಾಡಬಹುದು. ಆದರೆ ಪೂರ್ತ ಹಣ ಸಂದಾಯವಾಗುವವರೆಗೆ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ.

ನಿಘಂಟಿನ ಎರಡನೆಯ ಸಂಪುಟವು ಪ್ರಕಟವಾದ ಕೂಡಲೆ **ರಿಯಾಯಿತಿಯ ದರದಲ್ಲಿ** ಅದನ್ನು ವಿಕ್ರಯಿಸುವುದನ್ನು ನಿಲ್ಲಿಸಲಾಗುತ್ತದೆ; ಆ ಮುಂದೆ ಪೂರ್ಣವಾದ ಬೆಲೆಯನ್ನು ಕೊಡಬೇಕಾಗುತ್ತದೆ.

ನಿಘಂಟಿನ ಒಂದು ಸಂಪುಟವು ಸಿದ್ಧವಾದ ಬಳಿಕ ಅದರ ರಕ್ಷಾಕವಚವನ್ನು (Binding Case) ಮುಂಗಡವಾಗಿ ಬೆಲೆ ಸಲ್ಲಿಸಿರುವ ಗ್ರಾಹಕರಿಗೆ ಉಚಿತವಾಗಿ ಒದಗಿಸಲಾಗುವುದು.

ಸಂಚಿಕೆಗಳನ್ನೂ ರಕ್ಷಾಕವಚಗಳನ್ನೂ ಕಳಿಸಲು ಅಂಚೆವೆಚ್ಚವನ್ನು ಗ್ರಾಹಕರೇ ಸಲ್ಲಿಸತಕ್ಕದ್ದು.

ಗ್ರಾಹಕರು ಮುಂಗಡ ಬೆಲೆಯ ಜೊತೆಗೆ ಹತ್ತು ರೂಪಾಯಿಗಳನ್ನು ಅಂಚೆವೆಚ್ಚ, ರವಾನೆ ವೆಚ್ಚಗಳಿಗಾಗಿ ಸಲ್ಲಿಸಬೇಕು. ಸಂಚಿಕೆಗಳನ್ನು "ರಿಜಿಸ್ಟರ್ಡ್ ಪೋಸ್ಟ್" ಮೂಲಕ ಕಳಿಸಬೇಕೆಂದು ಗ್ರಾಹಕರು ಅಪೇಕ್ಷಿಸಿದಲ್ಲಿ ಆ ವಿಷಯವನ್ನು ಅವರು ಲಿಖಿತರೂಪದಲ್ಲಿ ಮೊದಲೇ ತಿಳಿಸಬೇಕು. ಹಾಗೆ ಮಾಡದಿದ್ದರೆ ಸಂಚಿಕೆಗಳನ್ನು "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಸಮೇತವಾಗಿ ಸಾದಾ ಟಪಾಲಿನ ಮೂಲಕ ಕಳಿಸಲಾಗುವುದು. ಸಂಚಿಕೆಗಳನ್ನು ಪರಿಷತ್ತಿನ ಕಚೇರಿಯಲ್ಲೇ ತೆಗೆದುಕೊಳ್ಳಲು ಅಪೇಕ್ಷಿಸುವವರು ಮುಂಚಿತವಾಗಿ ತಿಳಿಸಿ ಆ ರೀತಿ ಮಾಡಬಹುದು; ಅಂಥವರು ಅಂಚೆವೆಚ್ಚವನ್ನು ಕೊಡಬೇಕಾಗುವುದಿಲ್ಲ.

ನಿಘಂಟಿನ ಬಿಡಿಸಂಚಿಕೆಗಳನ್ನು ಪ್ರತಿ ಒಂದಕ್ಕೆ **ನಾಲ್ಕು** ರೂಪಾಯಿಗಳಂತೆ ಪಡೆಯಬಹುದು.

ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

ಈ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ವ್ಯವಹಾರ ಮಾಡಬಹುದು.

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಜೂನ್ ಜುಲೈ ೧೯೬೭

ಸಂಪುಟ : ೩೦

ಸಂಚಿಕೆ : ೬–೭

ಈ ಸಂಚಿಕೆಯಲ್ಲಿ . . .

ನಾವು ಕನ್ನಡಿಗರು

•

ಕೆ. ಆರ್. ಗಣೇಶರಾವ್

ನಾವು ಕನ್ನಡಿಗರು
ಸತ್ತ ಸತ್ವದ ಪ್ರೇತ ಜೀವಿಗಳು
ನಮಗಿಲ್ಲ ಹೃದಯ ಬಲ ; ನಾಡು ನುಡಿಯದರ ಛಲ
ಕೂಳು ಕುಟುಕುವ ಕೋಟಿ ಕುನ್ನಿಗಳು
ಕಂಡವರ ಕಾಲೊದೆತ ನಮಗೆ ಸನ್ಮಾನ
ಪರರ ಪೂಜಿಸುವುದೇ ನಮಗೆ ಬಹುಮಾನ
ನಾವು ಕನ್ನಡಿಗರು ‖ ೧ ‖

ನಾವು ಕನ್ನಡಿಗರು
ನಮಗಿತ್ತು ಸಿರಿನಾಡು ಕೃಷ್ಣ–ಗೋದೆಯ ಬೀಡು
ಕಾವೇರಿ ಕಾಲ್ತೊಳೆದ ಕಲಿಗಳಾಳಿದ ನಾಡು
ಗಂಧ ಚಂದದ ಬೀಡು, ಶಿಲ್ಪಕಲೆಗಳ ಗೂಡು
ಕವಿ ವಾಗ್ಮಿ ಗಾಯಕರ ನಲ್ಮೆವೀಡು
ಉಳಿಸಿದೆವು ಇಂದೇನು ಬರಿಯ ಸುಡುಗಾಡು
ನಾವು ಕನ್ನಡಿಗರು ‖ ೨ ‖

ನಾವು ಕನ್ನಡಿಗರು
ಹೆತ್ತ ತಾಯಿಯ ತುಳಿದು ತೊತ್ತ ಮೆರೆಸುವ ಜನರು
ಹೊತ್ತು ಸಲಹಿದ ಜನನಿ ಕೊರಳು ಕಡಿವವರು
ನಮ್ಮವರು ನಮಗೆ ಹಗೆ ಅನ್ಯರೆಲ್ಲರು ಹಿತರು
ಅವರ ಹಿತರಕ್ಷಣೆಯೆ ನಮಗೆ ಒಲವು
ಮನೆ ಮುರಿದು ಮಂಟಪವ ಕಟ್ಟುವವರು
ನಾವು ಕನ್ನಡಿಗರು ‖ ೩ ‖

ನಾವು ಕನ್ನಡಿಗರು
ನಾಡು–ನುಡಿ ಅಭಿಮಾನವಿಲ್ಲದವರು
ನಮ್ಮತನ ಅಡವಿಟ್ಟ ಪಿಂಡ ಪ್ರಾಣಿಗಳು
ನಮಗಿಲ್ಲ ಗಂಡಸುತನದ ಕೆಚ್ಚು ; ಕನ್ನಡದ ಹುಚ್ಚು
ನಮಗಿಲ್ಲ ಬದುಕಿ ಬೆಳೆಯುವ ಕಸುವು
ಪಾರತಂತ್ರ್ಯದ ಪರಪುಟ್ಟ ಪಕ್ಷಿಗಳು
ನಾವು ಕನ್ನಡಿಗರು ‖ ೪ ‖

MINISTER FOR
FINANCE AND PLANNING

BANGALORE-1
ದಿನಾಂಕ: 23-5-1967

ಸಂದೇಶ

ಮಾನ್ಯರೇ,

ಶ್ರವಣಬೆಳುಗೊಳದಲ್ಲಿ ಸೇರಲಿರುವ ೪೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣದ ಪತ್ರ ತಲುಪಿ ಸಂತೋಷವಾಯಿತು.

ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ದುಡಿದ, ದುಡಿಯುತ್ತಿರುವ ಸಹೃದಯ ಸಾಹಿತಿಗಳು ಅಪರೋಕ್ಷವಾಗಿ, ಆಯಾಯಾ ನಾಡಿನ ಜನಮನವನ್ನು ತಿದ್ದಿ ಸುಸಂಸ್ಕೃತ ಸಮಾಜವನ್ನು ನಿರ್ಮಿಸುವ ಮಹತ್ ಕಾರ್ಯವನ್ನು ಕೈಗೊಂಡಿರುವುದನ್ನು ಎಲ್ಲ ನಾಡಿನ ಇತಿಹಾಸ ತಿಳಿಸುತ್ತದೆ. ಇಂತಹ ವಿದ್ವಜ್ಜನ ಒಂದೆಡೆ ಸೇರುತ್ತಿರುವ ಸಾಹಿತ್ಯ ಸಮ್ಮೇಳನ ಜನಸಾಮಾನ್ಯರ ನಡಿಗೆಯನ್ನು ನಿರ್ದೇಶಿಸುವ ಚುಕ್ಕಾಣಿಯಂತಾಗುವದರಲ್ಲಿ ಸಂದೇಹವೇ ಇಲ್ಲ. ಕನ್ನಡ ಜನಮನದ ಮೆಚ್ಚುಗೆಯನ್ನು ಪಡೆದು ಸಾಹಿತ್ಯ ಸಮ್ಮೇಲನವು ಸಾಂಗವಾಗಿ ಜರುಗಲೆಂದು ಹಾರೈಸಿ ಈ ಮೂಲಕ ನನ್ನ ಶುಭೇಚ್ಛೆಗಳನ್ನು ಕಳಿಸುತ್ತಿದ್ದೇನೆ.

ತಮ್ಮ ವಿಶ್ವಾಸಿಕ

ರಾಮಕೃಷ್ಣ ಹೆಗಡೆ

MINISTER OF TRANSPORT & SHIPPING
INDIA

NEW DELHI
May 26, 1967

MESSAGE

I am happy to note that the Forty-Sixth Kannada Sahitya Sammelan is to meet at Sravanabelagola, one of the historic places in Karnataka.

LITERATURE thrives on history and history in turn gets immortalised through works of literature. Sravanabelagola with its serene beauty, historic importance and unruffled peace will provide an ideal environment for the deliberations of those who have made literature their main misson in life. My best wishes for the success of the Sammelan go with this.

V. K R. V. RAO

MINISTER OF STATE FOR
ATOMIC ENERGY

NEW DELHI
May 24, 1967

MESSAGE

I am very glad to learn that the Kannada Sahitya Parishat is going to hold the 46th Kannada Literary Conference on the 26th to 28th May 1967 to represent the culture and literature of Karnataka and discuss problems confronting the growth of literature etc., connected with Kannada language.

I send my warm good wishes for the great success of the function.

M. S. GURUPADASWAMY

MINISTER OF STATE FOR EDUCATION
GOVERNMENT OF INDIA

NEW DELHI
May 26, 1967

MESSAGE

I am very happy to learn about the organisation of the 46th Kannada literary conference from 26th to 28th May, 1967 at Sravanabelagola in Mysore State and to note in particular that the conference will discuss problems confronting the growth of literature and the relationship among different Indian Languages.

THE Indian languages have undoubtedly to be given greater attention than has been possible so far. I wish the conference all success.

SHER SINGH

ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಡಾ. ಆದಿನಾಥ ನೇಮಿನಾಥ ಉಪಾಧ್ಯೆ ಅವರಿಗೆ

ಶ್ರವಣಬೆಳುಗೊಳದ ಪುರಸಭೆಯ ಪರವಾಗಿ

ಅ ರ್ಪಿ ಸಿ ದ

ಸ ನ್ಮಾ ನ ಪ ತ್ರ

ವಿದ್ವಾಂಸ ಶ್ರೇಷ್ಠರೇ,

ಶ್ರವಣಬೆಳುಗೊಳವು ಚಾರಿತ್ರಿಕ ಮಹತಿಯನ್ನು ಪಡೆದ ಪುಣ್ಯಕ್ಷೇತ್ರ. ವಿಂಧ್ಯಗಿರಿ, ಚಂದ್ರಗಿರಿ ಬೆಟ್ಟಗಳ ಮಧ್ಯೆ, ಕಲ್ಯಾಣಿ ಪುಷ್ಕರಿಣಿಯನ್ನು ಸುತ್ತಿ ಹಬ್ಬಿಕೊಂಡಿರುವ ಈ ರಮಣೀಯ ತಾಣವು ಸಾವಿರಾರು ವರ್ಷಗಳಿಂದ ದೇಶ–ವಿದೇಶದ ಭಕ್ತರನ್ನೂ, ಕಲಾಪ್ರೇಮಿಗಳನ್ನೂ ಆಕರ್ಷಿಸಿದೆ. ಅಸಂಖ್ಯ ಸವಣರೂ ಆರ್ಯಕೆಯರೂ, ರಾಜಮಹಾರಾಜರೂ ಸಲ್ಲೇಖನ ಪಡೆದು ಸಿದ್ಧಿಹೊಂದಿದ ಪಾವನ ಕ್ಷೇತ್ರ ಇದು. ಮಹಾ ಮಹಿಮರ ತ್ಯಾಗ, ಸತ್ಕಾರ್ಯಗಳನ್ನು, ಸಾರುವ ಹಲವಾರು ಶಿಲಾಶಾಸನಗಳನ್ನು ಹೊತ್ತುಕೊಂಡ ಶ್ರವಣಬೆಳುಗೊಳವು ಸಂಶೋಧಕರಿಗೆ ಜ್ಞಾನದ ಆಗರವೇ ಆಗಿದೆ.

ಪ್ರಪಂಚಕ್ಕೆ ನಿರಂತರವಾಗಿ ಶಾಂತಿ–ವಿರಾಗದ ಸಂದೇಶ ಬೀರುತ್ತ ವಿರಾಜಿಸುತ್ತಿರುವ ಶ್ರೀ ಬಾಹುಬಲಿಯು ಕನ್ನಡ ಸಾಹಿತ್ಯಕ್ಕೆ ಆರಂಭಕಾಲದಿಂದಲೂ ಸ್ಫೂರ್ತಿಯನ್ನು ನೀಡುತ್ತ ಮೆರೆದಿದ್ದಾನೆ. ಪಂಪ–ರನ್ನ ರತ್ನಾಕರ ಮೊದಲಾದ ಕವಿಶ್ರೇಷ್ಠರ ಮಹಾಕೃತಿಗಳಿಗೆ ಆತನೇ ಪ್ರಾಣಪ್ರತಿಷ್ಠಾಪಕನೆನಿಸಿದ್ದಾನೆ. ಕನ್ನಡ ಭಾಷಾ–ಸಾಹಿತ್ಯಗಳ ಚರಿತ್ರೆಯಲ್ಲಿ ಶ್ರವಣಬೆಳುಗೊಳ ಕ್ಷೇತ್ರವು ಒಂದು ವಿಶಿಷ್ಟ ಹಾಗೂ ಮಹತ್ವಪೂರ್ಣವಾದ ಸ್ಥಾನ ಪಡೆದಿದೆ.

ನಮ್ಮ ಪುರಸಭೆಯು ೧೯೧೮ರಲ್ಲಿ ಸ್ಥಾಪಿತವಾದುದು. ಕ್ಷೇತ್ರ ನಿವಾಸಿ ಹಾಗೂ ಯಾತ್ರಾರ್ಥಿಗಳಿಗೆ ಸೌಕರ್ಯವನ್ನು ಒದಗಿಸುವಲ್ಲಿ ಪುರಸಭೆಯು ಕೆಲಮಟ್ಟಿಗೆ ಕಾರ್ಯಪ್ರವೃತ್ತವಾಗಿದ್ದು, ಇನ್ನೂ ಕೆಲವು ಯೋಜನೆಗಳನ್ನು ರೂಪಿಸಲಿದೆ. ಯಾತ್ರಾರ್ಥಿಗಳು ಮತ್ತು ವಿಹಾರಿಗಳ ಸಂಖ್ಯೆ ದಿನದಿನವೂ ಹೆಚ್ಚುತ್ತಿರುವುದರಿಂದ, ನಮ್ಮ ಕಾರ್ಯಕ್ರಮಗಳು ಇನ್ನೂ ತ್ವರಿತಗೊಳ್ಳಬೇಕಾಗಿದೆ. ಇದೀಗ ಶ್ರವಣಬೆಳುಗೊಳವು ವಿದ್ಯಾಕೇಂದ್ರವೂ ಆಗಿ, 'ಗೊಮ್ಮಟನಗರ'ವಾಗಿ ಶಿಕ್ಷಣರಂಗದಲ್ಲಿ ಕಾಲಿಡುತ್ತಿರುವುದು ಶುಭಸೂಚಕವಾಗಿದೆ.

ಕನ್ನಡನಾಡಿನ ವರಪುತ್ರರಾದ ತಾವು, ಇಲ್ಲಿ ಸೇರುತ್ತಲಿರುವ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ನಮಗೆ ಹೆಮ್ಮೆಯ ವಿಷಯ. ಭಾರತದ ವಿವಿಧ ಭಾಷೆಗಳಲ್ಲಿ ಪ್ರಾವಿಣ್ಯತೆ ಪಡೆದ ಹಲವು ವಿಶ್ವವಿದ್ಯಾನಿಲಯಗಳಿಂದ ಪ್ರಶಸ್ತಿಪಡೆದ ಕೀರ್ತಿಶಾಲಿಗಳು ತಾವು. 'ಪಂಚಸುತ್ತಮ್', 'ಪ್ರವಚನ ಸಾರ', 'ಪರಮಾತ್ಮ ಪ್ರಕಾಶ', 'ವರಾಂಗಚರಿತ' ಮೊದಲಾದ ಹಲವಾರು ಪ್ರಾಚೀನ ಗ್ರಂಥಗಳ ಸಂಶೋಧನೆಯಿಂದ ನಮ್ಮ ಭಾರತೀಯ ಸಾಹಿತ್ಯಕ್ಕೆ ತಾವು ಜೀವದಾನ ಮಾಡಿದವರು. ಕಳೆದ ವರ್ಷ ಅಖಿಲಭಾರತ ಪ್ರಾಚ್ಯವಿದ್ಯಾ ಸಮ್ಮೇಳನದ ಅಧ್ಯಕ್ಷರಾಗಿ, ದೇಶದ ಸಮಗ್ರ ವಿದ್ವಾಂಸರ ಗೌರವಕ್ಕೆ ತಾವು ಪಾತ್ರರಾಗಿದ್ದಿರಿ.

ತಮ್ಮ ಘನ ಅಧ್ಯಕ್ಷತೆಯುಲ್ಲಿ, ಕನ್ನಡ ನಾಡಿನ ವಿದ್ವಾಂಸರ, ಸಾಹಿತಿಗಳ ಈ ಸಮ್ಮೇಳನವು ವಿಜೃಂಭಿಸುವುದರಲ್ಲಿ ಸಂದೇಹ ವಿಲ್ಲ.

ಕನ್ನಡ ನಾಡು ನುಡಿಯ ಸೇವೆಯನ್ನು ಇತೋಪ್ಯ–ಅತಿಶಯವಾಗಿ ಕೈಕೊಳ್ಳುವ ಶಕ್ತಿ ಸಾಮರ್ಥ್ಯಗಳನ್ನು ಭಗವಾನ್ ಬಾಹುಬಲಿಯು ತಮಗೆ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರವಣಬೆಳುಗೊಳ
೨೬–೫–೧೯೬೭


ಎ. ಎಸ್. ಚಿಪ್ರೆ
ಆಡಳಿತಾಧಿಕಾರಿ
ಪುರಸಭೆ, ಶ್ರವಣಬೆಳುಗೊಳ

ಸಮ್ಮೇಳನಾಧ್ಯಕ್ಷರು




ಆದಿನಾಥ ನೇಮಿನಾಥ ಉಪಾಧ್ಯೆ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ




ಜಿ. ವೆಂಕಟಸುಬ್ಬಯ್ಯ

ಸ್ವಾಗತ ಸಮಿತಿ ಅಧ್ಯಕ್ಷರು




ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ
ಪಂಡಿತಾಚಾರ್ಯ ಮಹಾಸ್ವಾಮಿಗಳು

ಪರಿಷತ್ತಿನ ಕೋಶಾಧಿಕಾರಿಗಳು




ಎನ್. ವರದರಾಜನ್

ಪರಿಷತ್ತಿನ ಗೌರವ ಕಾರ್ಯದರ್ಶಿ



ವೆಂಕಟೇಶ ಸಾಂಗಲಿ

ಪರಿಷತ್ತಿನ ಗೌರವ ಕಾರ್ಯದರ್ಶಿ



ಹಂಪ. ನಾಗರಾಜಯ್ಯ



ದಾನವೀರ

ಎಂ. ಸಿ. ಅನಂತರಾಜಯ್ಯ


ಸಮ್ಮೇಳನದ ಉದ್ಘಾಟಕರು



ಮಾನ್ಯ ಸಚಿವ


ಎಸ್. ಆರ್. ಕಂಠಿಯವರು

ಸ್ವಾಗತ ಸಮಿತಿಯ



ಉಪಾಧ್ಯಕ್ಷರು

ಎಂ. ವಿ. ವೀರೇಂದ್ರಕುಮಾರ್




ಎಚ್. ಬಿ. ಜ್ವಾಲನಯ್ಯ, ಎಂ.ಎಲ್.ಎ.




ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರು


ಸಮ್ಮೇಳನದಲ್ಲಿ ಭಾಗವಹಿಸಿದ್ದವರು




ಕೆ. ಎಸ್. ನಿಸಾರ್ ಅಹಮದ್




ಡಾ. ಮ. ಸು. ಕೃಷ್ಣಮೂರ್ತಿ



ಮತ್ತೂರು ಕೃಷ್ಣಮೂರ್ತಿ



ಕಂ. ಸು. ವೆಂಕಟಾದ್ರಿಶರ್ಮ



ಧರ್ಮಾತ್ಮ

ಎಂ. ಎಸ್. ಪದ್ಮಯ್ಯನವರು


ವೈನಾಡು



ಮೇ. ರಾಜೇಶ್ವರಯ್ಯ




ಸಿ. ಪಿ. ಮಳೀಮಠ.



ಎಸ್. ವಿ. ಪರಮೇಶ್ವರಭಟ್ಟ


ಸಮ್ಮೇಳನದಲ್ಲಿ ಭಾಗವಹಿಸಿದ್ದವರು




ಡಾ. ಜಿ. ಎಸ್. ಶಿವರುದ್ರಪ್ಪ



ಗ. ಸ. ಹಾಲಪ್ಪ




ಹೀ. ಚಿ. ಶಾಂತವೀರಯ್ಯ



ಗೊರೂರು ರಾಮಸ್ವಾಮಯ್ಯಂಗಾರರು

ಸಮ್ಮೇಳನದಲ್ಲಿ ಭಾಗವಹಿಸಿದ್ದವರು




ಸೋಮಶೇಖರ ಇಮ್ರಾಪುರ



ವರದರಾಜ ಹುಯಿಲಗೋಳ



ಕೆ. ವೆಂ. ರಾಜಗೋಪಾಲ



ಜಿ. ಎಸ್. ಸಿದ್ಧಲಿಂಗಯ್ಯ

ಓಂ

ನಮಃ ಸಿದ್ಧೇಭ್ಯಃ

ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಶ್ರವಣಬೆಳುಗೊಳ

ಸ್ವಾಗತಾಧ್ಯಕ್ಷರ ಭಾಷಣ

ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್ ಧಾರ್ಮಿಕೋ ಭೂಮಿಪಾಲಃ
ಕಾಲೇ ಕಾಲೇ ಸುವೃಷ್ಟಿಂ ವಿತರತುಮಘವಾವ್ಯಾಧಯೋಯಾಂತು ನಾಶಂ
ದುರ್ಭಿಕ್ಷಂ ಚೋರಮಾರೀಕ್ಷಣಮಪಿ ಜಗತಾಂ ಮಾಸ್ಮಭೂಜ್ಜೀವಲೋಕೇ
ಜೈನೇಂದ್ರಂ ಧರ್ಮಚಕ್ರಂ ಪ್ರಭವತು ಸತತಂ ಸರ್ವಸೌಖ್ಯಪ್ರದಾಯೀ

ಪ್ರಧ್ವಸ್ತಘಾತಿ ಕರ್ಮಾಣಃ ಕೇವಲ ಜ್ಞಾನಭಾಸ್ಕರಾಃ
ಕುರ್ವಂತು ಜಗತ್‌ಶಾಂತಿಂ ವೃಷಭಾದ್ಯಾ ಜಿನೇಶ್ವರಾ

ಆಸ್ತಿಕ ಮಹಾಶಯರೆ,

ವಿಶ್ವದ ಅನುಪಮ ವಿಭೂತಿಯಾದ ಶ್ರೀ ಗೋಮಟೇಶ್ವರ ಸ್ವಾಮಿಯವರ ಸಾನಿಧ್ಯದಲ್ಲಿ ನಿಮ್ಮೆಲ್ಲರ ಸತ್ಪ್ರಯತ್ನದಿಂದ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಸರ್ವಾಂಗ ಸುಂದರವಾಗಿ ನಡೆಯುತ್ತಿರುವುದನ್ನು ನೋಡಿ ನಮಗೆ ಅತ್ಯಂತ ಹರ್ಷವುಂಟಾಗಿರುತ್ತದೆ.

ಆಧ್ಯಾತ್ಮಿಕತೆಯ ಉಗಮಸ್ಥಾನವಾದ ಈ ಭವ್ಯಭಾರತದ ಕೀರ್ತಿಸ್ತಂಭವಾದ ಈ ಶ್ರವಣಬೆಳುಗೊಳವು ಧರ್ಮ, ಸಾಹಿತ್ಯ ಹಾಗೂ ಕಲಾರೂಪೀ ತ್ರಿವೇಣೀ ಸಂಗಮಸ್ಥಾನವಾಗಿರುವ ಕಾರಣ ವಿಶ್ವದ ಸಮಗ್ರ ಜನತೆಗೂ ಚಿತ್ತಾಕರ್ಷಕವಾದ ಮಹಾಪುಣ್ಯಕ್ಷೇತ್ರವಾಗಿರುವ ವಿಷಯವು ಸರ್ವವಿದಿತವಾದುದಾಗಿದೆ. ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿಯೇ ಅಂತಿಮ ಶ್ರುತಕೇವಲಿ ಭದ್ರಬಾಹುಮುನಿ ಹಾಗೂ ಚಂದ್ರಗುಪ್ತರಾದಿಗಳು ಇಲ್ಲಿ ನೆಲಸಿ, ತಪವನ್ನಾಚರಿಸಿ ಸಮಾಧಿಯಿಂದ ಮುಡುಪಿರುವ ಕಾರಣ ಸುಮಾರು ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದಿನಿಂದಲೂ ಈ ಪುಣ್ಯಕ್ಷೇತ್ರವು ಆತ್ಮಕಲ್ಯಾಣೇಚ್ಛುಗಳನ್ನು ನಿರಂತರವೂ ತನ್ನೆಡೆಗೆ ಆಕರ್ಷಿಸುತ್ತಿದೆಯಲ್ಲದೆ ರಾಮಾಯಣ ಕಾಲದಲ್ಲಿಯೂ ಕೂಡ ಶ್ರೀರಾಮಚಂದ್ರಾದಿಗಳ ವಿಹಾರಭೂಮಿಯಾಗಿದ್ದ ಈ ಪ್ರದೇಶದ ವಿಂಧ್ಯಗಿರಿಯ ಮೇಲೆ ಬಾಹುಬಲಿಯಾಕೃತಿಯ ಅಸ್ತಿತ್ವವು ಅನೇಕ ಕವಿಪುಂಗವರ ಉಲ್ಲೇಖದಿಂದ ತಿಳಿಯಬರುವುದರಿಂದ ಈ ಕ್ಷೇತ್ರದ ಪ್ರಾಚೀನತೆಯು ಇನ್ನೂ ಹಿಂದಕ್ಕೆ ಹೋಗುತ್ತಲಿದೆ.

ಕ್ರಿಸ್ತಶಕ ಹತ್ತನೆಯ ಶತಮಾನದವರೆಗೂ ದಕ್ಷಿಣ ಭಾರತವನ್ನಾಳಿದ ಚಾಲುಕ್ಯ, ಪಲ್ಲವ, ಪಾಂಡ್ಯ, ರಾಷ್ಟ್ರಕೂಟ ಹಾಗೂ ಗಂಗವಂಶೀಯ ಅಳರಸರ ಕಾಲದಲ್ಲಿಯೂ ಕೂಡ ಅನೇಕ ಧರ್ಮಾತ್ಮರುಗಳು ಸಂಸಾರ ಶರೀರ ಭೋಗಗಳಲ್ಲಿ

ವಿರಕ್ತರಾಗಿ ಶ್ರಮಣತ್ವವನ್ನಂಗೀಕರಿಸಿ ಈ ಕ್ಷೇತ್ರ ಹಾಗೂ ಪ್ರತ್ಯಂತ ಭೂಮಿಯಲ್ಲಿ ಘೋರ ತಪಶ್ಚರ್ಯ ಮತ್ತು ಧರ್ಮ ಪ್ರಚಾರಾದಿ ಕಾರ್ಯಗಳಿಂದ ಈ ಕ್ಷೇತ್ರದ ಪವಿತ್ರತೆಯನ್ನು ರಕ್ಷಿಸಿಕೊಂಡು ಬಂದಿರುವ ವಂಶವನ್ನು ನಾವು ಭಕ್ತಿಪೂರ್ವಕವಾಗಿ ಸ್ಮರಿಸುತ್ತೇವೆ. ಕ್ರಿಸ್ತಶಕ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇಲ್ಲಿ ಗೋಮಟೇಶ್ವರ ಮಹಾಮೂರ್ತಿಯನ್ನು ನಿರ್ಮಾಣ ಮಾಡಿಸಿ ಕೃತಾರ್ಥನಾಗಿರುವ ಹಾಗೂ ತ್ರಿಷಷ್ಟಿಶಲಾಕಾ ಪುರುಷರ ಚರಿತ್ರೆಯನ್ನು ಒಳಗೊಂಡ ಚಾವುಂಡರಾಯ ಪುರಾಣ ಕರ್ತೃವಾದ ರಣರಂಗಮಲ್ಲ ಸಮ್ಯಕ್ತ್ವ ಚೂಡಾಮಣಿ ಶ್ರೀ ಚಾವುಂಡರಾಯನ ಧರ್ಮಗುರುಗಳೂ ಇಲ್ಲಿಯ ಗುರುಪೀಠದ ಪ್ರಥಮ ಆಚಾರ್ಯ ಪುಂಗವರೂ ತ್ರಿಲೋಕ ಸಾರ, ಲಬ್ಧಸಾರ, ಕ್ಷಪಣಸಾರ, ದ್ರವ್ಯಸಂಗ್ರಹ ಮುಂತಾದ ಸೈದ್ಧಾಂತಿಕ ಗ್ರಂಥಗಳ ರಚಯಿತೃಗಳೂ ಆದ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಜಿನಾಗಮದ ಸಮಗ್ರಸಾರವನ್ನು ಒಳಗೊಂಡ ಗೋಮಟಸಾರ ಜೀವಕಾಂಡ ಮತ್ತು ಕರ್ಮಕಾಂಡ ಗ್ರಂಥಗಳನ್ನೂ ಈ ಕ್ಷೇತ್ರದಲ್ಲಿಯೇ ರಚಿಸಿ, ಮಹತ್ತರವಾದ ಉಪಕಾರವನ್ನು ಮಾಡಿರುವುದನ್ನು ಕೂಡ ನಾವು ಇಂದು ಭಕ್ತಿಪುರಸ್ಸರವಾಗಿ ಸ್ಮರಿಸುತ್ತೇವೆ. ಅಂತೆಯೇ ಅವರ ಪರಂಪರೆಯಲ್ಲಿಯೇ ಅವರ ಪ್ರಶಿಷ್ಯರುಗಳಲ್ಲಿ ಒಬ್ಬರಾದ ಶ್ರೀ ಶುಭಚಂದ್ರಾಚಾರ್ಯರು ದ್ವಾರಸಮುದ್ರದ ಬಳಿ ಉದ್ಭವಿಸಿದ ಮಹದುತ್ಪಾತವನ್ನು ತಮ್ಮ ಅದ್ಭುತ ಮಂತ್ರ ಸಾಮರ್ಥ್ಯದಿಂದ ನಿವಾರಣೆ ಮಾಡಿರುವುದೂ ಅನಂತರದ ಪ್ರಶಿಷ್ಯರಲ್ಲೊಬ್ಬರಾದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರು ನೇಮಿಚಂದ್ರಾಚಾರ್ಯರ ಗೊಮ್ಮಟಸಾರಕ್ಕೆ ಕರ್ನಾಟಕ ವೃತ್ತಿಯನ್ನು ಹೃದಯಂಗಮವಾಗಿ ರಚಿಸಿರುವುದೂ ಸಂಸ್ಮರಣೀಯವಾಗಿದೆ. ಸ್ವತಃ ಚಾವುಂಡರಾಯನೇ ಈ ಕ್ಷೇತ್ರದಲ್ಲಿ ನೇಮಿಚಂದ್ರ ಸೈದ್ಧಾಂತಿಗಳ ಗೋಮಟಸಾರಕ್ಕೆ ಕರ್ನಾಟಕ ವೃತ್ತಿಯನ್ನು ರಚಿಸಿರುವಂಶವನ್ನೂ ಸಂಶೋಧಕರು ಒಪ್ಪಿರುತ್ತಾರೆ. ಆದ್ದರಿಂದ ಕನ್ನಡ ನಾಡಿಗೆ ಚಾವುಂಡರಾಯನೇ ಅರ್ಪಿಸಿರುವ ಮಹಾಕಾಣಿಕೆಯು ಚಿರಸ್ಮರಣೀಯವಾಗಿದೆ. ಚಾವುಂಡರಾಯನ ನಂತರ ಈ ಕ್ಷೇತ್ರದಲ್ಲಿಯೇ ಮಹೋನ್ನತ ಕನ್ನಡ ಸಾಹಿತ್ಯ ಸೃಷ್ಟಿ ಮಾಡಿರತಕ್ಕ ಕವಿಪುಂಗವರ ಪೈಕಿ ಶ್ರೀ ಕವಿರತ್ನ, ಬೊಪ್ಪಣ ಹಾಗೂ ಮಧುರಕವಿಗಳ ಮಹದುಪಕಾರವು ಲೋಕೋತ್ತರವಾದುದಾಗಿದೆ.

ಮುಖ್ಯವಾಗಿ ಈ ಕ್ಷೇತ್ರದಲ್ಲಿ ಈ ವರೆವಿಗೆ ಉಪಲಬ್ಧವಾಗಿರುವ ಕನ್ನಡ ಲಿಪಿಯಲ್ಲಿಯೇ ಇರುವ ಸುಮಾರು ೫೦೦ ಶಿಲಾಲೇಖಗಳೇ ಕನ್ನಡ ಸಾಹಿತ್ಯ ಸಾಗರದ ಅನರ್ಘ್ಯ ರತ್ನಗಳಾಗಿವೆ. ಬಾಹುಬಲಿ ಮಂದಿರದ ಇಕ್ಕೆಲಗಳಲ್ಲಿರುವ ಶಿಲಾಲೇಖಗಳೆರಡು ಹಾಗೂ ಮಲ್ಲಿಷೇಣ ಪ್ರಶಸ್ತಿಯನ್ನು ಒಳಗೊಂಡ ಶಿಲಾಲೇಖಗಳಂತೂ ಭಕ್ತಿ, ನೀತಿ ಹಾಗೂ ಶಾಂತರಸದ ಭಂಡಾರಗಳಾಗಿವೆ. ಮೇಲ್ಕಂಡ ಸಮಗ್ರ ಕೃತಿಕರ್ತಗಳಾದ ಮಹಾಕವಿಶ್ರೇಷ್ಠರನ್ನು ಸ್ಮರಿಸುವುದರ ಜೊತೆಗೆ ಕನ್ನಡ ನಾಡಿನ ಅನುಪಮ ವಿಭೂತಿಗಳಾದ ಅಜಿತಸೇನಾಚಾರ್ಯರು, ಪಂಪ, ರನ್ನ, ಜನ್ನ, ದಾನಚಿಂತಾಮಣಿ ಅತ್ತಿಮಬ್ಬೆ, ಹರಿಹರ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಲಕ್ಷ್ಮೀಶ, ಸರ್ವಜ್ಞ ಮಹಾಕವಿ, ಬಸವಣ್ಣನವರೇ ಮುಂತಾದವರನ್ನು ಗೌರವಾದರ ಪೂರ್ವಕವಾಗಿ ಸ್ಮರಿಸುತ್ತೇವೆ. ಅಲ್ಲದೆ ಬಿ. ಎಂ. ಶ್ರೀ ಹಾಗೂ ಕೆ. ವಿ. ಪುಟ್ಟಪ್ಪನವರೇ ಮುಂತಾದ ಆಧುನಿಕ ಕವಿವರೇಣ್ಯರ ಮತ್ತು ಸಾಹಿತಿಗಳ ಸಾಹಿತ್ಯಸೇವೆಯನ್ನೂ ಮನಃಪೂರ್ವಕವಾಗಿ ಪ್ರಶಂಸಿಸುತ್ತೇವೆ.

ಮತ್ತೊಂದು ಗಣನೀಯವಾದ ಅಂಶವೆಂದರೆ ಶ್ರೀ ಬಾಹುಬಲಿ ಮೂರ್ತಿಯ ಇಕ್ಕೆಲಗಳಲ್ಲಿಯ ಮಹಾರಾಷ್ಟ್ರ ಹಾಗೂ ಗ್ರಂಥಾಕ್ಷರ ಲಿಪಿಯ ಶಿಲಾಲೇಖಗಳು. ಇವುಗಳು ನಿಜವಾಗಿಯೂ ಕರ್ನಾಟಕ ಸಾಮ್ರಾಜ್ಯ ವಿಶಾಲ ವ್ಯಾಪ್ತಿಯ ದ್ಯೋತಕಗಳಾಗಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ಇನ್ನು ಶಿಲ್ಪಕಲೆಯ ವಿಷಯದಲ್ಲಿ ವಿಶ್ವದ ನವಮ ಆಶ್ಚರ್ಯಗಳಲ್ಲೊಂದಾದ ಶ್ರೀ ಗೋಮಟ ಮಹಾಮೂರ್ತಿಯ ಅನುಪಮ ಸೌಂದರ್ಯಕ್ಕೆ ಸರಿಸಾಟಿಯಾದುದು ಪ್ರಪಂಚದಲ್ಲಿ ಮತ್ತಾವುದಾದರೂ ಇರುವುದೇ? ಆದ್ದರಿಂದಲೇ ಈ ಮೂರ್ತಿಯ ಸೌಂದರ್ಯವು "ಗೋಮಟ ಜಿನ ಶ್ರೀರೂಪಮಾತ್ಮೋಪಂ" ಎಂದು ವರ್ಣಿತವಾಗಿರುವುದು ಅರ್ಥವತ್ತಾಗಿರುವುದಲ್ಲವೇ?

ಜಗತ್ತಿನಲ್ಲಿ ಸರ್ವಧರ್ಮಗಳ ಮೂಲ ಒಂದೇ. ಅದೇ ಅಹಿಂಸೆ. "ಜೀವದಯೆ ಪರಮಧರ್ಮಂ" ಇದು ಧರ್ಮದ ಯಥಾರ್ಥವಾದ ಸ್ವರೂಪ. ಈ ಅಹಿಂಸಾಧರ್ಮದ ಪ್ರತಿಕೃತಿಯೇ ಶ್ರೀ ಗೋಮಟ ಮಹಾಮೂರ್ತಿ. ಗೋಮಟ ಮಹಾಮೂರ್ತಿಯ ಆರಾಧನೆಯೇ ಅಹಿಂಸಾ ಆರಾಧನೆ. ಅಹಿಂಸಾರಾಧನೆಯೇ ಭಗವದಾರಾಧನೆ.

ಇನ್ನು ಚಂದ್ರಗಿರಿಯ ಪಾರ್ಶ್ವನಾಥ ಬಸದಿ, ಚಾವುಂಡರಾಯ ಬಸದಿ, ಗ್ರಾಮದೊಳಗಣ ಅಕ್ಕನ ಬಸದಿ, ಮುಂತಾದುವುಗಳ ಬಣ್ಣನೆಯ ಔಚಿತ್ಯಕ್ಕಿಂತಲೂ ಪ್ರತ್ಯೇಕ ಸಂದರ್ಶನವೇ ಉಚಿತವಾಗಿದೆ.

ಈ ಕ್ಷೇತ್ರದ ಗಣನೀಯವಾದ ಮತ್ತೊಂದು ವೈಶಿಷ್ಟ್ಯವೆಂದರೆ, ಅದು ಸರ್ವಧರ್ಮಗಳ ಸಾಮರಸ್ಯ ಹಾಗೂ ಬಾಂಧವ್ಯ. ಚಂದ್ರಗಿರಿಯ ಮೇಲೆ ಸವತಿ ಗಂಧವಾರಣ ಬಸದಿಯನ್ನು ಕಟ್ಟಿಸಿರುವ ಹೊಯ್ಸಳ ಸಾಮ್ರಾಜ್ಯ ನೃತ್ಯ ಸರಸ್ವತಿ ಶಾಂತಲಾದೇವಿಯ ಆದರ್ಶ ಪತಿಭಕ್ತಿ ಮತ್ತು ಇಲ್ಲಿಯ ಅತ್ಯುತ್ತಮ ಹೊಯ್ಸಳ ಶಿಲ್ಪ ಅಕ್ಕನ ಬಸದಿಯನ್ನು ಕಟ್ಟಿಸಿರುವ ಹಾಗೂ ಬಳಿಯಲ್ಲಿಯೇ ತನ್ನ ಪತಿದೇವರಿಗಾಗಿ ಶಿವಮಂದಿರವನ್ನು ನಿರ್ಮಾಣಮಾಡಿಸಿರುವ ಹೊಯ್ಸಳ ಬ್ರಾಹ್ಮಣ ಮಂತ್ರಿ ಚಂದ್ರಮೌಳಿಯ ಧರ್ಮಪತ್ನಿಯಾದ ಜಿನಪದಭಕ್ತೆ ಆಚಿಯಕ್ಕನ ಧರ್ಮನಿಷ್ಠೆ, ಪತಿಭಕ್ತಿ, ಹೃದಯವೈಶಾಲ್ಯ, ಮುಂತಾದ ಸದ್ಗುಣಗಳು ವಿಶ್ವಕ್ಕೇ ಆದರ್ಶಗಳಾಗಿರುತ್ತವೆ.

ಸಾಹಿತ್ಯಪ್ರಪಂಚದಲ್ಲಿ ಕನ್ನಡ ವಾಙ್ಮಯವು ಅತ್ಯಂತ ಪ್ರಾಚೀನವಾದುದು. ಆರ್ಯರು ಭಾರತಕ್ಕೆ ಬಂದಾಗ ಹಾಗೂ ಆರ್ಯರ ಮೊತ್ತಮೊದಲನೆಯ ಕೃತಿರತ್ನವಾದ ಋಗ್ವೇದ ರಚನೆಯ ಕಾಲಕ್ಕೆ ಭಾರತದಲ್ಲಿ ದ್ರಾವಿಡ ಭಾಷೆಗಳಲ್ಲೊಂದಾದ ಕನ್ನಡ ಭಾಷೆಯ ಅಸ್ತಿತ್ವವನ್ನು ಭಾಷಾಶಾಸ್ತ್ರದ ಅಧ್ಯಯನದಿಂದ ತಿಳಿಯಬಹುದಾಗಿದೆ. ಜೈನಾಗಮದ ರೀತ್ಯಾ ಆಯಾಯ ಸನ್ನಿವೇಶ, ಪರಿಸ್ಥಿತಿಗಳಿಗನುಸಾರವಾಗಿ ಭಾಷಾ ಸ್ವರೂಪದಲ್ಲಿ ಬದಲಾವಣೆಗಳಾಗುವುದಾದರೂ ಸರ್ವಭಾಷಾತ್ಮಕವಾದ ವೇದವು ಅನಾದಿ ಹಾಗೂ ಅಪೌರುಷೇಯವೆಂದು ಸಿದ್ಧವಾಗಿದೆ. ಈ ದಿಶೆಯಲ್ಲಿ ಕನ್ನಡ ಸಾಹಿತ್ಯವು ಅತ್ಯಂತ ಪ್ರಾಚೀನವಷ್ಟೇ ಆಗಿರದೆ ಅನಾದಿಯೂ ಆಗಿರುತ್ತದೆ.

ಇಂಥ ಪವಿತ್ರ ಹಾಗೂ ಪ್ರಾಚೀನವಾದ ಕನ್ನಡ ಸಾಹಿತ್ಯದ ಸಂರಕ್ಷಣೆ ಹಾಗೂ ಸಂವರ್ಧನಗಳನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡು ಈ ದಿಶೆಯಲ್ಲಿ

ನಿರಂತರ ಶ್ರಮಿಸುತ್ತಿರುವ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪ್ರಪಂಚದ ಕೇಂದ್ರ ಸ್ಥಾನವಾದ ಈ ಶ್ರವಣಬೆಳುಗೊಳ ಕ್ಷೇತ್ರದಲ್ಲಿ ನಲವತ್ತಾರ ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಮುಂದೆ ಬಂದಿರುವುದು ಅನು ಕರಣೀಯವೂ ಮತ್ತು ಆದರ್ಶವೂ ಆಗಿರುತ್ತದೆ. ಈ ಪವಿತ್ರ ಕಾರ್ಯವನ್ನು ನಡೆಸುತ್ತಲಿರುವ ಕನ್ನಡ ಸಾಹಿತ್ಯ ಪರಿಷತ್ತನ್ನು ನಾವು ಆದರ ಪುರಸ್ಸರವಾಗಿ ಸ್ವಾಗತಿಸುತ್ತೇವೆ.

ಈ ಮಹಾ ಸಮ್ಮೇಳನಕ್ಕೆ ಕನ್ನಡ, ಸಂಸ್ಕೃತ, ಪ್ರಾಕೃತ, ಮರಾಠಿ ಮತ್ತು ಇಂಗ್ಲಿಷ್ ಈ ಪಂಚಭಾಷೆಗಳಲ್ಲಿ ಪ್ರವೀಣರಾದ ಕನ್ನಡ ನುಡಿಗಾಗಿ ಗಣನೀಯ ವಾಗಿ ಸೇವೆಸಲ್ಲಿಸುತ್ತಿರುವ ಪ್ರೊಫೆಸರ್, ಡಾಕ್ಟರ್ ಶ್ರೀ ಆದಿನಾಥ ನೇಮಿನಾಥ ಉಪಾಧ್ಯೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿರುವ ಬಗ್ಗೆ ನಾವು ಅಪಾರ ಹರ್ಷಿತ ರಾಗಿರುತ್ತೇವೆ. ಹಾಗೂ ಶ್ರೀಯುತರನ್ನು ಸ್ವಾಗತ ಸಮಿತಿಯ ಪರವಾಗಿ ಸ್ವಾಗತಿಸುತ್ತೇವೆ. ಅಂತೆಯೇ ಈ ಕಾರ್ಯಕ್ಕೆ ಪೀಠಿಕೆಯನ್ನು ಹಾಕಿ ಈ ಕಾರ್ಯದ ಯಶಸ್ವೀ ನಿರ್ವಹಣೆಗಾಗಿ ನಿರಂತರವೂ ಶ್ರಮಿಸುತ್ತಿರುವ ತಿಪಟೂರಿನ ಕನ್ನಡ ಸಾಹಿತ್ಯಾಭಿಮಾನಿ ಕಾರ್ಯಕರ್ತೃಗಳ ಕಾರ್ಯಶೀಲತೆಯನ್ನು ಮತ್ತು ಹಾಸನ ಜಿಲ್ಲೆಯ ಕನ್ನಡ ಸಾಹಿತ್ಯಪ್ರೇಮಿಗಳಾದ ಕಾರ್ಯಕರ್ತೃಗಳ ಸತ್ಪ್ರಯತ್ನಶೀಲತೆ ಯನ್ನು ಹಾಗೂ ಕನ್ನಡ ನಾಡಿನ ಇತರ ಜಿಲ್ಲೆಗಳ ಕನ್ನಡಾಭಿಮಾನಿಗಳ ಸಹಯೋಗ ಸೌಹಾರ್ದಗಳನ್ನು ನಾವು ಮನಃಪೂರ್ವಕವಾಗಿ ಪ್ರಶಂಸಿಸುತ್ತೇವೆ. ಜೊತೆಗೆ ಕನ್ನಡ ನಾಡಿನ ವಿವಿಧ ಭಾಗಗಳಿಂದಲೂ ಸಾಹಿತ್ಯರಸದೌತಣವನ್ನುಣಬಡಿಸಿ ಸರ್ವರಿಗೂ ಆನಂದವನ್ನುಂಟುಮಾಡಲು ಆಗಮಿಸಿರತಕ್ಕ ಸಮಗ್ರ ವಿದ್ವನ್ಮಣಿ ಗಳನ್ನೂ ನಾವು ಅತ್ಯಂತ ಗೌರವಾದರ ಪುರಸ್ಸರವಾಗಿ ಸ್ವಾಗತಿಸುತ್ತೇವೆ.

ಸ್ವಾಗತ ಸಮಿತಿಯವರು ಇಲ್ಲಿಯ ಗುರುಪೀಠದ ಮೇಲೆ ಅಪಾರ ಅಭಿಮಾನ ವನ್ನಿಟ್ಟು ನಮ್ಮನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿರುವುದು ಅವರ ಸೌಜನ್ಯವನ್ನು ಸೂಚಿಸುತ್ತಲಿದೆ. ಈ ಬಗ್ಗೆ ನಾವು ಸ್ವಾಗತ ಸಮಿತಿಯವರಿಗೆ ಅತ್ಯಂತ ಆಭಾರಿಯಾಗಿರುತ್ತೇವೆ.

ದಯಾಮಯನಾದ ಶ್ರೀ ಗೋಮಟೇಶ್ವರ ಸ್ವಾಮಿಯು ಮತ್ತು ಶ್ರೀ ಶಾರದಾ ದೇವಿಯು ಸರ್ವರಿಗೂ ಸನ್ಮಂಗಲಗಳನ್ನು ದಯಪಾಲಿಸಲೆಂದು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಶುಭಮಸ್ತು ಸರ್ವಜಗತಾಂ ಪರಹಿತನಿರನಾಭನಂತು ಭೂತಗಣಾಃ
ದೋಷಾಃಪ್ರಯಾಂತು ನಾಶಂ ಸರ್ವತ್ರಜನ ಸುಖೀ ಭವತು ||

ಇತಿ ಭದ್ರಂ ಭೂಯಾತ್

ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ನಿವೇದನೆ

ಅವಳ ಕಯ್ಯ ಪುಸ್ತಕದೊಳಿರ್ಪುವು ಲೋಕದಸಾರ ಸೂಕ್ತಿಯಿ
ನ್ನಾವಳ ವಾಗ್ವಿಲಾಸಚತುರತ್ವದೆ ಪೋದುದು ಪದ್ಮಜಂಗೆ ಮ |
ನ್ನಾವರಿಸಿರ್ದ ಛಾಂದಸಿಕೆಯಾವಳ ಪೋಲ್ವೆಯ ಪುತ್ರಿ ಕೀರ್ತಿ ಲ
ಕ್ಷ್ಮೀ ವಧುವಾದಳಾ ವಧುಗೆ ಕಾವ್ಯದ ನಾಂದಿಯೊಳರ್ಘ್ಯವೆತ್ತುವೆಂ ||

—ಅಗ್ಗಳ

ಸ್ವಾಗತಾಧ್ಯಕ್ಷ ಶ್ರೀ ಚಾರುಕೀರ್ತಿ ಮಹಾಸ್ವಾಮಿಗಳವರೇ,
ಮಾನ್ಯ ಕಂಠಿಯವರೇ, ಮಾನ್ಯ ಡಾಕ್ಟರ್ ಉಪಾಧ್ಯೆ ಅವರೇ,
ಸಾಹಿತ್ಯ ಬಂಧುಗಳೇ,

ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಈ ಶುಭ ನಾಂದೀ ಸಂದರ್ಭದಲ್ಲಿ ಪೂರ್ವ ಕವಿವಾಣಿಯಿಂದ ಸರಸ್ವತಿಯನ್ನು ಪ್ರಾರ್ಥಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಕೆಲವೊಂದು ನಿವೇದನೆಯ ವಾಕ್ಯಗಳನ್ನು ತಮ್ಮ ಮುಂದಿಡಲು ನನಗೆ ಅಪೇಕ್ಷೆ ಆಗಿದೆ. ತಾವೆಲ್ಲರೂ ಪರಿಷತ್ತಿನ ಮೇಲೆ ತೋರಿರುವ ವಿಶ್ವಾಸವನ್ನು ಮುಂದುವರಿಸಿಕೊಂಡು ನಾನು ನಿವೇದಿಸುವ ಈ ಮಾತುಗಳನ್ನು ಮನನಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ಸಾಹಿತ್ಯ ಪರಿಷತ್ತಿನ ಧೋರಣೆಯಲ್ಲಿ ಹೊಸ ದೃಷ್ಟಿಯು ಒಡಮೂಡಿರುವುದನ್ನು ತಾವೆಲ್ಲರೂ ಕಂಡಿದ್ದೀರಿ. ಸತ್ಕಾರ್ಯಗಳು ವೇಗವಾಗಿ ನಡೆದಷ್ಟೂ ನಾಡಿಗೆ ಒಳ್ಳೆಯದೆಂಬ ದೃಷ್ಟಿಯಿಂದ ಪರಿಷತ್ತು ಮುನ್ನಡಿ ಇಡುತ್ತಿದೆ. ಇಲ್ಲಿಯವರೆಗೆ ಅದು ಸಾಧಿಸಿರುವ ಕಾರ್ಯದಲ್ಲಿ ಪ್ರಮುಖವಾದ ಕೆಲವನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಪರಿಷತ್ತಿನಲ್ಲಿ ಕನ್ನಡ-ಕನ್ನಡ ನಿಘಂಟಿನ ಮೂರು ಸಂಚಿಕೆಗಳನ್ನು ಪ್ರಕಟ ಮಾಡಿ ನಾಲ್ಕನೆಯ ಸಂಚಿಕೆಯನ್ನೂ ಇಷ್ಟರಲ್ಲಿಯೇ ಬಿಡುಗಡೆ ಮಾಡುವುದರಲ್ಲಿ ಇದ್ದೇವೆ. ಈಗ ನಿಘಂಟಿಗೆ ಸ್ವರೂಪರಚನೆಯು ನಿರ್ಧಾರವಾಗಿದೆ. ಇನ್ನುಮುಂದೆ ನಿಘಂಟಿನ ಪ್ರಕಟನೆ ಕಾರ್ಯ ಸುಲಭವಾಗುವ ಏರ್ಪಾಟುಗಳನ್ನು ಕೈಕೊಂಡಿದ್ದೇವೆ. ಹೆಚ್ಚು ಮಂದಿ ಸಂಪಾದಕರನ್ನು ನೇಮಿಸಿಕೊಳ್ಳಲು ಸರ್ಕಾರವು ಅನುಮತಿಯನ್ನು ಕೊಟ್ಟಿರುವುದರಿಂದ ಈ ಕಾರ್ಯಕ್ಕೆ ಹೆಚ್ಚು ಸಹಾಯ ಒದಗಿದಂತಾಗಿದೆ.

ಪರಿಷತ್ತಿನ ಒಳಾಡಳಿತವು ಈಗ ಸುವ್ಯವಸ್ಥೆಗೊಂಡಿದೆ. ಪತ್ರವ್ಯವಹಾರ, ಪತ್ರಿಕೆಗಳ ಪ್ರಕಟನೆ, ಪರೀಕ್ಷೆಗಳ ಏರ್ಪಾಟು, ಪರಿಷತ್ತಿನಲ್ಲಿ ಸಾಹಿತ್ಯ ಕಾರ್ಯ ಕ್ರಮಗಳನ್ನು ನಡೆಸುವುದು ಇವೆಲ್ಲವೂ ಇನ್ನು ಮುಂದೆ ನಿಶ್ಚಿತಗತಿಯಿಂದ ನಡೆಯುತ್ತವೆ.

ಪರಿಷತ್ತಿನ ಮಾಸ ಪತ್ರಿಕೆಯಾದ 'ಕನ್ನಡ ನುಡಿ'ಯು ನಾಡಿನ ಪ್ರಮುಖ ಸಾಹಿತ್ಯ ವಿಷಯಕವಾದ ಮಾಸ ಪತ್ರಿಕೆಯಾಗಿ ಸಾಹಿತಿಗಳ ಮನ್ನಣೆಯನ್ನು ಪಡೆದಿದೆ. ಅದರ ದೃಷ್ಟಿ ವಿಶಾಲಗೊಂಡು ಹೆಚ್ಚು ಜನರ ಒಲವನ್ನು ಅದು ಸಂಪಾದಿಸಿಕೊಂಡಿದೆ. ಈ ಮಾಸ ಪತ್ರಿಕೆಯನ್ನು ಓದುವ ಜನ ಈಗ ಹೆಚ್ಚಾಗಿದ್ದಾರೆ. ಅದರಲ್ಲಿ ಬರುವ ಲೇಖನಗಳ ಬಗ್ಗೆ ವಿದ್ವಾಂಸರು ಚರ್ಚೆ ಮಾಡುತ್ತಾರೆ. ಇದೊಂದು ಗಮನಾರ್ಹವಾದ ಪ್ರಗತಿ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯು ಈಗ ಪ್ರೌಢ ವಿಷಯಗಳನ್ನೊಳಗೊಂಡ ವಿದ್ವತ್ ಪತ್ರಿಕೆಯಾಗಿ ರೂಪುಗೊಂಡಿದೆ. ಸಾಮಾನ್ಯರ ದೃಷ್ಟಿಯನ್ನು ಮೀರಿರುವ ಇಲ್ಲಿಯ ಲೇಖನಗಳು ವಿದ್ವತ್ತನ್ನು ವರ್ಧನೆ ಮಾಡುವ ಕಾರ್ಯದಲ್ಲಿ ಯಶಸ್ವಿಯಾಗಿವೆ.

ಪರಿಷತ್ತು 'ಕನ್ನಡ ರತ್ನ' ಎಂಬ ಹೊಸ ಪರೀಕ್ಷೆಯನ್ನು ವ್ಯವಸ್ಥೆಮಾಡಿ ಕನ್ನಡದ ಪ್ರೌಢ ವ್ಯಾಸಂಗಕ್ಕೆ ಏರ್ಪಾಟು ಮಾಡಿದೆ. ಇದರಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳು ಮಾಧ್ಯಮಿಕ ಶಾಲೆಯಲ್ಲಿ ವಿಶೇಷವಾಗಿ ಕನ್ನಡವನ್ನು ಬೋಧಿಸುವುದಕ್ಕೆ ಅರ್ಹರಾಗುತ್ತಾರೆ. ಇಂಥ ಅಧ್ಯಾಪಕರ ಸಂಖ್ಯೆ ಹೆಚ್ಚಬೇಕು. ಆಗ ಮಾಧ್ಯಮಿಕ ಶಾಲೆಯ ಮಟ್ಟದಲ್ಲಿ ಕನ್ನಡದ ಒಲವನ್ನು ಹೆಚ್ಚಿಸುವುದು ಸಾಧ್ಯ.

ಪರಿಷತ್ತು ಹೋದ ಸಲ ಸೇರಿದ ಕಾರವಾರ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯದ ದಶವಾರ್ಷಿಕ ಸಮೀಕ್ಷೆಯೊಂದನ್ನು ನಡೆಸಿ ನಮ್ಮ ಸಾಹಿತ್ಯದ ಬೆಳೆಯ ಮೌಲ್ಯಮಾಪನ ಮಾಡಿತು. ಈ ಕಾರ್ಯಕ್ರಮವು ನಾಡಿನಲ್ಲೆಲ್ಲ ಆಸಕ್ತಿಯನ್ನು ಕೆರಳಿಸಿತು. ಆಗ ಸಿದ್ಧವಾದ ಲೇಖನಗಳೆಲ್ಲಾ ಗ್ರಂಥ ರೂಪದಲ್ಲಿ ಪ್ರಕಟವಾದರೆ ಒಂದು ಅತ್ಯುತ್ತಮವಾದ ವಿಮರ್ಶನ ಗ್ರಂಥ ಓದುಗರಿಗೆ ಕೈಪಿಡಿಯಾಗಿ ದೊರೆಯುತ್ತದೆ. ಧನದ ಸಹಾಯವಿಲ್ಲದೆ ಅದನ್ನು ಹಾಗೆಯೇ ಕಾದಿಡಲಾಗಿದೆ. ಆದರೆ ಈ ದೃಷ್ಟಿಯಲ್ಲಿ ಮಾಡುವ ವಿಷಯ ಸಂಗ್ರಹಣೆ ಓದುಗರಿಗೆ ಕೈಗೆಟುಕುವಂತಿರಬೇಕೆಂಬ ದೃಷ್ಟಿಯಿಂದ ಈ ವರ್ಷವೂ ಈ ಸಾಹಿತ್ಯ ಸಮ್ಮೇಳನದಲ್ಲಿ ಕಳೆದ ಎರಡು ವರ್ಷಗಳ ಸಾಹಿತ್ಯ ಸಮೀಕ್ಷೆಯನ್ನು ಏರ್ಪಾಟು ಮಾಡಲಾಗಿದೆ. ಈ ಲೇಖನಗಳೂ ಕೂಡ ಒಟ್ಟಿಗೆ ಗ್ರಂಥ ರೂಪದಲ್ಲಿ ಅಚ್ಚಾಗಬೇಕು.

ಈ ವರ್ಷ ಈ ಸಮ್ಮೇಳನದಲ್ಲಿ ಕೆಲವು ಹೊಸ ವಿಷಯಗಳನ್ನು ಸೇರಿಸಲಾಗಿದೆ. 'ಭಾಷಾ ಬಾಂಧವ್ಯ ವಿಚಾರ ರಂಗ'ವೆಂಬ ಹೆಸರಿನಿಂದ ಒಂದು ವಿಚಾರ ವಿನಿಮಯ ನಡೆಯಲಿದೆ. ಇದರಲ್ಲಿ ಕನ್ನಡ ಸಾಹಿತ್ಯದ ಎಷ್ಟು ಕೃತಿಗಳು ಇತರ ಭಾಷೆಗೆ ಅನುವಾದವಾಗಿವೆ ಮತ್ತು ಇತರ ಭಾಷೆಗಳಿಂದ ಕನ್ನಡಕ್ಕೆ ಎಷ್ಟು ಅನುವಾದಗೊಂಡಿವೆ, ಈ ಕೊಟ್ಟುಕೊಳ್ಳುವಿಕೆ ಎಲ್ಲ ಭಾಷೆಗಳಿಗೆ ಸಮಾನವಾಗಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲಾಗುತ್ತದೆ.

ಎಂದಿನಂತೆ ಕವಿಮೇಳವು ಹೊಸ ಕಾವ್ಯಗಳ ಶಕ್ತಿಪರಿಚಯ ಮಾಡಿಕೊಡುತ್ತದೆ.

ನಮ್ಮ ದೇಶದಲ್ಲಿ ವೃತ್ತಪತ್ರಿಕೆಗಳು ಜನಜೀವನದ ಮೇಲೆ ಹೆಚ್ಚು ಹೆಚ್ಚು ಪ್ರಭಾವ ಬೀರುತ್ತಾ ಇವೆ. ವಿದ್ಯಾರ್ಥಿಗಳ ಮೇಲಂತೂ ಇವುಗಳ ಪ್ರಭಾವ ಅಪರಿಮಿತವಾಗಿದೆ. ಆದುದರಿಂದ ಪತ್ರಿಕೆಗಳಲ್ಲಿ ಬರುವ ಭಾಷೆ, ಸಾಹಿತ್ಯಗಳ

ರೀತಿ-ನೀತಿ ಎಂತಿರಬೇಕು, ಯಾವುದು ನಾಡಿಗೆ ಒಳ್ಳೆಯದು, ಎಂಬುದನ್ನು ಪತ್ರಿಕಾವಿಚಾರ ಸಂಕಿರಣದಲ್ಲಿ ತೆಗೆದುಕೊಳ್ಳಲಾಗುತ್ತದೆ.

ಈ ಸಮ್ಮೇಳನದ ಮತ್ತೊಂದು ಮುಖ್ಯವಾದ ಅಂಶವೆಂದರೆ ಸಂಘ-ಸಂಸ್ಥೆಗಳ ಸಮ್ಮೇಳನ. ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಕರ್ಣಾಟಕ ಪ್ರಾತಿನಿಧಿಕ ಸಂಸ್ಥೆ ಎಂಬ ಸತ್ವವನ್ನು ಉಳಿಸಿಕೊಳ್ಳದೆ ಹೋದರೆ ಬರುಬರುತ್ತಾ ಅದರ ಶಕ್ತಿ ಕುಂಠಿತವಾಗಿಬಿಡುತ್ತದೆ. ಆದುದರಿಂದ ಇನ್ನು ಮುಂದೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಾಹಿತ್ಯ ಪರಿಷತ್ತಿನ ಶಾಖೆಗಳು ಕೆಲಸಮಾಡುವಂತಾಗಬೇಕು. ಈ ಶಾಖೆಗಳ ಪ್ರತಿನಿಧಿಗಳು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರಾಗಬೇಕು. ಈ ಕಾರ್ಯಸಮಿತಿಯು ವರ್ಷಕ್ಕೆ ಎರಡು ಬಾರಿಯಾದರೂ ಸೇರಿ ಒಂದು ವರ್ಷದ ಕಾರ್ಯಕ್ರಮವನ್ನು ನಿರ್ಧರಿಸಬೇಕು. ದೈನಂದಿನ ಕಾರ್ಯಕ್ರಮ ನಿರ್ವಹಣೆಗೆ ಒಂದು ಚಿಕ್ಕ ಸ್ಥಾಯೀ ಸಮಿತಿಯನ್ನು ಕಾರ್ಯಸಮಿತಿಯೇ ನೇಮಿಸಬಹುದು. ಈ ವಿಚಾರದಲ್ಲಿಯೂ ಈ ಸಂಘಸಂಸ್ಥೆಗಳ ಸಮ್ಮೇಳನ ಚರ್ಚೆಮಾಡಿ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಸೂಚಿಸುತ್ತದೆ.

ಸಮ್ಮೇಳನದಲ್ಲಿ ಭಾಗವಹಿಸಲು ಬಂದಿರುವ ಎಲ್ಲ ವಿದ್ವಾಂಸರಿಗೂ ನನ್ನ ಅಭಿವಂದನೆಗಳು.

ಮಾನ್ಯರೇ,

ಶ್ರವಣಬೆಳುಗೊಳದ ಈ ಸಮ್ಮೇಳನದಲ್ಲಿ ಯುವಕ ಚೈತನ್ಯವು ತನ್ನ ಶಕ್ತಿಯನ್ನು ವ್ಯಕ್ತಪಡಿಸುವುದಕ್ಕೆ ಪ್ರೋತ್ಸಾಹವು ದೊರಕಿದೆ. ಗೊಮ್ಮಟ ಗಿರಿಯ ಮೇಲೆ ಧೀರನಾಗಿ ನಿಂತು ಸರ್ವಸ್ವವನ್ನೂ ತ್ಯಾಗಮಾಡಿದ ಬಾಹುಬಲಿ ಸ್ವಾಮಿಯು ಆತ್ಮಬಲವೊಂದಿದ್ದರೆ ಹಿರಿಯರನ್ನೂ ಹೇಗೆ ಗೆಲ್ಲಬಹುದೆಂದು, ಗೆದ್ದು ಲೋಕ ಕಲ್ಯಾಣವನ್ನು ಸಾಧಿಸಬಹುದೆಂದು ಶಾಶ್ವತವಾಗಿ ದೃಷ್ಟಾಂತಪಡಿಸುತ್ತಿದ್ದಾನೆ. ಅವನ ಆಶ್ರಯದಲ್ಲಿ ನಮ್ಮ ಯುವಕರು ಆತ್ಮಬಲವನ್ನು ವೈಗೂಡಿಸಿಕೊಂಡು ಹಿರಿಯರು ನಡೆದ ಧೀರಮಾರ್ಗದಲ್ಲಿ ಮುನ್ನಡೆಯಬೇಕೆಂದು ಕಾತರರಾಗಿದ್ದಾರೆ. ಸ್ವಾಮಿಯ ಸಾನ್ನಿಧ್ಯಕ್ಕೆ ನಮ್ಮನ್ನು ಬರಮಾಡಿಕೊಂಡ ಶ್ರೀ ಶ್ರೀ ಚಾರುಕೀರ್ತಿ ಸ್ವಾಮಿಗಳಿಗೆ ಮತ್ತು ಸ್ವಾಗತಸಮಿತಿಗೆ ಪರಿಷತ್ತಿನವರೆಲ್ಲರೂ ಕೃತಜ್ಞರಾಗಿದ್ದಾರೆ.

ಈ ಸಮ್ಮೇಳನಕ್ಕೆ ಪ್ರಕಾಂಡ ಪಂಡಿತರಾದ ಮತ್ತು ಯುವಕ ಚೈತನ್ಯಕ್ಕೆ ಪ್ರೋತ್ಸಾಹಕೊಡುವುದರಲ್ಲಿ ನಿಸ್ಸೀಮರಾದ ಡಾಕ್ಟರ್ ಎ. ಎನ್. ಉಪಾಧ್ಯೆ ಅವರು ನಮಗೆ ಅಧ್ಯಕ್ಷರಾಗಿ ದೊರಕಿರುವುದು ನಮ್ಮ ಪುಣ್ಯ. ಅವರ ವಿದ್ಯಾವೈದುಷ್ಯವೂ ಸಂಶೋಧನಾಸಕ್ತಿಯೂ ಸ್ನೇಹಪರತೆಯೂ ವಿನಯವೂ ಎಂತಹವರ ಮನಸ್ಸನ್ನಾದರೂ ಸೂರೆಗೊಳ್ಳುತ್ತದೆ. ಅವರ ನೇತೃತ್ವದಲ್ಲಿ ಈ ಸಮ್ಮೇಳನವು ಸತ್ಕಾರ್ಯವನ್ನು ಸಾಧಿಸಲಿ ಎಂದು ನನ್ನ ಬಿನ್ನಹ.

ಸ್ವಾಗತ ಸಮಿತಿಯವರು ಪ್ರಕಟಿಸಿರುವ ' ಅಭಿಷೇಕ ' ಎಂಬ ಈ ಸಮ್ಮೇಳನದ ಸ್ಮರಣಸಂಚಿಕೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪದ್ಮಶ್ರೀ ವಿ. ಕೃ. ಗೋಕಾಕರು ನಾಳೆ ನೆರವೇರಿಸುತ್ತಾರೆ.*

---

*ಶ್ರೀಯುತರು ಕಾರ್ಯ ಗೌರವದಿಂದ ಬರಲಾಗದಿದ್ದುದರಿಂದ ಮುಂಬಯಿಯ ಶ್ರೀ ಅನಂತರಾಜಯ್ಯನವರು ಸಂಚಿಕೆಯನ್ನು ಬಿಡುಗಡೆ ಮಾಡಿದರು. —ಸಂ.

ಈ ಸಮ್ಮೇಳನವನ್ನು ಮಾನ್ಯ ಕಂಠಿಯವರು ಉದ್ಘಾಟನೆ ಮಾಡುವವರಿದ್ದಾರೆ. ಸಾಹಿತ್ಯಾಭಿಮಾನಿಗಳಾದ ಇವರು ರಾಜ್ಯದ ವಿದ್ಯಾಸಚಿವರಾಗಿದ್ದಾಗ ನನ್ನ ಮೇಲಿನ ಪರಮ ವಿಶ್ವಾಸದಿಂದಲೂ, ಪರಿಷತ್ತಿನ ಮೇಲಿನ ಪೂರ್ಣಗೌರವದಿಂದಲೂ ಪರಿಷತ್ತಿಗೆ ಸಲ್ಲುತ್ತಿದ್ದ ಸಹಾಯ ಧನವನ್ನು ಏಳೂವರೆ ಸಾವಿರ ರೂಪಾಯಿಗಳಿಂದ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದರು. ಇಷ್ಟು ಧನಸಹಾಯ ಈ ಇಕ್ಕಟ್ಟಿನ ಸಮಯದಲ್ಲಿ ನಮಗೆ ಬರದೆ ಹೋಗಿದ್ದರೆ ಪರಿಷತ್ತು ನಿದ್ರಾವಸ್ಥೆಯನ್ನು ತಾಳಬೇಕಾಗಿತ್ತು. ಅಂಥ ದುರವಸ್ಥೆ ಬರುವುದನ್ನು ತಪ್ಪಿಸಿ ಈ ಹಿರಿಯ ಸಂಸ್ಥೆಯನ್ನು ಸಚೇತನಗೊಳಿಸಿದ ಮೈಸೂರು ಸರಕಾರಕ್ಕೆ ಪರಿಷತ್ತು ಕೃತಜ್ಞವಾಗಿದೆ. ಈ ಬೆಂಬಲಕ್ಕಾಗಿ ನಾವು ಶ್ರೀ ನಿಜಲಿಂಗಪ್ಪನವರಿಗೂ, ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೂ, ಶ್ರೀ ಕಂಠಿಯವರಿಗೂ ಸರ್ವದಾ ಕೃತಜ್ಞರಾಗಿರುತ್ತೇವೆ.

ಆದರೆ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರಿದ್ದು. ವಾರ್ಷಿಕವಾಗಿ ಕೊನೆಯ ಪಕ್ಷ ಒಂದು ಲಕ್ಷ ರೂಪಾಯಿಗಳ ಸಹಾಯಧನವಿಲ್ಲದೆ ಹೋದರೆ ಅದರ ಕಾರ್ಯವಿಸ್ತಾರ ಮೊಟಕುಗೊಳ್ಳುತ್ತದೆ. ಅಖಿಲ ಭಾರತ ಸಾಹಿತ್ಯರಂಗದಲ್ಲಿ ಕನ್ನಡದ ಮಾತು ಮೊಳಗಬೇಕಾದರೆ, ಕನ್ನಡದ ಅಭಿಪ್ರಾಯಕ್ಕೆ ಹಿರಿಯಮಾನ್ಯತೆ ದೊರಕಬೇಕಾದರೆ ಇಷ್ಟು ಧನ ಸಹಾಯದ ನಿಶ್ಚಯವು ಕನಿಷ್ಠಪ್ರಮಾಣದ್ದು. ಇದನ್ನು ಪರಿಷತ್ತಿಗೆ ದೊರಕಿಸಿ ಕೊಡುವುದರಲ್ಲಿ ಮಾನ್ಯ ಕಂಠಿಯವರ ಸಹಾಯ ನಮಗಿರಲಿ ಎಂದು ಬೇಡುತ್ತೇನೆ.

ಕನ್ನಡ ಬಂಧುಗಳೇ,

ಇಂದು ನಮ್ಮ ನಾಡಿನಲ್ಲಿ ಸಾರ್ವಜನಿಕ ಕಾರ್ಯಕ್ಷೇತ್ರವು ತುಂಬ ಇಕ್ಕಟ್ಟಿಗೆ ಸಿಕ್ಕಿಕೊಂಡಿದೆ. ಸ್ವಾರ್ಥ, ದುರಭಿಮಾನ, ಅಜ್ಞಾನ, ಅನೀತಿ ಮುಂತಾದ ಅನಿಷ್ಟಗಳ ಎದುರು ಕಾರ್ಯಕರ್ತರು ಹೋರಾಡಬೇಕಾಗುತ್ತದೆ. ಇದಕ್ಕೆ ಸಹನೆ, ಶಾಂತಿ, ಸುಮನಸ್ಕತೆ ಮತ್ತು ಪ್ರಸನ್ನತೆಗಳು ಅಪಾರ ಪ್ರಮಾಣದಲ್ಲಿ ಕಾರ್ಯಕರ್ತರಲ್ಲಿ ಇರಬೇಕಾಗುತ್ತದೆ. ಇವು ಇದ್ದರೂ ಎಷ್ಟೋ ವೇಳೆ ಸಹನೆಯ ಕೇರಿ ಬಿರುಕುಬಿಡುವ ಸಂಭವಗಳು ಬರುತ್ತವೆ. ಇದಕ್ಕೆ ನಾವು ಬಲಿಬೀಳಬಾರದು. ಕೇವಲ ವಿರೋಧಕ್ಕೆ ಯಾರೂ ಹೆದರಬೇಕಾಗಿಲ್ಲ. ಅನಂತನಾಥ ಪುರಾಣದ ಕವಿ ಹೇಳುವಂತೆ "ಬಾಟ್ಟ ಮನೆಗೊಂದು ಬೊಗಳ್ವುದು ವೇಟ್ಟುಂ." ಆದರೆ ಸತ್ಕಾರ್ಯ ನಡೆದಾಗ ನಾಲ್ಕು ಸಜ್ಜನರ ಪ್ರೋತ್ಸಾಹದ ಮಾತು ದೊರಕಿದರೆ ಸಾಕು. ಅದರಿಂದ ಬರುವ ಚೈತನ್ಯ ಕಾರ್ಯಕರ್ತರನ್ನು ಮುನ್ನಡೆಸುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕರ್ತರು ದುಡಿಯಲು ಸಿದ್ಧರಾಗಿದ್ದಾರೆ. ತಮ್ಮಂಥ ಸಜ್ಜನರ ಬೆಂಬಲ ಸದಾ ದೊರಕುತ್ತಿರಲೆಂದು ಅವರು ಹಾರೈಸುತ್ತಾರೆ.

ಈ ಸಮ್ಮೇಳನದಿಂದ ಅಂಥ ವಿಶ್ವಾಸದ ಕೋಟೆ ಎದ್ದು ಪರಿಷತ್ತು ಬಲಗೊಳ್ಳಲಿ.

ಈ ಸಮ್ಮೇಳನವನ್ನು ಮಾನ್ಯ ಕಂಠಿಯವರು ಉದ್ಘಾಟನೆ ಮಾಡಲೆಂದೂ, ಡಾ. ಉಪಾಧ್ಯೆಯವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ನಡಸಿಕೊಡಲೆಂದೂ ನಾನು ಬೇಡಿಕೊಳ್ಳುತ್ತೇನೆ.

ರಾಜ್ಯದ ಕಾನೂನುಮಂತ್ರಿ
ಮಾನ್ಯ ಕಂಠಿಯವರ ಉದ್ಘಾಟನಾ ಭಾಷಣ

ಸ್ವಾಗತಾಧ್ಯಕ್ಷ ಶ್ರೀ ಚಾರುಕೀರ್ತಿ ಮಹಾಸ್ವಾಮಿಗಳವರೇ,
ಸಮ್ಮೇಳನಾಧ್ಯಕ್ಷ ಡಾಕ್ಟರ್ ಎ. ಎನ್. ಉಪಾಧ್ಯೆಯವರೇ,
ಸಾಹಿತ್ಯ ಪರಿಷದಧ್ಯಕ್ಷ ಶ್ರೀ ವೆಂಕಟಸುಬ್ಬಯ್ಯನವರೇ,

ಶ್ರವಣಬೆಳಗೊಳದಲ್ಲಿ ನೆರವೇರಲಿರುವ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿ ಅದನ್ನು ಉದ್ಘಾಟನೆ ಮಾಡುವ ಸುಯೋಗ ಲಭಿಸಿದ್ದಕ್ಕಾಗಿ ನಾನು ತುಂಬ ಸಂತೋಷ ಪಡುತ್ತೇನೆ. ಅನೇಕ ವಿದ್ವಾಂಸರೂ, ಕವಿಗಳೂ, ಕಲೆಗಾರರೂ ಒಟ್ಟು ಸೇರಿರುವುದು ಈ ಸಮ್ಮೇಳನಕ್ಕೆ ಒಂದು ಸಂಭ್ರಮವನ್ನು ತಂದುಕೊಟ್ಟಿದೆ. ರಾಜಕಾರಣದಲ್ಲಿ ಮತ್ತು ರಾಜ್ಯದ ಆಡಳಿತದಲ್ಲಿ ಮುಳುಗಿರುವ ನನಗೆ ಇಂಥ ಸಂಭ್ರಮ ಸಮಾರಂಭದಲ್ಲಿ ಭಾಗಿಯಾಗುವ ಅವಕಾಶವನ್ನು ಮಾಡಿಕೊಟ್ಟು ನನ್ನನ್ನು ಚಿರಋಣಿಗಳನ್ನಾಗಿ ಮಾಡಿದ್ದೀರಿ. ಆದುದರಿಂದ ನಾನು ಈ ಸಮ್ಮೇಳನದ ಉದ್ಘಾಟನೆಯನ್ನು ಸಂತೋಷದಿಂದ ಮಾಡುತ್ತೇನೆ.

ಶ್ರವಣಬೆಳಗೊಳವು ಇತಿಹಾಸ ಪ್ರಸಿದ್ಧವಾದ ಪವಿತ್ರಕ್ಷೇತ್ರ. ಇಲ್ಲಿ ಅನೇಕ ಮಹಾ ಮಹಿಮರು ಆಗಿಹೋಗಿದ್ದಾರೆ. ಅವರ ಸಾನಿಧ್ಯದಿಂದ ಪುನೀತವಾದ ಈ ಧರ್ಮಕ್ಷೇತ್ರದಲ್ಲಿ ಶ್ರೀ ಬಾಹುಬಲಿಸ್ವಾಮಿ ಸಾನಿಧ್ಯದಲ್ಲಿ ನಲವತ್ತಾರನೆಯ ಈ ಸಮ್ಮೇಳನವು ನಡೆಯುವುದು ತುಂಬ ಉಚಿತವಾಗಿದೆ. ಕನ್ನಡದ ಹಿರಿಯ ಕವಿಗಳಲ್ಲಿ ಪಂಪ, ರನ್ನ, ಜನ್ನ, ಪೊನ್ನ ಮುಂತಾದವ ರೆಲ್ಲರೂ ಈ ಬಾಹುಬಲಿಯ ಚರಿತ್ರೆಯಿಂದ ಪ್ರಭಾವಿತರಾದವರು. ಕೆಲವರು ಈ ವಿಗ್ರಹವು ಕಲ್ಲಿನಲ್ಲಿ ಮೂಡುವುದಕ್ಕೆ ಮುಂಚೆ ಬಾಳಿದ್ದವರು. ಪಂಪನಂತೂ ತನ್ನ ಕಾವ್ಯ ಶಿಲೆಯಲ್ಲಿ ಗೊಮ್ಮಟ ಶಿಲ್ಪವನ್ನು ಈ ಹಿಂದೆಯೇ ಕಡೆದು ನಿಲ್ಲಿಸಿದ್ದನು ಬಹುಶಃ ಆ ಕಾವ್ಯ ಪ್ರಭಾವ ದಿಂದಲೇ ಚಾವುಂಡರಾಯನು ಜಗದ್ಭವ್ಯವಾದ ಈ ಶಿಲಾಗೊಮ್ಮಟನನ್ನು ನಿರ್ಮಾಣ ಮಾಡಿಸಿ ದನು. ಕಾವ್ಯ ಮತ್ತು ಶಿಲ್ಪ ಇವೆರಡೂ ಹೀಗೆ ಪರಸ್ಪರ ಪೂರಕವಾಗಿ ಕನ್ನಡನಾಡಿನ ಜನಮನ ವನ್ನು ಬಹುಕಾಲದಿಂದಲೂ ಸನ್ಮಾರ್ಗದಲ್ಲಿ ನಡೆಸಿಕೊಂಡು ಬಂದಿವೆ. ಶ್ರವಣಬೆಳಗೊಳವು ಇಂಥ ಇನ್ನೆಷ್ಟೋ ಪುಣ್ಯ ಜೀವಿಗಳ ಪುಣ್ಯಕಾರ್ಯಗಳ ನೆಲೆಬೀಡಾಗಿದೆ. ಇಂಥ ಕ್ಷೇತ್ರವನ್ನು ಸಮ್ಮೇಳನಕ್ಕೆ ಆರಿಸುವುದರಲ್ಲಿ ನೀವೆಲ್ಲರೂ ಅತ್ಯುತ್ತಮ ಕಾರ್ಯವನ್ನು ಮಾಡಿದ್ದೀರಿ.

ಕನ್ನಡ ಸಾಹಿತ್ಯ ಪರಿಷತ್ತು ವರ್ಷವರ್ಷವೂ ಸಾಹಿತ್ಯ ಸಮ್ಮೇಳನಗಳನ್ನು ಕೂಡಿಸಿ ನಾಡುನುಡಿಗಳ ಪುರೋಭಿವೃದ್ಧಿಗೆ ದುಡಿದಿದೆ. ಕನ್ನಡನಾಡು ಒಂದಾಗಬೇಕೆಂಬ ಆಕಾಂಕ್ಷೆ ಕನ್ನಡಿಗರ ಮನದಲ್ಲಿ ಮೂಡಿದುದು ಸಾಹಿತಿಗಳ ಉದಾತ್ತ ಧ್ಯೇಯದಿಂದ. ಎಲ್ಲ ಸಮ್ಮೇಳನಾ ಧ್ಯಕ್ಷರೂ, ಪರಿಷತ್ತಿನ ಎಲ್ಲ ಅಧ್ಯಕ್ಷರುಗಳೂ ಈ ನಾಡಿನ ಏಕೀಕರಣವನ್ನು ಕುರಿತು ಅನೇಕ ಕಡೆಗಳಲ್ಲಿ ಭಾಷಣಗಳನ್ನು ಮಾಡಿ, ವಿಶಾಲವಾದ ಮೈಸೂರು ರಾಜ್ಯವನ್ನು ಕಟ್ಟಿದ್ದಾರೆ. ಬೇರೆ ಬೇರೆ ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರಿಗೆ ಮನಸ್ಸು ಒಟ್ಟಿಗೆ ಕೊಡುತ್ತದೆಯೋ ಇಲ್ಲವೋ ಎಂಬ ಅನುಮಾನ ಜನರಲ್ಲಿ ಕೆಲವು ಕಾಲ ಮೂಡಿದ್ದಿತು. ಆದರೆ ಈಚೆಗೆ ಭಾವೈಕ್ಯವೆನ್ನುವುದು ಎಲ್ಲ ಕನ್ನಡಿಗರಲ್ಲಿ ಒಡಮೂಡಿ ಒಮ್ಮನಸ್ಸು ತಲೆದೋರುತ್ತಾ ಇದೆ. ನಾಡಿನ ಅನೇಕ ಕಡೆ ಗಳಿಂದ ವಿಖ್ಯಾತ ವಿದ್ವಾಂಸರೂ, ಕವಿಗಳೂ, ಇಲ್ಲಿ ಒಟ್ಟಿಗೆ ಸೇರುವುದು ಈ ಭಾವೈಕ್ಯವನ್ನು ವೃದ್ಧಿಮಾಡುವುದಕ್ಕೆ ಸಹಾಯಕವಾಗುತ್ತದೆ. ಪರಿಷತ್ತು ಇಂಥ ಸಮ್ಮೇಳನಗಳನ್ನು ನಾಡಿನ

ಗಡಿಗಳಲ್ಲಿ ನಡೆಸಿ ನಮ್ಮ ಗಡಿಗಳನ್ನು ಭದ್ರಮಾಡಿತು. ರಾಜ್ಯದ ಒಳಪ್ರದೇಶಗಳಲ್ಲಿ ಸಮ್ಮೇಳನಗಳು ನಡೆದು ನಮ್ಮ ಅಂತಶ್ಚೈತನ್ಯ ಬೆಳೆದುಬಂದಿದೆ. ಹೊರನಾಡ ಕನ್ನಡಿಗರೂ ಕೂಡ ಪರಿಷತ್ತಿನೊಡನೆ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ. ಇಂಥ ಹಿರಿಯ ಸಂಸ್ಥೆಯು ಚೈತನ್ಯಯುತವಾಗಿ ಅಭಿವೃದ್ಧಿಹೊಂದಬೇಕಾದುದು ತುಂಬಾ ಅಗತ್ಯ.

ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಶ್ರೀ ಜಿ. ವೆಂಕಟಸುಬ್ಬಯ್ಯನವರು ದಕ್ಷರೂ, ಉತ್ಸಾಹಶಾಲಿಗಳೂ, ಸ್ನೇಹಪರರೂ ಆಗಿರುವುದರಿಂದ ಪರಿಷತ್ತಿನ ಸುತ್ತ ಹೊಸ ಹುರುಪು ಮೂಡಿಬಂದಿದೆ. ರಾಜ್ಯ ಸರಕಾರವೂ, ಸಾರ್ವಜನಿಕರೂ ಈ ಉತ್ಸಾಹಶಾಲಿಗಳ ಕಾರ್ಯಕ್ಕೆ ಬೆಂಬಲವಾಗಿ ನಿಂತು ಸಹಾಯಮಾಡಬೇಕು.

ಈ ಬಾರಿಯ ಸಮ್ಮೇಳನಕ್ಕೆ ಡಾಕ್ಟರ್ ಎ. ಎನ್. ಉಪಾಧ್ಯೆಯವರಂತಹ ಮಹಾ ವಿದ್ವಾಂಸರು ದೊರೆತಿರುವುದು ಸಮ್ಮೇಳನದ ಭಾಗ್ಯ. ಅನೇಕ ಭಾಷೆಗಳಲ್ಲಿ ಪರಿಣತರಾಗಿ ಅಂತ ರಾಷ್ಟ್ರೀಯ ಖ್ಯಾತಿಯನ್ನು ಸಂಪಾದಿಸಿರುವ ಡಾಕ್ಟರ್ ಉಪಾಧ್ಯೆಯವರ ನೇತೃತ್ವದಲ್ಲಿ ಈ ಸಮ್ಮೇಳನದ ಕಾರ್ಯಕಲಾಪಗಳು ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ. ಅವರ ಪೂರ್ಣ ವಿದ್ವತ್ತಿನ ಪ್ರಯೋಜನವನ್ನೂ, ಅವರ ಮಾರ್ಗದರ್ಶನದ ಸಹಾಯವನ್ನೂ ಪಡೆದು ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಹೆಚ್ಚಿಗೆ ಕಾರ್ಯಗಳನ್ನು ಮಾಡಲೆಂದು ಆಶಿಸುತ್ತೇನೆ.

ಸಮ್ಮೇಳನಕ್ಕೆ ಬಂದಿರುವ ವಿದ್ವಾಂಸರಿಗೆ ನನ್ನದೊಂದು ವಿಜ್ಞಾಪನೆ. ಕನ್ನಡ ನಾಡಿನಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕು. ರಾಜ್ಯದ ಎಲ್ಲ ವ್ಯವಹಾರವೂ ಕನ್ನಡದಲ್ಲಿ ನಡೆಯಬೇಕು. ಕನ್ನಡದ ಸ್ವಾರಸ್ವತ ಸಂಪತ್ತು ಹೆಚ್ಚಬೇಕು. ನಮ್ಮ ದೇಶದ ಯಾವ ಭಾಷೆಗೂ ಕನ್ನಡವು ಕಡಿಮೆಯಿಲ್ಲವೆಂಬ ಮಟ್ಟಿಗೆ ಕನ್ನಡದ ಶ್ರೀಮಂತಿಗೆ ಹೆಚ್ಚಬೇಕು. ಇತರ ದೇಶಗಳಲ್ಲಿ ಸಾಹಿತ್ಯ ಸಂಸ್ಥೆಗಳು ಪ್ರತಿವರ್ಷವೂ ಅಚ್ಚುಕಟ್ಟಾಗಿ ಪ್ರಕಟಿಸುವ ಆಧಾರಭೂತವಾದ ಗ್ರಂಥಗಳ ಹಾಗೆ ನಮ್ಮಲ್ಲಿಯೂ ಗ್ರಂಥಗಳ ಪ್ರಕಟನೆಯಾಗಬೇಕು. ಅಧಿಕಾರ, ದರ್ಪ, ಇವುಗಳಿಗಿಂತ ಸೇವೆ, ವಿನಯ ಇವು ಮುಖ್ಯ. ಆದುದರಿಂದ ದೂರದೃಷ್ಟಿಯನ್ನಿಟ್ಟು ನಾವು ಸಾಹಿತ್ಯಸೇವೆಯನ್ನು ಮಾಡಲು ಹವಣಿಸಬೇಕೆಂದು ನನ್ನ ಪ್ರಾರ್ಥನೆ.

ನಿಮ್ಮ ಕಾರ್ಯಕ್ರಮದಲ್ಲಿ ಭಾಷಾ ಬಾಂಧವ್ಯವಿಚಾರರಂಗವನ್ನು ಸೇರಿಸಿದ್ದೀರಿ. ಭಾರತದ ಭಾಷೆಗಳ ಪರಸ್ಪರ ಸಂಬಂಧ, ಪರಿಚಯ ಸ್ನೇಹ ಇವು ಬೆಳೆಯುವಂತೆ ನಿಮ್ಮ 'ವಿಚಾರರಂಗ' ಕಾರ್ಯಕ್ರಮವನ್ನು ನಿರೂಪಿಸಲಿ. ನಿಮ್ಮ ಕವಿಮೇಳದಲ್ಲಿ ಕೇಳುವ ಹಿರಿಯ ಕವಿಗಳ ವಾಣಿಯು ನೂತನ ಕವಿ ಮನಗಳನ್ನು ಸೃಷ್ಟಿಸಲಿ, ಸಂಘ ಸಂಸ್ಥೆಗಳ ಸಮ್ಮೇಳನವು ಪರಸ್ಪರ ಸಹಕಾರ ಮನೋಭಾವವನ್ನೂ ವೃದ್ಧಿಪಡಿಸಲಿ, 'ಪತ್ರಿಕಾ ವಿಚಾರ ವಿನಿಮಯ'ದಿಂದ ನಮ್ಮ ಪತ್ರಿಕಾ ಪ್ರಪಂಚದ ಭವಿಷ್ಯವು ಚರ್ಚಿತವಾಗಲಿ. ಎರಡು ವರುಷಗಳ ಸಾಹಿತ್ಯ ವಿಮರ್ಶೆಯಿಂದ ನಮ್ಮ ಸ್ವಂತ ಶಕ್ತಿಯ ಮೌಲ್ಯಮಾಪನ ನಡೆಯಲಿ. ಶ್ರೀ ಗೊಮ್ಮಟೇಶ ಮಹಾಮಸ್ತಕಾಭಿಷೇಕ ದರ್ಶನದಿಂದ ಕಣ್ಮನಗಳು ಪುನೀತವಾಗಿ ನಿಮ್ಮ ಸಮ್ಮೇಳನ ಯಾತ್ರೆ ಫಲಪ್ರದವಾಗಲಿ.

ಈ ಉದ್ಘಾಟನೆಯನ್ನು ಮಾಡಿ ನನಗೆ ಉಂಟಾಗಿರುವ ಆನಂದವು ನನ್ನಲ್ಲಿ ಶಾಶ್ವತವಾಗಿ ನೆಲಸಲಿ ಎಂದು ಶ್ರೀ ಗೊಮ್ಮಟಸ್ವಾಮಿಯನ್ನು ಪ್ರಾರ್ಥಿಸುತ್ತೇನೆ.

ಶ್ರವಣಬೆಳುಗೊಳ ಸಾಹಿತ್ಯ ಸಮ್ಮೇಳನ

ಅಧ್ಯಕ್ಷ ಭಾಷಣ

ಮಾನ್ಯರಾದ ಶ್ರೀ ಕಂಠಿ ಅವರೇ,

ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮಿಗಳೇ,

ಕನ್ನಡ ಬಾಂಧವರೇ,

ನಮ್ಮ ನಾಡಿನ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಈ ಶ್ರವಣಬೆಳ್ಗೊಳದಲ್ಲಿ ನಡೆಯುವ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ನಿಯಮಿಸಿರುವ ತಮ್ಮೆಲ್ಲರ ಔದಾರ್ಯಕ್ಕೆ ನಾನು ನನ್ನ ಕೃತಜ್ಞತೆಗಳನ್ನು ಮೊದಲು ಸಮರ್ಪಿಸುತ್ತೇನೆ. ನನ್ನ ಕಾರ್ಯಕ್ಷೇತ್ರದ ಮರ್ಯಾದೆಯ ಕಲ್ಪನೆಯು ನನಗಿದೆ. ಅದರಿಂದ ಈ ಅಧ್ಯಕ್ಷ ಪದವಿಯ ಗೌರವವನ್ನು ನಾನು ನಿರ್ವಹಿಸುವ ವಿಷಯದಲ್ಲಿ ಸಂದೇಹಬಾರದೆ ಇರದು; ಸಂಕೋಚವೆನಿಸದೆ ಹೋಗದು. ಆದರೂ ನನ್ನ ಪರಿಚಿತ ಹಾಗೂ ಅಪರಿಚಿತ ಮಿತ್ರರೆಲ್ಲ ಸೇರಿ, ಸ್ನೇಹದಿಂದಲೂ ಒಮ್ಮತದಿಂದಲೂ ಒಪ್ಪಿಸಿದ ಕಾರ್ಯವನ್ನು ನಾನೆಂತು ಒಪ್ಪದೆ ಇರಲಿ? ಅದರಲ್ಲೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ನನಗೆ ಪೂರ್ಣ ಅಭಿರುಚಿಯಿದೆ. ಈ ದೃಷ್ಟಿಯಿಂದ ನಾನೊಬ್ಬ ಕನ್ನಡ ಸಾಹಿತ್ಯ ದೇವಿಯ ಭಕ್ತ, ಆದರೆ ಕನ್ನಡದ ಭಾಗ್ಯವಂತನಲ್ಲ. ಅದರಿಂದ ಕನ್ನಡ ಸಾಹಿತ್ಯ, ನಾಡು ನುಡಿಗಳ ಸೇವೆಯಲ್ಲಿ ನನಗಿಂತ ಎಷ್ಟೋ ಪಾಲು ಹೆಚ್ಚಿಗೆ ಸೇವೆಸಲ್ಲಿಸಿರುವ ಮಹನೀಯರಿಗೆ ಸಲ್ಲಬೇಕಾದ ಈ ಗೌರವವು ನನಗೆ ಸಲ್ಲುತ್ತಿರುವುದು ತಮ್ಮೆಲ್ಲರ ಸೌಜನ್ಯದ ಫಲವೆಂದೇ ನಾನು ಭಾವಿಸಬೇಕಾಗಿದೆ.

ನಾನು ಕನ್ನಡಕ್ಕೆ ಮಾಡಿರುವ ಸೇವೆಯು ಸ್ವಲ್ಪ. ನನ್ನ ಅಂತರಂಗದಲ್ಲಿ ಕನ್ನಡಕ್ಕಾಗಿ ಎಷ್ಟು ಸೇವೆ ಮಾಡಬೇಕೆಂದು ಬಯಕೆ ಇದೆಯೋ ಅದರಲ್ಲಿ ಸ್ವಲ್ಪ ಭಾಗವನ್ನೂ ಮಾಡಿ ಪೂರೈಸಲಿಕ್ಕೆ ಆಗಿಲ್ಲ. ನಾನು ಕನ್ನಡ ಸಾಹಿತ್ಯಕ್ಕೆ ತುಸು ಸೇವೆಯನ್ನು ಮಾಡಿದ ಪಾಮರನೇ ಹೊರತು, ಪಂಡಿತನಲ್ಲ. ಕನ್ನಡ ಕವಿಗಳ ವಿಷಯವಾಗಿ, ಸಾಹಿತ್ಯದ ವಿಷಯವಾಗಿ, ನಾನು ಮಾಡಿದ ಸ್ವಲ್ಪ ಸೇವೆಯು ತಮ್ಮ ಮುಂದೆ ಇದ್ದೇ ಇದೆ. ತಮ್ಮ ಇಚ್ಛೆ ಹಾಗೂ ಮನಸ್ಸಿನ ಹಿರಿಮೆಗಳಿಗಾಗಿ ನಾನು ಈ ಉತ್ತರದಾಯತ್ವವನ್ನು ಕೈಗೊಂಡಿದ್ದೇನೆ. ಮತ್ತು ತಮ್ಮೆಲ್ಲರ ಸಹಯೋಗದಿಂದ ಈ ಸಮ್ಮೇಲನವನ್ನು ಸಫಲಮಾಡಲು ಪ್ರಯತ್ನಿಸುವ ಕರ್ತವ್ಯಪಾಲನೆಗಾಗಿ ಸಿದ್ಧನಾಗಿದ್ದೇನೆ. ಈ ಸಮಯದಲ್ಲಿ ಭರ್ತೃಹರಿಯ ವಾಕ್ಯವು ನನಗೆ ನೆನಪಾಗುತ್ತದೆ:

> "ಪರಗುಣ ಪರಮಾಣೂನ್ ಪರ್ವತೀಕೃತ್ಯ ಲೋಕೆ।
> ನಿಜ ಹೃದಿ ವಿಲಸಂತಾಃ ಸಂತಿ ಸಂತಃ ಪ್ರಿಯಂತಃ॥"

ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ನನ್ನ ಸಂಬಂಧವು ಏನಿಲ್ಲೆಂದರೂ ಮೂವತ್ತೈದು ವರ್ಷಗಳಿಂದ ಇದೆ. ಕನ್ನಡ ನಾಡಿನ ಶ್ರೇಷ್ಠ ಪಂಡಿತರಾದ ದಿ|| ಆರ್. ನರಸಿಂಹಾಚಾರ್ಯ, ಪಂ. ಶಾಮಾಶಾಸ್ತ್ರಿ, ಪ್ರೊ. ಹಿರಿಯಣ್ಣ ಇವರಿಂದ ಆಗಾಗ ನನಗೆ ಪ್ರೋತ್ಸಾಹವೂ ದೊರೆತಿತ್ತು. ಸಾಹಿತ್ಯ ಪರಿಷತ್ತಿನ ಕೂಡ ದೃಢಸಂಬಂಧವು ಉಂಟಾಗಲಿಕ್ಕೆ ಮುಖ್ಯ ಕಾರಣವೆಂದರೆ, ನಮ್ಮೆಲ್ಲರಿಗೂ ಪೂಜ್ಯಸ್ಥಾನದಲ್ಲಿರುವ ದಿ. ಬಿ. ಎಂ. ಶ್ರೀಕಂಠಯ್ಯನವರ ಪ್ರೇಮ, ಪ್ರೇರಣೆ, ಆದೇಶಗಳೇ ಸರಿ. ಕನ್ನಡಿಗರು ಎಲ್ಲಿಯೇ ಇರಲಿ, ಅವರನ್ನೆಲ್ಲ ಪ್ರೀತಿಯ ರಜ್ಜುವಿನಿಂದ ಕಟ್ಟುವ ವಿಲಕ್ಷಣ ಶಕ್ತಿ ಬಿ. ಎಂ. ಶ್ರೀಯವರಲ್ಲಿತ್ತು.

ಬೇರೆ ಬೇರೆ ಕಾರಣಗಳಿಂದ ಕರ್ನಾಟಕದಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದುಡಿಯುತ್ತಿರುವ ನನ್ನ ಸಮವಯಸ್ಕ ವಿದ್ವಾಂಸರ ಕೂಡ ಕಳೆದ ನಲವತ್ತು ವರ್ಷಗಳಿಂದ ಉಂಟಾದ ನನ್ನ ಸಂಬಂಧಗಳು ಈ ಹೊತ್ತಿನವರೆಗೂ ಉಳಿದಿವೆ. ಆ ವಿದ್ವಾಂಸರಲ್ಲಿ ಕೆಲವರು ನಮ್ಮನ್ನಗಲಿ ಹೋಗಿದ್ದಾರೆ. ಮತ್ತೂ ಕೆಲವರು ನಮ್ಮ ಕೂಡ ತಮ್ಮ ತಮ್ಮ ಮಾರ್ಗದಲ್ಲಿ, ಕ್ಷೇತ್ರಗಳಲ್ಲಿ ದುಡಿಯುತ್ತಲಿದ್ದಾರೆ. ಈ ಸಂದರ್ಭದಲ್ಲಿ ದಿ. ಪ್ರೊ. ಕೆ. ಜಿ. ಕುಂದಣಗಾರ, ಎಂ. ಗೋವಿಂದಪೈ, ತೀ. ನಂ. ಶ್ರೀಕಂಠಯ್ಯ ಇವರ ನೆನಪು ಆಗದೆ ಇರದು. ಈ ಸಾಹಿತಿಗಳ ಸಾವಿನ ಜೊತೆಯಲ್ಲೇ ಕನ್ನಡ ನಾಡಿನಲ್ಲೇ ಸಂಗೀತಕ್ಕೊಂದು ಶೋಭೆಯಾಗಿದ್ದ ಟಿ. ಚೌಡಯ್ಯನವರ ಸಾವೂ ನಮ್ಮ ದುಃಖವನ್ನು ಇಮ್ಮಡಿಸಿದೆ.

ಇವರನ್ನೆಲ್ಲ ಕೃತಜ್ಞತೆಯಿಂದ ಸ್ಮರಿಸುವೆ. ನಮ್ಮ ಸಮಕಾಲೀನ ವಿದ್ವಾಂಸರಲ್ಲಿ ಪ್ರೊ. ಡಿ. ಎಲ್. ನರಸಿಂಹಾಚಾರ್ಯ, ಎನ್. ಅನಂತರಂಗಾಚಾರ್ಯ, ಶ್ರೀಮಾನ್ ದ. ರಾ. ಬೇಂದ್ರೆ, ಡಾ. ಸಿ. ಚ. ನಂದೀಮಠ, ಡಾ. ಆರ್. ಎಸ್. ಮುಗಳಿ, ಡಾ. ಆರ್. ಸಿ. ಹಿರೇಮಠ, ಪ್ರೊ. ವಿ. ಕೃ. ಗೋಕಾಕ ಮೊದಲಾದ ಹಿರಿಯ ಕಿರಿಯ ಮಿತ್ರರ ಸಹಾಯದಿಂದ ಕನ್ನಡ ಸಂಸ್ಕೃತಿ, ಸಾಹಿತ್ಯಗಳಿಗೆ ನನ್ನ ಸಂಬಂಧವು ಇಂದಿಗೂ ಉಳಿದು ಬಂದಿದೆ. ಇತರ ಕನ್ನಡ ಸಾಹಿತಿಗಳೊಡನೆ ನನ್ನ ಸಂಬಂಧ ತೀರ ಕಡಮೆ. ಇದಕ್ಕಾಗಿ ನನ್ನ ಮನಸ್ಸು ಹಲವು ಸಲ ನೊಂದಿರುವುದುಂಟು. ನನ್ನ ತಾಯ್ನುಡಿಯ ಸೇವೆಯಲ್ಲಿ ನಿರತರಾದ ಸಾಹಿತಿಗಳ ಸ್ನೇಹಕ್ಕಾಗಿ ಹೃದಯ ಹಂಬಲಿಸಿದ್ದುಂಟು. ನನ್ನ ಬಹುಕಾಲದ ಆ ಬಯಕೆ ಇಂದು ನೆರವೇರುತ್ತಿದೆ. ಕನ್ನಡ ನಾಡುನುಡಿಗಳ ಮುನ್ನಡೆಗಾಗಿ ಶ್ರಮಿಸುತ್ತಿರುವ ತಮ್ಮೆಲ್ಲರನ್ನೂ ಈ ಶ್ರವಣಬೆಳ್ಗೊಳ ಪುಣ್ಯಕ್ಷೇತ್ರದಲ್ಲಿ ಒಟ್ಟಾರೆ ಸಂದರ್ಶಿಸುತ್ತಿರುವುದು ನನ್ನ ಆಯುಷ್ಯದಲ್ಲಿಯೇ ದೊಡ್ಡ ಸೌಭಾಗ್ಯವೆಂದು ನಾನು ತಿಳಿಯುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು ಇಂಥ ಸಾಹಿತ್ಯ ಸಮ್ಮೇಲನಗಳನ್ನು ಎಷ್ಟೋ ಸ್ಥಳಗಳಲ್ಲಿ ಏರ್ಪಡಿಸಿದೆ. ಅಂಥ ಒಂದೆರಡು ಸಮ್ಮೇಲನ ಹಾಗೂ ಅಧಿವೇಶನಗಳಿಗೆ ನಾನು ಹೋಗಿದ್ದೆ. ಇಂದಿನ ಸಮ್ಮೇಲನಕ್ಕಾಗಿ ಆಯ್ದ ಈ ಸ್ಥಳವು ವಿಶೇಷ ಮಹತ್ವದ್ದಾಗಿದೆ. ಈ ಶ್ರವಣಬೆಳ್ಗೊಳವು ಐತಿಹಾಸಿಕ ಕಾಲದಿಂದಲೂ ಪ್ರಸಿದ್ಧವೂ ಪವಿತ್ರವೂ ಆದ ಸ್ಥಳವಾಗಿದೆ. ಕ್ರಿಸ್ತ ಪೂರ್ವದಲ್ಲಿಯೇ, ಉತ್ತರದಿಂದ ದಕ್ಷಿಣದೇಶಕ್ಕೆ ಸಂಘಸಹಿತ ಬಂದ ಭದ್ರಬಾಹು ಸ್ವಾಮಿಗಳೂ ಅವರ ಶಿಷ್ಯನಾದ ಚಂದ್ರಗುಪ್ತ ಮೌರ್ಯನೂ, ಕಚವಪ್ರ ಅಥವಾ ಕಟ್ವಪ್ಪು (ಚಂದ್ರಗಿರಿ) ಎಂಬ ಬೆಟ್ಟದ ಮೇಲೆ ಸಲ್ಲೇಖನ ವ್ರತದಿಂದ ಸಮಾಧಿಯನ್ನು ಹೊಂದಿದರೆಂದು ಇಲ್ಲಿಯ ಶಿಲಾಲೇಖದಿಂದ ತಿಳಿಯುತ್ತದೆ. ಅಂದಿನಿಂದಲೂ ಇದು ಜೈನ ಸಂಸ್ಕೃತಿಯ ಕೇಂದ್ರ ಸ್ಥಳವಾಗಿದೆ. ಇಲ್ಲಿರುವ ಗೋಮಟೇಶ್ವರ ಭವ್ಯಮೂರ್ತಿಯು ಜಗತ್ತಿನಲ್ಲಿಯೇ ಪ್ರಸಿದ್ಧವಾಗಿದೆ. ಈ ಪವಿತ್ರ ಮೂರ್ತಿಯ ರೂಪದಲ್ಲಿ ಶಿಲ್ಪಿಯು ಜೈನದರ್ಶನದಲ್ಲಿ ಹೇಳಿರುವ ಸಂಪೂರ್ಣ ತ್ಯಾಗದ ಭಾವನೆಯನ್ನೂ ವೀತರಾಗವೃತ್ತಿಯನ್ನೂ ಮೂರ್ತೀಕರಿಸಿದ್ದಾನೆ. ಮೂರ್ತಿಯ ನಗ್ನತೆಯು ಜೈನದಲ್ಲಿಯ ಸರ್ವಸ್ವ ತ್ಯಾಗಭಾವನೆಯ ಪ್ರತೀಕವಾಗಿದೆ.

ಈ ಮೂರ್ತಿಯು ಗಂಗರಾಜರ ಮಂತ್ರಿಯೂ ಸೇನಾಪತಿಯೂ ಆದ ಚಾಮುಂಡರಾಯನ ನಿಮಿತ್ತದಿಂದ ನಿರ್ಮಾಣವಾಗಿದೆ. ಚಾಮುಂಡರಾಯನು ಸಮರಧುರಂಧರ, ವೀರಮಾರ್ತಂಡ, ರಣರಂಗಸಿಂಹ, ತ್ರಿಭುವನವೀರ, ವೈರಿಕುಲಕಾಲದಂಡ, ಸತ್ಯಯುಧಿಷ್ಠಿರನೆಂದು ಹೆಸರಾದ ಕಲಿಯು. ಇವನಿಗೆ ಮನೆಯಲ್ಲಿ ಹಿರಿಯರು ಪ್ರೀತಿಯಿಂದ 'ಗೊಮ್ಮಟ' ನೆಂದು ಕರೆಯುತ್ತಿದ್ದರು. ಅದರಿಂದ ಶ್ರವಣಬೆಳ್ಗೊಳದ ವಿಂಧ್ಯಗಿರಿಯ ಮೇಲೆ ಇವನು ಸ್ಥಾಪಿಸಿದ ಬಾಹುಬಲಿಯ ಲೋಕೋತ್ತರ ಮೂರ್ತಿಗೆ 'ಗೋಮಟೇಶ್ವರ' ನೆಂದು ಹೆಸರಾಯಿತು. ಆ ಕಾಲದಲ್ಲಿ ಎಂಥ ಸಮುನ್ನತ ಸಂಸ್ಕೃತಿಯ ಸಮ್ಮೇಲನವಿಲ್ಲಿ! ಬೆಳ್ಗೊಳವು ಗೋಮಟೇಶ್ವರ ವಿಗ್ರಹದಿಂದ ಕೊಪಣಾದ್ರಿಯನ್ನು ಮರೆಯಿಸುವಂತಾಯಿತು. ಅಜಿತಸೇನಾಚಾರ್ಯ, ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯ, ಕವಿಚಕ್ರವರ್ತಿ ರನ್ನ, ಚಾಮುಂಡರಾಯ ಇವರೆಲ್ಲ ಸೇರಿ, ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ ಆ ಕಾಲವು ಬೆಳುಗೊಳದ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಶ್ರೀ ಅಜಿತಸೇನಾಚಾರ್ಯರೆಂದರೆ ನಮ್ಮ ಈಗಿನ ಶ್ರೀ ಚಾರುಕೀರ್ತಿ ಭಟ್ಟಾರಕರ ಪೂರ್ವಜರು. ಅಜಿತಸೇನರು ಬಹು ಹಿರಿಯರು, ಭುವನಗುರು' ಗಳು; ಅವರು ಚಾಮುಂಡರಾಯನ ಗುರುಗಳು. ಈ ಪರಂಪರೆಯಲ್ಲಿ ಬೆಳೆದುಬಂದ ಇಲ್ಲಿಯ ಶ್ರೀ ಚಾರುಕೀರ್ತಿ ಗುರುಗಳವರ ಮಠವು ಕನ್ನಡಿಗರಿಗಷ್ಟೇ ಅಲ್ಲ, ಭಾರತೀಯರಿಗೆಲ್ಲ ಗುರುಪೀಠವಾಗಿದೆ. ಈ ಚಾರುಕೀರ್ತಿ ಭಟ್ಟಾರಕರ ಪರಂಪರೆಯು ವಿದ್ವತ್ ಪರಂಪರೆಯಾಗಿದೆ. ಈ ಪರಂಪರೆಯಲ್ಲಿ 'ಪಾರ್ಶ್ವಾಭ್ಯುದಯ' ದಂಥ ಗ್ರಂಥದ ಟೀಕೆಯನ್ನು 'ಗೀತ ವೀತರಾಗ' ದಂಥ ಕೃತಿಯನ್ನು ರಚಿಸಿದ ಭಟ್ಟಾರಕರಾಗಿ ಹೋಗಿದ್ದಾರೆ. ಇವರು ಕನ್ನಡನಾಡಿನ ಅಮೌಲ್ಯ ಶಾಸ್ತ್ರ ಭಾಂಡಾರವನ್ನು ಕಾಯ್ದುಕೊಂಡು ಬಂದಿದ್ದಾರೆ. ಅದು ನಮ್ಮೆಲ್ಲರಿಗೆ ಅನುಪಮನಿಧಿಯಾಗಿದೆ.

ಇನ್ನು ನೇಮಿಚಂದ್ರಾಚಾರ್ಯರು ಚಾಮುಂಡರಾಯನಿಗಾಗಿ ಸಂಗ್ರಹಿಸಿದ ಧವಲಾದಿ ಗ್ರಂಥಗಳ ಸಾರವಾದ ಜೈನತತ್ತ್ವ ಶಾಸ್ತ್ರದ ಸಂಗ್ರಹವೆನಿಸುವ 'ಗೊಮ್ಮಟಸಾರ' ವಂತೂ ಲೋಕಪ್ರಸಿದ್ಧವಾದ ಗ್ರಂಥವಾಗಿದೆ. ಸಾಯಣಾಚಾರ್ಯರು ವೇದದಮೇಲೆ ಭಾಷ್ಯ ಬರೆದು, ಕನ್ನಡ ನಾಡಿನ ವಿದ್ವತ್ತೆಯನ್ನು ನಮ್ಮ ದೇಶದಲ್ಲಿ ಅಷ್ಟೇ ಅಲ್ಲ, ಜಗತ್ತಿನಲ್ಲಿ ಬೀರಿದಂತೆಯೇ, ಅದಕ್ಕಿಂತ ಬಹು ಮುಂಚೆಯೇ, ಕೇಶವವರ್ಣಿಗಳು 'ಗೊಮ್ಮಟಸಾರ' ದ ಮೇಲೆ ಕನ್ನಡ ಟೀಕೆಯನ್ನು ಬರೆದರು. ಇದರ ಕೀರ್ತಿ

ಯನ್ನು ಕೇಳಿ, ಉತ್ತರ ಭಾರತದ ಪಂಡಿತರು ಕನ್ನಡ ನಾಡಿಗೆ ಬಂದು, ಕನ್ನಡ ಕಲಿತು, ಆ ಟೀಕೆಯ ಭಾಷಾಂತರವನ್ನು ಸಂಸ್ಕೃತದಲ್ಲಿ ಮಾಡಿದರು. ಅದೇ ಪರಂಪರೆಯಿಂದ ಈಗಲೂ ಉತ್ತರ ದೇಶದಲ್ಲಿ 'ಗೊಮ್ಮಟಸಾರ'ದ ಅಧ್ಯಯನವು ನಡೆಯುತ್ತಿದೆ.

ಚಾಮುಂಡರಾಯನು ಇಲ್ಲಿ ನಿರ್ಮಿಸಿದ 'ಗೋಮಟೇಶ' ವಿಗ್ರಹದ ಅನುಕರಣವಂತೂ ಸಾವಿರಾರು ವರ್ಷಗಳಿಂದ ನಾಡಿನಲ್ಲೆಲ್ಲ ನಡೆಯುತ್ತ ಬಂದಿದೆ. ಈ ಇಂದ್ರಗಿರಿಯ ಮೇಲಿನ ಬಾಹುಬಲಿಯ ಲೋಕೋತ್ತರ ಮೂರ್ತಿಯಿಂದ ಸ್ಫೂರ್ತಿಯನ್ನು ಹೊಂದಿ, ಐತಿಹಾಸಿಕ ಕಾಲದಲ್ಲಿಯೇ, ಕಾರ್ಕಳ, ವೇಣೂರುಗಳಲ್ಲಿಯೂ ಬಾಹುಬಲಿಯ ಭವ್ಯ ವಿಗ್ರಹಗಳು ರೂಪುಗೊಂಡವು. ಈ ಪ್ರಭಾವವು ಕರ್ನಾಟಕದ ಸೀಮೆಗಷ್ಟೇ ಮರ್ಯಾದಿತವಾಗಿಲ್ಲ. ದೂರದ ಬಿಹಾರದ ಆರಾದಲ್ಲಿಯೂ ಅಯೋಧ್ಯೆಯಲ್ಲಿಯೂ ಬಾಹುಬಲಿ ವಿಗ್ರಹಗಳ ಸ್ಥಾಪನೆಗೆ ಕಾರಣವಾಯಿತು. ಇತ್ತೀಚೆಗೆ ಕೊಲ್ಲಾಪುರ ಜಿಲ್ಲೆಯ ಶ್ರೀ ಬಾಹುಬಲಿ ವಿದ್ಯಾಪೀಠದಲ್ಲಿ ಸ್ಥಾಪಿಸಲಾದ ಬಾಹುಬಲಿ ವಿಗ್ರಹದವರೆಗೆ ಈ ಪರಂಪರೆಯ ಪ್ರಭಾವವು ವಿಸ್ತಾರವಾಗಿದೆ. ಹೀಗೆ ಶ್ರವಣಬೆಳ್ಗೊಳವು ಮೂರ್ತಿಶಿಲ್ಪ ಪರಂಪರೆಗೊಂದು ಜನನಸ್ಥಾನವೆನಿಸಿದೆ.

ಗಂಗರಾಜರ ಹಿರಿಯ ಮಂತ್ರಿಯಾದ ಚಾಮುಂಡರಾಯನು ಆ ಕಾಲದ ರಾಜಕೀಯ ಧಾರ್ಮಿಕ ಕಾರ್ಯಗಳಿಗೆಲ್ಲ ನೇತೃವಾಗಿದ್ದನು. ಗಂಗರಾಜ್ಯವು ಉನ್ನತಿಗೇರಲ ಸತತ ಪ್ರಯತ್ನಿಸುತ್ತಿದ್ದನು. ಮುಪ್ಪಿನ ಕಾಲದಲ್ಲಿಯಂತೂ ಇವನ ಜೀವನವು ಧರ್ಮಾಚರಣೆಯಲ್ಲಿಯೇ ಕಳೆಯಿತು. ಇವನು ಕನ್ನಡದಲ್ಲಿ 'ತ್ರಿಷಷ್ಠಿ ಲಕ್ಷಣ' ಮಹಾಪುರಾಣವನ್ನು ಬರೆದನು. ಅದಕ್ಕೆ 'ಚಾಮುಂಡರಾಯ ಪುರಾಣ'ವೆಂದೂ ಹೆಸರಿದೆ. ಸಂಸ್ಕೃತದಲ್ಲಿಯೂ ಇವನು 'ಚಾರಿತ್ರಸಾರ'ವೆಂಬ ಗ್ರಂಥವನ್ನು ರಚಿಸಿದ್ದಾನೆ. ಈತನಿಂದ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ತುಂಬ ನೆರವಾಯಿತು. ಈತನ ಆಶ್ರಯದಲ್ಲಿಯೇ ಕವಿ ಚಕ್ರವರ್ತಿ ರನ್ನನು ಕೃಷ್ಣಾ ಘಟಪ್ರಭೆಗಳ ಮಧ್ಯದ ಸೀಮೆಯಾದ ಮುದ್ದವೊಳಲಿನಿಂದ ಶ್ರವಣಬೆಳ್ಗೊಳಕ್ಕೆ ಬಂದು ನೆಲೆಸಿದನು. ಇಲ್ಲಿ ಸ್ಫೂರ್ತಿಯನ್ನು ಹೊಂದಿ 'ಗದಾಯುದ್ಧ', 'ಅಜಿತ ಪುರಾಣ ತಿಲಕ' ದಂಥ ಶ್ರೇಷ್ಠ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಪ್ರಪಂಚವನ್ನು ಬೆಳಗಿದನು.

ಈ ಐತಿಹಾಸಿಕ ಹಿನ್ನೆಲೆಯಿಂದ ನೋಡಿದರೆ ಶ್ರವಣಬೆಳ್ಗೊಳವು ಎಂಥ ಸುಂದರ ಸನ್ನಿವೇಶಗಳ ಬೀಡು! ಕಲೆಯ ತವರ್ಮನೆ! ಇಂದ್ರಗಿರಿ ಚಂದ್ರಗಿರಿಗಳ ಸೊಬಗೇನು? ಅವುಗಳ ಮಧ್ಯದಲ್ಲಿರುವ ಬೆಳ್ಗೊಳದ ಚೆಲುವೇನು? ಅಲ್ಲಿ 'ಚೆನ್ನಣ್ಣಬಸ್ತಿ', ಎದುರಿಗೆ ಮಾನಸ್ತಂಭ. ಇದರ ಹಿಂದೆ ಜರಗು ಬಸ್ತಿ. ಅಲ್ಲಿ ಕೆತ್ತಿದ ಕಲ್ಲಿನಲ್ಲರಳಿದ ಕಮಲದ ಕಲೆ ಯೆಂತಹದು! ಆ ಆವಾರದಲ್ಲಿ ತ್ಯಾಗದ ಬ್ರಹ್ಮದೇವನ ಕಂಬವಿದೆ. ಇದೇ ಕ್ಷೇತ್ರದಲ್ಲಿ ಕವಿ ಚಕ್ರವರ್ತಿ ರನ್ನನು ತನ್ನ ಹಸ್ತಾಕ್ಷರಗಳನ್ನು ನಮಗಾಗಿ ಮಾಡಿಸಿ ಹೋಗಿದ್ದಾನೆ. 'ಗುಳಕಾಯಜ್ಜಿ', 'ಸಿದ್ಧರ ಬಸ್ತಿ' ಗಳೂ ನೋಡತಕ್ಕಂಥವುಗಳೇ ಆಗಿವೆ. ಇಂದ್ರಗಿರಿಗಿಂತ ಚಂದ್ರಗಿರಿಯು ಚಿಕ್ಕದಾದರೂ ದ್ರಾವಿಡ ಶಿಲ್ಪದ ನೆಲೆಯಾಗಿದೆ. ಅದು ಇಲ್ಲಿ ಎಲ್ಲಕ್ಕೂ ಪ್ರಾಚೀನವಾದ ಮಂದಿರವು ಎಂಟನೆಯ ಶತಮಾನದಷ್ಟು ಹಳೆಯದಾಗಿದೆ. ಈ ಪರ್ವತದ ಮೇಲೆಯೇ ಭದ್ರಬಾಹು ಗುಹೆಯಿದೆ; ಚಾಮುಂಡರಾಯ ಬಸದಿಯಿದೆ. ಇದಲ್ಲದೆ ಶಾಂತಿನಾಥ ಮಂದಿರ, ಚಾಮುಂಡರಾಯ ಬಸ್ತಿ, ಸವತಿ ಗಂಧವಾರಣ ಬಸ್ತಿ ಮೊದಲಾದ ಸುಂದರ ಮಂದಿರಗಳಿವೆ; ಭವ್ಯವಾದ ಮಾನಸ್ತಂಭವೂ ಇದೆ. ಈ ಪರ್ವತದ ಉತ್ತರ ಭಾಗಕ್ಕೆ ಇಳಿದರೆ ಜಿನನಾಥಪುರವು ಇದೆ. ಇದನ್ನು ಕ್ರಿ. ಶ. ೧೧೧೭ರಲ್ಲಿ ಹೊಯಿಸಳ ಸೇನಾಪತಿಯಾದ ಗಂಗರಾಜನು ಸ್ಥಾಪಿಸಿದನು. ಇವಲ್ಲದೆ ಶ್ರವಣಬೆಳ್ಗೊಳ ಊರಲ್ಲಿಯೂ ಅನೇಕ ಜಿನಮಂದಿರಗಳಿವೆ. ಅವುಗಳಲ್ಲಿ ಭಂಡಾರಿಬಸ್ತಿಯು ಬಹು ದೊಡ್ಡದು. ಇದೇ ಮಂದಿರಕ್ಕೆ ರಾಜಾನರಸಿಂಹನು 'ಭವ್ಯಚೂಡಾಮಣಿ' ಎಂದು ಹೆಸರಿಟ್ಟನು. ಇನ್ನು 'ಅಕ್ಕನ ಬಸದಿ'ಎಂಬುದು ಶ್ರವಣಬೆಳ್ಗೊಳದಲ್ಲಿ ಹೊಯ್ಸಳ ಶಿಲ್ಪದ ಒಂದೇ ಒಂದು ಮಂದಿರವಾಗಿದೆ. ಅದರಂತೆ ಸಿದ್ಧಾಂತ ಬಸ್ತಿ, ದಾನಶಾಲಾ ಬಸ್ತಿ, ನಗರ ಜಿನಾಲಯ ಮಾಂಗಾಯಿ ಬಸ್ತಿಗಳು ನೋಡತಕ್ಕಂಥವುಗಳಾಗಿವೆ.

ಇಲ್ಲಿಯ ವಿದ್ವಾಂಸರಾದ ಭಟ್ಟಾರಕರ ಪೀಠವು, ಹತ್ತು ಶತಮಾನದಷ್ಟು ದೀರ್ಘ ಇತಿಹಾಸವುಳ್ಳುದಾಗಿದೆ. ಈ ಪೀಠ, ಸಾಹಿತ್ಯ ಕಲೆಗಳ ವಾತಾವರಣ, ಪವಿತ್ರ ಭಾವನೆಗಳ ಪ್ರಭಾವ ಇವೆಲ್ಲವುಗಳಿಂದ ಕೂಡಿದ ಶ್ರವಣಬೆಳ್ಗೊಳವು ನಮ್ಮ ಸಾಹಿತಿಗಳಿಗೆ ಮುಂದಣ ಕಾಲದಲ್ಲಿ ಸ್ಫೂರ್ತಿಯನ್ನು ನೀಡಲೆಂದು ಹಾರೈಸುತ್ತೇನೆ. ಉತ್ತರ ಕರ್ನಾಟಕದ ಬೆಳವಲನಾಡಿನಿಂದ ರನ್ನನು ಇಲ್ಲಿಗೆ ಬಂದು, ವಿಶೇಷ ಅಭ್ಯಾಸ ಮಾಡಿ, ಬೆಳ್ಗೊಳದ ಬಂಡೆಯ ಮೇಲೆ ತನ್ನ ಕೈಬರಹವನ್ನು ಬಿಟ್ಟು ಹೋದುದನ್ನು ನೋಡಿ, ನಮ್ಮೆಲ್ಲರಿಗೆ ವಿಶೇಷ ಸ್ಫೂರ್ತಿಯು ದೊರೆಯು

ಲೆಂದು ಅಪೇಕ್ಷಿಸುವೆ. ಇಲ್ಲಿ ಸೇರಿರುವ ಕಿರಿಯ ಸಾಹಿತಿಗಳಂತೂ ಇದರಿಂದ ಹೆಚ್ಚು ಉತ್ಸಾಹವನ್ನೂ ಮಾರ್ಗದರ್ಶನವನ್ನೂ ಪಡೆಯಲು ಸಾಧ್ಯವಿದೆ. ಈಗ ಇಲ್ಲಿ ನಡೆಯುತ್ತಿರುವುದು ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಲನವಾಗಿದೆಯಷ್ಟೆ? ಈ ಹಿಂದಿನ ನಲವತ್ತೈದು ಸಮ್ಮೇಲನಗಳ ಅಧ್ಯಕ್ಷಪದವಿಯನ್ನು ಬೆಳಗಿದ ಮಹಾನುಭಾವರ ಸಾಹಿತ್ಯಾಭ್ಯಾಸ, ಸಿದ್ಧಿಗಳನ್ನು ಸ್ಮರಿಸಿಕೊಂಡರೆ ಯಾರಿಗಾದರೂ ರೋಮಾಂಚವಾಗದೆ ಇರದು. ಅವರ ನಾಡು, ನುಡಿಗಳ ಭಕ್ತಿ, ಅವರು ಸಲ್ಲಿಸಿದ ಸೇವೆ, ಅವರು ನಿರ್ಮಿಸಿದ ಕೃತಿಗಳು, ಅವರು ಕಂಡ ಕನಸುಗಳು, ಕೈಕೊಂಡ ಯೋಜನೆಗಳು, ಇವೆಲ್ಲ ಇಂದಿಗೂ ಕನ್ನಡ ಕಾರ್ಯಕರ್ತರಿಗೆ ಸ್ಫೂರ್ತಿಯನ್ನೀಯುವಂಥವಾಗಿವೆ. ಕನ್ನಡ ನಾಡಿನ ಏಕೀಕರಣ, ವಿಶಾಲ ಕರ್ನಾಟಕದ ನಿರ್ಮಾಣ, ಬೇರೆ ಬೇರೆ ಪ್ರದೇಶಗಳ ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದ್ರಭಾವನೆ, ಎಲ್ಲ ಸೀಮೆಗಳಿಗೂ ಸಮಾನವಾದ ಗ್ರಾಂಥಿಕ ವ್ಯಾವಹಾರಿಕ ಭಾಷೆಯ ನಿರ್ಮಾಣ, ಕನ್ನಡದ ಸ್ಥಾನಮಾನ ವಿಚಾರ, ಹಳೆಯ ಸಾಹಿತ್ಯದ ಸಂರಕ್ಷಣ, ಪ್ರಕಟಣೆ - ಪ್ರಸಾರಗಳು, ಜನತೆಗೆ ಒಳ್ಳೆಯ ಸಾಹಿತ್ಯವನ್ನು ನೀಡುವಿಕೆ, ಹೊಸ ಸಾಹಿತ್ಯಕ್ಕೆ ಪ್ರೋತ್ಸಾಹ, ಕನ್ನಡ ಭಾಷಾಭ್ಯಾಸದ ಬೆಳವಣಿಗೆ, ಭಾಷಾ ಶಾಸ್ತ್ರದ ತೌಲನಿಕ ಅಭ್ಯಾಸ, ಪ್ರಬುದ್ಧ ಪಾಂಡಿತ್ಯದ ಸಮೃದ್ಧಿ, ಕನ್ನಡ ನಾಡಿನ ರಾಜಕೀಯ - ಸಾಮಾಜಿಕ - ಧಾರ್ಮಿಕ ಇತಿಹಾಸಗಳ ಲೇಖನ, ಅದಕ್ಕಾಗಿ ನಡೆಯಬೇಕಾದ ಸಂಶೋಧನೆ, ವಿಶ್ವಕೋಶದ ರಚನೆ, ಸಮೃದ್ಧವೂ ಸುಪುಷ್ಟವೂ ಆದ ಸಂಪನ್ನ ಶಬ್ದಕೋಶದ ನಿರ್ಮಾಣ, ವೈಜ್ಞಾನಿಕ ಗ್ರಂಥಗಳ ರಚನೆಗೆ ಪ್ರೋತ್ಸಾಹ, ಸಾಹಿತಿಗಳಿಗೆ ಸನ್ಮಾನ ಗೌರವಗಳು, ಸಮಾಜದಲ್ಲಿ ರಸಿಕತೆ, ಸಾಹಿತ್ಯ ಪ್ರೇಮಗಳ ಬೆಳವಣಿಗೆ—ಹೀಗೆ ಹಲವಾರು ವಿಚಾರಗಳನ್ನು ಹಮ್ಮಿಕೊಂಡಿದ್ದಾರೆ. ಅವೆಲ್ಲವುಗಳ ಹಿಂದೆ ಭಾರತೀಯ ರಾಷ್ಟ್ರೀಯ ದೃಷ್ಟಿಯ ಕಾಣ್ಕೆಯಿದೆ.

ಸರಕಾರದ ಸಹಕಾರ, ಜನತೆಯ ಸತತ ಪ್ರಯತ್ನ, ವಿದ್ವಾಂಸರ ದುಡಿಮೆಗಳಿಂದ ನಮ್ಮ ಹಿರಿಯರ ಈ ಭವ್ಯ ಕನಸುಗಳಲ್ಲಿ ಕೆಲವು ನನಸಾಗಿವೆ. ಹಲವು ಕ್ರಮದಿಂದ ಕಾರ್ಯರೂಪಕ್ಕೆ ಇಳಿಯುತ್ತಿವೆ. ಈಗೀಗ ವಿಶಾಲ ಕನ್ನಡ ನಾಡಿನ ಜನಮನದ ಬಾಂಧವ್ಯ, ಬಳಕೆಗಳು ಬೆಳೆಯುತ್ತಲಿವೆ. ಕೇಂದ್ರ ಸರಕಾರವೂ ರಾಜ್ಯ ಸರಕಾರವೂ ಸಾಹಿತ್ಯ, ಸಂಸ್ಕೃತಿ, ಭಾಷೆಗಳ ಅಭ್ಯುದಯಗಳ ಕಡೆಗೆ ತನ್ನ ಮನಸ್ಸನ್ನು ಹರಿಸಿದುದು ಶುಭೋದಯವಾಗಿದೆ. ಸರಕಾರಗಳ ಸಹಾಯ, ಸಮೃದ್ಧಿಗಳು ಹೆಚ್ಚಿದಂತೆ ನಮ್ಮ ಹೊಣೆಯೂ ಹೆಚ್ಚುತ್ತದೆಂಬುದನ್ನು ಸಾಹಿತಿಗಳು ಮರೆಯುವಂತಿಲ್ಲ. ವಿಶಾಲ ಕರ್ನಾಟಕದ ಮಕ್ಕಳೆಲ್ಲ ಒಂದೇ ರೂಪದ ಪಠ್ಯಪುಸ್ತಕಗಳನ್ನು ಓದುವಂತೆ ಪ್ರಾಥಮಿಕ ಮಟ್ಟದಲ್ಲಿ ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡಿದ ನಮ್ಮ ಸರಕಾರದ ಪ್ರಯತ್ನವೇನೂ ಚಿಕ್ಕದಲ್ಲ. ವಿವಿಧ ಕನ್ನಡಗಳ ಏಕರೂಪಕ್ಕೆ ಇದು ಅಡಿಗಲ್ಲಾಗಿದೆ. ಈ ಏಕರೂಪವನ್ನು ಸಾಧಿಸುವ ಅವಸರದಲ್ಲಿ ಗುಣವನ್ನು ಕಡೆಗಣಿಸಿದರೆ ಆಗದು. ವಿಶಾಲತೆ, ವಿಪುಲತೆಗಳಷ್ಟೇ ಗುಣಗಳ ಹೆಚ್ಚಳವೂ ಅವಶ್ಯ ಸಾಧಿಸಲಿಕ್ಕೆ ಬೇಕು. ಅದಕ್ಕೆ ಸಾಹಿತಿಗಳೂ ಭಾಷಾಭ್ಯಾಸಿಗಳೂ ಸತತ ಪ್ರಯತ್ನಿಸುವ ಆವಶ್ಯಕತೆಯಿದೆ. ಸರಕಾರಕ್ಕೆ ಮಾರ್ಗದರ್ಶನ ನೀಡುವುದು, ಹೊಸ ಹೊಸ ಯೋಜನೆಗಳನ್ನು ಕೈಕೊಂಡು ಕಾರ್ಯಪ್ರವೃತ್ತರಾಗುವುದು, ನಾಡಿನ ಮುಂದಿರುವ ನೂತನ ಸಮಸ್ಯೆಗಳ ಅರಿವನ್ನು ಹೊಂದಿರುವುದು ಸಾಹಿತಿಗಳ ಕರ್ತವ್ಯವಾಗಿದೆ.

ಜನಾಂಗದ ಸಮಸ್ಯೆಗಳಲ್ಲಿ ಒಂದನ್ನು ಬಿಡಿಸಹೋದರೆ ಇನ್ನೊಂದು ಉಂಟಾಗುತ್ತದೆ. ನಮ್ಮ ಸಾಮಾಜಿಕದಲ್ಲಿದ್ದ ಸಾಮಾನ್ಯ ವ್ಯಾವಹಾರಿಕ ನೀತಿಧರ್ಮಗಳು ದಿನದಿನಕ್ಕೂ ಕ್ಷೀಣವಾಗುತ್ತ ನಡೆದಿವೆ. ನಾವು ಅಧಃಪತನದ ಅಂಚಿಗೆ ಹೋಗಿ ನಿಂತಂತಾಗಿದೆ. ಈಗಲೇ ನಾವು ಎಚ್ಚರಗೊಳ್ಳದೆ ಹೋದರೆ ನಮ್ಮ ರಾಷ್ಟ್ರದ ಮಂಗಳ ಸಾಧನೆಯು ಬಹು ದೂರ ಮುಂದೆ ಹೋದೀತು. ನಮ್ಮ ದೇಶದ ಯೋಜನೆಗಳು ನಿಷ್ಫಲವಾದಾವು. ಜನತೆಯಲ್ಲಿ ರಾಷ್ಟ್ರದ ಕಾನೂನು ಕಾಯಿದೆಗಳ ವಿಷಯದಲ್ಲಿ ಭಕ್ತಿ ಗೌರವಗಳು ಅಳಿಯುತ್ತಲಿವೆ. ಇದು ಅತ್ಯಂತ ಘಾತುಕವಾದುದು. ಕೆಲವೊಂದು ಸಲ ನಿಯಮದಂತೆ ನಡೆದರೆ ನಮ್ಮ ಇಚ್ಛೆಯು ಕೈಗೂಡದೆ ಇರಬಹುದು. ಅದರಿಂದ ನಿಯಮ ಮುರಿಯಲಿಕ್ಕೆ ಆದೀತೆ? ವ್ಯಕ್ತಿಯು ತನ್ನ ಲಾಭಕ್ಕಾಗಿ ಸಮಾಜ, ರಾಷ್ಟ್ರಜೀವನದಲ್ಲಿಯ ನಿಯಮ ನಿರ್ಬಂಧಗಳನ್ನು ಮುರಿಯಲು ಹವಣಿಸುತ್ತಿದ್ದಾನೆ. ಅದರಲ್ಲಿ ಅವನಿಗೆ ಅನೇಕ ಸಲ ಲಾಭವೂ ಆಗುವುದುಂಟು. ಆದರೆ ಅದು ವಿಹಿತವಲ್ಲ. ರಾಷ್ಟ್ರಧರ್ಮದ ಈ ತಿರಸ್ಕಾರವು ಕ್ಷೇಮಕರವಲ್ಲ. ಅದಕ್ಕಾಗಿ ಈ ಜನಮನದ ಅಂತರಂಗ ಸುಧಾರಣೆಗೆ ಕಾನೂನು ಉಪಯೋಗ ಬೀಳದು. ಅದಕ್ಕೆ ಸಾಹಿತಿಗಳೇ ಮುಂದಾಗಿ ಪ್ರಯತ್ನಿಸಲು ಬೇಕು. ಇದು ಧರ್ಮಪ್ರಚಾರಕರು ಮಾಡಿದಂಥ

ಕೆಲಸವಿದೆ. ಆದರೆ ಸಾಹಿತಿಯು ರಸಸೃಷ್ಟಿಯಿಂದ, ಅಮೃತವಾಕ್ಯಗಳಿಂದ ಇದನ್ನು ಸಾಧಿಸಬಲ್ಲನು. ಕಲೆಯ ಈ ಕಾರ್ಯವು ಇಂದು ಯಶಸ್ವಿಯಾಗಬಲ್ಲುದು. ವಿವಿಧ ಲಲಿತಕಲೆಗಳ ಪ್ರಸಾರ ಹಾಗೂ ಬೆಳವಣಿಗೆಗಾಗಿ ಭಾರತದ ಸಾಹಿತ್ಯ ಅಕಾದಮಿಯು ಕೆಲಸ-ಕಾರ್ಯಗಳನ್ನು ಕೈಕೊಂಡಿದೆ. ಆದರೆ ಇದಿಷ್ಟೇ ಸಾಲದು. ಇನ್ನೂ ವಿಸ್ತಾರವಾಗಿ ಜನಮನದ ಕೊಳೆಯನ್ನು ಕಳೆಯುವುದಕ್ಕೆ ಹೃದಯಶುದ್ಧಿಯನ್ನು ಸಾಧಿಸುವುದಕ್ಕೂ ಯತ್ನವು ಭರದಿಂದ ನಡೆಯಬೇಕು. ಒಬ್ಬ ಸೇನಾಪತಿಯು ಮಾಡುವ ಕಾರ್ಯಕ್ಕಿಂತ ಒಬ್ಬ ಸಾಹಿತಿಯು ಮಾಡುವ ಸೇವೆಯು ದೀರ್ಘ ಪರಿಣಾಮಕಾರಿಯಾಗಿದೆ; ಸ್ಥಿರಪರಿವರ್ತನೆಯ ಸಾಧನವಾಗಿದೆ. ಅದರಿಂದ ರಾಜ್ಯ ಸರಕಾರವೂ ಸಾಹಿತ್ಯದ ಇಂಥ ಬೆಳವಣಿಗೆಗೂ ಸಾಹಿತಿಗಳ ಗೌರವಕ್ಕೂ ಇನ್ನೂ ಮುಂದಾಗಬೇಕಾಗಿದೆ. ಈಗಾಗಲೇ ನಡೆದ ಕಾರ್ಯವಂತೂ, ಅಭಿನಂದನೀಯವೇ ಆಗಿದೆ. ಆದರೆ ಇನ್ನೂ ಹೆಚ್ಚಬೇಕೆಂಬುದೇ ನಮ್ಮ ಆಶಯವಾಗಿದೆ.

ಹೊಸಗನ್ನಡದ ನವೋದಯವಾದಂದಿನಿಂದ ಇಂದಿನವರೆಗೆ – ಸುಮಾರು ನಲವತ್ತು ವರ್ಷಗಳಲ್ಲಿ – ಕನ್ನಡ ಸಾಹಿತ್ಯವು ಬಹುಮುಖವಾಗಿ ಬೆಳೆದಿದೆ. ಅದನ್ನು ನೋಡಿ ಯಾವ ಕನ್ನಡಿಗನಿಗೆ ಸಂತೋಷವಾಗಲಿಕ್ಕಿಲ್ಲ! ಇಂದು ಹರೆಯ ಹಿಂಗಿ ಹಿರಿಯರಾದವರು ಅಂದು ನವತಾರುಣ್ಯದ ಹುಮ್ಮಸ್ಸಿನಿಂದ ದೇಶಾಭಿಮಾನ, ನಾಡುನುಡಿಗಳ ಸೇವಾಭಾವಗಳಿಂದ ಪ್ರೇರಿತರಾಗಿ ಸಾಹಿತ್ಯ ಸೇವೆಗೆ ತೊಡಗಿದ್ದುಂಟು. ಆ ಹುರುಪು – ಹುಮ್ಮಸ್ಸುಗಳನ್ನು ನೆನೆದರೇನೇ ಇಂದು ಮೈಮೇಲೆ ರೋಮಾಂಚನಗಳು ಏಳುತ್ತವೆ. ಆರಂಭದಲ್ಲಿ ನಮ್ಮ ಸಾಹಿತಿಗಳು ಇಂಗ್ಲಿಷ್ ಭಾಷೆ-ಸಾಹಿತ್ಯಗಳಿಂದ ಸ್ಫೂರ್ತಿಯನ್ನು ಹೊಂದಿದರು. ಅವಳ ತೊಡಿಗೆಗಳನ್ನು ಇವಳಿಗೆ ಇಟ್ಟುನೋಡಿ ಸಂತಸಬಟ್ಟರು. ಹೊಸ ಭಾವ ಸೃಷ್ಟಿಗೆ ಹೊಸ ಛಂದಸ್ಸುಗಳನ್ನು ರೂಪಿಸಿಕೊಂಡರು. ಹೊಸಗನ್ನಡ ಕಾವ್ಯ ಸರಸ್ವತಿಗೆ ಬಣ್ಣಬಣ್ಣದ ಉಡಿಗೆ ತೊಡಿಗೆಗಳನ್ನು ತೊಡಿಸಿದರು. ಬಿಂಕದ ಸಿಂಗಾರಿಯಂತೆ ನಡಗಲಿಸಿದರು. ಕನ್ನಡ ಸಾಹಿತ್ಯದ ಲೌಕಿಕ ಯುಗವು ಅಂದಿನಿಂದಲೇ ಆರಂಭವಾಯಿತೆನ್ನಬೇಕು. ಅಂದಿನವರೆಗೆ ಧಾರ್ಮಿಕ ಆವರಣದಲ್ಲಿ ಬೆಳೆದು ಬಂದ ಕನ್ನಡ ಸಾಹಿತ್ಯವು ಜನಜೀವನ ಹಾಗೂ ಸ್ವಾನುಭವಗಳ ಆಶ್ರಯವನ್ನು ಹೊಂದಿ ವಿಕಾಸ ಹೊಂದತೊಡಗಿತು. ಕನ್ನಡ ಸಾಹಿತ್ಯದೇವಿಗೆ ನವೀನ ರಾಜಮಾರ್ಗವನ್ನು ಅಂದಿನ ತರುಣ ಮನಸ್ಸು ಕಲಿಸಿಕೊಟ್ಟಿತು. ಕನ್ನಡಭಾಷೆ ಕೃತಕತೆಯ ಕೊಂಡಿಯನ್ನು ಕಳಚಿಕೊಂಡು ಹೃದಯದಿಂದ ಹೊರಟು ಹೃದಯವನ್ನು ಮುಟ್ಟುವ ಕಸುವು ಪಡೆಯಿತು.

ಆಗ ಮೈಸೂರು, ಧಾರವಾಡ, ಮಂಗಳೂರುಗಳು ಕನ್ನಡ ಸಾಹಿತ್ಯದ ನವಜಾಗೃತಿಗೆ ಕೇಂದ್ರಗಳಾದುವು. ಮೈಸೂರಿನ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳ ಬಳಗವು ಕನ್ನಡಕ್ಕೆ 'ಕಿರಿಯಕಾಣಿಕೆ'ಯನ್ನು ಅರ್ಪಿಸಿತು. ಆ ಗರಡಿಯಲ್ಲಿ ಬೆಳೆದು ಬಂದ ಕೆಲವರು ಇಂದು ತಮ್ಮ ಕಲಾ ತಪಸ್ಸಿನಿಂದಲೂ ಕಾವ್ಯಾರಾಧನೆಯಿಂದಲೂ ಅತ್ಯುತ್ತಮವಾದ ಕೃತಿಗಳನ್ನು ಕನ್ನಡಕ್ಕಿತ್ತಿದ್ದಾರೆ. ಅಂಥದರಲ್ಲಿ ಪದ್ಮಭೂಷಣ ಡಾ. ಕೆ. ವಿ. ಪುಟ್ಟಪ್ಪನವರ ಹೆಸರನ್ನು ಇಲ್ಲಿ ಎತ್ತಿ ಹೇಳಬೇಕು. ಇದೇ ಕಾಲದಿಂದ ಸಾಹಿತ್ಯ ಕೃಷಿಯನ್ನು ಆರಂಭಿಸಿದವರಲ್ಲಿ ಶ್ರೀಗಳಾದ ಪು. ತಿ. ನರಸಿಂಹಾಚಾರ್ಯ, ಎಲ್. ಗುಂಡಪ್ಪ, ಜಿ. ಪಿ. ರಾಜರತ್ನಂ ಮೊದಲಾದವರು ಕನ್ನಡಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಿದರು. ಹಿರಿಯರಾದ ಶ್ರೀ ಡಿ. ವಿ. ಗುಂಡಪ್ಪನವರ ಸಾಹಿತ್ಯ ಸೇವೆಯಂತೂ ಎಲ್ಲರ ಕಣ್ಣೆದುರಿಗೆ ಇದ್ದೇ ಇದೆ. ಅತ್ತ ಧಾರವಾಡದಲ್ಲಿ ಗೆಳೆಯರ ಗುಂಪು ಕನ್ನಡದ ನವಜಾಗೃತಿಯ ಕಹಳೆಯನ್ನು ಊದಿತು. ಶ್ರೀ. ಡಿ. ಆರ್. ಬೇಂದ್ರೆಯವರ ಹಿರಿತನದಲ್ಲಿ ಹಲವು ಜನ ಯುವಕರು ಕನ್ನಡದ ಕೃತಿರಚನೆಗೆ ತೊಡಗಿದರು. ಅವರಲ್ಲಿ ಕೆಲವರು ಇಂದು ಕನ್ನಡದ ಶ್ರೇಷ್ಠ ಲೇಖಕರೂ ಕವಿಗಳೂ ಆಗಿ, ಕನ್ನಡಕ್ಕೆ ಕೀರ್ತಿಯನ್ನು ತರುತಲಿದ್ದಾರೆ. ಅಂಥವರಲ್ಲಿ ಪ್ರೊ. ವಿ. ಕೃ. ಗೋಕಾಕ, ಡಾ. ರಂ. ಶ್ರೀ. ಮುಗಳಿ, ಶ್ರೀ ಬೆಟಗೇರಿ ಕೃಷ್ಣಶರ್ಮ ಮೊದಲಾದವರ ಹೆಸರುಗಳನ್ನು ಉಲ್ಲೇಖಿಸಬಹುದಾಗಿದೆ. ಕನ್ನಡ ಭಾಷೆಯ ಆಳವಾದ ಅಭ್ಯಾಸಿಗಳಾದ ಶ್ರೀ. ಶಂ. ಬಾ. ಜೋಶಿಯವರ ಸಂಶೋಧನಾ ಗ್ರಂಥಗಳಂತೂ ತಮ್ಮ ಮುಂದೆ ಇವೆ. ನಾವು ಇಲ್ಲಿ ದಿ. ಮಧುರ ಚೆನ್ನರ ಧ್ಯಾನಶೀಲತೆ ಯನ್ನು ಮರೆಯುವಂತಿಲ್ಲ. ಇದೇ ರೀತಿ ಪಶ್ಚಿಮ ಕರಾವಳಿಯಲ್ಲಿ ದಿ. ಪಂಜೆ ಮಂಗೇಶರಾಯರು, ದಿ. ಮುಳಿಯ ತಿಮ್ಮಪ್ಪಯ್ಯನವರು, ದಿ. ಗೋವಿಂದಪೈಗಳು, ತಮ್ಮ ಸಕಲ ಸಾಹಿತ್ಯಾಭ್ಯಾಸ, ಸಂಶೋಧನೆಗಳಿಂದ ಕನ್ನಡದ ಕೀರ್ತಿ ಕಳಶಗಳಾದರು. ಶ್ರೀ ಕಡೆಂಗೋಡ್ಲು ಶಂಕರಭಟ್ಟರಂತೂ ರಮ್ಯವಾದ ಭಾವಗೀತೆಗಳನ್ನು ಹಾಡಿದರು; ಕನ್ನಡ ಸರಸ್ವತಿಗೊಂದು ಸವಿ ನುಡಿಯ ವೀಣೆಯನ್ನಿತ್ತರು. ಶ್ರೀ ಸೇಡಿಯಾಪು

ಕೃಷ್ಣಭಟ್ಟರು ಗಂಭೀರ ಸಾಹಿತ್ಯ ಸೃಷ್ಟಿಗೆ ಎತ್ತಿದ ಕೈಯೆಂದು ಹೆಸರು ಪಡೆದಿರುತ್ತಾರೆ. ಹಳೆಯ ಕವಿಗಳೂ ಹೊಸಕವಿಗಳೂ ಕನ್ನಡದ ಕಾವ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ನಾಡಿನಾದ್ಯಂತ ಕವಿಗಳು ಬೆಳಕಿಗೆ ಬರುತ್ತಿದ್ದಾರೆ. ಅವರೆಲ್ಲರನ್ನೂ ಇಲ್ಲಿ ಹೆಸರಿಸುವ ಮನಸ್ಸಿದ್ದರೂ ಅದೊಂದು ಸುದೀರ್ಘ ಪಟ್ಟಿಯಾದೀತೆಂಬ ಹೆದರಿಕೆಯಿಂದ ಆ ಕಾರ್ಯಕ್ಕೆ ಕೈಹಾಕಿಲ್ಲ. ಎಲ್ಲ ಕವಿಗಳನ್ನೂ ಮನಸಾರೆ ಅಭಿನಂದಿಸಿ ನುಡಿಯ ಬೆಳವಣಿಗೆಗೆ ನಿರಂತರವಾಗಿ ದುಡಿಯಲು ವಿನಂತಿಸುವೆ.

ಸಣ್ಣ ಕತೆ, ಕಾದಂಬರಿ, ನಾಟಕ, ಸಾಹಿತ್ಯ ಮೀಮಾಂಸೆ, ಭಾಷಾಭ್ಯಾಸ, ಪ್ರಬಂಧ, ವಿಡಂಬನೆ ಇತ್ಯಾದಿ ಕ್ಷೇತ್ರಗಳಲ್ಲಿಯೂ ಶ್ರೇಷ್ಠವಾದ ಕೃಷಿಯು ನಡೆದಿದೆ. ಇತ್ತೀಚಿಗೆ ಕನ್ನಡ ಸಾಹಿತ್ಯವು ಸಮೃದ್ಧವಾಗಿದೆ. ಶ್ರೀ ಶ್ರೀನಿವಾಸರಿಂದ ಆರಂಭವಾದ ಕನ್ನಡ ಸಣ್ಣಕಥಾ ಪ್ರಪಂಚದ ವಿಸ್ತಾರ, ವಿಪುಲತೆಗಳನ್ನು ಕಾಣಬೇಕಾದರೆ ಶ್ರೀ. ಕೆ. ನರಸಿಂಹಮೂರ್ತಿಯವರು ಸಂಪಾದಿಸಿರುವ 'ಅತ್ಯುತ್ತಮ ಸಣ್ಣಕತೆಗಳು' ಎಂಬುದನ್ನು ಕಂಡರೆ ಆದೀತು. ಇಂದು ಅನೇಕ ತರುಣರು ಕನ್ನಡ ಸಣ್ಣ ಕಥೆಗಳ ಬೆಳವಣಿಗೆಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ, ಸಲ್ಲಿಸುತ್ತಲೂ ಇದ್ದಾರೆ. ಈ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳೂ ಆಗುತ್ತಿವೆ. ನವ್ಯ ಕಥೆಗಳೆಂಬ ಹೆಸರು ಈಗಾಗಲೇ ಹಳೆಯದೆಂಬಷ್ಟು ಪರಿಚಿತವಾಗಿದೆ. ಶ್ರೀ ಆನಂದರ ಸಾವಿನಿಂದ ಬಡಕಲಾದಂತೆ ಅನ್ನಿಸಿದ ಕಥೆಗಳ ಕ್ಷೇತ್ರ ಮತ್ತೆ ಜೀವಕಳೆಯಿಂದ ಕಂಗೊಳಿಸುವ ಸೂಚನೆಗಳು ಕಾಣುತ್ತವೆ. ಪ್ರತಿಭಾಶಾಲಿಗಳಾದ ತರುಣರು ಈ ದಿಕ್ಕಿನಲ್ಲಿ ಅಡಿಯಿಟ್ಟಿದ್ದಾರೆಂಬುದು ನಮಗೆ ಸಂತೋಷದ ಸುದ್ದಿಯಾಗಿದೆ. ಅದರಂತೆ ಕನ್ನಡ ಕಾದಂಬರೀ ಪ್ರಪಂಚವೂ ಇತ್ತೀಚಿಗೆ ವಿಸ್ಮಯಕರವಾದ ಬೆಳವಣಿಗೆಯನ್ನು ಪಡೆದಿದೆ. ದಿವಂಗತರಾದ ಬಿ. ವೆಂಕಟಾಚಾರ್ಯ, ಗಳಗನಾಥ, ಕೆರೂರು ವಾಸುದೇವಾಚಾರ್ಯ, ಎಂ. ಎಸ್. ಪುಟ್ಟಣ್ಣ ಮುಂತಾದ ಹಿರಿಯ ಪೀಳಿಗೆಯ ಕಾದಂಬರಿಕಾರರ ತರುವಾಯ ಬಂದ ಕೃತಿಗಳನ್ನು ಓದಲು ಒಂದು ಜೀವಮಾನವೇ ಸಾಲದೆಂಬಂತಿದೆ. ಕಾದಂಬರೀ ರಂಗದಲ್ಲಿ ಶ್ರೀಗಳಾದ ಡಾ. ಕಾರಂತ, ಅ. ನ. ಕೃಷ್ಣರಾಯ, ಗೊರೂರು, ಬಸವರಾಜ ಕಟ್ಟೀಮನಿ, ತ. ರಾ. ಸು., ಇನಾಮದಾರ, ಕೆ. ವಿ. ಅಯ್ಯರ, ದೇವುಡು ಮೊದಲಾದವರು ವಿಶೇಷ ಸಾಧನೆಯನ್ನು ಗೈದಿದ್ದಾರೆ. ಇತ್ತೀಚಿಗೆ ಶ್ರೀಗಳಾದ ಕೃಷ್ಣಮೂರ್ತಿ ಪುರಾಣಿಕ, ನಿರಂಜನ, ಕೊರಟಿ ಶ್ರೀನಿವಾಸರಾಯ, ಮಿರ್ಜಿ ಅಣ್ಣಾರಾಯ, ಪ್ರೊ. ಶಾಂತಿನಾಥ ದೇಸಾಯಿ, ಪುಟ್ಟಸ್ವಾಮಯ್ಯ, ಪ್ರೊ. ಎಸ್. ಎಲ್. ಭೈರಪ್ಪ ಮೊದಲಾದವರೂ ಶ್ರೀಮತಿಯರಾದ ತ್ರಿವೇಣಿ, ಸಾವಿತ್ರಮ್ಮ, ಎಂ. ಕೆ. ಇಂದಿರಾ ಮೊದಲಾದವರು, ಜನಮೆಚ್ಚುಗೆಯನ್ನು ಗಳಿಸಿದ ಕಾದಂಬರಿಕಾರರಾಗಿದ್ದಾರೆ. ಮಹಿಳೆಯರೂ ಕನ್ನಡ ಸಾಹಿತ್ಯದ ಸೇವೆಯಲ್ಲಿ ಬಹಳ ಹಿಂದಿನಿಂದಲೂ ನಿರತರಾಗಿದ್ದಾರೆ. ಕನ್ನಡನುಡಿಯ ಬೆಳವಣಿಗೆಯಲ್ಲಿ ನಿರತರಾದ ಹೊಸಗನ್ನಡದಲ್ಲೂ ಹೆಣ್ಣು ಮಕ್ಕಳ ಸಂಖ್ಯೆ ಆಶಾದಾಯಕವಾಗಿದೆ. ಈ ಮಧ್ಯೆ ಶ್ರೀಮತಿ ತ್ರಿವೇಣಿಯವರು ಸತ್ತಮೇಲೆ ಮತ್ತೆ ಮಹಿಳೆಯರು ಆ ಕೊರತೆಯನ್ನು ತುಂಬುವರೆ ? ಎಂಬ ಸಂದೇಹ ಮೂಡಿತ್ತು. ಆದರೆ ಈಗ ಕನ್ನಡದಲ್ಲಿ ಅನೇಕ ಜನ ಮಹಿಳೆಯರು ಕಥೆ ಕಾದಂಬರಿ ಕವನ ವಿಮರ್ಶೆಗಳ ವಿವಿಧ ಕ್ಷೇತ್ರಗಳಲ್ಲಿ ಮಹತ್ತಾದ ಸೇವೆಸಲ್ಲಿಸುತ್ತಿದ್ದಾರೆ. ಸೋದರಿ ಜಯದೇವಿ ತಾಯಿಲಿಗಾಡೆ, ನೆಲ್ಲಿಕಾರಿನ ಜೈನ ಮಹಿಳೆ ಮುಂತಾದ ಕವಯತ್ರಿಯರೂ, ಎಂ. ಕೆ. ಇಂದಿರಾ, ಉಷಾದೇವಿ ಮೊದಲಾದ ಕಾದಂಬರಿಕಾರರೂ, ಡಾ. ಸರೋಜಿನಿ ಮಹಿಷಿ, ಸಿ. ಆರ್. ಕಮಲಮ್ಮ ಮುಂತಾದ ಅನೇಕಾನೇಕ ಹಿರಿಯ ಕಿರಿಯವಿಮರ್ಶಕರೂ ಸಾಹಿತ್ಯ ಸೇವೆಯಲ್ಲಿ ನಿರತರಾಗಿದ್ದಾರೆ. ಈ ನಡುವೆ ಹಲವು ಕೃತಿಗಳು ಬಂಗಾಲಿ, ಹಿಂದೀ ಭಾಷೆಗಳಿಂದ ಕನ್ನಡಕ್ಕೆ ಅನುವಾದವಾಗಿ ಬಂದು, ಕನ್ನಡಿಗರ ಮಾನವನ್ನು ಬೆಳಸಿವೆ. ಈ ಎಲ್ಲ ಸಾಹಿತ್ಯ ರಾಶಿಯನ್ನು ಪರಾಮರ್ಶಿಸಿ, ವಿಮರ್ಶಿಸಿ, ಅವುಗಳ ಸಾಹಿತ್ಯಕ ಗುಣಗಳ ಮಟ್ಟವನ್ನು ತೂಗಿ ನೋಡುವುದು, ನೋಡಿ ಹೇಳುವುದು, ಸಹೃದಯರಾದ ವಿಮರ್ಶಕರ ಕರ್ತವ್ಯವಾಗಿದೆ.

ಕಾವ್ಯ, ಕಾದಂಬರಿ, ಸಣ್ಣಕಥೆಗಳಲ್ಲಿ ನಡೆದಿರುವಷ್ಟು ಕೆಲಸವು ಇತರ ಸಾಹಿತ್ಯ ರೂಪಗಳಲ್ಲಿ ನಡೆದಿರುವಂತೆ ಕಾಣುವುದಿಲ್ಲ. ನಾಟಕರಂಗದಲ್ಲಿ ಶ್ರೀರಂಗ, ಕಾಮತ್ ಮುಂತಾದವರು ತೀರ ಅತ್ಯಾಧುನಿಕ ಪ್ರಯೋಗಗಳನ್ನು ಮಾಡುತ್ತಿರುವುದನ್ನು ನಾವಿಲ್ಲಿ ನೆನೆಯಬೇಕು. ರಂಗಭೂಮಿಗೆ ತಕ್ಕ ನಾಟಕಗಳು ಇನ್ನೂ ಹುಲುಸಾಗಿ ಬೆಳೆಯಬೇಕು. ಶ್ರೀ ಗಿರೀಶ ಕಾರ್ನಾಡ ಮುಂತಾದ ಯುವಕರು ಪ್ರಭಾವಶಾಲಿ ನಾಟಕಗಳನ್ನು ರಚಿಸುತ್ತಿದ್ದಾರೆ. ಅದರಂತೆ ಲಲಿತ ಪ್ರಬಂಧಗಳ ಕೊರತೆಯೂ ಕೂಡ ಕನ್ನಡ ಸಾಹಿತ್ಯದಲ್ಲಿ ಇದೆ. ಈ ಎರಡೂ ಅಂಗಗಳು ಇನ್ನೂ ಸಂಪುಷ್ಟವಾಗಿ ಬೆಳೆದುಬರಬೇಕು.

ಸಾಹಿತ್ಯ ವಿಮರ್ಶೆಯೂ ಸಾಮಾನ್ಯವಾಗಿ ಬೆಳೆಯುತ್ತ ಬಂದಿದೆ. ಹೊಸಗನ್ನಡಕ್ಕೆ ಶ್ರೀಕಾರವನ್ನು ಹಾಕಿದ ಶ್ರೀಯವರ 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಎಂಬ ವಿಮರ್ಶಾ ಪ್ರಬಂಧ ಸಂಗ್ರಹವು ಮುನ್ನುಡಿ ಭಾಷಣಗಳ ಸಂಕಲನ ರೂಪದಲ್ಲಿ ವಿಮರ್ಶೆಯ ಸ್ವರೂಪ, ತತ್ತ್ವಗಳ ನಿದರ್ಶನಗಳನ್ನು ಸೂಚಿಸುತ್ತದೆ. ಅವರು ಆರಂಭಿಸಿರುವ 'ಕನ್ನಡ ಸಾಹಿತ್ಯ ಚರಿತ್ರೆ' ಯು ಉತ್ತಮವಾದ ವಿಮರ್ಶಪದ್ಧತಿಯನ್ನು ಹಾಕಿಕೊಟ್ಟಿದೆ. 'ನಾಡೋಜ ಪಂಪ', 'ಭಾಸಕವಿ', 'ಸಂಸ್ಕೃತ ನಾಟಕ', 'ಕನ್ನಡ ನಾಟಕ', ಬಂಕಿಮಚಂದ್ರಗಳಂಥ ಕೃತಿಗಳು ಅಭ್ಯಾಸ, ವಿಮರ್ಶೆಗಳಿಗೆ ಮಾದರಿ ಗ್ರಂಥಗಳಾಗಿವೆ. ಶ್ರೀ ಡಿ.ವಿ.ಜಿ. ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ', 'ಸಾಹಿತ್ಯಶಕ್ತಿ'ಗಳು ಕಾವ್ಯದ ಉಗಮ ಸ್ವರೂಪಗಳನ್ನು ರಸವತ್ತಾಗಿ ತಿಳಿಸುತ್ತವೆ. ಶ್ರೀ ಮಾಸ್ತಿಯವರ 'ವಿಮರ್ಶೆ' ಗಳಲ್ಲಿ ವಿಮರ್ಶೆಯಿದೆ, ವಿಮರ್ಶಕರಿಗೆ ಮಾರ್ಗದರ್ಶನವಿದೆ. ಕನ್ನಡ ಸಾಹಿತ್ಯದ ಇತಿಹಾಸ ಲೇಖನದೃಷ್ಟಿಯಿಂದ ಕೆಲವು ಗಮನಾರ್ಹ ಪ್ರಯೋಗಗಳಿವೆ. ಇತ್ತೀಚೆಗೆ ಶ್ರೀ ತ. ಸು. ಶಾಮರಾಯರ 'ಕನ್ನಡ ಸಾಹಿತ್ಯದ ವಿಹಂಗಮ ನೋಟ' ವು ಬೆಳಕಿಗೆ ಬಂದಿದೆ. ಕವಿಶ್ರೇಷ್ಠರಾದ ಕುವೆಂಪು ಅವರ 'ದ್ರೌಪದಿಯ ಶ್ರೀಮುಡಿ' ಮತ್ತು 'ರಸೋವೈಸಃ' ಗಳಲ್ಲಿ ರಸವತ್ತಾದ ವಿಮರ್ಶೆಗಳನ್ನು ನೀಡಿದ್ದಾರೆ. ಇಲ್ಲಿ ಶ್ರೀ ಎಸ್. ವಿ. ರಂಗಣ್ಣನವರ 'ಹೊನ್ನಶೂಲ', 'ಶಾಕುಂತಲ' ನಾಟಕದ ವಿಮರ್ಶೆಗಳನ್ನು ನೆನೆಯಬೇಕು. ಅವುಗಳ ಸ್ವತಂತ್ರ ವಿಮರ್ಶದೃಷ್ಟಿಯು ಮೆಚ್ಚುವಂತಹದಾಗಿದೆ.

ಈಗೀಗ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ನೆರವನ್ನು ಪಡೆದು, ಅನೇಕ ಪ್ರಬಂಧಗಳು ವಿಶ್ವವಿದ್ಯಾನಿಲಯಗಳಿಂದ ಬೆಳಕಿಗೆ ಬರುತ್ತಿವೆ. ಅಂಥವುಗಳಲ್ಲಿ ಡಾ. ಸುಂಕಾಪುರರ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಡಾ. ತಿಪ್ಪೇರುದ್ರಸ್ವಾಮಿಯವರ "ಶರಣರ ಅನುಭಾವ ಸಾಹಿತ್ಯ", ಶ್ರೀ ಜಿ. ಬ್ರಹ್ಮಪ್ಪನವರ "ರತ್ನಾಕರನ ಶತಕ ಸಾಹಿತ್ಯ", ಡಾ. ಚಿದಾನಂದ ಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಇತ್ಯಾದಿ ಗ್ರಂಥಗಳು ಕನ್ನಡಿಗರೆಲ್ಲ'ರ ಮನ ಸೆಳೆಯುವಂಥವಾಗಿವೆ. ಹಿಂದಿನ ಕವಿಗಳ ಪ್ರಶಸ್ತಿ ಗ್ರಂಥಗಳಂತೂ ಉತ್ತಮ ವಿಮರ್ಶ ಲೇಖನಗಳಿಂದ ಕೂಡಿ, ಆಳವಾದ ಅಭ್ಯಾಸ, ಪಾಂಡಿತ್ಯಗಳನ್ನು ಪ್ರದರ್ಶಿಸುತ್ತವೆ. ಶ್ರೀ ಪರಮೇಶ್ವರ ಭಟ್ಟರಿಂದ ಕಾಳಿದಾಸನ ಸಮಸ್ತ ಕೃತಿಗಳ ಸಂಪುಟವು ಕನ್ನಡಕ್ಕೆ ಕಾಣಿಕೆಯಾಗಿ ಬಂದಿದೆ. ಇಂಥದೇ ಇನ್ನೊಂದು ಕೃತಿಯು ಷೇಕ್ಸಪಿಯರನ ಕೃತಿಗಳ ಸಂಗ್ರಹವಾಗಿದೆ. ಇಲ್ಲಿಯೇ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ವಿಮರ್ಶೆ, ಗ್ರಂಥ ಸಂಪಾದನಾ ಕಾರ್ಯಗಳನ್ನೆಲ್ಲ ಎತ್ತಿ ಹೇಳಬೇಕು. ಆದರೆ ಈ ಎಲ್ಲ ಪ್ರಯತ್ನವು ಹೆಚ್ಚಾಗಿ, ಹಳೆಯ ಸಾಹಿತ್ಯವನ್ನು ಕುರಿತು ಬಂದ ವಿಮರ್ಶೆಗಳೇ ಆಗಿವೆ. ಹೊಸಗನ್ನಡ ಸಾಹಿತ್ಯವನ್ನು ವಿಮರ್ಶಿಸುವ ಪರಿಪಾಠವು ಕನ್ನಡದಲ್ಲಿ ಬೆಳೆದು ಬಂದಿಲ್ಲ. ಈ ವಿಷಯದಲ್ಲಿ ಅತೃಪ್ತಿ, ಕೊರತೆಗಳು ಇದ್ದಂತೆ ತೋರುತ್ತವೆ. ಮುಂದಿನ ಪೀಳಿಗೆಯವರು ಇದರತ್ತ ವಿಶೇಷ ಗಮನ ಹರಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ 'ಪ್ರಸಾರಾಂಗವು' ಇತ್ತೀಚೆಗೆ ಶ್ರೀ ಕುವೆಂಪು ಅವರ ಸತ್‌ಪ್ರೇರಣೆ, ಬಲಿಷ್ಠ ಪ್ರಚೋದನೆಯಿಂದ ವಿಸ್ತಾರಗೊಂಡು, ಪ್ರಕಾಶನ ಕಾರ್ಯವನ್ನು ಬಹುಮುಖದಲ್ಲಿ ನಡೆಸಿದೆ. ಆ ಮಹಾಕವಿಯ ಶಕ್ತಿಯ ಕಿಡಿಗಳಾಗಿ ಪ್ರೊ. ಡಿ. ಜವರೇಗೌಡ, ಡಾ. ಹಾ. ಮಾ. ನಾಯಕ, ಮೊದಲಾದವರು ತಮ್ಮ ನೂತನ ಕೃತಿಗಳಿಂದಲೂ ಸಾಹಿತ್ಯಿಕ ಯೋಜನೆಗಳಿಂದಲೂ ಕನ್ನಡ ಸಾಹಿತ್ಯರಂಗದಲ್ಲಿ ಚಿರಂತನ ಸ್ವರೂಪದ ಕಾರ್ಯವನ್ನು ಎಸಗುತಲಿದ್ದಾರೆ. ಪ್ರಸಾರಾಂಗದಿಂದ ಶ್ರೀ ಎಚ್. ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ'ವೇ ಮೊದಲಾದ ಒಳ್ಳೆಯ ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಈ ಸಂದರ್ಭದಲ್ಲಿ ಮತ್ತೊಂದು ಮಾತು ನೆನಪಾಗುತ್ತದೆ. ಸರಕಾರದ ಬೇರೆ ಬೇರೆ ಸಣ್ಣಪುಟ್ಟ ಹುದ್ದೆಗಳಲ್ಲಿ ಅಧಿಕಾರಿಗಳಾಗಿದ್ದರೂ ಕೆಲವರು ಸಾಹಿತಿಗಳಾಗಿ, ಸಾಹಿತ್ಯಾಭಿಮಾನಿಗಳಾಗಿ ಕನ್ನಡದ ಸೇವೆಯಲ್ಲಿ ತೊಡಗಿದ್ದಾರೆ. ಇದೊಂದು ಹೆಮ್ಮೆಯ ವಿಷಯ. ಶ್ರೀ ನಾಗೇಗೌಡ, ಸಿದ್ಧಯ್ಯ ಪುರಾಣಿಕ, ಓ. ಎನ್. ಲಿಂಗಣ್ಣಯ್ಯ, ಕೋ. ಚನ್ನಬಸಪ್ಪ, ಸೇವ ನಮಿರಾಜಮಲ್ಲ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಮುಂದಿನ ಅಧಿಕಾರಿಗಳು ಇವರ ಮಾದರಿಯನ್ನು ಅನುಸರಿಸಿದರೆ ಆಡಳಿತದ ಆವರಣದಲ್ಲಿ ಸಾಹಿತ್ಯದ ಪರಿಮಳ ಕಾಣಿಸಿಕೊಂಡು ಅವರ ನಿತ್ಯದ ಬದುಕು ಚಂದ ಕಂಡೀತು.

ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವದ ಅಂಗವಾಗಿ ಕನ್ನಡ ಲೇಖಕರ ಸಮ್ಮೇಲನವನ್ನು ನಡೆಯಿಸಿ, ವಿವಿಧಗೋಷ್ಠಿಗಳನ್ನು ಏರ್ಪಡಿಸಿದ್ದು ಉಲ್ಲೇಖನೀಯ ಸ್ತುತ್ಯಕ್ರಮವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಂತೆಯೇ ಇತ್ತ ಕರ್ನಾಟಕ ವಿಶ್ವ

ವಿದ್ಯಾನಿಲಯವೂ ಕೂಡ ತನ್ನ ಪ್ರಕಾಶನಗಳಿಂದ ಸ್ವಲ್ಪ ದಿನಗಳಲ್ಲಿಯೇ, ಕನ್ನಡಿಗರ ಮನಸ್ಸನ್ನು ಆಕರ್ಷಿಸಿದೆ. ಚೆನ್ನಬಸವಣ್ಣನವರ ವಚನಗಳು, ಸಂಪಾದನೆ, ಪ್ರಕಾಶನಗಳನ್ನು ನೋಡಿದರೆ ಇಲ್ಲಿ ನಡೆದ ಕಾರ್ಯಕ್ರಮಗಳು ನಿದರ್ಶನಕ್ಕೆ ಬರುತ್ತವೆ. ಪ್ರಸಾರ ಭಾಷಣಗಳೂ ಅವುಗಳ ಪ್ರಕಟಣೆಗಳೂ, ಜನರಲ್ಲಿ ಬಹು ಮೆಚ್ಚುಗೆಯನ್ನು ಪಡೆದಿವೆ. ಇದಕ್ಕೆ ಕನ್ನಡ ವಿಭಾಗಕ್ಕೆ ಹಿರಿಯರಾದ ಡಾ. ಆರ್. ಸಿ. ಹಿರೇಮಠರವರ ವಿಶಾಲ ದೃಷ್ಟಿ, ಸತತಾಭ್ಯಾಸಗಳೇ ಕಾರಣವೆಂದರೆ ಅತಿಶಯೋಕ್ತಿಯೇನಲ್ಲ. ಈ ವಿಶ್ವವಿದ್ಯಾನಿಲಯಕ್ಕೆ ಸ್ವಲ್ಪ ದಿನಗಳಲ್ಲಿ ವಿಶಿಷ್ಟ ಹಾಗೂ ಆಕರ್ಷಕ ಸ್ಥಾನವನ್ನು ಗಳಿಸಿಕೊಟ್ಟ ಪದ್ಮಭೂಷಣ ಡಿ. ಸಿ. ಪಾವಟೆಯವರ ಕಾರ್ಯ ಕುಶಲತೆ, ವಿಶಾಲದೃಷ್ಟಿಗಳನ್ನು ಇಲ್ಲಿ ಗಮನಿಸಬೇಕು. ಇದೀಗ ರೂಪುಗೊಳ್ಳುತ್ತಿರುವ ಬೆಂಗಳೂರು ವಿಶ್ವವಿದ್ಯಾನಿಲಯವೂ ತನ್ನ ರೀತಿಯಲ್ಲಿ ಪ್ರಗತಿಯ ಹೆಜ್ಜೆಗಳನ್ನು ಇಡುವುದರಲ್ಲಿ ಸಂಶಯವಿಲ್ಲ. ಇಲ್ಲಿ; ರಾಜಾಜಿ ನಗರದ ಸಾಹಿತ್ಯಾಭ್ಯಾಸಿಗಳು, ಕನ್ನಡಿಗರ ಕೂಟದವರು, ಗಾಂಧೀ ಸಾಹಿತ್ಯ ಸಂಘದವರು ಪರಿಷತ್ತಿನ ಸಹಕಾರದಿಂದ ವಿವಿಧ ಸಾಹಿತಿಗಳ ಸಮಗ್ರ ಕೃತಿಗಳ ಪರಿಚಯಾತ್ಮಕ ಭಾಷಣಗಳನ್ನು ಏರ್ಪಡಿಸುತ್ತಿರುವುದನ್ನೂ ನೆನೆಯಬೇಕು. ಕನ್ನಡನಾಡಿಗೆ ಗುರುಪೀಠಗಳಾದ ವೀರಶೈವ ಮಠಗಳು, ಸ್ವಾಮಿಗಳು ವಿವಿಧ ಗ್ರಂಥಗಳನ್ನು ಪ್ರಕಟಿಸುತಲಿದ್ದಾರೆ. ಇದು ಸ್ತುತ್ಯ ಉಪಕ್ರಮವಾಗಿದೆ. ವಿವಿಧ ಸ್ವಾಮಿಗಳಿಗೂ ವಿದ್ವಾಂಸರಿಗೂ ನೀಡಿದ ಸಂಭಾವನಾ ಗ್ರಂಥಗಳಲ್ಲಿ ಒಳ್ಳೆಯ ವಿಮರ್ಶ ಸಾಹಿತ್ಯವು ಕನ್ನಡಿಗರಿಗೆ ಒದಗುತ್ತಲಿದೆ. ಕನ್ನಡನಾಡಿನ ವಿವಿಧ ವಿದ್ಯಾಸಂಸ್ಥೆಗಳಲ್ಲದೆ ಜೈನ, ವೀರಶೈವ, ಬ್ರಾಹ್ಮಣ, ಮುಂತಾದ ಬೇರೆ ಬೇರೆ ಧರ್ಮದ ಮಠಗಳವರೂ ಮಠಾಧಿಪತಿಗಳೂ ಸಾಹಿತ್ಯದ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿರುವುದನ್ನು ಕೃತಜ್ಞತೆಯಿಂದ ಇಲ್ಲಿ ನೆನೆಯಬಹುದಾಗಿದೆ. ವೀರಶೈವ ಮಠಾಧಿಪತಿಗಳೂ ಜಗದ್ಗುರುಗಳೂ ವಿಶೇಷವಾಗಿ ಸಾಹಿತಿಗಳಿಗೆ ಹಲವು ತೆರನಾದ ಬೆಂಬಲವಿತ್ತು ಪ್ರೋತ್ಸಾಹಿಸುತ್ತಿರುವುದನ್ನು ಸಂತೋಷದಿಂದ ಸ್ಮರಿಸುತ್ತಾ, ನಾಡು ಈ ಮಾದರಿಯ ಮೇಲ್ಪಂಕ್ತಿಯನ್ನು ಅವಶ್ಯ ಅನುಸರಿಸಬೇಕೆಂದು ಅತ್ಯಂತ ವಿನಯದಿಂದ ವಿಜ್ಞಾಪಿಸುವೆ. ಮದ್ರಾಸಿನ ದಕ್ಷಿಣ ಭಾಷಾಗ್ರಂಥ ಪ್ರಕಾಶನ ಸಂಸ್ಥೆಯವರು ಈಗೀಗ ಪ್ರಕಾಶಕರಿಗೆ ನೆರವು ನೀಡಿ, ಸಾಹಿತ್ಯದ ಬೆಳವಣಿಗೆಗೆ ತುಂಬ ಪ್ರಚೋದನೆಯನ್ನು ಒದಗಿಸಿದ್ದಾರೆ. ಈ ವರ್ಷದಲ್ಲಿ ಮೈಸೂರು ರಾಜ್ಯದ ಆಹಾರ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರ ನೇತೃತ್ವದಲ್ಲಿ ಸಂಘಟಿತವಾದ ಶ್ರೀ ಬಸವಣ್ಣನವರ ಎಂಟುನೂರನೆಯ ಉತ್ಸವ ಕಾರ್ಯದ ಅಂಗವಾಗಿ, ವಿವಿಧ ಮುಖಗಳಲ್ಲಿ ಶರಣ ಸಾಹಿತ್ಯದ ಅಭ್ಯಾಸ, ಪ್ರಕಟಣೆಗಳಿಗೆ ಪ್ರಚೋದನೆಯು ಲಭಿಸುವ ನಿರೀಕ್ಷೆಯಿದೆ. ರವೀಂದ್ರ ಶತಮಾನೋತ್ಸವ, ಪುರಂದರದಾಸ, ಕನಕದಾಸರ ಉತ್ಸವಗಳೂ ಗಮನೀಯವಾದ ಕಾರ್ಯಗಳನ್ನೆಸಗಿವೆ. ಈ ಎಲ್ಲ ಜಾಗೃತಿಯಿಂದ ಕನ್ನಡದಲ್ಲಿ ವಿಮರ್ಶ ಸಾಹಿತ್ಯದ ಬೆಳವಣಿಗೆಯೂ ಆಗಿದೆ. ಅದರ ಪರಿಣಾಮವಾಗಿ ಕಾವ್ಯಮೀಮಾಂಸೆ, ಭಾಷಾ ಶಾಸ್ತ್ರಗಳ ಅಭ್ಯಾಸ ಹೆಚ್ಚಿ, ಪ್ರೊ. ಹಂಪ. ನಾಗರಾಜಯ್ಯನವರಿಂದ 'ದ್ರಾವಿಡ ಭಾಷಾ ವಿಜ್ಞಾನ' ದಂಥ ಉತ್ತಮ ಕೃತಿಗಳು ಕನ್ನಡದ ಕಣಜವನ್ನು ತುಂಬಿವೆ. ಅನತಿಕಾಲದಲ್ಲಿಯೇ ಇಷ್ಟೆಲ್ಲ ಕಾರ್ಯವೂ ನಡೆದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ 'ಕನ್ನಡ ನಿಘಂಟು' ರೂಪುಗೊಳ್ಳುತ್ತಿದೆ. ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆಯಿಂದ ಕನ್ನಡ ವಿಶ್ವಕೋಶವು ನಿರ್ಮಾಣವಾಗಲಿದೆ. ಪ್ರೊ. ಜಿ. ಎಸ್. ಹಾಲಪ್ಪನವರು ಸಂಪಾದಿಸಿದ 'ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ' ನವರ ಸಮಗ್ರ ಕೃತಿಗಳ ಹೆಬ್ಬೊತ್ತಿಗೆಯೂ ಡಾ. ಕಾರಂತರ 'ವಿಜ್ಞಾನ ಪ್ರಪಂಚ' ವೂ ಉಲ್ಲೇಖನೀಯ ಪ್ರಯತ್ನಗಳಾಗಿವೆ. ಯಾವ ವಿಶ್ವವಿದ್ಯಾನಿಲಯವೂ ಸ್ವಲ್ಪ ಕಾಲದಲ್ಲಿ ಮಾಡಿ ಮುಗಿಸದಂಥ ಕಾರ್ಯವನ್ನು ಕಾರಂತರು ಮಾಡಿ ಮುಗಿಸಿದ್ದಾರೆ. ಕಡಲ ತೀರದ ಭಾರ್ಗವನ ಸಾಹಸವಾಗಿದೆಯಿದು. ಹೀಗೆಲ್ಲ ಕೆಲಸ ನಡೆದಿದ್ದರೂ ಇನ್ನೂ ಆಗಬೇಕಾದ ಕೆಲಸವು ವಿಪುಲವಾಗಿದೆಯೆಂದು ಹೇಳದೆ ಗತ್ಯಂತರವಿಲ್ಲವಷ್ಟೆ? ಕರ್ನಾಟಕದಲ್ಲಿ ಇಂದು ಅತ್ಯುತ್ತಮ ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ ಸಾಹಿತ್ಯದ ಸಮೃದ್ಧತೆಗೆ ಶ್ರಮಿಸುತ್ತಿದ್ದಾರೆಂದು ಹೆಮ್ಮೆಯಿಂದ ಹೇಳಬಯಸುವೆ. ವಿದ್ಯಾವಂತರೂ ಈ ಉದ್ಯಮವನ್ನು ಕೈಹಿಡಿದಿರುವುದು ಮತ್ತೊಂದು ಸಂತೋಷದ ಸಂಗತಿಯಾಗಿದೆ. ಇವೆಲ್ಲಕ್ಕೂ ಮಿಗಿಲಾಗಿ ಕನ್ನಡ ನಾಡಿನಲ್ಲಿ ಎಂದಿಗಿಂತಲೂ ಇಂದು ಹೆಚ್ಚಾಗಿ ಯುವಜನಾಂಗದಲ್ಲಿ ಕನ್ನಡಾಭಿಮಾನ ತುಂಬಿ ತುಳುಕುತ್ತಿದೆ. ಇದರಲ್ಲಿ ಪತ್ರಿಕೆಗಳವರ ಪಾತ್ರವೂ ವಿಶೇಷವಾಗಿದೆ. ಕನ್ನಡ ಭಾಷೆಯಲ್ಲಿ ಭಾರತದ ಹೆಮ್ಮೆಯೆನ್ನಬಹುದಾದ ಒಳ್ಳೆಯ ಪತ್ರಿಕೆಗಳಿವೆ. ಇದಲ್ಲದೆ ಕಥೆ, ಕವನ, ವಿಮರ್ಶೆಗೆಂದೇ ಮೀಸಲಾದ ಕೆಲವು ಪತ್ರಿಕೆಗಳು ತರುಣರ ಉತ್ಸಾಹಿಗಳ ಪ್ರಯತ್ನ

ದಿಂದ ಕಣ್ತಳೆದು ಮನ ಬೆಳಗುತ್ತಿವೆ. ಈ ಸಂದರ್ಭ ದಲ್ಲಿ ಸಮಗ್ರ ಕನ್ನಡ ಜನತೆಯಲ್ಲಿ ನನ್ನದೊಂದು ನಮ್ರ ವಿನಂತಿ. ಓದುಬಲ್ಲ ಪ್ರತಿಯೊಬ್ಬರೂ ಕನ್ನಡ ಪುಸ್ತಕ ಗಳನ್ನೂ, ಪತ್ರಿಕೆಗಳನ್ನೂ ಕೊಂಡು ಓದುವ ಹವ್ಯಾಸ, ಅಭ್ಯಾಸ ಬೆಳಸಿಕೊಳ್ಳಬೇಕು. ಒಂದೇ ಪುಸ್ತಕವನ್ನು, ಒಂದೇ ಪತ್ರಿಕೆಯನ್ನು ನೂರಾರು ಜನ ಎರವಲು ತಂದು ಓದುವ ಪ್ರವೃತ್ತಿ ಬಿಟ್ಟು, ತಮ್ಮ ಗಳಿಕೆಯಲ್ಲಿ ಅಣುವಿನಷ್ಟು ಹಣವನ್ನು ಕನ್ನಡ ಗ್ರಂಥಗಳನ್ನು ಕೊಂಡು ಓದುವ ಸದ್ಗುಣವನ್ನು ಬೆಳಸಿಕೊಳ್ಳಬೇಕೆಂದು ಪ್ರಾರ್ಥನೆ. ಹೀಗೆ ಆದಾಗ ಮಾತ್ರ ಕನ್ನಡ ಭಾಷೆ ಸಾಹಿತ್ಯದ ಸರ್ವಾಂಗೀಣ ಬೆಳವಣಿಗೆ ವೇಗದಿಂದ ಮುಂದುವರಿ ಯಲೂ, ಹೊಸ ಹೊಸ ಕೃತಿಗಳೂ ಪ್ರತಿಭೆಯ ಕುಡಿ ಗಳೂ ಬೆಳಕಿಗೆ ಬರಲು ಸಾಧ್ಯವಾಗುತ್ತದೆ.

ಇಲ್ಲಿ ಒಂದು ಮಾತನ್ನು ನಾನು ತಮ್ಮಲ್ಲಿ ಅರಿಕೆಮಾಡಿ ಕೊಳ್ಳದೆ ಇರಲಾರೆ. ಕನ್ನಡನಾಡಿನ ಹೊರಗೆ ಇದ್ದು, ನನ್ನ ಮಾರ್ಗದಲ್ಲಿ ನಾನು ಕಾರ್ಯ ಮಾಡುತ್ತ ಇರುವು ದರಿಂದ ಈ ಪರಿಶೀಲನೆಯು ಅಸಂಪೂರ್ಣವೆಂಬುದನ್ನು ನಾನು ಬಲ್ಲೆ. ವಿಶಾಲ ಕನ್ನಡ ನಾಡಿನಲ್ಲಿ ನಡೆದಿರುವ ಹಲವು ಸಾಹಿತ್ಯಕ ಚಟುವಟಿಕೆಗಳೂ ಕೆಲವು ವ್ಯಕ್ತಿ ಕೃತಿ ಗಳ ಉಲ್ಲೇಖವೂ ಈ ಅತಿತ್ವರಿತಗತಿಯ ನಿರೀಕ್ಷಣೆಯಲ್ಲಿ ಆಗದೆ ಹೋಗಿವೆ. ಕನ್ನಡಕ್ಕಾಗಿ ದುಡಿಯುತ್ತಿರುವ ಎಲ್ಲ ಮಹನೀಯರ ಹೆಸರಿನ ಹಾಗೂ ಕೃತಿಗಳ ಉಲ್ಲೇಖವು ಇಲ್ಲಿ ಬಂದಿಲ್ಲ. ಅಂಥ ಎಲ್ಲ ಸರಸ್ವತಿಯ ಪುತ್ರರೂ ನನ್ನನ್ನು ಕ್ಷಮಿಸಬೇಕಾಗಿ ಕೋರುತ್ತೇನೆ.

ಇಂದು ಜೀವನವು ಸಂಕೀರ್ಣವಾಗಿದೆ; ಅತೃಪ್ತಿ ಮಯವೂ ಆಗಿದೆ. ಹಲವು ಸಮಸ್ಯೆಗಳ ಮಧ್ಯದಲ್ಲಿ ಜನಾಂಗ, ವ್ಯಕ್ತಿಗಳು ಸಿಕ್ಕಿ ಒದ್ದಾಡುವಂತಹ ಪರಿಸ್ಥಿ ತಿಯು ಇದೆ. ಅದರಿಂದ ಸಾಹಿತ್ಯ ರಚನೆಗೆ ಇರುವ ಪ್ರೇರಕ ಶಕ್ತಿಯ ಕೊರತೆಯು ಉಂಟಾಯಿತೇನೋ! ಗಾಢತೆಯು ಕಡಿಮೆಯಾಗಿ, ವಿರಲಗೊಳ್ಳುತ್ತ ಬರುತ್ತ ಲಿದೆ. ಸಮಸ್ತ ಜನಾಂಗವನ್ನು ಸ್ಪರ್ಶಿಸುವ ಸಮಾ ರಂಭಗಳೂ ಕಡಿಮೆಯಾಗಿವೆ. ಆಂತರಿಕ ಪ್ರೇರಣೆಯ ಕೊರತೆಯು ಉಂಟಾಗಿದೆ. ನೈತಿಕ ಮೌಲ್ಯವು ಅಧೋ ಮುಖವಾಗಿದೆ. ಇಂಥ ಪರಿಸ್ಥಿತಿಯಲ್ಲಿಯೂ ಕನ್ನಡ ಲೇಖಕನು ಮುಂದರಿಯಬೇಕಾಗಿದೆ. ಹಿಂದೆ ಇದ್ದ ಸ್ವಾರ್ಥ ತ್ಯಾಗ, ನಿಷ್ಠೆ, ದೈವಭಕ್ತಿಗಳು ಇಂದೆಲ್ಲಿ ಹೋದವು? ಅದರಿಂದ ಇಂದಿನ ಸಾಹಿತ್ಯವು ಬೆಳೆಯುತ್ತಿರುವಷ್ಟು ವಿದ್ವತ್ತೆಯ ಗಾಢತೆಯು ಹೆಚ್ಚುತ್ತಲಿಲ್ಲ. ಕೆಲವರು ತಮ್ಮ ತಮ್ಮ ಕೃತಿರಚನೆಗೆ ತಕ್ಕ ಸಹಾಯಕ ಸಾಮಗ್ರಿ ಗಳನ್ನು ಒದಗಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ; ಗ್ರಂಥ ವ್ಯಾಸಂಗದ ಪ್ರಯೋಜನವನ್ನು ಪಡೆದಿದ್ದಾರೆ. ಒಂದು ವಿಷಯದ ಮೇಲೆ ಗ್ರಂಥವನ್ನು ರಚಿಸಬೇಕಾದರೆ ಆ ವಿಷಯಕ್ಕೆ ಸಂಬಂಧಿಸಿದ ಸಮಗ್ರ ಸಾಹಿತ್ಯವನ್ನು ವಿವಿಧ ಭಾಷೆಗಳಲ್ಲಿ ಇಂದಿನವರೆಗೆ ಪ್ರಕಟವಾದ ಗ್ರಂಥಗಳೆಲ್ಲ ವನ್ನೂ ಅವಲೋಕಿಸಬೇಕಾಗುತ್ತದೆ. ಆಮೇಲೆ ನಾವು ಕೈಕೊಳ್ಳುವ ಗ್ರಂಥರಚನೆಯಿಂದ ಕನ್ನಡಕ್ಕೆ ಏನಾದರೂ ನೀಡಿದಂತಾಗುತ್ತದೆ. ಇಂಥ ವಿದ್ವತ್ತು, ಅಭ್ಯಾಸಗಳು ಗ್ರಂಥ ಲೇಖಕರಿಗೆ ಅವಶ್ಯವಾಗಿ ಬೇಕು. ಅದಕ್ಕಾಗಿ ಸತತಾಭ್ಯಾಸದ ಆವಶ್ಯಕತೆಯಿದೆ. ಇದಕ್ಕೆ ನಾವು ಸಾಹಿತ್ಯ ತಪಸ್ಸೆಂದು ಕರೆಯೋಣ, ಬೇಕಾದರೆ. ಇಂಥ ತಪಸ್ಸಿನಿಂದ ಖಚಿತ ರೂಪವಾದ ಜ್ಞಾನವು ವ್ಯಕ್ತಿಯಲ್ಲಿ ಉಂಟಾಗುತ್ತದೆ. ಅದನ್ನೇ ವಿದ್ವತ್ತೆಂದು ಹೇಳಬಹುದು. ಈ ವಿದ್ವತ್ತೂ ರಸಿಕತೆಯೂ ವ್ಯಾವಹಾರಿಕ ಜೀವನಕ್ಕೆ ವಿರೋಧವಲ್ಲ; ಅದಕ್ಕೆ ಪೋಷಕ. ಸಹೃದಯದಲ್ಲಿ ಭಾವ ಬುದ್ಧಿಗಳೆರಡೂ ಸಮತೂಕದಲ್ಲಿರಬೇಕು. ಅಂದ ರೇನೇ ಅದು ಸಂಪೂರ್ಣ ವ್ಯಕ್ತಿತ್ವವೆನಿಸುತ್ತದೆ. ಒಂದಂ ಗವು ಬೆಳೆದು ಇನ್ನೊಂದಂಗವು ಕುಗ್ಗಿದರೆ ಸಾಹಿತ್ಯದ ಜೀವನದಲ್ಲಿ ಆಗಷ್ಟು ಕೊರತೆಯೇ ಎನಿಸುತ್ತದೆ. ಮಾನ ವನ ಈ ಎರಡು ದೃಷ್ಟಿಗಳು ಸೇರಿ ಸಮಷ್ಟಿದೃಷ್ಟಿಯನ್ನು ರೂಪಿಸಲಿ.

ಭಾಷೆ, ಛಂದಸ್ಸು, ವ್ಯಾಕರಣ, ಗ್ರಂಥಸಂಪಾದನಾ ಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಪಡೆಯ ಬೇಕಾದ ವಿದ್ವ ತ್ತಿಗೆ ಶಾಸ್ತ್ರ ಪ್ರತಿಭೆಯು ಆವಶ್ಯಕ. ಇದು ಕಾವ್ಯ ಪ್ರತಿಭೆಗಿಂತ ಕಡಿಮೆಯೆಂದು ಭಾವಿಸಬೇಕಿಲ್ಲ. ಅದ್ದ ರಿಂದ ವಿದ್ವತ್ತಿನ ಸಂಪಾದನೆಗೂ ಪ್ರತಿಭೆ ವ್ಯವ ಸಾಯಗಳು ಅಗತ್ಯ, ಮುಖ್ಯ. ಕಾವ್ಯ ಪ್ರತಿಭೆಯಾಗಲಿ, ವಿದ್ವತ್ತೆಯಾಗಲಿ, ಸ್ವಕೀಯ ಪ್ರಯತ್ನದಿಂದ ಕಳೆಗೊಳ್ಳು ತ್ತವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕವಿಗಳ ಸಂಖ್ಯೆಯೇ ವಿಪುಲ. ಈಗಲಾದರೂ ವಿದ್ವತ್ತಿನ ಬೆಳವಣಿಗೆಯಾಗ ಬೇಕಾಗಿದೆ. ಕನ್ನಡ ನಾಡಿನಲ್ಲಿ ಸಾಧನ ಸಂಪತ್ತಿಗೇನೂ ಕೊರತೆಯಿಲ್ಲ. ಸಾಕಷ್ಟು ಹಸ್ತಲಿಖಿತ ಗ್ರಂಥಗಳಿವೆ, ಶಿಲಾಲೇಖಗಳಿವೆ. ಆದರೆ ಕೆಲಸಮಾಡುವವರೇ ಇಲ್ಲ. ಅತ್ತ ನಮ್ಮ ತರುಣರ ಮನಸ್ಸು ಹರಿಯಲಿ. ಶ್ರೀ ಡಿ. ಎಲ್. ಎನ್. ಅವರು 'ಕನ್ನಡ ಗ್ರಂಥಸಂಪಾದನೆ' ಯಂಥ ಗ್ರಂಥ ರಚಿಸಿದ್ದಾರೆ. ಅದನ್ನವಲೋಕಿಸಿ, ಅದ ನ್ನನುಸರಿಸಿ ನಾವು ಗ್ರಂಥಸಂಪಾದನಾ ಕಾರ್ಯದಲ್ಲಿ

ಮುಂಪರಿದರೆ ನಾವು ಅವರಿಗೆ ಕೃತಜ್ಞತೆಯನ್ನು ವ್ಯಕ್ತ ಪಡಿಸಿದಂತೆಯೇ ಆಗುತ್ತದೆ. 'ಶ್ರೀ' ಯವರ ಮಾರ್ಗ ವನ್ನು ಅನುಸರಿಸಿದರೆ ಅವರಿಗೆ ನಾವು ಗೌರವವನ್ನೇ ಸಲ್ಲಿಸಿ ದಂತಲ್ಲವೆ?

ಇನ್ನು ಇತ್ತೀಚಿಗೆ ವಿಶ್ವವಿದ್ಯಾನಿಲಯಗಳಲ್ಲಿ ಓದುವ ಸ್ನಾತಕರನ್ನು ಬಿಟ್ಟರೆ ನಮ್ಮ ಹಳಗನ್ನಡ ಸಾಹಿತ್ಯ ಕೃತಿ ಗಳ ಆಳವಾದ ಅಭ್ಯಾಸವನ್ನು ಜನತೆಯು ಮಾಡುತ್ತ ಲಿಲ್ಲ. ಇಷ್ಟೇ ಅಲ್ಲ, ಎಷ್ಟೋ ಜನ ತರುಣ ಲೇಖಕರೂ ಹಳೆಯ ಸಾಹಿತ್ಯದ ಪರಿಚಯವನ್ನು ಹೊಂದಿಲ್ಲ. ನಮ್ಮ ಹಿಂದಿನ ಸಾಹಿತ್ಯ ಪರಂಪರೆಯ ಸಮೃದ್ಧವಾದ ಅಡಿಗಲ್ಲಿನ ಮೇಲೆಯೇ ನಮ್ಮ ಮುಂದಿನ ಸಾಹಿತ್ಯವು ರೂಪುಗೊ ಳ್ಳುತ್ತ ಹೋಗಬೇಕು. ಪರಕೀಯ ಭಾಷೆ, ಸಾಹಿತ್ಯ ಗಳಿಂದ ಹೊಸ ಹೊಸ ದೃಷ್ಟಿಗಳು ಮೂಡಲಿ. ಆದರೆ ಅವೆಲ್ಲ ನಮ್ಮ ಸಂಸ್ಕೃತಿ, ಪರಂಪರೆಗಳಿಗೆ ಒಗ್ಗುವಂತೆ ಬಂದು ಬೆಳೆಯಲಿ. ಇನ್ನೂ ಹಳೆಯ ಕಾವ್ಯಗಳ ಅಭ್ಯಾಸ, ಪ್ರಕಾಶನಗಳು ಹೆಚ್ಚುತ್ತ ಹೋಗಬೇಕು. ಹಳೆಯ ಕಾವ್ಯಗಳ ಸಂಪಾದನೆಯಲ್ಲಿ ವಿಸ್ತೃತ ಪ್ರಸ್ತಾ ವನೆ, ಪ್ರಾಮಾಣಿಕ ಅಭಿಪ್ರಾಯಗಳು ಹೆಚ್ಚಬೇಕು. ಕೆಲವು ಅತ್ಯುತ್ತಮ ಕಾವ್ಯಗಳಿಗಾದರೂ ಪ್ರಾಯಶಃ ಹೊಸಗನ್ನಡ ಅನುವಾದಗಳು ರೂಪುಗೊಂಡು ಜನರ ಮನ ಮನಕ್ಕೂ ಮುಟ್ಟುವಂತೆ ಮಾಡುವುದು ವಿಹಿತವಾ ಗಿದೆ. ಇಂಥ ಪ್ರಯತ್ನವೊಂದು ಭಾರತೀಯ ಜ್ಞಾನ ಪೀಠದವರಿಂದ ನಡೆದುದನ್ನು ಇಲ್ಲಿ ಉಲ್ಲೇಖಿಸಬಹು ದಾಗಿದೆ. ಈ ಕಾರ್ಯಕ್ಕೆ ಶ್ರೀಮಾನ್ ಶಾಹು ಶಾಂತಿ ಪ್ರಸಾದ್ ಹಾಗೂ ಅವರ ಧರ್ಮಪತ್ನಿಯವರಾದ ಶ್ರೀಮತಿ ರಮಾರಾಣಿಯವರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಜ್ಞಾನಪೀಠದ ಮನಸ್ಸು ಇತ್ತ ಸೆಳೆದುದು ಹೇಗೆ? ಅವರು ಈ ಭಾಗಕ್ಕೆ ಬಂದಾಗ ಇಲ್ಲಿಯ ಕನ್ನಡ ಪಂಡಿ ತರು ಅವರಿಗೆ ಕನ್ನಡ ಸಾಹಿತ್ಯದ ಶ್ರೇಷ್ಠತೆಯನ್ನು ತಿಳಿಸಿ ಕೊಟ್ಟಿದ್ದರಿಂದಲೇ ಅಲ್ಲವೇ? ಈ ದೃಷ್ಟಿಯಿಂದ ವಿಚಾರಿ ಸಿದರೆ ಇಂದು ಕನ್ನಡ ನಾಡಿನ ಹೊರಗೂ ಕೂಡ ನಮ್ಮ ವಿದ್ವತ್ತು ಸಾಹಿತ್ಯಗಳ ಪ್ರಚಾರಕಾರ್ಯವು ನಡೆಯುವ ಆವಶ್ಯಕತೆಯು ಇದೆ. ಕನ್ನಡ ಕಾವ್ಯ, ಗ್ರಂಥ ಸಂಪ ತ್ತಿಯ ಜ್ಞಾನದ ಅರಿವು ಅನ್ಯ ಭಾಷೆಯವರಿಗೂ ಆಗು ವಂತೆ ಅನುವಾದಗಳು ನಡೆಯಬೇಕು. ಹೊರಗಿನಿಂದ ನಾವು ತರುತ್ತಿರುವುದಕ್ಕೆ ಮಿಗಿಲಾಗಿ ನಮ್ಮದನ್ನು ಅನ್ಯರಿಗೆ ನೀಡುವ ಯತ್ನವು ನಡೆಯಲಿ. ಶ್ರೀ ಡಿ. ಜವರೇಗೌಡ ಹಾಗೂ ಡಾ. ನಾಯಕ ಅವರ ಸಂಪಾದ ಕತ್ವದಲ್ಲಿ ನಡೆದಿರುವ "ಕನ್ನಡ ಸ್ಟಡೀಜ" ದ ಪ್ರಕಾಶನವು ಸ್ತುತ್ಯವಾಗಿದೆ. ಆದರೆ ಕನ್ನಡ ವಿದ್ವಾಂಸರ ಮನಸ್ಸು ಇತ್ತ ಹರಿಯಬೇಕಾದಷ್ಟು ಹರಿದಿಲ್ಲ. ಇದರಲ್ಲಿ ಸಮರ್ಥ ರಾದವರೆಲ್ಲರೂ ಸಹಕರಿಸಬೇಕು. ಅನೂಲ್ಯವಾದ ವಚನ ಸಾಹಿತ್ಯ, ದಾಸ ವಾಙ್ಮಯಗಳು ಇತರ ಭಾಷೆಗಳಿಗೂ ಅನುವಾದಗೊಂಡು, ಕನ್ನಡ ನಾಡಿನ ಆಧ್ಯಾತ್ಮಿಕ ತೇಜಸ್ಸಿನಿಂದ ಲೋಕದ ಮನವು ತಣಿಯುವಂತಾಗಲಿ. ಆ ಮಾರ್ಗದಲ್ಲಿ ಕನ್ನಡಿಗರು ಸತತ ಪ್ರಯತ್ನಿಸಲಿ. ಭಾರ ತೀಯ ರಾಷ್ಟ್ರೀಯ ದೃಷ್ಟಿಯನ್ನು ರೂಪಿಸುವುದರಲ್ಲಿ ನಮ್ಮ ಕೊಡುಗೆಯೂ ಸಲ್ಲಲಿ.

ಇಲ್ಲಿ ಮದ್ರಾಸ ವಿಶ್ವವಿದ್ಯಾನಿಲಯದಲ್ಲಿ ನಡೆದ ವಿವಿಧ ಹಳಗನ್ನಡ ಗ್ರಂಥಗಳ ಪರಿಷ್ಕೃತ ಮುದ್ರಣ ಕೆಲಸ ವನ್ನು ನಾವು ಗಮನಿಸಬೇಕು. ಅಲ್ಲಿಯ ಓರಿಯಂಟಲ್ ಲಾಯಬ್ರರಿಯು ಒಳ್ಳೆಯ ಗ್ರಂಥಗಳನ್ನು ಪ್ರಕಟಿಸಿದೆ. ಪಂಡಿತ ಎಚ್. ಶೇಷಯ್ಯಂಗಾರ್, ಪ್ರೊ. ಮರಿಯಪ್ಪ ಭಟ್ಟ ಮೊದಲಾದವರ ಸಂಶೋಧನೆ ಸಂಪಾದನೆಯ ಕಾರ್ಯಗಳನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆ. ಇದೇ ದೃಷ್ಟಿಯಿಂದ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯು ತುಂಬ ಕೆಲಸ ಮಾಡಿದೆ. ಧಾರವಾಡದ ಮುರುಘಾಮಠವು ವೀರಶೈವ ಸಾಹಿತ್ಯದ ಉದ್‌ಗ್ರಂಥ ಗಳನ್ನು ಪ್ರಕಟಿಸಿದೆ. ದಿ. ಬಸವನಾಳ, ಡಾ. ಹಳಕಟ್ಟಿ ಪ್ರೊ. ಭೂಸನೂರಮಠ, ಪ್ರೊ. ಮಾಳವಾಡ, ಡಾ. ಹಿರೆ ಮಠ ಇತ್ಯಾದಿ ಮಹನೀಯರು ಈ ಕಾರ್ಯಕ್ಕಾ ತುಂಬ ಶ್ರಮಿಸುತ್ತಿದ್ದಾರೆ. ಇವರ ಸೇವೆಯು ಮಿಗಿಲಾ ದದ್ದು. ಇವರಲ್ಲದೆ ಕನ್ನಡ ನಾಡಿನ, ತುಂಬೆಲ್ಲ ವೈಯಕ್ತಿಕವಾಗಿ ಅಲ್ಲಲ್ಲಿ ಗ್ರಂಥ ಸಂಪಾದನೆ, ಪ್ರಕಾ ನಗಳು ನಡೆಯುತ್ತಿವೆ. ಅವುಗಳನ್ನೆಲ್ಲ ಇಲ್ಲಿ ಸಮಾಲೋ ಚಿಸುವುದು ಕಷ್ಟಸಾಧ್ಯ ಕಾರ್ಯವಾಗಿದೆ.

ಈ ಸಂದರ್ಭದಲ್ಲಿ ನಮ್ಮ ಗ್ರಂಥಗಳ ಹಸ್ತಪ್ರತಿಗ ವಿಷಯದಲ್ಲಿ ಹೇಳಬೇಕಾದ ಒಂದು ಮಾತಿದೆ. ಪ್ರಾಚೀ ಗ್ರಂಥಗಳ ಹಸ್ತಪ್ರತಿಗಳು ಇತರ ಸಂಪತ್ತಿಯಂತೆ ಕೇವ ಒಂದು ಸಂಪತ್ತೆಂದಾಗಲಿ, ಪ್ರದರ್ಶನದ ವಸ್ತುವೆಂದ ಗಲಿ, ಕಾಯ್ದಿಟ್ಟರೆ ತೀರಿತೆಂದಾಗಲಿ ಭಾವಿಸುವುದರ ಅರ್ಥವಿಲ್ಲ. ಮೇಲಧಿಕಾರಿಗಳಿಂದ, ದೊಡ್ಡವರೆನ್ನು ವರಿಗೆ ತೋರಿಸಿ, ಬೆನ್ನು ಚಪ್ಪರಿಸಿಕೊಳ್ಳುವುದರಲ್ಲಿಯ ಸಫಲತೆಯು ಇಲ್ಲ. ಅವುಗಳ ಉಪಯೋಗವು ಗ್ರಂ ಸಂಪಾದಕರಿಗೂ, ಲೇಖಕರಿಗೂ ಸುಲಭವಾಗಿ ಆಗುವ

ಅಧಿಕಾರಿಗಳೂ ಸಂಸ್ಥೆಗಳ ಹಿರಿಯರೂ ನೋಡಿಕೊಳ್ಳ ಬೇಕು. ಈ ದೃಷ್ಟಿಯಲ್ಲಿ ಪುಣೆಯ ಭಾಂಡಾರಕರ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟವು ಮಾದರಿಯ ಸಂಸ್ಥೆಯಾಗಿದೆ. ಇಂಥ ಸಂಸ್ಥೆಗಳು ಹಳೆಯ ಗ್ರಂಥಗಳು ಮುದ್ರಣಗೊಂಡು ಬೆಳಕಿಗೆ ಬರಲು ಸಹಾಯಕವಾಗುತ್ತವೆ. ಈ ಕಾರ್ಯವು ಸುಗಮವಾಗಿ ಸಾಗುವಂತೆ ಯೋಗ್ಯ ಕರಾರುಗಳನ್ನು ಹಾಕಿ, ಬರೆಯಿಸಿಕೊಂಡು, ಹಸ್ತಪ್ರತಿಗಳನ್ನು ಹೊರಗೆ ಕೊಟ್ಟರೆ ಅವುಗಳ ಉಪಯುಕ್ತತೆಯು ಹೆಚ್ಚುವುದರಲ್ಲಿ ಸಂಶಯವಿಲ್ಲ.

ಭಾಷಾಶಾಸ್ತ್ರದ ಅಭ್ಯಾಸದ ದೃಷ್ಟಿಯಿಂದ ನಮ್ಮ ಜನರ ಬಾಯಿಮಾತಿನಲ್ಲಿ ಹಲವು ಅಪೂರ್ವ ಪ್ರಯೋಗಗಳು ಬಳಕೆಯಲ್ಲಿವೆ. ಅಂಥ ಪ್ರಯೋಗಗಳನ್ನು ಸಂಗ್ರಹಿಸುವ ಕಾರ್ಯವೂ ಅವುಗಳ ಅಭ್ಯಾಸವೂ ಹೆಚ್ಚುವ ಆವಶ್ಯಕತೆಯು ಇದೆ. ಇಂಥ ಪ್ರಯತ್ನವೊಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಿಂದ ನಡೆದಿದೆ ಎಂದು ಕೇಳುತ್ತೇವೆ. ಈ ಕಾರ್ಯವು ತ್ವರಿತಗತಿಯಿಂದಲೂ ವಿಪುಲವಾಗಿಯೂ ನಡೆಯಲಿ. ಅಲ್ಲಲ್ಲಿ ಅಭ್ಯಾಸ ಕೂಟಗಳು ಏರ್ಪಡಲಿ. ಜನಪದಗೀತ, ಜನಪದ ಕಥೆಗಳನ್ನು ಈ ದೃಷ್ಟಿಯಿಂದ ಅಭ್ಯಸಿಸಬೇಕು. ಈಗ ಆಗಿರುವ ಸಂಗ್ರಹಗಳ ಜೊತೆಗೆ ಸಂಪಾದನೆಯ ಕೆಲಸವೂ ಸಂಶೋಧನೆಯೂ ನಡೆಯುವಂಥ ಯೋಜನೆಗಳನ್ನು ಹಮ್ಮಬೇಕು. ಹುಮ್ಮಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕು.

ಇನ್ನು ಕನ್ನಡ ನಾಡಿನ ವಿದ್ವತ್ತು, ಅಭ್ಯಾಸದ ಮೂಲ ಸಾಮುಗ್ರಿಗಳನ್ನು ಒದಗಿಸಿಕೊಡುವ ಹೊಣೆಯು ಪ್ರಾಚ್ಯ ಸಂಶೋಧನಾ ವಿಭಾಗಕ್ಕೆ ಸೇರಿದುದು. ಮೈಸೂರಿನಲ್ಲಿರುವ ಈ ಸಂಸ್ಥೆಯ ಕಾರ್ಯವು ಆರಂಭದಲ್ಲಿ ರೈಸ್, ಆರ್. ನರಸಿಂಹಾಚಾರ್ಯರಂಥ ವಿದ್ವನ್ಮಣಿಗಳಿಂದಲೂ ಅವರ ಸತತ ಪರಿಶ್ರಮದಿಂದಲೂ ಬಹು ಉತ್ತಮವಾಗಿ ಸಾಗಿತ್ತು. ಆ ಮಟ್ಟದಲ್ಲಿ ಮುಂದಿನ ಕಾಲದಲ್ಲಿ ಕೆಲಸವು ನಡೆದಂತೆ ಕಂಡು ಬರುವುದಿಲ್ಲ. ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿ, ಹುದುಗಿಕೊಂಡಿರುವ ಎಂತೆಂತಹ ಕಲಾಕೃತಿಗಳು ಇನ್ನೂ ಬೆಳಕಿಗೆ ಬಾರದೆ ಉಳಿದಿವೆ! ಅವುಗಳನ್ನು ಕಂಡುಹಿಡಿಯುವವರಾರು? ಪ್ರಾಚೀನ ನಿವೇಶನಗಳ ಅಗೆತ, ಸಂಶೋಧನೆಯ ಕೆಲಸವೂ ಇನ್ನೂ ಹೆಚ್ಚಾಗಿ ನಡೆಯುವ ಆವಶ್ಯಕತೆಯು ಇದೆ. ಇತ್ತೀಚೆಗೆ ಉಪಲಬ್ಧವಾದ ಶಾಸನಗಳನ್ನು ಕ್ರಮಬದ್ಧವಾಗಿ ಸಂಪಾದಿಸಿ ಪ್ರಕಟಿಸುವ ಕಾರ್ಯವೂ ನಡೆಯಬೇಕಾಗಿದೆ. ನಾಡಿನಲ್ಲೆಲ್ಲ ಸುತ್ತಾಡಿ, ಶಾಸನಗಳನ್ನೂ ತಾಡ ಓಲೆ ಗ್ರಂಥಗಳನ್ನೂ ಶೋಧಿಸುವ ಕೆಲಸವು ಇನ್ನೂ ಎಷ್ಟು ಅಗಾಧವಾಗಿದೆ! ಇದನ್ನೆಲ್ಲ ಮಾಡುವವರು ಯಾರು? ಈ ಅಭ್ಯಾಸ, ಅಭಿರುಚಿಗಳು ಎಷ್ಟು ಜನರಿಗಿವೆ? ಇಂಥ ಕೆಲಸಗಳಿಗೆ ಬೇಕಾಗುವ ತಾಳ್ಮೆ ಯಾರಿಗಿದೆ? ಪೂರ್ವಭಾವಿಯಾದ ಜ್ಞಾನವನ್ನು ಒದಗಿಸುವ ವ್ಯವಸ್ಥೆಯಾದರೂ ಎಲ್ಲಿದೆ? ಇವೆಲ್ಲವನ್ನೂ ನೋಡಿದಾಗ ನಮ್ಮ ಮುಂದೆ ಎಷ್ಟು ಗುಡ್ಡದಷ್ಟು ದೊಡ್ಡ ಕಾರ್ಯವಿದೆಯೆಂಬುದರ ಕಲ್ಪನೆಯು ಯಾರಿಗೂ ಬಾರದೆ ಇರದು. ಇದನ್ನೆಲ್ಲ ಸರಕಾರ ಹಾಗೂ ಸಾರ್ವಜನಿಕರು ಪರ್ಯಾಲೋಚಿಸಿ ಕಾರ್ಯ ಪ್ರವೃತ್ತರಾಗಬೇಕು.

ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಪ್ರೊ. ಜಿ. ವೆಂಕಟಸುಬ್ಬಯ್ಯನವರ ದಕ್ಷ ನೇತೃತ್ವದಲ್ಲಿ ನಮ್ಮ ಈ ಹಿರಿಯ ಸಂಸ್ಥೆ ಧನಬಲವನ್ನೇ ಗಳಿಸುತ್ತ ಕಿರಿಯ ಚೈತನ್ಯಗಳನ್ನು ಬೆಳೆಸುತ್ತ ವಿಶಾಲ ಭಾವನೆಯನ್ನೂ ದೂರದೃಷ್ಟಿಯನ್ನೂ ಕೈಗೂಡಿಸಿಕೊಳ್ಳುತ್ತ ಮುಂದುವರಿದಿದೆ. ಇಂಥ ಸಂಸ್ಥೆಗೆ ಬಹುಸಂಖ್ಯೆಯಲ್ಲಿ ಜನ ಬೆಂಬಲವಾಗಿ ನಿಂತರೆ ಕನ್ನಡದ ಮುನ್ನಡೆ ಬೇಗೆ ಸಾಧಿತವಾಗುತ್ತದೆ. ನಮ್ಮ ಜನ ಈ ಕಡೆ ಗಮನವಿಡಲಿ.

ಅನ್ಯ ಭಾಷೆ, ಸಾಹಿತ್ಯಗಳಿಂದ ನಮ್ಮ ಲೇಖಕರು ಸ್ಫೂರ್ತಿಯನ್ನು ಹೊಂದಲು ಅಡ್ಡಿಯಿಲ್ಲ. ಅನುಕರಣೆಯೂ ಸಮಂಜಸ ರೀತಿಯಲ್ಲಿದ್ದರೆ ಯೋಗ್ಯವೇ. ಪಾಶ್ಚಾತ್ಯ ಭಾಷೆ, ಸಾಹಿತ್ಯಗಳ ಅನುಕರಣೆಯಿಂದಲ್ಲವೆ ನಮ್ಮ ಹೊಸಗನ್ನಡ ಸಾಹಿತ್ಯಕ್ಕೊಂದು ರೂಪ ಒದಗಿದುದು? ಆದರೆ ಈ ಅನುಕರಣೆಯು ಭಾರತೀಯರಾದ ನಮ್ಮ ಪರಂಪರೆ, ಮನೋವೃತ್ತಿಗಳಿಗೆ ಅಳವಟ್ಟು ಬರಬೇಕು. ಸಮಾಜದ ಸತ್ಯಚಿತ್ರಗಳನ್ನು ಕೊಡುತ್ತೇವೆಂದು ಅಲ್ಲದ ಸಲ್ಲದ, ಜನಮನವನ್ನು ಮಲಿನಗೊಳಿಸುವ ವರ್ಣನೆಗಳನ್ನು ತಂದು ಸಾಹಿತ್ಯರೂಪದಿಂದ ಪ್ರಚುರಗೊಳಿಸುವುದೇನೂ ವಿಹಿತವಲ್ಲ. ಇದು ಮಾನಸಿಕ ನೈರ್ಮಲ್ಯಕ್ಕೊಂದು ಕೇಡು. ಪಾಶ್ಚಾತ್ಯಭಾಷೆಗಳಲ್ಲಿ ವಿಜ್ಞಾನ ಯುಗದ ಜೀವನರಂಗಕ್ಕನುಗುಣವಾಗಿ, ಕಾವ್ಯ ಪ್ರಪಂಚದಲ್ಲಿ ಅನೇಕ ಮಾರ್ಪಾಡುಗಳು ದಿನದಿನಕ್ಕೆ ಹೊಂದುತ್ತಲಿವೆ. ಅವೆಲ್ಲ ಆಗಾಗ 'ನವ್ಯತೆ' ಗಳೇ ಎನಿಸುತ್ತವೆ. ಅಂಥ ನವ್ಯ ವಿಧಾನವು ಸಾಹಿತ್ಯದ ಇತಿಹಾಸದಲ್ಲಿ ಕಾಲಕಾಲಕ್ಕೆ ಬರುತ್ತಲೇ ಇದೆ. ಹಾಗೆಯೇ ಇಂದೂ ಕೂಡ ನವ್ಯ ಕಾವ್ಯಯುಗವು ಇಂಗ್ಲಿಷಿನ ಪ್ರಭಾವದಿಂದ ಕನ್ನಡದಲ್ಲಿಯೂ ಆರಂಭವಾಗಿದೆ. ಅದರಲ್ಲಿ ಹಲವು

ಜನ ಹಿರಿಯ ಕವಿಗಳೂ ತರುಣರೂ ಶ್ರಮಿಸುತಲಿದ್ದಾರೆ. ಈ ಸಾಹಿತ್ಯ ಪ್ರಕಾರದ ಸಾಧನೆ, ಸಿದ್ಧಿಗಳನ್ನೂ ಪ್ರಭಾವ ವನ್ನೂ ಇನ್ನೂ ಕಾಯ್ದು ನೋಡಬೇಕು. ಅವರು ಹೇಳು ವುದನ್ನು ಜನರು ತಾಳ್ಮೆಯಿಂದ ಅರಿತುಕೊಳ್ಳಲು ಪ್ರಯ ತ್ನಿಸಲಿ. ಸಹಾನುಭೂತಿಯಿಂದ ರಸಾಸ್ವಾದವನ್ನು ಪಡೆ ಯಲೂ ಹವಣಿಸಬೇಕು. ಪ್ರತೀಕ, ಪ್ರತಿಮೆಗಳ ಅರ್ಥ ಮಾಡಿಕೊಳ್ಳಲೂ ಕೂಡ ಒಂದು ಸಾಧನೆ, ಯೋಗ್ಯತಾ ಸಂಪಾದನೆಗಳು ಬೇಡವೆ? ಜನಸಾಮಾನ್ಯರ ಸಾಹಿತ್ಯ, ಜನಸಾಮಾನ್ಯರ ಸಾಹಿತ್ಯವೆಂದು ಎಲ್ಲರೂ ಎಲ್ಲವನ್ನೂ ಸುಲಭದಲ್ಲಿ ತಿಳಿದುಕೊಳ್ಳುವುದು ಹೇಗೆ ಸಾಧ್ಯ? ಅದ ಕ್ಕಾಗಿ ವಿಶಿಷ್ಟ ಪರಿಶ್ರಮದ ಆವಶ್ಯಕತೆಯೂ ಇದೆ. ಜನ ತೆಯ–ಓದುಗರ–ಇಂಥ ಪರಿಶ್ರಮ ಹಾಗೂ ವಿಮರ್ಶಕರ ನೆರವುಗಳಿಂದ ಸಾಹಿತ್ಯದ ಗುಣಗ್ರಾಹಕ ರಸಿಕ ಮನೋ ಭಾವವೂ ಕನ್ನಡ ಲೋಕದಲ್ಲಿ ಹೆಚ್ಚಬೇಕು.

ಸಾಹಿತ್ಯ ನಿರ್ಮಿತಿಗಿಂತ ವಿಮರ್ಶನ ಕೆಲಸವೇನೂ ಕಡಿಮೆ ತರಗತಿಯದಲ್ಲ. ಒಂದು ಪ್ರತಿಭೆ ಹೆಚ್ಚಿನದು, ಇನ್ನೊಂದು ಪ್ರತಿಭೆ ಕೆಳತರಗತಿಯದು ಎಂದು ಭಾವಿಸುವ ಕಾರಣವಿಲ್ಲ. ಕವಿಗಳೂ ಲೇಖಕರೂ ಪಡುವ ರಸಾನು ಭವವನ್ನೆಲ್ಲ ಸಹೃದಯರಾದ ವಿಮರ್ಶಕರೂ ಹೊಂದಿ, ಸಮತೂಕ ಬುದ್ಧಿಯಿಂದ ಕೃತಿಯ ಗುಣದೋಷಗಳ ವಿಮರ್ಶೆಗೆ ತೊಡಗಬೇಕಾಗುತ್ತದೆ. ಇದೇನು ಸಾಮಾನ್ಯ ಕೆಲಸವಲ್ಲ. ಜಾಗೃತ ಬುದ್ಧಿಯ ಪ್ರಬುದ್ಧ ಪ್ರತಿಭೆಯ ಕಾರ್ಯವು ಇದಾಗಿದೆ. ಇಂಥ ಕಾರ್ಯವು ಹೊಸಗನ್ನಡ ಸಾಹಿತ್ಯವನ್ನು ಕುರಿತು, ನಡೆಯಬೇಕಾಗಿದೆ. ಹಿರಿಯ ಸಾಹಿತಿಗಳು ಇದನ್ನು ಕೈಕೊಂಡು, ಇಂದಿನ ಸಾಹಿತ್ಯದ ಮೌಲ್ಯಮಾಪನ ಗೈಯುವ ಆವಶ್ಯಕತೆಯು ಬಹಳವಿದೆ. ಇದರಿಂದ ಮುಂಬರುವ ಸಾಹಿತ್ಯಕ್ಕೊಂದು ಮಾರ್ಗ ದರ್ಶನವೂ ಆದೀತು. ಈಗ ಇದ್ದ ಸಾಹಿತ್ಯ ಕೃತಿಗಳಲ್ಲಿ ಜಳ್ಳು ಯಾವುದು, ನಾಲ್ಕು ಕಾಲ ನಿಲ್ಲುವಂತಹುದು ಯಾವುದು, ಎಂಬುದು ಜನಕ್ಕೂ ತಿಳಿದೀತು. ಓದುಗರ ಅಭಿರುಚಿಯು ಸದಭಿರುಚಿಯಾಗಿ ಮಾರ್ಪಡಲು ನೆರವಾ ದೀತು. ಇದಕ್ಕೆಲ್ಲ ಸಾಧನವಾದ ವಿಮರ್ಶ ಕಾರ್ಯವು ಕನ್ನಡದಲ್ಲಿ ಪುಷ್ಟವಾಗಿ ಬೆಳೆದು ಬರಲಿ.

ಮೊನ್ನೆ ಮೊನ್ನೆ ಕನ್ನಡ ನಾಡಿನ ಮೂರೂ ವಿಶ್ವವಿದ್ಯಾ ನಿಲಯಗಳು ಕನ್ನಡ ಮಾಧ್ಯಮವನ್ನು ಉಚ್ಚಶಿಕ್ಷಣದ ಹಂತಕ್ಕೂ ಒಯ್ಯು, ನಿಲ್ಲಿಸುವ ಕಡೆಗೆ ಒಲಿದಿವೆ. ಅದರಿಂದ ನಮಗೆ ಬೇಕಾದ ವೈಜ್ಞಾನಿಕ ಗ್ರಂಥಗಳ, ಪಠ್ಯ ಪುಸ್ತಕ ಗಳ ನಿರ್ಮಿತಿಯೂ ಜ್ಞಾನ ವಿಜ್ಞಾನ ವಿಷಯದ ಗ್ರಂಥ ರಚನೆಯೂ ವಿಪುಲವಾಗಿ ಆಗಬೇಕಾಗಿವೆ. ಇವೆಲ್ಲವು ಗಳನ್ನು ನಮ್ಮ ವಿದ್ವಾಂಸರು ಕಷ್ಟಪಟ್ಟು, ನಾಡಿಗೂ ನುಡಿಗೂ ಪೂರೈಸಿಕೊಡುವ ಆವಶ್ಯಕತೆಯು ಎಂದಿನಿಂದ ಇಂದು ಹೆಚ್ಚಾಗಿದೆ. ಆ ಕಾರ್ಯದ ಕಡೆಗೂ ಪಾರಿಭಾಷಿಕ ಶಬ್ದಗಳ ಏಕರೂಪ ಬಳಕೆಯ ಕಡೆಗೂ ಗಮನವಿಟ್ಟು, ಯೋಜನಾಬದ್ಧವಾದ ಕಾರ್ಯವು ಕನ್ನಡ ನಾಡಿನಲ್ಲಿ ನಡೆಯಬೇಕು. ಇದಕ್ಕೆ ಸರಕಾರ, ವಿಶ್ವವಿದ್ಯಾನಿಲಯ ಗಳೂ ಸಂಸ್ಥೆಗಳೂ ಸಂಪೂರ್ಣ ಲಕ್ಷ್ಯಗೊಟ್ಟು ದುಡಿಯಲು ಅಣಿಯಾಗಬೇಕು. ಈಗ ಸೌಲಭ್ಯಗಳು ಹೆಚ್ಚಿದಂತೆ ವಿದ್ಯಾವಂತರ ಹೊಣೆಯೂ ಕಾರ್ಯಪಟುತ್ವ, ದೀರ್ಘ ಪರಿಶ್ರಮಗಳ ಆವಶ್ಯಕತೆಯೂ ಇದೆ. ಇವೆಲ್ಲವೂ ಸೇರಿ ದಾಗ ಸಾಹಿತ್ಯ ದೇವಿಯು ಸರ್ವಾಂಗ ಸುಂದರವಾಗಿ ಮನೋಹರವಾಗಿ, ಚಾರುರೂಪಧಾರಿಣಿಯಾಗಿ ನಮ್ಮೆಲ್ಲ ರೆದುರಿಗೆ ಕಂಗೊಳಿಸುವಳು.

ಕನ್ನಡ ನಾಡಿನ ಮಹನೀಯರೆ, ಮಹಿಳೆಯರೆ, ವಾಙ್ಮಯ ಸೇವೆಯ ಅಧಿಕಾರವು ಎಲ್ಲರಿಗೂ ಬೇಕಾ ಗಿರುವ ವಿಷಯಗಳೂ ಸಹ ವಿಪುಲವಾಗಿವೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ, ಅಧ್ಯಾತ್ಮ ಗ್ರಂಥಗಳು, ವೃತ್ತಪತ್ರ, ಪತ್ರಿಕೆಗಳ ಕಾರ್ಯ, ವಿವಿಧ ಪುಸ್ತಕ, ಪತ್ರಿಕಾ ಪ್ರಕಾಶನ ಗಳ ಸಂಸ್ಥೆಗಳ ಸೇವೆ – ಹೀಗೆ ಹಲವಾರು ವಿಷಯಗಳ ಬಗ್ಗೆ ಮನಸ್ಸು ಉಕ್ಕಿ, ವಿಚಾರಗಳು ಹುರಿಗೊಂಡು, ಕೆಲವು ನುಡಿಗಳನ್ನಾದರೂ ಆಡಬೇಕೆಂದು ಮನಸ್ಸು ತವಕಗೊಳ್ಳುತ್ತಿದೆ. ಆದರೂ ಅವೆಲ್ಲಕ್ಕೂ ಇಲ್ಲಿ ಅವಕಾಶ ವಿಲ್ಲ. ಈಗಾಗಲೇ ನನ್ನ ಮಾತುಗಳು ದೀರ್ಘವಾದುವೋ ಏನೋ! ತಮ್ಮೆಲ್ಲರ ಔದಾರ್ಯ, ಸಹೃದಯತೆಗಳನ್ನು ಹೊಂದಿ, ಈ ಅಧ್ಯಕ್ಷ ಸ್ಥಾನದ ಗೌರವವನ್ನು ಸ್ವೀಕರಿ ಸಿರುವೆ. ಈ ಪದವಿಯನ್ನು ನನಗೆ ಇತ್ತುದಕ್ಕಾಗಿ ಮತ್ತೊಮ್ಮೆ ಕೃತಜ್ಞತೆಯ ವಂದನೆಗಳನ್ನು ತಮ್ಮೆ ಲ್ಲರಲ್ಲಿ ಅರ್ಪಿಸಿ, ನನ್ನ ಮಾತನ್ನು ಮುಗಿಸುವೆ.

"ಸಿರಿಗನ್ನಡಂ ಗೆಲ್ಗೆ"

ಭಾಷಾಬಾಂಧವ್ಯ ಗೋಷ್ಠಿ

ಅಧ್ಯಕ್ಷ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ ಭಾಷಣ

ಭಾಷಾಬಾಂಧವ್ಯ ವಿಚಾರ ಚರ್ಚೆಯನ್ನು, ಭಾಷಾಭಿಮಾನಿಯಾದ ಸರಸ್ವತಿಯ ಸ್ತುತಿಯೊಂದಿಗೆ ಪ್ರಾರಂಭಿಸೋಣ.

ಯಸ್ತೇಸ್ತನಃ ಶಶಯೋ ಯೋಮಯೋಭೂಃ
ಏನವಿಶ್ವಾ ಪುಷ್ಯಸಿ ವಾರ್ಯಾಣಿ
ಯೋ ರತ್ನಧಾ ವಸುವಿದಯಃ ಸುದತ್ರಃ
ಸರಸ್ವತೀ ತಮ್ ಇಹ ಧಾತವೇ ಕಃ (ಅಥರ್ವಣ)
ತವ ಶರ್ಮನ್ ಪ್ರಿಯತಮೆ ದಧಾನಾ
ಉಪಸ್ಥೇಯಾಮ ಶರಣಂ ನ ವೃಕ್ಷಂ (ಋಗ್)
ಅಂಬಿತಮೇ ನದೀ ತಮೇ ದೇವಿತಮೇ ಸರಸ್ವತೀ
ಅಪ್ರಶಸ್ತಾ ಇವಸ್ಮಸಿ ಪ್ರಶಸ್ತಿಂ ಅಂಭನಸ್ಕೃಧಿ
(ಋಗ್)

ಎಲ್ಲ ಮಂಗಳಗಳಿಗೂ ಮಾತೃಸ್ಥಾನವಾದ ಅಪರಿಮಿತವಾದ ನಿನ್ನ ಸ್ತನ್ಯಾಮೃತದಿಂದ ನೀನು ಜಗತ್ತನ್ನು ಪೋಷಿಸುತ್ತಿ. ಹೇ ಸರಸ್ವತೀ, ಅನರ್ಘ್ಯರತ್ನಗಳು ಅಮೂಲ್ಯ ಸಂಪತ್ತು ಮತ್ತು ಎಲ್ಲ ಕಲ್ಯಾಣಗಳಿಗೂ ಮೂಲವಾದ ನಿನ್ನ ಸ್ತನ್ಯಪಾನ, ನಮ್ಮನ್ನು ಪುಷ್ಟರನ್ನಾಗಿಯೂ ಬಲಿಷ್ಠರನ್ನಾಗಿಯೂ ಮಾಡಲಿ.

ಹೇ ಪ್ರಿಯತಮಳಾದ ಸರಸ್ವತೀ, ನಮ್ಮನ್ನು ನಿನ್ನ ರಕ್ಷಣೆಯಲ್ಲಿ ತೆಗೆದುಕೊ. ಹೇ ಮಹಾಮಾತೇ, ಹೇ ಮಹಾನದೀರೂಪಳೇ, ನಾವು ಅಪ್ರಶಸ್ತರು ಆಗಿದ್ದೇವೆ. ನಮಗೆ ಒಳ್ಳೆಯ ಪ್ರಶಸ್ತಿಯೂ ಪ್ರಸಿದ್ಧಿಯೂ ಉಂಟಾಗುವಂತೆ ಅನುಗ್ರಹಿಸು.

ಕನ್ನಡ ಸಾಹಿತ್ಯ ಪರಿಷತ್ತಿನವರೂ ಸ್ವಾಗತಸಮಿತಿಯವರೂ ಭಾಷಾಬಾಂಧವ್ಯ ವಿಚಾರಚರ್ಚೆ ಎಂಬ ಅಭಿದಾನದಿಂದ ಈ ಸಲ ಈ ಹೊಸ ಗೋಷ್ಠಿಯನ್ನು ಕರೆದು ನನ್ನನ್ನು ಅಧ್ಯಕ್ಷತೆಗೆ ನಿಯಮಿಸಿದ್ದಾರೆ. ಈ ಗೋಷ್ಠಿಗೆ ಅಧ್ಯಕ್ಷನಾಗಲು ನನ್ನಲ್ಲಿರುವ ಕುಂದು ಕೊರತೆಗಳು ಏನೇ ಇರಲಿ; ಇಂತಹ ಗೋಷ್ಠಿಯನ್ನು ಪರಿಷತ್ತಿನವರು ಕರೆದುದು ಅತ್ಯಂತ ಆವಶ್ಯಕವೂ ಉಪಯುಕ್ತವೂ ಆದ ಕಾರ್ಯವಾಗಿದೆ. ಈ ದೂರದೃಷ್ಟಿಗಾಗಿ ಅವರು ಅಭಿನಂದನಾರ್ಹರು.

ಭಾಷಾ ಬಾಂಧವ್ಯವೆಂಬ ಹೆಸರೇ ಸೂಚಿಸುವಂತೆ ಈ ಗೋಷ್ಠಿಯ ಗುರಿ, ಭಾಷೆಗಳಲ್ಲಿ ಮಧುರಬಾಂಧವ್ಯವುಂಟುಮಾಡುವುದು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಚರ್ಚೆ. ಭಾಷೆಗಳ ಪ್ರಶ್ನೆ, ಇಂದಿನಷ್ಟು ತೊಡಕಾಗಿ ನಮ್ಮ ಮುಂದೆ ಹಿಂದೆ ಯಾವಾಗಲೂ ಬರಲಿಲ್ಲ. ಭಾಷೆ ಎಂಬುದು ದೇವರು ನಮಗೆ ಕರುಣಿಸಿರುವ ಅತ್ಯಮೌಲ್ಯವಾದ ವರಗಳಲ್ಲಿ ಒಂದು. ಅದು ನಮ್ಮ ಕಣ್ಣು ಹೃದಯ ಪ್ರಾಣಗಳಿಗಿಂತ ಹೆಚ್ಚು. ಮನುಷ್ಯನನ್ನು, ಪ್ರಾಣಿಗಳೇ ಮೊದಲಾದ ತಿರ್ಯಕ್ ಜಂತುಗಳಿಂದ ಬೇರ್ಪಡಿಸಿದ ದೈವೀಗುಣಗಳಲ್ಲಿ ಭಾಷೆಯೂ ಒಂದು. ವಾಗ್ದೇವತೆ ಮನುಷ್ಯರಿಗೆ ಮಾತ್ರವೇ ವರವಲ್ಲ; ದೇವತೆಗಳು ಸಹ ಇದನ್ನು ಮಹಾ ಅನರ್ಘ್ಯರತ್ನವನ್ನಾಗಿ ಭಾವಿಸಿದ್ದಾರೆ. ಬ್ರಹ್ಮ ವಿಷ್ಣು ಮಹೇಶ್ವರರನ್ನು ಸುಲಭವಾಗಿ ಒಲಿಸಿ ಬೇಕಾದ ವರಗಳನ್ನು ಪಡೆಯುವ ದೇವತೆಗಳು ಸಹ ವಾಗ್ದೇವತೆಯನ್ನು ತುಂಬ ಶ್ರಮದಿಂದ ವರಿಸಿಕೊಳ್ಳಬೇಕಾಯಿತು.

ದೇವೀಂ ವಾಚಮ ಜನಯನ್ತ ದೇವಾಃ
ತಾಂ ವಿಶ್ವರೂಪಾಃ ಪಶವೋ ವದನ್ತಿ
ಸಾನೋ ಮನ್ದ್ರೇಷು ಮೂರ್ಧಂ ದುಹಾನಾ
ಧೇನುರ್ವಾಗಸ್ಮಾನುಪ ಸುಷ್ಟುತೈತು ||
ಯದ್ವಾಗ್ವದಂತ್ಯವಿಚೇತನಾನಿ
ರಾಷ್ಟ್ರೀ ದೇವಾನಾಂ ನಿಷಸಾದ ಮನ್ದ್ರಾ
ಚತಸ್ರ ಊರ್ಜಂದುದುಹೇಪಯಾಗ್ಂಸಿ
ಕ್ವಸ್ವಿದಸ್ಯಾಃ ಪರಮಂ ಜಗಾಮ ||

"ದೇವತೆಗಳು ವಾಗ್ದೇವತೆಗೆ ಮೊದಲು ಜನ್ಮವಿತ್ತರು. ಆ ದೈವವಾಕ್ಕನ್ನು ದ್ವಿಪಾದಿ ಚತುಷ್ಪಾದಿ ಮೊದಲಾದ ನಾನಾ ರೂಪಧಾರಿಗಳಾದ ಮನುಷ್ಯರೂ ಪಶುಗಳೂ ತಮ್ಮ ತಮ್ಮ ಭಾಷೆಗಳಾಗಿ ಉಪಯೋಗಿಸುತ್ತಾರೆ. ಆ ವಾಗ್ರೂಪವಾದ ಧೇನುವು ನಮಗೆ ಇಷ್ಟವಾದ ಅನ್ನವನ್ನೂ

ಹಾಲನ್ನೂ ಕೊಡಲಿ. ನಮ್ಮ ವೇದಮಂತ್ರಸ್ತೋತ್ರದಿಂದ ಹರ್ಷಿತಳಾಗಿ ನಮ್ಮಲ್ಲಿಗೆ ಬರಲಿ.

ವಾಗ್ದೇವತೆ ಮೂಕಪ್ರಾಣಿಗಳು ಮಾತನಾಡುವಂತೆ ಮಾಡುತ್ತಾಳೆ. ವಾಗ್ದೇವತೆ, ದೇವತೆಗಳಿಗೆಲ್ಲ ಒಡತಿ ಯಾಗಿದ್ದುಕೊಂಡು ಹರ್ಷದಿಂದ ನಮ್ಮ ಕರ್ಮದಲ್ಲಿ ಅಧಿಷ್ಠಾತ್ರಿಯಾಗಿರುತ್ತಾಳೆ. ಆಕೆಯ ಪ್ರಸಾದದಿಂದ ನಾಲ್ಕು ದಿಗ್ದೇವತೆಗಳೂ ಹಾಲು ನೀರನ್ನು ಪಡೆಯುತ್ತಾರೆ. ಇಂತಹ ದೇವಿಯ ಪರಮ ಪದವನ್ನು ಮನುಷ್ಯರು ಎಂದೂ ಪಡೆಯಲಾರರು."

ಇಂತಹ ಅನರ್ಘ್ಯವಾದ ರತ್ನ ಮನುಷ್ಯನಿಗೆ ದೊರೆತಿರ ಬೇಕಾದರೆ ಅದರಿಂದ ನಾವು ಏನನ್ನು ತಾನೇ ಸಾಧಿಸಲು ಅಸಾಧ್ಯ! ಭಾಷೆ ಜಗತ್‌ಶಕ್ತಿಯ ಒಂದು ವಿಶೇಷರೂಪ.

ವೇದ ಉಪನಿಷತ್ತುಗಳ ಕಾಲದಿಂದಲೂ ಭಾರತೀಯರು ಸರ್ವಭಾಷೆಗಳ ಬಾಂಧವ್ಯವನ್ನು ಅಂಗೀಕರಿಸಿಯೇ ಇದ್ದರು. ಭಾರತದಲ್ಲಿನ ಭಾಷೆಗಳು ಮಾತ್ರವೇ ಅಲ್ಲ. ಜಗತ್ತಿನ ಎಲ್ಲ ಭಾಷೆಗಳೂ ಒಂದೇ ಮೂಲದಿಂದ ಜನಿಸಿದು ವೆಂದು ಅವರು ನಂಬಿ ಆದರಂತೆ ವರ್ಣಿಸಿದರು.

ತಸ್ಮಾಗ್ಂ ಸಮುದ್ರಾ ಅಧಿವಿಸ್ತರನ್ತಿ
ತೇನ ಜೀವನ್ತಿ ಪ್ರದಿಶಶ್ಚ ತಸ್ರ

"ಈ ವಾಗ್ದೇವತೆಯನ್ನಾಶ್ರಯಿಸಿರುವ ಸಮುದ್ರ ಸಮಾನಗಳಾದ ಭಾಷೆಗಳು ವಿವಿಧಗಳಾಗಿ ಪ್ರವರ್ತಿಸು ತ್ತಿವೆ. ಅವುಗಳ ವಿವಿಧ ಪ್ರವರ್ತನೆಯಿಂದ ನಾಲ್ಕು ದಿಕ್ಕುಗಳಲ್ಲಿರುವ ಪ್ರಾಣಿಗಳೂ ಜೀವಿಸುತ್ತವೆ."

ಕರ್ಣಾಟಕ ಶಬ್ದಾನುಶಾಸನದ ಕರ್ತನಾದ ಭಟ್ಟಾ ಕಳಂಕದೇವನೂ ಇದೇ ಅಭಿಪ್ರಾಯವನ್ನು ತನ್ನ ಗ್ರಂಥ ದಲ್ಲಿ ಸೂಚಿಸಿದ್ದಾನೆ:

ಸಮುದ್ರ ಘೋಷಾ ಕೃತಿರರ್ಹತಿ ಪ್ರಭೌ
ಯದಾತ್ಮಮುತ್ಕರ್ಷ ಮುಪಾಗತಾ ಭೃಶಂ
ಅಶೇಷ ಭಾಷಾತ್ಮತಯಾ ತ್ವಯಾ ತದಾ
ಕೃತಂ ನಕೇಷಾಂ ಹೃದಿಮಾತರದ್ಭುತಂ

ಅಂದರೆ ಭಾಷೆಯ ವಿವಿಧತೆ ಕೃತಕವೂ ನಿರರ್ಥಕವೂ ಆದುದಲ್ಲ. ಅದಕ್ಕೆ ಸ್ವತಃಸಿದ್ಧವೂ ಅನನ್ಯ ಪರತಂತ್ರವೂ ಆದ ಮೂಲಕಾರಣವಿದೆ. ಜೀವಲೋಕದ ವೈವಿಧ್ಯತೆಯೇ ಬಾಳಿನ ವೈವಿಧ್ಯಕ್ಕೂ ಕಾರಣ.*

ನಮ್ಮ ಸಂಸ್ಕೃತಿಗೆ ಅನುಗುಣವಾಗಿ ನೋಡುವುದಾದರೆ, ಭಾಷೆಗಳೆಲ್ಲದರ ಮೂಲವೂ ಒಂದೇ. ಎಲ್ಲ ಭಾಷೆಗಳೂ ಒಂದೇ ಉಗಮದಿಂದ ಹೊರಟಿವೆ. ನಮ್ಮ ನಂಬಿಕೆ ಯಂತೆ ಜಗತ್ತಿನ ಎಲ್ಲ ಭಾಷೆಗಳ ಮೂಲವೂ ಈಶ್ವರನ ತಾಂಡವನರ್ತನದಲ್ಲಿದೆ.

ನೃತ್ತಾವಸಾನೇ ನಟರಾಜರಾಜೋ
ನನಂದ ಡಕ್ಕಾಂ ನವಪಂಚವಾರಂ
ಉದ್ಧರ್ತುಕಾಮಃ ಸನಕಾದಿ ಸಿದ್ಧಾನ್
ಏತದ್ವಿಮರ್ಶೆ ಶಿವಸೂತ್ರ ಜಾಲಂ

ನಟರಾಜನು ತಾಂಡವ ನರ್ತನವನ್ನು ಮಾಡಿದಾಗ ತನ್ನ ಡಕ್ಕವನ್ನು ಹದಿನಾಲ್ಕು ಬಾರಿ ಅಲ್ಲಾಡಿಸಿದನು. ಜಗತ್ತಿನಲ್ಲಿರುವ ಎಲ್ಲ ಭಾಷೆಗಳ ಶಬ್ದಗಳೂ ಆಗ ಅದರಲ್ಲಿ ಹೊರಟವು. ನಂದಿಕೇಶ್ವರ ಪಾಣಿನಿ ಪತಂಜಲಿ ಇವರೆಲ್ಲ ತಮತಮಗೆ ತೋರಿದಂತೆ ಆ ಹದಿನಾಲ್ಕು ಶಬ್ದಗಳಿಗೆ ಅರ್ಥ ಕಲ್ಪನೆ ಮಾಡಿದರು. ಪಾಣಿನಿಯು ಅದನ್ನು ವ್ಯಾಕರಣ ಸೂತ್ರವಾಗಿ ಅಂಗೀಕರಿಸಿದರೆ ಪತಂಜಲಿಯು ಅದನ್ನೇ ಸೂತ್ರಭಾಷ್ಯವಾಗಿ ಮಾಡಿದನು.

ಸಂಸ್ಕೃತದ ಐವತ್ತೊಂದು ಅಕ್ಷರಗಳು "ಅ"ದಿಂದ ಪ್ರಾರಂಭವಾಗಿ ಕ್ಷ ದಲ್ಲಿ ಕೊನೆಯಾಗುವುದರಿಂದ ಇದಕ್ಕೆ ಅಕ್ಷರ ಎಂದೇ ಹೆಸರು. ಗ್ರೀಕ್ ಅಕ್ಷರ ಮಾಲಿಕೆ ಆಲ್ಫ ಮತ್ತು ಬೀಟದಿಂದ ಪ್ರಾರಂಭವಾಗುತ್ತದೆ. ಆದುದರಿಂದ ಅದಕ್ಕೆ ಆಲ್ಫಬೆಟ್ ಎಂದು ಹೆಸರು. ಅರಾಬಿಕ್‌ನಲ್ಲಿ ಮೊದಲ ಅಕ್ಷರ ಅಲೀಫ್, ಎರಡನೆಯದು ಬೆ ಸೆ ಡೆ ವಗೈರೆ. ಗ್ರೀಕ್‌ನ ಮೊದಲ ಎರಡು ಅಕ್ಷರ ಆಲ್ಫ ಮತ್ತು ಬೀಟ, ಮತ್ತು ಅರಾಬಿಕ್‌ನ ಮೊದಲ ಎರಡು ಅಕ್ಷರ ಅಲೀಫ್ ಮತ್ತು ಬೆ ಸಮನಾಗಿವೆ. ಸಂಸ್ಕೃತದಲ್ಲಿ ಸ್ವರಗಳಿಗೆ ಅಚ್ ಎಂದು ಹೆಸರು; ವ್ಯಂಜನಗಳಿಗೆ ಹಲ್ ಎಂದು ಸಂಜ್ಞೆ. ಅದರಲ್ಲಿ ಮೊದಲು ಅ ಇ ಉಣ್, ಕೊನೆ ಹಲ್ ಅಂದರೆ ಅ ಮತ್ತು ಲ ಎರಡಕ್ಕೂ ಒಟ್ಟಿಗೆ ಅಲ್ ಎನ್ನುತ್ತೇವೆ. ಅದೇ ಗ್ರೀಕನ ಆಲ್ಫ ಮತ್ತು ಅರಾಬಿಕ್‌ನ ಅಲೀಫ್. ಹೀಗೆ ಜಗತ್ತಿನ ಎಲ್ಲ ಅಕ್ಷರ ಮಾಲೆಗಳೂ ಈಶ್ವರನ ಡಕ್ಕ ದಿಂದ ಹೊರಟಿವೆ. ಜಗತ್ತೆಲ್ಲ ಭಾಷಾ ಬಾಂಧವ್ಯದಿಂದ ಬಂಧಿತವಾಗಿದೆ; ಜಗತ್ತನ್ನೇ ಒಂದು ಕುಟುಂಬವಾಗಿ ಭಾವಿಸಬೇಕು ಎಂದು ಹೇಳಿದ ಹಿಂದೂ ಸಂಸ್ಕೃತಿ, "ಅಖಿಲ ಭಾರತವೂ ಒಂದು, ಇದರ ವೈವಿಧ್ಯದಲ್ಲಿ ಐಕ್ಯತೆ ಇದೆ ಎಂದೂ ಹೇಳಿತು.

---

* ಡಾಕ್ಟರ್ ಡಿ. ವಿ. ಜಿ.: ಜೀವನ ಸೌಂದರ್ಯ ಮತ್ತು ವಿಜ್ಞಾ

ಉತ್ತರಂ ಯತ್ ಸಮುದ್ರಸ್ಯಾತ್
ಹಿಮಾದ್ರೇಶ್ಚೈವ ದಕ್ಷಿಣಂ
ವರುಷಂ ತದ್ಭಾರತಂ ನಾಮ
ಭಾರತೀ ಯತ್ರ ಸಂತತಿ

ಹಿಮವತ್ ಪರ್ವತಕ್ಕೂ ದಕ್ಷಿಣ ಸಮುದ್ರಕ್ಕೂ ನಡುವೆ ಇರುವ ಭಾಗ ಭಾರತ. ಇಲ್ಲಿರುವವರೆಲ್ಲ ಭಾರತೀಯರು.

ಭಾರತದಲ್ಲಿ ವೈವಿಧ್ಯತೆಗೆ ಕಡಮೆ ಇಲ್ಲ. ಅವು ಹೇಗೆ ಈ ದೇಶದ ಶಕ್ತಿಯೋ ಆಕರ್ಷಣೆಯೋ ಹಾಗೆಯೇ ದೌರ್ಬಲ್ಯವೂ ಆಗಬಹುದು. ಆದರೆ ಭಾರತ ಸಂಸ್ಕೃತಿ, ಈ ದೇಶವು ಛಿದ್ರವಾಗಲು ಯಾವಾಗಲೂ ಅವಕಾಶ ಕೊಡಲಿಲ್ಲ. ಕೆಲವು ಕಾಲ ರಾಜಕೀಯವಾಗಿ ಇದು ಛಿದ್ರವಾದರೂ ಸಾಂಸ್ಕೃತಿಕವಾಗಿ ಇದು ತನ್ನ ಐಕ್ಯತೆಯನ್ನು ಉಳಿಸಿಕೊಂಡಿತ್ತು. ಹಾಗೆಯೇ ಈ ದೇಶದಲ್ಲಿ ಭಾಷೆಯ ವೈವಿಧ್ಯಕ್ಕೂ ಅನೇಕತೆಗೂ ಕೊರತೆ ಇಲ್ಲ. ಸಂವಿಧಾನವು ೧೪-೧೫ ಭಾಷೆಗಳನ್ನು ಒಪ್ಪಿಕೊಂಡಿದ್ದರೂ ಭಾರತದ ಭಾಷಾವಾರು ತಖ್ತೆಯಲ್ಲಿ ಭಾರತದಲ್ಲಿ ೧೭೯ ಸಜೀವ ಭಾಷೆಗಳೂ ೫೪೪ ಉಪಭಾಷೆಗಳೂ ಇರುವುದು ಉಲ್ಲೇಖವಾಗಿದೆ.

ಪರಮಾತ್ಮ, ಮಾನವ ಜನಾಂಗಕ್ಕೆ ಕರುಣಿಸಿದ ವರಗಳಲ್ಲಿ ಭಾಷೆಯೂ ಅತಿ ಶ್ರೇಷ್ಠವಾದುದು. ಭಾಷೆ ಇರುವುದು ಸಮಾಜ ಜೀವನವನ್ನು ಸುಗಮವಾಗಿ ನಡೆಸುವುದಕ್ಕಾಗಿ. ಸಮಾಜ ಜೀವನವೆಂಬ ರಥದ ಗಾಲಿಗೆ ಭಾಷೆಯೇ ಎಣ್ಣೆ.* ಭಾಷೆ ಮನಸ್ಸಿನ ಬಾಹ್ಯಮೂರ್ತಿ, ಮನಸ್ಸಿನ ವಾಹನ. ಮನಸ್ಸೇ ಮನುಷ್ಯ. ಮನಸ್ಸಿಲ್ಲದೆ ಮನುಷ್ಯ ವ್ಯಾಪಾರವಿಲ್ಲ. ಮಾತು ಎಂಬುದು ಒಬ್ಬ ಮನುಷ್ಯನ ಕಂಠದಿಂದ ಹೊರಟು ಇನ್ನೊಬ್ಬನ ಕಿವಿಯನ್ನು ಹೊಗಬಲ್ಲ ವಿಶೇಷಗಳ ಅಥವ ಶಬ್ದಗಳ ಒಂದು ನಿಷ್ಕರ್ಷೆಯಾದ ರೂಪ. (ನನು ಶ್ರೋತ್ರ ಗ್ರಾಹ್ಯೋರ್ಥೋಹಿ ಶಬ್ದಃ) ಒಂದು ಸಮಗ್ರ ಧ್ವನಿಯ ಅಥವ ಶಬ್ದದ ಸೃಷ್ಟಿ ರೂಪವೇ ಅಕ್ಷರ. ಈ ಅಕ್ಷರಗಳು ಕಣ್ಣಿಗೆ ಗೋಚರಿಸುವಂತೆ ಮಾಡುವ ಸಂಕೇತ ರೇಖೆಗಳೇ ಲಿಪಿ. ಈ ಅಕ್ಷರಗಳ ಸಂಯೋಜನೆಯಿಂದ ನಮಗೆ ತಿಳಿದಿರುವ ಎಲ್ಲ ವಸ್ತು ವ್ಯಾಪಾರಗಳಿಗೂ ಆ ಗೊತ್ತಾದ ಹೆಸರುಗಳು ಏರ್ಪಟ್ಟಿವೆ. ಈ ಹೆಸರುಗಳೇ ಅಥವಾ ಅಕ್ಷರಾತ್ಮಕ ಸಂಜ್ಞೆಗಳೇ ಮಾತುಗಳು. ಒಂದು ದೇಶದ ಅಥವಾ ಒಂದು ಗುಂಪಿನ ಜನರು ತಮ್ಮ ಇಂದ್ರಿಯಗಳಿಗೆ ತಿಳಿದು ಬಂದಿರುವ ನಾನಾ ಪ್ರಾಣಿಗಳಿಗೂ ನಾನಾ ಪದಾರ್ಥಗಳಿಗೂ ಅವುಗಳ ನಾನಾ ವರ್ತನೆ ಕಾರ್ಯಗಳಿಗೂ, ತಮ್ಮ ನಾನಾ ಅವಸ್ಥೆಗಳಿಗೂ ಅನುಭವಗಳಿಗೂ ಒಂದೊಂದಕ್ಕೆ ಒಂದು ಸಂಕೇತ ಅಥವಾ ಹೆಸರನ್ನು ಗೊತ್ತುಮಾಡಿರುವರಷ್ಟೆ. ಇಂತಹ ಸಂಕೇತ ಅಥವಾ ಮಾತುಗಳ ಸಮೂಹವೇ ಅವರ ಭಾಷೆ. (ಭಾಷಾಃ ಸಂಕೇತವಶಾತ್ ಪದಾರ್ಥ ಗೋಚರ ಪ್ರವೃತ್ತಿ ನಿವೃತ್ತಿ ರೂಪ ವ್ಯವಹಾರೌಪಯಿಕ ವಾಗ್ವಿಶೇಷಾಃ ಭಟ್ಟಾಕಲಂಕ.)-

ಹೀಗೆ ನಮಗೆ ಭಾಷೆ ಎಂಬುದು ನೀರು ಗಾಳಿ ಅನ್ನ ಬಟ್ಟೆ ಮನೆ ಮಠಗಳಂತೆ ಕೆಲವು ಸಂದರ್ಭಗಳಲ್ಲಿ ಅವುಗಳಿಗಿಂತ ಹೆಚ್ಚಾಗಿ ಉಪಯೋಗವಾದ ಮತ್ತು ಅನಿವಾರ್ಯವಾದ ವಸ್ತು. ಆದುದರಿಂದ ನಾವು ನಮ್ಮ ಭಾಷೆಯನ್ನು ಪ್ರೀತಿಸುವುದೇನೂ ಆಶ್ಚರ್ಯವಲ್ಲ. ಭಾಷೆ ನಮಗೆ ನಮ್ಮ ದೇಹದ ಅವಯವಗಳಂತೆ ಪ್ರಿಯವಾದುದರಿಂದ ಅದು ಸರ್ವವಿಧದಲ್ಲಿಯೂ ಪುಷ್ಟವಾಗಿರಬೇಕೆಂದು ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಈಗ ಹತ್ತು ವರುಷಗಳ ಹಿಂದೆ ಭಾಷಾವಾರು ಪ್ರಾಂತರಚನೆ ಮಾಡುವುದರಲ್ಲಿ ಈ ಉದ್ದೇಶವೂ ಇತ್ತು.

ಹೀಗೆ ಭಾಷೆಗಳನ್ನು ಬೆಳೆಸಿಕೊಳ್ಳುವ ಅವಸರದಲ್ಲಿ ನಾವು ಭಾರತದ ಐಕ್ಯತೆಯನ್ನು ಮರೆಯದಿರಬೇಕು.† ಸಂವಿಧಾನದಲ್ಲಿ ರೂಪಿತವಾಗಿರುವ ನಮ್ಮ ಹದಿನಾಲ್ಕು ಹದಿನೈದು ಭಾಷೆಗಳೂ ಭಾರತದ ವಿವಿಧ ಅಂಗಗಳು. ಒಂದು ಅಂಗ ಮತ್ತೊಂದು ಅಂಗವನ್ನು ಊನಮಾಡುವುದೇ ಆಗಲಿ ಅಥವಾ ಎಲ್ಲ ಅಂಗಗಳೂ ಸೇರಿ ದೇಹವನ್ನೇ ಊನಮಾಡುವುದಾಗಲೀ ಆತ್ಮಘಾತಕವಾಗುವುದು. ಭಾಷಾವಾರು ಪ್ರಾಂತರಚನೆಯನ್ನು ಮಾಡಿದುದು ಆಡಳಿತ ಸುಗಮವಾಗಲಿ, ಪ್ರತಿಯೊಂದು ಪ್ರಾಂತಭಾಷೆಯೂ ಬೆಳೆಯಲಿ ಮತ್ತು ಪ್ರತಿಪ್ರಾಂತವೂ ಭಾರತದ ಮೇಲ್ಮೆಗಾಗಿ ತನ್ನ ಕಾಣಿಕೆಯನ್ನು ಸಲ್ಲಿಸಲಿ ಎಂಬ ಉದ್ದೇಶದಿಂದ. ಇದರಿಂದ ಭಾರತದ ಐಕ್ಯಕ್ಕೆ ಧಕ್ಕೆಯುಂಟಾಗಿರಬಹುದೆ?

---

* ಡಾ|| ಡಿ. ವಿ. ಗುಂಡಪ್ಪ: ಭಾಷೆಯ ಸ್ವರೂಪ ಮತ್ತು ಸ್ವಭಾವ

†ಒಬ್ಬ ತಮಿಳು ಕವಿ, ಭಾರತದ ವಿವಿಧ ಭಾಷೆಗಳ ಹೊಡೆತದಲ್ಲಿ ನಾವು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವೆವೆ? ಎಂಬುದನ್ನು ಚಿಂತಿಸಿ ಹೀಗೆ ವಿನೋದವಾಗಿ ಹಾಡಿದ್ದಾನೆ:

ಶುತ್ತುಕ್ಕಡಂಗಾದಡಿ ಎನ್
ಸುಂದರತ್ತಿನ್ ಪೇರುರವಂ
ನನ್ನ ಪ್ರಿಯೆಯ ಸೌಂದರ್ಯ ಅತಿವಿಸ್ತಾರ
ನನ್ನೆರಡು ಕೈಗಳಲಿ ಅಲಿಂಗಿಸಲು ದುಸ್ತರ

ಎಂಬ ಭಯ ಅನೇಕರಿಗೆ ತೋರಿದೆ. ಅಖಿಲಭಾರತ ಸಂಸ್ಕೃತಿಯ ಮೂಲಪ್ರೇರಣೆಯೇ "ಅವಿಭಕ್ತಂ ವಿಭಕ್ತೇಷು" ವಿವಿಧತೆಯಲ್ಲಿ ಏಕತೆ. ಆದುದರಿಂದ ಅಂತಹ ವಿಚ್ಛೇದಕ ಪ್ರವೃತ್ತಿಗಳನ್ನು ಪ್ರತಿಪ್ರಾಂತದ ವಿವೇಕಿಗಳೂ ಕಡೆಗಟ್ಟ ಬೇಕು.

ಭಾರತೀಯವಾದುದೆಲ್ಲ ಭಾರತೀಯರೆಲ್ಲರಿಗೂ ಪ್ರಿಯ. ಭಾರತ ವಿರಾಟ್ ಪುರುಷನಲ್ಲಿರುವ ಯಾವ ಅಂಶವೂ ಭಾರತೀಯರಿಗೆ ಅಪ್ರಿಯವಲ್ಲ. ವಿವಿಧ ಭಾಷೆ, ವಿವಿಧ ಮತ, ಆಚಾರ ವಿಚಾರ ದೇಶಭಾಗ ಎಲ್ಲವೂ ಎಲ್ಲ ಭಾರತೀಯನಿಗೂ ಸ್ಪೃಹಣೀಯ. ಪ್ರಾಂತೀಕರಣವಾದ ಮಾತ್ರಕ್ಕೆ ತನ್ನ ಪ್ರಾಂತ ತನ್ನ ಭಾಷೆ ಹೆಚ್ಚೆಂಬ ಮೂಢ ನಂಬಿಕೆ ಯಾರಿಗೂ ಬೇಡ. ಭಾರತದ ದೀರ್ಘಕಾಲದ ಇತಿಹಾಸದಲ್ಲಿ ಭಾಷೆ ಭಾಷೆಗಳಿಗೆ ಹೊಡೆದಾಟವಾದ ಸಂಗತಿ ನಮಗೆ ತಿಳಿದಿಲ್ಲ. ಮಾತೃಭಾಷೆಯ ವಿಷಯದಲ್ಲಿ ಸದಭಿಮಾನ ಎಲ್ಲರಿಗೂ ಸ್ವಾಭಾವಿಕ ಮತ್ತು ಆವಶ್ಯಕ. ಆದರೆ ಪ್ರಾಂತೀಕರಣವಾದ ಮೇಲೆ, ಒಂದು ಪ್ರಾಂತದವರು ಮತ್ತೊಂದು ಪ್ರಾಂತದವರೊಡನೆ "ಅವರಿಗೂ ನಮಗೆ ಸಂಬಂಧವಿಲ್ಲ. ಅವರು ನಮ್ಮ ವಿರೋಧಿಗಳು" ಎಂಬಂತೆ ಕೂಡ ಆಚರಿಸುತ್ತಿರುವ ಉದಾಹರಣೆಗಳು ನಮ್ಮ ಕಣ್ಣುಮುಂದೆ ಬಂದಿವೆ. ಇದರ ವಿಕೃತರೂಪ ಎಲ್ಲಕ್ಕಿಂತ ಹೆಚ್ಚಾಗಿ ಮೊದಲು ಅಸ್ಸಾಂನಲ್ಲಿ; ಬೇರೆಬೇರೆ ಭಾಷೆಗಳ ಜನರ ಮೇಲೆ ತೋರಿಸಿದ ಹಿಂಸೆ ಗುಂಡಾಗಿರಿ ಪಟಿಂಗತನ ಇವುಗಳಲ್ಲಿ ವ್ಯಕ್ತವಾಯಿತು. ಯಾವ ಭಾಷೆಯವರಿಗೂ ತಮ್ಮ ಭಾಷೆಯ ವಿಷಯದಲ್ಲಿ ಅತಿರೇಕದ ಅಭಿಮಾನ ಸಲ್ಲ. ಭಾಷೆಯನ್ನು ರಾಜಕೀಯ ಪ್ರಶ್ನೆಯನ್ನಾಗಿ ಮಾಡಿಕೊಂಡಾಗ ಈ ದುರಾಗ್ರಹ ಸಂಭವಿಸುತ್ತದೆ. ಈಚಿನ ದಿನಗಳಲ್ಲಿ ತಮ್ಮ ಭಾಷೆಯ ಅತಿರೇಕಗಳನ್ನು ನಾವು ಕಾಣುತ್ತಿದ್ದೇವೆ. ಕೆಲವು ಪ್ರಾಂತಗಳಲ್ಲಿ ಬೇರೆ ಪ್ರಾಂತಗಳವರಿಗೆ ಸರ್ಕಾರಿ ಕೆಲಸಗಳನ್ನೂ ಸರ್ಕಾರಿ ಕಂಟ್ರಾಕ್ಟುಗಳನ್ನೂ ಕೊಡುವುದಿಲ್ಲ. ಕೊಟ್ಟರೂ ತಮ್ಮವರು ಸಿಕ್ಕಿದ ಕೂಡಲೇ ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಿಬಿಡುತ್ತಾರೆ. ಕೆಲವು ಪ್ರಾಂತಗಳಲ್ಲಿ ಬೇರೆ ಪ್ರಾಂತದವರು ಮನೆ ಮಠ ಆಸ್ತಿ ವ್ಯಾಪಾರಮಾಡಲು ಅವಕಾಶ ಕೊಡುತ್ತಿಲ್ಲ. ಇನ್ನು ಕೆಲವು ಪ್ರಾಂತಗಳಲ್ಲಿ ಭಾಷಾ ದುರಭಿಮಾನ ಎಷ್ಟರ ಮಟ್ಟಿಗೆ ಹೋಗಿದೆ ಎಂದರೆ ಆ ಭಾಷೆಯ ಮಕ್ಕಳಿಗೆ ಸಹ ತಿಳಿಯದಂತಹ ಎರಡನೆಯ ಮೂರನೆಯ ಶತಮಾನದ ಗೆದ್ದಲು ಹತ್ತಿದ ಬಳಕೆಯಲ್ಲಿಲ್ಲದ ಹಳೆಯ ಭಾಷೆಯಲ್ಲಿ ಸರ್ಕಾರಿ ಕಛೇರಿಗಳು, ನ್ಯಾಯಾಸ್ಥಾನಗಳು, ರೈಲ್ವೆ ನಿಲ್ದಾಣ, ವೈದ್ಯಶಾಲೆ, ಶಾಲಾಕಾಲೇಜು, ದನಗಳ ವೈದ್ಯಶಾಲೆ, ಫಲಹಾರ ಮಂದಿರ, ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳು ಇವುಗಳ ಹೆಸರಿನ ಫಲಕಗಳನ್ನೆಲ್ಲ ಬದಲಾಯಿಸಿ ಹಾಕಿರುತ್ತಾರೆ. ಪರಪ್ರಾಂತದವರು, ಕೊನೆಗೆ ಪ್ರವಾಸಿಗಳು ಯಾತ್ರಿಕರು ಯಾರಿಗೂ ಆ ಫಲಕಗಳಾಗಲಿ ಸಾರ್ವಜನಿಕ ಸ್ಥಳ ಯಾವುದೆಂಬುದಾಗಲಿ ತಿಳಿಯುವುದಿಲ್ಲ. ಒಟ್ಟಿನಲ್ಲಿ ಪ್ರಾಂತೀಕರಣದ ಸಂಕುಚಿತಮನೋಭಾವ ಎಲ್ಲ ಪ್ರಾಂತಗಳಲ್ಲಿಯೂ ಎದ್ದು ಕಾಣುತ್ತಿದೆ. ಕೆಲವು ಪ್ರಾಂತ್ಯಗಳಲ್ಲಿ ವಿವೇಕಿಗಳಾಗಿರುವ ಹಿರಿಯ ರಾಜಕಾರಣಿಗಳು ಇಂತಹ ವಿಚ್ಛೇದಕ ಪ್ರವೃತ್ತಿಗಳನ್ನು ವಿರೋಧಿಸುತ್ತಿರುವುದು ಶುಭಸೂಚನೆ. ಯಾಕೆಂದರೆ ಬೇರೆ ಬೇರೆ ಭಾಷೆಗಳನ್ನಾಡುತ್ತಿರುವ ಜನತೆಯಲ್ಲಿ ಸೌಹಾರ್ದ ಸ್ನೇಹವಿಲ್ಲದಿದ್ದಲ್ಲಿ ಅವರ ಭಾಷೆಯನ್ನು ಪ್ರೀತಿಸುವುದು ಶಕ್ಯವಲ್ಲ.

ಭಾರತದ ಐಕ್ಯತೆಯ ಅಂಶಗಳನ್ನು ಪ್ರಸ್ತಾಪಿಸಿ ಎತ್ತಿತೋರಿಸಿ ಪ್ರಚರಿಸಿ ಭಾರತೀಯ ಹಿತದೃಷ್ಟಿಯ ಶ್ರುತಿಯಲ್ಲಿ ಪ್ರತಿ ಭಾರತೀಯನೂ ಬಾಳಬೇಕು. ಎಲ್ಲರೂ ಭಾರತವನ್ನೆಲ್ಲ ಒಂದು ಸಲ ಎರಡು ಸಲ ನಾಲ್ಕು ಸಲ ತಿರುಗಿ ವೈವಿಧ್ಯಪೂರ್ಣವಾದ ಈ ರಾಷ್ಟ್ರದ ಮೂಲಭೂತ ಐಕ್ಯತೆಯನ್ನರಿತು ತನ್ನ ಪ್ರಾಂತ ಸಂಸ್ಕೃತಿಯನ್ನು ಅದಕ್ಕೆ ಅಳವಡಿಸಿಕೊಂಡು ಸಮರಸ ಬಾಳನ್ನು ಬಾಳಬೇಕು. ಭಾರತದ ಎಲ್ಲ ಭಾಗಗಳಲ್ಲಿಯೂ—ಯಾಕೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ—ಹೋಗಿ ನೆಲೆಸಿರುವ ವಿವಿಧ ಭಾರತೀಯರು ತಮ್ಮ ಭಾಷೆ ಸಂಸ್ಕೃತಿಗಳ ಅಭಿಮಾನವನ್ನು ಮರೆಯದಿದ್ದರೂ ಇತರ ಭಾಷೆಗಳು ಮತ್ತು ಸಂಸ್ಕೃತಿಗಳವರೊಂದಿಗೆ ಸಮರಸದಿಂದ ಬಾಳಬೇಕು. ಬೇರೆ ಭಾಷಾಬಂಧುಗಳು ನಮ್ಮಲ್ಲಿ ಬಂದು ನೆಲೆಸಿದರೂ ಅವರೂ ಇದೇ ಮಾರ್ಗವನ್ನು ಅನುಸರಿಸಬೇಕು.

ಮುಖ್ಯವಾಗಿ ಒಂದು ಭಾಷೆಯನ್ನು ಮಾತನಾಡುವವರಿಗೆ ಮತ್ತೊಂದು ಭಾಷೆಯಲ್ಲಿ ತಿರಸ್ಕಾರ ಅಥವಾ ಔದಾಸೀನ್ಯ ವುಂಟಾಗುವುದು ಆ ಭಾಷೆ ನಮಗೆ ತಿಳಿಯದೆ ಇರುವುದರಿಂದ ಮಾತ್ರ. ಉದಾಹರಣೆಗೆ ನಮ್ಮ ತಲೆಮಾರಿನವರು ಬಲಾತ್ಕಾರವಾಗಿಯಾದರೂ ಇಂಗ್ಲಿಷನ್ನು ಕಲಿತುದರಿಂದ ನಮ್ಮಲ್ಲಿ ಅನೇಕರಿಗೆ ಇಂಗ್ಲಿಷಿನ ವಿಷಯದಲ್ಲಿ ತನ್ನ ಮಾತೃಭಾಷೆಯಲ್ಲಿರುವುದಕ್ಕಿಂತ ಒಂದೊಂದು ವೇಳೆ ಅತಿರೇಕದ ಅಭಿಮಾನವುಂಟಾಗುತ್ತದೆ. English Ever, Hindi Never ಎಂಬ ಮತ್ತಾವ ನಾಗರಿಕ ರಾಷ್ಟ್ರದಲ್ಲಿಯೂ ಕಾಣದ ಸ್ವಾಭಿಮಾನರಹಿತ ಪರಭಾಷಾ ದಾಸ್ಯಮನೋಭಾವ, ಭಾಷೆಗಳ ವಿಷಯದಲ್ಲಿ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಅರ್ಹತೆಯೂ ಯೋಗ್ಯತೆಯೂ ಉಳ್ಳ

ಪ್ರಾಜ್ಞರಲ್ಲಿಯೂ ಕಾಣುತ್ತಿದೆ. ದೇಶದ ಇಂದಿನ ಪರಿಸ್ಥಿತಿಯನ್ನರಿಯಲು ಅಂಥವರು ಅಶಕ್ತರಾಗಿದ್ದಾರೆ. ನಮ್ಮ ಮಾತೃಭಾಷೆ ಮತ್ತು ನೆರೆಹೊರೆಯ ಸೋದರಭಾಷೆಗಳನ್ನು ನಾವು ಅಭ್ಯಾಸಮಾಡಿದರೆ, ನಮಗೆ ಅವುಗಳಲ್ಲಿ ಪ್ರೀತಿಯೂ ಅಭಿಮಾನವೂ ಉಂಟಾಗುವುದು. "ಸಮವಾಯ ಏವ ಸಾಧುಃ" (ಎಲ್ಲವನ್ನೂ ಸಮರಸಗೊಳಿಸಿಕೊಳ್ಳುವುದು ಉತ್ತಮ) ಭಾರತದ ಇಂದಿನ ಸ್ಥಿತಿಯಲ್ಲಿ ನಾವು ಪ್ರಯತ್ನಪೂರ್ವಕವಾಗಿ ಈ ಕಾರ್ಯವನ್ನು ಮಾಡಬೇಕು.

ಇಂಗ್ಲಿಷನ್ನು ಬಿಟ್ಟರೆ ನಾವು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನರಿಯದೆ ಕೂಪಕೂರ್ಮಗಳಾಗುತ್ತೇವೆಂದು ಇಂಗ್ಲಿಷ್ ಮಾನಸಪುತ್ರರು ನಮ್ಮನ್ನು ಎಚ್ಚರಿಸುತ್ತಿದ್ದಾರೆ. ಹಾಗೆಯೇ ನಾವು ನಮ್ಮ ದೇಶಭಾಷೆಗಳ ಸೋದರ ಭಾಷೆಗಳ ಪರಿಚಯವನ್ನು ಮಾಡಿಕೊಳ್ಳದಿದ್ದರೆ, ಅವೆಲ್ಲ ಭಾರತಾಂಬೆಯ ಬೇರೆ ಬೇರೆ ಅಂಗಗಳೆಂದೂ, ಅಂಗಗಳಲ್ಲಿ ಸಹಮತವಿಲ್ಲದಿದ್ದಲ್ಲಿ ಭಾರತವು ಐಕ್ಯದಿಂದ ಬಾಳದೆ ಛಿದ್ರಛಿದ್ರವಾಗುವುದೆಂದೂ ನಾವು ಅರಿಯದೆ ಹೋದಲ್ಲಿ ನಮ್ಮ ಆತ್ಮಘಾತವಾದೀತು. ಆತ್ಮಾಭಿಮಾನವುಳ್ಳ ಯಾವ ಪ್ರಾಂತೀಯರೇ ಆಗಲಿ ನೆರೆಯ ಭಾಷೆಯನ್ನು ಭಾಷಾಬಂಧುಗಳನ್ನು ತೆಗಳುವುದು ಅವರಿಗೆ ಭೂಷಣವಲ್ಲ. ಈ ವಿಷಯದಲ್ಲಿ ರಾಜಕಾರಣಿಗಳು ತುಂಬ ಸಂಯಮದಿಂದ ನಡೆಯಬೇಕು. ಮಾರ್ಗದರ್ಶನ ಮಾಡಲು ಯೋಗ್ಯತೆಯುಳ್ಳ ಅಥವಾ ಅಂತಹ ಸ್ಥಾನವನ್ನು ಆಕ್ರಮಿಸಿರುವ ನಾಯಕರು, ತಮ್ಮ ಹಿಂಬಾಲಕರನ್ನು ತೃಪ್ತಿಪಡಿಸುವ ಆತುರದಲ್ಲಿ ಅಖಿಲಭಾರತ ಐಕ್ಯತೆಯನ್ನೂ ಈ ಭಾಷಾ ಬಾಂಧವ್ಯವನ್ನೂ ಮರೆಯಬಾರದು. ಒಂದು ಭಾಷೆಯ ಜನತೆ ಅಥವಾ ಅವರಲ್ಲಿ ಘಟಂಗರು ಮತ್ತೊಂದು ಭಾಷೆಯ ಜನತೆಯ ಮೇಲೆ ಗೂಂಡಾಗಿರಿ ಸಹ ನಡೆಸುತ್ತಿರುವ ವಿಕಟ ದೃಶ್ಯವನ್ನು ನೋಡಿಕೊಂಡೂ ಸರ್ಕಾರದವರೂ ಮುಖಂಡರೂ ಅವರನ್ನು ಹತೋಟಿಗೆ ತರದೆ ಅಡ್ಡಗೋಡೆಯ ಮೇಲಿನ ದೀಪದಂತಹ ಮಾತುಗಳನ್ನು ಆಡುತ್ತ ಅವರ ಪುಂಡಾಟಿಕೆಯನ್ನು ಪ್ರೋತ್ಸಾಹಿಸುವುದು ನಿಜವಾಗಿ ಖಂಡನಾರ್ಹವಾಗಿದೆ.

ಈ ವಿಷಯದಲ್ಲಿ ಸಹ ಕನ್ನಡಿಗರ ನಡತೆ ಅತ್ಯಂತ ಗಂಭೀರವೂ ಅಖಿಲಭಾರತ ಪ್ರೇಮಪೂರಿತವೂ ಆಗಿದೆಯೆಂದು ನಾವು ಅಭಿಮಾನದಿಂದಲೇ ಹೇಳಿಕೊಳ್ಳಬಹುದಾಗಿದೆ. ಈಚಿನ ದಿನಗಳಲ್ಲಿ ನಮ್ಮ ನೆರೆಯ ಮಹಾರಾಷ್ಟ್ರೀಯರು ಶಿವಸೇನೆ ಎಂಬ ಹೆಸರಿನಲ್ಲಿ ಕನ್ನಡ ಮಾತನಾಡುವ ಜನರಮೇಲೆ ಪುಂಡಾಟಿಕೆ ಗೂಂಡಾಗಿರಿ ಲೂಟಿ ಇವುಗಳನ್ನು ಮಾಡುತ್ತಿದ್ದಾರೆ. ಅವರು ಶಿವಸೇನೆ ಎಂದು ಯಾಕೆ ಹೆಸರಿಟ್ಟುಕೊಂಡಿದ್ದಾರೆಯೋ ತಿಳಿಯದು. ಅವರು ನಡೆಸುತ್ತಿರುವ ಪಟಿಂಗತನ ಶಿವನಿಗೂ ಗೌರವ ತರುವುದಲ್ಲ. ಅವರ ನಾಯಕನಾದ ಶಿವಾಜಿಗೂ ಗೌರವ ತರುವುದಲ್ಲ. ಮಹಾರಾಷ್ಟ್ರದಲ್ಲಿ ಕನ್ನಡಿಗರು ಇರಬಾರದೆಂಬ ಅವರ ಅಭಿಪ್ರಾಯ ಮತ್ತು ಅದನ್ನು ಸಾಧಿಸಲು ಅವರು ಅನುಸರಿಸುತ್ತಿರುವ ಮಾರ್ಗ, ಕೇವಲ ಅನಾಗರಿಕ ಪ್ರವೃತ್ತಿ. ಇದು ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ವ್ಯಕ್ತಿಸ್ವಾತಂತ್ರ್ಯ ಅನಾದಿಕಾಲದಿಂದ ಬಂದ ಭಾರತದ ಸಂಸ್ಕೃತಿ ಮತ್ತು ಸೌಜನ್ಯಕ್ಕೆ, ದೊಡ್ಡ ಕಳಂಕ. ಬೊಂಬಾಯಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸಹ ನಡೆದಿತ್ತು. ಭಾರತವು ಛಿದ್ರವಾಗುವ ಮೂಲ ಈ ಸಮಾಜಘಾತಕ ಪ್ರವೃತ್ತಿಯಲ್ಲಿ ಅಡಗಿದೆ. ಅಖಿಲ ಭಾರತದ ಹಿರಿಯರೂ ಕೇಂದ್ರ ಸರ್ಕಾರವೂ ಶಿವಸೇನೆ ಎಂಬ ಹೆಸರಿನ ಈ ದಸ್ಯುಗಳನ್ನು ಅಡಗಿಸಬೇಕು. ಮಹಾರಾಷ್ಟ್ರ ಸರ್ಕಾರವು ಇವರ ದೇಶದ್ರೋಹ ಚಟುವಟಿಕೆಯನ್ನು ನೋಡುತ್ತ ಉದ್ದೇಶಪೂರ್ವಕವಾಗಿ ನಿರುಪಾಯವಾಗಿ ಕುಳಿತಿರುವುದೋ ಎಂಬಂತೆ ಹೊರಗಿನವರಿಗೆ ಭಾಸವಾಗುತ್ತಿದೆ. ಶಿವಸೇನೆಗೆ ವಿರೋಧವಾಗಿ ಮಹಾರಾಷ್ಟ್ರದ ಯಾವ ವಿವೇಕಿಯೂ ಚಕಾರವನ್ನೂ ಸಹ ಎತ್ತಿದಂತೆ ತೋರುವುದಿಲ್ಲ. ನಾವು ಬಹಳ ಕಷ್ಟಕ್ಕೆ ಸಿಕ್ಕಿದ್ದೇವೆ. ನಮ್ಮ ಸಹನೆಯ ದುರುಪಯೋಗವಾಗುತ್ತಿದೆ. ಪ್ರತೀಕಾರ ಭಾರತಕ್ಕೇ ವಿಘಾತಕ. ಮಧ್ಯಮಾರ್ಗವನ್ನು ಕಂಡುಹಿಡಿಯುವುದರಲ್ಲಿಯೇ ಅಡಗಿದೆ.

ಸಭ್ಯರಾಗಿ ಜೀವನ ನಡೆಸುತ್ತಿರುವ ಪರಪ್ರಾಂತೀಯರನ್ನು ಓಡಿಸುವುದು, ಅವರ ಆಸ್ತಿಗಳನ್ನು ಕಿತ್ತುಕೊಳ್ಳುವುದು, ಅವರ ಮನೆಗಳನ್ನೂ, ಕಾರ್ಖಾನೆಗಳನ್ನೂ ಸುಡುವುದು, ಅವರನ್ನು ಹೊಡೆಯುವುದು, ಲೂಟಿ, ಈ ಅನಾಗರಿಕ ಪೈಶಾಚಿಕ ಪ್ರವೃತ್ತಿ ಯಾರೊಬ್ಬರಿಗೆ ಮಾತ್ರವೇ ಮೀಸಲಲ್ಲ. ಪ್ರತಿಯೊಂದು ಪ್ರಾಂತದವರೂ ಆ ಬೆಂಕಿಯೊಡನೆ ಸರಸವಾಡಲು ಸಾಧ್ಯ. ಪ್ರತಿಪ್ರಾಂತದಲ್ಲಿಯೂ ಬೇರೆ ಪ್ರಾಂತದವರು ಹೋಗಿ ನೆಲೆಸಿ ನೂರಾರು ವರುಷಗಳಿಂದ ಸುಖವಾಗಿದ್ದಾರೆ. ಇತರ ಪ್ರಾಂತಗಳಲ್ಲಿಯೂ ಜೀವಿಸುತ್ತಿದ್ದಾರೆ; ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ; ವ್ಯಾಪಾರ ಮಾಡುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ದುಷ್ಟ ಪ್ರವೃತ್ತಿಯನ್ನು ಉದ್ರೇಕಿಸುವುದು ಸುಲಭ. ಆದರೆ ಅನಂತರ ಅದನ್ನು ಇಳಿಸುವುದು ಕಷ್ಟವಾಗುವುದು. ಕನ್ನಡಿಗರ ಸೌಜನ್ಯವನ್ನೂ ಸಂಯಮವನ್ನೂ ದುರುಪಯೋಗಪಡಿಸಿಕೊಳ್ಳಬಾರದೆಂದು ಮಹಾರಾಷ್ಟ್ರೀಯರನ್ನು ಎಚ್ಚರಿಸುವ ಕಾಲ ಈಗ ಬಂದಿದೆ.

ನಮ್ಮ ನೆರೆಪ್ರಾಂತವೇ ಇಂತಹ ಅಸಡ್ಡಾಳ ಚಳುವಳಿಯಲ್ಲಿ ತೊಡಗಿದ್ದರೂ, ಭಾಷಾಬಾಂಧವ್ಯದಿಂದಲೇ ಭಾರತದ ಕಲ್ಯಾಣವಾಗುವುದೆಂಬುದರಲ್ಲಿಯೂ ಅದಕ್ಕಾಗಿಯೇ ದೂರದೃಷ್ಟಿಯುಳ್ಳವರೂ ವಿವೇಕಿಗಳೂ ಪ್ರವರ್ತಿಸಬೇಕೆಂಬುದೂ ನಿರ್ವಿವಾದ. ಈ ಕಾರ್ಯದಲ್ಲಿ ಮುಖ್ಯವಾಗಿ ಸಾಹಿತಿಗಳೂ ಕಲಾವಿದರೂ ಮುಂದಾಗಬೇಕಾಗಿದೆ. ಒಂದು ಭಾಷೆಯ ಅತ್ಯುತ್ತಮ ಕೃತಿಯನ್ನು ಮತ್ತೊಂದು ಭಾಷೆಗೆ ಅನುವಾದ ಮಾಡುವುದರಿಂದ ಭಾಷೆಗಳಲ್ಲಿ ಪರಸ್ಪರ ಸೌಹಾರ್ದ ಹೆಚ್ಚುವುದು; ಅಲ್ಲಲ್ಲಿ ಭಾಷಾಂಧರೂ ಅಗ್ನಿಭಕ್ಷಕರೂ ಇದ್ದರೂ ಹೊಸಬಂಧುತ್ವದ ಪರಂಪರೆ ಇದರಿಂದ ವೃದ್ಧಿಯಾಗುವುದು. ಈ ದಿಶೆಯಲ್ಲಿ ಸಾಹಿತ್ಯ ಅಕಾಡಮಿ, ದಕ್ಷಿಣಭಾರತ ಭಾಷಾಸಂಸ್ಥೆ, ಪಿ.ಇ.ಎನ್. ಮುಂತಾದವರು ತಕ್ಕಮಟ್ಟಿನ ಕಾರ್ಯವನ್ನು ಎಸಗಿದ್ದಾರೆ. ಸಾಹಿತಿಗಳನೇಕರು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಉತ್ಕೃಷ್ಟ ಗ್ರಂಥಗಳನ್ನು ಭಾಷಾಂತರಿಸಿದ್ದಾರೆ. ಮುಖ್ಯವಾಗಿ ಕನ್ನಡಕ್ಕೂ ಸಹ ಇತರ ಭಾಷೆಗಳಿಂದ ಅನೇಕ ಗ್ರಂಥಗಳ ಅನುವಾದವೂ ಇತರ ಭಾಷೆಗಳಿಗೂ ಕೆಲವು ಕನ್ನಡ ಗ್ರಂಥಗಳ ಕಾದಂಬರಿಗಳ ಕಥೆಗಳ ಅನುವಾದವೂ ಆಗಿವೆ. ಈ ಲೇಖಕರೆಲ್ಲ ಭಾರತ ಸಂಸ್ಕೃತಿಯ ರಾಯಭಾರಿಗಳಾಗಿ ರಾಷ್ಟ್ರೀಯ ಐಕ್ಯದ ಸಂಕೇತವನ್ನು ಹೀಗೆ ಪ್ರತಿಪಾದಿಸುತ್ತಿರುವುದರಿಂದ ಮನ್ನಣೆಗೆ ಅರ್ಹರು.

ಕನ್ನಡಿಗರ ದೃಷ್ಟಿಯಿಂದ ನೋಡುವುದಾದರೆ ಪ್ರತಿಯೊಬ್ಬ ಕನ್ನಡ ಸಾಹಿತಿಯೂ ಒಂದಾದರೂ ದಕ್ಷಿಣಭಾರತ ಭಾಷೆಯನ್ನು ಕಲಿತು (ತಮಿಳು ತೆಲುಗು ಮಲೆಯಾಳಿ) ಅದರಲ್ಲಿರುವ ಉತ್ತಮ ಕೃತಿಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕು. ಹಾಗೆಯೇ ಸಾಧ್ಯವಿರುವವರು ಹಿಂದೀ ಬಂಗಾಳೀ ಮರಾಠಿ ಒರಿಯ ಪಂಜಾಬಿ ಕಾಶ್ಮೀರಿ (ಎಲ್ಲ ಉತ್ತರ ಭಾರತ ಭಾಷೆಗಳ) ಶ್ರೇಷ್ಠ ಕೃತಿಗಳ ಪರಿಚಯವನ್ನೂ ಕನ್ನಡಿಗರಿಗೆ ಮಾಡಿಕೊಡಬೇಕು. ಈಗಾಗಲೇ ಈ ಬಗೆಯ ಕಾರ್ಯ ನಮ್ಮಲ್ಲಿ ನಡೆದಿದೆ; ನಡೆಯುತ್ತಿದೆ. ಆದರೆ ಅಂತಹ ಭಾಷಾಂತರವನ್ನು ನೋಡುವಾಗ ನಮ್ಮ ಕನ್ನಡದಲ್ಲಿ ಬಂದಿರುವ ಅನೇಕ ಸ್ವತಂತ್ರ ಕೃತಿಗಳು, ಅವುಗಳಿಗೆ ಯಾವ ವಿಧದಲ್ಲಿಯೂ ಕಡಿಮೆಯಿಲ್ಲವೆಂಬುದು ನಮಗೆ ಹೊಳೆಯುತ್ತದೆ. ಆದುದರಿಂದ ಇತರ ಭಾಷೆಗಳಿಂದ ಕನ್ನಡಕ್ಕೆ ಪರಿವರ್ತಿಸುವಂತೆ, ಕನ್ನಡದಿಂದ ಭಾರತದ ಇತರ ಭಾಷೆಗಳಿಗೂ ಅನುವಾದಿಸುವುದು ಅವಶ್ಯಕವಾಗಿದೆ. ಈ ಭಾಗದಲ್ಲಿಯೂ ಈಗಾಗಲೇ ಸ್ವಲ್ಪಮಟ್ಟಿನ ಕಾರ್ಯ ನಡೆದಿದೆ.

ಆದರೆ ಒಂದು ಭಾಷೆ ಬೆಳೆಯುವುದೂ ಜನತೆಗೆ ತೇಜಸ್ಸನ್ನು ತುಂಬುವುದೂ ತನ್ನ ಸ್ವಂತ ಸತ್ವದಿಂದ. ಮಹಾತ್ಮ ಗಾಂಧಿಯವರೇ ಒಂದೆಡೆ ಹೇಳಿರುವಂತೆ "ಬರಿಯ ಭಾಷಾಂತರಕಾರರಿಂದಲೇ ಧೀರ ರಾಷ್ಟ್ರವಾಗುವುದಿಲ್ಲ" A Nation of Heroes is not made by only translators. ಆದುದರಿಂದ ನಮ್ಮ ಭಾಷೆಯನ್ನು ಸರ್ವವಿಧದಿಂದಲೂ ಸರ್ವಾಂಗಸುಂದರ ಸತ್ವಪೂರ್ಣವಾಗಿಯೂ ಬೆಳೆಸುವುದು ನಮ್ಮ ಕರ್ತವ್ಯ. ಈ ದಾರಿಯಲ್ಲಿ ನಮ್ಮ ಸರ್ಕಾರದವರು ಇನ್ನಷ್ಟು ಧೀರವಾದ ಹೆಜ್ಜೆಗಳನ್ನು ಇಡಬೇಕು. ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಲು ನಿರ್ಣಯವನ್ನೇನೋ ತೆಗೆದುಕೊಂಡಿದ್ದಾರೆ. ಮಂತ್ರಿಗಳನೇಕರು ಕನ್ನಡದಲ್ಲಿಯೇ ಮಾತನಾಡುತ್ತಾರೆ. ಅಧಿಕಾರಿಗಳನ್ನೂ ಕನ್ನಡಕ್ಕೆ ಒಲಿಸುತ್ತಿದ್ದಾರೆ. ನಾನಾರೀತಿಯಲ್ಲಿ ಗ್ರಂಥಕರ್ತರಿಗೆ, ಗ್ರಂಥಗಳಿಗೆ ಪ್ರೋತ್ಸಾಹಕೊಡುತ್ತಿದ್ದಾರೆ. ಕನ್ನಡದಲ್ಲಿ ಸರ್ಕಾರದ ಪೂರ್ಣ ಅಭಿಮಾನವೇನೋ ಸ್ಪಷ್ಟವಾಗಿದೆ. ಆದರೆ ಇನ್ನೂ ಕನ್ನಡ ಆಡಳಿತಭಾಷೆಯಾಗಲು ಅರ್ಹತೆ ಇಲ್ಲವೆ? ಆಗುವುದಾದರೆ ಎಷ್ಟರಮಟ್ಟಿಗೆ ಎಂಬುದನ್ನು ಪರೀಕ್ಷಿಸಲು ಈ ಇಪ್ಪತ್ತು ವರ್ಷಗಳಲ್ಲಿ ಮಾಡಿರುವ ಅರ್ಧಮನಸ್ಸಿನ ತೀರ್ಮಾನಗಳೂ ಸಮಿತಿ ನೇಮಕಗಳೂ ಇನ್ನು ಸಾಕು. ಕನ್ನಡ ಭಾಷೆ ನಮ್ಮ ಜನತೆಗೆ ಒಗ್ಗುವುದೆ? ತಾಯ ಹಾಲು ಮಗುವಿಗೆ ಹಿಡಿಯುತ್ತದೆಯೇ ಎಂಬುದನ್ನು ನಿರ್ಣಯಿಸಲು ಇಷ್ಟೊಂದು ತಜ್ಞರು ಇಷ್ಟೊಂದು ಕಾಲವನ್ನು ತೆಗೆದುಕೊಳ್ಳಬೇಕಾದಿಲ್ಲ. ಆದುದರಿಂದ ಸರಕಾರದವರು ಧೈರ್ಯಮಾಡಿ ಕೂಡಲೇ, ಕನ್ನಡವನ್ನು ಆಡಳಿತ ಭಾಷೆಯಾಗಿ ಉಪಯೋಗಿಸಬೇಕು. ಮಂತ್ರಿ ಸಂಪುಟದ ಎಲ್ಲ ಮಂತ್ರಿಗಳೂ ಇಲಾಖಾ ಮುಖ್ಯರೂ ತಮ್ಮ ಫೈಲುಗಳ ಮೇಲೆ ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರೆ, ಆಗ ಅವರಿಗೂ ಜನತೆಗೂ ನಿಜವಾದ ಆತ್ಮೀಯ ನಿಟಕಬಾಂಧವ್ಯವುಂಟಾಗುವುದು. ಜತೆಗೆ ಶಿಕ್ಷಣದ ಎಲ್ಲ ಮಟ್ಟಗಳಲ್ಲಿಯೂ (ವಿಶ್ವವಿದ್ಯಾಲಯವೂ ಸೇರಿ) ಕನ್ನಡವನ್ನೇ ಮಧ್ಯಮವನ್ನಾಗಿ ಮಾಡುವುದರಿಂದ ಕನ್ನಡ ಕಲ್ಪ ವೃಕ್ಷಕ್ಕೆ ಅಮೃತ ಸೇಚನವಾಗಿ ಕನ್ನಡವು "ವೀಣೆಯ ತಂತಿಯ ಸುಂದರ ನಿಸ್ವನದಂತೆ ಚೆಲುವೂ, ಜಲಕೇಳಿಯಾಡುವ ಬಾಲಿಕೆಯರ ಇಂಚರದಂತೆ ಮಂಜುಳವೂ ಜಾಣಿನ ಭಾರದಿಂ ಕೆಡದ ಬಾಲಕನ ಮೆಲ್ನುಲಿಯಂತೆ ವಿಮೋಹಕವೂ" ಆಗಿ ನಿತ್ಯನೂತನವಾದ ಈ ಸೊಗಸಾದ ಭಾಷೆ ಗರಿಗೆದರಿ ಹಾರಿ ನಮ್ಮ ದಾರಿದ್ರ್ಯವನ್ನು ನೀಗಿ ನಮ್ಮನ್ನು ಉದ್ಧಾರ ಮಾಡುವುದು. ಆಗ ನಮ್ಮ ಬಾಳು ಸರ್ವಾಂಗಪೂರ್ಣವಾಗಿ "ಸೊಕ್ಕಿನಲಿ ತಲೆಯೆತ್ತಿ ಜತೆಯವರ ಕೂಟದಲಿ ನಾವು ಸಮ ನಿಮಗೆಂದು" ನಾವೂ ನುಡಿಯಬಲ್ಲೆವು. ನಮ

ಜನತೆ ಸಹ, ಕನ್ನಡ ಭಾಷೆಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ತಮ್ಮ ಹೃದಯಕ್ಕೆ ತೆಗೆದುಕೊಂಡು, ನಮ್ಮ ಹಿಂದಲವರು ಮಾಡಿದಂತೆ ಈ ಭಾಷೆಯ ಮೂಲಕವೇ ತಮ್ಮ ಲೌಕಿಕಾಭಿವೃದ್ಧಿಯನ್ನೂ ಪಾರಮಾರ್ಥಿಕ ಉನ್ನತಿಯನ್ನೂ ಸಾಧಿಸಬೇಕು. ಆಗಲೀಗ ಕನ್ನಡ, ತನ್ನ ಮನೆಯಲ್ಲಿ ತಾನು ಯಜಮಾನಿಯಾಗಿ ಸಾಹಿತಿಗಳನ್ನು ರಕ್ಷಿಸಿ ಇತರ ಭಾಷೆಗಳಿಗೆ ಅನುವಾದವಾಗುವ ಗ್ರಂಥರಾಶಿಯನ್ನು ಸೃಷ್ಟಿಸುವುದು.

೧೯೪೬ನೆ ಇಸವಿಯಲ್ಲಿ ಮಹಾತ್ಮ ಗಾಂಧಿಯವರು, ದಕ್ಷಿಣ ಭಾರತ ಹಿಂದುಸ್ಥಾನಿ ಸಭೆಯ ರಜತಮಹೋತ್ಸವಕ್ಕಾಗಿ ಮದರಾಸಿಗೆ ಬಂದಿದ್ದಾಗ, ಭಾರತವನ್ನು ಒಂದು ಕಿತ್ತಲೆ ಹಣ್ಣಿಗೂ ಅದರಲ್ಲಿರುವ ವಿವಿಧ ಭಾಷೆಗಳನ್ನು ಹಣ್ಣಿನ ತೊಳೆಗಳಿಗೂ ಹೋಲಿಸಿದ್ದರು. ಅದು ನಮ್ಮ ವಿವಿಧ ಭಾಷೆಗಳ ಸಂಬಂಧ. ಭಾಷೆಗಿಂತ ಮನುಷ್ಯನೂ ಅವನ ಬಾಳ್ವೆಯೂ ಮನುಷ್ಯ ಸಮಾಜದ ಸಹಜೀವನವೂ ಹೆಚ್ಚು ಮೌಲ್ಯವುಳ್ಳದುದು. ಆದರೆ ಆ ಮೌಲ್ಯವನ್ನು ಸಾಧಿಸಲು ಭಾಷೆಯಂತಹ ಸುಲಭವಾದ ಉಪಕರಣ ಬೇರೊಂದಿಲ್ಲ.

ಯದ್ವಾಗ್ವಾ ನಭವಿಷ್ಯಂತ
ಧರ್ಮೋ ವಾ ನಾऽಧರ್ಮೋ ವ್ಯಜ್ಞಾಪಯಿಷ್ಯತ್
ನ ಸತ್ಯಂ ನಾನೃತಂ, ನ ಸಾಧು ನಾऽಸಾಧು
ನ ಹೃದಯಜ್ಞೋ ನಾऽ ಹೃದಯಜ್ಞೋ
ವಾಗೇವೈತತ್ ಸರ್ವಂ ವ್ಯಜ್ಞಾಪಯತ್ ।
ವಾಚಮುಪಾಸ್ವೇತಿ

ಭಾಷೆ ಇಲ್ಲದಿದ್ದರೆ ಧರ್ಮವೂ ಇಲ್ಲ, ಅಧರ್ಮವೂ ಇಲ್ಲ. ಸತ್ಯವೂ ಇಲ್ಲ ಅಸತ್ಯವೂ ಇಲ್ಲ. ಒಳ್ಳೆಯದೂ ಇಲ್ಲ ಕೆಟ್ಟದ್ದೂ ಇಲ್ಲ. ಮನೋಹರವಾದುದೂ ಇಲ್ಲ ಮನೋಹರವಲ್ಲದುದೂ ಇಲ್ಲ. ಎಲ್ಲವೂ ಆಗುವುದು ವಾಕ್ಕಿನಿಂದಲೇ. ಆದುದರಿಂದ ಭಾಷೆಯನ್ನು ಕುರಿತು ಧ್ಯಾನಿಸಿ.

ನಮ್ಮ ಸಮಸ್ತ ಚಟುವಟಿಕೆಗಳೂ ಕಾರ್ಯಗಳೂ ಭಾರತವನ್ನು ಒಟ್ಟುಗೂಡಿಸಿ ಛಿದ್ರಪ್ರವೃತ್ತಿಗಳನ್ನು ನಾಶಪಡಿಸಿ, ಕನ್ನಡಿಗರ ಶಕ್ತಿಯನ್ನು ವೃದ್ಧಿಗೊಳಿಸಿ ವಿವಿಧ ಭಾಷೆಗಳಲ್ಲಿರುವ ಸಾಮರಸ್ಯವನ್ನು ನಮಗೆ ಮನದಟ್ಟು ಮಾಡಿಕೊಟ್ಟು ಭಾರತೀಯರೆಲ್ಲರ ಸಮಾನ ಹಿತಾಸಕ್ತಿಗಳನ್ನು ಬೆಳೆಸುವ ಸಾಧನವಾಗಬೇಕು. ಸ್ವಾತಂತ್ರ್ಯಾನಂತರದ ಭಾರತ ಹಿಂದೆಂದೂ ಇಲ್ಲದಷ್ಟು ಐಕ್ಯತೆಯನ್ನು ಹೊಂದಿದ್ದಿತು. ಭಾರತದ ಎಂದಿನ ದೌರ್ಬಲ್ಯವಾದ ಛಿದ್ರಪ್ರವೃತ್ತಿ ಮತ್ತೆ ತಲೆ ಎತ್ತುತ್ತಿದೆ. ನಮ್ಮ ಬಾಳಿಗೆ ಸಂಜೀವಿನಿಯಾಗಿರುವ ಭಾಷೆಗಳೇ—ನಾವು ಅವುಗಳ ವಿಷಯದಲ್ಲಿ ಸರಿಯಾದ ಮನೋಭಾವವನ್ನು ಹೊಂದಿ ವಿವೇಕದಿಂದ ನಡೆಯದಿದ್ದಲ್ಲಿ—ಛಿದ್ರಪ್ರವೃತ್ತಿಯ ಮೂಲಕಾರಣಗಳಾಗಬಹುದು. ಆದುದರಿಂದ ಒಗ್ಗಟ್ಟು ನಮ್ಮ ಮಂತ್ರವಾಗಲಿ.

ಸಂಗಚ್ಛಧ್ವಂ ಸಂಪದಧ್ವಂ ಸಂವೋ ಮನಾಂಸಿ
ಜಾನತಾ
ದೇವಾಭಾಗಂ ಯಥಾ ಪೂರ್ವೇ ಸಂಜಾನಾನಾ
ಉಪಾಸತೆ
ಸಮಾನೋ ಮಂತ್ರಂ ಸಮಿತಿಃ ಸಮಾನೀ
ಸಮಾನಂ ಮನಃ ಸಹಚಿತ್ತಂ ಏಷಾಂ
ಸಮಾನ ಮಂತ್ರಂ ಅಭಿಮಂತ್ರ್ಯನೇವ
ಸಮಾನೇನವೋ ಹವಿಷಾಜುಹೋಮಿ
ಸಮಾನೀವ ಆಕೂತಿಃ ಸಮಾನೀ ಹೃದಯಾನಿವಃ
ಸಮಾನಮಸ್ತು ವೋ ಮನೋ ಯಥಾವಸ್ಸು
ಸಹಾಸತೀ

ಒಟ್ಟಾಗಿ ಸೇರೋಣ. ಒಟ್ಟಾಗಿ ಮಾತನಾಡೋಣ. ಒಂದೇ ಮನಸ್ಸುಳ್ಳವರಾಗಿರೋಣ; ನಮ್ಮ ಗುರಿ ಒಂದೇ ಆಗಿರಲಿ; ನಮ್ಮ ಮಂತ್ರಾಲೋಚನೆ ಚಿತ್ತವೃತ್ತಿ ಧ್ಯೇಯ ಒಂದೇ ಆಗಿರಲಿ; ನಮ್ಮ ಹೃದಯಗಳೆಲ್ಲ ಒಂದಾಗಿರಲಿ. ನಾವೆಲ್ಲ ಒಟ್ಟಿಗೆ ಸುಖವಾಗಿರೋಣ.

ಶಾಸ್ತ್ರಶ್ರೀರೋಹಣಾರೋಹಣಕ್ಕೆ ಕರೆ

ಅಧ್ಯಕ್ಷ ಎಸ್. ವಿ. ಪರಮೇಶ್ವರಭಟ್ಟ ಅವರ ಭಾಷಣ

ಕವಿ ಸಹೃದಯ ವಿಭೂತಿಗಳಿಗೆ ನಮಸ್ಕಾರ

ಕನ್ನಡನಾಡಿನ ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ— ಇವುಗಳ ದೃಷ್ಟಿಯಿಂದ ಸುಮಾರು ಎರಡು ಸಹಸ್ರ ವರ್ಷಗಳ ಹಿಂದಿನ ದಿನಗಳಿಂದ ಪ್ರಸಿದ್ಧಿಗೆ ಬಂದಿರುವ ಈ ದಿವ್ಯ ಕ್ಷೇತ್ರದಲ್ಲಿ ನಲವತ್ತಾರನೆಯ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸೇರಿರುವ ಈ ಕವಿ ಮೇಳದಲ್ಲಿ ಭಾಗಿಗಳಾಗಿರುವ ನಾವು ಶ್ರೀ ಬಾಹುಬಲಿಸ್ವಾಮಿಗೆ ನಮ್ಮ ಮೊದಲ ಮಣಿಹವನ್ನು ಸಲ್ಲಿಸಬೇಕು. ಬಳಿಕ ಯಾರು ಯಾರು ತಮ್ಮ ತಮ್ಮ ತಪದಿಂದ ಶೀಲದಿಂದ ಕಲಾಕೌಶಲದಿಂದ ಸಿರಿವಂತಿಕೆಯಿಂದ ಈ ಕ್ಷೇತ್ರದ ಮತ್ತು ಈ ಕ್ಷೇತ್ರಪತಿಯ ಸಂಬಂಧವಾದ ಮಹಿಮೆಯನ್ನು ಬೆಳಗಿ ಯಶಶ್ಶರೀರಿಗಳಾಗಿದಾರೆಯೊ ಆ ಭದ್ರಬಾಹು, ಚಂದ್ರಗುಪ್ತ, ಗುಣಸೇನ, ಚಾವುಂಡರಾಯ, ಅತ್ತಿಮಬ್ಬೆ, ಬೊಪ್ಪಣಾದಿ ದಿವ್ಯ ಜೀವರುಗಳನ್ನು ಭಕ್ತಿಯಿಂದ ಕೃತಜ್ಞತೆಯಿಂದ ಸ್ಮರಿಸಿ ವಂದಿಸಬೇಕು. ನಮ್ಮ ಕಾವ್ಯ ಪ್ರಪಂಚ ವಿಸ್ತಾರವಾದದ್ದು, ವೈವಿಧ್ಯಮಯವಾದದ್ದು, ಸ್ವಾರಸ್ಯಪೂರ್ಣವಾದದ್ದು, ಸಾವಿರವರ್ಷಗಳ ಭವ್ಯವಾದ ಪರಂಪರೆಯನ್ನುಳ್ಳದ್ದು. ಇಂತಹ ಕಾವ್ಯ ಪ್ರಪಂಚದಲ್ಲಿ ತಮ್ಮ ಪ್ರತಿಭಾಚಿತ್ರಕಾಶಗಳಿಂದ ಜ್ಯೋತಿರ್ವಲಯಗಳಾಗಿ ಬೆಳಗುತ್ತಿರುವ ನೃಪತುಂಗ, ಪಂಪ, ರನ್ನ, ನಾಗವರ್ಮ, ನಾಗಚಂದ್ರ, ಬಸವ, ಚನ್ನಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ಹರಿಹರ, ರಾಘವಾಂಕ, ನೇಮಿಚಂದ್ರ, ಜನ್ನ, ಕೇಶಿರಾಜ, ಕುಮಾರವ್ಯಾಸ, ಚಾಮರಸ, ನಿಜಗುಣಶಿವಯೋಗಿ, ನಂಜುಂಡ, ಪುರಂದರ, ಲಕ್ಷ್ಮೀಶ, ರತ್ನಾಕರ, ವಿರೂಪಾಕ್ಷ, ಷಡಕ್ಷರಿ, ಚಿಕ್ಕದೇವರಾಜ, ಚಿಕ್ಕುಪಾಧ್ಯಾಯ, ಹೊನ್ನಮ್ಮ, ಸರ್ವಜ್ಞ, ಮುದ್ದಣ—ಈ ಕವಿ ವಿಭೂತಿಗಳಿಂದ ನಾವು ಬೆಳಕು ಕಂಡಿದ್ದೇವೆ. ಇವರಿಗೆ ನಮ್ಮ ನಮಸ್ಕಾರವಿರಲಿ. ಮತ್ತೆ ಭರತವರ್ಷದ ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ರಚಿತವಾದ 'ಇಂಗ್ಲಿಷ್ ಗೀತಗಳು' 'ಗೀತಗಳು' 'ಸಮುದ್ರ ಗೀತೆಗಳು' 'ಸಖೀಗೀತೆ' 'ನಲ್ಮೆ' 'ನನ್ನ ನಲ್ಲ' 'ಗೊಲ್ಗೊಥಾ ಮತ್ತು ವೈಶಾಖಿ' ಮೈಸೂರು ಮಲ್ಲಿಗೆ' 'ಮುಕ್ತದ್ವಾರ' 'ಅಹಲ್ಯೆ' 'ಮಂಕುತಿಮ್ಮನ ಕಗ್ಗ' 'ಶ್ರೀ ರಾಮಾಯಣ ದರ್ಶನಂ' 'ರಂಗಬಿನ್ನಪ' ಈ ಕೃತಿಗಳಿಂದ ಈ ಶತಮಾನದ ಕಾವ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿ ಅದಕ್ಕೆ ಒಂದು ಭೂಮತ್ವವನ್ನು ಒದಗಿಸಿಕೊಟ್ಟ ಹಿರಿಯ ಕವಿ ಋಷಿಗಳಿಗೆ ಭಕ್ತಿಯಿಂದ ಮಣಿಬಾಗಬೇಕು ನಾವು. ಹಾಗೆಯೆ ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ರಚಿತವಾಗಿರುವ 'ಭೂಮಗೀತ' 'ಇಂದ್ರಚಾಪ' 'ದೀಪದ ಹೆಜ್ಜೆ' 'ಸಿದ್ಧರಾಮೇಶ್ವರ ಪುರಾಣ' 'ನಲ್‌ವಾಡುಗಳು' 'ಮುಗಿಯದ ಮಾಯೆ' 'ಪರಂಪರೆ' 'ಮಾನಸ ಸರೋವರ' 'ಸ್ನೇಹಸೌರಭ' 'ಹೂಗೊಂಚಲು' 'ಕಿಷ್ಕಿಂಧೆ' 'ರಸಯಜ್ಞ' 'ನೆಲಮುಗಿಲು' 'ಮನುಕುಲದ ಹಾಡು' 'ಹೇಳತೇನ ಕೇಳು' 'ಬಾನುಲಿ' 'ನೆನೆದವರ ಮನದಲ್ಲಿ' 'ನಿಮ್ಮ ಪ್ರೇಮಕುಮಾರಿಯ ಜಾತಕ' 'ಕರ್ಮಜೀವಿ' 'ಮಣ್ಣಿನಹಾಡು' 'ಭಗ್ನ ಪ್ರತಿಮೆ'—ಈ ಮುಂತಾದ ಬಹುಮುಖ ಪ್ರತಿಭೆಯ ಸಂಕೀರ್ಣಪ್ರಜ್ಞೆಯ ಕೃತಿ ರಚನೆಗಳಿಂದ ನಮ್ಮ ಕಾವ್ಯ ಪ್ರಪಂಚದಲ್ಲಿ ಹೊಸ ಹೊಸ ಕ್ಷಿತಿಜಗಳನ್ನು ತೆರೆದು ತೋರಿಸುತ್ತಿರುವ ಕವಿಗಣಕ್ಕೆ ನಮ್ಮ ನಮನವುಂಟು. ಹೀಗೆ ಕೆಲವೆಡೆ ಕವಿಗಳ ಹೆಸರು ಹೇಳಿ ಕೆಲವೆಡೆ ಕೃತಿಗಳ ಹೆಸರು ಹೇಳಿ ನಮ್ಮ ಕಾವ್ಯದ ಸಾವಿರ ವರುಷಗಳ ಭವ್ಯಪರಂಪರೆಯನ್ನು ನೆನೆದು ಅದಕ್ಕೆ ಗೌರವ ಸಲ್ಲಿಸಿ ಈ ಶತಮಾನದಲ್ಲಿ ರಚಿತವಾಗಿರುವ ಕೃತಿಗಳನ್ನು ನೆನೆದು ನಮ್ಮ ಕೃತಜ್ಞತೆಯನ್ನು ಸಲ್ಲಿಸಿದ ಮೇಲೆ ಈಗ ನಾವು ಕಾವ್ಯವನ್ನು ಕುರಿತ ಕೆಲವು ವಿಚಾರಗಳನ್ನು ಸ್ವಲ್ಪ ಪರಿಚಯ ಮಾಡಿಕೊಳ್ಳುವ ಪ್ರಸಂಗಕ್ಕೆ ಹೋಗಬಹುದು.

೨

ಮೊದಲನೆಯ ಪ್ರಶ್ನೆ ಕಾವ್ಯ ಏಕೆ ಹುಟ್ಟುತ್ತದೆ ಎಂಬುದು. ಇಲ್ಲಿ ಪ್ರಶ್ನೆ ಎಷ್ಟು ಸರಳವೋ ಉತ್ತರವು ಅಷ್ಟೇ ಸರಳ. ಒಂದು ಬಹಿರ್ಘಟನೆಯ ಕಾರಣವಾಗಿ ಕಾವ್ಯ ಹುಟ್ಟುತ್ತದೆ. ಹೊರಗೆ ಒಂದು ಸಂಗತಿ ನಡೆಯುತ್ತದೆ. ಇಂದ್ರಿಯಗಳ ಮೂಲಕವಾಗಿ ನಾವು ಅದನ್ನು ಅನುಭವಿಸುತ್ತೇವೆ. ಆ ಅನುಭವ ನಮ್ಮ ಮನಸ್ಸಿನ ಮೇಲೆ ಒಂದು ಪರಿಣಾಮವನ್ನು ಅಚ್ಚೊತ್ತಿದಂತೆ ಮೂ

ಸುತ್ತದೆ. ನಮಗಿಂತ ಹೆಚ್ಚು ಸೂಕ್ಷ್ಮಮತಿಯಾದ ಹೆಚ್ಚು ಸಂವೇದನಾ ಶೀಲನಾದ ಕವಿಯಾದರೋ ಈ ಅನುಭವ ದಿಂದ ಇದರ ಪರಿಣಾಮದಿಂದ ಒಳಗೊಳಗೆಯೆ ಕಾವು ಗೊಳ್ಳುತ್ತಾನೆ; ಒಂದು ವಿಧವಾದ ಒತ್ತಡಕ್ಕೆ ಸಿಕ್ಕಿ ಸ್ಪಂದಿ ಸುತ್ತಾನೆ. ಹೀಗೆ ಹೊರಗಿನ ಘಟನೆಯಿಂದ ಆದ ಸ್ಪಂದನ ಕವಿಯಿಂದ ಅನಿವಾರ್ಯವಾಗಿ ಆಕಸ್ಮಿಕವಾಗಿ ಆಶ್ಚರ್ಯಕರ ವಾಗಿ ಆದರೆ ಅತ್ಯಂತ ಸಹಜವಾಗಿ ಅತ್ಯಂತ ಸುಂದರವಾಗಿ ಮೇಲಿಂದ ಮೇಲೆ ನಾದ ಲಯ ಸಮನ್ವಿತವಾದ ಮಾತಿನ ಉದ್ಗಾರಗಳನ್ನು ಚಿಮ್ಮಿಸುತ್ತದೆ. ಹೀಗೆ ಚಿಮ್ಮಿದ ಈ ಸಹಜ ಸ್ಫುರಣವೇ ಕಾವ್ಯ. ನೂರಕ್ಕೆ ತೊಂಬತ್ತು ಸಂದ ರ್ಭಗಳಲ್ಲಿ ಕಾವ್ಯ ಹೊರಗಣ ಸಂಗತಿಯಿಂದಾದ ಒಳಗಣ ಕುದಿಯೆ ಕಾರಣವಾಗಿ ಹುಟ್ಟುತ್ತದೆ. ಇನ್ನು ಹತ್ತು ಸಂದ ರ್ಭಗಳ ವಿಷಯದಲ್ಲಿ ನಾನು ಅಜ್ಞ. ನನ್ನಮಟ್ಟಿಗೆ ಹೇಳು ವುದಾದರೆ ನನ್ನ ಎಲ್ಲ ಕವಿತೆಗಳೂ ಎಲ್ಲ ಮುಕ್ತಕಗಳೂ ಹೊರಗಣ ಸಂಗತಿಯ ಮಂತುವಿನಿಂದ ನನ್ನ ಬಗೆಗಡಲು ಕಡೆಹಕ್ಕೆ ಸಿಕ್ಕಿ ಕುದ್ದು ಬೋರ್ಗರೆದಾಗ ಕರೆಗೆ ಸಿಡಿದ ಮುಕ್ತಕಗಳೇ ಆಗಿವೆ.

೩

ಎರಡನೆಯ ಪ್ರಶ್ನೆ ಕಾವ್ಯ ಹೇಗೆ ಹುಟ್ಟುತ್ತದೆ? ಎಂಬುದು. ಇಲ್ಲಿ ಪ್ರಶ್ನೆ ಸರಳ; ಉತ್ತರ ಜಟಿಲ. ಕಾವ್ಯ ಏಕೆ ಹುಟ್ಟುತ್ತದೆ ಎಂದಾಗ ನೂರರಲ್ಲಿ ತೊಂಬತ್ತಕ್ಕಾದರೂ ಅನ್ವಯಿಸುವಂತೆ ಒಂದು ಸೂತ್ರವನ್ನು ಕಟ್ಟಿ ಹೇಳಿದ್ದಾಯಿತು. ಆದರೆ ಇಲ್ಲಿ ಹತ್ತಕ್ಕಾದರೂ ಅನ್ವಯಿಸುವಂತಹ ಸೂತ್ರ ಸಾಧ್ಯವೇ ಎನ್ನಿಸುತ್ತದೆ. ನೂರು ಸಂದರ್ಭಗಳಿದ್ದರೆ ರೀತಿಗಳೂ ನೂರು ಎನ್ನಬಹುದು. ಒಂದು ಸಂದರ್ಭ ದಲ್ಲಿ ಆಶು ಕವಿಯಾಗಿ, ಸಂಗತಿ ನಡೆದ ಘಳಿಗೆಯಲ್ಲಿಯೆ ಒಂದು ಕಾವ್ಯೋದ್ಗಾರವೇಳಬಹುದು. ಇನ್ನೊಂದು ಸಂದ ರ್ಭದಲ್ಲಿ ಎಚ್ಚರದಲ್ಲಿ ಆದ ಘಟನೆಗೆ ಕನಸಿಗಲ್ಲಿ ಸಾಲುಗಳು ಸರಮಾಲೆಯಾಗಿ ಹೊಮ್ಮಿ ಮರೆಯಾಗಬಹುದು. ಇನ್ನು ಹತ್ತು ಸಂದರ್ಭಗಳಲ್ಲಿ ನಡೆದ ಘಟನೆ ಮರೆಯಲಾರದ ಒಂದು ಪರಿಣಾಮವಾಗಿ ಮನಸ್ಸಿನಲ್ಲಿ ನೆನೆದು ಎಂದೋ ಒಮ್ಮೆ ಬುಗ್ಗೆ ಬುಗ್ಗೆಯಾಗಿ ಸೆಲೆಯೊಡೆದು ಹೊಮ್ಮಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಆರಂಭ ದಿಂದ ಅಂತ್ಯದವರೆಗೆ ಘಟ್ಟಘಟ್ಟಗಳಾಗಿ ಆಗಷ್ಟು ಈಗಷ್ಟು ಎಂಬಂತೆ ಕೃತಿಯ ರಚನೆ ನಡೆಯಬಹುದು. ಭಾವದ ಜತೆ ಜತೆಯಲ್ಲಿಯೇ ಪದಗಳು, ಪಾದಗಳು, ಲಯಗಳು ಪ್ರಾಸ, ಯತಿ, ನಡಿಮುಡಿಗಳು. ಅಲಂಕಾರಗಳು, ಚಮತ್ಕಾರಗಳು ಈ ಮುಂತಾದವು ಹೂವಿನ ಹಾರವನ್ನು ಒಂದುತುದಿಯಿಂದ ಹಿಡಿದು ಎತ್ತಿದರೆ ಹೇಗೆ ಹಾಗೆ ಇಡಿಯಾಗಿ, ಒಟ್ಟಾಗಿ, ನೇರಾಗಿ, ಒತ್ತಾಗಿ, ಜೋಡಿಸಿ ಒಂದಕ್ಕೊಂದು ಹೊಂದಿಕೊಂಡು ಕಾವ್ಯಕಾಣಿಸಬಹುದು ಕೇಳಿಸಬಹುದು. ವಾಸ್ತವ ಜಗತ್ತನ್ನು ಕಲೆಯ ಕಣ್ಣಿನಿಂದ ನೋಡುತ್ತಿದ್ದ ಹಾಗೆಯೆ, ಮನಸ್ಸಿಗೆ ಆದ ಅನುಭವಗಳನ್ನು ಮಾತುಗಳ ಸಹಾಯದಿಂದ ವ್ಯಕ್ತಪಡಿಸುತ್ತಿದ್ದ ಹಾಗೆಯೆ, ಮನಸ್ಸಿನ ಒಳಗಣ ಓವರಿಗಳಲ್ಲಿ ಅದುವರೆಗೆ ಸುಪ್ತವಾಗಿದ್ದ, ಅದುವರೆಗೆ ಗುಪ್ತವಾಗಿದ್ದ ಭಾವಗಳು, ನವೋನವವಾಗಿ ಮೇಲೆ ಚಿಮ್ಮುತ್ತ ಚಿಮ್ಮುತ್ತ ಕವಿಯ ಚೇತನ ; ಸಮಸ್ತವೂ ಆ ಭಾವ ಲಹರಿಯಲ್ಲಿ ಕರಗಿ ಹೊರಗಣದೆಲ್ಲವೂ ಮರೆತು ಆ ವಸ್ತು, ಆ ಸಂಬಂಧವಾದ ಕಲೆಯ ದರ್ಶನ, ಅದರ ವ್ಯಾವರ್ಣನ, ಅದರ ಪರಿಣಾಮವಾಗಿ ಮೇಲೆದ್ದ ಸುಪ್ತ ಭಾವಗಳ ಸ್ಪಂದನ, ಅದರ ಪರಿಣಾಮವಾಗಿ ದೊರೆತ ಒಂದು ತಲ್ಲೀನತೆ ಒಂದು ರಸಪರವಶತೆ, ಕೊನೆಗೆ ಕೊಟ್ಟ ಕೊನೆಗೇ, ಆ ರಸಸ್ಥಿತಿಯಲ್ಲಿ ತನಗೊದಗಿದ ಆನಂದ, ಇವೆಲ್ಲವನ್ನೂ ಧ್ವನಿ ರಮ್ಯವಾಗಿ ಹೊಮ್ಮಿಸುವ ವಾಣಿ ತಾನೆ ತಾನಾಗಿ ಹಿಗ್ಗಾಗಿ ಹರಿಯುವ ಸಂದರ್ಭಗಳನ್ನು ನೆನೆದಾಗ ಕವಿತೆ ಹೇಗೆ ಹುಟ್ಟುತ್ತದೆ ಎಂದು ಕೇಳಿದರೆ ಹೀಗೆ ಎಂದು ಹೇಳುವುದು ಹೇಗೆ?

೪

ಕಾವ್ಯ ಹೇಗೆ ಹುಟ್ಟುತ್ತದೆ ಎಂದಾಗ ಪ್ರತಿಭೆಯ ಮಾತು ಮೊದಲು ಬರುತ್ತದೆ. ನ್ಯಾಯವೇ. ಇದು ಒಂದು ವಿಶೇಷ ಶಕ್ತಿ, ಆದ್ದರಿಂದ ಇದು ದೈವದತ್ತವಾದದ್ದು, ಜನ್ಮಾಂತರದ ವಾಸನಾ ವಿಶೇಷದಿಂದ ಒಗೆದು ಬರತಕ್ಕದ್ದು ಎಂದು ಹೇಳುತ್ತಾರೆ. ಈ ಮಾತು ಹೇಗೇ ಇರಲಿ ಈ ಪ್ರತಿಭೆಯೊಂದೇ ಕಾವ್ಯರಚನೆಯಲ್ಲಿ ಕೆಲಸ ಮಾಡತಕ್ಕದ್ದು ಎಂಬ ಮಾತು ಸಮಂಜಸವಾದದ್ದಲ್ಲ. ಒಂದು ಕಾವ್ಯದಲ್ಲಿ ಕಲೆಯ ಭಾಗವೊಂದಿರುತ್ತದೆ, ಶಾಸ್ತ್ರದ ಭಾಗವೊಂದಿರುತ್ತದೆ. ಪ್ರತಿಭೆ ಎನ್ನುವುದು ಕಲೆಯ ಭಾಗಕ್ಕೆ ಸಂಬಂಧಪಟ್ಟು ಹಾಗೆ ಕೆಲಸ ಮಾಡತಕ್ಕದ್ದು. ಅಲ್ಲದೆ ಈ ಪ್ರತಿಭೆ ಒಂದು ಹೊಳಹು ಮಾತ್ರ. ಈಗೊಮ್ಮೆ ಆಗೊಮ್ಮೆ ಮಿಂಚಿ ಮರೆಯಾಗತಕ್ಕ ಒಂದು ಬೆಳಕು ಇದು. ಇಷ್ಟರಿಂದಲೆ ಒಂದು ಕಾವ್ಯ ಆದ್ಯಂತವಾಗಿ ಅಭಿವ್ಯಕ್ತಿಯನ್ನು ಪಡೆಯುವುದು ಹೇಗೆ? ಈ ಅಭಿವ್ಯಕ್ತಿಗೆ ಬೇರೊಂದು ಶಕ್ತಿಬೇಕು. ವಿಭಾವನೆಯೇ ಈ ಬೇರೊಂದು ಶಕ್ತಿ. ಪ್ರತಿಭೆ ವಿಭಾವನೆಗಳ ಕಾರ್ಯವನ್ನು ಒಂದು ಉದಾಹರಣೆಯಿಂದ ಹೀಗೆ ವಿವರಿಸಬಹುದು.

ಮಳೆಯ ದಿನಗಳಲ್ಲಿ ರಾತ್ರಿಯ ವೇಳೆಗಳಲ್ಲಿ ದಾರಿ ನಡೆಯುವ ನಮಗೆ ದಾರಿಕಾಣದೆ ತೊಳಲಾಡುತ್ತಿರುವಾಗ, ಅಡಿ ಎಡಹುತ್ತಿರುವಾಗ, ನಡೆ ಕುಂಟುತ್ತಿರುವಾಗ, ಇದ್ದಕ್ಕಿದ್ದ ಹಾಗೆಯೆ ಫಳ್ಳನೆ ಒಂದು ಮಿಂಚು ಆ ಕಪ್ಪು ಮೋಡದ ಒಡಲಿನಲ್ಲಿ ಈ ತುದಿಯಿಂದ ಆ ತುದಿಯವರೆಗೆ ಹಾವಿನ ಹಾಗೆ ಹರಿದು ಹೊಳೆದು ಮರೆಯಾಗಿ ಬಿಡುತ್ತದೆ. ಆಗ ನಮಗೆ ನಮ್ಮ ಮುಂದಣ ದಾರಿ ಇದ್ದಕ್ಕಿದ್ದ ಹಾಗೆಯೆ ಕಾಣಿಸುತ್ತದೆ. ಆದರೆ ಕ್ಷಣಮಾತ್ರದಲ್ಲಿ ಮಿಂಚು ಅಳಿದು ಕತ್ತಲೆ ಆವರಿಸುತ್ತದೆ. ಆ ಹೊಳಹಿನ ನೆನಹಿನಲ್ಲಿ, ಹಿಂದಿನ ಅನುಭವದಲ್ಲಿ ನಾವು ಅಡಿಯಿಟ್ಟು ದಾರಿ ತಪ್ಪದೆ ಗುರಿ ಮುಟ್ಟುತ್ತೇವೆ. ನಡುನಡುವೆ ಮತ್ತೆ ಮತ್ತೆ ಮಿಂಚು ಮಿಂಚುತ್ತಲೆ ಇರುತ್ತದೆ, ನಮಗೆ ನೆರವಾಗುತ್ತಲೆ ಇರುತ್ತದೆ. ಪ್ರತಿಭೆ ಮಿಂಚಿನಂತೆ. ಮಿಂಚು ಹೊರಗಿನ ಶಕ್ತಿ. ಅದು ಹೊಳೆದಾಗ ಆ ಮೊದಲೆಯೆ, ಆ ಕತ್ತಲೆಯಲ್ಲಿಯೆ, ಇದ್ದ ಆ ದಾರಿ ಸ್ಪಷ್ಟವಾಗಿ ಕಾಣಿಸುತ್ತದೆ ನಮಗೆ. ಹಾಗೆ ಮಿಂಚಿನ ಹೊಳಹಿನಲ್ಲಿ ಕಂಡ ಹಾದಿಯಲ್ಲಿ ಹೋಗುವುದು ನಮ್ಮ ದೇಹಶಕ್ತಿಯನ್ನೇ ನಮ್ಮ ಮನಶ್ಶಕ್ತಿಯನ್ನೇ ಅವಲಂಬಿಸಿರುತ್ತದೆ. ನಾವು ಕಾಣುವುದು ಆ ಶಕ್ತಿಯಿಂದ. ನಡೆಯುವುದು ಈ ಶಕ್ತಿಯಿಂದ. ದಾರಿಯನ್ನು ಕಾಣಿಸುವುದು ಮಿಂಚಿನ ಹೊಳಹು, ದಾರಿಯನ್ನು ಸಾಗಿಸುವುದು ನಮ್ಮ ಕಸುವು. ಮಿಂಚಿಲ್ಲದಿದ್ದರೂ ಕಸುವಿನ ಬಲದಿಂದ ದಾರಿ ಸಾಗುವುದೂ ಉಂಟು. ಇದರಲ್ಲಿ ಪ್ರಯಾಸ ಹೆಚ್ಚು. ಪ್ರಮೋದ ಕಡಿಮೆ. ಕಾವ್ಯ ರಚನೆಯ ಹಾದಿಯಲ್ಲಿಯೂ ಹೀಗೆಯೇ, ಪ್ರತಿಭೆ ಮಿಂಚಿನಂತೆ, ವಿಭಾವನೆ ಕಸುವಿನಂತೆ. ಕೃತಿಯ ರಚನೆಯಲ್ಲಿ ಪ್ರತಿಭೆಯ ಕಾರ್ಯ ಇಷ್ಟು ಮಾತ್ರ.

೫

ಕವಿತೆಯ ರಚನೆಯಲ್ಲಿ ಪ್ರತಿಭೆಯ ಕಾರ್ಯ ಒಕ್ಕಾಲು, ವಿಭಾವನೆಯ ಕಾರ್ಯ ಮುಕ್ಕಾಲು ಎಂದು ಹೇಳಬಹುದು. ಇಂಗ್ಲಿಷಿನಲ್ಲಿ Inspiration ಎಂದು ಹೇಳುವ ಮಾತಿಗೆ ನಾವು ಇಲ್ಲಿ ಪ್ರತಿಭೆ ಎಂಬುದಾಗಿಯೂ ಅಲ್ಲಿ Imagination ಎಂದು ಹೇಳುವ ಮಾತಿಗೆ ನಾವು ಇಲ್ಲಿ ವಿಭಾವನೆ ಎಂಬುದಾಗಿಯೂ ಹೇಳಬಹುದು. ಈ ಮೊದಲೆ ಪ್ರೊ. ಎಸ್. ವಿ. ರಂಗಣ್ಣನವರು ಹೀಗೆ ಈ ಅರ್ಥಗಳಲ್ಲಿ ಈ ಪದಗಳನ್ನು ಬಳಸಿ ನಮಗೆ ತುಂಬ ಉಪಕಾರ ಮಾಡಿದ್ದಾರೆ. ಕಾವ್ಯರಚನೆಯಲ್ಲಿ ವಿಭಾವನೆಯ ಪಾತ್ರ ಬಹಳ ದೊಡ್ಡದು. ಸಂಭಾಷಣೆಗಳ ಹೆಣಿಗೆ, ಸನ್ನಿವೇಶಗಳ ಜೋಡಣೆ, ಪಾತ್ರಗಳ ಗುಣಶೀಲಗಳ ವಿವರಣೆ, ದೃಶ್ಯಗಳ ವ್ಯಾವರ್ಣನೆ, ರಸಪ್ರತೀತಿಯ ಯೋಜನೆ, ಈ ಮುಂತಾದವುಗಳಲ್ಲೆಲ್ಲ ವಿಭಾವನೆಯ ಶಕ್ತಿ ಕೆಲಸಮಾಡಿರುತ್ತದೆ. ಛಂದಸ್ಸಿನ ಆಯ್ಕೆ, ಭಾಷೆಯ ಬಳಕೆ, ನಿರೂಪಣೆಯ ಕೌಶಲ, ಶಬ್ದಾಲಂಕಾರ ಅರ್ಥಾಲಂಕಾರಗಳ ರಚನೆ ಇವೂ ವಿಭಾವನಾ ಶಕ್ತಿ ಜನ್ಯವಾದುವೇ. ಪ್ರತಿಭೆಯ ಹೊಳಹಿನಿಂದ ಒಂದು ಸಾಲು ಸೂಚಿತವಾದರೆ ಅದಕ್ಕೆ ಪೋಷಕವಾಗಿ, ಊರೆಯಾಗಿ, ಅಲಂಕಾರವಾಗಿ, ಇನ್ನು ಒಂದು ಎರಡು ಅಥವಾ ಮೂರು ಸಾಲು ಕೂಡಿಸುವುದು ಸಾಧ್ಯವಾಗುತ್ತದೆ, ವಿಭಾವನಾ ಶಕ್ತಿಯ ನೆರವಿನಿಂದ. ನನ್ನ ಮುಕ್ತಕಗಳ ರಚನೆ ಎಷ್ಟೋ ವೇಳೆ ನಡೆದಿರುವುದೇ ಹೀಗೆ. ಕಾಳಿದಾಸನ ಶಾಕುಂತಳ ನಾಟಕದಲ್ಲಿ ಜಿಂಕೆ, ದುಂಬಿ, ಕಾಡಾನೆ, ಮಾವಿನ ಮರ, ಮಲ್ಲಿಗೆ ಬಳ್ಳಿ, ಕೋಗಿಲೆ, ಗುರುತಿನ ಉಂಗುರ, ಮುನಿಯ ಶಾಪ ಈ ಮುಂತಾದ ಘಟನೆಗಳು, ಸಂಗತಿಗಳು, ಆ ಮಹಾ ಕವಿಯ ದಿವ್ಯ ಪ್ರತಿಭೆಯಿಂದ ಹುಟ್ಟಿಬಂದವುಗಳೇ. ಆದರೆ ವಿವಿಧೋದ್ದೇಶಗಳಿಗಾಗಿ ಇವುಗಳನ್ನು ಅಳವಡಿಸಿದ ಶಿಲ್ಪ ಕೌಶಲ ಮಾತ್ರ ಆ ಕವಿಯ ವಿಭಾವನಾಶಕ್ತಿಯ ದಿವ್ಯ ಫಲ. ಆದ್ದರಿಂದ ಪ್ರತಿಯೊಬ್ಬ ಕವಿಯೂ ತನ್ನ ವಿಭಾವನಾ ಶಕ್ತಿಯನ್ನು ಬೆಳಸಿಕೊಳ್ಳಬೇಕು. ಬಲಪಡಿಸಿಕೊಳ್ಳಬೇಕು. ವಿಭಾವನಾ ಶಕ್ತಿಯ ಸಂವರ್ಧನೆಗೆ ವ್ಯುತ್ಪತ್ತಿಯೇ ಜೀವಾತು. ಒಂದು ಕಡೆ ಶಾಸ್ತ್ರವ್ಯಾಸಂಗ, ಇನ್ನೊಂದು ಕಡೆ ಲೋಕಾನುಭವ ಇವೆರಡರ ಸಹಾಯದಿಂದ ನಾವು ಜ್ಞಾನಾರ್ಜನೆ ಮಾಡಿಕೊಂಡಂತೆಲ್ಲ ನಮ್ಮ ವಿಭಾವನಾಶಕ್ತಿ ಬಲಿಷ್ಠವಾಗುತ್ತದೆ, ಗರಿಷ್ಠವಾಗುತ್ತದೆ. ಕಾವ್ಯ ಜಿಜ್ಞಾಸೆ, ಶಾಸ್ತ್ರಪರಿಚಯ, ಮಹಾಜನ ಸಂಪರ್ಕ, ದೇಶಪರ್ಯಟನೆ, ಸತತಾಭ್ಯಾಸ ಪ್ರಯತ್ನ, ವೃದ್ಧಸೇವಾನುರಾಗ ಈ ಮುಂತಾದ ಮತ್ತು ಹೀಗೆ ಹೆಸರಿಸದಿರುವ ಆದರೆ ನೀವು ನಾವು ಅರಿತಿರುವ ಹಲವು ಹತ್ತು ರೀತಿಗಳಿಂದ ನಮ್ಮ ಜ್ಞಾನಭಂಡಾರವನ್ನು ತುಂಬಿಕೊಂಡು ಪಂಡಿತರಾದರೆ ವಿದ್ವಾಂಸರಾದರೆ ವಿಮರ್ಶಕರಾದರೆ ರಸಿಕರಾದರೆ ಆಗ ನಮ್ಮ ಕವಿತೆ ನಾಲ್ಕುಕಾಲ ನಿಲ್ಲುವ ಕವಿತೆಯಾಗುತ್ತದೆ.

ಶಾಸ್ತ್ರಶ್ರೀರೋಹಣ ಗಿರಿಯನ್ನು ಯಾರು ಯಾರು ಏರಿಲ್ಲ? ಅಲ್ಲಿ ಕವಿತಾ ಚಿಂತಾರತ್ನ ಮಾರಾರಿಯ ಕೃಪೆ ಇಲ್ಲದವನಿಗೆ ದೊರಕುತ್ತದೆಯೆ? ಎಂಬ ಷಡಕ್ಷರಿಯ ಮಾತು ತುಂಬ ಯೋಗ್ಯವಾಗಿದೆ. ಕವಿತಾಶಕ್ತಿ ಈಶ್ವರ ಕೃಪೆ ಎಂಬ ಅಭಿಪ್ರಾಯದ ಜೊತೆಗೆ ಶಾಸ್ತ್ರಶಿರೋಹಣ

ಗಿರಿಯಲ್ಲಿಯೆ ಕವಿತಾ ಚಿಂತಾರತ್ನ ಹುದುಗಿದೆ ಎಂಬ ಅಭಿಪ್ರಾಯವೂ ಇಲ್ಲಿ ಪ್ರಕಟವಾಗಿದೆ. ಇದು ನಮಗೆ ಮುಖ್ಯವಾದದ್ದು. ಜ್ಞಾನದ ಬೆಲೆ ಎಷ್ಟು ಎಂಬುದನ್ನು ಬಲ್ಲ, ಕವಿ. ಶಾಸ್ತ್ರವನ್ನು ರೋಹಣಗಿರಿಯೆಂದು ಕರೆದಿರುವುದು ಸರ್ವಥಾ ಸಮಂಜಸವಾಗಿದೆ. ಈ ಶ್ರೀರೂಪಕ ನಮಗೆ ಎಂತಹ ಮಾರ್ಗದರ್ಶಕ! ಕವಿತಾ 'ಚಿಂತಾರತ್ನ'ವು ಸಿಗುವುದೂ ಬಿಡುವುದೂ ಹರೇಚ್ಛೆ, ಈಶ್ವರಕೃಪೆ. ಆದರೆ ಈ ಶಾಸ್ತ್ರರೋಹಣಾರೋಹಣ ಮಾತ್ರ ನಮಗೆ ಆದ್ಯಕರ್ತವ್ಯ. ಏಕೆಂದರೆ ಈ ಗಿರಿಯಲ್ಲಿಯೆ ಅಲ್ಲವೆ ಆ ಕವಿತಾಚಿಂತಾರತ್ನ ಹುದುಗಿರುವುದು!

ವಿಭಾವನಾಶಕ್ತಿಯ ಸಂವರ್ಧನೆಗೆ ವ್ಯುತ್ಪತ್ತಿಯೇ ಜೀವಾತುವೆಂದೂ ಅದು ಶಾಸ್ತ್ರವ್ಯಾಸಂಗದಿಂದ ಊರ್ಜಿತಗೊಳ್ಳತಕ್ಕದ್ದೆಂದೂ ಹೇಳಿದ ಮೇಲೆ ಲೋಕಾನುಭವದ ಮಾತನ್ನು ಇಲ್ಲಿ ಹೇಳಬೇಕು. ಕವಿಗೆ ಅನುಭವ ಎಷ್ಟು ಮುಖ್ಯ, ಅದು ಎಷ್ಟು ಪ್ರಮಾಣಿಕವಾಗಿರಬೇಕು ಎಂಬುದನ್ನು ನಾವೆಲ್ಲ ಬಲ್ಲೆವು. ಈಗಿನವರು ಹೇಳುವ ಹಾಗೆ ನಮ್ಮ ಕೃತಿಯಲ್ಲಿ 'ಸಾಮಾಜಿಕ ಪ್ರಜ್ಞೆ' ಅರಳಬೇಕಾದರೆ 'ಮಣ್ಣಿನ ವಾಸನೆ' ಹೊಡೆಯಬೇಕಾದರೆ ನಮ್ಮ ಅನುಭವ ಆಳವಾಗಿರಬೇಕು, ವಿಶಾಲವಾಗಿರಬೇಕು. ಹುಟ್ಟಿನಿಂದ, ಪರಿಸರದಿಂದ, ಕಲಿಕೆಯಿಂದ, ಸಹವಾಸದಿಂದ, ವೃತ್ತಿಯಿಂದ ಅಮ್ಮ ಅನುಭವ ರೂಪುಗೊಳ್ಳುತ್ತದೆ. ಸಾವಿರಪೆಟ್ಟಿನಿಂದ ಒಂದು ವಿಗ್ರಹ ಅದಹಾಗೆ ತಲೆಗೆ ತಾಕಿದ ಮೇಲೆ ಬುದ್ಧಿಬಂದ ಹಾಗೆ ಈ ಅನುಭವ ಬಂದು ನಮ್ಮ ವ್ಯುತ್ಪತ್ತಿಗೆ ಒಂದು ಕೋಡು ಮೂಡುತ್ತದೆ, ನಮ್ಮ ಮಾತಿಗೆ ಒಂದು 'ಬೆಲೆ' ಬರುತ್ತದೆ, ನಮ್ಮ ನೀತಿಗೆ ಒಂದು 'ನೆಲೆ' ಬರುತ್ತದೆ. ನಮ್ಮ ಕಾವ್ಯವಸ್ತು, ನಮ್ಮ ನಿರೂಪಣಕ್ರಮ, ನಮ್ಮ ಭಾಷಾ ಪ್ರಯೋಗ, ನಮ್ಮ ಪ್ರತೀಕ ಸೃಷ್ಟಿ, ಈ ಮುಂತಾದವುಗಳಲ್ಲಿ ನಮ್ಮ ನಮ್ಮ ವೈಶಿಷ್ಟ್ಯವು ಎದ್ದು ಕಾಣಬೇಕಾದರೆ ಅದಕ್ಕೆ ನಮ್ಮ ನಮ್ಮ ಅನುಭವವೇ ಕಾರಣ. ಅನುಭವದ ಬೆಳೆ ಹೆಚ್ಚಿದಷ್ಟೂ ವಿಭಾವನೆಯ ಬೆಲೆ ಹೆಚ್ಚು.

ಪ್ರತಿಭೆಯ ಹೊಳವು ದೇವದತ್ತ, ಶಾಸ್ತ್ರಜ್ಞಾನದ ಸುಳಿವು ಗುರುದತ್ತ. ಅನುಭವದ ಅರಿವು ಪರಿಸರದತ್ತ ಎಂದಮೇಲೆ ನಮ್ಮ ಕೈಯಲ್ಲಿಯೇ ಉಳಿದಿರುವುದು ಏನಿದೆ? ಸತತಾಭ್ಯಾಸ ಪ್ರಯತ್ನವೊಂದೇ ಎಂದೇ ನನ್ನ ಎಣಿಕೆ. ಯಾವುದಾದರೂ ಸರಿಯೆ ಮೊದಮೊದಲು ಹವ್ಯಾಸವಾಗಿ ಆರಂಭವಾಗಿ ಬರಬರುತ್ತ ಅದೇ ಅಭ್ಯಾಸವಾಗಿ ಕೊನೆಕೊನೆಗೆ ಅದೇ ಸ್ವಭಾವವಾಗಿ ನೆಲೆನಿಂತುಬಿಡುತ್ತದೆ. ಕಾವ್ಯದ ಅಭ್ಯಾಸಕ್ಕೂ ಈ ಸೂತ್ರ ಅನ್ವಯಿಸುತ್ತದೆ. 'ಆರವತ್ತು ಸಾರಿ ಅಳಿಸಿ ಬರೆಯೊ ಕವಿಯೇ' ಎಂಬ ರಂಗಯ್ಯನ 'ಬಿನ್ನಪ' ವನ್ನು ನಾವು ಶಾಸನದ ವಾಕ್ಯದಂತೆ ಪರಿಪಾಲಿಸಿದರೆ ಲೇಸು. ಸತತಾಭ್ಯಾಸವೆನ್ನುವುದು ಒಂದು ತಪಸ್ಸು. ಆ ತಪಸ್ಸಿಗೆ ಮಾತ್ರ ಪ್ರತ್ಯಕ್ಷಳಾಗುತ್ತಾಳೆ, ಪ್ರತಿಭಾತಟಿಲಕ್ಷ್ಮಿ! ಅಭ್ಯಾಸದಿಂದ ಕೈ ಪಳಗುತ್ತದೆ, ಬುದ್ಧಿಯ ಕಾರ್ಯ ಸಲೀಲವಾಗಿ ಸಾಗುತ್ತದೆ. ಅಭ್ಯಾಸ ಮನಸ್ಸಿನ ಒಂದು ವ್ಯಾಯಾಮ, ಒಂದು ಶಿಕ್ಷೆ. ಕತ್ತಿಗೆ ಸಾಣೆ ಹೇಗೆ, ನೆಲಕ್ಕೆ ಉಳುಮೆ ಹೇಗೆ, ಮರಕ್ಕೆ ಕಸಿ ಹೇಗೆ, ಕವಿಗೆ ಅಭ್ಯಾಸ ಹಾಗೆ. ಸಂಗೀತ ಚಿತ್ರ ನರ್ತನ ಶಿಲ್ಪ ಈ ಲಲಿತ ಕಲೆಗಳ ಹಾಗೆ ಸಾಹಿತ್ಯವೂ ಕಲೆ, ಲಲಿತ ಕಲೆ. ಎಂದಮೇಲೆ ಆ ಕಲೆಗಳ ಸಿದ್ಧಿಗೆ ಸಾಧಕನು ನಡೆಸುವ ಅಭ್ಯಾಸವೆಷ್ಟು! ಈ ಕಲೆಯ ಸಿದ್ಧಿಗೆ ಸಾಹಿತಿ ನಡೆಸುವ ಅಭ್ಯಾಸವೆಷ್ಟು? ವಿಜ್ಞಾನಿ ಹೇಗೆ, ತತ್ತ್ವಜ್ಞಾನಿ ಹೇಗೆ, ಅನುಭಾವಿ ಹೇಗೆ ಕವಿಯೂ ಹಾಗೆಯೆ ಶೋಧನಾನಿರತನಾಗಿ ಅಭ್ಯಾಸರಹಿತನಾಗಿ ಪ್ರಯೋಗತತ್ಪರನಾಗಿ ಸಾಧನಸ್ಗೈಯಬೇಕು. ಆಗ ಮಾತ್ರ ಕವಿ ಕರ್ಮ ಹಸನಾಗುತ್ತದೆ. ಇಂತಹ ಅಭ್ಯಾಸದಿಂದ ಕವಿಗೂ ಕ್ಷೇಮ. ಇಂತಹ ಕವಿಯಿಂದ ವಾಚಕನಿಗೂ ಕ್ಷೇಮ.

ಹೀಗೆ ಗ್ರಂಥಾವಲೋಕನ, ಲೋಕಾನುಭವ, ಸತತಾಭ್ಯಾಸ ಇವು ಮೂರೂ ಕೂಡಿದ ವ್ಯುತ್ಪತ್ತಿಯ ಸಂಪನ್ಮೂಲದ ಮೇಲೆ ಕವಿ ತನ್ನ ವಿಭಾವನಾ ವ್ಯವಹಾರವನ್ನು ಬೆಳಸುತ್ತಾನೆ, ಕವಿತಾ ಚಿಂತಾರತ್ನದ ಹರದುಗ್ಗೈಯುತ್ತಾನೆ. ಎಂದಮೇಲೆ ವಿಭಾವನೆಯ ಪ್ರಭಾವವೇನು? ಪ್ರಾಮುಖ್ಯವೇನು? ಆ ವಿಭಾವನೆಗೆ ಮೂಲವಾದ ಈ ವ್ಯುತ್ಪತ್ತಿಯ ಅವಶ್ಯಕತೆಯೇನು ಎಂದು ಈ ವರೆಗೆ ನಾವು ನೋಡಿದೆವು. ಇಲ್ಲಿ ಒಂದು ಚಿಕ್ಕ ಉದಾಹರಣೆ ಪ್ರಕೃತವೆಂದು ನನಗೆ ಅನಿಸುತ್ತದೆ. ಈಗ ನೋಡಿ: ಹದಿಬದೆಯ ಧರ್ಮದಂತಹ ಒಂದು ಕಾವ್ಯವನ್ನು ರಚಿಸಬೇಕೆಂದು ಒಬ್ಬ ಕವಿ ಇಚ್ಛಿಸಿದರೆ ಆತ ಅಥವಾ ಆಕೆ ಅದಕ್ಕಾಗಿ ಎಷ್ಟು ಸಿದ್ಧತೆ ಮಾಡಿಕೊಳ್ಳಬೇಕು? ಆಲೋಚಿಸಿ! ಹೊನ್ನಮ್ಮನು ಮಾಡಿಕೊಂಡಿದ್ದ ಸಿದ್ಧತೆಯ ಜೊತೆಗೆ ಅದಕ್ಕೆ ಹತ್ತು ಮಡಿಯಾಗಿ ಈಗಿನ ಕಾಲಕ್ಕೆ ತಕ್ಕ ಹಾಗೆ ಬೇರೆಯ ಸಿದ್ಧತೆಗಳನ್ನು ಯಶಸ್ವಿಯಾಗಿ ಪೂರೈಸಿಕೊಂಡಿರಬೇಕಲ್ಲವೆ? ಸಮಾಜ ವಿಜ್ಞಾನ, ದಾಂಪತ್ಯ ವಿಜ್ಞಾನ, ಆಹಾರ ವಿಜ್ಞಾನ, ಶಿಶು ಸಂಗೋಪನ ವಿಜ್ಞಾನ, ಕುಟುಂಬಯೋಜನೆ, ಗೃಹ ವಿಜ್ಞಾನ, ಮನಶ್ಶಾಸ್ತ್ರ,

ಅರ್ಥಶಾಸ್ತ್ರ, ಕಾಮಶಾಸ್ತ್ರ, ರಾಜ್ಯಶಾಸ್ತ್ರ, ದೇಶವಿದೇಶ ಇತಿಹಾಸ, ಕಲೆ, ಸಂಸ್ಕೃತಿ ನಾಗರಿಕತೆ–ಹೀಗೆ ಎಷ್ಟೊಂದು ಬಗೆಯ ವ್ಯುತ್ಪತ್ತಿ ಈ ಹೊತ್ತು ಬದಿಬದಿಯ ಧರ್ಮವನ್ನು ಬರೆಯುವ ಕವಿಯಿತ್ರಿಗೆ ಇರಬೇಡ!

ಈ ವ್ಯುತ್ಪತ್ತಿಯ ಯಾದಿಯ ವಿವರವನ್ನು ನೆನೆದರೆಯೆ ಎದೆ ನಡುಗುತ್ತದೆ. ಹಾಗೆಂದು ಇಂತಹ ಒಂದು ಕಾವ್ಯ ಈಗ ಬೇಡ ಎನ್ನುತ್ತೀರಾ? ಬದಲಾಯಿಸುತ್ತಿರುವ ಇಂದಿನ ಸಮಾಜದಲ್ಲಿ ದಿನದಿನಕ್ಕೆ ಹೊಸ ಹೊಸ ಮೌಲ್ಯ ಗಳು ಹುಟ್ಟಿಕೊಳ್ಳುತ್ತಿರುವಾಗ ಹಳೆಯ ಮೌಲ್ಯಗಳು ಏರುಪೇರುಗೊಳ್ಳುತ್ತಿರುವಾಗ ಹೆಣ್ಣಿಗೆ ಗಂಡು ಹೇಳುವ ಬುದ್ಧಿವಾದ ಯಾವುದು, ಗಂಡಿಗೆ ಹೆಣ್ಣು ಹೇಳುವ ಬುದ್ಧಿವಾದ ಯಾವುದು ಎಂಬ ವಿಷಯದ ವಿವರ ನಮ್ಮ ಮಕ್ಕಳಿಗೆ ಗುಡಜಿಹ್ವಿಕಾನ್ಯಾಯವಾಗಿ ಕಾಂತಾಸಂಮಿತ ವಾಗಿ ಕಾವ್ಯದ ಸುಭಾಷಿತವಾಗಿ ಸಮ-ಕಾಲೀನ ಪ್ರಜ್ಞೆಯ ಕುರುಹಾಗಿ ದೊರೆಯಬೇಡವೆ? ಈಗಿನ ಎಲ್ಲ ಕವಿಗಳೂ ಒಂದು ವಿರಹದ ಗೀತವಾಗಿ ಒಂದು ಭೋಗದ ಗೀತವಾಗಿ ಒಂದು ನೀತಿಯ ಮಾತಾಗಿ ಆಗೊಮ್ಮೆ ಈಗೊಮ್ಮೆ ಆಣಿ ಮುತ್ತುಗಳಂತಹ ಕವಿತೆಗಳನ್ನು ಬರೆದದ್ದುಂಟು. ಪ್ರೇಮದ ಎಷ್ಟೋ ಮುಖಗಳನ್ನು ಕುರಿತು, ನೋವು ನಲಿವುಗಳನ್ನು ಕುರಿತು ಸ್ವಾನುಭವವನ್ನೂ ಪರಾನುಭವವನ್ನೂ ಹಾಡಿದ್ದುಂಟು. ಪ್ರೇಮಗೀತೆಗಳನ್ನೆ ಆಯ್ದು ಪ್ರಕಟಿಸಿದ ಹಿರಿಯ ಕವಿಗಳ ಸಂಕಲನಗಳೂ ನಮ್ಮಲ್ಲಿವೆ. ಆದರೆ ಒಂದು ಶ್ರವಣಾರ್ಹವಾದ ಅಭಿನವ ಸತೀಗೀತೆಗೆ ಇದು ಸಕಲ ವಾಗಿದೆ ಎಂಬುದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಈ ಒಂದು ಸಣ್ಣ ನಿದರ್ಶನದಿಂದ ವ್ಯುತ್ಪತ್ತಿಯ ಮತ್ತು ಅದರ ತಳಹದಿಯಲ್ಲಿ ನಿಂತು ಕೆಲಸ ಮಾಡುವ ವಿಭಾವನೆಯ ವ್ಯಾಪಕತೆಯ ಅರಿವು ನಮಗಾದೀತು. ಇದರ ಮೇಲೆ ಬೃಹದ್ದರ್ಶನದ ಮೇರುಕೃತಿಗಳ ನಿರ್ಮಾಣಕ್ಕೆ ಎಂತಹ ವ್ಯುತ್ಪತ್ತಿಯ ಸಂಪನ್ಮೂಲವನ್ನು ನಾವು ರೂಢಿಸಿಕೊಂಡಿರಬೇಕೆಂಬುದನ್ನು ಪ್ರತ್ಯೇಕವಾಗಿ ತಿಳಿಸಬೇಕಾಗಿಲ್ಲ

ಪಂಪರನ್ನಾದಿ ಪ್ರಾಚೀನ ಕವಿಗಳೆಲ್ಲರೂ ಉಭಯ ಭಾಷಾ ಪಂಡಿತರು. ತಮ್ಮ ತಮ್ಮ ಮತಧರ್ಮಗಳ ತತ್ತ್ವಗಳನ್ನು ಗುರುಮುಖದಿಂದ ಆಳವಾಗಿ ಅಭ್ಯಾಸ ಮಾಡಿದ್ದವರು. ತಮ್ಮ ಮೆಚ್ಚಿನ ಹಿಂದಿನ ಕವಿಗಳನ್ನು ಭಕ್ತಿಯಿಂದ ಅಧ್ಯಯನ ಮಾಡಿದ್ದವರು. ಪಂಪರನ್ನರಿಗೆ ನಯಸೇನ ಆಂಡಯ್ಯರಿಗೆ ವ್ಯತ್ಯಾಸವಿದ್ದರೆ ಪ್ರತಿಭೆಯಲ್ಲಿಯೇ ಹೊರತು ಪಾಂಡಿತ್ಯದಲ್ಲಿ ಅಲ್ಲ. ಹಿಂದಿನ ಕವಿಗಳೆಲ್ಲರೂ ಘನಪಂಡಿತರು, ಪ್ರತಿಭೆಯಲ್ಲಿ ಒಬ್ಬರು ಮೇಲಿ ಒಬ್ಬರು ಕೆಳಗೆ ಎನ್ನಬಹುದೇ ಹೊರತು ಪಾಂಡಿತ್ಯದಲ್ಲಿ ಹಿಂದಿನವರಲ್ಲಿ ಯಾರೂ ಯಾರಿಗೂ ಮೇಲಲ್ಲ, ಯಾರಿಗೂ ಕೆಳಗಲ್ಲ. ಎಲ್ಲರೂ ಸಮಾನರು ನಮ್ಮ ನವೋದಯ ಕಾಲದ ಶ್ರೀ, ಪಂಜೆ, ಪೈ, ಮುಂತಾದವರ ಬಹುಮುಖವಾದ ಪಾಂಡಿತ್ಯವನ್ನೂ ನಾವು ಬಲ್ಲೆವು. ಆದರೆ ಈಗ ನನ್ನನ್ನೂ ಸೇರಿಸಿಕೊಂಡು ನನ್ನ ವಯಸ್ಸಿನ ಮತ್ತು ನನಗಿಂತ ಕಿರಿಯರ ವಿಷಯದಲ್ಲಿ ಪಾಂಡಿತ್ಯದ ವಿಷಯವಾಗಿ ಈ ಮಾತು ಹೇಳಬಹುದೆ? ಪಾಂಡಿತ್ಯವೆಂದರೆ ಶಾಸ್ತ್ರ ಜ್ಞಾನ. ಒಂದು ಕಡೆ ಶಾಸ್ತ್ರಜ್ಞಾನ, ಒಂದು ಕಡೆ ಲೋಕಾನುಭವ, ಒಂದು ಕಡೆ ಅಭ್ಯಾಸ. ಈ ಮೂರು ಶಕ್ತಿಗಳ ಸಮನ್ವಯದಿಂದ ನಮ್ಮ ಕಲ್ಪನೆಯೇ ಬರಡಾಗುತ್ತದೆ. ನಮ್ಮ ವರ್ಣನಾಸಾಮರ್ಥ್ಯವೇ ಬಂಜೆಯಾಗುತ್ತದೆ. ಈಗಿನ ಕೆಲವರ ಬರಹ ವಾಸ್ತವಿಕತೆಯ ವಿಷಯವಾದ ಅತಿ ಮಮತೆಯ ವ್ಯಾಜದಲ್ಲಿ ಸಪ್ಪೆಯಾಗಿ ಕಾಣುತ್ತದೆ. ಅಹಿಂಸೆ ಎಂದರೆ ಬಲಾಢ್ಯನ ಅಹಿಂಸಾವಾದವಾದರೆ ಹೇಗೆ ನಾವು ಮೆಚ್ಚುತ್ತೇವೆಯೋ ವಾಸ್ತವಿಕತೆ ಎಂದರೆ ಪಂಡಿತೋತ್ತಮನ, ವಿಭಾವನಾಸಂಪನ್ನನ ವಾಸ್ತವಿಕತಾವಾದವಾದರೆ ನಾವು ಮೆಚ್ಚುತ್ತೇವೆ. ವ್ಯುತ್ಪತ್ತಿಸಂಪನ್ನರಾದ ಯುವಕರಲ್ಲಿ ಯಾರಾದರೊಬ್ಬರು ಇನ್ನೊಂದು 'ಮೇಘದೂತ'ವನ್ನು ನಮಗೆ ಕೊಡಬೇಕು. ಈಗಿನ ಈ ಆಹಾರಾದಿಗಳ ಅಭಾವದ ದಿನಗಳಲ್ಲಿ ಆಗಿನ ಆ ಗುಪ್ತರ ಸುವರ್ಣಯುಗದ ಪರ್ವ ಸಮೃದ್ಧಿಯ ದಿನಗಳಲ್ಲಿ ಹುಟ್ಟಿದ ಮೇಘದೂತ ಮತ್ತೆ ಹುಟ್ಟೀತೆ ಎನ್ನಬೇಡಿ. ಸಾಮಾನ್ಯವಾದ ರಾಮಕಥಾ ಚಿತ್ರಕ್ಕೆ ಮುದ್ದಣ ಮನೋರಮೆಯರ ಸಂವಾದದ ಸುವರ್ಣದ ಚೌಕಟನ್ನು ಅಳವಡಿಸಿ ಕೊಟ್ಟ ಕವಿಯ ಕಾಲ ಯಾವುದು? ಆತನ ನಿತ್ಯ ಜೀವನದ ರಿಕ್ತತೆ ಎಂತಹುದು? ಪ್ರತಿಭೆ ವಿಭಾವನೆಗಳ ಶ್ರೀಮಂತಿಕೆ ಇದ್ದರೆ 'ಮೇಘದೂತ'ವೇ ಏಕೆ 'ಕಾದಂಬರಿ'ಯೇ ಹೊರಬರಬಹುದು. ಯೋಜನಾ ಬದ್ಧವಾದ ಅಧ್ಯಯನದಲ್ಲಿ ತೊಡಗಿ ಹತ್ತು ಇಪ್ಪತ್ತು ವರ್ಷಗಳ ತಪಸ್ಸು ಮಾಡಿದರೆ ನಮ್ಮ ಯುವಕರು ಉತ್ಕೃಕೃತಿಗಳನ್ನು ನೀಡುವುದರಲ್ಲಿ ಯಾವ ಸಂಶಯವೂ ಇಲ್ಲ. ಪಾಂಡಿತ್ಯದ ಅಭಾವ ಈಗೀಗ ತಲೆದೋರುತ್ತಿದೆ ಎಂಬ ಒಂದು ಅನುಮಾನ ದೊಡ್ಡವರಲ್ಲಿ ಕೆಲವರನ್ನು ಕಾಡಿಸುತ್ತಿದೆಯಾಗಿ ಇಷ್ಟು ಹೇಳಿದ್ದೇನೆ. ವಿಭಾವನೆಯ ಸಂಪನ್ಮೂಲವಾದ ವ್ಯುತ್ಪತ್ತಿಯ ವಿಷಯವಾಗಿ.

ಇಷ್ಟೆಲ್ಲ ಹೇಳುವುದಕ್ಕೆ ಇನ್ನೂ ಒಂದು ಕಾರಣವಿದೆ. ಪ್ರತಿಭೆ ಎಷ್ಟೇ ದೈವದತ್ತವಾದದ್ದೆಂದು ಹೇಳಿದರೂ ಶಕ್ತಿ

ಯನ್ನು ಹರಿತಗೊಳಿಸುವ ಹುರುಪುಗೊಳಿಸುವ ವಿಪುಳಗೊಳಿಸುವ ಶಕ್ತಿ ನಮ್ಮಲ್ಲಿಯೇ ಇದೆ. ಸಂಸ್ಕಾರ, ಚಾರಿತ್ರ, ಸಂಕಲ್ಪ ಮತ್ತು ವ್ಯುತ್ಪತ್ತಿ ಇವುಗಳಿಂದ ಪ್ರತಿಭೆಯನ್ನು ಆಹ್ವಾನಿಸಬಹುದು. ಜಾಜ್ವಲ್ಯಮಾನವಾಗಿ ಬೆಳಗುವಂತೆ ಮಾಡಬಹುದು. ಅದಕ್ಕಾಗಿ ಒಂದು ಕ್ಲುಪ್ತವಾದ ಕಾರ್ಯಕ್ರಮ ಬೇಕು ಇಂದ್ರಿಯಗಳ ಮತ್ತು ಮನಸ್ಸಿನ ನಿಗ್ರಹಬೇಕು. ಧೀಶಕ್ತಿಯ ಪ್ರಚೋದನೆ ಬೇಕು. ಕವಿ, ಋಷಿಯಾಗಬೇಕು ಕ್ರಾಂತದರ್ಶಿಯಾಗಬೇಕು. ಆಗ ಮಂತ್ರಗಳಂತಹ ಕವನಗಳನ್ನು ಕಾಣುವ ಕೇಳುವ ಹೇಳುವ ವಿಭೂತಿಯಾಗುತ್ತಾನೆ ಆತ. ವಿಭಾವನಾಶಕ್ತಿಯೇ ಬೆಳೆದು ಬೆಳೆದು ಪ್ರತಿಭಾಶಕ್ತಿಯಾಗಿ ಬಿಡುತ್ತದೆ, ಕೀಡಿ ಕುಂಡಲಿಂಗನಾದಂತೆ.

೬

ನಮ್ಮ ನವೋದಯ ಕಾಲದ ಕವಿಗಳಿಗೆ ಒಂದು ಕಡೆ ಆಂಗ್ಲಭಾಷೆಯ ಕೃತಿಗಳಿಂದ ಪ್ರೇರಣೆ ಒದಗಿದರೆ ಇನ್ನೊಂದು ಕಡೆ ಬಂಗಾಳಿ ಮತ್ತು ಮರಾಠಿ ಭಾಷೆಯ ಕೃತಿಗಳಿಂದ ಪ್ರೇರಣೆ ಒದಗಿ ಬಂದಿತು. ಇದರ ಜತೆಜತೆಯಲ್ಲಿಯೆ ನಮ್ಮ ಜನಪದ ಸಾಹಿತ್ಯದ ಸಿರಿಸಂಪತ್ತಿಗೆ ಮಾರುಹೋದ ಈ ಉದಯ ಕಾಲದ ಕವಿಗಳು ಆ ಸಾಹಿತ್ಯದ ತವನಿಧಿಯನ್ನು ಬಳಸಿಕೊಂಡು ತಮ್ಮ ಛಂದದಲ್ಲಿ, ತಮ್ಮ ಭಾಷೆಯಲ್ಲಿ ತಮ್ಮ ಶೈಲಿಯಲ್ಲಿ ಜನಪದದ ದೇಸಿಯನ್ನು ತಂದರು. ಜನಪದ ಸಾಹಿತ್ಯವೆಂದರೇನು? ಅದರ ವ್ಯಾಪ್ತಿಯೆಷ್ಟು ಏನೆಲ್ಲವನ್ನೂ ಅದು ಒಳಗೊಳ್ಳುತ್ತದೆ ಎಂಬುದನ್ನು ಮನಗಂಡ ನಾವು ಈಗ ವಿಶ್ವವಿದ್ಯಾನಿಲಯಗಳಲ್ಲಿ ಆ ಭಾಗವನ್ನು ಕುರಿತ ಸಂಶೋಧನೆಗೆ ಬೋಧನೆಗೆ ಪ್ರತ್ಯೇಕವಾಗಿ ಸ್ನಾತಕೋತ್ತರದ ತರಗತಿಗಳನ್ನೇ ತೆಗೆಯುವ ಏರ್ಪಾಡಿನಲ್ಲಿದ್ದೇವೆ. ಈ ದಿಸೆಯಲ್ಲಿ ನಮ್ಮ ಮೈಸೂರು ವಿಶ್ವವಿದ್ಯಾನಿಲಯ ದಿಟ್ಟತನದ ಮೊದಲು ಹೆಜ್ಜೆ ಇಟ್ಟಿದ್ದಾಗಿದೆ. ಇತ್ತ ಶ್ರೀ ಕ ರಾ.ಕೃ. ಮತ್ತು ಶ್ರೀ ಜಿ. ಶಂಪ ಇವರು ಸತತವಾದ ನಿರ್ವ್ಯಾಜವಾದ ಪರಿಶ್ರಮದಿಂದ ಸಂಗ್ರಹಿಸಿ ಹೊತ್ತಗೆಯಾಗಿ ಪ್ರಕಟಿಸಿ ಈ ಸಾಹಿತ್ಯವನ್ನು ನಮಗೆ ನೀಡುತ್ತಿದ್ದಾರೆ. ನಮ್ಮ ಯುವಕ ಕವಿಗಳು ಈ ಸಾಹಿತ್ಯರಾಶಿಯನ್ನು ಅಧ್ಯಯನ ಮಾಡಿ ತಮ್ಮ ಅಂತಸ್ಸತ್ವವನ್ನು ಹೆಚ್ಚಿಸಿಕೊಂಡರೆ ಒಳ್ಳೆಯದು. ಶ್ರೀ ಹೆಚ್. ಎಲ್. ನಾಗೇಗೌಡರವರು ತಮ್ಮ ಅಧಿಕಾರದ ಬಿಡುವಿಲ್ಲದ ಕಾರ್ಯಕ್ರಮದ ನಡುವೆ ನಮಗಾಗಿ 'ಪ್ರವಾಸಿ ಕಂಡ ಇಂಡಿಯ'ದ ಬೃಹತ್ ಸಂಪುಟಗಳನ್ನು ಅನುವಾದ ಮಾಡಿಕೊಡುತ್ತಿದ್ದಾರೆ. ಕಥನ ಕವನಕ್ಕೆ, ಭಾವಗೀತೆಗೆ, ಏಕಾಂಕಕ್ಕೆ, ಗೀತ ನಾಟಕಕ್ಕೆ, ಈ ಹೊತ್ತಗೆಗಳು ಅಮೂಲ್ಯವಾದ ನಿಧಿಗಳಾಗಿವೆ. ಈ ಹಿಂದೆಯೆ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಋಗ್ವೇದದ ಬೃಹತ್ ಸಂಪುಟಗಳು ಕನ್ನಡಕ್ಕೆ ಬಂದಿವೆ. ಹಾಗೆಯೆ ಪುರಾಣ ಲೋಕವೂ ಕನ್ನಡಕ್ಕೆ ಅನುವಾದಗೊಂಡದ್ದಾಗಿದೆ. ನಮ್ಮ ಯುವಕರು ಅವರಿಗೆ ಅನಾಯಾಸವಾಗಿ ದೊರಕಿರುವ ಈ ಪುರಾಣ ಕೃತಿಗಳನ್ನು ಅಧ್ಯಯನ ಮಾಡಬೇಕು, ಈ ಪುರಾಣವಾದ ವಸ್ತುಗಳನ್ನು ನೂತನವಾದ ರೀತಿಯಲ್ಲಿ ಬರೆಯಬೇಕು ಎಂದು ಕೇಳಿಕೊಳ್ಳುತ್ತೇನೆ. ಭಟ್ಟರು ಏನೋ ಪುರಾಣ ಹೇಳುತ್ತಾರೆ ಎನ್ನಬೇಡಿ. ನನ್ನ ಗೆಳೆಯರೊಬ್ಬರು ಹೇಳಿದಂತೆ ಗಾಂಧೀಜಿಯವರು ರಾಮನಾಮವನ್ನು ಹಿಡಿದುದರಿಂದಲೇ ಜನತೆಯ ನಾಡಿಯನ್ನು ಹಿಡಿದರು, ಅದರ ಮಿಡಿತವನ್ನು ಅರಿತರು, ಅದಕ್ಕೆ ಚಿಕಿತ್ಸೆ ಮಾಡಿದರು. ತಿಲಕ್, ಗೋಖಲೆ, ರಾಮಕೃಷ್ಣ, ವಿವೇಕಾನಂದ, ಅರವಿಂದ, ಗಾಂಧಿ ಈ ಕಾರಣ ಪುರುಷರೆಲ್ಲ, ರಾಮಾಯಣ, ಭಾರತ, ಭಗವದ್ಗೀತೆ, ಶಿವ ವಿಷ್ಣು ಪುರಾಣಗಳನ್ನು ನವ್ಯ ಪ್ರಜ್ಞೆಯಿಂದ ನೋಡಿ ಅದರ ಸಾರವನ್ನು ಪರಮ ಮೌಲ್ಯವನ್ನು ನಮ್ಮ ಜನತೆಗೆ ತಿಳಿಸಿದ ಸಾಹಿತಿಗಳೇ ಅಲ್ಲವೆ? ನುಡಿದಂತೆ ನಡೆದ ಮಹಾಮಹಿಮರೆ ಅಲ್ಲವೆ? ನಮ್ಮ ಶರಣರು ನಮ್ಮ ದಾಸರು ನಮ್ಮ ಹರಿಹರ ಕುಮಾರವ್ಯಾಸಾದಿ ಸಂತಕವಿಗಳು ಮಾಡಿದ್ದೇನು? ನಮ್ಮ ಶಲಾಕಾಪುರುಷರ, ನಮ್ಮ ಪುರಾತನ ಶರಣರ ನೂತನ ಶರಣರ ನಮ್ಮ ಭಾಗವತರ ದಾಸರ ದಿವ್ಯಕಥಾವಳಿಗಳನ್ನು ಹಾಡಿ ಜಿನ, ಶಿವ, ರಾಮ, ಕೃಷ್ಣರನ್ನು ನೆನೆದು ಜನತೆಯನ್ನು ಮುಟ್ಟಿದರು, ಜನತೆಯನ್ನು ಎತ್ತಿದರು. ಬಸವಾದಿಗಳು ಜನತೆಯ ನಡುವೆ ನುಗ್ಗಿ ತಾವೂ ನಡೆದು ಜನರನ್ನೂ ನಡಸುತ್ತ ಮುಂದೆ ಬಂದರು. ಪುರಂದರಾದಿಗಳೂ ಹಾಗೆಯೆಮಾಡಿದರು. ನಾರಣಪ್ಪ, ಹರಿಹರ, ಲಕ್ಷ್ಮೀಶ, ಸರ್ವಜ್ಞ, ರತ್ನಾಕರಾದಿಗಳೂ ಹಾಗೆಯೇ ಮಾಡಿದರು. ಜನತೆಯನ್ನು ನಮ್ಮ ಪೂರ್ವಕವಿಗಳು ಕರೆದು ತಂದು ಬಿಟ್ಟ ಬಳಿಯಲ್ಲಿಯೆ ಬಿಟ್ಟು ಈಗ ನಾನು ಮಾತ್ರ ಮುಂದೆ ಮುಂದೆ ಹೋಗುತ್ತಿದ್ದೇವೆ. ಜನತೆ ಹಿಂದೆ ನಾವು ಮುಂದೆ ಎಂಬಂತೆ. ನಾವು ಪುರೋಹಿತರಾಗಿ ಪುರೋಗಾಮಿಗಳಾಗಿರುವುದು ಸರಿಯೆ. ಆದರೆ ಪುರೋಹಿತರಾಗದೆ ಪುರೋಗಾಮಿಗಳಾದರೆ ಸರಿಯೆ? ಮತ್ತೆ ಹೊಸ ಕ್ಷಿತಿಜಗಳನ್ನು ತೆರೆಯುವವರಿಗೆ ಹೀಗೆ ಜಾನಪದ ಪ್ರಪಂಚವಿದೆ, ಪ್ರವಾಸಿ ಕಂಡ ಇಂಡಿಯ

ಇದೆ, ಪುರಾಣ ಪ್ರಪಂಚವಿದೆ ಎಂದು ಹೇಳುವುದೇ ಇಷ್ಟು ದ್ದದ ಮಾತಿನ ಉದ್ದೇಶ.

೭

ಕಾವ್ಯದ ಭಾಷೆ ಯಾವುದು? ಛಂದಸ್ಸು ಯಾವುದು? ಎಂಬುದನ್ನು ಒಟ್ಟಿಗೆ ಪರ್ಯಾಲೋಚಿಸಬೇಕು. ನಮ್ಮ ಮನಸ್ಸಿನಲ್ಲಿರುವುದನ್ನು ನೇರವಾಗಿ ಸ್ಪಷ್ಟವಾಗಿ ಇನ್ನೊಬ್ಬರಿಗೆ ತಿಳಿಸಬೇಕು. ಇದಕ್ಕೆ ಭಾಷೆಯನ್ನು ನಾವು ಬಳಸುತ್ತೇವೆ. ಭಾಷೆಯ ಲೌಕಿಕ ಪ್ರಯೋಜನವೇ ಇದು. ಇನ್ನೂ ಕೆಲವು ಬೇರೆ ಪ್ರಯೋಜನಗಳಿಗಾಗಿ ನಾವು ಕಾವ್ಯದಲ್ಲಿ ಭಾಷೆಯನ್ನು ಬಳಸುತ್ತೇವೆ. ನಮ್ಮ ಅರ್ಥ ಇಷ್ಟವಾಗುವಂತೆ, ರಮಣೀಯವಾಗುವಂತೆ, ವ್ಯಂಗ್ಯವಾಗಿ ಸೂಚಿತವಾಗುವಂತೆ ರಸಾರ್ದ್ರವಾಗಿ ಆನಂದದಾಯಕವಾಗಿ ಪರಿಣಮಿಸುವಂತೆ ಭಾಷೆಯನ್ನು ಇಲ್ಲಿ ಬಳಸಬೇಕು. ಭಾಷೆ ಇಷ್ಟು ಕೆಲಸ ಮಾಡಬೇಕಾದರೆ ಅದರ ಮೂಲ ಸಾಮಗ್ರಿಯಾದ ಪದಗಳ ಆಯ್ಕೆ ನಡೆಯಬೇಕು. ಅದರ ಜೋಡಣೆಯಲ್ಲಿ ಒಂದು ಕ್ರಮ ಪರಿಪಾಲನೆ ಬೇಕು. ನಾದ ಮತ್ತು ಲಯ ಇವುಗಳನ್ನು ಸಾಧಿಸುವಂತೆ ಒಂದು ಛಂದದ ಕುಂದಣದಲ್ಲಿ ಅದನ್ನು ಅಳವಡಿಸಬೇಕು ಇತ್ಯಾದಿ. ಕಣ್ಣಿಗೆ ಹೇಗೆ ಕಾಣಿಸುತ್ತದೆ ಎನ್ನುವುದಕ್ಕಿಂತ ಕಿವಿಗೆ ಹೇಗೆ ಕೇಳಿಸುತ್ತದೆ ಎನ್ನುವುದೇ ತಾನೆ ಛಂದಸ್ಸಿನ ಪರಮ ರಹಸ್ಯ. ಈಗ ಅಚ್ಚಾಗುತ್ತಿರುವ ಕೆಲವು ಪದ್ಯಗಳಲ್ಲಿ ಕಣ್ಣಿನ ಅಂದಕ್ಕೆ ಗಮನ ಕೊಟ್ಟಿರುವ ಹಾಗೆ ಭಾಸವಾಗುತ್ತದೆ. ಶ್ರೋತ್ರೇಂದ್ರಿಯವೊಂದರ ಮೂಲಕವಾಗಿಯೆ ಉಳಿದ ಇಂದ್ರಿಯಗಳ ಅನುಭವವನ್ನೂ ಮನಸ್ಸಿಗೆ ತಂದುಕೊಡುವ ನಿರ್ಮಳ ಮೂರ್ತಿಯಲ್ಲವೆ ವಾಗ್ದೇವಿ? ನಾದ ಮತ್ತು ಲಯ ಇವುಗಳನ್ನು ಬಿಟ್ಟು ಕಾವ್ಯದ ಕಲ್ಪನೆಯೇ ನನಗೆ ಬರುವುದಿಲ್ಲ. ಉಪಮೆ, ರೂಪಕ, ದೀಪಕ, ದೃಷ್ಟಾಂತ, ಉತ್ಪ್ರೇಕ್ಷೆ ಈ ಮುಂತಾದ ಅಲಂಕಾರಗಳಿಂದ ರಂಜಿತವಾಗದ ಹೊಸ ರೀತಿಯಲ್ಲಿ ಹೇಳುವುದಾದರೆ ಪ್ರತೀಕ, ಪ್ರತಿಮೆಗಳಿಂದ ಪುಂಜಿತವಾಗದ ಶಬ್ದಚಿತ್ರದ ಪದಪ್ರತಿಮೆಯ ಸರಮಾಲೆಯಾಗಿ ಕಂಗೊಳಿಸದ ಕಾವ್ಯ ಕಾವ್ಯವೆ? ಅರ್ಥದ ಸುಭಗತೆಗಾಗಿ ಅರ್ಥದ ಸ್ಪಷ್ಟತೆಗಾಗಿ ನಾವು ಇಷ್ಟೆಲ್ಲ ಮಾಡಲೆ ಬೇಕು ಕಾವ್ಯದಲ್ಲಿ; ಶಬ್ದಗಳ ಮೂಲಕ ಅದರ ನಾದಗಳ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಗಳನ್ನು ನೇಯಬೇಕು ಕವಿ. ಈಗ ಭಾಷೆ ಮತ್ತು ಛಂದಸ್ಸಿನಲ್ಲಿ ಹೊಸ ಕಸಬುಗಾರಿಕೆ ಕಾಣುತ್ತಿದೆ ಎಂದು ಹೇಳುತ್ತಾರೆ. ಸಂತೋಷ. ಆದರೆ ನಮ್ಮ ಕಾವ್ಯದ ಪರಂಪರೆಯನ್ನು ಬಲ್ಲವರಿಗೆ ಈ ಸಾವಿರ ವರುಷಗಳಲ್ಲಿ ಒಬ್ಬೊಬ್ಬ ಹಿರಿಯ ಕವಿಯೂ ತನ್ನ ತನ್ನ ಕಾಲದಲ್ಲಿ ಮೆರೆದ ಕಸಬುಗಾರಿಕೆ ಆ ಆ ಕಾಲಕ್ಕೆ ಹೊಸದಾಗಿಯೆ ಇತ್ತು ಎಂಬುದು ಗೊತ್ತು. ಇದರ ಮೇಲೆ ಕವಿ ಸಮರ್ಥನಾದರೆ ಈ ದಿನ ಮತ್ತೆ ಹಳೆಯ ಛಂದದಲ್ಲಿ ಬರೆದು, ಹಳೆಯ ಭಾಷೆಯಲ್ಲಿ ಬರೆದರೆ, ಕೃತಿಗೂ ಕರ್ತೃವಿಗೂ ಶ್ರೋತೃವಿಗೂ, 'ಕೃತಾರ್ಥತೆ' ಬರುವುದಿಲ್ಲವೆ? ಶ್ರೀ ರಾಮಾಯಣ ದರ್ಶನದ ಛಂದಸ್ಸು ಯಾವುದು? ಹಳೆಯ ರಗಳೆಗೆ ಕಾಯಕಲ್ಪ ನಡೆದು ಸರ್ವಛಂದದ ಗಣಘಟಕಗಳ ಮಹಾ ಛಂದದ ಹೆಗ್ಗಡಲಾಗಿ ಭೋರ್ಗರೆಯುತ್ತಿಲ್ಲವೆ ಅದು? ಮಂಕುತಿಮ್ಮನ ಕಗ್ಗದ ಛಂದಸ್ಸು ಯಾವುದು? ಪ್ರತೀಕಾತ್ಮಕವಾಗಿ ಸೂತ್ರಾತ್ಮಕವಾಗಿ ಅಳವಟ್ಟಿರುವ ಆ ಭಾಷೆ ಆ ಛಂದ ಹೊಸತೆ? ಹಳೆಯದೆ? ಶ್ರೀ ಜಯದೇವಿ ತಾಯಿಯವರು ಬಳಸಿದ ಛಂದಸ್ಸು ಯಾವುದು? ಹಳೆಯದಲ್ಲವೆ? ಗಾಥಾಸಪ್ತಶತಿ, ಇಂದ್ರಚಾಪ, ಚಂದ್ರವೀಥಿಗಳ ಛಂದಸ್ಸು ಹೇಗಿದೆ? 'ಇಂದಿಲ್ಲ ನಾಳೆ' ಹೊಸ ರೀತಿಯ ಚಂಪುವಲ್ಲವೆ? ಪು. ತಿ. ನ. ಅವರ ಗೀತರೂಪಕಗಳ ಛಂದೋಬಂಧಗಳು ಯಾವುವು? ಹಳದನ್ನು ಹೊಸತು ಗೈಯುವ ಮೋಡಿ ಕವಿಗೆ ಇರಬೇಕು ಅಷ್ಟೆ. ಇನ್ನೂ ಒಂದು ಮಾತು: ಭಾಷೆ ಮತ್ತು ಛಂದಸ್ಸು ಇವು ವಸ್ತು, ಪಾತ್ರ, ರಸ ಇವುಗಳಿಗೆ ಹೊಂದಿಕೆಯಾಗುವಂತೆ ಇರಬೇಕು. ಈ ಔಚಿತ್ಯ ಜ್ಞಾನ ಮುಖ್ಯ. ಇಂಗ್ಲಿಷ್ ಗೀತಗಳು, ರಂಗಬಿನ್ನಪ, ಅಶ್ವತ್ಥಾಮನ್, ನಾಗರಿಕ, ಸಮುದ್ರಗೀತಗಳು, ರತ್ನನಪದಗಳು, ಭೂಮಿಗೀತ, ಸಖೀಗೀತ, ನವರಾತ್ರಿ, ಈ ಮುಂತಾದವುಗಳನ್ನು ಛಂದಸ್ಸು ಭಾಷೆ ಈ ದೃಷ್ಟಿಗಳಿಂದ ಅಧ್ಯಯನ ಮಾಡಬೇಕು. ಕನ್ನಡ ಭಾಷೆಯ ಕಸುವು ಏನು ಎಂಬುದಕ್ಕೆ ದಯವಿಟ್ಟು ನಮ್ಮ ತರುಣರು ವಚನ ಸಾಹಿತ್ಯ ಮತ್ತು ಕುಮಾರವ್ಯಾಸ ಭಾರತ, ರತ್ನಾಕರನ ಭರತೇಶವೈಭವ ಇವುಗಳನ್ನು ಅಧ್ಯಯನ ಮಾಡಬೇಕು. ಅಲ್ಲಿ ಭಾಷೆ ಛಂದಸ್ಸು ಲಯಗಳ ಕಸುಬುಗಾರಿಕೆಯಿದೆ. ಅಲ್ಲದೆ ನಮ್ಮ ನಾಡಿನ ಉದ್ದಗಲದಲ್ಲಿ ಒಂದೊಂದು ಕಡೆಯವರು ಒಂದೊಂದು ಮೂಲೆಯವರು ಬಳಸುವ ಆಡುನುಡಿಯಲ್ಲಿ ಒಂದೊಂದು ದೇಸಿ ಇದೆ. ಈ ದೇಸಿ ನಮ್ಮ ಕಾವ್ಯದ ಅಭಿವ್ಯಕ್ತಿಗೆ ನೇರವಾಗಿ ಈಗ ಬರುತ್ತಿದೆ. ಕಂಬಾರ, ಇಮ್ರಾಪುರ, ಆಲನಹಳ್ಳಿ ಮುಂತಾದವರು ಈ ಕಾರ್ಯದಲ್ಲಿ ಯಶಸ್ಸು ಗಳಿಸುತ್ತಿದ್ದಾರೆ. ಪಂಪ, ರನ್ನ, ಹರಿಹರ, ಕುಮಾರವ್ಯಾಸ

ಬಸವ, ಅಲ್ಲಮ, ಪುರಂದರ, ಕನಕಾದಿಗಳೆಲ್ಲ, ಪ್ರಾದೇಶಿಕತೆಯ ಚೆಲುವು ತಂದವರೇ. ಆದ್ದರಿಂದ ಪ್ರತಿಯೊಬ್ಬ ಕವಿಯೂ ತಾನು ಬೆಳೆದ ಪರಿಸರದ ಆಡುನುಡಿಯನ್ನು ತನ್ನ ಕಾಲದಲ್ಲಿ ಕಾವ್ಯಕ್ಕೆ ಬಳಸಿಕೊಳ್ಳುವುದು ಒಳ್ಳೆಯ ತಂತ್ರವೇ ಹೊರತು ವಿನೂತನವಾದ ತಂತ್ರವಲ್ಲ. ಜೊತೆಗೆ ಒಬ್ಬ ಕವಿ ಹೀಗೆ 'ದೇಸಿ'ಯಲ್ಲಿ ಬರೆಯದೆ 'ಮಾರ್ಗ'ದಲ್ಲಿ ಬರೆದರೆ ಮೂಗು ಮುರಿಯುವುದು ಮಾತ್ರ ಬೇಡ. ಮತ್ತೊಮ್ಮೆ ನಾನು ಹೇಳುತ್ತೇನೆ: ಅರ್ಥ ಸ್ಪಷ್ಟವಾಗ ಬೇಕು, ಅದು ಸುಭಗವಾಗಿ ಶ್ರಾವ್ಯವಾಗಿ ಹೊಮ್ಮಬೇಕು. ಇದೇ ಮಾನದಂಡವಾಗಬೇಕು. 'ದೇಸಿ'ಯಲ್ಲ, 'ಮಾರ್ಗ'ವಲ್ಲ.

೮

ಈಗ ಓದುವವರ ಸಂಖ್ಯೆ ಹೆಚ್ಚು, ಬರೆಯುವವರ ಸಂಖ್ಯೆಯೂ ಹೆಚ್ಚು. ಆದ್ದರಿಂದ ರಚನೆಯಲ್ಲಿ ವೈವಿಧ್ಯ ವಿಸ್ತಾರಗಳೂ ಹೆಚ್ಚು. ಈ ಹೆಚ್ಚುವರಿಯ ರಚನೆಯ ಈಗಿನ ದಿನಗಳಲ್ಲಿ ಯಾವುದು ಒಳ್ಳೆಯ ರಚನೆ ಯಾವುದು ಕೆಟ್ಟ ರಚನೆ ಎಂದು ಹೇಳುವುದು ತುಂಬ ಸಾಹಸದ ಕಾರ್ಯ. ಸಾಮಾನ್ಯವಾಗಿ ಸ್ವಾತಂತ್ರ್ಯದ ಉತ್ತರ ಕಾಲದ ಈ ದಿನಗಳಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ, ಅಧ್ಯಾಪಕರಿಂದ ಹೆಚ್ಚುಹೆಚ್ಚಾಗಿ ಹೊಸರೀತಿಯ ನವ್ಯತಂತ್ರದ ಕೃತಿಗಳು ಬರುತ್ತಿವೆ. ನವೋದಯದ ಸಾಹಿತ್ಯ ತನ್ನ ಪ್ರಯೋಗಾವಸ್ಥೆಯನ್ನು ದಾಟಿ ಸಿದ್ಧಿಯನ್ನು ಪಡೆದು ನಿಂತಿತು. ಅದರ ಸಿದ್ಧಿಯ ಪೂರ್ವದ ಕಥೆ ಬಹುಶಃ ಅಜ್ಞಾತವಾಗಿ ಉಳಿದುಬಿಟ್ಟಿದೆ. ಸಾಧಕನಾದ ಅಲ್ಲಮನನ್ನು ನಾವು ಕಾಣೆವು. ನಾವು ಕಂಡ ವೇಳೆಗೆ ಆತ ಸಿದ್ಧನಾಗಿಯೆ ಇದ್ದ. ಸಾಧಕ ಶ್ರೀಯವರನ್ನು ಅವರ ಬರವಣಿಗೆಯಲ್ಲಿ ನಾವು ಕಾಣುವುದು ಸಾಧ್ಯವೆ? ಅವರ ಇಂಗ್ಲಿಷ್ ಗೀತಗಳು ಬಂದಾಗ ಅದು ಸಿದ್ಧನ ನಿಲವು ಎಂಬುದನ್ನೇ ನಾವು ಕಂಡೆವು. ಪಂಜೆ, ಪೈಗಳ ಬರವಣಿಗೆಗಳೂ ಹಾಗೆಯೇ. ಇಂತಹ ಪೂರ್ವಾಚಾರ್ಯರೂ ಡಿ. ವಿ. ಜಿ. ಶ್ರೀನಿವಾಸ, ವಿ. ಸೀ. ಅವರೂ ಬೇಂದ್ರೆ ಕುವೆಂಪು ಪುತಿನ ಗೋಕಾಕ ಮುಗಳಿ ರಾಜರತ್ನಂ ಅವರೂ ತಮ್ಮ ರಚನೆಗಳಿಂದ ಅದ್ಭುತವನ್ನು ಸಾಧಿಸಿದ್ದಾರೆ. ಸ್ವದೇಶ, ಸ್ವಧರ್ಮ ಸ್ವಭಾಷೆ ಇವುಗಳ ಸ್ವತ್ವವನ್ನು ಜನಕ್ಕೆ ತೋರಿಸಿ ಕೊಟ್ಟಿದ್ದಾರೆ. ಸಮಗ್ರ ಭಾರತಕ್ಕೆ ಅನ್ವಯಿಸಿ ಹೇಳುವುದಾದರೆ ಸ್ವತಂತ್ರ ಭಾರತ ಏಕತಂತ್ರ ಕರ್ಣಾಟಕ ಇವುಗಳ ಸಿದ್ಧಿಗೆ ಆ ಕಾಲದ ಕವಿಗಳ ರಚನೆಗಳು ಹೇಗೆ ಸಹಕರಿಸಿವೆ ಎಂಬುದನ್ನು ನಾವು ಬಲ್ಲೆವು. ಕನ್ನಡದಲ್ಲಿ ರಾಮಾಯಣ ದರ್ಶನ ಮಂಕುತಿಮ್ಮನ ಕಗ್ಗದಂತಹ ಸತ್ವಪೂರ್ಣ ಕೃತಿಗಳ ರಚನೆಯಿಂದ ಸ್ವಾತಂತ್ರ್ಯ ಪೂರ್ವದ ಸಾಹಿತ್ಯವು ಸಿದ್ಧಿಯ ಶಿಖರವನ್ನು ಮುಟ್ಟಿತು. ಈಗ ಸ್ವಾತಂತ್ರ್ಯದ ಬಳಿಕ ರಚಿತವಾಗುತ್ತಿರುವ ನವ್ಯ ಕಾವ್ಯ ತನ್ನ ತಂತ್ರದಲ್ಲಿ ಒಂದು ಪ್ರಯೋಗಾವಸ್ಥೆಯಲ್ಲಿದೆ. ಇದರ ಇತಿಮಿತಿಗಳ 'ಇದಮಿತ್ಥಂ' ಎಂಬ ನಿರ್ಣಯಕ್ಕೆ ಈಗ ಕಾಲ ಪಕ್ವವಾಗಿಲ್ಲ. ಇಷ್ಟು ಹೇಳಬಹುದು: ಜೀವನವೆಂದರೆ ಜಟಿಲತೆ, ಕ್ಲಿಷ್ಟತೆ ಇದ್ದದ್ದೇ. ಹಿಂದೂ ಜೀವನ ಸುಗಮವಾಗಿರಲಿಲ್ಲ, ಮುಂದೂ ಇರುವುದಿಲ್ಲ. ಜಟಿಲತೆ ಕ್ಲಿಷ್ಟತೆಗಳ ಬೇರೆ ಬೇರೆ ಅವತಾರಗಳು ಇದ್ದೇ ಇರುತ್ತವೆ. ನಮ್ಮ ಸಮಸ್ಯೆ ನಮಗೆ ಜಟಿಲ ಕ್ಲಿಷ್ಟ ಎನ್ನಿಸುವುದು ಸಹಜ. ತಾನು—ತನ್ನ ಪರಿಸರ, ತಾನು—ತನ್ನ ಆದರ್ಶ. ತಾನು—ತನ್ನ ಪೂರ್ವಸಂಸ್ಕೃತಿ, ತಾನು—ತನ್ನ ಅಭಿನವ ಸಂಸ್ಕೃತಿ, ಹೀಗೆ ಒಬ್ಬ ಕವಿ ಈಗ ಬಗೆಬಗೆಯ ದ್ವಂದ್ವಗಳಲ್ಲಿ ಸಿಕ್ಕಿ ಬೇಯುತ್ತಿದಾನೆಂಬುದು ನಿಜ. ಅತ್ತ ಹಸಿಯೂ ಅಲ್ಲ ಇತ್ತ ಬಿಸಿಯೂ ಅಲ್ಲ. ಎಂಬ ಒಂದು ಅರ್ಧಾವಸ್ಥೆಯಲ್ಲಿ ಸಿಕ್ಕಿ ಅರೆಬೆಂದು ಜೀವ ಇಂದು ನರಳುತ್ತಿದೆ. ಈ ಕಾರಣದಿಂದ ಇಂಥ ಕವಿಯ ಚಿತ್ರಣ 'ನವ್ಯ'ವಾಗಿ ಅಭಿವ್ಯಕ್ತವಾದರೆ ಆಶ್ಚರ್ಯವಿಲ್ಲ. ಈ ಅಭಿವ್ಯಕ್ತಿ ನವ್ಯವಾದುದರಿಂದಲೆ ಅತ್ತ ಪಂಡಿತರಿಗೂ ಸಮಸ್ಯೆಯಾಗಿದೆ, ಇದು ಇತ್ತ ಪಾಮರರಿಗೂ ಸಮಸ್ಯೆಯಾಗಿದೆ ಇದು. ಬೆಳೆಯಗುಣ ಮೊಳೆಯಲ್ಲಿ ಎಂಬ ಹಾಗೆ ನೋಡಿ ಹೇಳುವುದಾದರೆ ಈ ನವ್ಯಕಾವ್ಯದ ಮೊಳೆ ಚೆನ್ನಾಗಿದೆ. ಆದರೆಮಳೆ ಅತಿವೃಷ್ಟಿಯಾಗದೆ ಅನಾವೃಷ್ಟಿಯಾಗದೆ ಸಕಾಲವೃಷ್ಟಿಯಾಗಿ ಕೃಪೆಗೈದರೆ ಕಾಲ ಕಾಲಕ್ಕೆ ಅಗತೆ ಬಗತೆಗಳಾದರೆ ಇನ್ನು ಹತ್ತು ವರುಷದ ಮೇಲಣ ಸುಗ್ಗಿ ನಿಜವಾಗಿಯೂ ಸೊಗಸಾಗಿಯೆ ಇರುತ್ತದೆ ಎಂಬುದು ನನ್ನ ಕಾಲಜ್ಞಾನ.

ಇಲ್ಲಿ ಇನ್ನೊಂದು ದೃಷ್ಟಾಂತವನ್ನು ಕೊಡಬಹುದು. ಹಿಂದಿನವರು ಸೌದೆಯ ಒಲೆ ಉಪಯೋಗಿಸಿ ಅಡಿಗೆ ಮಾಡುತ್ತಿದ್ದರು. ಇಂದಿನವರು ವಿದ್ಯುತ್ತಿನ ಒಲೆ ಉಪಯೋಗಿಸಿ ಅಡಿಗೆ ಮಾಡುತ್ತಾರೆ. ಈ ಸಾಧನದ ತಂತ್ರ ನವೀನ. ಹಿಂದಿನವರಾಗಲಿ ಇಂದಿನವರಾಗಲಿ ಬೇಯಿಸಿ ಬಡಿಸುವ ಪದಾರ್ಥ ಮಾತ್ರ ಅಮೃತವಾಗಿರಬೇಕು. ಅದು ಅಮೃತವೆಂದು ಉಂಡವನು ಹೇಳಬೇಕು. ಹಾಗೆ ಕಾವು ಗೊಂಡು ಹಾಗೆ ಕುದ್ದು ಹಾಗೆ ರಸದ ಮಿಶ್ರಣ ಒಂದು ಪಾಕವಾಗಿ, ಅದು ಅಮೃತವಾಗಬೇಕು. ಸೌದೆಯ ಒಲೆಯ ಮೇಲೆ ಬೇಯಿಸಿದ್ದೆಲ್ಲವೂ ಅಮೃತವಲ್ಲ, ವಿದ್ಯುತ್ತಿನ ಒಲೆಯ ಮೇಲೆ ಬೇಯಿಸಿದ್ದೆಲ್ಲವೂ ವಿಷವಲ್ಲ. ಆದರೆ

ವಿದ್ಯುತ್ತಿನ ಒಲೆಯ ಬಳಕೆಗೆ ಹೆಚ್ಚು ಎಚ್ಚರಬೇಕು. ಅಲ್ಲದೆ ಬಹುಜನ ಸಮಾರಾಧನೆಗೆ ಸೌದೆಯ ಒಲೆಯೇ ಸರಿ.

ಒಬ್ಬ ಕವಿಯನ್ನು ಮತ್ತೊಬ್ಬ ಕವಿಯೊಡನೆ, ಒಂದೇ ಭಾಷೆಯ ಒಂದು ದೇಶದ ಸಾಹಿತ್ಯವನ್ನು ಮತ್ತೊಂದು ಭಾಷೆ ಮತ್ತೊಂದು ದೇಶದ ಸಾಹಿತ್ಯದೊಡನೆ ಒಂದೇ ಭಾಷೆಯಲ್ಲಿ ಒಂದು ಅವಧಿಯಲ್ಲಿ ರಚಿತವಾದ ಕೃತಿಸಮೂಹವನ್ನು ಮತ್ತೊಂದು ಅವಧಿಯಲ್ಲಿ ರಚಿತವಾದ ಕೃತಿ ಸಮೂಹದೊಡನೆ ಹೋಲಿಸಿ ಬಣ್ಣಿಸುವುದು ಬಹಳ ಕಷ್ಟದ ಕೆಲಸ. ಇಂತಹ ತೋಲನ ವಿಮರ್ಶೆಗೆ ಉಭಯ ವಿಷಯಗಳ ತಲಸ್ಪರ್ಶಿಯಾದ ಜ್ಞಾನ ಆವಶ್ಯಕ, ನಿಷ್ಪಾಕ್ಷಿಕವಾದ ದೃಷ್ಟಿ ಆವಶ್ಯಕ. ಇದಿಲ್ಲದಿದ್ದರೆ ಇಂತಹ ವಿಮರ್ಶೆಯಲ್ಲಿ ನಿರೀಕ್ಷಿಸಿದ ಪ್ರಯೋಜನ ದೊರೆಯುವುದಿಲ್ಲ, ನಿರೀಕ್ಷಿಸದ ಅಸೂಯೆ ಉದ್ವೇಗ ಮುಂತಾದವು ಉದ್ಭವಿಸುತ್ತವೆ. ಸ್ವಾತಂತ್ರ್ಯದಪೂರ್ವ ಉತ್ತರ ಎಂಬ ವಿಭಜನೆಯಾಗಲಿ ಕಾವ್ಯದ ನವೋದಯ ನವ್ಯ ಎಂಬ ಭೇದವಾಗಲಿ ಸಮಂಜಸವೇ ಅಲ್ಲ.

ನವ್ಯಕಾವ್ಯ ಎಂದರೆ ಏನು? ಅದರ ತಂತ್ರದ ಸ್ವರೂಪವೇನು? ಇಂಥ ರಚನೆಗೆ ಪ್ರೇರಣೆಯಾವುದು? ಈ ವಿವರಗಳನ್ನು ಇಲ್ಲಿ ಎತ್ತಿ ಹೇಳಬೇಕಾಗಿಲ್ಲ. 'ಸಂಕ್ರಮಣ' 'ಕವಿತಾ' 'ಲಹರಿ' 'ಸಮೀಕ್ಷೆ'ಗಳ ಸಂಚಿಕೆಗಳಲ್ಲಿ, ಶ್ರೀಗಳಾದ ಅಡಿಗ, ಅನಂತಮೂರ್ತಿ, ನರಸಿಂಹಮೂರ್ತಿ ಮುಂತಾದವರು ಕೆಲಕೆಲವು ಸಂಕಲನಗಳಿಗೆ ಬರೆದ ಮುನ್ನುಡಿ ಹಿನ್ನುಡಿಗಳಲ್ಲಿ, 'ಮನ್ವಂತರ'ದ ಬಂಧಗಳಲ್ಲಿ, 'ಮಣ್ಣಿನ ವಾಸನೆ'ಯ ಪ್ರಬಂಧಗಳಲ್ಲಿ ಈ ಹತ್ತು ವರುಷದ ಅವಧಿಯ ಸಾಹಿತ್ಯವನ್ನು ಒಟ್ಟಾಗಿ ಸಮೀಕ್ಷೆಗೈದ ಕೆಲವರ ಲೇಖನ ಭಾಷಣಗಳಲ್ಲಿ ಇದರ ವಿವರಗಳು ಚೆನ್ನಾಗಿ ಬಂದಿವೆ. ಕಾವ್ಯವೃಕ್ಷಕ್ಕೆ ಕಾಲ ಕಾಲಕ್ಕೆ ದೋಹದ ನಡೆಯಬೇಕು. ಅದು ಪ್ರೀತಿಯ ದೋಹದವಾಗಬೇಕು. ಆಗ ಮಾತ್ರ ಕಾವ್ಯವೃಕ್ಷ ನನೆಕೊನೆವೋಗಿ ಹೊಸ ಹೊಸ ಹೂವು ಹಣ್ಣು ಬಿಡುತ್ತದೆ. ಈಗ ನಮ್ಮ ಪೀಳಿಗೆಯ ಕವಿಗಳಿಂದ ಅಂತಹ ದೋಹದ ನಡೆದಿದೆ. ಆದ್ದರಿಂದ ಕಾವ್ಯವೃಕ್ಷಕ್ಕೆ ಹೊಸ ಟಿಸಿಲು ಬಂದಿದೆ. ಇದನ್ನು ನಾವು ಒಪ್ಪಿಕೊಳ್ಳಬೇಕು. ಉತ್ತರೋತ್ತರವಾಗಿ ಉದ್ಘಕೃತಿಫಲ ಇದರಿಂದ ಮೂಡುವಂತೆ ನೋಡಿಕೊಳ್ಳಬೇಕು.

ನವ್ಯಕಾವ್ಯವನ್ನು ಹೇಳುವಾಗ ಶ್ರೀ ಗೋಪಾಲಕೃಷ್ಣ ಅಡಿಗರನ್ನು ಕುರಿಯದಿರುವುದು ಸಾಧ್ಯವಿಲ್ಲ. ಅವರು ಈ ಸಾರಸತ್ವತಯಜ್ಞದ ಅಧ್ವರ್ಯು. ಅವರ ನೇತೃತ್ವದಲ್ಲಿ ಒಂದು ಪಡೆ ನವ್ಯಕಾವ್ಯದ ಮುನ್ನಡೆಗೆ ತನ್ನ ಪಾಲಿನ ಕಾಣಿಕೆ ಸಲ್ಲಿಸಿದೆ.

೯

ಇಲ್ಲಿ ನಾನು ನವ್ಯಕಾವ್ಯ ಸಂಬಂಧವಾಗಿ ಕವಿಗಳೂ ಲಾಕ್ಷಣಿಕರೂ ಆಡಿದ ಕೆಲವು ವಾಕ್ಯ ಮಾಣಿಕ್ಯಗಳನ್ನು ಆಯ್ದು ಜೋಡಿಸಿದ್ದೇನೆ. ಇದರಿಂದ ನನ್ನ ಕಾರ್ಯ ಸುಲಭವಾಗಿರುವಂತೆ ನೋಡಿಕೊಂಡಿದ್ದೇನೆ. ಇಷ್ಟೇ ಅಲ್ಲ, ಇದು ನನ್ನ ಆಯ್ಕೆಯಾದದ್ದರಿಂದ ಈ ಸಂಪಾದನ ಕಲೆಯಲ್ಲಿ ಈ ವಿಷಯವಾಗಿ ನನ್ನ ತಲೆ ಹೇಗೆ ಓಡಿದೆ ಎಂಬುದನ್ನೂ ನೀವು ಗ್ರಹಿಸಬಹುದು. "ನವ್ಯತೆಯು ಯಾವುದೊಂದು ವಿಶಿಷ್ಟ ಜೀವನ ದೃಷ್ಟಿಯ ಸೊತ್ತಾಗಲಾರದು; ಆದರೆ ಎಲ್ಲ ಜೀವನ ದೃಷ್ಟಿಯ ಕಲಾಸಿದ್ಧಿಯ ಒಂದು ಪ್ರಕಾರವಹುದು . . . ಅಂತೇ ನವ್ಯತೆಯು ಕಾವ್ಯದ ಚಿರಂತನ ತಂತ್ರಗಳಲ್ಲಿ ಒಂದು. ದೇಶಿ, ಮಾರ್ಗ, ನವ್ಯತೆ ಇವು ಮೂರೂ ಕಾವ್ಯದ ಮೂರೂ ಮಾರ್ಗಗಳಾಗಿವೆ." ಎಂದು ಶ್ರೀ ಗೋಕಾಕರು "ಕೃಷಿ ಇಲ್ಲದೆ ಎಲ್ಲಿಯೂ ಸಿದ್ಧಿಯಿಲ್ಲ" ಎಂದು ಶ್ರೀ ಆರ್. ಸಿ. ಹಿರೇಮಠರು "ಯಾವುದೊಂದು ಕವಿತೆ ನವ್ಯವೋ ರಮ್ಯವೋ ಇನ್ನಾವುದಾದರೂ ರೀತಿಯದೋ ಎಂದು ನೋಡುವುದಕ್ಕಿಂತ ಅದು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿದೆಯೆಂದು ನೋಡಬೇಕು" ಎಂಬುದಾಗಿ ಸಿದ್ಧಲಿಂಗ ಪಟ್ಟಣ ಶೆಟ್ಟಿಯವರು "ವಸ್ತು ಎಷ್ಟೇ ಗಹನವಾಗಿದ್ದರೂ ಭಾವನೆ ಎಷ್ಟೇ ಬಲಿಷ್ಠವಾಗಿದ್ದರೂ ತಾಳಲಯದ ಸಮತೂಕವಿಲ್ಲದ ಮಾತು ಗದ್ಯಕ್ಕೆ ಸಮೀಪವರ್ತಿಯಾಗುತ್ತದೆ; 'ಗದ್ಯತನ' ಮೇಲುಗೈಯಾಗಿ ದಾಂಧಲೆ ನಡೆಸಿದರೆ ಬರಹದಲ್ಲಿ ತೀವ್ರತೆ ಪರಿಣಾಮಗಳು ಮುಚ್ಚಿ ಹೋಗುತ್ತವೆ" ಎಂದು ನಿಸಾರ್ ಅಹಮದ್, "ಹಾಗೆ ನೋಡಿದರೆ ರೊಮ್ಯಾಂಟಿಕ್ ಕಾವ್ಯ ಮತ್ತು ನವ್ಯಕಾವ್ಯ ಅಂತ ವ್ಯತ್ಯಾಸವೇ ಇಲ್ಲ. ಇರುವ ವ್ಯತ್ಯಾಸವೆಲ್ಲ ಒಳ್ಳೆಯ ಕವಿತೆ ಮತ್ತು ಕೆಟ್ಟ ಕವಿತೆ" ಎಂದು ಲಂಕೇಶ "ಕೆಲವು ಮುಖಗಳು (aspects) ಒಂದು ಕಾವ್ಯದಲ್ಲಿ ಕಂಡುಬಂದ ಮಾತ್ರಕ್ಕೆ, ಆ ಕಾವ್ಯ ಗೊತ್ತಾದ ಉನ್ನತಿಯನ್ನು ಪಡೆಯುತ್ತದೆ ಎನ್ನುವುದು ಸರಿಯಾಗಿ ಕಾಣುವುದಿಲ್ಲ. ಹೊಸ ಸಂವೇದನೆಯ ರೀತಿಗಳಿಷ್ಟು, ಹಳೆಯ ಸಂವೇದನೆಯ ರೀತಿಗಳಿವು ಎಂದು ಹೇಳಿ ಕಾವ್ಯ ವೈಶಿಷ್ಟ್ಯವನ್ನು ಅಳೆಯುವುದು ವಿಮರ್ಶೆಯಾಗುವುದಿಲ್ಲ" ಎಂದು ವಿಶ್ವೇಶ್ವರ ಅವರು, "ನಮ್ಮ ಕಾವ್ಯದ ಹೊಸ

ಪ್ರಯೋಗ ಈಗ ನಡೆಯುತ್ತಿರುವುದು ಆಧುನಿಕ ಕನ್ನಡ ಕಾವ್ಯದ ತಳಹದಿಯ ಮೇಲೆಯೇ. ಆಧುನಿಕ ಕಾವ್ಯ ಮಾತ್ರವಲ್ಲ ಹಳಗನ್ನಡ ನಡುಗನ್ನಡ ಕಾವ್ಯಗಳ ಸಾರವನ್ನೂ ಹೀರಿ ಮುನ್ನೋಟ ಬೀರುತ್ತಿರುವ ಉದ್ಬುದ್ಧ ಮನಸ್ಸಿನ ಪ್ರತೀಕವಾಗಿ ಈ ನವ್ಯಕಾವ್ಯ ರೂಪುಗೊಳ್ಳುತ್ತಿದೆ" ಎಂದು ಅಡಿಗರು ಹೇಳಿದ್ದಾರೆ. ಇಲ್ಲಿ ಈಗ ನಾವು ದೊಡ್ಡವರು ಚಿಕ್ಕವರು ಎಂಬ ಭೇದವಿಲ್ಲದೆ, ನವೋದಯದವರು, ನವ್ಯದವರು ಎಂಬ ಭಾವವಿಲ್ಲದೆ, ನಾವೆಲ್ಲ ಒಟ್ಟಿಗೆ ಕೂಡಿ, ಉತ್ತಮೋತ್ತಮವಾದ ಕೃತಿರತ್ನಗಳ ಸಂಚಯಕ್ಕೆ ಶಾಸ್ತ್ರ ಶ್ರೀ ರೋಹಣಗಿರಿಯ ಆರೋಹಣಕ್ಕೆ ಸಿದ್ಧರಾಗೋಣ. ಉತ್ತಮ ಸೃಷ್ಟಿಗೆ ಮನಸ್ಸು ಮಾಡೋಣ. ನಾಳೆಯ ಪೀಳಿಗೆಯವರು ನಮ್ಮ ವಿಷಯದಲ್ಲಿ ಅಭಿಮಾನದಿಂದ ಮಾತನಾಡುವಂತೆ ನಡೆಯೋಣ, ನುಡಿಯೋಣ. ಒಳ್ಳೆಯ ಜ್ಞಾನ, ಒಳ್ಳೆಯ ಚಾರಿತ್ರ್ಯ, ಒಳ್ಳೆಯ ದರ್ಶನ ನಮ್ಮದಾಗಲಿ, ಪರಿಣಾಮವಾಗಿ ಕಾವ್ಯಶಿಲ್ಪದಲ್ಲಿ ಗೊಮ್ಮಟಕೃತಿಗಳು ತಲೆಯೆತ್ತಲಿ.

ಪರಿಶಿಷ್ಟ

[೧೯೬೫-೬೭ರಲ್ಲಿ ಪ್ರಕಟವಾದ ಕಾವ್ಯ. ನನ್ನ ತಿಳಿವಳಿಕೆಗೆ ಬಂದ ಪುಸ್ತಕಗಳು ಮಾತ್ರ ಇಲ್ಲಿವೆ]

ಕೃತಿ	ಕವಿ	ಕೃತಿ	ಕವಿ
೧ ಮರ್ಯಾದೆ	ಅಂಬಿಕಾತನಯದತ್ತ	೧೫ ಭಗ್ನಪ್ರತಿಮೆ	ಕೆ. ಶಿವರಾಮ ಐತಾಳ
೨ ಮಂತ್ರಾಕ್ಷತೆ	ಕುವೆಂಪು	೧೬ ಋತಗೀತಾಮೃತ	ಪ್ರೇಮಸೋದರ
೩ ಅನುತ್ತರಾ	,,	೧೭ ಕರ್ಮಜೀವಿ	ಚಿರಂತನ
೪ ಕುಟೀಚಕ	,,	೧೮ ಯಾತ್ರೆ	ರಾಗೌ
೫ ಪುಣ್ಯಭೂಮಿ	ವಿನಾಯಕ	೧೯ ಏಕಾಂತ	ಕೆ. ಎನ್. ಶಿವಪ್ಪ
೬ ಪತ್ರ-ಪುಷ್ಪ	ಕ. ಶಂಕರಭಟ್ಟ	೨೦ ಮಣ್ಣಿನ ಹಾಡು	ಶ್ರೀಕೃಷ್ಣ ಆಲನಹಳ್ಳಿ
೭ ಇಂದ್ರಚಾಪ	ಎಸ್. ವಿ. ಪರಮೇಶ್ವರಭಟ್ಟ	೨೧ ಮುಸುಕು-ನಸುಕು	ವೇಣುಗೋಪಾಲ ಸೊರಬ
೮ ಚಂದ್ರವೀಧಿ	,,	೨೨ ಬೆಳದಿಂಗಳು	ಸೋಮಶೇಖರ ಇಮ್ರಾಪೂರ
೯ ಗಾಥಾಸಪ್ತಶತಿ	,,	೨೩ ಅಗ್ನಿತುಷಾರ	ಶ್ರೀ ವಜ್ರಮುಟ್ಟಿ ಮೇಘಮಿತ್ರ
೧೦ ನೆಲಮುಗಿಲು	ಚೆನ್ನವೀರ ಕಣವಿ	೨೪ ಗೌರೀಶಂಕರ	ಕೆ. ಭೈರವಮೂರ್ತಿ
೧೧ ತೆರೆದ ದಾರಿ	ಜಿ. ಎಸ್. ಶಿವರುದ್ರಪ್ಪ	೨೫ ರಮ್ಮಿಯಾಟ	ಆಣತಿ ಸತ್ಯನಾರಾಯಣರಾವ್
೧೨ ಸುಮನಸೌರಭ	ಎಂ. ಆಕಬರಆಲಿ	೨೬ ಬೃಂದಾವನ	ಸಂ. ರಾಘವೇಂದ್ರಕಟ್ಟಿ
೧೩ ಧ್ರುವಬಿಂದು	ಬಿ. ಎ. ಸನದಿ	೨೭ ಕವನಕಿಡಿ	ಕೋಸು. ಸಂಪುಟಾಣೆ
೧೪ ನಾನಾಗುವೆ		೨೮ ಕವನಲೀಲೆ	ಧವಳಶ್ರೀ
ಗೀಜಗನ ಹಕ್ಕಿ	ಎಚ್. ಎಲ್. ನಾಗೇಗೌಡ	೨೯ ಸುಮುಹೂರ್ತ	ನಿಸಾರ್ ಅಹಮ್ಮದ್

ಸಾಹಿತ್ಯಗೋಷ್ಠಿ

ಕನ್ನಡದ ದಾರಿ

ಅಧ್ಯಕ್ಷ ದೇ. ಜವರೇಗೌಡ ಅವರ ಭಾಷಣ

ಪರಮ ಪೂಜ್ಯರಾದ ಕ್ಷೇತ್ರಪತಿಗಳೆ, ಪಂಡಿತೋತ್ತಮರೂ ಸಾಹಿತ್ಯ ಸಮ್ಮೇಳನದ ಸನ್ಮಾನ್ಯ ಅಧ್ಯಕ್ಷರೂ ಆದ ಡಾ. ಉಪಾಧ್ಯೆಯವರೆ, ಮಾನ್ಯ ಪರಿಷದಧ್ಯಕ್ಷರಾದ ಶ್ರೀ ವೆಂಕಟಸುಬ್ಬಯ್ಯನವರೆ, ವಿದ್ವನ್‌ಮಣಿಗಳೆ, ಬಂಧುಭಗಿನಿಯರೆ :

ಇತಿಹಾಸ ಪ್ರಸಿದ್ಧವೂ ಲೋಕಶ್ರುತವೂ ಚೈತ್ಯಾಗಾರವೂ ಜಿನಧರ್ಮ ಕಾವ್ಯಧರ್ಮಗಳ ಸಮನ್ವಯ ಕ್ಷೇತ್ರವೂ ಆದ ಶ್ರವಣಬೆಳ್ಗೊಳದಲ್ಲಿ ಪಾಂಡಿತ್ಯಗೊಮ್ಮಟರೂ ಅಂತರರಾಷ್ಟ್ರೀಯ ಖ್ಯಾತಿವೆತ್ತರೂ ಆದ ಡಾ. ಆದಿನಾಥ ನೇಮಿನಾಥ ಉಪಾಧ್ಯೆಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಮಹತ್ವದ ಸಂಗತಿಯಾಗಿದೆ. ಭದ್ರಬಾಹು ಚಂದ್ರಗುಪ್ತರು ಕಾಲಿರಿಸಿದಾಗಿನಿಂದ ಈ ನೆಲ ಪವಿತ್ರಕ್ಷೇತ್ರವಾಗಿ ಕರ್ಮವಶವಾದ ಜೀವಕೋಟಿಯನ್ನು ಸಂಸಾರಬಂಧನದಿಂದ ಪಾರುಮಾಡುತ್ತಿದೆ. ಆಚಾರ್ಯ ಉಪಾಧ್ಯಾಯರ ಸಿದ್ಧಸಾಧುಗಳ ಉಪದೇಶದಿಂದ ಶ್ರಾವಕಶ್ರಾವಿಕೆಯರ ಚಾರಿತ್ರದಿಂದ ಮುನಿನಿರ್ಗ್ರಂಥರ ವ್ರತತಪಾದಿಗಳಿಂದ ಪುನೀತಗೊಂಡಿರುವ ಈ ಕ್ಷೇತ್ರ ಭವರೋಗಿಗಳಿಗೆ ಶಾಂತಿ ಸಮಾಧಾನಗಳನ್ನು ನೀಡಿ, ರತ್ನತ್ರಯ ಸಾಧನೆಗೆ ನೆರವಾಗಿದೆ. ಕೊಂಡಕುಂದ ಗೌತಮಾದಿ ಗುರುಪರಂಪರೆಯ ಪ್ರಭಾಚಂದ್ರ ಮಾಘಣಂದಿ ಶುಭಕೀರ್ತಿ ಮೇಘಚಂದ್ರ ತ್ರೈವಿದ್ಯ ಮುನಿಗಳು ತಮ್ಮ ತಪೋಮಹಿಮೆಯಿಂದ ಧರ್ಮೋಪದೇಶದಿಂದ ಸಹಸ್ರ ಸಹಸ್ರ ಜೀವಿಗಳನ್ನುದ್ಧರಿಸಿ ಸಲ್ಲೇಖನವ್ರತದಿಂದ ಸಮಾಧಿಸ್ಥರಾದ ಕತೆಯನ್ನು ಕಟವಪ್ರದ ನಿಸಿದಿಗೆಗಳು ಸಾರುತ್ತಿವೆ; ಪೈಜಬ್ಬೆ ಸಾಯಿಬ್ಬೆ ಶ್ರೀಮತಿಯರು ಸಂನ್ಯಾಸ ಗ್ರಹಣಮಾಡಿ ತಪೋನಿರತರಾಗಿದ್ದು ಮುಡಿಪಿಕಂತಿಯರಾದ ವಿಷಯವನ್ನು ದಾರಿಬದಿಯ ನಿಲುಗಲ್ಲುಗಳು ಘೋಷಿಸುತ್ತಿವೆ; ಗುರುಕಂತಿಯರಲ್ಲದೆ ರಾಷ್ಟ್ರಕೂಟರ ಇಂದ್ರನಂಥ ರಾಜಾಧಿರಾಜರೂ ಸನ್ಯಸನವಿಧಿಯಿಂದ ಮುಡಿಪಿದುದಾಗಿ ಶಾಸನಗಳು (ಶ್ರವಣಬೆಳ್ಗೊಳ ೧೩೩) ಕೀರ್ತಿಸುತ್ತಿವೆ; ಚಾವುಂಡರಾಯ ಕವಿರತ್ನ ಅಕಲಂಕ ಪಂಡಿತ ನಾಗವರ್ಮ ಬೊಪ್ಪಣ ಮಧುರ ದೊಡ್ಡಯ್ಯ ಪಂಚಬಾಣ ದೇವಚಂದ್ರ ಚಿದಾನಂದ ಮೊದಲಾದ ಕವಿಗಳು ಅಂದು ನಡೆದಾಡಿದ ಸಪ್ಪಳ ಇಂದಿಗೂ ಇಲ್ಲಿಯ ಶಿಲೆಗಳಲ್ಲಿ ಮಾರ್ದನಿಗೊಡುತ್ತಿದೆ. ಗಂಗರಾಜ ಹುಳ್ಳ ಕಲ್ಲಯ್ಯ ಹುಲಿಗೆರೆ ಸೋವಣ್ಣ ಮೊದಲಾದ ದಂಡನಾಯಕರ ಗ್ರಾಮಮುಖಂಡರ ತ್ಯಾಗ ಶೌರ್ಯಾದಾರ್ಯಗಳಿಗೆ ಪ್ರತಿಮೆಗಳಾಗಿ ಅನೇಕ ನಿಸಿದಿಗೆಗಳೂ ಮಾನಸ್ತಂಭಗಳೂ ಕಲ್ಯಾಣಿಗಳೂ ಭವ್ಯಮೂರ್ತಿಗಳೂ ಶತಶತಮಾನಗಳಿಂದ ಬದುಕಿವೆ. ಆ ನಾಟ್ಯಸರಸ್ವತಿ ಹೊಯ್ಸಳೇಶ್ವರನ ಮಹಾರಾಣಿ ಶಾಂತಲೆಯನ್ನು ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಮರೆಯಲಾದೀತೆ? ಗಂಗ ರಾಷ್ಟ್ರಕೂಟ ಹೊಯ್ಸಳ ಚಕ್ರವರ್ತಿಗಳೂ, ಮಹಾಸಾಮಂತ ಮಂಡಳೇಶ್ವರ ಪಸಾಯಿತರೂ, ಪ್ರಧಾನಿ ದಂಡನಾಯಕ ಗಾವುಂಡರೂ ನಾನಾರೀತಿಯ ಭಕ್ತಿಗೌರವಾರ್ಪಣದಿಂದ ಈ ಕ್ಷೇತ್ರದ ತೀರ್ಥಂಕರತ್ವವನ್ನು ಪ್ರಕಟಪಡಿಸಿದ್ದಾರೆ. ಲೋಕದ ಕೆಡುಕೊಳಿತುಗಳಿಗೆಲ್ಲ ಸಾಕ್ಷೀಪ್ರಜ್ಞೆಯೆಂಬಂತೆ ತನ್ನ ಭವ್ಯನಗ್ನತೆಯಿಂದ ಲೋಕದ ಅಹಂಕಾರವನ್ನು ನಾಚಿಸಲೆಂಬಂತೆ, ಸಕಲ ಲೋಕಗಳ ಸತ್ಯಸೌಂದರ್ಯಗಳಿಗೆ ತಾನೆ ನೆಲೆವನೆಯೆಂಬಂತೆ, ವಿಧಾತ್ರಸೃಷ್ಟಿಯೊಡನೆ ಪ್ರತಿಸ್ಪರ್ಧೆ ಹೂಡಲೆಂಬಂತೆ ಪ್ರಪಂಚದ ಆಸುರೀ ವ್ಯಾಪಾರಗಳಿಗೆ ತನ್ನ ವ್ಯಕ್ತಿತ್ವವೇ ಪ್ರತ್ಯುತ್ತರವೆಂಬಂತೆ ಭಗವಾನ್ ಬಾಹುಬಲಿಸ್ವಾಮಿ ಜಗತ್ತಿನ ಕಲಾಚಾರ್ಯರಿಗೆ ಆಚಾರ್ಯನಾಗಿ ಭವ್ಯಾವಳಿಗೆ ಮೋಕ್ಷಗುರುವಾಗಿ ಸಹಸ್ರ ವರ್ಷಗಳ ಹತ್ತಿರದಿಂದ ವಿಂಧ್ಯಾದ್ರಿಯ ನೆತ್ತಿಯಮೇಲೆ ಗಗನೋಪಮವಾಗಿ ದಶದಿಕ್ಕುಗಳಿಗೂ ಸುಸ್ಮಿತದೃಷ್ಟಿಯನ್ನು ಬೀರುತ್ತ ನಿಂತಿದ್ದಾನೆ. ಇಲ್ಲಿ ಜಡವೆಂಬುದೊಂದಿಲ್ಲ. ಎಲ್ಲವೂ ಚೈತನ್ಯನಿಧಿ. ಜ್ಞಾತಾಜ್ಞಾತ ಕವಿಪುಂಗವರು ಶಿಲಾಶರೀರಿಗಳಾಗಿ ಗತಇತಿಹಾಸವನ್ನು ವಿವರಿಸುತ್ತ, ಯಾತ್ರಾ

ರ್ಥಿಗಳ ಧರ್ಮಪ್ರಜ್ಞೆಯನ್ನು ಪ್ರಚೋದಿಸುತ್ತ, ಪ್ರತಿಭಾವಂತರಿಗೆ ಕಾವ್ಯಸ್ಫೂರ್ತಿಯನ್ನು ನೀಡುತ್ತಿವೆ. ಕಲ್ಲುಮಣ್ಣು ಗಿಡಮರಗಳು ಅಣುರೇಣು ತೃಣ ಕಾಷ್ಠಗಳು ಸ್ವರ್ಗಾಪವರ್ಗವನ್ನು ಸಾಧಿಸಿದ ಸಾಧುಸಂತ ಕವಿಮುನೀಷಿಗಳ ಪಾದಸ್ಪರ್ಶದಿಂದ ಓಜರೂವಾರಿಗಳ ಪ್ರತಿಭಾದಾನಧಾರೆಯಿಂದ ತ್ಯಾಗವೀರ ದಾನಚಿಂತಾಮಣಿಗಳ ತೇಜಸ್ಸಂಪರ್ಕದಿಂದ ಮಹಿಮಾನ್ವಿತವಾಗಿ ದಿವ್ಯಾತ್ಮಕವಾಗಿ ಧನ್ಯತೆಯನ್ನು ಪಡೆದಂತೆ, ಆರ್ಷೇಯತ್ವವನ್ನು ಘೋಷಿಸುವಂತೆ ಹೆಮ್ಮೆಯಿಂದ ವಿಜೃಂಭಿಸುತ್ತಿವೆ. ಇದು ಕಲೆಯ ಸೆಲೆ, ಜಿನಧರ್ಮದ ನೆಲೆ.

ಕನ್ನಡ ನಾಡಿಗೆ ಜೈನಧರ್ಮದ ಪ್ರವೇಶವಾದೊಡನೆಯೆ ಸಾಹಿತ್ಯ ಕಲಾಕ್ಷೇತ್ರಗಳಲ್ಲಿ ಭಾಗ್ಯೋದಯವಾಯಿತೆನ್ನಬಹುದು. ಧರ್ಮಪ್ರಸಾರದೊಡನೆ ಅದರ ಅನಿವಾರ್ಯ ಸಾಧನವಾಗಿ, ಸಾಹಿತ್ಯ ಶಿಲ್ಪಕಲೆಗಳರಳಿದುವು. ಮೂರ್ತಿಸೃಷ್ಟಿ ಬಸದಿಚೈತ್ಯ ನಿರ್ಮಾಣಗಳಂತೆಯೇ ಪುರಾಣ ಪ್ರತಿಗಳ ಹಂಚಿಕೆಯೂ ಮೋಕ್ಷಕ್ಕೆ ಮಾರ್ಗವಾಯಿತು. ಪುರುಷಾರ್ಥ ಸಾಧನೆಗೆ ನೆರವಾಗದ, ಧರ್ಮಪ್ರಸಾರಕ್ಕೆ ಪ್ರಣಾಳಿಕೆಯಾಗದ ಸಾಹಿತ್ಯ ಕಲೆಗಳಿಗೆ ಸಮಾಜದಲ್ಲಿ ಸಾಕಷ್ಟು ಮನ್ನಣೆ ಸಿಗುತ್ತಿರಲಿಲ್ಲ. ಆದ್ದರಿಂದ ಭಾರತೀಯ ಸಾಹಿತ್ಯದ ಮೂಲೋದ್ದೇಶ ಶಿವೇತರಕ್ಷತಿ ಮತ್ತು ಸದ್ಯಃಪರನಿರ್ವೃತಿಯೆಂಬುದನ್ನು ಮರೆಯಬಾರದು. ಕಾವ್ಯಮೀಮಾಂಸೆಯ ಓನಾಮವೆಂಬಂತೆ ಕನ್ನಡದ ಪ್ರಥಮ ಲಕ್ಷಣ ಗ್ರಂಥದಲ್ಲಿಯೇ ಈ ತತ್ತ್ವ ಪ್ರತಿಪಾದನೆಗೊಂಡಿರುವುದನ್ನು ಕಾಣಬಹುದು :

> ಪಾಪಮಿದು ಪುಣ್ಯಮಿದು ಹಿತ
> ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ
> ಖೋಪಾತ್ತಮಿದೆಂದಱಿಪುಗು
> ಮಾ ಪರಮಕವಿ ಪ್ರಧಾನರಾ ಕಾವ್ಯಂಗಳ್

ದರ್ಶನಾತ್ಮಕವಲ್ಲದ ಮೋಕ್ಷ ಸಾಧಕವಾಗದ ಕೃತಿ ಮಹಾಕಾವ್ಯವಾಗಲಾರದೆಂಬುದೇ ಈ ಪದ್ಯದ ತಿರುಳು.

ನ್ಯೂನತೆಯಲ್ಲಿ ಪರಿಪೂರ್ಣತೆಯನ್ನೂ ವ್ಯಷ್ಟಿಯಲ್ಲಿ ಸಮಷ್ಟಿಯನ್ನೂ ಸಾಂತದಲ್ಲಿ ಅನಂತತೆಯನ್ನೂ ದರ್ಶಿಸಿ, ಆ ದರ್ಶನವನ್ನು ರಸಾತ್ಮಕವಾಗಿ ಅಭಿವ್ಯಕ್ತಗೊಳಿಸುವವನೇ ನಿಜವಾದ ಕವಿ. ಸಮಾಜದ ಲೋಪದೋಷಗಳನ್ನೂ ಕವಿ ವರ್ಣಿಸಬಾರದೆಂದಿಲ್ಲ; ಆದರೆ ಇವೇ ಮುಖ್ಯವಲ್ಲ. ಅರ್ಥಸಂಪಾದನೆ ಕೀರ್ತಿಕಾಮನೆಗಳನ್ನು ಮೀರಿದ ಸತ್ಯಸಾಕ್ಷಾತ್ಕಾರವೇ ಅವನ ಹೆಬ್ಬಯಕೆ. ಕೇವಲ ಮನರಂಜನೆಯಾಗಲೀ ಜ್ಞಾನಸಂವರ್ಧನೆಯಾಗಲೀ ಕಾವ್ಯದ ಪ್ರಧಾನ ಧರ್ಮವಲ್ಲ; ದೇಶಕಾಲ ವಿಷಯಾತೀತವೂ ಅವಿನಾಶಿಯೂ ಅನಾದಿಯೂ ಆದ ನಿತ್ಯಸತ್ಯ ಪ್ರಕಾಶನ ಅದರ ಹೆಗ್ಗುರಿ.[1] ಅಂದರೆ ಕಾವ್ಯ ನೀತಿ ಅಥವಾ ತತ್ತ್ವಶಾಸ್ತ್ರವಾಗಬಾರದು. ತತ್ತ್ವವಾಗಲಿ ನೀತಿಯಾಗಲಿ ರಸಾತ್ಮಕವಾಗಿ ಅಭಿವ್ಯಕ್ತಗೊಂಡಾಗ ಕಾವ್ಯವಾಗುತ್ತದೆ. ತತ್ತ್ವರಸಾನುಭವವಾಗಿ, ಬುದ್ಧಿಭಾವಗಳು ಅವಿಭಾಜ್ಯವೆಂಬಂತೆ ಮೈದೋರಿದಾಗ ಕಾವ್ಯ ಸಿದ್ಧಿಸುತ್ತದೆ. ಹಾಲಿನಲ್ಲಿರುವ ತುಪ್ಪದಂತೆ ಬುದ್ಧ್ಯಂಶ ಕಾವ್ಯದಲ್ಲಿ ಅಪ್ರತ್ಯಕ್ಷವಾಗಿ ಸೇರಿಕೊಂಡಿರುತ್ತದೆ. ಕವಿ ತನ್ನನ್ನು ತಾನು ಮರೆತು ವಿಶ್ವಾತ್ಮನಾಗಿ ಹಾಡುವಾಗ ದರ್ಶನಕಾವ್ಯ ಮೂಡುತ್ತದೆ.[2]

ಹಳೆಗಾಲ ಮತ್ತು ನಡುಗಾಲಗಳ ಕನ್ನಡ ಸಾಹಿತ್ಯಕ್ಕೆ ಮತೀಯ ಚಟುವಟಿಕೆಗಳೆ ಬಹುತೇಕವಾಗಿ ಚಾಲಕ ಮತ್ತು ಪ್ರೇರಕ ಶಕ್ತಿಯಾಗಿವೆಯೆಂಬುದಂತು ಸ್ಪಷ್ಟ. ಧರ್ಮದ ನೆಲಗಟ್ಟಿನ ಮೇಲೆ ಮತೀಯ ಸಾಮಗ್ರಿಯಿಂದ ಕಾವ್ಯಸೌಧ ನಿರ್ಮಾಣಗೊಂಡಿತು. ಸಾಹಿತ್ಯದಲ್ಲಿ ಧಾರ್ಮಿಕ ಪ್ರಜ್ಞೆಯ ಸಂಪ್ರದಾಯವನ್ನು ನೆಲೆಗೊಳಿಸಿ, ಸಾವಿರ ವರ್ಷಗಳ ನಂತರವೂ ಕನ್ನಡ ಸಾಹಿತ್ಯದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತಿರುವ ಪಂಪ ಮಹಾಕವಿಯೆ "ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗೞ್ತೆ ಲಾಭಮೆಂಬಿವೆ ವಲಂ" ಎಂದು ಕಾವ್ಯ ಪ್ರಯೋ

---

1. " The chief office of Poetry is not merely to give amusement, not merely to be the expression of feeling good or bad of mankind, or to increase our knowledge of human nature, and of human life, but if it includes this mission, it also includes a mission far higher, the revelation, namely, of ideal truth, the revelation of that world of which this world is but the shadow or the drossy copy, the revelation of the enternal, the unchanging and the typical which underlies the unsubstantial and the everdissolving phenomena of earth's empire of matter and time"—Churton Colluis, The True Function of Poetry.

2: " The human soul to rise into poetic rapture should become attuned with the soul of things beyond "—Dr. Radhakrishnan, The Philosophy of Rabindranath Tagore (page 81.)

ಜನವನ್ನು ನಿರೂಪಿಸುವಲ್ಲಿ ಕಾವ್ಯದ ಮೂಲೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಆಗಮಿಕ ಕಾವ್ಯವಾದ ಆದಿಪುರಾಣ ಮುಂದಿನ ಕವಿಗಳಿಗೆ ಮಾರ್ಗದರ್ಶಕವಾಯಿತು. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಾಹಿತ್ಯಕ್ರಾಂತಿಗೂ, ಹದಿನೈದನೆಯ ಶತಮಾನದಲ್ಲಿ ಕಣ್ದೊಡೆದು ಜನಜೀವನವನ್ನೆಲ್ಲ ವ್ಯಾಪಿಸಿದ ದಾಸಸಾಹಿತ್ಯಕ್ಕೂ ಮತೀಯ ಸ್ಫೂರ್ತಿಯೇ ಮೂಲಕಾರಣವಾಯಿತು. ಯುಗದಿಂದ ಯುಗಕ್ಕೆ ವಸ್ತುತಂತ್ರ ಭಾಷೆಗಳು ವ್ಯತ್ಯಾಸಹೊಂದಿದರೂ, ಭಿನ್ನಭಿನ್ನ ಮತಗಳು ಮೈದೋರಿದರೂ, ಕಾವ್ಯದ ಮೂಲೋದ್ದೇಶಕ್ಕೆ ಮಾತ್ರ ಭಂಗವೊದಗಲಿಲ್ಲ. ಪಂಪ ಹರಿಹರ ಕುಮಾರವ್ಯಾಸ ಚಾಮರಸಾದಿ ಕವಿಪುಂಗವರಿಗೆ ಕಾವ್ಯವೊಂದು ರಸಯೋಗ, ಇಹಪರಗಳನ್ನು ಸಂಧಿಸುವ ರಸಸೇತುವೆ; ಅವರ ದೃಷ್ಟಿಯಲ್ಲಿ ಕಾವ್ಯಧರ್ಮ ಮತಧರ್ಮಕ್ಕೆ, ಕಾವ್ಯದ ಲೌಕಿಕ ಮೌಲ್ಯಗಳು ಅಲೌಕಿಕ ಮೌಲ್ಯಗಳಿಗೆ ವಿರೋಧವಾಗಿರಬಾರದು; ಸರ್ವರಸಗಳೂ ಶಾಂತಿರಸದಲ್ಲಿ ಪರ್ಯವಸಾನಗೊಳ್ಳಬೇಕು. ಈ ಆಗಮಿಕ ದೃಷ್ಟಿ ನವ್ಯಕಾವ್ಯವನ್ನೊಳಗೊಂಡ ಆಧುನಿಕ ಸಾಹಿತ್ಯದಲ್ಲಿಯೂ ಪಟ್ಟುಹಿಡಿದಿರುವುದನ್ನು ಗಮನಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಲೌಕಿಕ ಕಾವ್ಯಗಳಿಗೆ ಕೊರತೆಯೇನೂ ಇಲ್ಲ. ವಿಕ್ರಮಾರ್ಜುನವಿಜಯ, ಸಾಹಸ ಭೀಮವಿಜಯ, ಕಬ್ಬಿಗರ ಕಾವ, ಲೀಲಾವತಿ, ಕುಮಾರ ರಾಮಸಾಂಗತ್ಯ ಮೊದಲಾದ ಕಾವ್ಯಗಳು ಯಥೇಚ್ಛವಾಗಿವೆ. ಆಗಮಿಕ ಕಾವ್ಯಗಳಲ್ಲಿಯೂ ಲೌಕಿಕ ವಿಚಾರಗಳು, ಅಷ್ಟಾದಶವರ್ಣನೆಗಳು, ಶೃಂಗಾರಾದಿ ನವರಸಗಳು ಸಮುಚಿತ ಪ್ರಮಾಣದಲ್ಲಿ ದೊರೆಯುತ್ತವೆ; ಆದರೆ ಅವೆಲ್ಲವೂ ಪರಮಾರ್ಥಕ್ಕೆ ಶರಣಾಗದಿದ್ದರೆ ಬೆಲೆ ಬರುವುದಿಲ್ಲ. ಸಾಹಿತ್ಯವಿಮರ್ಶೆ ಈ ಮುಖ್ಯಾಂಶವನ್ನು ಮರೆಯಬಾರದು. ಹಳಗನ್ನಡ ನಡುಗನ್ನಡ ಕಾವ್ಯಗಳು ಆಧುನಿಕ ವಿಮರ್ಶೆಯ ಒರೆಗಲ್ಲಿನಲ್ಲಿ ತೇರ್ಗಡೆಯಾಗದಿರಬಹುದು. ಆದರೆ ಆಯಾಯ ಕಾಲದ ಸಹೃದಯ ಸಮುದಾಯದ ಅಭಿರುಚಿಗೆ ತಕ್ಕಂತೆ, ಸಮಕಾಲೀನ ಕಾವ್ಯಮೀಮಾಂಸೆಯ ಸೂತ್ರಾನುಸಾರವಾಗಿ ಆಗಿನ ಕಾವ್ಯಗಳು ರಚನೆಗೊಳ್ಳುತ್ತಿದ್ದುವೆನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಕುಲಾಚಾರ ದೇಶಾಚಾರ ಸಮಾಚಾರಗಳಿಗೆ ಮನ್ನಣೆ ನೀಡಬೇಕಾಗಿದೆ; ಸರ್ವಜನಾಂಗೀಕಾರವಾದ ಮೂಲತತ್ತ್ವಗಳನ್ನು ಪುರಸ್ಕರಿಸಬೇಕಾಗಿದೆ. ಮಾನುಷಸೃಷ್ಟಿ ಸದಾ ಪರಿವರ್ತನಶೀಲವಾದದ್ದು. ಕಾವ್ಯವು ಮಾನವಸೃಷ್ಟಿ. ಆದರ ಅಂತಸ್ಸತ್ವ ಅವಿಕಾರವಾದುದಾದರೂ ಅದರ ಬಾಹ್ಯಾಕಾರ ಚರ್ಯೆಗಳು ಕಾಲಕಾಲಕ್ಕೆ ಬದಲಾವಣೆ ಹೊಂದುವುದು ಆರೋಗ್ಯದಲಕ್ಷಣ ಯುಗಧರ್ಮ ಪರಿಸರಣಧರ್ಮಗಳು ಭಗವದವತಾರದ ಮಾಧ್ಯಮವನ್ನು ನಿಯಂತ್ರಿಸುವಂತೆ ಕಾವ್ಯಸೃಷ್ಟಿಯನ್ನು ಪರಿಸರಣನಿಯಮಗಳು ನಿರ್ಧರಿಸುತ್ತವೆ. ವರಾಹನರಸಿಂಹಾವತಾರಗಳು ರಾಮಕೃಷ್ಣಾವತಾರಗಳು ಸಮಾನಪೂಜೆಗೆ ಅರ್ಹವಾಗಿರುವಂತೆ ಎಲ್ಲ ಕಾಲದ ಕಾವ್ಯಗಳೂ ಸಮಾನ ಗೌರವಕ್ಕೆ ಪಾತ್ರವಾಗುತ್ತವೆ. ಪೂರ್ವಿಕರ ವೇಷಭೂಷಣಗಳು ಆಚಾರ ಸಂಪ್ರದಾಯಗಳು ಜುಟ್ಟುಗಡ್ಡಗಳು ದೃಷ್ಟಿಧೋರಣೆಗಳು ರುಚಿ ಮೌಲ್ಯಗಳು ತುರುಬುಬೈತಲೆಗಳು ಸಾಂಪ್ರತ ಪರಿಸ್ಥಿಗೆ ಅವಿರೋಧವಾಗಿರುವುದರಿಂದಲೆ ಅವರಲ್ಲಿರುವ ಗೌರವ ಕುಂದಬೇಕಾಗಿಲ್ಲ. ಅರೆನಗ್ನತೆಯೆ ಫ್ಯಾಷನ್ ಆಗಿರುವಾಗ ಮೈತುಂಬ ಬಟ್ಟೆ ಹೊದೆದ ತಾಯಿಯನ್ನು ನಿರ್ಲಕ್ಷಿಸುವುದಿಲ್ಲವಷ್ಟೆ. ಈ ದೃಷ್ಟಿಯಿಂದ ಹಳೆಯ ಸಾಹಿತ್ಯವನ್ನು ತೂಗಿ ಬೆಲೆ ಕಟ್ಟಬೇಕು. ಅಲ್ಲಿಯ ದೋಷಗಳನ್ನು ಉತ್ಪ್ರೇಕ್ಷಿಸುವುದಾಗಲೀ, ಇಲ್ಲದ ಗುಣಗಳನ್ನರಸಿ ಇರುವ ಗುಣಗಳನ್ನೊರಸುವುದಾಗಲೀ ಶ್ರೇಯಸ್ಕರವಲ್ಲ.

ಈಚೀಚೆಗೆ ವಾಸ್ತುಶಿಲ್ಪದಲ್ಲಿ ಮಿತವ್ಯಯವಾದ ಸಾರ್ವತ್ರಿಕ ಮನ್ನಣೆ ಪಡೆದಿದೆ. ಕಟ್ಟಡದ ಅಲಂಕಾರಕ್ಕಿಂತ ಅದರ ಉಪಯೋಗದ ಕಡೆಗೆ ಗಮನ ಹರಿದಿದೆ. ಉಪಯುಕ್ತತೆಯ ದೃಷ್ಟಿಯಿಂದ ಅನುಚಿತವಾದದ್ದೆಲ್ಲ ತಿರಸ್ಕೃತವಾಗುತ್ತಿದೆ. ಗೋಡೆ ಕಂಬ ಬೋದಿಗೆ ಬಾಗಿಲುಗಳ ಮೇಲೆ ಚಿತ್ರಗಳ ಕೆತ್ತನೆ ದುಂದುಗಾರಿಕೆಯೆಂದು ವ್ಯಕ್ತಗೊಂಡಿದೆ: ಇಟ್ಟಿಗೆಗಳು ಅನಾವಶ್ಯಕವಾಗಿ ಪೋಲಾಗಬಾರದೆಂದು ಗೋಡೆ ಸಣ್ಣಗಾಗಿದೆ; ಪೋಕಿಯ ಸಲಕರಣೆ ಪರಿಕರಗಳು ವಿವರ್ಜಿತವಾಗಿ ತಾಂತ್ರಿಕತೆಗೆ ಪ್ರಾಧಾನ್ಯ ದೊರೆತಿದೆ. ಇತ್ತೀಚಿನ ಸಾಹಿತ್ಯದಲ್ಲಿಯೂ ಇಂಥದೇ ನಿಲವು ನಿಟ್ಟುಗಳು ತಲೆದೋರುತ್ತಿವೆ. ವಾಗ್ಗುಂಫನ ವರ್ಣನಾವಿಧಾನ ಪಾತ್ರಪೋಷಣ ಚಮತ್ಕಾರಾದಿ ಸಕಲ ಕಾವ್ಯಾಂಶಗಳಲ್ಲಿಯೂ ಔಚಿತ್ಯ ಹೊಂದಾಣಿಕೆ ಸಂಯಮ ಎಣೆತನಗಳು ಕಣ್ಗಾಣಬೇಕೆಂಬ ಭಾವನೆ ಪ್ರಬಲವಾಗುತ್ತಿದೆ. 'ಸರಸ್ವತಿಯ ಚರಣ ಚಿಹ್ನೆ'ಗಳಂತಿರುವ ಮಾತು ಪೋಲಾಗಬಾರದು, ಛಂದಸ್ಸಿನ ದುಂದುಗಾರಿಕೆಯಲ್ಲಿ ಭಾವಾರ್ಥಗಳು ಸಿಕಲಾಗಬಾರದು ರಸದ ಬುಗ್ಗೆ ಒತ್ತಬಾರದೆಂಬುದೇ ಆಧುನಿಕರ ಅಭಿಮತ. ಈ ಸೂತ್ರಗಳ ಹಿನ್ನೆಲೆಯಲ್ಲಿ, ಆಧುನಿಕಾಭಿರುಚಿಯ ಬೆಳಕಿನಲ್ಲಿ, ಮಿತವ್ಯಯವಾದದ ಮುಂಬಿನಲ್ಲಿ, ಅದ್ಯತನಮೌಲ್ಯಗಳ ದೃಷ್ಟಿ

ಯಿಂದ ಪ್ರಾಚೀನ ಕಾವ್ಯಗಳನ್ನು ಬಿಲೆ ಕಟ್ಟಬೇಕಾದ್ದು ಸಹಜವೇ; ಆದರೆ ಅದ್ಯತನೀಯತೆಯ ಉರುಬಿನಲ್ಲಿ ಅವು ಗಳ ಚಾರಿತ್ರಿಕ ಪರಿಸ್ಥಿತಿಯನ್ನೂ ಪ್ರಾಚೀನ ಮೌಲ್ಯ ಗಳನ್ನೂ ಮರೆಯಬಾರದು.

ಪ್ರಾಚೀನ ಸಾಹಿತ್ಯದಲ್ಲಿ ಪ್ರಾಚೀನ ಸೂತ್ರಗಳಿಂದಲೂ ಸಮರ್ಥಿಸಿಕೊಳ್ಳಲಾಗದ ಕಾವ್ಯೇತರಾಂಶಗಳು ರಾಶಿರಾಶಿ ಯಾಗಿವೆ. ಜೀವೋತ್ಕರ್ಷ ಸಾಧಕವಾದ ಲೋಕಾನು ಭವಪ್ರದವಾದ ಸಮಾಜ ಪರಿಷ್ಕಾರಕವಾದ ಸಂಗತಿಗಳು ಸಾಕಷ್ಟು ಪ್ರಮಾಣದಲ್ಲಿದ್ದರೂ ಮೂಗು ಮುರಿಯುವ ಶೃಂಗಾರನಿರೂಪಣೆಯಲ್ಲಿ ವಮನಕಾರಿಯಾದ ಅಷ್ಟಾದಶ ವರ್ಣನೆಗಳಲ್ಲಿ ಕೇವಲ ಚಮತ್ಕಾರ ಪ್ರಧಾನವಾದ ಅಲಂ ಕಾರಗಳ ಕೆಸರುಸುಬಿನಲ್ಲಿ ನಾಚಿಕೆಯಿಂದ ತಲೆ ಮರೆಸಿ ಕೊಳ್ಳುತ್ತವೆ. ಭಾವಸಂಗಿಯಲ್ಲದ ರಸಸಾಕ್ಷಾತ್ಕಾರ ವಾಗದ ಆಧ್ಯಾತ್ಮಿಕ ವಿಚಾರಗಳ ಗೊಂಡಾರಣ್ಯದಲ್ಲಿ ತತ್ತ್ವ ಶಾಸ್ತ್ರೋಚಿತವಾದ ಮತೀಯ ವಿಚಾರಗಳ ಮರುಭೂಮಿ ಯಲ್ಲಿ ಕಾವ್ಯಕನ್ನಿಕೆಯ ಜೀವಾತ್ಮಗಳು ಸೊರಗಿ ಸೀದು ಹೋಗುತ್ತವೆ. ಔಚಿತ್ಯದ ಆದೇಶದಂತೆ ಧ್ವನಿಶಾಸನಕ್ಕೆ ವಿಧೇಯವಾಗಿ ಅಲಂಕಾರ ರೀತಿಚಿಂತನಾಂಶಗಳು ಸೇವೆ ಸಲ್ಲಿಸುವುದಾದರೆ ರಸಸರಸ್ವತಿ ತೇಜಸ್ವಿನಿಯಾಗುತ್ತಾಳೆ; ಅದಲ್ಲದೆ ಸೇವಾವರ್ಗವೇ ಮತ್ತತೆಯಿಂದ ಮೆರೆದು ರಸ ಭಂಗವಾಗುವುದಾದರೆ ಕಾವ್ಯಚ್ಯುತ್ಯ ನಗಳುತ್ತದೆ. ಹರಿಹರ ನಂಥ ಕ್ರಾಂತಿ ಕವಿ ನಿಷ್ಠುರ ಶಿವಭಕ್ತ ಆಕಸ್ಮಿಕವೆಂಬಂತೆ ಸಂಪ್ರದಾಯ ಶರಣನಾಗಿ ನಾರದ ಹಿಮವಂತರನ್ನು ಸೂಳೆ ಗೇರಿಗೆ ಬಿಜಯಮಾಡಿಸುವಾಗ ವಾಚಕನ ಮನಸ್ಸು ದಂಗೆ ಯೇಳುತ್ತದೆ; ನಾರಣಪ್ಪನ ಯುದ್ಧವರ್ಣನೆಗಳಲ್ಲಿ ವೈವಿಧ್ಯ ವೈಶಿಷ್ಟ್ಯ ಸ್ವಾರಸ್ಯಗಳಿದ್ದರೂ ಆ ವರ್ಣನೆಯ ಬೇಗೆಯಲ್ಲಿ ಓದುಗನ ಶಾಂತಿ ಬೇಗುದಿಗೊಳ್ಳುತ್ತದೆ; ನಡುನಡುವೆ ಬರುವ ನೀತಿ ಸಂಧಿಗಳಂತು ರಸಿಕ ವೃಂದದ ತಾಳ್ಮೆಯನ್ನು ಪರೀಕ್ಷಿಸುವಂತಿವೆ. ಒಮ್ಮೊಮ್ಮೆ ಜೈನ ವೀರಶೈವ ಪುರಾಣಗಳು ಕಾವ್ಯ ರೂಢಿಯಲ್ಲಿ ಪ್ರಾರಂಭ ವಾಗಿ ನಡುನಡುವೆ ತಾತ್ತ್ವಿಕ ಗ್ರಂಥಗಳೆಂಬ ಭ್ರಮೆ ಉಂಟುಮಾಡುತ್ತವೆ.

"ಎಂಬುದುಮಾ ಮುಮುಕ್ಷುಗಳ ಸಮಕ್ಷದೊಳವರ ಪೇಟ್ದ ಮಾಟ್ಕೆಯೊಳ್ ಪರಮಜಿನಪತಿ ಪರಿಭಾಷಿತ ಮಪ್ಪ ಪೋಷಿತವ್ರತಮಂ ಕೈಕೊಂಡು ಷೋಡಶತೀರ್ಥ ಕರ ಭಾವನೆಗಳಂ ಚತುಸ್ತ್ರಿಂಶದತಿಶಯಂಗಳುಮನಷ್ಟ ಮಹಾ ಪ್ರಾತಿಹಾರ್ಯ್ಯಂಗಳುಮಂ ಪಂಚ ಮಹಾ ಕಲ್ಯಾಣಂಗಳುಮಂ ನಾಮೋದ್ದೇಶಂಗೆಯ್ದು ಪಾರಣೆಯ ದಿವಸಮಲ್ಲದಱುವತ್ತುಮೂಱು ದಿವಸದುಪವಾಸದಿಂ ಸಮೆಯೆ ಜಿನಗುಣ ಸಂಪತ್ತಿಯುಮನಿರ್ಪ್ಪತ್ತೆಂಟು ಮತಿ ಜ್ಞಾನ ಭೇದಮುಮಂ ಪನ್ನೊಂದಂಗಮುಮನೆರಡು ಪರಿ ಕರ್ಮ್ಮಮುಮನೆಂಬತ್ತೆಂಟು ಸೂತ್ರಂಗಳುಮಂ ಪ್ರಥ ಮಾನುಯೋಗಮುಮಂ" (ಆದಿಪುರಾಣ ೪-೪೦ ಗದ್ಯ) ಇತ್ಯಾದಿ.

> ಎಂತಾದುದೈ ನಿನಗೆ ಪ್ರಾಣಲಿಂಗಂ ಮನದ
> ಭ್ರಾಂತಿಯಲ್ಲವೆ ತನುತ್ರಯವಿಡಿದ ಬಳಿಕಿಲ್ಲಿ
> ಸಂತತಂ ತ್ರಿವಿಧಲಿಂಗವ ಧರಿಸಬೇಕಿಷ್ಟಲಿಂಗವೇ ನಿನಗಲ್ಲದೆ
> ಮುಂತೆರಡು ಲಿಂಗಂಗಳಳವಟ್ಟ ಭೇದಮಂ
> ನೀಂ ತಿಳಿಯೆ ಪೇಳೆನಲ್ ಸಿದ್ಧರಾಮೇಶ್ವರಂ
> ಸಂತಸದೊಳಾ ಚೆನ್ನಬಸವ ದಂಡಾಧೀಶನೊಡ ನಾಗಳಿಂತೆಂದನು
>
> (ಚೆನ್ನಬಸವ ಪುರಾಣ ೨-೧-೫)

ಇಂಥ ಪ್ರಕರಣಗಳು ಸಹೃದಯನ ತಾಳ್ಮೆ ಸಹಾನು ಭೂತಿಗಳನ್ನು ಅಪೇಕ್ಷಿಸುತ್ತವೆ. ಮತೀಯಶಾಸ್ತ್ರ ವಿಚಾರ ಗಳನ್ನೂ ಪ್ರತ್ಯಕ್ಷೋಪದೇಶ ಪ್ರಕರಣಗಳನ್ನೂ ದಾಟಿ ಮುಂದೆ ಹೆಜ್ಜೆಯಿಟ್ಟಾಗ ಕಾವ್ಯಕಲಾರಸದ ಮಡುವಿನಲ್ಲಿ ಮುಳುಗುತ್ತಾನೆ. ವಚನದಾಸ ಸಾಹಿತ್ಯಗಳಲ್ಲಿ ತಾತ್ತ್ವಿಕ ವಿಚಾರಗಳು ನೇಯ್ಗೆಗೊಂಡಿದ್ದರೂ ಅವು ಅಂತರಂಗ ಪರಿಪಾಕದ ಹೊಮ್ಮುಗೆಗಳಾದ್ದರಿಂದ ಅನುಭಾವವಾಗಿ ಆತ್ಮರಸಸಂಗಿಯಾಗಿ ಅಭಿವ್ಯಕ್ತಿಗೊಳ್ಳುವುದರಿಂದ ಆಸ್ವಾ ದ್ಯವಾಗುತ್ತವೆ. ಕೆಲವು ವಚನ ಪದಗಳು ಕಾವ್ಯಶಾಸ್ತ್ರ ಗಳ ಹೊಸ್ತಿಲಲ್ಲಿ ನೆಲೆ ನಿಂತರೆ ಆಶ್ಚರ್ಯವೇನಿಲ್ಲ.

ಕಾವ್ಯದಲ್ಲಿ ಅಧ್ಯಾತ್ಮ ನೀತಿ ತತ್ತ್ವವಿಚಾರಗಳ ಸ್ಥಾನ ವನ್ನೂ ಆವಶ್ಯಕತೆಯನ್ನೂ ಕುರಿತು ಪರಿಶೀಲಿಸುವಾಗ 'ಕಲೆ ಗಾಗಿ ಕಲೆ' ಎಂಬ ಸೂತ್ರವೂ 'ಸಾಹಿತ್ಯಪ್ರಚಾರ ಸಾಧನವೆ ?' ಎಂಬ ಪ್ರಶ್ನೆಯೂ ನೆನಪಿಗೆ ಬರುತ್ತವೆ. ಕೇವಲ ಮನೋ ರಂಜನೆಯೆ ಕಲೆಯ ಗುರಿಯಾಗುವುದಾದರೆ ದೊಂಬರಾಟ ಕೋಳಿಜೂಜು ಮುಂತಾದುವೂ ಕಲೆಯ ಗುಂಪಿಗೆ ಸೇರ ಬೇಕಾಗುತ್ತದೆ. ಅಷ್ಟರಿಂದಲೇ ಯಾರಿಗೂ ತೃಪ್ತಿಯಾಗು ವುದಿಲ್ಲ. ಅಂಥ ತೃಪ್ತಿ ಸಿಗರೇಟ್ ಸೇದಿನಿಂದ, ಮದ್ಯ ಸೇವನೆಯಿಂದ, ಕೊನೆಗೆ ಮದ್ದುಗುಳಿಗೆಯಿಂದ ಲಭ್ಯವಾಗ ಬಹುದು. ಕಾವ್ಯವ್ಯಾಸಂಗದಿಂದ ಭಾವಸಂಸ್ಕಾರ ಮಾತ್ರವಲ್ಲ, ಇಡೀ ಜೀವವೇ ಅಪ್ರತ್ಯಕ್ಷವಾಗಿ ಪರಿಷ್ಕಾರ ಗೊಳ್ಳುತ್ತದೆ. ಕಾವ್ಯರಸ ಜೀವ ಸರ್ವಸ್ವವನ್ನು ವ್ಯಾಪಿಸಿ

ತುಷ್ಟಿ ಪುಷ್ಟಿಗಳೆರಡನ್ನೂ ದಯಪಾಲಿಸುತ್ತದೆ. ಶ್ರೀ ರಾಮ ಕೃಷ್ಣ ಪರಮಹಂಸ ಮಹಾತ್ಮಗಾಂಧಿ ಮೊದಲಾದ ಮಹಾ ಪುರುಷರ ಸಾನ್ನಿಧ್ಯ ಮಹಿಮೆಯಿಂದ ಕ್ಷುದ್ರ ಜೀವಿಗಳೂ ಮಹಿಮಾವಂತರಾಗುವಂತೆ ಮ ಹಾ ಕಾ ವ್ಯ ವ್ಯಾಸಂಗ ದಿಂದ ಸಾಮಾನ್ಯರೂ ಮಹಾಮಾನ್ಯರಾಗಿರುವ ನಿದರ್ಶನ ಗಳನ್ನು ಪ್ರತಿನಿತ್ಯವೂ ಕಣ್ಣಾರೆ ನೋಡುತ್ತಿದ್ದೇವೆ. ರಾಮಾ ಯಣ ಮಹಾಭಾರತಗಳನ್ನು ಶರಣರ ವಚನ ದಾಸರ ಪದಗಳನ್ನು ವ್ಯಾಸಂಗಿಸಿದ ನಾಸ್ತಿಕರು ಆಸ್ತಿಕರಾದದ್ದನ್ನು ಹೇಡಿಗಳು ಕಡುಗಲಿಗಳಾದದ್ದನ್ನು, ಪೋಲಿ ಪುಂಡರು ಸಾತ್ವಿಕರಾದದ್ದನ್ನು, ವಿಷಯ ಲಂಪಟರು ಸಂಯಮಿಗಳಾ ದದ್ದನ್ನು ಸಾಕ್ಷಾತ್ತಾಗಿ ನೋಡಿದ್ದೇವೆ. ಆ ದ್ದ ರಿಂ ದ ಸಾಹಿತ್ಯ ಇಡೀ ಜೀವನವನ್ನು ಪ್ರೇರಿಸುತ್ತದೆ, ರೂಪಿಸು ತ್ತದೆ. ಪರಿವರ್ತಿಸುತ್ತದೆಂದರೆ ವ್ಯಕ್ತಿತ್ವವನ್ನು ಉದಾತ್ತ ಗೊಳಿಸುತ್ತದೆಂದರೆ ಮನೋರಂಜನವಾದಿಗಳಿಗೆ ಅಸಮಾ ಧಾನವಾಗಬಹುದು. ಮನೋರಂಜನೆಯ ಮೂ ಲ ಕ ಜೀವನ ಪರಿಪಾಕವನ್ನು ಸಾ ಧಿ ಸು ವು ದೇ ಸಾಹಿತ್ಯದ ಗುರಿ.

ಹಿಂದಿನ ಕನ್ನಡಸಾಹಿತ್ಯ ಈ ಗುರಿಗೆ ಹೊರತಾಗಿರಲಿಲ್ಲ. ಆದರೆ ಆದು ತಕ್ಕಮಟ್ಟಿಗೆ ಪ್ರಚಾರ ಸಾಧನವಾಗಿತ್ತೆನ್ನು ವುದನ್ನು ನಿರ್ಲಕ್ಷಿಸುವಂತಿಲ್ಲ. ಒಂದಾನೊಂದು ಕಾಲದಲ್ಲಿ ಎಲ್ಲ ಮತೀಯರೂ ತಂತಮ್ಮ ಮತೋತ್ಕರ್ಷಕ್ಕಾಗಿ ರಣ ರಂಗ ಹೂಡಿದ ಸಂಗತಿ ಚರಿತ್ರೆಯ ವಿ ಷ ಯ ವಾ ಗಿ ದೆ. ಮತೀಯ ಹೋರಾಟದ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯ ದಲ್ಲಿ ಸ್ವಮತ ಪ್ರಶಂಸೆಯೂ ಅನ್ಯಮತ ವಿಡಂಬನೆಯೂ ಅಪರೂಪವೇನಲ್ಲ. "ಜಿನಬುದ್ಧ ಚಾರ್ವಾಕ ಮತಮಿರದೆ ಪೆರ್ಚಿ ನೂತನನಮಾಗಿ ಪಿರಿದು ಶಿವಮತವನುರೆಜರೆವುತಂ"[1] ಎಂಬ ಮಾತಿನಲ್ಲಿ ಶೈವಮತ ಪಕ್ಷಪಾತವೂ ಅನ್ಯಮತ ಖಂಡನೆಯೂ ಸ್ಪಷ್ಟವಾಗಿದೆ.

ಸೌರಂ ಕೌಳೋತ್ತರಮೆಂ
ಬಾರಾಧನೆಗಳೊಳಮಖಿಳವೇದಸ್ಮೃತಿತ
ತ್ಪೌರಾಣಮೆನಿಪ್ಪುವಱೊಳ
ಸಾರಮನಿಂಬಾಗೆ ಬ್ರಹ್ಮ ಶಿವಕವಿ ಬಲ್ಲಂ

ಎಂದು ಬ್ರಹ್ಮಶಿವ ಅನ್ಯಮತಗಳ ಆಸಾರತೆಯನ್ನು ಸಾರು ವಲ್ಲಿ ಸ್ವಮತಾಧಿಕ್ಯವನ್ನು ಉದ್ಘೋಷಿಸುತ್ತಾನೆ. ಅವನ ನಾಲಗೆ ಬಹು ಹರಿತ. ಗರಗಸದಂತೆ ಎರಡು ಕಡೆಯೂ ಕೊಯ್ಯುತ್ತದೆ; ಅವನ ಪದ್ಯ ಚುರುಕಿನ ಸೊಪ್ಪಿನಹಾಗೆ, ಮುಟ್ಟಿದಲ್ಲೆಲ್ಲ ಕಡಿಯುತ್ತದೆ:

ಒಡಲೊರ್ವಾಗಮನಿತ್ತಂ
ಗಡ ಕಾಂತೆಗೆ ಶಂಭು ಶಂಭುಗಂ ಕೊಟ್ಟಳ್ ತ
ನ್ನೊಡಲೊರ್ವಾಗಮನಗಸುತೆ
ಗಡ ಮಿಕ್ಕೆರಡರೆಯನಾರ್ಗೆ ಕೊಟ್ಟರೊ ಪೇೞಿಂ

ಇಂಥ ಕಡೆ ಪ್ರಚಾರೋದ್ದೇಶ ಎದ್ದು ಕಾಣುತ್ತದೆ. ಆದರೆ ಇಂಥ ಸಾಹಿತ್ಯದಲ್ಲಿಯೂ ಮಾತಿನ ದಾಟಿ, ಉಪಮೆಗಳ ಸೊಗಸು, ಗಾದೆಗಳ ಬಳಕೆ, ತರ್ಕಚಮತ್ಕಾರ, ವಿಡಂಬನೆ ಕಟಕಿ ವ್ಯಂಗ್ಯ ನಿರ್ಭತ್ಸನೆ ಮೂದಲಿಕೆಗಳ ಸ್ವಾ ರ ಸ್ಯ ಯಾರನ್ನಾದರೂ ಬೆರಗುಗೊಳಿಸುವಂಥವು. ಜರತಾರಿ ಎಲೆಗಳನ್ನೊಳಗೊಂಡ ನೂಲಿನ ಸೀರೆಯಂತೆ ಅದೂ ಸಹೃದಯರನ್ನು ತಲೆದೂಗಿಸಬಲ್ಲುದು.

ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಮತಗಳು ಮಹತ್ವ ಪೂರ್ಣವಾದ ಪಾತ್ರವಹಿಸಿವೆ. ಅವುಗಳ ಮೇ ಲಾ ಟ ಗೈರುಹಾಜರಾಗಿದ್ದರೆ ಸಾಹಿತ್ಯ ಇಷ್ಟು ಸಮೃದ್ಧವಾಗಿ ಹುಲುಸುತ್ತಿರಲಿಲ್ಲವೆಂಬ ಶಂಕೆಗೆ ಆಸ್ಪದವಿರುವಂತಿದೆ. ಕಾವ್ಯರಚನೆಯೂ ಸಾಧನಾಮಾರ್ಗವೆಂದು ಭಗವತ್ಪೂಜೆ ಯೆಂದು ನಂಬಿದ ಜನ ಹಿರಿಯರು ಹಾಕಿದ ಸಡ್ಡೆದಾರಿ ಯಲ್ಲಿ ನಡೆದರು. ವೇದ ಪಾರಾಯಣದ ಫಲ, ಗಂಗಾದಿ ತೀರ್ಥ ಸ್ನಾನಫಲ, ಕೃಚ್ಛ್ರಾದಿ ತಪಸ್ಸಿನ ಫಲ, ಜ್ಯೋತಿ ಷ್ಟೋಮಯಾಗದ ಫಲ, ಮೇದಿನಿಯನೊಲಿದಿತ್ತ ಫಲ, ವಸ್ತ್ರಾದಿ ಕನ್ಯಾದಾನದ ಫಲ—ಇವು ಒಂದಕ್ಷರವನ್ನೋದಿ ದವರಿಗೆ ಮತ್ತು ಕೇಳಿದವರಿಗೆ ಪ್ರಾಪ್ತವಾಗುವುದಾದರೆ ಕಾವ್ಯಕರ್ತರಿಗೂ ಆ ಫಲ ದೊರಕಬೇಕಷ್ಟೆ? ಆ ನಂಬಿಕೆ ಜನತೆಯಲ್ಲಿ ದೃಢವಾಗಿ ಬೇರೂರಿದ್ದರಿಂದಲೇ ವಡ್ಡಾ ರಾಧನೆ ಆದಿಪುರಾಣ ಚಾವುಂಡರಾಯ ಪುರಾಣ ಅಜಿತ ಪುರಾಣ ನೇಮಿನಾಥಪುರಾಣ ಪಾರ್ಶ್ವನಾಥ ಪುರಾಣ ಯಶೋಧರ ಚರಿತೆ ವರ್ಧಮಾನಪುರಾಣ ಚಂದ್ರಪ್ರಭಾ ಪುರಾಣ ಭರತೇಶವೈಭವ ನೇಮಿಜಿನೇಶಸಂಗತಿ ಸಿದ್ಧ ರಾಮ ಪುರಾಣ ನಂಬಿಯಣ್ಣನ ರಗಳೆ ಬಸವಪುರಾಣ ಗದುಗಿನ ಭಾರತ ಶಿವತತ್ವ ಚಿಂತಾಮಣಿ ಪ್ರಭುಲಿಂ ಲೀಲೆ ಚನ್ನಬಸವಪುರಾಣ ತ್ರಿಷಷ್ಟಿ ಪುರಾತನರ ಚರಿತ್ರೆ ಭಾವಚಿಂತಾರತ್ನ ಮೋಹನ ತರಂಗಿಣಿ ವೃಷಭೇಂ ವಿಜಯ ದಿವ್ಯಸೂರಿಚರಿತೆ ಹರಿಕಥಾಮೃತಸಾರ ಮೊ ಲಾದ ನೂರಾರು ಸಾವಿರಾರು ಗ್ರಂಥಗಳು ಅನ್ಯಸಾಹಿ ಗಳಿಗೆ ಸವಾಲಾಗಿ ಸಾಲ್ಗೊಂಡಿವೆ. ಮ ತೀ ಯ ತೆ

---

1. ಚನ್ನಬಸವ ಪುರಾಣ ೧-೩-೯

ಪ್ರವೇಶದಿಂದ ಸಾಹಿತ್ಯಕ್ಷೇತ್ರದಲ್ಲಿ ಲಾಭಕ್ಕಿಂತ ನಷ್ಟವೇ ಅಧಿಕವಾಗಿದೆಯೆಂದರೆ ತಪ್ಪಾಗಲಾರದು. ಬೆಳೆಗಿಂತ ಕಳೆಯೇ ಹುಲುಸಾಯಿತೆಂಬಂತೆ ಸ್ವತಂತ್ರ ಕವಿಗಳಿಗಿಂತ ಛಾಯಾನುವರ್ತಿಗಳೂ ಪರೋಪಜೀವಿಗಳೂ ಕಿಕ್ಕಿರಿದರು. ಹಿರಿಯಕ್ಕನ ಚಾಳಿ ಮನೆಮನೆಗೂ ಯುಗ ಯುಗಕ್ಕೂ ವ್ಯಾಪಿಸಿತು. ಜ್ಯೇಷ್ಠರನ್ನು ಗೌರವಿಸುವಾಗ ಸಂಪ್ರದಾಯವನ್ನು ವರಿಸಿದಾಗ ಸಾತಂತ್ರ್ಯ ಮರೆತು ಪ್ರತಿಭೆ ತಣ್ಣಗಾಗಿ ಕಲ್ಪನೆ ಮರಗಟ್ಟಿತು. ಹಿರಿಯರು ಭೋಗಿಸಿದ ಹಳಸು ವಸ್ತು, ಅವರು ಎಂಜಲಿಸಿದ ಕಥಾತಂತ್ರ, ಅವರು ಶಿಲ್ಪಿಸಿದ ಪಾತ್ರವರ್ಗ, ಅವರು ಚಲಾವಣೆಗೆ ತಂದ ಗಾದೆ ನುಡಿಗಟ್ಟುಗಳು, ಅವರ ಕಲ್ಪನೆಯ ಎರಕದಲ್ಲಿ ಸಿದ್ಧವಾದ ಉಪಮಾ ರೂಪಕಾದಿ ಅಲಂಕಾರಗಳು, ಬುದ್ಧಿಯ ಕಸರತ್ತಿನಿಂದ ಲಬ್ಧವಾದ ಚಿಂತನಾಂಶಗಳು ಇವನ್ನೇ ತುಸು ಮಾರ್ಪಡಿಸಿ, ಹಳೆಯ ವೈನನ್ನು ಹೊಸಗ್ಲಾಸಿನಲ್ಲಿ ಕೊಡುವಂತೆ, ಈಚಿನ ಕವಿಗಳು ಕೃತಿರಚನೆ ಮಾಡಿದ್ದುಂಟು. ಜೈನಪುರಾಣವಾದರೆ ಅದೇ ಭವಾವಳಿ, ಅದೇ ಉಪಸರ್ಗ, ಅದೇ ಪಂಚಕಲ್ಯಾಣ, ಅದೇ ಪಂಚಾಶ್ಚರ್ಯ, ಅದೇ ಲೋಕಾಕಾರ ಕಥನ, ಅದೇ ಘಟನೆಗಳ ಆನುಪೂರ್ವಿ; ವೀರಶೈವ ಪುರಾಣವಾದರೆ ಅದೇ ಪಂಚವಿಂಶತಿಲೀಲೆ, ಅದೇ ಅಷ್ಟಾವರಣ ಷಟ್ಸ್ಥಲಾದಿಗಳ ಮಹಿಮಾವರ್ಣನೆ; ವೈಷ್ಣವ ಪುರಾಣವಾದರೆ ಅಂಥದೇ ಚೌಕಟ್ಟಿನ ಕಟ್ಟುಪಾಡುಗಳು. ಒಂದರ ಪಡಿಯಚ್ಚು ಮತ್ತೊಂದು; ರಬ್ಬರ್ ಸ್ಟಾಂಪಿನ ಮುದ್ರೆಯಿದ್ದ ಹಾಗೆ. ಆದಿಪುರಾಣ ಪರಿಚಯವಿರುವವರು ಅಜಿತಪುರಾಣದಲ್ಲಿ ಏನೇನಿರಬಹುದೆಂಬುದನ್ನು ಬಹುಮಟ್ಟಿಗೆ ಸರಿಯಾಗಿ ಊಹಿಸಬಹುದು. ಭಾಷಾಶಾಸ್ತ್ರದ transformationಗೆ ಸಂಬಂಧಿಸಿದ ಸೂತ್ರಗಳನ್ನನ್ವಯಿಸಿ ಪರಸ್ಪರ ಕಾವ್ಯಾಂಶಗಳನ್ನು ಅದಲು ಬದಲಿಸಬಹುದು. ನಯಸೇನ ನೇಮಿಚಂದ್ರ ಸುರಂಗ ವಿರೂಪಾಕ್ಷ ಪಂಡಿತ ಮೊದಲಾದ ವಿದಗ್ಧ ಕವಿಗಳು ಸವೆದಜಾಡನ್ನು ತೊರೆದು ಹೊಸ ಹಾದಿ ತುಳಿದಿದ್ದರೆ, ಚರ್ವಿತ ಚರ್ವಣಕ್ಕೆ ತಿಲಾಂಜಲಿ ಬಿಟ್ಟಿದ್ದರೆ ಅವರು ಮಹಾಕವಿ ಪಟ್ಟಕ್ಕೆ ಯೋಗ್ಯರಾಗುತ್ತಿದ್ದರು. ಮತಾಭಿಮಾನ ಗೌರವಗಳು ಅವರ ಪ್ರತಿಭೆಗೆ ಉರುಳಾದುವು, ಕಲ್ಪನೆಗೆ ತೊಡಕಾದುವು.

ಹೀಗೆ ಸಂಪ್ರದಾಯ ಪರಂಪರಾಗತವಾಗಿ ಮೊರೆಯುತ್ತಿರುವ ಸಾಹಿತ್ಯದಲ್ಲಿ ಆಗಾಗ್ಗೆ ಹಳತು ಹೊಸತುಗಳಿಗೆ ಘರ್ಷಣೆ ನಡೆದು, ಕ್ರಾಂತಿಯ ಬಿರುಗಾಳಿ ಬೀಸಿ ಜೊಳ್ಳುಸೀಕಲೆಲ್ಲ ತೂರಿಹೋಗಿ, ನವಚೈತನ್ಯ ಪ್ರವಹಿಸಿ, ಪ್ರಗತಿಪ್ರಾಪ್ತವಾದದ್ದುಂಟು. ಪಂಡಿತಪ್ರಿಯವಾದ ಸಂಸ್ಕೃತಮಿಶ್ರಣದ ಮಾರ್ಗಶೈಲಿಯ ಚಂಪೂಕೃತಿಗಳು ಸಾಮಾನ್ಯ ಜನರ ಅಭೀಪ್ಸೆಯನ್ನು ಕೈಗೂಡಿಸದಿದ್ದಾಗ ನಯಸೇನ ವಡ್ಡಾರಾಧನೆಯ ಆದರ್ಶದಲ್ಲಿ ಹೊಸಹಾದಿ ತುಳಿಯಬೇಕಾಯಿತು. ಧರ್ಮಾಮೃತ ಚಂಪೂಕಾವ್ಯವೆಂಬ ಬಿರುದಿಗೆ ಪಾತ್ರವಾಗಿದ್ದರೂ ಜಾನಪದ ಧಾಟಿಯ ದೇಶಿಶೈಲಿಯೇ ಅದರ ಜಾಯಮಾನವಾಗಿದ್ದು ಜನಹೃದಯವನ್ನು ಪ್ರತಿಬಿಂಬಿಸಿ, ಮುಂದಿನ ಮಹಾಕ್ರಾಂತಿಗೆ ಕೋಳಿಕೂಗಾಯಿತು. ಆಂಡಯ್ಯನಂಥ ಸ್ವತಂತ್ರ ಪ್ರವೃತ್ತಿಯ ವ್ಯಕ್ತಿಯೂ ಸಂಪ್ರದಾಯದ ಹೊನ್ನಪಂಜರದಿಂದ ಪಾರಾಗುವುದು ಕಷ್ಟವಾಯಿತು. ಮುಂದಿನ ಜೈನಕವಿಗಳು ಪಂಪಸೂರ್ಯನ ಪ್ರಕಾಶವನ್ನು ಪ್ರತಿಬಿಂಬಿಸುವುದರಲ್ಲಿ ಸಂತೃಪ್ತರಾದರು. ಕಾಲ ದೇಶ ಸಮಾಜ ಮನಸ್ಸುಗಳಲ್ಲಿ ಪಂಪನಿಂದ ಬಹುದೂರ ನಿಂತ ರತ್ನಾಕರವರ್ಣಿ ಪಂಪನ ಮಾರ್ಗದರ್ಶನವನ್ನೊಪ್ಪಿಕೊಂಡೂ, ಸ್ವಾಯತ್ತ ಪ್ರತಿಭೆಸ್ವೋಪಜ್ಞತೆಮನೀಷೆಗಳಿಂದ ಹಳತು ಹೊಸತುಗಳ ಸಮನ್ವಯವನ್ನು ಸಾಧಿಸಿ, ನೂತನ ಕೃತಿಯನ್ನು ಸೃಷ್ಟಿಸಿ ಕೃತಕೃತ್ಯನಾದನು. ರತ್ನಾಕರ ಸಾಹಿತ್ಯವನ್ನುಳಿದ ರಾಜಾವಳಿಕಥೆಯವರೆಗಿನ ಜೈನಸಾಹಿತ್ಯವೆಲ್ಲ ಪಂಪ ಸಾಹಿತ್ಯಸಾಗರದ ಹಿನ್ನೀರೆಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ಪಂಪಯುಗ ದೇವಚಂದ್ರನವರೆಗಿನ ಜೈನಕವಿಗಳನ್ನೆಲ್ಲ ಒಳಗೊಳ್ಳುತ್ತದೆನ್ನಲಡ್ಡಿಯಿಲ್ಲ. ವೈದಿಕಮತಕ್ಕೆ ಪ್ರತಿಭಟನೆಯ ರೂಪದಲ್ಲಿ ಸಿಡಿದೆದ್ದ ಜೈನಮತವೂ ಅತ್ಯುಚ್ಚ ಸಂಸ್ಕೃತಿಯನ್ನು ಬೆಳೆಸಿ, ತನ್ನ ಸುತ್ತ ಮುಗಿಲೆತ್ತರದ ದುರ್ಗಮವಾದ ಕೋಟೆಯನ್ನು ನಿರ್ಮಿಸಿಕೊಂಡು, ಸೃಜನ ಶಕ್ತಿಯನ್ನು ಕಳೆದುಕೊಂಡು ನಿರ್ವೀರ್ಯವಾಗುತ್ತಿದ್ದಾಗಲೇ ಕ್ರಾಂತಿಕಾಳಿಯೇ ಮೈವೆತ್ತಂತೆ ಜನಮನೋಭೀಪ್ಸವೇ ಸಾಕಾರಗೊಂಡಂತೆ ನಾಡಿನ ಭಾಗ್ಯವೇ ಕಣ್ತೆರೆದಂತೆ ವೀರಶೈವಮತ ಸಾಮಾಜಿಕ ರೋಗರುಜಿನಗಳಿಗೆ ಸಿದ್ಧಭೇಷಜವಾಗಿ ಜಡ ಚೇತನಗಳಿಗೆ ಸಂಜೀವನ ಶಕ್ತಿಯಾಗಿ ದಾಳಿಮಾಡಿತು. "Old order changeth yielding place to new one its good custom should corrupt the world" ಎಂಬ ಕವಿ ಪ್ರವಾದಿಯ ವಾಣಿ ನಿಜವಾಯಿತು. ಸಾಹಿತ್ಯಕ್ಷೇತ್ರದಲ್ಲಿ ಅದು ಬೀರಿದ ಪ್ರಭಾವ, ನಡಸಿದ ಕೋಲಾಹಲ ಸರ್ವವೇದ್ಯವಾಗಿದೆ. ಪಂಡಿತರ ಸ್ವತ್ತಾಗಿದ್ದ ಸಾಹಿತ್ಯ ಸಾಮಾನ್ಯರ ಆರಾಧ್ಯ ಶಕ್ತಿಯಾಯಿತು; ಸಮಕಾಲೀನ ಪ್ರಜ್ಞೆಯನ್ನು ಸಮಗ್ರವಾಗಿ ಪ್ರತಿಬಿಂಬಿಸುವ ಮಹದ್ದರ್ಪಣವಾಯಿತು; ಮೂಲೆಮೂಲೆಯ ಜನಮನದಲ್ಲಿ ಕನ್ನಡತನ ಉಕ್ಕು

ವಂತಾಯಿತು; ಜನವಾಣಿ ಶಿಷ್ಟವಾಣಿಯಾಗಿ ದೇವ
ವಾಣಿಯಾಗುವಂತಾಯಿತು. ಆ ಕ್ರಾಂತಿ ತಲೆದೋರಿದ
ಐವತ್ತು ಅರವತ್ತು ವರ್ಷಗಳಲ್ಲಿ ಸಾಧಿಸಬೇಕಾದದ್ದನ್ನೆಲ್ಲ
ಸಾಧಿಸಿ, ನವ್ಯಪ್ರಜ್ಞೆಯೊಂದನ್ನು ಪಡಿಮೂಡಿಸಿ ಪ್ರಲಯಾ
ನಂತರದ ಹೊಸ ಸೃಷ್ಟಿಯೆನ್ನುವಂತೆ ನೂತನ ಪಂಥವನ್ನು
ಸೃಷ್ಟಿಸಿತು. ಬಸವ–ಹರಿಹರ–ರಾಘವಾಂಕರು ಆ ಪಂಥದ
ಪ್ರವರ್ತಕರಾದರು. ಮುಂದಿನ ವೀರಶೈವ ಕವಿಗಳನ್ನೊಳ
ಗೊಂಡ ಕಾಲವಿಸ್ತೀರ್ಣವನ್ನು ಆ ಅಗ್ರತ್ರಯರ ಒಕ್ಕೂಟದ
ಹೆಸರಿನಿಂದ ಕರೆಯಬಹುದು. ವೀರಶೈವಮತ ಕ್ರಾಂತಿಯ
ಕಾವನ್ನು ಕಳೆದುಕೊಂಡು ಲೋಕೋತ್ತರವಾದ ಬಸವೋಪ
ದೇಶವನ್ನು ಮರೆತು, ಜಾತೀಯತೆಯ ಚೀಟಿಯನ್ನು
ಅಂಟಿಸಿಕೊಂಡನಂತರ ಅದು ಸಾಹಿತ್ಯಕ್ಕೆ ಪ್ರೇರಕಶಕ್ತಿಯಾ
ಗುವ ಕಸುವನ್ನು ಕಳೆದುಕೊಂಡಿತು. ಮತೀಯ ರಣರಂಗದ
ಹೊರವಳಯದಲ್ಲಿ ನಿಂತು ಕ್ರಾಂತಿಯ ಲಾಭವನ್ನು ಪಡೆದು,
ಭಾಗವತ ಸಂಪ್ರದಾಯದ ಹೆದ್ದಾರಿಯಲ್ಲಿ ಗಂಟುನಂಟು
ಗಳೆರಡನ್ನೂ ಉಳಿಸಿಕೊಂಡು ನೂತನ ಮಾರ್ಗಪ್ರವರ್ತಕ
ನಾಗಿದ್ದರೂ ಮಹಾಪ್ರತಿಭೆ ಕಲ್ಪಕತೆಗಳಿಂದ ಮುಂದಿನ
ಕವಿಗಳ ಮೇಲೆ ಬೀರಿದ ಪ್ರಭಾವ ವಿಶೇಷದಿಂದ ನಾರಣಪ್ಪ
ಶಕಪುರುಷನೆಂಬ ಮನ್ನಣೆಗೆ ಪಾತ್ರನಾಗುತ್ತಾನೆ. ಮಾಧ್ವ
ಮತದ ಪುನರ್ಸಂಘಟನೆಯ ಕಾಲದಲ್ಲಿ ಕುಸುಮಿಸಿದ ದಾಸ
ಸಾಹಿತ್ಯ ಸಂಪ್ರದಾಯದ ನೆಲಗಟ್ಟಿನ ಮೇಲೆ ಮಹಾ
ಪ್ರಮಾಣದಲ್ಲಿ ವಿಶಿಷ್ಟ ರೀತಿಯ ಪ್ರಗತಿ ಸಾಧಿಸಿದೆ.
ಸಾಮ್ರಾಜ್ಯವೈಭವದೊಡನೆ ಸಾಹಿತ್ಯವೈಭವವೂ ಶಿಖರ
ಸ್ಪರ್ಶಿಯಾದದ್ದಕ್ಕೆ ವಿಜಯನಗರವೂ, ಮಠಗಳೂ ಸಾಹಿತ್ಯ
ಸ್ಫೂರ್ತಿಯ ಕೇಂದ್ರವಾಗಿದ್ದುವೆನ್ನುವುದಕ್ಕೆ ಎಡೆಯೂರೂ
ನಿದರ್ಶನವಾಗಿವೆ. ಆ ಸಾಹಿತ್ಯದಲ್ಲಿ ಸರ್ವೋದಯಸಿದ್ಧಿ
ಯನ್ನೂ ಮಾನವತಾವಾದದ ಪರಾಕಾಷ್ಠೆಯನ್ನೂ ಪ್ರಯೋ
ಜಕತಾಸಿದ್ಧಾಂತದ ಸಾರ್ಥಕತೆಯನ್ನೂ ಕಾಣಬಹುದಾಗಿದೆ.

ಮತೀಯ ಪ್ರಭಾವದಿಂದ ಪಾರಾಗಿ ಆಧುನಿಕ ವಿಚಾರ
ಮೌಲ್ಯಗಳಿಂದ, ವೈಜ್ಞಾನಿಕ ಸಂಶೋಧನೆಗಳಿಂದ ಪ್ರೇರಿತ
ವಾದ ಸಾಹಿತ್ಯ ಹತ್ತೊಂಬತ್ತನೆಯ ಕೊನೆಯ ಭಾಗದಲ್ಲಿ
ಪ್ರಾರಂಭವಾದರೂ ಅದು ಸ್ಪಷ್ಟರೂಪ ತಾಳಿದ್ದು ಇಪ್ಪತ್ತ
ನೆಯ ಶತಮಾನದ ದ್ವಿತೀಯ ದಶಕದಲ್ಲಿ. ಮುಕ್ಕಾಲು
ಶತಮಾನಕ್ಕೆ ಹಿಂದೆಯೇ ವಸಂತೋದಯ ಸಮಯದ
ಕೋಗಿಲೆ ಕಾಜಾಣಗಳ ಕೀರಲು ದನಿ ಉಡುಪಿ ಧಾರವಾಡ
ಮೈಸೂರು ಕಡೆಗಳಿಂದ ಅಸ್ಪಷ್ಟವಾಗಿ ಕೇಳಿಸಿತು. ವಸಂತದ
ವೈಭವ ಸರ್ವತ್ರ ಮೈದೋರಬೇಕಾದರೆ ಕೆಲವು ದಿನ ಹಿಡಿ
ಯಿತು. ಹಿಂದಿನ ಕಾಲದಲ್ಲಿ ಸಾಹಿತ್ಯದ ಸ್ಫೂರ್ತಿ ಪ್ರೇರಣೆ
ಗಳನ್ನು ಸಮೀಪದ ಸುತ್ತಮುತ್ತಣ ಪರಿಸರಣದಲ್ಲಿಯೇ
ಕಂಡುಕೊಳ್ಳಬೇಕಾಗಿತ್ತು. ಕಾಲದೇಶಗಳ ದೂರ ಶೂನ್ಯ
ವಾಗಿ ಮನೋವಿಸ್ತೀರ್ಣ ಸಂಕುಚಿತವಾಗುತ್ತಿರುವ ಕಾಲ
ದಲ್ಲಿ ಸ್ಫೂರ್ತಿಪ್ರೇರಣೆಗಳು ಪ್ರಪಂಚದ ಯಾವ ಮೂಲೆ
ಯಿಂದಾದರೂ ಒದಗಿಬರಬಹುದು. ಭಾವಾಲೋಚನೆ
ವಿಚಾರಗಳು ವಿದ್ಯುದ್ ವೇಗದಲ್ಲಿ ಪ್ರಪಂಚಪರ್ಯಟನೆಯನ್ನು
ಮುಗಿಸಬಹುದು; ಜಗತ್ತಿನ ಸುಖಸಂಕಟಗಳು ಸ್ವಕರ್ಮ
ನಿರತನಾದ ಹಳ್ಳಿಯ ಬಡರೈತನ ಸಂಸಾರದ ಮೇಲೆ ಆಘಾತ
ಪ್ರತ್ಯಾಘಾತಗಳನ್ನುಂಟುಮಾಡಬಹುದು. ಬಿಹಾರದ ಕ್ಷಾಮ,
ನಾಗಾದಂಗೆಕೋರರ ಚಳುವಳಿ, ರೆಡ್ ಗಾರ್ಡ್ ಸೇನೆಯ
ಕವಾಯಿತು, ಹಿರೋಷಿಮಾದ ದಾರುಣ ಪ್ರಸಂಗ, ಸೂಯೆಜ್
ಪ್ರಕರಣ, ರಷ್ಯನರ ಚಂದ್ರಲೋಕಯಾತ್ರೆ, ಫ್ರಾನ್ಸ್
ಅಧ್ಯಕ್ಷರ ಭವಿಷ್ಯ, ನೀಗ್ರೋ ಜನರ ದಾಸ್ಯ, ಯಹೂದಿ
ಜನರ ಅಲೆದಾಟ, ಶ್ವೇತವರ್ಣೀಯರ ವರ್ಣಪ್ರಮತ್ತತೆ,
ಎಲ್ಲಿಯೋ ಸಂಭವಿಸಿದ ವಿಮಾನಾಪಘಾತ, ಮತ್ತೆಲ್ಲಿಯೋ
ಘಟಿಸಿದ ಭೂಕಂಪ, ಮಗುದೆಲ್ಲಿಯೋ ಜರುಗುತ್ತಿರುವ ರಣ
ಸಿದ್ಧತೆ ಅಣುಸಿಡಿತಗಳು ಮಾನವನ ಮನಸ್ಸನ್ನು ಕ್ಷೋಭೆ
ಗೀಡುಮಾಡಿರುವುದಲ್ಲದೆ, ಅವನ ಜೀವನದೃಷ್ಟಿಯ ಮೇಲೆ
ಅಪಾರ ಪ್ರಭಾವ ಬೀರುತ್ತಿವೆ. ಒಂದಾನೊಂದು ಕಾಲದಲ್ಲಿ
ಬುದ್ಧ ಮಹಾವೀರ ಕ್ರಿಸ್ತ ಮಹಮ್ಮದ ಶಂಕರ ರಾಮಾ
ನುಜ ಬಸವ ಮಧ್ವಾದಿ ಧರ್ಮಪ್ರವರ್ತಕರು ಲೋಕಜೀವನ
ವನ್ನು ವ್ಯಾಪಿಸುವಷ್ಟರಮಟ್ಟಿಗೆ ಶಕ್ತಿಪ್ರಭಾವವನ್ನು ಬೀರಿ
ದರೆ, ಕಾಲಾನಂತರದಲ್ಲಿ ಡಾರ್ವಿನ್ ಮಾರ್ಕ್ಸ್ ಫ್ರಾಯ್ಡ್
ಗಾಂಧಿಯಂಥ ವಿಜ್ಞಾನಿಗಳು ಹಾಗೂ ಮಾನವತಾವಾದಿಗಳು
ಜಗತ್ತಿನ ಜೀವನದೃಷ್ಟಿಯನ್ನೆ ಕ್ರಾಂತಿಕಾರಕ ರೀತಿಯಲ್ಲಿ
ಬದಲಾಯಿಸಿದರು. ಅದರಿಂದಾಗಿ ಸಹಸ್ರ ಸಹಸ್ರ ವರ್ಷ
ಗಳಿಂದ ರಕ್ತಗತವಾಗಿ ಬಂದಿದ್ದ ಮೌಢ್ಯಗಳು ನಂಬಿಕೆ
ಗಳೆಲ್ಲ ಗಾಳಿಗೆ ತೂರಿಹೋಗಿ, ಹಳೆಯ ಮತಗಳೆಲ್ಲ ಪ್ರಲಯ
ಹೊಂದಿ ಹೊಸಜೀವನ ಸೃಷ್ಟಿಯಾಗಿವೆ. ಬರ್‌ಟ್ರೆಂಡ್
ರಸೆಲ್, ಹೆಮಿಂಗ್‌ವೇ, ಇಲಿಯಟ್, ಲ್ಯಾಕ್ಸ್‌ನೆಸ್,
ನೆಹ್ರೂ ಬರೆದ ಗ್ರಂಥಗಳು ಮಾನವಕೋಟಿಯ ಗೌರವಕ್ಕೆ
ಭಾಜನವಾಗಿ ಸಮಸ್ತ ಸಮಾಜಗಳಲ್ಲಿ ಸಮಾನಧರ್ಮೀಯ
ತೆಯ ಬಾಂಧವ್ಯ ಕುದುರುತ್ತಿದೆ. ಎಂದೊ, ಎಲ್ಲಿಯೋ
ಗರ್ಭಗೊಂಡ ಭಾವಾಲೋಚನೆಗಳು ಮತ್ತೆಲ್ಲಿಯೋ ರೂಪಿಕ್ಕಿ
ಹಳೆಗಾಲದ Classism ಮತ್ತು Romanticism ಗಳ
ಜೊತೆಗೆ Realism, Surrealism, Naturalism,
Symbolism, Expressionism, Humanism,
Existentialism, Progressivism, Modernism

ಮೊದಲಾದ 'ಇಸಂ' ಗಳು ದಿಗ್ಭ್ರಮೆಯಾಗುವಷ್ಟರ ಮಟ್ಟಿಗೆ ದಾಳಿ ನಡಸುತ್ತಿವೆ. ಆದರೆ ಈ ಎಲ್ಲ 'ಇಸಂ' ಗಳು 'humanism' ನಲ್ಲಿ ಅಂತ್ಯಗೊಳ್ಳಬೇಕಾಗಿದೆ. ಯಾವ 'ಇಸಂ' ಆದರೂ ಸರ್ವಮಾನ್ಯವಾಗಬೇಕಾದರೆ ರಮಣೀಯತೆ ಅಥವಾ ಸೌಂದರ್ಯದೊಡನೆ ಸಾಯುಜ್ಯ ಪಡೆಯಬೇಕಾಗಿದೆ.

ಈ ಎಲ್ಲ ಪ್ರೇರಣೆ ತಿವಿತ ಮಿಡಿತ ಚೋದಕಗಳಿಂದ ಆಧುನಿಕ ಕನ್ನಡ ಸಾಹಿತ್ಯ ಸರ್ವವ್ಯಾಪಕವಾಗಿ ಸರ್ವಾಂಗ ಸುಂದರವಾಗಿ ಭೂಮಾಕಾರವಾಗಿ ಬೆಳೆಯುತ್ತಿದೆ; ಮೇಲೆ ಹೇಳಿದ ಎಲ್ಲ 'ಇಸಂ' ಗಳ ಪ್ರಯೋಗ ನಡೆದಿವೆ, ನಡೆಯುತ್ತಿದೆ; ಆದರೆ ಅವುಗಳ ನೆಲೆ ಬೆಲೆಗಳ ನಿರ್ಣಯ ಕಾಲಾಧೀನವಾದದ್ದು. ಕಾಲಲಬ್ಧಿಯಿಂದ ಕಾಷ್ಠ ಕೊನರುತ್ತದೆ, ಮಣ್ಣು ಹೊನ್ನಾಗುತ್ತದೆ; ಕಲ್ಲು ಕುಣಿಯುತ್ತದೆ, ನರ ನಾರಾಯಣನಾಗುತ್ತಾನೆ, ಅಲ್ಪತ್ವಕ್ಕೆ ಭೂಮತ್ವವೊದಗುತ್ತದೆ. ಭಗವದವತಾರ ಸಮಯಕ್ಕೆ ಅವನ ಪರಿವಾರವೂ ಭೂಮಿಗಿಳಿದು ಬರುವಂತೆ ಸಾಹಿತ್ಯಲೋಕದ ಕಾರಣಪುರುಷನೊಡನೆ ಅವನ ಸಮಸ್ತ ಪರಿವಾರವೂ ಕನ್ನಡನಾಡಿನಲ್ಲಿ ಜನ್ಮ ತಳೆದಂತಿದೆ. ಈ ಐವತ್ತು ವರ್ಷಗಳ ಒಂದು ಘಟಕದಲ್ಲಿ, ಒಂದು ಭೂಭಾಗದಲ್ಲಿ ಇಷ್ಟು ಮಂದಿ ಕವಿಗಳು ಕತೆಗಾರರು ನಾಟಕಕಾರರು ಕಾದಂಬರಿಕಾರರು ವಿಮರ್ಶಕರು ಪ್ರಬಂಧಕಾರರು ಜನ್ಮಧಾರಣೆ ಮಾಡಿದ್ದು ಆಶ್ಚರ್ಯಕರವಾಗಿದೆ: ಶ್ರೀ ಪೈ ಪಂಜೆ ಡಿ ವಿ ಜಿ ಬೇಂದ್ರೆ ಮಾಸ್ತಿ ವಿಸೀ ಕಾರಂತ ಕುವೆಂಪು ವಿನಾಯಕ ಪುತಿನ ರಂಗಣ್ಣ ರಾಜರತ್ನಂ ದಿನಕರ ದೇಸಾಯಿ ಮುಗಳಿ ಜಯದೇವಿ ತಾಯಿ ಶ್ರೀರಂಗ ಕಡೆಂಗೋಡ್ಲು ಆನಂದಕಂದ ಶಂಬಾ ಜೋಷಿ, ಎ ಆರ್ ಕೃ ಶೀ ನಂ ಶ್ರೀ ಡಿ ಎಲ್ ಎಸ್ ಎಂ ಆರ್ ಶ್ರೀ. ಆರ್. ನರಸಿಂಹಾಚಾರ್ಯ; ಅನಕೃ ಕಟ್ಟೀಮನಿ ನಿರಂಜನ ಕೃಷ್ಣಮೂರ್ತಿಪುರಾಣಿಕ ಗೊರೂರು ಪುಟ್ಟಸ್ವಾಮಯ್ಯ ತರಾಸು ಕೊರಟಿ; ಪರಮೇಶ್ವರ ಭಟ್ಟ, ಅಡಿಗ ನರಸಿಂಹಸ್ವಾಮಿ ಶಿವರುದ್ರಪ್ಪ ಕಣವಿ ಎಕ್ಕುಂಡಿ ಸಿದ್ದಯ್ಯಪುರಾಣಿಕ— ಕಣ್ಮುಚ್ಚಿ ನೆನಪಿನ ಪುಟಗಳನ್ನು ತೆರೆದರೆ ಇನ್ನೂ ನೂರಾರು ಹೆಸರನ್ನು ಪಟ್ಟಿ ಮಾಡಬಹುದು. ಲೇಖಕಿಯರನ್ನು ನೆನೆದರೆ ೧೫–೨೦ ಹೆಸರಾದರೂ ತಟ್ಟನೆ ಹೊಳೆಯುತ್ತವೆ; ಇವುಗಳಲ್ಲಿ ತ್ರಿವೇಣಿ ಮಹಿಷಿ ಇಂದಿರಾ ಯಾರಿಗಾದರೂ ಧೈರ್ಯ ನೀಡುವ ಹೆಸರುಗಳಾಗಿವೆ. ಸುಜನಾ ಅಕ್ಬರ್ ಆಲಿ ನಿಸ್ಸಾರ್ ಸಿಪಿಕೆ ತೇಜಸ್ವಿ ಲಂಕೇಶ ಚಂದ್ರಶೇಖರ ಪಾಟೀಲ ಗಿರಡ್ಡಿ ಗೋವಿಂದರಾಜ ಭೈರಪ್ಪ ಸಿದ್ಧಲಿಂಗಪಟ್ಟಣಶೆಟ್ಟಿ ಇಮ್ರಾಪೂರ ಆಲನಹಳ್ಳಿ ಮೊದಲಾದ ತರುಣ ಬರಹಗಾರರನ್ನು ನೆನೆದಾಗ ಕನ್ನಡ ಸಾಹಿತ್ಯದ ಭವಿಷ್ಯದ ಬಗ್ಗೆ ಹೊಸ ಆಸೆ ಧೈರ್ಯಗಳು ಮೂಡುತ್ತವೆ.

ಸಾಮಾನ್ಯ ಪ್ರಜ್ಞೆ ಎಚ್ಚತ್ತಿರುವ, ಸರ್ವೋದಯ ಸಮಾಜ ರೂಪುಗೊಳ್ಳುತ್ತಿರುವ ಕಾಲದಲ್ಲಿ ಕನ್ನಡ ಸಾಹಿತ್ಯ ಬಹುಮುಖವಾಗಿ ಸರ್ವವ್ಯಾಪಿಯಾಗಿ ಮುಂದುವರಿಯುತ್ತಿದೆ. ಈ ಸಾಹಿತ್ಯ ದೇವಿಯ ಗರ್ಭಗುಡಿಗೆ ಯಾರಿಗೂ ಪ್ರವೇಶ ನಿಷೇಧವಿಲ್ಲ: ಹಿಂದುಳಿದವರೂ ತಮ್ಮ ಭಕ್ತಿಯ ಹಣತೆಯನ್ನು ಹೊತ್ತಿಸಿ ಕೃತಾರ್ಥರಾಗಬಹುದು. ಸಾಮಾಜಿಕ ಕ್ಷೇತ್ರದಲ್ಲಿ ಅಕ್ಷಯವಾಗಿ ತಾಂಡವವಾಡುತ್ತಿರುವ ಜಾತಿಮತಗಳ ಹಾವಳಿ ಇಲ್ಲಿ ಕ್ಷೀಣಿಸುತ್ತಿರುವುದು ಶುಭಶಕುನವಾಗಿದೆ, ಬರಲಿರುವ ಸಮಾಜದ ಆರೋಗ್ಯ ಲಕ್ಷಣವನ್ನು ಸೂಚಿಸುವುದಾಗಿದೆ. ಹಳ್ಳಿಯವರು ಪಟ್ಟಣಿಗರು ಕಾರ್ಮಿಕರು ಮಾಣಿಗಳು ಬೇರೆ ಬೇರೆ ಕಸಬುದಾರರು ಬೇರೆ ಬೇರೆ ಜಾತಿಯವರು ಬೇರೆ ಬೇರೆ ವೃತ್ತಿಯವರು ನಾನಾ ವರ್ಗದವರು ಈ ಪವಿತ್ರ ಕಾರ್ಯದಲ್ಲಿ ನಿರತರಾಗಿರುವುದರಿಂದ ಸಾಹಿತ್ಯಕ್ಕೆ ಆಳ ಅಗಲಗಳೂ ಎತ್ತರ ಬಿತ್ತರಗಳೂ ಭಾಷೆಗೆ ತೂಕ ಕೆಚ್ಚುಗಳೂ ಸಮನಿಸುತ್ತವೆ. ಹೊಸಗನ್ನಡ ಸಾಹಿತ್ಯದಲ್ಲಿ ವಸ್ತುವೈವಿಧ್ಯ ಭಾವವೈವಿಧ್ಯ ಛಂದೋವೈವಿಧ್ಯ ವಿಚಾರಸಂಪತ್ತಿಗಂತು ಮಿತಿಯಿಲ್ಲ. ಈಗಲೂ ಹಿಂದಿನ ಸಂಪ್ರದಾಯ ಸಂಪೂರ್ಣವಾಗಿ ಮರೆಸಿಹೋಗಿಲ್ಲ. ಪ್ರಾಚೀನ ಕವಿಗಳ ಕೃತಿಗಳಿಗೆ ಸರಿಗಟ್ಟುವಂಥ ಕಂದಪದ್ಯಗಳನ್ನು ಡಿ.ವಿ ಜಿ. ರಚಿಸಿದ್ದಾರೆ; ಪರಮೇಶ್ವರಭಟ್ಟರು ಹಿಂದಿನವುಗಳಿಗೆ ಸರಿಜೋಡಿಯಾಗುವಂಥ ಸಾಂಗತ್ಯಗಳನ್ನು ಸೃಷ್ಟಿಸಿದ್ದಾರೆ; ಜಯದೇವಿಯವರ ಸಿದ್ಧರಾಮೇಶ್ವರ ಪುರಾಣ ತ್ರಿಪದಿಯಲ್ಲಿದೆ; ಕೊಳಂಬೆ ಪುಟ್ಟಣ್ಣಗೌಡರು ಅಂಡಯ್ಯನನ್ನು ಕೆಣಕಿ ನೋಡಿದ್ದಾರೆ; ಕೇಶವಭಟ್ಟರು ಚಂಪೂಕಾವ್ಯ ರಚಿಸಿದ್ದಾರೆ. ರಂಗಬಿನ್ನಪದ ವಚನಗಳು ಶರಣರ ವಚನಗಳಿಂದ ಭಿನ್ನವೆಂಬ ಅಭಿಪ್ರಾಯವಿದ್ದರೂ, ಅವು ಹಾಗೆ ಭಿನ್ನವಾದ್ದರಿಂದಲೇ ಹೊಸ ಬಗೆಯವೆಂದು ಹೇಳಬಹುದಾದ್ದರಿಂದ ಅವು ಕನ್ನಡಕ್ಕೆ ಅಮೂಲ್ಯವಾದ ಕೊಡುಗೆ ಎಂದು ಸಿದ್ಧಪಡಿಸಬಹುದು. ಮುಸ್ಲಿಂ ಕವಿ ಕೃಷ್ಣನನ್ನು, ಹಿಂದೂ ಕವಿ ಏಸುವನ್ನು, ವೈಷ್ಣವ ಕವಿ ಗಣೇಶನನ್ನು ಕುರಿತು ತನ್ಮಯತೆಯಿಂದ ಭಾವಿಸಿ ಪರಿಭಾವಿಸಿ ಕವನ ಬರೆಯುತ್ತಿರುವಾಗ ಕನ್ನಡ ಸಾಹಿತ್ಯ ಗಗನೋನ್ನತವಾಗುವುದರಲ್ಲಿ ಸಂದೇಹವಿಲ್ಲ. ಜೀವೋತ್ಕರ್ಷಕವೂ ಪವಿತ್ರವೂ ಆದ ಸಾಹಿತ್ಯಕ್ಷೇತ್ರದಲ್ಲಿ ಜಾತೀಯತೆ ಸಲ್ಲದು. ಲಿಂಗ ನಾಮ ಮುದ್ರೆ ಜನಿವಾರಗಳ ಮಾನದಿಂದ ಅದನ್ನಳೆಯುವ ಹೇಯಬುದ್ಧಿ ತ್ಯಾಜ್ಯ. ಜಾತೀಯತೆಯಂತೆ ಗುಂಪುಗಾರಿಕೆಯೂ ಸಾಹಿ

ತ್ಯದ ಬೆಳವಣಿಗೆಗೆ ಮಾರಕವಾಗುತ್ತದೆ. ಕನ್ನಡತನದಿಂದ ವಿಶ್ವತ್ವಕ್ಕೇರಿರುವ ಪಂಪ ಹರಿಹರ ರಾಘವಾಂಕ ನಾರಣಪ್ಪಾದಿಗಳನ್ನು ಜಾತೀಯತೆಯ ಮುದ್ರೆಯನ್ನೊತ್ತಿ, ಅವರ ಆತ್ಮಕ್ಕೆ ಅಪಚಾರವೆಸಗುವುದು ಬೇಡ. ಕಥೆ ಕಾದಂಬರಿ ನಾಟಕ ಯಾವ ಪ್ರಕಾರವನ್ನು ತೆಗೆದುಕೊಂಡರೂ ವಿಶ್ವ ಸಾಹಿತ್ಯದೊಡನೆ ಪೈಪೋಟಿ ನಡೆಸಬಲ್ಲ ಕೃತಿರತ್ನಗಳು ಈಗಾಗಲೇ ವಿಪುಲ ಸಂಖ್ಯೆಯಲ್ಲಿ ಪ್ರಕಟವಾಗಿವೆ. ಭಾಷಾಂತರ ಸಾಹಿತ್ಯವಂತು ಕನ್ನಡದ ಸಾಹಿತ್ಯದ ಆರೋಗ್ಯವನ್ನು ಕಾಪಾಡುತ್ತ ಅದರ ಶಕ್ತಿ ತೇಜಸ್ಸುಗಳನ್ನು ಹೆಚ್ಚಿಸುತ್ತ, ಸ್ವತಂತ್ರ ಸಾಹಿತ್ಯದೊಡನೆ ಸ್ಪರ್ಧಿಸುತ್ತಿದೆ.

ಇಡೀ ಭಾರತೀಯ ಜೀವನವನ್ನು ಮುಕ್ಕಿ ಸ್ವತಂತ್ರ ಶಕ್ತಿಯನ್ನು ಕ್ಷೀಣಗೊಳಿಸುತ್ತಿರುವ ಅನುಕರಣ ಪ್ರವೃತ್ತಿಯನ್ನು ತಡೆಗಟ್ಟದಿದ್ದರೆ ಭಾರತೀಯ ಸಂಸ್ಕೃತಿಯೇ ನಾಶವಾಗುತ್ತದೆ; ಭಾರತೀಯ ಜೀವನ ಇಂಗ್ಲೆಂಡ್ ಅಥವಾ ಅಮೇರಿಕ ಸಂಸ್ಕೃತಿಯ ರಬ್ಬರ್ ಸ್ಟಾಂಪ್ ಆಗುತ್ತಿರುವ ಈ ವಿಪತ್ಕಾರಕ ಸನ್ನಿವೇಶದಲ್ಲಿ ಸಾಹಿತಿಗಳಂತೂ ಸದಾ ಜಾಗರೂಕರಾಗಿರಬೇಕು. ರಾಜಕೀಯ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ಸಾಂಸ್ಕೃತಿಕ ದಾಸ್ಯ ದಿನೇ ದಿನೇ ಯಶಸ್ವಿಯಾಗಿ ವರ್ಧಿಸುತ್ತ ಹಳ್ಳಿಹಳ್ಳಿಗಳಿಗೂ ವ್ಯಾಪಿಸುತ್ತಿದೆ. ರಾಜಕಾರಣಿಗಳು ಪಂಡಿತರು ಸುಧಾರಕರು—ಎಲ್ಲ ಕ್ಷೇತ್ರದ ಬಹುಪಾಲು ಪರಿಣತರು ಪಾಶ್ಚಾತ್ಯ ಪ್ರತಿಭೆಯ ಕರಿನೆರಳಾಗುತ್ತಿದ್ದಾರೆ. ಒಳ್ಳೆಯದೆಲ್ಲಿದ್ದರೂ ಜಗತ್ತಿಗೆ ಸೇರಿದ್ದು ನಿಜ. ಹಾಗೆಂದು ನಮಗೆ ಬೇಡವಾದದ್ದನ್ನೆಲ್ಲ ನಮ್ಮ ವ್ಯಕ್ತಿತ್ವಕ್ಕೆ ಘಾತಕವಾದದ್ದನ್ನೆಲ್ಲ ಸ್ವೀಕರಿಸಬೇಕಾಗಿಲ್ಲ. ಗಂಗಾನದಿಯ ನೀರನ್ನು ಸಹ ಶೋಧಿಸಿ ಕುಡಿಯುತ್ತೇವೆ. ಆ ದೃಷ್ಟಿ ಪರಾನುಕರಣ ಸಂದರ್ಭದಲ್ಲಿ ಎಚ್ಚತ್ತಿರಬೇಕು. Lions club Junior chamber ಮೊದಲಾದ ಅಲ್ಲಿಯ ಸಂಸ್ಥೆಗಳು ಇಲ್ಲಿಯ ಬೀದಿ ಬೀದಿಗಳಲ್ಲಿ ಮೆರೆಯುವಂತೆ ಇಲ್ಲಿಯ ಸಂಸ್ಥೆಗಳ ಶಾಖೆಗಳು ಅಲ್ಲಿ ಮೆರೆಯುತ್ತಿವೆಯೆ? ಇಂಥ ನಿದರ್ಶನಗಳು ಸಾವಿರಾರಿವೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಈ ಅನುಕರಣೆ ಮಿತಿಗೊಂಡರೆ ಮೇಲು.

ಯಾವ ಕ್ಷೇತ್ರದಲ್ಲಾದರೂ ಸರಿಯೆ ಸಂಪತ್ಸಾಧನೆಯ ಮತ್ತು ಕ್ಷೇಮಾಭ್ಯುದಯದ ದೃಷ್ಟಿಯಿಂದ ಸ್ಪರ್ಧೆ ಅನಿವಾರ್ಯವಾಗುತ್ತದೆ; ಆದರೆ ಈ ಸ್ಪರ್ಧೆ ಕ್ರೋಧಮಾತ್ಸರ್ಯ ದೂಷಣಾದಿ ಕೆಟ್ಟ ಗುಣಗಳಿಂದ ಕಲುಷಿತಗೊಳ್ಳಬಾರದು. ಆದರೆ ದುರ್ದೈವವಶಾತ್ ಮೇಲೆ ನಮೂದಿಸಿದ 'ಇಸಂ'ಗಳ ಹೆಸರಿನಲ್ಲಿ ಗುಪ್ತಗಾಮಿನಿಯಾಗಿರಬಹುದಾದ ಲಾವಾರಸ ಭೂಸ್ಫೋಟದೊಡನೆ ಬುಗ್ಗೆಯಾಗಿ ಹಾರುವುದುಂಟು. ರೊಮ್ಯಾಂಟಿಕ್ ಸಂಪ್ರದಾಯದ ಗಾಳಿ ನಾಡಿನಲ್ಲೆಲ್ಲ ಬೀಸಿದಾಗ ಹಳಬರು ಕದ ಕಿಟಕಿಗಳನ್ನು ಭದ್ರವಾಗಿ ಮುಚ್ಚಿಕೊಂಡದ್ದುಂಟು; ನವಸಂಪ್ರದಾಯಾನುಯಾಯಿಗಳನ್ನು ಮೂದಲಿಸಿದ್ದುಂಟು. ಆದರೆ ಆ ಹಳಬರು ಸ್ವಯಂಪ್ರತಿಭಾವಂತರಾದ ಕಾವ್ಯಕರ್ತರಲ್ಲದ್ದರಿಂದ, ಅವರ ಮೂದಲಿಕೆ ಗಾಳಿಯಲ್ಲಿ ತೇಲಿಹೋಯಿತು. ನವ್ಯಪಂಥ ಮೊಳೆದೋರಿದಾಗ ರೊಮ್ಯಾಂಟಿಕ್ ಪಂಥ ಪ್ರಬುದ್ಧಾವಸ್ಥೆಗೇರಿ ಜನಪ್ರಿಯವಾಗಿದ್ದುದಲ್ಲದೆ ವರಕವಿ ಮಹಾಕವಿಗಳಿಂದ ಮಹಿಮಾನ್ವಿತವಾಗಿತ್ತು. ಗೋಕಾಕರಿಂದ ಪ್ರಣೀತವಾದ ನವ್ಯಪಂಥ ರೊಮ್ಯಾಂಟಿಕ್ ಪಂಥದ ಅಡಿಗರಿಂದ ಗರಿಗಟ್ಟಿಕೊಳ್ಳುತ್ತಿದೆ. ಅಡಿಗರಂಥ ಪ್ರತಿಭಾವಂತರು ಅದರ ಪುರಸ್ಕರ್ತರಾಗಿ ಅದರ ಕರ್ಣಧಾರರಾಗಿ ನಿಂತದ್ದು ಕನ್ನಡದ ಭಾಗ್ಯವೇ ಸರಿ. ಸಾಹಿತ್ಯ ಸದಾ ಹರಿಯುವ ವಾಹಿನಿಯಾಗಿರಬೇಕೇ ಹೊರತು ನಿಂತಿರುವ ಮಡುವಾಗಬಾರದು; ಹೊಸಹೊಸ ಗಾಳಿಗೆ ಅದು ಮೈಯೊಡ್ಡಿದಾಗ ನವಚೈತನ್ಯ ಸಂಚಾರವಾಗುತ್ತದೆ. ಈ ದೃಷ್ಟಿಯಿಂದ ನೂತನ ಪಂಥಗಳು ಸ್ವಾಗತಾರ್ಹ. ಆದರೆ ಆ ಪಂಥ ತಾಯಿಗೆ ಮಾರಕವಾಗುವ ಮರಿಚೇಳಾಗಬಾರದು. ಹೊಸತಿಗೆ ಹಳತೇ ತಳಹದಿ; ಸೊನ್ನೆಯಿಂದ ಹೊಸತು ಮೂಡುವುದಿಲ್ಲ. ಅಡಿಗರೂ ಮೊದಮೊದಲು ರೋಮ್ಯಾಂಟಿಕ್ ಪಂಥದಲ್ಲಿ ಗಣ್ಯರಾಗಿದ್ದರೆನ್ನುವುದನ್ನು ಮರೆಯಬಾರದು. ರೊಮ್ಯಾಂಟಿಕ್ ಸಂಪ್ರದಾಯ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಿಗೊಳಿಸಿತು, ಹಸನುಗೊಳಿಸಿತು; ತಾನು ಸಾಧಿಸಬೇಕಾದದ್ದನೆಲ್ಲ ಅತ್ಯಂತ ಪರಿಣಾಮಕಾರಿಯಾಗಿ ಸಾಧಿಸಿತು. ಅದು ಅಲ್ಲಿಯೇ ನಿಲ್ಲಬೇಕಾಗಿಲ್ಲ. ಬೇಂದ್ರೆ ಕುವೆಂಪು ಅವರೂ ಹಿಂದಿನಿಂದ ನವ್ಯವೆನ್ನಬಹುದಾದ ಕವನಗಳನ್ನು ಸಾಕಷ್ಟು ರಚಿಸಿದ್ದಾರೆ. ಕುವೆಂಪು ಅವರ ಆಗಿನ ಕಲ್ಕಿ ಈಗಿನ ಪ್ರೇತ ಕ್ಯೂ ನವ್ಯವಲ್ಲದೆ ಮತ್ತೇನು? ಭಾವಸಂಸ್ಕಾರಕ್ಕೆ ನೆರವಾಗಬೇಕಾದ ಸಾಹಿತ್ಯಕ್ಷೇತ್ರದಲ್ಲಿ ವೃತ್ತಿಮಾತ್ಸರ್ಯವಾಗಲೀ ಗುಂಪುಗಾರಿಕೆಯಾಗಲೀ ತರವಲ್ಲ. ಸ್ನೇಹ ಸಹಾನುಭೂತಿ ಕಾರುಣ್ಯಗಳನ್ನು ಬೆಳೆಸಿ ಸಮಾಜವನ್ನು ಉನ್ನತಿಗೊಯ್ಯಬೇಕಾದ ಜನ ಪರಸ್ಪರ ಕತ್ತಿಮಸೆದರೆ ಗತಿಯೇನು? ಒಬ್ಬ ಕವಿ ಮೇಲೇರುವಾಗ ಅವನ ಕಾಲುಹಿಡಿದು ಕೆಳಗೆಳೆಯುವಪ್ರಯತ್ನ ಸಾಹಿತಿಗೆ ಹೇಳಿದ್ದಲ್ಲ. "ಕುವೆಂಪು ಅವರಿಗೆ ಸಂದಗೌರವ ಕನ್ನಡ ಕವಿಕುಲಕ್ಕೇ ಸಂದ ಗೌರವ; ಅವರು ನಿಮಿತ್ತಮಾತ್ರ" ಎಂದು ಅವರಿಗೆ ರಾಷ್ಟ್ರಕವಿ ಗೌರವಸಂದ ಸಂದರ್ಭದಲ್ಲಿಶಿವಮೊಗ್ಗೆಯ ಸನ್ಮಾನ ಸಭೆಯೊಂದರಲ್ಲಿ ಬೇಂದ್ರೆಯವರು ಆಡಿದ ನುಡಿ ಸದಾ ನೆನಪಿನಲ್ಲಿಡತಕ್ಕದ್ದಾಗಿದೆ. ಇದು ನವ್ಯ ಇದು

ರೊಮ್ಯಾಂಟಿಕ್ ಎಂಬುದಾಗಿ ಪ್ರತ್ಯೇಕಿಸಿ ಹಣೆ ಹೆಸರಿಡುವುದರಲ್ಲಿ ಅರ್ಥವಿಲ್ಲ. ಸಾಹಿತ್ಯಲಕ್ಷಣಗಳಿದ್ದರೆ ಎರಡೂ ಪುರಸ್ಕಾರ ಯೋಗ್ಯವಾಗುತ್ತದೆ. ಈ ಗುಂಪುಗಾರಿಕೆ ಶಿಕ್ಷಕವೃತ್ತಿಯ ಸಾಹಿತಿಗಳಲ್ಲಿ ಪ್ರಬಲವಾಗಿದ್ದಂತೆ ತೋರುತ್ತದೆ. ಗಾಜಿನ ಮನೆಯ ಜನ ಬೇರೆಯವರ ಮನೆಯ ಮೇಲೆ ಕಲ್ಲೆಸೆಯಬಾರದು. ಹುಳುಕ ಮತ್ತೊಬ್ಬನ ಹುಳುಕಿನ ಕಡೆಗೆ ಬೆರಳು ತೋರಿಸಬಾರದು.

ವಿಮರ್ಶೆ ಮತ್ತು ಸಂಶೋಧನೆಯ ಕ್ಷೇತ್ರಗಳಲ್ಲಿ ತೃಪ್ತಿಕರವಾಗುವಷ್ಟರ ಮಟ್ಟಿಗೆ ಕೆಲಸ ನಡೆದಿಲ್ಲ ನಿಜ. ಈ ಕೆಲಸ ಹೆಚ್ಚಾಗಿ ಸಾಹಿತ್ಯಬೋಧಕರಿಂದ ನಡೆಯಬೇಕಾಗಿದೆ; ಆ ಪ್ರಕಾರಗಳ ನರುಚಲಿಗೆ ಅವರೇ ಉತ್ತರ ಹೇಳಬೇಕಾದೀತು? ಆಧುನಿಕ ಸಾಹಿತ್ಯದ ತಂಟೆ ಬೇಡವಾದರೆ ಪ್ರಾಚೀನ ಕೃತಿಗಳನ್ನು ಕುರಿತ ವಿಮರ್ಶೆ–ಸಂಶೋಧನೆಯ ಕಡೆಗೆ ಕನ್ನಡ ಅಧ್ಯಾಪಕರ ಗಮನ ಹರಿಯಬೇಡವೆ? ಒಬ್ಬೊಬ್ಬ ಅಧ್ಯಾಪಕ ಒಬ್ಬೊಬ್ಬ ಕವಿಯನ್ನು ಕುರಿತು ಎರಡು ಮೂರು ವರುಷಗಳಲ್ಲಿ ಒಂದೊಂದು ನಿಬಂಧ ಬರೆಯುವುದಾದರೆ ಐದಾರು ವರುಷಗಳಲ್ಲಿ ವಿಮರ್ಶೆ ಸಮೃದ್ಧವಾಗಿ ಬೆಳೆದೀತು. ಇದು ಅಧ್ಯಾಪಕರು ತೀರಿಸಬೇಕಾದ ಕವಿಋಣ. ತೌಲನಿಕಸಾಹಿತ್ಯ ಮೀಮಾಂಸೆಯನ್ನು ಜೀರ್ಣಿಸಿಕೊಂಡು ನಾನಾ ಶಾಸ್ತ್ರ ಪಾರಂಗತರಾಗಿ ಬುದ್ಧಿಶಕ್ತಿಯನ್ನು ಹರಿತಗೊಳಿಸಿಕೊಂಡಿರುವ ಶ್ರೇಷ್ಠ ದರ್ಜೆಯ ರಸಜ್ಞ–ವಿಮರ್ಶಕರಾಗಿದ್ದಾರೆ. ಆದರೆ ಪಕ್ಷಪಾತ ಮನೋಭಾವವೂ ಇತರ ಜನಾಭ್ಯುದಯ ವಿರೋಧವೂ ವಿಮರ್ಶೆಯ ಹದತೂಕಗಳನ್ನು ಏರುಪೇರು ಮಾಡುತ್ತವೆ. ಮಾಸ್ತಿ ಗೋಕಾಕ ವಿಸೀ ರಂಗಣ್ಣ ಮಾಳವಾಡ ರಾಜರತ್ನಂ ಶ್ರೀಧರ ಕುರ್ತುಕೋಟಿ ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಮಟ್ಟಿಗೆ ಕೈಯಾಡಿಸಿದ್ದಾರೆ. 'ಯುಗಧರ್ಮ ಹಾಗೂ ಸಾಹಿತ್ಯದರ್ಶನ' ವಿಮರ್ಶಕರ ಬಹುಶ್ರುತತ್ವ ವಿಚಿಕಿತ್ಸದೃಷ್ಟಿ ವಿಶ್ಲೇಷಣ ಸಾಮರ್ಥ್ಯ ಭಾಷಾ ಪ್ರಭುತ್ವ ಹಾಗೂ ಹದಗೊಂಡ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಆದರೆ ಬೇಂದ್ರೆಯವರು ಬರೆದದ್ದೆಲ್ಲ ಆಮೂಲಾಗ್ರವಾಗಿ ಅಪ್ಪಟ ಚಿನ್ನ, ಉಳಿದವರು ಬರೆದದ್ದೆಲ್ಲ ಕೀಳುಮೇಲುಗಳ ಬೆರಕೆ ಎನ್ನುವ ಮನೋಭಾವ ಒಳ್ಳೆಯದಲ್ಲ. ಬೇಂದ್ರೆಯೊಬ್ಬರನ್ನು ಕುರಿತು ಬರೆಯುವಾಗ ಗುಣಕಥನ ತಡೆದೀತು; ಇತರರೊಡನೆ ಸೇರಿಸಿ ಹಾಗೆ ವಿಮರ್ಶೆ ಬರೆಯುವಾಗ ಒಬ್ಬರನ್ನಿಳಿಸುವುದರ ಮೂಲಕ ಮತ್ತೊಬ್ಬರನ್ನೇರಿಸುವಂತೆ ತೋರುತ್ತದೆ. ಬೇಂದ್ರೆ ಕುವೆಂಪು ಪುತಿನ ಬರೆದದ್ದೆಲ್ಲ ಸರ್ವೋತ್ತಮವಲ್ಲ. ಪ್ರೇತ ಕ್ಯೂ ಎಂಬ ತಮ್ಮ ಪದ್ಯವನ್ನು ಕುರಿತು ಅದು ತ್ರಿಕಾಲಿಕ ಸಾಹಿತ್ಯವಲ್ಲ ಸಕಾಲಿಕ ಸಾಹಿತ್ಯವೆಂದು ಕುವೆಂಪು ಅವರೇ ಉದ್ಗಾರ ತೆಗೆದುದ್ದುಂಟು. ವಿಮರ್ಶೆಯಲ್ಲಿ ಸಾಹಿತ್ಯೇತರ ವಿಚಾರಗಳಿಗೆ ಮಣೆಹಾಕಬಾರದು. ಕವಿಗಳು ಕರ್ಮಯೋಗಿಗಳಂತೆ ನಿಷ್ಕಾಮಕರ್ಮಿಗಳಾದರೊಳ್ಳೆಯದು. ಒಮ್ಮೆ ಪ್ರಕಟವಾದ ಕಾವ್ಯ ನಾಡಿನ ಆಸ್ತಿಯಾಗುತ್ತದೆ, ಸಾರ್ವಜನಿಕ ಸ್ವತ್ತಾಗುತ್ತದೆ ಆದ್ದರಿಂದ ಕವಿ ಅದರ ಮಮಕಾರ ಬಿಡಬೇಕು. ನಿರ್ದಾಕ್ಷಿಣ್ಯಪರರೂ ಖಂಡಿತವಾದಿಗಳೂ ಸತ್ಯನಿಷ್ಠುರರೂ ಕಾವ್ಯಮರ್ಮಜ್ಞರೂ ಆದ ಹಾ. ಮಾ. ನಾಯಕರು ತಮ್ಮ ಇತ್ತೀಚಿನ ಲೇಖನಗಳಲ್ಲಿ ಕೆಲ ಕಾವ್ಯಗಳನ್ನು ಕುರಿತು ನಿರ್ಮತ್ಸರದಿಂದ ಟೀಕಿಸಿದಾಗ ಬಿರುಗಾಳಿ ಎದ್ದದ್ದುಂಟು; ಒಬ್ಬ ಕವಿಗಳಂತೂ ಏನೊ ಕಳೆದುಕೊಂಡಂತೆ ಪರೀಕ್ಷೆಯಲ್ಲಿ ಫೇಲಾದಂತೆ ತೋಡಿಕೊಂಡು ಪೇಚಾಡಿದ್ದುಂಟು, ಯಾವ ಕಾವ್ಯವಾದರೂ ತನ್ನ ಅಂತಸ್ಸತ್ವದಿಂದ ಬದುಕಬೇಕೇ ಹೊರತು ಕವಿಯ ಸ್ವಪ್ರತಿಷ್ಠೆಯಿಂದಲ್ಲ, ಅನ್ಯರ ಶಿಫಾರಸಿನಿಂದಲ್ಲ, ಬಳ್ಳಾಳಿಗಳ ಚಕಮಕಿಯಿಂದಲ್ಲ,

ಕನ್ನಡದಲ್ಲಿ ಸಂಶೋಧನೆ ಇತ್ತೀಚೆಗಂತೂ ವಿಶೇಷ ಪ್ರಮಾಣದಲ್ಲಿ ಸಾಗುತ್ತಿದೆ. ಈ ಸಂದರ್ಭದಲ್ಲಿ ಕಿಟ್ಟೆಲ್, ರೈಸ್, ಆರ್. ನರಸಿಂಹಾಚಾರ್, ಪೈ. ಶಂ. ಬಾ. ಜೋಷಿ, ಡಿ. ಎಲ್. ಎನ್‌ರ ಹೆಸರು ಸ್ಮರಣೀಯವಾದುವಾಗಿವೆ. ಅಲ್ಲಿಷ್ಟು ಇಲ್ಲಿಷ್ಟು, ವ್ಯಕ್ತಿಮಟ್ಟದಲ್ಲಿ ನಡೆಯುತ್ತಿದ್ದ ಸಂಶೋಧನೆ ವಿಶ್ವವಿದ್ಯಾನಿಲಯಗಳು ನೀಡುತ್ತಿರುವ ಸಂಶೋಧನವೇತನದಿಂದ ದಿನೇ ದಿನೇ ಅಧಿಕವಾಗುತ್ತಿದೆ. ಸ್ನಾತಕೋತ್ತರ ಸಂಶೋಧನ ಶಾಖೆಗಳಲ್ಲಿ ಈ ಕಾರ್ಯ ತುಂಬ ಬಿರುಸಿನಿಂದ ಸಾಗುತ್ತಿದೆ. ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರಲ್ಲೊಬ್ಬರೂ ನುರಿತ ಸಂಶೋಧಕರೂ ಆದ ಡಾ. ಹಿರೇಮಠರ ನೇತೃತ್ವದಲ್ಲಿ ಶಾಸ್ತ್ರೀಯ ರೀತಿಯ ವಚನ ಸಂಪಾದನೆಯ ಬೃಹತ್ ಯೋಜನೆ ಕಾರ್ಯಗತವಾಗುತ್ತಿದೆ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಾಸಸಾಹಿತ್ಯ ಸಂಪಾದನೆಯ ಯೋಜನೆ ಇಷ್ಟರಲ್ಲಿಯೆ ಕಾರ್ಯರೂಪಕ್ಕೆ ಬರಲಿದೆ. ಈಗಾಗಲೇ ಪ್ರಕಟವಾಗಿರುವ ಡಾಕ್ಟರೇಟ್ ನಿಬಂಧಗಳು ಯಾವ ಸಂಸ್ಥೆಗಾದರೂ ಗೌರವ ತರುವಂಥವಾಗಿವೆ. ಇವುಗಳಲ್ಲಿ ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಂಸ್ಕೃತಿಯ ಅಧ್ಯಯನ' ಎಂಬ ನಿಬಂಧವನ್ನು ಅತ್ಯವಶ್ಯವಾಗಿ ಉಲ್ಲೇಖಿಸಬೇಕಾಗಿದೆ. ಡಾ. ತಿಪ್ಪೇರುದ್ರಸ್ವಾಮಿಯವರ 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ಎಂಬ ಬೃಹದ್ಗ್ರಂಥ ಕನ್ನಡಕ್ಕೆ ಹೆಮ್ಮೆ ತರುವಂಥದಾಗಿದೆ. ಮರಿಯಪ್ಪ ಭಟ್ಟ, ಹಾ. ಮಾ. ನಾಯಕ, ಹಿರೇಮಠ್, ಹಂಪನಾ ಅವರ ಲೇಖನಗಳೂ ಕೃತಿಗಳೂ ಕನ್ನಡ ಭಾಷೆಯ ಅಧ್ಯಯನಕ್ಕೆ

ಅಮೂಲ್ಯ ಸಹಾಯವೊದಗಿಸುತ್ತಿವೆ. ಜ್ಞಾನಪ್ರಧಾನವಾದ ಗ್ರಂಥಗಳ ಸಂಖ್ಯೆ ದಿನೇ ದಿನೇ ವರ್ಧಿಸುತ್ತಿದೆ.

ಹಿಂದಿನ ಕಾಲದಲ್ಲಿ ಕನ್ನಡ ಗದ್ಯ ನಾಚಿಕೆಯಿಂದ ಮೂಲೆ ಹಿಡಿದಿತ್ತು. ಈಗಂತೂ ಎಲ್ಲೆಲ್ಲೂ ಅದರದೇ ಮೇಲುಗೈ, ಅದರದೇ ಹಾರಾಟ. ಅದಿಲ್ಲದೆ ಯಾವ ವ್ಯವಹಾರವೂ ನಡೆಯುವಂತಿಲ್ಲ. ಯಾರ ಬೇಳೆಯೂ ಬೇಯುವಂತಿಲ್ಲ. ಪದ್ಯ ಹಿಡಿ ಜನರ ಸ್ವತ್ತು; ಗದ್ಯ ಸಾರ್ವಜನಿಕ ಸ್ವತ್ತು. ಸಾಹಿತ್ಯ ರಾಜ್ಯದ ಅಧಿಕಾರಶ್ರೇಣಿಯಲ್ಲಿ ಕಾವ್ಯಕ್ಕೆ ಉಚ್ಚ ಸ್ಥಾನ ಮೀಸಲಾಗಿದ್ದರೂ ವ್ಯಾಪ್ತಿ ಪ್ರಯೋಜನಗಳ ದೃಷ್ಟಿಯಿಂದ ಗದ್ಯಕ್ಕೆ ಅಗ್ರ ತಾಂಬೂಲ. ಈಗಿನ ಅನೇಕ ಕವನಗಳು ಪದ್ಯರೂಪ ಧರಿಸಿದ ಗದ್ಯವಾಗಿವೆ; ತುಂಡುಸಾಲಿನ ಗದ್ಯವೆಂದರೂ ಸರಿಯೆ. ಇದರಿಂದ ಗದ್ಯದ ಮಹಿಮೆಯೂ ಅದು ತಾಳುತ್ತಿರುವ ವಿಶ್ವರೂಪವೂ ಸರ್ವಾಕರ್ಷಕವಾಗಿವೆ. ಗದ್ಯ ರಚಕ ಪದ್ಯ ರಚಿಸಬಾರದೆಂದಿಲ್ಲ. ವಿವಿಧ ಪ್ರಕಾರಗಳ ಸಿದ್ಧಿ ಚರ್ಯಾಮೂಲ (Behaviourism) ವಾಗಿ ಅಭ್ಯಾಸಬಲ (Habitualism) ದಿಂದ ಲಬ್ಧವಾದದ್ದು. ಗದ್ಯದಲ್ಲಿಯೂ ಲಯವೈವಿಧ್ಯವಿದೆ, ನಾದ ಮಾಧುರ್ಯವಿದೆ, ರೀತ್ಯಲಂಕಾರಗಳ ಥಟಾಟಿಯಿದೆ, ಮನೋರಂಜಕ ಸಾಮಗ್ರಿಯೂ ಇದೆ; ಗದ್ಯ ಪದ್ಯಗಳ ಭೇದಕ್ಕೆ ಈ ಗುಣಲಕ್ಷಣಗಳ ಪ್ರಮಾಣ ಭೇದವೇ ಕಾರಣ.

ಕನ್ನಡಭಾಷೆ ಸುಪುಷ್ಟವಾಗಿ ತೇಜಃಪುಂಜವಾಗಿ ವೀರ್ಯವತ್ತಾಗಿ ಬೆಳೆಯಬೇಕಾದರೆ ಅದು ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಮಾಧ್ಯಮವಾಗಬೇಕು, ಆಡಳಿತ ಭಾಷೆಯಾಗಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮ ಕುಂಟುತ್ತ ತೆವಳುತ್ತ ಮುಂದುವರಿಯುತ್ತಿದೆ; ಈ ಅಲಸಪ್ರವೃತ್ತಿಗೆ ಪ್ರತಿಗಾಮಿ ಮನೋಭಾವದ ಕನ್ನಡ ವಿರೋಧಿಗಳೇ ಕಾರಣ. ಹೆಜ್ಜೆಹೆಜ್ಜೆಗೂ ಅವರು ಪ್ರತಿಬಂಧಕಗಳನ್ನೊಡ್ಡುತ್ತಾರೆ. ಆದರೂ ಡಾ. ಶ್ರೀಮಾಲಿಯವರಂಥ ಉದಾರ ಮನೋಭಾವದ ದೂರದೃಷ್ಟಿಯ ಶಿಕ್ಷಣ ತಜ್ಞರ ಪ್ರಯತ್ನದಿಂದಾಗಿ ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ವಿದ್ಯಾರ್ಥಿಯೂ ಕನ್ನಡದಲ್ಲಿ ಉತ್ತರ ಬರೆಯಬಹುದೆಂದು ಹೇಳಲು ಸಂತೋಷವಾಗುತ್ತದೆ. ಬೆಂಗಳೂರು ವಿಶ್ವವಿದ್ಯಾನಿಲಯ ಕನ್ನಡ ಮಾಧ್ಯಮವನ್ನು ತತ್ಪಶಃ ಒಪ್ಪಿಕೊಂಡಿದೆ. ಆದರೆ ಅನ್ಯಭಾಷಾ ಸಂಸ್ಕೃತಿಗಳಿಗೆ ದತ್ತುವಾಗಿರುವ, ಸ್ವಭಾಷಾ ಸ್ವಸಂಸ್ಕೃತಿಗಳಿಗೆ ಪರವಾದ ಪರಿಣತರಿಂದ ಏನೇನು ಅರಿಷ್ಟಗಳು ಪ್ರಾಪ್ತವಾಗುತ್ತವೆಯೋ ಕಾದು ನೋಡಬೇಕಾಗಿದೆ. ಕರ್ಣಾಟಕ ವಿಶ್ವವಿದ್ಯಾನಿಲಯ ಕನ್ನಡ ಸಾಹಿತ್ಯದ ವ್ಯಾಸಂಗಕ್ಕೆ ಸಾಕಷ್ಟು ಸೌಲಭ್ಯಕಲ್ಪಿಸಿದ್ದರೂ ಅದು ಶಿಕ್ಷಣ ಮಾಧ್ಯಮವಾಗಬೇಕಾದ ಆವಶ್ಯಕತೆಯನ್ನು ಇನ್ನೂ ಮನಗಂಡಿಲ್ಲ. ಕೃಷಿ ವಿಶ್ವವಿದ್ಯಾನಿಲಯದಲ್ಲಂತು ಕನ್ನಡದ ಗಂಧವಿಲ್ಲ. ಕನ್ನಡ ಸಂಸ್ಕೃತಿಯ ಕಂಪಿಲ್ಲ. ಆ ಆವರಣಕ್ಕೆ ಹೋದಾಗ ವಿದೇಶವನ್ನು ಪ್ರವೇಶಿಸಿದಂತೆ ಭಾಸವಾಗುತ್ತದೆ. ಮೆಡಿಕಲ್ ಇಂಜನಿಯರಿಂಗ್ ಮತ್ತು ಕೃಷಿ ಕಾಲೇಜುಗಳಲ್ಲಿ ಮಾನವಯಂತ್ರಗಳು ತಯಾರಾಗುತ್ತಿರುವಂತೆ ಭಾಸವಾಗುತ್ತದೆ. ಅಲ್ಲಿಯ ಬಹುಮಂದಿಗೆ ರಾಮಾಯಣ ಭಾರತಗಳ ತಿಳಿವಳಿಕೆಯೇ ಇಲ್ಲ. ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರೊಬ್ಬರೊಡನೆ ಕೆಲವು ದಿನ ಹಿಂದೆ ಮಾತಾಡುತ್ತಿದ್ದಾಗ ಈ ಗುಟ್ಟು ರಟ್ಟಾಯಿತು. ಅವರಿಗೆ ಲೋಕಾನುಭವವೂ ಸೊನ್ನೆ ಅವರ ದೃಷ್ಟಿಯಲ್ಲಿ ಕನ್ನಡ ಕಾಡ ಭಾಷೆ. ಆದರೆ ಅವರು ಮಾತಾಡುತ್ತಿದ್ದದ್ದು ಬಟ್ಲರ್ ಇಂಗ್ಲಿಷ್. ಇಂಥ ಬಟ್ಲರ್ ಇಂಗ್ಲಿಷ್ ಭಾಷೆಗಳು ಕನ್ನಡದ ಕೊರಳಿಗೆ ಉರುಳಾಗಿದ್ದಾರೆ. ಆದರೂ ಕನ್ನಡ ಮಾಧ್ಯಮವಾಗುವ ದಿನ ಬಹುದೂರವಿಲ್ಲ. ಈ ಮೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಕನ್ನಡವನ್ನು ಗೌರವಿಸುವ, ದೂರದೃಷ್ಟಿಯ ಶಿಕ್ಷಣ ತಜ್ಞರು ವೈಸ್‌ಚಾನ್ಸಲರಾಗಿರುವುದು ಕನ್ನಡನಾಡಿನ ಪುಣ್ಯ. ಆತ್ಮಗೌರವವುಳ್ಳ ಎಲ್ಲ ಕನ್ನಡಿಗರೂ ಅವರಿಗೆ ಬೆಂಬಲವಾಗಿ ಬಲವಾಗಿ ನಿಲ್ಲಬೇಕಾಗಿದೆ.

ಕನ್ನಡ ಮಾಧ್ಯಮ ಇನ್ನೂ ಯಶಸ್ವಿಯಾಗದಿರುವುದಕ್ಕೆ ಅದು ಆಡಳಿತ ಭಾಷೆಯಾಗದಿರುವುದೇ ಪ್ರಬಲ ಕಾರಣ. ರಾಜಕೀಯ ನಾಯಕರು ಆ ಬಗ್ಗೆ ಆಸಕ್ತಿವಹಿಸಿದ್ದರೂ, ಮಂತ್ರಿಮಂಡಲ ಘೋಷಣೆ ಹೊರಡಿಸಿದ್ದರೂ, ಆ ಘೋಷಣೆ ಕಾರ್ಯಗತವಾಗಿಲ್ಲ. ಸಾಮಾನ್ಯ ಜನತೆಯ ಅಭ್ಯುದಯದಲ್ಲಿ ನಿರಾಸಕ್ತವಾದ, ತಾಯಿನೆಲದಲ್ಲಿ ಬೇರೂರದ, ನವಾಬ್ ಮನೋಭಾವದ, ಸೆಡೆತಕೊರಳಿನ, ದಂತಗೋಪುರ ನಿವಾಸಿಯಾದ ಅಧಿಕಾರಶಾಹಿ ಕನ್ನಡವನ್ನು ಕಚೇರಿಯೊಳಗೆ ಬರಗೊಡುತ್ತಿಲ್ಲ. ಅಧಿಕಾರಶಾಹಿಯ ಸಂಕೇತವಾದ ಇಂಗ್ಲಿಷ್ ಭಾಷೆ ನಿರ್ಗಮಿಸಿದಂತೆ ತಮ್ಮ ಪ್ರಾಬಲ್ಯ ಕ್ಷೀಣಿಸುತ್ತದೆಂಬ ವಿಷಯ ಅವರಿಗರಿವಾಗಿದೆ. ಅವರು ಸರ್ವಜ್ಞರು, ಸರ್ವಶಕ್ತರೆಂಬ ಭಾವನೆ ರಾಜಕೀಯ ಧುರೀಣರ ಮನಸ್ಸಿನಿಂದ ತೊಲಗುವತನಕ ನಾಡಿಗೆ ಕ್ಷೇಮವಿಲ್ಲ. ವಿದೇಶದಲ್ಲಿರುವ ರಾಯಭಾರಿ ಕಛೇರಿಯ ಉನ್ನತಾಧಿಕಾರಿಗಳಿಗೆ ಹಿಂದೂ ಧರ್ಮ ಹಿಂದೂ ಸಂಸ್ಕೃತಿಗಳ ಬಗೆಗೆ ಸ್ವಲ್ಪವೂ ತಿಳಿವಳಿಕೆಯಿಲ್ಲವೆಂದು ಅಮೆರಿಕೆಯ ಡಾ. ಕುಂಜ್ ಎಂಬ ವಿದ್ವಾಂಸರು ಹೇಳಿದಾಗ ಯಾವ ಭಾರತೀಯನಿಗಾದರೂ ಸಂಕಟವಾಗದಿರದು. ಅಧಿಕಾರಶಾಹಿಯಿಂದ ರಾಷ್ಟ್ರಕ್ಕಾಗುತ್ತಿರುವ ಅನಾಹುತವನ್ನು ಶ್ರೀ ದಿವಾನ್ ಚಮನ್‌ಲಾಲ್ ಅವರ

ತಮ್ಮದೊಂದು ಲೇಖನದಲ್ಲಿ ವಿವರಿಸಿದ್ದಾರೆ.[1] ಇಂಥ ಜನರ ಕೈಯಲ್ಲಿ ಅಧಿಕಾರವಿರುವತನಕ ಕನ್ನಡ ಆಡಳಿತ ಭಾಷೆಯಾಗುವುದಿಲ್ಲವೆಂಬುದಂತು ಸ್ಪಷ್ಟ.

ಆದರೆ ಅವರ ಮಾತು ಎಷ್ಟು ದಿನ ತಾನೆ ನಡೆದೀತು? ಸಾಮಾನ್ಯ ಜನತೆ ಎಚ್ಚರಗೊಂಡ ದಿನವೇ ಯಾರಿರಲಿ ಯಾರಿಲ್ಲದಿರಲಿ, ಕನ್ನಡ ಆಡಳಿತ ಭಾಷೆಯಾಗುತ್ತದೆ. ಆ ದಿನವೂ ಬಹುದೂರವಿಲ್ಲ. ಭಾಷಾಭಿಮಾನಿಗಳು ಸಚಿವ ಮಂಡಲಿಯಲ್ಲಿರುವಾಗ, ಕಡಿದಾಳರಂಥ ರಾಜಕಾರಣಿಗಳು ಸಾಹಿತ್ಯಕ್ಕೆ ಮನತೆತ್ತಿರುವಾಗ, ಮಹದೇವಬಣಕಾರ ಇದಿನಬ್ಬರಂಥ ಸಾಹಿತಿಗಳು ಶಾಸನಸಭೆಯ ಸದಸ್ಯರಾಗಿರುವಾಗ, ಎಚ್. ಎಂ. ಪಟೇಲರಂಥವರು ಹಿಮಾಚಲ ಮಾರ್ದನಿಗೆಯ್ಯುವಂತೆ ಲೋಕಸಭೆಯಲ್ಲಿ ಗುಡುಗುವಾಗ ಕನ್ನಡ ತಬ್ಬಲಿಯೇನಲ್ಲ.

ಸಾಹಿತ್ಯರಚನೆಯೇ ಪ್ರಮುಖ ವೃತ್ತಿಯಾಗುಳ್ಳ ಸಾಹಿತಿಗಳ ಪೋಷಣೆಯ ಹೊಣೆಯನ್ನು ಸರ್ಕಾರವಾಗಲೀ ಮಹಾಜನರಾಗಲೀ ಹೊರಬೇಕಾಗಿದೆ. "ಶಾಂತಿ ನೆಮ್ಮದಿಗಳಿಂದ ಮನಸ್ಸು ಪ್ರಸನ್ನವಾಗಿದ್ದರೆ ಉತ್ತಮ ಕಾವ್ಯಸೃಷ್ಟಿಯಾಗುತ್ತದೆ; ಕ್ಷೋಭೆಗೊಳಗಾದ ಮನಸ್ಸಿನಿಂದ ಮಹಾಕಾವ್ಯ ಮೂಡಲಾರದು."[2] ಉತ್ತಮ ಸಾಹಿತ್ಯಸೃಷ್ಟಿಯಿಂದ ಪ್ರಜಾಸ್ತೋಮದ ನೈತಿಕಮಟ್ಟ ಮೇಲೇರುತ್ತದೆ; ಉತ್ತಮ ಪ್ರಜಾಸ್ತೋಮದ ರಾಜಕೀಯ ಶುದ್ಧಿಯಾಗುತ್ತದೆ. ಆದ್ದರಿಂದ ಸಾಹಿತಿಗಳ ಪೋಷಣೆ ಸರ್ಕಾರದ ಆದ್ಯಕರ್ತವ್ಯ. ಅವರ ಪುಸ್ತಕಗಳಿಗೆ ಬಹುಮಾನಗಳನ್ನೂ ಸಹಾಯ ದ್ರವ್ಯವನ್ನೂ ನೀಡುವ ಮೂಲಕ, ಭಂಡಾರಗಳಿಗೆ ಅವನ್ನು ಕೊಳ್ಳುವ ಮೂಲಕ, ಶಾಲಾ ಕಾಲೇಜುಗಳಿಗೆ ಅವನ್ನು ಪಠ್ಯಪುಸ್ತಕಗಳನ್ನಾಗಿ ಆರಿಸುವ ಮೂಲಕ ಅವರಿಗೆ ಹೆಚ್ಚುಹೆಚ್ಚು ಪ್ರೋತ್ಸಾಹ ನೀಡಬೇಕು.

ಈ ಸಾಹಿತಿಗೋಷ್ಠಿಯ ಅಧ್ಯಕ್ಷತೆಗೆ ನನ್ನನ್ನಾರಿಸಿ, ನನಗೆ ತೋರಿಸಿರುವ ವಿಶ್ವಾಸಕ್ಕಾಗಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರನ್ನೂ, ಅವರ ಕಾರ್ಯದರ್ಶಿಗಳನ್ನೂ, ನನ್ನ ಭಾಷಣವನ್ನು ಶಾಂತಿಯಿಂದ ಕೇಳಿದ್ದಕ್ಕಾಗಿ ತಮ್ಮೆಲ್ಲರನ್ನೂ ಕೃತಜ್ಞತೆಯಿಂದ ವಂದಿಸುತ್ತೇನೆ.

---

1. ಶ್ರೀ ಸಾಮಾನ್ಯನಲ್ಲಿ ಹೆಚ್ಚುತ್ತಿರುವ ಅತೃಪ್ತಿ : ಪ್ರಜಾವಾಣಿ (೨೦-೫-೬೭), ಪುಟ ೪.

2. " It is only a mind at rest a soul at peace With itself that can produce good poetry. A disturbed soul or a worried mind cannot give great poetry." Dr. S. Radhakrishnan, The Philosophy of Rabindranath Tagore (page 11.)

ಒಬ್ಬ ಕನ್ನಡ ದೇವಿಯುದರದಿಂದೊಗೆದು,
ಒಬ್ಬ ಕನ್ನಡ ಜನನಿಯೆದೆಹಾಲ ಮೊಗೆದು,
ಒಬ್ಬ ಮಾತೆಯ ಮಡಿಲು ತೊಡೆಗಳಲಿ ಕುಣಿದು,
ಒಬ್ಬ ತಾಯುಲಿಗಳನೆ ತೊದಲಿ ನುಡಿದು,
ಬೆಳೆದ ಕನ್ನಡಿಗರೇ, ಬಂಧು ಕನ್ನಡಿಗರೇ,
ಇನಿಯ ಕನ್ನಡಿಗರೇ, ಸ್ವಾಗತವು ನಿಮಗೆ!

ಶ್ರೀ

ಸಿರಿಗನ್ನಡಂ ಗೆಲ್ಗೆ

ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸುಸಂದರ್ಭದಲ್ಲಿ

ಹಾಸನ ಜಿಲ್ಲಾ ಬರಹಗಾರರ ಮಂಡಲಿಯು

ಅಗ್ರಮಾನ್ಯ ಹಾಸ್ಯ ಲೇಖಕ, ಸರಸ ವಾಙ್ಮಿ, ಸ್ವಾತಂತ್ರ್ಯ ಸಮರದ ಸೇನಾನಿ, ನೈಷ್ಠಿಕ ಗಾಂಧಿವಾದಿ

ಸನ್ಮಾನ್ಯ ಶ್ರೀ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಅವರ ಸನ್ನಿಧಿಯಲ್ಲಿ ಆದರಾಭಿಮಾನಪೂರ್ವಕವಾಗಿ ಅರ್ಪಿಸಿದ

ಸನ್ಮಾನ ಪತ್ರ

ಪ್ರಿಯ ಗೊರೂರರೆ,

ನಾಡಿನ ವಿಶ್ರುತನಾಮ ಸಾಹಿತಿಗಳಲ್ಲಿ ಪ್ರಮುಖರೂ, ನಮ್ಮ ಜಿಲ್ಲೆಯ ಸರ್ವಶ್ರೇಷ್ಠ ಬರಹಗಾರರೂ ಆದ ತಮ್ಮನ್ನು ನಲವತ್ತಾರನೇ ಕನ್ನಡ ಸಾಹಿತ್ಯ ಸಮ್ಮೇಳನದ ಈ ಸುಸಮಯದಲ್ಲಿ ಕ್ಷೇತ್ರದ ತಪೋಧನರಾದ ಜಗದ್ಗುರು ಸರ್ವಶ್ರೀ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ, ವಿಶ್ವಮಾನ್ಯ ಸಂಶೋಧಕ, ಪ್ರತಿಷ್ಠಿತ ಲೇಖಕರಾದ, ಸಮ್ಮೇಳನಾಧ್ಯಕ್ಷರಾದ ಸನ್ಮಾನ್ಯ ಶ್ರೀ ಆದಿನಾಥ ನೇಮಿನಾಥ ಉಪಾಧ್ಯೆ ಅವರ, ಹಾಗೂ ವಾಗ್ದೇವಿ ವರಪುತ್ರರಾದ ವಿದ್ವಜ್ಜನರ ಸಮ್ಮುಖದಲ್ಲಿ, ಜಿಲ್ಲಾ ಬರಹಗಾರ ನವೋದಿತ ಮಂಡಲಿಯು ಅಭಿನಂದಿಸಲೂ, ಸನ್ಮಾನಿಸಲೂ ಹೆಮ್ಮೆ ಪಡುತ್ತದೆ. ನಮ್ಮ ಸನ್ಮಾನವನ್ನು ಅಂಗೀಕರಿಸಲು ಒಪ್ಪಿರುವ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಕನ್ನಡ ನುಡಿಯ ಸರ್ವತೋಮುಖವಾದ ಬೆಳವಣಿಗೆಗೆ ಅಡ್ಡಿಯಾಗಿದ್ದ ಹಾಸ್ಯ ಸಾಹಿತ್ಯ ಪ್ರಕಾರದ ಕೊರತೆಯನ್ನು ನೀಗಲು ಕ್ಷೇತ್ರದಲ್ಲಿ ಕೃಷಿಯನ್ನು ಹಲವು ದಶಕಗಳ ಮೊದಲೇ ಕೈಗೊಂಡು ರಸನಿಧಿಗಳಂತಿರುವ ಗ್ರಂಥರತ್ನಗಳನ್ನು ಸೃಷ್ಟಿಸಿ, ನುಡಿದೇವಿಯ ಮಂದಿರವನ್ನು ಅಲಂಕರಿಸಿದ ತಮ್ಮ ಅಕಳಂಕ ಕೀರ್ತಿಯನ್ನು ಹೆಮ್ಮೆಯಿಂದ ಕೊಂಡಾಡುತ್ತೇವೆ. ನಯವಾದ, ಸಹಜವಾದ, ಶುಚಿಯಾದ, ಸಭ್ಯ ಹಾಸ್ಯದ ರಸಗಂಗೆಯನ್ನು ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ಹರಿಸಿ ಸದ್ಭಾವ ಪ್ರವಾಹದಲ್ಲಿ ಓದುಗರನ್ನು ತೇಲಿಸಿರುವ ನಿಮ್ಮ ಲೇಖನಿಯನ್ನು ಅಭಿನಂದಿಸುತ್ತೇವೆ.

ಸಮಾಜದ ಏರು-ಪೇರುಗಳನ್ನೂ, ಓರೆಕೋರೆಗಳನ್ನೂ, ಇಡಿ ಇಡಿಯಾಗಿ ಬಿಡಿ ಬಿಡಿಯಾಗಿ ಚಿತ್ರಿಸಿ, ಸಮಾಜಕ್ಕೆ ಪ್ರೀತಿ ಸಹಾನುಭೂತಿಗಳಿಂದ ಕೂಡಿದ ರನ್ನಗನ್ನಡಿಯನ್ನು ಹಿಡಿದಿದ್ದೀರಿ. ಹಳ್ಳಿಯ ದೃಶ್ಯಗಳನ್ನೂ, ಕಾಣುವ "ಹತ್ತುಸಮಸ್ತ"ರನ್ನೂ ನಿಮ್ಮ ಲೇಖನಿಯಿಂದ ಅಮರರನ್ನಾಗಿಸಿದ್ದೀರಿ. ಪಂಡಿತರಿಗೂ, ಪಾಮರರಿಗೂ ರಂಜನೆಯಾಗುವಂತಹ ಮಾರ್ಗದಲ್ಲಿ ನಾಡಿನ ಸಂಸ್ಕೃತಿಯ ಉಜ್ವಲ ಸ್ವರೂಪದ ಪರಿಚಯವನ್ನು ಮೋಹಕವಾದ ಶೈಲಿಯಲ್ಲಿ ಮಾಡಿಕೊಟ್ಟು, ಅನುಕರಣೀಯವಾದ ಸತ್ಪಥವನ್ನು ನಿರ್ಮಿಸಿ, ನಿರ್ದೇಶಿಸಿದ್ದೀರಿ. ಸರ್ವಗ್ರಾಹ್ಯವಾದ ನಿಮ್ಮ ವಿಕಟಕವಿತ್ವ ಶಕ್ತಿ-ಪ್ರತಿಭೆಗಳಿಂದ ಜನ ಮನದ ಕೊಂಕು ಕಸಿರುಗಳನ್ನು ಕಳೆಯಲು ಶ್ರಮಿಸಿದ್ದೀರಿ.

ಪ್ರಿಯ ಅಯ್ಯಂಗಾರ್ಯರೇ,

ನಿಮ್ಮ ಅಸದೃಶ ಕೃತಿಗಳಾದ "ನಮ್ಮೂರಿನ ರಸಿಕರು", "ಹಳ್ಳಿಯ ಚಿತ್ರಗಳು", "ಗರುಡಗಂಬದ ದಾಸಯ್ಯ", "ಬೈಲಹಳ್ಳಿಯ ಸರ್ವೆ", ಮೊದಲಾದುವು ಯಾವ ಕಾಲಕ್ಕೂ ಸಾಹಿತ್ಯ ಭಂಡಾರದಲ್ಲಿ ಪರಿಶೋಭಿಸುವ ಕೃತಿಗಳು. ಚೇತೋಹಾರಿಯಾದ ಹಾಸ್ಯ, ಕಥೆಗಳು, ಕಾದಂಬರಿ, ಚಿತ್ರ ಮೊದಲಾದ ಲಲಿತ ಕಾವ್ಯಗಳ ಕಾರಣವೇ ನಿಮಗೆ ಮಾನ್ಯತೆ ದೊರಕಿದ್ದರೂ, ಜೀವನ-ಚರಿತ್ರೆ, ಸಾಹಿತ್ಯ ವಿಮರ್ಶೆಗಳೇ ಅಲ್ಲದೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳನ್ನು ಕುರಿತ ಶಾಸ್ತ್ರೀಯ ಗ್ರಂಥಗಳನ್ನು ರಚಿಸಿ ನಿಮ್ಮ ಸರ್ವತೋಮುಖೀ ಪ್ರತಿಭೆಯನ್ನು ವ್ಯಕ್ತಗೊಳಿಸಿದ್ದೀರಿ.

ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ನೀವು ಮಹಾತ್ಮ ಗಾಂಧಿಯವರ ವಿಚಾರ ವಾಹಿನಿಯನ್ನು ಹೃದ್ಗತ ಮಾಡಿಕೊಂಡು ಗಾಂಧಿ ಸಾಹಿತ್ಯವನ್ನು ಕನ್ನಡದಲ್ಲಿ ಬೆಳೆಸುವ ಕಾರ್ಯವನ್ನು ಪ್ರಶಂಸನೀಯವಾಗಿ ಮಾಡಿದ್ದೀರಿ. ಗಾಂಧಿ ಸ್ಮಾರಕ ನಿಧಿಯ ಆಶ್ರಯದಲ್ಲಿ ಗಾಂಧಿ ಸ್ಮಾರಕ ಗ್ರಂಥ ಮಾಲೆಯ ಸಂಪಾದಕರಾಗಿ ಶ್ರಮಿಸಿ ಕೀರ್ತಿ ಭಾಜನರಾಗಿದ್ದೀರಿ. ನೀವು ಕೈಯಿಕ್ಕಿದ ಕ್ಷೇತ್ರದಲ್ಲಿ ನಿಮ್ಮ ವೈಶಿಷ್ಟ್ಯ ಪ್ರತಿಭೆಗಳು ಸ್ವಯಂ ವ್ಯಕ್ತವಾಗುತ್ತವೆ.

ನಿಮ್ಮ ಈ ದೀರ್ಘ ಸಾಧನಾಮಯವಾದ ಆದರ್ಶ ಜೀವನವನ್ನು ಅಭಿನಂದಿಸುತ್ತೇವೆ. ನಿಮ್ಮ ಲೇಖನ ಶಕ್ತಿ ಪ್ರತಿಭೆಗಳನ್ನೂ, ಮನಮೋಹಕವಾದ ಹಾಸ್ಯ ರಸಮಯ ಕಾವ್ಯ ಸೃಷ್ಟಿಯನ್ನೂ, ನಿಮ್ಮ ಚಿತ್ರಣ ಶಕ್ತಿಯನ್ನೂ, ಅವುಗಳಲ್ಲಿ ಕಂಡುಬರುವ ಸಹಾನುಭೂತಿಯನ್ನೂ, ನಿಮ್ಮ ಪ್ರಗತಿಪರ ದೃಷ್ಟಿಯನ್ನೂ ಅಭಿನಂದಿಸುತ್ತೇವೆ. ಪ್ರತಿಷ್ಠಿತ ಲೇಖಕರಾದ ನಿಮ್ಮನ್ನೂ ನಿಮ್ಮ ಅನುಕರಣೀಯವಾದ ಸರಳತೆಯೇ ಮೊದಲಾದ ಜೀವನಾದರ್ಶಗಳನ್ನೂ ಅಭಿನಂದಿಸುತ್ತೇವೆ.

ಜಗದೀಶ್ವರನು ದೀರ್ಘಕಾಲ ನಿಮಗೆ ಆಯುರಾರೋಗ್ಯಗಳನ್ನು ನೀಡಿ ಹರಸಲೆಂದು ಹಾರೈಸುತ್ತೇವೆ. ನಿಮ್ಮ ಪುಷ್ಟ ಲೇಖನಿಯು ಅವಿರತವಾಗಿ ಸಾಗುತ್ತಲಿರಲಿ; ಆದರಿಂದ ನುಡಿ ಭಂಡಾರವು ಪುಷ್ಟವಾಗಿ ಬೆಳೆಯುತ್ತಿರಲೆಂದು ಹಾರೈಸುತ್ತೇವೆ.

ಇಂತು, ನಿಮ್ಮ ಶ್ರೇಯೋಕಾಂಕ್ಷಿಗಳಾದ
ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರು
ಜಿಲ್ಲಾ ಬರಹಗಾರ ಮಂಡಲಿ, ಹಾಸನ

ಶ್ರವಣಬೆಳಗೊಳ
ದಿನಾಂಕ: ೨೭-೫-೬೭

ಅಧ್ಯಕ್ಷ ಜಿ. ಎಸ್. ಹಾಲಪ್ಪನವರ ಭಾಷಣ

ಕನ್ನಡ ಬಂಧುಗಳೆ,

ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಾಮಾನ್ಯವಾಗಿ ಸಾಹಿತ್ಯಗೋಷ್ಠಿ, ಕವಿಮೇಳ ಮೊದಲಾದ ಗೋಷ್ಠಿಗಳನ್ನು ಏರ್ಪಡಿಸುವ ಸಂಪ್ರದಾಯ ಇದುವರೆಗೆ ನಮ್ಮಲ್ಲಿ ನಡೆದುಬಂದಿದೆ. ಆದರೆ ಈ ಸಲ ಈ ಸಂಪ್ರದಾಯವನ್ನು ಸ್ವಲ್ಪ ಸಡಿಲಿಸಿ ಕನ್ನಡದ ಹಿತರಕ್ಷಣೆಗಾಗಿ ದುಡಿಯುತ್ತ ಬಂದಿರುವ ಸಂಘಸಂಸ್ಥೆಗಳ ಸ್ಥಿತಿಗತಿಗಳ ಕಡೆಗೂ ನಮ್ಮ ದೃಷ್ಟಿಯನ್ನು ಹರಿಸಿರುವುದು ಸ್ತುತ್ಯ ಉಪಕ್ರಮವಾಗಿದೆ. ಏಕೆಂದರೆ ಪ್ರಾಚೀನ ಕಾಲದಿಂದಲೂ ಸಾಹಿತ್ಯ ಸೃಷ್ಟಿಗೆ ಚಾರಿತ್ರಿಕ ಪರಿಸ್ಥಿತಿ ಹಾಗೂ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶಗಳೂ ಕೂಡ ಮುಖ್ಯಕಾರಣವಾಗಿವೆ. ಕನ್ನಡ ಸಾಹಿತ್ಯದ ಸಮಸ್ಯೆಗಳನ್ನು ಸಮಾಲೋಚಿಸುವಂತೆ ಕನ್ನಡ ರಕ್ಷಣೆಯ ಆಧಾರಸ್ತಂಭಗಳಾದ ಸಂಘಸಂಸ್ಥೆಗಳು ಯಾವರೀತಿ ಕಾರ್ಯ ಮಾಡುತ್ತಿವೆ ಎಂಬುದನ್ನು ನಾವು ಅಭ್ಯಸಿಸುವುದು ಅಗತ್ಯವಾಗಿದೆ. ಹಾಗೂ ಯಾವ ರೀತಿ ನಾವು ರಚನಾತ್ಮಕವಾಗಿ ಕನ್ನಡ ಸಂಸ್ಥೆಗಳನ್ನು ಬಲಗೊಳಿಸಬೇಕೆಂಬ ಬಗ್ಗೆ ಚರ್ಚಿಸಿ ಸೂಕ್ತಕ್ರಮಗಳನ್ನು ಕೈಕೊಳ್ಳಬೇಕಾಗಿದೆ.

ಪಾಶ್ಚಾತ್ಯರ ಪ್ರಭಾವ ಹಾಗೂ ಕನ್ನಡ ಸಂಘ-ಸಂಸ್ಥೆಗಳ ಉದಯ

ಕನ್ನಡನಾಡಿನ ಹೊರಗೂ ಮತ್ತು ಒಳಗೂ ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಸಾರಕ್ಕಾಗಿ ಅನೇಕ ಸಂಘ ಸಂಸ್ಥೆಗಳು ದುಡಿಯುತ್ತ ಬಂದಿವೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹಿರಿಯ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಕರ್ನಾಟಕ ಸಂಘಗಳು ಜನತೆಯಲ್ಲಿ ಕನ್ನಡ ಅಭಿಮಾನವನ್ನು ಬೆಳಸುವ ಕಾರ್ಯದಲ್ಲಿ ಪ್ರಶಂಸನೀಯವಾದ ಕಾರ್ಯವನ್ನು ಮಾಡುತ್ತ ಬಂದಿವೆ. ಜ್ಞಾನಪ್ರಸಾರ ಮತ್ತು ಕನ್ನಡ ಹಿತರಕ್ಷಣೆಯ ಕಾರ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ಮೊದಲುಗೊಂಡು ವಿಶ್ವವಿದ್ಯಾನಿಲಯದ ಹಂತದವರೆಗೆ ಅನೇಕ ಬಗೆಯ ಶೈಕ್ಷಣಿಕ ಸಂಸ್ಥೆಗಳೂ, ಕನ್ನಡ ನಾಡಿನಲ್ಲಿ ವ್ಯಾಪಕವಾಗಿ ಹರಡಿರುವ ಅನೇಕ ಮತ ಮತ್ತು ಧಾರ್ಮಿಕ ಸಂಸ್ಥೆಗಳೂ ಸಾಕಷ್ಟು ಸೇವೆ ಸಲ್ಲಿಸುತ್ತಾ ಬಂದಿವೆ. ಇದೇ ರೀತಿ ಅನೇಕ ಪತ್ರಿಕೆಗಳು, ನಾಟಕ ಸಂಸ್ಥೆಗಳು, ರಾಜಕೀಯ ಸಂಘಗಳೂ ಕನ್ನಡಕ್ಕಾಗಿ ಹೋರಾಡಿವೆ. ಆದರೆ ಕನ್ನಡ ಸೇವೆಗಾಗಿಯೇ ಮೀಸಲಾಗಿ ದುಡಿಯುತ್ತಿರುವ ಸಂಘ-ಸಂಸ್ಥೆಗಳ ಪಾತ್ರವನ್ನು ಇಂದು ನಾವು ಮುಖ್ಯವಾದ ಇಲ್ಲಿ ಪ್ರಸ್ತಾಪಿಸುವುದು ಅಪೇಕ್ಷಣೀಯವಾಗಿದೆ.

ಕನ್ನಡವನ್ನುದ್ಧರಿಸಿದ ಪುಣ್ಯಪುರುಷರು

ಕನ್ನಡ ನಾಡಿನಲ್ಲಿ ಬ್ರಿಟಿಷ್ ಆಳಿಕೆ ಮತ್ತು ಪಾಶ್ಚಾತ್ಯ ಶಿಕ್ಷಣಗಳು ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರಿದಂತೆ ಕನ್ನಡ ಸಮಾಜದ ಮೇಲೂ ಪರಿಣಾಮವಾಯಿತು. ರಾಷ್ಟ್ರೀಯ ಚಳುವಳಿಯ ಅಂಗವಾಗಿಯೂ ಕೂಡ ಸ್ವಭಾಷಾ ಪ್ರಜ್ಞೆ ಬೆಳೆಯಿತು. ಕನ್ನಡ ಜಾಗೃತಿಯ ಕಾರ್ಯವನ್ನು ಮೊದಲು ಆರಂಭ ಮಾಡಿದವರೆಂದರೆ ಈ ನಾಡಿನಲ್ಲಿ ಬಂದು ಸೇವೆ ಸಲ್ಲಿಸಿದ ಇಂಗ್ಲಿಷ್ ಅಧಿಕಾರಿಗಳು ಮತ್ತು ಸಂಶೋಧಕರು. ಉತ್ತರ ಕರ್ನಾಟಕದಲ್ಲಿ ರಸೆಲ್ ಎಂಬ ಆಂಗ್ಲ ಶಿಕ್ಷಣಾಧಿಕಾರಿಯು ೧೯ನೆಯ ಶತಮಾನದಲ್ಲಿ ಮರಾಠಿ ಆಕ್ರಮಣದಿಂದ ಕನ್ನಡವನ್ನು ಬದುಕಿಸಲು ದಿಟ್ಟತನದ ಹೆಜ್ಜೆಯನ್ನಿಟ್ಟನು. ಡೆಪ್ಯೂಟಿ ಚನ್ನಬಸಪ್ಪ, ವೆಂಕಟರಂಗೋ ಕಟ್ಟಿ ಮುಂತಾದ ಮಹಾಪುರುಷರು ಕನ್ನಡವನ್ನುದ್ಧರಿಸಿದ ಮಹನೀಯರಲ್ಲಿ ಅಗ್ರಗಣ್ಯರು. ರೈಸ್, ಫ್ಲೀಟ್, ಕಿಟೆಲ್ ಮೊದಲಾದ ಮಹನೀಯರು ಕನ್ನಡ ಸಾಹಿತ್ಯ ಮತ್ತು ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿ ಕನ್ನಡಕ್ಕೆ ಎಂದೂ ಮರೆಯಲಾಗದ ಸೇವೆಯನ್ನು ಸಲ್ಲಿಸಿದರು. ಇಂತಹ ಮಹನೀಯರೆಲ್ಲರ ಪ್ರಯತ್ನದ ಫಲವಾಗಿ ಅಲ್ಲಲ್ಲಿ ಕನ್ನಡ ಸಂಸ್ಥೆಗಳು ಕಾಣಿಸಿಕೊಂಡವು. ಇವುಗಳಲ್ಲಿ ೧೮೯೦ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಆದಿ ಸಂಸ್ಥೆಯಾಗಿದೆ. ಆದರೆ ಅಖಿಲ ಕರ್ನಾಟಕ ಸಂಸ್ಥೆಯಾಗಿ ಒಂದೇ ಸಮನೆ ದುಡಿಯುತ್ತಿರುವ ಸಂಸ್ಥೆಯೆಂದರೆ ೧೯೧೫ರಲ್ಲಿ ಸ್ಥಾಪಿಸಲ್ಪಟ್ಟ ಕನ್ನಡ ಸಾಹಿತ್ಯ ಪರಿಷತ್ತು. ಮಹಾತ

ಗಾಂಧಿಯವರ ನಾಯಕತ್ವದಲ್ಲಿ ದೇಶಭಾಷೆಗಳ ಪುನರುಜ್ಜೀವನಕ್ಕೆ ಚಾಲನೆ ದೊರೆತಿದ್ದರಿಂದಲೂ, ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯಗಳ ಪ್ರಸಾರಕ್ಕಾಗಿ ಹಲವು ಮಹನೀಯರು ಟೊಂಕ ಕಟ್ಟಿ ದುಡಿಯಲಾರಂಭಿಸಿದುದರಿಂದಲೂ ಕನ್ನಡ ನಾಡಿನಲ್ಲಿ ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪ್ರಚಾರದ ಚಟುವಟಿಕೆಗಳು ಬಲಗೊಂಡವು. ದಿವಂಗತ ಬಿ. ಎಂ. ಶ್ರೀಕಂಠಯ್ಯ ಮೊದಲಾದ ವ್ಯಕ್ತಿಗಳ ದುಡಿಮೆಯ ಫಲವಾಗಿ ಕನ್ನಡ ನಾಡಿನಲ್ಲಿ ಕನ್ನಡ ಸೇವೆಗಾಗಿಯೇ ಮೀಸಲಾದ ಕರ್ನಾಟಕ ಸಂಘ ಮೊದಲಾದ ಸಂಸ್ಥೆಗಳು ಉದಯವಾದವು. ಕನ್ನಡ ಸಾಹಿತ್ಯ ಸಮ್ಮೇಳನ ಪ್ರತಿವರ್ಷ ಜರುಗಿ ಜನರಲ್ಲಿ ಕನ್ನಡ ಪ್ರೇಮ ಪ್ರಕಟಗೊಳ್ಳಲಾರಂಭಿಸಿತು. ನಾಡಹಬ್ಬ ಮತ್ತು ಸಾಹಿತ್ಯೋತ್ಸವ ಇತರ ಚಟುವಟಿಕೆಗಳು ಜನಪ್ರಿಯವಾದುವು.

ಕರ್ನಾಟಕ ಸಂಘಗಳು

ಅನೇಕ ಕರ್ನಾಟಕ ಸಂಘಗಳು ಅಲ್ಲಲ್ಲಿ ಪ್ರಶಂಸನೀಯವಾದ ಕಾರ್ಯವನ್ನು ಮಾಡಿವೆ. ಕಾಲೇಜಿನ ಕರ್ನಾಟಕ ಸಂಘಗಳಲ್ಲಿ ಬೆಂಗಳೂರು ಹಾಗೂ ಮೈಸೂರಿನ ಕರ್ನಾಟಕ ಸಂಘಗಳು ತುಂಬ ಉಪಯುಕ್ತ ಕಾರ್ಯವನ್ನು ಮಾಡಿವೆ. ಕಾಲೇಜೇತರ ಕರ್ನಾಟಕ ಸಂಘಗಳಲ್ಲಿ ಚೆನ್ನಾಗಿ ದುಡಿದ, ಹೈದರಾಬಾದಿನ ಕರ್ನಾಟಕ ಪರಿಷತ್ತು, ಬಳ್ಳಾರಿ ಕರ್ನಾಟಕ ಸಂಘ, ಶಿವಮೊಗ್ಗ ಕರ್ನಾಟಕ ಸಂಘ, ರಾಣಿಬೆನ್ನೂರಿನ ಕರ್ನಾಟಕ ಸಂಘ, ರಾಯಚೂರಿನ ಕರ್ನಾಟಕ ಸಂಘಗಳ ಹೆಸರನ್ನು ನಾವು ಇಲ್ಲಿ ಉಲ್ಲೇಖಿಸಬಹುದಾಗಿದೆ. ಕರ್ನಾಟಕ ಸಂಘಗಳು ಕನ್ನಡಿಗರ ಸಾಂಸ್ಕೃತಿಕ ಸಂಸ್ಥೆಗಳಾಗಿ ದುಡಿದಿವೆ; ಉಪನ್ಯಾಸ ಮುಂತಾದ ಕಾರ್ಯಕ್ರಮಗಳ ಜೊತೆಗೆ ಉತ್ತಮವಾದ ಪ್ರಕಟನೆಗಳನ್ನು ಕೈಕೊಂಡಿವೆ. ಕನ್ನಡನಾಡಿನ ಗಡಿಭಾಗಗಳಾದ ಬೆಳಗಾವಿ, ಸೊಲ್ಲಾಪುರ, ಕೊಲ್ಲಾಪುರ ಮೊದಲಾದ ಕೇಂದ್ರಗಳಲ್ಲಿ ಕರ್ನಾಟಕ ಸಂಘಗಳು ಹಾಗೂ ಶಿಕ್ಷಣ ಸಂಸ್ಥೆಗಳೂ ಸ್ತುತ್ಯವಾದ ಸೇವೆಯನ್ನು ಸಲ್ಲಿಸಿವೆ. ಕೊಲ್ಲಾಪುರದಲ್ಲಿ ಪ್ರೊಫೆಸರ್ ಕುಂದಣಗಾರರ ಮಾರ್ಗದರ್ಶನದಲ್ಲಿಯೂ, ಸೊಲ್ಲಾಪುರದಲ್ಲಿ ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅವರ ಹಿರಿತನದಲ್ಲಿಯೂ ಕನ್ನಡ ಕೋಟೆಗಳು ರಕ್ಷಿಸಲ್ಪಟ್ಟವು. ಮುಂಬಯಿ ಕರ್ನಾಟಕ ಸಂಘವು ಅಲ್ಲಿನ ಕನ್ನಡಿಗರ ಸಂಘಟನಾ ಶಕ್ತಿಯ ಪ್ರತೀಕವಾಗಿದೆ. ನಾಗಪುರ, ದೆಹಲಿ ಮೊದಲಾದ ಕಡೆ ಕನ್ನಡಿಗರು ಕರ್ನಾಟಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಕೆಲಸಮಾಡುತ್ತಾ ಬಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ

ಕನ್ನಡ ನಾಡಿನ ಏಕೀಕರಣಕ್ಕಾಗಿ ಹಾಗೂ ಕನ್ನಡಿಗರ ಪ್ರಗತಿಗಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್, ಕರ್ನಾಟಕ ಏಕೀಕರಣ ಸಂಸ್ಥೆ, ಕರ್ನಾಟಕ ವಾರ್ತ ಸಂಘ ಮೊದಲಾದ ಸಂಸ್ಥೆಗಳು ಶ್ರಮಿಸಿವೆ. ಆದರೆ ನಾಡುನುಡಿಗಳ ಸೇವೆಗಾಗಿ ಒಂದೇ ನಿಷ್ಠೆಯಿಂದ ದುಡಿಯುತ್ತಾ ಬಂದಿರುವ ರಾಜಕೀಯೇತರ ಸಂಸ್ಥೆ ಎಂದರೆ ಕನ್ನಡ ಪರಿಷತ್ತು. ಇದು ಪ್ರತಿವರ್ಷ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ಸಮ್ಮೇಳನಗಳನ್ನು ನಡೆಸಿ ಕನ್ನಡ ಜನತೆಯನ್ನು ಎಚ್ಚರಿಸಿತು; ಕನ್ನಡ ನಾಡಿನ ಏಕೀಕರಣಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿತು. ಪರಿಷತ್ತು ಪ್ರಕಟಣೆಗಳ ಮೂಲಕವೂ ನಾಡುನುಡಿಗಳ ಸೇವೆಯನ್ನು ಮಾಡುತ್ತಾ ಬಂದಿದೆ. ಕನ್ನಡ ನಾಡಿನ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತು ಹಲವಾರು ಉತ್ತಮ ಗ್ರಂಥಗಳನ್ನು ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಿರುವುದಲ್ಲದೆ 'ಕನ್ನಡ ನುಡಿ' ಮತ್ತು 'ಪರಿಷತ್ ಪತ್ರಿಕೆ'ಗಳನ್ನು ನಡೆಸುತ್ತಾ ಬಂದಿದೆ. ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಪರಿಷತ್ತಿನ ಸೇವೆ ಸಂಸ್ಮರಣೀಯವಾಗಿದೆ.

ಈ ಮಹಾ ಸಂಸ್ಥೆಯು ಕನ್ನಡ ರಾಜ್ಯ ಸ್ಥಾಪನೆಯಾದ ಮೇಲೆ ಯಾವ ರೀತಿ ತನ್ನ ಹೊಣೆಯನ್ನು ನಿರ್ವಹಿಸಬೇಕೆಂಬ ಬಗ್ಗೆ ಎಲ್ಲರೂ ಆಲೋಚಿಸಬೇಕು. ನಿಘಂಟಿನ ಕಾರ್ಯ ಒಂದೇ ಬಿಟ್ಟರೆ ಪರಿಷತ್ತು ಶಾಶ್ವತವಾಗಿ ಉಳಿಯುವಂತಹ ಇತರ ಮುಖ್ಯ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ನಾಡಿನ ಸಾಂಸ್ಕೃತಿಕ ಮತ್ತು ಭಾಷಾ ಬೆಳವಣಿಯ ದೃಷ್ಟಿಯಿಂದ ಪರಿಷತ್ತು ಹೆಚ್ಚಿನ ಹೊಣೆಯನ್ನು ಹೊರಬೇಕೆಂದು ಜನ ಬಯಸುವುದು ಸಹಜವಾಗಿದೆ. ಸುವರ್ಣ ಮಹೋತ್ಸವವನ್ನು ಆಚರಿಸಲಿರುವ ಈ ಸಂಸ್ಥೆಯು ರಚನಾತ್ಮಕ ಯೋಜನೆಗಳನ್ನು ಹಮ್ಮುವುದರಿಂದ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಪ್ರತಿ ವರುಷವೂ ಸಾಹಿತ್ಯ ಸಮ್ಮೇಳನ ನಡೆಸುವುದು ಆಗತ್ಯವೇ? ಮೂರುವರುಷಕ್ಕೊಮ್ಮೆ ಸಮ್ಮೇಳನ ನಡೆಸಿದರೆ ಸಾಲದೆ? ಹೀಗೆ ಕೆಲವರು ಹಲವಾರು ರೀತಿ ಪ್ರಶ್ನಿಸುತ್ತಿದ್ದಾರೆ. ಸಾಹಿತ್ಯ ಮತ್ತು ಭಾಷಾಭಿವೃದ್ಧಿಗಾಗಿ ನಿಶ್ಚಿತ ಕಾರ್ಯಕ್ರಮಗಳನ್ನು ರೂಪಿಸಿರುವುದು ಪರಿಷತ್ತಿನ ಮುಂದಿರುವ ಮುಖ್ಯ ಜವಾಬ್ದಾರಿಯಾಗಿದೆ; ಸಭೆ ಸಮ್ಮೇಳನಗಳು ಗೌಣವೆಂದು ನನ್ನ ಭಾವನೆ.

ಕರ್ನಾಟಕ ಸಂಘಗಳ ಮುಂದಿನ ಪಾತ್ರ

ಕನ್ನಡದ ರಾಜ್ಯಸ್ಥಾಪನೆಯಾದಮೇಲೆ ಕರ್ನಾಟಕ ಸಂಘಗಳು ಮೊದಲಿನಂತೆ ಕೆಲಸಮಾಡುತ್ತಿಲ್ಲವೆಂಬ ಮಾತು ಕೇಳಿಬರುತ್ತಿದೆ. ಕರ್ನಾಟಕ ಏಕೀಕರಣವಾದ ಮೇಲೆ ಕರ್ನಾಟಕ ಸಂಘಗಳು ಇರಬೇಕೇ ಎಂದು ಕೂಡ ಕೆಲವರು ಕೇಳುತ್ತಿದಾರೆ. ನಮ್ಮ ದೇಶದಲ್ಲಿ ಕರ್ನಾಟಕ ಸಂಘಗಳೇ ಏಕೆ ಯಾವ ಸಂಘ-ಸಂಸ್ಥೆಗಳೂ ಮೊದಲಿನಂತೆ ಕೆಲಸಮಾಡುತ್ತಿಲ್ಲ. ಈ ಮಾತು ಇಡೀ ಭಾರತಕ್ಕೇ ಅನ್ವಯಿಸುತ್ತದೆ. ಇಂದಿನ ಆಡಳಿತಗಾರ, ಇಂದಿನ ಕೂಲಿಗಾರ, ಇಂದಿನ ಶಿಕ್ಷಕ, ಇಂದಿನ ವಿದ್ಯಾರ್ಥಿ, ಇಂದಿನ ರೈತ, ಇಂದಿನ ರಾಜಕಾರಣಿ ಇಪ್ಪತ್ತೈದು ವರ್ಷಗಳ ಹಿಂದೆ ಕೆಲಸಮಾಡುತ್ತಿದ್ದ ಜನರಂತೆ ಕೆಲಸಮಾಡುತ್ತಿಲ್ಲ. ಹಿಂದಿನವರ ಪ್ರಾಮಾಣಿಕತೆ, ದಕ್ಷತೆ ಮತ್ತು ಶ್ರದ್ಧೆ ಈಗಿನವರಲ್ಲಿ ಕಾಣುತ್ತಿಲ್ಲ. ಇದು ರಾಷ್ಟ್ರದ ವ್ಯಕ್ತಿ ಮತ್ತು ಸಂಸ್ಥೆಗಳ ಅಧಃಪತನದ ಕುರುಹು. ಇಡೀ ಭಾರತ ಸಮಾಜದಲ್ಲಿ ನಾವು ಮಾನಸಿಕ ದೌರ್ಬಲ್ಯವನ್ನೂ, ಪ್ರಾಮಾಣಿಕತೆಯ ಅಭಾವವನ್ನೂ, ಕ್ರಿಯಾಶೂನ್ಯತೆಯನ್ನೂ ಕಾಣುತ್ತಿರುವಾಗ ಕನ್ನಡ ನಾಡಿನ ಸಂಘ-ಸಂಸ್ಥೆಗಳಲ್ಲಿಯೂ ಇದನ್ನು ಗಮನಿಸಬಹುದು. ಆದರೆ ಕನ್ನಡ ಜನರು ತುಂಬಾ ಸಂಪ್ರದಾಯವಾದಿಗಳಾಗಿರುವುದರಿಂದಲೂ, ಪರಸ್ಪರ ಅಸೂಯೆ ಮೊದಲಾದ ಅಲ್ಪಗುಣಗಳು ಅವರಲ್ಲಿ ಹೆಚ್ಚಾಗಿರುವುದರಿಂದಲೂ, ಕನ್ನಡ ಸಂಘ-ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ವಿಶೇಷ ಆತಂಕವಾಗಿದೆ. ಕನ್ನಡ ರಾಜ್ಯ ಸ್ಥಾಪನೆಯಾದ ಮೇಲೆ ಕನ್ನಡ ಸಂಸ್ಥೆಗಳಲ್ಲಿ ನವ ಉತ್ಸಾಹ ಮತ್ತು ನವ ಚಟುವಟಿಕೆಗಳು ಪ್ರಕಟವಾಗುವಂತೆ ಮಾಡಬೇಕು. ಕರ್ನಾಟಕ ಸಂಘಗಳು ಪ್ರಕಟಣೆ ಮುಂತಾದ ಉಪಯುಕ್ತ ಕಾರ್ಯಗಳಲ್ಲಿ ತೊಡಗಬಹುದಾಗಿದೆ.

ಕನ್ನಡಿಗರ ಆಲಸ್ಯತನ

ನೆರೆಯ ರಾಜ್ಯಗಳಿಂದ ಪ್ರತಿವರ್ಷ ಕನ್ನಡನಾಡಿನಲ್ಲಿ ಬಂದು ನೆಲಸುವ ಜನರ ಸಂಖ್ಯೆಯನ್ನು ಗಮನಿಸಿದರೆ ಕನ್ನಡ ರಾಜ್ಯ ಇನ್ನು ಕೆಲವು ವರ್ಷಗಳಲ್ಲಿ ಕನ್ನಡೇತರ ಬಹುಸಂಖ್ಯಾತರ ರಾಜ್ಯವಾಗಬಹುದು. ಈ ದೃಷ್ಟಿಯಿಂದ ಕನ್ನಡ ಜನರ ಹಿತರಕ್ಷಣೆಗಾಗಿ ಕನ್ನಡಿಗರು ನಿಶ್ಚಿತ ಯೋಜನೆಗಳನ್ನು ಮಾಡಬೇಕಾಗಿದೆ. ನಮಗೆ ಅಖಿಲಭಾರತ ದೃಷ್ಟಿ ಇರಬೇಕು ನಿಜ. ಆದರೆ 'ಪರಪುಟ್ಟರಿಗೆ ತೌರೂರು ಮೈಸೂರು' ಎನ್ನುವಂತಾಗಬಾರದು. ಕನ್ನಡಿಗರು ಆಲಸ್ಯವನ್ನು ತೊರೆದು ಕರ್ಮಶೀಲರಾಗಬೇಕು ಮತ್ತು ಕನ್ನಡ ರಾಜ್ಯದಲ್ಲಿ ಕನ್ನಡತನ ಅಳಿಸದಂತೆ ನೋಡಿಕೊಳ್ಳಬೇಕು. ನಾಡು ಮತ್ತು ನುಡಿಗಳ ಬಗ್ಗೆ ಕನ್ನಡಿಗರಲ್ಲಿ ಅಭಿಮಾನ ಇನ್ನೂ ಬೆಳೆಯಬೇಕು. ಧಾರವಾಡದ ಲಿಂಕನ್ ಸಂಸ್ಥೆಯು ಇತ್ತೀಚೆಗೆ 'The Moving Frontiers of Maharashtra' ಎಂಬ ಹೊತ್ತಿಗೆಯನ್ನು ಪ್ರಕಟಿಸಿದ ನಾಲ್ಕು ದಿನಗಳಲ್ಲಿ ದೆಹಲಿ, ಮುಂಬಯಿ, ಪುಣೆ ಮೊದಲಾದ ಕಡೆಗಳಿಂದ ಮಹರಾಷ್ಟ್ರಿಯರು ಪುಸ್ತಕಗಳನ್ನು ತರಿಸಿಕೊಂಡರು. ಮಹಾರಾಷ್ಟ್ರ ಸರ್ಕಾರದ ಜನರಲ್ ಆಡಳಿತ ಶಾಖೆಯವರು ಐದು ಪ್ರತಿಗಳನ್ನು ತಕ್ಷಣ ಕಳಿಸಲು ಬರೆದರು. ಮಹಾರಾಷ್ಟ್ರದಿಂದ ವ್ಯಕ್ತಿ ಮತ್ತು ಸಂಸ್ಥೆಗಳು ಒಂದು ತಿಂಗಳ ಅಲ್ಪಾವಧಿಯಲ್ಲಿ ೨೦೦ಕ್ಕೂ ಹೆಚ್ಚು ಪ್ರತಿಗಳನ್ನು ಕೊಂಡು ಓದಿದರು. ಮಹಾರಾಷ್ಟ್ರದ ಒಬ್ಬ ಸಂಸತ್ ಸದಸ್ಯರ ಪುತ್ರಿ ನಮ್ಮ ಪ್ರಕಟಣೆಯ ವಿರುದ್ಧವಾಗಿ 'Lincoln Re assasinated' ಎಂಬ ಹದಿನಾರು ಪುಟದ ಕಿರುಹೊತ್ತಿಗೆಯನ್ನು ಪ್ರಕಟಿಸಿ ಮೈಸೂರು ರಾಜ್ಯದಲ್ಲಿ ಭಾಷಾಂಧತೆಯಿದೆ ಎಂದೂ ಭಾಷಾ ಅಲ್ಪಸಂಖ್ಯಾತರನ್ನು ಹತ್ತಿಕ್ಕಲಾಗುತ್ತಿದೆ ಎಂದೂ ಕಿರುಬೊಬ್ಬೆ ಎಬ್ಬಿಸಿದರು. ನಮ್ಮ ಕನ್ನಡ ರಾಜ್ಯದಲ್ಲಿ ನಮ್ಮ ಪ್ರಕಟಣೆಗೆ ಸಿಕ್ಕಿರುವ ಪ್ರತಿಕ್ರಿಯೆಯಾದರೂ ಏನು? ಗೋವಾದಿಂದ ಕೂಡ ಈ ಪುಸ್ತಕ ಬೇಕೆಂದು ಬೇಡಿಗೆ ಬಂದವು. ಆದರೆ ಕನ್ನಡಿಗರಿಂದ ಯಾವ ಉತ್ತೇಜನವೂ ಸಿಕ್ಕಲಿಲ್ಲ. ಪುಕ್ಕಟೆ ಪ್ರತಿ ಕೊಟ್ಟರೂ ಕೂಡ ಓದಿ ಮೆಚ್ಚುವರಿಲ್ಲ. ಪತ್ರಿಕೆಗಳಲ್ಲಿ ಸಾಕಷ್ಟು ಪ್ರಸಿದ್ಧಿಕೂಡ ದೊರೆಯುವುದಿಲ್ಲ. ಇದು ಕನ್ನಡಿಗರ ಅಭಿಮಾನ ಶೂನ್ಯತೆ ಹಾಗೂ ಆಲಸ್ಯಗಳಿಗೆ ಒಂದು ಉದಾಹರಣೆ,

ಕನ್ನಡ ರಾಜ್ಯಸ್ಥಾಪನೆ ಗುರಿ ಹೇಗೆ ಕಾರ್ಯಗತವಾಗಬೇಕು ?

ಕನ್ನಡ ರಾಜ್ಯಸ್ಥಾಪನೆಯ ಗುರಿಯನ್ನು ಸಾಧಿಸಲು ಸರ್ಕಾರ ಹಾಗೂ ಸಾರ್ವಜನಿಕರು ಒಂದಾಗಿ ಕಾರ್ಯೋನ್ಮುಖರಾಗಬೇಕು. ಭಾಷಾ ತಳಹದಿಯ ಮೇಲೆ ರೂಪುಗೊಂಡ ಯಾವ ರಾಜ್ಯದಲ್ಲಿಯೂ ಭಾಷಾ ಹಾಗೂ ಸಂಸ್ಕೃತಿಯ ಕೆಲಸ ತೃಪ್ತಿಕರವಾಗಿ ಸಾಗಿಲ್ಲ. ಅನೇಕ ರಾಜ್ಯಗಳಲ್ಲಿ ಈಗ ಭಾಷೆ ಮತ್ತು ಸಂಸ್ಕೃತಿ ಇಲಾಖೆಗಳು ಸ್ಥಾಪಿತವಾಗಿ ಕೆಲಸ ಮಾಡುತ್ತಿವೆ. ಆದರೆ ಮಾಡಬೇಕಾದ ಕಾರ್ಯ ಅಗಾಧವಾಗಿದೆ. ನಮ್ಮ ರಾಜ್ಯದಲ್ಲಿ ಕೂಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಹೆಚ್ಚು

ಕಾರ್ಯವಾಗಬೇಕಾಗಿದೆ. ಗ್ರಂಥ ಪ್ರಕಟಣೆಯ ಬೃಹತ್ ಯೋಜನೆ ನಿರ್ದಿಷ್ಟವಾಗಿ ರೂಪುಗೊಂಡು ಅದು ಕಾರ್ಯಗತವಾಗಬೇಕು. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯದ ವಿಶ್ವವಿದ್ಯಾನಿಲಯಗಳು ಹಾಗೂ ರಾಜ್ಯ ಸರ್ಕಾರದವರೂ ಕೂಡಿ ಯೋಜನೆಯನ್ನು ಸಿದ್ಧಗೊಳಿಸಿ ದುಡಿಯುವುದಾದರೆ ಕನ್ನಡ ಕೆಲಸ ಶೀಘ್ರವಾಗಿ ಮತ್ತು ತೃಪ್ತಿಕರವಾಗಿ ಆಗಲು ಸಾಧ್ಯವಿದೆ.

ಕನ್ನಡ ಮುನ್ನಡೆಯ ದಾರಿ: ಕೆಲ ಸಲಹೆಗಳು

ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಭಾರತದ ದೇಶಭಾಷೆಗಳ ಬೆಳವಣಿಗೆಗಾಗಿ ಸುಮಾರು ೫೮೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವ ಅಂದಾಜಿದೆ. ಎಂದರೆ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಭಾಷೆಗಳ ಸಲುವಾಗಿ ತೆಗೆದಿಟ್ಟ ಹಣಕ್ಕಿಂತಲೂ ಮೂವತ್ತು ಪಟ್ಟು ಹೆಚ್ಚಿನ ಹಣವನ್ನು ಖರ್ಚು ಮಾಡುವ ವಿಚಾರವಿದೆ. ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಪ್ರತಿ ರಾಜ್ಯದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಯೋಚಿಸಿದೆ. ಶಿಕ್ಷಣದ ದೃಷ್ಟಿಯಿಂದಲೂ ಸಂಶೋಧನೆಯ ದೃಷ್ಟಿಯಿಂದಲೂ ಇಂತಹ ಸಂಸ್ಥೆಗಳು ಸ್ವಾಗತಾರ್ಹವಾಗಿವೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭಾಷಾ ಮತ್ತು ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವಾಗ, ಕನ್ನಡ ಪರಿಷತ್ತು, ಕರ್ನಾಟಕ ಸಂಘ ಮುಂತಾದ ಸೇವಾ ಸಂಸ್ಥೆಗಳನ್ನು ಸಹಾನುಭೂತಿಯಿಂದ ಕಾಣಬೇಕು. ರಾಜ್ಯ ಸರ್ಕಾರವು ಈಗಾಗಲೇ ಪರಿಷತ್ತಿಗೆ ನಿಘಂಟಿನ ಕಾರ್ಯಕ್ಕಾಗಿ ಸಾಕಷ್ಟು ದ್ರವ್ಯ ಸಹಾಯ ನೀಡಿರುವುದು ಪ್ರಶಂಸನೀಯವಾಗಿದೆ. ಪರಿಷತ್ತು ಕೂಡ ಹೊಸ ರಚನಾತ್ಮಕ ಯೋಜನೆಗಳನ್ನು ಕೈಕೊಳ್ಳಬೇಕು. ಸರಕಾರ ಮತ್ತು ಸಾಹಿತಿಗಳ ಸಹಕಾರದಿಂದ ಕನ್ನಡ ಸೇವೆಯನ್ನು ದ್ವಿಗುಣಗೊಳಿಸತಕ್ಕದ್ದು. ಗ್ರಂಥ ಪ್ರಕಟಣೆಗೆ ದ್ರವ್ಯ ಸಹಾಯ ನೀಡುವುದು, ಸಂಶೋಧನೆಗೆ ಉತ್ತೇಜನ ಕೊಡುವುದು, ಲೇಖಕರ ಉತ್ತಮ ಕೃತಿಗಳನ್ನು ಕೊಂಡುಕೊಳ್ಳುವುದು, ಪಂಪ, ರನ್ನ ಚಾಮರಸ ಮೊದಲಾದ ಕನ್ನಡದ ಶ್ರೇಷ್ಠ ಕವಿಗಳ ಪ್ರಸಿದ್ಧ ಕಾವ್ಯಗಳನ್ನು ಜಗತ್ತಿನ ಇತರ ಭಾಷೆಗಳಲ್ಲಿ ರೂಪಾಂತರ ಮಾಡುವುದು, ಆಧುನಿಕ ಕನ್ನಡ ಬರಹಗಾರರ ಶ್ರೇಷ್ಠ ಕೃತಿಗಳನ್ನು ಭಾಷಾಂತರ ಮಾಡಿಸುವುದು. ಈ ರೀತಿ ಸರ್ಕಾರ ಮತ್ತು ಪರಿಷತ್ತು ಸಾಹಿತ್ಯ ಮತ್ತು ಭಾಷಾ ಅಭಿವೃದ್ಧಿಗೆ ನೆರವಾಗಬಹುದಾಗಿದೆ. ಕನ್ನಡ ನಾಡಿನಲ್ಲಿರುವ ಕನ್ನಡ ಸಂಘ ಸಂಸ್ಥೆಗಳಿಗೆ ನೆರವು ನೀಡುವುದಲ್ಲದೆ, ಇತರ ಕಡೆ ಇರುವ ಕನ್ನಡ ಸಂಘ ಸಂಸ್ಥೆಗಳಿಗೂ ನೆರವು ನೀಡುವುದು ಅಗತ್ಯ. ಮೈಸೂರು ಸರ್ಕಾರದವರು ಈಗಾಗಲೇ ಮುಂಬಯಿ ಮತ್ತು ನಾಗಪುರದ ಕರ್ನಾಟಕ ಸಂಘಗಳಿಗೆ ವಿಶೇಷ ಪ್ರೋತ್ಸಾಹ ನೀಡಿರುವುದು ಸ್ತುತ್ಯವಾಗಿದೆ. ಕಟ್ಟಡಗಳಿಗೆ ದ್ರವ್ಯ ಸಹಾಯ ಮಾಡುವುದರ ಜೊತೆಗೆ ಕರ್ನಾಟಕ ಸಂಘಗಳಿಗೆ ಕನ್ನಡ ಗ್ರಂಥಗಳನ್ನು ಆಗಾಗ್ಗೆ ಕಳುಹಿಸಿಕೊಡುವ ವ್ಯವಸ್ಥೆಯಾದರೆ ಇನ್ನೂ ಒಳ್ಳೆಯದು. ಈ ಬಗ್ಗೆ ರಾಜ್ಯ ಸರ್ಕಾರದ ಪುಸ್ತಕ ಭಂಡಾರದ ಸಹಕಾರ ಪಡೆಯಬಹುದು ಈ ಬಗೆಯ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಲು ರಾಜ್ಯ ಸರ್ಕಾರವು ಇತರ ರಾಜ್ಯಗಳಲ್ಲಿರುವಂತೆಯೇ ನಮ್ಮ ರಾಜ್ಯದಲ್ಲಿ ಸಂಸ್ಕೃತಿ ಶಾಖೆಯನ್ನು ಪುನರ್ಘಟಿಸುವುದು ಅನಿವಾರ್ಯ.

ಕನ್ನಡಿಗರು ಎದುರಿಸಬೇಕಾಗಿರುವ ನವ ಗಂಡಾಂತರಗಳು

ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಕಳೆದ ಒಂದು ನೂರು ವರ್ಷಗಳಿಂದ ಆಕ್ರಮಣ ನಡೆಯುತ್ತಲೇ ಇದ್ದು ಉತ್ತರ ಕರ್ನಾಟಕದಲ್ಲಿ, ಮಹಾರಾಷ್ಟ್ರೀಯರ ಉಪಟಳವನ್ನು ತಾಳಲಾರದೆ ಕನ್ನಡಿಗರು ಕರ್ನಾಟಕ ರಾಜ್ಯ ಸ್ಥಾಪನೆಗೆ ಹೋರಾಡಿದರು. ಕನ್ನಡ ರಾಜ್ಯ ಸ್ಥಾಪನೆಯಾದ ಮೇಲೆ ಮಹಾರಾಷ್ಟ್ರ ಮತ್ತು ಮೈಸೂರು ಸ್ನೇಹಿತರಂತೆ ನಡೆದುಕೊಳ್ಳಬಹುದಾಗಿತ್ತು. ಆದರೆ ಮಹಾರಾಷ್ಟ್ರದ ಸ್ವಾರ್ಥ ರಾಜಕಾರಣಿಗಳು ಗಡಿ ಭೂತವನ್ನೆಬ್ಬಿಸಿದರು. ಕನ್ನಡ ರಾಜ್ಯದ ಪ್ರದೇಶಗಳನ್ನು ಪಡೆಯಲು ಸಾಧುವಲ್ಲದ ಮಾರ್ಗಗಳನ್ನು ಅನುಸರಿಸಿ ಮಹಾಜನ ಆಯೋಗವನ್ನು ನೇಮಿಸುವಂತೆ ಒತ್ತಾಯತಂದರು. ಇಷ್ಟೇ ಅಲ್ಲ, ಗೋವೆಯನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ವಿಶ್ವಪ್ರಯತ್ನ ನಡಸಿದರು. ಗೋವೆ ಮತ್ತು ಬೆಳಗಾವಿಗಳನ್ನು ಪಡೆಯಲು ಮಹಾರಾಷ್ಟ್ರದವರು ನಡೆಸಿರುವ ಚಳುವಳಿ, ಮಾಡುತ್ತಿರುವ ಸಂಚು ಮತ್ತು ಪ್ರಭಾವಗಳನ್ನು ನೋಡಿದರೆ ಕನ್ನಡ ಗಡಿಗಳು ಅಪಾಯದಿಂದ ಪಾರಾಗಿಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಮಹಾರಾಷ್ಟ್ರ ಗಡಿಗೆ ಸಂಬಂಧವಿಲ್ಲದಿದ್ದರೂ ಕಾರವಾರವನ್ನು ಬೇಡುವ ಅವರ ತಂತ್ರ ಭೌಗೋಲಿಕ ಶಾಸ್ತ್ರಕ್ಕೆ ಒಂದು ವಿನೂತನ

ಕಾಣಿಕೆಯಾಗಿದೆ! ಇದರಿಂದಾಗಿ ಕನ್ನಡಿಗರು ಗಡಿ ರಕ್ಷಣೆಗಾಗಿ ನಿರಂತರವಾಗಿ ಶ್ರಮಿಸಬೇಕಾಗಿದೆ.

ಗಡಿಗಳನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ಕನ್ನಡ ನಾಡಿನ ಒಳಗೂ ಹೊರಗೂ ಕನ್ನಡಿಗರ ಹಿತರಕ್ಷಣೆ ಮಾಡುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಕನ್ನಡ ನಾಡಿನ ನಗರ-ಪಟ್ಟಣಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದಾರೆ. ದೊಡ್ಡ ನಗರ, ಕೈಗಾರಿಕಾ ಕೇಂದ್ರಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರು. ಕನ್ನಡನಾಡಿನಲ್ಲಿ ನೆಲಸಿರುವ ಇತರ ಜನರನ್ನು ಕನ್ನಡತನಕ್ಕೊಳಪಡಿಸದಿದ್ದರೆ ಮುಂದೆ ದೊಡ್ಡ ಗಂಡಾಂತರವಾಗುವ ಸಂಭವವಿದೆ. ಈ ದೃಷ್ಟಿಯಿಂದ ಸರ್ಕಾರದವರು ನಗರ-ಪಟ್ಟಣಗಳ ಜನಸಂಖ್ಯೆಯನ್ನು ನಿಯಂತ್ರಿಸುವುದಲ್ಲದೆ ಕನ್ನಡಿಗರು ಕೈಗಾರಿಕೆ ಮತ್ತು ಉದ್ದಿಮೆಗಳಲ್ಲಿ ಹೆಚ್ಚುಹೆಚ್ಚಾಗಿ ಸೇರುವಂತೆ ಮತ್ತು ನಗರಗಳಲ್ಲಿ ಬಂದು ನೆಲಸುವಂತೆ ಕ್ರಮ ಕೈಕೊಳ್ಳಬೇಕು. ಈ ಬಗ್ಗೆ ತರಬೇತಿ ನೀಡಲು ಹಾಗೂ ಮಾರ್ಗದರ್ಶನ ಮಾಡಲು ವಿಶೇಷ ವ್ಯವಸ್ಥೆ ಮಾಡಿದರಂತೂ ಕನ್ನಡಿಗರ ಹಿತರಕ್ಷಣೆಯ ದೃಷ್ಟಿಯಿಂದ ತುಂಬ ಸಹಾಯಕವಾದೀತು. ಕನ್ನಡಿಗರಾದರೂ ಎಚ್ಚೆತ್ತು ಸಂಘಟನೆ ಮಾಡಿಕೊಳ್ಳಬೇಕು. ಕೇವಲ ಕೂಗಿನಿಂದ ತೃಪ್ತರಾಗದೆ ಒಳ್ಳೆಯ ಫಲಿತಾಂಶಗಳನ್ನು ಪಡೆಯಲು ಎಲ್ಲರೂ ಆಲೋಚಿಸಿ ಕ್ರಮ ಕೈಕೊಳ್ಳಬೇಕು. ಇತರ ಭಾಷಾ ಅಲ್ಪಸಂಖ್ಯಾತರನ್ನು ಶೋಷಣೆಗೀಡುಮಾಡಬೇಕೆಂದಲ್ಲ. ಕನ್ನಡ ರಾಜ್ಯದಲ್ಲಿರುವವರೆಲ್ಲರೂ ಕನ್ನಡಿಗರು ಎಂಬುದನ್ನು ಮನವರಿಕೆ ಮಾಡಿಕೊಡಬೇಕು; ಅವರು ಕನ್ನಡವನ್ನು ಕಲಿಯುವಂತೆ, ಉಪಯೋಗಿಸುವಂತೆ ಪ್ರಭಾವ ಬೀರಬೇಕು. ಕನ್ನಡ ಪರಿಷತ್ತು ಕೂಡ ಈ ವಿಷಯದಲ್ಲಿ ಆಸಕ್ತಿ ವಹಿಸಬಹುದಾಗಿದೆ.

ಕನ್ನಡಿಗರನ್ನು ಎದುರಿಸುತ್ತಿರುವ ಇನ್ನೊಂದು ಭಯಾನಕ ಸಮಸ್ಯೆ ಎಂದರೆ ಮಹಾರಾಷ್ಟ್ರದಲ್ಲಿ ತಲೆ ಎತ್ತಿರುವ 'ಶಿವಸೇನೆ'. ಮಹಾರಾಷ್ಟ್ರದಲ್ಲಿ ಕನ್ನಡಿಗರು ಸುರಕ್ಷತೆಯಿಂದ ಬಾಳುವುದು ಸಾಧ್ಯವಿಲ್ಲವಾದರೆ ಭಾರತ ಒಕ್ಕೂಟವಾದರೂ ಏಕೆ ಬೇಕು ಎಂದು ಪ್ರಶ್ನಿಸಬೇಕಾಗುತ್ತದೆ. ದಕ್ಷಿಣ ಭಾರತೀಯರು ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಮುಂಬಯಿನಲ್ಲಿ ಅನುಭವಿಸುತ್ತಿರುವ ಕಷ್ಟಗಳು ಮುಂದುವರಿಯುವುದಾದರೆ ರಾಜ್ಯಗಳು ಭಾಷಾ ಅಲ್ಪ ಸಂಖ್ಯಾತರನ್ನು ವಿನಿಮಯ ಮಾಡಿಕೊಳ್ಳಬೇಕೆಂಬ ಕಾಲವೂ ಬರಬಹುದು! ಇದು ಕೇವಲ ಕನ್ನಡಿಗರ ಸಮಸ್ಯೆ ಮಾತ್ರವಲ್ಲ; ಭಾರತ ಹಿತಚಿಂತಕರೆಲ್ಲರೂ ಈ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಕನ್ನಡಿಗರು ಕೂಡ ಮಧುರವಾದ ಅಂತರರಾಜ್ಯ ಬಾಂಧವ್ಯಕ್ಕಾಗಿ ಪ್ರಭಾವ ಬೀರುವುದಲ್ಲದೆ ಭಾಷಾ ಅಲ್ಪಸಂಖ್ಯಾತರ ಬಗ್ಗೆ ಭಾರತಾದ್ಯಂತ ಯೋಗ್ಯ ನೀತಿಯ ಅನುಸರಣೆಗಾಗಿ ಒತ್ತಾಯ ಮಾಡುವುದು ಅತ್ಯವಶ್ಯಕವಾಗಿದೆ.

ಕನ್ನಡ ಮಾತಿನ ತಂದೆತಾಯಿಗಳಿಂದ
ಚೆನ್ನ ಚೆನ್ನೆಯರೆಲ್ಲ ಹುಟ್ಟಿದಿರಿ.
ಕನ್ನಡ ಮಾತಿನ ಜೋಗುಳವನು ಕೇಳಿ
ಕನ್ನಡ ತೊಟ್ಟಿಲೊಳಾಡಿದಿರಿ.

ಶಾಂತಕವಿ

ಪತ್ರಿಕಾ ಗೋಷ್ಠಿ

ಅಧ್ಯಕ್ಷ ಪಾ. ವೆಂ. ಆಚಾರ್ಯ ಅವರ ಭಾಷಣ

ಮಿತ್ರರೇ

ಈ ಪತ್ರಿಕಾಗೋಷ್ಠಿಗೆ ನನ್ನನ್ನು ಪರಿಷತ್ತು ಅಧ್ಯಕ್ಷನಾಗಿ ಆರಿಸಿದ್ದು ಬಹಳ ದೊಡ್ಡ ಮನಸ್ಸೇ ಸರಿ. ಈ ಗೌರವಕ್ಕೆ ನಾನು ಯೋಗ್ಯನೇ ಎಂಬ ಬಗ್ಗೆ ಮಾತ್ರ ನನಗೆ ಅಪಧೈರ್ಯವೇ ಇದೆ. ಒಂದು ಕಾರಣವೆಂದರೆ, ನಾನು ವ್ಯವಸ್ಥಿತ ರೀತಿಯಲ್ಲಿ ಪತ್ರಿಕೋದ್ಯೋಗದಲ್ಲಿ ತರಬೇತಾಗಿ ಈ ರಂಗವನ್ನು ಪ್ರವೇಶಿಸಿದವನಲ್ಲ. ಇದೋ, ತಜ್ಞರ ಯುಗ, ಎಲ್ಲ ರಂಗಗಳಲ್ಲಿಯೂ ತರಬೇತಾದವರಿಗೆ ಬೆಲೆ. ಕಿಸೆ ಕತ್ತರಿಸುವವರಿಗೆ ಕೂಡ ತರಬೇತಿ ಶಾಲೆಗಳು ಆಗಿವೆಯೆಂದು ಕೇಳಿದ್ದೇನೆ! ನಿಜವಾಗಿ ಸರಕಾರಿ ಧನಸಹಾಯವಿಲ್ಲದೆ ನಡೆಯುವ ಶಾಲೆಗಳು ನಮ್ಮ ದೇಶದಲ್ಲಿ ಈ ಶಾಲೆಗಳು ಮಾತ್ರವೇ ಎಂದು ತೋರುತ್ತದೆ. ನಾನು ಬಹಳ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಅಭಿರುಚಿಯುಳ್ಳವನಾಗಿದ್ದೆನಾದರೂ ನನ್ನ ಜೀವನದಲ್ಲಿ ಕೆಲಸದಿಂದ ಕೆಲಸಕ್ಕೆ ಬದಲಾಯಿಸುತ್ತಾ ಕೊನೆಗೆ ಈ ಉದ್ಯೋಗದಲ್ಲಿ ಬಂದು ಸೇರಿಕೊಂಡವನು. ಇಲ್ಲಿಂದ ನನ್ನನ್ನು ಯಾರೂ ಹೊರಗೆ ದೂಡದ್ದರಿಂದ ಇದರಲ್ಲಿ ಉಳಿದುಕೊಂಡಿದ್ದೇನೆ. ಇಂದು ಇಲ್ಲಿ ಸೇರಿದವರಲ್ಲಿ, ಇಲ್ಲಿಯ ಚರ್ಚಾಗೋಷ್ಠಿಯಲ್ಲಿ ಭಾಗವಹಿಸುವವರಲ್ಲಿ ವ್ಯವಸ್ಥಿತವಾಗಿ ತರಬೇತಿ ಹೊಂದಿದವರಿರಬಹುದು. ರಾಜಧಾನಿ ಪಟ್ಟಣದ ನೂಕು ನುಗ್ಗಲಿನಲ್ಲಿ ಮೊಣಕೈ ಶಕ್ತಿಯಿಂದ ದಾರಿಮಾಡಿಕೊಂಡು ಕಟ್ಟು ಮಸ್ತಾದ ವ್ಯಾವಹಾರಿಕ ಅನುಭವವನ್ನು ಪಡೆದವರಿರಬಹುದು. ಅವರ ಮುಂದೆ ನಾನೂ ನನ್ನ ಮಾತುಗಳೂ ಸತ್ವಹೀನ ಮೌಲಿಕತಾಶೂನ್ಯವಾಗಿ ಕಾಣಬಹುದು. ಹಾಗೆ ಆದರೆ ಮುಂದಿನ ವರ್ಷ ಹೆಚು ಜಾಗರೂಕತೆಯಿಂದ ಅಧ್ಯಕ್ಷನನ್ನು ಆರಿಸಬೇಕೆಂದು ಪರಿಷತ್ತಿನವರು ಮನಗಾಣುವರೆಂದೂ ಅಷ್ಟು ಮಟ್ಟಿಗೆ ಇದು ಶೈಕ್ಷಣಿಕ ಪ್ರಯೋಜನವನ್ನು ಕೊಡುವುದೆಂದೂ ನಂಬಿದ್ದೇನೆ. ನಮ್ಮ ತಪ್ಪುಗಳಿಗೇ ತಾನೆ ನಾವು ಅನುಭವ ಎಂದು ಹೆಸರಿಡುವುದು?

ಅದಂತಿರಲಿ, ಈ ಗೋಷ್ಠಿಯಲ್ಲಿ ಮಾತಾಡಲಿರುವ ಮಹನೀಯರು ಪತ್ರಿಕೋದ್ಯೋಗಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳನ್ನು ಚರ್ಚಿಸಲಿದ್ದಾರೆಂದು ನನಗೆ ತಿಳಿಸಲಾಗಿದೆ. ಆ ವಿಷಯಗಳಲ್ಲಿ ನನಗೆ ಹೇಳಬೇಕೆನಿಸುವುದನ್ನು ನಾನು ಭಾಷಣದ ಕೊನೆಗೆ ಸಂಕ್ಷೇಪವಾಗಿ ಹೇಳುವೆನು. ಅದಕ್ಕೂ ಮೊದಲು ನಾನು ನನ್ನದೇ ದೃಷ್ಟಿಯಲ್ಲಿ ಕನ್ನಡದ ಪತ್ರಿಕೋದ್ಯಮದ ಕೆಲವು ಸಮಸ್ಯೆಗಳನ್ನು ಪ್ರಸ್ತಾಪಿಸಬೇಕೆನ್ನುತ್ತೇನೆ. ಅವು ನಿಮ್ಮೆಲ್ಲರ ಮತ್ತು ಭಾಷಾ ಪತ್ರಿಕೋದ್ಯಮದಲ್ಲಿ ತೊಡಗಿರುವವರ ಗಮನಕ್ಕೆ ಅರ್ಹವಾಗಿವೆಯೆಂದು ನಾನು ನಂಬಿದ್ದೇನೆ.

ನಾವು ಪ್ರೌಢರಾಗಿದ್ದೇವೆ

ಕನ್ನಡದ ಪತ್ರಿಕೋದ್ಯಮದ ಇತಿಹಾಸ, ಹಿನ್ನೆಲೆಗಳನ್ನು ನಾನಿಲ್ಲಿ ಚರ್ಚಿಸ ಬಯಸುವುದಿಲ್ಲ. ಈ ಮೊದಲು ಅನೇಕರು ಆ ಕೆಲಸ ಮಾಡಿದ್ದಾರೆ. ಅದಕ್ಕೆ ಸೇರಿಸತಕ್ಕದ್ದು ಹೆಚ್ಚೇನೂ ಇಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಪತ್ರಿಕೋದ್ಯಮವು ಈಗ ಮೂವತ್ತು-ನಲವತ್ತು ವರ್ಷಗಳ ಬಿಸಿಲು ಮಳೆಗಾಳಿಗಳನ್ನುಂಡಿದೆ. ಸಾಹಿತ್ಯ ಪತ್ರಿಕೆಗಳನ್ನು ಸೇರಿಸಿಕೊಂಡರೆ ಈ ಉದ್ಯಮದ ಇತಿಹಾಸ ಷಷ್ಟಿ-ಪೂರ್ತಿಯನ್ನೂ ಕಂಡಿದೆ. ಇಷ್ಟೆಲ್ಲಾ ಕಾಲದ ಅನುಭವವನ್ನು ನಾವು ಪಡೆದಿದ್ದೇವೆಂದ ಮೇಲೆ ಕನ್ನಡ ಪತ್ರಿಕೋದ್ಯಮವು ಪ್ರಾಯಕ್ಕೆ ಬಂದಿದೆ ಎಂದು ನಾವು ತಿಳಿದುಕೊಳ್ಳಬೇಕು. ಪ್ರಬುದ್ಧ ಪ್ರಾಯದ ಜವಾಬ್ದಾರಿಗಳನ್ನು ಅರಿತುಕೊಂಡು, ಇತರ ಭಾಷೆಗಳಲ್ಲಿ ಪತ್ರಿಕೆಗಳು ಪೂರೈಸುವ ಹೊಣೆಗಳನ್ನು ನಾವೂ ಪೂರೈಸಲು ಸಿದ್ಧರಾಗಬೇಕು. ಅಪ್ರಾಯಸ್ಥರು ಕೇಳುವ ಸೌಲತ್ತುಗಳನ್ನು, ರಿಯಾಯತಿಗಳನ್ನು ನಾವಿನ್ನು ಕೇಳಬಾರದು. "ಪ್ರೋತ್ಸಾಹ" ಕೊಡಬೇಕು ಎನ್ನುವ ಆ ಅಭಿಮಾನ ಶೂನ್ಯ ಬೇಡಿಕೆಯನ್ನು ತ್ಯಜಿಸಬೇಕು. ಕೇವಲ ಪ್ರೋತ್ಸಾಹದಿಂದ ಯಾರ ಸ್ನಾಯುಗಳೂ ಮಾಂಸಖಂಡಗಳೂ ಬಲವಾಗಲಾರವು. ಬಲವಿಲ್ಲದೆ ಆಧುನಿಕ ಯುಗದಲ್ಲಿ ಬದುಕಲು ಸಾಧ್ಯವಿಲ್ಲ. ನಾವು ನಮ್ಮ ಲೇಖನಿಯ ಸ್ನಾಯುಗಳಿಗೆ ವ್ಯಾಯಾಮ ಕೊಡಬೇಕು. ಈ ದೃಷ್ಟಿಯಿಂದ ಕೆಲವು ವಿಷಯಗಳನ್ನು ಇಲ್ಲಿ ವಿವೇದಿಸಬೇಕೆನ್ನುವುದು

ನನ್ನ ಮನೀಷೆ. ಈ ವರೆಗೆ ನಾವು ಸಾಧಿಸಿದ ಪ್ರಗತಿಯನ್ನು ಹೀಗಳೆಯುವುದು ನನ್ನ ಉದ್ದೇಶವಲ್ಲ. ಕೇವಲ ಕಾವ್ಯ ಸಾಹಿತ್ಯಕ್ಕೆ ಮೀಸಲಾಗಿದ್ದ ಭಾಷೆಯನ್ನು ದಿನ ನಿತ್ಯದ ಸುದ್ದಿ ಸಮಾಚಾರಗಳ ವಾಹನವಾಗಿ ಪರಿವರ್ತಿಸುವ ಮಹಾಕಾರ್ಯವನ್ನು ಕನ್ನಡ ಪತ್ರಿಕೋದ್ಯಮ ಸಾಧಿಸಿದೆ. ಈ ವಿಷಯದಲ್ಲಿ ಪತ್ರಿಕೋದ್ಯಮಿಗಳ ಸಾಧನೆ ಕನ್ನಡವನ್ನು ಕತೆ-ಕಾದಂಬರಿಗಳ ವಾಹನವಾಗಿ ರೂಪಿಸಿದ ನಮ್ಮ ಸಾಹಿತಿಗಳ ಸಾಧನೆಗಿಂತ ಕಡಿಮೆಯಾಗಿಲ್ಲ. ಕನ್ನಡ ಭಾಷೆಗೆ ಒಂದು ಸ್ಥಿತಿಸ್ಥಾಪಕಗುಣವನ್ನು ತಂದುಕೊಡುವುದರಲ್ಲಿ ಪತ್ರಿಕೋದ್ಯಮ ನೆರವಾಗಿದೆ. ನಾವು ಪತ್ರಿಕೋದ್ಯಮಿಗಳು ಬಳಸುವ ಭಾಷೆ ಜನ ಸಾಮಾನ್ಯರ ವ್ಯವಹಾರದಲ್ಲಿ ಎಷ್ಟು ಗಾಢವಾಗಿ ಪ್ರಭಾವ ಬೀರಿದೆ ಎಂದು ನೋಡಿದರೆ ಆಶ್ಚರ್ಯವಾಗುತ್ತದೆ. ಇದು ಬೆನ್ನು ತಟ್ಟಿಕೊಳ್ಳಬೇಕಾದ ಸಂಗತಿ.

ಆದರೆ, ಇದರಿಂದ ನಮ್ಮ ಜವಾಬ್ದಾರಿಯೂ ಹೆಚ್ಚಿದೆ. ಜನರ ಮಾತುಗಳ ಮೇಲೆ, ಯೋಚನೆಯ ರೀತಿ ನೀತಿಗಳ ಮೇಲೆ ನಾವು ಪರಿಣಾಮ ಮಾಡಬಲ್ಲೆವಾದ್ದರಿಂದ ಈ ಪರಿಣಾಮವು ಸರಿಯಾದ ದಿಶೆಯಲ್ಲಿ ಸಾಗುವಂತೆಯೂ ನಾವು ನೋಡಿಕೊಳ್ಳಬೇಕಾಗಿದೆ.

ಇದರಲ್ಲಿ ನಾವು ತಪ್ಪಿದರೆ ನಮ್ಮನ್ನು ನಂಬಿದ ಜನವನ್ನು ಯಾವಾಗಲೂ ಅಪರಿಪಕ್ವವಾಗಿ ಇಟ್ಟಂತಾಗುತ್ತದೆ. ನಾವು ಈವರೆಗೆ ಮಾಡಿ ತೋರಿಸಿದ್ದರೆ ಮೇಲಿಂದ ಜನರು ನಮ್ಮಿಂದ ಇನ್ನಷ್ಟು ನಿರೀಕ್ಷಿಸಲು ತೊಡಗಿದ್ದಾರೆ. ಆ ನಿರೀಕ್ಷೆಯನ್ನು ಪೂರ್ತಿಗೊಳಿಸುವುದು ನಮ್ಮ ಕರ್ತವ್ಯವಾಗುತ್ತದೆ. ಮುಂದೆ ಬರುವ ಮಾತುಗಳು ಈ ಭಾವನೆಯಿಂದ ಮಾಡಿದ ಆತ್ಮವಿಮರ್ಶೆಯೇ ಹೊರತು ಆತ್ಮನಿಂದೆಯಲ್ಲವೆಂದು ಮುಂದಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಬುದ್ಧಿ ಜೀವಿಗಳ ಅತೃಪ್ತಿ

ಕನ್ನಡ ಪತ್ರಿಕೆಗಳನ್ನು, ವಾರ್ತಾಪತ್ರಿಕೆಗಳಿರಲಿ, ಸಾಹಿತ್ಯ ಪತ್ರಿಕೆಗಳಿರಲಿ ಓದುವ ವರ್ಗ ಯಾವುದು? ಇಂಗ್ಲೀಷು ಮತ್ತು ಕನ್ನಡ ಪತ್ರಿಕೆಗಳೆರಡೂ ಏಕ ಕಾಲದಲ್ಲಿ ಲಭ್ಯವಾಗುವ ಸ್ಥಳಗಳಲ್ಲಿ ಸುಶಿಕ್ಷಿತರೂ, ವಿಚಾರಶೀಲರೂ ಇಂಗ್ಲೀಷ್ ಪತ್ರಿಕೆಗಳಿಗೆ ಪ್ರಾಧಾನ್ಯಕೊಡುವುದನ್ನು ನಾವು ನೋಡುತ್ತೇವೆ. ಎಷ್ಟೋ ಜನರು "ಕನ್ನಡ ಪತ್ರಿಕೆಗಳನ್ನು ಹೆಂಗಸರಿಗಾಗಿ ಕೊಳ್ಳುತ್ತೇವೆ" ಎಂದು ಅರ್ಧ ನಾಚಿಕೆ ಬೆರೆತ ದನಿಯಲ್ಲಿ ಹೇಳುವುದನ್ನು ಕೇಳುತ್ತೇವೆ. ಸಾಕಷ್ಟು ವಿಸ್ತಾರವಾದ ರಕ್ಷಿತ ಪುರುಷ ವಾಚಕ ವರ್ಗವೂ ಕನ್ನಡ ಪತ್ರಿಕೆಗಳಿಗಿದೆ, ಎಂದು ಒಪ್ಪಬೇಕು. ಆದರೆ ಬುದ್ಧಿ ಜೀವಿ ವರ್ಗವು ತಾಜಾಸುದ್ದಿಗಳಿಗಾಗಿ ಕನ್ನಡ ಪತ್ರಿಕೆಯನ್ನೋದಿದರೂ ಇಂಗ್ಲೀಷ್ ಪತ್ರಿಕೆಗಳಲ್ಲಿ ಅವುಗಳನ್ನು ಪುನಃ ಓದದೇ ತೃಪ್ತಿ ಹೊಂದುವುದಿಲ್ಲ. ವಿಚಾರ ಪ್ರಚೋದನೆಗಂತೂ ಇಂಗ್ಲೀಷನ್ನು ಇನ್ನೂ ಹೆಚ್ಚು ಆಶ್ರಯಿಸುತ್ತಾರೆ.

ಈ ಜನರು ಸ್ವಾಭಿಮಾನ ಶೂನ್ಯರು, ಇಂಗ್ಲೀಷ್ ದಾಸರು ಎಂದು ಹೇಳಿ ನಾವು ಆತ್ಮ ಸಮಾಧಾನವನ್ನು ಕಲ್ಪಿಸಿಕೊಳ್ಳುವುದು ಸುಲಭ. ಆದರೆ ಅದು ಅಷ್ಟು ಸರಿಯಲ್ಲ. ಇಂಗ್ಲೀಷ್ ಪತ್ರಿಕೆಗಳಲ್ಲಿ ಅಷ್ಟೇ ಪುಟಗಳಲ್ಲಿ ಓದುಗರಿಗೆ ದೊರಕಬಹುದಾದ ಖಚಿತ ವಿವರಗಳಾಗಲಿ ವಿಷಯ ವೈವಿಧ್ಯವಾಗಲಿ ಕನ್ನಡ ಪತ್ರಿಕೆಗಳಲ್ಲಿ ಅಪರೂಪವಾಗಿಯೇ ದೊರೆಯುತ್ತಿವಷ್ಟೇ. ಭಾಷೆಯಲ್ಲಿ ಏಕರೂಪಕತೆಯಾಗಲೀ ನಿಷ್ಕೃಷ್ಟತೆಯಾಗಲೀ ಇಲ್ಲವೆಂಬ ದೂರು ಇದೆ.

ನಮ್ಮ ವೃತ್ತಿಯಲ್ಲಿರುವ ಕೆಲ ಕಷ್ಟಗಳನ್ನು ವಿವೇಚಿಸುವ. ಕನ್ನಡ ಪತ್ರಿಕೋದ್ಯಮದ ಇಂದಿನ ಸ್ಥಿತಿಯಲ್ಲಿ ಕನ್ನಡ ಪತ್ರಿಕೋದ್ಯೋಗಿ ಇಂಗ್ಲೀಷ್ ಪತ್ರಿಕೋದ್ಯೋಗಿಗಿಂತಲೂ ಹೆಚ್ಚು ಯೋಗ್ಯವಂತನಿರಬೇಕಾಗುತ್ತದೆ. ಇಂಗ್ಲೀಷ್ ಪತ್ರಿಕೋದ್ಯಮದ ಉಪಸಂಪಾದಕನ ಮೇಜಿಗೆ ಹೆಚ್ಚಿನ ಸುದ್ದಿಗಳು ಶುದ್ಧವಾದ ಇಂಗ್ಲೀಷಿನಲ್ಲಿಯೇ ಬರುತ್ತಿವೆ. ಕನ್ನಡದಲ್ಲಿ ಹಾಗಲ್ಲ. ಅವನ ಮೇಜಿಗೆ ಬರತಕ್ಕವು ಇಂಗ್ಲೀಷ್ ಸುದ್ದಿಗಳು. ಅವುಗಳನ್ನು ಕನ್ನಡಕ್ಕೆ ಪರಿವರ್ತಿಸಿ ಅವನು ಕೊಡಬೇಕು. ಅವನಿಗೆ ಭಾಷೆಗಳ ಸರಿಯಾದ ಜ್ಞಾನಬೇಕು. ವೈಜ್ಞಾನಿಕ ಅಥವಾ ತಾಂತ್ರಿಕ ವಿಷಯಗಳು ಸ್ವಲ್ಪವೂ ಜ್ಞಾನವಿಲ್ಲದಿದ್ದರೆ ಅವನ ಭಾಷಾಂತರವು ಯದ್ವಾ ತದ್ವಾ ಆಗಬಹುದು. ಇಂಗ್ಲೀಷ ಉಪಸಂಪಾದಕನು ಸುದ್ದಿಯನ್ನು ಇದ್ದಕ್ಕಿದ್ದಂತೆ ಇಳಿ ಈ ಇಕ್ಕಟ್ಟಿನಿಂದ ನುಣುಚಿಕೊಳ್ಳಬಲ್ಲ. ಕನ್ನಡದವನಿ ಈ ಉಪಾಯದ ದಾರಿ ಲಭ್ಯವಾಗಿಲ್ಲ.

ಭಾಷಾಶುದ್ಧಿ

ಆದರೆ ಕನ್ನಡ ಪತ್ರಿಕೋದ್ಯಮವು ತನ್ನ ಈ ಹೆಚ್ಚಿ ಹೊಣೆಯನ್ನು ಹೇಗೆ ನಿರ್ವಹಿಸುತ್ತಿದೆ? ಅನೇಕವೇ ಬಹಳ ಅಸಡ್ಡೆಯಿಂದ ಎಂದು ಹೇಳಬೇಕಾಗುತ್ತದ ಇಂಗ್ಲೀಷ್ ವ್ಯಾಕರಣದ ಸರಿಯಾದ ಜ್ಞಾನವಿಲ್ಲದೆ ಅದ ಸ್ಪೆಲ್ಲಿಂಗುಗಳ ತಿಳುವಳಿಕೆ ಇಲ್ಲದೇ ಯಾರೂ ಇಂಗ್ಲೀಷ ಪತ್ರಿಕೋದ್ಯಮದಲ್ಲಿ ಪ್ರವೇಶಿಸುವ ದಾಷ್ಟ್ಯ ತೋರಿಸ

ಕ್ಕಿಲ್ಲ. ಆದರೆ ಕನ್ನಡದಲ್ಲಿ ಕೆಲವರು ಶುದ್ಧವಾಗಿ ಬರೆಯ ಬೇಕೆಂಬ ಅವಶ್ಯಕತೆಯನ್ನು ಅಷ್ಟಾಗಿ ಮನಸ್ಸಿಗೆ ತೆಗೆದು ಕೊಂಡಹಾಗಿಲ್ಲ. "ಉಚ್ಚ" "ಉಚ್ಛ"ಗಳಲ್ಲಿ ಯಾವುದು ಸರಿಯೆಂದು ತಿಳಿದು ಕೊಳ್ಳುವ ಗೋಜಿಗೆ ಅನೇಕರು ಹೋಗುವುದಿಲ್ಲ. ಕೆಲವೊಮ್ಮೆ ಬಹುವಚನದ ಕರ್ತೃ ಪದದಿಂದ ಪ್ರಾರಂಭವಾದ ವಾಕ್ಯವನ್ನು ಬಹುವಚನದ ಕ್ರಿಯಾಪದದಿಂದಲೇ ಮುಗಿಸಬೇಕೆಂಬ ಅಗತ್ಯವೂ ನಮಗೆ ಕಾಣುತ್ತಿಲ್ಲ. "ಉಚ್ಛ" ಎಂದರೇನು ತಪ್ಪು? ಜನರಿಗೆ ತಿಳಿದರಾಯಿತು, ಎಂದು ವಾದಿಸುವವರನ್ನು ನಾನು ಕಂಡಿದ್ದೇನೆ. ಆದರೆ ಅಂಥವರೇ ಇಂಗ್ಲೀಷ್ ಬರೆಯುವಾಗ ವ್ಯಾಕರಣ, ಸ್ಪೆಲ್ಲಿಂಗುಗಳ ಬಗ್ಗೆ ವಿಶೇಷ ಜಾಗರೂಕರಾಗಿರುವುದನ್ನು ಕಂಡಿದ್ದೇನೆ. ನಾನು ಕೇಶಿರಾಜನ ಭಕ್ತನಲ್ಲ. ಆದರೆ ಭಾಷೆಯಲ್ಲಿ ಒಂದು ಶಿಸ್ತು ಇಲ್ಲದಿದ್ದರೆ ಅದೆಂದೂ ಗೌರವಾರ್ಹವಾಗುವುದಿಲ್ಲ. ಅದರಲ್ಲಿ ಖಚಿತಾರ್ಥಗಳನ್ನು ವ್ಯಕ್ತಪಡಿಸುವುದೂ ಸಾಧ್ಯವಿಲ್ಲ. ಎಲ್ಲರೂ ಒಪ್ಪುವ ಕೆಲ ನಿಯಮಗಳಿಗೆ ನಾವು ತಲೆವಾಗಲೇ ಬೇಕು.

ವಿಜ್ಞಾನ ಮತ್ತು ಇತರ ತಾಂತ್ರಿಕ ವಿಷಯಗಳನ್ನು ನಿರ್ವಹಿಸುವ ಸಮಸ್ಯೆ ಸ್ವಲ್ಪ ಭಿನ್ನವಾದುದು. ಇವುಗಳನ್ನು ತೃಪ್ತಿಕರವಾಗಿ ಪೂರೈಸಲು ಸಿಬ್ಬಂದಿ ಭರ್ತಿಯಲ್ಲಿ ಧೋರಣೆ ಬದಲಿಸಬೇಕು. ಆದಷ್ಟುಮಟ್ಟಿಗೆ ಪತ್ರಿಕಾ ಸಿಬ್ಬಂದಿಯ ಸದಸ್ಯರ ಶೈಕ್ಷಣಿಕ ವಿಶೇಷಜ್ಞತೆಯಲ್ಲಿ ವೈವಿಧ್ಯವಿರುವುದಾದರೆ ವಿಜ್ಞಾನ, ಅರ್ಥಶಾಸ್ತ್ರ, ಇತಿಹಾಸ, ರಾಜಕೀಯ ಶಾಸ್ತ್ರ ಮೊದಲಾದವುಗಳ ಪದವೀಧರರು ಸರಿಬೆರೆತಿರುವಂತೆ ಸಿಬ್ಬಂದಿಯ ರಚನೆಯಿದ್ದರೆ—ಹೆಚ್ಚು ನಿರ್ದುಷ್ಟವಾದ ರೀತಿಯಲ್ಲಿ ಈ ವಿಷಯಗಳನ್ನು ಕನ್ನಡ ಪತ್ರಿಕೆಗಳೂ ವಿಸ್ತರಿಸಬಲ್ಲುವು.

ತಾಂತ್ರಿಕ ಶಬ್ದಗಳ ಮತ್ತು ಭಾಷೆಯ ಏಕರೂಪತೆಯ ಸಮಸ್ಯೆಯೂ ಕನ್ನಡ ಪತ್ರಿಕೋದ್ಯೋಗದ ಪ್ರಬುದ್ಧತೆಗೆ ಅಡ್ಡ ಬರುತ್ತಿದೆ. ತಾಂತ್ರಿಕ ಶಬ್ದಗಳ ಸಮಸ್ಯೆಯನ್ನು ಯನ್ನು ಬಿಡಿಸುವಯತ್ನ ಕೆಲವರ್ಷಗಳಿಂದ ನಡೆಯುತ್ತಿರುವುದು ಸಂತೋಷ. ಈಗಾಗಲೇ ಸಂಯುಕ್ತ ಕರ್ನಾಟಕ ಪತ್ರಿಕೆಯವರು ಒಂದು ಚಿಕ್ಕ ಶಬ್ದಕೋಶವನ್ನು ಪ್ರಕಟಿಸಿದ್ದಾರೆ. ಅದರ ವ್ಯಾಪ್ತಿ, ಗಾತ್ರ ಹೆಚ್ಚಬೇಕು, ಸಾರ್ವತ್ರಿಕ ಬಳಕೆಯಾಗಬೇಕು. ಆಗ ಕರ್ನಾಟಕದಲ್ಲೆಲ್ಲ ಪದಗಳನ್ನು ನಿಶ್ಚಿತವಾದ ಅರ್ಥದಲ್ಲಿ ಬಳಸಿದಂತಾಗಿ ಓದುಗರ ಗೊಂದಲವನ್ನು ನಿವಾರಿಸಿತು.

ಶೈಲಿಭೇದ

ಕನ್ನಡ ಪತ್ರಿಕೋದ್ಯಮದಲ್ಲಿ ಈಗ ದಕ್ಷಿಣ ಉತ್ತರ ಹೀಗೆ ಎರಡು ಶೈಲಿಗಳು ಮುಖ್ಯವಾಗಿ ಬಳಕೆಯಲ್ಲಿವೆ. ಇವುಗಳನ್ನುಒಮ್ಮೆಲೇ ನಿವಾರಿಸಲು ಸಾಧ್ಯವಾಗಲಾರದು. ನಿವಾರಿಸಿದರೆ ಆಯಾ ಶೈಲಿಗಳಿಗೆ ಒಗ್ಗಿದ ಓದುಗರಿಗೆ ತೊಂದರೆಯಾದೀತು. ಆದರೆ ಶೈಲಿಯ ಏಕೀಕರಣದ ಪ್ರಯತ್ನಗಳು ಅತ್ಯಗತ್ಯವಾಗಿವೆ. ಎರಡೂ ಶೈಲಿಗಳು ಪರಸ್ಪರ ಸಮಾವೇಶ ಹೊಂದಿದರೆ ಕನ್ನಡಕ್ಕೆ ಹೆಚ್ಚು ವೈವಿಧ್ಯ ಪೂರ್ಣ ಪ್ರಯೋಗಗಳು, ಹೆಚ್ಚು ಸೂಕ್ಷ್ಮವಾದ ಅರ್ಥವ್ಯಂಜನಶಕ್ತಿಉಂಟಾಗಬಲ್ಲದು. ಈ ಸಂಬಂಧದಲ್ಲಿ ಒಂದು ಚಿಕ್ಕ ಸೂಚನೆಯನ್ನು ದೊಡ್ಡ ಕನ್ನಡ ಪತ್ರಿಕೆಗಳ ಸಂಚಾಲಕರಿಗೆ ಮಾಡಬಹುದೇ? ಎಲ್ಲ ಪತ್ರಿಕೆಗಳೂ ಸಾಮಾನ್ಯವಾಗಿ ಚಂದಾದಾರರಾಗಿರುವ ಸುದ್ದಿ ಸಂಸ್ಥೆಗಳಿಂದ—ಉದಾಹರಣೆಗೆ ಪಿ. ಟಿ. ಐ. ದೊರಕಿಸುವ ಸುದ್ದಿಗಳ ಕನ್ನಡ ಭಾಷಾಂತರಕ್ಕೆ ಒಂದು ಕೇಂದ್ರ ಸಂಸ್ಥೆ ಸ್ಥಾಪಿಸಿದರೆ ಹೇಗೆ? ಹೀಗೆ ಒಂದೇ ಕಡೆ ಭಾಷಾಂತರವಾದರೆ ಶೈಲಿಯ ಏಕರೂಪತೆಗೂ ಅನುಕೂಲವಾಗುತ್ತದೆ. ಹೆಚ್ಚು ತಜ್ಞ ಭಾಂಷಾಂತರವೂ ಆದೀತು ಅದು ಕನ್ನಡ ಪತ್ರಿಕಾ ಕಚೇರಿಗಳ ಉಪಸಂಪಾದಕರನ್ನು ಇಂಗ್ಲಿಷ್ ಉಪಸಂಪಾದಕರ ಸ್ಥಿತಿಗೆ ಏರಿಸಿ ಹೆಚ್ಚು ದಕ್ಷವಾಗಿ ಕೆಲಸ ಮಾಡಲು ನೆರವಾದೀತು. ಹೀಗೆ ಈ ಕೇಂದ್ರೀಕೃತ ಭಾಷಾಂತರವನ್ನು ರೋಮನ್ ಲಿಪಿಯಲ್ಲಿ ಟೆಲಿಪ್ರಿಂಟರುಗಳಿಂದ ವಿವಿಧ ಪತ್ರಿಕೆಗಳಿಗೆ ರವಾನಿಸಬಹುದು.

ಪ್ರೌಢ ವಿಷಯಗಳು

ಕನ್ನಡ ಪತ್ರಿಕೆಗಳಲ್ಲಿ ರಾಜಕೀಯ, ಆರ್ಥಿಕ, ವೈಜ್ಞಾನಿಕ ಮೊದಲಾದ ವಿಷಯಗಳಲ್ಲಿ ಈಗಿರುವುದಕ್ಕಿಂತ ಉನ್ನತತರ ಮಟ್ಟದಲ್ಲಿ ವಿಚಾರಗಳು ಪ್ರಕಟವಾಗಬೇಕು. ಆಗಮಾತ್ರ ಅವು ಬುದ್ಧಿಜೀವಿಗಳಿಂದ ಮನ್ನಣೆ ಹೊಂದಬಲ್ಲವು. ಈ ಅಗತ್ಯದ ಅರಿವು ಈಗಾಗಲೇ ಪತ್ರಿಕೆಗಳಲ್ಲಿ ಮೂಡುತ್ತಿರುವುದು ಸಂತೋಷ. ಸ್ಥಳ ಸಂಕೋಚ ಮೊದಲಾದ ಕಾರಣಗಳಿಂದ ಈ ಕಲ್ಪನೆಗಳನ್ನು ರಭಸದಿಂದ ಮುಂದೊತ್ತುವುದು ಸುಲಭವಲ್ಲವೆಂದು ನಾನು ಬಲ್ಲೆ. ಒಂದು ದೊಡ್ಡ ತೊಂದರೆಯೆಂದರೆ, ಕನ್ನಡದಲ್ಲೇ ಈ ವಿಷಯಗಳನ್ನು ಬರೆಯುವ ತಜ್ಞರ ಕೊರತೆ. ಮರಾಠಿ ಮೊದಲಾದ ಕೆಲ ನೆರೆ ಭಾಷೆಗಳಲ್ಲಿ ವಕೀಲರು, ವಿಜ್ಞಾನಿಗಳು, ಒಳ್ಳೆ ರಾಜಕಾರಣಜ್ಞರೇ ಮೊದಲಾದವರು

ಅವರವರ ಭಾಷೆಯಲ್ಲಿ ಸ್ವತಂತ್ರವಾಗಿ ಅವರವರ ವಿಶೇಷ ವಿಷಯಗಳನ್ನು ಬರೆಯುತ್ತಾರೆ. ಆ ಪ್ರಮಾಣದಲ್ಲಿ ಕನ್ನಡ ದಲ್ಲಿ ಆಯಾ ವರ್ಗದವರು ಬರೆಯುತ್ತಿಲ್ಲ. ಲಲಿತ ಸಾಹಿತ್ಯ ದಲ್ಲಷ್ಟೆ ನಮ್ಮ ಓಡಾಟ ಹೆಚ್ಚಾಗಿದೆ. ಗಂಭೀರ ವಿಷಯಗಳ ಮೇಲೆ ಬರೆಯುವ ಯತ್ನಗಳಿಗೆ ಹೆಚ್ಚು ಚಾಲನೆ ಕೊಡು ವುದು ಅಗತ್ಯವಾಗಿದೆ. ಹೀಗಾದಾಗ ಮಾತ್ರವೇ ನಮ್ಮ ಪತ್ರಿಕೆಗಳು ನಿಜವಾಗಿ ಪ್ರಾಯಪ್ರಬುದ್ಧ ವಾದಂತೆ; ಕನ್ನಡ ಜನಕ್ಕೂ ಆಗತಾನೇ ಪ್ರಬುದ್ಧತನ ಬಂದಂತೆ.

ಪರಾಜಯ ಭಾವನೆ ಬೇಡ

ಕನ್ನಡದಲ್ಲಿ ಇಂಥ ತಾಂತ್ರಿಕ ವಿಷಯಗಳನ್ನು ಬರೆಯ ಲಾಗುವುದಿಲ್ಲ. ಬರೆದರೆ ಜನರಿಗೆ ತಿಳಿಯುವುದಿಲ್ಲ, ಇಂಗ್ಲಿಷಿನಲ್ಲಿದ್ದುದಕ್ಕಿಂತಲೂ ಕನ್ನಡ ತಾಂತ್ರಿಕ ಲೇಖನ ಗಳು ಓದಲು ಕಷ್ಟವಾಗಿರುತ್ತವೆ ಎಂಬ ವಾದವನ್ನು ಇನ್ನೂ ಕೆಲವರು ಮುಂದೊಡ್ಡುತ್ತಿರುವುದನ್ನು ನೋಡಿ ಸೋಜಿಗವಾಗುತ್ತದೆ. ಪಾರಿಭಾಷಿಕ ಶಬ್ದಗಳ ಕೊರತೆಯ ಮಾತೂ ಕೇಳಬರುತ್ತಿದೆ. ಇವೆಲ್ಲವುಗಳನ್ನು ಚರ್ಚಿಸು ವುದು ಇಲ್ಲಿ ಪ್ರಸಕ್ತವಲ್ಲವೆಂದು ತೋರುತ್ತದೆ. ಆದರೆ ಕನ್ನಡ ಲೇಖನಗಳು ತಿಳಿಯುವುದಿಲ್ಲ ಎನ್ನುವವರು ಇಂಗ್ಲೀಷನ್ನು ಚೆನ್ನಾಗಿ ಬಲ್ಲವರು. ಇಂಗ್ಲೀಷಿನಲ್ಲಿ ಓದಿ ಓದಿ ಅದಕ್ಕೇ ಮನಸ್ಸನ್ನು ಪಳಗಿಸಿಕೊಂಡವರು. ಮಾನವ ಮನಸ್ಸು ರೂಢಿಬದ್ಧವಾದದ್ದು. ಸವೆದ ಹಾದಿ ತುಳಿಯು ವಂಥಾದ್ದು. ನನ್ನದೇ ಉದಾಹರಣೆ ಕೊಡುತ್ತೇನೆ. ನಾನು ಗಣಿತವನ್ನು ಹೈಸ್ಕೂಲಿನಲ್ಲಿ ಇಂಗ್ಲಿಷಿನಲ್ಲಿ ಕಲಿ ತಿದ್ದೆ. ನನ್ನ ಮಕ್ಕಳು ಕನ್ನಡ ಗಣಿತ ಪುಸ್ತಕದಲ್ಲಿ "ಒಂದು ಸರಳರೇಖೆಯು ಇನ್ನೊಂದು ಸರಳರೇಖೆಯ ಮೇಲೆ ನಿಂತರೆ" ಎಂದು ಬರೆದುದನ್ನೋದುವಾಗ ನನ ಗೇಕೋ ಇದು ಬಲು ಗಡಚು ಎನಿಸುತ್ತದೆ. ಆದರೆ ನನ್ನ ಮಕ್ಕಳು ಅದನ್ನು ಲೀಲಾಜಾಲವಾಗಿ ಸ್ವಾಧೀನಪಡಿಸಿ ಕೊಂಡಿದ್ದಾರೆ. ಇಂಗ್ಲಿಷಿನ ಪರಿಚಯವುಳ್ಳವರು ರಾಜ ಕೀಯವನ್ನು ಚರ್ಚಿಸುವಾಗ ಇಂಗ್ಲಿಷ್ ಪದಗಳನ್ನೇ ಬಳಸುತ್ತೇವೆ. ಆದರೆ ರೈಲಿನಲ್ಲೋ ಬಸ್ಸಿನಲ್ಲೋ ನೀವು ಕಿವಿಗೊಟ್ಟು ಆಲಿಸುತ್ತಿದ್ದರೆ ಕನ್ನಡ ಪತ್ರಿಕೆಗಳಲ್ಲಿ ಬರುವ ಪಾರಿಭಾಷಿಕ ಪದಗಳನ್ನೇ ಉಪಯೋಗಿಸಿ ಕನ್ನಡ ಓದು ಗರು ಚರ್ಚಿಸುವುದನ್ನು ಕೇಳುತ್ತೀರಿ. ಅವರಿಗೆ ಅದೇ ಸ್ವಾಭಾವಿಕ ಎನಿಸುತ್ತದೆ. ಪದಗಳು ನಾವು ಅವಕ್ಕೆ ಕೊಡುವ ಅರ್ಥಶಕ್ತಿಯನ್ನು ಪಡೆಯುತ್ತವೆ. ಆ ಅರ್ಥ ಶಕ್ತಿಯು ನಾವು ಅವುಗಳನ್ನು ಏಕಪ್ರಕಾರವಾಗಿ ಅದೇ ಅರ್ಥದಲ್ಲಿ ಬಳಸುವುದನ್ನು ಅವಲಂಬಿಸುತ್ತದೆ. ಆ ಕಾರಣದಿಂದಲೇ ಪದಗಳನ್ನು ಲಾಘವವಾಗಿ ಬಳಸ ಬಾರದು ಎನ್ನುವುದು.

ಕನ್ನಡದಲ್ಲಿ ವೈಜ್ಞಾನಿಕ ಅಥವಾ ತಾಂತ್ರಿಕ ವಿಷಯ ಗಳನ್ನು ಬರೆಯಲಾಗುವುದಿಲ್ಲ ಎನ್ನುವುದು ಸರಿಯಲ್ಲ. ಕೆಲವೇ ಶತಮಾನಗಳ ಹಿಂದೆ ಯೂರೋಪಿನ ಭಾಷೆಗಳ ಬಗ್ಗೆಯೂ ಇದೇ ಮಾತು ಕೇಳಿಬರುತ್ತಿತ್ತು. ಲ್ಯಾಟಿನ್ನಿ ನಲ್ಲಿ ಮಾತ್ರ ಖಚಿತಾರ್ಥದಲ್ಲಿ ಬರೆಯಬಹುದು ಎಂದು ಹೇಳುವವರಿದ್ದರು. ಈಗ ಯಾರೂ ಹೀಗೆನ್ನುವುದಿಲ್ಲ.

ಕನ್ನಡದ ಜಾಯಮಾನ

ಈ ವಿಚಾರದಲ್ಲಿ ಒಂದು ಮಾತು ಗಮನಾರ್ಹ. ಇಂಗ್ಲಿಷಿನಲ್ಲಿ ಬರೆದಂತೆಯೇ ಕನ್ನಡದಲ್ಲಿ ಬರೆಯುವುದು ಸಾಧ್ಯವಿಲ್ಲ. ಇಂಗ್ಲೀಷಿನಲ್ಲೇ ವಿಚಾರಮಾಡಿ ಕನ್ನಡ ದಲ್ಲಿ ಅದೇ ಧಾರೆಯಲ್ಲಿ ಬರೆಯ ಹೋದರೆ ಪರಿಣಾಮ ಖಂಡಿತವಾಗಿ ದುಃಖದಾಯಕವಾಗುವುದು. ಇಂಗ್ಲೀಷಿನ ಪ್ರಕೃತಿಯೇ ಬೇರೆ ಕನ್ನಡದ್ದೇ ಬೇರೆ. ಆರ್ಯ ಭಾಷೆಗಳಲ್ಲಿ ರುವ ಸಂಕ್ಲಿಷ್ಟ ವಾಕ್ಯಸರಣಿ ಕನ್ನಡದಲ್ಲಿ ಸಾಧ್ಯವಿಲ್ಲ. ನಾವು ಚಿಕ್ಕವಾಕ್ಯಗಳಲ್ಲಿ ವಿಷಯವಿವೇಚನೆ ಮಾಡಬೇಕಾ ಗುತ್ತದೆ. ಒಟ್ಟಿನ ಮೇಲೆ ಕನ್ನಡದಲ್ಲಿ ಬರೆಯುವವರು ಕನ್ನಡದ ಜಾಯಮಾನವನ್ನು ಅರಿತು ಬರೆದರೆ ಎಲ್ಲವೂ ಸರಿಹೋಗುತ್ತದೆ. ಮುಖ್ಯವಾಗಿ ಲೇಖಕನಿಗೆ ವಿಷಯದ ಸರಿಯಾದ ಜ್ಞಾನ ಬೇಕು ಮತ್ತು ಕನ್ನಡದ ಮೇಲೆ ಪ್ರಭುತ್ವ ಬೇಕು. ಈಗಾಗುತ್ತಿರುವ ಮುಖ್ಯ ತೊಂದರೆ ಇದು: ಭಾಷಾಪ್ರಭುತ್ವ ಉಳ್ಳವರಿಗೆ ವಿಷಯ ಪ್ರವೇಶದ ಕೊರತೆ ಇದೆ. ವಿಷಯ ಬಲ್ಲವರಿಗೆ ಕನ್ನಡದಲ್ಲಿ ಬರೆದು ಅಭ್ಯಾಸವಿಲ್ಲ. ಪ್ರೊಫೆಸರ್ ಆರ್. ಎಲ್. ನರಸಿಂಹಯ್ಯ ನವರು, ಡಾಕ್ಟರ್ ಶಿವರಾಮ ಕಾರಂತರು ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಬರೆದರೆ ಏನೂ ಜಟಿಲವೆನಿಸು ವುದಿಲ್ಲ. ಯತ್ನಿಸಿದರೆ ಇದು ಇತರರಿಗೂ ಸಾಧ್ಯವುಂಟು. ಸಾಧನೆ ಬೇಕು. ಇಷ್ಟೂ ಮೀರಿ ಇಂಗ್ಲಿಷಿನಲ್ಲಿ ಬರುವ ವಿಷಯಗಳಾದರೂ ಇಂಗ್ಲಿಷ್ ಬಲ್ಲ ಎಲ್ಲರಿಗೂ ಅರ್ಥ ವಾಗುತ್ತದೆಯೇ? ಇಲ್ಲ. ಪರಮಾಣು ಎಂದರೇನೆಂದು ಗೊತ್ತಿಲ್ಲದವನಿಗೆ ಅದನ್ನು "ಆಟಂ" ಎಂದು ಕರೆದರೂ ಅಷ್ಟೇ, "ಪರಮಾಣು" ಎಂದರೂ ಅಷ್ಟೇ. "ಆಟಂ" ಎಂದರೆ ತನಗೆ ತಿಳಿಯುತ್ತದೆ ಎಂದು ಅವನು ತಿಳಿದು ಕೊಂಡಿದ್ದಾನೆ ಅಷ್ಟೇ. ಎಲ್ಲ ವಿಷಯಗಳಿಗೂ ಈ ಮಾತು ಅನ್ವಯಿಸುತ್ತದೆ.

ಸ್ವಲ್ಪ ತೊಂದರೆ ಉದ್ಭವಿಸುವುದು ಪದಗಳ ಬಳಕೆಯಲ್ಲಿ. ಕನ್ನಡ ವಿಜ್ಞಾನ ಪುಸ್ತಕಗಳು "ಆಟಂ" ಎಂಬುದಕ್ಕೆ "ಪರಮಾಣು" ಎಂಬ ಪದವನ್ನು ಬಳಸುತ್ತವೆ. ಇದು ಹಿಂದಿನಿಂದಲೂ ಬಂದ ಶಬ್ದ. ಆದರೆ ಪತ್ರಿಕೆಗಳಲ್ಲಿ ಕೆಲವರು "ಆಟಂ" ಗೆ "ಅಣು" ಎಂಬ ಪದವನ್ನು ಬಳಸುತ್ತಾರೆ. "ಅಣು" ಎಂದರೆ "ಮಾಲಿಕ್ಯೂಲ್" ಎಂದು ಪಠ್ಯಪುಸ್ತಕಗಳು ಹೇಳುತ್ತವೆ. ಹೀಗೆ ಪತ್ರಿಕಾ ಪ್ರಯೋಗಗಳೂ ಪಠ್ಯಪುಸ್ತಕ ಪ್ರಯೋಗಗಳೂ ಒಂದಕ್ಕೊಂದು ಹೊಂದದೆ ಓದುಗನಿಗೆ ಭ್ರಮೆಯಾಗುತ್ತದೆ. ಈ ಬಗೆಯಾದ ಲಾಘವವಾದ ಪ್ರಯೋಗಗಳನ್ನು ನಾವು ಪತ್ರಿಕಾಕರ್ತರು ಬಿಟ್ಟರೆ ನಮ್ಮ ಭಾಷೆಯ ಪ್ರಭಾವ ಹೆಚ್ಚುತ್ತದೆಂದು ಸೂಚಿಸುತ್ತೇನೆ.

ಈಚೆಗಿನ ಪ್ರಗತಿ

ಇಂಥ ಕೆಲ ಆಕ್ಷೇಪಗಳನ್ನು ನಾವು ಮಾಡಬಹುದಾದರೂ ಕನ್ನಡ ಪತ್ರಿಕೆಗಳಲ್ಲಿ ಈಗ ವೈವಿಧ್ಯ, ಪ್ರೌಢತೆ ಹೆಚ್ಚಿದೆ ಎಂಬುದನ್ನು ಗಮನಿಸಬೇಕು. ನಿತ್ಯದ ರಾಜಕೀಯ ಮತ್ತು ಆರ್ಥಿಕ ಆಗುಹೋಗುಗಳ ಬಗ್ಗೆ ತಿಳಿಯಾಗಿ, ಗಂಭೀರವಾಗಿ ತಿಳವಳಿಕೆ ಕೊಡುವ ಲೇಖಗಳು ಬರತೊಡಗಿವೆ. ಸಂಗೀತ ಕಚೇರಿ, ಚಿತ್ರಕಲಾ ಪ್ರದರ್ಶನ ಮೊದಲಾದವುಗಳ ಬಗ್ಗೆ ಪ್ರೌಢವಾದ ವಿಮರ್ಶೆಗಳನ್ನು ಕನ್ನಡ ಪತ್ರಿಕೆಗಳಲ್ಲಿ ಕಂಡು ಸಂತೋಷಪಡಬಹುದು. ಇದು ನಮ್ಮ ಜೀವನದ ಮತ್ತು ವಿಚಾರಪ್ರಪಂಚದ ವಿಸ್ತಾರ ಹೆಚ್ಚುತ್ತಿರುವುದರ ದ್ಯೋತಕವಾಗಿದೆ. ಸಂಪಾದಕೀಯ ಲೇಖನಗಳಲ್ಲಿ ಅಭಿಪ್ರಾಯಗಳನ್ನು ನೇರವಾಗಿ ನಿಷ್ಕೃಷ್ಟವಾಗಿ ಹೇಳುವ ಪ್ರವೃತ್ತಿ ಹೆಚ್ಚುತ್ತಿದೆ.

ಈ ಅಂಶಗಳಲ್ಲಿ ನಾವು ಕೆಲ ವಿಧಾನಗಳಿಂದ ಮಟ್ಟವನ್ನು ಇನ್ನೂ ಹೆಚ್ಚು ಏರಿಸಿಕೊಳ್ಳುವುದು ಸಾಧ್ಯವಿದೆ. ಸಂಪಾದಕೀಯ ವರ್ಗದಲ್ಲಿ ವಿವಿಧ ವಿಷಯಗಳಲ್ಲಿ ಸಾಕಷ್ಟು ಜ್ಞಾನವನ್ನು ಹೊಂದಿದ ಜನರಿರುವಂತೆ ಸಿಬ್ಬಂದಿ ಭರ್ತಿಯಾಗುವುದೊಳಿತೆಂದು ಈ ಮೊದಲೇ ಸೂಚಿಸಿದ್ದೇವೆ. ಅವರವರ ವಿಷಯದಲ್ಲಿ ಅವರ ಜ್ಞಾನ ಅದ್ಯಯಾವತ್ up-to date ಆಗಿರುವಂತೆ ನಿರಂತರವಾಗಿ ಅವರಿಗೆ ಪುಸ್ತಕಗಳ, ಪತ್ರಿಕೆಗಳ ಪೂರೈಕೆಯಾಗಬೇಕು. ಆ ವಿಷಯದಲ್ಲಿ ಅಭ್ಯಾಸಮಾಡಲು ಅವರಿಗೆ ಸೌಕರ್ಯಗಳೂ ಪ್ರಚೋದನೆಯೂ ಬೇಕು. ('ಪ್ರೋತ್ಸಾಹ' ಶಬ್ದವನ್ನು ನಾನು ಬೇಕೆಂದೇ ಬಿಟ್ಟಿದ್ದೇನೆ.) ಹೀಗಾದರೆ ಪತ್ರಿಕಾ ಕಚೇರಿಗಳಲ್ಲ ಹೆಚ್ಚಿನ ವಿಷಯಗಳ ಬಗ್ಗೆ ಪ್ರೌಢ ಸಂಪಾದಕೀಯ ಬರೆಯುವುದಕ್ಕೆ ಅನುಕೂಲವಾಗಬಹುದು. ವಿಶೇಷ ಲೇಖನಗಳನ್ನು ಆಗಾಗ್ಗೆ ಬರೆಸಬಹುದು. ಈ ಸೌಕರ್ಯಗಳ ವ್ಯವಸ್ಥೆ ಎಲ್ಲೆಡೆ ಆದೀತೆಂದೂ ಅದರ ಪ್ರಯೋಜನ ಪಡೆಯುವ ಆಸಕ್ತಿ ಕಂಡುಬಂದೀತೆಂದೂ ಹಾರೈಸುತ್ತೇನೆ.

ವಿಚಾರ ಸಂಕಿರಣ

ಇಷ್ಟು ಹೇಳಿ ಈ ಗೋಷ್ಠಿಯಲ್ಲಿ ನಡೆಯಲಿರುವ ವಿಚಾರ ಸಂಕಿರಣದ ಬಗ್ಗೆ ನಾಲ್ಕು ಮಾತುಗಳನ್ನಾಡಿ ಮುಗಿಸುತ್ತೇನೆ. ವಿವರವಾಗಿ ಮಾತಾಡುವುದು ಸೂಕ್ತವಲ್ಲ. ಸಂಕಿರಣಕ್ಕೆ ಮುನ್ನವೇ ಅಭಿಪ್ರಾಯ ಹೇಳಿಬಿಡುವುದು ಲೇಸಲ್ಲ. (೧) ವಾರ್ತಾ ಪ್ರಸಾರದ ರೀತಿನೀತಿ, (೨) ವಾಚಕರ ವಾಣಿ, (೩) ಪತ್ರಿಕೆಗಳ ಭಾಷೆ, (೪) ನಮ್ಮ ಸಾಹಿತ್ಯ ಪತ್ರಿಕೆಗಳು, (೫) ಜಿಲ್ಲಾ ಪತ್ರಿಕೆಗಳು. ಇವೈದು ವಿಷಯಗಳ ಮೇಲೆ ಚರ್ಚೆ ನಡೆಯಲಿದೆ. ಇವೆಲ್ಲವೂ ಪತ್ರಿಕೋದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಗಂಭೀರವಾಗಿ ವಿಚಾರಿಸತಕ್ಕ ಸಂಗತಿಗಳೇ. ವಾರ್ತಾ ಪ್ರಸಾರದ ರೀತಿನೀತಿ, ವಿಷಯದ ತಾತ್ಪರ್ಯ ನನಗೆ ಸರಿಯಾಗಿ ಆಗಿಲ್ಲ. ಆದರೂ ಒಂದು ವಿಷಯ ಹೇಳಬಹುದು. ನಮ್ಮ ವಾರ್ತಾ ಪ್ರಸಾರ ಹೆಚ್ಚು ಸೋದ್ದೇಶ(purposeful)ಆಗಬೇಕು. ಅದು ನಮ್ಮ ನಾಡಿನ ಮುನ್ನಡೆಗೆ ದಿಕ್ಕು ತೋರಿಸುವಂತಾಗಬೇಕು. ನಮ್ಮಲ್ಲಿ ನಡೆಯುತ್ತಿರುವ ಒಳ್ಳೇ ಕೆಲಸಗಳಿಗೆ ಹೆಚ್ಚು ಪ್ರಸಾರ ಸಿಕ್ಕಬೇಕು. ಇಂಥ ವಿಷಯಗಳನ್ನು ಅರಸಲು ಪ್ರಯತ್ನಿಸಬೇಕು. ಇದರಿಂದ ಒಳ್ಳೇ ಕೆಲಸ ಮಾಡುವವರಿಗೆ ಉತ್ಸಾಹ ಬರುತ್ತದೆ. ನಾವು ಏನಾದರೂ ಸಾಧಿಸಬಲ್ಲೆವೆಂಬ ಆತ್ಮವಿಶ್ವಾಸ ದೇಶಗಳಲ್ಲಿ ಬೆಳೆಯುತ್ತದೆ. ನಮ್ಮ ದೇಶದ ಸಮಸ್ಯೆಗಳಿಗೆ ಈ ಆತ್ಮವಿಶ್ವಾಸದ ಕೊರತೆ, ದೇಶದ ವಿಷಯದಲ್ಲಿ ಭರವಸೆಯ ಅಭಾವ ಇವೇ ಮೂಲವೆಂದು ನಾವು ಮನಗಾಣಬೇಕು.

"ವಾಚಕರ ವಾಣಿ"ಯು ಜನಾಭಿಪ್ರಾಯದ ಬಲವಾದ ಆಯುಧವಾಗಬೇಕು. ಸದ್ಯಕ್ಕೆ ಈ ವಿಭಾಗವು ಬೇರೆ ಬೇರೆ ಜನವರ್ಗಗಳ ಗೋಳನ್ನೇ ಹೆಚ್ಚಾಗಿ ವ್ಯಕ್ತಪಡಿಸುತ್ತದೆ. ಇದು ಸಾಲದು. ನಾಡಿನ ಮುಂದಿರುವ ಮಹತ್ವದ ಪ್ರಶ್ನೆಗಳ ಮೇಲೆ ಅಭಿಪ್ರಾಯ ಹೇಳಬಲ್ಲ ವಿಚಾರವಂತ ಜನರು ಈ ವಿಭಾಗವನ್ನು ಹೆಚ್ಚು ಉಪಯೋಗಿಸಿಕೊಳ್ಳಬೇಕು. ವಿಚಾರಿಗಳು ಪತ್ರಿಕೆಗಳಿಗೆ ಪತ್ರಗಳನ್ನು ಬರೆದು ವಿಚಾರಮಂಥನಕ್ಕೆ ಮಾರ್ಗ ಮಾಡಿಕೊಡಬೇಕು.

ಪತ್ರಿಕೆಗಳು ಅವುಗಳಿಗೆ ಸಾಕಷ್ಟು ಸ್ಥಳ ಮೀಸಲಿಡಬೇಕು.

ಪತ್ರಿಕೆಗಳ ಭಾಷೆಯ ಬಗ್ಗೆ ನಾನು ಕೆಲ ವಿಷಯಗಳನ್ನು ಹೇಳಿದ್ದೇನೆ. ಅದು ಪಂಡಿತಮನ್ಯವೆನಿಸದೆಯೂ ಶಕ್ತವಾಗಬೇಕು. ನಾಡಿನ ಆಡುನುಡಿಯ ಕಸುವು ಅದಕ್ಕೆ ದೊರೆಯಬೇಕು. ಅದಕ್ಕೆ ಹೆಚ್ಚು ಖಚಿತತೆ ಬರಬೇಕು.

ನಮ್ಮ ಸಾಹಿತ್ಯ ಪತ್ರಿಕೆಗಳ ವಿಷಯ ನಾನು ವಿಷಾದದಿಂದಲೇ ಮಾತಾಡಬೇಕಾಗಿದೆ. ಜಗತ್ತಿನಲ್ಲಿ ಎಲ್ಲ ಕಡೆ ಇಂಥ ಪತ್ರಿಕೆಗಳಿಗೆ ಗ್ರಹಣ ಹಿಡಿಯುತ್ತಿದೆ. ಕನ್ನಡದಲ್ಲಿಯೂ ಹಾಗೆಯೆ ೩೦-೪೦ ವರ್ಷಗಳ ಹಿಂದಿನ "ಜಯ ಕರ್ನಾಟಕ" ಮೊದಲಾದ ಪತ್ರಿಕೆಗಳಂಥವು ಈಗೆಲ್ಲಿ? ಅವುಗಳ ದರ್ಜೆ ಈಗೆಲ್ಲಿ? ಈಗ ತಾನೆ ಸಾಹಿತ್ಯಕ್ಕೇ ಮೀಸಲಾದ ಒಂದೆರಡು ಪತ್ರಿಕೆಗಳು ಹುಟ್ಟಿವೆ. ಬಹು ಮಿತವಾದ ಧನಬಲ, ವಾಚಕ ಬಲದಿಂದ ಅವು ನಡೆಯುತ್ತಿವೆ. ಇಂಗ್ಲೀಷಿನ Encounter ನಂಥ ಪತ್ರಿಕೆಗಳಿಗಾಗಿ ಕನ್ನಡ ಬುದ್ಧಿಜೀವಿ ಹಂಬಲಿಸುತ್ತಿದ್ದಾನೆ. ಆದರೆ ಆರ್ಥಿಕ ಪ್ರಶ್ನೆ ತೊಡಕಾಗಿ ನಿಂತು ಈ ಆಸೆ ಈಡೇರುತ್ತಿಲ್ಲ.

ವಿದೇಶಗಳಲ್ಲಿ ಜಿಲ್ಲಾ ಪತ್ರಿಕೆಗಳು ರಾಷ್ಟ್ರೀಯ ಪತ್ರಿಕೆಗಳು ಎಂಬ ಎರಡು ಶಾಖೆಗಳೇ ಆಗಿಹೋಗಿವೆ. ಇಲ್ಲಿಯೂ ಕೆಲ ವಾರಪತ್ರಿಕೆಗಳು ಜಿಲ್ಲಾ ಪತ್ರಿಕೆಗಳ ಕೆಲಸ ಮಾಡುತ್ತಿವೆ. ಆದರೆ ಮಿತವಾದ ಸಾಧನ ಸಂಪತ್ತು ಮತ್ತು ಓದುಗರು ಸಾಕಷ್ಟಿಲ್ಲದ್ದರಿಂದ ಅವುಗಳ ಶಕ್ತಿ ಬೆಳೆದಿಲ್ಲ. 'ರಾಷ್ಟ್ರೀಯ' ಎನಿಸಬಹುದಾದ ದಿನಪತ್ರಿಕೆಗಳೂ ಜಿಲ್ಲಾ ಸುದ್ದಿಗಳನ್ನು ಸಾಕಷ್ಟು ಕೊಡುವುದರಿಂದಲೂ ಕೆಲವೇ ಗಂಟೆಗಳಲ್ಲಿ ಈ ದಿನಪತ್ರಿಕೆಗಳು ನಾಡಿನ ಮೂಲೆ ಮೂಲೆ ಸೇರುವುದರಿಂದಲೂ ಜಿಲ್ಲಾ ಪತ್ರಿಕೆಗಳ ಮಹತ್ವ ಕುಗ್ಗಿದೆ. ಆದರೆ ನಾಡಿನಲ್ಲಿ ಚಟುವಟಿಕೆಗಳು ಹೆಚ್ಚಿದಂತೆ, ಸಾಕ್ಷರತೆ ಹಬ್ಬಿ ಸುತ್ತಮುತ್ತಲಿನ ಆಗುಹೋಗುಗಳಲ್ಲಿ ಜನರ ಆಸಕ್ತಿ ಬೆಳೆದಂತೆ ಇವುಗಳ ಮಟ್ಟ, ವ್ಯಾಪ್ತಿ ಎರಡೂ ಸುಧಾರಿಸಬಹುದು.

ಮಿತ್ರರೆ, ಕೊನೆಯಲ್ಲಿ ನಾನು ಒಂದು ಮಾತನ್ನು ಒತ್ತಿ ಹೇಳಬಯಸುತ್ತೇನೆ. ಕನ್ನಡ ಪತ್ರಿಕೋದ್ಯಮಕ್ಕೆ ಒಳ್ಳೇ ಭವಿಷ್ಯ ಕಾದಿದೆ. ವಿದ್ಯಾರಂಗ, ಆಡಳಿತ ರಂಗಗಳಲ್ಲಿ ದೇಶ ಭಾಷೆಗಳಿಗೆ ಹೆಚ್ಚು ಮಹತ್ವದ ಸ್ಥಾನ ದೊರೆಯುವ ಲಕ್ಷಣಗಳಿವೆ. ಇದು ಹಿಂದೆಂದೂ ಇಲ್ಲದಷ್ಟು ಮಟ್ಟಿಗೆ ದೇಶ ಭಾಷೆಗಳಲ್ಲಿ ಜ್ಞಾನ, ಮಾಹಿತಿಗಳಿಗೆ ಬೇಡಿಕೆಯನ್ನುಂಟುಮಾಡಲಿದೆ. ಆ ಸುದಿನಗಳಿಗಾಗಿ ನಾವು ಅಣಿಯಾಗೋಣ. ಕನ್ನಡಿಗರಲ್ಲಿ ಕೌಶಲ್ಯದ ಕೊರತೆ ಇಲ್ಲ. ಮುಂಬಯಿಯ ಇಂಗ್ಲೀಷ್, ಯಾಕೆ ಹಿಂದೀ ಪತ್ರಿಕಾರಂಗದಲ್ಲಿ ಕೂಡ ಇರುವ ಕನ್ನಡಿಗರ ಸಂಖ್ಯೆ, ಅವರ ದಕ್ಷತೆ ನೋಡಿದರೆ ಅಭಿಮಾನ ಉಂಟಾಗುತ್ತದೆ. ಈ ಪ್ರಾವೀಣ್ಯವನ್ನು ಕನ್ನಡ ಪತ್ರಿಕೋದ್ಯಮವೇ ಬೆಳೆಸಿಕೊಳ್ಳುವಂತಾದರೆ ಅಕ್ಷಯ ನಿಧಿಯೇ ದೊರೆತಂತೆ. ಸೋದ್ದೇಶವಾದ ಯತ್ನಗಳಾದರೆ ನಾವು ಹಿಂದೆ ಬೀಳಲು ಕಾರಣವೇ ಇಲ್ಲ.

ಪರಿಷತ್ತು ನನಗೆ ಈ ಗೌರವವಿತ್ತುದಕ್ಕಾಗಿಯೂ ನೀವು ಆದರದಿಂದ ಆಲಿಸಿದುದಕ್ಕಾಗಿಯೂ ಉಭಯತರಿಗೆ ನನ್ನ ಕೃತಜ್ಞತೆಯನ್ನು ಹೇಳಿ ವಿರಮಿಸುತ್ತೇನೆ.

ಹಳೆಯಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪಮಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮ ತೃಷೆಗೆ ದಕ್ಕಿಸು–
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು!

ಮಂ. ಗೋವಿಂದಪೈ

ಶ್ರವಣಬೆಳಗೊಳದ ರತ್ನತ್ರಯ ಮಂಟಪದಲ್ಲಿ ನಡೆದ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ

ಸಂಕ್ಷಿಪ್ತ ವರದಿ

ಶುಕ್ರವಾರ :

ದಿನಾಂಕ ೨೬-೫-೧೯೬೭

ಶ್ರವಣಬೆಳಗೊಳ ಇತಿಹಾಸ ಪ್ರಸಿದ್ಧವಾದ ಪುಣ್ಯಕ್ಷೇತ್ರ. ಭಗವಾನ್ ಬಾಹುಬಲಿಯ ಭವ್ಯಸಾನ್ನಿಧ್ಯದಲ್ಲಿ, ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯರವರ ದಿವ್ಯ ಆಶ್ರಯದಲ್ಲಿ ಪ್ರಾಚೀನವಾದ ಭಂಡಾರ ಬಸದಿಯ ಬಳಿ ಮನೋಹರವಾಗಿ ನಿರ್ಮಿತವಾಗಿದ್ದ ರತ್ನತ್ರಯ ಮಂಟಪದಲ್ಲಿ ಇಂದು ಬೆಳಗ್ಗೆ ೪೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಆರಂಭವಾಯಿತು.

ಸಮ್ಮೇಳನಾಧ್ಯಕ್ಷ ಶ್ರೀ ಆದಿನಾಥ ನೇಮಿನಾಥ ಉಪಾಧ್ಯೆ ಅವರು ಧ್ವಜಾರೋಹಣ ಮಾಡಿದರು.

ಅವರು ತಮ್ಮ ಭಾಷಣದಲ್ಲಿ ರಾಷ್ಟ್ರಧ್ವಜದ ಸಂಕೇತವನ್ನು ಕುರಿತು ಪ್ರಸ್ತಾಪಿಸಿ 'ಭಾಷಾಸೇವೆ ಮಾಡುವಾಗ ನಾಡನ್ನು ಮರೆಯಬಾರದು. ತಾಯ್ನಾಡಿನ, ತಾಯ್ನುಡಿಯ ಸೇವೆ ಮಾಡುವಾಗ ಮಾನವ ಕುಟುಂಬಗಳಲ್ಲಿ ಬೇರೆ ಅಂತರಗಳು ಬರದಿರಲಿ'—ಎಂದು ಹೇಳಿದರು.

ಅನಂತರ ಮನೋಹರವಾಗಿ ಅಲಂಕರಿಸಿದ್ದ ನಲವತ್ತಾರು ಜತೆ ಎತ್ತುಗಳನ್ನು ಕಟ್ಟಿದ್ದ ರಥದಲ್ಲಿ ಸಮ್ಮೇಳನಾಧ್ಯಕ್ಷರು, ಸ್ವಾಗತಾಧ್ಯಕ್ಷರು ಹಾಗೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಮೆರೆವಣಿಗೆಯಲ್ಲಿ ರತ್ನತ್ರಯ ಮಂಟಪಕ್ಕೆ ಕರೆದೊಯ್ಯಲಾಯಿತು.

ಕನ್ನಡನಾಡಿನ ಮೂಲೆ ಮೂಲೆಗಳಿಂದ ಬಂದಿದ್ದ ಕನ್ನಡ ಭಾಷಾಭಿಮಾನಿಗಳೂ ಸಾಹಿತ್ಯ ರಸದೌತಣ ಬಡಿಸಲು ಬಂದಿದ್ದ ವಿದ್ವಾಂಸರೂ ಸಾಹಿತ್ಯ, ಧರ್ಮ, ಕಲೆಗಳಿಗೆ ಆಗರವಾಗಿರುವ ಗೊಮ್ಮಟಗಿರಿಗೆ ಭಗವಾನ್ ಬಾಹುಬಲಿಯ ಮಂಗಳಮೂರ್ತಿಯನ್ನು ನೋಡಲು ಬಂದ ರಸಿಕರೂ ಸಮಾವೇಶಗೊಂಡಿದ್ದ ರತ್ನತ್ರಯ ಮಂಟಪದಲ್ಲಿ ಸಮ್ಮೇಳನದ ಕಾರ್ಯಕಲಾಪಗಳು ಆರಂಭವಾದವು.

ಶ್ರೀಮತಿ ಉಮಾದೇವಿ ಅವರಿಂದ ಪ್ರಾರ್ಥನೆ ಹಾಗೂ ಸ್ವಾಗತ ಪದ್ಯ ವಾಚನವಾದ ಮೇಲೆ ಶ್ರೀ ಶಾಂತರಾಜ ಶಾಸ್ತ್ರಿಗಳು ಬಂದಿದ್ದ ಅತಿಥಿಗಳನ್ನು ಸ್ವಾಗತ ಸಮಿತಿಯ ಅಧ್ಯಕ್ಷರಾದ ಚಾರುಕೀರ್ತಿ ಸ್ವಾಮಿಗಳ ಪರವಾಗಿ ಹಾರ್ದಿಕವಾಗಿ ಸ್ವಾಗತಿಸಿದರು.

ಸ್ವಾಗತ ಸಮಿತಿ ಕಾರ್ಯದರ್ಶಿ ತೋಂಟದಾರ್ಯರು ಸಮ್ಮೇಳನದ ಬಗ್ಗೆ ವಿವರಣೆಯನ್ನು ನೀಡಿದರು.

ಅನಂತರ ಬಿ. ಶಿವಾನಂದಸ್ವಾಮಿ ಅವರು ಸಮ್ಮೇಳನ ಯಶಸ್ವಿಯಾಗಲೆಂದು ಶುಭಕೋರಿ ಬಂದಿದ್ದ ಸಂದೇಶಗಳನ್ನು ಓದಿದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಧ್ಯಕ್ಷ ಪೀಠಕ್ಕೆ ಹಿಂದಿನ ಸಮ್ಮೇಳನಾಧ್ಯಕ್ಷ ಕಡಂಗೊಡ್ಲು ಶಂಕರಭಟ್ಟರ ಪರವಾಗಿ ಡಾ. ಉಪಾಧ್ಯೆ ಅವರ ಹೆಸರನ್ನು ಸೂಚಿಸಿದರು. ಸಭೆ ಇದನ್ನು ಸರ್ವಾನುಮತದಿಂದ ಅನುಮೋದಿಸಿತು.

ಶ್ರವಣಬೆಳಗೊಳ ಪುರಸಭೆಯ ಆಡಳಿತಾಧಿಕಾರಿ ಎನ್. ಎಸ್. ಚಿಪ್ರೆ ಅವರು ಸಮ್ಮೇಳನಾಧ್ಯಕ್ಷರಿಗೆ ಮಾನಪತ್ರ ಅರ್ಪಿಸಿದರು. ತುಮಕೂರಿನ ಕಲಾವಿದ ವಿರೂಪಾಕ್ಷ ಅವರು ತಾವು ಚಿತ್ರಿಸಿದ್ದ ಸಮ್ಮೇಳನಾಧ್ಯಕ್ಷರ ಭಾವಚಿತ್ರವನ್ನು ಅವರಿಗೆ ಅರ್ಪಿಸಿದರು.

ಪರಿಷತ್ತಿನ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರು ತಮ್ಮ ನಿವೇದನೆಯಲ್ಲಿ ಪರಿಷತ್ತು ಮಾಡುತ್ತಿರುವ ಕೆಲಸವನ್ನು ವಿವರಿಸಿದರು.

ರಾಜ್ಯದ ಕಾನೂನು ಮಂತ್ರಿ ಮಾನ್ಯ ಕಂಠಿ ಅವರು ಸಮ್ಮೇಳನವನ್ನು ಉದ್ಘಾಟಿಸಿ "ಸಂಶೋಧನೆ ಸಾಹಿತ್ಯ ಪರಿಷತ್ತಿನ ಕೆಲಸವಾಗಲಿ. ಸರ್ಕಾರ ಅದರ ಲಾಭ ಪಡೆಯಲು ಪರಿಷತ್ತಿಗೆ ನೆರವು ನೀಡುತ್ತದೆ. ಈಗ ಪರಿಷತ್ತಿಗೆ ನೀಡುತ್ತಿರುವ ೨೫ ಸಾವಿರ ರೂಪಾಯಿ ಸಹಾಯದ್ರವ್ಯ ಆಂಧ್ರದಲ್ಲಿ ಇರುವಂತೆ ಕನಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಬೇಕು." ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಉಪಾಧ್ಯೆ ಅವರು ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದ ಪರಂಪರೆ

ಯನ್ನು ವಿದ್ವತ್ಪೂರ್ಣವಾಗಿ ವಿಶ್ಲೇಷಿಸಿ ಜನಮನದ ಕೊಳೆಯನ್ನು ತೆಗೆದು ಹೃದಯ ಶುದ್ಧಿಯನ್ನು ಸಾಧಿಸುವ ಸಾಹಿತ್ಯ ಸೃಷ್ಟಿಯಾಗಬೇಕೆಂದು ಸಾಹಿತಿಗಳಿಗೆ ಕರೆ ನೀಡಿದರು.

ಮಧ್ಯಾಹ್ನ ಮೂರೂವರೆಗೆ ಮತ್ತೆ ಸಮಾವೇಶಗೊಂಡ ಸಮ್ಮೇಳನ ಗೊರೂರ ರಾಮಸ್ವಾಮಿ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಭಾಷಾಬಾಂಧವ್ಯ ವಿಚಾರವನ್ನು ಕುರಿತು ಚರ್ಚಿಸಿತು.

ಮ. ಸು. ಕೃಷ್ಣಮೂರ್ತಿ ಅವರು ಕನ್ನಡನಾಡು ಉತ್ತರ ಭಾರತದ ಬಾಂಧವ್ಯ ಚಂದ್ರಗುಪ್ತನ ಕಾಲಕ್ಕಿಂತ ಹಿಂದಿನದೆಂದು ಐತಿಹಾಸಿಕ ಆಧಾರಗಳ ಮೇಲೆ ವಿವರಿಸಿ, ಹಿಂದೀ ಭಾಷೆಯ ಹಿಂದಿನ ಅಪಭ್ರಂಶದಲ್ಲಿ ಸಾವಿರಾರು ಕನ್ನಡ ಪದಗಳಿವೆ, ರಾಷ್ಟ್ರಕೂಟರ ಕಾಲದಲ್ಲಿ ಇಡೀ ಭಾರತವರ್ಷ ಕನ್ನಡ ಛತ್ರದಡಿಯಲ್ಲಿತ್ತು—ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಕೇಂದ್ರ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಕನ್ನಡ ಸಾಹಿತ್ಯವನ್ನು ಹಿಂದಿಯ ಮೂಲಕ ನಾಡಿಗೆ ಪರಿಚಯ ಮಾಡಿಕೊಡಬೇಕೆಂದರು.

ಎಂ. ರಾಜೇಶ್ವರಯ್ಯನವರು ಹಿಂದಿ ಕನ್ನಡಗಳ ನಡುವೆ ನಡೆದಿರುವ ಸಾಹಿತ್ಯ ಚಟುವಟಿಕೆಗಳ ವಿಷಯವನ್ನು ಕುರಿತು ಮಾತನಾಡಿ ಸರ್ಕಾರದ ಕೆಲವೊಂದು ಸಾಂಸ್ಕೃತಿಕ ಯೋಜನೆಗಳಿಗೆ ಪರಿಷತ್ತು ಪ್ರೋತ್ಸಾಹ ನೀಡಬೇಕೆಂದು ಹೇಳಿದರು.

ತಮಿಳು ಕನ್ನಡ ಸಂಬಂಧವನ್ನು ಪ್ರಸ್ತಾಪಿಸಿದ ಮತ್ತೂರು ಕೃಷ್ಣಮೂರ್ತಿ ಅವರು ದ್ರಾವಿಡ ಭಾಷಾ ಸೋದರಿಯರಲ್ಲಿ ತಮಿಳು ಹಿರಿಯಕ್ಕನೆಂದೂ, ಹರಿಹರನಿಂದ ತೊಡಗಿ ಬಿ. ಎಂ. ಶ್ರೀವರೆಗೆ ತಮಿಳಿನ ಅನೇಕ ಕೃತಿಗಳು ಕನ್ನಡಕ್ಕೆ ಬಂದಿವೆ ಎಂದರು. ಇತ್ತೀಚೆಗೆ ಕನ್ನಡದ ಕೆಲವು ಕೃತಿಗಳು ತಮಿಳಿಗೆ ಭಾಷಾಂತರವಾಗುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಅನಂತರ ತೆಲುಗು ಕನ್ನಡ ಬಾಂಧವ್ಯವನ್ನು ಕುರಿತು ಕ. ಸು. ವೆಂಕಟಾದ್ರಿಶರ್ಮ ಅವರು ಮಾತನಾಡಿ ಉಭಯ ಭಾಷೆಗಳು ಸಂಸ್ಕೃತದಿಂದ ಪ್ರಭಾವಿತವಾಗಿವೆ ಎಂದೂ, ವೀರಶೈವ ಸಾಹಿತ್ಯ ಎರಡು ಭಾಷೆಯ ಸ್ವತ್ತೆಂದೂ ಹೇಳಿ, ಪಂಪ ನನ್ನಯ್ಯರಲ್ಲೂ, ಸರ್ವಜ್ಞ ವೇಮನರಲ್ಲೂ ಒಂದೇ ಭಾವ ಪ್ರಕಟವಾಗಿದೆ ಎಂದರು.

ಶಾಂತವೀರಯ್ಯನವರು ಕನ್ನಡ ಕೋಶ ಬೆಳೆದು ಬಂದ ರೀತಿಯನ್ನು ಕುರಿತು, ಕೆಲವು ಉದಾಹರಣೆಗಳೊಂದಿಗೆ ಭಾಷಣ ಮಾಡಿದರು.

ಸಂಜೆ ನಡೆದ ಕವಿಮೇಳಕ್ಕೆ ಹಿರಿಯ ಕವಿಗಳಾದ ಎಸ್. ವಿ. ಪರಮೇಶ್ವರಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಕನ್ನಡ ಕಾವ್ಯ ಬೆಳೆದುಬಂದ ಹಾದಿ, ಅದು ಎದುರಿಸಿದ ತೊಡಕು, ಮುಂದೆ ನಡೆಯಬೇಕಾದ ಮಾರ್ಗಗಳನ್ನು ಕುರಿತು ಚರ್ಚಿಸಿದರು. ಉತ್ತಮ ಕೃತಿಗಳ ಸಂಚಯನಕ್ಕೆ ಶಾಸ್ತ್ರ ಶ್ರೀ ರೋಹಣಗಿರಿಯ ಆರೋಹಣಕ್ಕೆ ಸಿದ್ಧರಾಗಲು ಸೋದರ ಕವಿಗಳಿಗೆ ಕರೆನೀಡಿದರು.

ಅನಂತರ ಪು.ತಿ.ನ, ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ಕೆ. ಎಸ್. ನಿಸಾರ್ ಅಹಮದ್, ಸೋಮಶೇಖರ ಇಂಮ್ರಾಪುರ, ಮಹಿಷವಾಡಿ, ಚಂದ್ರಶೇಖರ ಕಂಬಾರ, ಕ. ವೆಂ. ರಾಜಗೋಪಾಲ ಹಾಗು ಕೃಷ್ಣ ಆಲನಹಳ್ಳಿ, ಮೊದಲಾದ ಸುಪ್ರಸಿದ್ಧ ಕವಿಗಳು ತಮ್ಮ ಕವನಗಳನ್ನು ಓದಿದರು.

ಮನರಂಜನಾ ಕಾರ್ಯಕ್ರಮವಾಗಿ ಪಾಂಚವಾರ್ಷಿಕ ಯೋಜನೆಯ ಪ್ರಚಾರ ಅಧಿಕಾರಿ ಎನ್.ಎಸ್. ವೆಂಕೋಬರಾಯರ ನೆರವಿನಿಂದ ಏರ್ಪಡಿಸಿದ್ದ ಬೆಂಗಳೂರಿನ ಸುಪ್ರಸಿದ್ಧ ವಿದುಷಿ ಕುಮಾರಿ ಶ್ಯಾಮಲಾಭಾವೆ ಅವರ ಲಘು ಸಂಗೀತ ಕಚೇರಿಯೊಂದಿಗೆ ಮೊದಲನೆಯ ದಿನದ ಕಾರ್ಯಕಲಾಪಗಳು ಮುಕ್ತಾಯವಾದುವು.

ಶನಿವಾರ :

ದಿನಾಂಕ ೨೭-೫-೧೯೬೭

ಹಿಂದಣ ದಿನದ ಕವಿಗೋಷ್ಠಿ ತುಂಬಾ ಜನಪ್ರಿಯವಾದುದನ್ನು ನೋಡಿ ಅನೇಕ ಕವಿಗಳಿಗೆ ತಮ್ಮ ಕವನಗಳನ್ನು ಓದಬೇಕೆಂಬ ಹುರುಪು ಬಂದು ಮುಂಜಾನೆಯ ಕಾರ್ಯಕ್ರಮ ಮತ್ತೆ ಕವಿಗೋಷ್ಠಿಯೊಂದಿಗೆ ಆರಂಭವಾಯಿತು.

ಇಂದು ನಡೆದ ಕವಿಮೇಳದಲ್ಲಿ ಕ.ಸ. ಧರಣೇಂದ್ರಯ್ಯ, ಧರ್ಮಶ್ರೀ, ಭೈರಮೂರ್ತಿ, ತಿಮ್ಮರಾಜು, ವೈ.ಕೆ. ತಿಮ್ಮರಸಯ್ಯ, ವಿಜಯಕುಮಾರ್, ಸುಬ್ರಾಯ ಚೊಕ್ಕಾಡಿ, ತೊ.ಸು, ಸುಬ್ರಹ್ಮಣ್ಯಂ, ನಾಗರಾಜಶಾಸ್ತ್ರಿ, ಕ. ಸು. ವೆಂಕಟಾದ್ರಿಶರ್ಮ, ಕೆ. ಎಸ್. ವೆಂಕಟರಾಂ, ಶಿವರಾಂ, ಕ. ಪಿ. ಶಿವಲಿಂಗಯ್ಯ, ಜಿ. ಎಸ್. ಸಿದ್ಧಲಿಂಗಯ್ಯ, ಸತ್ಯನಾರಾಯಣ, ಅಮ್ಮೆಂಬಳ ಶಂಕರನಾರಾಯಣ ಮೊದಲಾದವರು ಭಾಗವಹಿಸಿದ್ದರು.

ಪೂರ್ವಾಹ್ನದಲ್ಲಿ ಸಂಘ ಸಂಸ್ಥೆಗಳ ಸಮ್ಮೇಳನ ನಡೆಯಿತು. ಪ್ರೊ. ಗ. ಸ. ಹಾಲಪ್ಪನವರು ಅಧ್ಯಕ್ಷತೆ ವಹಿಸಬೇಕಾಗಿದ್ದ ಈ ಗೋಷ್ಠಿ ಅನಿವಾರ್ಯ ಕಾರಣಗಳಿಂದ ಅವರು ಬರಲಾಗದಿದ್ದುದರಿಂದ ಭಾರತ ಸರ್ಕಾರದ ಪ್ರಚಾರಶಾಖೆ ಅಧಿಕಾರಿ ಎಸ್. ಎಸ್. ವೆಂಕೋಬರಾಯರು ನಡೆಸಿಕೊಡಬೇಕಾಯಿತು.

ಬಲಗುಂದಿದ ಸಂಘ ಸಂಸ್ಥೆಗಳಿಗೆ ಪುನಶ್ಚೇತನ ಮೂಡಿಸಿ, ಹೊಸದೃಷ್ಟಿಯನ್ನು ಬೆಳೆಸಲು ಪರಿಷತ್ತು ಮತ್ತು ಸರ್ಕಾರಗಳು ಮಾಡಬೇಕಾದ ಕರ್ತವ್ಯಗಳನ್ನು ವಿವೇಚಿಸುವುದೇ ಈ ಗೋಷ್ಠಿಯ ಉದ್ದಿಶ್ಯವಾಗಿತ್ತು.

ರಚನಾತ್ಮಕ ರೀತಿಯಲ್ಲಿ ಸಾಹಿತ್ಯ ಸಮಸ್ಯೆಗಳ ನಿವಾರಣೆ ಮತ್ತು ಕನ್ನಡ ರಕ್ಷಣೆ ಕಾರ್ಯದ ಆಧಾರ ಸ್ತಂಭಗಳಾದ ಕನ್ನಡ ಸಂಘ ಸಂಸ್ಥೆಗಳನ್ನು ಪುನರುಜ್ಜೀವಿಸುವ ಅಗತ್ಯವನ್ನು ಗ. ಸ. ಹಾಲಪ್ಪನವರು ಕಳುಹಿಸಿ ಕೊಟ್ಟಿದ್ದ ತಮ್ಮ ಲಿಖಿತ ಭಾಷಣದಲ್ಲಿ ವಿವರಿಸಿ, ಆಂಗ್ಲ ಹಾಗೂ ಕನ್ನಡಿಗ ಮಹನೀಯರ ಸೇವೆಯನ್ನು ಸ್ಮರಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಬೆಳೆದುಬಂದ ಉನ್ನತ ಸಾಂಘಿಕ ಚಟುವಟಿಕೆಯನ್ನು ವಿವರಿಸಿದ ಕೆ. ಎಸ್. ನಾರಾಯಣಸ್ವಾಮಿ ಅವರು ಸ್ವಾತಂತ್ರ್ಯ ಬಂದ ಮೇಲೆ ತುಳಿದ ಹಾದಿ ಬದಲಾಗಿ, ಮಹೋದ್ದೇಶ ಸಾಧನೆಗೆ ಬೇಕಾದ ಧೀಮಂತ ನಾಯಕತ್ವ ನಶಿಸಿ ಸಂಘ ಸಂಸ್ಥೆಗಳು ಶಿಥಿಲವಾಗುತ್ತಿವೆ ಎಂದರು. ಜನಾಧರಿತವಾದ ಸಾಹಿತ್ಯ ಸಂಸ್ಥೆಗಳು ಬೆಳೆದು, ವಿಚಾರವಂತ ಯುವಕರಿಂದ ಮಾರ್ಗದರ್ಶನ ದೊರತು, ದೇಶದ ಭಾವೈಕ್ಯತೆ ನೆಲೆಗೊಳ್ಳಬೇಕು —ಎಂದು ಸೂಚಿಸಿದರು.

ಜಿ. ಎ. ರೆಡ್ಡಿಯವರು ಸಾಂಸ್ಕೃತಿಕ ಸಂವರ್ಧನೆಯನ್ನು ಒತ್ತಿ ಹೇಳಿ, ಸಂಘ ಹಾಗೂ ಪರಿಷತ್ತಿನ ಪಾತ್ರವನ್ನು ವಿವರಿಸಿದರು. ಪರಿಷತ್ತಿನ ರಚನೆ ಮತ್ತು ಕಾರ್ಯವ್ಯಾಪ್ತಿಯ ಕ್ರಮದಲ್ಲಿ ಬದಲಾವಣೆ ಅಗತ್ಯವೆಂದು ಸಲಹೆ ಮಾಡಿ, ಪರಿಷತ್ತು ಗ್ರಂಥ ಸಂಶೋಧನೆ, ಶಾಖೆಗಳ ಸಂಘಟನೆಗೆ ಆದ್ಯ ಗಮನ ಕೊಡಬೇಕೆಂದರು.

ವರದರಾಜ ಹುಯಿಲಗೋಳ ಅವರು ಮಾತನಾಡಿ ಸಾಹಿತಿಗಳ ಸಂಘಟನೆಯಲ್ಲಿ ಎದುರಿಸಬೇಕಾದ ತೊಡಕುಗಳನ್ನು ಪ್ರಸ್ತಾಪಿಸಿದರು. ಪರಿಷತ್ತಿನ ವ್ಯಾಪ್ತಿ ವಿಶಾಲವಾಗಬೇಕು, ಪ್ರಾದೇಶಿಕ ಸಂಘಗಳು ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕು, ಸಾಹಿತ್ಯ ಸಮ್ಮೇಳನಾಧ್ಯಕ್ಷರನ್ನು ಅವು ಚುನಾಯಿಸುವಂತಾಗಬೇಕೆಂದು ಅಪೇಕ್ಷಿಸಿದರು.

ಸಾಹಿತ್ಯ ಸೇವೆಯಲ್ಲಿ ಸಂಘ ಸಂಸ್ಥೆಗಳಿಗೆ ಇರುವ ಅಡಚಣೆಗಳನ್ನು ಸ್ವಾನುಭವದಿಂದ ವಿವರಿಸಿದ ಶ್ರೀಹರಿ ಅವರು ಅವುಗಳ ನಿವಾರಣೆಗೆ ಸೂಕ್ತ ಕಾರ್ಯಕ್ರಮ ಏರ್ಪಡಬೇಕೆಂದರು.

ಮಳೀಮಠ ಅವರು ತಮ್ಮ ಭಾಷಣದಲ್ಲಿ ಇಂಥ ಸಂಘ ಸಂಸ್ಥೆಗಳ ಸಮ್ಮೇಳನದ ಬದಲು ರಾಜ್ಯದ ವಿವಿಧ ಕರ್ನಾಟಕ ಸಂಘಗಳ ಸಮ್ಮೇಳನ ನಡೆಯಲೆಂದು ಆಶಿಸಿ, ಅವುಗಳ ಬೆಳವಣಿಗೆಗೆ ವಿಧಾಯಕ ಕ್ರಮಗಳ ಅಗತ್ಯವನ್ನು ಒತ್ತಿ ಹೇಳಿದರು.

ವ್ಯಾವಹಾರಿಕ ದೃಷ್ಟಿ ಬೆಳೆಯದೆ ಸಾಹಿತ್ಯ ಸಂಘಗಳು ಕೈಸುಟ್ಟುಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಹೇಳಿದ ಸಿ. ಆರ್. ಶ್ರೀನಿವಾಸ ಐಯ್ಯಂಗಾರ್ಯರು ಅವುಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕೆಂದು ಹೇಳಿದರು.

ತೊ. ಸು. ಸುಬ್ರಹ್ಮಣ್ಯಂ ಮತ್ತು ಬಿ. ನಂಜಪ್ಪ ಅವರು ಸಂಘಗಳ ಬಲಸಂವರ್ಧನೆಗೆ ಅಗತ್ಯವಾದ ಕೆಲವು ಉಪಯುಕ್ತ ಸೂಚನೆಗಳನ್ನು ಇತ್ತರು. ಆರ್. ಎಚ್. ರಾಜು ಅವರು ಸಂಘಗಳ ಬೆಳವಣಿಗೆಯ ಅಗತ್ಯವನ್ನು, ಅವುಗಳು ವಹಿಸುವ ಪಾತ್ರವನ್ನು ತಿಳಿಸಿದರು.

ಮಧ್ಯಾಹ್ನದ ಕಾರ್ಯಕ್ರಮ-ಪತ್ರಿಕಾ ವಿಚಾರ ಸಂಕಿರಣ–ಆರಂಭವಾಗುವ ಮುನ್ನ 'ಹೇಮಾವತೀ ಪುತ್ರ'ರೆನಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯ ಸೇವೆಯನ್ನು ಪ್ರಶಂಸಿಸಿ, ಅವರಿಗೆ ಬಿನ್ನವತ್ತಳೆ ಅರ್ಪಿಸಿ ಗೌರವಿಸಲಾಯಿತು.

ಸುಮಾರು ಅರ್ಧ ಶತಮಾನಕ್ಕೂ ಹೆಚ್ಚಾಗಿ ಗೊರೂರರ ಸ್ನೇಹದ ಸವಿಯನ್ನು ಅನುಭವಿಸಿದ್ದ ಅವರ ಒಡನಾಡಿ, ಕವಿಮಿತ್ರ ಪು. ತಿ. ನರಸಿಂಹಾಚಾರ್ಯರು ಗೊರೂರರ ಸಾಹಿತ್ಯ ಕೊಡುಗೆ ಹಾಗೂ ಸಖ್ಯವನ್ನು ಆತ್ಮೀಯವಾಗಿ ಹೃದಯಂಗಮವಾಗಿ ವರ್ಣಿಸಿದರು. ಗೊರೂರರವರು ತಮ್ಮದೇ ಆದ ಹಾಸ್ಯ ಶೈಲಿಯಲ್ಲಿ ಸೂಕ್ತ ಉತ್ತರವಿತ್ತರು.

ಇದೇ ಸಂದರ್ಭದಲ್ಲಿ ಜನ್ಮ ತಳೆದ ಹಾಸನ ಜಿಲ್ಲಾ ಬರಹಗಾರ ಮಂಡಳಿಯನ್ನು ಪರಿಷತ್ತಿನ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರು ಉದ್ಘಾಟಿಸಿದರು.

ಅವರು ತಮ್ಮ ಭಾಷಣದಲ್ಲಿ ರಾಜ್ಯದ ವಿಧಾನ ಪರಿಷತ್ತಿನಲ್ಲಿ ಸಾಹಿತಿಗಳಿಗೆ ಪ್ರಾತಿನಿಧ್ಯ ಮುಂದುವರಿಯಬೇಕೆಂದು ಒತ್ತಿ ಹೇಳಿದರು.

ಡಾ. ಉಪಾಧ್ಯೆ ಅವರು ಮಾತನಾಡಿ ಎಲ್ಲೆಡೆ ಇಂಥ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಬರಹಗಾರ ಮಂಡಲಿಗಳು ಏರ್ಪಡಲೆಂದು ಹಾರೈಸಿದರು.

ಕಲಾಕಾರ ತಿಪ್ಪಯ್ಯನವರು ಗೊರೂರರಿಗೆ ತಮ್ಮ ಕೃತಿಯೊಂದನ್ನು ಅರ್ಪಿಸಿದರು.

ಎನ್. ಎಸ್. ರಾಮಪ್ರಸಾದರು ಮಂಡಲಿಯ ಉದ್ದೇಶವನ್ನು ಸಭೆಗೆ ವಿವರಿಸಿದರು.

ಅನಂತರ ನಡೆದ ಪತ್ರಿಕಾ ವಿಚಾರ ಸಂಕಿರಣದಲ್ಲಿ ಕನ್ನಡ ಪತ್ರಿಕಾ ಪ್ರಪಂಚವು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಯಿತು.

ಪಾ.ವೆಂ. ಆಚಾರ್ಯ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಜನರ ಮೇಲೆ ಹೆಚ್ಚು ಪ್ರಭಾವ ಬೀರಬಲ್ಲ ಪತ್ರಿಕಾರಂಗ ಜನರನ್ನು ತಪ್ಪು ದಾರಿಗೆ ಎಳೆಯದಂತೆ ಎಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ಒತ್ತಿಹೇಳಿ, ಕನ್ನಡ ಪತ್ರಿಕಾರಂಗ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು.

ಕನ್ನಡ ಪತ್ರಕರ್ತರು ಉಭಯ ಭಾಷಾ ಪಾಂಡಿತ್ಯ ಪಡೆಯಬೇಕಾಗಿದೆ ಎಂದೂ, ಭಾಷಾಂತರ ಕಾರ್ಯದಲ್ಲಿ ಯೋಗ್ಯ ಶಬ್ದಗಳನ್ನು ಆಯ್ಕೆ ಮಾಡುವ ಕೇಂದ್ರ ಸಂಸ್ಥೆಯೊಂದು ಅಗತ್ಯವಿದೆ ಎಂದೂ ಹೇಳಿ, ವೈಜ್ಞಾನಿಕ ಲೇಖನಗಳನ್ನು ಬರೆಯುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ವಿವರಿಸಿದರು.

ಭಾಷಾ ಪತ್ರಿಕೆಗಳ ವ್ಯಾಪ್ತಿ, ಪ್ರಚಾರ ಮತ್ತು ವಿಚಾರಗಳನ್ನು ಅವಲೋಕಿಸಿದ ಕಲ್ಲೆ ಶಿವೋತ್ತಮರಾವ್ ಅವರು ಅಲ್ಪಸಂಖ್ಯಾತರು ಮತ್ತು ಹರಿಜನರ ವಿಚಾರಗಳಿಗೆ ವಿಶೇಷ ಗಮನ ನೀಡಬೇಕೆಂದು ಹೇಳಿದರು. ಜನಸಾಮಾನ್ಯರಿಗೆ ಅರ್ಥವಾಗುವಂತೆ ಪತ್ರಿಕಾ ಭಾಷೆ ಇರಬೇಕೆಂದರು. ಅವರು ವಿಚಾರ ಸ್ವಾತಂತ್ರ್ಯ ಬೆಳೆಯಬೇಕೆಂದು ಒತ್ತಿ ಹೇಳಿದರು.

ಜಿಲ್ಲಾ ಪತ್ರಿಕೆಗಳ ವಿಚಾರವಾಗಿ ಮಾತನಾಡುತ್ತಾ ಕೃ. ನ. ಮೂರ್ತಿ ಅವರು ಸಣ್ಣ ಪತ್ರಿಕೆಗಳ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಜಿಲ್ಲಾ ಮಟ್ಟದ ಪತ್ರಿಕೆಗಳು ರಾಜ್ಯಮಟ್ಟದ ಪತ್ರಿಕೆಗಳಿಗೆ ಮಾರಕವಲ್ಲ ಪೋಷಕವೆಂದು ಹೇಳಿ, ಅವು ಉನ್ನತ ಮಟ್ಟವನ್ನು ಕಾಪಾಡಿಕೊಂಡು ಬರಲು ಸರ್ಕಾರದ ನೆರವು ಅಗತ್ಯವೆಂದರು.

ಎನ್. ಎಸ್. ರಾಮಪ್ರಸಾದರು ಪತ್ರಿಕೋದ್ಯೋಗಿಯು ದಿನ ಬೆಳಗಾದರೆ ತನ್ನ ವೃತ್ತಿಯಲ್ಲಿ ಎದುರಿಸಬೇಕಾಗುವ ಸಂಕಷ್ಟಗಳನ್ನು ವಿವರಿಸಿದರು.

ಶಿವರಾಮ ಮತ್ತು ಹರಿರಾವ್ ಅವರು ಮಾತನಾಡಿ ಪತ್ರಿಕೋದ್ಯಮದ ಯಶಸ್ಸಿಗೆ ಶೀಲವನ್ನು ಬಲಿ ಕೊಡಬಾರದೆಂದು, ಪ್ರಾಮಾಣಿಕತೆ, ಸತ್ಯಾನ್ವೇಷಣೆ, ನಿರ್ಭಯತೆಗಳು ಪತ್ರಿಕೆಗಳ ಗುರಿಯಾಗಿರಬೇಕೆಂದರು.

ಮನರಂಜನ ಕಾರ್ಯಕ್ರಮ ಆರಂಭವಾಗುವುದಕ್ಕೆ ಮೊದಲು ಮುಂಬಯಿಯ ಎಂ. ಸಿ. ಅನಂತರಾಜಯ್ಯನವರು 'ಅಭಿಷೇಕ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಮರುದಿನ ಶ್ರೀ ಗೊಮ್ಮಟಸ್ವಾಮಿಗೆ ನಡೆಯಲಿದ್ದ ಮಹಾಮಸ್ತಕಾಭಿಷೇಕಕ್ಕೆ ಎಲ್ಲರನ್ನೂ ಆಹ್ವಾನಿಸಿದರು.

ಇಂದಿನ ಮನರಂಜನಾ ಕಾರ್ಯಕ್ರಮವಾಗಿ ಬೆಂಗಳೂರಿನ ಭಾರತ ಸರಕಾರದ ಸುದ್ದಿ ಮತ್ತು ಪ್ರಚಾರ ಶಾಖೆಯವರು ಭಾರತದ ಜಾನಪದ ನೃತ್ಯಗಳು ಮತ್ತು ಸ್ವಾಮಿ ವಿವೇಕಾನಂದ-ಇವುಗಳನ್ನು ಕುರಿತು ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು.

ಭಾನುವಾರ:

ದಿನಾಂಕ ೨೮-೫-೧೯೬೭

ಕಳೆದೆರಡು ದಿನಗಳಿಂದ ಸಂತತವಾಗಿ ಸಾಹಿತ್ಯದೇವಿಯ ಆರಾಧನೆಯಲ್ಲಿ ತೊಡಗಿದ್ದ ಸಾಹಿತಿಗಳಿಗೆ ಈದಿನ ಭಗವಾನ್ ಬಾಹುಬಲಿ ಸ್ವಾಮಿಗೆ ನಡೆದ ಮಹಾಮಸ್ತಕಾಭಿಷೇಕವನ್ನು ನೋಡುವ ಅಪೂರ್ವ ಯೋಗ ದೊರಕಿತ್ತು. ಕೆಲವು ದಿನಗಳ ಹಿಂದೆ ಹದಿನಾಲ್ಕು ವರ್ಷಗಳನಂತರ ನಡೆದ ಮಹಾ ಮಸ್ತಕಾಭಿಷೇಕವನ್ನು ನೋಡಲು ಶ್ರವಣಬೆಳುಗೊಳದಲ್ಲಿ ಐದಾರು ಲಕ್ಷ ಯಾತ್ರಿಕರು ಸೇರಿದ್ದರು. ಆ ಸಮಯದಲ್ಲಿ ಸ್ವಾಮಿಗೆ ನಡೆದ ಅಭಿಷೇಕವನ್ನು ಹತ್ತಿರದಿಂದ ನೋಡಿ ಆನಂದಿಸುವ ಭಾಗ್ಯ ದೊರತದ್ದು ಕೆಲವರಿಗೆ ಮಾತ್ರ. ಮುಂಬಯಿಯ ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳೂ ದಾನಶೀಲರೂ ಆಗಿರುವ ಎಂ. ಸಿ. ಅನಂತರಾಜಯ್ಯನವರ ಪ್ರಯತ್ನದ ಫಲವಾಗಿ ಈ ಭಾಗ್ಯ ಸಮ್ಮೇಳನಕ್ಕೆ ಬಂದಿದ್ದ ಎಲ್ಲ ಸಾಹಿತಿಗಳ ಪಾಲಿಗೆ ದೊರಕಿತು.

ಬಾಹುಬಲಿ ಸ್ವಾಮಿಯ ಮಸ್ತಕಾಭಿಷೇಕವು ದೇವತೆಗಳೂ ಅಸೂಯೆ ಪಡುವಂತಹ ಅದ್ಭುತ ದೃಶ್ಯ. ಬೆಳಗಿ

ಎಳೆಬಿಸಿಲಿನಲ್ಲಿ ನಡೆದ ಚಿರಸ್ಮರಣೀಯವಾದ, ಸದ್ದು ಗದ್ದಲದಿಂದ ದೂರವಾದ ಅಭಿಷೇಕದ ಸೊಬಗನ್ನು ನೋಡುವುದೇ ಒಂದು ಭಾಗ್ಯ!

ಮಣ್ಣಿನ ಕಲಶಗಳಿಂದ ವೈರಾಗ್ಯಮೂರ್ತಿಯಾದ ಸ್ವಾಮಿಗೆ ಮೊದಲು ಜಲಧಾರೆ, ಅನಂತರ ಕ್ಷೀರ, ದಧಿ, ಎಳನೀರು, ಮಾವಿನ ಹಣ್ಣಿನ ರಸ, ಕಬ್ಬಿನ ರಸ, ಅರಶಿನ, ಕುಂಕುಮಕೇಸರಿ, ಚಂದನ, ಪುಷ್ಪಗಳ ಅಭಿಷೇಕ-ಅಟ್ಟಣೆಗಳ ಮೇಲಿನಿಂದ ಸ್ವಾಮಿಯ ಮಸ್ತಕ, ಭುಜ, ವಕ್ಷಸ್ಥಳಗಳ ಮೇಲೆ ಸಂತತ ಧಾರೆಯಾಗಿ ನಡೆದ ಈ ಅಭಿಷೇಕ-ಸಮ್ಮೇಳನಕ್ಕೆ ಬಂದವರ ಪಾಲಿಗೆ ಒಂದು ಚಿರಸ್ಮರಣೀಯ ಘಟನೆಯಾಗಿ ಉಳಿಯಿತು.

ಮಸ್ತಕಾಭಿಷೇಕದಿಂದ ಪ್ರಫುಲ್ಲಿತಗೊಂಡ ಸಾಹಿತಿಗಳ ಮನಸ್ಸು ಮಧ್ಯಾಹ್ನ ರತ್ನತ್ರಯ ಮಂಟಪದಲ್ಲಿ ನಡೆದ ಸಾಹಿತ್ಯ ವಿಚಾರಸಂಕಿರಣದಿಂದ ಮುದಗೊಂಡಿತು.

ಈ ಗೋಷ್ಠಿಯ ಅಧ್ಯಕ್ಷರಾದ ದೇ. ಜವರೇಗೌಡರು ಕನ್ನಡದ ಪ್ರಗತಿಯ ದಾರಿಯಲ್ಲಿ ಬಂದೊದಗಿರುವ ಅಡ್ಡಿ ಆತಂಕಗಳನ್ನು ವಿಶ್ಲೇಷಿಸಿ, ಅದು ಮುಕ್ತವಾಗಲು ಮಾಡಬಹುದಾದ ಕಾರ್ಯಗಳನ್ನು ವಿವರಿಸಿದರು.

ಎರಡು ವರ್ಷಗಳಲ್ಲಿ ಬಂದ ಕಥೆ ಕಾದಂಬರಿಗಳ ಹುಲುಸನ್ನು ತೀಕ್ಷ್ಣವಾಗಿ, ನಿಷ್ಪಕ್ಷಪಾತವಾಗಿ ವಿಶ್ಲೇಷಿಸುತ್ತಾ ಡಾ. ಹಾ. ಮಾ. ನಾಯಕರು ಬಹುಪಾಲು ಲೇಖಕರು ಜನಪ್ರಿಯತೆಯ ಮತ್ತಿನಲ್ಲೂ, ಮಾರುಕಟ್ಟೆಯ ಆಕರ್ಷಣೆಯಲ್ಲೂ ಅಗ್ಗದ ಕೃತಿಗಳನ್ನು ರಚಿಸಿ ತೃಪ್ತಿಪಡುತ್ತಿದ್ದಾರೆ ಎಂದು ವಿಷಾದಿಸಿ, ಸಾಹಿತ್ಯ ಕೃತಿಗಳ ಮಟ್ಟ ಉತ್ತಮಗೊಳ್ಳಬೇಕೆಂದು ಹಾರೈಸಿದರು.

ಎಂ. ರಾಮಚಂದ್ರ ಅವರು ಮಾತನಾಡುತ್ತ ಅನುವಾದ ಸಾಹಿತ್ಯ ಕನ್ನಡ ಸಾಹಿತ್ಯ ಬೆಳವಣಿಗೆಗೆ ಉಪಯುಕ್ತವೇ ಹೊರತು ಹಾನಿಯಲ್ಲವೆಂದು ಹೇಳಿ, ಆಕರ ಗ್ರಂಥಗಳ ಕೊರತೆಯನ್ನು ಸ್ಪಷ್ಟಪಡಿಸಿದರು. ಸಾಹಿತ್ಯ ನಿಷ್ಪಕ್ಷಪಾತ, ಋಜುವಾದ ವಿಮರ್ಶೆ ಬೆಳೆಯಲು ಅಗತ್ಯವೆಂದರು.

ವಿಚಾರ ಸಾಹಿತ್ಯವನ್ನು ಪ್ರಸ್ತಾಪಿಸಿದ ಮಿರ್ಜಿ ಅಣ್ಣಾರಾಯರು ವೈಜ್ಞಾನಿಕ ಸಾಹಿತ್ಯ ಬೆಳೆಯಲು ತಾಂತ್ರಿಕ ರಂಗದಲ್ಲಿರುವವರು ಪ್ರಯತ್ನಿಸಬೇಕೆಂದು ಹೇಳಿದರು.

ಪಂಡಿತ ನಾಗರಾಜ ಶಾಸ್ತ್ರಿಗಳು ಜೈನವಾಙ್ಮಯವನ್ನು ಕುರಿತು ಮಾತನಾಡಿದರು.

ಚಂದ್ರಶೇಖರ ಕಂಬಾರರು ಆಧುನಿಕ ಕಾವ್ಯದ ಒಲವು ನಿಲವುಗಳನ್ನು ವಿಮರ್ಶಿಸುತ್ತಾ, ಸಾಹಿತ್ಯದ ಬೆಲೆ ಕಟ್ಟುವಾಗ ಮೊದಲಿನ ಪದ್ಧತಿಗೆ ಭಿನ್ನವಾದ ಮಾರ್ಗದತ್ತ ದೃಷ್ಟಿ ಹರಿಸಬೇಕೆಂದರು.

ಕನ್ನಡ ನಾಟಕರಂಗದ ಆಗುಹೋಗುಗಳನ್ನು ವಿಮರ್ಶಿಸಿದ ಕ. ವೆಂ. ರಾಜಗೋಪಾಲರು ಹಲವಾರು ಉತ್ತಮ ಪ್ರಯೋಗಾರ್ಹ ನಾಟಕಗಳು ರಚಿತವಾಗಿದ್ದರೂ ಪ್ರೇಕ್ಷಕರ ಅಭಾವ ಹಾಗೂ ಪ್ರೋತ್ಸಾಹದ ಕೊರತೆಯಿಂದಾಗಿ ರಂಗಭೂಮಿಯ ಕಲೆ ಹೀನಸ್ಥಿತಿಗೆ ಬಂದಿದೆ ಎಂದು ವಿಷಾದಿಸಿದರು.

ಈ ವಿಚಾರಗೋಷ್ಠಿ ಮುಕ್ತಾಯವಾದ ಮೇಲೆ ಸಮ್ಮೇಳನಾಧ್ಯಕ್ಷರಾದ ಡಾ. ಉಪಾಧ್ಯೆ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ನಡೆಯಿತು.

ಅವರು ತಮ್ಮ ಉಪಸಂಹಾರ ಭಾಷಣದಲ್ಲಿ ನಾವೇ ದೊಡ್ಡವರೆಂಬ ಒಣಹೆಮ್ಮೆ ಬಂದರೆ ಜ್ಞಾನ ಬೆಳಗುವುದಿಲ್ಲವೆಂದು ಹೇಳಿದರು.

"ಸಾಹಿತಿಗಳ ಸ್ಥಾನವಾಗಿದ್ದ ಶ್ರವಣಬೆಳುಗೊಳದಲ್ಲಿ ವಿಶಾಲಕಾಯನಾದ ಬಾಹುಬಲಿ, ಕೀರ್ತಿ ಶಿಖರಕ್ಕೇರಿದ ಕವಿವರ್ಯರು, ಮಾನಸಕಂಬ, ಚಾವುಂಡರಾಯನ ಬಸದಿಗಳ ಎದುರು ನಿಂತಾಗ ನಾವೆಷ್ಟು ಸಣ್ಣವರೆಂದು ಅನಿಸುತ್ತದೆ. ಅದು ನಮ್ಮ ನೆನಪಿನಲ್ಲಿದ್ದರೆ ಸಾಕು. ಹೆಮ್ಮೆ ಬಾರದಿರಲು ಇಂತಹ ಕ್ಷೇತ್ರಕ್ಕೆ ಬರಬೇಕು"-ಎಂದರು. ಸಮ್ಮೇಳನದ ಅಗತ್ಯತೆಯನ್ನು ಕುರಿತು ಹೇಳುತ್ತಾ, "ಇಂತಹ ಸಮ್ಮೇಳನಗಳು ಉಪಯುಕ್ತ. ನಾನಾ ವಿಚಾರ ಧಾರೆ ಬರುತ್ತದೆ. ಪರಸ್ಪರ ಸಹಯೋಗದಿಂದ ತಿಳಿವಳಿಕೆ ಮೂಡುತ್ತದೆ. ಹಿರಿಯರಿಂದ ಸ್ಫೂರ್ತಿ, ಸಮಾನರಿಂದ ಸದ್ಗುಣ, ಸ್ನೇಹ, ಕಿರಿಯರಿಂದ ಉತ್ಸಾಹ, ಆನಂದ ಉಂಟಾಗುತ್ತದೆ"—ಎಂದರು.

ಸಾಹಿತ್ಯಸೇವೆಗೆ ಬಂದ ಸಾಹಿತಿಗಳಿಗೆ ಗೊಮ್ಮಟನ ಮಸ್ತಕಾಭಿಷೇಕ ದರ್ಶನದ ಅವಕಾಶ ಕಲ್ಪಿಸಿಕೊಟ್ಟ ಎನ್. ಸಿ. ಅನಂತರಾಜಯ್ಯನವರಿಗೆ ಕೃತಜ್ಞತೆಯನ್ನು ಅರ್ಪಿಸಿದರು.

ಸಮ್ಮೇಳನ ಲಾಭಕರವಾಗಿ ಯಶಸ್ವಿಯಾಗಿ ಮುಕ್ತಾಯವಾದುದಕ್ಕೆ ಶ್ರವಣಬೆಳುಗೊಳದ ಜನತೆ, ಹಾಗೂ ಸಮ್ಮೇಳನದ ಕಾರ್ಯಕರ್ತರಿಗೆ ಅವರು ವಂದಿಸಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಚಾರು ಕೀರ್ತಿ ಸ್ವಾಮಿಗಳಿಗೆ ಕಲಾವಿದ ವಿರೂಪಾಕ್ಷಯ್ಯನವರು ಬರೆದ ಕಲಾಕೃತಿಯನ್ನು ಅಧ್ಯಕ್ಷರು ಕಾಣಿಕೆಯಾಗಿ ಒಪ್ಪಿಸಿದರು.

ಸ್ವಾಗತಸಮಿತಿಯ ಪರವಾಗಿ ಎಸ್. ಸಿ. ಪದ್ಮಯ್ಯ ನವರೂ, ಪರಿಷತ್ತಿನ ಪರವಾಗಿ ವೆಂಕಟೇಶ ಸಾಂಗ್ಲಿ ಅವರೂ ವಂದನೆಗಳನ್ನು ಅರ್ಪಿಸಿದರು. ಅನಂತರ ಹಾಸನದ ರವೀಂದ್ರ ಕಲಾಕ್ಷೇತ್ರದ ಗೆಳೆಯರು ಅಭಿನಯಿಸಿದ ಕೈಲಾಸಂ ಅವರಿಂದ ರಚಿತವಾದ 'ಏಕಲವ್ಯ' ನಾಟಕದೊಂದಿಗೆ ಮೂರು ದಿನಗಳ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾಯಿತು.

ಗೊಮ್ಮಟ ನಗರದಲ್ಲಿಅತಿಥಿಗಳಿಗೂ, ಪ್ರತಿನಿಧಿಗಳಿಗೂ ಯೋಗ್ಯರೀತಿಯ ವಸತಿ ಕಲ್ಪಿಸಿಕೊಡಲಾಗಿತ್ತು. ಕೃಷ್ಣಪ್ಪ ಮತ್ತು ಶ್ರೀನಿವಾಸೈಯ್ಯಂಗಾರ್ ಅವರ ನೇತೃತ್ವದಲ್ಲಿ ಸೊಗಸಾದ ಊಟ-ಫಲಹಾರಗಳ ವ್ಯವಸ್ಥೆ ಏರ್ಪಾಡಾಗಿತ್ತು.

ಭಗವಾನ್ ಬಾಹುಬಲಿಯ ಗೊಮ್ಮಟ ಶಿಲ್ಪಕ್ಕೆ ಹೊಯ್‌ಕೈಯಾಗಿ ನಿಂತ ಸಾಹಿತ್ಯ ಗೊಮ್ಮಟ ಡಾ. ಆದಿನಾಥ ನೇಮಿನಾಥ ಉಪಾಧ್ಯೆ ಅವರ ನೇತೃತ್ವದಲ್ಲಿ ನಡೆದ ಈ ಮೂರು ದಿನಗಳ ಸಮ್ಮೇಳನ ಬಂದವರಿಗೆಲ್ಲಾ ಲಾಭದಾಯಕವಾಗಿ, ಚಿರಸ್ಮರಣೀಯ ಘಟನೆಯಾಗಿ ಉಳಿಯುವ ಸಮ್ಮೇಳನವಾಗಿ ಮುಕ್ತಾಯವಾಯಿತು.

[ಈ ವರದಿಯನ್ನು ವೃತ್ತಪತ್ರಿಕೆಗಳ ಹಾಗೂ ಪ್ರತ್ಯಕ್ಷದರ್ಶಿಗಳ ಸಹಾಯದಿಂದ ಸಿದ್ಧಪಡಿಸಲಾಗಿದೆ. ಬಹಿರಂಗ ಅಧಿವೇಶನದಲ್ಲಿ ಸ್ವೀಕೃತವಾದ ಗೊತ್ತುವಳಿಗಳನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.

—ಸಂ]

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ ಕೇವಲ ಅಲಂಕಾರ ಪ್ರಾಯವೆಂದೂ, ಇದರಿಂದ ಏನನ್ನೂ ಸಾಧಿಸಲಾಗುವುದಿಲ್ಲವೆಂದೂ ಕೆಲವು ಜನರು ತಿಳಿಯಬಹುದು. ನನ್ನ ದೃಷ್ಟಿಯಿಂದ ಮಾತ್ರ ಇದೊಂದು ದೊಡ್ಡ ಹೊಣೆ. ಅಧ್ಯಕ್ಷರಾದವರು ತಮ್ಮ ಕ್ಷೇತ್ರದಲ್ಲಿ ವಿಶೇಷ ದುಡಿದು, ವಾಙ್ಮಯಸೇವೆ ಮತ್ತು ಸಂಶೋಧನೆಮಾಡಿ ಈ ಸ್ಥಾನಕ್ಕೆ ಹೆಚ್ಚಿನ ಮೆಚ್ಚುಗೆ ತರಬೇಕು. ಇಂಥ ಹಿರಿಯರಿಂದ ಚಿಕ್ಕವರಿಗೆ ಸ್ಫೂರ್ತಿ ಮತ್ತು ಮಾರ್ಗ ದರ್ಶನ ದೊರೆಯಬೇಕು. ನಾನಂತೂ ಇಂದೊಂದು ವಿದ್ವಜ್ಜನರ ಮತ್ತು ಮಿತ್ರರ ಮೆಚ್ಚುಗೆಯೆಂದು ತಿಳಿಯುತ್ತೇನೆ.

—ಎ. ಎನ್. ಉಪಾಧ್ಯೆ

ತಾ. ೨೮-೫-೧೯೬೭ರಂದು ಶ್ರವಣ ಬೆಳಗೊಳದಲ್ಲಿ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ

ಬಹಿರಂಗಾಧಿವೇಶನದಲ್ಲಿ ಮಂಡಿಸಲ್ಪಟ್ಟ ಅಂಗೀಕೃತವಾದ ನಿರ್ಣಯಗಳು

೧ ಸಂತಾಪ ಸೂಚನೆ:

ಕನ್ನಡನಾಡು-ನುಡಿಯ ಸೇವೆಯನ್ನು ಮಾಡಿದ ಕೆಳ ಕಂಡ ಮಹನೀಯರುಗಳು ಕಳೆದ ಸಾಹಿತ್ಯ ಸಮ್ಮೇಳನ ದಿಂದೀಚೆಗೆ ನಿಧನರಾದ ಬಗ್ಗೆ ಈ ಸಭೆಯು ತನ್ನ ಸಂತಾಪ ವನ್ನು ಸೂಚಿಸುವುದರೊಂದಿಗೆ ಅವರುಗಳಿಗೆ ತನ್ನ ಗೌರವ ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಶ್ರೀಗಳಾದ—

ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ
ಡಿ. ವಿ. ಚಿತ್ತಾಲ್
ಜಿ. ಪರಮಶಿವಯ್ಯ
ಗಮಕಿ ಎಂ. ಚಂದ್ರಶೇಖರಯ್ಯ
ಹಾರ್ಮೋನಿಯಂ ವಿದ್ವಾನ್ ಅರುಣಾಚಲಪ್ಪ
ಕೆ. ಅನಂತರಾಮಯ್ಯ
ಕೆ. ರೇವಣ್ಣ
ಜನರಲ್ ತಿಮ್ಮಯ್ಯ
ಮನೀಷಿ ಡೇ
ಕೆ. ಜಿ. ಕುಂದಣಗಾರ್
ಭಾಭಾ
ಲರೋಯ
ಶ್ರೀನಿವಾಸಮಲ್ಯ
ತೀ. ನಂ. ಶ್ರೀಕಂಠಯ್ಯ
ಕೃಷ್ಣಗಿರಿ ಕೃಷ್ಣರಾವ್
ಕಂಡಗಲ್ ಹನುಮಂತರಾವ್
ನಟ ಬಸವರಾಜು
ಬಿ. ಕೆ. ಪದ್ಮನಾಭರಾವ್
ಶ್ರೀಮತಿ ದ. ರಾ. ಬೇಂದ್ರೆ
ಹೆಮ್ಮಿಗೆ ದೇಶಿಕಾಚಾರ್
ಸಂಗೀತರತ್ನ ಟಿ. ಚೌಡಯ್ಯ
ಎಂ. ಕೆ. ತಿರುನಾರಾಯಣ ಅಯ್ಯಂಗಾರ್
ಮುರುಡೇಶ್ವರ ಗವಾಯ್
ಬಿ. ಲಕ್ಷ್ಮೀನಾರಾಯಣರಾವ್
ಸೊಗವೀರಶರ್ಮ
ಮಾಣಿಕರಾವ್ ವಕೀಲ್
ಯು. ನಾರಾಯಣಭಟ್ಟ
ಡಾ॥ ಚಕ್ರಪಾಣಿ
ಐ. ಸಿ. ಸುಬ್ಬಯ್ಯ

—ಸಮ್ಮೇಳನಾಧ್ಯಕ್ಷರಿಂದ

೨ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವಿಸ್ತರಣೆಯನ್ನು ಕುರಿತು ರಾಜ್ಯ ಸರ್ಕಾರಕ್ಕೆ ಮಾಡಿಕೊಂಡ ಮನವಿಯನ್ನು ಮನ್ನಿಸಿ ಮೈಸೂರು ಸರ್ಕಾರದವರು ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯಧನವನ್ನು ರೂ. ೨,೫೦೦ರಿಂದ ರೂ. ೨೫,೦೦೦ಕ್ಕೆ ಹೆಚ್ಚಿಸಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಆರ್ಥಿಕ ಬೆಂಬಲವನ್ನು ಕೊಟ್ಟಿರುವುದಕ್ಕಾಗಿ ಮೈಸೂರು ಸರ್ಕಾರಕ್ಕೆ ಈ ಸಮ್ಮೇಳನವು ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

—ಸಮ್ಮೇಳನಾಧ್ಯಕ್ಷರಿಂದ

೩ ಪರಿಷತ್ತು ನಿರೂಪಿಸಿಕೊಂಡಿರುವ ಯೋಜನೆಗಳು ಕಾರ್ಯಗತವಾಗಬೇಕಾದರೆ ಕನಿಷ್ಠ ಪಕ್ಷ ವಾರ್ಷಿಕ ಸಹಾಯ ಧನವು ಒಂದು ಲಕ್ಷ ರೂಪಾಯಿಗಳಾದರೂ ಬೇಕು. ಈ ಅವಶ್ಯಕತೆಗಳನ್ನು ಗಮನಿಸಿ ಮೈಸೂರು ಸರ್ಕಾರವು ಕನ್ನಡ

ಸಾಹಿತ್ಯ ಪರಿಷತ್ತಿನ ವಾರ್ಷಿಕ ಧನ ಸಹಾಯವನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ ಕೊಡಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು : ಶ್ರೀ ಸಿ. ಆರ್. ಶ್ರೀನಿವಾಸ ಅಯ್ಯಂಗಾರ್
ಅನುಮೋದಕರು : ಶ್ರೀ ಟಿ. ತೋಂಟದಾರ್ಯ

೪ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ೫೦ ವರ್ಷಗಳಿಗೂ ಮಿಕ್ಕಿ ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಈ ೫೦ ವರ್ಷಗಳ ಸೇವೆಯ ನೆನಪಿಗಾಗಿ ಸುವರ್ಣ ಮಹೋತ್ಸವವನ್ನು ನಡೆಸುವುದು ಯುಕ್ತವಾಗಿದೆ. ಈ ಉತ್ಸವವನ್ನು ಇದೇ ವರ್ಷದ ಡಿಸೆಂಬರ್ ತಿಂಗಳೊಳಗಾಗಿ ವೈಭವದಿಂದ ಆಚರಿಸಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ. ಈ ಉತ್ಸವಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಸ್ಥಾನಿಕಸಂಸ್ಥೆಗಳೂ ಹಾಗೂ ಕರ್ಣಾಟಕದ ಮಹಾಜನರೂ ಧನ ಸಹಾಯ ಮಾಡಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು : ಡಾ|| ಎಸ್. ರಾಮಕೃಷ್ಣ
ಅನುಮೋದಕರು : ಶ್ರೀ ಕಾ. ಸ. ಧರಣೇಂದ್ರಯ್ಯ

೫ ಅಚ್ಚಕನ್ನಡ ಪ್ರದೇಶವಾದ ಕಾಸರಗೋಡು ತಾಲ್ಲೂಕನ್ನು ಚಂದ್ರಗಿರಿ ನದಿಯ ಉತ್ತರ ಭಾಗ—ಕೂಡಲೇ ಮೈಸೂರಿಗೆ ಸೇರಿಸುವಂತೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಹಾಗೂ ಮೈಸೂರು ಸರ್ಕಾರಗಳನ್ನು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ. ಅಲ್ಲದೆ ಇದಕ್ಕಾಗಿ ನೇಮಕವಾದ ಮಹಾಜನ ಆಯೋಗವು ಕಾಸರಗೋಡು ಜನತೆಯ ೧೧ ವರ್ಷಗಳ ಬೇಡಿಕೆಯನ್ನು ಮನ್ನಿಸಿ ನ್ಯಾಯವಾದ ತೀರ್ಮಾನಗಳನ್ನು ಮಾಡುವಂತೆಯೂ ಕೇಳಿಕೊಳ್ಳುತ್ತದೆ.

ಸೂಚಕರು : ಡಾ|| ಎಂ. ವಿ. ಬಳ್ಳುಳ್ಳಾಯ
ಅನುಮೋದಕರು : ವೈ. ಎಸ್. ಹರಿಹರಭಟ್

೬ ಮಹಾರಾಷ್ಟ್ರದಲ್ಲಿ ಅಲ್ಪಸಂಖ್ಯಾತರಾಗಿರುವ ಕನ್ನಡಿಗರಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಹಾರಾಷ್ಟ್ರ ಸರ್ಕಾರವನ್ನೂ ಮತ್ತು ಕೇಂದ್ರ ಸರ್ಕಾರವನ್ನೂ ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ಸೂಚಕರು : ಶ್ರೀ ಎನ್. ಎಸ್. ರಾಮಪ್ರಸಾದ್
ಅನುಮೋದಕರು : ಡಾ|| ನಾರಾಯಣರಾವ್ ಪಿಸ್ಸೆ

೭ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಅಧ್ಯಕ್ಷರೂ ಸಂಘಸಂಸ್ಥೆಗಳ ಸಮ್ಮೇಳನದಲ್ಲಿ ಪ್ರತಿನಿಧಿಗಳೂ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟು ಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಶಾಖೆಗಳನ್ನು ಏರ್ಪಾಟು ಮಾಡುವುದು, ಕರ್ನಾಟಕ ಸಂಘಗಳೂ ಜಿಲ್ಲಾ ಶಾಖೆ ಮತ್ತು ಕೇಂದ್ರ ಪರಿಷತ್ತುಗಳ ನಡುವೆ ಹೊಂದಾಣಿಕೆಯನ್ನು ಕಲ್ಪಿಸಲು ಅನುಕೂಲವಾದ ವಾತಾವರಣ ಉಂಟುಮಾಡುವುದು-ಈ ದೃಷ್ಟಿಯಿಂದ ಪರಿಷತ್ತಿನ ಅಂಗರಚನೆಯಲ್ಲಿ ಸೂಕ್ತ ತಿದ್ದುಪಾಟುಗಳನ್ನು ಮಾಡಬೇಕೆಂದು ಈ ಸಮ್ಮೇಳನವು ಪರಿಷತ್ತನ್ನು ಪ್ರಾರ್ಥಿಸುತ್ತದೆ.

ಸೂಚಕರು : ಶ್ರೀ ಸಿ. ಆರ್. ಶ್ರೀನಿವಾಸ ಅಯ್ಯಂಗಾರ್
ಅನುಮೋದಕರು : ಶ್ರೀ ಟಿ. ಶಿವಾನಂದಸ್ವಾಮಿ

ಸರ್ಕಾರದವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರಬೇಕೆಂದು ಕೇಳುತ್ತಿರುವಾಗ ವ್ಯವಹಾರ ಸೌಕರ್ಯಕ್ಕೆ ಅತ್ಯಾವಶ್ಯಕವಾದ ಕನ್ನಡ ಟೈಪ್‌ರೈಟರನ್ನು ಸರ್ಕಾರದವರು ಅದರ ಸರ್ವಸ್ವಾಮ್ಯ ಸಹಿತ ತೆಗೆದುಕೊಂಡ ಮೇಲೆ ಸಾರ್ವಜನಿಕರಿಗೆ ೧೧೬೦ ರೂ.ಗಳಿಗೆ ಮಾರುತ್ತಿದ್ದರು. ಆ ಯಂತ್ರದ ಮಾರಾಟವನ್ನು ಈಗ ಕಂಪೆನಿಗೇ ಕೊಟ್ಟಿರುವುದರಿಂದ ಕಂಪೆನಿಯು ಆ ಯಂತ್ರದ ಬೆಲೆಯನ್ನು ಈಗ ೧೫೦೦-೧೪೦೦ ರೂ.ಗಳವರೆಗೆ ಹೆಚ್ಚಿಸಿರುತ್ತದೆಂದು ತಿಳಿದುಬಂದಿದೆ. ಭಾಷಾಭಿವೃದ್ಧಿಯ ದೃಷ್ಟಿಯಿಂದ ಆವಶ್ಯಕವಾದರೆ ಸರ್ಕಾರದವರು ಸಬ್ಸಿಡಿ (ಸಹಾಯ ಧನ) ಯನ್ನು ಕೊಟ್ಟಾದರೂ ಕನ್ನಡ ಟೈಪ್‌ರೈಟರನ್ನು ಮೊದಲಿನ ಬೆಲೆಗೇ ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ಸೂಚಕರು : ಶ್ರೀ ಎನ್. ಎಸ್. ರಾಮಪ್ರಸಾದ್
ಅನುಮೋದಕರು : ಶ್ರೀ ಆರ್. ಎಚ್. ರಾಜು

೯ ಪ್ರಕಟವಾಗದಿರುವ ಮೂಲ ಕನ್ನಡ ಗ್ರಂಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟ ಮಾಡಬೇಕು. ಅದು ಅದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸತಕ್ಕದ್ದು. ಬೇಕಾದ ಸಹಾಯವನ್ನು ಕೇಂದ್ರ ಸರ್ಕಾರದಿಂದ ಪಡೆಯತಕ್ಕದ್ದೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು : ಶ್ರೀ ನಾಭಿರಾಜಯ್ಯ
ಅನುಮೋದಕರು : ಶ್ರೀ ಟಿ. ಶಿವಾನಂದಸ್ವಾಮಿ

೧೦ ಆಯಾ ವರ್ಷದಲ್ಲಿ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ

ಗ್ರಂಥಗಳ ಗ್ರಂಥಸೂಚಿಯನ್ನೂ ಪರಿಷತ್ತು ಪ್ರತಿ ವರ್ಷವೂ ಪ್ರಕಟಿಸಬೇಕು.

ಸೂಚಕರು : ಶ್ರೀ ಶ್ರೀನಿವಾಸ ಉಡುಪ
ಅನುಮೋದಕರು : ಶ್ರೀ ಆರ್. ಎಚ್. ರಾಜು

೧೧ ಕನ್ನಡನಾಡಿನ ಶಾಲೆಗಳಲ್ಲಿ ಪ್ರಾರ್ಥನೆಯ ಪದ್ಯವಾಗಿ ಕನ್ನಡನಾಡ ಗೀತೆಯೊಂದನ್ನು ಹಾಡುವ ಪದ್ಧತಿಯನ್ನು ರೂಢಿಗೆ ತರಲು ತಕ್ಕ ವ್ಯವಸ್ಥೆಯನ್ನು ಮಾಡಲು ಸರ್ಕಾರವನ್ನು ಮತ್ತು ವಿದ್ಯಾ ಇಲಾಖೆಯನ್ನೂ ಈ ಸಭೆ ಪ್ರಾರ್ಥಿಸುತ್ತದೆ.

ಸೂಚಕರು : ಶ್ರೀ ಜಿನರಾಜ ಸರಾಫ್
ಅನುಮೋದಕರು : ಶ್ರೀ ನಾಭಿರಾಜಯ್ಯ

೧೨ ರಾಜ್ಯದ ವಿಧಾನ ಸಭೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಒಬ್ಬ ಪ್ರತಿನಿಧಿಯನ್ನು ತೆಗೆದುಕೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ಸೂಚಕರು : ಶ್ರೀ ಜಿನರಾಜ ಸರಾಫ್
ಅನುಮೋದಕರು : ಶ್ರೀ ಟಿ. ಶಿವಾನಂದಸ್ವಾಮಿ

೧೩ ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ನಮ್ಮ ಶಿಕ್ಷಣ ಸಂಸ್ಥೆಗಳೂ ವಿಶ್ವವಿದ್ಯಾನಿಲಯಗಳೂ ಆಡಳಿತ ಭಾಷೆಯನ್ನಾಗಿ ಕಡ್ಡಾಯವಾಗಿ ಜಾರಿಗೆ ತರಲು ಸರ್ಕಾರವು ತೀವ್ರ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು ಎಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ಸೂಚಕರು : ಪ್ರೊ॥ ದೇ. ಜವರೇ ಗೌಡ
ಅನುಮೋದಕರು : ಶ್ರೀ ಜಿ. ಅಶ್ವತ್ಥನಾರಾಯಣ

ಸ್ತ್ರೀಕಾರ

ಕಾದಂಬರಿ

ಸಿಂಹಾಸನ: ಲೇ. ರಮಾತನಯ, ಪ್ರ. ಪುರೋಗಾಮಿ ಸಾಹಿತ್ಯಸಂಘ, ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: vi+೯೦, ಆಕಾರ: ಕ್ರೌನ್ ಅ. ದಳ, ಬೆಲೆ: ರೂ. ೧-೭೫, ೧೯೬೭.

ಒಲವಿನ ಒಸರು: ಲೇ. ಪುರೋಗಾಮಿ ಸಾಹಿತ್ಯ ಸಂಘ, ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: viii+೧೪೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ಕಥಾ ಸಂಕಲನ

ಕೆಂಪುದೀಪ: ಲೇ. ಎನ್. ನಾರಾಯಣ ಬಲ್ಲಾಳ, ಪ್ರ. ಪುರೋಗಾಮಿ ಸಾಹಿತ್ಯ ಸಂಘ, ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: vii+೧೩೮, ಆಕಾರ: ಕ್ರೌನ್ ಅಷ್ಟದಳ, ಬೆಲೆ; ರೂ. ೨-೦೦, ೧೯೬೭.

ನಾಟಕ

ರೂಪಚಕ್ರ: ಲೇ. ವಿ. ನಾರಾಯಣಸ್ವಾಮಿ, ಪ್ರ: ಗೀತಾ ಏಜನ್ಸೀಸ್, ಸೌರಾಷ್ಟ್ರಪೇಟೆ, ಬೆಂಗಳೂರು-೨ ಪುಟ: ೬೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ೧೯೬೭.

ರಾಸಲೀಲೆ: ಲೇ. ಸಮೇತನಹಳ್ಳಿ ರಾಮರಾಯ, ಪ್ರ: ರಾಸಪ್ರಕಾಶನ, ಡಿ-೫, ೧೨೩೫, ಅಫಿಷಿಯಲ್ ಕ್ವಾರ್ಟರ್ಸ್, ಮಂಡ್ಯ, ಪುಟ: ೫೨-೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೨೫, ೧೯೬೭.

ಜೀವಚ್ಛವ: ಲೇ. ಜಿ. ಜೆ. ಹರಿಜಿತ್, ಪ್ರ: ಭುವನ ಭಾರತಿ ಪ್ರಕಾಶನ, ಬೆಂಗಳೂರು, ಪುಟ: ೫೦, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ಕವನ ಸಂಕಲನ

ಮಣ್ಣಿನ ಹಾಡು: ಲೇ. ಶ್ರೀ ಕೃಷ್ಣ, ಆಲನಹಳ್ಳಿ, ಪ್ರ: ಸಮೀಕ್ಷ ಪ್ರಕಾಶನ, ನಂ. ೧೦೩೨, ಗೀತಾರೋಡು, ಚಾಮರಾಜಪುರಂ, ಮೈಸೂರು, ಪುಟ: vii+೩೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ೧೯೬೬.

ಏಕಾಂತ: ಲೇ. ಕೆ. ಎನ್. ಶಿವಪ್ಪ, ಪ್ರ: ಸಂಜಯ ಪ್ರಕಾಶನ, ೪೫೦೪/೭, ಎನ್. ಆರ್. ಮೊಹಲ್ಲ, ಮೈಸೂರು, ಪುಟ: viii+೪೦, ಆಕಾರ: ಕ್ರೌನ್ ಅಷ್ಟ ದಳ, ಬೆಲೆ: ರೂ. ೧-೫೦, ೧೯೬೦.

ವಚನ ಸಾಹಿತ್ಯ

ಶೀಲ ಸಂಪಾದನೆ: ಲೇ. ಶ್ರೀ ಜ. ಚ. ನಿ., ಪ್ರ. ಶಿವಾದ್ವೈತ ತತ್ವಪ್ರಚಾರ ಕೇಂದ್ರ, ಶ್ರೀ ಗುರುಕುಮಾರಾ ಶ್ರಮ, ಗಿರಿಯಪುರ, ಚಿಕ್ಕಮಗಳೂರು ಜಿಲ್ಲೆ, ಪುಟ: xvi+೨೫೦, ಬೆಲೆ: ರೂ. ೨-೫೦, ೧೯೬೭.

ಕಂಡ ಕಲ್ಯಾಣ: ಲೇ. ಶ್ರೀ ಜ. ಚ. ನಿ., ಪ್ರ: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ನಂ. ೪೯, ಎಚ್. ಬಿ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪, ಪುಟ: ೬+೩೭, ಬೆಲೆ: ರೂ. ೦-೩೭, ೧೯೬೭.

ಪ್ರಬಂಧ

ಉಪಾಯನ: ಲೇ. ಪ್ರೊ. ಡಿ. ಎಲ್. ನರಸಿಂಹಾ ಚಾರ್ ಅವರಿಗೆ ಅವರ ಮಿತ್ರರೂ ಶಿಷ್ಯರೂ ಒಪ್ಪಿಸಿದ ಪ್ರಬಂಧಗಳ ಸಂಪುಟ, ಪ್ರ: ಪ್ರೊ. ಡಿ ಎಲ್. ನರಸಿಂಹಾ ಚಾರ್ಯರ ಸಂಭಾವನಾ ಗ್ರಂಥ ಪ್ರಕಾಶನ ಸಮಿತಿ, ನಂ ೬೮, ೫ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ಪುಟ: xxiv+೪೨೨, ಬೆಲೆ: ರೂ. ೨೫-೦೦, ೧೯೬೭.

ಜೀವನ ಚರಿತ್ರೆ

ಶ್ರೀ ಜಗದ್ಗುರು ಜಯದೇವ ದಿಗ್ವಿಜಯ: ಲೇ. ಡಾ. ಕಣಕುಪ್ಪಿ ಕೊಟ್ಟೂರು ಬಸವಪ್ಪ, ಪ್ರ. ಕಣಕುಪ್ಪಿ ಗುರು ಪಾದಪ್ಪ, ಜಯದೇವ ಪ್ರೆಸ್, ದಾವಣಗೆರೆ, ಪುಟ: iv+vi+viii+೨೮೮+೯೨, ಬೆಲೆ: ರೂ. ೧೦-೦೦, ೧೯೬೬.

ಮಾಸ ಪತ್ರಿಕೆ

ಜ್ಞಾನಸುಧಾ: (ತ್ರೈಮಾಸಿಕ ಪತ್ರಿಕೆ) ಸಂ. ಕೆ. ಬಿ. ಬಸವರಾಜ್, ಪ್ರ. ಜ್ಞಾನಜ್ಯೋತಿ ಕಲಾಮಂದಿರ (ರಿ), ೭೨, ಬಳೇಪೇಟೆ, ಬೆಂಗಳೂರು-೨, ಪುಟ: ೧೮೨, ಬೆಲೆ: ಬಿಡಿ ಸಂಚಿಕೆ ಸಂಚಿಕೆ ೧ಕ್ಕೆ ರೂ. ೧-೦೦, ೧೯೬೭.

ಸುದ್ದಿ ಸಂಗ್ರಹ

ಪಂಪನ ತಮ್ಮ ಜಿನವಲ್ಲಭನ ಶಾಸನ

ಕೆಲವು ತಿಂಗಳ ಹಿಂದೆ ಮೈಸೂರಿನಲ್ಲಿ ನಡೆದ ಇಪ್ಪತ್ತೆಂಟನೆಯ ಇತಿಹಾಸ ಸಮ್ಮೇಳನದಲ್ಲಿ ಸುಪ್ರಸಿದ್ಧ ವಿದ್ವಾಂಸರಾದ ಡಾ. ಎನ್. ವೆಂಕಟರಮಣಯ್ಯ ಅವರು ಈಚೆಗೆ ಆಂಧ್ರಪ್ರದೇಶದ ವೇಮುಲವಾಡದ ಸಮೀಪದಲ್ಲಿ ದೊರೆತ ಜಿನವಲ್ಲಭನ ಶಾಸನವನ್ನು ಕುರಿತು ಒಂದು ಅಮೂಲ್ಯವಾದ ಲೇಖನವನ್ನು ಓದಿದರು. ಈ ಶಾಸನದ ಆಧಾರದ ಮೇಲೆ ಜಿನವಲ್ಲಭನು ಕನ್ನಡದ 'ನಾಡೋಜ' ಪಂಪ ಕವಿಯ ಸಹೋದರನೆಂಬ ಸಂಗತಿ ಬೆಳಕಿಗೆ ಬಂದಿದೆ. ಅವನು ಕವಿತಾಗುಣಾರ್ಣವನಾದ ಪಂಪನು ತನ್ನ ಅಣ್ಣನೆಂದು ಹೇಳಿಕೊಂಡಿರುವುದಲ್ಲದೆ, ಅವನು ಕೊಡುವ ವಂಶಾವಳಿಗೂ, ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಕೊಡುವ ವಿವರಗಳಿಗೂ ಸಾಮ್ಯವಿದೆ. ಪಂಪನು ತನ್ನ ತಂದೆ ಅಭಿರಾಮದೇವರಾಯನೆಂದು ಹೇಳಿದ್ದರೆ ಇಲ್ಲಿ ಜಿನವಲ್ಲಭನು ಭೀಮ ಎಂದು ಹೇಳಿದ್ದಾನೆ. ಪಂಪನಿಗೆ ಅರಿಕೇಸರಿ ಕೊಟ್ಟ ಅಗ್ರಹಾರವಿದ್ದ ಬಚ್ಚಿಸಾಸಿರವೆಂಬಲ್ಲಿ, ಈ ಶಾಸನದಲ್ಲಿ ಸಬ್ಬಿ ಎಂದಿದೆ. ಇವಿಷ್ಟೇ ಶಾಸನದಲ್ಲಿ ಹೊರಪಡುವ ವ್ಯತ್ಯಾಸಗಳು.

ಈ ಶಾಸನವು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ರಚಿತವಾಗಿದೆ. ಇಲ್ಲಿ ಬಂದಿರುವ ತೆಲುಗು ಕಂದಪದ್ಯಗಳು ತೆಲುಗು ಭಾಷೆಯಲ್ಲೇ ಅತ್ಯಂತ ಪ್ರಾಚೀನವೆಂದು ಹೇಳಲಾಗಿದೆ. ಈ ರೋಮಾಂಚಕ ಸುದ್ದಿಯನ್ನು ಪ್ರಕಟಿಸಿರುವ ವೆಂಕಟರಮಣಯ್ಯನವರಿಗೆ ಕನ್ನಡಿಗರು ಕೃತಜ್ಞರಾಗಿದ್ದಾರೆ.

ಧಾರವಾಡದಲ್ಲಿ ವಿಚಾರ ಸಂಕಿರಣ

'ಕಾವ್ಯದ ಅರ್ಥವ್ಯಾಪ್ತಿ ಮತ್ತು ಪ್ರಯೋಜನಗಳು' ಎಂಬ ವಿಷಯದ ಮೇಲೆ ಮನೋಹರ ಗ್ರಂಥಮಾಲೆ ಮತ್ತು ಮನ್ವಂತರ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ಒಂದು ವಿಚಾರ ಸಂಕಿರಣವು ಕಳೆದ ಮೇ ತಿಂಗಳು ಧಾರವಾಡದಲ್ಲಿ ನಡೆಯಿತು. ಸರ್ವಶ್ರೀ ದ. ರಾ. ಬೇಂದ್ರೆ, ಕೀರ್ತಿನಾಥ ಕುರ್ತಕೋಟಿ, ಗಿರೀಶ ಕಾರ್ನಾಡ, ಯು. ಆರ್. ಅನಂತಮೂರ್ತಿ, ಚಂದ್ರಶೇಖರ ಕಂಬಾರ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಜಿ. ಎಸ್. ಅಮೂರ, ಚಂದ್ರಶೇಖರ ಪಾಟೀಲ, ಗೋವಿಂದರಾಜ ಗಿರಡ್ಡಿ, ಜಿ. ಎಚ್. ನಾಯಕ, ಜಿ. ಎಸ್. ಸಿದ್ದಲಿಂಗಯ್ಯ, ಬಿ. ವಿ. ಕಾರಂತ, ವೈ. ಎನ್. ಕೆ., ಪಾ. ವೆಂ. ಆಚಾರ್ಯ, ಸಿ. ಎಲ್. ಸುಬ್ರಹ್ಮಣ್ಯಂ, ಬಿ. ಟಿ. ದೇಸಾಯಿ, ಜಿ. ಎ. ಜಾಲಿಹಾಳ, ಎಂ. ರಮೇಶ ಮುಂತಾದ ಲೇಖಕರು ಭಾಗವಹಿಸಿದ್ದರು.

ಬೇಂದ್ರೆಯವರ ಸಹೃದಯ ತಂತ್ರ-ಎಂಬ ಭಾಷಣದ ಮೇಲೂ, ಕುರ್ತಕೋಟಿ ಅವರ ಕವಿತೆಯ ಅನುಭವ ಮತ್ತು ಅಭಿವ್ಯಕ್ತಿ ಇವುಗಳನ್ನು ಕುರಿತ ಪ್ರಬಂಧದ ಬಗೆಗೂ, ಚಂದ್ರಶೇಖರ ಕಂಬಾರರ ಕಾವ್ಯದಲ್ಲಿ ಪ್ರತಿಮೆ ಲೇಖನದ ಬಗೆಗೂ, ಬಿ. ವಿ. ಕಾರಂತರ ಕನ್ನಡದಲ್ಲಿ ಲಯತತ್ವದ ಲೇಖನದ ಬಗೆಗೂ, ಅನಂತಮೂರ್ತಿ ಅವರು ಬೇಂದ್ರೆ ಅವರ ಒಟ್ಟು ಕಾವ್ಯವನ್ನು ಕುರಿತು ಮಾಡಿದ ವಿಮರ್ಶೆಯ ಬಗೆಗೂ, ಅವರದೇ ಆದ ಕಾದಂಬರಿ ಸಂಸ್ಕಾರದ ಬಗೆಗೂ ವಿಪುಲವಾದ ಚರ್ಚೆ ನಡೆಯಿತು.

ವಿಚಾರವಂತರ ಈ ಬಗೆಯ ಸಮ್ಮೇಳನ-ಗೋಷ್ಠಿಗಳಿಂದ ಯೋಗ್ಯರೀತಿಯ ಸಾಹಿತ್ಯ ವಿಮರ್ಶೆ ಬೆಳೆಯಲು ನೆರವಾಗುವುದೆಂದು ಆಶಿಸಬಹುದಾಗಿದೆ.

ಬೆನಗಲ್ ಶಿವರಾಯರ ಪತ್ರಿಕಾಸೇವೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಮದರಾಸಿನಲ್ಲಿ ಹಬ್ಬಿ ಭಾರತಮಾತೆಯ ಮಡಿಲಲ್ಲಿ ಹೂ ಬಿಟ್ಟು, ಅಂತರರಾಷ್ಟ್ರೀಯವಾಗಿ ಸೌರಭ ಬೀರಿದ ಬೆನಗಲ್ ಸೋದರರ ಕೀರ್ತಿ-ಹಾಗೂ ಸಾಧನೆ ಕನ್ನಡಿಗರ ಹೆಮ್ಮೆಯ ಸಂಗತಿಯಾಗಿದೆ.

ಇತ್ತೀಚೆಗೆ ಬೆನಗಲ್ ಶಿವರಾಯರು ತಮ್ಮ ಪತ್ರಿಕೋದ್ಯಮದ ಸುವರ್ಣ ಮಹೋತ್ಸವವನ್ನು ಆಚರಿಸಿದಾಗ ನಾಡಿನ ಪ್ರತಿಭಾವಂತರೆಲ್ಲರೂ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಗೌರವ ಸಲ್ಲಿಸಿದರು.

ಶ್ರೀ ಬೆನಗಲ್ ಶಿವರಾಯರು ೧೯೧೧ರಲ್ಲಿ ಮದರಾಸಿನ

ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವ್ಯಾಸಂಗಮಾಡಿ, ತಮ್ಮ ಸಹೋದರ ಸಂಜೀವರಾಯರು ಪ್ರೊಫೆಸರರಾಗಿದ್ದ ಕಾಶಿ ವಿಶ್ವವಿದ್ಯಾನಿಲಯಕ್ಕೆ ಅಧ್ಯಾಪಕರಾಗಿ ಸೇರಿದರು. ಮುಂದೆ ಶ್ರೀಮತಿ ಆನಿಬೆಸಂಟರ ಪ್ರಭಾವಕ್ಕೆ ಸಿಲುಕಿ ಗೋಖಲೆಯ ಮಾರ್ಗದರ್ಶನದಲ್ಲಿ ತಮ್ಮ ಬಾಳನ್ನು ರೂಪಿಸಿಕೊಂಡರು. ಅಲ್ಲದೆ ಅವರು ಶ್ರೀ ಅರವಿಂದರ ಬರಹಗಳಿಂದ ಪ್ರಭಾವಿತರಾದರು. ಮುಂದೆ ಬೆಸೆಂಟರು ಸ್ಥಾಪಿಸಿದ್ದ 'ನ್ಯೂ ಇಂಡಿಯಾ' ದಿನಪತ್ರಿಕೆಯ ಸಂಪಾದಕ ವರ್ಗದಲ್ಲಿ ಕೆಲಸಮಾಡಿದರು. ಹೋಮ್‌ರೂಲ್ ಚಳುವಳಿಯಲ್ಲಿ ಭಾಗವಹಿಸಿ ಗಾಂಧೀಜಿಯ ಅಭಿಮಾನ ಗೌರವಗಳಿಗೂ ಪಾತ್ರರಾದರು.

ನ್ಯೂ ಇಂಡಿಯಾ ಪತ್ರಿಕೆ ನಿಂತಮೇಲೆ ಮದರಾಸಿನ ಕಸ್ತೂರಿ ಶ್ರೀನಿವಾಸನ್ನರ 'ದಿ ಹಿಂದೂ' ಪತ್ರಿಕೆಗೆ ರಾಜಧಾನಿಯ ವರದಿಗಾರರಾಗಿ ಕೆಲಸಮಾಡಿ, ವೃತ್ತಪತ್ರಿಕಾರಂಗದಲ್ಲೂ ಕೀರ್ತಿಭಾಜನರಾದರು.

ಅವರು ಗಾಂಧೀಜಿಯವರ ಜತೆಯಲ್ಲಿ ಇಂಗ್ಲೆಂಡಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲೂ, ಮುಂದೆ ಜಿನಿವಾ ಸಮ್ಮೇಳನದಲ್ಲೂ ಕಾರ್ಮಿಕ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಈಗ ಶ್ರೀಯುತರು ತಮ್ಮ ಎಪ್ಪತ್ತೈದನೆ ವಯಸ್ಸಿನಲ್ಲಿ ವಿಶ್ವವಿದ್ಯಾಲಯ ಗ್ರ್ಯಾಂಟ್ಸ್ ಕಮಿಷನ್ನಿನ ಸದಸ್ಯರಾಗಿಯೂ, ಭಾರತದ ಪ್ರೆಸ್ ಕೌನ್ಸಿಲ್ಲಿನ ಸದಸ್ಯರಾಗಿಯೂ ಕೆಲಸಮಾಡುತ್ತಿದ್ದಾರೆ. ಭಗವಂತನು ಶ್ರೀಯುತರಿಗೆ ಆಯುರಾರೋಗ್ಯವನ್ನು ಕರುಣಿಸಲಿ.

ಶಿಕ್ಷಣ ಮಾಧ್ಯಮವಾಗಿ ಕನ್ನಡ

ಶಾಲಾ ಕಾಲೇಜುಗಳು ಹೊಸದಾಗಿ ಆರಂಭವಾಗುತ್ತಿರುವ ಈ ಸಮಯಲ್ಲಿ ರಾಜ್ಯದ ಶಿಕ್ಷಣಮಂತ್ರಿ ಮಾನ್ಯ ಶಂಕರಗೌಡರು ಕನ್ನಡವನ್ನು ಎಲ್ಲ ಹಂತಗಳಲ್ಲೂ ಶಿಕ್ಷಣ ಮಾಧ್ಯಮವಾಗಿ ಮಾಡಲಿರುವ ಸರ್ಕಾರದ ನೀತಿಯನ್ನು ಖಚಿತವಾಗಿ ಉದ್ಘೋಷಿಸಿ, ಕನ್ನಡಿಗರಿಗೆಲ್ಲ ಸಂತೋಷವನ್ನುಂಟುಮಾಡಿದ್ದಾರೆ. ಶ್ರೀಯುತರು ಕನ್ನಡ ಸಾಹಿತಿಗಳೂ, ಶಿಕ್ಷಣವೇತ್ತರೂ, ಸಮಾಜ ಕಾರ್ಯಕರ್ತರೂ ಆಗಿದ್ದು ಈ ಸಮಸ್ಯೆಯನ್ನು ಯಥಾರ್ಥ ಬಿಡಿಸಬಲ್ಲವರಾಗಿದ್ದಾರೆ. ಇದೇ ಸಂದರ್ಭದಲ್ಲಿ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮ ತರಗತಿಗಳು ಅನೇಕ ಕಾಲೇಜುಗಳಲ್ಲಿ ಆರಂಭವಾಗಲಿದ್ದು, ಅಧಿಕ ಸಂಖ್ಯೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಆಕರ್ಷಿಸಿದೆ. ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಂಡ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರು ಡಿಪ್ಲೊಮೋ ತರಗತಿಗಳನ್ನು ತೆಗೆಯಲು ನಿರ್ಧರಿಸಿರುವುದು ಉಪಕುಲಪತಿ ವಿ. ಕೃ. ಗೋಕಾಕರ ದೂರದರ್ಶಿತ್ವದ ದ್ಯೋತಕವಾಗಿದೆ.

ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಂಡು ಮೈಸೂರಿನ ಕುಮಾರಿ ಶಶಿಕಲಾ ಎಂಬ ವಿದ್ಯಾರ್ಥಿನಿ ಫೈನಲ್ ಬಿ. ಎ. ನಲ್ಲಿ ಇಡೀ ವಿಶ್ವವಿದ್ಯಾನಿಲಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿರುವುದು ಈ ಬಗ್ಗೆ ಸಲ್ಲದ ಸಂಶಯ ತಳೆದಿದ್ದವರೆಲ್ಲರಿಗೂ ಕಣ್ಣುತೆರೆಸುವ ಸಂಗತಿಯಾಗಿದೆ.

ಚಿಕಾಗೋಗೆ ಕನ್ನಡ ಪ್ರಾಧ್ಯಾಪಕರು

ಮಾನಸಗಂಗೋತ್ರಿಯಲ್ಲಿ ಕನ್ನಡ ಅಧ್ಯಾಪಕರಾಗಿರುವ ಡಾ. ಎಂ. ಚಿದಾನಂದಮೂರ್ತಿ ಅವರಿಗೆ ಒಂದು ವರ್ಷ ಕಾಲ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಟೀಚಿಂಗ್ ಅಸಿಸ್ಟೆಂಟ್‌ಷಿಪ್ ನೀಡಲಾಗಿದೆ ಎಂದು ತಿಳಿದುಬಂದಿದೆ. ಅವರು ಇದೇ ಸಮಯದಲ್ಲಿ ಭಾಷಾವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಯ ನಂತರದ ಉನ್ನತ ವ್ಯಾಸಂಗ ನಡೆಸಲಿರುವರು.

ಶ್ರೀಯುತರು ಶಾಸನಗಳ ಆಧಾರದ ಮೇಲೆ ಕನ್ನಡ ಸಂಸ್ಕೃತಿಯನ್ನು ಆಳವಾಗಿ ಅಭ್ಯಾಸಮಾಡಿ ಒಂದು ಶ್ರೇಷ್ಠವಾದ ಗ್ರಂಥವನ್ನು ಇತ್ತೀಚೆಗೆ ಪ್ರಕಟಿಸಿದ್ದಾರೆ. ಇದು ಕನ್ನಡಿಗರೆಲ್ಲರೂ ಆದರದಿಂದ ಬರಮಾಡಿಕೊಳ್ಳಬೇಕಾದ ಕೃತಿಯಾಗಿದೆ. ಈ ಕೃತಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೂ ಅನುವಾದಿತವಾಗಿ ಕನ್ನಡಿಗರ ಹಿರಿಮೆ ಸಾಧನೆಗಳು ಉಳಿದವರಿಗೂ ಪರಿಚಯವಾಗುವಂತಾಗಲೆಂದು ಹಾರೈಸುತ್ತೇವೆ.

ಬಾಲಬರಹಗಾರರ ಪ್ರಥಮ ಸಮ್ಮೇಳನ

ಕನ್ನಡ ಬಾಲ ಬರಹಗಾರರ ಪ್ರಥಮ ಸಮ್ಮೇಳನವು ಕೆಲವು ದಿನಗಳ ಹಿಂದೆ ಬೆಂಗಳೂರಿನ ಜಯನಗರದ ಮೂರನೇ ಬ್ಲಾಕಿನಲ್ಲಿ ನಡೆಯಿತು. ಉದಯರವಿ

ಕ್ರೀಡಾಂಗಣದಲ್ಲಿ ನಡೆದ ಈ ಸಮ್ಮೇಳನಕ್ಕೆ ಮಕ್ಕಳಮಂಟಪದ ಶ್ರೀ ಬಿ. ಪಾಂಡುರಂಗರಾಯರು ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಬಾಲಸಾಹಿತ್ಯ ಲೇಖಕರನ್ನು ಹಾಗೂ ಎಳೆಯ ಬರಹಗಾರರನ್ನು ಬೆಳಕಿಗೆ ಬರುವಂತೆ ಪ್ರೋತ್ಸಾಹಿಸಿ, ಮಕ್ಕಳ ಸಾಹಿತ್ಯವನ್ನು ಪ್ರಕಟಿಸಿ ಅದಕ್ಕೆ ಪ್ರತಿಫಲ ದೊರಕುವಂತೆ ಮಾಡಬೇಕೆಂದೂ, ಮಕ್ಕಳ ಸಾಹಿತ್ಯಸೇವೆ ಗೌರವಯುತವಾದ ಹಾಗೂ ಲಾಭದಾಯಕವಾದ ಉದ್ಯೋಗವಾಗುವಂತೆ ಮಾಡಬೇಕೆಂದೂ, ಉತ್ತಮ ಶಿಶುಸಾಹಿತ್ಯ ಕೃತಿಗಳಿಗೆ ರಾಜ್ಯ ಸರಕಾರವು ಯೋಗ್ಯ ಬಹುಮಾನ ಕೊಡಬೇಕೆಂದೂ ಈ ಸಮ್ಮೇಳನದಲ್ಲಿ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಬೆಂಗಳೂರಿನಲ್ಲಿ ಮಕ್ಕಳ ಸಮ್ಮೇಳನ

ಕನ್ನಡನಾಡಿನ ಎಲ್ಲ ಮಕ್ಕಳ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಬೃಹತ್‌ಪ್ರಮಾಣದಲ್ಲಿ ನಡೆಯಲಿರುವ ಈ ಸಮ್ಮೇಳನಕ್ಕೆ ಹದಿನೈದು ಸಾವಿರ ರೂಪಾಯಿಗಳ ವೆಚ್ಚ ತಗುಲಬಹುದೆಂದೂ, ಸುಮಾರು ಮೂರು ಸಾವಿರ ಮಕ್ಕಳು ಭಾಗವಹಿಸುವ ನಿರೀಕ್ಷೆಯಿದೆ ಎಂದೂ ಹೇಳಲಾಗಿದೆ. ಭಾಗವಹಿಸುವ ಮಕ್ಕಳಿಗೆ ಉಚಿತ ಊಟ ವಸತಿಗಳನ್ನು ಕಲ್ಪಿಸಿ ಕೊಡಲಾಗುವುದು. ಸಮ್ಮೇಳನದಲ್ಲಿ ಮಕ್ಕಳೇ ಭಾಗವಹಿಸುವ ವಿವಿಧ ಗೋಷ್ಠಿಗಳೂ ವಸ್ತು ಪ್ರದರ್ಶನವೂ ಏರ್ಪಾಡಾಗಿದೆ. ಗೆಳೆಯ ಎಂಬ ಸಂಸ್ಮರಣ ಸಂಚಿಕೆ ಹೊರಬೀಳುವ ಸಂಭವವಿದೆ.

ಈ ಸಮ್ಮೇಳನದಲ್ಲಿ ಪದ್ಮಶ್ರೀ ವಿ. ಕೃ. ಗೋಕಾಕ, ಬಿ. ಶಿವಮೂರ್ತಿಶಾಸ್ತ್ರಿಗಳೂ, ಸರ್ವಶ್ರೀ ರಾಜರತ್ನಂ, ಗೊರೂರು, ಕೆ. ಎಸ್. ಧರಣೇಂದ್ರಯ್ಯ, ಟಿ. ಎಸ್. ರಾಮಚಂದ್ರರಾವ್, ಖಾದ್ರಿ ಶಾಮಣ್ಣ, ಜಿ. ವೆಂಕಟಸುಬ್ಬಯ್ಯ ಮತ್ತು ಆಕಾಶವಾಣಿ ಹಾಗೂ ವೃತ್ತಪತ್ರಿಕೆಗಳ ಮಕ್ಕಳ ವಿಭಾಗದ ಮುಖ್ಯಸ್ಥರೂ ಭಾಗ ವಹಿಸುತ್ತಾರೆ ಎಂದು ಬೆಂಗಳೂರಿನ ಸುದ್ದಿಯೊಂದು ತಿಳಿಸುತ್ತದೆ.

ಗಣದೇವತಾಕ್ಕೆ ಒಂದು ಲಕ್ಷ ರೂಪಾಯಿ ಬಹುಮಾನ

೧೯೪೪ರಲ್ಲಿ ಶ್ರೀ ಶಾಂತಿಪ್ರಸಾದ ಜೈನರಿಂದ ಸ್ಥಾಪಿತವಾದ ಭಾರತೀಯ ಜ್ಞಾನಪೀಠವು ಈ ವರ್ಷದ ಬಹುಮಾನವನ್ನು ಬಂಗಾಳಿ ಕಾದಂಬರಿಕಾರ ಶ್ರೀ ತಾರಾಶಂಕರ ಬಂದ್ಯೋಪಾಧ್ಯಾಯರ ಕಾದಂಬರಿ ಗಣದೇವತಾ ಕೃತಿಗೆ ಇತ್ತು ಅವರನ್ನು ಗೌರವಿಸಿದೆ. ಭಾರತೀಯ ಭಾಷೆಗಳಲ್ಲಿನ ಶ್ರೇಷ್ಠ ಕೃತಿಯೊಂದಕ್ಕೆ ಒಂದು ಲಕ್ಷ ರೂಪಾಯಿಗಳ ಮೌಲ್ಯದ ಬಹುಮಾನ ಕೊಡುವ ಯೋಜನೆಯಂತೆ ಕಳೆದವರ್ಷ ಈ ಬಹುಮಾನವು ಕೇರಳದ ಮಹಾಕವಿ ಜಿ. ಶಂಕರಕುರುಪರಿಗೆ ದೊರತಿತ್ತು. ಈ ಸಂದರ್ಭದಲ್ಲಿ ಕನ್ನಡದ ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗವನ್ನು ಸಮಿತಿಯು ಶ್ರೇಷ್ಠ ಕೃತಿಗಳ ಆಯ್ಕೆಗಾಗಿ ಪರಿಶೀಲನೆಗೆ ತೆಗೆದುಕೊಂಡಿತ್ತೆಂಬ ಸಂಗತಿಯನ್ನು ಇಲ್ಲಿ ನೆನೆಯಬಹುದಾಗಿದೆ.

ಈ ಬಾರಿ ಬಹುಮಾನ ಗಳಿಸಿರುವ ತಾರಾಶಂಕರರು ೧೮೯೮ರಲ್ಲಿ ಪಶ್ಚಿಮ ಬಂಗಾಳದ ಲಬಪುರದಲ್ಲಿ ಹುಟ್ಟಿದರು. ತಮ್ಮ ಹಳ್ಳಿಯ ಶಾಲೆಯನ್ನು ಮುಗಿಸಿಕೊಂಡು ಅವರು ಕಲ್ಕತ್ತೆಯ ಸೈಂಟ್ ಕ್ಸೇವಿಯರ್ ಕಾಲೇಜುಸೇರಿದರು. ಮಧ್ಯದಲ್ಲಿ ಓದು ನಿಲ್ಲಿಸಿ ಹಳ್ಳಿಗೆ ಹಿಂತಿರುಗಿ ಜಮೀನು ನೋಡಿಕೊಳ್ಳಲು ನಿಂತರು; ಗ್ರಾಮ ಸೇವೆಗೆಂದು ತಮ್ಮ ಬಾಳನ್ನು ಮೀಸಲಿಟ್ಟರು.

ಮುಂದೆ ಸಾಹಿತ್ಯ ಕೃಷಿಗೂ ಕೈಹಾಕಿ ೧೯೨೮ರಲ್ಲಿ ತಮ್ಮ ಪ್ರಥಮ ಕಥೆ 'ಕಲ್ಲೋಲ' ಪ್ರಕಟಿಸಿದರು. ಅದಾದ ಮೇಲೆ ಕಾಂಗ್ರೆಸ್ ಚಳುವಳಿಗೆ ಸೇರಿ ತುರಂಗವಾಸ ಅನುಭವಿಸಿದರು. ಈ ಅವಧಿಯಲ್ಲಿ ಚೈತ್ರದ ಬಿರುಗಾಳಿ ಎಂಬ ಕಾದಂಬರಿ ಬರೆದರು.

ಇದುವರೆಗೆ ತಾರಾಶಂಕರರು ಒಂದು ನೂರಕ್ಕೂ ಹೆಚ್ಚಾಗಿ ಗ್ರಂಥಗಳನ್ನು ಬರೆದಿದ್ದಾರೆ. ಅವರು ಯಶಸ್ವಿ ಕಾದಂಬರಿಕಾರರಾಗಿರುವಂತೆ ಸುರಿತ ನಾಟಕಕಾರರೂ ಆಗಿದ್ದಾರೆ. ಅವರು ಬರೆದ ಆರೋಗ್ಯನಿಕೇತನ ಕಾದಂಬರಿಗೆ ೧೯೫೫ರಲ್ಲಿ ರವೀಂದ್ರ ಬಹುಮಾನವೂ ೧೯೫೬ರಲ್ಲಿ ಸಾಹಿತ್ಯ ಅಕಾಡಮಿ ಬಹುಮಾನವೂ ದೊರಕಿತ್ತು. ಅವರು ಏಷಿಯಾದ ಲೇಖಕರಲ್ಲಿ ಒಬ್ಬರಾಗಿ ಚೀನಾ, ಮಾಸ್ಕೊಗಳಿಗೆ ಭೆಟ್ಟಿ ಕೊಟ್ಟಿದ್ದಾರೆ.

ಪ್ರಸ್ತುತ ಗಣದೇವತಾ ಕಾದಂಬರಿಯು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿನ ಬಂಗಾಳದ ಗ್ರಾಮೀಣ ಸಮಾಜದ ಪರಿವರ್ತನೆಯ ಜ್ವಲಂತ ಚಿತ್ರಣವನ್ನು ಕೊಡುತ್ತದೆ ಎಂದು ಹೇಳಲಾಗಿದೆ.

ಮುದ್ದಣ ಜಯಂತಿ

ಹೊಸಗನ್ನಡದ ನವೋದಯದ ಕಾಲದಲ್ಲಿ ಬೆಳ್ಳಿಚಿಕ್ಕೆಯಂತೆ ಮೂಡಿ ತನ್ನ ಬದುಕಿನ ಮೂರು ದಶಕಗಳಲ್ಲಿ ಸಾಹಿತ್ಯ ಲೋಕದಲ್ಲಿ ಮಹತ್ಸಾಧನೆ ಮಾಡಿ ಕಾಲಗರ್ಭದಲ್ಲಿ ಅಡಗಿಹೋದ ನಂದಳಿಕೆ ಲಕ್ಷ್ಮೀನಾರಾಯಣಪ್ಪನಿಗೆ ಇನ್ನು ಮೂರು ವರ್ಷಗಳು ಉರುಳಿದರೆ ನೂರು ವರ್ಷ ತುಂಬುತ್ತವೆ. ರಾಮಪಟ್ಟಾಭಿಷೇಕ, ಅದ್ಭುತ ರಾಮಾಯಣ, ರಾಮಾಶ್ವಮೇಧಗಳಂತಹ ಶ್ರೇಷ್ಠ ಕೃತಿಗಳನ್ನು ನಿರ್ಮಿಸಿದ ಕವಿ ಮುದ್ದಣನಿಗೆ ರಾಜ್ಯಮಟ್ಟದಲ್ಲಿ ಯೋಗ್ಯ ರೀತಿಯಲ್ಲಿ ಗೌರವ ಸಲ್ಲಿಸುವ ಕಾಲ ಈಗ ಸನ್ನಿಹಿತವಾಗಿದೆ. ಈ ಬಗ್ಗೆ ವಿಸ್ತೃತವಾದ, ಚಿರಕಾಲ ಉಳಿಯುವಂತಹ ಕಾರ್ಯಕ್ರಮಗಳು ರೂಪುಗೊಂಡು, ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಮುದ್ದಣ ಜಯಂತಿ ಉತ್ಸವಗಳು ನಡೆಯಬೇಕಾಗಿದೆ. ಈ ದಿಸೆಯಲ್ಲಿ ಬೆಂಗಳೂರಿನ ಸಾಹಿತ್ಯ ಕುಟೀರದವರು ಕೆಲವು ದಿನಗಳ ಹಿಂದೆ ಶ್ರೇಷ್ಠ ನ್ಯಾಯಮೂರ್ತಿ ಟಿ. ಕೆ. ತುಕೋಳರ ಅಧ್ಯಕ್ಷತೆಯಲ್ಲಿ ಮುದ್ದಣನನ್ನು ಕುರಿತು ಒಂದು ಉಪನ್ಯಾಸವನ್ನು ಏರ್ಪಡಿಸಿದ್ದರು. ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಮತ್ತು ವಿ.ಎಂ ಶರ್ಮ ಅವರು ಕವಿಕೃತಿ ದರ್ಶನ ಮಾಡಿಕೊಟ್ಟರು. ಈ ಉತ್ಸವ ಉಳಿದ ಕಡೆ ನಡೆಯುವ ಮುದ್ದಣ ಜಯಂತ್ಯುತ್ಸವಕ್ಕೆ ನಾಂದಿಯಾಗಲಿ.

ದಿವಂಗತ ಆರ್. ನರಸಿಂಹಾಚಾರ್ಯರ ಜೀವನ ಚರಿತ್ರೆ

ಕಳೆದ ಶತಮಾನದ ಉತ್ತರಾರ್ಧದಲ್ಲಿ ಮತ್ತು ಈ ಶತಮಾನದ ಮೊದಲ ದಶಕಗಳಲ್ಲೂ ಕನ್ನಡನಾಡು ನುಡಿಗಳ ಸೇವೆಗೆ ತಮ್ಮ ಸರ್ವಸ್ವವನ್ನು ಮುಡುಪಿಟ್ಟು, ದುಡಿದ ಮಹನೀಯರು ಹಲವರು. ಇವರಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ್‌ಬಹಾದ್ದೂರ್, ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ ಅವರೂ ಒಬ್ಬರು.

ಆಚಾರ್ಯರು ಕ್ರಿ. ಶ. ೧೮೯೩ರಲ್ಲಿ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ. ಎ. ಪದವಿಯನ್ನು ಪಡೆದು, ಅಧ್ಯಾಪಕರಾಗಿ ಕೆಲಸಮಾಡಿ ಮೈಸೂರು ಸರಕಾರದಲ್ಲಿ ಐದುವರ್ಷಗಳ ಕಾಲ ಕನ್ನಡ ಭಾಷಾಂತರಕಾರರಾಗಿ ಸೇವೆಸಲ್ಲಿಸಿದರು. ಅನಂತರ ೧೮೯೯ರಲ್ಲಿ ಪ್ರಾಚೀನ ವಸ್ತು ಸಂಶೋಧನಾ ಇಲಾಖೆಯಲ್ಲಿ ಸಹಾಯಕರಾಗಿ ನೇಮಕಗೊಂಡರು. ಆ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಕೆಲಸಮಾಡಿ ೧೯೨೨ರಲ್ಲಿ ತಮ್ಮ ಅಧಿಕಾರದಿಂದ ನಿವೃತ್ತರಾದರು.

ಇವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸಾವಿರಾರು ಶಾಸನಗಳನ್ನು ಸಂಗ್ರಹಿಸಿ ಹದಿನಾರು ಸಂಪುಟಗಳಲ್ಲಿ ಪ್ರಕಟಿಸಿದರು. ಶ್ರೀ ಎಸ್. ಜಿ. ನರಸಿಂಹಾಚಾರ್ಯರ ಸಹಾಯದಿಂದ ಮೂರು ಸಂಪುಟಗಳಲ್ಲಿ ಕರ್ನಾಟಕ ಕವಿಚರಿತೆಯನ್ನು ಪ್ರಕಟಿಸಿ ಸಾವಿರಕ್ಕೂ ಹೆಚ್ಚಿನ ಕವಿಗಳನ್ನೂ ಪ್ರತಿಮಾದಿಂದ ಬೆಳಕಿಗೆ ತಂದು, ಕನ್ನಡಕ್ಕೆ ಶಾಶ್ವತವಾದ ಬೆಲೆಯುಳ್ಳ ಕಾಣಿಕೆಯನ್ನು ಅರ್ಪಿಸಿದರು. ತಮಿಳಿನಿಂದ ನೀತಿಮಂಜರಿಯನ್ನೂ, ಇಂಗ್ಲಿಷಿನಿಂದ ನಗೆಗಡಲನ್ನೂ ಭಾಷಾಂತರಮಾಡಿದುದಲ್ಲದೆ, ಕರ್ನಾಟಕ ಶಬ್ದಾನುಶಾಸನ, ಕಾವ್ಯಾವಲೋಕನ ಕರ್ನಾಟಕ ಭಾಷಾಭೂಷಣಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಶಾಸನ ಪದ್ಯಮಂಜರಿ, ಶ್ರವಣಬೆಳಗೊಳದ ಶಾಸನ ಸಂಗ್ರಹವನ್ನು ಪ್ರಕಟಿಸಿದ್ದುದಲ್ಲದೆ ನೂರಾರು ವಿದ್ವತ್ಪೂರ್ಣ ಲೇಖನಗಳನ್ನು ದೇಶವಿದೇಶಗಳ ಪತ್ರಿಕೆಗಳಿಗೆ ಬರೆದು ವಿದ್ವಾಂಸರ ಪ್ರಶಂಸೆಗೆ ಪಾತ್ರರಾದರು. ಇಂತಹ ಪುಣ್ಯ ಪುರುಷರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಒಂದು ಕಾರ್ಯಕ್ರಮವು ಕೆಲವು ದಿನಗಳ ಹಿಂದೆ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘ-ಪರಿಷತ್ತಿನ ಆಶ್ರಯದಲ್ಲಿ ನಡೆಯಿತು.

ಹೆಸರಾಂತ ಪತ್ರಿಕೋದ್ಯೋಗಿಯೂ, ಶಾಸನ ಪಂಡಿತರೂ ಆದ ಟಿ. ಟಿ. ಶರ್ಮ ಅವರು ಆಚಾರ್ಯರ ಜೀವನವನ್ನು ಕುರಿತು ಭಾಷಣ ಮಾಡಿದರು. ಈ ಭಾಷಣವನ್ನು ಗ್ರಂಥರೂಪದಲ್ಲಿ ಬರೆದುಕೊಟ್ಟರೆ ತಾವು ಮಲ್ಲೇಶ್ವರದ ಸಾಹಿತ್ಯ ಅಭಿಮಾನಿಗಳ ನೆರವಿನಿಂದ ಪ್ರಕಟಿಸುವುದಾಗಿ ಸಂಘದ ಅಧ್ಯಕ್ಷರಾದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರು ತಿಳಿಸಿದರು. ಟಿ. ಟಿ. ಶರ್ಮ ಅವರು ಆಚಾರ್ಯರನ್ನು ಕುರಿತು ಒಂದು ಗ್ರಂಥವನ್ನು ಬರೆದು ಕೊಡುವುದಾಗಿ ಒಪ್ಪಿಕೊಂಡರು.

ವಿಮರ್ಶನರಂಗ

ಪ್ರತಿಭಾಸಿದ್ಧರು-ಪಂಡಿತಾರಾಧ್ಯರು

ಲೇಖಕರು: ಶ್ರೀ ಜ. ಚ. ನಿ., ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬೆಂಗಳೂರು-೪. ಆಕೃತಿ: ಕ್ರೌನ್ ೧/೮, ಪುಟಗಳು: ೧೨೪+೮೮, ಬೆಲೆ ರೂ. ೨-೦೦.

ಪಂಚಾಚಾರ್ಯರಲ್ಲಿ ಒಬ್ಬರಾಗಿ ತಮ್ಮ ಶುಭ್ರಾಚಾರದಿಂದ ಶ್ವೇತಾಚಾರ್ಯರೆನಿಸಿ, ಶಿವಾದ್ವೈತ ಸಿದ್ಧಾಂತವನ್ನು ಪ್ರಚಾರಮಾಡಿದ ಪಂಡಿತಾರಾಧ್ಯರ ಚರಿತ್ರೆಯ ಜ್ಯೋತಿಯನ್ನಿಲ್ಲಿ ಕಾಣಬಹುದು. ಶ್ರೀಶೈಲದ ಪ್ರಥಮ ಜಗದ್ಗುರುಗಳಾಗಿ, ಶ್ರೀ ಸೂರ್ಯಸಿಂಹಾಸನಾಧೀಶರಾಗಿ, ಆಚಾರ್ಯತ್ವ-ಆರಾಧ್ಯತ್ವ ಎಂಬ ಉಭಯ ಗುಣಸಂಪನ್ನರಾಗಿದ್ದ ಪಂಡಿತಾರಾಧ್ಯರು ಕವಿರಾಜಮಾರ್ಗ ಗ್ರಂಥದಲ್ಲಿ ಕನ್ನಡ ಪದ್ಯಕವಿಗಳ ಪಂಕ್ತಿಯಲ್ಲಿ ವರ್ಣಿತರಾಗಿರುವ "ಪಂಡಿತ" ಎಂಬ ನಾಮಾಂಕಿತರೆಂಬ ಸಂಶೋಧನೆಯನ್ನು ಮುಂದಿಟ್ಟಿದ್ದಾರೆ. ಈ ಗ್ರಂಥದಲ್ಲಿ ತಮ್ಮ ಶ್ರೀ ನಿಡುಮಾಮಿಡಿ ಪೀಠದ ಪುರಾತನತ್ವವನ್ನು ವಿವರಿಸಿದ್ದಾರೆ. ಕೊನೆಗೆ ವ್ಯಕ್ತಿ-ಕಾಲ-ಸ್ಥಾನ-ಮಾನ ನಿರ್ಣಯಕ್ಕೆ ಸಂಬಂಧಿಸಿ ಅನ್ಯತ್ರ ನಡೆದ ವಾದಭೂಮಿಕೆಗಳನ್ನು ಕೊಟ್ಟು, ವಿಚಾರಶೀಲರ ಮನವನ್ನು ಸೆಳೆದಿದ್ದಾರೆ ಈ ಬರವಣಿಗೆಯಲ್ಲಿ ಸೊಗಸಾದ ನುಡಿ-ನುಡಿಗಟ್ಟುಗಳ ಕಾಂತಿಯಿದೆ. ಪ್ರತಿಭಾನ್ವಿತ ವಾಕ್ಪಂಕ್ತಿಯಿದೆ. ವಿಚಾರ ಪ್ರಬೋಧಕ ವಸ್ತು ಸಾಮಗ್ರಿಯಿದೆ. ತತ್ವದೃಷ್ಟಿಯಿದೆ. ಸುಯೋಗ್ಯ ಮುದ್ರಣದಿಂದ ಆಕರ್ಷಣೀಯವಾಗಿದೆ.

* * *

ಹರಳು-ಮುತ್ತು (ಚುಟುಕುಗಳ ಸಂಗ್ರಹ)

ಲೇಖಕರು: ಜಿ. ಎಸ್. ಅನ್ನದಾನಿ, ಗುಡೂರ, ಪ್ರಕಾಶಕರು: ಮಿತ್ರಭಾರತಿ ಪ್ರಕಾಶನ, ವಿಜಾಪೂರ. ಆಕೃತಿ: ಕ್ರೌನ್ ೧/೮, ಪುಟ: ೪೮, ಬೆಲೆ: ರೂ. ೧-೦೦.

ಇದರಲ್ಲಿ ೧೭೨ ಚುಟುಕುಗಳನ್ನು ಕೊಟ್ಟಿದ್ದಾರೆ. ಲೇಖಕರು ಆಗಾಗ ಬರೆದು, ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಳಿಸಿರುವ ಚುಟುಕುಗಳನ್ನು ಓದುಗರಿಗೆ ಒಂದೇ ಕಡೆ ದೊರೆಯುವಂತೆ ಈ ಹೊತ್ತಗೆಯ ಮೂಲಕ ಮಾಡಿರುವುದು ಅಭಿನಂದನೀಯ. ವ್ಯಕ್ತಿ, ಸಮಾಜ, ಸರಕಾರ, ಅಧಿಕಾರಿ ವರ್ಗ-ಮುಂತಾದವುಗಳ ಸ್ವಾರ್ಥಮಯ ದೋಷಗಳನ್ನೂ ಹಾವಳಿಯನ್ನೂ ಬಯಲಿಗೆಳೆದು, ಜನತೆಯನ್ನು ಎಚ್ಚರಿಸುವ ಉದ್ದೇಶ ಈ ಚುಟುಕುಗಳಿಗಿವೆ. ಇದನ್ನು "ರಾಗವಿಲ್ಲದ ಹಾಡು, ಚತುಷ್ಪಾದ ಕವನ" ಎಂದು ಲೇಖಕರು ಸಾರ್ಥಕವಾಗಿ ಕರೆದುಕೊಂಡಿದ್ದಾರೆ. ಲೇಖಕರಿಗೆ ಗುರುಮಾನ್ಯರಾದ ಶ್ರೀ ದಿನಕರ ದೇಸಾಯಿಯವರು ತಮ್ಮ ಮುನ್ನುಡಿಯ ಚುಟುಕಿನಲ್ಲಿ ಹೇಳಿದ "ನಿನ್ನ ಬರವಣಿಗೆಯಲಿ ಕೊನರುತಿದೆ ಚಿಗುರು, ಈ ಚಿಗುರು ಬಲಿತು ಮೂಡಲಿ ಅದಕೆ ಉಗುರು" ಎಂಬುದನ್ನೇ ನಾವೂ ಆಶಿಸಬಹುದು.

* * *

ಮುಗಿಲು-ಮಂಜು (ನಾಲ್ಕು ಏಕಾಂಕ ನಾಟಕಗಳು)

ಲೇಖಕರು: ಜಿ. ಜಿ. ಹರಿಜಿತ್. ಪ್ರಕಾಶಕರು: ಭುವನ ಭಾರತಿ ಪ್ರಕಾಶನ, ಬೆಂಗಳೂರು. ಪುಟಗಳು: ೧೫೬, ಬೆಲೆ: ರೂ. ೨-೫೦.

ಈ ನಾಟಕ ಪುಸ್ತಕದಲ್ಲಿ ಮುಗಿಲು-ಮಂಜು, ದೀಪ ಆರಿತು, ಮಂಜಿನ ಮನುಷ್ಯ, ಸ್ವರ್ಗಕ್ಕೆ ಬಂದ ಸೈತಾನರು-ಎಂಬ ನಾಲ್ಕು ನಾಟಕಗಳನ್ನು ಕಾಣುತ್ತೇವೆ. 'ಮಂಜಿನ ಮನುಷ್ಯ' ಎಂಬುದು ಒಂದು ಅತಿಕಲ್ಪನೆಯ ಚಿತ್ರವನ್ನುಳ್ಳ ರೇಡಿಯೋ ನಾಟಕ-ಹಾಸ್ಯರಸಭರಿತವಾಗಿದೆ. ಉಳಿದ ಮೂರೂ ನಮ್ಮ ದೇಶದ ಮೇಲೆ ಚೀನ-ಪಾಕಿಸ್ತಾನಗಳು ನಡೆಸಿದ ಆಕ್ರಮಣ ಯುದ್ಧಗಳಲ್ಲಿ ನಮ್ಮ ವೀರಯೋಧರು ಮೆರೆಸಿದ ಶೌರ್ಯ-ಧೈರ್ಯ ತ್ಯಾಗಗಳ, ಮೊಳಗಿಸಿದ ಕೀರ್ತಿ ದುಂದುಭಿಯ ಚಿತ್ರಣಗಳಿಂದ ಸೊಗಸಾಗಿವೆ. ಭಾರತೀಯ ಜನತೆಯಲ್ಲಿ ಸ್ವದೇಶದ ಬಗೆಗೆ ಆದರಾಭಿಮಾನಗಳನ್ನು ಮೂಡಿಸಲು, ರಾಷ್ಟ್ರರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಜನತೆಯನ್ನು ಪ್ರೇರೇಪಿಸಲು, ಭಾವೈಕ್ಯದ ಮೂಲಕ ಒಗ್ಗಟ್ಟನ್ನು ಬಲಿಸಲು ಈ ನಾಟಕಗಳು ಪ್ರೇರಕವಾಗುವವು. ಯೋಗ್ಯ ರಚನೆ, ಪಾತ್ರೋಚಿತ ಸಂಭಾಷಣೆ, ಸಂಭಾಷಣೆಯಲ್ಲಿ ಪ್ರಭಾವಮಯ ವಾಕ್ಸರಣಿ, ಮನಮುಟ್ಟುವ ಸನ್ನಿವೇಶಗಳು-ಸಫಲ ನಾಟಕಕಾರರ ಕರಕೌಶಲವಾಗಿ, ಇದರಲ್ಲಿ ಪ್ರಸ್ಫುಟವಾಗಿವೆ. 'ಏರಿಳಿತ' ಎಂಬ ಹಿರಿಯಮಟ್ಟದ ಕಿರಿಯ ನಾಟಕವನ್ನು ಬರೆದು, ಮೊದಲೇ ಮೆಚ್ಚುಗೆ ಗಳಿಸಿದ 'ಹರಿಜಿತ್' ಅವರ ಈ 'ಮುಗಿಲ ಮಂಜು' ವಿಗೂ

ಈಗಲೇ ಜನಾದರ ದೊರಕಿದೆ. ಇದು ಇತೋಪ್ಯತಿಶಯವಾಗಲೆಂದು ಆಶಿಸಬಹುದು.

* * *

ಜೀವಚ್ಛವ (ಏಕಾಂಕ ನಾಟಕ)

ಲೇಖಕರು: ಜಿ. ಜೆ. ಹರಿಜಿತ್. ಪ್ರಕಾಶಕರು: ಭುವನ ಭಾರತಿ ಪ್ರಕಾಶನ, ಬೆಂಗಳೂರು. ಪುಟಗಳು ೫೨, ಅಕೃತಿ: ಕ್ರೌನ್ ೧/೮, ಬೆಲೆ ರೂ. ೧-೦೦.

ಕಲಾಭಿಮಾನಿಗಳಿಗೆ ಹೊಸತಾದ ರಸದೌತಣವಾಗಿ ಪ್ರಕಟವಾಗಿರುವ ಸೊಗಸಾದ ಏಕಾಂಕವಿದು. ಆರು ಪಾತ್ರಗಳಿಂದ ಕೂಡಿದೆ. ಇದರಲ್ಲಿ ಕರ್ನಲನು ರಜನಿಯನ್ನು ವರಿಸಿ ಕುಮಾರನನ್ನು ಪಡೆದ. ಆಕೆ ತನಗೆ ಡಾಕ್ಟರ್ ಕಲಿವ ಇಚ್ಛೆಗೆ ಅವಕಾಶ ದೊರೆಯದೆ ನರ್ಸ್ ಆಗುತ್ತಾಳೆ. ಆದರೆ ಕುಮಾರನು ಡಾಕ್ಟರಾಗಿ ಬಂದಾಗ ಅವನನ್ನು ಕಾಣಲು ಬರುತ್ತಾಳೆ. ಕರ್ನಲನು ಪತ್ನಿ ವಿಯೋಗ ಸಂತಪ್ತನಾಗುತ್ತಾನೆ; ಶರಾಬು ಸೇವನೆಯಲ್ಲಿ ಮುಳುಗಿ ಜೀವಚ್ಛವವಾಗುತ್ತಾನೆ. ಈ ಸನ್ನಿವೇಶದ ರೋಮಹರ್ಷಕ ಚಿತ್ರವನ್ನು ನಾವಿಲ್ಲಿ ಕಾಣುತ್ತೇವೆ. ಹೃದಯ ತರಂಗಗಳನ್ನೆಬ್ಬಿಸುವ ಭಾವನೆಯ ಬಿರುಗಾಳಿ, ಸ್ತಂಭೀಭೂತಗೊಳಿಸುವ ವಾಕ್ಸರಣಿ–ಈ ನಾಟಕದಲ್ಲಿ ಕಾಣುತ್ತೇವೆ. ಕಾಣುತ್ತಿದ್ದಂತೆ ಪರಿಸ್ಥಿತಿ ಎಲ್ಲಿಂದೆಲ್ಲಿಗೆ ಮುಟ್ಟಿತು? ಚಕಿತರಾಗುತ್ತೇವೆ. ಕಲಾನೈಪುಣ್ಯದಲ್ಲಿ ಒಂದನ್ನೊಂದು ಮೀರಿಸುವ ಈ ಲೇಖಕರ ನಾಟಕ ರಚನೆಗಳಿಗೆ ಒಳ್ಳೆಯ ಭವಿಷ್ಯವಿದೆ.

—ಟಿ. ಕೇಶವಭಟ್ಟ

ರಾಸಲೀಲೆ

ಲೇ: ಶ್ರೀ ಸಮೇತನಹಳ್ಳಿ ರಾಮರಾಯ, ಪ್ರಕಾಶಕರು: ರಾಸಪ್ರಕಾಶನ, ಪುಟಗಳು ೫೨, ಬೆಲೆ ರೂ. ೧-೨೫.

ಮಹಾಭಾರತದ ಸೂತ್ರದಾರಿ ಶ್ರೀ ಕೃಷ್ಣ ಯುಗಪುರುಷ, ಯೋಗಿವರ. ಈ ಮಹಾ ಮಾನವನನ್ನು ನಮ್ಮ ಸಾಹಿತ್ಯದಲ್ಲಿ ಚಿತ್ರಿಸಿರುವ ಬಗೆ ನಮ್ಮ ಕಲ್ಪನೆಯ ಅಲ್ಪತೆಯ ಮೇಲೆ ಬೆಳಕು ಬೀರುವಂಥಾದ್ದು. ಗೀತೆಯನ್ನು ಉಪದೇಶಮಾಡಿದ ಈ ಮಹಾತ್ಮನನ್ನು ಜಾರ, ಚೋರ, ಕಪಟಿ, ಕಾರಸ್ಥಾನಿ, ಪುಂಡರ ನಾಯಕ ಇತ್ಯಾದಿಯಾಗಿ ನಮ್ಮ ಅರಿವಿನಳತೆಗೆ ಎಳತಂದು ನಿಲ್ಲಿಸಿ ಆತನ ಔನ್ನತ್ಯವನ್ನು ಮರೆಮಾಡಿದ್ದೇವೆ.

ಸದ್ಯದ ಈ ನಾಟಕ ಈ ತಪ್ಪಿನಿಂದ ಹೊರತಾಗಿದೆ. ಒಂದು ಯುಗಧರ್ಮವನ್ನೇ ನಿಂತು ನಡೆಸಿದ ಗೀತೆಯಂತಹ ಅಮೋಘ ಕೃತಿಯನ್ನು ಜಗಕಿತ್ತ, ಆ ಮಹಾಪುರುಷನ ನಿಜರೂಪವೇನು? ಅವನ ಕೃತಿಗಳ ಮರ್ಮವೇನು? ಆತನ ಧ್ಯೇಯ ಉದ್ದೇಶ್ಯಗಳೇನು? ಈ ವಿಚಾರಗಳನ್ನು ತಿಳಿಯಾದ ಸರಳ ಭಾವಮಯ ಭಾಷೆಯಲ್ಲಿ ಶ್ರೀಯುತರು ಒಡಮೂಡಿಸಿದ್ದಾರೆ.

ನಾಟಕದ ತಂತ್ರದೃಷ್ಟಿಯಿಂದ ಇದು ದೃಶ್ಯಕ್ಕಿಂತಲೂ ಶ್ರಾವ್ಯಮಾರ್ಗಕ್ಕೇ ಹೆಚ್ಚು ಹೊಂದಿಕೊಳ್ಳುತ್ತದೆ. ಲೇಖಕರಿಗೆ ಆಳವಾದ ಅಭ್ಯಾಸ ಮತ್ತು ಒಳ್ಳೆಯ ಕತೆಗಾರಿಕೆಯ ಹಿನ್ನೆಲೆಯಿದೆ. ಅವರ ಲೇಖನಿಯು ಹೆಚ್ಚು ಕಲ್ಪನಾಯುತವೂ, ಅನುಕಂಪನೀಯವೂ ಆಗಿದೆ. ಇದು ಒಂದು ಸುಂದರ, ಅಚ್ಚುಕಟ್ಟಾದ ಕೊಡುಗೆ.

* * *

ಏಕಾಂತ

ಲೇಖಕರು: ಶ್ರೀ ಕೆ. ಎನ್. ಶಿವಪ್ಪ, ಪ್ರಕಾಶಕರು: ಸಂಜಯ ಪ್ರಕಾಶನ, ೪೬೦೪/೭-ಎ., ಎನ್. ಆರ್. ಮೊಹಲ್ಲಾ, ಮೈಸೂರು, ಪುಟಗಳು ೪೦, ಬೆಲೆ ರೂ. ೧-೫೦.

ವಿವಿಧ ವಸ್ತುಗಳನ್ನು ತಮ್ಮ ಕಾವ್ಯಕ್ಷೇತ್ರದಲ್ಲಿ ಅಳವಡಿಸಿ, ನಮ್ಮ ಮುಂದೆ ತಮ್ಮದೇ ಆದ ಒಂದು ವಿನೂತನ ಗದ್ಯಶೈಲಿಯ ಕವನ ಸಂಗ್ರಹವನ್ನು ಲೇಖಕರು ಪ್ರಸ್ತುತಪಡಿಸಿದ್ದಾರೆ. ಕವಿಯ ವಾಣಿಯಲ್ಲಿ ಅಕ್ಕರೆಯಿದೆ, ಆಶೆಯಿದೆ, ನೋವಿದೆ, ನಮಿರಿದೆ. ಒಂದುರೀತಿಯ ಮನೋಸಂವೇದನೆ ಇಡೀ ಸಂಕಲನವನ್ನೇ ಆವರಿಸಿದೆಯೆಂದರೆ ತಪ್ಪಾಗಲಾರದು.

ಕವಿಯ ಪ್ರತಿಮಾರಚನೆ, ಮತ್ತು ಶಬ್ದಚಿತ್ರಗಳನ್ನು ಮೂಡಿಸುವ ವಿಧಾನ ನಿಶ್ಚಯವಾಗಿಯೂ ಮನಸೆಳೆಯುವುದು. "ರಕ್ತಮಾಂಸವ ತುಂಬಿ ಮೇಲೆ ಲೇಪವ ಹಚ್ಚುವನು; (ಪುಟ ೮)–"ಭೂಮಂಡಳದ ರಾಶಿ ಬಣ್ಣ ಬಣ್ಣಗಳ ವೈವಿಧ್ಯ ಕರ್ತಾರನ ಕಮ್ಮಟ" (ಪುಟ ೮) ಹರಿದು ಹತ್ತಾರಾದ ಭಾವನೆಗಳನ್ನು ಜತೆಗೂಡಿಸಿ ಧ್ವನಿಮಾಡಿಸುವ ಹಂಬಲ ಹೀಗೆ ಹರಿಯುವುದು ಸರಳ ಮಾರ್ಗದಲ್ಲಿ. "ಬದುಕು ಬೆಂಕಿ, ಅವಳೊಂದು ಬಾರುಗು,–ಜಾರಿದಳು ತೋಟ ಬತ್ತಲೆಯಾಯ್ತು, ದಿಕ್ಕೆ ಹೊಸದಾಯ್ತು. (ಪುಟ ೩೦) "ಮತ್ತೆಲ್ಲಿ ದಾರಿ" ಕವಿತೆಯಲ್ಲಿ ಸದ್ಯದ ರಾಜಕೀಯದ ಅಣಕಿದೆ "ಹಲವಾರು ವರ್ಷ ಗಳಿಸಿದ ತಿರುಪೆ ಅನುಭವದ ಮೂಟೆ ಸಾಹಸದಿ ಗೆಲ್ಲುವುದೆ ಮೂರ್ಖ

ತನವೆಂದು ಹೊಗುಟ್ಟುನಲಿ, ಕೈಕೊಟ್ಟು ಪಾರ್ಕಲಾ ಮೆಂದು ಕಾಲಕಟ್ಟಿ ಹೊಟ್ಟೆಕಟ್ಟಿ ತೆಪ್ಪಗಿರುಸವ ಇವನೊಬ್ಬ ಬಾಯಿಬಡುಕ" (ಪುಟ ೩೯). ಕವಿಗೆ ಭಾವನಾಮಯ ಅನುಕಂಪಿತ ಹೃದಯುವಿದೆ. ಸೌಂದರ್ಯಾನುಭವ ಶಕ್ತಿಯಿದೆ, ಸಾಕು, ಲೇಖಕರಿಗೆ ಉತ್ತಮ ಭವಿಷ್ಯಕಾದಿದೆಯೆಂದಾಯ್ತು. ಅಂದವಾದ ಹೊರಕವಚ, ತಪ್ಪಿಲ್ಲದ ಸುಂದರವಾದ ಮುದ್ರಣ, ಕನ್ನಡ ಸಾರಸ್ವತ ಸಂಸಾರಕ್ಕೆ ಹೆಮ್ಮೆಯ ಆಸ್ತಿ ಈ ಸಂಕಲನ.

* * *

" ಮಣ್ಣಿನ ಹಾಡು "

ಲೇಖಕರು : ಶ್ರೀಕೃಷ್ಣ ಆಲನಹಳ್ಳಿ, ಪ್ರಕಾಶಕರು : ಸಮೀಕ್ಷಕ ಪ್ರಕಾಶನ, ೧೦೩೨, ಗೀತಾರೋಡ್, ಚಾಮರಾಜಪುರಂ, ಮೈಸೂರು. ಪುಟಗಳು : ೩೮+೧೧, ಬೆಲೆ : ರೂ. ೩-೦೦.

ಮೇಲ್ಕವಚದ ವರ್ಣವಿನ್ಯಾಸವನ್ನು ಕಂಡ ಮನ ಮಣ್ಣಿನ ಹಾಡು ಎಂಬ ಶೀರ್ಷಿಕೆಯನ್ನು ಓದಿ, ಕೃಷಿ, ಕೃಷಿಕ, ಪೈರು, ಹೊಲ ಹಸಿರು ಇತ್ಯಾದಿ ವಸ್ತು ಕ್ಷೇತ್ರದ ಕಡೆ ಮನ ಓಡಿಸುವುದು ಸಹಜ. ಆದರೆ ಪುಸ್ತಕದ ಹಾಳೆಗಳನ್ನು ಮುಗುಚುತ್ತಾ ಬಂದಾಗ ನಮ್ಮ ಮುಂದೆ ಕವಿಯ ಹರೆಯದ ಅಂತರಂಗದ ಜ್ವಾಲಾವರ್ಣ ವಿಭೇದಗಳು ನಮ್ಮ ಮನಸ್ಸನ್ನು ಒಂದೆರಡು ನಿಮಿಷವಾದರೂ ಭ್ರಾಂತಿಗೊಳಿಸುವುದು.

ಇಡೀ ಮೂವತ್ತುಮೂರು ಪುಟಗಳ ತುಂಬಾ ಮಣ್ಣು ಹೆಣ್ಣುಗಳು ಹಾಸಹೊಕ್ಕಾಗಿ ನಮ್ಮ ಮುಂದೆ ಕಾಮದ ಒಂದು ನವ್ಯ ವರ್ಣಚಿತ್ರ ಮೈಗೂಡಿ ನಿಲ್ಲುತ್ತದೆ. ಕೆಲಸಲ ಬೆತ್ತಲೆಯಾಗಿ, ಹಲವು ಸಲ ಭೀಕರವಾಗಿ, ಅನೇಕ ಸಲ ಭೀಭತ್ಸವಾಗಿಯೂ ಸಹ ಹೆಣ್ಣಿನ, ಮಣ್ಣಿನ ಕಾಮದ ಚಿತ್ರಣ ನಮ್ಮ ಕಣ್ಣಮುಂದೆ ಮುಕ್ತ ನೃತ್ಯ ನಡೆಸಿದರೂ, ಅದರ ಒಂದು ನಿಯಂತ್ರಿತ ಸುಂದರ ಛಾಯೆ ನಮ್ಮ ಮನಸ್ಸಿನ ಮೇಲೆ ಬೇರೆಯಾದ ಛಾಯೆಯನ್ನೇ ಬೆಳಗುವುದು. ಆದರೆ ಆದಿಯಿಂದ ಅಂತ್ಯದವರಿವಿಗೂ ವಸ್ತು ವ್ಯತ್ಯಾಸವಿಲ್ಲದೆ ಅದೇ ಹಾಡು, ಅದೇ ರಾಗ, ಅದೇ ಚಿತ್ರ ಅದೇ ಬಣ್ಣವಾದರೆ ಮನ ಅದೇಕೋ ಬಹುತೇಕ ಮುದುಡುವುದು. ಯೌವನ ಸಹಜ ಚಾಪಲ್ಯಗಳಿಗೆ ಸೋದಿಟ್ಟರೂ, ಅದೇ ಸ್ಥಿರವಲ್ಲ. ನಾಣ್ಯದ ಮತ್ತೊಂದು ಮುಖದ ಕಡೆಗೂ ಗಮನ ಹರಿಸಿದ್ದರೆ ಸೂಕ್ತವೆನಿಸುತ್ತಿತ್ತು. ಆದರೂ ವಸ್ತು ಕಾವ್ಯದ ಹದವನ್ನು ಕೆಡಿಸಿಲ್ಲ. ಭಾಷೆಯ ಬಿಗಿ, ಮರೆ, ಮುಸುಕು, ಕಾವ್ಯದ ಸೊಗಸನ್ನು ಕಾದಿರಿಸಿದೆ. ಸುಂದರವಾದ ಈ ಪದಪುಂಜಗಳತ್ತ ನೋಡಿ :

" ಬಿಸಿಲ ಬ್ರಾಂದಿಯ ಕುಡಿದ . . . "
" ಸಂಜೆ–ತೊಡೆಕಣಿವೆಯೊಳದಲಿ ಕೆಂಪಾರಿ ಮತ್ತೆ
ಕತ್ತಲು . . . "
" ತುಂಬು ಮಾಂಸದ ಕಪ್ಪನೆಯ ಹೆಣ್ಣು ನೆಲ . . ."
" ಉಗುರು ಬೆಚ್ಚಗಿನ ಘಡಸು ನೀರೊಳ್ . . . "

ಕಿರಿಹರಯದ ಲೇಖಕರಿಗೆ ಉಜ್ವಲ ಭವಿಷ್ಯವಿದೆ. ಅವರ ನೋಡುವ ದೃಷ್ಟಿ ಪಕ್ವವಾಗಬೇಕು, ಬಾಳಿನ ಕಾವಿನ ಸಾಕಷ್ಟು ಅನುಭವವಾಗಬೇಕು, ಆಗ ತನ್ನಷ್ಟಕ್ಕೇ ಮೂಸೆಯಲ್ಲಿ ಕಾದ ಚಿನ್ನದಂತೆ ಅವರ ಕಾವ್ಯಧಾರೆ ಹೊರಹೊಮ್ಮೀತು, ಸಾಹಿತ್ಯಸೇವೆ ಬೆಳದೀತು.

* * *

ವೀರೇಶ ಚರಿತೆ

ಲೇ. ಮಹಾಕವಿ ರಾಘವಾಂಕ, ಸಂಪಾದಕರು : ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ, ಪ್ರಕಾಶಕರು : ಶರಣಸಾಹಿತ್ಯ ಕಾರ್ಯಾಲಯ, ಬೆಂಗಳೂರು, ೨, ಪುಟಗಳು : ೨೧ + ೬೮ + ೭, ಬೆಲೆ : ರೂ. ೩-೦೦.

ಕವಿ ರಾಘವಾಂಕ ಕನ್ನಡ ಸಾಹಿತ್ಯದಲ್ಲಿ ಕವಿಚಕ್ರವರ್ತಿ ಎನಿಸಿಕೊಂಡ ಹರಿಹರದೇವನ ಶಿಷ್ಯ ಮತ್ತು ಸೋದರಳಿಯ. ಇವನು ಹರಿಶ್ಚಂದ್ರ ಕಾವ್ಯ ಆದಿಯಾಗಿ ಆರು ಗ್ರಂಥಗಳನ್ನು ಬರೆದಿದ್ದಾನೆ. 'ವೀರೇಶ ಚರಿತೆ' ಎಂಬ ಈ ಗ್ರಂಥಕ್ಕೆ ಹರಿಹರನ 'ವೀರಭದ್ರದೇವರ ರಗಳೆ' ಎಂಬ ಗ್ರಂಥವೇ ಆಧಾರ. ಹರಿಹರನು ಲಲಿತ ರಗಳೆಯಲ್ಲಿ ಬರೆದಿದ್ದರೆ ರಾಘವಾಂಕನು 'ಉದ್ದಂಡ ಷಟ್ಪದಿ'ಯಲ್ಲಿ ಬರೆದಿದ್ದಾನೆ. ಶಿವದ್ವೇಷಿಯಾಗಿ ದಕ್ಷಬ್ರಹ್ಮನು ಯಾಗ ಮಾಡುವ ಕಾಲದಲ್ಲಿ ಶಿವನ ಹಣೆಗಣ್ಣಿನಿಂದ ಜನಿಸಿದ ವೀರಭದ್ರನು ಅವನನ್ನು ನಾಶಪಡಿಸುವುದೇ ಈ ಗ್ರಂಥದ ವಸ್ತು. ಈ ಗ್ರಂಥಕ್ಕೆ 'ಮೀಸಲು ಕವಿತೆ' ಎಂಬ ಹೆಸರೂ ಇದೆ.

ಇದು ರಾಘವಾಂಕನ 'ವೀರೇಶ ಚರಿತೆ'ಯ ದ್ವಿತೀಯ ಮುದ್ರಣ. ಸಂಪಾದಕರೂ, ಅವರಿಗೆ ದೊರೆತ ಕೈ ಬರಹದ ಪ್ರತಿ, ಮತ್ತು ತಾಳೆಯೋಲೆ ಎರಡರಲ್ಲೂ ದೋಷಗಳು ವಿಪರೀತವಾಗಿ ಕಂಡುಬಂದ ಕಾರಣ ನಿರ್ದೋಷ

ವಾಗಿ ಸಂಸ್ಕರಿಸಲು ಸಾಧ್ಯವಿಲ್ಲದುದಕ್ಕೆ ವ್ಯಥೆಯನ್ನು ಸೂಚಿಸಿದ್ದಾರೆ. ಇದರ ಉತ್ತಮ ಪಾಠಸಂಸ್ಕರಣ ಜಾಗ್ರತೆಯಾಗಿ ಹೊರಬರಲಿ ಎಂದು ಹಾರೈಸುತ್ತೇವೆ.

* * *

ಕಲಿಸುವ ಹಸಿವು ಮತ್ತು ವೈಚಾರಿಕ ಬರೆಹಗಳು

ಲೇ. ಶ್ರೀ ಮ. ಸು. ಗು. ಘಿವಾರಿ. ಎಸ್. ಟಿ. ಸಿ., ಪ್ರಕಾಶಕರು: ಶ್ರೀ ಗುರಪಾರ ಪ್ರಕಾಶನ, ಬೆಳಗಾವಿ, ಪುಟಗಳು ೯೬, ಬೆಲೆ ರೂ. ೨-೦೦.

ಸಣ್ಣಕತೆ, ಕಾದಂಬರಿಗಳ ಮಹಾಪೂರ ಉಕ್ಕಿಬಂದಿರುವ ಪ್ರಸ್ತುತ ಸಮಯದಲ್ಲಿ, ಪ್ರಬಂಧಗಳ ರಚನೆಗೆ ಯಾರಾದರೂ ಕೈಹಾಕಬೇಕಾದರೆ ಅದಕ್ಕೆ ಒಳ್ಳೆಯ ಎದೆಗಾರಿಕೆ ಬೇಕು. ಸದ್ಯದ ಗ್ರಂಥದ ಲೇಖಕರು ಈ ರೀತಿಯ ಸಾಹಸೀ ಮನೋವೃತ್ತಿಯನ್ನು ತೋರಿಸಿದ್ದಾರೆ.

ಈ ಸಂಗ್ರಹದಲ್ಲಿ ಬಹುಮಟ್ಟಿಗೆ ಶೈಕ್ಷಣಿಕ ಪ್ರಬಂಧಗಳು. ಇವೆಲ್ಲವೂ ವಿದ್ಯೆ, ವಿದ್ಯಾರ್ಥಿ, ಶಿಕ್ಷಕ-ಪಾಠಕ, ಶಾಲೆ-ಸಮಾಜ, ಶೀಲ-ಸಂಸ್ಕೃತಿ ಈ ವಸ್ತುದೃಷ್ಟಿಯಿಂದ ರಚಿಸಲ್ಪಟ್ಟವೆ. ಲೇಖಕರ ಶೈಲಿಯಲ್ಲಿ ಸತ್ವವಿದೆ, ಬಿಗಿಯಿದೆ, ಸದ್ಯದ ಸಮಸ್ಯೆಗಳ ಪೂರ್ಣ ಅರಿವು ಲೇಖಕರಿಗಿದೆ. ಹಲವೊಂದು ಸಲ ಲೇಖಕರ ಶೈಕ್ಷಣೀಮನೋವೃತ್ತಿ ಪ್ರಾಧಾನ್ಯತೆ ಪಡೆದರೂ ಅವರ ಕಾಯಕದ ಬಗ್ಗೆ ಅವರಿಗೆ ಶ್ರದ್ಧೆಯಿದೆ.

ಅನೇಕ ಅಚ್ಚಿನ ಲೋಪದೋಷಗಳು, ಸಾಮಾನ್ಯ ಪುಸ್ತಕದ ಅಚ್ಚುಕಟ್ಟು ಈ ಕಾರಣಗಳಿಂದ ಪುಸ್ತಕ ನೋಡಲು ಸಾಮಾನ್ಯವಾಗಿ ಕಂಡರೂ ಕನ್ನಡಿಗರು ಅವರ ಪ್ರಾಮಾಣಿಕ ಅನುಭವದ ಸಾರವನ್ನು ಖಂಡಿತ ಮೆಚ್ಚುವರು.

* * *

ವೀರಮನಕೆ ಹಿತವಚನ

ಲೇ. ಶ್ರೀ 'ಬಳ್ಳಿ ಹೂಲಿಂಗ', ಪ್ರಕಾಶಕರು: ಶ್ರೀ ವೇ. ವೀರಯ್ಯಸ್ವಾಮಿ, ಬಸವಣ್ಣಯ್ಯಸ್ವಾಮಿ, ಶಾಸ್ತ್ರೀ ಮಠ, ಗುರುಪಾದುಕಾಶ್ರಮ, ನಂ. ೭೦/೫, ೪ನೇ ಬ್ಲಾಕು, ರಾಜಾಜೀನಗರ, ಬೆಂಗಳೂರು-೧೦, ಪುಟಗಳು ೬೦, ಬೆಲೆ ೦-೫೦ ಪೈಸೆ.

ಇದೊಂದು ಬೋಧಪ್ರದ ಗ್ರಂಥ, ವೈರಾಗ್ಯ, ಆತ್ಮಜ್ಞಾನ, ಶಿವಪೂಜಾನಿಷ್ಠೆ. ಈ ಮೂಲಕ ಚಂಚಲವಾದ ಮನಸ್ಸನ್ನು ಒಂದೆಡೆಯಲ್ಲಿ ಕೇಂದ್ರೀಕೃತಮಾಡಿ ಮೋಕ್ಷಮಾರ್ಗವನ್ನು ಉಪಾರ್ಜನೆಗೈಯ್ಯಲು ಸಾಧ್ಯವಾಗುವ ಮಾರ್ಗವನ್ನು ಸೂಚಿಸಲಾಗಿದೆ. ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರಿಗೆ ಇದು ಕೈದೀವಿಗೆಯಾಗಿದೆ.

ಇದರೊಂದಿಗೆ ವೀರಶೈವ ಮಹಾಮತ ಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಸಂಕ್ಷಿಪ್ತ ಲೀಲೆಗಳನ್ನೂ ಮತ್ತು ನಾರಿಯರಿಗೆ ದಿವ್ಯೋಪದೇಶವನ್ನು ಬಹು ಸುಂದರವಾಗಿ ವರ್ಣಿಸಿ ತಿಳಿಹೇಳಿದ್ದಾರೆ. ಧಾರ್ಮಿಕ ವಿಚಾರಗಳನ್ನು ಸುಲಭ ಸರಳ ಶೈಲಿಯಲ್ಲಿ ಪಾಮರರಿಗೆ ತಿಳಿಯುವಂತೆ ಬಿಡಿಸಿ ಹೇಳಿದ್ದಾರೆ.

* * *

ಬೆಲೆ ಏರಿಕೆ ಸಮಸ್ಯೆ

ಲೇಖಕರು ಮತ್ತು ಪ್ರಕಾಶಕರು: ಕೃ. ಪ. ಜೋಶಿ, ಪುಟಗಳು: ೭೧, ಬೆಲೆ: ೦-೮೦ ಪೈಸೆ.

ಈ ಪುಸ್ತಕ ಜೀವನೋಪಯುಕ್ತ ವಸ್ತುಗಳ ಬೆಲೆ ಏರಿಕೆ, ಇತಿಹಾಸ, ಕ್ರಮ, ಕಾರಣ ಹಾಗೂ ಪರಿಹಾರ ಇಷ್ಟು ಸಂಗತಿಗಳನ್ನು ಒಳಗೊಂಡಿದೆ. ಇದರಲ್ಲಿ ಪ್ರಚಲಿತ ಹಣ ಪದ್ಧತಿಯ ಲೋಪದೋಷಗಳನ್ನು ತೋರಿಸಿಕೊಡಲಾಗಿದೆ. ಅರ್ಥಶಾಸ್ತ್ರದ ಗಹನ ವಿಚಾರಗಳನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಲೇಖಕರು ನಮ್ಮ ಮುಂದೆ ಚರ್ಚಿಸಿ ಈ ಸಮಸ್ಯೆ ಬಹಳ ಪುರಾತನವಾದದ್ದೂ ಮತ್ತು ಜಟಿಲವೂ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇವರು ಸೂಚಿಸಿರುವ ಪರಿಹಾರೋಪಾಯವು ಮಾತ್ರ ಕೆಲವೆಡೆ ವಿವಾದಾಸ್ಪದವಾಗಿ ನಮ್ಮ ಮುಂದೆ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ಉಳಿಯುತ್ತದೆ. ಸರ್ವರ ಜೀವನಕ್ಕೂ ಸಂಬಂಧಿಸಿದ ಸಮಸ್ಯೆಯನ್ನು ಇವು ಚರ್ಚಿಸ ಹೊರಟಿರುವುದರಿಂದ ಜನಸಾಮಾನ್ಯರಿಗೂ ಇದು ಬಹಳ ಉಪಯೋಗಕರವೂ, ವಿಚಾರಗಳನ್ನು ಬಡಿದೆಬ್ಬಿಸುವ ಸಾಧನವೂ ಆಗಿದೆ.

—ಕೆ. ಎಸ್. ಸೂಲಿಬೆಲೆ

ಸಂಸ್ಕೃತ ಕವಯತ್ರಿಯರು:

ಕರ್ನಾಟಕ ವಿಶ್ವವಿದ್ಯಾನಿಲಯವು ಮೈಸೂರು ವಿಶ್ವವಿದ್ಯಾಲಯದ ಮಾದರಿಯಲ್ಲಿ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಗಳ ಮೂಲಕ ಜ್ಞಾನಪ್ರಸಾರ ಮಾಡುತ್ತಿದ್ದು

ಅದರ ಪೂರಕಯೋಜನೆಯಾಗಿ 'ಉಪನ್ಯಾಸ ಗ್ರಂಥಮಾಲೆ' ಯನ್ನೂ ಪ್ರಾರಂಭಿಸಿರುವುದು ಸರ್ವವಿದಿತ. ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿದ ಏಳು ಜಿಲ್ಲೆಗಳಲ್ಲಿ ನಡೆಸಿದ ಉಪನ್ಯಾಸ ಶಿಬಿರಗಳಲ್ಲಿ ವಿದ್ವಾಂಸರಿಂದ ಏರ್ಪಡಿಸಿದ ಉಪನ್ಯಾಸಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಈ ಕಿರುಹೊತ್ತಿಗೆಗಳು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಚಾರೋಪನ್ಯಾಸಮಾಲೆಯ ಮಾರ್ಗದಲ್ಲಿಯೇ ಜನಪ್ರಿಯವಾಗಿವೆ. ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ, ಅರ್ಥಶಾಸ್ತ್ರ, ಮನಶ್ಶಾಸ್ತ್ರ ಮೊದಲಾದ ವಿಷಯಗಳನ್ನೊಳಗೊಂಡ ಹಲವು ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಪ್ರಕೃತ ಸಾಹಿತ್ಯಕ್ಕೆ ಸಂಬಂಧಪಟ್ಟ ಎರಡು ಕಿರುಹೊತ್ತಿಗೆಗಳನ್ನು ಇಲ್ಲಿ ಪರಿಶೀಲನೆಗಾಗಿ ತೆಗೆದುಕೊಂಡಿದೆ. ಅವು ಶ್ರೀ ಕೆ. ಟಿ. ಪಾಂಡುರಂಗಿಯವರ 'ಸಂಸ್ಕೃತ ಕವಯಿತ್ರಿಯರು' ಹಾಗೂ ಶ್ರೀ ಜ. ಬಿ. ಹೆಂಡಿಯವರ ಹರಿಹರನು ಚಿತ್ರಿಸಿದ ಶಿವಶರಣೆಯರು.

'ಸಂಸ್ಕೃತ ಕವಯಿತ್ರಿಯರು' ಹೆಸರೇ ಆ ಕಿರುಹೊತ್ತಿಗೆಯ ಪ್ರಮುಖ ಆಕರ್ಷಣೆಯಾಗಿದೆ. ಏಕೆಂದರೆ ಸಂಸ್ಕೃತ ಕವಯಿತ್ರಿಯರು ಕನ್ನಡದಲ್ಲಿಯಂತೆಯೇ ಅತಿ ವಿರಳ. ಇರುವ ಕೆಲವರೂ ಖ್ಯಾತ ನಾಮಾಂಕಿತರಲ್ಲ. ಶ್ರೀ ಪಾಂಡುರಂಗಿಯವರು ಆ ಕೆಲವೇ ಕವಯಿತ್ರಿಯರ ಕಾವ್ಯಗಳನ್ನು ಆಮೂಲಾಗ್ರವಾಗಿ ಅಭ್ಯಸಿಸಿ ಆ ಕೃತಿಗಳ ವಿಸ್ತೃತ ಪರಿಚಯವನ್ನು ಸಾಮಾನ್ಯ ಓದುಗರಿಗೆ ಸರಳ ರೀತಿಯಲ್ಲಿ ಮಾಡಿಕೊಡುವ ಪ್ರಯತ್ನ ನಡೆಸಿರುವುದು. ಮಾತ್ರವಲ್ಲದೆ 'ಕವೀಂದ್ರ ವಚನ ಸಮುಚ್ಚಯ', 'ಸದುಕ್ತಿ ಕರ್ಣಾಮೃತ', 'ಶಾರ್ಙ್ಗಧರ ಪದ್ಧತಿ', 'ಸೂಕ್ತಿ ಮುಕ್ತಾವಲಿ', 'ಸುಭಾಷಿತಾವಲಿ' ಮೊದಲಾದ ಸಂಸ್ಕೃತ ಸುಭಾಷಿತ ಗ್ರಂಥಗಳಲ್ಲಿಯೂ ಅಲಂಕಾರ ಗ್ರಂಥಗಳಲ್ಲಿಯೂ ಉಲ್ಲೇಖಿತವಾಗಿರುವ ಹಲವು ಕವಯಿತ್ರಿಯರ ಬಿಡಿ ಪದ್ಯಗಳನ್ನಾರಿಸಿಕೊಂಡು ಅವುಗಳ ಸ್ಥೂಲ ಪರಿಚಯವನ್ನೂ ಮಾಡಿಕೊಡುವ ಯತ್ನ ಮಾಡಿದ್ದಾರೆ. ಪ್ರಾರಂಭದಲ್ಲಿ ಈ ಬಿಡಿ ಪದ್ಯಗಳನ್ನು ಪರಿಚಯ ಮಾಡಿಕೊಟ್ಟು ಮುಂದಿನ ಭಾಗಗಳಲ್ಲಿ ಕ್ರಮವಾಗಿ ವಿಜ್ಜಿಕೆ ಎಂಬ ಪ್ರಸಿದ್ಧಳಾಗಿರುವ ಕರ್ನಾಟಕದವಳೆಂದು ಪರಿಗಣಿತಳಾಗಿರುವ 'ಕೌಮುದೀ ಮಹೋತ್ಸವ' ನಾಟಕವನ್ನು ರಚಿಸಿದ ವಿಜಯಾಂಬಿಕೆಯ; 'ಮಧುರಾ ವಿಜಯಮ್' ಅಥವಾ 'ವೀರ ಕಂಪಣರಾಯ ಚರಿತಮ್' ಕಾವ್ಯರಚಿಸಿದ ಗಂಗಾದೇವಿಯ; 'ವರದಾಂಬಿಕಾ ಪರಿಣಯ' ಚಂಪೂ ಕಾವ್ಯ ಕರ್ತೃವಾದ ತಿರುಮಲಾಂಬೆಯ ಮತ್ತು 'ರಘುನಾಥಾಭ್ಯುದಯ' ಕಾವ್ಯ ಬರೆದ ರಾಮಭದ್ರಾಂಬೆಯ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಕೇವಲ ಗ್ರಂಥ ಸ್ವಾರಸ್ಯ ಪರಿಚಯ ಮಾಡಿಕೊಡುವುದರಲ್ಲಿಯೇ ತೃಪ್ತರಾಗದೆ ಲೇಖಕರು ಆಯಾ ಕವಯಿತ್ರಿಯರ ಕಾಲ, ಇತರ ಕವಿಗಳ ಪ್ರಭಾವ, ಅವರ ಕಾವ್ಯಗಳ ವಸ್ತುವಿನ ಐತಿಹಾಸಿಕ ಸಂಭಾವ್ಯತೆ ಮೊದಲಾದ ಹಲವು ಸಂಗತಿಗಳನ್ನು ತಮ್ಮ ಪರಿಮಿತಸ್ಥಳಾವಕಾಶದಲ್ಲಿ ಪರಿಶೀಲಿಸಿದ್ದಾರೆ. ವಿವರವಾಗಿ ಪರಿಶೀಲಿಸಿರುವ ಹಾಗೂ ಪೂರ್ಣ ಕರ್ತೃಗಳೆನಿಸಿದ ನಾಲ್ವರು ಕವಯಿತ್ರಿಯರು ದಕ್ಷಿಣ ಭಾರತದವರೇ ಆಗಿದ್ದು ವಿಜ್ಜಿಕೆ ಕರ್ನಾಟಕದವಳಾಗಿದ್ದು ಇತರ ಕವಯಿತ್ರಿಯರು ವಿಜಯನಗರ ಚರಿತ್ರೆಗೆ ಸಂಬಂಧಿಸಿದ ವಿಷಯಗಳನ್ನೇ ತಮ್ಮ ಕಾವ್ಯಕ್ಕೆ ಆರಿಸಿಕೊಂಡಿರುವುದು ಇಲ್ಲಿ ತಿಳಿದುಬರುವ ವಿಸ್ಮಯಕರ ಸಂಗತಿ. ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಯಾವುದೋ ಮೂಲೆಯಲ್ಲಿ ಹೆಸರಿಸಲ್ಪಡುವ ಇಲ್ಲವೆ ಹೆಸರಿಸದೆಯೂ ಇರಬಹುದಾದ ಈ ಕವಿಯತ್ರಿಯರ ಕೃತಿಗಳು ತುಲನಾತ್ಮಕವಾಗಿ ಉತ್ಕೃಷ್ಟವೆನ್ನಿಸದಿದ್ದರೂ ಅವು ಸ್ತ್ರೀಯರಿಂದ ರಚಿತವಾದವು ಎಂಬ ವಿಶಿಷ್ಟ ಕಾರಣದಿಂದ ಪರಿಶೀಲನೆಗೆ ಅರ್ಹ ಕೃತಿಗಳೇ ಆಗಿವೆ. ಅಂತೇ ಪಾಂಡುರಂಗಿಯವರು ಈ ಕಿರುಹೊತ್ತಿಗೆಯಲ್ಲಿ ಕನ್ನಡ ಜನತೆಗೆ ಅವರ ಪರಿಚಯ ಮಾಡಿಕೊಟ್ಟು ಉಪಕಾರ ಮಾಡಿದ್ದಾರೆ.

* * *

ಹರಿಹರನು ಚಿತ್ರಿಸಿದ ಶಿವಶರಣೆಯರು

ಶಿವಶರಣರ ಕಥೆಗಳನ್ನು ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿರುವ ಹರಿಹರನು ಶಿವಶರಣೆಯರ ಕಥೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ರಚಿಸಿದ್ದಾನೆ. ಅವನು ಚಿತ್ರಿಸಿರುವ ಶಿವಶರಣೆಯರಲ್ಲಿ ಪ್ರಮುಖರಾದವರು : 'ಮಹದೇವಿಯಕ್ಕ' 'ಕಾರಿಕಾಲಮ್ಮೆ', 'ಮೈಜಕವ್ವೆ', 'ಪಾಂಡ್ಯ ಮಹಾದೇವಿ' 'ಹೆರೂರ ಹೆಂಗೂಸು', 'ಬಿಜ್ಜ ಮಹಾದೇವಿ', 'ಕೋಳೂರ ಕೊಡಗೂಸು', ಮತ್ತು 'ನಿಂಬಿಯಕ್ಕ'. ಅವರು ತಮಗೊದಗಿದ ವಿಶಿಷ್ಟ ಪರಿಸ್ಥಿತಿಯಲ್ಲಿ, ಪ್ರತಿಕೂಲ ಸನ್ನಿವೇಶಗಳಲ್ಲಿ, ಪರೀಕ್ಷಾ ಸಮಯಗಳಲ್ಲಿ ಶಿವಭಕ್ತಿಯನ್ನು ಮೆರೆದು ಶಿವಲೋಕವನ್ನು ಸೇರಿದ ಕಥೆಗಳು ಇವು. ಶಿವನನ್ನು ದೇವನನ್ನಾಗಿ, ಸ್ವಾಮಿಯನ್ನಾಗಿ, ಮಗುವಂತೆ ಕಂಡು ಆರಾಧಿಸಿದವರು ಇವರು. ಶಿವನನ್ನು ಒಲಿಸಲು, ಮೆಚ್ಚಿಸಲು, ತಮ್ಮ ಸುಖಭೋಗಗಳನ್ನು ತ್ಯಾಗಮಾಡಿದವರು, ಪ್ರಾಣವನ್ನೇ ಪಣವಾಗಿಟ್ಟವರು. ಒಬ್ಬೊಬ್ಬರ ಕಥೆಯೂ ವೈವಿಧ್ಯಪೂರ್ಣವಾಗಿ ಸ್ವಾರಸ್ಯವಾಗಿವೆ. ಈ ಶಿವಶರಣೆಯರ ಪರಿಚಯವನ್ನು ಆದಷ್ಟು ಕವಿಯ ಮಾತುಗಳಲ್ಲಿ ಸಮಗ್ರ ಪರಿಚಯ ಮಾಡಿಸಿ

ಕೊಟ್ಟು, ಅವರ ಜೀವನ ದರ್ಶನವನ್ನೂ, ಭಕ್ತಿ ಸ್ವರೂಪವನ್ನು ವಿಶ್ಲೇಷಿಸಿರುವವರು ಶ್ರೀ ಬಿ. ಬಿ. ಹೆಂಡಿಯವರು. ಹರಿಹರನ ರಗಳೆಗಳನ್ನು ಮೂಲದಲ್ಲಿ ಓದಲಾಗದವರಿಗೆ ಈ ಪರಿಚಯ ತುಂಬಾ ಉಪಕಾರಿ. ಸರಳ ಶೈಲಿಯಲ್ಲಿ ಔಚಿತ್ಯಪೂರ್ಣ ವಿವರಗಳೊಡನೆ ಕೂಡಿದ್ದು ಶ್ರೀ ಹೆಂಡಿಯವರ ಈ ಕಿರುಹೊತ್ತಿಗೆ ಪ್ರಶಂಸನೀಯವಾಗಿದೆ.

ಸಾಹಿತ್ಯ ವಿಷಯವಲ್ಲದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಗಳಲ್ಲಿ ಇಲ್ಲಿ ಪರಿಶೀಲಿಸಲಿರುವುದು ಶ್ರೀ ಡಾ|| ಎನ್. ರಾಜಗೋಪಾಲರಾವ್‌ರವರ 'ರಾಜಕೀಯ ಪಕ್ಷಗಳು' ಶ್ರೀಯುತರು ಈ ಕಿರುಹೊತ್ತಿಗೆಯಲ್ಲಿ ಮೊದಲು ರಾಜಕೀಯ ಪಕ್ಷಗಳೆಂದರೇನು ಎಂಬ ವಿವರಣೆಯನ್ನು ಕೊಟ್ಟು, ಪಕ್ಷಗಳ ಸಂಘಟನೆ ಮತ್ತು ರಚನೆಗಳ ವಿಧಾನವನ್ನು ಪರಿಶೀಲಿಸಿ, ಪಕ್ಷಗಳಲ್ಲಿ ಸಾಂಘಿಕ ನಾಯಕತ್ವ ಹೇಗಿರಬೇಕು, ಅದರ ನಿಯಮಗಳೆಂತು ಎಂಬ ವಿಚಾರಗಳನ್ನೆಲ್ಲಾ ಸಂಗ್ರಹವಾಗಿ ವಿವರಿಸಿದ್ದಾರೆ. ಅನಂತರ ಏಕಪಕ್ಷ, ದ್ವಿಪಕ್ಷ ಮತ್ತು ಬಹುಪಕ್ಷಗಳ ಕಾರ್ಯವಿಧಾನವನ್ನೂ ಉದಾಹರಣೆಗಳೊಡನೆ ವಿವರಿಸಿ ಬಹುಪಕ್ಷ ಪದ್ಧತಿಯನ್ನು ಸಾಕಷ್ಟು ವಿವರವಾಗಿ ಪರಿಶೀಲಿಸಿ ಅದರ ಸಾಧಕಬಾಧಕಗಳನ್ನು ವಿವೇಚಿಸಿದ್ದಾರೆ. ಏಕಪಕ್ಷದಲ್ಲಿನ ಕೊರತೆಯನ್ನು ವಿವರಿಸಿದ್ದಾರೆ. ಅನಂತರ ಬೇರೆ ಬೇರೆ ರಾಷ್ಟ್ರಗಳಲ್ಲಿ ಪಕ್ಷಪದ್ಧತಿಗಳು ಹೇಗಿವೆಯೆಂಬುದನ್ನು ಪರಿಶೀಲಿಸಿ ಕಡೆಯಲ್ಲಿ ಭಾರತದಲ್ಲಿನ ವಿಭಿನ್ನ ಪಕ್ಷಗಳ ರೀತಿನೀತಿಗಳನ್ನು ಪರಿಶೀಲಿಸಿದ್ದಾರೆ. ಕೊನೆಯಲ್ಲಿ ಪಕ್ಷಪದ್ಧತಿಯ ಗುಣದೋಷಗಳನ್ನು ಪ್ರಜಾಪ್ರಭುತ್ವದಲ್ಲಿ ಪಕ್ಷಗಳ ಸ್ಥಾನಮಾನಗಳನ್ನು ವಿವೇಚಿಸಿದ್ದಾರೆ.

ಪ್ರಜಾಪ್ರಭುತ್ವ ರಾಜಕೀಯ ಪದ್ಧತಿಗಳಲ್ಲೆಲ್ಲಾ ಅತ್ಯಂತ ಪ್ರಧಾನವೆನಿಸಿರುವ ಈ ದಿನಗಳಲ್ಲಿ, ಪ್ರಜಾಪ್ರಭುತ್ವ ಅತ್ಯಂತ ಪ್ರಭಾವೀರೂಪದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಲಕ್ಷಣಗಳನ್ನೂ, ರಾಜಕೀಯ ಪಕ್ಷಗಳ ವಿಧಿವಿಧಾನಗಳನ್ನೂ ತಿಳಿದುಕೊಳ್ಳಬೇಕಾಗಿರುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ರಾಜ್ಯಶಾಸ್ತ್ರವನ್ನೇ ಐಚ್ಛಿಕ ವಿಷಯವಾಗಿ ಓದಲಾಗದ ಬಹಳ ಮಂದಿ ವಿದ್ಯಾರ್ಥಿಗಳಿಗೂ ಇತರರಿಗೂ ಶ್ರೀ ರಾಜಗೋಪಾಲ್‌ರವರ ಈ ಕಿರುಹೊತ್ತಿಗೆ ತುಂಬಾ ಉಪಕಾರಿಯೆನಿಸುವುದರಲ್ಲಿ ಸಂದೇಹವಿಲ್ಲ. ವಿಷಯ ನಿರೂಪಣೆ, ಶೈಲಿ, ಉದಾಹರಣೆಗಳು ಎಲ್ಲದರಲ್ಲಿಯೂ ಲೇಖಕರು ಸರಳತೆಯನ್ನು ಅನುಸರಿಸಿರುವುದರಿಂದ ಓದುವಾಗ ಪಾರಿಭಾಷಿಕ ಪದಗಳ ಜಟಿಲತೆ ಅಷ್ಟಾಗಿ ಕಾಣುವುದಿಲ್ಲ. ಆದರೂ ಬಳಸಿರುವ ಹಲವು ಪಾರಿಭಾಷಿಕ ಪದಗಳಿಗೆ ಕೊನೆಯಲ್ಲಿ ಅರ್ಥಕೋಶದಂತೆ ಇಂಗ್ಲಿಷ್ ಸಮಪದಗಳ ಒಂದು ಪಟ್ಟಿಯನ್ನು ಕೊಟ್ಟಿದ್ದಲ್ಲಿ ಹೊತ್ತಿಗೆ ಇನ್ನಷ್ಟು ಪರಿಪೂರ್ಣವಾಗುತ್ತಿತ್ತು.

—ಸೂ. ವೆಂ. ಅರಗ

ಜಡರಹಿತ ಅರ್ಥವ್ಯವಸ್ಥೆ

ಲೇಖಕರು: ಶ್ರೀ "ರಾಜರತ್ನ", ಪ್ರಕಾಶಕರು: ಆರಾಧನಾ ಸಾಹಿತ್ಯ, ಆರಾಧನಾ ಮಂದಿರ, ಅರಸೀಕೆರೆ, ಪುಟಗಳು: xviii+೨೦೯, ಬೆಲೆ: ರೂ. ೩–೫೦.

ಶ್ರೀ "ರಾಜರತ್ನ" ಅವರು ತಮ್ಮ ಈ ಕೃತಿಯಲ್ಲಿ ಆಧುನಿಕ ಆರ್ಥಿಕ ಸಮಸ್ಯೆಗಳನ್ನು, ವ್ಯವಸ್ಥೆಗಳನ್ನು ಸೋದಾಹರಣ ಪೂರ್ವಕವಾಗಿ ಸುಲಭ ಗ್ರಾಹ್ಯವಾಗುವಂತೆ ವಿವೇಚಿಸಿದ್ದಾರೆ, ವಿಚಾರಮಾಡಿದ್ದಾರೆ. ಅವರ ಈ ಪ್ರಯತ್ನ ಸ್ತುತ್ಯವಾದುದು; ಅನುಕರಣಯೋಗ್ಯವಾದುದು. ಆಳವಾದ ಅಧ್ಯಯನದ ಮೇಲೆ ರಚಿತವಾಗಿರುವ ಈ ಕೃತಿ ಜನಪ್ರಿಯವಾಗುವುದರಲ್ಲಿ ಸಂಶಯವಿಲ್ಲ. ಅವರಿಂದ ನಾವು ಈ ಬಗೆಯ ಇನ್ನೂ ಹೆಚ್ಚಿನ ಪುಸ್ತಕಗಳನ್ನು ನಿರೀಕ್ಷಿಸೋಣ; ನಾಡು ಅವರ ಸೇವೆಯ ಸಾಫಲ್ಯ ದೊರಕಿಸಲೆಂದು ಆಶಿಸೋಣ.

—ಸು

ಆಟಿಕೆ (ಕಥಾ ಸಂಕಲನ)

ಲೇಖಕರು: ಶ್ರೀ ಡಿ. ಲಿಂಗಯ್ಯ, ಪ್ರಕಾಶಕರು: ದಿನಕರ ಪ್ರಕಾಶನ, ಪೀಹಳ್ಳಿ, ಕೊಡಿಯಾಲ ಪೋಸ್ಟ್, ಪುಟ: ೧೧೬, ಬೆಲೆ: ಸಾಧಾರಣ ಪ್ರತಿ ರೂ. ೧–೭೫, ಉತ್ತಮ ೨–೫೦.

ಇದು ಲೇಖಕರ ಮೊದಲನೆಯ ಕಥಾಸಂಗ್ರಹ. ಇದರಲ್ಲಿ ಒಟ್ಟು ಏಳು ಕಥೆಗಳಿವೆ. ಬಹುಮಟ್ಟಿಗೆ ಈ ಕಥೆಗಳು ಬದುಕಿನಿಂದ ಪ್ರಭಾವಿತಗೊಂಡು ಬರೆದವು. ಆ ಕಾರಣದಿಂದಾಗಿ ಇವು ಹೃದ್ಯವಾಗಿವೆ. ಜೀವನದ ಸೂಕ್ಷ್ಮರೇಖೆಗಳನ್ನು ಕಂಡು ಅವುಗಳಿಗೆ ಮನಸೋತು ಅವುಗಳಿಂದ ಮೂಡಿದ ಭಾವನೆಗಳ ಅಲೆಗಳ ಮೇಲೆ ತೇಲಾಡಿ ಕಥೆಯ ತೀರವನ್ನು ತಲುಪಿದ್ದಾರೆ.

ಗ್ರಾಮೀಣ ಜೀವನ ಈ ಕಥೆಗಳಿಗೆ ಹಿನ್ನೆಲೆಯಾಗಿ ನಿಂತಿದೆ. ನಮ್ಮ ಸಮಾಜದ ಒಂದು ವರ್ಗದ ಜನರಲ್ಲಿ ಇಂದು ಕಂಡುಬರುವ ಆಚಾರ ವಿಚಾರಗಳು ಈ ಕಥೆಗಳಲ್ಲಿ ಹಾಸುಹೊಕ್ಕಾಗಿ ಬಂದು ಹೋಗುತ್ತವೆ. ಪಾತ್ರಗಳ ಸೃಷ್ಟಿಯಲ್ಲಿ, ಅವುಗಳು ಆಡುವ ಮಾತುಗಳಲ್ಲಿ ವಾಸ್ತವಿಕತೆ ಸಹಜತೆಗಳು ಮೂಡಿಬಂದಿವೆ. ಶೈಲಿಯಲ್ಲಿ ಸಂಯಮವಿದೆ.

ಒಟ್ಟಿನಲ್ಲಿ ಪ್ರಸ್ತುತ ಲೇಖಕರಿಂದ ಒಳ್ಳೆಯ ಸಾಹಿತ್ಯ ಸೇವೆಯನ್ನು ನಾವು ನಿಸ್ಸಂಶಯವಾಗಿ ನಿರೀಕ್ಷಿಸಬಹುದಾಗಿದೆ.

—ಸೂ. ಸು

'ದೊಡ್ಡ ದೇಶದ ದೊಡ್ಡ ಜನ'-ನಾಟಕ

ಲೇಖಕ: ಹೆಚ್. ವಿ. ನಾರಾಯಣ್, ಸುದರ್ಶನ ಪ್ರಕಾಶನ, ಪುಟ: ೪೦, ಬೆಲೆ: ರೂ. ೧-೦೦.

ಶ್ರೀ ನಾರಾಯಣ್‌ರವರ 'ದೊಡ್ಡ ದೇಶದ ದೊಡ್ಡ ಜನ' 'ಧ್ಯೇಯಪೂರ್ಣ' ಕಥಾವಸ್ತುವನ್ನುಳ್ಳ ಮೂರು ದೃಶ್ಯಗಳ ಕಿರುನಾಟಕ. ನಾಟಕಕಾರರು ರಾಷ್ಟ್ರೀಯತೆಯ ಮುದ್ರೆಯನ್ನೊತ್ತಿರುವುದನ್ನು ಕಂಡಾಗ ಯಾವ ದೃಷ್ಟಿಯಿಂದ ಈ ಪ್ರಶಸ್ತಿಯನ್ನಂಟಿಸಿಕೊಂಡಿದ್ದಾರೆಂದು ವಿಮರ್ಶಕನಿಗಂತೂ ಅರಿವಾಗುತ್ತಿಲ್ಲ!

ಭಾರತ-ಪಾಕಿಸ್ತಾನಗಳ ನಡುವೆ ಯುದ್ಧ ನಡೆಯುತ್ತಿದ್ದಾಗ ಅಂದಿನ, ಹಿಂದಿನ ಘಟನೆಗಳಿಂದ ಪ್ರಭಾವಿತರಾಗಿ, ಸ್ಫೂರ್ತಿ ಪಡೆದು ಲೇಖಕರು ಹಿಂದೂ-ಮುಸ್ಲಿಂ ಮೈತ್ರಿ ಸಂಸ್ಥಾಪನೆಯ ಆದರ್ಶವನ್ನು ಗುರಿಯನ್ನಾಗಿಟ್ಟುಕೊಂಡು ನಾಟಕರಚನೆಗೆ ಕೈಹಾಕಿದ್ದಾರೆ. ಆ ಕಾರ್ಯದಲ್ಲಿ ಅವರು ಬಹುಮಟ್ಟಿಗೆ ಸಫಲರಾಗಿದ್ದಾರೆನ್ನಬಹುದು.

ಮಾರ್ಗದರ್ಶಿ ಮತ್ತು ಛಾಯಾಚಿತ್ರಗ್ರಾಹಕ-ಇವರ ಜೀವನದ ಸುತ್ತ ಕಥೆ ಹೆಣೆಯಲ್ಪಟ್ಟಿದೆ. ಹಿಂದೂ-ಮುಸ್ಲಿಮರಾದರೂ ಇವರು ಸೋದರರಿಗಿಂತ ಮಿಗಿಲಾಗಿದ್ದವರು. ಇವರನ್ನು ಮೆಚ್ಚಿದ್ದ ರೂಪಾ ಭಕ್ಷಿರಾಮನ ಪತ್ನಿಯಷ್ಟೇ ಅಲ್ಲದೆ ಅಬ್ದುಲನ ಸೋದರಿಯಾಗಿದ್ದಳು; ಸುಮಿತ್ರಾ ವಿಜಾತೀಯವನಾದರೂ ಅಬ್ದುಲನನ್ನು ಪ್ರೀತಿಸಿದ್ದಳು. ನಡುವೆ ನಡೆದ ಘಟನೆಯೊಂದರಿಂದ ಈ ಮೈತ್ರಿಯ ಕಟ್ಟಡ ಕುಸಿದು, ಮತ್ತೊಮ್ಮೆ ಪುನರ್‌ರೂಪಿತಗೊಳ್ಳುತ್ತದೆ-ಇದು ನಾಟಕದ ಸ್ಥೂಲ ಅವತರಣಿಕೆ.

ವಸ್ತುವಿನ ಆಯ್ಕೆ ಉತ್ತಮವಾಗಿದ್ದು, ಪ್ರಭಾವ ಬೀರಬಲ್ಲದ್ದಾಗಿದೆ. ಪಾತ್ರರಚನೆಯಲ್ಲಿ-ಕೆಲವೆಡೆ ಸಂಭಾಷಣೆ ನೀರಸವಾಗಿದ್ದು, ಕೇವಲ ತೋರಿಕೆಯದಾಗಿ ಕಂಡರೂ-ಕುಶಲತೆಯಿದೆ. ತಂತ್ರದೃಷ್ಟಿಯಿಂದ ಒಂದು ಮಾತನ್ನು ಹೇಳಬಹುದು-ನಾಟಕದ ಪ್ರಾರಂಭಕ್ಕೆ ಮುನ್ನ ನಾಲ್ಕು 'ದೃಶ್ಯ' ಗಳಲ್ಲಿ (?) ಕರ್ತೃ ಹಾಗೂ ಕೃತಿ ಪರಿಚಯವನ್ನು ರಂಗದ ಮೇಲೂ ತರುವ (-ಇದನ್ನು ತರುವ, ಬಿಡುವ ಪ್ರಶ್ನೆ ಕಲಾವಿಲಾಸಿಗಳನ್ನವಲಂಬಿಸಿದೆ.) ಪ್ರಯತ್ನ ಪ್ರದರ್ಶನವಾಗಿ ಉಳಿಯಿತಲ್ಲದೆ ಔಚಿತ್ಯಪೂರ್ಣವೆನಿಸದು. ನಾಲ್ಕುಬಾರಿ ತೆರೆ ಎತ್ತಿ, ಇಳಿಸುವ ಈ ಕಸರತ್ತಿನಿಂದ ಆರಂಭಕ್ಕೆ ಮುನ್ನವೇ ನಾಟಕದ 'ಗತಿ' ಕುಂಟುತ್ತದೆ. ಮುಂದೆ ಭಕ್ಷಿರಾಂನಿಗೆ ಮಾನಸಿಕ ಆಘಾತದಿಂದಾಗಿ ಬುದ್ಧಿ ಚಾಂಚಲ್ಯವುಂಟಾದಾಗಲೂ ಕೃತಕತೆ ಎದ್ದು ಕಾಣುತ್ತದೆ. ಆಘಾತದ ತೀವ್ರತೆ ಅಸಾಧಾರಣವಾಗಿದ್ದಾಗ್ಯೂ ಅವನ ಕೆಲವು ಮಾತುಗಳು ಸಮರ್ಥಿಸುವುದಕ್ಕಿಂತ ಹೆಚ್ಚಾಗಿ ವಿರೋಧಿಸುತ್ತವೆ! ಅಂತ್ಯದ ಅರ್ಪಣೆಯೂ ಅಷ್ಟೇನೂ ಅರ್ಥಪೂರ್ಣ ಎನಿಸದಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮಾತುಮಾತಿಗೆ ಅಬ್ದುಲನು ದೊಡ್ಡ ದೇಶ, ದೊಡ್ಡ ಜನ, ದೊಡ್ಡ ನಡತೆ ಎಂದು ಸೂಚ್ಯವಾಗಿ ಕೃತಿಯಲ್ಲಿ ಮೂಡಿಸದೆ ಉದ್ಗರಿಸುವುದು ಪರಿಣಾಮಕಾರಿಯಾಗಿಲ್ಲ. ಪುಟ ೨೭ರ ಈ ಸಂಭಾಷಣೆಯ ತುಣುಕು:—

'ಭ-ಏನು ಧೈರ್ಯ ಇಲ್ಲ ಎಂದುಕೊಂಡೆಯ?
ಅ-ಧೈರ್ಯ ಇದೆ ಎಂದು ಹೇಳುತ್ತೇನೆ'

ಹಾಗೂ ಪುಟ ೩೯ರ—

'ಸು-ನಾನು ಬಿಡುವುದಿಲ್ಲ
ಅ-ನಾನು ಬಿಡುತ್ತೇನೆ'—

ಎಷ್ಟರಮಟ್ಟಿಗೆ ನಾಟಕೀಯವಾಗಿದೆ!

ಆದರೂ ಶ್ರೀ ನಾರಾಯಣ್‌ರಿಗೆ ಉತ್ತಮ ಭವಿಷ್ಯವಿದೆಯೆಂದು ದೃಢಪಡಿಸಬಲ್ಲ ಈ ವಾಕ್ಯಗಳು ನಾಟಕದ ಜೀವಾಳವಾಗಿವೆ.

'ಮನುಷ್ಯ ಯಾಕೆ ಹೀಗಾಗಬೇಕು? ಅವನ ಹೃದಯದಲ್ಲಿ ಪ್ರೀತಿ ತುಂಬಿ ಹರಿಯಬಾರದೆ? . . . ಮನುಷ್ಯ ಮನುಷ್ಯನಾಗಿರಬಾರದೆ?' (ಪುಟ ೨೩.)

ಒಟ್ಟಿನಲ್ಲಿ ಇದೊಂದು ಸಮಯೋಚಿತ ನಾಟಕವೆನ್ನಬಹುದು.

—ಸುಮನಾ

ಇಂದ್ರಚಾಪ

ಎಸ್. ವಿ. ಪರಮೇಶ್ವರಭಟ್ಟ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, ಪುಟಗಳು vii+೨೪೪, ಬೆಲೆ ರೂ. ೬-೦೦.

ಚಂದ್ರವೀಧಿ

ಎಸ್. ವಿ, ಪರಮೇಶ್ವರಭಟ್ಟ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, ಪುಟಗಳು: ೧೭೫ ಬೆಲೆ: ೪ರೂ.

ಗಾಥಾಸಪ್ತಶತಿ

ಎಸ್. ವಿ. ಪರಮೇಶ್ವರಭಟ್ಟ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, ಪುಟಗಳು vii×೧೭೬.

ಇಂದ್ರಚಾಪ, ಚಂದ್ರವೀಥಿ, ಗಾಥಾಸಪ್ತಶತಿ ಇವು ಮೂರೂ ಶ್ರೀ ಎಸ್. ವಿ. ಪರಮೇಶ್ವರಭಟ್ಟರ ಸಾಂಗತ್ಯ ಮುಕ್ತಕ ಸಂಕಲನಗಳು. ಮೊದಲ ಎರಡು ಗ್ರಂಥಗಳಲ್ಲಿ ಸ್ವಂತ ಸೃಷ್ಟಿ–ಅನುವಾದಗಳೆರಡೂ ಇದ್ದರೆ ಗಾಥಾಸಪ್ತಶತಿಯು ಸಾತವಾಹನ ಹಾಲನೆಂಬ ಕವಿ ಪ್ರಾಕೃತದಲ್ಲಿ ಬರೆದ ಏಳುನೂರು ಪದ್ಯಗಳ ಕನ್ನಡ ಅನುವಾದ. ಮೂರೂ ಸಾಂಗತ್ಯ ರೂಪದಲ್ಲಿ ಪ್ರಕಟವಾಗಿವೆ. ಈ ಗ್ರಂಥಗಳಲ್ಲಿ ಎದ್ದುಕಾಣುವ ಅಂಶವೆಂದರೆ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ಸಾಂಗತ್ಯದ ಛಂದೋರೂಪದಲ್ಲಿ ಕಂಡುಕೊಂಡ ಜೀವಸತ್ವ ಮತ್ತು ನಿರ್ವಹಣಾಕ್ಷಮತ್ವ. ಸಂಪನ್ನವಾದ, ಸರ್ವಂಕಷವಾದ ವಿಚಾರಧಾರೆಗೆ ಯೋಗ್ಯ ಮಾಧ್ಯಮವಾಗುವಂತೆ ಸಾಂಗತ್ಯವನ್ನು ಬಳಸಿಕೊಂಡಿರುವ ರೀತಿ, ಮತ್ತು ಕನ್ನಡದಲ್ಲಿ ಹಿಂದೆ ಯಶಸ್ವಿಯಾಗಿದ್ದ ಒಂದು ಸಿದ್ಧಛಂದೋರೂಪಕ್ಕೆ ಹೊಸಯುಗದ ಅಭಿರುಚಿಗೆ ತಕ್ಕಂತೆ ರಕ್ತಮಾಂಸಗಳನ್ನು ತುಂಬಿ ವೇಷವನ್ನು ಒಗ್ಗಿಸಿಕೊಂಡು, ಪಲುಕಿನಲ್ಲಿ ನಾನಾ ವೈವಿಧ್ಯಗಳನ್ನು ಯೋಚಿಸಿ ಹದಗೊಳಿಸಿರುವ ರೀತಿ ಪ್ರಶಂಸಾರ್ಹವಾಗಿದೆ. ಹೊಸ ದೀಕ್ಷೆ ತೊಟ್ಟು ನಿಂತ ಸಾಂಗತ್ಯ ಶ್ರೀ ಭಟ್ಟರ ಕೈಯಲ್ಲಿ ನುರಿತ ಶಿಲ್ಪಿಗೆ ಬಾಗುವ ಕಲಾವಸ್ತುವಿನಂತೆ ಬಾಗಿದೆ. ಸಾಂಗತ್ಯ ಆಕಸ್ಮಿಕವಾಗಿ ಇವರ ಕಣ್ಣಿಗೆ ಬಿದ್ದ ರೂಪ ಎಂದು ಹೇಳಲಾಗುವುದಿಲ್ಲ. ಶ್ರೀ ಭಟ್ಟರು ತಮ್ಮ ಅನುವಾದ ಕೃತಿಗಳಲ್ಲೆಲ್ಲಾ ಬಳಸಿರುವ ಒಟ್ಟು ಛಂದೋರೂಪಗಳು ಬೆರಗುಗೊಳಿಸುವಷ್ಟಿವೆ. ಸ್ವತಂತ್ರ ಕೃತಿರಚನೆ ಮಾಡುವಾಗ, ಕಾಳಿದಾಸನ ಕಾವ್ಯ, ನಾಟಕಗಳ ವಿವಿಧ ಪದ್ಯಗಳನ್ನು ಕನ್ನಡದ ಛಂದಸ್ಸಿನ ಒಳವೈಗೆ ಹೊಂದಿಸಿಕೊಳ್ಳುವಾಗ; ಭರ್ತೃಹರಿಯ ಮೂರು ಶತಕಗಳನ್ನೂ ಜಯದೇವನ ಗೀತಗೋವಿಂದದ ಮಧುರ ಅಷ್ಟಪದಿಗಳನ್ನೂ ಕಾವ್ಯರೂಪದಲ್ಲಿ ಅನುವಾದಿಸುವಾಗ ಅವರು ಪಟ್ಟ ಛಂದೋವೇದನೆಗಳು, ಪರಿಚಯಿಸಿಕೊಂಡ ಛಂದೋಸಾಗರದ ಅಲೆಗಳು, ಅನುಭವಿಸಿದ ಸೋಲು–ಇವೆಲ್ಲಾ ಈ ಮೂರು ಸಾಂಗತ್ಯಗಳ ಯಶಸ್ಸಿನ ಹಿನ್ನೆಲೆ ಎನ್ನಬೇಕಾಗುತ್ತದೆ.

ಇಂದ್ರಚಾಪ ಹಾಗೂ ಚಂದ್ರವೀಥಿ ಕನ್ನಡದ ಉತ್ತಮ 'ನೆನೆಕಬ್ಬ' ಗಳು ಎನ್ನಬಹುದು. ಪ್ರಾಚೀನಾರ್ವಾಚೀನ ಸಂಸ್ಕೃತ, ಆಂಗ್ಲ ಸೂಕ್ತಿಸುಧೆಯಿಂದ ಸಂಪುಷ್ಟಗೊಂಡು ಪರಿಭಾವನೆಗೆ ಯೋಗ್ಯವಾದ ವಿಚಾರಲಹರಿ, ಶಬ್ದಗಳ ಅಪವ್ಯಯವಾಗದಂತೆ ಕೆಲವೆಡೆ ಕಿರಿದರೊಳೆ ಪಿರಿದರ್ಥವನ್ನು ಸಂಯೋಜಿಸಿರುವ ಕಲಾಜಾಣ್ಮೆ, ಗಾದೆ, ನುಡಿಗಟ್ಟು, ಪಲ್ಲವಿಗಳ ಭಾವಸಂಪತ್ತನ್ನು ಅರಿತು ಹೊಸ ಹೊಸದಾಗಿ ಅಂಥವನ್ನು ಸೃಷ್ಟಿಮಾಡುವ ಕುಶಲಕರ್ಮ ಇವು ಈ ಗ್ರಂಥಗಳ ವೈಶಿಷ್ಟ್ಯ.

"ಹಿಡಿದರೆ ಹಿಡಿತುಂಬ ಬಿಟ್ಟರೆ ಜಗಕೆಲ್ಲ
ಕವಿಯ ಸುಭಾಷಿತ ಹೀಗೆ
ಒಂದಡಿ ಇಳೆಗೆಲ್ಲ ಒಂದಡಿ ನಭಕೆಲ್ಲ
ವಾಮನ ಬೆಳೆದೆದ್ದ ಹಾಗೆ"

ಎಂದು ಶ್ರೀ ಭಟ್ಟರೇ ಈ ಪದ್ಯಜಾತಿಯ ಸ್ವರೂಪವನ್ನೂ ಪ್ರಭಾವವನ್ನೂ ಒಂದುಕಡೆ ಗುರುತಿಸಿದ್ದಾರೆ. ಇಂದ್ರಚಾಪದ ಮೊದಲ ನಾಲ್ಕುನೂರು ಪದ್ಯಗಳಲ್ಲಿ ಲೇಖಕರು ತಮ್ಮ ಬದುಕಿನ ಹಲವಾರು ಪ್ರೇರಕಶಕ್ತಿಗಳು, ತಾವು ಹುಟ್ಟಿ ಬೆಳೆದ ಪರಿಸರ ಮೊದಲಾದ ಜೀವನಪಾಕದ ಪರಿಕರಗಳನ್ನು ಆತ್ಮೀಯವಾದ ಉಕ್ತಿಗಳಲ್ಲಿ ಚಿತ್ರಿಸಿದ್ದಾರೆ. ಸಂಪೂರ್ಣ ವ್ಯಾವಹಾರಿಕವಾದ ಆತ್ಮಚರಿತೆಯನ್ನು ಕಲಾತ್ಮಕವಾಗಿ ಚಿತ್ರಿಸುವುದು ಕಷ್ಟಸಾಧ್ಯವಾದ ಕೆಲಸ. ಬೇಂದ್ರೆಯವರ ಸಖೀಗೀತದಂತೆ (ಛಂದಸ್ಸೂ ಬಲುಮಟ್ಟಿಗೆ ಅದೇ) ಇಲ್ಲಿ ಭಟ್ಟರೂ ತಮ್ಮ ಬದುಕಿನ–ಒಂದು ಘಟ್ಟದವರೆಗಿನ–ಇತಿಹಾಸದ ತಂತುಗಳನ್ನು ವ್ಯವಸ್ಥಿತವಾಗಿ ಒಂದುಗೂಡಿಸಿಕೊಟ್ಟಿದ್ದಾರೆ.

ಇಂದ್ರಚಾಪ ಚಂದ್ರವೀಥಿ ಮತ್ತು ಗಾಥಾಸಪ್ತಶತಿಗಳಿಂದ ಈ ಕೆಲವು ಪದ್ಯಗಳನ್ನು ಗಮನಿಸಿದರೆ ಒಟ್ಟು ರಚನೆಯ ಧಾಟಿ, ದೃಷ್ಟಿಗಳ ಪರಿಚಯವಾದೀತು.

ಬಂದು ಹೋಗುವುದಕೆ ಒಂದೆ ಬಾಗಿಲು ನೋಡು
ಜಗವೊಂದು ಜೇನಿನ ಗೂಡು
ಸಾವಿರ ಕೋಣೆಗಳಿಲ್ಲಿಹವಾದರೆ
ನಾವಿದರೊಳು ಬೇರೆ ಬೇರೆ.

ನೊಣವನೆ ಬೇಯಿಸಿ ಬಡಿಸುವುದಾದರು
ಯಜಮಾನರರಿಯದ ಹಾಗೆ
ರೆಕ್ಕೆಯನೊಂದನು ಅಡುಗೆಯ ಭಟ್ಟರು
ತಮಗಾಗಿ ತೆಗೆದಿರಿಸುವರು.

ಅರಳುವುದೆಂದಿಗೆ ಕಣ್ಣಿನ ಕೊನೆ ಮೊಗ್ಗು
ಮಾಗುವುದೆಂದಿಗೆ ಸಿಗ್ಗು ?
ಮುರಿಯುವುದೆಂದಿಗೆ ಮೌನದ ಗೋಲಕ
ನಿಲ್ಲುವುದೆಂದಿಗೆ ನಡುಕ.

ಗುರಿಸಿಕ್ಕಿತೆನುವಾಗ ದೊಣೆ ಬರಿದಾಗಿತ್ತು
ಹೀಗಿತ್ತು ಹಣೆಯೊಳು ಬರಹ

ಬೆಳಗಾಯಿತೆನುವಾಗ ಕತ್ತಲೆಯಾಗಿತ್ತು
ಜತೆಗೂಡಿತೆನ್ನನು ವಿರಹ.

ತುಂಗ ಪಯೋಧರದೀ ಮಳೆಗಾಲವು
ಸಂದಿತು ಯೌವನದಂತೆ
ಅರಳಿಹುದಿದೊ ನೋಡು ಒಂದೆ ಕಾಶದ ಹೂವು
ತಿರೆಯ ತಲೆಯ ನೆರೆಯಂತೆ.

ಕ್ಷಣಭಂಗುರಂಗಳಿವೆನಿಸಿದ ಒಲವೊಳು
ನೊಂದೆನು ಚಿಕ್ಕಮ್ಮ ಕೇಳು
ಕಣ್ತೆರೆದಾಗುಂಟೆ ಕನಸಿನ ಆ ಗಂಟು
ಅದರಂತೆ ಲೋಕದ ನಂಟು.

ಇಲ್ಲಿಯ ೨೬೦೦ ಸಾಂಗತ್ಯ ಪದ್ಯಗಳಲ್ಲಿ ಗಾಥಾಸಪ್ತಶತಿಯದು ನೇರವಾದ ಅನುವಾದ. ಇಂದ್ರಚಾಪದ ಸುಮಾರು ೧೯೬ ಪದ್ಯಗಳಿಗೆ ಆಕರಗಳನ್ನು ಸಂಸ್ಕೃತ ಸಾಹಿತ್ಯದಲ್ಲಿ ಗುರುತಿಸಬಹುದು. ಕನ್ನಡ ಸೂಕ್ತಿಗಳು, ಪೂರ್ವ ಕವಿಗಳ ಉಕ್ತಿಗಳು ಗಾದೆ ಮಾತುಗಳು ಅನೇಕ ಪದ್ಯಗಳಿಗೆ ಪ್ರೇರಕವಾಗಿವೆ. ಚಂದ್ರವೀಥಿ ಬಹುಮಟ್ಟಿಗೆ ಸ್ವಂತ ವಿಚಾರಧಾರೆ ಎನ್ನಬಹುದು. ಇಲ್ಲಿಯ ಪದ್ಯಗಳ ಜೋಡಣೆಯಲ್ಲಿ ಯಾವ ಕ್ರಮಶಾಸ್ತ್ರಗಳನ್ನೂ ಇಟ್ಟುಕೊಂಡಂತೆ ಕಾಣಿಸುವುದಿಲ್ಲ. ಇಂದ್ರಚಾಪದಲ್ಲಿ ಕೊನೆಯ ಪಕ್ಷ ಆರನೆಯ ನೂರು ಪದ್ಯಗಳಿಂದ ಮುಂದಕ್ಕೆ ಅಕಾರಾದಿಯ ಕ್ರಮವನ್ನು ಅನುಸರಿಸಬಹುದಿತ್ತು ಎನಿಸುತ್ತದೆ. ಸುಮಾರು ೨೨ ಪದ್ಯಗಳು ಜೋಡಣೆಯ ಅಚಾತುರ್ಯದಿಂದಾಗಿ ಎರಡೆರಡು ಬಾರಿ ಕಾಣಿಸಿಕೊಂಡಿವೆ. ಅನುವಾದಿಸಿರುವ ಸಂಸ್ಕೃತ ಶ್ಲೋಕಗಳ ಮೂಲವನ್ನು ಅನುಬಂಧದಲ್ಲಿ ಕೊಡಬಹುದಿತ್ತು. ಹೀಗೆ ಆಕರ ಸೂಚಿ ಇಲ್ಲದಿರುವುದರಿಂದ ಈ ಸಾಂಗತ್ಯಗಳಲ್ಲಿ ಎಷ್ಟುಭಾಗ ಸುಭಾಷಿತ, ಎಷ್ಟುಭಾಗ ಸ್ವವಿಚಾರ ಎಂಬುದು ತಿಳಿಯದೆ ಹೋಗುತ್ತದೆ. ಇದರಿಂದ ಲೇಖಕರಿಗೇ ಆಗಿರುವ ನಷ್ಟ ಹೆಚ್ಚು. ಅನೇಕ ಕಡೆಗಳಲ್ಲಿ ಪದ್ಯರಚನೆ ತುಂಬ ಸುಲಭವಾದ ಯಾಂತ್ರಿಕ ಹೊಸೆತವಾಗಿ ವ್ಯಂಜನ ಶಕ್ತಿಯನ್ನು ಕಳೆದುಕೊಂಡಿವೆ. ಚಂದ್ರವೀಥಿಯಲ್ಲಿ ತುಂಬ ಸರಳವಾದ ಲಘುವಾದ ಹಾಸ್ಯದ ಚುಟಕಗಳನ್ನು ಇಡೀ ಪದ್ಯಕ್ಕೆ ವಿಸ್ತರಿಸಿರುವುದರಿಂದ ಪದ್ಯಗಳಲ್ಲಿ ಬಿಗಿ ಕಡಮೆಯಾಗಿದೆ. ಇಂದ್ರಚಾಪದಲ್ಲಿ ಹೆಣ್ಣಿನ ಬಗ್ಗೆ ಬರೆದಿರುವ ಎರಡು ಪದ್ಯಗಳಂತೂ ಅಯಾಚಿತವಾಗಿ ಕೀಳು ರುಚಿಯನ್ನು ತೋರುತ್ತವೆ. ಮನಮುಟ್ಟುವ ಹಾಸ್ಯ, ವಿಚಾರ ವಲಯಗಳ ವಿಸ್ತಾರ ಇವು ಮೆಚ್ಚತಕ್ಕುವಾದರೂ ಚಂದ್ರವೀಥಿಯ ಬಹುತೇಕ ಪದ್ಯಗಳು ಮೊದಲ ಗ್ರಂಥದ ನೇಯ್ಗೆಯ ಹದವನ್ನು ಉಳಿಸಿಕೊಳ್ಳಲಾರದೆ "ನನ್ನಿತಿಮಿತಿಯೊಳಗಿನ ಅನುಭವವನೆ ಮತ್ತೆ ಮತ್ತೊರೆವೆನೋರಂತೆ" ಎಂಬ ಲೇಖಕರ ಮಾತಿನಂತೆಯೇ ಗಾಣ ಸುತ್ತುತ್ತವೆ. ಗಾಥಾಸಪ್ತಶತಿಯ ಅಸಂಖ್ಯಾತ ಪದ್ಯಗಳು ಮಾತ್ರ ಮುಗ್ಧ ಸೌಂದರ್ಯದಿಂದ ನಮ್ಮ ಮನ ತಣಿಸುತ್ತವೆ. ಒಟ್ಟಿನಲ್ಲಿ ಶ್ರೀ ಎಸ್. ವಿ. ಪರಮೇಶ್ವರಭಟ್ಟರ ಸಾಂಗತ್ಯ ವಿಲಾಸವು ಈ ಸಾವಿರಾರು ಪದ್ಯಗಳಲ್ಲಿ ಸ್ವಚ್ಛಂದವಾಗಿ ಮೈದೋರಿದೆ ವಿಚಾರ ಕ್ಷೇತ್ರಗಳಿರುವ ಎಡೆಗಳಲ್ಲೆಲ್ಲಾ ಚಣಕಾಲ ಮಾತ್ರ ನಿಂತು ಅಲ್ಲಿಯ ಸೊಗಸನ್ನು ಎದೆಗೆ ತುಂಬಿಕೊಳ್ಳುವ ಶ್ರೀಯುತರ ಸಾಹಿತ್ಯಯಾತ್ರೆ ಸಾಫಲ್ಯವನ್ನು ಪಡೆದಿದೆ.

—ವಿ

ಏಳುಕೊಳ್ಳದ ಎಲ್ಲಮ್ಮ

ಲೇಖಕರು : ಮತಿಘಟ್ಟ ಕೃಷ್ಣಮೂರ್ತಿ, ಗುರುಮೂರ್ತಿ ಪ್ರಕಾಶನ, ನಂ. ೧೫, ದತ್ತಾತ್ರೇಯ ಬಡಾವಣೆ, ಬೆಂಗಳೂರು-೧೯, ಪುಟಗಳು: ೮೦, ಬೆಲೆ: ರೂ. ೧-೫೦.

ಜನಪದ ಸಾಹಿತ್ಯ ಸಂಗ್ರಹಣೆಯ ಕಾರ್ಯದಲ್ಲಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಅಪೂರ್ವವಾದ ಸಾಹಿತ್ಯವನ್ನು ಸಂಗ್ರಹಿಸಿ, ನಶಿಸಿಹೋಗುತ್ತಿರುವ ಸಾಹಿತ್ಯವನ್ನು ಉಳಿಸಿ, ಪುಸ್ತಕ ರೂಪದಲ್ಲಿ ಅರಳಿಸಿ ಕೊಡುವವರನ್ನು ಸಾಹಿತಿಗಳೆಂದೇ ಕರೆಯಬೇಕು. ಈ ನಿಟ್ಟಿನಲ್ಲಿ ದುಡಿದವರಿಗೆ, ದುಡಿಯುವವರಿಗೆ ನಮ್ಮ ಜನತೆ, ಸರ್ಕಾರ ಯಾವ ರೀತಿಯಿಂದಲೂ ನೆರವು ನೀಡುತ್ತಿಲ್ಲ. ಇನ್ನಾದರೂ ಈ ಕಡೆ ಘನಸರ್ಕಾರದ ಗಮನ ಹರಿಯಲಿ, ಬಾಯಿಂದ ಬಾಯಿಗೆ ಪ್ರವಹಿಸಿ ಬಂದು, ವೈಜ್ಞಾನಿಕ ಯುಗದ ಸೆಳೆತಕ್ಕೆ ಸಿಕ್ಕು, ಕೊಚ್ಚಿ ಹೋಗುತ್ತಿರುವ ಈ ಸಾಹಿತ್ಯ ಗಂಗೆಯನ್ನು ಸಂರಕ್ಷಿಸುವಂತಹ ಕಾರ್ಯವನ್ನು ಎಷ್ಟು ತ್ವರಿತಗತಿಯಲ್ಲಿ ನಡೆಸಿದರೆ ಅಷ್ಟೂ ಲಾಭವಿದೆ. ಈ ದಿಕ್ಕಿನಲ್ಲಿ ಈಗಾಗಲೇ ಕಾರ್ಯನಿರತರಾಗಿರುವ ಹಲವರಿಗೆ ಪ್ರೋತ್ಸಾಹನೀಡಿ ತಮ್ಮ ಈ ವೃತ್ತಿಯಲ್ಲಿ ಮಗ್ನರಾಗುವಂತೆ ಪ್ರೇರೇಪಿಸುವುದು ಸರ್ಕಾರದ ಆದ್ಯಕರ್ತವ್ಯ ಎನ್ನಿಸುತ್ತದೆ.

ಶ್ರೀ ಕೃಷ್ಣಮೂರ್ತಿಯವರು ಕಳೆದ ಕೆಲವು ದಶಕಗಳಿಂದ ಜನಪದ ಸಾಹಿತ್ಯ ಸಂಗ್ರಹಣೆ ಹಾಗೂ ಪ್ರಕಟಣೆಯ ಕಾರ್ಯದಲ್ಲಿ ತೊಡಗಿ ಸಾಕಷ್ಟು ಹೆಸರುಗಳಿಸಿದ್ದಾರೆ.

ಪ್ರಕೃತ "ಏಳುಕೊಳ್ಳದ ಎಲ್ಲಮ್ಮ" ಎಂಬ ಕ್ಷೇತ್ರಪರಿಚಯ ಗ್ರಂಥವೊಂದನ್ನು ಕನ್ನಡಿಗರ ಮಡಿಲಲ್ಲಿ ಇಟ್ಟಿದ್ದಾರೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ 'ಎಲ್ಲಮ್ಮ' ಸುಪ್ರಸಿದ್ಧ ದೇವತೆ, 'ಎಲ್ಲಮ್ಮನ ಕೊಳ್ಳ'ವು ಪ್ರಸಿದ್ಧ ಯಾತ್ರಾಸ್ಥಳ. ಪ್ರತಿದಿನವೂ ನೂರಾರು ಜನ ಭಕ್ತಾದಿಗಳು ಈ ಕ್ಷೇತ್ರಕ್ಕೆ ಭೇಟಿಕೊಡುತ್ತಾರೆ. ಇಂತಹ ಪ್ರಸಿದ್ಧ ಕ್ಷೇತ್ರವೊಂದರ ಪರಿಚಯ, ಐತಿಹಾಸಿಕ ಸಂಗತಿಗಳ ಸ್ಪಷ್ಟ ವಿವರಣೆ, ಪೌರಾಣಿಕ ವಿಷಯಗಳ ಸಂಗ್ರಹ, ಕ್ಷೇತ್ರ ಮಹಿಮೆ, ಇವೆಲ್ಲವನ್ನೂ ಸಂಗ್ರಹಿಸಿಕೊಡುವುದು ಯಾರಿಂದಲಾದರೂ ಸಾಧ್ಯವಾಗುವಂತಹ ಕೆಲಸ. ಆದರೆ ಶ್ರೀ ಕೃಷ್ಣಮೂರ್ತಿಯವರು ತಮ್ಮ ಮನೋಧರ್ಮಕ್ಕನುಗುಣವಾದ, ಇದೆಲ್ಲಕ್ಕೂ ಹೆಚ್ಚಿನ ಸ್ತುತ್ಯಾರ್ಹ ಕೆಲಸವೊಂದನ್ನು ಈ ಗ್ರಂಥವನ್ನು ಪ್ರಕಟಿಸುವುದರ ಮೂಲಕ ಮಾಡಿಕೊಟ್ಟಿದ್ದಾರೆ. ಅದೆಂದರೆ, ಕ್ಷೇತ್ರದ ಬಗ್ಗೆ, ದೇವತೆಯ ಬಗ್ಗೆ ದೊರಕುವ ಎಲ್ಲ ರೀತಿಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿಕೊಟ್ಟು ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಈ ಬಗೆಯ ಕೆಲಸ ಕನ್ನಡನಾಡಿನ ಎಲ್ಲ ಸುಪ್ರಸಿದ್ಧ ಕ್ಷೇತ್ರಗಳ ಬಗೆಗೂ ನಡೆದರೆ, ಜನತೆಗೆ ನಾಡಿನ ಗತವೈಭವದ ಸ್ಮರಣೆಯನ್ನೂ, ಪ್ರಾಚೀನ ಸಂಸ್ಕೃತಿಯ ದಿಗ್ದರ್ಶನವನ್ನು ಮಾಡಿಸಿ ಕೊಟ್ಟಂತಾಗುತ್ತದೆ. ಶ್ರೀ ಕೃಷ್ಣಮೂರ್ತಿಯವರು ಈ ದಿಕ್ಕಿನಲ್ಲಿ ಕೆಲಸಮಾಡುವಂತಹ ಪ್ರೋತ್ಸಾಹವನ್ನು ಕನ್ನಡ ಜನತೆ ಸರಿಯಾದ ರೀತಿಯಲ್ಲಿ ನೀಡಲಿ ಎಂದು ಹೇಳಬಯಸುತ್ತೇವೆ.

* * *

ಗೀತಲಹರಿ (ಕವನ ಸಂಕಲನ)

ಎನ್. ಎಸ್. ಗದಗಕರ, ಪ್ರಕಾಶಕರು : ಎನ್. ಎಸ್. ಗದಗಕರ, ಶುಕ್ರವಾರಪೇಟೆ, ನವಲೂರು ಅಗಸಿ, ಧಾರವಾಡ, ಪುಟಗಳು : ೩೨, ಬೆಲೆ : ೦೦-೭೫.

ಎನ್. ಎಸ್. ಗದಗಕರ 'ಗೀತಲಹರಿ' ಕವನ ಸಂಕಲನವನ್ನು ಕೈಗೆತ್ತಿಕೊಂಡಾಗ ಮೊದಲು ನೋಟಕ್ಕೆ ತೋರಿಬಂದುದು ಮುದ್ರಾರಾಕ್ಷಸನ ಹಾವಳಿ, ದಾಳಿ ಎಂದರೂ ಸರಿಯೇ! ೩೨ ಪುಟಗಳ ಅವಕಾಶದಲ್ಲಿ ಎಷ್ಟು ತಪ್ಪುಮಾಡಬಹುದೆಂಬ ದೃಷ್ಟಿಯಲ್ಲಿ ಇವರು 'ವಿಕ್ರಮ' ಸಾಧಿಸಿದ್ದಾರೆಂದರೆ ಖಂಡಿತ ಅತಿಶಯೋಕ್ತಿಯಾಗಲಾರದು. ಇದೂ ಸಾಲದೆಂಬಂತೆ ಪುಟಗಳ ಕ್ರಮಸಂಖ್ಯೆಯನ್ನು ಪತ್ತೆಹಚ್ಚಬೇಕಾದರೆ ತಲೆಕೆಡಿಸಿಕೊಂಡು ಹುಡುಕಬೇಕು. ಇಷ್ಟೆಲ್ಲ ಕ್ರಮವನ್ನು ಲೆಕ್ಕಿಸದೆ ಸಂಕಲನದಲ್ಲಿರುವ ೧೮ ಕವನಗಳನ್ನು ಓದಿ ನೋಡಿದಾಗ ದೊರಕುವುದು ನಿರಾಶೆಯೆ ಹೊರತು ಮತ್ತೇನೂ ಅಲ್ಲ. ಕವಿಗಳು ನಿವೇದನೆಯಲ್ಲಿ 'ಕಲೆಪ್ರಯೋಗ, ಪರಿಪೂರ್ಣತೆ ಅಭ್ಯಾಸ ಬಲವನ್ನು ಅವಲಂಬಿಸಿರುವುದು, ಎಂದಿದ್ದಾರೆ. ಈ ಮಾತನ್ನು ಮತ್ತೊಮ್ಮೆ ಅವರ ನೆನಪಿಗೆ ತರಬಯಸುತ್ತೇವೆ. ಕವನ ಸಂಕಲನದ ವಿಮರ್ಶೆಗೆ ತೊಡಗುವುದಕ್ಕಿಂತ ಹಸಿ ಹಸಿ ಆಲೋಚನೆಗನ್ನು ಮನಸ್ಸಿಗೆ ತೋಚಿದಂತೆ ಗೀಚಿ ಪದ್ಯಗಳ ಸಾಲಿನಂತೆ ಜೋಡಿಸಿ ಅಚ್ಚುಹಾಕಿಸುವ ಗೋಜಿಗೆ ಹೋಗುವ ಬದಲು, ಪ್ರಯೋಗದಲ್ಲಿ ಪರಿಣತಿಯನ್ನು ಪಡೆದು, ಸಾಧನೆಯಲ್ಲಿ ಸಿದ್ಧಿಯನ್ನು ಗಳಿಸಿದನಂತರ ಇಂತಹ ಸಾಹಸಕ್ಕೆ ಕೈಹಾಕಿ ಎಂದು ನಮ್ರತೆಯಿಂದ ಸೂಚಿಸಬಯಸುತ್ತೇನೆ.

—ಪರಮೇಶ

ಕನ್ನಡಮ್ಮನ ಕರೆ (ನಾಟಕ)

ಲೇ : ಶ್ರೀ ನಾಗಪ್ಪಶೆಟ್ಟರ, ಶಹಾಪೂರ, ಪ್ರಕಾಶಕರು : ಶ್ರೀ ಚನ್ನಬಸಪ್ಪಗೌಡ, ಶಂಭುರೆಡ್ಡಿ, ಶಹಾಪೂರ, ಪುಟಗಳು ೧೬೦, ಬೆಲೆ ರೂ. ೨-೦೦.

ಸದ್ಯದ ಕನ್ನಡ ನಾಡನ್ನು ತನ್ನ ನಿದ್ರೆಯಿಂದ ಎಚ್ಚರಿಸಲು ನಾನಾ ಜನರು ಹಲವಾರು ರೀತಿಗಳಿಂದ ಶ್ರಮಿಸುತ್ತಿದ್ದಾರೆ. ಅಂಥಹ ಪ್ರಯತ್ನಗಳಲ್ಲಿ ಈ ಗ್ರಂಥವೂ ಒಂದು.

ಆದರೆ ಪ್ರಯತ್ನ ಮತ್ತು ಉದ್ದಿಶ್ಯ ಶ್ಲಾಘನೀಯವಾದರೂ ನಿರೂಪಣೆಯಲ್ಲಿ ಕೆಲವೆಡೆ ಅತಿರೇಕವೆನಿಸುತ್ತದೆ. ನಾಟಕದ ತಾಂತ್ರಿಕ ದೃಷ್ಟಿಯಿಂದ ಈ ನಾಟಕವನ್ನಾಡುವುದು ಮತ್ತು ಜನಗಳ ಮನಸ್ಸನ್ನು ರಂಜಿಸುವುದು ಕಠಿಣವೆನಿಸಬಹುದು. ಕೇವಲ ಭಾವಪೂರಿತ ಭಾಷಣ ಮತ್ತು ಸನ್ನಿವೇಶಗಳಿಂದ ನಾಟಕ ಉತ್ತಮವೆನಿಸಲಾಗದು ಮತ್ತು ಬರೀ ಜನಮನಗಳನ್ನು ಭಾವೋದ್ರೇಕದಿಂದ ರೊಚ್ಚಿಗೆಬ್ಬಿಸಿದರೆ ಯಾವ ಕಾರ್ಯವೂ ಆಗಲಾರದು. ಒಂದು ಶಿಸ್ತಿನ ಶಾಸ್ತ್ರೀಯ ಕಾರ್ಯಕ್ರಮದಿಂದ ಮಾತ್ರ ಕನ್ನಡಿಗರ ಉದ್ಧಾರವಾಗಬಹುದು ಅಷ್ಟೆ. ಭಾಷಣ, ಭಾವನೆಗಳ ಮೇಲೆ ನಿಯಂತ್ರಿಸಿದಷ್ಟೂ ಉತ್ತಮ.

* * *

ವಿಶ್ವಾಮಿತ್ರ-ಮೇನಕೆ (ನಾಟಕ)

ಲೇ. ಶ್ರೀ ಎಂ. ಎಸ್. ಆರಾಧ್ಯ, ಪ್ರಕಾಶಕರು : ಗಾಯತ್ರೀ ಪ್ರಕಾಶನ, ಮೈಸೂರು, ಪುಟಗಳು ೧೮, ಬೆಲೆ ೦-೫೦ ಪೈಸೆ.

ವಿಶ್ವಾಮಿತ್ರ ಕ್ಷತ್ರಿಯ. ಋಷಿಯಾಗಬಯಸಿ, ರಾಜರ್ಷಿಯಾದ. ಜ್ಞಾನಮಯ ಶರೀರಕ್ಕೂ ಅನ್ನಮಯ ಶರೀರಕ್ಕೂ ಸದಾ ನಡೆದ ತಾಕಲಾಟ,-ದ್ವಂದ್ವವೇ, 'ವಿಶ್ವಾಮಿತ್ರ-ಮೇನಕಾ'

ಖಂಡಿತವಾಗಿಯೂ ಈ ಪುಟ್ಟಹೊತ್ತಿಗೆ ಜ್ಞಾನ, ಬುದ್ಧಿ ಇವುಗಳ ಸಂಘರ್ಷದ ಒಂದು ಸಂಕೇತ ಮೂರೇ ಪಾತ್ರಗಳ, ಕೆಲವೇ ಮಾತುಗಳ ಈ ನಾಟಕ ಪ್ರೇಕ್ಷಕರಲ್ಲಿ ಒಂದು ಹೊಸ ವಿಚಾರತರಂಗವನ್ನು ಬಡಿದೆಬ್ಬಿಸುವುದು. ಪುಸ್ತಕ ಚಿಕ್ಕದಾದರೂ ತತ್ವ ಹಿರಿದು. ಈ ದೃಷ್ಟಿಯಿಂದ ಈ ಪುಸ್ತಕಕ್ಕೆ ನಮ್ಮ ಸ್ವಾಗತ.

* * *

ಇದು ನಮ್ಮ ಸ್ವಾತಂತ್ರ್ಯವೇ? (ರಾಷ್ಟ್ರೀಯ ನಾಟಕ) ಲೇ. ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್, ಪ್ರಕಾಶಕರು : ವಿಚಾರಸಾಹಿತ್ಯ ಮಾಲೆ, ಕಡಿರುದ್ಯಾವರ.

ಇದೊಂದು ಎಂಟು ದೃಶ್ಯಗಳ ಒಂದು ಏಕಾಂಕ. ನಾಟಕದಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ, ಸರಕಾರದ ನಿಯಂತ್ರಣಾಜ್ಞೆ, ಜನತೆಯ ಜೀವನದ ಕ್ಲಿಷ್ಟತೆ, ಜನತೆಯಲ್ಲಿ ತಾಂಡವವಾಡುತ್ತಿರುವ ಅಜ್ಞಾನ, ಕುಡುಕತನ, ಜೂಜು ಮತ್ತು ಅಧಿಕಾರಿಗಳ ಪ್ರಮತ್ತತೆ, ಇತ್ಯಾದಿ ವಿಚಾರಗಳನ್ನು ನಮ್ಮ ಮುಂದೆ ಪ್ರತಿಯೊಂದು ದೃಶ್ಯದಲ್ಲಿಯೂ ಪ್ರದರ್ಶಿಸುತ್ತಾ ಹೋಗುತ್ತಾರೆ.

ನಾಟಕವು ನಮ್ಮ ಅಧಿಕಾರಿಗಳು, ರೈತರು. ಯುವಕರು ಇವರನ್ನು ಎಚ್ಚರಿಸುತ್ತದೆ. ಕೆಲವೆಡೆ ಅತಿನಾಟಕೀಯವಾಗಿ ಕಂಡರೂ ನಾಟಕ ಜನತೆಗೆ ದರ್ಶನ ನೀಡುವ ವಿಚಾರದಲ್ಲಿ ತನ್ನ ಗುರಿಯನ್ನು ಸಾಧಿಸಿದೆಯೆಂದು ಹೇಳಬಹುದು.

—ಡಿ. ಮಾಧವಮೂರ್ತಿ

ಪುನರ್ಜನ್ಮ : (ಮೂರಂಕಗಳ ಸಾಮಾಜಿಕ ನಾಟಕ) ಲೇ: 'ಹರಿದಾಸ' ವಿದ್ವಾನ್, ವೀಣಾ ಪ್ರಕಟನಾಲಯ, ಬೆಳ್ತಂಗಡಿ, ದ. ಕ. ಬೆಲೆ : ಎರಡು ರೂಪಾಯಿ.

ಬಂಗಾಳದ 'ಭವಾಲ್ ಸನ್ಯಾಸಿ'ಯ ಮೊಕದ್ದಮೆಯು ಈ ನಾಟಕದ ವಸ್ತುವಿಗೆ ಆಧಾರ. ಸರ್ವಗುಣ ಸಂಪನ್ನನಾದ ಜಮೀನ್ದಾರ್ ರಮಾನಂದ. ಅವನ ದ್ವಿತೀಯ ಪತ್ನಿ ಭವಾನಿ. ಇವಳ ಬಾಲ್ಯ ಸ್ನೇಹಿತ-ಮೊದಲ ಪ್ರೇಮಿ—ಚಕ್ರಪಾಣಿ ಇವರ ಸುತ್ತ ಹೆಣೆದುಕೊಂಡಿದೆ ಈ ನಾಟಕ. ದುರಂತವೆನಿಸುವ ಈ ನಾಟಕದಲ್ಲಿ ಚಕ್ರಪಾಣಿಯಿಂದ ದುರಂತತೆ ಏಕಮುಖವಾಗಿ ಬೆಳೆದಿದೆ.

ಸಾಮಾಜಿಕ ನಾಟಕವೆಂಬ ಹೆಸರಿನ ಈ ಸಾಟಕವು ಯಾವುದೋ ಒಂದು ವಿಶಿಷ್ಟ ರೀತಿಯಲ್ಲಿ ನಡೆದಿರಬಹುದಾದ ವಿಚಿತ್ರವಾದ ಘಟನೆಗಳಿಂದ ಆಧಾರಿತವಾಗಿದೆ.

ನಾಟಕ ಮುಗಿದ ಮೇಲೆ (ಓದಿ ಮುಗಿಸಿದ ಮೇಲೂ) ಅನೇಕ ಪ್ರಶ್ನೆಗಳ ಪರಂಪರೆಯನ್ನೇ ಎದುರುಗೊಳ್ಳುತ್ತದೆ. ಆದರೆ ಸಮಸ್ಯೆಗಳತ್ತ ಬೆನ್ನು ತೋರಿಸಿ ನಾಟಕದಲ್ಲಿ ಬರುವ ವ್ಯಕ್ತಿಗಳ ಪ್ರತಿಕ್ರಿಯೆಗಳನ್ನೇ ಗಮನಿಸಿದಾಗ ಅಸಹಜತೆಗಳೇ ಕಾಣುತ್ತವೆ.

ಕುಟಿಲನಾದ ಚಕ್ರಪಾಣಿಯು ಬಲೆಗೆ ಬೀಳುವಾಗ ಭವಾನಿಯ ಮನಸ್ಸಿನ ಗೊಂದಲ, ಅವಳ ಹೋರಾಟದ ಚಿತ್ರಣಕ್ಕೆ ಅವಕಾಶವಿಲ್ಲ. ಹೇಳುವವರು-ಕೇಳುವವರಿಲ್ಲದೆ ಚಕ್ರಪಾಣಿಯ ಅವನ ಗೆಳೆಯ ಡಾಕ್ಟರ್‌ನ ಅವಾಂತರ ನಡೆದಿದೆ. ರಮಾನಂದನ ಸ್ವಾಮಿನಿಷ್ಠ ಸೇವಕನಾದ ಗುಂಡಣ್ಣನ ಪಾತ್ರ ಜೀವಕಳೆಯಿಂದ ತುಂಬಿದೆ. ಬೀದಿ ಗಾಯಕನ ಹಾಡು ಸಂಕೇತ ಪೂರ್ಣವಾಗಿ ಬಂದಿದೆ ಒಟ್ಟಿನಲ್ಲಿ ಇದೊಂದು ಸಾಮಾನ್ಯ ದರ್ಜೆಯ ನಾಟಕ.

* * *

ಶಿವಲಿಂಗ ಚಾರಿತ್ರ : (ಚಂಪೂಕಾವ್ಯ) ಸಂ : ಎಂ. ಜಿ. ನಂಜುಂಡಾರಾಧ್ಯ ; ಪ್ರ ; ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥಭಂಡಾರ, ಹ. ಬ. ಸಮಾಜರಸ್ತೆ, ಬಸವನಗುಡಿ, ಬೆಂಗಳೂರು-೪. ಬೆಲೆ : ೭೫ ಪೈಸೆ.

ಸುಮಾರು ೧೫ನೇ ಶತಮಾನದಲ್ಲಿ ಆಗಿಹೋದ ಶಾಂತವೀರದೇಶಿಕ ಕವಿಯಿಂದ ಬರೆಯಲ್ಪಟ್ಟ ಈ ಗ್ರಂಥವನ್ನು ಸಾಕಷ್ಟು ವಿವರವನ್ನೊದಗಿಸುವ ಪೀಠಿಕೆಯಲ್ಲಿ ಕವಿ, ಕಾಲ, ಸ್ಥಳ, ಇವನ ಇತರ ಗ್ರಂಥಗಳು ಮುಂತಾದವನ್ನು ಕುರಿತು ವಿವೇಚನೆ ನಡೆಸಿದ್ದಾರೆ. ಚಾರಿತ್ರಿಕ ಪ್ರಾಮುಖ್ಯತೆಯನ್ನುಳ್ಳ ಈ ಕವಿಯ ಬಗ್ಗೆ ಉಲ್ಲೇಖ ನಡೆಸುತ್ತಾ ಬೆಂಗಳೂರು ಕೆಂಪೇಗೌಡ ಮುಂತಾದವರ ಸಂಪರ್ಕವನ್ನು ಸ್ಪಷ್ಟಗೊಳಿಸಿದ್ದಾರೆ. ಈ ಮುಂತಾದ ಮುಖ್ಯವಾದ ವಿವರಗಳ ಜೊತೆಗೆ ಅಲ್ಲಲ್ಲಿ ವಿವಾದಕ್ಕೆ ಅವಕಾಶವಾಗುವಂತಹ ಅಂಶಗಳ ಪ್ರಸ್ತಾಪವಿದೆ. (ಪೀಠಿಕೆ ೧೭ . . . ಆದರೆ ಇತ್ತೀಚಿನ ಬೌದ್ಧ ಯುಗದಲ್ಲಿ ಮತಪ್ರಚಾರ ಮಾಡಲು ಬ್ರಹ್ಮಚಾರಿಗಳಿಗೆ (ಅವಿವಾಹಿತ) ಹೆಚ್ಚು ಸೌಕರ್ಯವೆಂಬುದರಿಂದಲೇ ಬ್ರಹ್ಮಚಾರಿಯೇ ಮಠಾಧಿಪತಿಯಾಗುವ ಪದ್ಧತಿ ಆಚರಣೆಯಲ್ಲಿ ಬಂದಂತೆ ತೋರುತ್ತದೆ. ಎಲ್ಲರೂ ಗೌತಮ ಬುದ್ಧ

ರಾಗುವುದು ಸಾಧ್ಯವಾಗದ ಫಲವಾಗಿ ಬೌದ್ಧಧರ್ಮ ಅನೀತಿಯಃ ಹೊಂಡವಾಗಿ ಕಡೆಗೆ ಅದು ನಾಮಶೇಷವಾಯಿತು. . .)

ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರರಾದ ಶ್ರೀ ಜ. ಚ. ನಿ. ಯವರು ತಮ್ಮ ಪೀಠಿಕೆಯಲ್ಲಿ ಕವಿಯ ಬಗೆಗೆ ಕೃತಿಯ ಬಗೆಗೆ ಸಾಕಷ್ಟು ವಿವರವಾದ ಮಾಹಿತಿಯನ್ನೊದಗಿಸಿದ್ದಾರೆ. ಬೆಂಗಳೂರು ಕೆಂಪೇಗೌಡ ಮುಂತಾದ ಐತಿಹಾಸಿಕ ವ್ಯಕ್ತಿಗಳ ಬಗೆಗೆ ಹೊಸ ಬೆಳಕನ್ನು ಚೆಲ್ಲುವ ಈ ಕೃತಿಯನ್ನು ಸಾಹಿತ್ಯ ಲೋಕ ಸ್ವಾಗತಿಸಬಹುದು.

* * *

ಭಾರತ ಸಂಸ್ಕೃತಿಯ ಸಂಘಟನೆ : (ಪ್ರಬಂಧಗಳು) ಲೇ ; ಸಿಂಪಿ ಲಿಂಗಣ್ಣ ; ಪ್ರ : ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ. ಪುಟ ೧೦೪. ಬೆಲೆ ರೂ. ೧-೫೦.

ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುವ ಈ ಕೃತಿಯಲ್ಲಿ ೧೧ ಪ್ರಬಂಧಗಳಿದ್ದು ಒಂದೊಂದು ಪ್ರಬಂಧವೂ ಆ ಪ್ರಯತ್ನ ಮಾಡುತ್ತದೆ.

ಸಂಸ್ಕೃತಿ ಎಂದರೇನು ಎಂದು ಸಂಕ್ಷಿಪ್ತವಾಗಿ ಜಿಜ್ಞಾಸೆ ಮಾಡಿ ಪ್ರಮುಖರ ಅಭಿಪ್ರಾಯಗಳ ಪುಷ್ಟಿಯೊದಗಿಸಿಕೊಂಡು ನಾಗರೀಕತೆಗೂ-ಸಂಸ್ಕೃತಿಗೂ ಇರುವ ವ್ಯತ್ಯಾಸ ತೋರಿಸುತ್ತಾ ಭಾರತೀಯ ಸಂಸ್ಕೃತಿಯ ಲಕ್ಷಣ ಪಾಶ್ಚಾತ್ಯ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಉಂಟುಮಾಡಿರುವ ಪರಿಣಾಮಗಳನ್ನು ತೋರಿಸುತ್ತಾರೆ.

ದ್ರಾವಿಡಾರ್ಯ ಸಂಸ್ಕೃತಿಗಳ ಸಮರಸತೆಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ, ಆರ್ಯ ದ್ರಾವಿಡ ಸಂಸ್ಕೃತಿಯ ಎಳೆಗಳನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲೆವಾದರೂ ಒಂದರಿಂದ ಇನ್ನೊಂದನ್ನು ವಿಂಗಡಿಸಲಿಕ್ಕೆ ಬರಲಾರದಂತೆ ಅವು ಒಂದರೊಳಗೊಂದು ಬೆರೆತುಕೊಂಡಿವೆ ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ಬೌದ್ಧ-ಜೈನ ಧರ್ಮಗಳ ಸಂಸ್ಕಾರದ ಬಗ್ಗೆ ವಿವೇಚನೆ ಮಾಡುತ್ತಾ 'ಕರ್ಮಠತೆಗೆ ಬಂದಿದ್ದ ಹಿಂದೂ ಧರ್ಮಕ್ಕೆ ಕಾರುಣ್ಯದ ಮೆರಗನ್ನು ಕೊಟ್ಟ' ಹೆಗ್ಗಳಿಕೆ ಈ ಧರ್ಮಗಳ ಸಂಸ್ಕಾರ ಎನ್ನುತ್ತಾರೆ.

ಅದ್ವೈತದ ಮೆರಗಿನಲ್ಲಿರುವ ಸರ್ವಧರ್ಮ ಸಹನೆಯ ಅಗತ್ಯವನ್ನು ವಿಶದಪಡಿಸುತ್ತಾರೆ. ಮುಸ್ಲಿಂ ಸಂಸ್ಕೃತಿಯ ನೆರಳಿನಲ್ಲಿ ಹಿಂದೂ ಧಾರ್ಮಿಕ ಪಂಗಡಗಳು ಹೇಗೆ ಒಂದಾದವೆಂಬುದನ್ನು ವಿವರಿಸುತ್ತಾರೆ.

ಐರೋಪ್ಯರ ಹವಾಸದಲ್ಲಿ ಭಾರತದಲ್ಲಿ ಹೇಗೆ ಸ್ವಾತಂತ್ರ್ಯ ಪ್ರಜ್ಞೆ ಬೆಳೆಯಿತು ಜೊತೆಗೆ ಜನಗಳ ವಿಚಾರ ವಿಶಾಲವಾದದ್ದು ಹೇಗೆಂಬುದನ್ನು ಉಲ್ಲೇಖಿಸುತ್ತಾರೆ.

ಇವೆಲ್ಲವುಗಳ ಸಂಕೀರ್ಣ ಪ್ರಭಾವದಿಂದ ಎಚ್ಚೆತ್ತ ಭಾರತದ ದೀರ್ಘವಾದ ಸಾವರಣೆಯಾಗಿ ತನ್ನ ದೀರ್ಘ ಅಜೇತ ನಾವಸ್ಥೆಯಿಂದ ಹೇಗೆ ಜಾಗೃತವಾಯಿತೆಂದೂ ಅದಕ್ಕೆ ಗಾಂಧಿಜೀ ಮುಂತಾದವರು ಹೇಗೆ ಕಾರಣರಾದರೆಂದೂ ಸ್ಪಷ್ಟಪಡಿಸುತ್ತಾರೆ.

ಈ ರೀತಿಯಲ್ಲಿ ಇಲ್ಲಿರುವ ಎಲ್ಲ ಪ್ರಬಂಧಗಳೂ ನಮಗೆ ಸಮಗ್ರ ಭಾರತದ 'ದರ್ಶನ'ಕ್ಕೆ ಸಹಕಾರಿಯಾಗಿವೆ. ಇಂತಹ ವಿಚಾರಾತ್ಮಕ ಬರಹಗಳ ಸಂಖ್ಯೆ ಕಡಮೆಯಾಗುತ್ತಿರುವಾಗ 'ಭಾರತೀಯ ಸಂಸ್ಕೃತಿಯ ಸಂಘಟನೆ' ನಿಜಕ್ಕೂ ಶ್ರೇಷ್ಠ ಮಟ್ಟದ ಕೃತಿ.

* * *

ವಿಷಮಜ್ವರ : ಲೇ : ಡಾ|| ಪಿ. ಎಸ್. ಶಂಕರ್. ಪ್ರ : ಕರ್ಣಾಟಕ ವಿಶ್ವವಿದ್ಯಾಲಯದ ಉಪನ್ಯಾಸಮಾಲೆ. ಧಾರವಾಡ. ಬೆಲೆ : ೭೫ ಪೈಸೆ.

ಸಮಾಜದ ಆರೋಗ್ಯವನ್ನು ಉತ್ತಮಪಡಿಸಲು ಇಂತಹ ವೈಜ್ಞಾನಿಕ ವಿಷಯಗಳ ಸರಳ ಪರಿಚಯ ಜನಗಳಿಗಾಗ ಬೇಕು. ಈ ದಿಕ್ಕಿನಲ್ಲಿ ಕರ್ಣಾಟಕ ವಿಶ್ವವಿದ್ಯಾಲಯದ ಪ್ರಯತ್ನ ಸ್ವಾಗತಾರ್ಹ.

ಡಾ|| ಶಂಕರ್ ಅವರು ವಿಷಮಜ್ವರದ ಬಗೆಗೆ ಎಷ್ಟು ಸರಳವಾಗಿ ಅರ್ಥವತ್ತಾಗಿ ಹೇಳಿದ್ದಾರೆಂದರೆ ಇದನ್ನು ಓದಿದವರೆಲ್ಲರಿಗೂ ವಿಷಮ ಜ್ವರದ ಬಗೆಗೆ ಪೂರ್ಣ ಅಗತ್ಯ ಮಾಹಿತಿ ದೊರೆಯುತ್ತದೆ. ಈ ಕಾರ್ಯಕ್ಕಾಗಿ ಡಾ|| ಶಂಕರ್ ಅಭಿನಂದನಾರ್ಹರು. ಕಟ್ಟಿನ ಜ್ವರ-ವಿಷಮ ಜ್ವರ-ಮುಂತಾದ ನಾನಾ ಹೆಸರುಳ್ಳ ಈ ಜ್ವರದ ವಿವರವನ್ನು ಆಡುಮಾತಿನಲ್ಲಿ ವಿವರಿಸುತ್ತಾ ಈ ರೋಗದ ಲಕ್ಷಣಗಳೇನು? ಆ ರೋಗ ಬರಲು ಕಾರಣವಾದ ಅಣುಜೀವಿಗಳ ಬಗೆಗೆ ವಿವರಕೊಟ್ಟು, ೧೮೮೦ರಲ್ಲಿ ಎಬರ್ಥ ಎಂಬಾತನು ಕಂಡುಹಿಡಿದ ಈ ಅಣುವಿನ ಚಲನವಲನವನ್ನು ತಿಳಿಸುತ್ತಾರೆ. ಅನೈರ್ಮಲ್ಯದಿಂದ ಈ ರೋಗ ಹೇಗೆ ಹರಡುತ್ತದೆಂದು ತಿಳಿಸುತ್ತಾ ಅದನ್ನು ತಡೆಗಟ್ಟುವ ಕ್ರಮಗಳನ್ನೂ ಸೂಚಿಸುತ್ತಾರೆ. ಜ್ವರ ಪೀಡಿತನಾದವನ ಲಕ್ಷಣ ಹೇಳುತ್ತಾ ರೋಗದ ಬೆಳವಣಿಗೆ ತಿಳಿಸುತ್ತಾ ಆ ರೋಗಿಯ ಆರೈಕೆಯನ್ನೂ ರೋಗದಿಂದ ರಕ್ಷಣೆ ಪಡೆಯುವುದನ್ನೂ ವಿವರವಾಗಿ ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಈ ಚಿಕ್ಕ ಪುಸ್ತಕದಲ್ಲಿ ವಿಷಮಜ್ವರದ ಬಗೆಗೆ ಸಾಕಷ್ಟು ಮಾಹಿತಿ ಇದ್ದು ರೋಗದ ಬಗ್ಗೆ ಮುಂಜಾಗ್ರತೆ ವಹಿಸಲು ಪ್ರೇರಣೆ ಕೊಡುತ್ತದೆ.

—ಎಂ. ಚಂದ್ರಶೇಖರ್

ಮಾಸ್ತರನ ಹೆಂಡತಿ: ಕಥಾಸಂಕಲದ. ಲೇಖಕರು: ದು. ನಿಂ. ಬೆಳಗಲಿ. ಪ್ರಕಾಶಕರು: ಕೃಷ್ಣಾತೀರ ಸೌರಭ ಪ್ರಕಾಶನ. ಬೆಲೆ: ಒಂದೂವರೆ ರೂಪಾಯಿಗಳು. ಒಂದು ನೂರಾನಾಲ್ಕು ಪುಟಗಳು.

ಈಗಾಗಲೆ ಎರಡು ಕಥಾಸಂಕಲ, ಎರಡು ಕಾದಂಬರಿಗಳನ್ನು ಕನ್ನಡ ಓದುಗರಿಗಿತ್ತು ಚಿರಪರಿಚಿತರಾಗಿರುವ ದು. ನಿಂ. ಬೆಳಗಲಿಯವರ ಕಥಾ ಸಂಕಲನ 'ಮಾಸ್ತರನ ಹೆಂಡತಿ' ಸಮಾಜದಲ್ಲಿನ ಎಂತಹ ಸಮಸ್ಯೆಯನ್ನೂ ಕತೆಗೆ ಅಳವಡಿಸಿಕೊಂಡು ಅದನ್ನು ಬೇಸರ ತರದಂತೆ ನಿರೂಪಿಸುವ ಧಾಟಿ ಅವರಿಗೆ ಕರಗತ ಎಂದು ಈ ಸಂಕಲನದಲ್ಲಿ ತಿಳಿಯುತ್ತದೆ. ಈ ಸಂಕಲನದ ಎಂಟು ಕತೆಗಳಲ್ಲೂ ಮಾನವ ಹೃದಯದ ಮಾರ್ಮಿಕವಾದ ಆಶೆ ಆಕಾಂಕ್ಷೆಗಳನ್ನು ಸಹಜವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಕಣ್ಣಿಗೆ ಕಟ್ಟುವಂತೆ ಮನುಷ್ಯರ ಗುಣಾವಗುಣಗಳನ್ನು ಜೀವಂತವಾಗಿ ಮೂಡಿಸಿದ್ದಾರೆ. ವಸ್ತುವೈವಿಧ್ಯತೆಗೆ ತಂತ್ರಕಳೆ ತಂದಿದೆ. ಪಾತ್ರನಿರ್ವಹಣೆ, ಸನ್ನಿವೇಶ ನಿರೂಪಣೆಗಳಲ್ಲಿ ಪಳಗಿದ ಕೈ ಅವರದು. ಕೆಲವೊಂದು ಮಾತುಗಳು ನಾಜೂಕಾಗಿ ಬಳಕೆಯಾಗಿವೆ. ಇಂಗ್ಲೀಷ್ ಪದಗಳಿಗೆ ಸರಿಹೊಂದುವ ಕನ್ನಡ ಶಬ್ದಗಳನ್ನು ಪ್ರಯತ್ನಪೂರ್ವಕವಾಗಿ ತಯಾರಿಸಿ ಬಳಸಿದ್ದಾರೆ. ಅದರಿಂದ ಕತೆಗೆ ಮೆರಗು ಬರದಿದ್ದರೂ ಅನಾಹುತವೇನೂ ಆಗಿಲ್ಲ. ಇಲ್ಲಿ ಬರುವ ಪಾತ್ರಗಳೆಲ್ಲ ಜೀವಂತ. ದಿನ ಬೆಳಗಾದರೆ ನಮ್ಮ ಕಣ್ಮುಂದೆ ಸುಳಿಯುವಂತಹವು. ಒಟ್ಟಾರೆ ಹೇಳುವುದಾದರೆ, ಕಲಾತ್ಮಕವಾದ ನಿರೂಪಣೆಯಿಂದ ಕೂಡಿರುವ ಈ ಕಥಾ ಸಂಕಲನ ಓದುಗರ ಮೆಚ್ಚುಗೆ ಗಳಿಸದಿರಲಾರದು.

* * *

ತುಂಟರ ಗುರು: ಕತೆಗಾರರು: ಬಿ ಶ್ರೀ. ಪಾಂಡುರಂಗರಾಯರು. ಪ್ರಕಾಶಕರು: ಮಕ್ಕಳ ಮಂಟಪ ಪ್ರಕಾಶನ. ಪುಟ ೨೦. ಬೆಲೆ ೨೫ ಪೈಸೆ.

ಮಕ್ಕಳಿಗೆ ಓದಲು ಕತೆ ಅನುಕೂಲವಾಗಿರಬೇಕು. ಅವರಿಗೆ ಅರ್ಥವಾಗುವಂತೆ ಚಿತ್ರಗಳಿರಬೇಕು ಚಿತ್ರಗಳಿಗೆ ಆಕರ್ಷಕ ಬಣ್ಣಗಳಿರಬೇಕು. ಎಂಬೆಲ್ಲ ಹೇಳಿಕೆ 'ತುಂಟರ ಗುರು' ಪುಸ್ತಕದಲ್ಲಿ ಪೂರ್ಣವಾಗಿದೆ. ಶ್ರೀವರ್ಮಾ ಪಾಂಡುರಂಗರಾಯರು ಮಕ್ಕಳ ಸಾಹಿತ್ಯ, ಮಕ್ಕಳ ಪುರೋಭಿವೃದ್ಧಿಗೆ ಅತಿಯಾಗಿ ಶ್ರಮಿಸಿ ಆ ದಿಶೆಯಲ್ಲಿ ಅಮೂಲ್ಯಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿ ಬರುವ ಕತೆ, ಕತೆಗೆ ತಕ್ಕ ಬಣ್ಣದ ಚಿತ್ರಗಳು ಮಕ್ಕಳ ಮನಸ್ಸನ್ನು ಹಿಡಿಯುವುದರಲ್ಲಿ ಸಂಶಯವಿಲ್ಲ.

* * *

ಮುದ್ದು ಸಿಂಗಾರಿ: ಕತೆಗಾರರು: ಬಿ. ಶ್ರೀ. ಪಾಂಡುರಂಗರಾಯರು. ಪ್ರಕಾಶಕರು: ಮಕ್ಕಳ ಮಂಟಪ ಪ್ರಕಾಶನ. ಪುಟ ೨೦. ಬೆಲೆ ೨೫ ಪೈಸೆ.

ಮಕ್ಕಳು ಮಾತಾಡುವುದು, ಮಾಡಿದ್ದೆಲ್ಲವೂ ಚೆನ್ನು ಎಂಬಂತೆ 'ಮುದ್ದು ಸಿಂಗಾರಿ'ಯಲ್ಲಿ ಸಿಂಗಾರಿ ಉಷ ವಾಕಿಂಗ್ ಹೊರಟ ವಿಷಯ; ಅವಳ ಗೆಳೆಯ ಬಳಗ, ಅವುಗಳಿಗೆ ಅವಳು ಬೋಧಿಸಿದ ಶುಚಿತ್ವ ಇತ್ಯಾದಿ ಸಹಜವಾಗಿ ಮೂಡಿಬಂದಿವೆ. ತಕ್ಕ ಚಿತ್ರಗಳಿಂದ ಕೂಡಿ ಪುಸ್ತಕ ಅಂದವಾಗಿ ಮುದ್ರಿತವಾಗಿದೆ. ಈ ಕೃತಿ ಮಕ್ಕಳ ಮನಸ್ಸನ್ನು ಆಕರ್ಷಿಸುವಲ್ಲಿ ಸಂಶಯವಿಲ್ಲ.

* * *

ಶ್ರೀ ಪುರಂದರದಾಸರು ರಚಿಸಿದ ಸಂಕ್ಷಿಪ್ತ ರಾಮಾಯಣ ಮತ್ತು ಕೆಲವು ಹಳೆಯ ಹಾಡುಗಳು: ಸಂಗ್ರಹಕಾರರು: ಮತಿಘಟ್ಟ ಕೃಷ್ಣಮೂರ್ತಿ. ಪ್ರಕಾಶಕರು: ಗುರುಮೂರ್ತಿ ಪ್ರಕಾಶನ. ಪುಟಗಳು ಹದಿನಾರು. ಬೆಲೆ: ೨೫ ಪೈಸೆ.

ಇಲ್ಲಿನ ಹಾಡುಗಳು, ಸಂಕ್ಷಿಪ್ತ ರಾಮಾಯಣಗಳನ್ನು ಸಂಗ್ರಹಿಸಿ ಉಪಕಾರ ಮಾಡಿದ್ದಾರೆ ನಿಜ. ಆದರೆ ಅವು ಪುರಂದರದಾಸ ಕೃತವೆನ್ನಲು ಯಾವ ಆಧಾರವನ್ನೂ ಸೂಚಿಸಿಲ್ಲ. ಸಾಮಾನ್ಯವಾಗಿ ಪುರಂದರದಾಸರ ಹಾಡುಗಳಿಗೆ ರಾಗ, ತಾಳಗಳ ಸೂಚನೆ ಇರುತ್ತದೆ. ಇಲ್ಲಿ ಅಂತಹ ಯಾವ ಲಕ್ಷಣವೂ ಇಲ್ಲ. ಇಲ್ಲಿನ ರಾಮಾಯಣ ಸಂಕ್ಷಿಪ್ತವಾಗಿ ಓದಲು ಸುಲಭವಾಗಿದೆ. ಪುಸ್ತಕಕ್ಕೆ ಒಂದು ರಕ್ಷಾಪುಟ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

* * *

ಪಂಚಾಯಿತಿ ರಾಜ್ಯ: ಲೇಖಕರು: ಎಸ್. ಜಿ. ಕರಭಂಟನಾಳ, ಕೆ. ಡಿ. ಬಸವ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ. ಪುಟಗಳು ೬೬. ಬೆಲೆ: ೨೫ ಪೈಸೆ.

ಈ ಕೃತಿಯಲ್ಲಿ 'ಪಂಚಾಯಿತಿ ರಾಜ್ಯ' ಎಂದರೇನು? ಗ್ರಾಮ ಪಂಚಾಯಿತಿಗಳ ಜವಾಬ್ದಾರಿ, ಕಾರ್ಯಾಚರಣೆ, ಮಹತ್ವವನ್ನು ಕುರಿತು ವಿವೇಚಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯ ಸೂಕ್ಷ್ಮ ಪರಿಚಯವಿದೆ. ಆಡಳಿತ ವಿಕೇಂದ್ರೀಕರಣ, ಅದರ ಉಪಯೋಗ, ಗ್ರಾಮ ಪಂಚಾಯಿತಿಯ

ಆದಾಯ-ವ್ಯಯ ; ಕಾರ್ಯ-ಕರ್ತವ್ಯಗಳ ಬಗೆಗೆ ಸಾಕಷ್ಟು ವಿವರಣೆ ಇದೆ. ಆದರೆ ಈ ಆಡಳಿತ ಮಾರ್ಗದಿಂದಾಗಿ ಗ್ರಾಮಗಳ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಎಷ್ಟೋ ಪ್ರಗತಿ ಕಂಡುಬಂದಿದೆ ಎಂಬ ಲೇಖಕರ ಅಭಿಪ್ರಾಯ ವಿಚಾರಾರ್ಹವಾದುದು.

* * *

ವಿಷಮ ಜ್ವರ: ಲೇಖಕರು: ಡಾ|| ಪಿ. ಎಸ್. ಶಂಕರ್. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ ಪುಟ: ೪೩. ಬೆಲೆ: ೨೫ ಪೈಸೆ.

ವಿಷಮ ಜ್ವರ (Tayphoid) ಭಯಂಕರ ಖಾಯಿಲೆ ಎಂಬಂಶ ಎಲ್ಲರ ಅನುಭವಕ್ಕೆ ಬಂದಿದೆ. ಇಲ್ಲಿ ಅದರ ಬಗೆಗೆ ಅದರ ಲಕ್ಷಣಗಳು, ಆಗುವ ಅನಾಹುತ, ಹರಡುವಿಕೆ, ತಡೆಗಟ್ಟುವ ವಿಧಾನ, ನಿವಾರಣೆ, ಈ ರೋಗವಿರುವ ಕಾಲಕ್ಕೆ ವಹಿಸಬೇಕಾದ ಎಚ್ಚರಿಕೆ, ಇವುಗಳ ಬಗೆಗೆ ಸಾಕಷ್ಟು ವಿವರಣೆ ಬಂದಿವೆ. ರೋಗವನ್ನು ತಡೆಗಟ್ಟುವ ವಿಧಾನದ ಸೂಚನೆ ಇದೆ. ಒಟ್ಟಿನಲ್ಲಿ ಈ ಕೃತಿ ವಿಷಮ ಜ್ವರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ಅಲ್ಲಲ್ಲಿ ಕನ್ನಡದ ಸಮಾನಾರ್ಥಕ ಅರ್ಥವುಳ್ಳ ಶಬ್ದಗಳನ್ನು ಬಳಸಿ ಉಪಕಾರ ಮಾಡಿದ್ದಾರೆ.

* * *

ಕೆಂಪುದೀಪ: ಲೇ: ನಾರಾಯಣ ಬಲ್ಲಾಳ. ಪ್ರ: ಪುರೋಗಾಮಿ ಸಾಹಿತ್ಯ. ಪುಟ ೧೩೮. ಬೆಲೆ: ೨ ರೂ.

'ಕೆಂಪು ದೀಪ' ಹತ್ತು ಕತೆಗಳ ಸಂಕಲನ. ಇಲ್ಲಿ ಬರುವ ಕತೆಗಳಲ್ಲಿ ಜೀವನದ ಅನೇಕ ಮುಖಗಳ ಸೂಕ್ಷ್ಮ ಪರಿಚಯವಿದೆ. ಮೊದಲ ಒಂಬತ್ತು ಕಥೆಗಳಲ್ಲಿನ ಸಮಸ್ಯೆಗಳು ಹತ್ತನೆಯ ಕೆಂಪು ದೀಪದಲ್ಲಿ ಪರಿಹಾರ ಹುಡುಕುವಂತಿದೆ.

'ಧರ್ಮ-ಕರ್ಮ' ಕತೆಯಲ್ಲಿ ತನ್ನ ಧರ್ಮ ಹೇಳಿಕೊಳ್ಳಲು ಭಯಪಡುವ ವ್ಯಕ್ತಿಯ ಪರಿಚಯ, ಆದರ್ಶ ಹಾಗೂ ಸ್ವಚ್ಛಂದ ಪ್ರೀತಿಯ ಚಿತ್ರಣವಿದೆ. ಪ್ರೇಮ ಎಂಬುದು ಸೃಷ್ಟಿಯಲ್ಲಿ ಸರ್ವಜೀವಿಗೂ ಸಮಾನವಾದುದು, ಮೂಕ ಪ್ರಾಣಿಗಳಲ್ಲೂ 'ಪ್ರೇಮ-ದ್ವೇಷ' ಗಳ ತಾಕಲಾಟವಿದೆ ಎಂಬಂಶ 'ಟಾಮಿ' ಕತೆಯಲ್ಲಿದೆ. ಧರ್ಮ ಮಾನವ ಹೃದಯವನ್ನು ಅಂಕಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವ ಅಂಶ; ಸುಂದರ ಯುವತಿಯನ್ನು ಕಂಡಾಗ ಯುವಕರಲ್ಲಿ ಮೂಡುವ ಭಾವನೆಗಳ ತಾಕಲಾಟ, ತಪ್ಪು ಮಾಡಿದ ಹೃದಯ ತುಡಿಯುವುದು ಸಹಜ ಎಂಬ ಹೇಳಿಕೆ, ತಾನು ಮಾಡಿದ ತಪ್ಪಿಗೆ ತನ್ನ ಪ್ರೇಮದ ಪ್ರತೀಕವನ್ನೇ ಕಳೆದುಕೊಳ್ಳುವ ದುರಂತ ಚಿತ್ರ: ಧರ್ಮ ಮಾರಿ ನಡೆಯುವುದು ಬೆಂಕಿಯೊಡನೆ ಆಟವಾಡಿದಂತೆ, ಎಂಬಂಶ, ಮುಗ್ಧ ಗಾಂಭೀರ್ಯತೆಗಳಿಂದ ಕೂಡಿದ ಹೂಗಳನ್ನು ಸಮಾಜ-ವಿಧಿ ತಮ್ಮ ಅಟ್ಟಹಾಸಕ್ಕೆ ತಕ್ಕಂತೆ ಕುಣಿಸಿಕೊಳ್ಳುವ ಚಿತ್ರ; ವೇಶ್ಯಾ ಜೀವನದ ಸಹಜ ಚಿತ್ರ; ಈ ಎಲ್ಲ ಅಂಶಗಳು, 'ಅನಿತಾಳ ದೀಪಾವಳಿ' 'ನಾವು ಮೂವರು ಅಕೆ ಒಬ್ಬಳು', ಬದುಕು ಜಟಕಾ ಬಂಡಿ', 'ಪಿಕ್ ಪಾಕೆಟ್', 'ಬೆಂಕಿಯೊಡನೆ ಆಟ', 'ಪುನರ್ಜನ್ಮ', 'ಕರಿ ಪರದೆ ಹರಿದಾಗ ಹಾಲ್ಜೇನು ಹರಿದಿತ್ತು' ಎಂಬ ಕತೆಗಳಲ್ಲಿ ಸಹಜವಾಗಿ ಮೂಡಿ ಬಂದಿವೆ'—'ಕೆಂಪು ದೀಪ' ವನ್ನು ಬಾಳಿನ ಕುರುಹಾಗಿಸಿದ್ದಾರೆ. ಬಾಳು-ಕೆಂಪು ದೀಪ; ಮಧುರ-ಮನೋಜ್ಞ. ಭೀಕರ; ಇದು ಸತ್ಯ. ಈ ಕತೆಗಳಲ್ಲಿ ಬರುವ ಪಾತ್ರಗಳೆಲ್ಲ ಜೀವಂತವಾಗಿವೆ. ಒಟ್ಟಾರೆ ಹೇಳುವುದಾದರೆ ನಾರಾಯಣ ಬಲ್ಲಾಳರಿಗೆ ಕತೆ ಹೇಳುವ ಮೋಡಿ ಅಂಗೈನೆಲ್ಲಿಯಂತೆ ಪಳಗಿದೆ. ಕೈ ಪಳಗಿ ಹೃದಯ ಸ್ಪರ್ಶಿ ಘಟನೆಗಳನ್ನು ನಿರ್ಮಿಸಿ ಪರಿಹಾರ ಸೂಚಿಸಿದ ವೈಖರಿ ಮೆಚ್ಚುವಂತಹುದು. ಅನುಭವ ಮುಖ್ಯವೆಂದಾಗ; ಜೀವನದ ಘಟನೆಗಳೆಲ್ಲವನ್ನೂ ಅನುಭವಿಸಿಯೇ ತೀರಬೇಕೆಂದಲ್ಲ! 'ಭಾವನೆ'ಯೂ ಅನುಭವವೇ ಎಂಬಂಶ ಸಾರ್ಥಕವಾಗಿದೆ ಈ ಸಂಕಲನದಲ್ಲಿ. ಕತೆ ಹೇಳುವ ತಂತ್ರ ಅನುಕರಣೀಯ.

* * *

ಒಲವಿನ ಒಸರು: ಲೇ: ಬಿ. ಜಿ. ಸತ್ಯಮೂರ್ತಿ. ಪ್ರ: ಪುರೋಗಾಮಿ ಸಾಹಿತ್ಯ ಸಂಘ. ಪುಟ ೧೪೬ ಬೆಲೆ ೨-೦೦ ರೂ.

ಭಾರತವನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ಒಂದಾದ 'ನಾಗ' ಸಮಸ್ಯೆಯ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ 'ಒಲವಿನ ಒಸರು'. ಎರಡು ವ್ಯಕ್ತಿಗಳ ನಡುವಣ ಒಲವನ್ನು ಎರಡು ಬಣಗಳ ಒಲವಿಗೆ ಪ್ರತೀಕ ಮಾಡಬಹುದು. ಸನ್ನಿವೇಶ ರಚನೆ, ಪಾತ್ರ ಪರಿಪೋಷಣೆ, ಸಮರ್ಪಕವಾಗಿ ಮೂಡಿ ಬಂದಿದೆ. ಓದುಗರಲ್ಲಿ ರಾಷ್ಟ್ರಾಭಿಮಾನ ಕೆರಳುವಂತಹ ಸಂಭಾಷಣೆಯನ್ನು ಬಳಸಲಾಗಿದೆ. ಗೆಳೆಯರ ಹೃದಯದ ಆತ್ಮೀಯತೆ, ಶಾಂತಿಪಾಲನೆ ಮಾನವೀಯತೆಯ ಮುಖ್ಯ ಅಂಶ ಎಂಬ ಅಭಿಪ್ರಾಯ, ಭಾರತದ ಅಲಿಪ್ತನೀತಿ; ನಾಗಾ ಜನರ ತೀವ್ರ ಆಸಕ್ತಿ; ಹೊರನಾಡಿನ ವಿದ್ರೋಹ ನೀತಿ ಇವುಗಳ ಚಿತ್ರಣವಾಗಿದೆ. 'ಜವ್ಮ' ಪ್ರಕೃತಿಯ ಮುಗ್ಧ ಶಿಶು ಎಂಬ ಹೇಳಿಕೆಯನ್ನು ನಾಜೂಕಾಗಿ ಪಾಲಿಸಿಕೊಂಡು ಬಂದಿದ್ದಾರೆ. 'ಟೆಂಪೆಸ್ಟ್' ನಾಟಕದಲ್ಲಿ ಮಿರಾಂಡ ಫರ್ಡಿನಾಂಡನನ್ನು ನೋಡಿ "How beatious the Mankind is!"

ಎಂದು ಕಣ್ಣರಳಿಸಿ ನೋಡಿದಂತೆ ಇಲ್ಲಿಯೂ 'ಜಮ್ಮಿ' ಕುಲ ಕರ್ಣಿಯನ್ನು ಆಶ್ಚರ್ಯದಿಂದ ವೀಕ್ಷಿಸುವಳು.

ಇನ್ನು ಅಚ್ಚಿನ ವ್ಯವಸ್ಥೆಯಲ್ಲಿ ಹೆಚ್ಚು ಆಸಕ್ತಿ ವಹಿಸ ಬಹುದಿತ್ತು. ಕೆಲವು ಕತೆಗಳಲ್ಲಿ ಮುದ್ರಣದ ತಪ್ಪಿನಿಂದಾಗಿ ಅರ್ಥ ವ್ಯತ್ಯಾಸವಾಗಿರುವುದುಂಟು. ಈ ಕಾದಂಬರಿಯ ಕಥೆಯನ್ನು ನೇರವಾಗಿ ಮುಗಿಸಿದ್ದಾರೆ. ಕೆಲವು ಕಡೆಗಳಲ್ಲಿ ಪ್ರಯತ್ನ ಪೂರ್ವಕವಾಗಿ ತಂದು ದೊಡ್ಡ ದೊಡ್ಡ ಶಬ್ದ ಗಳನ್ನು ಅಡಕುವಂತೆ ಕಂಡುಬಂದರೂ ಬಿ. ಜಿ. ಸತ್ಯಮೂರ್ತಿ ಗಳು ಉತ್ತಮ ಕಾದಂಬರಿಕಾರರಾಗುವ ಲಕ್ಷಣಗಳು ಈ ಕೃತಿಯಲ್ಲಿವೆ.

—ಆರ್. ರಾಚಪ್ಪ

ಬಯಸದೆ ಬಂದಾಕೆ: ಶ್ರೀ ಕೋಡು ಭೋಜಶೆಟ್ಟಿ; ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ; ಪುಟ ೬೨; ಬೆಲೆ ೧–೨೫.

ಬೆಳಕು ಬೆಳಕನೆ ಕೂಡಿತು (ಕಥಾ ಸಂಕಲನ) ಶ್ರೀ ಜಿ. ಎಸ್. ಅನ್ನದಾನಿ ಗ್ರಾಮಸೇವಕ ಗ್ರಂಥಮಾಲೆ, ಯಡಹಳ್ಳಿ; ಪುಟ ೧೦೫. ಬೆಲೆ ೧–೨೫.

'ಸಾಹಿತ್ಯ ಯಾತ್ರಿತರು': ಶ್ರೀಶ ಲಕ್ಸೆಟ್ಟಿ; ಉದಯ ಪ್ರಕಾಶನ, ಗೋಕಾಕ; ಪುಟ ೫೬: ಬೆಲೆ ೧–೨೫.

'ನನ್ನ ಮದುವೆ ನಿಮ್ಮೊಂದಿಗೇ'—'ಶ್ರೀ ಮಿತ್ತೂರು'; ಜನ ಜೀವನ ಸಾಹಿತ್ಯ ಸದನ, ಮುಲ್ಕಿ; ಪುಟ ೯೨: ಬೆಲೆ ೧–೦೦ ರೂ.

'ಬಯಸದೆ ಬಂದಾಕೆ': ಶ್ರೀ ಕೋಡು ಭೋಜಶೆಟ್ಟರ ಪ್ರಥಮ ಕಥಾ ಸಂಕಲನ. ಇಲ್ಲಿನ ಏಳು ಕಥೆಗಳೂ ಅವರ ವಸ್ತುವೈವಿಧ್ಯ–ಆಯ್ಕೆ ಹಾಗೂ ಸಮರ್ಪಕ ನಿರ್ವಹಣೆಗೆ ನಿದರ್ಶನವಾಗಿವೆ. ವಾಸ್ತವಿಕತೆಯ ವಿಸ್ಮಯ, ಕಠೋರ ಸತ್ಯಗಳನ್ನು ಹೃದ್ಯವಾಗಿ, ರೋಮಾಂಚಕಾರಿಯಾಗಿ ಚಿತ್ರಿ ಸಿರುವ ಮೊದಲಕಥೆ 'ಹಾನುಗಲ್ಲದ ಕೆಲಸಗಾರ' ಸಂಕಲನದ ಅತ್ಯುತ್ತಮ ಕಥೆಯಾಗಿದೆ. ಹೆಂಡತಿಗಾಗಿ ಉದ್ದೇಶ ಪೂರ್ವಕವಾಗಿ ಕೊಂಡ 'ಖೋಟಾ ನೋಟು' ಆಕಸ್ಮಾತ್ ಕಳುವಾಗಿ, ಅವಳಿಂದಲೇ ಬದುಕಿಕೊಂಡ ಗಂಡ: ಪತಿಯ ಅಧರ್ಮದಲ್ಲಿ ಭಾಗಿಯಾಗಿದ್ದರೂ, ತನ್ನ ಪಾತಿವ್ರತ್ಯದ ಪ್ರಶ್ನೆ ಬಂದಾಗ ಚಾತುರ್ಯದಿಂದ ಎದುರಿಸಿ ಚಳ್ಳೆಹಣ್ಣು ತಿನ್ನಿಸ ಬಲ್ಲ ಹೆಣ್ಣು ಎಸ್ತೆಲಾಳ ಕತೆ 'ಭೂಮಿ ತಿರುಗುತ್ತಾ ಇದೆ'; ಸ್ಥಳೀಯ ವೈದ್ಯ ದಂಪತಿಗಳು ನಾಟಕಕ್ಕೆ ಹೆದರಿ ಹೊಸದಾಗಿ ಬಂದು, ಕೆಲವೇ ದಿನಗಳಲ್ಲಿ ಕಂಬಿ ಕಿತ್ತ 'ಡಾ. ಪರಾರಿ'; ಮುಂಬೈನಂತಹ ಬೃಹತ್ ಪಟ್ಟಣದಲ್ಲಿ ಆಧುನಿಕ ಯುವತಿ ಯರು ಹಣ ಸುಲಿಯಲು ಹೂಡುವ ಕುತಂತ್ರದ 'ಬಯಸದೆ ಬಂದಾಕೆ'—ಇವೆರಡು ಕಥೆಗಳಲ್ಲಿಯೂ ಸಂಭವತೆಯ ಅಂಶ ಅತ್ಯಲ್ಪವೆನ್ನಬೇಕು; ಸರ್ಕಸ್ ನೋಡಿಕೊಂಡು ಹಿಂದಿರುಗು ವಾಗ ಬಸ್ ತಪ್ಪಿ, ಪಟ್ಟ ಪಾಡಿನ 'ಹಸಿ ಅನುಭವ' 'ಕಮಲ ಳ ರಿಂಗ್ ಸರ್ಕಸ್'; ಮಾನವ ಸಹಜ ದೌರ್ಬಲ್ಯವಾದ ದುರಾಸೆಗೆ ಬಲಿಬಿದ್ದು, ಸಂಕಪ್ಪ ಕೈಲಿದ್ದುದನ್ನೂ ಕಳೆದು ಕೊಂಡ ಕಥೆ 'ಡಬ್ಬಲ್ ಜೀರೋ'—ಓದುಗರನ್ನು ರಂಜಿಸ ಬಲ್ಲವು. ತಂತ್ರ ದೃಷ್ಟಿಯಿಂದಲೂ ಶೆಟ್ಟರ ಕಥೆಗಳು ಮೆಚ್ಚ ಬಲ್ಲವಾಗಿವೆ. ಇದೊಂದು ಉತ್ತಮ ಸಂಕಲನವೆನ್ನ ಬಹುದು.

* * *

ಬೆಳಕು ಬೆಳಕನೆ ಕೂಡಿತು

ಶ್ರೀ ಜಿ. ಎಸ್. ಅನ್ನದಾನಿ ಅವರ 'ಅಂತಃಶಕ್ತಿ' ಕಥಾ ಸಂಗ್ರಹವನ್ನು ಹಿಂಬಾಲಿಸಿ, ಅವರು ಹದಿನೈದು ವರ್ಷಗಳ ಅವಧಿಯಲ್ಲಿ ಆಗಾಗ ರಚಿಸಿರುವ ಒಂಬತ್ತು ಸಣ್ಣ ಕಥೆ ಗಳನ್ನು ಒಟ್ಟುಗೂಡಿಸಿರುವ 'ಬೆಳಕು ಬೆಳಕನೆ ಕೂಡಿತು' ಸಂಕಲನ ಹೊರಬಂದಿದೆ. ಮುನ್ನುಡಿಕಾರರು ಹೇಳಿರು ವಂತೆ ಲೇಖಕರು ತಮ್ಮ ಕತೆಗಳಲ್ಲಿ ನೂತನ ತಂತ್ರಗಳನ್ನು ಬಳಸಲು ಹಿಂಜರಿದಿಲ್ಲವಾದರೂ, ನವ್ಯತೆಯ ಹೆಸರಿನಲ್ಲಿ ಹರಡಿರುವ ಅಸ್ಪಷ್ಟ–ಅಪಕ್ವ 'ಪ್ಯಾಷನ್ನಿಗೆ' ಮರುಳಾಗದೆ ನೇರ ದಾರಿಯಲ್ಲಿ ನಡೆದಿದ್ದಾರೆಂಬುದು ಸಮಾಧಾನದ ಸಂಗತಿಯೇ. (ಆದರೂ ಪ್ರಸ್ತುತ ಸಂಕಲನದ ಕತೆಗಳಲ್ಲಿ 'ನೂತನ' ಎನಿಸಿಕೊಳ್ಳಬಲ್ಲ 'ತಂತ್ರ'ಗಳಾವುವೂ ಕಂಡು ಬರುವುದಿಲ್ಲವೇನೋ!) ಮೂಕ ಪ್ರಾಣಿಯಾದರೂ ನಾಯಿ ಯೊಂದು 'ಐವತ್ತು ಮನೆಯನ್ನು ಉಳಿಸಿದ ಮಹಾತಾಯಿ' ಯಾದುದು 'ಬಲಿದಾನ'ದ ಹೃದಯಸ್ಪರ್ಶಿ ಕಥಾವಸ್ತು; ಉದಾರಿ, ಕರುಣಾಮಯಿ ಎಂದು ಇಡೀ ಊರಿನಿಂದ ಹೊಗಳಿಸಿಕೊಂಡ ಮಲತಾಯಿ ಸಾವಿತ್ರಿ, ಹಣದಾಸೆಗೆ ಮೊದಲ ಹೆಂಡತಿಯ ಮುದ್ದು ಮಗುವನ್ನು ಶ್ರೀಮಂತರೊ ಬ್ಬರಿಗೆ ಯಂತ್ರಸಜ್ಜುವಿಗಾಗಿ ಬಲಿಯೊಪ್ಪಿಸಲು ನೀಡಿದ ಚಿತ್ರಣ 'ಔದಾರ್ಯದ ಮಡಿಲಲ್ಲಿ'; ಸಮಾಜ ಜೀವನದ ತೆರೆಯಮರೆಯ ಮರೆ–ಮೋಸಗಳನ್ನೊಳಗೊಂಡ 'ಭಪ್ಪರೆ ಮಾಮಾ' 'ಬಣ್ಣ ಬದಲಾಯಿತು' 'ಶಾಪ': ಅನ್ಯಾಯ ಆತ್ಮಸಾಕ್ಷಿಗಳ ನಡುವೆ ನಡೆವ ನಿರಂತರ ಘರ್ಷಣೆಗೆ ಸಾಕ್ಷಿ 'ಅಂತಃಶಕ್ತಿ', 'ಸಾಕ್ಷಾತ್ಕಾರ'; ಅಸತ್ಯ, ಪಕ್ಷಪಾತಗಳ ಮಧ್ಯೆ ಎದ್ದು ಕಾಣಬಲ್ಲ ಆದರ್ಶ ಸ್ವರೂಪ 'ಬೆಳಕು ಬೆಳ ಕನೆ ಕೂಡಿತು'—ಇವು ಲೇಖಕರ ರಚನಾ ಸಾಮರ್ಥ್ಯಕ್ಕೆ

ಕುರುಹಾಗಿವೆ. ಗ್ರಾಮೀಣ ಭಾಷೆಯ ಮೆರುಗಿನಿಂದ ಇವರ ಬರವಣಿಗೆ ಹೃದ್ಯವಾಗಿ ಶೋಭಿಸಿದರೂ, ಭಾವೋದ್ರೇಕದ ಹೆಚ್ಚಳದಿಂದಾಗಿ ಅನೇಕವೇಳೆ ಕತೆಯ ಗತಿ, ವೇಗ ಕುಂಟುತ್ತದೆ; ಅನಾವಶ್ಯಕ ಉಪಮೆ, ಉತ್ಪ್ರೇಕ್ಷೆಗಳು ಬೆಳೆಯುತ್ತವೆ. 'ಔದಾರ್ಯದ ಮಡಿಲಲ್ಲಿ' ಮತ್ತು 'ಶಾಪ'ಗಳಲ್ಲಿ ಅಸಂಭವತೆಯ ಪ್ರಶ್ನೆ ಏಳುತ್ತದೆ. 'ಬೆಳಕು ಬೆಳಕನೆ ಕೂಡಿತು' ನಿಜಕ್ಕೂ ಉತ್ತಮ ಕತೆ; ಆದರೆ, ಆರಂಭ ಆಕರ್ಷಿಸಲಾರದೇನೋ ಅಂತೆಯೇ ಮೊದಲ ಕತೆಯ ಆರಂಭ ಚೆನ್ನಾಗಿದ್ದರೂ, ಬೆಳವಣಿಗೆ ಅಸಮರ್ಪಕ. ವ್ಯಕ್ತಿ ಚಿತ್ರಗಳನ್ನು ಪ್ರಭಾವಿಯಾಗಿ ರೂಪಿಸಬಲ್ಲ ಶಕ್ತಿ ಲೇಖಕರಿಗಿದೆ. ಸಮಸ್ಯೆಗಳನ್ನು ಅನುಕಂಪದಿಂದ ಕಾಣಬಲ್ಲ ಶ್ರೀ ಅನ್ನದಾನಿಯವರು ಇನ್ನೂ ಉತ್ತಮ ಕತೆಗಳನ್ನು ಬರೆಯಬಲ್ಲರೆಂಬ ಭರವಸೆ ಮೂಡಿಸಬಲ್ಲದು ಈ ಕೃತಿ. ಒಟ್ಟಿನಲ್ಲಿ ಇದೊಂದು ಪ್ರಾಮಾಣಿಕ ಪ್ರಯತ್ನವೆನ್ನಬಹುದು.

* * *

ಸಾಹಿತ್ಯ ಯಾತ್ರಿಕರು

ಉತ್ಸಾಹೀ ತರುಣ ಲೇಖಕರಾದ ಶ್ರೀ ಬಾಳೇಶ ಲಕ್ಷೆಟ್ಟಿ ಅವರು ತಮ್ಮ 'ಉದಯರಾಗ', 'ಭಾಗ್ಯೋದಯ', 'ಎಸಳು', 'ಧ್ಯೇಯವಾದಿ'—ಕವನ ಸಂಕಲನಗಳಿಂದಲೂ ಮತ್ತು ಇತ್ತೀಚಿನ 'ಸ್ಫೂರ್ತಿ ವೀಣೆ' ಪತ್ರ ಸಾಹಿತ್ಯದ ಮೂಲಕವೂ ಚಿರಪರಿಚಿತರೇ ಆಗಿದ್ದಾರೆ. 'ಸಾಹಿತ್ಯ ಯಾತ್ರಿಕರು' ಹೆಸರೇ ಸೂಚಿಸುವಂತೆ ಕನ್ನಡ ಸಾರಸ್ವತ ಲೋಕಕ್ಕೆ ಬಹುಮುಖ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಶ್ರೀ ಮುಗಳಿ, ಶ್ರೀ ಸಿಂಪಿ ಲಿಂಗಣ್ಣ, ಡಾ. ಆರ್.ಸಿ. ಹಿರೇಮಠ, ಶ್ರೀ ಚೆನ್ನವೀರ ಕಣವಿ, ಶ್ರೀ ಬೇಂದ್ರೆ, ಶ್ರೀ ಎಸ್. ಡಿ. ಇಂಚಲ, ಜಯದೇವಿ ತಾಯಿ ಲಿಗಾಡೆ ಮತ್ತು ಶ್ರೀ ಕೃಷ್ಣಮೂರ್ತಿ ಪುರಾಣಿಕ—ಇವರ ವ್ಯಕ್ತಿಚಿತ್ರಗಳ ಪಡಿನೆಳಲನ್ನು ಪ್ರತಿಬಿಂಬಿಸುವ ಲೇಖನಗಳ ಸಂಕಲನ. ಇಲ್ಲಿ ಪ್ರಸ್ತಾಪಿಸಿ, ಪರಿಚಯ ಮಾಡಿಕೊಟ್ಟಿರುವ ಸಾಹಿತಿಗಳ ಸಾಮೀಪ್ಯದಲ್ಲಿ ಶ್ರೀ ಬಾಳೇಶರು ಅಕ್ಕರೆಯಿಂದ ಕುಳಿತು, ಅವರೆಲ್ಲರ ವ್ಯಕ್ತಿಜೀವನದ ಗುಣವಿಶೇಷತೆಗಳನ್ನೂ, ಜೀವನ ದೃಷ್ಟಿಯನ್ನೂ ಸೂಕ್ಷ್ಮವಾಗಿ ಅವಲೋಕಿಸಿದಂಥವರು. ಅವರ ಸಾಹಿತ್ಯ ಸೃಷ್ಟಿಯ ಬಗೆಗೆ ಹಾಗೂ ವೈಯಕ್ತಿಕ ವ್ಯಕ್ತಿತ್ವದತ್ತ ನಮ್ಮ ಗೌರವಾದರಗಳನ್ನು ಇಮ್ಮಡಿಸುವ ಪ್ರಯತ್ನವನ್ನು ಯಶಸ್ವಿಯಾಗಿ ಲೇಖಕರು ಮಾಡಿದ್ದಾರೆ. ವ್ಯಕ್ತಿಚಿತ್ರಗಳನ್ನು ಸಮ್ಮೋಹಕವಾಗಿ, ನಯವಾಗಿ ತಮ್ಮ ಕುಂಚದಿಂದ ಚಿತ್ರಿಸಿರುವುದರ ಜೊತೆಗೆ ಅಲ್ಲಲ್ಲಿ ಅವರ ಕೃತಿಗಳ ಸೂಕ್ಷ್ಮ ವಿಮರ್ಶೆಯನ್ನೂ ಮಾಡಿರುತ್ತಾರೆ. ಕೆಲವು ಲೇಖನಗಳ ಶೀರ್ಷಿಕೆ ಅತ್ಯುಕ್ತಿಯ ಛಾಯೆಯನ್ನು ಉಳಿಸಿಕೊಂಡಿದೆ ಮತ್ತು ಕೆಲವೆಡೆ ಲೇಖನದ ಕೇಂದ್ರ ವ್ಯಕ್ತಿಯ ವಿವರಣೆಯಲ್ಲಿ ಅಭಿಪ್ರಾಯ ಮಾಲಿಕೆಯ ಸಂಗ್ರಹವಾಗಿ, ಕೇವಲ ಪಟ್ಟಿಯಾಗಿ ಉಳಿದಿರುವುದುಂಟು. ಆದರೂ ಬಾಳೇಶರು ಕೆಲವೇ ಪದಗಳಲ್ಲಿ, ವಾಕ್ಯಗಳಲ್ಲಿ ವ್ಯಕ್ತಿಯ ಸಾರ್ಥಕ ಪರಿಚಯ ಮಾಡಿಕೊಡಬಲ್ಲರು. ನಾಡು-ನುಡಿಯ ಪುರೋಭಿವೃದ್ಧಿಗಾಗಿ ಬಹುಮೂಲ್ಯ ಸೇವೆ ಸಲ್ಲಿಸುತ್ತಿರುವ ಹಲವಾರು ಸಾಹಿತಿಗಳನ್ನು ಕೃತಿಗಳಿಂದ ಮಾತ್ರ ಬಲ್ಲವರಿಗೆ ಬಾಳೇಶರ ಈ ಹೊತ್ತಿಗೆ ಸಹೃದಯ ಪರಿಚಯ ಮಾಡಿಕೊಡಬಲ್ಲದ್ದಾಗಿದೆ. ಇಂತಹ ಹಲವಾರು ಪರಿಚಯಾತ್ಮಕ ಸಂಕಲನಗಳು ಅವರಿಂದ ಹೊರಬೀಳಲೆಂದು ಹಾರೈಸುತ್ತೇವೆ.

* * *

ನನ್ನ ಮದುವೆ ನಿಮ್ಮೊಂದಿಗೇ

ಶ್ರೀ ಮಿತ್ರೂರು ಅವರ ಮೂರನೆಯ ಸಣ್ಣ ಕತೆಗಳ ಸಂಗ್ರಹ—'ನನ್ನ ಮದುವೆ ನಿಮ್ಮೊಂದಿಗೇ' ಇದರಲ್ಲಿ ಏಳು ಕತೆಗಳಿವೆ. ಮೊದಲನೆಯ ಮತ್ತು ಕೊನೆಯದಾದ 'ಗಂಟುಬಿದ್ದ ನಂಟು' ಮತ್ತು 'ನನ್ನ ಮದುವೆ ನಿಮ್ಮೊಂದಿಗೆ' ಕತೆಗಳಲ್ಲಿ ಸ್ವಾರ್ಥಸಾಧನೆಗಾಗಿ ಆಧುನಿಕ ಯುವತಿಯರು ಬಳಸಬಹುದಾದ ಕಪಟ, ವಂಚನೆಗಳ ತಂತ್ರದ ಪರಿಚಯವಿದೆ. ಇವುಗಳಲ್ಲಿ ಸಹಜತೆಯ ಸಂಭವತೆಯ ಕೊರತೆ ಮತ್ತು ಸಂಭಾಷಣೆಯ ಆಧಿಕ್ಯಗಳ ಸುಳಿವಿದೆ. ವ್ಯಕ್ತಿದಾರಿದ್ರ್ಯ ಬಡತನಗಳನ್ನು ವಸ್ತುವಾಗುಳ್ಳ 'ತಂದೆ ಕೊಂದ ಮಗು' ಹೃದಯಸ್ಪರ್ಶಿ ಕತೆಯಾದರೂ ಇದರ ಬೆಳವಣಿಗೆ ತೀರಾ ಅಸಮರ್ಪಕ. ಅಂತ್ಯ ಅತ್ಯಂತ ಸಹಜವಾಗಿದ್ದರೂ ಸೂಚ್ಯವಾಗಿ ಸಂಗ್ರಹವಾಗಿದ್ದಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತಿತ್ತು. ಸುದೀರ್ಘ ವಿವರಣೆ ಅನಾವಶ್ಯಕವಾಗಿದೆ. ನೈಜತೆಯನ್ನು ಪ್ರತಿಬಿಂಬಿಸುವ 'ಮೋಹ ಮಾಯವಾದಾಗ' ಮತ್ತು ಮಡಿ-ಮೈಲಿಗೆ, ಮಾನವೀಯ ಅನುಕಂಪೆಗಳ ನಡುವಣ ಘರ್ಷಣೆಯ 'ಈ ಜಾತಿ ಆ ನೀತಿ' ಸಂಕಲನದ ಉತ್ತಮ ಕತೆಗಳು. 'ಸಂಭಾವಿತನ ಸಂತಾಪ'ದ ವಸ್ತು ಸಾಧಾರಣದ್ದಾದರೂ ಅನಿರ್ದಿಷ್ಟತೆ ಎದ್ದು ಕಾಣುತ್ತದೆ; ಅಂತ್ಯ

ಘಟ್ಟ ಮೇಲಿನ ಹಲವು ಕತೆಗಳಂತಯೇ ಅನವಶ್ಯವಾಗಿ ಬೆಳೆದಿದೆ. ಅಲ್ಲಲ್ಲಿ ಸಮಾಜವನ್ನು, ಆಳುವ ಸರಕಾರವನ್ನು ಕುರಿತಾದ ವ್ಯರ್ಥ ಕಂಠ ಶೋಷಣೆಯಿಂದ ಸಮಾಜ ಜೀವನದ ವೈವಿಧ್ಯತೆಯತ್ತ, ವ್ಯಕ್ತಿ ಜೀವನದ ನಿತ್ಯಬವಣೆ, ವಂಚನೆ ಪ್ರಲೋಭಗಳತ್ತ ಲೇಖಕರು ಗಮನ ಸೆಳೆದಿದ್ದಾರೆ. ಒಟ್ಟಿನಲ್ಲಿ ಮಿತ್ತೂರರು ಉತ್ತಮ ಕತೆಗಾರರಾಗಬಲ್ಲರೆಂಬ ಭರವಸೆಯನ್ನು ಮೂಡಿಸಬಲ್ಲ ಈ ಸಂಕಲನ ಒಂದು ರಂಜನೀಯ ಸಂಗ್ರಹವಾಗಿದೆ.

—'ಸುಮನಾ'

ಪ್ರಹಾರ: ಲೇ: ಲಾಂಗೂಲಾಚಾರ್ಯ, ಪ್ರ: ಲೋಕ ಶಿಕ್ಷಣ ಮಾಲಾ, ಹುಬ್ಬಳ್ಳಿ-ಬೆಂಗಳೂರು. ಪುಟ: ೧೨೮, ಬೆಲೆ: ರೂ. ೧-೫೦.

ಕನ್ನಡ ಜನತೆಗೆ ಚಿರಪರಿಚಿತರಾಗಿರುವ ಲಾಂಗೂಲಾಚಾರ್ಯರ ಇಪ್ಪತ್ತೊಂದು ಹರಟೆಗಳ ಸಂಗ್ರಹ 'ಪ್ರಹಾರ' ವಸ್ತು ಪ್ರತಿಪಾದನ ಕ್ರಮದಲ್ಲಿ, ಮತ್ತು ಭಾಷಾ ಪ್ರಯೋಗದಲ್ಲಿ ಹೊಸದಾದ ಅನನ್ಯ ಪದ್ಧತಿಯನ್ನು ರೂಢಿಸಿಕೊಂಡಿರುವ ಶ್ರೀ ಲಾಂಗೂಲಾಚಾರ್ಯರು ಕರ್ಮವೀರ ಪತ್ರಿಕೆಯಲ್ಲಿ ವಾರವಾರಕ್ಕೆ ಬರೆದ ಹಲವಾರು ಹರಟೆಗಳು ಇಲ್ಲಿವೆ. ಜನರಿಗೆ ತೀರ ಪರಿಚಿತವಾದ ವಸ್ತುವನ್ನೇ ಆರಿಸಿಕೊಂಡು ಅದರ ಇನ್ನೊಂದು ಮಗ್ಗುಲನ್ನು ತೋರಿಸಿಕೊಡುವ ಜಾಣ್ಮೆಯಲ್ಲಿ ಶ್ರೀ ಲಾಂಗೂಲಾಚಾರ್ಯರು ಸಿದ್ಧಹಸ್ತರಾಗಿದ್ದಾರೆ. ಕೊಡೆಗೆ ಸಂಸ್ಕೃತದಲ್ಲಿ 'ಆತಪತ್ರ' ಎಂದು ರೂಢಿಯಲ್ಲಿರುವ ಶಬ್ದವನ್ನು ಹಿಡಿದು ನಮ್ಮ ಪೂರ್ವಿಕರಿಗೆ ಬಿಸಿಲಿಗೆ ಹಿಡಿಯುವ ಕೊಡೆಯನ್ನು ಮಳೆಗೂ ಹಿಡಿಯಬಹುದು ಎಂದು ಕಲ್ಪನೆಯೇ ಇರಲಿಕ್ಕಿಲ್ಲ ಎಂದು ಒಂದು ಕಡೆ ನಗೆಯಾಡಿದ್ದಾರೆ. ದ್ರೌಪದಿ ಸೀರೆಯುಡುವ ಬದಲು ನರ್ಸ್‌ನಂತೆ ಸ್ಕರ್ಟ್ ಹಾಕಿದ್ದರೆ, ಅಥವಾ ತಮಿಳು ಹೆಂಗಸರಂತೆ ಸೀರೆಯುಟ್ಟಿದ್ದರೆ ದುಶ್ಶಾಸನನಿಗಾಗ ಬಹುದಾಗಿದ್ದ ಅವಸ್ಥಾಂತರಗಳನ್ನು ಊಹಿಸಿ ನೋಡಿದ್ದಾರೆ. ಹಾಗೆಯೇ ರಾಮಾಯಣ ಭಾಗವತಗಳ ಹಲವಾರು ಸಮಸ್ಯೆಗಳನ್ನು ಅತ್ಯಂತ ಮೋಜಿನ ದೃಷ್ಟಿಯಿಂದ ಬಿಡಿಸುವ ಪ್ರಯತ್ನಮಾಡಿದ್ದಾರೆ. ಶ್ರೀಮನ್ನಾರಾಯಣನ ನಿವೃತ್ತಿ, ಬ್ರಹ್ಮ 'ಹೂ' ಅಂದ ಸಂದರ್ಭ, ಗಣಪತಿಯ ಜನನ ಬೆಳವಣಿಗೆ, ಚಟುವಟಿಕೆಗಳು ಇವನ್ನೆಲ್ಲಾ ಪ್ರಬಂಧಕಾರರು ನೋಡಿರುವ ದೃಷ್ಟಿ ಉದಕ್ಕೂ ನಗೆಯ ಹೊಳೆಯನ್ನು ಹರಿಸುವಂಥದು. ಪೌರಾಣಿಕ ಸಾಹಿತ್ಯದಲ್ಲಿ ಲಾಂಗೂಲಾಚಾರ್ಯರಿಗಿರುವ ಪ್ರವೇಶ, ಹಾಸ್ಯದ ದ್ವೀಪದಲ್ಲಿನಿಂತು ಪುರಾಣಗಳಲ್ಲಿನ ಪಾತ್ರ-ಘಟನಾವಳಿಗಳನ್ನು ಒರೆಗೆ ಹಚ್ಚುವ ನೂತನ ದೃಷ್ಟಿ ಇವು ಬೆರಗುಗೊಳಿಸುವಂಥವಾಗಿವೆ.

ಸಮಾಜದ ಸುತ್ತಲೂ ಹಾಸ್ಯಗಾರನ ಕಣ್ಣು ಹೊರಳಿದರೆ ಎಂತೆಂತಹ ಅದ್ಭುತ ದೃಶ್ಯಗಳು ಗೋಚರವಾಗಬಲ್ಲವೆಂಬುದಕ್ಕೆ ಈ ಪ್ರಬಂಧ ಸಂಕಲನದ ಹತ್ತು ಬರಹಗಳು ಸಜೀವ ಸಾಕ್ಷಿಯಾಗಿವೆ. ನೀವು ಎಷ್ಟೇ ಹಾಲು ಕೇಳಿ, ಕೆಲವೇ ಎಮ್ಮೆ-ಹಸುಗಳನ್ನಿಟ್ಟುಕೊಂಡಿರುವ ಗೌಳಿಗನು ನಿಮಗೆ ಹಾಲನ್ನು ತಪ್ಪದೆ ಒಪ್ಪಿಸಬಲ್ಲ ಪ್ರತಿಭಾಶಾಲಿಯೆಂದು ಗೌಳಿಗನನ್ನು ಹೊಗಳಿದ್ದಾರೆ. ಅವನ ಜಲಚಿಕಿತ್ಸಾ ಪ್ರಾವೀಣ್ಯವನ್ನು ವಿವರಿಸಿದ್ದಾರೆ. ಹೆಂಗಸರನ್ನು ಅರ್ಥಮಾಡಿಕೊಳ್ಳಲು ಹೊರಟು ಅವರ ಪಟ್ಟಪಾಡು ಹೊಟ್ಟೆ ಹುಣ್ಣಾಗುವಂತೆ ನಗೆ ತರುವುದಲ್ಲದೆ ವಿಷಯದ ಸಂಕೀರ್ಣತೆಯನ್ನು ಪರಿಚಯ ಮಾಡಿಕೊಡುತ್ತದೆ. ನಮ್ಮ ದೈನಂದಿನ ಹರಟೆ ಮಾತುಗಳಲ್ಲಿ ಸುಳಿಯುವ ಗೆಲವು ಶಬ್ದಚ್ಛಟೆಗಳ ಹುಚ್ಚು ಕುಣಿತವನ್ನು ನಾಟಕೀಯವಾಗಿ ವಿವರಿಸಿದ್ದಾರೆ. ಸಂಗೀತದಿಂದ ಹೆಚ್ಚು ಬೆಳೆ ಸಾಧ್ಯ ಎಂಬ ಸಿದ್ಧಾಂತದ ಬಗ್ಗೆ ತಮ್ಮದೇ ಆದ ಉಪಸಿದ್ಧಾಂತಗಳ ಮಾಲೆಯನ್ನೇ ಮಂಡಿಸಿ ಸಾಕಷ್ಟು ಗೊಂದಲ ಎಬ್ಬಿಸಿದ್ದಾರೆ.

ಹೀಗೆ ಇಲ್ಲಿಯ ಎಲ್ಲ ಲೇಖನಗಳೂ ವಿನೋದ ಜೀವಿಯಾದ ಲೇಖಕರ ಸಜೀವ ಕಲ್ಪಕತೆಯಿಂದ ಮೋಹಕವಾಗಿ ಬೆಳಗಿವೆ. 'ಪ್ರಹಾರ'ಗಳು ಬಲಿಷ್ಠವಾಗಿದ್ದು ಹಾಸ್ಯವನ್ನು ಸ್ಫೋಟಿಸಲು ಸಮರ್ಥವಾಗಿವೆ. ವಿರಳವಾಗುತ್ತಿರುವ ಕನ್ನಡ ಹಾಸ್ಯಬಂಧಗಳ ಕ್ಷೇತ್ರಕ್ಕೆ ಒಂದು ಹೊಸ ಚೈತನ್ಯವನ್ನು ತುಂಬಬಲ್ಲ ಸಾರ್ಥಕ ಪ್ರಬಂಧಗಳಾಗಿವೆ.

—ಮಿ.

ಪರಿಷತ್ತಿನ ಸುದ್ದಿಗಳು

ಉಪನ್ಯಾಸಮಾಲೆ-೨೨

ದಿನಾಂಕ ೨೧-೫-೧೯೬೭ರಂದು ರಾಜಾಜಿನಗರದ ವಿದ್ಯಾವರ್ಧಕ ಸಂಘದಲ್ಲಿ ಪರಿಷತ್ತಿನ ಆಶ್ರಯದಲ್ಲಿ ಕವಿ ಕೃತಿದರ್ಶನದ ಅಂಗವಾಗಿ "ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಸಾಹಿತ್ಯ ಸೇವೆ"ಯನ್ನು ಕುರಿತು ೨೨ನೆಯ ಉಪನ್ಯಾಸಮಾಲೆಯನ್ನು ಏರ್ಪಡಿಸಿತ್ತು.

ಪಂಡಿತ ಶ್ರೀ ಹು. ಮ. ರಾಮಾರಾಧ್ಯರು 'ಶ್ರೀ ಸಿದ್ಧರಾಮೇಶ್ವರ ಪುರಾಣ'ವನ್ನು ಕುರಿತು, ಶ್ರೀಮತಿ ಕಮಲಮ್ಮ ಹಂಪನಾ ಅವರು 'ಜಯಗೀತ ಮತ್ತು ತಾಯಿಯ ಪದಗಳ'ನ್ನು ಕುರಿತು ಉಪನ್ಯಾಸ ಮಾಡಿದರು. ಆಸ್ಥಾನ ವಿದ್ವಾನ್ ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಕನ್ನಡಿಗರ ಕೂಟ

ದಿನಾಂಕ ೨೧-೫-೧೯೬೭ರಂದು ಪರಿಷತ್ತಿನ ಆಶ್ರಯದಲ್ಲಿ ಬಸವನಗುಡಿಯ ಕನ್ನಡಿಗರ ಕೂಟದವರು ನರಸಿಂಹರಾಜಕಾಲೋನಿಯ ಶ್ರೀರಾಮ ಮಂದಿರದಲ್ಲಿ ಸಾಹಿತ್ಯ ಪ್ರಕಾರಗಳ ಪರಿಶೀಲನೆಯ ೯ನೆಯ ಕಾರ್ಯಕ್ರಮದ ಅಂಗವಾಗಿ 'ಮಹಿಳಾ ಸಾಹಿತ್ಯ'ವನ್ನು ಏರ್ಪಡಿಸಿದ್ದರು.

'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕವಯತ್ರಿಯರು' ಎಂಬ ವಿಷಯವನ್ನು ಕುರಿತು ಶ್ರೀಮತಿ ಕೆ. ಶಾಂತಾ ಅವರು, 'ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿಯ ಪ್ರಗತಿಯಲ್ಲಿ ಮಹಿಳೆಯರ ಪಾತ್ರ' ಎಂಬ ವಿಷಯವನ್ನು ಕುರಿತು ಶ್ರೀಮತಿ ವೇದವತಿರಾವ್ ಅವರು, 'ಮಹಿಳಾ ಸಾಹಿತ್ಯದಲ್ಲಿ ಆಧುನಿಕ ಒಲವು' ಎಂಬ ವಿಷಯವನ್ನು ಕುರಿತು ಶ್ರೀಮತಿ ಅನುಪಮಾ ನಿರಂಜನ ಅವರೂ ಭಾಷಣ ಮಾಡಿದರು. ಶ್ರೀಮತಿ ಎಂ. ಕೆ. ಇಂದಿರಾ ಅವರು ಅಧ್ಯಕ್ಷತೆ ವಹಿಸಿದ್ದರು.

ನಾಲ್ಕನೆಯ ಉಪನ್ಯಾಸಮಾಲೆ

ದಿನಾಂಕ ೨೮-೫-೧೯೬೭ರಂದು ಗಾಂಧಿ ಸಾಹಿತ್ಯ ಸಂಘದವರು ಪರಿಷತ್ತಿನ ಆಶ್ರಯದಲ್ಲಿ ತಮ್ಮ ನಾಲ್ಕನೆಯ ಉಪನ್ಯಾಸಮಾಲೆಯನ್ನು ಏರ್ಪಡಿಸಿದ್ದರು.

ವಿಷಯ : ದಿ. ದೇವಶಿಖಾಮಣಿ ಅಳಸಿಂಗರಾಚಾರ್ಯ ಅವರ ಕೃತಿಗಳು.

ಉಪನ್ಯಾಸಕರು : ಪಂಡಿತ ಎಂ. ವಿ. ಚಕ್ರವರ್ತಿಅವರು

ಸ್ಥಳ : ಮಲ್ಲೇಶ್ವರದ ಎಂಟನೇ ಕ್ರಾಸಿನಲ್ಲಿರುವ ಗಾಂಧಿ ಸಾಹಿತ್ಯ ಸಂಘ.

ಕಾವ್ಯವಾಚನ

ದಿನಾಂಕ ೧೫-೬-೧೯೬೭ರಂದು ಪರಿಷನ್ಮಂದಿರದಲ್ಲಿ ಕಾವ್ಯವಾಚನವನ್ನೇರ್ಪಡಿಸಿತ್ತು. ಶ್ರೀಮತಿ ಎಂ. ವಿಜಯಲಕ್ಷ್ಮಿ ಅವರು 'ಜೈಮಿನಿ ಭಾರತದ 'ಸೀತಾಪರಿತ್ಯಾಗ' ಭಾಗವನ್ನು ವಾಚನ ಮಾಡಿದರು.

ಐದನೆಯ ಉಪನ್ಯಾಸಮಾಲೆ

ದಿನಾಂಕ ೨೫-೬-೧೯೬೭ರಂದು ಗಾಂಧಿ ಸಾಹಿತ್ಯ ಸಂಘದವರು ಪರಿಷತ್ತಿನ ಆಶ್ರಯದಲ್ಲಿ ತಮ್ಮ ಐದನೆಯ ಉಪನ್ಯಾಸ ಮಾಲೆಯನ್ನು ಏರ್ಪಡಿಸಿದ್ದರು.

ವಿಷಯ : ದಿ. ಪ್ರಾಕ್ತನ ವಿಮರ್ಶ ವಿಚಕ್ಷಣ, ಕರ್ಣಾಟಕ ಪ್ರಾಚ್ಯ ವಿದ್ಯಾವೈಭವ, ರಾವ್‌ಬಹದ್ದೂರ್ ರಾ. ನರಸಿಂಹಾಚಾರ್ ಅವರ ಕೃತಿಗಳು. ಉಪಾನ್ಯಾಸಕರು ಶ್ರೀ ತಿರುಮಲೆ ತಾತಾಚಾರ್ಯಶರ್ಮ ಅವರು. ಸ್ಥಳ: ಮಲ್ಲೇಶ್ವರದ ಎಂಟನೇಕ್ರಾಸಿನಲ್ಲಿರುವ ಗಾಂಧೀ ಸಾಹಿತ್ಯ ಸಂಘ.

ಸಮ್ಮೇಳನದ ಲೆಕ್ಕಪತ್ರಗಳು

ಶ್ರವಣ ಬೆಳಗೊಳದ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರಗಳ ಅಂಗೀಕಾರಕ್ಕಾಗಿ ಸ್ವಾಗತ ಸಮಿತಿಯ ಸಭೆಯು ಇಷ್ಟರಲ್ಲಿಯೇ ಸೇರಲಿದೆ. ಸಮ್ಮೇಳನಕ್ಕೆ ಧನಸಹಾಯ ಮಾಡಿದ ಎಲ್ಲ ಮಹನೀಯರ ಹೆಸರುಗಳನ್ನೂ ಲೆಕ್ಕಪತ್ರಗಳನ್ನೂ 'ಕನ್ನಡ ನುಡಿ'ಯಲ್ಲಿ ಪ್ರಕಟಿಸಲಾಗುವುದು.

ಸಂಪಾದಕೀಯ

'ಕನ್ನಡ ನುಡಿ' – ಸಮ್ಮೇಳನ ವಿಶೇಷಾಂಕ

ನಲವತ್ತಾರನೆಯ ಸಾಹಿತ್ಯ ಸಮ್ಮೇಳನದ ವಿಶೇಷ ಸಂಚಿಕೆಯಾಗಿ ಈ ಸಲದ 'ನುಡಿ' ಯನ್ನು ಪ್ರಕಟಿಸುತ್ತಿದ್ದೇವೆ. ಈ ಸಮ್ಮೇಳನವು ಅನೇಕ ದೃಷ್ಟಿಯಿಂದ ಪ್ರಸಿದ್ಧ ವಿದ್ವಾಂಸರಾದ ಆ. ನೇ. ಉಪಾಧ್ಯೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಯಿತು. ಅನೇಕ ಲೇಖಕರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಬಹು ಮುಖ್ಯವಾದ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಶ್ರವಣ ಬೆಳಗೊಳದಂಥ ಸಣ್ಣ ಊರಿಗೆ ಸೇರಿದ್ದ ಜನಸಂಖ್ಯೆ ಹೆಚ್ಚೆಂದೇ ಹೇಳಬೇಕು. ಗೊಮ್ಮಟ ಮೂರ್ತಿಗೆ ಎಂ. ಸಿ. ಅನಂತರಾಜಯ್ಯನವರು ಧರ್ಮ ಬುದ್ಧಿಯಿಂದ ನಡೆಸಿದ ಮಹಾಮಸ್ತಕಾ ಭಿಷೇಕವಂತೂ ಸಾಹಿತಿಗಳ ಕಣ್ಮನಗಳನ್ನು ತಣಿಸಿ ಅವರೆಲ್ಲರ ಆತ್ಮವನ್ನು ಪವಿತ್ರಗೊಳಿಸಿತು. ಸ್ವಾಗತ ಸಮಿತಿಯ ಅಧಿಕಾರಿಗಳೂ, ಸದಸ್ಯರೂ, ಚೆನ್ನರಾಯಪಟ್ಟಣ, ಹಾಸನ, ಹೊಳೆಯ ನರಸೀಪುರದಂಥ ಊರುಗಳ ಮುಂದಾಳುಗಳೂ ಸೊಂಟ ಕಟ್ಟಿ ದುಡಿದು ನುಡಿ ಹಬ್ಬವನ್ನು ಸಾಂಗವಾಗಿ ನೆರವೇರಿಸಿದರು.

ಉತ್ಸವ, ಚರ್ಚೆ, ನಿರ್ಣಯಾದಿ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು ಅನೇಕ ಬಲ್ಲವರು ಪತ್ರಗಳನ್ನು ಬರೆದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವರು ಮುಂದಿನ ಸಮ್ಮೇಳನವನ್ನು ಉತ್ಸಾಹದಿಂದ ನಿರೀಕ್ಷಿಸುತ್ತಿರುವುದಾಗಿ ಬರೆದಿದ್ದಾರೆ. ಈ ಎಲ್ಲ ಹಿತೈಷಿಗಳಿಗೆ 'ನುಡಿ' ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಅನೇಕ ಪತ್ರಿಕೆಗಳು ತನ್ನ ಸಂಪಾದಕೀಯದಲ್ಲಿ ಸಮ್ಮೇಳನದ ಕಾರ್ಯಕ್ರಮಗಳನ್ನು ಕುರಿತು ಪ್ರೋತ್ಸಾಹದಾಯಕವಾದ ಅಗ್ರ ಲೇಖನಗಳನ್ನು ಬರೆದಿವೆ. ಅನೇಕ ಉತ್ತಮವಾದ ಸೂಚನೆ ಗಳನ್ನು ಇತ್ತಿವೆ. ಈ ಸೂಚನೆಗಳನ್ನು ಮುಂದಿನ ಏರ್ಪಾಟು ಮಾಡುವಾಗ ಗಮದಲ್ಲಿಡ ಲಾಗುತ್ತದೆ.

ಯಾವಾಗಲೂ ಸಮ್ಮೇಳನದಲ್ಲಿ ಹಿರಿಯರು ಮಾತ್ರ ಇರಬೇಕೆಂಬುದು ಕೆಲವರ ಅಭಿಪ್ರಾಯ. ಇದು ಸರಿಯಲ್ಲ. ಸಾಹಿತ್ಯದ ಕಾರ್ಯವು ಪ್ರಗತಿಯುತವಾಗಿರಬೇಕಾದರೆ ಹಿರಿಯರ ನೇತೃತ್ವ ದಲ್ಲಿ ಅನೇಕ ಕಿರಿಯರು ಕಾರ್ಯಮುಖರಾಗಬೇಕು. ಆಗ ಕಾರ್ಯಕರ್ತರ ಪಡೆಯೇ ಸಿದ್ಧ ವಾಗುತ್ತದೆ. ಲೇಖನಕಲೆ, ಭಾಷಣಕಲೆ, ವ್ಯವಸ್ಥಾ ಚಾತುರ್ಯ, ಮೈತ್ರಿಸಂವರ್ಧನ ಕರ್ನಾಟ ಕದ ಆದ್ಯಂತ ನಡೆಯಬೇಕಾಗಿರುವ ನುಡಿಯ ಪ್ರಚಾರಕಾರ್ಯ, ಸಂಘ ಸಂಸ್ಥೆಗಳ ಚಟುವಟಿಕೆ, ಪ್ರಗತಿಪರ ಸಂಬಂಧ, ಪತ್ರಿಕೆಗಳ ಪರಸ್ಪರ ಸಂಬಂಧ, ವಿಮರ್ಶೆ, ವಿಚಾರವಿನಿಮಯ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಯುವಕರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ತರಪೇತಿ ಪಡೆಯಬೇಕು. ಸಿದ್ಧತೆ ಯಿಲ್ಲದೆ ನಡೆಸುತ್ತಿರುವ ಕಾರ್ಯ ಈಜುವುದಕ್ಕೆ ಬರದೆ ನೀರಿಗೆ ಬಿದ್ದವನ ಕಾರ್ಯವನ್ನು ಹೋಲು ತ್ತದೆ. ಇದನ್ನು ನೆನಪಿನಲ್ಲಿಟ್ಟು ಅನೇಕ ಯುವಕರು ಮುಂದೆ ಬರಲೆಂದು ವಿನಯದಿಂದ ಕಾರ್ಯ ಕ್ರಮದ ಮಾರ್ಗವನ್ನು ಅರಿತುಕೊಳ್ಳಲೆಂದು 'ನುಡಿ' ಹಾರೈಸುತ್ತದೆ. ಅಲ್ಲದೆ 'ನುಡಿ'ಯು ಕೆಲಸದಲ್ಲಿ ಪರಸ್ಪರ ಸೌಹಾರ್ದವನ್ನು ಬೆಳೆಸಿಕೊಳ್ಳಲೆಂದು ಅಪೇಕ್ಷಿಸುತ್ತದೆ.

ಕನ್ನಡ ಲೇಖಕಿಯರ ಸಂಘದ ಆರಂಭೋತ್ಸವ

ತಾ. ೧೬-೪-೬೭ರಂದು ಚಿತ್ರ ಕಲಾವಿದರ ಸಾಹಿತ್ಯ ವಿಭಾಗದ ಅಂಗವಾಗಿ ಕನ್ನಡ ಲೇಖಕಿಯರ ಸಂಘದ ಆರಂಭೋತ್ಸವ ಶ್ರೀ ಎಂ. ಆರ್. ಲಕ್ಷ್ಮಮ್ಮನವರಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನೆರವೇರಿತು.

ಅಧ್ಯಕ್ಷೆ ಸುನೀತಿ ಕೃಷ್ಣಸ್ವಾಮಿ ಲೇಖಕಿಯರ ಸಂಘಟನೆ, ವಿಚಾರ ವಿನಿಮಯ, ಲೇಖಕಿಯರ ಸಮ್ಮೇಳನ ಮುಂತಾದ ಸಂಘದ ಉದ್ದೇಶಗಳನ್ನು ವಿವರಿಸಿದರು. ಎಂ. ಕೆ. ಉಷಾದೇವಿ ಅವರಿಂದ ಸ್ವಾಗತವಾಯಿತು.

ಸಭೆಗೆ ಆಗಮಿಸಿದ್ದ ಜನಪ್ರಿಯ ಲೇಖಕಿಯರಾದ ಎಂ.ಕೆ. ಇಂದಿರಾ, ಟಿ. ಸುನಂದಮ್ಮ, ಎಂ. ಸಿ. ಪದ್ಮ, ಪ್ರೇಮಾ ಭಟ್, ಸಾವಿತ್ರಿದೇವಿ ನಾಯಿಡು ಮುಂತಾದ ಲೇಖಕಕಿಯರನ್ನೂ—ಕಿರಿಯ ಲೇಖಕಿಯರ ತಂಡವನ್ನೂ ಶ್ರೀಮತಿ ಕುಸುಮಾ ಪರಿಚಯ ಮಾಡಿಕೊಟ್ಟರು. ಶ್ರೀಮತಿ ವಾಣಿ, ಆರ್ಯಾಂಬ ಪಟ್ಟಾಭಿ, ಹೆಚ್. ವಿ. ಸಾವಿತ್ರಮ್ಮ, ನೀಳಾದೇವಿ ಮುಂತಾದ ಸದಸ್ಯ ಲೇಖಕಿಯರ ಸಂದೇಶವನ್ನು ಹೊತ್ತ ಪ್ರಕಟನೆ ಹಂಚಲಾಯಿತು.

ಇಂತಹ ಸಂಘದ ಅವಶ್ಯಕತೆ ಒತ್ತಿ ಹೇಳಿದ ಶ್ರೀಮತಿ ಲಕ್ಷ್ಮಮ್ಮನವರು ನಿಜಕ್ಕೂ ಇದೊಂದು ಮಹತ್ವದ ದಿನ ಲೇಖಕಿಯರ ಪಾಲಿಗೆ ಎಂದು ಹೇಳಿ ಮಹಿಳೆಯರ ಸಾಹಿತ್ಯ ಸೇವೆ ಸ್ಮರಿಸಿ-ಲೇಖಕಿಯರಿಗೆ ಹೆಚು ಪ್ರಾತಿನಿಧ್ಯ, ಪ್ರೋತ್ಸಾಹ ಅಗತ್ಯ ಎಂದರು.

ಎಂ. ಕೆ. ಉಷಾದೇವಿ, ಮನೋರಮಾ ಅವರ ಕವನಗಳ ವಾಚನವಾಯಿತು. ಇಂತಹ ಸಂಘದ ಆರಂಭಕ್ಕೆ ಪ್ರೋತ್ಸಾಹ ನೀಡಿದ ಎಲ್ಲ ಪತ್ರಿಕೋದ್ಯೋಗಿಗಳನ್ನೂ-ಲೇಖಕಿಯರಿನ್ನೂ ಸಂಚಾಲಕಿ ಹೆಚ್. ಆರ್. ಇಂದಿರಾ ವಂದಿಸಿದರು.

ಆನಂತರ 'ಪ್ರತಿಭಾನ್ವಿತೆ' ಎಂಬ ನಾಟಕ ಪ್ರದರ್ಶನವಾಯಿತು. ಲೇಖಕಿಯರು ಅಭಿನಯಿಸಿದ ಈ ನಾಟಕ ಲೇಖಕಿಯರಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಇಂದಿರಾ ಅವರ ಈ ನಾಟಕದಲ್ಲಿ ವಿಜಯಲಕ್ಷ್ಮಿ, ಸರಸ್ವತಿ, ಗೌರಿ, ಶ್ರೀದೇವಿ ಉತ್ತಮ ಅಭಿನಯ ನೀಡಿದರು.

ಸಮಾರಂಭಕ್ಕೆ ಶ್ರೀ ಜಿ. ಪಿ. ರಾಜರತ್ನಂ, ಟಿ.ಟಿ. ಶರ್ಮ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರು ಆಗಮಿಸಿದ್ದರು.


ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು

		ರೂ. ಪೈ
೧.	ಕನ್ನಡದ ಬಾವುಟ (ಐದನೆಯ ಮುದ್ರಣ ೧೯೫೮)	೨=೦೦
೨.	ಸೀತಾ ಪರಿತ್ಯಾಗ (ಜೈಮಿನಿ ಭಾರತದಿಂದ ೧೯೬೧)	೦=೬೫
೩.	ಜೇಮ್ಸ್ ಏಬ್ರಹಾಮ್ ಗಾರ್ಫೀಲ್ಡನ ಚರಿತ್ರೆ : ಕ್ಯಾಲಿಕೋ ಪ್ರತಿ (೧೯೩೦)	೧=೫೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ (೧೯೩೮)	೧=೦೦
೪.	ಜ್ಯೋತಿರ್ವಿನೋದಿನಿ (೧೯೩೧)	೨=೦೦
೫.	ಹೂಮಾಲೆ (೧೯೪೩)	೦=೬೩
೬.	ಕನ್ನಡ ನಾಡಿನ ಚರಿತ್ರೆ: ಭಾಗ ೧	
	,, ಭಾಗ ೨ (ಎರಡನೆಯ ಮುದ್ರಣ ಅಚ್ಚಿನಲ್ಲಿದೆ)	೨=೦೦
	,, ಭಾಗ ೩ (,, ೧೯೫೯)	೧=೨೫
೭.	ಸರ್ವೋದಯ (೧೯೪೯)	೦=೩೨
೮.	ಸಂಕಲನ (೧೯೪೯)	೦=೬೩
೯.	ಅರುಂಧತಿ (೧೯೫೧)	೦=೨೫
೧೦.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ ೧೯೫೨)	೨=೦೦
೧೧.	ಹರಿದಾಸ ಸಾಹಿತ್ಯ–ಇಂಗ್ಲಿಷ್ ಉಪೋದ್ಘಾತದೊಡನೆ (೧೯೫೨)	೧೦=೦೦
೧೨.	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ (೧೯೫೨)	೮=೦೦
೧೩.	ಗಾಳಿಯಲ್ಲಿನ ಅಗೋಚರ ಶತ್ರುಗಳು (೧೯೫೪)	೧=೨೫
೧೪.	ನಕ್ಷತ್ರದರ್ಶನ (೧೯೫೪)	೧=೫೦
೧೫.	ಹರಿದಾಸ ಕೃತಿಮಂಜರಿ (೧೯೫೫)	೧=೨೫
೧೬.	ಪ್ಲೇಟೋವಿನ ಆದರ್ಶರಾಜ್ಯ (೧೯೫೬)	೧=೩೮
೧೭.	ವಾಚನ ಕಾವ್ಯಮಂಜರಿ (೧೯೫೫)	೦=೧೯
೧೮.	ಚೇರಮ ಕಾವ್ಯಂ (೧೯೫೬)	೨=೦೦
೧೯.	ಅನುಭವ ಮುಕುರಂ (೧೯೫೬)	೦=೩೮
೨೦.	ಆಧುನಿಕ ಗದ್ಯ ಸಾಹಿತ್ಯ (ಎರಡನೆಯ ಮುದ್ರಣ ೧೯೬೧)	೨=೫೦
೨೧.	ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ ೧೯೫೮)	೪=೦೦
೨೨.	ಕಾದಂಬರಿ–ಸಾಮಾನ್ಯ ಮನುಷ್ಯ (೧೯೫೭)	೧=೦೦
೨೩.	ಉದ್ಭಟದೇವ ಚರಿತೆ (೧೯೫೭)	೧=೫೦
೨೪.	ತ್ರಿಪುರದಹನ ಸಾಂಗತ್ಯ (೧೯೫೯)	೦=೭೫
೨೫.	ಮೂರು ಸ್ಪರ್ಧಾ ನಾಟಕಗಳು (೧೯೫೯)	೨=೭೫
೨೬.	ಕಾವ್ಯ ಸೌರಭ (೧೯೬೨)	೨=೦೦
೨೭.	**ಕರ್ಣಾಟಕ ಕವಿಚರಿತೆ (೧ನೆ ಭಾಗ) ....**	**೧೨=೦೦**
	,, ,, ಲೈಬ್ರರಿ ಪ್ರತಿಗಳು	**೧೫=೦೦**
೨೮.	ಕಾವ್ಯಗಾಯನ ಕಲಾ ಸಂಗ್ರಹ	೧=೨೫

ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆ ವಿನಾ ಮಿಕ್ಕೆಲ್ಲ ಪುಸ್ತಕಗಳಿಗೆ ಶೇ. 25ರಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

Reg. No. B. G. 4—June-July 1967
Licensed to Post without pre-payment, Licence No 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೮

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಚಪ್ಪ

ಆಗಸ್ಟ್ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ.

ಬೆಂಗಳೂರು-೧೮

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ-ಕನ್ನಡ ನಿಘಂಟು

ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ "ಕನ್ನಡ ನಿಘಂಟು" ಡೆಮ್ಮಿ ಚತುಷ್ಪತ್ರ ಆಕಾರದ ಸುಮಾರು ೫,೦೦೦ ಪುಟಗಳನ್ನು ಒಳಗೊಂಡು, ಒಂದೊಂದು ಸಂಪುಟದಲ್ಲೂ ಸುಮಾರು ೧೨೫೦ ಪುಟಗಳಿರುವ ನಾಲ್ಕು ಸಂಪುಟಗಳಲ್ಲಿ (Volumes) ಪ್ರಕಟವಾಗುವಂತೆ ಏರ್ಪಡಿಸಿದ್ದು ಮೊದಲ ಸಂಪುಟದ ಎರಡನೆಯ ಸಂಚಿಕೆ ಈಗಾಗಲೇ ಪ್ರಕಟವಾಗಿದೆ.

ನಿಘಂಟಿನ ಒಟ್ಟು ಬೆಲೆ ೧೨೦ ರೂಪಾಯಿಗಳು; ಮುಂಗಡವಾಗಿ ಹಣ ಸಲ್ಲಿಸುವ ಗ್ರಾಹಕರಿಗೆ ೧೦೦ ರೂಪಾಯಿಗಳ ರಿಯಾಯಿತಿ ದರದಲ್ಲಿ ಅದನ್ನು ಒದಗಿಸಲಾಗುತ್ತದೆ. ನಿಘಂಟು ಸಿದ್ಧವಾದಂತೆಲ್ಲ ೯೬ ಪುಟಗಳುಳ್ಳ ಸಂಚಿಕೆಗಳ (Fascicules) ರೂಪದಲ್ಲಿ ಅದನ್ನು ಮುಂಗಡವಾಗಿ ೧೦೦ ರೂಪಾಯಿಗಳ ರಿಯಾಯಿತಿಯ ಬೆಲೆಯನ್ನು ಸಲ್ಲಿಸಿರುವ ಗ್ರಾಹಕರಿಗೆ ತಲುಪಿಸಲಾಗುವುದು. ಮುಂಗಡ ಹಣ ನೂರು ರೂಪಾಯಿಗಳನ್ನು ಹತ್ತು ರೂ.ಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಪಾವತಿ ಮಾಡಬಹುದು. ಆದರೆ ಪೂರ್ತ ಹಣ ಸಂದಾಯವಾಗುವವರೆಗೆ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ.

ನಿಘಂಟಿನ ಎರಡನೆಯ ಸಂಪುಟವು ಪ್ರಕಟವಾದ ಕೂಡಲೆ **ರಿಯಾಯಿತಿಯ ದರದಲ್ಲಿ** ಅದನ್ನು ವಿಕ್ರಯಿಸುವುದನ್ನು ನಿಲ್ಲಿಸಲಾಗುತ್ತದೆ; ಆ ಮುಂದೆ ಪೂರ್ಣವಾದ ಬೆಲೆಯನ್ನು ಕೊಡಬೇಕಾಗುತ್ತದೆ.

ನಿಘಂಟಿನ ಒಂದು ಸಂಪುಟವು ಸಿದ್ಧವಾದ ಬಳಿಕ ಅದರ ರಕ್ಷಾಕವಚವನ್ನು (Binding Case) ಮುಂಗಡವಾಗಿ ಬೆಲೆ ಸಲ್ಲಿಸಿರುವ ಗ್ರಾಹಕರಿಗೆ ಉಚಿತವಾಗಿ ಒದಗಿಸಲಾಗುವುದು.

ಸಂಚಿಕೆಗಳನ್ನೂ ರಕ್ಷಾಕವಚಗಳನ್ನೂ ಕಳಿಸಲು ಅಂಚೆವೆಚ್ಚವನ್ನು ಗ್ರಾಹಕರೇ ಸಲ್ಲಿಸತಕ್ಕದ್ದು.

ಗ್ರಾಹಕರು ಮುಂಗಡ ಬೆಲೆಯ ಜೊತೆಗೆ ಹತ್ತು ರೂಪಾಯಿಗಳನ್ನು ಅಂಚೆವೆಚ್ಚ, ರವಾನೆ ವೆಚ್ಚಗಳಿಗಾಗಿ ಸಲ್ಲಿಸಬೇಕು. ಸಂಚಿಕೆಗಳನ್ನು "ರಿಜಿಸ್ಟರ್ಡ್ ಪೋಸ್ಟ್" ಮೂಲಕ ಕಳಿಸಬೇಕೆಂದು ಗ್ರಾಹಕರು ಅಪೇಕ್ಷಿಸಿದಲ್ಲಿ ಆ ವಿಷಯವನ್ನು ಅವರು ಲಿಖಿತರೂಪದಲ್ಲಿ ಮೊದಲೇ ತಿಳಿಸಬೇಕು. ಹಾಗೆ ಮಾಡದಿದ್ದರೆ ಸಂಚಿಕೆಗಳನ್ನು "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಸಮೇತವಾಗಿ ಸಾದಾ ಟಪಾಲಿನ ಮೂಲಕ ಕಳಿಸಲಾಗುವುದು. ಸಂಚಿಕೆಗಳನ್ನು ಪರಿಷತ್ತಿನ ಕಚೇರಿಯಲ್ಲೇ ತೆಗೆದುಕೊಳ್ಳಲು ಅಪೇಕ್ಷಿಸುವವರು ಮುಂಚಿತವಾಗಿ ತಿಳಿಸಿ ಆ ರೀತಿ ಮಾಡಬಹುದು; ಅಂಥವರು ಅಂಚೆವೆಚ್ಚವನ್ನು ಕೊಡಬೇಕಾಗುವುದಿಲ್ಲ.

ನಿಘಂಟಿನ ಬಿಡಿಸಂಚಿಕೆಗಳನ್ನು ಪ್ರತಿ ಒಂದಕ್ಕೆ **ನಾಲ್ಕು** ರೂಪಾಯಿಗಳಂತೆ ಪಡೆಯಬಹುದು.

ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

ಈ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ವ್ಯವಹಾರ ಮಾಡಬಹುದು.

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಆಗಸ್ಟ್ ೧೯೬೭

ಸಂಪುಟ : ೩೦

ಸಂಚಿಕೆ : ೮

ಈ ಸಂಚಿಕೆಯಲ್ಲಿ...

ಸಂಪ್ರೀತಿ ದೀಪ್ತಿ

ಎತ್ತಿತ್ತು ಪಾರ್ಥಸಾರಥಿ ನಿನ್ನ ದಿವ್ಯ ಚಾವಟಿಯು,
ತತ್ತರಿಪ ಕುದುರೆಗಳ ಜಡಿದು ಝಂಕಿಸಲಲ್ಲ!
ಮತ್ತರಥಿಕನು ನಾನು! ಹಯಕೇಕೆ ಶಿಕ್ಷೆಯುಪಾಯ?
ಹತ್ತಿಕ್ಕು ಮುರಿದೆನ್ನೀ ಮುರುಕು ಬಿಲ್ಲ.

ಎಡೆಬಿಡದೆ ಹೊಡೆದು ಮಾಡೆನ್ನ ಮುಖಭಂಗ;
ತೊಡೆದುಬಿಡು ಮಮಕಾರ ಕೆಡಹಿ ಗರ್ವದ ಶೃಂಗ!
ಒಡಲಲಿಯಾಸೆಗಳನೆಲ್ಲ ಮಾಡು ಬಹಿರಂಗ.
ಪಿಡುಗೆನ್ನಲಾರೆ ನಾ ನಿನ್ನೀಘಾತತರಂಗ.

ಬೀಗಿ ಬಿರಿಯುತಿದೆ ಕುರುಡು ಸ್ವಾರ್ಥ,
ಸಾಗುತಿದೆ ಮೋಹ ಮತ್ಸರಗಳ ಅನರ್ಥ.
ಹಾಗ ಮುಪ್ಪಾಗ ವೈ ತತ್ವತರ್ಕದ ಅರ್ಥ!
ಮಾಗತಿದೆ ಕರ್ಮಫಲ ಶರಣಾಗದೆಲ್ಲ ವ್ಯರ್ಥ.

ಅರಿತರಿತೆ! ನನ್ನತನವಳಿಯುವುದೆ ಸಾಯುಜ್ಯಪ್ರಾಪ್ತಿ.
ಹರಿ! ನಿನ್ನ ಶಾಸ್ತಿಯಲೆ ಕಾಂಬೆ ಸಂಪ್ರೀತಿ ದೀಪ್ತಿ.

ದಾಮೋದರ ಬಾಳಿಗ

ಸ್ವಾತಂತ್ರ್ಯದ ಪಿಳ್ಳೆಗಳು

•

ಜಿ. ಎಸ್. ಸಿದ್ಧಲಿಂಗಯ್ಯ

೧

ಪಡುವದಿಕ್ಕಿನಿಂದಲೇನೆ
ದೊಡ್ಡಬ್ಬರ ಮೊಳಗಿತಲ್ಲ
ಸ್ವಾತಂತ್ರ್ಯದ ತೂರ್ಯ,
ಸಿಕ್ಕಿತು ಸ್ವಾತಂತ್ರ್ಯ.
ನಮ್ಮದೆ ನೆಲ ನಮ್ಮದೆ ಜಲ
ಕೇಳುವದೊಣೆನಾಯ್ಕರಾರು ?
ನಮ್ಮ ಹೆಂಡ ನಮ್ಮ ಬುರುಡೆ
ಸಿಕ್ಕಿತು ಸ್ವಾತಂತ್ರ್ಯ.
ರಾಜಕೀಯ ಸ್ವಾತಂತ್ರ್ಯ
ಮಾತಿನ ಸ್ವಾತಂತ್ರ್ಯ
ಚಳುವಳಿ ಸ್ವಾತಂತ್ರ್ಯ
ಎಲ್ಲಾ ಸ್ವಾತಂತ್ರ್ಯ.

೨

ಸೂತ್ರಧಾರ ಚುಕ್ಕಾಣಿ
ಹುಟ್ಟು ಗಿಟ್ಟು ನಿಲುಗುಂಡು
ಎಲ್ಲ ಕಳಚಿ ಹಬ್ಬವೀಗ,
ಜೊಂಪೇರಿದ ಕೈ ಕಾಲಿಗೆ
ತೊಂಡಲೆಯುವ ತೀಟೆ
ಮರಜಡವಾಗಿದ್ದ ಮೈಗೆ
ಚುರುಕಾಗೋಡಾಡುವಾಸೆ
ಬಾನುದ್ದಕು ನೆಗೆಯಬೇಕು
ಕಡಲುದ್ದಕು ಹಾರಬೇಕು
ಕುಣಿಯಬೇಕು ಕೋತಿಯಂತೆ
ತಿನ್ನಬೇಕು ಹಂದಿಯಂತೆ
ಹರಟಬೇಕು ಗಿಳಿ ಹಾಗೆಯೆ
ಮೈಮನಸನು ತಲೆಯನೂ
ಗಾಳಿಗೇ ತೂರಬೇಕು
ಹಾಗೇ ಹಾರಾಡಬೇಕು
ಸಿಕ್ಕಿತು ಸ್ವಾತಂತ್ರ್ಯ.

೩

ಪುಸ್ತಕ ಭಂಡಾರ ಖಾಲಿ
ಕಲಾಗಿಲಾ ಕ್ಷೇತ್ರ ಖಾಲಿ
ಆಟದ ಮೈದಾನವೂ
ಮನೆ ಗುಡಿ ಮಠ ಎಲ್ಲವೂ
ಶುಷ್ಕ ಶೂನ್ಯ ಖಾಲಿ ಖಾಲಿ.

೪

ಕೂತು ಕೂತು ಓದಿ ಓದಿ
ಕೂಚುಭಟ್ಟರಾಗಲಿಲ್ಲ.
ಕಲಿಯಲಿಲ್ಲ ಸರಿಬಿಡಿ ಅದ.
ಕೊಳ್ಳೆಹೋದುದೇನು ಹೇಳಿ ?
ಅವರಿವರಿತಿಹಾಸ ಬೇಕೆ
ಹೊಸತಾರೆಯ ಪತ್ರೆ ಬೇಕೆ
ಹಿಡಿಯಿರಿವರ ಪಾದಗಳನು
ಡ್ಯಾನ್ಸು ಸಿನೆಮ ಇಸ್ಪೀಟು
ಇನ್ನೇನಿದೆ ಹೊಸ ಹೊಸ ಕಲೆ
ದುಂಬಿಯಂತೆ ಚುರುಕಿವರು
ಇವರಭಿನವ ಬ್ರಹ್ಮರು.
ಬಾಯಲ್ಲಿಯೆ ಹೋಮ ಧೂಮ
ಭಾಷಣಗಳೊ ಅಮಮಮಮಾ !

ಒಬ್ಬೊಬ್ಬನು ರೋಮಿಯೋ
ಒಬ್ಬೊಬ್ಬಳು ಜೂಲಿಯಟ್ಟು
(ಸಾಯಬೇಕು ಏಲಿಯಟ್ಟು!)
ಕೌಪೀನದ ನಚೀಕೇತ
ಇವರ ಮುಂದೆ ಓತಿಕ್ಯಾತ
ಅವನಾವನು ಸತ್ಯಕಾಮ
  ಇಲ್ಲಿಗೊ ನವಕಾಮ.
ನಾಲಗೆ ಬಲ ಅಲಲಲಲಾ
ಸರಸ್ವತಿಯು ಮೂಕಿಯು.
ಷೇಕ್ಸ್‌ಪಿಯರು ಬೇಂದ್ರೆ ಗೀಂದ್ರೆ
ಹಳಸಲು ಕಸ ಗೊಬ್ಬರ
ಸ್ವಾತಂತ್ರ್ಯದ ಹೊಸ ಭರತ
ಸಿಂಹದಮರಿ ಹಲ್ಲನೆಳೆದ
ಹುಡುಗನಿದ್ದ; ಈಗಿಲ್ಲವೆ
ಅಪ್ಪನ ಹಲ್ಲನ್ನೆ ಕಿರಿಸಿ
  ನಕ್ಕು ನಲಿಯುವವರು
  ತಾವು ಕಿರಿಯುವವರು
ಈ ವಯಸಿಗೆ ಎಂಥ ಶಕ್ತಿ
  ಎಲ್ಲವು ಬೇಕು
ಯಾವುದಕ್ಕು ಅಂಜರಿವರು
ಯಾವುದಕ್ಕು ಅಂಟರು.
ತಂದೆಯಂತೆ ಮಕ್ಕಳಂತೆ
ಗಾದೆ ನಿಜವೆ ಇರಬಹುದು
ಹಗಲಿರುಳೂ ಎಂಥ ಚುರುಕು
ಆ ಹೆಗಲಿಗೆ ಟ್ರಾನ್ಸಿಸ್ಟರು
ಈ ಹೆಗಲಿಗೆ ಕ್ಯಾಮರಾ
ತೂಗಿಕೊಂಡು ಬೀಗಿಕೊಂಡು
ಹುಡುಕುತ್ತಲೆ ಇರುವವರು :

ಅಲ್ಲಾ ಉದ್ದೀನನ
ಮಂತ್ರದೊಂದು ದೀಪವನ್ನೊ
ಮಂತ್ರದ ಒಂದುಂಗುರವನೊ
ಮೂಲೆ ಹಿಡಿದ ಅರಸುಗುವರಿ
ಇಲ್ಲ, ಒಂದು ಪಟ್ಟದಾನೆ
ಸೇಸಮ್ಮಾ ಎಂದೊಡನೆಯೆ
ತೆರೆದು ಬರುವ ಸ್ವರ್ಣದ್ವಾರ?
ಮರವ ಹತ್ತಿ ಬುಡಕಡಿದನ
ನಾಲಗೆಯಲಿ ವರಬಿತ್ತಿದ
ಕಾಳಿಗಾಗಿ—ಹುಡುಕುತಿಹರು.
ದಿನವಿಡಿ ಅದೆ ಚಟುವಟಿಕೆ.
  ಗಿಜಿಬಿಜಿಗಿಜಿ ಸಂಭ್ರಮ.
ಹೆಂಟೆಯಾಗಿ ಹುಂಜವಾಗಿ
ಹುಡುಕುತ್ತಲೆ ಇರುವವರು
ನಮ್ಮದೆಲ್ಲ ಹಳೆಕಾಲ್ಲ
ಈಗಿನದಿದು ಬಿಡುಗಡೆತಳಿ
ಹತ್ತುದಿಕ್ಕಿಗೂನೆ ಕೈ
ಹತ್ತೂಕಡೆ ಹರಿದ ಮೈ
ಮುದಿಗೂಬೆಗು ಚಪಲ ಹಿಡಿಸಿ
ಜೊಲ್ಲುಗರೆವ ಮೋಡಿ ಹಾಕಿ
ಹೊಸ ಸುಖಗಳ ಹುಡುಕಿ ಹುಡುಕಿ
ಹೊಸ ದೃಷ್ಟಿಯೆ ಮೆರೆದಿದೆ
ನಮಗೆ ತಿಳಿಯದಿದ್ದರೇನು
ಸ್ವಾತಂತ್ರ್ಯದ ಪೀಳಿಗೆಯಿದು
  ಜೈ ಜೈ ಜೈ.

ಶ್ರವಣಬೆಳುಗೊಳದ ಕವಿಮೇಳದಲ್ಲಿ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಓದಿದ ಕವಿತೆ.

ಉಪಮಾ ಕಾಳಿದಾಸಸ್ಯ

ಟಿ. ಕೇಶವ ಭಟ್ಟ

ಕಾಳಿದಾಸನು ಸಂಸ್ಕೃತ ಮಹಾಕವಿಗಳ ಮಕುಟಮಣಿ. ಅವನಿಗೆ ಮಣಿಯದ ಕವಿಗಳಿಲ್ಲ, ಅವನ ಕಾವ್ಯಗಳನ್ನು ಲಕ್ಷ್ಯವಿಟ್ಟುಕೊಳ್ಳದ ಲಾಕ್ಷಣಿಕರಿಲ್ಲ, ಹೊಗಳದ ವಿಮರ್ಶಕರೂ ಇಲ್ಲ. ಕಾಳಿದಾಸನು ಸ್ವತಃ ತನ್ನ ದೇಶಕಾಲಾದಿಗಳನ್ನು ಹೇಳದಿರುವುದರಿಂದ ಇವಿನ್ನೂ "ಇದಮಿತ್ಥಂ" ಎಂಬಲ್ಲಿಗೆ ತಲಪಿಲ್ಲ. ಅವನ ಕಾಲನಿರ್ಣಯದ ಚರ್ಚೆ ಕ್ರಿಸ್ತಪೂರ್ವ ಎರಡನೆ ಶತಮಾನದಿಂದ ಈಚೆಗೆ ಕ್ರಿಸ್ತಶಕ ಆರನೆ ಶತಮಾನದವರೆಗೂ ಉದ್ದವರಿಯುತ್ತದೆ. ಆತನು ವಿಕ್ರಮಾದಿತ್ಯನ ಆಸ್ಥಾನದಲ್ಲಿ ಇದ್ದನೆಂಬ ಆಧಾರದಿಂದ, ಆ ವಿಕ್ರಮಾದಿತ್ಯನು ಎರಡನೆ ಚಂದ್ರಗುಪ್ತನಿರಬೇಕೆಂಬ ಊಹೆಯಿಂದ, ನಾಲ್ಕನೆ ಶತಮಾನದ ಕೊನೆಯ ಭಾಗವೇ ಕಾಳಿದಾಸನ ಕಾಲವಿರಬಹುದೆಂಬುದಕ್ಕೆ ಬೆಂಬಲ ಹೆಚ್ಚಾಗಿದೆ. ಕ್ರಿಸ್ತಶಕ ಏಳನೆಯ ಶತಮಾನದ ಐಹೊಳೆಯ ಶಾಸನಕವಿ "ರವಿಕೀರ್ತಿ" ಕಾಳಿದಾಸನನ್ನು ಹೊಗಳಿದ್ದಾನೆ. ಅದೇ ಶತಮಾನದ ಬಾಣಭಟ್ಟನು ತನ್ನ ಹರ್ಷಚರಿತೆಯಲ್ಲಿ ಕಾಳಿದಾಸನ ಸೂಕ್ತಿಗಳನ್ನು ಪ್ರಶಂಸಿಸಿದ್ದಾನೆ. ಕಾಳಿದಾಸನು ಅದ್ವಿತೀಯ ಕವಿ-ಎಂದು ಸುಭಾಷಿತವೊಂದು ಹೀಗೆ ಸಾರುತ್ತದೆ—

> ಪುರಾ ಕವೀನಾಂ ಗಣನಾ ಪ್ರಸಂಗೇ
> ಕನಿಷ್ಠಿಕಾಧಿಷ್ಠಿತ ಕಾಳಿದಾಸಾ
> ಅದ್ಯಾಪಿ ತತ್ತುಲ್ಯಕವೇರಭಾವಾ
> ದನಾಮಿಕಾ ಸಾರ್ಥವತೀ ಬಭೂವ ||

ಹಿಂದೆ, ಕವಿಗಳನ್ನು ಲೆಕ್ಕಮಾಡುತ್ತ ಮೊದಲಾಗಿ ಕಿರುಬೆರಳಿಗೆ ಕಾಳಿದಾಸನ ಹೆಸರನ್ನೆತ್ತಿಕೊಂಡರಂತೆ. ಅವನಿಗೆ ಎಣೆಯೆನಿಸುವ ಬೇರೆ ಕವಿಗಳೇ ಇಲ್ಲದುದರಿಂದ ಎಣಿಕೆ ಅಲ್ಲಿಗೇ ನಿಂತಿತು. ಆ ಎರಡನೆ ಬೆರಳು "ಅನಾಮಿಕಾ" ಅಂದರೆ, "ಹೆಸರಿಲ್ಲದುದು" ಎಂಬ ಅರ್ಥ ಬರುವ ಬೆರಳಾಯಿತು. ಕಾಳಿದಾಸನನ್ನು ಗೀತಗೋವಿಂದ ಕರ್ತೃ ಜಯದೇವನು "ಕವಿಕುಲಗುರು" ಎಂದು ಕರೆದಿದ್ದಾನೆ.

ಕಾಳಿದಾಸನ ಹೆಸರಲ್ಲಿ ರಚಿತವಾಗಿರುವ ಗ್ರಂಥಗಳು ಸುಮಾರು ನಲವತ್ತಕ್ಕೂ ಮಿಕ್ಕಿವೆ. ಆದರೆ ನಿಸ್ಸಂದಿಗ್ಧವಾಗಿ ಕಾಳಿದಾಸನವೇ - ಎನಿಸತಕ್ಕವು - ಮೇಘದೂತ, ರಘುವಂಶ, ಕುಮಾರಸಂಭವ ಎಂಬ ಮೂರು ಕಾವ್ಯಗಳು; ಮತ್ತು ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಅಭಿಜ್ಞಾನ ಶಾಕುಂತಲ - ಎಂಬೀ ಮೂರು ನಾಟಕಗಳು. ಕುಮಾರಸಂಭವ ಕಾವ್ಯದಲ್ಲಿ ಎಂಟನೆಯ ಸರ್ಗದ ಕೊನೆಗೆ ಕಾಳಿದಾನ ರಚನೆ ನಿಂತುಹೋಗಿದ್ದು, ಅಲ್ಲಿಂದ ಮುಂದಿನ ಭಾಗವು ಅನ್ಯಕರ್ತೃಕವೆಂದು ತಿಳಿದುಬರುತ್ತದೆ. ಆತನ ನಾಟಕಗಳಲ್ಲಿ "ಅಭಿಜ್ಞಾನ ಶಾಕುಂತಲ"ವು ಮೇರು ಕೃತಿಯೆನಿಸಿದೆ. ಈ ನಾಟಕದ ಪ್ರಶಸ್ತಿ ಶ್ಲೋಕವಿದು—

> ಕಾವ್ಯೇಷು ನಾಟಕಂ ರಮ್ಯಂ
> ತತ್ರ ರಮ್ಯಾ ಶಕುಂತಲಾ
> ತತ್ರಾಪಿ ಚತುರ್ಥೋಽಂಕಃ
> ತತ್ರ ಶ್ಲೋಕ ಚತುಷ್ಟಯಂ ||

"ಕಾವ್ಯಗಳಲ್ಲಿ ನಾಟಕ, ನಾಟಕಗಳಲ್ಲಿ ಶಾಕುಂತಲ, ಶಾಕುಂತಲದಲ್ಲಿ ನಾಲ್ಕನೆ ಅಂಕ, ಆ ನಾಲ್ಕನೆ ಅಂಕದಲ್ಲಿ ನಾಲ್ಕು ಪದ್ಯಗಳು-ಹೀಗೆ ಉತ್ತರೋತ್ತರವಾಗಿ ಉತ್ಕರ್ಷವಾಗಿವೆ" ಎಂದು ಇಲ್ಲಿ ಹೇಳಿದೆ. ಶಾಕುಂತಲದ ಶ್ರೇಷ್ಠತೆಗೆ ವಿದೇಶೀಯರೂ ಮೆಚ್ಚಿದ್ದಾರೆ. ಇದನ್ನು ೧೭೮೯ರಲ್ಲಿ "ಸರ್ ವಿಲ್ಲಿಯಂ ಜಾನ್ಸ್" ಎಂಬವನು ಇಂಗ್ಲಿಷಿಗೆ ಪರಿವರ್ತಿಸಿದನು. ಇಂಗ್ಲಿಷಿನಿಂದ ಇದನ್ನು 'ಫಾರ್ಸ್ಟರ್' ಎಂಬವನು ೧೭೯೧ರಲ್ಲಿ ಜರ್ಮನಿಭಾಷೆಗೆ ಮಾರ್ಪಡಿಸಿದನು. ಇದನ್ನು ಓದಿ ಮೆಚ್ಚಿದ ಜರ್ಮನಿಯ ವಿಖ್ಯಾತ ಕವಿ "ಗಯಟೆ" ಎಂಬಾತನು "ಸ್ವರ್ಗ - ಮರ್ತ್ಯಲೋಕಗಳೆರಡರ ಸಾರವೂ ಶಾಕುಂತಲದಲ್ಲಿದೆ" ಎಂದಿದ್ದಾನೆ. ಹನ್ನೆರಡನೆ ಶತಮಾನದ ಕನ್ನಡ ಕವಿ ರುದ್ರಭಟ್ಟನು "ಕಾಳಿದಾಸಂಗೆ ದಾಸರೆನಿಪರ್ ಕವಿಗಳ್" ಎಂದುಬಿಟ್ಟಿದ್ದಾನೆ. ಇಂತಹ ಮೆಚ್ಚಿಕೆಗೆ ಹೊಗಳಿಕೆಗೆ ಕಾರಣವೇನು?

ಕಾಳಿದಾಸನಲ್ಲಿ ಸಹಜವಾಗಿ ಅಪಾರ ಪ್ರತಿಭೆ, ಮಾನವೀಯ ಸ್ವಭಾವ ಪರಿಜ್ಞಾನ, ಸರಸ ಕವಿತಾ ಸಾಮರ್ಥ್ಯ ಭಾವಸ್ಪಂದನ, ಔಚಿತ್ಯಪ್ರಜ್ಞೆ, ವಿವೇಕವುಳ್ಳ ವಿದ್ವತ್ತು-ಇವೆಲ್ಲವೂ ಸೇರಿವೆ. ರಚನೆಯಂತೂ ವೈದರ್ಭೀರೀತಿಯದಾಗಿ ಇರುವುದು ಮೆಚ್ಚಿಕೆಗೆ ಒಂದು ಕಾರಣವೆನ್ನಬಹುದು "ಕಾವ್ಯವು ಅಲಂಕಾರದಿಂದ ಗ್ರಾಹ್ಯವಾಗುವುದು

(ಕಾವ್ಯಂ ಗ್ರಾಹ್ಯಮಲಂಕಾರಾತ್)-ಎಂದು ಒಬ್ಬ ಲಾಕ್ಷಣಿಕ ಹೇಳಿದ್ದರೆ, ಅಂತಹ ಅಲಂಕಾರಗಳಿಗೆಲ್ಲ ಉಪಮೆಯೇ ಮೂಲ-ಎಂದು ಹಲವರು ಲಾಕ್ಷಣಿಕರು ಒಪ್ಪಿದ್ದಾರೆ. ಅಂತಹ ಉಪಮೆಗೆ ಕಾಳಿದಾಸನದೇ ಎತ್ತಿದ ಕೈಯೆಂದು ಬಣ್ಣಿಸಿದ್ದಾರೆ. ಇದರಿಂದ "ಉಪಮಾ ಕಾಳಿದಾಸಸ್ಯ" ಎಂದು ಅವನಿಗೆ ಮಾನ್ಯತೆ ಬಂದಿದೆ.

ಕಾಳಿದಾಸನ ಉಪಮೆ ಬಹಳ ಪರಿಷ್ಕೃತವಾದುದು. ಅದರಲ್ಲಿ ಅರ್ಥವೈಶಾಲ್ಯವಿದೆ, ಭಾವಪರಿಪುಷ್ಟಿಯಿದೆ, ಔಚಿತ್ಯವಿದೆ, ಧ್ವನಿಯೂ ಇದೆ. ಇವುಗಳಿಂದ ಅಲ್ಲಿ ಬರುವ ಉಪಮೇಯ-ಉಪಮಾನಗಳ ಸಾದೃಶ್ಯವು ಮನವನ್ನು ಮುಟ್ಟುತ್ತದೆ. ಕಾಳಿದಾಸನ ಕೆಲವು ಕೃತಿಗಳ ಕೆಲವು ಉಪಮಾಲಂಕಾರ ಸಂದರ್ಭಗಳನ್ನು ಆಯ್ದು ಅವುಗಳ ವೈಶಿಷ್ಟ್ಯವನ್ನು ಸ್ವಲ್ಪ ಅವಲೋಕಿಸುವ:

'ರಘುವಂಶ' ಕಾವ್ಯವನ್ನು ಕವಿಯು—

ವಾಗರ್ಥಾವಿವ ಸಂಪೃಕ್ತೌ
ವಾಗರ್ಥ ಪ್ರತಿಪತ್ತಯೇ
ಜಗತಃ ಪಿತರೌ ವಂದೇ
ಪಾರ್ವತೀ ಪರಮೇಶ್ವರೌ

ಎಂದು ನಮಸ್ಕಾರಪೂರ್ವಕ ಪ್ರಾರಂಭಿಸಿದ್ದಾನೆ. "ಶಬ್ದ-ಅರ್ಥಗಳಂತೆ ಸೇರಿಕೊಂಡಿರುವ, ಲೋಕಕ್ಕೆ ತಾಯ್ತಂದೆಗಳಾಗಿರುವ ಪಾರ್ವತೀ ಪರಮೇಶ್ವರರನ್ನು ಶಬ್ದ-ಅರ್ಥಗಳ ಸರಿಯಾದ ತಿಳಿವಳಿಕೆಗಾಗಿ ವಂದಿಸುತ್ತೇನೆ" ಎಂಬುದು ಇಲ್ಲಿ ಅರ್ಥ. ಉಪಮಾಗರ್ಭಿತವಾದ ಈ ಮಾತಿನಲ್ಲಿ ಉಪಮೆಗೆ ಮೀರಿದ ಭಾವನೆಯನ್ನೂ ಧ್ವನಿಯನ್ನೂ ಔಚಿತ್ಯವನ್ನೂ ನಾವು ಕಾಣುತ್ತೇವೆ. ವಾಕ್ಕಿಗೂ ಅರ್ಥಕ್ಕೂ ಇರುವ ಅಭಿನ್ನತೆಯನ್ನೂ ಸಮರಸತೆಯನ್ನೂ ವ್ಯಕ್ತಪಡಿಸಲು ಇದಕ್ಕಿಂತ ಬೇರೆ ಸುಲಭದ ಒಳ್ಳೆಯ ಉಪಮೆ ಯಾವುದಿದ್ದೀತು? ಕವಿ ಇಲ್ಲಿ ಒಂದು ಹೊಸ ಸೃಷ್ಟಿಯ ಕರ್ತಾರ. ಆ ಸೃಷ್ಟಿ ಕಾವ್ಯ ಅದಕ್ಕೆ ಸಾಧನ-ಶಬ್ದ ಮತ್ತು ಅರ್ಥ-"ಶಬ್ದಾರ್ಥೌ ಸಹಿತಾ ಕಾವ್ಯಂ" ತಾನೆ? ಆದುದರಿಂದ ಅವೆರಡರ ಪರಿಜ್ಞಾನ ಕವಿಗೆ ಮೂಲಭೂತವಾದ ಆವಶ್ಯಕತೆ. ಶಬ್ದ-ಅರ್ಥಗಳಂತೆ ಸೇರಿದ್ದು, ಲೋಕಕ್ಕೆ ತಾಯಿತಂದೆಗಳಾದವರಿಗೆ ಈ ವಿಧದ ಸೃಷ್ಟಿ ಶಕ್ತಿಯ ಸಿದ್ಧಿಯನ್ನು ಕೊಡಲು ಸಾಧ್ಯವಿದೆ-ಎಂಬ ಧ್ವನಿ ಇಲ್ಲಿ ಮೂಡುತ್ತದೆ.

ಕಾಳಿದಾಸನು ಶೈವನು. ಆದುದರಿಂದ ಕಾವ್ಯಾರಂಭದಲ್ಲಿ ಶಿವಶಿವೆಯರನ್ನು ಸ್ತುತಿಸಿದ್ದಾನೆ, ನಿಜ. ಅಷ್ಟೇ ಅಲ್ಲ, ಕವಿ ಹರಿ-ಹರರಲ್ಲಿ ಭೇದವೆಣಿಸದೆ, ಇಬ್ಬರನ್ನೂ ಸಮಾನವಾಗಿ ಈ ಮಂಗಳ ಶ್ಲೋಕದಲ್ಲಿ ಸ್ತುತಿಸಿರಬಹುದೆಂದು ಎಣಿಸಲೂ ಆಸ್ಪದವಿದೆ-"ಪಾರ್ವತೀ ಪರಮೇಶ್ವರೌ" ಎಂದು ವಿಂಗಡಿಸಿ ಅರ್ಥಮಾಡಿದರೆ ಶಿವ ಮತ್ತು ವಿಷ್ಣು-ಎಂಬ ಅರ್ಥವೂ ಇಲ್ಲಿ ಹೊಮ್ಮುತ್ತದೆ. ಹರಿಹರರನ್ನೇ ಲೋಕಕ್ಕೆ ತಂದೆಗಳು-ಎಂದು ಕವಿ ಭಾವಿಸಿದ್ದರೆ ತಪ್ಪಲ್ಲ. "ಮಾತಾ ಚ ಪಿತಾ ಚ-ಪಿತರೌ" ಎಂಬ ವಿವರಣೆಯಂತೂ ಸರಿಯೆ. ಆದರೂ "ಪಿತರೌ" ಎಂಬ ಪುಲ್ಲಿಂಗದ ದ್ವಿವಚನ ಪ್ರಯೋಗವು ಧ್ವನಿಪೂರ್ಣವಾಗಿದೆ.

ಕಾಳಿದಾಸನು ಕವಿತಾಗರ್ವಿಯಲ್ಲ. ವಾಲ್ಮೀಕಿಯ ಮೇಲೆ ಅವನಿಗೆ ಬಹಳ ಗೌರವ. ಮುಂದೆ ಒಂದು ಶ್ಲೋಕದಲ್ಲಿ—

"ಪೂರ್ವಕವಿಗಳ ವಾಗ್ದ್ವಾರದಲ್ಲಿ ತನ್ನ ನಡೆಯು, ವಜ್ರದಿಂದ ಕೊರೆದ ರತ್ನದಲ್ಲಿ ಸೂತ್ರದ ಹಾಗೆ" ಇರುವುದೆಂದು ಉಪಮೆಯಿಂದ ತಿಳಿಸಿ, ತನ್ನ ವಿನಯ ಸೌಜನ್ಯವನ್ನೂ ವಾಲ್ಮೀಕಿ ಶಿಷ್ಯತ್ವವನ್ನೂ ಪ್ರಕಟಿಸಿದ್ದಾನೆ. ಹೀಗೆ ವಿಶೇಷವಾದ ಭಾವಾಭಿವ್ಯಕ್ತಿಯನ್ನು ಉಚಿತವರಿತು ಮಾಡಲು ಇಲ್ಲಿ ಉಪಮೆ ಕವಿಗೆ ನೆರವಾಗಿದೆ.

ಉದಾತ್ತ ವ್ಯಕ್ತಿಯನ್ನು ಚಿತ್ರಿಸುವುದರಲ್ಲಿ ಉದಾತ್ತವಾದ ಉಪಮಾನವನ್ನೂ ನಾವು ಕಾಳಿದಾಸನಲ್ಲಿ ಕಾಣುತ್ತೇವೆ. ಮನು ಮಹಾರಾಜನನ್ನು ಪ್ರಸ್ತಾಪಿಸುತ್ತ—

ವೈವಸ್ವತೋ ಮನುರ್ನಾಮ
ಮಾನನೀಯೋ ಮನೀಷಿಣಾಂ
ಆಸೀನ್ಮಹೀಕ್ಷಿತಾಮಾದ್ಯಃ
ಪ್ರಣವಶ್ಛಂದಸಾಮಿವ ||

ಎಂದರೆ, "ವೈವಸ್ವತಮನು-ವೇದಗಳಿಗೆಲ್ಲ ಓಂಕಾರವಿರುವಂತೆ, ವಿದ್ವಜ್ಜನ ಮಾನ್ಯನಾಗಿ ರಾಜರಿಗೆಲ್ಲ ಮೊದಲಿಗನಾಗಿದ್ದನು" ಎಂದಿದ್ದಾನೆ. ಇಲ್ಲಿ ವೇದ-ಪ್ರಣವಗಳ ಉಲ್ಲೇಖದಿಂದ ಪವಿತ್ರತೆ, ಶ್ರೇಷ್ಠತೆ, ಜ್ಞಾನರೂಪತೆಗಳು ಕಲ್ಪಿತವಾಗುತ್ತವೆ.

ರಘುಮಹಾರಾಜನಿಗೆ ರಾಜ್ಯಾಧಿಕಾರ ಕೈಸೇರಿದ ಸಂದರ್ಭದ ಉಪಮಾಗರ್ಭಿತ ಶ್ಲೋಕವಿದು—

ಸ ರಾಜ್ಯಂ ಗುರುಣಾ ದತ್ತಂ
ಪ್ರತಿಪದ್ಯಾಧಿಕಂ ಬಭೌ
ದಿನಾಂತೇ ನಿಹಿತಂ ತೇಜಃ
ಸವಿತ್ರೇವ ಹುತಾಶನಃ ||

"ತಂದೆಯಿಂದ ರಾಜ್ಯವನ್ನು ಪಡೆದ ರಘು ಸಾಯಂಕಾಲದಲ್ಲಿ ಸೂರ್ಯನಿಂದ ತೇಜಸ್ಸನ್ನು ಪಡೆದ ಅಗ್ನಿಯಂತೆ ಅಧಿಕ

ವಾಗಿ ಪ್ರಕಾಶಿಸಿದ"ನಂತೆ. ಲೌಕಿಕ ದೃಷ್ಟಿಯಿಂದ ನೋಡಿದರೆ, ಸೂರ್ಯಾಸ್ತವಾದಾಗ ಅಗ್ನಿಗೆ ತೇಜವು ಅಧಿಕವಾಗಿ ಕಾಣುವುದು ನಿಜ. ಇದಕ್ಕೆ ಸೂರ್ಯನ ಬೆಳಕು ಇಲ್ಲದಿರುವುದೇ ಕಾರಣ. "ಸೂರ್ಯಾಸ್ತದ ವೇಳೆಗೆ ಸೂರ್ಯಪ್ರಕಾಶವು ಅಗ್ನಿಯನ್ನು ಸೇರಿಕೊಳ್ಳುತ್ತದೆ"ಎಂಬುದು ಶ್ರುತಿಪ್ರಮಾಣ. ಇದೂ ಒಂದು ವಿಧದ ಕವಿಸಮಯವೆಂತಲೂ ಹೇಳಬಹುದು. ಕಾಳಿದಾಸನು ಶ್ರುತಿಪ್ರಮಾಣ್ಯದ ಉಪಮೆಯನ್ನು ಕೊಟ್ಟಿರುವುದು ಆತನ ವೇದಾನುಸರಣೆಗೆ ಸಾಕ್ಷಿಕವಾಗಿದೆ.

ಕಾಳಿದಾಸನ ಇನ್ನೊಂದು ಕಾವ್ಯವಾಗಿರುವ "ಕುಮಾರಸಂಭವ"ವನ್ನು ನೋಡಿದರೆ, ಅಲ್ಲಿಯೂ ನಾವು ಉಪಮಾಸಮೃದ್ಧಿಯನ್ನು ಕಾಣುತ್ತೇವೆ. ಕವಿ ಹಿಮಾಲಯವನ್ನು ವರ್ಣಿಸುತ್ತ, ಅದು ಅಪರಿಮಿತ ರತ್ನಗಳಿಗೆ ಉತ್ಪತ್ತಿಸ್ಥಾನವಾಗಿದೆ-ಎಂದು ಅದರ ಗುಣವನ್ನೂ ಆದರೆ ಹಿಮದಿಂದ ಆವೃತವಾಗಿದೆ-ಎಂದು ಅದರ ದೋಷವನ್ನೂ ಹೇಳುತ್ತಾನೆ. ಹಿಮದಿಂದ ಆ ಪರ್ವತದ ಸೊಬಗು ಕೆಡಲಿಲ್ಲವೆನ್ನುತ್ತಾನೆ-ಅದಕ್ಕೆ ಕಾರಣವನ್ನೂ ಕೊಡುತ್ತಾನೆ.

ಏಕೋಹಿ ದೋಷೋ ಗುಣಸನ್ನಿಪಾತೇ
ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ ||

ಅಂದರೆ, "ಅನೇಕ ಒಳ್ಳೆಯ ಗುಣಗಳಿರುವಲ್ಲಿ ಒಂದು ದೋಷವಿದ್ದರೆ, ಆ ದೋಷವು ಬೆಳ್ದಿಂಗಳಲ್ಲಿ ಚಂದ್ರಮಂಡಲದ ಕಳಂಕದಂತೆ ಮರೆಯಾಗುವುದು." ಈ ಅರ್ಥಾಂತರನ್ಯಾಸಯುಕ್ತ ಉಪಮಾಲಂಕಾರದ ಮೂಲಕ ಗುಣಗ್ರಾಹಕತೆಯ ಶ್ರೇಷ್ಠವಾದ ನೀತಿಯೊಂದನ್ನು ಕಾಳಿದಾಸನು ನಮ್ಮ ಮುಂದಿಟ್ಟಿದ್ದಾನೆ.

ಸಾಮಾನ್ಯವಾದ ಉಪಮೆಗಳನ್ನಲ್ಲದೆ, ಅಲ್ಲಲ್ಲಿ ಮಾಲೋಪಮೆಗಳನ್ನೂ ಕಾಳಿದಾಸನಲ್ಲಿ ಕಾಣಬಲ್ಲೆವು. ಹಿಮವಂತನು ತನ್ನ ಮಗಳಾದ ಪಾರ್ವತಿಯಿಂದ ಹೇಗೆ ಸುಶೋಭಿತನಾದನು-ಎಂಬಲ್ಲಿ ಮಾಲೋಪಮೆಯ ಚಿತ್ರಣವಿದು—

ಪ್ರಭಾಮಹತ್ಯಾ ಶಿಖಯೇವ ದೀಪ
ಸ್ತ್ರಿಮಾರ್ಗಯೇವ ತ್ರಿದಿವಸ್ಯ ಮಾರ್ಗಃ
ಸಂಸ್ಕಾರವತ್ಯೇವ ಗಿರಾ ಮನೀಷೀ
ತಯಾ ಸ ಪೂತಶ್ಚ ವಿಭೂಷಿತಶ್ಚ ||

ಉಜ್ವಲ ಪ್ರಕಾಶವುಳ್ಳ ಜ್ವಾಲೆಯಿಂದ ದೀಪವೂ, ಮಂದಾಕಿನಿಯಿಂದ ಸ್ವರ್ಗಮಾರ್ಗವೂ, ವ್ಯಾಕರಣಾದಿ ಸಂಸ್ಕಾರಯುಕ್ತ ವಾಣಿಯಿಂದ ವಿದ್ವಾಂಸನೂ ಪರಿಶುದ್ಧ ಮತ್ತು ಅಲಂಕಾರಯುಕ್ತ ಆಗುವಂತೆ, ಹಿಮವಂತನು ಪರಿಶುದ್ಧನೂ ಅಲಂಕಾರಯುತನೂ ಆದನು—ಎಂದಿಲ್ಲಿ ಅಭಿಪ್ರಾಯ. ಈ ಉಪಮೆಗಳಲ್ಲಿ ನಾವು ಅತಿ ಭವ್ಯ ಕಲ್ಪನೆಗಳನ್ನು ಕಾಣುತ್ತೇವೆ.

"ಮಾಲವಿಕಾಗ್ನಿಮಿತ್ರ" ನಾಟಕದಿಂದ ಉಪಮಾಲಂಕಾರಕ್ಕೆ ಒಂದು ಉದಾಹರಣೆ ಕೊಡಬಹುದು:

ಅಮಾತ್ಯನ ಮಾತಿದು:

ಅಚಿರಾಧಿಷ್ಠಿತ ರಾಜ್ಯಃ
ಶತ್ರುಃ ಪ್ರಕೃತಿಷ್ವರೂಢ ಮೂಲತ್ವಾತ್
ನವ ಸಂರೋಪಣ ಶಿಥಿಲ
ಸ್ತರುರಿವ ಸುಕರಃ ಸಮುದ್ಧರ್ತುಂ ||

"ಆಗ ತಾನೆ ನಟ್ಟಿರುವುದರಿಂದ ಬೇರು ಗಟ್ಟಿಯಾಗದೆ ಇರುವ ಮರದಂತೆ, ಆಗತಾನೇ ರಾಜ್ಯಾಧಿಕಾರಕ್ಕೆ ಬಂದಿರುವ ಶತ್ರು ತನ್ನ ಅಮಾತ್ಯಾದಿ ರಾಜ್ಯಾಂಗಗಳಲ್ಲಿ ರೂಢಮೂಲನಾಗದಿರುವುದರಿಂದ ಉತ್ಪಾಟನಕ್ಕೆ ಸುಲಭನಾಗಿರುವನು" ಇಂತಹ ಸುಯುಕ್ತಸಾದೃಶ್ಯ ವಿವರಣೆಯಿಂದ ಹೇಳಿರುವ ಸಂಗತಿ, ಮನಸ್ಸಿಗೆ ಚೆನ್ನಾಗಿ ಹತ್ತಿಕೊಳ್ಳುವುದು. ಮಾತು ಸೌಂದರ್ಯಪೂರ್ಣವಾಗಿ ಚೇತೋವಿಹಾರಿಯಾಗುವುದು. ಇಲ್ಲಿ ಉಪಮೆಯ ಮಾತಂತೂ ಇರಲಿ. ಎಂತಹ ಸಮರತಂತ್ರ! ಮತ್ತು ರಾಜನೀತಿರಹಸ್ಯ!

ಕಾಳಿದಾಸನ ಅಭಿಜ್ಞಾನ ಶಾಕುಂತಲದಲ್ಲಿ ನಾವು ಇನ್ನಷ್ಟು ಉಪಮಾನ ವೈಭವವನ್ನು ಕಾಣಬಲ್ಲೆವು. ಬೇಟೆಗೆ ಬಂದ ದುಷ್ಯಂತನು ಶಕುಂತಳೆಯಲ್ಲಿ ಆಸಕ್ತವಾದ ತನ್ನ ಮನಸ್ಥಿತಿಯನ್ನು ಹೀಗೆ ಹೇಳಿಕೊಳ್ಳುವನು.

ಗಚ್ಛತಿ ಪುರಶ್ಶರೀರಂ
ಧಾವತಿ ಪಶ್ಚಾದಸಂಸ್ಥಿತಂ ಚೇತಃ
ಚೀನಾಂಶುಕಮಿವ ಕೇತೋಃ
ಪ್ರತಿವಾತಂ ನೀಯಮಾನಸ್ಯ ||

ಗಾಳಿಗೆದುರಾಗಿ ಕೊಂಡೊಯ್ಯುವ ಧ್ವಜದ ಸ್ತಂಭವು ಮುಂದೆ ಹೋಗುತ್ತಿರುವುದು. ಆಗ ಧ್ವಜದ ವಸ್ತ್ರವು ಅಸ್ಥಿರವಾಗಿದ್ದು ಹಿಂದಕ್ಕೆ ಹೋಗುವುದು. ಹಾಗೆಯೇ ನನ್ನ ಶರೀರವು ಮುಂದೆ ಹೋಗುತ್ತಿದೆ. ಆದರೆ ಮನಸ್ಸು ಹಿಂದಕ್ಕೆ ಓಡುತ್ತಿದೆ. ಈ ಸಾದೃಶ್ಯದಿಂದ ದುಷ್ಯಂತನ ಆಗಿನ ಮನಃಸ್ಥಿತಿಯ ನೈಜಚಿತ್ರವು ಕಣ್ಣಿಗೆ ಕಟ್ಟುತ್ತದೆ.

ದುಷ್ಯಂತನನ್ನು ಶ್ಲೇಷೆಯಿಂದ ಆನೆಗೆ ಹೋಲಿಸಿರುವ ಪದ್ಯವಿದು :

ಅನವರತ ಧನುರ್ಜ್ಯಾಸ್ಫಾಲನ ಕ್ರೂರಪೂರ್ವಂ
ರವಿಕಿರಣಸಹಿಷ್ಣುಃ ಸ್ವೇದಲೇಶೈರಭಿನ್ನಂ
ಅಪಚಿತಮಪಿಗಾತ್ರಂ ವ್ಯಾಯತತ್ವಾದಲಕ್ಷ್ಯಂ
ಗಿರಿಚರ ಇವ ನಾಗಃ ಪ್ರಾಣಸಾರಂ ಬಿಭರ್ತಿ ||

ರಾಜನ ಪರವಾದ ಅರ್ಥ ಹೀಗಿದೆ: "ಯಾವಾಗಲೂ ಧನುಸ್ಸಿನ ಹಗ್ಗವನ್ನೆಳೆದು ಕಠಿಣತೆಗೊಂಡ ಶರೀರದ ಮುಂಭಾಗವುಳ್ಳ, ಸೂರ್ಯನ ಬಿಸಿಲನ್ನು ಸಹಿಸತಕ್ಕವನಾದ, ಸ್ವಲ್ಪವೂ ಬೆವರದ-ಅಂದರೆ, ಶ್ರಮ ಜಯತ್ವವುಳ್ಳ, ಕ್ಷೀಣ ಕಾಯನಾದರೂ ಪ್ರಕಾಂಡತ್ವದಿಂದ ಕೃಶವಾಗಿ ಕಾಣಿಸದ-ರಾಜನು ಪರ್ವತದಲ್ಲಿ ಸಂಚರಿಸುವ ಆನೆಯ ಹಾಗೆ ಬಲಿಷ್ಠನಾಗಿದ್ದಾನೆ." ಇಲ್ಲಿ "ಧನುರ್ಜ್ಯಾ" ಎಂಬುದಕ್ಕೆ "ಪ್ರಿಯಾಲವೃಕ್ಷಗಳಿರುವ ಭೂಮಿ" ಎಂಬ ಅರ್ಥವಿದ್ದು, ಉಳಿದ ರಾಜವಿಶೇಷಣಗಳು ಆನೆಗೂ ಸಂಬಂಧಿಸುವುದರಿಂದ ಶ್ಲೇಷೋಪಮೆಯಾಗಿದೆ. ಇಂತಹ ಶ್ಲೇಷೋಪಮೆ ಕವಿತಾಪ್ರೌಢಿಮೆಗೆ ಒಂದು ನಿದರ್ಶನ.

ಶಕುಂತಳೆಯನ್ನು ಅಗಲಲಾರದ ದುಷ್ಯಂತನಿಗೆ ರಾಜಮಾತೆಯ ಪತ್ರದ ಮೂಲಕ, ರಾಜಧಾನಿಗೆ ಕರೆ ಬಂದಾಗ ಧರ್ಮಸಂಕಟವೊದಗುವುದು. ಮಾತ್ರಾದೇಶವನ್ನು ಪುರಸ್ಕರಿಸಲೆ? ಪ್ರಿಯೆಯನ್ನಗಲಬೇಕಾಗುವುದು. ಪ್ರಿಯೆಯನ್ನಗಲದೆ ಇರಲೆ? ತಾಯಿಗೆ ಅವಿಧೇಯನಾಗಬೇಕಾಗುವುದು. ದುಷ್ಯಂತನ ಈ ಮನಃಸ್ಥಿತಿಯನ್ನು ಸುಂದರ ಉಪಮೆಯಿಂದ ಕವಿ ಚಿತ್ರಿಸಿದ್ದಾನೆ :

ಕೃತ್ಯಯೋರ್ಭಿನ್ನದೇಶತ್ವಾತ್
ದ್ವೈಧೀ ಭವತಿ ಮೇ ಮನಃ
ಪುರಃ ಪ್ರತಿಹತೇ ಶೈಲೇ
ಸ್ರೋತಃ ಸ್ರೋತೋವಹೋ ಯಥಾ |

"ಪರ್ವತವು ಅಡ್ಡ ಬಂದಾಗ ನದಿಯ ಹರಿವಿನ ಹಾಗೆ, ಈಗ ನನಗೊದಗಿರುವ ಕಾರ್ಯವನ್ನು ಭಿನ್ನದೇಶತೆಯಿಂದ ನನ್ನ ಮನವು ಸೀಳಾಗಿದೆ" ಎಂದು ದುಷ್ಯಂತನು ಹೇಳುತ್ತಾನೆ.

ಕಣ್ವರ್ಷಿ ತೀರ್ಥಾಟನೆಯನ್ನು ಮುಗಿಸಿ, ಆಶ್ರಮಕ್ಕೆ ಬರುತ್ತಿರುವಾಗ ಕೇಳಿಸಿದ ಅಶರೀರವಾಣಿ—ಇದರಲ್ಲಿರುವ ಉಪಮಾಧ್ವನಿಯನ್ನು ಪರಿಶೀಲಿಸಬೇಕು—

ದುಷ್ಯಂತೇನಾಹಿತಂ ತೇಜೋ
ದಧಾನಾಂ ಭೂತಯೇ ಭುವಃ
ಅವೇಹಿ ತನಯಾಂ ಬ್ರಹ್ಮ
ನ್ನಗ್ನಿಗರ್ಭಾಂ ಶಮೀಮಿವ

"ಎಲೈ ಬ್ರಾಹ್ಮಣನೆ, ತನ್ನೊಳಗೆ ಅಗ್ನಿಯನ್ನು ಧರಿಸಿರುವ ಶಮಿಯಂತೆ, ನಿನ್ನ ಮಗಳು ಲೋಕದ ಸಂಪತ್ತಿಗಾಗಿ ದುಷ್ಯಂತನ ತೇಜಸ್ಸನ್ನು ಧರಿಸಿರುವಳೆಂದು ತಿಳಿ" ಇಲ್ಲಿ 'ದುಷ್ಯಂತನ' ಎಂದುದರಲ್ಲಿ ಶಕುಂತಳೆ ಸೇರಿರುವ ಕುಲದ ಶ್ರೇಷ್ಠತೆಯೂ, "ಲೋಕದ ಸಂಪತ್ತಿಗಾಗಿ" ಎಂದುದರಲ್ಲಿ ಮುಂದೆ ಚಕ್ರವರ್ತಿಯಾಗುವ ಪುತ್ರನ ಜನನಸೂಚನೆಯೂ ಇದೆ- ದುಷ್ಯಂತನ ತೇಜಸ್ಸನ್ನು ಧರಿಸಿರುವಳೆಂಬಲ್ಲಿ, ಆಕೆಗೆ ಗರ್ಭವಾಗಿರುವ ಧ್ವನಿಯೂ ಇದೆ. "ಅಗ್ನಿಯನ್ನು ಒಳಗೊಂಡಿರುವ ಶಮಿ" ಎಂದುದರಲ್ಲಿ ಪರಿಶುದ್ಧತೆ-ದಿವ್ಯ ಕಲ್ಪನೆಗಳು ನಿರೂಪಿತವಾಗುತ್ತವೆ.

ಭವ್ಯಸೌಧ ಅಥವಾ ಅರಮನೆ, ನಗರ, ನಾಗರಿಕ ಜೀವನ-ಇತ್ಯಾದಿಗಳಿಗೆ ಇಂದಿನ ಜನರು ಅತಿಮಹತ್ವ ಕೊಡುತ್ತಾರೆ. ಹಳ್ಳಿಯ ಬಾಳನ್ನು ಕಾಡಿನ ಜೀವನವನ್ನು ಹೀಗಳೆಯುತ್ತಾರೆ. ಪ್ರಾಯಃ ಕಾಳಿದಾಸನ ಕಾಲದಲ್ಲಿ ಸ್ವಲ್ಪಮಟ್ಟಿಗಾದರೂ, ಇಂತಹದೇ ಪರಿಸ್ಥಿತಿಯಿದ್ದಿರಬಹುದು. ಕವಿ ಆಶ್ರಮ ಜೀವನವನ್ನೇ ಹಿರಿದಾಗಿ ಕಂಡು, ಶಾರದ್ವತನ ಮಾತಿನಿಂದ ನಗರ ಜೀವನವನ್ನು ನೋಡಿದ ಅನುಭವವನ್ನು ಹೀಗೆ ಹೇಳುತ್ತಾನೆ:

ಅಭ್ಯಕ್ತಮಿವ ಸ್ನಾತಃ
ಶುಚಿರಶುಚಿಮಿವ ಪ್ರಬುದ್ಧ ಇವ ಸುಪ್ತಂ
ಬದ್ಧಮಿವ ಸ್ವೈರಗತಿ
ರ್ಜನಮಿಹ ಸುಖಸಂಗಿನಮವೈಮಿ ||

"ಸ್ನಾನಮಾಡಿದವನು ಮೈಗೆ ಎಣ್ಣೆಹಚ್ಚಿರುವವನನ್ನೂ, ಶುಚಿಯು ಅಶುಚಿಯನ್ನೂ, ಎಚ್ಚತ್ತಿರುವವನು ನಿದ್ರಿಸುವವನನ್ನೂ, ಸ್ವತಂತ್ರಸಂಚಾರಿಯು ಬಂಧಿತನನ್ನೂ, ತಿಳಿಯುವಂತೆ-ಸುಖದಲ್ಲಿ ಆಸಕ್ತರಾಗಿರುವ ಈ ಜನರನ್ನು ನಾನು ತಿಳಿಯುತ್ತೇನೆ" ಹೀಗೆನ್ನುವಾಗ ಲೌಕಿಕ ಸುಖದಲ್ಲೇ ಮುಳುಗಿ ಸಂಸ್ಕೃತಿ ಕೆಟ್ಟು ವರ್ತಿಸುವುದನ್ನು ನಿಂದಿಸುವ ಮನಃಪ್ರವೃತ್ತಿ ಕವಿಗೆ ಇದ್ದಂತೆ ತೋರುತ್ತದೆ. ಪರಿಶುದ್ಧ, ಪವಿತ್ರ, ಜ್ಞಾನಯುಕ್ತ ಮತ್ತು ಸ್ವತಂತ್ರವೆನಿಸುವ ಆಶ್ರಮವಾಸದ ಹಿರಿಮೆಯನ್ನು ಈ ಉಪಮಾವಾಕ್ಯಗಳಿಂದ ತಿಳಿಸಿದಂತೆ ಆಗಿದೆ.

ದುಷ್ಯಂತನು ಮುಂದೆ, ಮಾರೀಚಾಶ್ರಮದಲ್ಲಿ ಸಿಂಹದ ಮರಿಯೊಡನೆ ಆಡುವ ಸರ್ವದಮನನನ್ನು ಕಂಡಾಗ ಆಡಿ ಕೊಳ್ಳುವ ಮಾತಿದು :

ಮಹತಸ್ತೇಜಸೋ ಬೀಜಂ
ಬಾಲೋಽಯಂ ಪ್ರತಿಭಾತಿ ಮೇ
ಸ್ಫುಲಿಂಗಾವಸ್ಥಯಾ ವಹ್ನಿ
ರೇಧಾಪೇಕ್ಷ ಇವ ಸ್ಥಿತಃ

"ಮಹತ್ತರ ತೇಜಸ್ಸಿನ ಬೀಜವಾಗಿರುವ ಈ ಬಾಲಕನು ಕಿಡಿಯ ರೂಪದಲ್ಲಿದ್ದು ಸಮಿತ್ತನ್ನು ಅಪೇಕ್ಷಿಸುವ ಬೆಂಕಿ ಯಂತೆ ನನಗೆ ತೋರುತ್ತಿರುವನು" ಎಂಬೀ ಉಪಮೆ ಯನ್ನು ಭಾವಿಸಿದರೆ, ಆ ಬಾಲಕನಲ್ಲಿ ಮುಂದೆ ಕಾಣಿಸ ಲಿರುವ ಉಜ್ವಲ ತೇಜದ ಮೂಲವಿರುವುದನ್ನು ಇದಕ್ಕಿಂತ ಚೆನ್ನಾದ ಸಾದೃಶ್ಯದಿಂದ ವಿವರಿಸುವುದು ಸಾಧ್ಯವೆನಿಸದು.

ಕಾಳಿದಾಸನ ಉಪಮಾಗರ್ಭಿತ ಸೂಕ್ತಿಗಳೆಲ್ಲವನ್ನೂ ಉದಾಹರಿಸುವುದು ಇಲ್ಲಿ ಸಾಧ್ಯವಲ್ಲ. ಸ್ಥಾಲೀಪುಲಾಕ ನ್ಯಾಯದಿಂದ ಇವಿಷ್ಟನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಅಷ್ಟೊಂದು ವಿಪುಲವಾಗಿ ಉಪಮೆಗಳು ಆತನ ಕೃತಿಗಳಲ್ಲಿ ಕಂಗೊಳಿಸುತ್ತವೆ.

ಉಪಮಾಲಂಕಾರದ ಪ್ರಯೋಗದಲ್ಲಿಯೂ ಕಾಳಿದಾಸ ನದು ವೈಶಿಷ್ಟ್ಯವಿದೆ. ಪಾಂಡಿತ್ಯ ಪ್ರದರ್ಶನದ ಡಾಂಬಿಕತೆ ಗಾಗಿ ಅವನು ಅವನ್ನು ಬಳಸಲಿಲ್ಲ. ಅರ್ಥಕ್ಲಿಷ್ಟತೆಗಾಗಿ ಉಪಯೋಗಿಸದೆ ಅರ್ಥಸ್ಪಷ್ಟತೆಗಾಗಿ ಪ್ರಯೋಗಿಸಿದ್ದಾನೆ. "ಚಿತ್ತರಂಜನೆಗಾಗಿ ಮಾತ್ರ" ಎಂಬಂತೆಯೂ ಪ್ರಯೋಗಿ ಸದೆ, ಓದುಗರಿಗೆ ಅಲ್ಲಲ್ಲಿ ಹೊಸ ಬೆಳಕು, ನವೀನ ಸಂದೇಶ ಗಳು ದೊರಕುವಂತೆ ಮಾಡಿದ್ದಾನೆ. ಜೀವನದರ್ಶನವೂ ನೀತಿಯ ನೆಲೆಯೂ ಅಲಂಕಾರವಿರುವ ಕಡೆಗಳಲ್ಲಿ ಮೂಡಿ ಬಂದಿವೆ. ಕಾಳಿದಾಸನ ಬಂಧವಂತೂ ಪರುಷ ವಲ್ಲ, ಕಠಿಣಪದಗಳು ಕಡಮೆ. ದೀರ್ಘಸಮಾಸಗಳು ವಿರಳ. ಇಂತಹ ರೀತಿಗೆ ಆತನ ಸುಂದರ ಉಪಮಾಲಂ ಕಾರಗಳು ಸೊಗಸನ್ನು ಉಂಟುಮಾಡಿವೆ. ಕಾಳಿದಾಸನ ಉಪಮೆಗಳು ಬೆರಳಿಟ್ಟು ತೋರಿಸುವಂತಾಗಿವೆ. ಆತನ ಕಾವ್ಯಗಳಿಗೆ ಸೊಗಸಾದ ವ್ಯಾಖ್ಯಾನ ಬರೆದಿರುವ 'ಮಲ್ಲಿ ನಾಥ'ನು ಕಾಳಿದಾಸನ ವಾಣಿ ಅತ್ಯಂತ ಸಾರವತ್ತಾದು ದೆಂದೂ ಅದನ್ನು ಸರಿಯಾಗಿ ತಿಳಿಯಬಲ್ಲವರೆಂದರೆ, ಕಾಳಿ ದಾಸ, ಸರಸ್ವತಿ ಅಥವಾ ಚತುರ್ಮುಖಬ್ರಹ್ಮ-ಎಂಬೀ ಮೂವರು ಮಾತ್ರವೆಂದೂ ಹೇಳಿ, ಕವಿಯ ಹಿರಿಮೆಯ ಶಿರಸ್ಸಿಗೆ ಕಿರೀಟವನ್ನು ತೊಡಿಸಿದ್ದಾನೆ.

(ಆಕಾಶವಾಣಿ ಕೃಪೆಯಿಂದ)

ನೆಲದ ಒಳ ಉರಿಯೆದ್ದು ತೂರಿರುವ ಮೊರಟಾದ
ಸಿಲೆಯ ಸಾವಿರದಿ ಗುಡಿ ಬಸದಿ ರಥ ಗೊಮ್ಮಟರ
ಚೆಲುವು ನನೆಕೊನೆಯಾಗಿ ನಿಲ್ಲಿಸಿದ ನಾಡಿನಲಿ
ಚೆಲುವು, ಕಲೆ, ಹಾಡು ನುಡಿ ಹೂವುಗಳ ತುಳಿಯುತಿಹರೋ !

—ರಂ. ಶ್ರೀ. ಮುಗಳಿ

ಪದ್ಮಫಲ ಭಕ್ಷಕರು

ಎಸ್. ಕೃಷ್ಣಭಟ್ಟ

ಆಂಗ್ಲಸಾಹಿತ್ಯ ಗಗನದಲ್ಲಿ ಆಲ್‌ಫ್ರೆಡ್ ಟೆನಿಸನ್ ಒಂದು ಪ್ರಕಾಶಮಯ ತಾರೆ. ಕವಿಗಳ ಪ್ರಪಂಚದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿರುವ ಈ ಕವಿ ಕಳೆದ ಶತಮಾನದಲ್ಲಿ–ವಿಕ್ಟೋರಿಯಾ ಯುಗದಲ್ಲಿ–ಇಂಗ್ಲೆಂಡಿನ ರಾಷ್ಟ್ರಕವಿಯಾಗಿದ್ದನು. ಕೀಟ್ಸ್, ಶೆಲ್ಲಿ, ವರ್ಡ್ಸ್‌ವರ್ತ್ ಮುಂತಾದ ಕವಿವರ್ಗದಿಂದ ಪೋಷಿಸಲ್ಪಟ್ಟ ರಮ್ಯಪಂಥದ ಪುನರುತ್ಥಾನವು ಟೆನಿಸನ್‌ನ ಮೇಲೆಯೂ ಸಾಕಷ್ಟು ಪ್ರಭಾವವನ್ನು ಬೀರಿತು. ಜೊತೆಗೆ, ಈತನ ಕಾಲದಲ್ಲಿ ವೇಗವಾಗಿ ಅಭಿವೃದ್ಧಿಗೆ ಬರುತ್ತಿದ್ದ ವೈಜ್ಞಾನಿಕ ಸಂಶೋಧನೆಗಳಿಂದ ಕವಿ ದೂರವಿರಲು ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ, ಇವನ ಕಾವ್ಯವು ಅಷ್ಟಾಗಿ ಕಾಲ್ಪನಿಕ ಕತೆಗಳಿಗೂ, ಪ್ರಕೃತಿಯ ವಿವಿಧ ವ್ಯಾಪಾರಗಳ ಅಸತ್ಯ ವರ್ಣನೆಗೂ ಎಡೆಕೊಡದೆ, ವಾಸ್ತವಾಂಶಗಳಿಗೆ ಬೆಲೆ ಕೊಟ್ಟಿತು; ಹೀಗೆ, ಇವನು 'ಯುಗದ ಪ್ರಾತಿನಿಧಿಕ ಕವಿ' ಎನ್ನಿಸಿಕೊಂಡನು. ಇಷ್ಟು ಅಲ್ಲದೆ, ಉತ್ತಮ ಕಲಾಕಾರನಾಗಿ ಆರಿಸಿದ ಸೂಕ್ತ ಪದಗಳ ಜೋಡಣೆಯ ಕೀರ್ತಿಯೂ ಇವನಿಗೆ ಬಂದಿತು. ಇವನ ಶ್ರೇಷ್ಠ ಕಾವ್ಯಗಳಲ್ಲಿ ಸಹೃದಯರು ಕಾಣುವುದು ಕಾವ್ಯ–ಸಂಗೀತ–ಚಿತ್ರಕಲೆಯ ಒಂದು ಅಪೂರ್ವ ಸಂಗಮ. ಇವನ 'ಮಾಡ್', 'ಇನ್ ಮೆಮೋರಿಯಂ', 'ಯೂಲಿಸಿಸ್', 'ಲೋಟಸ್ ಈಟರ್ಸ್' ಮುಂತಾದ ಉತ್ತಮ ಕೃತಿಗಳ ರಸವನ್ನೂ ಆಸ್ವಾದ ಮಾಡುವುದೇ ಸಾಹಿತ್ಯಾಭ್ಯಾಸಿಗಳಿಗೆ ಒಂದು ಆನಂದ.

ಟೆನಿಸನ್‌ನ ಕಾವ್ಯಗಳಲ್ಲೊಂದಾದ 'ಲೋಟಸ್ ಈಟರ್ಸ್' ಓದುಗರಿಗೆ ಒಂದು ರಸಭರಿತವಾದ ಔತಣವನ್ನು ನೀಡುತ್ತದೆ. ಕವಿ ಒಂದು ಪುರಾತನ ಗ್ರೀಕ್ ಕಥಾವಸ್ತುವನ್ನು ತೆಗೆದುಕೊಂಡು ಅದನ್ನು ರಮ್ಯಪಂಥಕ್ಕೆ ತಿರುಗಿಸಿ, ನಮಗೆ ಆನಂದಾನುಭವವನ್ನು ಉಂಟುಮಾಡಿಕೊಡುತ್ತಾನೆ. ಇದನ್ನು ನಾವು ಇವನ ನಾಟಕೀಯ ಭಾವಗೀತೆಗಳಾದ 'ಮಾಡ್', 'ಲೋಟಸ್ ಈಟರ್ಸ್' ಮತ್ತು 'ಯೂಲಿಸಿಸ್'–ಈ ಮೂರರಲ್ಲೂ ಕಾಣಬಹುದು. 'ಮಾಡ್'ನಲ್ಲಿ ಯುವಕ ಪ್ರೇಮಿಗೆ ಯುದ್ಧಕ್ಕೆ ಸೇರುವುದರಿಂದ ಶಾಂತಿ ಲಭಿಸಿದರೆ, 'ಯೂಲಿಸಿಸ್'ನ ನಾಯಕನಿಗೆ ಜೀವನದ ಗುರಿಯವರೆಗೆ ಮಾಡುವ ಪ್ರಯಾಣದಿಂದ, ಮತ್ತು 'ಲೋಟಸ್ ಈಟರ್ಸ್'ನಲ್ಲಿ ಭೂತ–ಭವಿಷ್ಯತ್‌ಗಳನ್ನು ಮರೆತು ವರ್ತಮಾನದ ಸ್ವಪ್ನ ಸುಖ–ವಿಶ್ರಾಂತಿಗಳಲ್ಲೇ ತಲ್ಲೀನರಾಗುವುದರಿಂದ ಶಾಂತಿಯುಂಟಾಗುತ್ತದೆ.

ಪ್ರಾಚೀನ ಕವಿ ಹೋಮರನ ಅಮರಕಾವ್ಯಗಳಾದ 'ಇಲಿಯಡ್' ಮತ್ತು 'ಒಡಿಸ್ಸಿ'ಗಳ ವೀರನ ಜೀವನವನ್ನು ಆಧುನಿಕ ಕಥಾವಸ್ತುವಾಗಿಸಿದ ಕೀರ್ತಿ ಟೆನಿಸನ್‌ನಿಗೆ ಸಲ್ಲಬೇಕು. ಹೋಮರನ ಪ್ರಕಾರ, ಒಡಿಸಿಯಸ್ (ಯೂಲಿಸಿಸ್) ಸುಪ್ರಸಿದ್ಧ ಟ್ರಾಯ್ ಯುದ್ಧ ಮುಗಿದ ಮೇಲೆ ಸಂಗಡಿಗರೊಡನೆ ತನ್ನ ನಾಡಾದ ಇಥಾಕಕ್ಕೆ ಹಿಂತಿರುಗುವಾಗ ದಾರಿಯಲ್ಲಿ ಕೆಲವು ಅನಿರೀಕ್ಷಿತ ಸಾಹಸ ಕಾರ್ಯಗಳನ್ನೆಸಗಬೇಕಾಗುತ್ತದೆ. ಇವುಗಳಲ್ಲಿ 'ಲೋಟೋಫ್ಯಾಗಿ' ಅಥವಾ 'ಲೋಟಸ್ ಈಟರ್ಸ್' ದ್ವೀಪದ ಪ್ರವಾಸವೂ ಒಂದು. ಸಮುದ್ರದಲ್ಲೆದ್ದ ಭಾರೀ ಬಿರುಗಾಳಿಯೊಂದು ಇವನ ಹಡಗನ್ನು ಎರಡು ದಿನಗಳ ಪರ್ಯಂತ ಎಲ್ಲಿಗೋ ಕೊಚ್ಚಿಕೊಂಡು ಹೋಗುತ್ತದೆ; ಮೂರನೇ ದಿನ ಅದರ ಪ್ರಭಾವ ಸ್ವಲ್ಪಮಟ್ಟಿಗೆ ಕಡಮೆಯಾದರೂ ಪುನಃ ಸಮುದ್ರವು ಅಲ್ಲೋಲ ಕಲ್ಲೋಲವಾಗಿ ಸುಮಾರು ಒಂಭತ್ತು ದಿನಗಳವರೆಗೆ ಹಡಗನ್ನು ಆಟವಾಡಿಸುತ್ತದೆ. ಹೀಗಾಗಿ ಹತ್ತನೇ ದಿನ ಅವರು ಒಂದು ದ್ವೀಪವನ್ನು ಮುಟ್ಟಲು ಸಾಧ್ಯವಾಗುತ್ತದೆ. ಆ ಹೊಸನಾಡನ್ನು ಪರಿಶೀಲಿಸಿದ ನಂತರ ಅದು 'ಪದ್ಮಫಲ ಭಕ್ಷಕರ' (ಲೋಟಸ್ ಈಟರ್ಸ್) ಸ್ಥಳವೆಂದು ಅರಿವಾಗುತ್ತದೆ. ಅಲ್ಲಿ ಪದ್ಮ ಫಲವನ್ನು ತಿಂದವರು ಹಿಂದಿನದನ್ನೆಲ್ಲಾ ಮರೆತು, ಮುಂದಿನ ಕಾಲದ ಗೋಜಿಗೆ ಹೋಗದೆ, ಈಗಿನ ಸ್ವಪ್ನದಲ್ಲಿ ಮೈಮರೆಯುವರು. ಯೂಲಿಸಿಸ್ ತನ್ನ ಕಡೆಯವರೊಡನೆ ಆ ದ್ವೀಪಕ್ಕೆ ಬಂದಿಳಿದ ಕೂಡಲೆ, ಅಲ್ಲಿರುವ ಜನರ ರೀತಿನೀತಿಗಳನ್ನು ತಿಳಿದುಕೊಂಡು ಬರುವಂತೆ ತನ್ನ ಗುಂಪಿನಲ್ಲಿ ಮೂವರಿಗೆ ಹೇಳಿ ಕಳುಹಿಸುತ್ತಾನೆ. ಇವರು ತಮ್ಮ ಸಮೀಪಕ್ಕೆ ಬಂದ ಕೂಡಲೆ, ಅಲ್ಲಿನ ಜನ ಇವರನ್ನು ಆದರದಿಂದ ಸ್ವಾಗತಿಸಿ ಕಮಲದ ಹೂಗಳಿಂದ ಉಪಚರಿಸುತ್ತಾರೆ. ಇದರ ಪರಿ

ಣಾಮವಾಗಿ ಇವರು ತಮ್ಮ ಹಡಗನ್ನೂ, ಜೊತೆಗಾರರನ್ನೂ ಸಂಪೂರ್ಣವಾಗಿ ಮರೆತುಬಿಡುತ್ತಾರೆ. ಎಷ್ಟು ಹೊತ್ತಾದರೂ ಹಿಂತಿರುಗದ ಇವರನ್ನು ನೋಡಿಕೊಂಡು ಬರಲು, ಯೂಲಿಸಿಸ್‌ನು ತಾನೇ ಅಲ್ಲಿಗೆ ಹೋಗಿ, ಇವರೆಲ್ಲರನ್ನೂ ಎಳೆದುತಂದು, ಹಡಗಿನ ಬೆಂಚುಗಳಿಗೆ ಕಟ್ಟಿಹಾಕುತ್ತಾನೆ. ಅನಂತರ, ಪುನಃ ಆ ವಿಚಿತ್ರ ಫಲದ ಆಸೆಯಾಗುವ ಮೊದಲೇ ಅಲ್ಲಿಂದ ಪ್ರಯಾಣ ಮಾಡುತ್ತಾರೆ.

ಹೋಮರನ ಈ ಕತೆಯು ಟೆನಿಸನ್‌ನ ಕೈಯಲ್ಲಿ ಒಂದು ಪ್ರಸಿದ್ಧ ಕಾವ್ಯವಾಯಿತು. ಮೂಲಕತೆಗಿಂತ ಹೆಚ್ಚಾಗಿ, ಈ ಕವಿಯು ಇಲ್ಲಿ ಮಾಡಿರುವ ತನ್ನದೇ ಆದ ಒಂದು ವಿಶೇಷ ಪ್ರಕೃತಿವರ್ಣನೆಯ ಜೊತೆಗೆ, ಪದ್ಮಫಲದ ರಸಾಸ್ವಾದದ ಪರಿಣಾಮವನ್ನು ಭೋಗಿಸುವ ವಿಷಯವಾಗಿಯೂ ಈ ಯೂಲಿಸಿಸ್‌ನ ವಿಚಾರಧಾರೆಯೂ ವಿಶಿಷ್ಟವಾಗಿದೆ. ಸದಾ ಎಸಗುವ ಸಾಹಸಕಾರ್ಯ ಮತ್ತು ಶಾಂತಜೀವನ—ಇವೆರಡರ ಮಧ್ಯೆ ಮನಸ್ಸಿನಲ್ಲಿ ಒಂದು ತುಮುಲಯುದ್ಧವೇ ನಡೆದು, ಜನ ಸ್ವಾಭಾವಿಕವಾಗಿ ಎರಡನೆಯದನ್ನರಸುವ ಚಿತ್ರವನ್ನು ನಾವು ಇಲ್ಲಿ ಕಾಣಬಹುದು. ಈ ಕಾವ್ಯದಲ್ಲಿ ಎರಡು ಭಾಗಗಳಿವೆ: ೧. ಯೂಲಿಸಿಸ್‌ನ ಏಕಪಾತ್ರ ನಾಟಕ (Monologue) ಮತ್ತು ೨. ಅವನ ಸಂಗಡಿಗರು ಒಟ್ಟಿಗೆ ಹೇಳುವ ಪಲ್ಲವಿ ಹಾಡು (Choric song). ಮೊದಲನೇ ಭಾಗವು ಎರಡನೆಯದಕ್ಕೆ ಪೀಠಿಕೆರೂಪದಲ್ಲಿದೆ; ಅಲ್ಲದೆ, ಅವನ ಮಾತಿನ ಸರಣಿಗೆ ತಕ್ಕಂತೆ ಐದು ಸ್ಪೆನ್ಸೇರಿಯನ್ ಜಾತಿಯ ಪದ್ಯಗಳಲ್ಲಿದೆ. ಆದರೆ ಎರಡನೇ ಭಾಗದಲ್ಲಿರುವ ಒಂಭತ್ತು ಪದ್ಯಗಳ ವೃತ್ತ ಒಂದೇ ವಿಧವಾಗಿಲ್ಲ; ಅವರು ಹಾಡುವಾಗ ವ್ಯತ್ಯಾಸ ಹೊಂದುತ್ತಿರುವ ಭಾವನೆಗಳಿಗೆ ತಕ್ಕಂತೆ ವೈವಿಧ್ಯವಿದೆ.

ಕಾವ್ಯದ ಮೊದಲನೇ ಭಾಗದಲ್ಲಿ ಯೂಲಿಸಿಸ್‌ನೇ ವರ್ಣಿಸುವಂತೆ, ಪದ್ಮ ಫಲ ಭಕ್ಷಕರ ನಾಡಿನ ಪ್ರಕೃತಿ ಸೌಂದರ್ಯ ಆಗತಾನೆ ಬಿರುಗಾಳಿಯ ಸಮುದ್ರ ಕ್ಷೋಭೆಯಿಂದ ತಪ್ಪಿಸಿಕೊಂಡು ಬಂದ ಈ ಜನರಿಗೆ ಅತ್ಯಂತ ಆಹ್ಲಾದಕರವಾಗಿದೆ. ಅಲ್ಲಿ ಅಸಂಖ್ಯಾತ ತೊರೆಗಳಿಂದ ಹಾಗೂ ದೂರದಲ್ಲಿ ಹೊಳೆಯುತ್ತಿರುವ ನದಿಯಿಂದ ಉದ್ಭವಿಸುತ್ತಿರುವ ಇಂಪಾದ ಧ್ವನಿ ಮತ್ತು ತುಂತುರುಗಳ ಸ್ವಪ್ನಸಾಮರಸ್ಯ; ಜೊತೆಗೆ, ಸೂರ್ಯಾಸ್ತಮಾನದಿಂದ ಕೆಂಪಾದ ಹಿಮಾಚ್ಛಾದಿತ ಶಿಖರಗಳು; ದಿಗಂತವನ್ನು ಮುಟ್ಟುವಂತೆ ವ್ಯಾಪಿಸಿದ್ದ ಪೀತದಾರು ವೃಕ್ಷಗಳ ಕಾಡುಗಳು; ಅಂಚಿನಲ್ಲಿ ತಾಳೆಮರಗಳನ್ನುಳ್ಳ ಹುಲ್ಲುಗಾವಲುಗಳು ತುಂಬಿದ ಮನೋಹರ ಕಣಿವೆಗಳು. ಇಂಥಾ ಸೌಂದರ್ಯದ ನೆಲೆವೀಡಿನಲ್ಲಿ ವಾಸಿಸುತ್ತಿದ್ದ ಪದ್ಮಫಲಭಕ್ಷಕರು ಈ ನಾವಿಕರ ಸಮೀಪಕ್ಕೆ ಹೋಗಿ, ಇವರನ್ನು ಪದ್ಮಫಲಗಳಿಂದ ಉಪಚರಿಸುತ್ತಾರೆ. ನಾವಿಕರ ಗುಂಪಿನಲ್ಲಿ ಕೆಲವರು ಅವುಗಳನ್ನು ರುಚಿನೋಡಿದ ಕೂಡಲೆ, ವಾಸ್ತವತೆಯನ್ನು ದಾಟಿ ಸ್ವಪ್ನಲೋಕದಲ್ಲಿ ವೈಮರೆಯುತ್ತಾರೆ. ತಮ್ಮ ಸಂಗಡಿಗರು ಮಾತನಾಡುತ್ತಿದ್ದಂತೆಯೇ, ಇವರಿಗೆ ತಾವು ಹಳೆಯ ದುಃಖಕರವಾದ ಸಂಗತಿಗಳನ್ನು ಕೇಳುತ್ತಿದ್ದಂತೆ, ಭಾಸವಾಗುತ್ತದೆ. ಇಂಥಾ ಸ್ಥಿತಿಯಲ್ಲಿ ಇವರು ಸಮುದ್ರದ ದಡದ ಮೇಲೆಯೇ ಸೂರ್ಯಾಸ್ತಮಾನದಿಂದ ಚಂದ್ರೋದಯದವರೆಗೂ ಕುಳಿತುಕೊಳ್ಳುತ್ತಾರೆ. ಆಗ, ತಮ್ಮ ಮನೆಗಳ ಸವಿನೆನಪುಗಳೇ ತುಂಬಿಕೊಂಡಿದ್ದ ಇವರ ಮನಸ್ಸಿನಲ್ಲಿ ಇವರು ರೋಸಿಹೋಗಿದ್ದ ಬಿರುಗಾಳಿಯ ಸಮುದ್ರಯಾನದ ಕಲ್ಪನೆಯು ಇದ್ದಕ್ಕಿದ್ದಂತೆಯೇ ಉಂಟಾಗುತ್ತದೆ. ಇವರೆಲ್ಲರ ಮನಸ್ಸಿನಲ್ಲಿದ್ದ ಒಂದೇ ಭಾವನೆಯು ಒಬ್ಬನ ಕಂಠದಿಂದ ಹೊರಹೊಮ್ಮಿ ಬಂದ ಉದ್ಗಾರ: "ನಾವು ಇನ್ನು ಎಲ್ಲಿಯೂ ಅಲೆದಾಡುವುದಿಲ್ಲ." ಆಗ, ಉಳಿದವರೆಲ್ಲರೂ ಇದೇ ಪಲ್ಲವಿನ್ನನುಸರಿಸಿ, ಸುಖ-ವಿಶ್ರಾಂತಿಯ ಕತೆಯನ್ನು ಹಾಡುತ್ತಾರೆ.

ಕಾವ್ಯದ ಎರಡನೇ ಭಾಗ ಅವರ ಹಾಡು: "ಈ ಕಣಿವೆಯಲ್ಲಿ ನಾವು ಕೇಳುತ್ತಿರುವುದು ನಿದ್ರಾಕಾರಕ, ಮಧುರ ಸಂಗೀತ; ಕಣ್ಣನ್ನು ತಣಿಸುತ್ತಿರುವುದು ತಂಪಾದ, ಆಳವಾದ ಹಾವಸೆಗಳು. ನಿಜಕ್ಕೂ ಇದು ಶಾಂತಿ ಆಳುತ್ತಿರುವ ನಾಡು. ಹೀಗೆ ಪ್ರಕೃತಿಯಲ್ಲಿ ಉಳಿದೆಲ್ಲಾ ವಸ್ತುಗಳು ವಿಶ್ರಾಂತಿಸೌಖ್ಯವನ್ನು ಅನುಭವಿಸುತ್ತಿದ್ದಾಗ, ದುಃಖದ ತುಳಿತಕ್ಕೆ ಹಾಗೂ ದುಡಿಮೆಗೆ ಮಾನವವರ್ಗ ಮಾತ್ರವೇ ಏಕೆ ಸಿಕ್ಕಿಕೊಳ್ಳಬೇಕು? ನಮ್ಮ ಹೃದಯಾಂತರಾಳದಲ್ಲಿ ವಿಶ್ರಾಂತಿಯ ಆನಂದ ಅಡಗಿದ್ದರೂ, ಅವಿಶ್ರಾಂತ ಕಾರ್ಯಭಾರಗಳ ಅಲೆಗಳ ಹೊಡೆತಕ್ಕೆ ಸಿಕ್ಕಿದ್ದೇವೆ! ನೋಡಿ, ಪ್ರಕೃತಿಯು ಹೇಗೆ ಕಷ್ಟಪಡುತ್ತಲೇ ಇಲ್ಲ! ಮರಗಳ ಕೊಂಬೆಗಳಿಂದ ಹುಟ್ಟುವ ಎಲೆಗಳಿಗೆ ಗಾಳಿ, ಬೆಳಕು, ನೀರಿನ ಹನಿಗಳೇ ಆಹಾರ; ಆಮೇಲೆ ಅವುಗಳು ಹಳದಿ ಬಣ್ಣಕ್ಕೆ ತಿರುಗಿ, ಕೆಳಗೆ ಬಿದ್ದು ಭೂಮಿಯಲ್ಲಿ ಸೇರಿ ಹೋಗುತ್ತವೆ; ಆದರೆ ಅವು ನಮ್ಮಂತೆ ಸದಾ ದುಡಿಯುತ್ತವೆಯೇ? ನಮ್ಮದಾದರೋ, ನೀಲಗಗನ-ನೀಲಸಮುದ್ರಗಳ ನಡುವೆ ಸದಾ ದುಡಿಮೆ; ಕೊನೆಯಲ್ಲಿ ಸಾವು ನಿಶ್ಚಿತ. ನಮಗೆ ಪೂರ್ಣಬೇಸರವಾಗಿರುವ ಹೋರಾಟವು ಇನ್ನು ಸಾಕು. ಅದರಿಂದ ದೂರವಿದ್ದು, ಸ್ವಪ್ನದ ಆನಂದವನ್ನರಸುವೆವು. ಅದು ಸಿಗದಿದ್ದರೂ ಚಿಂತೆಯಿಲ್ಲ; ಈ ಕೊನೆಯಿಲ್ಲದ

ದುಡಿಮೆ ಮಾತ್ರ ಬೇಡ. ಸ್ವಪ್ನಲೋಕ ದೊರಕುವುದಾದರೆ, ಅಲ್ಲಿ ಕೇಳಲು ಇಂಪಾದ ಸಂಗೀತ, ತಿನ್ನಲು ಕವುಲದ ಹಣ್ಣುಗಳು, ನೋಡಲು ಅಲೆಗಳಿಂದ ಬರುವ ಬಿಳಿಯ ನೊರೆ – ಇದೆಲ್ಲಾ ಬೇಕು. ಈಗಾಗಲೇ ಸಾವನ್ನಪ್ಪಿರುವ ಕೆಲವು ಆಪ್ತರ ಜೊತೆಯಲ್ಲಿ ಕಳೆದ ನಮ್ಮ ಬಾಲ್ಯ ಮುಂತಾದ ಹಳೆಯದರ ನೆನಪೂ ಕೂಡ ನಮಗೆ ಇಷ್ಟವಾದ್ದು.

"ನಮ್ಮ ನೆಚ್ಚಿನ ಮಡದಿಯರ ನೆನಪೇನೋ ನಮಗೆ ಆಹ್ಲಾದಕರ; ಆದರೆ, ಭವಿಷ್ಯದ ನಿರೀಕ್ಷೆ ಹಾಗಿರಲಾರದು. ಈಗಾಗಲೇ ನಮ್ಮನ್ನು ಸಂಪೂರ್ಣವಾಗಿ ಮರೆತಿರಬಹುದಾದ ನಮ್ಮ ಮಕ್ಕಳ ಶಾಂತಿಗೆ ನಾವು ಭಂಗ ತಂದೇವು! ಪ್ರಾಯಶಃ ದಂಗೆಯೆದ್ದು ನಮ್ಮ ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಂಡಿರುವ ನಮ್ಮಲ್ಲಿಯ ರಾಜಕುಮಾರರ ಕಲ್ಪನೆಯಲ್ಲಿ ನಾವು ಈಗಾಗಲೇ ಟ್ರಾಯ್ ದೇಶದ ಐತಿಹಾಸಿಕ ವ್ಯಕ್ತಿಗಳಾಗಿರಬಹುದು. ಯುದ್ಧ ಮಾಡಿ ಮಾಡಿ ಬೇಸತ್ತ ನಾವು ಇದನ್ನೆಲ್ಲಾ ಸರಿಪಡಿಸಲಾರೆವು. ಆದ್ದರಿಂದ ಇದನ್ನೆಲ್ಲಾ ಮರೆತು ಇಲ್ಲಿ ಸ್ವಪ್ನಸುಖವನ್ನನುಭವಿಸೋಣ. ಮಧುರನಾದದಿಂದ ಹರಿಯುತ್ತಿರುವ ತೊರೆಗಳ ಮೇಲೆ ಬೀಳುವ, ಸೂರ್ಯಾಸ್ತಮಾನದಲ್ಲಿ ಉಂಟಾದ ಕಾಮನ ಬಿಲ್ಲಿನ ಬಣ್ಣಗಳು; ಮನೋಹರ ದೃಶ್ಯಗಳ ಹಾಗೂ ನಾದಗಳ ಮಧುರ ಸಂಗಮವಿಲ್ಲಿ. ಇಷ್ಟಲ್ಲದೆ, ನಮ್ಮ ವಯಸ್ಸಿಗೆ ತಕ್ಕಂತೆ ಇಲ್ಲಿ ಸದಾ ನೆಲೆಸಿರುವ ಅಪರಾಹ್ನ. ಸ್ವರ್ಗಸುಖಕ್ಕೆ ಅತಿ ಸಮೀಪದ ಅನುಭವವೆಂದರೆ, ಇಲ್ಲಿ ಹೂಗಳ ಹಾಸಿಗೆಯ ಮೇಲೆ ಸುಖವಾಗಿ ಮಲಗಿ, ಸುಂದರ ಸ್ವಪ್ನಗಳನ್ನು ಕಾಣುವುದು. ಬೇಕಾದರೆ, ದೂರದಲ್ಲಿ ಬೋರ್ಗರೆಯುತ್ತಿರುವ ಸಮುದ್ರವು ಇನ್ನೂ ಉದ್ರೇಕಗೊಳ್ಳಲಿ; ಆದರೆ ನಾವು ಮಾತ್ರ ಇಲ್ಲಿನ ಸುಂದರ ಸ್ವಪ್ನ-ಸಮುದ್ರವನ್ನು ಬಿಟ್ಟು, ಆ ಸಮುದ್ರದ ಮೇಲೆ ಇನ್ನು ಖಂಡಿತವಾಗಿಯೂ ಪ್ರಯಾಣ ಮಾಡುವುದಿಲ್ಲ."

"ನಿಜ, ನಮ್ಮ ಇಂದ್ರಿಯಗಳಿಗೆ ಸುಖಕೊಡುವ, ಪದ್ಮಪರಾಗದ ಸುವಾಸನೆಯಿಂದ ಕೂಡಿದ ಗಾಳಿಯಲ್ಲಿ ನಮ್ಮ ಆತ್ಮಗಳು ಕನಸನ್ನು ಕಾಣುತ್ತಾ ತೇಲುತ್ತಿವೆ. ಕಷ್ಟ ಮತ್ತು ದುಡಿಮೆ ನಮಗೆ ಸಾಕಾಗಿ ಹೋಗಿದೆ. ಹತ್ತು ವರ್ಷಗಳ ಟ್ರಾಯ್ ಯುದ್ಧ, ಅನಂತರ ಸಮುದ್ರದ ಬಿರುಗಾಳಿಗೆ ಸಿಕ್ಕಿ ಮಾಡಿದ ಕಷ್ಟತಮವಾದ ಪ್ರಯಾಣಗಳು – ಈ ಪರಮಾವಧಿಯ ಅನುಭವಗಳು ಮಾನವನ ಶೌರ್ಯಕ್ಕೆ ಸಾಲದೇ? ನಮ್ಮ ಕರ್ತವ್ಯವನ್ನು ನಾವು ಮಾಡಿ ಮುಗಿಸಿದ್ದೇವೆ. ಇನ್ನು ದೇವತೆಗಳಂತೆ, ಮನುಷ್ಯನ ಆಗುಹೋಗುಗಳ ಸಮಸ್ಯೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಈ ಪದ್ಮಗಳ ನಾಡಿನಲ್ಲಿ ಹಾಯಾಗಿ ಇರುವುದೇ ನಮ್ಮ ಪ್ರತಿಜ್ಞೆ. ಏಕೆಂದರೆ, ದೇವತೆಗಳು ಇದಕ್ಕಿಂತ ಉತ್ತಮವಾದದ್ದೇನು ಮಾಡುತ್ತಾರೆ? ಅವರೂ ಅಮೃತಪಾನ ಮಾಡಿಲ್ಲವೇ? ಮನುಷ್ಯಕೋಟಿಯನ್ನು ಆಹುತಿ ತೆಗೆದುಕೊಳ್ಳುತ್ತಿರುವ ಯುದ್ಧಗಳಿಂದ, ರೋಗರುಜಿನಗಳಿಂದ ತುಂಬಿದ ಭೂಮಿಯನ್ನು ಅವರು ತಿರಸ್ಕಾರದಿಂದ ನೋಡುತ್ತಿಲ್ಲವೇ? ಇಷ್ಟೇ ಅಲ್ಲ, ದೇವತೆಗಳಿಂದಾಗುತ್ತಿರುವ ಕೆಡಕು. ಭವ್ಯ ಸ್ವರ್ಗದಲ್ಲಿರುವ ಅವರಿಗೆ ಇದಾವುದೂ ಮುಟ್ಟದೇ ಇರುವುದರಿಂದ ಅವರು ನಗುತ್ತಾರೆ; ಅಲ್ಲದೆ, ಮಾನವನ ಕಹಿ ಅನುಭವದ ದುರಂತ ಕತೆಗಳೇ ಅವರಿಗೆ ವಿನೋದಕಾರಕ. ಮಾನವರು ದುಃಖದಿಂದ ಬಾಳುತ್ತಿದ್ದಾರೆಯೇ; ? ಸತ್ತ ಮೇಲೆ ಸ್ವರ್ಗಕ್ಕೆ ಹೋಗುವವರು ಯಾರು, ನರಕಕ್ಕೆ ಹೋಗುವವರು ಯಾರು? — ಇದಾವುದರ ಚಿಂತೆಯೂ ಅವರಿಗೆ ಬೇಡ; ಮಾನವರು ಹೇಗಿದ್ದರೂ ಅವರಿಗೆ ಒಂದೇ. ಹೀಗಿರುವಾಗ, ನಾವೂ ಕೂಡ ಈ ಪದ್ಮಗಳ ನಾಡಿನಲ್ಲಿ ಅದರ ಮಕರಂದ ಪಾನ ಮಾಡುತ್ತಾ ಸ್ವಪ್ನಸುಖವನ್ನನುಭವಿಸಿದರೆ, ಅದು ದೇವತೆಗಳು ಮಾಡದಿದ್ದ ಕಾರ್ಯವೇನೂ ಅಲ್ಲ. ನಮ್ಮ ಜೀವನದ ಈ ಮೆಟ್ಟಲಿನಲ್ಲಿ ಎಲ್ಲಕ್ಕಿಂತಲೂ ಇದೇ ಬುದ್ಧಿವಂತಿಕೆಯ ಮಾರ್ಗವೆಂದು ತೋರುತ್ತದೆ. ಆದ್ದರಿಂದ, ನೊಂದ ಸ್ನೇಹಿತರೇ, ನಾವು ನಮ್ಮ ಪ್ರತಿಜ್ಞೆಯನ್ನು ಸ್ಥಿರೀಕರಿಸೋಣ; ನಾವು ಖಡಾಖಂಡಿತವಾಗಿಯೂ ಇನ್ನೆಲ್ಲಿಯೂ ಅಲೆದಾಡುವುದಿಲ್ಲವೆಂದು ಏಕಕಂಠದಿಂದ ಘೋಷಿಸೋಣ."
ಇಲ್ಲಿಗೆ ಮುಗಿಯುತ್ತದೆ ನಾವಿಕರ ಹಾಡು.

ಇನ್ನು ಈ ಕಾವ್ಯದ ವಿಮರ್ಶೆಗಾಗಿ ಒಂದೆರಡು ಮಾತು. ಕಾವ್ಯದ ನಿಜವಾದ ರಸವನ್ನು ಸವಿಯಲು, ವಾಚ್ಯಾರ್ಥದಿಂದ ನಮ್ಮ ಗಮನ, ಅದರ ಲಕ್ಷ್ಯಾರ್ಥದ ಹಾಗೂ ಧ್ವನಿಯ ಕಡೆ ಹೋಗಬೇಕು. ಇಲ್ಲಿ ಬರುವ ಪ್ರಕೃತಿಯ ಸುಂದರ ವರ್ಣನೆ, ಅದಕ್ಕಿಂತ ಮಿಗಿಲಾಗಿ ಧ್ವನಿತವಾಗಿರುವ, ವಿಶ್ರಾಂತಿಗಾಗಿ ಮಾನವ ಹೃದಯದ ಅದಮ್ಯ ಹಂಬಲ– ಇವು ಓದುಗರ ಮನಸ್ಸನ್ನೂ ಸೂರೆಗೊಳ್ಳುತ್ತವೆ. ಭಾವಕ್ಕೆ ತಕ್ಕಂಥಾ ಛಂದಸ್ಸು, ಪ್ರಾಸ, ಸ್ವರ ಸಂಗೀತ, ಶಬ್ದಗಳ ಸೂಕ್ತಪುನರುಕ್ತಿಗಳು ಕಾವ್ಯಸೌಂದರ್ಯವನ್ನು ಇನ್ನೂ ಹೆಚ್ಚಿಸಿವೆ. ಇದನ್ನು ಓದುತ್ತಾ ಹೋದಂತೆಲ್ಲಾ, ನಾವೂ ಕೂಡ ನಮ್ಮನ್ನು ಮರೆತು, ಪದ್ಮಫಲಗಳ ನಾಡಿಗೇ ಹೋಗುತ್ತೇವೆ. ಕಾವ್ಯವು ಬೋಧಿಸುವ ನೀತಿಯ ವಿಚಾರದಲ್ಲೇನೋ ಕೆಲವು ವಿಮರ್ಶಕರ ಆಕ್ಷೇಪಣೆಯಿದೆ. ಆದರೆ,

ಇಲ್ಲಿ ಟ್ರಾಯ್ ಯುದ್ಧದ ವೀರರು ಬಯಸಿದ ಶಾಂತಿ ಸ್ವಾಭಾವಿಕವಾಗಿಯೇ ಇದೆ; ದುಡಿಮೆಯ ಕಾಲದಲ್ಲಿ ಶ್ರದ್ಧೆಯಿಂದ ದುಡಿದ ಅವರಿಗೆ ಪದ್ಮಫಲದ ಭಕ್ಷಣೆಯಿಲ್ಲದೆ ಬೇರೆಯಾವುದು ವಿಶ್ರಾಂತಿಯನ್ನು ತಂದೀತು! ಜೀವನದ ಕಾರ್ಯಕ್ಷೇತ್ರದಿಂದ ತಪ್ಪಿಸಿಕೊಳ್ಳಲೆಂದೇ ಮಾನವನ ಈ ಪ್ರಯತ್ನವೆಂದು ಹೇಗಾದೀತು! ಇದೇ ಕವಿಯ 'ಯೂಲಿಸಿಸ್' ಕವನದೊಂದಿಗೆ ಇದನ್ನು ಹೋಲಿಸಿದರೂ, ಇವೆರಡೂ ಪರಸ್ಪರ ಪೂರಕಗಳೇ ಹೊರತು, ವಿರೋದಿಗಳಲ್ಲಿವೆಂಬುದು ವ್ಯಕ್ತವಾಗುವುದು. ಅಲ್ಲದೆ ಈ ಕಾವ್ಯದ ಕಥಾವಸ್ತುವಿನ ಹಾಗೂ ರೀತಿಯ ಪ್ರತಿಧ್ವನಿಯನ್ನು ನಾವು 'ಕೋರಸ್‌ಫ್ರಮ್ ಮಾರ್ಫಿಯಸ್', 'ಬಿಟರ್ ಸ್ಯಾಂಕ್ಚುಯರಿ' ಮುಂತಾದ ಕಾವ್ಯಗಳಲ್ಲೂ ಕಾಣಬಹುದು.

ಬಾಳು

ಮಗಮಗಿಪ ತಂಗಾಳಿ ತೀಡುತಿರೆ
ಸೀತಾಂಶು ತಿಂಗಳಿಗೆ ತೆರವಿತ್ತು
ತಳಿತೆ ಮಾಮರದ ಮೇಲೆ ಬೆಳಕ ಚೆಲ್ಲಿ
ಸಂಜೆವೆಣ್ ತೋಳೊಳಗಡಗುತಿದ್ದ ರವಿ. ೧

ನಡೆದಿತ್ತು ಒಲವಿನಾ ಸಲ್ಲಾಪ;
ಗಂಡುಹೆಣ್ಣುಗಳು ಮೈಮರೆತಿರಲು–
ಭುವಿ ತುಂಬಿ ಬಂದಿತ್ತು ಸ್ವರ್ಗತಾ–
ತಿರೆಯೊಳಗೆ ನೆಲೆಯೂರಿತ್ತು. ೨

ಒಬ್ಬೊರೊಬ್ಬರನು ಒಲಿದು ಸ್ನೇಹಬೇಟ
ವೆನಿಸಿ ಗಂಡು–ಹೆಣ್ಣಿಗೆ ಭೇದವಿಲ್ಲವಾಯ್ತು;
ಮಾತಿಲ್ಲದ ಪ್ರಕೃತಿ ಶಿಶುಗಳ ಒಲವಿನಾಟ–
ಕಂಡು ಮನದಿ ಮೂಡಿತು ನಾಚಿಕೆ. ೩

ಇಂದು ನಲಿವು ನಮ್ಮದು ನಾಳೆ
ಚಿಂತೆ ನಾಳೆಗೆ; ಆ ಕೊರಗು ಇಂದೇಕೆ?
ಆನಂದ ಕಟ್ಟೆಯೊಡೆದು ಮೈಮರೆತಿತ್ತು–
ಕಾಣದೆ ಮಂಡೆ ಮೇಲಾಡುವ ವಿಧಿ ಕೊಂತ! ೪

ಮಧು ಮಧುರ ಬಾಳು ವಿಧಿಯದರ ಕೃಪಾಣು,
ಮರಣವೇ ಅದರ ತೀರ–ಆದರಲೆ ಎಲ್ಲವೂ–
ನಲವೆಲ್ಲ, ಒಲವೆಲ್ಲ– ಮರಣವನುಗೆಲಲಾಸ–
ನಲ್ಮೆ ಬಾಳ ನಲಿವು ನಂದಿಹೋಹುದು. ೫

ಕಾಣದೊಂದು ಮಾರ್ಜಾಲ ಹಿಡಿಯಿತು–
ಗಂಡು; ಚೂರ ತುದಿಗೇರಿತು ಹೆಣ್ಣು;
ಚೀಕ್, ಚೀಕ್ ಚಿರರ್ರೋ, ಚಿರರ್ರೋ,
ಕೇಳಿತೇನು ಚೀರಾಟ ಬೆಕ್ಕಿಗೆ! ೬

ನೆಟ್ಟ ದೃಷ್ಟಿ ಆ ಕಡೆಗೆ ಮನವೆಲ್ಲ
ಬಾಳಿನಾ ತೀರದೆಡೆ–ಆ ಘೋರದೆಡೆಗೆ;
ನೊಂದು ನೀರಿಳಿದಿತ್ತು ಕಣ್ಣಕಡೆಯಂಚಿನಲಿ
ಸ್ಮೃತಿ ಮೈಮರೆತಿತ್ತು, ರುದ್ರಮೌನ ಅಲ್ಲಿತ್ತು. ೭

'ನೀರಿದೇತಕೆ ಅಣ್ಣ ಕಣ್ಣಲಿ'–ಕೇಳಿದಳು
ಬಾಲವಿಧವೆ ಬದುಕಿ ಬಾಳಿನಾ–
ಭವ್ಯತೆಯ ಕಾಣುವ ಬಲು ಮುನ್ನವೆ,
ನಿಟ್ಟುಸಿರಿದೆ ತಾನೆಂಬ ಬಲವಿಲ್ಲದ ಸೋದರಿ. ೮

"ನೋಡಿಲ್ಲಿ ಈ ಅಳಿಲಿನ ದುರಂತ; ರೋದನವು ಜ್ವಲಂತ;
ತುಂಬಿದೀ ಬಾಳಲ್ಲಿ ತಂದು ತುಂಬಿತು ದುಃಖ–
ಮೃತ್ಯುಮಾರ್ಜಾಲ–ಕೇಳಲಾರೆನು;
ನೋಡಲಾರೆ ಬಾಳಿನೀ ದುರಂತ." ೯

ಅಪ್ಪೆಯೆ! ರೋದನವೆ ಮೀಸಲು ಜೀವಿಯಪಾಲ್ಗೆ!!
ಅತ್ತತ್ತು ಬೇಸತ್ತು ಬಳಲುವುದು ಕೆಲಹೊತ್ತು.!!
ತಲೆಯೆತ್ತಿ ನೋಡಿದೆನು ಮಾತಲ್ಲಿ
ಮೂಕವಾಗಿ ಕಣ್ಣಲ್ಲಿ ನೀರಿಳಿದಿತ್ತು.

[ವಿ. ಸೂ: ಹಿರಿಯರೂ, ಪ್ರಾಜ್ಞರೂ, ಗುರುಗಳೂ ಆದ ಶ್ರೀ ಅರಗ ರಾಮರಾಯರ ಅನುಭವವನ್ನು ನನ್ನದಾಗಿಸಿಕೊಂಡು ಈ ಕವನ ರಚಿಸಿದ್ದೇನೆ. ಅವರ ಕರುಣೆಗೆ ನಾನು ಚಿರಋಣಿ.]

ಮಧುರ

ರಾಮಕಥೆಯ ಉದ್ಭವ ಮತ್ತು ಪರಂಪರೆ

ಡಾ. ವಾಸು ಬಿ. ಪುತ್ರನ್

ರಾಮಕಥೆಯ ಉದ್ಭವದ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇಂದು ಆದಿಕಾವ್ಯ ನಮಗೆ ಯಾವ ರೂಪದಲ್ಲಿ ದೊರೆಯುತ್ತದೆಯೋ ಅದರ ಮೂಲ ಸ್ರೋತವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯ. ವಾಲ್ಮೀಕಿಗೆ ಬ್ರಹ್ಮ ಸರಸ್ವತಿ ಹಾಗೂ ನಾರದಮುನಿಯಿಂದ ಪ್ರೇರಣೆ ದೊರೆತ್ತಿತ್ತು ಎಂಬ ಮಾತಿನ ಉಲ್ಲೇಖ ಕಾವ್ಯದಲ್ಲಿಯೇ ದೊರೆಯುತ್ತದೆ. ಕುಶೀಲವರು (ಇವರು ರಾಮನ ಮಕ್ಕಳಲ್ಲ, ಕರ್ನಾಟಕದ ಕೆಲವು ಭಾಗಗಳಲ್ಲಿರುವ 'ದಾಸ'ರಂತಹ ಕಾವ್ಯೋಪಜೀವಿಗಳು) ಸಾವಿರಾರು ವರ್ಷ ಮುಖೋದ್ಗತಮಾಡಿ ಹಾಡಿ ಜನಪ್ರಿಯಗೊಳಿಸಿದ್ದ ರಾಮಕಥೆಯನ್ನೇ ವಾಲ್ಮೀಕಿ ತನ್ನ ಕಾವ್ಯ ಪ್ರತಿಭೆಯಿಂದ ಸುಂದರವಾಗಿ ಮಹಾಕಾವ್ಯವನ್ನಾಗಿ ರಚಿಸಿದನೆಂಬ ವಿಚಾರವೂ ಗಮನಾರ್ಹವಾಗಿದೆ.

ಆದರೆ ಕೆಲವು ಪಾಶ್ಚಾತ್ಯ ವಿದ್ವಾಂಸರು ಮಾತ್ರ ಸಮಗ್ರ ರಾಮಕಾವ್ಯವನ್ನು ಬರೇ ಕಲ್ಪನೆ ಎಂದಿರುವರು. ಡಾ|| ವೆಬರ್ ಎಂಬುವರು ಇದನ್ನು ಬರೇ ಒಂದು ರೂಪಕ ಎಂದು ಗ್ರಹಿಸಿ "ಸೀತೆಯು ಈ ಕಾವ್ಯದ ಮುಖ್ಯ ಪಾತ್ರ; ಅವಳ ಹರಣ ಮತ್ತು ಅವಳ ಪುನಃ ಪ್ರಾಪ್ತಿ ಈ ಕಾವ್ಯದ ಮೂಲ ಕಥೆ; ಆದರೆ ಸೀತೆ ಎಂದರೆ ಸೃಷ್ಟಿಯ ಅಧಿಷ್ಠಾತ್ರಿ ದೇವಿಯ ಮಾನವೀಕರಣ-ಹೊರತು ಒಬ್ಬ ಸಹಜ ವ್ಯಕ್ತಿಯಲ್ಲ. ರಾಮಾಯಣದ ಎಲ್ಲಾ ಪಾತ್ರಗಳು ಐತಿಹಾಸಿಕ ಸತ್ಯದಿಂದ ಬಹುದೂರವಾಗಿವೆ." ಎಂದು ಘೋಷಿಸಿರುವರು. ಲಾರ್ಸೆನ್ ಎಂಬುವರೂ ಈ ತರ್ಕವನ್ನು ಒಪ್ಪಿರುವರು. ಆದರೆ ಡಾ|| ವೆಬರ್‌ರಂತಹ ವಿದ್ವಾಂಸರ ಈ ತರ್ಕಕ್ಕೆ ಈ ತನಕವೂ ಯಾವ ಆಧಾರವೂ ದೊರೆಯದಿದ್ದುದರಿಂದ ಅವರ ತರ್ಕ ಬರೇ ಒಂದು ಅನುಮಾನ, ಭ್ರಮೆ, ಎಂದು ನಾವು ಹೇಳಿದರೆ ತಪ್ಪಾಗದು. ಯಾಕೆಂದರೆ ಒಂದು ವೇಳೆ ಆ ವಿದ್ವಾಂಸರು ಹೇಳುವಂತೆ ಕಲ್ಪನೆ ಅಥವಾ ಕಪೋಲ ಕಲ್ಪಿತವಾಗಿದ್ದರೆ ಈ ಕಥೆಯು ಜನ-ಮನವನ್ನು ಪ್ರೇರೇಪಿಸಲು ಸಾಧ್ಯವಿರುತ್ತಿದ್ದಿಲ್ಲ! ಮೇಲೆ ಹೇಳಿರುವ ವಿದೇಶಗಳಲ್ಲಿ, ವಿಭಿನ್ನ ಪರಂಪರೆಯ ದೇಶಗಳಲ್ಲಿ ಕಥೆ ಜನಪ್ರಿಯವಾಗಲು ಸಾಧ್ಯವಿತ್ತೇ? ಜೈನಧರ್ಮಗಳ ಸಾಹಿತ್ಯದಲ್ಲಿ ಕೂಡಾ ರಾಮನಿಗೆ ಮಹತ್ವಪೂರ್ಣ ಸ್ಥಾನ ಹೇಗೆ ದೊರೆಯುತ್ತಿತ್ತು? ಅಷ್ಟೇ ಅಲ್ಲದೆ ಮಹಾ ಭಾಷ್ಯ ಪುರಾಣ ಹಾಗೂ ಋಗ್ವೇದ ಮೊದಲಾದ ಗ್ರಂಥಗಳಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಕೆಲವು ಪಾತ್ರಗಳ ಹೆಸರು ದೊರೆಯುವುದನ್ನು ನೋಡಿದರೆ ಕಾವ್ಯದ ಮಹತ್ವದ ಅರಿವು ತನ್ನಷ್ಟಕ್ಕೆ ಆಗುವುದಿಲ್ಲವೇ? ಇವೆಲ್ಲವನ್ನು ತಿಳಿದ ಬಳಿಕ ರಾಮಾಯಣದ ಪಾತ್ರಗಳನ್ನೂ ಸಮಗ್ರ ಕಥೆಯನ್ನೂ ಕಲ್ಪನೆ, ರೂಪಕ ಎಂದು ಸ್ವಿಕರಿಸಿದರೆ ಇತಿಹಾಸಕ್ಕೆ ಅನ್ಯಾಯ ಬಗೆದಂತೆಯೇ ಸರಿ! ರಾಮನು ಅಯೋಧ್ಯೆಯ ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ರಾಜಕುಮಾರನೆಂಬುದನ್ನು ಹೇಗೆ ಮರೆಯಬಹುದು? ಅಯೋಧ್ಯೆ, ಚಿತ್ರಕೂಟ, ಪಂಚವಟಿ, ರಾಮೇಶ್ವರಂ, ಮೊದಲಾದ ರಾಮಾಯಣಕ್ಕೆ ಸಂಬಂಧಪಟ್ಟ ಸ್ಥಳಗಳು ಈಗಲೂ ಇವೆಯಲ್ಲ? ಲಂಕೆಯಲ್ಲಿ ಇಂದಿಗೂ ಸೀತೆಯ ಜೀವನಕ್ಕೆ ಸಂಬಂಧಪಟ್ಟ ಸ್ಥಳ-ಫಲಗಳಿವೆ ಎಂದು ತಿಳಿದರೆ ಆಶ್ಚರ್ಯವಾಗುತ್ತದಾದರೂ, ಅದು ಸತ್ಯ.

ಜೆ. ಟಿ. ವ್ಹೀಲರ್ ಎಂಬವರೊಬ್ಬರು ರಾಮಾಯಣವನ್ನು ಬ್ರಾಹ್ಮಣ-ಬೌದ್ಧಧರ್ಮಗಳ ಸಂಘರ್ಷ ಎಂದಿರುವರು! ರಾಕ್ಷಸರೆಂದರೆ ಬೌದ್ಧರೆಂದೂ, ಲಂಕೆಯ ಮೇಲೆ ರಾಮನ ದಾಳಿ ಎಂದರೆ ಲಂಕೆಯ ಮೇಲೆ ವಾಲ್ಮೀಕಿಯ ದೋಷಾರೋಪಣೆ ಎಂದೂ ಇವರ ಕಲ್ಪನೆ. ಆದರೆ ಈ ತರ್ಕದಲ್ಲಿಯೂ ತಥ್ಯವಿಲ್ಲ. ರಾಮಾಯಣದಲ್ಲಿ ಬೌದ್ಧರ ಉಲ್ಲೇಖ ರವೆಯಷ್ಟಾದರೂ ಎಲ್ಲಿದೆ?

ಮೆಕ್ಸ್‌ಮುಲ್ಲರರು ರಾಮಾಯಣವೆಂದರೆ, ಉತ್ತರ ಭಾರತದ ಸಭ್ಯಜನರು ದಕ್ಷಿಣದ ಅಸಭ್ಯರ ಮೇಲೆ ಮಾಡಿದ ದಾಳಿ ಹಾಗೂ ಗಳಿಸಿದ ವಿಜಯ ಎಂದು ಹೇಳಿರುವರು. ಡಾ. ವೆಬರ್, ಕಥೆಯಲ್ಲಿ ಅಡಕವಾಗಿರುವ ಆರ್ಯ ಸಭ್ಯತೆಯ ಪ್ರಚಾರವನ್ನು ಹುಡುಕುವ ಹವ್ಯಾಸಕ್ಕಿಳಿದಿರುವರು. ಆದರೆ ಈ ತರ್ಕಕ್ಕೂ ಕಾವ್ಯದಲ್ಲಿ ಆಧಾರ ದೊರೆಯುವುದಿಲ್ಲ. ಕಾವ್ಯದಲ್ಲಿ ರಾಮನು ಎಲ್ಲಿಯೂ ಯಾರಿಗೂ ಆರ್ಯ ಸಂಸ್ಕೃತಿಯನ್ನು ಸ್ವೀಕರಿಸಲು ಒತ್ತಾಯ ಪಡಿಸುವುದಂತೂ ಇರಲಿ, ಅದನ್ನು ಪ್ರತಿಪಾದಿ

ಸುವ ಉಲ್ಲೇಖವೇ ಇಲ್ಲ. ಅವನಲ್ಲಿ ಲಂಕೆ-ಕಿಷ್ಕಿಂಧೆಗಳ ಸಂಸ್ಕೃತಿಯನ್ನು ಹಾಳು ಗೆಡಹಬೇಕೆಂಬ ಭಾವನೆ ಕ್ಷಣ ಮಾತ್ರಕ್ಕೂ ಬಂದಂತೆ ಕಾಣುವುದಿಲ್ಲ.

ಶ್ರೀ ಟಿ. ಪರಮಶಿವ ಐಯ್ಯರ್ ಎಂಬುವರು ರಾಮಾಯಣವೆಂದರೆ ಜನಸ್ಥಾನಕ್ಕಾಗಿ ಆರ್ಯ-ಗೋಂಡ (ಜಾತಿ) ರ ಯುದ್ಧವೆಂದಿರುವರು. ಶ್ರೀ ಎಂ. ವೆಂಕಟ ರತ್ನ ಇವರು ರಾಮಕಥೆಯನ್ನು ಮಿಶ್ರದೇಶದ ಸಾಮ್ರಾಟ ರಮಸೆಸ್ (ಕ್ರಿ. ಪೂ. ೧೩೪೮-೧೨೩೨) ನ ಜೀವನ ಚರಿತ್ರೆಯೊಂದಿಗೆ ಜೋಡಿಸುವ ಹವ್ಯಾಸಕ್ಕಿಳಿದಿರುವರು. ಈ ವಿಚಾರಗಳಲ್ಲಿ ಎಷ್ಟು ಸತ್ಯಾಂಶವಿದೆ ಎಂಬುದನ್ನು ಬೇರೆಯವರೂ ನೋಡಬೇಕು.

ರಾಮಕಥೆಯ ಉದ್ಭವ ಈ ದೇಶದಲ್ಲಿಯೇ ಆಗಿತ್ತು, ಎಂದು ಪುನಃ ಹೇಳುವ ಅಗತ್ಯ ಕಾಣುವುದಿಲ್ಲ. ವೇದಗಳಲ್ಲಿಯೇ ಇದರ ಅಸ್ಪಷ್ಟ ರೂಪದೊರೆಯುತ್ತದೆ. ಕುಶೀಲವರು ಅದನ್ನು ಪ್ರಚಾರಗೊಳಿಸಿದರು. ಅದು ಜನ-ಪ್ರಿಯವಾಯಿತು. ವಾಲ್ಮೀಕಿ ಮೊತ್ತಮೊದಲು ಅದನ್ನು ಮಹಾಕಾವ್ಯವನ್ನಾಗಿ ಹೆಣೆದನು.

ಸೀತೆಯ ಪಾತ್ರದ ಉಗಮ

ಸೀತೆಯನ್ನು ಕುರಿತು ವೇದ, ಉಪನಿಷತ್ತುಗಳಲ್ಲಿ ವಿಚಿತ್ರ ಕಥೆಗಳಿವೆ. ಋಗ್ವೇದದಲ್ಲಿ ಸೀತೆ ಕೃಷಿಯ ಅಧಿಷ್ಠಾತ್ರಿದೇವಿ; ಕೃಷ್ಣಯಜುರ್ವೇದದ ತೈತ್ತಿರೀಯ ಉಪನಿಷತ್ತಿನಲ್ಲಿ ಆಕೆ ಪ್ರಜಾಪತಿಯ ಪುತ್ರಿ, ಶ್ರದ್ಧೆಯ ಸಹೋದರಿ, ಸೋಮರಾಜನ ಪ್ರೇಯಸಿ (ಬಳಿಕ ಪತ್ನಿ); ಋಗ್ವೇದದ ಸೂರ್ಯಸೂಕ್ತದಲ್ಲಿ ಅವಳು ಸೂರ್ಯನ ಪುತ್ರಿ, ಸೋಮರಾಜನ ಪತ್ನಿ. ಸೀತೆಯನ್ನು "ಪರ್ಜನ್ಯ" ಹಾಗೂ 'ಇಂದ್ರಪತ್ನಿ'ಯ ರೂಪದಲ್ಲಿಯೂ ಚಿತ್ರಿಸಿರುವರು. 'ಇಂದ್ರಪತ್ನಿ' ಎಂಬ ಆಧಾರದಲ್ಲಿ ಡಾ. ಯೂಕೋಬಿ ಎಂಬ ವಿದ್ವಾಂಸರು ರಾಮನನ್ನು ಇಂದ್ರಜ ಅನ್ಯರೂಪ ಎಂದು, ಅವರಿಬ್ಬರ ಅಭಿನ್ನತ್ವವನ್ನು ಸ್ಪಷ್ಟಗೊಳಿಸಲಿಕ್ಕಾಗಿ ಇಂದ್ರನ ಎರಡು ಪ್ರಸಿದ್ಧ ಕಾರ್ಯಗಳ ಪ್ರತಿಬಿಂಬವನ್ನು ರಾಮಾಯಣದಲ್ಲಿ ತೋರಿಸುವ ಪ್ರಯತ್ನ ಮಾಡಿರುವರು – (೧) ಇಂದ್ರನಿಂದ ವೃತ್ರಾಸುರನ ವಧೆ (ರಾಮ-ರಾವಣ ಯುದ್ಧ, ರಾವಣ ವಧೆಯಲ್ಲಿ ಸಾಮ್ಯ) (೨) ಫಣಿಗಳಿಂದ ಅಪಹರಿಸಲ್ಪಟ್ಟ ಹಸುಗಳನ್ನು ದೇವಶುನಿ ಸರಮಾನ ಮುಖಾಂತರ ನದಿ ದಾಟಿ ಹುಡುಕಿ ಅವು (ಹಸು) ಗಳನ್ನು ಪಡೆಯುವ ಘಟನೆ (ಇಲ್ಲಿ ಹಸು=ಸೀತೆ; ದೇವಶುನಿ. ಸರಮಾ=ಹನುಮಂತ; ಫಣಿ=ರಾಕ್ಷಸ)

ಹನುಮಂತನೂ ರಾಮಾಯಣದ ಮುಖ್ಯ ಪಾತ್ರಗಳಲ್ಲಿ ಒಬ್ಬ. ಆದರೆ ಡಾ. ಯಕೋಬಿ ಇವನನ್ನೂ ಕೃಷಿದೇವತೆ ಎಂದು ಹೇಳುತ್ತ ಅವನ ಸ್ವರೂಪದ ಬಗ್ಗೆ "ಹನುಮಂತನು ವಾಯುಪುತ್ರನು ಆಕಾಶದಲ್ಲಿ ಹಾರಬಲ್ಲನು ದಕ್ಷಿಣದಿಂದ (ಸೀತೆಯು ಲಂಕೆಯಲ್ಲಿರುವಳೆಂಬ) ಶುಭ ಸಮಾಚಾರವನ್ನು (ಮಳೆಯನ್ನು) ತರುವನು." ಎಂದು ಹೇಳಿರುವರು. ಆದರೆ ರಾಮಾಯಣಗಳ ಬಗ್ಗೆ ಸಂಶೋಧನೆ ಮಾಡಿದ ಜರ್ಮನ್ ವಿದ್ವಾಂಸ ಡಾ. ಕಾಮಿಲ್ ಬುಲ್ಕೆ ಈ ತರ್ಕವನ್ನು ಒಪ್ಪುವುದಿಲ್ಲ. ಹನುಮಂತ ಶಬ್ದದ ಉತ್ಪತ್ತಿಯೇ ಬೇರೆ.

ರಾಮನಿಗೆ ಕ್ರಮೇಣ ರಾಜಕುಮಾರನಿಂದ ಪುರುಷೋತ್ತಮ, ಪುರುಷೋತ್ತಮನಿಂದ ವಿಷ್ಣು, ವಿಷ್ಣುವಿನಿಂದ ಪರಮ ಪುರುಷನ ಪದವಿ ಪಡೆಯಲು ಎಷ್ಟು ವರ್ಷ ಹಿಡಿಯಿತೋ ಹೇಳುವುದು ಸುಲಭವಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಅವನು ಪುರುಷೋತ್ತಮ. ಈ ಪದವಿಯನ್ನು ಪಡೆಯುವುದರಲ್ಲಿ ವೈಷ್ಣವ-ಭಕ್ತಿಯ ಕೈವಾಡವಿತ್ತೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ. ವಾಲ್ಮೀಕಿಯ ನಂತರ ಬಂದ ಕವಿಗಳೂ ರಾಮನ ಭವ್ಯ ರೂಪವನ್ನು ಚಿತ್ರಿಸಿದರು. ರಾಮನ ಮಹತ್ವದೊಡನೆ ಅವನ ಪರಿವಾರದವರ, ಮಿತ್ರರ, ಸಂಗಾತಿಗಳ ಹಾಗೂ ಸೇವಕರ, ಮಹತ್ವ ಹೆಚ್ಚತೊಡಗಿತು.

ಭಕ್ತಿ ಸಾಹಿತ್ಯದ ಅಧ್ಯಯನಮಾಡಿದರೆ ಕ್ರಿ. ಪೂ. ಎರಡನೆ ಶತಮಾನದಲ್ಲಿಯೇ ಶ್ರೀಕೃಷ್ಣನು ಪರಾತ್ಪರ ಬ್ರಹ್ಮನ ರೂಪದಲ್ಲಿ ಪೂಜಿಸಲ್ಪಡುತ್ತಿದ್ದನೆಂದು ತಿಳಿದು ಬರುತ್ತಿದೆ. ಶ್ರೀಕೃಷ್ಣನಿಗೆ ಆ ಸ್ಥಾನಮಾನ ದೊರೆತಾಗ ರಾಮ-ಭಕ್ತರು ಸುಮ್ಮನಿರುವರೇ? ಸ್ಪರ್ಧೆಗೆ ಪ್ರಾರಂಭವಾಯಿತು. ಆದಿಕಾವ್ಯದ ಯುದ್ಧಕಾಂಡದಲ್ಲಿಯೇ ರಾಮನು ಬ್ರಹ್ಮ, ವಿಷ್ಣು, ಮಹೇಶ್ವರ, ಯಮ, ವರುಣ ಮೊದಲಾದವರಿಗೆ ವಂದ್ಯನಾದ! ಸಂಸ್ಕೃತ ನಾಟ್ಯ ಸಾಹಿತ್ಯದಲ್ಲಿ ಭಾಸ, ಕಾಲಿದಾಸ ಹಾಗೂ ರಾಮಭಕ್ತ ಕವಿಗಳೂ ರಾಮನನ್ನು ವಿಷ್ಣುವಿನ ಅವತಾರವೆಂದು ಚಿತ್ರಿಸಿದರು. 'ಪಂಚರಾತ್ರ ಸಂಹಿತ' (ಲನೇ ಶತಮಾನದ ಪೂರ್ವ)ದಲ್ಲಿ ಲಕ್ಷ್ಮಣ, ಭರತ, ಶತ್ರುಘ್ನರೂ ಅವತಾರಿಗಳಾದರು! 'ಅಹಿರ್ಬುಂಧ್ಯ ಸಂಹಿತ'ದಲ್ಲಿ ಈ ಮೂವರೂ ದೇವರ ಅಂಶವೆನಿಸಿಕೊಂಡರು. ನಂತರ ವಾನರರೂ ದೇವತೆಗಳ ಅವತಾರವೆನಿಸಿಕೊಂಡರು. ರಾಮನ ಸಂಪರ್ಕಕ್ಕೆ ಬಂದ ವ್ಯಕ್ತಿಗಳೂ ತಮ್ಮ ವ್ಯಕ್ತಿತ್ವವನ್ನು ಪರಿವರ್ತಿಸಿಕೊಂಡರು. ಈ ರೀತಿ ವೈದಿಕ ಸಾಹಿತ್ಯದಲ್ಲಿ ಯಾವ

ಪಾತ್ರಗಳ ಹೆಸರುಗಳನ್ನು ಮಾತ್ರ ಕೇಳಿದ್ದೆವೋ ಅಥವಾ ಯಾರ ಅತ್ಯಂತ ಸಂಕ್ಷಿಪ್ತ ಕಥೆ ದೊರೆಯುತ್ತದೋ ಅವರು ರಾಮಾಯಣದಲ್ಲಿ ಭವ್ಯ-ದಿವ್ಯ ಪಾತ್ರಗಳಾಗಿ ಮೆರೆದರು.

ಆದಿಕಾವ್ಯದ ಮೂಲಸ್ರೋತ

ರಾಮುಕಥೆಯ ವಿಕಾಸಕ್ಕೆ ವಾಲ್ಮೀಕಿ ರಾಮಾಯಣ ಪ್ರಥಮ ಮೆಟ್ಟಿಲು ; ಆ ಬಳಿಕ ರಚಿಸಲ್ಪಟ್ಟ ರಾಮಕಾವ್ಯಗಳಿಗೆ ಅದೇ ಪ್ರೇರಣೆ, ಅದೇ ಆಧಾರ. ಈ ಆದಿಕಾವ್ಯದ ಮೂಲ ಸ್ರೋತವನ್ನು ಕುರಿತು ವಿದ್ವಾಂಸರು ಸಾಕಷ್ಟು ಚರ್ಚೆ ಮಾಡಿದ್ದಾರೆ. ಆದರೆ ಅವರಲ್ಲಿ ಭಿನ್ನಾಭಿಪ್ರಾಯವಿದೆ. ವೈದಿಕ ಸಾಹಿತ್ಯದಲ್ಲಿ ದೊರೆಯುವ ಕಥೆ ಹಾಗೂ ಕುಶೀಲವರ (ಹಬ್ಬದ ದಿನಗಳಲ್ಲಿ ಸವಾದ್ಯ, ಸಸ್ವರಗೀತೆ ಹಾಡಿ ಮನರಂಜನೆ ಮಾಡುವ ಕಾವ್ಯೋಪಜೀವಿವರ್ಗ) ಹಾಡುಗಳ ಆಧಾರದಿಂದ ವಾಲ್ಮೀಕಿ ಮುನಿ ಕಾವ್ಯವನ್ನು ರಚಿಸಿದಂತಿದೆ.

ಆದಿಕಾವ್ಯದಲ್ಲಿ ಬರುವ ಘಟನೆ ಎಂದರೆ, ವಾಲ್ಮೀಕಿಯು ನಾರದನಿಗೆ ಕೇಳಿದ ಪ್ರಶ್ನೆ ನಾರದನ ಉತ್ತರ, ಬ್ರಹ್ಮನು ಕವಿಗೆ ಮಹಾಕಾವ್ಯ ರಚಿಸಲು ಹೇಳಿದ ಉಪದೇಶ, ಆಶೀರ್ವಾದ ಹಾಗೂ ಆಶ್ವಾಸನೆ, ಕವಿಗೆ ಸರಸ್ವತಿಯ ಪ್ರೇರಣೆ ಇವುಗಳಿಂದ ಕಥಾವಸ್ತು ದೇವತೆಗಳಿಂದ ದೊರೆಯಿತೆಂದು ಹೇಳಬಹುದು. ನಿಜವಾಗಿಯೂ ಇದನ್ನು ಸಾಧಾರಣ ರಾಮುಕಥೆಗೆ ಅಲೌಕಿಕ, ಧಾರ್ಮಿಕ ಹಾಗೂ ಪವಿತ್ರ ರೂಪಕೊಡುವ ಪ್ರಯತ್ನವೆನ್ನಬಹುದು. ಏನೇ ಇರಲಿ, ರಾಮುಕಥೆಯ ಪರಂಪರೆ ವಾಲ್ಮೀಕಿಗೆ ಪೂರ್ವಜರಿಂದ ದೊರಕಿತು. ಕೆಲ ಪಾಶ್ಚಾತ್ಯ, ಭಾರತೀಯ ವಿದ್ವಾಂಸರು ಇದನ್ನು ಒಪ್ಪುವುದಿಲ್ಲ. ಡಾ|| ವೆಬರ್ 'ದಶರಥ ಜಾತಕ'ವನ್ನು ರಾಮಾಯಣಕ್ಕೆ ಆಧಾರವೆಂದಿರುವರು. ದಿನೇಶಚಂದ್ರಸೇನ್ ಎಂಬವರೂ 'ದಶರಥ ಜಾತಕ' ವನ್ನೂ ಆದಿಕಾವ್ಯಕ್ಕಿಂತ ಪ್ರಾಚೀನವೆಂದು ವಾದಿಸಿರುವರು. ಆದರೆ ಡಾ|| ಯಕೋಬಿ, ಮೆಕ್‌ಡೊನಲ್ ಹಾಗೂ ಅಧಿಕಾಂಶ ಭಾರತೀಯ ವಿದ್ವಾಂಸರು ವಾಲ್ಮೀಕಿ ರಾಮಾಯಣವನ್ನು 'ದಶರಥ ಜಾತಕ'ಕ್ಕಿಂತ ಪ್ರಾಚೀನ ಕೃತಿ ಎಂದು ಅಭಿಪ್ರಾಯ ಪಟ್ಟಿರುವರು. ಕಾವ್ಯದಲ್ಲಿ ಎಲ್ಲಿಯೂ ಬುದ್ಧ ಯಾ ಬೌದ್ಧಧರ್ಮದ ಮಾತೇ ಬರುವುದಿಲ್ಲ. ಆದುದರಿಂದ ಇದನ್ನು ಬೌದ್ಧ-ಪೂರ್ವಕೃತಿ ಎಂದು ಹೇಳಿದರೆ ಹೆಚ್ಚಾಗಲಾರದು. ಇಷ್ಟೇ ಅಲ್ಲ 'ದಶರಥ ಜಾತಕ'ವು ಆದಿಕಾವ್ಯದ ವಿಕೃತ ಕೃತಿ ಎಂದೇ ಹೇಳಬೇಕಾದೀತು.

ಡಾ|| ವೆಬರ್ ಇನ್ನೊಂದು ಹಾಸ್ಯಾಸ್ಪದ ಹವ್ಯಾಸಕ್ಕೆ ಕೈಹಾಕಿರುವರು. ಅದೆಂದರೆ ಸೀತೆಯ ಅಪಹರಣದ ಆಧಾರವನ್ನು ಮಹಾಕವಿ ಹೋಮರನ ಕೃತಿ 'ಇಲಿಯಡ್' ನಲ್ಲಿ ವರ್ಣಿತವಾದ ಹೆಲೆನ್ ಹರಣದಲ್ಲಿ ಹುಡುಕಿರುವುದು ಲಂಕಾಯುದ್ಧಕ್ಕೆ ಟ್ರಾಯ್ (Troy) ನಲ್ಲಾದ ಯುದ್ಧ ಆಧಾರವಂತೆ! ಸೀತಾ ಹರಣಕ್ಕೂ ಹೆಲೆನ್ ಹರಣಕ್ಕೂ ಎಲ್ಲಿಯ ಸಾಧ್ಯ? ಹೆಲೆನ್ ತನ್ನ ಪೂರ್ವಯೋಜನೆಯಂತೆ, ಸ್ವೇಚ್ಛೆಯಿಂದ ತಾನೇ ಓಡಿ ಹೋಗಿದ್ದಾಳಾದರೆ, ಸೀತೆಯನ್ನು ಬಲತ್ಕಾರದಿಂದ ರಾವಣನು ಕೊಂಡೊಯ್ದ! ಎಷ್ಟು ವ್ಯತ್ಯಾಸ!

ವಾಲ್ಮೀಕಿ ರಾಮಯಣದ ಕಾಲ ಕುರಿತೂ ವಿದ್ವಾಂಸರಲ್ಲಿ ವಿಭಿನ್ನ ಮತಗಳಿವೆ. ಆದರೆ ಅಧಿಕಾಂಶ ವಿದ್ವಾಂಸರು ಕಾವ್ಯವು ಕ್ರಿ. ಪೂ. ಆರನೇ ಶತಮಾನ ಹಾಗೂ ಕ್ರಿ. ಪೂ. ಎರಡನೆ ಶತಮಾನದೊಳಗಿನ ಅವಧಿಯಲ್ಲಿ ರಚಿಸಲ್ಪಟ್ಟಿರಬೇಕೆಂದು ಅಭಿಪ್ರಾಯ ಪಟ್ಟಿರುವರು. ಈ ಆದಿಕವಿ ವಾಲ್ಮೀಕಿ ಯಾರು? ಎಂಬ ವಿಷಯದಲ್ಲಿಯೂ ಚರ್ಚೆ ನಡೆದಿದೆ. ಕವಿ ರಾಮನ ಸಮಕಾಲೀನನೇ, ಆ ಬಳಿಕದೇವನೇ? ಪೂರ್ವಜನೇ? ವಾಲ್ಮೀಕಿ ಒಬ್ಬನೇ? ಹಲವರೋ? ಎಂಬ ವಿಷಯ ಇಂದಿಗೂ ಚರ್ಚಾಸ್ಪದವಾಗಿಯೇ ಉಳಿದಿದೆ.

ಕಾವ್ಯದಲ್ಲಿ ಪ್ರಕ್ಷಿಪ್ತಾಂಶ

ಛಾಪಖಾನೆಗಳಿಲ್ಲದೆ ಸಮಗ್ರ ಕಾವ್ಯ ಮುಖೋದ್ಗತವಾಗಿದ್ದು, ಒಬ್ಬರಿಂದ ಇನ್ನೊಬ್ಬರಿಗೆ ಪರಂಪರೆಯಾಗಿ ದೊರೆತ್ತಿದ್ದ ಕಾಲದಲ್ಲಿ ರಾಮಾಯಣದಂಥ ಜನಪ್ರಿಯ ಕಾವ್ಯದಲ್ಲಿ ಹಲವಾರು ಹೊಸ ವಿಚಾರಗಳು ಪದ್ಯರೂಪವಾಗಿ ನುಸುಳಿಕೊಳ್ಳುವುದು ಸಹಜವಾದದ್ದೇ. ಈ ಕಾವ್ಯದ ಬಾಲಕಾಂಡ, ಉತ್ತರಕಾಂಡ ಹಾಗೂ ಇನ್ನಿತರ ಕಾಂಡಗಳಲ್ಲಿ ತುಂಬಾ ಪ್ರಕ್ಷಿಪ್ತ ಅಂಶಗಳು ಸೇರಿಕೊಂಡಿವೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅದರಲ್ಲಿಯೂ ಈ ಎರಡು ಕಾಂಡಗಳು ಬಹಳ ಸಮಯದ ಅನಂತರ ಸೇರಿಕೊಂಡ ಭಾಗ ಎಂದು ಅವರ ಅಭಿಮತ. ಅವನ್ನು ಆದಿಕವಿ ರಚಿಸದೆ ಇನ್ನ್ಯಾರೋ ವಾಲ್ಮೀಕಿ ಎಂಬವನು ರಚಿಸಿರುವನೆಂದವರ ವಿಶ್ವಾಸ. ಅವು ಯಾವಾಗ ಆದಿಕಾವ್ಯದಲ್ಲಿ ಸೇರಿಕೊಂಡಿರಬಹುದೆಂದೂ ಚರ್ಚೆಯ ವಿಷಯ. ಆದರೆ ಪ್ರಕ್ಷಿಪ್ತಾಂಶ ಸೇರಿಕೊಂಡಿವೆ ಎಂಬುವುದರಲ್ಲಿ ಸಂಶಯವಿಲ್ಲ. ಕಾರಣ ಆದಿಕಾವ್ಯದಲ್ಲಿಯೇ ಒಂದು ಕಡೆ "ಚತುರ್ವಿಂಶತ್ಸಹಸ್ರಣಿ ಶ್ಲೋಕಾನುಮುಕ್ತವಾನಷಿಃ ತಥಾ ಸರ್ಗ ಶತಾನ್ಪಂಚ ಷಟ್ಕಾಂಡಾನೀ ತಪೋತ್ತರಂ" ಎಂದು

ಬರೆದು ಕಾವ್ಯದಲ್ಲಿ ಒಟ್ಟು ೨೪,೦೦೦ ಶ್ಲೋಕಗಳೂ ೫೦೦ ಸರ್ಗಗಳೂ ಇವೆ ಎಂದು ಸ್ಪಷ್ಟಪಡಿಸಲಾಗಿದೆ. ಆದರೆ ಇಂದು ಉಪಲಬ್ಧವಿರುವ ವಾಲ್ಮೀಕಿ ರಾಮಾಯಣದ ಪ್ರಥಮ ಆರು ಕಾಂಡಗಳಲ್ಲಿಯೇ ಇದಕ್ಕಿಂತ ಹೆಚ್ಚು ಶ್ಲೋಕ-ಸರ್ಗಗಳಿವೆ. ಮೇಲಿನ ಶ್ಲೋಕ ಸಂಖ್ಯೆಯನ್ನು ಎಣಿಸುವಾಗ ಆಗ ಉತ್ತರಕಾಂಡವು ನಿಶ್ಚಿತವಾಗಿ ಆದಿ ಕಾವ್ಯದಲ್ಲಿ ಸೇರಿಕೊಂಡಿರಲಿಲ್ಲವೆಂದರ್ಥವಾಗುತ್ತದೆ. ಈ ಪ್ರಕ್ಷಿಪ್ತಾಂಶ, ಆದರಲ್ಲಿಯೂ ಉತ್ತರಕಾಂಡ, ಮೂಲ ರಾಮಾಯಣದಲ್ಲಿ ಎಂದು ಪ್ರವೇಶ ಪಡೆಯಿತು ಎಂಬ ವಿಷಯದ ಕುರಿತು ವಿಭಿನ್ನಮತಗಳಿವೆ. ಇಲ್ಲಿ ಹೆಚ್ಚಿನ ಚರ್ಚೆಗೆ ಆಸ್ಪದ ಕೊಡದೆ, ಹಲವಾರು ಗ್ರಂಥಗಳ ಆಧಾರ ದಿಂದ, ಸುಮಾರು ಕ್ರಿ. ಶ. ೮೦೦ರವರೆಗೆ ಮೂಲ ರಾಮಾಯಣಕ್ಕೆ ಸಧ್ಯ ಇರುವ ರೂಪವು ದೊರೆತಿರಬಹುದೆಂದು ಹೇಳಬಹುದು.

ಸಾಹಿತ್ಯ-ಪ್ರೇರಣೆ :

ಆದಿಕಾವ್ಯದ ಭವ್ಯ ಕಥಾವಸ್ತು, ದಿವ್ಯ ಪಾತ್ರಗಳು ಹಲವಾರು ಕವಿಗಳನ್ನು ಆ ಕಡೆ ಆಕರ್ಷಿಸಿದವು. ಸಂಸ್ಕೃತದ ಲಲಿತ ಸಾಹಿತ್ಯದಲ್ಲಿ ರಾಮ ಕಥೆ ಸಾಕಷ್ಟು ವ್ಯಾಪಕಗೊಂಡಿತು. ಜಯದೇವ, ಭಾಸ, ಕಾಲಿದಾಸ, ಭವಭೂತಿ ಮೊದಲಾದವರ ಕೃತಿಗಳು ರಾಮಕಥೆಗೆ ಇನ್ನಷ್ಟು ವ್ಯಾಪಕ ಕ್ಷೇತ್ರವನ್ನು ನಿರ್ಮಿಸಿದುವು. ಕವಿಗಳು ಹೊಸ ಹೊಸ ಕಲ್ಪನೆಯನ್ನು ಸೇರಿಸಿಕೊಂಡರು. ರಾಮನ ಮಹತ್ವ ನಿರಂತರ ಹೆಚ್ಚಾಗುತ್ತಾ ಹೋಯಿತು-ಶೃಂಗಾರಕ್ಕೂ ಹೆಚ್ಚು ಹೆಚ್ಚು ಆಸ್ಪದ ದೊರೆಯತೊಡಗಿತು.

ವಾಲ್ಮೀಕಿಯ ಅನಂತರ ರಾಮ ಕಥೆಯನ್ನು ಆಧಾರವಾಗಿಟ್ಟುಕೊಂಡು ಮುಖ್ಯತಃ ಮೂರು ರೀತಿಯ ಕೃತಿಗಳು ರಚಿಸಲ್ಪಟ್ಟವು. ೧. ಕಾವ್ಯ ೨. ನಾಟಕ ೩. ಕಥಾ ಸಾಹಿತ್ಯ. ಮಹಾಕಾವ್ಯಗಳಲ್ಲಿ ಕಾಲಿದಾಸನ 'ರಘುವಂಶ' ಭಟ್ಟಿಯ 'ಭಟ್ಟಿಕಾವ್ಯ' ಕುಮಾರದಾಸನ 'ಜಾನಕೀ ಹರಣ' ಕ್ಷೇಮೇಂದ್ರನ 'ದಶಾವತಾರ ಚರಿತ' ಸಾಕಲ್ಯ ಮಲ್ಲನ 'ಉದಾರ ರಾಘವ' ಇತ್ಯಾದಿ; ನಾಟಕಗಳಲ್ಲಿ ಭಾಸನ 'ಪ್ರತಿಮಾ ನಾಟಕ' 'ಅಭಿಷೇಕ ನಾಟಕ', ಭವಭೂತಿಯ 'ಮಹಾವೀರ ಚರಿತ', 'ಉತ್ತರ ರಾಮ ಚರಿತ' ಮುರಾರಿಯ 'ಅನರ್ಘ ರಾಘವ' ಕವಿರಾಜ ಶೇಖರನ 'ಬಾಲ ರಾಮಾಯಣ' ಶಕ್ತಿಭದ್ರನ 'ಆಶ್ಚರ್ಯ ಚೂಡಾಮಣಿ', ಜಯದೇವನ 'ಪ್ರಸನ್ನ ರಾಘವ' ಇತ್ಯಾದಿ; ಕಥಾ ಸಾಹಿತ್ಯದಲ್ಲಿ ಗುಣಾಢ್ಯನ 'ಬೃಹತ್ಕಥೆ' ಸೋಮದೇವನ 'ಕಥಾಸರಿತ್ಸಾಗರ' ರಾಜಭೋಜನ 'ಚಂಪೂ ರಾಮಾಯಣ' ಇವುಗಳನ್ನು ಉಲ್ಲೇಖಿಸಬಹುದು.

ಭಾರತದ ವಿಭಿನ್ನ ಸಂಪ್ರದಾಯಕ್ಕನುಸಾರವಾಗಿಯೂ ರಾಮಕಥೆಯನ್ನೊಳಗೊಂಡ ಕೃತಿಗಳು ರಚಿಸಲ್ಪಟ್ಟವು. ಸಂಪ್ರದಾಯಕ್ಕನುಗುಣವಾಗಿ ಪರಿವರ್ತನೆಗೂ ಆಸ್ಪದ ದೊರೆಯಿತು. ವೈಷ್ಣವ ಸಂಪ್ರದಾಯಕ್ಕನುಸಾರವಾಗಿ ರಚಿಸಲ್ಪಟ್ಟ "ಹರಿವಂಶ ಪುರಾಣ" (೮ನೇ ಶತಮಾನ) "ವಿಷ್ಣು ಪುರಾಣ" (೪-೫ನೇ ಶತಮಾನ) "ಬ್ರಹ್ಮ ಪುರಾಣ", "ಭಾಗವತ ಪುರಾಣ", "ಕೂರ್ಮ ಪುರಾಣ" (೭ನೇ ಶತಮಾನ) "ವಾಯು ಪುರಾಣ" (೫ನೇ ಶತಮಾನ) "ಅಗ್ನಿ ಪುರಾಣ" (೮ನೇ ಶತಮಾನ) "ನಾರದ ಪುರಾಣ" ಪದ್ಮ ಪುರಾಣ (೧೨ನೇ ಶತಮಾನ) "ನೃಸಿಂಹ ಪುರಾಣ" ಮೊದಲಾದ ಪುರಾಣಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರಾಮಕಥೆಗೆ ಸ್ಥಾನದೊರೆತಿದೆ. ಇವುಗಳಲ್ಲಿ ರಾಮ ಚರಿತೆಯ ಮೂಲರೂಪವನ್ನು ಹುಡುಕುವುದು ಕಷ್ಟಸಾಧ್ಯ.

"ಗೌತಮಿ ಮಾಹಾತ್ಮ್ಯ" "ಕಿಷ್ಕಿಂಧಾ ಮಾಹಾತ್ಮ್ಯ" "ಸಹಸ್ರ ಕುಂಡ ಮಾಹಾತ್ಮ್ಯ" ಮೊದಲಾದ ಗ್ರಂಥಗಳಲ್ಲಿಯೂ ರಾಮಕಥೆಗೆ ಸ್ಥಾನದೊರೆಯಿತು. ಬೌದ್ಧರು ಪ್ರಾಚೀನಕಾಲದಿಂದಲೇ "ದಶರಥ ಜಾತಕ" 'ಅನಾಮತಂ ಜಾತಕಂ' "ದಶರಥ ಕಥಾನಕಂ" "ದೇಮದಮ್ಮ ಜಾತಕ" "ಜಯಸಿದ್ಧ ಜಾತಕ" "ಸಾಮಾಜಾತಕ ಮೊದಲಾದ ಜಾತಕಗಳಲ್ಲಿ ರಾಮಕಥೆಗೆ ಸ್ಥಾನಕೊಟ್ಟು ಕೊಂಡು ಬಂದಿದ್ದರು. ಆದರೆ ಈ ಪರಂಪರೆಯಲ್ಲಿ ಬುದ್ಧನ ಅನುಯಾಯಿಗಳು ರಾಮನನ್ನು ಹೆಚ್ಚುಕಾಲ ತಮ್ಮವನ್ನಾಗಿ ಸ್ವೀಕರಿಸಲಿಲ್ಲ.

"ಯೋಗವಾಶಿಷ್ಠ"ವೂ ರಾಮಕಥೆ. ಇದನ್ನು ಯಾವ ಸಂಪ್ರದಾಯಕ್ಕೂ ಸೇರಿಸದಿರುವುದೇ ಲೇಸು, ಆದರೆ ಬೌದ್ಧಧರ್ಮದ ನಿರಾಶೆಯ ನೆರಳು ಇಲ್ಲಿದೆ. ನಿರಾಶನಾದ ರಾಮನಿಗೆ ಗುರುವಶಿಷ್ಠರು ಮೋಕ್ಷ-ಪ್ರಾಪ್ತಿಯ ಉಪದೇಶ ಕೊಡುವರು. ರಾಮನು ಪುನಃ ಕರ್ತವ್ಯ ಪಾಲನೆಗಾಗಿ ಟೊಂಕಕಟ್ಟುವನು. ಇದೇ ಕೃತಿಯ ಕಥಾವಸ್ತು.

ಜೈನಗ್ರಂಥಗಳಲ್ಲಿ ಉಪಲಬ್ಧವಾಗುವ ರಾಮಕಥೆ ಅತ್ಯಂತ ವಿಸ್ತ್ರತವಾದದ್ದು. ಇಲ್ಲಿಯ ರಾಮನು ಎಂಟನೆಯ ಬಲದೇವನು, ಲಕ್ಷ್ಮಣನು ವಾಸುದೇವನು, ರಾವಣನು ಪ್ರತಿವಾಸುದೇವನು. ಈ ಮೂವರೂ ಪ್ರತಿಕಲ್ಪದಲ್ಲಿ ವಿಮಲಸೂರಿಯು ಪ್ರಾಕೃತದಲ್ಲಿ "ಪವುಮ ಚರಿಉ" ವನ್ನೂ, ಗುಣಭದ್ರಾಚಾರ್ಯನು "ಉತ್ತರ ಪುರಾಣ"

ವನ್ನೂ, ಸ್ವಯಂಭೂಕವಿಯು 'ಪವುಮ ಚರಿಯ'ವನ್ನೂ ಪುಷ್ಪದಂತನು 'ತಿಸಟ್ಠಿ-ಮಹಾಪುರಿಸ ಗುಣಾಲಂಕಾರ' (ಮಹಾಪುರಾಣ)ವನ್ನೂ ಹೇಮಚಂದ್ರನು "ಜೈನಪುರಾಣ" ವನ್ನೂ, ಕೃಷ್ಣದಾಸನು 'ಪುಣ್ಯಚಂದ್ರೋದಯ'ವನ್ನೂ, ಜಿನದಾಸನು 'ರಾಮಪುರಾಣ'ವನ್ನೂ ರಚಿಸಿದರು. ನಾಗಚಂದ್ರನ 'ಪಂಪರಾಮಾಯಣ' ಕುಮುದೇಂದು ಮುನಿಯ "ಕುಮುದೇಂದು ರಾಮಾಯಣ," ದೇವಪ್ಪನ "ರಾಮ ವಿಜಯ ಕಾವ್ಯ" ಇತ್ಯಾದಿ, ಚಾವುಂಡರಾಯಕೃತ 'ಚಾವುಂಡರಾಯ ಪುರಾಣ' ನಾಗರಾಜನ 'ಪುಣ್ಯಾಶ್ರವ' (ಅಲ್ಲಿ ಬರುವ ಕಥೆ) ಮೊದಲಾದ ಕೃತಿಗಳು ಕನ್ನಡ ಜೈನ ಕಾವ್ಯಗಳಲ್ಲಿ ಉಲ್ಲೇಖನೀಯವಾದುವುಗಳು.

ಶಾಕ್ತರೂ ಈ ಕ್ಷೇತ್ರದಲ್ಲಿ ಸಾಕಷ್ಟು ಮುಂದೆ ಬಂದಿದ್ದಾರೆ. 'ಅದ್ಭುತರಾಮಾಯಣ' 'ಆನಂದ ರಾಮಾಯಣ' 'ಸೀತಾವಿಜಯ'ಗಳಂತಹ ರಾಮಕಾವ್ಯಗಳನ್ನು ರಚಿಸಿದ್ದಾರೆ. ಈ ಗ್ರಂಥಗಳಲ್ಲಿ ರಾವಣನಿಗಿಂತ ಸೀತೆಗೆ ಹೆಚ್ಚು ಮಹತ್ವ-ಶತಸ್ಕಂಧ ರಾವಣನ ಸಂಹಾರವಾಗುವುದು ಅವಳಿಂದಲೇ.

'ಅಧ್ಯಾತ್ಮ ರಾಮಾಯಣ' 'ಸತ್ಯೋಪಾಖ್ಯಾನ' 'ಹನುಮದ್ ಸಂಹಿತ' 'ಬೃಹತ್ಕೋಶಲಖಂಡ' ಮೊದಲಾದ ರಾಮಕಾವ್ಯಗಳಲ್ಲಿ ಶೃಂಗಾರಕ್ಕೆ ಸಾಕಷ್ಟು ಪ್ರಾಧಾನ್ಯ ದೊರೆತಿದೆ.

ಈ ರೀತಿಯಾಗಿ ರಾಮಕಥೆಯನ್ನು ಪ್ರತಿಯೊಂದು ಪ್ರಧಾನ ಸಂಪ್ರದಾಯ, ಧರ್ಮವನ್ನು ಭಾಷೆಗಳು ಸ್ವೀಕರಿಸಿ ವಿಭಿನ್ನ ಉದ್ಭಾವನೆಗಳಿಗೆ ಅವಕಾಶವನ್ನು ಕಲ್ಪಿಸಬೇಕಾದರೆ ಆ ಕಾವ್ಯದ ಮಹತ್ವ ಪ್ರತಿಯೊಂದು ಕ್ಷೇತ್ರದಲ್ಲಿಯೂ ಎಷ್ಟಿದೆ ಎಂಬುದು ಸ್ವಯಂ ನಿಷ್ಪನ್ನವಾಗುತ್ತದೆ.

ಕನ್ನಡಿಗರ ಆತ್ಮಗೀತ

ಕೆ. ಆರ್. ಗಣೇಶರಾವ್

ನಾವು ಕನ್ನಡಿಗರು
ಇದ್ದುದನು ಮರೆವವರು; ಇರುವುದನು ಕಳೆವವರು
ಇಲ್ಲದುದಕಾಗಿ ಕೂಗಿ ಕರೆವವರು
ಕೂಗು ಕಚ್ಚಾಟದಲಿ ಕಾಲ ಕಳೆವವರು
ನೆರೆಯನಾಡಿನ ನೀತಿ ಅರಿಯದವರು
ಜನಿಸಿದ ಮಗುವಿಗೂ ಹೆಸರಿಡದ ಜನರು
ನಾವು ಕನ್ನಡಿಗರು

* * *

ನಾವು ಕನ್ನಡಿಗರು
ಎಲ್ಲ ಭಾಷೆಗಳಿಗಿಲ್ಲಿ ಮಾನ ಸನ್ಮಾನ
(ಕನ್ನಡಕೆ ಮಾತ್ರ ಅಪಮಾನ)
ನುಡಿಯುವುದು ಕನ್ನಡವ ನಮಗೆ ಅವಮಾನ
ನಮ್ಮತಾಯಿಯ'ತಾಯಿ' ಎನಲೇಕೋ ಬಿಗುಮಾನ
ಹೊರನಾಡ ಹೊರೆಹೊತ್ತ ಹಂದೆಯಾಳುಗಳು
ನಾವು ಕನ್ನಡಿಗರು

ನಾವು ಕನ್ನಡಿಗರು
ನಿನ್ನೆ-ನಾಳೆಯ ಮರೆತ ಆದರ್ಶವಾದಿಗಳು
ನಾಡಹಿತ ಕಡೆಗಣಿಸಿ ರಾಷ್ಟ್ರೀಯರಾದವರು
ಗಡಿನಾಡ ಗೋರಿಯಲಿ ಗುಡಿ ಗಂಟೆ ಇಟ್ಟವರು
ಗುಂಪುಗದ್ದಲದಲ್ಲಿ 'ಹೊಟ್ಟೆ' ಬೆಳೆಸಿದ ಜನರು
ಮನೆಯ ಮಸಣವ ಮಾಡಿ ಮೆರೆಯುವವರು
ನಾವು ಕನ್ನಡಿಗರು

* * *

ನಾವು ಕನ್ನಡಿಗರು
ನಮಗೇಕೆ ನಾಡ-ನುಡಿ ಬಲ್ಮೆ ಒಲ್ಮೆಗಳು
ನಮಗೇಕೆ ನಾಡಕಟ್ಟುವ, ಕೂಡಿ ಬಾಳುವ ರೀತಿನೀತಿಗಳು
ಯಾರು ಆಳಿದರೇನು ಯಾರು ಬಾಳಿದರೇನು ?
(ಎಲ್ಲರೂ ನಮ್ಮವರೇ ನಮ್ಮವರ ಹೊರತು!)
ಹೊತ್ತೆರಡು ಹೊಟ್ಟೆಹೊರೆಯುವ "ಕಾಕ" ಪಕ್ಷಿಗಳು
ನಾವು ಕನ್ನಡಿಗರು

ಕಾರಂತರ ನಾಟಕಗಳು

ಎಚ್. ವಿ. ಶ್ರೀನಿವಾಸಶರ್ಮ

(ಮುಂದುವರಿದುದು)

೨. ಹಣೆಬರಹ

ಈ ನಾಟಕವೂ ಇದೇ ಅವಧಿಯಲ್ಲಿ ಬರೆದ ಗದ್ಯನಾಟಕ. ಈ ನಾಟಕದ ರಚನೆಗೆ ಹಿನ್ನೆಲೆ ಎಂದಿನಂತೆಯೇ ಕಾರಂತರ ಸ್ವಂತ ಅನುಭವವೇ ಎನ್ನಬಹುದು. ಹಲವಾರು ರೋಗ ರುಜಿನಗಳಿಂದಲೇ ಮಕ್ಕಳು ಸಾಯುವುದು ಸಹಜ. ಆದರೆ ಅದರ ಸರಿಯಾದ ಕಾರಣವನ್ನು ತಿಳಿಯದೆ 'ದೈವದ ಬಡಿತದಿಂದಲೋ' ಹಣೆಯ ಬರಹದಿಂದಲೋ, ಜಾತಕದಲ್ಲೇ ಹಾಗಿತ್ತು ಎಂದೋ ನಂಬಿಕೊಂಡು ತಲೆ ಚಚ್ಚಿಕೊಳ್ಳುವ ಜನರನ್ನು ನೋಡಿದಾಗ, ಕಾರಂತರಿಗೆ ನೋವು ಉಂಟಾಗುತ್ತಿದ್ದಂತೆ ತೋರುತ್ತದೆ. ಈ ಅನುಭವವನ್ನು ಅವರು ಊರೂರು ಸುತ್ತುವಾಗ ಪಡೆಯುತ್ತಿದ್ದುದೂ ನಿಜವೆ. ಅವರ ಮಾತಿನಲ್ಲೇ ಹೇಳುವುದಾದರೆ ಇದಕ್ಕೆ ಪುಷ್ಟಿಬಂದೀತು: "ಕೆಲವರು ರೈತರು ಕೃತಕ ಗೊಬ್ಬರ, ಹಿಂಡಿ, ಗೊಬ್ಬರಗಳಿಂದ ಹೆಚ್ಚಿನ ಬೆಳೆ ಪಡೆಯುತ್ತಿದ್ದರೂ ಅವರದೇ, ಮಗ್ಗುಲಗದ್ದೆಯ ಜನರನ್ನು 'ನೀವೇಕೆ ಹಾಗೆ ಮಾಡುವುದಿಲ್ಲ' ಎಂದು ಕೇಳಿದುದೇ ಆದರೆ, 'ಅವರ ಅದೃಷ್ಟದಲ್ಲಿ ಬರೆದಿದೆ'ಯೆಂದೂ, 'ನಮ್ಮ ಅದೃಷ್ಟಕ್ಕೆ ಒಳ್ಳೆಯ ಬೆಳೆ ಬರಲಾರದು' ಎನ್ನುತ್ತಾರೆ." ಇಂತಹವರನ್ನು ನೋಡಿದಾಗ ಅವರ ಮುಂದೆ ಆಡಲೆಂದು ಈ ನಾಟಕವನ್ನು ಬರೆದಂತೆ ತೋರುತ್ತದೆ.

ಮೊದಲೇ ಬಡವನಾಗಿ ಅದರ ಮೇಲೆ ಹಣೆಯ ಬರಹವನ್ನೇ ನಂಬಿ, ಮುಟ್ಟಿದ್ದೆಲ್ಲಾ ಮಣ್ಣಾಗುವುದಲ್ಲ ಎಂದು ಕೊರಗುತ್ತಾ, ಬ್ರಹ್ಮ ಬರೆದುದನ್ನು ಯಾರ ಅಪ್ಪನಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಮರುಗುವ, ಹಣೆಬರಹದ ವಿಶ್ವಾಸಿ ತ್ಯಾಂಪಣ್ಣ ಜ್ಯೋತಿಷ, ಶನಿಕಾಟ, ಜಾತಕ ಇವುಗಳಲ್ಲಿ ನಂಬಿಕೆ ಇಟ್ಟು ಕೊಂಡು ತನಗೆ ಉಂಟಾಗುವ ನಿತ್ಯಗಟ್ಟಲೆಯ ಲೋಪದೋಷಗಳಿಗೆಲ್ಲಾ, ಇವೇ ಕಾರಣವೆಂದೂ, ಕೊನೆಗೆ ತನ್ನ ಹೆಂಡತಿ ಸಿಡುಕಿ ಮಾತನಾಡುವುದಕ್ಕೂ ಅವಳ ಜಾತಕವೇ ಕಾರಣವೆಂದೂ ನಿರ್ಧರಿಸಿ, ಅದೇ ಕೊರಗಿನಲ್ಲೇ ತನ್ನ ಜೀವನವನ್ನೇ ಮಣ್ಣುಗೂಡಿಸುತ್ತಿರುವ ವ್ಯಕ್ತಿ ನಂಜಪ್ಪ. ಸಮಯಕ್ಕೆ ತಕ್ಕಂತೆ ತನ್ನ ಬುದ್ಧಿಯ ಪ್ರಯೋಜನ ಪಡೆದು, ಅವರಿಬ್ಬರಲ್ಲಿ ಅವರವರ ಸ್ವಭಾವ ಗುಣ ನಂಬಿಕೆಗಳನ್ನು ಕೆರಳಿಸಿ ಅವರಿಂದ ಹಣದ ಪ್ರಯೋಜನ ಪಡೆದು, ತನ್ನ ಭವಿಷ್ಯವೊಂದನ್ನಲ್ಲದೆ, ಪ್ರಪಂಚದ ಭವಿಷ್ಯವನ್ನೆಲ್ಲಾ ಬಲ್ಲವನು ಪುರಾಣಿಕ. ಕಾವೇರಿ, ವೆಂಕಟಮ್ಮ ಇವರಿಬ್ಬರೂ ತ್ಯಾಂಪಣ್ಣ, ನಂಜಪ್ಪ ಇವರಿಬ್ಬರ ಒಡತಿಯರು. ಈ ನಾಟಕದಲ್ಲಿ ವಿಶಾಲಮನೋಭಾವವುಳ್ಳ ಜ್ಞಾನಿಗಳೆಂದರೆ ಇವರಿಬ್ಬರೇ. ಇವು ಭಾಗವಹಿಸುವ ಪಾತ್ರಗಳು. ಇವು ಬರೇ ಪಾತ್ರಗಳಾಗಿ ನಿಲ್ಲುವುದು ಮಾತ್ರವಲ್ಲ; ಜೀವಂತ ವ್ಯಕ್ತಿಗಳಂತೆ ನಮ್ಮ ಮುಂದೆ ನಿಲ್ಲುತ್ತವೆ.

ಐದು ಅಂಕದ ಈ ನಾಟಕದ ವಸ್ತು ಮಹತ್ತರವಾದುದೇನೂ ಅಲ್ಲ. ಕೇವಲ ಅವರವರ ಮಾನಸಿಕ ಶೈಥಿಲ್ಯವೇ ಮೊದಲಿನಿಂದ ತುದಿಯವರೆಗೂ ಹರಿದು ಸಾಗುವುದನ್ನು ಕಾಣುತ್ತೇವೆ. ತ್ಯಾಂಪಣ್ಣ ತನ್ನ ಮಗುವಿಗೆ ಖಾಯಿಲೆಯಾಗಿ ಸಾಯುವ ಗತಿಬಂದರೂ ಗ್ರಹಚಾರ ಕೆಟ್ಟಿರುವಾಗ ಔಷಧಿ ಕುಡಿಸಿದರೆ ಜಾಸ್ತಿಯಾಗುತ್ತದೆ ಎಂದೇ ಅವನ ಭಾವನೆ. "ಔಷಧ ಗಿವುಷಧ ಎಲ್ಲ ಭ್ರಮೆ. ಬ್ರಹ್ಮ ಬರೆದ ಗೆರೆ ಸರಿಯೋ ಎಲ್ಲಾ ಸರಿ." ಇದು ಅವನ ನಂಬಿಕೆ. ತನ್ನ ಮನೆಯ ಹಸು ಹಾಲು ಕರೆಯಿಸಿಕೊಳ್ಳದೇ ಇರುವುದಕ್ಕು ಗ್ರಹಚಾರವೇ ಕಾರಣ. ಮನೆ ಮುಂದಿನ ಹೊಲಹತ್ತುಮುಡಿ ಭತ್ತ ಕೂಡ ಬೆಳೆಯದೇ ಇರುವುದಕ್ಕೂ ಹಣೆಬರಹವೇ ಗತಿ. ಹಣೆಬರಹ ಕೆಟ್ಟಾಗ ಜಾತಕವೂ ಕೂಡ 'ನೀನು ಮುಟ್ಟಿದ್ದೆಲ್ಲಾ ಮಣ್ಣು' ಎಂದೇ ತಿಳಿಸಿ ಬಿಡುವುದಂತೆ.

ಹೀಗೆ ಆರಂಭವಾದ ನಾಟಕದಲ್ಲಿ ಮುಖ್ಯವಾಗಿ ಖಾಯಿಲೆಯಮಗು, ಕರೆಸಿಕೊಳ್ಳದ ಹಸು, ಬೆಳೆಯದ ಹೊಲ, ತನ್ನ ಮನೆಯಲ್ಲಿ ಕಾಣೆಯಾದ ಬೆಳ್ಳಿಪಾಡಗ (ಕಾಲುಬಳೆ). ಪಾಡಗದ ಕಳ್ಳತನಕ್ಕೆ ಕರಿ ಮೂತಿಯ ನಂಜಪ್ಪನ ಮೇಲೆ ಅನುಮಾನವಿದ್ದ ತ್ಯಾಂಪಣ್ಣ ಪುರಾಣಿಕರ ಮನೆಗೆ ಶಾಸ್ತ್ರಕೇಳಲು ಹೋಗುತ್ತಾನೆ. ಇದಿಷ್ಟನ್ನೂ ತಿಳಿದಿದ್ದ ನಂಜಪ್ಪನ ಬಾಯಿಂದ ಕೇಳಿದ ಪುರಾಣಿಕರ ಮನೆಗೆ ತ್ಯಾಂಪಣ್ಣ ಬಂದಾಗ, ಅವನು ಶಾಸ್ತ್ರ ಹೇಳುವ ಸೊಗಸು, ವೈಖರಿ, ಚಮತ್ಕಾರ, ಪ್ರೇಕ್ಷಕರಿಂದ ಮರೆಯಲಾಗದ ಸನ್ನಿವೇಶಗಳೇ.

ಪುರಾಣಿಕ: ಎಲ್ಲಿ ಒಂದು ಸಂಖ್ಯೆ ಹೇಳು?

ತ್ಯಾಪ: ಆರು.

ಪುರಾಣಿಕ: ೧, ೨, ೩, ೪, ೫, ೬. ಅಂದರೆ ಷಷ್ಠ ... ಷಷ್ಠಮಂ ನಷ್ಟ ಕಾರಣಂ... ಏನೋ ನಷ್ಟ ವಾಗಿದೆ... ಆರರಲ್ಲಿ ಎರಡು ಕಳೆದರೆ ನಾಲ್ಕು... ನಾಲ್ಕು ಎಂದರೆ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು... ಬ್ರಾಹ್ಮಣೇ ಮು ಖ ಮಾ ಸೀ ತು... ಪಾದೋ ಶೂದ್ರೋಭಿ ಜಾಯತೇ... ಅಂದರೆ ಪಾದ ... ಆ! ಕಾಲಿಗೆ ಹಾಕುವಂತಾದ್ದು... ಬಿಳೇದಿರ ಬಹುದು. ಅಲ್ಲವೆ. ಕಾಲು ಚಿನ್ನವೇನೋ ಕಳುವಾಗಿರ ಬೇಕು.

ಹೀಗೆಯೇ ಮುಂದುವರಿದ ಪುರಾಣಿಕ,

"ಆರು ಅಂದೆಯಲ್ಲ... ಒಂದು ಕಳೆದರೆ ಐದು. ಆರರಿಂದ ಐಯ್ದಕ್ಕೆ ಗುಣಿಸಿದರೆ ಮೂವತ್ತು ಅಂದರೆ ಅಮಾವಾಸ್ಯೆ. ಕಪ್ಪು ಎಂದು ಕಾಣುತ್ತದೆ. ಕಪ್ಪು ಜನ..."

ಈ ಮಾತಿನಿಂದಲೇ ತ್ಯಾಂಪಣ್ಣನಿಗೆ ಸಾಕಷ್ಟು ನಂಬಿಕೆ ಬರುತ್ತದೆ. ಮಗು, ದನ, ಹೊಲ, ಈ ಸಮಸ್ಯೆಗಳನ್ನು ಅವನಲ್ಲಿ ತಿಳಿಸಿ ಪರಿಹಾರ ಬೇಡುತ್ತಾನೆ. ಒಂದೊಂದು ಪ್ರಶ್ನೆಗೂ ಒಂದೊಂದು ಪಾವಲಿಯನ್ನು ಕೇಳುತ್ತಾ ಪುರಾಣಿಕ ಅವನಿಗೆ ಕೊಡುವ ಪರಿಹಾರ ಇದು:

೧) "ಮಗು ಬದುಕುವುದು ಕಷ್ಟ." ೨) ದನಕ್ಕೆ ಏನೋ ಕಂಟಕ ಬಂದಹಾಗೆ ಕಾಣುತ್ತೆ.

೩) ಹೊಲಕ್ಕೆ ಭೂತದ ಉಪದ್ರವವಿದೆ ೪) ಪಾಡಗ ಕರಿಮುಸುಡಿನವ ಅಡಗಿಸಿದ್ದಾನೆ. ಈ ನಾಲ್ಕರ ಪರಿಹಾರಕ್ಕೆ ಹಣ ತಂದಿಟ್ಟರೆ ಮಾತ್ರ ಸಾಧ್ಯವೆಂದು ಹೇಳಿ ನಿಲ್ಲಿಸುತ್ತಾನೆ ಪುರಾಣಿಕ. ಇದರ ಪರಿಣಾಮ ತ್ಯಾಂಪಣ್ಣನಿಗೂ, ನಂಜಪ್ಪನಿಗೂ ಬೀದಿಯಲ್ಲೇ ಚೂರಿಹಿಡಿದು ಕಾದಾಡುವಂತಾಗುತ್ತದೆ. ಆದರೆ ನಾಟಕದ ಕೊನೆಯಲ್ಲಿ ಕಾರಂತರು, ಈ ಮೂಢನಂಬಿಕೆಗಳಿಂದ ಆಗುವ ಅನರ್ಥಗಳನ್ನು ಬಯಲಿಗೆಳೆದು, ಜನರ ಮನೋದೌರ್ಬಲ್ಯಗಳನ್ನು ಬಿಡಿಸಿ ತೋರಿಸಲು ಯತ್ನಿಸುತ್ತಾರೆ.

ಕಾವೇರಿ, ವೆಂಕು, ಇವರಿಬ್ಬರು ನಾಟಕದಲ್ಲಿ ಈ ಮೂಢ ನಂಬಿಕೆಗಳನ್ನು ದಾಟನಿಂತ ಜ್ಞಾನಶಕ್ತಿಗಳಂತೆ ಇದ್ದು ಇತರರಿಗೆ ಜ್ಞಾನದ ಬೆಳಕನ್ನು ತೋರಿಸುತ್ತಾರೆ. ಗಂಡಸರ ವೈಮನಸ್ಸಿನ ನಡುವೆ ತಾವು ನಿಂತು ಅವರವರ ಮಾನಸಿಕ ನೋವುಗಳನ್ನು ಬಿಡಿಸಿ ಕಳೆಯುತ್ತಾರೆ.

ಡಾಕ್ಟರಿಂದ ಔಷಧಿ ತಂದು ಮಗುವನ್ನು ಬದುಕಿಸಿಕೊಂಡ ಕಾವೇರಿ ಪುರಾಣಿಕರನ್ನು ಕಂಡಾಗ, ನಡೆಸುವ ಮಾತುಕತೆ ಬಲು ರಮ್ಯವಾಗಿದೆ. ಅಷ್ಟೇ ಸೋಜಿಗವಾಗುತ್ತದೆ ಪುರಾಣಿಕನ ಜಾಣ್ಮೆಯನ್ನು ಕಂಡಾಗ.

ಕಾವೇರಿ: ಪಾಡಗ ಕದ್ದವರು ಕರಿಮುಸುಡಿನವರು ಎಂದಿರಲ್ಲ. ಅದು ಒಲೆ ಬೂದಿಯಲ್ಲಿ ಸಿಕ್ಕಿತಲ್ಲ.

ಒರಾ: ಕರಿಮುಸುಡಿನವ ಎಂದರೆ ನಂಜಪ್ಪನೇನು? ಕರಿಮಸಿ ಕೆಂಡ ಎಂದೂ ಆಗಬಹುದಲ್ಲ.

ಒಲೆಯಲ್ಲಿದ್ದ ಮೇಲೆ ಹಾಗೆ ಅರ್ಥವಾಯಿತಲ್ಲ–ಇದು ಪುರಾಣಿಕ ಹೇಳಿದ್ದ ಶಾಸ್ತ್ರ. ಹಾಗೆಯೇ ಮಗು ಉಳಿಯುವುದು ಕಷ್ಟ ಎಂದನೇ ಹೊರತು ಮಗು ಸಾಯುತ್ತದೆ ಅನ್ನಲಿಲ್ಲ, ಎನ್ನುತ್ತಾನೆ ಪುರಾಣಿಕ. ಹೀಗೆ ಚಮತ್ಕಾರವಾಗಿ ತಪ್ಪಿಸಿಕೊಳ್ಳುತ್ತಾನೆ. ಹಸು ಹಾಲು ಕರೆಯದೇ ಇರುವ ಕಾರಣವನ್ನು ತಿಳಿಸುತ್ತಾ ಕಾವೇರಿ ಕೆಚ್ಚಲನ್ನು ಮುಳ್ಳುಗೀರಿ ಗಾಯಮಾಡಿರುವುದನ್ನು ತೋರಿಸುತ್ತಾಳೆ. ಜಾಣತನದ ಪುರಾಣಿಕ ಸೋಲುವುದಿಲ್ಲ. ತಟ್ಟನೆ ಹೇಳುತ್ತಾನೆ: 'ಕಂಟಕ' ಎಂದರೇನು? 'ಮುಳ್ಳು' ಅಲ್ಲಿಗೆ ಹೇಳಿದುದು ಸರಿ ಎನ್ನುತ್ತಾನೆ. ಹೊಲದ ಸಮಸ್ಯೆಯನ್ನು ಕುರಿತು. 'ಭೂತ ಭೂತ ಎಂದರೇನು. ಪಂಚಭೂತ! ಎಂದರೆ ಅದರಲ್ಲಿ ನೆಲ ಒಂದು ಎಂದಮೇಲೆ ಗೊಬ್ಬರ ಸಾಲದೇ ಇರುವುದರಿಂದ ಬೆಳೆ ಇಲ್ಲ ಎಂದಾಯಿತು. ಅದರಿಂದ ಭೂತದ ಉಪದ್ರ ಎಂದದ್ದು ಸರಿ ಎನ್ನುತ್ತಾನೆ.

ಹಣೆಬರಹ, ಜಾತಕ, ಎಂದು ನಂಬಿಕೆ ಕೆಡುತ್ತಿದ್ದ ತ್ಯಾಂಪ, ನಂಜಪ್ಪ ಬುದ್ಧಿಕಲಿಯುತ್ತಾರೆ. ಈ ನಾಟಕದಲ್ಲಿ ಅವಾಸ್ತವಿಕೆ ಅಷ್ಟೇನೂ ಕಾಣಿಸುವುದಿಲ್ಲ. ಈ ಕಾಲಕ್ಕೆ ನಾಟಕವನ್ನು ರಂಗದ ಮೇಲೆ ತಂದು ಪ್ರಯೋಗಿಸಬಹುದಾದ ನಗೆ ನಾಟಕ 'ಹಣೆಬರಹ' ಎಂದರೆ ಅತಿಶಯೋಕ್ತಿ ಆಗಲಾರದು.

೩. ಕಟ್ಟೆಪುರಾಣ

ಇದೊಂದು ವಿಡಂಬನನಾಟಕ. ಮಾಡುವುದಕ್ಕೆ ಕೆಲಸವಿಲ್ಲದೆ ಮನೆಯ ಮುಂದಿನ ಪಡಸಾಲೆಯೊಂದರಲ್ಲಿ ಇಡೀ ದಿನ ಕುಳಿತು ಅವರಿವರ ಮನೆಯ, ಇಲ್ಲವೆ ಯಾರಾದರೂ ವ್ಯಕ್ತಿಯ ವಿಷಯವನ್ನೇ ಎತ್ತಿಕೊಂಡು ಬಾಯಿಗೆ ಬಂದಂತೆ, ಹರಟುತ್ತಾ ಕೂರುವ ಸಮಾಜದ ಕೆಲವು ಸೋಮಾರಿಗಳ ಪಾತ್ರ ಚಿತ್ರಣ ಈ ನಾಟಕದಲ್ಲಿ ನಡೆದಿದೆ ಎನ್ನಬಹುದು. ಈ ನಾಟಕವನ್ನು ರಂಗಮಂಟಪದ ಮೇಲೆ ತರುವ ಬದಲು ಓದಿ ಆನಂದಪಡುವುದೇ ಸೂಕ್ತವೆನ್ನಿಸುತ್ತದೆ. ಅದಕ್ಕೆ ಅಷ್ಟೇ ಸೊಗಸು ಎನ್ನಬಹುದು. ನಾಟಕ ನಡೆಯುವುದು ಒಂದೇ ಜಗಲಿಯ ಮೇಲೆ ತೆರೆ

ಎದ್ದ ಮೇಲೆ ನಾಟಕ ಮುಗಿದಂದೇ ತೆರೆಬೀಳುವುದು. ಸತತವಾಗಿ ಓತಪ್ರೋತವಾಗಿ ಮಾತುಕತೆ ನಡೆದೇ ಸಾಗುತ್ತದೆ. ಆರು ಪಾತ್ರಗಳು ಭಾಗವಹಿಸಿದ್ದರೂ ಪ್ರಧಾನ ಸೋಮಾರಿ ಎಂದರೆ ರಂಗಣ್ಣಯ್ಯ. ಜಗಲಿ ಮೇಲೆ ಕುಳಿತ ೩೦-೩೫ ವಯಸ್ಸಿನ ಈತ ಹರಟೆಯಲ್ಲಿ ಕಾಲ ಕಳೆಯಲು ಹಾದಿಯಲ್ಲಿ ಹೋಗುವವರನ್ನೆಲ್ಲಾ ಕರೆದು ಮಾತನಾಡಿಸುವುದು ರೂಢಿ. ಹೀಗೆ ಸೇರಿದ ವ್ಯಕ್ತಿಗಳಿಗೆಲ್ಲಾ ರಂಗಣ್ಣಯ್ಯನ ಜಗಲಿ ಒಂದು ಪುರಾಣ ಕಟ್ಟೆ. ಇವರು ಓದುವ ಪುರಾಣ, ಅವರಿವರ ಸುದ್ದಿ, ಬೇಸರವಾದಾಗ ಇಸ್ಪೀಟು; ಇದು ಗೀತೆಯಂತೆ ಅವರಿಗೆ. ಇಂತಹವರಲ್ಲಿ ರಾಮಣ್ಣಯ್ಯ ಇವರ ಕೊರಳಪ್ರಾಣ. ಯಾರು ಬರದಿದ್ದರೂ ಇವನು ಸದಾಸಿದ್ಧ. ಈ ವೈಗಳ್ಳನ ಜೊತೆಗೆ ಆಗಾಗ ಬಂದು ಹೋಗುವವರು ಶ್ಯಾನುಭೋಗ ವೆಂಕಟರಾಯ, ಅರ್ಚಕ ಶ್ರೀಧರ ಭಟ್ಟ. ಹೊಟ್ಟೆಗಿಲ್ಲದ ಬಡವ ಐತಪ್ಪ ಇವರ ಹಾಸ್ಯಕ್ಕೆ ವಸ್ತು. ಭಾಗ್ಯಮ್ಮ ರಾಮಣ್ಣನ ಯಜಮಾನತಿ. ಸ್ವಲ್ಪ ವಿವೇಕಶಾಲಿನಿ ಎಂದರೆ ಇವಳೊಬ್ಬಳೇ.

ನಾಟಕದಲ್ಲಿ ದೃಶ್ಯಾದೃಶ್ಯಗಳು ಹೆಣೆದಿರದಿದ್ದರೂ, ಸನ್ನಿವೇಶದಿಂದ ಸನ್ನಿವೇಶಕ್ಕೆ, ಘಟನೆಯಿಂದ ಘಟನೆಗೆ, ಸುದ್ದಿಯಿಂದ ಸುದ್ದಿಗೆ ಚಾಕಚಕ್ಯತೆಯಿಂದ ಹಾದುಹೋಗುವ ಸಂಭಾಷಣೆ ಯಾರ ಮನಸ್ಸನ್ನಾದರೂ ಆಕರ್ಷಿಸದೇ ಇಲ್ಲ. ಅದು ರಂಗಣ್ಣಯ್ಯನ ಮಾತಿನ ವರಸೆ ಎನ್ನುವುದಕ್ಕಿಂತ ಮಿಗಿಲಾಗಿ ಕಾರಂತರ ಮಾತಿನಜಾಣ್ಮೆ. ಚತುರತೆ ಎಂದರೂ ತಪ್ಪಾಗಲಾರದು. ನಾಟಕಕಾರನ ದೃಷ್ಟಿ ಸಮಾಜದ ಹಲವಾರು ವ್ಯಕ್ತಿಗಳ ಮೇಲೆ ಬಿದ್ದಾಗ, ಅವುಗಳನ್ನೇ ನಾಟಕದಲ್ಲಿ ಪ್ರತಿಬಿಂಬಿಸಿರುವ ಹಾಗೆ ಕಾಣುವುದು ಸಹಜ. ಇಲ್ಲಿ ಕಟ್ಟೆಯಲ್ಲಿ ನಡೆಯುವ ಪುರಾಣ ಇವು: ವಿಧವೆಯರ ಮಡಿ ಸಂಗತಿ, ವಕೀಲರ ಮೋಸ, ವೃತ್ತಪತ್ರಿಕೆಯ ಹರಟೆ, ತಾಲ್ಲೂಕು ಕಚೇರಿ, ಕ್ರಿಶ್ಚಿಯನ್ ಮತದ ಅವಹೇಳನ, ಶ್ರೀಧರಭಟ್ಟನ ಪೂಜೆಯ ಸ್ವಾರ್ಥ, ಲಂಚ, ಶಾಲಾಮಾಸ್ತರು, ಹೀಗೆ ಕಟ್ಟೆಯ ಪುರಾಣಕ್ಕೆ ಬಾರದಿರುವ ವಿಷಯವಿಲ್ಲ. ಇವರ ವಿಚಾರಮಂಥನದಲ್ಲಿ ಇವು ಸಿಕ್ಕಲೇಬೇಕು. ಇವುಗಳಲ್ಲಿ ಮುಖ್ಯವಾದ ಎರಡು ಘಟನೆಗಳನ್ನು ಮಾತ್ರ ತಿಳಿಸಿದರೆ ಕಟ್ಟೆಪುರಾಣದ ವೈಶಿಷ್ಟ್ಯ ಕಣ್ಣಿಗೆ ಕಟ್ಟೀತು.

ಬಡತನದಲ್ಲಿ ಬೆಂದು ಬೇಡರ ಜಾತಿಯ 'ಐತು' ಭಿಕ್ಷೆ ಬೇಡುವ ದಾಸನಾಗುತ್ತಾನೆ. ಅವನನ್ನು ಕಂಡ ರಾಮಣ್ಣಯ್ಯ, ರಂಗಣ್ಣಯ್ಯರ ಲೇವಡಿ ಬಲು ಅಂದವಾಗಿದೆ.

ರಂಗ: ತಡಿ, ತಡಿ, ಯಾರೋ ನಾರದರು ಬಂದ ಹಾಗಿದೆ. . . .

ರಾಮು: ಹೊ . . . ಹೊಸರಂಗು ಶುರುಮಾಡಿದಾನೆ ಪಟ್ಟಾಗಿ ಮೂರುನಾಮ ಬೇರೆ. ಶಂಖ ಜಾಗಟೆ ಯಾವ ದೇವರ ಗುಡಿಯಿಂದ ಕದ್ದನೋ.

ಹೀಗೆ ಇವರ ಹರಟೆ ಪ್ರಾರಂಭ. ಹತ್ತಿರ ಬಂದ ಐತುವನ್ನು ಮಾತಾಡಿಸುವ ರೀತಿ ಇದು ". . . ಪುರಂದರ ದಾಸರಂಥ ಪುಣ್ಯದ ಕೆಲಸವನ್ನು ಯಾರು ಮಾಡಬೇಕು ಈ ಕಲಿಯುಗದಲ್ಲಿ! ಯಾವಾಗ ಆ ಪುಣ್ಯಾತ್ಮ ಪ್ರಾಣ ಬಿಟ್ಟನೋ, ಅವನೇನು ಪ್ರಾಣ ಬಿಡುತ್ತಾನೆ, ನಮ್ಮ ಅಜ್ಞಾನ, ಅಂತು ಯಾವಾಗ ಪ್ರಾಣ ಬಿಟ್ಟನೋ ಅವನ ಹಿಂದೆಯೇ ಹೋಯಿತು ಅವನ ಕೀರ್ತನೆ. ಏನೋ ಐತುವಂಥ ಪುಣ್ಯಾತ್ಮರು ಹುಟ್ಟಿ ಅದನ್ನು ನಮ್ಮಂಥ ಪಾಪಿಷ್ಟರ ಕಿವಿಗೆ ಕೇಳಿಸುತ್ತಾರಲ್ಲ . . ." ಹೀಗೆ ಇಬ್ಬರೂ ಸೇರಿ ವ್ಯಂಗ್ಯವಾಗಿ ತಮಾಷೆ ಮಾಡುವುದು, ಅವನು ಇದನ್ನು ತಿಳಿಯದೆ ತೆರೆದ ಮನಸ್ಸಿನಿಂದ ತನ್ನ ಕಷ್ಟವನ್ನು ತೋಡಿಕೊಳ್ಳುವುದು, ಅವನಿಂದ ಹಾಡು ಹೇಳಿಸಿ, ಕಾಸುಕೊಡದೆ "ಅವಳು ಉಗ್ರಾಣದ ಕೋಣೆಗೆ ಬೀಗ ಹಾಕಿ ಕೆರೆಗೆ ಹೋದಳು . . . ಅಕ್ಕಿ ಕುಚ್ಚಲು ಸಹ ಕೋಣೆ ಒಳಗೆ ಇದೆ" ಎಂದು ಜಾಣತನವಾಗಿ ಮಾತಾಡಿ ತಪ್ಪಿಸಿಕೊಳ್ಳುವುದು ಹೀಗೆ ನಡೆಯುತ್ತದೆ ಅವರ ಲೇವಡಿ. ಹಾಗೆಯೇ ಮತ್ತೊಂದು ಪ್ರಮುಖ ಸುದ್ದಿ ಎಂದರೆ ಶ್ರೀಧರಭಟ್ಟರ ಮಗಳ ಶೀಲ ಪ್ರಶ್ನೆ. ಅವಳ ನಡತೆಯ ಬಗ್ಗೆ ಹಲವಾರು ಕತೆ ಬೆಳೆಸಿ, ಅವಳು ಕೆರೆ ಹಾರುವವರೆಗೆ ಪ್ರಸಂಗವನ್ನು ಹಬ್ಬಿಸಿ ಬಿಡುತ್ತಾರೆ ಈ ಕಟ್ಟೆಯ ಸದಸ್ಯರೆಲ್ಲಾ ಸೇರಿ.

ಒಟ್ಟಿನಲ್ಲಿ ಭಾಗಮ್ಮನ ಈ ಮಾತಿನೊಡನೆ ಕಾರಂತರು, ಈ ಸೋಮಾರಿಗಳಿಂದ ಆಗುವ ಅನರ್ಥವನ್ನು ಹೊರತಂದು ನಾಟಕವನ್ನು ಮುಗಿಸುತ್ತಾರೆ.

". . . ಮನೆ ಹೆಂಗಸರು ಸುಮ್ಮನೆ ಅಡುಗೆ ಮಾಡಿ ನಿಮ್ಮಂಥ ಕೋಣಗಳನ್ನು ಸಾಕುತ್ತಾರೆ ಎಂದು ಇಷ್ಟು ಸೊಕ್ಕಿನ ಮಾತು . . . ಅಗ್ಗದ ಕೂಳು ತಿಂದು, ದಾರಿ ಮೇಲೆ ಹೋಗುವವರನ್ನೆಲ್ಲಾ ಬೈಯುತ್ತಾ ಇರುವುದು ಕೆಲಸವಾಗಿದೆ ನಿಮಗೆ . . . ಬಡವರಮನೆ ಮಗಳು ಗಂಡ ಇಲ್ಲ ಎಂದ ಮಾತ್ರಕ್ಕೆ ಇಷ್ಟು ನಾಲಿಗೆ ಸಡಿಲ ಮಾಡಬೇಕೆ? ಅವಳಂಥ ಶೀಲದಂತ ಹುಡುಗಿ ನಿಮ್ಮ ಕುಲದಲ್ಲಿ ಹುಟ್ಟಿದ್ದಾಳೆಯೆ . . ." ಹೀಗೆ ಛೀಮಾರಿ ಮಾಡಿದ ಭಾಗಮ್ಮ ಕಟ್ಟೆಯ ಸದಸ್ಯರಿಗೆಲ್ಲಾ ಬುದ್ಧಿ ಕಲಿಸುತ್ತಾಳೆ. ನಾಟಕ ಮುಗಿಯುತ್ತದೆ.

(ಮುಂದುವರಿಯುವುದು)

'ಸಪ್ತರ್ಷಿಧಾಮ' ಹಾಗೂ 'ಕವಿ-ಕೃತಿ ದರ್ಶನ'

[ಒಂದು ಸಮೀಕ್ಷೆ]

ಕೆ. ಎನ್. ಶ್ರೀಹರಿ

'ಮುಕುಂದಮಾಲಾ' ಕೃತಿಯನ್ನು ಅನುಗ್ರಹಿಸಿದ ಶ್ರೀ ಕುಲಶೇಖರ ಆಳ್ವಾರರು,

"ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ಮತ್ಪ್ರಾರ್ಥನೀಯ ಮದನುಗ್ರಹ ಏಷ ಏವ
ತ್ವದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ."

ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡಿದ್ದಾರೆ. ಇದರಂತೆ ಕನ್ನಡದ ಕವಿರತ್ನ ಶ್ರೀ ಜಿ. ಪಿ. ರಾಜರತ್ನಂ ಅವರು "ನಾನು ಸೇವಿಸುತ್ತಿರುವ ಸಾಹಿತ್ಯವೇ ನನ್ನ ಭಾಗದ ದೇವರು. ನನ್ನ ದೇವರಿಗೆ ಪರಿಚಾರಕನಾಗಿ ನಡಸುತ್ತಿರುವ ನಿತ್ಯ ಕೈಂಕರ್ಯವನ್ನು ನನ್ನ 'ಸಾಹಿತ್ಯ ಪರಿಚಾರಿಕೆ' ಯೆಂದು ನಾನು ಭಾವಿಸಿದ್ದೇನೆ" ಎಂದು ನಿವೇದಿಸಿಕೊಂಡಿದ್ದಾರೆ.

ಈ 'ಸಾಹಿತ್ಯ ಪರಿಚಾರಿಕೆ'ಯನ್ನೇ, 'ಕವಿ-ಕೃತಿದರ್ಶನ' ಉಪನ್ಯಾಸ ಮಾಲೆಗಳ ಮೂಲಕ, ಬೆಂಗಳೂರು ರಾಜಾಜಿನಗರದ ವಿದ್ಯಾವರ್ಧಕ ಸಂಘದ 'ಸಪ್ತರ್ಷಿಧಾಮ'ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಕೂಡಿ, ಅಕ್ಷರಶಃ ಪಾಲಿಸಿಕೊಂಡು ಬರುತ್ತಿವೆ ಎಂದು ಹೇಳಬಹುದು.

ರಾಜಾಜಿ ನಗರ 'ಸಪ್ತರ್ಷಿಧಾಮ'ದ ಮಂಗಳ ಸಭಾಂಗಣದಲ್ಲಿ ಪ್ರತಿತಿಂಗಳ ಎರಡನೆಯ ಭಾನುವಾರ ಸಂಜೆ ೫ ಗಂಟೆಯಿಂದ ರಾತ್ರಿ ೯ ಗಂಟೆವರೆವಿಗೆ 'ಸಾಹಿತ್ಯ ಸಮಾರಾಧನೆ'ಯ ಕಾರ್ಯಕ್ರಮವು ಕಳೆದ ೨೨ ತಿಂಗಳುಗಳಿಂದ (೧೯೬೫ರ ಆಗಸ್ಟ್ ೧೧ರಿಂದ) ನಿರಂತರವಾಗಿ, ನಿರಾಡಂಬರವಾಗಿ, ಗಾಂಭೀರ್ಯದಿಂದ, ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬರುತ್ತಲಿರುವುದು ಸರ್ವವಿದಿತವಾಗಿದೆ. ಇದೇ 'ಕವಿ-ಕೃತಿದರ್ಶನ ಉಪನ್ಯಾಸ ಮಾಲೆ.' ಇದರ ಆದ್ಯ ಪ್ರವರ್ತಕರು: ಕನ್ನಡ ಸಾಹಿತ್ಯ ಪರಿಷತ್ತು; ಏರ್ಪಾಟಿನ ಹೊಣೆಗಾರರು: ರಾಜಾಜಿನಗರ ವಿದ್ಯಾವರ್ಧಕ ಸಂಘ; ಸ್ಥಳ: ವಿದ್ಯಾವರ್ಧಕ ಸಂಘದ 'ಸಪ್ತರ್ಷಿಧಾಮ'; ದಿನ: ಪ್ರತಿತಿಂಗಳ ಎರಡನೆಯ ಭಾನುವಾರ; ಕಾಲ: ಸಂಜೆ ೫ ಗಂಟೆಗೆ. ಹೀಗೆ, ಇದುವರೆಗೆ ೨೨ ಜನ ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಕುರಿತು ವ್ಯಾಖ್ಯಾನಗಳು ನಡೆದಿವೆ. ಸುಮಾರು ಒಂದು ನೂರು ಮಂದಿ ಹಿರಿಯ ಕಿರಿಯ ವಿದ್ವಾಂಸರು, ಕಾಲೇಜುಗಳ ಅಧ್ಯಾಪಕರು, ಪ್ರಾಧ್ಯಾಪಕರುಗಳು, ಕವಿ, ಗಮಕಿ, ವಾಗ್ಮಿಗಳು ಭಾಗವಹಿಸಿ ಸಾಹಿತ್ಯ ಪರಿಚಯ, ಸಾಹಿತ್ಯ ವಿಮರ್ಶೆಗಳನ್ನು ನಡೆಸಿಕೊಟ್ಟು ಉಪಕರಿಸಿದಾರೆ.

"ಹೀಗೆ ಕನ್ನಡದ ಸಮಕಾಲೀನ ಲೇಖಕರ ಸಮಗ್ರ ಕೃತಿ ಪ್ರದರ್ಶನವನ್ನು, ಮಾಡಿಸುವ ಇಂತಹ ಗೋಷ್ಠಿಗಳು ದೇಶದಲ್ಲಿ ಬೇರೆ ಕಡೆಗಳಲ್ಲಿ ನಡೆದಿರಬಹುದು. ಅದು ನಮಗೆ ಗೊತ್ತಿಲ್ಲ. ನಡೆದಿಲ್ಲದಿದ್ದರೆ ನಡೆಯುವುದು ಒಳ್ಳೆಯ ಸಂಪ್ರದಾಯ. ಇದು ಉಚ್ಚ ನಾಗರಿಕತೆಯ ಕುರುಹು" ಎಂದು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಪದ್ಮಶ್ರೀ ವಿ. ಕೃ. ಗೋಕಾಕ ಅವರು ಅಭಿಪ್ರಾಯಪಟ್ಟಿದ್ದಾರೆ.

೧೯೬೫ರ ಆಗಸ್ಟ್ ತಿಂಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಂಗವಾಗಿ 'ರಾಷ್ಟ್ರಕವಿ ಕುವೆಂಪು' ಅವರ ಸಾಹಿತ್ಯವನ್ನು ಕುರಿತು ಬೆಂಗಳೂರಿನ ಬೇರೆಬೇರೆ ಕಡೆಗಳಲ್ಲಿ ಒಂದು ಸಪ್ತಾಹ ಏರ್ಪಾಟಾಯಿತು. ಪರಿಷತ್ತಿನ ಕರೆಯನ್ನು ಮನ್ನಿಸಿ, ರಾಜಾಜಿನಗರದ ವಿದ್ಯಾವರ್ಧಕ ಸಂಘವೂ ತನ್ನ 'ಸಪ್ತರ್ಷಿಧಾಮ'ದಲ್ಲಿ ಆಗಸ್ಟ್ ೧೧ರಂದು ಈ ಸಪ್ತಾಹವನ್ನು ಆರಂಭಿಸಿತು. ಆದರೆ, ಮುಂದೆಯೂ ಹೀಗೆಯೇ ತಿಂಗಳಿಗೊಂದು ಸಾಹಿತ್ಯ ಕಾರ್ಯ ನಡೆಸುತ್ತ ಹೋಗಬಹುದೆಂದು ಆಗ ತಿಳಿದಿರಲಿಲ್ಲ. ಅಂದಿನ ಸಮಾರಂಭ ಮುಗಿದ ಮೇಲೆ, ಶ್ರೋತೃವೃಂದದ ಕೆಲವರು ಸಾಹಿತ್ಯಾಭಿಮಾನಿಗಳು ಬಂದು 'ಇಂಥ ಕಾರ್ಯಕ್ರಮಗಳನ್ನು ದಯೆಯಿಟ್ಟು ಆಗಿಂದಾಗ್ಯೆ ನಡೆಸಿ, ಸಾಹಿತ್ಯದ ರಸದೂಟವನ್ನು ಉಣಿಸಿರಿ' ಎಂಬ ಆಶಯವನ್ನು ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಮುಂದೆ ವ್ಯಕ್ತಪಡಿಸಿದರು. ಕಾರ್ಯಕರ್ತರೂ ಈ ಬಗೆಗೆ ಆಸಕ್ತಿ ತೋರಿದರು. ಕನ್ನಡ ಸಾಹಿತ್ಯ ಪರಿಷತ್ತೂ ತನ್ನ ನೆರವನ್ನು ಕೊಟ್ಟು

ಪ್ರೋತ್ಸಾಹಿಸಲು ಮುಂದೆ ಬಂತು. ಇವುಗಳ ಪ್ರತಿಫಲವೇ ಈ 'ಕವಿ-ಕೃತಿದರ್ಶನ' ಉಪನ್ಯಾಸ ಮಾಲೆ. ಈ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಪ್ರತಿ ತಿಂಗಳೂ ನಡೆಸುವ ಹೊಣೆಯನ್ನು ಸಂಘವು ಹೊತ್ತಿತು.

ಯಾವ ರೀತಿ ಈ ಉಪನ್ಯಾಸಮಾಲೆಯನ್ನು ನಡೆಸಬೇಕೆಂಬ ಬಗೆಗೆ ಸರ್ವಶ್ರೀಪೂಜ್ಯ ಡಾ. ಮಾಸ್ತಿ, ಡಾ. ದ.ರಾ. ಬೇಂದ್ರೆ, ಜಿ. ಪಿ. ರಾಜರತ್ನಂ, ಸಿದ್ಧವನಹಳ್ಳಿ ಕೃಷ್ಣಶರ್ಮ, ಶ್ರೀರಂಗ, ಪ್ರೊ. ಜಿ. ವೆಂಕಟಸುಬ್ಬಯ್ಯ ಎಸ್. ಆರ್. ಮಳಗಿ, ಅ. ರಾ. ಮಿತ್ರ, ಹಂಪ ನಾಗರಾಜಯ್ಯ, ಲಕ್ಷ್ಮೀನಾರಾಯಣಭಟ್ಟ, ಕ. ವೆಂ. ರಾಜಗೋಪಾಲ, ನೀ. ಕಸ್ತೂರಿ, ಶೇಷನಾರಾಯಣ, ಪಿ. ಆರ್. ಮುಂಡೇವಾಡಿ, ಎಂ. ಎನ್. ಲಕ್ಷ್ಮೀನಾರಾಯಣರಾವ್, ಎಚ್. ಬಿ. ಪುರೋಹಿತ್-ಮತ್ತಿತರರು ಉಪಯುಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನಿತ್ತು ಉಪಕರಿಸಿದ್ದಾರೆ.

ಮುಂದೆ, ೧೯೭೫ರ ಸೆಪ್ಟೆಂಬರ್ ತಿಂಗಳಿನ ೧೧ನೆಯ ತಾರೀಕು, 'ವರಕವಿ ಬೇಂದ್ರೆ ಅವರ ಸಾಹಿತ್ಯ ಸೌಭಾಗ್ಯ'ವನ್ನು ಕುರಿತು ಎರಡನೆಯ ಉಪನ್ಯಾಸವನ್ನು ಏರ್ಪಡಿಸಲಾಯಿತು. ಆ ಸಂಬಂಧದ ಆಹ್ವಾನಪತ್ರಿಕೆಯ ಹಿಂದುಗಡೆ, ಮುಂದಿನ ಉಪನ್ಯಾಸಮಾಲೆಯಲ್ಲಿ ಇಂತಿಂತಹವರ ಕೃತಿಗಳ ಬಗೆಗೆ ಕಾರ್ಯಕ್ರಮ ನಡೆಯುವುದೆಂದು ಸೂಚಿಸಿ, ಒಟ್ಟು ಇಪ್ಪತ್ತು ಸಾಹಿತಿಗಳ ಹೆಸರನ್ನು ಉಲ್ಲೇಖಿಸಿ, 'ಇನ್ನೂ ಅನೇಕ (ನಾಡಿನ ಹಿರಿಯ ಕಿರಿಯ) ವಿದ್ವಾಂಸರ ಬಗೆಗೂ ವಿಚಾರಗೋಷ್ಠಿಗಳು ನಡೆಯಲಿವೆ' ಎಂದು ಶ್ರುತಪಡಿಸಲಾಯಿತು.

ಅಲ್ಲಿಂದ ಈಚೆಗೆ ಪ್ರತಿತಿಂಗಳೂ (ಎರಡನೆಯ ಭಾನುವಾರ) ಒಬ್ಬೊಬ್ಬ ಸಾಹಿತಿಯ ಕೃತಿಗಳನ್ನು ಕುರಿತು ಉಪನ್ಯಾಸಗಳು ನಡೆದಿವೆ. ಈಬಗ್ಗೆ ನಾವು ಯಾವ ವಿದ್ವಾಂಸರ ಬಳಿಗೆ ಹೋಗಲಿ (ಹಿರಿಯರು, ಕಿರಿಯರು) ನಮಗೆ ಅವರಿಂದ ಸುಸ್ವಾಗತ ಹಾಗೂ ಪ್ರೋತ್ಸಾಹ ದೊರಕಿತು. ನಮ್ಮೊಡನೆ ಸಹಕರಿಸುವ ಆಶ್ವಾಸನೆಯನ್ನೂ ನೀಡಿ, 'ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ' ಎಂದು ಹಾರೈಸಿದರು. ಇಷ್ಟು ದಿನವಾದರೂ, ಉಪನ್ಯಾಸಕರುಗಳಿಗೆ ಒಂದು ಬಿಡಿಗಾಸನ್ನೂ ಸಂಭಾವನೆಯಾಗಿ ಕೊಟ್ಟಿಲ್ಲ. ಕಾರಣ 'ನಮ್ಮಲ್ಲಿ ಬೆಳ್ಳಿಯಿಲ್ಲ, ಬಂಗಾರವಿಲ್ಲ; ಆದರೆ ಯಾವುದು ಇದೆಯೋ ಅದನ್ನು ನಿರ್ವಂಚನೆಯಾಗಿ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ದೃಢದಿಂದಲೂ ನಿರ್ವಂಚನೆಯಿಂದಲೂ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿ ಸಹಾಯಕ್ಕೆ ಬಂದು ನಿಲ್ಲುವರೆಂದು ನಮಗೆ ಧೈರ್ಯವಿದೆ' ಎಂಬ ಪೂಜ್ಯ ಡಾ. ಎ.ಆರ್.ಕೃ. ಅವರ ವಾಕ್ಯಗಳು, ಇಲ್ಲಿ ಸತ್ಯವಾಗಿವೆ.

'ಕವಿ-ಕೃತಿ ದರ್ಶನ'ದಲ್ಲಿ ಇದುವರೆಗೆ ನಡೆದ ೨೨ ಉಪನ್ಯಾಸಮಾಲೆಗಳ ವಿವರ ಹೀಗಿದೆ:

ಉಪನ್ಯಾಸ ಮಾಲೆ	ದಿನಾಂಕ	ವಿಷಯ (ರಾಷ್ಟ್ರಕವಿ)	ಅಧ್ಯಕ್ಷರು ಸರ್ವಶ್ರೀ	ಉಪನ್ಯಾಸಕರು ಸರ್ವಶ್ರೀ
೧.	೧-೮-೧೯೭೫ (ಉದ್ಘಾಟನೋತ್ಸವ)	ಶ್ರೀ ಕುವೆಂಪು ಸಾಹಿತ್ಯ ಸಪ್ತಾಹ	ಎಚ್. ಹೊಂಬೇಗೌಡರು (ಶ್ರೇಷ್ಠ ನ್ಯಾಯಾಧೀಶರು)	ಪ್ರೊ. ಜಿ. ವೆಂಕಟಸುಬ್ಬಯ್ಯ
೨.	೧೧-೯-೧೯೭೫	ವರಕವಿ ಬೇಂದ್ರೆ ಅವರ ಸಾಹಿತ್ಯ ಸೌಭಾಗ್ಯ	ಪ್ರೊ. ಜಿ. ವೆಂಕಟಸುಬ್ಬಯ್ಯ (ಅಧ್ಯಕ್ಷರು, ಕ.ಸಾ.ಪ.)	ಎನ್ಕೆ ಕುಲಕರ್ಣಿ ಆರ್. ಜಿ. ಕುಲಕರ್ಣಿ
೩.	೯-೧೦-೧೯೭೫	ಡಾ. ಮಾಸ್ತಿ ಅವರ ಸಾಹಿತ್ಯಸಂಪತ್ತು	ಎಂ. ವಿ. ಸೀತಾರಾಮಯ್ಯ	ಕೆ. ಗೋಪಾಲಕೃಷ್ಣರಾಯರು ಬಿ. ಶ್ರೀ. ಪಾಂಡುರಂಗರಾವ್ ಆರ್. ಎಸ್. ರಾಮರಾವ್
೪.	೧೪-೧೧-೧೯೭೫	ಶ್ರೀ ಪರ್ವತವಾಣಿ ನಾಟಕ ಚಕ್ರ	ಸಿ. ಬಿ. ಜಯರಾವ್ (ಆಕಾಶವಾಣಿ)	ಪ್ರೊ. ಎಂ. ಎಸ್. ನಾಗರಾಜ ಎಸ್. ಜಿ. ರಾಮಚಂದ್ರ

ಉಪನ್ಯಾಸ ಮಾಲೆ	ದಿನಾಂಕ	ವಿಷಯು	ಅಧ್ಯಕ್ಷರು ಸರ್ವಶ್ರೀ	ಉಪನ್ಯಾಸಕರು ಸರ್ವಶ್ರೀ
೫.	೧೨–೧೨–೧೯೬೫	ಡಾ. ಕೆ. ಶಿವರಾಮ ಕಾರಂತರ ಸಾಹಿತ್ಯ ಪ್ರಪಂಚ	ಡಾ. ಎಚ್.ಕೆ. ರಂಗನಾಥ್ (ಆಕಾಶವಾಣಿ)	ಜಿ. ಟಿ. ನಾರಾಯಣರಾವ್ ಕೆ. ಎಸ್. ಲಕ್ಷ್ಮಣರಾವ್ ಕ. ವೆಂ. ರಾಜಗೋಪಾಲ ಶ್ರೀನಿವಾಸಶರ್ಮ
೬.	೯–೧–೧೯೬೬	ಶ್ರೀ ಮಿರ್ಜಿ ಅಣ್ಣರಾಯರ ಸಾಹಿತ್ಯ ಕೃತಿಗಳು	ನಿರಂಜನ	ಶ್ರೀಮತಿ ಕಮಲಮ್ಮ ಹಂಪನಾ. ಜಿ. ಬ್ರಹ್ಮಪ್ಪ
೭.	೧೩–೨–೧೯೬೬	ಡಾ. ಡಿ. ವಿ. ಜಿ. ಅವರ ಸಾಹಿತ್ಯ ಸೃಷ್ಟಿ	ಡಾ. ಎಂ. ಶಿವರಾಂ	ಜಿ. ಪಿ. ರಾಜರತ್ನಂ
೮.	೨೭–೩–೧೯೬೬	ಶ್ರೀ ಪು. ತಿ. ನರಸಿಂಹಾಚಾರ್ ಅವರ ಸಾಹಿತ್ಯ ಸೌಂದರ್ಯ	ದಿ. ಪ್ರೊ. ತೀ. ನಂ. ಶ್ರೀ	ದಿ. ಹೆಮ್ಮಿಗೆ ದೇಶಿಕಾಚಾರ್ಯ ಹಂಪ. ನಾಗರಾಜಯ್ಯ ಹ. ವೆಂ. ನಾಗರಾಜರಾವ್ ಅ. ರಾ. ಮಿತ್ರ
೯.	೧೦–೪–೧೯೬೬	ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ಸಾಹಿತ್ಯ ಕೌಶಲ	ಆರ್. ಆರ್. ದಿವಾಕರ್ (ಬಿಹಾರಿನ ಮಾಜಿ ರಾಜ್ಯಪಾಲರು)	ಖಾದ್ರಿ ಶಾಮಣ್ಣ ಎನ್.ಎಸ್. ಸೀತಾರಾಮ ಶಾಸ್ತ್ರಿ ಕ. ವೆಂ. ರಾಜಗೋಪಾಲ ಮತ್ತೂರು ಕೃಷ್ಣಮೂರ್ತಿ
೧೦.	೮–೫–೧೯೬೬	ಶ್ರೀರಂಗ ಸಾರಸ್ವತ	ಪ್ರೊ. ವಿ. ಸೀತಾರಾಮಯ್ಯ	ಎಸ್. ಜಿ. ರಾಮಚಂದ್ರ ಎಂ. ಶಂಕರ್ ಕ. ವೆಂ. ರಾಜಗೋಪಾಲ ಎಂ. ಎಸ್. ನಾಗರಾಜ
೧೧.	೧೨–೬–೧೯೬೬	ಶ್ರೀ ಅ. ನ. ಕೃಷ್ಣರಾಯರ ಸಾಹಿತ್ಯ ವೈಭವ	ಶ್ರೀರಂಗ	ಮ. ಶ್ರೀಧರಮೂರ್ತಿ ಪರ್ವತವಾಣಿ ಎಲ್. ಎಸ್. ಶೇಷಗಿರಿ ರಾವ್
೧೨.	೧೦–೭–೧೯೬೬	ಶ್ರೀ ಸಾಲಿ ರಾಮಚಂದ್ರರಾಯರ ಸಾಹಿತ್ಯ ಮಾಧುರ್ಯ	ಪ್ರೊ. ಕೆ. ಟಿ. ಪಾಂಡುರಂಗಿ	ಅರ್ಚಿಕ ವೆಂಕಟೇಶ
೧೩.	೧೪–೮–೧೯೬೬	ಶ್ರೀ ಜಿ. ಪಿ. ರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆ [ಮತ್ತು ಉಪನ್ಯಾಸ ಮಾಲೆಯ ವಾರ್ಷಿಕೋತ್ಸವ]	ಅ. ನ. ಕೃಷ್ಣರಾಯರು	ಶ್ರೀ ಬಿ. ಪಾಂಡುರಂಗ ರಾವ್ ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟ ಅ. ರಾ. ಮಿತ್ರ ಹಂಪ. ನಾಗರಾಜಯ್ಯ

(ಮುಂದುವರಿಯುವುದು)

ಅಕ್ಕಮಹಾದೇವಿ ವಾಙ್ಮಯ ದರ್ಶಕ

ಎಸ್. ಆರ್. ಗುಂಜಾಳ

(ಏಪ್ರಿಲ್ ಸಂಚಿಕೆಯಿಂದ ಮುಂದುವರಿದುದು)

೭. ಅಕ್ಕನ ವಚನಗಳು :

ಬಸವರಾಜು (ಎಲ್)
ಮೈಸೂರು, ಡಿ. ವಿ. ಕೆ. ಮೂರ್ತಿ, ೧೯೬೬.
ಪುಟ xxxiii+೨೨೬=೨೫೯ ;
ಬೆಲೆ : ರೂ. ೪–೦೦.

ವರ್ಣನೆ : ಅಕ್ಕನನ್ನು ವರ್ಣಿಸಿ ಬರೆದ ಇತರ ಶರಣರ ವಚನಗಳಿವೆ. ಅಕ್ಕನ ಸಮಗ್ರ ವಚನಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಅವುಗಳಲ್ಲಿ ಕೆಲವು ವಚನಗಳಿಗೆ ವ್ಯಾಖ್ಯಾನವಿದೆ. 'ಅರ್ಥಕೋಶ', 'ವಿಶೇಷ ಪದ ಸೂಚಿ' ಉಪಯುಕ್ತವಾಗಿವೆ. ವಚನಗಳ 'ಅಕಾರಾದಿ' ಇದೆ. ಅಕ್ಕನ ಮಿಕ್ಕ ವಚನ ಮತ್ತು ಹಾಡುಗಳ ಬಗೆಗೆ ಅನುಬಂಧದಲ್ಲಿ ವಿವರಿಸಿದೆ.

೮. ಅಕ್ಕನ ಹಂಬಲ :

ಸದಾಶಿವಯ್ಯ (ಟಿ. ಎಚ್. ಎಂ.)
ದಾವಣಗೆರೆ, ಪಂಪಾಸಾಹಿತ್ಯ ಪ್ರಕಟನಾಲಯ,
೧೯೫೮ ;
ಪುಟ. ೨೪+೬+೩೨+೧೪೧=೨೦೩ ;
ಬೆಲೆ : ರೂ. ೨–೦೦.

ವರ್ಣನೆ : ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನಾಧರಿಸಿ ಬರೆಯಲ್ಪಟ್ಟ ಐದು ಅಂಕಿನ ನಾಟಕ "ನಾನು ಈ ಕೃತಿಯಲ್ಲಿ ಅಕ್ಕನ ವಚನಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡಿರುವೆನು. ಕೆಲವುವಚನಗಳನ್ನು ಸೀಸ, ತೇಟಗೀತೆ, ಆಟವೆಲದಿ ಪದ್ಯಗಳಿಗೆ ಪರಿವರ್ತಿಸಿರುವೆನು" ಎಂದು ಲೇಖಕರು ಹೇಳಿರುವರು.

". . . ಮಹಾದೇವಿಯಕ್ಕನಂತಹ ಹಿರಿಯ ವ್ಯಕ್ತಿಯ ಬಗೆಗೆ ಸತ್ಯಸಂಗತಿಯು ಮತ್ತು ಉದಾತ್ತ ವ್ಯಕ್ತಿತ್ವದ ಹಿರಿಮೆಯನ್ನು ಎತ್ತಿ ತೋರಿಸುವ ಕೃತಿಗಳು ಕಡಮೆಯೆಂದೇ ಹೇಳಬೇಕು. ಇಂತಹ ಕಾಲದಲ್ಲಿ ಐತಿಹಾಸಿಕ ಸಂಗತಿಗಳನ್ನು ಅನುಭವ ಮತ್ತು ಕಾಲಮಾನ ಪರಿಸರಗಳ ಪ್ರಭಾವ ಇವುಗಳ ಒರೆಗಲ್ಲಿಗೆ ಹಚ್ಚಿ ಮಹಾದೇವಿಯಕ್ಕನ ಅಪೂರ್ವವಾದ ವ್ಯಕ್ತಿತ್ವವನ್ನು ಈ ನಾಟಕ ಕರ್ತೃಗಳು ಚಿತ್ರಿಸಿದ್ದಾರೆ" ಎಂದು ಸಂಪಾದಕರಾದ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ಅಭಿಪ್ರಾಯಪಟ್ಟಿರುವರು.

೯. ಅಕ್ಕಮಹಾದೇವಿ

ಪರಮೇಶ್ವರ ಭಟ್ಟ (ಎಸ್. ವಿ.)
ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ೧೯೪೬
ಪು. ೬೯
(ಪ್ರಚಾರ ಪುಸ್ತಕ ಮಾಲೆ, ೩೨)

ವರ್ಣನೆ : "ಅಕ್ಕಮಹಾದೇವಿ ಒಂದು ಜೀವ, ಒಂದು ದೇಹವೆಂದು ಭಾವಿಸಿದರೆ ಅದು ನಮ್ಮ ಸಣ್ಣ ಭಾವನೆಯಾಗುತ್ತದೆ. ಅನುಭವಿಗಳ ದೊಡ್ಡ ಭಾವನೆಯಲ್ಲಿ ಹೇಳುವುದಾದರೆ ಆ ಜೀವ ಕೇವಲ ಜೀವವಲ್ಲ ಜ್ಯೋತಿ ಎನ್ನಬೇಕು. ಆ ದೇಹ ಕೇವಲ ದೇಹವಲ್ಲ, ಹಣತೆಯನ್ನ ಬೇಕು. ದೇಹದ ಹಣತೆಯಲ್ಲಿ ಜೀವನದ ಜ್ಯೋತಿ ಉರಿದು ಆಧ್ಯಾತ್ಮದ ಬೆಳಕಿನಿಂದ ತಾನು ಬೆಳಗಿ ಇತರರಿಗೂ ಬೆಳಕಾಗಿ ಕೊನೆಗೆ ಜಗಜ್ಯೋತಿಯಲ್ಲಿ ಐಕ್ಯವಾದ ಜೀವಪ್ರಭೆ ಅಕ್ಕನದು. ಅದು ಸ್ವಯಂ ಪ್ರಭೆ ಶ್ರೀ ಶೈಲದ ಗಿರಿ ಗಹ್ವರವನ್ನು ಬೆಳಗಿದ ಆ ಸ್ವಯಂಪ್ರಭೆ ಇಂದು ಮತ್ತೆ ಕಾಣಿಸಿಕೊಳ್ಳಲಿ; ಅಂಥ ತಪಸ್ಸಿನ ಆ ಸೂರ್ಯ ಲೋಕದಲ್ಲಿ ನರಳುತ್ತಿರುವ ಕನ್ನಡಿಗರ ಹೃದಯ ಗಹ್ವರಗಳನ್ನು ಬೆಳಗಲಿ.

"ಬಸವನಂತಹ ಅಣ್ಣ, ಮಹಾದೇವಿಯಂತಹ ಅಕ್ಕ, ಅವರ ಸಮಕಾಲಿಕ ವ್ಯಕ್ತಿಗಳಿಗೆ ನಿಜವಾದ ಅಣ್ಣ ಅಕ್ಕಂದಿರಾಗಿ ಬಾಳಿದರು. ಇವರ ಬಾಳುವೆಯ ಬೆಳಕಿನಲ್ಲಿ ಅಂದಿನ ತಮ್ಮ ತಂಗಿಯರು ತಮ್ಮ ದಾರಿಯನ್ನು ತಾವು ಕಂಡು ಕೊಂಡರು. ಈ ಹೊತ್ತು ಧರ್ಮ, ಮತ, ತತ್ವ, ನೀತಿ, ಆಧ್ಯಾತ್ಮಿಕ ಅನುಭಾವ – ಇವುಗಳ ಪುನರ್ಯೋಜನೆಯಲ್ಲಿ ದಾರಿಗೆಟ್ಟು ಕನ್ನಡ ಜನ ಮತ್ತಿಂತಹ ಅಣ್ಣ ಅಕ್ಕಂದಿರ ಹುಟ್ಟಿಗಾಗಿ ಕಾದಿದೆ. ಇವರ ಹುಟ್ಟು ಸಿದ್ಧಿಸಿ, ತಪ ಫಲಿಸಿ ನಮ್ಮ ನಾಡು ನುಡಿಗಳನ್ನು ಇವರು ಮತ್ತೆ ಬೆಳಗುವಂತಾಗಲಿ" ಎಂದು ಲೇಖಕರು ಗ್ರಂಥದ ಕೊನೆ ಸಮಾರೋಪಿಸಿ ಹೇಳಿರುವರು.

೧೦. ಅಕ್ಕಮಹಾದೇವಿ :
ಪುಟ್ಟಸ್ವಾಮಯ್ಯ, ಬಿ.
ಬೆಂಗಳೂರು, ಪ್ರತಿಭಾ ಪಬ್ಲಿಕೇಶನ್ಸ್, ೧೯೪೬
ಪು. xxvii + ೧೦೭=೧೩೪
ಬೆಲೆ : ೧-೦೦

ವರ್ಣನೆ: "'ಅಕ್ಕಮಹಾದೇವಿ' ಪೌರಾಣಿಕ ನಾಟಕವಲ್ಲ. ಅಕ್ಕನವರ ಸಂಬಂಧವಾಗಿ ಪುರಾಣಗಳಲ್ಲಿ ಮತ್ತು ಕಾವ್ಯಗಳಲ್ಲಿ ದೊರಕುವ ಕಥಾವಸ್ತುವನ್ನು ಈ ನಾಟಕದಲ್ಲಿ ಅವಲಂಬಿಸಿಲ್ಲ. ಅಕ್ಕನವರ ವಚನಗಳಿಂದ ಅಭಿವ್ಯಕ್ತವಾಗುವ ಅವರ ಅಂತರಂಗದ ಬೆಳವಣಿಗೆ ಮತ್ತು ಆಧ್ಯಾತ್ಮಿಕ ಜೀವನವನ್ನು ಚಿತ್ರಿಸಲು ನಾನು ಪ್ರಯತ್ನಿಸಿದ್ದೇನೆ. ಪುರಾಣ ಕಾವ್ಯಗಳಲ್ಲಿ ಪರಸ್ಪರ ವಿರುದ್ಧವಾಗಿ ಹೇಳಲ್ಪಟ್ಟಿರುವ ಅಕ್ಕನವರ ಚರಿತ್ರೆಯನ್ನು ಉಪೇಕ್ಷಿಸಿ, ಕೌಶಿಕನೊಡನೆ ಮಹಾದೇವಿಯ ವಿವಾಹ, ಕೌಶಿಕ ಮಹಾದೇವಿಯವರ ವಿಸಂಗತ ದಾಂಪತ್ಯ ಜೀವನ, ಮಹಾದೇವಿಯ ಗೃಹತ್ಯಾಗ, ಅನುಭವ ಮಂಟಪದ ಸಂದರ್ಶನ ಮತ್ತು ಶ್ರೀಶೈಲದಲ್ಲಿ ನಿರ್ಯಾಣ—ಈ ಘಟನೆಗಳನ್ನು ಮುಖ್ಯವಾಗಿಟ್ಟುಕೊಂಡು, ಇವುಗಳಿಗೆ ಬೇಕಾದ ಹೊಸ ಪಾತ್ರ ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಈ ನಾಟಕವನ್ನು ರಚಿಸಿದ್ದೇನೆ" ಎಂದು ಲೇಖಕರೇ ಗ್ರಂಥದ ಉದ್ದೇಶವನ್ನು ತಮ್ಮ 'ನಿವೇದನೆ' ಯಲ್ಲಿ ಹೇಳಿರುವರು.

೧೧. ಅಕ್ಕಮಹಾದೇವಿ
ಮುಗಳಿ (ರಂ. ಶ್ರೀ)
ಧಾರವಾಡ, ಜಿ. ಬಿ. ಜೋಶಿ, ೧೯೩೭
ಪು ೮+೫೪=೬೨ ಬೆಲೆ: ೦೦-೫೦

ವರ್ಣನೆ "ಈ ನಾಟಕದಲ್ಲಿ ನಾನು ರೂಪಿಸಿದ ಅಕ್ಕಮಹಾದೇವಿಯ ಆಂತರಿಕ ಚರಿತ್ರೆ ಅವಳ ಹಿರಿದಾದ ವಚನಗಳೇ ಮೂಲಾಧಾರವಾಗಿವೆ. ಅವು ತುಸುವೇ ಆಗಿದ್ದರೂ ಅವಳ ಆಂತರಿಕ ಜೀವನಕ್ಕೆ ಕನ್ನಡಿಯಾಗಿವೆ. ಕನ್ನಡ ವಾಙ್ಮಯಕ್ಕೆ ರತ್ನದ ತುಂಡುಗಳಾಗಿವೆ. ಅಂತಹ ಒಂದೆರಡನ್ನು ಮೊದಲು ಓದಿದಾಗ ನನ್ನ ಮೈಮನವೆಲ್ಲ ತೂಗಿ ತೊನೆಯಾಡಿತು. ಅವನ್ನು ನಾಲಿಗೆಯು ಅಂದಣದಲ್ಲಿ ಇಟ್ಟು ನೂರು ಸಲ ಮೆರೆಸಿತು. ಅಕ್ಕಮಹಾದೇವಿಯ ವ್ಯಕ್ತಿ ಚಿತ್ರವು ಕ್ರಮವಾಗಿ ನನ್ನಲ್ಲಿ ಮೂಡಿಸಿತು. ಅದನ್ನು ಚಿತ್ರಿಸಬೇಕೆಂದು ಕಲಾಪ್ರಜ್ಞೆ ಹಾತೊರೆಯಿತು. ಅದರ ಸಹಜ ಫಲವೇ ಈ ನಾಟ್ಯ ಚರಿತ್ರ"

—ಲೇಖಕರ 'ಮುನ್ನುಡಿ'ಯಿಂದ

೧೨. ಅಕ್ಕಮಹಾದೇವಿ
ವೀರಭದ್ರಯ್ಯ (ಹೆಚ್. ಎಂ)
ಮೈಸೂರು, ಕರ್ತೃ, ೧೯೫೧
ಪು V+೧೨೮=೧೩೩ ಬೆಲೆ : ೧-೨೫ರೂ

ವರ್ಣನೆ: "ಅಕ್ಕಮಹಾದೇವಿಯು ಭಕ್ತಿಯೇ ಮೂರ್ತಿವೆತ್ತಲಲನಾ ಮಣಿ, ತತ್ವಶಿರೋಮಣಿ, ಪರಮವಿರಾಗಿಣಿ. ಇವಳ ವಚನಗಳು ಸಾಹಿತ್ಯಪ್ರಪಂಚದಲ್ಲಿ ಉತ್ತಮ ಸ್ಥಾನವನ್ನು ಪಡೆದಿವೆ . . . ಇಂತಹ ಭಕ್ತಿಪರಾಯಣೆಯ ಪವಿತ್ರ ಜೀವನ ಚರಿತ್ರೆಯನ್ನು ಪಂಡಿತ ಹೆಚ್. ಎಂ. ವೀರಭದ್ರಯ್ಯನವರು ತಿಳಿಗನ್ನಡದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆದಿರುವದು ಶ್ಲಾಘನೀಯ. ಭಾಷೆಯು ಸರಳವಾಗಿಯೂ ಸ್ವಾರಸ್ಯವಾಗಿಯೂ ಇದೆ. ಹರಿಹರನ ರಗಳೆಯನ್ನೇ ಆಧಾರವಾಗಿಟ್ಟುಕೊಂಡು ಗ್ರಂಥವನ್ನು ರಚಿಸಿದ್ದಾರೆ. ವಚನಗಳಲ್ಲಿ ಅಡಗಿರುವ ಮಹಾದೇವಿಯ ಚರಿತ್ರೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಇತರ ಗ್ರಂಥಗಳಲ್ಲಿ ಕಂಡುಬರುವ ಇವಳ ಜೀವನದ ವಿಷಯವನ್ನು ಸಂಗ್ರಹಿಸಿ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ."

—ಎಂ. ಸಿದ್ಧಲಿಂಗಯ್ಯನವರ 'ಮುನ್ನುಡಿ'ಯಿಂದ

ಇದರಲ್ಲಿ ಲಿಂಗಪೂಜಾನಿರತಳಾದ ಅಕ್ಕಮಹಾದೇವಿಯ ಭಾವಚಿತ್ರವಿದೆ.

೧೩. ಅಕ್ಕಮಹಾದೇವಿಯ ಅಮೃತವಾಣಿ
ಮೇಟಿ (ಹಾಲೇಶ ಎಂ), ಸಂ
ಗದಗ, ಪಿ. ಸಿ. ಶಾಬಾದಿಮಠ, ೧೯೬೧
ಪು ೧೦೧ ಬೆಲೆ: ೧-೭೫ರೂ

ವರ್ಣನೆ "ಅಕ್ಕನವರು ರೂಪಿಸಿದ ಹಲವಾರು ವಚನಗಳಲ್ಲಿ ಹೆಚ್ಚು ನನಗೆ ಸರಿ ಕಂಡು ಬಂದ ವಚನಗಳನ್ನಾಯ್ದು ಜನಪದಕ್ಕೆ ಸರಿಯಾದ ಅರ್ಥವನ್ನು ತಿಳಿಸಲು ಪ್ರಯತ್ನಿಸಿದ್ದೇನೆ . . . ಇಲ್ಲಿ ತಿಳಿ ಅರ್ಥವನಷ್ಟೇ ಹೇಳುವದಲ್ಲದೆ ಅಕ್ಕನ ಜೀವನದ ಐತಿಹ್ಯವನ್ನಿಡಲಾಗಿದೆ. ಅಕ್ಕನನ್ನು ಹೊಗಳಿದ ವಚನಕಾರರ, ಹಾಗೂ ನವೀನ ಆಧುನಿಕ ಕವಿಗಳ ಕಾವ್ಯವನ್ನು ಇಲ್ಲಿ ಜೋಡಿಸಲಾಗಿದೆ."

—ಲೇಖಕರ 'ನನ್ನ ನುಡಿ'ಯಿಂದ

ಕೊನೆಯಲ್ಲಿ ಕಠಿಣಶಬ್ದಕೋಶವಿದ್ದು ಉಪಯುಕ್ತವಾಗಿದೆ.

೧೪. ಅಕ್ಕಮಹಾದೇವಿಯ ಆದರ್ಶಜೀವನ
ಶಾಸ್ತ್ರೀಮಠ (ನಾಗಭೂಷಣಶಾಸ್ತ್ರಿ)

೧೫. ಅಕ್ಕಮಹಾದೇವಿಯವರ ವಚನಗಳು
ಗಿರಿಜಾಶಂಕರ, ಸಂ
ಗದಗ, ಬಿ. ಜಿ. ಸಂಕೇಶ್ವರ, ೧೯೬೦
ಪು vi+೧೪೬=೧೫೨ ಬೆಲೆ : ೧-೦೦ ರೂ

ವರ್ಣನೆ : "ಅಕ್ಕನವರ ವಚನಗಳ ಗರ್ಭದಲ್ಲಡಗಿದ ತತ್ವಾಮೃತವನ್ನು ಎಲ್ಲರಿಗೂ ಪಾನಮಾಡಿಸಬೇಕೆಂಬ ಇಚ್ಛೆಯಿಂದ ಅಕ್ಕನವರ ವಚನಗಳಿಗೆ ಸರಳವಾಗಿ ಅರ್ಥ ಬರೆದಿದ್ದೇನೆ."

—ಲೇಖಕರ 'ಒಡಲ್ನುಡಿ'ಯಿಂದ

ಪ್ರಾರಂಭದಲ್ಲಿ ಅಕ್ಕನ ಜೀವನ ಚರಿತ್ರೆಯಿದೆ. ಕೊನೆಯಲ್ಲಿ ಕಠಿಣ ಶಬ್ದಗಳಿಗೆ ಅರ್ಥವನ್ನು ಕೊಟ್ಟಿದೆ.

೧೬. ಅಕ್ಕನ ಅನುರವಾಣಿ
ಕಲ್ಲೂರ (ಸಂಗಣ್ಣ)

೧೭. ಅಕ್ಕಮಹಾದೇವಿಯರ ವಚನಗಳು
ಹೆಬಸೂರ (ಕೆ. ಎಚ್.)
ಹುಬ್ಬಳ್ಳಿ, ಸಿಟಿ ಬುಕ್ ಸ್ಟಾಲ್, ೧೯೫೫
ಪು ೬+೭೫=೯೧ ಬೆಲೆ : ೦೦-೫೦ ಪೈಸೆ

ವರ್ಣನೆ : 'ಮೊದಲ ಮಾತಿ'ನಲ್ಲಿ ಅಕ್ಕನ ಜೀವನ ಚರಿತ್ರೆಯನ್ನು ಸಂಗ್ರಹವಾಗಿ ಬಣ್ಣಿಸಲಾಗಿದೆ. ತರುವಾಯ ಅಕ್ಕನ ೧೭೨ ವಚನಗಳಿಗೆ ಅರ್ಥವಿವರಣೆಯನ್ನು ಕೊಡಲಾಗಿದೆ. ಕೊನೆಯಲ್ಲಿ ಕಠಿಣ ಶಬ್ದಗಳ ಕೋಶವಿದೆ.

೧೮. ಅಕ್ಕಮಹಾದೇವಿ ವಚನಾರ್ಥ
ಚೆನ್ನಮಲ್ಲಿಕಾರ್ಜುನ, ಸಂ
ಮೈಸೂರು, ಸಂಪಾದಕ ೧೯೫೦
ಪು ೬+೭೪=೮೦ ಬೆಲೆ; ೧-೨೫
(ಸದ್ಧರ್ಮ ದೀಪಿಕೆ ಗ್ರಂಥಮಾಲೆ, ೨)

ವರ್ಣನೆ : ಇದರಲ್ಲಿ ಅಕ್ಕನ ೧೫೦ ವಚನಗಳಿಗೆ ತಾತ್ಪರ್ಯವನ್ನು ಬರೆಯಲಾಗಿದೆ. 'ಅಕ್ಕನ ವಚನಗಳಲ್ಲಿ ಬಂದ ವಿಷಯಗಳು ಉಪನಿಷತ್ತಿನ ಬೋಧೆಗೆ ಅನುಸಾರವಾಗಿ ಇರುವುವುಗಳನ್ನು, ಅಲ್ಲಲ್ಲಿ ತೋರಿಸಿ ಇದೆ.'

೧೯. ಅಮರ ಜ್ಯೋತಿ ಅಕ್ಕಮಹಾದೇವಿ
ಕರಡಿ (ವ್ಹಿ. ಕೆ)

೨೦. ಉಡುತಡಿಯ ಅಕ್ಕಮಹಾದೇವಿಯ ಪುರಾಣಂ
ಪುಟ್ಟರಾಜ ಕವಿ
ಗದಗ, ಅನ್ನದಾನಯ್ಯ ಹಿರೇಮಠ ವೀರೇಶ್ವರ ಪುಣ್ಯಾಶ್ರಮ, ೧೯೬೧
ಪು ೪+೪+೧೪೨=೧೫೦ ಬೆಲೆ : ೨-೫೦ ರೂ
(ಶ್ರೀ ಪಂಚಾಕ್ಷರಿ ಗ್ರಂಥಮಾಲಾ ೧)

ವರ್ಣನೆ : "ಈ ಕಾವ್ಯವನ್ನು ಎರಡು ದೃಷ್ಟಿಯಿಂದ ರಚಿಸಲಾಗಿದೆ. ಅದೇನೆಂದರೆ ಒಂದು ತಾತ್ವಿಕವಿಚಾರ; ಒಂದು ಪಾರಮಾರ್ಥಿಕ ವಿಚಾರ. ತಾತ್ವಿಕವಾಗಿ ಅಕ್ಕನ ಸಂಪೂರ್ಣ ಬಾಳಿನ ಒಳಗುಟ್ಟನ್ನು ಸಂಸಾರಿಗಳಾದವರಿಗೆ ಅನುಕೂಲವಾಗುವಂತೆ ರಚಿಸಲಾಗಿದೆ. ಪಾರಮಾರ್ಥಿಕವಾಗಿ ಅಕ್ಕನು ಯಾರು? ಆಕೆಯ ಬಾಳಿನ ಬಗೆ ಹೇಗೆ ಎಂಬುದನ್ನು ಈ ಶರೀರಕ್ಕೆ ಹೋಲಿಸಿ ತತ್ವವಿಚಾರವನ್ನಿಟ್ಟು ಬರೆಯಲಾಗಿದೆ...ಅಕ್ಕನ ಆದರ್ಶಜೀವನವು ಜಗತ್ಕಲ್ಯಾಣಕ್ಕೆಂದೇ ವಿವರಿಸಿದ್ದೇನೆ." —'ಕವಿಯ ನಿವೇದನೆ' ಭಾಗದಿಂದ

ಎಡೆಯೂರ ಶ್ರೀ ತೋಂಟದಾರ್ಯರು, ಅಕ್ಕಮಹಾದೇವಿ, ಹಾನಗಲ್ಲ ಶ್ರೀ ಶಿವಯೋಗಿ, ಧಾರವಾಡ ಶ್ರೀ ಮೃತ್ಯುಂಜಯ ಸ್ವಾಮಿಗಳು, ಶ್ರೀ ಪಂಚಾಕ್ಷರ ಗವಾಯಿಗಳು, ಕಾರ್ಯಕರ್ತೃ ಶ್ರೀ ಪುಟ್ಟರಾಜ ಗವಾಯಿಗಳು, ವೀರೇಶ್ವರ ಪುಣ್ಯಾಶ್ರಮ ಮತ್ತು ಶ್ರೀ ನಾಗಪ್ಪಜ್ಜನವರ ಚಿತ್ರಗಳಿವೆ.

೨೧. ಉಡುತಡಿಯ ಮಹಾದೇವಿಯಕ್ಕನ ರಗಳೆ
ಹರಿಹರದೇವ
ಚೆನ್ನಮಲ್ಲಿಕಾರ್ಜುನ, ಸಂ
ದಾವಣಗೆರೆ, ಸಂಪಾದಕರು, ೧೯೩೩
ಪು ೧೨+೨+೬೯+೮೯ ಬೆಲೆ : ೧-೦೦ರೂ
(ಸದ್ಧರ್ಮ ಗ್ರಂಥಮಾಲಾ, ೧೩)

ವರ್ಣನೆ : ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪಾಠಾಂತರಗಳೊಂದಿಗೆ ಇದನ್ನು ಪ್ರಕಟಿಸಲಾಗಿದೆ. ಪ್ರಾರಂಭದಲ್ಲಿ ಅಕ್ಕನ ಜೀವನದ ಅಲ್ಪ ಐತಿಹಾಸಿಕ ವಿವೇಚನೆಯಿದೆ. ಕೊನೆಯಲ್ಲಿ ರಗಳೆಯಲ್ಲಿ ಕಂಡು ಬರುವ ಕಠಿಣ ಶಬ್ದಗಳಿಗೆ ಅರ್ಥವನ್ನು ಕೊಡಲಾಗಿದೆ. ಆರಂಭದ ಒಂದು ಕಂದ ಪದ್ಯವನ್ನಿಲ್ಲಿ ಉದ್ಧರಿಸುವೆವು :

ಭಾವತಿಯ ಭಕ್ತಿ ಚರಿತೆಯ |
ಲಾವಣ್ಯದ ತಿರುಳ ತಂಬೆಲರ ತಂಪಿನ ಸಂ |
ಜೀವನೆಯೆಂದೆನಿಪ ಮಹಾ |
ದೇವಿಯ ಗುಣಕಥನಮುಂ ವಿವರ್ಣಿಪರಳವೇ ||

(ಮುಂದುವರಿಯುವುದು)

<u>ಭಾಷಾಬಾಂಧವ್ಯ ಗೋಷ್ಠಿ</u>

ಕನ್ನಡ ಮತ್ತು ಹಿಂದೀ ಭಾಷೆಗಳ ಬಾಂಧವ್ಯ

ಡಾ. ಮ. ಸು. ಕೃಷ್ಣಮೂರ್ತಿ

ಕನ್ನಡನಾಡು ಮತ್ತು ಹಿಂದೀ ಪ್ರದೇಶಗಳ ನಡುವೆ ಸಹಸ್ರಾರು ವರ್ಷಗಳ ಸಂಬಂಧವಿದೆ. ಈ ಸಂಬಂಧವನ್ನು ರಾಜಕೀಯ ಹಾಗೂ ಸಾಂಸ್ಕೃತಿಕ ಎಂದು ಎರಡು ವಿಧವಾಗಿ ವಿಂಗಡಿಸಬಹುದು.

ಮೊಳಕಾಲ್ಮೂರು, ಜಟಿಂಗ ರಾಮೇಶ್ವರ ಮೊದಲಾದ ಕಡೆಗಳಲ್ಲಿ ದೊರೆಯುವ ಶಿಲಾಲೇಖನಗಳಿಂದ ಕರ್ಣಾಟಕದ ಕೆಲವು ಭಾಗಗಳು ಮೌರ್ಯ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದುವೆಂದು ತಿಳಿಯುತ್ತದೆ. ಇವೇ ಮೌರ್ಯವಂಶದ ಚಂದ್ರಗುಪ್ತನು ಉತ್ತರಾಪಥದಲ್ಲಿ ಘೋರ ಕ್ಷಾಮ ತಲೆದೋರಲು ತನ್ನ ಗುರುವಾದ ಶ್ರುತಕೇವಲಿ ಭದ್ರಬಾಹುವಿನೊಡನೆ ಕಟವಪ್ರ ಅಥವಾ ಶ್ರವಣಬೆಳಗೊಳಕ್ಕೆ ಬಂದಿದ್ದನೆಂದು ಜೈನ ಐತಿಹ್ಯಗಳು ತಿಳಿಸುತ್ತವೆ.

ಕ್ರಿ. ಶ. ನಾಲ್ಕನೆಯ ಶತಮಾನದಲ್ಲಿ ಕದಂಬ ವಂಶ ಸ್ಥಾಪಕನಾದ ಮಯೂರಶರ್ಮನು ತ್ರಿಕೂಟ, ಆಭೀರ, ಸೇಂದ್ರಕ ಮೊದಲಾದ ರಾಜ್ಯಗಳನ್ನು ಗೆದ್ದು ಗಂಗಾ ಪ್ರಾಂತ್ಯದಿಂದ ವೈದಿಕ ಕುಟುಂಬಗಳನ್ನು ಕರೆಸಿ ನೆಲಸುವಂತೆ ಅನುಕೂಲ ಮಾಡಿಕೊಟ್ಟನು. ಕದಂಬ ಕಾಕುತ್‌ಸ್ಥವರ್ಮನು ಭರತಖಂಡದಲ್ಲೆಲ್ಲ ಪ್ರಖ್ಯಾತನಾಗಿದ್ದನು. ಅವನು ಗುಪ್ತವಂಶದೊಡನೆ ವೈವಾಹಿಕ ಸಂಬಂಧವನ್ನು ಬೆಳೆಸಿದ್ದನು. ಕಾಕುತ್‌ಸ್ಥವರ್ಮನ ಮೊಮ್ಮಗ ಮೃಗೇಶವರ್ಮ ಕೈಕಯಿರಾಜಕುಮಾರಿಯಾದ ಪ್ರಭಾವತಿಯನ್ನು ಮದುವೆಯಾಗಿದ್ದನು.

ಗಂಗರ ಕಾಲದಲ್ಲಂತೂ ಕನ್ನಡನಾಡು ಅಖಿಲಭಾರತ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯನ್ನು ಸಂಪಾದಿಸಿತು. ಗಂಗರ ಶಾಖೆಯೊಂದು ಕ್ರಿ. ಶ. ಆರನೆಯ ಶತಮಾನದಲ್ಲಿ ಕಳಿಂಗ ರಾಜ್ಯದಲ್ಲಿ ಸ್ಥಾಪಿತವಾಯಿತು. ಇದರ ಮತ್ತೊಂದು ಶಾಖೆ ಕ್ರಿ. ಶ. ೮೭೯ರಲ್ಲಿ ನೇಪಾಳದಲ್ಲಿಯೂ ಸ್ಥಾಪಿತವಾಯಿತು. ಗಂಗರಾಜರು ಇದೇ ಕಾಲದಲ್ಲಿ ಸಿಂಧೂ ರಾಜರ ಸಂಬಂಧಬೆಳೆಸಿ ಕರ್ಣಾಟಕದ ಚರಿತ್ರೆಗೂ ಉತ್ತರದ ಚರಿತ್ರೆಗೂ ಸಂಪರ್ಕವೇರ್ಪಡಿಸಿದರು. ಗಂಗರಾಜ ದುರ್ವಿನೀತನ ಮಗ ಮುಷ್ಕರನಿಗೆ ಸಿಂಧೂ ರಾಜನ ಮಗಳನ್ನು ಕೊಟ್ಟು ಮದುವೆಯಾಗಿತ್ತು. ಇದೇ ಗಂಗವಂಶದ ಭೂಮಗ (ಕ್ರಿ. ಶ. ೬೩೮-೫೩) ಚಿತ್ರಕೂಟರ ಮೇಲೆ ಧಾಳಿ ಮಾಡಿ ಸಪ್ತಮಾಳವವನ್ನು ಗೆದ್ದು ಗಡಿಕಂಬಗಳನ್ನು ನೆಟ್ಟು ಆ ದೇಶಕ್ಕೆ ಮಾಳವಗಂಗ ಎಂಬ ಹೆಸರನ್ನು ಕೊಟ್ಟನು.

ಅನಂತರ ಬಂದ ಚಾಳುಕ್ಯರೂ ಕನ್ನಡನಾಡಿನ ವಿಜಯ ವೈಜಯಂತಿಯನ್ನು ಉತ್ತರಕ್ಕೊಯ್ಯಲು ಪ್ರಯತ್ನಿಸಿದರು. ಉತ್ತರಾಪಥೇಶ್ವರನಾದ ಶ್ರೀಹರ್ಷನನ್ನು ಸೋಲಿಸಿ ವಿಗಲಿತಹರ್ಷನನ್ನಾಗಿ ಮಾಡಿದ ಶ್ರೇಯಸ್ಸು ಕನ್ನಡಿಗ ಪರಮೇಶ್ವರ ಪುಲಿಕೇಶಿಯದು. ಈತನ ಕಾಲದಲ್ಲಿ ಕನ್ನಡನಾಡು ಪರ್ಷಿಯಾದೊಡನೆಯೂ ಸಂಪರ್ಕ ಸ್ಥಾಪಿಸಿತು. ಇದೇ ಚಾಲುಕ್ಯ ವಂಶದ ವಿನಯಾದಿತ್ಯನು ಉತ್ತರಾಪಥನಾಥನಾದ ಆದಿತ್ಯಸೇನನನ್ನು ಗೆದ್ದು, ಗಂಗಾ-ಯಮುನಾ ಪ್ರಾಂತ್ಯವನ್ನು ವಶಪಡಿಕೊಂಡನು. ಪುಲಿಕೇಶಿಯ ಕಾಲದಲ್ಲೇ ಆಂಧ್ರ, ಗುಜರಾತಿನಲ್ಲಿ ಚಾಲಕ್ಯವಂಶದ ಶಾಖೆಗಳು ಹುಟ್ಟಿಕೊಂಡವು.

ರಾಷ್ಟ್ರಕೂಟರ ಕಾಲದಲ್ಲಿ ಕರ್ಣಾಟಕ ಸಾಮ್ರಾಜ್ಯದ ಛತ್ರಛಾಯೆಗೆ ಇಡೀ ಭರತಖಂಡವೇ ಒಳಪಟ್ಟಿತು. ಕರ್ಣಾಟಕ ವೀರಪರಂಪರೆಯ ಹೈಮಾಚಲ ಔನ್ನತ್ಯವನ್ನು ನಾವು 'ರಾಷ್ಟ್ರಕೂಟ ಯುಗ'ದಲ್ಲಿ ಕಾಣಬಹುದು. ಕ್ರಿ.ಶ. ೮ರಿಂದ ೧೧ನೆಯ ಶತಮಾನದವರೆಗಿನ ಈ ಮೂರು ಶತಮಾನಗಳ ಯುಗವನ್ನು ರಾಷ್ಟ್ರಕೂಟ ಯುಗವೆಂದು ಕರೆಯುವುದು ಸಮಂಜಸವಾಗಿದೆ ಎಂದ ಡಾ. ಶ್ರೀಕಂಠ ಶಾಸ್ತ್ರಿಗಳ ಹೇಳಿಕೆ ತುಂಬ ಯಥಾರ್ಥವಾದುದು. ಎರಡನೇ ದಂತವರ್ಮ ಉತ್ತರದಲ್ಲಿ ಮಾಹೀ ಮತ್ತು ನರ್ಮದಾ ನದಿಗಳವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ಮೂರನೆಯ ಗೋವಿಂದನು ಗೂರ್ಜರರನ್ನು ಸೋಲಿಸಿದ್ದಲ್ಲದೆ ವಿಂಧ್ಯ ಪ್ರಾಂತದ ಹಲವು ರಾಜರುಗಳನ್ನು ಬಗ್ಗುಬಡಿದನು. ಮಾಳವ, ಕನ್ಯಕುಬ್ಜ ಮೊದಲಾದ ದೇಶಗಳನ್ನು ಇವನು ಜಯಿಸಿದನು. ಹಿಮಾಚಲದಿಂದ ಕನ್ಯಕುಮಾರಿಯವರೆಗಿನ ಭೂಭಾಗ ಇವನ ಕಾಲದಲ್ಲಿ ರಾಷ್ಟ್ರಕೂಟರ

ಕ್ರೀಡಾಭೂಮಿಯಾಗಿತ್ತು. ಗುಣಭದ್ರನು ಉತ್ತರ ಪ್ರಕರಣದಲ್ಲಿ ವರ್ಣಿಸಿರುವಂತೆ ರಾಷ್ಟ್ರಕೂಟ ಕಾಲದಲ್ಲಿ ಕರ್ಣಾಟಕ ಸೈನ್ಯದ ಗಜಗಳು ಗಂಗಾ ನದಿಯಲ್ಲಿ ಮಿಂದು ಮಲಯಾ ಚಲದಲ್ಲಿ ವಿಶ್ರಾಂತಿ ಪಡೆದವು.

ಮೂರನೆಯ ಕೃಷ್ಣನ ಕಾಲದಲ್ಲಂತೂ ಭಾರತದ ಮುಕ್ಕಾಲುಭಾಗ ರಾಷ್ಟ್ರಕೂಟರ ಧ್ವಜದ ನೆರಳಿನಲ್ಲಿತ್ತು. ಸಿಂಧೂ ಪ್ರಾಂತದ ಮೂಲೆಗೆ ಕೂಡ ರಾಷ್ಟ್ರಕೂಟರು ಒತ್ತರಿಸಿ ಬಂದಿದ್ದರೆಂದು ಅರಬ್ಬರು ಹೇಳಿದ್ದಾರೆ. ಇತ್ತ ಸಿಂಹಳವನ್ನೂ ಕೂಡ ಅವರು ಗೆದ್ದಿದ್ದರು. ರಾಷ್ಟ್ರಕೂಟರ ಪರಾಕ್ರಮವನ್ನು ಕುರಿತು ಹಿಂದಿಯ ವಿಖ್ಯಾತ ವಿದ್ವಾಂಸರಾದ ಮಹಾಪಂಡಿತ ರಾಹುಲ ಸಾಂಕೃತ್ಯಾಯನ ಅವರ ಮಾತುಗಳು ಮನನೀಯ : "ಹರ್ಷವರ್ಧನನನ್ನು ದಕ್ಷಿಣ ಭಾರತ ದಿಗ್ವಿಜಯದಲ್ಲಿ ಬರಿಗೈಯಲ್ಲಿ ಮರಳುವಂತೆ ಮಾಡಿದ ಪುಲಿಕೇಶಿಯ ಚಾಲಕ್ಯ ವಂಶವನ್ನು ನಾಶ ಮಾಡಿ ರಾಷ್ಟ್ರಕೂಟರು ತಮ್ಮ ಪ್ರಬಲಸತ್ತೆಯನ್ನು ಇದೇ ಸಮಯದಲ್ಲಿ (ಕ್ರಿ. ಶ. ೭೫೩) ಸ್ಥಾಪಿಸಿದರು. ಇದೇ ಕಾಲದಲ್ಲಿ ಪೂರ್ವದಲ್ಲಿ ಗೋಪಾಲ ಪಾಲವಂಶಕ್ಕೆ ತಳಹದಿ ಹಾಕುತ್ತಿದ್ದ. ಕ್ರಿ.ಶ.೭೫೩ರಿಂದ ೯೭೩ರವರೆಗಿನ ಪ್ರಾಯಶಃ ಎಂಟು ಶತಮಾನಗಳತನಕ ರಾಷ್ಟ್ರಕೂಟ ವಂಶದ ವಲ್ಲಭ ರಾಜರು ಭಾರತದ ಅತ್ಯಂತ ಪ್ರಬಲ ರಾಜರಾಗಿದ್ದರು. ನರ್ಮದೆಯಿಂದ ಕೃಷ್ಣ ಮತ್ತು ಕೆಲವು ವೇಳೆ ಕಾಂಚಿಯವರೆಗೂ ಅವರ ವಿಶಾಲ ರಾಜ್ಯ ಹಬ್ಬಿತ್ತು. ಸುಮಾರು ದಕ್ಷಿಣದಲ್ಲಿ ರಾಮೇಶ್ವರವೇ ಅಲ್ಲ ಕೆಲವು ವೇಳೆ ಸಿಂಹಳವೂ ಅವರ ಆಜ್ಞೆಯನ್ನು ಪಾಲಿಸುತ್ತಿತ್ತು. ಎಷ್ಟೋ ವೇಳೆ ಅವರ ಕುದುರೆಗಳ ಖುರಪುಟ ಧ್ವನಿ ಗಂಗಾ ಯಮುನಾ ಪ್ರಾಂತದಲ್ಲೂ ಅಣುರಣಿತವಾಗಿತ್ತು. ಅದೆಷ್ಟೋ ವೇಳೆ ಅವರ ಸೈನಿಕರು ಸಂಯುಕ್ತ ಪ್ರಾಂತದ ದುರ್ಗದ ಮಾಲಿಕರಾಗಿ ತೋರುತ್ತಿದ್ದರು.[1]

ಕಲ್ಯಾಣಿಯ ಚಾಲಿಕ್ಯರ ಕಾಲದಲ್ಲೂ ಕನ್ನಡ ವೀರರು ಉತ್ತರಾಪಥದ ಮೇಲೆ ಜೈತ್ರಯಾತ್ರೆ ನಡೆಸಿದರು. ಜಯಸಿಂಹನು ಉತ್ತರದ ಧಾರಾನಗರಿಯ ರಾಜನಾದ ಭೋಜನನ್ನು ನಿರಾಧಾರನನ್ನಾಗಿ ಮಾಡಿದನು. ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಕರ್ಣಾಟಕದಶ್ರೀ ಕಾಶ್ಮೀರವನ್ನೂ ಮುಟ್ಟಿದಳು. ಬಿಲ್ಹಣ, ವಿಜ್ಞನೇಶ್ವರ ಮೊದಲಾದ ಸಂಸ್ಕೃತ ವಿದ್ವಾಂಸರು ಕನ್ನಡನಾಡಿನಲ್ಲಿ ಆಶ್ರಯವನ್ನು ಪಡೆದರು.

ಕಳಚುರ್ಯ ವಂಶದ ಮೊದಲ ದೊರೆಗಳು ಕಾಲಂಜರ, ಡಾಹಳ (ಬುಂದೇಲಖಂಡ್) ಮಂಡಳದೊಡನೆ ಸಂಪರ್ಕ ವಿಟ್ಟುಕೊಂಡಿದ್ದರು. ಹೊಯ್ಸಳರೂ ಉತ್ತರದಲ್ಲಿ ವಿಜಯ ಯಾತ್ರೆಯನ್ನು ಕೈಕೊಂಡಿದ್ದರು. ಎರೆಯಂಗ (ಕ್ರಿ. ಶ. ೧೧೩೭) ನು ಮಾಳವದ ಮೇಲೆ ದಂಡೆತ್ತಿ ಹೋಗಿ ಧಾರಾನಗರವನ್ನು ಸುಟ್ಟನು.

ಇಷ್ಟೇ ಅಲ್ಲ, ಕನ್ನಡನಾಡಿನ ವಿಖ್ಯಾತ ರಾಜವಂಶಗಳು ಉತ್ತರದಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿದವು. ಕರ್ಣಾಟಕದ ರಾಷ್ಟ್ರಕೂಟರೇ ರಾಜಸ್ಥಾನದಲ್ಲಿ ರಾಷ್ಟ್ರಕೂಟರಾದರು. ಚಾಲುಕ್ಯರೇ ಸೋಲಂಕಿ ಎನ್ನಿಸಿಕೊಂಡರು. ಪ್ರತಿಹಾರರು, ಪರಮಾರರು ಕರ್ಣಾಟಕದ ರಾಜರು. ನೇಪಾಳದ ಸೇನೆಯಲ್ಲಿ ಕರ್ಣಾಟಕದ ಸೈನಿಕರು ತುಂಬ ಮಹತ್ವಪೂರ್ಣಸ್ಥಾನ ಪಡೆದಿದ್ದರೆಂದು ಒಂದು ಕಾಲಕ್ಕೆ ನೇಪಾಳೀ ಸೇನೆಯಲ್ಲೆಲ್ಲ 'ಕಾನಡೀ ಸಿಪಾಯಿ' ಗಳೇ ತುಂಬಿದ್ದರೆಂದು ಸುಪ್ರಸಿದ್ಧ ಇತಿಹಾಸಕಾರರಾದ ಜಯಚಂದ್ರ ವಿದ್ಯಾಲಂಕಾರ್ ಅವರು ಹೇಳುತ್ತಾರೆ. ಬಿಹಾರಿನ ಮಿಥಿಲೆಯಲ್ಲಿ ಕರ್ಣಾಟಕ ವಂಶದ ರಾಜರು ಆಳಿದ್ದರು. ಅಲ್ಲಿ ಅವರು ಕಟ್ಟಿಸಿದ ಕೆರೆಗಳು ಇಂದಿಗೂ ಇವೆ.

ರಾಜಕೀಯವಲ್ಲದೆ ಸಾಮಾಜಿಕ ಹಾಗೂ ಧಾರ್ಮಿಕವಾಗಿಯೂ ಕರ್ಣಾಟಕಕ್ಕೂ ಉತ್ತರ ಭಾರತಕ್ಕೂ ನಿಕಟ ಸಂಬಂಧವಿತ್ತು. ದಕ್ಷಿಣದ ತೆಲುಗು, ತಮಿಳು ನಾಡುಗಳಂತೆಯೇ ಬಂಗಾಳ, ಬಿಹಾರ, ಗುಜರಾತ್, ಕಾಶ್ಮೀರ ಮೊದಲಾದ ದೇಶಗಳೊಡನೆಯೂ ಕರ್ಣಾಟಕದ ತಡೆಯಿಲ್ಲದ ಬಳಕೆಯಿದ್ದಿತು. ರಾಜಮನೆತನಗಳಲ್ಲಿ ಅಂತಪ್ರಾಂತೀಯ ವಿವಾಹ ನಡೆಯುತ್ತಿತ್ತೆಂಬುದನ್ನು ಹಿಂದೆ ನೋಡಿದೆವು. ಅದು ಇಂದಿನ ಮೈಸೂರಿನ ರಾಜಮನೆತನದವರೆಗೂ ನಡೆದು ಬಂದಿದೆ. ಶ್ರೀ ದೇಸಾಯಿ ಪಾಂಡುರಂಗರಾಯರು ಹೇಳುವಂತೆ 'ಬ್ರಾಹ್ಮಣ ಮೊದಲಾದ ವರ್ಗದ ಕುಟುಂಬಗಳು ಇಲ್ಲಿಂದ ಹೊರನಾಡಿಗೂ ಹೊರನಾಡಿನಿಂದ ಕನ್ನಡನಾಡಿಗೂ ಬಂದು ಒಕ್ಕಲಾಗುತ್ತಿದ್ದವು. ಕದಂಬ ಮಯೂರಶರ್ಮನು ರೋಹಿಲಖಂಡದ ಅಹಿಚ್ಛತ್ರ ನಗರದಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ತುಳುನಾಡಿನಲ್ಲಿ ನೆಲೆಯೂರಿಸಿದ. ಇಂದು ಕರ್ಣಾಟಕದಲ್ಲಿ ಸ್ಥಾಯಿಯಾದ ಶಿವಳ್ಳಿ, ಹೈಗ, ಸಹವಾಸಿ, ವೀರಬಿಣಂಜು, ಸಾರಸ್ವತ ಮೊದಲಾದ ಬ್ರಾಹ್ಮಣ ಕುಲವೃತ್ತಗಳು ಅವರ ಔತ್ತರೇಯ ಮೂಲ ನಿವಾಸವನ್ನು ಸಿದ್ಧಪಡಿಸುವುವು. ಕಾಶ್ಮೀರದ ಕಾಳಾಮುಖ ಪಂಥದ ಅನೇಕ ಪಂಡಿತರು

---

1 ಹಿಂದೀ ಕಾವ್ಯಾಧಾರಾ–ಪುಟ ೨೫. ರಾಹುಲ ಸಾಂಕೃತ್ಯಾಯನ.

ಕನ್ನಡನಾಡಿನಲ್ಲಿ ತಳವೂರಿ ಸಮಾಜದ ಎಲ್ಲ ವರ್ಗದ ಗೌರವಕ್ಕೂ ಪಾತ್ರರಾಗಿದ್ದರು.

ಹದಿನಾಲ್ಕನೆಯ ಶತಮಾನದ ರಾಜಸ್ಥಾನದ ಒಂದು ಶಾಸನದಲ್ಲಿ ಅಲ್ಲಿಯ ವಿಖ್ಯಾತ ರಾಜನಾದ ಹಮ್ಮೀರನ ಕೀರ್ತಿಯನ್ನು ವರ್ಣಿಸುವಾಗ ಅದು ಚಂದ್ರನಿಗಿಂತಲೂ-ಶಿವನ ನಗೆಗಿಂತಲೂ ಬಿಳಿದು ಎಂದು ಹೇಳಿ ಕಾಂತಿಯಲ್ಲಿ ಕನ್ನಡ ಹೆಂಗಳೆಯರ ಶುಭ್ರವಾದ ಹಲ್ಲುಗಳ ಹೊಳಪಿಗೆ ಸರಿಹೋಲುವುದು ಎಂದು ಹೇಳಿದೆ. (E 1. II p. 413)

ಹಿಂದೂಗಳ ಅಂತಿಮ ಸಾಮ್ರಾಟನಾದ ಪೃಥ್ವೀರಾಜ ಚೌಹಾನನ ಆಸ್ಥಾನದಲ್ಲಿ 'ಕರ್ಣಾಟಕಿ' ಕರ್ಣಾಟಿ' ಎಂಬ ಹೆಸರಿನ ಒಬ್ಬ ನರ್ತಕಿಯಿದ್ದಳು. ಕನ್ನಡನಾಡಿನ ಗೋಪಾಲನಾಯಕ ಔತ್ತರೇಯ ಸಂಗೀತಕ್ಕೆ ಅಸ್ತಿವಾರ ಹಾಕಿದ. ಇದರಿಂದಲೇ ಏನೋ ಒಂದು ಗಾದೆ ಹುಟ್ಟಿಕೊಂಡಿತು. "ಸಂಗೀತ ಕರ್ಣಾಟಕದಲ್ಲಿ ಹುಟ್ಟಿತು, ಅಯೋಧ್ಯೆಯಲ್ಲಿ ಬೆಳೆಯಿತು, ಪಂಜಾಬಿನಲ್ಲಿ ಅಳಿಯಿತು." ಕನ್ನಡನಾಡಿನ ಜನರ ವೀಣಾವಾದದ ವೈಖರಿಯನ್ನು ಸಾರುವ ಕಾವ್ಯವೊಂದು ರಾಜಾಸ್ಥಾನಿಯಲ್ಲಿದೆ. ನಾರಾಯಣದಾಸ ಎಂಬ ಕವಿ ಹದಿನಾರನೆಯ ಶತಮಾನದಲ್ಲಿ 'ಛಿತಾಯೀ ವಾರ್ತಾ' ಎಂಬ ಈ ಕಾವ್ಯವನ್ನು ಬರೆದ. ಇದರಲ್ಲಿ ಕಲ್ಪನೆ ಮತ್ತು ತಥ್ಯಗಳ ವಿಲಕ್ಷಣ ಸಂಯೋಗವನ್ನು ಕಾಣಬಹುದು. ಈ ಕಾವ್ಯದ ನಾಯಕ ಕನ್ನಡನಾಡಿನ ಹೊಯ್ಸಳ ರಾಜಕುಮಾರ ಎಂಬುದು ಕುತೂಹಲದ ಸಂಗತಿಯಾಗಿದೆ. ಇದರ ಕತೆ ಸಂಕ್ಷೇಪದಲ್ಲಿ ಹೀಗಿದೆ:

ಅಲ್ಲಾಉದ್ದೀನ್ ಸೇನೆ ಮೊದಲ ಬಾರಿಗೆ ದಕ್ಷಿಣದ ವಿಜಯಯಾತ್ರೆಯನ್ನು ಕೈಕೊಳ್ಳುತ್ತದೆ. ಅವನ ದಾಳಿಯನ್ನು ಎದುರಿಸಲಾರದೆ ದೇವಗಿರಿಯ ರಾಜ ರಾಮದೇವ ದಿಲ್ಲಿಗೆ ಹೋಗಿ ಧನಕನಕವಿತ್ತು ಸಂಧಿಮಾಡಿಕೊಳ್ಳುತ್ತಾನೆ. ಅವನು ಅಲ್ಲಾಉದ್ದೀನನ ಆದರಾತಿಥ್ಯಗಳಲ್ಲಿ ಮೂರು ವರ್ಷ ಅಲ್ಲೇ ಉಳಿದುಕೊಳ್ಳುತ್ತಾನೆ.

ಇತ್ತ ಈ ಅವಧಿಯಲ್ಲಿ ಅವನ ಮಗಳು ಛಿತಾಯೀ ಪ್ರಾಯಸಮರ್ಥೆಯಾಗಿ ಮದುವೆಗೆ ನಿಂತಿರುತ್ತಾಳೆ. ಆದ್ದರಿಂದ ರಾಣಿ ರಾಜನನ್ನು ದೇವಗಿರಿಗೆ ಹಿಂದಿರುಗಿ ಕರೆತರುವಂತೆ ಚಾರರನ್ನು ಕಳುಹಿಸಿ ಓಲೆಯಟ್ಟುತ್ತಾಳೆ. ರಾಜ ಅಲ್ಲಾ ಉದ್ದೀನನ ಅಪ್ಪಣೆ ಪಡೆದು ಹಿಂತಿರುಗುತ್ತಾನೆ. ಅಲ್ಲಾ ಉದ್ದೀನನ್ನು ಸತ್ಕರಿಸಿ ಅವನ ಜೊತೆಗೆ ಒಬ್ಬ ಚಿತ್ರಕಾರನನ್ನೂ ಕಳುಹಿಸಿಕೊಡುತ್ತಾನೆ. ಆ ಚಿತ್ರಕಾರ ದೇವಗಿರಿಗೆ ಬಂದು ರಾಜನ ಅರಮನೆಯನ್ನು ಸಿಂಗರಿಸುತ್ತಾನೆ. ರಾಜಕುಮಾರಿ ಛಿತಾಯಿಯ ಸೌಂದರ್ಯವನ್ನು ಕಂಡು ಚಕಿತನಾಗುತ್ತಾನೆ. ಇದೇ ಸಮಯದಲ್ಲಿ ರಾಜ ತನ್ನ ಮಗಳನ್ನು ದ್ವಾರಸಮುದ್ರದ ರಾಜ ಶ್ರೀಮನ್ನಾರಾಯಣನ ಕುಮಾರ ಸೌರಸೀಗೆ ಕೊಟ್ಟು ಮದುವೆ ಮಾಡುತ್ತಾನೆ. ಚಿತ್ರಕಾರ ರಾಜಕುಮಾರಿಯ ಹಲವು ಭಾವಭಂಗಿಗಳ ಚಿತ್ರವನ್ನು ಬರೆದುಕೊಂಡು ಹೋಗಿ ಅಲ್ಲಾ ಉದ್ದೀನನಿಗೆ ತೋರಿಸುತ್ತಾನೆ. ಅವುಗಳನ್ನು ಕಂಡು ಅಲ್ಲಾ ಉದ್ದೀನ ರಾಮದೇವ ರೂಪಸಿಯಾದ ತನ್ನ ಮಗಳನ್ನು ನನಗೆ ಕೊಡದೆ ಮೋಸಮಾಡಿದ ಎಂದು ಕೋಪಗೊಳ್ಳುತ್ತಾನೆ. ತಕ್ಷಣವೇ ಸ್ವತಃ ಸೈನ್ಯ ಸಮೇತನಾಗಿ ದಕ್ಷಿಣಕ್ಕೆ ಹೊರಟು ದೇವಗಿರಿಯನ್ನು ಮುತ್ತುತ್ತಾನೆ. ಏನು ಮಾಡಿದರೂ ದೇವಗಿರಿದುರ್ಗ ಮಣಿಯದಿರಲು ಕೊನೆಗೆ ಮೋಸದಿಂದ ಛಿತಾಯಿಯನ್ನು ಅಪಹರಿಸಿಕೊಂಡು ದಿಲ್ಲಿಗೆ ಧಾವಿಸುತ್ತಾನೆ.

ರಾಮದೇವನ ನೆರವಿಗಾಗಿ ಹೊಯ್ಸಳ ಸೇನೆಯನ್ನು ತರಲು ಸೌರಸೀ ದ್ವಾರಸಮುದ್ರಕ್ಕೆ ಹೋಗಿದ್ದ. ಅವನು ಬರುವುದರೊಳಗಾಗಿ ಇಷ್ಟೆಲ್ಲ ಅನರ್ಥ ನಡೆದುಹೋಗಿತ್ತು. ತನ್ನ ಪ್ರಾಣಕಾಂತೆಯನ್ನು ಕಳೆದುಕೊಂಡ ಬಳಿಕ ಬದುಕೇನು ಸಾರ್ಥಕ ಎಂದು ಅವನು ವಿಯೋಗಿಯಾಗಿ ಹೋಗುತ್ತಾನೆ. ಚಂದ್ರಗಿರಿಯ ಚಂದ್ರನಾಥನೆಂಬ ಯೋಗಿಯಿಂದ ದೀಕ್ಷೆ ಪಡೆದು ಅವನು ಛಿತಾಯಿಯನ್ನು ಹುಡುಕಿಕೊಂಡು ಹೊರಟ.

ಛಿತಾಯಿಯ ಬಳಿ ಒಂದು ವೀಣೆಯಿತ್ತು. ಅದನ್ನು ಅವಳು ಮತ್ತು ಅವಳ ಪತಿಯಲ್ಲದೆ ಬೇರಾರಿಗೂ ಬಾಜಿಸಲಾಗುತ್ತಿರಲಿಲ್ಲ. ಅವಳು ದಿಲ್ಲಿಗೆ ಹೋದಾಗ ಅದನ್ನು ಕೊಂಡೊಯ್ದಿದ್ದಳು. ಅದರಿಂದ ಸೌರಸಿಯನ್ನು ಪತ್ತೆಹಚ್ಚಲು ಅನುಕೂಲವಾದೀತೆಂದು ತಿಳಿದು ಅದನ್ನು ಗೋಪಾಲನಾಯಕನ ಬಳಿ ಇಟ್ಟಿದ್ದಳು. ಸೌರಸೀ ದೇಶಾಂತರ ಸುತ್ತಿ ದಿಲ್ಲಿಗೆ ಬಂದ. ಗೋಪಾಲನಾಯಕನ ಮನೆಗೆ ಹೋಗಿ ಆ ವೀಣೆಯನ್ನು ಬಾರಿಸಿದ. ಅನಂತರ ಅಲ್ಲಾ ಉದ್ದೀನನ ಬಳಿಗೆ ಹೋಗಿ ತನ್ನ ಕಲಾಕೌಶಲವನ್ನು ಪ್ರದರ್ಶಿಸುತ್ತಾನೆ. ಅಲ್ಲಾ ಉದ್ದೀನ ಅವನ ಕಲೆಯನ್ನು ಮೆಚ್ಚಿಕೊಳ್ಳುತ್ತಾನೆ. ಛಿತಾಯಿಯ ಗಂಡ ಇವನೇ ಎಂದು ತಿಳಿದು ಅಗಲಿದ ಸತಿಪತಿಯರನ್ನು ಕೂಡಿಸಿ ಕೊಡುತ್ತಾನೆ. ಈ ಕಾವ್ಯದಲ್ಲಿ ಕನ್ನಡಿಗರ ವೀಣಾವಾದನಪಟುತೆ ಅದೆಷ್ಟು ಚೆನ್ನಾಗಿ ಮೂಡಿದೆ!

ರಾಷ್ಟ್ರಕೂಟ ಅರಸರು ಅಪಭ್ರಂಶ ಸಾಹಿತ್ಯದ ಪೋಷಕರಾಗಿದ್ದರು. ಅಪಭ್ರಂಶದ 'ಮಹಾಪುರಾಣ'ದ ಕರ್ತೃವಾದ ಮಹಾಕವಿ ಪುಷ್ಪದಂತ ರಾಷ್ಟ್ರಕೂಟರ ಕೃಷ್ಣನ

ಆಶ್ರಿತನಾಗಿದ್ದ; ಪೊನ್ನನ ಸಮಕಾಲೀನನಾಗಿದ್ದ. ಅವನ ಮಹಾಪುರಾಣದಲ್ಲಿ ನೂರಾರು ಕನ್ನಡ ಶಬ್ದಗಳು ದೊರೆಯುತ್ತವೆ. ಹದಿನಾಲ್ಕನೆಯ ಶತಮಾನದಲ್ಲಿದ್ದ ಮಿಥಿಲೆಯ ಕವಿ ಜ್ಯೋತಿರೀಶ್ವರನ 'ವರ್ಣ ರತ್ನಾಕರ' ಎಂಬ ಗ್ರಂಥದಲ್ಲಿ ಬೇಕಾದಷ್ಟು ಕನ್ನಡ ಶಬ್ದಗಳು ದೊರೆಯುತ್ತವೆ.

ಸುಮಾರು ಎಂಟರಿಂದ ಹತ್ತನೆಯ ಶತಮಾನದ ಹೊತ್ತಿಗೆ ಉತ್ತರಾಪಥದಲ್ಲಿ 'ಚೌರಾಸೀಸಿದ್ಧರು' (ಎಂಭತ್ತು ನಾಲ್ಕು ಮಂದಿ ಸಿದ್ಧರು) ಎಂದು ಹೆಸರಾಂತ ಬೌದ್ಧ ಸಿದ್ಧರು ತಮ್ಮ ವಿಲಕ್ಷಣ ವಾಣಿಯಿಂದ ವಿಚಾರಕ್ರಾಂತಿ ಮಾಡುತ್ತಾರೆ. ಇವರ ವಾಣಿಯು 'ಚರ್ಯಾಪದ', 'ದೋಹಾಕೋಷ'ಗಳಲ್ಲಿ ಸಂಗ್ರಹೀತವಾಗಿವೆ. 'ಶಬರ್‌ಪಾ ಇಲ್ಲವೆ ಶಬರ್‌ಪಾದನಿಂದ ಮೊದಲುಗೊಂಡ ಈ ಪರಂಪರೆಯಲ್ಲಿ ಎಂಭತ್ತುನಾಲ್ಕು ಜನ ಸಿದ್ಧರು ಬರುತ್ತಾರೆ. ಅವರಲ್ಲಿ ಕಣ್ಹಪಾ (ಕ್ರಿ. ಶ. ೮೪೦) ಎಂಬ ಸಿದ್ಧನಿಗೆ ಮಹತ್ವಪೂರ್ಣ ಸ್ಥಾನವಿದೆ. ಈತ ಕರ್ಣಾಟಕದವನು, ಕನ್ನಡಿಗ ಎಂದು, ಇಲ್ಲಿಂದ ಬಿಹಾರ ಮತ್ತು ಬಂಗಾಳಕ್ಕೆ ಹೋದನೆಂದೂ ಮಹಾಪಂಡಿತ ರಾಹುಲ ಸಾಂಕೃತ್ಯಾಯನ ಅವರು ಅಭಿಪ್ರಾಯಪಟ್ಟಿದ್ದಾರೆ. ಈತನ ಸತ್ಯ ನಿಷ್ಠುರವಾಣಿ ವೀರಶೈವ ಸಂತರ ವಾಣಿಯನ್ನು ನೆನಪಿಕೆ ತರುತ್ತದೆ. ಕೆಲವು ಉದಾಹರಣೆಗಳನ್ನು ನೋಡಬಹುದು:

"ಲೋಅಹ ಗಬ್ಬ ಸಮುಬ್ಬಹಇ,
ಹಂಉ ಪರಮತ್ಥ ಪವೀಣ|
ಕೋಡಿಅ ಮಜ್ಝೇ ಏಕ್ಕಜಇ,
ಹೋಇ ಣಿರಂಜಣಲೀಣ|
ಆಗಮವೇ ಅ ಪುರಾಣೇ ಪಂಡಿಅ ಮಾಣ ವಹಂತಿ
ಪಕ್ಕ ಸಿರೀಫಲೇ ಅಲಿಯ ಜಿವು,
ಬಾಹೇರೀ ಅಭಮಂತಿ ||

"ಜನ ತಾವು ಪರಮಾರ್ಥ ಪ್ರವೀಣರೆಂದು ಉಬ್ಬಿ ನುಡಿಯುತ್ತಾರೆ. ಆದರೆ ನಿಜವಾಗಿ ನೋಡಿದರೆ ಕೋಟಿಗೊಬ್ಬ ನಿರಂಜನಲೀನ."

"ಆಗಮ ವೇದ ಪುರಾಣಗಳಲ್ಲೇ ಪಂಡಿತರು ತೊಳಲಾಡುತ್ತಿರುತ್ತಾರೆ. ಪಕ್ವವಾದ ಶ್ರೀಫಲದ ಹೊರಗೇ ತುಂಬಿಗಳು ಹಾರಾಡುವಂತೆ."

ಗೋರಖ್‌ನಾಥ ಕನ್ನಡನಾಡಿನ ಕದಿರಿಗೆ ಬಂದು ತನ್ನ ಮಠವನ್ನು ಸ್ಥಾಪಿಸಿದ.

ಧಾರ್ಮಿಕ ಕ್ಷೇತ್ರದಲ್ಲಿ ಕರ್ಣಾಟಕಕ್ಕೂ ಹಿಂದೀ ಪ್ರದೇಶಕ್ಕೂ ಅತ್ಯಂತ ಮಹತ್ವಪೂರ್ಣವಾದ ಸಂಬಂಧವಿದೆ. ಬಸವಣ್ಣನವರ ಸಮಕಾಲೀನನಾದ ಶೀಲವಂತಯ್ಯ ಎಂಬ ಶರಣನು ಕಾಶಿಗೆ ಹೋಗಿ ಅಲ್ಲಿಯ ರಾಜನಾದ ಜಯಸಿಂಹನನ್ನು ಪವಾಡದಿಂದ ಮೆಚ್ಚಿಸಿ ಅವನಿಂದ ಶಿವಕೇಶವನಂದಕಾನನ ಎಂಬ ಭೂಮಿಯನ್ನು ಬಹುಮಾನವಾಗಿ ಪಡೆದ ಎಂದು 'ಕೆಳದಿ ನೃಪವಿಜಯ'ದಲ್ಲಿ ಹೇಳಿದೆ. ಆ ಪ್ರದೇಶದಲ್ಲೇ ಆತ 'ಜಂಗಮವಾಡೀಮಠ' ಎಂಬ ಮಠವನ್ನು ಕಟ್ಟಿದ. ಆ ಮಠ ಇಂದಿಗೂ ಕಾಶಿಯಲ್ಲಿದೆ. ಅಂದಿನಿಂದ ಇಂದಿನವರೆಗೂ ಆ ಮಠದಲ್ಲಿ ವೀರಶೈವ ಸಂತರು ಶರಣ ಪರಂಪರೆಯನ್ನು ನಡೆಸಿಕೊಂಡು ಬಂದಿದ್ದಾರೆ. ಹಿಂದಿಯ ಆದಿಸಂತನಾದ ಕಬೀರನ ಮೇಲೂ ಇವರ ಪ್ರಭಾವ ಬಿದ್ದಿದೆ. ಸ್ವತಃ ಕಬೀರ ಈ ವೀರಶೈವ ಸಂತರನ್ನು ಹೀಗೆ ಉಲ್ಲೇಖಿಸುತ್ತಾನೆ:

ಮೈಲಾ ಬ್ರಹ್ಮಾ ಮೈಲಾ ಇಂದು
ಮೈಲೇ ಜೋಗೀ ಜಂಗಮ ಸಹೇತಿ
ಮೈಲೀ ಕಾಇಆ ಹಂಸ ಸಮೇತಿ ||

"ದಸ್‌ಸಮಸೀ ಬಾರಹ್‌ಜೋಗೀ
ಚೌದಹ್ ಶೇಖ್‌ಬಖಾನ್|
ಅಠಾರಹ್ ಬ್ರಾಹ್ಮಣ
ಅಠಾರಹ್ ಜಂಗಮ ಚೂವಿಸರೇ...."

"ಇಕ್ ಜಂಗಮ ಇಕ್ ಜಟಾಧರ
ಇಕ್ ಅಂಗವಿಭೂತಿಕಕ್ಕೈ ಅಪಾರ|
ಇಕ್ ಮುನಿಯರ್ ಇಕ್ ಮನಹ್ಲೀನ
ಹೋತ್ ಹೋತ್ ಜಗಜಾತ್‌ಬೀನ|
ಇಕ್ ಆರಾಧೈ ಸಕತೀ ಸೀವ
ಇಕ ಪಡದಾ ದೈದೈಜೀವ|
ಇಕ್ ಕುಲದೇವ್ಯಾಂಕೋ ಜಪಹಿಜಾಪ,
ತ್ರಿಭುವನಪತಿ ಭೂಲೇ ತ್ರಿವಿಧತಾಪ ||

ಬಸವಣ್ಣನವರ ಮುಕ್ತಿಗಿಂತ ಸತ್ಸಂಗ ದೊಡ್ಡದು, ಸಂತದೇವರಿಗಿಂತ ದೊಡ್ಡವನು ಸತ್ತಮೇಲೆ, ದೊರೆಯುವ ಸ್ವರ್ಗ ಬರಿಯ ಬಯಲು, ಪ್ರವೃತ್ತಿ ನಿವೃತ್ತಿಗಳ ಸಮನ್ವಯ ಸಿದ್ಧಾಂತ, ಕಾಯಕದ ಮಹತ್ವ ಮೊದಲಾದ ಸಿದ್ಧಾಂತಗಳ ಪ್ರಭಾವ ಕಬೀರನ ಮೇಲೆ ಬಿದ್ದಿದೆ.

ಸಂತ ಸುಂದರದಾಸನ ಮೇಲೂ ವೀರಶೈವ ಪ್ರಭಾವ ಬಿದ್ದಿದೆ. ಐಕ್ಯಭಾವವನ್ನು ವರ್ಣಿಸುವಾಗ ವೀರಶೈವರ ದೃಷ್ಟಾಂತವನ್ನೇ ಉದಾಹರಿಸಿದ್ದಾನೆ:

" ದೇಹ್‌ಕೋ ಸಂಜೋಗ ಪಾಯಿ,
ಜೀನ ಐಸೋನಾಮುಭಯೋ।
ಘಟ್‌ಹೇ ಸಂಜೋಗ
ಘಟಾರಾಸ ಹೀಕಹಾಯೋ ಹೈ॥
ಈಸ್ವರ ಸಕಲ ವಿರಾಟ ಮೇ ವಿರಾಜಮಾನ।
ಮಡಕೇ ಸಂಯೋಗ ಮಠಾಕಾಸ್
ನಾವನು ಪಾಯೋ ಹೈ॥
ಮಹಾಕಾಸ್, ಮಹಿಸಬ್,
ಘಟ್‌ಮಠ್ ದೇಖಿಯನ್,
ಬಾಹಿರ್ ಭೀಕರ್ ಏಕ್,
ಗಗನ ಸಮಾಯೋ ಹೈ।
ಕೈಸೇಹೀ ಸುಂದರ ಬ್ರಹ್ಮಈಶ್ವರ ಅನೇಕ ಜೀವ
ತ್ರಿವಿಧ ಉಪಾದಿ ಭೇದ,
ಗ್ರಂಥಮೇ ಗಾಯೋ ಹೈ॥

"ದೇಹದ ಸಂಯೋಗದಿಂದ ಈ ಜೀವಕ್ಕೆ ಜೀವ ಎಂಬ ಹೆಸರು ಬಂದಿದೆ. ಘಟದ ಸಂಯೋಗದಿಂದ ಆ ಕಾ ಶ ಘಟಾಕಾಶ ಎನ್ನಿಸಿಕೊಳ್ಳುವಂತೆ; ಈಶ್ವರ ಎಲ್ಲ ವಸ್ತುಗಳಲ್ಲೂ ವಿಶಾಲಮಾನನಾಗಿದ್ದಾನೆ. ಮಠದ ಸಂಯೋಗದಿಂದ ಆಕಾಶ ಮಠಾಕಾಶ ಎನ್ನಿಸಿಕೊಳ್ಳುವಂತೆ ಮಹಾಕಾಶದಲ್ಲೇ ಘಟ, ಮಠ, ಎಲ್ಲವೂ ಇವೆ. ಒಳಗೆ ಹೊರಗೆ ಎಲ್ಲೆಡೆಯೂ ಬಂದೇ ಆಕಾಶ ವ್ಯಾಪ್ತವಾಗಿದೆಯಲ್ಲವೆ? ಇದೇ ರೀತಿ ಎಲೈ ಸುಂದರದಾಸನೆ, ಈಶ್ವರಜೀವ ಅನೇಕ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ತ್ರಿವಿಧ ಉಪಾಧಿಗಳಿಗೆ ಈ ಭೇದ ಎಂದು ಗ್ರಂಥಗಳಲ್ಲಿ ಹೇಳಿದೆ."

ಬಂಗಾಳದ ಸೇನ ಮತ್ತು ಮಿಥಿಲೆಯ ನಾನ್ಯದೇವನ ಮನೆತನದ ಪ್ರಭಾವದ ಫಲವಾಗಿ ಮಿಥಿಲೆಯಲ್ಲಿ ಹರಿಹರ ದೈವ ಕಲ್ಪನೆ ಪ್ರಚಾರಕ್ಕೆ ಬಂದಿತು. ಸೇನರಾಜರು ಕಟ್ಟಿಸಿದ ಪ್ರದ್ಯುಮ್ನೇಶ್ವರ ದೇವಾಲಯದ ಶಾಸನವೊಂದರಲ್ಲಿ ಈ ಹರಿಹರರ ಸಂಯುಕ್ತ ವರ್ಣನೆ ಬರುತ್ತದೆ. ಇದರಿಂದ ಪ್ರಭಾವಿತನಾಗಿ ಮೈಥಿಲೆ ಕೋಕಿಲೆ, ಅಭಿನವ ಜಯದೇವ ಎಂದು ವಿಖ್ಯಾತನಾದ ವಿದ್ಯಾಪತಿ ಕವಿ 'ಹರಿಹರ' ಮೂರ್ತಿಯನ್ನು ಈ ರೀತಿಯಾಗಿ ನುತಿಸಿದ್ದಾನೆ:

ಭಲಹರ ಭಲಹರಿ ತುರುಕಲಾ
ಖನ ಪೀತವಸನ ಖನಹಿಂ ಬಘಛಲಾ।
ಖನ ಪಂಚಾನನ ಖನ ಭುಜಚಾರಿ।
ಖನ ಸಂಕರ ಖನದೇವ ಮುರಾರಿ।
ಖನ ಗೋಕುಲ ಮಝೋ ಚರಾಹಯ ಗಾಯ।
ಖನ ಭಿಖಿ ಮಾಂಗಿಯ ಡಮುರೂ ಬಜಾವಯ್
ಖನ ಗೋವಿಂದ ಭಮೈಲಿ ಅಮುಹಾದಾನ
ಮನಹಿಂ ಮುಸಮ ಭುರಿ ಆಂಬ ಓ ಕಾನ।
ಏಕ ಸರೀರ ಲೇಲ ದುಇವಾಸ
ಖನ ವೈಕುಂಠ ಖಿನಹಿಂ ಕೈಲಾಸ
ಮನಹಿಂ ವಿದ್ಯಾಪತಿ ವಿಪರೀತ ಕಾನ
ಓ ನಾರಾಯಣ ಓ ಶೂಲಪಾನಿ

ತುಳಸೀದಾಸರು ಇದರಿಂದ ಪ್ರಭಾವಿತರಾಗಿ ಹೀಗೆ ಪ್ರಾರ್ಥಿಸಿದ್ದಾರೆ:

" ರುಚಿರ ಹರಿಶಂಕರೀನಾಮ ಮಂತ್ರಾವಲೀ
ದ್ವಂದ್ವ ದುಖಹಾನಿ ಆನಂದಖಾನಿ।
ವಿಷ್ಣು ಶಿವಲೋಕ ಸೋಪಾನ
ಸಮಸರ್ವದಾವದತಿ ತುಲಸೀದಾಸ ವಿಸದಖಾನಿ॥"

ಇವನ ಪ್ರಭಾವ ತುಳಸೀದಾಸರ ಮೇಲೂ ಬಿದ್ದಿದೆ. ಈ ರೀತಿ ಕನ್ನಡದ ಹರಿಹರಾದ್ವೈತ ಪಂಥದಿಂದ ಹಿಂದಿಯ ಭಕ್ತಕವಿ ಸಾರ್ವಭೌಮ ತುಳಸೀದಾಸರೂ ಪ್ರಭಾವಿತರಾಗಿದ್ದಾರೆ ಎನ್ನುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಉತ್ತರಾಪಥದಲ್ಲಿ ಕೃಷ್ಣಭಕ್ತಿಯ ಅನುರಾಗ ಮಂದಾಕಿನಿಯನ್ನೇ ಹರಿಸಿದ 'ಶುದ್ಧಾದ್ವೈತ' ವೇದಾಂತದ ಪ್ರವರ್ತಕರಾದ ವಲ್ಲಭಾಚಾರ್ಯರು ಕನ್ನನಾಡಿನ ಬಳ್ಳಾರಿಯಲ್ಲಿ ಜನಿಸಿದರು. ಹಿತಹರಿವಂಶ ಎಂಬ ಭಕ್ತರು ಸ್ಥಾಪಿಸಿದ 'ರಾಧಾವಲ್ಲಭೀಯ ಸಂಪ್ರದಾಯ' ಎಂಬ ಪಂಥ ಮಾಧ್ವ ಸಂಪ್ರದಾಯದ 'ಒಂದು ಕೊಂಡಿ' ಎಂದು ಡಾ. ಹಜಾರೀಪ್ರಸಾದರ ದ್ವಿವೇದಿ ಅವರು ಅಭಿಪ್ರಾಯ ಪಡುತ್ತಾರೆ. ಇದಲ್ಲದೆ ವಿಜಯಜಂಗಮ ಗುಂಡಕೇಶ್ವರ ಎಂಬ ವೀರಶೈವರು ಗ್ವಾಲಿಯರಿನ ಸುತ್ತಮುತ್ತ ಹದಿನಾರನೆಯ ಶತಮಾನದಲ್ಲಿ ನೆಲಸಿ ತಮ್ಮ ಧರ್ಮಪ್ರಚಾರ ಮಾಡಿದರು ಎಂದು ಐತಿಹ್ಯ.

ಹೊಯ್ಸಳರ ಕಾಲದಲ್ಲಿ ವೈಷ್ಣವರ ಪ್ರಾಬಲ್ಯ ಹೆಚ್ಚಲು ಕೆಲವು ಜಂಗಮರು ಇಲ್ಲಿಂದ ಓಡಿಹೋಗಿ ಗ್ವಾಲಿಯರಿನ ಬಳಿ ನೆಲೆಸಿದರೆಂದೂ ಅವರಲ್ಲಿ 'ಗುಂಡಕೇಶ್ವರ' ಎನ್ನುವನು ತನ್ನ ಅನುಯಾಯಿಗಳೊಡನೆ ಒಮ್ಮೆ ಕ್ರಾಂತಿ ಮಾಡಿದನೆಂದೂ ಡಾ. ಹಜಾರಿಪ್ರಸಾದರ ದ್ವಿವೇದಿ ಅವರು ತಮ್ಮ 'ಚಾರುಚಂದ್ರಲೇಖ' ಎಂಬ ಐತಿಹಾಸಿಕ ಕಾದಂಬರಿಯಲ್ಲಿ ವಿವರಿಸಿದ್ದಾರೆ.

ಇಂದು ಹಿಂದೀ ಬಹುಜನ ಭಾಷೆಯಾಗಿರುವುದರಿಂದ ನಮ್ಮ ರಾಷ್ಟ್ರ ಭಾಷೆ ಇಲ್ಲವೆ ಸಂಪರ್ಕ ಭಾಷೆಯಾಗಿದೆ. ಹಿಂದೀ ಬಹುಜನರ ಭಾಷೆಯೆಂದು ಗಾಂಧೀಜಿಯವರು ಅದನ್ನು ರಾಷ್ಟ್ರ ಭಾಷೆಯಾಗಿ ಅಂಗೀಕರಿಸಿ ಅದರ ಪ್ರಚಾರಕ್ಕೆ ಕಾರಣರಾದರು. ಮುಸಲ್ಮಾನರ ಪ್ರಭಾವದಿಂದ ಉರ್ದುವಿನ ಪ್ರಭಾವ ನಮ್ಮ ಭಾಷೆಗಳ ಮೇಲೆ ಸಾಕಷ್ಟು ಬಿದ್ದಿದೆ. ಹೀಗಾಗಿ ಅದನ್ನು ಅರ್ಥ ಮಾಡಿಕೊಳ್ಳುವವರ ಸಂಖ್ಯೆ ಹನ್ನೆರಡು ಕೋಟಿಯನ್ನೂ ಮೀರಿದೆ. ನಮ್ಮ ಜನತಾ ಸರ್ಕಾರ ತ್ರಿಭಾಷಾ ಸೂತ್ರವನ್ನೇನೋ ಅಂಗೀಕರಿಸಿತು. ಅದರಂತೆ ಭಾರತದಲ್ಲಿ ಅದರಲ್ಲೂ ದಕ್ಷಿಣದಲ್ಲಿ ಹಿಂದಿಯ ಪ್ರಚಾರ ವಿಶೇಷವಾಗಿ ನಡೆದಿದೆ. ತ್ರಿಭಾಷಾ ಸೂತ್ರದ ಪ್ರಕಾರ ಉತ್ತರದವರು ಯಾವುದಾದರೂ ಒಂದು ದಾಕ್ಷಿಣಾತ್ಯ ಭಾಷೆಯನ್ನು ಕಲಿಯಬೇಕು. ಆದರೆ ಈ ನಿಟ್ಟಿನಲ್ಲಿ ಅವರು ಸಾಕಷ್ಟು ಶ್ರದ್ಧೆ ತೋರದಿರುವುದು ವಿಷಾದನೀಯ. ಅವರು ನಮ್ಮ ಭಾಷೆಗಳನ್ನು ಅಸಡ್ಡೆಯಿಂದ ಕಾಣುತ್ತಿರುವಾಗ ನಾವೇಕೆ ಅವರ ಭಾಷೆಗೆ ಪುರಸ್ಕಾರ ಕೊಡಬೇಕೆಂಬ ಪ್ರಶ್ನೆ ಸಹಜವಾದುದು. ತ್ರಿಭಾಷಾ ಸೂತ್ರ ಯಶಸ್ವಿಯಾಗಲಿ. ದಾಕ್ಷಿಣಾತ್ಯ ಭಾಷೆಗಳಿಗೆ ತಕ್ಕ ಸ್ಥಾನವನ್ನು ಕೊಟ್ಟು ಅದರ ಪ್ರಚಾರಕ್ಕೆ ನೆರವಾಗುವಂತೆ ನಮ್ಮ ಶಾಸಕರು ಮಾಡಬೇಕು. ಉತ್ತರದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಕನ್ನಡ ಮೊದಲಾದ ಭಾಷೆಗಳಿಗೆ ಪೀಠಗಳನ್ನು ಕಲ್ಪಿಸಬೇಕು. ಅವುಗಳ ವ್ಯಾಸಂಗ ಪ್ರಾಮಾಣಿಕತೆಯಿಂದ ನಡೆಯುವಂತಾಗಬೇಕು.

ಹಿಂದೀ ಪ್ರಚಾರದಲ್ಲಿ ಹಲವಾರು ಸಂಘ ಸಂಸ್ಥೆಗಳು ಮಹತ್ವಪೂರ್ಣ ಪಾತ್ರ ವಹಿಸಿವೆ. ಅಲಹಾಬಾದಿನ ಹಿಂದೀ ಸಾಹಿತ್ಯ ಸಮ್ಮೇಳನ, ಕಾಶಿಯ 'ನಾಗರೀ ಪ್ರಚಾರಿಣೀ ಸಭೆ', ಬಿಹಾರಿನ 'ರಾಷ್ಟ್ರ ಭಾಷಾ ಪರಿಷತ್', ವಾರ್ಧಾದ 'ರಾಷ್ಟ್ರ ಭಾಷಾ ಪ್ರಚಾರ ಸಮಿತಿ' ಮತ್ತು ಮದರಾಸಿನ 'ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ'ಯ ಹೆಸರುಗಳು ಇಲ್ಲಿ ಉಲ್ಲೇಖನೀಯ. ಇವುಗಳಲ್ಲಿ ಕೆಲವನ್ನು ಸರ್ಕಾರ ಅಖಿಲಭಾರತ ಮಹತ್ವದ ಸಂಸ್ಥೆ ಎಂದು ಘೋಷಿಸಿ ಅವಕ್ಕೆ ವಿಶ್ವವಿದ್ಯಾನಿಲಯದ ಸ್ಥಾನಮಾನಗಳನ್ನು ನೀಡಿವೆ. ಸರ್ವಿಸ್ ಸ್ಟಾಂಪ್ ಬಳಕೆಯ ಸೌಲಭ್ಯ ನೀಡಿದೆ. ಇಂಥ ಸೌಲಭ್ಯ ಕನ್ನಡನಾಡಿನ ಏಕಮೇವ ಸಂಸ್ಥೆಯಾದ ಪರಿಷತ್ತಿಗೆ ಬೇಡವೆ? ಈ ಸಂಸ್ಥೆಗಳ ಕಾರ್ಯವಿಧಾನ ನಮಗೆ ಮಾರ್ಗದರ್ಶಕವಾಗಬಲ್ಲದು. ಈ ಸಂಸ್ಥೆಗಳು ಹಿಂದೀ ಸಾಹಿತ್ಯದಲ್ಲಿ ಎಂ.ಎ. ಮತ್ತು ಡಾಕ್ಟರೇಟಿಗೆ ಸಮಾನವಾದ ಪರೀಕ್ಷೆಗಳನ್ನು ನಡೆಸುತ್ತವೆ. ಅಲಹಾಬಾದಿನ 'ಹಿಂದೀ ಸಾಹಿತ್ಯ ಸಮ್ಮೇಳನ' ನಡೆಸುವ 'ಸಾಹಿತ್ಯ ರತ್ನ' ಎಂ.ಎ.ಗೆ ಸಮಾನ ಎಂದು ಮಾನ್ಯತೆ ಪಡೆದಿದೆ. 'ಮಹೋಪಾಧ್ಯಾಯ' ಎಂಬ ಸಂಶೋಧನ ಪದವಿಯೂ ಇಲ್ಲಿದೆ. ಇದಲ್ಲದೆ ಹಿಂದಿಗೆ ಸೇವೆ ಸಲ್ಲಿಸಿದ ಮಹಾಪುರುಷರನ್ನು ಕರೆದು ಅಂಥವರಿಗೆ 'ಸಾಹಿತ್ಯಾಚಾರ್ಯ' ಮೊದಲಾದ ಗೌರವ ಪ್ರಶಸ್ತಿಗಳನ್ನು ನೀಡುತ್ತವೆ. ಶ್ರೀ ರಂಗನಾಥ ದಿವಾಕರರ ಅವರಿಗೆ ಅಲಹಾಬಾದಿನ ಸಾಹಿತ್ಯ ಸಮ್ಮೇಳನದ ಈ ಗೌರವ ಪ್ರಶಸ್ತಿ ಸಂದಿರುವುದು ಕನ್ನಡಿಗರಿಗೆಲ್ಲ ಹೆಮ್ಮೆಯ ಸಂಗತಿ. ಕೇವಲ ಹಿಂದೀ ಸಾಹಿತ್ಯದಲ್ಲಿ ಮಾತ್ರವೇ ಅಲ್ಲ ಸಂಸ್ಕೃತ ಸಾಹಿತ್ಯ, ಆಯುರ್ವೇದ, ಪತ್ರಿಕೋದ್ಯಮ, ಮುದ್ರಣ ಕಲೆ ಮೊದಲಾದವುಗಳಲ್ಲಿ ಕೂಡ ಎಂ.ಎ.ಗೆ ಸಮಾನವಾದ ಮಟ್ಟವುಳ್ಳ ಪರೀಕ್ಷೆಗಳನ್ನು ನಡೆಸುತ್ತವೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೆಲಸ ಮಾಡಬೇಕು. ಅದು ಕನ್ನಡ ಜನತೆಯ ವಿಶ್ವವಿದ್ಯಾನಿಲಯವಾಗಬೇಕು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರಲು ಪರಿಷತ್ತು ಸಹಕಾರಿಯಾಗಬೇಕು. ನಾಡಿನ ಕನ್ನಡಿಗರ ನೆರವಿನಿಂದ ಅದೂ ಕೂಡ ಪತ್ರಿಕೋದ್ಯಮ, ಮುದ್ರಣಕಲೆ ಕನ್ನಡ ಸಾಹಿತ್ಯ ಮೊದಲಾದವುಗಳಲ್ಲಿ ಉನ್ನತ ಮಟ್ಟದ ಪರೀಕ್ಷೆಗಳನ್ನು ನಡೆಸಿ ಅದಕ್ಕೆ ತಕ್ಕ ಮಾನ್ಯತೆ ಸರ್ಕಾರದಿಂದ ದೊರೆಯುವಂತೆ ಮಾಡಬೇಕು. ವರ್ಷಕ್ಕೆ ಎರಡು ಪರೀಕ್ಷೆಗಳಂತೆ ಮೂರು ವರ್ಷ ಹಿಂದೀ ಓದಿದರೆ ಒಬ್ಬ ಹೋಟೆಲಿನ ಮಾಣಿ ಹೈ ಸ್ಕೂಲಿನಲ್ಲಿ ಹಿಂದೀ ಅಧ್ಯಾಪಕನಾಗಬಲ್ಲ. ಇಂಥ ಸೌಲಭ್ಯ ಕನ್ನಡಕ್ಕೇಕೆ ದೊರೆಯಬಾರದು? ಪರಿಷತ್ತಿನ ಪರೀಕ್ಷೆಗಳಿಗೆ ಏನು ಮಾನ್ಯತೆಯಿದೆ?

ಇಂದು ನಮ್ಮ ವಿದ್ಯೆಯೆಲ್ಲ ಅರ್ಥಕಾರೀ ವಿದ್ಯೆಯಾಗಿರುವಾಗ ಜನ ಪರಿಷತ್ತಿನ ಪರೀಕ್ಷೆಗಳನ್ನು ಆರ್ಥಿಕದೃಷ್ಟಿಯಿಂದ ನೋಡುವುದು ಸಹಜವೇ. ಸಾಹಿತ್ಯ ಸಮ್ಮೇಳನ ಬಿಹಾರಿನ ರಾಷ್ಟ್ರಭಾಷಾ ಪರಿಷತ್ತು, ಮಧ್ಯಪ್ರದೇಶದ ಶಾಸಕೀಯ ಹಿಂದೀ ಪರಿಷತ್ತು ವರ್ಷಕ್ಕೊಮ್ಮೆ ಹಿಂದಿಯ ಅಧಿಕಾರೀ ವಿದ್ವಾಂಸರಿಂದ ಭಾಷಣಗಳನ್ನು ಏರ್ಪಡಿಸುತ್ತದೆ. ಈ ಭಾಷಣಗಳು ಸಂಶೋಧನಾತ್ಮಕವಾಗಿದ್ದು ತುಂಬ ಉನ್ನತಮಟ್ಟದವಾಗಿರುತ್ತವೆ. ಒಂದು ದಿವಸದ ಭಾಷಣಕ್ಕೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. ಅನಂತರ ಅದನ್ನು ಗ್ರಂಥಾಕಾರದಲ್ಲಿ ಪ್ರಕಟಿಸುತ್ತಾರೆ. 'ಹಿಂದೀ ಸಾಹಿತ್ಯದ ಭೂಮಿಕೆ', 'ಸಹೀ ಸಾಧನೆ' ಮೊದಲಾದ ಮಹತ್ವಪೂರ್ಣ ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ.

ವಾರ್ಧಾದ ರಾಷ್ಟ್ರಭಾಷಾ ಪ್ರಚಾರ ಸಮಿತಿ ಅಹಿಂದೀ ಭಾಷಿಗಳಾದ ಹಿಂದೀ ಲೇಖಕರಿಗೆ ಒಂದು ಸಾವಿರ ರೂಪಾಯಿಯ ಪುರಸ್ಕಾರವನ್ನು ನೀಡುತ್ತದೆ. ಅದರ ಬೆಳ್ಳಿಯ ಹಬ್ಬದ ಸಂದರ್ಭದಲ್ಲಿ ಭಾರತದ ಹದಿನಾಲ್ಕು ಭಾಷೆಗಳ ಪ್ರತಿನಿಧಿ ಕವಿಗಳ ಪರಿಚಯಾತ್ಮಕ ಗ್ರಂಥಗಳನ್ನು ಪ್ರಕಟಸಿತು. ಕನ್ನಡದ ವರಕವಿಗಳಾದ ಶ್ರೀ ಕುವೆಂಪು ಮತ್ತು ಬೇಂದ್ರೆಯವರ ಮೇಲೆ ಬರೆದ ಈ ಲೇಖಕನ ಗ್ರಂಥಗಳು ಪ್ರಕಟವಾಗಿವೆ. ಇದಲ್ಲದೆ ಹಿಂದೀ ಪ್ರದೇಶದ ವಿವಿಧ ಸರ್ಕಾರಗಳು, ಅಹಿಂದೀ ಪ್ರದೇಶದ ಹಿಂದೀ ಬರಹಗಾರರ ಕೃತಿಗಳಿಗೆ ಪುರಸ್ಕಾರಗಳನ್ನು ಇತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದ ಡಾ. ಹಿರಣ್ಮಯಿ ಅವರಿಗೆ ಅವರ 'ಹಿಂದೀ ಮತ್ತು ಕನ್ನಡದ ಭಕ್ತಿ ಆಂದೋಳನದ ತುಲನಾತ್ಮಕ ಅಧ್ಯಯನ' ಎಂಬ ಗ್ರಂಥಕ್ಕೆ ಒಂದು ಸಾವಿರ ರೂಪಾಯಿನ ಬಹುಮಾನ ನೀಡಿ ಉತ್ತರ ಪ್ರದೇಶ ಸರ್ಕಾರ ಗೌರವಿಸಿದೆ. ಇದೇ ರೀತಿ ಮೈಸೂರು ಸರ್ಕಾರ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ಹಿಂದಿಯಲ್ಲಿ ಕೆಲಸಮಾಡುತ್ತಿರುವ ಲೇಖಕರನ್ನು ಗೌರವಿಸಿ ಪುರಸ್ಕರಿಸಬೇಕು.

ಭಾರತಸರ್ಕಾರ ಹಿಂದೀ ಪ್ರಚಾರಕ್ಕಾಗಿ ಹೊನ್ನಿನ ಹೊಳೆಯನ್ನೇ ಹರಿಸುತ್ತಿದೆ. ಹಿಂದೀ ಸಾಹಿತ್ಯದ ಪ್ರದೇಶಕ್ಕಾಗಿ ವಿಖ್ಯಾತ ವಿದ್ವಾಂಸರನ್ನು ಅಹಿಂದೀ ಪ್ರಚಾರಕ್ಕೆ ಕಳುಹಿಸಿ ಅವರಿಂದ ಭಾಷಣಗಳನ್ನು ಏರ್ಪಡಿಸುತ್ತದೆ. ಆ ವಿದ್ವಾಂಸರಿಗೆ ವಿಮಾನ ವೆಚ್ಚವೇ ಮೊದಲಾದ ಸೌಲಭ್ಯಗಳನ್ನು ನೀಡುತ್ತದೆ. ಇದೇ ರೀತಿ ಕನ್ನಡದ ವಿದ್ವಾಂಸರನ್ನು ಹಿಂದೀ ಪ್ರದೇಶಕ್ಕೆ ಬರಮಾಡಿಕೊಂಡು ಕನ್ನಡ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಹಿಂದಿಯಲ್ಲೋ ಇಂಗ್ಲೀಷಿನಲ್ಲೋ ಅಥವಾ ಕನ್ನಡ ಭಾಷಣದ ಹಿಂದೀ ಭಾಷಾಂತರವನ್ನೊದಗಿಸಿದರೂ ಸರಿಯೆ, ಭಾಷಣಮಾಲೆಯನ್ನು ಏರ್ಪಡಿಸುವಂತೆ ಪರಿಷತ್ತು, ನಮ್ಮ ಸರ್ಕಾರ, ಶಾಸಕರು ಕೇಂದ್ರ ಸರ್ಕಾರವನ್ನು ಒತ್ತಾಯಮಾಡಬೇಕು.

ಕೇಂದ್ರದ ಧನಸಹಾಯದಿಂದ ಹಿಂದೀ ವಾಙ್ಮಯ ಅತ್ಯಂತ ಶೀಘ್ರವಾಗಿ ಪ್ರಗತಿಗಾಮಿಯಾಗಿದೆ. ಇಂದು ಹಿಂದೀ ಮಧ್ಯಮದಲ್ಲಿ ಸ್ನಾತಕೋತ್ತರ ಮಟ್ಟದ ಪರೀಕ್ಷೆಗಳು ನಡೆಯುತ್ತಿವೆ. ಕಾಶೀ ವಿಶ್ವವಿದ್ಯಾನಿಲಯದ ಪ್ರಶ್ನೆಪತ್ರಿಕೆಯ ಮೇಲೆ 'The candidate can answer either in English or in Hindi' ಎಂದು ಬರೆದಿರುತ್ತದೆ. ಕನ್ನಡದಲ್ಲೂ ಹೀಗಾಗಬೇಡವೇ? ಹೀಗಾಗಬೇಕಾದರೆ ಅದಕ್ಕೆ ತಕ್ಕ ಪಠ್ಯಪುಸ್ತಕಗಳು ದೊರೆಯಬೇಕು. ಈ ದಿಶೆಯಲ್ಲಿ ಹಿಂದಿಯಲ್ಲಿ ಅದ್ಭುತವಾದ ಕೆಲಸ ನಡೆದಿದೆ. ಜ್ಞಾನವಿಜ್ಞಾನದ ಪ್ರಪಂಚದ ಎಲ್ಲ ಶ್ರೇಷ್ಠ ಗ್ರಂಥಗಳೂ ಹಿಂದಿಗೆ ದಡದಡನೆ ಅನುವಾದಗೊಳ್ಳುತ್ತಿವೆ. ಮನಶ್ಶಾಸ್ತ್ರ, ತತ್ತ್ವವಿಜ್ಞಾನ, ಭಾಷಾವಿಜ್ಞಾನ, ಸೌಂದರ್ಯಶಾಸ್ತ್ರ, ಅರ್ಥಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ ಮೊದಲಾದವುಗಳ ವಿದ್ವತ್ ಗ್ರಂಥಗಳು ಹಿಂದಿಯಲ್ಲಿ ಅನುವಾದಗೊಂಡಿವೆ. ಇಷ್ಟೇ ಸಂಖ್ಯೆಯಲ್ಲಿ ಮೌಲಿಕ ಗ್ರಂಥಗಳೂ ಬಂದಿವೆ. ಕೆಲವು ಸಾರಿಯಂತೂ ಒಂದೊಂದು ಗ್ರಂಥದ ಎರಡು ಮೂರು ಅನುವಾದಗಳು ಬಂದಿವೆ. 'ಪಿಶಲ್‌ನ ಪ್ರಾಕೃತ ಭಾಷೆಗಳ ವ್ಯಾಕರಣ' ಎಂಬ ಗ್ರಂಥದ ಎರಡು ಅನುವಾದಗಳು ದೊರೆಯುತ್ತವೆ. ಕನ್ನಡನಾಡಿನ ವಿಶ್ವವಿಖ್ಯಾತ ವಿದ್ವಾಂಸರಾದ ಎಂ. ಹಿರಿಯಣ್ಣನವರ 'outlines of Indian Philosophy'ಯ ಎರಡು ಅನುವಾದಗಳಾಗಿವೆ. ಈ ಗ್ರಂಥ ಕನ್ನಡದಲ್ಲಿ ಮಾತ್ರ ಇನ್ನೂ ಬಂದಿಲ್ಲ. ವೈಜ್ಞಾನಿಕ ಗ್ರಂಥಗಳ ಅನುವಾದವನ್ನು ಎಂ.ಎಸ್‌ಸಿ. ಪದವೀಧರರೂ ಡಾಕ್ಟರೇಟ್ ಪದವೀಧರರೂ ಅನುಭವೀ ಲೇಖಕರ ಮಾರ್ಗದರ್ಶನದಲ್ಲಿ ಹಿಂದಿಗೆ ಮಾಡುತ್ತಾರೆ. ಇಂಥ ಕೆಲಸ ಕನ್ನಡದಲ್ಲಾಗಬೇಕು. ಆಗ್ರ ಮೊದಲಾದ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಂತರದಲ್ಲಿ ಎಂ.ಎ. ತರಗತಿಗಳಿವೆ, ಡಿಪ್ಲೋಮಾಗಳಿವೆ. ಕರ್ಣಾಟಕದ ಎಲ್ಲ ವಿಶ್ವವಿದ್ಯಾನಿಲಯಗಳೂ translation course ಮತ್ತು translation M.A. ತರಗತಿಗಳನ್ನು ತೆರೆಯಬೇಕು. ಸಾಹಿತ್ಯ ಅಕಾಡೆಮಿ ವರ್ಷಕ್ಕೊಮ್ಮೆ ನಡೆಸುವ ಕವಿಮೇಳದ ಎಲ್ಲ ಕವಿತೆಗಳನ್ನು ಹಿಂದಿಗೆ ಅನುವಾದಿಸುತ್ತದೆ. ಕನ್ನಡದಲ್ಲೂ ಇಂಥ ಯತ್ನ ನಡೆಯಬೇಕು. ಕೋಶಗಳೂ, ಸಂದರ್ಭ ಗ್ರಂಥಗಳೂ ಹಿಂದಿಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಬಂದಿವೆ. Encyclopaedia of literary terms ಎಂಬ ಮಾದರಿಯಲ್ಲಿ ರಚಿತವಾಗಿರುವ ಹಿಂದೀ ಸಾಹಿತ್ಯ ಕೋಶ, ಸಾಹಿತ್ಯಶಾಸ್ತ್ರ ಪಾರಿಭಾಷಿಕ ಕೋಶ, ಭಾಷಾವಿಜ್ಞಾನಕೋಶಗಳಲ್ಲದೆ ನೇಕಾರಶಬ್ದಕೋಶ, ಕೃಷಿಕಶಬ್ದಕೋಶ, ಕಮ್ಮಾರ ಶಬ್ದಕೋಶಗಳೂ ಬಂದಿವೆ. ಇದಲ್ಲದೆ 'ಸೂರಶಬ್ದಕೋಶ', 'ತುಳಸೀಶಬ್ದಕೋಶ' ಮೊದಲಾದವೂ ಬಂದಿವೆ. ಕನ್ನಡದಲ್ಲೂ ಇಂಥ ಕೆಲಸ ಅಗತ್ಯವಾಗಿ ನಡೆಯಬೇಕು. ಹಿಂದಿಯ ವಿಶ್ವಕೋಶ ಈಗಾಗಲೇ ಹನ್ನೊಂದು ಭಾಗಗಳು ಪ್ರಕಟವಾಗಿವೆ. ಇದಲ್ಲದೆ Indian year book ಭಾರತೀಯ ಶಬ್ದಕೋಶ ಪ್ರತಿವರ್ಷವೂ ಹಿಂದಿಯಲ್ಲಿ ಪ್ರಕಾಶವಾಗುತ್ತದೆ. ಕೇಂದ್ರದ ನೆರವಿನಿಂದ ಕನ್ನಡ ಸಾಹಿತ್ಯ ಪರಿಷತ್ತೂ ಈ ಕೆಲಸವನ್ನು

ಕೈಗೊಳ್ಳಬೇಕು. ದ್ವಿಭಾಷಾ ಕೋಶಗಳಿಗಂತೂ ಹಿಂದಿಯಲ್ಲಿ ಲೆಕ್ಕವೇ ಇಲ್ಲ. ಹಿಂದಿಯಲ್ಲಿ ಈಗ ವಿಮರ್ಶೆಯ ಯುಗ ನಡೆಯುತ್ತಿದೆ. ಕಾದಂಬರಿಗಳಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ವಿಮರ್ಶ ಗ್ರಂಥಗಳು ಬರುತ್ತಿವೆ. ರಸ ಸಿದ್ಧಾಂತದ ಮೇಲೆ ಅತ್ಯಂತ ಉನ್ನತಮಟ್ಟದ ಗ್ರಂಥ ಬಂದಿದೆ. ಡಾ. ದೇವರಾಜರ ರೊಮ್ಯಾಂಟಿಕ್ ಕಾವ್ಯ ಶಾಸ್ತ್ರ, ರಾಮಚಂದ್ರ ಶುಕ್ಲರ ರಸಮೀಮಾಂಸೆ, ಗುಲಾಬ್ ರಾಯರ 'ನವರಸ' ಉಲ್ಲೇಖನೀಯ. ಇವುಗಳಲ್ಲದೆ ಲೋಕ ಸಾಹಿತ್ಯ, ವಿಜ್ಞಾನ, ಬರಿಯ ವಿಮರ್ಶೆಗಾಗಿಯೇ ಮೀಸಲಾದ ಪತ್ರಿಕೆಗಳು ಬರುತ್ತಿವೆ. ಜೀವಿತ ವ್ಯಕ್ತಿಗಳ ಕೃತಿತ್ವ ವ್ಯಕ್ತಿತ್ವವನ್ನು ಕುರಿತು ಅದೆಷ್ಟೋ ಉದ್ಗ್ರಂಥಗಳು, ಸಂಶೋಧನ ಪ್ರಬಂಧಗಳು ಬಂದಿವೆ. ಕನ್ನಡದಲ್ಲಿ ಬೇಂದ್ರೆ, ಕುವೆಂಪು, ಕಾರಂತ ಮೊದಲಾದವರ ಕೃತಿಗಳ ಮೇಲೆ ಡಾಕ್ಟರೇಟ್‌ಗಾಗಿ ಕೆಲಸ ನಡೆಯಬೇಕು. ಕಾವ್ಯಕೃತಿ ಪರಿಚಯಕ್ಕಾಗಿ ಹಿಂದಿಯಲ್ಲಿ ಆನೇಕ ಸುಂದರ ಗ್ರಂಥ ಮಾಲೆಗಳಿವೆ ಒಬ್ಬ ಕವಿಯನ್ನೇ ಅವನು ತನ್ನ ಶ್ರೇಷ್ಠ ಕವನಗಳನ್ನು ಆಯುವಂತೆ ಮಾಡಿ ಅವನಿಂದಲೇ ಭೂಮಿಕೆ ಬರೆಸಿದ ಕಾವ್ಯಸಂಗ್ರಹಗಳು, ಕವಿಗಳ ಪರಿಚಯಾತ್ಮಕ ಗ್ರಂಥಗಳು ತುಂಬ ಅಗ್ಗದ ಬೆಲೆಗೆ ದೊರೆಯುತ್ತವೆ. ಇಂಥ ಕೆಲಸ ಕನ್ನಡದಲ್ಲಿ ನಡೆಯಬೇಕು.

ಇವೆಲ್ಲಕ್ಕೂ ಮಿಗಿಲಾಗಿ ಹಿಂದಿಯಲ್ಲಿ ಭಾರತದ ಎಲ್ಲ ಭಾಷೆಗಳ ಗ್ರಂಥಗಳೂ ಅನುವಾದಗೊಳ್ಳುತ್ತಿವೆ. ಇದರಲ್ಲಿ ಕನ್ನಡ ಗ್ರಂಥಗಳ ಸಂಖ್ಯೆ ಕಡಿಮೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಿಂದಿಯ ಕಬೀರ, ತುಳಸೀದಾಸ, ಸೂರದಾಸ, ಮೀರಾಬಾಯಿ, ಪ್ರೇಮಚಂದ್, ಮೈಥಿಲೀ ಶರಣಗುಪ್ತರ ಹೆಸರುಗಳು ಚಿರಪರಿಚಿತ. ಆದರೆ ಹಿಂದಿಯ ಜನತೆಯಲ್ಲಿ ಎಷ್ಟು ಜನಕ್ಕೆ ಪಂಪ, ಬಸವ, ಅಕ್ಕಮಹಾದೇವಿ, ಸರ್ವಜ್ಞ, ಕುವೆಂಪು, ಬೇಂದ್ರೆ, ಕಾರಂತರ ಹೆಸರು ಗೊತ್ತಿದೆ? ದಕ್ಷಿಣವೆಂದರೆ ಮದ್ರಾಸು ಎನ್ನುವವರಲ್ಲಿ ಹಲವರಿಗೆ ದಕ್ಷಿಣದಲ್ಲಿ ಕನ್ನಡ ಎಂಬ ಭಾಷೆ ಇದೆ ಎನ್ನುವುದೂ ತಿಳಿಯದು. ಬಂಕಿಮ, ಶರಚ್ಚಂದ್ರ, ರವೀಂದ್ರ, ಪ್ರೇಮಚಂದ್ರರ ಕೃತಿಗಳನ್ನು ಓದದ ಕನ್ನಡಿಗನೇ ಇಲ್ಲ. ಆದರೆ ಕಾರಂತರ, ಗೋಕಾಕರ, ಕೈಲಾಸಂ ಅವರ ಕೃತಿಗಳನ್ನು ಅವರು ಓದಬೇಡವೆ? ಕನ್ನಡದಲ್ಲಿ ನಡೆಯುತ್ತಿರುವ ಈ one way traffic ನಿಲ್ಲಬೇಕಾದರೆ ಕನ್ನಡದ ಕೃತಿಗಳು ವಿಪುಲ ಸಂಖ್ಯೆಯಲ್ಲಿ ಹಿಂದಿಗೆ ಹೋಗಬೇಕು. ಕಲ್ಕತ್ತೆಯಿಂದ ಬಂಗಾಳೀ ಸಾಹಿತ್ಯ ಸಂಸ್ಕೃತಿಯ ಪರಿಚಯ ಮಾಡಿಕೊಡಲು 'ಅಣಿಮಾ' ಎಂಬ ಪತ್ರಿಕೆ ಹೊರಡುತ್ತದೆ. ಇದರಲ್ಲಿ ಬಂಗಾಳಿಯ ಒಂದು ಕಾದಂಬರಿಯ ಧಾರಾವಾಹಿ ಅನುವಾದ, ಕವಿತೆ, ಸಣ್ಣಕತೆ, ಪ್ರಬಂಧ ಎಲ್ಲವೂ ಬಂಗಾಳಿಯಿಂದ ಅನುವಾದ ಮಾಡಿ ಬರುತ್ತವೆ. ಬಂಗಾಳೀ ಸಾಹಿತ್ಯದ ಪರಿಚಯಕ್ಕೇ ಮೀಸಲಾದ ಪತ್ರಿಕೆ ಇದು. ಇಂಥ ಪತ್ರಿಕೆಗಳು ಕನ್ನಡನಾಡಿನಲ್ಲೂ ಬರಬೇಕು. ಇಂದು ಕನ್ನಡ ಪ್ರಚಾರ ಹಿಂದಿಯಲ್ಲಿ ನಡೆಯಬೇಕು. ಕನ್ನಡಸಾಹಿತ್ಯ ಭಾರತೀಯ ಸಾಹಿತ್ಯವಾಗಬೇಕಾದರೆ ಅದು ಮೊದಲು ಹಿಂದಿಯಲ್ಲಿ ಅನುವಾದಗೊಳ್ಳಬೇಕು. ಅನಂತರ ಅದರ ಮೂಲಕ ಅದು ಇತರ ಭಾಷೆಗಳಿಗೂ ಸಂಕ್ರಮಿಸುತ್ತದೆ. ಈ ನಿಟ್ಟಿನಲ್ಲಿ ಪರಿಷತ್ತು ರಾಜ್ಯ ಸರ್ಕಾರ ಕೆಲಸಮಾಡಬೇಕು. ಪಂಪಭಾರತ, ಕುಮಾರ ವ್ಯಾಸ ಭಾರತ, ಜೈಮಿನೀ ಭಾರತ, ಬಸವಣ್ಣನವರೇ ಮೊದಲಾದ ಶರಣರ ವಚನಗಳು, ದಾಸರ ಪದಗಳು ಹಿಂದಿಯಲ್ಲಿ ಅನುವಾದಗೊಳ್ಳಬೇಕು. ರಾಮಾಯಣ ದರ್ಶನ, ಮಾಸ್ತಿಯವರ ಸಣ್ಣ ಕತೆಗಳು, ಬೇಂದ್ರೆ, ಕುವೆಂಪು, ಅಡಿಗ, ನರಸಿಂಹಸ್ವಾಮಿ, ಗೋಕಾಕ್ ಮೊದಲಾದವರ ಕೃತಿಗಳ ಅನುವಾದ ಹಿಂದಿಯಲ್ಲಿ ಬರಬೇಕು. ಹಿಂದಿಯಲ್ಲಿ ಕನ್ನಡ ಸಾಹಿತ್ಯಚರಿತ್ರೆ ಪ್ರಾಮಾಣಿಕವಾಗಿ ರಚಿತವಾಗಬೇಕು. ಇದೆಲ್ಲಕ್ಕೂ ಮುಂಚೆ ಕನ್ನಡ ಹಿಂದಿ ಸ್ವಯಂಬೋಧಿನಿ ಹಿಂದಿಯಲ್ಲಿ ಬರಬೇಕು. ಕನ್ನಡ ಹಿಂದೀ ಕೋಶ ಪ್ರಥಮ ಅಗತ್ಯ. ಕನ್ನಡನಾಡಿನ ಲಲಿತಕಲೆಗಳ, ಕುಶಲಕಲೆಗಳ, ಪ್ರೇಕ್ಷಣೀಯ ಸ್ಥಳಗಳ, ಧಾರ್ಮಿಕ ಚಲನವಲನಗಳ, ಪರಿಚಯಾತ್ಮಕಗ್ರಂಥ ಹಿಂದಿಯಲ್ಲಿ ಬರಬೇಕು. ಬೆಂಗಳೂರು, ಧಾರವಾಡಗಳ ಬಾನುಲಿಗಳಲ್ಲಿ ಹಿಂದೀ ಕಾರ್ಯಕ್ರಮದಲ್ಲಿ ಮೀರಾ ಭಜನೆ ಹಾಡಿಸಿದರೆ ಪ್ರಯೋಜನವಿಲ್ಲ. ಕನ್ನಡ ಸಂತರ, ಕಲಾಕಾರರ ಪರಿಚಯವನ್ನು ಹಿಂದಿಯಲ್ಲಿ ಮಾಡಿಕೊಡುವಂಥ ಕಾರ್ಯಕ್ರಮಗಳು ನಡೆಯಬೇಕು. ಈಗ ನಡೆಯುತ್ತಿರುವ ಕಾರ್ಯಗಳಲ್ಲಿ ಹೊಳೆಗೆ ಹುಣಸೇಹಣ್ಣು ಕಲಸಿದಂತಾಗುತ್ತಿದೆ. ಇದೇ ರೀತಿ ಕನ್ನಡದಲ್ಲಿ ಕೂಡ ಹಿಂದಿಯ ಪ್ರತಿನಿಧೀ ಸಂತರ, ಕವಿಗಳ ಪರಿಚಯಾತ್ಮಕವಾದ ಗ್ರಂಥಗಳು ಬರಬೇಕು. ಕಬೀರನ ವಾಣಿ, ಸೂರದಾಸನ ಪದಗಳು, ಮೀರಾ ಭಜನ ಇವೆಲ್ಲಾ ಕನ್ನಡಕ್ಕೆ ಬರಬೇಕು. ಹಿಂದಿಯ ಮೂಲಕ ಕನ್ನಡಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ ಮಹನೀಯರೂ ನಮ್ಮಲ್ಲಿದ್ದಾರೆ. ಅಂಥವರನ್ನು ರಾಜ್ಯ ಸರ್ಕಾರ ಸನ್ಮಾನಿಸುವುದು ಸೂಕ್ತ. ಮೈಸೂರು ಸರ್ಕಾರ 'ಅಣಿಮಾ' ದಂಥ ಹಿಂದಿಯ ಪತ್ರಿಕೆಯೊಂದನ್ನು ಆರಂಭಿಸಬೇಕು. ಹಿಂದಿಯಲ್ಲಿ ಹಳೆಯ ಹೊಸ ಎಲ್ಲ ಲೇಖಕರ

ಭಾವಚಿತ್ರಗಳು ವಿವಿಧ ಆಕಾರದಲ್ಲಿ ದೊರೆಯುತ್ತವೆ. ಒಮ್ಮೆ ಯಾರೋ ಹಿಂದಿಯವರು–ಪಂಪನ ಭಾವಚಿತ್ರಕ್ಕಾಗಿ ನನಗೆ ಬರೆದರು. ನನಗೆ ಅದು ದೊರೆಯಲಿಲ್ಲ. ಅವರು ನೃಪತುಂಗನ ಚಿತ್ರವನ್ನು ಕೇಳಿದ್ದರು. ನೃಪತುಂಗನಿಂದ ಹಿಡಿದು ಇಂದಿನ ಕವಿಗಳ ಕಲಾಕಾರರ ಭಾವಚಿತ್ರಗಳೆಲ್ಲ ಪರಿಷತ್ತಿನಲ್ಲಿ ದೊರೆಯಬೇಕು. ಹಿಂದಿಯಲ್ಲಿ ನಡೆಯುತ್ತಿರುವಂತೆ ವಿಲ್‌ಡುರಾಂಟ್, ಟಾಯ್ನಬೀ, ರಾಧಾಕೃಷ್ಣನ್ ಮೊದಲಾದವರ ಗ್ರಂಥಗಳ ಅನುವಾದ ಕನ್ನಡದಲ್ಲಿ ಬರಬೇಕು. ಕನ್ನಡದ ಬಗೆಗೆ ಕೆಲಸಮಾಡಿದ ರೈಸ್, ಫ್ಲೀಟ್ ಮೊದಲಾದವರ ಇಂಗ್ಲೀಷ್ ಗ್ರಂಥಗಳೆಲ್ಲ ಕನ್ನಡದಲ್ಲಿ ಬರಬೇಕು. ಇಂಥ ಕೆಲಸ ಹಿಂದಿಯಲ್ಲಿ ನಡೆದಿದೆ.

ಕೊನೆಯ ಮಾತು

ಭಾರತೀಯ ಭಾಷೆಗಳ ವಿಕಾಸಕ್ಕಾಗಿ ಕೇಂದ್ರ ಸರ್ಕಾರ 'ಭಾರತೀಯ ಭಾಷಾಸಮಿತಿ' ಎಂಬ ಸಮಿತಿಯೊಂದನ್ನು ಸ್ಥಾಪಿಸಿದೆ. ಇದರ ಮೊಟ್ಟಮೊದಲ ಅಧಿವೇಶನ ೨೬ನೇ ನವೆಂಬರ್ ೧೯೬೬ರಲ್ಲಿ ದಿಲ್ಲಿಯಲ್ಲಿ ನಡೆಯಿತು. ಆದರ ಕಾರ್ಯಕ್ರಮದ ಪ್ರಕಾರ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತೀಯ ಭಾಷೆಗಳ ಪ್ರಗತಿಗಾಗಿ ಸರ್ಕಾರ ೫ ಕೋಟಿ ೮೫ ಲಕ್ಷ ರೂಪಾಯಿಗಳನ್ನು ಒದಗಿಸಲಿದೆ. ಇದರಲ್ಲಿ ಒಂದು ಕೋಟಿ ರೂ. ಕೇಂದ್ರೀಯ ಕ್ಷೇತ್ರದಿಂದ ಮತ್ತು ಉಳಿಕೆ ಹಣ ರಾಜ್ಯಕ್ಷೇತ್ರದಿಂದ ಖರ್ಚಾಗಲಿದೆ. ಆಧುನಿಕ ಭಾರತೀಯ ಭಾಷೆ ಮತ್ತು ಹಿಂದಿಯ ಒಂದು ಕೇಂದ್ರೀಯ ಸಂಸ್ಥೆ ೫೦ ಲಕ್ಷ ರೂಪಾಯಿ ಖರ್ಚಿನಲ್ಲಿ ಅಸ್ತಿತ್ವಕ್ಕೆ ಬರಲಿದೆ. ಇದರಲ್ಲಿ ಎಲ್ಲ ಭಾಷೆಗಳ ತೌಲನಿಕ ವ್ಯಾಸಂಗ ಮತ್ತು ಸಂಶೋಧನೆ ನಡೆಯುತ್ತದೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಹೊಸಕೃತಿಗಳ ಅನುವಾದವೂ ಇದರ ಮೇಲ್ವಿಚಾರಣೆಯಲ್ಲಿ ನಡೆಯಲಿದೆ. ಇದಲ್ಲದೆ ಈ ಸಂಸ್ಥೆ ವಿವಿಧ ವಿಶ್ವವಿದ್ಯಾನಿಲಯಗಳ ಭಾಷಾ ವಿಭಾಗಗಳು, ಸಂಶೋಧನ ಸಂಸ್ಥೆಗಳು ಮತ್ತು ಇತರ ಸಂಘ ಸಂಸ್ಥೆಗಳೊಡನೆ ಸಂಪರ್ಕ ಸ್ಥಾಪಿಸಿ ಅಗತ್ಯವಾದ ನೆರವನ್ನು ಒದಗಿಸುತ್ತದೆ. ಸಂಶೋಧನೆ ಮತ್ತು ಅಧ್ಯಾಪನದ ಶಿಕ್ಷಣಕ್ಕೂ ವ್ಯವಸ್ಥೆ ಮಾಡುತ್ತದೆ.

ಕೇಂದ್ರೀಯ ಭಾಷಾ ಸಂಸ್ಥೆಯಲ್ಲದೆ ವಿವಿಧ ರಾಜ್ಯಗಳಲ್ಲೂ ಭಾಷಾ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ಸದ್ಯಕ್ಕೆ ೨೭ ಕೋಟಿ ರೂ. ಮೀಸಲಾಗಿದೆ. ಆಧುನಿಕ ಭಾರತೀಯ ಭಾಷೆಗಳ ಸಂಯಕ್ ವಿಕಾಸ ಈ ಸಂಸ್ಥೆಗಳ ಗುರಿ. ಇದರಿಂದ ಆಧುನಿಕ ಭಾಷೆಗಳು ಶೀಘ್ರವೇ ಸಂಪೃದ್ಧವಾಗಿ ಆಧುನಿಕ ಜ್ಞಾನವಿಜ್ಞಾನದ ಸಫಲವಾಹಿನಿಗಳಾಗುವುವೆಂದು ಆಶಿಸಲಾಗಿದೆ.

ಇದರ ಕಾರ್ಯಕ್ರಮ ಹೀಗಿದೆ:

೧. ಆಧುನಿಕ ಭಾರತೀಯ ಭಾಷೆಗಳಲ್ಲಿ ಸಂಶೋಧನೆ ನಡೆಸುವುದು.

೨. ಕ್ಷೇತ್ರೀಯ ಭಾಷೆಗಳ ಪಾರಿಭಾಷಿಕ ಶಬ್ದಾವಳಿಯ ನಿರ್ಮಾಣ ಕಾರ್ಯದಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಶಬ್ದಾವಳೀ ಆಯೋಗಕ್ಕೆ ಇದು ಏಜೆನ್ಸಿಯಾಗಿ ಕೆಲಸಮಾಡುತ್ತದೆ.

೩. ಕ್ಷೇತ್ರೀಯ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಪುಸ್ತಕಗಳನ್ನು ತಯಾರಿಸುವುದು.

೪. ಕ್ಷೇತ್ರೀಯ ಭಾಷೆಗಳ ಆಧಾರಭೂತ ಶಬ್ದಾವಳಿ ಮತ್ತು ತುಲನಾತ್ಮಕ ವ್ಯಾಕರಣಗಳನ್ನು ತಯಾರಿಸುವುದು.

೫. ದ್ವಿಭಾಷಾವಿದರಿಗೆ ಮತ್ತು ಬಹುಭಾಷಾವಿದರಿಗೆ ಶಿಕ್ಷಣ ನೀಡುವುದು ಮತ್ತು ಕಾಲೇಜು ಅಧ್ಯಾಪಕರುಗಳಿಗೆ ಅನುಸ್ಥಾಪನ ಪಾಠ್ಯಕ್ರಮ (orientation course) ನಡೆಸುವುದು. ಇದರಿಂದ ಅವರು ಭಾರತೀಯ ಭಾಷಾ ಮಾಧ್ಯಮದಿಂದ ಯಶಸ್ವಿಯಾಗಿ ಬೋಧನೆ ನಡೆಸಬಲ್ಲರು.

೬. ಕ್ಷೇತ್ರೀಯ ಭಾಷೆಗಳಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಸಾಹಿತ್ಯ ಸಮಿತಿಗೆ ಪ್ರೋತ್ಸಾಹ ನೀಡುವುದು.

೭. ರಾಷ್ಟ್ರೀಯ ಭಾಷೆಗಳ ವಿಕಾಸಕ್ಕೆ ನೆರವಾಗುವ ಇತರ ಕಾರ್ಯಕ್ರಮಗಳನ್ನು ಕೈಕೊಳ್ಳುವುದು.

ಹಿಂದೀ ಭಾಷಾಕ್ಷೇತ್ರದಲ್ಲಿ ಹಿಂದಿಯೇತರ ಭಾಷೆಗಳ ಶಿಕ್ಷಕರ ನಿಯುಕ್ತಿ

ತ್ರಿಭಾಷಾ ಸೂತ್ರವನ್ನು ಯಶಸ್ವಿಗೊಳಿಸಲು ಹಿಂದೀ ಕ್ಷೇತ್ರದಲ್ಲಿ ಅಹಿಂದೀ ಭಾಷೆಗಳ ಅಧ್ಯಾಪಕರು ಹಾಗೂ ಅಹಿಂದೀ ಕ್ಷೇತ್ರದಲ್ಲಿ ಹಿಂದೀ ಅಧ್ಯಾಪಕರ ಅಭಾವ ಇರಬಾರದು. ಈ ಕ್ಷೇತ್ರದಲ್ಲೂ ನಮ್ಮಲ್ಲಿ one way traffic ನಡೆಯುತ್ತಿದೆ. ಈ ಕಾರ್ಯಕ್ಕಾಗಿ ನಾಲ್ಕನೆಯ ಪಂಚ

ವಾರ್ಷಿಕ ಯೋಜನೆಯಲ್ಲಿ ೯೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ.

ಭಾರತೀಯ ಭಾಷೆಗಳ ವಿಕಾಸಕ್ಕಾಗಿ ದುಡಿಯುತ್ತಿರುವ ಸ್ವೇಚ್ಛಿಕ ಸಂಸ್ಥೆಗಳಿಗೆ ಸಹಾಯಧನ.

ಈ ಯೋಜನೆಯಲ್ಲಿ ವಿಭಿನ್ನ ರೀತಿಯ ವಿಶ್ವಕೋಶ, ಶಬ್ದಕೋಶ, ಗ್ರಂಥಸೂಚಿ, ಸಾಹಿತ್ಯ ಸಂಕಲನ, ಜ್ಞಾನ ಕೋಶ ಮೊದಲಾದ ಸಂದರ್ಭ ಗ್ರಂಥಗಳ ನಿರ್ಮಾಣಕ್ಕಾಗಿ, ಸಾಂಸ್ಕೃತಿಕ, ಸಾಹಿತ್ಯಿಕ ಭಾಷೆ ಮತ್ತು ವೈಜ್ಞಾನಿಕ ಗ್ರಂಥಗಳ ಪ್ರಕಾಶನಕ್ಕೆ, ಪ್ರಾಚೀನ ಹಸ್ತಲಿಪಿಗಳ ಸಂಪಾದನೆ ಮತ್ತು ಪ್ರಕಾಶನಕ್ಕಾಗಿ, ವಿವಿಧ ಭಾಷೆಗಳ ಸ್ವಯಂ ಶಿಕ್ಷಕ ಪುಸ್ತಕಗಳನ್ನು ಅಣಿಗೊಳಿಸಲು ಆರ್ಥಿಕ ನೆರವನ್ನು ನೀಡಲಾಗುವುದು. ಸಾಹಿತ್ಯ ಸಮ್ಮೇಳನ, ಶಿಬಿರ ಹಾಗೂ ಪುಸ್ತಕ ಪ್ರದರ್ಶನಗಳಿಗೂ ಸಹಾಯ ನೀಡುತ್ತದೆ. ಒಂದು ಭಾಷೆಯ ಪುಸ್ತಕವನ್ನು ಇತರ ಭಾಷೆಗೆ ಲಿಪ್ಯಂತರ ಮಾಡಲೂ ಇದು ನೆರವು ನೀಡುತ್ತದೆ.

ಈ ಯೋಜನೆಗಳಲ್ಲದೆ ಆಧುನಿಕ ಭಾರತೀಯ ಭಾಷೆಗಳ ಕೆಲವು ಸಾಮಾನ್ಯ ಯೋಜನೆಗಳನ್ನೂ ಕುರಿತು ಸಮಿತಿ ಚರ್ಚೆ ನಡೆಸಿತು. ಆ ಯೋಜನೆಗಳು ಇಂತಿವೆ:

ಕೇಂದ್ರೀಯ ಯೋಜನೆಗಳು

೧. ವಿಭಿನ್ನ ಭಾರತೀಯ ಭಾಷೆಗಳಲ್ಲಿ ದ್ವಿಭಾಷೀ ಕೋಶಗಳನ್ನು ರಚಿಸುವುದು.

೨. ಭಾರತದ ಭಾಷಾ ವೈಜ್ಞಾನಿಕ ಸರ್ವೇಕ್ಷಣೆ, ಭಾಷಾ ವೈಜ್ಞಾನಿಕ ಸಂಶೋಧನೆ.

೩. ಹಿಂದೀ ಪುಸ್ತಕಗಳನ್ನು ಪ್ರಾಂತೀಯ ಲಿಪಿಗಳಲ್ಲಿ ಹಾಗೂ ಪ್ರಾಂತೀಯ ಭಾಷೆಗಳ ಪುಸ್ತಕಗಳನ್ನು ದೇವನಾಗರೀ ಲಿಪಿಯಲ್ಲಿ ಪ್ರಕಟಿಸುವುದು.

ಇದೀಗ ಭಾರತೀಯ ಭಾಷೆಗಳಿಗೆ ರಾಜಯೋಗ ಒದಗಿ ಬಂದಿದೆ. ಇದು ಅವುಗಳ ಸತ್ವಪರೀಕ್ಷೆಯ ಕಾಲವೂ ಹೌದು. ಈ ಎಲ್ಲ ಕಾರ್ಯಕ್ರಮಗಳನ್ನೂ ಕಾರ್ಯಗತಗೊಳಿಸಲಿ. ನಮ್ಮಲ್ಲಿ ಭಾಷಾವಾದದ, ಅದರಲ್ಲೂ ಹಿಂದಿಯನ್ನು ಬಲ್ಲ ಜನರ ಅಗತ್ಯವೆಷ್ಟಿದೆ ಎಂದು ಹೇಳಬೇಕಾಗಿಲ್ಲ. ಇಂದು ಕನ್ನಡಿಗರು ತಮ್ಮ ಭಾಷಾ ಪ್ರೇಮವನ್ನು ತೂಗಿಕೊಂಡು, ಜೀರ್ಣಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಈ ದಿಶೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹೊಣೆಗಾರಿಕೆ ಮಹತ್ತರವಾದುದು.

ಹಿಂದೆ ನಮ್ಮಲ್ಲಿ ಉಭಯ ಭಾಷಾ ವಿಶಾರದರೂ, ಉಭಯ ಕವಿಕಮಲರವಿಗಳೂ, ಚತುರ್ಭಾಷಾ ಚಕ್ರವರ್ತಿಗಳೂ ಹೇರಳವಾಗಿದ್ದರು. ಇಂದೂ ಅಂತಹ ಉಭಯ, ಏಕೆ ಹಲವು ಭಾಷೆಗಳ ಮೇಲೆ ಪ್ರಭುತ್ವವುಳ್ಳ ವಿದ್ವಾಂಸರ ಅಗತ್ಯವಿದೆ. ಮೇಲೆ ಹೇಳಿದ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾದರೆ ಕನ್ನಡ ಒಂದನ್ನೇ ಅರಿತ ಜನರಿಂದ ಎಷ್ಟು ನೆರವಾದೀತು? ಪಂಪನೇ ಮೊದಲಾದ ಎಲ್ಲ ಪ್ರಾಚೀನ ಕನ್ನಡ ಕವಿಗಳಿಗೂ ಸಂಸ್ಕೃತ ಕನ್ನಡ ಭಾಷೆಗಳ ಮೇಲೆ ಅಧಿಕಾರವಿತ್ತು. ಪ್ರಾಕೃತ ಅಪಭ್ರಂಶವನ್ನೂ ನಮ್ಮ ಜೈನ ಕವಿಗಳು ಕಲಿತಿದ್ದರು. ಅನೇಕ ಭಾಷೆಗಳನ್ನು ಎಲ್ಲರೂ ಕಲಿಯಲಿ ಎಂದು ನಮ್ಮ ಆಶಯವಲ್ಲ. ಆದರೆ ಭಾಷೆಗಳನ್ನು ಕಲಿಯುವತ್ತ ಆಸಕ್ತಿ ನುಸುಳಿಸಬಾರದು, ಅದರಿಂದ ನಮ್ಮ ನುಡಿ ಶ್ರೀಮಂತವಾಗಬೇಕು ಧೀಮಂತವಾಗಬೇಕು. ಇಪ್ಪತ್ತಾರು ಭಾಷೆಗಳ ಮೇಲೆ ಅಧಿಕಾರವಿದ್ದ ದಿವಂಗತ ಮಹಾಪಂಡಿತ ರಾಹುಲ ಸಾಂಕೃತ್ಯಾಯನ ಮತ್ತು ಅಷ್ಟೇ ಪಾಂಡಿತ್ಯವಿದ್ದ ಕನ್ನಡ ಮಹಾಪಂಡಿತ ದಿ. ಗೋವಿಂದ ಪೈ ಅವರ ಸಾಧನೆ, ಸಿದ್ಧಿ ನಮ್ಮ ತರುಣ ಪೀಳಿಗೆಗೆ ದಾರಿದೀಪವಾಗಬೇಕು. ಈ ರೀತಿ ಭಾಷೆಗಳನ್ನು ಕಲಿಯುವ ತರುಣರನ್ನು ನಮ್ಮ ಸಂಘಸಂಸ್ಥೆಗಳು ಬಂಗಾಳ, ಮಹಾರಾಷ್ಟ್ರ, ಮದ್ರಾಸು, ಉತ್ತರ ಪ್ರದೇಶ ಮೊದಲಾದ ಪ್ರದೇಶಗಳಿಗೆ ಕಳುಹಿಸಿ ಅದರಲ್ಲಿ ತರಬೇತು ಪಡೆಯುವಂತೆ ಮಾಡಬೇಕು. ಇಲ್ಲವಾದರೆ ಇಲ್ಲೇ ಅಂತಹ ತರಬೇತನ್ನು ಕೊಡಮಾಡಬೇಕು. ಇಂಥ ಸಾಧನೆಯಿಂದ ನಮ್ಮ ನಾಡು, ನುಡಿ, ಶ್ರೀಮಂತವಾಗಲಿ.

"ಆ ನೋ ಭದ್ರಾಃ ಕ್ರಿತವೋ ಯಂತು ವಿಶ್ವತಃ"

ಭಾಷಾಬಾಂಧವ್ಯ ಗೋಷ್ಠಿ

ಹಿಂದಿ-ಕನ್ನಡ ಮತ್ತು ಕನ್ನಡ-ಹಿಂದಿಯ ಕೊಳು ಕೊಡೆಯ ಸರ್ವೇಕ್ಷಣ

ಮೇ. ರಾಜೇಶ್ವರಯ್ಯ

ಹಿಂದಿ-ಕನ್ನಡ ಮತ್ತು ಕನ್ನಡ-ಹಿಂದಿಯ ಭಾಷಾ ಬಾಂಧವ್ಯದ ನಿಜವಾದ ಅಳತೆಗೋಲು ಮತ್ತು ಏಕಮಾತ್ರ ಆಧಾರ ಈ ಎರಡು ಭಾಷೆಗಳ ಮಧ್ಯ ನಡೆದಿರುವ ಕೊಳು-ಕೊಡೆ ಎಂದು ನನ್ನ ಅಭಿಮತ. ನನ್ನ ತಿಳಿವಳಿಕೆಗೆ ಬಂದಿರುವಷ್ಟು ಗ್ರಂಥಗಳ, ಲೇಖಕರ ಆಧಾರದ ಮೇಲೆ ಈ ಆಧಾರವನ್ನು ತಯಾರಿಸಲಾಗಿದೆ. ಉದ್ದೇಶಪೂರ್ವಕವಾಗಿ ಯಾವುದನ್ನೂ ಬಿಟ್ಟಿಲ್ಲ, ಯಾರನ್ನೂ ಅಲಕ್ಷಿಸಿಲ್ಲ. ತಿಳಿದವರು ಮತ್ತಷ್ಟು ಮಾಹಿತಿ ಒದಗಿಸಿದಲ್ಲಿ, ಉಂಟಾಗಿರುವ ತಪ್ಪುಗಳನ್ನು ತಿದ್ದಿಕೊಟ್ಟಲ್ಲಿ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ಈ ಲೇಖನವನ್ನು ಮತ್ತಷ್ಟು ಪರಿಪೂರ್ಣಗೊಳಿಸುತ್ತೇನೆ.

ಹಿಂದಿಯಿಂದ ಕನ್ನಡಕ್ಕೆ ಬಂದಿರುವ ಗ್ರಂಥಗಳು ಸುಮಾರು ೮೦-೧೦೦. ಅಂತೆಯೆ ಕನ್ನಡದಿಂದ ಹಿಂದಿಗೆ ಹೋಗಿರುವ ಗ್ರಂಥಗಳು ಸುಮಾರು ೪೦-೫೦ ಅಂದರೆ ಹಿಂದಿಯಿಂದ ಕನ್ನಡಕ್ಕೆ ಬಂದಿರುವ ಪ್ರತಿ ಎರಡು ಪುಸ್ತಕಗಳಿಗೆ ಒಂದರಂತೆ ಹಿಂದಿಗೆ ಕನ್ನಡದಿಂದ ಕೊಡಲಾಗಿದೆ. ಕನ್ನಡದವರಾಗಿದ್ದುಕೊಂಡು ಸ್ವತಂತ್ರ ರೂಪವಾಗಿ ಹಿಂದಿಯಲ್ಲಿ ರಚಿಸಿರುವವರೂ ಇದ್ದಾರೆ. ಅವರ ಸಂಖ್ಯೆ ೫-೬ ಮಾತ್ರ.

ಅನುವಾದಿತವಾಗಿ ಬಂದಿರುವ ಗ್ರಂಥಗಳೂ ಸಹ ಇಬ್ಬಗೆಯವು. ಹಿಂದಿಯಿಂದ ಕನ್ನಡಕ್ಕೆ ನೇರವಾಗಿ ಬಂದವುಗಳು ಒಂದು ಬಗೆಯಾದರೆ ಬಂಗಾಲಿಯೋ ಮತ್ತಾವುದೋ ಭಾಷೆಯ ಗ್ರಂಥ ಹಿಂದಿಯ ಮೂಲಕ ಕನ್ನಡಕ್ಕೆ ಬಂದವುಗಳು ಇನ್ನೊಂದು ಬಗೆ. ವಿಶೇಷವಾಗಿ ಶರತ್‌ಚಂದ್ರರ, ಬಂಕಿಮರ, ಟಾಗೋರ್‌ರ ಕೃತಿಗಳು ಹಿಂದಿಯ ಮೂಲಕವೇ ಕನ್ನಡಕ್ಕೆ ಬಂದಿವೆ ಎಂದು ಹೇಳಬಹುದು.

ಹಿಂದಿಯಿಂದ ಕನ್ನಡಕ್ಕೆ ಅನುವಾದಿತವಾಗಿ ಬಂದಿರುವ ಗ್ರಂಥಗಳನ್ನು ಕವಿತೆ, ನಾಟಕ, ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ವಿಮರ್ಶೆ, ಪ್ರವಾಸಸಾಹಿತ್ಯ, ಶಿಶುಸಾಹಿತ್ಯ, ಶೈಕ್ಷಣಿಕ ಸಾಹಿತ್ಯ ಎಂದು ಮುಂತಾಗಿ ವಿಂಗಡಿಸಬಹುದು.

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಕವಿತೆ :		
ನ್ಯೆ. ಶೇ. ಅನಂತಪದ್ಮನಾಭರಾವ್	ತುಳಸೀ ರಾಮಾಯಣ	ರಾಮಚರಿತ ಮಾನಸ ತುಳಸೀದಾಸ
ಪ್ರಧಾನ್ ಗುರುದತ್ತ	ಭ್ರಮರಗೀತ (ಕನ್ನಡ ಸಮ್ಮೇಳನದ ಸುವರ್ಣ ಸಂಪುಟದಲ್ಲಿ)	ಸೂರದಾಸ
ೇ. ನಂ. ಶಿವರಾಮಯ್ಯ	ನುಡಿಮಲ್ಲಿಗೆ (ಕಬೀರೋಪನಿಷತ್ತು) ಕಬೀರನ ೧೦೮ ವಚನಗಳ ಅನುವಾದ	ಕಬೀರದಾಸ
ಾ॥ ಹಾ. ಮಾ. ನಾಯಕ	ವಿದ್ಯಾಪತಿಯ ಕೆಲವು ಪದಗಳು (ಪ್ರಬುದ್ಧ ಕರ್ನಾಟಕದ ಸಂಚಿಕೆಗಳಲ್ಲಿ)	ವಿದ್ಯಾಪತಿ

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಎಂ. ವಿ. ನಾರಾಯಣರಾವ್	ಕುರುಕ್ಷೇತ್ರ (ಮಹಾಕಾವ್ಯ)	'ಕುರುಕ್ಷೇತ್ರ' ರಾಮಧಾರಿಸಿಂಹ 'ದಿನಕರ್'
ಎಂ. ವಿ. ನಾರಾಯಣರಾವ್	ಪಂಚವಟಿ (ಖಂಡಕಾವ್ಯ)	'ಪಂಚವಟಿ' ಮೈಥಿಲಿ ಶರಣ ಗುಪ್ತ
ಎಂ. ವಿ. ನಾರಾಯಣರಾವ್	ಕಣ್ಣೀರು	'ಆಂಸೂ' ಜಯಶಂಕರ ಪ್ರಸಾದ್
'ಕುಮುದಪ್ರಿಯ'	ಕಣ್ಣೀರು	,, ,,
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಕಾಮಾಯನಿಯ ಕೆಲವು ಪದ್ಯಗಳು (ಡಾ|| ನಾಗೇಂದ್ರರ ಶ್ರೇಷ್ಠ ಪ್ರಬಂಧಗಳು) ಎಂಬ ಗ್ರಂಥದಲ್ಲಿ	'ಡಾ. ನಗೇಂದ್ರರ ಶ್ರೇಷ್ಠ ನಿಬಂದ್' ಡಾ. ನಗೇಂದ್ರ
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಸಾಕೇತರ ಕೆಲವು ಪದ್ಯಗಳು (ಊರ್ಮಿಳಾ ಕನ್ನಡ ಗ್ರಂಥ)	'ಸಾಕೇತ್' ಮೈಥಿಲಿ ಶರಣಗುಪ್ತ
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಬಾಲಕೃಷ್ಣ ಶರ್ಮ 'ನವೀನ್'ರ ಕೆಲವು ಪದ್ಯಗಳು (ಊರ್ಮಿಳಾ ಕನ್ನಡ ಗ್ರಂಥದಲ್ಲಿ)	'ಊರ್ಮಿಲಾ' ಬಾಲಕೃಷ್ಣ ಶರ್ಮ 'ನವೀನ್'
ಯೋಗಾ ನರಸಪ್ಪ	ಬಿಹಾರಿ ಸಪ್ತಶತೀ (ಇನ್ನೂ ಅಚ್ಚಾಗಿಲ್ಲ)	ಬಿಹಾರಿ ಸಪ್ತಸಯಿಾ, ಬಿಹಾರಿ
ನಾಟಕ :		
ಆರ್. ನಾಗರಾಜ್	ಅಜಾತಶತ್ರು	'ಅಜಾತಶತ್ರು' ಜಯಶಂಕರಪ್ರಸಾದ್
ಆರ್. ನಾಗರಾಜ್	ಮೇವಾಡಪತನ	'ಮೇವಾಡಪತನ್' ದ್ವಿಜೇಂದ್ರಲಾಲ್ ರಾಯ್
ಗೋವಿಂದ ಲಕ್ಷ್ಮಣ ಹಳ್ಳಿಪ್ಪ	ಮೇವಾಡ ಪತನ	,, ,,
ಪಿ. ಎಸ್. ರಾಮಪ್ಪ	ದುರ್ಗಾದಾಸ್	'ದುರ್ಗಾದಾಸ್' ದ್ವಿಜೇಂದ್ರಲಾಲ್ ರಾಯ್
ಬಿ. ನಂ. ಚಂದ್ರಯ್ಯ	ಧೃವ ಸ್ವಾಮಿನಿ	'ಧೃವಸ್ವಾಮಿನಿ' ಜಯಶಂಕರ ಪ್ರಸಾದ್
ಶಿವರಾಂ	ಯವನ ವಿಜೇತ ಚಂದ್ರಗುಪ್ತ	ಪಂ. ದೀನದಯಾಳ ಉಪಾಧ್ಯಾಯ
ಕೆ. ಸಿ. ಶಿವಪ್ಪ (ಸರಸಪ್ರಿಯ)	ಛಾಯಾ (ಮಧುಕರ ಮಾಗ್‌ಝಿನ್‌ನಲ್ಲಿ)	'ಛಾಯಾ' ಸುದರ್ಶನ್
ರಾಷ್ಟ್ರೋತ್ಥಾನ ಸಾಹಿತ್ಯದವರು ಅನುವಾದಿಸಿ ಪ್ರಕಾಶಿಸಿರುತ್ತಾರೆ	ಯವನ ವಿಜೇತ ಚಂದ್ರಗುಪ್ತ ರಣವೀಳ್ಯ	....
ಸತ್ಯದೇವ್	....	ಎ. ಐ. ಆರ್. ಗೆ ಹಲವಾರು ನಾಟಕಗಳನ್ನು ಅನುವಾದಿಸಿ ಕೊಡುತ್ತಿದ್ದಾರೆ
ಎಚ್. ಎಸ್. ಪಾರ್ವತಿ	....	,, ,,
ಮೇ. ರಾಜೇಶ್ವರಯ್ಯ	....	,, ,,
ಕಥೆ :		
ಗುರುನಾಥಜೋಶಿ	೫೦–೬೦ ಕಥೆಗಳು	ಪ್ರೇಮಚಂದ್, ಜೈನೇಂದ್ರಕುಮಾರ್ ಇತ್ಯಾದಿ
ಬೆಳ್ಳೂರು ಸುಬ್ರಾಯ ಅಡಿಗ	೫೦–೬೦ ಕಥೆಗಳು	ಪ್ರಸಿದ್ಧ ಕಥೆಗಾರರ ಕಥೆಗಳು
ರಂ. ಶಾ. ಲೋಕಾಪುರ	೮ ಕಥೆಗಳ ಸಂಕಲನ	ಪ್ರೇಮಚಂದರ ಕಥೆಗಳು

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಕೆ. ಸಿ. ಶಿವಪ್ಪ (ಸರಸಪ್ರಿಯ)	ಶುಕ್ರದೆಸೆ	ಭಗವತೀ ಚರಣವರ್ಮ, ಸುದರ್ಶನ್, ಯಶಪಾಲ್, ಇಲಾಚಂದ್ರಜೋಶಿ, ಬೇಚನ್ ಉಗ್ರ ಇತ್ಯಾದಿ ೧೦ ಪ್ರಸಿದ್ಧ ಕಥೆಗಾರರ ಕಥೆಗಳು
ವೇ. ರಾಜೇಶ್ವರಯ್ಯ	ಕಸಿದಿಗೆ ಬಟ್ಟೆ	'ಕಫನ್' ಪ್ರೇಮಚಂದ್‌ರ ಕಥೆ
ಪ್ರಧಾನ್ ಕೃಷ್ಣಮೂರ್ತಿ	ಕಲೆಯ ಉದಯ	....
	ಸತ್ತಮೇಲೆ	ಜಯಸಿಂಹಠಾಕೂರ್‌ರ ಕಥೆ
	ನಡೆದು ಬಂದ ದಾರಿ	ಸುದರ್ಶನ್ ಜೋಪ್‌ಡಾರ ಕಥೆ
ಎಸ್. ಶ್ರೀಕಂಠಮೂರ್ತಿ	ಸಾಲವತಿ	ಪ್ರಮುಖ ಹಿಂದಿ ಕಥೆಗಾರರ ಕಥೆಗಳು
	ನಮ್ಮ ಸ್ಕೂಲು	....
	ವೊಲ್ಗಾದಿಂದ ಗಂಗೆಯವರೆಗೆ	....
ಎಚ್. ಎಸ್. ಪಾರ್ವತಿ	ದುರ್ಗೇಶ ನಂದಿನಿ	....
	ದೇವಿ ಚಧರಾಣಿ	
ಜಿ. ಜಿ. ಹೆಗ್ಡೆ	ಒಂದು ಕತ್ತೆಯ ಆತ್ಮಕಥೆ	'ಏಕ್ ಗಧೇಕೀ ಆತ್ಮಕಥಾ' ಕೃಷ್ಣಚಂದರ್
ಪಿ. ವಿ. ನಂಜರಾಜ ಅರಸು	೨೩ ಕಥೆಗಳು	'ತೇಯೀಸ್ ಕಹಾನಿಯಾ' (ಸಾಹಿತ್ಯ ಅಕಾಡಮಿಗಾಗಿ)
ಕೆ. ಸರೋಜಬಾಯಿ	....	ಬೆಡ್ ನಂಬರ್ ೨, ಪಲಾಂಗಮ್ಮ ಮುಂತಾದ ನಾಲ್ಕಾರು ಕಥೆಗಳನ್ನು ಅನುವಾದಿಸಿದ್ದಾರೆ (ದಕ್ಷಿಣಭಾರತ ಪತ್ರಿಕೆಯಲ್ಲಿ ಅಚ್ಚಾಗಿವೆ)
ಪ್ರಧಾನ ಗುರುದತ್ತ	ಭಾಭಿ	ದೇ. ನಾ. ಶ್ರೀ ಅವರ ಅತ್ತಿಗೆ ಮತ್ತು ಇತರ ೨–೩ ಕಥೆಗಳನ್ನು ಅನುವಾದಿಸಿದ್ದಾರೆ (ದಕ್ಷಿಣ ಭಾರತದಲ್ಲಿ ಅಚ್ಚಾಗಿವೆ)

ಕಾದಂಬರಿ :

ಗುರುನಾಥ ಜೋಶಿ	ಹತ್ತಾರು ಕಾದಂಬರಿಗಳು	ಪ್ರೇಮಚಂದ್ ಮುಂತಾದ ಪ್ರಮುಖ ಕಾದಂಬರಿಕಾರರ ಕೃತಿಗಳು ಮತ್ತು ಶರತ್ ಬಂಕಿಮಚಂದ್ರರ ಕೃತಿಗಳು
ಕೆ. ಆರ್. ಉಡುಪ	ದುರ್ಗಾಮಂದಿರ	'ದುರ್ಗಾಕಾಮಂದಿರ್' ಪ್ರೇಮಚಂದ್
ಕೆ. ಆರ್. ಉಡುಪ	ಗೋದಾನ	(ಸಂಕ್ಷಿಪ್ತ 'ಗೋದಾನ್'–ಪ್ರೇಮಚಂದ್
ಬಿ. ಕೆ. ಸುಬ್ಬಲಕ್ಷ್ಮಿ	ಕಲ್ಯಾಣಿ	'ಕಲ್ಯಾಣಿ' ಜೈನೇಂದ್ರಕುಮಾರ್
,,	ಪ್ರತಿಜ್ಞೆ	'ಪ್ರತಿಜ್ಞಾ' ಪ್ರೇಮಚಂದ್
,,	ಡೆಡ್ ಲೆಟರ್	'ಡೆಡ್ ಲೆಟರ್' ಯಶಪಾಲ್
ಹರಿದಾಸಭಟ್ಟ	ಗಬನ್ (ಪತ್ರಾಪಹರಣ ಅಥವಾ ಚಂದ್ರಹಾರ)	'ಗಬನ್' ಪ್ರೇಮಚಂದ್

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಎಚ್. ಎಸ್. ಪಾರ್ವತಿ	ಗಬನ್ (ಚಂದ್ರಹಾರ)	'ಗಬನ್' ಪ್ರೇಮಚಂದ್ (ಇನ್ನೂ ಅಚ್ಚಾಗಿಲ್ಲ)
,,	ತ್ಯಾಗ ಪತ್ರ	'ತ್ಯಾಗಪತ್ರ' ಜೈನೇಂದ್ರಕುಮಾರ್
,,	ಉದಯುದೆಡೆಗೆ	ಉದಯ್‌ಕೀ ಓರ್
,,	ಪರಾಜಯ	'ಪರಾಜಯ್' ಕೃಷ್ಣಚಂದರ್
,,	ಗೃಹದೇವಿ	'ಗೃಹದೇವಿ' ಶರತ್
ಪ್ರತಾಪ ಸುಧಾಕರ್	ಚಂದ್ರಕಾಂತ	
	ಚಂದ್ರಕಾಂತ ಸಂತತಿ (೧೧ ಭಾಗಗಳು)	
	ಕಾಜರ್ ಕಿ ಕೊಠರಿ	
	ಸೌಲಖಾ ಹಾರ್	ದೇವಕೀನಂದನ್ ಖತ್ರಿ
	ಕುಸುಮ ಕುಮಾರಿ	
	ನರೇಂದ್ರ ಮೋಹಿನಿ	
	ವೀರೇಂದ್ರ ವೀರ	
ಬಿ. ನಂ. ಚಂದ್ರಯ್ಯ	ಮಲ್ಲಿಕಾ	ಯಾದವ ಚಂದ್ರ ಜೈನ್
,,	ಚಿತ್ರಲೇಖಾ	'ಚಿತ್ರಲೇಖ' ಭಗವತೀ ಚರಣವರ್ಮ
ಎಂ. ಎಸ್. ಕೃಷ್ಣಮೂರ್ತಿ	ಮೃಗನಯನೆ	'ಮೃಗನಯನಿ' ವೃಂದಾವನ್‌ಲಾಲ್‌ವರ್ಮ
ಫರ್ನಾಂಡಿಸ್	ಕುಂಡಲೀ ಚಕ್ರ	'ಕುಂಡಲೀ ಚಕ್ರ' ವೃಂದಾವನಲಾಲ್‌ವರ್ಮ
ಪುಷ್ಪದೇವಿ	ವಿರಾಟದುರ್ಗದ ಪದ್ಮಿನಿ	'ವಿರಾಟದುರ್ಗಕೀ ಪದ್ಮಿನಿ' ವೃಂದಾವನ ಲಾಲ್‌ವರ್ಮ
ಗೋವಿಂದರಾಜ್	ಝಾನ್ಸಿರಾಣಿ	'ಝಾಂನ್ಸಿಕೀ ರಾಣೀ' ವೃಂದಾವನ್‌ಲಾಲ್ ವರ್ಮ
,,	ರಾಮಘಡದ ರಾಣಿ	'ರಾಮಘಡಕೀ ರಾಣಿ' ವೃಂದಾವನಲಾಲ್ ವರ್ಮ
ಭಾರತೀ ರಮಣಾಚಾರ್	ವಿಪ್ರದಾಸ	ಶರತ್
ಶಕುಂತಲ ನಾಗರಾಜ್	ನವಾಬ ನಂದಿನಿ (ಅಪ್ರಕಾಶಿತ)	'ನವಾಬ್‌ಕೀ ನಂದಿನಿ' ಬಂಕಿಮಚಂದರು
ಐ. ಎಸ್. ಪುಟ್ಟಸ್ವಾಮಯ್ಯ	ಪ್ರೇಮದ ಬಲೆ	'ಪ್ರೇಮ ಕಾಜಾಲ್' ಭಗವತೀಚರಣವರ್ಮ
,,	ಕುಂಡಲೀ ಚಕ್ರ (ಅಪ್ರಕಾಶಿತ)	'ಕುಂಡಲೀ ಚಕ್ರ' ಭಗವತೀ ಚರಣ ವರ್ಮ
,,	ಮಂಗಳ (ಅಪ್ರಕಾಶಿತ)	'ಮಂಗಲ್' ಅನಂತಗೋಪಾಲ ಶೇವಕಿ
	ರಂಗಭೂಮಿ (ಅಪ್ರಕಾಶಿತ)	ಪ್ರೇಮಚಂದ್
ಪಂಚಾಕ್ಷರಿ ಹಿರೇಮಠ	ನಾರಿ (ಅಪ್ರಕಾಶಿತ)	'ನಾರಿ' ಸಾಹಿತ್ಯಅಕಾಡೆಮಿಗಾಗಿ

ಜೀವನಚರಿತ್ರೆ (ಕಥೆ–ಆತ್ಮಕಥೆ) :

ಸಿದ್ದವ್ವನಹಳ್ಳಿ ಕೃಷ್ಣಶರ್ಮ	ಬಾಬೂ ರಾಜೇಂದ್ರಪ್ರಸಾದರ ಆತ್ಮಕಥೆ	ರಾಜೇಂದ್ರ ಪ್ರಸಾದ್
ಎಂ. ಎಸ್. ಕೃಷ್ಣಮೂರ್ತಿ	ಬಾಣಭಟ್ಟನ ಆತ್ಮಕಥೆ	'ಬಾಣ ಭಟ್ಟಕೇ ಆತ್ಮಕಥಾ' ಹಾ. ಹಜಾರಿ ಪ್ರಸಾದ್ ದ್ವಿವೇದಿ

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಎಸ್. ಕೃಷ್ಣ	ಮಣ್ಣಿನ ಮೂರ್ತಿಗಳು	'ಮಾಟೀ ಕೀ ಮೂರ್ತಿಯಾಂ' ರಾಮಕೃಷ್ಣ ಬೇನೀಪುರಿ
ರಾಮಚಂದ್ರ ಶಾಸ್ತ್ರಿಗಳು	ಶಂಕರಾಚಾರ್ಯ	'ಶಂಕರಾಚಾರ್ಯ' ಬಲದೇವ ಉಪಾಧ್ಯಾಯಕಾಶಿ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಲೋಕದೇವನೆಹರೂ	'ಲೋಕದೇವನೆಹರೂ' ರಾ. ಸಿಂಹ 'ದಿನಕರ್'

ವಿಮರ್ಶೆ (ಪರಿಚಯ) :

ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಊರ್ಮಿಳೆ (ಔತ್ತರೇಯ ವಿರಹಿಣಿ, ದಾಕ್ಷಿಣಾತ್ಯ ತಪಸ್ವಿನಿ)	ತೌಲನಿಕ ವಿಮರ್ಶೆ (ಸ್ವತಂತ್ರ ಕೃತಿ)
ಡಾ. ಹಿರಣ್ಮಯ	ತುಳಸೀದಾಸ	(ಪರಿಚಯಾತ್ಮಕ)
ಎಂ. ಎಸ್. ಕೃಷ್ಣಮೂರ್ತಿ	ಸೂರದಾಸ	,,

ಪ್ರವಾಸಸಾಹಿತ್ಯ—ಇಲ್ಲ

ಶಿಶುಸಾಹಿತ್ಯ :

ಎಚ್. ವಿ. ನಾರಾಯಣರಾವ್	ವೀರಕೇಸರಿ ಹಮ್ಮೀರದೇವ್	'ವೀರಕೇಸರಿ ಹಮ್ಮೀರದೇವ್' ಜಗದೀಶರಘು ವಿಮಲ್
ಎಚ್. ವಿ. ನಾರಾಯಣರಾವ್	ದರೋಡೆಕಾರನಮಗ	ಹರಿಕೃಷ್ಣ ದೇವಸರೆ

ಶೈಕ್ಷಣಿಕ ಸಾಹಿತ್ಯ—ಇಲ್ಲ

ಪ್ರಬಂಧ :

ಡಿ. ಕೆ. ಭರದ್ವಾಜ್	ತುಳಸೀರಾಮಾಯಣ	ಶ್ರೀರಾಮಚರಿತ ಮಾನಸ—ತುಳಸೀದಾಸ್
ಗೊರೂರು ರಾಮಸ್ವಾಮಿ ಅಯ್ಯಂಗಾರ್	ಭಗವಾನ್ ಕೌಟಿಲ್ಯ	ಕೆ. ಎಂ. ಮುನ್ಷಿ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಡಾ|| ನಗೇಂದ್ರರ ಶ್ರೇಷ್ಠ ಪ್ರಬಂಧಗಳು	ಡಾ. ನಗೇಂದ್ರಕೇ ಶ್ರೇಷ್ಠ ಸಂಕಲನ ಕರ್ತ ನಿಬಂಧ್—ಭಾರತಭೂಷಣ ಅಗ್ರವಾಲ
ಮೋ. ರಾಜೇಶ್ವರಯ್ಯ	ನಾವು-ಸರಕಾರ	'ಹಮ್ ಸರಕಾರ್ ಹೈ' ಅಕ್ಷರಪ್ರಚಾರ ಸಮಿತಿ, ಲಕ್ನೊ
ಯು. ಹನುಮಯ್ಯ	ಪ್ರಾಚೀನ ಭಾರತದ ಕಲಾತ್ಮಕ ವಿನೋದಗಳು	'ಪ್ರಾಚೀನಭಾರತಕೇ ಕಲಾತ್ಮಕ್ ವಿನೋದ್' ಡಾ. ಹಜಾರಿ ಪ್ರಸಾದ
ಎಸ್. ವಿ. ಭಟ್ಟ	ಪ್ರೇಮಚಂದ್	'ಪ್ರೇಮಚಂದ್' ವಿಮರ್ಶಾತ್ಮಕ ಗ್ರಂಥ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ರಸ-ಸಿದ್ಧಾಂತ (ಅಪ್ರಕಾಶಿತ)	'ರಸ ಸಿದ್ಧಾಂತ' ಡಾ. ನಗೇಂದ್ರ
ಪಂಚಾಕ್ಷರಿ ಹಿರೇಮಠ	ಮುಗ್ಗ ಚೆಲ್ಲದ ಬೆಳಕು	ಡಾ. ಹಜಾರಿ ಪ್ರಸಾದ್ ದ್ವಿವೇದಿ

ಕನ್ನಡದಿಂದ ಹಿಂದಿಗೆ ಕೊಟ್ಟಿರುವ ಗ್ರಂಥಗಳನ್ನೂ ಸಹ ಇದೇ ರೀತಿಯಾಗಿ ವಿಂಗಡಿಸಬಹುದು.

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಕವಿತೆ :		
ರಂ. ರಾ. ದಿವಾಕರ	ಅಂತರಾತ್ಮಕೊ	'ಅಂತರಾತ್ಮಸಿಗೆ' ರಂ. ರಾ. ದಿವಾಕರ
ಡಾ. ಹಿರಣ್ಮಯ	ಕು. ವೆಂ. ಪು.	ಇತ್ಯಾದಿ ಕವಿಗಳ ಕೆಲವೊಂದು ಕವಿತೆಗಳು
ಪ್ರೊ. ನಾಗಪ್ಪ	ಬೇಂದ್ರೆ	ಸಾಹಿತ್ಯ ಅಕಾದಮಿಗೆ
	ಪು. ತಿ. ನ.	
	ಶಿವರುದ್ರಪ್ಪ	
	ನರಸಿಂಹಸ್ವಾಮಿ	
ಮೋ. ರಾಜೇಶ್ವರಯ್ಯ	ಬಸವೇಶ್ವರ್ ಕೆ ಚುನೆಹುಯೆ ವಚನ್	'ಬಸವಣ್ಣನವರ ೨೫೫ ವಚನಗಳು' ಬಸವಣ್ಣ
ಎಂ. ಜಿ. ಉಮಾಪತಿಶಾಸ್ತ್ರಿ	ಬಸವ ವಚನಾಮೃತ	'ಬಸವಣ್ಣನವರ ೧೦೮ ವಚನಗಳು' ಬಸವಣ್ಣ
,,	ಅಕ್ಕಮಹಾದೇವಿಕೆ ವಚನ್	'ಅಕ್ಕಮಹಾದೇವಿಯ ವಚನಗಳು' ಅಕ್ಕಮಹಾದೇವಿ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ	ಊರ್ಮಿಳೆ (ಹಿಂದಿ) (ಶ್ರೀರಾಮಾಯಣ ದರ್ಶನದ ಕೆಲವು ಭಾಗಗಳು)	'ಶ್ರೀ ರಾಮಾಯಣ ದರ್ಶನ' ಕು. ವೆಂ. ಪು.
ಕೆ. ಎನ್. ಭಟ್ಟತ್ತಿರಿ	....	'ಮಂಕುತಿಮ್ಮನ ಕಗ್ಗ' ಹಲವಾರು ಪದ್ಯಗಳನ್ನು ಅನುವಾದಿಸಿದ್ದಾರೆ. ಅಚ್ಚಾಗಿವೆ, ಡಿ. ವಿ. ಜಿ.
ಸರೋಜಿನಿ ಮಹಿಷಿ	.... (ಅಪ್ರಕಾಶಿತ)	'ಮಂಕುತಿಮ್ಮನ ಕಗ್ಗ' ಡಿ. ವಿ. ಜಿ.
ಭಾರತೀ ರಮಣಾಚಾರ್ಯ	....	'ಪುರಂದರ ದಾಸರ ಪದಗಳು' ಪುರಂದರ ದಾಸರು
ಆರ್. ಸಿ. ಭೂಸನೂರಮಠ	....	'ಬಸವಣ್ಣನವರ ವಚನಗಳು' ಬಸವಣ್ಣ (ಭಾರತವಾಣಿ ಪತ್ರಿಕೆಯಲ್ಲಿ ಬಿಡಿಯಾಗಿ ಪ್ರಕಾಶಿತವಾಗುತ್ತಲಿವೆ)
ಕೆ. ಎನ್. ಭಟ್ಟತ್ತಿರಿ	....	'ಬಸವಣ್ಣನವರ ವಚನಗಳು' ಬಸವಣ್ಣ
....	....	'ವಚನಶಾಸ್ತ್ರ ರಹಸ್ಯ' ರಂ. ರಾ. ದಿವಾಕರ
ಸ್ವತಂತ್ರ ಕೃತಿಗಳು :		
ಗದುಗಿನ ಪುಟ್ಟರಾಜ ಗವಾಯಿ (ಹುಟ್ಟು ಕುರುಡರು), ಧಾರವಾಡ	ಬಸವೇಶ್ವರ ಪುರಾಣ	(ಭಾವಾನುವಾದ ಸ್ವತಂತ್ರಕೃತಿಯಂತಿದೆ)
	ಶೈಲ್ ಔರ್ ಸಾಗರ್	(ಆಧುನಿಕ ಕವಿತೆಗಳ ಸಂಗ್ರಹ)
ರಾಯಚೂರಿನ ಚಂದ್ರಕಾಂತ ಕುಸನೂರ್‌ಕರ್	೫೦-೬೦ ಕವಿತೆಗಳು	(ವಿವಿಧ ಹಿಂದಿಯ ಪತ್ರಿಕೆಗಳಲ್ಲಿ ಬಿಡಿಯಾಗಿ ಪ್ರಕಾಶಿತವಾಗಿವೆ. ಸಂಕಲನದ ರೂಪದಲ್ಲಿ ಬರಲಿವೆ. ಎಲ್ಲ ಆಧುನಿಕ ಕವಿತೆಗಳು)

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಗದ್ಯರೂಪದಲ್ಲಿ :		
ಶಿವಾನಂದಶರ್ಮ ಮತ್ತು ಎ. ವಿ ಶ್ರೀನಿವಾಸಮೂರ್ತಿ	....	ಬಸವಣ್ಣನವರ ಕೆಲವು ವಚನಗಳು, ಬಸವಣ್ಣ
ಎನ್. ಎಸ್. ದಕ್ಷಿಣಾಮೂರ್ತಿ	ಜೈಮಿನಿ ಭಾರತ	ಜೈಮಿನಿ ಭಾರತ, ಲಕ್ಷ್ಮೀಶ (ದಕ್ಷಿಣ ಭಾರತ ತ್ರೈಮಾಸಿಕ ಪತ್ರಿಕೆಯಲ್ಲಿ ಲೇಖನ ಮಾಲೆಯ ರೂಪದಲ್ಲಿ ಪ್ರಕಟವಾಗಿದೆ)
ಡಿ. ಕೆ. ಭರದ್ವಾಜ	....	ಶ್ರೀ ರಾಮಚರಿತ ಮಾನಸ, ತುಳಸಿದಾಸ
ಶ್ರೀ ಶಿವಕುಮಾರ ಸ್ವಾಮಿಗಳು	ಪ್ರಭು	'ಪ್ರಭುದೇವರ ವಚನಗಳು' ಪ್ರಭುದೇವರು (ಕಾಶಿನಾಗರಿ ಪ್ರಚಾರಿಣಿ ಸಭೆಯಿಂದ ಪ್ರಕಟವಾಗಿದೆ)
ರಂ. ರಾ. ದಿವಾಕರ್	ಕರ್ಮಯೋಗ	'ಕರ್ಮಯೋಗ' ರಂ. ರಾ. ದಿವಾಕರ್
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಬಸವತತ್ತ್ವ ಪಯಲ್	'ಬಸವತತ್ತ್ವ ಪರಿಮಳ', ಸಂ॥ ಮಲ್ಲಭದ್ರ
ಕೆ. ಸಿ. ಸಾರಂಗಮಠ	ಪ್ರಥಮಾಚಾರ ದೀಪಿಕಾ	'ಪ್ರಥಮಾಚಾರ ದೀಪಿಕೆ', ಹರ್ಡೆಕರ್ ಮಂಜಪ್ಪ
ಶಂಕರರಾವ್ ಕಪ್ಪಿಕೇರಿ	ಕರ್ನಾಟಕ್ ಕೀ ಶಿವಶರಣಿಯಾಂ	'ಕರ್ನಾಟಕದ ಶಿವಶರಣೆಯರು' ಸರಸ್ವತಿ ಮಾಳವಾಡ
ವೆಂಕಟರಮಣಾಚಾರ್	ರಾಘವೇಂದ್ರಸ್ವಾಮಿಜಿ	'ರಾಘವೇಂದ್ರಸ್ವಾಮಿಗಳು ....
....	ವಚನಶಾಸ್ತ್ರ	'ವಚನಶಾಸ್ತ್ರ ರಹಸ್ಯ', ರಂ. ರಾ. ದಿವಾಕರ್
ಕೆ. ಸಿ. ಸಾರಂಗಮಠ	ಕರ್ನಾಟಕ್ ಕೆ ಮಹಾನ್‌ಸಂತ್ (ಅಪ್ರಕಾಶಿತ)	'ಕರ್ನಾಟಕದ ಹಿರಿಯ ಸಂತರು', ಸಂಕಲಿತ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಗೀತಾ-ಅಂತರ್ವಾಣಿ (ಅಪ್ರಕಾಶಿತ)	'ಗೀತೆ ಅಂತರ್ವಾಣಿ', ಎಂ. ಜಿ. ನಂಜುಂಡಾರಾಧ್ಯ
ನಾಟಕಗಳು :		
ರಂ. ರಾ. ದಿವಾಕರ	ನಾಗರಿಕ	'ನಾಗರಿಕ', ಎಂ. ಆರ್. ಶ್ರೀನಿವಾಸಮೂರ್ತಿ
ಮೋ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಅಂಗುಲೀಮಾಲ	'ಅಂಗುಲಿಮಾಲ' ಡಾ. ಪ್ರಭುಶಂಕರ್
ಶೈಲಜ	....	ಕೆಲವು ಕೈಲಾಸಂ ನಾಟಕಗಳು, ಟಿ. ಪಿ. ಕೈಲಾಸಂ
ಚಂದ್ರಕಾಂತ ಕುಸನೂರ್‌ಕರ್	ಮಹಾಪುರುಷ್	ಸ್ವತಂತ್ರ ಕೃತಿ
ಸತ್ಯದೇವ್	....	ಎ. ಐ. ಆರ್. ಗೆ ಅನೇಕ ನಾಟಕಗಳನ್ನು ಅನುವಾದಿಸಿ ಕೊಡುತ್ತಿದ್ದಾರೆ.
ಹೆಚ್. ಎಸ್. ಪಾರ್ವತಮ್ಮ	....	,,
ಮೋ. ರಾಜೇಶ್ವರಯ್ಯ	....	,,

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಬೆಳಗಾಂವ ಮಿತ್ರರು	....	ಸ್ವತಂತ್ರ ಕೃತಿ
ಆರ್. ಸಿ. ಭೂಸನೂರಮಠ	ಪ್ಯಾರ್‌ಕೀಭೇಂಟ್	ಸ್ವತಂತ್ರ ಕೃತಿ (ನಾಲ್ಕು ಏಕಾಂಕಗಳು)

ಕಥೆ :

ಗುರುನಾಥಜೋಶಿ	೧೦–೨೦ ಕಥೆಗಳು	ಹೆಸರಾಂತ ಕನ್ನಡದ ಕಥೆಗಾರರ ಕಥೆಗಳು
ಕೆ. ಸಿ. ಸಾರಂಗಮಠ	ತುಷಾರಹಾರ್	ಸಿದ್ಧಯ್ಯಪುರಾಣಿಕರ ಕಥೆಗಳ ಸಂಕಲನ
ಎಸ್. ಶ್ರೀಕಂಠಮೂರ್ತಿ	ಸಭ್ಯತಾದೇವತಾ ಭಗವಾನ್ ಜಬ್ ಹಸಾ	'ಸಭ್ಯತಾ ದೇವತ', 'ದೇವರು ನಕ್ಕಾಗ' ಕು. ವೆಂ. ಪು.
ಎಂ. ಕೆ. ಭಾರತೀ ರಮಣಾಚಾರ್	ಗಿಲಹರಿಕೆ ಬಚ್ಚೆ	ಸ್ವತಂತ್ರ ಕಥೆಗಳ ಸಂಕಲನ
ಚಂದ್ರಕಾಂತ ಕುಸನೂರ್‌ಕರ್	ರೇಶಮ್‌ಕೀಗುಡಿಯಾನ್	ಸ್ವತಂತ್ರ ಕಥೆಗಳ ಸಂಕಲನ (ಭಾರತ ಸರ್ಕಾರದಿಂದ ಪುರಸ್ಕೃತವಾಗಿದೆ)
ಮಹಗಾಂವ್‌ಕರ್	....	,, ,,
ಕಾಶಿ ರಾಮ ಶಾಸ್ತ್ರಿ	ಕಥಾವಳಿ	ಸ್ವತಂತ್ರ ಕಥೆಗಳ ಸಂಕಲನ
ಜಿ. ಸಚ್ಚಿದಾನಂದನ್	ಕಥಾವಲ್ಲರಿ ಭಾಗ ೧ ,, ೨	ಸ್ವತಂತ್ರ ಕಥೆಗಳ ಸಂಕಲನಗಳು
ಎಸ್. ರಾಮಚಂದ್ರ	....	ಅಶ್ವತ್ಥರ ೮–೧೦ ಕತೆಗಳ ಅನುವಾದ ಬಿಡಿಯಾಗಿ ಮಾಡಿ ಪ್ರಕಾಶಿಸಿದ್ದಾರೆ.
ಬಿ. ಕವಲಿ	ಅಪರಾಧ ಔರ್ ಸಜಾ	ಅಪರಾಧ ಮತ್ತು ಶಿಕ್ಷೆ . . .
ಕಟೀಲ ಗಣಪತಿಶರ್ಮ	ಮೋತಿಯಾಂಕೆಹಾರ್	ಸ್ವತಂತ್ರ ಹಾಗೂ ಸಂಕಲಿತ ಕತೆಗಳ ಸಂಗ್ರಹ
ಎಸ್. ರೇವಣ್ಣ	....	ನಾಲ್ಕಾರು ಕಥೆಗಳ ಅನುವಾದ ಮಾಡಿದ್ದಾರೆ. ಸ್ವತಂತ್ರವಾಗಿಯೂ ರಚಿಸಿದ್ದಾರೆ.
ಬನರಸೀದಾಸ್ ಚತುರ್ವೇದಿ	ಹಮಾರೆಗಾವ್‌ಕೆ ರಸಿಕ್	ನಮ್ಮೂರಿನ ರಸಿಕರು, ಗೋರೂರು ರಾಮಸ್ವಾಮಯ್ಯಂಗಾರ್
ರಾಜಲಕ್ಷ್ಮಿ ರಾಘವನ್	ಗುರಡಗಂಬದ ದಾಸಯ್ಯ ಆಚಾರ ಕೆಟ್ಟರೂ ಆಕಾರ ಕೆಡಬಾರದು ದೇವರುಗಳ ಜೂಜು ಅಮೃತ ವಾಕ್ಯ	ಈ ಕತೆಗಳ ಅನುವಾದ ಮಾಡಿದ್ದಾರೆ, ಹಿಂದಿಯಲ್ಲಿ ಪ್ರಕಾಶಿತವಾಗಿವೆ.
,,	ಪ್ರಸಾದ ಮತ್ತು ಶಿಕ್ಷೆ	,,

ಕಾದಂಬರಿ :

ಬಾಬೂರಾವ್ ಕುಮಟೇಕರ್	....	'ಮರಳಿ ಮಣ್ಣಿಗೆ' ಶಿವರಾಮ ಕಾರಂತ
ಪ್ರತಾಪ ಸುಧಾಕರ್	ಹಂಸಗೀತ	'ಹಂಸಗೀತೆ' ತ. ರಾ. ಸು.
ಪ್ರತಾಪ ಸುಧಾಕರ್	ಸಂಧ್ಯಾರಾಗ	'ಸಂಧ್ಯಾರಾಗ' ಅ. ನ. ಕೃ.
ಹಿರಣ್ಮಯಿ	ಶಾಂತಲಾ	'ಶಾಂತಲಾ' ಕೆ. ವಿ. ಅಯ್ಯರ್
ಶಿವಮೂರ್ತಿಸ್ವಾಮಿ	....	'ಮಲೆನಾಡಿನ ಚಿತ್ರಗಳು' ಕು. ವೆಂ. ಪು.
ಸುಬ್ಬಲಕ್ಷ್ಮಿ	ಬನಶಂಕರಿ	'ಬನಶಂಕರಿ'

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಡಾ|| ನ. ಸು. ದಕ್ಷಿಣಾಮೂರ್ತಿ	ರತ್ನಾಕರ	'ರತ್ನಾಕರ' ಜಿ. ಬ್ರಹ್ಮಪ್ಪ ಮತ್ತು ಶ್ರೀನಿವಾಸಮೂರ್ತಿ
....	ಅತ್ತಿಮಬ್ಬೆ (ಅಪ್ರಕಾಶಿತ)	'ಅತ್ತಿಮಬ್ಬೆ' ,,
ಇಂದಿರಮ್ಮ	....	'ಚೋಮನ ದುಡಿ' ಶಿವರಾಮ ಕಾರಂತ
ಪ್ರಧಾನ್ ಕೃಷ್ಣಮೂರ್ತಿ	ಬಂದ್ ದರವಾಜಾ (ಅಪ್ರಕಾಶಿತ)	'ಮುಚ್ಚಿದ ಬಾಗಿಲು' ತ್ರಿವೇಣಿ
ಎಸ್. ರಾಮಚಂದ್ರ	ಮಹಾಶಿಲ್ಪಿ	'ಮಹಾಶಿಲ್ಪಿ' ಹೆಚ್. ಬಿ. ಜ್ವಾಲನಯ್ಯ
ಎಸ್. ರಾಮಚಂದ್ರ	.... (ಅಪ್ರಕಾಶಿತ)	'ಹಂಬಲ' ಅಶ್ವತ್ಥ
ಎಂ. ದೇವೇಗೌಡ	ಪರಿಪೂರ್ಣತಾ ಕೀ ಓರ್ (ಅಪ್ರಕಾಶಿತ)	'ಪರಿಪೂರ್ಣದೆಡೆಗೆ' ಡಾ. ಹೆಚ್. ತಿಪ್ಪೇರುದ್ರಸ್ವಾಮಿ

ಪ್ರಬಂಧಗಳು :

ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಮಕಡೀ ಕಾಜಲ್ (ಅಪ್ರಕಾಶಿತ)	'ಜೇಡನ ಬಲೆ' ಹೆಚ್. ಎಸ್. ಕೆ.
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಕನ್ನಡ ಭಷಾ ಔರ್ ಸಾಹಿತ್ಯ	ಸ್ವತಂತ್ರವಾದ ಸುದೀರ್ಘ ಲೇಖನ (ರಜತೋತ್ಸವ ಗ್ರಂಥ, ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆ-ಧಾರವಾಡ)
ಎಂ. ಜಿ. ಉಮಾಪತಿಶಾಸ್ತ್ರಿ	ಕರ್ನಾಟಕ-ಕನ್ನಡ	,,
ಎಸ್. ಆರ್. ಶಿವಮೂರ್ತಿಸ್ವಾಮಿ	ಕರ್ನಾಟಕ-ಶಿಲ್ಪ	,,

ಶೈಕ್ಷಣಿಕ ಸಾಹಿತ್ಯ :

ನಾ. ನಾಗಪ್ಪ	ವ್ಯಾವಹಾರಿಕ ಹಿಂದಿ	ಸ್ವತಂತ್ರ ಕವಿತೆ
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಸ್ವತಂತ್ರ ಸಮಾಜ ಕೀ ಶಿಕ್ಷಣ ಪದ್ಧತಿ	'ಸ್ವತಂತ್ರ ಸಮಾಜದ ಶಿಕ್ಷಣ ಪದ್ಧತಿ' ಡಾ|| ವಿ. ಕೊ. ಜವಳಿ
ಪ್ರಧಾನ ಗುರುದತ್ತ	ಸುಬೋಧ ವ್ಯಾವಹಾರಿಕ ಹಿಂದಿ	'ವ್ಯಾವಹಾರಿಕ ಕನ್ನಡ' ದ ರೂಪಾಂತರ, ಎಚ್. ಎಸ್. ಕೆ.
ಮೇ. ರಾಜೇಶ್ವರಯ್ಯ ಮತ್ತು ಎಸ್. ಶ್ರೀಕಂಠಮೂರ್ತಿ	ಅಹಿಂದೀ ಪ್ರಾಂತ್ ಕೆ ಬಚ್ಚೊಂಕೊ ಹಿಂದಿ ಸಿಖಾನೆಕಾ ತರೀಕಾ (ಅಪ್ರಕಾಶಿತ)	'ಅಹಿಂದೀ ಪ್ರಾಂತದ ಮಕ್ಕಳಿಗೆ ಹಿಂದಿ ಕಲಿಸುವ ವಿಧಾನ', ಸ್ವತಂತ್ರ ಕೃತಿ
....	ಕನ್ನಡ ಸ್ವಯಂ ಶಿಕ್ಷಕ	'ಹಿಂದಿಯ ಮೂಲಕ' ಸ್ವತಂತ್ರ ಕೃತಿ
ಪಂಡಿತ ಸಿದ್ಧನಾಥಪಂತ್	ಹಿಂದಿ ಶಿಕ್ಷಕ ಸ್ವಯಂಬೋಧಿನಿ	ಕನ್ನಡ ಸ್ವಯಂಬೋಧಿನಿ ಸ್ವತಂತ್ರ ಕೃತಿ (ದ. ಭಾ. ಹಿಂ. ಪ್ರ. ಸಭಾ ಮದ್ರಾಸು)
ಕೆ. ಎಸ್. ವೆಂಕಟರಾಮಯ್ಯ	ಹಿಂದೀ ಶಿಕ್ಷಕ	ಸ್ವತಂತ್ರಕೃತಿ (ದ. ಭಾ. ಹಿಂ. ಪ್ರ. ಸಭಾ ಮದ್ರಾಸು)

ಅನುವಾದಕರ ಹೆಸರು	ಗ್ರಂಥ	ಮೂಲಗ್ರಂಥ ಹಾಗೂ ಲೇಖಕರ ಹೆಸರು
ಪ್ರವಾಸ ಸಾಹಿತ್ಯ :		
ನಾ. ನಾಗಪ್ಪ	ಶ್ರವಣಬೆಳಗೊಳ	'ಶ್ರವಣಬೆಳಗೊಳ' ಪ್ರಾಕ್ತನ ಇಲಾಖೆ ಮೈಸೂರು
ನಾ. ನಾಗಪ್ಪ	ಮೈಸೂರು	'ಮೈಸೂರು' ,,
ವಿಮರ್ಶೆ (ಪರಿಚಯ) :		
ಎಂ. ಎಸ್. ಕೃಷ್ಣಮೂರ್ತಿ	ಕವಿಶ್ರೀಮಾಲೆ : ಕುವೆಂಪು, ಬೇಂದ್ರೆ	ಕೆ. ವಿ. ಪುಟ್ಟಪ್ಪ ಮತ್ತು ಬೇಂದ್ರೆ ಅವರುಗಳ ಪರಿಚಯ (ವಾರ್ಧಾ ಹಿಂದಿ ಪ್ರಚಾರ ಸಮಿತಿಯ ಪರವಾಗಿ ಪ್ರಕಾಶಿತ) ಸ್ವತಂತ್ರ ಕೃತಿಗಳು
ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ	ಊರ್ಮಿಳಾ ಔತ್ತರೀಯ ಸಿಂಹಿಣಿ, ದಾಕ್ಷಿಣಾತ್ಯ ತಪಸ್ವಿನಿ	ಕು. ವೆಂ. ಪು., ಮೈಥಿಲಿಶರಣಗುಪ್ತ, ಬಾಲ ಕೃಷ್ಣಶರ್ಮ 'ನವೀನ್' ಅವರ ಕೃತಿಗಳಲ್ಲಿ ಊರ್ಮಿಳೆಯ ಪಾತ್ರನಿರೂಪಣೆಯ ತೌಲನಿಕ ವಿಮರ್ಶೆ ಹಿಂದಿ-ಕನ್ನಡ ಭಾಷೆಗಳಲ್ಲಿ ಏಕ ಕಾಲದಲ್ಲಿ, ಸ್ವತಂತ್ರ ಕೃತಿ
ಪ್ರಧಾನ ಗುರುದತ್ತ	ಕಾವ್ಯ ಸಮೀಕ್ಷೆ	'ಭಾರತೀಯ ಕಾವ್ಯಮೀಮಾಂಸೆ' (ದಕ್ಷಿಣ ಭಾರತ-ಪತ್ರಿಕೆಯಲ್ಲಿ ಲೇಖನಮಾಲೆಯ ರೂಪದಲ್ಲಿ ಪ್ರಕಾಶಿತವಾಗುತ್ತಲಿದೆ) ತಿ. ನಂ. ಶ್ರೀ.
ಎನ್. ಎಸ್. ರಾಮಪ್ರಸಾದ್	ತುಲಸೀದಾಸ್, ಸೂರದಾಸ್, ಮೀರಾಬಾಯ್	ಮುಂತಾದ ಸಂತರ ಹಾಗೂ ಹಿಂದೀ ಸಾಹಿತ್ಯದ ಪರಿಚಯ-ದಿನಪತ್ರಿಕೆಗಳ ಮೂಲಕ
ಆತ್ಮಕಥೆ:		
ಜಿ. ಸಚ್ಚಿದಾನಂದ	ಅನಂತಾನಂದ ಸ್ವಾಮೀಜಿ	'ಅನಂತಾನಂದ ಸ್ವಾಮಿಗಳು'
ಕೆ. ಸಿ. ಸಾರಂಗಮಠ	ಕಿತ್ತೂರು ಚನ್ನಮ್ಮ	ಸ್ವತಂತ್ರ
ಕೆ ಸಿ. ಸಾರಂಗಮಠ	ಬೆಳವಲದ ಮಲ್ಲಮ್ಮ	,,
ಮೇ. ರಾಜೇಶ್ವರಯ್ಯ ಮತ್ತು ಎಂ. ಜಿ. ಉಮಾಪತಿಶಾಸ್ತ್ರಿ	ಗಾಂಧೀಜಿ ಭಾಗ-೧ (ಇಂಗ್ಲಿಷಿನಿಂದ ಹಿಂದಿಗೆ)	ಮೈಸೂರು ಶಿಕ್ಷಣ ಇಲಾಖೆಗಾಗಿ
ಮೇ. ರಾಜೇಶ್ವರಯ್ಯ ಮತ್ತು ಕೆ. ಸಿ. ಸಾರಂಗಮಠ	ಗಾಂಧಿಜಿ ಭಾಗ-೨ (ಇಂಗ್ಲಿಷಿನಿಂದ ಹಿಂದಿಗೆ)	,,
ಮೇ. ರಾಜೇಶ್ವರಯ್ಯ ಮತ್ತು ನಾರಾಯಣಭಟ್	ಸಮಾಜ ಶಿಕ್ಷಣ	,,
ಕೆ. ವೆಂಕಟರಮಣಾಚಾರ್	ರಾಘವೇಂದ್ರ ಸ್ವಾಮೀಜಿ	ರಾಘವೇಂದ್ರಸ್ವಾಮಿಗಳು
ಬಾಲೋಪಯೋಗಿ ಸಾಹಿತ್ಯ :		
ಕೆ. ಗಣಪತಿಭಟ್ಟ	ವಲ್ಲಭಭಾಯಿ	ಸ್ವತಂತ್ರ ಕೃತಿ
ಕೆ. ಗಣಪತಿಭಟ್ಟ	ಜವಾಹರ್‌ಲಾಲ್	,,
ಕೆ. ಬಿ. ಮಾನಪ್ಪ	ಮಹಾಪುರುಷ್	,,

ವ್ಯಾಕರಣ, ಗಾದೆಗಳು, ನುಡಿಗಟ್ಟುಗಳು-ಕೋಶಗಳು :

ಗುರುನಾಥ ಜೋಶಿ, ಜೆ. ಡಿ. ವೈಸಾಳೆ, ಎಂ. ವಿ. ಜಂಬುನಾಥನ್, ಪಂಡಿತ ಕವಲಿ, ಸಿ. ಜಿ. ದುಬೆ, ಎಸ್. ವಿ. ಭಟ್ಟ, ಜಿ. ಸಚ್ಚಿದಾನಂದ, ಡಾ|| ದಕ್ಷಿಣಾ ಮೂರ್ತಿ, ಕೆ. ಸಿ. ಸಾರಂಗಮಠ, ಪ್ರಸನ್ನಕುಮಾರ್, ಕೆ. ಬಿ. ಮಾನಪ್ಪ, ಶ್ರೀಕಂಠಶಾಸ್ತ್ರಿ, ಗೋಡ್‌ಬೊಲೆ, ನಾರಾಯಣಾಚಾರ್, ಲೋಕನಾಥನ್, ಪಿ. ಆರ್. ಶ್ರೀನಿವಾಸ ಶಾಸ್ತ್ರಿ, ಪ್ರಭಾಕರ್, ಚಿಕ್ಕ ನರಸಿಂಹಯ್ಯ, ಕಟೀಲ ಗಣಪತಿಶರ್ಮ, ಇವರೇ ಮುಂತಾದವರು ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ—ಗ್ರಂಥಗಳನ್ನು ಹೊರತಂದಿರುತ್ತಾರೆ.

ಗ್ರಂಥಗಳ ಮೌಲ್ಯಮಾಪನ ಇಲ್ಲಿ ಮಾಡಿಲ್ಲ. ಮಾಡಬೇಕಾದ ಕಾಲ ಒದಗಿಬಂದಿದೆ. ಮುಂದೆ ಮಾಡಲಾಗುವುದು.

ಸಲಹೆಗಳು :

೧. ಹಿಂದಿಗೆ ಭಾಷಾಂತರಿಸುವುದರಿಂದ ಉಳಿದ ಭಾರತೀಯ ಎಲ್ಲ ಭಾಷೆಗಳಿಗೂ ಅನುವಾದ ಮಾಡಿದಂತೆಯೇ ಸೈ. ಇದರ ಮಹತ್ವವನ್ನರಿತು—ಹಿಂದಿ ಕನ್ನಡ ಭಾಷಾ ಬಾಂಧವ್ಯ ಸ್ಥಾಯಿ ಸಮಿತಿಯನ್ನು ಏರ್ಪಡಿಸುವುದು ಸೂಕ್ತ.

೨. ಕೇಂದ್ರ ಹಾಗೂ ಸ್ಥಾನೀಯ ಸರಕಾರಗಳಿಂದ ಅನೂದಿತ ಗ್ರಂಥಗಳಿಗೆ ಸಹಾಯ ಧನ ಹಾಲಿ ದೊರೆಯುತ್ತಲಿದೆ. ಅದರ ಉಪಯೋಗ ಪಡೆಯಬೇಕು.

೩. ಅನುವಾದ ತರಬೇತಿ ವರ್ಗವೊಂದನ್ನು ವಿಶ್ವವಿದ್ಯಾಲಯಗಳಲ್ಲಿ, ಪರಿಷತ್ತಿನಲ್ಲಿ ಸ್ಥಾಪಿಸಿ ತರಬೇತಿ ಕೊಡುವುದು ಸೂಕ್ತ.

೪. ಭಾಷಾ ಬಾಂಧವ್ಯಕ್ಕೆ ದುಡಿಯುತ್ತಿರುವ ಮಹನೀಯರಿಗೆ ಪ್ರಶಸ್ತಿ, ಸನ್ಮಾನಪತ್ರ ಮುಂತಾದವುಗಳನ್ನು ನೀಡಿ ಗೌರವಿಸುವುದರ ಮೂಲಕ ಉತ್ತೇಜನ ಕೊಡಬಹುದು.

ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ !
ಉಂಬ ಜಂಗಮ ಬಂದರೆ ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ !
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನಮಾಡಿದರೆ ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯ

* * *

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ; ಅನಾಚಾರವೇ ನರಕ
ಕೂಡಲಸಂಗಮದೇವ ನೀವೇ ಪ್ರಮಾಣ

—ಬಸವಣ್ಣ

ವಿಮರ್ಶನರಂಗ

ಜ್ಞಾನಸುಧಾ (ತ್ರೈಮಾಸಿಕ): ಸಂಪುಟ ೧, ಸಂಚಿಕೆ ೧, ಜನವರಿ ೧೯೬೭, ಆಕೃತಿ ಡೆಮ್ಮಿ ೧/೪, ಪುಟ ೧೮೬, ಬಿಡಿ ಸಂಚಿಕೆ ರೂ. ೧-೦೦, ವಾರ್ಷಿಕ ಚಂದಾ ರೂ. ೩-೦೦ ಸಂಪಾದಕರು: ಕೆ. ಬಿ. ಬಸವರಾಜನ್, ಪ್ರ. ಜ್ಞಾನ ಜ್ಯೋತಿ ಕಲಾ ಮಂದಿರ (ರಿ.), ೭೨, ಬಳೆಪೇಟೆ, ಬೆಂಗಳೂರು-೨.

ಕರ್ಣಾಟಕದ ವಿಖ್ಯಾತ ವಿದ್ವಾಂಸರಾದ ಸರ್ವಶ್ರೀ ಡಾ|| ರಂ. ಶ್ರೀ. ಮುಗಳಿ, ಕೆ. ಗೋಪಾಲಕೃಷ್ಣರಾಯರು, ಎಸ್. ಆರ್. ಮಳಗಿ, ಎಂ. ರಾಘವೇಂದ್ರರಾಯರು, ಡಾ|| ಜಿ. ಶಿವರುದ್ರಪ್ಪ, ಟಿ. ಕೇಶವಭಟ್, ಕಾಶಿ ಶ್ರೀಪಾದಾಚಾರ್ಯ ಅರ್ಚಿಕ ವೆಂಕಟೇಶ್, ತೊ. ಸು. ಸುಬ್ರಹ್ಮಣ್ಯಂ, ಕು. ರಾ. ಸೀತಾರಾಮಶಾಸ್ತ್ರೀ ಮುಂತಾದವರ ಬರವಣಿಗೆಗಳಿಂದ ಶೋಭಿತವಾಗಿದೆ. ದಿ. ಆಲೂರ ವೆಂಕಟರಾಯರ ಸ್ಮರಣಾರ್ಥ ವಾಗಿ ಈ ಸಂಚಿಕೆ ಪ್ರಕಟವಾಗಿದೆ. ನಮ್ಮ ನಾಡಿನ ಸಾಹಿತ್ಯ ಸಂಸ್ಕೃತಿಗಳ ಸೇವೆಯನ್ನು ನಾನಾ ಮುಖವಾಗಿ ಸಲ್ಲಿಸುತ್ತ ಬಂದಿರುವ ಜ್ಞಾನಜ್ಯೋತಿ ಕಲಾಮಂದಿರದ ಪರವಾಗಿ ಪ್ರಕಟವಾಗುವ ಈ ತ್ರೈಮಾಸಿಕವು ಉಜ್ವಲವಾಗಿ ಬಾಳು ವಂತೆ ಕನ್ನಡಿಗರು ಪ್ರೋತ್ಸಾಹ ನೀಡಲೆಂದು ಆಶಿಸಬಹುದು.

*   *   *

ಬೆಟ್ಟದ ಹೊಳೆ (ಕಾದಂಬರಿ): ಲೇ: ಸಿಂಪಿ ಲಿಂಗಣ್ಣ, ಆಕೃತಿ ಕ್ರೌನ್ ೧/೮, ಪುಟ. ೮+೧೦೬. ಬೆಲೆ. ರೂ. ೧-೫೦. ಪ್ರ. ಶ್ರೀ ಅರವಿಂದ ಗ್ರಂಥಾಲಯ, ಚಡ ಚಣ, ವಿಜಾಪುರ ಜಿಲ್ಲೆ.

ಹಳ್ಳಿಯ ಪ್ರಕೃತಿಗನುಗುಣವಾದ ಜನಜೀವನ, ಬಯು ಲಾಟಗಳ ವೈಶಿಷ್ಟ್ಯ-ಇವುಗಳೊಡವೆರೆದ ವಿವರಣೆಗಳಿಂದ ಈ ಸಾಮಾಜಿಕ ಕಾದಂಬರಿ ಓದುಗರ ಮನಸೆಳೆಯುವುದು. ರಾಚಮಲ್ಲನ, 'ದಕ್ಷಬ್ರಹ್ಮ' ಪಾತ್ರ, ಅವನ ಮಡದಿ ಗಿರಿಜವ್ವೆಯ ಮರಣ, ಅವನ ಮಕ್ಕಳಾದ ಸಿದ್ಧರಾಮ ಮತ್ತು ಪ್ರಭು ಎಂಬಿಬ್ಬರ ಗುಣಸ್ವಭಾವ ಕಥನ, ಪ್ರಭು ತನ್ನ ಜೀವನವನ್ನು ಸುರೂಪಿಸುವುದಕ್ಕಾಗಿ ಪಟ್ಟಪಾಡು- ಇಂತಹ ಸನ್ನಿವೇಶಗಳೆಲ್ಲ ಪರಿಣಾಮಕಾರಕಗಳಾಗಿವೆ. ಪ್ರಭುವೇ ಇಲ್ಲಿ ಮುಖ್ಯನಾಯಕ. ಪುಸ್ತಕ ಚಿಕ್ಕದಾದುದ ರಿಂದ ವಸ್ತು ವಿಸ್ತಾರವಿಲ್ಲ. ವಿಶೇಷ ಸಂಘರ್ಷಗಳೂ ಇಲ್ಲ. ದೇಶೀಯ ಶಬ್ದಪುಂಜ, ನಾಳ್ನುಡಿಗಳು, ರಸಭಾವಯುಕ್ತ ಕವಿತೆಯಂತಹ ಮಾತುಗಳು, ವಿಶಿಷ್ಟ ಶೈಲಿಯ ರೂಪವನ್ನು ತಾಳಿವೆ. ಇದರಿಂದ ಈ ಕಾದಂಬರಿ ಓದುಗರ ಮೆಚ್ಚನ್ನು ಗಳಿಸುವುದು.

*   *   *

ಯತಿವರರು: ಆಕೃತಿ ಕ್ರೌನ್ ೧/೮, ಪುಟ. ೧೯೨, ಬೆಲೆ ರೂ. ೨-೭೫, ಲೇ. : ಕೆ. ಯಸ್. ಪದ್ಮನಾಭಾಚಾರ್ಯ ಪ್ರ. ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ.

ಶ್ರೀ ಮನ್ಮಧ್ವಾಚಾರ್ಯರಿಂದ ಸ್ಥಾಪಿತವಾದ ಉಡುಪಿಯ ಅಷ್ಟಮಠಗಳಲ್ಲಿ ಒಂದಾಗಿರುವ ಪುತ್ತಿಗೆಮಠದ ಮತ್ತು ಆ ಮಠದ ಯತಿಪರಂಪರೆಯ ಚರಿತ್ರೆಯಿದು. ಸಮರ್ಥ ಲೇಖ ಕರೂ, ಕವಿಗಳೂ, ಸಂಸ್ಕೃತ-ಹಿಂದೀ-ಕನ್ನಡ ಪರಿಣತರೂ, ಶಿಕ್ಷಣವೇತ್ತರೂ ಆಗಿರುವ ಶ್ರೀ ಪದ್ಮನಾಭಾಚಾರ್ಯರ ಲೇಖನಿಯಿಂದ ಈ ಚರಿತ್ರ ಕಥನವು ಪುಟ್ಟಕ್ಕಿಟ್ಟ ಚಿನ್ನ ದಂತಾಗಿದೆ. ಸ್ವಪ್ರಶಂಸಾ ಪ್ರಿಯರಲ್ಲದ ಪರಂಪರೆಯ ಪುತ್ತಿಗೆ ಮಠದ ಇಂದಿನ ಯತಿವರರಾದ ಶ್ರೀ ಸುಜ್ಞಾನೇಂದ್ರ ತೀರ್ಥರ ಹಿರಿಮೆಯನ್ನೂ ಪುಸ್ತಕ ಪ್ರಕಾಶಕರ ಹಾಗೂ ಭಕ್ತ ಜನರ ಪ್ರೇರಣೆಯಿಂದ ಲೇಖಕರು ಕೊಟ್ಟಿದ್ದಾರೆ. ಈ ೧೯೨ ಪುಟಗಳ ಗ್ರಂಥವು ಮಠದ ಸಮಗ್ರ ಇತಿಹಾಸದ ಮೊದಲ ಭಾಗವೆಂದೂ ಇನ್ನೂ ೧೫೦ ಪುಟಗಳ ರಚನೆ ದ್ವಿತೀಯ ಭಾಗವಾಗಿ ಬರಲಿದೆಯೆಂದೂ ಲೇಖಕರು ತಿಳಿಸಿ ದ್ದಾರೆ. ನಮ್ಮ ಜನತೆ ಇಂತಹ ಧಾರ್ಮಿಕ ಇತಿಹಾಸ ಗ್ರಂಥ ಗಳನ್ನು ಪರಿಶಿಸಿದಷ್ಟೂ ಒಳ್ಳೆತು. ಈ ಪುಸ್ತಕವು ಕೇವಲ ಯತಿವರರ ಚರಿತ್ರೆ ಮಾತ್ರವಾಗಿರದೆ, ಸಮಗ್ರ ಮಾಧ್ವ ಸಿದ್ಧಾಂತದ ವಿವರಣೆಯೇ ಆಗಿರುವುದು ಇದರ ಹಿರಿಮೆಯ ಇನ್ನೊಂದು ಅಂಶ. ಇದರ ಭಾಷೆ ಸರಳ, ರಚನೆ ಸೊಗಸು, ವಿಚಾರ ಗಂಭೀರ, ವಸ್ತು ಭಕ್ತಿಪ್ರದ, ಮುಖಪತ್ರ- ಮುದ್ರಣಾದಿ ಬಾಹ್ಯಾಂಗಗಳು ಅಚ್ಚುಕಟ್ಟಾಗಿ ಅಭಿಮಾನ ಕರ.

*   *   *

ಒಂದೇ ದಾರಿ: ಪುಟ. ೨೨೦, ಬೆಲೆ ರೂ. ೧-೦೦ ಪ್ರವಚನ ಕರ್ತೃ : ಶ್ರೀ ಮಹಾತ್ಮ ಆನಂದಸ್ವಾಮಿ, ಸಂಗ್ರಾ ಹಕ : ಶ್ರೀ ರಣವೀರಜೀ, ಅನುವಾದಕ : ರಾಂ. ನಾಂ. ರತನ್, ಪ್ರಕಾಶಕರು : ಕೆ. ರಾಮಕೃಷ್ಣಪ್ಪ, ಸಿಟಿ ಆರ್ಯ ಸಮಾಜ, ಮೈಸೂರು.

ಆರ್ಯಸಮಾಜದ ಅಗ್ರಗಣ್ಯ ಕಾರ್ಯಕರ್ತರಾಗಿ ಹಿಂದೂ ಜನತೆಯ ಧರ್ಮರಕ್ಷಣೆಗಾಗಿ ದುಡಿದ ಶ್ರೀ ಮಹಾತ್ಮಾ ಆನಂದ ಸ್ವಾಮೀಜೀಯವರು ದೆಹಲಿಯ ಆರ್ಯಸಮಾಜ ಕರೋಲ ಬಾಗಿನಲ್ಲಿ ಏಳು ದಿವಸಗಳೂ ಬಿಡದೆ ಮಾಡಿದ "ಏಕ್ ಹೀ ರಾಸ್ತಾ" (ಒಂದೇ ದಾರಿ) ಎಂಬ ಉಪದೇಶಗಳ ಸಂಗ್ರಹ ವಿದು. ವೇದೋಪನಿಷತ್ತುಗಳ ಆಧಾರದಿಂದ, ಸಾಧು ಸಂತರ ಅಮೃತ ವಾಣಿಗಳಿಂದ ಸ್ವಾನುಭವದ ಸಮುಚಿತ ಉದಾಹರಣೆಗಳಿಂದ, ಈ ಪ್ರವಚನ ಸಂಗ್ರಹವು ಅಪ್ಯಾಯ ಮಾನವಾಗಿದೆ. ಓಂಕಾರದ ಮಹಿಮೆ, ಅದನ್ನು ಉಪಾಸಿಸುವ ಮಾರ್ಗ, ಗಾಯತ್ರೀ ಮಂತ್ರಾರ್ಥ, ನೈಜ ಭಕ್ತನ ಲಕ್ಷಣ-ಮುಂತಾದವನ್ನು ಮನಮುಟ್ಟುವಂತೆ ಇದರಲ್ಲಿ ತಿಳಿಸಲಾಗಿದೆ. ಭಾಷೆ ಕೆಲವೆಡೆ ಗ್ರಾಮ್ಯವಾಗಿದೆ.

* * *

ಪತ್ರ-ಪುಷ್ಪ (ಕವನಸಂಕಲನ) : ಆಕೃತಿ ಕ್ರೌನ್ ೧/೮, ಪುಟ ೬೬, ಬೆಲೆ ರೂ. ೨-೦೦, ಲೇ. ಕಡೆಂಗೋಡ್ಲು ಶಂಕರ ಭಟ್ಟ, ಸಂಪಾದಕರು: ಅಮ್ಮೆಂಬಳ ಶಂಕರನಾರಾಯಣ ನಾವಡ, ಪ್ರ. ಸಾಹಿತ್ಯಾಂಜಲಿ ಗ್ರಂಥಮಾಲೆ, ಆನಂದಾಶ್ರಮ, ಕೋಟೆಕಾರು, ದ. ಕ.

ಕನ್ನಡನಾಡಿನ ಖ್ಯಾತ ಸಾಹಿತಿಗಳೂ ಕವಿವರರೂ ಆಗಿರುವ ಶ್ರೀ ಕಡೆಂಗೋಡ್ಲು ಶಂಕರಭಟ್ಟರು ಸುಮಾರು ೪೫ ವರ್ಷಗಳಿಂದಲೇ ವಿವಿಧ ಸಾಹಿತ್ಯ ರಚನೆಯೊಡನೆ ಕವಿತೆಗಳನ್ನೂ ಬರೆಯುತ್ತ ಬಂದವರು. ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದ ಅವುಗಳಲ್ಲಿ ಕೆಲವು ಸಂಕಲಿತವಾಗಿ ಕಾಣಿಕೆ (೧೯೨೭), ನಲ್ಮೆ (೧೯೩೭), ಹಣ್ಣು ಕಾಯಿ (೧೯೩೩)-ಮುಂತಾದ ಪುಸ್ತಕ ರೂಪಗಳಲ್ಲಿ ಪ್ರಕಟವಾಗಿವೆ. ಇನ್ನೂ ಸಂಕಲನಗೊಳ್ಳದೆ ಮರೆಯಲ್ಲಿದ್ದ ೨೩ ಸರಸ ಕವನಗಳನ್ನು ಆಯ್ದು ಸಂಪಾದಕರು ಈ ಪುಸ್ತಕದಲ್ಲಿ ಪ್ರಕಟಿಸಿರುತ್ತಾರೆ. ಇದರಲ್ಲಿ ೧೯೪೯ ರಿಂದ ೧೯೬೩ ವರೆಗಿನ ಕವನಗಳ ಆಯ್ಕೆ ಇದೆ. ಈ ಆಯ್ಕೆ ಕೂಡ ಮಿಂಚಿನಿಂದ ತೊಡಗಿ, ರಸಿಕತೆಯ ಅನುಭವಸಾರಗಳಲ್ಲಿ ಅಡಗಿ, ಇತಿಹಾಸದ ಭಾವುಕ ಸ್ಮೃತಿಯಲ್ಲಿಯೂ ವೀರತೆಯ ಉಕ್ಕಿನಲ್ಲಿಯೂ ಕಡುಗಿ, ದೇಶಭಕ್ತಿಯಲ್ಲಿ ತೆರಳಿ, ಶುಭದ ಹಾರೈಕೆಯಲ್ಲಿ ಅರಳಿ, "ಬ್ರಹ್ಮಾಸ್ಮಿ" ತತ್ವದಲ್ಲಿ ಲೀನವಾಗಿದೆ. ಈ ಕವನಗಳ ಸಾಹಿತ್ಯ ರಸಮಾಧುರ್ಯವನ್ನು ಒಟ್ಟಿಗೆ ಒಂದೆಡೆ ಸವಿವಂತೆ ಅನುಮಾಡಿಕೊಟ್ಟ ಸಂಪಾದಕರು ಅಭಿನಂದನಾರ್ಹರು. ಪುಸ್ತಕವಿದು ಸಂಗ್ರಹಾರ್ಹ, ಪಠ್ಯಕ್ಕೆ ಯೋಗ್ಯ.

* * *

ಕವನ ಲೀಲೆ : ಆಕೃತಿ ಕ್ರೌನ್ ೧/೮, ಪುಟ. ೩೬, ಬೆಲೆ. ರೂ. ೧-೫೦, ಲೇ. "ಧವಳಶ್ರೀ", ಪ್ರ. ಪದ್ಮಶ್ರೀ ಪ್ರಕಾಶನ ದೊಡ್ಡಬೆಲೆ.

ಮೂವತ್ತಮೂರು ಶಿರೋನಾಮಾಂತರ್ಗತ ಕವನಗಳು ಈ ಹೊತ್ತಗೆಯಲ್ಲಿ ಸಂಗೃಹೀತವಾಗಿವೆ. ಲೇಖಕರ ವಿದ್ಯಾರ್ಥಿ ದಶೆಯ ಕವನಗಳಿವು. 'ಮನಸ್ಸಿಗೊಪ್ಪುವ ರೀತಿಯಲ್ಲಿ' ಬರೆದಿದ್ದಾರೆ. ಈ ಕವನಗಳಲ್ಲಿ ಛಂದಸ್ಸಿಲ್ಲ, ಭಾಷಾ ಶುದ್ಧಿಯೂ ಇಲ್ಲ. ಶಬ್ದಗಳಿವೆ-ಅವು ವಿಶೇಷ ಭಾವನೆಯನ್ನೇನೂ ಪ್ರಕಟಿಸುವುದಿಲ್ಲ. ಉದಾ : 'ಕಲಿ' ಎಂಬೊಂದು ದ್ವಿಪಂಕ್ತಿಯ ಕವನ ಹೀಗಿದೆ :

ಕಲಿ ಕಲಿ ಕಲಿ ಎಲ್ಲವನು ಬಿಡದೆ ಕಲಿ
ಕಲಿತುದೆಲ್ಲವು ಒಳಿತಿಗಾಗಲಿ ಬಲಿ

ಅಬದ್ಧವಾದ ಕೆಲವು ಸಂಸ್ಕೃತ ಶಬ್ದಗಳಿವು-ಪರಿಕ್ಷಾ, ನಿಶ್ಯಬ್ದ, ಮನಶಿಖರ, ಸುಬೆಳಕು, ಸ್ಫುಟಿದು-ಇತ್ಯಾದಿ. "ಮಹತ್ಕಾರ್ಯ ಒಂದೊಂದೂ ಒಬ್ಬೊಬ್ಬರಿಂದಲೆ ಸಾಧ್ಯವೆ? ಸೂರ್ಯನೊಬ್ಬ ನೆಲವನ್ನೆಲ್ಲ ಆಳಲಾರ; ಅದಕಾಗಿ ನಾವು ನೀವು ಬೇರೆ ಬೇರೆಯಲ್ಲ ಕನ್ನಡದ ಜ್ಯೋತಿ ನಾವೆಲ್ಲ" ಇಲ್ಲಿನ ಹೇಳಿಕೆಗಳು ವಾಸ್ತವಿಕತೆಗೆ ವಿರೋಧವಾಗಿ ಕಾಣುತ್ತವೆ. ಇಂತಹ ಕವನಗಳನ್ನು ಆತ್ಮತೃಪ್ತಿಗಾಗಿ ಬರೆದು ಮುದ್ರಿಸುವುದರಲ್ಲಿ ತಪ್ಪಿಲ್ಲ. ಆದರೆ ಸಹೃದಯರ ಕೈಗೆ ದಾಟಲಿರುವುದರಿಂದ ಮುದ್ರಿಸುವ ಮುನ್ನ ತಿದ್ದಿಸಿಕೊಂಡರೆ ಲೇಸಿತ್ತು.

* * *

ಹೊಸ ಹೊನಲು : ಆಕೃತಿ ಕ್ರೌನ್ ೧/೮ ಪುಟ. ೧೯+೩೬ ಬೆಲೆ. ರೂ. ೧-೨೫, ಪ್ರ. ರತ್ನಾಕರ ಪ್ರಕಾಶನ, ರಾಯಚೂರು.

ಇದರಲ್ಲಿ ಇಪ್ಪತ್ತಮೂರು ನವ್ಯಕವನಗಳಿವೆ. ಎಂ. ಲಕ್ಷ್ಮಣ, ಎಂ. ಜಂಬಣ್ಣ, ಜಿ. ಆರ್. ಹಿರೇಮಠ ಕುಷ್ಟಗಿ ಎಂ. ಮಲ್ಲಿಕಾರ್ಜುನಶಾಸ್ತ್ರಿ, ಎಂ. ಬಿ. ಬನ್ನಿಗೋಲಕರ್-ಎಂಬ ತರುಣ ಕವಿ ಪಂಚಕದ ಕವನಗಳನ್ನು ಇದರಲ್ಲಿ ಆರಿಸಿಕೊಂಡಿದೆ. ಕವನಗಳು ಲಲಿತವಾಗಿ, ಸರಸವಾಗಿ, ಭಾವಯುತವಾಗಿ, ನವ್ಯಮಾರ್ಗವನ್ನು ಅವಲಂಬಿಸಿವೆ. ಶಿಶಿರ ವೃದ್ಧನ ಚಪಲ, ನಾಲ್ಕನೆ ಮಹಾಯುದ್ಧದನಂತರ, ಸೂರ್ಯಾಸ್ತ, ಸತ್ತರೂ ಬಿಡಲಿಲ್ಲ, ಭಾವನಾ ಭಾಮಿನಿ, ಅರ್ಥವಾಗದ ಪುಸ್ತಕ, ಹೊಸ ಹೊನಲು-ಇವುಗಳ ರಚನೆಗಳಲ್ಲಿ ಪ್ರತಿಮಾ ವಿಧಾನದಿಂದ ಆಗಿರುವ ಕವನ ನೈಪುಣ್ಯವನ್ನು ಕಾಣಬಹುದು.

ಟಿ. ಕೇಶವಭಟ್ಟ

ಸುದ್ದಿ ಸಂಗ್ರಹ

ಮದರಾಸಿನಲ್ಲಿ ಕನ್ನಡ ಶಾಲೆಗಳು

ನೆರೆಯ ರಾಜ್ಯವಾದ ಮದರಾಸಿನಲ್ಲಿ ನೆಲೆಸಿರುವ ಸುಮಾರು ಎರಡುಲಕ್ಷ ಮಂದಿ ಕನ್ನಡಿಗರು ಬಹುದಿನಗಳಿಂದ ಕಾಣುತ್ತಿದ್ದ ಕನಸು ಕೈಗೂಡುವ ಲಕ್ಷಣಗಳು ಕಂಡುಬರುತ್ತಿವೆ. ಅದಕ್ಕೆ ಸೂಚನೆಯಾಗಿ ಈ ವರ್ಷದಲ್ಲಿ ಎರಡು ಶಾಲೆಗಳನ್ನು ಕನ್ನಡಿಗರು ತಮ್ಮ ಸ್ವಂತ ಪ್ರಯತ್ನದಿಂದ ಪ್ರಾರಂಭಿಸಿದ್ದಾರೆ. ಒಂದು ಕನ್ನಡ ಸಂಘದ ಆಶ್ರಯದಲ್ಲಿ, ತ್ಯಾಗರಾಜನಗರದಲ್ಲಿ ನಡೆಯುತ್ತಿರುವ ಕನ್ನಡ ಶಾಲೆ, ಎರಡನೆಯದು ವಡಪಳನಿಯಲ್ಲಿ ಇತ್ತೀಚೆಗೆ ಪ್ರಾರಂಭವಾದ ಶ್ರೀ ಪಾಂಡುರಂಗ ವಿದ್ಯಾನಿಲಯಂ. ಇದನ್ನು ಕನ್ನಡಿಗರ ಅಚ್ಚುಮೆಚ್ಚಿನ ಚಿತ್ರ ಅಭಿನೇತ್ರಿಯರಾದ ಶ್ರೀಮತಿ ಎಂ. ಪಂಢರಿಬಾಯಿಯವರ ಉದಾರ ನೆರವಿನಿಂದ ಅವರ ಸಹೋದರರಾದ ಎಂ. ಸದಾಶಿವ ರಾಯರು ಪ್ರಾರಂಭಿಸಿದ್ದಾರೆ. ಈ ಎರಡು ಶಾಲೆಗಳಲ್ಲಿಯೂ ಕನ್ನಡವನ್ನು ಉಳಿದ ಭಾಷೆಗಳಂತೆ ಕಲಿಸಲಾಗುವುದು. ಕ್ರಮೇಣ ಹೈಸ್ಕೂಲು ಶಿಕ್ಷಣ ಸೌಲಭ್ಯವನ್ನು ವಿಸ್ತರಿಸುವ ಯೋಜನೆಯಿಂದ ಪ್ರಾರಂಭವಾಗಿರುವ ಈ ಶಾಲೆಗಳು, ಕನ್ನಡ ವಿದ್ಯಾರ್ಥಿಗಳಿಲ್ಲದೆ ಕೃಶವಾಗಿರುವ, ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಕನ್ನಡ ವಿಭಾಗಕ್ಕೆ ಪೂರಕಶಕ್ತಿ ಕೇಂದ್ರಗಳಾಗುವುವೆಂದು ತಿಳಿಸಲು ಹರ್ಷವಾಗುತ್ತದೆ. ಅಭಿಮಾನಿಗಳಾದ ಕನ್ನಡಿಗರೆಲ್ಲರೂ ಈ ಪ್ರಯತ್ನಕ್ಕೆ ನೆರವಾಗಿ ಮದ್ರಾಸಿನಲ್ಲಿ ಕನ್ನಡದ ಪುನರುಜ್ಜೀವನಕ್ಕಾಗಿ ಶ್ರಮಿಸುವುದು ಆದ್ಯ ಕರ್ತವ್ಯವಾಗಿದೆ.

ಸಿ. ಕೆ. ವೆಂ. ಅವರ ನೂತನ ಕೃತಿ: ಕಾಳಿದಾಸ ಮಹಾಕವಿ

ಶ್ರೀ ಕೆಂಗಲ್ ಹನುಮಂತಯ್ಯನವರ ಅಧಿಕಾರದ ಅವಧಿಯಲ್ಲಿ ಸ್ಥಾಪಿತವಾದ ಮೈಸೂರು ಸರಕಾರದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆಯು ಇದುವರೆಗೆ ಹಲವಾರು ಉತ್ತಮ ಕನ್ನಡ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸಿ, ನಾಡು ನುಡಿಗಳಿಗೆ ಮಹೋಪಕಾರಮಾಡಿದೆ. ಈಗ ಶಾಖೆಯು ಕಾಳಿದಾಸ ಮಹಾಕವಿಯನ್ನು ಕುರಿತು ಸಿ. ಕೆ. ವೆಂಕಟರಾಮಯ್ಯ ಅವರು ಬರೆದ ಒಂದು ಉದ್ಗ್ರಂಥವನ್ನು ಪ್ರಕಟಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಭಾಸ ಮಹಾಕವಿಯನ್ನು ಕುರಿತು ಒಂದು ಬೆಲೆಯುಳ್ಳ ಗ್ರಂಥವನ್ನು ಬರೆದು ಈ ಹಿಂದೆ ಸಾರಸ್ವತ ಲೋಕಕ್ಕೆ ಅರ್ಪಿಸಿರುವ ಶ್ರೀ ಸಿ.ಕೆ. ವೆಂಕಟರಾಮಯ್ಯನವರು ತಮ್ಮ ದೀರ್ಘ ವ್ಯಾಸಂಗದ ಫಲ ಸ್ವರೂಪವಾಗಿ ರಾಯಲ್ ಡೆಮ್ಮಿ ಸುಮಾರು ಏಳುನೂರು ಪುಟಗಳ ಈ ವಿಮರ್ಶಾಗ್ರಂಥವನ್ನು ಕನ್ನಡಿಗರಿಗೆ ಅರ್ಪಿಸಿದ್ದಾರೆ. ಇದರ ಬೆಲೆ ರೂ. ೧೭–೫೫. ಪ್ರತಿಗಳು ದೊರಕುವ ಸ್ಥಳ: ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೊ, ಬೆಂಗಳೂರು–೧.

ಕುವೆಂಪು ಅವರ ಹೊಸ ಕಾದಂಬರಿ: ಮಲೆಗಳಲ್ಲಿ ಮದುಮಗಳು

ಕುವೆಂಪು ಅವರು ಮೂಲತಃ ಕವಿಗಳಾದರೂ ಅವರ ಗದ್ಯ ಕೃತಿಗಳು ಅವರ ಕಾವ್ಯದಷ್ಟೇ ಜನಪ್ರಿಯವಾಗಿವೆ. ಅವರು ಬರೆದ ಕಾನೂರು (ಸುಬ್ಬಮ್ಮ) ಹೆಗ್ಗಡತಿ ಎಂಬ ಕಾದಂಬರಿ ೧೯೩೬ರಲ್ಲಿ ಪ್ರಕಟವಾಗಿ ಇದುವರೆಗೆ ನಾಲ್ಕು ಮುದ್ರಣಗಳನ್ನು ಕಂಡಿದೆ. ಈಗ ಕುವೆಂಪುರವರು ಮೂವತ್ತು ವರ್ಷಗಳ ಅನಂತರ ತಮ್ಮ ಎರಡನೆಯ ಮಹಾ ಕಾದಂಬರಿ–ಮಲೆಗಳಲ್ಲಿ ಮದುಮಗಳು–ಪ್ರಕಟಿಸಿದ್ದಾರೆ. ಸುಮಾರು ಎಂಟು ನೂರ ಐವತ್ತು ಪುಟಗಳ ಈ ಕಾದಂಬರಿಯು ಮಲೆನಾಡಿನ ಜೀವನದ ವಿಶ್ವಕೋಶವೆಂದು ಹೇಳಲಾಗಿದೆ. ಇದರ ಬೆಲೆ ಇಪ್ಪತ್ತುರೂಪಾಯಿ. ಪ್ರಕಾಶಕರು ಉದಯರವಿ ಪ್ರಕಾಶನ, ಮೈಸೂರು.

ಅಖಿಲಭಾರತ ಪ್ರಕಾಶಕರ ಹಾಗೂ ಪುಸ್ತಕ ವ್ಯಾಪಾರಿಗಳ ಸಮ್ಮೇಳನ

ಭಾರತದ ಪುಸ್ತಕಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳ ಸಂಘವು (ವಿಳಾಸ: ಇಂಡಿಯಾ ಬುಕ್‌ಹೌಸ್, ೩೯, ಒಡೆಹೌಸ್ ರೋಡ್, ಮುಂಬಯಿ–೧) ಬರಲಿರುವ ಸೆಪ್ಟಂಬರ್ ೧೭ನೇ ದಿನಾಂಕ ಮುಂಬಯಿಯಲ್ಲಿ ಒಂದು ಸಮ್ಮೇಳನವನ್ನು ನಡೆಸಲಿದೆ. ಪ್ರಕಾಶಕರು ಹಾಗೂ ಪುಸ್ತಕ ಮಾರಾಟಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಸಮ್ಮೇಳನವು ಚರ್ಚಿಸಲಿದೆ. ಈ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿನಿಧಿಗಳು ಸಂಘದ ಕಾರ್ಯದರ್ಶಿಯವರಿಗೆ ಪತ್ರ ಬರೆಯಬೇಕಾಗಿ ಕೋರಿದೆ. ಮೇಲ್ಕಂಡ ಸಂಘಕ್ಕೆ ಹೊಸದಾಗಿ ಸದಸ್ಯರಾಗಲು ಚಂದಾ ಹಣ: ರೂ. ೧೧–೦೦ ಮಾತ್ರ.

ಕನ್ನಡ ಗ್ರಂಥ ಪ್ರದರ್ಶನ ಕೇಂದ್ರ

ಮೈಸೂರು ರಾಜ್ಯದ ಪ್ರಕಾಶಕರು ಹಾಗೂ ಪುಸ್ತಕ ವ್ಯಾಪಾರಿಗಳ ಸಂಸ್ಥೆಯು ಮದರಾಸಿನ ದಕ್ಷಿಣಭಾರತ ಭಾಷಾ ಸಂಸ್ಥೆಯ ಸಹಕಾರದೊಂದಿಗೆ ಬೆಂಗಳೂರಿನ ಜಯದೇವ ಹಾಸ್ಟೆಲ್(V ಮೈನ್ ರೋಡ್, ಗಾಂಧಿನಗರ, ಬೆಂಗಳೂರು) ಕಟ್ಟಡದಲ್ಲಿ ಆಗಸ್ಟ್ ೧ನೇ ದಿನಾಂಕದಿಂದ ಒಂದು ವರ್ಷ ಕಾಲ ನಡೆಯುವ ಕನ್ನಡ ಗ್ರಂಥಗಳ ಪ್ರದರ್ಶನ ಕೇಂದ್ರವೊಂದನ್ನು ಆರಂಭಿಸಿದೆ. ಕಳೆದ ಮೂರು ವರ್ಷಗಳಲ್ಲಿ ಪ್ರಕಟವಾಗಿರುವ ಎಲ್ಲ ಕನ್ನಡ ಗ್ರಂಥಗಳನ್ನು ಈ ಕೇಂದ್ರದಲ್ಲಿ ಪ್ರದರ್ಶಿಸಲಾಗುವುದು. ಪ್ರಕಾಶಕರೂ, ಪುಸ್ತಕ ಮಾರಾಟಗಾರರೂ ತಮ್ಮ ಗ್ರಂಥಗಳ ಎರಡು ಪ್ರತಿಗಳನ್ನು ಮೇಲ್ಕಂಡ ಕೇಂದ್ರಕ್ಕೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ದಿನಾಂಕ ೪-೮-೬೭ರಂದು ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ಕೇಂದ್ರವನ್ನು ಉದ್ಘಾಟಿಸಿದರು.

ಮೈಸೂರು ವಿ. ವಿ. ನಲ್ಲಿ ಕನ್ನಡದ ಮುನ್ನಡೆ

ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಸ್ಟಡಿಸ್' ಸಂಸ್ಥೆಯು ಸ್ಥಾಪಿತವಾದ ಅತ್ಯಲ್ಪಕಾಲದಲ್ಲಿ ಅನೇಕ ಪೂರ್ಣ ಪ್ರಮಾಣದ ಯೋಜನೆಗಳನ್ನು ಕೈಗೊಂಡಿದೆ. ಸಂಸ್ಥೆಯು ದೇ. ಜವರೇಗೌಡ ಅವರ ನೇತೃತ್ವದಲ್ಲಿ ಹರಿದಾಸವಾಙ್ಮಯ ಸಂಶೋಧನೆ, ಪ್ರಕಟನೆಗಳ ಕಾರ್ಯ ಕೈಗೊಂಡಿದೆ. ಅಲ್ಲದೆ ಜನಪದ ಸಾಹಿತ್ಯದ ಸಂಶೋಧನೆಗೆಂದು ಒಂದು ಶಾಖೆಯನ್ನು ಆರಂಭಿಸಿದೆ. ಪಠ್ಯಪುಸ್ತಕಗಳ ನಿರ್ಮಾಣದ ದಿಸೆಯಲ್ಲಿ ಭಾಷಾಂತರ ಕಾರ್ಯಕ್ಕೆ ನೆರವಾಗಲು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಸಂಸ್ಥೆಯು ಉತ್ತಮ ಭಾಷಾಂತರ ಕೃತಿಗಳಿಗೆ ಸೂಕ್ತ ಬಹುಮಾನವನ್ನು ನೀಡಲು ನಿರ್ಧರಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಸ್ನಾತಕೋತ್ತರ ಮಟ್ಟದಲ್ಲಿ 'ಹ್ಯುಮ್ಯಾನಟೀಸ್' ವಿಷಯಗಳಲ್ಲಿ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶ ಕಲ್ಪಿಸಿಕೊಟ್ಟಿದೆ. ಇನ್ನು ಮುಂದೆ ಎಲ್ಲ ವಿಶ್ವವಿದ್ಯಾನಿಲಯದ ಶಿಕ್ಷಕರಿಗೂ ಕನ್ನಡ ಭಾಷೆ ತಿಳಿದಿರಬೇಕೆಂಬ ಕಡ್ಡಾಯ ನಿಯಮವನ್ನು ಹೇರಿದೆ. ನೌಕರಿಗಾಗಿ ಅಭ್ಯರ್ಥನ ಪತ್ರ ಸಲ್ಲಿಸುವವರು ಇನ್ನು ಮುಂದೆ ಕನ್ನಡವನ್ನು ಬಲ್ಲವರಾಗಿರಬೇಕು.

ಕನ್ನಡ ಬಾರದ ಅಧ್ಯಾಪಕರ ಸಲುವಾಗಿ ವಿ. ವಿ. ನಲ್ಲಿ ಈಗಾಗಲೇ ಕನ್ನಡ ತರಗತಿಗಳು ಆರಂಭವಾಗಿವೆ. ಶಿವಮೊಗ್ಗೆಯಲ್ಲಿ ಕನ್ನಡ ಡಿಪ್ಲೊಮೋ ತರಗತಿಗಳು ಆರಂಭವಾಗಿ ಈ ದೆಸೆಯಲ್ಲಿ ಉತ್ತಮ ಕೆಲಸಮಾಡುತ್ತಿದೆ.

ಮೈಸೂರಿನ ಸಂಗೀತ ಕಾಲೇಜಿನಲ್ಲಿ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಕಲಿಯದೇ ಕೇವಲ ಕನ್ನಡ, ಹಿಂದಿ ಭಾಷೆಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಪದವೀಧರರಾಗುವ ಅವಕಾಶ ಕಲ್ಪಿಸಿಕೊಡಲಾಗಿದೆ. ಇದು ವಿ. ವಿ. ಕನ್ನಡದ ಮುನ್ನಡೆಯಲ್ಲಿ ಮಹತ್ವದ ಸಾಧನೆ.

ಬಾಲ ಗಂಧರ್ವರ ನಿಧನ

ಮಹಾರಾಷ್ಟ್ರದ ರಂಗಭೂಮಿಯ ಮೇಲೆ ಆರು ದಶಕಗಳಿಗೂ ಹೆಚ್ಚಿನ ಕಾಲ ಸೇವೆಸಲ್ಲಿಸಿದ್ದ ನಾರಾಯಣರಾವ್ ಶ್ರೀ ಪಾದ ರಾಜಹಂಸ ಬಾಲಗಂಧರ್ವ ಅವರು ತಮ್ಮ ೭೯ನೇ ವಯಸ್ಸಿನಲ್ಲಿ ದಿನಾಂಕ ೧೫-೭-೧೯೬೭ರಂದು ತೀರಿಕೊಂಡರು. ಅವರು ದೇಶಭಕ್ತ ಲೋಕಮಾನ್ಯ ಭಾಲಗಂಗಾಧರ ತಿಲಕರ ಮೆಚ್ಚಿಕೆಗೂ ಪಾತ್ರರಾಗಿದ್ದರು. ಅವರು ವಹಿಸುತ್ತಿದ್ದ ಸ್ತ್ರೀ ಪಾತ್ರಗಳು ಇಂದಿಗೂ ಕರ್ಣಾಟಕ-ಮಹಾರಾಷ್ಟ್ರಗಳಲ್ಲಿ ಮನೆಮಾತಾಗಿವೆ. ಅವರು ಬಾಲ್ಯದಲ್ಲೇ ನಟನವೃತ್ತಿಗೆ ಇಳಿದು ಶಾರದಾ, ವೀರತನಯ, ಶಕುಂತಲಾ, ಸುಭದ್ರಾ, ಸರೋಜಿನಿ-ಮೊದಲಾದ ನಾಟಕಗಳಿಂದ ಜನಪ್ರಿಯತೆ ಗಳಿಸಿದರು. ಅವರು ೧೯೧೩ರಲ್ಲಿ ತಮ್ಮದೇ ಆದ ಗಂಧರ್ವ ನಾಟಕಮಂಡಲಿಯನ್ನು ಆರಂಭಿಸಿ ಕಲಾಸೇವೆ ಮಾಡಿದರು. ಸ್ವಯಂವರ, ಏಕಚಪ್ಯಾಲ, ನಂದಕುಮಾರ, ಆಶಾನಿರಾಶಾ, ಕಾನ್ಹೊಪಾತ್ರ, ಅಮೃತಸಿದ್ಧಿ ನಾಟಕಗಳಿಂದ ರಂಗಭೂಮಿಯ ಮೇಲೆ ಕ್ರಾಂತಿಯನ್ನುಂಟುಮಾಡಿದರು. ದಿವಂಗತರ ಆತ್ಮಕ್ಕೆ ಶಾಂತಿ ದೊರಕಲಿ.

ಕನ್ನಡ-ತೆಲುಗುಗಳಿಗೆ ಏಕಲಿಪಿ

ಕಳೆದ ತಿಂಗಳು ಅನಂತಪುರದಲ್ಲಿ ನಡೆದ ಜಿಲ್ಲಾ ಕನ್ನಡ ಸಂಘವನ್ನು ಉದ್ಘಾಟಿಸುತ್ತಾ ಬೆಂಗಳೂರಿನ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪ್ರೊ. ವಿ. ಕೃ. ಗೋಕಾಕ್ ಅವರು ತೆಲುಗು-ಕನ್ನಡ ಭಾಷೆಗಳಿಗೆ ಏಕಲಿಪಿಯಾಗಬೇಕೆಂದು ಅಭಿಪ್ರಾಯಪಟ್ಟರು. ಇದರಿಂದ ತೆಲುಗು-ಕನ್ನಡ ಭಾಷೆಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಪರಿಹಾರವಾಗುವುದಲ್ಲದೆ ಎರಡು ಭಾಷೆಗಳ ನಡುವೆ ಮಧುರ ಬಾಂಧವ್ಯ ಏರ್ಪಡುವುದೆಂದರು. ಕವಿ ದ. ರಾ. ಬೇಂದ್ರೆ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಗಮಕ ಕಲಾ ಪ್ರಶಸ್ತಿ ಪತ್ರ ವಿನಿಯೋಗ ಸಮಾರಂಭ

ಕನ್ನಡ ಸಾಹಿತ್ಯ ಕುಟೀರದ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಗಮಕ ಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರಗಳನ್ನು ದಿನಾಂಕ ೩೦-೭-೬೭ರಂದು ಸಂಸ್ಕೃತ ಕಾಲೇಜಿನ ಆವರಣದಲ್ಲಿ ಜರುಗಿದ ಸಮಾರಂಭದಲ್ಲಿ ನ್ಯಾಯಮೂರ್ತಿಗಳಾದ ಶ್ರೀ. ಹೆಚ್. ಹೊಂಬೇಗೌಡರವರ ನೇತೃತ್ವದಲ್ಲಿ ವಿನಿಯೋಗ ಮಾಡಿದರು. ಶ್ರೀ ಕಡಿದಾಳ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ. ವಿ. ಚಕ್ರವರ್ತಿ ಅವರು ಗಮಕ ಕಲೆಯ ಬಗ್ಗೆ ಭಾಷಣಮಾಡಿದರು. ಪ್ರಾರಂಭದಲ್ಲಿ ಕನ್ನಡ ಸಾಹಿತ್ಯ ಕುಟೀರದ ಕಾರ್ಯದರ್ಶಿ ಶ್ರೀ ಎಂ. ವಿ. ಸುಬ್ಬರಾಯರು ಸ್ವಾಗತ ಬಯಸಿದರು.

ಸಾಹಿತ್ಯ ಮಂಟಪದ ಸಭೆ

ರವಿವಾರ ದಿ. ೯ರ ಸಂಜೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ಸಾಹಿತ್ಯ ಮಂಟಪದ ಸಾಮಾನ್ಯ ಸಭೆ ಸೇರಿ ೧೯೬೭-೬೮ನೆಯ ವರ್ಷದ ಕಾರ್ಯನಿರ್ವಹಣೆಗಾಗಿ ಶ್ರೀಗಳಾದ ವರದರಾಜ ಹುಯಿಲಗೋಳ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರನ್ನು ಕಾರ್ಯದರ್ಶಿಗಳೆಂದು ಆರಿಸಲಾಯ್ತು. ಕಾರ್ಯದರ್ಶಿಗಳೂ ಸೇರಿರುವಂತೆ ಸರ್ವಶ್ರೀ ಬಸವರಾಜ ಕಟ್ಟೀಮನಿ, ಚೆನ್ನವೀರ ಕಣವಿ ಮತ್ತು ಮಾಧವ ಮಹಿಷಿ ಅವರನ್ನೊಳಗೊಂಡ ಕಾರ್ಯ ಸಮಿತಿಯನ್ನೂ ಆಯ್ಕೆ ಮಾಡಲಾಯಿತು. ಶ್ರೀ ಗೋಖಲೆ ಭಾಸ್ಕರರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಶ್ರೀ ಚಂದ್ರಶೇಖರ ಕಂಬಾರರು ತಮ್ಮ ಕಾವ್ಯವಾಚನದಿಂದ ಸಭೆಯನ್ನು ರಂಜಿಸಿದರು.

ಸಭೆಯು ಪ್ರಾರಂಭದಲ್ಲಿ ದಿ. ವಿರೂಪಾಕ್ಷಪ್ಪ ಬಸವನಾಳರಿಗೆ ಮೌನಗೌರವ ಸಲ್ಲಿಸಿ ಶ್ರದ್ಧಾಂಜಲಿಯರ್ಪಿಸಿತು.

ವೆಂಕಟಪ್ಪ ಸ್ಮಾರಕ ಕಲಾಗಾರ ಸ್ಥಾಪನೆ

ಹೆಸರಾಂತ ಕಲಾವಿದರಾದ ದಿವಂಗತ ಕೆ. ವೆಂಕಟಪ್ಪ ಅವರ ಕಲಾಕೃತಿಗಳ ಪ್ರದರ್ಶನಕ್ಕಾಗಿ ಬೆಂಗಳೂರು ನಗರದಲ್ಲಿ ಶೀಘ್ರವಾಗಿ ಒಂದು ಕಲಾಗಾರವನ್ನು ಸ್ಥಾಪಿಸಲು ರಾಜ್ಯ ಸರಕಾರ ನಿರ್ಧರಿಸಿದೆ. ದಿವಂಗತರ ನಿವಾಸದಲ್ಲಿ, ಕಳೆದ ತಿಂಗಳು ಏರ್ಪಟ್ಟಿದ್ದ ಕಲಾಕೃತಿಗಳ ಪ್ರದರ್ಶನವನ್ನು ಉದ್ಘಾಟಿಸಿದ ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಈ ಸಂಗತಿಯನ್ನು ಪ್ರಕಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಶಿಕ್ಷಣಮಂತ್ರಿ ಶ್ರೀ ಕೆ. ವಿ. ಶಂಕರಗೌಡರು ವಹಿಸಿದ್ದರು.

ಮಲ್ಲೇಶ್ವರದ ವೆಂಕಟಪ್ಪನವರ ನಿವಾಸದಲ್ಲಿ ಏರ್ಪಟ್ಟಿದ್ದ ಈ ಕಲಾ ಪ್ರದರ್ಶನದಲ್ಲಿ ದಿವಂಗತರ ಹಲವಾರು ಕೃತಿಗಳನ್ನೂ, ಅವರು ಉಪಯೋಗಿಸುತ್ತಿದ್ದ ವೀಣೆ ಮೊದಲಾದವುಗಳನ್ನೂ ಪ್ರದರ್ಶನಕ್ಕೆ ಇರಿಸಿದ್ದರು.

ಖ್ಯಾತ ಅಮೇರಿಕನ್ ಕವಿ ನಿಧನ

ಆಧುನಿಕ ಅಮೇರಿಕಾದ ಖ್ಯಾತಕವಿ ಕಾರ್ಲ್‌ಸ್ಯಾಂಡ್‌ಬರ್ಗ್ ಅವರು ತಮ್ಮ ಎಂಭತ್ತೊಂಬತ್ತನೇ ವಯಸ್ಸಿನಲ್ಲಿ, ನಾರ್ತ್‌ಕೆರಲೀನ ಪ್ರಾಂತ್ಯದ ಪ್ಲೇಟ್‌ರಾಕ್ ನಗರದಲ್ಲಿ ನಿಧನ ಹೊಂದಿದರು. ಶ್ರೀಯುತರು ಕಳೆದ ಮೂರು ದಶಕಗಳಿಂದ ಶ್ರೇಷ್ಠ ಕವಿಯಾಗಿ ಪ್ರಭಾವ ಬೀರಿದ್ದರು.

ಎಸ್. ಕೆ. ರಾಮಚಂದ್ರರಾಯರ ಬಹುಮುಖ ಪ್ರತಿಭೆ

ಕಳೆದ ತಿಂಗಳು ಬೆಂಗಳೂರಿನ ಇಂಡಿಯನ್ ಇನಿಸ್ಟಿಟ್ಯೂಟ್ ಆಫ್ ಕಲ್ಚರ್ ಸಂಸ್ಥೆಯ ಆಶ್ರಯದಲ್ಲಿ ಕನ್ನಡ ಸಾಹಿತಿ ಎಸ್. ಕೆ. ರಾಮಚಂದ್ರರಾಯರ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು. ಶ್ರೀಯುತರು ನುರಿತ ಶಿಕ್ಷಕರಾಗಿ, ಸಂಗೀತಕಾರಾಗಿ, ಲೇಖಕರರಾಗಿ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಈಗ ಅವರು ಚಿತ್ರಕಲೆಯಲ್ಲಿ ಸಾಧಿಸಿರುವ ಬಹುಮುಖ ಪ್ರತಿಭೆಯನ್ನು ತೋರಿಸುವಂತಹ ಒಂದುಅಪೂರ್ವ ಚಿತ್ರಕಲಾ ಪ್ರದರ್ಶನವೇರ್ಪಟ್ಟಿತ್ತು. ಈ ಪ್ರದರ್ಶನದಲ್ಲಿ ಶ್ರೀಯುತರು ಬರೆದ ಸುಮಾರು ನೂರೈವತ್ತು ತೈಲ ಹಾಗೂ ಜಲವರ್ಣದ ಚಿತ್ರಗಳೂ, ಅರಿಯಕುಡಿ, ಶಿವಬಾಲಯೋಗಿ, ವೆಂಕಟಪ್ಪನವರ ಎದೆಮಟ್ಟದ ಶಿಲ್ಪಕೃತಿಗಳೂ, ಬೇಂದ್ರೆ, ರಾಳ್ಳಪಲ್ಲಿ, ಡಿ. ವಿ. ಜಿ., ಮಾಸ್ತಿ ಮೊದಲಾದವರ ಭಾವಚಿತ್ರಗಳೂ, ಹಿರಿಯಣ್ಣ, ವೀಣೆ ಶೇಷಣ್ಣ ಮೊದಲಾದವರ ವರ್ಣ ಚಿತ್ರಗಳೂ ಪ್ರದರ್ಶಿಸಲ್ಪಟ್ಟಿದ್ದು, ನೋಟಕರ ಕುತೂಹಲವನ್ನು ಕೆರಳಿಸುವಂತೆ ಇದ್ದವು.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಕ್ರಮದ ಬಗ್ಗೆ ಸೆಮಿನಾರ್

ಬೆಂಗಳೂರಿನ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ವಿ. ಕೃ. ಗೋಕಾಕ್ ಅವರು ಕಳೆದ ತಿಂಗಳು ವಿಶ್ವ

ವಿದ್ಯಾನಿಲಯದ ಆಶ್ರಯದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷೆ, ಪಠ್ಯಕ್ರಮ, ಶಿಕ್ಷಣ ವಿಧಾನಗಳಲ್ಲಿ ಮಾರ್ಪಾಡನ್ನು ತರುವ ಉದ್ದಿಶ್ಯದಿಂದ ಒಂದು ವಿಚಾರಗೋಷ್ಠಿಯನ್ನು ಕರೆದಿದ್ದರು. ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಮಟ್ಟದ ಶಿಕ್ಷಣ ಲಾಭದಾಯಕವಾಗುವಂತೆ ಶಿಕ್ಷಣ ಕ್ರಮದಲ್ಲಿ ಪಠ್ಯಕ್ರಮವನ್ನು ಪ್ರಿ ಯೂನಿವರ್ಸಿಟಿ ಮಟ್ಟದಿಂದ ಬದಲಾಯಿಸುವ ವಿಷಯವನ್ನು ಪರಿಶೀಲಿಸುವುದೇ ಈ ಗೋಷ್ಠಿಯ ಮುಖ್ಯ ಉದ್ದಿಶ್ಯವಾಗಿತ್ತು. ಇದರಲ್ಲಿ ದೆಹಲಿಯ ಶಿಕ್ಷಣವೇತ್ತರಾದ ಪ್ರೊ. ಧವೆ ಅವರು ಪಾಲುಗೊಂಡಿದ್ದರು. ನಗರದ ಎಲ್ಲ ಕಾಲೇಜುಗಳ ಪ್ರತಿನಿಧಿಗಳು ಸುಮಾರು ಎಪ್ಪತ್ತು ಮಂದಿ ಮೂರು ದಿನಗಳ ಕಾಲ ಸಭೆಸೇರಿ ಉಪಯುಕ್ತವಾದ ರೀತಿಯಲ್ಲಿ ವಿಚಾರ ವಿನಿಮಯ ನಡೆಸಿದರು.

ಸಾಹಿತ್ಯ ಸ್ಪರ್ಧೆ

ಕನ್ನಡಿಗರ ಕೂಟ ಬಸವನಗುಡಿ, ಬೆಂಗಳೂರು-೪ ಅವರು ೧. ಸಣ್ಣ ಕಥೆ ೨. ಕವನ ೩. ನಾಟಕಗಳಲ್ಲಿ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ.

ನಿಯಮಗಳು :

೧. ಈ ಸ್ಪರ್ಧೆಯಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು.

೨. ಕೃತಿಗಳು ಸ್ವಂತದ್ದಾಗಿದ್ದು, ಕನ್ನಡದಲ್ಲಿರಬೇಕು.

೩. ಒಬ್ಬ ಸ್ಪರ್ಧಿಯು ಎಷ್ಟು ಕೃತಿಗಳನ್ನು ಬೇಕಾದರೂ ಕಳುಹಿಸಬಹುದು.

೪. ಲೇಖನಗಳ ಉದ್ದ, ಪುಟ ಸಂಖ್ಯೆ, ವಿಷಯ ಮುಂತಾದುವುಗಳ ಬಗ್ಗೆ ಯಾವ ನಿರ್ಬಂಧವೂ ಇಲ್ಲ.

೫. ಪ್ರವೇಶ ಧನ ಪ್ರತಿ ವಿಭಾಗಕ್ಕೆ ೦-೫೦ ಪೈಸೆ.

೬. ಪ್ರವೇಶಧನವನ್ನು ಕನ್ನಡಿಗರ ಕೂಟಕ್ಕೆ ಕ್ರಾಸ್ಡ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು.

೭. ಪ್ರತಿಯೊಂದು ವಿಭಾಗದಲ್ಲೂ ಎರಡು ಬಹುಮಾನಗಳನ್ನು ಮತ್ತು ಒಂದು ಪ್ರಶಸ್ತಿ ಪತ್ರವನ್ನು ಕೊಡಲಾಗುವುದು. ಬಹುಮಾನಿತರಿಗೆ ವಿಷಯವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

೮. ಎಲ್ಲಾ ವಿಚಾರಗಳಲ್ಲೂ ಕೂಟದ ತೀರ್ಮಾನವೇ ಅಂತಿಮವಾದದ್ದು ಮತ್ತು ನಿಯಮಬದ್ಧವಾದದ್ದು.

೯. ಕೃತಿಗಳನ್ನು ವಾಪಸ್ಸು ಕಳುಹಿಸಲಾಗುವುದಿಲ್ಲ.

೧೦. ಪ್ರವೇಶ ಕಳುಹಿಸಲು ಕೊನೆಯ ದಿನಾಂಕ ೧೫ನೇ ಆಗಸ್ಟ್ ೧೯೬೭.

೧೧. ಕೃತಿಗಳನ್ನು ಕಳುಹಿಸಬೇಕಾದ ವಿಳಾಸ :
ಕಾರ್ಯದರ್ಶಿ, ಕನ್ನಡಿಗರ ಕೂಟ,
೧-ಎ, ನಾಗಸಂದ್ರ ಸರ್ಕಲ್, ಬಸವನಗುಡಿ,
ಬೆಂಗಳೂರು-೪.

ಈ ಸ್ಪರ್ಧೆಯಲ್ಲಿ ತಾವು ಮತ್ತು ತಮ್ಮವರೆಲ್ಲರೂ ಭಾಗವಹಿಸಬೇಕಾಗಿ ಕಾರ್ಯದರ್ಶಿ ವಿನಂತಿಸಿಕೊಂಡಿದ್ದಾರೆ.

ಕನ್ನಡ - ಕನ್ನಡ ನಿಘಂಟಿನ ಮೂರನೆಯ ಸಂಚಿಕೆಯು ಬಿಡುಗಡೆ

ದಿನಾಂಕ ೧೬-೭-೧೯೬೭ರಂದು ಬೆಳಿಗ್ಗೆ ಹತ್ತು ಗಂಟೆಗೆ ರಾಜ್ಯದ ವಿದ್ಯಾಮಂತ್ರಿಗಳಾದ ಮಾನ್ಯ ಕೆ. ವಿ. ಶಂಕರಗೌಡ ಅವರು ನಿಘಂಟಿನ ಮೂರನೆಯ ಸಂಚಿಕೆಯನ್ನು ಬಿಡುಗಡೆ ಮಾಡಿದರು. ನಿಘಂಟಿನ ಕಾರ್ಯ ತೀವ್ರವಾಗಿ ನಡೆಯುವುದಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನು ಒದಗಿಸಿಕೊಡುವುದಾಗಿ ಭರವಸೆ ನೀಡಿದರು.

ಈ ಸಮಾರಂಭಕ್ಕೆ ನಿಘಂಟಿನ ಸಮಿತಿಯ ಎಲ್ಲ ಸದಸ್ಯರೂ ಆಗಮಿಸಿದ್ದರು.

ಉಪಾಧ್ಯಕ್ಷರಾದ ಶ್ರೀ ರಂ. ಶ್ರೀ. ಮುಗಳಿ ಅವರೂ, ಶ್ರೀ ಶಿವಮೂರ್ತಿ ಶಾಸ್ತ್ರಿ ಅವರೂ, ಪರಿಷತ್ತಿನ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯ ಅವರೂ, ಪರಿಷತ್ತು ಕೈಗೊಂಡಿರುವ ನಿಘಂಟಿನ ಕಾರ್ಯಸ್ವರೂಪವನ್ನು ಪರಿಚಯ ಮಾಡಿಕೊಟ್ಟರು.

ಪರಿಷತ್ತಿನ ಸುದ್ದಿಗಳು

ಪ್ರೊ|| ಎಸ್. ವಿ. ರಂಗಣ್ಣ ಅವರ ಸಾಹಿತ್ಯ ಸೇವೆ ಕುರಿತು ಉಪನ್ಯಾಸ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜಾಜಿ ನಗರದ ವಿದ್ಯಾವರ್ಧಕ ಸಂಘದ "ಸಪ್ತರ್ಷಿಧಾಮ"ದಲ್ಲಿ ಜುಲೈ ೯ರಂದು ಪ್ರಾಧ್ಯಾಪಕ ಎಸ್. ವಿ. ರಂಗಣ್ಣ ಅವರ ಸಾಹಿತ್ಯ ಸೇವೆಯನ್ನು ಸ್ಮರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ. ವಿ. ಸೀತಾರಾಮಯ್ಯನವರು ವಹಿಸಿದ್ದರು. ಶ್ರೀ ಎಂ. ಎಸ್. ಲಕ್ಷ್ಮಿನಾರಾಯಣ ಭಟ್ಟರು ಮತ್ತು ಶ್ರೀ ಕಿ. ರಂ. ನಾಗರಾಜ ಅವರು ಪ್ರೊ|| ರಂಗಣ್ಣನವರ ಸಾಹಿತ್ಯ ಸೇವೆಯ ಬಗ್ಗೆ ಉಪನ್ಯಾಸ ಮಾಡಿದರು.

ದಿ|| ಪಿ. ಆರ್. ಕರಿಬಸವಶಾಸ್ತ್ರಿಗಳ ಕೃತಿಗಳನ್ನು ಕುರಿತು ಉಪನ್ಯಾಸ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಜುಲೈ ೨೩ರಂದು ಭಾನುವಾರ ದಿವಂಗತ ಆಸ್ಥಾನ ವಿದ್ವಾನ್ ಕರ್ಣಾಟಕ ಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳವರ ಕೃತಿಗಳ ಬಗ್ಗೆ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರು ದಿವಂಗತ ಕರಿಬಸವಶಾಸ್ತ್ರಿಗಳ ಕೃತಿಗಳ ಪರಿಚಯ ಮಾಡಿಕೊಟ್ಟರು.

ಕಂಠಪಾಠ ಸ್ಪರ್ಧೆ

ಶ್ರೀಮತಿ ಭಾಗೀರತಮ್ಮನವರ ನಿಧಿ ಕಂಠಪಾಠ ಸ್ಪರ್ಧೆಯು ಜುಲೈ ೨೦ನೇ ತಾರೀಖು ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯಿತು. ಸ್ಪರ್ಧೆಯಲ್ಲಿ ಬೆಂಗಳೂರಿನ ಗಿರಿಜಮ್ಮ–ಮುಕುಂದದಾಸ್ ಗರ್ಲ್ಸ್ ಹೈಸ್ಕೂಲಿನ ಕುಮಾರಿ ಎಂ. ಎಸ್. ರಾಜಲಕ್ಷ್ಮಿ ಪ್ರಥಮ ಬಹುಮಾನ ಪಡೆದರು. ಶ್ರೀಗಳಾದ ಎಂ. ರಾಘವೇಂದ್ರರಾಯರು ಮತ್ತು ಟಿ. ಕೇಶವಭಟ್ಟ ಅವರು ತೀರ್ಪುಗಾರರಾಗಿ ಆಗಮಿಸಿದ್ದರು.

ಗಮಕ ವಾಚನ

ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಜುಲೈ ೧೩ರಂದು ಸಂಜೆ ಶ್ರೀಮತಿ ಜಿ. ಪಿ. ಲಕ್ಷ್ಮೀದೇವಿಯವರು ಕುಮಾರ ವ್ಯಾಸ ಭಾರತದಿಂದ ಆಯ್ದ "ಶ್ರೀ ಕೃಷ್ಣಸ್ತುತಿ" ಎಂಬ ಭಾಗವನ್ನು ವಾಚನಮಾಡಿದರು.

ದಿವಂಗತ ಶೇಷಮ್ಮ ಭಾಸ್ಕರರಾಯರ ಕನ್ನಡ ಸ್ಪರ್ಧೆ—೧೯೬೭

ದಿವಂಗತ ಶೇಷಮ್ಮ ಭಾಸ್ಕರರಾಯರ ಹೆಸರಿನಲ್ಲಿ ಒಂದು ವಿಮರ್ಶಾ ಸ್ಪರ್ಧೆಯನ್ನು ಪ್ರತಿವರ್ಷದಂತೆ ಪರಿಷತ್ತು ಈ ವರ್ಷವೂ (೧೯೬೭) ಏರ್ಪಡಿಸಿದೆ.

ಸ್ಪರ್ಧೆಯ ವಿಷಯ : **"ನವ್ಯಕತೆಗಳು"**

ಸ್ಪರ್ಧೆಯ ನಿಯಮಗಳು

೧. ಸ್ಪರ್ಧೆಗೆ ಬರುವ ವಿಮರ್ಶೆಗಳು ಸ್ವತಂತ್ರವಾಗಿದ್ದು ಈ ಸ್ಪರ್ಧೆಗಾಗಿಯೇ ಬರೆದುದಾಗಿರಬೇಕು.

೨. ಇದುವರೆಗೆ ಎಲ್ಲೂ ಅಚ್ಚಾಗಿರಬಾರದು.

೩. ಲೇಖನ ಫೂಲ್ಸ್‌ಕೇಪ್ ಆಕಾರದ ಸುಮಾರು ಇಪ್ಪತ್ತು ಪುಟಗಳಷ್ಟಿರಬೇಕು.

೪. ಕಾಗದದ ಒಂದೇ ಕಡೆಗಳಲ್ಲಿ ಸ್ಪಷ್ಟವಾಗಿ ಮಸಿಯಲ್ಲಿ ಬರೆದಿರಬೇಕು.

೫. **೧೯೬೭ರ ಆಗಸ್ಟ್ ೩೧ನೆಯ ದಿನದಂದು** ಅಥವಾ ಅದರೊಳಗಾಗಿ ತಲುಪುವಂತೆ **ಪ್ರವೇಶ ಧನ ಒಂದು ರೂಪಾಯಿಯೊಂದಿಗೆ** ಕಳುಹಿಸಬೇಕು.

೬. ತೀರ್ಪುಗಾರರು ನಿಶ್ಚಯಿಸಿದ ಪ್ರಬಂಧಗಳಿಗೆ ಮೊದಲನೆಯ ಬಹುಮಾನ ೩೦ ರೂ. ಮತ್ತು ಎರಡನೆಯ ಬಹುಮಾನ ೨೦ ರೂ. ಕೊಡಲಾಗುವುದು.

೭. ಎರಡು ಬಹುಮಾನಗಳಲ್ಲಿ ಒಂದನ್ನು ಮಹಿಳೆಯರಿಗೆ ಕೊಡಲಾಗುವುದು. ಮಹಿಳಾ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಅಥವಾ ಅವು ಬಹುಮಾನಾರ್ಹವಾಗಿಲ್ಲದಿದ್ದಲ್ಲಿ ಎರಡು ಬಹುಮಾನಗಳನ್ನೂ ಪುರುಷ ಸ್ಪರ್ಧಿಗಳಿಗೇ ಕೊಡಲಾಗುವುದು. ಪರಿಷತ್ತಿನ ತೀರ್ಮಾನವೇ ಈ ವಿಚಾರದಲ್ಲಿ ಕೊನೆಯದು.

೮. ಬಹುಮಾನ ಪಡೆದ ಪ್ರಬಂಧಗಳ ಸ್ವಾಮ್ಯ ಪರಿಷತ್ತಿಗಿರುತ್ತದೆ. ಪರಿಷತ್ತು ಪ್ರಕಟಿಸಿದ ತರುವಾಯ ಪರಿಷತ್ತಿನ ಅನುಮತಿ ಪಡೆದು ಪ್ರಬಂಧಕಾರರು ಪ್ರಕಟಿಸಬಹುದು.

೯. ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ಯೋಗ್ಯವಾಗಿಲ್ಲವೆಂದು ಕಂಡುಬಂದರೆ, ಬಹುಮಾನವನ್ನು ಹಂಚದಿರುವ ಅಧಿಕಾರವು ಪರಿಷತ್ತಿಗಿದೆ.

೧೦. ಹಿಂದಿನ ವರ್ಷಗಳಲ್ಲಿ ಈ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಮತ್ತೆ ಸ್ಪರ್ಧಿಸುವಂತಿಲ್ಲ.

ವೆಂಕಟೇಶ ಸಾಂಗಲಿ
ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿಗಳು

ಕನ್ನಡ ನಿಘಂಟಿನ ಪ್ರಗತಿ

ಈಚೆಗೆ ಸರಕಾರದ ಶಾಸನ ಸಭೆಗಳಲ್ಲಿಯೂ, ನಾಡಿನ ಪ್ರಮುಖ ವಾರ್ತಾ ಪತ್ರಿಕೆಗಳಲ್ಲಿಯೂ ಪರಿಷತ್ತು ಪ್ರಕಟಿಸುತ್ತಿರುವ ಕನ್ನಡ – ಕನ್ನಡ ನಿಘಂಟಿನ ಬಗೆಗೆ ವಾದ ವಿವಾದ ನಡೆದು ಕನ್ನಡ ಜನತೆಗೆ ಕನ್ನಡ ನಿಘಂಟಿನ ಬಗ್ಗೆ ಇರುವ ಆಸಕ್ತಿಯು ಬಹಿರಂಗವಾಗಿ ವ್ಯಕ್ತಗೊಂಡಿದೆ. ಕನ್ನಡಿಗರ ಈ ಆಸಕ್ತಿಯನ್ನು ಮೆಚ್ಚಿ ಪರಿಷತ್ತು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಕನ್ನಡ – ಕನ್ನಡ ನಿಘಂಟು ಬೇಗ ಪ್ರಕಟಗೊಳ್ಳಬೇಕೆಂದೂ ಅದನ್ನು ಉಪಯೋಗಿಸುವ ಕಾಲ ಬೇಗ ಬರಬೇಕೆಂದೂ ಅಪೇಕ್ಷಿಸುವುದು ತಪ್ಪಲ್ಲ. ಆದರೆ, ಅದು ಬೇಗ ಪ್ರಕಟವಾಗದಿರುವುದಕ್ಕೆ ಕಾರಣಗಳೇನೆಂಬುದನ್ನು ಸೂಕ್ಷ್ಮವಾಗಿ ಪರಿಶೀಲನೆಮಾಡಿ ಪ್ರಕಟಣೆಗೆ ಮಾರ್ಗವನ್ನು ಮಾಡಿ ಕೊಡುವುದು ಕಾರ್ಯವಂತರ ದಾರಿ. ಪರಿಷತ್ತು ನಿಘಂಟನ್ನು ಪ್ರಕಟಮಾಡಬೇಕೆಂಬ ಅಪೇಕ್ಷೆ ಪರಿಷತ್ತಿನಷ್ಟೇ ಹಳೆಯದು. ಇದಕ್ಕಾಗಿ ಒಂದು ಸಮಿತಿ ರೂಪುಗೊಂಡದ್ದು ಪರಿಷತ್ತು ಸ್ಥಾಪನೆಯಾದ ಮೂವತ್ತು ವರ್ಷಗಳ ಮೇಲೆ, ಸುಮಾರು ೧೯೪೪ರಲ್ಲಿ. ನಿಜವಾಗಿ ನಿಘಂಟಿನ ಕಾರ್ಯ ಆರಂಭವಾದದ್ದು ಇದಾದ ಹತ್ತು ವರ್ಷಗಳ ತರುವಾಯ, ೧೯೫೪ರಲ್ಲಿ. ಇಂದಿಗೆ ಹದಿಮೂರು ವರ್ಷಗಳಾದವು – ಕಾರ್ಯ ಮೊದಲಾಗಿ.

ನಿಘಂಟಿನ ರಚನೆ ಎಷ್ಟು ಕಷ್ಟವೆಂಬುದೂ ಅದಕ್ಕೆ ಎಷ್ಟು ಆರ್ಥಿಕ ಬಲ, ಜನಬಲ, ಗ್ರಂಥ ಸಂಚಯ, ವಸತಿ ವಿಸ್ತಾರ ಮುಂತಾದುವು ಇರಬೇಕೆಂಬುದರ ಪರಿಚಯ ನಿಘಂಟು ಕಾರ್ಯದಲ್ಲಿ ನಿಯುಕ್ತರಾಗಿದ್ದವರಿಗೆ ಕ್ರಮೇಣ ಅರಿವಾಗತೊಡಗಿತು. ಆದುದರಿಂದ ಒಂದು ಸಂಪೂರ್ಣ ಯೋಜನೆಯನ್ನು ಸಿದ್ಧಪಡಿಸಿ ಅದಕ್ಕೆ ಸರಕಾರದ ಒಪ್ಪಿಗೆಯನ್ನು ಪಡೆದು ೧೯೬೧ರಲ್ಲಿ ಸರಕಾರವೂ – ಪರಿಷತ್ತೂ ಪರಸ್ಪರ ಒಪ್ಪಂದ ಮಾಡಿಕೊಂಡಿತು. ನಿಘಂಟಿನ ರಚನೆಗೆ ಒಂದು ಸ್ವರೂಪವನ್ನು ಕೊಡಲು ಇದಾದ ಮೇಲೆಯೇ ಸಾಧ್ಯವಾದದ್ದು. ೧೯೬೬ರ ವೇಳೆಗೆ ಪೂರ್ತಿಯಾಗಿ ಪ್ರಕಟಿಸಬೇಕೆಂದು ಒಪ್ಪಂದದಲ್ಲಿ ತೀರ್ಮಾನವಾಗಿತ್ತು. ಆದರೆ ೧೯೬೪ರ ಡಿಸೆಂಬರ್ ತನಕ ಏನೂ ಪ್ರಕಟವಾಗಿರಲಿಲ್ಲ. ಈಗಿರುವ ಕಾರ್ಯ ಸಮಿತಿಯು ಅಧಿಕಾರಕ್ಕೆ ಬಂದ ಮೇಲೆ ನಿಘಂಟು ಸಂಪಾದಕ ಸಮಿತಿಯು ಶ್ರೇಷ್ಠ ವಿದ್ವಾಂಸರೆಲ್ಲರ ಸಲಹೆ – ಸಹಕಾರಗಳನ್ನು ಪಡೆದು ೧೯೬೪ರ ಡಿಸೆಂಬರ್ ೨೫ರಂದು ನಿಘಂಟಿನ ಪ್ರಥಮ ಸಂಚಿಕೆಯು ಪ್ರಕಟವಾಯಿತು. ಅಲ್ಲಿಂದ ಈಚೆಗೆ ಮತ್ತೆ ಎರಡು ಸಂಚಿಕೆಗಳು, ಪೀಠಿಕೆ ಸಂಕ್ಷಿಪ್ತ ಸೂಚಿಗಳು ಪ್ರಕಟವಾಗಿವೆ. ಒಟ್ಟು ನಾಲ್ಕುನೂರು ಪುಟಗಳಷ್ಟು ಮುದ್ರಣವಾಗಿ ಪ್ರಕಟವಾಗಿದೆ.

ನಿಘಂಟಿನ ರೂಪನಿರ್ಧಾರವು ಈಗ ನಿಸ್ಪಷ್ಟವಾಗಿರುವುದರಿಂದ ಮುಂದಿನ ಮುದ್ರಣಕಾರ್ಯ ಸುಲಭ. ಅದನ್ನು ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುದ್ರಿಸುವುದು ಪರಿಷತ್ತಿನ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟಕ್ಕೆ ಏನೂ ಕಷ್ಟವಲ್ಲ.

ಯೋಜನೆಯ ಪ್ರಾರಂಭದಲ್ಲಿ ಅಂದರೆ ೧೯೫೪ರಲ್ಲಿ ಪರಿಷತ್ತು ಪ್ರಾರ್ಥಿಸಿದ್ದಂತೆ ಜನಬಲವು ಒದಗಿದ್ದರೆ ನಿಘಂಟಿನ ಕಾರ್ಯ ಇಷ್ಟು ತಡವಾಗುತ್ತಿರಲಿಲ್ಲ. ನಿಘಂಟಿನ ಕೆಲಸಮಾಡುವ ಯುವಕ ವಿದ್ವಾಂಸರಿಗೆ ಈ ಕೆಲಸವು ಖಾಯಂ ಅಲ್ಲದಿರುವುದರಿಂದ ಇಲ್ಲಿಯೇ ನಿಂತು ಕೆಲಸ ಮಾಡಲು ಕಷ್ಟವಾಗಿದೆ. ಖಾಯಂ ಕೆಲಸ ಸಿಕ್ಕಿದೊಡನೆಯೇ ಅವರೆಲ್ಲರೂ ಹೊರಟುಹೋಗುತ್ತಾರೆ. ಹೀಗಾಗಿ ನಿಘಂಟಿನ ಕೆಲಸಕ್ಕಾಗಿಯೇ ತರಪೇತುಗೊಂಡ ಅನೇಕ ಯುವಕ ಪದವೀಧರರು ಬೇರೆಯ ಕೆಲಸವನ್ನು ಹುಡುಕಿಕೊಂಡು ಹೊರಟುಹೋಗಿದ್ದಾರೆ. ಹೊಸಬರನ್ನು ಮತ್ತೆ ನೇಮಿಸಿಕೊಂಡಾಗ ಅವರಿಗೆ ತರಪೇತು ಕೊಡುವುದಕ್ಕೆ ಕಾಲವ್ಯರ್ಥವಾಗುತ್ತದೆ. ಹೀಗೆ ಪುನಃ ನೇಮಕಗೊಂಡವರೂ ಕೂಡ ಖಾಯಂ ಕೆಲಸಕ್ಕಾಗಿ ಕಾತರರಾಗಿರುತ್ತಾರೆ. ಈ ವಿಷವರ್ತುಲದಲ್ಲಿ ಸಿಕ್ಕಿ ನಿಘಂಟು ಕಾರ್ಯ ತ್ವರಿತಗೊಳ್ಳುವುದು ದುಸ್ಸಾಧ್ಯವಾಗಿದೆ.

ಕೇರಳದ ಮಲೆಯಾಳೀ ನಿಘಂಟು ತಯಾರಾಗುವುದಕ್ಕೆ ನಲವತ್ತು ಜನ ಖಾಯಂ ಸಹಾಯಕ ಸಂಪಾದಕರು ನೇಮಕಗೊಂಡಿದ್ದರು. ನಿಘಂಟಿನ ಕಾರ್ಯ ಮುಗಿದ ಮೇಲೆ ಜೀವನಕ್ಕಾಗಿ ಬೇರೆ ವೃತ್ತಿಯನ್ನು ಹುಡುಕುವ ತೊಂದರೆ ಅವರಿಗಿರಲಿಲ್ಲ. ನಮ್ಮಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವವರು ಒಬ್ಬರೇ; ಅಲ್ಲದೆ ನಮ್ಮ ಸಿಬ್ಬಂದಿಯ ಸಂಖ್ಯೆ ನಾಲ್ಕು. ಈ ಐದು ಜನ ಎಷ್ಟು ಕೆಲಸಮಾಡಲು ಸಾಧ್ಯ?

ಅಲ್ಲದೆ, ಕನ್ನಡದ ನಿಘಂಟು ಮಲೆಯಾಳೀ, ತೆಲುಗು, ತಮಿಳು ನಿಘಂಟುಗಳಿಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದು. ಇದು ಕಾಲಾನುಕ್ರಮವಾದ ಆಧಾರ ಸಹಿತವಾದ ಶಾಸನಗಳ ಸಂಶೋಧನೆಗಳಿಂದ ಒಡಗೂಡಿದ ಮತ್ತು ೧೮೦೦ಕ್ಕೆ ಮುಂಚೆ ಮುದ್ರಣಗೊಂಡ ಮತ್ತು ಮುದ್ರಿತವಾಗದಿರುವ ಎಲ್ಲ ಗ್ರಂಥಗಳ ಎಲ್ಲ ಪದಗಳನ್ನೂ ಸೇರಿಸಿ ಅರ್ಥನಿರ್ಧಾರಮಾಡಿರುವ ನಿಘಂಟು. ಇದು ಕಿಟ್ಟೆಲ್ಲರ ನಿಘಂಟಿಗಿಂತ ಬಹು ಮುಂದೆ ಹೋಗಿದೆ; ಎಷ್ಟೋ ಹೊಸ ವಿಷಯಗಳನ್ನು ಆಧಾರಭೂತವಾಗಿ ಕಾಣಿಸಿವೆ. ಈ ನಿಘಂಟನ್ನು ಇತರ ಭಾಷೆಗಳ ನಿಘಂಟುಗಳಿಗೆ ಹೋಲಿಸುವುದು ಸರಿಯಾಗುವುದಿಲ್ಲ. ಈ ದೃಷ್ಟಿಯಿಂದ ಸರಿಯಾದ ತುಲನಾತ್ಮಕ ವಿವೇಚನೆಮಾಡಿದರೆ ನಮ್ಮ ನಿಘಂಟಿನ ಸತ್ವ ಮತ್ತು ಹಿರಿಮೆ ಗೊತ್ತಾಗುತ್ತದೆ. ಮುಂದೆ ನಡೆಯಬಹುದಾದ ಎಲ್ಲ ಸಂಶೋಧನೆಗಳಿಗೂ ಆಧಾರವನ್ನೊದಗಿಸುವ ಈ ನಿಘಂಟಿಗೆ ಆತುರದ ನಡೆಯನ್ನು ನಿರೀಕ್ಷಿಸಬಾರದು. ಆದರೆ ಅಕ್ಷಮ್ಯವಾದ ವಿಳಂಬಮಾಡುವುದು ಅಪರಾಧವೆನಿಸುತ್ತದೆ.

ಇತ್ತೀಚಿಗೆ ಪರಿಷತ್ತಿನ ಅಧಿಕಾರಿಗಳೂ ನಿಘಂಟು ಸಮಿತಿಯ ಸದಸ್ಯರುಗಳೂ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀ ಶಂಕರಗೌಡರನ್ನು ಬರಮಾಡಿಕೊಂಡು ನಿಘಂಟಿನ ಪ್ರಕಟಣೆಗೆ ಇರುವ ಅಡ್ಡಿ-ತಡೆಗಳನ್ನು ವಿವರಿಸಿದರು. ವಿದ್ಯಾಪಕ್ಷಪಾತಿಗಳೂ, ಸಹೃದಯರೂ, ಸಾಹಿತ್ಯಾಭಿಮಾನಿಗಳೂ ಆದ ಶ್ರೀ ಶಂಕರಗೌಡರು ಈ ಎಲ್ಲ ತೊಂದರೆಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಅಗತ್ಯವಾದ ಅನುಕೂಲಗಳನ್ನು ಬೇಗ ಒದಗಿಸಿಕೊಡುವ ಭರವಸೆಯನ್ನು ಕೊಟ್ಟಿದ್ದಾರೆ.

ಮಾನ್ಯ ಸಚಿವರ ಭರವಸೆಗಳು ಬೇಗ ಕೈಗೂಡಿ ನಿಘಂಟು ಬೇಗ ಪ್ರಕಟವಾಗಲೆಂದು, ನಿರಾಧಾರವಾದ ಟೀಕೆಗಳಿಗೆ ಅವಕಾಶವಾಗದಿರಲೆಂದೂ "ಕನ್ನಡ ನುಡಿ"ಯು ಅಪೇಕ್ಷಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು

					ರೂ. ಪೈ
೧.	ಕನ್ನಡದ ಬಾವುಟ (ಐದನೆಯ ಮುದ್ರಣ ೧೯೫೮)	....		....	೨=೦೦
೨.	ಜೇಮ್ಸ್ ಏಬ್ರಹಾಮ್ ಗಾರ್‌ಫೀಲ್ಡನ ಚರಿತ್ರೆ : ಕ್ಯಾಲಿಕೋ ಪ್ರತಿ (೧೯೩೦)			....	೧=೫೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ (೧೯೩೮)			....	೧=೦೦
೩.	ಜ್ಯೋತಿರ್ವಿನೋದಿನಿ (೧೯೩೧)	....	....	....	೨=೦೦
೪.	ಕನ್ನಡ ನಾಡಿನ ಚರಿತ್ರೆ: ಭಾಗ ೧	....	....	....	
	,, ಭಾಗ ೨ (ಎರಡನೆಯ ಮುದ್ರಣ ಅಚ್ಚಿನಲ್ಲಿದೆ)			....	೨=೦೦
	,, ಭಾಗ ೩ (,, ೧೯೫೯)	....		....	೧=೨೫
೫.	ಸಂಕಲನ (೧೯೪೯)	....	....	....	೦=೬೩
೬.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ ೧೯೫೨)		....	....	೨=೦೦
೭.	ಹರಿದಾಸ ಸಾಹಿತ್ಯ-ಇಂಗ್ಲಿಷ್ ಉಪೋದ್ಘಾತದೊಡನೆ (೧೯೫೨)		....	....	೧೦=೦೦
೮.	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ (೧೯೫೨)			....	೮=೦೦
೯.	ಗಾಳಿಯಲ್ಲಿನ ಅಗೋಚರ ಶತ್ರುಗಳು (೧೯೫೪)	....	....	....	೧=೨೫
೧೦.	ನಕ್ಷತ್ರದರ್ಶನ (೧೯೫೪)	....	....	....	೧=೫೦
೧೧.	ಹರಿದಾಸ ಕೃತಿಮಂಜರಿ (೧೯೫೫)	....	....	....	೧=೨೫
೧೨.	ಪ್ಲೇಟೋವಿನ ಆದರ್ಶರಾಜ್ಯ (೧೯೫೬)	....	....	....	೧=೩೮
೧೩.	ಚೇರಮ ಕಾವ್ಯಂ (೧೯೫೬)	....	....	....	೨=೦೦
೧೪.	ಅನುಭವ ಮುಕುರಂ (೧೯೫೬)	....	....	....	೦=೩೮
೧೫.	ಆಧುನಿಕ ಗದ್ಯ ಸಾಹಿತ್ಯ (ಎರಡನೆಯ ಮುದ್ರಣ ೧೯೬೧)		....	....	೨=೫೦
೧೬.	ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ ೧೯೫೮)			....	೪=೦೦
೧೭.	ಕಾದಂಬರಿ-ಸಾಮಾನ್ಯ ಮನುಷ್ಯ (೧೯೫೭)	....	....	....	೧=೦೦
೧೮.	ಉದ್ಭಟದೇವ ಚರಿತೆ (೧೯೫೭)	....	....	....	೧=೫೦
೧೯.	ತ್ರಿಪುರದಹನ ಸಾಂಗತ್ಯ (೧೯೫೯)	....	....	....	೦=೭೫
೨೦.	**ಕರ್ಣಾಟಕ ಕವಿಚರಿತೆ (೧ನೆ ಭಾಗ)**	**....**	**....**	**....**	**೧೨=೦೦**
	,, ,, ಲೈಬ್ರರಿ ಪ್ರತಿಗಳು			**....**	**೧೫=೦೦**
೨೧.	ಕಾವ್ಯಗಾಯನ ಕಲಾ ಸಂಗ್ರಹ	....	....	....	೧=೨೫

ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆ ವಿನಾ ಮಿಕ್ಕೆಲ್ಲ ಪುಸ್ತಕಗಳಿಗೆ ಶೇ. 25ರಂತೆ ರಿಯಾಯಿತಿ (ಕಮಿಾಷನ್) ಕೊಡಲಾಗುವುದು.

Reg. No. B. G. 4—August 1967

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೯

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಸೆಪ್ಟೆಂಬರ್ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ,

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ-ಕನ್ನಡ ನಿಘಂಟು

ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ "ಕನ್ನಡ ನಿಘಂಟು" ಡೆಮ್ಮಿ ಚತುಷ್ಪತ್ರ ಆಕಾರದ ಸುಮಾರು ೫,೦೦೦ ಪುಟಗಳನ್ನು ಒಳಗೊಂಡು, ಒಂದೊಂದು ಸಂಪುಟದಲ್ಲೂ ಸುಮಾರು ೧೨೫೦ ಪುಟಗಳಿರುವ ನಾಲ್ಕು ಸಂಪುಟಗಳಲ್ಲಿ (Volumes) ಪ್ರಕಟವಾಗುವಂತೆ ಏರ್ಪಡಿಸಿದ್ದು ಮೊದಲ ಸಂಪುಟದ ಮೂರನೆಯ ಸಂಚಿಕೆ ಈಗಾಗಲೇ ಪ್ರಕಟವಾಗಿದೆ.

ನಿಘಂಟಿನ ಒಟ್ಟು ಬೆಲೆ ೧೨೦ ರೂಪಾಯಿಗಳು; ಮುಂಗಡವಾಗಿ ಹಣ ಸಲ್ಲಿಸುವ ಗ್ರಾಹಕರಿಗೆ ೧೦೦ ರೂಪಾಯಿಗಳ ರಿಯಾಯಿತಿ ದರದಲ್ಲಿ ಅದನ್ನು ಒದಗಿಸಲಾಗುತ್ತದೆ. ನಿಘಂಟು ಸಿದ್ಧವಾದಂತೆಲ್ಲ ೯೬ ಪುಟಗಳುಳ್ಳ ಸಂಚಿಕೆಗಳ (Fascicules) ರೂಪದಲ್ಲಿ ಅದನ್ನು ಮುಂಗಡವಾಗಿ ೧೦೦ ರೂಪಾಯಿಗಳ ರಿಯಾಯಿತಿಯ ಬೆಲೆಯನ್ನು ಸಲ್ಲಿಸಿರುವ ಗ್ರಾಹಕರಿಗೆ ತಲುಪಿಸಲಾಗುವುದು. ಮುಂಗಡ ಹಣ ನೂರು ರೂಪಾಯಿಗಳನ್ನು ಹತ್ತು ರೂ.ಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಪಾವತಿ ಮಾಡಬಹುದು. ಆದರೆ ಪೂರ್ತ ಹಣ ಸಂದಾಯವಾಗುವವರೆಗೆ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ.

ನಿಘಂಟಿನ ಎರಡನೆಯ ಸಂಪುಟವು ಪ್ರಕಟವಾದ ಕೂಡಲೆ ರಿಯಾಯಿತಿಯ ದರದಲ್ಲಿ ಅದನ್ನು ವಿಕ್ರಯಿಸುವುದನ್ನು ನಿಲ್ಲಿಸಲಾಗುತ್ತದೆ; ಆ ಮುಂದೆ ಪೂರ್ಣವಾದ ಬೆಲೆಯನ್ನು ಕೊಡಬೇಕಾಗುತ್ತದೆ.

ನಿಘಂಟಿನ ಒಂದು ಸಂಪುಟವು ಸಿದ್ಧವಾದ ಬಳಿಕ ಅದರ ರಕ್ಷಾಕವಚವನ್ನು (Binding Case) ಮುಂಗಡವಾಗಿ ಬೆಲೆ ಸಲ್ಲಿಸಿರುವ ಗ್ರಾಹಕರಿಗೆ ಉಚಿತವಾಗಿ ಒದಗಿಸಲಾಗುವುದು.

ಸಂಚಿಕೆಗಳನ್ನೂ ರಕ್ಷಾಕವಚಗಳನ್ನೂ ಕಳಿಸಲು ಅಂಚೆವೆಚ್ಚವನ್ನು ಗ್ರಾಹಕರೇ ಸಲ್ಲಿಸತಕ್ಕದ್ದು.

ಗ್ರಾಹಕರು ಮುಂಗಡ ಬೆಲೆಯ ಜೊತೆಗೆ ಹತ್ತು ರೂಪಾಯಿಗಳನ್ನು ಅಂಚೆವೆಚ್ಚ, ರವಾನೆ ವೆಚ್ಚಗಳಿಗಾಗಿ ಸಲ್ಲಿಸಬೇಕು. ಸಂಚಿಕೆಗಳನ್ನು "ರಿಜಿಸ್ಟರ್ಡ್ ಪೋಸ್ಟ್" ಮೂಲಕ ಕಳಿಸಬೇಕೆಂದು ಗ್ರಾಹಕರು ಅಪೇಕ್ಷಿಸಿದಲ್ಲಿ ಆ ವಿಷಯವನ್ನು ಅವರು ಲಿಖಿತರೂಪದಲ್ಲಿ ಮೊದಲೇ ತಿಳಿಸಬೇಕು. ಹಾಗೆ ಮಾಡದಿದ್ದರೆ ಸಂಚಿಕೆಗಳನ್ನು "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಸಮೇತವಾಗಿ ಸಾದಾ ಟಪಾಲಿನ ಮೂಲಕ ಕಳಿಸಲಾಗುವುದು. ಸಂಚಿಕೆಗಳನ್ನು ಪರಿಷತ್ತಿನ ಕಚೇರಿಯಲ್ಲೇ ತೆಗೆದುಕೊಳ್ಳಲು ಅಪೇಕ್ಷಿಸುವವರು ಮುಂಚಿತವಾಗಿ ತಿಳಿಸಿ ಆ ರೀತಿ ಮಾಡಬಹುದು; ಅಂಥವರು ಅಂಚೆವೆಚ್ಚವನ್ನು ಕೊಡಬೇಕಾಗುವುದಿಲ್ಲ.

ನಿಘಂಟಿನ ಬಿಡಿಸಂಚಿಕೆಗಳನ್ನು ಪ್ರತಿ ಒಂದಕ್ಕೆ ನಾಲ್ಕು ರೂಪಾಯಿಗಳಂತೆ ಪಡೆಯಬಹುದು.

ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

ಈ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ವ್ಯವಹಾರ ಮಾಡಬಹುದು.

ಶ್ರೀಮತಿ ಲಕ್ಷ್ಮೀ ಜಿ. ವೆಂಕಟಸುಬ್ಬಯ್ಯ ದತ್ತಿನಿಧಿ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ|| ಜಿ. ವೆಂಕಟ ಸುಬ್ಬಯ್ಯನವರ ಪುಸ್ತಕ 'ಕರ್ಣಕರ್ಣಾಮೃತ' ೧೯೬೭-೬೮ ನೆಯ ವರ್ಷಕ್ಕೆ ಪಿ.ಯು.ಸಿ. ತರಗತಿಗೆ ಪಠ್ಯಪುಸ್ತಕವಾಗಿದೆ.

ಈ ಪುಸ್ತಕದಿಂದ ಈ ವರ್ಷ ಬರುವ ಎಲ್ಲ ಆದಾಯವನ್ನು ಪ್ರೊ|| ಜಿ. ವೆಂಕಟಸುಬ್ಬಯ್ಯನವರು "ಶ್ರೀಮತಿ ಲಕ್ಷ್ಮೀ ಜಿ. ವೆಂಕಟಸುಬ್ಬಯ್ಯ ದತ್ತಿನಿಧಿ" ಎಂಬ ಹೆಸರಿನಿಂದ ಪರಿಷತ್ತಿಗೆ ಸಮರ್ಪಿಸಿದ್ದಾರೆ.

೮೦೦೦ ರೂಪಾಯಿಗಳ ಮೊತ್ತದ ಈ ನಿಧಿಯಿಂದ ಬರುವ ಬಡ್ಡಿಯನ್ನು ನಿರ್ದಿಷ್ಟವಾದ ಸಾಹಿತ್ಯಕಾರ್ಯಕ್ಕೆ ಉಪಯೋಗಿಸ ಲಾಗುತ್ತದೆ.

ಪರಿಷತ್ತಿಗೆ ಇಲ್ಲಿಯವರೆಗೆ ಬಂದಿರುವ ದತ್ತಿನಿಧಿಗಳಲ್ಲಿ ಇದೇ ಅತ್ಯಂತ ಹೆಚ್ಚಿನ ಪ್ರಮಾಣದ್ದು.

ಇದನ್ನು ಉದಾರವಾಗಿ ದಾನಮಾಡಿದ ಅಧ್ಯಕ್ಷರಾದ ಪ್ರೊ|| ಜಿ. ವೆಂಕಟಸುಬ್ಬಯ್ಯನವರಿಗೆ ಪರಿಷತ್ತು ತುಂಬ ಕೃತಜ್ಞವಾಗಿದೆ.

ಎನ್. ವರದರಾಜನ್
ಗೌರವ ಕೋಶಾಧಿಕಾರಿಗಳು

ವೆಂಕಟೇಶ ಸಾಂಗಲಿ
ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿಗಳು

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜಿಟಿಯರ್ ಆಗಬೇಕು

—ಬಿ.ಎಂ.ಶ್ರೀ

ಸೆಪ್ಟೆಂಬರ್ ೧೯೬೭

ಸಂಪುಟ : ೩೦

ಸಂಚಿಕೆ : ೯

ಈ ಸಂಚಿಕೆಯಲ್ಲಿ . . .

ನಮ್ಮ ಊರಿನ ಕವಿಗಳು

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ನಮ್ಮ ಊರಿನ ಕವಿಗಳು
ಶಾರದೆಯ ಹಿರಿಯಣುಗರು
ಹುಟ್ಟುವಾಗಲೆ ಕಾವ್ಯಪ್ರತಿಭೆಯ
ಕಟ್ಟಿತಂದಾ ಧೀರರು
ಈ ಯುಗದ ಸತ್ವವನೆ ಹೀರಿ
ಬೆಳೆದ ಕಾರಣ ಪುರುಷರು
ಒಟ್ಟಿಗೊಂದೇ ಸಲಕೆ ನಾಡಿಗೆ
ಮುಕ್ತಿಕೊಡುವ ಸಮರ್ಥರು.
ಯಾರು ಒಪ್ಪಲಿ, ಒಪ್ಪದಿರಲಿ
(ಒಪ್ಪದಿರೆ ಧಿಕ್ಕಾರವಿರಲಿ)
ನಮ್ಮ ಊರಿನ ಕವಿಗಳು
ಅನಭಿಷಿಕ್ತ ಪ್ರಭುಗಳು.

ಸುತ್ತಲೂ ಪತ್ರಿಕೆಗಳು
ಮೈಕು ಮೈಕ್ರಾಫೋನ್‌ಗಳು
ಕಿಕ್ಕಿರಿದ ಜನಸಂದಣಿ
ಮಧ್ಯೆ ನಮ್ಮಿಮ್ಮಾ ಕವಿಗಳು
ತೇಗಿದರು ಕೆಮ್ಮಿದರು ಬೆಚ್ಚಗೆ
ಮಲಗಿ ಗೊರಕೆಯ ಎಳೆದರೂ
ಲೋಕಕೆಲ್ಲಾ ಪ್ರಕಟವಾಗುತ
ಕಿವಿ ತಮಟೆಗಳ ಹರಿವರು
ಕೂತದ್ದು ಎದ್ದದ್ದು ಏಳುತ ಜಾರಿ
ಗುಂಡಿಗೆ ಬಿದ್ದುದು
ಒಂದು ಬಿಡದೆಲೆ ಬರೆವರು
ಈ ನಮ್ಮ ಊರಿನ ಕವಿಗಳು
ಯಾವ ಎಲೆಯಲಿ ಯಾವ ಮದ್ದೊ
ಯಾವ ನೋವಿಗೆ ಎಲ್ಲಿ ಗುದ್ದೊ

ನಾವು ಬಲ್ಲೆವೆ ಅಜ್ಞರು
ಲೋಕಹಿತದಾ ಸೂಕ್ಷ್ಮವೆಲ್ಲವ
ತಿಳಿದವರು ಆ ಪ್ರಾಜ್ಞರು.

ಅಸಹಾಯ ಸುಸಮರ್ಥರು
ನಮ್ಮ ಊರಿನ ಕವಿಗಳು
ಬುದ್ಧಿಗಿದ್ಧಿಯ ನೆಚ್ಚದೆ
ಅನುಭವದ ಬಾಗಿಲ ಬಿಚ್ಚದೆ
ಸ್ಫೂರ್ತಿಯೊಂದಕೆ ಕಚ್ಚಿಕೊಳುವರು
ಯಾವ ಟೀಕೆಗು ಬೆಚ್ಚದೆ
ಮುಚ್ಚುಮರೆ ಇಲ್ಲದೆಲೆ ಲೋಕದ
ಬಿಚ್ಚುವೈಯನೆ ಬರೆವರು
ತಕ್ಕ ಸ್ಫೂರ್ತಿಯ ಸಾಲು ಸಿಗರೇಟುಗಳ
ಹೊಗೆಯಲಿ ಬೆಳೆವರು
(ಕಾಫಿ ಕಪ್ಪಲಿ ತೊಳೆವರು)
ಓದಲೂ ಬಿಡುವಿಲ್ಲದೆ
ಕಾಗದದ ಎದೆ ಕೊರೆವರು
ಲೋಕ ಜೀವನದೆಲ್ಲ ಹೊಲಸನು
ನಾಲಿಗೆಯಲೇ ತೆಗೆವರು.

ನಮ್ಮ ಊರಿನ ಕವಿಗಳು
ಸಣ್ಣತನವನು ಸಹಿಸರು
ನಿನ್ನದಿದು ಇದು ನನ್ನದೆನ್ನುವ
ಭೇದ ಕಂಡರೆ ಸಿಡಿವರು
ಯಾರದಾದರೆ ಏನು? ಕೊಂಡರೆ,
ಪ್ರೀತಿಯಿಂದಲಿ ನಮ್ಮದೆಂದರೆ
ನಮ್ಮ ಹೆಸರನೆ ಅದಕೆ ಕೊಟ್ಟರೆ
ನಮ್ಮದಾಗದೆ ಎನುವರು
ಹೋದವಗೆ ಶಾಂತಿಯನು ಕೋರಲು
ಇರುವವರ ಬಡಿದೆಬ್ಬಿ ನಿಲಿಸಲು
ಬರುವವಗೆ ಆಹ್ವಾನ ನೀಡಲು
ದುಡಿಯುತಿದೆ ಕವಿಲೇಖನಿ
ಇದ್ದಕಿದ್ದೊಲು ಪ್ರತಿಭೆ ಜಾಡಿಸಿ
ಒದ್ದು ಒಳಗಿಂದೇಳಲು .
ಹರಿಯುತಿದೆ ರಸವಾಹಿನಿ.

ನಮ್ಮ ಊರಿನ ಕವಿಗಳೆ
ವಾಲ್ಮೀಕಿಗಳ ಮರಿಗಳೆ
ಹಕ್ಕಿಯೊಂದರ ಸಾವು ಕಂಡೇ
ಮರುಗಿದರು ಕವಿಋಷಿಗಳು
ನೀವೊ ಧೀರರು ಮರುಕ ಗಿರುಕಕೆ
ಎಡೆಕೊಡದ ದೂರ್ವಾಸರು
ಕವನ ಬರೆವುದ ಬಿಡರಿ ಜನಗಳ
ಜೀವ ಕಂಗಾಲಾದರೂ
ಯಾವ ಪತ್ರಿಕೆ ತೆಗೆದರೂ
ಯಾವ ಸಭೆಗೇ ಹೋದರೂ
ಈ ಊರ ಆಕಾಶವಾಣಿಗೆ
ತಲೆತಪ್ಪಿ ಕಿವಿಗೊಟ್ಟರೂ
ಗುಡುಗುಡಿಸಿ ಧಡಧಡಿಸಿ ಸುರಿವುದು
ನಿಮ್ಮ ಕಾವ್ಯಸ್ರೋತವು
ಬಿದ್ದವಾಡನು ಛಿದ್ರಮಾಡುವ
ಹಟತೊಟ್ಟ ಜಲಪಾತವು.

ನಮ್ಮ ಊರಿನ ಕವಿಗಳೆ
ಜನದ ಪರ ನಾ ಬೇಡುವೆ
ಕ್ಷಮಿಸಿ ಈ ಬಡಪಾಯಿ ಜನಗಳು
ಮಾಡಿದಂಥಾ ತಪ್ಪಿಗೆ
ಹತ್ತು ಹೂವಲಿ ಕೊಳುವ ದುಂಬಿಯ
(ಕವಿಜನದ ಪರಮಾಪ್ತ ಬಂಧುವ)
ನೋಡಿ ಕಲಿಯಿರಿ, ಬೆಳೆಯಿರಿ
ಮುಖ್ಯ ಅಂತಃಕರಣ ಇದ್ದರೆ
ಲೋಕ ನಮ್ಮದು ಎನುವರು.

ನಮ್ಮ ಊರಿನ ಕವಿಗಳು
ವಚೋಸಿದ್ಧರು ಋಷಿಗಳು
ಆಡಿ ಕೂರುವ ಅಧಮರಲ್ಲ
ಮಾಡಿ ತೋರುವ ಕಲಿಗಳು
ಲೋಕದೆಲ್ಲಾ ಕಡೆಯು ಕವಿಗಳ
ಕಂಡುತಿಳಿಯದ ತಮ್ಮ ಅನುಜರ
ಬರೆಹವನು ಮನ್ನಿಸುವರು
ಅವರ ಮಾತಿನ ಚಿತ್ರಪಟಕೆ
ತಮ್ಮ ಹೆಸರಿನ ಕಟ್ಟನೊದಗಿಸಿ
ತಮ್ಮದೆಂದೇ ಕರೆವರು
ಇಂಥ ಗೌರವ ಸಲ್ಲಿಸಿದರೂ
ಅದನು ಯಾರಿಗು ತಿಳಿಸರು
ಸ್ವಪ್ರಚಾರದ ಹೊಲಸು ಬುದ್ಧಿಗೆ
ದೂರದಲೆ ಕೈಮುಗಿವರು.

ನಮ್ಮ ಊರಿನ ಕವಿಗಳು
ಬಿಡುವೆ ಇಲ್ಲದೆ ದುಡಿವರು

ನೂರು ಹರಿದಿನ, ಹರಿದಾಸದಿನ
ಹಬ್ಬಹುಣ್ಣಿಮೆ ಅಲ್ಲದೆ
ಬುದ್ಧವೀರ ಜಯಂತಿ ಅಣ್ಣನ
ಪುಣ್ಯನಾಮ ಸ್ಮರಣೆಗೆ
ಪಾಂಚವಾರ್ಷಿಕ ರಾಷ್ಟ್ರಯೋಜನೆ
ವೀರಯೋಧರ ನೆನಪಿಗೆ
ದಿನಕ್ಕೆ ನಾಲ್ಕೇ ಕವನ ಬರೆದರು
ಕಡಮೆ ಕಾರಣ ಸಂಖ್ಯೆಗೆ
ನಿಮ್ಮ ನಾಲಿಗೆ ಖಡ್ಗಕೆ
ಅರಿವಿದಳನ ಕೃಪಾಣಕೆ
ತಮ್ಮ ಕರ್ಣ ಗುರಾಣಿಯೊಡ್ಡಿದ
ತಲೆಯಿರದ ಕಡು ಧಾರ್ಷ್ಟ್ಯಕೆ
ನಮೋ ಎಂದೆವು ತ್ರಾಹಿ ಎಂದೆವು
ಬಿಟ್ಟುಬಿಡಿ ನಮ್ಮಷ್ಟಕೆ
ತಪ್ಪ ಮಾಡಿದರೇನು
ಕವಿಗಳ ಹೃದಯ ಕರಗದೆ ಕಷ್ಟಕೆ ?

ವಿ. ಸೀ. — ಒಂದು ಕವಿಕೃತಿ ದರ್ಶನ

'ಸುಮನಾ'

ಪಡುಗಡಲಿಗೆ ಹೊಂದಿಕೊಂಡಂತೆಯೇ ಇರುವ ಊರು ಹೊನ್ನಾವರ. ಮಲೆನಾಡಿಗೆ ಸೇರುವುದರಿಂದ ಸುತ್ತ ಮುತ್ತೆಲ್ಲ ಗುಡ್ಡಗಳಿಗೇನೂ ಬರಗಾಲವಿಲ್ಲ; ಊರು ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿದೆ; ಮಳೆ ಹೆಚ್ಚೆಂದು ಹೇಳಬೇಕಾಗಿಯೇ ಇಲ್ಲ; ಮಲೆನಾಡಿನ ಎಲ್ಲ ಪ್ರದೇಶಗಳಲ್ಲೆಂತೊ ಅಂತೆಯೇ ಇಲ್ಲಿಯೂ ನಿಮಿಷ ಬಿಡುವಿಲ್ಲದಂತೆ ಮಳೆಗಾಲದಲ್ಲಿ ಮುಸಲಧಾರೆ ಸುರಿಯುತ್ತಿರುತ್ತದೆ. ಇಲ್ಲಿನ ಅಸಹ್ಯ ಸೆಖೆಗೆ ಬೇಸತ್ತು ಬಹುದೂರ ಹೊರಡಬೇಕೆನ್ನಿಸಿದರೂ ಅಲ್ಲಿನ ರಮ್ಯ ಪ್ರಕೃತಿಸೌಂದರ್ಯವನ್ನು ಅರೆಗಳಿಗೆ ಸವಿದರೂ, ಅಲ್ಲಿಂದ ಕದಲಲು ಕಾಲೇ ಬಾರದಾಗುತ್ತದೆ. ಅಷ್ಟು ನಿಸರ್ಗದ ಚೆಲುವು ಅಲ್ಲಿನದು.

ಉತ್ತರ ಕನ್ನಡ ಜಿಲ್ಲೆಗೆ ಬಹುಶಃ ಅದೇ ದೊಡ್ಡ ಊರು ಎನ್ನಬೇಕು. ಹಿಂದೆ (ಈಗಲೂ) ಬಂದರಾಗಿ ಹಡಗುಗಳ ನಿಲುದಾಣವಾಗಿದ್ದುದರಿಂದ ವಾಣಿಜ್ಯ-ವ್ಯಾಪಾರ-ಅಭಿವೃದ್ಧಿಯುತವಾಗಿಯೇ ಇದೆ. ಈಚೆಗೆ ಒಂದು ಕಾಲೇಜು ಸಹ ಪ್ರಾರಂಭವಾಗಿದೆ. ಸಾಧಾರಣ ಗುಡ್ಡವೊಂದರ ಮೇಲೆ ಕಾಲೇಜಿನ ಕಟ್ಟಡವಿದೆ. ಎದುರಿಗೆ ನೇರ ಎರಡು-ಮೂರು ಫರ್ಲಾಂಗ್‌ಗಳ ದೂರದಲ್ಲಿ ಒಂದು ವಿಶಾಲವಾದ ಸಮುದ್ರದ ಅಂಚು ಎದ್ದುಕಾಣುತ್ತದೆ. ಎಡಪಕ್ಕಕ್ಕೆ ಗುಂಡಬಾಳೆ ಉಪನದಿಯೊಂದಿಗೆ ಕೂಡಿ ಹರಿಯುವ ಶರಾವತಿ; ಅದು ಸಮುದ್ರವನ್ನು ಸೇರುವುದೂ ಇಲ್ಲಿಯೇ; ದಡದಲ್ಲಿ ಮುಗಿಲೆತ್ತರಕ್ಕೆ ಸೊಂಪಾಗಿ, ಒತ್ತಾಗಿ ಬೆಳೆದು ನಿಂತ ತೆಂಗುಗಳು ಗಾಳಿಗೆ ಬಾಗಿ ಬಳುಕಿ ಸ್ವಾಗತಿಸುತ್ತವೆ. ಹಿಂದಕ್ಕೆ ಕಣ್ಣುನೋಟ ಹರಿಯುವವರೆಗೆ ಸಹಸ್ರಾರು ವರ್ಷಗಳಿಂದ ಅಚಲವಾಗಿ ನಿಂತಿರುವ ಸಹ್ಯಾದ್ರಿ ಶೃಂಗಮಾಲೆ-ದೂರಕ್ಕೆ ಹಚ್ಚ ಹಸಿರಾಗಿ, ಹಿಮಮಿಶ್ರಿತವಾಗಿ ಕಾಣಿಸುತ್ತವೆ; ಎತ್ತ ತಿರುಗಿದರೂ ಹಸಿರು, ಹುಚ್ಚು ಹಿಡಿಸಬಲ್ಲ, ಬಿಡಿಸಬಲ್ಲ ಮನಸ್ಸನ್ನು ಸೆರೆಹಿಡಿದು, ಸೂರೆ ಮಾಡುವಷ್ಟು ಪ್ರಕೃತಿಯ ಶೋಭೆ ಇಲ್ಲಿನದು. ಊರಿನ ಒಳವಲಯದಲ್ಲಿ ನಾಗರಿಕ ಪ್ರಪಂಚದ ಎಲ್ಲ ಆಕರ್ಷಣೆಗಳೂ ಇವೆ. ಸಮೀಪದಲ್ಲಿ ಚಾರಿತ್ರಿಕ ಅಂಶವಾಗಿ ಮಡಿದ ಆಂಗ್ಲಯೋಧರ ನೆನಪಿನಲ್ಲಿ ನಿಲ್ಲಿಸಲ್ಪಟ್ಟ ೩೦ ಅಡಿ ಎತ್ತರದ ಸ್ತಂಭವಿದೆ. ಮೈಲಿದೂರದಲ್ಲಿಯೇ ರಾಮತೀರ್ಥ, ಲಕ್ಷ್ಮಣತೀರ್ಥ ಎಂಬೆರಡು ಕಿರುಧಾರೆಗಳಿಂದಾವೃತವಾದ ಸ್ವಚ್ಛ ಕೊಳವಿದೆ. ಶ್ರೀ ರಾಮಲಕ್ಷ್ಮಣರ ಅಂಬಿನಿಂದ ಉದ್ಭವಿಸಿದುವೆಂಬ ಪ್ರತೀತಿಯಿದೆ. ಚೇತೋಹಾರಿಯನ್ನುಂಟು ಮಾಡಬಲ್ಲದು ಈ ಅಗೋಚರ ನಿರ್ಮಲೋದಕ.

ಹೊನ್ನಾವರಕ್ಕೆ ಹನ್ನೆರಡು ಮೈಲಿಗಳಿಗೆ ಕುಮಟಾ. ಅಲ್ಲಿಂದ ದೇವಿಮನೆ ಘಟ್ಟ ಸಾಲುಗಳ ಕಡಿದಾದ ಮಾರ್ಗಗಳಲ್ಲಿ ಮುಂದೆ ಸಾಗಿದರೆ ಗೋಕರ್ಣ, ಕಾರವಾರಗಳು ಸಿಗುತ್ತವೆ.

ಹೊನ್ನಾವರದ ಅತಿಮುಖ್ಯ ಆಕರ್ಷಣೆ ಅಲ್ಲಿನ ಕಡಲಿನದು. ಗೋಕರ್ಣ, ಕಾರವಾರ ಮತ್ತಿತರ ಹಲವಾರು ಎಡೆಗಳಲ್ಲಿ ಪಡುವಣ ಕಡಲನ್ನು ಕಾಣಬಹುದಾದರೂ ಇಲ್ಲಿನ ವೈಶಿಷ್ಟ್ಯ ನಿಜಕ್ಕೂ ಬೇರೆ ತೆರನದು. ಗೋಕರ್ಣದ ಕಡಲಿಗೆ ಅಷ್ಟು ಅಬ್ಬರಿಸುವ ಶಕ್ತಿ ಇರುವಂತೆ ಕಾಣದು; ದೇವರ ನೆಲೆವೀಡೆಂದು ಭಯ, ಭಕ್ತಿ, ವಿನಯಗಳಿರಬೇಕು! ಕಾರವಾರದ ಕಡಲಿಗೆ ಗಾಂಭೀರ್ಯದ ಮುಸುಕು ಹೆಚ್ಚು; ಎಷ್ಟಾದರೂ ವಿಹಾರಸ್ಥಳ ಅದು. ಹೊನ್ನಾವರದ ಕಡಲಿಗಾದರೂ ಈ ಎರಡು ವಿಶೇಷತೆಗಳೂ ಇವೆಯಾಗಿ ಇಲ್ಲಿ ಸಮನ್ವಯತೆಯನ್ನು ಕಾಣಬಹುದು. ಶರಾವತಿಯನ್ನು ದಾಟಿ ಫರ್ಲಾಂಗ್ ದೂರದಲ್ಲಿನ ಕಾಸರಕೋಡಿನ ಅಂಚಿನಲ್ಲಿ, ಸಾಲಾಗಿ ಬೆಳೆದ ಸರ್ವೆ ಜಾತಿಯ ಮರಗಳ ಬದಿಯಲ್ಲಿ ಸರ್ವದಾ ಅಬ್ಬರಿಸುವ ಕಡಲಿನ ದಂಡೆಯಲ್ಲಿಯೇ ನೇರ ನಾಲ್ಕು ಫರ್ಲಾಂಗ್ ದೂರ ಕೈಕಟ್ಟಿಕೊಂಡು ಸಾಗಿದರೆ, ಆಗ ಅಲ್ಲಿನ ಕಡಲಿನ ನೈಜತೆ, ಅದ್ಭುತ ರಮ್ಯತೆ, ಅಲೆಗಳ ಸಂಗೀತ-ಮೊರೆತಗಳ ಪ್ರತ್ಯಕ್ಷ ದರ್ಶನವಾಗುತ್ತದೆ. ಅದರ ಹಿರಿಮೆಯನ್ನರಿತು ಮೂಕರಾಗುತ್ತೇವೆ. ನಮ್ಮ ಕೀಳ್ಮೆಯನ್ನು ಗುರುತಿಸಿ ವಿಸ್ಮಿತರಾಗುತ್ತೇವೆ. ಆ ರೌದ್ರಶಕ್ತಿಗೆ ಮಣಿಯುತ್ತೇವೆ. ಅದೇ ಧಾರೇಶ್ವರದ ಕಡಲಿನ ಮುಗ್ಧಗಾಂಭೀರ್ಯ ನಮ್ಮನ್ನು ಪ್ರಸನ್ನಗೊಳಿಸುತ್ತದೆ. ಸೂರ್ಯಾಸ್ತದ ಸೊಬಗು ಇಲ್ಲಿ ಬಲು ಚಂದ. ಕಾಸರಕೋಡಿನಷ್ಟು ಅಬ್ಬರ ಅಲ್ಲಿಲ್ಲ.

ಇದರ ಜೊತೆಗೆ ಮತ್ತೊಂದು ವಿಶೇಷತೆ ಶರಾವತಿಯು ಸಮುದ್ರದೊಂದಿಗೆ ಸಂಗಮ ಹೊಂದುವುದು. ಎಲ್ಲಿಂದಲೋ

ಹರಿದು ಬರುವ ಪವಿತ್ರಗಮನೆ ಶರಾವತಿ ತನ್ನ ಪರಿಪೂರ್ಣತೆಯನ್ನು ಇಲ್ಲಿ ಪಡೆಯುತ್ತದೆ.

ಅಲ್ಲಿನ ಪ್ರಕೃತಿ ಶೋಭೆಯನ್ನು, ಕಡಲನ್ನು ಕಂಡು ವಿಸ್ಮಯಗೊಂಡ ಮನಸ್ಸಿಗೆ ಆ ಕಡಲಿನಷ್ಟೇ ಆಳವಾದ ಪಾಂಡಿತ್ಯ, ಅಷ್ಟೇ ವಿಶಾಲಮನಸ್ಸು, ಅದರದೇ ಹಿರಿಮೆಯುಳ್ಳ ವ್ಯಕ್ತಿತ್ವವುಳ್ಳ ಶ್ರೀ ವಿ. ಸೀ. ಅವರನ್ನು ಕಂಡಾಗ ಮತ್ತಷ್ಟು ವಿಸ್ಮಯಗೊಳ್ಳುತ್ತೇವೆ. ನಿಜಕ್ಕೂ ಶ್ರೀ ವಿ. ಸೀ. ಅವರನ್ನು ಕಡಲಿಗೆ ಹೋಲಿಸಬಹುದು: ಆದರೆ ಅದರ ಅಬ್ಬರ ಅವರಿಗಿಲ್ಲ, ಅವರು ನಿತ್ಯಸೌಮ್ಯರು, ಶಾಂತಿಪ್ರಿಯರು. ಕಡಲಿನ ಗಾಂಭೀರ್ಯವಂತೂ ಅವರದು. ಈಗ ಎರಡು ವರ್ಷಗಳಿಂದ ಅವರು ಅಲ್ಲಿನ ಕಾಲೇಜಿನ ಪ್ರಿನ್ಸಿಪಾಲರಾಗಿ ಹೊಸದಾಗಿ ಪ್ರಾರಂಭವಾದ ಕಾಲೇಜಿಗೆ ಸಮರ್ಥ ಮಾರ್ಗದರ್ಶಕರಾಗಿ, ಅಸಂಖ್ಯ ವಿದ್ಯಾರ್ಥಿಗಳಿಗೆ ತಮ್ಮ ಪೂರ್ಣ ಪಾಂಡಿತ್ಯ, ಅನುಭವ ಸಿದ್ಧಿಗಳನ್ನು ಧಾರೆಯೆರೆಯುತ್ತಿದ್ದಾರೆ; ಕಿರಿಯ ಅಧ್ಯಾಪಕ ಮಿತ್ರರಿಗೆ ಹಿರಿಯಣ್ಣನಂತೆ ವಾತ್ಸಲ್ಯದ ಸಿವಿಯನ್ನುಣಿಸುತ್ತಿದ್ದಾರೆ.

೨

ಅರವತ್ತೇಳು ವಸಂತಗಳನ್ನು ಕಂಡಿರುವ ಶ್ರೀ ವಿ. ಸೀ. ಅವರು ಮುಂದಿನ ತಿಂಗಳಿಗೆ ಅರವತ್ತೆಂಟನ್ನೂ ಹಿಂದೆ ಹಾಕುತ್ತಾರೆ (ಅಕ್ಟೋಬರ್). ಅವರನ್ನಾಗಲಿ, ಅವರ ಧೀಮಂತ ಹಾಗೂ ಸಾರ್ಥಕ ಬದುಕನ್ನಾಗಲಿ ಪರಿಚಯ ಮಾಡಿಕೊಡುವ ಅಗತ್ಯ ಕಂಡು ಬರುವುದಿಲ್ಲ; ಅಂತೆಯೇ ಅವರ ಪರಿಚಯವನ್ನು ಮಾಡಿಕೊಡಬಲ್ಲ ಎದೆಗಾರಿಕೆ, ಧೈರ್ಯ ಇರುವಂತೆಯೂ ಕಾಣುತ್ತಿಲ್ಲ. ಕಳೆದ ಎಂಟು ವರ್ಷಗಳಿಂದ ಅವರ ಪರಿಚಯ ಮತ್ತು ಸಾಮೀಪ್ಯಗಳ ಸೌಭಾಗ್ಯ ಲಭಿಸಿದ್ದರೂ ಅವರನ್ನು ಅರ್ಥಮಾಡಿಕೊಂಡಿದ್ದೇನೆಂದು ಧೈರ್ಯವಾಗಿ ನುಡಿಯಲಾರೆ – ಅಷ್ಟು ಉನ್ನತ ವ್ಯಕ್ತಿತ್ವ ಅವರದು.

ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅವರ ಹೆಸರು ಮನೆಮಾತಾಗಿದೆಯೆಂದರೂ ಒಪ್ಪುತ್ತದೆ. ಅವರ ಪಾಂಡಿತ್ಯ ಪ್ರತಿಭೆಗಳು ಒಂದು ಕ್ಷೇತ್ರಕ್ಕೆ ಸೀಮಿತವಾದುದಲ್ಲ; ಒಂದು ಭಾಷೆಗೆ ಸೀಮಿತವಾದುದಲ್ಲ; ಹಲವು ಕ್ಷೇತ್ರಗಳಲ್ಲಿ ಅವರು ಸಿದ್ಧಿ ದೊರಕಿಸಿಕೊಂಡಿದ್ದಾರೆ; ಹಲವು ಭಾಷೆಗಳನ್ನರಿತು, ಪ್ರಭುತ್ವ ಸಂಪಾದಿಸಿಕೊಂಡಿದ್ದಾರೆ. ಒಮ್ಮೆ ಅವರ ಆತ್ಮೀಯ ಸ್ನೇಹಿತರೊಬ್ಬರು ಅವರಿಗೆ ಸಾಕಷ್ಟು ಮನ್ನಣೆ ದೊರೆಯದಿರಲು ಇದೇ ಕಾರಣ ಎಂದುದುಂಟು. ಆದರೆ, ಅವರಂತೆ ವಿವಿಧ ಕ್ಷೇತ್ರಗಳಲ್ಲಿ ಸಿದ್ಧಿ ದೊರಕಿಸಿಕೊಂಡಿರುವವರ ಸಂಖ್ಯೆ ಬಹು ವಿರಳ. ಅವರ ಕವಿಪ್ರತಿಭೆ, ಸಹೃದಯತೆಗಳ ಫಲವಾಗಿ ಹಲವಾರು ಕವನ ಸಂಕಲನಗಳು ಅರಳಿ ನಿಂದು, ಸೌರಭವನ್ನು ಎಲ್ಲೆಡೆ ಬೀರುತ್ತಿವೆ. 'ಗೀತಗಳ'ನ್ನು ಹಾಡಿ, 'ನೆಳಲು – ಬೆಳಕಿ'ನ ಹಾದಿಯಲ್ಲಿ ನಮಗೆ ಆಹ್ವಾನ ನೀಡಿ, ಮಧುರವಾದ 'ದ್ರಾಕ್ಷಿ– ದಾಳಿಂಬೆ'ಗಳನ್ನುಣಿಸಿ, ಬದುಕಿನ 'ಹೆಜ್ಜೆಪಾಡು'ಗಳನ್ನು ತಾವು ಕಂಡು, ನಮ್ಮ ಬಾಳಿಗೂ ಸಾರ್ಥಕತೆಯನ್ನು ದೊರಕಿಸಲು 'ದೀಪಗಳ'ನ್ನು ತೋರಿ ಅನಂತ ಕರುಣೆಯ ಬೆಳಕಾಗಿ ಶುಚಿ ದರ್ಶನವನ್ನು ಮಾಡಿಸುತ್ತಾರೆ.

ಅವರ ಪದ್ಯದಂತೆ ಗದ್ಯವೂ ಸುಪ್ರಸಿದ್ಧವಾದುದು. ಅವರ 'ಪಂಪಾಯಾತ್ರೆ' ಹಾಳು ಹಂಪೆಯನ್ನು ಕಾಣದವರಿಗೂ ಯಾತ್ರೆ ಮಾಡಿಸಬಲ್ಲುದು–ಸಮರ್ಥ ರೀತಿಯಲ್ಲಿ. ಪ್ರತಿಯೊಂದನ್ನೂ ಸವಿವರವಾಗಿ ವಿವರಿಸಿ, ಮನಸ್ಸಿನಲ್ಲಿ ಅಚ್ಚಳಿಯದಂತೆ ಪ್ರಭಾವ ಬೀರುತ್ತದೆ ಇಲ್ಲಿನ ವರ್ಣನಾ ಕೌಶಲ; ಕಥನ ರೀತಿಯ ಸೊಗಸು ಓದಿದರೆ ಮಾತ್ರ ಸ್ವಯಂವೇದ್ಯವಾಗುತ್ತದೆ. 'ಭಾರತದ ಐವರು ಮಹನೀಯರು' ಮಹಾಭಾರತದ ಪ್ರಮುಖ ವ್ಯಕ್ತಿಗಳೈವರ ಬದುಕಿನ ಆದರ್ಶದ ಪಡಿನೆಳಲನ್ನು ಪ್ರತಿಬಿಂಬಿಸುತ್ತದೆ. 'ಬೆಳುದಿಂಗಳು' ಮತ್ತು ಇತರ ಪ್ರಬಂಧ ಲೇಖನಗಳು ವಸ್ತು ವೈವಿಧ್ಯತೆ, ಉತ್ತಮ ಬಂಧ, ನವುರಾದ ಶುಚಿಯಾದ ರುಚಿಯಾದ ತಿಳಿಹಾಸ್ಯ, ಕಲೆಗಾರಿಕೆಯ ನಯ, ಚಾತುರ್ಯಗಳಿಗೆ ಉದಾಹರಣೆಯಾಗಿದೆ.

ಅವರ ಶಾಸ್ತ್ರೀಯ ಪಾಂಡಿತ್ಯಕ್ಕೆ ಶಾಶ್ವತ ಕುರುಹಾಗಿದೆ 'ಹಣಪ್ರಪಂಚ'. ಅತಿ ತೊಡಕಿನ ವಸ್ತುವನ್ನಾಯ್ದುಕೊಂಡು ಪದ, ಭಾಷೆ, ವಸ್ತು ಕ್ಲಿಷ್ಟತೆಗಳಿದ್ದರೂ ಎಲ್ಲವನ್ನೂ ಸರಿದೂಗಿಸಿಕೊಂಡು, ಹಣದ ವಿವಿಧ ಕಾರ್ಯಕಲಾಪ, ರೂಪರೇಷೆ ಹಾಗೂ ಪ್ರಭಾವಗಳನ್ನು ಕುರಿತು ವಿದ್ವತ್ಪೂರ್ಣವಾಗಿ ಸಮರ್ಪಕವಾಗಿ ನಿರ್ವಹಿಸಿ ವಿ. ಸೀ. ಅವರು ಬಹುಮಟ್ಟಿಗೆ ಕೃತಕಾರ್ಯರಾಗಿದ್ದಾರೆ. ಇಲ್ಲಿನ ಭಾಷೆಯ ಸೊಬಗು ಕನ್ನಡ ಗದ್ಯಕ್ಕೇ ಗೌರವ ತರುವಂಥದು.

ಅವರ ವಿವಿಧ ಪ್ರತಿಭೆಗಳನ್ನು ಇಕ್ಕಿ ಮೆಟ್ಟಿದೆ, ಅವರ ವಿಮರ್ಶಕ ಪ್ರಜ್ಞೆ. ವಿ. ಸೀ. ಅವರು ಕನ್ನಡದ ಕೆಲವೇ ಉತ್ತಮ ವಿಮರ್ಶಕರಲ್ಲಿ ಒಬ್ಬರಾಗಿದ್ದಾರೆ. ಅವರಲ್ಲಿ ವಿಮರ್ಶಕ ಪ್ರಜ್ಞೆಯ ತೀವ್ರತೆ ಹೆಚ್ಚು ಕಂಡು ಬರುತ್ತದೆ. ಅವರ 'ಅಶ್ವತ್ಥಾಮನ್' ಆಚಾರ್ಯ 'ಶ್ರೀ'ಅವರ ರುದ್ರನಾಟಕದ ವಿಮರ್ಶಾಪರಿಚಯ. ಅವರು 'ಪರಿಚಯ'

ಎಂದಿರುವುದಕ್ಕೆ ಅಪಾರ್ಥಕಲ್ಪನೆ ಮಾಡಿಕೊಂಡಿರುವ ಹಲವರು ಅವರ ವಿಮರ್ಶೆಯನ್ನು ವಿಮರ್ಶೆಯೇ ಅಲ್ಲ ಎಂದಿರುವವರುಂಟು; ಅವರ ವಿಮರ್ಶೆಯ ನೆಲಸು ಸುತ್ತು ಬಳಸಿನದು ಎಂದವರುಂಟು. ಆದರೆ ವಿ. ಸೀ. ಅವರ ವಿಮರ್ಶೆಯ ತೆರನೇ ಬೇರೆ, ಅದರ ನೆಲಸೇ ಬೇರೆ. ಅವರ ವಿಮರ್ಶೆ ಪಾಂಡಿತ್ಯ ಪ್ರದರ್ಶನದ ಢಾಂಬಿಕ ವಿಮರ್ಶೆಯಲ್ಲ; ಅತಿಪ್ರಜ್ಞೆಯ ಅಧಿಕಾರವಾಕ್ಯಲ್ಲ; ಸಹೃದಯ ವಿಮರ್ಶೆ, ವಿನಯ ಸಂಪನ್ನ ವಿಮರ್ಶೆ; ಅವರ ದೃಷ್ಟಿ ಏಕಸಾಕ್ಷಿಕವಲ್ಲ, ಸಂಕುಚಿತವಾದದ್ದಲ್ಲ; ಹಲವು ದೃಷ್ಟಿಗಳ, ವಿಶಾಲ ಮನೋಧರ್ಮದ ಸಮನ್ವಯ ದೃಷ್ಟಿಯ ಸವಿವಾಕ್ಷೆ ಅದು. ಅದನ್ನು ಒಪ್ಪದಿದ್ದರೆ ಏನಂತೆ? ಹಸಿರಿನ ಚೆಲುವು ವನ್ಯವಾಗಿ ಪ್ರಾಕೃತಿಕವಾಗಿ ಅಂಕೆಶಿಕ್ಷೆಗಳ ಹಂಗಿಲ್ಲದೆ ಸೊಂಪಾಗಿ ಬೆಳೆದಿರುವಾಗಲೇ ಒಂದು ಬಗೆಯದಾಗಿರುತ್ತದೆ; ಸಮರ್ಥ ವ್ಯಕ್ತಿಯ ಹಿಡಿತದಲ್ಲಿದ್ದು ನಯಗಾರಿಕೆ, ಕುಸುರಿ ಕೆಲಸಗಳು ಇತ್ಯಾದಿ ಹಲವಾರು ಸಂಸ್ಕಾರಗಳನ್ನೊಳಗೊಂಡಾಗ ಇನ್ನೊಂದು ಬಗೆಯ ಶೋಭೆ ಅದಕ್ಕೆ ಬರುತ್ತದೆ; ಎಷ್ಟಾದರೂ ಹಸಿರೇ ಅಲ್ಲವೆ ಎಂದರೆ ಕೊಚ್ಚೆಯಲ್ಲಿಯೂ ಅದು ಬೆಳೆಯುತ್ತದೆ. ಹಾಗೆಯೇ ವಿಮರ್ಶೆಯಲ್ಲಿಯೂ ಹಲವು ಸ್ತರಗಳುಂಟು. ವಿ. ಸೀ. ಯವರ ವಿಮರ್ಶೆ, ಅಷ್ಟೇಕೆ, ಅವರ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಕಂಡುಬರುವ ವಿಶೇಷತೆ ಎರಡನೆಯ ಬಗೆಯದು; ಕಲೆಗಾರಿಕೆ, ನಯ, ವಿನಯ, ಮಾನವೀಯ ದೃಷ್ಟಿ ಅನುಭವ – ಪಾಂಡಿತ್ಯಗಳ ಸಹೃದಯ ಸಮ್ಮಿಲನ, ಮೃದು ಮಧುರ ಬಂಧ, ನಿರಾಡಂಬರಪ್ರಿಯತೆ, ಓಜೋಯುಕ್ತಶೈಲಿ – ಇವು ಅವುಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಎಂದ ಮೇಲೆ ಇವುಗಳ ಸೊಬಗೂ ಸೊಗಸಲ್ಲವೆ? 'ಪರಿಚಯ' ಎಂದ ಮಾತ್ರಕ್ಕೆ ವಿಮರ್ಶೆಯೇ ಆಗುವುದಿಲ್ಲವೆ? ಮೂಲಕೃತಿಯನ್ನು ಕೃತಿಕಾರನನ್ನು ಕುರಿತ ಗೌರವ, ಮೌಲ್ಯಗಳನ್ನು ಕುರಿತು ಮೆಚ್ಚುಗೆ, ವಿನಯ ಇವುಗಳು ಹಾಗೆ ಕರೆಯಲು ಪ್ರೇರೇಪಿಸಿರಬಾರದೇಕೆ? ಅದರ ಹಿನ್ನೆಲೆಯನ್ನೇ ಅರಿಯದಿದ್ದವರು ಇದನ್ನು ಅರ್ಥಮಾಡಿಕೊಳ್ಳಲಾರರು. ಮೂಲ ಗ್ರೀಕ್ ನಾಟಕ 'ಏಜಾಕ್ಸ್' ಮತ್ತು 'ಶ್ರೀ'ಯವರು ಮಹಾಭಾರತದ ಗದಾ ಮತ್ತು ಸೌಪ್ತಿಕ ಪರ್ವಗಳ ಕತೆಯನ್ನು ಆಧಾರಿಸಿ ರಚಿಸಿರುವ 'ಅಶ್ವತ್ಥಾಮನ್' ನಾಟಕಗಳ ವಿಶೇಷತೆಗಳನ್ನು ತೂಗಿನೋಡಿ, ಬೆಲೆಕಟ್ಟಿದ್ದಾರೆ ವಿ. ಸೀ. ಅವರ 'ಅಭಿಜ್ಞಾನ ಶಾಕುಂತಲ, ಸಹೃದಯ ವಿಮರ್ಶೆಗೆ ಅತ್ಯುತ್ತಮ ಉದಾಹರಣೆ. ಇಲ್ಲಿ ವಿ. ಸೀ. ಅವರು ಗಣಿತಜ್ಞನಂತೆ ೨+೨=೪ ಎಂದು ಪ್ರತಿಪಾದಿಸ ಹೊರಟಿಲ್ಲ; ವೈಯಾಕರಣಿಯಂತೆ ಶುಷ್ಕಪಾಂಡಿತ್ಯವನ್ನು ಪ್ರದರ್ಶಿಸಿಲ್ಲ; ಕವಿಯ ಮೂಲಧ್ಯೇಯ, ಭಾವನೆ, ದೃಷ್ಟಿಗಳನ್ನರಿತ ಅದರ ನೆಳಲು ಬೆಳಕಿನಲ್ಲಿ ನಡೆದು, ಆದರ್ಶ ಹಿರಿಮೆಗಳನ್ನರಿತು, ಸಮನ್ವಯ ಹಾಗೂ ಪರಿಪೂರ್ಣ ದೃಷ್ಟಿಯಿಂದ ನಮಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಕೃತಿರಚಿಸಿದ್ದಾರೆ. ಹೀಗಾಗಿ, ಅದು ಕೇವಲ ಶಾಕುಂತಲ ನಾಟಕದ ಪರಿಚಯ ಮಾತ್ರವಾಗಿ ಉಳಿಯದೆ ಕವಿ ಕಾಳಿದಾಸನ, ಅವನ ಉನ್ನತ ಬದುಕಿನ ದೃಷ್ಟಿ, ಸೃಷ್ಟಿಗಳ, ತನ್ಮೂಲಕ ಭಾರತೀಯ ಜೀವನ ದೃಷ್ಟಿಯ ಸಮಗ್ರ ಪರಿಚಯವಾಗಿದೆ. ಇನ್ನೊಂದು ಬಗೆಯಲ್ಲಿ, ಇದನ್ನೇ ವಿ. ಸೀ. ಅವರ ಜೀವನ ದೃಷ್ಟಿ ಎಂದರೂ ತಪ್ಪಾಗದೇನೋ . . .

ಅವರ 'ಕವಿಕಾವ್ಯದೃಷ್ಟಿ' ಕಾವ್ಯಗಳನ್ನು, ಕವಿಗಳನ್ನು ಕುರಿತಾದ ಬಿಡಿಲೇಖನಗಳ ಸಂಗ್ರಹ. ಅವರ 'ವಿಮರ್ಶೆಯಲ್ಲಿ ಅರ್ಥ ಮತ್ತು ಮೌಲ್ಯ'—ಹೆಸರೇ ಸೂಚಿಸುವಂತೆ ಕಾವ್ಯವಿಮರ್ಶೆಯಲ್ಲಿ ಅರ್ಥ, ಮೌಲ್ಯಗಳನ್ನು ಕುರಿತಾದ ಸಾರವತ್ತಾದ ವಿವೇಚನೆ. ಅವರ ಉನ್ನತ ವ್ಯಾಸಂಗದ ಪರಿಪಾಕ ಈ ಗ್ರಂಥ. ಇಲ್ಲಿನ ಬರವಣಿಗೆಯ ಹರಹು ಅಸೀಮಿತವಾದುದು—ಅದಕ್ಕೆ ಎಲ್ಲೆಕಟ್ಟುಗಳಿಲ್ಲ; ಅದರಿಂದಾಗಿ ಸುತ್ತು-ಬಳಸಿನದಾಗಿ ತೋರಬಹುದು. ಎಲ್ಲೆಡೆ ಗಮನ ಹರಿಸಿ, ಎಲ್ಲವನ್ನೂ ದರ್ಶಿಸಿ ಕಂಡ ಕಾಣ್ಕೆಯನ್ನು ತನ್ನದಾಗಿ ಅಳವಡಿಸಿಕೊಂಡು, ಪರಿಚಯಮಾಡಕೊಡುವ ಬಗೆ ಅವರದು (ಅಷ್ಟಲ್ಲದೆ ಅದು ಅವರ ಉಪನ್ಯಾಸ, ಅದರಿಂದಾಗಿ ಭಾಷಣದ ಧಾಟಿಯನ್ನೇ ಉಳಿಸಿಕೊಂಡಿದೆ.); ಕಣ್ಣುಮುಚ್ಚಿ ನೇರ ಸಾಗುವುದಲ್ಲ ಅವರ ನಡೆ.

ಅವರು ನಾಟಕಗಳನ್ನೂ ಬರೆದಿದ್ದಾರೆ. ನಾಟಕದತಂತ್ರ, ಕಲೆಗಳನ್ನು ಅವರು ಬಲ್ಲರು. ಜಗತ್ತಿನ ಮಹಾನ್ ನಾಟಕಕಾರರನ್ನೆಲ್ಲ ಅವರ ವಿಶಿಷ್ಟ ಪ್ರತಿಭೆ ಅರಗಿಸಿಕೊಂಡಿದ್ದರೆ, ಉತ್ತಮ ನಟರ ಶ್ರೇಷ್ಠ ಅಭಿನಯಗಳನ್ನು ಕಂಡು ಕಣ್ಣು ಮೆಚ್ಚಿದೆ. ಅವರ ಮನೆಯಲ್ಲಿ ಶೇಖರಿತವಾಗಿರುವ ಸುಮಾರು ನಲವತ್ತು ವರ್ಷಗಳ ಅವಧಿಯ 'Theatre Arts' ಗಳ ಬೈಂಡಾದ ಸಂಚಿಕೆಗಳನ್ನು ತಿರುವಿಹಾಕಿದರೆ ಇದರ ಸ್ಪಷ್ಟ ಪರಿಚಯವಾದೀತು. ಅಂದಿನಿಂದ ಇಂದಿನವರೆಗೂ ನಾಟಕ ಜಗತ್ತಿನಲ್ಲಾದ ಕ್ರಾಂತಿಯನ್ನು ಅವರು ಸ್ಪಷ್ಟವಾಗಿ ಗುರುತಿಸಿದ್ದಾರೆ, ಗ್ರಹಿಸಿದ್ದಾರೆ. Classism, Romanticism, Realism, Surrealism, Naturalism, Symbolism, Expressionism, Existentialism, Progressivism, Metaphysicism, Modernism,

ಇತ್ಯಾದಿ ಹಲವು 'ism' ಗಳನ್ನು ('20th Century Drama'—Bomber gaskin) ಅವರು ಬಲ್ಲರು. ಷೇಕ್ಸ್ ಪಿಯರ್, ಗಾಲ್ಸ್‌ವರ್ದಿ, ಚೆಕೋವ್, ಇಬ್ಸೆನ್‌ಗಳನ್ನೆಂತೊ ಅಂತೆಯೇ ಮೋಲಿಯೆರ್, ಪಿರಂಡೆಲೊ, ಷಾ, ಐಯನೆಸ್ಕೋ, ಸಾರ್ತ್ರೆ, ಪ್ರೀಸ್ಟ್ಲೆ, ಸ್ಟ್ರಿಂಡ್‌ಬರ್ಗ್, ಓ'ನೀಲ್, ಪಿಂಟರ್, ಬೆಕೆಟ್, ಡಿಲನ್ ಥಾಮಸ್, ಬ್ರೆಕ್ಟ್, ಆಡೆನ್, ಈಷರ್‌ವುಡ್‌ಗಳನ್ನೂ ಬಲ್ಲರು. ಅವರ ಮನೋಗರ್ಭದಿಂದ ಹೊರಬಿದ್ದ ನಾಟಕಗಳಲ್ಲಿ 'ಆಗ್ರಹ' ಮಹಾಭಾರದ ಆಖ್ಯಾನವೊಂದರ ಮೇಲೆ ಆಧಾರಿತ ರಚನೆ; 'ಸೊಹ್ರಾಬ್-ರುಸ್ತುಂ' ಪರ್ಷಿಯಾದ ಫಿರ್ದೂಸಿ ಕವಿಯ 'ಷಾನಾಮಾ'ದ ಆಖ್ಯಾನದ ತಳಹದಿಯ ಮೇಲೆ ನಿರ್ಮಿತವಾದ ರುದ್ರನಾಟಕ; 'ಶ್ರೀಶೈಲ ಶಿಖರ' ಪ್ರೀಸ್ಟ್ಲೆಯವರ 'Flashback' ತಂತ್ರವನ್ನಳವಡಿಸಿಕೊಂಡು ಪಾಪ, ಢಾಂಬಿಕತೆಗಳನ್ನು ಬಯಲಿಗೆಳೆವ ಭಾರತೀಯ ಬದುಕಿನ ಚಿತ್ರಣವಾಗಿದೆ.

ವಿ. ಸೀ. ಅವರು ಬರ್ನಾರ್ಡ್ ಷಾರ 'ಪಿಗ್‌ಮೇಲಿಯನ್' ನಾಟಕವನ್ನು ಕನ್ನಡಿಸಿದ್ದಾರೆ. ಕಾರಂತರ ಬಹುಮುಖ ಪ್ರತಿಭೆಯ ಪರಿಚಯವನ್ನು ಕಿರುಹೊತ್ತಿಗೆಯೊಂದರಲ್ಲಿ ಮಾಡಿಕೊಟ್ಟಿದ್ದಾರೆ. ಹಲವಾರು ನಿಯತಕಾಲೀನ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಮತ್ತು ಇತರೆಡೆ ದಿಕ್ಕಾಪಾಲಾಗಿ ಚೆದುರಿಹೋಗಿರುವ ಅವರ ಲೇಖನಗಳ ಸಂಖ್ಯೆ ಅಪರಿಮಿತವಾದುದು. ಕನ್ನಡ ಸಾಹಿತ್ಯದ ಆಧುನಿಕ ರೂಪರೇಷೆ, ಬೆಳವಣಿಗೆಗಳನ್ನು ಗುರುತಿಸಿ, ಆಗಾಗ ಅವರು ಬರೆದಿರುವ ಲೇಖನಗಳು ಮತ್ತು ಛಂದಸ್ಸಿನ ಮೇಲೆ ಬರೆದಿರುವ ಲೇಖನ, ವಿಮರ್ಶೆಗಳನ್ನು ಒಟ್ಟುಗೂಡಿಸಿದರೆ ಉಪಯುಕ್ತ ಗ್ರಂಥಗಳೇ ಆಗುತ್ತವೆ. ಇತರ ರೇಡಿಯೋ ಭಾಷಣಗಳು ಮತ್ತು ಪರಿಚಯ ಲೇಖನಗಳು ಇನ್ನೆಷ್ಟೋ! ಅವುಗಳೆಲ್ಲ ಒಂದೆಡೆ ಗ್ರಂಥರೂಪದಲ್ಲಿ ಸಿಗುವಂತಾದರೆ ನಾಡು, ನುಡಿಗಳಿಗೆ, ಸಾಹಿತ್ಯಾಭ್ಯಾಸಿಗಳಿಗೆ ಉಪಕಾರವಾಗಬಲ್ಲದು.

೩

ಅವರ ಸಜ್ಜನಿಕೆಯ ಮಟ್ಟ ಬಹು ಎತ್ತರದ್ದು. ಅವರ ಮನೋಧರ್ಮವನ್ನರಿತವರಾಗಲಿ ಅಥವಾ ಒಮ್ಮೆ ಅವರ ಬಳಿ ಸುಳಿದವರಾಗಲಿ ಅವರಿಂದ ಎಂದಿಗೂ ದೂರವಾಗ ಬಯಸರು. ಅಂತಹ ನಡೆ-ನುಡಿ ಅವರವು. ಕಿರಿಯರನ್ನು ಕಂಡರೆ ಅವರಿಗೆ ಅಪರಿಮಿತ ವಿಶ್ವಾಸ. ಅಪರಿಚಿತರಿಗೂ ಅವರೊಡನೆ ಬೆರೆತಾಗ ಹಲವು ವರ್ಷಗಳಿಂದ ಸುಪರಿಚಿತರೆಂಬ ಭಾವನೆ ಮೂಡುತ್ತದೆ. ಅವರ ಮನಸ್ಸು ಬಹು ಮೃದು; ಕಠಿಣವಾದದ್ದನ್ನು ನಾನಂತೂ ಕಂಡಿಲ್ಲ; ವೈಶಾಲ್ಯವಂತೂ ಮುಗ್ಧಗೊಳಿಸುತ್ತದೆ. 'ವಿ. ಸೀ' ಎಂಬ ಎರಡು ಅಕ್ಷರಗಳ ಹಿಂದೆ ಮನೋವೈಶಾಲ್ಯ ಹಾಗೂ ಅಪಾರ ಸಹನೆಗಳ ಸಾಗರಗಳೇ ಇವೆ. ಇದರ ಅರಿವು ಸ್ವತಃ ಅನುಭವವಾದಾಗ ಮಾತ್ರ ಆದೀತು.

ಚಾಮರಾಜಪೇಟೆಯ ಅವರ ಮನೆಗೆ ಹೋದರೆ ಮೊದಲು ಮುಂದಿನ ಮಲ್ಲಿಗೆ, ಜಾಜಿಗಳು ಕಂಪು ಬೀರಿ ಸ್ವಾಗತಿಸುತ್ತವೆ. ಒಳಹೊಕ್ಕರೆ ಮೊದಲ ಪ್ರವೇಶಕ್ಕೇ ಬಲಕೋಣೆ ಅವರದು; ಬಾಗಿಲಿಗೆ ತುಸುಮೇಲೆ 'ನೃತ್ಯ ಸರಸ್ವತಿ'ಯ ಉತ್ತಮ ಚಿತ್ರಪಟವೊಂದು ಶ್ರೀಗಂಧದ ನಯಗಾರಿಕೆಯ ಕೆಲಸಮಾಡಿದ ಹಾರದಿಂದ ಅಲಂಕೃತವಾಗಿದ್ದು ಎದುರುಗೊಳ್ಳುತ್ತದೆ. ಕೋಣೆಯ ಒಳಹೊಕ್ಕರೆ ಮೊದಲು ಯಾವುದೋ ಗ್ರಂಥಾಲಯವನ್ನು ಪ್ರವೇಶಿಸಿದಂತೆ ಭಾಸವಾಗುತ್ತದೆ. ಅಲ್ಲಿನ ಒಪ್ಪ, ಓರಣ, ಅಚ್ಚುಕಟ್ಟು, ಸ್ವಚ್ಛತೆಗಳು ಮನಸ್ಸನ್ನು ಸೆರೆಹಿಡಿಯುತ್ತವೆ. ಸಾಮಾನ್ಯವಾಗಿ ವಿ.ಸೀ. ಅವರಿರುವಾಗ ಹೋದಲ್ಲಿ, ಶುಭ್ರವಾದ ಅಚ್ಚಬಿಳಿಯ ತೆಳುವಸ್ತ್ರಗಳನ್ನುಟ್ಟು, ಅರೆಮಲಗಿದಂತೆ ಗೋಡೆಗೊರಗಿ ಏನನ್ನಾದರೂ ಓದುತ್ತಿರುವ ಅವರ ಮುಗುಳ್ನಗೆ ಧೈರ್ಯ,ಉತ್ತೇಜನ ರೀತಿ ಬರಮಾಡಿಕೊಳ್ಳುತ್ತದೆ. 'ಬನ್ನಿ, ಕುಳಿತುಕೊಳ್ಳೀಪ್ಪ' ಇದು ಅವರ ಮೊದಲ ನುಡಿ.

ಹಾಗೆಯೇ ಒಂದು ನಿಮಿಷ ಸುತ್ತ ದೃಷ್ಟಿ ಹಾಯಿಸಿದರೆ ಅವರ ಎರಡು ಪಕ್ಕಗಳಲ್ಲಿಯೂ ಉನ್ನತವಾದ ಎರಡು ಬೀರುಗಳಲ್ಲಿ ಮೂರು ಸಾಲುಗಳಲ್ಲಿ ಹಿಂದೆ ಮುಂದೆ ಅಚ್ಚುಕಟ್ಟಾಗಿ ಓಂಗಡಿಸಲ್ಪಟ್ಟು ಜೋಡಿಸಿರುವ ಪುಸ್ತಕಗಳು ಕಾಣುತ್ತವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಭಾರತೀಯ ಸಂವಿಧಾನ, ಕಾನೂನುಗಳಿಗೆ ಸಂಬಂಧಿಸಿದವು, ನಾಟ್ಯಶಾಸ್ತ್ರ ಮತ್ತು ಇತರ ಸಂಸ್ಕೃತ ಪ್ರಾಚೀನ ಬೃಹದ್ಗ್ರಂಥಗಳು; ಇಂಗ್ಲಿಷ್ ನಾಟಕಗಳು, ಕಾವ್ಯಕೃತಿಗಳು, ವಿಮರ್ಶೆಗೆ ಸಂಬಂಧಿಸಿದ ಸೈಂಟ್ಸ್‌ಬರಿಯ ಕೃತಿಗಳು; ಕಲೆಗೆ ಸಂಬಂಧಿಸಿದಂತೆ ಹಲವು ಎದ್ದುಕಾಣುತ್ತವೆ. ಅವರ ಪಕ್ಕದಲ್ಲಿಯೂ ಅವರು ಆಗ ಓದುತ್ತಿರಬಹುದಾದ ಹಲವು ಗ್ರಂಥಗಳು; ಸಮೀಪದಲ್ಲಿ B. B. C. Review-Listener, Economist, Times Literary Supplement, Encounter ಇತ್ಯಾದಿ ವಿದೇಶೀಯ ಪತ್ರಿಕೆಗಳು. ಇಷ್ಟೇ ಸಾಲದೆಂಬಂತೆ ಕೋಣೆಯೊಳಗೆಲ್ಲ ದೊಡ್ಡ ದೊಡ್ಡ ಬೀರುಗಳಲ್ಲಿ ಹಿಡಿಸಲಾರದಷ್ಟು ಪುಸ್ತಕಗಳು; ಬಂಗಾಳಿ,

ಸಂಸ್ಕೃತ, ಹಿಂದಿ, ಕನ್ನಡ, ಇಂಗ್ಲಿಷ್, ತೆಲುಗು-ಇನ್ನೆಷ್ಟೋ ಭಾಷೆಯವು; ಅದರಿ ಎಲ್ಲದರಲ್ಲಿಯೂ ಅಚ್ಚುಕಟ್ಟು; ಗೋಡೆಗಳಿಗೆ ತೂಗುಹಾಕಿರುವ ಸುಪ್ರಸಿದ್ಧ ಕಲಾತಪಸ್ವಿಗಳ ವರ್ಣರೇಖಾಚಿತ್ರಗಳ ಪ್ರತಿಕೃತಿಗಳ—ಅಲ್ಲಿಯೂ ರೀತಿ ನೀತಿ!

ಕುಳಿತುಕೊಂಡಿರೆನ್ನಿ: ಮೊದಲು ನಿಮ್ಮ ಕೆಲಸ, ಕಾರ್ಯಗಳ ವಿಚಾರಣೆ. ಅನಂತರ ನೀವಾಗಿ ಬಯಸಿದರೆ ಅಥವಾ ಅವರಾಗಿಯೇ ತಿಳಿಸಿದಲ್ಲಿ ಅನೆಷ್ಟೋ ವಿಷಯಗಳ ಚರ್ಚೆ. ಸಂಭಾಷಣೆಯನ್ನು ಮೊಟಕು ಮಾಡಲೂ ಬಲ್ಲರು; ಒಮ್ಮೆ ಮಾತಿಗಿಳಿದರೆ, ಅದರ ವಿಶಾಲ ಭೂಮಿಕೆಯಲ್ಲಿ ಹಾದುಹೋಗುವ ವಿಷಯಗಳೆಷ್ಟೋ! ಅವರನ್ನು ಮಾತಿಗೆ ಬಿಟ್ಟು ಕೇಳಿ ಮಾತ್ರ ಆನಂದಿಸಬೇಕು-ಅಷ್ಟು ದರ್ಶನ. ಆತ್ಮೀಯ ಸಂಭಾಷಣೆಗೆ ತೊಡಗಿದಾಗ ಅಪರಿಚತೆಯ ಸೋಂಕೆಲ್ಲೋ ಮಾಯವಾಗಿಬಿಡುತ್ತದೆ; ಮಾತು ಬರದವರಿಗೂ ನಾಲ್ಕು ಮಾತು ಕಲಿಸಬಲ್ಲರು ಅವರು.

ಅವರ ಮಾತುಗಾರಿಕೆಯೂ ಒಂದು ಕಲೆ. ನಮ್ಮ ಬಂಡವಾಳವನ್ನರಿತು, ಇನಿತನ್ನೂ ತೋರ್ಪಡಿಸದೆ, ಕಿರಿಯರೆಂಬ ಅನಾದರವಿಲ್ಲದೆ, ಭೇದವಿಲ್ಲದೆ, ಬಹು ಆತ್ಮೀಯತೆಯಿಂದ ನಮಗೆ ತಿಳಿದುದರ ಸರಿ-ತಪ್ಪುಗಳನ್ನೂ ತೂಗಿ, ತಿಳಿಯದಿದ್ದರೆ ತಾವು ಕಂಡು, ಉಂಡು, ಅರಗಿಸಿಕೊಂಡು ತಮ್ಮದಾಗಿಸಿಕೊಂಡದೆಲ್ಲವನ್ನೂ ವಿವರಿಸಿ, ನಿಮ್ಮ ಮನಸ್ಸಿನಲ್ಲಿ ಪ್ರಭಾವ ಬೀರುವಂತೆ, ಪರಿಣಾಮ ಬೀರುವಂತೆ ತಿಳಿಸುತ್ತಾರೆ. ಅಲ್ಪಸಾಮಯಿಕವಾದ ಸಂಭಾಷಣೆಯಾದರೂ ಚರ್ಚಿತವಾಗುವ ಸಂಗತಿಗಳು ಅಸಂಖ್ಯ. ಸಾಹಿತ್ಯವನ್ನು ಅದರ ಪ್ರಕಾರಗಳನ್ನು ಕುರಿತ, ಕಲೆಗೆ ಸಂಬಂಧಿಸಿದ, ರಾಜಕೀಯ, ವಿಜ್ಞಾನ, ಅರ್ಥಶಾಸ್ತ್ರದ ಏರುತಗ್ಗುಗಳನ್ನು ಕುರಿತ ಕೊನೆಗೆ ದೈನಂದಿನ ಬದುಕಿಗೆ ಸಂಬಂಧಿಸಿದಂತೆ ಸ್ವಾನುಭವದ ಎಷ್ಟೋ ಸಂಗತಿಗಳನ್ನು ಸ್ವಾರಸ್ಯವಾಗಿ ತಿಳಿಸುತ್ತಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸಲೆಂಬಂತೆ ಒಮ್ಮೊಮ್ಮೆ ತಮ್ಮ ಬಳಿಯ ಬೀರುವಿನಿಂದ ಯಾವುದೋ ಪುಸ್ತಕವನ್ನೆಳೆದು-ಆಯಾ ಪುಸ್ತಕ ಅಂತಂಥ ಎಡೆಯಲ್ಲಿಯೇ ಇರುವುದೆಂಬಷ್ಟು ಖಚಿತ, ನಿರ್ದುಷ್ಟ-ಎಂದೋ ಓದಿ, ಕೆಂಪು ಪೆನ್ಸಿಲ್‌ನಿಂದ ಗುರುತಿಸಿದ್ದ, ಯಾವುದೋ ವಾಕ್ಯವನ್ನು ಓದಿ, ವಿವರಿಸಿ, ಸಮರ್ಥಿಸಿ 'ನೋಡಿದಿರಾ, ಸರಿಯಲ್ಲವೆ?' ಎಂಬಂತೆ ನೋಟ ಬೀರಿ ತಲೆದೂಗಿಸುವ ಕಲೆಗಾರಿಕೆ ಅವರದು.

ಅವರ ನೆನಪಿನ ಶಕ್ತಿ ಅದ್ಭುತವಾದುದು: ಇದರ ಪರಿಚಯ ಅವರು ವಿವರಣೆಯಲ್ಲಿ ತೊಡಗಿರುವಾಗ ಉದಾಹರಿಸುವ ಷೇಕ್ಸ್‌ಪಿಯರ್ ನಾಟಕದ ವಾಕ್ಯಗಳನ್ನಾಗಲಿ, ಬಂಗಾಲಿಯ ಪದ್ಯಪುಂಜಗಳನ್ನಾಗಲಿ, ರಾಮಾಯಣ, ಭಾರತ ಅಥವಾ ಗೀತೆಯ ಶ್ಲೋಕಗಳನ್ನಾಗಲಿ, ಮಾರ್ಷಲ್‌ರ ಅರ್ಥಶಾಸ್ತ್ರದ ಇಂಥ ಪುಟದಲ್ಲಿ ಈ ವಾಕ್ಯವಿದೆ ಎಂದು ಹೇಳುವಾಗಲಾಗಲಿ, ಕೊನೆಗೆ ಪೌಂಡ್ ಅಥವಾ ಈಲಿಯಟ್ಟರ ಸಂಪೂರ್ಣ ಕವನವನ್ನು ಬರಿಯ ನೆನಪಿನಿಂದ ಹೇಳುವುದನ್ನು ಕೇಳಿದಾಗ ಗೋಚರವಾಗುತ್ತದೆ. ಇಷ್ಟಾದರೂ ಯಾವುದೇ ಗ್ರಂಥವನ್ನು ಅವರು ಒಮ್ಮೆ, ತಪ್ಪಿದರೆ ಎರಡನೆಯ ಬಾರಿಗಿಂತ ಹೆಚ್ಚು ಸಲ ಓದುವವರಲ್ಲ.

(ಮುಂದುವರಿಯುವುದು)

ಶಾಸನಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ

ತಿ. ತಾ. ಶರ್ಮ

ಭಾಷಾಂತರ ರೀತಿ

ಸುತ್ತೂರು ಗ್ರಾಮದ ಶಾಸನವೊಂದು; ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ್ದು. ಸಾಮಾನ್ಯವಾಗಿ ಶಿಲಾ ಶಾಸನಗಳಾಗಲಿ, ತಾಮ್ರ ಶಾಸನಗಳಾಗಲಿ, ಬಹು ಭಾಗ ದಾನಶಾಸನಗಳು. ಶಾಸನವನ್ನೆಲ್ಲ ಬರೆದು ಮುಗಿಸಿದ ಮೇಲೆ ಮಾಡಿದ ಧರ್ಮವನ್ನು ಕೆಡಿಸುವವರನ್ನು ಎಚ್ಚರಿಸುವ, ಶಾಪರೂಪದ, ಕೆಲವು ಶ್ಲೋಕಗಳೋ, ವಚನಗಳೋ, ಇರುತ್ತವೆ. ಸಂಸ್ಕೃತದಲ್ಲೂ ಇರುತ್ತವೆ, ಕನ್ನಡದಲ್ಲೂ ಇರುತ್ತವೆ; ಎರಡಲ್ಲೂ ಇರುತ್ತವೆ.

ಸುತ್ತೂರು ಶಾಸನದಲ್ಲಿರುವುದು ಈ ಸಂಸ್ಕೃತ ಶ್ಲೋಕ:

"ಸ್ವದತ್ತಾಂ ಪರದತ್ತಾಂ ವಾ
ಯೋ ಹರೇತ ವಸುಂಧರಾಂ
ಷಷ್ಠಿರ್ವರ್ಷ ಸಹಸ್ರಾಣಿ
ವಿಷ್ಠಾಯಾಂ ಜಾಯತೇ ಕ್ರಿಮಿಃ"

ಈ ಶಾಸನವನ್ನು ಬರೆದ ಲಿಪಿಕರ ಶಬ್ದ ಜ್ಞಾನ-ಅರ್ಥ ಜ್ಞಾನ ಹೆಚ್ಚಾಗಿಲ್ಲದವನೆಂದು ಕಂಡುಬರುತ್ತದೆ. ತಪ್ಪುತಪ್ಪಾಗಿ ಬರೆದಿದ್ದಾನೆ. ಬಳಪದಲ್ಲಿ ಅಥವಾ ಕೆಮ್ಮಣ್ಣಿನಲ್ಲಿ ಬರೆದಂತೆ ಶಿಲ್ಪಿ ಕೆತ್ತಿದ್ದಾನೆ. ಐದು ಸಾಲುಗಳಲ್ಲಿ ಮೇಲಿನ ಶ್ಲೋಕವನ್ನೂ, ಅದಕ್ಕೆ ಕನ್ನಡದಲ್ಲಿ ಅರ್ಥವನ್ನೂ, 'ಪ್ರತಿಪದಾರ್ಥ ರೂಪ' ದಲ್ಲಿ ಕೊಡಲಾಗಿದೆ.

(೧) ಸ್ವದತ್ತಂ ತನ್ನಿತ್ತುದಕ್ಕೆ ಪರದತ್ತಂ ವಾ ಪ
(೨) ಅರಿತ್ತುದಕ್ಕೆ ಓ ಹರೇತು ಆಟುವೋ ವಸುನ್ಧ
(೩) ರಿ ಭೂಮಿ ಷಷ್ಟಿವರ್ಷ ಸಹಸ್ರಾಣಿ ಅ
(೪) ರವತ್ತು ಸಾವಿರ ವರ್ಷ ವಿಷ್ಟಾಯಾಂ ಜಾಯ
(೫) ತೇ ಕ್ರಿಮಿ ಪೆಲಪುಟುವಾಗಿ ಪುಟ್ಟುಗೆ.

ಇಲ್ಲಿ ನೋಡಬೇಕಾದದ್ದು ಭಾಷಾಂತರ ಮರ್ಯಾದೆಯನ್ನು; ಬಂಧುರವಾಗಿದೆಯೆ, ಇಲ್ಲವೆಯೆಂಬುದನ್ನಲ್ಲ.

ಸ್ವದತ್ತಂ = ತನ್ನಿತ್ತುದಕ್ಕೆ
ಯೋಹರೇತ = ಅಟ್ಟುವೊ (ನ್)
ವಿಷ್ಟಾಯಾಂ ಜಾಯತೇ ಕ್ರಿಮಿಃ=
ತೆಲಪುಟುವಾಗಿ ಪುಟ್ಟುಗೆ

ಭಾಷಾಂತರ ಮರ್ಯಾದೆಯೊಂದಿಗೆ ಭಾಷಾಮರ್ಯಾದೆಯ ಒಂದೆರಡು ಲಕ್ಷಣಗಳೂ ಇಲ್ಲಿ ಕಂಡುಬರುತ್ತವೆ. ಇಲ್ಲಿ ಭಾಷಾಂತರ ಮಾತಿಗೆ ಮಾತಲ್ಲ; ಮರ್ಯಾದೆಗೆ ಮರ್ಯಾದೆ.

"It rains" ಅನ್ನುವುದು ಇಂಗ್ಲಿಷ್ ಭಾಷಾ ಮರ್ಯಾದೆ; "ಮಳೆ ಬರುತ್ತಿದೆ" "ಹನಿ ಬೀಳುತ್ತಿದೆ" ಅನ್ನುವುದು ಕನ್ನಡ ಭಾಷಾ ಮರ್ಯಾದೆ.

ಕನ್ನಡ ವಾಕ್ಯರಚನೆ

ಹೊಸಕೋಟೆ ತಾಲ್ಲೂಕು ಬಿಸನಹಳ್ಳಿ ಗೋಕರಿ ಶ್ರೀ ಚೆನ್ನಪ್ಪನವರ ಬಳಿ ಇದ್ದ [1] ತಾಮ್ರಶಾಸನ, 'ಗಂಗದುರ್ವಿನೀತನ ಪೆಣ್ಣೂರಿನ ಶಾಸನ'ವೆಂದು ಇದನ್ನು ಗುರುತಿಸಲಾಗಿದೆ. ಸುಮಾರು ಏಳನೆಯ ಶತಮಾನಕ್ಕೆ ಸೇರಿದ್ದೆಂದು ಶಾಸನದ [2] ಲಿಪಿ ಲಕ್ಷಣಗಳನ್ನು ಕಂಡು ಅನುಮಾನ ಮಾಡಲಾಗಿದೆ.

ಶಾಸನದ ಭಾಷೆಯೆಲ್ಲ ಸಂಸ್ಕೃತ; ಕಡೆಯ ಪಾದಗಳೆರಡು ಮಾತ್ರ ಕನ್ನಡ.

(೫೩) "... ಮಕ್ಕಣ್ಡ ಕತ್ತು ಮಣುಮ್ಮನೆಯು
(೫೪) ಮ್ಮಾಪುಟುಮ್ಪಟ್ಟುಯುನ್ತರಕ್ಕುಮ್ ಒಡೆಅನ್"

೫೦ನೆಯ ಪಾದಾಂತ್ಯದಲ್ಲಿ "ಚೋಮತ್ತಟ್ಟಾರ ನಾಮಧೇಯೇನ ಲಿಖಿತಂ ತಾಮ್ರ ಸಾಧನಂ" ಎಂಬದಾಗಿ ಹೇಳಿದೆ. ಈ ಶಾಸನವನ್ನು ಬರೆದವನು ಅಕ್ಕಸಾಲಿಗ ಚೋಮ–ಸೋಮ.

ತಟ್ಟಾರ, ತಟ್ಟಾನ್, ಅಂದರೆ ತಮಿಳಿನಲ್ಲಿ ಅಕ್ಕಸಾಲಿಗ, ಬಡಗಿ, ಎಂದರ್ಥ. ಶಾಸನ ಬರೆದ ಕಾಲದಲ್ಲಿ ಈ ಮಾತು

---

1. No. 31 of M.A.R. 1942.
2. 'The test letters ಬ, ಜ, ಕ, ಲ, ಜ್ಜ, etc., found in the plates all belong to about this period." M.A.R. 1942-P. 140.

ಗಳು ಕನ್ನಡದಲ್ಲಿ ವಿಶೇಷವಾಗಿ ಬಳಕೆಯಲ್ಲಿರಬೇಕೆಂದು ಅನುಮಾನಮಾಡಬಹುದು. ಇರುವುದೊಂದು ವಾಕ್ಯದಲ್ಲಿ,

ಮುಕಣ್ಣುಗ, ಮಣ್ಣು, ಮನೆ, ಪಾಲು, ಪಟ್ಟಿ, ಅಕ್ಕುವಮ್, ಒಡೆಯನ್-ಎಂಬ ಮಾತುಗಳೆಲ್ಲ ಕನ್ನಡ!

ಇದನ್ನು ಹಲ್ಮಿಡಿ ಶಾಸನದೊಂದಿಗೆ ಹೋಲಿಸಿ ನೋಡಿದಾಗ, ಅದರಲ್ಲಿ ನೂರಕ್ಕೆ ೮೦ರಷ್ಟು ಸಂಸ್ಕೃತ ಪದಗಳು ಕಂಡುಬರುತ್ತವೆ! ಬಿಸನಹಳ್ಳಿ ಶಾಸನದ ಕನ್ನಡ ವಾಕ್ಯ ರಚನೆಗೂ, ಹಲ್ಮಿಡಿ ಶಾಸನದ ವಾಕ್ಯಗಳ ರಚನೆಗೂ, ಅಂತರ ಅಪಾರ.

ಪ್ರಕೃತಿ, ಪ್ರತ್ಯಯಗಳನ್ನೊಡೆದು ಬರೆಯುವುದು ಆ ಕಾಲದ ಲಕ್ಷಣವೆಂದು ತಿಳಿಯಬೇಕಲ್ಲದೆ ಲಿಪಿಕರನ ಅಪರಾಧವೆಂದು ಭಾವಿಸುವುದು ತಪ್ಪು.

"ಮ (ಮು) ಕ್ಕಣ್ಣ ಕತ್ತು" ಎಂಬುದು ತಮಿಳು ಭಾಷಾ ಮಾರ್ಗವನ್ನು ಸೂಚಿಸುವುದೆಂದು ಹೇಳುವುದಕ್ಕಿಂತ ತಮಿಳು, ಕನ್ನಡ ಮುಂತಾದ 'ಸಗೋತ್ರ ಭಾಷೆ'ಗಳಲ್ಲೆಲ್ಲ ಸಮಾನ ವ್ಯಾಕರಣ ಲಕ್ಷಣಗಳು ಕಂಡುಬರುವುವೆಂದು ಹೇಳಬಹುದಲ್ಲವೆ?

ಕನ್ನಡ-ಸಂಸ್ಕೃತಗಳ ಬಾಂಧವ್ಯ

ಚಳ್ಳಕೆರೆ ತಾಲ್ಲೂಕು ಕಸಬಾ ಹೋಬಳಿ ಹಿರೆಮಧುರೆ ಗ್ರಾಮದ ಕರಿಲಿಂಗಪ್ಪನ ಹೊಲದಲ್ಲಿ [1] ಮೂರು ವೀರಗಲ್ಲುಗಳಿವೆ. ಅವು ಮೂರೂ ತಲಕಾಡು ಗಂಗರಸರ ಕಾಲದವು; ಕ್ರಿ. ಶ. ಎಂಟನೆಯ ಶತಮಾನದವೆಂದು ಹೇಳಬಹುದು.

ಒಂದು ಶಾಸನದಲ್ಲಿ "ಶ್ರೀ ಪ್ರಭಾಕರ ದಾಸನ್" ಎಂಬ ಆರು ಅಕ್ಷರಗಳನ್ನು ಆರು ಸಾಲಿಗೆ ಹಂಚಿ ಕೆತ್ತಿರುವುದನ್ನು ನೋಡುತ್ತೇವೆ.

ಇನ್ನೊಂದು ಶಾಸನದಲ್ಲಿ,

"...ರಸರು ಕಙ್ಚಿಯನ್ ಕೊಳ್ವನ್ದು ಕೊಙ್ಗಣಿ ಅರಸರ ಆಳು ಎಱಿದು ಸತೊನ್"

ಎಂದು ಮೊದಲ ನಾಲ್ಕು ಸಾಲುಗಳಲ್ಲೂ,

"ಶ್ರೀ ದಾಸಿ ಅಮ್ಮನ್ ಕಙ್ಚಿಯೊಳ್ಪನ್ನೊರ್ಬನೆಱಿದು ಸ್ವರ್ಗ್ಗಿ ಅದನ್"

ಮುಂತಾಗಿ ಏಳು ಸಾಲುಗಳಲ್ಲೂ ಹೇಳಿದೆ.

ಮೂರನೆಯ ಶಾಸನವೇ ಮುಖ್ಯವಾಗಿ ಗಮನಾರ್ಹವಾದುದು. ಹತ್ತೊಂಬತ್ತು ಸಾಲುಗಳ ಶಾಸನ ಪಾಠವನ್ನು ಇಲ್ಲಿ ಸಾಲು ವಿಂಗಡಮಾಡದೆ ಸೇರಿಸಿಕೊಡಲಾಗಿದೆ.

"ಕತ್ತಿ ಅರಸರ ಕೊಙ್ಗಣಿ ಅರಸರ
ಬಾಗೆ ಊರೊಳೆ ಎಱಿವನ್ದ
ಕೊಙ್ಗಣಿ ಅರಸರ ಆಳು ಎಱಿ
ದು ಸತ್ತೊನ್, ಭಾನುದಾಸನ್,
ಜಯಮಿತ್ರನ್, ಊನರವ್ವೈಶಿಕನ್,
ಒಡಿವೆಚ್ಚಿರಾಯಿಳನ್ನಿಗ್ಗೊಳನ್ಮನು ಜಾಗರನ್,
ಅಣ್ಣನವತಿಗನ್, ಅನ್ತಕಙ್ಙದೊನ್"

ಕನ್ನಡ ಭಾಷೆಯ ಮಾತುಗಳು, ಪ್ರತ್ಯಯಗಳನ್ನು ಹಚ್ಚುವ ರೀತಿ, ವಾಕ್ಯರಚನೆ, ಸಂಸ್ಕೃತ-ದ್ರಾವಿಡ ಪಕ್ಷಪಾತ ಚಾಪಲ್ಯ ಅಥವಾ ಪ್ರಭಾವ-ಇತ್ಯಾದಿಗಳನ್ನೆಲ್ಲ ಅಧ್ಯಯನ ಮಾಡಬಯಸುವ ವಿದ್ಯಾರ್ಥಿಗಳಿಗೆ ಈ ಶಾಸನದಿಂದ ವಿಶೇಷ ಲಾಭವಾಗುತ್ತದೆ.

ಪ್ರಭಾಕರದಾಸನ್, ಭಾನುದಾಸನ್, ಜಯಮಿತ್ರನ್, ಎಂಬ ಪೂರ್ಣ ಸಂಸ್ಕೃತ ಹೆಸರುಗಳ ಸಂಯೋಜನೆಯನ್ನೂ ನೋಡುತ್ತೇವೆ:

"ದಾಸಿ ಅಮ್ಮನ್, ಊನರವ್ವೈಶಿಕನ್,
ಒಡಿವೆಚ್ಚಿರಾಯಿಳನ್, ಇಗ್ಗೊಳನ್,
ಮನುಜಾಗರನ್, ಅಣ್ಣನವತಿಗನ್,
ಅನ್ತಕಙ್ಗಙ್ಙದೊನ್"

ಎಂಬ ಸಂಸ್ಕೃತ-ಕನ್ನಡ ಮಾತುಗಳನ್ನು ಜೋಡಿಸಿದ ಅಂಕಿತ ನಾಮಗಳನ್ನೂ ನೋಡುತ್ತೇವೆ. ಸಂಸ್ಕೃತ ವಿಶೇಷಣಗಳನ್ನು ಕನ್ನಡಕ್ಕೂ, ಕನ್ನಡ ವಿಶೇಷಣಗಳನ್ನು ಸಂಸ್ಕೃತಕ್ಕೂ, ಹಚ್ಚುವ ಪ್ರಯೋಗದ ಕಾಲವೂ ಹಿಂದೆ ಇತ್ತೆಂಬುದಿಲ್ಲಿ ಕಂಡುಬರುತ್ತದೆ.

ಕ್ರಮವಿಪರ್ಯಯ

ಬಿಜಾಪುರ ಜಿಲ್ಲೆ ಬಾಗೆವಾಡಿ ತಾಲ್ಲೂಕು, ಹೂವಿನ ಹಿಪ್ಪರಗಿಯೆಂಬುದು ಗ್ರಾಮ. ಆ ಗ್ರಾಮ ದ್ವಾರದಲ್ಲಿ ಒಡೆದು ಬಿದ್ದಿರುವ ಕಲ್ಲುಕಂಬದ ಮೇಲೆ ಒಂದು ಶಾಸನವಿದೆ.[2] ಅದು ರಾಷ್ಟ್ರಕೂಟ ನೃಪತುಂಗ ಅಮೋಘವರ್ಷನ ಆಳ್ವಿಕೆಯ (ಕ್ರಿ. ಶ. ೮೬೨) ಕಾಲದ್ದು.

1. Nos. 21, 22, 23 of M.A.R. 1939.
2. No. 8. Bombay-Karnatak Inscriptions, S. I. I. Vol. XI-1.

"ಜ್ಯೋತಿಷ, ಶಕುನ, ನಿಮಿತ್ತಂಗಳಂ ಬಲ್ಲ" ಗೋಲೆಯ ಭಟ್ಟನಿಗೆ ಸಿಪ್ಪರಗೆ ಗ್ರಾಮವನ್ನು ಸರ್ವಬಾಧಾ ಪರಿಹಾರವಾಗಿ ದತ್ತಿಯಾಗಿ ಕೊಡಲಾಯಿತೆಂಬ ಅಂಶ ವನ್ನು ಕುರಿತು ಈ ಶಾಸನದಲ್ಲಿ ಹೇಳಲಾಗಿದೆ.

ಕಂಬದ ಮೊದಲನೆಯ ಮುಖದಲ್ಲಿ ಹದಿನಾಲ್ಕು ಸಾಲು ಗಳು, ಎರಡನೆಯ ಮುಖದಲ್ಲಿ ಹನ್ನೊಂದು ಸಾಲುಗಳು, ಒಟ್ಟು ಹದಿನೇಳು ಸಾಲುಗಳ ಶಾಸನವಿದು.

> "ಸ್ವಸ್ತ್ಯಮೋಘವರ್ಷ ಶ್ರೀ ಪೃಥುವೀ ವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಾ ಭಟಾ ರರಾ ರಾಜ್ಯಾಭಿವೃದ್ಧಿ ಸಲಿ ಸಖ ನೃಪ ಕಾಲಾ ತೀತ ಸಂವತ್ಸರಂಗಳೆಲ್ಟ್ನೂಱು ಎಣ್ಬತ್ತಾ ನಾಲ್ಕನೆಯ ಚಿತ್ರಭಾನು ಎನ್ಬ ವರ್ಷಂ ಪ್ರವ ರ್ತಿಸೆ"

ಅನ್ನುವವರೆಗೆ (ಸಾಲು ೧ರಿಂದ ೧೨ರ ಮಧ್ಯದವರೆಗೆ) ಕನ್ನಡ ಭಾಷೆಯಲ್ಲಿದೆ.

> "ಕನ್ನವುರಿ ವಿಷಯೇ ಸಿರ್ಮಲಗೆ ಪೂರ್ವಾದಿಗ್ಭಾಗೇ ಕೃಷ್ಣಬೆಣ್ಣೋತ್ತರ ಪಥೇ ಬಾಸುರಿಕೋಡು, ಇಂಗಳಿಸರ, ಬಾಗೆವಾಡಿ, ಸಾಮುಳವಾಡಿಗೆ, ಒಡ್ಡ ಮಾತಿಗೆ, ಮಧ್ಯವರ್ತಿ ಪಿಪ್ಪರಗೆ ನಾಮ ಗ್ರಾಮೋ ಸರ್ವಬಾಧ ಪರಿಹಾರೇಣ"

ಇದಿಷ್ಟು (೧೨ನೆ ಸಾಲಿನ ಮಧ್ಯದಿಂದ ೨೨ನೆಯ ಸಾಲಿನ ಮಧ್ಯದವರೆಗೆ) ಸಂಸ್ಕೃತ ಭಾಷೆಯಲ್ಲಿದೆ. ೨೨ನೆಯ ಸಾಲಿನ ಮಧ್ಯದಿಂದ ೨೭ನೆಯ ಸಾಲಿನವರೆಗೂ ಮತ್ತೆ ಕನ್ನಡದಲ್ಲಿ,

> "ದತ್ತಿ ಜೋತಿಷ, ಶಕುನ, ನಿಮಿತ್ತಂಗಳಂ ಬಲ್ಲ ಹಗೆ ಪ್ರತ್ಯಗೆಯ್ದು ಮಹಾಸಾಮನ್ತರು, ಮಣ್ಡ ಲೀಕರು ಮಱಯೆ ಪಡೆದಂ ಗೋಲೆಯಭಟ್ಟವರ್"

ಎಂದಿದೆ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡೂ ಹೇಗೆ "ಸಹಬಾಳ್ವೆ" ನಡೆಸುತ್ತಿದ್ದುವೆಂಬುದಕ್ಕೆ ಇದೊಂದು ಉದಾಹರಣೆ.

ಶಿಲಾಶಾಸನಗಳಲ್ಲಾಗಲಿ, ತಾಮ್ರಶಾಸನಗಳಲ್ಲಾಗಲಿ, ಸಾಮಾನ್ಯವಾಗಿ ಶಾಸನದ ಪ್ರಧಾನ ಭಾಗವೆಲ್ಲ ಸಂಸ್ಕೃತ ದಲ್ಲಿರುತ್ತದೆ. ಆದರೆ ದಾನಮಾಡಿದ ಭೂಮಿ ಅಥವಾ ಗ್ರಾಮದ ಮೇರೆಗಳ ವಿವರಗಳೆಲ್ಲ ಕನ್ನಡದಲ್ಲಿರುತ್ತವೆ. ಈ ಶಾಸನದಲ್ಲಿ ಮಾತ್ರ ಕ್ರಮವಿಪರ್ಯಯವಾಗಿದೆ! ಇದೊಂದು ವಿಶೇಷ.

ಪೊಲೆ ಅಂದರೇನು?

ಹೊನ್ನಾಳಿ ತಾಲ್ಲೂಕು ಬೆಳಗುತ್ತಿ ಮಜರೆ ಮಲ್ಲಿಗೇನ ಹಳ್ಳಿ ಆಂಜನೇಯನ ಗುಡಿ ಮುಂದೆ ಇರುವ[1] ವೀರಗಲ್ಲಿನ ಮೂರು ಪಾದಗಳು,

> "೧. ಶ್ರೀಮತ್ ಬಳ್ಳವೆನಾಡ ವಂಗೆಯ ದಾ
> ೨. ಸರನ ಪೆಂಮ್ಮಕೇತಯ್ಯ ನೆಲವತ್ತಿ
> ೩. ಯ ಪೊಲೆಗೆ ತಾಗಿ ಕಾದಿ ಸತ್ತಮಂಗಳ"

ಪೆಮ್ಮಕೇತಯ್ಯ ಹೊಡೆದಾಟದಲ್ಲಿ ಬಿದ್ದು ಸತ್ತ. "ಪೊಲೆಗೆ ತಾಗಿ" ಎಂಬ ಮಾತಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. "ತಾಗಿ" ಅರ್ಥವಾಗುತ್ತದೆ; "ಪೊಲೆಗೆ" ಅಂದರೇನು?

'ಪೊಲೆ' ಎಂದರೆ ಸಾಮಾನ್ಯವಾಗಿ 'ಮೈಲಿಗೆ', 'ಸೂತಕ', 'ನೀಚ' ಎಂಬುದು ಅರ್ಥ. ಈ ಮಾತು ಹೊಸಕನ್ನಡದಲ್ಲಿ 'ಹೊಲೆ'ಯಾಗಿದೆ; "ಹೊಲಸು" ಎಂಬ ಮಾತನ್ನು ಯಾವ ಅರ್ಥದಲ್ಲಿ ಬಳಸುತ್ತಿದ್ದೇವೆಂಬು ದನ್ನು ಕುರಿತು ವಿವರಣೆ ಕೇಳಬೇಕಿಲ್ಲ. 'ಹೊಲೆಯ' ಎಂಬ ಮಾತು ಈ ಮೂಲವಾಗಿಯೇ ರೂಪುಗೊಂಡಿರ ಬೇಕು. 'ಪೊಲೆ' ಅಂದರೆ 'ಅಂಟು' ಎಂಬ ಅರ್ಥವೂ ಉಂಟು.

ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಮಿತ್ರರೊಬ್ಬರು ತಮ್ಮ ಕಡೆ "ಹೊಲೆ", "ಹೊಲ್ಮೆ" ಎಂಬ ಮಾತುಗಳು ಇಂದಿಗೂ ಬಳಕೆಯಲ್ಲಿವೆಯೆಂದು ಹೇಳಿ, "ಹೊಲ್ಮೆ" ಯ ಪ್ರಯೋಗ ತೋರಿಸಲು ಈ ವಿವರ ಕೊಟ್ಟರು:

> "ನಾವು ನಿಮಗೆ ನೂರು ರೂಗಳನ್ನು ಮುಂಗಡ ವಾಗಿ ಕೊಡುತ್ತೇನೆ. ನೀವು ಅದನ್ನು ಹತ್ತು ಮಣ ಅಡಿಕೆಯ ರೂಪದಲ್ಲಿ ಹಿಂದಕ್ಕೆ ಕೊಡ ಬೇಕು. ಅಂದರೆ ಆಗ ಮಣಕ್ಕೆ ಹತ್ತು ರೂಗಳಂತೆ ಅಂದಾಜಿನ ಲೆಕ್ಕ. ಹಿಂದಕ್ಕೆ ಕೊಡಬೇಕಾಗಿ ಬಂದಾಗ ಆ ಲೆಕ್ಕದಂತೆ ಕೊಡಬೇಕು. ಅದಕ್ಕೆ "ಹೊಲೆ" ಎಂದು ಹೆಸರು. ಆಗ ನೀವು ಈಗಿನ ದರ ಮಣಕ್ಕೆ ೧೫ ರೂಗಳಾಗಿವೆ. ಆ ದರದಂತೆ ಲೆಕ್ಕಹಾಕಿ ಅಡಿಕೆ ಕೊಡುತ್ತೇನೆ ಅನ್ನುವಿರಿ. ಆಗ ನಮ್ಮಿಬ್ಬರಿಗೂ ಜಗಳವಾರಂಭವಾಗುತ್ತದೆ."

ಶಾಸನದಲ್ಲಿ "ಪೊಲೆ" ಅಂದರೆ ಈ ಅರ್ಥವಿರಬಹುದೆಂದು ಊಹಿಸಲು ಅವಕಾಶವಿದೆ. Barter ಎಂಬ ಆಂಗ್ಲ

---

1. No. 68, M.A.R. 1942.

ಪದದ ಅರ್ಥವೇ ಇದಕ್ಕಿರಬಹುದು. 'ಪೊಲೆ' ಅಂದರೆ 'ವಿನಿಮಯ'.

ಕನ್ನಡ - ಕರ್ನಾಟ

ಸಾವಿರ ವರ್ಷಗಳ ಮೇಲಾಯಿತು ರಾಷ್ಟ್ರಕೂಟ ನೃಪತುಂಗ 'ಕವಿರಾಜ ಮಾರ್ಗ' ರಚಿಸಿ. ಅದರಲ್ಲೇ ಎರಡು ಕಂದಪದ್ಯಗಳಿವೆ :

" ಮಿಗೆ ಕನ್ನಡ ಕಬ್ಬಂಗಳೊ
ಳಗಣಿತಗುಣ ಗದ್ಯಪದ್ಯ ಸಂಮಿಶ್ರಿತಮಂ
ನಿಗದಿಸುವರ್ಗ್ಗದ್ಯ ಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯ್ಯರ್ಕಳ್ "

"ಕಾವೇರಿಯಿಂದಮಾ ಗೋ
ದಾವರಿ ವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ "

ಮೊದಲನೆಯ ಪದ್ಯದಲ್ಲಿ "ಕನ್ನಡ ಕಬ್ಬಂಗಳ್" ಎಂಬದಾಗಿ ಹೇಳಿದ. ಎರಡನೆಯ ಪದ್ಯದಲ್ಲಿ "ನಾಡದಾ ಕನ್ನಡದೊಳ್" ಅಂದ. ಮೊದಲದರಲ್ಲಿ ನುಡಿಯೆಂದೂ, ಎರಡನೆಯದರಲ್ಲಿ ನಾಡೆಂದೂ "ಕನ್ನಡ" ಶಬ್ದವನ್ನು ಬಳಸಿದ. ಅವನ ಅಭಿಪ್ರಾಯದಲ್ಲಿ "ಕನ್ನಡ" ಭಾಷಾ ವಾಚಕವೂ ಹೌದು; ದೇಶವಾಚಕವೂ ಹೌದು.

ಆದಿಕವಿ ಪಂಪನಾದರೋ—

" ರಾಜ ಸುಧಾನಿಯ ಪುಟವಹ
ಸಾಜದ ಪುಲಿಗೆಱೆತೆಯ ತಿರುಳ ಕನ್ನಡದೊಳ್ "

ತನ್ನ ಗ್ರಂಥಗಳನ್ನು ರಚಿಸುವುದಾಗಿ ಹೇಳಿದ್ದಾನೆ. ಕನ್ನಡ ವಿಲ್ಲಿ ಭಾಷಾವಾಚಕ.

'ಛಂದೋಂಬುಧಿ'ಕಾರ ನಾಗವರ್ಮ—

" ದ್ರವಿಡಾಂಧ್ರ ಕರ್ಣಾಟಾದಿ ಷಟ್ಪಂಚಾ
ಶತ್ಸರ್ವ ವಿಷಯ ಭಾಷಾ ಜಾತಿಗಳಕ್ಕುಂ"

ಅನ್ನುವಾಗ 'ದೇಶ-ಭಾಷೆ' ಎರಡಕ್ಕೂ ದ್ರಾವಿಡ, ಆಂಧ್ರ, ಕರ್ಣಾಟ, ಶಬ್ದಗಳನ್ನು ಉಪಯೋಗಿಸಿರುವಂತೆ ಕಂಡುಬರುತ್ತದೆ.

ಇಮ್ಮಡಿ ದೇವರಾಯನ ಆಸ್ಥಾನಕ್ಕೆ ಬಂದು, ಬಾಗಲು ಕಾದು ಬೇಸತ್ತು,

" ಕನ್ನಡ ರಾಜ್ಯಲಕ್ಷ್ಮೀ! ದಯಲೇದಾ
ನೇನು ಶ್ರೀನಾಥುರ್ಡ "

ಎಂಬುದಾಗಿ ಮಹಾಕವಿ ಶ್ರೀನಾಥ "ಕನ್ನಡ ರಾಜ್ಯ" ವೆಂದು ಕರೆದ.

ಕೃಷ್ಣದೇವರಾಯನಾದರೋ ತನ್ನ ಕೃತಿ "ಆಮುಕ್ತ ಮಾಲ್ಯ"ದಲ್ಲಿ "ಕನ್ನಡ ರಾಜ್ಯ ರಮಾರಮಣ"ನೆಂದು ಕರೆದುಕೊಂಡಿದ್ದಾನೆ. ಇಬ್ಬರು ತೆಲುಗು ಮಹಾ ಕವಿಗಳೂ "ಕನ್ನಡ"ವನ್ನು ದೇಶವಾಚಕವನ್ನಾಗಿ ಬಳಸಿದ್ದಾರೆ.

ಆಂಧ್ರ ಭಾರತ ರಚಿಸಿದ ನನ್ನಯ ಭಟ್ಟಾರಕನಿಗೆ ನೆರವಾದ ನಾರಾಯಣ ಭಟ್ಟನನ್ನು ಕುರಿತು ನನ್ನಯನೇ ಬರೆದ ನಂದಂಪೂಡಿ ತಾಮ್ರ ಶಾಸನದಲ್ಲಿ,

" ಯಸ್ಸಂಸ್ಕೃತ ಕರ್ಣಾಟ ಪ್ರಾಕೃತ ಪೈಶಾಚಿ
ಕಾಂಧ್ರ ಭಾಷಾಸು ಕವಿರಾಜಶೇಖರ ಇತಿ
ಪ್ರಥಿತಃ ಸುಕವಿತ್ವ ವಿಭವೇನ "

ಎಂದಿದೆ. ನನ್ನಯನಿಲ್ಲಿ 'ಕರ್ಣಾಟ'ವನ್ನು ಭಾಷಾವಾಚಕವಾಗಿ ಉಪಯೋಗಿಸಿದ್ದಾನೆ.

" ಎವ್ವರೇಮನ್ನನೇಮಿ ನಾದು ಕರ್ಣಾಟ ಭಾಷಾ"

ಎಂದು ಶ್ರೀನಾಥ ಉತ್ತರಕೊಟ್ಟ! ಇಲ್ಲಿ ಕರ್ಣಾಟ ಭಾಷಾವಾಚಕವಾಯಿತು. ಇದೇ ಶ್ರೀನಾಥ 'ಕಾಶೀ ಖಂಡ' ದಲ್ಲಿ "ಕರ್ಣಾಟ ಕ್ಷಿತಿನಾಥ ಮೌಕ್ತಿಕ ಸಭಾಗಾರಾಂತ" ಇತ್ಯಾದಿಯಾಗಿ ಕೃತಿಪತಿಯನ್ನು ಹೊಗಳಿದ್ದಾನೆ.

ಕನ್ನಡನಾಡಿನ ಶಿಲಾ ಶಾಸನಗಳಲ್ಲಿ ಅನೇಕ ಕಡೆ 'ಕರ್ನಾಟಕ', 'ಕನ್ನಡ' ಎಂಬೀ ಮಾತುಗಳೆರಡನ್ನೂ ದೇಶವಾಚಕವನ್ನಾಗಿಯೂ, ಭಾಷಾವಾಚಕವನ್ನಾಗಿಯೂ, ಉಪಯೋಗಮಾಡಿರುವುದು ಕಂಡುಬರುತ್ತದೆ.

ಇಂದು ಸಹ ಲೇಖಕರನೇಕರು ಇವೆರಡೂ ಮಾತುಗಳನ್ನೂ 'ನಾಡುನುಡಿ' ಇವೆರಡರ್ಥದಲ್ಲೂ ಉಪಯೋಗಿಸುತ್ತಿದ್ದಾರೆ. ಇನ್ನುಮುಂದಾದರೂ "ಕನ್ನಡ" ಶಬ್ದವನ್ನು ಭಾಷೆಯನ್ನು ಸೂಚಿಸುವುದಕ್ಕೂ, 'ಕರ್ಣಾಟಕ' ಶಬ್ದವನ್ನು ದೇಶವನ್ನು ಸೂಚಿಸುವುದಕ್ಕೂ, ಮಿತಿಗೊಳಿಸುವ ಸಂಪ್ರದಾಯವನ್ನು ಆರಂಭಿಸುವುದು ಸರಿ. ಖಚಿತಾರ್ಥ ಬಯಸುವಾಗ ಒಂದು ಮಾತಿಗೆ ಒಂದು ಅರ್ಥವನ್ನು ನಿಗದಿಮಾಡಿ, ಆ ಮಾತನ್ನು ಆ ಅರ್ಥದಲ್ಲೇ ಪ್ರಯೋಗ ಮಾಡಬೇಕು. ಆಗ ಭಾಷೆಗೊಂದು ಕಿರಣದ್ಯುತಿ ಬರುತ್ತದೆ.

ಕಾರ್ಪಣ್ಯಯೋಗ

ಡಾ. ಮ. ಸು. ಕೃಷ್ಣಮೂರ್ತಿ

(ಏಪ್ರಿಲ್ ಸಂಚಿಕೆಯಿಂದ ಮುಂದುವರಿದುದು)

ಹಣ ಎಂದರೆ ಹೆಣವೂ ಎದ್ದು ನಿಲ್ಲುವುದಂತೆ. ಆದರೆ ಜಿಪುಣ ಎಂದರೆ ಹಣವೂ ಹೆಣವಾಗುತ್ತದೆ. ಈ ರೀತಿ ಹಣದ ಶಕ್ತಿಯನ್ನೆಲ್ಲ ನಾಶಮಾಡಿ ಅದನ್ನು ಬರಿಯ ಲೋಹದ ತುಂಡುಗಳನ್ನಾಗಿ, ಕಾಗದದ ಚೂರುಗಳನ್ನಾಗಿ ಪರಿವರ್ತಿಸುವ ಈ ಮಂತ್ರವಾದಿ ಜಿಪುಣನನ್ನು ಪಾಶ್ಚಾತ್ಯ ಲೇಖಕನೊಬ್ಬನು ಪ್ರಾಚೀನ ನಾಣ್ಯಶಾಸ್ತ್ರಜ್ಞನಿಗೆ ಹೋಲಿಸಿದ್ದಾನೆ. ಹೌದು, ನಾಣ್ಯಶಾಸ್ತ್ರಜ್ಞ ಪ್ರಾಚೀನ ನಾಣ್ಯ-ಸಮುಕಲ ನಾಣ್ಯಗಳನ್ನಿಟ್ಟುಕೊಂಡು ಅದರ ಆಧಾರದ ಮೇಲೆ ಐತಿಹಾಸಿಕ ಅನ್ವೇಷಣೆ ನಡೆಸುತ್ತಾನೆ. ಐತಿಹಾಸಿಕ ಅನ್ವೇಷಣೆಗೆ ಮಾತ್ರ ಆ ನಾಣ್ಯಗಳು ಸಹಾಯಕ, ಬೇರಾವ ಮೌಲ್ಯವೂ ಅವಕ್ಕಿಲ್ಲ. ಜಿಪುಣನ ಹಣದ ಹಣೆಯ ಬರಹವೂ ಅಷ್ಟೇ. ಹಳೆಯ ನಾಣ್ಯದಷ್ಟು ಉಪಯೋಗವೂ ಅವಕ್ಕಿಲ್ಲ. ಹಣದ ಈ ನಿರ್ವೀರ್ಯೀಕರಣ ಕೃಪಣನ ಪವಾಡವಲ್ಲವೆ?

ಮೊನ್ನೆ ತಾನೇ ನಾವು ರೂಪಾಯಿನ ಅವಮಾನವನ್ನು ಕಂಡೆವು. ಹಾಗೆ ಹಣಕ್ಕೆ ಅವಮಾನ ಮಾಡಿದ ಅರ್ಥ ಸಚಿವರ ಮೇಲೆ ಬೈಗುಳಗಳ ಸುರಿಮಳೆಯೇ ನಡೆಯಿತು. ಆದರೂ ರೂಪಾಯಿಯನ್ನು ಅವಮಾನ ಮಾಡಿದ ಅವನ ಧೈರ್ಯವನ್ನು ನಾವು ಮೆಚ್ಚಲೇಬೇಕು. ಹಾಗಾದರೆ ಹಣದ ಅವಮಾನವಾಗಲಿ ಮಾರಣಹೋಮ ಮಾಡುವ ಜಿಪುಣನ, ಸಾಹಸ, ಮನೋಬಲವನ್ನು ಮೆಚ್ಚಬೇಡವೆ? ಒಮ್ಮೆ ರಾಮಕೃಷ್ಣ ಪರಮಹಂಸರನ್ನು ಪರೀಕ್ಷಿಸಲು ಒಮ್ಮೆ ನರೇಂದ್ರನು ಅವರ ಹಾಸಿಗೆಯ ಕೆಳಗೆ ಒಂದು ಚಿನ್ನದ ನಾಣ್ಯವಿಟ್ಟನಂತೆ. ಹಾಸಿಗೆಯ ಮೇಲೆ ಮಲಗಿದ ಕೂಡಲೆ ಅವರಿಗೆ ಚೇಳು ಕುಟುಕಿದಂತಾಯಿತು. ತಕ್ಷಣ ಅವರು ಹಾಸಿಗೆಯನ್ನು ಕೊಡವಿಸಿದಾಗ ಅದರಿಂದ ಚಿನ್ನದ ನಾಣ್ಯ ಹೊರಬಿತ್ತಂತೆ. ಹಣ ಚೇಳಿನಂತೆ ಆ ಮಹಾಪುರುಷರನ್ನು ಕುಟುಕಿತ್ತು. ನಮ್ಮ ಕೃಪಣ ಮಹಾಶಯ ಅದರ ಕೊಂಡಿಯನ್ನೇ ಕತ್ತರಿಸಿ, ಅದಕ್ಕೆ ದಾರ ಕಟ್ಟಿ ಆಟವಾಡಿಸುವ ಧೀರ. ಬಸವಣ್ಣನವರು, 'ಕಾಂಚನವೆಂಬ ನಾಯಯನೆಚ್ಚಿ ಕೆಟ್ಟೆನಯ್ಯ' ಎಂದು ಹೇಳಿ ಹಣವನ್ನು ನಾಯಿಗೆ ಹೋಲಿಸಿದ್ದಾರೆ. ಆದರೆ ಆ ನಾಯಿ ಜಿಪುಣನ ಮನೆಯಲ್ಲಿ ಬಾಲ ಅಲ್ಲಾಡಿಸದೆ. ಬಾಯಿಬಿಟ್ಟು ಬೊಗಳದೆ ಬಿದ್ದಿದೆ. ಜಿಪುಣನ ಈ ನಾಯಿ ಕಚ್ಚುವುದೂ ಇಲ್ಲ, ಬೊಗಳುವುದೂ ಇಲ್ಲ.

ಜಿಪುಣತನದಿಂದಲೇ ದೇವರನ್ನು ಕಂಡ ಮಹಾನುಭಾವರಿದ್ದಾರೆ, ದಾಸವರೇಣ್ಯರಾದ ಪುರಂದರದಾಸರೇ ಇದಕ್ಕೆ ಉದಾಹರಣೆ. ಹಣದ ಮೇಲೆ ಉತ್ಕಟವಾದ ಪ್ರೇಮವಿದ್ದುದರಿಂದಲೇ ಅವರು ಅಷ್ಟು ಬೇಗ ಅದನ್ನು ದೈವೀಪ್ರೇಮವಾಗಿ ಮಾರ್ಪಡಿಸಲು ಸಾಧ್ಯವಾಯಿತು. ಅಷ್ಟೇ ಅಲ್ಲ ಜಿಪುಣ ಭಕ್ತನಾದರೆ ಆ ಭಕ್ತಿ ಎಂಥ ಎತ್ತರಕ್ಕೆ ಹೋಗುತ್ತದೆ, ಅವನ ನಿಷ್ಠೆ ಎಷ್ಟು ಬಲವತ್ತರವಾಗಿರುತ್ತದೆ ಎಂಬುದನ್ನು ಪುರಂದರದಾಸರ ಕೆಲವು ಕೀರ್ತನೆಗಳಲ್ಲಿ ಮನಗಾಣಬಹುದು. ದೇವರು ಒಬ್ಬ ಜಿಪುಣ. ಬಡಪೆಟ್ಟಿಗೆ ಒಲಿಯುವನಲ್ಲ. ಅಂತಹವರನ್ನು ಒಲಿಸುವುದಕ್ಕೆ ಜಿಪುಣರೇ ಸರಿ.

ಪುರಂದರದಾಸರ ಹಟ ನೋಡಿ :

" ನೀ ಕೊಡೆ ನಾ ಬಿಡೆ ಕೇಳಯ್ಯ | ರಂಗ
ಗೋಕುಲತಿ ಪಗೋವಿಂದಯ್ಯ || ಪಲ್ಲವಿ ||

ನೋಡುವೆ ನಿನ್ನನು ಪಾಡುವೆ ಗುಣಗಳ |
ಬೇಡುವೆ ಕಾಡುವೆ ನಾಡೊಳಗೆ ||
ಮೋಡಿಯ ಬಿಡುಬಿಡು ಮೊದಲಿಗ ಬಡ್ಡಿಯ |
ಕಾಡಲಿ ತುರುಗಳ ಕಾಯ್ದರನ್ನ || ೧ ||

ಎಂಟಕ್ಷರವಿದೆ ಹೃದಯ ಸಾಕ್ಷಿಗಳಿವೆ |
ಗಂಟಿಗೆ ಮೋಸವೆ ದಾಸನಿಗೆ |
ಎಂಟೆಂಟೆನಿಸುವ ಬಂಟನ ಕೈಯಲಿ |
ತುಂಟತನವ ಬಿಡೊ ತುಡುಗರಸೊ || ೨ ||

ಅಪ್ಪ ಶ್ರೀ ಕೃಷ್ಣನೆ ಅಮರರಿಗೊಲಿದನೆ |
ಸರ್ಪನ ಮೇಲೊರಗಿಪ್ಪವನೆ ||
ಒಪ್ಪಿಸಿಕೊಟ್ಟರೆ ಪುರಂದರವಿಠಲನ |
ಒಪ್ಪುತ ಪಾಡುವೆ ನಡೆಮನೆಗೆ || ೩ ||

ಈ ರೀತಿ ಪುರಂದರದಾಸರು ದೇವರನ್ನೂ ಒಬ್ಬ ಜಿಪುಣನನ್ನಾಗಿ ಕಂಡಿದ್ದಾರೆ. ಅವನನ್ನು ಕಾಡಿಸಿ ಗೋಳು

ಹೊಯ್ದುಕೊಂಡಿದ್ದಾರೆ. ಬತ್ತಲೆ ನಿಂತರೂ ಬಿಡದ ಜಿಪುಣರವರು. ಭಕ್ತನೂ ಜಿಪುಣ, ದೇವರೂ ಜಿಪುಣನಾದರೆ ಕೇಳಬೇಕೆ?

ಆ ಕಿತ್ತಾಟವನ್ನು ನೋಡಬೇಕು :

"ಕೊಟ್ಟು ಹೋಗೆನ್ನ ಸಾಲವ| ಕಣ್ಣ
ಬಿಟ್ಟರಂಜುವನಲ್ಲ ಹೊರು ಕಳ್ಳ ಕೃಷ್ಣ ‖ ಪ ‖
ಕಾಲಕರೂಗಿ ಭೂಮಿದಾಡೆಯೊಳಟ್ಟರೆ|
ಮೇಲೆ ನೆಗೆದು ಬಾಯಿಬಿಟ್ಟರೆ‖
ಏಳುವರ್ಷದ ಬಡ್ಡಿಮೂಲ ಸಹಿತವಾಗಿ|
ತಾಳುವನಲ್ಲೇಳೋ ತಿರುಕ ಮುಂಡಾಳ ‖ ೧ ‖

ಕೊರಳುಗೊಯಿಕಪೂರ್ವ ಸಾಲವ ಕೊಡದೆ|
ತಿರುಗೋದು ವನವನ ಉಚಿತವೆ‖
ಎರಡೇಳುವರುಷಕ್ಕೆ ಎನಗೆ ನೀ ಸಿಕ್ಕಿದೆ|
ಒರಳಿಗೆ ಕಟ್ಟದೆ ಬಿಡುವೆನೆ ಕಳ್ಳ ‖ ೨ ‖

ಬತ್ತಲೆ ನಿಂತರೂ ಬಿಡುವೆನೆ ಬೆ|
ನ್ಹತ್ತಿ ನಿನಗೆ ಸದಾ ತಿರುಗುವೆ‖
ಹತ್ತಿದ ಕುದುರೆ ಸಹಿತವಾಗಿ ಹಿಡಿತಂದು‖
ಚಿತ್ತಕ್ಕೆ ಕಟ್ಟುವೆ ಪುರಂದರವಿಠಲ ‖ ೩ ‖

ಪುರಂದರ ದಾಸರಂತೆ ಬಸವಣ್ಣನವರು ಜಿಪುಣರಾಗಿಲ್ಲದಿದ್ದರೂ ದೇವರನ್ನು ಜಿಪುಣನಂತೆ ಕಂಡಿದ್ದಾರೆ; ದೇವರ ಜಿಪುಣತನವನ್ನು ಕಂಡುಕೊಂಡು ಎಚ್ಚರಗೊಂಡಿದ್ದಾರೆ. ಕೂಡಲಸಂಗಮದೇವ ಅವರ ಕಣ್ಣಿಗೆ ಮಹಾದೇವಸೆಟ್ಟಿಯಾಗಿ ತೋರಿದ ಪರಿಯನ್ನು ನೋಡಬೇಕು :

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ
ಒಮ್ಮನವಾದರೆ ಒಡನೆ ನುಡಿವನು,
ಇಮ್ಮನವಾದರೆ ನುಡಿಯನು;
ಕಾಣಿಯಸೋಲ, ಅಡ್ಡಗಾಣಿಯಗೆಲ್ಲ!
ಜಾಣ, ನೋಡವ್ವಾ, ನಮ್ಮ
ಕೂಡಲಸಂಗಮದೇವ!"

ಬಿಡುಗಾಸನ್ನೂ ಸೋಲದ ದೇವನನ್ನು ಒಲಿಸುವುದು ಬಿಡುಗಾಸನ್ನೂ ಬಿಡದ ಜಿಪುಣರಿಗೆ ಹೆಚ್ಚು ಸುಲಭವೆಂದು ಕಾಣುತ್ತದೆ. ಈ ರೀತಿ ಜಿಪುಣತನ ಮಾನವನಲ್ಲಿಯೇ ಅಲ್ಲ ದೇವರಲ್ಲಿಯೂ ಇದೆ ಎಂದಮೇಲೆ ಅದೊಂದು ದೈವೀ ಗುಣವಲ್ಲವೆ? ಹಾಗಾದರೆ ಅದನ್ನೇಕೆ ತಿರಸ್ಕರಿಸಬೇಕು?

ನಿಜವಾಗಿ ನೋಡಿದರೆ ಜಿಪುಣತನ ಒಂದು ಅಸಿಧಾರಾ ವ್ರತ. ಭಕ್ತಿಯೆಂಬುದು ಗರಗಸದಂತೆ ಬಾಳಬಾಯಧಾರೆ ಎಂದು ಬಸವಣ್ಣನವರು ಹೇಳಿದ್ದಾರೆ. ಅಂತೆಯೇ ಜಿಪುಣತನವೂ ಒಂದು ಕಠಿಣ ಸಾಧನೆ. ಅದನ್ನು ಉಳಿಸಿಕೊಳ್ಳಲು ಎಷ್ಟೊಂದು ನಿಷ್ಠುರ ಕಟ್ಟಿಕೊಳ್ಳಬೇಕು! ಅದೆಷ್ಟು ಜನರ ಶಾಪಕ್ಕೆ ಗುರಿಯಾಗಬೇಕು? ಲೋಕಾಪವಾದ, ಸ್ತುತಿ, ನಿಂದೆ ಇವೆಲ್ಲವನ್ನೂ ಧೀರತನದಿಂದ ಎದುರಿಸುವ ಜಿಪುಣರು ನಿಜವಾಗಿಯೂ ವೀರರು.

ರಾಗ ಬಂಧನವನ್ನು ಹರಿದೊಗೆಯುವುದು ಸಾಧಾರಣವಾದ ಕೆಲಸವೇನಲ್ಲ ಎಂಬುದನ್ನು ಸಾಧಕರ ಜೀವನವನ್ನು ಅವಲೋಕಿಸಿದಾಗ ಅರಿಯಬಹುದು. ಗಾಂಧೀಜಿಯವರನ್ನು ತಮ್ಮ ನಾಟಕ ನೋಡಲು ಬರುವಂತೆ ಪ್ರಯತ್ನಿಸಿ ವಿಫಲರಾದ ಕೈಲಾಸಂ ಅವರನ್ನು ಸಮಯ ಕೃಪಣ ಎಂದು ಕರೆದರು. ಈ ರೀತಿ ಕಾರ್ಪಣ್ಯ ಯೋಗಿಯ ಅನಿವಾರ್ಯ ಗುಣವೋ ಏನೋ ಎನ್ನಿಸುತ್ತದೆ.

ಜಿಪುಣರಾದವರು ಸರ್ವಸಂಗ ಪರಿತ್ಯಾಗಿಗಳಾಗಿ ವಿರಕ್ತರಾಗುವುದು ಬಹು ಸುಲಭ ಎಂಬುದನ್ನು ಪುರಂದರ ದಾಸರ ಬದುಕಿನಲ್ಲಿ ಕಂಡೆವು. ಜಿಪುಣರಿಗೂ ಯೋಗಿಗಳಿಗೂ ಸಮಾನ ಧರ್ಮವೇ ಹೆಚ್ಚು. ಅವರಿಬ್ಬರಲ್ಲಿ ಒಂದರಲ್ಲಿ ಮಾತ್ರ ಅಂತರ. ಜಿಪುಣ ದುಡ್ಡೇ ದೇವರು ಎಂದರೆ, ಯೋಗಿ ದೇವರೇ ಹಣ, ಸರ್ವಸ್ವ ಎನ್ನುತ್ತಾನೆ. ಜಿಪುಣನಲ್ಲಿ ಯೋಗಿಯ ಎಲ್ಲ ಸ್ಥಿತಪ್ರಜ್ಞತೆ, ಚಿತ್ತಸಂಯಮಗಳಿರುವುದರಿಂದ ಅವನು ದೈವಭಕ್ತನಾಗಿ ಭಕ್ತಿಯೋಗಿಯಾಗಿ ಪರಿಣಮಿಸುವುದು ತಡವಾಗುವುದಿಲ್ಲ. ದಾರಿ ಒಂದೇ, ಗುರಿ ಬೇರೆ. ದಾರಿ ಒಂದಾದ ಮೇಲೆ ಗುರಿ ಬದಲಾಯಿಸುವುದು ತಡವಾಗುವದಿಲ್ಲ. ಸ್ವಾರ್ಥ ಒಂದೇ ಆಡಳಿತ ಪಕ್ಷವಾಗಲೀ ವಿರೋಧ ಪಕ್ಷದವರಾಗಲೀ, ಆದರೆ ಗುರಿ ಮುಟ್ಟಲು ಅವರು ವೇಷ ಬದಲಾಯಿಸಬೇಕು, ಟೋಪಿ ಬದಲಾಯಿಸಬೇಕು, ಅಷ್ಟೆ. ಮೂಲ ಗುಣ ಮಾತು ಒಂದೇ.

'ಯೋಗ'ವೆಂದರೆ 'ಕೂಡುವುದು' ಎಂಬ ಅರ್ಥವಿದೆ. ಈ ಅರ್ಥದಲ್ಲೂ ಜಿಪುಣ ಯೋಗಿಯೇ ಸರಿ. "ಯೋಗಃ ಚಿತ್ತವೃತ್ತಿ ನಿರೋಧಃ." ಚಿತ್ತವೃತ್ತಿ ನಿರೋಧವೇ ಯೋಗವಾದರೆ ಜಿಪುಣತನವೂ ಯೋಗವೇ ಅಲ್ಲವೆ? ಹಣ ಕೂಡಿಸುವುದರಲ್ಲೇ ಇಷ್ಟೊಂದು ತನ್ಮಯತೆಯನ್ನು ತೋರಿಸಬೇಕಾದರೆ 'ಪರಮಧನ'ವಾದ ಪ್ರಭುವನ್ನು ಕೂಡುವುದರಲ್ಲಿ ಅವನು ಇನ್ನೂ ಹೆಚ್ಚಿನ ತತ್ಪರತೆಯನ್ನು ತೋರಿಸು

ತ್ತಾನೆ. ಈ ರೀತಿ ಕಾರ್ಪಣ್ಯ ದೋಷವಲ್ಲ. ಅದು ಜ್ಞಾನ ಯೋಗ, ಭಕ್ತಿ ಯೋಗಗಳಂತೆ ಒಂದು ದೊಡ್ಡ ಯೋಗ.

ಅಷ್ಟೇ ಅಲ್ಲ ಒಂದು ದೃಷ್ಟಿಯಲ್ಲಿ ಅದು ಎಲ್ಲ ಯೋಗಿಗಳಿಗಿಂತಲೂ ದೊಡ್ಡದು. ಯೋಗಿಯಾದವನು ಸರ್ವ ಸಂಗ ಪರಿತ್ಯಾಗಿಯಾಗಿ ಕಾಡಿಗೆ ಹೋಗಿ ಯೋಗ ಸಾಧನೆ ಮಾಡುತ್ತಾನೆ. ಈ ಜಗತ್ತಿನಿಂದ ಓಡಿ ಹೋಗುವುದು ಒಂದು ರೀತಿಯ ಪಲಾಯನವಾದ. ಅಭಾವ ವೈರಾಗ್ಯ. ಆದರೆ ಜಿಪುಣನದು ಹಾಗಲ್ಲ. ಭೋಗ ವಸ್ತುಗಳಿಂದ ದೂರವಿದ್ದು ಚಿತ್ತನಿರೋಧ ಮಾಡುವುದು ದೊಡ್ಡದಲ್ಲ. ಅವುಗಳ ನಡುವೆಯೇ ಇದ್ದು ಮನಸ್ಸನ್ನು ಗೆಲ್ಲುವುದು ನಿಜವಾದ ಸಾಧನೆ. ಒಬ್ಬ ಗ್ರೀಕ್ ದಾರ್ಶನಿಕ ತನ್ನ ಕಣ್ಣೆದುರಿಗೆ ಬಾದಾಮಿ, ಕಲ್ಲುಸಕ್ಕರೆ, ದ್ರಾಕ್ಷಿ ಮೊದಲಾದುವುಗಳನ್ನು ಇಟ್ಟುಕೊಂಡು ಚಿತ್ತನಿರೋಧ ಮಾಡುತ್ತಿದ್ದನಂತೆ. ಜಿಪುಣನದೂ ಇಂತಹುದೇ ಸಾಧನೆ. ಅವನ ವೈರಾಗ್ಯ ಅಭಾವ ವೈರಾಗ್ಯವಲ್ಲ ಸ್ವಭಾವ ವೈರಾಗ್ಯ, ಸ್ವೇಚ್ಛಾ ವೈರಾಗ್ಯ. ಈ ರೀತಿ ಯೋಗಗಳಲ್ಲೆಲ್ಲ ಶ್ರೇಷ್ಠವಾದ ಈ ಕಾರ್ಪಣ್ಯ ಯೋಗವನ್ನು ಯೋಗಗಳ ರಾಜ ಅಥವಾ ರಾಜಯೋಗ ಎಂದು ಕರೆಯಬಹುದು.

ಯೋಗ ವೈಯಕ್ತಿಕವಾದ ಸಾಧನೆ. ಆದರೆ ಅದರ ಸಾಮೂಹಿಕ ಉಪಯೋಗದಿಂದ ರಾಷ್ಟ್ರ ಧರ್ಮವೂ ಆಗಬಲ್ಲುದು. ಸ್ಕಾಟ್‌ಲೆಂಡಿನ ಜನರು ಈ ಯೋಗವನ್ನು ಸಾಮೂಹಿಕವಾಗಿ ಮೈಗೂಡಿಸಿಕೊಂಡಿದ್ದಾರೆ. ನಮ್ಮಲ್ಲಿ ಮಾರ್ವಾಡಿಗಳೂ ಇದನ್ನು ಇದೇ ರೀತಿ ಒಗ್ಗಿಸಿಕೊಂಡಿದ್ದಾರೆ. ಜಿಪುಣನ ದೇವರು ಜಾತ್ಯತೀವಾದ, ಧರ್ಮಾತೀತವಾದಹಣ. ಜಾತ್ಯತೀತವಾದ ನಮ್ಮರಾಷ್ಟ್ರದಲ್ಲಿ "ಸರ್ವದೇವ ಬಹಿಷ್ಕಾರ"ವಾಗಿದೆ. ಯಾವುದೇ ಒಂದು ಧರ್ಮವನ್ನು, ದೇವರನ್ನು ರಾಷ್ಟ್ರ ಧರ್ಮ, ರಾಷ್ಟ್ರ ದೇವತೆ ಎಂದು ಅಂಗೀಕರಿಸುವಂತಿಲ್ಲ. ಜಾತ್ಯತೀತವಾದ ಕಾರ್ಪಣ್ಯಯೋಗ ರಾಷ್ಟ್ರ ಧರ್ಮವಾಗಲಿ. ರಾಷ್ಟ್ರದ ಜನತೆಯೆಲ್ಲ ಅದನ್ನು ಅನುಸರಿಸಿ ಇಹಪರಗಳೆರಡನ್ನೂ ಸಾಧಿಸಿಕೊಳ್ಳಲಿ. ಅದರಿಂದ ಆಧ್ಯಾತ್ಮಿಕ ಮೋಕ್ಷ ದೊರೆಯುವುದು ಕೊಂಚ ತಡವಾದರೂ ಆರ್ಥಿಕ ಮೋಕ್ಷವಂತೂ ಶತಸ್ಸಿದ್ಧ-ಶೀಘ್ರ

ಬಾಳು ಕನ್ನಡಕಾಗಿ

ಕೆ. ಆರ್. ಗಣೇಶರಾವ್

ನಾವು ಕನ್ನಡಿಗರು
ತಲೆಯ ತೂಗುವ "ಕೋಲೆ-ಬಸವ"ಗಳು
ನಮಗಿಲ್ಲ ನಮ್ಮ ನಿಲುವಿನ ಗೆಲವು-ಒಲವುಗಳು
ಕಂಡವರ ನೀತಿ-ನಡೆ ನೋಡಿ ನಡೆವವರು
ಕಂಡ ಕುಣಿತಕೆ ಕಾಲ ಕುಣಿಸುವವರು
ಹೌದಪ್ಪನೋಲಗದಿ ಹರಿವಾಣ ಹಿಡಿದವರು
ನಾವು ಕನ್ನಡಿಗರು

* * *

ನಾವು ಕನ್ನಡಿಗರು
ನೆರೆಯ ರಾಜ್ಯದಿ ತಮಿಳು ಬೆಳೆಯಿತಂತೆ
ಜನರ ಜೀವನ-ತಿರುಳು ಆಯಿತಂತೆ
ಆಗಲೇಳು ಅಲ್ಲೇಕೆ ಇಲ್ಲಿಯೂ ಕೂಡ
ಕನ್ನಡವ ತೂರಿ ಕಲಿಸು ಅದನು ಕೂಡ
ಮನೆ ಮಾರಿ ಮಾನವನು ಗಳಿಸ ಹೊರಟವರು
ನಾವು ಕನ್ನಡಿಗರು

ನಾವು ಕನ್ನಡಿಗರು
ಕೊಡುವುದನು ಕಲಿತ ಕರ್ಣ-ಕುಲದವರು
ಕೊಟ್ಟೆವಲ್ಲವೆ ಕಾಸರಗೋಡು ಮತ್ತಿತರ ಬೀಡು
ಬಿಟ್ಟೆವಲ್ಲವೆ ಬೇಡವೆಂದು ನಮ್ಮಯ ಗೂಡು
ಬಿಟ್ಟು ಕೆಟ್ಟರೂ ಬೀಗಿ ಮೆರೆಯುವವರು
ನಮ್ಮವನೂ ನಮ್ಮದೆನ್ನದ ನಾಡ-ನುಡಿಯವರು
ನಾವು ಕನ್ನಡಿಗರು

* * *

ನಾವು ಕನ್ನಡಿಗರು
ಮರೆಯದಿರು ಓ ತಮ್ಮ! ತಾಯಿಯನ್ನು
ಮರೆಯದಿರು ನಾವೆಲ್ಲ ಒಂದೆಯೆನ್ನು
ಬಾಳು ಕನ್ನಡಕಾಗಿ; ಕನ್ನಡವಾಗಿ
ಬಾಳಿ ಬೆಳಗಿಸು ಅದರ ಹಿರಿಮೆಯನ್ನು
ಸಿರಿಗನ್ನಡವೆ ಗೆಲ್ಗೆ; ಸಿರಿಗನ್ನಡವೆ ಬಾಳ್ಗೆ
ನಾವೆಂದೆಂದಿಗೂ ಕನ್ನಡಿಗರು

ಶ್ರೀ ವಾದಿರಾಜರ ಕನ್ನಡ ಕೃತಿಗಳು

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಶ್ರೀಮಧ್ವಾಚಾರ್ಯರು ಇಸ್ವಿ ೧೨೦೦-೭೮ರಲ್ಲಿದ್ದು, ಆ ಸೇತು ಹಿಮಾಚಲ ಪ್ರದೇಶದಲ್ಲಿ ದ್ವೈತಮತವನ್ನು ಪ್ರಚುರಿಸಿದರು. ಇವರ ಪೂರ್ವಾಶ್ರಮದ ತಮ್ಮನೂ ವಿರಕ್ತನಾಗಿ, ಇವರಿಂದಲೆ ಸನ್ಯಾಸಾಶ್ರಮವನ್ನು ಕೈಕೊಂಡನು. ಆ ವಿಷ್ಣುತೀರ್ಥರ ಉಡುಪಿಯ ಮಠದ ಪೀಳಿಗೆಯಲ್ಲಿ ಇಪ್ಪತ್ತನೆಯವರಾದ ಶ್ರೀ ವಾದಿರಾಜರು ಇಸ್ವಿ ೧೪೮೦-೧೬೦೦ ರಲ್ಲಿದ್ದರು. ಇವರು ಉತ್ತರ ಕನ್ನಡ ಜಿಲ್ಲೆಯ ಸುಧಾಪುರ-ಸ್ವಾದೀ-ಸೋದೆ-ಎಂಬಲ್ಲಿ ದೇವಾಲಯ ಶ್ರೀಮಠಗಳನ್ನು ಕಟ್ಟಿಸಿದರು. ಇದರಿಂದಾಗಿ, ಈ ಮಠದ ಪೀಳಿಗೆಗೆ 'ಶ್ರೀಸೋದಾಮಠ-ಶ್ರೀವಾದಿರಾಜರಮಠ' ದವರೆಂಬ ಹೆಸರಾದುದು. ಶ್ರೀ ವಾದಿರಾಜರು 'ಗುರುರಾಜ'ರೆಂದೂ ಪ್ರಸಿದ್ಧರಾಗಿದ್ದಾರೆ! ಏಕೆಂದರೆ ಶ್ರೀ ವಾದಿರಾಜರು-ಶ್ರೀ ರಾಘವೇಂದ್ರರಂತೆ-ತನ್ನ ಅಂತಿಮ ಕಾಲವನ್ನು ಮುಂದಾಗಿ ಸೂಚಿಸಿ, ವೃಂದಾವನಗತರಾಗಿ, ನಿರ್ಯಾಣರಾದರು. ಭಾವುಕರು ಇವರ 'ವೃಂದಾವನ'ದ ಸೇವೆಯಿಂದ ತಮ್ಮ ದುರಿತಗಳನ್ನು ದೂರಮಾಡಿಸಿ, ಇಷ್ಟಾರ್ಥಗಳನ್ನು ಪಡೆಯುತ್ತಿದ್ದಾರೆಂಬುದು ಅದ್ಯಾಪಿ ಉಲ್ಲೇಖನೀಯವು!

ಶ್ರೀ ವಾದಿರಾಜರು ಸಂಸ್ಕೃತಭಾಷೆಯಲ್ಲಿ 'ಯುಕ್ತಿಮಲ್ಲಿಕಾ' ಮೊದಲಾದ ಆರೆಂಟು ತಾತ್ತ್ವಿಕ ಗ್ರಂಥಗಳನ್ನು, 'ರುಕ್ಮಿಣೀಶವಿಜಯ' ಮೊದಲಾದ ಕಾವ್ಯ (ನಾಟಕ) ಗಳನ್ನೂ, ಕೃಷ್ಣಾಷ್ಟಕ ಮುಂತಾದ ಅನೇಕ ಸ್ತೋತ್ರಗಳನ್ನೂ ಬರೆದವರು. ಅಷ್ಟು ಮಾತ್ರವಲ್ಲ, ಕನ್ನಡದ ಜನತೆಯೂ ದ್ವೈತ ತತ್ತ್ವಗಳನ್ನು ತಿಳಿಯಬೇಕೆಂದು ಹಲವು ಗ್ರಂಥಗಳನ್ನು ಬರೆದಿದ್ದಾರೆ.

೧. ಶ್ರೀಮಧ್ವಾಚಾರ್ಯರು ಬರೆದ 'ಮಹಾಭಾರತ ತಾತ್ಪರ್ಯನಿರ್ಣಯ'ಕ್ಕೆ ಕನ್ನಡ ಭಾಷೆಯಲ್ಲಿ ಸುವಿಸ್ತಾರ ವ್ಯಾಖ್ಯೆಯನ್ನು ಬರೆದಿದ್ದಾರೆ. ಕನ್ನಡ ಭಾಷಾತ್ಮಕ ಸಾಹಿತ್ಯ ಗ್ರಂಥ ಪ್ರಪಂಚದಲ್ಲಿ ಇಷ್ಟು ದೊಡ್ಡ ತಾತ್ತ್ವಿಕ-ದ್ವೈತಮತೀಯ ಗ್ರಂಥವು ಬೇರೊಂದಿಲ್ಲ. ಇದು ಇಸ್ವಿ ೧೮೯೧ರಲ್ಲಿ ಬೆಳಗಾಂ 'ರಾಮತತ್ತ್ವ ಪ್ರಕಾಶನ' ಛಾಪಖಾನೆಯಲ್ಲಿ ಶ್ರೀ ಆಬಾಜೀ ರಾಮಚಂದ್ರ ಸಾವಂತರಿಂದ-ನೊತ್ತಮೊದಲಾಗಿ-ಸಂಸ್ಕೃತಾಕ್ಷರದಲ್ಲಿ ಮುದ್ರಿಸಲ್ಪಟ್ಟಿದೆ. ಅಗಲೇ ೧೩" × ೧೬" ಆಕಾರದ ಕಾಗದದಲ್ಲಿ ೬೯೪ ಪುಟಗಳಷ್ಟು ದೀರ್ಘ ಗ್ರಂಥವು ಮುದ್ರಿತವಾಗಿದೆ. ಇದೀಗ ಆ ಪ್ರತಿ ದೊರೆಯುತ್ತಿಲ್ಲವಾದುದರಿಂದ, ಪುನಃ ಮುದ್ರಣವಾಗುವುದು ಸೂಕ್ತವು. ಅಖಿಲಭಾರತ ಮಾಧ್ವಮಹಾಮಂಡಳದ ವತಿಯಿಂದಾಗಲಿ, ಉಡುಪಿ ಶ್ರೀ ಮಠಗಳ ಮೂಲಕವಾಗಲಿ, ಇತರ ಸಂಸ್ಥೆ ಸಂಘಗಳಾಗಲಿ ಈ ಮಹತ್ತರ ಕಾರ್ಯಕ್ಕೈಕಸುವಂತೆ ಆದರೆ ಸಂತೋಷವಾದೀತು; ಕನ್ನಡಿಗರಿಗೆ ದ್ವೈತಪ್ರಮೇಯಗಳು ಚೆನ್ನಾಗಿ ತಿಳಿಯಬಂದಾವೆಂದು ಭಾವಿಸಲಾಗುತ್ತದೆ.

೨. ಶ್ರೀವಾದಿರಾಜರು ಬರೆದ ಬೇರೆ ಕನ್ನಡ ಕೃತಿಗಳ ವಿಚಾರ ಹೀಗೆನ್ನಲಾಗಿದೆ. "ವೈಕುಂಠವರ್ಣನೆ, ಲಕ್ಷ್ಮೀಶೋಭನ, ಸ್ವಪ್ನಪದ, ಕೀಚಕವಧ, ಕೇಶವನಾಮ, ಗುಂಡಕ್ರಿಯೆ ಮುಂತಾದವಲ್ಲದೆ, 'ಹಯವದನ' ಮುದ್ರಿಕೆಯಲ್ಲಿ ಹಲವಾರು ಕೀರ್ತನೆ ಮತ್ತು ಸುಳಾದಿ-ಉಗಾಭೋಗಗಳನ್ನು ಬರೆದಿದ್ದಾರೆ." (ಶ್ರೀ ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ) ಅಂತೆ ಭ್ರಮರಗೀತೆ ಇತ್ಯಾದಿ ರಚಿಸಿದ್ದಾರೆ. "ಶಾಸ್ತ್ರೀಯ ಯುಕ್ತಿಗಳನ್ನು ಸಾಹಿತ್ಯ ಮುದ್ರೆಯಿಂದ ಮನಸ್ಸಿಗೆ ನೆಡುವಂತೆ ಸರಳವಾದ ಪ್ರೌಢ ಕನ್ನಡ ನುಡಿಯಲ್ಲಿ ಮುಖ್ಯಪ್ರಮೇಯವಾದ ಭಕ್ತಿಯಿಂದ ಶ್ರೀಹರಿಯನ್ನು ಒಲಿಸಿ ಮುಕ್ತಿಯನ್ನು ಪಡೆಯಬೇಕೆಂಬುದನ್ನು ಸಿದ್ಧಾಂತಿಸಿದ್ದಾರೆ. **ಇವರ ಕೃತಿಗಳಿಗೆ ಶಾಸ್ತ್ರೀಯ ಸಾಹಿತ್ಯವೆನ್ನಬಹುದು**" (ಶ್ರೀ ಆರ್. ಎಸ್. ಪಂಚಮುಖಿ: ಹರಿದಾಸ ಸಾಹಿತ್ಯ). ಈ ಚಿಕ್ಕ ಪುಟ್ಟ ಕೃತಿಗಳಲ್ಲಿ ಹಲವು ಈಗಲೆ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಬೆಂಗಳೂರ ಸುಬೋಧ ಪ್ರಕಟನಾಲಯಗಳಿಂದ ಹೆಚ್ಚು ಪ್ರಕಟವಾಗಿವೆ. ಪರಂತು ಅಪ್ರಕಟವಾದ ಇನ್ನೂ ಕೆಲವು ಕೃತಿಗಳು ಸಂಶೋಧನೆಗೆಳೆಸಿದರೆ ದೊರೆತಾವೆಂದು ತೋರುತ್ತದೆ.

ಮಂಗಳೂರು ತಾಲೂಕಿನ ಗುರುಪುರದ (ಗಂಜಿಮಠದ) ಬಳಿ ಶ್ರೀನಾರಳಮಠವಿದೆ. ಅಲ್ಲಿ ವರಾಹತೀರ್ಥ, ಭೂವರಾಹ ಮಂದಿರ, ಶ್ರೀ ವಾದಿರಾಜರಿಗಿಂತ ಎಂಟು ತಲೆಮಾರು ಹಿಂದಿನ ಶ್ರೀ ರತ್ನಗರ್ಭ ತೀರ್ಥರ ವೃಂದಾವನ, ಭೂತರಾಜರ ನೆಲೆ, 'ಸಿಲಿ ಚಾಮುಂಡಿ' (ವ್ಯಾಘ್ರ

ಚಾಮುಂಡಿ)ಯ ಗುಡಿಗಳು ಪ್ರಾಕೃತಿಕ ಶೋಭೆಯಿಂದ ಮತ್ತಷ್ಟು ಕಂಗೊಳಿಸುತ್ತವೆ. ಅಂತೆ, ಅಲ್ಲಿ ಹಲವಾರು ತಾಳೆಗರಿಯ ಹಾಗೂ ಮುದ್ರಿತ ಗ್ರಂಥಗಳಿವೆ. ಸಾಧಾರಣ ನೂರುವರ್ಷದ ಹಿಂದೆ ಬರೆದ ಶ್ರೀ ವಾದಿರಾಜರ ರೇಖಾ ಚಿತ್ರ ಮತ್ತು ಕನ್ನಡ ಕೃತಿಗಳುಳ್ಳ ಕಾಗದದ ಪ್ರತಿಯೂ ಇದೆ. ಶ್ರೀರಾಮಚಂದ್ರ ಉಪಾಧ್ಯಾಯರು ಮತ್ತೆ ಅನಂತ ಉಪಾಧ್ಯಾಯರು ಅವರ ದಯೆಯಿಂದ ಈ ಹಸ್ತಪ್ರತಿ ನನಗೆ ಸಿಕ್ಕಿದೆ. ಸಪ್ತಪದ್ಯ, ಲಕ್ಷ್ಮೀಶೋಭನ, ಕಲ್ಕಿ ಸುಳಾದಿ, ಮತ್ತು ಇತರ ಕೀರ್ತನೆಗಳು ಒಟ್ಟು ಅರವತ್ತು ಕೃತಿಗಳು ಅದರಲ್ಲಿವೆ. ಇದುವರೆಗೆ ಅಚ್ಚಾದ ಕೃತಿಗಳಿಗೂ ಇವಕ್ಕೂ ಅಲ್ಲಲ್ಲಿ ಕೆಲವು ವ್ಯತ್ಯಾಸಗಳಿವೆ. ಕನ್ನಡ ಸಾಹಿತ್ಯ ರಸಿಕರೂ, ಮಾಧ್ವ ಭಕ್ತರೂ ಇನ್ನೂ ಪರಿಶೋಧನೆ ಗೆಳಸಿದರೆ, ಇನ್ನೂ ಹೆಚ್ಚಿನ ಉಪಕಾರವಾದೀತೆಂದು ಹೇಳದಿರಲಾರೆನು! ಇದೀಗ ಕೆಲವು ಕೃತಿಗಳ ಲಘು ಪರಿಚಯಕ್ಕಿಳಿಸಿದೆ :

(೧) ಜಯ ಮಧ್ವವಲ್ಲಭ ಜಯ ಶುದ್ಧಸುಲಭ |
ಜಯ ಪದ್ಮನಾಭ ಉಡುಪಿನ |
ಜಯ ಪದ್ಮನಾಭ ಉಡುಪಿನ ಶ್ರೀಕೃಷ್ಣ
ಜಯ ದುರ್ಜನರಿಗೆ ಅತಿದೂರ | ಸುಪ್ರಿಸುಪ್ರಿ ||ಪ||

ಮೋಹನರಾಗ-ಆದಿತಾಳದಿಂದ ಹೇಳುವ ಈ ಪದ್ಯದಲ್ಲಿ ವೈಶಿಷ್ಟ್ಯವೆಂದರೆ ಶ್ರೀಕೃಷ್ಣ, ಮುಖ್ಯಪ್ರಾಣ, ಹನುಮ, ಭೀಮ, ಮಧ್ವರನ್ನು ಒಂದೊಂದು ಸೊಲ್ಲಿನಿಂದ ಹೊಗಳಿದೆ. ಮತ್ತೆ (ಮಧ್ವವಿಜಯದಲ್ಲಿ ಕಾವ್ಯ ಸೂಚ್ಯವಾಗಿ ಹೇಳಿದೆ) ಅಷ್ಟಮಠಗಳ ಮೂಲಯತಿಗಳಾದ ಹೃಷೀಕೇಶ, ನೃಸಿಂಹ, ಜನಾರ್ದನ, ಉಪೇಂದ್ರ, ವಾಮನ, ವಿಷ್ಣು, ರಾಮ, ಅಧೋಕ್ಷಜರನ್ನು ಮತ್ತು ಪದ್ಮನಾಭ ತೀರ್ಥರನ್ನು (ಉತ್ತ ರಾದಿಮಠ) ಅನುಕ್ರಮವಾಗಿ ಒಂದೊಂದು ಸೊಲ್ಲಿನಲ್ಲಿ ಹೊಗಳಿದೆ. ಕೊನೆಯ ಸೊಲ್ಲು ಹೀಗಿದೆ :

ದೇವ ಹಯವದನನ ಆವಾಗ ಪೂಜಿಪ |
ಪಾವನ ಮಧ್ವಮುನಿಪನ ||
ಪಾವನ ಮಧ್ವಮುನಿಪನ ಶಿಷ್ಯರಾದ |
ದೇವತಾಂಶಗಳ ಮೊರೆಹೊಕ್ಕೆ || ೧೫ ||

'ಗುರುರ್ಬ್ರಹ್ಮಾ ಗುರುರ್ವಿಷ್ಣುಃ' ಎಂಬಂತೆ ಈ ಗುರುಗಳೆಲ್ಲಾ ದೇವತಾಂಶರೆಂದು ಹೇಳಿದೆ. ಗುರುವಿನ ಅನುಗ್ರಹದ ಮೂಲಕ ದೇವನ ಒಲುಮೆಯಾಗುವುದೆಂಬುದೂ ಇಲ್ಲಿ ಸ್ಮರಣೀಯವಾಗಿದೆ!

(೨) ಕೃಷ್ಣ ಮೂರುತಿಯ ಮನದಿ ನೆನೆದು |
ತೃಷ್ಣೆಯ ಬಿಡಿಸುವೆ ನಾ || ಪ ||
ಎನ್ನ | ಘನ್ನ | ತೃಷ್ಣೆಯ ಬಿಡಿಸುವೆ ನಾ ||ಅ.ಪ.||
ಮುದ್ದುಮೊಗದ ಸುಳಿಗಲ್ಲದ |
ವಿದ್ರುಮಾಧರದ (ಚಂಪಕ) ನಾಸಿಕದ |
ಪದ್ಮದೆಸಳ ಪೋಲ್ವ ನಯನದ ನೊಸಳಿನೊ |
ಳಿದ್ದ ಕುಂತಲ ತತಿಯ | ಹುಬ್ಬುಗಳೆಂಬ |
ಸದ್ಧನುವಿನ ಸ್ಥಿತಿಯ | ಕರ್ಣದಲಿ ಸಂ |
ಬದ್ಧ ಕುಂಡಲ ತತಿಯ | ಈ ದೇವನ ||
ಸದ್ರತ್ನ ತಿಲಕದ ಸೊಬಗನ ಕಂಡರಾ |
ಗಿದ್ದವನವನೆ ಸುಖಿ | ಗೋಕುಲದೊಳ |
ಗಿದ್ದ ಮಾನವನೆ ಸುಖಿ | ಅಮ್ಮ ನಮ್ಮ || ೧ ||

ಧನ್ಯಾಸಿರಾಗ-ತಿಸ್ರತಾಳದಲ್ಲಿರುವ ಈ ಪದ್ಯದ ಮೂರು ಸೊಲ್ಲುಗಳು ಖಂಡತಾನಗಳ ಗತ್ತುಗಳಿಂದ ಹಾಡುಗಾರಿಕೆ ಗೊಂದು ವಿಶೇಷ ಶೋಭೆಯನ್ನು ಒದವಿಸುತ್ತದೆ. (ಆಧುನಿಕ ಕವಿತೆಗಳಲ್ಲಿ ಇಂತಹ ಖಂಡಗಳನ್ನು ಕಾಣುತ್ತೇವೆ: ಡಿ. ಎಸ್. ಕರ್ಕಿ ಕನ್ನಡ ಛಂದೋವಿಕಾಸ)

(೩) ಸಾಕು ಬರಹೇಳೆ ಮನೆಗೆ || ಪ ||
ನಮ್ಮ | ಶ್ರೀ ಕಾಂತನಲಿ ಪೋಗಿ ಕರತಾರೆ ಭಾಮೆ || ಅ. ಪ. ||
× × ಜರಿಗೆ ಪೀತಾಂಬರವು | ಉರದಲ್ಲಿ |
ಗುರುತೊಂದು ಶ್ರೀವತ್ಸವು ||
ತರುಣ ತುಲಸಿ ಮಾಲೆಯ | ಹಯವದನ |
ಧರಿಸಿ ಏತಕೆ ಬಾರನೆ || ೫ ||

ಕೇತಾರಗೌಳ ರಾಗ-ತಾಳ (?)ದ ಈ ಪದ್ಯದಲ್ಲಿ-ಮುಂದಿನ ಪದ್ಯದಂತೆ-ಮತ್ಸ್ಯಾದಿ ದಶಾವತಾರಗಳ ಸಂಗತಿಯಿದೆ. ಇದು ಗೋಪಿಯರ ವಿರಹಗೀತೆಯಂತಿದೆ. ಚಿಕ್ಕ ನುಡಿಗಳಿಂದ 'ಮನಂಬುಗು'ವಂತಿದೆ!

(೪) ತೋರೆ ನೀ ಬೇಗದಿ ತೋಯಜನಯನೆ |
ಮದ | ವಾರಣ ಗಮನೆ || ಪ ||
ಮಾರನ ತಾಪವ ಸಹಿಸಲಾರೆನೆ |
ನೀರೆ ನಿನಗೆ ಮುತ್ತಿನ ಹಾರವ ಕೊಡುವೆನೆ ||ಅ.ಪ.||
ನೀರೊಳು ನಲಿನಲಿದಾಡುತ ಬಂದ |
ದನುಜರ ಕೊಂದ |
ಮೂರು ಪದ ಭೂಮಿಯ ಬೇಡುತ ನಿಂದ |
ಮುನಿಕುಲದಲಿ ಬಂದ |

ನಾರಿಯ ಬಿಟ್ಟು ಪರನಾರಿಯನಾಳಿದ |
ತೋರೆ ರಮಣಿ ಹಯವೇರಿದ ರಂಗನ || ೧ ||

ಗೌಳಿಪಂತುರಾಗದ ಈ ಪದ್ಯದ ಮೂರು ನೊಲ್ಲು ಗಳಲ್ಲೂ ಪುನರಾವೃತ್ತಿಯಾಗಿ ದಶಾವತಾರಗಳ ಚುಟುಕು ಸೂಚನೆಯಿದ್ದು, ಹಾಡಲೂ, ಕೇಳಲೂ ಮೋಹಕ ವಾಗಿದೆ.

(೫) ಇಂದ್ರಲೋಕವ ಪೋಲ್ವ ದ್ವಾರಕಿ |
ಯಿಂದ ನಮ್ಮನು ಸಲಹಲೋಸುಗ |
ಸಿಂಧುವಿನ ಮಾರ್ಗದಲಿ ತೌಳವ ಜನರ ದೇಶಕ್ಕೆ ||
ಬಂದು ಮಧ್ವಾಚಾರ್ಯರಾ ಕೈ |
ಯಿಂದ ಪೂಜೆಯಗೊಂಡ ಕೃಷ್ಣನ |
ಮಂದಹಾಸದ ಮುದ್ದುಮೊಗ ಸೇವಿಪಗೆ ಸಂಪದವು || ೧ ||

ಶ್ರೀರಾಗದಲ್ಲಿ ಹೇಳುವ, 'ಭಾಮಿನಿಷಟ್ಪದಿಯಲ್ಲಿ ಬರೆದ ಈ ಪದ್ಯದ ಒಂಬತ್ತು ನೊಲ್ಲುಗಳಲ್ಲಿ ಕೃಷ್ಣನ ಪೂಜೆ ನೈವೇದ್ಯಾದಿ ವಿವರಗಳಿವೆ! ಉಡುಪಿ 'ತೌಳವ' ಪ್ರದೇಶ ವೆಂದಿದೆ! ಕೃಷ್ಣನ ಪ್ರತಿಮೆ ದ್ವಾರಕಿಯಿಂದ ಬಂದುದೆಂದು ಶ್ರೀ ವಾದಿರಾಜರ ಕಾಲದಿಂದ ಪ್ರಸಾರವಾದ ಕತೆಯಾಗಿದೆ! (ಈ ಬಗೆಗೆ ನನ್ನಲೇಖ ಬೇರೆ ಪ್ರಕಟವಾಗಲಿದೆ)

(೬) ನಿನ್ನ ಧ್ಯಾನಿಸುವ ಬಗೆ ಹ್ಯಾಂಗೆ || ಪ ||
ಮನ್ನಿಸೊ | ಪನ್ನಗಶಯನ ನಿಂದೆನ್ನ ಮನದೊಳಗೆ || ಅ.ಪ. ||
ಪಾಪ ಕರ್ಮಗಳ ಕಾಟ | ಬಹು |
ಕೋಪ ಮತ್ಸರದ ಹೊಯ್ದಾಟ | ಕಾಮ |
ವ್ಯಾಪಿಸುವ ಕ್ರೂರನೋಟ | ಈ |
ತಾಪತ್ರಯ ಆಟದಲಿ ಕೂಟ || ೧ ||

ನೀಲಾಂಬರಿರಾಗದ ಇದರ ಮೂರು ನೊಲ್ಲುಗಳಲ್ಲಿ 'ಆರ್ತ' ಭಕ್ತನ ಮೊರೆತವಿದೆ. 'ಆರ್ತೋ ಜಿಜ್ಞಾ ಸುರರ್ಥಾರ್ಥೀ' ಎಂದು ನಾಲ್ವರ ಹೆಸರು ಭಗವದ್ಗೀತೆ ಯಲ್ಲಿ ಹೇಳಿದೆ (೭-೧೬)

(೭) ಕಲ್ಕಿಸುಳಾದಿಯು ಗುರ್ಜರಿರಾಗದಲ್ಲಿ ಹಾಡು ವಂತಹದು. ಆದಿ, ಮಟ್ಟೆ, ಧ್ರುವ, ರೂಪಕ, ಝಂಪೆ, ತ್ರಿವುಡೆ, ಅಟ್ಟ, ಏಕತಾಳಗಳಲ್ಲಿ ಹೇಳುವ ಒಂದೊಂದು ಪದ್ಯಗಳು ಕೊನೆಗೊಂದು ಜತಿ (೩ ಸಾಲು) ಗಳಲ್ಲಿವೆ. ಸುಳಾದಿಗೆ ಹೇಳಿದ ಲಕ್ಷಣಗಳಿಂದ ಕೂಡಿದೆ-ಕೆಲವು ಪದ್ಯ ಚುಟುಕು, ಕೆಲವು ಸರಳವಾಗಿವೆ. ವಿವಿಧಾವತಾರಗಳ ಬಣ್ಣನೆಯಿಂದ ಹೃದ್ಯವಾಗಿದೆ.

ಮಟ್ಟೆ ತಾಳ | ಕಟ್ಟಿದ ಪೊನ್ನ ಕಠಾರಿಯ ನೋಡು (ಕಾಲ್ಗೆ) |
ಮೆಟ್ಟಿದ ರನ್ನದ ಹಾವಿಗೆಯ ನೋಡು |
ತೊಟ್ಟಿಹ ಕನಕ ಕವಚವ ನೋಡು | ಹತ್ತಿ |
ಲಿಟ್ಟಿಹ ಕರಚೂರಿಯ ನೋಡು |
ದುಷ್ಟರ ಮುರಿವ, ಶಿಷ್ಟರ ಪೊರೆವ | ಜಗ |
ಜಟ್ಟಿಗ ನಮ್ಮ ದಿಟ್ಟ ಹಯವದನ ||

ಕೊನೆಮಾತು: ಶ್ರೀ ವಾದಿರಾಜರ ಕೀರ್ತನೆಗಳಲ್ಲಿ ಉಡುಪಿಯ ಕೃಷ್ಣನ (ದಂಡಪಾಶಧರನ) ಬಣ್ಣಿಕೆಯಿದೆ. ಅಲ್ಲಿ ಇದೀಗಲೂ ನಡೆವ, ಹಪ್ತೆಯ ಪ್ರತಿದಿನಕ್ಕೊಂದು ಅಲಂಕಾರವಿದೆ. ಅನೇಕ ಲೀಲಾವತಾರಗಳ ಕತೆ ಸೂಚ್ಯ ವಾಗಿದೆ. ವಿಶೇಷತಃ 'ತತ್ತ್ವಸುವ್ವಾಲಿ'ಯಲ್ಲಿ ದೇಹ ದಲ್ಲಿರುವ ದೇವತಾದಿಗಳ ವಿಚಾರವಿದೆ. 'ಸೊಬಗಿನ ಸೋನೆ' ಅಥವಾ 'ತತ್ತ್ವಸಾರ'ವು 'ವೈಕುಂಠ ವರ್ಣನೆ' ಯಾಗಿದೆ. ಸ್ವಪ್ನಪದ, ಗುಂಡಕ್ರಿಯೆಗಳಲ್ಲಿ ವೇದೋಕ್ತಿ ಗಳ-ಪುರಾಣಕತೆಗಳ ಉದಾಹರಣಗಳಿಂದ ದ್ವೈತಮತದ ಸಾರವು ಸಾರಲಾಗಿದೆ. ಇದಾಗಿ, ಭ್ರಮರಗೀತೆ, ಮತ್ತು ಇತರ ಕೆಲವು ಕೃತಿಗಳು ಗೋಪಿಯರ ವಿರಹಾತ್ಮಕ ಗಳಾಗಿವೆ. ಇಷ್ಟು ವೈವಿಧ್ಯ ವಿಷಯಗಳನ್ನು ರಾಗ-ತಾಳ-ಛಂದಸ್ಸುಗಳನ್ನು ಶ್ರೀ ವಾದಿರಾಜರ ಕೃತಿಗಳಲ್ಲಿ ಮಾತ್ರ ನಾವು ಕಾಣಬಹುದಾಗಿದೆ. ಇವರ ಕನ್ನಡ ಕೃತಿಗಳ ಬಗೆಗೆ ವಿಶೇಷ ಅಧ್ಯಯನ ಮಾಡಿ, ಪ್ರತ್ಯೇಕ ವಿವರ ಣಾತ್ಮಕವಾದ-ವಿಮರ್ಶಾತ್ಮಕವಾದ ಒಂದು ನಿಬಂಧ (ಥಿಸಿಸ್) ಬರೆಯಬಹುದು; 'ಡಾಕ್ಟರೇಟ್' ಪ್ರಶಸ್ತಿ ಪಡೆಯಬಹುದು. ವಿಶ್ವವಿದ್ಯಾಲಯಗಳು ಈ ವಿಚಾರಕ್ಕೆ ಗಮನ ಕೊಡಬೇಕಾಗಿ ಅರಿಕೆ.

ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿ ರಾಜರು ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ತಾತ್ತ್ವಿಕ ಗ್ರಂಥಗಳನ್ನೂ ಹರಿಭಕ್ತಿ ಗೀತೆಗಳನ್ನೂ ಬರೆದ 'ರತ್ನತ್ರಯ' ರೆಂದರೆ ಅತಿಶಯೋಕ್ತಿಯಾಗದು!

ಕಾರಂತರ ನಾಟಕಗಳು

ಎಚ್. ವಿ. ಶ್ರೀನಿವಾಸಶರ್ಮ

(ಮುಂದುವರಿದುದು)

೪. ಹಿರಿಯಕ್ಕನ ಚಾಳಿ

ಇದೊಂದು ಕಿರು ನಾಟಕ. ಮನೆಯಲ್ಲಿರುವ ಹಿರಿಯರ ಒಂದೊಂದು ನಡೆನುಡಿ, ಮಾತುಕತೆಗಳು ಕಿರಿಯ ಮಕ್ಕಳ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಅರಿವು ಹಿರಿಯರಿಗೆ ಇರಬೇಕೆಂಬುದೇ ಈ ನಾಟಕದ ಕಥಾ ಹಂದರ. ಸುಬ್ರಾಯ, ಗೌರಮ್ಮನಿಗೆ ಎರಡು ಮಕ್ಕಳು. ರುಕ್ಮಿಣಿ, ಲಚ್ಚಣ್ಣ; ಪುಟ್ಟ ಸಂಸಾರ. ಹನ್ನೆರಡು, ಎಂಟು ವರ್ಷದ ಮಕ್ಕಳ ಮೇಲೆ ಅವರಿಬ್ಬರು ಕಲಿತು ತೋರಿಸುತ್ತಿದ್ದ ಚಾಳಿ ಹೇಗೆ ಬೇರೂರಿತ್ತು ಎಂಬುದರ ಚಿತ್ರ "ಹಿರಿಯಕ್ಕನ ಚಾಳಿ." ತಂದೆ ಹೇಳಿದ ಮಾತನ್ನು ಎಳ್ಳಷ್ಟೂ ನಡೆಸದೆ ಎದುರು ಉತ್ತರ ಕೊಟ್ಟು ನಿಲ್ಲುವ ರುಕ್ಮಿಣಿ; ಹಿಡಿದ ಹಠವನ್ನೇ ಪಟ್ಟುಹಿಡಿದು ಸಾಧಿಸಲು ಹೋಗುವ ಲಚ್ಚಣ್ಣ ಮನೆಯಲ್ಲಿ ಕಿರಿಯವರು. ತಂದೆ ತಾಯಿಯರ ಜಗಳ, ಅವರು ತೋರಿಸುವ ವಂಚನೆ, ಮೋಸ, ಇವುಗಳೆಲ್ಲಾ ಯಥಾವತ್ತಾಗಿ ಮಕ್ಕಳಿಗೂ ಕೊಡುಗೆ ಬಂದಂತೆ ಬಂದಿರುತ್ತದೆ. ಸುಬ್ಬರಾಯನೇ ಒಮ್ಮೊಮ್ಮೆ ಇದರಿಂದ ಬೇಸತ್ತು ಹೆಂಡತಿಯು ಹಠಮಾರಿತನ ನೋಡಿ ಅಂದದ್ದೂ ಉಂಟು "ತೆಗೆದ ಬಾಯಿಗೆ ಎದುರು ಮಾತು, ನಿನ್ನ ಚಾಳಿಯೇ ಮಕ್ಕಳಿಗೆ ಬಂದಂತೆ ಕಾಣುತ್ತೆ" ಎನ್ನುತ್ತಾನೆ, ಮನೆಯಲ್ಲಿದ್ದ ಹಲಸಿನ ಹಣ್ಣಿನ ಮುಳ್ಕ ಮಾಡದೆ ಬಂಗಾರಮ್ಮನಿಗೆ ಕೊಡಬೇಕೆಂದು ಹಠ ಹಿಡಿದಾಗ ಗೌರಮ್ಮ. ಹೀಗೆ ಗಂಡ ಹೆಂಡಿರಲ್ಲಿ, ದಿನಾ ದಿನಾ ಕಾಣಿಸುವ ಮೋಸ, ಜಗಳ, ಸುಳ್ಳು ಮಕ್ಕಳಿಗೆ ಅಚ್ಚೊತ್ತಿದಂತೆ ಅಭ್ಯಾಸವಾಗಿ ಬಿಡುವುದನ್ನು ನಾಟಕಕಾರರು ಚೆನ್ನಾಗಿ ಚಿತ್ರಿಸಿ, ಅದರ ಅನರ್ಥವೇನೆಂಬುದನ್ನು ಬಿಡಿಸಲು ತೊಡಗುತ್ತಾರೆ. ಸಾಲಗಾರರೋ, ಸ್ನೇಹಿತರೋ ಮನೆಗೆ ಬಂದು ಕೂಗಿದಾಗ, ತಂದೆ ಒಳಗೆ ಅವಿತುಕೊಂಡು 'ಮನೆಯಲ್ಲಿ ಇಲ್ಲ' ಎಂದು ತಮ್ಮ ಕೈಯಲ್ಲೇ ಹೇಳಿಸಿ ಬಿಡುತ್ತಿದ್ದ ಒಂದು ಪದ್ಧತಿ ಮಕ್ಕಳಿಗೂ ಅಂಟಿಬರುತ್ತದೆ ಮುಂದೆ. ಈ ಚಾಳಿಯೇ ತಂದೆಗೆ ಮೋಸ ಮಾಡುವ ಪ್ರಸಂಗವನ್ನು ಒಡ್ಡುತ್ತದೆ. ಪಟೇಲ್ ಅಚ್ಯುತಯ್ಯ ಲೇವಾದೇವಿ ಹಣ ಕೊಡಲು ಬಂದ ಸಮಯದಲ್ಲಿ ಈ ಮಕ್ಕಳು ಮನೆಯಲ್ಲಿ ಮಾಡಿದ್ದ ಹಲಸಿನ ಹಣ್ಣಿನ ಮುಳ್ಕಕ್ಕೆ ಈತ ಎಲ್ಲಿ ವಕ್ಕರಿಸಿ, ತಮಗೆ ಎಲ್ಲಿ ಸೊನ್ನೆ ಬೀಳುವುದೋ ಎಂಬ ಚಿಂತೆಯಿಂದ, ಅಭ್ಯಾಸ ಬಲದಂತೆ 'ಅಪ್ಪ ಮನೆಯಲ್ಲಿ ಇಲ್ಲ' ಎಂದುಬಿಡುತ್ತಾನೆ ಲಚ್ಚಣ್ಣ. ವಿಷಯ ತಿಳಿದ ಸುಬ್ಬರಾಯ ಮೋಸವಾಯಿತಲ್ಲ ಎಂದು ಪೇಚಾಡುತ್ತಾನೆ.

ಮನೆಯಲ್ಲಿ ಹಲಸಿನ ಹಣ್ಣಿನ ಪಾಯಸ ಮಾಡಿದ ಸುದ್ದಿಯನ್ನು ಭಂಗಾರಮ್ಮನಿಗೆ ತಿಳಿಸುವವರೂ ಮಕ್ಕಳೇ. ಹಣ್ಣಿಗಾಗಿ ಬಂದ ಅವಳಿಗೆ ತಿಳಿಯಬಾರದೆಂದು, ಎಷ್ಟು ರಹಸ್ಯವಾಗಿ ಇಡಲು ಪ್ರಯತ್ನಿಸಿದರೂ, 'ಈ ಮಕ್ಕಳು' "ಹಲಸಿನ ಹಣ್ಣೆಲ್ಲಾ ಚಟ್ಟು. ಅದನ್ನು ಈವೊತ್ತು ಪಾಯಸ ಮಾಡಿಯಾಯ್ತು" ಎಂದುಬಿಡುತ್ತವೆ. ಹೀಗೆ ಈ ನಾಟಕದಲ್ಲಿ ಉದ್ದಕ್ಕೂ ತಮ್ಮ ಗೆಳೆಯರಿಗೆ ಸುಳ್ಳು ಹೇಳಿ ಹೇಳಿ, ವಂಚಕರಂತೆ ನಡೆದುಕೊಳ್ಳುವ ಹಲವಾರು ಸನ್ನಿವೇಶಗಳು ಬರುವುದೂ ಉಂಟು. ಇವು ಮಕ್ಕಳ ಮೇಲೆ ಬೀರಿದ ಭೀಕರ ಪರಿಣಾಮ ಏನೆಂಬುದು ರಮ್ಯವಾಗಿದ್ದು ಪ್ರೇಕ್ಷಕರ ಎದೆ ಚುಚ್ಚುವಂತಿದೆ. ಒಂದು ವೇಳೆ ರಂಗದ ಮೇಲೆ ತಂದರೂ ನಾಟಕ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ ಎನ್ನಿಸುತ್ತದೆ.

೫. ನಾಲ್ಕನೆ ಪಿಶಾಚಿ

ಇದೊಂದು ಗುಪ್ತರೋಗದ ಬಹಿರಂಗ ಚಿತ್ರ. ಗಂಡಸರು ತಾವು 'ಗಂಡು' ಎಂಬ ಉದ್ಧಟತನದಲ್ಲಿ ಏನನ್ನಾದರೂ ಮಾಡಬಹುದು ಎನ್ನುವ ಮನೋಭಾವದಲ್ಲಿ, ತಾವು ಮಾಡುವ, ಮಾಡಿದ ಹೇಯ, ನೀಚ ಕೆಲಸಗಳಿಂದ ಆಗುವ ಅನರ್ಥಕ್ಕೆ ತಾವೂ ಗುರಿಯಾಗುವುದಲ್ಲದೆ, ಮನೆಯವರನ್ನೆಲ್ಲಾ ಗುರಿಮಾಡಿ, ಅಪರ ಮೇಲೆ ಆರೋಪಣೆ ಹೊರಿಸುವುದು ಸಹಜ ಎಂಬ ರೀತಿಯಲ್ಲಿ ಹೆಣೆದಿರುವ ನಾಟಕ "ನಾಲ್ಕನೆ ಪಿಶಾಚಿ".

ನಾಟಕದ ಆರಂಭದಿಂದಲೇ ಒಂದು ಸಂಸಾರದ ಭಯಂಕರ ವಾತಾವರಣ, ಸ್ವಲ್ಪ ಸ್ವಲ್ಪವಾಗಿ ಸ್ಪ್ರಿಂಗ್ ಬಿಚ್ಚಿದಂತೆ ಪ್ರಕಟವಾಗುತ್ತಾ ಹೋಗಿ ಅಂತ್ಯದಲ್ಲಿ ಭೀಕರ

ಸಮಸ್ಯೆಯಾಗಿ ನಿಲ್ಲುವುದನ್ನು ಕಾಣುತ್ತೇವೆ. ಅಣ್ಣಪ್ಪಯ್ಯ ಹಳ್ಳಿಯ ಗೃಹಸ್ಥ. ಸಂಸಾರದ ಜಂಜಡದಲ್ಲಿ ಸಿಕ್ಕಿಕೊಂಡು ಎನ್ನುವ ಬದಲು, ಜಂಜಡವನ್ನು ತಾನೇ ತಂದುಕೊಂಡು, ತಾಳ್ಮೆಗೆಟ್ಟ ವ್ಯಕ್ತಿ. "... ಬೇಡ, ಬೇಡ, ಸಂಸಾರ ಬೇಡ, ಈ ಬದುಕು ಬೇಡ ಎಲ್ಲಾದರೂ ಸಂನ್ಯಾಸ ತೆಗೆದುಕೊಂಡು ಸಾಯುವುದು ಮೇಲು" ಎಂದು ಸಂಕಟಪಟ್ಟರೂ, ಈ ಸಂಸಾರದ ನರಕಕ್ಕೆ ತಾನೇ ಕಾರಣ ಎನ್ನುವ ಅರಿವು ಅವನಿಗಿಲ್ಲ. ಮೊದಲನೆ ಮಗು ಅಪ್ಪು ಹುಟ್ಟು ಕುರುಡ ಸದಾ ಮನೆಯಲ್ಲೇ ಬಿದ್ದು, ತಾನು ಕಲಿತ ಭಜನೆ ಹಾಡುಗಳನ್ನು ತನ್ನ ಒರಟು ಕಂಠದಿಂದ ಅರಚಿಕೊಳ್ಳುವುದೇ ಅವನ ಕೆಲಸ. ಎರಡನೆಯ ಮಗ ಅಚ್ಚು, ಅವನಿಗೆ ಬುದ್ಧಿ ಶೂನ್ಯ. ಬಾಲಗ್ರಹವೆಂದು ನಂಬಿ ಹತ್ತು ಹನ್ನೆರಡು ವರ್ಷದಿಂದ, ಅದರ ಬಿಡುಗಡೆಗೆ ಕಾದು ಸುಸ್ತಾಗಿ ಅದರ ವಿಷಯವನ್ನೇ ಬಿಟ್ಟಿದ್ದ ಅಣ್ಣಪ್ಪಯ್ಯ. ತನಗೆ ತೋಚಿದಂತೆ ಪೆದ್ದು ಪೆದ್ದಾಗಿ ಮಾತಾಡಿಕೊಳ್ಳುವುದೇ ಕೆಲಸ ಅಚ್ಚುವಿಗೆ. ಮೂರನೆ ಮಗ ಬಾಬಿ; ಅವನೋ ನಿತ್ರಾಣಿ. ಬಾಲಾಮೃತದ ಸೀಸೆ ಚೀಪಿದ. ಕಾಡ್‌ಲಿವರ್ ಎಣ್ಣೆ ಕುಡಿದ. ಏನಾದರೂ ಅವನಿಗೆ ಶಕ್ತಿ ಎಂಬುದೇ ಬರುವುದಿಲ್ಲ. ಹೀಗಾಗಿ ಅಣ್ಣಪ್ಪಯ್ಯನಿಗೆ ಈ ಮೂರು ಮಕ್ಕಳು ಕೊರಳಿಗೆ ಕೋದಂಟೆಗಳಾಗುತ್ತವೆ. ಈ ನಡುವೆ ಅವನ ಹೆಂಡತಿ ನಾಗಮ್ಮ ಗರ್ಭಿಣಿ; ನಾಲ್ಕನೆ ಮಗು'ವಿ'ಗಾಗಿ ಅಲ್ಲ, ನಾಲ್ಕನೆ ಪಿಶಾಚಿಯನ್ನು ಅಣ್ಣಪ್ಪಯ್ಯನಿಗೆ ಕೊಡುವುದಕ್ಕಾಗಿ.—ಇದು ಅಣ್ಣಪ್ಪಯ್ಯನ ಅಭಿಪ್ರಾಯ.

ನಾಟಕ ಪ್ರಾರಂಭವಾಗುವುದೇ ಅಪ್ಪುವಿನ ಭಜನೆಯಿಂದ. ಅತ್ತ ಭಜನೆ; ಇತ್ತ ಅಚ್ಚುವಿನ ಕಿರಿಚಾಟ; ಈ ನಡುವೆ ನಾಗಮ್ಮನ ಹೆರಿಗೆ ಹೊಟ್ಟೆನೋವಿನ ನರಳಾಟ. ಅಣ್ಣಪ್ಪಯ್ಯನಿಗೆ ತಲೆ ಸಿಡಿದಂತಾಗುತ್ತದೆ. ಅಷ್ಟಾದರೂ ತನ್ನ ಹೆಂಡತಿಯ ಮೇಲೆ ದ್ವೇಷವೇ ಹೊರತು ಕನಿಕರವಿಲ್ಲ. ಆ ಗಳಿಗೆಯಲ್ಲೂ ಅವಳಿಗೆ ಅಜೀರ್ಣದ ಹೊಟ್ಟೆನೋವೆಂದು ಬೈದು ಉದಾಸೀನ ಮಾಡಿ ನಿರಾಕರಿಸಿ ಬಿಡುತ್ತಾನೆ. ಸೂಲಗಿತ್ತಿ, ಡಾಕ್ಟರನ್ನು ಕರೆತರುವುದಿರಲಿ, ಔಷಧಿ ತರುವುದಕ್ಕೂ ಅವನಿಗೆ ಇಷ್ಟವಿಲ್ಲ. ಬಾಬಿ ತಂದ ಔಷಧದ ಸೀಸೆಯನ್ನು ಆ ಮುದ್ದು ಮಕ್ಕಳು ಒಡೆದು ಬಿಡುತ್ತಾರೆ. ಆ ಗಾಜಿನ ಚೂರು, ಕಸ ಇವುಗಳನ್ನು ತೆಗೆಯಲಿಲ್ಲವೆಂದೇ ಹಾರಾಟ ಅಣ್ಣಪ್ಪಯ್ಯನದು, ನರಳುತ್ತಿರುವ ನಾಗಮ್ಮನ ಮೇಲೆ. ಮಕ್ಕಳನ್ನು ಕಂಡರೆ ಮೈಯೆಲ್ಲಾ ಉರಿ, ತಿರಸ್ಕಾರ. "ನಿಮ್ಮನ್ನು ಪಡೆಯುವ ಬದಲಿಗೆ ಮೂರು ನಾಯಿಗಳನ್ನು ದೇವರ ಹತ್ತಿರ ಬೇಡಬಹುದಾಗಿತ್ತು" ಎನ್ನುತ್ತಾನೆ. ಗಂಡನ ಕಾಲಿನಲ್ಲಿ ಗಾಜು ಚುಚ್ಚಿ ರಕ್ತ ಬಂದದ್ದನ್ನು ಕಂಡು ಗಾಬರಿಗೊಂಡು ಕನಿಕರಿಸಿದ ತನ್ನ ಹೆಣ್ಣು ಜೀವ ನಾಗಮ್ಮನ ಮೇಲೆ ಅವನ ಆಕ್ರೋಶ, ಬೇಸರ. "ನೀನು ಒಳಗ್ಹೋಗಿ ಮಲಗು ಪುಣ್ಯಾತ್ಗಿತ್ತಿ. ಗೊತ್ತು. ನನಗೆ ನಾಲ್ಕನೆ ಪಿಶಾಚಿ ಮುಖ ಕಾಣುವುದು ಇದೆ . . . ಆಗಲಿ ಸಂಭ್ರಮ. ಮೂರರಲ್ಲಿ ಏಕೆ ನಿಲ್ಲಬೇಕು . . . ನಾಲ್ಕನೆ ಪಿಶಾಚಿ . . ." ಪಾಪ ಏನೂ ಅರಿಯದ ಸಾಧ್ವಿ ನಾಗಮ್ಮನ ಪ್ರಾರ್ಥನೆಯೇ ಬೇರೊಂದು ರೀತಿ. "ಪಿಶಾಚಿಗಳೇ ನನ್ನ ಹಣೆಯ ಮೇಲೆ ಬರೆಯಬೇಕೆ? ಏ, ದೇವರೆ ಒಂದಾದರೂ ಒಳ್ಳೆ ಮಗುವನ್ನು ಕೊಡಬಾರದೆ . . . ಬೇಡಪ್ಪ ಈ ಜೀವ." ಅವಳಿಗೆ ಬದುಕಲು ಆಸೆ ಇಲ್ಲ. "ನಾಲ್ಕನೆ ಪಿಶಾಚಿ"—ಗಂಡನ ಈ ಮಾತು ಅವಳ ಕಿವಿಗೆ ಹತ್ತಾರು ಕಡೆಯಿಂದ ಈಟಿಯಂತೆ ಚುಚ್ಚುತ್ತದೆ. ತುಂಬಿದ ಗರ್ಭಿಣಿ ಬಾವಿಯಲ್ಲಿ ಬೀಳಲು ಹೋಗಿ, ಗಂಡನ ಗೆಳೆಯ ಸೋಮಯ್ಯನ ಕೈಗೆ ಸಿಕ್ಕಿಬೀಳುತ್ತಾಳೆ. ಕೊನೆಗೂ ಡಾಕ್ಟರು, ಸೂಲಗಿತ್ತಿ ಬಂದದ್ದೂ ಆಗುತ್ತದೆ. ಹೆರಿಗೆಯಾದಂದು ವಿಕಾರ ರೂಪದ ಮಗುವನ್ನು ಕಂಡು ಬಾಣಂತಿಯ ಎದುರಿನಲ್ಲೇ ಅಣ್ಣಪ್ಪಯ್ಯ "ನಾಲ್ಕನೆ ಪಿಶಾಚಿಯೇ ಇದು" ಎಂದು ಅಬ್ಬರಿಸುತ್ತಾನೆ. ಮಗು ಬದುಕುವುದಿಲ್ಲ. ಹೀಗೆ ನಾಟಕದ ಅಂತ್ಯವಾಗುತ್ತಿದ್ದಂತೆಯೇ ಇಲ್ಲಿ ಯಾರದು ತಪ್ಪು ಈ ಹಗರಣಕ್ಕೆ ಎನ್ನುವುದು ತಿಳಿದು ಬರುತ್ತದೆ. ಇಲ್ಲಿಯವರೆಗೂ ರಹಸ್ಯವಾಗಿಯೇ, ಪ್ರಶ್ನಾರ್ಥವಾಗಿಯೇ ಉಳಿದು ಬರುತ್ತಿದ್ದ ಸಮಸ್ಯೆಯನ್ನು ಡಾಕ್ಟರು ಸಾಂಭರಾಯರು ಬಿಚ್ಚಿ ಹೇಳಿಬಿಡುತ್ತಾರೆ. ಇಡೀ ನಾಟಕದಲ್ಲಿ ಕಂಡ ದುರಂತತೆಯ ರಹಸ್ಯ ಈಗ ಹೊರಬೀಳುತ್ತದೆ. "ನಾಲ್ಕನೆ ಪಿಶಾಚಿ ಯಾರೆಂಬುದು ನಿಮಗೆ ಗೊತ್ತಿಲ್ಲ. ಹೇಳುತ್ತೇನೆ." ಎಂದು ಆರಂಭಿಸಿದ ಡಾಕ್ಟರು ಅಣ್ಣಪ್ಪಯ್ಯನನ್ನು ತೋರಿಸಿ "ಈ ಮನುಷ್ಯ ಸೊಕ್ಕಿ ಪರಂಗಿ ರೋಗ ತಂದುಕೊಂಡು ಈ ಪಾಪದ ಹೆಂಗಸಿನ ಬಾಳ್ವೆ ಕೆಡಿಸಿದ. ಇವನ ಈ ಪುಣ್ಯದ ಫಲ ಈ ಮಕ್ಕಳು . . . ಬಾಯಿ ಮುಚ್ಚಿಕೊಂಡು ಬಾಣಂತಿಯ ಆರೈಕೆ ಮಾಡಿ. ಅವಳನ್ನು ಕೊಲ್ಲುವುದಾದರೆ ಕುತ್ತಿಗೆ ಹಿಸುಕಿ ಕೊಂದುಬಿಡಿ. ಬೈದು ಬೈದು ಕೊಲ್ಲುವುದು ಬೇಡ."—ಡಾಕ್ಟರ ಮಾತು ಕೇಳಿದ ಅಣ್ಣಪ್ಪಯ್ಯ ಬೆಪ್ಪಾಗಿ ನಿಂತುಬಿಡುತ್ತಾನೆ. ನಾಟಕ ಮುಗಿಯುತ್ತದೆ.

ಇದು ಏಕಾಂಕ ನಾಟಕ. ರಂಗದ ಮೇಲೆ ತರಲು

ಸೊಗಸಾಗಿದೆ. ಇದು ಸಮಾಜದ ಮೇಲೆ ಭೀಕರ ಪರಿಣಾಮವನ್ನು ಮಾಡುವುದರಲ್ಲಿ ಸಂಶಯವಿಲ್ಲ. ಕಲಾವಿದರು ಈ ನಾಟಕವನ್ನು ಪ್ರಯೋಗಿಸಬಹುದು.

ದೀರ್ಘಗದ್ಯನಾಟಕಗಳು

೧. ಗರ್ಭಗುಡಿ (೧೯೩೭)

ಹಲವಾರು ಯಾತ್ರಾ ಸ್ಥಳಗಳಿಗೆ ಭೇಟಿ ಕೊಡುವ ಸಂಪ್ರದಾಯವುಳ್ಳ ಕಾರಂತರು, ಕೆಲವು ಯಾತ್ರೆಗಳಲ್ಲಿ ಕಣ್ಣಾರೆಕಂಡು, ನೊಂದ ಅನುಭವ ಸತ್ಯಗಳನ್ನು ಹೊರಗೆಡಹಿದ ನಾಟಕ 'ಗರ್ಭಗುಡಿ'. ಕೆಲವು ಕಡೆ ಅವರಿಗೆ ಶಾಂತಿಗೃಹದಂತೆ ಕಾಣುವಬದಲು ಆ ಗುಡಿಗಳು ಸಂತೆಯಂತೆ ಕಂಡಿವೆ. ವ್ಯಾಪಾರ ಕೇಂದ್ರಗಳಾಗಿ ಕಂಡಿವೆ. ಕೆಲವು ಉತ್ತಮ ಜಾತಿಯವರಿಗೆ ಮಾತ್ರ ಮೀಸಲಾಗಿ, ಪ್ರತ್ಯೇಕವಾಗಿ ನಿಂತ ಸಂಸ್ಥೆಗಳೋ ಎನಿಸಿವೆ. ದೇವಾಲಯದ ಅಧಿಕಾರಿಗಳ ನಡೆನುಡಿ ಆಚಾರ ವಿಚಾರಗಳಲ್ಲಿ, ಹೊಲಸು ನಾರುವುದನ್ನು ಕಂಡಿದ್ದಾರೆ. ಎಷ್ಟೋ ಸಲ ಆ ಗುಡಿಗಳಿಗಿಂತ ಸ್ವಚ್ಛಂದ ನಿಸರ್ಗವೇ, ಶಾಂತಿಯ ಆಗರದಂತೆ ಭಾಸವಾಗಿ ಅದನ್ನು ನೆನೆದು ನೀಳುಸಿರುಬಿಟ್ಟಿದ್ದಾರೆ. ದೇವರ ಹೆಸರಿನಲ್ಲಿನ ನಡೆಯುವ ಅನಾಚಾರ, ಅತ್ಯಾಚಾರ, ವ್ಯಭಿಚಾರ, ಕಾಂಚನ ಭಕ್ತರು ಮಾಡುವ ಕಾಂಚನ ಸುಲಿಗೆ, ಯಾತ್ರಿಕರಿಗೆ ಕೊಡುವ ಕಿರುಕುಳ, ಧಾರ್ಮಿಕ ಜೀವನದ ಅಧೋಗತಿ, ಇವುಗಳನ್ನು ಕಂಡು ವಿಡಂಬನ ಮಾಡಿದ್ದಾರೆ. ಹೀಗೆನ್ನುವ ಬದಲು ತುಂಬಾ ನೊಂದು ಬೆಂದಿದ್ದಾರೆ ಎನ್ನುವುದು ಸೂಕ್ತವೆನಿಸುತ್ತದೆ.

"ಗರ್ಭಗುಡಿ" ನಾಟಕ ಈ ಅನುಭವಗಳ ಪ್ರತಿಬಿಂಬ. ನಾಟಕದ ವಸ್ತುವೇ ಇದು. ನಾಟಕಕಾರರ ಮಾತಿನಲ್ಲೇ ಹೇಳುವುದಾದರೆ ಹೀಗೆ—"ಗರ್ಭಗುಡಿಯಲ್ಲಿ ಅಂತರಂಗದ ಮತ್ತು ಬಹಿರಂಗದ ಎರಡು ವಿಗ್ರಹಗಳನ್ನು ಕಾಣಿಸಿದೆ. ಒಂದು, ಇರಬೇಕಾದ, ಅಂದರೆ ನಿಜವಾದ ಶಿಲ್ಪಿಯು ತಪೋಬಲದಿಂದ ಕಂಡು ಅನುಭವಿಸಿ ಕೆತ್ತಿದ ಮೂರ್ತಿ; ಇನ್ನೊಂದು ಪ್ರತಿಮೆಯ ನಿಜಪರಿಚಯವಿಲ್ಲದವರು, ಕಾಂಚನಕ್ಕೆ ಮರುಳಾಗಿ, ಬರಿಯ ಚಿನ್ನ ಬೆಳ್ಳಿ ಮತ್ತು ರತ್ನಾದಿಗಳಿಂದ ನಿರ್ಮಿಸಿ, ಕಲಾದೃಷ್ಟಿಯಿಂದ ಅಸಹ್ಯವಾಗಿ ಕಾಣಿಸುವಂತೆ ಮಾಡಿದ ಗೊಂಬೆ." ಇವೆರಡರ ನಡುವಣ ಚಿತ್ರ ಈ ನಾಟಕ.

ಗರ್ಭಗುಡಿ ಐದು ಅಂಕದ ನಾಟಕ. ಶ್ರೀಕ್ಷೇತ್ರದಲ್ಲಿರುವ ಅನಾಥಪುರಿ. ಅನಾಥೇಶ್ವರನ ಗುಡಿ ನಾಟಕಕ್ಕೆ ಎಷ್ಟು ಕಲ್ಪನಾ ಸಾಮಗ್ರಿಯೋ ಅಷ್ಟೇ ಭಾಗವಹಿಸುವ ಪಾತ್ರಗಳೂ ಕಾಲ್ಪನಿಕ. ಆದರೆ ಇವು ಇಂದಿನ ಸಮಾಜದ ಆಗುಹೋಗು, ರೀತಿನೀತಿಗಳನ್ನೇ ಪ್ರತಿಫಲಿಸಿ, ಅವರ ಪ್ರತೀಕ, ಪ್ರತಿಮೆಗಳಂತೆ ನಿಲ್ಲುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಮೊದಲನೆ ಅಂಕದಲ್ಲಿ ಪರಮ ಪವಿತ್ರವಾದ ದೇವಾಲಯದ ಬಳಿ ನಡೆಯುವ, ಪೂಜಾರಿಗಳ ಪಂಡರ, ವ್ಯಾಪಾರಿಗಳ, ದಬ್ಬಾಳಿಕೆ, ಕಿರುಕುಳ ಹಿಂಸೆಗಳ ಪ್ರತ್ಯಕ್ಷ ದರ್ಶನವನ್ನು ಕಾಣುತ್ತೇವೆ. ಎರಡನೆ ಅಂಕ ಪೂರ್ಣ ಜಾತಿಮತಗಳ ಅಸಹ್ಯಗೊಂದಲದ ಚಿತ್ರಣವಿದ್ದರೆ, ದೇವಾಲಯದ ಅರ್ಚಕ, ಅಧಿಕಾರಿಗಳು ವೇಶ್ಯೆಯರೊಡನೆ ನಡೆಸುವ ರಹಸ್ಯಜೀವನ, ಹಾಗೂ ಮಠದ ಗುರುವೇ ಈ ವಂಚಕರ ಗುರುವಾಗಿ ಕಂಡು, ಇವರೆಲ್ಲ ಕಟ್ಟಿದ ಕಳ್ಳರ ಸಂತೆಯೋ ಎನಿಸುವ ಸಹಜ ಚಿತ್ರಕ್ಕೆ ಮೀಸಲು ಮೂರನೆ ಅಂಕ. ನಾಲ್ಕನೆ ಅಂಕದಲ್ಲಿ ಸಮಾಜ ಸುಧಾರಣೆ ಎನ್ನುವುದಕ್ಕಿಂತ ಸಮಾಜದ ಉದ್ಧಾರ, ದೀನದಲಿತರ ಸೇವೆ, ನೀಚಕುಲದವರೆಂದು ಪರಿಗಣಿಸಿ ಒಂದೆಡೆಗೆ ತಳ್ಳಿಸಿಕೊಂಡವರ ಮೂಢನಂಬಿಕೆ, ಹಳೆ ಸಂಪ್ರದಾಯಗಳನ್ನು, ಅಜ್ಞಾನವನ್ನು ಆಧುನಿಕ ಕಾಲದ ಗಾಳಿಯಲ್ಲಿ ತೂರುವಿಕೆ, ಜ್ಞಾನ ವಿಕಾಸಕ್ಕೆ ಎಡೆಮಾಡಿಕೊಡುವ ಸನ್ನಿವೇಶಗಳು ಹೆಣೆದುಕೊಂಡಿವೆ. ಇನ್ನು ಕೊನೆಯ ಅಂಕ: ಈ ಗರ್ಭಗುಡಿಯಲ್ಲಿ ಅಡಗಿ, ಅಜ್ಞಾನದಲ್ಲಿ ಮುಳುಗಿ ಹಣ, ಚಿನ್ನ ಆಭರಣಗಳ ದುರಾಸೆಗೆ ದೇವರ ವಿಗ್ರಹವನ್ನೇ ಕಗ್ಗಲ್ಲೆಂದು ತಿಳಿದು ಮಾರಿಕೊಳ್ಳಲೂ ಸಿದ್ಧವಾದ ಪೂಜಾರಿ, ಪಾರುಪತ್ಯಗಾರ ಕೊನೆಗೆ ಮಠದ ಗುರು ಇವರೆಲ್ಲರಿಗೂ ಜ್ಞಾನದ ಬೆಳಕನ್ನು ತೋರಿಸುತ್ತಾರೆ ಕಾರಂತರು ಕಾಶ್ಯಪನ ಮೂಲಕ. ಹಾಗೆಯೇ ಗರ್ಭಗುಡಿಯ ಹಿರಿಯ ಬಾಗಿಲು ಜನತೆಯ ಎದುರಿಗೆ ವಿಶಾಲವಾಗಿ ತೆರೆದು ನಿಲ್ಲುವಂತೆ ಮಾಡುತ್ತಾರೆ.

ಈ ಅನ್ಯಾಯ, ಅನಾಚಾರಗಳೆಲ್ಲವನ್ನೂ ಪ್ರತ್ಯಕ್ಷದರ್ಶಿಯಾಗಿ ಮೊದಲು ತುದಿಯವರೆಗೂ ನೋಡುವವನು ದೇವರನ್ನು ಕಡೆದು ನಿಲ್ಲಿಸಿದ ಶಿಲ್ಪಾಚಾರ್ಯ ಕಾಶ್ಯಪ. ವಿಗ್ರಹವನ್ನು ಜನತೆಗೆ ಕೊಟ್ಟ ಹಲವು ಕಾಲದಮೇಲೆ ಹಿಂದಿರುಗಿ ಬಂದ ಕಾಶ್ಯಪ ದೇವಾಲಯದ ಬಳಿ ಆಗಿದ್ದ ಬದಲಾವಣೆಗಳನ್ನು ಕಣ್ಣಾರೆ ಕಾಣುತ್ತೇವೆ. ಪಂಡರು, ಪೂಜಾರಿಗಳೂ, ಯಾತ್ರಿಕರನ್ನು ಮುತ್ತಿ, ಆಕರ್ಷಣೆಯ ಮಾತಾಡಿ, ಮೋಸಮಾಡಿ, ವಂಚಿಸಿ, ನಂಬಿಸಿ ಹಣವನ್ನು ಸುಲಿಯುವ ದೃಶ್ಯವನ್ನು ನೋಡುತ್ತಾನೆ. "ದೇವರ ಗುಡಿಗೆ ಬ್ರಾಹ್ಮಣರ ಪಹರೆಯೆ? ಗುಡಿಯ ಮುಂದೆ ಸುಂಕದ ಕಟ್ಟೆ! ದಕ್ಷಿಣೆಯ ಆಸೆಗಾಗಿ ಜಗತ್ತನ್ನೇ ವಂಚಿಸುತ್ತಿರುವವರು

ಈ ಜನರು" ಎಂದು ಕಾಶ್ಯಪ ನೊಂದುಕೊಂಡರೆ, ದರ್ಶನಕ್ಕಾಗಿ ಬಂದ ಯಾತ್ರಿಕ ಗುಂಡಪ್ಪ "ದೇವರಿಲ್ಲಮ್ಮ ದೇವರಿಲ್ಲ . . . ಈ ಜನರಿರುವಲ್ಲಿ ದೇವರಿಲ್ಲ" ಎಂದು ದುಃಖಿಸಿ ತಾನು ಅಲ್ಲಿಗೆ ಬಂದದ್ದೇ ತಪ್ಪಾಯಿತು ಎನ್ನುವಷ್ಟು ಪರಿತಪಿಸುತ್ತಾನೆ.

ಇದಿಷ್ಟೂ ದೇವಾಲಯದ ಬಳಿಯ ಹಾವಳಿಯಾದರೆ ಊರೊಳಗೆ ನಡೆಸುವ ಅನ್ಯಾಯ ಹೇಳತೀರದು. ಕಾಂಚನದ ದಾಸರೆನಿಸಿದ ಬ್ರಾಹ್ಮಣರು ಗುಡಿಯನ್ನು ಸಂತೆ ಮಾಡಿ ದೇವರನ್ನು ಆಟದ ಗೊಂಬೆಮಾಡಿ ಮನುಷ್ಯರನ್ನು ಪಶುಗಳಿಗಿಂತಲೂ ಕಡೆಮಾಡಿ ಅದರಲ್ಲೂ ನೀಚಕುಲದವರೆಂದು ಹೊಲೆಯರನ್ನು ತುಳಿದು, ಊರಾಚೆ ನೂಕಿ, ಮುಟ್ಟಿದರೆ ಸ್ನಾನ ಮಾಡುವ ಹೇಯ ಭಾವನೆಯನ್ನು ತಳೆದ ಚಿತ್ರವಂತೂ ಕಣ್ಣಿಗೆ ಕಟ್ಟುವಂತೆ ಕಂಡು, ಎದೆಗೆ ಚುಚ್ಚುವ ಕೆಲಸ ಇಲ್ಲಿ ನಡೆದಿರುವುದು ಸಹಜವಾಗಿದೆ. ಕಾರಂತರ ಮಾತು ಸಿಹಿ ಸವರಿದ ಕೊಯಿನ ಮಾತ್ರೆ ಎಂಬುದಕ್ಕೆ ಈ ನಾಟಕ ಸಾಕ್ಷಿ.

ಸಮಾಜದಲ್ಲಿ ತಪ್ಪಿತಸ್ಥರೆಂದರೆ, ಭ್ರಷ್ಟಾಚಾರ ಮಾಡಿದವರೆಂದರೆ ಇವರು: ಹೊಲೆಯರನ್ನು ಮುಟ್ಟಿಸಿಕೊಂಡವರು, ಹೊಲೆಯರ ಸಾಯುವ ಮಕ್ಕಳ ಬಾಯಿಗೆ ನೀರು ಹಾಕಿ ಬದುಕಿಸಿದವರು, ವಿಲಾಯಿತಿಗೆ ಹೋಗಿಬಂದವರು! ಇವರಿಗೆಲ್ಲಾ ಪ್ರಾಯಶ್ಚಿತ್ತವೆಂದರೆ ಸಾವಿರಾರು ರೂಪಾಯಿ ದಂಡ, ಇಲ್ಲವೆ ಜಾತಿಬಾಹಿರನೆಂದು ಸಾರುವುದು. ಇದು ಇವರ ದಬ್ಬಾಳಿಕೆ. ವ್ಯಭಿಚಾರ ಮಾಡಿದ ಬಡವಿಧವೆಯ ಪಾಪ ಪರಿಹಾರಕ್ಕೆ ಹಣದ ರಾಶಿಯನ್ನೇ ತೆರಬೇಕು. ಇಲ್ಲವಾದರೆ ಅವಳನ್ನು ಕುಲದಿಂದ ದೂರವಿರಿಸುವುದು. ಹೀಗೆ ಹಣದ ಸುಲಿಗೆ ಮಾಡಿ ಜೀವಿಸುವ ದೇಗುಲದ ಗುರು, ಪೂಜಾರಿ, ಪಾರುಪತ್ಯಗಾರರೇ, ಸ್ವತಃ ವ್ಯಭಿಚಾರಿಗಳಾಗಿ, ಸಮಾಜ ದ್ರೋಹಿಗಳಾಗಿ, ಹೊಲೆಯರಿಗಿಂತ ಹೊಲೆಯರಾಗಿ ಜೀವನ ನಡೆಸುವ ರೀತಿಯನ್ನು ಹೊರಗೆ ಎಳೆದು ವಿಡಂಬನಕ್ಕೆ ಗುರಿಮಾಡಿ ಕೊನೆಗೆ ಹಣದ ಆಸೆಗೆ ದೇವರನ್ನು ಮಾರಿಕೊಳ್ಳುವ ದುಷ್ಟ ಸ್ವಭಾವದ ಹುಟ್ಟುತನವನ್ನು ಕಾರಂತರು ತೋರಿಸುತ್ತಾರೆ.

ಎಲ್ಲರ ಅಜ್ಞಾನವನ್ನು ಅರಳಿಸಿ ತೋರಿಸಿ "ಜನರಿಗಾಗಿ ದೇವರು; ಜನರಿಗಾಗಿ ಗುಡಿ; ಅನಾಥಬಂಧುವಿನ ಗುಡಿಯ ಬಾಗಿಲು ಇಂದು ಜಗತ್ತಿಗೇ ತೆರೆದಿರುವುದು, ಅಂತರಂಗ ಶುದ್ಧವುಳ್ಳವರಿಗೆ, ಆರ್ತಿಗಳಿಗೆ, ಮಾನವತೆ ಇರಿಸಿಕೊಂಡವರಿಗೆಲ್ಲಾ ಇಲ್ಲಿಗೆ ಬರುವ ಸ್ವಾತಂತ್ರ್ಯವಿದೆ" ಎಂದು ಸಾರಿ ಗರ್ಭಗುಡಿಯ ಬಾಗಿಲನ್ನು ತೆರೆದು ತೋರಿಸುತ್ತಾನೆ ಕಾಶ್ಯಪ, ಗರ್ಭಗುಡಿಯ ಶಿಲ್ಪಾಚಾರ್ಯ. ನಾಟಕವನ್ನು ನೋಡಿ ಮುಗಿದ ಮೇಲೆ ನಮ್ಮ ಕಣ್ಣಮುಂದೆ ನಿಂತು, ಸ್ಮೃತಿಪಟಲದಲ್ಲಿ ನೆಲೆಯಾಗುವ ಕೆಲವು ಪಾತ್ರಗಳಿಂದ ನಾಟಕ ಕಳೆ ಕಟ್ಟುವುದು ಸಹಜ. "ನಮಗೆ ದಕ್ಷಿಣೆಯನ್ನು ಕೊಡದೆ ಯಾವ ಮಗನೂ ಗುಡಿಯ ಹೊಸ್ತಿಲು ದಾಟಲಿಕ್ಕೆ ಸಾಧ್ಯವಿಲ್ಲ. ಗುಡಿಯೊಳಗೆ ಕಾಲಿಡಿಸುವ ಮೊದಲು ನಮ್ಮ ಪಾಪ ಸರ್ವಸ್ವವೂ ಧ್ವಂಸವಾಗಬೇಕು" ಎನ್ನುವ ಕ್ಷೇತ್ರದ ಪಂಡ ಏಕಾಕ್ಷಿ. "ಈ ಬ್ರಾಹ್ಮಣರ ಕಾಟವೂ ಬೇಡ, ಗೊಂಬೆಯ ಮಾಟವೂ ಬೇಡ ಬಾ ಹೋಗುವ" ಎಂದು ನೊಂದು ನುಡಿಯುವ ಯಾತ್ರಿಕ ಗುಂಡಪ್ಪ; "ಒಂದು ಕಾಲದಲ್ಲಿ ಪತಿತರನ್ನು ಉದ್ಧರಿಸಿ ಬ್ರಾಹ್ಮಣರಾದರೆ ಇಂದು ಅವರನ್ನು ತುಳಿದು ಬ್ರಾಹ್ಮಣರಾಗುತ್ತಿದ್ದಾರೆ" ಎಂದು ಸಮಾಜದ ಉದ್ಧಾರಕ್ಕೆ ತೊಡಗುವ ಕಾಶ್ಯಪ. "ಇಂಥವರಿಗೆಲ್ಲಾ ದೇವರ ಚಿನ್ನ ಹೋಗುವುದಕ್ಕಿಂತ ನನ್ನ ಮೈಮೇಲೆ ಇದ್ದರೆ ಚೆಂದವಲ್ಲವೆ ಬನಾವಟ್ ಮುತ್ತಿನ ಹಾರ ಅಲ್ಲಿರಿಸಿ ಅದನ್ನು ತಂದು ಕೊಡಿ" ಎಂದು ಉಪಾಯವಾಗಿ, ಲಾವಣ್ಯ ತೋರಿ ಗುಡಿಯ ಧನವನ್ನೆಲ್ಲಾ ಸುಲಿಯುವ ನರ್ತಕಿ ಭಾನುವಿನ ವೇಶ್ಯೆ ಚಂದ್ರಿ "ಸ್ವಾಮಿಯವರು ಬರುವಾಗ ನೀನಿಲ್ಲಿರಬಾರದು, ಬೈದಾರು. ಎದುರಿಗಾದರೂ ನಾನು ಸಂಭಾವಿತನಾಗಿರಬೇಕಲ್ಲ" ಎಂದು ಚಂದ್ರಿಯನ್ನು ಸಮಾಧಾನ ಮಾಡುವ ಪಾರುಪತ್ಯಗಾರ ಭಾನು; "ಸತ್ತರೆ ಸತ್ತ. ಎಂಥ ಕತ್ತೆಯಿವನು. ನಮಗಿಲ್ಲಿ ಬೆಳಗಾದರೆ ಎಲ್ಲಾ ಬಣ್ಣ ಮಸಿ ನುಂಗಿತು" ಎಂದು ಸಮಾಜ ದ್ರೋಹಿಯಂತಿರುವ ಮಠದ ಗುರು ಶ್ರೀಪಾದಸ್ವಾಮಿಯವರು—ಈ ಪಾತ್ರಗಳು ಬಹಳ ಕಾಲದವರೆಗೆ ಸಜೀವ ಪಾತ್ರಗಳಾಗಿ ನಮ್ಮನ್ನು ಹಿಂಬಾಲಿಸುವುದರಲ್ಲಿ ಸಂಶಯವಿಲ್ಲ.

ಎಂಬತ್ತೇಳು ಪುಟಗಳಿರುವ ಈ ನಾಟಕ ದೊಡ್ಡ ನಾಟಕವಾದರೂ ಪ್ರೇಕ್ಷಕರಿಗೆ ಬೇಸರ ತರುವುದಿಲ್ಲ. ತ. ಸು. ಶಾಮರಾಯರ ಈ ಮಾತಿನೊಡನೆ ಮುಗಿಸಬಹುದು. "ಕತೆಯ ಉದ್ದಕ್ಕೂ ಚಾಟಿಯ ಏಟಿನಂತಹ ಮೊನೆಚಾದ ಮಾತುಗಳು, ಸರಳವಾದರೂ ಮಿಂಚಿನಂತೆ ಮುಂದುವರಿಯುವ ಸಂಭಾಷಣೆ, ಅಲ್ಲಲ್ಲಿ ಕರುಣ ಗರ್ಭಿತವಾದ ತಿಳಿನಗೆ—ಇವುಗಳಿಂದ ಬೆಳೆದುಕೊಂಡು ಹೋಗುವ ಈ ನಾಟಕ ಕಾರಂತರ ಕಲಾಶಕ್ತಿಗೆ ಒಂದು ಉದಾಹರಣೆ.... ಗರ್ಭಗುಡಿ ನಿಜವಾಗಿಯೂ ಒಂದು ಸುಂದರ ಕಲಾಕೃತಿ."

(ಮುಂದುವರಿಯುವುದು)

ಕೊರವಂಜಿ ಕಾಡಿಗೆ ಹೊರಟಳು

ನೀಲತ್ತಹಳ್ಳಿ ಕಸ್ತೂರಿ

ತಿಂಗಳ ಮೊದಲನೆ ತಾರೀಕು ಅಂದರೆ ಯಾರಿಗೆ ಖುಷಿ ಇಲ್ಲ! ಅದರಲ್ಲೂ ತಿಂಗಳ ಸಂಬಳವನ್ನೇ ನೆಚ್ಚಿ ಬದುಕುವ ಜನಕ್ಕೆ ಮೊದಲತೇದಿ ಮಹಾದಿನ! ಆ ಹೊತ್ತು ಒಂದು ದಿನವಾದರೂ ನಾವು ಸಾವಿರ ರೂಪಾಯಿ ಇಲ್ಲದೆ ಹೋದರೂ ನೂರು ರೂಪಾಯಿನ ಸರದಾರರು! ಜೇಬಿನಲ್ಲಿ ಜಣಿಮಿಣಿ ಅನ್ನುತ್ತೆ ಹಣ! ಒಂದು ದಿನ, ಒಂದೇ ದಿನ ಅಷ್ಟೆ. ಅದೂ ಸಂಜೆ ತನಕ. ಮನೆ ಸೇರಿದ ಮೇಲೆ ಆ ಭಾರಿ ಸಂಪಾದನೆ ನೂರು ತೆರನಾಗಿ ಬಟವಾಡೆ ಆಗಿ ಹೋಗುತ್ತದೆ. ಮರುದಿನ ಮತ್ತೆ ಬರಿಗೈಯೆ. ಬರಿಗೈಯೆ ಸ್ಥಾಯಿ, ಭರ್ತಿ ಸಂಚಾರಿ ಅಲ್ಲವೇ!

ಇಲ್ಲಿಯವರೆಗೂ ಮೊದಲನೆ ತಾರೀಕು ಅಂದರೆ ಇನ್ನೊಂದು ಆಕರ್ಷಣೆ ಇತ್ತು. ಸಂಬಳದ ಹಾಗೇ ಅದೂ ಸರಿಯಾಗಿ ಒಂದನೇ ತಾರೀಕು ಒದಗುತ್ತಿತ್ತು. ಆದರೆ ಅದು ಹಣದ ಹಾಗೆ ಹರಿದುಹೋಗದೆ, ನಮ್ಮಲ್ಲೇ ಉಳ ಕೊಳ್ಳುತ್ತಿತ್ತು. ಅದರ ಚಮಕು, ಅದರ ನೆನಪು, ರುಚಿ, ಸಿಹಿ ಖಾರ ಒಗರು ತಿಂಗಳುದ್ದಕ್ಕೂ ಉಳಕೊಳ್ಳುತ್ತಿದ್ದವು, ಅದೇ ನಮ್ಮ 'ಕೊರವಂಜಿ' ಯ ನೆನಪು! ತಿಂಗಳ ಮೊದಲಿಗೆ ಸರಿಯಾಗಿ ಕೊರವಂಜಿ ಬರುತ್ತಿದ್ದಳು. ಕಣಿ ಹೇಳಿ ನಕ್ಕು ನಗಿಸುತ್ತಿದ್ದಳು, ನಲಿಸುತ್ತಿದ್ದಳು. ಎಷ್ಟೋ ಸಲ ಚುರುಕು ಮುಟ್ಟಿಸುತ್ತಿದ್ದಳು. ಲಕಲಕಾಂತ ಬಂದು ನಗಿಸಿ ಉತ್ಸಾಹ ಕೆರಳಿಸಿ ಹೋಗುತ್ತಿದ್ದಳು. ಮತ್ತೆ ಮುಂದಿನ ತಿಂಗಳು ಅವಳು ಬರೋತನಕವೂ ನೆನಪಿನಲ್ಲಿ ಉಳೀತಿತ್ತು ಅವಳ ನಗೆಯ ಮಿಂಚು, ಮಾತಿನ ಮೋಡಿ, ನಡೆಯ ಬೆಡಗು, ಚಬಕಿನ ಚುರುಕು.

ಕೊರವಂಜಿ ಮಾತು ನಾನಾ ತರ. ಒಂದೊಂದು ಕೇಳಿದ ಕೂಡಲೇ ಕಚಗುಳಿ ಕೊಡುತ್ತಿದ್ದವು. ಇನ್ನು ಕೆಲವು ಪೂರಾ ಓದಿದ ಮೇಲೆಯೆ ಪರಿಣಾಮಕಾರಿ. ಮತ್ತೆ ಕೆಲವಂತೂ ಓದಿ ಮತ್ತೆ ಓದಿದ ಮೇಲೆಯೆ ಬುರುಡೆಗೆ ಏರುತ್ತಿದ್ದುದು. ಓದಿ ಎಷ್ಟೋ ಹೊತ್ತಿನ ಮೇಲೆ ಏನೊ ನೆನಪು ಹೊಡೆದ ಹಾಗೆ ಆಗಿ ಪಕಪಕ ನಗುಬರುತ್ತಿತ್ತು. ಅವಳ ಕಣ್ಣಿನ ನೋಟ ಹುಬ್ಬಿನ ಡೊಂಕು ಮೂರ್ತಿ ಮಲಕು ಹಾಡಿನ ಜೋಕು ನಡಿಗೆಯ ಠೀಕು ಎಲ್ಲ ವಿಶಿಷ್ಟವೇ. ನಮ್ಮ ಕನ್ನಡಮ್ಮನ ಮನೆಯ ಬೆಡಗಿನ ಮಗಳು ಕೊರವಂಜಿ, ಕಣಿಹೇಳಿ, ಕತೆ ಹೇಳಿ, ಉರಿಗಾಳು ಕೊಟ್ಟು, ಕುಹಕಿಡಿ ಹಾರಿಸಿ, ಕೊರವಣ್ಣನ ಅವಲೋಕನ ತಿಳಿಸಿ, ಬಲಿತವರಿಗೆ ನೀತಿಯ ಕಣಿ ಹೇಳಿ, ಕತೆ ಹೇಳಿ, ಲಕ್ಷ್ಮಣರ ವಿಲಕ್ಷಣ ಚಿತ್ರ ತೋರಿಸಿ, ಹೊಸಗಾಲದ ಗಾದೆ ಹೇಳಿ, ಅಣಕಮಾಡಿ ಮರುಳುಮಾಡುತ್ತಿದ್ದಳು ಕಿಲಾಡಿ ಕೊರವಂಜಿ! ಅವಳ ಬುಟ್ಟೀಲಿ ಎಷ್ಟೊ ಬಾಣ! ಹೂಬಾಣ ಭೂಬಾಣ ಕುಹಕಿಡಿ ಉರಿಗಾಳು ಚಿನಕುರುಳಿ ಪಟಾಕಿ ಆನೆ ಪಟಾಕಿ ಏನೇನೊ! ತಿಳಿನಗೆ, ಹಾಸ್ಯ, ವಿಡಂಬನೆ, ಟೀಕೆ, ಕುಹಕ, ಚೇಷ್ಟೆ, ಸರಸ ಸಲ್ಲಾಪ! ಆದರೆ ಅವಳ ಹತ್ತಿರ ಗಡಾಬಾಜು ಆಟಂಬಾಂಬು ಇಲ್ಲ. ಅವಳ ನಗೆ ಎದೆಎದೆ ಒಡಕೊಂಡು ಬಿದ್ದುಬಿದ್ದು ನಗೋದಲ್ಲ. ಇನ್ನೂ ಹುಟ್ಟದೇ ಇರೊ ವಿವೇಕದ ಹಲ್ಲನ್ನು ತೋರಿಸಿ ನಗೋದಲ್ಲ. ತಿಳಿನಗೆ ಅವಳದು! ಬದುಕಿನ ಬವಣೆ ನಮ್ಮ ಮುಖದ ಮೇಲೆ ಹಾಕುವ ಗಂಟುಗಳನ್ನು ತನ್ನ ಮಾತಿನ ಮಲಕಿನಿಂದ ಬಿಚ್ಚುವುದು ಕೊರವಂಜಿಯ ಕೆಲಸ! ಮುಖದ ಮೇಲೆ ತಿಳಿನಗು; ಮನಸ್ಸಿನ ಮೇಲೆ ಅರಿವಿನ ತಿಳಿಬೆಳಕು, ಆತ್ಮಕ್ಕೆ ಆನಂದದ ತಿಳಿವು, ಇದು ಅವಳ ಗುರಿ, ಕನ್ನಡದಲ್ಲಿ ಹಾಸ್ಯಕ್ಕೆ ಒಂದು ಗೂಡು ಕಟ್ಟಿಕೊಟ್ಟಳು ಕೊರವಂಜಿ! ಎಳೇ ಹುಡುಗಿ ಮಣ್ಣಲ್ಲಿ ಆಡತಾಳೆ, ಗೂಡು ಕಟ್ಟುತಾಳೆ, ಮನೆ ಆಟ ಆಡುತಾಳೆ, ಆಟದ ಸಂಸಾರ ನಡೆಸತಾಳೆ, ಪೂಜೆ ಮಾಡತಾಳೆ, ಹಾಡು ಹೇಳತಾಳೆ! ಹಾಗೇ ಈ ಕೊರವಂಜಿ ತುಂಬಾ ಚುರುಕು, ಹಾಸ್ಯದ ಆಟ ತೋರಿಸಿದಳು, ಹಾಸ್ಯದ ಒಂದು ಗೂಡು ಕಟ್ಟಿಕೊಟ್ಟಳು.

ಕೊರವಂಜಿ ಹುಟ್ಟಿ ಇಪ್ಪತ್ತೈದು ವರ್ಷ ಆಯಿತಂತೆ. ಅವಳು ಹುಟ್ಟಿದಾಗ ಭಾರತಮಾತೆ ಇನ್ನೂ ಸೆರೆಯಲ್ಲೇ ಇದ್ದಳು. ಯುದ್ಧದ ಹಾವಳಿ ಬೇರೆ. ಆ ಗೊಂದಲದ ನಡುವೇನೆ ಕೊರವಂಜಿ ಕೂಸು ಕಿರ್ ಅಂದೇ ಬಿಟ್ಟಳು! ಒಂದೇ ಗಳಿಗೆ ಅತ್ತದ್ದು ಹುಟ್ಟೋವಾಗ! ಆಮೇಲೆಲ್ಲ ನಗುವೇ! ಮೂರು ತಿಂಗಳಿಗೆ ಮೊಗಚಿಕೊಂಡಳು, ಆರು ತಿಂಗಳಿಗೆ ಎದ್ದು ಕೂತಳು, ವರ್ಷಕ್ಕೆ ಓಡಾಡಿಯೆಬಿಟ್ಟಳು. ಯುಗಾದಿ ಹಬ್ಬ ವರ್ಷದ ಹೆಚ್ಚು, ಹೊಸ ಬಣ್ಣಬಣ್ಣದ ಲಂಗ ಅಂಗಿ ಹಾಕಿಕೊಂಡು ಹೂ ಮುಡಿದುಕೊಂಡು ಬೇವು ಬೆಲ್ಲ ತಿಂದು ಒಬ್ಬಟ್ಟು ಮೆಲ್ಲಿ ತಾ ಓಡಾಡತಿದ್ದರೆ ಕೊರವಂಜಿ, ಮನೆ ತುಂಬಿತು, ಮನಸ್ಸೂ ತುಂಬಿತು. ಸಾಕು ತಂದೆ ರಾಶಿ, ಕತೆ ಹಾಡು ಹೇಳಿಕೊಟ್ಟ ನಾ. ಕ. ದೀಕ್ಷಿತ್, ರಾಮಿ, ಕಾರಂತ, ಜಿ. ಪಿ. ಇತ್ಯಾದಿ ಎಲ್ಲರಿಗೂ ಎಷ್ಟು ಖುಷಿಯೊ! ಚಿತ್ರ ಬರೆದುಕೊಟ್ಟ ಲಕ್ಷ್ಮಣ್‌ಗೂ

ಆನಂದ. ಆ ಮಗೂ ಕಣೀನ ಕತೀನ ಹಾಡನ್ನ ಕೇಳಿ, ಅವಳ ಆಟ ನೋಡಿ ನಕ್ಕು ನಲಿದ ಆ ಜನಕ್ಕೂ ಖುಷಿನೊ ಖುಷಿ! ಹೀಗಿತ್ತು ಆ ಕಾಲ.

ಬೆಳೆದಳು ಕೊರವಂಜಿ, ಹೊಸ ತರಾ ಲಂಗ ಬಂತು. ಆ ವೇಳೆಗೆ ನಮ್ಮ ದೇಶವೂ ಸ್ವತಂತ್ರವಾಯಿತು. ಕೊರವಂಜಿಗಂತೂ ಸಂತೋಷವೊ ಸಂತೋಷ! ತನ್ನ ಆನಂದಾನ ಎಲ್ಲರಿಗೂ ಹಂಚಿಕೊಟ್ಟಳು. ಸ್ವಾತಂತ್ರ್ಯದ ಜೊತೇಲೆ ನಾವೆಲ್ಲ ನಮ್ಮ ಬುದ್ಧೀಗೂ ನಮ್ಮ ನೀತಿ ನೇಮಕ್ಕೂ ಸ್ವಾತಂತ್ರ್ಯ ಕೊಟ್ಟಬಿಟ್ಟೆವಲ್ಲ, "ಹೋಗಿ ನಮಗೆ ನಿಮ್ಮ ಅಗತ್ಯ ಇಲ್ಲ, ನಿಮಗೆ ನಮ್ಮ ಅಡ್ಡೀನೂ ಬೇಡ" ಅಂತ ದೂರ ಕಳಿಸಿಬಿಟ್ಟೆವಲ್ಲ! ಕೊರವಂಜಿ ಬೆಳೀತಾ ಇದ್ದಳು. ಇದನ್ನೆಲ್ಲ ಗಮನಿಸಿದಳು, ಆಗಾಗ ಛೂಬಾಣ ಬಿಡತಾ ಇದ್ದಳು. ಸರಿ ನಿಜವಾದ ಬಾಣ ಬಂದರೂ ನಮಗೇನೂ ನಾಟೋದಿಲ್ಲ, ಇನ್ನು ಹೆಣ್ಣು ಮಗಳ ಮಾತಿನ ಬಾಣ ನಾಟೀತೆ ನಮ್ಮ ಒರಟುಬುದ್ಧೀಗೆ! ಆದರೂ ಕೊರವಂಜಿ ಸೋಲಲಿಲ್ಲ. ಗೆಲವಾಗೇ ಇದ್ದಳು. ನಗತಾಲೇ ಇದ್ದಳು. ನಗೋ ಯೋಗ್ಯತೆ ಇದ್ದವರನ್ನೆಲ್ಲ ನಗಿಸತಾಲೇ ಇದ್ದಳು.

ಅಳುನೇ ಹೇಗೆ ಶಾಶ್ವತ ಅಲ್ಲವೊ, ನಗೂನೂ ಹಾಗೇ! ಸದಾ ನಗತಾಲೇ ಇರತಾರೆಯೆ ಯಾರಾದರೂ! ಎರಡೂ ಇದ್ದೇ ಇವೆ. ಒಂದರ ಹಿಂದೆ ಇನ್ನೊಂದು. ಆದರೆ ಅಳು ಬಂದಾಗಲೂ, ಮರೆತು, ನಗೆತನವನ್ನ ಉಳಿಸಿಕೊಳ್ಳುವುದು, ನಗೆಯ ಫ್ಯಾನ್ ತಿರುಗಿಸಿ ಧಗೆ ಕಡಮೆ ಮಾಡಿಕೊಳ್ಳುವುದು ಜಾಣತನ! ಅದನ್ನೇ ಕಲಿಸಿ ಕೊಟ್ಟಳು ಕೊರವಂಜಿ ಈ ತನಕ.

ಕೊರವಂಜಿ ಅತ್ತದ್ದು ಉಂಟೇ? ಉಂಟು. ಆದರೆ ಒಂದೇ ಸಲ. ಒಂದೇ ಒಂದು ಸಲ ಅವಳು ಅಳುಮೂಂಜಿ ಆಗಿದ್ದಳು. ಅದೇ ೧೯೪೮ರಲ್ಲಿ. ನಮ್ಮ ದೇಶಾನ ಅಳು ಮುಖದಲ್ಲಿ ಒಂದು ಧೈರ್ಯ ಒಂದು ನಗೆ ಮಿಂಚಿಸಿದನಲ್ಲ ತಾತ ಬಾಪೂ, ಆತನ್ನ ನಾವು ನಮ್ಮಲ್ಲಿ ಇರಬೇಡ ಅಂತ ಕಳಿಸಿಬಿಟ್ಟೆವಲ್ಲ ಆಗ! ಕೊರವಂಜಿ ಇನ್ನೂ ಹುಡುಗಿ. ಆದರೂ ದೊಡ್ಡವರ ಮೇಲ್ಪಂಕ್ತಿ! ಕರೀ ಲಂಗ ಹಾಕಿಕೊಂಡು ಕಣ್ಣೀರು ಸುರಿಸುತಾ ಬಂದಿದ್ದಳು. ಆ ಅಳುವಿನಲ್ಲೂ ಅವಳದೇ ಒಂದು ಬ್ಲೋಕು, ಒಂದು ರೀತಿ! ಮತ್ತೆ ಚಾಚಾ ನೆಹರೂ ಹೋದಾಗ, ತಾತ ವಿಶ್ವೇಶ್ವರಯ್ಯ ಹೋದಾಗ, ಶಾಸ್ತ್ರಿಗಳು ಹೋದಾಗಲೂ ಕೊರವಮ್ಮನಿಗೆ ನೋವಾಗಿತ್ತು.

ಈಗ ಕೊರವಂಜಿ ಬೆಳೆದ ಹೆಣ್ಣು. ಇಪ್ಪತ್ತೈದರ ಪ್ರಾಯ. ಸ್ವಾತಂತ್ರ್ಯ ಬಯಸತಾಳೆ. ಸಾಕು ತಂದೆಗೆ ಇನ್ನು ಹೆಚ್ಚು ಭಾರ ಆಗಬಾರದು ಅಂತ ಅವಳ ಮನಸ್ಸು. ಬೇರೆ ಯಾರೂ ಆಕೆಯ ಕೈಹಿಡಿಯಲಿಲ್ಲ. "ಊರಿಗೆ ಬೇಡವಾಗಿದೇನಿ ನಾನು. ಕಾಡಿಗೆ ಹೊರಟು ಹೋಗತೀನಿ. ಈ ಧಗೆ ಈ ಹೊಗೆ ತುಂಬಿದ ಊರಿಗಿಂತ ಆ ಕಾಡಿನ ಬೆಟ್ಟ ಗುಡ್ಡ ಮರ ಗಿಡ ಹುಲಿ ಚಿರತೆ ಅವೇ ಮೇಲು" ಅಂತ, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ಹೊರಟು ನಿಂತಿದಾಳೆ ಕೊರವಂಜಿ. ಬೇಡ ಅನ್ನೋದಕ್ಕೆ ಅಗಿಲ್ಲ ತಂದೇಗೆ! ಹೋದ ವರ್ಷವೇ ಕಳಿಸಿಬಿಡಬೇಕು ಅಂದುಕೊಂಡಾಗ ನೆರೆಹೊರೆಯವರು "ಬೇಡಿ ನಾವು ಕುಮ್ಮಕ್ಕು ಕೊಡತೀವೆ" ಅಂದರು. ಈಗ ಇನ್ನು ಸಾಧ್ಯವಿಲ್ಲ ಅನ್ನುವ ಸ್ಥಿತಿ ಬಂದಿದೆ. ಹೋದ ಮಾರ್ಚಿ ತಿಂಗಳಲ್ಲಿ ಕೊರವಂಜಿ ಕೊನೆಯ ನಮಸ್ಕಾರ ಹೇಳಿದಾಳೆ. ಸಾಕು ತಂದೆ ರಾಶಿ, ಹಿರಿಯರು ಶ್ರೀರಂಗ, ಗೆಳೆಯರು ಅರಾಸೇ, ದಾಶರಥಿ ದೀಕ್ಷಿತ್, ರಾಮಿ, ಅಕ್ಕ ಸುನಂದಮ್ಮ ಎಲ್ಲರೂ ಕಳಿಸಿ ಕೊಟ್ಟಿದಾರೆ, "ಕಾಗದ ಬರೀತಿರಮ್ಮಾ" ಅಂತ ಹೇಳಿದಾರೆ. ಶ್ರೀರಂಗರಂತೂ "ತಿಂಗಳು ತಿಂಗಳಿಗೆ ಅಲ್ಲವಾದರೂ ಕೊನೇಪಕ್ಷ ಮೂರು ತಿಂಗಳಿಗೊ ಆರು ತಿಂಗಳಿಗೊ ಇಲ್ಲವೇ ವರ್ಷಕ್ಕೆ ಒಮ್ಮೆಯೊ ಬಂದು ಹೋಗಮ್ಮಾ, ಮರೆಯಬೇಡಾ" ಅಂತ ಹೇಳಿದಾರೆ. ಹಾಗೇ ಆಗಲಿ ಅಂತ ನಮ್ಮೆಲ್ಲರ ಎದೇನೂ ಬೇಡಿಕೊಳ್ಳುತಾ ಇದೆ.

ಕೊರವಂಜಿ ಹೋಗತಾಳೆ, ಅಲ್ಲ ಹೋಗಿ ಬರತಾಳೆ! ಆದರೆ ಅವಳ ನೆನಪು ಹೋದೀತೇ? ಅವಳು ಹೇಳಿದ ಹೊಸ ಗಾದೆಗಳು, ಹಾಡುಗಳು 'ಕಾದಿರುವಳು ಗೌರಿ', "ನಿಮ್ಮ ಮನೆಯಂಗಳದಿ ಬೆಳೆದೊಂದು ಹೈದನ್ನ", "ಅವನಿದ್ದದ್ದು ನಾನಾದದ್ದು", 'ಕೂಷ್ಮಾಂಡ ಪುರಾಣ', "ವೈಮರಿತ ಮಾದನ ಸಾಹಸಗಳು", "ರೇಷನ್ ಆಫೀಸರ್ ಮಗಾ ಕಾಣೊ!" ಅನರ್ಥ ಕೋಶ, ನೀತಿ ಕತೆಗಳು, ಗಾಂಪರ ಗಲಾಟೆ, ದೇರಣ್ಣೋರ ದಫೇದಾರಿಕೆ, ಮುಗಿಲು ಹಳ್ಳಿಯ ಮಹಾತ್ಮೆ, ಒಂದೇ ಎರಡೇ ಮರೆಯುವುದು ಹೇಗೆತಾನೇ ಸಾಧ್ಯ!

ಅಂತೂ ಏಪ್ರಿಲ್ ತಿಂಗಳಿನಿಂದ ಕೊರವಂಜಿ ಬರಲಿಲ್ಲ.! ಒಂದನೇ ತಾರೀಕು ಬರಿದೋ ಬರಿದು!

ಕಾಡಿಗೆ ಹೊರಟಳು ಕೊರವಂಜಿ.
ಊರಿಗೆ ಇನ್ನೇನು ಅಳುಮೂಂಜಿ.
ಹೇಗೋ ಸಿಕ್ಕೀತು ಉಪ್ಪುಗಂಜಿ.
ಹೇಗೆ ಸಿಕ್ಕೀತು ನಗೆ ಅಪರಂಜಿ.

ಭಾಷಾ ಬಾಂಧವ್ಯ ಗೋಷ್ಠಿ
ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಶ್ರವಣಬೆಳ್ಗೊಳ : ಮೇ ೧೯೬೭

ತೆಲುಗು-ಕನ್ನಡ ಭಾಷಾ ಬಾಂಧವ್ಯ

ಕಂ. ಸು. ವೆಂಕಟಾದ್ರಿ ಶರ್ಮಾ

ಶ್ರೀಮನ್ಮಹಾಭಾರತದ ಅಂಗವಾದ ವಿಷ್ಣುಸಹಸ್ರನಾಮದಲ್ಲಿಯೆ 'ಆಂಧ್ರ', ಶಬ್ದದ ಉಲ್ಲೇಖವಿದೆ. ಆಂಧ್ರವೆಂಬ ಶಬ್ದ ಅತಿ ಪ್ರಾಚೀನವೆಂಬುದಕ್ಕೆ ಅಡ್ಡಿಯಿಲ್ಲ. ಆಂಧ್ರರೆಂಬ ಮೂಲ ನಿವಾಸಿಗಳಗುಂಪೊಂದು ಪ್ರಾಯಶಃ ವಿಂಧ್ಯಪರ್ವತದ ಸುತ್ತಮುತ್ತ ಇದ್ದಿರಬೇಕು ಎನ್ನಿಸುತ್ತದೆ.

ಆರ್ಯಾವರ್ತದಲ್ಲಿದ್ದ 'ತೇಲ್' ಎಂಬ ನದಿಯನ್ನು ದಾಟಿ ಬಂದವರು ತೆಲುಗರು ಎಂಬುದೊಂದು ಅಭಿಪ್ರಾಯ. ಸಧ್ಯದಲ್ಲಿ 'ಆಂಧ್ರ' ಮತ್ತು 'ತೆಲುಗು' ಎಂಬ ಶಬ್ದಗಳು ಪರ್ಯಾಯವಾಚಿಗಳಂತೆ ಬಳಕೆಯಲ್ಲಿವೆ. ಅಜಂತ ಬಾಹುಳ್ಯ, ಸಂಸ್ಕೃತ ಶಬ್ದಗಳ ಹಿತ-ಮಿತ-ಉಚಿತವಾದ ಬೆರಕೆ, ದೇಶೀ ಮತ್ತು ಮಾರ್ಗಗಳ ಹವಣರಿತ ಹೊಂದಾಣಿಕೆ-ಈ ಗುಣಗಳನ್ನು ಮೈಗೂಡಿಸಿಕೊಂಡಿರುವ ಆಂಧ್ರ ಅಥವಾ ತೆಲುಗು ಸಾಹಿತ್ಯ ಮಾರ್ದವತೆ-ಮೋಹಕತೆಗಳಿಗೆ ಹೆಸರಾಂತು 'ಪೌರ್ವಾತ್ಯ ದೇಶದ ಇಟಾಲಿಯನ್' (Italian of the East) ಎಂಬ ಬಿರುದನ್ನು ಪಾಶ್ಚಾತ್ಯರಿಂದ ಪಡೆದುಕೊಂಡಿದೆ.

ಎಂಟನೆಯ ಶತಮಾನದ ಕವಿರಾಜ ಮಾರ್ಗವೆಂಬ ಲಕ್ಷಣ ಗ್ರಂಥದಿಂದ ಇತಿಹಾಸವನ್ನು ಪ್ರಾರಂಭಿಸಿರುವ ಶ್ರೀಮಂತ-ಧೀಮಂತವಾದ ಕರ್ನಾಟಕ ಸಾಹಿತ್ಯವು ತೆಲುಗಿಗಿಂತಲೂ ಪ್ರಾಚೀನವೆಂಬುದು ನಿರ್ವಿವಾದ. ಕನ್ನಡ ಸಾಹಿತ್ಯದ ಪ್ರಾರಂಭ ಎಂಟನೆಯ ಶತಮಾನಕ್ಕಿಂತಲೂ ಹಿಂದೆಯೆ ಆಗಿರಬಹುದೆಂಬುದೂ ಒಂದು ಅಭಿಪ್ರಾಯ. ಲಕ್ಷ್ಯ ಗ್ರಂಥಗಳಿಲ್ಲದೇ ಲಕ್ಷಣ ಗ್ರಂಥಗಳು ಹೊರಬರಲಾರದು. ಲಕ್ಷ್ಯ ಗ್ರಂಥಗಳ ಬೆಳೆವಣಿಗೆ ತಾರಕಕ್ಕೆ ಏರಿದಾಗ ಮಾತ್ರ ಲಕ್ಷಣ ಗ್ರಂಥಗಳು ಬರುತ್ತವೆನ್ನುವ ಮಾತು ಹೊಸದೇನೂ ಅಲ್ಲ. ಕನ್ನಡ ಸಾಹಿತ್ಯದ ಆರಂಭವನ್ನು ಇನ್ನೂ ಹಿಂದಕ್ಕೆ ಹಾಕಲು ಕಾರಣ ಇಷ್ಟೇ.

ಈಗ ನಮಗೆ ದೊರಕಿರುವ ಸಾಮಗ್ರಿಗಳ ಆಧಾರದಿಂದ ಹೇಳುವುದಾದರೆ, ಕನ್ನಡ ಸಾಹಿತ್ಯ ತೆಲುಗು ಸಾಹಿತ್ಯಕ್ಕಿಂತಲೂ ಮೂರು ಶತಮಾನಗಳಷ್ಟು ಹಿಂದಿನದು.

ಆಂಧ್ರ ಸಾಹಿತ್ಯದ ಪ್ರಾರಂಭ ಕವಿತ್ರಯರಲ್ಲಿ ಮೊದಲಿಗನಾದ ನನ್ನಯ ಭಟ್ಟಾರಕನ (೧೦೦೦-೧೦೬೦) ಮಹಾಭಾರತದಿಂದ—ಇದು ಸಂಸ್ಕೃತದ ಅನುವಾದ. ಬ್ರಾಹ್ಮಣ ಕವಿ ನನ್ನಯಭಟ್ಟ ತೆಲುಗು ಸಾಹಿತ್ಯಕ್ಕೆ ಆದಿಕವಿಯಾದರೆ ಜೈನಕವಿ ಪಂಪನು ಕನ್ನಡ ಸಾಹಿತ್ಯಕ್ಕೆ ಆದಿಕವಿ. ಈ ಎರಡೂ ಭಾಷೆಗಳಲ್ಲಿನ ಆದಿ ಕಾವ್ಯಗಳಿಗೆ ಕಥಾವಸ್ತು ಸಂಸ್ಕೃತದ ವ್ಯಾಸಪ್ರಣೀತ ಶ್ರೀಮನ್ಮಹಾಭಾರತವೆಂಬುದು ಉಭಯ ಭಾಷೆಗಳ ಬೆಳವಣಿಗೆ ಪ್ರಪ್ರಥಮ ಹಂತದಲ್ಲೇ ಇರುವ ಸಾಮ್ಯ. 'ಪಂಪ ಭಾರತ' ಅಥವಾ 'ವಿಕ್ರಮಾರ್ಜುನ ವಿಜಯ'ದಲ್ಲಿ ಭಾರತದ ಕಥಾವಸ್ತು 'ಆನೆ ಕನ್ನಡಿಯೊಳಗಿರ್ಪಂತೆ' ಸೂಕ್ಷ್ಮ ರೂಪದಲ್ಲಿದೆ; ಆದರೆ ಸಂಸ್ಕೃತದ ಮೂಲವನ್ನು ತೆಲುಗು ಭಾರತ ಚಾಚೂ ತಪ್ಪದೆ ಅನುಸರಿಸಿದೆ—ಇದೊಂದು ವ್ಯತ್ಯಾಸ ಈ ಭಾರತಗಳಿಗೆ ಇದೆ.

ಈ ಉಭಯ ಭಾರತಗಳೂ ಚಂಪೂ ಗ್ರಂಥಗಳೇ. ಇವೆರಡೂ ಗ್ರಂಥಗಳಲ್ಲಿ ತತ್ತದೇಶೀಯವಾದ ಅಂಶಗಣ ಪ್ರಧಾನವಾದ ಲಯಗಳನ್ನು ಅಥವಾ ಛಂದಸ್ಸುಗಳನ್ನು ಹೊಂದಿರುವುದರ ಜೊತೆಗೆ ಸಂಸ್ಕೃತದ ಅಕ್ಷರಗಣ ಪ್ರಧಾನ ಸಮವೃತ್ತಗಳೂ ಇವೆ. ಈ ಉಭಯ ಗ್ರಂಥಗಳಲ್ಲಿಯೂ ಬರುವ ಗದ್ಯ ಭಾಗಗಳಲ್ಲಿ ಸಂಸ್ಕೃತದ ಪದಗಳು ಹೇರಳವಾಗಿ ಸಿಗುತ್ತವೆ.

ತೆಲುಗಿನ ಆದಿ ಕಾವ್ಯವನ್ನು ಬರೆದ ನನ್ನಯ ಭಟ್ಟಾರಕನಿಗೆ ಕನ್ನಡದ ಕವಿ ನಾರಾಯಣಭಟ್ಟನ ಸಹಾಯವೂ ಇತ್ತು ಎಂಬ ಮಾತಿದೆ. ಭಾಷಾ ಬಾಂಧವ್ಯಕ್ಕೆ ಹನ್ನೊಂದನೆಯ ಶತಮಾನದಲ್ಲಿಯೇ ಹಾಕಿದ ಸುಭದ್ರ ಬುನಾದಿಯಿದು ಎನ್ನಬಹುದು.

ಯಾವುದೇ ಭಾಷೆಯ ಉತ್ತಮವಾದ ಸಾಹಿತ್ಯದೊಡನೆ ರಸ-ಗುಣಗಳಲ್ಲಿ ಸ್ಪೈರ್ಧೋಟಿ ಮಾಡಬಲ್ಲ, ಕನ್ನಡದ ಜಾಯಮಾನಕ್ಕೆ ಒಗ್ಗಿಬಂದ ಷಟ್ಪದೀ ಶೈಲಿಯ ಮೇರು ಕೃತಿಯಾದ ಕುಮಾರವ್ಯಾಸ (ಕ್ರಿ.ಶ. ೧೪೩೦) ಭಾರತದ ಉತ್ತರಾರ್ಧವಾದ 'ಕೃಷ್ಣರಾಯ ಭಾರತ'ದ ಕರ್ತೃವಾದ ತಿಮ್ಮಣಾರ್ಯನಿಗೆ ಪ್ರೋತ್ಸಾಹ-ಪ್ರೇರಣೆಗಳನ್ನೊದಗಿಸಿದವನು ವಿಜಯನಗರದ ಆಂಧ್ರ ಕವಿಯಾದ ಕವಿರಾಜ ಶ್ರೀಕೃಷ್ಣದೇವರಾಯ. ಹದಿನಾರನೆಯ ಶತಮಾನದ ಈ ದೊರೆ 'ಭುವನೇಶ್ವರೀ ವಿಜಯಮು' ಎಂಬ ಹೆಸರಿನಲ್ಲಿ ನಡೆಸುತ್ತಿದ್ದ ಕವಿ-ಮೇಳ ನಿಜವಾಗಿಯೂ ಭಾಷಾ ಬಾಂಧ ಮೂರ್ತ ಸ್ವರೂಪ. ಅಲ್ಲಸಾನಿ ಪೆದ್ದನ ತೆನಾಲಿ ರಾಮ ಕೃಷ್ಣ-ಧೂರ್ಜಟೀ ಮುಂತಾದ ತೆಲುಗು ಕವಿಗಳ ಜೊತೆಯಲ್ಲಿಯೇ ತಿಮ್ಮಣ ಮುಂತಾದ ಕನ್ನಡದ ವರಕವಿಗಳೂ ಇದ್ದರು. ಇವರಲ್ಲಿ ಅನೇಕರು ಉಭಯಭಾಷಾವಿಶಾರದರು ಅಥವಾ ಅನೇಕ ಭಾಷಾಕೋವಿದರು. ಸರಸ್ವತಿಯನ್ನು 'ಸರ್ವಭಾಷಾ ಸ್ವರೂಪಿಣೀ' ಎಂಬುದಾಗಿ ಲಲಿತಾಸಹಸ್ರ ನಾಮವು ಸ್ತುತಿಸಿದೆ. ಈ ಮಾತಿಗೆ ವ್ಯಾಖ್ಯಾನವೆಂಬಂತೆ ಶ್ರೀಕೃಷ್ಣದೇವರಾಯನ ಆಸ್ಥಾನವು ಮೊಳಗುತ್ತಿತ್ತು.

ಸುಮಾರು ಹದಿಮೂರನೆಯ ಶತಮಾನದವರೆಗೂ ತೆಲುಗು ಮತ್ತು ಕನ್ನಡಭಾಷೆಗಳಿಗೆ ಒಂದೆ ಲಿಪಿಯಿದ್ದಿತು. ಈ ಮಾತು ಭಾಷಾಬಾಂಧವ್ಯದ ದೃಷ್ಟಿಯಿಂದ ಗಣನೀಯ ಭಾಷಾಶಾಸ್ತ್ರದ ದೃಷ್ಟಿಯಿಂದ ಗಣನೀಯ. ಹದಿನಾಲ್ಕನೆಯ ಶತಮಾನದಿಂದಾಚೆಗೆ ತಲೆಕೊಟ್ಟುಗಳಲ್ಲಿ ವ್ಯತ್ಯಾಸ ವಾಗುತ್ತಾ ಬಂದರೂ ಉಭಯ ಭಾಷೆಗಳ ಲಿಪಿಗಳಿಗೂ ಇಂದೂ ಹೆಚ್ಚು ವ್ಯತ್ಯಾಸವೇನೂ ಇಲ್ಲ.

ತೆಲುಗು ಮತ್ತು ಕನ್ನಡದ ಪ್ರಪ್ರಥಮ ಶಬ್ದಕೋಶ ಗಳನ್ನು ಒದಗಿಸಿದವರು ಬ್ರೌನ್ ಮತ್ತು ಕಿಟ್ಟೆಲ್ ಎಂಬ ಐರೋಪ್ಯರು, ವಿದೇಶೀಯರು, ಸ್ವದೇಶೀಯರಲ್ಲ. ಇದೂ ಒಂದು ಉಭಯ ಸಾಮಾನ್ಯ ವಿಚಾರ.

ಕನ್ನಡದ ಅನೇಕ ಪದಗಳನ್ನು ತೆಲುಗಿನಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೇ ಬಳಸುತ್ತಿದ್ದರೆಂಬುದಕ್ಕೆ ಗ್ರಂಥಸ್ಥ ಆಧಾರಗಳಿವೆ. ಉದಾಹರಣೆಗಾಗಿ ಹನ್ನೆರಡನೆಯ ಶತಮಾನದ ಆರಂಭದಲ್ಲಿಯೇ ಆಗಿಹೋದ 'ನನ್ನೆಚೋಡ' ನೆಂಬ ಕವಿಯ 'ಕುಮಾರ ಸಂಭವಮು' ಎಂಬ ಚಂಪೂ ಗ್ರಂಥದಲ್ಲಿ 'ಕೆಲಸ', 'ಮೊಸರು', 'ನೆರವು' ಮುಂತಾದ ಶುದ್ಧ ಕನ್ನಡ ಶಬ್ದಗಳಿವೆ. ಕನ್ನಡದ 'ಕೇಣ' ಮತ್ತು 'ಗಡಣ' ಮುಂತಾದುವು 'ಕೇನ' ಮತ್ತು 'ಗಡನ' ಮುಂತಾಗಿ ನಕಾರಾಂತಗಳಾಗಿವೆ. 'ಚಪ್ಪರಿಸು', 'ಚೇತರಿಸು', 'ಸೀವರಿಸು' ಮುಂತಾದ ಪ್ರೇರಣಾರ್ಥಕ ಧಾತುಗಳು 'ಸಪ್ಪರಿಂಚು' 'ಚೌತರಿಂಚು' 'ಸವರಿಂಚು' ಎಂಬ ರೂಪಗಳನ್ನು ಹೊಂದಿವೆ. ನೆರೆಯ ಪ್ರಾಂತದ ಸಮೃದ್ಧ ಭಾಷೆಯೊಂದರಿಂದ ಪದಗಳನ್ನು ಎರವಲಾಗಿ ಪಡೆಯುವುದು ಹೊಸದೇನೂ ಅಲ್ಲ. ಕನ್ನಡ ರಾಜ್ಯದಲ್ಲಿರುವ ತೆಲುಗರು ಅನೇಕ ಕನ್ನಡ ಶಬ್ದಗಳನ್ನು ಬಳಸಿ ತೆಲುಗು ಭಾಷೆಯನ್ನು ಕುಲಗೆಡಿಸುವರೆಂದು ದೂರುವವರಿಗಿದೊಂದು ಪಾಠ. ಹೈದರಾಬಾದಿನ ತೆಲುಗಿನಲ್ಲಿ ಉರ್ದು ಶಬ್ದಗಳು ಬೆರೆತಿರುವುದೊಂದು ನಿದರ್ಶನ. ಇಂಗ್ಲೀಷಿನ ಪದಗಳನ್ನೇ ಧಾರಾಳವಾಗಿ ಬಳಸಬಹುದೆಂದ ಮೇಲೆ, ಕನ್ನಡ ನಾಡಿನ ತೆಲುಗರು ಕನ್ನಡ ಮಾತುಗಳನ್ನು ಬೆರೆಸುವುದು ತಪ್ಪಲ್ಲ.

ಕನ್ನಡ ಮತ್ತು ತೆಲುಗು ಸಾಹಿತ್ಯಗಳೆರಡರಲ್ಲಿಯೂ ಆದಿಕಾವ್ಯಗಳಿಗೆ ಉಪಾದಾನ ಸಾಮಗ್ರಿಯನ್ನೊದಗಿಸಿದುದು ಸಂಸ್ಕೃತದ ಭಾರತ-ಭಾಗವತ-ರಾಮಾಯಣಾದಿ ಪುರಾಣ ಗ್ರಂಥಗಳು ಮತ್ತು ಸಂಸ್ಕೃತದ ಪಂಚ ಮಹಾ ಕಾವ್ಯಗಳೇ ಮುಂತಾದ ಲೌಕಿಕ ಕಾವ್ಯಗಳು.

ರುದ್ರಭಟ್ಟ (೧೧೭೩-೧೨೨೦) 'ಜಗನ್ನಾಥ ವಿಜಯ' ಹರಿಹರನ 'ಗಿರಿಜಾ ಕಲ್ಯಾಣ' (ಸು ೧೨೦೦) -ಇವು ಕನ್ನಡಕ್ಕೆ ಉದಾಹರಣೆಗಳು.

ನನ್ನೆಚೋಡ (೧೨೧೦) ನ 'ಕುಮಾರ ಸಂಭವಮು' ಕೇತನ (೧೩ನೆಯ ಶತಮಾನ) 'ದಶಕುಮಾರ ಚರಿತಮು' ಮಾರನ ಕವಿಯ (೧೩ನೆಯ ಶತಮಾನ) 'ಮಾರ್ಕಂಡೇಯ ಪುರಾಣಮು' ಕವಿಸಾರ್ವಭೌಮ ಶ್ರೀನಾಥನ (೧೩೮೦-೧೪೫೦) 'ಶೃಂಗಾರ ನೈಷಧಮು', ಮಡಿಕಿಸಿಂಗ (೧೫ನೆಯ ಶತಮಾನ) 'ವಾಶಿಷ್ಠ ರಾಮಾಯಣಮು'—ಇವು ತೆಲುಗಿಗೆ ಉದಾಹರಣೆಗಳು.

ಈ ಆದಿಯುಗದಲ್ಲಿ ತೆಲುಗು ಮತ್ತು ಕನ್ನಡ ಸಾಹಿತ್ಯಗಳ ಒಲವು ಮಾರ್ಗದತ್ತಲೇ ಹೆಚ್ಚು. ಸಂಸ್ಕೃತದ ಸಮಾಸ ಭೂಯಿಷ್ಠ ಶೈಲಿಯೇ ಈ ಕವಿಗಳಿಗೆ ಮೆಚ್ಚು. ಕನ್ನಡ ಅಥವಾ ತೆಲುಗುಗಳ ಜೊತೆಗೆ ಸಂಸ್ಕೃತ ಸಾಹಿತ್ಯದ ಮೇಲೆ ಹಿಡಿತವೂ ಹೆಚ್ಚು. ಬೇಕೆಂದರೇ ಸಂಸ್ಕೃತದಲ್ಲಿಯೇ ಕಾವ್ಯಗಳನ್ನು ರಚಿಸಿಬಿಡುವ ಕಿಚ್ಚು ಇತ್ತು.

ಉದಾಹರಣೆಗಾಗಿ ಈ ಪದ್ಯಗಳನ್ನು ನೋಡಿ:

ಅಲ ವೈಕುಂಠ ಪುರಂಬುಲೋ ನಗರಿಲೋ
ನಾ ಮೂಲ ಸೌಧಂಬು ದಾ-
ಪಲ ಮಂದಾರ ವನಾಂತರಾಮೃತಸರಃ ಪ್ರಾಂತೇಂದು
ಕಾಂತೋಪಲೋ-

ತ್ಪಲ ಪರ್ಯಂಕ ರಮಾವಿನೋದಿಯಗು ನಾಪನ್ನ
ಪ್ರಸನ್ನುಂಡು ವಿ-
ಹ್ವಲ ನಾಗೇಂದ್ರಮು ಪಾಹಿ ಪಾಹಿಯನಂಗು
ಯ್ಯಾಲಿಂಚಿ ಸಂರಂಭಿಯೈ|

—ಪೋತನ: ಭಾಗವತಮು

ಶ್ರೀರಾಮಾನಟಕೌಸ್ತುಭದ್ಯುತಿ
ಕಿರತ್ಪುಷ್ಪಾಂಜಲಿಕ್ಷೇಪ ವ-
ಕ್ಷೋರಂಗಸ್ಥಿತಿಯಾದ ಪಾದನಖರೋಚಿರ್ಗಂಗೆ
ಪೃಥ್ವೀಶ ಕೋ-
ಟೀರ ವ್ಯಾಪ್ತಿಗೆ ಸಂದ ಚಕ್ರರವಿ
ದೈತ್ಯಧ್ವಾಂತಮುಂ ಗೆಲ್ದ ಭೂ-
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದ
ಸಂದೋಹಮಂ ||

—ರುದ್ರಭಟ್ಟ : ಜಗನ್ನಾಥವಿಜಯ

'ಜಗನ್ನಾಥ ವಿಜಯ'ಕ್ಕಂತೂ ಸಂಸ್ಕೃತದಲ್ಲೇ ವ್ಯಾಖ್ಯಾನವೂ ಇದೆ. ಈತನ ಪದ್ಯಗಳು ಸಂಸ್ಕೃತಜ್ಞರ ತಲೆಯನ್ನೇ ತಿಂದಿರಬೇಕು !

[ಈ ಉಭಯ ಭಾಷೆಗಳಲ್ಲಿಯೂ ಸಾಹಿತ್ಯದ ಬೆಳವಣಿಗೆ ರಾಜಾಶ್ರಯದಲ್ಲಿ ಆಯಿತು ಎಂಬುದೊಂದು ಸಮಾನ ಧರ್ಮ.]

ವಸ್ತು-ವಿಧಾನ ಮತ್ತು ಗತಿ-ರೀತಿಗಳಲ್ಲಿ ಕನ್ನಡ ಮತ್ತು ತೆಲುಗು ಸಾಹಿತ್ಯಗಳೆರಡರಲ್ಲಿಯೂ ಏಕರೂಪತೆ-ಐಕ್ಯತೆಗಳನ್ನು ಒದಗಿಸಿದವರೆಂದರೆ ವೀರಶೈವ ಕವಿಗಳು. ೧೧ನೆಯ ಶತಮಾನದಲ್ಲಿ ಕನ್ನಡದಲ್ಲಿ ಭಕ್ತಿ ಭಾಂಡಾರಿ ಬಸವಣ್ಣನವರ 'ಅನುಭವ ಮಂಟಪ'ದ ಸುತ್ತು ಮುತ್ತು ಬೆಳೆದು ಹೆಮ್ಮರನಾಗಿ ನಿಂತ 'ವಚನಸಾಹಿತ್ಯ'ವೇ ತೆಲುಗು ಸಾಹಿತ್ಯದಲ್ಲಿ ಅವತರಿಸಿತೇನೋ ಎನ್ನುವಂತೆ ಮಲ್ಲಿಕಾರ್ಜುನ ಪಂಡಿತಾರಾಧ್ಯ (೧೧೨೦-೧೧೮೦) 'ಶಿವತತ್ವಸಾರಮು', ಪಾಲ್ಕುರಿಕೆ (೧೩ನೆಯ ಶತಮಾನ) ಸೋಮನಾಥರ 'ಬಸವಪುರಾಣಮು', 'ಪಂಡಿತಾರಾಧ್ಯ ಚರಿತಮು' ಮುಂತಾದ 'ವೀರಶೈವ ಕಾವ್ಯಗಳು' ಬೆಳೆದುವು. ಈಗ ಹೆಸರಿಸಿದ ಎಲ್ಲಾ ಕವಿಗಳೂ ಕನ್ನಡ ಮತ್ತು ತೆಲುಗು ಎರಡರಲ್ಲಿಯೂ ಗ್ರಂಥರಚನೆ ಮಾಡಿದವರೇ. ಪಾಲ್ಕುರಿಕೆ ಸೋಮನಾಥನಂತೂ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ 'ಹಾಲ್ಕುರಿಕೆ' ಎಂಬ ಗ್ರಾಮದವನೆನ್ನುವ ಮಾತಿದೆ. ಪಾಲ್ಕುರಿಕೆ ಸೋಮನಾಥನ 'ಬಸವಪುರಾಣ'ವನ್ನು ಭೀಮಕವಿ ಕನ್ನಡಿಸಿದ್ದಾನೆ.

* * *

ಕನ್ನಡ ಮತ್ತು ತೆಲುಗು ಸಾಹಿತ್ಯಗಳೆರಡರಲ್ಲಿಯೂ ಭಕ್ತ ಕವಿಗಳಿದ್ದಾರೆ. ಹಿಂದೀ ಸಾಹಿತ್ಯ ಚರಿತೆಕಾರರು ಭಕ್ತಿ ಸಾಹಿತ್ಯವನ್ನು 'ಕೃಷ್ಣಭಕ್ತಿ' ಮತ್ತು 'ರಾಮಭಕ್ತಿ' ಶಾಖೆಗಳನ್ನಾಗಿ ವಿಂಗಡಿಸಿರುವಂತೆಯೇ, ಕನ್ನಡ ಮತ್ತು ತೆಲುಗು ಸಾಹಿತ್ಯವನ್ನು 'ಶಿವಭಕ್ತಿ ಶಾಖೆ' ಮತ್ತು 'ವಿಷ್ಣುಭಕ್ತಿ ಶಾಖೆ'ಗಳನ್ನಾಗಿ ಆಲಂಬನ-ಭೇದದ ಆಧಾರದಿಂದ ವಿಂಗಡಿಸಬಹುದಾಗಿದೆ. ಈ ಎರಡೂ ಭಾಷೆಗಳಲ್ಲಿ ಶಿವಭಕ್ತಿಯ ಗಂಗಾಸ್ರೋತವು ೧೧ನೇ ಶತದಲ್ಲಿ ಏಕಕಾಲದಲ್ಲಿಯೇ ಹರಿಯಿತು. ಆದರೆ ವಿಷ್ಣುಭಕ್ತಿಯೆಂಬ ಯಮುನಾಧಾರೆಯು ಮಾತ್ರ ತೆಲುಗಿನಲ್ಲಿ ೧೫ನೆಯ ಶತಮಾನದಲ್ಲಿಯೇ ಕನ್ನಡಕ್ಕಿಂತ ಮೂರು ಶತಮಾನಗಳ ಮುಂಚೆಯೇ ಹರಿಯಿತು ಎಂದು ಸ್ಥೂಲವಾಗಿ ಹೇಳಬಹುದು. ಈ ಮಾತಿಗೆ ಮುಖ್ಯವಾದ ಒಂದೇ ಅಪವಾದವೆಂದರೆ ಕನ್ನಡ ಸಾಹಿತ್ಯದಲ್ಲಿ ರುದ್ರಭಟ್ಟನ 'ಜಗನ್ನಾಥ ವಿಜಯ'ವೆಂಬ ವಿಷ್ಣುಭಕ್ತಿ ಕಾವ್ಯ ಮಾತ್ರ. ೧೧ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಶೈವ ಸಮುದ್ರದಲ್ಲಿ ಕಾಣಿಸಿದ ವೈಷ್ಣವ ದ್ವೀಪವೆಂಬುದಾಗಿ ಈ 'ಜಗನ್ನಾಥ ವಿಜಯ'ವನ್ನು ಕರೆಯಬಹುದು.

ಕನ್ನಡ ಶೈವಸಾಹಿತ್ಯಕ್ಕೂ ತೆಲುಗು ಶೈವಸಾಹಿತ್ಯಕ್ಕೂ ವ್ಯತ್ಯಾಸವೂ ಇದೆ. ಅನುಭವಮಂಟಪದ ಸುತ್ತ ಬೆಳೆದ ಸಾಹಿತ್ಯ ಶ್ರೀಸಾಮಾನ್ಯನ ಆಡುಮಾತಿಗೆ ಸನಿಹವಾಗಿ, 'ವಚನ'ವೆಂಬ ಹೊಸ ಸಾಹಿತ್ಯ ಪ್ರಕಾರವೊಂದರ ಆವಿರ್ಭಾವವಾಯಿತು. ಆದರೆ ತೆಲುಗಿನ ಶೈವಕವಿಗಳು ದೇಸಿಯತ್ತ ಒಲವನ್ನು ತೋರಿಸಲಿಲ್ಲ. ತೆಲುಗಿನಲ್ಲಿ ಈ 'ವಚನ'ಗಳು ಆಗ ಬೆಳೆಯಲಿಲ್ಲ.

ಸಾಂಗತ್ಯ ಸಾಹಿತ್ಯವು ಕನ್ನಡ ತೆಲುಗುಗಳೆರಡರಲ್ಲಿಯೂ ಇದೆ. ರತ್ನಾಕರವರ್ಣಿಯ 'ಭರತೇಶವೈಭವ', ಸಂಚಿ ಹೊನ್ನಮ್ಮನ 'ಹದಿಬದೆಯ ಧರ್ಮ'ಕ್ಕೆ ಸಾಟಿಯಾದ ಸಾಂಗತ್ಯಗಳು ತೆಲುಗಿನಲ್ಲೂ ಸಿಗುತ್ತವೆ. ೧೭ನೆಯ ಶತಮಾನದ ವೇಳೆಗೆ ವಿಜಯರಾಘವುಡು ಬರೆದ 'ವೀರ ಶೃಂಗಾರ ಸಾಂಗತ್ಯಮು' 'ಸಂಪಂಗಿಮನ್ನಾರು ಸಾಂಗತ್ಯಮು' ಇವುಗಳು ಸಿಗುತ್ತವೆ. ತೆಲುಗಿನಲ್ಲಿ ಸಾಂಗತ್ಯದ ಬೆಳೆ ಕನ್ನಡದಷ್ಟು ಹುಲುಸಾಗಿಲ್ಲ.

ಕನ್ನಡದ ದ್ವಿಪದಿ ಕಾವ್ಯವನ್ನು ಹೋಲುವ ತೆಲುಗಿನ 'ದ್ವಿಪದ ಕಾವ್ಯಮು' ಎಂಬ ಪ್ರಾಕಾರದಲ್ಲಿ ಗೋನಬುದ್ಧಾ

ರೆಡ್ಡಿ(೧೨೦೦-೧೨೫೦)ಯ 'ರಂಗನಾಥ ರಾಮಾಯಣಮು' ಎಂಬುದು ಅಜರಾಮರ ಕಾವ್ಯ. ಈ ಪರಂಪರೆ ೧೯ನೆಯ ಶತಮಾನದವರೆಗೂ ತೆಲುಗಿನಲ್ಲಿ ಅಜಸ್ರ ಹರಿದಂತೆ ಕನ್ನಡದಲ್ಲಿ ಬೆಳೆದಿಲ್ಲ.

೧೧ನೆಯ ಶತಮಾನದ ಆದಿಯಲ್ಲಿ ಬರೆಯಲಾದ ನಾಗವರ್ಮಾಚಾರ್ಯನ 'ಚಂದ್ರಚೂಡಾಮಣಿ ಶತಕ'ವೇ ಕನ್ನಡದ ಪ್ರಥಮ ಶತಕ. ಕನ್ನಡದಲ್ಲಿಯೂ ಪಾಂಡಿತ್ಯವಿದ್ದ ೧೨ನೆಯ ಶತಮಾನದ ತೆಲುಗುಕವಿ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಬರೆದ 'ಶಿವತತ್ವಸಾರಮು' ಎಂಬ ಕಾವ್ಯದಲ್ಲಿ ಶತಕ-ಸಾಹಿತ್ಯದ ಛಾಯೆಯಿದೆಯಾದ್ದರಿಂದ ಕನ್ನಡದ ಶತಕದ ಪ್ರಭಾವ ತೆಲುಗಿನ ಮೇಲೆ ಬಿದ್ದಿರುವ ಸಂಭವವಿದೆ. ಆದರೂ, ತೆಲುಗಿನ ಪ್ರಥಮ ಪ್ರಸಿದ್ಧ ಶತಕ ೧೦ನೆಯ ಶತಮಾನದ ಭದ್ರಭೂಪಾಲನ 'ಸುಮತಿ ಶತಕ'ವೇ.

ಕನ್ನಡದಲ್ಲಿ ಹರಿಹರನ ರಕ್ಷಾಶತಕ (೧೧೮೦): ರತ್ನಾಕರವರ್ಣಿಯ ಶತಕತ್ರಯ (೧೬೦೦); ಭರ್ತೃಹರಿಯ ನೀತಿಶತಕದ ಕನ್ನಡ ಅನುವಾದ (೧೮೮೦)-ಇವೆಲ್ಲಾ ಪ್ರಸಿದ್ಧ ಶತಕಗಳು.

ತೆಲುಗಿನಲ್ಲಿ ರಾವಿಪಾಟಿ ತ್ರಿಪುರಾಂತಕನ (೧೪ ಶತ) 'ಅಂಬಿಕಾ ಶತಕಮು', ಧೂರ್ಜಟಿಯ (೧೬ನೆ ಶತ) 'ಕಾಳಹಸ್ತೀಶ್ವರ ಶತಕಮು', ಏನುಗು ಲಕ್ಷ್ಮಣಕವಿಯ (೧೮ನೆ ಶತ) 'ಸೂರ್ಯಶತಕಮು' (ಸಂಸ್ಕೃತದ ಅನುವಾದ); ಪುಷ್ಪಗಿರಿ ತಿಮ್ಮನ ಕವಿಯ (೧೮ನೆ ಶತ) 'ಭರ್ತೃಹರಿಯ ನೀತಿಶತಕಮು' ಕೆಲವು ಹೆಸರಾಂತ ಶತಕಗಳು.

ಭರ್ತೃಹರಿಯ ನೀತಿಶತಕವು ೧೯ನೆಯ ಶತಮಾನದಲ್ಲಿಯೇ ಕನ್ನಡಕ್ಕೂ ತೆಲುಗಿಗೂ ಅನುವಾದಿತವಾಯಿತೆಂಬುದು ಗಮನೀಯಾಂಶ.

೧೫ ಮತ್ತು ೧೬ನೆಯ ಶತಮಾನಗಳ ನಡುವೆ ಕನ್ನಡದಲ್ಲಿ ಪುರಂದರ-ಕನಕಾದಿ ದಾಸಕೂಟದವರಿಂದ ದಾಸಸಾಹಿತ್ಯದ ಕನಕವೃಷ್ಟಿಯಾದಂತೆಯೇ, ತೆಲುಗಿನಲ್ಲಿಯೂ ಇದೇ ಅವಧಿಯಲ್ಲಿಯೇ, ತಾಳ್ಳಪಾಕಂ ಅನ್ನಮಾಚಾರ್ಯುಲು ಪೆದ್ದತಿರುಮಲಾಚಾರ್ಯುಲು ಮುಂತಾದವರಿಂದ ಅನೇಕ ಕೃತಿಗಳ ಸೃಷ್ಟಿಯೂ ಆಯಿತು. ಆಂಧ್ರದೇಶದ ವಾಗ್ಗೇಯಕಾರ ಸಂಗೀತ ಸಾರ್ವಭೌಮ ತ್ಯಾಗರಾಜರು ಕನ್ನಡದ ಪುರಂದರದಾಸರ ಹಿರಿಮೆಯನ್ನಂಗೀಕರಿಸಿ, ಭಾವನೆಗೆ ಭಾಷೆ ಅಡ್ಡವಲ್ಲವೆಂದು ತೋರಿಸಿಕೊಟ್ಟಿದ್ದಾರೆ.

ಸಂಸ್ಕೃತ ಶಬ್ದಗಳ ಮಿತಿಮೀರಿದ ಬಳಕೆಯ ವಿರುದ್ಧ ಕನ್ನಡದಲ್ಲಿ ಬಂಡಾಯವೆಬ್ಬಿಸಿದ ಗಂಡುಗಲಿಯೆಂದರೆ ೧೩ನೆಯ ಶತಮಾನದ ಆಂಡಯ್ಯ. ಈತ 'ಸೊಗಯಿಪ ಸಕ್ಕದಂ ಬೆರೆಸಿದಲ್ಲದೆ ಕನ್ನಡದಿ ಕಬ್ಬಮಂ ಪೇಳ್ವ' ಪಣ ತೊಟ್ಟ. ಇದೇ ರೀತಿಯ ವಿಪ್ಲವ ೨೦ನೆಯ ಶತಮಾನದಲ್ಲಿ ನಡೆದು 'ನೀರಿಳಿಯದ ಗಂಟಲೊಳ್ ಕಡುಬನ್ನು ತುರುಕು'ವ ಪಂಡಿತರನ್ನು ಅಲ್ಲಗಳೆದ. ಇದನ್ನೇ 'ಶುದ್ಧ ಕನ್ನಡದ ಆಂದೋಳನ' ವೆನ್ನಬಹುದು.

ಇದೇ ರೀತಿಯ 'ಶುದ್ಧತೆಲುಗಿನ ಆಂದೋಳನವು' (ಅಚ್ಚತೆಲುಗು) ತೆಲುಗು ಸಾಹಿತ್ಯದಲ್ಲಿಯೂ ನಡೆದಿದೆ. ಪೊನ್ನಗೆಂಟಿ ತೆಲುಗನ್ನ (೧೬ನೆ ಶತ)ನ 'ಯಯಾತಿ ಚರಿತ್ರ' ಕೂಚಿಮಂಚಿ ತಿಮ್ಮಕವಿಯ (೧೮ನೆ ಶತ) 'ಅಚ್ಚ ತೆನುಗು ರಾಮಾಯಣಮು', ಸಿಂಗರಾರ್ಯನ (೧೯ನೆ ಶತ) 'ದಶರಥರಾಜನಂದನ ಚರಿತ್ರ'-ಇವೆಲ್ಲಾ ಈ ಅವಾಂತರ ಪ್ರಜ್ಞೆಯ ಶಿಶುಗಳೇ. ಶುದ್ಧ ಕನ್ನಡ ಆಂದೋಳನವು ಹೇಗೆ ನಿಲ್ಲಲಿಲ್ಲವೋ, 'ಅಚ್ಚತೆನುಗು' ಆಂದೋಳನವೂ ಹಾಗೆಯೇ ಸ್ಥಾಯಿಯಾಗಲಿಲ್ಲ.

ಕನ್ನಡದ ಸರ್ವಜ್ಞ ಮತ್ತು ತೆಲುಗಿನ ವೇಮನ' ಇವರಿಬ್ಬರೂ ಹೆಚ್ಚುಕಡಿಮೆ ಸಮಕಾಲೀನರಾದ ೧೭ನೆಯ ಶತಮಾನದ ಕ್ರಾಂತಿ-ಕವಿಗಳೇ. ಇವರಿಬ್ಬರಲ್ಲಿಯೂ ಜಾನಪದೀಯ ಸತ್ವವಿದೆ, ದೇಶೀಯ ಹೊಳಹು ಇದೆ. ಸರ್ವಜ್ಞನು ಮೂರು ಸಾಲುಗಳಲ್ಲಿ ಹೇಳುವುದನ್ನೇ ವೇಮನನು ನಾಲ್ಕುಸಾಲುಗಳಲ್ಲಿ ಹೇಳಿದರೂ, ವೇಮನನು ಬಳಸುವ ನಾಲ್ಕನೆಯ ಸಾಲು, ಸಂಗೀತದ ಪಲ್ಲವಿಯಂತೆ ಮತ್ತೆ ಮತ್ತೆ ಬರುವ ಮುದ್ರೆ ಅಥವ ಮುಕುಟವನ್ನೊಳಗೊಂಡ 'ವಿಶ್ವದಾಭಿರಾಮ ವಿನುರವೇಮ' ಎಂಬ ಸಾಲು ಆದುದರಿಂದ ಇವರಿಬ್ಬರೂ ಸಮಾಸ ಶಕ್ತಿಗಳನ್ನು ಮೈಗೂಡಿಸಿಕೊಂಡ ಮಹಾತ್ಮರೇ.'ಕಿರಿದರೊಳ್ ಪಿರಿದರ್ಥಮಂ ಪೇಳ್ವ ಪಿರಿಮೆ' ಇವರಿಬ್ಬರದು. ವಿಶ್ವಮಾನ್ಯವಾದ ತತ್ವಗಳನ್ನು ಜನಸಾಮಾನ್ಯಕ್ಕೆ ಜನಸಾಮಾನ್ಯವಾದ ಭಾಷೆಯಲ್ಲಿಯೇ ಹೇಳುವ ಕಲೆ ಇವರ ಸಾಹಿತ್ಯಕ್ಕೆ ಇದೆ. ಸಮಾಜಸುಧಾರಣೆ ಇವರಿಬ್ಬರ ಧ್ಯೇಯ.

ಆತ್ಮಶುದ್ಧಿ ಲೇನಿಯಾಚಾರ ಮದಿಯೇಲ
ಭಾಂಡಶುದ್ಧಿಲೇನಿ ಪಾಕಮೇಲ
ಚಿತ್ತಶುದ್ಧಿಲೇನಿ ಶಿವಪೂಜಲೇಲರಾ
ವಿಶ್ವದಾಭಿರಾಮ ವಿನುರವೇಮ ||

ವೇಮನನ ಈ ಪದ್ಯದೊಡನೆ—

ತನ್ನಲಿಹ ಲಿಂಗವನು ಮನ್ನಿಸಲಿ ಕರಿಯದೇ
ಬಿನ್ನಣದಿ ಕಡೆದ ಪ್ರತಿಮೆಗಳಿಗೆರುವ
ಅನ್ನೆಯವ ನೋಡು ಸರ್ವಜ್ಞ|

ಎಂಬುದನ್ನು ಹೋಲಿಸಿ ನೋಡಿ.

* * *

ತೆಲುಗು ಮತ್ತು ಕನ್ನಡ ಸಾಹಿತ್ಯ ವಾರಿಧಿಗಳಲ್ಲಿ ಈ ಶತಮಾನದ ಮೊದಲ ಎರಡು ದಶಕಗಳಲ್ಲಿ ರಾಷ್ಟ್ರೀಯ ಜಾಗೃತಿಯ ಅಲೆಗಳು ಉಬ್ಬೆದ್ದುವು. ಸ್ವಲ್ಪ ಹೆಚ್ಚು ಕಡಿಮೆ ಹಿಂದೀ ಸಾಹಿತ್ಯದಲ್ಲಿಯೂ ಈ ಸಮಯಕ್ಕೆ ಸರಿಯಾಗಿ ಹೀಗೆಯೇ ಆಯಿತೆನ್ನುವುದೊಂದು ವಿಶೇಷ. ಈ ರಾಷ್ಟ್ರೀಯ ಉತ್ಥಾನದ ಅಂಗವಾಗಿ ಭಾರತಾಂಬೆಗೆ ತಾನು ತನ್ನದು ಎಂಬ ಅಭಿಮಾನ ಉಕ್ಕೇರಿತು. ಭಾರತದ ಪ್ರಾಚೀನ ವೈಭವದ ಸ್ಮರಣೆ ಇದರ ಅಂಗ. ಪುರಾಣ ಗ್ರಂಥಗಳು, ಭಾಸ-ಕಾಲಿದಾಸ-ಭವಭೂತಿಗಳ ಕಾವ್ಯಗಳ ಅನುವಾದಗಳು ಈ ಕಾಲದಲ್ಲಿ ಹೇರಳವಾಗಿ ಬಂದುವು. ಕನ್ನಡದಲ್ಲಿ ಬಸವಪ್ಪಶಾಸ್ತ್ರಿ, ಧೋಂಡೋ ಮುಳಬಾಗಿಲು, ತುರಮುರಿ ಮುಂತಾದವರೂ, ತೆಲುಗಿನಲ್ಲಿ ವೀರೇಶಲಿಂಗಂ, ಚಿಲಕಮರ್ತಿ ಲಕ್ಷ್ಮೀನರಸಿಂಹಂ ಮುಂತಾದವರೂ ಈ ಉತ್ಥಾನದ ಪ್ರತಿನಿಧಿಗಳು. ಹಿಂದೀ ಸಾಹಿತ್ಯದಲ್ಲಿ ಮಹಾವೀರ ಪ್ರಸಾದ ದ್ವಿವೇದಿಗಳ ಯುಗವು ಆಗತಾನೇ ಮುಗಿದಿತ್ತು. ತೆಲುಗಿನ ಈ ಉತ್ಥಾನದ ಸಂಚಾಲಕರಾದ ವೀರೇಶಲಿಂಗಂರವರು ಬೆಂಗಳೂರಿನಲ್ಲಿಯೂ ಸ್ವಲ್ಪಕಾಲ ತಂಗಿದ್ದು ಆರ್ಯಸಮಾಜದ ಚಟುವಟಿಕೆಗಳನ್ನು ನಡೆಸಿದರೆಂಬುದು ಗಮನಾರ್ಹ. ಇದು ಕನ್ನಡ ತೆಲುಗುಗಳೆರಡರಲ್ಲಿಯೂ ಆಧುನಿಕ ಸಾಹಿತ್ಯದ ಪ್ರಥಮೋತ್ಥಾನ.

ಆಧುನಿಕ ಸಾಹಿತ್ಯದ ದ್ವಿತೀಯೋತ್ಥಾನವು ಕನ್ನಡ ಮತ್ತು ತೆಲುಗುಗಳೆರಡರಲ್ಲಿಯೂ ೧೯೨೦ರಿಂದ ಪ್ರಾರಂಭವಾಯಿತು. ಕನ್ನಡದ ಕಣ್ವ ಬಿ. ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತೆಗಳು' ಪ್ರಕಟವಾದ ೧೯೨೨ನೆಯ ಇಸವಿಯಿಂದ ಈ ದ್ವಿತೀಯ ಉತ್ಥಾನವನ್ನು ಎಣಿಸುತ್ತೇವೆ. ಇದನ್ನೇ ಭಾವಗೀತೆಗಳ ಕಾಲವೆನ್ನುತ್ತೇವೆ. ತೆಲುಗಿನಲ್ಲಿ ಗುರುಜಾಡಾ ಅಪ್ಪಾರಾಯರಿಂದ ಭಾವಗೀತೆಗಳ ಯುಗವು ಪ್ರಾರಂಭವಾಯಿತೆನ್ನಬಹುದು. ಇವರಿಬ್ಬರೂ ಇಂಗ್ಲಿಷ್ ಸಾಹಿತ್ಯವ ಪ್ರಭಾವವನ್ನು ಮೈಗೂಡಿಸಿಕೊಂಡಿದ್ದವರೇ. ಇಂಗ್ಲೀಷ್ ಸಾಹಿತ್ಯದ ಬೀಜ ಕನ್ನಡ ಮತ್ತು ತೆಲುಗು ಕ್ಷೇತ್ರದಲ್ಲಿ ಏಕಕಾಲದಲ್ಲಿಯೇ ಬಿದ್ದಿತು ಎನ್ನಬಹುದು. ಥೇಂಸ್ ಮತ್ತು ಮಿಸ್ಸಿಸಿಪಿ ನದಿಗಳ ನೀರು ಕಾವೇರಿ ಕೃಷ್ಣೆಗಳಲ್ಲಿ ಹರಿಯಿತು.

ಇದೇ ಸಮಯಕ್ಕೆ, ಕನ್ನಡ ಕಾದಂಬರಿ ಮತ್ತು ತೆಲುಗು 'ನವೆಲು'ಗಳು ಇಂಗ್ಲೀಷ್‌ನ ಸಾಮಾಜಿಕ ಮತ್ತು ಚಾರಿತ್ರಿಕ ಕಾದಂಬರಿಗಳಿಂದ ಸ್ಫೂರ್ತಿ ಪಡೆದುವು. ಸೋದರ ಭಾಷೆಯಾದ ಬಂಗಾಳಿಯು ಈ ಅವಸ್ಥೆಗೆ ಈ ವೇಳೆಗಾಗಲೇ ಸಂದು, ತನ್ನದೇ ಆದ ಕೆಲವು ಕಾದಂಬರಿಗಳನ್ನು ಸೃಷ್ಟಿಸಿತ್ತು. ಶರತ್‌ಬಾಬುಗಳು ಮತ್ತು ಬಂಕಿಂ ಚಂದ್ರರು ಬಂಗಾಲೀ ಕಾದಂಬರಿಯ ಪ್ರತಿನಿಧಿಗಳಾಗಿದ್ದರು. ವಂಗಸಾಹಿತ್ಯದ ಅನುವಾದಗಳು ಕನ್ನಡದಲ್ಲಿಯೂ ತೆಲುಗಿನಲ್ಲಿಯೂ ಬಂದುವು. ಕನ್ನಡದಲ್ಲಿ ಈ ಅನುವಾದ ಕಾರ್ಯವನ್ನು ವೆಂಕಟಾಚಾರ್ಯರು ಗಳಗನಾಥರು ಕೈಗೊಂಡಂತೆ, ತೆಲುಗಿನಲ್ಲಿ ಚಿಲಕಮರ್ತಿ ಲಕ್ಷ್ಮೀನರಸಿಂಹಂ ಮತ್ತು 'ವೆಂಕಟಪಾರ್ವತೀಕವುಲು' ಕೈಗೊಂಡರು. ಇದೇ ಕಾಲಕ್ಕೇ ಬಂಗಾಳೀ ಕಾದಂಬರಿಗಳು ಹಿಂದಿಗೆ ಅನುವಾದಿತವಾದುವೆಂಬುದು ಇಲ್ಲಿ ಗೌಣ. (ಹಿಂದಿಯಲ್ಲಿ ಕಾದಂಬರಿಗೆ 'ಉಪನ್ಯಾಸ'ವೆಂಬ ಹೆಸರಿದೆ.)

ಹಿಂದಿಯಲ್ಲಿ 'ಉಪನ್ಯಾಸ ಸಾಮ್ರಾಟ್' ಎಂದು ಹೆಸರು ಪಡೆದ ಪ್ರೇಮಚಂದರ ಕಾದಂಬರಿಗಳು ಕನ್ನಡ ತೆಲುಗುಗಳೆರಡರಲ್ಲಿಯೂ ಕೆಲವು ವರ್ಷಗಳ ನಂತರ ಅನುವಾದಿತವಾದುವು.

ಕನ್ನಡದಲ್ಲಿ ಜನಪದದ ಧಾಟಿಯಲ್ಲಿ ಆಡುಮಾತುಗಳನ್ನು ಸಾಹಿತ್ಯದಲ್ಲಿ ಬಳಸುವ ಪ್ರಯತ್ನಗಳು ಬೇಂದ್ರೆಯರ ಗೆಳೆಯರ ಗುಂಪು ಮುಂತಾದವರಿಂದ ನಡೆದಂತೆಯೇ ವ್ಯವಹಾರ ಭಾಷೆಯನ್ನು ಸಾಹಿತ್ಯದ ಮಟ್ಟಕ್ಕೆ ಏರಿಸುವ ಪ್ರಯತ್ನಗಳು ಗುರುಜಾಡಾ ಅಪ್ಪಾರಾವು ಮತ್ತು ಗಿಡಗು ರಾಮಮೂರ್ತಿ ಮುಂತಾದವರು ಮಾಡಿದ್ದಾರೆ.

ಬೇಂದ್ರೆಯವರ 'ಸಖೀಗೀತ', 'ಗರಿ'ಗಳಲ್ಲಿರುವ ಗೀತೆಗಳ ಶೈಲಿಯೊಡನೆ ಗುರುಜಾಡಾ ಅಪ್ಪಾರಾವು ಅವರ ಈ ಕವಿತೆಯನ್ನು ಹೋಲಿಸಿ :

ದೇಶಾಭಿಮಾನಂ ನಾಕು ಕದ್ದನಿ
ವೊಟ್ಟಗೊಪ್ಪಲು ಚೆಪ್ಪಕೋ ಕೋಯ್ |
ಮಂದಗಿಂಚಕ ಮುಂದು ಅಡುಗೇಯ್
ವೆನುಕ ಬಡಿತೆ ವೆನುಕನೋಯ್ ||

ದೇಶಪ್ರೇಮವು ಎನಗೆ ಇದೆಯೆಂದು
ಏಕೆ ಸುಮ್ಮನೆ ಗರ್ವಪಡುತಿಹೆ ?
ತೊರೆದು ಆಲಸಿಕೆ ಹೋಗು ಮುಂದಕೆ
ಹಿಂದೆ ಸರಿದರೆ ಹಿಂದಕೇ !

—ಅನುವಾದ : ಕಂ. ಸು. ವೆಂ.

ದೇಶಾಭಿಮಾನ ಈ ಕವಿಗಳ ಸಹಜ ಪ್ರವೃತ್ತಿ. ಭಾಷಾಭಿಮಾನವೂ ಕವಿವಾಣಿಯಲ್ಲಿ ಹೀಗೆ ಹೊಮ್ಮಿದೆ:

ಮೊದಲು ತಾಯ ಹಾಲು ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು?
ನಲ್ಲೆಯೊಲವ ತೆರೆದು ತಂದ
ಮಾತದಾವುದು?

—ಬಿ. ಎಂ. ಶ್ರೀ.

'ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು'

—ಗೋವಿಂದ ಪೈ

ಪದವೋಯ್ ತೆಲುಗುವಾಡಾ
ಅದೆ ನೀ ತೆಲುಗು ಮೇಡಾ
ಸಂಕೆಳ್ಳು ಲೇನಿ ನೇಲ
ಸಂತೋಷ ಚಂದ್ರಶಾಲಾ

ನಡೆಯೋ ತೆಲುಗು ಭಾಷೀ
ಇಲ್ಲಿದೆಯೋ ನಿನ್ನ ಠಾವು।
ಸಂಕೋಲೆ ಇಲ್ಲ, ಇದುವೆ
ಸಂತೋಷ ಚಂದ್ರಶಾಲೆ॥

—ಅನುವಾದ: ಕಂ. ಸು. ವೆಂ.

ಕನ್ನಡದಲ್ಲಿರುವ ಪ್ರಗತಿಶೀಲ ಸಾಹಿತ್ಯವೇ, ತೆಲುಗಿನಲ್ಲಿ 'ಅಭ್ಯುದಯ ಕವಿತ್ವ'ವಾಗಿದೆ.

ಕಥೆ-ಕಾದಂಬರಿ, ನಾಟಕ-ಏಕಾಂಕ, ಕಾವ್ಯ-ಭಾವಕವಿತೆ, ಸವಿಾಕ್ಷೆ, ಪ್ರಬಂಧ—ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡ-ತೆಲುಗು ಸಾಹಿತ್ಯದ ಬೆಳವಣಿಗೆಯನ್ನು ಗುರುತಿಸುತ್ತಾ ಸಾಹಿತ್ಯದ ಪ್ರಭಾವವನ್ನು ಗುರುತಿಸಬಹುದಾಗಿದೆ.

ಭಾರತದ ಮತೀಯ ಗಲಭೆಗಳು, ಗಾಂಧೀಹತ್ಯೆ, ಭಾಷಾ ಗೊಂದಲ, ಅನ್ನಾಭಾವ, ಸಮಾಜವಾದ, ಹೆಣ್ಣು-ಗಂಡಿನ ಸಮಸ್ಯೆ ಇವೆಲ್ಲಕ್ಕೂ ತೆಲುಗು ಮತ್ತು ಕನ್ನಡ ಕವಿಗಳ ಹೃದಯ ಒಂದೇ ರೀತಿ ಮಿಡಿದಿದೆ.

ಕನ್ನಡ ಕಾದಂಬರೀ ಕ್ಷೇತ್ರದ ಅನಕೃರವರನ್ನು ತೆಲುಗಿನ ಪಿ. ಪದ್ಮರಾಜುರವರೊಡನೆ ಹೋಲಿಸಬಹುದೆನ್ನಿಸುತ್ತದೆ.

ಸಣ್ಣ ಕಥೆಗಳ ಕ್ಷೇತ್ರದಲ್ಲಿ ಕನ್ನಡದ ಆಸ್ತಿಯಾದ ಮಾಸ್ತಿಯವರನ್ನು ತೆಲುಗಿನ 'ಚಿಂತಾದೀಕ್ಷಿತಲು' ರವರೊಡನೆ ಹೋಲಿಸಬಹುದೇನೋ!

* * *

ಕನ್ನಡ-ತೆಲುಗು ಸಾಹಿತ್ಯಗಳ ಬಾಂಧವ್ಯವನ್ನು ಉಳಿಸಿ-ಬೆಳೆಸುವ ಅನೇಕ ಪ್ರಯತ್ನಗಳು ತೆಲುಗು ಸಾಹಿತ್ಯದ ಆದಿ ಕಾಲದಿಂದಲೂ ನಡೆದಿವೆ. ಇವುಗಳನ್ನು ಈಗಾಗಲೇ ಪ್ರಾಸ್ತಾವಿಕವಾಗಿ ಹೇಳಲಾಗಿದೆಯಾದರೂ, ಅವುಗಳನ್ನು ಮತ್ತೊಮ್ಮೆ ಇಲ್ಲಿ ಕ್ರೋಢೀಕರಿಸಲಾಗಿದೆ.

೧) ಆದಿಕವಿ ನನ್ನಯ ಭಟ್ಟಾರಕನಿಗೆ ಆಂಧ್ರ ಭಾರತವನ್ನು ಬರೆಯಲು ಸಹಾಯ ಮಾಡಿದವನು ಕನ್ನಡ ಕವಿ ನಾರಾಯಣಭಟ್ಟ.

೨) ಕನ್ನಡ ಕವಿ ನಾರಾಯಣಭಟ್ಟನ ಮಗಳಾದ ಕುಪ್ಪಮ್ಮ ೧೧ನೆಯ ಶತಮಾನದಲ್ಲಿ ತೆಲುಗು ಕಾವ್ಯವನ್ನು ಬರೆದಿದ್ದಾಳೆ.

೩) ಕನ್ನಡ ದೇಶದಲ್ಲಿ ಹುಟ್ಟಿದ ತೆಲುಗು ಕವಿ ಪಾಲ್ಕುರಿಕೆ ಸೋಮನಾಥನು ಬರೆದಿರುವ ದ್ವಿಪದ ಛಂದಸ್ಸಿನ 'ಬಸವ ಪುರಾಣಮು' ಎಂಬುದನ್ನು ಭೀಮ ಕವಿ ಕನ್ನಡದಲ್ಲಿ ಷಟ್ಪದೀ ಛಂದಸ್ಸಿನಲ್ಲಿ ಅನುವಾದ ಮಾಡಿದ್ದಾನೆ. ತೆಲುಗಿನಿಂದ ಕನ್ನಡಕ್ಕೆ ನಡೆದ ಕಾವ್ಯದ ಮೊದಲ ಅನುವಾದ ಇದೇ.

೪) ೧೫ನೆಯ ಶತಮಾನದಲ್ಲಿ ಕವಿ ಸಾರ್ವಭೌಮ ಶ್ರೀನಾಥ ಕನ್ನಡ ರಾಜ್ಯಕ್ಕೆ ಭೇಟಿಯಿತ್ತ ಸಂದರ್ಭವನ್ನು ನೆನೆಸಿಕೊಂಡು ಒಂದು ಚಾಟು ಪದ್ಯವನ್ನು ಬರೆದಿದ್ದಾನೆ.

ತಲ್ಲಿ ಕನ್ನಡ ರಾಜ್ಯಲಕ್ಷ್ಮಿ ದಯರಾಲೇದಾ
ನೀಕಿಂತನನೆ।

೫) ಕೃಷ್ಣದೇವರಾಯನ (ವಿಜಯನಗರ) ಕಾಲದಲ್ಲಿ ತೆಲುಗು-ಕನ್ನಡ ಕವಿಗಳಿಬ್ಬರೂ ಆಸ್ಥಾನವನ್ನಲಂಕರಿಸಿದ್ದರು.

ಇಷ್ಟೇ ಅಲ್ಲದೆ ಕನ್ನಡ ದೇಶದವರು ತೆಲುಗು ಕಾವ್ಯಗಳನ್ನು ಬರೆಯುವ ಅಥವಾ ಅನುವಾದಿಸುವ ಕಾರ್ಯವನ್ನು ಆಗಾಗ ಮಾಡುತ್ತಲೇ ಬಂದಿದ್ದಾರೆ.

೧) ಮೈಸೂರು ರಾಜ್ಯದ ಆಳರಸ ಚಿಕ್ಕದೇವರಾಯ (೧೬೭೦-೧೭೦೪)ನ ಆಳ್ವಿಕೆಯಲ್ಲಿ ದಳವಾಯಿ ಕಳಲೇ ಭೀಮರಾಜನು ತೆಲುಗಿನ ಚಂಪೂ ಭಾರತವನ್ನು ತೆಲುಗು ವಚನದಲ್ಲಿ ಬರೆದನು.

೨) ಕೋಲಾರ ಜಿಲ್ಲೆಯ ಕುಂದಲಕ್ಕುರಿ ಗ್ರಾಮದಲ್ಲಿದ್ದ ಚಂದ್ರಕವಿ ಎಂಬ ತೆಲುಗು ಕವಿ 'ಶ್ರೀಕೃಷ್ಣ ಭೂಪಾಲೀಯಮು' ಎಂಬ ತೆಲುಗು ಗ್ರಂಥವನ್ನು ಬರೆದು ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರಿಗೆ ಅರ್ಪಿಸಿದ್ದಾನೆ.

೩) ಆಸ್ಥಾನ ವಿದ್ವಾನ್ ನಂಜನಗೂಡು ಎಸ್. ಅನಂತ ನಾರಾಯಣಶಾಸ್ತ್ರಿ (೧೮೭೬-೧೯೪೮) ರವರ 'ಸತ್ಯವತೀ ಚರಿತ್ರೆ', ತೆಲುಗಿನ ಕೆ. ವೀರೇಶಲಿಂಗಂರವರ ತಲುಗು ಕಾದಂಬರಿಯ ಅನುವಾದ.

೪) ತೆಲುಗಿನ ಭಂಡಾರಂ ಅಚ್ಚಮಾಂಬಾರವರ 'ಅಬಲಾಸಚ್ಚರಿತ್ರಮಾಲಾ' ಎಂಬುದು ಸೌ|| ರಾಜಮ್ಮ ಮತ್ತು ಅಚ್ಚಮ್ಮ ಎಂಬ ಭಗಿನೀದ್ವಯರಿಂದ ಅನುವಾದವಾಗಿದೆ.

೫) ಕೃಷ್ಣಗಿರಿಯ ಕೆ. ಎಸ್. ವೆಂಕಟರಮಣಯ್ಯ (ಸು. ೧೮೧೦-೧೮೭೫) ರವರು ತೆಲುಗಿನಲ್ಲಿ 'ಅಧ್ಯಾತ್ಮ ರಾಮಾಯಣ'ವನ್ನು ಬರೆದರು.

೬) ಬೆಂಗಳೂರು ಸೂರ್ಯನಾರಾಯಣರಾವ್ (೧೮೫೬-೧೯೩೭) ರವರು 'ಸ್ವಯಂ ಜ್ಯೋತಿರ್ಬೋಧಿನೀ' ಮತ್ತು 'ಮುದಿರಾಜ ಇತಿಹಾಸ' ಎಂಬ ತೆಲುಗು ಗ್ರಂಥಗಳನ್ನು ಬರೆದಿದ್ದಾರೆ.

ಈ ಪಟ್ಟಿ ಅಪೂರ್ಣವಾಗಿರಲೇ ಬೇಕು.

* * *

ಈ ಶತಮಾನದಲ್ಲಿ ತೆಲುಗು ಗ್ರಂಥಗಳು ಕನ್ನಡಕ್ಕೂ, ಕನ್ನಡ ಗ್ರಂಥಗಳು ತೆಲುಗಿಗೂ ಅನುವಾದಿಸುವ ಕಾರ್ಯ ಭರದಿಂದಲೇ ಸಾಗಿದೆ. ಭಾಷಾ ಬಾಂಧವ್ಯಕ್ಕೆ ಇದೊಂದು ಸುಭದ್ರ ಬುನಾದಿ. ಕೆಲವು ಉದಾಹರಣೆಗಳನ್ನು ಕೆಳಕೆ ಕಾಣಿಸಲಾಗಿದೆ :

ತೆಲುಗಿನಿಂದ ಕನ್ನಡಕ್ಕೆ

೧. ಎಸ್ ಅನಂತನಾರಾಯಣ ಎಂ.ಎ. ಅಡಬಿಬಾಪಿರಾಜುರವರ 'ನಾರಾಯಣರಾವು' ಎಂಬ ಕಾದಂಬರಿ.

೨. ಎಸ್. ಎಂ. ಮುನಿವೆಂಕಟಪ್ಪ ಎಂ.ಎ. 'ಲೋಕಚರಿತೆ' ಎಂಬ ಕಾದಂಬರಿ.

೩. ಎಂ. ರಂಗರಾವ್ 'ನವಗಿರಿನಂದ' ತೆಲುಗಿನ 'ಆಕಾಂಕ್ಷೆ' ಎಂಬ ಕಾದಂಬರಿ.

೪. ಕಾವ್ಯಕಲಾನಿಪುಣ ಸಂತೇಕಲ್ಲಹಳ್ಳಿ ಲಕ್ಷ್ಮೀನರಸಿಂಹಶಾಸ್ತ್ರೀ 'ಆಂಧ್ರ ಭಾಗವತ'.

೫. ಕೋಲಾರ ವಾಸುದೇವರಾವ್ 'ವಾಸುದೇವ' ಆತ್ರೇಯರವರ 'ರಕ್ತಾಂಜಲಿ'.

೬. ಪಿ. ವೆಂಕೋಬಾಚಾರ್ ಬಿ.ಎ., ಬಿ.ಟಿ., ಧಾರವಾಡ, ಗುಡಿಪಾಟಿ ವೆಂಕಟಾಚಲಂರವರ ತೆಲುಗು ಕಾದಂಬರಿಗಳು – 'ದೇವುಡಿಚ್ಚಿನ ಭಾರ್ಯ', 'ಕುಲಂ ಲೇನಿ ಪಿಲ್ಲ' – 'ವಿಧಿ ತಂದ ವಧು', 'ಕುಲವಿಲ್ಲದ ಹೆಣ್ಣು' 'ಹೂ ಅರಳಿತು' ಇತ್ಯಾದಿ.

೭. ಎಂ. ವಿ. ಸೀತಾರಾಮಯ್ಯ ಎಂ.ಎ. ಸ್ವಾಮಿ ವಿವೇಕಾನಂದ.

೮. ಎಂ. ಜಿ. ಭೀಮರಾಜುರವರು ಕೆಲವು ತೆಲುಗು ಕಾದಂಬರಿಗಳನ್ನು ಅನುವಾದ ಮಾಡಿದ್ದಾರೆ.

೯. ಏಲಕಾಗಣಪತಿಶಾಸ್ತ್ರಿಯವರ ತೆಲುಗು ಕಾದಂಬರಿಯೊಂದು 'ಕಸ್ತೂರಿ'ಯಲ್ಲಿ ಧಾರಾವಾಹಿನಿಯಾಗಿ ಇತ್ತೀಚೆಗೆ ಬಂದಿದೆ.

೧೦. ತೆಲುಗಿನ 'ರುದ್ರಮದೇವಿ' ಕನ್ನಡಕ್ಕೆ ಬಂದಿದೆ.

ಕನ್ನಡದಿಂದ ತೆಲುಗಿಗೆ

೧. ಆರ್. ಭೀಮಸೇನರಾವ್ 'ಬೀಚಿ' ಯವರ 'ಸರಸ್ವತೀ ಸಂಹಾರ.'

೨. ಬಿ. ರಾಮಕೃಷ್ಣಾಚಾರ್‌ರವರು ಬರೆದಿರುವ 'ಉಡುಪೀ ಕ್ಷೇತ್ರ' ಎಂಬ ಸ್ಥಳ ಪುರಾಣವು 'ಉಡುಪಿ ಕ್ಷೇತ್ರಮು' ಎಂಬ ಹೆಸರಿನಲ್ಲಿ ಅನುವಾದವಾಗಿದೆ.

೩. 'ಮಾಸ್ತಿ' ಯವರ 'ಸುಬ್ಬಣ್ಣ'-ವಿದ್ವಾನ್ ವಿಶ್ವಂರವರಿಂದ ಅನುವಾದ.

೪. 'ತ್ರಿವೇಣಿ' ಯವರ ಕಥೆಗಳನ್ನು ಶರ್ವಾಣಿಯವರು ಅನುವಾದಿಸಿದ್ದಾರೆ.

೫) ಶ್ರೀನಿವಾಸರಾವ್ ಕೊರಟಿಯವರ ವಿಜಯನಗರಕ್ಕೆ ಸಂಬಂಧಿಸಿದ ಇಪ್ಪತ್ತು ಕಾದಂಬರಿಗಳು – ಪೆಂಗರಗುಂಟಿ ರಾಮಾಚಾರ್ಲು ಮತ್ತು ಸಹೋದರರಿಂದ ತೆಲುಗಿಗೆ ಅನುವಾದ.

* * *

ತೆಲುಗಿನಲ್ಲಿಯೇ ಸ್ವತಂತ್ರವಾಗಿ ಕಾವ್ಯಗಳನ್ನು ಬರೆಯಬಲ್ಲ ಕನ್ನಡ ಕವಿಗಳು ಇಲ್ಲದಿಲ್ಲ. ಕನ್ನಡಿಗರ ಕನ್ನಡದ ಕವಿತೆಗಳೇ ಅಚ್ಚಾಗದೆ ಕುಳಿತಿರುವಾಗ ಕನ್ನಡಿಗರು ಸೃಷ್ಟಿಸಿರುವ ತೆಲುಗು ಸಾಹಿತ್ಯವು ಪ್ರಕಟವಾಗುವುದು ಹೇಗೆ?

ಶ್ರೀ ನಾಗೇಶಶರ್ಮ, ಜಿ.ವೆಂಕಟಾಚಲಶರ್ಮ, ಲಂಕಾ ಕೃಷ್ಣಮೂರ್ತಿ, ಗಡಿಯಾರು ಸುಬ್ಬಯ್ಯಶಾಸ್ತ್ರಿ, ಶಂಕರ

ನಾರಾಯಣರಾಜು, ವಿ. ಟಿ. ಕುಮಾರ್, ವಿ. ವಿ. ಕೃಷ್ಣಯ್ಯ, ಕಂ. ಸು. ವೆಂಕಟಾದ್ರಿಶರ್ಮ, ಇವರೇ ಮುಂತಾದವರೆಲ್ಲರೂ ತೆಲುಗು ಸಾಹಿತ್ಯದ ಸೇವೆಯನ್ನು ಕನ್ನಡ ರಾಜ್ಯದಲ್ಲೇ ಇದ್ದು ಮಾಡುತ್ತಿದ್ದಾರೆ.

ಕನ್ನಡ ರಾಜಧಾನಿಯಾದ ಬೆಂಗಳೂರಿನಲ್ಲಿ 'ತೆಲುಗು ಸಾಹಿತಿ ಸಮಿತಿ' ಮತ್ತು 'ತೆಲುಗು ವಿಜ್ಞಾನ ಸಮಿತಿ' ಎಂಬ ಎರಡು ತೆಲುಗು ಸಮಿತಿಗಳು ತೆಲುಗಿನ ಅಭಿವೃದ್ಧಿಗೆ ದುಡಿಯುತ್ತಿವೆ. ಹೀಗೆಯೇ ಆಂಧ್ರದ ರಾಜಧಾನಿಯಾದ ಹೈದರಾಬಾದಿನಲ್ಲಿ 'ಆಂಧ್ರ ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಸಂಸ್ಥೆಯೊಂದು ಕನ್ನಡ ಸಾಹಿತ್ಯದ ಏಳ್ಗೆಗೆ ಶ್ರಮಿಸುತ್ತಿದೆ. ಇದೂ ಒಂದು ಭಾಷಾ ಬಾಂಧವ್ಯವೇ.

* * *

ಸಾಹಿತ್ಯ ಕ್ಷೇತ್ರದಲ್ಲಿಯೇ ಅಲ್ಲದೆ ಕಲೆಯ ಕ್ಷೇತ್ರದಲ್ಲಿಯೂ ಈ ಭಾಷಾ ಬಾಂಧವ್ಯ ನಡೆದು ಬಂದಿದೆ.

ಕನ್ನಡ ಯಕ್ಷಗಾನಕ್ಕೆ ತೆಲುಗಿನ ಯಕ್ಷಗಾನ ಮೂಲವೆಂದು ಹೇಳುವವರಿದ್ದಾರೆ. ೧೬ನೆಯ ಶತಮಾನದ ಕಂದಕೂರಿ ರುದ್ರಕವಿಯ 'ಸುಗ್ರೀವ ವಿಜಯಮು' ೧೭ನೆಯ ಶತಮಾನದ ರಂಗರಾಜಮ್ಮ 'ಉಷಾಪರಿಣಯಮು' ಮತ್ತು ಕೃಷ್ಣಾಧ್ವರಿಯ 'ಕಲ್ಯಾಣ ಕೌಮುದೀ ಕಂದರ್ಪ ನಾಟಕಮು' ಇವೆಲ್ಲಾ ಯಕ್ಷಗಾನಗಳೇ. ಇವರೆಲ್ಲರೂ ಪಾರ್ತಿಸುಬ್ಬನ ಪೂರ್ವಜರೇ.

ತೆಲುಗು ದೇಶದ ಕೂಚಿಪುಡಿ ನೃತ್ಯಕ್ಕೆ ಕನ್ನಡ ದೇಶದಲ್ಲಿ ಅನೇಕ ಭಕ್ತರಿದ್ದಾರೆ.

ಸಂಗೀತ ಕ್ಷೇತ್ರದಲ್ಲಂತೂ ಕನ್ನಡ-ತೆಲುಗರ ಬಾಂಧವ್ಯ ತುಂಬಾ ಹಳೆಯದು. ತ್ಯಾಗಯ್ಯ-ಅಪ್ಪಯದೀಕ್ಷಿತ ಶ್ಯಾಮಾಶಾಸ್ತ್ರಿಗಳ ತೆಲುಗು ಕೃತಿಗಳನ್ನು ಹಾಡದ ಕನ್ನಡ ಸಂಗೀತಗಾರನಾರು? ಕನ್ನಡದ, ಸುಪ್ರಸಿದ್ಧ ವಾಗ್ಗೇಯಕಾರ ವಾಸುದೇವಾಚಾರ್ಯರ 'ಬ್ರೋಚೇವಾರೆವರುರಾ?' ಮುಂತಾದ ಕೃತಿಗಳು ತುಂಬಾ ಜನಪ್ರಿಯವಾಗಿವೆ.

ಅಗಲಿಕೆ-ಸಾಮೀಪ್ಯ

ಯಾರಾದರೂ
ವಿದೇಶದಲಿರುವಾಗ
ಕಾಗೆ ನಿತ್ಯ ಸಂದೇಶವ ತರುವುದು,
ಹಿಂದಿರುಗಿದಾಗ
ಕೋಗಿಲೆಗೆ
ಹಳೆಯ ಹಾಡೇ ನೆನಪಿರದು!
ಯಾರಾದರೂ
ದೂರವಿದ್ದಾಗ
ಸದಾ ನೆನಪಾಗುವರು,
ಹತ್ತಿರ ಬಂದಾಗ
ದೂರವಾಗಲೆಂದು
ಒಮ್ಮೆಲೆ ಮನಬಯಸುವುದು!

ವಿದ್ಯಾರ್ಥಿ

'ಸಪ್ತರ್ಷಿಧಾಮ' ಹಾಗೂ 'ಕವಿ-ಕೃತಿ ದರ್ಶನ'

ಕೆ. ಎನ್. ಶ್ರೀಹರಿ

(ಹಿಂದಿನ ಸಂಚಿಕೆಯಿಂದ)

ಉಪನ್ಯಾಸ ಮಾಲೆ	ದಿನಾಂಕ	ವಿಷಯ	ಅಧ್ಯಕ್ಷರು ಸರ್ವಶ್ರೀ	ಉಪನ್ಯಾಸಕರು ಸರ್ವಶ್ರೀ
೧೪.	೧೧-೯-೧೯೬೬	ಶ್ರೀ ಬಿ. ಪುಟ್ಟಸ್ವಾಮಯ್ಯ ಅವರ ಸಾಹಿತ್ಯ ಸಾಮ್ರಾಜ್ಯ	ಡಾ. ರಂ. ಶ್ರೀ. ಮುಗಳಿ	ಮಾ. ಸಾ. ಚೌಡಪ್ಪ ಕೊರಟಿ ಶ್ರೀನಿವಾಸರಾವ್ ಕ. ವೆಂ. ರಾಜಗೋಪಾಲ ಜಿ. ವಿ. ಶಿವಾನಂದ್
೧೫.	೯-೧೦-೧೯೬೬	ಶ್ರೀ ಬೆಟಗೇರಿ ಕೃಷ್ಣಶರ್ಮ ಅವರ ಸಾಹಿತ್ಯ ವೈವಿಧ್ಯ	ಎಸ್.ಆರ್. ರೋಹಿಡೇಕರ್ (ಜಾಯಿಂಟ್ ಡಿ ಪಿ. ಐ.)	ವೆಂ. ಮು. ಜೋಶಿ ಕುಲಕರ್ಣಿ ಶೇಷಗಿರಿರಾವ್ ಎಂ. ಪಿ. ಮಹಿಷಿ
೧೬.	೧೩-೧೧-೧೯೬೬	ಶ್ರೀ ಎಂ.ವಿ. ಸೀತಾರಾಮಯ್ಯ ಅವರ ಸಾಹಿತ್ಯದ ಸೊಬಗು	ಎಸ್. ಆರ್. ಮಳಗಿ	ಸಿ. ಶ್ರೀನಿವಾಸರಾಜು ರಾಘವೇಂದ್ರ ಪಟ್ವಾರಿ ಕೆ. ಪಿ. ಶಿವಲಿಂಗಯ್ಯ
೧೭.	೧೧-೧೨-೧೯೬೬	ಪದ್ಮಶ್ರೀ ವಿ. ಕೃ. ಗೋಕಾಕ ಅವರ ಸಾಹಿತ್ಯೋಪಾಸನೆ	ಎಸ್. ಆರ್. ಮಳಗಿ	ಆರ್. ಜಿ. ಕುಲಕರ್ಣಿ ಕೆ. ಟಿ. ಪಾಂಡುರಂಗಿ ಎಚ್. ಜಿ. ಸೂರ್ಯ ನಾರಾಯಣರಾವ್
೧೮.	೧೭-೧-೧೯೬೭	ಡಾ. ಎ. ಆರ್. ಕೃಷ್ಣಶಾಸ್ತ್ರೀ ಅವರ ಕೃತಿಗಳು	ಜಿ. ಪಿ. ರಾಜರತ್ನಂ	
೧೯.	೧೨-೨-೧೯೬೭	ಡಾ. ರಂ. ಶ್ರೀ. ಮುಗಳಿ ಅವರ ಸಾಹಿತ್ಯಾರಾಧನೆ	ಪದ್ಮಶ್ರೀ ವಿ. ಕೃ ಗೋಕಾಕ್	ಎಂ. ವಿ. ಸೀತಾರಾಮಯ್ಯ ಡಾ. ಜಿ.ಎಸ್. ಶಿವರುದ್ರಪ್ಪ
೨೦.	೧೨-೩-೧೯೬೭	ಶ್ರೀ ಡಿ. ಎಲ್. ನರಸಿಂಹಾಚಾರ್ ಅವರ ಸಾಹಿತ್ಯಸೇವೆ	ಡಾ. ರಂ. ಶ್ರೀ. ಮುಗಳಿ	ಎನ್. ಬಸವಾರಾಧ್ಯ ಹಂಪ. ನಾಗರಾಜಯ್ಯ ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟ
೨೧.	೯-೪-೧೯೬೭	ಪದ್ಮಶ್ರೀ ಸಿ. ಕೆ. ವೆಂಕಟ ರಾಮಯ್ಯ ಅವರ ಸಾಹಿತ್ಯ ಸೇವೆ	ಪ್ರೊ. ಎಸ್. ವಿ. ರಂಗಣ್ಣ	
೨೨.	೨೧-೫-೧೯೬೭	ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅವರ ಸಾಹಿತ್ಯ ಸೇವೆ	ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರೀ	ಪಂಡಿತ ಹು. ಮ. ರಾಮಾರಾಧ್ಯ ಕಮಲಮ್ಮ ಹಂಪನಾ

ಉಪನ್ಯಾಸ ಮಾಲೆ	ದಿನಾಂಕ	ವಿಷಯ	ಅಧ್ಯಕ್ಷರು ಸರ್ವಶ್ರೀ	ಉಪನ್ಯಾಸಕರು ಸರ್ವಶ್ರೀ
೨೩.	೧೧-೬-೧೯೬೭	ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯ ಸೇವೆ	ಸಿದ್ದವನಹಳ್ಳಿ ಕೃಷ್ಣಶರ್ಮ	ಎಲ್. ಎಸ್. ಶೇಷಗಿರಿ ರಾವ್ ಕೆ. ಸಂಪದ್ಗಿರಿರಾವ್ ನೀ. ಕಸ್ತೂರಿ
೨೪.	೯-೭-೧೯೬೭	ಶ್ರೀ ಎಸ್. ವಿ. ರಂಗಣ್ಣ ಅವರ ಸಾಹಿತ್ಯ ಸೇವೆ	ಎಂ. ವಿ. ಸೀತಾರಾಮಯ್ಯ	ಕಿ. ರಂ. ನಾಗರಾಜ ಎನ್. ಎಸ್. ಲಕ್ಷ್ಮೀ ನಾರಾಯಣಭಟ್ಟ
೨೫.	೧೩-೮-೧೯೬೭	ಪ್ರೊ|| ದೇ. ಜವರೇಗೌಡ ಅವರ ಸಾಹಿತ್ಯ ಕೃತಿಗಳು	ಸಿದ್ಧಯ್ಯ ಪುರಾಣಿಕ	ಹಂಪ. ನಾಗರಾಜಯ್ಯ ಅ. ರಾ. ಮಿತ್ರ

ತಿಂಗಳಿಗೊಂದರ ಈ 'ಕವಿ–ಕೃತಿದರ್ಶನ' ಉಪನ್ಯಾಸದ ಜೊತೆಗೆ, ಕೆಲವು 'ವಿಶೇಷ ಉಪನ್ಯಾಸ' ಗಳೂ ಈ 'ಸಪ್ತರ್ಷಿ ಧಾಮು' ದಲ್ಲಿ ನಡೆದಿವೆ. ಅವುಗಳ ವಿವರ ಹೀಗಿವೆ:

ವಿಶೇಷ ಉಪನ್ಯಾಸ	ದಿನಾಂಕ	ವಿಷಯ	ಅಧ್ಯಕ್ಷರು ಸರ್ವಶ್ರೀ	ಉಪನ್ಯಾಸಕರು ಸರ್ವಶ್ರೀ
೧.	೧೩-೩-೧೯೬೬	ಶ್ರೀ ವಾಲ್ಮೀಕಿ ರಾಮಾಯಣ	ಪಿ. ವಿ. ಜೋಶಿ	ಪಂಡಿತ ಎಂ.ವಿ. ಚಕ್ರವರ್ತಿ
೨.	೧೩-೪-೧೯೬೬	ಶ್ರೀ ಕನಕದಾಸರ ಜಯಂತ್ಯುತ್ಸವ	ಸಿದ್ದವ್ವನಹಳ್ಳಿ ಕೃಷ್ಣಶರ್ಮ	ಪಂಡಿತ ಹು. ಮ. ರಾಮಾರಾಧ್ಯ
೩.	೨೬-೫-೧೯೬೬	'ಅಲ್ಲಮಪ್ರಭು' (ಚಾಮರಸನ 'ಪ್ರಭುಲಿಂಗ ಲೀಲೆ' ಯ ಆಧಾರ) (ಗಮಕರೂಪಕ–ರಾಮಾರಾಧ್ಯ ವಿರಚಿತ)	ಬಿ. ಡಿ. ಜತ್ತಿ	ಗಾಂಧೀ ಸಾಹಿತ್ಯ ಸಂಘದ ಸದಸ್ಯರು
೪.	೨೬-೬-೧೯೬೬	ಕನ್ನಡದಲ್ಲಿ ಬೌದ್ಧಸಾಹಿತ್ಯ	ಜಿ. ಪಿ. ರಾಜರತ್ನಂ	
೫.	೨೪-೭-೧೯೬೬	ಭಾಸತ್ರಯೋದಶೀ 'ಊರುಭಂಗ'	ಪಂಡಿತ ಎಂ.ವಿ. ಚಕ್ರವರ್ತಿ	ವಸಂತ ಕವಲಿ
೬.	೨೮-೮-೧೯೬೬	ಶ್ರೀ ಅರವಿಂದ ದರ್ಶನ	ಡಾ. ರಂ. ಶ್ರೀ. ಮುಗಳಿ	ಜಿ. ಯಸ್. ಯಕ್ಕುಂಡಿ ಆರ್. ಜಿ. ಕುಲಕರ್ಣಿ ನಾರಾಯಣ ಸಂಗಮ
೭.	೨೫-೯-೧೯೬೬	ರಾಜ್ಯಾಂಗ ಹಾಗೂ ಗಾಂಧೀ ತತ್ತ್ವ	ಡಾ. ಎಂ. ವಿ. ಕೃಷ್ಣರಾವ್	ಪ್ರೊ. ಆರ್. ರಂಗಯ್ಯ
೮.	೨೭-೧೧-೧೯೬೬	ಪಂಪರಾಮಾಯಣದಲ್ಲಿ ಸೀತಾಪಹರಣ ಪ್ರಸಂಗ	ಎಸ್.ಆರ್. ರೋಹಿಡೇಕರ್	
೯.	೨೫-೧೨-೧೯೬೬	ದಿ|| ಶ್ರೀ ತೀ. ನಂ. ಶ್ರೀ. ಅವರ ಸಾಹಿತ್ಯ ಸಮರ್ಪಣೆ (ಷಷ್ಟ್ಯಬ್ದ ಸ್ಮರಣೆ)	ಪು. ತಿ. ನರಸಿಂಹಾಚಾರ್	ಎಂ. ವಿ. ಸೀತಾರಾಮಯ್ಯ ಅ. ರಾ. ಮಿತ್ರ

ಈ ಎಲ್ಲ ಉಪನ್ಯಾಸಗಳಲ್ಲೂ ಆಯಾ ಸಾಹಿತಿಗಳ ಕೃತಿಗಳಿಂದಲೇ ಆಯ್ದ ಪ್ರಾರ್ಥನೆ, ನಾಟಕಗಳ ದೃಶ್ಯವಾಚನ, ಕವನವಾಚನ ಇವುಗಳಲ್ಲಿ ನೆರವಾದ ಕೆಲಮಹನೀಯರನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬೇಕಾಗಿದೆ. ಶ್ರೀಮತಿಯರಾದ ಅನ್ನಪೂರ್ಣಮ್ಮ ರಘುಪತಿಶಾಸ್ತ್ರೀ, ಕುಮಾರಿ ಶ್ರೀಮತಿ, ಪರಿಮಳಾ, ಅಲಮೇಲು, ಶಾಂತಾ ತೊರವೆ, ಸುಲೋಚನಾರಾವ್, ಅನ್ನಪೂರ್ಣ, ಜಯಲಕ್ಷ್ಮೀ, ಮತ್ತು ಸರ್ವಶ್ರೀ ಕೆ. ಪಿ. ತೊರವೆ, ನೀ. ಕಸ್ತೂರಿ, ಎಂ. ಎಸ್. ಗುರುರಾಜ್, ಕೆ. ಎನ್. ಬದರೀನಾಥ್, ಕೆ. ಎನ್. ಮುರಳೀಧರ, ಕಡಬ ಸುಬ್ರಹ್ಮಣ್ಯಂ, ಸಿ. ಕೆ. ಸೂರ್ಯನಾರಾಯಣರಾವ್, ಜೋಶಿ, ವಿಮಲಾ ಭಂಡಿವಾಡ, ಶ್ರೀಮಧ್ವರಾವ್ ಮುಧೋಳ್ ಮುಂತಾದವರು.

ಒಂದೊಂದು ಉಪನ್ಯಾಸದ ಯೋಜನೆಯೂ ಕೆಲವು ತಿಂಗಳ ಮೊದಲೇ ಚರ್ಚೆಯಾಗಿ ಒಂದು ರೂಪಕ್ಕೆ ಬರುತ್ತದೆ. ಈ ಸಾಹಿತಿಯ ಇಂತಿಂತಹ ಗ್ರಂಥಗಳ ಮೇಲೆ, ಇಂತಿಂತಹವರು, ಇಷ್ಟಿಷ್ಟು ಹೊತ್ತು ಮಾತಾಡತಕ್ಕದ್ದು ಎಂದು ಮೊದಲೇ ವಿಷಯವನ್ನೂ, ವೇಳೆಯನ್ನೂ ಹಂಚಿಕೊಂಡು, ಸಭೆಯಲ್ಲಿ ಆಡಬೇಕಾದ್ದನ್ನು ಅವರವರಿಂದ ಎಷ್ಟು ಸಾಧ್ಯವೋ ಅಷ್ಟು ಪರಿಷ್ಕಾರವಾಗಿ ಆಗುತ್ತದೆ—ಆಯಾ ಸಾಹಿತಿಯ ಕೃತಿಗಳ ಪರಿಚಯ ಹಾಗೂ ಪರಿಶೀಲನ.

ಈ ಉಪನ್ಯಾಸಗಳನ್ನು ಕುರಿತ ಕರೆಯೋಲೆಗಳಲ್ಲಿಯೂ ಒಂದು ವೈಶಿಷ್ಟ್ಯ ಇದೆ. ಕರೆಯೋಲೆಗಳನ್ನು ಸರ್ವಾಂಗ ಸುಂದರವಾಗಿ, ಬಿ. ಎಂ. ಶ್ರೀ. ಅಚ್ಚುಕೂಟದ ಕೆಲಸಗಾರರು ಪರಿಷತ್ತಿನ ಪರವಾಗಿ ತಪ್ಪಿಲ್ಲದಂತೆ ಮುದ್ರಿಸಿಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕರೆಯೋಲೆ, ಕ್ರೌನ್ ಅಷ್ಟಪತ್ರಾಕಾರದಲ್ಲಿ ನಾಲ್ಕು ಪುಟಗಳಲ್ಲಿರುತ್ತದೆ. ಮೊದಲನೆಯ ಪುಟದಲ್ಲಿ–ಇಂಥ ಸಂಸ್ಥೆ, ಇಂಥ ಸ್ಥಳ, ಇಂಥ ದಿನ, ಕಾಲ, ಉಪನ್ಯಾಸ ಮಾಲೆಯ ಸಂಖ್ಯೆ ಇತ್ಯಾದಿ; ಎರಡನೆಯ ಪುಟದಲ್ಲಿ–ಅಂದಿನ ಸಾಹಿತಿಯ ಅಚ್ಚಾದ ಕೃತಿಗಳ ಒಟ್ಟು ಪಟ್ಟಿ; ಮೂರನೆಯ ಪುಟದಲ್ಲಿ–ಅಂದಿನ ಕಾರ್ಯಕ್ರಮದ ವಿವರ; ನಾಲ್ಕನೆಯ ಪುಟದಲ್ಲಿ–ಮುಂದಿನ ತಿಂಗಳ ಉಪನ್ಯಾಸದ ಮುನ್ಸೂಚನೆ ಇರುತ್ತದೆ. ಅಲ್ಲದೆ ಒಂದು ಪ್ರಕಟಣೆ ಹೀಗಿರುತ್ತದೆ: "ಕಾಲೇಜು ವಿದ್ಯಾರ್ಥಿ ವರ್ಗದ ಶ್ರೋತೃಗಳಿಗೂ ಮತ್ತು ಸಾರ್ವಜನಿಕರಿಗೂ ಎರಡು ಪ್ರತ್ಯೇಕ 'ಲೇಖನ ಮಾಲಿಕಾ ಸ್ಪರ್ಧೆ'ಗಳು ಉಂಟು. ಇದರಲ್ಲಿ ಭಾಗವಹಿಸುವವರು ಅನುಕ್ರಮವಾಗಿ ೧೨ ತಿಂಗಳೂ ಉಪನ್ಯಾಸಗಳಿಗೆ ಬಂದು ತಾವು ಕೇಳಿದ ಉಪನ್ಯಾಸಗಳ ವಿಷಯವನ್ನು ಆಧಾರವಾಗಿಟ್ಟುಕೊಂಡು, ತಮ್ಮ ವಿಚಾರ ವಿಮರ್ಶೆಯನ್ನು ಅಳವಡಿಸಿ, ಎಲ್ಲ ಉಪನ್ಯಾಸಗಳ ಸಾರಾಂಶ ರೂಪದ ಲೇಖನ ಮಾಲಿಕೆಯನ್ನು ವ್ಯವಸ್ಥಾಪಕರಿಗೆ ಒಪ್ಪಿಸತಕ್ಕದ್ದು. ಪ್ರತಿ ಲೇಖನ ಐದು ಪುಟಗಳಲ್ಲಿ ಅಡಕವಾಗಿರಬೇಕು. ಸಾಹಿತ್ಯಾಭಿಲಾಷಿಗಳಿಗೆಲ್ಲ ಇದೊಂದು ಸದವಕಾಶ. ಈ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರುವ ಉದ್ದೇಶವಿದೆ". ಇದರಲ್ಲಿ ಬಹುಮಂದಿ ಕಾಲೇಜು ಕನ್ನಡ ಆನರ್ಸ್. ಎಂ. ಎ. ವಿದ್ಯಾರ್ಥಿಗಳೂ, ಅಧ್ಯಾಪಕರುಗಳೂ, ಇತರರೂ ಭಾಗವಹಿಸುತ್ತಿದ್ದಾರೆ.

ಈ ಕರೆಯೋಲೆಯ ಬಗೆಗೆ ಶ್ರೀ ಜಿ. ಪಿ. ರಾಜರತ್ನಂ ಅವರು ಪ್ರಜಾವಾಣಿಯಲ್ಲಿ ಪ್ರಕಟಿಸಿದ 'ಸಾಹಿತ್ಯಾರಾಧನ' ಎಂಬ ಲೇಖನದಲ್ಲಿ, "ವಿದ್ಯಾವರ್ಧಕ ಸಂಘದ ಈ ಕರೆಯೋಲೆಗಳಲ್ಲಿ ಇನ್ನೊಂದು ಸಂತೋಷದ ಅಂಶ. ಪ್ರತಿಯೊಂದು ಕಾರ್ಯಕ್ರಮವೂ 'ರಾಜಾಜಿ ನಗರದ ವಿದ್ಯಾವರ್ಧಕ ಸಂಘದ ನೇತೃತ್ವ'ದಲ್ಲಿ ಏರ್ಪಾಟಾಗಿ ನಡೆದರೂ, ಅದು 'ಕನ್ನಡ ಸಾಹಿತ್ಯ ಪರಿಷತ್ತಿನ ಅಂಗವಾಗಿ' ನಡೆಯುತ್ತಿದೆ ಎಂಬುದನ್ನು ಪ್ರತಿಕರೆಯೋಲೆಯೂ ದಪ್ಪ ಅಕ್ಷರಗಳಲ್ಲಿ ಸಾರುತ್ತದೆ. ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಬದುಕಿದ್ದು ಇದನ್ನು ನೋಡಿದ್ದರೆ, ಎಷ್ಟು ಸಂತೋಷಪಡುತ್ತಿದ್ದರೋ! 'ಕನ್ನಡ ನಾಡಿನಲ್ಲಿ ಕಾರ್ಯಪರವಾದ ಸಂಘಗಳೆಲ್ಲವೂ ಪರಿಷತ್ತಿನ ಅಂಗ ಸಂಸ್ಥೆಗಳಾಗಬೇಕು. ತಾವು ಯಾವ ಕೆಲಸಮಾಡಿದರೂ ಪರಿಷತ್ತಿನ ಅಂಗವಾಗಿ ಅದು ಮಾಡಿದ್ದೆಂದಾಗಬೇಕು. ಹೀಗೆ ಎಲ್ಲರೂ ಪರಿಷತ್ತನ್ನು ಕಟ್ಟಬೇಕು' ಎಂದು ಹೇಳಿ ಹಾಗಾಗುವುದಕ್ಕೆ ಶ್ರಮಿಸಿದರು" ಎಂದು ಬರೆದಿದ್ದಾರೆ.

ಈ ಮೇಲ್ಪಂಕ್ತಿಯನ್ನನುಸರಿಸಿ ಈಚೆಗೆ ಬೆಂಗಳೂರಿನ ಇತರ ಕಡೆಗಳಲ್ಲಿ ಅಂದರೆ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ 'ಕವಿ-ಕೃತಿಸ್ಮರಣೆ' (ದಿವಂಗತ ಸಾಹಿತಿಗಳ ಸ್ಮರಣೆ) ಉಪನ್ಯಾಸಗಳನ್ನು ಮತ್ತು ಬಸವನಗುಡಿಯ ಕನ್ನಡಿಗರ ಕೂಟದಲ್ಲಿ 'ಸಾಹಿತ್ಯ ಪ್ರಕಾರಗಳ ಪರಿಶೀಲನೆ' ಉಪನ್ಯಾಸಗಳನ್ನೂ ಪರಿಷತ್ತಿನ ಅಂಗವಾಗಿ ಪ್ರಾರಂಭಿಸಿರುವುದು ಗಮನಾರ್ಹ ಹಾಗೂ ಸ್ತುತ್ಯಾರ್ಹ. ಇಷ್ಟೇ ಅಲ್ಲದೆ, ಭಾರತದ ಇತರ ಭಾಷೆಗಳಲ್ಲೂ, ರಾಜಾಜಿ ನಗರ 'ಸಪ್ತರ್ಷಿಧಾಮ'ದಲ್ಲಿ ನಡೆಯುವ ಕವಿ-ಕೃತಿ ದರ್ಶನ ಉಪನ್ಯಾಸಗಳ ಅನುವಾದಗಳನ್ನು ಸಿದ್ಧಗೊಳಿಸಿ, ಪ್ರಕಟಿಸಿ, ಕನ್ನಡ ಸಾಹಿತಿಗಳ ಹಾಗೂ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವ ಪ್ರಯತ್ನವೂ ನಡೆಯುತ್ತಿದೆ.

'ಈ ಉಪನ್ಯಾಸಗಳನ್ನು ಲಿಪಿಬದ್ಧಗೊಳಿಸುವ ಕಾರ್ಯದಲ್ಲಿ ತೊಡಗಿರಿ' ಎಂದು ವರಕವಿ ಡಾ|| ದ. ರಾ. ಬೇಂದ್ರೆಯವರು, ಈ ಉಪನ್ಯಾಸಮಾಲೆಯ ಆರಂಭೋತ್ಸವ ಸಂದರ್ಭದಲ್ಲಿ ಸಂದೇಶ ಕಳುಹಿಸಿದ್ದರು. ಆ ಪ್ರಕಾರವಾಗಿ ಕನ್ನಡದಲ್ಲಿ ಈ ಉಪನ್ಯಾಸಗಳನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸುವ ಯೋಜನೆಯೂ ಇದೆ.

ಅಲ್ಲದೆ, ಈ ಉಪನ್ಯಾಸಗಳ ಸಮಗ್ರ ವರದಿಯನ್ನು ಪ್ರತಿತಿಂಗಳೂ 'ಸಂಯುಕ್ತ ಕರ್ಣಾಟಕ' ಪತ್ರಿಕೆ ಪ್ರಕಟಿಸಿ ಮಹೋಪಕಾರ ಮಾಡುತ್ತ ಬಂದಿದೆ. ಇತರ ಪತ್ರಿಕೆಗಳವರೂ ಸಹಕಾರ ನೀಡುತ್ತ ಬಂದಿದ್ದಾರೆ ಎಂಬುದನ್ನು ಇಲ್ಲಿ ಸ್ಮರಿಸಬೇಕಾಗಿದೆ.

ನಿರಂತರವಾಗಿ ಸಾಗಿ ಬಂದಿರುವ ಈ ಉಪನ್ಯಾಸಗಳ ಕಾರ್ಯಕ್ರಮದಿಂದಾಗಿ ರಾಜಾಜಿನಗರದ 'ಸಪ್ತರ್ಷಿಧಾಮ' ಬೆಂಗಳೂರಿನ ಸಾಹಿತ್ಯ ಪ್ರೇಮಿಗಳೆಲ್ಲರ ಯಾತ್ರಾಸ್ಥಳವಾಗಿದೆ ಎಂದು ಜನ ಭಾವಿಸಿದ್ದಾರೆ.

ಇದನ್ನು ಕಂಡೇ, ಶ್ರೀ ಜಿ. ಪಿ. ರಾಜರತ್ನಂ ಅವರು, "ಸೂರ್ಯನು ಪಶ್ಚಿಮದಲ್ಲಿ ಹುಟ್ಟುತ್ತಾನೆ ಎಂಬುದು ಅಸಂಭವ. ಆದರೆ ಬೆಂಗಳೂರಿನ ಸಾಹಿತ್ಯ ಪ್ರಪಂಚದಲ್ಲಿ ಸಾಹಿತಿಗಳ ಕೃತಿಗಳನ್ನು ಬೆಳಕಿಗೆ ತರುವ ಸೂರ್ಯನು ಪಶ್ಚಿಮದ ರಾಜಾಜಿನಗರದಲ್ಲಿ ಹುಟ್ಟುತ್ತಿರುವುದನ್ನು ಕನ್ನಡಕ್ಕೆ ಶುಭಸೂಚನೆಯಾಗಿ ಇಟ್ಟುಕೊಳ್ಳಬಹುದು" ಎಂದು ತಮ್ಮ ಮೆಚ್ಚುಗೆ ಸೂಚಿಸಿದ್ದಾರೆ.

ಈ ವಿದ್ಯಾವರ್ಧಕ ಸಂಘವು ಶಿಕ್ಷಣಕ್ಷೇತ್ರವಲ್ಲದೆ, ಸಾಹಿತ್ಯ ಕ್ಷೇತ್ರದಲ್ಲೂ ಮಾಡುತ್ತಿರುವ ಸೇವೆಯನ್ನು ಮೆಚ್ಚಿ, ಮಲ್ಲೇಶ್ವರದ ಸಹಕಾರ ಬ್ಯಾಂಕಿನವರು, ಶ್ರೀರಾಮನವಮಿಯ ದಿನ, ಈ ವರ್ಷದ 'ಶ್ರೀ ಎಸ್. ಗೋಪಾಲಸ್ವಾಮಿ ಸ್ಮಾರಕ ಪ್ರಶಸ್ತಿ' ಯನ್ನು ಕೊಟ್ಟು ಗೌರವಿಸಿದರು.

ಈ ಉಪನ್ಯಾಸಗಳಲ್ಲಿ ಆಗಾಗ ಉದಯೋನ್ಮುಖ ತರುಣ ಕವಿಗಳನ್ನೂ, ಸಾಹಿತಿಗಳನ್ನೂ, ಕಾಲೇಜು ಅಧ್ಯಾಪಕರುಗಳನ್ನೂ ಭಾಗವಹಿಸಲು ಆಹ್ವಾನಿಸುತ್ತಿರುವ ಪರಿಪಾಠವಿಟ್ಟಿರುವುದರಿಂದ, 'ಸಪ್ತರ್ಷಿಧಾಮ'ವು ಈ ದೃಷ್ಟಿಯಿಂದ ಅವರಿಗೆಲ್ಲ ಕನ್ನಡ ಭಾಷಾ-ಸಾಹಿತ್ಯಗಳ ಆಳವಾದ ವ್ಯಾಸಂಗಕ್ಕೆ ಒಂದು ಉತ್ತಮ ಭೂಮಿಕೆಯಾಗಿ ಪರಿಣಮಿಸಿದೆ. ಅವರೂ ಈ ದಿಸೆಯಲ್ಲಿ, ಈ ಉಪನ್ಯಾಸಗಳಲ್ಲಿ, ಉತ್ಸಾಹದಿಂದಲೂ, ವಿಷಯದ ಅಭ್ಯಾಸ ಸಿದ್ಧತೆಯಿಂದಲೂ ಬಂದು ಸಹಕರಿಸುತ್ತಿರುವುದರಿಂದ ಈ ಕಾರ್ಯಕ್ರಮಗಳಿಗೆ ಒಂದು ವಿಶೇಷ ಶೋಭೆಯುಂಟಾಗಿದೆ. ಮತ್ತು ನಿಯಮಿತವಾದ ಈ ಕಾರ್ಯಕ್ರಮಗಳಿಗೆ ಬರುವ ಸಹೃದಯ ಶ್ರೋತೃಗಳಿಗೂ ಈ ತರುಣ ವಾಗ್ಮಿವೃಂದ ಹೆಚ್ಚು ಹೆಚ್ಚಾಗಿ ಮೆಚ್ಚುಗೆಗೆ ಪಾತ್ರವಾಗುತ್ತಿರುವುದು ಅವರ ವೈಯಕ್ತಿಕ ಬೆಳವಣಿಗೆಯ ದೃಷ್ಟಿಯಿಂದಲ್ಲದೆ, ನಮ್ಮ ನಾಡು ನುಡಿಗಳ ಅಭಿವೃದ್ಧಿಯಿಂದಲೂ ಶುಭ ಸೂಚನೆಯೇ ಆಗಿದೆ. ಇಂಥ ಜನ, ಇಂಥ ಉಪನ್ಯಾಸಗಳು, ದುಡ್ಡಿಗೆ ದೊರೆತೀತೇ?

"ಬೆಲೆಯಿಂದಕ್ಕುಮೆ ಕೃತಿ ಗಾ
ಗಾವಿಲ ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ|
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ||"

—ನೇಮಿಚಂದ್ರ

ಇನ್ನು ಇಲ್ಲಿ ಸೇರುವ ಶ್ರೋತೃಗಳ ಬಗೆಗೆ ಪ್ರೊ|| ಎಸ್. ವಿ. ರಂಗಣ್ಣನವರು 'Such an informed, enthusiastic and tolerant audience it is difficult to find; your 'Asram' has produced it for the benefit of people like me. I need not say how eager I am to come to the place whenever I can, to listen as well as to lecture,' ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದಾರೆ.

ಈ ಲೇಖನವನ್ನು, ಈ ಕೆಳಗಿನ ಶ್ರೀ ಪು. ತಿ. ನ. ಅವರ ಕವಿವಾಣಿಯೊಂದಿಗೆ ಮುಗಿಸಬಯಸುತ್ತೇನೆ:

'ನೆಲೆಯಾಗಲಿ ಸರಸತಿಗೀ ಶಾಲೆ
ಸುತರಿಡಲೀಕೆಗೆ ಸುಯಶೋಮಾಲೆ
ಈಕೆಗಳಿಯಲೀ ಪರಾಭಿಭೂತಿ
ಹೊರಹೊಮ್ಮಲಿ ಸ್ವಾಂತಾತ್ಮ ವಿಭೂತಿ
ಹೊಳೆ ಹೊಳೆಸುತ ಸದ್ವಿದ್ಯಾ ರುಚಿಗಳ
ತೇಜವಾಗೆ ಪರಚಿತ್ತಗ್ರಸಿಷ್ಣು
ಹರಸಲಿದನು ತ್ರಿವಿಕ್ರಮ ವಿಷ್ಣು.'

ಈ ಲೇಖನಕ್ಕೆ ಆಧಾರ: ಶ್ರೀ ಜಿ. ಪಿ. ರಾಜರತ್ನಂ ಅವರು ತಾ. ೯-೫-೬೬ರ ಪ್ರಜಾವಾಣಿಯಲ್ಲಿ ಬರೆದು ಪ್ರಕಟಿಸಿದ 'ಸಾಹಿತ್ಯಾರಾಧನ' ಎಂಬ ಲೇಖನ. ಅವರ "ವಿಚಾರತರಂಗ" ಎಂಬ ಪುಸ್ತಕವನ್ನು ನೋಡಿ.

ಪ್ರೊ. ದೇ. ಜವರೇಗೌಡರು ಈ ಕಾರ್ಯಕ್ರಮಗಳನ್ನು ಮೆಚ್ಚಿ ಆರು ಕಾರ್ಯಕ್ರಮಗಳ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿಕೊಡಲು ಆಶ್ವಾಸವಿತ್ತಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

ವಿಮರ್ಶನರಂಗ

ಇಡಗೂರು ರುದ್ರಕವಿ ಮತ್ತು ಶ್ರೀ ಭೀಮೇಶ್ವರ ಕ್ಷೇತ್ರಗಳು : ಬರೆದವರು : ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ; ಪ್ರಕಾಶಕರು : ವೇ|| ಸಿ. ಗುರುಸಿದ್ದಯ್ಯನವರು, ರಿ|| ಸ್ಕೂಲು ಮಾಸ್ಟರ್, ಇಡಗೂರು, ಗೌರಿಬಿದನೂರು ತಾಲ್ಲೂಕು ; ಪುಟಗಳು vi+೫೨+೩೦ ಬೆಲೆ: ರೂ. ೧-೦೦.

ಇದು ಕರ್ಣಾಟಕಾಂಧ್ರೋಭಯ ಭಾಷಾ ಕವಿತಾ ವಿಶಾರದ ಯಕ್ಷಗಾನ, ನಾಟಕ ಪಿತಾಮಹ ಇಡಗೂರು ರುದ್ರಕವಿಯ ಜೀವನದ ಸಂಕ್ಷಿಪ್ತ ಪರಿಚಯ. ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿಗೆ ಸೇರಿರುವ ಇಡಗೂರಿನಲ್ಲಿ ಕಳೆದ ಶತಮಾನದಲ್ಲಿ ಆಗಿಹೋದ, ನಿಡುಮಾಮಿಡಿ ಶ್ರೀಶೈಲ ಸಂಸ್ಥಾನದ ಗುರುಪೀಠಕ್ಕೆ ಸೇರಿದ ಕಲಾಕೋವಿದರೂ, ಕವಿಗಳೂ ಆದ ರುದ್ರಕವಿಗಳ ಜೀವನ ಹಾಗೂ ಸಾಧನೆಯನ್ನು ಎಂ. ಜಿ. ನಂಜುಂಡಾರಾಧ್ಯರು ಬಹಳ ಸ್ವಾರಸ್ಯವಾಗಿ ಮಾಡಿಕೊಟ್ಟಿದ್ದಾರೆ. ಇದಕ್ಕೆ ನಿಡುಮಾಮಿಡಿ ಸ್ವಾಮಿಗಳು ಮುನ್ನುಡಿಯನ್ನು ಅನುಗ್ರಹಿಸಿ ಹರಸಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪಂಡಿತರಾದ ರುದ್ರಕವಿಗಳು ಅನೇಕ ಕೃತಿಗಳನ್ನು ಬರೆದಿದ್ದರೂ ಇದುವರೆಗೆ ಕೇವಲ ೧೪ ಕೃತಿಗಳು ಮಾತ್ರ ದೊರಕುತ್ತವೆ. ಯಕ್ಷಗಾನ ಶಿವನಾಟಕ, ಮಾರ್ಕಂಡೇಯ ಚರಿತ್ರೆ, ಹೊನ್ನಾವರದ ಹೊನ್ನೇಗೌಡರ ವಂಶಾವಳಿ ಮತ್ತು ಪಾಲ್ಕುರಿಕೆ ಸೋಮನಾಥನ 'ಅಕ್ಷರಾಂಕನ ಗದ್ಯ' ಟೀಕೆ ಇವುಗಳು ಮಾತ್ರ ಕನ್ನಡದಲ್ಲಿ ಕವಿಗಳು ಬಿಟ್ಟಿರುವ ಸಾರಸ್ವತ ಸಂಪತ್ತಾಗಿ ಉಳಿದು ಬಂದಿವೆ. ಅರಮನೆ, ಗುರು ಮನೆಗಳಲ್ಲಿ ತಮ್ಮ ವಿದ್ವತ್ತು-ಕಲಾಪ್ರೌಢಿಮೆಗಳಿಂದ ಮನ್ನಣೆಯನ್ನು ಪಡೆದಿದ್ದ ರುದ್ರಕವಿಗಳು 'ಉದಾತ್ತ ಚೇತನ'ರೂ ಆಗಿದ್ದರೆಂಬುದಕ್ಕೆ ಇಲ್ಲಿ ಅನೇಕ ನಿದರ್ಶನಗಳನ್ನು ಲೇಖಕರು ಒದಗಿಸಿದ್ದಾರೆ. ಅವರ ಜೀವಿತದ ಚರಿತ್ರೆಯೊಂದಿಗೆ ಇಡಗೂರು ಭೀಮೇಶ್ವರ ಬೆಟ್ಟ ಮತ್ತು ಕೈವಾರಗಳಲ್ಲಿರುವ ಭೀಮೇಶ್ವರ ಲಿಂಗಗಳ ಪರಿಚಯವನ್ನು ಮಾಡಿಕೊಟ್ಟಿರುವುದರ ಜತೆಗೆ ಕೆಲವು ಚಿತ್ರಗಳನ್ನೂ ಒದಗಿಸಿದ್ದಾರೆ. ಇದೊಂದು ಸಂಗ್ರಾಹ್ಯವಾದ ಕೃತಿ.

* * *

ಕೇನೋಪನಿಷತ್ ತಾತ್ಪರ್ಯ ನಿರ್ಣಯ : ಲೇಖಕರು ರಿ|| ಹೈಕೋರ್ಟ್ ಜಡ್ಜರಾದ ಟಿ. ಎನ್. ಮಲ್ಲಪ್ಪ; ಪ್ರಕಾಶಕರು : ಬಿ. ಎಂ. ಮೃತ್ಯುಂಜಯ, ನಂ. ೧, ರೇಸ್ ಕೋರ್ಸ್ ರೋಡ್, ಬೆಂಗಳೂರು-೧. ಪುಟಗಳು : ೧೮೮ ; ಬೆಲೆ ರೂ. ೨–೨೫.

'ವೇದಾಂತ' ಜಿಜ್ಞಾಸುಗಳಾದ ಮಲ್ಲಪ್ಪನವರು ಈ ಮೊದಲು 'ಈಶಾವಾಸ್ಯೋಪನಿಷತ್ ಪ್ರಕಾಶ' ಎಂಬ ಗ್ರಂಥವನ್ನು ಬರೆದು ಪ್ರಕಟಿಸಿ ಉಪನಿಷತ್ತುಗಳ ಅಧ್ಯಯನದಲ್ಲಿ ಹೊಸ ದೃಷ್ಟಿಕೋಣವನ್ನು ಒದಗಿಸಿದ್ದರು. ಉಪನಿಷತ್ತುಗಳು ನೂರಾದರೂ ತ್ರಿಮತಾಚಾರ್ಯರು 'ಪ್ರಸ್ಥಾನ ತ್ರಯ'ದಲ್ಲಿ ಅಂಗೀಕರಿಸಿರುವ ದಶೋಪನಿಷತ್ತಿನಲ್ಲಿ ಒಂದಾದ ಈಶಾವಾಸ್ಯಕ್ಕೆ ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳಲ್ಲಿ ಬಂದಿರುವ ವ್ಯಾಖ್ಯಾನಗಳು ಅಸಂಖ್ಯಾತವಾಗಿವೆ. ಕನ್ನಡವೊಂದರಲ್ಲೇ ಇದರ ಬಗ್ಗೆ ಹತ್ತಕ್ಕು ಹೆಚ್ಚಿನ ಟೀಕೆ ಟಿಪ್ಪಣಿಗಳುಳ್ಳ ವ್ಯಾಖ್ಯಾನಗಳು ಇವೆ. ಆದರೆ ಯಾವ ಒಂದು ಗ್ರಂಥದಲ್ಲಿಯೂ ತ್ರಿಮತಾಚಾರ್ಯರ ಭಾಷ್ಯಗಳನ್ನು ಒಂದೆಡೆಯಲ್ಲಿ ತುಲನಾತ್ಮಕವಾಗಿ ಪರಿಶೀಲಿಸುವ ಪ್ರಯತ್ನ ನಡೆದಿರುವಂತೆ ಕಾಣುವುದಿಲ್ಲ. ಶ್ರೀ ಮಲ್ಲಪ್ಪನವರು ಅಂತಹ ಪ್ರಯತ್ನವನ್ನು ತಮ್ಮ ಕೃತಿಗಳಲ್ಲಿ ನಡೆಸಿದ್ದಾರೆ.

ಕೇನೋಪನಿಷತ್ತಿನಲ್ಲಿ ಶ್ರೀಯುತರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೇನೋಪನಿಷದ್ ಭಂಡಾರದ ಕೀಲಿಕೈ ಒಂದನ್ನು ಜಿಜ್ಞಾಸುಗಳ ಪಾಲಿಗೆ ಒದಗಿಸಿದ್ದಾರೆ. ಇಲ್ಲಿ ಮಂತ್ರಗಳ ಪ್ರತಿಪದಾರ್ಥ, ಪದ್ಯಾನುವಾದ, ಸರಳಾನುವಾದ, ವಿವರಣೆ, ಶಂಕರಮಾಧ್ವರಂಗ ರಾಮಾನುಜರ ಭಾಷ್ಯಗಳು ಅವುಗಳ ಅರ್ಥವಿವರಣೆಗಳ ಜತೆಗೆ ಇಂಗ್ಲಿಷಿನಲ್ಲಿ ಬಂದಿರುವ ಮ್ಯಾಕ್ಸ್‌ಮುಲ್ಲರ್ ಮತ್ತು ಅರವಿಂದರ ಅನುವಾದಗಳನ್ನೂ ಕೊಟ್ಟು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಇವುಗಳ ಜತೆಗೆ ಕೇನೋಪನಿಷತ್ತಿನ ಷಡ್ಲಿಂಗಗಳಿಗೆ ಅನುಸಾರವಾದ ತಾತ್ಪರ್ಯವನ್ನು ಸಾಮಾನ್ಯ ಓದುಗರಿಗೂ ತಿಳಿಯುವಂತೆ ಸರಳವಾದ ತರ್ಕಬದ್ಧ ಕನ್ನಡದ ಶೈಲಿಯಲ್ಲಿ ಮಾಡಿಕೊಟ್ಟಿದ್ದಾರೆ.

ಈ ಕೃತಿಯನ್ನು ಓದಿದ ಮೇಲೆ ಶ್ರೀ ಮಲ್ಲಪ್ಪನವರು ಉಳಿದ ಎಂಟು ಉಪನಿಷತ್ತುಗಳಿಗೂ, ಗೀತೆ ಮತ್ತು ಬ್ರಹ್ಮಸೂತ್ರಗಳಿಗೂ ಇದೇ ರೀತಿ ವ್ಯಾಖ್ಯಾನ ಮಾಲೆಯನ್ನು ಬರೆದು 'ಆಧುನಿಕ ಆಚಾರ್ಯ' ಪುರುಷರಾಗಬಾರದೇ ಎಂದು ಯಾರಿಗಾದರೂ ಅನಿಸೀತು. ಈ ಗ್ರಂಥದ ಪುಟಪುಟಗಳಲ್ಲೂ ಲೇಖಕರ ವಿಶಾಲ ಮನೋಭಾವ, ತತ್ವಜಿಜ್ಞಾಸೆ ಸತ್ಯನಿಷ್ಠೆ, ನಿಷ್ಪಕ್ಷಪಾತ ವಿಮರ್ಶೆ, ಪ್ರತಿಪಕ್ಷ

ದವರ ವಿಚಾರಗಳನ್ನು ಅರಿಯುವ ಕಳಕಳಿಗಳು ಎದ್ದು ಕಾಣುತ್ತವೆ. (ಉದಾ: ಇಂದ್ರಿಯಗಳನ್ನು ಒಳಮುಖ ಮಾಡಿ ಹರಿಸಿ ಅಂತರಾತ್ಮನ ಸಮ್ಯಗ್‌ದರ್ಶನವನ್ನು ಪಡೆವ ಈ ಪ್ರಯತ್ನ ವಿಶೇಷಕ್ಕೆ ಕಠೋಪನಿಷತ್ತಿನಲ್ಲಿ 'ಆಧ್ಯಾತ್ಮ ಯೋಗ'ವೆಂದೂ, ಶ್ವೇತಾಶ್ವತರ ಉಪನಿಷತ್ತಿನಲ್ಲಿ 'ಧ್ಯಾನ ಯೋಗ'ವೆಂದೂ ಕರೆಯಲಾಗಿದೆ. ಶೈವರು ಇದನ್ನು ಶಿವಯೋಗವೆಂದರೆ ವೈಷ್ಣವರು ಇದನ್ನು 'ನಾರಾಯಣಾನುಧ್ಯಾನ'ವೆನ್ನಬಹುದು. ಹೆಸರಿನಲ್ಲಿ ಏನಿದೆ? ಎಲ್ಲರ ಧ್ಯಾನಕ್ಕೂ ಒಳಗಾಗುವವನು ಪರಮಾತ್ಮನು ಒಬ್ಬನೇ ತಾನೇ—ಪೀಠಿಕೆ.)

ಶ್ರೀಯುತರ ಸಮರ್ಥ ಲೇಖಣಿಯಿಂದ ಉಳಿದ ಉಪನಿಷತ್ತುಗಳ ಪೂರ್ಣ ಪಾಠಗಳು ಕನ್ನಡದಲ್ಲಿ ಬೇಗನೆ ಅವತರಿಸಲಿ, ಕೊರತೆಯಿರುವ ಕನ್ನಡ ಆಧ್ಯಾತ್ಮ ವಾಙ್ಮಯವನ್ನು ಅವರು ತುಂಬಲಿ ಎಂದು ಹಾರೈಸುತ್ತೇವೆ.

* * *

ಜಾಗತಿಕ ಸತ್ಯಗಳು : ಸಂ. ವೀರಭದ್ರಪ್ಪ ಸಜ್ಜನಶೆಟ್ಟಿ ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ ; ಪುಟಗಳು ೩೬೦ ; ಬೆಲೆ ರೂ. ೪-೫೦.

ಇದೊಂದು ನುಡಿಮುತ್ತುಗಳ ಇಲ್ಲವೇ ಅಮೃತವಾಣಿಗಳ ಸಂಗ್ರಹ. ಕನ್ನಡದಲ್ಲಿ ಉಮಾಪತಿ ಅವರು ಇಂಥದೊಂದು ಸಂಗ್ರಹವನ್ನು ಪ್ರಕಟಿಸಿದರು. ಈ ದಿಸೆಯಲ್ಲಿ 'ಜಾಗತಿಕ ಸತ್ಯಗಳು' ಎರಡನೆಯದಾದರೂ, ಅನೇಕ ದೃಷ್ಟಿಗಳಿಂದ ಮಹತ್ವದ ಗ್ರಂಥವಾಗಿದೆ. ಇಂಗ್ಲಿಷಿನಲ್ಲಿ ಈ ಬಗೆಯ Quotation ಗ್ರಂಥಗಳು ಅಸಂಖ್ಯಾತವಾಗಿದ್ದರೂ, ಕನ್ನಡಕ್ಕೆ ಇಂಥ ಬರವಣಿಗೆ ಹೊಸದು. 'ಕನ್ನಡ ಸಾಹಿತ್ಯದ ಬೆಳವಣಿಗೆಗೆ ಹಾಗೂ ಶ್ರೀಮಂತಿಕೆಗಾಗಿ ಪ್ರಯತ್ನಿಸುವುದು' ತಮ್ಮ ಕರ್ತವ್ಯವೆಂದು ಬಗೆದಿರುವ ಲೇಖಕರು ಇಲ್ಲಿ ಸ್ತುತ್ಯ ಕರ್ತವ್ಯವೊಂದನ್ನು ಶ್ರದ್ಧೆಯಿಂದ ಮಾಡಿ, ಬಹುಪಾಲು ಕೃತಕೃತ್ಯರೂ ಆಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಈಗಾಗಲೇ ಅನೇಕ ಗಾದೆಗಳನ್ನು ಕುರಿತ ಸಂಗ್ರಹಗಳು (ಅಕ್ರೂರರ ಗಾದೆಗಳು, ಜಂಗಮ ಕೋಟೆ ಕೃಷ್ಣಶಾಸ್ತ್ರಿ ಅವರ ಗಾದೆಗಳ ಭಂಡಾರ, ಅಚ್ಚಪ್ಪನವರ ಕನ್ನಡ ಗಾದೆಗಳು ಮತ್ತು ಇತ್ತೀಚೆಗೆ ಸಮಾಜ ಪುಸ್ತಕಾಲಯದವರು ಪ್ರಕಟಿಸಿರುವ ಕನ್ನಡ ಗಾದೆಗಳ ಕೋಶ) ಬಂದಿದ್ದರೂ ಎಲ್ಲ ಕಾಲಕ್ಕೂ ಸತ್ಯದರ್ಶನ ಮಾಡುವ, ನೊಂದಮನಕ್ಕೆ ಭರವಸೆಯ ಮಾತನಾಡುವ ಅಮೃತ ವಚನಗಳು ಕೇವಲ ವೃತ್ತಪತ್ರಿಕೆಗಳಲ್ಲಿ ಮಾತ್ರ ಕಾಣಬರುತ್ತಿದ್ದವು. ಅಲ್ಲದೆ ವಚನ, ಶತಕ, ಶ್ಲೋಕ, ಸುಭಾಷಿತ ಗ್ರಂಥಗಳಲ್ಲಿ ಮಿಂಚಿನ ಬಳ್ಳಿಯಂತೆ ಕಾಣಿಸಿಕೊಂಡು ಕಣ್ಮರೆಯಾಗುತ್ತಿದ್ದವು. ಅವುಗಳನ್ನು ಗ್ರಂಥಸ್ಥಗೊಳಿಸಿ, ಓದುಗರಿಗೆ ದೊರಕುವಂತೆ ಮಾಡಿರುವ ಸಂಪಾದಕರಿಗೂ, ಪ್ರಕಾಶಕರಿಗೂ ಕನ್ನಡನಾಡಿನ ಸಾರಸ್ವತಲೋಕ ಋಣಿಯಾಗಿದೆ. ಇಲ್ಲಿ ಲೇಖಕರು ಭಾರತೀಯ ಹಾಗೂ ಕನ್ನಡ ಲೇಖಕರ ಶ್ರೇಷ್ಠ ವಾಕ್ಯಗಳನ್ನು ಸಂಗ್ರಹಿಸುವುದರ ಜತೆಗೆ ಅಮೇರಿಕಾ, ಆಸ್ಟ್ರಿಯಾ, ಇಟಲಿ, ಇರಾಣ, ಐರ್ಲೆಂಡ್, ಗ್ರೀಸ್, ಕೆನಡಾ, ಚೀನಾ, ಜರ್ಮನಿ, ಡೆನ್ಮಾರ್ಕ್, ಪೋರ್ಚುಗಲ್, ಫ್ರಾನ್ಸ್, ಫಿನ್‌ಲೆಂಡ್, ಬ್ರಿಟನ್, ಬೆಲ್ಜಿಯಂ, ರಷ್ಯಾ, ಸಿರಿಯಾ, ಸ್ವಿಟ್ಜರ್‌ಲೆಂಡ್, ಸ್ಪೈನ್, ಹಾಲೆಂಡ್, ಹಂಗೇರಿ—ಹೀಗೆ ಇಪ್ಪತ್ತೆರಡಕ್ಕೂ ಹೆಚ್ಚಿನ ದೇಶವಿದೇಶಗಳ ಸುಮಾರು ಮುನ್ನೂರೈವತ್ತು ಲೇಖಕರ, ಕವಿ ದಾರ್ಶನಿಕರ ನಾನೂರಕ್ಕೂ ಹೆಚ್ಚಿನ ವಿಷಯಗಳನ್ನು ಕುರಿತು ಸೂಕ್ತಿ ಸುಧೆಯನ್ನು ಒದಗಿಸಿದ್ದಾರೆ.

ಅವರ ಅನುವಾದ ಸರಳವಾಗಿದೆ, ನುಡಿಬಂಧ ಇಂಪಾಗಿ, ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು, ಸತ್ವಯುತವಾಗಿ ಬಂದಿದೆ. (ಉದಾ: ಬೇರಿನ ಮುಂದೆ ಎಲೆಗಳಿಗೇನು ಮಹತ್ವ—ಶ್ರೀ ಅರವಿಂದ ; ಒಬ್ಬ ಆದರ್ಶ ಮಾತೆ ನೂರು ಗುರುಗಳಿಗಿಂತ ಶ್ರೇಷ್ಠಳು-ಬೈಬಲ್ ; ಚಿನ್ನ ಮಾತಾಡಿದಾಗ ನಾಲಗೆಗೆ ದನಿಯಿಲ್ಲ....ಗಾಜೋ ಇತ್ಯಾದಿ) ಇದೊಂದು ಎಲ್ಲ ಕನ್ನಡಿಗರಿಂದ ಸಂಗ್ರಾಹ್ಯವಾದ ಕೃತಿ.

* * *

ದಕ್ಷಿಣ ಕನ್ನಡದ ಬರಹಗಾರರು : ಸಂಪಾದಕರು : ಸೂರ್ಯನಾರಾಯಣ ಚಡಗ, ಪ್ರಕಾಶಕರು : ಗೀತಾ ಪಬ್ಲಿಕೇಷನ್ಸ್, ಸೌರಾಷ್ಟ್ರಪೇಟೆ, ಬೆಂಗಳೂರು-೨ ; ಪುಟಗಳು : ೨೦೩ ; ಬೆಲೆ : ರೂ. ೩-೦೦

ಇತ್ತೀಚೆಗೆ ಕನ್ನಡ ಬರಹಗಾರರನ್ನು ಕುರಿತು ಪರಿಚಯ ಮಾಡಿಕೊಡುವ ಶ್ಲಾಘನೀಯ ಪ್ರಯತ್ನವನ್ನು ಹಲವು ಲೇಖಕರು ಕೈಗೊಂಡಿರುವುದು ಭಾಷಾ ಬೆಳವಣಿಗೆಯ ದ್ಯೋತಕವಾಗಿದೆ. ಇದುವರೆಗೆ ಈ ದಿಸೆಯಲ್ಲಿ ವೆಂಕಟೇಶ ಸಾಂಗ್ಲಿ ಅವರ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ (ಇದರ ದ್ವಿತೀಯ ಭಾಗ ಇನ್ನೂ ಪ್ರಕಟವಾಗಬೇಕಾಗಿದೆ) ಏಕಮೇವಕೃತಿಯಾಗಿತ್ತು. ಮೌಲ್ಯದಲ್ಲಿ, ವಿವರಗಳಲ್ಲಿ, ಶಾಸ್ತ್ರೀಯದೃಷ್ಟಿ ಹಾಗೂ ವರ್ಗೀಕರಣಗಳಲ್ಲಿ ಇದನ್ನು ಸರಿಗಟ್ಟುವ ಕೃತಿಗಳು ಕನ್ನಡದಲ್ಲಿ ಇನ್ನೂ ಪ್ರಕಟವಾಗಬೇಕಾದರೂ, ದಕ್ಷಿಣ ಭಾಷಾ ಸಂಸ್ಥೆಯವರು ಪ್ರಕಟಿಸಿರುವ

ಇಂದಿನ ಕನ್ನಡ ಬರಹಗಾರರು, ಸಾಹಿತ್ಯ ಅಕಾಡಮಿಯವರು ಪ್ರಕಟಿಸಿರುವ who is who of Indian Literature ಮತ್ತು Bibiliography of Indian writers Part I ಗ್ರಂಥಗಳೂ, ಹಾಸನ, ತುಮುಕೂರು ಜಿಲ್ಲೆಯ ಬರಹಗಾರರ ಕೋಶಗಳೂ, ಈ ದಿಕ್ಕಿನಲ್ಲಿ ಉತ್ತಮ ಕೆಲಸವನ್ನು ಮಾಡಿವೆ. ಕೋಲಾರ ಜಿಲ್ಲೆಯ ಬರಹಗಾರರನ್ನು ಕುರಿತು ಇಂಥದೊಂದು ಸಂಕಲನ ಗ್ರಂಥ ಪ್ರಕಟವಾಗಲಿದೆ. ಈಗ ನಮ್ಮ ಪರಿಶೀಲನೆಗೆ ಇರುವ ಗ್ರಂಥದಲ್ಲಿ ಸಂಪಾದಕರಾದ ಸೂರ್ಯನಾರಾಯಣ ಚಡಗರು ಬಹಳ ಶ್ರಮವಹಿಸಿ ದಕ್ಷಿಣ ಕನ್ನಡದ ಬರಹಗಾರರನ್ನು ಕುರಿತು ಸಂಕ್ಷಿಪ್ತ ಪರಿಚಯಮಾಡಿಕೊಟ್ಟಿದ್ದಾರೆ. ಈ ಗ್ರಂಥದಲ್ಲಿ ಸುಮಾರು ಐದುನೂರು ಮಂದಿ ಲೇಖಕರು–ಇಂದಿನವರು, ಹಿಂದಿನವರು–ಉಲ್ಲೇಖನಗೊಂಡಿದ್ದಾರೆ. ಇಂಥ ಪ್ರಯತ್ನಕ್ಕೆ ಮಾಹಿತಿ ದೊರಕಿಸಿಕೊಳ್ಳುವುದು ಬಹಳ ಕಷ್ಟ. ಸ್ವಯಂ ಲೇಖಕರು ತಮ್ಮ ಬಗೆಗೆ ವಿವರಗಳನ್ನು ಕಳುಹಿಸಿಕೊಡಲು ಸಂಕೋಚಪಡುತ್ತಾರೆನ್ನುವುದಕ್ಕಿಂತ ಉದಾಸೀನ ಪ್ರವೃತ್ತಿಯುಳ್ಳವರಾಗಿದ್ದಾರೆ. ಇಷ್ಟೆಲ್ಲ ಅಡ್ಡಿ ತಡೆಗಳು ಇದ್ದರೂ ಚಡಗರು ಈ ಕೃತಿಯನ್ನು ತುಂಬಾ ಶ್ರದ್ಧೆಯಿಂದ ಸಿದ್ಧಪಡಿಸಿದ್ದಾರೆ. ಇದೊಂದು ಅಪೂರ್ವ ಸಾಧನೆಯೇ ಸರಿ. ಆದರೂ ಈ ಗ್ರಂಥದಲ್ಲಿ ಒಂದೆರಡು ನ್ಯೂನತೆಗಳು ತಲೆಹಾಕಿದೆ. ಕಾರಂತ, ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯರಂತಹ ವ್ಯಕ್ತಿಗಳ ಪರಿಚಯಕ್ಕೆ ಮೀಸಲಾದ ಸ್ಥಳವನ್ನು, ಇತರ ಸಾಮಾನ್ಯ ಲೇಖಕರು, ಒಂದು ಅರ್ಧ ಕೃತಿಗಳನ್ನು ಬರೆದ ಲೇಖಕರಿಗೂ ಮೀಸಲಿಟ್ಟಿದ್ದಾರೆ. ಅಲ್ಲದೆ ವರ್ಗೀಕರಣದಲ್ಲಿ ಶಾಸ್ತ್ರೀಯ ದೃಷ್ಟಿಯ ಅಭಾವವಿದೆ. ಉದಾ: ಶಿವರಾಮ ಕಾರಂತರು ಕಕಾರದಡಿಯಲ್ಲಿ ಬರಬೇಕಿತ್ತು. ತಡವಾಗಿ ಮಾಹಿತಿಕೊಟ್ಟ ಲೇಖಕರನ್ನು ಪರಿಶಿಷ್ಟದಲ್ಲಿ ಸೇರಿಸುವ ಬದಲು, ಗ್ರಂಥದ ಒಡಲಿನಲ್ಲಿ ಎಲ್ಲೆಂದರಲ್ಲಿ ಸೇರಿಸಲಾಗಿದೆ. ಇದಕ್ಕಿಂತ ಎದ್ದುಕಾಣುವ ಕೊರತೆ ಎಂದರೆ ಪಡಕೋಣೆ ರಮಾನಂದ, ಪಿ. ವೆಂಕಟರಮಣಾಚಾರ್ಯ (ಕಸ್ತೂರಿ ಸಂಪಾದಕರು) ತತ್ವಶಾಸ್ತ್ರಜ್ಞರೂ, ರವೀಂದ್ರರ ಮೂರು ರೂಪಕಗಳು ಲೇಖಕರಾದ ಚಿತ್ರಕಾರ ಡಾ. ಬಿ. ರಾಮಕೃಷ್ಣರಾಯರ ಉಲ್ಲೇಖ ಬಿಟ್ಟುಹೋಗಿವೆ. ಒಂದೆರಡು ಕೃತಿಗಳನ್ನು ಬರೆದ ಸುನೀತಿ ಉದ್ಯಾವರಳಂತಹ ಲೇಖಕಿಯ ಪ್ರಸ್ತಾಪ ಬಂದಿಲ್ಲ; ದಾಮೋದರ ಬಾಳಿಗರು ಗೋವಿಂದ ಪೈಅವರ ಗೊಲ್ಗಥಾ ಕೃತಿಯನ್ನು ಇಂಗ್ಲಿಷಿಗೆ ಅನುವಾದಿಸಿರುವ ಸಂಗತಿಯಾಗಲೀ, ಕಾರಂತರ ಚೋಮನದುಡಿ, ಮರಳಿ ಮಣ್ಣಿಗೆ ಕೃತಿಗಳು ಅನ್ಯಭಾಷೆ (ಹಿಂದಿ, ಇಂಗ್ಲಿಷ್‌ಗಳಿಗೆ) ಅನುವಾದಿತವಾಗಿರುವ ಸಂಗತಿಗಳಾಗಲೀ ಇಲ್ಲಿ ದೊರಕುವುದಿಲ್ಲ. ಮುಂದಿನ ಸಂಸ್ಕರಣದಲ್ಲಿ ಸರಿಪಡಿಸಬಹುದಾದ ಈ ಸಣ್ಣ ಪುಟ್ಟ ದೋಷಗಳನ್ನು ಬಿಟ್ಟರೆ, ಚಡಗರು ದಕ್ಷಿಣ ಕನ್ನಡ ಜಿಲ್ಲೆಯ ಬರಹಗಾರರನ್ನು ಪರಿಚಯಮಾಡಿಕೊಡುವುದರಲ್ಲಿ ಮಹತ್ವದ ಕಾರ್ಯ ಸಾಧಿಸಿದ್ದಾರೆ. ಈ ಕೃತಿಯ ಬೆಲೆಯನ್ನು ಪಿ. ಕೆ. ನಾರಾಯಣರ ದಕ್ಷಿಣ ಕನ್ನಡದಲ್ಲಿ ಕನ್ನಡದ ಬೆಳವಣಿಗೆ ಬಿ. ಕೇಶವ ಭಟ್ಟರ ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು, ಎನ್. ನಾರಾಯಣ ಬಲ್ಲಾಳರ ಮನಮೋಹಕ ಜಿಲ್ಲೆ ದಕ್ಷಿಣ ಕನ್ನಡ, ಭಂಡಾರ್‌ಕರರ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮ ಲೇಖನಗಳೂ ಅಮೂಲ್ಯಗೊಳಿಸಿವೆ. ಈ ಗ್ರಂಥವು ಕನ್ನಡ ಭಾಷಾಭಿಮಾನಿಗಳೆಲ್ಲರೂ ಸಂಗ್ರಹಿಸಿಟ್ಟುಕೊಳ್ಳಬೇಕಾದ ಕೃತಿ.

* * *

ಗಾಂಧೀಜಿ ತತ್ವಜ್ಞಾನ ರಹಸ್ಯ : ಲೇಖಕರು ಮತ್ತು ಪ್ರಕಾಶಕರು : ಕೃ. ಪ. ಜೋಶಿ ; ಪುಟಗಳು : ೬೦ ; ಬೆಲೆ : ರೂ ೧–೦೦.

ಈ ಹೊತ್ತಗೆಯು ಮಹಾತ್ಮ ಗಾಂಧೀಜಿಯವರ ಬರಲಿರುವ ಶತಸಾಂವತ್ಸರಿಕ ಉತ್ಸವಕ್ಕಾಗಿ (೧೯೬೮) ಅರ್ಪಿಸಲಾಗಿರುವ ಕಾಣಿಕೆ. ಇಂದು ಗಾಂಧೀಜಿಯವರು ರಾಷ್ಟ್ರಪಿತರೆನಿಸಿಕೊಂಡಿದ್ದರೂ, ನಮ್ಮ ತರುಣ ಪೀಳಿಗೆಗೆ ಅವರ ಜೀವನ ಸಾಧನೆಗಳಾಗಲೀ, ತತ್ವಜ್ಞಾನವಾಗಲೀ ಅಷ್ಟಾಗಿ ಪರಿಚಯವಾದಂತಿಲ್ಲ. ಜಗತ್ತಿನ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರೆಂದು ಪರಿಗಣಿತರಾದ ಈ ವಿಭೂತಿ ಪುರುಷನ ಬಗ್ಗೆ ಈ ಬಗೆಯ ಹಿರಿಯ ಕಿರಿಯ ಹೊತ್ತಗೆಗಳು ಈ ಶತಮಾನೋತ್ಸವದ ಸಂದರ್ಭದಲ್ಲಾದರೂ ಪ್ರಕಟವಾಗಿ, ಜನತೆಯ ಅಜ್ಞಾನವನ್ನು ಕಳೆಯಬೇಕು. ಗಾಂಧೀಜಿಯವರ ಭೂಮ ವ್ಯಕ್ತಿತ್ವದ ಗುಟ್ಟೇನು? ಅವರ ತತ್ವಜ್ಞಾನದ ತಿರುಳೇನು? ಜಗತ್ತಿಗೆ ಅವರು ನೀಡುವ ಅಮರ ಸಂದೇಶವೇನು? ಈ ವಿಚಾರಗಳನ್ನು ಈ ಪುಟ್ಟಗ್ರಂಥದಲ್ಲಿ ಸ್ಥೂಲವಾಗಿ ವಿವೇಚಿಸಿರುವರು. ಈ ಮಹಾತ್ಮನ ನೆನಪಿಗಾಗಿ ನಾವು ಕೈಗೊಳ್ಳಬೇಕಾಗಿರುವ ಸ್ಮಾರಕ, ಜನ್ಮಶತಾಬ್ಧಿ ಸಂದರ್ಭದಲ್ಲಿ ನಡೆಯಬೇಕಾಗಿರುವ ಕಾರ್ಯ ವಿಧಾನಗಳ ಬಗೆಗೆ ಲೇಖಕರು ಉಪಯುಕ್ತ ಸೂಚನೆಗಳನ್ನು ನೀಡಿದ್ದಾರೆ.

* * *

ಪುಣ್ಯಭೂಮಿ: ಲೇಖಕರು: ವಿನಾಯಕ, ಪ್ರಕಾಶಕರು: ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೫; ಪುಟಗಳು: ೫೮; ಬೆಲೆ: ರೂ. ೨-೦೦.

ಹೊಸ ಕನ್ನಡ ನವ್ಯಕಾವ್ಯಕ್ಕೆ ಆದಿಪುರುಷರೆನಿಸಿದ ವಿ.ಕೃ. ಗೋಕಾಕ್ ಅವರು ಪ್ರಸಿದ್ಧಿಸಿರುವ ಕವನಸಂಕಲನಗಳಲ್ಲಿ ಇದು ಹದಿನಾರನೆಯದು. ಈ ಸಂಕಲನವನ್ನು ಪುಣ್ಯಭೂಮಿಯ ಎಂಟು ದಿಕ್ಕುಗಳಿಂದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್‌ಗೆ ಬಂದು ಅಪಾರ ಸ್ನೇಹದ ದಾರಿಬುತ್ತಿಯನ್ನುಣಿಸಿದ ಸಾವಿರಾರು ನೇಹಿಗರಿಗೆ ಅರ್ಪಿಸಿದ್ದಾರೆ. ಇದರಲ್ಲಿ ಒಂದು ಔಚಿತ್ಯವೂ ಇದೆ. ಈ ಕವನಸಂಗ್ರಹದಲ್ಲಿ ಕವಿಯು ಬೇರೆ ಬೇರೆ ಕಾಲಾವಧಿಯಲ್ಲಿ ಬರೆದ ಕವನಗಳಿದ್ದರೂ (ಅಯೋಧ್ಯಾ ಕವನ-೧೯೫೭) ಇಲ್ಲಿ ಪ್ರಥಮ ಬಾರಿಗೆ 'ನಮ್ಮ ನಾಡಿನ ಚೆಲುವನ್ನೂ ಶಿಲ್ಪವನ್ನೂ ಪವಿತ್ರತೆಯನ್ನೂ, ಇತಿಹಾಸ ಸಂಸ್ಕೃತಿಗಳನ್ನೂ ನೆನೆದು ರಚಿಸಿದ ಕವನ'ಗಳನ್ನು ಒಂದೆಡೆಗೆ ಕೊಟ್ಟಿದ್ದಾರೆ. ಕವಿಯು ದಳ್ಳುರಿ ಬಟ್ಟೆಯ, ಹಾವಿನ ಹಾರದ ಜೇಳಿನ ಕಿರೀಟದ ಕಾಲ ಭೈರವಿಯನ್ನು ರುದ್ರಗಂಭೀರವಾಗಿ ಚಿತ್ರಿಸಿದ್ದಾರೆ- ಮಾಸತಿಯಲ್ಲಿ. ಕನ್ನಡ ನಾಡಿನ ಶಿಲ್ಪಕಲೆಯನ್ನೂ ಕ್ಷಾತ್ರತೇಜವನ್ನೂ, ಧರ್ಮ ಸಮನ್ವಯವನ್ನೂ ಚಿತ್ರಿಸುವ ಅನೇಕ ಕವನಗಳಿವೆ. ಹಂಪೆಯ ಭಗ್ನಾವಶೇಷಗಳನ್ನೂ ಕಂಡಾಗ 'ಹತ್ತು ತಲೆಮಾರುಗಳು ಸುತ್ತಿವೆ. ಕಾದ ಕಂಬನಿ ಸುರಿಸುತ' ಎಂದು ಉದ್ಗಾರ ತೆಗೆದಿದ್ದಾರೆ. ಅಂತೆಯೇ, ಪುಲಿಗೆರೆಯನ್ನು 'ಪಂಪಕೃತಿಯುಗಮಿಸಿದ ಪುಣ್ಯಕ್ಷೇತ್ರವಿದು' ಎಂದಿದ್ದಾರೆ. ಘಟಪ್ರಭ ಅವರ ಪಾಲಿಗೆ 'ಪಂಚೇಂದ್ರಿಯಂಗಳಿಗೆ ಪಂಚಾಮೃತವು'. ಕೃಷ್ಣೆ 'ಬಾಳುವ ಮನುಜರ ನೋಡಲು ತಡೆದು ಹರಿಯುವಳು.' ಅಜಂತೆಯಗವಿಗಳು ಕವಿಯನ್ನು 'ನಿಸರ್ಗದೇವಿ ಕೈಮಾಡಿ ಕರೆವಳು.' ಅಲ್ಲಿ 'ಕನಸೇ ಐರಾವತವಾಣಿ ಬದ್ಧನಾಗ ಮನವನ್ನು ಸಾಧಿದೆ.' ಎಲ್ಲೋರಗವಿಗಳು 'ಕಲ್ಲೇ ಕೈಲಾಸವಾಯಿತು'. ಆಗ್ರದಲ್ಲಿ 'ಭೋಗಲಕ್ಷ್ಮಿ' ಕುಣಿದುದನ್ನು ಕಂಡಿದ್ದಾರೆ. ಮಮತಾಜಳನ್ನು ಹುಗಿದ ತಾಣವನ್ನೂ ಕಂಡಿದ್ದಾರೆ. ಕುತುಬ್‌ಮಿನಾರ್ 'ಉರಿಯುವ ಊದಿನಕಡ್ಡಿಯಿದು' ಅಯೋಧ್ಯೆ 'ಪುಣ್ಯನಗರಿ'. ಚಂಡಿಗರ 'ಅನ್ಯಶಿಲ್ಪಿಯ ಕನಸಿನಾಕೃತಿ'. ತಿರುಪತಿ ಎಂದರೆ ಕವಿಯ ಪಾಲಿಗೆ 'ವೆಂಕಟರಮಣಾ ಗೋವಿಂದಾ ಗೋವಿಂದಾ'. ಮೀನಾಕ್ಷಿ ದೇವಾಲಯ "ಭವ್ಯ, ಅದ್ಭುತ ರಮ್ಯ!" ಅನಂತಪದ್ಮನಾಭಸ್ವಾಮಿ ಮೂರು ಕಿಂಡಿಯಲ್ಲಿ ನರನು ಸೆರೆಯಿಟ್ಟದೈವ, ಕನ್ಯಾಕುಮಾರಿ ತಪಿಸುತ ಕುಳಿತ ಆದಿಪರ್ವತಕನ್ಯೆ. ಹೀಗೆ ಇಲ್ಲಿನ ಕವನಗಳು ಕವಿಯು ತಾವು ನೋಡಿದ ಪ್ರಾಚೀನ, ಅರ್ವಾಚೀನ ಭಾರತದ ನದಿ, ನದ, ಗಿರಿ, ಗುಹ್ವರ, ಪುಣ್ಯಕ್ಷೇತ್ರ, ಇತಿಹಾಸದ ಭಗ್ನಾವಶೇಷಗಳನ್ನು ಕುರಿತು ಕಾವ್ಯಮಯ ಶೈಲಿಯಲ್ಲಿ ಬರೆದಿರುವ ದಿನಚರಿಯ ಪುಟಗಳಾಗಿವೆ. ಇಲ್ಲಿನ ಕವನಗಳಲ್ಲಿ ವಿಚಾರವಿದೆ, ಕಲ್ಪನೆಯ ಕುಸುರಿನ ಚಿತ್ರವಿದೆ; ತ್ಯಾಗಭೋಗಗಳ ಸಮನ್ವಯದ ಸಹಜ ಚಿತ್ರಣವಿದೆ; ಕವಿ ದಾರ್ಶನಿಕನಾಗಿ ಇತಿಹಾಸದ ಅಸ್ತಿವಾರದ ಮೇಲೆ ನಿಂತು ಭವಿಷ್ಯದ ಗಗನ ಮಂದಿರದ ನಕಾಸೆಯನ್ನು ಬಿಡಿಸಿದ್ದಾರೆ. 'ಪುಣ್ಯಭೂಮಿ' ಯಾತ್ರಿಕರ ಕೈಪಿಡಿಯಾಗಿರುವಂತೆ, ಕಾವ್ಯಸೌಂದರ್ಯದ ರಸಗ್ರಾಹಿಗಳಾದ ಸಹೃದಯರಿಗೆ ಆನಂದದ ಚಿಲುಮೆಯೂ ಆಗಿದೆ.

ಕೊ. ಶ್ರೀ

ಅರ್ಧಾಂಗಿ: (ನಾಟಕ): ವಿ. ನಾರಾಯಣಸ್ವಾಮಿ, ಪುಟ ೫೬, ಬೆಲೆ ರೂ. ೧-೦೦.

ಈ ನಾಟಕದಲ್ಲಿ ಆರು ದೃಶ್ಯಗಳಿವೆ.

ಮೋಹನರಾವ್ ಮನೆಯ ಯಜಮಾನ. ನಾಟಕದ ಹುಚ್ಚು ಹಿಡಿದು ಅಲೆಯುವ ಮಗ ಸುರೇಶ, ವೈದ್ಯಕೀಯ ಶಿಕ್ಷಣಕ್ಕೆಂದು ಮೈಸೂರಿಗೆ ತೆರಳಿ ಸ್ವತಂತ್ರ ಬಾಳನ್ನು ರೂಪಿಸಿಕೊಳ್ಳುವ ಮಗಳು ವಾಸಂತಿ, ಮತ್ತೊಬ್ಬ ಮಗ ಕ್ರಿಕೆಟ್ ಪ್ರೇಮಿ ರಘು, ರಾಯರ ಎರಡನೆಯ ಸಂಸಾರ ಕ್ಲಬ್ಬು-ಪಾರ್ಟಿ ಇತ್ಯಾದಿಗಳಲ್ಲಿ ಮುಳುಗಿರುವ ರೂಪಾದೇವಿ, ಪ್ರೇಕ್ಷಕರನ್ನು ನಗಿಸಲೆಂದು ಮತ್ತೊಂದು ಪಾತ್ರ ಅಡಿಗೆ ಆಚಾರ್—ಕೊನೆಗೆ ಸುಖಾಂತ್ಯದಲ್ಲಿ ಎಲ್ಲವೂ ಮುಕ್ತಾಯ.

ನಮ್ಮಲ್ಲಿ ಇತರ ಪ್ರಕಾರಗಳಂತೆಯೆ ನಾಟಕ ಸಾಹಿತ್ಯವೂ ವಿಪುಲವಾಗಿ ಬೆಳೆಯುತ್ತಿದೆ. ನಾಟಕಕಾರರೂ ಸಂಖ್ಯೆಯಲ್ಲಿ ಹೆಚ್ಚುತ್ತಿದ್ದಾರೆ. ಸಂತೋಷಪಡಬೇಕಾದ ವಿಚಾರ. ಆದರೆ ಒಂದೇ ಬಗೆಯ ವಸ್ತು, ಕೃತಕ ಜೋಡಣೆ, ಪ್ರೇಕ್ಷಕರನ್ನು ಬಲವಂತವಾಗಿ ನಗಿಸಲು ಒಂದೆರಡು ಪಾತ್ರಗಳು—ಇವುಗಳಿಂದ ಕಲೆಯನ್ನು ಉದ್ಧಾರ ಮಾಡುವುದು ಬರೇ ಸಾಹಸವಾದೀತು. ವಸ್ತುವಿನಲ್ಲಿ ವೈವಿಧ್ಯತೆ ಇಲ್ಲದಿದ್ದ ಮೇಲೆ ಪ್ರಗತಿ ಹೇಗೆ ಸಾಧ್ಯ?

ಅರ್ಧಾಂಗಿ ಈ ಅಪವಾದಕ್ಕೆ ಹೊರತಾಗಿಯೇನೂ ಇಲ್ಲ. ಇದೂ ಒಂದು ಸಾಮಾನ್ಯ ದರ್ಜೆಯ ನಾಟಕ, ಅಷ್ಟೆ.

* * *

ವಿಜಯ ದುಂದುಭಿ : (ಚಾರಿತ್ರಿಕ ನಾಟಕ) ನಾಟಕ ಕಾರರು : ಕುಂದಾನಿ ಸತ್ಯನ್ ; ಪ್ರ: ಶ್ರೀ ಸುರಭಿ ಪ್ರಕಾಶನ, ಕೃಷ್ಣ ಬಿಲ್ಡಿಂಗ್ಸ್, ತ್ಯಾಗರಾಜರಸ್ತೆ, ಮೈಸೂರು-೪. ಪುಟ ೧೦೦, ಬೆಲೆ ರೂ. ೨-೦೦.

ಎಚ್ಚಮ್ಮನ ಕಥೆ ಈ ನಾಟಕದ ವಸ್ತು. ವಿಜಯನಗರ ಸಾಮ್ರಾಜ್ಯ ಪತನವಾದ ಮೇಲೆ ನಡೆದ ಕಾಲ. ಈಗಾಗಲೆ, ನಾಟಕ ರಂಗದ ಮೇಲೆ ಹಲವಾರು ನಾಟಕ ಕಾರರು ಈ ವಸ್ತುವನ್ನು ಆಯ್ದುಕೊಂಡು ಕೃತಿರಚನೆ ಮಾಡಿದ್ದಾರೆ; ಯಶಸ್ವಿಯಾಗಿದ್ದಾರೆ.

ಕುಂದಾನಿ ಸತ್ಯನ್‌ರವರೂ ಇದೇ ದಿಕ್ಕಿನಲ್ಲಿಯೇ ಸಾಗಿದ್ದಾರೆ. ಒಬ್ಬರು ಬರೆದುದನ್ನು, ಅದೂ ಚಾರಿತ್ರಿಕವೆಂದ ಮೇಲೆ, ಮತ್ತೊಬ್ಬರು ಬರೆಯಬಾರದು ಎಂದೇನೂ ಇಲ್ಲವಲ್ಲ.

ಆದರೆ ಸತ್ಯನ್‌ರವರದು ಪಳಗಿದ ಕೈ. ಅವರು ನಾಟಕ ಬರೆಯುವುದು ಒಂದೇ ಆಗಿರದೆ ಚಿತ್ರರಂಗದಲ್ಲಿಯೂ ಹಲವಾರು ವರ್ಷಗಳಿಂದ ದುಡಿಯುತ್ತ ಇದ್ದಾರೆ. ಆದುದರಿಂದ ನಾಟಕದ ತಂತ್ರ, ಸಂಭಾಷಣೆಯ ಬೆಡಗು, ಪಾತ್ರಗಳ ಜೋಡಣೆ ಇತ್ಯಾದಿಗಳಲ್ಲಿ ಅವರು ಸಾಕಷ್ಟು ಅಭಿರುಚಿಯನ್ನೂ ಅನುಭವವನ್ನೂ ಬೆಳೆಸಿಕೊಂಡಿದ್ದಾರೆ.

ಹೀಗಾಗಿ 'ವಿಜಯ ದುಂದುಭಿ' ಯಶಸ್ವಿಯಾಗಿ ರಂಗದ ಮೇಲೆ ಅಭಿನಯಿಸಲು ತಕ್ಕ ಅರ್ಹತೆಯನ್ನು ಪಡೆದು ಕೊಂಡಿದೆ.

ಒಂದು ಮಾತು. ಈ ಪುಸ್ತಕದಲ್ಲಿ ಪುಟ ಪುಟಕ್ಕೂ ಸಾಲುಸಾಲಿಗೂ ವ್ಯಾಕರಣ ದೋಷಗಳು. ರೋಧಿಸು, ಹರೆಸಿ, ನಾಲಿಗೆ, ಆಂಧೋಲನ, ಅಸಹಾಕಾರ, ಸ್ಫೂರ್ತಿ, ಪ್ರಶಂಶಿಸು—ಹೀಗೆ, ಇನ್ನೂ ಇತ್ಯಾದಿ. ಇದನ್ನು ನಿವಾರಿಸಲು ಲೇಖಕರು ಸಾಕಷ್ಟು ಎಚ್ಚರವನ್ನು ತೆಗೆದುಕೊಳ್ಳಬೇಕಾಗಿತ್ತು.

*   *   *

ಭಾವ ಭಂಗ : (ಕಥಾ ಸಂಕಲನ) ಲೇ : ಪ್ರಿಯತಮಾ ಪ್ರ : ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದ.ಕ.) ಪುಟ ೧೧೦, ಬೆಲೆ ರೂ. ೧-೫೦.

'ಭಾವ-ಭಂಗ' ಎಂಟು ಕತೆಗಳ ಒಂದು ಸಂಕಲನ. 'ಪ್ರಿಯತಮಾ' ಬಹುಮುಖ ಪ್ರತಿಭೆಯುಳ್ಳ ಕತೆಗಾರರು, ಕಥಾಲೋಕದಲ್ಲಿ ಮುಂದೆ ಅವರಿಗೆ ಒಳ್ಳೆಯ ಸ್ಥಾನವಿದೆ ಎನ್ನುವುದಕ್ಕೆ ಇಲ್ಲಿನ ಕೆಲವು ಕಥೆಗಳೇ ಸಾಕ್ಷಿ.

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಮುಖಗಳ ಚಿತ್ರಣವನ್ನು ಪ್ರಿಯತಮಾ ಹೃದಯಂಗಮವಾಗಿ ಇಲ್ಲಿ ಚಿತ್ರಿಸಿದ್ದಾರೆ. 'ಅ. ನಾ. ಗದ್ದೆಯ ಕೋಳಿ ಅಂಕ', 'ಗುಂಡೂ ಮಾಮಾ' ಈ ಕತೆಗಳಲ್ಲಿ ಜಿಲ್ಲೆಯ ಸುಂದರ ಚಿತ್ರಣವಿದ್ದರೆ, 'ಹೃದಯ ಒಂದು-ಮುಖಗಳೆರಡು', 'ಭಾವ-ಭಂಗ' ಈ ಕತೆಗಳಲ್ಲಿ ಬದುಕಿನ ಬಹು ಮುಖಗಳನ್ನು ಕಾಣಬಹುದಾಗಿದೆ.

ಈ ಸಂಕಲನದಲ್ಲಿನ ಉತ್ಕೃಷ್ಟ ಕತೆಗಳೆಂದರೆ 'ಮಲ್ಲಿಗೆ' ಮತ್ತು 'ಮಗು ಅಳುತ್ತಿತ್ತು.'

ಹೀನ ಜಾತಿಯ ಮಗುವೆಂದು ತಬ್ಬಲಿಯಾಗಿ ಎಲ್ಲರ ಅನಾದರಣೆಗೆ ಪಾತ್ರವಾಗಿರುವ ಒಂದು ಹಸುಳೆ 'ಮಗು ಅಳುತ್ತಿತ್ತು' ಕತೆಯ ವಸ್ತು. ಕತೆಗಾರರ ಅನುಕಂಪೆ ಇಲ್ಲಿ ಮೆಚ್ಚುವಂಥಹುದು. ಹಾಗೆಯೆ 'ಮಲ್ಲಿಗೆ' ಮನದಲ್ಲಿ ಅರಳಿದ, ಎಂದೂ ಅಳಿಯದ, ಭಾವಪ್ರಧಾನವಾದ ಸುಂದರ ಕಲ್ಪನೆಯ ಕತೆ.

ಚೊಕ್ಕವಾದ ಬರವಣಿಗೆಯನ್ನು ಬರೆಯಬಲ್ಲ ಪ್ರಿಯತಮಾರಿಂದ ಇದಕ್ಕೂ ಉತ್ತಮ ಕತೆಗಳನ್ನು ನಾವು ನಿರೀಕ್ಷಿಸೋಣ.

*   *   *

ಪರ್ಣಕುಟಿ : (ಕಥಾ ಸಂಕಲನ) ಲೇ : ದಯಾನಂದ ತೊರ್ಕೆ ಮತ್ತು ಮಿತ್ರರು. ಪ್ರ : ಸಾಹಿತ್ಯ ಕಲಾಕುಂಜ, ಬೆಂಗಳೂರು-೪. ಪುಟ ೯೨. ಬೆಲೆ ರೂ. ೧-೫೦.

ಬೇರೆ ಬೇರೆ ಕತೆಗಾರರ ಆರುಕತೆಗಳ ಸಂಕಲನ 'ಪರ್ಣಕುಟಿ'. ದಯಾನಂದ ತೊರ್ಕೆಯವರ 'ಮಂಗಳ ಸೂತ್ರ' ಮತ್ತು ಚಿರಂಜೀವಿ ಅವರ 'ಈ ಪರಿಯ ಸೊಬಗು' ಈ ಸಂಕಲನದಲ್ಲಿ ಉತ್ತಮ ಕಥೆಗಳು. ಶ್ರೀಮತಿ ಎಚ್. ವಿ. ಅನಂತಲಕ್ಷ್ಮಿಯವರ 'ಒಡೆದ ಕನಸು' ವಸ್ತು ಚೆನ್ನಾಗಿದ್ದರೂ ಕಥೆ ಹೇಳುವ ರೀತಿ ತಿಳಿಯದೆ ಬರಿಯ ವರದಿಯಂತಿದೆ. ಜೆ. ಸು. ನ. ಅವರ 'ಬಿಸಿಲ್ಗುದುರೆ' ತೀರಾ ಸಪ್ಪೆ. ನೊಣವಿನಕೆರೆಯವರ 'ಬಯಕೆ ಚುಂಬಿಸಿದ ಬಾಳು' ಸಾಮಾನ್ಯವಾಗಿದೆ.

ಪುಸ್ತಕದ ಮುದ್ರಣ ತೀರಾ ಹೊಲಸು. 'ಪರ್ಣಕುಟಿ' ಸಾಮಾನ್ಯ ದರ್ಜೆಯ ಒಂದು ಕಥಾ ಸಂಕಲನ, ಅಷ್ಟೆ.

ಶೇಷನಾರಾಯಣ

ಕಂಡೆ ಕಲ್ಯಾಣ : ಪುಟ. ೩೮-೪, ಬೆಲೆ. ೩೭ ಪೈಸೆ. ಲೇ- ಶ್ರೀ ಜ. ಚ. ನಿ. ಪ್ರ. ಶ್ರೀ ಶೈಲ ಜಗದ್ಗುರು ಸಿಡು ಮಾಮಿಡಿ ಪುಸ್ತಕ ಭಂಡಾರ, ೪೯, ಎಚ್. ಬಿ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪.

ಇದರ ಲೇಖಕರಾದ ಶ್ರೀ ಜ. ಚ. ನಿ. ಯವರು ಸಂಖ್ಯೆಯಲ್ಲಿ ಸುಮಾರು ಎಂಬತ್ತರಷ್ಟು ಒಳ್ಳೆಯ ಪುಸ್ತಕಗಳನ್ನು ಬರೆದು ಕನ್ನಡಿಗರಿಗೆಲ್ಲ ಅತಿಪರಿಚಿತರು. ಸ್ವಚ್ಛ-ಸರಳ-ವಾಕ್ಯಗಳಿಂದ ಕೂಡಿ, ಭಾವನಿಗೂಢವಾದ ತತ್ವದರ್ಶಕವಾದ ಶ್ರೀಯುತರ ಗದ್ಯಸರಣಿ ಚೆಲುವಿನ ಗಣಿ. ಈ ಹೇಳಿಕೆಗೆ ಈ ಚಿಕ್ಕ ಪುಸ್ತಕವೆ ಸಾಕು ಸಾಕ್ಷಿ. ಶ್ರೀಯುತರು ಈ ಪುಸ್ತಕದಲ್ಲಿ ವೀರಶೈವ ಗಂಗೋತ್ರಿಯೆನಿಸಿರುವ 'ಕಲ್ಯಾಣ'ದ ಪುಣ್ಯಸ್ಥಳ ವಿವರಣೆಯೊಡನೆ ಅಲ್ಲಿನ ಪುಣ್ಯಪುರುಷರ ಹಿರಿಮೆಗೆ ಬೆಳಕನ್ನು ನೀಡಿದ್ದಾರೆ. ಹನ್ನೆರಡನೆ ಶತಮಾನಕ್ಕೆ ಮೊದಲು 'ಮಂಗಳವಾಡ' ಎನಿಸಿದ್ದ ಸ್ಥಳ ಶ್ರೀ ಬಸವೇಶ್ವರರ ಲೀಲಾಭೂಮಿಯಾದನಂತರ "ಕಲ್ಯಾಣ" ಎಂಬ ನಾಮದಿಂದ ವಿಭ್ರಾಜಿಸಿ, ಈಗ ಅವಾವ ಮಠ-ಮಂದಿರ-ಗವಿ-ಕಟ್ಟೆ-ಕೆರೆ-ಕೋಟೆಗಳಿಂದ ಕೂಡಿದೆ? ಅವುಗಳ ಐತಿಹ್ಯವೇನು? ಎಂಬುದನ್ನು ತಮ್ಮ ಒಂದೆರಡು ದಿನಗಳ ಸಂದರ್ಶನದಿಂದ ಆದ ಅನುಭವದಿಂದ ವಿವರಿಸಿರುತ್ತಾರೆ. ಈ ಪುಸ್ತಕವು ಒಂದು ಉತ್ತಮ 'ಕ್ಷೇತ್ರ-ಕೈಪಿಡಿ' ಎನ್ನಬಹುದು.

* * *

ಶೀಲಸಂಪಾದನೆ : ಪುಟ ೧೪-೨೫೦, ಬೆಲೆ ರೂ. ೨-೫೦ ಲೇ. ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಚ. ನಿ. ಪ್ರ. ಶಿವಾದ್ವೈತ ತತ್ವಪ್ರಚಾರ ಕೇಂದ್ರ, ಶ್ರೀ ಗುರು ಕುಮಾರಾಶ್ರಮ, ಗಿರಿಯಪುರ, ಚಿಕ್ಕಮಗಳೂರು ಜಿಲ್ಲೆ.

ಮಾನವನ ಬಾಳು ಹಸನಾಗಬೇಕಾದರೆ, ಜೀವನದ ಮಟ್ಟ ಏರಬೇಕಾದರೆ ಮುಖ್ಯಸಾಧನಗಳು ಅನ್ನ-ವಸ್ತ್ರ-ಧನಕನಕ-ವಸತಿಗಳಲ್ಲ. ಇವೆಲ್ಲವೂ ಗೌಣ. ಶೀಲವೊಂದೇ ಮುಖ್ಯವಾದದು. ಶೀಲವೇ ಸಂಪತ್ತು, ಶ್ರೇಷ್ಠವಾದ ಭೂಷಣ— ಶೀಲಂ ಪರಂಭೂಷಣಂ. ಸರ್ವಸುಖ-ಸ್ವಸ್ತಿಗಳಿಗೆ ಶೀಲವೇ ಮೂಲ. ಶೀಲವೇ ಶ್ರೀಶೈಲ; ಶೀಲವಂತನೇ ಶ್ರೀಶೈಲನಾಥ-ಎಂಬೀ ವಿಚಾರಗಳನ್ನು ಲೇಖಕರು ಭಾವನಾತ್ಮಕವಾಗಿ ವಿವರಿಸಿದ್ದಾರೆ. ಶ್ರುತ್ಯುಪನಿಷತ್ತುಗಳು, ಆಗಮಗಳು, ನೀತಿ ಗ್ರಂಥಗಳು, ಶತಕಗಳು, ವಚನಸಾಹಿತ್ಯ—ಇತ್ಯಾದಿಗಳನ್ನು ಸಮುಚಿತವಾಗಿ ಉದಾಹರಿಸಿ ಶೀಲದ ಮಹಿಮೆಯನ್ನು ವಿವಿಧ ಮುಖಗಳಿಂದ ಅಭಿವರ್ಣಿಸಿದ್ದಾರೆ. ಇದರ ವಾಕ್ಯರಚನೆಗಳೇ ಶೀಲದ್ಯೋತಕವೆನಿಸುವ ಶೈಲಿಯನ್ನು ತಳೆದಿವೆ. ಬಾಳಿನ ಎಲ್ಲ ಹಂತದವರೂ ಇದನ್ನೋದಬೇಕು; ಓದುಬರದವರು ಓದಿಸಿ ಕೇಳಬೇಕು; ಮತ್ತು ಇದರಿಂದ ತಂತಮ್ಮ ನಡತೆಗಳನ್ನು ತಿದ್ದಿಕೊಳ್ಳಬೇಕು.

* * *

ಶ್ರೀ ಜಗದ್ಗುರು ಜಯದೇವ ದಿಗ್ವಿಜಯ : ಆಕೃತಿ ಡೆಮ್ಮಿ ೧/೮, ಪುಟ. ೨೬+೨೮೮+೯೨, ಬೆಲೆ. ರೂ. ೧೦-೦೦, ಲೇ. ಡಾ|| ಕಣಕುಪ್ಪಿ ಕೊಟ್ಟೂರು ಬಸವಪ್ಪ, ಬಿ.ಎ., ಬಿಎಲ್ ಪ್ರ. ಕಣಕುಪ್ಪಿ ಗುರುಪಾದಪ್ಪ, ದಾವಣಗೆರೆ.

ಚಿತ್ರದುರ್ಗದ ಲಿಂಗೈಕ್ಯ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳ ಜೀವನ ಚರಿತ್ರೆಯ ಉದ್ಗ್ರಂಥವಿದು. ವಿಶೇಷವಾದ ಅನ್ವೇಷಣೆಯಿಂದ ದೊರೆತ ಆಧಾರಗಳಿಂದ, ಮಾಡಿದ ಸಂಶೋಧನೆಯಿಂದ ಹತ್ತು ವರ್ಷಗಳ ಪ್ರಯತ್ನದಿಂದ ಬರೆದ ಚರಿತ್ರವಿದು. ಜಗದ್ಗುರುಗಳ ಬಾಲ್ಯ, ವಿದ್ಯಾವ್ಯಾಸಂಗ, ಮಠಾಧಿಪತಿತ್ವ, ಧರ್ಮೋದ್ಧಾರ ಕಾರ್ಯಗಳು, ವೀರಶೈವ ಸಮಾಜದ ಉನ್ನತಿಗೆ ಮಾಡಿದ ಸಾಧನೆಗಳು, ಮೆರೆದ ಪವಾಡಗಳು-ಇವನ್ನೆಲ್ಲ ಲೇಖಕರು ಚೆನ್ನಾಗಿ ವರ್ಣಿಸಿದ್ದಾರೆ. ಭಾರತಾದ್ಯಂತ ಪಾದಯಾತ್ರೆ ಮಾಡಿ, ಹಿಂದೂ ಧರ್ಮವನ್ನು ಉದ್ಧರಿಸಿದ ಶಂಕರಾಚಾರ್ಯರ ಮಹಾತ್ಕಾರ್ಯವನ್ನು "ಶಂಕರ ದಿಗ್ವಿಜಯ" ಎನ್ನುವಂತೆ, ದಕ್ಷಿಣ ದೇಶವನ್ನೆಲ್ಲ ಸಂಚರಿಸಿ, ವಿದ್ಯೆಗೆ-ಧರ್ಮಪ್ರಸಾರಕ್ಕೆ, ಜ್ಞಾನ ಬೋಧೆಗೆ, ಅಸಮತೆಯ ನಿವಾರಣೆಗೆ, ವೀರಶೈವ ತತ್ವ ಪ್ರಾಬಲ್ಯಕ್ಕೆ ಕಾರಣರಾದ ಜಯದೇವ ಸ್ವಾಮಿಗಳ ಯಶಸ್ವೀ ಕಾರ್ಯಗಳನ್ನು ಲೇಖಕರು "ಜಯದೇವ ದಿಗ್ವಿಜಯ" ಎಂದುದು ಯೋಗ್ಯವೆನಿಸಿದೆ. ಇದು ಕೇವಲ ಚರಿತ್ರ ಗ್ರಂಥವೂ ಅಲ್ಲ; ಸಂಶೋಧಕ ಗ್ರಂಥ. ಸಾಹಿತ್ಯ ಪರಿಚಯಾತ್ಮಕವೂ ಆಗಿದೆ. ಇತಿಹಾಸ, ಧರ್ಮ ಸಾಹಿತ್ಯಗಳ ಸಂಶೋಧಾತ್ಮಕ ಪರಿಚಯವು ಈ ಗ್ರಂಥ ಪಠನದಿಂದ ಆಗುವುದು. ಗ್ರಂಥವು ಸುಯೋಗ್ಯವಾದ ಮುನ್ನುಡಿಗಳಿಂದ, ಸದಭಿಪ್ರಾಯಗಳಿಂದ, ಸಂದೇಶಗಳಿಂದ ಕೂಡಿದೆ. ೯೨ ಪುಟಗಳ ಪರಿಶಿಷ್ಟದಲ್ಲಿ ವಿವಿಧವಾದ ದಾಖಲಾತಿಗಳಿದ್ದು ಘಟನೆಗಳ ಸತ್ಯತೆಗೆ ಅವು ಸಾಕ್ಷಿಕೊಡುತ್ತವೆ.

ಟಿ. ಕೇಶವಭಟ್ಟ

ಅಕ್ಕಮಹಾದೇವಿ ವಾಙ್ಮಯ ದರ್ಶಕ

ಎಸ್. ಆರ್. ಗುಂಜಾಳ

(ಹಿಂದಿನ ಸಂಚಿಕೆಯಿಂದ)

೨೨. ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ

ಜವಳಿ (ಬಿ. ಸಿ.) ಮತ್ತು ಮಲ್ಲಾಬಾದಿ (ವೀರಭದ್ರಪ್ಪ) ಸಂ.
ದಾವಣಗೆರೆ, ಪಂಪಾಸಾಹಿತ್ಯ ಪ್ರಕಟನಾಲಯ, ೧೯೬೩
ಪು. xxxi+೨೭೦=೩೦೧ ಬೆಲೆ ರೂ. ೫-೦೦
(ಪ್ರೇಮದ ಬಳ್ಳಿಯ ಬಳಗದ ಪುಷ್ಪ, ೧೦)

ವರ್ಣನೆ: ಅಕ್ಕನವರ ವಚನಗಳನ್ನು ಕೆಳಗಿನ ಗ್ರಂಥಗಳನ್ನಾಧರಿಸಿ ಸಂಗ್ರಹಿಸಲಾಗಿದೆ. ೧. ಶ್ರೀ ಗೌರೀಶಂಕರ ಸ್ವಾಮಿಗಳ ಸಂಗ್ರಹ, ೨. ಪ್ರಭುಲಿಂಗಲೀಲೆ, ೩. ಕೌಲೇದುರ್ಗದ ಹಸ್ತಪ್ರತಿ, ೪. ಲಿಂಗಲೀಲಾವಿಲಾಸ ಚರಿತ್ರೆ, ೫. ಗಣಭಾಷರತ್ನಮಾಲೆ, ೬. ಶೂನ್ಯ ಸಂಪಾದನೆ, ೭. ಲಿಂಗಸ್ತೋತ್ರದ ವಚನಗಳು, ೮. ಅಷ್ಟಾವರಣ ಸ್ತೋತ್ರದ ವಚನ, ೯. ಶರಣಸ್ತೋತ್ರದ ವಚನ, ೧೦. ಏಕೋತ್ತರ ಶತಸ್ಥಲ, ೧೧. ಅಕ್ಕಗಳ ಸೃಷ್ಟಿವಚನ, ೧೨. ಶ್ರೀ ಹಳಕಟ್ಟಿಯವರ ಸಂಗ್ರಹ, ೧೩. ಶ್ರೀ ಕೊಪ್ಪಳ ಶಾಸ್ತ್ರರರ ಸಂಗ್ರಹ, ೧೪. ಬೆಡಗಿನ ವಚನ, ೧೫. ಶ್ರೀ ಮಲ್ಲಿಕಾರ್ಜುನರ ಸಂಗ್ರಹ, ೧೬. ಪ್ರಬುದ್ಧ ಕರ್ನಾಟಕ, ೧೭. ಲಿಂಗದ ವಿಕಳಾವಸ್ಥೆಯ ವಚನ, ೧೮. ಅಕ್ಕಗಳು ನಿರೂಪಿಸಿದ ಕೊರವಂಜಿ ವಚನ.

ಅಕ್ಕನ 'ಯೋಗಾಂಗ ತ್ರಿವಿಧಿ' ಗ್ರಂಥವಿದೆ. ಅನುಬಂಧಗಳು ೧. ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯಲ್ಲಿಯ ಮಹಾದೇವಿಯಕ್ಕಗಳ ಸಂಪಾದನೆ ೨ ಸೃಷ್ಟಿಯ ವಚನ ೩ ಯೋಗಾಂಗ ತ್ರಿವಿಧಿಯ ೧೪ನೆಯ ಪದ್ಯಕ್ಕೆ ತಾತ್ವಿಕ ವಿವರಣೆ ೪-೫ ಶ್ರೀಶೈಲ ಪರ್ವತ ಪ್ರದೇಶದಲ್ಲಿ ಗುಪ್ತ ಕದಳೀವನ ಮತ್ತು ಅಕ್ಕನ ಯೋಗ ಮಂಟಪಗಳ ಸಂಶೋಧನೆ ಹಾಗೂ ದಿವ್ಯ ದರ್ಶನ ೬ ಯೋಗಾಂಗ ತ್ರಿವಿಧಿ ಶಾಂಭವೀಚಕ್ರದ ೨೦ನೇ ಪದ್ಯದ ವಿವರಣೆ ಇವೆ. ಕೊನೆಯಲ್ಲಿ ವಚನಾನುಕ್ರಮಣಿಕೆ, ಕಠಿಣಶಬ್ದಕೋಶಗಳಿವೆ. ಅಕ್ಕ, ಅಣ್ಣ ಹಾಗೂ ಕದಳೀವನದ ಸುಂದರ ಚಿತ್ರಗಳಿವೆ.

"ಈ ಕೃತಿಗೆ ಪ್ರೊ. ಜವಳಿಯವರು ಅಭ್ಯಾಸ ಪೂರ್ವವಾದ ೮೦ ಪುಟಗಳ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಪ್ರಸ್ತಾವನೆಯಲ್ಲಿ ಬಂದಿರುವ ಅಕ್ಕನ ಸಾಹಿತ್ಯ, ಶೈಲಿಯ ಸ್ವರೂಪ ಹಾಗೂ ವಿಮರ್ಶೆಗಳು ಅಮೌಲ್ಯವಾಗಿವೆ. ಷಟ್‌ಸ್ಥಲ ಜ್ಞಾನೋಪದೇಶ, ನೂರೊಂದು ಸ್ಥಲಗಳ ವಿವರಣೆ.... ಇತ್ಯಾದಿ ವಿಷಯಗಳು ತಾತ್ವಿಕ ಜಿಜ್ಞಾಸೆಯುಳ್ಳವರಿಗೆ, ಅಕ್ಕಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಬೇಕೆನ್ನುವವರಿಗೆ, ಉಪಯುಕ್ತವಾಗಿವೆ."

—ಸೌ. ಶಾಂತಾದೇವಿ ಮಾಳವಾಡ ಅವರ 'ಮುನ್ನುಡಿ'ಯಿಂದ

೨೩. ಕದಳಿಯ ಕರ್ಪುರ

ತಿಪ್ಪೇರುದ್ರಸ್ವಾಮಿ (ಹೆಚ್)
ಮೈಸೂರು, ಡಿ. ವಿ. ಕೆ. ಮೂರ್ತಿ, ೧೯೬೨
ಪು. iii+೩೩೪=೩೩೭ ಬೆಲೆ ರೂ. ೪-೦೦

ವರ್ಣನೆ: "ಮಂಗಳವೇ ಮಜ್ಜನವಾಗಿ, ದಿಗಂಬರವೇ ದಿವ್ಯಾಂಬರವಾಗಿ, ಶಿವಪಾದ ರೇಣುವಿನ ಅನುಲೇಪನದಿಂದ ಅಲಂಕೃತಳಾದ ಶರಣಸತಿ ಮಹಾದೇವಿ, ಇಹಕೊಬ್ಬ ಗಂಡನನ್ನೂ ಪರಕೊಬ್ಬ ಗಂಡನನ್ನೂ ಒಲ್ಲದೆ, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಾದ ಚೆನ್ನಮಲ್ಲಿಕಾರ್ಜುನನೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದಳು. ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು ದೇವಾಂಗವನುಟ್ಟು ಪುರುಷ ಬಾರಾ! ನಿನ್ನ ಬರವೆನ್ನ ಸುವಿನ ಬರವು ಬಾರಯ್ಯಾ . . ." ಎಂದು ಮುಂತಾಗಿ ಆತನಿಗಾಗಿ ಹಂಬಲಿಸಿ ಮಧುರ ಭಕ್ತಿಯ ಮಧುವಿನಂತಹ ಮಂಗಳ ಗೀತೆಗಳನ್ನು ಹಾಡಿದಳು. ಕೊನೆಯಲ್ಲಿ "ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ" ಅಲ್ಲಿ ತನ್ನ ಪತಿಯೊಡನೆ ಸೇರಿ ಆ ಸಮರಸದ ಅಮರ ಪ್ರಭೆಯನ್ನು ಲೋಕಕ್ಕೆ ಬೀರಿದಳು. ಈ ಸತಿಪತಿ ಭಾವದ ಭಕ್ತಿಯ ಭವ್ಯವಾದ ಬೆಳವಣಿಗೆಯನ್ನು ಅವಳ ಭಾವನೆಯ ಹೋರಾಟದ ಹಿನ್ನೆಲೆಯಲ್ಲಿ ಚಿತ್ರಿಸುತ್ತದೆ ಈ "ಕಾದಂಬರಿ ಕದಳಿಕರ್ಪುರ"

—ಕವರಿನ ಹಿಂಬದಿಯಲ್ಲಿಯ ಪರಿಚಯದಿಂದ

೨೪. ಗಿರಿಯ ನವಿಲು
ಕಟ್ಟೀಮನಿ (ಬಸವರಾಜ)
ಬೆಂಗಳೂರು, ಶಾರದಾ ಪ್ರಕಟನಾಲಯ, ೧೯೫೬
ಪು. vi+೨೫೭=೨೬೩ ಬೆಲೆ : ರೂ. ೩-೦೦

ವರ್ಣನೆ: “ಅಕ್ಕಮಹಾದೇವಿಯೆಂಬ ಆ ತಾಯಿ ಹೇಗಿದ್ದಳು? ಆಕೆ ಹೀಗೆಯೇ ಇದ್ದಳೆಂದು ಖಚಿತವಾಗಿ ಹೇಳುವದು ಯಾರಿಂದಲೂ ಸಾಧ್ಯವಾಗದು. ಆದರೂ ಹರಿಹರಾದಿ ಕವಿಗಳೂ ಬಸವೇಶ್ವರಾದಿ ವಚನಕಾರರೂ ಆಕೆಯನ್ನು ಕುರಿತು ಬರೆದಿರುವ ಕಾವ್ಯಗಳನ್ನೂ ನುಡಿದಿರುವ ವಚನಗಳನ್ನೂ ಲಕ್ಷಗೊಟ್ಟು ಓದಿದಾಗ ಅಕ್ಕನ ವ್ಯಕ್ತಿತ್ವದ ಕಲ್ಪನೆಯೊಂದು ಹೊಳೆಯದಿರಲಾರದು. ಸ್ವಯಂ ಅಕ್ಕನ ವಚನಗಳಿಂದಲೂ ಆಕೆಯ ಗುಣಶೀಲ ಸ್ವಭಾವ ಚಾರಿತ್ರ್ಯಾದಿಗಳ ಕಲ್ಪನೆ ಬರುವಂತಿದೆ. ಕವಿಗಳೂ ಪುರಾಣಕಾರರೂ ಮತೀಯ ಕಾರಣಗಳಿಂದಾಗಿ ಅಕ್ಕನ ವ್ಯಕ್ತಿತ್ವಕ್ಕೆ ಅವಾಸ್ತವವೆನಿಸುವ ಅಲೌಕಿಕ ಬಣ್ಣ ಬಳೆದಿರುವದೂ ನಿಜವೇ. ಅಸಹಜವೂ ಅಸ್ವಾಭಾವಿಕವೂ ಆದ ಆ ಬಣ್ಣವನ್ನು ತೆಗೆದು ಹಾಕಿ, ಅಕ್ಕನ ಜೀವನವನ್ನು ವಿಶುದ್ಧವಾದ ವೈಜ್ಞಾನಿಕ ದೃಷ್ಟಿಯಿಂದ ನೋಡಿ ಆಕೆಯ ಸಹಜ ಸ್ವರೂಪವನ್ನು ಚಿತ್ರಿಸಲು ನಾನಿಲ್ಲಿ ಯತ್ನಿಸಿದ್ದೇನೆ. ‘ ಅಕ್ಕ ಹೀಗೇ ಇದ್ದಳು ’ ಎಂದು ಸಾಧಿಸಲು ಹೊರಟ ಸಂಶೋಧಕನ ಭೂಮಿಕೆ ನನ್ನದಲ್ಲ. ಇದು, ಅಕ್ಕನನ್ನು ಕುರಿತ ಪ್ರಬಂಧವಾಗಿರದೆ ಆಕೆಯ ಜೀವನ ಕಥೆಯಾಗಿದೆ. “ ಚಾರಿತ್ರಿಕ ಕಾದಂಬರಿ ”ಯಾಗಿದೆ.

—ಲೇಖಕರ ‘ ಮೊದಲ ಮಾತಿ ’ನಿಂದ

೨೫. ತತ್ವಶಿಖಾಮಣಿ ಶ್ರೀಮಹಾದೇವಿಯಕ್ಕ
ನಂಜಪ್ಪ (ಮಾ. ನಂ.)
ಬೆಂಗಳೂರು, ವೀರಶೈವ ಸಾಹಿತ್ಯ ಭಾಂಡಾರ, ೧೯೪೯
ಪು. xxi + ೧೨೦ - ೧೪೧ ಬೆಲೆ : ರೂ. ೧-೫೦
(ವೀರಶೈವ ಸಾಹಿತ್ಯ ಭಾಂಡಾರ ಗ್ರಂಥಮಾಲೆ, ೯)

ವರ್ಣನೆ: ಮಹಾದೇವಿಯಕ್ಕನನ್ನು ಕುರಿತು ಬರೆದ ಪ್ರಾಚೀನ ಕಾವ್ಯಗಳನ್ನಾಧರಿಸಿ ಈ ಗ್ರಂಥವನ್ನು ಬರೆಯಲಾಗಿದೆ. “ . . . ಅಕ್ಕನವರ ಸ್ವಾಭಾವಿಕ ಜೀವಿತ ಚರಿತ್ರೆಯನ್ನು ವಚನಗಳ ಜೋಡಣೆಯಿಂದ ಹೆಣೆಯಬೇಕೆಂಬುದು ಈ ಗ್ರಂಥರಚನೆಯ ಉದ್ದೇಶ ”ವೆಂದು ಲೇಖಕರು ಹೇಳಿರುವರು. ೧೮ ಪ್ರಕರಣಗಳಲ್ಲಿ ಸಮಗ್ರ ಅಕ್ಕನ ಜೀವನ ಚರಿತ್ರೆಯನ್ನು ಹೆಚ್ಚಾಗಿ ವಚನಗಳನ್ನಾಧರಿಸಿ ವಿವರಿಸಿರುವರು.

೨೬. ಮಹಾದೇವಿಯಕ್ಕ
ಕುಂದಣಗಾರ (ಕೆ. ಜಿ.)
ಕೊಲ್ಹಾಪುರ ಬ. ಮ. ಏಳುಕೋಟಿ. ಬಸವನ ಬಳಗದ ಕಾರ್ಯದರ್ಶಿ, ೧೯೩೭
ಪು. xii + ೧೬೬ + ೩-೨೦೧ ಬೆಲೆ :

ವರ್ಣನೆ: “ ಬಸವಣ್ಣನವರ ವೀರಶೈವ ಧರ್ಮವು ಉಪನಿಷತ್ತುಗಳನ್ನು ಸರಿಗಟ್ಟುವ ವಚನ ಗ್ರಂಥಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿತೆಂಬ ಮಾತು ಮಾತ್ರ ನಿರ್ವಿವಾದ ಮಾತಾಗಿದೆ. ಈ ವಚನ ವಾಙ್ಮಯದಲ್ಲಿ ಮಹಾದೇವಿಯಕ್ಕನವರ ವಚನಗಳು ಅತ್ಯುಚ್ಚಪದವಿಯನ್ನು ಪಡೆದುಕೊಂಡಿವೆ. ಅವುಗಳನ್ನು ಎಷ್ಟು ಸಲ ಓದಿದರೂ ಮನಸ್ಸಿಗೆ ತೃಪ್ತಿಯಿಲ್ಲ. ತಿರುತಿರುಗಿ ಓದಬೇಕೆಂದು ಮನಸ್ಸು ಬಯಸುತ್ತದೆ. ಹೀಗೆ ಪರಿಣಾಮವಾಗಿ ಅವರ ವಚನ ಭಾಷೆಯು ಬಾಯಿಯಲ್ಲಿ ಕುಳಿತು ನಾನೂ ಅವರಂತೆ ಹಾಡಿವೆನು :

“ ಅಮ್ಮಾ, ಸಂಶೋಧನಗಳು ಸಾಗಿದೊಡೆ ಸಾಗುಗೆ,
ಸಾಗದಿರ್ದೊಡೆ ಮಾಣುಗೆ;
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಮ್ಮಾ
ಅಮ್ಮಾ ನೀ ಬುದ್ಧಿಯನ್ನು ಕೊಟ್ಟರೆ ಕೊಡು,
ಕೊಡದಿರ್ದೊಡೆ ಮಾಣು
ನಾ ನಿನ್ನ ವಚನಗಳನೋದಿ ಹಿಗ್ಗಿ ಹಾರೈಸಿದಲ್ಲದೆ
ಸೈರಿಸಲಾರೆನಮ್ಮಾ.”

‘ಅಮ್ಮಾ, ನಾ ನಿನ್ನ ಸ್ತುತಿಸಿ ಹರುಷದೊಳೋಲಾಡುವೆ’ ನಮ್ಮ ಪ್ರೊ. ಮುಗಳಿಯವರೂ ತಮ್ಮ ಅಕ್ಕಮಹಾದೇವಿ ನಾಟಕದಲ್ಲಿ ಇದೇ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಜನದ ಮನಸ್ಸನ್ನು ತಮ್ಮ ಕಡೆಗೆ ಎಳೆದುಕೊಳ್ಳುವ ಅಸಾಧಾರಣ ವಾಕ್‌ಸಾಮರ್ಥ್ಯವುಳ್ಳ, ಪ್ರತಿಭಾ ಸಂಪನ್ನರಾದ ಉದ್ದಾಮ ಕವಿಗಳ ಮಾಲೆಯಲ್ಲಿ ಅಕ್ಕನವರಿಗೆ ಉಚ್ಚಸ್ಥಾನವು ದೊರೆತಿದೆಯೆಂಬಲ್ಲಿ ಯಾವ ಸಂಶಯವೂ ಇಲ್ಲ”

—ಲೇಖಕರ ‘ ಮುನ್ನುಡಿ ’ಯಿಂದ

ನೂತನ ಪರೀಕ್ಷಾ ಪದ್ಧತಿ

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೂತನ ಪರೀಕ್ಷಾಕ್ರಮವನ್ನು ವ್ಯವಸ್ಥೆ ಮಾಡಲು ಒಂದು ವಿಚಾರ ವಿನಿಮಯ ನಡೆಯಿತು. ವಿಶ್ವವಿದ್ಯಾನಿಲಯದ ಅನೇಕ ಕಾಲೇಜುಗಳಿಂದ ಪ್ರಮುಖ ಪ್ರಾಧ್ಯಾಪಕರುಗಳೂ ಶಿಕ್ಷಣತಜ್ಞರೂ ಸೇರಿ ಮೂರು ದಿನಗಳತನಕ ವಿಚಾರವಿನಿಮಯ ಮಾಡಿದರು. ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಪ್ರೊ. ವಿ. ಕೃ. ಗೋಕಾಕ್ ಅವರು ಪ್ರಾರಂಭದಲ್ಲಿ ಮಾತನಾಡಿ ಶಿಕ್ಷಣ ಕ್ಷೇತ್ರದಲ್ಲಿ ಪರೀಕ್ಷೆಗೆ ಇರುವ ಪ್ರಾಧಾನ್ಯವನ್ನು ಇತ್ತೀಚಿನ ಅನೇಕ ಪ್ರಯೋಗಗಳನ್ನು ವಿಮರ್ಶಿಸಿದರು. ಆಧುನಿಕ ವಿಶ್ವವಿದ್ಯಾನಿಲಯವು ಪರೀಕ್ಷೆಯನ್ನು ಸರಿಯಾದ ರೀತಿಯಲ್ಲಿ ನಡೆಸದೆ ಹೋದರೆ ವಿದ್ಯಾಭ್ಯಾಸದ ಪರಿಣಾಮವೇ ಅನಿಶ್ಚಿತವಾಗುತ್ತದೆಂಬುದನ್ನು ವಿವರಿಸಿದರು. ಪ್ರೊ. ಧವೆ ಅವರು ಮೂರು ಉಪನ್ಯಾಸಗಳನ್ನು ನೀಡಿ ಪರೀಕ್ಷಾ ಪದ್ಧತಿ, ಪಠ್ಯವಿಷಯ ವ್ಯವಸ್ಥೆ, ಶಿಕ್ಷಣ ಧ್ಯೇಯಗಳನ್ನು ಕುರಿತು ಪ್ರೌಢವಾದ ವಿಷಯಗಳನ್ನು ಸರಳವಾದ ನಿರೂಪಣೆಯಲ್ಲಿ ಮಾಡಿದರು.

ವಿಶ್ವವಿದ್ಯಾನಿಲಯದ ಅನುಭವಸ್ಥ ಪ್ರಾಧ್ಯಾಪಕರು ಆ ಬಳಿಕ ಚರ್ಚೆಮಾಡಿ ನೂತನ ಪರೀಕ್ಷಾವ್ಯವಸ್ಥೆಗೆ ಒಪ್ಪಿ, ತಮ್ಮ ಸಂಪೂರ್ಣ ಸಹಕಾರವನ್ನು ನೀಡಿದರು. ಹೊಸ ರೀತಿಯ ಪ್ರಶ್ನೆಪತ್ರಿಕೆ ಹೇಗಿರಬೇಕೆಂಬುದನ್ನು ಸ್ಥೂಲವಾಗಿ ನಿರ್ದೇಶಿಸಲಾಯಿತು.

ಈಗ ವಿವಿಧ ವಿಷಯಗಳಲ್ಲಿ ವಿದ್ವಾಂಸರು ಆಯಾ ವಿಷಯದ ಪರೀಕ್ಷೆ, ಪ್ರಶ್ನೆಪತ್ರಿಕೆಗಳನ್ನು ಕುರಿತು ವಿವರವಾಗಿ, ವಿಚಾರ ವಿನಿಮಯ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಕನ್ನಡದ ಬಗ್ಗೆ ವಿಶೇಷವಾದ ಗಮನ ಈಗ ಅಗತ್ಯವಾಗಿದೆ. ಕನ್ನಡದ ಪರಿಶುದ್ಧತೆಯನ್ನು ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟು ವಿದ್ಯಾರ್ಥಿಗಳ ಉಚ್ಚಾರಣೆಯ ಅಭ್ಯಾಸವನ್ನೂ ವಿಚಾರ ಸಂಗ್ರಹವನ್ನೂ ಗ್ರಹಣಶಕ್ತಿಯನ್ನೂ ಸಾಹಿತ್ಯಾಭಿರುಚಿಯನ್ನೂ ವಾಚನಶೀಲತೆಯನ್ನೂ ವಾದದಲ್ಲಿ ಲೇಖನಗಳಲ್ಲಿ ಅಭಿಪ್ರಾಯ ನಿರೂಪಣಾಶಕ್ತಿಯನ್ನೂ ಬೆಳೆಸುವುದಕ್ಕೆ ದಾರಿಯನ್ನು ಸಮೆಯುವ ಪರೀಕ್ಷಾ ಪದ್ಧತಿಯನ್ನು ರೂಪಿಸಬೇಕಾಗಿದೆ. ಕನ್ನಡದ ಮಾನ್ಯ ಅಧ್ಯಾಪಕರುಗಳು ಈ ಕಡೆಗೆ ಹೆಚ್ಚು ಗಮನ ಕೊಡಲೆಂದೂ ನುಡಿಯ ಏಳಿಗೆಗೆ ಕಾರಣರಾಗಲೆಂದೂ 'ನುಡಿ' ಹಾರೈಸುತ್ತದೆ.

ಅರ್ಥಸಚಿವ ರಾಮಕೃಷ್ಣ ಹೆಗ್ಗಡೆಯವರ ವಿದೇಶ ಪ್ರವಾಸ

ನಮ್ಮ ರಾಜ್ಯದ ಜನಪ್ರಿಯ ಅರ್ಥಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಮೇರಿಕಾ, ಯುರೋಪ್, ಜಪಾನ್ ದೇಶಗಳಲ್ಲಿ ಸುಮಾರು ಎರಡು ತಿಂಗಳಕಾಲ ಪ್ರವಾಸವನ್ನು ಕೈಗೊಂಡಿದ್ದಾರೆ. ಆಗಸ್ಟ್ ೨೪ನೆಯ ತಾರೀಖು ವಿಮಾನ ನಿಲ್ದಾಣದಲ್ಲಿ ರಾಜ್ಯದ ಅನೇಕ ಪ್ರಮುಖರು ಅವರಿಗೆ ಶುಭಾಶಯಗಳನ್ನು ಕೋರಿ ಬೀಳ್ಕೊಟ್ಟರು.

ಶ್ರೀ ರಾಮಕೃಷ್ಣ ಹೆಗ್ಗಡೆಯವರ ಜನಾನುರಾಗ ಅವರ ಎಲ್ಲ ಕಾರ್ಯಗಳಲ್ಲಿಯೂ ಕಂಡುಬರುತ್ತದೆ. ಸೂಕ್ಷ್ಮಮತಿಗಳೂ ದೂರದೃಷ್ಟಿಯುಳ್ಳವರೂ ಸಮರ್ಥರೂ ಆಡಳಿತ ದಕ್ಷರೂ, ರಾಷ್ಟ್ರಭಕ್ತರೂ ಸಾಹಿತ್ಯ ಪ್ರೇಮಿಗಳೂ, ವಾಚನಶೀಲರೂ ಆದ ಈ ಸಚಿವರ ಪ್ರವಾಸವು ಮುಖ್ಯವಾಗಿ ಔದ್ಯೋಗಿಕ ಕ್ಷೇತ್ರಕ್ಕೆ ಸಂಬಂಧ ಪಟ್ಟಿದ್ದರೂ, ಸಮಯ ಸಿಕ್ಕಿದಾಗ ಆಯಾ ದೇಶಗಳಲ್ಲಿ ಸಾಹಿತ್ಯ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತವೆಂಬುದನ್ನು ಪರಿಶೀಲಿಸುವ ಸಂಭವವಿದೆ.

ಶ್ರೀಯುತರಿಗೆ ಈ ಅವಕಾಶ ಹೆಚ್ಚಾಗಿ ಸಿಕ್ಕಲೆಂದೂ ಅವರ ಪ್ರವಾಸ ಸುಖಮಯವಾಗಿದ್ದು ಸಫಲವಾಗಲೆಂದೂ, ಆ ಪ್ರವಾಸದ ಅನುಭವ ಗ್ರಂಥರೂಪದಲ್ಲಿ ಕನ್ನಡಿಗರಿಗೆ ಬೇಗ ದೊರೆಯುವಂತಾಗಲೆಂದೂ ಸಾಹಿತ್ಯ ಸಂಸ್ಥೆಗಳಿಗೆ ಆ ದೇಶಗಳಲ್ಲಿರುವ ಸ್ಥಾನಮಾನಗಳು ನಮ್ಮ ದೇಶದಲ್ಲಿಯೂ ದೊರಕುವಂತಾಗಲೆಂದೂ ನಮ್ಮ ಹಾರ್ದಿಕವಾದ ಅಪೇಕ್ಷೆ.

ಸುದ್ದಿ ಸಂಗ್ರಹ

ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ಪ್ರಚಾರೋಪನ್ಯಾಸ

ರಾಜ್ಯದ ಸಾಂಸ್ಕೃತಿಕ ಕಣ್ಣುಗಳಲ್ಲಿ ಒಂದಾದ, ಬೆಂಗಳೂರು ವಿಶ್ವವಿದ್ಯಾನಿಲಯವು ಕಳೆದ ತಿಂಗಳು ಬೆಂಗಳೂರಿನ ವಿಮಾನಪುರದ ಕನ್ನಡ ಸೇವಾ ಸಮಾಜದ ಆಶ್ರಯದಲ್ಲಿ ತನ್ನ ಪ್ರಥಮ ಪ್ರಚಾರೋಪನ್ಯಾಸವನ್ನು ಏರ್ಪಡಿಸಿತ್ತು. ನಿವೃತ್ತ ಪ್ರೊ. ವಿ. ಶ್ರೀನಿವಾಸರಾವ್ ಅವರು 'ಅಂತರಿಕ್ಷಯಾನ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಾಧಿಕಾರಿಗಳಾದ ಪ್ರೊ. ರಂ. ಶ್ರೀ. ಮುಗಳಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳನ್ನು ಡಾ. ನಾರಾಯಣರಾವ್ ಪಿಸ್ಸೆ ಅವರು ಸ್ವಾಗತಿಸಿದರು. ಶ್ರೀ ದಾಶರಥಿ ದೀಕ್ಷಿತ್ ಅವರು ಪರಿಚಯ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಸಮಾಜದ ಕಲಾವಿದರಿಂದ ಮನರಂಜನ ಕಾರ್ಯಕ್ರಮವು ಏರ್ಪಟ್ಟಿತ್ತು.

ದೇವರಾಜ ಬಹಾದ್ದೂರ್ ಬಹುಮಾನಗಳು

೧೯೬೫-೬೬ನೇ ಸಾಲಿನ ದೇವರಾಜ ಬಹಾದ್ದೂರ್ ಸಾಹಿತ್ಯ ಬಹುಮಾನಗಳನ್ನು ಸಮಿತಿಯು ಇತ್ತೀಚೆಗೆ ಪ್ರಕಟಿಸಿದೆ.

ಶ್ರೀಮತಿ ಜಯದೇವಿತಾಯಿಲಿಗಾಡೆ ಅವರು ಬರೆದಿರುವ 'ಸಿದ್ಧರಾಮೇಶ್ವರ' ಪುರಾಣ ಗ್ರಂಥಕ್ಕೆ ಪ್ರಥಮ ಬಹುಮಾನವಾಗಿ ೩೫೦ರೂಗಳನ್ನೂ, ಡಾ. ಚಿದಾನಂದಮೂರ್ತಿ ಅವರ 'ಭಾಷಾವಿಜ್ಞಾನದ ಮೂಲ ತತ್ತ್ವಗಳು' ಗ್ರಂಥಕ್ಕೆ ದ್ವಿತೀಯ ಬಹುಮಾನವಾಗಿ ೨೦೦ರೂಗಳನ್ನೂ, ಪಂಡಿತ ಎಸ್. ರಂಗಾಚಾರ್ ಅವರು ಬರೆದಿರುವ 'ಸಂಸ್ಕೃತ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ' ಗ್ರಂಥಕ್ಕೆ ಮೂರನೇ ಬಹುಮಾನವಾಗಿ ೧೫೦ರೂಗಳನ್ನೂ ಕೊಡಲಾಗಿದೆ.

ಇಂಡೆಕ್ಸ್ ಇಂಡೋ-ಏಸಿಯಾಟಿಕಸ್

ಕಲ್ಕತ್ತೆಯ ಏಸಿಯಾಟಿಕ್ ಸೊಸೈಟಿಯ ಗ್ರಂಥ ಭಂಡಾರಿಗಳ ಸಂಪಾದಕತ್ವದಲ್ಲಿ ಭಾರತೀಯ ಹಾಗೂ ವಿದೇಶಗಳ ವೃತ್ತ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಭಾರತದ ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನಗಳಿಗೆ ಸಂಬಂಧಿಸಿದಂತೆ ಪ್ರಕಟವಾಗುವ ಲೇಖನಗಳನ್ನು ಆರಿಸಿ, ಪಟ್ಟಿಮಾಡಿ ಅವುಗಳನ್ನು ಸೂಕ್ತರೀತಿಯಲ್ಲಿ ಪ್ರಕಟಿಸುವ ಸಲುವಾಗಿ ಇಂಡೆಕ್ಸ್ ಇಂಡೋ-ಏಸಿಯಾಟಿಕಸ್ ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯು ಪ್ರಕಟವಾಗಲಿದೆ. ಇದಕ್ಕೆ ಡಾ. ರಾಧಾಕೃಷ್ಣನ್ ಮತ್ತು ಡಾ. ಸುನೀತ ಕುಮಾರ ಚಟರ್ಜಿ ಅವರ ಬೆಂಬಲ ದೊರಕಿದೆ. ಕಳೆದ ೧೯೬೬ರಿಂದ ಕನ್ನಡ ನಾಡಿನ ನಿಯತಕಾಲಿಕಗಳಲ್ಲಿ ಪ್ರಕಟವಾದ ಉಪಯುಕ್ತ ಲೇಖನಗಳ ಪಟ್ಟಿಯನ್ನು ಬಂಗಾಳಿ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಈ ಸಂಸ್ಥೆಗೆ ಕಳುಹಿಸಿಕೊಡಬಹುದು. ಪ್ರಥಮ ಸಂಚಿಕೆಯು ೧೯೬೭ನೇ ಸೆಪ್ಟಂಬರ್ ತಿಂಗಳಲ್ಲಿ ಹೊರಬೀಳುವುದು.

ವಿಳಾಸ :
Index Indo-Asiaticus
Post Box No. 11215
Calcutta-14

ಭಾರತೀಯ ಲೇಖಕರ ಕೇಂದ್ರ

ಪೂನಾ ನಗರದ ಚತುಶ್ಶೃಂಗಿ ದೇವಾಲಯದ ಬಳಿ, ಪಿತೃಚ್ಛಾಯೆಯಲ್ಲಿ ಭಾರತೀಯ ಬರಹಗಾರರು ನಿಶ್ಚಿಂತೆಯಿಂದ ತಮ್ಮ ಕೃತಿರಚನೆ ಮಾಡಲು ಒಂದು ಕೇಂದ್ರವನ್ನು ಪ್ರಭಾಕರಪಾಧ್ಯೆ ಅವರ ನೇತೃತ್ವದಲ್ಲಿ ಆರಂಭಿಸಲಾಗಿದೆ. ನಿಸರ್ಗದ ಮಡಿಲಲ್ಲಿ ಇರುವ, ಪೂನಾ ವಿಶ್ವವಿದ್ಯಾನಿಲಯಕ್ಕೆ ಸಮೀಪವಾಗಿರುವ ಈ ಲೇಖಕಧಾಮದಲ್ಲಿ ಬರೆಯಲು ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದರ ಉಪಯೋಗವನ್ನು ಭಾರತೀಯ ಲೇಖಕರೆಲ್ಲರೂ ಪಡೆಯಬಹುದಾಗಿದೆ.

ಈ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಎಲವಾಲದಲ್ಲಿರುವ 'ಅಲೋಕ' ಭವನವನ್ನು ಸರಕಾರದಿಂದ ಪಡೆದು ಕನ್ನಡ ಲೇಖಕರ ಸಲುವಾಗಿ ಸಜ್ಜುಗೊಳಿಸಿದೆ ಎಂಬ ಸಂಗತಿಯನ್ನು ನೆನೆಯಬಹುದಾಗಿದೆ. ಈ ದಿಸೆಯಲ್ಲಿ ಇನ್ನೊಂದು ಪ್ರಯತ್ನ ಈ ಲೇಖಕಧಾಮ.

ವಿಳಾಸ :
ಪ್ರಭಾಕರಪಾಧ್ಯೆ,
ಪಿತೃಚ್ಛಾಯಾ, ನಂ. ೧೦,
ಅಂಬಿಕಾ ಹೌಸಿಂಗ್ ಸೊಸೈಟಿ,
ಚತುಶ್ಶೃಂಗಿ, ಪೂನಾ-೧೪.

ಅಖಿಲ ಕರ್ಣಾಟಕ ಜನಪದ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಚಟುವಟಿಕೆಗಳ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಇದೇ ಅಕ್ಟೋಬರ್ ತಿಂಗಳಲ್ಲಿ ತರೀಕೆರೆಯಲ್ಲಿ ಅಖಿಲ ಕರ್ಣಾಟಕ ಜನಪದ ಸಾಹಿತ್ಯ

ಸಮ್ಮೇಳನವನ್ನು ಏರ್ಪಡಿಸಲಾಗಿದೆ. ಜನಪದ ಸಾಹಿತ್ಯದ ಸಂಗ್ರಹಣೆ, ಪ್ರಕಟಣೆ ಮತ್ತು ಪ್ರಚಾರ, ವಿಚಾರಗೋಷ್ಠಿ ಉಪನ್ಯಾಸ, ನೃತ್ಯ, ಜಾನಪದ ಕಲೆಗಳ ಪ್ರದರ್ಶನ, ಗ್ರಂಥ ಪ್ರದರ್ಶನ ಇವೇ ಮೊದಲಾದ ಕಾರ್ಯಕ್ರಮಗಳನ್ನು ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದೆ. ಅಲ್ಲದೆ ತಮಿಳು, ತೆಲುಗು, ಮಲೆಯಾಳ, ತುಳು ಮತ್ತು ಮರಾಠಿ ಜನಪದ ಸಾಹಿತ್ಯದ ಪರಿಚಯಾತ್ಮಕ ಲೇಖನಗಳು ಹಾಗೂ ನಾಡಿನ ಜನಪದ ಸಾಹಿತ್ಯದ ವಿವಿಧ ಮುಖಗಳನ್ನು ಚಿತ್ರಿಸುವ ಸುಪ್ರಸಿದ್ಧ ಬರಹಗಾರರ ಲೇಖನಗಳನ್ನು ಒಳಗೊಂಡ ಒಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸಲಾಗುವುದು. ಈ ಗ್ರಂಥದ ಸಂಪಾದನದ ಹೊಣೆಯನ್ನು ಸರ್ವಶ್ರೀ ಸ. ಸ. ಮಾಳವಾಡ, ದೇ. ಜವರೇಗೌಡ, ಪಿ. ಮಲ್ಲಿಕಾರ್ಜುನಪ್ಪ, ಜಿ. ಎಸ್. ಶಿವರುದ್ರಪ್ಪ, ಜೀ. ಶಂ. ಪರಮಶಿವಯ್ಯ ಮತ್ತು ಗೊ. ರು. ಚನ್ನಬಸಪ್ಪ ನವರುಗಳನ್ನು ಒಳಗೊಂಡಿರುವ ಒಂದು ಸಮಿತಿಯು ವಹಿಸಿಕೊಂಡಿದೆ ಎಂದು ತಿಳಿದುಬಂದಿದೆ.

ತೀ. ನಂ. ಶ್ರೀ. ವರ್ಷಾಬ್ದಿಕ

ಸೆಪ್ಟಂಬರ್ ೯ಕ್ಕೆ ಆಚಾರ್ಯ ತೀ.ನಂ.ಶ್ರೀ ಅವರು ನಮ್ಮನ್ನಗಲಿ ಒಂದು ವರ್ಷ ತುಂಬುತ್ತದೆ. ಈ ಪುಣ್ಯ ತಿಥಿಯ ಸಂದರ್ಭದಲ್ಲಿ ದಿವಂಗತರನ್ನು ಸ್ಮರಿಸಲು ಮೈಸೂರು ವಿಶ್ವವಿದ್ಯಾನಿಲಯದ ಅವರ ಅಭಿಮಾನಿಗಳೂ, ಶಿಷ್ಯರೂ, ಒಂದು ನಿಶ್ಚಿತ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದುವರೆಗೆ ತೀನಂಶ್ರೀ ಸ್ಮಾರಕ ಸಮಿತಿಯವರು ಸಂಗ್ರಹಿಸಿರುವ ಸುಮಾರು ೧೬ ಸಾವಿರ ರೂಪಾಯಿಗಳನ್ನು ಒಂದು ಧ್ರುವನಿಧಿಯಾಗಿ ಪರಿವರ್ತಿಸಿ, ಪ್ರತಿವರ್ಷ ಅದರಿಂದ ಬರುವ ಬಡ್ಡಿ ಹಣದಿಂದ, ಕನ್ನಡ ನಾಡಿನಲ್ಲಿ ಪ್ರಕಟವಾಗುವ ಶ್ರೇಷ್ಠ ಸಂಶೋಧನ ಗ್ರಂಥಕ್ಕೆ ಸುಮಾರು ೭೫೦ ರೂಪಾಯಿಗಳ ಒಂದು ಬಹುಮಾನವನ್ನು ನೀಡಲು ಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ಶ್ರೀ ದೇ. ಜವರೇಗೌಡರು ಬರೆದಿರುವ 'ತೀನಂಶ್ರೀ' ಜೀವಿತದ ಪರಿಚಯ ಗ್ರಂಥ ಪ್ರಕಟವಾಗಲಿದೆ.

ಈ ಗ್ರಂಥದಿಂದ ಬರುವ ಲಾಭವನ್ನು ದಿವಂಗತರ ಸ್ಮರಣಾರ್ಥವಾಗಿ ಏರ್ಪಾಡಾಗಿರುವ ಅಂತರ ಕಾಲೇಜು ಚರ್ಚಾಸ್ಪರ್ಧೆಯ ವ್ಯವಸ್ಥೆಗೆ ಬಿಟ್ಟುಕೊಡಲಾಗುವುದೆಂದು ತಿಳಿದು ಬಂದಿದೆ.

ಇದೇ ಸಮಯದಲ್ಲಿ ತೀನಂಶ್ರೀ ಅವರ ಏನತ್ತಕ್ಕೂ ಹೆಚ್ಚಿನ ಅಪ್ರಕಟಿತ ಕವನಗಳ ಸಂಕಲನವೂ, ಇನ್ನಿತರ ಗ್ರಂಥಗಳೂ ಪ್ರಕಟವಾಗುವ ನಿರೀಕ್ಷೆ ಇದೆ.

ಡಾ. ಹಾ. ಮಾ. ನಾಯಕರು ಬುಡಾಪೆಸ್ಟಿಗೆ

ಮೈಸೂರು ವಿಶ್ವವಿದ್ಯಾನಿಲಯದ ಭಾಷಾ ಶಾಸ್ತ್ರದ ರೀಡರೂ ಮತ್ತು ಕನ್ನಡ ವಿದ್ವಾಂಸರಲ್ಲಿ ಒಬ್ಬರೂ ಆಗಿರುವ ಹಾರೋಗದ್ದೆ ಮಾನಪ್ಪನಾಯಕ ಅವರು ಸೆಪ್ಟಂಬರ್ ತಿಂಗಳ ಮೊದಲ ವಾರದಲ್ಲಿ ರುಮೇನಿಯಾ ದೇಶದ ಬುಡಾಪೆಸ್ಟಿನಲ್ಲಿ ಸೇರಲಿರುವ ಹತ್ತನೆಯ ಅಂತರ ರಾಷ್ಟ್ರೀಯ ಭಾಷಾ ಶಾಸ್ತ್ರಜ್ಞರ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ವಿದೇಶಕ್ಕೆ ಪ್ರಯಾಣಮಾಡಿದರು. ಸಮ್ಮೇಳನದಲ್ಲಿ ಅವರು ಭಾರತೀಯ ಭಾಷೆಗಳಲ್ಲಿ ಕಂಡುಬರುವ ಸಾಮಾಜಿಕ ಪ್ರವೃತ್ತಿಗಳನ್ನು ಕುರಿತಂತೆ ಒಂದು ಪ್ರಬಂಧವನ್ನು ಓದಲಿದ್ದಾರೆ.

ಇದು ಕನ್ನಡ ನಾಡಿಗೆ ಗೌರವವನ್ನು ತರುವ ಸಂಗತಿಯಾಗಿದೆ.

ಮಹಾಕಾಲ ಸಂಹಿತೆ

ಅಲಹಾಬಾದಿನ ಗಂಗಾನಾಥ್ ಸಂಶೋಧನಾಲಯದವರು ಪ್ರಾಚೀನ ಭಾರತದ ತಾಂತ್ರಿಕ ಅಧ್ಯಯನಕ್ಕೆ ಪ್ರಮಾಣ ಗ್ರಂಥವಾಗಿರುವ, 'ಮಹಾಕಾಲ ಸಂಹಿತೆ' ಗ್ರಂಥವನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸುವ ನಿರ್ಧಾರ ಕೈಗೊಂಡಿದ್ದಾರೆ ಈ ಯೋಜನೆಗೆ ೧.೨೫ ಲಕ್ಷ ರೂಪಾಯಿಗಳು ವೆಚ್ಚವಾಗಲಿದ್ದು, ಈ ಹಣವನ್ನು ಕೇಂದ್ರ ಸರಕಾರವು ಕೊಡಲು ಮುಂದೆ ಬಂದಿದೆ.

ಆರ್. ಕೆ. ನಾರಾಯಣರಿಗೆ ಗೌರವ ಪ್ರಶಸ್ತಿ

ಭಾರತದ ಖ್ಯಾತ ಕಾದಂಬರಿಗಾರರೂ, ಕನ್ನಡಿಗರೂ ಆದ ಶ್ರೀ ಆರ್. ಕೆ. ನಾರಾಯಣ್ ಅವರಿಗೆ ಲೀಡ್ಸ್ ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಆಫ್ ಲೆಟರ್ಸ್ ಪದವಿಯನ್ನು ಇತ್ತು ಗೌರವಿಸಲಿದೆ. ಈ ಪದವಿಯನ್ನು ಸ್ವೀಕರಿಸುತ್ತಿರುವ ಕನ್ನಡಿಗರಲ್ಲಿ ಶ್ರೀಯುತರೇ ಮೊದಲಿಗರು.

ಕನ್ನಡ ಹಾಸ್ಯಸಾಹಿತ್ಯ ಗೋಷ್ಠಿ

ಕಳೆದ ತಿಂಗಳು ಸ್ವಾತಂತ್ರ್ಯ ದಿನದಂದು ಬೆಂಗಳೂರಿನ ಜಿ. ನಾರಾಯಣ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ವಿನೋದ' ಪತ್ರಿಕೆಯ ೧೬ನೆಯ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ಹಾಸ್ಯಸಾಹಿತ್ಯಗೋಷ್ಠಿಯೊಂದನ್ನು ಏರ್ಪಡಿಸಿದ್ದರು. ಕರ್ಣಾಟಕದ ಹಿರಿಯ ಹಾಸ್ಯಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ. ರಂ. ಶ್ರೀ. ಮುಗಳಿ

ಅವರು ಸಮಾರೋಪ ಭಾಷಣಮಾಡಿದರು. ಹಾಸ್ಯ ಸಾಹಿತ್ಯದ ಲೇಖಕರಿಗೆ ಪ್ರೋತ್ಸಾಹ, ಹಾಸ್ಯದ ಹೊಸ ಬಗೆಗಳು, ಸಾಮಗ್ರಿ ಮತ್ತು ಅದರ ಉಪಯೋಗ, ಪ್ರಾಚೀನ ಸಾಹಿತ್ಯದಲ್ಲಿ ಹಾಸ್ಯ, ಗ್ರಂಥಪ್ರಕಟನೆ–ಪ್ರಚಾರ-ಇವೇ ಮೊದಲಾದ ಸಮಸ್ಯೆಗಳನ್ನು ಎತ್ತಿಕೊಂಡು, ನಾಡಿಗೇರ ಕೃಷ್ಣರಾಯ, ದಾಶರಥಿ ಧೀಕ್ಷಿತ್, ತಿ. ತಾ. ಶರ್ಮ, ಸಿ. ಬಿ. ಜಯರಾವ್, ಹಂಪ. ನಾಗರಾಜಯ್ಯ, ಬಿ. ಸುನಂದಮ್ಮ ಮುಂತಾದವರು ಭಾಷಣಮಾಡಿದರು.

ಅ. ರಾ. ಮಿತ್ರ ಅವರು ವಂದನಾರ್ಪಣೆ ಮಾಡಿದರು.

ಶಿವರಾಮ ಕಾರಂತರಿಗೆ ಯುನೆಸ್ಕೊ ಆಹ್ವಾನ

ಕನ್ನಡ ನಾಡಿನ ಖ್ಯಾತ ಸಾಹಿತಿಗಳಾದ ಡಾ. ಕೋ. ಶಿವರಾಮ ಕಾರಂತರನ್ನು ಈ ತಿಂಗಳ ಮೊದಲನೆಯವಾರ ಟೆಹರಾನಿನಲ್ಲಿ ನಡೆಯಲಿರುವ ಸಾಹಿತಿಗಳ ಸಮ್ಮೇಳನದಲ್ಲಿ ಭಾರತದ ಪರ ಭಾಗವಹಿಸಲು ಯುನೆಸ್ಕೊ ಸಮಿತಿಯು ಆಹ್ವಾನಿಸಿದೆ ಎಂದು ತಿಳಿದು ಬಂದಿದೆ.

ಶ್ರೀಯುತರನ್ನು ಇದೇ ಸಮಯದಲ್ಲಿ ಅವರ ೭೫ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಸತ್ಕರಿಸಿ, ಒಂದು ನಿಧಿಯನ್ನು ಅರ್ಪಿಸಲು ಅವರ ಅಭಿಮಾನಿಗಳೂ, ಮಿತ್ರರೂ ನಿರ್ಧರಿಸಿದ್ದಾರೆ. ಹಣವನ್ನು ಗುಂಡ್ಮಿ ರಾಮಕೃಷ್ಣ ಐತಾಳ, ಸನ್ಮಾನ ಸಮಿತಿ ಸಂಚಾಲಕರು, ಸರಸ್ವತಿ ಲಾಡ್ಜ್, ಗಾಂಧಿನಗರ ಅವರಿಗೆ ಕಳುಹಿಸಲು ಕೋರಲಾಗಿದೆ.

ಬೆಂಗಳೂರಿನ ನಾರಾಯಣ ಬಲ್ಲಾಳ ಅವರ ಸಂಪಾದಕತ್ವದಲ್ಲಿ 'ದಿಗಂತ' ಎಂಬ ಹೆಸರಿನ ಸುಮಾರು ೭೫೦ ಪುಟಗಳ–ಕನ್ನಡದ ಶ್ರೇಷ್ಠ ಕಥೆಗಳ ಸಂಕಲನವೊಂದನ್ನು ಕಾರಂತರಿಗೆ ಕಾಣಿಕೆಯಾಗಿ ಅರ್ಪಿಸಲು ಸಿದ್ಧತೆಗಳು ಭರದಿಂದ ನಡೆಯುತ್ತಿವೆ.

ಪ್ರೊ. ಮರಿಯಪ್ಪ ಭಟ್ಟರಿಗೆ ಅರವತ್ತು ತುಂಬಿತು

ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಂ. ಮರಿಯಪ್ಪ ಭಟ್ಟರ ಷಷ್ಟ್ಯಬ್ದ ಪೂರ್ತಿಯ ಉತ್ಸವದ ಅಂಗವಾಗಿ ಮದರಾಸಿನ ನಾಗರಿಕರು ಒಂದು ಸತ್ಕಾರ ಸಮಾರಂಭವನ್ನು ಕಳೆದ ತಿಂಗಳು ಮದರಾಸಿನಲ್ಲಿ ಏರ್ಪಡಿಸಿದ್ದರು. ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎ. ಲಕ್ಷ್ಮಣಸ್ವಾಮಿ ಮೊದಲಿಯಾರರು ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತರು ಈಗ ಕಿಟೆಲ್ ಅವರ ಕನ್ನಡ ಇಂಗ್ಲಿಷ್ ಶಬ್ದಕೋಶವನ್ನು ದ್ವಿತೀಯ ಮುದ್ರಣಕ್ಕೆ ಸಿದ್ಧಪಡಿಸುತ್ತಿದ್ದಾರೆ.

ಹಿಂದಿ ಭಾಷೆಗೆ 'ಭರ್ತೃಹರಿ ಶತಕಂ'

ಪ್ರಥಮಬಾರಿಗೆ ಭರ್ತೃಹರಿಯ ಶತಕತ್ರಯವನ್ನು ಹಿಂದಿ ಭಾಷೆಗೆ ದೆಹಲಿಯ ಶ್ರೀಗೋಪಾಲ್‌ದಾಸ್‌ಗುಪ್ತಾ ಅವರು ಅನುವಾದಿಸಿ ಪ್ರಕಟಿಸಿದ್ದಾರೆ. ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಅದರ ಒಂದು ಪ್ರತಿಯನ್ನು ಲೇಖಕರು ಪ್ರಧಾನಮಂತ್ರಿ ಇಂದಿರಾಗಾಂಧಿ ಅವರಿಗೆ ಅರ್ಪಿಸಿದರು.

ಬಸವೇಶ್ವರರ ಎಂಟನೆಯ ಶತಮಾನೋತ್ಸವ

ಕನ್ನಡ ನಾಡಿನಲ್ಲಿ ಎಂಟುನೂರು ವರ್ಷಗಳ ಹಿಂದೆ ಅವತರಿಸಿ, ನಾಡು ನುಡಿಗಳಿಗೆ ಮಹತ್ತರ ಸೇವೆಸಲ್ಲಿಸಿದ ವಿಭೂತಿ ಪುರುಷ ಬಸವಣ್ಣನವರ ಎಂಟುನೂರನೆ ಉತ್ಸವವನ್ನು ರಾಜ್ಯಮಟ್ಟದಲ್ಲಿ ವೈಭವದಿಂದ ನಡೆಸಲು ಬಸವ ಸಮಿತಿಯು ನಿರ್ಧರಿಸಿದೆ. ಈ ಉತ್ಸವಗಳು ದೆಹಲಿ, ಬೆಂಗಳೂರು, ಬಾಗೇವಾಡಿ, ಕೂಡಲಸಂಗಮ ಮುಂತಾದ ಸ್ಥಳಗಳಲ್ಲಿ ಮುಂದಿನ ಡಿಸೆಂಬರ್ ೨೫ರಿಂದ ೧೯೭೮ಲನೇ ಮೇ ತಿಂಗಳವರೆಗೆ ನಡೆಯುತ್ತವೆ.

೧. ಬಸವೇಶ್ವರರ ಜೀವನ ಚರಿತ್ರೆ ೨. ಸ್ಮಾರಕ ಗ್ರಂಥ ೩. ಶ್ರೀ ಬಸವೇಶ್ವರರ ವಚನಗಳು. ಈ ಮೂರು ಗ್ರಂಥಗಳನ್ನು ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಅಲ್ಲದೆ ಕೂಡಲ ಸಂಗಮವನ್ನು ಎಂಟು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುವುದು.

ಪರಿಷತ್ತಿನ ಸುದ್ದಿಗಳು

ಪ್ಲವಂಗ ಸಂವತ್ಸರದ ಸಾಹಿತ್ಯೋತ್ಸವ

ಪ್ಲವಂಗ ನಾಮ ಸಂವತ್ಸರದ ಸಾಹಿತ್ಯೋತ್ಸವವು ದಿನಾಂಕ ೩೦-೭-೧೯೬೭ರಿಂದ ದಿನಾಂಕ ೬-೮-೧೯೬೭ರ ಪೂರ್ತಿ ಎಂಟು ದಿನಗಳಕಾಲ ಶ್ರೀ ಕೃಷ್ಣರಾಜಪರಿಷನ್ಮಂದಿರದಲ್ಲಿ ವಿಜೃಂಭಣೆಯಿಂದ ಜರುಗಿತು.

ದಿನಾಂಕ ೩೦ರಂದು ಸಂಜೆ ಉತ್ಸವದ ಉದ್ಘಾಟನೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ರಂ. ಶ್ರೀ. ಮುಗಳಿಯವರು ನೆರವೇರಿಸಿದರು. ಪ್ರೊ. ಎಂ. ವಿ. ಸೀತಾರಾಮಯ್ಯನವರು ಶ್ರೀಮತಿ ಜಾವಳಿ ಮಹಾಲಕ್ಷ್ಮಮ್ಮ ಲಕ್ಷ್ಮಯ್ಯ ಅವರ ನಿಧಿ ಉಪನ್ಯಾಸವಾಗಿ "ಕವಿರಾಜಮಾರ್ಗ ಮತ್ತು ಅದರ ಕರ್ತೃ" ಎಂಬ ವಿಷಯವನ್ನು ಕುರಿತು ವಿದ್ವತ್ಪೂರ್ಣವಾದ ಭಾಷಣ ಮಾಡಿದರು. ಅನಂತರ ಮನರಂಜನೆಯ ಕಾರ್ಯಕ್ರಮವಾಗಿ ಶ್ರೀ ಎಂ. ಎಸ್. ಅನಂತಸ್ವಾಮಿ ಅವರಿಂದ ಕನ್ನಡ ಗೀತೆಗಳ ಗಾಯನವನ್ನು ಏರ್ಪಡಿಸಲಾಗಿತ್ತು.

ಎರಡನೆಯ ದಿನ ಶ್ರೀ ಆರ್. ಚಂದ್ರಶೇಖರಯ್ಯ ಸುಬ್ಬಮ್ಮ ನಿಧಿ ಉಪನ್ಯಾಸವಾಗಿ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು "ವಚನ ಶಾಸ್ತ್ರದಲ್ಲಿ ಪ್ರತಿಮೆಗಳು ಮತ್ತು ಪತೀಕಗಳು" ಎಂಬ ವಿಚಾರಪೂರ್ಣ ಭಾಷಣ ಮಾಡಿದರು. ಮನರಂಜನೆಯಾಗಿ ಕುಮಾರಿ ಎಂ. ಕೆ. ವತ್ಸಲಾ ಮತ್ತು ಸಂಗಡಿಗರಿಂದ "ಲಘುಸಂಗೀತ" ನಡೆಯಿತು.

ಮೂರನೆಯ ದಿನ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಶ್ರೀ ಟಿ. ಎನ್. ನಂಜುಂಡಪ್ಪನವರ ನಿಧಿ ಉಪನ್ಯಾಸವಾಗಿ "ಬಾಹ್ಯರೂಪ ರಚನಾದೃಷ್ಟಿಯಿಂದ ಬಸವಣ್ಣನವರ ವಚನಗಳನ್ನು ಕುರಿತು ಪರಿಶೀಲನೆ" ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಅನಂತರ ಬೇಲೂರಿನ ಕುಮಾರಿ ಭಾಗೀರಥಿ ಅವರಿಂದ "ಭಕ್ತ ಪುರಂದರ ದಾಸರು" ಎಂಬ ಹರಿಕಥೆ ನಡೆಯಿತು.

ನಾಲ್ಕನೆಯ ದಿನ ಶ್ರೀಮಾನ್ ಬೆಳ್ಳಾವೆ ವೆಂಕಟನಾರಣಪ್ಪನವರ ದತ್ತಿ ಉಪನ್ಯಾಸವಾಗಿ ಡಾ. ನಾರಾಯಣರಾವ್ ಪಿಸ್ಸೆ ಅವರು "ವೈದ್ಯ ಶಾಸ್ತ್ರದಲ್ಲಿ ಹೊಸ ಸಂಶೋಧನೆಗಳು" ಎಂಬ ವೈಜ್ಞಾನಿಕ ಉಪನ್ಯಾಸ ಮಾಡಿದರು. ಅನಂತರ ಚಿತ್ರಕಲಾವಿದರಿಂದ "ಆಡಿದ್ದೇ ನಾಟಕ" ಎಂಬ ನಾಟಕ ಅಭಿನಯಿಸಲ್ಪಟ್ಟಿತು.

ಐದನೆಯ ದಿನ ಶ್ರೀಮತಿ ಸೋಸಲೆ ಗರಳಪುರಿ ವೆಂಕಟಸುಬ್ಬಮ್ಮನವರ ನಿಧಿ ಉಪನ್ಯಾಸ ಮಾಡಿದ ಶ್ರೀಮತಿ ಸಿ. ಆರ್. ಕಮಲಮ್ಮನವರು ಜಯದೇವಿತಾಯಿ ಲಿಗಾಡೆಯವರ ಸಾಹಿತ್ಯ ಸೇವೆಯನ್ನು ಕುರಿತು ಪರಿಚಯಾತ್ಮಕ ಭಾಷಣ ಮಾಡಿದರು. ಶಶಿಕಲಾವಿದರು "ಕೈಗೆ ಬಂದ ತುತ್ತು" ಎಂಬ ನಾಟಕವನ್ನು ಅಭಿನಯಿಸಿದರು.

ಆರನೆಯದಿನ ಶ್ರೀಮತಿ ಕುಂತಳಮ್ಮ ಸ್ಮಾರಕನಿಧಿ ಉಪನ್ಯಾಸವಾಗಿ ಶ್ರೀಮತಿ ಎಂ. ಕೆ. ಇಂದಿರಾ ಅವರು 'ಇಂದಿನ ಕನ್ನಡ ಕಾದಂಬರಿಕಾರ್ತಿಯರು' ಎಂಬ ವಿಷಯವಾಗಿ ಮಾತನಾಡಿದರು. ಕನ್ನಡ ಮಿತ್ರ ಕಲಾವಿದರು "ಅಮ್ಮಯ್ಯನ ಅಟಂಬಾಂಬ್" ನಾಟಕವನ್ನು ಅಭಿನಯಿಸಿದರು.

ಏಳನೆಯ ದಿನ ಶ್ರೀ ಆಸುಂಡಿ ಹುದ್ದಾರ ಕೃಷ್ಣರಾವ್ ಅವರ ಸ್ಮಾರಕ ಹರಿದಾಸ ಸಾಹಿತ್ಯ ನಿಧಿ ಉಪನ್ಯಾಸವಾಗಿ ಪ್ರೊ|| ಎಸ್. ಕೆ. ರಾಮಚಂದ್ರರಾಯರು ಹಾಗೂ ವೈಣಿಕ ವಿದ್ವಾನ್ ಶ್ರೀ ಎಲ್. ರಾಜಾರಾಯರು "ಕರ್ಣಾಟಕ ಸಂಸ್ಕೃತಿಗೆ ಪುರಂದರದಾಸರ ಕೊಡುಗೆ" ಎಂಬ ವಿಷಯವಾಗಿ ಭಾಷಣಮಾಡಿದರು. ಸರ್ವೋದಯ ಪರಿಷತ್ ಕಲಾವಿದರು "ಹೊನ್ನು, ಹೆಣ್ಣು, ಮಣ್ಣು" ಎಂಬ ನಾಟಕವನ್ನು ಅಭಿನಯಿಸಿದರು.

ಕಡೆಯ ದಿನವಾದ ದಿನಾಂಕ ೬ರಂದು ಶ್ರೀಮತಿ ಡಿ. ಎನ್. ಶಾರದಮ್ಮನವರು "ಪುರುಷ ಕವಿಗಳು" ಎಂಬ ವಿಷಯವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಹಿಂದಿನ ವರ್ಷ ಗಮಕ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಅನಂತರ ಜ್ಞಾನಜ್ಯೋತಿ ಕಲಾವಿದರಿಂದ "ಶುದ್ಧಶುಂಠಿ" ಎಂಬ ನಾಟಕಪ್ರದರ್ಶನ ನಡೆಯಿತು. ಕಡೆಯಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ

ಶ್ರೀ ಹಂಪ. ನಾಗರಾಜಯ್ಯನವರು ಒಂದುವಾರ ಅವಿಚ್ಛಿನ್ನ ವಾಗಿ ಕಾರ್ಯಕ್ರಮ ನಡೆಸಿಕೊಟ್ಟ ಎಲ್ಲ ಉಪನ್ಯಾಸಕರು, ಕಲಾವಿದರು ಮತ್ತು ನಾಟಕ ಸಂಸ್ಥೆಯವರಿಗೆ ಪರಿಷತ್ತಿನ ಪರವಾಗಿ ಕೃತಜ್ಞತೆಗಳನ್ನು ಸಮರ್ಪಿಸಿದರು. ಇದರಂತೆಯೇ ಮೂರು ದಿನಗಳ ಮಹಿಳೆಯರ ಕಾರ್ಯಕ್ರಮ ನಡೆಸಬೇಕೆಂದಿರುವುದಾಗಿಯೂ, ಈಗ ನಡೆಸಿದ ವಾರದ ಕಾರ್ಯಕಮಗಳಿಗೆ ಅನೇಕರಿಂದ ಬಂದಿರುವ ಮೆಚ್ಚಿಗೆಯನ್ನು ತಿಳಿಸುತ್ತಾ ಪರಿಷತ್ತು ತನ್ನ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸ್ವಾಗತಿಸುವುದೆಂದೂ ಹೇಳಿದರು.

* * *

ಕವಿ-ಕೃತಿ ದರ್ಶನ : ೨೫ನೆಯ ಉಪನ್ಯಾಸಮಾಲೆ

ರಾಜಾಜಿನಗರದ ವಿದ್ಯಾವರ್ಧಕ ಸಂಘದವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ದಿನಾಂಕ ೧೩ರಂದು ಕವಿ-ಕೃತಿ ದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. "ಪ್ರೊ|| ದೇ. ಜವರೇಗೌಡರ ಸಾಹಿತ್ಯ ಕೃತಿಗಳು" ಎಂಬ ವಿಷಯವಾಗಿ ಶ್ರೀ ಹಂಪ. ನಾಗರಾಜಯ್ಯ ಮತ್ತು ಶ್ರೀ ಅ. ರಾ. ಮಿತ್ರ ಅವರುಗಳು ಪರಿಚಯಾತ್ಮಕ ಉಪನ್ಯಾಸ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಿದ್ದಯ್ಯ ಪುರಾಣಿಕ ಅವರು ವಹಿಸಿದ್ದರು.

ಇದು ವಿದ್ಯಾವರ್ಧಕ ಸಂಘದವರು ನಡೆಸುತ್ತಿರುವ ೨೫ನೆಯ ಉಪನ್ಯಾಸಮಾಲೆ.

ಕಾವ್ಯವಾಚನ : ಶ್ರೀಮತಿ ಶಕುಂತಲಾಬಾಯಿ ಬಾಟ್ನಿ ಅವರಿಂದ

ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ದಿನಾಂಕ ೨೪ ರಂದು ಶ್ರೀಮತಿ ಶಕುಂತಲಾಬಾಯಿ ಬಾಟ್ನಿ ಅವರಿಂದ ಕುಮಾರವ್ಯಾಸ ಭಾರತದ "ದುರ್ವಾಸಾತಿಥ್ಯ" ಕಾವ್ಯ ವಾಚನ ನಡೆಯಿತು. ಶ್ರೀ ಕೃಷ್ಣಮೂರ್ತಿ ಬಾಟ್ನಿಯವರು ವಾಚನದ ಅನುವಾದ ಮಾಡಿದರು.

ಭಾರತ ವಾಚನ ಪ್ರವೀಣ ಶ್ರೀ ಸಂ. ಗೋ. ಬಿಂದೂರಾಯರಿಂದ

ದಿನಾಂಕ ೨೬ರಂದು ಶನಿವಾರ ಸಂಜೆ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಗಮಕ ಶಿಕ್ಷಣ ತರಗತಿಗಳನ್ನು ಮೊದಲು ನಡೆಸಿಕೊಟ್ಟ ಭಾರತ ವಾಚನ ಪ್ರವೀಣ ಶ್ರೀಮಾನ್ ಸಂ. ಗೋ. ಬಿಂದೂರಾಯರು ಕುಮಾರವ್ಯಾಸ ಭಾರತದಿಂದ ಕಾವ್ಯವಾಚನ ಮಾಡಿದರು.

ನಗರದ ಗಮಕ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

* * *

'ಹೊಯಿಸಳ ಅವರ ಕೃತಿಗಳು' ಪರಿಚಯ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ದಿನಾಂಕ ೨೭ರಂದು ಭಾನುವಾರ ಶ್ರೀ ಹೊಯಿಸಳ (ಅರಗಂ ಲಕ್ಷ್ಮಣರಾವ್) ಅವರ ಕೃತಿಗಳನ್ನು ಶ್ರೀ ಬಿ. ಶ್ರೀ ಪಾಂಡುರಂಗರಾಯರು ಪರಿಚಯ ಮಾಡಿಕೊಟ್ಟರು. ಶ್ರೀಮತಿ ಶಂಕುಂತಲಾಬಾಯಿ ಪಾಂಡುರಂಗರಾವ್ ಅವರು ಹೊಯಿಸಳರ ಕವನಗಳನ್ನು ಹಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ

ಸಕಲ ಸದಸ್ಯರ ಸಭೆಯ ಐವತ್ತೊಂದನೆಯ ವಾರ್ಷಿಕಾಧಿವೇಶನ

ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆಯು ದಿನಾಂಕ ೧೩-೮-೧೯೬೭ರಂದು ಬೆಳಗ್ಗೆ ೯-೩೦ ಗಂಟೆಗೆ ಕೃಷ್ಣರಾಜ ಪರಿಷ್ಮನಂದಿರದಲ್ಲಿ ಸೇರಿತ್ತು. ೧೦೫ ಸದಸ್ಯರು ಸಭೆಗೆ ಬಂದಿದ್ದರು.

ಸಭೆಗೆ ಆವಶ್ಯಕ 'ಕೋರಂ' ಆಗಿದೆ ಎಂದು ಸಾರಿ, ಪರಿಷದಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ತಿಳುವಳಿಕೆ ಪತ್ರವನ್ನು ಓದಲು ಕಾರ್ಯದರ್ಶಿಗಳಿಗೆ ಸೂಚಿಸಿದರು. ಪ್ರಾರಂಭದಲ್ಲಿ ಶ್ರೀ ಎಂ. ವಿ. ಸುಬ್ಬರಾಯರು, ಈ ಸಭೆಗೆ ಬೇರೊಬ್ಬರು ಅಧ್ಯಕ್ಷರಾಗಬೇಕೆಂದೂ, ಶ್ರೀ ಜಿ. ಅಶ್ವತ್ಥನಾರಾಯಣ ಅವರ ಹೆಸರನ್ನು ತಾವು ಅಧ್ಯಕ್ಷ ಸ್ಥಾನಕ್ಕೆ ಸೂಚಿಸುವುದಾಗಿಯೂ ಹೇಳಿದರು. ಶ್ರೀ ಡಿ. ಕೆ. ಮೂರ್ತಿಯವರು ಅನುಮೋದಿಸಿದರು.

ಶ್ರೀ ಎಸ್. ಬಿ. ವಸಂತರಾಜಯ್ಯನವರು ಪರಿಷತ್ತಿನ ಅಧ್ಯಕ್ಷರೇ ಸಭೆಯ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವ ಗೌರವಪೂರ್ಣ ಸಂಪ್ರದಾಯವನ್ನು ಬಿಟ್ಟುಕೊಡಬಾರದೆಂದೂ, ಪ್ರೊ. ವೆಂಕಟಸುಬ್ಬಯ್ಯನವರೇ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬೇಕೆಂದೂ ಹೇಳಿದರು. ಶ್ರೀ ಗುಬ್ಬಯ್ಯನವರು ಅನುಮೋದಿಸಿದರು. ಶ್ರೀಯುತರಾದ ಕೋಟಿ ಭಾಸ್ಕರರಾಯರು, ಅಂತೋಣಿಸ್ವಾಮಿ, ಎಚ್. ಶ್ರೀಕಂಠಯ್ಯನವರು, ಮ. ರಾಮನರಸಯ್ಯ, ತೊ. ಸು. ಸುಬ್ರಹ್ಮಣ್ಯಂ, ಪಿ. ರಾಮದೇವ್ ಚರ್ಚೆಯಲ್ಲಿ ಮಾತನಾಡಿ ನಿಬಂಧನೆಯ ಸ್ಪಷ್ಟ ನಿರ್ದೇಶನವಿಲ್ಲದಾಗ, ಪರಿಷತ್ತಿನ ಅಧ್ಯಕ್ಷರೇ ಸಭಾಧ್ಯಕ್ಷತೆ ವಹಿಸುವುದು ಸೂಕ್ತವೆಂದೂ, ಅವರು ಸಭೆಯಲ್ಲಿ ಹಾಜರಿರದಿದ್ದರೆ ಮಾತ್ರ ಬೇರೊಬ್ಬರನ್ನು ಅಧ್ಯಕ್ಷರನ್ನಾಗಿ ಸೂಚಿಸಬಹುದೆಂದೂ ಅಭಿಪ್ರಾಯಪಟ್ಟರು.

ಶ್ರೀ ಎಂ. ವಿ. ಸುಬ್ಬರಾವ್ ಅವರು ಪರಿಷತ್ತಿನ ಗೌರವದ ದೃಷ್ಟಿಯಿಂದ ತಮ್ಮ ಮೂಲ ಸೂಚನೆಯನ್ನು ಹಿಂದೆಗೆದುಕೊಳ್ಳುವುದಾಗಿ ಹೇಳಿದರು. ಪ್ರೊ. ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದರು. ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗಲಿ ಅವರು ತಿಳುವಳಿಕೆ ಪತ್ರವನ್ನು ಓದಿ ಕಾರ್ಯಕಾರೀ ಮಂಡಲದ ಪರವಾಗಿ ವರದಿ–ಆಯವ್ಯಯ ಪತ್ರಿಕೆಗಳನ್ನು ಮಂಡಿಸಿದರು. ಕಾರ್ಯಸೂಚಿಯ ಮೇರೆಗೆ ೧೯೬೬ರ ವರದಿ ಮತ್ತು ಲೆಕ್ಕಪತ್ರಗಳನ್ನು ಕುರಿತ ಚರ್ಚೆಯನ್ನು ಆರಂಭಿಸಲು ಅಧ್ಯಕ್ಷರು ಸದಸ್ಯರನ್ನು ಕೋರಿದರು.

ಶ್ರೀ ಜಿ. ಅಶ್ವತ್ಥನಾರಾಯಣ ಅವರು ವರದಿಯಲ್ಲಿ ವಿಶೇಷವಾದ ಯಾವ ಅಂಶವೂ ಇಲ್ಲವೆಂದರು. ಕಾರ್ಯ ಸಮಿತಿಯ ಸಭೆಯು ಬೆಂಗಳೂರು ಬಿಟ್ಟು ಬೇರೆ ಕಡೆಗೆ ಸೇರದೆ ಇರುವುದು ನಿಬಂಧನೆಯ ಉಲ್ಲಂಘನೆ. ಸದಸ್ಯ ಸಂಪತ್ತು ಕಡಮೆಯಾಗಿದೆ. ಪುಸ್ತಕ ಭಂಡಾರಕ್ಕೆ ೩೮೦ ಪುಸ್ತಕಗಳು ಸೇರಿವೆ ಎಂದು ವರದಿ ಮಾಡಿದರೆ ಸಾಲದು; ಹೇಗೆ ಎಂಬುದನ್ನು ಹೇಳಬೇಕು. ವಾಚನಾಲಯದ ಸ್ಥಿತಿಯು ನಿರಾಶಾಜನಕವಾಗಿದೆ. ವಿವಿಧ ಭಾಗಗಳಲ್ಲಿ ಸಾಹಿತ್ಯ ಪ್ರಚಾರದ ಕಾರ್ಯಕ್ರಮ ನಡೆಯುತ್ತಿದ್ದರೂ ಅವು ಸಮರ್ಪಕವಾಗಿಲ್ಲ; ಏರ್ಪಾಡುಗಳು ಚೆನ್ನಾಗಿಲ್ಲ. ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇಲ್ಲ. ೧೦ನೆಯ ನಿಯಮದ ಪ್ರಕಾರ ಅದು ಈ ಸಭೆಯಲ್ಲಿಯೇ ನಡೆಯಬೇಕು. ಇಲ್ಲವಾದರೆ ನಿಬಂಧನೆಯ ತಿದ್ದುಪಡಿ ಮಾಡಬೇಕು. ಹಣಕಾಸಿನ ಸ್ಥಿತಿ ಶೋಚನೀಯವಾಗಿದೆ. ಸರ್ಕಾರದಿಂದ ಬಂದ ಹಣವನ್ನು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ನಿಘಂಟಿನ ಲೆಕ್ಕವನ್ನೂ ಸದಸ್ಯರಿಗೆ ತಿಳಿಯಪಡಿಸಬೇಕು ಎಂದು ಹೇಳಿದರು.

ಶ್ರೀ ಎಸ್.ಬಿ. ವಸಂತರಾಜಯ್ಯನವರು ವರದಿಯನ್ನು ಸಮರ್ಥಿಸಿ, ಆಡಳಿತ ವರ್ಗದ ಒಳ್ಳೆಯ ಕೆಲಸಗಳನ್ನು ಅದು ಎತ್ತಿ ತೋರಿಸುತ್ತದೆ. ಸಾಹಿತ್ಯ ಕಾರ್ಯಗಳಿಗೆ ಪರಿಷತ್ತು ಕೇಂದ್ರವಾಗಿ ನಿಂತ ಲಕ್ಷಣಗಳು ವರದಿಯಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ತಮಗೆ ದೊರೆತಷ್ಟೇ ಅನುಕೂಲಗಳಲ್ಲಿ ಅವರು ಒಳ್ಳೆಯದನ್ನು ಸಾಧಿಸಿದ್ದಾರೆ. ಸರಕಾರದ ವಾರ್ಷಿಕ ಸಹಾಯ ಧನವನ್ನು ೨೫೦೦ ದಿಂದ ೨೫೦೦೦ ದ ವರೆಗೆ ಹೆಚ್ಚಿಸಿದ್ದು ಪರಿಷತ್ತಿನ ಚರಿತ್ರೆಯಲ್ಲಿ

ನೆನಪುಳಿಯುವಂಥ ಸಂಗತಿಯಾಗಿದೆ. ಒಳ್ಳೆಯ ಕಾರ್ಯಗಳನ್ನು ತುಂಬು ಮನಸ್ಸಿನಿಂದ ಒಪ್ಪಿಕೊಳ್ಳುವ ಸಹೃದಯತೆಯನ್ನೂ ನಾವು ತೋರಿಸಬೇಕು; ಪರಿಷತ್ತಿನ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು—ಎಂದರು.

ಶ್ರೀ ಗುಬ್ಬಯ್ಯನವರು, ವರದಿಯನ್ನು ಅನುಮೋದಿಸುತ್ತ ಅದರಲ್ಲಿಯ ಕೆಲವು ಲೋಪಗಳನ್ನು ಎತ್ತಿ ತೋರಿಸಿದರೆ, ಪರಿಷತ್ತಿನ ಹಾಗೂ ಅಧ್ಯಕ್ಷರ ಮೇಲಿನ ನನ್ನ ವಿಶ್ವಾಸ-ಅಭಿಮಾನಗಳು ಕಡಮೆ ಎಂಬುದಾಗಿ ಯಾರೂ ಭಾವಿಸಕೂಡದು ಎಂದು ಹೇಳಿ, ಸಾಮಾನ್ಯ ಸದಸ್ಯರ ಸಂಖ್ಯೆ ೫೮೯ರಿಂದ ೩೭೯ಕ್ಕೆ ಇಳಿದಿದೆ. ಇದು ಶೋಚನೀಯ. ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಅದು ಕಡಮೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಬೇಕು. ಸರ್ಕಾರದ ಒಪ್ಪಿಗೆ ಇಲ್ಲದೆ ನಿಘಂಟಿಗೆ ಕಟ್ಟಡವನ್ನು ಕಟ್ಟಿಸಿರುವುದು ಕ್ರಮಬದ್ಧವಲ್ಲ. ನಿಘಂಟಿನ ಕಾರ್ಯದಲ್ಲಿ ವಿಳಂಬವಾಗುತ್ತಿರುವುದು ವಿಷಾದಕರ. ಅದು ಜಾಗ್ರತೆ ಹೊರಬರುವಂತೆ ಶ್ರಮಿಸಬೇಕು. ಇದರಲ್ಲಿ ಪರಿಷತ್ತಿನ ಘನತೆಯ ಪ್ರಶ್ನೆ ಇದೆ—ಎಂದು ಹೇಳಿ ಸಭೆಯ ಪ್ರಾರಂಭದ ವಿದ್ಯಮಾನಗಳನ್ನು ಉಲ್ಲೇಖಿಸಿ ಪರಿಷತ್ತಿಗೆ ಅಗೌರವವನ್ನುಂಟು ಮಾಡುವ ಇಂಥ ಸಂದರ್ಭಗಳು ಒದಗಬಾರದು ಎಂದರು.

ಶ್ರೀ ಶ್ರೀವತ್ಸ ಅವರು ವರದಿಯಲ್ಲಿಯ ಮುದ್ರಣ ದೋಷಗಳನ್ನು ಸಭೆಯ ಗಮನಕ್ಕೆ ತಂದರು. ಜಮಾ ಖರ್ಚಿನಲ್ಲಿ ೩೯೫ ಸಾಮಾನ್ಯ ಸದಸ್ಯರನ್ನು ತೋರಿಸಿ ಸದಸ್ಯರ ಸಂಖ್ಯೆಯಲ್ಲಿ ೩೭೯ ಎಂದದ್ದು ಸರಿಯೇ? ನಿಘಂಟಿನ ಮೂರು ಸಂಚಿಕೆಗಳು ಬಂದಿವೆ ಎಂದು 'ಹಣಕಾಸಿನ ಸ್ಥಿತಿ' ಯಲ್ಲಿ ಹೇಳಲಾಗಿದೆ. ಆದರೆ ವರದಿಯ ಅವಧಿಯಲ್ಲಿ ಬಂದದ್ದು ಎರಡೇ ಅಲ್ಲವೇ? ಎಂದು ಪ್ರಶ್ನಿಸಿದರು. ಉಪ ಸಮಿತಿಗಳು ಸರಿಯಾಗಿ ಕೆಲಸ ಮಾಡಿಲ್ಲ, ನಿಘಂಟಿನ ಲೆಕ್ಕ-ಪತ್ರಗಳನ್ನು ಇದರಲ್ಲಿ ಸೇರಿಸಿಲ್ಲ. ಇಂಥ ವರದಿ, ಆಯ-ವ್ಯಯ ಪತ್ರಿಕೆಯನ್ನು ನಾವು ಹೇಗೆ ಒಪ್ಪಬೇಕು? ಎಂದರು.

ಶ್ರೀ ಕೋಟೆ ಭಾಸ್ಕರರಾಯರು ಮಾತನಾಡಿ, ಪರಿಷತ್ತಿನ ಅಂಗರಚನೆಯ ತಿದ್ದುಪಡಿಯ ಬಗ್ಗೆ ವರದಿಯಲ್ಲಿ ಉಲ್ಲೇಖಿಸಿದಂತೆ ಸೂಕ್ತ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಬೇಕು. ಪರಿಷತ್ತಿನ ಕಾರ್ಯಕ್ರಮಗಳ ಬಗ್ಗೆ ಎಲ್ಲ ಸದಸ್ಯರಿಗೆ ತಿಳುವಳಿಕೆ ಕೊಡಬೇಕು. ವಾಚನಾಲಯದಲ್ಲಿ ಪತ್ರಿಕೆಗಳು ವ್ಯವಸ್ಥಿತವಾಗಿ ದೊರೆಯುವಂತೆ ಏರ್ಪಾಟು ಮಾಡಬೇಕು ಎಂದರು.

ಶ್ರೀ ಡಿ. ಮಾಧವಮೂರ್ತಿಯವರು ವರದಿಯ ಪ್ರಾರಂಭದಲ್ಲಿ ಉಲ್ಲೇಖಿಸಿದ ನಿಧನ ಹೊಂದಿದ ಮಹಾವ್ಯಕ್ತಿಗಳ ಬಗ್ಗೆ ಗೌರವ ಸಲ್ಲಿಸಲು ಎರಡು ನಿಮಿಷ ಮೌನ ಆಚರಿಸಬೇಕೆಂದು ಅಧ್ಯಕ್ಷರಿಗೆ ವಿನಂತಿಸಿಕೊಂಡರು. ಸಭೆಯು ಎರಡು ನಿಮಿಷ ಎದ್ದು ನಿಂತು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿತು.

ಮುಂದೆ, ಅಧಿಕಾರ ವರ್ಗದವರು ತುಂಬ ಸಮರ್ಪಕವಾಗಿ ಕೆಲಸ ಮಾಡಿದ್ದಾರೆಂಬುದನ್ನು ವರದಿಯು ಸಮರ್ಪಿಸುತ್ತದೆ, ಅದು ಪ್ರಾಮಾಣಿಕವಾಗಿದೆ ಎಂದು ಹೇಳಿದರು.

ಶ್ರೀ ಪಿ. ಎನ್. ರೆಡ್ಡಿಯವರು, ಕಾರ್ಯಕಾರಿ ಸಮಿತಿಯವರು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿ ತೋರಿಸಿದ್ದಾರೆ. ಅವರಿಗೆ ನಮ್ಮ ಬೆಂಬಲವಿದೆ. ಸಕಲ ಸದಸ್ಯರ ಸಭೆಯನ್ನು ಒಳಗೊಂಡು ಪರಿಷತ್ತಿನ ಎಲ್ಲ ಕಾರ್ಯಕ್ರಮಗಳೂ ಪತ್ರಿಕೆಯಲ್ಲಿ (ನಗರದಲ್ಲಿ ಇಂದು) ಶೀರ್ಷಿಕೆಯಲ್ಲಿ ಪ್ರಕಟವಾದರೆ ಸದಸ್ಯರಿಗೆ ಅನುಕೂಲ ಎಂದು ಸೂಚಿಸಿದರು.

ಶ್ರೀ ಸಿ. ಲ. ಭೈರಣ್ಣನವರು ಮಾತನಾಡಿ, ಪರಿಷತ್ತಿನಿಂದ ಬರುವ ಕಾಗದ ಪತ್ರಗಳು ಕನ್ನಡ ವಿಳಾಸಗಳನ್ನು ಹೊಂದಿರಬೇಕು ಎಂದರು.

ಶ್ರೀ ಹ. ಸು. ನಾಗೇಂದ್ರ ಅವರು ಹೀಗೆ ಹೇಳಿದರು: ಲೆಕ್ಕ ಪರಿಶೋಧಕರ ವರದಿಗೆ ಪರಿಷತ್ತಿನ ಅಧಿಕಾರ ವರ್ಗದವರು ಕೊಡುವ ಉತ್ತರಗಳು ಇನ್ನೂ ಖಚಿತವಾಗಿರಬೇಕು. ಪುಟ ೪೫ರಲ್ಲಿ ಪರಿಷತ್ತಿನ ಆಸ್ತಿ ಹೊಣೆಯ ಪಟ್ಟಿಯಲ್ಲಿ ಅಚ್ಚುಕೂಟಕ್ಕೆ ಕೊಡಬೇಕಾಗಿದ್ದ ೨೭೯೨೨ ರೂ. ಎಂದೂ ಅಚ್ಚುಕೂಟದ ಆಸ್ತಿ ಹೊಣೆಯಲ್ಲಿ ಅದೇ ಮೊತ್ತವನ್ನು ೨೯೪೫೨ ರೂ. ಎಂದಿದೆ. ನೆರವು ನಿಧಿಯಲ್ಲಿ ೪೧೪೮-೯೫ ಎಂದಿದ್ದು, ಅದೇ ಲೆಕ್ಕದ ಬ್ಯಾಂಕಿನಲ್ಲಿಟ್ಟ ಹಣವು ೨೦೦೦ ರೂ. ಇದೆ. ಇದರ ವಿವರಗಳನ್ನು ಕೊಡಬೇಕೆಂದು ವಿನಂತಿಸಿಕೊಂಡರು. ಅಂದಾಜು ಪಟ್ಟಿಯನ್ನು ಕೊಡುವಾಗ ಹಿಂದಿನ ವರ್ಷದ ಅಂದಾಜನ್ನೂ ವರದಿಯಲ್ಲಿ ಕೊಡಬೇಕೆಂದು ಸೂಚಿಸಿದರು.

ಶ್ರೀ ತೊ. ಸು. ಸುಬ್ರಹ್ಮಣ್ಯಂ ಅವರು ವರದಿಯ ಬಗ್ಗೆ ಈ ರೀತಿ ಹೇಳಿದರು: ಸದಸ್ಯ ಸಂಪತ್ತು ಹೆಚ್ಚಬೇಕು. ಉಪಸಮಿತಿಗಳು ಇನ್ನೂ ಕಾರ್ಯಪ್ರದವಾಗಬೇಕು. ಪರಿಷತ್ಪತ್ರಿಕೆ ಇನ್ನೂ ಪುಷ್ಟವಾಗಬೇಕು. ಕನ್ನಡ ನುಡಿ ಚೆನ್ನಾಗಿ ಬರುತ್ತಿದೆ. ಗಮಕ ಪ್ರವೇಶ ತರಗತಿಯ ಅಭ್ಯರ್ಥಿಗಳ ಸಂಖ್ಯೆ ಕಡಮೆ. ಭಾಷಣ ಕಲಾ ತರಗತಿಗೆ

ಒಬ್ಬರಿಗಿಂತ ಇಬ್ಬರು, ಮೂವರನ್ನು ಬೋಧಕರನ್ನಾಗಿ ನಿಯಮಿಸಬೇಕು. ದತ್ತಿ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ ಸಾಹಿತಿಗಳೊಬ್ಬರಿಂದ ಹಸ್ತಪ್ರತಿ ಇನ್ನೂ ಬಂದಿಲ್ಲ. ಕೂಡಲೇ ಅವರಿಂದ ಪಡೆದು ಅದನ್ನು ಪ್ರಕಟಿಸಬೇಕು. ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಸದಸ್ಯರಿಗೆ ಕಳಿಸಬೇಕು. ನಿಘಂಟಿನ ಪ್ರಗತಿ ಈಚಿಗೆ ಗಮನಾರ್ಹವಾಗಿ ನಡೆದಿದೆ. ಲೆಕ್ಕಶೋಧಕರ ವರದಿಗೆ ಉತ್ತರಗಳು ಇನ್ನೂ ಸ್ಪಷ್ಟವಾಗಿರಬೇಕು. ಇಂಥ ಲೋಪಗಳಿದ್ದರೂ ಈ ವರ್ಷದ ವರದಿ ಮತ್ತು ಲೆಕ್ಕಪತ್ರಗಳು ಪ್ರಗತಿದರ್ಶಕವಾಗಿವೆ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ಶ್ರೀ ಮ. ರಾಮಮೂರ್ತಿ ಅವರು ಈ ರೀತಿ ಹೇಳಿದರು: ೧೯ನೆಯ ಪುಟದಲ್ಲಿ ಅಂಗರಚನೆಯ ಬಗ್ಗೆ ಹೇಳಲಾಗಿದೆ, ತಜ್ಞರ ಸಮಿತಿ ಆಯಿತು. ಪ್ರತಿಸಲವೂ ಸಕಲ ಸದಸ್ಯರ ಸಭೆಯಲ್ಲಿ ಈ ಚರ್ಚೆ ನಡೆಯುತ್ತಲೇ ಇದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಪ್ರದೇಶಗಳು ಹನ್ನೊಂದು ವರ್ಷಗಳ ಹಿಂದೆ ಒಟ್ಟುಗೂಡಿ ಕರ್ನಾಟಕವಾಗಿದ್ದರೂ, ಪರಿಷತ್ತಿನಂಥ ಅಖಿಲ ಕರ್ನಾಟಕದ ಏಕಮೇವ ಸಾಂಸ್ಕೃತಿಕ ಸಂಸ್ಥೆಯು ತನ್ನ ಅಂಗರಚನೆಯಲ್ಲಿ ಆ ವಿಭಿನ್ನತೆಗಳನ್ನು ಹಾಗೆಯೇ ಉಳಿಸಿಕೊಂಡದ್ದು ಬಹಳ ದುಃಖಕರ ಸಂಗತಿ. ಇಂಥ ಅಂಗರಚನೆ ಇರುವಾಗ ಚುನಾವಣೆ ನಡೆದರೆ ಅಖಿಲ ಕರ್ನಾಟಕದ ಪ್ರಾತಿನಿಧ್ಯ ಪರಿಷತ್ತಿಗೆ ಸಿಕ್ಕಂತೆ ಆಗದು. ಮೊದಲು ಅಂಗರಚನೆಯ ತಿದ್ದುಪಡಿ ಆಗಲಿ. ಅದನ್ನು ಎಲ್ಲ ಸದಸ್ಯರು ಒಪ್ಪಿದ ನಂತರವೇ ಚುನಾವಣೆ ನಡೆಯಲಿ.

ಶ್ರೀ ಎಂ. ವಿ. ಸುಬ್ಬರಾಯರು ಹೀಗೆ ಹೇಳಿದರು: ನಿಘಂಟಿನ ಮೂರು ಸಂಚಿಕೆಗಳು ಬಂದಿವೆ ಎಂದು ಹೇಳುವುದು ಸುಳ್ಳು. ಒಂದೂವರೆ ಲಕ್ಷ ರೂಪಾಯಿ ಸರಕಾರದಿಂದ ಬಂದಿದ್ದು ಅದರ ಲೆಕ್ಕವೆಲ್ಲಿ? ೬೮ ಸಾವಿರ ರೂಪಾಯಿ ಹೇಗೆ ಖರ್ಚಾಗಿದೆಯೆಂಬುದನ್ನು ನಾವು ತಿಳಿಯಬೇಕು. ಕಾವ, ಜಾಣ ಪರೀಕ್ಷೆಗಳನ್ನು ನಡೆಸಿಲ್ಲ. ಗಮಕ ತರಗತಿಗೆ ಇನ್ನೂ ಪ್ರೋತ್ಸಾಹ ಹೆಚ್ಚಬೇಕು. ಪರಿಷತ್ತು ಸರ್ಕಾರಕ್ಕೆ ಒತ್ತಾಯಪಡಿಸಬೇಕು. ವಾಚನಾಲಯದಲ್ಲಿ ಪತ್ರಿಕೆಗಳು ಸರಿಯಾಗಿ ಸಿಗುತ್ತಿಲ್ಲ. ಅದು ಸುವ್ಯವಸ್ಥೆ ಗೊಳ್ಳಬೇಕು. ಕುವೆಂಪು ಸನ್ಮಾನವು ತಡವಾಗಿ ಏರ್ಪಟ್ಟಿತು. [ಸಭೆಯ ಒತ್ತಾಯದ ಮೂಲಕ ಬಳಸಿದ ಕೆಲವು ಅಸಹ್ಯ ಮಾತುಗಳನ್ನು ಅವರು ಹಿಂದೆಗೆದುಕೊಂಡರು.] ನೌಕರರಿಗೆ ಉಡುಪು ಕೊಡಬೇಕು. ಅವರಿಗೆ ಬೋನಸ್ಸು ಕೊಡಬೇಕು.

ಶ್ರೀ ಗೊರೂರು ಶ್ರೀನಿವಾಸಮೂರ್ತಿಯವರು ಈ ರೀತಿ ಹೇಳಿದರು: ಕಾಲೇಜ್ ವಿದ್ಯಾರ್ಥಿಗಳನ್ನು ಸದಸ್ಯರಾಗುವಂತೆ ಪ್ರಚಾರ ಮಾಡಬೇಕು. ಕನ್ನಡ ನುಡಿಯ ತೀ. ನಂ. ಶ್ರೀ ಸಂಚಿಕೆ ಉತ್ತಮವಾದದ್ದು. ಸಂಪಾದಕ ಮಂಡಲಿಯು ಅಭಿನಂದನಾರ್ಹ.

ಶ್ರೀ ಜಿ. ವಿ. ಶಿವಸ್ವಾಮಿಯವರು ಹೇಳಿದ್ದು: ಕನ್ನಡ ರತ್ನ ಪರೀಕ್ಷೆಗೆ ಕಟ್ಟಬಯಸುವವರು ಎಸ್.ಎಸ್ ಎಲ್.ಸಿ. ಆದವರಿರಬೇಕೆಂಬ ನಿಯಮವಿದೆ. ಆದರೆ ರತ್ನ ಪರೀಕ್ಷೆ ಮತ್ತು ಎಸ್. ಎಸ್. ಎಲ್.ಸಿ. ಆದವರಿಗೆ ಸರ್ಕಾರದ ದೃಷ್ಟಿಯಲ್ಲಿ ಒಂದೇ ಸ್ಥಾನಮಾನವಿದ್ದರೆ ಇದರ ಉಪಯೋಗವಾದರೂ ಏನು? ಪರಿಷತ್ತಿನ ಸತ್ಕಾರ ಸಮಾರಂಭಗಳಿಗೆ ಎಲ್ಲ ಸದಸ್ಯರಿಗೂ ಆಹ್ವಾನ ಪತ್ರಿಕೆ ಕಳಿಸಬೇಕು. ಕನ್ನಡ ರಾಜ್ಯೋತ್ಸವವನ್ನು ವಿಶೇಷ ವಿಜೃಂಭಣೆಯಿಂದ ಆಚರಿಸಬೇಕು.

ಶ್ರೀ ಕೆ. ಎನ್. ಶ್ರೀಹರಿಯವರು ವರದಿ ಮತ್ತು ಲೆಕ್ಕ-ಪತ್ರಗಳಿಗೆ ತಮ್ಮ ಅನುಮೋದನವನ್ನು ಕೊಟ್ಟರು.

ಶ್ರೀ ಎಸ್. ಶಂಕರಪ್ಪನವರು ಈ ರೀತಿ ಮಾತಾಡಿದರು: ದತ್ತಿ ನಿಧಿಯ ಕಾರ್ಯಕ್ರಮಗಳಲ್ಲಿ ಕೆಲವನ್ನು ಬಿಡಲಾಗಿದೆ. ಎಸ್. ಎಸ್. ಎಲ್. ಸಿ. ಪಾಸಾದವರೇ ರತ್ನ ಪರೀಕ್ಷೆಗೆ ಕಟ್ಟಬಹುದೆಂಬ ನಿಯಮ ಮಾಡಲಾಗಿದೆ. ಅದಕ್ಕೆ ಸಮಾನವಾಗಿರುವ ಸಂಸ್ಕೃತ ಪರೀಕ್ಷೆ ಪಾಸಾದವರಿಗೆ ಯಾಕೆ ಅವಕಾಶವಿಲ್ಲ? ಕಾಳಿದಾಸ ಜಯಂತಿಯ ಕಾರ್ಯಕ್ರಮಗಳ ಏರ್ಪಾಟಿನಲ್ಲಿ ಸಂಸ್ಕೃತ ಪಂಡಿತರಿಗೆ ಅವಕಾಶ ಮಾಡಿಕೊಟ್ಟಿಲ್ಲ. ಸದಸ್ಯರ ಸಂಪತ್ತನ್ನು ಬೆಳೆಸಲು ಪ್ರಯತ್ನಿಸಬೇಕು.

ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರು ಪರಿಷತ್ಪತ್ರಿಕೆಯ ಗಾತ್ರವಾಗಲೀ, ಸತ್ವವಾಗಲೀ ಕಡಮೆಯಾಗಿಲ್ಲವೆಂದು ಹೇಳಿದರು.

ಶ್ರೀ ಶ್ರೀನಿವಾಸಾಚಾರ್ಯರು ಹೀಗೆ ಹೇಳಿದರು: ಸರಕಾರದಿಂದ ಬರುವ ಸಹಾಯ ಇನ್ನೂ ಹೆಚ್ಚಬೇಕು. ಸಭಾಂಗಣ ದೊಡ್ಡದಾಗಬೇಕು. ಪರಿಷತ್ತು ಸ್ವಂತ ಒಂದು ಧ್ವನಿವರ್ಧಕವನ್ನು ಇಟ್ಟುಕೊಳ್ಳಬೇಕು. ಪರಿಷತ್ತು ರಚನಾತ್ಮಕ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿಸಬೇಕು.

ಶ್ರೀ ಅಂತೋಣಿಸ್ವಾಮಿ: ಕಾರ್ಯಸಮಿತಿಯ ಸಭೆಗಳನ್ನು ಎರಡು ತಿಂಗಳಿಗೊಮ್ಮೆ ಕರೆಯಬೇಕು. ನಿಘಂಟು ಲೆಕ್ಕದ ಖರ್ಚು ೬೮,೦೦೦ ರೂ. ಎಂದಿಷ್ಟೇ ಹೇಳಿದೆ. ಎಲ್ಲ ವಿವರಗಳನ್ನೂ ಮುದ್ರಿಸಬೇಕು.

ಶ್ರೀ ಸಿ. ಎಸ್. ನರಸಿಂಹನ್: ನಿಘಂಟಿನ ಕಾರ್ಯವನ್ನು ಬೇರೆ ಯಾರಿಗೂ ವಹಿಸಿಕೊಡದೆ ಪರಿಷತ್ತು ತಾನೇ ಪೂರೈಸಬೇಕು. ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಅಧ್ಯಕ್ಷರು ಪತ್ರಿಕಾ ಹೇಳಿಕೆಗಳನ್ನು ಪ್ರಕಟಿಸುತ್ತಿರಬೇಕು.

ಶ್ರೀ ನಾರಾಯಣ್ (ನಾಣಿ): ನಾಟಕ ಪ್ರಯೋಗಗಳಿಗಾಗಿ ರಂಗಮಂಟಪದಲ್ಲಿ ಸಲಕರಣೆಗಳು ಇನ್ನೂ ಹೆಚ್ಚಬೇಕು.

ಶ್ರೀ ಮ. ಗ. ಶೆಟ್ಟಿ: ನಿಘಂಟು ಕಾರ್ಯ ತ್ವರಿತಗೊಳ್ಳಬೇಕು. ಶ್ರದ್ಧಾವಂತ, ಕಾರ್ಯನಿಷ್ಠ ಕೆಲಸಗಾರರು ಅದರಲ್ಲಿ ಸೇರಬೇಕು.

ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು: ಪರಿಷತ್ಪತ್ರಿಕೆ ನಿಯಮಿತವಾಗಿ ಪ್ರಕಟವಾಗಬೇಕು. ದತ್ತಿ ಉಪನ್ಯಾಸಗಳು ಗಡಿ ವಿಭಾಗದಲ್ಲಿ ನಡೆಯಬೇಕು. ರಾಜ್ಯೋತ್ಸವ ಹೆಚ್ಚು ವಿಜೃಂಭಣೆಯಿಂದ ನಡೆಸಬೇಕು. ಕಾಳಿದಾಸ ಜಯಂತಿಯನ್ನು ನಾಡಿನ ನಾನಾ ಭಾಗಗಳಲ್ಲಿ ಏರ್ಪಡಿಸಬೇಕು.

ಶ್ರೀ ಆರ್. ಎಚ್. ರಾಜು: ಸದಸ್ಯರನ್ನು ಹೆಚ್ಚಿಸುವುದು ನಮ್ಮೆಲ್ಲರ ಕರ್ತವ್ಯ. ಅಂಗರಚನೆಯ ತಿದ್ದುಪಡಿ ಮೊದಲು ಆಗಬೇಕು.

ಶ್ರೀ ಎ. ಎಸ್. ಮೂರ್ತಿ: ಅಂಗಸಂಸ್ಥೆಗಳನ್ನು ಪರಿಷತ್ತು ಪೋಷಿಸಬೇಕು. ನಾಟಕ ಕಲೆಗೆ, ಪ್ರಯೋಗಗಳಿಗೆ ಹೆಚ್ಚಿನ ಉತ್ತೇಜನ ದೊರೆಯುವಂತಾಗಲಿ. 'ನಾಟಕ ಉಪಸಮಿತಿ' ರಚಿತವಾಗುವುದು ಅವಶ್ಯ. ಸಭಾಂಗಣದ ಬಾಡಿಗೆ ಕಡಮೆ ಮಾಡಿರಿ. ಇಡುಗಂಟು ತೆಗೆದುಕೊಳ್ಳುವ ಅಗತ್ಯವಿಲ್ಲ.

ಅನಂತರ ಕೋಶಾಧಿಕಾರಿಗಳಾದ ಶ್ರೀ ಎನ್. ವರದರಾಜನ್ ಅವರು ವರದಿ ಮತ್ತು ಲೆಕ್ಕಪತ್ರಗಳ ಬಗ್ಗೆ ಸದಸ್ಯರು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಿ, ನಿಘಂಟು ಲೆಕ್ಕಪತ್ರದ ಜಮಾ-ಖರ್ಚನ್ನು ಸಭೆಯಲ್ಲಿ ಓದಿದರು. ಯಾವುದೇ ಅಂಶವನ್ನು ಕುರಿತ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಸದಸ್ಯರು ಕೇಳಬಹುದೆಂದೂ ತಾವು ಉತ್ತರಿಸುವುದಾಗಿಯೂ ಹೇಳಿದರು. ವರದಿ ಲೆಕ್ಕ-ಪತ್ರಗಳ ಮಿಕ್ಕ ವಿಚಾರಗಳನ್ನು ಕುರಿತು ಅಧ್ಯಕ್ಷರು ಈ ರೀತಿ ಹೇಳಿದರು:

ಮೈಸೂರು ಮದ್ರಾಸು ಮೊದಲಾದ ಕಡೆಗಳಿಂದ ನಿಘಂಟು ಸಮಿತಿಯ ಕಾರ್ಯಕ್ಕಾಗಿ ಆಗಮಿಸಿದ ಹಿರಿಯ ವಿದ್ವಾಂಸರು, ಸಾಹಿತ್ಯ ಸಮ್ಮೇಳನದ ಹಿಂದಿನ ಅಧ್ಯಕ್ಷರೂ ಪರಿಷತ್ತಿನ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದವರೂ ಅನೇಕ ರೀತಿಯಲ್ಲಿ ನನಗೆ ಮಾರ್ಗದರ್ಶಕರೂ ಆಗಿರುವ ವಯೋವೃದ್ಧರು, ಸರ್ಕಾರದ ಮುಖ್ಯ ಹುದ್ದೆಗಳಲ್ಲಿ ಕಾರ್ಯಮಾಡಿ ನಿವೃತ್ತಿ ಹೊಂದಿರುವ ಅಧಿಕಾರಿಗಳು, ಲೆಕ್ಕಪತ್ರಗಳಲ್ಲಿ ಮತ್ತು ಆಡಳಿತ ವಿಷಯಗಳಲ್ಲಿ ಅನುಭವ ಪಡೆದ ನಾಡು-ನುಡಿಯ ಅಭಿಮಾನಿಗಳು ತರುಣ-ಉತ್ಸಾಹಿ ಕಾರ್ಯಕರ್ತರು-ಇವರಿಂದ ತುಂಬಿದ ಈ ಸಕಲ ಸದಸ್ಯರ ಸಭೆಯನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಕಳೆದುಹೋದ ಶಕ್ತಿ ಮತ್ತೆ ಬಂದಂತಾಗಿದೆ. ತಮಗೆಲ್ಲಾ ಹೃತ್ಪೂರ್ವಕ ಪ್ರಣಾಮಗಳು. ಈ ಆಸಕ್ತಿಯನ್ನೂ ಪರಿಷತ್ತಿನ ಮೇಲಿನ ಅಭಿಮಾನವನ್ನೂ ತಾವು ಮುಂದೆಯೂ ಉಳಿಸಿಕೊಂಡು ಹೋಗಬೇಕೆಂದು ಬೇಡುತ್ತೇನೆ.

ಪರಿಷತ್ತಿನ ಕಾರ್ಯವು ಮುಳ್ಳುಹಾಸಿಗೆ. ಕಾದ ಕಬ್ಬಿಣ, ದುಃಖ-ದುಮ್ಮಾನಗಳ ಅರವಟ್ಟಿಗೆ ಎಂಬುದನ್ನು ಹಿಂದಿನ ಅಧ್ಯಕ್ಷರಾದವರೆಲ್ಲಾ ಅನುಭವಿಸಿದ್ದಾರೆ. ಸರಸ್ವತಿಯ ಆವಾಸಸ್ಥಾನದಲ್ಲಿಯೂ ಇಂಥ ಪರಿಸ್ಥಿತಿ ಇದೆಯೇ ಎಂದು ತಾವು ಸಂದೇಹ ಪಡಬೇಕಾಗಿಲ್ಲ. ಇದೀಗ ಕಣ್ಣಾರೆ ಹಲವು ವಿದ್ಯಮಾನಗಳನ್ನು ಈ ಸಭೆಯಲ್ಲಿ ಕಂಡಿದ್ದೀರಿ. ಸಾಹಿತ್ಯ–ಸಂಸ್ಕೃತಿ ಭಕ್ತರ ಕೂಟವಾಗಬೇಕಾದ ಪರಿಷತ್ತಿನಲ್ಲಿ ಸಹೃದಯತೆ ಸಭ್ಯತೆಗೆ ಅಗ್ರಸ್ಥಾನವೀಬೇಕೆಂಬುದನ್ನು ನಮ್ಮ ಕೆಲವು ಸದಸ್ಯರು ತಿಳಿಯಬೇಕು. ಆರು ರೂಪಾಯಿ ಕೊಟ್ಟು ಸದಸ್ಯರಾಗಿ ಸದಸ್ಯತ್ವದ ಹಕ್ಕು ಪಡೆಯಬಹುದು. ಆದರೆ ಅದರೊಡನೆ ಒಂದು ಬಾಧ್ಯತೆಯೂ ಇದೆ ಎಂದೂ ತಿಳಿದರೆ ಒಳಿತು. ಪರಿಷತ್ತಿನ ಸದಸ್ಯತ್ವವು ತನ್ನ ಗೌರವವನ್ನು ಕಾಪಾಡಿಕೊಳ್ಳಬೇಕಾದರೆ ಅದು ತನ್ನ ಸತ್ವವನ್ನೂ ಶೀಲವನ್ನೂ ಬೆಳೆಸಿಕೊಳ್ಳಬೇಕು. ಪರಸ್ಪರ ವಿಶ್ವಾಸ ಹೊಂದಿ ಕೆಲಸ ಮಾಡುವ ಮನೋಧರ್ಮ, ನಾಡು ನುಡಿಯ ಏಳ್ಗೆಗಾಗಿ ಶ್ರಮಿಸಬೇಕೆಂಬ ಛಲ, ನಿಷ್ಠೆ ಅವು ಇಂಥ ಸಂಸ್ಥೆಯ ಸದಸ್ಯರಲ್ಲಿರಬೇಕಾದ ಕೆಲವು ಆವಶ್ಯಕ ಗುಣಗಳು. ವಿದ್ಯಾವಿಹೀನ ಅನಾಗರಿಕ ವೃತ್ತಿ ಪರಿಷತ್ತಿನ ಸದಸ್ಯತ್ವಕ್ಕೆ ಅಪಚಾರವೆಂಬುದನ್ನು ತಾವು ತಿಳಿದವರೇ ಆಗಿದ್ದೀರಿ. ಇಂದಿನ

ಸಭೆಯ ಪ್ರಾರಂಭದಲ್ಲಿ ಒಬ್ಬಿಬ್ಬ ಸದಸ್ಯರು ತೋರಿಕೊಂಡ ವರ್ತನೆ ತಮ್ಮಂತೆ ನನಗೂ ವ್ಯಥೆಯನ್ನುಂಟು ಮಾಡಿದೆ.

ಪರಿಷತ್ತಿನ ನಿತ್ಯ ವ್ಯವಹಾರದಲ್ಲಿಯೂ ಇದೇ ಕಷ್ಟ. ತಮ್ಮ ಹಕ್ಕು ಬಾಧ್ಯತೆಗಳ ಹೆಸರಿನಲ್ಲಿ ಇವರು ಪರಿಷತ್ತಿನ ಶಾಂತ ಸುಸಂಸ್ಕೃತ ವಾತಾವರಣವನ್ನು ಕದಡಿ ಆಡಳಿತಕ್ಕೆ ವಿಘ್ನವನ್ನು ತಂದೊಡ್ಡುವುದರಲ್ಲಿ ಸದಾ ನಿರತರಾಗಿರುತ್ತಾರೆ. ಪತ್ರಿಕೆಗಳಲ್ಲಿ ಸುಳ್ಳು ವಿವರಗಳು ಬರೆದು ಸರಕಾರದ ಇಲಾಖೆಗಳಿಗೆ ತಪ್ಪು ವಿಷಯಗಳನ್ನು ತಿಳಿಸಿ ತಮ್ಮ ಅಜ್ಞಾನವನ್ನೂ ವಿನಾಶಕಾರಕ ಪ್ರವೃತ್ತಿಯನ್ನೂ ಪ್ರದರ್ಶಿಸುತ್ತಾರೆ. ಇಂಥವರ ವರ್ತನೆಯಿಂದ ಪರಿಷತ್ತು ತನ್ನ ಪಾವಿತ್ರ್ಯವನ್ನೂ ಕಾರ್ಯಶಕ್ತಿಯನ್ನೂ ಕಳೆದುಕೊಳ್ಳುವ ಸೂಚನೆಗಳು ತಮ್ಮಂತೆ ನನಗೂ ಕಾಣಬರುತ್ತಿವೆ. ಸಕಲ ಸದಸ್ಯರ ಸಭೆಯ ಗಮನಕ್ಕೆ ಈ ವಿಷಾದಕರ ಅಂಶವನ್ನು ತರಲು ನನಗೆ ವ್ಯಥೆಯಾಗುತ್ತದೆ.

ವರದಿ ಮತ್ತು ಲೆಖ್ಖಪತ್ರಗಳ ಮೇಲೆ ತಾವು ವ್ಯಕ್ತಪಡಿಸಿದ ಅಮೂಲ್ಯವಾದ ವಿಚಾರಗಳೆಲ್ಲವನ್ನೂ ಕೇಳಿ ಗುರುತು ಹಾಕಿಕೊಂಡಿದ್ದೇನೆ. ಪರಿಷತ್ತಿನ ಬಗ್ಗೆ ತಾವು ಆಡಿದ ಪ್ರೋತ್ಸಾಹಕರ, ಸದ್ಭಾವನಾಪೂರ್ಣ ಮಾತುಗಳಿಗಾಗಿ ಮತ್ತು ಮುಂದಿನ ಆಡಳಿತ ಸುಧಾರಣೆಯ ಬಗ್ಗೆ ಮಾಡಿದ ಸೂಚನೆಗಳಿಗಾಗಿ ತಮಗೆ ನನ್ನ ವಂದನೆಗಳು. ದತ್ತಿ ಉಪನ್ಯಾಸಗಳು ಮತ್ತು ಕಾರ್ಯಕಾರೀ ಸಮಿತಿಯ ಸಭೆಗಳು ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿ ನಡೆಯದೆ ಇರುವುದಕ್ಕೆ ಪರಿಷತ್ತಿನ ಆರ್ಥಿಕಸ್ಥಿತಿಯಲ್ಲದೆ ಮತ್ತೇನೂ ಕಾರಣವಲ್ಲ. ದತ್ತಿ ನಿಧಿಗಳಲ್ಲಿ ಕೆಲವು ಹನ್ನೆರಡು ವರ್ಷದ ಬಾಂಡುಗಳಲ್ಲಿ ಮತ್ತೆ ಕೆಲವು ಸರ್ಕಾರದ ವಶದಲ್ಲಿ ಇಡುಗಂಟಾಗಿ ಇರುವುದರಿಂದ ಮೊದಲು ಪರಿಷತ್ತಿನಿಂದಲೇ ಹಣವನ್ನು ಖರ್ಚುಮಾಡಿ ಈ ಕಾರ್ಯಕ್ರಮಗಳನ್ನು ನಡೆಸಬೇಕಾಗುತ್ತದೆ. ಅಷ್ಟು ಹಣವೂ ಕಳೆದ ವರ್ಷ ಪರಿಷತ್ತಿನಲ್ಲಿ ಇರಲಿಲ್ಲ. ವರ್ಷಾಂತ್ಯದಲ್ಲಿ ಸರ್ಕಾರದಿಂದ ಸಹಾಯ ದ್ರವ್ಯ ದೊರೆತನಂತರವೇ ಪರಿಷತ್ತು ಉಸಿರಾಡುವುದು ಸಾಧ್ಯವಾಯಿತು. ಈ ವರ್ಷ ಎಲ್ಲ ದತ್ತಿ ಉಪನ್ಯಾಸಗಳನ್ನೂ ಏರ್ಪಡಿಸಲಾಗಿದೆ.

ಈ ಅವಧಿಯಲ್ಲಿ ಪರಿಷತ್ತು ಸಾಧಿಸಿದ ಕೆಲವು ಕಾರ್ಯಗಳ ಬಗ್ಗೆ ಸದಸ್ಯರು ತಾಳಿದ ಅಭಿಮಾನದ ಬಗ್ಗೆ ನನಗೂ ಸಂತೋಷ. ಸರಕಾರದ ಔದಾರ್ಯದ ಪರಿಣಾಮವಾಗಿ ವಾರ್ಷಿಕ ಸಹಾಯ ದ್ರವ್ಯ ೭,೫೦೦ ರೂ. ಗಳಿಂದ ೨೫,೦೦೦ ರೂ. ಗಳಿಗೆ ಹೆಚ್ಚಿದೆ. ಪರಿಷತ್ತಿನ ಕಾರ್ಯವನ್ನೂ ಮುಂದಿನ ಯೋಜನೆಗಳನ್ನೂ ಜನ ಅರಿತುಕೊಂಡು ನಾಲ್ಕು ಒಳ್ಳೆಯ ಮಾತು ಆಡಿದರೆ ಇದನ್ನು ಒಂದು ಲಕ್ಷಕ್ಕೆ ಹೆಚ್ಚಿಸುವುದು ಅಸಾಧ್ಯವೇನಲ್ಲ. ಆದರೆ ಈ ದೃಷ್ಟಿ ನಮ್ಮಲ್ಲಿ ಬೆಳೆಯಬೇಕು. ಪರಿಷತ್ತನ್ನು ಟೀಕಿಸುವವರು ಅದರ ಸಮೀಪಕ್ಕೆ ಬಂದು ನಿಂತರೆ ಅದರ ಕಷ್ಟಗಳನ್ನು ತಿಳಿಯಬಲ್ಲರು.

ಸಾಹಿತ್ಯ ಪ್ರಚಾರದಲ್ಲಿಯೂ ಸಾಹಿತ್ಯ ಪರೀಕ್ಷೆ ಗಮಕ ಪರೀಕ್ಷೆಗಳನ್ನು ನಡೆಸುವುದರಲ್ಲಿಯೂ ಪರಿಷತ್ತು ಸಾಕಷ್ಟು ಕೆಲಸ ಮಾಡಿದೆ. ಕನ್ನಡ ನಾಡಿನ ಇತರ ಭಾಗಗಳಿಗೆಲ್ಲ ಈ ಕಾರ್ಯಕ್ರಮಗಳು ವಿಸ್ತರಿಸಬೇಕೆಂಬ ಯೋಜನೆ ಮುಂದೆ ಇದೆ.

ಪರಿಷತ್ತಿನ ಹಣಕಾಸು ಮತ್ತು ನಿಘಂಟಿನ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗುತ್ತಲಿದೆ. ಸಂತೋಷ. ಆದರೆ ವಸ್ತುಸ್ಥಿತಿಯನ್ನು ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದು ತಮಗೂ ಸಂಸ್ಥೆಗೂ ಗೌರವ ತರುವಂಥದು ಎಂಬುದನ್ನು ನಾನು ಸಾರ್ವಜನಿಕರಲ್ಲಿ ಅರಿಕೆ ಮಾಡಿಕೊಳ್ಳಬಯಸುತ್ತೇನೆ. ನಿಘಂಟು ಕಾರ್ಯ ತ್ವರಿತಗೊಳ್ಳಬೇಕೆಂಬ ಉದ್ದೇಶದಿಂದ ಕಚೇರಿಗೆ ಸ್ಥಳಾನುಕೂಲತೆ ಒದಗಿಸಲು ಪ್ರತ್ಯೇಕ ಕಟ್ಟಡವನ್ನು ಪರಿಷತ್ತು ಕಟ್ಟಿಸಿತು. ನಿಘಂಟು ಹಣದಿಂದಲೇ ಇದನ್ನು ಮಾಡಲಾಯಿತು ಎಂಬುದೂ ನಿಜ. ಆದರೆ ನಿಘಂಟಿನ ಮೂರು ಸಂಚಿಕೆಗಳು ಮತ್ತು ಸಂಕ್ಷಿಪ್ತ ಸೂಚಿಯನ್ನು ಮುದ್ರಿಸಿದ್ದಕ್ಕಾಗಿ ಸರ್ಕಾರದಿಂದ ಪರಿಷತ್ತಿಗೆ ಬರತಕ್ಕ ಹಣವನ್ನು ನಾವಿನ್ನೂ ಪಡೆದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಹಣಕಾಸಿನ ವಿಷಯದಲ್ಲಿ ನಿಜಸ್ಥಿತಿಯನ್ನು, ನಿಘಂಟನ್ನು ಬೇಗ ಪ್ರಕಟಿಸಲು ನಾವು ಮಾಡುತ್ತಿರುವ ಕಾರ್ಯವನ್ನು, ವರದಿ ಲೆಕ್ಕಪತ್ರಗಳ ಮೇಲಿಂದ ತಾವು ಮನಗಾಣಬಹುದು. ಅವುಗಳ ಬಗ್ಗೆ ಯಾರಿಗಾದರೂ ಹೆಚ್ಚಿನ ವಿವರಣೆ ಬೇಕಾಗಿದ್ದರೆ ಪರಿಷತ್ತಿಗೆ ಬಂದರೆ ನಾವು ಯಾವಾಗಲೂ ವಿವರಿಸಲು ಸಿದ್ಧರಿದ್ದೇವೆ.

ನಮ್ಮೆಲ್ಲರ ಆಶೋತ್ತರಗಳ ಪ್ರತೀಕವಾಗಿ ಪರಿಷತ್ತು ಇನ್ನೂ ಸಾಧಿಸಬೇಕಾದುದು ಅಮಿತವಾಗಿದೆ. ನಮ್ಮ ಶಕ್ತಿ ಪ್ರಯತ್ನಗಳು ಆ ದಿಶೆಯಲ್ಲಿ ಶೀಘ್ರಗತಿಯಲ್ಲಿ ನಡೆಯಬೇಕಾಗಿದೆ. ಸದಸ್ಯ ಸಂಪತ್ತು ಕಾರ್ಯಕರ್ತರ ಸಹಕಾರ ಮತ್ತು ನಾಡ ಜನತೆಯ ಬೆಂಬಲ ಈ ಕಾರ್ಯದಲ್ಲಿ ಅಗತ್ಯವಾಗಿ ದೊರೆಯಬೇಕಾಗಿದೆ.

೧೯೬೬ರ ವರದಿ ಲೆಕ್ಕಪತ್ರಗಳನ್ನು ತಮ್ಮ ಒಪ್ಪಿಗೆಗಾಗಿ ಮಂಡಿಸಿದ್ದೇವೆ. ಅದನ್ನು ಸ್ವೀಕರಿಸಿ ಪರಿಷತ್ತಿಗೆ ಬೆಂಬಲ ನೀಡಿರಿ ಎಂದು ತಮ್ಮೆಲ್ಲರನ್ನು ಪ್ರಾರ್ಥಿಸುತ್ತೇನೆ.

ವರದಿ, ಲೆಕ್ಕ-ಪತ್ರ ಮತ್ತು ೧೯೬೭ರ ಅಂದಾಜು ಪತ್ರಿಕೆಯನ್ನು ಮತಕ್ಕೆ ಹಾಕಿದಾಗ ೧೦೩ ಪರವಾಗಿಯೂ ಎರಡು ಮತಗಳು ವಿರೋಧವಾಗಿಯೂ ಬಿದ್ದವು. ಅವು ಸ್ವೀಕೃತವಾದ ಬಗ್ಗೆ ಅಧ್ಯಕ್ಷರು ಸಾರಿದರು.

ಮುಂದಿನ ವರ್ಷಕ್ಕೆ ಶ್ರೀ ಡಿ. ಎಸ್. ರಂಗನಾಥ್ ಅವರನ್ನು ಲೆಕ್ಕಪರಿಶೋಧಕರನ್ನಾಗಿ ನಿಯಮಕ ಮಾಡಬೇಕೆಂಬ ಸೂಚನೆಯನ್ನು ಸಭೆಯು ಅಂಗೀಕರಿಸೀತು.

ಕಾರ್ಯಸಮಿತಿಯು ಪ್ರಕಟಿಸಿದ ಚುನಾವಣೆಯ ವೇಳಾಪಟ್ಟಿಯನ್ನು ಸಭೆಯು ಅಂಗೀಕರಿಸಬೇಕೆಂದು ಅಧ್ಯಕ್ಷರು ಕೇಳಿಕೊಂಡರು.

ಶ್ರೀ ರಾಮಮೂರ್ತಿಯವರು ಮಾತನಾಡಿ, ಚುನಾವಣೆಗೆ ಮೊದಲು ಅಂಗರಚನೆಯ ತಿದ್ದುಪಡಿಗಾಗಿ ಸಕಲ ಸದಸ್ಯರ ವಿಶೇಷ ಸಭೆಯನ್ನು ಕರೆದು ಅಂಗರಚನೆಯ ತಿದ್ದುಪಡಿಯ ಆಶ್ವಾಸನೆಯನ್ನು ಅಧ್ಯಕ್ಷರು ಕೊಡಬೇಕು. ಅಂಗರಚನೆಯ ತಿದ್ದುಪಡಿಗಳು ಸ್ವೀಕೃತವಾದನಂತರವೇ ಚುನಾವಣೆ ನಡೆಯಬೇಕು ಎಂದು ಖಂಡಿತವಾಗಿ ಹೇಳಿದರು.

ಶ್ರೀ ಡಿ. ಮಾಧವಮೂರ್ತಿಯವರು ಈ ಸೂಚನೆಯನ್ನು ಅನುಮೋದಿಸಿದರು. ಸರ್ವಾನುಮತದಿಂದ ಸಭೆಯು ಅದನ್ನು ಒಪ್ಪಿ ಈ ಕಾರ್ಯವನ್ನು ಅಧ್ಯಕ್ಷರು ಕೂಡಲೇ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಉತ್ತರವಾಗಿ ಅಧ್ಯಕ್ಷರು ಅಕ್ಟೋಬರ ತಿಂಗಳ ಕೊನೆಯಲ್ಲಿ ಅಂಗರಚನೆಯ ತಿದ್ದುಪಾಟುಗಳನ್ನು ಪರಿಶೀಲಿಸಲು ಸಕಲ ಸದಸ್ಯರ ವಿಶೇಷ ಸಭೆಯನ್ನು ಕರೆಯುವ ಏರ್ಪಾಡು ಮಾಡುವುದಾಗಿ ಹೇಳಿದರು.

ಸಭೆಗೆ ದಯಮಾಡಿಸಿ ಪರಿಷತ್ತಿನ ವಿಷಯದಲ್ಲಿ ತೋರಿಸಿದ ಅಭಿಮಾನ-ವಿಶ್ವಾಸಗಳಿಗಾಗಿ ಸಕಲ ಸದಸ್ಯರಿಗೆ ವಂದನೆಗಳನ್ನು ಕಾರ್ಯದರ್ಶಿಗಳಾದ ವೆಂಕಟೇಶ ಸಾಂಗ್ಲಿ ಅವರು ಅರ್ಪಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಗಳು

		ರೂ. ಪೈ
೧.	ಕನ್ನಡದ ಬಾವುಟ (ಐದನೆಯ ಮುದ್ರಣ ೧೯೫೮)	೨=೦೦
೨.	ಜೇಮ್ಸ್ ಏಬ್ರಹಾಮ್ ಗಾರ್‍ಫೀಲ್ಡನ ಚರಿತ್ರೆ : ಕ್ಯಾಲಿಕೋ ಪ್ರತಿ (೧೯೩೦)	೧=೫೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ (೧೯೩೮)	೧=೦೦
೩.	ಜ್ಯೋತಿರ್ವಿನೋದಿನಿ (೧೯೩೧)	೨=೦೦
೪.	ಕನ್ನಡ ನಾಡಿನ ಚರಿತ್ರೆ: ಭಾಗ ೧	
	,, ಭಾಗ ೨ (ಎರಡನೆಯ ಮುದ್ರಣ ಅಚ್ಚಿನಲ್ಲಿದೆ)	೨=೦೦
	,, ಭಾಗ ೩ (,, ೧೯೫೯)	೧=೨೫
೫.	ಸಂಕಲನ (೧೯೪೯)	೦=೬೩
೬.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ ೧೯೫೨)	೨=೦೦
೭.	ಹರಿದಾಸ ಸಾಹಿತ್ಯ–ಇಂಗ್ಲಿಷ್ ಉಪೋದ್ಘಾತದೊಡನೆ (೧೯೫೨)	೧೦=೦೦
೮.	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ (೧೯೫೨)	೮=೦೦
೯.	ಗಾಳಿಯಲ್ಲಿನ ಅಗೋಚರ ಶತ್ರುಗಳು (೧೯೫೪)	೧=೨೫
೧೦.	ನಕ್ಷತ್ರದರ್ಶನ (೧೯೫೪)	೧=೫೦
೧೧.	ಹರಿದಾಸ ಕೃತಿಮಂಜರಿ (೧೯೫೫)	೧=೨೫
೧೨.	ಪ್ಲೇಟೋವಿನ ಆದರ್ಶರಾಜ್ಯ (೧೯೫೬)	೧=೩೮
೧೩.	ಚೇರಮ ಕಾವ್ಯಂ (೧೯೫೬)	೨=೦೦
೧೪.	ಅನುಭವ ಮುಕುರಂ (೧೯೫೬)	೦=೩೮
೧೫.	ಆಧುನಿಕ ಗದ್ಯ ಸಾಹಿತ್ಯ (ಎರಡನೆಯ ಮುದ್ರಣ ೧೯೬೧)	೨=೫೦
೧೬.	ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು (ಮೂರನೆಯ ಸಂಪುಟ ೧೯೫೮)	೪=೦೦
೧೭.	ಕಾದಂಬರಿ–ಸಾಮಾನ್ಯ ಮನುಷ್ಯ (೧೯೫೭)	೧=೦೦
೧೮.	ಉದ್ಭಟದೇವ ಚರಿತೆ (೧೯೫೭)	೧=೫೦
೧೯.	ತ್ರಿಪುರದಹನ ಸಾಂಗತ್ಯ (೧೯೫೯)	೦=೭೫
೨೦.	**ಕರ್ಣಾಟಕ ಕವಿಚರಿತೆ (೧ನೆ ಭಾಗ) ....**	**೧೨=೦೦**
	,, ,, ಲೈಬ್ರರಿ ಪ್ರತಿಗಳು	**೧೫=೦೦**
೨೧.	ಕಾವ್ಯ ಗಾಯನ ಕಲಾ ಸಂಗ್ರಹ	೧=೨೫

ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆ ವಿನಾ ಮಿಕ್ಕೆಲ್ಲ ಪುಸ್ತಕಗಳಿಗೆ ಶೇ. 25ರಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

Reg. No. B. G. 4—September 1967

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೧೦
ಸಂಪುಟ : ೪೦

ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ
ಶ್ರೀನಿವಾಸರಾವ್ ಕೊರಟಿ
ಆರ್. ರಾಚಪ್ಪ

ಅಕ್ಟೋಬರ್ : ೧೯೮೭

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮

ಕನ್ನಡ ನಾಡುನುಡಿಗಳ ಅಭಿಮಾನಿಗಳಲ್ಲಿ ಬಿನ್ನಹ

ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಗಿ ೫೨ ವರುಷಗಳಿಂದ ಕನ್ನಡ ನಾಡುನುಡಿಗಳ ಸೇವೆಯನ್ನು ಅವ್ಯಾಹತವಾಗಿ ನಡೆಸಿಕೊಂಡು ಬರುತ್ತಿದೆ. ಕನ್ನಡನಾಡು ಒಂದು ಪ್ರಾಂತವಾಗುವವರೆಗೂ ಪರಿಷತ್ತು ಕನ್ನಡಿಗರ ಏಕೀಕರಣಕ್ಕೆ ಹೊಡೆದಾಡಿ ಏಕೀಕರಣವನ್ನು ಸಾಧಿಸಿತು. ಶಬ್ದಮಣಿದರ್ಪಣ, ಪಂಪಭಾರತ, ಪಂಪರಾಮಾಯಣ, ಕವಿಚರಿತೆಯಂತಹ ಅತ್ಯುತ್ತಮವಾದ ಹಳೆಗನ್ನಡ ಕಾವ್ಯಗಳನ್ನೂ ಆಧಾರ ಗ್ರಂಥಗಳನ್ನೂ ಪರಿಶೋಧಿಸಿ, ಅವಕ್ಕೆ ನಿಘಂಟುಗಳನ್ನು ತಯಾರಿಸಿ ಪ್ರಕಟಿಸಿತು. ಸಾಹಿತ್ಯ ಸಂಸ್ಕೃತಿಗಳಿಂದ ಹಿಡಿದು ವಿಜ್ಞಾನ ವಿಮರ್ಶೆಗಳ ವರೆಗೂ – ಅನೇಕ ವಿಷಯಗಳನ್ನೊಳಗೊಂಡ ಸುಮಾರು ೫೦ ಪುಸ್ತಕಗಳನ್ನು ಪ್ರಕಟಿಸಿತು. ಈಗ ೫೧ ವರ್ಷಗಳಿಂದ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಎಂಬ ಪ್ರೌಢ ವಿಷಯಗಳನ್ನೊಳಗೊಂಡ ಷಾಣ್ಮಾಸಿಕ ಪತ್ರಿಕೆಯನ್ನೂ ೩೦ ವರ್ಷಗಳಿಂದ ಪ್ರಮುಖ ಸಾಹಿತ್ಯ ವಿಷಯಕವಾದ 'ಕನ್ನಡ ನುಡಿ' ಎಂಬ ಮಾಸಪತ್ರಿಕೆಯನ್ನೂ ಪ್ರಕಟಸುತ್ತಿದೆ. ಕನ್ನಡಿಗರಿಗೆ ಕನ್ನಡ ಭಾಷೆಯಲ್ಲಿ ಅಭಿಮಾನ ಪಾಂಡಿತ್ಯಗಳನ್ನು ಬೆಳೆಸುವ ಉದ್ದೇಶದಿಂದ ಕನ್ನಡ 'ಜಾಣ' 'ಕಾವ' ಮತ್ತು 'ರತ್ನ' ಎಂಬ ಮೂರು ಸಾಹಿತ್ಯ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಈಗ ೩೦ ವರ್ಷಗಳಿಂದ ಅನೇಕ ಕೇಂದ್ರಗಳಲ್ಲಿ ಗಮಕ ತರಗತಿಗಳನ್ನು ನಡಸಿ ಕನ್ನಡ ಜನತೆಯಲ್ಲಿ ಕಾವ್ಯಾಭ್ಯಾಸ, ಕಾವ್ಯವಾಚನಾಭಿರುಚಿಗಳನ್ನು ಬೆಳೆಸಿ ಗಮಕ ಕಲೆಯನ್ನು ಪ್ರಚಾರಮಾಡುತ್ತಿದೆ. ದತ್ತಿನಿಧಿಗಳನ್ನು ದಾನವಾಗಿ ಕೊಟ್ಟಿರುವ ಮಹನೀಯರ ಹೆಸರಿನಲ್ಲಿ ನಿಷ್ಣಾತರಾದ ಪಂಡಿತರಿಂದ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಿ ಆ ಪೈಕಿ ಅನೇಕ ಉಪನ್ಯಾಸಗಳನ್ನು ಪರಿಷತ್ಪತ್ರಿಕೆಯಲ್ಲಿಯೂ ಪುಸ್ತಕರೂಪವಾಗಿಯೂ ಪ್ರಕಟಿಸಲಾಗುತ್ತಿದೆ. ಪ್ರಾಚೀನ ಸಾಹಿತ್ಯದ ಪ್ರಚಾರಕ್ಕಾಗಿ ಪುಸ್ತಕಗಳನ್ನು ಪ್ರಕಟಿಸಿರುವುದಲ್ಲದೆ ಆ ಸಂಬಂಧವಾದ ಉಪನ್ಯಾಸಗಳನ್ನು ಆಗಾಗ ಏರ್ಪಡಿಸಲಾಗುತ್ತಿದೆ. ಪ್ರತಿವರ್ಷವೂ ಒಂದು ವಾರದವರೆಗೆ ವಸಂತ ಸಾಹಿತ್ಯೋತ್ಸವವನ್ನೂ, ಕಾಳಿದಾಸ ಜಯಂತಿ, ರಾಜ್ಯೋತ್ಸವ, ಭಾಷಣ ಕಲಾ ತರಗತಿಗಳು, ಕಂಠಪಾಠ ಸ್ಪರ್ಧೆಗಳು, ದೇವರನಾಮ ಸ್ಪರ್ಧೆಗಳು—ಹೀಗೆ ಅನೇಕ ಸಾಹಿತ್ತಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದೆ. ಒಂದುಸಜ್ಜಿತವಾದ ರಂಗಮಂಟಪವಿದ್ದು ಅದು ಕಲಾವಿಲಾಸಿ ಸಂಘಗಳ ಕಾರ್ಯಕ್ರಮಗಳಿಗೂ ನವ್ಯನಾಟಕಗಳ ಪ್ರಯೋಗಕ್ಕೂ ಸಹಾಯಕವಾಗಿದೆ. ಸುಮಾರು ೨೦,೦೦೦ ಪುಸ್ತಕಗಳನ್ನುಳ್ಳ ಕನ್ನಡ ಗ್ರಂಥ ಭಂಡಾರವಿದೆ. ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳನ್ನು ಕೊಳ್ಳುವ ಏರ್ಪಾಟೊಂದನ್ನು ಈ ವರ್ಷದಿಂದ ಕೈಕೊಳ್ಳಲಾಗಿದೆ. ಇವ... ಒಟ್ಟು ೮೮ ದಿನಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗಳ... ಪರಿಷತ್ತು ತರಿಸುತ್ತಿದೆ. ಈ ಗ್ರಂಥಭಂಡಾರ ಮತ್ತು ವಾಚನಾಲಯ... ಪ್ರಯೋಜನವನ್ನು ಸಾರ್ವಜನಿಕರೂ, ಸ್ನಾತಕೋತ್ತರ ವಿದ್ಯಾ... ಗಳೂ ಪಡೆಯುತ್ತಿದ್ದಾರೆ. ಪ್ರತಿ ವರ್ಷವೂ ಸಾಹಿತ್ಯ ಸಮ್ಮೇ... ವನ್ನೇರ್ಪಡಿಸಿ ವರ್ಷದಲ್ಲಿ ನಡೆದ ಸಾಹಿತ್ಯ ಕಾರ್ಯಗಳ ಪ್ರ... ಯನ್ನು ವಿವೇಚಿಸಿ ಅದು ಸತ್ವಶಾಲಿಯಾಗಿ ಸರಿಯಾದ ದಾರಿಯ... ಮುಂದುವರಿಯಲು ಬೇಕಾದ ಮಾರ್ಗದರ್ಶನವನ್ನು ಸೂಚಿಸಲಾ... ತ್ತಿದೆ. ಪ್ರಸಿದ್ಧರಾದ ಸಾಹಿತಿಗಳಿಗೂ ವಿದ್ವಾಂಸರಿಗೂ ಸನ್ಮಾ... ಸಭೆಗಳನ್ನೇರ್ಪಡಿಸಿ ಅವರನ್ನು ಗೌರವಿಸಿ ಅವರಿಂದ ಸಾಹಿ... ಪ್ರಪಂಚಕ್ಕಾಗುತ್ತಿರುವ ಸೇವೆಯನ್ನು ಸ್ಮರಿಸಲಾಗುತ್ತಿದೆ. ಎಲ್ಲಕ್ಕಿಂ... ಹೆಚ್ಚಾಗಿ ಪರಿಷತ್ತು ಕನ್ನಡ – ಕನ್ನಡ ನಿಘಂಟನ್ನು ತಯಾರಿಸ... ಮಹತ್ಕಾರ್ಯವನ್ನು ಕೈಗೊಂಡಿದೆ. ಇದು ಡೆಮಿ ೪ ಆಕಾ... ೫೦೦೦ ಪುಟಗಳ ಮಹದ್ಗ್ರಂಥ. ಈಗ ಸುಮಾರು ೮೦೦ ಪುಟಗಳ... ಅಚ್ಚಾಗಿದೆ. ಈ ಮಹಾಕಾರ್ಯಕ್ಕೆ ಸರ್ಕಾರದ ನೆರವೂ ದೊರೆತಿ...

ಈ ಮೇಲೆ ಸೂಚಿಸಿರುವ ನಾನಾ ಮುಖವಾದ ಸಾಹಿತ್ಯ ಸಂಸ್... ಕಲೆಗಳ ಚಟುವಟಿಕೆಗಳನ್ನು ಪರಿಷತ್ತು ನಡೆಸಿಕೊಂಡು ಬ... ತ್ತಿದ್ದರೂ ಅವುಗಳನ್ನು ಇನ್ನೂ ವಿಸ್ತರಿಸುವುದು ಆವಶ್ಯಕವಾಗಿ... ಇದಲ್ಲದೆ ಪರಿಷತ್ತು ಮಾಡಬೇಕೆಂದು ಇಟ್ಟುಕೊಂಡಿರುವ ಕೆ... ಗಳು ಇನ್ನೂ ಬಹಳವಾಗಿವೆ. ಓಲೆ ಪ್ರತಿಗಳ ಸಂಗ್ರಹ, ಹಳೆ... ಗ್ರಂಥಗಳ ಪ್ರಕಟನೆ, ಸಂಶೋಧನಾ ಶಾಖೆಯ ಏರ್ಪಾ... ವ್ಯಾಕರಣ-ನಿಘಂಟು, ಪ್ರಾಚೀನ ಸಾಹಿತ್ಯ, ಇತರ ಗ್ರಂಥಗಳ... ಇತ್ಯಾದಿಗಳ ಪ್ರಕಟನೆ, ಮತ್ತು ವಿವಿಧ ವಿಷಯಗಳ ಉತ್ತ... ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಇ... ಭಾಷೆಗಳಿಗೆ ಭಾಷಾಂತರ ಮಾಡುವುದು, ಪ್ರಕಟಮಾಡುವು... ಸುಸಜ್ಜಿತವಾದ ರಂಗಮಂದಿರದ ಸ್ಥಾಪನೆ ಗ್ರಂಥಭಂಡಾ... ಅಭಿವೃದ್ಧಿ ಇತ್ಯಾದಿ ಅನೇಕ ಕಾರ್ಯಕ್ರಮಗಳು ಪರಿಷ... ಯೋಜನೆಯಲ್ಲಿವೆ.

ಇಷ್ಟು ವ್ಯಾಪಕವಾದ ಹಾಗೂ ಮಹತ್ವಪೂರ್ಣ ಕಾರ್ಯ... ಗಳನ್ನು ಯೋಜಿಸಿಕೊಂಡಿರುವ ಈ ಅಖಿಲ ಕರ್ನಾಟಕದ ವ... ಯುಳ್ಳ ಏಕೈಕ ಕನ್ನಡ ಸಂಸ್ಥೆಗೆ ಇರುವ ಸದಸ್ಯ ಸಂಪತ್ತು ಕೆ...

(ರಕ್ಷಾಪುಟದ ೩ನೇ ಪುಟ ನೋ...

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು
—ಬಿ.ಎಂ.ಶ್ರೀ

ಅಕ್ಟೋಬರ್ ೧೯೬೭

ಸಂಪುಟ : ೩೦

ಸಂಚಿಕೆ : ೧೦

ಈ ಸಂಚಿಕೆಯಲ್ಲಿ . . .

ಜೀವನಗೀತ

ಪ್ರಭೊ,
ನೀನೆನ್ನ ಮಾಡಯ್ಯ ನಿನ್ನ ಶಾಂತಿ ಸಾಧನವ.
ಎಲ್ಲಿ ದ್ವೇಷದ ದುರುಳೊ, ಬಿತ್ತಲಲ್ಲಿಯೆ ಒಲವ;
ಎಲ್ಲಿ ದ್ರೋಹದ ದಾಹ, ಸುರಿಸಲಲ್ಲಿಯೆ ಕ್ಷಮೆಯ;
ಎಲ್ಲಿ ಶಂಕೆಯ ಸುಳಿಯೊ, ನೆಡಲಲ್ಲಿ ಸ್ಥಿರ ನಂಬಿಕೆಯ;
ಎಲ್ಲಿ ದುಃಖದ ದುಗುಡ, ಅಲ್ಲಿ ಆಕಾಂಕ್ಷೆ ಮೊಳೆಪಂತೆ;
ಕವಿವ ಕತ್ತಲಿನೊಳಗೆ ಬೆಳಕನುಜ್ಜ್ವಳಿಪಂತೆ;
ಕೊರೆವ ಕೊರಗಿನ ಕಳದಿ ಬೆಳಪಂತೆ ಸೌಖ್ಯಸಂಪದವ.
ಪ್ರಭೊ, ನಿನೆನ್ನ ಮಾಡಯ್ಯ ನಿನ್ನ ಶಾಂತಿ ಸಾಧನವ.

ದೇವರ ದೇವ! ಕರುಣಿಸೆನಗೆ ನೀನೀ ಸೌಭಾಗ್ಯ ಪ್ರಾಪ್ತಿ:
ಹಂಬಲಿಸಲಲ್ಲ; ಸ್ವೈರಿಸಿ, ಸಂತಯಿಪ ಶುಭ ವ್ಯಾಪ್ತಿ;
ಬಗೆ ಬಯಲಾಗಿಸೆನ್ನ, ಬಗೆ ಬಗೆಯ ಪರಿಯರಿವಂತೆಲ್ಲು;
ಒಲುಮೆಯನೆ ಕಲಿಸೆನಗೆ, ದಯೆಯ ನೊಸರಿಪಂತೆಲ್ಲೆಲ್ಲು;
ಕೊಡುಗೈಯವನೆ ಸ್ವೀಕರಿಸಲರ್ಹ ಸರ್ವ ಸಕಲ;
ಕ್ಷಮಿಸುವವನಿಗೆ-ನೋಡ! ಕ್ಷಮೆಯ ಗಿಟ್ಟಿಪ ಸತ್ವ;
ಮರಣದಲೆ ಅಡಕವಿಹುದೆಮ್ಮ ಅಮರ ಜೀವನ ತತ್ವ.
ಪ್ರಭೊ, ನೀನೆನ್ನ ಮಾಡಯ್ಯ ನಿನ್ನ ಶಾಂತಿ ಸಾಧನವ.

ದಾಮೋದರ ಬಾಳಿಗ

[ಈ ಕವಿತೆಯನ್ನು ಫ್ರಾನ್ಸಿಸ್ ಆಫ್ ಅಸೆಸಿ ಎಂಬ ಸಂತನ ಪ್ರಾರ್ಥನೆಯ ಆಧಾರದಿಂದ ರಚಿಸಲಾಗಿದೆ-ಲೇ.]

‘ಗದಾಯುದ್ಧ’ದ ಒಂದು ಪದ್ಯದ ವಿಚಾರ

ಡಿ. ಎಲ್. ನರಸಿಂಹಾಚಾರ್

ಕುರುಕ್ಷೇತ್ರದ ಯುದ್ಧದಲ್ಲಿ ಭೀಷ್ಮದ್ರೋಣಾದಿ ಗುರು ಹಿರಿಯರನ್ನೂ ತಮ್ಮಂದಿರನ್ನೂ ಮಕ್ಕಳನ್ನೂ ಸ್ನೇಹಿತನಾದ ಕರ್ಣನನ್ನೂ ಕಳೆದುಕೊಂಡು ದುಃಖಿತನಾಗಿದ್ದ ದುರ್ಯೋಧನನು ಸಂಜಯದ್ವಿತೀಯನಾಗಿ ತನ್ನ ಕಡೆಯ ಯೋಧರು ತನಗೆ ಮಾಡಿದ ಅನ್ಯಾಯಗಳನ್ನು ಕುರಿತು ವಿರಸವಾದ ಪರುಷವಾಕ್ಯಗಳನ್ನಾಡುತ್ತಿರಲು ಸಂಜಯ ಪಾಂಡವರ ಪರಾಕ್ರಮವನ್ನು ಹೊಗಳುತ್ತ ಧರ್ಮರಾಜನ ದಾನ ಜ್ಞಾನ ಕ್ಷಮಾಗುಣಗಳನ್ನು ವರ್ಣಿಸುತ್ತಾನೆ. ಆಗ ‘ಫಣಿರಾಜಕೇತನಂ ಸಿಡಿಲ್ದು,’ ‘ಸ್ಥಿರಸತ್ಯವ್ರತಿಯೆಂದು ಧರ್ಮರುಚಿಯೆಂದಾ ಧರ್ಮಪುತ್ರಂ ದಯಾಪರನೆಂದೆಲ್ಲರ ಪೇೞ್ದ ಮಾತು ಪುಸಿಯಾಯ್ತು’ ಎಂದು ಧರ್ಮರಾಜನನ್ನು ತೆಗಳುತ್ತ

> “ ಕಳಜನನಿಂತು ಕೊಲಿಸಿದ
> ಖಳನೆ ಗಡಂ ಧರ್ಮನಂದನಂ ಕ್ರೂರದಿನಂ
> ಗಳ ಪೆಸರಂ ಮಱೆಯಿಸಿ ಮಂ
> ಗಳವಾರಂ ಕಡ್ಡವಾರಮೆಂಬಂತೆ ವಲಂ.” ೨-೨೬

ಎಂದು ಧರ್ಮರಾಜನ ಗುಣದ ವಿಷಯವಾಗಿ ತನ್ನ ನಿರ್ಣಯವನ್ನು ಹೇಳುತ್ತಾನೆ. ಇಲ್ಲಿನ ‘ಕಡ್ಡವಾರ’ ವೆಂಬುದಕ್ಕೆ ಒಂದು ಓಲೆಯ ಪ್ರತಿಯಲ್ಲಿ ‘ವಡ್ಡವಾರ’ ಎಂಬ ಪಾಠಭೇಧವಿದೆ. ಈ ಪದ್ಯದ ಅರ್ಥವನ್ನೂ ಕವಿಯ ಆಶಯವನ್ನೂ ವಿಚಾರ ಮಾಡಬೇಕಾಗಿದೆ; ಹಾಗೆಯೇ ಪಾಠಭೇದವನ್ನೂ ಪರಿಶೀಲಿಸಬೇಕು.

ಈಗ ಇರುವಂತೆ ಪದ್ಯದ ಅಭಿಪ್ರಾಯವನ್ನು, ಹೀಗೆ ದ್ರೋಣನನ್ನು ಕೊಲ್ಲಿಸಿದ ಧರ್ಮರಾಜನು ದುಷ್ಟನೇ ಸರಿ, ಕ್ರೂರವಾದ ದಿನಗಳ ಹೆಸರುಗಳನ್ನು ಮರೆಮಾಡಿ ಅವುಗಳನ್ನು ಮಂಗಳವಾರ ಮತ್ತು ಕಡ್ಡವಾರ ಎಂದು ಕರೆಯುವ ಹಾಗೆ, ಎಂದು ಭಾವಿಸಬಹುದು. ಇಲ್ಲಿರುವ ಮಂಗಳವಾರವೆನ್ನುವುದೇನೋ ಶುಭವಾದ ಹೆಸರು. ಆದರೆ ‘ಕಡ್ಡವಾರ’ ಅಂಥ ಶುಭವಾದ ಹೆಸರಾಗಿ ಕಾಣುವುದಿಲ್ಲ. ಇದು ‘ಕಷ್ಟ-ವಾರ’ ಎಂಬ ಶಬ್ದದ ತದ್ಭವವಾಗಿರುವಂತೆ ತೋರುವುದರಿಂದ ಅದರ ಅರ್ಥ ಅಶುಭವಾರ ಎಂದಾಗುತ್ತದೆ; ಎಂದರೆ ಕ್ರೂರದಿನದ ಹೆಸರನ್ನು ಮರೆಯಿಸಿದಂತಾಗಲಿಲ್ಲ. ಆದ್ದರಿಂದ ಅಲ್ಲಿ ಅಂಥ ಹೆಸರನ್ನು ಮರೆಯಿಸುವ ಒಂದು ಒಳ್ಳೆಯ ಹೆಸರಿರಬೇಕು. ಈ ಕಾರಣದಿಂದ ‘ಕಡ್ಡವಾರ’ ಎಂಬ ಪಾಠ ಸ್ವೀಕರಣ ಯೋಗ್ಯವಾಗಿಲ್ಲ. ಇನ್ನೊಂದು ಪಾಠವಾದ ‘ವಡ್ಡವಾರ’ ಗಮನಾರ್ಹವಾಗುತ್ತದೆ, ಇದರ ವಿಷಯವೇನು?

ರೈಸ್ ಅವರು ತಮ್ಮ ಕಚೇರಿಯ ಪಂಡಿತರಾಗಿದ್ದ ಬಿ. ಶ್ರೀನಿವಾಸಯ್ಯಂಗಾರ್ಯರ ಸಹಾಯದಿಂದ ಈ ಪದ್ಯದ ಅರ್ಥವನ್ನು ಹೀಗೆ ನಿರೂಪಿಸಿದ್ದಾರೆ: ಕಳಶಜನನ್ನು ಹೀಗೆ ಕೊಲ್ಲಿಸಿದ ಧರ್ಮನ ಮಗನು ಹೀನನಲ್ಲವೆ? ಕೆಟ್ಟ ದಿನಗಳ ಹೆಸರುಗಳನ್ನು ಮರೆಮಾಡಿ ಅವುಗಳನ್ನು ಮಂಗಳವಾರವೆಂದೂ ವಡ್ಡವಾರವೆಂದೂ ಕರೆಯುವ ಹಾಗೆ[1]. ಇಲ್ಲಿ ರೈಸ್ ಅವರು ‘ವಡ್ಡವಾರ’ ಎಂಬ ಪಾಠವನ್ನೂ ಸರಿಯೆಂದು ಗ್ರಹಿಸಿರುವಂತೆ ಕಾಣುತ್ತದೆ. ಅದು ಯಾವ ವಾರ ಎಂಬುದನ್ನು ನಿರ್ದೇಶಿಸುತ್ತ ಶನಿವಾರ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ;[2] ವಡ್ಡವಾರ ಎಂಬಲ್ಲಿನ ವಡ್ಡ- **ಸಂಸ್ಕೃತದ** ವೃದ್ಧ ಶಬ್ದದಿಂದ ಬಂದಿದೆಯೆಂದು ಅವರು ಹೇಳುತ್ತಾರೆ.

‘ವಡ್ಡವಾರ’ದ ವಿಷಯವಾಗಿ ತುಂಬ ಚರ್ಚೆ ನಡೆದಿದೆ. ಈ ಶಬ್ದ ಕರ್ನಾಟಕದ ಶಾಸನಗಳಲ್ಲಿ ಹಲವುಸಲ ಪ್ರಯೋಗವಾಗಿದೆ. ಡಾ|| ಭೌದಾಜಿ ಅವರು ವಡ್ಡವಾರವೆಂದರೆ ಬುಧವಾರವೋ ಗುರುವಾರವೋ ಆಗಿರಬೇಕೆಂದು ಹೇಳಿದ್ದರು.[3] ಡಾ|| ಎಫ್. ಕೀಲ್‌ಹಾರನ್ ಅವರು ಶಾಲಿವಾಹನ ಶಕ ೧೦೦೯ನೆಯ ಸಂವತ್ಸರದಲ್ಲಿ ಲಿಖಿತವಾದ ಕೋಣೂರು ಶಾಸನದಲ್ಲಿ ಬರುವ ‘ವಡ್ಡವಾರ’ವನ್ನು ಕ್ರಿ. ಶ. ೧೦೮೭ನೆಯ ಡಿಸೆಂಬರ್ ೨೬ನೇಯ ತಾರೀಖಿನಂದು

---

1. *The Indian Antiquary* XIII (1894), p 167-168 : “ Having so caused Kalasaja to be slain is not the son of Dharma base ? Even as disguising the name of evil (or unlucky) days in calling them *mangalavara* and *vaddavara* ”

2. Ibd, p 168 “ We seen therefore right in encluding that Vaddavāra means Saturday ”

3. *J. B. B. R. A. S.* X, p 46.

ಕಾಣುವ ಭಾನುವಾರಕ್ಕೆ ಸಮೀಕರಿಸಿದಾರೆ;[4] ರುದ್ರದೇವನ ಅನಮಕೊಂಡ ಶಾಸನದಲ್ಲಿ “ಶಕವರ್ಷಮುಲು ೧೦೮೪ವು ನೇಂಟಿ ಚಿತ್ರಭಾನು ಸಂವತ್ಸರ ಮಾಘ ಶುದ್ಧ ೧೩ ವಡ್ಡವಾರಮುನಾಡು” ಎಂದು ಉಕ್ತವಾಗಿರುವೆಡೆಯಲ್ಲಿ ಕಾಣುವ ವಡ್ಡವಾರವನ್ನು ಕ್ರಿ. ಶ. ೧೧೬೩ನೆಯ ಜನವರಿ ೨೦ನೆಯ ತಾರೀಖಿನ ಭಾನುವಾರವೆಂದು ಅವರು ಹೇಳಿದ್ದಾರೆ;[5] “ಶಕವರ್ಷಂ ೧೧೧೦ನೆಯ ಪ್ಲವಂಗ ಸಂವತ್ಸರದ ಪುಷ್ಯ ಬಹುಳ ೧೦ ವಡ್ಡವಾರ ವುತ್ತರಾಯಣ ಸಂಕ್ರಮಣ ವ್ಯತೀ ಪಾತದ” ಎಂದು ತೊರಗಲ್ಲು ಶಾಸನದಲ್ಲಿ ಕಾಣುವ ವಡ್ಡವಾರವು ಕ್ರಿ. ಶ. ೧೧೮೭ನೆಯ ಡಿಸೆಂಬರ್ ೨೬ನೆಯ ತಾರೀಕಿನ **ಶನಿವಾರ**ವಾಗಿರಬೇಕೆಂದು ಅವರು ಲೆಕ್ಕ ಹಾಕಿ ತೋರಿಸಿದ್ದಾರೆ.[6] ಆದ್ದರಿಂದ ವಡ್ಡವಾರವೆಂದರೆ ಶನಿವಾರವೋ ಭಾನುವಾರವೋ ಆಗಿರಬೇಕೆಂದು ಅವರ ಅಭಿಪ್ರಾಯ. ಇನ್ನೂ ಕೆಲವು ಶಾಸನಗಳನ್ನು ಅವರು ನಿರ್ದೇಶಿಸಿ[7] ‘ನನಗೆ ತಿಳಿದಿರುವ ಈ ವಿವರಗಳು ವಡ್ಡವಾರವೆಂದರೆ ಯಾವ ವಾರವೆಂಬ ಸಮಸ್ಯೆಯನ್ನು ಖಚಿತವಾಗಿ ನಿರ್ಣಯಿಸಲು ಸಾಲದಾಗಿವೆ’ ಎಂದು ತಮ್ಮ ನಿರ್ಣಯವನ್ನು ಹೇಳಿದ್ದಾರೆ.[8] ಡಾ|| ಫ್ಲೀಟ್ ಅವರು ಮೇಲಿನ ಅಭಿಪ್ರಾಯಗಳನ್ನು ಬಲ್ಲವರಾಗಿದ್ದು ತಮಗೆ ದೊರೆತ ಇತರ ಸಾಕ್ಷ್ಯಗಳ ಅಧಾರದಿಂದ ‘ವಡ್ಡವಾರವೆಂದರೆ ಬಹುಶಃ ಶನಿವಾರವೆಂದು ನನ್ನ ನಿರ್ಣಯ; ಆದರೆ ಇದಕ್ಕೆ ಖಚಿತವಾದ ಪ್ರಮಾಣಗಳು ನನಗೆ ಲಭ್ಯವಾಗಿಲ್ಲ’ ಎಂದಿದ್ದಾರೆ.[9] ಇದಾದಮೇಲೆ ಲ್ಯೂಯಿರೈಸ್ ಅವರು ತಮ್ಮ ಅಭಿಪ್ರಾಯವನ್ನು ಈ ಹಿಂದೆ ನಿರೂಪಿಸಿರುವಂತೆ ಹೇಳಿದರು.

ಡಾ|| ಎಲ್. ಡಿ. ಬಾರ್ನೆಟ್ ಅವರು Two Inscription from Belgaum'' ಎಂಬ ತಮ್ಮ ಲೇಖನದಲ್ಲಿ[10] ಈ ವಿಷಯವನ್ನು ಪರಿಶೀಲಿಸಿದ್ದಾರೆ. ಆ ಎರಡು ಬೆಳಗಾಮಿಯ ಶಾಸನಗಳೊಂದರಲ್ಲಿ (ಪಂಕ್ತಿ ೪೦) “ಶತವರ್ಷದ ೧೧೨೭ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಶುದ್ಧ ಬಿದಿಗೆ ವಡ್ಡವಾರದೊಳಾದ ಸಂಕ್ರಮಣ ಸಮಯದೊಳು” ಎಂದಿರವೆಡೆಯಲ್ಲಿ ಕಾಣುವ ವಡ್ಡವಾರ ಶನಿವಾರಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆಂದು ಅವರು ನಿರ್ಣಯಿಸಿದ್ದಾರೆ. ಇನ್ನೊಂದು ಶಾಸನದಲ್ಲಿ ಬರುವ “೧೨ನೆಯ ಚಾಳುಕ್ಯ ವಿಕ್ರಮ **ವರ್ಷ ಪುಷ್ಯ** ವಡ್ಡವಾರ ಉತ್ತರಾಯಣ ಸಂಕ್ರಾಂತಿ” ಎಂಬೆಡೆಯಲ್ಲಿ ಕಾಣುವ ವಡ್ಡವಾರವೂ ಕ್ರಿ. ಶ. ೧೦೮೭ನೆಯ ಡಿಸೆಂಬರ್ ೨೩ನೆಯ ತಾರೀಕು ಶನಿವಾರವಾಗುತ್ತದೆಂದೂ ಕುಜ ಶನಿ ಗ್ರಹಗಳನ್ನು ಕ್ರೂರದೃಶ್ ಎಂದು ಕರೆಯುತ್ತಾರೆಂದೂ ಅವರು ನಿರೂಪಿಸಿದ್ದಾರೆ.[12] ಆದ್ದರಿಂದ ವಡ್ಡವಾರವೆಂದರೆ ಶನಿವಾರವೆಂಬ ಅಭಿಪ್ರಾಯವನ್ನು ಒಪ್ಪಬಹುದೆಂದು ತೋರುತ್ತದೆ. ಇದು ವೃದ್ಧ–ವಾರ ಎಂಬ ಸಂಸ್ಕೃತ ಶಬ್ದದ ತದ್ಭವವಾಗಿರುವುದರಿಂದ ದೊಡ್ಡದಿವಸ, ಹಿರಿಯ ದಿವಸ, ಏಳ್ಗೆಯ ದಿವಸ ಎಂಬರ್ಥವನ್ನು ಹೊಂದಿದ್ದು ಮಂಗಳವಾಚಿಯಾಗಿಯೂ ಇದೆ.

ಮೇಲೆ ಕೊಟ್ಟಿರುವ ಕಂದಪದ್ಯವನ್ನು ರನ್ನನು ರಚಿಸುವಾಗ ಮಾಘಕವಿಯ ‘ಶಿಶುಪಾಲವಧ’ದ (ಸರ್ಗ ೧೩-೧೭)

> “ತವ ಧರ್ಮರಾಜ ಇತಿ ನಾಮ ಕಥಮಿಂದಪಷ್ಮ ಪಠ್ಯತೇ |
> ಭೌಮದಿನಮಭಿದಧತ್ಯಥವಾ ಭೃಶಮಪ್ರಶಸ್ತ
> ಮಪಿಮಂಗಲಂ ಜನಾಃ ||”

ಎಂಬ ಪದ್ಯವನ್ನು ಸ್ಮರಿಸಿಕೊಂಡಿರಬೇಕೆಂದು ಕಾಣುತ್ತದೆ. ಧರ್ಮರಾಜನು ಕೃಷ್ಣನಿಗೆ ಸಲ್ಲಿಸಿದ ಅಗ್ರಪೂಜೆಯನ್ನು

---

4. *I. A.* XXII, 251-252
5. *I. A.* XII, 97
6. *I. A.* XII, 95
7. *Pali, Sanskrit and Kanarese Inscriptions :* No. 87. ಇಲ್ಲಿ ವಡ್ಡವಾರವೆಂಬುದು ಶನಿವಾರವಾಗುತ್ತದೆ; No. 96 : ಇಲ್ಲಿ ವಡ್ಡವಾರ ಶುಕ್ರವಾರವೋ ಮಂಗಳವಾರವೋ ಆಗುತ್ತದೆ. No. 225 : ಇಲ್ಲಿನ ವಡ್ಡವಾರ ಬುಧವಾರವೋ ಭಾನುವಾರವೋ ಆಗುತ್ತದೆ.
8. . . . . but the dates known to me art not sufficient to settle the questions definitey' (Ibd)
9. *1A* XXII, 251-252 : "I arrived at the opinion that *Vaddavāra* is most probably, Saterday. But I have not been able to obtains the actual proof that is needed. . If seens to me that the evidence decided, proper dates in favour of *Vaddavara* meaning Saturday. But as I have always said, definite proof is still wanting"
10. *E. I.* XIII, 16, 18,
11. "The Raktakshi *Samuatsara* was Saka 1127 current, The given *tithi* answer quite regularly to Saturday, 27 December A. D. 12 04" *Ibid.*
12. *E. I.* XII (1913-1914), P 147 "This Date gives another instance of the use of the term "*Vaddavāra*" which is rare and noteworthy to denote saturday. Saturn, we know, was held to be a very malignant planet ; in fact both he and Mars, the lord of Tuesday, had the name *Krura dṛs* "evil eyed."

ಕಂಡು ಶಿಶುಪಾಲನು ಕ್ರೋಧಾವಿಷ್ಟನಾಗಿ ಅವನನ್ನು ತೆಗಳಿದ್ದಾನೆ; ರನ್ನನು ಅದೇ ತೆಗಳಿಕೆಯನ್ನು ದುರ್ಯೋಧನನಿಂದ ಮಾಡಿಸಿದ್ದಾನೆ. ಧರ್ಮರಾಜನನ್ನು ದೂಷಿಸುವುದೇ ಎರಡೂ ಸಂದರ್ಭಗಳ ಉದ್ದೇಶ. ಈ ಪದ್ಯಕ್ಕೆ ಮಲ್ಲಿನಾಥನ ವ್ಯಾಖ್ಯಾನ ಹೀಗಿದೆ:

" ಹೇ ಪಾರ್ಥ ತವೇದಂ ಧರ್ಮರಾಜ ಇತಿ ನಾಮ ಕಥ ಮಪಷ್ಠು ಅಸತ್ಯಮೇವ ಪಠ್ಯತೇ| ಜನೈಃ ಇತಿ ಶೇಷಃ| ಯದ್ವಾಯುಕ್ತಮೇವೈತದಿತ್ಯಾಹ–ಅಥವಾ ಜನಾಃ ಭೃಶಮ ಪ್ರಶಸ್ತಮಪಿ ಭೌಮದಿನಮಂಗಾರಕವಾರಂ ಮಂಗಲಮಭಿ ದಧತಿ ವ್ಯಪದಿಶಂತಿ ತದ್ವದಿದಮೇವೇತ್ಯರ್ಥಃ| ಲೋಕೈರ ಪ್ರಶಸ್ತಂ ಪ್ರಶಸ್ತಶಬ್ದೇನ ವಿರುದ್ಧೋರ್ಥೇನಾಪಿ ವ್ಯಪದಿಶ್ಯತೇ ತದುಚ್ಚಾರೇಣ ದೋಷಃ ಯಥಾ ಧೂಲಿವೃದ್ಧಿಶಬ್ದೇನ ತದ್ವದಧರ್ಮರಾಜ ಸ್ಯಾಪಿ ತವ ಧರ್ಮರಾಜ ವ್ಯಪದೇಶ ಇತಿ ಭಾವಃ| . . . "

ಹೇ, ಪೃಥೆಯ ಮಗನೇ, ಧರ್ಮರಾಜ ಎಂಬ ನಿನ್ನ ಹೆಸರನ್ನು ಜನರು ಹೇಗೆ ಸುಳ್ಳಾಗಿ ಹೇಳುತ್ತಾರೆ? ಎಂದರೆ ಅಧರ್ಮರಾಜ ಎಂಬುದು ಸತ್ಯವಾದ ಹೆಸರು ನಿನ್ನದು, ಧರ್ಮರಾಜನೆಂದಲ್ಲ. ಅಥವಾ ಇದು ಯುಕ್ತವಾಗಿಯೇ ಇದೆ: ಏಕೆಂದರೆ ಜನರು ಅಪ್ರಶಸ್ತವಾದ ಭೌಮವಾರ ಅಥವಾ ಅಂಗಾರಕವಾರವನ್ನು ಮಂಗಲವಾರವೆಂದು ಹೇಳುವಂತೆ. ಅಪ್ರಶಸ್ತವಾದ ವಸ್ತುವನ್ನು ಪ್ರಶಸ್ತ ಶಬ್ದದಿಂದ,ಅದು ವಿರುದ್ಧಾರ್ಥವುಳ್ಳದ್ದಾದರೂ ಕೂಡ, ಲೋಕ ಕರೆಯುತ್ತದೆ, ಅಪ್ರಶಸ್ತ ಶಬ್ದವನ್ನು ಉಚ್ಚರಿಸುವುದು ಕೇಡಿಗೆ ಕಾರಣವಾದರೂ ಕೂಡ, ಧೂಲಿವೃದ್ಧಿಶಬ್ದದಂತೆ. ಹಾಗೆಯೇ ನೀನು ಅಧರ್ಮರಾಜನಾಗಿದ್ದರೂ ಧರ್ಮರಾಜ ಎಂದು ಕರೆಯಿಸಿಕೊಳ್ಳುವಂತೆ – ಎಂದು ಈ ವ್ಯಾಖ್ಯಾನದ ಅಭಿಪ್ರಾಯ. ಇದು ಪದ್ಯದ ಅರ್ಥವನ್ನು ವಿಶದಗೊಳಿಸುತ್ತದೆ. ಇಲ್ಲಿ ಹೇಳಿರುವ ಮಂಗಳವಾರದ ಜೊತೆಗೆ ರನ್ನನು ವಡ್ಡವಾರ (=ಶನಿವಾರ)ವನ್ನು ಸೇರಿಸಿದ್ದಾನೆ.

ಈಗ ರನ್ನನ ಪದ್ಯದ ಅಭಿಪ್ರಾಯವನ್ನು ಹೀಗೆ ನಿರೂಪಿಸಬಹುದು: ದ್ರೋಣನನ್ನು ಹೀಗೆ ಕೊಲ್ಲಿಸಿದ ಧರ್ಮಪುತ್ರನು ದುಷ್ಟನೇಸರಿ; ಎಂದರೆ ಅವನು ಧರ್ಮನಂದನನಲ್ಲ, ಅಧರ್ಮನಂದನ; ಅಧರ್ಮನಂದನ ಎಂದೇ ಏಕೆ ಕರೆಯಬಾರದು? ಹಾಗೆ ಕರೆದರೆ ಕರೆಯಿಸಿಕೊಂಡವನಿಗೆ ಕೋಪವೂ ಕರೆದವನಿಗೆ ಕೇಡೂ ಆಗಬಹುದು. ಆದ್ದರಿಂದ ಹಾಗೆ ಕರೆಯದೆ ಧರ್ಮನಂದನನೆಂದೇ ಕರೆಯೋಣ, ಅದು ವಿರುದ್ಧಾರ್ಥವುಳ್ಳದ್ದಾದರು ಕೂಡ. ಹೀಗೆ ಮಾಡಿದರೆ ಕರೆದವನಿಗೆ ಕೇಡಿಲ್ಲ, ಕರೆಯಿಸಿಕೊಂಡವನಿಗೆ ಕೋಪವಿಲ್ಲ; ಅರ್ಥವೆನೋ ಅಧರ್ಮನಂದನನೆಂದೇ. ಅವಾಚ್ಯವಾದುದನ್ನು ಏಕೆ ಹೇಳಬೇಕು? ಕ್ರೂರಗ್ರಹಗಳಾದ ಕುಜ ಮತ್ತು ಶನಿ – ಇವರಿಗೆ ಮೀಸಲಾಗಿರುವ ದಿವಸಗಳನ್ನು ಕುಜವಾರ ಮತ್ತು ಶನಿವಾರ ಎಂದು ಕರೆದರೆ ಆ ಗ್ರಹಗಳಿಗೂ ಕೋಪ, ಕರೆದವನಿಗೂ ತಾಪ. ಆದ್ದರಿಂದ ಆ ಹೆಸರುಗಳನ್ನು ಬಿಟ್ಟು ಮಂಗಳವಾರ ಮತ್ತು ವಡ್ಡವಾರ ಎಂದು ಕರೆದರೆ ಉಭಯ ಪಕ್ಷಕ್ಕೂ ಹಿತವಾಗುತ್ತದೆ. ಹೀಗೆ ಅಶುಭವನ್ನು ಶುಭದ ಹೆಸರಿನಲ್ಲಿ ಮರೆಮಾಡಿ ಹೇಳುವುದು ಲೇಸು.

ಈ ಸಂದರ್ಭದಲ್ಲಿ ಹರಿಹರ ಕವಿಯ " ಪೇಶಾದ ನಾಳೆಲ್ಲ ತಿರುನಾಳ ದಿನವಯ್ಯ " ಎಂಬ ವಾಕ್ಯ ನೆನಪಿಗೆ ಬರುತ್ತದೆ. ಹೆಸರು ಹೇಳಬಾರದ ದಿನಗಳೆಲ್ಲ ಶ್ರೇಷ್ಠವಾದ ದಿವಸಗಳೇ ಆಗಿವೆ ಎಂದು ಇದರ ಅರ್ಥ. ಅಪ್ರಶಸ್ತವಾದುದನ್ನು ಪ್ರಶಸ್ತಶಬ್ದದಿಂದ ಕರೆಯುವುದು ಲೋಕರೂಢಿ. ಇದನ್ನು ಇಂಗ್ಲಿಷಿನಲ್ಲಿ Euphemism = " ಸೌಮ್ಯೋಕ್ತಿ " ಎಂದು ಕರೆಯುತ್ತಾರೆ.

ವಿ. ಸೀ. — ಒಂದು ಕವಿಕೃತಿ ದರ್ಶನ

' ಸುಮನಾ '

(ಹಿಂದಿನ ಸಂಚಿಕೆಯಿಂದ)

ಅನ್ಯಾಯದ, ಪಕ್ಷಪಾತದ ನುಡಿಗಳನ್ನು ವಿ.ಸೀ. ಅವರು ಸಹಿಸರು. ಮಾಸ್ತಿಯವರ ಕಾವ್ಯವನ್ನೊಮ್ಮೆ ಯಾರೋ ಸಪ್ಪೆ ಎಂದಿದ್ದಾರಲ್ಲ-ಎಂದಾಗ ಅವರಿಗೆ ಸಲ್ಪ ರೇಗಿರಬೇಕು. ಹತ್ತಿರದಲ್ಲಿದ್ದ 'ನವರಾತ್ರಿ'ಯ ಮೊದಲ ಭಾಗವನ್ನು ಕೈಗೆತ್ತಿಕೊಂಡು ನಾಲ್ಕು ಪುಟಗಳನ್ನು ಛಂದೋಗತಿಗನು ಸಾರವಾಗಿ ಓದಿ, ಪದ್ಯಗಳನ್ನು ಓದುವ ಬಗೆಯನ್ನು ತಿಳಿಸಿ ನನ್ನನ್ನು ಮಾತಿಲ್ಲದಂತೆ ಮಾಡಿದರು. ಛಂದಸ್ಸಿನ ಓಟಕ್ಕೆ ತಕ್ಕಂತೆ ಬಾಗಿ ಬಳುಕಿ ಓದುವುದೂ ಒಂದು ಕಲೆಯೆನ್ನಿಸಿತು. ಇನ್ನೊಮ್ಮೆ ನನಗೆ 'ಶ್ರೀ'ಯವರ 'ಕನ್ನಡ ಭಾವುಟ' ಓದಿ ತೋರಿಸಿದ ನೆನಪಿದೆ; ಕೆ. ಎಸ್. ನರಸಿಂಹಸ್ವಾಮಿ ಯವರ 'ಅನ್ನಪೂರ್ಣೆ'ಯ 'ತುಟಿ ದುಃಖದ ಬಿರುಕು' ಸಾಲನ್ನು ನಾಲ್ಕೈದುಬಾರಿ ವಿವಿಧ ಬಗೆಯಲ್ಲಿ ಓದಿ ತೋರಿಸಿ, ಅದರಲ್ಲಿನ ವಿಸರ್ಗದ ಔಚಿತ್ಯ, ಪ್ರಭಾವ, ಕವಿಯ ಸಿದ್ಧಿ ಗಳನ್ನು ಕುರಿತು ನುಡಿದುದಿನ್ನೂ ಹಸಿರಾಗಿದೆ. 'ಕಲಾ ಮಂದಿರ'ದಲ್ಲಿ ಅವರು 'ಶ್ರೀ'ಯವರ 'ಅಶ್ವತ್ಥಾಮನ್' ನಾಟಕ ವಾಚನವನ್ನು ಮಾಡಿದ್ದನ್ನು ಮರೆಯುವಂತಿಲ್ಲ. ಅಂದಿನ ಜಡಿಮಳೆಯಲ್ಲಿಯೂ ಸಮಯಕ್ಕೆ ಸರಿಯಾಗಿ ಹಾಜ ರಿದ್ದ ಅವರು ಮಳೆಯನ್ನು ಮರೆಸುವಂತೆ ನಾಟಕವನ್ನು ಓದಿ ವಿವರಿಸಿದುದನ್ನು ಎಂದಿಗೂ ಮರೆಯಲಾಗದು. 'ಓ ಪೊಲ್ಲ ಯುದ್ಧಮೇ' ಪ್ರಸಂಗ ಬಂದಾಗ ಮಧ್ಯೆ ಭಾರತ-ಪಾಕಿಸ್ತಾನ ಗಳ ಯುದ್ಧ ವಿಷಯ ನಡುವೆ ಸೇರಿ, ಅವರ ಮುಖ ಉಗ್ರ ವಾಯಿತು. ಯುದ್ಧದಿಂದ ನಾಡಿನ, ದೇಶದ ಯುವಜನಾಂಗ ಕ್ಷೀಣವಾಗುತ್ತದೆ, ಅಸಹಾಯಕರ, ವೃದ್ಧರ, ಸ್ತ್ರೀಯರ ಸಂಖ್ಯೆಯೇ ಹೆಚ್ಚುತ್ತದೆ. 'The flower of the nation dies' ಎಂದಾಗಲಂತೂ ಅವರ ಮುಖದ ಬಿರುಸು ಇಂದಿಗೂ ಕಣ್ಮುಂದೆ ಬರುತ್ತದೆ. ಅಶ್ವತ್ಥಾಮನು ಆತ್ಮಹತ್ಯೆಗೆಳಸುವ ಮುನ್ನ ತಾಯ್ನಾಡಾದ ಬನವಾಸಿಯ ಸೌಂದರ್ಯವನ್ನು ಕುರಿತು ಹುಲುಬಿ, ತನಗೂ ಅಲ್ಲಿಯೇ ಮಣ್ಣಾಗುವಂತಾದರೆ ಎನುವಾಗ ವಿ. ಸೀ. ಅವರ ಮಾತಿನ ಚಕಮುಕಿಯಾದರೂ ಎಂಥದು? 'ಏನು ಮಾಡುವುದು, ಮೋಕ್ಷಗುಂಡಂ ಅಂಥವ ರನ್ನೂ ಈ ಮೋಕ್ಷದಾಸೆ-ಜನ್ಮಭೂಮಿಯಲ್ಲಿ ಸಾಯಬೇಕು-ಬಿಡಲಿಲ್ಲ; ಅಂಥಹುದರಲ್ಲಿ, 'ಜನನೀ ಜನ್ಮ ಭೂಮಿಶ್ಚ' ಕೇಳಿಲ್ಲವೆ? 'ತಕ್ಕವನ್ ತಕ್ಕವೊಲೆ ಬಾಟ್ಟಿಪನ್' ವಾಕ್ಯ ವನ್ನು ಓದಿದಾಗಲಂತೂ ಭಾವ ತೀವ್ರತೆಯಿಂದ ಅವರ ಮುಖ ಕೆಂಪಾಗಿ, ಕಣ್ಣುಗಳು ಹೊಳಪೇರಿದ್ದುವು . . .

* * *

ಶಿಸ್ತು ಅವರ ಬಾಳಿನ ಉಸಿರಾದರೆ, ಶುಚಿಪ್ರಿಯತೆ ಅವರ ಸಾರ್ಥಕ ಬದುಕಿನ ರಹಸ್ಯ. ಪುಸ್ತಕವನ್ನು ಜೋಡಿಸುವುದ ರಿಂದ ಮೊದಲಾಗಿ ಉಡಿಗೆ-ತೊಡಿಗೆಗಳವರೆಗೂ ಒಂದು ಬಗೆಯ ವಿಶಿಷ್ಟತೆ, ಕ್ರಮ ಎದ್ದು ಕಾಣುತ್ತದೆ. ಉತ್ತಮ ದರ್ಜೆಯ ಮಫತ್‌ಲಾಲ್ ಪಂಚೆ, ಕ್ಯಾಲಿಕೊ ಮಲ್‌ನ ತೆಳುವಂಗಿ, ಕುತ್ತಿಗೆ ಮುಚ್ಚುವ ಕ್ಲೋಸ್‌ಕಾಲರ್ (ಸಿಲ್ಕ್) ಸರ್ಜ್ ಕೋಟು, ಶುಭ್ರವಾದ ಗಂಜಿಯಿಳಿಸಿದ ಪೇಟ, ಕಾಲಿಗೆ ಮೃದುವಾದ ಜಿಂಕೆಯ ಚರ್ಮದಂತಹದ ಚಪ್ಪಲಿ ಗಳು (ಧಾರವಾಡದ ಗಂಡು ಮೆಟ್ಟಲ್ಲ), ಕಣ್ಣಿಗೆ ಕನ್ನಡಕ, ಕೈಗೊಂದು ವಾಕಿಂಗ್‌ಸ್ಟಿಕ್-ಇದು ಸಾಮಾನ್ಯವಾಗಿ ಅವರು ಹೊರಹೊರಟಾಗಿನ ವೇಷಭೂಷಣಗಳು.

ಅವರ ಮಾನವೀಯ ಅನುಕಂಪೆ ಎಲ್ಲಕ್ಕಿಂತ ಹಿರಿಯ ಗುಣ. ಕಷ್ಟದಲ್ಲಿರುವವರನ್ನು ಕಂಡರೆ ಮರುಗುವುದು ಮಾತ್ರವಲ್ಲದೆ ಸ್ವತಃ ತಮ್ಮ ಕೈಮೀರಿ ನೆರವಾಗುತ್ತಾರೆ. ಹಲ ವೊಮ್ಮೆ ಅವರು ಸಾಲಸೋಲಗಳಿಗೆ ಗುರಿಯಾಗಿ ಕ್ಲೇಶ ಪಟ್ಟರೆಂಬುದನ್ನು ಅವರಿಂದಲೇ ಕೇಳಬಲ್ಲೆ. ಇದರ ನೆನ ಪಾದಾಗಲೆ ಅವರು ಕಿರಿಯರಾದ ನಮಗೆ 'ಸಾಲಮಾಡ ಬೇಡಿರಪ್ಪ' ಎನ್ನುತ್ತಾರೆ.

ಅವರಲ್ಲಿಗೆ ಅತಿಥಿಗಳಾಗಿ ಹೋದಾಗಲಂತೂ ಮನೆಯವ ರಲ್ಲಿಯೇ ಒಬ್ಬರಂತೆ ವಿಶ್ವಾಸದಿಂದ ಕಾಣುತ್ತಾರೆ. 'ಯಾವು ದರಲ್ಲಿಯೂ ಸಂಕೋಚ ಸಲ್ಲದು - ಬಡವನ ಮನೆಗೆ ಹೋದಾಗ ಬಡವನಂತಿರಬೇಕು, ದೊರೆಮನೆಗೆ ಹೋದಾಗ ರಾಜನಂತಿರಬೇಕು' ಎನ್ನುತ್ತಾರೆ. ಒಮ್ಮೆ ಅವರ ಅಧ್ಯಾಪಕ ಮಿತ್ರರು 'ನಿಮಗೆ ಬಂದ ಸಂಬಳವೆಲ್ಲ ಕಾಫಿಗೇ ಸಾಲದಾ ಗುತ್ತದೆ, ಸಾರ್' ಎಂದು ಟೀಕಿಸಿದುದಕ್ಕೆ ಅವರ ಉತ್ತರ

'ಆಗಲೇಳಿ, ಏನಂತೆ' ಎಂದರಂತೆ. ಅವರದು ಒಂದು ಬಗೆಯ ರಸಿಕ ಜೀವನ ಎಲ್ಲವುಗಳಲ್ಲಿಯೂ ಉತ್ತಮ ದರ್ಜೆಯದಾದ ವಸ್ತುಗಳನ್ನು ಆಯುವ ಕಣ್ಣು ಅವರದು. ಊಟಕ್ಕೆ ಎಳೆಯ ಬಾಳೆಯೆಲೆ; ಮೈಸೂರು ಚಿಗುರು ಸಣ್ಣ ವೀಳೆಯದೆಲೆ–ಅದಕ್ಕೆ ಮನೆಯಲ್ಲಿಯೇ ಬಣ್ಣ ಕಟ್ಟಿದ ಪುಡಿಯಡಿಕೆ; ದಪ್ಪನಾದ ರಸಭರಿತ ಮಲಗೋವಾ ಮಾವಿನಹಣ್ಣೇ ಆಗಬೇಕು; ಹಸಿರು ಬಣ್ಣದ ದಪ್ಪ ದಪ್ಪ ಕಾಬುಲು ದ್ರಾಕ್ಷಿಯೇ–ಕೆ. ಜಿ. ಗೆ ಎಂಟು ರೂಪಾಯಿ ಗಳಾದರೂ ಚಿಂತೆಯಿಲ್ಲ–ಆಗಬೇಕು; ಒಳ್ಳೆಯ ಸೇಬುಗಳೇ ಆಗಬೇಕು; ಕೊನೆಗೆ ಲಿಪ್ಟನ್ ಹಳದಿಲೇಬಲ್‌ನ ಚಹಾ ಪುಡಿಯ ಚಹವೇ ಆಗಬೇಕು; ವಾರಕ್ಕೊಮ್ಮೆಯಾದರೂ ಗುಂಡಪ್ಪನ ಹೋಟೆಲಿನ ಮಂಡಿಗೆಯ ನೈವೈದ್ಯವಾಗ ಬೇಕು! ಎಷ್ಟು ವೆಚ್ಚವಾದರೇನು, ಶ್ರೇಷ್ಠವಾದುದಾದರೆ ಸರಿಯೆನ್ನುವವರು ಅವರು. ರಸಿಕತೆಯೊಂದಿಗೇ ಗುಣಪಕ್ಷ ಪಾತವೂ ಸೇರಿದೆ ಅವರಲ್ಲಿ. ಉತ್ತಮ ಅಭಿರುಚಿಯುಳ್ಳ ವಸ್ತುಗಳೇ ಅವರಿಗೆ ಮಾನ್ಯ.

ಊಟವಾದ ನಂತರ ಯಾವುದಾದರೂ ಒಂದು ಹೋಳು ಹಣ್ಣು, ಎಲೆಅಡಿಕೆ ಹಾಕುವ ವಾಡಿಕೆ ಅವರದು. ಹಾಕಿ ಕೊಳ್ಳಲು ತರುವ ಚಿಕ್ಕ ಚಿಗುರೆಲೆಯನ್ನು ತೋರಿಸಿ 'ಹೀಗಿ ದ್ದರೆ ಚೆನ್ನ, ಹಿಡಿದರೆ ಬಳುಕಬೇಕು' ಎಂದು ತಿಳಿಸುತ್ತಾರೆ. ಒಮ್ಮೆ ಅವರ ಪಾಲಿನ ಮಾವಿನ ಹಣ್ಣಿನಲ್ಲಿ ಒಂದು ಹೋಳನ್ನು ಮಾತ್ರ ಇಟ್ಟುಕೊಂಡು ಮಿಕ್ಕೆಲ್ಲವನ್ನೂ ನನ ಗಿತ್ತರು. 'ನಿಮ್ಮದೆಲ್ಲ ನನಗಾಯಿತು' ಎಂದುದಕ್ಕೆ 'ಹೇಗಾ ಗುತ್ತದೆ' ಅಂದರು. ಮರುಕ್ಷಣ, 'ಬೇಡಪ್ಪ, ಬೇಡ, ನನ್ನಲ್ಲಿ ಒಳ್ಳೆಯದೇನಾದರೂ ಇದ್ದರೆ ನಿನಗಿರಲಿ, ಕೆಟ್ಟ ದೆಲ್ಲಾ ನನಗೇ ಇರಲಿ' ಎಂದರು. ಪರಿಚಯ ಹೆಚ್ಚಾಗಿದ್ದರೆ ಆಗಾಗ ನಾಲ್ಕು ಹಿತವಚನಗಳನ್ನು ಹೇಳುತ್ತಲೇ ಇರುತ್ತಾರೆ- ನಮಗಾಗಿ, ನಮ್ಮ ಒಳಿತಿಗಾಗಿ. ಒಂದು ಸಲ ನೀರು ಕೇಳಿ ದಾಗ, ಅಕಸ್ಮಾತ್ ಲೋಟದಲ್ಲಿ ಬೆರಳಿಟ್ಟದುದಕ್ಕಾಗಿ 'Table Manners' ಬಗೆಗೆ ೧೫ ನಿಮಿಷ ವಿವರಿಸಿದ್ದುಂಟು; ಅವರು ಹೇಳಿದ್ದ ತಿಂಡಿ ತರಲು ಹೋಗಿ ಸಿಗದೆ ಬರಿಗೈಲಿ ಹಿಂದಿರುಗಿದಾಗ 'Young fellowes, responsibilities ಇಲ್ಲ, ಏನೂ ತಿಳಿಯೋದೆ ಇಲ್ಲ ನಿಮಗೆ, ಬೇರೆ ಏನಾದರೂ ತರಬಹುದಿತ್ತಲ್ಲ' ಎನಿಸಿಕೊಂಡದ್ದುಂಟು. ಆದರೆ ಇದರ ಹಿಂದಿನ ಅಂತಃಕರಣ ಅರಿವಾದಲ್ಲಿ ಅವರ ಮಾತಿನ ಅರ್ಥ ಗೋಚರವಾಗುತ್ತದೆ.

* * *

ಯಾರನ್ನೂ ಬೇಸರದಿಂದ ಮುಕ್ತಗೊಳಿಸಲು ಸದಾ ಯತ್ನಿಸುವುದು ಅವರ ಸ್ವಭಾವ–ಕೊನೆಗೆ ಅವರ ಶ್ರೀಮತಿ ಯನ್ನು ಸಹ. ಸಪ್ಪೆ ಮುಖದಿಂದಿದ್ದರೆ ಕರೆದು, ಕೂರಿಸಿ ಕೊಂಡು, ಸ್ವಲ್ಪ ಹೊತ್ತು ಮಾತನಾಡಿಸಿ, ಯೋಗಕ್ಷೇಮ ವಿಚಾರಿಸಿ, ಹಾಸ್ಯ ಮಾಡಿ ನಕ್ಕು ನಗಿಸಿ ಗೆಲುವಾಗಿಸಿ ಒಳಗೆ ಕಳುಹಿಸುವರು. ಹಲವಾರು ವೇಳೆ ಏಕಾಗ್ರಚಿತ್ತ ದಿಂದ ಯಾವುದಾದರೂ ಲೇಖನವನ್ನು ಹೇಳಿ ಬರೆಯಿಸುತ್ತಿ ದ್ದಾಗಲೂ, ಇದರಿಂದ ತಮ್ಮ 'Continuity'ಗೆ ಭಂಗ ಬರುವುದೆಂದು ತಿಳಿದೂ ಹಾಗೆ ಮಾಡುತ್ತಾರೆ. ಮರುಕ್ಷಣವೇ, 'ಅವರನ್ನು ಇನ್ಯಾರು ಕೇಳಬೇಕಪ್ಪ, ನಮ್ಮನ್ನೆಲ್ಲ ವಿಚಾರಿಸಿ ಕೊಳ್ಳುವ ಜೀವ ಅದು. ನಮಗೆ ಬೇಸರವಾದರೆ ತಿರುಗಾಟಕ್ಕೆ ಹೋಗುತ್ತೇವೆ, ಸಿನೆಮಾಕ್ಕೆ ಹೋಗ್ತೇವೆ; ಇಲ್ಲವೆ, ಸ್ನೇಹಿತ ರಿದ್ದಾರೆ, ಪುಸ್ತಕಗಳಿವೆ; ಅವರಿಗೆ ಏನಿದೆ, ತಾವಾಯಿತು ಮನೆಯಾಯಿತು' ಎನ್ನುತ್ತಾರೆ. ಇನ್ನೊಮ್ಮೆ ಹಾಸ್ಯ ಮಾಡಿ ರೇಗಿಸಿ, ನಮ್ಮತ್ತ ತಿರುಗಿ ಹುಬ್ಬು ಹಾರಿಸಿ 'Till the end of your life, be loving your wife!' ಎಂದು ನಗುತ್ತಾರೆ. ಇಂತಹ ಸನ್ನಿವೇಶಗಳ ಮಾಧುರ್ಯ ಅವರ್ಣನೀಯ.

ಎಲ್ಲದರಲ್ಲಿಯೂ ಅಪಾರ ಆಸಕ್ತಿ ಅವರಿಗೆ. ಆ ನಟಿ ಹಾಗೆ ಮಾಡುತ್ತಿದ್ದಳು, ಅವನು ಹೀಗೆ ಹ್ಯಾಮ್ಲೆಟ್ ಅಭಿನಯಿ ಸುತ್ತಿದ್ದ; ಆ ಪ್ರೊಡ್ಯೂಸರ್ ಹಾಗೆ ತಯಾರಿಸುತ್ತಿದ್ದ – ಎಂದು ಅವರು ಕಂಡ ಹಲವು ಚಿತ್ರಗಳನ್ನು ಕುರಿತು ನುಡಿ ಯುತ್ತಾರೆ. ಉತ್ತಮ ಆಂಗ್ಲ ಚಿತ್ರಗಳನ್ನು ಇಂದಿಗೂ ತಪ್ಪದೆ ನೋಡುವ ಚಟ ಅವರಿಗಿದೆ. ಕ್ರಿಕೆಟ್ ಪಂದ್ಯಗಳು ನಡೆವಾಗ ಆಸಕ್ತಿಯಿಂದ ಸ್ಕೋರುಗಳನ್ನು ವಿಚಾರಿಸುತ್ತಾರೆ ಡೇವಿಸ್‌ಕಪ್ ಟೆನಿಸ್ ಪಂದ್ಯ ನಡೆಯುತ್ತಿದಾಗ ಪ್ರತಿ ಐದು ನಿಮಿಷಗಳಿಗೂ ಏನನ್ನೋ ಓದುತ್ತಿದ್ದರೂ ಏನಾಯಿತು, ಏನಾಯಿತು ಯಾರು ಗೆದ್ದರು ಎಂದು ವಿಚಾರಿಸುತ್ತಿದ್ದರು. ಅರ್ಥವತ್ತಾದ ಒಂದು ಸಾಲು ಗದ್ಯ ಅಥವಾ ಪದ್ಯ, ಒಂದು ಉತ್ತಮ ಕುಂಚಕ್ರಿಯೆ, ರೇಖಾಚಿತ್ರ, ಒಂದು ರಮ್ಯಪ್ರಕೃತಿ ನೋಟ ಅಥವಾ ಉತ್ತಮ ಸಂಗೀತವಿದ್ದರೆ ಅವರ ಮನಸ್ಸು ಅದಕ್ಕೆ ಸೆರೆಯಾಗಿರುತ್ತದೆ. ಒಂದು ವಿಶೇಷ ರುಚಿಯ ಅಡುಗೆಯನ್ನು ಮಾಡಬೇಕೆಂದರೂ, ಉತ್ತರದಲ್ಲಿ ಹಾಗೆ ಮಾಡುತ್ತಾರೆ, ದಕ್ಷಿಣದವರು ಹೀಗೆ ಮಾಡುತ್ತಾರೆ, ಹಾಗೆ ಮಾಡಿದರೇ ಚೆನ್ನ, ಹೆಚ್ಚು ರುಚಿ ಎಂದು ವಿವರಿಸುತ್ತಾರೆ. ಸಣ್ಣ ವಿಷಯದಿಂದ ಮೊದಲಾಗಿ ಎಲ್ಲವನ್ನೂ ತಾಳ್ಮೆಯಿಂದ ಕೇಳುತ್ತಾರೆ. ಬೇಸರವೆಂಬ ಪದವೂ ಅವರ ಬಳಿ ಸುಳಿಯ ದೇನೋ!

ಕೀಳುತನವನ್ನು ಕಂಡಾಗ ಅವರು ಸ್ವಲ್ಪ ಕಠಿಣರಾಗುತ್ತಾರೆ. ಒಮ್ಮೆ ಗಾಂಧೀಜಿಯವರು ಐನ್‌ಸ್ಟೀನರಿಗೆ ಬರೆದಿದ್ದ ಅಪ್ರಕಟಿತ ಪತ್ರವೊಂದು ಪತ್ರಿಕೆಯಲ್ಲಿ ಅಚ್ಚಾದಾಗ ಅವರು ಉದ್ಗರಿಸಿದ್ದುಂಟು: 'ಒಬ್ಬ ಇದ್ದ ಅಂತಹವನು, ಏನೊ ಮಾಡಿದ, ಹೋದ ಎಂಬುದು ಕೂಡ ನಮ್ಮವರಿಗೆ ಬೇಕಿಲ್ಲ; ಕ್ರಿಸ್ತ, ಬುದ್ಧ, ಗಾಂಧಿ ಎಲ್ಲ ಬಂದರು, ಹೋದರು; ಅಂಥವರಿದ್ದರು ಎಂದು ಮಾತ್ರ. ನಾವು ಮಾತ್ರ ಎಂದೆಂದಿಗೂ ಬದಲಾಗದ ಮನುಷ್ಯರಾಗಿ ಉಳಿದಿದ್ದೇವೆ!'

ಅವರಿಗೆ ವಿರೋಧವಾದುದನ್ನು, ಅಪ್ರಿಯವಾದುದನ್ನು ಕೇಳಿದಾಗ ಒಮ್ಮೊಮ್ಮೆ ಅವರು ಕೆಲವು ಕ್ಷಣ ಖಿನ್ನರಾಗುತ್ತಾರೆ. ಅವರನ್ನು Romantic ಸಂಪ್ರದಾಯದ ಕವಿಗಳೆಂದು ಟೀಕಿಸಿದವರುಂಟು; ನವ್ಯವನ್ನು ಕಂಡರೆ ಆಗದು, ಅಸಹನೆ ಎಂದವರುಂಟು; ಅವರಿಗೆ ಈ ಬಗೆಯ ಪಕ್ಷಪಾತ ಹಿಡಿಸದು. ವೈಯಕ್ತಿಕವಾಗಿ ಯಾವ ಬಗೆಯನ್ನು ಕುರಿತಾಗಲಿ ಅವರಿಗೆ ಅಸಹನೆ ಇಲ್ಲ. ನವ್ಯರೀತಿಯಲ್ಲಿಯೂ ಕೆಲವು ಕವನಗಳನ್ನು ಅವರು ರಚಿಸಿದ್ದಾರೆ. ಅವರಿಗೆ ನವ್ಯ ಮಾರ್ಗದಲ್ಲಿ ವಿಶೇಷತೆಯೇನೂ ಕಂಡು ಬರದಿದ್ದಲ್ಲಿ ಅದನ್ನು ಅಸಹನೆ ಎಂದು ಗುರುತಿಸಿದರೆ ಸರಿಯೆ? ನವ್ಯದ ಮಹಾಗುರು ಈಲಿಯೆಟ್ಟರನ್ನು ಅವರು ೧೯೩೦ಕ್ಕೇ ಓದಿ ಮುಗಿಸಿ ಅರಿಗಿಸಿಕೊಂಡಿದ್ದರು; ಕನ್ನಡಕ್ಕೆ ಆ ಪ್ರಭಾವ ಬರಲು ನಾಲ್ವತ್ತು ವರ್ಷಗಳೇ ಬೇಕಾಯಿತಷ್ಟೆ! ಭಾರತಕ್ಕೆ ಸ್ಟಿಫೆನ್ ಸ್ಪೆಂಡರ್ ಬಂದಿದ್ದಾಗ ಯಾವುದೋ ಗೋಷ್ಠಿಯನ್ನು ಉದ್ಘಾಟಿಸಿದ ವಿ. ಸೀ. ಯವರು ಅವರನ್ನು ಈಲಿಯಟ್ ಕವನಗಳ ಬಗೆಗೆ ವಿಚಾರಿಸಿದರೆ, ಅವರಿಗೆ ದೊರೆತ ಉತ್ತರ: 'Professor, you have asked a difficult question' ಇಂದಿನ ಆಡಂಬರದ ಜಗತ್ತಿನಲ್ಲಿ (ಸಾಹಿತ್ಯಲೋಕದಲ್ಲಿಯೂ ಇದು ತಪ್ಪಿದ್ದಲ್ಲ) ಗುಣಕ್ಕೆ ಬೆಲೆಯಾದರೂ ಎಲ್ಲಿ? ಒಮ್ಮೆ ಸೋಪೊಕ್ಲೆಸ್ ಭಾಷಾಂತರಿಸಬಾರದೇಕೆ ಎಂದುದಕ್ಕೆ ಅವರಿತ್ತ ಉತ್ತರ ಬಹುಮಾರ್ಮಿಕವಾಗಿತ್ತು: 'ಮೃದಂಗಕ್ಕಿಂತ ಜನ ಹೆಚ್ಚು ಡೋಲನ್ನೇ ಬಯಸುತ್ತಾರೆ; ಕೈ ನೋಯಿಸಿಕೊಳ್ಳಬೇಕಿಲ್ಲ, ಕೋಲಿಂದ ಡೋಲು ಬಾರಿಸಬಹುದು; ಅದರ ಅಬ್ಬರ, ಧ್ವನಿ ಮೃದಂಗಕ್ಕೆಲ್ಲಿ ಬಂದೀತು! ಹಾಗೆಯೆ quality works ಯಾರಿಗೆ ಬೇಕಾಗಿದೆ; qulitative valuationಗೆ ಬೆಲೆಯಿಲ್ಲ; ಎಲ್ಲ ಕಡೆಯೂ ಹೀಗೇ . . . ಎಲ್ಲಾ ಭಾಷೆಗಳಲ್ಲೂ ಇದೇ ತೊಂದರೆ . . .'

ಸೈಂಟ್ಸ್‌ಬರಿಯವರ 'Essays and prefaces' ಪುಸ್ತಕಕ್ಕೆ ಮೊದಲ ನುಡಿ ಬರೆದಿರುವ ಆಲಿವರ್ ಎಲ್ಟನ್‌ರ ಈ ವಾಕ್ಯಗಳು ವಿ. ಸೀ. ಯವರಿಗೆ ಅಚ್ಚು ಮೆಚ್ಚು; ಅದನ್ನು ಒಂದೆರಡೆಡೆ ಉದಾಹರಿಸಿಯೂ ಇದ್ದಾರೆ. ಕೆಲವೊಮ್ಮೆ ವಿಮರ್ಶೆಯಲ್ಲಿ ಕೊಟ್ಟ ಕೊನೆಯ ಮಾತು, ಅಧಿಕಾರವಾಕ್ಯಗಳ ಮಾತು ಬಂದಾಗ ತಕ್ಷಣ ಇದನ್ನು ಓದುತ್ತಾರೆ–"Men of calling had best be modest *quickly the night wind sweeps us away, and the traces of us!* Saintsbury, for all his brave positive way of speaking, was modest; and well for those who can leave behind them half as much as he has left of literature that is sound and fine . . ." ಅಂತೆಯೇ ಅಳಿಯುವುದು, ಉಳಿಯುವುದು ಯಾವುದು ಎಂದು ತಿಳಿದಿರುವ ಅವರಿಗೆ ಯಾವುದರ ಕೊರಗೂ ಇಲ್ಲ.

೪

ನಾವು ಹಿರಿದನ್ನು ಕಾಣಬೇಕೆಂದು, ಆಶಿಸಬೇಕೆಂದು ಅವರು ಬಯಸುತ್ತಾರೆ. ತಮ್ಮ ಬಾಳಿನ ಅನುಭವಗಳನ್ನು ವರ್ಣಿಸುತ್ತಾರೆ; ತಮ್ಮ ಗೆಳೆಯರು, ಗುರುಗಳನ್ನು ಕುರಿತು ಮಾತನಾಡುವಾಗ ಅವರ ಮಾತಿನಲ್ಲಿ ಮೃದುತ್ವ, ಗೌರವ, ಮೆಚ್ಚುಗೆಗಳು ನೆಲಸುತ್ತವೆ. ಅಂತಹ ಸನ್ನಿವೇಶಗಳಲ್ಲೆಲ್ಲ ದೊಡ್ಡದಕ್ಕೆ ಆಸೆಪಡಬೇಕು, ಅವನ್ನು ಸಾಧಿಸಿಕೊಳ್ಳಬೇಕು, ಬಾಳನ್ನೂ ಆಳವಾಗಿ ಅರಿತುಕೊಂಡು ಸಾರ್ಥಕಪಡಿಸಿಕೊಳ್ಳಬೇಕು ಎಂದು ತಿಳಿಸುತ್ತಾರೆ. ಸ್ವಾರ್ಥವನ್ನು ಬಿಡಬೇಕು–'ಹೆಣ್ಣು, ಹಣ ತನ್ನದು, ಸ್ವಾರ್ಥ; ಬೆಳದಿಂಗಳು, ನಕ್ಷತ್ರ ಎಲ್ಲರವು.' ಸಣ್ಣ ಆಸೆಗೆ ಬಲಿಯಾಗಿ ದೊಡ್ಡದಕ್ಕೆ ಅಡ್ಡಿ ಬರುವ ಯಾವುದನ್ನೂ ಮಾಡಬಾರದು. ಅಂತಾಗಲು ಬಾಳಿಗೆ 'ಹದ' ತಂದುಕೊಳ್ಳಬೇಕು; ಎಲ್ಲವನ್ನೂ ಸಹಿಸುವ ತಾಳ್ಮೆಯನ್ನು ಸಂಪಾದಿಸಬೇಕು; ಎಡರು ತೊಡರುಗಳನ್ನು ಲೆಕ್ಕಿಸದೆ ಅಂಬಿನಂತೆ ನೇರ ಸಾಗಬೇಕು ಎನ್ನುತ್ತಾರೆ. ಲೋಕ ಜೀವನಕ್ಕೆ ಹೊಂದಿಕೊಂಡು ಪ್ರೀತಿ ಪ್ರೇಮ ವಿಶ್ವಾಸ, ಸಜ್ಜನಿಕೆಗಳ ಕಾಣಿಕೆ ಸಲ್ಲಿಸಬೇಕೇ ಹೊರತು ಸರ್ವಸಂಗ ಪರಿತ್ಯಾಗಿಯಾಗಿ ಸಂನ್ಯಾಸಿಯಾಗುವುದರಲ್ಲಿ ತಮಗೆ ನಂಬಿಕೆ ಇಲ್ಲವೆನ್ನುತ್ತಾರೆ. ಜೀವನಕ್ಕೆ ಅಂಟಿಯೂ ಅಂಟದಂತೆ ಇರಬೇಕೆನ್ನುವ ಮನೋಧರ್ಮ ಅವರದು. ಅಬ್ಬರ, ಆಡಂಬರ, ಪ್ರಜ್ಞಾವಾದ ಅವರಿಗೆ ಹಿಡಿಸದು. ಬಾಳಿನಲ್ಲಿ ಸರಳತೆಯನ್ನು, ಶುಚಿಯನ್ನು ಬಿತ್ತಿದವರು ಅವರು; ಆರಾಧಿಸುವವರು ಅವರು.

ಅವರ ಪತ್ರಗಳಿಂದ ಕೆಲವು ವಾಕ್ಯಗಳನ್ನು ಆಯ್ದು ಉದಾಹರಿಸುವುದರಿಂದ ಅವರ ಮನೋಧರ್ಮದ ಪರಿಚಯವಾಗಬಹುದು:

'Try to build up yourself into somebody and be a source of light and help to others. . .

* * * *

'Build yourself more than that, read good English books and shape your writing and talking. Far they will stand you in good steady life.

* * * *

'You must have a purpose in life which will take hold of your mind and does not let you do things. ಮಾ ತೇ ಸಂಗೋಸ್ತ್ವ ಅಕರ್ಮಣೀ is the direction. If nothing bigger can be mastered or nursed, read, throw yourself into some work which does not let you have any free time, Only it must be work which you like and think is of value . . .

* * * *

'More than everything else one must cultivate a sense of values. This is what I always say-the words are from Shankara : ಲೋಕ ಸ್ವರೂಪ. How can you keep it ? That can't alter to suit you. You must adjust your attitudes to it. If it can't work your way, you must not get it to its toils : but use it to some advantage ; at least not let it hurt you or your aims and objects in life . . .'

ಬೇಸರದ ಕಾರ್ಮೋಡ ಕವಿದಿರುವ ಯಾವ ಮನಸ್ಸಿಗೆ ತಾನೆ ಈ ವಾಕ್ಯಗಳು ಧೈರ್ಯ, ಭರವಸೆ ನೀಡದಿರಲಾರವು? ಬಾಳಿಗೊಂದು ನಂಬಿಕೆಯನ್ನು ಆಸಕ್ತಿಯನ್ನು ಸೃಜಿಸ ಲಾರವು ?

ನಮ್ಮ ನಾಡಿನ ಸ್ಥಿತಿ ಎಲ್ಲದರಲ್ಲಿಯೂ ಈ ಬಗೆಯದಾ ಯಿತಲ್ಲ ಎಂದು ಅವರಿಗೆ ವ್ಯಥೆ, ಅನುಕಂಪ. ಹೊಯ್ಸಳ ಶಿಲ್ಪದ ಬಗೆಗೆ ಒಮ್ಮೆ ವಿವರಿಸುತ್ತ–' ಈಗಂತೂ ಆ ಸೃಜನೆ ಅಸಾಧ್ಯ, ಕಟ್ಟಿರೋದನ್ನು ಉಳಿಸಿಕೊಳ್ಳುವ ಭಾಗ್ಯವಿಲ್ಲ ನಮಗೆ, ಸ್ವಲ್ಪ ದೊಡ್ಡ city ಥರಹ ಮಾಡಿ, ದೇವಸ್ಥಾ ನದ ಸುತ್ತೆಲ್ಲ ಶುಚಿಮಾಡಿಸಿ, ಗಾಳಿ ಬೆಳಕಾದರೂ ಬರು ವಂತೆ ಮಾಡಿದರೆ ನಾಲ್ಕು ಜನ ನೋಡಿಯಾರು. ಒಂದು ಕಾಲಕ್ಕೆ ಅದು ರಾಜಧಾನಿಯಾಗಿತ್ತೆಂದು ಯಾರು ಹೇಳು ತ್ತಾರೆ ?'. ಎಂದು ಕಳಕಳಿಯಿಂದ ನುಡಿದರು. ಇದರ ಸತ್ಯಾಸತ್ಯತೆ ಇತ್ತೀಚೆಗೆ ಮಸ್ತಕಾಭಿಷೇಕದ ಸಂದರ್ಭದಲ್ಲಿ ಹಳೆಯಬೀಡಿಗೂ ಹೋಗಿದ್ದಾಗ ಅಲ್ಲಿನ ಕಗ್ಗತ್ತಲೆಯ ಗವಿ ಯಂತಿದ್ದ ದೇವಸ್ಥಾನದ ಒಳಗನ್ನು, ಅದರಲ್ಲಿರುವ ಎರಡು ಗೋಳಾಕಾರದ ನುಣುಪಾದ ಶಿಲಾನಾಟ್ಯರಂಗವನ್ನು– ಒಂದು ಕಾಲದಲ್ಲಿ ಪಿರಿಯರಿಸಿ ಶಾಂತಲೆ ದೈವಪ್ರೀತ್ಯರ್ಥ ವಾಗಿ ನೃತ್ಯಸೇವೆಯನ್ನೊಪ್ಪಿಸುತ್ತಿದ್ದ ಶಿಲಾರಂಗ–ಪ್ರವಾಸಿ ಗಳ ಗುಂಪು ಕೂಡುವ ಸ್ಥಳವಾಗಿ ತುಳಿಯುತ್ತ ಉಪ ಯೋಗಿಸುತ್ತಿದ್ದುದನ್ನು ಕಂಡಾಗ ಅಲ್ಲಿನ ದುರ್ದೆಸೆಯ ಅರಿವಾಯಿತು.

೫

ಅವರನ್ನು ಹೊನ್ನಾವರದಲ್ಲಿ, ಹೊಸ ಅಧಿಕಾರವನ್ನು ವಹಿಸಿಕೊಂಡಾಗ ಕಾಣುವ, ಹತ್ತು ದಿನಗಳು ಅವ ರೊಂದಿಗೇ ಇರುವ ಸವಕಾಶ ಜೂನಿನಲ್ಲಿ ನನಗೆ ಲಭಿಸಿತ್ತು. ಆ ಹತ್ತುದಿನಗಳು ನನ್ನ ಪಾಲಿಗೆ ಚಿರಸ್ಮರಣೀಯವಾದವು, ಎಂದೆಂದಿಗೂ ಸ್ಮೃತಿಯಲ್ಲಿ ಅಚಲವಾಗಿ ಉಳಿಯು ವಂತಹವು. ಮೊದಲ ದಿನ ನನ್ನನ್ನೂ ತಮ್ಮ ಕಾಲೇಜಿಗೆ ಕರೆದುಕೊಂಡುಹೋದರು. ಹತ್ತು ನಿಮಿಷ ಅಲ್ಲಿ ಕುಳಿತು, ಕಾಲೇಜಿನ ಹಿಂಭಾಗದಲ್ಲಿ ಗುಡ್ಡವಾದರೂ ಸ್ವಲ್ಪ ಬಯಲಾ ಗಿದ್ದಂತೆ ಕಾಣುತ್ತಿದ್ದ ವಿಶಾಲ ಜಾಗಕ್ಕೆ ಕರೆದೊಯ್ದರು. ಸಮೀಪದಲ್ಲಿದ್ದ ನಾಲ್ಕಾರು ಸರ್ವೆ ಜಾತಿಯ ಮರಗಳಿಂದ ತಂಗಾಳಿ ಹಿತಕರವಾಗಿ ಬೀಸುತ್ತಿತ್ತು. ಮರಗಳ ನೆಳಲಿನಲ್ಲಿ ಎರಡು ಚಣ ನಿಂತರು ; ಗಾಳಿ ಅವರ ಬಳಿ ಸುಳಿದು ಮುಂದೆ ಸಾಗಿದಾಗ ಅದರೊಡನೆ ಮೃದುವಾಗಿ ಮಾತುಕತೆ ನಡೆಸಿ ದಂತೆ ಮೆಲ್ಲನೆ ಒಡನಿದ್ದ ನನಗೆ ನುಡಿದರು–'This is a speciality, here.' ಸದಾ ಮಳೆ ಬೀಳುತ್ತಿದ್ದರೂ ಸಹಿ ಸಲಸಾಧ್ಯ ಸೆಖೆಯಿದ್ದ ಆಗ ಈ ತಂಗಾಳಿಗೆ ಮೈಯೊಡ್ಡಿ ನಿಲ್ಲುವುದು ನಿಜವಾಗಿಯೂ ವಿಶೇಷವೇ. ಆದರೆ ಪ್ರತಿದಿನ ಕಾಲೇಜಿಗೆ ಬಂದೊಡನೆ ಕೆಲವು ಕ್ಷಣ ಅಲ್ಲಿಗೆ ಹೋಗಿ ನಿಲ್ಲು ತ್ತಿದ್ದರೆಂದು ನನಗೆ ಅನಂತರ ತಿಳಿಯಿತು.

ಇನ್ನೂ ನಾಲ್ಕು ಹೆಜ್ಜೆ ಮುಂದೆ ನಡೆದು ಬಯಲಿನ ಅಂಚನ್ನು ಸಮೀಪಿಸಿದೆವು. ಅಗ್ನಿಪರ್ವತ ಕಾರಿದಾಗ ಉಂಟಾಗುವ ಲಾವಾರಸ ಹೆಪ್ಪುಗಟ್ಟಿ ಮೊನಚಾದ ಉಕ್ಕಿನ ಶಿಲೆಗಳಾಗಿದ್ದಂತೆ ತೋರುತ್ತಿದ್ದ ಅಲ್ಲಿನ ನೆಲದ ಮೇಲೆ ಜಾಗರೂಕತೆಯಿಂದ ನಡೆವಂತೆ ಸೂಚಿಸಿ, ಒಂದು ಚಣ ನಿಂತು ಪಶ್ಚಿಮದ ಕಡೆ ಕೈ ತೋರಿಸಿದರು. ಅನತಿ ದೂರದಲ್ಲಿ ಕಡಲಿನ ಅಂಚು ಕಾಣುತ್ತಿತ್ತು. ಕಣ್ಣೋಟ ಹೋಗುವವರೆಗೂ ಕಡಲು ಹಬ್ಬಿರುವುದು, ಅದರ ನೀಲಿಮೆ, ನೊರೆನೊರೆಯಾಗಿ ಸಾಗಿ ಬರುತ್ತಿದ್ದ ಅಲೆಗಳ ನೀರು, ಕಾಣಿ

ಸುತ್ತಿತ್ತು ; ಮೊರೆತ ಕೇಳಿಸುತ್ತಿತ್ತು. ಎಡಭಾಗದಲ್ಲಿ ಕೆಳಗಡೆ (ನಾವು ನಿಂತಿದ್ದುದು ಕಾಲೇಜಿನ ಕಟ್ಟಡವಿರುವ ಗುಡ್ಡದಲ್ಲಿ) ಶರಾವತಿ ಹರಿಯುತ್ತಿತ್ತು. ಎಲ್ಲೆಡೆ ಮೌನ. 'To here this eternal music of sea, I am staying hear, even at this age' ಎಂದು ನುಡಿದರು. ಸುತ್ತಲ ಸೌಂದರ್ಯವನ್ನೆಲ್ಲ ಕಣ್ಣುಗಳಲ್ಲಿ ತುಂಬಿಕೊಳ್ಳುವಂತೆ ದೃಷ್ಟಿ ಹಾಯಿಸಿದರು. ಹತ್ತು ಹೆಜ್ಜೆಗೆ ದೂರದಲ್ಲಿ ಗುಡ್ಡದಮೇಲೆ ಏಕಾಕಿ ವಾಸಗೃಹವೊಂದಿತ್ತು. ಅದರೆಡೆ ಕೈದೋರಿ 'ಇಂಗ್ಲಿಷಿನವರಿದ್ದಾಗ ಕಟ್ಟಿಕೊಂಡಿದ್ದರು, ಎಂಥ, sense of beauty ಅವರದು, ಎಂಥ ಸ್ಥಳ! If they can give that house, I can live here till my end . . .' ಎಂದರು. ಅಲ್ಲಿ ನಿಂತು ನೋಡಿದರೆ ಎಲ್ಲವೂ ಕಾಣುತ್ತಿದ್ದುವು-ನದಿ, ಸಮುದ್ರ, ಸಹ್ಯಾದ್ರಿಯ ಅಸಂಖ್ಯ ಶ್ರೇಣಿಗಳು, ಸುತ್ತೆಲ್ಲ ಹಸಿರುಡೆಯುಟ್ಟ ಪ್ರಕೃತಿಯ ಮಂದಹಾಸ, ಜೊತೆಗೆ ಸಮುದ್ರ ಸಂಗೀತ ಕೇಳುತ್ತಿತ್ತು-ಹಗಲಿರುಳು ನಿರಂತರವಾಗಿ, ಮಂಜುಳದನಿಯಲ್ಲಿ. ಅದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೇನು ಬೇಕು ಎನಿಸಿತು ಆ ಕ್ಷಣಕ್ಕೆ ನನಗೆ. ಪಡುವಣ ಕಡಲೊಂದು, ಮಾನವನಾದರೂ ಕಡಲನ್ನು ಸಮಗಟ್ಟಬಲ್ಲ ಮಹಾವ್ಯಕ್ತಿತ್ವವುಳ್ಳ ವಿ. ಸೀ. ಅವರು-ನಡುವೆ ನಿಂತ ನನಗೆ ಮಾತು ಮೂಕವಾಗಿ ಮನಸ್ಸು ಅನಿರ್ವಚನೀಯ ಆನಂದದಲ್ಲಿ ಮುಳುಗಿತ್ತು. ಆ ದಿನವನ್ನು ಎಂದಿಗೂ ಮರೆಯಲಾರೆ.

ಹಿಂದಿನ ಕಾಲದಲ್ಲಿ ಗುರುಗಳು ಹಿರಿಯರು ಎನಿಸಿಕೊಂಡವರ ಪಾದದೆಡೆ ಕುಳಿತು ಅಭ್ಯಸಿಸುತ್ತಿದ್ದರಂತೆ; ಉಪದೇಶ ಪಡೆಯುತ್ತಿದ್ದರಂತೆ. ಇಂದು ಆ ಬಗೆಯ ಸಂಪ್ರದಾಯಕ್ಕೆ ಗೌರವ ಸಲ್ಲಿಕೆಗೆ ನಾಡಿನ ಜನತೆ ತಿಲಾಂಜಲಿಯಿತ್ತಿದೆ. ಕಾಲ ಬದಲಾದಂತೆ ನಡೆ-ನುಡಿಗಳು ಬದಲಾಗುತ್ತವೆ. ಹೊಸದಾಗುತ್ತವೆ. ಆದರೂ ಆತ್ಮಸಾಕ್ಷಿ ಒಪ್ಪಿದ ಹಿರಿಯರನ್ನು ಬಿಡುವಾದಗಲಾದರೂ ಒಮ್ಮೊಮ್ಮೆ, ಕಂಡು, ನಾಲ್ಕು ಚಣ ಸಂಭಾಷಿಸಿ, ಬದುಕಿನಲ್ಲಿ ಶ್ರದ್ಧೆ, ಉತ್ಸಾಹಗಳನ್ನು ತುಂಬಿಕೊಳ್ಳುವಂತಾದರೆ ನಿಜಕ್ಕೂ ನಮ್ಮ ಬದುಕಿನ ಅರ್ಥವಂತಿಕೆಯೂ ಹೆಚ್ಚೀತು, ಸಾಫಲ್ಯತೆ ಮೂಡೀತು ಎನಿಸುತ್ತದೆ. ಬೇರೆಲ್ಲೋ ಓದಿದ ಈ ವಾಕ್ಯಗಳು ವಿ. ಸೀ. ಅವರಿಗೆ ಪದಶಃ ಒಪ್ಪುತ್ತವೆ :

" In these days of shaky faith in men and women, in people and purity, truth, beauty and human religion ; honesty, harmony and divine light ; . . . is a rare example in the midst of hundreds of renowned writers who still holds brief for men and women people ; and purity ; truth, beauty and human religion honesty, hormony and divine light eternal ; and moreover inspires millions to have faith in creative art which alone brings spiritual joy to ever-expanding ever-living humanity . . . "

ವಿ.ಸೀ. ಅವರಂತಹ ಉದಾತ್ತ ವ್ಯಕ್ತಿಗಳ ಸಂಪರ್ಕ, ಸಂಸರ್ಗದಿಂದ ನಮ್ಮ ಬಾಳು ಹಸನಾಗುತ್ತದೆಂದು ಬೇರೆ ಹೇಳಬೇಕಿಲ್ಲ.

ವಿ. ಸೀ. ಅವರ ಕೃತಿಗಳು

ನಾಟಕ :

ಸೊಹ್ರಾಬ್-ರುಸ್ತುಂ
ಆಗ್ರಹ
ಶ್ರೀಶೈಲ ಶಿಖರ
ಪಿಗ್‌ಮೇಲಿಯನ್ (ಅನು)

ಕವನ :

ಗೀತಗಳು
ದೀಪಗಳು
ನೆಳಲು-ಬೆಳಕು
ದ್ರಾಕ್ಷಿ-ದಾಳಿಂಬೆ
ಹೆಜ್ಜೆ ಪಾಡು

ವಿಮರ್ಶೆ :

ಕರ್ಣಾಟಕ ಕಾದಂಬರಿ
ಅಶ್ವತ್ಥಾಮನ್
ಅಭಿಜ್ಞಾನ ಶಾಕುಂತಲ ನಾಟಕ
ಕವಿ-ಕಾವ್ಯ-ದೃಷ್ಟಿ
ಸಾಹಿತ್ಯ ವಿಮರ್ಶೆಗವಲ್ಲಿ ಅರ್ಥ ಮತ್ತು ಮೌಲ್ಯ

ಶಾಸ್ತ್ರ :

ಹಣಪ್ರಪಂಚ
ಕಾನೂನು
ನ್ಯಾಯ
ಧರ್ಮಶಾಸ್ತ್ರ
ಭಾರತ ರಾಜ್ಯಾಂಗ ರಚನೆ

ಇತರ :

ಪಂಪಾಯಾತ್ರೆ
ಭಾರತದ ಐವರು ಮಹನೀಯರು
ಬೆಳುದಿಂಗಳು
ಬಂಗಾಳೀ ಸಾಹಿತ್ಯ ಚರಿತ್ರೆ (ಅನು)
ಭಾರತ ಸ್ವಾತಂತ್ರ್ಯ ಗಳಿಸಿತು (ಅನು)
ಶಿವರಾಮ ಕಾರಂತ

ತುಂಗಭದ್ರಾ ಜಲಾಶಯ

•

ಭಾರತದ ಬಿಡುಗಡೆಯ ಮರದ ಬೇರೊಂದು
ಹೀರುತಿದೆ ನೀರನಿಲ್ಲಿ
ಹರಡಲಿದೆ ಆ ಮರದ ರೆಂಬೆಯೊಂದಕ್ಕೆ
ಇಲ್ಲಿ ಪಲ್ಲವಿಸುತಿಹ ಸಮೃದ್ಧಿ-ವಲ್ಲಿ
ಈ ಕಲ್ಪವೃಕ್ಷದ ಎಲ್ಲ ಬೇರುಗಳಿಗೆ
ಇಂಥ ನೀರಿನಾಸರ ದೊರೆತರೆ-
ಈ ಸುರತರುವಿನ ಎಲ್ಲ ರೆಂಬೆಗಳಿಗೆ
ಇಂಥ ಕಲ್ಪವಲ್ಲಿ ಹರಡಿದರೆ-
ಕಿಚ್ಚು ಹಚ್ಚೆಂದ ಸ್ವರ್ಗಕ್ಕೆ,
ಸುರರೆ ಬರಬಹುದು ಭಾರತಮಾರ್ಗಕ್ಕೆ!

ಅಲ್ಲಿ ತಾಳೀಕೋಟೆಯಲ್ಲಿ
ವೈರಿ ರಕ್ತವ ಚೆಲ್ಲಿ
ಬಲಿಪೀಠವೇರಿದ
ವಿಜಯನಗರದ ವೀರರ ತೀರದ
ವಿಜಯ-ವಾಂಛೆ, ಅತೃಪ್ತ ಅಭಿಲಾಷೆ
ತಳೆದು ಸಲೀಲ ಸಲಿಲದ ಭಾಷೆ
ಉದ್ಘೋಷಿಸುತ್ತಿದೆಯಿಲ್ಲಿ,
ತುಂಗಭದ್ರಾ ಜಲಾಶಯದಲ್ಲಿ-
'ಕನ್ನಡದ ತೇಜ ಅವಿನಾಶಿ
ಅದು ಇಲ್ಲಿ ಸಲಿಲ-ವೇಷಿ
ಇದೆ ಇನ್ನು ಕನ್ನಡದ ಕಾಶಿ!'
ನಿಜವಲ್ತೆ ಈ ನಾಡ ಅಂತರಂಗದ ಅಧ್ಯಕ್ಷ-
ಶ್ರೀ ವಿರೂಪಾಕ್ಷ?

ಈ ಜಲಾಶಯದ ತರಲ ತರಂಗ ಸಂಗೀತದಲಿ
ಕನ್ನಡದ ಮರುಹುಟ್ಟು ಹಾಡುತಿದೆ ಜಯಗೀತೆ-
ಅಲ್ಲವೆ ಸತ್ಯಪಕ್ಷ?

ಬಿದ್ದಿತ್ತು ಈ ವರೆಗೆ ಹಾಳು ಹಂಪೆ
ಕನ್ನಡದ ಸಾಮ್ರಾಜ್ಯದ ಸಮಾಧಿಯಂತೆ
ಕಂಡವಗೆ ಕಟುಸ್ಮೃತಿಯ ವ್ಯಾಧಿಯಂತೆ
ನಿಂತಿದ್ದುವು ವಿಗ್ರಹಗಳಲ್ಲಿ ಅಪರಾಧಿಯಂತೆ
ತುಂಗೆ ಹರಿಯುತ್ತಿದ್ದಳಲ್ಲಿ ರೋದಿಪಂತೆ?
ಈ ಜಲಾಶಯದ ಹುಟ್ಟು ಮರುಹುಟ್ಟು ಹಂಪೆಗೆ,
ಮತ್ತೆ ಮಹಿಮೆಯು ಬಂತು ಈ ಹಾಳು ಕೊಂಪೆಗೆ!
ಕೇಳಿ ಸಲಿಲಸ್ವನವ, ತುಂಗಭದ್ರೆಯ ಧ್ವನಿಯ-
'ಯಂ ಕಾಮಯೇ ತಂತಂ
ಸಮೃದ್ಧಂ ಕೃಣೋಮಿ!'
ಮಾಡಬಲ್ಲಳು ಇವಳು-
ಬರದ ಬೀಡನೆ ಸಿರಿಯ ನಾಡನಾಗಿ,
ಸೊಗದ ಗೂಡನಾಗಿ,
ಸೌಖ್ಯದೀಡನಾಗಿ,
ಮಾಡಲಿ!
ಬರದ ಬಾನಲೆ ಸೊಗದ ಹಕ್ಕಿ ಹಾರಾಡಲಿ!
ಕೊರತೆಯ ಒರತೆಯಿಂದಲೆ ಸುಖದ ಸೆಲೆಮೂಡಲಿ;
ತುಂಗಭದ್ರೆ ಶುಭದಮುದ್ರೆಯೊತ್ತಲಿ
ಈ ಅಭಾವ-ಪೀಡಿತ ಪ್ರದೇಶಕ್ಕೆ!
ಆಯ್ದುಕೊಳಲಿ ಕನ್ನಡ ನಾಡನ್ನೆ
ಸಮೃದ್ಧಿ ಶ್ರೀ ತನ್ನ ನಿವಾಸಕ್ಕೆ!

•

ಕಾವ್ಯಾನಂದ

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

ತಿ. ತಾ. ಶರ್ಮ

"ಮಹಾರಾಷ್ಟ್ರ" ಅಂದರೇನು?

"ಕನ್ನಡ ರಾಜವಂಶಾವಳಿ" ಗಳೆಂದು ಹೆಸರಿಟ್ಟು ದಿವಂಗತ ಡಾ|| ಜಾನ್ ಫೆಯಿತ್‌ಫುಲ್ ಫ್ಲೀಟರು ಮುಂಬಯಿ 'ಗೆಜೆಟಿಯರ್'ಗೆ ಒಂದು ದೊಡ್ಡ ಪ್ರಬಂಧ ಬರೆದರು. ಅದೇ ಕನ್ನಡನಾಡಿನ ಇತಿಹಾಸಕ್ಕೆ ಮೂಲಾಧಾರ ಗ್ರಂಥವೆನಿಸಿತು. ಇಷ್ಟು ದಶಕಗಳು ಕಳೆದರೂ ಅದರ ಮೌಲ್ಯ ಕಡಿಮೆಯಾಗಿಲ್ಲ; ಇಲ್ಲಿದೆ ಅದರ ಗುಣ.

ಈ ಮಾತು ಹಾಗಿರಲಿ; ಫ್ಲೀಟರು ಮಾಡಿದ ಅಥವಾ ಆರಂಭಿಸಿದ ಕೆಲಸವನ್ನು ಇದುವರೆಗೆ ನಮ್ಮ ನಾಡಿನ ವಿದ್ವಾಂಸರು ಯಾರೂ ಮುಂದುವರಿಸಲಿಲ್ಲ. ಈ ಕೆಲಸದ ಅಗತ್ಯ ಕುರಿತು ಒತ್ತಿ ಹೇಳಬೇಕಾಗಿಲ್ಲ.

ಈ ಗ್ರಂಥದಲ್ಲಿ ಡಾ|| ಫ್ಲೀಟರು "ಮಹಾರಾಷ್ಟ್ರ" ಅಂದರೇನೆಂಬುದನ್ನು ಕುರಿತು ವಿವರಣೆಯನ್ನು ಕೊಟ್ಟಿದ್ದಾರೆ. ಅವರು ಹೇಳಿರುವ ಭಾಷೆಯಲ್ಲೇ–ಆ ವಚನವನ್ನಿಲ್ಲಿ ಎತ್ತಿ ಕೊಟ್ಟಿದ್ದೇನೆ. ಕಾರಣವಿಷ್ಟೆ; ಆ ಗ್ರಂಥ ಸಿಗುವುದಿಲ್ಲ. ಭಾಷಾಂತರ ಮಾಡಿಕೊಟ್ಟರೆ ವಿದ್ವಾಂಸರು "ಮೂಲದಲ್ಲಿ ಎನಿದೆಯೋ ಹೇಗಿದೆಯೋ" ಎಂದು ಪ್ರಶ್ನೆಹಾಕುವ ಸಂಭವವಿದೆ. ಆದಕಾರಣ ಫ್ಲೀಟರು ಬರೆದು ಪ್ರಕಟಿಸಿದ ಆಂಗ್ಲಮೂಲವನ್ನೇ ವಾಚಕರಿಗೆ ಒದಗಿಸಿದ್ದೇನೆ:

"It is true that, in one of the carliest inscriptions, of Pulekēsi' II, this part of the country is included in what was then known, and even many centuries before his time, as *Mahā Rāshtra* or 'the great country'. But the word had originally, and in his time, a signification very different from the special meaning which its corruption '*Marātha*' carries now, and denoted simply the great and comparatively unknown region lying to the south of the Aryan settlement in Hindustan. In the whole area of the country treated in this paper, not a single *Marāthi* inscription has been discovered of a greater age than two or three centuries with the exception that a few *Prākrit* words occur here and there the inscriptions are all either in pure *Samskrit* or pure Kanarese, or in the two languages combined. This fact speaks of itself as to what was the Vernacular of the country in early times. In the present day, the people and the languagae of the British districts are Kanarese and the Kanarese people and language have been displaced to a certain extent by the *Marāthi* people and language in the Native States, only because those States were established by the aggressions of *Marāthas* from the north, whose local influence proved to be greater than that of the native rulers whome they dispossessed."

ಈಗ "ದೇಶವಾಚಕ"ವೆನಿಸಿ, ಸಂವಿಧಾನಬದ್ಧವಾಗಿ, ಚತುಸ್ಸೀಮಾ ನಿರ್ಮಿತವಾಗಿರುವ "ಮಹಾರಾಷ್ಟ್ರ"ಕ್ಕೂ, ಪ್ರಾಚೀನ ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಉಕ್ತವಾಗಿರುವ "ಮಹಾರಾಷ್ಟ್ರ"ಕ್ಕೂ, ಯಾವ ಸಂಬಂಧವೂ ಇಲ್ಲ. ಈ ಅಂಶವನ್ನು "ಮರೆಮಾಡು"ವ ಮಾತಿಲ್ಲವಾದರೂ "ಭ್ರಾಂತಿಮೂಲ"ವಾಗಿ ತಪ್ಪುದಾರಿಗೆಳೆಯುವ ಅವಕಾಶವುಂಟು. ಬಹಳ ವರ್ಷಗಳ ಹಿಂದೆಯೇ ಡಾ|| ಫ್ಲೀಟರು ಈ "ಪ್ರಮಾದ" ಕುರಿತು ಎಚ್ಚರಿಕೆ ನೀಡಿದರು.

ಹನುಮ ತಮಿಳನೇ, ಕನ್ನಡಿಗನೇ?

ಶ್ರೀ ಶ್ರೀಪ್ರಕಾಶರು ಮದರಾಸು, ಮಹಾರಾಷ್ಟ್ರಗಳಲ್ಲಿ ರಾಜ್ಯಪಾಲರಾಗಿದ್ದರು. ೧೯೬೩ರಲ್ಲಿರಬೇಕು; ಅಲಹಾಬಾದಿನಲ್ಲಿ ಹಿಂದಿ ಸಾಹಿತ್ಯ ಸಮ್ಮೇಳನದ ವಾರ್ಷಿಕ ಘಟಿಕೋ

ತ್ಸವ, ಆಗ ಶ್ರೀ ಶ್ರೀಪ್ರಕಾಶರು ಮಾಡಿದ ಭಾಷಣದಲ್ಲಿ ಈ ರೀತಿ ಹೇಳಿದರು :

"ತಮಿಳುನಾಡಿನಲ್ಲೊಂದು ವಿಶೇಷ ಪ್ರಚಾರದಲ್ಲಿದೆ ಕಥೆಯೊಂದು. ಹನುಮಂತ ಲಂಕೆಗೆ ಹೋದನಷ್ಟೆ. ಅಲ್ಲಿ ಅವನು ಸೀತಾದೇವಿಯನ್ನು ಕಂಡ. ಆಕೆಯೊಂದಿಗೆ ಮಾತನಾಡಬೇಕು. ಯಾವ ಭಾಷೆಯಲ್ಲಿ ಮಾತನಾಡಬೇಕು? ಆಗ ಹನುಮಂತ ತನ್ನೊಳಗೇ ಈ ರೀತಿಯಾಗಿ ವಿಚಾರ ಮಾಡಿದ.

"ನನ್ನ ಭಾಷೆಯಲ್ಲಿ ಮಾತನಾಡಿದರೆ ಸೀತಾದೇವಿಗೆ ಅರ್ಥವಾಗುವುದಿಲ್ಲ. ಸಂಸ್ಕೃತದಲ್ಲಿ ಮಾತನಾಡಿದರೆ ಆಕೆ ನಾನು ರಾವಣನ ರಹಸ್ಯದೂತನಿರಬಹುದೆಂದು ಶಂಕಿಸಲೂ ಬಹುದು. ಏಕೆಂದರೆ ರಾವಣ ಸಂಸ್ಕೃತ ಭಾಷಾ ಕೋವಿದ."

ಕಡೆಗೆ ತಮಿಳಿನಲ್ಲಿ ಮಾತನಾಡಿದ. ಸೀತಾದೇವಿಯೂ ತಮಿಳಿನಲ್ಲಿ ಮಾತನಾಡಿದಳು."

ಇದಿಷ್ಟನ್ನು ಹೇಳಿ ಶ್ರೀ ಶ್ರೀಪ್ರಕಾಶರು "ಈ ವಿಷಯ ಕುರಿತು ಸಂಶೋಧನೆ ಮಾಡಬೇಕು" ಎಂಬುದಾಗಿ ವಿದ್ವಾಂಸರಲ್ಲಿ ಬಿನ್ನೈಸಿಕೊಂಡರು.

ಶ್ರೀ ಶ್ರೀಪ್ರಕಾಶರ ವಿದ್ವತ್ತಿನ ವಿಶೇಷ ಲಕ್ಷಣವೆಂದರೆ ಅವರ ಪರಿಹಾಸ ಗುಣ. ಈ ಕಥೆಯನ್ನವರು ತಳ್ಳಿಹಾಕಲು ಸಿದ್ಧರಾಗಿಲ್ಲ. ಏಕೆಂದರೆ ದಂತಕಥೆಯು ರಮಣೀಯವಾಗಿದೆ. ಇಂತಹ ಮನೋಹರವಾದ ಕಥೆಯನ್ನು ಕಳೆದುಕೊಳ್ಳಲು ಯಾರುತಾನೆ ಸಿದ್ಧವಾದಾರು?

"ನನ್ನ ಭಾಷೆಯಲ್ಲಿ ಮಾತನಾಡಿದರೆ
ಸೀತಾದೇವಿಗೆ ಅರ್ಥವಾಗುವುದಿಲ್ಲ"

ಅಂದನಷ್ಟೆ ಹನುಮಂತ. ಯಾವುದಾ 'ನನ್ನ ಭಾಷೆ'? 'ಮಾನಸಗಂಗೋತ್ರಿ'ಯ ಪ್ರಾಧ್ಯಾಪಕ ಶ್ರೀ ಜವರೇಗೌಡರ ಉತ್ತರವಿದು :

*"The trusted lieutenant of Sri Ramachandra, Hanuman, was a Kannadiga. The men who displayed unequalled valour in restoring Sita to Sri Rama were Kannadigas. Kishkindha is our Hampe."

ಹುಚ್ಚು ಊಹೆಗಳಲ್ಲವೆ?

ನಲವತ್ತು ವರ್ಷಗಳ ಮೇಲಾಯಿತು. ದಿವಂಗತ ವಂಗೂರಿ ಸುಬ್ಬರಾಯರು "ಆಂಧ್ರ ವಾಙ್ಮಯ ಚರಿತ್ರಮು" ಬರೆದರು; ಅವರೇ ತಮ್ಮ "ಬಿನ್ನಹ"ದಲ್ಲಿ

"ಈ ಗ್ರಂಥದಲ್ಲಿ ಕೆಲವು ಕಡೆ ದೇಹದೌರ್ಬಲ್ಯವನ್ನನುಸರಿಸಿ, ಕಠಿಣ ವಾಕ್ಯಗಳನ್ನಾಡಿದ್ದೇನು. ಅಸಮರ್ಥವಾದ, ಅಸಂಬದ್ಧವಾದ, ವಾದಗಳನ್ನು ಮಾಡಿದ್ದೇನು. ಒಂದು ವರ್ಷದಿಂದ ನನ್ನ ಮಾನಸಿಕ ಸ್ಥಿತಿ ಚೆನ್ನಾಗಿಲ್ಲ."

ಎಂಬುದಾಗಿ ಪ್ರಾಮಾಣಿಕತೆಯಿಂದ ಹೇಳಿ, ಹೀಗೆ ಮುಂದುವರಿಸಿದ್ದಾರೆ :

"ನಮ್ಮ ದೇಶದಲ್ಲಿ ಸತ್ಯವಾದ ವಿದ್ಯೆ ವಿರಳವಾದದ್ದು. ಪಾಶ್ಚಾತ್ಯವಿಮರ್ಶಾ ಪದ್ಧತಿಗಳಲ್ಲಿ ಸಂಸ್ಕೃತ ಓದಿದವರು ಅಪೂರ್ವ. ಪರಿಶೋಧನೆಗಳನ್ನು ನಡೆಸುವವರು ಪ್ರಾಕೃತ, ಪಾಲಿ, ಭಾಷೆಗಳನ್ನೂ ಓದಿದವರು ಬಹಳ ಕಡಿಮೆ. ನನ್ನಂತಹ ಅಪಂಡಿತನಿಗೆ ಅಭಿಪ್ರಾಯಗಳೇ ಇರುವುದಿಲ್ಲ; ಪರಿಶ್ರಮವಿಲ್ಲ. ಇರುವ ಅಭಿಪ್ರಾಯಗಳೂ ವಾಕ್ಯಗಳಲ್ಲಿ ಬರುವುದು ಕಷ್ಟ. ಮಾತನಾಡಿದಷ್ಟು ಮಾನವ ಬರೆಯಲಾರ. ದುರದೃಷ್ಟವಶದಿಂದ ನಾನು ಬರೆದಷ್ಟು ಅಚ್ಚಾಗುವುದಿಲ್ಲ."

ಈ ಗ್ರಂಥ ಪ್ರಕಟವಾದಮೇಲೆ–ಆಗ ನಾನು ಉದಕಮಂಡಲದಲ್ಲಿದ್ದೆ–ಈ ಗ್ರಂಥಕ್ಕೆ ನನ್ನ ವಿದ್ಯಾಗುರುಗಳಾಗಿದ್ದ ಸ್ವರ್ಗವಾಸಿ ಕಟ್ಟಮಂಚಿ ರಾಮಲಿಂಗಾರೆಡ್ಡಿಯವರು "ಮುನ್ನುಡಿ" ಬರೆದಿದ್ದರು. ಅದನ್ನೋದಿದಮೇಲೆ ರೆಡ್ಡಿಗಳಿಗೆ ನಾನೊಂದು ಪತ್ರವನ್ನು ಬರೆದೆ. ಅನಂತರ ಬೆಂಗಳೂರಲ್ಲೊಮ್ಮೆ ಅವರನ್ನು ಕಂಡು ಮಾತನಾಡಿದೆ. ಆಗ ಮತ್ತೆ ಅವರ "ಮುನ್ನುಡಿ"ಯ ಈ ಭಾಗವನ್ನೆತ್ತಿ ಓದಿದೆ :

"ಅನೇಕ ಸ್ಥಳಗಳಲ್ಲಿ ಸುಬ್ಬರಾಯರು ನೂತನ ಯೋಜನೆಗಳನ್ನು ಪ್ರಯೋಗಿಸಿ, ಕ್ಲಿಷ್ಟಾರ್ಥಗಳಿಗೆ ಅದ್ಭುತ ರೀತಿಯಲ್ಲಿ ಅನ್ವಯವನ್ನು ಕಲ್ಪಿಸಿದ್ದಾರೆ. ಒಟ್ಟಿನಲ್ಲಿ ಇವು ಹುಚ್ಚು ಊಹೆಗಳಿಗೆ ಸೇರಿದವಲ್ಲದೆ ವಿಮರ್ಶಾಪದ್ಧತಿಯನ್ನು ಅನುಸರಿಸಿದ ದೃಢಸತ್ಯಗಳಾಗಿವೆ."

"ನಿನ್ನ ವಾದವೇನು?" ಎಂದು ರೆಡ್ಡಿಗಳು ನಗುತ್ತಾ ನನ್ನ ಕಡೆ ನೋಡಿದರು.

---

* Mysore State, 1956-1966 Government Publication.

"ಶ್ರೀಮಾನ್ ರೆಡ್ಡಿಯವರಂತಹ ಪ್ರಾಮಾಣಿಕ ಮತ್ತು ಶೂರವಿಮರ್ಶಕರೂ "ಹುಚ್ಚು ಊಹೆ" ಗಳನ್ನು "ದೃಢಸತ್ವ" ವೆನ್ನುತ್ತಾರಲ್ಲಾ. ಎಂತಹ ಶ್ರದ್ಧಾಳು ಲೇಖಕನೇ ಆಗಲಿ, ಅವನ "ಅಭಿಮಾನ" ಯಾವ ಮಟ್ಟದ್ದೇ ಆಗಲಿ, "ಸತ್ಯದಕೊಲೆ" ಆಗ ಬಾರದು."

ಎಂಬುದಾಗಿ ಮನಸ್ಸು ಬಿಚ್ಚಿ ಹೇಳಿದೆ. ರೆಡ್ಡಿಗಳ ಬಳಿ ಈ ಬಗೆಯ ಸಲಿಗೆ ವಹಿಸಿ ಮಾತನಾಡುವ ಸ್ವಾತಂತ್ರ್ಯವನ್ನವರು ನನಗೆ ಕೊಟ್ಟಿದ್ದರು.

"ಸುಬ್ಬರಾಯರು ಯಾವ ಕೊಲೆ ಮಾಡಿದ್ದಾರೆ?" ಅಂದರು ರೆಡ್ಡಿಗಳು ನಗುವನ್ನು ಬೆರೆಸಿ.

"ದೇವರಕೃಪೆಯಿಂದ ಅವರು ಯಾರ ಕೊಲೆ ಯನ್ನೂ ಮಾಡಿಲ್ಲ, ಅಂತಹ ಹಂಚಿಕೆಯನ್ನೂ ಅವರು ಹಾಕಿಲ್ಲ."

ಎಂದು ಹೇಳಿ "ತೆಲುಗು ಲಿಪಿ ಕನ್ನಡ ಲಿಪಿಯಿಂದ ಹುಟ್ಟಿದ್ದೆ!" ಎಂಬ ಸುಬ್ಬರಾಯರ ಗ್ರಂಥಭಾಗದಿಂದ ಎತ್ತಿ, ಓದಿದೆ.

"ಪ್ರಾಚೀನಲಿಪ್ಯನ್ವೇಷಣ ಶಾಖೆಗೆ ಸೇರಿ, ನಿನ್ನ ಜನ್ಮಸಾರ್ಥಕ ಮಾಡಿಕೊಂಡೆ"

ಎಂದು ಭುಜ ತಟ್ಟುತ್ತಾ, ತಾವು ನಕ್ಕು ನನ್ನನ್ನೂ ನಗಿಸಿ ಬಿಟ್ಟರು.

"ಸುಬ್ಬರಾವು ಮಹಾ ಉತ್ಸಾಹಿ. ಇಂತಹವರ ಉತ್ಸಾಹಕ್ಕೆ ಭಂಗತರಬಾರದು. ಆದರೆ ಇತಿಹಾಸ ಬರೆಯುವವರೂ, ಸಂಶೋಧನಾಕಾರ್ಯ ನಿರತರೂ, ಬರೀ ಉತ್ಸಾಹವನ್ನೇ ತಮ್ಮ ಆಸ್ತಿಯನ್ನಾಗಿ ಮಾಡಿ ಕೊಳ್ಳಬಾರದು."

ಎಂದು ಸಮಾಧಾನ ಹೇಳಿದರು. ಆಗ ನಾನು ಆ ಗ್ರಂಥದಿಂದ ಎತ್ತಿ, ಓದಿ, ರೆಡ್ಡಿಗಳಿಗೆ ಕೇಳಿಸಿದ ಭಾಗವನ್ನಿಲ್ಲಿ ಕೊಡು ತ್ತೇನೆ:

"ಕ್ರಿಸ್ತಪೂರ್ವ ಆಂಧ್ರರು ಘನಸಾಮ್ರಾಜ್ಯ ಧುರಂಧ ರರೆಂದು, ಪ್ರಾಚೀನ ಚೀನಾಯಾತ್ರಿಕರು ಬರೆಯು ತ್ತಿರಲಾಗಿ, ಪುರಾಣಗಳು, ಶಾಸನಗಳು, ಘಂಟಾ ಘೋಷವಾಗಿ ನುಡಿಯುತ್ತಿರಲಾಗಿ, ನಾಣ್ಯಗಳು ನಮ್ಮ ಪ್ರಾಚೀನರು ನೌಕಾವರ್ತಕ ವ್ಯಾಪಾರ ಬಲ್ಲವರೆಂದು ಹೇಳುತ್ತಿರಲಾಗಿ, ಭಾಷೆ, ಲಿಪಿ, ವಾಙ್ಮಯವಿಲ್ಲದ ನಮ್ಮ ಪೂರ್ವಜರು ವಿದೇಶ ಗಳೊಂದಿಗೆ ಹೇಗೆ ವ್ಯಾಪಾರ ನಡೆಸಿದರು? ೫೦೦ ವರ್ಷಗಳ ಕಾಲ ವಿಂಧ್ಯದ ದಕ್ಷಿಣ ಭಾಗವನ್ನೆಲ್ಲ ಹೇಗೆ ಆಳಿದರು? ಹೀಗೆ ನಮ್ಮವರು ಪ್ರಶ್ನೆಹಾಕಿ ಕೊಟ್ಟರು. ಪರಿಪಾಲಕರಾದ ಮಾತ್ರಕ್ಕೆ ಕಲಾಭಿ ಜ್ಞರೆಂದು ಎಲ್ಲಿ ಹೇಳಿದೆ? ನಾಗರಿಕರೆಂದು ಎಲ್ಲಿ ಹೇಳಿದ್ದಾರೆ? ಈ ರೀತಿ ಕೆಲವರು ಕೇಳಬಹುದು. ಪ್ರಾಚೀನಾಂಧ್ರರ ಸಾಂಚೀಸ್ತೂಪ ಭಾರತವರ್ಷದ ದೊಡ್ಡ ಆಸ್ತಿಯೆಂದು ಪ್ರಸ್ತುತ ಪ್ರಭುತ್ವದವರೇ ಈ ಮಧ್ಯೆ ಅದರ ಜೀರ್ಣೋದ್ಧಾರಮಾಡಿದರು. ಅದನ್ನು ಕುರಿತು ಪ್ರಾಚ್ಯ ಪಾಶ್ಚಾತ್ಯ ವಿಮರ್ಶ ಕರು ಚರ್ಚಿಸಿದ್ದಾರೆ. ಇದನ್ನಾಂಧ್ರರೇ ನಿರ್ಮಿಸಿ ದ್ದೆಂದು ದೊಡ್ಡ ವಿದ್ವಾಂಸರು ನಿರ್ಣಯಿಸಿದ್ದಾರೆ. (Modern Review, Aug. 1911) ಇದರಿಂದ ಒಂದಂಶ ತೇಲುತ್ತದೆ. ಆರ್ಯನಾಗರಿಕತೆಗೆ ಸ್ಥಾನ ಪಾಂಚಾಲ (ಸಪ್ತಸಿಂಧು), ಗಂಗಾತೀರವೆನ್ನ ಬಹುದು. ಆರ್ಯನಾಗರಿಕತೆ ಅರೇಬಿಯ, ಪರ್ಷಿಯ, ಗ್ರೀಸ್‌ದೇಶಗಳನ್ನೂ ದಾಟಿ, ರೋಮುಕ ದೇಶಕ್ಕೆ ಹೋಗಿ, ಪಾಶ್ಚಾತ್ಯದೇಶಗಳನ್ನು ವ್ಯಾಪಿಸಿತು. ಹಾಗೆಯೇ ಉತ್ತರ ದೇಶದಿಂದ ಮಗಧಪರಿಪಾಲಕ ರಾದ ಆಂಧ್ರರ ಸಹಾಯದಿಂದ ವಿಂಧ್ಯಕ್ಕೆ ದಕ್ಷಿಣದ ಮಹಾರಾಷ್ಟ್ರ, ಕರ್ನಾಟಕ, ಚೋಳ, ಪಾಂಡ್ಯ, ದೇಶಗಳಿಗೆ, ಸಂಚಾರಮಾಡಿತು. ಪಶ್ಚಿಮಕ್ಕೆ ಗ್ರೀಕ್ ರೋಮುಕರು ವಾಹಕರಾದಂತೆಯೇ ಆರ್ಯ ನಾಗರಿ ಕತೆಯನ್ನು ದಕ್ಷಿಣಾಪಥಕ್ಕೊಯ್ದವರು ಆಂಧ್ರರು. (Development of Telugu Prose, M. Venkata Ratnam garu). ಇದಕ್ಕೆ ಪ್ರಬಲವಾಗಿ ಕೆಲವು ಆಧಾರಗಳನ್ನು ತೋರಿಸುವೆನು.

ಕನ್ನಡ ವಾಙ್ಮಯವು ನಮಗಿಂತ ಪ್ರಾಚೀನ ವಾದುದು; ಜೈನರು ಬರೆದುದು; ಎಂಬ ಮಾತು ಸತ್ಯ. ಆದರೆ ಆ ವಾಙ್ಮಯದಲ್ಲಿ ಮುಖ್ಯವಾದದ್ದೆಲ್ಲ ಆಂಧ್ರರು ರಚಿಸಿದ್ದೆಂಬುದನ್ನು ಮಾತ್ರ ನಂಬಿ.

ಆಂಧ್ರದೇಶದಿಂದ ಕನ್ನಡ ದೇಶಕ್ಕೆ ಹೋಗಿ, ಆ ಭಾಷೆಯಲ್ಲಿ ಅಸಮಾನ ಕವೀಶ್ವರರಾದವರಲ್ಲಿ ಪೂಜ್ಯಪಾದ (೪೭೦), ದಂಡಿ (೭ನೆ ಶತಮಾನ), ನಾಗಾರ್ಜುನ (೮ನೆ ಶತಮಾನ), ಆದಿಪಂಪ (೯೪೧), ಪೊನ್ನ (೯೫೦), ನಾಗವರ್ಮ (೯೯೦), ರನ್ನ (೯೯೩), ರಾಜಾದಿತ್ಯ (೧೧೨೦), ವೈದುನ

ರಾಮಯ್ಯ (೧೧೬೦), ಮೋಳಿಗಯ್ಯ (೧೧೬೦), ಮರುಳದೇವ (೧೧೬೦), ಮಲ್ಲಿಕಾರ್ಜುನ ಪಂಡಿತಾರಾಧ್ಯ (೧೧೬೦), ಹರೀಶ್ವರ, ರಾಘವ, ಕೆರೆಯ ಪದ್ಮರಸ (೧೧೬೫), ಚಕ್ರಪಾಣಿ ರಂಗನಾಥ (೧೧೯೫), ಪೋಲಾಳ್ವದಂಡನಾಥ(೧೨೨೪), ಭೀಮಕವಿ (೧೩೬೯), ಎಂಬವರು ಮುಖ್ಯರು. (ಆಂಧ್ರ ಪರಿಷತ್ಪತ್ರಿಕೆ, ಸಂ. ೫. ಸಂಪುಟ ೫. ಪುಟ ೧೯೦).

ಇಷ್ಟೊಂದು ಮಂದಿ ಆಥ್ರರು ಕನ್ನಡ ದೇಶಕ್ಕೆ ಹೋಗಿ ಅವರು ಕನ್ನಡಿಗರ ಲಕ್ಷ್ಯ ಲಕ್ಷಣ ಗ್ರಂಥಗಳನ್ನು ರಚಿಸಿ, ಆರ್ಯ ನಾಗರಿಕತೆಯನ್ನು ಕರ್ನಾಟಕದಲ್ಲಿ ವ್ಯಾಪಿಸುವಂತೆ ಮಾಡಿ, ಕನ್ನಡಿಗರಿಗೆ ಮಹೋಪಕಾರ ಮಾಡಿಲ್ಲವೆ? ನಾವು ಅವರ ಲಿಪಿಯನ್ನು ಸಾಲತಂದುಕೊಳ್ಳುವಷ್ಟು ದರಿದ್ರರೆ?"

* * *

"ಅಶೋಕ ಶಾಸನಗಳೊಳಗಿನ ಬ್ರಾಹ್ಮಿ, ಖರೋಷ್ಠಿ, ಮೊದಲಾದ ಪ್ರಾಚೀನಲಿಪಿಗಳಿಗೂ, ನಮ್ಮ ಆಂಧ್ರಲಿಪಿಗೂ, ಸನ್ನಿಹಿತ ಸಂಬಂಧವಿದೆ. ನನ್ನ ಸಿದ್ಧಾಂತ ಅಭಿಮಾನಪೂರಿತವಾದುದೆಂದು ಹೊಡೆದು ಹಾಕುವವರು ಕೆಲವರಿರಬಹುದು. ಆದರೆ ನಮ್ಮ ತೆಲುಗು ಲಿಪಿಯು ಸಂಪೂರ್ಣವಾಗಿ ಪ್ರಸ್ತುತ ದೇವನಾಗರಿ ಲಿಪಿಗೆ ಮಾತೃಕೆಯೆಂದು ಕಾಣಬರುತ್ತದೆ."

* * *

"ಕನ್ನಡಿಗರ ರಾಮಾಯಣ ಭಾರತಗಳನ್ನು ಆಂಧ್ರರು ಬರೆದಿರಲಾಗಿ, ಆಂಧ್ರರು ತಮ್ಮ ಲಿಪಿಯನ್ನು ಕನ್ನಡಿಗರಿಗೆ ಕೊಡುವರೋ? ಇಲ್ಲ ಕನ್ನಡ ಲಿಪಿಯನ್ನಿವರು ಸ್ವೀಕರಿಸುವರೋ! ಬುದ್ಧಿವಂತರು ಆಲೋಚನೆಮಾಡಲಿ. ಕನ್ನಡದಲ್ಲಿ ಇಂದಿಗೂ ಪ್ರಸಿದ್ಧ ಕಾವ್ಯಗಳೆಂದು ಪ್ರಕಾಶಿಸುತ್ತಿರುವುವೆಲ್ಲ ಆಂಧ್ರರು ಬರೆದುವೇ. ಪಂಪ ಭಾರತರಾಮಾಯಣಗಳು ಜೈನಮತಾನುಸಾರವಾಗಿ ತೆಲುಗಿನಲ್ಲಿದ್ದವುಗಳನ್ನು ಭಾಷಾಂತರಮಾಡಿದನಾದಕಾರಣವೇ, ಸುಲಭವಾಗಿ, ಸ್ವಲ್ಪಕಾಲದಲ್ಲೇ, ಬರೆಯಲು ಸಮರ್ಥನಾದ."

* * *

ಇಂದಿಗೂ ನೆರೆಹೊರೆ ಪ್ರಾಂತ್ಯದವರಲ್ಲಿ ಕನ್ನಡ ನಾಡು, ನುಡಿ, ಜನ, ಜೀವನ, ಕುರಿತು ಈ ಬಗೆಯ ಅಭಿಪ್ರಾಯಗಳಿವೆ!!

ನಾನು ಕನ್ನಡದ ಕಾವಲುನಾಯಿ

ಬೊಗಳುವೆನು ಬಂಯ್ಯುತ್ತುಂಬ ; ಕಚ್ಚುವೆನು ಮೈತುಂಬ
ನಾನು ಕನ್ನಡದ ಕಾವಲುನಾಯಿ |
ದೂರಸರಿ ; ದಿಟ್ಟಿಸದಿರಿತ್ತ ಕಾಕದೃಷ್ಟಿಯ ಖೂಳ
ನಾನಿರುವೆನಿದೋ ಕನ್ನಡದ ನಾಯಿ || || ೧ ||

ನೂರುಜನ್ಮವು ಬರಲಿ ; ಎಲ್ಲ ಜಂಜಡವಿರಲಿ
ನಾನುಳಿವೆ ಬರಿಯ ಕಾವಲುನಾಯಿ |
ಹಸಿವು ಹಗರಣವಿರಲಿ ; ಬಿಸಿಲು ಬೆಂಗಾಡಿರಲಿ
ನಾನಿರುವೆ ಕನ್ನಡದ ಕಾವಲುನಾಯಿ || ೨ ||

ನನ್ನ ನಾಡಿನ ಮಣ್ಣು ; ನನ್ನ ಜೀವದ ಕಣ್ಣು
ಕಾದಿರುವೆ ಅದಕಾಗಿ ಕನ್ನಡನ ನಾಯಿ |
ಹೆಜ್ಜೆಹಾಕದಿರಿತ್ತ ತುಳಿದೇನು ನೆಲದುದ್ದ
ಕಣ್ತೆರೆದು ಕಾದಿರುವೆ ಕನ್ನಡದ ನಾಯಿ || || ೩ ||

ಎಂತಾದರೂ ಇರಲಿ ; ನಮ್ಮವರು ನಮ್ಮವರೆ
ಅವರ ಬಾಗಿಲಕಾಯ್ವೆ ಕನ್ನಡದ ನಾಯಿ |
ತಾಯ್ ಕರೆದು ತೂಪಿರಿದು ತುಂಡು ರೊಟ್ಟಿಯ ನೀಡೆ
ತಲೆಬಾಗಿ ತಿಂಬ ಕನ್ನಡದ ನಾಯಿ || || ೪ ||

ಕೆ. ಆರ್. ಗಣೇಶರಾವ್

ಒಂದು ಸಮೀಕ್ಷೆ: ಸಾಹಿತ್ಯ ಗೋಷ್ಠಿ
ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಶ್ರವಣಬೆಳುಗೊಳ : ಮೇ ೧೯೬೭

೧೯೬೫-೬೬ರ ಕನ್ನಡ ಕಾದಂಬರಿ-ಸಣ್ಣಕಥೆ

ಡಾ. ಹಾ. ಮಾ. ನಾಯಕ

ಸಮ್ಮೇಳನಾಧ್ಯಕ್ಷ ಡಾ. ಉಪಾಧ್ಯೆಯವರೆ, ಸಾಹಿತ್ಯಗೋಷ್ಠಿಯ ಅಧ್ಯಕ್ಷ ಪ್ರೊ. ಜವರೇಗೌಡರೆ, ಪರಿಷದಧ್ಯಕ್ಷ ಶ್ರೀ ವೆಂಕಟ ಸುಬ್ಬಯ್ಯನವರೆ, ಕನ್ನಡ ಕುಲರಸಿಕರೆ:

೧೯೬೫-೬೬: ಈ ಎರಡು ವರ್ಷಗಳ ಅವಧಿಯಲ್ಲಿ ಪ್ರಕಟವಾದ ಕನ್ನಡ ಕಥೆ – ಕಾದಂಬರಿಗಳನ್ನು ಅವಲೋಕಿಸುವ ಹೊಣೆ ನನ್ನ ಪಾಲಿನದಾಗಿದೆ. ಯಾವುದೇ ಸಾಹಿತ್ಯದ ಪಾರ್ಶ್ವಿಕವಾದ ಚಿಕ್ಕ ಸಮೀಕ್ಷೆಯು ಅಪೂರ್ಣವಾಗಿರುವುದು ಅನಿವಾರ್ಯ. ಅದರಲ್ಲಿಯೂ ಹೀಗೆ ಕ್ಯಾಲೆಂಡರ್ ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಸಮೀಕ್ಷೆಗಳನ್ನು ಸಿದ್ಧಪಡಿಸುವುದಂತೂ ತುಂಬ ಕಷ್ಟದ ಕೆಲಸ. ಏಕೆಂದರೆ ಈ ಅವಧಿಯ ಕೃತಿಗಳನ್ನು ಹಿಂದಿನ ವರ್ಷದ ಕೃತಿಗಳೊಂದಿಗೆ ತೂಗಿ ಮೌಲ್ಯವಿವೇಚನೆ ಮಾಡುವುದಕ್ಕೆ ಇಲ್ಲಿ ಆಸ್ಪದವಿಲ್ಲ; ಹಾಗಾಗಿ ಕೊಟ್ಟ ಅವಧಿಯ ಕೃತಿಗಳ ಗುಣವನ್ನು ಕುರಿತು ವಿಚಾರಮಾಡಲು ಅವಕಾಶವಿಲ್ಲ. ಮುಖ್ಯವಾದ ಈ ಅಡಚಣೆಯೊಂದಿಗೆ ನನ್ನ ಇನ್ನೂ ಒಂದೆರಡು ಕಷ್ಟಗಳನ್ನು ಹೇಳಿಕೊಳ್ಳಬೇಕು. ಈ ಎರಡು ವರ್ಷಗಳ ಅವಧಿಯಲ್ಲಿ ಮಿಕ್ಕೆಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಕಥೆ ಕಾದಂಬರಿಗಳು ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾಗಿವೆ.[1] ಇವೆರಡನ್ನೂ ಬೇರೆಬೇರೆಯಾಗಿಯೇ ಸಮೀಕ್ಷಿಸುವ ಅಗತ್ಯವಿತ್ತು. ಕಳೆದ ಸಾಹಿತ್ಯ ಸಮ್ಮೇಳನದಲ್ಲಿ ಹೀಗೆ ಮಾಡಿದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಹೆಚ್ಚು ಪ್ರಕಟಣೆಗಳನ್ನುಳ್ಳ ಎರಡು ಪ್ರಕಾರಗಳನ್ನು ಒಟ್ಟಿಗೆ ಸೇರಿಸಿರುವುದರಿಂದ ಎರಡಕ್ಕೂ ಅನ್ಯಾಯವಾಗಿದೆಯೆಂದೇ ನನ್ನ ಭಾವನೆ. ಸಮೀಕ್ಷೆಯ ಅಧ್ಯಯನಕ್ಕೆ ಅಗತ್ಯವಾದ ಗ್ರಂಥಗಳನ್ನು ಸಂಗ್ರಹಿಸುವುದು ಎಲ್ಲದಕ್ಕಿಂತ ದೊಡ್ಡ ಕಷ್ಟ. ಕನ್ನಡ ಪುಸ್ತಕಗಳ ವಿಷಯದಲ್ಲಿ ಒಂದಾದರೂ ಸಮರ್ಪಕವಾದ ಗ್ರಂಥ ಭಂಡಾರವಿಲ್ಲ. ಇದಕ್ಕೆ ಪರಿಷತ್ತೂ ಅಪವಾದವಲ್ಲ. ನಮ್ಮಲ್ಲಿ ಗ್ರಂಥಭಂಡಾರಗಳಲ್ಲಿಯೂ ಕೂಡ ಆಧಿಕಾರಿಗಳ ವೈಯಕ್ತಿಕ ಅಭಿರುಚಿ, ಲಾಭಗಳೇ ಪುಸ್ತಕಗಳ ಆಯ್ಕೆಯಲ್ಲಿ ಪ್ರಧಾನಪಾತ್ರ ವಹಿಸುತ್ತವೆ. ಯಾವ ಒಂದು ಸಂಸ್ಥೆಯಾದರೂ ವಾರ್ಷಿಕ ಪ್ರಕಟಣೆಗಳ ಪಟ್ಟಿಯನ್ನು ಪ್ರಕಟಿಸುವುದಿಲ್ಲ. ಪುಸ್ತಕಗಳ ಪ್ರಕಟಣೆ ವ್ಯಾಪಾರಗಳಲ್ಲಿಯೂ ಈ ನಾಡಿನಲ್ಲಿ ಇನ್ನೂ 'ಏಕೀಕರಣ' ವಾಗಿಲ್ಲ. ಇದರಿಂದ ಪ್ರಕಟವಾದ ಎಷ್ಟೋ ಪುಸ್ತಕಗಳು ಆಸಕ್ತರ ಗಮನಕ್ಕೆ ಬರದೆ ಹೋಗುತ್ತವೆ. ಪತ್ರಿಕೆಗಳ ಸಾದರ ಸ್ವೀಕಾರ ವಿಭಾಗದಲ್ಲಿ ಹಲಕೆಲವು ಗ್ರಂಥಗಳು ಆಗಾಗ ಕಾಣಿಸಿಕೊಳ್ಳುತ್ತವೆ. ಆದರೆ ಎಷ್ಟೋ ಸಂದರ್ಭದಲ್ಲಿ ಒಂದು ಗ್ರಂಥ ಕಥೆಯೆ ಕಾದಂಬರಿಯೆ ಎಂದು ತಿಳಿಯುವುದಿಲ್ಲ[2]. ಪ್ರಕಟಣೆಯ ವರ್ಷವನ್ನಂತೂ ಪತ್ರಿಕೆಯವರು ಸೂಚಿ

---

[1] ಈ ಲೇಖನವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಈ ಲೇಖಕನ ಗಮನಕ್ಕೆ ಬಂದಂತೆ ಸುಮಾರು ೨೦೦ ಕೃತಿಗಳು ಪ್ರಕಟವಾಗಿವೆ. ಆದರೆ ಒಟ್ಟು ಪ್ರಕಟಣೆಗಳ ಸಂಖ್ಯೆ ಕನಿಷ್ಟ ಪಕ್ಷ ಮುನ್ನೂರಾದರೂ ಆಗಬಹುದೆಂದು ಅಂದಾಜು ಮಾಡಲು ಅವಕಾಶವಿದೆ. ಬಂಗಾಳಿ ಭಾಷೆಯಲ್ಲಿ ೧೯೬೪-೬೫ ಮತ್ತು ೧೯೬೫-೬೬ ಈ ವರ್ಷಗಳಲ್ಲಿ ಕ್ರಮವಾಗಿ ೨೭೮ ಮತ್ತು ೩೭೬ ಕಥೆ ಕಾದಂಬರಿಗಳು ಪ್ರಕಟವಾದುವು. ಅಲ್ಲಿಯೂ ಈ ಪ್ರಕಾರಗಳಲ್ಲಿಯೇ ಹೆಚ್ಚು ಸಂಖ್ಯೆಯ ಗ್ರಂಥಗಳು ಪ್ರಕಟವಾಗಿವೆ.

C. R. Banerji: 'Indian Publishing: Recent Trends' *Indian Literature*, 9-4, P. 11

[2] ಈ ಸ್ಥಿತಿ ಕನ್ನಡಕ್ಕೇ ವಿಶಿಷ್ಟವಾದುದಲ್ಲ; ತಮಿಳಿನಲ್ಲಿ ನೋಡಿ–

"Over two thousand new books do, however, get published in a year, though there is no machinery by which we—I mean the general reader—can get to know what books have been published by whom; there are no cumulative book lists, no guiding reviews magazine, no publishers' lists on which one can pin one's faith."

Ka. Naa. Subramanyam: 'Tamil: Who wants good books' *Indian Literature* 9-4, p. 97

ಸುವುದೇ ಇಲ್ಲ. ಹಲವು ಗ್ರಂಥಗಳಲ್ಲಿಯೇ ಪ್ರಕಟಣೆಯ ವರ್ಷ ನಮೂದಾಗದೇ ಇರುವುದರಿಂದ ಈ ವಿಚಾರದಲ್ಲಿ ಪತ್ರಿಕೆಯವರನ್ನು ದೂರಿ ಪ್ರಯೋಜನವಿಲ್ಲ. ನಮ್ಮ ಪತ್ರಿಕೆಯವರು ಪ್ರತಿವರ್ಷವೂ ಆಯಾ ವರ್ಷದ ನಾನಾ ಪ್ರಕಾರಗಳ ಸಾಹಿತ್ಯ ಸಮೀಕ್ಷೆಯನ್ನು ಪ್ರಕಟಿಸುವ ವ್ಯವಸ್ಥೆ ಮಾಡಬೇಕು. ಹಲವು ವರ್ಷಗಳ ಕೆಳಗೆ 'ವಾಹಿನಿ' ಪತ್ರಿಕೆ ತನ್ನ ವಾರ್ಷಿಕ ಸಂಚಿಕೆಯಲ್ಲಿ ಒಂದೆರಡು ವರ್ಷ ಈ ಕೆಲಸವನ್ನು ಕೈಗೊಂಡಿದ್ದು ನನಗೆ ನೆನಪಿದೆ. ಈ ದೃಷ್ಟಿಯಿಂದ ಸಾಹಿತ್ಯ ಸಮ್ಮೇಳನದಲ್ಲಿ ಸಮೀಕ್ಷೆಯ ಕಾರ್ಯಕ್ರಮವನ್ನು ಆರಂಭಿಸಿರುವುದು ಅಭಿನಂದನೀಯ. ಆದರೆ ಇಂಥ ಲೇಖನಗಳನ್ನು ಸಿದ್ಧಪಡಿಸಲು ಕೊಡುವ ಸಮಯ ತೀರ ಸ್ವಲ್ಪ. ದೀರ್ಘವಾದ ಕಾಲಾವಧಿಯಲ್ಲಿ ಯೋಜನೆಗೊಳ್ಳಬೇಕಾದ ಸಾಹಿತ್ಯ ಸಮ್ಮೇಳನಗಳೂ ಶಾಲಾವಾರ್ಷಿಕೋತ್ಸವಗಳಂತೆ ಅವಸರವಸರವಾಗಿ ಕೂಡುತ್ತಿರುವುದು ಅಪೇಕ್ಷಣೀಯವಲ್ಲ. ಪರಿಷತ್ತಿನವರು ನನ್ನನ್ನು ಈ ಸಮೀಕ್ಷೆಗಾಗಿ ಕೇಳಿಕೊಂಡ ಒಡನೆಯೇ ನಾನು ಹತ್ತು ಜನ ಲೇಖಕರಿಗೆ, ಉತ್ತರಕ್ಕಾಗಿ ಅಂಚೆ ಚೀಟಿ ಇಟ್ಟು, ೬೫–೬೬ರ ಅವಧಿಯಲ್ಲಿ ಪ್ರಕಟವಾದ ಅವರ ಕಥಾಸಂಕಲನಗಳ ಕಾದಂಬರಿಗಳ ಹೆಸರುಗಳನ್ನು ತಿಳಿಸುವಂತೆ ಪ್ರಾರ್ಥಿಸಿಕೊಂಡೆ. ಒಡನೆಯೇ ಮೂರು ಜನರಿಂದ ಉತ್ತರ ಬಂತು: ಅವರಲ್ಲಿ ಇಬ್ಬರು ಕೊಟ್ಟ ವಿವರಗಳು ತಪ್ಪಾಗಿದ್ದವು. ನಾಲ್ಕನೆಯವರಿಂದ ಬರುವ ಉತ್ತರ ವೇಳೆಗೆ ಈ ಪ್ರಬಂಧ ರಚನೆ ಮುಗಿದು ಹೋಗಿತ್ತು. ಮಿಕ್ಕ ಆರೂಜನ ಲೇಖಕರಿಗೆ ನನ್ನ ಕಾಗದಗಳು ತಲುಪದೆ ಇರುವಷ್ಟು ನಮ್ಮ ಅಂಚೆ ಇಲಾಖೆ ಇನ್ನೂ ಅವ್ಯವಸ್ಥಿತವಾಗಿಲ್ಲ! ಸ್ವಲ್ಪ ಸಮಾಧಾನದ ವಿಚಾರವೆಂದರೆ, ಸಮ್ಮೇಳನದ ವಿವರಗಳನ್ನು ಪತ್ರಿಕೆಗಳಲ್ಲಿ ಓದಿದ ಕೆಲವು ಲೇಖಕರು ತಾವಾಗಿಯೇ ತಮ್ಮ ಪ್ರಕಟಣೆಗಳ ವಿವರಗಳನ್ನು ನನಗೆ ತಿಳಿಸುವ ಕೃಪೆಮಾಡಿದರು.

ನನಗೆ ಕೊಟ್ಟಿರುವ ಇಪ್ಪತ್ತು ನಿಮಿಷಗಳ ಅವಧಿಯಲ್ಲಿ ಈ ಮಾತುಗಳನ್ನು ಆಡುತ್ತಿರುವುದಕ್ಕೆ ಕಾರಣ—ಇಂಥ ಕೆಲಸಗಳಲ್ಲಿ ನಿರತರಾಗಿರುವವರಿಗೆ ಯಾವ ಬಗೆಯ ಸಹಕಾರ ದೊರೆಯುತ್ತದೆ, ಯಾವ ಯಾವ ತೊಂದರೆಗಳಿವೆ ಎಂಬುದನ್ನು ತಮ್ಮ ಗಮನಕ್ಕೆ ತರಲು ನನಗಿರುವ ಅಪೇಕ್ಷೆ; ಹಾಗೂ ಈ ಪ್ರಬಂಧದ ಕೊರತೆಗಳ ಬಗೆಗೆ ತಮ್ಮ ಕ್ಷಮೆಯನ್ನೂ, ಸಹಾನುಭೂತಿಯನ್ನೂ ಯಾಚಿಸುವ ಕಾತರ. ನಾನು ಮೇಲೆ ವಿವರಿಸಿರುವ ಸನ್ನಿವೇಶದಲ್ಲಿ ಈ ಬಗೆಯ ಸಮೀಕ್ಷೆ ಪರಿಪೂರ್ಣವಾಗಿರುವುದು ಸಾಧ್ಯವಿಲ್ಲವೆಂದು ತಾವೂ ನನ್ನೊಡನೆ ಒಪ್ಪುತ್ತೀರೆಂಬ ಭರವಸೆ ನನಗಿದೆ. ಈ ಸಮೀಕ್ಷೆಯಲ್ಲಿ ಉಲ್ಲೇಖಗೊಂಡಿರುವ ಲೇಖಕರೂ, ಕೃತಿಗಳೂ ಲೇಖಕನ ವೈಯಕ್ತಿಕ ಓದಿನ ಸಫಲವಾಗಿರುವುದು ಅನಿವಾರ್ಯವಾಗಿದೆ.

ಕನ್ನಡ ಪತ್ರಿಕೆಗಳಲ್ಲಿ ಕಥೆಗಳು ದೊಡ್ಡ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ಕಥೆ ವಾರಪತ್ರಿಕೆಗಳಲ್ಲಿ, ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳಲ್ಲಿ, ವಿಶೇಷ ಸಂಚಿಕೆಗಳಲ್ಲಿ ತಪ್ಪದೇ ಪ್ರಕಟವಾಗುವುದಲ್ಲದೆ, ಕಥೆಗಳಿಗಾಗಿಯೇ ಮೀಸಲಾದ ಮಾಸಪತ್ರಿಕೆಗಳೂ ಇವೆ. ಈಚಿನ ಕೆಲವು ವರ್ಷಗಳಲ್ಲಿ ಈ ಪತ್ರಿಕೆಗಳು ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸುವ ಪರಿಪಾಠವನ್ನೂ ಆರಂಭಿಸಿವೆ. ಇದರಿಂದ ಕಾದಂಬರಿಕಾರರಿಗೆ ಹೆಚ್ಚಿನ ಪ್ರೋತ್ಸಾಹ, ಅವಕಾಶಗಳು ದೊರಕುವುದಲ್ಲದೆ ಎಷ್ಟೋ ಕಾದಂಬರಿಗಳ ಸೃಷ್ಟಿಗೆ ಇದು ನೆವ ಕೂಡ ಆಗಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳನ್ನೂ, ಧಾರಾವಾಹಿಯಾಗಿ ಪ್ರಕಟವಾಗಿದ್ದರೂ ಪುಸ್ತಕರೂಪವಾಗಿ ಹೊರಬಂದ ಕಾದಂಬರಿಗಳನ್ನೂ, ಹಲವಾರು ಅನ್ಯಭಾಷೆಗಳಿಂದ ಅನುವಾದವಾಗಿ ಬಂದ ಕಥೆ ಕಾದಂಬರಿಗಳನ್ನೂ[1] ಈ ಸಮೀಕ್ಷೆಗೆ ಒಳಪಡಿಸಿಲ್ಲ. ಈ ಕಟ್ಟುಪಾಡು ಪ್ರಬಂಧ ವಿಸ್ತಾರದ ಭಯದಿಂದ, ಅಷ್ಟೆ. ಈ ಎಲ್ಲ ಕೃತಿಗಳ ಮಹತ್ವವನ್ನೂ ಈ ಲೇಖಕ ಅರಿತಿದ್ದಾನೆ ಎಂದು ಹೇಳಬೇಕು. ಆದರೆ ಅವುಗಳ ಬಗೆಗೆ ಇಲ್ಲಿ ಏನನ್ನೂ ಹೇಳದಿರುವುದಕ್ಕೆ ಅವನ ವಿಷಾದವಿದೆ.

ಈಚಿನ ಹಲವು ವರ್ಷಗಳಂತೆ, ಸಮೀಕ್ಷೆಗೆ ಒಳಪಟ್ಟ ಕಳೆದ ಎರಡು ವರ್ಷಗಳಲ್ಲಿಯೂ ಕಾದಂಬರಿಯೇ ಅತ್ಯಂತ ಹೆಚ್ಚಿನ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. ಬರವಣಿಗೆ, ಪ್ರಕಟಣೆ, ಮಾರಾಟ—ಈ ಎಲ್ಲ ದೃಷ್ಟಿಗಳಿಂದಲೂ ಕಾದಂಬರಿ ಸಮೃದ್ಧವಾಗಿದೆ. ನಮ್ಮ ವೃತ್ತಪತ್ರಿಕೆಗಳಲ್ಲಿ ಧಾರಾವಾಹಿ ಕಾದಂಬರಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಜನಪ್ರಿಯ ವಾರಪತ್ರಿಕೆಯಾದ 'ಸುಧಾ' ೧೯೬೬ರಲ್ಲಿ ಕಾದಂಬರಿಗಳ ಸ್ಪರ್ಧೆಯೊಂದನ್ನು ಯೋಜಿಸಿ ಎರಡು ಸಾವಿರ

[1] ಈ ಅವಧಿಯಲ್ಲಿ ಟಾಲ್‌ಸ್ಟಾಯ್, ಪುಷ್ಕಿನ್, ಓ ಹೆನ್ರಿ, ರವೀಂದ್ರನಾಥ್ ಠಾಕೂರ್, ಸ್ಟೆನ್‌ಬೆಕ್, ಆರ್. ಕೆ. ನಾರಾಯಣ್, ಹುಮಾಯೂನ್ ಕಬೀರ್, ಮೊದಲಾದ ಲೋಕಪ್ರಸಿದ್ಧರ ಹಲವಾರು ಕೃತಿಗಳನ್ನು ಕನ್ನಡದ ಸಮರ್ಥ ಲೇಖಕರಾದ ಎಂ. ವಿ. ಸೀತಾರಾಮಯ್ಯ, ದೇ. ಜವರೇಗೌಡ, ಚಿ. ನ. ಮಂಗಳ, ಗೋಪಾಲಕೃಷ್ಣ ಅಡಿಗ. ಕೆ, ವೆಂಕಟರಾಮಪ್ಪ, ಅ. ಶಂಕರ ಮೊದಲಾದವರು ಅನುವಾದಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಅನುವಾದಗಳಿಂದ ನಮ್ಮ ಕಥನ ಸಾಹಿತ್ಯದ ಸಂಪತ್ತು ಖಂಡಿತವಾಗಿಯೂ ಹೆಚ್ಚಿದೆ.

ರೂಪಾಯಿಗಳ ಬಹುಮಾನವನ್ನು ಸಾರಿತು. ಈ ಸ್ಪರ್ಧೆಯ ವಿಷಯದಲ್ಲಿ ಕನ್ನಡ ಲೇಖಕರು ತೋರಿದ ಉತ್ಸಾಹ ಉಲ್ಲೇಖನೀಯವಾಗಿದೆ. ಸ್ಪರ್ಧಿಗಳ ಸಂಖ್ಯೆ, ಸ್ವರೂಪ, ಉತ್ತೇಜನಕಾರಿಯಾಗಿದೆ. ಕನ್ನಡ ಕಾದಂಬರಿ ಪ್ರಪಂಚ ಸಾಕಷ್ಟು ವಿಸ್ತಾರವಾಗಿದೆಯೆಂಬುದನ್ನು ಈ ಸ್ಪರ್ಧೆ ತೋರಿಸಿಕೊಟ್ಟಿದೆ.[1]

ನಮ್ಮ ಇಬ್ಬರು ಪ್ರಮುಖ ಕಾದಂಬರಿಕಾರರು ತಾವು ಕಾದಂಬರಿಗಳನ್ನು ಹೆಚ್ಚಾಗಿ ಬರೆಯುವುದು ಏಕೆ ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ತಮ್ಮ ಆರಂಭದ ಒಂದೆರಡು ಕೃತಿಗಳನ್ನು ಜನ ಓದಿದ ಮೆಚ್ಚಿದ ರೀತಿಯಿಂದ ಮತ್ತು ಹಿಡಿದು ಒಂದರ ಮೇಲೊಂದರಂತೆ ಕಾದಂಬರಿಗಳನ್ನು ಬರೆಯುತ್ತಾ ಬಂದ ನಿರಂಜನರು ಹೇಳುತ್ತಾರೆ: "ಅಂಗಳ ಚಿಕ್ಕದು. ಇಲ್ಲಿ ನರ್ತಿಸಲಾರೆ—ಎನ್ನುವಂತಿಲ್ಲ. ಕಾದಂಬರಿ ಬಯಲು ಅಪಾರ ವಿಸ್ತಾರಕ್ಕೆ ನಾನು ಶರಣು. ವ್ಯಕ್ತಿಗಳನ್ನು ಘಟನೆಗಳನ್ನು ಬದುಕನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸಲು ಕಾದಂಬರಿಯೊಂದೇ ಮಾಧ್ಯಮ." ತಾವು ಕಾದಂಬರಿಗಳನ್ನು "ಸೃಷ್ಟಿಯ ಸಂತೋಷಕ್ಕೋಸ್ಕರ, ಕೃತಿಯನ್ನು ಜನ ಓದುವುದರಿಂದ ಬರೆಯುವವನಿಗೆ ಆಗುವ ಆನಂದಕ್ಕೋಸ್ಕರ" ಬರೆಯುತ್ತಿರುವುದಾಗಿ ಅವರು ಹೇಳಿಕೊಂಡಿದ್ದಾರೆ.[2] "ಕಾದಂಬರಿಕಾರನ ಮೂಲ ಬಂಡವಲು ಆತನ ಅನುಭವ. ನೂರಾರು ಊರು ಸುತ್ತಿ, ಸಾವಿರಾರು ಜನರನ್ನು ಕಂಡು, ಜೀವನದ ಸಹಸ್ರ ಮುಖಗಳ ಪರಿಚಯ ಮಾಡಿಕೊಂಡಾಗಲೇ ಕಾದಂಬರಿಯಲ್ಲಿ ವಾಸ್ತವತೆಯೂ ಜೀವಂತಿಕೆಯೂ ಎದ್ದು ಕಾಣುತ್ತದೆ" ಎಂದು ಹೇಳುವ ಬಸವರಾಜ ಕಟ್ಟೀಮನಿಯವರು "ನಾನು ಸಾಯುವವರೆಗೆ ಬರೆದರೂ ಮುಗಿಯದಷ್ಟು ವಿಷಯ ಸಂಗ್ರಹವಿದೆಯಲ್ಲ? ನಾನು ತಿರುಗಿದ್ದೇನು ಕಡಿಮೆಯೆ?" ಎಂದೂ ಪ್ರಶ್ನಿಸುತ್ತಾರೆ. ಕಾದಂಬರಿ ಸೃಷ್ಟಿ ಅವರಿಗೆ ಸಹಜವಾದ ಒಲವಾಗಿದೆ. ಆದ್ದರಿಂದಲೇ ಅವರೆನ್ನುತ್ತಾರೆ: "ಕಥೆ ಕಾದಂಬರಿಗಳ ರಚನೆಯಲ್ಲಿ ಮಾತ್ರ ನಾನು ಸುಖವನ್ನೂ ಸಮಾಧಾನವನ್ನೂ ಪಡೆದಿದ್ದೇನೆ. . .ಸಣ್ಣಕಥೆ ಕಾದಂಬರಿಗಳ ಬಗೆಗೆ ನನಗೆ ಮೊದಲಿನಿಂದಲೂ ಇಂಥ ಒಲವು ಬೆಳೆದು ಬಂದಿದೆ. ಎಂತಲೇ ನಾನು ಈ ಎರಡು ವಿಭಾಗದಲ್ಲಿಯೇ ಹೆಚ್ಚಾಗಿ ಕೆಲಸ ಮಾಡುತ್ತಲಿದ್ದೇನೆ. . .ಕಥೆ ಕಾದಂಬರಿಗಳ ರಚನೆಯಿಂದ ನನ್ನ ಮನಸ್ಸಿಗೆ ಶಾಂತಿಯೂ ತೃಪ್ತಿಯೂ ಲಭಿಸುತ್ತಿದೆ."[3] ಹೀಗೆ ಕಾದಂಬರಿಯ ವ್ಯಾಪ್ತಿ, ವಿಸ್ತಾರಗಳನ್ನು ಅರಿತುಕೊಂಡಿರುವ ಲೇಖಕರು ಅದನ್ನು ಸಹಜವಾಗಿ ತಮ್ಮ ಕ್ಷೇತ್ರವನ್ನಾಗಿ ಮಾಡಿಕೊಂಡಿರುವುದು ಸಮಾಧಾನದ ಸಂಗತಿ. ಈ ಅರಿವಿನ ಲೇಖಕರಿಂದ ಕನ್ನಡ ಕಾದಂಬರಿ ಇನ್ನೂ ಎತ್ತರಕ್ಕೆ ಬೆಳೆಯಬಹುದೆಂದು ನಾವು ಆಶಿಸಬಹುದಾಗಿದೆ.

ಈ ಸಮೀಕ್ಷೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸುಮಾರು ಎಪ್ಪತ್ತು ಜನ ಲೇಖಕರ (ಇವರಲ್ಲಿ ಹದಿಮೂರು ಜನ ಮಹಿಳೆಯರು!) ನೂರ ಎಪ್ಪತ್ತು ಕೃತಿಗಳು ನಮ್ಮ ಗಮನಕ್ಕೆ ಬಂದಿವೆ.[4] ಈ ಸಂಖ್ಯೆ ನಿಸ್ಸಂದೇಹವಾಗಿ ಇನ್ನೂ ದೊಡ್ಡವು.

ಅ. ನ. ಕೃಷ್ಣರಾಯರು, ಕೃಷ್ಣಮೂರ್ತಿ ಪುರಾಣಿಕರು ಹಾಗೂ ನಾಡಿಗೇರ ಕೃಷ್ಣರಾಯರು ಈ ಎರಡು ವರ್ಷಗಳಲ್ಲಿ ಹೆಚ್ಚು ಸಂಖ್ಯೆಯ ಕಾದಂಬರಿಗಳನ್ನು ರಚಿಸಿರುವ ಲೇಖಕರರಾಗಿದ್ದಾರೆ. ಅವರಲ್ಲಿ ಒಬ್ಬೊಬ್ಬರೂ ಎಂಟೆಂಟು ಕಾದಂಬರಿಗಳನ್ನು ಬರೆದಿದ್ದಾರೆ. ಹಳತು-ಹೊಸತರ ಸಂಕ್ರಮಣ. ಅಣ್ಣ ತಂಗಿಯರ ಪರಸ್ಪರ ಪ್ರೇಮ ತ್ಯಾಗಗಳು, ಕಾರ್ಮಿಕರ ಸಮಸ್ಯೆ, ತಾಯಿ ಜೀವನದ ಆದರ್ಶ, ಋಜು ಜೀವನಕ್ಕಾಗಿ ಹೆಣ್ಣು ಪಡುವ ಬವಣೆ-ಹೀಗೆ ಹಲವು ಸಮಸ್ಯೆಗಳು ಅನಕೃ ಅವರ ಕಾದಂಬರಿಗಳಿಗೆ ವಸ್ತುವಾಗು

---

[1] "ಸ್ಪರ್ಧೆಗೆ ಕೃತಿಗಳನ್ನು ಕಳುಹಿಸಿಕೊಡಲು ಇದ್ದ ಅವಧಿ ಕಡಿಮೆಯಾದರೂ ಸ್ಪರ್ಧೆಗಾಗಿ ಬಂದಿದ್ದ ಕೃತಿಗಳ ಸಂಖ್ಯೆ ಕಡಿಮೆಯಿಲ್ಲ. ಒಟ್ಟು ೧೪೭. ಪ್ರತಿಯೊಂದು ಕೃತಿಯ ಸರಾಸರಿ ಉದ್ದ ಇನ್ನೂರು ಪುಟವೆಂದು ಇಟ್ಟುಕೊಂಡರೂ ಒಟ್ಟು ಸುಮಾರು ಮೂವತ್ತು ಸಾವಿರ ಪುಟ! ಸ್ಪರ್ಧಿಗಳಲ್ಲಿ ಅನೇಕರು ಸಿದ್ಧಹಸ್ತರು! ಕೆಲವು ಎಳೆಯ ಕೈಗಳು. ಲೇಖಕರಿಗೆ ಹೆಗಲೆಣೆಯಾಗಿ ನಿಂತ ಲೇಖಕಿಯರು ಹಲವರು ...... ಸ್ಪರ್ಧೆಗಾಗಿ ಬಂದ ಕಾದಂಬರಿಯಲ್ಲಿ ವಸ್ತು ವೈವಿಧ್ಯವಿದೆ; ಕಲಾವಂತಿಕೆಯಿದೆ; ಪಾತ್ರಗಳ ಎರಚಾಟ ಇದೆ; ವಿವಿಧ ರಾಗಗಳ ಬಣ್ಣನೆಯಿದೆ; ಕನ್ನಡನಾಡಿನ ಕಡಲ ತೀರದಿಂದ ಹಿಡಿದು ದೂರದ ಅಸ್ಸಾಮಿನ ಟೀ ತೋಟದವರೆಗೆ ನಾನಾ ಪರಿಸರಗಳ ಪರಿಚಯವಿದೆ ...ಸ್ಪರ್ಧೆಯ ಕಾದಂಬರಿಗಳಲ್ಲಿ ಪುರಾಣದ ಕಥೆಗಳಿವೆ. ಜಂತುಹುಳುವಿನ ಜಗತ್ತಿದೆ. ಇತಿಹಾಸದ ಹಿಂಗಣ್ಣಿನ ಕತೆಗಳಿವೆ...ಮನಸ್ಸಿನ ಆಳವನ್ನೂ ಜೀವನದ ವಿಸ್ತಾರವನ್ನೂ ಕಲಾತ್ಮಕವಾಗಿ ನಿರೂಪಿಸಬಲ್ಲ ಲೇಖಕರ ಸಂಖ್ಯೆ ಬೆಳೆಯುತ್ತಿದೆಯೆಂಬುದಕ್ಕೆ ಇವುಗಳಲ್ಲಿ ಸಾಕಷ್ಟು ಆಧಾರವಿದೆ." —ಎಚ್ಚೆಸ್ಕೆ: 'ತೀರ್ಪುಗಾರರ ಪರವಾಗಿ ನಾಲ್ಕು ಮಾತು', ಸುಧಾ-ಯುಗಾದಿ ಸಂಚಿಕೆ ೧೯೬೭, ಪು. ೩೫.

[2] ನಿರಂಜನ: 'ನಾನು ಕಾದಂಬರಿಗಳನ್ನೇ ಏಕೆ ಹೆಚ್ಚಾಗಿ ಬರೆದೆ?' ಕರ್ಮವೀರ-ದೀಪಾವಳಿ ಸಂಚಿಕೆ ೧೯೬೬. ಪು. ೪೦.

[3] ಬಸವರಾಜ ಕಟ್ಟೀಮನಿ: 'ನಾನು ಕಾದಂಬರಿಗಳನ್ನೇ ಏಕೆ ಬರೆದೆ?" ಅದೇ ಪು-೩೭

[4] ಮೊದಲನೆಯ ಅನುಬಂಧವನ್ನು ನೋಡಿ,

ತ್ತವೆ. ಭಾರತೀಯ ಸಂಸ್ಕೃತಿ, ಕುಟುಂಬ ಜೀವನಗಳನ್ನು ಕುರಿತು ಬರೆಯುವಾಗ ಅವರಿಗೆ ಇನ್ನಿಲ್ಲದ ಉತ್ಸಾಹ. ಬರವಣಿಗೆ ಲೀಲಾಜಾಲವಾಗಿ ಸಿದ್ಧಿಸಿರುವ, ಸಂಭಾಷಣೆಗಳಲ್ಲಿಯೇ ಎಲ್ಲವನ್ನೂ ತರಲು ಸಮರ್ಥರಾಗಿರುವ ಅನಕೃ ಸಣ್ಣ ಕಥೆಯಾಗಬಲ್ಲ ವಸ್ತುವಿಗೆ ಕಾದಂಬರಿಯ ವೇಷ ತೊಡಿಸಿ ಬಿಡುತ್ತಾರೆ. 'ಕಣ್ಣಿನ ಗೊಂಬೆ'ಯಂತಹ ಕಾದಂಬರಿಗಳು ಇದಕ್ಕೆ ಸಾಕ್ಷಿ. ನೂರು ಕಾದಂಬರಿಗಳನ್ನು ಮುಗಿಸಿ ಎರಡನೆಯ ನೂರರಲ್ಲಿಯೂ ದಶಕವನ್ನು ದಾಟಿರುವ ಅನಕೃ ಅವರ ಬರವಣಿಗೆಯಲ್ಲಿ ಹೊಸದೇನೂ ಇಲ್ಲ. ಪಾತ್ರಗಳು, ಸನ್ನಿವೇಶ, ಸಮಸ್ಯೆಗಳೆಲ್ಲ ಮತ್ತೆಮತ್ತೆ ಜಾಳಾಗಿ ಬರುತ್ತಲೇ ಇರುತ್ತವೆ. ಒಳ್ಳೆಯದು–ಕೆಟ್ಟದು ಅನಕೃ ಪ್ರಪಂಚದಲ್ಲಿ ಎರಡು ಕೊನೆಗಳು. ಅವುಗಳ ನಡುವಿನಲ್ಲಿ ಅವರಿಗೆ ಅಷ್ಟಾಗಿ ಆಸಕ್ತಿಯಿಲ್ಲ. ಐವತ್ತು ಕಾದಂಬರಿಗಳನ್ನು ಮುಗಿಸಿರುವ ಪುರಾಣಿಕರು ಸಮಕಾಲಿನ ಜೀವನವನ್ನೂ, ಕೌಟುಂಬಿಕ ಸಮಸ್ಯೆಗಳನ್ನೂ ತಮ್ಮದೇ ಚೌಕಟ್ಟಿನಲ್ಲಿ ಎತ್ತಿಕೊಳ್ಳುತ್ತಾರೆ. ರಾಜಕೀಯ ಭ್ರಷ್ಟಾಚಾರವನ್ನು ಅವರು 'ಕಾಂಚನ ಕಸ್ತೂರಿ'ಯಲ್ಲಿ ತಂದರೆ, 'ಹಿಮಗಿರಿಯ ಗೌರಿ'ಯಲ್ಲಿ ಚೀನೀದಾಳಿಯ ಹಿನ್ನೆಲೆ ಬರುತ್ತದೆ. ಮೂವರು ವಿದ್ಯಾವತಿಯರ ಮೂರು ಬೇರೆ ಬೇರೆ ಮುಖಗಳನ್ನು 'ಮಾವು ಮಲ್ಲಿಗೆ'ಯಲ್ಲಿ ಆರಂಭಿಸಿ 'ವಿದ್ಯಾ ಸುಂದರಿ'ಯಲ್ಲಿ ಮುಗಿಸಿದ್ದಾರೆ. ಕುಟುಂಬ ಜೀವನದ ಚಿತ್ರಗಳನ್ನು ಕೊಡುವಲ್ಲಿ ಪುರಾಣಿಕರು ಕುಶಲಿಗಳು. ಆದರೆ ಈ ಕೌಶಲದಲ್ಲಿ ನಯಗಾರಿಕೆಯಾಗಲಿ, ಚಿತ್ರಣದಲ್ಲಿ ಆಳವಾಗಲೀ ಕಂಡುಬರುವುದಿಲ್ಲ. "ನನ್ನ ಜೀವನದಲ್ಲಿ ತೃಪ್ತಿ ಬಂದಿದೆ. ಆದರೆ ಹಂಬಲ ಇನ್ನೂ ನೀಗಿಲ್ಲ. ನನ್ನಿಂದ ಒಳ್ಳೆಯ ಒಂದು ಕೃತಿಯಾದರೂ ಇನ್ನೂ ಬರಲಿಲ್ಲವೆಂಬ ದುಃಖ ನನ್ನದು" ಎಂದು ಪುರಾಣಿಕರೇ ಹೇಳಿಕೊಳ್ಳುತ್ತಾರೆ. ನಾಡಿಗೇರ ಕೃಷ್ಣರಾಯರು ನಗೆ ಬರಹಗಳ ಮೂಲಕ ಪ್ರಸಿದ್ಧಿಗೆ ಬಂದವರು. ಕಾದಂಬರಿ ಅವರ ಎರಡನೆಯ ಪ್ರೇಮ. ಎರಡನೆಯ ಪ್ರೇಮ ಮೊದಲಿನದನ್ನು ಗೆಲ್ಲುತ್ತದೆಂಬ ಹೇಳಿಕೆ ನಾಡಿಗೇರರ ವಿಷಯದಲ್ಲಿ ನಿಜವಾಗಿ ಅವರು ಈಗ ಕಾದಂಬರಿಕಾರರಾಗಿದ್ದಾರೆ. ಅವರ ಕಾದಂಬರಿಗಳಲ್ಲಿ ಗಂಡು–ಹೆಣ್ಣು ಪ್ರಥಮ; ಪ್ರಧಾನ, ಬಣ್ಣದ ಚಿಟ್ಟೆ, ಹೆಣ್ಣಿನ ತ್ಯಾಗ, ದಾಯಾದಿ ಕಲಹ, ಗ್ರಾಮ ಜೀವನದ ವೈಷಮ್ಯ, ಹೆಣ್ಣಿನ ವ್ಯಾಮೋಹದಿಂದಾಗುವ ಅನರ್ಥಗಳು, ಕುಲದ ಪವಿತ್ರತೆ ಹೀಗೆ ತಮ್ಮ ಕಾದಂಬರಿಗಳಲ್ಲಿ ಒಂದೊಂದು ಸಮಸ್ಯೆ, ವಸ್ತು ಇರುವುದಾಗಿ ನಾಡಿಗೇರರು ಹೇಳಿಕೊಳ್ಳುತ್ತಾರೆ. ಆದರೆ ಕಾದಂಬರಿಗಳಲ್ಲಿ ಇವೆಲ್ಲ ಮರೆಯಾಗಿ, ಪಾತ್ರಗಳು ಬಾಟಲಿಯನ್ನು ಎತ್ತಿ ದೀಪ ಆರಿಸುವುದಕ್ಕೆ ಕಾತರರಾಗಿರುವಂತೆ ತೋರಿ ಬರುತ್ತದೆ. ಕಾದಂಬರಿಕಾರರು ವಾಚಕರನ್ನು ಆಕರ್ಷಿಸುವುದರಲ್ಲಿ ನಿರತರಾಗಿರುವಂತೆ ಕಾಣುತ್ತದೆ. ಲೇಖಕನಿಗೆ ಬೇಕಾದದ್ದು ಓದುಗರೆಂದೂ, ತಮಗೆ ಓದುಗರ ಕೊರತೆ ಇಲ್ಲವೆಂದೂ ನಾಡಿಗೇರರು ಹೇಳಿಕೊಳ್ಳುತ್ತಾರೆ.[1] ಇದು ಅಪಾಯಕಾರೀ ತೃಪ್ತಿ. ಏಕೆಂದರೆ ಅಫೀಮಿನ ಅಂಗಡಿಯವನು ತನ್ನ ವ್ಯಾಪಾರದಲ್ಲಿ ಪಡೆಯುವ ತೃಪ್ತಿಯನ್ನು ಪಕ್ಕದ ಪನ್ನೀರಿನ ಅಂಗಡಿಯವನು ಪಡೆಯಲಾರನೇನೊ! ಈ ಮಾತು ಕನ್ನಡ ಕಥನ ಸಾಹಿತ್ಯದಲ್ಲಿ ಕಾಮದ ಕೊಳಕನ್ನು ತುಂಬುತ್ತಿರುವ ಎಲ್ಲ ಲೇಖಕರಿಗೂ ಅನ್ವಯಿಸುತ್ತದೆ. ಹೆಚ್ಚು ಸಂಖ್ಯೆಯ ಕಾದಂಬರಿಗಳನ್ನು ನಾಡಿಗೇರರು ರಚಿಸಿದ್ದರೂ ಅವನ್ನು ಓದಿದ ಮೇಲೆ ಯಾವುದೊಂದೂ, ಕೆಲಕಾಲವಾದರೂ, ನೆನಪಿನಲ್ಲಿ ಉಳಿಯದೆ ಹೋಗುವುದು ದುರ್ದೈವದ ಸಂಗತಿ.

ಶಿವರಾಮ ಕಾರಂತರು 'ಒಂಟಿದನಿ' ಹಾಗೂ 'ಸ್ವಪ್ನದ ಹೊಳೆ' ಎಂಬ ಎರಡು ಕಾದಂಬರಿಗಳನ್ನು ಕೊಟ್ಟಿದ್ದಾರೆ. ಎರಡೂ ಕಾದಂಬರಿಗಳ ವಸ್ತು, ವಿನ್ಯಾಸ ಬೇರೆಯಾಗಿದ್ದರೂ, ಎರಡರಲ್ಲಿಯೂ ಕೇಳಿಬರುವುದು ಒಂಟಿ ದನಿಯೆ; ಹರಿಯುವುದು ಸ್ವಪ್ನದ ಹೊಳೆಯೆ. ಈ ದನಿ–ಹೊಳೆಗಳು ಆದರ್ಶ. ಮೊದಲಿನದರಲ್ಲಿ ಆದರ್ಶ–ವಾಸ್ತವಿಕತೆಗಳು ಮೇಳವಿಸಿಲ್ಲ. ಆದರೆ ಎರಡನೆಯ ಬೆಳವಣಿಗೆ ಸಾಕಷ್ಟು ಸಹಜವಾಗಿ ಬಂದಿದೆ. ಕಾರಂತರಲ್ಲಿ ಬಣ್ಣದ ಬೆಡಗಿಲ್ಲ. ನೀವು ಒಪ್ಪಿ ಬಿಡಿ, ಅವರ ದಾರಿ ಅವರಿಗೆ ನೇರ, ಸ್ಪಷ್ಟ.

ತ. ರಾ. ಸು. ಅವರ ನಾಲ್ಕು ಕಾದಂಬರಿಗಳಲ್ಲಿ 'ಹಾವು ಹಿಡಿದವರು' ಸಾಮಾಜಿಕ. ಇದರ ಉತ್ತರಾರ್ಧ ಅಚ್ಚಿನಲ್ಲಿದೆಯೆಂದು ಅವರು ಹೇಳಿಕೊಂಡು ವರ್ಷದ ಮೇಲಾಗಿದೆ. ಅದು ಪೂರ್ತಿಗೊಳ್ಳದೆ ಈ ಕಾದಂಬರಿಯ ಬಗೆಗೆ ಏನು ಹೇಳುವುದೂ ಸರಿಯಾಗಲಾರದು. ಏಕೆಂದರೆ ಈ ಕಾದಂಬರಿ ಈಗಿರುವಂತೆ ಅರ್ಥಶೂನ್ಯ; ಅಸಂಬದ್ಧ, ಕಾದಂಬರಿಕಾರರೂ ಕಲಾದೃಷ್ಟಿಯಿಲ್ಲದೆ, ವ್ಯಾಪಾರೀ ದೃಷ್ಟಿಯಿಂದ ಕಾದಂಬರಿಗಳನ್ನು ಹೇಗೆ ಪ್ರಕಟಿಸುತ್ತಾರೆಂಬುದಕ್ಕೆ ಇದು ಒಂದು ಉದಾಹರಣೆ. 'ಕಸ್ತೂರಿಕಂಕಣ', 'ರಾಜ್ಯದಾಹ'ಗಳೆರಡೂ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದವು. ತ.ರಾ.ಸು. ಅವರ ಹೆಸರಾಂತ 'ಕಂಬನಿಯ ಕುಯಿಲು', ಮತ್ತು 'ರಕ್ತರಾತ್ರಿ' ಕಾದಂಬರಿಗಳ ನಡುವಿನ ಕಾಲದ

---

[1] ನಾಡಿಗೇರ ಕೃಷ್ಣರಾಯ: 'ವಯಸ್ಸಿಗೆ ಬಂದವಳು'–ಎರಡು ಮಾತು.

ಚಿತ್ರವನ್ನು 'ರಾಜ್ಯದಾಹ' ನೀಡುತ್ತದೆ. 'ಅಗ್ನಿರಥ–ಮುಕ್ತಿ ಪಥ' ಅಲ್ಲಮ ಪ್ರಭುವಿನ ಜೀವನನ್ನು ಕುರಿತದ್ದು. ಇದರ ನಿರ್ವಹಣೆಯಲ್ಲಿ ಆ ಮಹಾಜ್ಞಾನಿಯ ಬದುಕು ಸಹಜ ಶಕ್ತಿಯಿಂದ ವಿಕಸಿಸಿದ ಪವಾಡವೇ ವಿನಾ ಕಾಲದ ಸೃಷ್ಟಿಯಲ್ಲ ಎಂಬ ಮನೋಭಾವವನ್ನು ತ. ರಾ. ಸು ತಾಳಿದ್ದಾರೆ. ಕಟ್ಟೀಮನಿಯವರ ಏಕಮಾತ್ರ ಕಾದಂಬರಿ 'ಪ್ರಪಾತ' ಮೂರು ಪಾತ್ರಗಳನ್ನು ಕೇಂದ್ರವಾಗಿ ಉಳ್ಳ ವಿಫಲ ಪ್ರೇಮದ ಕಥೆ. ಕಥೆಯಲ್ಲಿ ಹೊಸದೇನೂ ಇಲ್ಲ. ಆದರೆ ಕಟ್ಟೀಮನಿಯವರು ತಮ್ಮ ಸವೇಗ ಬರವಣಿಗೆಯಿಂದಾಗಿ ಅದನ್ನು ವಾಚನೀಯವನ್ನಾಗಿಸಿದ್ದಾರೆ. ನಿರಂಜನರು ತಮ್ಮ 'ನೂರು ಜುಟ್ಟು ಮೂರು ಜಡೆ'ಯಲ್ಲಿ ಗ್ರಾಮ ಜೀವನದ ಪರಿವರ್ತನೆಯಿಂದಾಗಿ ಕಣಿವೆ ಹಳ್ಳಿ ಮಧುಪುರವಾಗುವ ಚಿತ್ರವನ್ನು ಕೊಟ್ಟಿದ್ದಾರೆ. ಈ ಕಥೆ ಇನ್ನೂ ಬೆಳೆಯುವ ಸೂಚನೆಯನ್ನು ನಾವು ಕಾಣಬಹುದು. ಪಾತ್ರಗಳ ಸಂಖ್ಯೆ ದೊಡ್ಡದಾಗಿ ಯಾವ ಪಾತ್ರವೂ ಸ್ಪಷ್ಟವಾಗಿ ರೂಪುಗೊಳ್ಳದೆ ಹೋಗಿರುವುದು ಈ ಕಾದಂಬರಿಯ ದೋಷ. ಕೊಡಗಿನ ಇತಿಹಾಸಕ್ಕೆ ಸಂಬಧಿಸಿದ 'ಸ್ವಾಮಿ ಅಪರಂಪಾರ' ಎಂಬ ಕಾದಂಬರಿಯನ್ನೂ ನಿರಂಜನರು ಪ್ರಕಟಿಸಿದ್ದು, ಅದರಲ್ಲಿ ಈ ದೋಷವನ್ನು ಕಳೆದುಕೊಂಡಿದ್ದಾರೆ. ಇದರ ಪಾತ್ರ ಪೋಷಣೆ ಎತ್ತಿ ಹೇಳಬೇಕಾದ ಅಂಶ. ಐತಿಹಾಸಿಕ ಕಾದಂಬರಿಕಾರರಾದ ಕೊರಟಿ ಶ್ರೀನಿವಾಸರಾಯರು 'ಉಭಯ ಲೋಕೇಶ್ವರ' ಮತ್ತು 'ರಾಜ್ಯಕ್ಷಯ' ಎಂಬ ಎರಡು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಬಹು ಸೂಕ್ಷ್ಮವಾದ ಇತಿಹಾಸದ ಅಂಶದ ಮೇಲೆ ಕೊರಟಿಯವರು ಕಾದಂಬರಿಯ ಹಂದರವನ್ನು ನಿರ್ಮಿಸಬಲ್ಲರು. ಕರ್ಣಾಕದ ಸ್ವಾತಂತ್ರ್ಯ ವೀರರಲ್ಲಿ ಒಬ್ಬನಾದ ದೋಂಡಯ ವಾಘನನ್ನು ಮೊದಲ ಕಾದಂಬರಿ ಕುರಿತಿದ್ದರೆ, ಎರಡನೆಯದು ಲೇಖಕರ ವಿಜಯ ನಗರ ಕಾದಂಬರಿ ಮಾಲೆಯಲ್ಲಿ ಕೊನೆಯದು.

ಭಾರತೀಸುತ, ಮಿರ್ಜಿ ಅಣ್ಣಾರಾಯ, ವಿ. ಎಂ. ಇನಾಂದಾರ್, ಬಿ.ಪುಟ್ಟಸ್ವಾಮಯ್ಯ, ಶ್ರೀರಂಗ ಇವರ ಒಂದೊಂದು ಕಾದಂಬರಿಗಳು ಪ್ರಕಟವಾಗಿವೆ. ಭಾರತೀಸುತರು ಎಂದಿನಂತೆ ತಮ್ಮ 'ಗಿರಿಕನ್ಯೆ'ಯಲ್ಲಿ, ಮೈನಾಡಿನ ಗಿರಿಜನರ ಒಂದು ಪಂಗಡವಾದ ಪಣಿಯರ ಜೀವನವನ್ನು ಚಿತ್ರಿಸಿರುವುದಾಗಿ ಹೇಳಿಕೊಂಡಿದ್ದಾರೆ. ತಮ್ಮ ಹಿಂದಿನ ಕಾದಂಬರಿಗಳಿಗಿಂತ ಭಾರತೀಸುತರು ಹೆಚ್ಚಿನದೇನನ್ನೂ ಸಾಧಿಸಿಲ್ಲ. ಪಣಿಯ ಹೆಣ್ಣೊಂದು ತನ್ನ ಒಡೆಯನಿಂದ ತನ್ನ ಶೀಲವನ್ನು ಹೇಗೆ ಕಾಪಾಡಿಕೊಂಡಿತೆಂಬುದೇ ಇಲ್ಲಿನ ಕಥೆ. ಹಿಂದಿನ 'ಹುಲಿಯಹೆಬೋಸಿ'ನಲ್ಲೂ ಅದೇ ಕಥೆ. ಆದರೆ ಅಲ್ಲಿ ಹೆಣ್ಣು ಸೋತಿದ್ದಳು; ಇಲ್ಲಿ ಅವಳು ಸೋಲಲಿಲ್ಲ. ಅಷ್ಟೇ ವ್ಯತ್ಯಾಸ. ಪಣಿಯರ ಜೀವನ, ಸಂಪ್ರದಾಯ, ನಂಬಿಕೆ ಇವುಗಳನ್ನು ಬಲ್ಲ ಭಾರತೀಸುತರು ಅದೇನನ್ನೂ ತಮ್ಮ ಕಾದಂಬರಿಯಲ್ಲಿ ಕೊಡದಿರುವುದು ನಷ್ಟವೇ ಸರಿ. ಶಿಕ್ಷಕನೊಬ್ಬನ ಒಂದುವಾರದ ದಿನಚರಿಯ ರೂಪದಲ್ಲಿ ಮೈದಾಳಿರುವ ಅಣ್ಣಾರಾಯರ 'ಹದಗೆಟ್ಟ ಹಳ್ಳಿ' ಎಲ್ಲ ಕ್ಷೇತ್ರಗಳಲ್ಲಿಯೂ ಹದಗೆಡುತ್ತಿರುವ ನಮ್ಮ ಸಮಕಾಲಿನ ಜೀವನದ ಒಂದು ನಿರೂಪಣೆಯಾಗಿದೆ. ಒಂದು ವಾರದ ಹಳ್ಳಿಜೀವನದಲ್ಲಿ ಅವನತಿಗೆ ಒಳಗಾಗಿರುವ ಜೀವನ ಮೌಲ್ಯಗಳ ವಿಶ್ಲೇಷಣೆಯಿದೆ. ಬದಕನ್ನು ಸಮಜೋಡಿಯಾಗಿ ನಡೆಸುತ್ತಿರುವ ಒಳ್ಳೆಯದು–ಕೆಟ್ಟದು ಇವುಗಳ ಸಬಂಧವನ್ನು ಇನಾಂದಾರರು ತಮ್ಮ 'ಮಂಜು ಮುಸುಕಿದ ದಾರಿ' ಯಲ್ಲಿ ನೋಡಲು ಯತ್ನಿಸಿದ್ದಾರೆ. ಒಂದು ಕಥೆಯ ಅಸ್ತಿವಾರದ ಮೇಲೆ ಕಾದಂಬರಿಯ ಉಳಿದ ಪರಿಕರಗಳ ಭವನವನ್ನು ನಿರ್ಮಿಸುವುದು ಅವರ ಬಗೆ. ಎಷ್ಟೋ ಸಲ ಈ ಅಸ್ತಿವಾರವೊಂದೇ ನಮಗೆ ಕಾಣಸಿಕ್ಕುವುದು. ಇನಾಂದಾರರ ಹಿಂದಿನ ಕಾದಂಬರಿಗಳೊಂದಿಗೆ ಹೋಲಿಸಿ ನೋಡಿದರೂ ಈ ಕೃತಿ ಯಶಸ್ವಿಯಾದುದಲ್ಲವೆಂದೇ ಎನಿಸುತ್ತದೆ. ಬಿ. ಪುಟ್ಟಸ್ವಾಮ್ಯನವರ 'ಅರ್ಧಾಂಗಿ' ಒಂದು ಸಾಮಾಜಿಕ ಚಿತ್ರಣ. ಗತ ಇತಿಹಾಸದಲ್ಲಿ ತಮ್ಮ ಕಲ್ಪನೆಯ ಹಾಯಿಯನ್ನು ಹರಿಯಬಿಡುವ ಪುಟ್ಟಸ್ವಾಮಯ್ಯನವರು ಸಾಮಾಜಿಕಕ್ಕೆ ಇಳಿದರೇ ಎಂದು ಆಶ್ಚರ್ಯಪಡಬೇಕಾಗಿಲ್ಲ. ಹತ್ತು ಹದಿನೈದು ವರ್ಷಗಳ ಕೆಳಗೆ ಅವರು ರಚಿಸಿದ್ದ 'ಮಲ್ಲಮ್ಮನ ಪವಾಡ' ಎಂಬ ಕಿರುಕೃತಿಯ ವಿಸ್ತೃತ ರೂಪವೇ 'ಅರ್ಧಾಂಗಿ'! 'ಸೌಜನ್ಯದ ಬೆಲೆ' ನಾಟಕಕಾರ ಶ್ರೀರಂಗರ ಕಾದಂಬರಿ. ಲೀಲಾ ಎಂಬ ಹೆಣ್ಣುಮಗಳು ಹೇಳಿಕೊಳ್ಳುವ ಆತ್ಮಕಥಾರೂಪದ ಈ ಕೃತಿಯುಲ್ಲಿ ಹೆಣ್ಣಿನ ಜೀವನದ ನಾನಾ ಘಟನೆಗಳು ಕಥಾನಾಯಕಿಯ ಪ್ರತಿಕ್ರಿಯೆಗಳು ಕಾದಂಬರಿಕಾರರವಾಗಿ ಎರಡಕ್ಕೂ ಹೊಂದಾಣಿಕೆ ಇಲ್ಲದೆ ಹೋಗಿರುವುದೇ ಈ ಕೃತಿಯ ದೌರ್ಬಲ್ಯವಾಗಿದೆ.

ಮ. ನ. ಮೂರ್ತಿಯವರು 'ಕಾಲ ಸರ್ಪಿಣಿ' ಯಲ್ಲಿ ವಾಮಾಚಾರದ ಕಥೆಯನ್ನು ಹೇಳಿದ್ದರೆ, 'ದೇವರಹಸ್ಯ'ದಲ್ಲಿ ಜ್ಯೋತಿಷ್ಯವನ್ನೇ ಆಧರಿಸಿದ್ದಾರೆ. 'ವಸುಂಧರೆ' ಯಲ್ಲಿ ಎಡವಿದ ಹೆಣ್ಣಿನ ಸಮಸ್ಯೆಯಿದ್ದು ಈ ಮೂರೂ ಕೃತಿಗಳಲ್ಲಿ ಮೂರ್ತಿಯವರು ಸುಲಭವಾಗಿ ಕಥೆಯನ್ನು ಹೇಳಿಕೊಂಡು ಹೋಗಿದ್ದಾರೆ. ಯಶಸ್ವಿಯಾದ ಐತಿಹಾಸಿಕ ಕಾದಂಬರಿಗಳನ್ನು ಬರೆದಿರುವ ಅವರು ಒಳ್ಳೆಯ ಸನ್ನಿವೇಶಗಳನ್ನೂ

ಚಿತ್ರಿಸಬಲ್ಲರು. ಲಕ್ಕಣ್ಣ–ಈರಣ್ಣ ಎಂಬ ಸುಪ್ರಸಿದ್ಧ ಜನಪದ ಲಾವಣಿಯ ಆಧಾರದ ಮೇಲೆ ತ.ಪು. ವೆಂಕಟರಾಮ್ ಅವರು 'ಹರಿಯಳಾದೇವಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ನಾ. ರಾಜಣ್ಣನವರು 'ಮುಗಿಲಮಾಲೆ'ಯ ಎರಡನೆ ಭಾಗದಲ್ಲಿ ತಮ್ಮ ಕಲಾವಿದನ ಕಥೆಗೆ ಮುಕ್ತಾಯ ಹಾಡಿದ್ದಾರೆ. ಸತ್ಯಮೂರ್ತಿಯವರ 'ಒಲವಿನ ಒಸರಿ'ಗೆ ನಾಗಾ ಹಿನ್ನೆಲೆಯಂತೆ! ಕನ್ನಡ ಕವಯಿತ್ರಿಯರಲ್ಲಿ ಒಬ್ಬಳಾದ 'ಹೆಳವನಕಟ್ಟೆ ಗಿರಿಯಮ್ಮ'ನನ್ನು ಕುರಿತು ವೈ. ಸು. ಶೇಷಗಿರಿರಾಯರು ಕಾದಂಬರಿ ಬರೆದಿದ್ದಾರೆ. ಜಿ. ವೆಂಕಟಯ್ಯನವರು 'ಚಂದನದ ಕೊರಡು' ಕೃತಿಯಲ್ಲಿ ವೈದ್ಯನೊಬ್ಬನ ಆದರ್ಶದ ಮುಖವನ್ನು ನಿರೂಪಿಸಿದ್ದಾರೆ. ಇಲ್ಲಿಯ ಬರವಣಿಗೆ ಸರಾಗವಾಗಿದೆ; ಆಕರ್ಷಕವಾಗಿದೆ. ವಿಶುಕುಮಾರರ 'ನೆತ್ತರಗಾನ' ದಲ್ಲಿ ಯಕ್ಷಗಾನ ಕಲೆ, ಕಲಾವಿದರು ತುಂಬಿದ್ದಾರೆ. ಇದು ಸ್ವಾರಸ್ಯವಾದ ಬರವಣಿಗೆ. ಆದರೆ ಬಲಿಯಬೇಕಾದುದು ಬಹಳವಿದೆ. ಪ್ರವಾಸ ಕಥನದ ಹೆಸರಿನಂತೆ ತೋರುವ ಸೂರ್ಯನಾಥ ಕಾಮತರ 'ಥೇಂಸ್‌ನಿಂದ ಗಂಗೆಗೆ', ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಅಸಹಜವಾಗಿ ಹೊಗಳಿ ಹಾಡುತ್ತದೆ. ಸಶಸ್ತ್ರ ಡಕಾಯಿತರು ವಿನೋಬಾ ಅವರಿಗೆ ಶರಣಾಗತರಾಗಿ ಬಂದ ಸಮಕಾಲೀನ ಇತಿಹಾಸದ ಒಂದು ಅಧ್ಯಾಯ ಪಿ. ವೆಂಕೋಬರಾವ್ ಅವರು 'ಚಂಬಲ ಕಣಿವೆಯ ಚಮತ್ಕಾರ'. ಬಿ. ಮಲ್ಲಿರಾಜ ಅರಸು ಅವರು ಗ್ರಾಮ ಸುಧಾರಣೆ, ಪಂಚಾಯ್ತಿ ರಾಜ್ಯಗಳನ್ನು ಕುರಿತು ಎರಡು ಪ್ರಚಾರ ಕಾದಂಬರಿಗಳನ್ನು ಬರೆದಿದ್ದು ಅವುಗಳಲ್ಲಿ ಕಲೆಯ ಯಾವ ಅಂಶವೂ ಇಲ್ಲ.

ಸೂರ್ಯನಾರಾಯಣ ಚಡಗ ಅವರು ಹೆಚ್ಚು ಸಂಖ್ಯೆಯನ್ನು ಸೃಷ್ಟಿಸುವ ಇನ್ನೊಬ್ಬ ಲೇಖಕರಾಗಿದ್ದು, ಈ ಅವಧಿಯಲ್ಲಿ ಐದು ಕಾದಂಬರಿಗಳನ್ನು ಬರೆದಿದ್ದಾರೆ. 'ಸೀಮಂತಿನಿ' ಸೂಳೆಯ ಮಗಳೊಬ್ಬಳು ಯಕ್ಷಗಾನ ಕಲಾವಿದನನ್ನು ಒಲಿದ ಕಥೆ; 'ಗಂಗಾಭವಾನಿ' ಹಳ್ಳಿಯ ಮಾಸ್ತರನೊಬ್ಬನ ದುರಂತ; 'ಪದ್ಮ ಸರೋವರ' ಸೇಡು ತೀರಿಸಿಕೊಳ್ಳಲು ಜಿಗಣಿಯಾಗಿ ಬಂದ ಹೆಣ್ಣೊಂದರ ಕಥೆ. ಒಟ್ಟಿನಲ್ಲಿ ಚಡಗರು ಒರಟೂರಟಾಗಿ ಕಥೆ ಹೇಳಿಬಿಡುತ್ತಾರೆ. ಅದರ ಅಲಂಕರಣಗಳ ಬಗೆಗೆ ಅವರಿಗೆ ಆಸಕ್ತಿಯಿಲ್ಲ; ಶ್ರದ್ಧೆಯಿಲ್ಲ. ಫಲವಾಗಿ ಹಲವಾರು ಅಸಹಜತೆಗಳು ಅವರ ನಿರೂಪಣೆಯಲ್ಲಿ ತಲೆದೋರುತ್ತವೆ; ಕೃತಕತೆ ಮೂಡುತ್ತದೆ. ಶ್ರೀನಿವಾಸ ಉಡುಪರು ನಾಲ್ಕು ಕಾದಂಬರಿಗಳನ್ನು ಕೊಟ್ಟಿದ್ದರೂ ಒಂದರಲ್ಲಿಯೂ ಹೇಳಿಕೊಳ್ಳುವಂತಹ ಗುಣವಿಲ್ಲ. ಘಟನೆಗಳೆಲ್ಲ ಸರಳವಾಗಿ ನಡೆದುಹೋಗುತ್ತವೆ; ಯಾವ ಘರ್ಷಣೆಯೂ ಇಲ್ಲ. ಪಾತ್ರ ನಿರ್ವಹಣೆಯಲ್ಲಿ ಅತಿ ಉದಾರತೆ. ಅವರ 'ಪ್ರೇಮ ಸಮರ'ವನ್ನೇ ಗಮನದಲ್ಲಿಟ್ಟುಕೊಂಡು ಈ ಅಂಶಗಳನ್ನು ನಾವು ಪರಿಶೀಲಿಸಬಹುದು.

ನಗೆ–ನಂಜು, ಕಟಕಿ–ವಿಡಂಬನೆ ಇವುಗಳನ್ನು ಪ್ರಧಾನವಾಗಿ ಉಳ್ಳ ಕೃತಿಗಳನ್ನು ದಾಶರಥಿ ದೀಕ್ಷಿತ್, ಎ. ಎಸ್. ಮೂರ್ತಿ, ಬೀಚಿ ಮೊದಲಾದವರು ಬರೆದಿದ್ದಾರೆ. ಬದುಕಿನ ಸಮಸ್ಯೆಗಳ ಬಗೆಗೆ ಕಾತರವಿದ್ದರೂ ಬೀಚಿಯವರ ಕಾದಂಬರಿಗಳು ಅವರ ಜಾಳಾದ ಶೈಲಿಯಿಂದ, ಅತಿಯಾದ ವ್ಯಂಗ್ಯ ವಿಡಂಬನೆಗಳಿಂದ ಪರಿಣಾಮವನ್ನು ಮಾಡದೇ ಹೋಗುತ್ತವೆ. ಅವರು ಕಾದಂಬರಿಯ ನಾನಾ ಅಂಗಗಳ ಸಮತೋಲನವನ್ನು ಕಾಯ್ದುಕೊಳ್ಳುವುದರಲ್ಲಿ ಅಸಮರ್ಥರು. 'ನಾನೂ ನೀನೂ ಜೋಡಿ' 'ಕಳ್ಳರ ಸಂತೆ' ಈ ಎರಡು ಹಾಸ್ಯಪೂರ್ಣ ಕಾದಂಬರಿಗಳಲ್ಲಿ ಮೂರ್ತಿಯವರು ನಾಟಕ ರಂಗದ ತಮ್ಮ ನಗೆಯನ್ನು ಕಾದಂಬರಿ ಕ್ಷೇತ್ರಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ದಾಶರಥಿ ದೀಕ್ಷಿತರ 'ಗಂಡಾಗಿ ಕಾಡಿದ್ದ ಗುಂಡ' ಉಲ್ಲೇಖನೀಯವಾಗಿದೆ. ಕಥೆಯನ್ನು ಸ್ವಾರಸ್ಯವಾಗಿ ಹೇಳುವಲ್ಲಿ, ಅದನ್ನು ಉಲ್ಲಾಸಭರಿತವಾಗಿ ಬೆಳೆಸುವಲ್ಲಿ ದೀಕ್ಷಿತರು ಒಳ್ಳೆಯ ಯಶಸ್ಸು ಪಡೆದಿದ್ದಾರೆ. ಆವರು ಇಂಥ ಕೃತಿಗಳನ್ನು ಇನ್ನೂ ಬರೆಯಬೇಕು.

(ಮುಂದುವರಿಯುವುದು)

ಶಾಸನದಲ್ಲಿ ಭಾಮಿನಿ

ಮಲ್ಲಿನಾಥ ಕಲಬುರ್ಗಿ

ಕನ್ನಡಮಾತು ಗೀತವಾಗಬೇಕೆಂದು ಹಸಿದು ಹಂಬಲಿಸಿದಾಗ ಮೂಡಿಬಂದಿರಬಹುದಾದ ಹಲವಾರು ಛಂದಃಪ್ರಭೇದಗಳಲ್ಲಿ ಹತ್ತು ಮಾತ್ರ ಛಾಂದಸಿಗರ ಗಮನವನ್ನು ಸೆಳೆದವು. 'ಕರ್ಣಾಟ ವಿಷಯ ಜಾತಿ' ಎಂಬ ವರ್ತುಲದಲ್ಲಿ ನಿಂತ ಇವುಗಳಲ್ಲಿ ಮದನವತಿ ಛಂದೋವತಂಸಗಳು ಕೇವಲ ಛಂದೋಗ್ರಂಥಗಳಲ್ಲಿ ಜೀವಹಿಡಿದು ಕುಳಿತರೆ ಮಿಕ್ಕ ಅಕ್ಕರಿಕೆ ಅಕ್ಕರ ಗೀತಿಕೆ ಏಳೆ ಚೌಪದಿ ಉತ್ಸಾಹಗಳು ಒಂದು ಹೆಜ್ಜೆ ಮುಂದು ಹೋಗಿ ಕವಿಗಳ ಹಸ್ತಹಬ್ಬಿ ನಿಲ್ಲುವ ವಿಫಲ ಸಾಹಸ ತೋರಿಸಿದವು. ಆದರೆ ತ್ರಿಪದಿ ಷಟ್ಪದಿಗಳು ಮಾತ್ರ ಕವಿಮನವನ್ನು ತಮ್ಮತ್ತ ಸರ್ವತ್ರ ಆಕರ್ಷಿಸಿ ಜನವಾಣಿಯಿಂದ ಕವಿವಾಣಿಗೆ ಹಂತಕಟ್ಟಿ ಹಬ್ಬಿನಿಂತವು. ಷಟ್ಪದಿಯಂತೂ ಒಂದು ಆರಾಗಿ ಆರು ಅನೇಕವಾಗಿ ನಿಂತು ಹೊಸ ಹೊಸ ವೇಷಹೊತ್ತು ಕುಣಿಯಿತು. ಅದರ ಕುಣಿತ ಮಣಿತಗಳಿಗೆ ಮಾರುಹೋಗಿ

ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ
ಚರಿಸುವ ಸುಲಲಿತ ಷಟ್ಪದಿಗಳೆಡಬಿಡದೆ ಝೇಂ
ಕರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾ
ನೀರೇರುಹಾಕರದೊಳು ||೧

ಎಂದು ಲಕ್ಷ್ಮೀಶನೂ

ಆರು ಕಾಲುಗಳಿಂದ ನಡೆವಳು
ಮೂರು ಹೆಜ್ಜೆಗಳಿಂದ ರಂಜಿಸಿ
ಸಾರಿ ಡಂಗುರ ಹೊಯ್ಸಿ ಕವಿಗಳಿಗಾನೆ ನೆರವೆಂದು
ತೋರಿದುಕ್ತಿಯನಧಿಕ ವೇಗದಿ
ತೋರಿ ಸೊಗಸನು ಬೀರಿ ಸುಖವನು
ಸೂರೆಗೊಟ್ಟಳು ಕೇಳಿದವರಿಗೆ ಭಾರತೀರನ್ನೆ || ೨

ಎಂದು ರಾಮಚಂದ್ರ ಗುರುಶಿಷ್ಯನೂ ಎದೆದುಂಬಿ ಕೀರ್ತಿಸಿದರು. ಹೀಗೆ ಕವಿಕುಲವನ್ನು ತಣಿಸಿದ ಷಟ್ಪದಿಗಳಿಗೆ ಮೂಲ ಅಂಶಗಣ ಘಟಿತ ಷಟ್ಪದಿ. ಈ ಮೂಲ ಷಟ್ಪದಿ

೧. ಜೈಮಿನಿ ಭಾರತ

೨. ಆದಿತ್ಯ ಪುರಾಣ

ತ್ರಿಪದಿ ಅಕ್ಕರಗಳಂತೆ ಶಾಸನ ಪ್ರಪಂಚದಲ್ಲಿಯೂ ಸ್ಥಾನಗಳಿಸಿಕೊಂಡಿದೆ. ಈವರೆಗೆ ಪಂಡಿತರ ಶ್ರಮದಿಂದ ಇಂಥ ಶಾಸನಸ್ಥ ಎರಡು ಷಟ್ಪದಿಗಳು ಬೆಳಕಿಗೆ ಬಂದಿವೆ. ಅವು:

(೧) ಭೀಮ ಸಮುದ್ರ ಶಾಸನ.[೩] ಕ್ರಿ. ಶ. ೧೦೬೭.

(೨) ಅಮ್ಮಿನಭಾವಿ ಶಾಸನ.[೪] ಕ್ರಿ. ಶ. ೧೦೭೧.

ಶ್ರೀ ಪಿ. ಬಿ. ದೇಸಾಯಿ ಮತ್ತು ಶ್ರೀ ತೀ. ನಂ. ಶ್ರೀಕಂಠಯ್ಯ ಅವರು ಇವನ್ನು ತೋರಿಸಿಕೊಟ್ಟಿದ್ದಾರೆ.[೫] ಆದರೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ದೀರ್ಘಕಾಲ ಬದುಕು ಮಾಡಿದ ಮಾತ್ರಾಗಣ ಘಟಿತ ಷಟ್ಪದಿ ಈ ವರೆಗೆ ಶಾಸನದಲ್ಲಿ ಕಂಡು ಬಂದಿರಲಿಲ್ಲ. ಪ್ರಸ್ತುತ ಲೇಖನದಲ್ಲಿ ಅಂಥ ಒಂದು ಷಟ್ಪದಿಯನ್ನು ತೋರಿಸಿಕೊಡಲಾಗಿದೆ.

S. I. I. XV ಗ್ರಂಥವನ್ನು ನಿರೀಕ್ಷಿಸುತ್ತಿರುವಲ್ಲಿ No. 691ರ ಯಾಳವಾರ (ಬಾಗೆವಾಡಿ ತಾಲೂಕ, ವಿಜಾಪುರ ಜಿಲ್ಲೆ) ಶಾಸನವೊಂದು ನನ್ನ ಗಮನವನ್ನು ಸೆಳೆಯಿತು. ಇದರ ಕಾಲ ಶಾಲಿವಾಹನ ಶಕೆ ೧೪೭೯ ಅಂದರೆ ಕ್ರಿ. ಶ. ೧೫೫೭. ನಮಗೆ ಸಂಬಂಧಪಟ್ಟ ಅದರ ಮುಖ್ಯಭಾಗ ಹೀಗಿದೆ.

೩. E. C. XI No. 47

೪. B. K. I. Vol I, Part II, No. 121

೫. ಶ್ರೀ ಪಿ. ಬಿ. ದೇಸಾಯಿ ಅವರು ಕನ್ನಡ ನುಡಿ ೧೫–೨ರಲ್ಲಿ ಅಮ್ಮಿನಭಾವಿ ಶಾಸನದ ಷಟ್ಪದಿಯನ್ನು ೪ ಮಾತ್ರೆಯ ೩ ಗಣ ಯೋಜಿತ 'ಅಪೂರ್ವ ಷಟ್ಪದಿ' ಎಂದು ತಪ್ಪಾಗಿ ಭಾವಿಸಿದರು. ಶ್ರೀ ಪಾ. ವೆಂ. ಆ. ಅವರು ಕರ್ಮವೀರ ೧೯೫೨ರ ಮಾರ್ಚ್ ೧೭ರ ಸಂಚಿಕೆಯಲ್ಲಿ ಇದನ್ನು 'ಆರ್ಯಾವೃತ್ತ ಪ್ರಭೇದ' ಎಂದು ಊಹಿಸಿದರು. ಆಹರೆ ಶ್ರೀ ತೀ. ನಂ. ಶ್ರೀ ಅವರು ಕನ್ನಡ ನುಡಿ ೧೫–೩ ಮತ್ತು ೪ರಲ್ಲಿ ಇದು ಅಂಶಗಣಘಟಿತ ಮೂಲಷಟ್ಪದ ಎಂದು ಸರಿಯಾಗಿ ನಿರ್ಧರಿಸಿದರಲ್ಲದೆ ತಮ್ಮ ಸಮಾಲೋಕನ ಗ್ರಂಥದ ಪರಿಶಿಷ್ಟದಲ್ಲಿ ಮೇಲಣ ಭೀಮಸಮುದ್ರ ಶಾಸನಸ್ಥ ಇನ್ನೊಂದು ಮೂಲ ಷಟ್ಪದಿಯನ್ನು ತೋರಿಸಿಕೊಟ್ಟರು. ತರುವಾಯ ಶ್ರೀ ಪಿ. ಬಿ. ದೇಸಾಯಿ ಅವರು ಕನ್ನಡ ನುಡಿ ೧೫–೧೧ರಲ್ಲಿ ತಮ್ಮಿಂದ ಬೆಳಕಿಗೆ ಬಂದ ಆ ಅಮ್ಮಿನಭಾವಿ ಶಾಸನದ ಷಟ್ಪದಿಯನ್ನು ಅಂಶಗಣ ಘಟಿತ ಷಟ್ಪದಿಯೆಂದು ಒಪ್ಪಿಕೊಂಡರು.

ಯಾಳವಾರ ಶಾಸನ

5 . . . . ಹರನ ಗಿರಿಜಾ

6 ವರನ ಕರುಣಾಕರನ ದುರಿತಾಂತರನ ಗಂಗಾಧರನ

7 ಫಣಿಯ ಕುಂಡಲನ ಹರನು ಸಿಖರನನಿಲಗಣ

8 ನಿಗಮುಸ್ವರೂಪದೆ ನೀಲಕಂಠಾಭರಣ ಭಸ್ಮಾ[ದಿ] ಧೂಳಿ

9 ತಾಂಗನ ಚಿತ್ರಕಾಯನ ಚಿನ್ಮಯಾಂಬರನ ನೊಲವಿ

10 – – ರ [ಪಾಲಿಸಿರ ಭೂಹಿದಸೆ] ಭುಜದ ಗೌರಿಯ ಬಾಲನಂ

11 ಘ್ರಿಯ ಅರ್ಚಿಪುವೀಜೆಯ [ಹುರಸಿಮಿ]ಯೊಳು...[೬]

ಈ ಭಾಗವನ್ನು ಹೀಗೆ ಷಟ್ಪದಿಗೊಳಿಸಬಹುದು :

ಹರನ ಗಿರಿಜಾವರನ ಕರುಣಾ
ಕರನ ದುರಿತಾಂತರನ ಗಂಗಾ
ಧರನ ಫಣಿಯ ಕುಂಡಲನ ಹರನು ಸಿಖರನ

ಇಷ್ಟಕ್ಕೆ ಇದನ್ನು ನಿಲ್ಲಿಸಬೇಕೆಂದು ತೋರುತ್ತದೆ. ಅಂದರೆ ಅರ್ಧಷಟ್ಪದಿ ಮಾತ್ರ ಇಲ್ಲಿ ಲಿಪಿಸಿದಂತಿದೆ. ಇನ್ನು ಮುಂದೆ

ನಿಲಗಣ ನಿಗಮು ಸ್ವರೂಪದೆ
ನೀಲಕಂಠಾಭರಣ ಭಸ್ಮಾ[ದಿ]
ಧೂಳಿತಾಂಗನ ಚಿತ್ರಕಾಯನ ಚಿನ್ಮಯಾಂಬರನ
ನೊಲವಿ – – ರ [ಪಾಲಿಸಿರಭೂ
ಹಿದಸೆ] ಭುಜದ ಗೌರಿಯ
ಬಾಲನಂಘ್ರಿಯ ಅರ್ಚಿಪುವೀಜೆಯ [ಹರಸಿಮಿ]
ಯೊಳು

ಅಶುದ್ಧ ಭಾಷೆ, ತ್ರುಟಿತಭಾಗ ಮತ್ತು ಸಂಪಾದಕರ ಊಹಿತ ಪಾಠ ಇವುಗಳ ಮೂಲಕ ಇಲ್ಲಿ ಶುದ್ಧ ಷಟ್ಪದಿಯನ್ನು ನಿರೀಕ್ಷಿಸುವುದು ಕಷ್ಟಕರವಾಗಿದೆ. ಆದರೂ ಈ ಭಾಮಿನಿಯನ್ನು ಹೀಗೆ ಸಂಸ್ಕರಣಗೊಳಿಸಬಹುದು.

ಹರನ ಗಿರಿಜಾವರನ ಕರುಣಾ
ಕರನ ದುರಿತಾಂತರನ ಗಂಗಾ
ಧರನ ಫಣಿಕುಂಡಲನ ಭವಭಯ ಹರನ ಶಂಕರನ ||
ನೀಲಗಳ ನಿಗಮುಸ್ವರೂಪದ
ನೀಲಕಂಠಾಭರಣ ಭಸ್ಮೋ |
ದ್ಧೂಳಿತಾಂಗನ ಚಿತ್ರಕಾಯನ ಚಿನ್ಮಯಾಂಬರನ ||
ಶೂಲವಿಧಿಯಕಪಾಲ ಸಿರ ಭೂ
—ಉ ಹಿ ದಶಭುಜದ ಗೌರಿಯ |
ಲೋಲನಂಘ್ರಿಯ ಅರ್ಚಿಪ ವಿಜಯರೂರ
ಸೀಮೆಯೊಳು |

ಶಾಸನಸ್ಥ ಪಾಠವನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ಈ ಪದ್ಯವನ್ನು ಪರಿಷ್ಕರಿಸಲಾಗಿದೆ. ಇದು ಪ್ರಾಚೀನ ಕವಿಗಳಿಂದ ಸ್ವೀಕರಿಸದ ಸ್ವತಂತ್ರ ಪದ್ಯವೆಂದು ತೋರುತ್ತದೆ. ಕಾಲದೃಷ್ಟಿಯಿಂದ ಇತ್ತೀಚಿನ(ಕ್ರಿ. ಶ. ೧೫೫೭)ದೆನಿಸಿದರೂ ಶಾಸನದಲ್ಲಿ ಸ್ಥಾನಪಡೆದ ಮಾತ್ರಾಗಣಘಟಿತ ಷಟ್ಪದಿಯೆಂಬ ದೃಷ್ಟಿಯಿಂದ ಇದಕ್ಕೆ ಐತಿಹಾಸಿಕ ಮಹತ್ವವಿದೆ. ಒಟ್ಟನಲ್ಲಿ ಈಗಿನ ಮಟ್ಟಿಗೆ ಇದು ಶಾಸನ ಪ್ರಪಂಚದಲ್ಲಿ ತೋರಿಬಂದ ಮಾತ್ರಾಗಣಘಟಿತ ಪ್ರಥಮ (ಭಾಮಿನಿ) ಷಟ್ಪದಿಯೆನ್ನಬಹುದು.

---

೬. . . . ಅಪ್ರಸ್ತುತವೆನಿಸಿದುದರಿಂದ ಲೇಖಕರು ಬಿಟ್ಟ ಭಾಗ.
– – – ತ್ರುಟಿತ ಭಾಗ
[ ] ಶಾಸನ ಸಂಪಾದಕರು ಊಹಿಸಿದ ಪಾಠ

ಜಯತು ಬಸವರಗಳೆ

ಎಸ್. ಶಿವಣ್ಣ

[ಭಕ್ತಿಭಾಂಡಾರಿ ಬಸವಣ್ಣನವರ ಸ್ತುತಿಯ ರೂಪವಾದ ‘ಜಯತುಬಸವರಗಳೆ’ಯನ್ನು ಮೈಸೂರು ಪ್ರಾಚ್ಯ ವಿದ್ಯಾಲಯ K. 998ನೆಯ ತಾಳಪ್ರತಿಯಿಂದ ಪಡೆಯಲಾಗಿದೆ. ಪ್ರಕೃತದಲ್ಲಿ ಇದರ ಏಕೈಕ ಪ್ರತಿಯ ಉಪಲಬ್ಧತೆಯ ಕಾರಣ ಕೃತಿಯ ಹಲವಾರೆಡೆಗಳಲ್ಲಿ ಅರ್ಥ ಸಂದಿಗ್ಧತೆ ಕಾಣಬರುತ್ತದೆ. ಕೃತಿಯ ಆರಂಭದಲ್ಲಿ ವೃತ್ತವೊಂದಿದ್ದು ಅಂತ್ಯದಲ್ಲಿ ನಾಲ್ಕು ಕಂದಗಳಿವೆ. ಕೃತಿಯ ಉಳಿದೆಲ್ಲ ಭಾಗ ಉತ್ಸಾಹ ರಗಳೆಯಲ್ಲಿ ರಚಿತವಾಗಿದೆ. ಕೃತ್ಯಾಂತದ ಕಂದಗಳೊಂದರಿಂದ ಶಾಂತಮಲ್ಲಿಕಾರ್ಜುನದೇವ ಈ ರಗಳೆಯನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಕರ್ತೃವಿನ ಬಗೆಗೆ ಇನ್ನಾವ ಸಂಗತಿಯೂ ಕೃತಿಯಲ್ಲಿ ನಮೂದಿತವಾಗಿಲ್ಲ. ಈತನ ಕಾಲದ ಬಗೆಗೆ ಏನನ್ನೂ ತಿಳಿಸಲು ಸದ್ಯದಲ್ಲಿ ಸಾಧ್ಯವಿಲ್ಲ. ಪೂಜ್ಯ ಕವಿಚರಿತೆಕಾರರ ದೃಷ್ಟಿಗೆ ಬಾರದ ಕೃತಿಸಮುದಾಯದಲ್ಲಿ ಇದೂ ಒಂದಾಗಿದೆ. ಈ ಕೃತಿಯನ್ನು ಸಂಪ್ರತಿಸಿಕೊಳ್ಳಲು ಅವಕಾಶವಿತ್ತ ಶ್ರೀ ಬಿ. ಎಸ್. ಸಣ್ಣಯ್ಯ, ಎಂ.ಎ., ಅವರಿಗೂ, ಕೃತಿಯನ್ನು ಪ್ರತಿಮಾಡುವ ಸಮಯದಲ್ಲಿ ಸಹಾಯ ನೀಡಿದ ಮಿತ್ರರಾದ ಶ್ರೀ ಜಿ. ಎ. ಶಿವಲಿಂಗಯ್ಯ, ಬಿ.ಎ., ಅವರಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ. —ಲೇಖಕ]

ವೃತ್ತ:

ಶ್ರೀಮತ್ಪದ್ಮಜ ಪದ್ಮನೇತ್ರ ಪುರಹೂತಾಮರ್ತ್ಯ ಮನ್ವಾಧಿಕ
ಸ್ತೋಮೋತ್ತುಂಗ ತರಂಗ ಮಂಗಳ ಮಹಾಕೋಟೀರ
ರತ್ನಂಗಳಿಂ
ಹೇಮಾಕ್ರಾಂತ ದಿಶಾಂತ ದೀಪ್ತಿಗಳ
ನನ್ನೀರಾಜಿತಾಘ್ರಿಂದ್ವಯಾ
ಪ್ರೇಮೋದ್ದಾಮ ಸುಭಕ್ತಿಯಿಂದೆ ಬಸವಾ ನಿಮ್ಮಂ
ಪೊಗಳ್ವೆಂ ಸದಾ

ಶ್ರೀಮದಮೃತತರಕಲಾಪಶೇಷವಲಯ ಜ[ಯ]ತು ಬಸವ
ರಾಮಣೀಯರಜತ ಶೈಲರಮ್ಯನಿಲಯ ,, ೧
ಖಂಡಿತ ಪ್ರಚಂಡಗಂಡ ಕಾಲದಂಡ ,,
ದಂಡಿತ ತ್ರಿಭುವನ ಹರಣದನುಜಷಂಡ ,, ೨
ಕಲ್ಪಿತಾಬ್ಜಜಾಂಡ ಕಂತುಕ ಪ್ರಕರಣ ,,
ಜಲ್ಪಿತಾಲ್ಪ ಕುಮಯಸಮಯ ಜಾಡ್ಯಹರಣ ,, ೩
ರಾಜಿತಾಂಗ ಜಂಗಮಾಂಘ್ರಿರೇಣುಮಸ್ತ ,,
ಪೂಜಿತೇಷ್ಟ ತುಂಗಲಿಂಗಪೂರ್ಣ ಹಸ್ತ ,, ೪
ಹರಗಣಾಗಮಾಂಘ್ರಿ[೧] [ರ]ಕ್ತ ಹರುಷವರ್ಷ ,,
ಗುರುವರಾಗ್ರ ಭೀತಿನಮ್ರ ಗಮನಶೀರ್ಷ ,, ೫
ಗರ್ಜಿತಾಷ್ಟಮದಮದೇಭಗಜಕುಲಾರಿ ಜಯತು ಬಸವ
ನಿರ್ಜಿತಾರಿವರ್ಗನಿಚಯನಿಕೃತವೈರಿ ,, ೬
ಕ್ಲೇಶಪಂಚಕಾಸ್ತ್ರ ವಿಲಯಕಾಲಪವನ ,,
ದೋಷಕೋಟವಿಷಯಪವನ[೨] [ದಾ]ವದಹನ ,, ೭
ಮದನಹರಕಥಾ ಸುಧಾಬ್ಧಿಮಗ್ನಹೃದಯ ,,
ವಿಧುವಿರಂಚಿತೃಣಸಮನ ಬುದ್ಧಿನಿಲಯ ,, ೮
ಕಂಬಲಾಶ್ವತೇಷ್ಟಗಾನಕರ್ಣಪೂರ ,,
ಸಂಭಿತಾದಿಯಗ್ಣ ? ಜನಿತಸಕಲಘೋರ ,, ೯
× ಶ × × ವಬಾಣಮೌರ್ವಿ ಮೇರುಚಾಪ ,,
ಶ್ರೀ ಶವಾಸವಾಜಹೃದಯಸದನದೀಪ ,, ೧೦
ಬಿಜ್ಜಲೋರ್ವಿಪಾನನೇಂದು ಭಸ್ಮರಾಹು ,,
ದುಜ್ಜನಾಂಗಭಂಗ ಪೀನದಕ್ಷಬಾಹು ,, ೧೧
ಭಜಕಭಕ್ತಜನ ಭವಾಬ್ಧಿಬಡಬದಹನ ,,
ಪ್ರಜಿತಚಟುಲಮೋಘಪಟಲ ವಿಲಯಪವನ ,, ೧೨
ಪಾಪಜಾಲ ಸಾಲಮೂಲ ಪಟುಕುಠಾರ ,,
ಕೋಪತಾಪ ತಿಮಿರನಿಕರ ಕ್ರೂರಸೂರ ,, ೧೩
ಬಾಧರಾಯಣರ್ಥ ಬಾಹು ಭಂಜನೋಗ್ರ ,,
ಮಾಧವಾಖಿಲಾವತಾರ ಮದನಶೀಘ್ರ ,, ೧೪

---

೧ ಶಿ

೨ ದ

ಕಲ್ಪಿತಪ್ರಕಲ್ಪವಾರ್ದೆ ಗುಲ್ಪವಷ್ನ ಜಯತು ಬಸವ
ಕಲ್ಪವೃಕ್ಷ ಪುಷ್ಪಮಾಲ್ಯಕಂಠ ಲಗ್ನ ,, ೧೫
ಬಾಹುಪರಿಘ ಲಗ್ನಭಗ್ನ ಭಗಣ ನೃತ್ಯ ,,
ಸಾಹಸಪ್ರಣಮದೇತ ದುಷ್ಟಸರಕಲ? ದೈತ್ಯ ,, ೧೬
ಶ್ರೀ ಕೃತಪ್ರಣಾದವೇದ ಸಿಂಧು ಜೂಟ ,,
ಭೀಕರಾಕ್ಷಿದಗ್ಧ ಮದನಶಲಭಕೀಟ ,, ೧೭
ಚರಣಘಾತಚಲಿತ ನವನಶೈಲಭೂಮಿ ,,
ಉರಗಲೋಕಗತರಥೋದ್ಧೃತೋರುನೇಮಿ ,, ೧೮
ವಾರಿಜಾಕ್ಷನಯನ ಚರಣ ವಾರಿಜಾತ ,,
ವಾರಿಜಭವಮಸ್ತಹಸ್ತ ವಾರಿಜಾತ ,, ೧೯
ವಾರಿಜಾರಿಫಲಕಾಪಾಣಿ (?) ವಾರಿಜಾತ ,,
ವಾರಿಜಾಲಯಾಶ್ರಿತಾಂಘ್ರಿ ವಾರಿಜಾತ ,, ೨೦
ವಾರಿಜಾರಿ ಮಿತ್ರಹಸ್ತ ವಾರಿಜಾತ ,,
ವಾರಿಜಾತವಿಜಿತ ವದನ ವಾರಿಜಾತ ,, ೨೧
ಸಾರಮೋಹವಲ್ಲಿ ಲೂನ ಶಾತದಾತ್ರ ,,
ವೀರಶೈವ ಶರಣ ಶರಣವನಚಯಿತ್ರ ,, ೨೨
* ಪಾದ ಮೃದುಪರಾಜಿತಾರ್ಹ ಪದ್ಮನಿಕರ ,, ೨೩
ಚರಣನಖರನಿಕರ ಕಿರಣಚಕಿತ ಭಗಣ ,,
ಚಿರದಿಶಾಪ್ರಮತಿತಾಸ್ಯ ಚಂದ್ರಕಿರಣ ,, ೨೪
ಹುಂಕೃತಿಪ್ರಭಿನ್ನ ಕಕುಭಹೇಮಭಿತ್ತಿ ,,
ಶಂಕರರ್ಚನಾರ್ಥವಿಹಿತ ಸಾಧುವೃತ್ತಿ ,, ೨೫
ಭವಸುಖಾಕೃತೀಶ ಗಂಡಮಂಡಲಾಭ ,,
ನವಸುಖಾಮೃತೋದಯಾದಿ ನವ್ಯಲಾಭ ,, ೨೬
ತ್ರಿಪುರಕುಪಿತ ಕಪಟದನುಜ ದರ್ಪಭೇದಿ ,,
ಅಪಗತಾದಿ ಭೌತಿಕಾದಿ ದೈವಿಕಾದಿ ,, ೨೭
ವೀರಶೈವ ಚರಿತ ಭರಿತ ವಿಮಲಬೋಧ ,,
ಭೂರಿಭವ ಭವಾಬ್ಧಿ ತರುಣ ಭವ್ಯಸಾಧು ,, ೨೮
ತರುಣ ಕೋಟಿ ತರುಣ ಕಿರಣ ದೀಪಿತಾಂಗ ,,
[ಉ]ರಗ ಮಸ್ತಮಣಿಗಣಾಂಚಿತೋತ್ತಮಾಂಗ
ಜಯತು ಬಸವ ೨೯
ಕಟಿತಟ ಪ್ರಕಲ್ಪಿತಾರ್ಥ ಕರಟ ಚರ್ಮ ,,
ನಿಟಿಲತಟನಿಗುಪ್ತಕಲ್ಪ ಕೃಷ್ಣವರ್ತ ,, ೩೦

ಭಾಲನೇತ್ರ ಚಿತ್ರಭಾನು ಭಸ್ಮಸಾರ ಜಯತು ಬಸವ
ಕಾಲಮೇಘ ಕೃಷ್ಣ ಕೃಷ್ಣ ಕುಲ್ಯಹಾರ ,, ೩೧
ಹರಿಣವಿದ ? ಹರಿಶಿರ ಪ್ರಹರಣ ರುದ್ರ ,,
ಹರಿಣಿ ರೂಪ ಪುತ್ರಿ ಕಮ್ರ ಹರಣ ರುದ್ರ ,, ೩೨
ಚಿತ್ರಭಾನು ಭಾನುರುಚಿರ ಚಂದ್ರ ನೇತ್ರ ,,
ಚಿತ್ರಕಾಯ ಚಿತ್ರಚರ್ಮ ಚೇಲನೇತ್ರ ,, ೩೩
ಕ್ಷೀರ ಹಾರ ತಾರಹಾರ ಗೌರಕೀರ್ತಿ ,,
ಶಾರದಭ್ರ ಶುಭ್ರ ತುಹಿನ ಸುಮಧ್ಯ ಮೂರ್ತಿ ,, ೩೪
ಕುಂದಕುಟ್ಮಲಾಗ್ರರದನ ಕಿರಣವದನ
ಬಂದುರಾಭ ? ರುಂದ್ರವಾಣಿ ಭರಿತ ರಸನ ,, ೩೫
ಕ್ಷುದ್ರ ಸಮಯ ಸರ್ವಗರ್ವಕುಧರ ಬಿದುರ ,,
ಭದ್ರಮಯ ಮಹೇಶಪಾದ ಭಕ್ತಿವಿದುರ ,, ೩೬
ಆದಿಮಧ್ಯ ವಿಹಿತ ಜಗದನಾದಿರುದ್ರ ,,
ಪಾದಪದ್ಮ ಗುಪ್ತ ಪರಮ ಭದ್ರ ,, ೩೭
ಭ್ರೂಲತಾಗ್ರಲೇಖ ಸಿದ್ಧಭೂರಿ ಭೂತಿ ,,
ಕಾಲಹೃದಯ ಕೀಲಿತ ತ್ರಿಶೂಲಕ್ಲಾತಿ ,, ೩೮
ಪ್ರಣಮದಮರಮೌಳಿ ೧ಶಿಕ್ತ ಪಾದಪಾಂಶು ,,
ಗಣಕುಲಾಬ್ಧಿಪ್ರಸಿದ್ಧಿ ಪೂರ್ಣಘನಹೇಮಾಂಶು ,, ೩೯
ಪಾದನಖರಲಿಖಿತ ಚಕ್ರಪತಿತ ಧೀತಿ ,,
ಸಾದರಾರ್ಚಿತ ತ್ರಿಕಾಲ ಸಕಲ ದೀಪ್ತಿ ,, ೪೦
ಜಗದಶೇಷ ಜನನಭಾರ ಜನ್ಮಭೂಮಿ ,,
ನಗಪಚಾಪ ನವ್ಯ ದಿವ್ಯ ನಾಮಕಾಮಿ ,, ೪೧
ಸ್ಫುರಣ ಕಾರಣ ಹರಣ ಶರಣ ಚರಣ ಶರಣ ,,
ವಿರಣ ಮರಣ ತರುಭ ಭುವನ ಭವನ ಕರಣ ,, ೪೨
ಅಮಲ ಸದನ ಕಮಲ ವದನ ವಿಮಲರದನ ,,
ಭ್ರಮಣವ[ಮ]ನ ಶಮನಶಮನ ರಮಣರಮಣ ,, ೪೩
ಕಾಲ ಜಾಲ ಹಾಲತೂಲ ಮೂಲಕೀಲ .,,
ಭ್ರೂಲತಾಲವಾಲ ಶೈಲಜೇನಲೋಲ ,, ೪೪
ತ್ರ್ಯಕ್ಷಮೋಕ್ಷ ದಕ್ಷರಾಕ್ಷ ಯಕ್ಷಪಕ್ಷ ,,
ದಕ್ಷಶಿಕ್ಷಕಾಕ್ಷ ಮಾಕ್ಷ ರೋಕ್ಷ ದಕ್ಷ ,, ೪೫
ಆದ್ಯ ವೇದ್ಯ ಭೇದ್ಯ ಚೋದ್ಯ ಹೃದ್ಯ ವೇದ್ಯ ,,
ಬುದ್ಯ ಸಾದ್ಯ ಸಿದ್ಯ ಭೇದ್ಯ ಪ್ರದ್ಯ ವದ್ಯ ,, ೪೬

---

* ಒಂದು ಪಾದ ಲೋಪವಾಗಿದೆ

೧ [ರ] ?

ಸ್ನಿಗ್ಧಶೀಲ ದಗ್ಧಕಾಲ ಮುಗ್ಧಲೋಲ ,,
ವಾಗ್ಧವೇಷ್ಟ ರುಗ್ಧರೋಷ್ಟ ಯುಗ್ಧೀಶಿಧ್ಧ ? ,, ೪೭

ಕೃತನಮುಸ್ಕ ನತಶಿರಸ್ಕ ಶಿತಯಶಸ್ಕ ,,
ನುತಯಜುಸ್ಕ ಗಂತಜನುದ್ಕ ? ಜಿತಮನಸ್ಕ ,, ೪೮

ತ್ಯಕ್ತಕಾಮ ಭಕ್ತಿಧಾಮ ಪ್ರೋಕ್ತಸೋಮ ,,
ತ್ಯಕ್ತನಾಮ ಯುಕ್ತಸೋಮ ಮುಕ್ತಿರಾಮ ,, ೪೯

ಇಷ್ಟಧರ್ಮ ನಷ್ಟಕರ್ಮ ಸೃಷ್ಟಶರ್ಮ ,,
ಭ್ರಷ್ಟಮರ್ಮ ಸೃಷ್ಟಕೂರ್ಮ ಹೃಷ್ಟವರ್ಮ ,, ೫೦

ಗುಂಭನಾದ ಶಂಭುಮೋದ ಶುಂಭಭೇದ ,,
ಜೃಂಭಣೋದ ಕುಂಭಜೇದ ಟಂಬರೋದ ,, ೫೧

ಯಕ್ಷಗಾನ ಮೋಕ್ಷದಾನ ಶಿಕ್ಷಯಾನ ,,
ತ್ರ್ಯಕ್ಷರೂಪ ದಕ್ಷಕೋಟಿ ರಕ್ಷಲೋಪ ,, ೫೨

ನಾದಮೂರ್ತಿ ಜಯತು ಬಸವ ನವ್ಯಕೀರ್ತಿ ,,
ವೇದವರ್ತಿ ,, ವಾರಿತಾರ್ಥಿ ,, ೫೩

ಪ್ರಬಲವೀರ್ಯ ,, ಪ್ರಮಥವಾರ್ಯ ,,
ವಿಭವಸದ್ಮ ,, ವೀತಪದ್ಮ ,, ೫೪

ಪ್ರಣವರೂಪ ,, ಪಾಪಲೋಪ ,,
ಗಣಕುಟುಂಬ ,, ಗಾನಗುಂಭ ,, ೫೫

ವಿಶ್ವಗೋಪ್ತ್ರ ,, ವಿಗತಶತ್ರು ,,
ಭಾಸ್ವತಾಂಗ ,, ಭಕ್ತಿಸಂಗ ,, ೫೬

ಜಯ ಜಯತು ,, ಜಯತು ಜಯತು

ಕಂದ :

ಜಯತು ನುತಿರತ್ನ[ಮಾಲೆ][೧]ಯ
ನಯಪದ ನವರತ್ನಖಚಿತಮಾಗರ್ಪಿಸಿದಂ
ನಯದಿಂ ಬಸವರಸರ್ಗಾಂ
ನಿಯತಾತ್ಮಂ **ಶಾಂತಮಲ್ಲಿಕಾರ್ಜುನದೇವಂ** ೧

ಬಸವ ಎನೆ ಭಾಗ್ಯಮಕ್ಕುಂ
ಬಸವ ಎನೆ ಭವಪ್ರಬದ್ಧಪಾಶಂಪರಿಗುಂ
ಬಸವ ಎನೆ ಪಾಪವಳಿಗುಂ
ಬಸವ ಎನಲ್ಭಕ್ತಿ ಮುಕ್ತಿ ಸಿದ್ಧಿಗಳಕ್ಕುಂ ೨

ಆವನ ವದನಕರಂಡದೆ
ತೀವಿರ್ಪುದದು ಬಸವಾಕ್ಷರತ್ರಯರತ್ನಂ
ಭಾವಿಸಲಾತನೆ ರುದ್ರಂ
ಭೂವಿನುತ ಸುಪಾತ್ರ ಗಾತ್ರನವನೇ ದೇವಂ ೩

ಕಾಲತ್ರಯವೀ ಸ್ತುತಿಯ ವಿ
ಶಾಲಮತಿ ಮನುಜನೊಲ್ದು ಜಪಿಯಿಪನವನಂ
ಪಾಲಿಪನೆಮ್ಮಯ ಬಸವಂ
ಸಾಲೋಕ್ಯ ಪದಕ್ಕೆ ಪಟ್ಟದರಸಾಗಿಪ್ಪಂ ೪

ಜಯತು ಬಸವರಗಳೆ ಸಮಾಪ್ತ

---

೧ ಮತಿ

ಆಕಾಶದಂತೆ ಸೂರ್ಯಚಂದ್ರರಂತೆ ಎಲ್ಲರಿಗೂ ಸೇರಬೇಕಾದುದು ಜ್ಞಾನ. ಅದರ ಬೆಳಕೂ ಬಿಸಿಲೂ ಬೇಡವೆನ್ನುವ ಜನರು ತಮ್ಮ ಮೇಲ್ಮೆಯನ್ನು ತಾವಾಗಿ ತೊರೆದವರಾಗುತ್ತಾರೆ.

—ಡಿ. ವಿ. ಜಿ.

ಅಕ್ಕಮಹಾದೇವಿ ವಾಙ್ಮಯ ದರ್ಶಕ

ಎಸ್. ಆರ್. ಗುಂಜಾಳ

(ಹಿಂದಿನ ಸಂಚಿಕೆಯಿಂದ)

೨೭. ಮಹಾದೇವಿಯಕ್ಕನ ಉಜ್ವಲ ಜೀವನ

ಹಂಜಿ (ಸ. ವಿ.)
ಬಾಗಿಲುಕೋಟೆ, ಕರ್ತೃ, ೧೯೫೩
ಪು. ೪+೫೧=೫೫ ಬೆಲೆ: ೦-೬೦ ಪೈಸೆ

ವರ್ಣನೆ: "ಮಹಾದೇವಿಯಕ್ಕನು ಶಿವಶರಣರಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿದ್ದಾಳೆ. ಆವಳು ಶಿವಾನುಭವ ಮಂಟಪದಲ್ಲಿ ಎಲ್ಲ ಶಿವಾನುಭವಿಗಳಿಂದಲೂ ಮನ್ನಣೆ ಹೊಂದಿದಳಾಗಿದ್ದಳು. ಅವಳ ಶಿವಾನುಭವವು ಹೇಗಿತ್ತೆಂಬುದನ್ನು ಅವಳ ಉಕ್ತಿಗಳಲ್ಲಿಯೇ ನಾವು ಕಂಡುಹಿಡಿಯಬಹುದಾಗಿದೆ. ಗ್ರಂಥಕರ್ತರು ಅವಳ ಜೀವಿತದಲ್ಲಿ ಒದಗಿದ ಸನ್ನಿವೇಶಗಳನ್ನು ಕಥಾರೂಪದಲ್ಲಿ ಈ ಚಿಕ್ಕಹೊತ್ತಿಗೆಯಲ್ಲಿ ವಿವರಿಸಿದ್ದಾರೆ. ಅವರು ಅನೇಕ ವಚನಗಳನ್ನು ಆಯ್ದು ಅವುಗಳ ಮೇಲಿಂದ ಅವಳ ಜೀವನ ಮತ್ತು ವ್ಯಕ್ತಿತ್ವ ಇವುಗಳು ಹೇಗಿದ್ದವೆಂಬುದನ್ನು ಹೇಳಿದ್ದಾರೆ. ಮನುಷ್ಯನ ಜೀವಿತ ಮತ್ತು ಅವನ ವಿಚಾರಗಳಲ್ಲಿ ಯಾವಾಗಲೂ ನಿಕಟ ಸಂಬಂಧವಿರುತ್ತದೆ. ಆದ್ದರಿಂದ ಮಹಾಪುರುಷರ ಚರಿತ್ರೆಗಳನ್ನು ಈ ಪ್ರಕಾರ ಬರೆಯಲು ಯತ್ನಿಸಿರುವರು ಎಲ್ಲರಿಗೂ ಗ್ರಾಹ್ಯವಾಗದೆ ಇರದು. ಈ ದೃಷ್ಟಿಯಿಂದ ಗ್ರಂಥಕರ್ತರು ಬರೆದ ಈ ಚರಿತ್ರೆಯ ಮಹತ್ವವು ಹೆಚ್ಚಿನದಾಗಿರುತ್ತದೆ."

—'ಮುನ್ನುಡಿ'ಯಿಂದ

೨೮. ಮಹಾದೇವಿಯಕ್ಕನ ವಚನಗಳು

ಶ್ರೀ ಜ. ಚ. ನಿ., **ಗುಪ್ತನಾಮ**
ಬೆಂಗಳೂರು ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೧೯೫೭
ಪು. ೮೦, ಬೆಲೆ ೦-೭೫ ಪೈಸೆ

ವರ್ಣನೆ: ಇದೇ ಲೇಖಕರ 'ಅಕ್ಕನ ಬಾಳು ಮತ್ತು ಸಾಹಿತ್ಯ' ಎಂಬ ಗ್ರಂಥದ ಭಾಗವಿದು. ಪ್ರತ್ಯೇಕ ಪುಟಗಳೊಂದಿಗೆ ಪ್ರಕಟವಾಗಿದೆ. ಇದರಲ್ಲಿ ಒಟ್ಟು ೨೮೦ ಅಕ್ಕನ ವಚನಗಳನ್ನು ಸಂಗ್ರಹಿಸಿಕೊಡಲಾಗಿದೆ.

೨೯. ಮಹದೇವಿಯಕ್ಕನ ವಚನಗಳು

ಹಳಕಟ್ಟಿ (ಫ. ಗು.), **ಸಂ**
ವಿಜಾಪುರ, ಸಂಪಾದಕರು, ೧೯೫೫
ಪು. ೪+೫೨=೫೬ ಬೆಲೆ ೦೦-೭೫ ಪೈಸೆ
(ಶಿವಾನುಭವ ಗ್ರಂಥಮಾಲಾ, ೩)

ವರ್ಣನೆ: ಇದರಲ್ಲಿ ಅಕ್ಕನ ೧೮೪ ವಚನಗಳು ಷಟ್‌ಸ್ಥಳ ಕ್ರಮದಲ್ಲಿ ಮುದ್ರಿಸಲ್ಪಟ್ಟಿವೆ. ಪ್ರತಿಯೊಂದು ವಚನದ ಅಂತ್ಯದಲ್ಲಿ ಆ ವಚನದಲ್ಲಿ ಕಂಡುಬಂದ ಕಠಿಣ ಶಬ್ದಗಳ ಅರ್ಥವನ್ನು ಕೊಡಲಾಗಿದೆ.

೩೦. ಮಹಾದೇವಿಯಕ್ಕನ ಪುರಾಣ

ಚೆನ್ನಬಸವಾಂಕ
ಅಪ್ರಕಟಿತ

ವರ್ಣನೆ: ಈ ಕಾವ್ಯದಲ್ಲಿಯ ಅಕ್ಕನ ಚರಿತ್ರೆಯನ್ನು ಸಂಕ್ಷೇಪಿಸಿ ಇಂತು ಹೇಳಬಹುದು: ಅಕ್ಕನ ಜನ್ಮಸ್ಥಳ ಉಡುತಡಿ. ನಿರ್ಮಲಸೆಟ್ಟಿ-ಸುಮತಿ ಆಕೆಯ ತಂದೆ ತಾಯಿಗಳು. ಗುರು ಮಲ್ಲನಾಥ, ಜೈನ ಅರಸು ಕೌಶಿಕ ವೈಹಾಳಿಯಿಂದ ಮರಳಿ ಬರುವಾಗ ಅಕ್ಕನ ಸೌಂದರ್ಯವನ್ನು ಕಂಡು ಮೋಹಿತನಾದನು. ಮದುವೆಗೆ ಬಲಾತ್ಕಾರ ಮಾಡಿದನು. ಅಕ್ಕನು ಮೂರು ಕರಾರುಗಳನ್ನು ಹಾಕಿ ಮದುವೆಗೆ ಒಪ್ಪಿದಳು. ಆದರೆ ಒಪ್ಪಿ ಮದುವೆಯಾದ ತರುವಾಯ ಕೌಶಿಕನು ಕರಾರು ಮುರಿದನು. ಆಗ ಅಕ್ಕ ಕೇಶಾಂಬರಿಯಾಗಿ ಗೃಹತ್ಯಾಗ ಮಾಡಿ ಕಲ್ಯಾಣಕ್ಕೆ ಬಂದಳು. ಅಲ್ಲಿ ಶರಣರೊಡನಿದ್ದು ಶ್ರೀಶೈಲಕ್ಕೆ ಹೋಗಿ ಕದಳಿಯಲ್ಲಿ ಬಯಲಾದಳು.

೩೧. ಮಹಾದೇವಿಯಕ್ಕನ ಸಾಂಗತ್ಯ

ರಾಚಯ್ಯ ಕವಿ
ಅಪ್ರಕಟಿತ

ವರ್ಣನೆ: ಸಾಂಗತ್ಯದಲ್ಲಿ ಅಕ್ಕನ ಚರಿತ್ರೆ ನಿರೂಪಿತವಾಗಿದೆ.

೩೨. ಮಹಾದೇವಿಯಕ್ಕನವರು
ಪಾಟೀಲ (ಬಿ. ಬಿ.)

೩೩. ಮಹಾಯೋಗಿನಿ
ಲಿಗಾಡೆ ಜಯದೇವಿ ತಾಯಿ

೩೪. ಯೋಗಾಂಗ ತ್ರಿವಿಧಿ

ಚೆನ್ನಮಲ್ಲಿಕಾರ್ಜುನ, **ಸಂ**
ಮೈಸೂರು, ಸಂಪಾದಕರು, ೧೯೪೦ ?
ಬೆಲೆ ೦೦-೫೦ ಪೈಸೆ

ವರ್ಣನೆ: ಪ್ರತಿಯೊಂದು ತ್ರಿವಿಧಿಗೂ ಟೀಕೆ ಟಿಪ್ಪಣಿಯನ್ನು ಬರೆಯಲಾಗಿದೆ. ಯೋಗದ ಮರ್ಮವನ್ನು ಗೂಢಾರ್ಥದಲ್ಲಿ ಪ್ರತಿಯೊಂದು ಪದ್ಯದಲ್ಲಿ ವರ್ಣಿಸಲಾಗಿದೆ. ಒಂದು ಅಂತಹ ಪದ್ಯವನ್ನಿಲ್ಲಿ ಉದ್ಧರಿಸುತ್ತೇವೆ.

ಪಶ್ಚಿಮದ ಕೊಳದಲ್ಲಿ ಅಚ್ಚತಾವರೆಯರಳಿ
ನಿಚ್ಚಳದ ಗಂಧವೆಸೆಯಲಿಕೆ ಅದಕಂಡು
ಸಚ್ಚಿತ್ತ ಭ್ರಮರವೆರಗಿತ್ತು ||

೩೫. ವೈರಾಗ್ಯನಿಧಿ ಅಕ್ಕಮಹಾದೇವಿ

ಲಿಂಗಣ್ಣಯ್ಯ (ಓ. ಎನ್.)
ಬೆಂಗಳೂರು, ಎಸ್. ಎಸ್. ಎನ್. ಬುಕ್ ಡಿಪೋ ೧೯೬೭.
ಪು. vi+೧೩೨+೧೨+೨=೧೪೨ ಬೆಲೆ : ೧-೫೦
(ಶ್ರೀಶೈಲಕುಮಾರೀ ಗ್ರಂಥಮಾಲೆ, ೧೩)

ವರ್ಣನೆ: "ಈ ವೈರಾಗ್ಯ ನಿಧಿ ಅಕ್ಕಮಹಾದೇವಿ ಭಕ್ತಿ ಹೃದಯದಲ್ಲಿ ಮೂಡಿಬಂದ ದಿವ್ಯ ಚಿತ್ರ; ಅಷ್ಟೆ. ಆಕೆ ವಿಲಾಸಿನಿಯಲ್ಲ; ತಪಸ್ವಿನಿ. ಆಕೆ ಗೃಹಿಣಿಯಲ್ಲ; ವಿರಾಗಿಣಿ. ಆಕೆ ಲೋಕಕಾಮಿನಿಯಲ್ಲ; ವೀರಯೋಗಿನಿ! ಸ್ತ್ರೀ ಪರಾಶಕ್ತಿ ಸ್ವರೂಪಿಣಿಯೆಂಬುದನ್ನು ಲೋಕಕ್ಕೆ ತೋರಿದ ಆದರ್ಶ ಮಹಿಳೆ! ಅಕ್ಕನಂತಹ ಆತ್ಮಜ್ಞಾನ ಪೂರ್ಣೆ ಕರ್ನಾಟಕದಲ್ಲಿ ಹುಟ್ಟಿರಲಿಲ್ಲ; ಇನ್ನೂ ಹುಟ್ಟಿ ಬಂದಿಲ್ಲ! ಇಂತಹ ಮಹಾವಿರಕ್ತೆಯ ಜೀವನ ಚಿತ್ರವನ್ನು ಇಲ್ಲಿ ಅನುವರಿತು ರೂಪಿಸಲಾಗಿದೆ. ಆದರೆ ಈ ಚಿತ್ರ ಸರ್ವ ಸುಂದರವೆಂಬ ಹೆಮ್ಮೆ ನಮಗಿಲ್ಲ. ಭಾವ ಪರಮೇಶ್ವರಿಗೆ ಭಕ್ತಿ ಗಂಗಾಜಲದ ಅಭಿಷೇಕ ನಡೆದಿದೆ! ಪಂಡಿತರು ಮೆಚ್ಚಲಿ ಮೆಚ್ಚದಿರಲಿ; ವಿಮರ್ಶಕರು ಒಪ್ಪಲಿ ಒಪ್ಪದಿರಲಿ; ರಸಿಕರು ತಲೆದೂಗಲಿ ತಲೆದೂಗದಿರಲಿ; ಸಾಹಿತ್ಯ ಪ್ರಿಯರು ಮನ್ನಿಸಲಿ ಮನಿಸದಿರಲಿ; ತತ್ವವಿದರು ತಣಿಯಲಿ ತಣಿಯದಿರಲಿ; ನಮ್ಮ ನಾಡಿನ ಅಕ್ಕ ತಂಗಿಯರು ಈ ಭಕ್ತಿಚಿತ್ರವನ್ನು ಒಮ್ಮೆ ಕಣ್ಣುತುಂಬ ನೋಡಿದರೆ ಸಾಕು; ಹೃದಯ ತುಂಬಿ ಹಾಡಿದರೆ ಸಾಕು. ಸಹೃದಯರ ಸವಿನುಡಿಯೇ ನಮ್ಮ ಭಾಗ್ಯ.

—ಲೇಖಕರ 'ಶರಣಾರ್ಥಿ'ಯಿಂದ

"ಅಕ್ಕನದು ಅಮೃತವಾಣಿ; ಅಮರ ಅನುಭವ; ಆದರ್ಶ ಜೀವನ, ಈ ತ್ರಿವೇಣಿ ಸಂಗಮದಲ್ಲಿ ಮಿಂದವರು ಯಾರೇ ಆಗಲಿ ಅವರಿಗೆ ಆತ್ಮಸ್ಫೂರ್ತಿ, ಬುದ್ಧಿನೈಶಿತ್ಯ, ಉಕ್ತಿ ಕೌಶಲ್ಯ ಹೊರಹೊಮ್ಮದೆ ಹೋಗವು. ಅ ತಾಯಿಯ ತಳಿರಡಿಯಲ್ಲಿ ತಮ್ಮಳಿಲು ಸೇವೆಯನ್ನು ಸಲ್ಲಿಸುವ ಚಾಪಲ್ಯ ಚಿಮ್ಮದೇ ಇರದು. ಈ ನಿಯತಿಗನುಸರಿಸಿ ಶ್ರೀಮಾನ್ ಓ. ಎನ್. ಲಿಂಗಣಯ್ಯ, ಬಿ.ಎ., (ಆನರ್ಸ್) ಇವರು ಈ ಕೃತಿಯನ್ನು ರಚಿಸಿದ್ದಾರೆ. ಆಮೂಲಾಗ್ರವೂ ಅಚ್ಚಗನ್ನಡ ಶೈಲಿ; ಮನಮೆಚ್ಚುವ ಪದಪ್ರಯೋಗ ಭಾವ ಒಪ್ಪುವ ತತ್ವಾನುವಿವರಣೆ; ಓದುಗರ ಒಲುಮೆಯನ್ನು ತಗ್ಗಿಸದೆ ಉದಾತ್ತವೂ ಉಜ್ವಲವೂ ಆದ ಅಕ್ಕನ ವಿರತಿ ಜೀವನ ವರ್ಣನೆ. ಒಟ್ಟಾರೆ 'ವೈರಾಗ್ಯ ನಿಧಿ ಅಕ್ಕಮಹಾದೇವಿ' ಗ್ರಂಥ ಸರ್ವರಿಗೂ ಹೆಜ್ಜೇನಿನಂತೆ ಸವಿಯಾಗಿದೆ. ಹಾಲುಕೆನೆಯಂತೆ ಮಧುರವಾಗಿದೆ. ತೆಂಗಿನ ಎಳೆ ನೀರಿನಂತೆ ತಂಪಾಗಿದೆ"

—ಶ್ರೀ ಜ. ಚ. ನಿ. ಅವರ ಮುನ್ನುಡಿಯಿಂದ

ಸ್ವೀಕಾರ

ಕಾದಂಬರಿ :

ಹರಿಯದ ನದಿ : ಲೇ : ನರಸು, ಪ್ರ : ಹಂಸ ಧ್ವನಿ ಪ್ರಕಾಶನ, ವಿಶ್ವೇಶ್ವರ ಪುರಂ, ಬೆಂಗಳೂರು-೪ ; ಪುಟ ೧೧೫, ಅಕಾರ : ಕ್ರೌ ಅಷ್ಟದಳ ಬೆಲೆ : ರೂ. ೧-೫೦, ೧೯೬೫.

ಬೆಟ್ಟದ ಹೊಳೆ : ಲೇ : ಸಿಂಪಿಲಿಂಗಣ್ಣ, ಪ್ರ : ಅರವಿಂದ ಗ್ರಂಥಾಲಯ ಚಡಚಣ, ವಿಜಾಪುರ ಜಿಲ್ಲೆ ; ಪುಟ ೮+೧೦೬+೨ ; ಬೆಲೆ : ರೂ. ೧-೫೦, ೧೯೬೭.

ಡಾಕ್ಟರ್ ಅಘೋರ : ಲೇ ; ಮಲ್ಲಿಕಾ, ಪ್ರ : ಮಲ್ಲಿಕಾ ; ಗ್ಲೆಂಡೇಲ್ ನಂ. ೭, ಲ್ಯಾಂಗ್ ಫೋರ್ಡ್ ರೋಡು, ಲ್ಯಾಂಗ್ ಫೋರ್ಡ್ ಟೌನ್, ಬೆಂಗಳೂರು-೨೫ ; ಪುಟ ೪೫೨ ; ಬೆಲೆ : ರೂ. ೯-೦೦, ೧೯೬೭

ಜಲಪಾತ : ಲೇ : ಎಸ್. ಎಲ್. ಭೈರಪ್ಪ, ಪ್ರ : ಮ. ಗೋವಿಂದರಾವ್, ಸಾಹಿತ್ಯ, ಭಂಡಾರ, ಹುಬ್ಬಳ್ಳಿ ; ಪುಟ ೨೪೨ ; ಆಕಾರ : ಕ್ರೌ. ಅಷ್ಟದಳ ಬೆಲೆ : ರೂ. ೪-೦೦, ೧೯೬೭.

ಕಥಾಸಂಕಲನ :

ಮಾಸ್ತರನ ಹೆಂಡತಿ : ಲೇ : ದು. ನಿಂ. ಬೆಳಗಲಿ, ಪ್ರ ಕೃಷ್ಣಾತೀರ ಸೌರಭ ಪ್ರಕಾಶನ, ಬನಹಟ್ಟಿ, ಬಿಜಾಪುರ ಜಿಲ್ಲೆ, ಪುಟ ೧೦೪ ; ಬೆಲೆ : ರೂ. ೧-೫೦, ೧೯೫೭.

ಬಾಸಿಂಗ ಬಲಿ : ಲೇ : ವಿ. ರಘುರಾಮರೆಡ್ಡಿ, ಪ್ರ : ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರ, ಬೆಂಗಳೂರು-೪ ; ಪುಟ ೯೬ ; ಆಕಾರ : ಕ್ರೌ. ಅಷ್ಟದಳ ಬೆಲೆ : ರೂ. ೧-೫೦, ೧೯೬೬.

ಸಮುದ್ರದಂಚಿನ ಸಂಜೆ : ಲೇ : ಪಿ. ವ್ಹಿ. ಶಾಸ್ತ್ರೀ, ಪ್ರ : ಮಾರಿಕಾಂಬ ಪ್ರಕಾಶನ ವಿಭಾಗ, ಶಿರಸಿ, (ಉ. ಕನ್ನಡ) ಪುಟ ೨೦೪ ; ಆಕಾರ : ಕ್ರೌ. ಅಷ್ಟದಳ ಬೆಲೆ : ರೂ. ೨-೦೦, ೧೯೬೬.

ಸಂಸಾರ ಚಿತ್ರ : ಲೇ : ಆನಂದಕಂದ ; ಪ್ರ : ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಪುಟ ೪+೧೬೩ ಆಕಾರ : ಕ್ರೌ ಅಷ್ಟದಳ ಬೆಲೆ : ರೂ. ೩-೦೦, ೧೯೬೭.

ಜೀವನ ಚರಿತ್ರೆ :

ಡೇವಿಡ್ ಕಾಫರ್ ಫೀಲ್ಡ್‌ನ ಜೀವನ ವೃತ್ತಾಂತ ಮತ್ತು ಅನುಭವಗಳು : ಲೇ : ಚಾರ್ಲ್ಸ್ ಡಿಕನ್ಸ್‌ರವರು, ಅನುವಾದ : ಎ. ಪಿ. ಸುಬ್ಬಯ್ಯ, ಪ್ರ : ಎ. ಪಿ. ಸುಬ್ಬಯ್ಯ, ಪೋಲೀಸ್ ವಸತಿಗಳ ಸಮೀಪ, ಪುತ್ತೂರು ; (ದ. ಕ), ಪುಟ ೫೫೦ ; ಬೆಲೆ : ರೂ. ೭-೦೦, ೧೯೬೬.

ಇಡಗೂರು ರುದ್ರಕವಿ : ಲೇ ಎಂ. ಜಿ. ನಜುಂಡಾರಾಧ್ಯ, ಪ್ರ : ಶ್ರೀ ಸಿ. ಗುರುಸಿದ್ದಯ್ಯನವರು, ಇಡಗೂರು, ಗೋರಿಬಿದನೂರು ತಾಲ್ಲೂಕು ; ಪುಟ ೬+೫೨+೨೯ ; ಆಕಾರ : ಕ್ರೌ ಅಷ್ಟದಳ ಬೆಲೆ : ರೂ. ೧-೦೦, ೧೯೬೪.

ಶ್ರೀ ವಾಲುಕೇಶ್ವರ ಭಾರತಿಸ್ವಾಮಿಗಳ ಸಂಕ್ಷಿಪ್ತ ಗುರು ಚರಿತ್ರೆ : ಲೇ : ಶ್ರೀ ದತ್ತ ಸೇವಕ ದತ್ತ, ಪ್ರ : ಆನಂದ ಪ್ರೆಸ್, ಹೊಸಪೇಟೆ ; ಪುಟ ೫೪ ; ಬೆಲೆ : ಉಚಿತ.

ಜಾನ್ ಕೆನೆಡಿ : ಲೇ : ಜೇಮ್ಸ್ ಮೆಕ್‌ಗ್ರೆಗರ್ ಬರ್ನ್ಸ್, ಅನುವಾದ : ಪಿ. ಎಸ್. ಭಟ್ಟ, ಪ್ರ : ಪಿ. ಎಸ್, ಭಟ್ಟ ಕರ್ನಾಟಕ ಸಹಕಾರ ಪ್ರಕಾಶನ ಮಂದಿರ, ನಿಯಮಿತ, ಬೆಂಗಳೂರು-೧೮ ; ಪುಟ ೭+೨೩೩ ; ಬೆಲೆ : ರೂ. ೨-೦೦, ೧೯೬೧.

ವಚನ ಸಾಹಿತ್ಯ :

ಕೊರವಂಜಿ ಸಾಹಿತ್ಯ : ಲೇ : ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪ ; ಪುಟ ೫+೧೩೧ ; ಆಕಾರ : ಕ್ರೌನ್ ಅಷ್ಟದಳ ರೂ. ೨-೫೦,

ಜೀವನ ಸಿದ್ಧಾಂತ : ಲೇ : ಶ್ರೀ ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನೀಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪ ; ಪುಟ ೨೬+೮೯೨ ಬೆಲೆ : ರೂ ೧೦-೫೦, ೧೯೬೬.

ದಾಸೋಹ : ಲೇ : ಶ್ರೀ ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯ ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪ ; ಪುಟ ೧೩+೫೧೨+೮ ; ಆಕಾರ : ಕ್ರೌ ಅಷ್ಟದಳ ; ಬೆಲೆ : ರೂ. ೮-೦೦, ೧೯೬೭.

ದೃಷ್ಟಿದರ್ಶನ : ಲೇ : ಶ್ರೀ ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ ಬೆಂಗಳೂರು-೪ ; ಪುಟ ೧೫+೨೨೩ ; ಬೆಲೆ : ರೂ. ೨-೦೦, ೧೯೬೭.

ಭಾವಗೀತಾಂಜಲಿ : ಲೇ : ಶ್ರೀ ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ ಬೆಂಗಳೂರು-೪ ಪುಟ : ೭+೫೫ ; ಆಕಾರ: ಕ್ರೌ ಅಷ್ಟದಳ ಬೆಲೆ: ರೂ. ೦-೭೫, ೧೯೬೭.

ಸಂವೇದನೆ : ಲೇ : ಜ. ಚ. ನಿ ; ಪ್ರ : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪ ; ಪುಟ ೫+೬೧ ; ಆಕಾರ : ಕ್ರೌ ಅಷ್ಟದಳ ಬೆಲೆ : ರೂ. ೧-೦೦. ೧೯೬೭.

ಹೊಳಹು-ಸುಳುಹು: ಲೇ : ಜ. ಚ. ನಿ; ಪ್ರ: ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪ ; ಪುಟ ೨+೧೦೮ ; ಬೆಲೆ : ರೂ. ೧-೫೦, ೧೯೬೭.

ಶ್ರೀ ಬಸವೇಶ್ವರ ವಚನ ಪ್ರದೀಪಿಕೆ : ಲೇ : ಮಾ. ನಂ, ನಂಜಪ್ಪ, ಪ್ರ : ಮಾ. ನಂ. ಶಿವಪ್ಪ ಸಹೋದರರು, ಕಲ್ಯಾಣ ಸಾಹಿತ್ಯ ಭಂಡಾರ, ಕಲ್ಯಾಣ ಭವನ, ಚಿಕ್ಕಪೇಟೆ, ಬೆಂಗಳೂರು-೨ ; ಪುಟ ೧೧+೨೨೮ ; ಬೆಲೆ : ರೂ. ೩-೦೦, ೧೯೬೭.

ಸಂಸ್ಮರಣ ಸಂಚಿಕೆ :

ಮುಕ್ತಿಶ್ರೀ : ಮಹಾಮಸ್ತಕಾಭಿಷೇಕ ಸಂಸ್ಮರಣ ಸಂಚಿಕೆ ೧೯೬೭ ಸಂಪಾದಕ : ಸಿರಸಪ್ಪ ಇಚಾರಿ, ಪ್ರ : ಶ್ರೀ ಮಹಾವೀರ ಮಿಶನ್, ಎಂ. ಟಿ. ಜೈನ ಬೋರ್ಡಿಂಗ್ ಹೋಮ್, ಶಂಕರಪುರಂ, ಬೆಂಗಳೂರ-೪ ; ಪುಟ ೫೨+೨+೧೨+೪೫ ; ಬೆಲೆ : ರೂ. ೨-೦೦, ೧೯೬೭.

ಸ್ಮಾರಕಗ್ರಂಥ :

ಪುಣ್ಯಸ್ಮರಣೆ : (ಕೈ. ವಾ. ಹರ್ಡೇಕರ ಮಂಜಪ್ಪಣ್ಣನವರ ಸ್ಮಾರಕಗ್ರಂಥ) ಲೇ: ವಿರೂಪಾಕ್ಷಸ್ವಾಮಿ, ಮುಧೋಳ ; ಪ್ರ : ವಿಶ್ವನಾಥ ವಾಚನಾಲಯ ಆಡೂರ, ತಾಲ್ಲೂಕು, ಯಲಬುರ್ಗಿ, ರಾಯಚೂರು ಜಿಲ್ಲೆ ; ಪುಟ ೬೨ ; ಆಕಾರ : ಕ್ರೌ.ಅಷ್ಟದಳ ಬೆಲೆ: ರೂ. ೧-೦೦, ೧೯೬೭.

Souvenir

ಸಂದೇಶ : (ಉಗಾದಿ ಸಂಚಿಕೆ) ೧೯೬೭ Souvenir committee, karnataka sangh, Bhopal; page-116. 1967

ಗಾಂಧಿ ಸಾಹಿತ್ಯ :

ಗಾಂಧಿಜಿ ತತ್ವ ಜ್ಞಾನ ರಹಸ್ಯ : ಲೇ : ಕೃ. ಪ. ಜೋಶಿ, ಪ್ರ : "ಪತಿತ ಪಾವನ" ಆಶಾ ಪ್ರೆಸ್ ರಾಧಾಕೃಷ್ಣ ಗಲ್ಲಿ, ಹುಬ್ಬಳ್ಳಿ ; ಪುಟ ೬೦ ; ಆಕಾರ : ಕ್ರೌ ಅಷ್ಟದಳ ಬೆಲೆ : ರೂ. ೧-೦೦, ೧೯೬೭.

ಬಾಲ ಸಾಹಿತ್ಯ :

ತುಂಟರ ಗುರು : ಲೇ : ಶ್ರೀ ಪಾಂಡುರಂಗರಾಯರು, ಮಕ್ಕಳ ಮಂಟಪ ಪ್ರಕಾಶನ, ನೆಹರು ನಗರ, ಬೆಂಗಳೂರು-೨೦ ; ಪುಟ ೨೦ ; ಬೆಲೆ : ರೂ. ೦-೭೫, ಮುದ್ದುಸಿಂಗಾರಿ ; ಲೇ : ಶ್ರೀ ಪಾಂಡುರಂಗರಾಯರು, ಮಕ್ಕಳ ಮಂಟಪ ಪ್ರಕಾಶನ, ನೆಹರು ನಗರ, ಬೆಂಗಳೂರು-೨೦, ಪುಟ ೨೦; ಬೆಲೆ: ರೂ. ೦-೭೫, ೧೯೬೭.

ನಾಲ್ಕು ಕಾವ್ಯ ಕಥೆಗಳು: ಲೇ: ವಿವಿಧ ಲೇಖಕರು, ಪ್ರ: ವಾಗ್ವಿಲಾಸ ಪ್ರಕಾಶನ, ೨೩೧ ೭೨/೨೬, ೨ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-೧೦ ; ಪುಟ ೨+೬೫ ; ಆಕಾರ : ಕ್ರೌ ಅಷ್ಟದಳ ಬೆಲೆ : ರೂ. ೮೦, ೧೯೬೭.

ಸಿಗೋರ : ಲೇ : ಬಿ. ಭಾರತಿಸುತ, ಪ್ರ : ಕರ್ಣಾಟಕ ಸಹಕಾರ ಪ್ರಕಾಶನ ಮಂದಿರ, ನಿಯಮಿತ, ಚಾಮರಾಜ ಪೇಟೆ, ಬೆಂಗಳೂರು-೧೮ ; ಪುಟ ೩೯ : ಬೆಲೆ : ೧-೦೦, ೧೯೬೭.

ಬುದ್ಧಿವಂತರು : ಲೇ : ಬಿ. ಭಾರತೀದೇವಿ, ಪ್ರ : ಕರ್ಣಾಟಕ ಸಹಕಾರ ಪ್ರಕಾಶನ ಮಂದಿರ, ನಿಯಮಿತ, ಚಾಮರಾಜಪೇಟೆ, ಬೆಂಗಳೂರು-೧೮ ; ಪುಟ ೩೬ ; ಬೆಲೆ : ೧-೦೦, ೧೯೬೭.

ಕೆಂಪಮ್ಮನ ಮಗು : ಲೇ : ಡಾ|| ಅನುಪಮಾ ನಿರಜನ, ಪ್ರ : ಕರ್ಣಾಟಕ ಸಹಕಾರ ಪ್ರಕಾಶನ ಮಂದಿರ, ನಿಯಮಿತ, ಚಾಮರಾಜಪೇಟೆ, ಬೆಂಗಳೂರು-೧೮ ; ಪುಟ ೫೦ ; ಬೆಲೆ : ರೂ. ೧-೫೦.

ಕೂಡಿ ದುಡಿಯೋಣ : ಲೇ : ಕುಮಾರ ವೆಂಕಣ್ಣ ಪ್ರ : ಕರ್ಣಾಟಕ ಸಹಕಾರ ಪ್ರಕಾಶನ ಮಂದಿರ, ನಿಯಮಿತ, ಚಾಮರಾಜಪೇಟೆ, ಬೆಂಗಳೂರು-೧೮ ಪುಟ ೩೮ ; ಬೆಲೆ : ರೂ. ೧-೦೦, ೧೯೬೭.

ವಿಮರ್ಶನರಂಗ

ದಾಸೋಹ: ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಚ. ನಿ. ರಜತ ಮಹೋತ್ಸವ ಸಂಭಾವನಾಗ್ರಂಥ. ಪ್ರಕಾಶಕರು—ಶ್ರೀ ಮನ್ನಿಡು ಮಾಮಿಡಿ ಶ್ರೀಶೈಲಸೂರ್ಯಸಿಂಹಾಸನಾಧೀಶ್ವರ ಶ್ರಿ ಜ. ಚ. ನಿ. ರಜತ ಮಹೋತ್ಸವ ಸಂಭಾವನಗ್ರಂಥ ಪ್ರಕಟನಾಸಮಿತಿ, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪. ಪುಟಗಳು ೫೧೨, ಬೆಲೆ ಸಾದಾಪ್ರತಿ ೮-೦೦ ಉತ್ತಮಪ್ರತಿ ೧೦-೦೦.

'ದಾಸೋಹ' ಶ್ರೀ ಶ್ರೀ ಜ. ಚ. ನಿ. ಅವರ ರಜತ ಮಹೋತ್ಸವ ಸಂದರ್ಭದಲ್ಲಿ ಅರ್ಪಿಸಿದ ಸಂಭಾವನಾಗ್ರಂಥ. ಶ್ರೀ ಜ. ಚ. ನಿ. ಅವರು 'ಧರ್ಮಗುರು'ವಾಗಿದ್ದು ನಿರ್ಲಿಪ್ತರಾಗಿದ್ದಾರೆ. ತಾವರೆಯ ಮೇಲಿನ ಹನಿಯಂತೆ ಜಗತ್ತಿನಲ್ಲಿ ಇದ್ದು-ಜೀವನದ ನಾನಾ ಮುಖಗಳ ಪರಿಚಯಮಾಡಿಕೊಂಡು ಜೀವಾತ್ಮ-ಪರಮಾತ್ಮನಾಗುವುದು ಹೇಗೆ ಎಂಬ ದರ್ಶನವನ್ನು ಸಾಮಾನ್ಯರಿಗೆ ತಿಳಿವಂತೆ ಹೇಳಿ 'ಸಾಹಿತ್ಯಾಚಾರ್ಯ'ರೆನಿಸಿಕೊಂಡಿದ್ದಾರೆ. ಅವರ ಭಾಷಾಜ್ಞಾನ ವಿಪುಲ, ಸಂಸ್ಕೃತ-ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಉಂಟು. "ವೀರಶೈವ ಮತದ ಉಜ್ವಲ ಪರಂಪರೆಗೆ ನವೀನ ಸಂಪಾದನೆಯನ್ನೂ ಧ್ವನಿಯನ್ನೂ ವಚನಕಾರರು ನೀಡಿದಂತೆ ಶ್ರೀ ಜ. ಚ. ನಿ. ಅವರು ತಮ್ಮದೇ ಆದ ರೀತಿಯಲ್ಲಿ ಅದನ್ನು ಸಾಧಿಸಿ ನಮ್ಮ ಶತಮಾನದ ಗಣ್ಯ ವಚನಕಾರರೂ ಸಾಹಿತಿಗಳೂ ಆಗಿದ್ದಾರೆ" ಎಂಬ, ವೈಸ್‌ಛಾನ್ಸಲರ್ ಶ್ರೀ ವಿ. ಕೃ ಗೋಕಾಕರ ನುಡಿಯನ್ನು ಇಲ್ಲಿ ನೆನೆಯಬಹುದು.

'ದಾಸೋಹ' ಇದಕ್ಕೆ ವೀರಶೈವ ಧರ್ಮದಲ್ಲಿ ವಿಶಿಷ್ಟ ಅರ್ಥವುಂಟು. 'ದಾಸಃ ಅಹಮ್' ನಾನು ದಾಸನು ಎಂಬ ಭಾವನೆ. ಬಸವಣ್ಣನವರು ದಾಸೋಹಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ತ್ರಿವಿಧ ದಾಸೋಹ ಎಂದು ಹೇಳುತ್ತಾ, ತನು, ಮನ, ಧನವನ್ನು ಗುರು, ಲಿಂಗ, ಜಂಗಮಗಳಿಗೆ ಅರ್ಪಿಸಿ ಪುನೀತನಾಗಬೇಕು ಭಕ್ತ ಎನ್ನುವ ಭಾವನೆ ಇದೆ. ಶರಣರೆಲ್ಲರಲ್ಲಿ ಇದಕ್ಕೆ ಮಾನ್ಯತೆ ಇದೆ. ಹಾಗೆಯೆ ಶ್ರೀ ಜ. ಚ. ನಿ. ಅವರು 'ಜ್ಞಾನ ದಾಸೋಹ' ನಡೆಸಿದ್ದಾರೆ. ನಾಡಿನ ಗಣ್ಯ ವಿದ್ವಾಂಸರ ಸಾಲಿನಲ್ಲಿ ಎಣಿಸಬಹುದಾದವರಾಗಿದ್ದಾರೆ.

ಈ ಕೃತಿಯಲ್ಲಿ ಶ್ರೀಗಳವರ ಸಾಹಿತ್ಯ ರಚನೆಯ ವಿವಿಧ ಮುಖಗಳ ಪರಿಚಯವನ್ನು ಅನೇಕ ಸಾಹಿತಿಗಳು ವಿದ್ವಾಂಸರು ಮಾಡಿಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ವಿಷಯ ಒಂದೇ ಎಂದು ಚರ್ವಿತ ಚರ್ವಣವೆನಿಸುವುದೂ ಉಂಟು. ಆದರೆ "ದಾಸೋಹ" ಮಾತಿನ-ಹೆಸರಿನ-ಔಚಿತ್ಯವನ್ನು ತಿಳಿಸುವ ಲೇಖನ ಒಂದಾದರೂ ಇಲ್ಲದಿರುವುದು ಆಶ್ಚರ್ಯಮೂಡಿಸುತ್ತದೆ.

ಮುದ್ರಣ ಕಾರ್ಯದಲ್ಲಿ ಅನೇಕ ದೋಷಗಳಿವೆ. ಕೆಲವೊಮ್ಮೆ ಓದುಗರನ್ನು ದಂಗುಬಡಿಸುವಂತಹ ತಪ್ಪುಗಳಾಗಿವೆ – ಉದಾಹರಣೆಗೆ ಪುಟ ೬೦೭, ಸಂಪಾದಕವಾಣಿಯಲ್ಲಿ ಈ ಮಾತುಗಳಿವೆ. ಶ್ರೀಗಳವರ ಅನುವಾದ ಸಾಹಿತ್ಯವನ್ನು ಕುರಿತು ಹೇಳುತ್ತಾ "'ಗದ್ಯಂ ವದ್ಯಂ-ಪದ್ಯಂ ಹೃದ್ಯಂ' ಎಂಬ ಮಾತನ್ನು ಪೂರ್ಣ ಪ್ರತಿನಿಧಿಸುತ್ತಿರುವ ಈ ಮೂರು ಕೃತಿಗಳು ಅನುವಾದ ಸಾಹಿತ್ಯಾಕಾಶದಲ್ಲಿ ನಿತ್ಯ ಬೆಳಗುವ ನಕ್ಷತ್ರಗಳು" ಎಂದಿದೆ. ಈ ಮೊದಲೆ ಶ್ರೀಗಳವರ 'ಮಣಿಕಾಂತಿ' ಗದ್ಯರೂಪದ್ದು ಎಂದಿದೆ. ಹೀಗಿರುವಾಗ ಮೇಲೆ ಹೇಳಿರುವ ಮಾತಿನ ಅರ್ಥ ಸ್ವಲ್ಪ ವಿವಾದಾಸ್ಪದವಾಗುತ್ತದೆ.

ಒಟ್ಟಿನಲ್ಲಿ ಶ್ರೀಗಳವರ ಕೃತಿ ಪರಿಚಯ ಸ್ಪಷ್ಟವಾಗಿ ಆಗಿದೆ. ಕೃತಿಯಲ್ಲಿರುವ ವೀರಶೈವ ಧರ್ಮವನ್ನು ಕುರಿತಾದ ಲೇಖನಗಳು ವಿಚಾರಪೂರ್ಣವಾದುದಾಗಿವೆ. ತಾತ್ವಿಕ ವಿಚಾರಗಳಿಂದ ಕೂಡಿದ ದಾರ್ಶನಿಕ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಕಾರ್ಯ ಯಶಸ್ವಿಯಾಗಿ ಆಗಿದೆ 'ದಾಸೋಹ' ಕೃತಿಯಲ್ಲಿ.

ಆರ್. ರಾಚಪ್ಪ

ಕೊಂತಿಪೂಜೆ. (ಪ್ರಬಂಧ) ಆಕೃತಿ ೧/೮, ಪುಟಗಳು ೩೨, ಬೆಲೆ ರೂ ೧-೦೦; ಲೇಖಕರು: ಡಿ. ಲಿಂಗಯ್ಯ, ಪ್ರಕಾಶಕರು: ದಿನಕರ ಪ್ರಕಾಶನ. ಪೀಹಳ್ಳಿ, ಕೊಡಿಯಾಲಪೋಸ್ಟ್, ಮಂಡ್ಯಮಾರ್ಗ.

ಲೇಖಕರು ತಮ್ಮ ಹಳ್ಳಿಯಲ್ಲಿ "ಕೊಂತಿಪೂಜೆ" ಎಂಬ ಜಾನಪದ – ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದಲ್ಲಿಗೆ ಹೋಗಿ ಆ ಸಂಬಂಧದ ಪದಗಳನ್ನು ಹಳ್ಳಿಯ ಜನರಿಂದ ಹೇಳಿಸಿ ಬರೆದುಕೊಂಡು, ಆ ಪೂಜೆಯ ಸಮಗ್ರ ಸಂಗತಿಗಳನ್ನು ತಿಳಿದು, ಸಿದ್ಧಗೊಳಿಸಿರುವ ಪ್ರಬಂಧವಿದು. ಪ್ರಬಂಧದಲ್ಲಿ ಅಲ್ಲಲ್ಲಿ 'ಕೊಂತಿಪದ'ಗಳನ್ನು ಉದಾಹರಿಸಿದ್ದಾರೆ. ಕೊಂತಿಪದಗಳಲ್ಲಿ ಬರುವ ಸಾಹಿತ್ಯವು ಕುಂತೀದೇವಿಯ ಚರಿತೆ-ಸ್ಥೂಲವಾಗಿ ಮಹಾಭಾರತದ ಕಥೆ. ಕುಂತಿದೇವಿಯು ಆದರ್ಶಸತಿಯಾಗಿ, ಆದರ್ಶತಾಯಾಗಿ, ಸತ್ಸಂತಾನ ಪಡೆದ ನಾರೀಮಣಿಯೆಂದು ಸಂತಾನಾಪೇಕ್ಷೆ

ಯುಳ್ಳ ಹಳ್ಳಿಯ ಸ್ತ್ರೀಯರಿಂದ ಪೂಜಾರ್ಹಳಾದಳೆಂದು ತಿಳಿದುಬರುತ್ತದೆ. ಹೆಣ್ಣುಮಕ್ಕಳು ಆಚರಿಸುವ ಉತ್ಸವ-ಕುಂತಿಪೂಜೆ. "ಜಾನಪದ" (Folklore)ವನ್ನು ಅಧ್ಯಯನ ಮಾಡುವವರಿಗೆ ಈ ಪ್ರಬಂಧದಲ್ಲಿ ಸಮೃದ್ಧವಾದ ಸಾಮುಗ್ರಿಯಿದೆ.

* * *

ರೂಪಚಕ್ರ (ನಾಟಕ) ಆಕೃತಿ ೧/೮. ಪುಟಗಳು ೮+೮೮, ಬೆಲೆ ರೂ. ೧-೨೫; ಲೇಖಕರು: ವಿ. ನಾರಾಯಣಸ್ವಾಮಿ, ಪ್ರತಿಗಳು ದೊರೆಯುವ ಸ್ಥಳ: ಗೀತಾ ಏಜನ್ಸೀಸ್, ಸೌರಾಷ್ಟ್ರಪೇಟೆ, ಬೆಂಗಳೂರು-೯.

ಈ ನಾಟಕ ಹತ್ತೊಂಬತ್ತು ದೃಶ್ಯಗಳಿಂದ ಕೂಡಿದೆ. ಆಡಿದರೆ ಸುಮಾರು ೨೩ ಗಂಟೆಗಳ ಕಾಲಕ್ಷೇಪವಾಗುವುದು. ನಾಟಕದ ವಸ್ತು ಕಾಲ್ಪನಿಕವೆನಿಸುವ ಐತಿಹಾಸಿಕ. ಇದರಲ್ಲಿ ಪುರಾಣದ ಛಾಯೆಯೂ ಇದೆ. ಶೃಂಗಾರ-ವೀರಗಳೇ ಮುಖ್ಯರಸಗಳು. ಇಲ್ಲಿನ ಶೃಂಗಾರಕ್ಕೆ ಸಾಕಷ್ಟು ಬೆಳವಣಿಗೆಯಾಗಲೀ ಸುಸಂಸ್ಕೃತಿಯಾಗಲೀ ಕಾಣುವುದಿಲ್ಲವಾದುದರಿಂದ ಅದು ಕೀಳುಮಟ್ಟದ್ದೇ ಆಗಿದೆಯೆನ್ನದೆ ವಿಧಿಯಿಲ್ಲ. ಪ್ರೇಮ-ಕಾಮ-ಮೋಹಗಳದೇ ಇಲ್ಲಿ ರಾಜ್ಯ. ನಾಟಕವನ್ನು ಓದುವವರಿಗೆ ಅಲ್ಲಲ್ಲಿ ಪದದೋಷಗಳು ಅನ್ನದಲ್ಲಿ ಬಂದ ಕಲ್ಲಿನಂತೆ ತೊಡಕುತ್ತವೆ. ಕುಮಾರ್ತೆ (ಕುಮಾರಿ ಎಂಬ ಅರ್ಥದಲ್ಲಿ), ಚಪ್ಪನ್ನಾರು (ಚಪನ್ನ-೫೬), ಇತ್ಯಾದಿಗಳು. ವಾಕ್ಯದೋಷಗಳೂ ತುಂಬಿವೆ. ಆದರೆ ರಂಗಕ್ಕೆ ಈ ನಾಟಕ ಬಂದಾಗ ಇಂತಹ ಪದ-ವಾಕ್ಯದೋಷಗಳು ದೃಶ್ಯದ ಇದಿರಲ್ಲಿ ಗ್ರಹಿಕೆಗೆ ಬಾರದೆ ಹೋಗಬಹುದು, ಅಥವಾ ಗ್ರಹಿಕೆಗೆ ಬಂದರೂ ಮರೆತುಹೋಗಬಹುದು. ಅಂತೂ ಪಾತ್ರಗಳಿಗೆ ನೈತಿಕಬಲ ಸಾಲದು. ಹೀಗೆ ವಸ್ತು-ಪಾತ್ರಗಳನ್ನು ಬಿಟ್ಟರೆ ರಚನಾಕ್ರಮ, ಸಂಸ್ಕೃತ ಭೂಯಿಷ್ಠ ಪ್ರೌಢ ವಾಕ್ಯಗಳು, ರೂಪಕಮಯ ಶೈಲಿ-ಮುಂತಾದವು ಮೆಚ್ಚಿಕೆಗೆ ಅರ್ಹವಾಗಿವೆ.

ಟಿ. ಕೇಶವಭಟ್ಟ

ಲಾಲ್‌ಬಹಾದೂರ್ ಶಾಸ್ತ್ರಿ: ಲೇ: ಬಿ. ಆರ್. ಪ್ರಾಣೇಶರಾವ್, ಎಂ. ಎ., ಪ್ರ: ಕಮಲಾ ಪ್ರಕಾಶ ೧೬೨/೨, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು-೧ ಪು: ೧೯೨, ಬೆಲೆ. ರೂ. ೨-೦೦.

ಅಮರ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜೀವನ ಚರಿತ್ರೆಯನ್ನು ಲೇಖಕರು ಸ್ವಾರಸ್ಯವಾಗಿ ಇಲ್ಲಿ ವಿವರಿಸಿದ್ದಾರೆ. ಶಾಸ್ತ್ರಿಯವರ ಬಾಲ್ಯದಿಂದ ತಾಷ್ಕೆಂಟಿನಲ್ಲಿ ಅವರು ನಿಧನರಾಗುವ ವರೆಗಿನ ಸ್ವಾರಸ್ಯಪೂರ್ಣ ಕಥೆ ಇಲ್ಲಿದೆ

ಭಾರತದ ರಾಜಕೀಯ ಇತಿಹಾಸದಲ್ಲಿ ಶಾಸ್ತ್ರಿಯವರ ಪಾತ್ರ ತುಂಬ ಹಿರಿದು. ಅವರು ಪ್ರಧಾನಿಯಾಗಿದ್ದುದೂ ಸಂದಿಗ್ಧ ಕಾಲ. ಅವರ ಪದವಿಯೋ ನೆಹರೂ ಅಲಂಕರಿಸಿ ಬಿಟ್ಟದ್ದು. ಭಾರತದ ಸತ್ವ ಪರೀಕ್ಷೆಯೊ ಎನ್ನುವಂತೆ ಚೀಣಾದ ಅಕ್ರಮಣವೂ ಆಗ ಆಯಿತು.

ನೆಹರೂನಂತರ ಯಾರು ? ಎನ್ನುವ ಪ್ರಶ್ನೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಆಗ ಉತ್ತರವಿರಲಿಲ್ಲ. ಅದರೆ ಜವಾಹರರು ತಾವು ಅಸ್ವಸ್ಥರಾದಾಗಲೇ ತಮ್ಮ ಸ್ಥಾನಕ್ಕೆ ಲಾಲ್ ಬಹದ್ದೂರರೇ ಅರ್ಹ ವ್ಯಕ್ತಿ ಎಂದು ತೀರ್ಮಾನಿಸಿದ್ದರು. ಆದುದರಿಂದಲೆ ಅವರನ್ನು ಇಲಾಖಾರಹಿತ ಸಚಿವರನ್ನಾಗಿ ನಿಯಮಿಸಿಕೊಂಡಿದ್ದರು.

ಹತ್ತೊಂಬತ್ತು ತಿಂಗಳು ಕಾಲ ಮಾತ್ರ ಪ್ರಧಾನಿಯಾಗಿದ್ದ ಲಾಲ್‌ಬಹದ್ದೂರರು ಭಾರತ ಜನಕೋಟಿಯ ಪ್ರೇಮ ವಿಶ್ವಾಸಗಳನ್ನು ಪಡೆದುಕೊಂಡಿದ್ದರು.

ಅವರದು ಅತ್ಯಂತ ಸರಳವೂ ತ್ಯಾಗಮಯವೂ ಆದ ಜೀವನ.

ಇಂಥ ಮಹಾಪುರುಷನ ಜೀವನ ಚರಿತ್ರೆಯನ್ನು ಲೇಖಕರು ಒದಗಿಸಿ ಓದುಗರಿಗೆ ಮಹದುಪಕಾರ ಮಾಡಿದ್ದಾರೆ.

ಇದು ತುಂಬ ಉಪಯುಕ್ತವಾದ ಕೃತಿ.

* * * *

ವಿಜ್ಞಾನ ವಿಹಾರ: ಲೇ: ಸೂ. ಸುಬ್ರಹ್ಮಣ್ಯಂ, ಪ್ರ: ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ಪುಟ. ೧೯೬, ಬೆಲೆ. ರೂ. ೨-೦೦

ವಿಜ್ಞಾನ ಸಾಹಿತ್ಯದಲ್ಲಿ ಲೇಖಕರು ಈಗಾಗಲೇ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಫ್ಲೆಮಿಂಗ್ ಮುಂತಾದ ಉತ್ತಮ ಕೃತಿಗಳು ಅವರಿಂದ ಹೊರಬಂದಿವೆ.

ಪ್ರಸ್ತುತ ಕೃತಿ ಸಂಪಾದಕರು ಮುನ್ನುಡಿಯಲ್ಲಿ ಹೇಳಿರುವಂತೆ ನಮ್ಮ ಸುತ್ತಮುತ್ತಲೂ ನಡೆಯುತ್ತಿರುವ ಅನೇಕ ನೈಸರ್ಗಿಕ ವ್ಯವಹಾರಗಳ ಬಗ್ಗೆ ವೈಜ್ಞಾನಿಕ ವಿವರಣೆಯನ್ನು ನೀಡುವ ಮತ್ತು ಕುತೂಹಲವನ್ನು ಕೆರಳಿಸುವ ಹನ್ನೊಂದು ಪ್ರಬಂಧಗಳ ಸಂಕಲನ.

ಈ ಸಂಕಲನಕ್ಕಾಗಿ ಲೇಖಕರು ಕಪ್ಪೆಯಿಂದ ಹಿಡಿದು ಜ್ವಾಲಾಮುಖಿಯ ವರೆಗೆ ವಸ್ತುವನ್ನು ಆಯ್ದಿದ್ದಾರೆ. ಪ್ರಸಿದ್ಧ ವಿಜ್ಞಾನಿಗಳ ಅನ್ವೇಷಣೆಯ ಹಲವು ಮುಖ, ಮೂರು ಶತಮಾನದ ಅಥವಾ ಮೂರು ತಲೆಮಾರಿನ ರಾಯಲ್ ಸೊಸೈಟಿಯ ಇತಿಹಾಸ, ರಕ್ತದ ಕತೆ, ಭೂಕಂಪ

ಆಗುವುದು ಹೇಗೆ ಎನ್ನುವ ವಿವರಣೆ-ಇತ್ಯಾದಿ ವಿಷಯುಗಳು ಈ ಸಂಕಲನದಲ್ಲಿ ಇವೆ.

ಇಂಥ ಸಾಹಿತ್ಯ ಕನ್ನಡದಲ್ಲಿ ಹೊರಬಂದಿರುವುದು ತೀರ ವಿರಳ. ಲೇಖಕರು ಸಾಮಾನ್ಯ ಜನತೆಗೆ ಉಪಯುಕ್ತವಾದ ಹಲವು ವಿಷಯಗಳ ಪರಿಚಯವನ್ನು ಸರಳವಾಗಿ ಇಲ್ಲಿಬಿಡಿಸಿದ್ದಾರೆ.

ಇದು ಶಾಲೆಕಾಲೇಜುಗಳ ವಾಚನಾಲಯಗಳಲ್ಲಿ ಅಗತ್ಯ ಇರಲೇಬೇಕಾದ ಒಳ್ಳೆಯ ಸಂಕಲನ. ಇಂಥ ಒಂದು ಸಂಕಲನವನ್ನು ಹೊರತಂದುದಕ್ಕಾಗಿ ಮಿಂಚಿನಬಳ್ಳಿಯ ಯವರನ್ನು ನಾವು ಅಭಿನಂದಿಸೋಣ.

ಶೇಷನಾರಾಯಣ

ಡೇವಿಡ್ ಕಾಫರ್‌ಫೀಲ್ಡನ ಜೀವನ ವೃತ್ತಾಂತ: (ಚಾರ್ಲ್ಸ್‌ಡಿಕೆನ್ಸ್‌ರವರ ಇಂಗ್ಲಿಷ್ ಕಾದಂಬರಿಯ ಭಾವಾನುವಾದ) ಅನುವಾದಕರು: ಶ್ರೀ ಎ. ಪಿ. ಸುಬ್ಬಯ್ಯ, ಪ್ರಕಾಶಕರು: ಶ್ರೀ ಎ. ಪಿ. ಸುಬ್ಬಯ್ಯ, ಪೋಲೀಸ್ ವಸತಿಗಳ ಸಮೀಪ ಪುತ್ತೂರು, ದ. ಕ. ಪುಟಗಳು ೧೬+೫೫೦. ಬೆಲೆ ರೂ. ៥-೦೦.

ಮನುಷ್ಯ ಜೀವನದ ಒಂದು ಸಮಗ್ರ ಪರಿಚಯ ನಮಗಾಗಬೇಕಾದರೆ, ವಿಶ್ವದ ಇತರೇ ಭಾಗಗಳ ಜನಜೀವನವನ್ನು ನಾವು ಅಭ್ಯಸಿಸುವುದು ಒಳಿತು. ಈ ದೃಷ್ಟಿಯಿಂದ ನಾವು ಸದ್ಯಃದ ಗ್ರಂಥವನ್ನು ಸ್ವಾಗತಿಸುತ್ತೇವೆ. ಈ ಗ್ರಂಥದಲ್ಲಿ ೧೯ನೆಯ ಶತಮಾನದ ಮಧ್ಯ ಭಾಗದ ಇಂಗ್ಲೆಂಡ್ ದೇಶದ ಒಂದು ಪೂರ್ಣ ಚಿತ್ರ ನಮಗೆ ದೊರಕುತ್ತದೆ.

ಇಂಗ್ಲಿಷ್ ಕಾದಂಬರೀಕಾರರಲ್ಲಿ ಚಾರ್ಲ್ಸ್‌ಡಿಕ್ಸೆನ್ಸ್‌ರ ಸ್ಥಾನ ಉನ್ನತವಾದದ್ದು. ಅವರು ತಮ್ಮ ಕಾದಂಬರಿಗಳ ಮೂಲಕ ಆಗಿನ ಸಮಾಜದ ಗುಣದೋಷಗಳು, ರೂಢಿ ಸಂಪ್ರದಾಯಗಳು, ಇವುಗಳನ್ನು ಸಹಜ ಹಾಸ್ಯ, ಪ್ರೀತಿ ಮತ್ತು ಕರುಣೆಯ ಪಾತ್ರಗಳ ಮೂಲಕ ತೋರಿಸಲು ಪ್ರಯತ್ನಿಸಿದ್ದಾರೆಂಬ ವಿಚಾರ ಈ ಪುಸ್ತಕವನ್ನೋದಿದವರಿಗೆ ವ್ಯಕ್ತವಾಗದೆ ಇರದು.

ಸದ್ಯದ ಅನುವಾದವು ನಮ್ಮ ಮನಸ್ಸಿಗೆ ಪೂರ್ತಿ ಹಿಡಿಸಿದೆ ಎಂದು ಹೇಳುವ ಧೈರ್ಯ ನಮಗಿಲ್ಲ. ಅನುವಾದಕನ ಕೆಲಸ ಇಕ್ಕಟ್ಟಿನ ಕೆಲಸ. ಬೇರೊಂದು ದೇಶದ ಜೀವನ ಕ್ರಮ, ರೀತಿ ರಿವಾಜು, ಉಡುಗೆ ತೊಡುಗೆ ಇತ್ಯಾದಿಗಳನ್ನು ನಮ್ಮ ಭಾಷೆಯಲ್ಲಿ ನಮ್ಮ ಜನತೆಯ ಅರಿವಿಗೆ, ಭಾವನೆಗಳಿಗೆ ಹೊಂದುವಂತೆ ಸೂಕ್ತವಾಗಿ ಅಳವಡಿಸುವುದು ಕಷ್ಟ ಸಾಧ್ಯ.

ಇದೇ ರೀತಿ ನಾನಾ ದೇಶ ಭಾಷೆಗಳ ಉತ್ತಮ ಸಾಹಿತ್ಯ ಗ್ರಂಥಗಳನ್ನು ನಮ್ಮ ನಾಡಿನ ಜನತೆಯ ಉಪಯೋಗಕ್ಕೆ ಅನುವಾದಿಸಿದರೆ, ಅವು ಜನತೆಯ ಪ್ರಗತಿಯ ಕೈದೀವಿಗೆಯಾಗುವುದೆಂದು ನಮ್ಮ ಆಶೆ.

* * *

ಕಲ್ಲುಗಾಣ: ಲೇ. ಶ್ರೀ ಶ್ರೀ ಶೈಲಂ, ಪ್ರಕಾಶಕರು: ಶ್ರೀ ಬಿ. ಎನ್. ಗಂಗಾಧರಶಾಸ್ತ್ರಿ, 'ನಾಗಾನಂದ' ಕೃಷ್ಣರಾಜಪುರಂ, ಬೆಂಗಳೂರು-೧೬. ಪುಟಗಳು ೧೪೨. ಬೆಲೆ ರೂ. ೨-೦೦.

ಶ್ರೀ ಶೈಲ ನಾಮಾಂಕಿತ ಶ್ರೀ ಓ. ಎನ್. ಲಿಂಗಣ್ಣಯ್ಯನವರು ಮೈಸೂರು ರಾಜ್ಯದ ರೆವಿನ್ಯೂ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ನಿಷ್ಠಾವಂತರಾಗಿ ಸರ್ಕಾರೀ ಸೇವೆಯನ್ನು ಸಲ್ಲಿಸಿದಂತೆ ಸಾಹಿತ್ಯಕ್ಕಾಗಿಯೂ ದುಡಿದಿದ್ದಾರೆ.

'ಕಲ್ಲುಗಾಣ' ಐತಿಹಾಸಿಕ ಹಿನ್ನೆಲೆಯ ಸಾಮಾಜಿಕ ಕಾದಂಬರಿ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಒಂದು ಚಿತ್ರ ನಿರೂಪಣೆ. ಕಲ್ಲುಗಾಣ ಶಿರ್ಷಿಕೆ ಒಂದು ದುಷ್ಟ ಶಕ್ತಿ ಸಂಕೇತ. ಆಗಿನ ಆರ್ಥಿಕ ಧಾರ್ಮಿಕ ಸಾಮಾಜಿಕ ಹಾಗೂ ರಾಜಕೀಯ ಶೋಷಣೆಗಳ ಒಂದು ದುರಂತ ಚಿತ್ರ ಕಲ್ಲುಗಾಣ.

ಚರಿತ್ರೆ, ರಾಜಕೀಯ ಇವುಗಳು ಸಾಮಾನ್ಯವಾಗಿ ರಕ್ತ ರಂಜಿತವಾದುವುಗಳೇ. ಜೀವನ ವ್ಯಕ್ತಿಯದ್ದಾಗಲೀ ರಾಜ್ಯದ್ದಾಗಲೀ, ಅದರ ಹಿನ್ನೆಲೆಯಲ್ಲಿ ನೋವು ನಲಿವು ವೇದನೆ, ಆನಂದ ಇವುಗಳ ಒಂದು ಸಮ್ಮಿಶ್ರಣ ಇರುವುದು ಸಹಜ. ಲೇಖಕರು ಈ ಮಿತಿಯ ಕ್ಷೇತ್ರದಲ್ಲಿ ತಮ್ಮದೇ ಆದ ಜಾಣ್ಮೆ ಮುತ್ತು ಕೌಶಲ್ಯಗಳಿಂದ ಕಲ್ಲುಗಾಣದ ಕರುಳು ಬಿರಿಯುವ ಆಟದ ನೋಟವನ್ನು ಚಿತ್ರಿಸಿದ್ದಾರೆ. ಕುಂಭಾವತಿ, ವಿಮುಲಾ, ಪಿಳ್ಳೆ ಮಿಡಿಗೇಶಿ ಹೇಮನಗೌಡ, ಗುರುರಾಜ ಮಲ್ಲ ರಾಜೇಂದ್ರ, ಧಾರವಾಡದ ಪ್ರಸಾದಮ್ಮ ಇತ್ಯಾದಿಗಳು, ಕವಿ ಕಲ್ಪನಾ ವಿಲಾಸದ ಸೃಷ್ಟಿಯಾದರೂ ತಮ್ಮ ಪಾತ್ರ ಸಹಜ ಭಾವಗಳನ್ನು ಪ್ರದರ್ಶಿಸಿ ಇತಿಹಾಸಕ್ಕೆ ಹೊಂದಿಕೊಳ್ಳುತ್ತಾರೆ.

ಆದರೆ ಮುನ್ನುಡಿಯಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ತಿ. ತಾ. ಶರ್ಮರ, ದಿವಾನ್ ಪೂರ್ಣಯ್ಯನವರ ವಿರುದ್ಧ ಆಕ್ರೋಶ ಸ್ವಲ್ಪ ಗೆರೆ ಮೀರಿದ ಹಾಗೆ ಭಾಸವಾಗುತ್ತದೆ!

ಕಲ್ಲುಗಾಣದಲ್ಲಿ ಮೈಸೂರು ಚರಿತ್ರೆಯ ಒಂದು ಬಹು ಮುಖ್ಯ ಪುಟವನ್ನು ಲೇಖಕರು ನಮ್ಮ ಮುಂದಿಟ್ಟಿದ್ದಾರೆ.

* * *

ಸುದ್ದಿ ಸಂಗ್ರಹ

ನಟನಕಲಾ ಸಂಘದವರಿಂದ ಹಿರಿಯರಿಗೆ ಸನ್ಮಾನ

ಬೆಂಗಳೂರಿನ ನಟನ ಕಲಾಸಂಘವು ಕನ್ನಡ ನಾಡುನುಡಿಗಳಿಗೆ ವಿಶೇಷ ರೀತಿಯಲ್ಲಿ ಸೇವೆ ಸಲ್ಲಿಸಿರುವ ಮಹನೀಯರನ್ನು ಬರಮಾಡಿಕೊಂಡು ಸತ್ಕರಿಸುವ ಹಾಗೂ ಕನ್ನಡಿಗರ ಕೃತಜ್ಞತೆಯನ್ನು ಅರ್ಪಿಸುವ ಒಂದು ಹೊಸ ರೀತಿಯ ಕಾರ್ಯಕ್ರಮವೊಂದನ್ನು ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ಏರ್ಪಡಿಸಿತ್ತು. ಈ ಬಾರಿ ಕನ್ನಡ ಸಾಹಿತ್ಯ ಮತ್ತು ಕೀರ್ತನ ರಂಗದಲ್ಲಿ ಅಪಾರ ಸೇವೆ ಸಲ್ಲಿಸಿದ ನಾಡಿನ ವಿದ್ವಾಂಸರಾದ ಶ್ರೀ ಸುಬೋಧ ರಾಮರಾಯರು ಮತ್ತು ಹರಿಕಥಾ ವಿದ್ವಾನ್ ಟಿ. ಕೆ. ವೇಣುಗೋಪಾಲದಾಸರು ಇವರುಗಳನ್ನು ಗೌರವಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ವಹಿಸಿದ್ದರು.

ಸರ್ವಶ್ರೀ ಅರ್ಚಿಕ ವೆಂಕಟೇಶ್, ನಾಡಿಗೇರ ಕೃಷ್ಣರಾವ್ ಕೊರಟಿ ಶ್ರೀನಿವಾಸರಾವ್ ಮಾತನಾಡಿದರು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರು ಪುಷ್ಪಹಾರ ಅರ್ಪಿಸಿದರು.

ಈ ಮೊದಲು ನಟನಕಲಾ ಸಂಘವು ಅ. ನ. ಕೃ. ಅಧ್ಯಕ್ಷತೆಯಲ್ಲಿ ಸಂಸ್ಕೃತ – ಕನ್ನಡ ವಿದ್ವಾಂಸರಾದ ಚೀಮನಹಳ್ಳಿ ರಘುನಾಥಾಚಾರ್ಯರನ್ನು ಇದೇ ರೀತಿ ಸನ್ಮಾನಿಸಿತೆಂಬುದನ್ನು ಇಲ್ಲಿ ಸ್ಮರಿಸಬಹುದು.

ಕಿತ್ತೂರು ಚೆನ್ನಮ್ಮರಾಣಿ ವಿದ್ಯಾಪೀಠ

ಭಾರತೀಯ ಸಂಸ್ಕೃತಿ, ದೇಹದಾರ್ಢ್ಯಗಳಿಗೆ ವಿಶೇಷ ಗಮನನೀಡಿ ಬಾಲಕಿಯರಿಗೆ ವಿಜ್ಞಾನ ಮತ್ತು ಕಲೆಗಳಲ್ಲಿ ವಿಶಾಲದೃಷ್ಟಿಯ ಶಿಕ್ಷಣವನ್ನು ನೀಡುವ ದೃಷ್ಟಿಯಿಂದ ಕಿತ್ತೂರಿನಲ್ಲಿ ರಾಣಿ ಚೆನ್ನಮ್ಮ ಬಾಲಕಿಯರ ವಸತಿ ವಿದ್ಯಾಪೀಠವು ಮುಂದಿನ ವರ್ಷ ಜೂನ್ ತಿಂಗಳಲ್ಲಿ ಆರಂಭವಾಗಲಿದೆ. ಈ ಶಾಲೆಯಲ್ಲಿ ರೇಖಾ ಮತ್ತು ವರ್ಣಚಿತ್ರ, ಲೇಖ, ಪುಸ್ತಕ ಭಂಡಾರ ಕುರಿತು ಶಿಕ್ಷಣ, ಗೃಹಾಲಂಕರಣ, ಟೈಪ್ ರೈಟಿಂಗ್, ಕುಶಲ ಕಲೆಗಳು, ಕುದುರೆ ಸವಾರಿ, ಈಜುವುದು, ದೋಣಿ ನಡೆಸುವುದು ಮೊದಲಾದ ವಿಷಯಗಳಲ್ಲಿ ಶಿಕ್ಷಣವನ್ನು ಕೊಡಲಾಗುವುದು. ಶಿಕ್ಷಣದ ಅವಧಿ ಏಳು ವರ್ಷವಿದ್ದು ಪ್ರತಿ ಬಾಲಕಿಗೆ ವರ್ಷಕ್ಕೆ ೨,೦೦೦ ರೂಪಾಯಿ ಶುಲ್ಕ ವಿಧಿಸಲಾಗುವುದು. ಪೋಷಕರ ಆದಾಯ ವರ್ಷಕ್ಕೆ ೨,೪೦೦ ರೂ. ಗಳಿಗಿಂತ ಹೆಚ್ಚಾಗಿಲ್ಲದ ಮೈಸೂರು ರಾಜ್ಯದ ಎಲ್ಲ ವಿದ್ಯಾರ್ಥಿನಿಯರಿಗೂ ಈ ಶಾಲೆಯಲ್ಲಿ ವಿದ್ಯಾರ್ಥಿ ವೇತನಗಳನ್ನು ನೀಡಲಾಗುವುದು. ಶಾಲೆಗೆ ಸೇರಲು ಕನಿಷ್ಠ ವಯೋಮಿತಿ ಒಂಭತ್ತು ವರ್ಷ. ಸದ್ಯದಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿರುವುದು. ಆರಂಭದಲ್ಲಿ ಶಾಲೆಗೆ ೩೫೦ ಮಂದಿ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಲಾಗುವುದೆಂದು ತಿಳಿದು ಬಂದಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಜ್ಯೋತಿಷಶಾಸ್ತ್ರ

ದಕ್ಷಿಣವಲಯದ ರೋಟರಿಕ್ಲಬ್ ಸದಸ್ಯರನ್ನು ಉದ್ದೇಶಿಸಿ 'ಆಸ್ಟ್ರಲಾಜಿಕಲ್ ಮ್ಯಾಗಜೀನ್' ಸಂಪಾದಕರಾದ ಪ್ರೊ. ಬಿ. ವಿ. ರಾಮನ್ ಅವರು ಮಾತನಾಡುತ್ತಾ ಪ್ರಾಚೀನ ಜ್ಯೋತಿಷದ ಸಿದ್ಧಾಂತಗಳು ವೈಜ್ಞಾನಿಕ ಮನೋಭಾವಕ್ಕೆ ಅನುಗುಣವಾಗಿವೆ ಎಂದು ತಿಳಿಸಿ, ನಮ್ಮ ದೇಶದ ವಿಶ್ವವಿದ್ಯಾನಿಲಯಗಳಲ್ಲಿ ಜ್ಯೋತಿಷ ಶಾಸ್ತ್ರವನ್ನು ಅಭ್ಯಾಸದ ವಿಷಯವಾಗಿ ಸೇರಿಸಬೇಕೆಂದು ಅಭಿಪ್ರಾಯಪಟ್ಟರು. ಈ ದಿಸೆಯಲ್ಲಿ ಭಾರತದ ಪ್ರಾಚೀನ ವಿಶ್ವವಿದ್ಯಾನಿಲಯಗಳ ಮಾರ್ಗದರ್ಶನದಲ್ಲಿ ನಮ್ಮ ನಾಡು ಹೆಜ್ಜೆ ಹಾಕಬೇಕೆಂದೂ ಅಪ್ರಕಟಿತ ಜ್ಯೋತಿಷಗ್ರಂಥಗಳು ಬೆಳಕಿಗೆ ಬರಬೇಕೆಂದೂ ಹೇಳಿದರು.

ನೆಗಳೂರು ರಂಗನಾಥ ಅವರ ನಿಧನ

ನೆರಂಗ ಎಂಬ ಕಾವ್ಯನಾಮವಿಟ್ಟುಕೊಂಡು ಬರೆಯುತ್ತಿದ್ದ ಕನ್ನಡದ ಲೇಖಕರೂ, ಧಾರವಾಡದ ಸುಪ್ರಸಿದ್ಧ ವಕೀಲರೂ, ಹಲವು ಕಾಯದೆ ಗ್ರಂಥಗಳ ಭಾಷಾಂತರಕಾರರೂ ಆಗಿದ್ದ ನೆಗಳೂರು ರಂಗನಾಥ ಅವರು ತಮ್ಮ ೫೫ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. ಶ್ರೀಯುತರು ಅಧ್ಯಾಪಕ, ಪತ್ರಕರ್ತ, ಲೇಖಕ, ವಿಮರ್ಶಕ, ವಕೀಲರಾಗಿ ವಿವಿಧರಂಗಗಳಲ್ಲಿ ಸೇವೆಸಲ್ಲಿಸಿದ್ದರು. ಅವರು ಕರ್ಣಾಟಕ ಏಕೀಕರಣ ಚಳುವಳಿಯಲ್ಲಿ ಮುಖ್ಯ ಭಾಗವಹಿಸಿದ್ದರು. ಸುಪ್ರಸಿದ್ಧ ನಾಟಕಕಾರರಾದ ಶ್ರೀರಂಗರನ್ನು ಕುರಿತು

ಅವರು ಬರೆದಿರುವ ಜೀವನ ಚರಿತ್ರೆ ಇಂದಿಗೂ ವೈಶಿಷ್ಟ್ಯ ಪೂರ್ಣವಾಗಿದೆ. ಅವರ ಕೆಲವು ನಾಟಕಗಳಲ್ಲಿ ಶ್ರೀಯುತರು ಭಾಗವಹಿಸಿದ್ದರು. ಮೃತರ ಆತ್ಮಕ್ಕೆ ಭಗವಂತನು ಶಾಂತಿ ಯನ್ನೀಯಲಿ.

ಬೇಂದ್ರೆ ಅವರ ವಿಚಾರಧಾರೆ

ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಕನ್ನಡ ಸಂಘದ ಉದ್ಘಾಟನೆಯನ್ನು ಕವಿ ದ. ರಾ. ಬೇಂದ್ರೆ ಅವರು ನೆರ ವೇರಿಸಿ ಮಾತನಾಡುತ್ತಾ "ಕವಿಯ ಪ್ರತಿಭೆ ಉಳಿದು ಬೆಳೆಯಬೇಕಾದರೆ ಕೇಳುವ ಕಿವಿಯೂ ಅಗತ್ಯ. ಕವಿ – ಸಹೃದಯರಿಬ್ಬರು ಸರಸ್ವತಿ ಸತ್ವದ ಎರಡು ಮುಖಗಳು. ಕವಿಯಷ್ಟೇ ಸಹೃದಯನೂ ಪ್ರತಿಭಾವಂತ, ಸಹೃದಯ. ಕೆಲವೊಮ್ಮೆ ಕವಿಗಿಂತಲೂ ಹೆಚ್ಚು ಪ್ರತಿಭಾಶಾಲಿಯಾಗಿರ ಬಹುದು. ಕವಿ ವಾಚಾಳಿ; ಸಹೃದಯ ಮೌನಿ, ಅಷ್ಟೇ ವ್ಯತ್ಯಾಸ" ಎಂದು ಹೇಳಿದರು.

'ಸೋವಿಯಟ್ ಲ್ಯಾಂಡ್' ೧೯೬೭ನೇ ಸಾಲಿನ ನೆಹರೂ ಪುರಸ್ಕಾರಗಳು

ಭಾರತ ಹಾಗೂ ಸೋವಿಯಟ್ ಒಕ್ಕೂಟದ ದೇಶಗಳ ನಡುವಣ ಸ್ನೇಹವನ್ನು ವೃದ್ಧಿಸುವ ಉದ್ದೇಶದಿಂದ 'ಸೋವಿಯಟ್ ಲ್ಯಾಂಡ್' ಪತ್ರಿಕೆಯು ಈ ವರ್ಷವೂ ಭಾರತೀಯ ಭಾಷೆಗಳು ಮತ್ತು ರಶಿಯನ್ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಬರೆದ ಶ್ರೇಷ್ಠ ಗ್ರಂಥಗಳಿಗೆ ಬಹುಮಾನಗಳನ್ನೂ ನೀಡಲು ನಿರ್ಧರಿಸಿದೆ. ಸಾಹಿತ್ಯ ಕೃತಿಗಳಿಗಾಗಿ ೮೦೦೦ ರೂಪಾಯಿಗಳ ಐದು ಬಹುಮಾನಗಳೂ ಇತರ ಸಾಹಿತ್ಯ ಕೃತಿಗಳಿಗಾಗಿ ೧೦೦೦ ರೂ.ಗಳ ಹತ್ತು ಅಧಿಕ ಪುರಸ್ಕಾರಗಳೂ ಇವೆ. ಅಲ್ಲದೆ ಬಹುಮಾನ ವಿಜೇತರಿಗೆ ರಶಿಯಾ ದೇಶದ ಸಂದರ್ಶ ಸೌಲಭ್ಯವೂ ಉಂಟು. ಲೇಖಕರು ತಮ್ಮ ಕೃತಿಗಳನ್ನು ಈ ವಿಳಾಸಕ್ಕೆ ಅಕ್ಟೋಬರ್ ದಿನಾಂಕ ೧, ೧೯೬೭ರ ಒಳಗೆ ಕಳುಹಿಸಬೇಕು.

ವಿಳಾಸ:
ಸೋವಿಯಟ್ ಲ್ಯಾಂಡ್,
ಕೇಂದ್ರ ಕಾರ್ಯಾಲಯ
ನೆಹರೂ ಪುರಸ್ಕಾರ ಸಮಿತಿ,
೨೫, ಬಾರಖಾಂಬಾರಸ್ತೆ
ಹೊಸದಿಲ್ಲಿ–೧

ಪಂಜಾಬಿನ ರಾಜ್ಯಪಾಲರಾಗಿ ಕನ್ನಡಿಗ ಪಾವಟೆ

ಇದುವರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲ ಪತಿಗಳಾಗಿ ಒಂದು ದಶಕಕ್ಕಿಂತಲೂ ಹೆಚ್ಚು ಸೇವೆಸಲ್ಲಿಸಿರುವ, ಸುಪ್ರಸಿದ್ಧ ಶಿಕ್ಷಣತಜ್ಞರೂ, ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರೂ, ಅಂತರ ವಿಶ್ವವಿದ್ಯಾನಿಲಯ ಮಂಡಲಿಯ ಅಧ್ಯಕ್ಷರೂ, ಕೇಂದ್ರ ಯು. ಜಿ. ಸಿ. ಸದಸ್ಯರೂ ಆಗಿರುವ ಡಾ|| ಪಾವಟೆ ಅವರು ಪಂಜಾಬಿನ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ. ಇದು ಕನ್ನಡ ನಾಡಿಗೆ ಸಂದ ಗೌರವವಾಗಿದೆ.

ಕನ್ನಡದಲ್ಲಿ ವಿಶ್ವಧರ್ಮ ಪರಿಚಯ

ಬೆಂಗಳೂರಿನ ಕರ್ನಾಟಕ ಸರ್ವೋದಯ ಸಾಹಿತ್ಯ ಪ್ರಕಾಶನ ಸಮಿತಿ, ಗಾಂಧೀ ಭವನ, ಕುಮಾರ ಪಾರ್ಕ್ (ಪೂರ್ವ) ಬೆಂಗಳೂರು–೧ ಅವರು ಜಗತ್ತಿನ ಪ್ರಮುಖ ಧರ್ಮಗಳನ್ನು ಜನಸಾಮಾನ್ಯರಿಗೂ ತಿಳಿಯುವ ತಿಳಿಗನ್ನಡ ದಲ್ಲಿ ಪುಟ್ಟ ಪುಸ್ತಕಗಳಲ್ಲಿ ಪರಿಚಯಮಾಡಿಕೊಡುವ ಸಾಹಸ ಕೈಗೊಂಡು, ಈಗ ತಮ್ಮ ಮಾಲೆಯ ಕೊನೆಯ ಕಿರು ಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಇದುವರೆಗೆ ಈ ಮಾಲೆ ಯಲ್ಲಿ ವೇದಧರ್ಮ (ಎರಡು ಭಾಗಗಳು) ಜೈನಧರ್ಮ, ಬೌದ್ಧಧರ್ಮ, ಪಾರಸಿಧರ್ಮ, ಯಹೂದಿಧರ್ಮ, ಇಸ್ಲಾಂ ಧರ್ಮ, ಈಸಾಯಿಧರ್ಮ, ಸಿಖ್‌ಧರ್ಮ ಮತ್ತು ತಾವೋ ಕನ್ ಫ್ಯೂಶಿಯಸ್‌ಧರ್ಮಗಳನ್ನು ಕುರಿತು, ೬೮ ಪುಟಗಳ ೧೦ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವುಗಳ ಬೆಲೆ ಪ್ರತಿ ಯೊಂದಕ್ಕೂ ೬೦ ಪೈಸೆ. (ಒಟ್ಟು ಸಂಪುಟದ ಬೆಲೆ ರೂ. ೬–೬೦) ಮೂಲ ಹಿಂದೀ ಲೇಖಕರು ಶ್ರೀ ಕೃಷ್ಣದತ್ತ ಭಟ್ಟ. ಅನುವಾದಕರು ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ರಚಿತವಾದ ಸಂಪಾದಕಮಂಡಳಿ. ಇದೊಂದು ಸಂಗ್ರಹಯೋಗ್ಯ ಕೃತಿ.

ವಿದ್ಯಾರ್ಥಿ ಗ್ರಾಮ

ಮೈಸೂರು ವಿಶ್ವವಿದ್ಯಾನಿಲಯವು ಮಾನಸಗಂಗೋತ್ರಿಯಲ್ಲಿ ಅಭ್ಯಾಸಮಾಡುತ್ತಿರುವ ಬಡವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸ ಹಾಗೂ ಆರ್ಥಿಕ ನೆರವೀಯುವ ಸಲುವಾಗಿ ವಿದ್ಯಾರ್ಥಿಗಳ ಕ್ಷೇಮ ಹಾಗೂ ಸಹಬಾಳ್ವೆ ಮತ್ತು ಉನ್ನತ ಶಿಕ್ಷಣಗಳ ಬಗೆಗೆ ಒಂದು ಅಪೂರ್ವವಾದ ಪ್ರಯೋಗ ಕೈಗೊಂಡಿದೆ. ಮೈಸೂರು ನಗರದ ಕುಕ್ಕರ ಹಳ್ಳಿ ಕೆರೆ ಮತ್ತು ಮಾನಸಗಂಗೋತ್ರಿ ಇವುಗಳ ನಡುವಣ ಸುಮಾರು ೪೮ ಎಕರೆ ಪ್ರದೇಶದಲ್ಲಿ ವಿದ್ಯಾರ್ಥಿ ಗ್ರಾಮ

ಗಳನ್ನು ನಿರ್ಮಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಆರ್ಥಿಕವಾಗಿ ಹಿಂದುಳಿದಿರುವ ಬಡ ವಿದ್ಯಾರ್ಥಿಗಳಿಗೆ ದುಡಿದು ತಮ್ಮ ಶಿಕ್ಷಣವನ್ನು ಮುಂದುವರಿಸುವ ಸೌಲಭ್ಯ ವನ್ನು ಇಲ್ಲಿ ಕಲ್ಪಿಸಕೊಡಲಾಗುವುದು. ವಿದ್ಯಾರ್ಥಿ ಗಳಿಗೆ 'ಗಳಿಕೆ ಹಾಗೂ ಕಲಿಕೆ, ಯೋಜನೆಯಂತೆ ವಿಶ್ವ ವಿದ್ಯಾನಿಲಯವು ನಿರ್ಮಿಸಲಿರುವ ಇಲ್ಲಿನ ಕೈಗಾರಿಕಾ ಎಸ್ಟೇಟುಗಳಲ್ಲಿ ಅನೇಕ ವೃತ್ತಿಗಳಲ್ಲಿ ತರಬೇತಿ ನೀಡ ಲಾಗುವುದು.

ಸ್ವಾವಲಂಬನ ಮನೋಧರ್ಮ, ಸಮುದಾಯ ಜೀವನ, ಕಾರ್ಯಘನತೆ ಅರಿವು–ಇವೇ ಈ ಯೋಜನೆಯ ಸಮಗ್ರ ಆಶಯ.

ಪ್ರಾರಂಭದಲ್ಲಿ ೨೦೦ ಮಂದಿ ವಿದ್ಯಾರ್ಥಿಗಳಿಗೆ ಈ ಗ್ರಾಮದಲ್ಲಿ ಅವಕಾಶ ಕಲ್ಪಿಸಿಕೊಡಲಾಗುವುದು. ಮುಂದೆ ಆಯಾ ಜಿಲ್ಲೆಗಳಿಂದ ಸಾರ್ವಜನಿಕರ ನೆರವನ್ನು ಪಡೆದು ಆ ಜಿಲ್ಲೆಗಳ ಹೆಸರಿನಲ್ಲಿ ಬ್ಲಾಕುಗಳನ್ನು ಆರಂಭಿಸಬಹುದು.

ಇಡೀ ಯೋಜನೆಗೆ ೧೨ ಲಕ್ಷ ರೂಪಾಯಿಗಳ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಪಶ್ಚಿಮ ಜರ್ಮನಿ ಸರಕಾರ ನೆರವೀಯಲು ಮುಂದೆ ಬಂದಿದೆ.

ಚಿತ್ರಕಾರ ರುಮಾಲೆ ಅವರ ಕೃತಿಗಳ ಪ್ರದರ್ಶನ

ಇತ್ತೀಚೆಗೆ ಬೆಂಗಳೂರಿನ ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಶ್ರೀ ರುಮಾಲೆ ಚನ್ನಬಸವಯ್ಯನವರ ಕಲಾ ಕೃತಿಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಸಮಾರಂಭಕ್ಕೆ ಉಪಕುಲಪತಿ ಶ್ರೀ ವಿ. ಕೃ. ಗೋಕಾಕ್ ಅವರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು.

ಶ್ರೀ ರುಮಾಲೆಯವರು ಸ್ವಾತಂತ್ರ್ಯ ಹೋರಾಟದಲ್ಲಿ ಹಿಂಬದಿಗೆ ಸೇರಿದ್ದರೂ, ಅವರ ಕಲಾಕೃತಿಗಳು ಒಂದೆ ರಡು ದಶಕಗಳಿಂದ ಕಲಾಭಿಮಾನಿಗಳ ಆದರಕ್ಕೆ ಪಾತ್ರ ವಾಗಿದ್ದವು. ಈಗ ಅವುಗಳನ್ನು ಒಂದೆಡೆ ನೋಡುವ ಅವಕಾಶ ಬೆಂಗಳೂರಿನ ನಾಗರಿಕರ ಪಾಲಿಗೆ ದೊರೆತಿತ್ತು.

ಇಂಥದೇ ಚಿತ್ರ ಪ್ರದರ್ಶನಗಳು ಇತ್ತೀಚೆಗೆ ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಭವನದಲ್ಲಿ ಶ್ರೀಯುತರಾದ ಎಸ್. ಕೆ. ರಾಮಚಂದ್ರ ರಾಯರು ಹಾಗೂ ಮದರಾಸಿನ ರಾಮಮೂರ್ತಿ ಅವರಿಂದ ಪ್ರದರ್ಶಿಸಲ್ಪಟ್ಟ ಸಂಗತಿಯನ್ನು ನೆನೆಯ ಬಹುದಾಗಿದೆ.

ಪಿ. ಯು. ಸಿ. ಮಟ್ಟದಲ್ಲಿ ಧಾರ್ಮಿಕ ಶಿಕ್ಷಣ

ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಗಳಾದ ವಿ. ಕೃ. ಗೋಕಾಕ ಅವರು ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಪಡೆದ ಪೌರ್ವಾತ್ಯ ಮನೋಭಾವ ಉಳ್ಳ ವಿಚಾರ ಸಂಪನ್ನರು. ದೇಶದ ಯುವಜನರಲ್ಲಿ ತಲೆದೋರುತ್ತಿರುವ ಅಶಿಸ್ತು, ಅಶಾಂತಿ, ಅನೈಕಮತ್ಯಗಳಿಗೆ ಧಾರ್ಮಿಕ ಶಿಕ್ಷಣವು ಸೂಕ್ತ ಪರಿಹಾರ ನೀಡಬಲ್ಲದೆಂದು ನಂಬಿದವರು. ಇತ್ತೀಚೆಗೆ ಅವರು ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ನಡೆದ ಐದು ದಿನಗಳ ವಿಚಾರ ಗೋಷ್ಠಿ ಯಲ್ಲಿ ಮಾತನಾಡುತ್ತಾ ಪ್ರೀ ಯೂನಿವರ್ಸಿಟಿ ಮಟ್ಟದಲ್ಲಿ ಆಧುನಿಕ ಭಾರತೀಯ ಸಂಸ್ಕೃತಿಯ ಅವಶ್ಯಕ ಅಂಶಗಳಿಂದ ಕೂಡಿದ ಮತ್ತು ಎಲ್ಲ ಮಹಾಧರ್ಮಗಳ ವಿಶ್ವವ್ಯಾಪಕತೆ ಯನ್ನು ತಿಳಿಸುವ ಕಡ್ಡಾಯದ ಶಿಕ್ಷಣ ಜಾರಿಗೆ ತರಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು. ಎಲ್ಲ ಧರ್ಮಗಳ ತಜ್ಞರು ರೂಪಿಸಿದ ಇಂಥ ಒಂದು ಪಠ್ಯ ಪುಸ್ತಕ ಕಡ್ಡಾಯ ಶಿಕ್ಷಣಕ್ಕೆ ಪೂರಕವಾಗುವಂತೆ ಗೊತ್ತುಮಾಡಬಹುದೆಂದು ಸಲಹೆ ನೀಡಿದರು.

ಮುಂಬಯಿಯಲ್ಲಿ ಕನ್ನಡ ನಾಟಕೋತ್ಸವ

ಮುಂಬಯಿ ನಗರದಲ್ಲಿ ಸಯಾನಿನಲ್ಲಿರುವ ಕನ್ನಡ ಸಾಹಿತ್ಯ ಸಂಗೀತ ಕಲಾ ಕ್ಷೇತ್ರದ ಆಶ್ರಯದಲ್ಲಿ ರಾಜ್ಯದ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಶ್ರೀ ಮಾಸ್ತಿ ವಿರ ಚಿತ ಕಾಕನಕೋಟೆ ನಾಟಕವನ್ನು ಅಭಿನಯಿಸಲಾಯಿತು. ಅಲ್ಲದೆ ಬೆಂಗಳೂರಿನ ರವಿಕಲಾವಿದರು ಷಣ್ಮುಖಾನಂದ ಭವನದಲ್ಲಿ 'ಮುತ್ತಾಳ ಮುಟ್ಟಿದ್ದೆಲ್ಲ ಹಾಳು' ನಾಟಕ ವನ್ನು ಅಭಿನಯಿಸಿದರು. ಈ ಸಮಯದಲ್ಲಿ ಒಂದು 'ಸ್ಮರಣ ಸಂಚಿಕೆ'ಯನ್ನು ಬಿಡುಗಡೆ ಮಾಡಲಾಯಿತು.

ಎಪ್ಪತ್ತುಒಂಭತ್ತು ತುಂಬಿದ ರಾಧಾಕೃಷ್ಣನ್

ಭಾರತದ ಶ್ರೇಷ್ಠ ತತ್ವಶಾಸ್ತ್ರಜ್ಞರಲ್ಲಿ ಒಬ್ಬರೂ, ನಿವೃತ್ತ ರಾಷ್ಟ್ರಪತಿಗಳೂ ಆದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರಿಗೆ ಕಳೆದ ತಿಂಗಳಿಗೆ ಎಪ್ಪತ್ತುಒಂಭತ್ತು ವರ್ಷಗಳು ತುಂಬಿದವು. ಅವರ ಜನ್ಮದಿನದೊಂದಿಗೆ ಸಮಾವೇಶ ಗೊಂಡಿರುವ ಶಿಕ್ಷಕದಿನಾಚರಣೆಯ ಸಂದರ್ಭದಲ್ಲಿ ಅವರು ನಾಡಿಗಿತ್ತ ಸಂದೇಶದಲ್ಲಿ 'ಶಿಕ್ಷಕರು ತಮ್ಮ ಸದ್ವರ್ತನೆಯಿಂದ ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿಯಾಗಬೇಕು. ವಿಚಾರ, ಆಚಾರ ಮತ್ತು ಪ್ರಚಾರಗಳು ಒಟ್ಟಿಗೆ ಇರಬೇಕು. ಆತ್ಮ

ಶೋಧನೆ ಮತ್ತು ಆತ್ಮಸಂಯಮಗಳನ್ನು ನಾವು ಬೆಳಸಿಕೊಳ್ಳಬೇಕೆಂದು' ಹೇಳಿದರು.

ಭಗವಂತನು ಅವರಿಗೆ ನೂರುವಸಂತಗಳನ್ನು ಕಾಣುವ ಸೌಭಾಗ್ಯವನ್ನು ಕರುಣಿಸಲಿ.

ಅ. ನ. ಕೃ. ಸಂಧ್ಯಾರಾಗಕ್ಕೆ ರಜತಪದಕ

ಉತ್ತಮ ಪ್ರಾದೇಶಿಕ ಚಿತ್ರಗಳೆಂದು ೧೯೬೬ನೆ ಸಾಲಿಗೆ ಆಯ್ಕೆಯಾಗಿರುವ ಚಲಚಿತ್ರಗಳ ಪೈಕಿ ಕನ್ನಡದ ಸಂಧ್ಯಾರಾಗಕ್ಕೆ ರಾಷ್ಟ್ರಪತಿಯವರ ರಜತಪದಕವು ದೊರತಿದೆ. ಅನಕೃ ಅವರ ಈ ಕೃತಿ ಜನಪ್ರಿಯ ಕಾದಂಬರಿಯಾಗಿದ್ದು ಹಿಂದೀ ಭಾಷೆಗೂ ಅನುವಾದಿತವಾಗಿದೆ. ಇತ್ತೀಚೆಗೆ ಈ ಕಾದಂಬರಿಯ ಆಧಾರದಮೇಲೆ ಚಲನಚಿತ್ರವೊಂದು ರೂಪಗೊಂಡು ಅದ್ಭುತ ಯಶಸ್ಸನ್ನು ಪಡೆಯಿತೆಂಬ ಸಂಗತಿಯನ್ನು ನೆನೆಯಬಹುದಾಗಿದೆ.

ಪ್ರದೇಶ ಭಾಷೆಗಳ ಸಾಹಿತ್ಯ ರಚನೆಗೆ ಕೇಂದ್ರದ ಸಹಾಯ

ಇಂಗ್ಲಿಷ್ ಬದಲು ಪ್ರಾದೇಶಿಕ ಭಾಷೆಗಳನ್ನು ಉನ್ನತ ಶಿಕ್ಷಣ ಮಾಧ್ಯಮವಾಗಿ ಮಾಡಲು ಅನುಕೂಲವಾಗುವಂತೆ ಎಲ್ಲ ಭಾರತೀಯ ಭಾಷೆಗಳಲ್ಲಿ ಸಾಹಿತ್ಯವನ್ನು ಅಭಿವೃದ್ಧಿಪಡಿಸಲು ೧೮ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಕೇಂದ್ರ ಸರಕಾರವು ರೂಪಿಸಿದೆ. ದೆಹಲಿಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ಉಪಕುಲಪತಿಗಳ ಸಮ್ಮೇಳನದಲ್ಲಿ ಕೇಂದ್ರ ಶಿಕ್ಷಣ ಮಂತ್ರಿ ಡಾ. ತ್ರಿಗುಣಸೇನರು ಈ ವಿಷಯವನ್ನು ಪ್ರಕಟಿಸಿದರು. ಈ ನಿಧಿಯ ಸಹಾಯವನ್ನು ಪಡೆದು ಕನ್ನಡ ಸಾಹಿತ್ಯವು ಸರ್ವತೋಮುಖವಾಗಿ ಪ್ರಗತಿ ಹೊಂದುವುದೆಂದು ನಿರೀಕ್ಷಿಸಬಹುದಾಗಿದೆ.

ದಕ್ಷಿಣ ಭಾರತ ನಾಟಕ ಸಮ್ಮೇಳನ

ರಾಜ್ಯದ ರಂಗಭೂಮಿ ಮತ್ತು ಕಲಾವಿದರ ಕೇಂದ್ರ ಸಂಘದ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಮುಂದಿನ ಡಿಸೆಂಬರ್-ಜನವರಿ ತಿಂಗಳುಗಳಲ್ಲಿ ದಕ್ಷಿಣಭಾರತ ನಾಟಕ ಸಮ್ಮೇಳನವನ್ನು ನಗರದಲ್ಲಿ ಕರೆಯಲು ತೀರ್ಮಾನಿಸಲಾಯಿತು. ಶ್ರೀ ಆರ್. ದಯಾನಂದಸಾಗರ್ ಅವರ ನೇತೃತ್ವದಲ್ಲಿ ಸರ್ವಶ್ರೀ ನಾಟಕರತ್ನ ಜಿ. ಹೆಚ್. ವೀರಣ್ಣ, ಬಿ. ಬಸವಲಿಂಗಪ್ಪ, ಡಿ. ಎಸ್. ಕರಿಬಸವಯ್ಯ, ಕೋಟಾ ರಾಮಲಿಂಗಂ, ಎಸ್. ಆರ್. ಅಶ್ವತ್ಥ್ ಮತ್ತು ಕೆ. ವಿ. ಆಚಾರ್ ಇವರನ್ನೊಳಗೊಂಡ ಸ್ಥಾಯಿ ಸಮಿತಿಯೊಂದನ್ನು ರಚಿಸಲಾಯಿತು.

ಗೊರೂರ್ ಅವರಿಗೆ ಗೌರವ ವೇತನ

ರಾಜ್ಯದ ಸಾಹಿತಿಗಳಿಗೆ ಗೌರವ ವೇತನ ನೀಡುವ ಸರ್ಕಾರದ ಯೋಜನೆಯಂತೆ ಸುಪ್ರಸಿದ್ಧ ಸಾಹಿತಿಗಳೂ, ಸಮಾಜ ಸುಧಾರಕರೂ ಆದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ರಾಜ್ಯ ಸರ್ಕಾರವು ೩೫೦ ರೂ.ಗಳ ಮಾಸಾಶನ ನೀಡಲು ನಿರ್ಧರಿಸಿದೆ ಎಂದು ತಿಳಿದು ಬಂದಿದೆ. ಈ ಹಿಂದೆ ಈ ಯೋಜನೆಯ ಫಲವಾಗಿ ಕುವೆಂಪು ಅವರಿಗೂ, ದ. ರಾ. ಬೇಂದ್ರೆ ಅವರಿಗೂ ಗೌರವ ವೇತನಗಳನ್ನು ಸರ್ಕಾರ ನೀಡಿ, ಗೌರವಿಸಿದರೆಂಬುದನ್ನು ಇಲ್ಲಿ ಸ್ಮರಿಸಬೇಕಾಗಿದೆ. ಸರ್ಕಾರದ ಈ ಕೃತ್ಯ ಸ್ತುತ್ಯವಾಗಿದೆ.

ಪುರಂದರದಾಸರ ನೂತನ ಭಾವಚಿತ್ರ

ಬೆಂಗಳೂರಿಗೆ ನೂರೈವತ್ತು ಮೈಲಿ ದೂರದಲ್ಲಿರುವ ವಾಲಾಜಾಪೇಟೆಯಲ್ಲಿ ವೆಂಕಟರಮಣ ಭಾಗವತರ ಹೆಸರಿನಲ್ಲಿ ಒಂದು ರಸ್ತೆ ಹಾಗೂ ಭಜನ ಮಂದಿರವಿದೆ. ಈ ವೆಂಕಟರಮಣ ಭಾಗವತರು ತ್ಯಾಗರಾಜರ ಆಪ್ತ ಶಿಷ್ಯರಲ್ಲಿ ಪ್ರಮುಖರು. ತ್ಯಾಗರಾಜಸ್ವಾಮಿಗಳ ಕೃತಿಗಳನ್ನು ಸಂಗ್ರಹಿಸಿ ಲೋಕಕ್ಕೆ ಉಪಕಾರ ಮಾಡಿದವರಲ್ಲಿ ಇವರೇ ಮುಖ್ಯರು. ಇವರ ಮುಖ್ಯ ಶಿಷ್ಯರೇ ಮೈಸೂರಿನ ಸದಾಶಿವರಾಯರು.

ವಾಲಾಜಾಪೇಟೆಯಲ್ಲಿರುವ ರಾಮಮಂದಿರದಲ್ಲಿ ತ್ಯಾಗರಾಜರ ಭಾವಚಿತ್ರವೂ, ಅವರು ಪೂಜಿಸಲು ಕೊಟ್ಟ ರಾಮ ಲಕ್ಷ್ಮಣ ಸೀತಾ ವಿಗ್ರಹಗಳೂ ಇವೆ. ಅಲ್ಲಿನ ಭಿತ್ತಿಯಲ್ಲಿ ಪುರಂದರದಾಸರ ಪ್ರಾಚೀನ ವರ್ಣ ಚಿತ್ರವೂ ದೊರಕುತ್ತದೆ. ಇದು ಬೆಂಗಳೂರಿನ ಸಂಗೀತ ವಿಮರ್ಶಕರಾದ ಶ್ರೀ ಬಿ. ವಿ. ಕೆ. ಶಾಸ್ತ್ರೀ ಅವರ ಪ್ರಯತ್ನದ ಫಲವಾಗಿ ಬೆಳಕಿಗೆ ಬಂದಿದೆ. ಇದು ಕುತೂಹಲಕಾರಿಯಾದ ವರ್ಣಚಿತ್ರವಾಗಿದೆ.

ಮಹಾಜನರ ಶಿಫಾರಸು

ಕರ್ಣಾಟಕದ ಉತ್ತರದ ಗಡಿಯಲ್ಲಿ ತಲೆದೋರಿದ್ದ ಗಡಿಯ ವಾದ ಮಹಾಜನ ಅವರ ಸಮಿತಿಯ ವರದಿ ಹೊರಬಿದ್ದ ಮೇಲೆ ತಣ್ಣಗಾಗುವ ಸಂಭವವಿದೆ. ಕನ್ನಡನಾಡಿನ ಅವಿಭಾಜ್ಯ ಭೂಭಾಗವಾದ ಬೆಳಗಾವಿ ಕಾರವಾರ ಬಿದರೆ ಪ್ರದೇಶಗಳ ತಂಟೆಗೆ ಸಮಿತಿಯು ಹೋಗದೆ, ದಕ್ಷಿಣ ಸೊಲ್ಲಾಪುರದ ಸುಮಾರು

೬೫ ಹಳ್ಳಿಗಳೂ, ಅಕ್ಕಲಕೋಟೆಯ ಇಡೀ ತಾಲೂಕು ಗಂಡಿಕ್ಲೇಜದಿಂದ ೨೪ ಮತ್ತು ಶಿರೋಳ್ ತಾಲೂಕಿನಿಂದ ೪೦ ಗ್ರಾಮಗಳು ಒಟ್ಟು ಸುಮಾರು ೧೫೦ ಗ್ರಾಮಗಳು ಮೈಸೂರಿಗೆ ಲಾಭವಾಗುವ ಸಂಭವವಿದೆ ಎಂದು ತಿಳಿದು ಬಂದಿದೆ. ಆದರೆ ನಿಪ್ಪಾಣಿ, ಖಾನಪುರಗಳ ಕೆಲವು ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಲಿರುವ ಸಂಗತಿ ವಿಷಾದಕರವಾಗಿದೆ. ಅವು ಕನ್ನಡ ಭೂಭಾಗವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅಂತಲೇ ಕಾಸರಗೋಡನ್ನು ಕುರಿತು ಶಿಫಾರಸು ಮಾಡದಿರುವುದು ಸಮಿತಿಯ ಒಂದು ಕೊರತೆ ಎಂದು ಹೇಳಲಾಗಿವೆ.

ವಯಸ್ಕರ ಶಿಕ್ಷಣ ಸಮಿತಿಯ ಬೆಳ್ಳಿಹಬ್ಬ

ಅವಿದ್ಯಾವಂತ ವಯಸ್ಕ ಅನಕ್ಷರತೆಯನ್ನು ತೊಡೆದು ಹಾಕುವ ಸಲುವಾಗಿ ಇಪ್ಪತ್ತೈದು ವರ್ಷಗಳ ಹಿಂದೆ ಮೈಸೂರಿನಲ್ಲಿ ಆರಂಭವಾದ ಅಕ್ಷರ ಪ್ರಚಾರ ಸಮಿತಿ ಮುಂದೆ ವಯಸ್ಕರ ಶಿಕ್ಷಣ ಸಮಿತಿಯಾಗಿ ಮಾರ್ಪಟ್ಟು ತನ್ನ ಇಪ್ಪತ್ತೈದು ವರ್ಷಗಳ ಸಾರ್ಥಕ ಜೀವನದ ಬೆಳ್ಳಿಹಬ್ಬ ಆಚರಿಸಲಿದೆ. ಇದುವರೆಗೆ ಈ ಸಂಸ್ಥೆಯಿಂದ ಪ್ರತ್ಯಕ್ಷವಾಗಿ ೪೮೭೩೨ ಮಂದಿ ವಯಸ್ಕರು ಅಕ್ಷರಾಭ್ಯಾಸ ಮಾಡಿ ಓದು ಬರಹ ಮುಂದುವರಿಸಿದ್ದಾರೆ. ಅಂತಹವರ ಸಲುವಾಗಿ ಈ ಸಂಸ್ಥೆಯು ಇದುವರೆಗೆ ವಿವಿಧ ವಿಷಯಗಳ ಮೇಲೆ ವಿದ್ವಾಂಸರಿಂದ ೧೩೭ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದೆ. ಜಿಲ್ಲಾ ಕೇಂದ್ರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು ೨೬೦೨ ಪುಸ್ತಕ ಭಂಡಾರಗಳನ್ನು ಸಮಿತಿಯು ಒದಗಿಸಿದೆ. ರಾಜ್ಯದಲ್ಲಿ ಒಟ್ಟು ೧೨ ಕಡೆ ಮುಂದಾಳುಗಳ ತರಬೇತಿಗಾಗಿ ವಿದ್ಯಾಪೀಠಗಳನ್ನು ಸ್ಥಾಪಿಸಿದೆ. ಜನಪ್ರಿಯ ರಾಮಾಯಣ, ಶರಣ ಚರಿತಾಮೃತ ಮುಂತಾದ ಉದ್ಗ್ರಂಥಗಳನ್ನು ಪ್ರಕಟಿಸಿರುವುದಲ್ಲದೆ ಸಮಿತಿಯು ಪುಸ್ತಕ ಪ್ರಪಂಚವೆಂಬ ಮಾಸಿಕವನ್ನೂ, ಬೆಳಕು ಎಂಬ ವಾರಪತ್ರಿಕೆಯನ್ನೂ ನಡೆಸಿಕೊಂಡು ಬರುತ್ತಿದೆ.

ಬೆಳ್ಳಿಹಬ್ಬವನ್ನು ಯೋಗ್ಯ ರೀತಿಯಲ್ಲಿ ಆಚರಿಸಲು ಸಮಿತಿಯು ೨೫ ಲಕ್ಷ ರೂಪಾಯಿಗಳ ನಿಧಿಯೊಂದನ್ನು ಸಂಗ್ರಹಿಸುವ ಕಾರ್ಯಕ್ರಮವೊಂದನ್ನು ಹಾಕಿಕೊಂಡಿದೆ.

ವೀರಣ್ಣನವರ ಆತ್ಮಕಥೆ : 'ಕಲೆಯೇ ಕಾಯಕ'

ತಮ್ಮ ನಾಟಕರಂಗದ ಸೇವೆಯಿಂದ ವಜ್ರೋತ್ಸವ ಆಚರಿಸಿರುವ ನಾಟಕರತ್ನ ಗುಬ್ಬಿ ವೀರಣ್ಣನವರು ತಮ್ಮ ತುಂಬು ಜೀವನದ ರಸಮಯ ಚಿತ್ರಣಗಳನ್ನು ಹೊಸದಾಗಿ ಬರೆದಿರುವ ಕಲೆಯೇ ಕಾಯಕ ಗ್ರಂಥದಲ್ಲಿ ಕೊಟ್ಟಿದ್ದಾರೆ. ಅವರ ಜೀವನ ಚರಿತ್ರೆ ಒಂದು ದೃಷ್ಟಿಯಿಂದ ಕನ್ನಡನಾಡಿನ ರಂಗಭೂಮಿಯ ಇತಿಹಾಸವೇ ಆಗಿದೆ. ಈ ದೃಷ್ಟಿಯಿಂದ ಅವರ ಆತ್ಮಚರಿತ್ರೆ ಸ್ವಾಗತಾರ್ಹವಾಗಿದೆ. ಇದನ್ನು ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು ಅವರು ಪ್ರಟಿಸಿದ್ದಾರೆ. ಪುಟಗಳು ಸುಮಾರು ೨೫೦ ; ಬೆಲೆ ಸಾಧಾರಣ ಪ್ರತಿ ರೂ. ೮-೦೦. ಗ್ರಂಥದಲ್ಲಿ ಶ್ರೀಯುತರನ್ನು ಕುರಿತ ಆನೇಕ ಅಮೂಲ್ಯವಾದ ಚಿತ್ರಗಳಿವೆ. ಇದೊಂದು ಸಂಗ್ರಹ ಯೋಗ್ಯ ಕೃತಿ.

ಕೋಲಾರ ಜಿಲ್ಲೆ-ಒಂದು ಸಾಹಿತ್ಯ ಪರಿಚಯ

ಕನ್ನಡನಾಡಿನ ಚಿನ್ನದ ಬೀಡೆಂದು ಹೆಸರು ಪಡೆದಿರುವ ಕೋಲಾರ ಜಿಲ್ಲೆ ಇತಿಹಾಸ ಹಾಗೂ ಸಾಹಿತ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ೧೯೫೦ರಿಂದ ಈಚಿನ ಕನ್ನಡ ಹಾಗೂ ಕನ್ನಡಿಗರ ವಿಷಯಗಳನ್ನೊಳಗೊಂಡ ಜಿಲ್ಲೆಯ ಇತಿಹಾಸವನ್ನು ಹೊರತರುವ ಹಂಬಲದಿಂದ ಕೆಲಸ ನಡೆದಿದೆ. ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಸಾಹಿತ್ಯಿಕಘಟನೆಗಳು, ಜನರ ನಡೆನುಡಿಗಳು, ದೇವಾಲಯಗಳು, ಸಾಹಿತಿಗಳು, ಸಾಂಸ್ಕೃತಿಕ ಸಮಾರಂಭಗಳು ಹಾಗೂ ಕನ್ನಡಚಳುವಳಿಗೆ ಸಂಬಂಧಿಸಿದ ವಿವರಗಳನ್ನು ಮತ್ತೂರು ಶಂಕರ ಬಿ.ಎ., ಕೇರ್ ಆಫ್ ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಮಲ್ಲೇಶ್ವರಂ, ಬೆಂಗಳೂರು-ಅವರಿಗೆ ಪತ್ರಮುಖೇನ ತಿಳಿಸಿ ಸಹಕರಿಸಬೇಕಾಗಿ ಕಾರ್ಯಕರ್ತರು ಪ್ರಾರ್ಥಿಸಿದ್ದಾರೆ.

ಕನ್ನಡದಲ್ಲಿ ಶ್ರೀ ತುಲಸೀದಾಸ ರಾಮಾಯಣ

ಬೆಂಗಳೂರಿನ ಬುಕ್ ಸೆಂಟರ್, ೪೨೩, ಎ ಜಯನಗರ, ೧ನೇ ಬ್ಲಾಕ್, ಅವರು ಇತ್ತೀಚೆಗೆ ಗಮಕ ವಿದ್ವಾನ್ ಶ್ರೀ ಎಂ. ಎಸ್. ಅನಂತಪದ್ಮನಾಭರಾಯರಿಂದ ಕನ್ನಡದಲ್ಲಿ ಅನುವಾದಿತವಾದ ಶ್ರೀ ತುಲಸೀದಾಸ ರಾಮಾಯಣ—ರಾಮಚರಿತ ಮಾನಸ-ಕಾವ್ಯದ ಉದ್ಘಾಟನೆಯ ಉತ್ಸವವನ್ನು ಏರ್ಪಡಿಸಿದ್ದರು, ಪದ್ಮಶ್ರೀ ವಿ. ಕೃ. ಗೋಕಾಕರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಗಮಕ ವಿದುಷಿ ಶ್ರೀಮತಿ ಶಂಕುಂತಲಾಬಾಯಿ ಪಾಂಡುರಂಗರಾವ್ ಅವರು ಕಾವ್ಯ ವಾಚನ ಮಾಡಿದರು.

ಶ್ರೀ ಸಂ. ಗೋ. ಬಿಂದೂರಾಯರಿಗೆ ಸನ್ಮಾನ

ಶ್ರೀ ಸಂ. ಗೋ. ಬಿಂದೂರಾಯರು ಕಳೆದ ಐದು ದಶಕಗಳಿಂದಲೂ ಗಮಕ ವಾಚನವನ್ನೇ ತಮ್ಮ ಕಾಯಕವಾಗಿ

ಇಟ್ಟುಕೊಂಡು ನಾಡುನುಡಿಗಳಿಗೆ ಮಹತ್ತರವಾದ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ತಿಂಗಳು ಅವರ ಸೇವೆಯನ್ನು ಮನಗೊಂಡು ಬೆಂಗಳೂರಿನ ಕನ್ನಡ ಸಾಹಿತ್ಯ ಕುಟೀರದವರು ಶ್ರೀಯುತರನ್ನು ಸನ್ಮಾನಿಸುವ ಕಾರ್ಯಕ್ರಮವೇರ್ಪಡಿಸಿದ್ದರು. ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಪಾಂಡುರಂಗರಾಯರು ಉಪನ್ಯಾಸ ಮಾಡಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ

ನಗರದ ಬಿ. ಇ. ಎಲ್. ಕಾರ್ಖಾನೆಯ ಕನ್ನಡ ಸಾಹಿತ್ಯ ಕೂಟದ ಆಶ್ರಯದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರು ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರಿಂದ 'ನಗೆಯಮರ್ಮ' ಎಂಬ ವಿಷಯದ ಮೇಲೆ ಪ್ರಚಾರೋಪನ್ಯಾಸ ಏರ್ಪಡಿಸಿದ್ದರು. ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಾಧಿಕಾರಿಗಳಾದ ಡಾ. ರಂ. ಶ್ರೀ. ಮುಗಳಿ ಅವರು ಅಧ್ಯಕ್ಷತೆ ವಹಿಸಿದ್ದರು.

ದೇ. ಜವರೇಗೌಡ ಅವರಿಗೆ ಸನ್ಮಾನ

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ವಿಭಾಗದ ಮುಖ್ಯಾಧಿಕಾರಿಗಳೂ, ಸುಪ್ರಸಿದ್ಧ ವಿದ್ವಾಂಸರೂ, ಹಲವು ಗ್ರಂಥಗಳ ಲೇಖಕರೂ ಆದ ಪ್ರೊ. ದೇ. ಜವರೇಗೌಡ ಅವರನ್ನು ತಿಪಟೂರಿನ ಪುರಸಭೆಯವರು ಇತ್ತೀಚೆಗೆ ಬರಮಾಡಿಕೊಂಡು ಶ್ರೀಯುತರ ನಾಡು ನುಡಿಗಳ ಸೇವೆಯನ್ನು ಸ್ಮರಿಸಿ ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಗೌರವಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಕನ್ನಡ ಸ್ಟಡೀಸ್' ಎಂಬ ಸಂಸ್ಥೆಯ ಡೈರೆಕ್ಟರ್ ಆಗಿ ಕೆಲಸಮಾಡುತ್ತಿರುವ ಶ್ರೀಯುತರು ಕನ್ನಡದ ಕಟ್ಟಾಳುಗಳೆಂದು ಹೆಸರಾಗಿದ್ದಾರೆ. ಅವರ ಉತ್ಸಾಹದ ಹಾಗೂ ಕಾರ್ಯಕ್ಷಮತೆಯ ಫಲವಾಗಿ ಕನ್ನಡದ ಬಾವುಟ ಇಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹು ಎತ್ತರದಲ್ಲಿ ಹಾರಾಡುತ್ತಿದೆ.

ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ

ಮೈಸೂರು ವಿಶ್ವವಿದ್ಯಾನಿಲಯವು ಇದುವರೆಗೆ ಕನ್ನಡದಲ್ಲಿ ಅಚ್ಚಾಗಿರುವ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿಯನ್ನು ಕ್ರಮಬದ್ಧವಾಗಿ ಸಂಕಲಿಸಿ ಪ್ರಕಟಿಸುವ ದೊಡ್ಡ ಯೋಜನೆಯನ್ನು ಪ್ರಸಾರಾಂಗದ ಮೂಲಕ ಕೈಗೊಂಡಿದೆ. ಪ್ರೊ. ದೇ. ಜವರೇಗೌಡ (ಕನ್ನಡ ಪ್ರೊಫೆಸರ್ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಡೈರೆಕ್ಟರ್), ಶ್ರೀ ಕೆ. ಎಸ್. ದೇಶಪಾಂಡೆ (ಲೈಬ್ರೇರಿಯನ್, ಮೈಸೂರು ಯೂನಿವರ್ಸಿಟಿ ಲೈಬ್ರೆರಿ) ಮತ್ತು ಡಾ. ಪ್ರಭುಶಂಕರ (ಡೈರೆಕ್ಟರ್, ಪ್ರಸಾರಾಂಗ) ಈ ಮೂವರನ್ನೊಳಗೊಂಡ ಒಂದು ಸಂಪಾದಕ ಸಮಿತಿಯು ನಾಲ್ಕು ಜನ ಸಹಾಯಕ ಸಂಶೋಧಕರ ನೆರವಿನಿಂದ ಈ ಕಾರ್ಯವನ್ನು ಪ್ರಾರಂಭಿಸಿದೆ.

ಕರ್ಣಾಟಕದ ಎಲ್ಲ ಪ್ರಕಾಶಕರು ಮತ್ತು ಗ್ರಂಥಕರ್ತರು ತಮ್ಮ ಪ್ರಕಟಣೆಗಳ ಪಟ್ಟಿಯೊಂದನ್ನು ಕೃಪೆಯಿಟ್ಟು ಕಳುಹಿಸಿ ಕೊಡಬೇಕು. ವಿದ್ವಾಂಸರು ತಮ್ಮ ವೈಯಕ್ತಿಕ ಪುಸ್ತಕ ಭಂಡಾರಗಳ ಗ್ರಂಥಸೂಚಿಯನ್ನು ಅವು ತಯಾರಾಗಿದ್ದಲ್ಲಿ, ಕಳುಹಿಸಿಕೊಡುವ ಕೃಪೆಮಾಡಬೇಕು. ಹಾಗೆ ಗ್ರಂಥಗಳ ಪಟ್ಟಿಯು ಸಿದ್ಧವಾಗಿರದಿದ್ದಲ್ಲಿ, ಹಾಗೆಂದು ಬರೆದು ತಿಳಿಸಿದರೆ ನಮ್ಮ ಸಂಶೋಧಕರೇ ಅವರಲ್ಲಿಗೆ ಹೋಗಿ ಅವರಿಂದ ಅಗತ್ಯವಾದ ನೆರವನ್ನು ಪಡೆದುಕೊಳ್ಳುತ್ತಾರೆ. ವೈಯಕ್ತಿಕವಾಗಿ ಒಂದೆರಡು ಪುಸ್ತಕಗಳನ್ನು ಪ್ರಕಟಿಸಿರುವ ಮಹನೀಯರು ಅವುಗಳ ಬಗೆಗೆ ದಯವಿಟ್ಟು ವಿವರಗಳನ್ನು ತಿಳಿಸಬೇಕು. ಈ ರೀತಿಯಾಗಿ ಈ ದೊಡ್ಡ ಯೋಜನೆಯಲ್ಲಿ ಎಲ್ಲರೂ ಸಹಕರಿಸಬೇಕೆಂದು ಈ ಮೂಲಕ ಪ್ರಾರ್ಥಿಸಲಾಗಿದೆ.

ಇದನ್ನು ಕುರಿತ ಎಲ್ಲ ಪತ್ರವ್ಯವಹಾರಗಳನ್ನೂ ದಯವಿಟ್ಟು ಡೈರೆಕ್ಟರ್, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬ ಇವರೊಂದಿಗೆ ನಡೆಸಬೇಕಾಗಿ ಕೋರಿದೆ.

ಸೂಚನೆ: ೩೨ನೆಯ ಪುಟದಲ್ಲಿರುವ 'ಕಾಫರ್‌ಫೀಲ್ಡ್' ಮತ್ತು 'ಕಲ್ಲುಗಾಣ'ದ ವಿಮರ್ಶೆ ಶ್ರೀ ಕೆ. ಎಸ್. ಸೂಲಿಬೆಲೆಯವರದು.

ಸಂಪಾದಕೀಯ

ನಾಡಹಬ್ಬ

ನವರಾತ್ರಿಯನ್ನು ನಾಡಹಬ್ಬವಾಗಿ ಆಚರಿಸುವ ರೂಢಿ ನಮ್ಮಲ್ಲಿ ಹಿಂದಿನಿಂದಲೂ ಬೆಳೆದು ಬಂದಿತ್ತು. ಈಚೆಗೆ ಅದಕ್ಕೆ ಹೊಸ ಅರ್ಥವನ್ನು ಕೊಟ್ಟು, ನಾಡು ನುಡಿಗಳ ಹಬ್ಬವಾಗಿ ಅದನ್ನು ಆಚರಿಸಬೇಕೆಂದು ಹಿರಿಯರನೇಕರು ಸೂಚನೆಯಿತ್ತರು. ಅದರಂತೆ ಅನೇಕ ವರ್ಷಗಳು ನಾಡು ಈ ಹಬ್ಬವನ್ನು ಆಚರಿಸಿತು. ಇತ್ತೀಚೆಗೆ ನಾಡಹಬ್ಬಕ್ಕೆ ಪ್ರಾಧಾನ್ಯ ಕಡಮೆಯಾದಂತೆ ಕಂಡುಬರುತ್ತದೆ. ದಿನಬೆಳಗಾದರೆ ಅನೇಕ ಉತ್ಸವಗಳನ್ನು ಆಚರಿಸಲೇಬೇಕಾಗಿ ಬಂದ ಬಲವಂತದಿಂದ ಹಿಂದಿನಿಂದ ನಡೆದು ಬಂದ ಪದ್ಧತಿ ಮೂಲೆಗುಂಪಾಗುವ ಸ್ಥಿತಿ ಒದಗಿದೆ. ನಾಡ ಮತ್ತು ನುಡಿಯ ಭಕ್ತರು ಇದನ್ನು ಗಮನಿಸಿ ನವರಾತ್ರಿಯ ಸಮಯವನ್ನು ನಮ್ಮ ಸಂಸ್ಕೃತಿಯ ಸಂಕೇತವನ್ನಾಗಿ ಉಳಿಸಿಕೊಂಡು ಬರಬೇಕು. ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿ ಇದರ ಆವಶ್ಯಕತೆಯಿದೆ.

ನಾಡಿನ ಬೇರೆ ಬೇರೆ ಭಾಗದ ಜನನಾಯಕರು ತಮ್ಮ ತಮ್ಮ ವಿಭಾಗದ ಸಾಹಿತ್ಯ ಸಂಗೀತ ಮುಂತಾದ ಕಲೆಗಳನ್ನು ಕುರಿತ ತಿಳಿವಳಿಕೆಯನ್ನು ಜನಸಾಮಾನ್ಯಕ್ಕೆ ಪರಿಚಯಮಾಡಿಕೊಡುವ ಒಟ್ಟು ಕನ್ನಡತನವನ್ನು ಬೆಳೆಸುವ ಮತ್ತು ಭಾರತವು ಒಂದೆಂಬ ಭಾವಸಂವರ್ಧನೆ ಮಾಡುವ ಆವಶ್ಯಕ ಕಾರ್ಯದಲ್ಲಿ ತೊಡಗಬೇಕು ; ಕಲೆಗಾರರಿಗೆ ಇದರಿಂದ ಪ್ರೋತ್ಸಾಹ ತೃಪ್ತಿಗಳೂ, ನಾಡವರಿಗೆ ತಿಳಿವು ಆನಂದಗಳೂ ಉಂಟಾಗುತ್ತವೆ. ನೆರೆನಾಡಿನ ಜನರಿಗೂ ಇದರಿಂದ ನಮ್ಮ ಸ್ನೇಹದ ಬಗ್ಗೆ ಆದರ ಅಭಿಮಾನಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ಹೊರನಾಡ ಕನ್ನಡಿಗರು ಈ ಕೆಲಸವನ್ನು ಹೆಚ್ಚು ಆಸಕ್ತಿಯಿಂದ ಮಾಡುತ್ತಿದ್ದಾರೆ. ಬೊಂಬಾಯಿ, ದೆಹಲಿ, ಕಲ್ಕತ್ತ, ಮದ್ರಾಸು, ತಿರುವನಂತಪುರ ಮುಂತಾದ ಕಡೆಗಳಲ್ಲಿ ನಾಡಹಬ್ಬವನ್ನು ತುಂಬ ಉತ್ಸಾಹದಿಂದ ಆಚರಿಸುತ್ತ ಇದ್ದಾರೆ. ಇಂಥಲ್ಲಿರುವ ನಮ್ಮವರಿಗೆ ತವರು ನಾಡಿನಿಂದ ಮನ್ನಣೆ ಸತ್ಕಾರಗಳು ಸಿಗುವಂತಾಗಬೇಕು. ಇದರಿಂದಲೂ ಪರಸ್ಪರ ಸೌಹಾರ್ದ ಬೆಳೆದು ನಾಡಿನ ಏಳ್ಗೆಯಾಗುತ್ತದೆ. ಈ ಸಲ ನಮ್ಮ ನಾಡಿನ ಎಲ್ಲ ಕಡೆಗಳಲ್ಲೂ ನಾಡಹಬ್ಬ ನೆರವೇರಿ ಈ ಸಂಸ್ಕೃತಿಯ ಕಾರ್ಯಕ್ಕೆ ಸರ್ವತೋಮುಖವಾದ ಸಹಾಯ ಒದಗುವಂತಾಗಲಿ.

ಪರಿಷತ್ತಿನ ಸುದ್ದಿಗಳು

ಕವಿಕೃತಿ ದರ್ಶನ : ೨೬ನೆಯ ಉಪನ್ಯಾಸಮಾಲೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜಾಜಿನಗರದ ವಿದ್ಯಾವರ್ಧಕ ಸಂಘದವರು ದಿನಾಂಕ ೧೦-೯-೬೭ ರಂದು ಕವಿ-ಕೃತಿ-ದರ್ಶನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ವಿಷಯ : ಪ್ರೊ. ವಿ. ಸೀತಾರಾಮಯ್ಯ ಅವರ ಸಾಹಿತ್ಯ ಕೃತಿಗಳು.

ಅಂದಿನ ಕಾರ್ಯಕ್ರಮದ ಆಧ್ಯಕ್ಷತೆಯನ್ನು ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರು ವಹಿಸಿದ್ದರು. ಉಪನ್ಯಾಸಕರು : ಶ್ರೀ ಎಂ. ಚಂದ್ರಶೇಖರ ಮತ್ತು ಶ್ರೀ ಕ. ವೆಂ. ರಾಜಗೋಪಾಲ.

ಉಪನ್ಯಾಸಮಾಲೆ : ಗಾಂಧೀ ಸಾಹಿತ್ಯ ಸಂಘ

ಪಂಜೆ ಮಂಗೇಶರಾಯರ ಬಗ್ಗೆ ಉಪನ್ಯಾಸವನ್ನು ದಿನಾಂಕ ೨೪-೯-೬೭ರಂದು ಗಾಂಧೀ ಸಾಹಿತ್ಯ ಸಂಘದವರು ಏರ್ಪಡಿಸಿದ್ದರು. ಈ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಶ್ರೀ ಪದುಕೋಣೆ ರಮಾನಂದರಾಯರು.

ಇದು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಾಂಧೀ ಸಾಹಿತ್ಯ ಸಂಘದವರು ಆಚರಿಸುತ್ತಿರುವ ಎಂಟನೆಯ ಉಪನ್ಯಾಸಮಾಲೆ.

ಪರಿಷತ್ತಿನ ಗ್ರಂಥಭಂಡಾರ

ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ ೧-೯-೧೯೬೭ ರಿಂದ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನು ಪುಸ್ತಕಭಂಡಾರಕ್ಕಾಗಿ ಕೊಂಡುಕೊಳ್ಳಬೇಕೆಂದು ಗೊತ್ತುಮಾಡಿದೆ. ಪುಸ್ತಕ ಪ್ರಕಾಶಕರು ಹಾಗೆ ಪ್ರಕಟವಾಗುವ ಪುಸ್ತಕಗಳ ಒಂದೊಂದು ಪ್ರತಿಯನ್ನು-ಒಳ್ಳೆಗಟ್ಟರಟ್ಟಿನ ಪುಸ್ತಕ ಭಂಡಾರದ ಪ್ರತಿಯನ್ನು-ಸಾಹಿತ್ಯ ಪರಿಷತ್ತಿನ ಕಚೇರಿಗೆ ಸಾಮಾನ್ಯವಾಗಿ ಮಾರಾಟಗಾರರಿಗೆ ಕೊಡುವ ರಿಯಾಯಿತಿ ಬೆಲೆಗೆ ತಂದುಕೊಟ್ಟು ಹಣಪಡೆಯಬಹುದೆಂದು ಈ ಮೂಲಕ ಪ್ರಾರ್ಥಿಸಲಾಗಿದೆ.

ಗಮಕ ಕಲಾ ತರಗತಿಗಳು—೧೯೬೭

ಗಮಕ ಕಲಾ ತರಗತಿಗಳಿಗೆ ನಿಯಮಿತವಾದ ಪಠ್ಯಪುಸ್ತಕ "ಗಮಕ ಪ್ರವೇಶದಾಯಿನಿ" ಪ್ರಕಟವಾಗಿದೆ. ಅದರ ಬೆಲೆ ರೂ. ೧-೫೦. ಎಲ್ಲ ಹಿಂದಿನ ಮತ್ತು ಇಂದಿನ ವಿದ್ಯಾರ್ಥಿಗಳೂ ಈ ಪುಸ್ತಕವನ್ನು ಕೊಳ್ಳಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ.

೧೯೬೮ರಲ್ಲಿ ನಡೆಯುವ ಗಮಕ ಪ್ರವೇಶ ಪರೀಕ್ಷೆಗೆ ಗೊತ್ತುಮಾಡಿರುವ ಪದ್ಯಭಾಗಗಳು :

ಪಠ್ಯಪುಸ್ತಕ "ಗಮಕ ಪ್ರವೇಶದಾಯಿನಿ"ಯಿಂದ (ಪರಿಷತ್ತಿನ ಪ್ರಕಟಣೆ) ೧೯೬೭

೧. ಕರ್ಣಾಟಕ ಭಾರತ ಕಥಾಮಂಜರಿ : ಗದಾಪರ್ವದ ಪದ್ಯಭಾಗಪೂರ್ತಿ (ಪುಟ ೨೧ರಿಂದ ೨೫ರ ಪೂರ್ತಿ)

೨. ಜೈಮಿನಿ ಭಾರತ (ಸಂಕ್ಷೇಪ ರಾಮಾಯಣ) ಪುಟ ೩೧ರಿಂದ ೩೬ರ ಪೂರ್ತಿ)

೩. ಹರಿಹರನ ಶತಕ-ವಿರೂಪಾಕ್ಷಸ್ತುತಿ (ಪುಟ ೪೪ ರಿಂದ ೪೭ರ ಪೂರ್ತಿ)

೪. ರಗಳೆ-ಉತ್ಸಾಹ ರಗಳೆ (ಪುಟ ೬೬)

೫. ಹದಿಬದೆಯ ಧರ್ಮ (ಸಾಂಗತ್ಯ) ಪುಟ ೭೨-೭೩)

೬. ಸುಭಾಷಿತ (ಕಂದ ಪದ್ಯಗಳು) (ಪುಟ ೭೫-೭೬)

೭. ವಚನ-(ಬಸವಣ್ಣ ಮತ್ತು ಅಕ್ಕಮಹಾದೇವಿ) ಪುಟ ೭೭

೮. ಇವುಗಳ ಜೊತೆಗೆ 'ಕನ್ನಡ ಬಾವುಟ'ದಿಂದ ಎರಡು ದಾಸರ ಪದಗಳನ್ನೂ ಎರಡು ಶಿವಶರಣರ ಕೃತಿಗಳನ್ನೂ ನಾಲ್ಕು ಆಧುನಿಕ ಕವಿಗಳ ಗೀತೆಗಳನ್ನೂ ಅಭ್ಯಾಸ ಮಾಡತಕ್ಕದ್ದು.

೧೯೬೮ನೆಯ ಅಕ್ಟೋಬರ್ ತಿಂಗಳೊಳಗಾಗಿ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪರಿಷತ್ತಿಗೆ ಕಳುಹಿಸಿಕೊಡತಕ್ಕದ್ದು. ಪರೀಕ್ಷಾ ಶುಲ್ಕ ಪರಿಷತ್ತು ನಡೆಸುತ್ತಿರುವ ಗಮಕ ತರಗತಿಯ ವಿದ್ಯಾರ್ಥಿಗಳಿಗೆ ಮೂರು ರೂಪಾಯಿಗಳು ಮತ್ತು ಸ್ವಂತ ವ್ಯಾಸಂಗಿಗಳಿಗೆ ನಾಲ್ಕು ರೂಪಾಯಿಗಳು.

೮೦೦ ಮಾತ್ರ. ಆ ಪೈಕಿ ಸುಮಾರು ೪೫೦ ಮಂದಿ ಆಜೀವಸದಸ್ಯರು. ಅವರ ಸದಸ್ಯತ್ವದ ಹಣದಬಡ್ಡಿ ಮಾತ್ರ ಪರಿಷತ್ತಿನ ನಿತ್ಯ ಉಪಯೋಗಕ್ಕೆ ಸಿಗುತ್ತಿದೆ. ಅದು ತಲಾ ಸರಾಸರಿ ವರ್ಷಕ್ಕೆ ಐದು ರೂ. ಆಗುತ್ತದೆ. ಉಳಿದ ವಾರ್ಷಿಕ ಸದಸ್ಯರು ವರ್ಷಕ್ಕೆ ಆರು ರೂ. ಯಂತೆ ಕೊಡುವವರು. ಈ ಎಲ್ಲರಿಗೂ ವರ್ಷಕ್ಕೆ ಆರು ರೂಪಾಯಿನ ಕನ್ನಡ ನುಡಿ ; ರೂ. ೨.೫೦ರ ಸಾಹಿತ್ಯ ಪರಿಷತ್ಪತ್ರಿಕೆಗಳನ್ನು ಉಚಿತವಾಗಿ ಕೊಡುವುದಲ್ಲದೆ, ಪುಸ್ತಕ ಭಂಡಾರ, ವಾಚನಾಲಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯೋಜನವನ್ನು ಅವರಿಗೆ ದೊರಕಿಸಿಕೊಡುವುದಾಗಿದೆ. ಕಳೆದ ವರ್ಷದಿಂದ ಮೈಸೂರು ಸರ್ಕಾರದವರು ಪರಿಷತ್ತಿಗೆ ವರ್ಷಕ್ಕೆ ರೂ. ೨೫,೦೦೦ಗಳ ಸಹಾಯ ದ್ರವ್ಯವನ್ನು ಒದಗಿಸುತ್ತಿದ್ದಾರೆ. ಆದರೆ ಮೇಲೆ ಸೂಚಿಸಿರುವ ಪರಿಷತ್ತಿನ ಆಶೋತ್ತರಗಳು ನೆರವೇರಬೇಕಾದರೆ ವರ್ಷವೊಂದಕ್ಕೆ ಒಂದು ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ.

ಎಲ್ಲ ಕನ್ನಡಿಗರೂ ಯೋಚಿಸಬೇಕಾದ ಒಂದು ದೊಡ್ಡ ಪ್ರಶ್ನೆ ಎಂದರೆ ಪರಿಷತ್ತಿನಂತಹ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಎಷ್ಟು ದಿನ ಹೀಗೇ ಸರ್ಕಾರದ ಧನಸಹಾಯವವನ್ನು ನಂಬಿ ಕುಳಿತಿರಬೇಕು ? ಎರಡೂವರೆ ಕೋಟಿ ಜನ ಕನ್ನಡಿಗರಿರುವ ಕನ್ನಡ ನಾಡಿನಲ್ಲಿ ಆ ಕನ್ನಡಿಗರ ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಭಿವೃದ್ಧಿಗೆ ಮೀಸಲಾದ ಏಕೈಕ ಪ್ರಾತಿನಿಧಿಕ ಸಂಸ್ಥೆ ಸತ್ವಪೂರ್ಣವಾಗಿ ಕಂಗೊಳಿಸುವಂತೆಯೂ ಕಾರ್ಯಶೀಲವಾಗುವಂತೆಯೂ ಜನರ ಬೆಂಬಲದೊರೆಯಬೇಡವೆ ? ಹಾಗೆ ದೊರೆತದ್ದೇ ಆದರೆ ಅದರ ಚಟುವಟಿಕೆಗಳು ಹೆಚ್ಚು ಪ್ರಭಾವಾನ್ವಿತವಾಗಿ, ಶಕ್ತಿಯುತವಾಗಿ, ಸ್ವತಂತ್ರವಾದ ಧೋರಣೆಯನ್ನು ರೂಪಿಸಿಕೊಂಡು ಕನ್ನಡಿಗರ ಸರ್ವತೋಮುಖವಾದ ಏಳಿಗೆಗೆ ಸಹಾಯಕವಾಗಬಲ್ಲದು. ಆ ದೃಷ್ಟಿಯಿಂದ ಪರಿಷತ್ತು ಈ ಮನವಿಯನ್ನು ನಿಮಗೆ ಸಲ್ಲಿಸುತ್ತಿದೆ.

ಭಾಷಾಭಿಮಾನಿಗಳಾದ ಕನ್ನಡಿಗರು ಪರಿಷತ್ತಿಗೆ ಹೇಗೆ ಸಹಾಯ ಮಾಡಬಹುದು ?

೧. ಪರಿಷತ್ತಿಗೆ ಕೆಳಗಿನ ಯಾವುದೇ ವಿಶೇಷವರ್ಗದ ಸದಸ್ಯರಾಗಿ ಸೇರಬಹುದು. ಇದರಿಂದ ಪರಿಷತ್ತಿನ ಶಾಶ್ವತನಿಧಿಗೆ ಹಣಸೇರಿ ಅದರಿಂದ ಬರುವ ಬಡ್ಡಿ ಪರಿಷತ್ತಿನ ದಿನಬಳಕೆಗೆ ಉಪಯೋಗವಾಗುತ್ತದೆ.

೧.	ಉದ್ಧಾರಕ ವರ್ಗ	ರೂ.	೧,೦೦೦/-
೨.	ಪ್ರದಾತೃ ವರ್ಗ	ರೂ.	೫೦೦/-
೩.	ಆಶ್ರಯದಾತ ವರ್ಗ	ರೂ.	೨೫೦/-
೪.	ಆಜೀವ ಸದಸ್ಯ ವರ್ಗ	ರೂ.	೧೦೦/-

೨. ಗೊತ್ತಾದ ಉದ್ದೇಶಕ್ಕಾಗಿ ದತ್ತಿನಿಧಿಗಳನ್ನು ದಾನಮಾಡು
ಇದರಿಂದ ದಾನಿಗಳ ಹೆಸರಿನಲ್ಲಿ ಪ್ರತಿವರ್ಷವೂ ಸಾಹಿತ್ಯ ಪ್ರ
ನಡೆದು ಅವರ ಹೆಸರು ಚಿರಸ್ಮರಣೀಯವಾಗಿರುತ್ತದೆ.

೩. ಪರಿಷತ್ತಿನ ಗ್ರಂಥಭಂಡಾರಕ್ಕೆ ಬೀರುಗಳ ಆವಶ್ಯಕತೆ ಇದೆ. ಅ
ದಾನಮಾಡಬಹುದು. ದಾನಿಗಳ ಹೆಸರನ್ನು ಆ ಬೀರುಗಳ
ಬರೆಸಿಡಲಾಗುತ್ತದೆ.

೪. ಪರಿಷತ್ತಿನ ರಂಗಮಂಟಪದ ಪುನರ್ವ್ಯವಸ್ಥೆಗೆ ರೂ. ೨೫,೦೦೦
ಗಿದೆ. ಇದಕ್ಕಾಗಿ ಹಣ ಕೊಡುವದಾನಿಗಳ ಹೆಸರನ್ನು ಚಿತ್ರ
ಮೇಲೆ ಬರೆಸಿ ತೂಗುಹಾಕಲಾಗುತ್ತದೆ.

೫. ಪರಿಷತ್ತು ಸ್ಥಾಪಿತವಾಗಿ ೫೨ ವರುಷವಾಗಿದ್ದು "ಸು
ಮಹೋತ್ಸವ" ವನ್ನು ನಡೆಸಲು ತಗಲುವ ಕನಿಷ್ಠಪಕ್ಷ
ರೂ. ಗಳ ಬಗ್ಗೆ ಧನಸಹಾಯವನ್ನು ಕೊಡುವ ದಾನಿಗಳ ಹೆ
ಬರೆಸಿ ಫಲಕಗಳಮೇಲೆ ಪ್ರಕಟಸಲಾಗುತ್ತದೆ.

೬. ಪುಸ್ತಕ ಪ್ರಕಟನೆಗೆ ಒಂದು ಲಕ್ಷ ರೂಪಾಯಿಗಳಾದರೂ
ದಾನಿಗಳು ಪುಸ್ತಕ ಪ್ರಕಟನೆಗೆ ದಾನಮಾಡಿ ಅದರಿಂದ
ಹಣವನ್ನು ಪರಿಷತ್ತು ತನ್ನ ಸಾಹಿತ್ಯ ಸಂಸ್ಕೃತಿಗಳ ಚಟ
ಗಳಿಗೆ, ಇತರ ಪುಸ್ತಕ ಪ್ರಕಟನೆಗಳಿಗೆ ಬಳಸಿಕೊಳ್ಳಲು ಅ
ಕೊಟ್ಟರೆ ಅದರಿಂದ ಸಾಹಿತ್ಯಾಭಿವೃದ್ಧಿಗೆ ಅವರು ಹಿರಿಯ
ಸಲ್ಲಿಸಿದಂತಾಗುತ್ತದೆ.

ಹೀಗೆ ಯಾವುದಾದರೊಂದು ವಿಧದಲ್ಲಿ ಕನ್ನಡಿಗರು ಸಹಾಯ
ಕನ್ನಡ ನಾಡು ನುಡಿ ಸಂಸ್ಕೃತಿ ಕಲೆ—ಇವುಗಳ ಪುರೋಭಿ
ಸಹಾಯಕವಾಗಬೇಕೆಂದು ಈ ಮನವಿಯನ್ನು ಪರಿಷತ್ತು
ಜನಕೋಟಿಯ ಮುಂದೆ ಅರ್ಪಿಸುತ್ತದೆ.

ವೆಂಕಟೇಶ ಸಾಂಗಲಿ
ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿಗಳು

ಜಿ. ವೆಂಕಟಸು

ಎನ್. ವರದ
ಗೌರವ ಕೋಶ

Reg. No. B. G. 4—October 1967

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೧೧

ಸಂಪುಟ : ೩೦

ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ನವಂಬರ್ : ೧೯೬೭

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ,

ಬೆಂಗಳೂರು ೧೮

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮

ಕನ್ನಡ ನಾಡುನುಡಿಗಳ ಅಭಿಮಾನಿಗಳಲ್ಲಿ ಬಿನ್ನಹ

ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಗಿ ೫೭ ವರುಷಗಳಿಂದ ಕನ್ನಡ ನಾಡುನುಡಿಗಳ ಸೇವೆಯನ್ನು ಅವ್ಯಾಹತವಾಗಿ ನಡೆಸಿಕೊಂಡು ಬರುತ್ತಿದೆ. ಕನ್ನಡನಾಡು ಒಂದು ಪ್ರಾಂತವಾಗುವವರೆಗೂ ಪರಿಷತ್ತು ಕನ್ನಡಿಗರ ಏಕೀಕರಣಕ್ಕೆ ಹೊಡೆದಾಡಿ ಏಕೀಕರಣವನ್ನು ಸಾಧಿಸಿತು. ಶಬ್ದಮಣಿದರ್ಪಣ, ಪಂಪಭಾರತ, ಪಂಪರಾಮಾಯಣ, ಕವಿಚರಿತೆಯಂತಹ ಅತ್ಯುತ್ತಮವಾದ ಹಳೆಗನ್ನಡ ಕಾವ್ಯಗಳನ್ನೂ ಆಧಾರ ಗ್ರಂಥಗಳನ್ನೂ ಪರಿಶೋಧಿಸಿ, ಅವಕ್ಕೆ ನಿಘಂಟುಗಳನ್ನು ತಯಾರಿಸಿ ಪ್ರಕಟಿಸಿತು. ಸಾಹಿತ್ಯ ಸಂಸ್ಕೃತಿಗಳಿಂದ ಹಿಡಿದು ವಿಜ್ಞಾನ ವಿಮರ್ಶೆಗಳ ವರೆಗೂ - ಅನೇಕ ವಿಷಯಗಳನ್ನೊಳಗೊಂಡ ಸುಮಾರು ೫೦ ಪುಸ್ತಕಗಳನ್ನು ಪ್ರಕಟಿಸಿತು. ಈಗ ೫೧ ವರ್ಷಗಳಿಂದ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಎಂಬ ಪ್ರೌಢ ವಿಷಯಗಳನ್ನೊಳಗೊಂಡ ಷಾಣ್ಮಾಸಿಕ ಪತ್ರಿಕೆಯನ್ನೂ ೩೦ ವರ್ಷಗಳಿಂದ ಪ್ರಮುಖ ಸಾಹಿತ್ಯ ವಿಷಯಕವಾದ 'ಕನ್ನಡ ನುಡಿ' ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದೆ. ಕನ್ನಡಿಗರಿಗೆ ಕನ್ನಡ ಭಾಷೆಯಲ್ಲಿ ಅಭಿಮಾನ ಪಾಂಡಿತ್ಯಗಳನ್ನು ಬೆಳೆಸುವ ಉದ್ದೇಶದಿಂದ ಕನ್ನಡ 'ಜಾಣ' 'ಕಾವ' ಮತ್ತು 'ರತ್ನ' ಎಂಬ ಮೂರು ಸಾಹಿತ್ಯ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಈಗ ೩೦ ವರ್ಷಗಳಿಂದ ಅನೇಕ ಕೇಂದ್ರಗಳಲ್ಲಿ ಗಮಕ ತರಗತಿಗಳನ್ನು ನಡಸಿ ಕನ್ನಡ ಜನತೆಯಲ್ಲಿ ಕಾವ್ಯಾಭ್ಯಾಸ, ಕಾವ್ಯವಾಚನಾಭಿರುಚಿಗಳನ್ನು ಬೆಳೆಸಿ ಗಮಕ ಕಲೆಯನ್ನು ಪ್ರಚಾರಮಾಡುತ್ತಿದೆ. ದತ್ತಿನಿಧಿಗಳನ್ನು ದಾನವಾಗಿ ಕೊಟ್ಟಿರುವ ಮಹನೀಯರ ಹೆಸರಿನಲ್ಲಿ ನಿಷ್ಣಾತರಾದ ಪಂಡಿತರಿಂದ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಿ ಆ ಪೈಕಿ ಅನೇಕ ಉಪನ್ಯಾಸಗಳನ್ನು ಪರಿಷತ್ಪತ್ರಿಕೆಯಲ್ಲಿಯೂ ಪುಸ್ತಕರೂಪವಾಗಿಯೂ ಪ್ರಕಟಿಸಲಾಗುತ್ತಿದೆ. ಪ್ರಾಚೀನ ಸಾಹಿತ್ಯದ ಪ್ರಚಾರಕ್ಕಾಗಿ ಪುಸ್ತಕಗಳನ್ನು ಪ್ರಕಟಿಸಿರುವುದಲ್ಲದೆ ಆ ಸಂಬಂಧವಾದ ಉಪನ್ಯಾಸಗಳನ್ನು ಆಗಾಗ ಏರ್ಪಡಿಸಲಾಗುತ್ತಿದೆ. ಪ್ರತಿವರ್ಷವೂ ಒಂದು ವಾರದವರೆಗೆ ವಸಂತ ಸಾಹಿತ್ಯೋತ್ಸವವನ್ನೂ, ಕಾಳಿದಾಸ ಜಯಂತಿ, ರಾಜ್ಯೋತ್ಸವ, ಭಾಷಣ ಕಲಾ ತರಗತಿಗಳು, ಕಂಠಪಾಠ ಸ್ಪರ್ಧೆಗಳು, ದೇವರನಾಮ ಸ್ಪರ್ಧೆಗಳು—ಹೀಗೆ ಅನೇಕ ಸಾಹಿತ್ತಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದೆ. ಒಂದುಸಜ್ಜಿತವಾದ ರಂಗಮಂಟಪವಿದ್ದು ಅದು ಕಲಾವಿಲಾಸಿ ಸಂಘದ ಕಾರ್ಯಕ್ರಮಗಳಿಗೂ ನವ್ಯನಾಟಕಗಳ ಪ್ರಯೋಗಕ್ಕೂ ಸಹಾಯಕವಾಗಿದೆ. ಸುಮಾರು ೨೦,೦೦೦ ಪುಸ್ತಕಗಳನ್ನುಳ್ಳ ಕನ್ನಡ ಗ್ರಂಥಭಂಡಾರವಿದೆ. ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳನ್ನು ಕೊಳ್ಳು ಏರ್ಪಾಟೊಂದನ್ನು ಈ ವರ್ಷದಿಂದ ಕೈಕೊಳ್ಳಲಾಗಿದೆ. ಇವಲ್ಲ ಒಟ್ಟು ೮೮ ದಿನಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗಳನ್ನು ಪರಿಷತ್ತು ತರಿಸುತ್ತಿದೆ. ಈ ಗ್ರಂಥಭಂಡಾರ ಮತ್ತು ವಾಚನಾಲಯ ಪ್ರಯೋಜನವನ್ನು ಸಾರ್ವಜನಿಕರೂ, ಸ್ನಾತಕೋತ್ತರ ವಿದ್ಯಾರ್ಥಿಗಳೂ ಪಡೆಯುತ್ತಿದ್ದಾರೆ. ಪ್ರತಿ ವರ್ಷವೂ ಸಾಹಿತ್ಯ ಸಮ್ಮೇಳವನ್ನೇರ್ಪಡಿಸಿ ವರ್ಷದಲ್ಲಿ ನಡೆದ ಸಾಹಿತ್ಯ ಕಾರ್ಯಗಳ ಪ್ರಗಯನ್ನು ವಿವೇಚಿಸಿ ಅದು ಸತ್ವಶಾಲಿಯಾಗಿ ಸರಿಯಾದ ದಾರಿಯ ಮುಂದುವರಿಯಲು ಬೇಕಾದ ಮಾರ್ಗದರ್ಶನವನ್ನು ಸೂಚಿಸಲಾಗುತ್ತಿದೆ. ಪ್ರಸಿದ್ಧರಾದ ಸಾಹಿತಿಗಳಿಗೂ ವಿದ್ವಾಂಸರಿಗೂ ಸನ್ಮಾನ ಸಭೆಗಳನ್ನೇರ್ಪಡಿಸಿ ಅವರನ್ನು ಗೌರವಿಸಿ ಅವರಿಂದ ಸಾಹಿತ್ಯ ಪ್ರಪಂಚಕ್ಕಾಗುತ್ತಿರುವ ಸೇವೆಯನ್ನು ಸ್ಮರಿಸಲಾಗುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪರಿಷತ್ತು ಕನ್ನಡ - ಕನ್ನಡ ನಿಘಂಟನ್ನು ತಯಾರಿಸು ಮಹತ್ಕಾರ್ಯವನ್ನು ಕೈಗೊಂಡಿದೆ. ಇದು ಡೆಮಿ ೪ ಆಕಾರ ೫೦೦೦ ಪುಟಗಳ ಮಹದ್ಗ್ರಂಥ. ಈಗ ಸುಮಾರು ೮೦೦ ಪುಟಗಳಷ್ಟು ಅಚ್ಚಾಗಿದೆ. ಈ ಮಹಾಕಾರ್ಯಕ್ಕೆ ಸರ್ಕಾರದ ನೆರವೂ ದೊರೆತಿದೆ.

ಈ ಮೇಲೆ ಸೂಚಿಸಿರುವ ನಾನಾ ಮುಖವಾದ ಸಾಹಿತ್ಯ ಸಂಸ್ಕೃ ಕಲೆಗಳ ಚಟುವಟಿಕೆಗಳನ್ನು ಪರಿಷತ್ತು ನಡೆಸಿಕೊಂಡು ಬರ ತ್ತಿದ್ದರೂ ಅವುಗಳನ್ನು ಇನ್ನೂ ವಿಸ್ತರಿಸುವುದು ಆವಶ್ಯಕವಾಗಿ ಇದಲ್ಲದೆ ಪರಿಷತ್ತು ಮಾಡಬೇಕೆಂದು ಇಟ್ಟುಕೊಂಡಿರುವ ಕೆಲ ಗಳು ಇನ್ನೂ ಬಹಳವಾಗಿವೆ. ಓಲೆ ಪ್ರತಿಗಳ ಸಂಗ್ರಹ, ಹಳೆ ಗ್ರಂಥಗಳ ಪ್ರಕಟನೆ, ಸಂಶೋಧನಾ ಶಾಖೆಯ ಏರ್ಪಾಟು, ವ್ಯಾಕರಣ-ನಿಘಂಟು, ಪ್ರಾಚೀನ ಸಾಹಿತ್ಯ, ಇತರ ಗ್ರಂಥಗಳು—ಇತ್ಯಾದಿಗಳ ಪ್ರಕಟನೆ, ಮತ್ತು ವಿವಿಧ ವಿಷಯಗಳ ಉತ್ತ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಇತ ಭಾಷೆಗಳಿಗೆ ಭಾಷಾಂತರ ಮಾಡುವುದು, ಪ್ರಕಟಮಾಡುವುದು ಸುಸಜ್ಜಿತವಾದ ರಂಗಮಂದಿರದ ಸ್ಥಾಪನೆ ಗ್ರಂಥಭಂಡಾ ಅಭಿವೃದ್ಧಿ ಇತ್ಯಾದಿ ಅನೇಕ ಕಾರ್ಯಕ್ರಮಗಳು ಪರಿಷತ್ತಿ ಯೋಜನೆಯಲ್ಲಿವೆ.

ಇಷ್ಟು ವ್ಯಾಪಕವಾದ ಹಾಗೂ ಮಹತ್ವಪೂರ್ಣ ಕಾರ್ಯಕ್ರ ಗಳನ್ನು ಯೋಜಿಸಿಕೊಂಡಿರುವ ಈ ಅಖಿಲ ಕರ್ನಾಟಕದ ವ್ಯಾ ಯುಳ್ಳ ಏಕೈಕ ಕನ್ನಡ ಸಂಸ್ಥೆಗೆ ಇರುವ ಸದಸ್ಯ ಸಂಪತ್ತು ಕೇ

(ರಕ್ಷಾಪುಟದ ೩ನೇ ಪುಟ ನೋ

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ನವೆಂಬರ್ ೧೯೬೭

ಸಂಪುಟ : ೩೦

ಸಂಚಿಕೆ : ೧೧

ಈ ಸಂಚಿಕೆಯಲ್ಲಿ . . .

ಮುಗಿಲು

ಅನಂತದಲ್ಲಪಾರದಲ್ಲಿ
ಸ್ವಯಂಭೂಲೀಲೆ
ಮುಗಿಲೆ ಮುಗಿಲು ಕನಸು ತೇಲಿ
ಬೆಟ್ಟಗಳಿಗೆ ವಲ್ಲಿಯಾಗಿ
ಪೇಟವಾಗಿ
ಬಗೆ ಬಗೆ ಶೃಂಗಾರವಾಗಿ
ನಕ್ಕು ತೇಲಿಹೋಗುವುದು
ಬೆಟ್ಟ ಬೆಟ್ಟಗಳ ಹೆಗಲಮೇಲೆ ಕೈಯನೂರಿ
ನೆಲಕ್ಕೆ ಮೊಲೆಯನೂಡುವುದು
ನೀಲಿಯಾಕಾಶದಲ್ಲಿ
ಮೈಯಚಾಚಿ ಮಲಗುವುದು
ಮೈಮುರಿಯುತ ಹೊರಳುವುದು
ಹುಬ್ಬುಗಂಟನಿಕ್ಕುವುದು
ಮುಗುನಗೆ ಮಂದಾರವಾಗಿ
ಗುಮ್ಮನಾಗಿ ಬೆದರಿಸುವುದು
ಕಣ್ಣುಮಿಟುಕಿಸುವುದು ಒಮ್ಮೆ
ನಾಚಿ ಕೆನ್ನೆ ಕೆಂಪೇರಿ
ಶ್ಯಾಮ ಆಗಿ
ಹೆಬ್ಬೆಟ್ಟವಾಗಿ
ರೂಪಧಾರಣಾಲೋಲ
ಮುಗಿಲು ಮುಗಿಲು
ಮುಗಿವೆ ಇಲ್ಲ.
ನೋಡುವ ನಮಗಷ್ಟೇ ಭಾವ
ಅಗೋ ಅಗೋ ಕಾಮರೂಪಿ
ವಿರಾಡ್ರೂಪಿ
ಹಿರಣ್ಯಗರ್ಭ
ಯಾವ ಋತ, ಯಾವ ನಿಯತಿ ?
ಚಲಿಸಿದರೂ ನಿರಾಯಾಸ
ನಿಂತರೂ ನಿರಾಲಂಬ
ನೆಲಕೆ ಬಿದ್ದು ನಿರ್ಲೇಪ
ಇದ್ದರೂ ಅದು ಅಲ್ಲ, ಬಾನೆಲ್ಲ
ಬಯಲಿನಲ್ಲಿ ಬಯಲು
ಮುಗಿಲು.

ಜಿ. ಎಸ್. ಸಿದ್ಧಲಿಂಗಯ್ಯ

ದರ್ಪಣಾವಲೋಕನ–ಒಂದು ಪ್ರತಿ ವಿಮರ್ಶೆ

ಹಂಪ. ನಾಗರಾಜಯ್ಯ

ಕನ್ನಡ ಭಾಷೆಯ ಹಳೆಯ ಹೊತ್ತಗೆಗಳಲ್ಲಿ ಅನೇಕವು ಇನ್ನೂ ಬೆಳಕು ಕಂಡಿಲ್ಲ. ಅಚ್ಚಾದ ಪ್ರಾಚೀನ ಗ್ರಂಥಗಳೂ ಒಂದು ಮುದ್ರಣಕ್ಕಿಂತ ಹೆಚ್ಚು ಮುದ್ರಣ ನೋಡಿರುವುದು ಇನ್ನೂ ಕಡಮೆ. ವಸ್ತುಸ್ಥಿತಿ ಹೀಗಿರುವಾಗ ವ್ಯಾಕರಣವೊಂದು ಹಲವು ಮುದ್ರಣ ಕಂಡಿರುವುದು ಸೋಜಿಗವೇ ಸರಿ. ಕೇಶಿರಾಜನ ಶಬ್ದಮಣಿದರ್ಪಣ ರಚಿತವಾಗಿ ಏಳು ಶತಮಾನಗಳಾದುವು. ಈ ಏಳುನೂರು ವರ್ಷಗಳ ಅವಧಿಯಲ್ಲಿ ಅದು ಹಲವು ಓಲೆಗರಿಗಳ ಮೂಲಕ ಕನ್ನಡನಾಡಿನಾದ್ಯಂತ ಆಳಿಬಾಳಿದೆ. ನಿಟ್ಟೂರ ನಂಜಯ್ಯ, ಲಿಂಗಣಾರಾಧ್ಯರ ಟೀಕಾಸಮೇತ ಬಲ್ಲಿದರ ಸ್ವತ್ತಾಗಿ ಜೀವಿಸಿದೆ. ಅಚ್ಚಿನ ಅನುಕೂಲ ಕನ್ನಡನಾಡಿಗೂ ಕಾಲಿಟ್ಟ ಕಾಲದಿಂದೀಚೆಗೆ ಕೇಶಿರಾಜನ ಕೃತಿ ಕೆಲವಾರು ಹೊಸ ಮುದ್ರಣ ಕಂಡಿದೆ. ಅದರ ವಿವರ ಇಂತಿದೆ:

೧. ಜೆ. ಗೆರೆಟ್ (J. Garrett) ಸಂಪಾದಿತ ಪ್ರತಿ ಪ್ರಕಟವಾದುದು — ೧೮೬೮
೨. ರೆ|| ಎಫ್. ಕಿಟೆಲ್ (Rev. F. Kittle) ಅವರ ಪ್ರತಿ ಪ್ರಕಟವಾದುದು (ಮೊದಲ ಮುದ್ರಣ) — ೧೮೭೨
೩. ,, (ಎರಡನೆಯ ಮುದ್ರಣ) — ೧೮೯೯
೪. ಪಂಜೆ ಮಂಗೇಶರಾಯರಿಂದ ಪರಿಷ್ಕೃತ ಪ್ರತಿ ಪ್ರಕಟವಾದುದು — ೧೯೨೦
೫. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ್ದು — ೧೯೨೦
೬. ಮದರಾಸು ವಿಶ್ವವಿದ್ಯಾನಿಲಯದ ಪ್ರಕಟನೆ — ೧೯೩೮
೭. ಡಿ. ಎಲ್. ನರಸಿಂಹಾಚಾರ್ ಸಂಪಾದಿತ (ಪ್ರಥಮ ಮುದ್ರಣ) — ೧೯೪೯
೮. ಡಿ. ಎಲ್. ನರಸಿಂಹಾಚಾರ್ ಸಂಪಾದಿತ (ದ್ವಿತೀಯ ಮುದ್ರಣ) — ೧೯೬೪

ಈ ರೀತಿಯಲ್ಲಿ ಸರಿಯಾಗಿ ಒಂದು ನೂರು ವರ್ಷದ ಅಂತರದಲ್ಲಿ ಶಬ್ದಮಣಿದರ್ಪಣ ದಿನೇದಿನೇ ಪರಿಷ್ಕಾರಗೊಂಡು ಎಂಟು ಸಲ ಅಚ್ಚಾಗಿದೆ. ಇದು ಅದರ ಜನಪ್ರಿಯತೆಗೂ, ಅಂತಸ್ಸತ್ವಕ್ಕೂ, ಗ್ರಂಥಹಿರಿಮೆಗೂ ಹಿಡಿದ ಮಣಿದರ್ಪಣವಾಗಿದೆ.

ಇಷ್ಟಾದರೂ ಶಬ್ದಮಣಿದರ್ಪಣದ ಶುದ್ಧತಮವಾದ ಪಾಠನಿರ್ಣಯ ಇನ್ನೂ ಸಾಧಿಸಬೇಕಾದ ಗುರಿಯಾಗಿಯೇ ಉಳಿದಿದೆಯೆಂಬುದನ್ನು ವಿದ್ವಾಂಸರೆಲ್ಲ ಬಲ್ಲರು. ಶಬ್ದಮಣಿದರ್ಪಣದ ಪಾಠನಿರ್ಣಯ ಒಂದು ಜಟಿಲಪ್ರಶ್ನೆಯಾಗಿದ್ದು ಮೇಲೆ ಹೇಳಿದ ಎಂಟು ಮುದ್ರಣಗಳಲ್ಲೂ ಅದರತ್ತ ಪ್ರಾಮಾಣಿಕ ಪ್ರಯತ್ನ ನಡೆದಿದೆ. ಆದರೂ ಅನವಧಾನ, ಅನ್ಯಥಾಜ್ಞಾನ, ಆಧಾರಗಳ ಅಭಾವ ಮುಂತಾದ ಅನೇಕ ಅಡಚಣೆಗಳಿಂದಾಗಿ ಅತ್ಯಾಧುನಿಕ ಮುದ್ರಣದ ತನಕ ಕೆಲವಾರು ತಪ್ಪುಗಳು ಉಳಿದುಕೊಂಡೂ ನುಸುಳಿಕೊಂಡೂ ನಿಂತುಬಿಟ್ಟವೆ. ಶಬ್ದಮಣಿದರ್ಪಣವನ್ನು ಶುದ್ಧವಾಗಿ ಸಿದ್ಧಪಡಿಸಿಕೊಡುವ ಶ್ರಮಸಾಧ್ಯ ಜ್ಞಾನಕಾಯಕದಲ್ಲಿ ದುಡಿದ ಸಂಪಾದಕರ ಪ್ರಯತ್ನ ಪ್ರಶಂಸನೀಯವೆಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಇದುವರೆಗಿನ ಪರಿಷ್ಕರಣ ಮುದ್ರಣಗಳಲ್ಲೆಲ್ಲ ಪ್ರಾಧ್ಯಾಪಕ ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಮುದ್ರಣವೇ ಉತ್ತಮವೆಂಬುದು ಬಲ್ಲಿದರ ಅಭಿಪ್ರಾಯ. ಅದಕ್ಕಾಗಿ ಅವರು ಭಾಷಾಭ್ಯಾಸಿಗಳೆಲ್ಲರಿಂದಲೂ ಅಭಿನಂದನೀಯರು.

ಪ್ರಾ|| ಡಿ. ಎಲ್. ನರಸಿಂಹಾಚಾರ್ಯರು (=A) ೧೯೬೪ರಲ್ಲಿ ಶಬ್ದಮಣಿದರ್ಪಣದ ಒಂದು ಪರಿಷ್ಕೃತ ಮುದ್ರಣವನ್ನು ನಿಟ್ಟೂರ ನಂಜಯ್ಯನ ಟೀಕಾಸಮೇತವಾಗಿ ಪ್ರಕಟಿಸಿದರು. ಈ ಸಂಪಾದನ ಕಾರ್ಯಕ್ಕೆ ಅವರು ದಿವಂಗತ ಪಂಜೆ ಮಂಗೇಶರಾಯರಿಂದ ಪರಿಶೋಧಿತವಾದ ಕಿಟ್ಟೆಲರ ದ್ವಿತೀಯ ಮುದ್ರಣದ ತೃತೀಯ ಆವೃತ್ತಿಯ ಪ್ರತಿಯನ್ನೂ (ಕಿ), ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಪ್ರತಿಯನ್ನೂ (ಪ), ಮತ್ತೆರಡು ಓಲೆಯ ಪ್ರತಿಗಳನ್ನೂ (ಕ.ಖ.) ಉಪಯೋಗಿಸಿಕೊಂಡಿದ್ದಾರೆ. A ಅವರೇ ಹೇಳಿರುವಂತೆ ಇದು ತಾತ್ಕಾಲಿಕ ಪರಿಷ್ಕರಣ. ಇದರಲ್ಲಿ ಎಲ್ಲ ಪ್ರತಿಗಳ ಎಲ್ಲ ಪಾಠಾಂತರಗಳನ್ನೂ ಕೊಡುವ ಉದ್ದೇಶ ಅವರದಾಗಿರಲಿಲ್ಲ. ಅಲ್ಲದೆ ಕಿ. ಪ. ಗಳಲ್ಲೂ ಎಲ್ಲ ಪಾಠಾಂತರಗಳನ್ನೂ ಕಾಣಿಸಿಲ್ಲ. ಹೀಗಾಗಿ A ಅವರು ತಮ್ಮ ಈ ಹೊಸ

ಪರಿಷ್ಕರಣದ ಪರಿಪೂರ್ಣತೆಯ ವಿಚಾರವಾಗಿ ಏನೂ ಹೇಳಿ ಹೊಗಳಿಕೊಂಡಿಲ್ಲ. ಅದರ ಬದಲು ತುಂಬ ವಿನಯದಿಂದ "ಅಜ್ಞಾನದಿಂದಲೂ, ಅನ್ಯಥಾ ಜ್ಞಾನದಿಂದಲೂ, ಅನವಧಾನದಿಂದಲೂ ನುಸುಳಿಕೊಂಡು ಬಂದಿರುವ ಸ್ಖಾಲಿತ್ಯಗಳು ಇನ್ನೂ ಹಲವು ಇರಬಹುದು. ಅವು ಕಣ್ಣಿಗೆ ಬಿದ್ದಾಗ ಸರಿಪಡಿಸಲು ಸಾಧ್ಯವಾದೀತು. 'ಅಕ್ಕರಿಗರಧಿಕಪ್ರಜ್ಞರ್ ಕೈಕೊಂಡು ತಿರ್ದುಗೆ ದೋಷಮಂ'" ಎಂದು ವಿನಂತಿಸಿಕೊಂಡಿದ್ದಾರೆ. ಇತರ ಆರು ಹಿಂದಿನ ಪರಸ್ಕರಣಗಳಿರುವಂತೆ ಇದೂ ಒಂದು ಪರಿಷ್ಕರಣವೆಂದು ಅವರು ಭಾವಿಸಿದ್ದಾರೆ.

ಹೀಗಿರುವಾಗ A ಅವರು ಸಂಪಾದಿಸಿದ ಶಬ್ದಮಣಿದರ್ಪಣದ ಎರಡನೆಯ ಮುದ್ರಣ ಪ್ರಕಟವಾದ ಎರಡು ವರ್ಷಗಳ ಅನಂತರ ಶ್ರೀಮಾನ್ ಎಂ. ಎಂ. ಕಲಬುರ್ಗಿ ಅವರು (=B) 'ದರ್ಪಣಾವಲೋಕನ' ವೆಂಬ ಹೆಸರಿನಿಂದ ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೆಯಲ್ಲಿ (ಕಲಾ ವಿಭಾಗ) IX ಮತ್ತು Xನೆಯ ಸಂಪುಟಗಳಲ್ಲಿ, ಎರಡು ಲೇಖನಗಳನ್ನು ಬರೆದು ತುಂಬ ಉಪಕರಿಸಿದ್ದಾರೆ. B ಅವರಿಗಾಗಲಿ, ಅವರ ಲೇಖನಗಳನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕರಿಗಾಗಲಿ ವಿಮರ್ಶೆಯ ಕೃಪೆಗಾಗಿ A ಅವರಾಗಲಿ, ಗ್ರಂಥದ ಪ್ರಕಾಶಕರಾಗಲಿ ಪ್ರಕೃತ ಗ್ರಂಥದ ಪ್ರತಿಯನ್ನು ಕಳಿಸಿಕೊಟ್ಟಿರಲಿಲ್ಲವೆಂದು ತಿಳಿದುಬರುತ್ತದೆ. ಆದರೂ ಕೂಡ B ಅವರು ಉದಾರ ಹೃದಯದಿಂದ ಈ ಗ್ರಂಥವನ್ನು ಆರಿಸಿಕೊಂಡು ಅವರ ಸುದೀರ್ಘವಾದ ವಿಮರ್ಶೆಯ ಕೃಪೆ ಮಾಡಿದ್ದಾರೆ. ಅದಕ್ಕಾಗಿ ದರ್ಪಣಾಭಿಮಾನಿಗಳೆಲ್ಲ ಕೃತಜ್ಞರು. B ಅವರು ತಮ್ಮ ಎರಡು ಲೇಖನಗಳಲ್ಲಿ A ಅವರ ಸಂಪಾದಿತ ಶಬ್ದಮಣಿದರ್ಪಣದ ಶುದ್ಧತೆಯನ್ನು ಶ್ಲಾಘಿಸಿದ್ದಾರೆ: 'ಈ ಹೊಸ ಮುದ್ರಣ ಹಿಂದಿನವುಗಳಿಗಿಂತ ಅಚ್ಚುಕಟ್ಟಾಗಿದೆ. ಕೆಲವು ಅಂಶಗಳಲ್ಲಿ ಶುದ್ಧವಾಗಿದೆ. ಇದು ಒಪ್ಪತಕ್ಕ ಮಾತು.' ಅದರಂತೆ ಈ ಹೊಸದಾದ ಮುದ್ರಣದಲ್ಲಿ ಉಳಿದುಬಿಟ್ಟಿರುವ ದೋಷಗಳನ್ನು ಎತ್ತಿ ತೋರಿಸುವ ಪ್ರಯತ್ನವನ್ನೂ ಮಾಡಿದ್ದಾರೆ. B ಅವರ ಎರಡೂ ಲೇಖನಗಳು A ಅವರ ಗ್ರಂಥ ಹೊತ್ತಿರುವ ದೋಷಗಳ ನಿರೂಪಣೆಗೇ ಮೀಸಲಾಗಿದೆಯಾದರೂ ಅಲ್ಲಲ್ಲಿ ಅದಕ್ಕೆ ತಕ್ಕ ಪರಿಹಾರವನ್ನೂ ತೋರಿಸಿದ್ದಾರೆ. ಇದು ಶ್ಲಾಘನೀಯ.

ಆದರೆ B ಅವರ ಈ ಪ್ರಶಂಸನೀಯ ಪ್ರಯತ್ನದಲ್ಲಿ ತಪ್ಪುಒಪ್ಪುಗಳೆರಡೂ ಸೇರಿಬಿಟ್ಟಿವೆ. ಇದು ಸಹಜವೇ ಆಗಿದೆ. ಅವರ ಎರಡು ಲೇಖನಗಳಲ್ಲಿ ಮೊದಲನೆಯ ಲೇಖನದ ಆರಂಭದಲ್ಲೇ ತಮ್ಮ ಪ್ರಕೃತ ಬರವಣಿಗೆಯ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ: 'ಪ್ರಸ್ತುತ ಲೇಖನಕ್ಕೆ ಈಗಿನ ಮಟ್ಟಿಗೆ ಕೊನೆಯ ಮುದ್ರಣವೆನಿಸಿದ ಶ್ರೀ ಡಿ. ಎಲ್. ಎನ್. ಪ್ರತಿಯನ್ನು (೧೯೬೪) ಅವಲೋಕಿಸುವುದು ಅನಿವಾರ್ಯವೂ ನ್ಯಾಯವೂ ಆದುದರಿಂದ ಈ ಲೇಖನ ಶ್ರೀ ಡಿ. ಎಲ್. ಎನ್. ದರ್ಪಣಾವಲೋಕನವಾಗಿದೆ. ಈ ತುದಿಯಿಂದ ಆ ತುದಿಯವರೆಗೂ ಅವರ ದರ್ಪಣವನ್ನವಲೋಕಿಸುವಲ್ಲಿ ಅಚ್ಚುದೋಷ ಮೊದಲುಮಾಡಿ ಸಂಪಾದನೆಯ ಕೊರತೆ, ಸಂಪಾದಕೀಯ ದೋಷಗಳನ್ನು ಸಂಕಲಿಸುವೆ. ಸಾಧ್ಯವಾದಲ್ಲಿ ಪರಿಹಾರ ಸೂಚಿಸುವೆ'. ಈ ಮಾತುಗಳು B ಅವರ ವಿಮರ್ಶೆಯ ಗೊತ್ತುಗುರಿಗಳನ್ನು ಖಚಿತಗೊಳಿಸುತ್ತದೆ. ಆದರೆ ಅವರು ಅಚ್ಚುದೋಷವನ್ನು ಪ್ರಧಾನವಾಗಿ ಪರಿಗಣಿಸದೆ ಆನುಷಂಗಿಕವಾಗಿ ಒಟ್ಟಿಗೆ ಒಂದೆಡೆ ಪಟ್ಟಿ ಮಾಡಿಕೊಟ್ಟಿದ್ದರೆ ಉಚಿತವಾಗುತ್ತಿತ್ತು. ಏಕೆಂದರೆ ಅಚ್ಚಿನ ದೋಷ ಅಕ್ಷಮ್ಯವಾದ ದೊಡ್ಡ ಅಪರಾಧವಲ್ಲ. ಹಾಗೆಂದು ಅದನ್ನು ನಿರ್ಲಕ್ಷಿಸಬೇಕೆಂದು ಅರ್ಥವಲ್ಲ. ಒಂದೂ ಮುದ್ರಣದೋಷವಿಲ್ಲದೆ ಪುಸ್ತಕವನ್ನು ಪ್ರಕಟಿಸಬೇಕೆಂಬುದೇ ಎಲ್ಲ ಲೇಖಕರ ಬಯಕೆ. ಅದಕ್ಕಾಗಿಯೇ ಕರಡುಪ್ರತಿಯನ್ನು ಕಡೆಯತನಕ ಮೂರು ನಾಲ್ಕು ಬಾರಿ ಕಣ್ಣಿರಳಿಸಿ ಎಚ್ಚರದಿಂದ ನಿಗವಿಟ್ಟು ನೋಡುವುದು.

ಯಾರು ಎಷ್ಟೇ ನೋಡಿದರೂ, ವಿಶೇಷತಃ ದೊಡ್ಡ ಪ್ರಮಾಣದ ಗ್ರಂಥಗಳಲ್ಲಿ, ಅಲ್ಲಲ್ಲಿ ಅಚ್ಚಿನ ದೋಷಗಳು ಉಳಿದೇ ಇರುತ್ತವೆ. ಇದನ್ನು ಪುಸ್ತಕ ಬರೆದು ಪ್ರಕಟಿಸಿರುವ ಎಲ್ಲರೂ ಬಲ್ಲರು. A ಅವರೇ ಈ ವಿಚಾರವಾಗಿ 'ಅಚ್ಚಿನ ಕರಡುಗಳನ್ನು, ಎರಡಲ್ಲ ನಾಲ್ಕು ಕಣ್ಣುಗಳು ನೋಡಿ ಎಚ್ಚರಿಕೆಯಿಂದ ತಿದ್ದಿದರೂ ತಪ್ಪುಗಳು ಉಳಿದಿರುವುದಕ್ಕಾಗಿ ವಿಷಾದಿಸಬೇಕಾಗಿದೆ' ಎಂದು ನೊಂದುಕೊಂಡು ನುಡಿದಿದ್ದಾರೆ. ಆದುದರಿಂದ ಅಚ್ಚಿನ ದೋಷವನ್ನೇ ಅದ್ಭುತಮಾಡಿ ಅನಾಹುತ ಆಗಿಹೋದಂತೆ ಆಪಾದಿಸುವುದು ಸಾಧುವಲ್ಲ, ಸರಿಯಲ್ಲ. B ಅವರು ತಮ್ಮ ವಿಮರ್ಶೆಯಲ್ಲಿ ಬಹುಭಾಗ ಈ ಮುದ್ರಣದೋಷವನ್ನೇ ತೋರಿಸಿದ್ದಾರೆ. ಅದು ಅಷ್ಟು ಪ್ರಧಾನವಾದ ಪರಿಗಣನೆಗೆ ಅರ್ಹವಲ್ಲವೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಇನ್ನು B ಅವರ ಒಟ್ಟು ವಿಮರ್ಶೆಗೆ ತಕ್ಕ ಸಮಾಧಾನವನ್ನು, ಅಗತ್ಯವಾದ ಕಡೆಗಳಲ್ಲಿ, ಹೇಳಲು ತೊಡಗಬಹುದು. A ಅವರ ಶಬ್ದಮಣಿದರ್ಪಣದ ಸಂಪಾದನಾ ಕಾರ್ಯವನ್ನು ಕುರಿತ B ಅವರ ವಿಮರ್ಶೆಗೆ ಇಲ್ಲಿ ಸೂತ್ರ, ವೃತ್ತಿ, ಪ್ರಯೋಗ, ನಿಟ್ಟೂರ ನಂಜಯ್ಯನ ಟೀಕೆ–ಎಂಬ ವಿಭಾಗಗಳನ್ನು ಮಾಡಿ

ಕೊಂಡು ಯಥಾಮತಿ ಉತ್ತರವನ್ನು ನೀಡಲೆತ್ನಿಸಿದೆ. A ಅವರೂ, B ಯವರೂ, ಇತರ ಅನೇಕ ವಿದ್ವಾಂಸರೂ ಈ ಪ್ರಯತ್ನವನ್ನು ಸ್ನೇಹಾದರಗಳಿಂದ ಸ್ವಾಗತಿಸುವರೆಂದೂ, ಪ್ರೀತಿಯಿಂದ ಪರಿಭಾವಿಸುವರೆಂದೂ ಆಶಿಸಿದ್ದೇನೆ.

ಸೂತ್ರಗಳು

೧. ಸೂತ್ರ : ೧೮

ಸವನಿಸಿದೆ ಏ ಒ ಓ ಯೆಂ
ಬಿವು......................

B. ವಕಾರ ಪ್ರಾಸದ ಈ ಸೂತ್ರದ ಮೂರನೆಯ ಪಾದದಲ್ಲಿ ಪ್ರಾಸಾಕ್ಷರ 'ಮು' ಎಂದು ಬಿದ್ದಿದೆ, ಇದು 'ವು' ಎಂದಿರಬೇಕು.

Bಯವರ ಈ ಅಭಿಪ್ರಾಯ ಸರಿ. ಆದರೆ ವಾಸ್ತವವಾಗಿ ಇದು ಕೇವಲ ಅಚ್ಚಿನ ತಪ್ಪು, ಅಷ್ಟೆ.

೨. ಸೂತ್ರ ೨೨ :

ಸ್ವರಪರದೊಳಿರ್ಪಕತದಿಂ
ದುರು ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ
ಪರಿಕಿಸೆ......................

B. ಮೊದಲನೆಯ ಪಾದದ ಕತದಿಂ ಎಂಬುದಕ್ಕೆ 'ತೆಱದಿಂ' ಎಂದಿರುವ ಪಾಠಾಂತರ (ಕಿ. ಪ) ಪರಿಗ್ರಾಹ್ಯ. ಕಾರಣ : 'ಕತದಿಂ' ಎಂಬುದರ ಪುನರಾಗಮನ ತಪ್ಪುತ್ತದೆ.

ಈ ಅಭಿಪ್ರಾಯ ಸರಿಯಲ್ಲ. 'ಕತದಿಂ' ಎಂಬುದೇ ಪರಿಗ್ರಾಹ್ಯ. ಕಾರಣಗಳು ಮೂರು : (ಅ) ತೆಱದಿಂ ಎಂದೇ ಕೇಶಿರಾಜನ ಪಾಠವಿದ್ದಿದ್ದರೆ ಆ ಸುಲಭವಾದ ಪದವನ್ನು ತೆಗೆದುಹಾಕಿ 'ಕತದಿಂ' ಎಂಬ ಕ್ಲಿಷ್ಟ ಶಬ್ದವನ್ನು ಲಿಪಿಕಾರ ಹಾಕಲಾರ.

ಇ. ಕೇಶಿರಾಜ ಕೆಲವು ವೇಳೆ ಸೂತ್ರಗಳಲ್ಲಿ ಶಬ್ದಗಳನ್ನು ಪುನರುಕ್ತಿಮಾಡಿಲ್ಲವೆಂದು ಹೇಳುವ ಹಾಗಿಲ್ಲ. ಒಂದು ಉದಾಹರಣೆ :

ಇಂತೀ ಪೇೞ್ದ ವಿಭಕ್ತಿಗ
ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ಪ್ರಥಮಾ
ರ್ಥಂ ತೋಱಿಯುಂ ದ್ವಿತೀಯಾ
ರ್ಥಂ ತೋಱಿಯಮಲ್ಲಿ ಷಷ್ಠಿ ದೊರೆಕೊಂಡಿರ್ಕುಂ

ಇಲ್ಲಿ ತೋಱಿಯುಂ ಎಂಬುದರ ಪುನರಾಗಮನವಿದೆ.

ಉ. (ಪ)ದಲ್ಲಿ ಪ್ರತ್ಯಂತರದ ಒಂದರ ಪಾಠ 'ಕತದಿಂ' ಎಂದಿದೆ.

೩. ಸೂತ್ರ ೩೧ :

ಕೃತಿಮಾರ್ಗದೊಳುಂಟು ಟಕಾ
ರ ತಕಾರ ಠಕಾರ ತಕಾರ ರೇಫದೆಡೆಗಂ ಬಹುಳ
....

B. ಇಲ್ಲಿ ಎರಡನೆಯ ಪಾದದಲ್ಲಿ ಒಂದು 'ತಕಾರ' ಎಂಬುದು ಅಧಿಕವಾಗಿ ಬಂದಿದೆ.

ಇದು ತಪ್ಪು ಎಂಬುದು ನಿಜ. ಎರಡನೆಯ 'ತಕಾರ' ವನ್ನು ಬಿಡಬೇಕು. ಹೀಗಾದುದಕ್ಕೆ ಕಾರಣ ಇದು ಪುನರ್ ಲೇಖನವೆಂಬ ದೋಷಕ್ಕೆ ಒಳಗಾದುದು.

೪. ಸೂತ್ರ ೪೨ :

ತರದಿಂ ಪದಿನಾಲ್ಕಕ್ಕುಂ
ಸ್ವರ......................

B. ಇಲ್ಲಿನ ಪ್ರಥಮ ಪಾದಕ್ಕಿರುವ 'ತರದಿಂದಂ ಪದಿನಾಲ್ಕುಂ ಸ್ವರಂ' ಎಂಬ (ಕಿ. ಪ.) ಗಳ ಪಾಠವೇ ಪರಿಗ್ರಾಹ್ಯ, ಅಕ್ಕುಂ ಎಂಬ ಕ್ರಿಯಾಪದ ಅನವಶ್ಯ.

ಇರುವ ಎರಡು ಭಿನ್ನಪಾಠಗಳಲ್ಲಿ ಯಾವುದನ್ನಾದರೂ ಸ್ವೀಕರಿಸಬಹುದು. ಕೇಶಿರಾಜನಪಾಠ ಯಾವುದೆಂಬುದನ್ನು ನಿರ್ಣಯಿಸಲಾಗುವುದಿಲ್ಲ. ಕೂದಲು ಸೀಳುವುದನ್ನು ಬಿಟ್ಟರೆ ಎರಡಕ್ಕೂ ಸಮಾನವಾಗಿರುವ ಅರ್ಥವನ್ನು ತಿಳಿದುಕೊಳ್ಳಬಹುದು. ಅರ್ಥವ್ಯತ್ಯಾಸವೇನೂ ನಮಗೆ ತೋರುವುದಿಲ್ಲ.

೫. ಸೂತ್ರ ೪೩ :

ತಿಳಿ ದೇಶೀಯಮುಮೈದಂ
ಕಳೆ......................

B. ಇಲ್ಲಿ ತಿಳಿದೇಶೀಯಮುಮೈದಂ' ಎಂಬ (ಕಿ. ಪ.) ಗಳ ಪಾಠವೇ ಹೆಚ್ಚು ಶುದ್ಧ. ಹೈದರಾಬಾದಿನ ಪ್ರತಿಗಳಲ್ಲಿ 'ಮುಮೈದಂ' ಎಂದೇ ಇದೆ. ದೇಶೀಯಂ +ಅಂ+ಐದು+ಅಂ ಎಂದು ಬಿಡಿಸಿದರೆ ದ್ವಿತೀಯಾ ವಿಭಕ್ತಿಯ ದ್ವಿರುಕ್ತಿ ದೋಷ ಬರುತ್ತದೆ. ದೇಶೀಯಂ +ಅವು+ಐದಂ ಎಂದು ಬಿಡಿಸಿದರೆ ಈ ದೋಷ ತೊಲಗುತ್ತದೆ.

ದೇಶೀಯಂ+ಅವು+ಐದಂ ಎಂದೇ ಬಿಡಿಸಿಕೊಳ್ಳಬೇಕು. 'ದೇಶೀಯಮುಂ' ಎಂಬಲ್ಲಿನ –ಉಂ ಸಮುಚ್ಚಯ ಹಿಂದಿನ

ಸೂತ್ರದ ಸ್ವರಂ, ವರ್ಗಂ, ಅವರ್ಗಂ, ಯೋಗವಾಹಂ ಎಂಬ ಶಬ್ದಗಳಿಗೂ ಸೇರಿಕೊಂಡೇ ಸ್ವರಮುಂ, ವರ್ಗಮುಂ ಇತ್ಯಾದಿಯಾಗಿ ಬರಬೇಕಾಗಿತ್ತು. ಆದರೆ ಹಾಗೆ ಬಂದಿಲ್ಲ. ಅಭಿನ್ನ ಸೂತ್ರಗಳಾಗಿರುವ ಇವೆರಡರಲ್ಲಿ (೪೨, ೪೩) ಕೊನೆಯ ಶಬ್ದಕ್ಕೆ—ಎಂದರೆ 'ದೇಶೀಯಂ' ಎಂಬುದಕ್ಕೆ ಮಾತ್ರ ಸಮುಚ್ಚಯ -ಉಂ ಬರಲು ಕಾರಣವೇನು? ೪೨ನೆಯ ಸೂತ್ರದಲ್ಲಿರುವ ಅಕ್ಕುಂ ಎಂಬ ಕ್ರಿಯಾಪದ. ಸ್ವರಂ ಅಕ್ಕುಂ ವರ್ಗಂ ಅಕ್ಕುಂ ಎಂದು ಎಲ್ಲವಕ್ಕೂ ಅನ್ವಯವಾಗುತ್ತದೆ. ಅನಂತರ ಬರುವ ದೇಶೀಯಂ+ಅವು+ಐದಂ, ತಿಳಿ—ಎಂಬುದರಲ್ಲಿ ಕ್ಲೇಶವೇನೂ ಇಲ್ಲ. ಆದ್ದರಿಂದ 'ದೇಶೀಯಮುಮೈದಂ' ಎಂದು A ಅವರಿಂದ ಸ್ವೀಕೃತವಾಗಿರುವ ಪಾಠದಲ್ಲಿ ದೋಷವೇನೂ ಇಲ್ಲವೆಂದು ನಮಗೆ ತೋರುವುದು. ಅಲ್ಲದೆ ಇವು ಅಭಿನ್ನ ಸೂತ್ರಗಳೂ ಅಲ್ಲದಿರಬಹುದು.

೬. ಸೂತ್ರ ೫೦ :

ಇರ್ಪುಂ ತೋರ್ಪುಂ ಕರ್ಪುಂ
ನೇರ್ಪುಂ...................

B. ಈ ಸೂತ್ರದ ಮೊದಲ ಪಾದದಲ್ಲಿ 'ಕೆರ್ಪುಂ' ಎಂದಿರಬೇಕು.

ಇದು ಸಕಾರಣವಾಗಿದೆ, ಸರಿ. ಆದರೆ ಇದು ಕೇವಲ ಅಚ್ಚಿನ ತಪ್ಪು.

೭. ಸೂತ್ರ ೨೮–೨೯ :

ಅತಿಪೀಡನದಿಂ ರೇಫಾ
ಶ್ರಿತಮಾದ ಱಕಾರಮುಂ ಸಮಂತು ಡಕಾರಾ|
ಶ್ರಿತಮಾದ ೞಟನುಮಂಗೀ
ಕೃತ ಪದಲತ್ವಕ್ಕೆ ಸಮನೆಸಲ್ಲದ ಕುಳನುಂ ||

ಇವು ವರ್ಣಾವೃತ್ತಿಗೆ ಸಲ್ಪುವು ಸಂದುಂ ಪ್ರಾಸದೆಡೆಗೆ ಸಲ್ಲವು .... ೨೮ನೆಯ ಸೂತ್ರದ ಕೊನೆಯ ಪಾದಕ್ಕೆ 'ಕೃತ ಪದಲತ್ವಕೆ ಸನೇಮ ಸಲ್ಲದ ಕುಳನುಂ'(ಕಿ) ಎಂದೂ, 'ಕೃತ ಪದಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ'(ಪ) ಎಂದೂ ಎರಡು ಬೇರೆ ಪಾಠಾಂತರಗಳಿವೆ. ಹೀಗೆ ಒಟ್ಟು ಮೂರು ಪಾಠಗಳಲ್ಲಿ ಯಾವುದು ಗ್ರಾಹ್ಯ ಎಂಬುದು ಪ್ರಶ್ನೆ.

B. ಆಕ್ಷೇಪಣೆ : 'ಅಂಗೀಕೃತ ಪದಲತ್ವಕ್ಕೆ ಸಮನೆ ಸಲ್ಲದ ಕುಳನುಂ' ಎಂದು ಸ್ವೀಕರಿಸಿರುವ ಪಾಠ ಉಚಿತವಲ್ಲ. ಇದಕ್ಕೆ B ಅವರು ಕೊಡುವ ಕಾರಣಗಳು :

(ಅ) ಸೂತ್ರದ ಮೊದಲೆರಡು ವಾಕ್ಯಗಳಿಗೂ, ವೃತ್ತಿಯ ಮೊದಲೆರಡು ವಾಕ್ಯಗಳಿಗೂ ಹೊಂದಿಕೆ ಇದೆ; ಸೂತ್ರದ ಮೂರನೆಯ ವಾಕ್ಯಕ್ಕೂ ವೃತ್ತಿಯ ಮೂರನೆಯ ವಾಕ್ಯಕ್ಕೂ ಹೊಂದಾಣಿಕೆಯಿಲ್ಲ.

(ಆ) 'ಅಂಗೀಕೃತಪದ' ಎಂದರೆ ಅಂಗೀಕರಿಸಲ್ಪಟ್ಟ ಕನ್ನಡ ಪದ. ಅದರಲ್ಲಿರುವ ಲಕಾರಕ್ಕೆ ಳತ್ವ ಬಂದರೆ ಅರ್ಥ ವ್ಯತ್ಯಾಸವಾಗುವುದರಿಂದ ಅವು ಎಂದರೆ ಲ್, ಳ್ ಗಳು ಭಿನ್ನ ವರ್ಣಗಳು. ಆದ್ದರಿಂದ ಪ್ರಾಸಕ್ಕೆ ಸಲ್ಲವು.

(ಇ) ಲ್, ಳ್ ಗಳ ಏಕಸ್ಥಾನಿತ್ವದ ವಿಷಯವಾಗಿ ಮೌನ ತಾಳಿದೆ.

(ಈ) (ಕಿ) ಪ್ರತಿಯ ಪಾಠ 'ಅಂಗೀಕೃತ ಪದಲತ್ವಕೆ ಸನೇಮ ಸಲ್ಲದ ಕುಳನುಂ' ಎಂಬುದು ಅಗ್ರಾಹ್ಯ. 'ಸನೇಮ ಸಲ್ಲದ' ಎಂದರೆ ಪ್ರಾಸಕ್ಕೆ ಸಲ್ಲದ ಎಂದು. ಮುಂದಿನ ಸೂತ್ರದಲ್ಲಿಯೂ (೨೮) 'ಪ್ರಾಸದೆಡೆಗೆ ಸಲ್ಲವು' ಎಂದಿದೆ. ಆದ್ದರಿಂದ ಪುನರುಕ್ತಿ ದೋಷವಿದೆ.

(ಉ) (ಪ)ದ ಪಾಠ 'ಅಂಗೀಕೃತ ಪದಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ' ಎಂಬುದು ಸ್ವೀಕರಣ ಯೋಗ್ಯ. ಕಾರಣಗಳು i. ಲಕಾರದ ಬೆಟ್ಟಿತುಚ್ಚರಣೆ (ಅತಿಪೀಡನತ್ವ) ಇಲ್ಲಿ ಸೂಚಿತವಾಗಿದೆ. ii. ವೃತ್ತಿಯ ಮೂರನೆಯ ವಾಕ್ಯಕ್ಕೆ ಇದು ಹೊಂದಿಕೊಳ್ಳುತ್ತದೆ.

B ಅವರ ಈ ಆಕ್ಷೇಪಣೆಗೆ ಸಮಾಧಾನ ಸುಲಭವಾಗಿಯೇ ಕೊಡಬಹುದೆಂದು ತೋರುತ್ತದೆ. (ಕಿ) ಪ್ರತಿಯ ಪಾಠವನ್ನು A ಅವರೂ B ಅವರೂ ತ್ಯಜಿಸಿರುವುದರಿಂದ ಅದರ ವಿಷಯದ ಚರ್ಚೆ ಅಪ್ರಕೃತ. 'ಅಂಗೀಕ್ರತ ಪದಲತ್ವಕ್ಕೆ ಸಮನೆ ಸಲ್ಲದ ಕುಳನುಂ' ಎಂಬಲ್ಲಿನ 'ಸಮನೆ ಸಲ್ಲದ' ಎಂಬ ಪದಗಳ ಅರ್ಥವೇನು? ಸಮಾನವಾಗಿ ಸಲುವಳಿಯಾಗದ ಎಂದು ತಾನೆ? ಲಕಾರಕ್ಕೆ ಸಮಾನವಾಗಿ ಸಲ್ಲುವ ಒಂದಕ್ಷರವಿದೆಯೆಂದು ಇದರಿಂದ ಧ್ವನಿತವಾಗುತ್ತದೆ. ಆ ಅಕ್ಷರ ಕ್ಷಳವೆಂಬುದು ಸ್ಪಷ್ಟ. 'ಸಂಸ್ಕೃತ ಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್' (ಸೂತ್ರ ೨೬) ಎಂಬುದನ್ನು ಪರಿಗಣಿಸಬೇಕು. ಇಲ್ಲಿನ

'ಸರಿಯಾಗಿ' ಎಂಬುದಕ್ಕೆ ಸೂತ್ರ ೨೭ರ 'ಸಮನೆ' ಎಂಬ ಪದ ಬಂದಿರುತ್ತದೆ. ಸಂಸ್ಕೃತ ಶಬ್ದದ ಲಕಾರದೆಡೆಯಲ್ಲಿ ಳಕಾರ (ಕ್ಷಳ) ಬಂದರೆ ಅರ್ಥ ವ್ಯತ್ಯಾಸವಿಲ್ಲದಿರುವುದರಿಂದ ಅಲ್ಲಿ ಸಮಾನತೆ ಇದೆ. ಕನ್ನಡ ಶಬ್ದದ ಲಕಾರಕ್ಕೆ ಳ (ಕುಳ) ಕಾರ ಬಂದರೆ ಅರ್ಥ ವ್ಯತ್ಯಾಸವಾಗುವುದರಿಂದ ಸಮಾನತೆ ಇಲ್ಲ. ಇದನ್ನು ತೋರಿಸುವುದಕ್ಕಾಗಿ 'ಸಮನೆ ಸಲ್ಲದ' ಎಂಬ ಶಬ್ದಗಳು ಸೂತ್ರದಲ್ಲಿ (೨೭) ಬಂದಿವೆ. 'ಅಂಗೀಕೃತ ಪದಲಕ್ಷ್ಯಕ್ಕೆ' ಎಂಬ ಸೂತ್ರ ಶಬ್ದಗಳಿಗೆ ಅರ್ಥೈಸುವಾಗ ಅಂಗೀಕೃತ ಪದ ಸಂಸ್ಕೃತವೊ ಕನ್ನಡವೊ ಎಂಬ ಸಂದೇಹ ಉಂಟಾಗುತ್ತದೆ. ಆ ಪದ ಸಂಸ್ಕೃತವಲ್ಲ ಕನ್ನಡವೇ ಆಗಿರುವುದೆಂಬುದನ್ನು 'ಸಮನೆ ಸಲ್ಲದ' ಎಂಬ ಶಬ್ದಗಳು ಸೂಚಿಸುತ್ತವೆ. ಕನ್ನಡ ಶಬ್ದದ ಲಕಾರವನ್ನು ಬೆಟ್ಟಿತ್ತಾಗಿ ಉಚ್ಚರಿಸಿದರೆ ಕುಳ ಬರುತ್ತದೆ ತಾನೆ? ಕ್ಷಳ ಹೇಗೆ ಬರುತ್ತದೆ? ಸಂಸ್ಕೃತ ಶಬ್ದಗತ ಲಕಾರವನ್ನು 'ಬೆಟ್ಟಿತ್ತಾಗಿ' ಉಚ್ಚರಿಸುವುದರಿಂದ ತಾನೆ ಅದು (ಕ್ಷಳ) ಬರುವುದು? ಆದ್ದರಿಂದ 'ಬೆಟ್ಟಿತೆಸಿಸಿದ'ಳಕಾರಗಳು ಎರಡು ಇವೆಯೆಂದು ಹೇಳಬಹುದು. ಅವುಗಳಲ್ಲಿ ಕುಳವನ್ನು ಪ್ರತ್ಯೇಕಿಸುವುದಕ್ಕಾಗಿ 'ಸಮನೆ ಸಲ್ಲದ' ಎಂಬ ಪದಗಳನ್ನು ಸೂತ್ರದಲ್ಲಿ ಬಳಸಿದೆ. ಅಲ್ಲದೆ A ಅವರಿಂದ ಸ್ವೀಕೃತವಾಗಿರುವ ಪಾಠವೇ ಮದರಾಸಿನ ಮುದ್ರಣದಲ್ಲಿಯೂ (ಸೂತ್ರ ೨೧), ಭಟ್ಟಾಕಳಂಕನ 'ಶಬ್ದಾನುಶಾಸನ'ದಲ್ಲಿಯೂ (ಪುಟ ೧೬೭) ದೊರೆಯುತ್ತದೆ. ಇನ್ನು ಏಕಸ್ಥಾನಿತ್ವದ ವಿಚಾರವಾಗಿ ವೃತ್ತಿಯಲ್ಲಿ ಹೇಳಿರುವ ವಾಕ್ಯಗಳು—ಅವುಗಳಿಗೆ ಸೂತ್ರಗಳಲ್ಲಿ ಏನೂ ಆಧಾರವಿಲ್ಲದಿರುವುದರಿಂದಲೂ, ಸೂತ್ರದಲ್ಲಿ ಹೇಳದೆ ಬಿಟ್ಟ ಅಂಶಗಳನ್ನು ವೃತ್ತಿಯಲ್ಲಿ ಹೇಳುವುದೂ ಗ್ರಂಥಕರ್ತ ಕೇಶಿರಾಜನ ಸಂಪ್ರದಾಯವಾಗಿರುವುದರಿಂದಲೂ—ಅಧಿಕವಾಗಿ ಬಂದಿವೆಯೆಂದು ಎಣಿಸಬಹುದು. ಈ ಕಾರಣಗಳಿಂದ A ಅವರಿಂದ ಸ್ವೀಕೃತವಾಗಿರುವ ಪಾಠವೇ ಯೋಗ್ಯವೆಂದು ನಮಗೆ ತೋರುತ್ತದೆ.

೮. ಸೂತ್ರ ೭೨ :

ಪದಯುಗದ ಸಂಧಿಯುಂ........

B. ಇಲ್ಲಿ 'ಪದಯುಗದ ಸಂಧಿಯಂ' ಎಂದಿರಬೇಕು.

ಇದು ಸರಿ. 'ಯುಂ' ಎಂಬುದು ಅಚ್ಚಿನ ತಪ್ಪು ಎಂದು ಸ್ವಯಂ ವೇದ್ಯವಾಗಿದೆ. ಇದನ್ನು ಹೆಸರಿಸಬೇಕಾದ ಅಗತ್ಯವಿಲ್ಲ.

೯. ಸೂತ್ರ ೧೦೬ :

ಸಂಗಡಿಸಿ ಸರ್ವನಾಮದ

....

B. ಈ ಸೂತ್ರದ ಮೂರನೆಯ ಪಾದದಲ್ಲಿರುವ 'ಪಿಂಗದು ಲೋಪಂ'ಎಂಬ ಪಾಠಕ್ಕಿಂತ 'ಪಿಂಗದೆ ಲೋಪಂ' ಎಂಬ ಪಾಠವೇ ಮೇಲು. ಕಾರಣ 'ಲೋಪ ತೊಲಗುವುದಿಲ್ಲ' ಎಂಬುದರ ಜೊತೆಗೆ 'ಲೋಪವುಂಟಾಗುವುದಿಲ್ಲ' ಎಂಬ ಭ್ರಮೆಗೂ ಎಡೆ ಇದೆ.

'ಲೋಪವು ಹಿಂಜರಿಯುವುದಿಲ್ಲ, ಎಂದರೆ ಬಂದೇ ಬರುತ್ತದೆ' ಎಂಬ ಅರ್ಥ ನೇರಾಗಿಯೇ ಇದೆ. ಭ್ರಾಂತಿ ಉಂಟಾಗುವುದೆಂದು 'ಪಿಂಗದೆ' ಎಂದಿಟ್ಟುಕೊಂಡರೆ 'ಲೋಪಂ' ಎಂಬ ಕರ್ತೃ ಪದಕ್ಕೆ ಕ್ರಿಯಾಪದವೇ ಇಲ್ಲವಾಗುತ್ತದೆ. ಕೆಲವರಿಗೆ 'ಪಿಂಗದೆ' ಎಂಬುದು ಪ್ರಶ್ನಾರ್ಥಕವಾಗಿಯೂ ತೋರಿ 'ಹಿಂಗುವುದಿಲ್ಲವೆ,' ಎಂಬ ಅರ್ಥ ಆಗುವುದಕ್ಕೂ ಎಡೆ ಇದೆ. ಮತ್ತೆ ಕೆಲವರಿಗೆ 'ಪಿಂಗದೆ' ಎಂಬುದು ಹಿಂಜರಿಯದೆ ಎಂಬರ್ಥದ ಅಪೂರ್ಣಕ್ರಿಯೆಯಾಗಿ ತೋರಬಹುದು ಹಿಂಜರಿಯದೆ ಮುಂದೇನಾಯಿತು ಎಂಬ ಪ್ರಶ್ನೆ ಬರಬಹುದು. ಈ ಸೂತ್ರದ ಕೊನೆಯಭಾಗದಲ್ಲಿರುವ 'ಗುಣವಚನಂಗಳೊಳಂತ್ಯಂ ದುಕಾರಮಾದೊಡೆ ಲೋಪಂ' ಎಂಬುದು ಕ್ರಿಯಾಪದವಿಲ್ಲದೆಯೇ ಪೂರ್ಣಾರ್ಥವನ್ನು ಕೊಡುವುದಾಗಿದೆ. ಹಾಗೆಯೇ ಈ ಸೂತ್ರದ ಪೂರ್ವಭಾಗವಾದ 'ಸಂಗಡಿಸಿ ಸರ್ವನಾಮದ. . .ಲೋಪಂ' ಎಂಬುದು ಕೂಡ ಕ್ರಿಯಾಪದವಿಲ್ಲದೆಯೇ ಅರ್ಥಬೋಧೆಯನ್ನು ಮಾಡಿಕೊಡುತ್ತದೆ. ಆದ್ದರಿಂದ 'ಪಿಂಗದೆ' ಎಂಬುದು ಪ್ರಾಸಕ್ಕಾಗಿ ಹಾಕಿರುವ ಶಬ್ದ; ಪಿಂಗದು ಎಂದಿದ್ದರೂ ಅಷ್ಟೆ ಎಂದು ಮತ್ತೆ ಕೆಲವರು ಆಕ್ಷೇಪ ಹೇಳಬಹುದು. ಪಿಂಗದು + ಎ ಎಂದು ಬಿಡಿಸಿ, ಇಲ್ಲಿ ಅವಧಾರಣೆಯ ಎ ಇದೆಯೆಂದು ಹೇಳಿದರೆ ಆಗ ಪಿಂಗದೆ ಎಂಬುದರ ಅವಧಾರಣಾರ್ಥಕ್ಕೆ ಇನ್ನೊಂದು ಕ್ರಿಯೆಯ ನೆರವು ಬೇಕಾಗುತ್ತದೆ, ಪಿಂಗದೆ ಲೋಪಂ ಅಕ್ಕುಂ ಎಂಬಂತೆ. ತಪ್ಪದೆ ಬಾಟ್ವಿಸ್, ಮೆಟ್ಟದೆ ಕೊಂಡನೇ ಎಂಬ ಪಂಪಭಾರತದ ಪ್ರಯೋಗಗಳನ್ನು (೯-೫೦, ೫೩) ನೋಡಬಹುದು. ಈ ಗೊಂದಲವನ್ನೆಲ್ಲ ಪರಿಹಾರ ಮಾಡಲು ಇರುವ ಮಾರ್ಗ ಒಂದೇ, 'ಪಿಂಗದೆ' ಎಂಬುದನ್ನು ಬಿಟ್ಟು 'ಪಿಂಗದು' ಎಂಬ ಕ್ರಿಯಾಪದವನ್ನು ಸ್ವೀಕರಿಸುವುದು. ಆದ್ದರಿಂದ A ಅವರ ಸ್ವೀಕೃತ ಪಾಠ ಸರಿಯೆಂದೂ, ಯೋಗ್ಯವೆಂದೂ ತೋರುವುದು.

೧೦. ಸೂತ್ರ ೧೧೦ : (೨ನೆಯ ಪಾದ)

ನವಿಶೇಷದಿನುಸಿರ್ವ ರೂಢಿಯನಿತಿನಿತೆ
ಲ್ಲವು...................

B. ಇಲ್ಲಿ ' ನಿತೆ ' ಎಂಬುದು ಬಿಟ್ಟುಹೋಗಿದೆ. ಇದನ್ನು ಸೇರಿಸಿಕೊಂಡರೆ ಪಾದದ ಮಾತ್ರಾಸಂಖ್ಯೆ ಸರಿಯಾಗುತ್ತದೆ.

ಈ ತಿದ್ದುಪಡಿ ಯೋಗ್ಯ ಮತ್ತು ಆವಶ್ಯಕ. ಆದರೆ ಇಲ್ಲಿ ಈ ತಪ್ಪು ಆಗಲು ಕಾರಣವಿದೆ. ಬಹುಶಃ ' ನಿತೆ ' ಎಂಬುದು ಅಚ್ಚಾಗುವಾಗ ಹಾರಿ ಹೋಗಿರಬಹುದು.

೧೧. ಸೂತ್ರ ೧೧೦ : (ಕೊನೆಯ ಪಾದ ಭಾಗ)

................ವತ್ವವೊಡನಿರೆ ಪಡೆಗುಂ

B. ಇಲ್ಲಿ ' ಒಡನಿರೆ ' ಎಂಬುದಕ್ಕೆ ಪ್ರತಿಯಾಗಿ ಕಿಟ್ಟೆಲ್ ಅವರ ಪಾಠವಾದ ' ಒದವಿರೆ ' ಎಂದಿಟ್ಟುಕೊಳ್ಳಬೇಕು. ' ವತ್ವವೊಡನಿರೆ ' ಎಂದರೆ ವತ್ವದೊಂದಿಗೆ ಎಂಬರ್ಥ ಬಂದು ಅನಿತು, ಇನಿತು ಇತ್ಯಾದಿಗಳ ಅಂತ್ಯಾಕ್ಷರದೊಂದಿಗೆ ವಕಾರವೂ ಲೋಪವಾಗುವುದೆಂಬ ಅರ್ಥ ಬರುತ್ತದೆ.

ಒಡನಿರೆ, ಒದವಿರೆ ಎಂಬೆರಡೂ ಇಲ್ಲಿ ಸಮಾನಾರ್ಥಕಗಳೆಂದೇ ನಮ್ಮ ಅಭಿಪ್ರಾಯ. ವತ್ವವು ಕೂಡಿರಲು, ಎಂದರೆ ವ ಸಮೇತವಾದ–ಅರ್. ಇರಲು ಅನಿತು ಮುಂತಾದವುಗಳ ಅಂತ್ಯವರ್ಣ–ತು ಲೋಪವಾಗುತ್ತದೆ ಎಂದು ಕೇಶಿರಾಜನ ಅರ್ಥವೇ ಆಗುತ್ತದೆ. ಇಲ್ಲಿನ ಎರಡು ಪಾಠಗಳಲ್ಲಿ ಯಾವುದಾದರೂ ಇರಬಹುದು, ಅವುಗಳ ನಡುವಣ ವ್ಯತ್ಯಾಸ ಅತ್ಯಲ್ಪವಾದುದರಿಂದ.

೧೨. ಸೂತ್ರ : ೧೩೫

ಅವಿಶೇಷದಿಂದದಂತ
ಕ್ಕೆ ವರ್ಣಮೊದವುವುದು . . .

B. ಈ ಸೂತ್ರದ ಪ್ರಥಮ ಪಾದ ಪಾಠ ' ಅವಿಶೇಷದೆ ಲಿಂಗಾಂತ್ಯ | ಕ್ಕೆ . . . ' ಎಂದಿರಬೇಕು. ಇದಕ್ಕೆ ಆಧಾರ ' ಶಬ್ದಮಣಿದರ್ಪಣದ ಪಾಠಾಂತರಗಳು ' ಎಂಬ ಗ್ರಂಥದಲ್ಲಿರುವ ಹೈದರಾಬಾದು ಪ್ರತಿಯ ಪಾಠ.

ಈ ಸೂಚನೆ ಸ್ವೀಕರಣಯೋಗ್ಯ. ಆದರೆ ಬೇರೆ ಹಸ್ತಪ್ರತಿಗಳಲ್ಲಿ ಇದೇ ವಿಧವಾದ ಪಾಠ ದೊರೆಯುವುದೇ ಎಂಬುದನ್ನು ನೋಡಬೇಕು. ದೊರೆತರೆ ಆಗ ಇದಕ್ಕೆ ಸ್ವೀಕರಣಯೋಗ್ಯವಾದ ಪುಷ್ಟಿಯುಂಟಾಗುತ್ತದೆ. ಆದರೂ ಪ್ರಕೃತ ಈ ಉಚಿತ ಸೂಚನೆಗಾಗಿ B ಅವರಿಗೆ ನಮ್ಮ ಶ್ಲಾಘನೆ ಸಲ್ಲುತ್ತದೆ.

೧೩. ಸೂತ್ರ : ೧೭೧

ಅಂತಹನಿಂತಹನುಂತಹ
ನೆಂತಹನೆಂದಿಂತು ತದ್ವಿವರುಕ್ತಿಗೆ ಹತ್ವಂ |
ಭ್ರಾಂತೇಂ ಗಡಾರ್ಥದೊಳ್ ಮೇ
ಣಂತವಱಿಡೆಗನ್ನನಿನ್ನನನ್ನ**ನು**ಮೆನ್ನಂ ||

B ಈ ಸೂತ್ರದ ಕೊನೆಯ ಪಾದದಲ್ಲಿ ' ಉನ್ನಮುಂ ' ಎಂಬ ನಪುಂಸಕ ಪದ ಇರಬೇಕು. ಕಾರಣ ' ಅಂತವಱ ' ಎಂಬ ನಪುಂಸಕ ಸೂಚಿ ಶಬ್ದ ಇರುವುದು. (ಕಿ. ಪ.) ಪ್ರತಿಗಳಲ್ಲಿ ' ಗಂನನಿಂನನುಂ ನಮು**ಮು**ಮೆಂನಂ' ಎಂಬ ಪಾಠವನ್ನು ಗಮನಿಸಬೇಕು.

ಇಲ್ಲಿ ' ಅವಱ ' ಎಂಬ ನಪುಂಸಕ ಶಬ್ದ ಅಂತಹಂ, ಇಂತಹಂ, ಉಂತಹಂ, ಎಂತಹಂ–ಎಂಬ ಶಬ್ದಗಳಿಗೆ ಅನ್ವಯಿಸುತ್ತದೆಯೇ ಹೊರತು ಮುಂದೆ ಬರುವ ಅನ್ನಂ ಮುಂತಾದವುಗಳಿಗೆ ಅನ್ವಯಿಸುವುದಿಲ್ಲ. ' ಅವಱ ' ಎಂದರೆ ಆ ಶಬ್ದಗಳ ಎಂದು ಅರ್ಥ. ಅನ್ನಂ, ಇನ್ನಂ ಮುಂತಾದುವು ಪುಲ್ಲಿಂಗದ ಶಬ್ದಗಳು, ಅಂತಹಂ, ಇಂತಹಂ, ಮುಂತಾದವುಗಳ ಹಾಗೆ. ಆದ್ದರಿಂದ ಸೂತ್ರದಲ್ಲಿರುವ 'ಉನ್ನನುಂ' ಎಂಬ ಪಾಠವೇ ಸಾಧು. ನಪುಂಸಕವೇ ಆಗಿದ್ದರೆ ' ಉನ್ನದುಂ ' ಎಂದಿರಬೇಕಾಗಿತ್ತು.

೧೪. ಸೂತ್ರ : ೭೮

ಇರೆ ಯಲರಹಿತ ವ್ಯಂಜನ
. . . . . .

B. ಈ ಸೂತ್ರದ ಉತ್ತರಾರ್ಧದಲ್ಲಿ ಎರಡು ಸಲ ಬಂದಿರುವ ' ಅರೆಯೆಡೆ ' ಎಂಬುದು ತಪ್ಪು ; 'ಅರೆ ಎಡೆ' ಎಂದು ವಿಸಂಧಿಯಾಗಿರಬೇಕು.

B ಯವರ ಸಲಹೆ ಸರಿ. ಈ ತಪ್ಪು ಬಹುಶಃ ಅನವಧಾನದಿಂದ ಬಂದಿರಬಹುದು. ಏಕೆಂದರೆ ಸೂತ್ರ ೩೦ಳರಲ್ಲಿ 'ಅರೆ ಎಡೆ ' ಎಂದು ಸರಿಯಾಗಿಯೇ ಅಚ್ಚಾಗಿದೆ.

ವೃತ್ತಿಗಳು

೧. ವೃತ್ತಿ : ೧೯ನೆಯ ಸೂತ್ರ :

'ಸಮಾನ ಸಂಜ್ಞೆಯಂ ಪಡೆದ ಪತ್ತಕ್ಕರದ ಮೊದಲಕ್ಕರಂಗಳ್ ಹ್ರಸ್ವಂ ಅವಾವುವೆಂದೊಡೆ–ಅ ಇ ಎ ಋ ಌ ಎ ಒ ಎಂಬಿವುಮಾ ಪ್ರಕಾರದೊಳ್ ವರ್ತಿಸುಗುಂ.'

B. ಇಲ್ಲಿ 'ಸಮಾನ ಸಂಜ್ಞೆಯಂ ಪಡೆದ ಪತ್ತಕ್ಕರಂಗಳ್ ಮೊದಲಕ್ಕರಂಗಳ್ ಹ್ರಸ್ವಂ, ಅವಾವುವೆಂದೊಡೆ–ಅ ಇ ಉ ಋ ಌ ಎಂಬಿವು ಎ ಌ ಎಂಬಿವುಮಾ ಪ್ರಕಾರದೊಳ್ ವರ್ತಿಸುಗುಂ' ಎಂದು ಪಾಠವಿರಬೇಕು.

Bಯವರ ಈ ಸೂಚನೆ ಗ್ರಾಹ್ಯ.

೨. ವೃತ್ತಿ : ೪೦ನೆಯ ಸೂತ್ರ :

'ಕೊರಲೊಳಂ ನಾಲಗೆಯ . . . ಮಿಾಯೆಂಟಱೊಳ್'

B. ಇದರಲ್ಲಿ 'ನಾಸಿಕೆಯೊಳಂ' ಎಂಬುದು ಬಿಟ್ಟು ಹೋಗಿದೆ.

ಹೌದು, ಸೇರಿಸಬೇಕು. ಇದೂ ಕೂಡ ಅನವಧಾನದ ಫಲ.

೩. ವೃತ್ತಿ : ೪೫ನೆಯ ಸೂತ್ರ :

ಅ. 'ವಿಭಕ್ತಿಗಳಾವುವೆಂದೊಡೆ ಮ್, ಅಮ್ ಮೊದಲಾದ ನಾಮಾಖ್ಯಾತ ವಿಭಕ್ತಿಗಳುಮಂ ಪ್ರತ್ಯಯಮೆನಲಕ್ಕುಂ'.

B. ಈ ವಾಕ್ಯ ಅಶುದ್ಧ; ಇಲ್ಲಿ 'ವಿಭಕ್ತಿ' ಎಂಬ ದ್ವಿರುಕ್ತಿಯ ದೋಷವಿದೆ. ಕಿಟೆಲ್, ಪರಿಷತ್ ಪ್ರತಿಗಳಲ್ಲಿ ಇದು ಎರಡು ವಾಕ್ಯಗಳಾಗಿದ್ದು ದೋಷರಹಿತವಾಗಿದೆ. ಮದರಾಸು ಪ್ರತಿಯ ಪಾಠದಲ್ಲಿ ಹುರುಳಿಲ್ಲದ ಸಮುಚ್ಚಯ (ವಿಭಕ್ತಿಗಳುಮಂ) ಎಂಬಲ್ಲಿ ಬಂದಿದೆ.

೧. 'ಇಲ್ಲಿ (ಮದರಾಸು ಪ್ರತಿಯಲ್ಲಿ) ಕೊಟ್ಟಿರುವ ವೃತ್ತಿಗಳು ಕೇಶಿರಾಜನವಲ್ಲಾದ್ದರಿಂದ ಪ್ರಕೃತ ಪರಿಷ್ಕರಣಕ್ಕೆ ಹೆಚ್ಚಿನ ಸಹಾಯವಾಗುವಂತಿಲ್ಲ' ಎಂದು A ಅವರೇ ಹೇಳಿರುವುದರಿಂದ ಅವರು ಮದರಾಸು ಪ್ರತಿಯ ಬೆನ್ನು ಹತ್ತಿರಲಾರರು. ಬಹುಶಃ ಇದು (ಕ) ಪ್ರತಿಯ ಪಾಠವಿರಬಹುದು, ಇಲ್ಲವೇ ಅಲ್ಲಿಯೇ ತಪ್ಪಾಗಿರಬಹುದು. ಕಿಟೆಲ್ ಮತ್ತು ಪರಿಷತ್ ಪಾಠಗಳು ಶುದ್ಧವೇ ಸರಿ. ಆದರೆ A ಅವರು ಕೊಟ್ಟಿರುವ ವೃತ್ತಿಯ 'ವಿಭಕ್ತಿಗಳುಮಂ' ಎಂಬುದನ್ನು ಲಿಪಿಕಾರನ ದೋಷವೆಂದು ಭಾವಿಸಿ ವಿಭಕ್ತಿಗ[ಳವಂ] ಎಂದು ತಿದ್ದಿಕೊಂಡರೆ ಅರ್ಥಸ್ಪಷ್ಟತೆಯುಂಟಾಗುತ್ತದೆ. 'ವಿಭಕ್ತಿ' ಎಂಬುದರ ಪುನರುಕ್ತಿ ಅರ್ಥಸ್ಪಷ್ಟತೆಗಾಗಿಯೇ ಎಂದು ಭಾವಿಸಬಹುದು. ಮುಂದೆ 'ಅವಂ ಪ್ರತ್ಯಯಮೆನಲಕ್ಕುಂ' ಎಂಬುದು ಹೊಂದಿಕೊಳ್ಳುತ್ತದೆ.

ಇ. 'ಆ ವಿಭಕ್ತಿಗಳ ಪಿಂದಿರ್ಪ ಪ್ರಕೃತಿ ಲಿಂಗಮಂ ಧಾತುವಂ ಪ್ರಕೃತಿಯೆನಲಕ್ಕುಂ'

B. ಈ ಪಾಠವೂ ಮದರಾಸು ಪ್ರತಿಯ ಪಾಠವೂ ಬಲುಮಟ್ಟಿಗೆ ಒಂದೆ; 'ಪಿಂದಿರ್ಪ'ಕ್ಕೆ ಪ್ರತಿಯಾಗಿ 'ಪಿಂದಿರ್ದುದು' ಎಂದಿದೆ ಅಷ್ಟೆ. 'ಪ್ರಕೃತಿ' ಮುಂದೆ ಇರುವ ಪೂರ್ಣವಿರಾಮ ಚಿಹ್ನೆಯನ್ನು ಗಮನಿಸಿಲ್ಲ. 'ಪ್ರಕೃತಿಲಿಂಗ' ಎಂಬ ಹೊಸಪದ ಹುಟ್ಟಿಕೊಂಡಿದೆ.

A ಅವರು ಮದರಾಸು ಪ್ರತಿಯ ಪಾಠವನ್ನು ಅನುಸರಿಸಲಾರರೆಂದು ಹಿಂದೆಯೇ ಹೇಳಿದೆ. ಅವರು ಕೊಟ್ಟಿರುವುದು (ಕ) ಪ್ರತಿಯ ಪಾಠವಿದ್ದು ಅಲ್ಲಿಯೇ ಅಶುದ್ಧವಾಗಿರುವುದೂ ಸಾಧ್ಯವಿದೆ. ಆ ಪಾಠದಲ್ಲಿ ಕಾಣುವ 'ಪ್ರಕೃತಿ' ಎಂಬ ದ್ವಿರುಕ್ತಿಯಲ್ಲಿ ಮೊದಲಿನದನ್ನು ಬಿಟ್ಟರೆ ಎಲ್ಲ ದೋಷಗಳೂ ತೊಲಗಿಹೋಗುತ್ತವೆ. 'ಆ ವಿಭಕ್ತಿಗಳ ಪಿಂದಿರ್ಪ ಲಿಂಗವಂ ಧಾತುವಂ ಪ್ರಕೃತಿಯೆನಲಕ್ಕುಂ' ಎಂದು ಸರಿಯಾದ ಪಾಠ ದೊರೆಯುತ್ತದೆ. ಇಲ್ಲಿ ವಿಶೇಷ ವಿಷಯವೆಂದರೆ (ಕ) ದ ವೃತ್ತಿಗೂ ಮದರಾಸು ಪ್ರತಿಯ ಲಿಂಗಣಾರಾಧ್ಯ ವಿರಚಿತ ವೃತ್ತಿಗೂ ಸಾದೃಶ್ಯವಿರುವುದು. ಈ ವೃತ್ತಿಯಲ್ಲಿ ಪಾಠ ಸಮ್ಮಿಶ್ರಣವಿರುವಂತೆ ತೋರುತ್ತದೆ. ಆದರೆ ಯಾವುದರಿಂದ ಯಾವುದಕ್ಕೆ ಮಿಶ್ರಣವಾಯಿತೆಂದು ಹೇಳುವುದಾಗುವುದಿಲ್ಲ.

೪. ವೃತ್ತಿ : ಸೂತ್ರ ೫೯ :

B. ಸೂತ್ರದಲ್ಲಿರುವ 'ಪರಸ್ಪರಂ' ಎಂಬುದರ ಅರ್ಥ 'ಅನ್ಯೋನ್ಯವಾಗಿ' ಎಂಬುದು ವೃತ್ತಿಯಲ್ಲಿ ಬಿಟ್ಟು ಹೋಗಿದೆ. ಅದರ ಅರ್ಥವನ್ನು ಒಂದು ಎಳೆ ಬಿಡದ ಹಾಗೆ 'ಅನ್ಯೋನ್ಯ' ಎಂಬ ಮಾತು ಸಮರ್ಥವಾಗಿ ಹಿಡಿದುಕೊಂಡಿದೆ.

B ಯವರ ಈ ಕಾರಣ ಭಾವನಾಮಯವೆಂದು ನಮಗೆ ಅನ್ನಿಸುತ್ತದೆ. ಆದರೂ ಇದೊಂದು ಪರಿಭಾವನಾರ್ಹ

(೩೦ನೆಯ ಪುಟಕ್ಕೆ)

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

ತಿ. ತಾ. ಶರ್ಮ

ಪ್ರಥಮ ದ್ರಾವಿಡ

"ಈ ಮೂರೂ ಭಾಷೆಗಳೂ (ತಮಿಳು, ತೆಲುಗು, ಕನ್ನಡ) ಕೂಡುವ ಪ್ರಸ್ಥಭೂಮಿಯಲ್ಲಿ ಇವುಗಳ ಉತ್ಪತ್ತಿಕಾಲದ ಆದಿ ಸ್ವರೂಪವನ್ನು, ಅಲ್ಲಿಂದ ಪ್ರಥಮ ದ್ರಾವಿಡದ ವಯಸ್ಸು ಮತ್ತು ಸ್ವರೂಪವನ್ನು ಪರಿಶೋಧನೆಯಿಂದ ತೆಗೆಯಬೇಕಾಗಿದೆ. ಈ ಶಾಸ್ತ್ರ ಬಲವಾದಷ್ಟೂ, ಸಂಸ್ಕೃತೀಕರಣದ ಮುಸುಕನ್ನು ತೆಗೆದು ಕನ್ನಡದ ಎಳೆಗಳನ್ನು ಬಿಡುಗಡೆ ಮಾಡಿ, ಆ ದಾರಿಯಲ್ಲಿ ಅದರ ಸಹಜ ಸ್ವರೂಪವನ್ನು ಕಂಡು, ಮತ್ತೊಮ್ಮೆ ಕನ್ನಡ ವ್ಯಾಕರಣವನ್ನು ಸೂತ್ರಿಸಬೇಕಾಗಿದೆ. ಕನ್ನಡ ಬಲು ಸರಳವಾದ, ಸುಲಭವಾದ ಭಾಷೆ. ಇದರ ಮೇಲೆ ಅನಗತ್ಯವಾದ ಶಾಸ್ತ್ರದ ಭಾರವನ್ನು ಹೊರಿಸಬೇಕಾಗಿಲ್ಲ. ಸಾರ್ವಜನಿಕ ವಿದ್ಯಾಭ್ಯಾಸದ ಕಾಲಕ್ಕೆ ಈ ಭಾಷೆಯ ಬಿಡಿಕೆಯೂ, ಬಿಡುಗಡೆಯೂ ಅವಶ್ಯಕ."*

ಎಂಬುದಾಗಿ ಸ್ವರ್ಗವಾಸಿ ಬಿ. ಎಂ. ಶ್ರೀಕಂಠಯ್ಯನವರು ಹೇಳಿ ಕಾಲು ಶತಮಾನದ ಮೇಲಾಗಿ ಹೋಯಿತು. ಈ ದಿಶೆಯಲ್ಲಿ ಎಳ್ಳಷ್ಟೂ ಕೆಲಸವಾಗಲಿಲ್ಲ. ಕನ್ನಡದ "ಬಿಡಿಕೆ, ಬಿಡುಗಡೆ" ಮಾತು ಸದ್ಯಕ್ಕೆ ಹಾಗಿರಲಾಗಿ "ಪ್ರಥಮ ದ್ರಾವಿಡ", ಅದರ ಸ್ವರೂಪ, ಅದರ ವಯಸ್ಸು, ಇವುಗಳ ರಹಸ್ಯವನ್ನು ಭೇದಿಸಬೇಕಾಗಿದೆ; ಪರಿಶೋಧನೆಗಳಾಗಬೇಕಾಗಿದೆ.

ಇದುವರೆಗೆ ಈ ಕೆಲಸದ ಕಡೆಗೆ ವಿದ್ವಾಂಸರ ದೃಷ್ಟಿ ಬೀಳಲಿಲ್ಲ. ತಮಿಳು-ತೆಲುಗು-ಕನ್ನಡ, ಈ ಮೂರೂ ಭಾಷೆಗಳು ಕೂಡುವ "ಪ್ರಸ್ಥಭೂಮಿ" ಕರ್ನಾಟಕ. ಈ ನೆಲದಲ್ಲಿ "ಶೋಧನೆ" ನಡೆಯಬೇಕು. "ಇತಿಹಾಸಪೂರ್ವ" ಕಾಲದ, ಪೂರ್ವ ಶಿಲಾಯುಗದ ಅವಶೇಷಗಳು ಅಷ್ಟೋ ಇಷ್ಟೋ ಈ ನಾಡಿನಲ್ಲಿ ದೊರೆತಿವೆ. ಭೂಶೋಧನೆಗಾಗಿ ಕ್ಷೇತ್ರಗಳೆಷ್ಟೋ ಇವೆ. ಹಲವನ್ನು ನಿಪುಣರು ಗುರುತಿಸಿದ್ದಾರೆ. ಪರಿಶೋಧನಾಕಾರ್ಯವಾಗಬೇಕಾಗಿದೆ; ಆಗಿಲ್ಲ. ಮೂರೂ ಭಾಷಾವರ್ಗದವರ ಸಹಕಾರದಿಂದ ಪರಿಶೋಧನಾ ಕಾರ್ಯವನ್ನಾರಂಭಿಸುವುದು ಅಸಾಧ್ಯವೆ?

ಕನ್ನಡ, ತಮಿಳು, ಆಂಧ್ರ, ಸಾಹಿತ್ಯ ಪರಿಷತ್ತುಗಳು ಈ ವಿಚಾರ ಕುರಿತು ಆಲೋಚನೆ ಮಾಡಬೇಕು. ಮದರಾಸು, ಅಣ್ಣಾಮಲೈ, ವೆಂಕಟೇಶ್ವರ, ಆಂಧ್ರ, ಮೈಸೂರು, ಬೆಂಗಳೂರು, ಕರ್ನಾಟಕ—ವಿಶ್ವವಿದ್ಯಾನಿಲಯಗಳೂ ಸಹ ಒಂದಾಗಿ ಈ ಅವಶ್ಯಕ ಕಾರ್ಯವನ್ನು ಸಾಧಿಸುವ ಸಂಕಲ್ಪ ಮಾಡಬೇಕು. ಪುಣೆ ಮತ್ತು ಮುಂಬಯಿ ವಿಶ್ವವಿದ್ಯಾನಿಲಯಗಳೂ ಈ ಕಾರ್ಯದಲ್ಲಿ ಸಹಕರಿಸಬಹುದು.

* * *

"ಪಂಚದ್ರಾವಿಡ" ಗಳಲ್ಲಿ ಮರಾಠಿಯೂ ಒಂದೆಂಬ ಮಾತೊಂದಿದೆ. ಯಾವುದೋ ಒಂದು ಕಾಲದಲ್ಲಿ ಕನ್ನಡವೂ, ಮರಾಠಿಯೂ, ಕೊಂಚ ಹೆಚ್ಚುಕಡಿಮೆ ಒಂದೇ ಆಗಿತ್ತೆಂದು ಸ್ವರ್ಗವಾಸಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಅಭಿಪ್ರಾಯಪಟ್ಟು, ಹಾಗೆ ಪ್ರಕಟಿಸಿದ್ದುಂಟು. ಮರಾಠಿ ಭಾಷೆಯಲ್ಲಿ ಅನೇಕ ಕನ್ನಡ ಮಾತುಗಳನ್ನು ಕಂಡುಕೊಳ್ಳಬಹುದು.

ತೆಲುಗಿನಲ್ಲಿ ವಚನ ಬಿನ್ನಪ

ಕನ್ನಡದಲ್ಲಿ ಇರುವಂತೆ ತೆಲುಗು ಸಾಹಿತ್ಯದಲ್ಲಿ "ವಚನ" ಗಳಿವೆಯೆ; "ಬಿನ್ನಪ" ಗಳಿವೆಯೆ; ಎಂದು ಕೇಳುವವರಿದ್ದಾರೆ. ಹೀಗೆ ಪ್ರಶ್ನೆ ಹಾಕುವವರಿಗೂ ಉತ್ತರ ಸಿಗಬೇಕು; ಹಾಕದವರಿಗೂ ಪರಿಸ್ಥಿತಿಯೇನೆಂಬುದು ಗೊತ್ತಾಗಬೇಕು.

ಕಾಕತೀಯ ರಾಜಮನೆತನದ ಎರಡನೆಯ ಪ್ರತಾಪರುದ್ರನ (ಕ್ರಿ. ಶ. ೧೨೯೫-೧೩೨೬) ಕಾಲದಲ್ಲಿ "ವಚನ ಸಂಕೀರ್ತನ ವಾಙ್ಮಯ" ವನ್ನು ತೆಲುಗಿನಲ್ಲಿ ಆರಂಭಿಸಿದ

---

* Oriental Conference, 1940 March. B. M. Srikantiah's Presidential Speech Kannada Section.

ಕೃಷ್ಣಮಾಚಾರ್ಯರೆಂಬವರಿದ್ದರೆಂದು ತಿಳಿದುಬರುತ್ತದೆ. ಈ ಸಂಗತಿಯನ್ನು ತಿರುಪತಿಯ "ಸಂಕೀರ್ತನಾಚಾರ್ಯ" ತಾಳ್ಳ ಪಾಕ ಅನ್ನಮಯ್ಯ (ಕ್ರಿ. ಶ. ೧೪೦೮-೧೫೦೩) ನವರು ಹೇಳಿದ್ದಾರೆ. ಅನ್ನಮಯ್ಯನವರ ಮೊಮ್ಮಗ ಚಿನ್ನನ್ನ. ಆತ "ಪರಮಯೋಗಿ ವಿಲಾಸ" ವನ್ನು ಬರೆದಿದ್ದಾನೆ. ಅದರಲ್ಲಿ ಕೃಷ್ಣಮಾಚಾರ್ಯರ ಪ್ರಶಂಸೆ ಇದೆ. "ಆಚಾರ್ಯ ಸೂಕ್ತಿ ಮುಕ್ತಾವಳಿ" ಯಲ್ಲೂ ಅವರ ಪ್ರಶಂಸೆ ಇದೆ.

ಸಿಂಹಾಚಲಕ್ಷೇತ್ರ ಮಹಾತ್ಮ್ಯದಲ್ಲೂ ಕೃಷ್ಣಮಾಚಾರ್ಯರ ವಿಚಾರವಾಗಿ ಹಲವು ಸಂಗತಿಗಳು ತಿಳಿದುಬರುತ್ತವೆ. ಅವರು ಸಿಂಹಾಚಲವಾಸಿಗಳಾಗಿದ್ದರೆಂದೂ, ಶ್ರೀ ವರಾಹ ನರಸಿಂಹನ ಭಕ್ತರಾಗಿ ಅನೇಕ ಸಂಕೀರ್ತನೆಗಳನ್ನು ರಚಿಸಿದ ರೆಂದೂ ತಿಳಿದುಬರುತ್ತದೆ.

"ಸಿಂಹಾಚಲ ವಚನಗಳು" ಅಥವಾ "ಸಿಂಹಾಚಲ ನರಸಿಂಹರ ವಚನಗಳು" ಹಲವು ಈಗಲೂ ಅಲ್ಲಲ್ಲಿ ಸಿಗು ತ್ತವೆ. ಅವುಗಳನ್ನು ರಚಿಸಿದವರು ಕೃಷ್ಣಮಾಚಾರ್ಯರೆಂದೂ ಜನರಲ್ಲಿ ನಂಬಿಕೆ ಇದೆ.

"ಕೃಷ್ಣಮಾಚಾರ್ಯಲ ಕೀರ್ತನ ಲನ್ನಿಯು
ನಿತ್ಯಭೋಗಮುಲಯ್ಯೆ ನೇಟಿಕೈನ
ಮಱಿಕೊನ್ನ ನಾಳ್ಳಲೋ ಮಲ್ಲಿನೇಬನುವಾಡು
ಮ್ಲೇಚ್ಛಾಧಿಪತಿ ವಚ್ಚಿ ಮಿನ್ನ ರಾಯು
ದಿವ್ಯ ವಿಮಾನಂಬು ತೆಗಟಾರ್ಚಿ ಕೋಕೆಲ
ಬಾರ ಚಾಪಲ ತೈಲಭಾಸಿತ ಮುನ
ಚುಟ್ಟೆಂಚಿ ಕಾಳ್ಚಿನ ಸುಡಿಸಿ ಯೇಡಹಮುಲು
ಕಾಲಿ ಭಕ್ತ್ಯೋಕ್ತಿತೋ ಗದಲಕುಂಡೆ."

ಎಂಬ ಪದ್ಯವೊಂದು "ಆಚಾರ್ಯ ಸೂಕ್ತಿಮುಕ್ತಾವಳಿ" ಯಲ್ಲಿದೆ. ಮಲ್ಲಿಕ್ ನವಾಬನೆಂಬ ಮ್ಲೇಚ್ಛ ಪ್ರಭು ಸಿಂಹಾ ಚಲಕ್ಕೆ ಬಂದ; ದಿವ್ಯವಾದ ವಿಮಾನಕ್ಕೆ ಚಾಪೆಗಳನ್ನು ಸುತ್ತಿಸಿ, ಎಣ್ಣೆ ಸುರಿಸಿ, ಬೆಂಕಿ ಇಡಿಸಿದ. ವಿಮಾನವನ್ನು ಧ್ವಂಸಮಾಡಬೇಕೆಂಬುದವನ ಅಪೇಕ್ಷೆ. ಏಳು ದಿನಗಳು ಏಕಪ್ರಕಾರವಾಗಿ ದೇವಾಲಯ ಬೆಂಕಿಯಲ್ಲಿ ಬೆಂದಿತು. ಇದು ಈ ಪದ್ಯದಿಂದ ತಿಳಿದುಬರುವ ಅಂಶ.

* * *

ತೆಲುಗಿನಲ್ಲಿ ವಚನ ರಚನೆಯನ್ನು "ಗದ್ಯ, ಬಿರುದು ಗದ್ಯ, ಚೂರ್ಣಿಕೆ, ವಚನ, ಬಿನ್ನಪ" ಹೀಗೆ ಐದು ವರ್ಗ ಗಳಾಗಿ ವಿಂಗಡಿಸಲಾಗಿದೆ. ಕೃಷ್ಣಮಾಚಾರ್ಯರಾದರೋ ಚೂರ್ಣಿಕೆ, ವಚನ, ಬಿನ್ನಪ, ಎಂಬ ಮೂರು ತೆರನಾದ ರಚನೆಗಳಿಗೆ ಹೆಸರುವಾಸಿಗಳಾಗಿದ್ದಾರೆ. ಇವರಿಗೆ ಮೊದಲು ಈ ಜಾತಿಯ ಗದ್ಯರಚನೆ ಇತ್ತೋ ಇಲ್ಲವೋ ಹೇಳಲಾ ಗದು. ತಾಳ್ಳಪಾಕ ಅನ್ನಮಯ್ಯನವರು ಚೂರ್ಣಿಕೆಯ ಲಕ್ಷಣ ಕುರಿತು ಹೇಳಿದ್ದಾರೆ:

"ಧನಕೃಷ್ಣಾಚಾರಾದಿಪ
ಪರಿಕಲ್ಪಿತ ಪದಮು ತಾಳಬಂಧಚ್ಛಂದೋ
ವಿರಹಿತಮ್ಮೈ ಚೂರ್ಣಾಖ್ಯಂ
ಬರಗುನು ನಿರ್ಯುಕ್ತನಾಮ ಭಾಸಿತಮುಗುರ್ರ್ಚ."

'ಶತಕ' ಗಳಲ್ಲಿರುವಂತೆಯೇ 'ವಚನ' ಗಳಲ್ಲೂ "ಮಕುಟ" ನಿಯಮ ಉಂಟು; ಹಾಗೆಯೇ "ಸಂಖ್ಯಾ" ನಿಯಮವೂ ಉಂಟು. ಭಕ್ತಿರಸ ಎರಡಕ್ಕೂ ಸಮಾನ.

ಶೈವ, ವೈಷ್ಣವ, ವಾಙ್ಮಯದಲ್ಲಿ ಇಂತಹ ವಚನಗಳು ಅಸಂಖ್ಯಾತವಾಗಿವೆ. "ಪುರಾತನ ಶಂಕರ ವಚನ" ಗಳಿಗೆ ಲೆಕ್ಕವೇ ಇಲ್ಲ.

"ನನು ರಕ್ಷಿಂಪವೇ ಭವಾನೀ ಮನೋಹರಾ"

ಎಂಬುದು ಅವುಗಳ 'ಮಕುಟ'.

"ಸಿಂಹಗಿರಿ ನಮೋ ನಮೋ ದಯಾನಿಧೇ"

ಹೀಗೆ ಮುಗಿಯುತ್ತವೆ ಕೃಷ್ಣಮಾಚಾರ್ಯರ ವಚನಗಳು.

ತೆಲುಗಿನಲ್ಲಿ "ಬಿನ್ನಪ" ಗಳಿಗೂ ಬರವಿಲ್ಲ. "ನಮೋ ನಮೋ ಲಕ್ಷ್ಮೀವಲ್ಲಭಾ" ಎಂಬ ಮಕುಟದ ಬಿನ್ನಪಗಳು ಕೆಲವಿವೆ. ಶಠಗೋಪ ಮುನಿಗಳ ದ್ರಾವಿಡ ವೇದಗಳ ಭಾಷಾಂತರಗಳಿವು. ಈ ಭಾಷಾಂತರ ಕರ್ತರೂ ಕೃಷ್ಣ ಮಾಚಾರ್ಯರೇ ಎಂಬದಾಗಿ ತಾಳ್ಳಪಾಕ ಚಿನ್ನನ್ನನವರು ಹೇಳಿದ್ದಾರೆ. ತೆಲುಗು "ಬಿನ್ನಪ"ದ ಮಾದರಿಯೊಂದನ್ನು ಇಲ್ಲಿ ಕೊಡಲಾಗಿದೆ.

"ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕಾ! ಮೀಕು ಪುನಃ ಪುನಃ ಪ್ರದಕ್ಷಿಣ ನಮಸ್ಕಾರಂಬು ಜೇಸಿ ನಾ ತುಚ್ಛ ಮನಸ್ಸುನ ಮಿಮ್ಮು ವರ್ಣಿಂಚೆದ. ವಾಕ್ಪತಿ, ಬೃಹಸ್ಪತಿ, ದಿವಸ್ಪತುಲಕೈನನು ವರ್ಣಿಂಪ ನಲವಿಗಾನಿ ಮೀ ದಿವ್ಯ ತಿರುನಾಮಮುಲು ವರ್ಣಿಂಚುಚುನ್ನಾಡನೇ ದೇವ! ಅಚ್ಯುತ! ಅನಂತ! ಆಶ್ರಿತ ರಕ್ಷಣಾ! ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕಾ! ಆದಿಮಧ್ಯಾಂತ ರಹಿತಾ! ಶರಣಾಗತ ವಜ್ರಪಂಜರಾ! ನಾ ದುರಿತಂಬುಲ ಖಂಡಿಂಚಿ, ಮೀ ದಾಸಾನುದಾಸುಲಕು ದಾಸುಂಡ ನೈ ವರ್ತಿಂಚೇ ಬುದ್ಧಿ ಪುಟ್ಟೆಂಚಿ, ನಾ ದುರ್ಗುಣಂ

ಬಲು ಚೂಡಕ, ಮೀ ಪತಿತಪಾವನ ಬಿರುದು ಪ್ರತಿ
ಷ್ಠಿಂಚಿ, ಪತಿತುಂಡೈನ ನನ್ನು, ರಕ್ಷಿಂಚವೇ! ಆಶ್ರಿತ
ಜನ ಮಂದಾರಾ! ಅಘದೂರಾ! ನಮೋ, ನಮೋ,
ಲಕ್ಷ್ಮೀವಲ್ಲಭಾ!"

ಕನ್ನಡನಾಡಿನ ಇತಿಹಾಸದಲ್ಲಿ ಚಿಕ್ಕದೇವರಾಯರ ಹೆಸರು ಬಹಳ ಪ್ರಸಿದ್ಧವಾದದ್ದು. ಅವರು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. "ಚಿಕದೇವರಾಯ ಬಿನ್ನಪ" ಎಂಬುದೂ ಅವುಗಳಲ್ಲಿ ಒಂದು.

"ನೀಲಮುಯ್ಯನ ಬರೆಹಂ"

ಶಿಕಾರಿಪುರ ತಾಲ್ಲೂಕಿನ ಹಳೆಬನ್ನೂರು ಕಾಡಿನಲ್ಲಿ ಬಿದ್ದಿದೆ ಈ * ಅಕ್ಷರಗಲ್ಲು. ಬನ್ನೂರು ಕೆರೆಯ ಕಟ್ಟೆ ಯೊಡೆದು ಹೋದಾಗ ತಂಬರಸ ಆ ಕೆರೆಯ ಜೀರ್ಣೋದ್ಧಾರಮಾಡಿಸಿ, ಅದರ ರಕ್ಷಣೆಗೆ ಅವಶ್ಯಕವಾದ ವೆಚ್ಚಕ್ಕೆ ಅನುಕೂಲ ಕಲ್ಪಿಸಿದನೆಂದು ಶಾಸನ ವಿವರಿಸುತ್ತದೆ. ಈ ಶಾಸನದ ತಂಬರಸನು ಮಹಾಪರಾಕ್ರಮಿ. ಅವನ ಶೌರ್ಯ ಪರಾಕ್ರಮಗಳ ವರ್ಣನೆ ಇದೆ ಇದರಲ್ಲಿ. ಪದ್ಯಗಳನ್ನು ನೋಡಿದರೆ ಬರೆಹವನ್ನು ಬರೆದವನು ಒಳ್ಳೆಯ ಕವಿತಾಶಕ್ತಿಯುಳ್ಳವನೇ ಆಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಬರೆದವನು ಯಾರು? ಶಾಸನದ ಕಡೆಯ ಎರಡು ಪಾದಗಳು ಹೀಗಿವೆ:

(೫೨) "ಸೋಭನಯ್ಯ ನಾಯಕನ ಮಗಂ
ನೀಲಮುಯ್ಯನ ಬರೆಹಂ"

(೫೩) "ಮಾಳೋಜಂ ಸಾಸನಮುಂ ಮಾಡಿ
ಅಕ್ಕರಮುಂ ಖಣ್ಡರಿಸಿದಂ"

"Some of the Kannada poems in the inscription are very fine and mark the author as a poet of considerable merit."

ಎಂಬದಾಗಿ ಆ ಶಾಸನ ವ್ಯಾಖ್ಯಾನಕಾರರು ಹೇಳಿದ್ದಾರೆ.

† "ಬರಹ", "ಬರೆಹಂ", "ಬರೆದಂ" ಎಂಬ ಮಾತುಗಳನ್ನು "ರಚಿಸಿದವ", "ಕೃತಿಕರ್ತ", "ಕವಿ" ಎಂದು ಅಂಗೀಕರಿಸಬಾರದೆಂದು ವಾದಿಸುವವರು ಹಲವರುಂಟು. ಅವರೊಂದಿಗೆ ನನ್ನ "ಜಗಳ" ವಿಲ್ಲ. ಮೇಲಿನ ಶಾಸನದಿಂದ ಇಲ್ಲಿ ಎತ್ತಿಕೊಟ್ಟಿರುವ ಪದ್ಯಗಳನ್ನು ಓದಿದವರು ನೀಲಮುಯ್ಯ "ಕವಿತೆ ಮಾಡಿದವನೋ" ಇಲ್ಲ ಯಾರೋ ಮಾಡಿದ ಪದ್ಯಗಳನ್ನು ಕಲ್ಲಿನ ಮೇಲೆ ಬಣ್ಣದ ಬಳಪದಲ್ಲಿ "ಬರೆದವನೋ" ನಿಶ್ಚಯಮಾಡಬೇಕು.

"ದ್ರವಿಳಾಳೀ ಪತಿಯೆಂಬ ಚೋಳಿಕರ
ರಾಜ್ಯಾಪಕ್ರಮ ಶ್ರೀಗೆ ಕಾಂ
ಚಿ ವೊಲಿದ್ದೊರ್ಪ್ಪುವ ಕಂಚಿ ಸಂಚಳಿಸೆ
ತೆಂಕಲ್ ಘಟ್ಟಮುಂ ದಾಂಟಿ ಸಾ
ನುವಿನೊಳ್ ರಾಜಿಗನೊಕ್ಕಲಂ ಬಡಿದು
ತಂದೊಕ್ಕಲ್ ಜವಂ ನಟ್ಟ ಮೇ
ಟಿ ವೊಲಾದತ್ತೆನೆ ನೆಟ್ಟನೊಟ್ಟಜಿಕೆಯಿಂ
ತಂಬಂ ಜಯಸ್ತಂಭಮುಂ."

"ಪಿರಿದದ್ರೀಂದ್ರಂ ನಗೇಂದ್ರಕ್ಕವನಿ ಪಿರಿದು
ಮಾಭ್ರಿದ್ಧರಾ ಚಕ್ರದಿಂದಂ
ಪಿರಿದಂಭೋರಾಶಿ ಶೈಳಾವನಿ ಜಳನಿಧಿ
ಸನ್ದೋಹದಿಂ ದಿಕ್ತಟಂ ತಾಂ
ಪಿರಿದನ್ತಾಪರ್ವತಕ್ಕಂ ಧರೆಗ ಮಬ್ಧಿ ಗಂ
ದಿಗ್ವಿಭಾಗಕ್ಕೆ ಮತ್ತಂ
ಪಿರಿದೇಕಂ ಖ್ಯಾತಿವೆತ್ತಂ ಪಿರಿಯನನಿತರಿಂ
ತಂಬದಣ್ಡಧಿನಾಥಂ."

೮-೯ನೇ ಶತಮಾನದ ಕನ್ನಡ ಗದ್ಯ

ಗುಂಡ್ಲುಪೇಟೆ ತಾಲ್ಲೂಕು ಹಂಗಳ ಹೋಬಳಿ ದೇವರಹಳ್ಳಿ ಗ್ರಾಮದಲ್ಲೊಂದು ಶಿಲಾಶಾಸನವಿದೆ. ಇದು ಕ್ರಿ.ಶ. ಎಂಟನೆಯ ಶತಮಾನದ ಗಂಗವಂಶದ ದುರ್ವಿನೀತ ಎಱೆಯಪ್ಪನ ಕಾಲದ್ದು.

ಗಂಗವಂಶದ ಅರಸರ ವಂಶಾವಳಿಯನ್ನು ತಿಳಿಸುವ ಶಿಲಾಶಾಸನಗಳೇ ಇಲ್ಲ. ಈ ಶಾಸನವೇ ಮೊಟ್ಟಮೊದಲನೆಯ ಉದಾಹರಣೆ. ಈ ಶಾಸನದ ವಂಶಾವಳಿಯಲ್ಲಿ ಕಂಡು ಬರುವ ಹೆಸರುಗಳಿಗೂ ತಾಮ್ರ ಶಾಸನಗಳಲ್ಲಿ ಉಕ್ತವಾಗಿರುವ ಹೆಸರುಗಳಿಗೂ ವ್ಯತ್ಯಾಸವಿಲ್ಲ. ಗಮನಾರ್ಹವಾದಂಶವಿದು.

ಕನ್ನಡ ಭಾಷೆಯ ದೃಷ್ಟಿಯಿಂದಲೂ ಈ ಶಾಸನವು ಅಮೂಲ್ಯವಾದದ್ದು. ಪ್ರಾಚೀನ ಲಿಪ್ಯನ್ವೇಷಣ ಶಾಖಾಧಿಕಾರಿಗಳು (ಸ್ವರ್ಗವಾಸಿ ಡಾ|| ಎಂ. ಎಚ್. ಕೃಷ್ಣರವರು)

---

* No. 76, Mysore Archaeological Report, 1930, page 235.

† No. 13, Imperial Strehaeological Survey– 'Some Kannada poets from Inscriptions, 1923.

ಶ್ರಮವಹಿಸಿ ಶಾಸನದ ಪಾಠವನ್ನು ಕೊಟ್ಟಿದ್ದಾರೆ. ಶಾಸನದಲ್ಲಿರುವುದು ಹತ್ತು ಸಾಲುಗಳು. ಮೊದಲ ಮೂರು ಸಾಲುಗಳು ಸಂಸ್ಕೃತ ಶ್ಲೋಕಗಳೆರಡಕ್ಕೆ ವಿಾಸಲಾಗಿವೆ. ಉಳಿದ ಏಳು ಸಾಲುಗಳೂ ಕನ್ನಡ. ಈ ಶಾಸನ ಪಾಠವು ನಿರ್ದುಷ್ಟವಾದುದೆಂದು ಅವರು ಹೇಳುವುದಿಲ್ಲ. ಕನ್ನಡ ವಿದ್ವಾಂಸರು ಈ ಶಾಸನ ಪಾಠವನ್ನು ನಿರ್ದುಷ್ಟಗೊಳಿಸಿ, ಸರಿಯಾಗಿ ಅರ್ಥವಾಗುವಂತೆ ಉಪಕಾರ ಮಾಡಬೇಕು. ಅನೇಕ ಕಾರಣಗಳಿಂದಾಗಿ ಈ ಶಾಸನಕ್ಕೆ ಬೆಲೆ ಇದೆ. ಹಳೆಗನ್ನಡ ಶಬ್ದಗಳು ಕೆಲವು, ಅವುಗಳ ಪ್ರಯೋಗಗಳು, ಗಮನಾರ್ಹವಾಗಿವೆ.

೩ . . . . . . ಕೊಂಗೊಣಿ

೪ ಪೃಥುವೀ ರಾಜ್ಯಂಕೆಯೆ ದುರ್ವಿನೀತೆಱೆ
ಅಪ್ಪೊರ್ ಕೊ

೫ ಸರುಪುಟ್ಕಿಱಿದಿದಿರು ಪಯ್ದಗಿದಿಡಿದಿರುದ

೬ ಟಿ ನಾಮುನ್ದಾದಿಗಳು ಪಗಳೊತ್ತೆಟ್ಟಿದಿನ್ವರು ನರ

೭ ಮಕರಮನೊಡೆದೊಡೆಪ್ಪಡೆತ್ತರು
ಪುಣಿಸೊಪ್ಪೊರ್ಲ

ನೆಲ್ಲುಪಾಣ್ಡಿಯುವಳಿವದು ಸರ್ವಪಹಾರತ್ತೊಟ್ಟಪ

೯ ಕೆಡಿಪೊವೊನು ಕೊಳ್ವೊನು ಪಞ್ಚಮಹಾ
ಪತಕನಕ್ಕೆ ಒಕ್ಕ

೧೦ ಉಳಿದುಣ್ಡು ಕಾದುವೊಂಗಿದು ಕಳ್ಗಿಟ್ಟು
ತೊಯ್ತಿತ್ತು ವಕ್ಕೆ

ಗಂಗ ದುರ್ವಿನೀತ ಎಱೆಯಪ್ಪನ ವೈರಿಗಳನ್ನು ಉಪಗೊಳ ಗ್ರಾಮದ ೭೦ ಮಂದಿ ಯೋಧರು ಕೊಸರು ಪುಟ್ಕಿಯ ಮುತ್ತಿಗೆಯ ಕಾಲದಲ್ಲಿ ಎದುರಿಸಿ, ತೋರಿಸಿದ ಪರಾಕ್ರಮಕ್ಕೆ ಮೆಚ್ಚಿ ರಾಜಪುತ್ರನು ಪುಣಸೂರು ಗ್ರಾಮವನ್ನು ಸರ್ವಬಾಧಾ ಪರಿಹಾರವಾಗಿ ಅವರಿಗೆ ದಾನವಾಗಿ ಕೊಟ್ಟನೆಂಬುದು ಶಾಸನ ತಿಳಿಸುವ ವಿಷಯ.

ಕ್ರಿ.ಶ. ೯ನೆಯ ಶತಮಾನಕ್ಕೆ ಹಿಂದೆ ಕನ್ನಡ ಗದ್ಯದ ಸ್ವರೂಪವೇನು, ವಾಕ್ಯರಚನೆಯ ಲಕ್ಷಣವೆಂತಹುದು, ಪ್ರತ್ಯಯಗಳನ್ನು ಹಚ್ಚುವುದರಲ್ಲಿರುವ ವಿಶೇಷಗಳೇನು—ಇವೇ ಮೊದಲಾದ ಹಲವಾರು ಅಂಶಗಳನ್ನು ಕುರಿತು ಆಲೋಚನೆಮಾಡಬೇಕಾದದ್ದು ಅವಶ್ಯಕ. "ಪಡೆತ್ತದು" ಎಂಬ ನಪುಂಸಕಲಿಂಗೇಕ ವಚನಪ್ರಯೋಗವನ್ನು ಗಮನಿಸಬೇಕು. "ಪಡೆದುದು" ಎಂಬರ್ಥದಲ್ಲಿ ಅಲ್ಲವೆ ಇದು ಉಪಯೋಗವಾಗಿರುವುದು? ಇಂತಹ ಅಂಶಗಳೆಷ್ಟೋ ಶಾಸನಗಳು ನಮ್ಮ ಲಕ್ಷ್ಯವನ್ನೆಳೆಯುತ್ತವೆ.

"ಬನ್ನಿರಿ ಎಲ್ಲರು ಆಣೆ ಇಟ್ಟುಕೊಳಿ
ಚೆನ್ನ ಮಾಡಿ ಬಾಳ
ಹೆಸರಿನ ಚೆಲುವನು ನಾಡಿನ ಬದುಕಲಿ
ಮರಳಿ ಮೊಳೆಯಿಸಿರಿ."

—ಶ್ರೀನಿವಾಸ

ಏಕಾಂಕ ನಾಟಕ

ಅಪವಾದ

ಕೈನಾರ ರಾಜಾರಾವ್

[ರಾಮಾಯಣ ಮಹಾಕಾವ್ಯದ ನಾಯಕಿಯಾದ ಸೀತಾದೇವಿಯ ಜನನ ವೃತ್ತಾಂತವು ಒಂದು ಗೂಢವಾದ ಸಮಸ್ಯೆ. ಆ ಸಮಸ್ಯೆಯನ್ನು ಬಿಡಿಸುವ ಉದ್ದೇಶದಿಂದ ಈ ಊಹಾಚಿತ್ರವನ್ನು ಚಿತ್ರಿಸಲಾಗಿದೆ.

ಸೀತಾದೇವಿಯು ಮಂಡೋದರಿಯ ಮಗಳೆಂಬುದಕ್ಕೆ ಪುರಾಣಕತೆಗಳಲ್ಲಿ ಸಾಕಷ್ಟು ಆಧಾರಗಳಿವೆ. ವಾಲ್ಮೀಕಿ ರಾಮಾಯಣದಲ್ಲಿಯೂ, ಸುಂದರ ಕಾಂಡದಲ್ಲಿ ಸೀತೆಯನ್ನು ಹುಡುಕುತ್ತಿದ್ದ ಹನುಮಂತನು ಅಂತಃಪುರದಲ್ಲಿ ಮಲಗಿದ್ದ ಮಂಡೋದರಿಯನ್ನು ನೋಡಿ ಸೀತೆಯೆಂದೇ ಭ್ರಮಿಸುತ್ತಾನೆ. ಅವರಿಬ್ಬರ ರೂಪ ಸಾದೃಶ್ಯ ಅಷ್ಟು ನಿಕಟವಾದುದು. ಆಮೇಲೆ ಮಂಡೋದರಿಯ ಪಾದದಲ್ಲಿ ವೈಧವ್ಯದ ಚಿಹ್ನೆಯಾದ ಕಾಕರೇಖೆಯನ್ನು ಕಂಡು ಅವಳು ಸೀತೆಯಲ್ಲವೆಂದು ನಿರ್ಣಯಿಸುತ್ತಾನೆ. ಈ ನಾಟಕ ಪುಸ್ತಕ ರೂಪದಲ್ಲಿ ಬರುವಾಗ ಈ ಬಗ್ಗೆ ಹೆಚ್ಚು ವಿವರಗಳನ್ನು ಕೊಡಲಾಗುವುದು.

ಮೂರೊಂಭತ್ತು ತಿಂಗಳ ಫಲದ ಮಾತು ಪುರಾಣಕಾಲದಿಂದ ಇಂದಿನವರೆಗೂ ಪ್ರತೀತಿಯಲ್ಲಿದೆ. ಮಹಿಮಾವಂತರ ಜನನದ ಸಂಬಂಧದಲ್ಲಿ ನಾವು ಕೇಳಿರುವ ಓದಿರುವ ಪವಾಡಗಳನ್ನು ಗಮನಿಸಿದರೆ ಇದೇನೂ ಅಮಾನುಷವಲ್ಲ. ವ್ಯಾಸಭಾರತದ ಶಕುಂತಲೋಪಾಖ್ಯಾನದಲ್ಲಿಯೂ ಕಣ್ವರು ದುಷ್ಯಂತ ಸಮಾಗಮದ ಮೂರು ವರುಷಗಳ ಮೇಲೆ ಬಸುರಿಯಾಗಿದ್ದ ಶಕುಂತಲೆಯನ್ನು ದುಷ್ಯಂತನ ಬಳಿಗೆ ಕಳುಹಿಸಿಕೊಟ್ಟರೆಂದು ಹೇಳಿದೆ. ಈ ಕಾಲದ ಮಾನದಂಡವನ್ನು ಮಹಾಕಾವ್ಯಗಳ ಕಾಲಕ್ಕೆ ಅನ್ವಯಿಸಿದಲ್ಲಿ ಆ ಮಹಾಕಾವ್ಯಗಳು ನಿರೀಕ್ಷಿಸುವ ಸಹೃದಯತೆಯನ್ನಾಗಲೀ ಸಹಾನುಭೂತಿಯನ್ನಾಗಲೀ ಅನ್ವಯಿಸಿದಂತಾಗುವುದಿಲ್ಲವೆಂಬುದನ್ನು ನಾವು ಮನಗಾಣಬೇಕು. ಕಾವ್ಯಸತ್ವ ಲೋಕಸತ್ಯಕ್ಕೆ ವಿಭಿನ್ನವಾದದ್ದು. ಈ ದೃಷ್ಟಿಯಿಂದ ಈ ದೃಶ್ಯವನ್ನೋದಬೇಕಾಗುತ್ತದೆ.

ಈ ದೃಶ್ಯವನ್ನು ನಾನು ೧೯೩೭ರಲ್ಲಿ ಬರೆದಾಗ ಅದರಲ್ಲಿ ಮೂರುನೂರು ಸಾಲಗಳಷ್ಟಿತ್ತು. ಈಗ ಅದು ಏಳನೂರಕ್ಕೂ ಮಿಕ್ಕಿ ಹೊಸ ಕೃತಿಯೇ ಆಗಿದೆ.]

ಪಾತ್ರಗಳು

೧. ರಾವಣ

೨. ಮಂಡೋದರಿ

೩. ಚಾರರು . . . . ಮೂವರು

[ರಾವಣನ ಅಂತಃಪುರ. ತೆರೆ ಮೇಲೇಳುವ ಕಾಲಕ್ಕೆ ಮಹಾಸಾಮ್ರಾಟ ರಾವಣೇಶ್ವರನು ರತ್ನಖಚಿತವಾದ ಪೀಠದಲ್ಲಿ ಕುಳಿತು ಚಿಂತಾಮಗ್ನನಾಗಿದ್ದಾನೆ. ಸ್ವಲ್ಪ ಕಾಲದನಂತರ ಅವನ ಪಟ್ಟದ ರಾಣಿಯಾದ ಮಂಡೋದರೀ ದೇವಿಯು ಪ್ರವೇಶಿಸುವಳು.]

ಮಂಡೋದರಿ :

ಪತಿದೇವ ! ಏನಿಂದು ಎಂದಿಲ್ಲದಾ ಮೌನ ?
[ರಾವಣೇಶ್ವರನು ಚಿಂತೆಯಿಂದ ನಿಟ್ಟುಸಿರು ಬಿಡುತ್ತಿರಲು]
ಯಾವುದೋ ಗುರುತರದ ಚಿಂತೆ ಕಾರ್ಮೋಡದೊಲು
ಮನಮುಸುಕಿ ನೀಡುಸುಯ್ಲು ಬಿರುಗಾಳಿಯೆಬ್ಬಿಸಿದೆ.
ಮುಖದ ತೇಜವು ಅಳಿದುದೆಂಬಂತೆ ತೋರುತಿದೆ.

ರಾವಣ :

ಅಹುದು ನೀ ಪೇಳ್ದಂತೆ ಮನವು ಮಂಕಾಗಿಹುದು.
ಒಮ್ಮೆ ಉದ್ವೇಗದಿಂ ಮೋಸದಿಂ ಸೀತೆಯನು
ಅಪಹರಿಸಿ ತಂದಂದು, ಸುಕುಮಾರ ಅಕ್ಷಯನ
ಅಸುವ ಬಲಿಗೊಟ್ಟಂದು, ಒಡಹುಟ್ಟಿ ಒಡಬೆಳೆದು
ಒಡನಿದ್ದ ಆ ತಮ್ಮ ಶತ್ರುವನು ಸೇರ್ದಂದು
ತಾಯ್ನಾಡ ಪ್ರೇಮದಲಿ, ನನ್ನ ಮೇಲಿನ ಪರಮ-
ಪ್ರೇಮದಲಿ-ಯುದ್ಧರಂಗದಿ ಅಳಿದ ಆ ಕುಂಭ-
ಕರ್ಣನನು ಕಳೆದಂದು ಈ ರೀತಿ ಮನವು ಧೃತಿ-
ಗೆಡಲಿಲ್ಲ. ಇಂದು, ಆ ಜಾನಕಿಯ ಮೃದುನುಡಿಯ
ಕೇಳ್ದಿಂದು, ಪ್ರಾರ್ಥನೆಯ ಬೇಡಿಕೆಯ ನುಡಿಗಳನು
ಕೇಳ್ದಿಂದು, ಮನದ ಧೃತಿಗೆಟ್ಟಿಹುದು. ರಣಕೇಳಿ-
ಯಲಿ ಮೆರೆವೆನೆಂದು ಕುಣಿಯುತಲಿದ್ದ ಆ ವೀರ
ಹುಮ್ಮಸ್ಸು ಇಳಿಯುತ್ತ ಬಂದಿಹುದು.

ಮಂಡೋದರಿ :
ಅಂತೆಯೇ
ತೋರುತಿದೆ. ವೈಮೆಗಾರಳು ಸೀತೆ. ಜಗದೇಕ–
ವಂದ್ಯನಹ ಸಾರ್ವಭೌಮನ ಮನವ, ಲೋಕೈಕ–
ವೀರನಹ ಆರ್ಯಪುತ್ರನ ಮನದ ದೃಢತೆಯನು
ಸಡಲಿಸುತ ಮಾತಿನಿಂ ಮೂದಲಿಸಿ ಮನವ ಕದ–
ಡಿದ ಸೀತೆ ವೈಮೆಗಾರಳೆ ಅಹುದು. ದಿಟವೆಂಬೆ.

ರಾವಣ :
ಆ ಸೀತೆ ಆ ರೀತಿ ಮೂದಲಿಸಿ ನುಡಿದಿಲ್ಲ.
ನೂರಾರು ಸಲ ಆಕೆ ಮನಮುಟ್ಟಿ ಬೈದೆನ್ನ
ಶಪಿಸಿದುದ ಕೇಳಿರುವೆ. ಅದು ಎನಗೆ ಅನುದಿನವು
ಬಳಕೆಯಾಗಿಹ ಹಾಡು. ಆ ಬೈಗಳಲಿ ಎನಗೆ
ಆನಂದವಿರುತಿತ್ತು. ಆದರಿಂದಿನದಿನವ
ನುಡಿಯು ನಿತ್ಯದ ಬಗೆಯ ನುಡಿಯಲ್ಲ. ಪೊಸ ರೀತಿ.

ಮಂಡೋದರಿ :
ಏನ ಪೇಳಿದಳವಳು ? ಆರ್ಯಪುತ್ರನು ಅದನು
ತಿಳಿಸುವನೆ ? ಮಡದಿ ಮಂಡೋದರಿಯು ಅದನು ತಿಳಿ–
ಯಲು ಬಹುದೆ ?

ರಾವಣ :
ಅದನು ತಿಳಿಯಲುಬಹುದೆ ಎಂದೇಕೆ ?
ತಿಳಿಯಲೇ ಬೇಕದನು. ಮನದ ಸಂಶಯ ಕಳೆದು
ದೃಢತೆಯನು ನೀಗಿರುವ ಮನದಲ್ಲಿ ಧೃತಿತುಂಬಿ
ಹುರುಪುಗೊಳಿಸಲುಬೇಕು. ವೀರ ನಾರಿಯು ನೀನು.

ಮಂಡೋದರಿ :
ಅವಸರದ ಸಮಯವಿದು. ಆಗಬಾರದುದಾಯ್ತು.
ಹಿಂದಿರುಗಿ ಬರಲಾರದಾಕಾರ್ಯ ನಡೆದಿಹುದು.
ಆದರೂ ಕೇಳುವೆನು ನನ್ನಯ ಕುತೂಹಲಕೆ
ಒಂದು ಉತ್ತರವನ್ನು . . .

ರಾವಣ :
ಕೇಳು, ಹೇಳುವೆನದನು.

ಮಂಡೋದರಿ :
ನಿಜವಾಗಿ ?

ರಾವಣ :
ಅನುಮಾನವೇ ನಿನಗೆ ಈ ವಿಷಮ
ಸಮಯದಲು ?

ಮಂಡೋದರಿ :
ಕೇಳಬಹುದೇ ಸೀತೆಯಪಹರಣ
ಕಾರಣವ ?

ರಾವಣ :
ಅರಿಯದಿಹುದೇ ನಿನಗೆ ಈವರೆಗು ?

ಮಂಡೋದರಿ :
ಅರಿತಿಹೆನು ಶೂರ್ಪನಖಿ ಮಾನಭಂಗದ ವಿವರ.
ಖರದೂಷಣಾದಿಗಳ ಯುದ್ಧಾಪಜಯಗಳನು.
ಮಾರೀಚಮಾಯಾಮೃಗದ ವೃತ್ತಾಂತವನು.
ಜಾನಕಿಯ ಅನುಪಮದ ರೂಪ ಲಾವಣ್ಯವನು.
ಆದರೂ ನನ್ನ ಕಲ್ಪನೆಯ ಲಂಕಾಧಿಪತಿ
ಸೀತೆಯಂತಹ ಪುಟ್ಟಬಾಲಕಿಯನಪಹರಿಸಿ
ತಂದುದಕೆ ಅವು ಮಾತ್ರ ಕಾರಣಗಳಲ್ಲದೆಂ–
ದೂಹಿಪೆನು.

ರಾವಣ :
ನೀನೆನ್ನ ನಿಜವಾದ ಸತಿಯೆ ದಿಟ.
ಇಂಗಿತಜ್ಞಳು ಎಂದು ಮೆಚ್ಚಿ ಪೇಳುವೆ ಕೇಳು . . .

ಮಂಡೋದರಿ :
ದೇವ ಮಾನವರಲ್ಲಿ ಯಕ್ಷ ಗಂಧರ್ವರಲಿ
ಕಿಂಪುರುಷಗಣಗಳಲಿ ಅತ್ಯಂತ ರೂಪವತಿ–
ಯರು ಎಲ್ಲ ನಿನ್ನ ಅಂತಃಪುರವ ಸೇರಿರಲು
ಹುಲುಮನುಜಳಾದ ಈ ಯುವತಿಯನು ಸೀತೆಯನು
ಅಪಹರಿಸಿ ತಂದುದಕೆ ಬೇರೆ ಕಾರಣಗಳೇ
ಇರಬೇಕು. ಹಾಗೆನ್ನ ಮನದೆಣಿಕೆ.

ರಾವಣ :
ಸರಿಯಾಗಿ
ಊಹಿಸಿದೆ. ಮೇಲೆ ಹೇಳಿದುವೆಲ್ಲ ತೋರಿಕೆಯ
ಕಾರಣಗಳಂತಿರಲಿ. ನಿಜವಾದ ಕಾರಣವ
ಹೇಳುವೆನು. ನೀನವಳ, ಸೀತೆಯನು, ನೋಡಿಹೆಯ ?

ಮಂಡೋದರಿ :
ಹೇಗೆ ನೋಡಲಿ ದೇವ ? ಯಾವ ಮುಖದಲಿ ನಾನು
ಅವಳ ನೋಡಲು ಬಹುದು ಹೇಳೀಗ ? ನನ್ನವೊಲು
ಅವಳೊಬ್ಬ ಪತಿಪರಾಯಣೆ ಅಬಲೆ. ನಾನವಳ–
ಮುಂದೆ ನಿಲೆ ಕೇಳದಿಹಳೇ ನನ್ನ –" ಕೇಳಿಹೆನು

ಕೀರ್ತಿಯನು. ಆದರ್ಶಪತಿವ್ರತಾರಮಣಿಯರ
ಮಾಲೆಯಲಿ ನಿನಗುಂಟು ಮೊಟ್ಟಮೊದಲಿನ ಸ್ಥಾನ.
ಅಂತು ಹೆಸರಾಂತವಳು ರಾವಣನ ಆಂತರಿಕ
ರಾಣಿಯಾಗಿರುತಿರಲು ಇನ್ನೊಬ್ಬ ನಿಸ್ಸಹಾ-
ಯಕಳಾದ ಪತಿವ್ರತೆಯ ನೀತಿನಿಯಮಕೆ ಹಾನಿ
ತರಬಹುದೆ?" – ಹಾಗನಲು ಕೇಳಿದೊಡೆ ನಾನೇನು
ಉತ್ತರವ ಕೊಡಬಲ್ಲೆ? ನಾನವಳ ನೋಡಿಲ್ಲ.
ನೋಡ ಬಯಸುವುದಿಲ್ಲ, ನೋಡಬಯಸುವುದಿಲ್ಲ.

ರಾವಣ :

ಹೇಗಾದರೂ ಇರಲಿ. ಆ ಮಾತ ಬಿಡು ಈಗ.
ನೀನವಳ ನೋಡಿಲ್ಲ. ಕೇಳು ಹೇಳುವೆನೀಗ,
ಸೀತೆಯನು ತಂದುದಕೆ ನಿಜವಾದ ಕಾರಣವ.
ನಿನ್ನಂತೆ ಆ ಸೀತೆ ಅಸದೃಶದ ರೂಪವತಿ-
ಯೆಂತೆಂದು ಶೂರ್ಪನಖಿ ವರ್ಣಿಪುದ ಕೇಳಿದ್ದೆ.
ಮಾರೀಚ ಹೊಗಳಿದುದ ಕೇಳಿದ್ದೆ. ಆಮೇಲೆ
ಪರ್ಣಶಾಲೆಯೊಳಂದು ನಿಜವಾದ ಸೀತೆಯನು
ನೋಡಿದೆನು ಭ್ರಮಿಸಿದೆನು ನೀನೆಯೇ ಅವಳೆಂದು
ನಿನ್ನ ರೂಪವೆ ರೂಪ ಕಣ್‌ಮೂಗು ತುಟಿಮಾಟ
ನಡೆನುಡಿಯು ಮಂದಹಾಸದ ಹಾಸ, ತುಂಬಿದೆದೆ
ಸಣ್ಣನಡು ನಿನ್ನಂತೆಯೇ ಎಲ್ಲ, ನಿನ್ನಂತೆ-
ಯೇ ಎಲ್ಲ. ಕನಸಿದೋ ಎಚ್ಚೆರವೋ ಎಂದೆನುತ
ಮೈಜಿವುಟಿ ನೋಡಿದೆನು. ಕನಸಲ್ಲ ನಿಚ್ಚನಿಜ.
ನಿನ್ನದೇ ಪ್ರತಿರೂಪ ಆ ಸೀತೆ ನಿಜರೂಪ.
ಅವಳಿಮಕ್ಕಳ ರೂಪ, ಅಕ್ಕತಂಗಿಯ ರೂಪ,
ತಾಯಿ ಮಕ್ಕಳ ರೂಪದಂತಿತ್ತು.

ಮಂಡೋದರಿ :

ಕೇಳಿದ್ದೆ
ಸಖಿಯೊಮ್ಮೆ ಪೇಳಿದುದು, ಆದರೂ ಹೀಗುಂಟೆ
ರೂಪ ಸಾದೃಶ್ಯವೀ ಸೃಷ್ಟಿಯಲಿ?

ರಾವಣ :

ಉಂಟುಂಟು.
ಊಹೆಗೂ ಮೀರಿದುದು ಆ ರೂಪ ಸಾದೃಶ್ಯ.
ಮೋಸಹೋಯಿತು ಕಣ್ಣು ಮರುಳಾಯ್ತು ಆ ಮನಸು
"ಮಂಡೋದರೀ ರಾಣಿ, ಮಂಡೋದರೀ ರಾಣಿ,
ಇಲ್ಲಿಗೇಕೈತಂದೆ?" – ಎಂದು ಕೇಳುವನಿದ್ದೆ.
ಅಷ್ಟರಲಿ ಎಚ್ಚೆತ್ತೆ. ಯೋಚಿಸಿದೆ. ಸೃಷ್ಟಿಯಲಿ
ಎರಡೆರಡು ಮಂಡೋದರಿಯರಿರುವುದಾದರೆ ಆಗ
ಇಬ್ಬರೂ ಒಂದು ಕಡೆ ವಾಸಿಸಲಿ. ಮಡದಿ ಮಂ-
ಡೋದರಿಯು ರಾವಣನ ರಾಣಿವಾಸದ ಮುಕುಟ-
ಮಣಿಯಾಗಿ ಇರುವಲ್ಲಿ ಅವಳ ಸಾದೃಶ ರೂಪ-
ವತಿಯಾದ ಸೀತೆಯೂ ಅವಳೊಡನೆ ಅಲ್ಲಿಯೇ
ಇರಬೇಕು, ಬೇರೆ ಜಾಗದೊಳಲ್ಲ, ಬೇರೆ ಪತಿ-
ಯೊಡನಲ್ಲ – ಎಂದು ನಾ ನಿರ್ಧರಿಸಿ ತಂದೆ ಆ
ಸೀತೆಯನು. ಆದೊಡೇನ್ . . .

ಮಂಡೋದರಿ : (ನಡುವೆ ಬಾಯಿ ಹಾಕಿ)

ಅಹುದಹುದು. ಆ ಸೀತೆ
ರಾವಣೇಶ್ವರನನ್ನು ಒಲ್ಲೆನೆಂದೆನುತ ತಾ
ತ್ಯಜಿಸಿಹಳು.

ರಾವಣ :

ಹೌದು. ನಿಜ, ತ್ಯಜಿಸಿಹಳು.

ಮಂಡೋದರಿ :

ಈ ಸಮಯ
ವಿಂತಿರಲು ಆರ್ಯಪುತ್ರನೊಳೆನ್ನ ಪ್ರಾರ್ಥನೆಯು
ಬರಿಯ ಪ್ರಾರ್ಥನೆಯಲ್ಲ ಮೇಣ್ ನನ್ನ ಕಡೆ ಭಿಕ್ಷೆ.

ರಾವಣ :

ರಾವಣನ ಬೇಡಿದವರೊಬ್ಬರೂ ತಣಿಯದೆಯೆ
ಹೋಗಿಲ್ಲ. ಮಂಡೋದರೀ ದೇವಿ! ಕೊಡುತಿಹನು
ರಾವಣನು, ಕೇಳುವುದು ಕಡೆ ಭಿಕ್ಷೆ. ರಾವಣನ
ಬೇಡುವಂತಹುದಿರಲಿ ಆ ಭಿಕ್ಷೆ.

ಮಂಡೋದರಿ :

ಆ ಸೀತೆ . . .
ಪೆಣ್ಮಗಳು, ಚಿಕ್ಕವಯಸಿನ ಯುವತಿ. ಆ ಮಗಳು . . .

ರಾವಣ :

(ನಡುವೆ ಬಾಯಿ ಹಾಕಿ) ಆ ಮಗಳು, ಆ ಮಗಳೆ . . .

ಮಂಡೋದರಿ :

ವಿಧಿನಿಯಮವಂತು ಅನು-
ಗೊಳಿಸಿದ್ದುದಾಗಿರಲು ಆ ವಯಸ್ಸಿನ ಪುತ್ರಿ
ಇರಲು ಬಹುದಾಗಿತ್ತು ರಾವಣಗೆ. ಪರವನಿತೆ-
ಯಹ ಸೀತೆ ಮಗಳ ಸಮವಲ್ಲದೆಲೆ ಬೇರೆಂತು?

ರಾವಣ :

ಏನೆಂಬೆ ? ಮಂಡೋದರೀ ದೇವಿ ನೀನೆಂತು ಪೇಳುವೆಯ ? ಪರವನಿತೆ ಆ ಸೀತೆ ಎನಗೆ ಮಗ-ಳಾಗಿಹಳೆ ?

ಮಂಡೋದರಿ :

ಅಂತಲ್ಲವೈ ರಮಣ. ನಮಗೆಲ್ಲಿ ಆ ಭಾಗ್ಯ. ಜಾನಕಿಯ ಸರಿಪೋಲ್ವ ಪತಿವ್ರತಾ-ಮೂರುತಿಯ ಗರ್ಭದಲಿ ಧರಿಸುವಂತಹ ಪುಣ್ಯ-ಮಂಡೋದರೀ ದೇವಿಗೆಲ್ಲಿಯದು ? ನಾ ಪೇಳಿ-ದುದು ಹೀಗೆ. ಆ ಸೀತೆ ವಯಸಿನಲಿ ಕಿರಿಯವಳು ರಾವಣನ ಮಗಳಾಗಬಹುದಾದವಳ ವಯಸು ಆ ವಯಸು. ಆ ದೇವಿ ಪರವನಿತೆ. ಕಿರಿಯಳಹ ಪರವನಿತೆ ಮಗಳ ಸಮನಾದವಳು. ಮನದೊಳಿದ ಯೋಚಿಸುತ ಮಗಳ ಭಾವನೆಯಿಂದ ಪತಿಯ ಸ-ನ್ನಿಧಿಗವಳ ಸೇರಿಸುವುದೆಂತೆಂಬ, ಉಭಯಕುಲ ವಿಕಸಿಸುವ ಮಾರ್ಗವನು ಸೂಚಿಸಲು ಬಂದಿಹೆನು. ಇಂತುಮಾಡೆಂಬ ಕಡೆ ಭಿಕ್ಷೆಯನು ಬೇಡೆ ಬಂ-ದಿಹೆ ನಾನು.

ರಾವಣ :

ಮಂಡೋದರೀದೇವಿ ! ಈ ಸಮಯ ವೆಂತಹುದು. ತನುಜನನು ಬಲಿಕೊಟ್ಟೆ, ಪುತ್ರರನು ಬಲಿಗೊಟ್ಟೆ, ಲಂಕೆಯತಿವೀರರನು ಮೂಲಬಲ-ದಾಳುಗಳ ಬಲಿಗೊಟ್ಟೆ. ಉಳಿದನೊಬ್ಬನು ಕುವರ ಇಂದ್ರಜಿತು. ಅವನನೂ ಕಳುಹಿಹೆನು ಇಂದಿನಾ-ಸಮರಕ್ಕೆ. ರಣದೇವಿಗಿಂತು ಬಲಿಯೊಪ್ಪಿಸಿದ ಮೇಲಿನ್ನು, ಪ್ರಾರ್ಥನೆಯ ಸಲ್ಲಿಸುವ ನೆವದಲ್ಲಿ ಸೀತೆಯನು ಕಳುಹಿಸುತ ಬದುಕುವನೆ ರಾವಣನು ? ರಾವಣನ ಹಿರಿಯ ಜೀವನದಲ್ಲಿ ಅಪವಾದ ಬರದಿಹುದೆ ? ಮಂಡೋದರೀದೇವಿ ! ಎನಗೆ ಬಂ ದಪವಾದ ನಿನ್ನದಲ್ಲವೆ ದೇವಿ ?

ಮಂಡೋದರಿ :

ಪತಿದೇವ ! ಇನ್ನಾವ ಅಪವಾದ ಬರಬೇಕು. ಸೀತೆಯನು ಕಳುಮಾಡಿದಪವಾದ ಬರದಿಹುದೆ, ಇದುವರೆಗೆ ?

ರಾವಣ :

ಬಂದಿಲ್ಲ, ಬಂದಿಲ್ಲ. ಅಪವಾದವೆಲ್ಲಿಯದು ? ರಾವಣನ ತಂಗಿ ಶೂರ್ಪನಖಿ ಕಿವಿಮೂಗುಗಳ ಕೊಯ್ದವಳ ರೂಪವನು ಪಾಳ್ಗೆಡಿಸಿದಾತನಿಗೆ "ಇದುವೆ ತಕ್ಕುದು ಶಿಕ್ಷೆ, ಇದುವೆ ತಕ್ಕುದು ಶಿಕ್ಷೆ" ಎನ್ನದೆ ಈ ಲೋಕ ?

ಮಂಡೋದರಿ :

ಕರೆದುತಂದುದು ಶಿಕ್ಷೆ. ಸೆರೆಯಲಿಟ್ಟುದು ಶಿಕ್ಷೆ. ಆಮೇಲೆ . . . ಆಮೇಲೆ ಅವಳ ಕಾಮಿಸಿದೊಂದು ಅಪರಾಧ . . . ಅಪವಾದ.

ರಾವಣ :

ಅಂತಲ್ಲ ಮಂಡೋದರೀದೇವಿ. ಸೀತೆ ರಾ ಮರ ಪ್ರೇಮ ಜಗಕೆಲ್ಲ ಆದರ್ಶವಾಗಿಹುದು. ಅಂತಪ್ಪ ಸೀತೆಯನು ಮನವೊಲಿಸಿ, ಹಿಂದೊಮ್ಮೆ ಅವಳನಾಳ್ದನ ಮುಂದೆ ಮೆರೆಯುವುದು ಜಯಭೇರಿ ಹೊಡೆದಂತೆ. ರಾವಣನು ರಾಮನಿಗೆ ವಿಧಿಸುವಂ ತಹ ಶಿಕ್ಷೆ ಅಂತಹುದೆ ಇರಬೇಕು. ಆ ರಾಮ ಮರಣ ಪರ್ಯಂತರವು ಅನುದಿನವು ನೆನೆನೆನೆದು ಪತರಿಪಿಸುತಿರಬೇಕು.

ಮಂಡೋದರಿ :

ಪತಿದೇವ ! ಜಾನಕೀಯ ಮನವನ್ನು ಒಲಿಸಲಾರದೆ ಹೋದೆ. ನಿನ್ನೊಡನೆ ವೈಭವದಿ ಮೆರೆಯುವುದಕವಳು ಒಪ್ಪಲೆ ಇಲ್ಲ.

ರಾವಣ :

ಇಲ್ಲ ನಿಜ. ಮೂರು ಲೋಕದ ಗಂಡ, ಲಂಕಾಧಿ ಪತಿ ನಾನು, ರಸಿಕರಾಜರರಾಜ. ನನ್ನೊಡನೆ ಲೋಲಾಪ್ತಿಯಲ್ಲಿರಲು ಅವಳೊಪ್ಪದಿರುವುದದು ಆಶ್ಚರ್ಯ. ರಾಜವಂಶದೊಳುದಿಸಿ, ಹೇಡಿಯೊಳು ವನವಾಸದಲ್ಲಿರುವ ಹುಲುಮನುಜ ರಾಮನಲಿ ಅತಿಶಯವನೇನು ಕಾಣುತ್ತಿರ್ಪಳೋ ಕಾಣೆ.

ಮಂಡೋದರಿ :

ಪತಿಯೆ ಪರದೈವವೆಂದೆಣಿಸುವಳು ಪತಿವ್ರತೆಯು ಪತಿಯ ಮೂರ್ತಿಯ ಮುಂದೆ ಅರಸುತನವನು ಕೂಡ

ತೃಣವಾಗಿ ಕಾಣುವಳು. ನಿನಗೆ ಒಲಿಯುವಳಲ್ಲ,
ಸೀತೆಯಂತಹ ಸಾಧ್ವಿ.

ರಾವಣ :

ಅಹುದು ಒಲಿಯುವಳಲ್ಲ.

ಮಂಡೋದರಿ :

ಪತಿಯ ಸನ್ನಿಧಿಗವಳ ಕಳುಹಿಸಲು ತಡವೇಕೆ ?

ರಾವಣ :

ತಂದುದಾಯಿತು ದೇವಿ. ಕಳುಹುವುದು ರಾವಣನ
ಪರಿಯಲ್ಲ. ಅತಿರಥ ಮಹಾರಥರ ನಡುಗಿಸಿದ
ರಾವಣನು ಹುಲುಮನುಜ ರಾಮನಿಗೆ ತಂದುದನು
ಹಿಂದಕ್ಕೆ ಒಪ್ಪಿಸನು.

ಮಂಡೋದರಿ :

(ದೈನ್ಯದಿಂದ ಬೇಡುತ್ತಾ) ಸೋಲಾಗುತಿದೆ ದೇವ.

ರಾವಣ :

ಸೋಲಾಗುತಿರುತಿಹುದು. ಅರಿತಿಹೆನು ನಾನದನು.
ಸೀತೆಯನು ತಹ ಮುನ್ನ, ಯುದ್ಧ ಹೂಡುವ ಮುನ್ನ,
ನಾನು ಊಹಿಸಲಿಲ್ಲ ಈ ಬಗೆಯ ಸೋಲು ಸಮ-
ನಿಪುದೆಂದು. ಈ ಸೋಲು ರಾವಣನ ಊಹೆಗೂ
ಮೀರಿದುದು.

ಮಂಡೋದರಿ :

ಇನ್ನುಮುಂದಾದರೂ

ರಾವಣ :

ಸಾಕು ಬಿಡು
ಆ ಮಾತು.

ಮಂಡೋದರಿ :

ಪೆಣ್ಮಗಳು ಆ ಸೀತೆ ಪಡುತಿರುವ
ದುಃಖವನು ಕೇಳಿಹೆನು. ಕೇಳಿ ಮನನೊಂದಿಹೆನು.
ಅಂತಪ್ಪ ಸುಕುಮಾರಿ ಸಹಿಸಲಾರಳು ಅದನು.
ಕಾವಲಿನ ದಾಸಿಯರ ಹೃದಯವೇ ಕರಗಿಹುದು
ಅವಳ ಶೋಕವ ಕಂಡು. ಅದ ಕೇಳಿ ಎನ್ನ ಹೃದ
ಯವೆ ಒಡೆದು ಹೋಗುತಿದೆ. ಪತಿದೇವ! ಕೃಪೆದೋರು.
ಸೀತೆಯನು ನಿನ್ನ ಮಗಳಂತೆಯೇ ಭಾವಿಸುತ
ಅವಳಲ್ಲಿ ಕೃಪೆದೋರು.

ರಾವಣ :

ಮಗಳಂತೆ, ಮಗಳಂತೆ ? . . .
ಈ ನಿನ್ನ ಮಾತುಗಳು ಮನವ ತಲ್ಲಣಗೊಳಿಸಿ
ಭಯದಿ ನಡುಗಿಸುತಿಹುದು.

ಮಂಡೋದರಿ :

ಪತಿದೇವ ! ನಾನೇನ
ಪೇಳಿದೆನು ? ಮೊಗವೇಕೆ ತತ್ಕ್ಷಣವೆ ಮಂಕಾಯ್ತು ?

ರಾವಣ :

ಮಂಡೋದರಿ ದೇವಿ ! ಜಾನಕಿಯು ಅಂತೆಯೇ
ಪೇಳಿದಳು.

ಮಂಡೋದರಿ :

ಏನೆಂದು ? ಅಂತಪ್ಪು ಮಹಿಮೆಯು
ಳ್ಳವೆ ಅವಳ ಮಾತುಗಳು ? ಸೀತೆ ಪೇಳಿದುದೇನು ?
ಆ ಮಾತ ತಿಳಿಯಲತಿಕಾತುರತೆಯಿಂದಿಹುದು
ಎನ್ನ ಮನ.

ರಾವಣ :

ಜಾನಕಿಯು ಪೇಳಿದಳು.

ಮಂಡೋದರಿ :

ಏನೆಂದು ?

ರಾವಣ :

ಯಾವ ಬಯಕೆಯ ಸಲಿಸೆ ಕುಲಕೆ ಅಪಯಶ ತಂದು
ಕಳುಮಾಡಿ, ಪುತ್ರರನು ತನುಜರನು ಬಲಿಗೊಟ್ಟು
ಕಡೆಗುಳಿದ ಸೈನ್ಯವನು ಇಂದ್ರಜಿತುವಿನ ಜೊತೆಗೆ
ಕಳುಹಿಸಿರುವೆನೊ ನಾನು, ಆ ಮನದ ಇಚ್ಛೆಯದು
ಸಾಧ್ಯವಾಗದುದೆಂದು ಎನ್ಮನಕೆ ತಿಳಿದು ಬರೆ
ಸತ್ತು ಮಡಿಯುತ್ತಲಿಹ ಬಂಧುಗಳ ಸೈನಿಕರ
ಸೇಡು ತೀರಿಸಲೆಂದು, ಧಾವಿಸಿದೆ ನಾ ಸೀತೆ
ಸೆರೆಯಿದ್ದ ವನದೆಡೆಗೆ. ಕೆರಳ್ದ ಕೋಪದಳವಳ
ತಲೆಯ ತುಂಡರಿಸಿಟ್ಟು ಆ ತಲೆಯ ರಾಮನಿಗೆ
ಕಳುಹಬೇಕೆಂದಿದ್ದೆ.

ಮಂಡೋದರಿ :

ಉಂಟುಂಟೆ ? ಹೀಗುಂಟೆ ?
ಸ್ತ್ರೀಹತ್ಯಪಾತಕವು ರಾವಣನ ಕಾಡಿಸದೆ ?

ರಾವಣ :

ಕೇಳಿನ್ನು. ಸಮರಜಯ ದೇವನಿಗೆ ಸೇರಿದುದು
ಅದು ಯಾವ ಬಗೆ ಇಹುದೊ ತಿಳಿಯಲಾಗದು ಈಗ
ಆ ವಿಧಿಯ ಫಲವ ತಿಳಿಯುವ ಮುನ್ನ ಸಂದ
ನಷ್ಟದ ಸೇಡ ತೀರಿಸುವ ಬಯಕೆ ಬಲಪಾಗಿರಲು
ಜಯವ ಕೈಗೂಡಿಸುವ ಸಾಧನೆಯ ಸಾಧಿಸಲು
ಜಾನಕಿಯ ಬಳಿಗೀಗ ಹೋಗಿದ್ದೆ.

ಮಂಡೋದರಿ : (ಗಾಬರಿಯಿಂದ)

ಜೀವೇಶ!

ನಿನ್ನ ಮಾತನು ಕೇಳಿ ಭಯವಾಗುತಿದೆ ಮನಕೆ.
ಆ ಸೀತೆ ಪತಿವ್ರತೆಯು. ಏನನರ್ಥದ ಬಯಕೆ
ಚಿಂತಿಸಿದೆ.

ರಾವಣ :

ಅನರ್ಥದ ಬಯಕೆಯೇಂ! ಅಂತಲ್ಲ,
ಮಂಡೋದರೀ ದೇವಿ, ಆ ಗುಟ್ಟ ನೀನರಿಯೆ.
ರಾವಣನು ಜಯವ ಪಡೆಯುವ ಮಾರ್ಗ ಇದು ಒಂದೆ.
ರಾವಣನ ಜಯಧ್ವಜವು ಜಾನಕಿಯ ಒಲವಿನಲ
ಗಿನಮೇಲೆ ನರ್ತಿಸುತ ನಡೆದಿಹುದು. ಜಾನಕಿಯು
ರಾಮನಿಗೆ ಅರ್ಪಿಸಿಹ ದೃಢವಾದ ಪ್ರೇಮವೇ
ಅವನಿಗೀ ಸಮರವನು ಗೆಲುವಂಥ ಶಕ್ತಿಯನು
ಕೊಟ್ಟಿಹುದು. ಅವಳ ಪ್ರಾಣವು ಹೋಗಿ ಆ ಶಿರವ
ಆ ರಾಮ ನೋಡಿದೊಡೆ ಕಂಗೆಟ್ಟು ವೈರಾಗ್ಯ
ತಾಳುವನು. ರಾಮನಿಗೆ ಬೇಸರದ ವನವಾಸ
ಸಮನಿಪುದು. ರಾವಣಗೆ ಸ್ವರ್ಗಸುಖವನು ಕೊಡುವ
ಈ ಲಂಕೆಯುಳಿಯುವುದು. ಜಯವಧುವು ವರಿಸುವಳು.
ಕಡಿದ ಸೀತೆಯ ಶಿರವ ನೋಡಿದೊಡೆ ಆ ರಾಮ
ದುಃಖದಲಿ ಸಾಯುವನೊ ಬದುಕುವನೊ ಯಾರದನು
ಬಲ್ಲವರು. ಸೇಡತೀರಿಪೆನೆಂಬ ಕೋಪದಲಿ
ನಾನಿರಲು ತಡೆದನೆನ್ನ ಸುಪಾರ್ಶ್ವ ವಿಧಿಯಡ್ಡ
ಬಂದಂತೆ. ಸ್ತ್ರೀಹತ್ಯೆ ಪಾತಕವದೆಂದೆನುತ
ಹಿರಿದ ಕತ್ತಿಯನಿಳುಹಿ ವೇದಾಂತವನ್ನರುಹಿ
ಆ ಸೀತೆ ಬದುಕುವೊಲು ಮಾಡಿದನು. ನನ್ನೆಣಿಕೆ
ತಪ್ಪಾಯ್ತು. ಆಸೆ ಬರಿ ಭ್ರಮೆಯಾಯ್ತು. ವಿಧಿಯೆನಗೆ
ಅನುಕೂಲವಾಗಿಲ್ಲ. ನಾನೀಗ ಪ್ರತಿಕೂಲ
ದೈವನೆಂದೂಹಿಪೆನು.

ಮಂಡೋದರಿ :

ವಿವರವಾಗದ ಪೇಳು.

ರಾವಣ :

ಜಾನಕಿಯ ಬಳಿ ಸಾರಿ ಆಸೆಯನು ತೋರಿಸಿದೆ.
ನನ್ನೊಡನೆ ಬಾಳೆಂದು ಅವಳ ಬಳಿ ಸಾರುತ್ತ
ನಸುನಗುವ ಬೀರುತ್ತ, ಒಲಿದು ಬಾ ಜಾನಕಿಯೆ
ರಸಿಕರಾಜರ ರಾಜ ರಾವಣೇಶ್ವರ ವೀರ
ಮೆಚ್ಚಿಬಂದಿಹೆ ನಿನಗೆ. ರಾಜ್ಯಕ್ಕೆ ರಾಣಿಯನು
ಮಾಡುವೆನು. ಸೇವೆಯನು ಸ್ವೀಕರಿಸು ಎಂದು ನಾ
ಸಂತಸದಿ ಹೆಜ್ಜೆಯಿಡೆ ಜರೆದು ಮೂದಲಿಸಿದಳು
ಕಟುವಾದ ಮಾತಿನಲಿ. ನೆತ್ತಿಗೇರಿತು ಕೋಪ
ಕತ್ತಿಯನು ಝುಳಪಿಸುತ ಸಂರಾಜ್ಞಿಯಾಗದೊಡೆ
ಸಾವನಪ್ಪಲು ತಕ್ಕ ಸಿದ್ಧತೆಯ ಮಾಡಿಕೋ
ಈ ಭೂಮಿ ಋಣ ನಿನಗೆ ತೀರಿತೆಂದೂಹಿಸಿಕೋ
ಎಂದು ನಾ ಮುಂದೆ ಬರೆ, ಆ ಸೀತೆ, ದೂರದೂ
ರಕೆ ಸರಿದು, "ಕಾಪಾಡು ಜನಪಾಲ ಕಾಪಾಡು.
ನಾನಬಲೆ ಸೆರೆಯಾಳು ಕಾಪಾಡು. ನಿನಗೊಬ್ಬ
ಮಗಳಿಲ್ಲ. ಕರುಳನೋವಿನ ಅಳಲ ಪರಿಚಯವು
ನಿನಗಿಲ್ಲ. ಎನ್ನನ್ನು ನಿನ್ನ ಮಗಳಂತೆಯೇ
ತಿಳಿದುಕೊಳ್ಳೈ ತಂದೆ"–ಎನುತೆ ಕೈಗಳ ಮುಗಿದು
ಬೇಡಿದಳು. ಪೇಳಲೇನಚ್ಚರಿಯ ಪ್ರಿಯರಮಣಿ.
ಸಿಡಿದು ನುಡಿಯುತಲಿದ್ದ ಬಿರುಸಿನಾ ನುಡಿಗಳಿಗೆ
ಬೈಗಳಿಗೆ ಲಕ್ಷಿಸದೆ ಕೋಪಿಸದೆ ಹಿಂಜರಿಯ
ದಿದ್ದ ಮನ 'ಎನ್ನನ್ನು ನಿನ್ನ ಮಗಳಂತೆಯೇ
ತಿಳಿದುಕೊಳ್ಳೈ ತಂದೆ'–ಎಂದೆನುತ ದೈನ್ಯದಿಂ
ನಮಿಸಿ ಪೇಳಿದ ಅವಳ ಮಾತುಗಳ ದೈನ್ಯತೆಗೆ
ಧೃತಿಗೆಡಲು, ಬಲವುಡುಗಿ, ಮೈಬೆವರಿ, ಪೆತ್ತ ಪಿತ
ಮಗಳನ್ನು ಕಾಮಿಸಿದ ಭಾವ ಮನದಲಿ ಸುಳಿದು
ಹೃದಯವನು ಭೇದಿಸಲು, ಕಣ್ಣುಕತ್ತಲೆ ಮುಸುಕೆ
ಬಂದೆನಿಲ್ಲಿಗೆ ಬೇಗ. ಆ ಭಾವದಾಳದಲಿ
ಕರುಳ ಮಿಡಿಸಿದ ಭಾವದಾಳದಲಿ ನೆಲಸಿರುವ
ಗುಟ್ಟನರಿಯದೆ ಹೋದೆ. ಮನದ ಬವಳಿಯೊಳಿರಲು
ತಂದನೆನ್ನ ಸುಪಾರ್ಶ್ವ.

(ಮುಂದುವರಿಯುವುದು)

ರಾಮಾಯಣದಲ್ಲಿ ಬರುವ ರಾಮ, ರಾಕ್ಷಸ, ವಾನರರು

ಡಾ|| ವಾಸು ಬಿ. ಪುತ್ರನ್

ನಮ್ಮ ಪ್ರಾಚೀನ ಸಾಹಿತ್ಯವು ಅತ್ಯಂತ ಸಮೃದ್ಧವಾದುದು. ಅದರಲ್ಲಿ ಭಾರತೀಯ ಸಂಸ್ಕೃತಿಯು ಹಾಸುಹೊಕ್ಕಾಗಿ ವ್ಯಕ್ತವಾಗಿದೆ. ಆದರೆ ಪುರಾಣಾದಿ ಪ್ರಾಚೀನ ಗ್ರಂಥಗಳಲ್ಲಿ ಚಿತ್ರಿಸಲ್ಪಟ್ಟಿರುವ ಕೆಲವೊಂದು ಪಾತ್ರಗಳ ಯಾ ಜಾತಿಸಮೂಹದ ವಿಚಿತ್ರ-ವಿಕೃತ ರೂಪಗಳನ್ನು ನೋಡಿದರೆ, ನಿಜವಾಗಿಯೂ ಈ ಪಾತ್ರಗಳು ಈ ದೇಶದಲ್ಲಿದ್ದಿರಬಹುದೇ ಎಂಬ ಸಂಶಯಕ್ಕೆ ಆಸ್ಪದ ದೊರೆಯುತ್ತದೆ. ಇಂದಿಗೂ ಆ ವಿಚಿತ್ರ-ವಿಕೃತರೂಪಗಳು ಜನತೆಯ ಮಾನಸ ಪಟಲದಲ್ಲಿ ಅಚ್ಚಳಿಯದೆ ಉಳಿದಿವೆ! ಆದರೆ ನಾವು ಆ ಪ್ರಾಚೀನ ಪುರಾಣಾದಿ ಗ್ರಂಥಗಳಲ್ಲಿ ಸಂಕಲಿತವಾಗಿರುವ ಪರಂಪರೆಯ ಆಳಕ್ಕಿಳಿದು ಸತ್ಯವನ್ನು ಹುಡುಕುವ ಪ್ರಯಾಸ ಮಾಡಿದರೆ ಆ ಗ್ರಂಥಗಳ ರಚನೆಯಾಗುವ ಮೊದಲೇ ಹಲವಾರು ತರದ ಭ್ರಮೆಗಳು ಹುಟ್ಟಿದ್ದುವು ಎಂದು ತಿಳಿಯುತ್ತೇವೆ. ಈ ಗ್ರಂಥಕರ್ತರು ಆ ಭ್ರಮೆಗಳನ್ನೇಕೆ ಬಯಲಿಗೆಳೆಯಲಿಲ್ಲವೆಂಬುದು ಮನನೀಯ ವಿಷಯ. ಬಹುಶಃ ಅವರಿಗೂ ಆ ರೂಢಿಗಳಲ್ಲಿ ವಿಶ್ವಾಸವಿದ್ದುದರಿಂದ ಹಾಗೆಯೇ ಸ್ವೀಕರಿಸಿ ಚಿತ್ರಿಸಿರಬಹುದೆಂದು ವಾದಿಸಬೇಕಾಗುತ್ತದೆ.

ರಾಮಾಯಣದಲ್ಲಿಯೂ ಈ ವಿಚಿತ್ರ-ವಿಕೃತ ರೂಪದ ಪಾತ್ರಗಳಿಗೆ ಸ್ಥಾನ ದೊರೆತಿದೆ. ಇಲ್ಲಿ ಬರುವ ಪಾತ್ರಗಳಲ್ಲಿ ಶ್ರೀರಾಮ, ರಾವಣ, ಹಾಗೂ ವಾನರರು ಮುಖ್ಯ. ಇಲ್ಲಿ ರಾಮನ ಆರ್ಯರ (ದೇವತೆಗಳ) ಪ್ರತೀಕನಾದರೆ ರಾವಣನು ದ್ರಾವಿಡರ (ರಾಕ್ಷಸರ) ಪ್ರತೀಕನು. ವಾನರರು ಇಬ್ಬರಲ್ಲಿಯೂ ಸಂಬಂಧವನ್ನಿಟ್ಟುಕೊಂಡಿದ್ದರು-ಮೊದಲು ವಾನರರು ಒಂದು ರೀತಿಯಲ್ಲಿ ರಾವಣನ ಮಿತ್ರರಾಗಿದ್ದರೆ, ಬಳಿಕ ಬಹುಶಃ ಸ್ವಾರ್ಥದಿಂದಾಗಿ ರಾಮನ ಮಿತ್ರರಾಗಿ ರಾವಣನನ್ನು ಗೆಲ್ಲಲು ಸಹಾಯವನ್ನಿತ್ತಿರುವ ಕಾಡು ಜಾತಿಯವರು

ರಾಮಾಯಣದಲ್ಲಿ ಬರುವ ರಾಮನೆಂದರೆ ಕೋಟ್ಯಂತರ ಕಾಮದೇವನಿಗಿಂತಲೂ ಸುಂದರ, ಗಗನ ಸದೃಶ ವರ್ಣದವನು, ಕೋದಂಡನು. ಪರಾಕ್ರಮಿ, ಭುಜಬಲಶಾಲಿ, ತ್ಯಾಗಿಯು ; ಅವನು ಏಕಪತ್ನೀವ್ರತಧಾರಿ, ಶಿವನ ಮಿತ್ರನು ಅಯೋನಿಜೆ ಸೀತೆಯ ಪತಿ, ಆಜ್ಞಾಪಾಲಕ ಪುತ್ರ, "ಯದಾ ಯದಾಹಿ ಧರ್ಮಸ್ಯ" ಎಂಬಂತೆ ಧರ್ಮದ ಉದ್ಧಾರಕ್ಕಾಗಿ, ಅಧರ್ಮ-ಅಧರ್ಮಿಗಳ ನಾಶಕ್ಕಾಗಿ ಜನ್ಮ ಪಡೆದಿರುವ ಅವತಾರಿ. ಇತ್ತ ರಾವಣನೆಂದರೆ ರಾಕ್ಷಸ. ಅವನ ಹೆಸರು ತೆಗೆದ ಕೂಡಲೇ ಒಂದು ಭಯಂಕರವಾದ ಕಾಲ್ಪನಿಕ ರೂಪವು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುವುದು. ಇನ್ನು ವಾನರರೆಂದ ಕೂಡಲೇ ಆ ಮಂಗ ಚೇಷ್ಟೆಗಳು, ಆ ಅಸಂಸ್ಕೃತ ವರ್ತನೆಗಳು ವಿಕೃತಾಕಾರಗಳು ಸ್ವಾಭಾವಿಕವಾಗಿ ನಮ್ಮಲ್ಲಿ ಬಂದು ನಿಲ್ಲುವವು.

ಆದರೆ ಈ ವ್ಯಕ್ತಿಗಳು ಪ್ರಾರಂಭದಲ್ಲಿ ಯಾವ ರೀತಿಯಲ್ಲಿದ್ದರು ? ಅವರ ಅಸ್ತಿತ್ವವೇನಿತ್ತು ? ಮಹತ್ವವೆಷ್ಟಿತ್ತು? ಅವರು ಈಗ ಪಡೆದಿರುವ ಸ್ಥಾನ-ಮಾನಗಳನ್ನು ಹೇಗೆ ಪಡೆದರು ? ಎಂಬುದನ್ನು ಗಮನಿಸಬೇಕು. ಧಾರ್ಮಿಕ ಶ್ರದ್ಧೆ ಇರುವ ಹಲವರಿಗೆ ಈ ವಿಚಾರ ಒಪ್ಪದು. ಆದರೆ ನಿಜ ವಿಷಯವನ್ನು ತಿಳಿಯುವ ಪ್ರಯತ್ನ ಅನುಚಿತವಲ್ಲ !

ವೈದಿಕ ಸಾಹಿತ್ಯದಲ್ಲಿ ರಾಮನೆಂಬ ಹೆಸರಿನ ವ್ಯಕ್ತಿಗಳನೇಕರು ದೊರಕುವರು. ತೈತ್ತರೀಯ ಆರಣ್ಯಕದಲ್ಲಿ ರಾಮನೆಂದರೆ 'ಪುತ್ರ' ಎಂಬರ್ಥವಿದೆ. ಸಾಯಣನ ಅಭಿಮತದಂತೆ 'ರಮಣೀಯ ಪುತ್ರ'ನಿಗೆ ರಾಮನೆಂಬ ಹೆಸರು. ಋಗ್ವೇದದಲ್ಲಿ ರಾಮನೊಬ್ಬ ತಪಸ್ವಿ. ಶತಪಥ ಬ್ರಾಹ್ಮಣದಲ್ಲಿ ಅವನು ಓರ್ವ ತಪಸ್ವಿಯ ಪುತ್ರ. ತಾತ್ಪರ್ಯವೇನೆಂದರೆ ವೈದಿಕ ಸಾಹಿತ್ಯದಲ್ಲಿ ಇಂದಿನಂತೆ ಶ್ರೀರಾಮ ಅವತಾರಿಯಾಗಿರದೆ ರಾಜ ಹಾಗೂ ಬ್ರಾಹ್ಮಣರಲ್ಲಿ ಒಬ್ಬನಾಗಿದ್ದನು. ಅಲ್ಲಿ ಅವನು ಜನಕನ ಅಳಿಯನಾಗಿದ್ದನೆಂಬುದಕ್ಕೂ ಸೀತೆಯ ಪತಿಯಾಗಿದ್ದನೆಂಬುದಕ್ಕೂ ಯಾವ ಆಧಾರವೂ ದೊರೆಯುವುದಿಲ್ಲ. ಮಹಾಭಾರತದಲ್ಲಿ ದ್ರೋಣಪರ್ವ ಶಾಂತಿಪರ್ವಗಳಲ್ಲಿ ರಾಮಾಯಣದ ಕಥೆಗೆ ಸ್ಥಾನ ದೊರೆಯುವುದಾದರೂ ರಾಮನನ್ನು ಅವತಾರಿ ಎಂದು ವರ್ಣಿಸಿಲ್ಲ.

ಹಾಗಾದರೆ ರಾಮನಿಗೆ ಅವತಾರಿಯೆಂಬ ರೂಪ ಅಥವಾ

ಬಿರುದು ಎಂದು ಸಿಕ್ಕಿತು? ಎಂಬುದೊಂದು ಸ್ವಾಭಾವಿಕ ಪ್ರಶ್ನೆ. ಶತಪಥ ಬ್ರಾಹ್ಮಣದಲ್ಲಿ ಅವತಾರವಾದದ ಬೀಜವು ಕಾಣಬಹುದು. ಆದರೆ ಅಲ್ಲಿ ವಿಷ್ಣುವಿಗಿಂತ ಮತ್ಸ್ಯ, ಕೂರ್ಮ, ವರಾಹ ಅವತಾರ ತಾಳುವ ಪ್ರಜಾಪತಿಗೆ ಹೆಚ್ಚಿನ ಮಹತ್ವ ಸಿಕ್ಕಿದೆ. ವಿಷ್ಣುವಿಗೆ ಮಹತ್ವ ಸಿಗತೊಡಗಿದುದು ಆ ಬಳಿಕ ವಿಷ್ಣುವೇ ಮತ್ಸ್ಯ, ಕೂರ್ಮ, ವರಾಹ, ನರಸಿಂಹನ ಅವತಾರಗಳಿಗೆ ಕಾರಣಭೂತನೆಂದು ಪರಿಗಣಿಸಲ್ಪಟ್ಟನು. ಕ್ರಿ. ಪೂ. ೩ನೇ ಶತಮಾನದಲ್ಲಿ ವಾಸುದೇವ–ಕೃಷ್ಣ ಹಾಗೂ ವಿಷ್ಣುವಿನ ಅಭಿನ್ನತೆಯು ಕಂಡುಬರುತ್ತದೆ ಬರಬರುತ್ತಾ ಭಾಗವತ ಧರ್ಮದತ್ತ ಕಡೆ ಜನರನ್ನು ಆಕರ್ಷಿಸಲಿಕ್ಕೂ ಬೌದ್ಧಧರ್ಮದ ಮಹತ್ವವನ್ನು ಕುಗ್ಗಿಸಲಿಕ್ಕಾಗಿಯೂ ಬ್ರಾಹ್ಮಣರು ಅವತಾರವಾದಕ್ಕೆ ತುಂಬಾ ಪ್ರೋತ್ಸಾಹವನ್ನಿತ್ತ ಕಾರಣ ಕ್ರಮೇಣ ರಾಮನೂ ಕೃಷ್ಣನಂತೆ ವಿಷ್ಣುವಿನ ಅವತಾರವೆಂದು ಪರಿಗಣಿಸಲ್ಪಟ್ಟನು. ಅವನಲ್ಲಿರುವ ವೀರತ್ವ, ಆದರ್ಶ ಮೊದಲಾದುವನ್ನು ಜನರು ಆ ಮೊದಲೇ ಅರಿತುಬಿಟ್ಟಿದ್ದರು. ರಾವಣನನ್ನು ಪಾಪದ ಪ್ರತೀಕವಾಗಿಯೂ ರಾಮನನ್ನು ಸದಾಚಾರದ ಪ್ರತೀಕನಾಗಿಯೂ ಕಲ್ಪಿಸಲು ಈ ಪ್ರಚಾರವು ಪ್ರೋತ್ಸಾಹವನ್ನಿತ್ತಿತು. ಈ ಭಾವನೆಯು ಕ್ರಿ. ಪೂರ್ವದಲ್ಲಿಯೇ ಜನರಲ್ಲಿ ಮೂಡಿರಬಹುದೆಂದು ವಿದ್ವಾಂಸರ ಅಭಿಮತ.

ವೇದಗಳಲ್ಲಿ ಬೀಜಾರೋಪಣೆಗೊಂಡ ಭಕ್ತಿಯು ಬ್ರಾಹ್ಮಣ ಸಾಹಿತ್ಯದಲ್ಲಿ ಚಿಗುರಿ, ಮುಂದೆ ಪಲ್ಲವಿಸಿ, ವಿಕಾಸಗೊಂಡಿರುವುದನ್ನು ನಾವು ಕಾಣುತ್ತೇವೆ. ರಾಮಭಕ್ತಿಯ ಆವಿರ್ಭಾವವು ದಕ್ಷಿಣ ಭಾರತದಲ್ಲಿಯೇ ಆಯಿತು ಎಂದರೆ ಆಶ್ಚರ್ಯಗೊಳ್ಳುವ ಅಗತ್ಯವಿಲ್ಲ. ತಮಿಳರಾದ ಆಳ್ವರರ ರಚನೆಗಳನ್ನು ನೋಡಿದರೆ ಇದು ಸ್ಪಷ್ಟವಾಗುವುದು. ಅಲ್ಲದೆ ಉತ್ತರ ಭಾರತದ ಸಾಧು–ಸಂತರು ಇದನ್ನು ಮುಕ್ತಕಂಠದಿಂದ ಒಪ್ಪಿ ಕೊಂಡಾಡಿರುವರು. ಉತ್ತರದಲ್ಲಿ ರಾಮಾನುಜಾಚಾರ್ಯರಿಂದ ಈ ರಾಮಭಕ್ತಿ ಭಾವನೆಯು ಹರಡಿತು. ಕ್ರಮೇಣ ಪೂಜೆಗೂ ಪ್ರೋತ್ಸಾಹ ದೊರಕಿತು. ರಾಮನ ಬಾಲಲೀಲೆಯ ವರ್ಣನೆಗಾಗಿ 'ಅದ್ಭುತ ರಾಮಾಯಣ'ದ ರಚನೆಯೂ ಆಯಿತು. ತುಲಸೀದಾಸರ 'ರಾಮಚರಿತ ಮಾನಸ'ವು ರಾಮನನ್ನು ಪೂರ್ಣಾವತಾರನೆಂದೇ ನಿರೂಪಿಸಿತು. ಅಷ್ಟೇ ಅಲ್ಲದೆ 'ಆನಂದ ರಾಮಾಯಣ', 'ಸತ್ಯೋಪಖ್ಯಾನ' ಮೊದಲಾದ ಗ್ರಂಥಗಳಿಗೆ ರಾಮ–ಸೀತೆಯರ ಕ್ರೀಡಾವಿಲಾಸ, ಜಲವಿಹಾರದ ಸವಿಸ್ತಾರ ವರ್ಣನೆ ಸಿಗುವುದಲ್ಲದೆ ಮುಂದೆ 'ಹನುಮತ್ಸಂಹಿತ', 'ಬೃಹತ್ಕೋಶಲ ಖಂಡ', 'ಆದಿರಾಮಾಯಣ' ಗಳಲ್ಲಿ ರಾಮಲೀಲೆಯ ವರ್ಣನೆಯೂ ಸಿಗುತ್ತದೆ.

ಈ ರೀತಿಯಲ್ಲಿ ಮೊದಲು ಯಾವ ಮಹತ್ವವನ್ನೂ ಪಡೆಯದಿದ್ದ ರಾಮನು ಇಂದು ದೇವನಾಗಿ ಮೆರೆಯುತ್ತಿರುವನು. ಅವನ ನಾಮವು ಪಾಪಿಗಳಿಗೂ ಮುಕ್ತಿಯನ್ನೀಯಲು ಸಮರ್ಥವಾದುದು ಎಂದು ನಾವು ಕಲ್ಪಿಸುವೆವು. ಕವಿಗಳು, ಸಾಧು–ಸಂತರು, ಭಕ್ತರು ಇದನ್ನು ವರ್ಣಿಸಿರುವರು. ನಾವೆಲ್ಲ ಅದನ್ನು ನಂಬುವೆವು. ಅದು ಸಹಜವೂ ಅಹುದು, ಯಥಾರ್ಥವೂ ಅಹುದು ಆದರೆ ರಾಕ್ಷಸ, ವಾನರರಿಗೆ ಯಥಾರ್ಥವಾದ ಸ್ಥಾನವನ್ನು ನಾವು ಕೊಟ್ಟಿರುವೆವು. ರಾಕ್ಷಸ, ವಾನರರೆಂದರೆ ಸಾಮ್ಯವಾಗಿ ಇರುವ ಕೆಳಕಲ್ಪನೆಗೂ, ಅವರ ನಿಜವಾದ ಯೋಗ್ಯತೆ, ಸ್ವರೂಪಕ್ಕೂ ಅಂತರವಿದೆಯೆ?

ರಾಕ್ಷಸರೆಂದ ಕೂಡಲೇ ನಮ್ಮಲ್ಲಿ ರಾವಣ–ಕುಂಭಕರ್ಣರ ಕಲ್ಪನೆಯಾಗುವುದು ಸಹಜ. ಆದರೆ ನಿಜವಾಗಿಯೂ ಈ ದ್ರಾವಿಡ ಜಾತಿಯವರು ಅಂದು ಅಷ್ಟು ಅನಾಗರಿಕರಾಗಿದ್ದರೆ? ಅಷ್ಟು ಕ್ರೂರಿಗಳೇ ಅವರು? ನಿಜವಾಗಿಯೂ ಅಂತಹ ಭಯಂಕರ ರೂಪವನ್ನು ತಾಳುವವರಾಗಿದ್ದರೇ? ಅಥವಾ ಆರ್ಯರು ದ್ರಾವಿಡರನ್ನು ನಿರೂಪಿಸುವಾಗ ದ್ವೇಷಭಾವನೆಯಿಂದಾಗಿ ಅವರಿಗೆ ಈ ವಿಚಿತ್ರ–ವಿಕೃತ ರೂಪಗಳನ್ನಿತ್ತರೇ? ಎಂದು ನಾವು ಆಲೋಚಿಸಬೇಕಾದ ವಿಷಯ. ಆರ್ಯ ಸಂಸ್ಕೃತಿಯನ್ನು ವಿರೋಧಿಸಿದವರು ಅಥವಾ ಸ್ವೀಕರಿಸದವರು ರಾಕ್ಷಸರಾದರೆ? ಅಥವಾ ರಾವಣನ ತಮ್ಮ ವಿಭೀಷಣ ಅದೇಕೆ ರಾಮಭಕ್ತನೆಂದು ಪರಿಗಣಿಸಲ್ಪಟ್ಟನು? ರಾಮನ ಪಕ್ಷ ವಹಿಸಿದನೆಂದೇ? ವಾಲಿಯ ವಧೆಗೆ ರಾಮನ ಪಕ್ಷ ವಹಿಸದೆ ಅವನಿಗೆ ರಾವಣನಲ್ಲಿದ್ದ ಮಿತ್ರತ್ವವೇ ಕಾರಣವಾಯಿತೇ? ಎಂಬುದು ಚರ್ಚಾಸ್ಪದವಾದ ವಿಷಯ.

ರಾವಣನಂತೂ ಮಹಾ ಪಂಡಿತನು, ಅವನು ಋಷಿಸಂತಾನ, ವೇದಗಳ ಜ್ಞಾತ, ಕುಶಲ ರಾಜನೀತಿಜ್ಞನು, ನೀತಿಶಾಸ್ತ್ರದ ಪಂಡಿತನು; ರಾಮಾಯಣವೇ ಅವನನ್ನು ಅಹಿತಾಗ್ನಿಯೆಂದು ವರ್ಣಿಸಿದೆ. ರಾಮನೂ ಅವನ ಶೌರ್ಯ–ಗುಣಗಳನ್ನು ಯುದ್ಧಭೂಮಿಯಲ್ಲೇ ಹೊಗಳಿರುವುದನ್ನು ಓದಬೇಕು. ಅವನು ಶೈವ ದ್ವಿಜನು. ತನ್ನ ಆರಾಧ್ಯ ದೇವನಾದ ಶಿವನಿಗೆ, ತಪಸ್ಸಿನಲ್ಲಿ ಸಿದ್ಧಿ ಪಡೆಯಲಿಕ್ಕಾಗಿ ತನ್ನ ತಲೆಯನ್ನು ಅರ್ಪಿಸಿದ ಮಹಾ ಭಕ್ತನಿವನು. ಅದರಿಂದಾಗಿ ಅವನು ದಶಕಂಠನಾದನು. ಆದರೆ ಕವಿಗಳು ಅವನಿಗೆ ಹತ್ತು ತಲೆಗಳಿದ್ದುವೆಂದು ಚಿತ್ರಿಸಿ (ವರ್ಣಿಸಿ)

ವಿಕೃತಗೊಳಿಸಿದರು – ಹತ್ತು ತಲೆಗಳಿದ್ದವನಿಗೆ ಇಪ್ಪತ್ತು ಭುಜಗಳು ಬೇಡವೇ ಎಂದು ಅವುಗಳ ಕಲ್ಪನೆಯೂ ಆಯಿತು! ದಶರಥರಾಜನು ಹತ್ತು ರಥಗಳನ್ನು ನಡೆಯಿಸುತ್ತಿದ್ದನೇ? ಇಲ್ಲ. ಅಂತಹ ಯೋಗ್ಯತೆ ಅವನಲ್ಲಿದ್ದಿತು ಎಂದೇ ಅದರ ಅರ್ಥ. ಹಾಗೆಯೇ ದಶಕಂಠನಲ್ಲಿಯೂ ವಿಶಿಷ್ಟಯೋಗ್ಯತೆ ಇದ್ದಿರಬೇಕು ಅಥವಾ ಶಿವನಿಗೆ ಶಿರಾರ್ಪಣೆಯಿಂದಾಗಿಯೇ ಆ ಬಿರುದು ಸಿಕ್ಕಿರಬೇಕು.

'ವೈದಿಕ ಸಂಪತ್ತಿ', 'ವೈದಿಕ ಸಾಹಿತ್ಯ', 'ವೇದಕಾವಾಙ್ಮಯ ಇತಿಹಾಸ' ಮೊದಲಾದ ವಿವೇಚನಾತ್ಮಕ ಗ್ರಂಥಗಳಲ್ಲಿ ವಿದ್ವಾಂಸ ಲೇಖಕರು ರಾವಣನ ವಿದ್ವತ್ತೆಯನ್ನೂ, ಪಾಂಡಿತ್ಯವನ್ನೂ ಮುಕ್ತಕಂಠದಿಂದ ಹೊಗಳಿರುವರು—ಆತನ ಸೂಕ್ಷ್ಮನೀತಿ ಹಾಗೂ ವಿಚಾರವನ್ನು ಶ್ಲಾಘಿಸಿರುವರು. ಅವನು ಮಾಡಿರುವ ಒಂದು ಅನುಚಿತ ಕಾರ್ಯ (ಸೀತೆಯ ಅಪಹರಣೆ) ಕ್ಕಾಗಿ ಅವನು ರಾಕ್ಷಸನಾಗಿಬಿಟ್ಟನು. ಇಂದಿನ ಯುಗದಲ್ಲಿ, ಅದೇ ಅಳತೆಗೋಲಿನಿಂದ ಅಳೆದರೆ ಜಗತ್ತಿನ ವ್ಯಕ್ತಿಗಳಲ್ಲಿ ಹಲವರನ್ನು ರಾಕ್ಷಸರ ವರ್ಗಕ್ಕೆ ಸೇರಿಸಬಹುದು. ರಾವಣನ ತಾಮಸಿ ಪ್ರವೃತ್ತಿಯು ಅವನ ದುರ್ಭಾಗ್ಯದಿಂದ ಅವನಲ್ಲಿದ್ದ ಸಾತ್ವಿಕ ಪ್ರವೃತ್ತಿಯನ್ನು ಗೆದ್ದುಕೊಂಡಿತು–ಅವನ ನೈತಿಕ ಪತನವಾಯಿತು. ಅದಕ್ಕಾಗಿ ಅವನು ಪಶ್ಚಾತ್ತಾಪ ಪಡದೇ ಇಲ್ಲ! ಸೀತೆಯನ್ನು ಅಪಹರಣ ಮಾಡಿದ್ದು ಕಾಮತೃಪ್ತಿಗೆ ಎನ್ನುವುದಕ್ಕಿಂತ ಆ ಸಂಕಲ್ಪಕ್ಕೆ ರಾಮಲಕ್ಷ್ಮಣರಿಂದೊಂದಗಿದ ಮುನ್ನಿನ ಪರಾಭವವೇ ಕಾರಣವೆನ್ನುವುದು ಹೆಚ್ಚು ಉಚಿತ. ತಂಗಿಯ ಅಂಗಭಂಗ ಮಾಡಿದ ವಿಷಯ ಕೇಳಿಯೂ ಯಾವ ಸಹೋದರನು ಸುಮ್ಮನಿರಲು ಸಾಧ್ಯ? ರಾವಣನಂಥ ವೀರನಿಗದು ಚಿತವೆನಿಸುತ್ತಿತ್ತೇ? ರಾವಣನು ಮದಾಂಧನಾಗಿದ್ದನೇನೋ ನಿಜ. ಅಧಿಕಾರ ಮಾನವನನ್ನು ಭ್ರಷ್ಟಗೊಳಿಸುತ್ತದೆ. ರಾವಣನಲ್ಲಿ ಅಧಿಕಾರ, ಸಂಪತ್ತು, ರಾಜ್ಯ, ಯಾವುದಕ್ಕೂ ಕಡಮೆಯಿರಲಿಲ್ಲ. ಹಾಗಿರುವಾಗ ಅವನು ಪಥಭ್ರಷ್ಟನಾದನು. ಅವನು ಮಾಡಿದ್ದು ಸರಿಯೆಂದೂ ಯಾರೂ ಒಪ್ಪುವುದಂತಿಲ್ಲ–ಅದು ನಮ್ಮ ಅಪೇಕ್ಷೆಯೂ ಅಲ್ಲ. ಆದರೆ ಈ ಸ್ವಾಭಾವಿಕ ಭ್ರಷ್ಟತನನಿಂದಾಗಿ ಅವನನ್ನು ರಾಕ್ಷಸನೆನ್ನಬಹುದೇ?

ಈ ರಾಕ್ಷಸರಾರು? ರಾಮಾಯಣದಲ್ಲಿ ಬರುವ ರಾಕ್ಷಸರು ಲಂಕೆ ಹಾಗೂ ಗೋದಾವರಿಯ ಮಧ್ಯೆ ಇರುವ ಬೆಟ್ಟದಲ್ಲಿ ವಾಸಿಸುವ ಒಂದು ಜಾತಿಯೆಂದು ಕೆಲವರ ಮತ. ಅವರು ಮನುಷ್ಯರಾಗಿದ್ದರೂ ಸಹ ಆರ್ಯರಾಗಿರಲಿಲ್ಲವೆಂಬುದು ನಿಜ.

ದೈತ್ಯ, ರಾಕ್ಷಸ, ದಾನವ ಶಬ್ದಗಳ ಪ್ರಯೋಗ ದುಷ್ಟ, ಕ್ರೂರ, ನಿರ್ದಯ ಭಯಂಕರ ಸ್ವಭಾವ ಮೊದಲಾದ ಅರ್ಥಗಳಲ್ಲಿ ಆಗುತ್ತಿದೆ. ಕಲಂಕ, ನಿಂದೆ ಅಶುಭವಾಚಕ ಶಬ್ದಗಳ ಅರ್ಥದಲ್ಲಿಯೂ ಪ್ರಚಲಿತವಾಗಿದೆ. ದುರ್ಗುಣಿ, ಅನ್ಯಾಯಿ, ಅತ್ಯಾಚಾರಿ, ತಾಮಸಗುಣದ ವ್ಯಕ್ತಿಗಳಿಗೆ ಈ ಶಬ್ದಗಳ ಪ್ರಯೋಗವಾಗುತ್ತಿದೆ. ನಿಜವಾಗಿ ಅಸುರ, ದಾನವ, ದೈತ್ಯ ಈ ಶಬ್ದಗಳು ಮೂಲತಃ ವಿಶಿಷ್ಟ ಜಾತಿಗಳನ್ನು ಉಲ್ಲೇಖಿಸುತ್ತವೆ. ಈ ಜಾತಿಗಳು ಶಕ್ತಿಶಾಲಿ, ಯುದ್ಧದಲ್ಲಿ ಭಯಂಕರ, ಶಸ್ತ್ರ ವಿದ್ಯೆಯಲ್ಲಿ ಅತ್ಯಂತ ನಿಪುಣವಾಗಿದ್ದುವು. ಉದಾಹರಣೆಗಾಗಿ ಬಾಣನು ದೈತ್ಯರಾಜ ಅಥವಾ ಭೂತೇಶ್ವರನಾಗಿದ್ದನು.—ಅವನ ಮಗಳ ವಿವಾಹ ಕೃಷ್ಣನ ಪುತ್ರ ಅನುರುದ್ಧನೊಡನೆ ಆಗಿತ್ತು. ಮಥುರೆಯ ಯಾದವ ವಂಶದವನಾದ ಕಂಸನು ರಾಕ್ಷಸನಂತೆ! ಕೃಷ್ಣನ ಪೂರ್ವಜನಾದ ಯದುವಂಶಿ ಮಧು ದಾನವರಾಜನು! ಮಧುವಿನ ವಂಶದವನಾದ ಲವಣನು ಅಸುರನೆನಿಸಿಕೊಂಡನು. ಮಗಧದ ಪ್ರಸಿದ್ಧ ಭರತವಂಶಿ ಕ್ಷತ್ರಿಯ ರಾಜ ಜರಾಸಂಧನನ್ನು ಅಸುರನೆಂದಿರುವವರುತಾನೆ!

ನಿಜವಾಗಿ ನೋಡಿದರೆ ಈ ರಾಕ್ಷಸರು ಅಸಭ್ಯರಲ್ಲ ಅಸಂಸ್ಕೃತರಲ್ಲ ಅಷ್ಟೇ ಯಾಕೆ? ಬ್ರಾಹ್ಮಣತ್ವವು ಅನಾರ್ಯ ದ್ರಾವಿಡ ಸಂಸ್ಕೃತಿಯಿಂದಲೇ ಪ್ರಾರಂಭವಾಯಿತು. ಭಾರತದ ಅತಿ ಪ್ರಾಚೀನವಾದ ಸಂಸ್ಕೃತಿ ಮೊಹಂಜೋದಾರೋ–ಹರಪ್ಪಾಗಳಲ್ಲಿ ದೊರಕಿದೆ. ಸಾಹಿತ್ಯ ಶ್ರುತಿಗಳಲ್ಲಿಯೂ ಇದರ ಪುಷ್ಟಿಗೆ ಸಾಕಷ್ಟು ಪ್ರಮಾಣಗಳು ದೊರೆಯುತ್ತವೆ. ಮಹಾಭಾರತದಲ್ಲಿ ಶುಕ್ರನ ಸಂಬಂಧ, ದೈತ್ಯ ಹಾಗೂ ದಾನವರೊಡನೆ ಘನಿಷ್ಟವಾಗಿತ್ತೆಂದು ಉಲ್ಲೇಖವಿದೆ. ಶುಕ್ರನು ದಾನವ ರಾಜನಾದ ಬಲಿಯ ಗುರುವಾಗಿದ್ದನು. ದಾನವನಾದ ಶಂಬರ, ಬ್ರಾಹ್ಮಣರ ಭಕ್ತ ಹಾಗೂ ಬ್ರಹ್ಮಜ್ಞಾನಿಯಾಗಿದ್ದ. ಭಾರ್ಗವರು ದೈತ್ಯರಾಜ ಹಿರಣ್ಯಕಶಿಪುವಿನ ಪುರೋಹಿತರಾಗಿದ್ದರು. ಇನ್ನು ವಶಿಷ್ಠರು ಅವನ ಹೋತೃ ಆಗಿದ್ದರು. ಬ್ರಾಹ್ಮಣನಾಗಿದ್ದ ವೃಥಾಸುರ ಹಾಗೂ ನಮುಚಿ ಎಂಬವರ ವಧೆ ಮಾಡಿದುದಕ್ಕಾಗಿ ಇಂದ್ರನು ಬ್ರಹ್ಮಹತ್ಯೆಯ ಪಾಪಕ್ಕೊಳಗಾಗಿ ಕಳಂಕಿತನಾದನು. ಈ ರೀತಿ:ಎಷ್ಟು ಜುಗುಪ್ಸೆ, ತಾತ್ಸಾರದಿಂದ ನಾವು ಅಸುರರ ಹೆಸರುಗಳನ್ನು ಉಚ್ಚರಿಸುವೆವೋ, ನಿಂದಿಸುವೆವೋ, ವಿಕಾರರೂಪಗಳನ್ನು ಕಲ್ಪಿಸಿಕೊಳ್ಳುವೆವೊ ಅವು ಅಷ್ಟು ಉಚಿತವೆಂದು ಕಾಣುವುದಿಲ್ಲ. ದಾರ್ಶನಿಕ–ಧಾರ್ಮಿಕ ಗ್ರಂಥಗಳು ವರ್ಣಿಸಿರುವ ಚಿತ್ರಗಳೇ ಈ ಭ್ರಮೆಗೆ ಕಾರಣವೆಂದರೆ ಹೆಚ್ಚಾಗಲಾರದು.

ಇವರು ದ್ರಾವಿಡರಾದುದರಿಂದ ಆರ್ಯರು ಇವರನ್ನು ರಾಕ್ಷಸ, ಅಸುರರೆಂದು ವರ್ಣಿಸಿರಬಹುದೆಂದು ಕೆಲವರ ಕಲ್ಪನೆ. ರಾಮಾಯಣದಿಂದ ಹೊರಬಂದು ಇನ್ನಿತರ ಅನಾಯಕರೆಂದು ಪರಿಗಣಿಸಲ್ಪಟ್ಟಿರುವವರ ಕೆಲವು ಉದಾಹರಣೆಗಳನ್ನು ನೋಡಬಹುದು. ನಿಷಾದ ಜಾತಿಯವನಾಗಿದ್ದ ಏಕಲವ್ಯನು ಅರ್ಜುನನಿಗಿಂತ ಶ್ರೇಷ್ಠನಾಗಿದ್ದ! ಅನಾರ್ಯಜಾತಿಗೂ ಆರ್ಯಜಾತಿಗೂ ಹಲವಾರು ವಿವಾಹ ಸಂಬಂಧಗಳು ನಡೆದಿದ್ದುವು. ಅಸುರರಾಜ ವೃಷಪರ್ವನೆಂಬವನ ಪುತ್ರಿ ಶರ್ಮಿಷ್ಠೆ ಮತ್ತು ಸಾಮ್ರಾಟ ಯಯಾತಿಯ ವಿವಾಹದ ಸಂಬಂಧದಿಂದ ದ್ರುಹ್ಯು, ಅನು, ಪುರು ಎಂಬ ಮೂವರು ಪುತ್ರರಾಗಿದ್ದರು. ಭೀಮ–ಹಿಡಿಂಬೆಯರ ಸಂಬಂಧ ಮತ್ತು ಅವರಿಂದ ಬಲಶಾಲಿಯಾದ ರಾಕ್ಷಸ ರಾಜ ಘಟೋತ್ಕಚನ ಜನ್ಮಕ್ಕೆ ಕಾರಣವಾಯಿತು. ಶ್ರೀ ದ.ರಾ. ಬೇಂದ್ರೆಯವರ ಅಭಿಮತದಂತೆ ಕೌಶಲ್ಯೆ–ದಶರಥನ ಸಂಬಂಧವು ದ್ರಾವಿಡ–ಆರ್ಯರ ಸಂಬಂಧವಾಗಿದೆ. ಕೌಶಲ್ಯೆಯು ಕೋಸಲದವಳು, ಕೋಸಲವು ದ್ರಾವಿಡ ದೇಶ. ಈ ದೃಷ್ಟಿಯಿಂದ ನೋಡಿದರೂ ದ್ರಾವಿಡರು ಆರ್ಯರಿಂದ ಯಾವ ರೀತಿಯೂ ಹಿಂದುಳಿದವರಲ್ಲ ಎಂದು ಧೃಢವಾಗುತ್ತದೆ.

ಇದೇ ರೀತಿ ರಾಮಲಕ್ಷ್ಮಣರಿಗೆ ಸಹಾಯವನ್ನಿತ್ತ ವಾನರರು ಕೋತಿಗಳೇ? ರಾಮಾಯಣದಲ್ಲಿ ಚಿತ್ರಿಸಿರುವಂತೆ ಅವರು ವಿಕೃತರಾಗಿದ್ದರೇ? ಎಂಬುದು ಗಮನಾರ್ಹ ವಿಷಯ. ಆಳವಾಗಿ ಅಭ್ಯಾಸಿಸಿದಲ್ಲಿ ಇವರು ಕೋತಿಗಳಾಗಿರದೆ ವಿಂಧ್ಯಪರ್ವತದ ಕೆಳಭಾಗದಲ್ಲಿ, ದಕ್ಷಿಣದಲ್ಲಿ, ಗುಡ್ಡ ಕಾಡುಗಳಲ್ಲಿ ನಿವಾಸಿಸುತ್ತಿದ್ದ ಜನರೆಂದೇ ಹೇಳಬೇಕಾಗುತ್ತದೆ. ಇವರಲ್ಲಿ ವಾನರ, ಋಕ್ಷ, ಗೋಲಾಂಗೂಲ ಮೊದಲಾದ ಪಂಗಡಗಳಿದ್ದುವು. ವಾನರರು ರಾಜ್ಯವಾಳುತ್ತಿದ್ದರು. ಕಿಷ್ಕಿಂಧೆಯು ವಾನರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಆದಿಕವಿ ವಾಲ್ಮೀಕಿ ವರ್ಣಿಸಿರುವ ಈ ನಗರದ ವರ್ಣನೆಯನ್ನು ನೋಡಿದರೆ ಆಶ್ಚರ್ಯವಾಗುವುದು. ರಾಜಮಾರ್ಗದಲ್ಲಿ ಮೇರು ಪರ್ವತದಂತೆ ನಿಂತಿರುವ ವಿಶಾಲ ಹಾಗೂ ಹಲವು ಅಂತಸ್ತುಗಳ, ಶ್ವೇತ ಮೇಘಗಳಂತೆ ಉಜ್ವಲವಾದ, ಸುಗಂಧಿತ ಮಾಲೆಗಳಿಂದ ಶೃಂಗರಿಸಲ್ಪಟ್ಟ, ಪ್ರಚುರ ಧನ–ಧಾನ್ಯಗಳಿಂದ ಕೂಡಿದ, ಸ್ತ್ರೀ–ರತ್ನಗಳಿಂದ ಸುಶೋಭಿತವಾಗಿರುವ ಭವ್ಯ ಮನೆಗಳು. ಇಂದ್ರಭವನದ ಶೋಭೆಯನ್ನು ತುಚ್ಛೀಕರಿಸುವ ವಾನರ ರಾಜ ಸುಗ್ರೀವನ ಅರಮನೆ.... ಬೆಳ್ಳಿ ಬಂಗಾರಗಳ ಪಲ್ಲಂಗ ಹಾಗೂ ಅನೇಕ ಉತ್ತಮ ಮಂಚಗಳು, ಅವುಗಳ ಮೇಲೆ ಹಾಸಿರುವ ಬಹುಮೂಲ್ಯ ವಸ್ತ್ರಗಳು .... ಇವುಗಳೆಲ್ಲಾ ಅಸಭ್ಯರಲ್ಲಿರುವ ವಸ್ತುಗಳೇ? ಲಕ್ಷ್ಮಣನು ಒಮ್ಮೆ ಸುಗ್ರೀವನ ಈ ಆಸ್ಥಾನವನ್ನು ಪ್ರವೇಶಿಸುವವನು. ಸುಗ್ರೀವನ ವಚನವನ್ನು ನೆನಪು ಹುಟ್ಟಿಸಲಿಕ್ಕಾಗಿ. ಆಗ ಲಕ್ಷ್ಮಣನ ಕರ್ಣಗಳು ಆಲಿಸಿದ, ಸ್ಪಷ್ಟ ಉಚ್ಚಾರಣೆಯೊಡನೆ ಹೊರಟು, ಸ್ವರ–ತಾಳಗಳೊಡನೆ ಕೇಳಿ ಬರುತ್ತಿದ್ದ ಸಂಗೀತದ ಮಧುರ ಧ್ವನಿಯನ್ನು ಅವನೆಂದೂ ಮರೆತಿರಲಿಕ್ಕಿಲ್ಲ. ಇದು ಕೋತಿಗಳಲ್ಲಿರಬಹುದಾದ ಕಲೆಯೇ? ಸಂಸ್ಕೃತಿಯೇ?

ಇದರಿಂದ ಈ ವಾನರರು ಕೋತಿಗಳಾಗಿರದೆ ಸಭ್ಯ ಮನುಷ್ಯರಾಗಿದ್ದರೆಂದು ನಂಬಲು ಸಾಕಷ್ಟು ಆಧಾರ ದೊರೆಯುತ್ತದೆ. ಅವರಿಗೆ ತಮ್ಮದೇ ಆದ ಸಮಾಜ ವ್ಯವಸ್ಥೆ, ಅರ್ಥ ವ್ಯವಸ್ಥೆ ಹಾಗೂ ಶಾಸನ ವ್ಯವಸ್ಥೆಗಳಿದ್ದುವು. ಅವುಗಳಲ್ಲಿ ಮಾನವ ಸಮಾಜದಲ್ಲಿ ಸಂಘಟನೆಗಳಲ್ಲಿ ಕಂಡುಬರುವ ಎಲ್ಲಾ ಗುಣಗಳನ್ನು ಕಾಣಬಹುದು. ಆರ್ಯರಂತೆಯೇ ಅವರು ಧರ್ಮಕ್ಕೆ ಜೀವನದಲ್ಲಿ ಮಹತ್ವಪೂರ್ಣ ಸ್ಥಾನವನ್ನಿತ್ತಿದ್ದರು. ಹಲವಾರು ವಾನರರು ವೇದಪಾರಂಗತರಾಗಿದ್ದರು. ಸುಗ್ರೀವನ ರಾಜ್ಯಾಭಿಷೇಕ ಶಾಸ್ತ್ರೀಯ ವಿಧಿಗನುಸಾರವಾಗಿ ಆಗಿರುವುದನ್ನು ನಾವೆಂತು ಮರೆಯಲು ಸಾಧ್ಯ? ವಾಲಿಯ ದೇಹಸಂಸ್ಕಾರವೂ ಆರ್ಯಪರಂಪರೆಯಂತೆ ಆಗಿತ್ತು! ಅವರು ಅಗ್ನಿ, ವಾಯು, ಸೂರ್ಯ ಹಾಗೂ ವರುಣನ ಉಪಾಸಕರಾಗಿದ್ದರು. ಕಲಾಪ್ರೇಮಿಗಳೂ ಆಗಿದ್ದರೆಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ವಾನರ ಸ್ತ್ರೀಯರು ಅನೇಕ ಅಂಶಗಳಲ್ಲಿ ನಿಪುಣರು. ವಾಲಿಯ ಹೆಂಡತಿ ತಾರೆಯಂತೂ ವೇದಗಳನ್ನು ಬಲ್ಲವಳಾಗಿದ್ದಳೆಂದರೆ ಆಶ್ಚರ್ಯಪಡುವ ಅಗತ್ಯವಿಲ್ಲ.

ಆದಿಕವಿ ವಾಲ್ಮೀಕಿಯೂ ತನ್ನ ಕಾವ್ಯದಲ್ಲಿ ವಾನರರ ವರ್ಣನೆಯನ್ನು ಸವಿಸ್ತಾರವಾಗಿ ಮಾಡಿ, ವಾನರರೆಂದರೆ ಮಾನವರು ಎಂದು ಸಂಕೇತಿಸಿರುವನು. ಅಲ್ಲಿ ಅವರಲ್ಲಿ ಬೇಕಾದ ರಾಜನೈತಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚಾರ ವಿಚಾರಗಳಿದ್ದುವೆಂದು ಸ್ಪಷ್ಟವಾಗುವುದು. ಹಿಂದಿಯ ಮಹಾಕವಿ ತುಲಸೀದಾಸರು ರಾಮನನ್ನು ವಿಷ್ಣುವಿನ ಪೂರ್ಣಾವತಾರವೆಂದು ನಿರೂಪಿಸಿ, ಹನುಮಂತನನ್ನು ಒಬ್ಬ ಆದರ್ಶ ಭಕ್ತನ ರೂಪದಲ್ಲಿ ಪ್ರಸ್ತುತಗೊಳಿಸಿರುವರು. ಮೊತ್ತಮೊದಲನೆಯ ಭೇಟಿಯ ಬಳಿಕ ಹನುಮಂತನ ಪಾಂಡಿತ್ಯವನ್ನು ಲಕ್ಷ್ಮಣನೊಡನೆ ಕೊಂಡಾಡಿದುದನ್ನು ನೋಡಿದರೆ ವಾನರನಾಗಿದ್ದ ಈ ಹನುಮಂತನು ಎಷ್ಟು ದೊಡ್ಡ ವಿದ್ವಾಂಸನಾಗಿರಬಹುದೆಂದು ನಾವೇ ಆಲೋಚಿಸಬೇಕು.

ರಾಕ್ಷಸರೂ, ವಾನರರೂ ವಿದ್ಯಾಧರವಂಶದವರೆಂದು ಕೆಲ ವಿದ್ವಾಂಸರು ಅಭಿಪ್ರಾಯಪಟ್ಟಿರುವರು. ಹಲವು ವಿದ್ಯೆಗಳನ್ನು ಕಲಿತು ಆ ವಿದ್ಯಾಬಲದಿಂದಲೇ ಸಮಯಕ್ಕನುಗುಣವಾಗಿ ಹಲವಾರು ರೂಪಗಳನ್ನು ತಾಳುತ್ತಿದ್ದರು ಎಂದವರ ಅಭಿಮತ. ಹನುಮಂತನು ಕುಂಭಕರ್ಣನ ಮೂಗಿನ ಸೊಳ್ಳೆಯೊಳಗೆ ನುಸಿಯಾಗಿ ಹೋಗುವುದನ್ನು ಅತಿಶಯೋಕ್ತಿ ರೂಪದಲ್ಲಿ ರಾಮಾಯಣದಲ್ಲಿ ಓದುತ್ತೇವಲ್ಲ!

ವಾನರರು ನಿಜವಾಗಿಯೂ ಕಪಿಗಳಾಗಿರದಿದ್ದರೆ ಅವರು ಅದೇಕೆ ಹಾಗೆ ಚಿತ್ರಿಸಲ್ಪಟ್ಟರು, ವರ್ಣಿಸಲ್ಪಟ್ಟರು? ಎಂಬ ಪ್ರಶ್ನೆ ಬಹಳ ಸ್ವಾಭಾವಿಕವಾದುದು. "ಭಾರತವರ್ಷ ಮೆ ಜಾತಿಬೇದ" ಎಂಬ ಪುಸ್ತಕದಲ್ಲಿ ಆಚಾರ್ಯ ಕ್ಷಿತಿಮೋಹನ ಸೇನರು ಈ ರೀತಿ ಬರೆದಿರುವರು. "ಆರ್ಯರಿಂದ ಮೊದಲಿನ ಅನೇಕ ಜಾತಿಗಳವರು ತಮ್ಮ ಪರಿಚಯವನ್ನು ಯಾವುದಾದರೊಂದು ಜೀವ-ಜಂತು ಅಥವಾ ವೃಕ್ಷ-ಲತೆಗಳಿಂದ ಕೊಡುತ್ತಿದ್ದುವು .... ಯಾವ ವಸ್ತು ಚಿಹ್ನೆಯ ರೂಪದಲ್ಲಿ ಉಪಯೋಗಿಸಲ್ಪಡುತ್ತದೋ ಆ ವಸ್ತು ಆ ಜಾತಿಯ ಪ್ರತ್ಯೇಕ ವ್ಯಕ್ತಿಯ ಶ್ರದ್ಧೆ ಸನ್ಮಾನದ ವಸ್ತುವಾಗಿರುತ್ತದೆ. ಇಂಗ್ಲಿಷಿನಲ್ಲಿ ಇದಕ್ಕೆ "ಟೋಟೆಂ" ಎನ್ನುವುದು .... ಇಂದಿಗೂ ಭಾರತದಲ್ಲಿ ತಮ್ಮನ್ನು ಹನುಮಂತ ಹಾಗೂ ಜಾಂಬುವಂತರ ವಂಶದವರೆನ್ನುವವರು ಇದ್ದಾರೆ. ಕಾಠಿಯಾವಾಡದ ಸುದಾಮಪುರ (ಪೋರ್‌ಬಂದರ್) ದ ರಾಜನು ಹನುಮಂತನ ವಂಶಜನು. ಅವರ ಪತಾಕೆಯಲ್ಲಿ ಹನುಮಂತನ ಚಿತ್ರ ಅಂಕಿತವಾಗಿದೆ ...."

ಕೋತಿಗಳಿಗೆ ಅವುಗಳ ಬಾಲ ಅತಿ ಪ್ರಿಯತಾನೆ? ಆ ಪ್ರಿಯ ಬಾಲವನ್ನು ವಾನರರು ಕಟ್ಟಿಕೊಳ್ಳುತ್ತಿದ್ದರು. ಅದು ಬೇರೆಯೇ ಆಗಿದ್ದುದರಿಂದ ಹನುಮಂತನ ಬಾಲಕ್ಕೆ ಲಂಕೆಯಲ್ಲಿ ಬೆಂಕಿ ಹಚ್ಚಿದಾಗ ಅವನಿಗೆ ಹಾನಿಯಾಗಲಿಲ್ಲ— ಲಂಕೆಯನ್ನು ಸುಟ್ಟುಬಿಟ್ಟನು! ಈ ರೀತಿ ವಾನರರಿಗೆ ನಿಜವಾದ, ತಮ್ಮದೇ ಆದ ಬಾಲವಿರಲಿಲ್ಲ. ಅವರದನ್ನು ತಮ್ಮ ಚಿಹ್ನೆಯಂತೆ ಧರಿಸಿಕೊಳ್ಳುತ್ತಿದ್ದರು.

ಶತಾಬ್ದಿಗಳಿಂದ ನಾವು ರಾಮಾಯಣದಲ್ಲಿ ಬರು ಈ ಪಾತ್ರಗಳ ವರ್ಣನೆಯನ್ನು ಓದಿರುವೆವು. ಆ ಚಿತ್ರಗಳು, ವಿಚಿತ್ರ-ವಿಕೃತರೂಪಗಳು ನಮ್ಮ ಮನದಲ್ಲಿ ಮನೆ ಮಾಡಿಕೊಂಡಿವೆ. ಅವುಗಳನ್ನು ಮರೆತುಬಿಡುವುದು ಬಹಳ ಕಷ್ಟಸಾಧ್ಯ. ಈ ಕಾಲ್ಪನಿಕ ವಿಚಿತ್ರ-ವಿಕೃತ ರೂಪಗಳ ಹಿಂದೆ ಹಲವಾರು ಶತಮಾನಗಳಿಂದ ಅಡಗಿರುವ ನೈಜ್ಯವನ್ನು ತಿಳಿಯುವ ಪ್ರಯತ್ನವಾಗಬೇಕು. ಅಲ್ಲದೆ ರಾಕ್ಷಸ-ವಾನರರ ಯೋಗ್ಯ ಸ್ಥಾನಮಾನಗಳ ಚಿತ್ರ ನಮ್ಮ ಮುಂದೆ ಬರಬೇಕಾಗಿದೆ. ಚಂದ್ರಲೋಕದ ವಾಸ್ತವಿಕತೆಯನ್ನು ಸಂಶೋಧಿಸುವ ಯುಗವಿದು. ಈ ಯುಗದಲ್ಲಿಯೂ ಇದೇ ಲೋಕ, ಇದೇ ಸಮಾಜದಲ್ಲಿ ಜೀವಿಸಿದ್ದ ಪಾತ್ರಗಳ ವಾಸ್ತವಿಕತೆಯನ್ನು ತಿಳಿಯದಿರುವುದು ಯೋಗ್ಯವೇ?

ಭಾಷಾವೃಕ್ಷ ಜೀವಕಳಾ ಸಂಪನ್ನವಾಗಿದೆಯೆನ್ನುವುದಕ್ಕೆ ಅದರ ಕೊಂಬೆಗಳಲ್ಲಿ ಉತ್ತಮ ಗ್ರಂಥಗಳೆಂಬ ಚಿಗುರೆಲೆಗಳು ಕಂಗೊಳಿಸುತ್ತಿರುವುದೇ ಲಕ್ಷಣ.

—ಡಿ. ವಿ. ಜಿ.

೧೯೬೫-೬೬ರ ಕನ್ನಡ ಕಾದಂಬರಿ–ಸಣ್ಣಕಥೆ

ಡಾ. ಹಾ. ಮಾ. ನಾಯಕ

(ಹಿಂದಿನ ಸಂಚಿಕೆಯಿಂದ)

ನಚಿಕೇತ, ದಯಾನಂದ ತೊರ್ಕೆ, ರಘುರಾಮ ಹೆಗ್ಡೆ ಜಿ. ಎ. ರೆಡ್ಡಿ, ಪರಂಜ್ಯೋತಿ, ಶಿವಾಜಿರಾವ್ ಮೊದಲಾದ ಹಲವು ಹೊಸ ಲೇಖಕರು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಪ್ರವೇಶಿಸಿದ್ದಾರೆ. ಅವರ ಕೃತಿಗಳಲ್ಲಿ ಅಪಕ್ವತೆ, ಅಸಹಜತೆ ಆಭಾಸಗಳು ತಲೆದೋರಿದರೂ ಮುಂದೆ ಅವರುಗಳು ಕನ್ನಡ ಕಾದಂಬರಿಯನ್ನು ಬೆಳೆಸಿಯಾರೆಂದು ನಂಬಬಹುದಾಗಿದೆ. ಪೂರ್ಣಚಂದ್ರ ತೇಜಸ್ವಿಯವರ 'ಸ್ವರೂಪ' ಕಾದಂಬರಿ ಯೆಂದು ಕರೆಯಲಾದ ಆದರೆ ಕಾದಂಬರಿಯ ಸ್ವರೂಪವಿ ಲ್ಲದ ಕಿರುಕೃತಿ. ನಿಜಗುಣಶಿವಯೋಗಿಗಳ ಜೀವನವನ್ನು ಕುರಿತ ದೇವೇಂದ್ರಕುಮಾರ ಹಕಾರಿಯವರ 'ಚೆಲ್ವ ಕೋಗಿಲೆ' ಒಂದು ಒಳ್ಳೆಯ ಪ್ರಯತ್ನ. 'ಪಂಜ್ರವಳ್ಳಿಯ ಪಂಜು'ವಿನಿಂದ ಪ್ರಸಿದ್ಧರಾದ ಕಡಿದಾಳ ಮಂಜಪ್ಪನವರು 'ನಾಳೆಯ ನೆಳಲು' ಎಂಬ ತಮ್ಮ ಎರಡನೆಯ ಕಾದಂ ಬರಿಯನ್ನು ಪ್ರಕಟಿಸಿದ್ದಾರೆ. ಮೊದಲನೆಯ ಕಾದಂಬರಿಯ ದೋಷಗಳಿಂದ ಪಾರಾಗಲು ಮಂಜಪ್ಪನವರು ಶಕ್ತರಾಗಿಲ್ಲ. ಅವರಿಗೆ ಅಪಾರವಾದ ಅನುಭವವಿದೆ. ಆದ್ದರಿಂದಲೇ ಅವರ ಕೃತಿಯಲ್ಲಿ ಶ್ರೀಮಂತವಾದ ಜೀವನವಿದೆ. ಆದರೆ ಅದು ಕಲೆಯಾಗಿ ಮಾರ್ಪಟ್ಟಿಲ್ಲ. ಕಾದಂಬರಿಯ ಆರಂಭ ಯಾವುದೋ ಪತ್ತೇದಾರಿ ಕಾದಂಬರಿಯ ಆರಂಭದಂತಿದೆ. ಹತ್ತುವರ್ಷಗಳಾಚೆ ನಮ್ಮ ರಾಜಕೀಯ, ಆಡಳಿತ ಜೀವನ ಹೇಗಿರಬಹುದೆಂಬುದನ್ನು ಕಡಿದಾಳರು ಇಲ್ಲಿ ಊಹಿಸಲು ಯತ್ನಿಸಿದ್ದಾರೆ. ಅವರ ಊಹೆಗಳು ಈಗಷ್ಟೇ ಅಧಿಕಾರಕ್ಕೆ ಬಂದ ಹಲವು ಕಾಂಗ್ರೆಸ್ಸೇತರ ಸರ್ಕಾರಗಳ ನಿರ್ಧಾರಗಳಿಂದ ದೃಢಗೊಳ್ಳುತ್ತಿರುವುದು ಗಮನೀಯ ವಿಚಾರವಾಗಿದೆ.

ಎಂ. ಸಿ. ಪದ್ಮಾ, ತಪಸ್ವಿನಿ, ಎಂ. ಕೆ. ಜಯಲಕ್ಷ್ಮಿ, ಪದ್ಮ, ಉಷಾದೇವಿ, ವಾಣಿ, ಅರ್ಯಾಂಬ ಪಟ್ಟಾಭಿ, ತ್ರಿವೇಣಿ, ಶಾರದೆ, ಅನುಪಮಾ ನಿರಂಜನ, ಮಲ್ಲಿಕಾ, ಎಂ. ಕೆ. ಇಂದಿರಾ ಮತ್ತು ನೀಳಾದೇವಿ—ಈ ಅವಧಿಯಲ್ಲಿ ಕಾದಂಬರಿಗಳನ್ನು ಪ್ರಕಟಿಸಿರುವ ಲೇಖಕಿಯರಾಗಿದ್ದಾರೆ. ಇವರಲ್ಲಿ ಎಂ. ಕೆ. ಇಂದಿರಾ ಅವರೊಬ್ಬರೇ ಮೂರು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ತಮ್ಮ 'ಸದಾನಂದ' ಕಾದಂಬರಿಗಾಗಿ ಅವರು ಸಂಸ್ಥಾನದ ಸಾಹಿತ್ಯ ಅಕೆಡೆಮಿಯ ಬಹುಮಾನವನ್ನೂ ಪಡೆದಿದ್ದಾರೆ. ಅವರ 'ಹೆಣ್ಣಿನ ಆಕಾಂಕ್ಷೆ' ಹೆಸರೇ ಸೂಚಿಸುವಂತೆ ಹೆಣ್ಣಿನ ಕಷ್ಟ ಸುಖ ಗಳನ್ನು ಪದರು ಪದರಾಗಿ ಬಿಡಿಸಿಡುತ್ತದೆ; 'ಗೆಜ್ಜೆ ಪೂಜೆ' ಯಲ್ಲಿ ವೇಶ್ಯಾಸಮಸ್ಯೆಯನ್ನು ಹೆಣ್ಣಿನ ಕಣ್ಣಿನಿಂದ ನೋಡ ಲಾಗಿದೆ; 'ಸದಾನಂದ' ನನ್ನ ಮಿತ್ರರೊಬ್ಬರು ಹೇಳಿದಂತೆ ಅರ್ಧಕ್ಕೇ ಮುಗಿಯಬೇಕಾಗಿದ್ದ ಕೃತಿ. 'ಮುರಿದ ಸರಪಳಿ' 'ನೀರ ಮೇಲಣ ಗುಳ್ಳೆ'-ಉಷಾದೇವಿಯವರ ಕಾದಂಬರಿ ಗಳು. ಮಾನವನ ಮನಸ್ಸಿನ ಒಳಲೋಕವನ್ನು ತೆರೆದು ತೋರುವುದರಲ್ಲಿ ಅವರಿಗೆ ಆಸಕ್ತಿ. ವಸ್ತುವಿನ ಆಯ್ಕೆಯಲ್ಲಿ ಅವರು ಯಶಸ್ವಿಯಾದರೂ ಅವರ ಶೈಲಿ, ನಿರೂಪಣೆಗಳು ನೀರಸ. ಆರ್ಯಾಂಬ ಪಟ್ಟಾಭಿಯವರೂ ಎರಡು ಕಾದಂಬರಿ ಗಳನ್ನು ಪ್ರಕಟಿಸಿದ್ದಾರೆ. 'ಎರಡು ಮುಖ'ಗಳಲ್ಲಿ ದ್ವಂದ್ವ ವ್ಯಕ್ತಿತ್ವದ ಚಿತ್ರಣವಿದ್ದರೆ, 'ಮರಳಿ ಗೂಡಿಗೆ' ಅನಾಥಾಲಯ ಹೆಣ್ಣೊಬ್ಬಳು ಬಿಸಿಲುಗುದುರೆಯ ಬೆನ್ನೇರಿ ಮತ್ತೆ ಅನಾಥಾ ಲಯಕ್ಕೆ ಬಂದು ಸೇರಿದ ಕಥೆಯಾಗಿದೆ. ಆರ್ಯಾಂಬ ಅವರ ಬರವಣಿಗೆ, ತಂತ್ರ ನಿರೂಪಣೆ ಎಲ್ಲವೂ ಒರಟು. 'ಮರಳಿ ಗೂಡಿಗೆ' ಕಾದಂಬರಿಯ ಸಮಸ್ಯೆಯೇನು ಎಂಬುದು ನಮಗೆ ತಿಳಿಯದು. ಅಪ್ಸರ ಧನವಂತನನ್ನು ಮದುವೆಯಾಗ ದಿದ್ದರೆ ಅವಳ ಬದುಕು ಸರಿಯಾಗುತ್ತಿತ್ತೆ? ಮಲ್ಲಿಕಾ ಅವರ 'ಜೀವನ ಗಂಗಾ' ತೀರ ಅಪಕ್ವವಾದ ಕಾದಂಬರಿ.

ತ್ರಿವೇಣಿಯವರ 'ಅವಳ ಮಗಳು' ಒಂದು ವಿಶೇಷ ಕಾರಣಕ್ಕಾಗಿ ಉಲ್ಲೇಖನೀಯವಾಗಿದೆ. ಇದು ದುರ್ದೈವದಿಂದ ಅವರು ಮುಗಿಸದೆ ಹೋದ ಕಾದಂಬರಿ. ಮೊದಲಿನ ಅರವತ್ತಾರು ಪುಟಗಳಷ್ಟೇ ಅವರವು. ಮುಂದಿನದನ್ನು ಪೂರ್ಣಗೊಳಿಸಿದವರು ಎಂ. ಸಿ. ಪದ್ಮಾ ಅವರು. "ತ್ರಿವೇಣಿಯವರ ಶೈಲಿ, ಪಾತ್ರಚಿತ್ರಣ, ಕಥಾ ಸಂವಿಧಾನವನ್ನೇ ನನ್ನ ಬರವಣಿಗೆಯಲ್ಲಿಯೂ ಮುಂದುವರಿಸುವ ಶಕ್ತಿ, ಚೈತನ್ಯ ಎರಡೂ ನನಗಿಲ್ಲ" ಎಂಬುದಾಗಿ ಪದ್ಮಾ ಅವರೇ ಹೇಳಿಕೊಂಡಿರುವುದು ವಿನಯದ ಮಾತೇನಲ್ಲ. ೨೨೭ ಪುಟಗಳ ಈ ಕಾದಂಬರಿಯಲ್ಲಿ ನಾಲ್ಕನೆಯ ಒಂದು ಭಾಗವಷ್ಟೇ ತ್ರಿವೇಣಿಯವರದು. ಕಾದಂಬರಿಯನ್ನು ನಾನಾ ವಿಧವಾಗಿ ಅರಳಿಸಲು ಆ ಆರಂಭದಲ್ಲಿ ಅವಕಾಶವಿದ್ದು ಅದಕ್ಕೆ ಪದ್ಮಾ ಅವರು ಒಂದು ಮುಕ್ತಾಯವನ್ನೇನೋ ತಂದಿದ್ದಾರೆ. ಕಾದಂಬರಿಯ ಕೊನೆಯ ಭಾಗ ಅತಿ ತೆಳುವಾಗಿದೆ. ವಾಣಿಯವರ 'ಕಾವೇರಿಯ ಮಡಿಲಲ್ಲಿ' ಪ್ರತ್ಯೇಕವಾಗಿ ಹೆಸರಿಸಬೇಕಾದ ಕೃತಿ. ವಾಣಿಯವರು ಬದುಕನ್ನು ಸೂಕ್ಷ್ಮವಾಗಿ ನಿರೀಕ್ಷಿಸಬಲ್ಲರು; ಬದುಕಿನ ಸುಖದುಃಖಗಳಲ್ಲಿ ಅತಿರೇಕದ ಲೇಪನವಿಲ್ಲದೆ ಚಿತ್ರಿಸಬಲ್ಲರು. ಅವರ ಪಾತ್ರಗಳನ್ನು ಸನ್ನಿವೇಶಗಳು ಜೀವಂತವಾಗಿವೆ; ಚೊಕ್ಕವಾಗಿವೆ. ಅವರ ಕಥನಕ್ರಮ ನೇರವಾದುದು; ಸ್ಪಷ್ಟವಾದುದು. 'ಜೋಡಿಹಕ್ಕಿ', 'ಮೆಚ್ಚಿನ ಸೊಸೆ', 'ಸಂಧಿಕಾಲ', 'ಸವತಿ ಕಸ್ತೂರಿ' ಮೊದಲಾದುವೂ ಮಹಿಳೆಯರ ಕೃತಿಗಳೇ. ಕುಟುಂಬ ಜೀವನದ ಚಿತ್ರಣ, ಹೆಣ್ಣು ಜೀವನದ ಬಗೆಗೆ ಸಹಾನುಭೂತಿ ಈ ಕೃತಿಗಳ ಜೀವಾಳ. 'ಮೆಚ್ಚಿನ ಸೊಸೆ'ಯ ಬರವಣಿಗೆ ಚೆನ್ನಾಗಿದೆ.

ಡಾ. ಎಸ್. ಎಲ್. ಭೈರಪ್ಪ, ಯು. ಆರ್. ಅನಂತಮೂರ್ತಿ ಮತ್ತು ಕುಸುಮಾಕರ ದೇವರಗೆಣ್ಣೂರ ಇವರು ಈ ಅವಧಿಯಲ್ಲಿ ಸಾರ್ಥಕವಾದ ಕೃತಿಗಳನ್ನು ರಚಿಸಿ, ಕನ್ನಡ ಕಾದಂಬರಿಯ ಬಗೆಗೆ ಹೊಸ ಆಸೆಯನ್ನೂ, ಭರವಸೆಯನ್ನೂ ಮೂಡಿಸಿರುವ ಲೇಖಕರಾಗಿದ್ದಾರೆ. ಅವರ ಕೃತಿಗಳ ಬಗ್ಗೆ ಪ್ರತ್ಯೇಕವಾಗಿ ನಾಲ್ಕು ಮಾತು ಹೇಳುವುದು ಅಪ್ರಸ್ತುತವಾಗದು. ಭೈರಪ್ಪನವರು 'ಜಲಪಾತ', 'ಮತದಾನ' ಮತ್ತು 'ವಂಶವೃಕ್ಷ'ವೆಂಬ ಕಾದಂಬರಿಗಳನ್ನು ರಚಿಸಿದ್ದು ಕೊನೆಯದು ಅವರ ಶ್ರೇಷ್ಠ ಕೃತಿಯಾಗಿದೆ. ಅದಕ್ಕೆ ಸಂಸ್ಥಾನದ ಸಾಹಿತ್ಯ ಅಕೆಡೆಮಿಯ ಪ್ರಥಮ ಬಹುಮಾನ ಬಂದಿರುವುದು ಸಹಜವಾಗಿಯೇ ಇದೆ. 'ಮತದಾನ'ದಲ್ಲಿ ಸಮಕಾಲೀನ ಜೀವನದ ಭ್ರಷ್ಟಾಚಾರದ ನಿರೂಪಣೆಯಿದ್ದು, ರಾಜಕೀಯ ವಿಷ ಹೇಗೆ ಸಮಾಜಜೀವನವನ್ನು ಕದಡುತ್ತದೆಂಬುದರ ಮನೋಜ್ಞ ನಿರೂಪಣೆಯಿದೆ. ಇದರಲ್ಲಿ ಲೇಖಕರು ಬಳಸಿರುವ ಆಡು ನುಡಿ ಸಮರ್ಥವಾಗಿದೆ. 'ವಂಶವೃಕ್ಷ' ಕಾದಂಬರಿಯನ್ನು ಕುರಿತು ನಾನು ಬೇರೆ ಕಡೆ ಹೇಳಿರುವ ಮಾತುಗಳನ್ನೇ ಇಲ್ಲಿ ಉದ್ಧರಿಸಬಯಸುತ್ತೇನೆ: "ಬದುಕಿನ ಬಹು ದೊಡ್ಡ ಹಾಸಿನ ಮೇಲೆ ನಿರ್ಮಿತವಾಗಿರುವ ಎಸ್. ಎಲ್. ಭೈರಪ್ಪ ಅವರ 'ವಂಶವೃಕ್ಷ' ಅತ್ಯಂತ ಕುತೂಹಲಕಾರೀ ಕಾದಂಬರಿಯಾಗಿದೆ. ಮಾತ್ರವಲ್ಲ, ಕನ್ನಡದ ಈಚಿನ ಮಹತ್ವದ ಕಾದಂಬರಿಗಳಲ್ಲಿ ಅದು ಒಂದಾಗಿದೆ. ಜೀವನದ ಶ್ರದ್ಧೆ ಮೌಲ್ಯಗಳು ಸಂಘರ್ಷಣೆಯಲ್ಲಿ ಸಿಕ್ಕಾಗ ವ್ಯಕ್ತಿಗಳು ಪಡುವ ಪಾಡು ಇಲ್ಲಿ ಸಹಜವಾಗಿ, ಸುಂದರವಾಗಿ ಚಿತ್ರಿತವಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೆ ನಿರ್ಜೀವಗೊಳ್ಳಬಹುದಾದಂತಹ ಪಾತ್ರಗಳನ್ನು ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಸ್ಫುಟವಾಗಿ ಕಡೆದು ನಿಲ್ಲಿಸುವುದರಲ್ಲಿ ಭೈರಪ್ಪನವರು ಯಶಸ್ಸುಗಳಿಸಿದ್ದಾರೆ. ಇಲ್ಲಿ ಪರಂಪರಾಗತವಾದ ಸಂಪ್ರದಾಯ, ಸಾಮಾಜಿಕ ಕಟ್ಟಲೆಗಳು, ವೈಯಕ್ತಿಕವಾದ ಇಷ್ಟಾನಿಷ್ಟಗಳು ಇವುಗಳ ಬೇಲಿಯೊಳಗೆ ಮದುವೆ, ಅಭಿರುಚಿ, ವಂಶಪಾವಿತ್ರ್ಯ ಮೊದಲಾದ ಎಷ್ಟೋ ವಿಷಯಗಳು, ಸಮಸ್ಯೆಗಳು, ನಂಬಿಕೆಗಳು ಕುಡಿಯೊಡೆಯುತ್ತವೆ. ವ್ಯಕ್ತಿಗಳು ತುದಿಗಾಲಿನಲ್ಲಿ ನಿಲ್ಲದೆ ನೆಲದ ಮೇಲೆ ಭದ್ರವಾಗಿ ನಿಂತಿದ್ದಾರೆ. ಇಂದಿನ ಕಾದಂಬರಿಕಾರ ಎಷ್ಟೋ ಸಂದರ್ಭಗಳಲ್ಲಿ ಉಪನ್ಯಾಸಕಾರನಾಗಿ ಉಳಿದುಬಿಡುತ್ತಾನೆ. ಆದರೆ ಭೈರಪ್ಪನವರು ಪ್ರಥಮತಃ ಕಾದಂಬರಿಕಾರರು; ಅವರ ಉಪನ್ಯಾಸ ಸೂಚ್ಯವಾದರೂ ಪ್ರಭಾವಪೂರ್ಣವಾಗಿದೆ. ಅಷ್ಟಾಗಿ ಪ್ರಸಿದ್ಧಿಗೆ ಬಾರದಿರುವ ಈ ತರುಣ ಲೇಖಕರು ಈ ಕಾದಂಬರಿ 'ವಂಶವೃಕ್ಷ'ದಿಂದ ಗಣನೀಯ ಸ್ಥಾನ ಪಡೆದುಕೊಂಡಿರುವುದರ ಜೊತೆಗೆ ತಮ್ಮ ಬಗೆಗೆ ಮುಂದೇನು ಎಂಬ ತೀವ್ರಾಸಕ್ತಿಯನ್ನೂ ಕೆರಳಿಸಿದ್ದಾರೆ."[1]

'ಸಂಸ್ಕಾರ' ಅನಂತಮೂರ್ತಿಯವರ ಮೊದಲನೆಯ ಕಾದಂಬರಿಯಾಗಿದ್ದು, ಸಫಲವಾದ ಬರವಣಿಗೆಯಾಗಿದೆ. ಮಾನವನ ನೈಜವಾದ ಸಂಸ್ಕಾರಗಳು ಎಲ್ಲ ಕಟ್ಟುಗಳನ್ನೂ ದಾಟಿ ಒಂದಲ್ಲ ಒಂದು ಸಲ ಹೊರಬೀಳುವುದೇ ಇಲ್ಲಿನ ಪ್ರಧಾನವಾದ ಅಂಶವಾಗಿದೆ. ಅನಂತಮೂರ್ತಿಯವರು ಚಿತ್ರಿಸಿರುವ ಪ್ರಾಣೇಶಾಚಾರ್ಯರ ಪಾತ್ರ ಕನ್ನಡದ ಈಚಿನ ಎತ್ತರದ ಪಾತ್ರಗಳಲ್ಲಿ ಒಂದಾಗಿದೆ. ಪ್ರಾಣೇಶಾಚಾರ್ಯರು ಚಂದ್ರಿಯ ಸಂಗಮ ನೈಜ ಸಂಸ್ಕಾರದ ಸಂಕೇತವಾದರೂ,

---

1 ಹಾ. ಮಾ. ನಾಯಕ: ಸಮೀಕ್ಷೆ, ಪು. ೧೦೫,

ಕಾದಂಬರಿಯಲ್ಲಿ ಘಟನೆಯಾಗಿ ಸಹಜವೆನಿಸುವುದಿಲ್ಲ. ಇಬ್ಬರ ಬದುಕಿನಲ್ಲಿಯೂ ಅದು ಉತ್ಕಟವಾದ ಸನ್ನಿವೇಶ ಮಾತ್ರವಲ್ಲ. ದೈಹಿಕವಾಗಿಯಾದರೂ ಅವರು ಆ ಘಳಿಗೆಯಲ್ಲಿ ಲೈಂಗಿಕಕ್ರಿಯೆಗೆ ಸಮರ್ಥರಾಗಿದ್ದರೇ ಎನ್ನಿಸುತ್ತದೆ. ಕಥೆಯ ಉದ್ದಕ್ಕೂ ಹಬ್ಬಿರುವ ಪ್ಲೇಗ್ ರೋಗದ ಹಿನ್ನೆಲೆಯ ಸಾರ್ಥಕತೆಯೇನೆಂದು ಗೊತ್ತಾಗುವುದಿಲ್ಲ. ಅನಂತಮೂರ್ತಿಯವರು ಚಿತ್ರಿಸಿರುವ ಮಲೆನಾಡಿನ ಹಳ್ಳಿಯಲ್ಲಿ, ಜಾತ್ರೆಗೆ ಸೋಡಾ ಅಂಗಡಿಗಳು ಬಂದ ಕಾಲದ ಈಚೆಗೆ, ಪ್ಲೇಗ್ ಬಂದಾಗ ಗುಡಿಸಿಲುಗಳಿಗೆ ಬೆಂಕಿ ಹಾಕುವ ವಿಚಾರ ಆಭಾಸವಾಗಿ ಕಾಣುತ್ತದೆ. ಅನಗತ್ಯವಾದ ಲೈಂಗಿಕ ವಿವರಗಳು ಹೊಸ ಬರವಣಿಗೆಯ ಫ್ಯಾಷನ್ ಆಗಿರಬಹುದು. ಹೀಗೆ ಈ ಕಾದಂಬರಿಯ ಕೊರೆಗಳನ್ನು ಪಟ್ಟಿ ಮಾಡಿ ಹೇಳಬಹುದು. ಈ ದೌರ್ಬಲ್ಯಗಳಿದ್ದರೂ, ಸಮರ್ಥವಾದ ಶೈಲಿ, ಸುಂದರವಾದ ಸಂವಿಧಾನ, ಸೊಗಸಾದ ಪಾತ್ರನಿರ್ವಹಣೆ, ಜೊತೆಗೆ ಇವುಗಳ ಹಿನ್ನೆಲೆಯಲ್ಲಿ ಅಸ್ತಿತ್ವವಾದ ಮೆಲ್ಲುಸಿರು ಇವುಗಳಿಂದ 'ಸಂಸ್ಕಾರ' ಕಳೆಗೊಂಡಿದೆ; ಬೆಲೆಬಾಳುತ್ತದೆ.

ಓದುಗರಿಂದ ನ್ಯಾಯವಾಗಿ ಸಲ್ಲಬೇಕಾದ ಗಮನವನ್ನು ಪಡೆಯದೇ ಹೋದ ಮತ್ತೊಬ್ಬ ಲೇಖಕರೆಂದರೆ ಕುಸುಮಾಕರ ದೇವರಗೆಣ್ಣೂರ. 'ಮುಗಿಯದ ಕಥೆ' ಹಾಗೂ 'ನಾಲ್ಕನೆಯ ಆಯಾಮ' ಎಂಬ ಎರಡು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಈ ಕೃತಿಗಳ ರಚನೆಯಲ್ಲಿ ಅವರು ತೋರಿರುವ ನಿಷ್ಠೆಯೂ, ಸಂಯಮವೂ ಅಸಾಧಾರಣವಾಗಿವೆ. ಹೊಸ ಲೇಖಕರಲ್ಲಿ ಸಾಮಾನ್ಯವಾಗಿ ಕಂಡು ಬಾರದಿರುವ ಅನುದ್ವೇಗವನ್ನು ಕುಸುಮಾಕರರು ವರವಾಗಿ ಪಡೆದಿದ್ದಾರೆ. ಶೈಲಿ, ತಂತ್ರಗಳಲ್ಲಿಯೂ ಅವರು ತಮ್ಮತನವನ್ನು ಮೆರೆದಿದ್ದಾರೆ. ಲೈಂಗಿಕ ವಿಚಾರಗಳನ್ನು ಸಿಕ್ಕಾಪಟ್ಟೆ ಬಳಸುತ್ತಿರುವ ಹೊಸ ತಲೆಮಾರಿನ ಲೇಖಕರು ಇವರಿಂದ ಪಾಠಕಲಿಯಬೇಕು. ಎರಡನೆಯ ಕೃತಿ ಎಲ್ಲ ದೃಷ್ಟಿಯಿಂದಲೂ ಹೆಚ್ಚು ಸಮರ್ಥವಾದ ಕೃತಿಯಾಗಿದೆ. ತಲೆಪಟ್ಟಿಯನ್ನು ಕಟ್ಟಿಕೊಳ್ಳದಿದ್ದರೂ ಇದು ನವ್ಯ ಕೃತಿಯಾಗಿದೆ. ಒಂದು ಕೃತಿ ನವ್ಯವಾಗಲು ಬದುಕನ್ನು ವಿಕಾರವಾಗಿಯೇ ನೋಡಬೇಕಿಲ್ಲವೆಂಬುದಕ್ಕೆ 'ನಾಲ್ಕನೆಯ ಆಯಾಮ' ಒಂದು ಉತ್ತಮವಾದ ಉದಾಹರಣೆಯಾಗಿದೆ. ಈ ಎರಡು ಕೃತಿಗಳಲ್ಲಿ ಪ್ರದರ್ಶಿಸಿರುವ ಶಕ್ತಿಯನ್ನು ಉಳಿಸಿ ಬೆಳೆಸಿಕೊಳ್ಳುವುದು ಕುಸುಮಾಕರರಿಗೆ ಸಾಧ್ಯವಾದರೆ, ಸವಕಲು ಮಾತಿನಲ್ಲಿ ಹೇಳುವುದಾದರೆ, ಅವರಿಗೆ ಉಜ್ವಲವಾದ ಭವಿಷ್ಯವಿದೆ. ಈ ಭವಿಷ್ಯ ಕನ್ನಡ ಕಾದಂಬರಿಗೂ ಕೂಡ!

* * *

ಕಾದಂಬರಿಯ ಜನಪ್ರಿಯತೆಯಲ್ಲಿ ಸಣ್ಣ ಕಥೆಯನ್ನು ಕೇಳುವವರಿಲ್ಲವೆಂಬ ದೂರು ಸಾಮಾನ್ಯವಾಗಿದ್ದರೂ ಈ ಸಮೀಕ್ಷೆಯ ಅವಧಿಯಲ್ಲಿ ನಮಗೆ ತಿಳಿದು ಬಂದಂತೆ ಸುಮಾರು ಐವತ್ತು ಜನ ಲೇಖಕರ ಎಪ್ಪತ್ತು ಕಥಾ ಸಂಗ್ರಹಗಳು ಪ್ರಕಟವಾಗಿವೆ. ಆರು ಜನ ಲೇಖಕಿಯರು ತಮ್ಮ ಒಂದೊಂದು ಸಂಕಲನವನ್ನು ಪ್ರಕಟಿಸಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ('ಕನ್ಯಾಕುಮಾರಿ ಮತ್ತು ಇತರ ಕಥೆಗಳು') ಅ. ನ. ಕೃಷ್ಣರಾಯ ('ಅ. ನ. ಕೃ. ಅವರ ಆಯ್ದ ಕಥೆಗಳು'), ನಿರಂಜನ ('ನಾಸ್ತಿಕ ಕೊಟ್ಟ ದೇವರು') ಮತ್ತು ತರಾಸು ('ದಶಮುಂಜರಿ') ತಮ್ಮ ಆರಿಸಿದ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದಿದ್ದಾರೆ. ಬೇರೆ ಬೇರೆ ಲೇಖಕರ ಕಥೆಗಳನ್ನೊಳಗೊಂಡ ಏಳು ಸಂಕಲನಗಳು ಈ ಅವಧಿಯಲ್ಲಿ ಮೈದಾಳಿವೆ. ಇವುಗಳಲ್ಲಿ 'ತ್ರಿವೇಣಿ' ಎನ್ನುವುದು ಹದಿನೆಂಟು ಮಹಿಳೆಯರ ಕಥೆಗಳನ್ನೊಳಗೊಂಡ ಸಂಗ್ರಹವಾಗಿದ್ದು ದಿ|| ತ್ರಿವೇಣಿಯವರ ನೆನಪಿಗೆ ಅರ್ಪಿತವಾಗಿದೆ. ಇಲ್ಲಿ ಬರೆಯಬಲ್ಲ ಪ್ರತಿಯೊಬ್ಬ ಲೇಖಕಿಯ ಕಥೆಯನ್ನೂ ಸೇರಿಸಬೇಕೆಂದು ಸಂಪಾದಕರು ಹಠ ತೊಟ್ಟ ಹಾಗೆ ಕಾಣುತ್ತದೆ! 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾದ ಕಥೆಗಳಲ್ಲಿ ಕೆಲವನ್ನು ಆಯ್ದು ದಕ್ಷಿಣಭಾಷಾ ಪುಸ್ತಕ ಸಂಸ್ಥೆಯವರು ಉಷಾದೇವಿಯವರ ಸಂಪಾದಕತ್ವದಲ್ಲಿ ಪ್ರಕಟಿಸಿದ್ದಾರೆ. 'ಸುಧಾ' ಪತ್ರಿಕೆಯ ಓದುಗರಿಗೆ ಇದಕ್ಕಿಂತ ಒಳ್ಳೆಯ ಆಯ್ಕೆ ಮಾಡುವುದು ಸಾಧ್ಯವಿತ್ತೆಂದು ಅನ್ನಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. 'ಹೊಸ ಕ್ಷಿತಿಜ' "ಹೊಸ ಸಂವೇದನೆಯ ಕಥೆಗಳು" ಎಂದು ವರ್ಣಿತವಾದ ಹದಿನಾಲ್ಕು ಕಥೆಗಳ ಉತ್ತಮ ಸಂಕಲನವಾಗಿದೆ. ಈ ಸಂಕಲನದ ಲೇಖಕರಲ್ಲಿ ಕೆಲವರು ಹಳೆಯ ತಲೆಮಾರಿನವರು; ಹಲವರು ಹೊಸ ತಲೆಮಾರಿನವರು. ಸದಾಶಿವ, ತೇಜಸ್ವಿ, ಶಾಂತಿನಾಥ ದೇಸಾಯಿ ಮತ್ತು ಅನಂತಮೂರ್ತಿಯವರ ಕಥೆಗಳು ಈ ಸಂಕಲನದ ಅತ್ಯುತ್ತಮ ಕಥೆಗಳಾಗಿವೆ. ಹೊಸ ಕಥೆಗಾರರ ಒಂದು ದೋಷವೆಂದರೆ ಅವರು ಕಲೆಗಾರರಿಗಿಂತ ಮಿಗಿಲಾಗಿ ವಾಗ್ಮಿಗಳಾಗುವುದು. ಅನಂತಮೂರ್ತಿ, ತೇಜಸ್ವಿಯವರ ಕಥೆಗಳೂ ಇದಕ್ಕೆ ಅಪವಾದವಲ್ಲ. ವೈಚಾರಿಕತೆ, ಮಾತುಗಾರಿಕೆ ಹೆಚ್ಚಾದಾಗ ಕತೆಗಾರಿಕೆ ನರಳುತ್ತದೆ. 'ಎಂಟು ಕತೆಗಳು' ಎಂಟು ಜನ ಲೇಖಕರ ಕಥೆಗಳ ಸಂಗ್ರಹವಾಗಿದೆ. ಈ ಲೇಖಕರ ಬಗ್ಗೆ "ಸಣ್ಣ ಕತೆಗಾರರೆಂದು ಈಗಾಗಲೇ ಸಾಕಷ್ಟು ಪ್ರಸಿದ್ಧರಾಗಿಲ್ಲದ ಇಲ್ಲಿನ ಕೆಲವರಾದರೂ ಒಳ್ಳೆಯ ಕಥೆಗಾರರಾಗಿ ಬೆಳೆಯಬಹುದಾದ ಭರವಸೆಯನ್ನು ಹುಟ್ಟಿಸುವಂಥ

ವರು ಎಂಬ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಮಾತು ಕೇವಲ ಔಪಚಾರಿಕವಾದುದಲ್ಲ"[1] ಎಂದು ಹೇಳಲಾಗಿದೆ. ಇದು ಸಂತೋಷದ ವಿಚಾರ.

ಶ್ರೀಮಿತ್ತೂರ್ ಹಾಗೂ ಶ್ರೀನಿವಾಸ ಉಡುಪ ಇವರಿಬ್ಬರೇ ಮೂರು ಮೂರು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾದಂಬರಿಕಾರರಾದ ಕೃಷ್ಣಮೂರ್ತಿ ಪುರಾಣಿಕ ಹಾಗೂ ಕೊರಟಿ ಶ್ರೀನಿವಾಸರಾವ್ ಅವರು ಎರಡೆರಡು ಸಂಕಲನಗಳನ್ನು ತಂದಿದ್ದಾರೆ. ತೀರ ಹೊಸ ಲೇಖಕರಾದ 'ಪ್ರಿಯತಮಾ' ಅವರೂ ತಮ್ಮ ಎರಡು ಸಂಗ್ರಹಗಳನ್ನು ನೀಡಿದ್ದಾರೆ. ಸಮಾಜದ ಕುಂದುಕೊರತೆಗಳ ಬಗೆಗೆ ಜಾಗ್ರತರಾಗಿರುವ ಮಿತ್ತೂರರ ಕಥೆಗಳು ರಂಜಕವಾಗಿವೆ. ಸರಸವಾಗಿವೆ. ಅವುಗಳಲ್ಲಿ ಹಲವಕ್ಕೆ ಸ್ವಯಂ ಹಿನ್ನೆಲೆಯುಂಟು. ಪುರಾಣಿಕರ ಕಥೆಗಳು ಸಾಮಾನ್ಯವಾಗಿ ಸನ್ನಿವೇಶ ಚಿತ್ರಣಗಳು. ಕೊರಟಿಯವರ 'ಭದ್ರಾಂಬೆ'ಯಲ್ಲಿ ಅಮ್ಮವ್ವೆ, ಭೈರಾದೇವಿ, ಭದ್ರಾಂಬೆ, ಗೇರುಸೊಪ್ಪೆಯ ರಾಣಿ, ಸೋಮಲಾದೇವಿ ಮುಂತಾದ ಐತಿಹಾಸಿಕ ಮಹಿಳೆಯರನ್ನು ಒಳಗೊಂಡ ಹತ್ತು ಕಥೆಗಳಿವೆ. ಅವರ ಇನ್ನೊಂದು ಸಂಕಲನವಾದ 'ರಾಮರಾಯನ ತಲೆ' ಐತಿಹಾಸಿಕ ನೀಳ್ಗತೆಗಳ ಸಂಕಲನವೆಂದು ಹೇಳಲಾಗಿದೆ. ಪ್ರಿಯತಮಾ ಅವರ ಕಥೆಗಳು ಆರಂಭದ ಪ್ರಯೋಗಗಳೆಂದು ಹೇಳಿದರೆ ಸಾಕು. ಕಥನ ಕ್ರಮದಲ್ಲಿ, ಭಾಷೆಯ ಬಳಕೆಯಲ್ಲಿ ಶ್ರೀನಿವಾಸ ಉಡುಪರಿಗೆ ಪರಿಣತಿ ಸಾಲದು. ಆದರೂ ಅವರ 'ಹೆಗ್ಗಡ್ತಿಹೆತ್ತ ದೆವ್ವ' ನಾವು ಅವರನ್ನು ಕಾಯುವಂತೆ ಮಾಡುತ್ತದೆ. ಉತ್ಸಾಹವೊಂದೇ ಯಶಸ್ಸನ್ನು ತರಲಾರದೆಂದು ಉಡುಪರು ನೆನಪಿನಲ್ಲಿಡಬೇಕು.

ಚಂಪಾವತಿ ಮಹಿಷಿ, ಎಚ್. ವಿ. ಸಾವಿತ್ರಮ್ಮ, ಲಲಿತಾಂಬಾ ಚಂದ್ರಶೇಖರ್, ಅನುಪಮಾ ನಿರಂಜನ, ಭುವನೇಶ್ವರಿ ಸಿಂಪಿ, ಮತ್ತು ಪ್ರೇಮಾ ಭಟ್ ಇವರೇ ಕಥಾಸಂಕಲನಗಳನ್ನು ಪ್ರಕಟಿಸಿರುವ ಆರು ಜನ ಲೇಖಕಿಯರು. ಸಾವಿತ್ರಮ್ಮನವರ 'ಸರಿದ ಬೆರಳು' ಗಂಭೀರವಾದ ಸ್ವಾರಸ್ಯವಾದ ಏಳು ಕಥೆಗಳ ಸಂಕಲನ. ನೂರು ಪುಟಗಳಷ್ಟು ದೀರ್ಘವಾಗಿರುವ 'ಪಾತು ಕತೆ' 'ಹೆಣ್ಣಿನ ಬಾಳು ಕಣ್ಣೀರು' ಎಂಬ ಪ್ರಸಿದ್ಧವಾದ ಹೇಳಕೆಗೆ ಒಂದು ಸ್ಮಾರಕವಾಗಿದೆ. ನಿರಾಡಂಬರದ ಈ ಕಥೆಗಳಲ್ಲಿ ತಂತ್ರದ ಸರ್ಕಸ್ ಇಲ್ಲ. ವಿಷಾದವನ್ನು ಚಿತ್ರಿಸುವಂತೆಯೇ ಅವರು ವಿನೋದವನ್ನೂ ತರಬಲ್ಲರು. ಸಿಂಪಿಯವರ ಆಕರ್ಷಿಕ ಕಥೆಗಳಲ್ಲಿ ಬಿಗಿಬನಿಗಳೆರಡೂ ಇವೆ. ಅವರ ಕಥೆಗಳ ಉದ್ದಕ್ಕೂ ಮೃದುವಾದ 'ಕರುಳಿನ ಕರೆ' ಕೇಳಿಬರುತ್ತದೆ. ಲಲಿತಾಂಬ ಚಂದ್ರಶೇಖರ್ ಅವರ 'ಬಿಡಿ ಹೂಗಳ' ಬಗೆಗೆ ಮುನ್ನುಡಿಯಲ್ಲಿ ಪ್ರೊ. ಡಿ. ಕೆ. ಭೀಮಸೇನರಾಯರು "ಲಲಿತ ಪದಪ್ರಯೋಗ ಪ್ರಸನ್ನತಾ ಗುಣದಿಂದ ಒಂದೊಂದು ಕಥೆಯೂ ಹೃದಯಸ್ಪರ್ಶಿಯಾಗಿದೆ" ಎಂದು ಹೇಳಿರುವುದು ಬಹು ಉದಾರವಾದ ಪ್ರಶಂಸೆಯಾದರೂ, ಲಲಿತಾಂಬಾ ಅವರ ಕಥೆಗಳಲ್ಲಿ ಓದಿಸಿಕೊಂಡು ಹೋಗುವ ಗುಣವಿದೆ. ಅನುಪಮಾ ನಿರಂಜನ ಅವರ 'ಏಳುಸುತ್ತಿನ ಮಲ್ಲಿಗೆ'ಯಲ್ಲಿ ಹತ್ತು ಕಥೆಗಳಿವೆ. ಇವೆಲ್ಲವೂ ಲಲಿತ ನಿರೂಪಣೆಯ ಸಾಮಾನ್ಯ ಕಥೆಗಳು. ವೈದ್ಯಕೀಯ ಜೀವನದ ಸನ್ನಿವೇಶಗಳನ್ನೋ ಸಂದರ್ಭಗಳನ್ನೋ ತರುವಲ್ಲಿ ಅನುಪಮಾ ಸಹಜವಾಗಿಯೇ ಯಶಸ್ಸು ಪಡೆಯುತ್ತಾರೆ.

ತರಾಸು ಅವರ 'ಇದೇ ನಿಜವಾದ ಸಂಪತ್ತು' ಎರಡು ಕಥೆಗಳ ಸಂಕಲನ. ಈ ಹೆಸರಿನ ಕಥೆಯ ಜೊತೆಗೆ ಇರುವ ಇನ್ನೊಂದು ಕಥೆ 'ಸಮಯ ಸ್ಫೂರ್ತಿ.' ಈ ಸಂಕಲನ ೧೯೬೫ರಲ್ಲಿ ಪ್ರಕಟವಾಗಿ ೬೭ರಲ್ಲಿ ಮರು ಮುದ್ರಣವನ್ನು ಕಂಡಿರುವುದು ವಿಶೇಷವಾದ ಸಂಗತಿ. ಧನಕನಕಗಳಿಗಿಂತಲೂ ಅದನ್ನು ಉತ್ಪಾದಿಸುವ ಶಕ್ತಿಯನ್ನು ಕೊಡುವ ಜ್ಞಾನವೇ ನಿಜವಾದ ಸಂಪತ್ತು ಎಂಬುದನ್ನು ಮೊದಲನೆಯ ಕಥೆ ಪ್ರತಿಪಾದಿಸುತ್ತದೆ; ಎರಡನೆಯ ಕಥೆ ಚಪ್ಪಲಿ ಪುರಾಣ. ಚಪ್ಪಲಿಯ ಉಂಗುಟ ಕಿತ್ತಿದ್ದರಿಂದ ಏನೆಲ್ಲ ಆಯಿತೆಂಬ ಸಮಯಸ್ಫೂರ್ತಿಯ ಚಿತ್ತಾಕರ್ಷಕ ನಿರೂಪಣೆ.

ಅಶ್ವತ್ಥ, ಭಾರತೀಸುತ, ಶೇಷನಾರಾಯಣ, ಜನಾರ್ದನ ಗುರ್ಕಾರ ಇವರು ಕ್ರಮವಾಗಿ, 'ನೋವು ನಲಿವು', 'ಕರೆಗೆ ಓಗೊಟ್ಟ ಕಾರ್ಡೀಲಿಯಾ', 'ಮೊಲ್ಲೆ ಮಲ್ಲಿಗೆ', ಹಾಗೂ 'ಕಂಬದ ಹುಚ್ಚು' ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅಶ್ವತ್ಥರು ನಮ್ಮ ಹಿರಿಯ ಕಥೆಗಾರರಲ್ಲಿ ಒಬ್ಬರು. ಅವರ ಈಚಿನ ಕಥೆಗಳು ಈ ಸಂಕಲನದಲ್ಲಿ ಸಂಗ್ರಹಿತವಾಗಿವೆ. ಕೊರಿಯಾ ಯುದ್ಧದ ಹಿನ್ನೆಲೆಯಲ್ಲಿ ಮೂಡಿರುವ 'ಪಪ್‌ಪಪ್ ಮಮ್‌ಮಮ್', ಬದುಕು ಬೇಡವಾದ ಗಂಡು ಹೆಣ್ಣುಗಳನ್ನು ಹಸುಗೂಸೊಂದು ಮತ್ತೆ ಮಣ್ಣಿಗೆ ಅಂಟಿಸಿದ ಕಥೆ. 'ನಂಬಿದರೆ ನಂಬಿ ಬಿಟ್ಟರೆ ಬಿಡಿ'ಯಲ್ಲಿ ಬಂಗಾಳಿಗಳ ಸಂಭಾಷಣೆಯನ್ನು ತಂದ ರೀತಿಯೇ ಸ್ವಾರಸ್ಯಪೂರ್ಣವಾಗಿದೆ. 'ರಾಮಿ' ಅಶ್ವತ್ಥರ ವರ್ಣನಾ ವಿಸ್ತಾರಕ್ಕೆ ಒಂದು ಉದಾಹರಣೆ. ಅದರ ಮುಕ್ತಾಯ ಆಕಸ್ಮಿಕ ಆದರೆ ಅಷ್ಟೇ ಸಹಜ. ಈ ಮುಕ್ತಾಯದಿಂದಾಗಿಯೆ ನಾವು ರಾಮಿಯನ್ನು ಮರೆಯಲಾಗದು. ದೀರ್ಘವಾದ ವರ್ಣನೆ

1 ಎಣ್ಣು ಕಥೆಗಳು, ಪುಟ ೧೫೬

ಗಳು ಕಥೆಗಳ ರಸಾಸ್ವಾದನೆಗೆ ಎಷ್ಟೋ ಸಲ ಅಡ್ಡಿ ಮಾಡುತ್ತವೆ. ಆದರೆ ಅದು ಅಶ್ವತ್ಥರಿಗೆ ಸಹಜವಾದ ರೀತಿ. 'ಕರಿಗೆ ಓಗೊಟ್ಟ ಕಾರ್ಡೀಲಿಯಾ'ದ ಒಂಬತ್ತು ಕಥೆಗಳಲ್ಲಿ ಭಾರತೀಸುತರು ಕೊಡಗಿನ ಜನಜೀವನದ ವಿವಿಧ ಮುಖಗಳನ್ನು, ಸಂಪ್ರದಾಯ, ಸೊಗಸುಗಳನ್ನು ಪರಿಚಯಿಸುತ್ತಾರೆ. ಪ್ರಾದೇಶಿಕ ಜೀವನವನ್ನು ಸಾಹಿತ್ಯದಲ್ಲಿ ತರುವ ಕೆಲವೇ ಲೇಖಕರಲ್ಲಿ ಭಾರತೀಸುತರು ಒಬ್ಬರಾಗಿದ್ದಾರೆ. 'ಟೊಳ್ಳು ನಂದಿ ಮರ'ದಂಥ ಕಥೆಯಿಂದಾಗಿ ಈ ಸಂಕಲನ ಆಕರ್ಷಕವಾಗಿದೆ. ಅವರ ಶೈಲಿಯಲ್ಲಿ ಹಲವು ಮಾತುಗಳು, ಪದ ಪುಂಜಗಳು ಪುನರಾವರ್ತನೆಯಿಂದ ಕೆಲವು ಸಲ ಬೇಸರ ತರಿಸುತ್ತವೆ. ಎಂಟು ಕಥೆಗಳ ಸಂಕಲನವಾದ 'ಮೊಲ್ಲೆ ಮಲ್ಲಿಗೆ' ವಿಶಿಷ್ಟವಾದ ಕಥಾಗುಚ್ಛವಾಗಿದೆ. ಇಲ್ಲಿನ ಕಥೆಗಳಲ್ಲಿ ಪ್ರಧಾನ ಪಾತ್ರ ವಹಿಸುವವರು ಮಾನವರು ಮಾತ್ರವಲ್ಲ; ಒಂದು ಕಥೆಯಲ್ಲಿ ಬೆಕ್ಕು; ಇನ್ನೊಂದರಲ್ಲಿ ಆನೆ; ಮತ್ತೊಂದರಲ್ಲಿ ನವಿಲು; ಮಗುದೊಂದರಲ್ಲಿ ಮೊಲ್ಲೆಯ ಬಳ್ಳಿ! ಜೊತೆಗೆ ಈ ಕಥೆಗಳಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗದ ಪ್ರಾದೇಶಿಕ ಜೀವನ, ಭಾಷೆಗಳ ಮೆರುಗಿದೆ. ಈ ಸಂಕಲನವನ್ನು ಓದಲು ವ್ಯಯಿಸುವ ಕಾಲ ವ್ಯರ್ಥವಲ್ಲ. 'ಕಂಬದ ಹುಚ್ಚಿ'ನಲ್ಲಿ ಗುರ್ಕಾರರ ಹದಿನೇಳು ಚಿಕ್ಕ ಕಥೆಗಳಿವೆ. ಅವರ ಕಥನ ಕಲೆಯ ಸಾಮರ್ಥ್ಯ 'ಕಂಬದ ಹುಚ್ಚು', 'ಬಾಪೂಜಿ', 'ಹೊಗೆ' ಮುಂತಾದ ಕಥೆಗಳಲ್ಲಿ ಮನೋಜ್ಞವಾಗಿ ವ್ಯಕ್ತವಾಗಿದೆ. ಅವರು ಹೃದಯಸ್ಪರ್ಶಿಯಾದ ಕಥೆಗಳನ್ನು ಬರೆಯಬಲ್ಲರೆಂಬುದಕ್ಕೆ 'ಸಿಪಾಯಿ ಮಲಗಿದನು' ಎಂಬ ಒಂದು ಕಥೆ ಸಾಕು. ಗುರ್ಕಾರರ ಈ ಮೊದಲನೆಯ ಸಂಕಲನ ಅವರಿಂದ ಇನ್ನೂ ಹೆಚ್ಚಿನ ಕಥೆಗಳನ್ನು ಅಪೇಕ್ಷಿಸುವಂತೆ ಮಾಡಿದರೆ ಆಶ್ಚರ್ಯವಿಲ್ಲ.

ಶಾಂತಿನಾಥ ದೇಸಾಯಿ ಅವರ 'ಕ್ಷಿತಿಜ' ಹಾಗೂ ಕ. ವೆಂ. ರಾಜಗೋಪಾಲ ಅವರ 'ಅರ್ಧ ತೆರೆದ ಬಾಗಿಲು' ಎರಡೂ ಶ್ರೇಷ್ಠ ಸಂಕಲನಗಳಾಗಿವೆ. ಈ ಇಬ್ಬರೂ ಕಥೆಗಾರರ ಪ್ರಪಂಚ ಸಂವೇದನಶೀಲವೂ ಸೂಕ್ಷ್ಮವೂ ಆಗಿದೆ. ಸಾಂಕೇತಿಕತೆಯನ್ನು ಅವರು ಸರಾಗವಾಗಿ ತರಬಲ್ಲರು. ದೇಸಾಯಿಯವರು ಮನಸ್ಸಿನ ಒಳಪದರುಗಳ ರೀಲನ್ನು ಬಿಚ್ಚಬಲ್ಲರು. ರಾಜಗೋಪಾಲರು ಕುಸುರಿ ಕೆಲಸದಲ್ಲಿ ನಿಸ್ಸೀಮರು. 'ಕ್ಷಿತಿಜ'ದ ಆರು ಕಥೆಗಳಲ್ಲಿ ಅದೇ ಹೆಸರಿನ ಕಥೆಯನ್ನೂ, 'ಗಂಡ ಸತ್ತ ಮೇಲೆ' ಎಂಬ ಇನ್ನೊಂದು ಕಥೆಯನ್ನೂ ಪ್ರತ್ಯೇಕವಾಗಿ ಹೆಸರಿಸಲೇ ಬೇಕು. 'ಆಶೆಯ ಶಿಶು' ರಾಜಗೋಪಾಲರ ಅತ್ಯುತ್ತಮ ಕಥೆಯಾಗಿದೆ. ಈಚಿನ ಕಥೆಗಳಲ್ಲಿ ಸಾಂಕೇತಿಕತೆ ಇಷ್ಟು ಸಮರ್ಥವಾಗಿ ಇನ್ನೊಂದರಲ್ಲಿ ವ್ಯಕ್ತವಾಗಿಲ್ಲ. "ರಾಜಗೋಪಾಲರ ಹೆಸರು ಹೊಸ ಕಥೆಗಾರರಲ್ಲಿ ಕೇಳಿಸಬೇಕಾದಷ್ಟು ಕೇಳಿಸದಿರುವುದು ಆಶ್ಚರ್ಯದ ಮಾತು"[1] ಎಂದು ನಾನು ಇನ್ನೊಂದು ಕಡೆ ಹೇಳಿದ್ದೇನೆ.

ಸುಧಾಕರ, ನಂಜರಾಜ ಅರಸು, ಉಮಾಶಂಕರ, ಶ್ರೀಕಾಂತ, ನಾಗಭೂಷಣರಾವ್ ಸಿಂಧೆ, ಬಸವರಾಜ್, ನಾರಾಯಣ ಬಲ್ಲಾಳ, ಹುಯಿಲಗೋಳ, ಮಾವಿನಕೆರೆ ರಂಗನಾಥನ್, ಪರಂಜ್ಯೋತಿ, ಮುಕುಂದ, ಜಿ. ಎಸ್. ಅನ್ನದಾನಿ, ಡಿ. ಲಿಂಗಯ್ಯ, ಸೇವ ನಮಿರಾಜಮಲ್ಲ ಮೊದಲಾದ ಲೇಖಕರು ಕನ್ನಡ ಕಥೆಯ ಸಮೃದ್ಧಿಗೆ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಇವರಲ್ಲಿ ಕೆಲವರು ಮೊದಲೇ ಒಂದೆರಡು ಸಂಕಲನಗಳನ್ನು ಪ್ರಕಟಿಸಿರುವ ಪಳಗಿದ ಕಥೆಗಾರರಾಗಿದ್ದಾರೆ. ಇನ್ನು ಕೆಲವರು ಇದೇ ಮೊದಲ ಬಾರಿಗೆ ತಮ್ಮ ಸಂಕಲನಗಳನ್ನು ಹೊರತರುತ್ತಿದ್ದಾರೆ. ಸುಧಾಕರರ ಕಥೆಗಳಲ್ಲಿನ ಗ್ರಾಮ ಜೀವನದ ಸವಿ, ಸೊಗಡು ಮೋಹಕವಾಗಿವೆ. ಆರ್. ಬಸವರಾಜರ ಸಂಕಲನ ಮೂರನೆಯದೆಂದರೆ ನಂಬುವುದು ಕಷ್ಟ. ನಾರಾಯಣ ಬಲ್ಲಾಳರ ಕಥೆಗಳಲ್ಲಿ ಉದ್ವೇಗವಿದೆ. ಮಾವಿನಕೆರೆ ರಂಗನಾಥನ್ ಅವರ ಕಥೆಗಳಲ್ಲಿ "ಕಾಮನ ಬಣ್ಣ ಪ್ರಧಾನವಾಗಿದೆ." ಡಿ. ಲಿಂಗಯ್ಯನವರು ಈ ಲೇಖಕರುಗಳಲ್ಲೆಲ್ಲ ತೀರ ಈಚಿನವರಾದರೂ, ಅವರ ಕಥೆಗಳೆಲ್ಲ ಸವಕಲು ನಾಣ್ಯಗಳು. ಅರಸು ಮತ್ತು ಉಮಾಶಂಕರ ನಿರಾತಂಕವಾಗಿ ಕಥೆ ಹೇಳಬಲ್ಲರು. ಆದರೆ ಅರಸು ಅವರಲ್ಲಿ ಅನಪೇಕ್ಷಣೀಯ ವಿಸ್ತಾರ; ಉಮಾಶಂಕರರಲ್ಲಿ ಅಸಹಜವಾದ ಬೆಳವಣಿಗೆ ದೋಷಗಳು. 'ನೈಲಾನ್ ಸಾಕ್ಸ್'ನ ನಾಗಭೂಷಣರಾವ್ ಸಿಂಧೆ ಒಳ್ಳೆ ಕಥೆಗಾರರಾಗುವ ಸೂಚನೆಯನ್ನು ಪ್ರಥಮ ಸಂಕಲನದಲ್ಲಿಯೇ ನೀಡಿದ್ದಾರೆ. ಶ್ರೀಕಾಂತರ ಬೆಳವಣಿಗೆಯನ್ನು ಇನ್ನೂ ನಿರೀಕ್ಷಿಸಬೇಕು. ಸುಪ್ರಸಿದ್ಧ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿಯವರು 'ಸೈನಿಕನ ಹೆಂಡತಿ' ಎಂಬ ಒಂದು ಸಂಕಲನವನ್ನು ಈ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಎರಡು ವರ್ಷಗಳಲ್ಲಿ ಇನ್ನಿತರ ಹಲವರು ಹೊಸ ಲೇಖಕರು ಕಥಾ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ಸಂಕಲನಗಳನ್ನು ಪ್ರಕಟಿಸಿರುವರಾದರೂ, ಕನ್ನಡದ ಕಥೆಗೆ ಗಾತ್ರ ಬಂದ ಹಾಗೆ ಗುಣ ಬಂದಿಲ್ಲವೆಂಬುದನ್ನು ನಾವು ಮರೆಯುವಂತಿಲ್ಲ. ಪತ್ರಿಕೆಯ ಪುಟಗಳಲ್ಲಿ ಮರೆಯಾಗಿ ಹೋಗಿರುವ ಎಷ್ಟೋ ಉತ್ತಮ ಕಥೆಗಳು ಇಂದಲ್ಲ ನಾಳೆ ಸಂಕಲನರೂಪ

---

1 ಹಾ. ಮಾ. ನಾಯಕ; ಸಮೀಕ್ಷೆ, ಪು. ೮೪

ದಲ್ಲಿ ಬಂದಾವೆಂದೂ, ಕೆಲವರಾದರೂ ಲೇಖಕರು ನಮ್ಮ ಕಥೆಯನ್ನು ಬೆಳೆಸಲು ಸಮರ್ಥರಾದಾರೆಂದೂ ನಂಬಬಹುದಾಗಿದೆ.

*   *   *

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಕಥನ ಸಾಹಿತ್ಯವನ್ನು (Fiction) ಅವಷ್ಟು ಸ್ಥೂಲವಾಗಿ ಈವರೆಗೆ ಅವಲೋಕಿಸಲಾಯಿತು. ಈಗ ಒಟ್ಟಂದದಲ್ಲಿ ಈ ಅವಧಿಯ ಸಾಧನೆಯನ್ನೂ, ಕಂಡು ಬರುವ ಪ್ರವೃತ್ತಿಗಳನ್ನೂ ಕುರಿತು ನಾಲ್ಕು ಮುಖ್ಯವಾದ ಮಾತುಗಳನ್ನು ಆಡಬಹುದಾಗಿದೆ. ಸಂಖ್ಯೆಯ ದೃಷ್ಟಿಯಿಂದ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವೇನೋ ನಡೆದಿದೆ. ಆದರೆ ಸಾಹಿತ್ಯದ ಮಹತ್ವ ಸಂಖ್ಯೆಯಿಂದ ನಿರ್ಧಾರವಾಗುವುದಿಲ್ಲ. ಹಳೆಯ ಲೇಖಕರು ಸಮೃದ್ಧವಾಗಿ ಬರೆಯುತ್ತಲೇ ಇದ್ದಾರೆ; ಹೊಸ ಲೇಖಕರು ಉತ್ಸಾಹದಿಂದ ಕಾರ್ಯಾರಂಭ ಮಾಡಿದ್ದಾರೆ. ಹಳೆಯ ಲೇಖಕರಿಗೆ ಬರವಣಿಗೆ ಯಾಂತ್ರಿಕವಾಗಿ ಹೋಗಿದೆಯೇನೋ ಎನ್ನುವಷ್ಟರ ಮಟ್ಟಿಗೆ ಅವರ ಕೃತಿಗಳು ವರ್ಣವಿಹೀನವಾಗಿವೆ; ಜಾಳಾಗಿವೆ; ಜೊಳ್ಳಾಗಿವೆ. ಹೊಸ ಲೇಖಕರಾದರೋ—ಕೇವಲ ಬೆರಳಲ್ಲಿ ಎಣಿಸುವವರನ್ನುಳಿದು-ಉತ್ಸಾಹವೊಂದನ್ನೇ ಅವಲಂಬಿಸಿ, ಹೊಸತನವನ್ನು ಮೆರೆಯುವುದರಲ್ಲಿ ಆಸಕ್ತರಾಗಿದ್ದಾರೆ. ಪಂಥ ಪೂಜೆಗೆ ಬಲಿಯಾಗಿ ಕಲೆಯನ್ನು ಕಡೆಗಣಿಸುತ್ತಾರೆ.

ಕೃತಿಗಳಲ್ಲಿ ವೈಯಕ್ತಿಕತೆ ಎನ್ನುವುದೇ ಈಚಿನ ಬರವಣಿಗೆಯಲ್ಲಿ ಕಂಡುಬರುವುದಿಲ್ಲ. ಹತ್ತು ಜನ ಲೇಖಕರ ಹತ್ತು ಕೃತಿಗಳನ್ನು ಒಟ್ಟಾರೆ ನೋಡಿದಾಗ ಅವುಗಳಲ್ಲಿ ಯಾವ ವ್ಯತ್ಯಾಸವೂ ಕಾಣಿಸುವುದಿಲ್ಲ. ಭಾಷೆಯ ಬಳಕೆಯಲ್ಲಂತೂ ಅಸಾಧಾರಣವಾದ ಸಾಧಾರಣೀಕರಣ ಕಂಡು ಬರುತ್ತದೆ. ತೀರ ಹೊಸ ಲೇಖಕರಿಗೂ ಒಂದು ಸಿದ್ಧವಾದ ಶೈಲಿ, ಭಾಷೆ ಲಭ್ಯವಾಗಿದೆ. ಅದರಲ್ಲಿ ವೈವಿಧ್ಯವಿಲ್ಲ. ನಲ್ಲಿಯನ್ನು ಯಾರು ಬೇಕಾದರೂ ತಿರುಗಿಸಬಹುದಾಗಿದೆ. ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ಗೋಪಾಲ ಕೃಷ್ಣ ಅಡಿಗರ ಪ್ರಥಮ ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಬೇಂದ್ರೆಯವರು "ನಾನು ಕವಿತೆಯನ್ನು ಬರೆಯಲು ಪ್ರಾರಂಭಿಸಿದಾಗ ಇದ್ದ ಶೈಲಿಯ ಪ್ರಾಯೋಗಿಕತೆ ಇಂದಿನ ಕನ್ನಡದಲ್ಲಿ ಅಷ್ಟು ಮಟ್ಟಿಗೆ ಇಲ್ಲ. ಒಂದು ಬಗೆಯ ಸಿದ್ಧ ಶೈಲಿಯಿಂದ ನವಕವಿಗಳು ಹೊರಡುತ್ತಾರೆ" ಎಂದು ಹೇಳಿದ್ದಾರೆ.[1] ಈ ಮಾತು ಇಂದಿನ ಗದ್ಯ ಲೇಖಕರಿಗೂ ಸರಿಯಾಗಿ ಅನ್ವಯವಾಗುತ್ತದೆ. ಭಾಷೆಯ ಸಾಮರ್ಥ್ಯ, ಸಾರ್ಥಕತೆಗಳ ಬಗೆಗೆ ವಿಚಾರ ಮಾಡುವ ಯಾರಿಗೂ ಈ ಪ್ರವೃತ್ತಿ ಖೇದವನ್ನುಂಟುಮಾಡುತ್ತದೆ. ಸರಳ ಎಂದರೆ ಶಕ್ತಿಹೀನ ಎಂದು ಅರ್ಥವಲ್ಲ. ಸತ್ವಶಾಲಿಯಾದ ಲೇಖಕ ಬಳಕೆಯ ಭಾಷೆಯಲ್ಲಿಯೂ ಅರ್ಥವ್ಯಂಜನೆಯ ಹೊಸ ಲೋಕವನ್ನೇ ನಿರ್ಮಿಸಬಲ್ಲ.

ಕಥೆ, ಪಾತ್ರಪೋಷಣೆ, ಸನ್ನಿವೇಶಗಳ ಚಿತ್ರಣ ಎಲ್ಲದರಲ್ಲಿಯೂ ಇದೇ ಬಗೆಯ ಪೂರ್ವಸಿದ್ಧತೆಯ ಏಕನಾದ ಎದ್ದು ಕಾಣುತ್ತದೆ. ಒಂದು ಕಾದಂಬರಿಗೆ, ಒಂದು ಕಥೆಗೆ ನಿಗದಿಯಾದ ಒಂದು ಸೂತ್ರವಿದೆ. ನಮ್ಮ ಬಹುಪಾಲು ಕೃತಿಗಳು ಈ ಸೂತ್ರದಿಂದ ಬಂಧಿತವಾದವು. ಆದ್ದರಿಂದಲೇ ವಿನೂತನವಾದ ಒಂದು ವಸ್ತು ಪರಿಣಾಮಕಾರಿಯಾದ ಒಂದು ಪಾತ್ರ ನಮಗೆ ಹುಡುಕಿದರೂ ಸಿಕ್ಕುವುದಿಲ್ಲ. ಲೇಖಕ ಕೃತಿ ನಿರ್ಮಾಣದಲ್ಲಿ ಆತ್ಮೀಯತೆಯನ್ನೂ, ನಿಷ್ಠತೆಯನ್ನೂ ಎಲ್ಲಿಯ ತನಕ ತೋರುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಯಶಸ್ಸು ದೊರೆಯದು. ವೈಯಕ್ತಿಕತೆಯನ್ನು ಮೆರೆಯಲು ನಮ್ಮ ಕಾದಂಬರಿಕಾರರು, ಕಥೆಗಾರರು ಶ್ರಮಿಸಬೇಕು. ಆದರೆ ವಿಕಾರ, ವಿಕೃತಿಗಳಿಂದ ಮಾತ್ರ ಅದು ಲಭ್ಯವಾಗುತ್ತದೆಂದು ಅವರು ಮೋಸ ಹೋಗಬಾರದು.

ಮಾನವನ ಮನಸ್ಸಿನ ಆಳ ಅಗಲಗಳನ್ನೂ, ಬದುಕಿನ ವೈವಿಧ್ಯ ವಿಸ್ತಾರಗಳನ್ನೂ ಸವಿವರವಾಗಿ ಚಿತ್ರಿಸಬಲ್ಲ ಲೇಖಕರಾಗಲಿ, ಸಮಕಾಲೀನ ಜೀವನದ ಅಸಂಖ್ಯಾತ ಸಮಸ್ಯೆಗಳನ್ನು ವಿಶ್ಲೇಷಕ ದೃಷ್ಟಿಯಿಂದ ನೋಡಬಲ್ಲ ಕಲಾವಿದರಾಗಲಿ ಈ ಅವಧಿಯಲ್ಲಿ ಕೃತಿರಚನೆ ಮಾಡಿಲ್ಲ. ಈ ಗುರಿಯತ್ತ ದೃಷ್ಟಿಯಿಟ್ಟುಕೊಂಡ ಮೂರು ನಾಲ್ಕು ಕೃತಿಗಳನ್ನಷ್ಟೇ ನಾವು ಹೆಸರಿಸಬಹುದಾಗಿದೆ. ಬಹುಪಾಲು ಲೇಖಕರು ಜನಪ್ರಿಯತೆಯ ಮತ್ತಿನಲ್ಲಿ, ಮಾರುಕಟ್ಟೆಯ ಆಕರ್ಷಣೆಯಲ್ಲಿ ಅಗ್ಗದ ಕೃತಿಗಳನ್ನು ರಚಿಸಿ ತೃಪ್ತಿಪಡುತ್ತಿದ್ದಾರೆ; ಹೊಸತನವನ್ನು ತರಬೇಕು ಎಂಬ ಹುಚ್ಚು ಹಂಬಲದಲ್ಲಿ ಬಗೆ ಬಗೆಯ ಲಾಗ ಹಾಕುತ್ತಿದ್ದಾರೆ.

ಈ ಸಮೀಕ್ಷೆಯಲ್ಲಿ ಉಲ್ಲೇಖಿತರಾಗುವ ಹಲವು ಜನ ಲೇಖಕರು ಕಥೆ ಕಾದಂಬರಿಗಳ ಹೆಸರಿನಲ್ಲಿ ನಾಯಿಕೊಡೆಗಳಂತೆ ಪುಸ್ತಕಗಳನ್ನು ಪ್ರಕಟಿಸುತ್ತಿರುವುದನ್ನು ಈ ಲೇಖಕ ಬಲ್ಲ. ಹೇಸಿಗೆ ತರುವ ಹಾಸಿಗೆ ಪೂಜೆ, ಮಂಚದ ಮಹಿಮೆಗಳ ಈ "ಲಂಗ ಸೀರೆ ಸಾಹಿತ್ಯ"ವನ್ನು ಮನಶ್ಶಾಸ್ತ್ರದ ಗೋಷ್ಠಿಯಲ್ಲಿ ಪರಿಶೀಲಿಸಬೇಕೆ ವಿನಾ ಸಾಹಿತ್ಯ ಸಮ್ಮೇಳನದಲ್ಲಿ ಪ್ರಸ್ತಾಪಿಸಬಾರದು.

ಒಟ್ಟಿನಲ್ಲಿ ಈ ಎರಡು ವರ್ಷಗಳ ಕಥನ ಸಾಹಿತ್ಯದ

1 ಗೋಪಾಲಕೃಷ್ಣ ಅಡಿಗ : ಭಾವತರಂಗ (ಮುನ್ನುಡಿಯಲ್ಲಿ ಬೇಂದ್ರೆ) ಪು. iii.

ಅವಲೋಕನದಿಂದ ಉತ್ಸಾಹಕಾರಿಯೂ, ಪರಿಣಾಮಕಾರಿಯೂ ಆದ ಸಾಧನೆ ತೀರ ಸ್ವಲ್ಪ ಎಂದು ಗೊತ್ತಾಗುತ್ತದೆ. ಇದಕ್ಕೂ ಸಿದ್ಧ ಪ್ರಸಿದ್ಧರಾದ ಹಳೆಯ ಲೇಖಕರ ಕಾಣಿಕೆ ಏನೂ ಇಲ್ಲ. ಹೊಸ ಪೀಳಿಗೆಯ ಕೆಲವರೇ ಆಸೆಯನ್ನೂ ಭರವಸೆಯನ್ನೂ ಮೂಡಿಸಿದ್ದಾರೆ. ಜೀನ್ ಪಾಲ್ ಸಾರ್ತ್ರ್ ಎಂಬ ಲೇಖಕ ತನ್ನ ಆತ್ಮಕಥೆಯಲ್ಲಿ ಒಂದು ಕಡೆ ಹೀಗೆ ಹೇಳಿಕೊಂಡಿದ್ದಾನೆ: "ಲೇಖಕ ತನ್ನ ನೆರೆಯವರಿಗಾಗಿ ಇಲ್ಲವೆ ದೇವರಿಗಾಗಿ ಬರೆಯುತ್ತಾನೆ. ನನ್ನ ನೆರೆಯವರನ್ನು ಉಳಿಸುವ ದೃಷ್ಟಿಯಿಂದ ನಾನು ದೇವರಿಗಾಗಿ ಬರೆಯಲು ನಿಶ್ಚಯಿಸಿದೆ. ನನಗೆ ಬೇಕಾದದ್ದು- ಕೃತಜ್ಞತೆ; ಓದುಗರಲ್ಲ."[1] ದುರ್ದೈವದಿಂದ ನಮ್ಮ ಲೇಖಕರು ನೆರೆಯವರ ಬಗೆಗೆ ಕರುಣೆಯಿಲ್ಲದೆ ಬರೆಯುತ್ತಾರೆ; ಅವರಿಗೆ ಬೇಕಾದದ್ದು ಕೊಳ್ಳಲೋಸುಗ ಓದುಗರು; ಕೃತಜ್ಞತೆಯಲ್ಲ!*

Sartre, Jean-Paul: *The Words* p. 112.

* ಈ ಪ್ರಬಂಧವನ್ನು ಸಿದ್ಧಗೊಳಿಸ-ವಾಗ ನನಗೆ ಬೇಕಾದ ಪುಸ್ತಕಗಳನ್ನು ದೊರಕಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದ ಅಧಿಕಾರಿಗಳಿಗೂ, ಉಷಾ ಪ್ರೆಸ್‌ನ ಶ್ರೀ ಹಬ್ಬು ಗೀತಾ ಬುಕ್ ಹೌಸನ ಶ್ರೀ ಸತ್ಯನಾರಾಯಣ ರಾವ್ ಬಂಧುಗಳು ಹಾಗೂ ಡಿ ವಿ ಕೆ. ಮೂರ್ತಿ–ಈ ಮಿತ್ರರುಗಳಿಗೂ, ಕೆಲವು ಕಥಾ ಸಂಕಲನಗಳನ್ನು ನನ್ನ ಗಮನಕ್ಕೆ ತಂದ ಶ್ರೀ ಡಿ. ಲಿಂಗಣ್ಣಯ್ಯನವರಿಗೂ ನಾನು ಕೃತಜ್ಞನಾಗಿದ್ದೇನೆ.

ದರ್ಪಣಾವಲೋಕನ – ಒಂದು ಪ್ರತಿ ವಿಮರ್ಶೆ

(ಒನೆಯ ಪುಟದಿಂದ)

ಸಲಹೆಯಾಗಿದೆ; 'ಪರಸ್ಪರ ಸನ್ನಿಕರ್ಷಃ ಸಂಹಿತಾ' (ಕರ್ನಾಟಕ ಭಾಷಾಭೂಷಣ ಸೂತ್ರ ೧೭) ಎಂಬುದನ್ನು ತೋರಿಸಿ ಆ ಸೂತ್ರದ ವೃತ್ತಿಯಲ್ಲಿರುವ 'ಪರಸ್ಪರಮನ್ಯೋನ್ಯಂ' ಎಂಬುದನ್ನು ಅನುವಾದಿಸಬಹುದಿತ್ತು B ಯವರು. ಹಾಗೆಯೇ ಭಟ್ಟಾಕಳಂಕನ ಶಬ್ದಾನುಶಾಸನದ ೩೪ನೆಯ ಸೂತ್ರದ ವೃತ್ತಿಯಲ್ಲಿರುವ 'ಪರಃ ಸನ್ನಿಕರ್ಷಃ ಸನ್ಧಿಃ' ಎಂಬುದನ್ನೂ, 'ಪರಃ ಇತಿ ಉತ್ಕೃಷ್ಟ ಇತ್ಯರ್ಥಃ, ಉತ್ಕರ್ಷಶ್ಚ ಅತ್ರ ಪೂರ್ವೋತ್ತರ ವರ್ಣಾನಾಂ ಅವಿರಾಮೇಣ ಉಚ್ಚಾರಣ ಲಕ್ಷಣಃ' ಎಂಬ ವಾಕ್ಯವನ್ನೂ ಸಮರ್ಥನೆಗಾಗಿ ಅವರು ಆಶ್ರಯಿಸಬಹುದಾಗಿತ್ತು. ಈ ಕಾರಣಗಳಿಂದ ವೃತ್ತಿಯಲ್ಲಿ 'ಅನ್ಯೋನ್ಯವಾಗಿ' ಎಂಬ ಪದವನ್ನು ಸೇರಿಸಿಕೊಳ್ಳಬಹುದೆಂದು ನಮಗೆ ತೋರುತ್ತದೆ. ಸೂತ್ರದಲ್ಲಿರುವ ಶಬ್ದಗಳಿಗೆಲ್ಲ ವೃತ್ತಿಯಲ್ಲಿ ಅರ್ಥವನ್ನು ಹೇಳಬೇಕೆಂಬುದು ಕೇಶಿರಾಜನ ಸಂಕಲ್ಪವಲ್ಲದಿರುವುದರಿಂದ (ಉದಾ: ಸೂತ್ರ ೬೦ರಲ್ಲಿರುವ 'ವಿದಗ್ಧರಿಂ' ಎಂಬ ಶಬ್ದದ ಅರ್ಥ ಅದರ ವೃತ್ತಿಯಲ್ಲಿಲ್ಲ) 'ಅನ್ಯೋನ್ಯವಾಗಿ' ಎಂಬುದನ್ನು ಬಿಟ್ಟರೂ ಬಿಡಬಹುದು.

೫. ವೃತ್ತಿ, ಸೂತ್ರ ೬೨:

B. ವೃತ್ತಿಭಾಗವಾದ 'ಸಂಸ್ಕೃತದ ಕನ್ನಡದ ವಿಭಕ್ತಿ ಸ್ವರಕ್ಕಂ' ಎಂಬ ವಾಕ್ಯಭಾಗ 'ಸಂಸ್ಕೃತದ ಕನ್ನಡದ ಪ್ರಕೃತಿಗಳ ವಿಭಕ್ತಿಗಳ ಸ್ವರಕ್ಕಂ' ಎಂದಿರಬೇಕು. ಇದಕ್ಕೆ ಆಧಾರ ಮದರಾಸು ಪ್ರತಿಯಲ್ಲಿರುವ ವೃತ್ತಿ.

(ಕಿ. ಪ. ಕ. ಖ.) ಎಂಬ ಪ್ರತಿಗಳಲ್ಲಿಲ್ಲದಿರುವ 'ಪ್ರಕೃತಿಗಳ' ಎಂಬ ಶಬ್ದವನ್ನು 'ಲಿಂಗಣಾರಾಧ್ಯ ರಚಿತವಾದ ವೃತ್ತಿಯಲ್ಲಿ ಇದೆ' ಎಂಬ ಕಾರಣದಿಂದಲೇ ಪರಿಗ್ರಹಿಸಬೇಕೆಂದು ನಮಗೆ ತೋರುವುದಿಲ್ಲ. ಲಿಂಗಣಾರಾಧ್ಯನು ಆ ಶಬ್ದವನ್ನು ಕೇಶಿರಾಜನ ವೃತ್ತಿಯೊಳಕ್ಕೆ ತನ್ನದೂ ಸ್ವಲ್ಪ ಇರಲೆಂದು ಸೇರಿಸಿರಬಹುದು. ಒಂದು ವೇಳೆ ಅದಿಲ್ಲದಿದ್ದರೂ ಅರ್ಥಮಾಡಿಕೊಳ್ಳಬಹು. 'ಸಂಸ್ಕೃತದ ಕನ್ನಡದ' ಎಂದರೆ ಸಂಸ್ಕೃತ ಶಬ್ದದ ಕನ್ನಡ ಶಬ್ದದ ಎಂದು ತಿಳಿಯುವುದು ಸುಲಭ; ಹಾಗೆಯೇ 'ಸಹಜ ಸ್ವರಕ್ಕಂ' ಎಂದರೆ ಸಂಸ್ಕೃತ ಪ್ರಕೃತಿಯ, ಕನ್ನಡ ಪ್ರಕೃತಿಯ ಸ್ವರಕ್ಕಂ ಎಂದು ಅರಿವಾಗುತ್ತದೆ. ಆದ್ದರಿಂದ B ಅವರ ಸೂಚನೆ ನಮಗೆ ಸಮ್ಮತವಿಲ್ಲ.

೬. ವೃತ್ತಿ, ಸೂತ್ರ ೬೭:

B. 'ಖೇದದೊಳಮಂತೆ ಸಂಧಿಯಿಲ್ಲ' ಎಂಬ ವಾಕ್ಯ ದ್ವಿರುಕ್ತಿ ದೋಷಕ್ಕೆ ಎಡೆಗೊಡುತ್ತದೆ.

ಇದು ದಿಟ. 'ಆಕಾರಕ್ಕಂ ಖೇದಕ್ಕಂ ಸ್ವರಂ ಪರಮಾಗೆ ಸಂಧಿಯಿಲ್ಲ' ಎಂಬ ವೃತ್ತಿವಾಕ್ಯದಲ್ಲಿ ಖೇದಕ್ಕಂ ಎಂಬ ಶಬ್ದವನ್ನು ಬಿಟ್ಟರೆ ಸರಿಹೋಗುತ್ತದೆ.

೭. ವೃತ್ತಿ, ಸೂತ್ರ ೭೦ :

B. ವೃತ್ತಿಯಲ್ಲಿ 'ಗದ್ಯಪದ್ಯ ಕಾವ್ಯದೊಳ್' ಎಂದಿದೆ. ಇದು ಸಲ್ಲದು. 'ಗದ್ಯ ಕಾವ್ಯದೊಳ್' ಎಂದು ಮಾತ್ರ ಇರಬೇಕು, ಸೂತ್ರದಲ್ಲಿರುವಂತೆ.

ಈ ಸೂತ್ರಕ್ಕೆ ವೃತ್ತಿ (ಕಿ) ಪ್ರತಿಯಲ್ಲಿಲ್ಲ; (ಪ) ಪ್ರತಿಯಲ್ಲೂ ಇಲ್ಲ; ಅದರ ಸಂಪಾದಕರು ಸ್ವಂತವಾಗಿ ಒಂದು ವೃತ್ತಿಯನ್ನು ಬರೆದು ಸೇರಿಸಿದ್ದಾರೆ. (ಖ) ದಲ್ಲಿ ಬೇರೊಂದು ವೃತ್ತಿ ಇದೆ, (ಪುಟ ೬೭, ಅಡಿ ಟಿಪ್ಪಣಿ). ಆದುದರಿಂದ A ಅವರು ಕೊಟ್ಟಿರುವ ವೃತ್ತಿ (ಕ) ಪ್ರತಿಯದಿರಬೇಕು. ಅಲ್ಲದೆ A ಅವರು ಹಳೆಯ ವೃತ್ತಿಯೊಂದು ಈ ಸೂತ್ರಕ್ಕೆ ಸಿಕ್ಕಿತಲ್ಲಾ ಎಂದು ಅದನ್ನು ಕೊಟ್ಟಿರಬೇಕು. ಆದರೆ ಅದರಲ್ಲಿ ಲಿಪಿಕಾರ ಸ್ಖಾಲಿತ್ಯಗಳೂ ಇರಬಹುದು. ಏನೇ ಇರಲಿ ಇಲ್ಲಿ 'ಪದ್ಯ' ಎಂಬ ಶಬ್ದವನ್ನು ಬಿಟ್ಟರೆ ಸರಿಯಾಗುತ್ತದೆ.

೮. ವೃತ್ತಿ, ಸೂತ್ರ ೭೪ :

B. "ಕಿಱಿದೆಡೆಯುಂ ನಿರೂಪಿಸುವ ನಿಪಾತದರ್ಥದರೆಯೆಂಬ ಶಬ್ದವೊಂದು ವಸ್ತುವಿನ ಭಾಗಮುಂ ಪೇೞ್ವಲ್ಲಿ." ಎಂಬ ವೃತ್ತಿವಾಕ್ಯದ 'ವಸ್ತುವಿನ ಭಾಗಮುಂ' ಎಂಬುದಕ್ಕೆ ಪ್ರತಿಯಾಗಿ 'ವಸ್ತುವಿನ ಸಮಭಾಗಮುಂ' ಎಂದಿರಬೇಕು. ಇಲ್ಲದಿದ್ದರೆ ನಿಪಾತದ 'ಅರೆ' (ವಸ್ತುವಿನ ಭಾಗ) ಎಂಬ ಅರ್ಥವನ್ನೇ ಮತ್ತೊಮ್ಮೆ ಹೇಳಿದಂತಾಗುತ್ತದೆ. ಈ ಸೂಚನೆಗೆ (ಪ) ಪ್ರತಿ ಆಧಾರವಾಗಿದೆ.

(ಪ) ಪ್ರತಿಯಲ್ಲಿರುವ 'ಸಮ' ಎಂಬುದನ್ನು ಸ್ವೀಕರಿಸಬೇಕಾದ ಅವಶ್ಯಕತೆ ನಮಗೆ ತೋರುವುದಿಲ್ಲ. ಅರೆ ಎಂಬುದಕ್ಕೆ ಅರ್ಧ ಎಂಬರ್ಥವಿದ್ದರೂ ಭಾಗ ಎಂಬರ್ಥವೂ ಇಲ್ಲದಿಲ್ಲ. ಅರೆಬರ್ ಎಂಬುದು ಅರ್ಧ ಜನರು ಎಂಬರ್ಥವನ್ನು ತಾಳದೆ ಕೆಲವರು ಎಂಬರ್ಥವನ್ನು ಹೊಂದಿರುವುದು ಇದಕ್ಕೆ ನಿದರ್ಶನ. ನಿಪಾತದ 'ಅರೆ' ಗೆ 'ಕಿಱಿದೆಡೆ' ಎಂಬರ್ಥವೇ ಹೊರತು B ಅವರು ಹೇಳಿರುವಂತೆ 'ಅರೆ' (ವಸ್ತುವಿನ ಭಾಗ) ಎಂಬರ್ಥವೆಲ್ಲಿದೆಯೋ ತಿಳಿಯದಾಗಿದೆ.

೯. ವೃತಿ, ಸೂತ್ರ ೭೭ :

B. 'ಜಕಾರಕ್ಕಾದೇಶಮಾದ' ಎಂಬುದು 'ಜಕಾರಕ್ಕಮಾದೇಶಮಾದ' ಎಂದು ಸಮುಚ್ಚಯಾತ್ಮಕವಾಗಿರಬೇಕು.

ಬೇಕಾದರೆ ಇಲ್ಲಿ ಸಮುಚ್ಚಯವನ್ನು ಸೇರಿಸಬಹುದು. ಇಲ್ಲವಾದರೆ ಅರ್ಥೈಸುವಾಗ ಅದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಇದಕ್ಕೆ ಮಾದರಿಗಾಗಿ ಸೂತ್ರ ೧೫೬ ನೋಡಿ. ಇಲ್ಲವೇ (ಪ) ಪ್ರತಿಯಲ್ಲಿರುವ ಆ ಸಮುಚ್ಚಯವನ್ನು ಯಾರೋ ಸೇರಿಸಿರಬಹುದು' ಅದೂ ಸಾಧ್ಯವಿದೆ.

೧೦. ವೃತ್ತಿ, ಸೂತ್ರ ೮೪ :

B. 'ಕ್ರಿಯಾತ್ಮಕಂಗಳಪ್ಪ ಸಂಸ್ಕೃತದ ಭಾವವಚನಗಳನಾ . . .' ಎಂಬುದಕ್ಕೆ ಬದಲಾಗಿ 'ಕನ್ನಡಕ್ಕೆ ಕ್ರಿಯಾತ್ಮಕಂಗಳಪ್ಪ . . .' ಎಂದಿರಬೇಕು. ಕಾರಣ (ಪ)ದಲ್ಲಿ ಈ ಪಾಠವಿದೆ, (ಕ್ರಿ)ದಲ್ಲಿಯೂ ಇದೆ.

ಇಲ್ಲಿ ಸಂಸ್ಕೃತದ ಭಾವವಚನಂಗಳು ಸಂಸ್ಕೃತಕ್ಕೆ ಕ್ರಿಯಾತ್ಮಕಂಗಳೋ ಕನ್ನಡಕ್ಕೆ ಕ್ರಿಯಾತ್ಮಕಂಗಳೋ ಎಂಬುದನ್ನು B ಅವರು ಮೊದಲು ನಿರ್ಧರಿಸಬೇಕು. 'ಕನ್ನಡಕ್ಕೆ' ಎಂದು ಹೇಳುವುದಕ್ಕೆ ಸೂತ್ರದಲ್ಲಿ ಯಾವ ಆಧಾರವೂ ಇಲ್ಲ. ಸಂಸ್ಕೃತದ ಭಾವವಚನಗಳ ವಿಷಯ ಇಲ್ಲಿ ಹೇಳಿರುವುದರಿಂದ ಅವು ಕ್ರಿಯಾತ್ಮಕಂಗಳಾಗಿರುವುದು ಸಂಸ್ಕೃತಕ್ಕೆ ಎಂದು ನಮಗೆ ತೋರುತ್ತದೆ. ಈ ವಿಷಯದ ಚರ್ಚೆಗೆ ಇದು ಎಡೆಯಲ್ಲ. ಸಂಸ್ಕೃತದ ಕ್ರಿಯಾಧಾತುಗಳಿಗೆ ಸೇರುವ ಲ್ಯುಟ್ಪ್ರತ್ಯಯಗಳಿಂದ ಬರುವ ಭಾವನಾಮಗಳು (ಕೃದಂತ) ತಮ್ಮ ಕ್ರಿಯಾರ್ಥತ್ವವನ್ನು ಪೂರ್ಣವಾಗಿ ಕಳೆದುಕೊಂಡಿರುವುದಿಲ್ಲವಾದ್ದರಿಂದ ಅವು ಸಂಸ್ಕೃತಕ್ಕೆ ಕ್ರಿಯಾತ್ಮಕಂಗಳು. 'ಕನ್ನಡಕ್ಕೆ' ಎಂಬುದನ್ನು ಪಾಠಾಂತರವಾಗಿ ಬೇಕಾದರೆ ಕಾಣಿಸಬಹುದು,ಅದು ಸರಿಯಾದ ಕ್ರಮ.

೧೧. ವೃತ್ತಿ, ಸೂತ್ರ ೧೨೩ :

B. 'ಅಕಾರಾಂತ ನಪುಂಸಕ ಲಿಂಗಕ್ಕೆ ವಿಕಲ್ಪದಿಂ ದ್ವಿರ್ಭಾವಮುಕ್ಕುಂ' ಎನ್ನುವುದಕ್ಕೆ ಬದಲಾಗಿ 'ಅಕಾರಾಂತ ನಪುಂಸಕ ಲಿಂಗದೊಳ್ ಪರಮಾದ ಚತುರ್ಥಿಗೆ ವಿಕಲ್ಪದಿಂ ದ್ವಿತ್ವಮುಕ್ಕುಂ' ಎಂಬ (ಕಿ. ಪ.)ಗಳ ಪಾಠವಿರಬೇಕು.

ಇಲ್ಲಿ ವೃತ್ತಿಯ ಮೊದಲ ವಾಕ್ಯ 'ಅಕಾರಾಂತ ಪುಲ್ಲಿಂಗಕ್ಕೆ ಪರಮಾದ ಚತುರ್ಥಿಗೆ ಬಿಂದುವೆರಸು . . .' ಎಂಬುದರಲ್ಲಿರುವ 'ಪರಮಾದ ಚತುರ್ಥಿಗೆ' ಎಂಬ ಶಬ್ದಗಳನ್ನು ಎರಡನೆಯ ವಾಕ್ಯದಲ್ಲಿ ಅನುವರ್ತಿಸಿಕೊಳ್ಳಬೇಕು. ಆಗ 'ಅಕಾರಾಂತ ನಪುಂಸಕ ಲಿಂಗಕ್ಕೆ ಪರಮಾದ ಚತುರ್ಥಿಗೆ' ಎಂಬುದಾಗಿ ಅರ್ಥವಾಗುತ್ತದೆ.

೧೨. ವೃತ್ತಿ, ಸೂತ್ರ ೧೧೦ :

A

ಅನಿತಿನಿತೆನಿತೆಂದು ಪವಣಂ ಪೇೞ್ವ
ಶಬ್ದಂಗಳ್ ನಿರ್ವಿಶೇಷ ಶಬ್ದಂಗಳ್ :
ವಿಶೇಷದಿಂ ಸಂಖ್ಯೆಯನುಸಿರ್ವ ಎಲ್ಲವು . . .

ಕಿ. ಪ.

ಅನಿತು ಇನಿತು ಎನಿತು ಎಂಬ
ಪವಣಂ ಪೇೞ್ವ, **ನಿರ್ವಿಶೇಷದಿಂ**
ಸಂಖ್ಯೆಯಂ ಪೇೞ್ವ ಎಲ್ಲವು . . .

B. ಈ ವೃತ್ತಿಗಳಲ್ಲಿ ನಿರ್ವಿಶೇಷ, ವಿಶೇಷ ಎಂಬ ಪದಗಳ ಬಳಕೆಯಲ್ಲಿ ಗದ್ದಲವಿದೆ; ಇವುಗಳಲ್ಲಿ ಪವಣ್‌ಗೆ ಯಾವುದು ? ಸಂಖ್ಯೆಗೆ ಯಾವುದು ?

Bಯವರ ಪ್ರಶ್ನೆ ಸಾಧುವಾಗಿದೆ. ಆದರೆ ಇದರ ವಿಷಯ ನಿರ್ಣಯಕ್ಕೆ ಬೇರೆ ಹಸ್ತಪ್ರತಿಗಳಲ್ಲಿರುವ ಈ ವೃತ್ತಿಪಾಠವನ್ನು ಪರಿಶೀಲಿಸಬೇಕು.

೧೩. ವೃತ್ತಿ,ಸೂತ್ರ ೧೧೩ :

B. 'ಆ ಬಿಂದು ಅಕಾರಾಂತ ನಪುಂಸಕ ಲಿಂಗದೊಳ್ ಬರೆವಿಕಲ್ಪಂ' ಇದಕ್ಕೆ ಬದಲಾಗಿ 'ಅಕಾರಾಂತ ನಪುಂಸಕ ಲಿಂಗದೊಳ್ ಗಳ್ ಬರೆ ಆ ಬಿಂದು ವಿಕಲ್ಪಂ' ಎಂದಿರಬೇಕು. ; ಕಾರಣ ಅದು (ಕಿ. ಪ.) ಗಳ ಪಾಠವಾಗಿರುವುದು.

Aಅವರು ಕೊಟ್ಟಿರುವ ಪಾಠ (ಕ. ಖ.)ಪ್ರತಿಗಳ ಪಾಠವೆಂದು ತೋರುತ್ತದೆ. ಹಾಗಿದ್ದಲ್ಲಿ ಅಲ್ಲೇ 'ಗಳ್' ಎಂಬುದು ಬಿಟ್ಟುಹೋಗಿರಬಹುದು. ಆದುದರಿಂದ ಇದರಲ್ಲಿ 'ಬರೆ' ಎಂಬುದರ ಹಿಂದೆ 'ಗಳ್' ಸೇರಿಸಿ 'ಗಳ್ ಬರೆ' ಎಂದೋದಿಕೊಂಡರೆ ಸಾಕು.

೧೪. ವೃತ್ತಿ, ಸೂತ್ರ ೧೨೯ :

B. 'ಉಕಾರಾಂತಂಗಳ್ಗಲ್ಲಿ ಮತ್ವಮಕ್ಕುಂ' ಎಂಬುದು 'ಉಕಾರಾಂತ ದಿಗ್ವಾಚಕಂಗಳ್ಗೊತ್ವಮಕ್ಕುಂ' ಎಂದಿರಬೇಕು. ಕಾರಣ ಅರ್ಥಸ್ಪಷ್ಟತೆ ಮತ್ತು (ಕಿ. ಪ.) ಗಳ ಪಾಠವಾಗಿರುವುದು.

ಪ್ರಕರಣವನ್ನು ನೋಡಿ ಅರ್ಥವನ್ನು ಗ್ರಹಿಸಬೇಕು. ವೃತ್ತಿಯ ಹಿಂದಿನ ವಾಕ್ಯದಲ್ಲಿ 'ದಿಗ್ವಾಚಿಯಪ್ಪ' ಎಂಬ ಶಬ್ದವಿದೆ. ಅದನ್ನು ಮುಂದಿನ ವಾಕ್ಯದ ಆದಿಗೆ ಅನುವರ್ತಿಸಿದರೆ ಸಾಕು. ಅದನ್ನು ಬಿಟ್ಟು 'ಎಲ್ಲ ಉಕಾರಾಂತಗಳಿಗೂ ಎತ್ವವಾಗುತ್ತದೆ' ಎಂದು ಅರ್ಥ ಮಾಡಿದರೆ ಅದು ಸರಿಯಾಗುವುದಿಲ್ಲ.

೧೫. ವೃತ್ತಿ, ಸೂತ್ರ ೧೩೪ :

B. 'ಸ್ವರಾಂತ ವ್ಯಂಜನಾಂತ ಲಿಂಗಗಳ' ಎಂಬ A ಅವರ ಪಾಠಕ್ಕೆ (ಕಿ. ಪ.) ಪ್ರತಿಗಳಲ್ಲಿರುವ 'ಸ್ವರಾಂತಗಳ' ಎಂಬ ಪಾಠವಿರಬೇಕು.

ಇದು ಸರಿ, ಆಗಬಹುದು. Bಯವರ ಸಲಹೆಯನ್ನು ಸ್ವೀಕರಿಸಬಹುದು.

೧೬. ವೃತ್ತಿ, ಸೂತ್ರ ೧೩೫ :

B. 'ಸ್ತ್ರೀಪುನ್ನಪುಂಸಕಮೆನ್ನದೆ' ಎಂಬ A ಅವರ ಸಂಕ್ಷಿಪ್ತ ಪಾಠಕ್ಕಿಂತ (ಕಿ. ಪ.) 'ಲಿಂಗತ್ರಯಮೆನ್ನದೆ ವಚನತ್ರಯಮೆನ್ನದೆ ಸ್ವರಾಂತ ವ್ಯಂಜನಾಂತಗಳೆನ್ನದೆ' ಎಂಬ ವಿಸ್ತೃತಪಾಠ ಗ್ರಾಹ್ಯ.

ಇದಕ್ಕೆ ಅಡ್ಡಿಯೇನೂ ತೋರುವುದಿಲ್ಲವಾದರೂ,(ಕಿ. ಖ.) ಪ್ರತಿಗಳಲ್ಲಿ ಇವು ಬಿಟ್ಟುಹೋಗಿರಬಹುದೆಂದು ತೋರುತ್ತದೆ.

೧೭. ವೃತ್ತಿ, ಸೂತ್ರ ೧೪೪ :

A

ನಿರ್ಧಾರಣಮುಣಮೆಂಬುದು ಗುಣದಿಂ ಮೇಣ್
ಕ್ರಿಯೆಯಿಂ ಮೇಣ್ ಜಾತಿಯತ್ತಣಿಂ
ವಸ್ತುವಂ ಬೇರ್ಕೆಯ್ವುದು

ಕಿ. ಪ.

ನಿರ್ಧಾರಣಮೆಂಬುದು ಗುಣನೆಂಬ
ಕ್ರಿಯೆಯೆಂಬ ಎರಡಱಿಂ ಜಾತಿಯತ್ತ
ಣಿಂ ವಸ್ತುವಂ ಬೇರ್ಕೆಯ್ವುದು

B. ಗುಣ, ಕ್ರಿಯೆ, ಜಾತಿಗಳ ಅವಲಂಬನದಿಂದ ವಸ್ತುವನ್ನು ಬೇರ್ಪಡಿಸುವುದೋ? ಗುಣಕ್ರಿಯೆ ಎಂಬೆರಡರ ಅವಲಂಬನದಿಂದ ಮಾತ್ರ ವಸ್ತುವನ್ನು ಪ್ರತ್ಯೇಕಿಸುವುದೋ ?

ಇದಕ್ಕೆ ಭಟ್ಟಾಕಳಂಕನ ಶಬ್ದಾನುಶಾಸನದ 'ಯತೋ ನಿರ್ಧಾರಣಂ' (ಸೂತ್ರ ೨೨೩) ಎಂಬುದನ್ನೂ ಅದರ ವೃತ್ತಿ ಪ್ರಯೋಗಗಳನ್ನೂ ನೋಡಬಹುದು. ದ್ರವ್ಯದ ಅವಲಂಬನವೂ ಕೆಲವು ವೇಳೆ ಉಂಟು.

೧೮. ವೃತ್ತಿ ಸೂತ್ರ ೧೫೧

A

ವಿಶೇಷಣ ಪದಂಗಳ್ ಪ್ರಥಮಾ ವಿಭಕ್ತಿ
ಯಂ ಪಡೆದು ವಾಕ್ಯದ ಮೊದಲೊಳಿರ್ದುಂ
ತುದಿಯ ಕಾರಕ ಪದದ ವಿಭಕ್ತಿಯೆನೆ
ಕೈಕೊಳ್ವುವನ್ವಯಿಸುವಲ್ಲಿ

ಕಿ. ಪ.

ವಿಶೇಷಣ ಪದಂಗಳ್ ಪ್ರಥಮಾ
ವಿಭಕ್ತಿಯಂ ಪಡೆದು ವಾಕ್ಯದ
ಮೊದಲೊಳಿರ್ದು ಅನ್ವಯಿಸುವಲ್ಲಿ
ತುದಿಯಕಾರಕ ಪದದ ವಿಭಕ್ತಿಯಂ ತಳೆವುದು

B. A ಅವರ ವೃತ್ತಿಯಲ್ಲಿ ಮೂರು ದೋಷಗಳಿವೆ : ೧. 'ಅನ್ವಯಿಸುವಲ್ಲಿ' ಎಂಬುದು ಕೊನೆಗೆ ಬಂದುದು ಪ್ರಾಚೀನ ಕನ್ನಡದ ವಾಕ್ಯರಚನಾಕ್ರಮಕ್ಕೆ ವಿರೋಧ. ೨. 'ಮೊದಲೊಳಿರ್ದುಂ' ಎಂಬಲ್ಲಿಯ 'ಉಂ' ಅನಾವಶ್ಯ. ೩. 'ವಿಭಕ್ತಿಯೆನೆ' ಎಂಬುದು ಅಚ್ಚಿನ ತಪ್ಪು.

Bಯವರ ಈ ಆಕ್ಷೇಪಣೆಗೆ ಆಧಾರಗಳನ್ನಿತ್ತು ಸಮಾಧಾನ ಕೊಡಬಹುದು : ೧. ಪದ್ಯವನ್ನು ಬಿಟ್ಟು ಪ್ರಾಚೀನ ಕನ್ನಡ ಗದ್ಯದ ವಾಕ್ಯರಚನಾ ಕ್ರಮವಿಶೇಷವನ್ನು ಈ ಕೆಳಗಿನ ವಾಕ್ಯಗಳಲ್ಲಿ ನೋಡಬಹುದು. ಇವನ್ನು A ಅವರೇ ಸಂಪಾದಕರಾದ ವಡ್ಡಾರಾಧನೆಯಿಂದ ಆರಿಸಲಾಗಿದೆ.

(i) ಕುಮಾರನಿಂತೆಂದು ಬಗೆದನೊರ್ವಳಿ ಇರ್ದ ಸ್ತ್ರೀಯಪಕ್ಕದೆ ಸತ್ಪುರುಷಂಗಿರಲ್ ತಕ್ಕುದಲ್ (ವಡ್ಡಾರಾಧನೆ, ಪು. ೬೦)

(ii) ತಾನುಂ ಪಟ್ಟೆರಲೆಂದು ಬಗೆದು ತಲೆಯೆತ್ತಿ ಡಲ್ಕಂಜಿಸಿಯೇನುಮಂಕಾಣದೆವರ್ಪೊನೆಣ್ಬರಿಂದಂ ತಳರ್ಚಲಾಱವಂತಪ್ಪ ಪಿರಿದೊಂದು ನಿಲೆಯಂ (ಪು. ೭೬)

(iii) ಸಾಸಿರ ದೀನಾರದ ಪೊಟ್ಟಳಿಗೆಯಂ ಕಳ್ವಾತ ನಿಂತೆಂದಂ ಮದೆವಳ್ ತೊಟ್ಟಾಭರಣ ಮೆಲ್ಲಮುಂ ಕೊಳ್ಳದೆ ಕಟಿಪಿದ ಕಳ್ಳನೊಳದನ್(ಪು. ೧೭)

(vi) ನಿನ್ನಂ ಕಂಡು ಸಂತಸಮಾಯ್ತು ಮಗನೆ. ನೀವೆಲ್ಲಂ ಬನ್ನಿಂ ಪೋಪಂ ಸಾರೆಯೂರಂ (ಪುಟ ೧೮)

(v) ಕಾರಣಮಂ ನಿನಗೆ ಪೇೞ್ದಪ್ಪೆಂ ನೀನಾರ್ಗಂ ಪೇೞಿಯಪ್ಪೊಡೆ (ಪು. ೪೪)

(vi) ಇರ್ವರ್ಗಂ ಪುಟ್ಟಿದರ್ ಚಂದ್ರವೇಗನಂ ಭಾನುವೇಗನು ಮೆಂಬರ್ ಮಕ್ಕಳಾಗಿ (೬೧)

(vii) ಗೆಂಟೞುಂಬಂದೆವು ನಿಮ್ಮ ರೂಪನಱ್ತುವಟ್ಟು ನೋಡಲ್ಕೆ (ಪು. ೬೬)

(viii) ದೇವರ್ಕಳ ತೇಜಮುಂ ಲಾವಣ್ಯಮುಂ ಪುಟ್ಟಿದ ಪ್ರಥಮ ಸಮಯದಿಂ ತೊಟ್ಟು ಪೆರ್ಚುತ್ತುಂ ಪೋಕುಮಾಯುಷ್ಯದ ನಡುವರೆಗಂ (ಪು. ೬೭)

(ix) ಆಕೆಗಮಿಂತಪ್ಪುದೊಂದು ಬಯಕೆಯಾದಪುದು ಮೞೆಗಾಲದೊಳಾನೆಯ ನೇೞಯೆಲ್ಲಾ ಪಡೆಯೊಡನಡವಿಗೆ ಪೋಗಿಯಾಲದ ಮರದ ಪಣ್ಗಳಂ ಕೊಯ್ವಂತಪ್ಪ (ಪು. ೧೫೭)

(x) ಮಹಾದೇವಿಗಿಂತುಬೊಂದು ಬಯಕೆಯಾದುದೆಲ್ಲಾ ಜನಂಗಳುಮಂ ದಂಡಿಸುವಂತಿರೆ (ಪು. ೧೭೯)

ಕನ್ನಡ ಭಾಷೆಯ ವಾಕ್ಯರಚನಾ ವೈವಿಧ್ಯವನ್ನು ತೋರಿಸುವುದಕ್ಕೆ ಮೇಲಿನ ಹತ್ತು ವಾಕ್ಯಗಳು ಉತ್ತಮವಾಗಿದ್ದು ಸಸಮರ್ಥವಾಗಿವೆ.

೨. 'ಉಂ' ಎಂಬ ಸಮುಚ್ಚಯ ಅನಾವಶ್ಯಕವೆಂದು ಹೇಳಲಾಗುವುದಿಲ್ಲ; 'ಪ್ರಥಮಾ ವಿಭಕ್ತಿಯಂ ಪಡೆದು' ಎಂಬುದನ್ನು ಅರ್ಥೈಸಿಕೊಳ್ಳುವಾಗ 'ಪಡೆದುಂ' ಎಂದು ಸಮುಚ್ಚಯಾಂತವಾಗಿ ಗ್ರಹಿಸಬೇಕು.

೧೯. ವೃತ್ತಿ, ಸೂತ್ರ ೧೫೯ :

A

ಇವಱಬಹುವಚನದೊಳ್
ಒಂದೆಂಬುದೇಕವಚನಮಾಗದು

ಕಿ. ಪ.

ಒಂದೆಂಬುದೇಕವಚನ
ಮಾಗೆ ಅದಾಗದು.

B. Aಯ ವೃತ್ತಿಭಾಗ ತೊಡಕು ತೊಡಕು.

'ಇವಱ' ಎಂದರೆ ಸ್ವರಾದಿ ಸಂಖ್ಯಾವಾಚಿಗಳು. ಇವುಗಳಲ್ಲಿ 'ಒಂದು' ಎಂಬ ಸ್ವರಾದಿ ಸಂಖ್ಯಾಶಬ್ದವೂ ಸೇರಿದೆ. ಆದರೆ ಇದು ಬಹುವಚನವಲ್ಲ, ಏಕವಚನ. ಆದ್ದರಿಂದ ಇದನ್ನು ಉಳಿದ ಸ್ವರಾದಿ ಸಂಖ್ಯಾ ಬಹುವಾಚಿಗಳಿಂದ

ಪ್ರತ್ಯೇಕಿಸಬೇಕಾಗಿದೆ. ಅದಕ್ಕಾಗಿ ಮೇಲಿನ ವೃತ್ತಿಭಾಗ. (ಕಿ. ಪ)ಗಳ ಪಾಠವೇ ಅಸ್ಪಷ್ಟವೆಂದು ತೋರುತ್ತದೆ, A ಯವರದಕ್ಕಿಂತಲೂ. ಆದುದರಿಂದ Aಯವರ ವೃತ್ತಿ ಸರಿ. ಅಲ್ಲದೆ Aಯವರಲ್ಲಿ ಸೂತ್ರಭಾಗಕ್ಕೂ ವೃತ್ತಿಭಾಗಕ್ಕೂ ಸಾದೃಶ್ಯ ಹೆಚ್ಚಾಗಿದೆ.

೨೦. ವೃತ್ತಿ, ಸೂತ್ರ ೧೭೧ :

B. Aಯವರ ವೃತ್ತಿಯಲ್ಲಿ ಬರುವ 'ಪ್ರಕಾರ ಕಾಲಾರ್ಥ' ಎಂಬುದು ಸರಿಯೋ (ಕಿ. ಪ) ವೃತ್ತಿಯಲ್ಲಿ ಬರುವ 'ಪ್ರಕಾರಾರ್ಥ' ಎಂಬುದು ಸರಿಯೋ? ಅಂತಪ್ಪ, ಇಂತಪ್ಪ ಎಂಬಿವು ಗಡಾರ್ಥ ಶಬ್ದಗಳೋ, ಅನ್ನಂ ಇನ್ನಂ ಎಂಬಿವು ಗಡಾರ್ಥ ಶಬ್ದಗಳೋ?

ಸೂತ್ರದಲ್ಲಿರುವ 'ಗಡಾರ್ಥದೊಳ್' ಎಂಬ ಶಬ್ದಕ್ಕೂ ವೃತ್ತಿಯಲ್ಲಿರುವ ಅದೇ ಶಬ್ದಕ್ಕೂ ಪಾಠಾಂತರಗಳು ಇತರ ಹಸ್ತಪ್ರತಿಗಳಲ್ಲಿ ದೊರೆಯಬಹುದು. ಪ್ರಶ್ನೆ ಕೇಳುವುದ ರಿಂದ ವಿಷಯ ನಿರ್ಣಯವಾಗಲಾರದು. ಆದುದರಿಂದ A ಮತ್ತು B ಯವರು ಪ್ರತ್ಯಂತರಗಳನ್ನು ಪರೀಕ್ಷಿಸುವ ಕೆಲಸಮಾಡಬೇಕು.

೨೧ : B. ಕೃಲ್ಲಿಂಗಂ ಮಾಳ್ಪುದು (ಸೂತ್ರ ೮೪ರ ವೃತ್ತಿ), ಲಿಂಗಂ ಮಾಳ್ಪರ್ (ಸೂತ್ರ ೯೦ರ ವೃತ್ತಿ)-ಎಂಬ ದ್ವಿತೀಯಾ ಪ್ರತ್ಯಯದ ಪ್ರಯೋಗಗಳು ಕೊಂಚ ದೋಷ ಎನಿಸುತ್ತವೆ.

'ಲಿಂಗಂ ಮಾಳ್ಪರ್' ಎಂಬ ಮಾತು ಕೇಶಿರಾಜನ ಸೂತ್ರದಲ್ಲೇ (೯೦) ಇದೆ; ಆ ದ್ವಿತೀಯಾ ಪ್ರಯೋಗ-ಇಲ್ಲಿ ಪ್ರಥಮೆ ಇದೆ, ಸಮಾಸವಾಗಿ-ಕೊಂಚ ದೋಷ ವೆಂದರೆ ಅದಕ್ಕೆ ಹೊಣೆ ಕೇಶಿರಾಜನದಾಗುತ್ತದೆ. 'ಕೃಲ್ಲಿಂಗಂ ಮಾಳ್ಪುದು' ಎಂಬಲ್ಲಿಯೂ ಸಮಾಸವಾಗಿ ಪ್ರಥಮೆ ತಲೆದೋರಿದೆ.

ಪ್ರಯೋಗಗಳು

೧. ಸೂತ್ರ ೩೪: ಪ್ರಯೋಗ ೧

B. ಇದರ ಎರಡನೆಯ ಪಾದದಲ್ಲಿ 'ತಿರ್ದ' ಎಂದಿದೆ, 'ತಿರ್ದ್ದ' ಎಂದಿರಬೇಕು.

ಪ್ರಯೋಗ ೨

ಇದರಲ್ಲಿ 'ಚುರ್ಚಿದ' ಎಂಬುದು 'ಚುರ್ಚ್ಚಿದ' ಎಂದಿರಬೇಕು.

ಈ ಶತಮಾನದ ಉತ್ತರಾರ್ಧದಲ್ಲಿ ಮುದ್ರಿಸುತ್ತಿರುವ ಹಳಗನ್ನಡ ಗ್ರಂಥಗಳಲ್ಲಿ ಹೀಗೆ ಅಚ್ಚಾಗಿಸುವುದು ರೂಢಿ. ಹಳಗನ್ನಡದ ಹಸ್ತಲಿಖಿತಗಳಲ್ಲಿ ರೇಫ ಸಂಯುಕ್ತ ಬಂದ ಕಡೆ ರೇಫ ಸಜಾತೀಯ ಸಂಯುಕ್ತ ಸಾಧಾರಣವಾಗಿ ಬರೆ ದಿರುತ್ತದೆ. ಇದನ್ನು ಹಾಗೆಯೇ ಅಚ್ಚಿಡುವುದೂ ಉಂಟು. ಸಜಾತೀಯತ್ವವನ್ನು ಕಳೆದು ಅಚ್ಚುಮಾಡುವುದೂ ಉಂಟು. ಇದು ಈಗಿನ ರೂಢಿ. ಅದು ಹಿಂದಿನ ರೂಢಿ. 'ಕವಿರಾಜ ಮಾರ್ಗ್ಗ' ಎಂದು ಪಾಠಕರ ಮುದ್ರಣದಲ್ಲಿದ್ದರೆ 'ಕವಿರಾಜ ಮಾರ್ಗಂ' ಎಂದು ಮದರಾಸು ಮುದ್ರಣದಲ್ಲಿದೆ. ಇದು ಅಚ್ಚಿನ ಸೌಕರ್ಯ ಸೌಲಭ್ಯ ಸೌಂದರ್ಯಗಳಿಗಾಗಿ ಬಂದಿದೆ. ನಿಜವಾದ ಶಿಥಿಲೋಚ್ಚಾರಣೆ ಬಂದು ಛಂದೋ ಭಂಗವುಂಟಾದಾಗ ಸಜಾತೀಯ ದ್ವಿತ್ವವನ್ನು ಬಳಸುತ್ತಾರೆ ಈಗಿನವರು. ದರ್ಪಣಾವಲೋಕನ ಎಂಬುದರಲ್ಲಿರುವ ದರ್ಪಣ ಪದವನ್ನು ದರ್ಪ್ಪಣ ಎಂದೇಕೆ ಅಚ್ಚಿಡಲಿಲ್ಲ? ಎಂದೂ ಕೇಳಬೇಕಾದೀತು. ಆದುದರಿಂದ ವರ್ಣಂಗಳ ಪಾಠಕ್ರಮಂ (ಸೂತ್ರ ೧೪), ವರ್ಗ ದ್ವಿತೀಯ ವರ್ಣಂ (ಸೂತ್ರ ೨೪) ಎಂಬ ದರ್ಪಣ ಸೂತ್ರಗಳಲ್ಲಿರುವ ಪ್ರಾಸಾಕ್ಷರಗಳು ರೇಫ ಸಂಯುಕ್ತವಾಗಿ ಅಚ್ಚಾಗಿವೆಯೇ ಹೊರತು ರೇಫ ಸಜಾತೀಯ ಸಂಯುಕ್ತವಾಗಿ ಅಚ್ಚಾಗಿಲ್ಲ.

೨. ಸೂತ್ರ ೫೬, ಪ್ರಯೋಗ :

B. ಇದರಲ್ಲಿ ನರಂ-ನರವು, ನೆರಂ-ನೆರವು, ಬರಂ-ಬರವು ಎಂಬ A ಕ್ರಮ ಸರಿಯಲ್ಲ. ನರವು-ನರಂ . . . ಇತ್ಯಾದಿಯಾಗಿರಬೇಕು.

ಕೇಶಿರಾಜನ ದೃಷ್ಟಿಯಿಂದ Bಯವರು ಹೇಳುವುದು ಸರಿ.

೩. ಸೂತ್ರ ೬೫, ಪ್ರಯೋಗ :

B. ಕುಡುವುದು ಕೂರ್ಮೆಯಲ್ಲ ಕಲೆಯಿಲ್ಲದೆ ಮನ್ನಿಪ ಸೂಳೆಯರ್ಗೇನನಾದೊಡಂ-ಇದು ಛಂದೋ ದೋಷ ವನ್ನು ಹೊತ್ತುಕೊಂಡಿದೆ. 'ಕುಡುವುದು ಕೂರ್ಮೆ ಯಿಂದೊಲಿದು ಕೂಡುವ ಮಾನಿನಿಗೇನ ನಾದೊಡಂ' ಎಂದು ತಿದ್ದಬೇಕು.

ಇಲ್ಲಿ ಛಂದಸ್ಸಿನ ಸ್ಖಾಲಿತ್ಯವಿದೆ, ಅದನ್ನು ಸುಲಭವಾಗಿ ನಿವಾರಿಸಬಹುದು. ಆದರೆ Bಯವರು ತಿದ್ದಿರುವ ಹಾಗೆ ತಿದ್ದಲು ಆಧಾರವೇನು? ಅವರು ಕೇವಲ ಊಹಿಸಿದ್ದಾರೊ ಅಥವಾ ಆಧಾರಗಳಿಂದ ಹಾಗೆ ಮಾಡಿದ್ದಾರೊ ತಿಳಿಯದು. ಈ ಸಾಲಿನ ಪಾಠ ಮದರಾಸು ಪ್ರತಿಯಲ್ಲಿ 'ಕುಡುವುದು ಕೂರ್ಮೆಯಲ್ಲಿ ಕಳವಿಲ್ಲದೆ ಮನ್ನಿಪ ಸೂಳೆಗೇನನಂ,

ಎಂದಿದೆ. ಇದು ಛಂದಸ್ಸಿನ ದೃಷ್ಟಿಯಿಂದ ಸರಿಯಾಗಿದೆ. ಇದನ್ನು ಬೇಕಾದರೆ ಅಂಗೀಕರಿಸಬಹುದು. ಇಲ್ಲವಾದರೆ 'ಕುಡುವುದು ಕೂರ್ಮೆಯಲ್ಲ ಕಲೆಯಿಲ್ಲದೆ ಮನ್ನಿಪ ಸೂಳೆಗೇನನಾದೊಡಂ' ಎಂಬ ಪಾಠ ನಿಯೋಜನೆಯನ್ನು ಮಾಡಿಕೊಳ್ಳಬಹುದು. ಕೂರ್ಮೆಯಲ್ಲ, ಕೂರ್ಮೆಯಲ್ಲಿ ಎಂಬೆರಡು ಪಾಠಗಳಿವೆ A ಅವರಲ್ಲಿ, ಯಾವುದು ಸರಿ ? ಎನ್ನುತ್ತಾರೆ B ಅವರು. ಆದರೆ ಕೂರ್ಮೆಯಲ್ಲ ಎಂಬುದು ಸರಿಯೆಂದೂ ಕೂರ್ಮೆಯಲ್ಲಿ ಎಂಬುದು ತಪ್ಪೆಂದೂ ತೋರುತ್ತದೆ. –ಲ್ಲಿ ಎಂಬುದು ಅಚ್ಚಿನ ದೋಷ.

೪. ಸೂತ್ರ ೧೩೫, ಪ್ರಯೋಗ : ೧

B. ಇಲ್ಲಿ ಎಕಾರಾಂತಕ್ಕೆ ಒಂದು ಪ್ರಯೋಗ ಬೇಕು.

ಪ್ರಯೋಗ ಬೇಕೆಂಬುದರಲ್ಲಿ ನಮ್ಮ ಸಮ್ಮತಿಯೂ ಇದೆ. ಆದರೆ (ಕಿ. ಕ. ಖ. ಪ.) ಪ್ರತಿಗಳಲ್ಲೂ ಮದರಾಸು ಮುದ್ರಣದಲ್ಲೂ ಉದಾಹರಣೆ ದೊರೆಯುತ್ತಿಲ್ಲ. ಸೂತ್ರದಲ್ಲಾಗಲಿ ವೃತ್ತಿಯಲ್ಲಾಗಲಿ ಇರುವ ಎಲ್ಲ ಅಂಶಗಳಿಗೂ ಒಂದಕ್ಕೂ ಬಿಡದಂತೆ ಉದಾಹರಣೆ ಕೊಡಲೇಬೇಕೆಂಬುದು ಕೇಶಿರಾಜನ ಸಂಕಲ್ಪವಾಗಿರಲಿಲ್ಲವೆಂದು ತೋರುತ್ತದೆ. 'ಡಕಾರ ಅಟಂಗಳುಂ, ಲಕಾರ ಕುಳಂಗುಳುಂ ಈ ತೆಱದಿಂ ಯಮಕಕ್ಕೆ ಸಲ್ಲವು' (ಸೂತ್ರ ೫೯) ; 'ಇವಂ ಪ್ರಯೋಗಮುಂ ಕಂಡು ಪೇೞ್ವುದು ೩೫)' ; 'ಇಂತುಟೞುವನಱುವುದು', ಇಂತು ಮೊದಲಾದುವಂ ನೋಡಿಕೊಳ್ವುದು–ಎಂದು ಕೇಶಿರಾಜನೇ ಅಲ್ಲಲ್ಲಿ ಹೇಳುವುದನ್ನು ನೋಡಬೇಕು. ಆದ್ದರಿಂದ ಉದಾಹರಣೆ ಇಲ್ಲವಾದರೆ ಇಲ್ಲ, ಅಷ್ಟೇ.

೫. ಸೂತ್ರ ೯೦, ಪ್ರಯೋಗ ೧

ಅರಸುಕುಮಾರನನಾಯತ
ತರಕಡೆಗಣ್ಣಿಂದೆ ನೋಡಿ ಕೆಳದಿ ಸಮೇತಂ |
ಪರಿಗತ ನಗೆಯಿಂದಿರ್ದಂ
ಗುರುನಾಣ್ಭರದಿನೆಱಗಿ ಮುಖತಾಮರೆಯಂ ||

B. ಇಲ್ಲಿ ನಾಲ್ಕನೆಯ ಪಾದದಲ್ಲಿ ಛಂದೋದೋಷವಿದೆ; 'ಗುರುನಾಣಾಭರದಿನೆಱಗಿ ಮುಖತಾಮರೆಯಂ' ಎಂದಿರಬೇಕು.

ಇದು ಸರಿ. ಈ ಪದ್ಯ ಮೂಲತಃ ಕವಿರಾಜಮಾರ್ಗಕ್ಕೆ ಸೇರಿದ್ದು (೧–೫೮). ಇದರಲ್ಲಿ ನಾಲ್ಕನೆಯ ಪಂಕ್ತಿಯ ಪಾಠ 'ಗುರುನಾಣ್ಭರದಿಂದಮೆಱಗಿ ಮುಖತಾವರೆಯಂ' ಎಂದಿದೆ. ಇದೇ ಪಾಠ ಮದರಾಸಿನ ಮುದ್ರಿತ ಗ್ರಂಥದಲ್ಲಿಯೂ (ಕವಿರಾಜಮಾರ್ಗ), ಪರಿಷತ್ತಿನ ಪ್ರತಿಯಲ್ಲೂ (ಪ) ಇದೆ. (ಕಿ)ದಲ್ಲಿ ಮಾತ್ರ Bಯವರು ಕೊಟ್ಟಿರುವ ಪಾಠವಿದೆ. (ಪ) ಕ್ಕೂ ಉಪಯೋಗಿಸಿಕೊಂಡಿರುವ ಒಂದು ಶಮದದ ಪ್ರತಿಯಲ್ಲೂ ಈ ಪಾಠವಿದೆ. ಅಲ್ಲದೆ ಮೈಸೂರಿನ ಕವಿರಾಜಮಾರ್ಗ ಪ್ರತಿಯೊಂದರಲ್ಲಿ 'ಗುರುನಾನಾಭರದಿನೆಱಗಿ ....' ಪಾಠವೂ ಇದೆ. (ಪ)ಕ್ಕೆ ಉಪಯೋಗಿಸಿದ ಒಂದು ಪ್ರತಿಯಲ್ಲೂ 'ನಾಣಾ ....' ಎಂದಿದೆ. ಕೇಶಿರಾಜನು ಯಾವ ಪಾಠವನ್ನು ಕೊಟ್ಟಿದ್ದನು ಎಂಬುದು ಪ್ರಶ್ನೆ. ದರ್ಪಣದ ಕೆಲವು ಹಸ್ತಪ್ರತಿಗಳಲ್ಲೂ, (ಕಿ)ದಲ್ಲೂ 'ಗುರುನಾಣಾಭರದಿ ....' ಎಂದಿತ್ಯಾದಿಯಾಗಿರುವುದರಿಂದಲೂ, ಕವಿರಾಜಮಾರ್ಗದ ಪಾಠಕರವರ ಪ್ರತಿಯಲ್ಲಿ ಒಂದು ಪ್ರತ್ಯಂತರ ಪಾಠವೂ ಇದೇ ಆಗಿರುವುದರಿಂದಲೂ ಮೂಲ ಪಾಠ 'ಗುರುನಾಣಾಭರದಿನೆಱಗಿ ಮುಖತಾವರೆಯಂ' ಎಂದೇ ಇರಬೇಕಾದ್ದು ಸಂಭವ. ಈ ಪಾಠವನ್ನೇ ಕೇಶಿರಾಜನೂ ಕೊಟ್ಟಿರಬೇಕು. ಆದರೆ 'ಗುರುನಾಣ್ಭರದಿಂದ ....' ಎಂಬ ಪಾಠದಲ್ಲಿ ಗುರುನಾಣ್, ನಾಣ್ಭರ ಎಂದು ಎರಡು ಅರಿಸಮಾಸಗಳು ಬಂದಿರುವುದನ್ನು ಕಾಣಬಹುದು. ಈ ದೃಷ್ಟಿಯಿಂದ Aಯವರು ಕೊಟ್ಟಿರುವ ಪಾಠವೇ ಗಮನಾರ್ಹವಾಗಿದೆ. ಇದನ್ನೇ ಇಟ್ಟುಕೊಂಡರೆ ಛಂದೋದೋಷವೇನೂ ಬರಲಾರದು.

ಮೇಲಿನ ಪ್ರಯೋಗದ ವಿಷಯದಲ್ಲೇನೋ ಆಕರ ಗ್ರಂಥಪಾಠಕ್ಕೂ ಕೇಶಿರಾಜನ ಪ್ರಯೋಗ ಪಾಠಕ್ಕೂ ಸಮಾನತೆ ಕಂಡುಬರುತ್ತದೆ. ಆದರೆ ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಕೇಶಿರಾಜನ ಪ್ರಯೋಗ ಪಾಠಗಳನ್ನು ಅವಕ್ಕೆ ಆಕರವಾದ ಗ್ರಂಥಗಳಲ್ಲಿರುವ ಪಾಠಗಳಂತೆ ನೇರ್ಪಡಿಸಬೇಕೇ ಬೇಡವೇ ? ಕೇಶಿರಾಜನು ಯಾವ ಪ್ರತಿಗಳನ್ನು ನೋಡಿದ್ದನೋ, ಯಾವ ಪ್ರತಿಯ ಪಾಠ ಅವನ ನೆನಪಿನಲ್ಲಿತ್ತೋ ಆ ಪಾಠಗಳನ್ನು ಅವನು ಕೊಟ್ಟಿರುತ್ತಾನೆ. ಆಕರ ಗ್ರಂಥಗಳ ಮೂಲ ಕವಿ ಪಾಠಗಳನ್ನು ಅವನು ಕಾಣಿಸಿರುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ : ೧. 'ಎರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗ ವಲ್ಲಭಂ' (ಸೂತ್ರ ೧೪೭–೧) ಎಂಬಲ್ಲಿ ಇದಕ್ಕೆ ಆಕರವಾಗಿರುವ ಮತ್ತು ಈಗ ಅಚ್ಚಾಗಿರುವ ಆದಿಪುರಾಣದ ಪ್ರತಿಗಳಲ್ಲೆಲ್ಲ 'ಎರ್ದೆಯಾಣ್ಮ ....' ಎಂದೇ ಪಾಠವಿದೆ, (೩–೫೫) ಅವಕ್ಕೆ ಉಪಯೋಗಿಸಿಕೊಂಡಿರುವ ಯಾವ ಹಸ್ತಪ್ರತಿಯಲ್ಲೂ 'ಎರ್ದೆಗಾಣ್ಮ' ಎಂಬ ಪಾಠಾಂತರವಿಲ್ಲ. 'ಎರ್ದೆಯಾಣ್ಮ' ಎಂಬುದನ್ನು ಅಂಗೀಕರಿಸಿದರೆ ಷಷ್ಠಿಗೆ ಚತುರ್ಥಿ ಬರುತ್ತದೆ-ಎಂಬ ವ್ಯಾಕರಣಾಂಶಕ್ಕೇ ಆಧಾರವಿಲ್ಲದಂತಾಗುತ್ತದೆ.

II. ಅಱುದಿಂಗಳಾಯುವುಂಟೆನೆ
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ|
ಪಱಪಟ್ಟುಬರೆ ಕನಲ್ವುದು
ಮಱಪವೆ **ನಾಲ್ವರ್ಗೆ** ನರಕದುಃಖದ ತೆಱನಂ||

(ಸೂತ್ರ ೨೦೦-೩)

ಇದು ಆದಿಪುರಾಣದ ಪದ್ಯ (೯-೫೦). ಇದರ ನಾಲ್ಕನೆಯ ಪಾದದಲ್ಲಿರುವ 'ನಾಲ್ವರ್ಗೆ' ಎಂಬುದು ಮುದ್ರಿತ 'ಆದಿಪುರಾಣ'ದ ಪ್ರತಿಗಳಲ್ಲಿಲ್ಲ, ಪಾಠಾಂತರಗಳೂ ಅಲ್ಲಿ ಇಲ್ಲ. ಪ್ರತಿಯಾಗಿ 'ಕಲ್ಪಜರ್ಗೆ' ಎಂದು ಪಾಠ ಅವುಗಳಲ್ಲಿ ಇದೆ. ದರ್ಪಣದ ಎಲ್ಲ ಮುದ್ರಣಗಳಲ್ಲೂ (ಕಿ. ಪ. ಮದರಾಸು A) 'ನಾಲ್ವರ್ಗೆ' ಎಂದೇ ಇದೆ. (ಪ)ದಲ್ಲಿ 'ಸುಜನರ್ಗೆ' ಎಂದೂ, ಮದರಾಸು ಪ್ರತಿಯಲ್ಲಿ 'ಸುರಜನರ್ಗೆ' ಎಂದೂ ಪಾಠಾಂತರಗಳಿವೆ. 'ಕಾವ್ಯಾವಲೋಕನ'ದಲ್ಲಿ ಕೂಡ 'ನಾಲ್ವರ್ಗೆ' ಎಂದೇ ಇದೆ-(ಪದ್ಯ ೨೭೦). ಈಗ ಆಕರ ಗ್ರಂಥದಲ್ಲಿರುವಂತೆ 'ಕಲ್ಪಜರ್ಗೆ' ಎಂದು ಪಾಠವನ್ನು ತಿದ್ದಿಕೊಳ್ಳಬೇಕೇ, ಅಥವಾ ಸುಜನರ್ಗೆ ಇಲ್ಲವೇ ಸುರಜನರ್ಗೆ ಎಂದು ತಿದ್ದಬೇಕೇ? 'ಗುರುನಾಣಾಭರದಿ...' ಎಂಬ ಉದಾಹರಣೆಯ ವಿಷಯದಲ್ಲಿ ಮಾಡಿರುವಂತೆ ಆಕರ ಗ್ರಂಥಪಾಠ ಸ್ವೀಕರಣ ಮಾಡಿದರೆ ಇಲ್ಲಿಯೂ ಆಕರಗ್ರಂಥ ಪಾಠವನ್ನು ಏಕೆ ಅಂಗೀಕರಿಸಬಾರದು? ಕೇಶಿರಾಜನು ಪಂಪನ ಆದಿಪುರಾಣದ ಯಾವ ಹಸ್ತಪ್ರತಿಯನ್ನು ನೋಡಿದ್ದನೋ ಅದರಲ್ಲಿದ್ದಂತೆ ಅವನು ಅನುವದಿಸಿರುವ ಪದ್ಯದ ಪಾಠವಿರಬೇಕಾದ್ದು ಸಹಜ. ಆದ್ದರಿಂದ ಇಲ್ಲಿರುವ 'ನಾಲ್ವರ್ಗೆ' ಎಂಬುದನ್ನು ತಿದ್ದುವುದು ಸಲ್ಲದು. ಕೇಶಿರಾಜನ ಪ್ರಯೋಗಗಳ ಪಾಠಗಳು ಅವುಗಳ ಆಕರಗ್ರಂಥಗಳಲ್ಲಿರುವ ಆಯಾಪಾಠಗಳಂತೆ ಇರಬೇಕೆಂಬ ತತ್ವವನ್ನು ಎಲ್ಲ ಸಂದರ್ಭಗಳಲ್ಲೂ ಒಪ್ಪಲು ಸಾಧ್ಯವಾಗಲಾರದು.

ಟೀಕಿನ ವಿಚಾರ

A ಅವರು ತಮ್ಮಿಂದ ಪರಿಷ್ಕೃತವಾದ ಶಬ್ದಮಣಿದರ್ಪಣದಲ್ಲಿ ನಿಟ್ಟೂರ ನಂಜಯ್ಯನ ಟೀಕೆಯನ್ನೂ ಸೇರಿಸಿದ್ದಾರೆಂಬುದು ವಿದಿತವಾಗಿದೆ. ಕೆಲವೆಡೆ ಈ ಟೀಕಿನಲ್ಲಿರುವ ಸೂತ್ರ ಶಬ್ದಗಳಿಗೂ ಸೂತ್ರಗಳಲ್ಲಿರುವ ಶಬ್ದಗಳಿಗೂ ಹೊಂದಾಣಿಕೆಯಿಲ್ಲವೆಂಬುದು ತಾನಾಗಿಯೇ ತೋರುತ್ತದೆ. ಇದನ್ನು A ಅವರೂ ಬಲ್ಲರು. 'ಇಲ್ಲಿ ಸ್ವೀಕೃತವಾಗಿರುವ ಕೆಲವು ಸೂತ್ರ ಪಾಠಗಳಿಗೂ ನಿಟ್ಟೂರ ನಂಜಯ್ಯನ ಟೀಕೆಯಲ್ಲಿರುವ ಪಾಠಗಳಿಗೂ ಅಲ್ಪ ವ್ಯತ್ಯಾಸಗಳು ಕೆಲವೆಡೆ ಕಾಣುತ್ತವೆ. ಅಂಥ ಸಂದರ್ಭಗಳಲ್ಲಿ ಟೀಕೆಯಂತೆ ಸೂತ್ರಪಾಠಗಳನ್ನು ತಿದ್ದದೆ ಮತ್ತು ಸೂತ್ರಪಾಠಗಳಂತೆ ಟೀಕೆಯನ್ನು ತಿದ್ದದೆ ಹಾಗೆಯೇ ಉಳಿಸಿಕೊಂಡಿದೆ' ಎಂದು A ಅವರೇ ಬರೆದಿದ್ದಾರೆ. ಇದು ಸುಲಭವಾಗಿ ಅರ್ಥವಾಗುವುದರಿಂದ ಇದರ ಮೇಲೆ ಬೇರೆ ಮಾತುಗಳು ಅನಾವಶ್ಯಕ. ಟೀಕೆಯನ್ನೂ ಪರಿಷ್ಕರಿಸಬೇಕಾಗಿತ್ತು ಎಂಬುದು B ಅವರ ಅಭಿಪ್ರಾಯ. ಕಿಟ್ಟೆಲ್ ಅವರ ಪರಿಷ್ಕರಣದಲ್ಲಿ ಸೂತ್ರಪಾಠಗಳಿಗೂ, ಟೀಕಾಗತ ಪಾಠಗಳಿಗೂ ಪ್ರಾಯಶಃ ಎಲ್ಲೆಡೆಯಲ್ಲೂ ಏಕತೆ ಇದೆ. (ಪ) ಪ್ರತಿಯಲ್ಲೂ ಹೆಚ್ಚುಕಡಮೆ ಹಾಗೆಯೇ ಇದೆ. A ಅವರು ಬಹುಶಃ ಕಿಟ್ಟೆಲ್ ಅವರು ಕೊಟ್ಟಿರುವ ಟೀಕಾಪಾಠವನ್ನು ಅನುಸರಿಸಿರುವಂತೆ ತೋರುತ್ತದೆ. ಏಕೆಂದರೆ ಅವರು ಉಪಯೋಗಿಸಿರುವ (ಕ.ಖ.) ಪ್ರತಿಗಳಲ್ಲಿ ಈ ಟೀಕೆಯೇ ಇಲ್ಲ. ನಿಟ್ಟೂರು ನಂಜಯ್ಯನು ತನ್ನ ಟೀಕನ್ನು ಬರೆಯುವಾಗ ಯಾವ ಸೂತ್ರಪಾಠದ ಯಾವ ಪ್ರತಿಯನ್ನು ಅನುಸರಿಸಿದ್ದನೋ ಈಗ ನಮಗೆ ತಿಳಿಯದು. ಕನಿಷ್ಠಪಕ್ಷ ಆತನು ಎರಡು ಪ್ರತಿಗಳನ್ನಾದರೂ ಉಪಯೋಗಿಸಿರಬೇಕೆಂದು ತೋರುತ್ತದೆ. ಸೂತ್ರ ೧೦೮ರ ಟೀಕಿನಲ್ಲಿ "'ಮುಂದದಕ್ಕುಮತ್ವಾಂತ ಲಿಂಗದೊಳ್ವಿಧಿ ಲೋಪಂ' ಎಂದು ಪಾಠಾಂತರಂ" ಎಂಬ ನಂಜಯ್ಯನ ಮಾತು ಈ ನಿರ್ಧಾರಕ್ಕೆ ಆಧಾರ. ಅಲ್ಲದೆ ಸೂತ್ರ ೨೮ರ ಕೊನೆಯಲ್ಲಿ 'ಅಂಗೀಕೃತ ಪದಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ' ಎಂಬ ಪಾಠಕ್ಕನುಸಾರವಾಗಿ ಆ ಪ್ರತಿಯ ಟೀಕಿನಲ್ಲಿದೆ. ಎರಡೂ ಟೀಕುಗಳೂ ನಿಟ್ಟೂರ ನಂಜಯ್ಯನವೆಂದೇ ಭಾವಿಸಲು ಸಾಧ್ಯವೆ? ಆತನು ಈ ಸೂತ್ರಕ್ಕೆ ಎರಡು ರೀತಿಯ ಟೀಕನ್ನು ಬರೆದನೆ? ಅಥವಾ ಒಂದು ಸಲ ಬರೆದದ್ದನ್ನು ಇನ್ನೊಂದು ಸಲ ತಿದ್ದಿ ಬರೆದನೆ? ಹಾಗಾದರೆ ಟೀಕೆಯನ್ನು ಪರಿಷ್ಕರಿಸುವಾಗ ಯಾವ ಸೂತ್ರಪಾಠವನ್ನಿಟ್ಟುಕೊಳ್ಳಬೇಕು?-ಇಂತಹ ಸಮಸ್ಯೆಗಳು ಅಲ್ಲಲ್ಲಿ ತಲೆದೋರಬಹುದು. ನಿಟ್ಟೂರ ನಂಜಯ್ಯನ ಟೀಕನ್ನೊಳಗೊಂಡ ಇತರ ಹಸ್ತಪ್ರತಿಗಳ ಸಹಾಯದಿಂದ ಟೀಕಿನ ಪಾಠವನ್ನು ಪರಿಷ್ಕರಿಸಿದರೆ ಆಗುವ ಫಲಿತಾಂಶವೇನು? ಈ ಕೆಲಸವನ್ನು ಆಗಲೇ (ಕಿ. ಪ.) ಪ್ರತಿಗಳು ಮಾಡಿವೆ. ಟೀಕಿನ ಪಾಠಕ್ಕೂ ಸೂತ್ರ ಪಾಠಕ್ಕೂ ಸಮನ್ವಯ ಏರ್ಪಟ್ಟಿದೆ. ಅಂದರೆ ನಿಟ್ಟೂರ ನಂಜಯ್ಯನಿಗೆ ಲಬ್ಧವಾಗಿದ್ದ ದರ್ಪಣದ ಸೂತ್ರಪಾಠ ಯಾವುದೆಂಬುದು ಇದರಿಂದ ವೇದ್ಯವಾಗುತ್ತದೆ. ಇದೆಲ್ಲ

(೬೦ನೇ ಪುಟ ನೋಡಿ)

ನಿಬಂಧಮಾಲಾ

ಜಿ. ವೆಂಕಟಸುಬ್ಬಯ್ಯ

ಭಾರತದ ವಿವಿಧ ಭಾಗಗಳ ಉತ್ತಮ ಸಾಹಿತ್ಯವನ್ನು ದೇಶದ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿಯೂ ಅನುವಾದ ಮಾಡಿಸಿ ಸಾಹಿತ್ಯಪ್ರಿಯರಿಗೆ ಪರಸ್ಪರ ಪರಿಚಯವನ್ನು ಹೆಚ್ಚಿಸುವ ದೃಷ್ಟಿಯಿಂದ ಸಾಹಿತ್ಯ ಅಕಾಡೆಮಿಯವರು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಬಹು ಮುಖ್ಯರಾದ ಲೇಖಕರ ಕೃತಿಗಳೆಲ್ಲ ಹೀಗೆ ಅನುವಾದ ಗೊಂಡರೆ ಭಾರತದ ಸಾಹಿತ್ಯದ ವಿಸ್ತಾರವೂ ವೈಭವವೂ ಜನಸಾಮಾನ್ಯದ ಕೈಗೆ ಎಟಕುವಂತಾಗುತ್ತದೆ. ಈ ಕಾರಣದಿಂದ ಎಲ್ಲ ಅನುವಾದಗಳನ್ನೂ ನಾವು ಸ್ವಾಗತಿಸ ಬೇಕು. ನಾನು ಇಲ್ಲಿ ವಿಮರ್ಶಿಸಲು ಆರಿಸಿಕೊಂಡಿರುವ ಈ 'ನಿಬಂಭಮಾಲಾ' ಎಂಬ ಪುಸ್ತಕವು ಈ ವರ್ಗಕ್ಕೆ ಸೇರಿದುದು.

ಭಾಷಾಂತರ ಕಾರ್ಯವು ಎಂದೂ ಕಷ್ಟಕರವಾದದ್ದೇ. ಮೂಲದ ಲೇಖಕನು ಬಹು ಶಕ್ತನಾದರಂತೂ ಭಾಷಾಂತರ ಕಾರನ ಕೆಲಸ ಇನ್ನಷ್ಟು ಕಠಿಣವಾಗುತ್ತದೆ. ಭಾಷಾಂತರ ದಲ್ಲಿ ಮೂಲದ ಅಭಿಪ್ರಾಯವನ್ನು ವ್ಯತ್ಯಾಸಮಾಡದೆ, ಅಲ್ಲಿಯ ಭಾಷೆಯ ಸಾನ್ನಿಧ್ಯವನ್ನು ಉಳಿಸಿಕೊಂಡು, ಸಾಧ್ಯವಾದರೆ ಅಲ್ಲಿಯ ಉಕ್ತಿಚಮತ್ಕಾರಗಳನ್ನೂ ವ್ಯಂಗ್ಯ ಸಾಧನೆಯನ್ನೂ ರಕ್ಷಿಸಿಕೊಂಡು ಕಾರ್ಯಸಾಧನೆ ಮಾಡಬೇ ಕಾಗುತ್ತದೆ. ಇದಕ್ಕೆ ಆಳವಾದ ಪಾಂಡಿತ್ಯವಿರಬೇಕು– ಎರಡು ಭಾಷೆಗಳಲ್ಲಿಯೂ, ಮೂಲ ಲೇಖಕನು ಕವಿಯಾಗಿ ಬಿಟ್ಟರಂತೂ ತೀರಿತು—ಆತನ ಆಲೋಚನೆಗಳ ಜಾಡು ಹಿಡಿಯುವ ತನಕ ಭಾಷಾಂತರ ಸಾಧ್ಯವಾಗುವುದೇ ಇಲ್ಲ.

ರವೀಂದ್ರನಾಥ ಠಾಕೂರರು ಮೂಲತಃ ಕವಿಗಳು. ಅವರು ತಮ್ಮ ಮಾತೃಭಾಷೆಯಾದ ಬಂಗಾಳಿಯ ವಿಷಯ ದಲ್ಲಿ ತಳೆದ ಧೋರಣೆ ಎಷ್ಟು ವಿಶ್ವಾಸಯುಕ್ತವಾಗಿದ್ದಿತೆಂ ಬುದನ್ನು ಅವರ ಮಾತುಗಳಲ್ಲಿಯೇ ಓದಿ ತಿಳಿಯಬೇಕು. ಆಂಗ್ಲ ಸಂಸ್ಕೃತಿಯ ಸಾರವನ್ನು ಹೀರಿಕೊಂಡರೂ ಆತ್ಮ ಸತ್ವದ ಚೈತನ್ಯವನ್ನು ಮೊಟಕುಗೊಳಿಸಲು ಅವಕಾಶವನ್ನೇ ಕೊಡದ ಈ ಕವಿದೃಷ್ಟಿಯ ಭವ್ಯತೆಯಲ್ಲಿ ಬಂಗಾಳದ ಎಷ್ಟೋ ಕಿರಿ ಚೈತನ್ಯಗಳು ಬೆಳೆದುಬಂದವು. ರವೀಂದ್ರರ ಸಹಸ್ರಮುಖಿಯಾದ ಪ್ರತಿಭೆಗೆ ವಿರಾಮವೆಂಬುದೇ ಇಲ್ಲ. ಕಾವ್ಯಮಾರ್ಗವನ್ನು ಅನುಸರಿಸಿ ಅವರು ಮಾಡಿರುವ ಮಹಾ ಸೃಷ್ಟಿಯನ್ನೂ ಅವರ ಭಾವಗೀತೆಗಳ ವೈಭವವನ್ನೂ ಅವರ ನಾಟಕಗಳ ಅರ್ಥಪೂರ್ಣತೆಯನ್ನೂ ಕಾದಂಬರಿಗಳ ಅನುಭವ ಸಾರವನ್ನೂ ಕನ್ನಡದ ಜನ ಅಲ್ಪಸ್ವಲ್ಪವಾಗಿ ಅನುವಾದಗಳ ಮೂಲಕ ಈಗಾಗಲೇ ಪರಿಚಯ ಮಾಡಿ ಕೊಂಡಿದ್ದಾರೆ; ಸಾಹಿತ್ಯಪರವಾದ ಕೆಲವು ಪ್ರಬಂಧಗಳ ಅನುವಾದವನ್ನು ಬಹು ಹಿಂದೆಯೇ ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಮತ್ತು ಶ್ರೀ ಕೃಷ್ಣಶಾಸ್ತ್ರಿಗಳ ಅನುವಾ ದದ ಮೂಲಕ ಅರಿತುಕೊಂಡಿದ್ದರು. ಈಗ ಈ 'ನಿಬಂಧ ಮಾಲೆ' ಯಲ್ಲಿ ಠಾಕೂರರ ಪ್ರಬಂಧ ಸಾಹಿತ್ಯದ ಪರಿಚಯ ವನ್ನು ಕನ್ನಡಿಗರು ಪಡೆಯಬಹುದು.

ಇಲ್ಲಿಯ ಪ್ರಬಂಧಗಳು ಆರು ಬೇರೆ ಬೇರೆ ವಿಭಾಗಗಳಾಗಿ ಜೋಡಣೆಗೊಂಡಿವೆ. 'ಮಹಾಪುರುಷರ ಜೀವನ ಚರಿತ್ರೆ' ಯಲ್ಲಿ ಬುದ್ಧ, ರಾಮಮೋಹನರಾಯ್, ವಿದ್ಯಾಸಾಗರ, ಗಾಂಧೀ ಇಂಥ ಮಹಾವ್ಯಕ್ತಿಗಳ ಜೀವನ ದರ್ಶನವನ್ನು ಠಾಕೂರರು ಹೇಗೆ ಅರ್ಥಮಾಡಿಕೊಂಡರು ಎಂಬುದರ ಪರಿ ಚಯವಿದೆ. 'ಇತಿಹಾಸ' ವೆನ್ನುವ ಭಾಗದಲ್ಲಿ ತಪೋ ವನವನ್ನು ಕುರಿತ ಬಹು ರಮ್ಯವಾದ ಬಂದ ನಿಬಂಧವಿದೆ. ಭಾರತದ ವಿನಮ್ರತೆಯಲ್ಲಿ ಎಂಥ ಪ್ರಬಲಶಕ್ತಿಯಿದೆ ಎಂದು ಸವಿಸ್ತಾರವಾಗಿ ತಿಳಿಯಪಡಿಸುವ ಈ ಪ್ರಬಂಧವನ್ನು ಠಾಕೂರರ ಗದ್ಯರಚನೆಗೆ ದೃಷ್ಟಾಂತವನ್ನಾಗಿ ಆರಿಸಿಕೊಳ್ಳ ಬಹುದು. ಭಾರತದ ಇತಿಹಾಸದ ಪ್ರವಾಹವನ್ನು ಚಿತ್ರಿ ಸುತ್ತಾ ಈ ಕವಿಗಳು ಹೀಗೆ ಬರೆಯುತ್ತಾರೆ.

"ಘೋರತರ ದುರ್ಯೋಗದ ಇರುಳ ಕಗ್ಗತ್ತಲೆಯ ಲ್ಲಿಯೂ ಈ ತಾಮಸೀ ಕಥೆಯ ನಡುವೆ ಭಾರತವರ್ಷ ಪೂರ್ತಿ ಆತ್ಮಸಮರ್ಪಣೆ ಮಾಡಿಕೊಂಡು ಕುಳಿತಿಲ್ಲ. ಯಾವೆಲ್ಲ ಅದ್ಭುತ ದುಃಸ್ವಪ್ನಗಳ ಹೊರೆ ಅದರ ಎದೆಯ ಮೇಲೆ ಅದುಮಿಕೊಂಡು ಉಸಿರಾಡುವುದನ್ನು ಅಡ್ಡಿಮಾಡು ತ್ತದೆಯೋ ಅದನ್ನು ತಳ್ಳಿಹಾಕಿ ಸರಳ ಸತ್ಯದಲ್ಲಿ ಎಚ್ಚರ ಗೊಳ್ಳುವುದಕ್ಕಾಗಿ ಅದರ ವಿಹ್ವಲ ಚೈತನ್ಯ ಘಳಿಗೆ ಘಳಿಗೆ ಯಲ್ಲಿಯೂ ಪೂರ್ಣಪ್ರಯತ್ನ ಮಾಡುತ್ತ ಬಂದಿದೆ. ಇಂದು ನಾವು ಯಾವ ಕಾಲದಲ್ಲಿ ವಾಸಮಾಡುತ್ತಿದ್ದೇವೆಯೋ ಆ ಕಾಲವನ್ನು ಹೊರಗಿನಿಂದ ಸ್ಪಷ್ಟವಾಗಿ ನೋಡಲಾರ

ಭಾಗ–೧ ರವೀಂದ್ರರ ಕೃತಿಗಳ ಕನ್ನಡ ಅನುವಾದ ಸ್ವಾಮಿ ಶಂಕರಾನಂದ ಸರಸ್ವತಿ.

ದಿದ್ದೇವೆ. ಆದರೂ ಭಾರತವರ್ಷ ತನ್ನ ಸತ್ಯವನ್ನು ಏಕವನ್ನು, ಸಾಮಂಜಸ್ಯವನ್ನು ಮತ್ತೆ ಮತ್ತೆ ಪಡೆಯಲು ಸಿದ್ಧಗೊಳ್ಳುತ್ತಿದೆಯೆಂಬುದು ಅನುಭವಕ್ಕೆ ಬರುತ್ತಿದೆ. ನದಿಯಲ್ಲಿ ಅಣಕಟ್ಟೆಯ ಮೇಲೆ, ಅಣಕಟ್ಟೆ ಸೃಷ್ಟಿಯಾಗಿತ್ತು. ಎಷ್ಟೋ ಕಾಲದಿಂದ ಅದರಲ್ಲಿ ನೀರ ಓಟ ಇರಲಿಲ್ಲ. ಇಂದು ಕಟ್ಟೆಯ ಗೋಡೆ ಎಲ್ಲೋ ಒಡೆದಿದೆ. ಅದರಿಂದಲೇ ಇಂದು ಈ ನಿಂತ ನೀರಿಗೆ ಮಹಾ ಸಮುದ್ರದ ಸಂಪರ್ಕ ಲಭಿಸಿದೆ. ಪುನಃ :ವಿಶ್ವದ ಉಬ್ಬರವಿಳಿತಗಳ ಸಂಚಾರ ಆರಂಭಿಸಿದೆಯೋ ಎನ್ನುವಂತಿದೆ.”

ಕವಿವರ್ಯರ ಈ ಮಾತುಗಳು ನಮ್ಮ ದೇಶಕ್ಕೂ ಸಮಾಜಕ್ಕೂ ಈಗಲೂ ಹೇಗೆ ಅನ್ವಯವಾಗುತ್ತದೆಯೆಂಬುದು ಯಾರಿಗಾದರೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಹೀಗೆಯೇ ಧರ್ಮ, ಶಿಕ್ಷಣ, ಸಮಾಜ, ರಾಷ್ಟ್ರನೀತಿ, ಗ್ರಾಮಸುಧಾರಣೆ, ಅರ್ಥನೀತಿ ಮುಂತಾದ ಅನೇಕ ವಿಷಯಗಳ ನಿರೂಪಣೆ ಇಲ್ಲಿಯ ಸುಮಾರು ಐವತ್ತು ಲೇಖನಗಳಲ್ಲಿ ಮನೆಮಾಡಿಕೊಂಡಿವೆ. ವಿಷಯ ಸಂಗ್ರಹದ ದೃಷ್ಟಿಯಿಂದಲೂ, ನಿರೂಪಣೆಯ ದೃಷ್ಟಿಯಿಂದಲೂ ಚೇತೋಹಾರಿಯಾಗಿರುವ ಈ ನಿಬಂಧಗಳು ಓದುಗರನ್ನು ಸೆರೆಹಿಡಿಯುವುದರಲ್ಲಿ ಸಂಶಯವಿಲ್ಲ. ಬ್ರಾಹ್ಮಣ-ಕ್ಷತ್ರಿಯ, ಹಿಂದು-ಮುಸ್ಲಿಮ್, ಆಂಗ್ಲ-ಭಾರತೀಯ, ಪಾಶ್ಚಿಮಾತ್ಯ-ಪೌರಸ್ತ್ಯ, ಮುಂತಾದ ವಿರೋಧಗಳ ಸೃಷ್ಟಿ ಚಿತ್ರವನ್ನು ನೀಡಿ ಈ ಪ್ರಬಂಧಗಳು ನಮ್ಮ ದೃಷ್ಟಿಯನ್ನೇ ಬದಲಾಯಿಸುತ್ತವೆ. ನಮಗೆ ಆಶ್ಚರ್ಯವಾಗುವ ವಿಷಯವೆಂದರೆ, ಇಲ್ಲಿಯವರೆಗೆ ನಮ್ಮ ತಿಳಿವಳಿಕೆಯ ಪ್ರಕಾರ ಠಾಕೂರರ ವ್ಯಕ್ತಿತ್ವ ಎಷ್ಟು ಹಿರಿದಾಗಿದ್ದಿತೋ ಅದು ಈ ಪ್ರಬಂಧಗಳ ವಾಚನದಿಂದ ಮತ್ತಷ್ಟು ಹಿರಿದಾದಂತೆ ತೋರುತ್ತದೆ. ಕಾರಣ ಕನ್ನಡಿಗರಿಗೆ ಕನ್ನಡದ ಮೂಲಕ ಈ ಪ್ರಬಂಧ ಸಾಹಿತ್ಯದ ಪರಿಚಯ ಇಲ್ಲಿಯವರೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗಿರಲಿಲ್ಲ.

ಠಾಕೂರರ ಶೈಲಿಯಲ್ಲಿ ಗೌಡೀ ರೀತಿಯ ಓಜಸ್ಸಿದೆ. ಅದನ್ನು ಪರಿಚಯಮಾಡಿಕೊಳ್ಳಬೇಕಾದರೆ ಈ ಅನುವಾದವು ಸಹಾಯಕವಾಗಿದೆ. ಶ್ರೀ ಶಂಕರಾನಂದ ಸರಸ್ವತಿಯವರು ಠಾಕೂರರ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಮಾಡಿ ತನ್ಮೂಲಕ ಒಂದು ಚೈತನ್ಯವನ್ನು ಬೆಳೆಸಿಕೊಂಡಿದ್ದರು. ಈಗ ಆ ಎಲ್ಲ ಶಕ್ತಿಯ ಪೂರ್ಣ ಉಪಯೋಗ ಈ ಅನುವಾದದಲ್ಲಿ ಕಂಡುಬರುತ್ತದೆ. ಮೂಲ ಬಂಗಾಳಿಯ ಓಟವೇ ಎಷ್ಟೋ ಕಡೆಗಳಲ್ಲಿರುವಂತೆ ನಮಗೆ ಭಾಸವಾಗುತ್ತದೆ. ಶಂಕರಾನಂದ ಸರಸ್ವತಿಯವರ ಅನುವಾದವನ್ನು ಸರಿನೋಡಿ ತಮ್ಮ ಸದಭಿರುಚಿಯ ಒರೆಗಲ್ಲಿಗೆ ಹಚ್ಚಿನೋಡಿ ಅನುವಾದದ ಮೇಲ್ಮೆಯನ್ನು ಶ್ರೀ ವಿ. ಸೀತಾರಾಮಯ್ಯನವರು ಹೆಚ್ಚಿಸಿದ್ದಾರೆ. ಇವರಿಬ್ಬರ ಪ್ರಯತ್ನದಿಂದ ಈ ಸಾಹಿತ್ಯ ನಮಗೆ ಒದಗುವಂತಾಗಿರುವುದು ಸಂತೋಷ.

ಭಾರತದ ವಿಶ್ವಬಂಧುತ್ವದ ಸಂದೇಶವನ್ನು ನಾವು ಈ ಪ್ರಬಂಧಗಳಲ್ಲಿ ಕಾಣಬಹುದು. ಶಿಕ್ಷಣದ ತತ್ವಗಳಲ್ಲಿ ನಮ್ಮ ದೇಶಕ್ಕೆ ಉಚಿತವಾದವುಗಳ ಸರಳ ನಿರೂಪಣೆಯನ್ನು ನಾವು ನೋಡಬಹುದು. ಸಮಾಜದ ರೀತಿನೀತಿಗಳ ಕಟ್ಟುಪಾಡುಗಳ ವಿಮರ್ಶೆಯನ್ನು ಕಾಣಬಹುದು. ಬೃಹತ್ ಚೈತನ್ಯದ ಅಪೇಕ್ಷೆಗಳೆಲ್ಲವನ್ನೂ ನಾವಿಲ್ಲಿ ಪರಿಚಯಮಾಡಿಕೊಳ್ಳಬಹುದು.

ಇನ್ನೊಂದು ಮಾತು. ಬಂಗಾಳಿಯ ಸಾಹಿತ್ಯದಲ್ಲಿ ಗದ್ಯದ ಬೆಳವಣಿಗೆಗೆ ಠಾಕೂರರ ವ್ಯಕ್ತಿತ್ವದಿಂದ ಏನು ಸಹಾಯ ಒದಗಿರಬಹುದೆಂಬುದನ್ನೂ ನಾವಿಲ್ಲಿ ಸ್ಥೂಲವಾಗಿ ಅರ್ಥಮಾಡಿಕೊಳ್ಳಬಹುದು. ವೈಜ್ಞಾನಿಕ ಮನೋಭಾವವನ್ನು ಅವರು ಹೊಂದಿಸಿಕೊಂಡಿರುವ ದೃಷ್ಟಿ ಅಸಾಧಾರಣವಾದುದು. ಈ ಭಾವನೆಗಳು ಈ ಭಾಷಾವೈಚಿತ್ರ್ಯಗಳು-ಇವೆರಡರಿಂದ ಈ ಪ್ರಬಂಧಗಳಿಗೆ ಇನ್ನೂ ಒಂದು ನೂತನತೆ ಉಂಟಾಗಿದೆ.

ನಿಬಂಧ ಎಂಬ ಪದ ಕನ್ನಡದಲ್ಲಿ ಅಷ್ಟು ಪ್ರಯೋಗದಲ್ಲಿಲ್ಲ. ಪ್ರಬಂಧ ಎಂಬುದೇ ಹೆಚ್ಚು ಪ್ರಚಾರದಲ್ಲಿದೆ. ಹೆಸರು ಏನೇ ಆಗಲಿ ಈ ರೀತಿಯ ಸಾಹಿತ್ಯರಚನೆಗೆ 'ನಿಬಂಧಮಾಲಾ-ಭಾಗ ೧' ತುಂಬ ಪ್ರೋತ್ಸಾಹಕಾರಿಯಾಗಿರುತ್ತದೆ. ಕನ್ನಡದ ಭಂಡಾರದಲ್ಲಿ ಇದೊಂದು ಉತ್ತಮ ಕೃತಿಯಾಗಿ ನಿಲ್ಲುತ್ತದೆ. ಇದನ್ನು ಸಂಗ್ರಹಿಸಬೇಕು, ಓದಬೇಕು.

ಸಿ. ನಿಜಲಿಂಗಪ್ಪ
ಮುಖ್ಯ ಮಂತ್ರಿ

" ವಿಧಾನ ಸೌಧ "
ಬೆಂಗಳೂರು-೧
ತಾ. ೧೭-೧೦-೬೭

ನಿಮ್ಮ ಸೆಪ್ಟೆಂಬರ್ ೮ನೇ ದಿನಾಂಕದ ಕಾಗದ, ಹಾಗೂ ಅದರೊಡನೆ ನೀವು ಕಳುಹಿಸಿದ್ದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿಗೆ ದಾನವಾಗಿ ಅರ್ಪಿಸಿರುವ ದತ್ತಿನಿಧಿಯ ದಾನಪ್ರಕಟನೆ ಭಿತ್ತಿಪತ್ರವನ್ನು ಓದಿ ತುಂಬ ಸಂತೋಷವಾಯಿತು. ಕನ್ನಡ ಸಾಹಿತ್ಯಕ್ಕೆ ಶ್ರೀ ವೆಂಕಟಸುಬ್ಬಯ್ಯನವರು ಸಲ್ಲಿಸಿರುವ ಸೇವೆ ಅಪಾರವಾದದ್ದು ; ಇದಕ್ಕೆ ಕನ್ನಡಿಗರು ಕೃತಜ್ಞರಾಗಿರಬೇಕು.

ಶ್ರೀ ವೆಂಕಟಸುಬ್ಬಯ್ಯನವರ ಈ ದತ್ತಿದಾನದ ಸುಸಂದರ್ಭವನ್ನು ಉಳಿದೆಲ್ಲ ಸಾಹಿತಿಗಳಿಗೂ ನಿದರ್ಶನವಾಗಿಟ್ಟು ಸಂಜನಿಸುವ ಸನ್ನಿವೇಶಗಳನ್ನು ಪರಿಷತ್ತು ಬಳಸಿಕೊಂಡು ಇಂತಹ ಉದಾರ ಮತ್ತು ಉನ್ನತ ಸಾಹಿತಿಗಳ ಸಂಖ್ಯೆಯನ್ನು ಇನ್ನೂ ಹೆಚ್ಚುಹೆಚ್ಚಾಗಿ ಬೆಳೆಸಲೆಳೆಸುವುದೆಂದು ಆಶಿಸುತ್ತೇನೆ.

ಇತಿ ತಮ್ಮ
ಸಿ. ನಿಜಲಿಂಗಪ್ಪ

* * * * *

D. V. Gundappa, D.Litt.

Gokhale Institute of Public Affairs
Basavangudi, Bangalore-4
Date 30 9-1967

Please accept my warm congratulations on your having given such a handsome donation—Rs. 8000/—to the Sahitya Parishat.

The sum makes a fortune for an average man in our country and you have given it away in the proper spirit, that is a great act of patriotism, for which all will honour you and about which your friends will be very proud.

God bless you and yours. With warm regards.

Yours Sincerely,
D. V. GUNDAPPA

ಇಂಥ ಹಲವಾರು ಪತ್ರಗಳು 'ಕನ್ನಡ ನುಡಿ'ಯ ವಾಚಕರಿಂದ ನಮಗೆ ಬಂದಿವೆ. ಇಲ್ಲಿ ಪತ್ರಗಳನ್ನು ಪ್ರಕಟಿಸಿರುವ ಉದ್ದಿಶ್ಯವಿಷ್ಟೆ : ಕನ್ನಡ ನಾಡಿನಲ್ಲಿ ಕೊಡುಗೈಯ ದಾನಿಗಳಿಗೆ ಕೊರತೆ ಇಲ್ಲ. ಅವರಲ್ಲಿ ಕೆಲವರಾದರೂ ಇದರಿಂದ ಸ್ಫೂರ್ತಿ ಪಡೆದರೆ ಪರಿಷತ್ತು ತನ್ನ ಬಹುಮುಖ ಕೆಲಸ ಕಾರ್ಯಗಳಿಗೆ ಬೇಕಾದ ಹಣವನ್ನು ಪಡೆದೀತು.

ಕೊರಟ ಶ್ರೀನಿವಾಸರಾವ್
'ಕನ್ನಡ ನುಡಿ'

ತಾ. ೨೬-೧೦-೧೯೬೭

ಸುದ್ದಿ ಸಂಗ್ರಹ

ಕನ್ನಡ ಅಭ್ಯಾಸಕ್ಕೆ ಪ್ರೋತ್ಸಾಹ

ವಿಶ್ವವಿದ್ಯಾನಿಲಯದಲ್ಲಿ ಬಿ. ಎ., ಪದವಿ ಮಟ್ಟದಲ್ಲಿ ಕನ್ನಡವನ್ನು ಮುಖ್ಯ ವಿಷಯವಾಗಿ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ೫೦ ಗಳನ್ನು ವಿದ್ಯಾರ್ಥಿ ವೇತನವಾಗಿ ಕೊಡುವ ಯೋಜನೆ ಸರಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿದುಬಂದಿದೆ. ಇದು ಕಾರ್ಯರೂಪಕ್ಕೆ ಬಂದರೆ ಕನ್ನಡ ಪಂಡಿತರ ಅಭಾವ ತಪ್ಪುವ ನಿರೀಕ್ಷೆ ಇದೆ.

ಕಾರಂತರಿಗೆ ನಿಧಿ ಹಾಗೂ ಗ್ರಂಥಸಮರ್ಪಣೆ

ಬೆಂಗಳೂರಿನ ಪುರೋಗಾಮಿ ಸಾಹಿತ್ಯ ಸಂಘದವರು ಕನ್ನಡನಾಡಿನ ಭಾರ್ಗವರೆನಿಸಿದ ಕೋ. ಶಿವರಾಮ ಕಾರಂತರಿಗೆ ಅರವತ್ತಾರು ವರ್ಷಗಳು ತುಂಬಿದ ಸಂತೋಷದ ಸಂದರ್ಭದಲ್ಲಿ ಬೆಂಗಳೂರಿನ ನಗರಭವನದಲ್ಲಿ ಶ್ರೀಯುತರಿಗೆ ಆರುಸಾವಿರದ ಆರನೂರ ಅರವತ್ತಾರು ರೂಪಾಯಿ ಅರವತ್ತಾರು ಪೈಸೆಗಳನ್ನು ಸಾಂಕೇತಿಕವಾಗಿ ಇತ್ತು ಗೌರವಿಸಿದರು. ಈ ಸಮಯದಲ್ಲಿ ಮಾವಿನಕೆರೆಯವರ ನೇತೃತ್ವದಲ್ಲಿ ಎಂಭತ್ತೈದು ಸಾಹಿತಿಗಳು ಬರೆದ ಉತ್ತಮ ಸಣ್ಣ ಕಥೆಗಳ 'ದಿಗಂತ' ಸಂಕಲನವನ್ನು ಪ್ರಕಟಿಸಿದರು. ಪುಟಗಳು : ೮೪೩ ; ಬೆಲೆ : ರೂ. ೨೦-೦೦. ಪ್ರತಿಗಳಿಗೆ : ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ೧೧ನೇ ಕ್ರಾಸ್, ಬೆಂಗಳೂರು-೩.

ಮಂಗಳೂರಿನಲ್ಲಿ ಸಂಶೋಧನಾ ಕೇಂದ್ರ

ಮೈಸೂರಿನ ಮಾನಸ ಗಂಗೋತ್ರಿಯು ತನ್ನ ಅಸ್ತಿತ್ವದ ಅತ್ಯಲ್ಪಕಾಲದಲ್ಲೇ ಬೃಹದ್ ಸಂಸ್ಥೆಯಾಗಿ ಬೆಳೆದಿದೆ. ಕುವೆಂಪುರಂತಹ ರಸಋಷಿಗಳು ಮಾತ್ರ ಈ ಬಗೆಯ ದರ್ಶನ ಕಾಣಬಲ್ಲರು. ಅಲ್ಲಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರ ವಿಭಾಗ, ಹರಿದಾಸ ವಾಙ್ಮಯ ಸಂಶೋಧನ ವಿಭಾಗ, ಪ್ರಾಚ್ಯ ಸಂಶೋಧನಾ ವಿಭಾಗ, ಕೋಶ ಸಂಸ್ಕರಣ ವಿಭಾಗ, ಪ್ರಸಾರಾಂಗದ ಮುದ್ರಣ ಪ್ರಕಟಣ ವಿಭಾಗ, ಭಾಷಾಶಾಸ್ತ್ರ ವಿಭಾಗ, ಜನಪದ ಸಾಹಿತ್ಯ ವಿಭಾಗಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಈಗ ಗಂಗೋತ್ರಿಯು ತನ್ನ ಜ್ಞಾನ ಗಂಗೆಯ ಶಾಖೋಪಶಾಖೆಗಳನ್ನು ನಾಡಿನಲ್ಲೆಲ್ಲಾ ಹರಿಸುವ ಸಲುವಾಗಿ ರಾಜ್ಯದ ಹಲವು ಕಡೆ ಉಪಕೇಂದ್ರಗಳನ್ನು ತೆರೆಯಲು ಯೋಚಿಸಿದ್ದು ಸದ್ಯದಲ್ಲೇ ಮಂಗಳೂರಿನ ಶಾಖೆಯು ಕಾರ್ಯಾರಂಭ ಮಾಡುವುದೆಂದು ತಿಳಿದುಬಂದಿದೆ.

ದರ್ಪಣಾವಲೋಕನ – ಒಂದು ಪ್ರತಿ ವಿಮರ್ಶೆ

(೩೬ನೆಯ ಪುಟದಿಂದ)

ಆದರೂ ಕೇಶಿರಾಜನ ಪಾಠ ಯಾವುದೆಂಬುದು ಅನಿರ್ದಿಷ್ಟವಾಗಿಯೇ ಉಳಿಯುತ್ತದೆ. ಬೇಕಾದರೆ ಮುಂದೆ ಯಾರಾದರೂ ಇನ್ನೊಂದು ಸಲ ಟೀಕಾ ಪಾಠವನ್ನು ಇತರ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಬಹುದು. ಅಂಥ ಒಂದು ಪರಿಷ್ಕರಣದಲ್ಲಿ ಸಂವಾದಿಯಾದ ಸೂತ್ರಪಾಠಗಳನ್ನೂ ಕಂಡುಹಿಡಿಯಬಹುದು. ಹಾಗೆ ಮಾಡಿದರೆ ಅದೊಂದು ಪ್ರಯೋಜನಕಾರಿ ಪರಿಷ್ಕರಣವಾಗಿ ಪರಿಣಮಿಸುತ್ತದೆ. ಅದೇ ಬೇರೆಯ ಕೆಲಸ, ಪ್ರಕೃತ ಅದು A ಅವರ ಉದ್ದೇಶವಾಗಿರಲಿಲ್ಲ. ಈಗಿರುವ ದರ್ಪಣದ ಸೂತ್ರಪಾಠವೇನಿದ್ದರೂ ನಿಟ್ಟೂರ ನಂಜಯ್ಯನ ಕಾಲದಲ್ಲಿದ್ದ ಅದರ ಸ್ಥಿತಿಯನ್ನು ತೋರಿಸುತ್ತದೆ, ಅಷ್ಟೆ.

B ಯವರ ವಿಮರ್ಶೆಯ ಈ ಪುನರ್ ವಿವೇಚನೆಯಲ್ಲಿ B ಯವರು ವಹಿಸಿರುವ ಶ್ರದ್ಧೆ, ಅವಧಾನ ಹಾಗೂ ಶುದ್ಧಪಾಠ ನಿರ್ಣಯಕ್ಕಾಗಿ ಮತ್ತು ದೋಷನಿವಾರಣೆಗಾಗಿ ತೋರಿರುವ ತಿಳಿವು ತವಕಗಳನ್ನು ಮನಸಾರೆ ಮೆಚ್ಚಲಾಗಿದೆ. 'ಇದರಿಂದ ಮುಂದಿನ ಮುದ್ರಣ ಇನ್ನಷ್ಟು ಶುದ್ಧವಾಗಿ ಓದುಗರ ಕೈ ಸೇರಿದರೆ ಈ ಲೇಖನ ಸಾರ್ಥಕ, ಲೇಖಕ ಕೃತಾರ್ಥ' ಎಂದು B ಯವರು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. A ಯವರು ಈ ಅವಲೋಕನದಲ್ಲಿ ಸೂಕ್ತಾಂಶಗಳನ್ನು ಸ್ವೀಕರಿಸಿ, ಇನ್ನೂ ಶುದ್ಧತಮ ಶಬ್ದಮಣಿದರ್ಪಣ ಮುದ್ರವೊಂದನ್ನು ಆದಷ್ಟು ಬೇಗ ಹೊರ ತರುವರೆಂದು ಆಶಿಸುತ್ತೇವೆ.

ಲಂಡನ್ನಿನಲ್ಲಿ ಯು. ಎಸ್. ಕೃಷ್ಣರಾವ್ ದಂಪತಿಗಳು

ಉನ್ನತ ವ್ಯಾಸಂಗದ ಸಲುವಾಗಿ ಇಂಗ್ಲೆಂಡಿಗೆ ತೆರಳಿರುವ ನೃತ್ಯಗಾರ ಯು. ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿಯವರು ಕನ್ನಡ ಸಂಸ್ಕೃತಿ ನೃತ್ಯಕಲೆಗಳ ರಾಯಭಾರಿಗಳೂ ಆಗಿದ್ದಾರೆ. ಅವರು ಕೆ. ವಿ. ಐಯ್ಯರ್ ಅವರ ಶಾಂತಲಾ ಕಾದಂಬರಿಯ ಆಧಾರದಿಂದ ಪ್ರದರ್ಶಿಸಿದ 'ಶಾಂತಲಾ' ನೃತ್ಯರೂಪಕ ತುಂಬಾ ಯಶಸ್ವಿಯಾಗಿದ್ದು, ಇಂಗ್ಲೆಂಡಿನ ಎಲ್ಲ ಪ್ರಮುಖ ಪತ್ರಿಕೆಗಳ ಪ್ರಶಂಸೆಗೂ ಪಾತ್ರವಾಗಿದೆ. ಶ್ರೀಯುತರು ನೃತ್ಯಕಲೆಯಲ್ಲಿ ಪ್ರವೀಣರಾಗಿದ್ದು ಭಾರತೀಯ ನೃತ್ಯಕಲೆಯನ್ನು ಕುರಿತ ಒಂದು ಬೃಹತ್ ಗ್ರಂಥವನ್ನು ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯ ಪರವಾಗಿ ಪ್ರಕಟಿಸಿದ್ದಾರೆ.

ಕೇಂದ್ರದ ಉಚ್ಚ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ

ಇದುವರೆಗೆ ಭಾರತ ಸರಕಾರದವರು ಅಖಿಲ ಭಾರತ ವ್ಯಾಪ್ತಿ ಇರುವ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗಳಲ್ಲಿ ರಾಜ್ಯ ಭಾಷೆಗಳಿಗೆ ಅವಕಾಶಕೊಟ್ಟದ್ದರೂ ಅದರಲ್ಲಿ ಕೆಲವೊಂದು ಪ್ರತಿಷ್ಠಿತ ಭಾಷೆಗಳಿಗೆ ಮಾತ್ರ ಪುರಸ್ಕಾರ ನೀಡಿತ್ತು. ಈಗ ಕನ್ನಡದ ಯುವಕರು ಫೆಡರಲ್ ಕಮಿಷನ್ನಿನ ಪರೀಕ್ಷೆಗಳಿಗೆ ಕುಳಿತುಕೊಳ್ಳುವಾಗ ಚರಿತ್ರೆ ರಾಜಕೀಯ ಶಾಸ್ತ್ರ ಅರ್ಥಶಾಸ್ತ್ರಗಳ ಜತೆಯಲ್ಲಿ ಕನ್ನಡವನ್ನೂ ಐಚ್ಛಿಕ ಭಾಷೆಯಾಗಿ ತೆಗೆದುಕೊಳ್ಳಲು ಅವಕಾಶ ನೀಡಿದ್ದಾರೆ.

ಕಳೆದ ತಿಂಗಳು ಆಚಾರ್ಯ ಪಾಠಶಾಲೆಯಲ್ಲಿ ಕನ್ನಡ ಸಂಘದ ಉದ್ಘಾಟನೆ ಮಾಡುತ್ತಾ ಮಾನಸಗಂಗೋತ್ರಿಯ ಕನ್ನಡ ಪ್ರೊಫೆಸರರಾದ ದೇ. ಜವರೇಗೌಡರು ಈ ವಿಷಯವನ್ನು ಹೊರಗೆಡಹಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿದ್ದಯ್ಯಪುರಾಣಿಕರು ವಹಿಸಿದ್ದರು.

ಪರಿಷತ್ತಿಗೆ ಬಲ್ಗೇರಿಯಾ ವಿದ್ವಾಂಸರ ಭೇಟಿ

ಇವಾನ್ ಸ್ಟೈಫನೋವ್ ಎಂಬ ಸುಪ್ರಸಿದ್ಧ ವಿದ್ವಾಂಸರು ಕಳೆದ ತಿಂಗಳು ಪರಿಷತ್ತಿಗೆ ಭೇಟಿಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಪರಿಚಯಮಾಡಿಕೊಂಡರು. ಶ್ರೀಯುತರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ಶಾಸ್ತ್ರವನ್ನು ಕಲಿತು, ಅನಂತರ ಸಂಖ್ಯಾಶಾಸ್ತ್ರದ ಮೇಲೆ ಕೆಲಸ ಮಾಡಿ ಪಿಎಚ್.ಡಿ ಡಿಗ್ರಿ ಪಡೆದರು. ಇವರು ಸೋಫಿಯಾದಲ್ಲಿ ಸಂಖ್ಯಾ ಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ಸಂಶೋಧನೆಯಲ್ಲಿ ಕೆಲಸ ಮಾಡಿ ಈಗ ಅಂತರಾಷ್ಟ್ರೀಯ ಸಂಖ್ಯಾಶಾಸ್ತ್ರದ ಸಂಸ್ಥೆಯ ಸದಸ್ಯರಾಗಿದ್ದಾರೆ.

ಅವರು ಬಲ್ಗೇರಿಯನ್ ಮತ್ತು ಜರ್ಮನ್ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಎಲ್ಲ ವಿಷಯಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ ಎಂದೂ, ಅಲ್ಲಿ ಇಂಗ್ಲಿಷಿನ ಮೋಹವಿಲ್ಲವೆಂದೂ ಕನ್ನಡವೂ ಪ್ರೋತ್ಸಾಹ ದೊರೆತರೆ ಸಶಕ್ತ ಶಿಕ್ಷಣ ಮಾಧ್ಯಮವಾಗಬಲ್ಲದೆಂದು ಒತ್ತಿ ಹೇಳಿದರು.

ಲೇಖಕಿಯರ ಒಂದು ಕಾರ್ಯಕ್ರಮ : ಕನ್ನಡ ವೈಭವ

ಕಳೆದ ತಿಂಗಳು ಕನ್ನಡ ಲೇಖಕಿಯರ ಸಂಘದಿಂದ ಬೆಂಗಳೂರಿನ ಹೆಚ್. ಬಿ. ಸಮಾಜದ ಭವನದಲ್ಲಿ ಒಂದು ವಿಚಾರಪೂರಿತ ಕಾರ್ಯಕ್ರಮವು ಜರುಗಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿಗಳಾದ ಹೆಚ್. ಆರ್. ಇಂದಿರಾ, ಎಂ. ಆರ್. ಲಕ್ಷಮ್ಮ, ಎಂ. ಸಿ. ಪದ್ಮಾ, ಕೆ. ಸಾವಿತ್ರಿ ಮೊದಲಾದ ಮಹಿಳಾ ಲೇಖಕಿಯರು ಭಾಗವಹಿಸಿದ್ದರು. ಶ್ರೀಮತಿ ನೀಳಾದೇವಿಯವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆಚಾರ್ಯ ಕಾಲೇಜಿನ ಶ್ರೀಮತಿ ಅನ್ನಪೂರ್ಣಮ್ಮ ಅವರು ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಆದಿತ್ಯ ಪುರಾಣ

ಸುರತ್ಕಲ್ಲಿನ ವಿಜಯ ಸಾಹಿತ್ಯ ಮಾಲೆಯವರು ಇದುವರೆಗೆ ಕನ್ನಡದಲ್ಲಿ ದುರ್ಲಭವಾಗಿದ್ದ ಆದಿತ್ಯ ಪುರಾಣದ ಕನ್ನಡ ಭಾಷಾಂತರವನ್ನು ಪರಿಶೋಧಿಸಿ ಈಗ ಪ್ರಥಮ ಸಂಪುಟವನ್ನು ಪ್ರಕಟಿಸಿದ್ದಾರೆ. ಇದರ ಸಂಪಾದಕರು ಶ್ರೀ ವೆಂಕಟರಾಯಾಚಾರ್ಯರು. ಕಳೆದ ತಿಂಗಳು ಗ್ರಂಥ ಪ್ರಕಾಶನೋತ್ಸವವು ಸುರತ್ಕಲ್ಲಿನ ವಿದ್ಯಾದಾಯಿನಿ ಶಾಲೆಯಲ್ಲಿ ಶ್ರೀ ಕೆ. ಆರ್. ಆಚಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕನ್ನಡ ಭಾಷೆಯ ಚರಿತ್ರೆ

ಕನ್ನಡ ಪುಸ್ತಕ ಪ್ರಕಟನಾ ಪ್ರಪಂಚದಲ್ಲಿ ಇತ್ತೀಚೆಗೆ ಉದ್ಗ್ರಂಥಗಳು ಅನೇಕ ಕಾಣಿಸಿಕೊಳ್ಳುತ್ತಿರುವುದು ಸ್ತುತ್ಯ ವಿಚಾರವಾಗಿದೆ. ವಿದ್ವಾಂಸರಿಂದ ಮಾತ್ರವೇ ನಿರ್ಮಾಣಗೊಳ್ಳಬೇಕಾಗಿರುವ ಭಾಷಾಚರಿತ್ರೆಯಂತಹ

ಅಪರೂಪದ, ಶ್ರಮ ಸಾಧ್ಯವಾದ ವಿಷಯಗಳು ಕಾಣಿಸಿಕೊಂಡಿವೆ. ಶ್ರೀ ಧಾರವಾಡಕರ, ಶ್ರೀ ಚಿದಾನಂದಮೂರ್ತಿ, ಶ್ರೀ ಹಂಪನಾ ಇವರ ಸಾಲಿಗೆ ಇದೀಗ ಪ್ರ.ಗೋ. ಕುಲಕರಣಿ ಅವರು ತಮ್ಮ ಅಮೂಲ್ಯವಾದ ಕನ್ನಡ ಭಾಷೆಯ ಚರಿತ್ರೆ ಗ್ರಂಥದಿಂದ ಸೇರಿದ್ದಾರೆ. ಇದನ್ನು ಬರೆಯಲು ಶ್ರೀಯುತರಿಗೆ ಐದು ದಶಕಗಳೇ ಹಿಡಿದವೆಂದರೆ ಲೇಖಕರ ಶ್ರಮ, ತಾಳ್ಮೆ, ಸಿದ್ಧತೆಗಳಿಗೆ ನಾವು ತಲೆದೂಗಬೇಕಾಗುವುದು. ಇದು ಭಾಷಾ ಸಾಹಿತ್ಯಾಭ್ಯಾಸಿಗಳಿಗೆ ಒಂದು ಸಂಗ್ರಹಯೋಗ್ಯ ಕೃತಿ. ಪುಟಗಳು : ೫೫೦ ; ಬೆಲೆ : ರೂ. ೨೦–೦೦ ಪ್ರತಿಗಳಿಗೆ : ಪ್ರ. ಗೋ. ಕುಲಕರಣಿ ೨೦೦/೩೩, ಹಿಂದವಾಡಿ, ಬೆಳಗಾವ್.

ಮಾಧವಿ—ಕನ್ನಡದ ಒಂದು ನೂತನ ಮಾಸಪತ್ರಿಕೆ

ಕನ್ನಡದಲ್ಲಿ ಕಸ್ತೂರಿ, ಪಂಚಾಮೃತ ಮಾದರಿಗಳ ಪತ್ರಿಕೆಗಳು ಹೆಚ್ಚು ಜನಪ್ರಿಯವಾಗಿವೆ ಎನ್ನಲು ಇತ್ತೀಚೆಗೆ ಧಾರವಾಡದಿಂದ ವಿಚಾರ, ವಿನೋದ, ವಿಜ್ಞಾನಗಳಿಗೆ ಮೀಸಲಾದ 'ಮಾಧವಿ' ಎಂಬ ಹೆಸರಿನ ಮಾಸಿಕ ಪ್ರಕಟವಾಗುತ್ತಿದೆ. ಪ್ರಥಮ ಸಂಚಿಕೆಯಲ್ಲಿ ವಿಖ್ಯಾತ ಲೇಖಕರ ಬರಹಗಳಿದ್ದು ಮನರಂಜನೆಯೊಂದಿಗೆ ಜ್ಞಾನಪ್ರಸಾರಕ್ಕೂ ಎಡೆಕೊಟ್ಟಿದೆ. ಇದರ ಸಂಚಾಲಕರು : ಎ. ಆರ್. ಪಾಟೀಲರು ; ವ್ಯವಸ್ಥಾಪಕರು : ಕೃಷ್ಣಮೂರ್ತಿ, ಎಂ.ಎ. ಸಂಪಾದಕರು : ಕುವಲಯ, ಎಂ.ಎ. ಉತ್ಪಾದನೆ ಮತ್ತು ಚಿತ್ರಕಲೆ ಕ್ರಮವಾಗಿ ಕೃಷ್ಣಪೋತದಾರ, ಭಾಸ್ಕರಭೋಸಲೆ ಅವರದು. ಸುಮಾರು ನೂರು ಪುಟಗಳ ಈ ಮಾಸಿಕದ ವಾರ್ಷಿಕ ಚಂದಾ ರೂ. ೧೫–೦೦ ; ಬಿಡಿಸಂಚಿಕೆ ರೂ.೦–೭೫ ವಿಳಾಸ : ಮಾಧವಿ ಕಾರ್ಯಾಲಯ ; ದೀಕ್ಷಿತ್ ಕಾಂಪೌಂಡ್, ಯು. ಬಿ. ಹಿಲ್. ಧಾರವಾಡ-೭.

ಪುಸ್ತಕ ಪ್ರಕಾಶಕರಿಗೊಂದು ಸೂಚನೆ

ಸಾರ್ವಜನಿಕ ಪುಸ್ತಕ ಭಂಡಾರ ತಿದ್ದುಪಡಿ ಕಾನೂನು ರೀತ್ಯ ಭಾರತದಲ್ಲಿ ಪ್ರಕಟವಾಗಲಿರುವ ಪ್ರತಿಯೊಂದು ಗ್ರಂಥ ಹಾಗೂ ವೃತ್ತಪತ್ರಿಕೆಗಳ ಪ್ರತಿಯೊಂದನ್ನು ಕಲ್ಕತ್ತ ರಾಷ್ಟ್ರೀಯ ಲೈಬ್ರರಿ, ಮದರಾಸಿನ ಕನ್ನಮೇರ ಲೈಬ್ರರಿ, ಮುಂಬಯಿಯ ಸೆಂಟ್ರಲ್ ಲೈಬ್ರರಿಗಳಿಗೆ ತಲಾಒಂದೊಂದು ಪ್ರತಿಗಳನ್ನು ಪ್ರಕಟವಾಗುವ ೩೦ದಿನಗಳೊಳಗಾಗಿ ಸ್ವಂತ ವೆಚ್ಚದಲ್ಲಿ ರಿಜಿಸ್ಟರು ಅಂಚೆಯ ಮೂಲಕ ರವಾನಿಸಬೇಕೆಂದೂ ಇಲ್ಲದಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದೆಂದೂ ಪ್ರಕಟಿಸಲಾಗಿದೆ.

ಸಂಸ್ಕೃತ-ಕನ್ನಡ ಶಬ್ದಕೋಶದ ದ್ವಿತೀಯ ಸಂಪುಟ

ಸುಮಾರು ಆರು ವರ್ಷಗಳ ಹಿಂದೆ ಸಾಹಿತ್ಯವಿದ್ವಾನ್ ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ ಅವರು ಪ್ರಕಟಿಸಿದ ಸಂಸ್ಕೃತ-ಕನ್ನಡ ಶಬ್ದಕೋಶದ ದ್ವಿತೀಯ ಸಂಪುಟವು ಈಗ ಬಿಡುಗಡೆಯಾಗಲಿದೆ. ಇದು ಕನ್ನಡಕ್ಕೆ ಒಂದು ಅಪೂರ್ವವಾದ ಕಾಣಿಕೆ. ಸುಮಾರು ೨೫೦೦ ಪುಟಗಳಲ್ಲಿ ೫ ಸಂಪುಟಗಳಲ್ಲಿ ಪ್ರಕಟವಾಗಲಿರುವ ಈ ಬೃಹತ್ ಕೋಶದ ಬೆಲೆ ರೂ ೯೦–೦೦.

ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ
" ಸೌಗಂಧಿಕಾ "
೩೪೮, ೫ನೆಯ ಕ್ರಾಸ್ ರಸ್ತೆ
ವಿಲ್ಸನ್ ಗಾರ್ಡನ್ಸ್
ಬೆಂಗಳೂರು–೨೭

ಹೊಸಕನ್ನಡ ತ್ರೈಮಾಸಿಕ : 'ಸಮನ್ವಯ'

ಬೆಂಗಳೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮಗಳಿಗೆ ಸಂಬಂಧಿಸಿದಂತೆ ಮೇಲ್ಮಟ್ಟದ ತ್ರೈಮಾಸಿಕವೊಂದು ಸಮನ್ವಯ ಹೆಸರಿನಲ್ಲಿ ಪ್ರಕಟವಾಗಲಿದೆ. ಇದರ ಮುಖ್ಯ ಸಂಪಾದಕರು ಪದ್ಮಶ್ರೀ ಡಾ. ಗೋಕಾಕರು. ಸಂಪಾದಕ ಮಂಡಲಿಯಲ್ಲಿ ಸರ್ವಶ್ರೀ ಹೇಮಂತ ಕುಲಕರ್ಣಿ, ನಿರಂಜನ, ಶಂಕರ ಮೊಖಾಸಿ, ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ಪ. ಸು. ಭಟ್ಟ, ರಂಜನಭಟ್ಟ ಮತ್ತು ಶ್ರೀಮತಿ ಚಿ. ನ. ಮಂಗಳಾ ಅವರುಗಳು ಇದ್ದಾರೆಂದು ತಿಳಿದು ಬಂದಿದೆ.

ಸಮನ್ವಯದ ಪ್ರಥಮ ಸಂಚಿಕೆ ಜನವರಿಯಲ್ಲಿ ಬಿಡುಗಡೆಯಾಗಲಿದೆ.

ಚಿತ್ರಕಾರ ಪಿ. ಎಸ್. ರಾವ್ ಅವರ ನಿಧನ

ಭಾರತದ ಪ್ರತಿಭಾವಂತ ಚಿತ್ರಕಾರರಲ್ಲಿ ಒಬ್ಬರಾಗಿದ್ದು ಕನ್ನಡಿಗರಾಗಿದ್ದ ಪಿ. ಸುಬ್ಬರಾಯರು ದೆಹಲಿಯಲ್ಲಿ ಬಡತನದ ಭವಣೆಯನ್ನು ಅನುಭವಿಸಲಾಗದೆ ಜೀವನದಲ್ಲಿ ಆತ್ಮಹತ್ಯೆಮಾಡಿಕೊಳ್ಳಬೇಕಾಗಿ ಬಂದುದು ಕನ್ನಡಿಗರ ದುರ್ದೈವ. ಅವರು ಮುಂಬಯಿಯ ಜೆ. ಜೆ. ಆರ್ಟ್ಸ್ ಸಂಸ್ಥೆಯಲ್ಲಿ ಡಿಪ್ಲೊಮೊ ಪಡೆದು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡರು. ಅವರ ಜೀವನ ಚಕ್ರ, ರಾಮಾರಾಮಿ, ಗೋಡ್ಸೆ – ಇವುಗಳನ್ನು ನೋಡಿದವರು ಅವರ ಪ್ರತಿಭೆಗೆ ಬೆರಗಾಗಿದ್ದರು. ಅ. ನ. ಕೃ. ಅವರು ತಮ್ಮ ಕನ್ನಡ ನಾಡಿನ ಕಲಾವಿದರನ್ನು ಕುರಿತು ಬರೆದ

(೪೪ನೇ ಪುಟ ನೋಡಿ)

ಸಂಪಾದಕೀಯ

ಶ್ರೀ ಮಹಾಜನ್ ವರದಿ

ಮಹಾರಾಷ್ಟ್ರದವರೂ ಕನ್ನಡದವರೂ ನಿರೀಕ್ಷಿಸಿದ್ದ ಶ್ರೀ ಮಹಾಜನ್ ವರದಿ ಸಿದ್ಧರಾಗಿ ಅದರ ಮುಖ್ಯ ವಿಷಯಗಳು ಹೊರಬಿದ್ದಿವೆ. ಕನ್ನಡಿಗರು ಶಾಂತರೀತಿಯಿಂದ ಮಂಡಿಸಿದ್ದ ಬಹುತೇಕ ವಿಷಯಗಳನ್ನು ಈ ವರದಿ ಒಪ್ಪಿದೆ. ಈಗ ಇದು ಕೇಂದ್ರ ಸರಕಾರದ ಮುಂದೆ ಇದೆ. ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ತಮ್ಮ ಸ್ಪಷ್ಟವಾದ ನಿಲುವನ್ನು ಪ್ರಕಟಿಸಿದ್ದಾರೆ. ಅವರ ನಿಲುವಿನಲ್ಲಿ ವರದಿ ಪ್ರಕಟವಾಗುವುದಕ್ಕೆ ಮುಂಚೆ ಇದ್ದ ಸ್ಥಿರತೆಯಲ್ಲಿ ಸ್ವಲ್ಪವೂ ಮಾರ್ಪಾಟಾಗಿಲ್ಲ. ಆದರೆ ಈಚೆಗೆ ಮಹಾರಾಷ್ಟ್ರ ಸರಕಾರದ ಕಡೆಯಿಂದ ಒಡಕು ಅಭಿಪ್ರಾಯ ಹೊರಬಿದ್ದಿದೆ. ಇದು ಶಾಂತಿಪ್ರಿಯರೆಲ್ಲರಿಗೂ ಆಶ್ಚರ್ಯವನ್ನೂ ಖೇದವನ್ನೂ ಒಟ್ಟಿಗೆ ತರುತ್ತದೆ.

ಗ್ರಾಮ ಘಟಕದ ತತ್ವವನ್ನು ಶ್ರೀ ಮಹಾಜನ್ ಅವರೂ ತಳ್ಳಿಹಾಕಿದ್ದಾರೆ. ಭಾಷಾವಾರು ಪ್ರಾಂತವಿಭಜನೆಗೆ ಎಲ್ಲಾ ನಾಡಿನ ಜನರ ಶಾಂತ ಜೀವನವನ್ನು ಕದಡದಿರುವುದೇ ಮುಖ್ಯ ಉದ್ದೇಶವಾಗಿರುವುದರಿಂದ ಈ ತತ್ವವನ್ನು ತಳ್ಳಿ ಹಾಕಿರುವುದು ಸೂಕ್ತವೇ ಆಗಿದೆ.

ಇನ್ನು ಈ ಸಮಸ್ಯೆಯನ್ನು ಮತ್ತೆ ಬೃಹತ್ತಾಗಿ ಮಾಡಿ ಕದಡಿದ ನೀರಿನಲ್ಲಿ ಮೀನು ಹಿಡಿಯುವ ಕೆಲಸ ಸರಿಯಾದುದಲ್ಲ. ಭಾರತದ ಐಕ್ಯವನ್ನು ರಕ್ಷಿಸುವುದೇ ಎಲ್ಲ ಪ್ರದೇಶಗಳ ಮುಖ್ಯ ಗುರಿ ಎಂಬುದನ್ನು ಎಲ್ಲ ಮುಂದಾಳುಗಳೂ ಹೇಳುತ್ತ ಬಂದಿದ್ದಾರೆ. ಭಾರತದ ಅತಿ ಶ್ರೇಷ್ಠ ನ್ಯಾಯಾಲಯದ ಮೂರ್ತಿಗಳು ಆ ದೃಷ್ಟಿಯಿಂದಲೇ ನಮ್ಮ ಎಲ್ಲ ನಾಡಿನ ಸಮಸ್ಯೆಗೆ ಸೂಕ್ತ ಪರಿಹಾರವನ್ನು ನೀಡಿದ್ದಾರೆ. ಎಂದೂ ಶಾಂತಿಗೆ ಮನತೆತ್ತವರಾದ ಕನ್ನಡಿಗರು ಇದನ್ನು ಸಂಪೂರ್ಣ ಒಪ್ಪಿದ್ದಾರೆ. ಕನ್ನಡಕ್ಕೆ ಬರಲೇಬೇಕಾಗಿದ್ದ ಪ್ರದೇಶಗಳು ಬರುವಂತೆ ಈಗ ದಾರಿ ಮಾಡಲಾಗಿದೆ. ಇದರಿಂದ ನೆರೆಪ್ರಾಂತದವರಿಗೆ ಯಾವ ಹಾನಿಯೂ ಇಲ್ಲ. ಕೇವಲ ಪ್ರತಿಷ್ಠೆಗೋಸ್ಕರ ಮೊಂಡಾಟ ಹೂಡುವ ಬಾಲಕರಂತೆ ಮಹಾರಾಷ್ಟ್ರದ ಜನನಾಯಕರೂ, ಕೇರಳದ ಜನರೂ ಇನ್ನು ನಡೆದುಕೊಳ್ಳದೆ ಈ ವರದಿಯನ್ನು ಒಪ್ಪಿ ದಕ್ಷಿಣ ಭಾರತದಲ್ಲಿ ಶಾಂತಿ ತಲೆದೋರಿ ಪ್ರಗತಿಗೆ ಅವಕಾಶವನ್ನು ಉಂಟುಮಾಡಿ ಕೊಡುವಂತಾಗಲಿ.

ಕನ್ನಡ ಸಾಹಿತ್ಯ ಪರಿಷತ್ತು ಒಪ್ಪಿಸಿದ ಸಾಕ್ಷ್ಯದಲ್ಲಿ ಪರಿಷತ್ತು ನೀಡಿದ್ದ ಸಲಹೆಗಳಲ್ಲಿ ಮುಖ್ಯವಾದುದೆಲ್ಲವನ್ನೂ ಮಹಾಜನರ ವರದಿಯು ಒಪ್ಪಿಕೊಂಡಿರುವುದು ಪರಿಷತ್ತಿಗೆ ಸಂತೋಷವನ್ನುಂಟು ಮಾಡಿದೆ. ಈ ವರದಿಯನ್ನು ಕೇಂದ್ರವು ಬೇಗ ಜಾರಿಗೆ ತರುವ ಧೈರ್ಯಮಾಡಲೆಂದೂ ಅದರಿಂದ ಒಂದು ಸಮಸ್ಯೆಯನ್ನು ಸಂತೋಷವಾಗಿ ಪರಿಹರಿಸಲೆಂದೂ 'ನುಡಿ' ಹಾರೈಸುತ್ತದೆ.

(೪೨ನೇ ಪುಟದಿಂದ)

ಗ್ರಂಥದಲ್ಲಿ ಶ್ರೀಯುತರನ್ನು ಪ್ರಶಂಸಿಸಿದ್ದರು. ಅವರು ಬೆಂಗಳೂರಿನ ಕಲಾಮಂದಿರದಲ್ಲಿ ಕೆಲಕಾಲ ಪ್ರಿನ್ಸಿಪಾಲ ರಾಗಿದ್ದರು. ಧಾರವಾಡ, ಪೂನಾಗಳಲ್ಲಿ ಕೆಲಸಮಾಡಿದ್ದರು. ಸಾಯುವ ಮುನ್ನ ದೆಹಲಿಯ ದೇವಕಿಲಾಲ್ ಅವರ ಕಲಾ ಶಾಲೆಯಲ್ಲಿದ್ದರು. ಮೃತರ ಆತ್ಮಕ್ಕೆ ಶಾಂತಿ ದೊರಕಿಸ ಬೇಕಾದರೆ ಅವರ ಹಾಗೆಯೇ ಬಡತನದಲ್ಲಿ ತೊಳಲುತ್ತಿರುವ ಇತರ ಕಲಾವಿದರ ಬಾಳು ಉತ್ತಮವಾಗಬೇಕು.

ಇನ್ನಾದರೂ ಕನ್ನಡಿಗರು ಎಚ್ಚತ್ತು ಪಿ. ಎಸ್. ರಾಯರ ಬಗ್ಗೆ ಉಚಿತ ಸ್ಮಾರಕ ಏರ್ಪಡಿಸಲಿ.

ಸರ್ ನಾರ್ಮಲ್ ಏಂಜಲ್ ನಿಧನ

ತಮ್ಮ ಸಾಹಿತ್ಯ ಕೃತಿಗಳಿಂದ ಶಾಂತಿಗಾಗಿ ದುಡಿದು, ೧೯೩೩ರಲ್ಲಿ ನೊಬೆಲ್ ಶಾಂತಿ ಪಾರಿತೋಷಕ ಪಡೆದಿದ್ದ ಸರ್‌ನಾರ್ಮನ್ ಏಂಜೆಲ್ ಅವರು ತಮ್ಮ ೯೪ನೇವರ್ಷದಲ್ಲಿ ನಿಧನಹೊಂದಿದರು.

ಕರ್ಣಾಟಕ-ವಿಶ್ವವಿದ್ಯಾನಿಲಯಕ್ಕೆ ನೂತನ ಉಪಕುಲಪತಿ

ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಆರಂಭದಿಂದಲೂ ರಿಜಸ್ಟ್ರಾರರಾಗಿ ಸೇವೆಸಲ್ಲಿಸುತ್ತ ಬಂದಿರುವ ಒಡೆಯರ್ ಅವರು ಹಂಗಾಮಿ ಉಪಕುಲಪತಿಯಾಗಿ ನೇಮಕ ವಾಗಿದ್ದಾರೆ. ಶ್ರೀಯುತರು ಕನ್ನಡ ಸಾಹಿತಿಗಳೂ ಆಗಿದ್ದು, ರವೀಂದ್ರರ ಮೇಲೆ ಒಂದು ಉತ್ತಮ ಗ್ರಂಥ ಬರೆದಿದ್ದಾರೆ.

ಶಿಕ್ಷಕರಿಗೆ ರಾಷ್ಟ್ರಪ್ರಶಸ್ತಿ

ಸುರತ್ಕಲ್ಲಿನ ವಿದ್ಯಾದಾಯಿನಿ ಹೈಸ್ಕೂಲಿನ ಮುಖ್ಯ ಅಧ್ಯಾಪಕರಾಗಿರುವ ಎಂ. ವಾಸುದೇವಮೂರ್ತಿ ಅವರು ಹಲವು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಉತ್ತಮ ಸೇವೆಯನ್ನು ಮನಗಂಡು ಈ ವರ್ಷ ಅವರಿಗೆ ಕೇಂದ್ರ ಸರ್ಕಾರದವರು ರಾಷ್ಟ್ರಪ್ರಶಸ್ತಿಯನ್ನು ಇತ್ತು ಗೌರವಿಸಿದ್ದಾರೆ. ಶ್ರೀಯುತರು ಮಂಗಳೂರು ವಿಭಾಗದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಹತ್ತುವರ್ಷಗಳಿಗೂ ಮೀರಿ ಸೇವೆ ಸಲ್ಲಿಸಿದ್ದಾರೆ.

ಸ್ವೀಕಾರ

ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ:
(ಉಪನ್ಯಾಸ ಗ್ರಂಥಮಾಲೆ)

೧) ಅಕ್ಕಮಹಾದೇವಿ ಮತ್ತು ಮೀರಾಬಾಯಿ: ಲೇ: ಎಸ್. ಎಸ್. ಕಬ್ಬಿನ, ಪ್ರ: ಕರ್ನಾಟಕ ವಿಶ್ವ ವಿದ್ಯಾನಿಲಯ, ಧಾರವಾಡ; ಪುಟ ೨+೩೩ ಬೆಲೆ: ರೂ. ೦-೭೫, ೧೯೬೬.

೨) ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ: ಲೇ: ಮಹಿಷವಾಡಿ ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪುಟ ೧೧-೭೧ ಬೆಲೆ: ರೂ. ೦-೭೫, ೧೯೬೭.

೩) ಪುಸ್ತಕ ಭಂಡಾರದ ಕಾಯದೆ: ಲೇ: ಜಿ. ಎಂ. ಪಾಟೀಲ, ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪುಟ ೮+೮೦; ಬೆಲೆ: ೭೫, ೧೯೬೭.

೪) ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು: ಲೇ: ಬಿ. ಸಿ. ಜವಳಿ, ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪುಟ ೫+೯; ಬೆಲೆ: ೦-೭೫, ೧೯೬೬.

೫) ವಿಷಮ ಜ್ವರ: ಲೇ: ಪಿ. ಎಸ್. ಶಂಕರ್ ಪ್ರ: ಕರ್ಣಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪುಟ ೮+೪೨; ಬೆಲೆ: ರೂ. ೦-೭೫, ೧೯೬೬.

೬) ಪಂಚಾಯಿತೀ ರಾಜ್ಯ: ಲೇ: ಎಸ್. ಜಿ. ಕರಭಂಟ ನಾಳ, ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಪುಟ ೫+೬೬; ಬೆಲೆ: ೦-೭೫, ೧೯೬೬.

ಭಾರತ ರಾಜ್ಯ ಘಟನೆ; ಲೇ: ಎಂ. ಎಸ್. ಪಾಟೀಲ, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ೭+೭೭, ಬೆಲೆ: ೦-೭೫, ೧೯೬೬.

ಪರಿಷತ್ತಿನ ಸುದ್ದಿಗಳು

ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರ

ಬೊಂಬಾಯಿ ಪ್ರವಾಸ

ಬೊಂಬಾಯಿ ಕರ್ಣಾಟಕ ಸಂಘದ ಆಹ್ವಾನದ ಪರಿಣಾಮವಾಗಿ ಪರಿಷತ್ತಿನ ಅಧ್ಯಕ್ಷ, ಪ್ರೊ. ವೆಂಕಟಸುಬ್ಬಯ್ಯನವರು ಒಂದು ವಾರ ಬೊಂಬಾಯಿನಲ್ಲಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಅಲ್ಲಿಯ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟರು.

ಬೊಂಬಾಯಿ ಕರ್ಣಾಟಕ ಸಂಘವು ತನ್ನ ನಾಡಹಬ್ಬವನ್ನು ತಾ. ೯-೧೦-೧೯೬೭ರಂದು ಆಚರಿಸಿತು. ಅಂದು ಮುಖ್ಯ ಅಥಿತಿಗಳಾಗಿ ಅಧ್ಯಕ್ಷರು ಭಾಷಣ ಮಾಡಿದರು. ಬೊಂಬಾಯಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಪ್ರಸಿದ್ಧ ವಾಣಿಜ್ಯೋದ್ಯಮಿಗಳೂ ಆದ ಶ್ರೀ ಎ. ಕೆ. ಹಾಫಿಸ್ಕ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜೆ. ಎನ್. ಐಯರ್, ಶ್ರೀ ಮೂಡಬಿದ್ರೆ ಸಂಜೀವರಾವ್ ಮತ್ತು ಶ್ರೀ ಎ. ಎಸ್. ಕೆ. ರಾವ್ ಅವರುಗಳು ಮುಂದಾಳುಗಳಾಗಿ ನಿಂತು ನಾಡಹಬ್ಬವನ್ನು ಯಶಸ್ವಿಗೊಳಿಸಿದರು. ಬೊಂಬಾಯಿನ ಕಲಾವಿದರು ಶ್ರೀಮತಿ ಸೀತಮ್ಮನವರ ನೇತೃತ್ವದಲ್ಲಿ ಕನ್ನಡ ಗೀತೆಗಳನ್ನು ತುಂಬ ಸೊಗಸಾಗಿ ಹಾಡಿದರು. ಕನ್ನಡದ ಕಾರ್ಯಕ್ಕೆ ಉತ್ಸಾಹಶಾಲಿಗಳಾದ ಅನೇಕ ಯುವಕರು ಕೂಡಿದ್ದುದು ಆಶಾದಾಯಕವಾಗಿತ್ತು.

ಪರಿಷತ್ತಿನ ಅಧ್ಯಕ್ಷರು ಮಾತನಾಡುತ್ತ, ನಾಡಿನ ಹಿರಿಮೆ, ಸಂಸ್ಕೃತಿಯ ಹಿರಿಮೆ, ಸಾಹಿತ್ಯದ ಹಿರಿಮೆಗಳನ್ನು ನಾಡಹಬ್ಬದಂದು ನೆನೆಯುವುದು ಸಂತೋಷದ ವಿಷಯವಾದರೂ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕನ್ನಡ ಕಾರ್ಯಕರ್ತರ ಐಕ್ಯಸಾಧನೆಗೆ ಇರುವ ಪ್ರಾಧಾನ್ಯವನ್ನು ಒತ್ತಿ ಹೇಳಿದರು. ಬೆಂಗಳೂರಿನಲ್ಲಿ ಇತ್ತೀಚೆಗೆ ಈ ಬಗ್ಗೆ ಪ್ರಗತಿದಾಯಕವಾದ ಪರಿಸ್ಥಿತಿಯುಂಟಾಗಿರುವುದನ್ನು ವಿವರಿಸಿ ಕನ್ನಡ ಸಾಹಿತ್ಯ ಪರಿಷತ್ತು ಇಂಥ ಶಕ್ತಿಯನ್ನು ಬೆಳೆಸಬಲ್ಲ ಸಂಸ್ಥೆಯೆಂಬುದನ್ನು ಸಕಾರಣವಾಗಿ ನಿರೂಪಿಸಿದರು. ಅಲ್ಲದೆ ಪರಿಷತ್ತು ತನ್ನ ಅಖಿಲ ಕರ್ಣಾಟಕ ಪ್ರಾತಿನಿಧ್ಯವನ್ನು ಕಳೆದುಕೊಳ್ಳಬಾರದೆಂದೂ ಅದು ಬೆಂಗಳೂರಿನ ಪರಿಷತ್ತಾಗಿರದೆ ಕನ್ನಡನಾಡಿನ ಪರಿಷತ್ತಾಗಿರಬೇಕೆಂದೂ ಅದಕ್ಕೆ ಸಕಲರ ಸಹಾಯಬೇಕೆಂದೂ ವಿಜ್ಞಾಪನೆ ಮಾಡಿದರು. ಅಲ್ಲದೆ, ಪರಿಷತ್ತಿನ ಅಂಗರಚನೆಯು ಸದ್ಯದಲ್ಲಿಯೇ ತಿದ್ದುಪಾಟಾಗಲಿದ್ದು ಅದರಲ್ಲಿ ಈ ಅಖಿಲ ಕರ್ಣಾಟಕ ಸತ್ವವನ್ನು ಉಳಿಸಿಕೊಳ್ಳಲಾಗುತ್ತದೆಂದೂ, ಹೊರನಾಡ ಕನ್ನಡಿಗರಿಗೂ ಸ್ಥಾನ ದೊರಕುವಂತಾಗಬೇಕೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹೊರನಾಡ ಕನ್ನಡಿಗರು ಕನ್ನಡದ ರಾಯಭಾರಿಗಳೆಂದೂ, ಪರಿಷತ್ತೇ ಆ ರಾಯಭಾರಿಗಳ ನಿಕಟ ಸಂಪರ್ಕವನ್ನು ಹೊಂದಿ ನೆರೆನಾಡುಗಳ ಸ್ನೇಹ ಸಂವರ್ಧನೆಗೆ ಸಹಾಯಕವಾಗಬೇಕೆಂದೂ, ಪರಿಷತ್ತಿಗೆ ಯುವಕ ಚೈತನ್ಯವನ್ನು ತುಂಬಿ ಹಿರಿಯರ ಮಾರ್ಗದರ್ಶನದಲ್ಲಿ ಅದು ಬೆಳೆಯುವಂತೆ ಮಾಡುವುದು ತಮ್ಮ ದೃಷ್ಟಿಯೆಂದೂ ವಿವರಿಸಿದರು.

ಪರಿಷತ್ತಿಗೆ ಆಶ್ರಯದಾತರೂ ಆಜೀವ ಸದಸ್ಯರೂ ಅಮಿತ ಸಂಖ್ಯೆಯಲ್ಲಿ ಸೇರಬೇಕೆಂದೂ ಕೇಳಿಕೊಂಡರು.

ಈ ಸಭೆಗೆ ಬೊಂಬಾಯಿನ ಅನೇಕ ಸಾಹಿತಿಗಳೂ, ಹಿರಿಯ ಉದ್ದಿಮೆಗಾರರೂ, ಉತ್ಸಾಹಿ ತರುಣರೂ ಬಂದಿದ್ದರು. ಶ್ರೀ ಜೆ. ಎನ್. ಐಯ್ಯರ್ ಅವರು ಸ್ವಾಗತ ಮಾಡಿದರು. ಶ್ರೀ ಎ. ಎಸ್. ಕೆ. ರಾವ್ ಅವರು ವಂದನಾರ್ಪಣೆ ಮಾಡಿದರು. ಸಂಜೆ ಬ್ರಿಸ್ಟಲ್ ಗ್ರಿಲ್‌ನಲ್ಲಿ ಅಧ್ಯಕ್ಷರಿಗೆ ಔತಣಕೂಟ ನಡೆಯಿತು.

ಮಾರನೆಯ ದಿನ ನಗರದ ಅನೇಕ ಹಿರಿಯರು ಅಧ್ಯಕ್ಷರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ಪರಿಷತ್ತಿನ ಬಗ್ಗೆ ವಿವರಗಳನ್ನು ಕೇಳಿ ತಿಳಿದುಕೊಂಡರು. ಈ ವಿಚಾರ ವಿನಿಮಯದ ಪರಿಣಾಮವಾಗಿ ಪರಿಷತ್ತಿಗೆ ಆಶ್ರಯದಾತ

ರಾಗಿ ಒಂದು ಸಾವಿರ ರೂಪಾಯಿಗಳ ಸಹಾಯ ಮಾಡಲು ಈ ಕೆಳಗಿನ ಮಹನೀಯರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು.

೧) ಶ್ರೀ ಆರ್. ಡಿ. ಚಾರ್
೨) ಶ್ರೀ ಎಂ. ಆರ್. ವರದರಾಜನ್
೩) ಶ್ರೀ ಎ. ಕೆ. ಹಾಫಿಸ್ಕ
೪) ಶ್ರೀ ಯು. ವಿ. ಉಪಾಧ್ಯ

ಶ್ರೀ ಮೂಡಬಿದರೆ ಸಂಜೀವರಾಯರು ಸುಮಾರು ಹತ್ತು ಜನ ಆಜೀವ ಸದಸ್ಯರನ್ನು ಮಾಡಿಸಿಕೊಡುವುದಾಗಿ ಸೂಚಿಸಿದರು. ಈ ಕೆಳಗಿನ ಮಹನೀಯರು ಆಜೀವ ಸದಸ್ಯರಾದವರು :

೧) ಶ್ರೀ ಆರ್. ವಿ. ಮೂರ್ತಿ
೨) ಶ್ರೀ ವ್ಯಾಸರಾಯ ಬಲ್ಲಾಳ
೩) ಶ್ರೀ ಚಿದಂಬರ ದೀಕ್ಷಿತ್
೪) ಶ್ರೀ ಹೆಚ್. ನಂಜುಂಡಯ್ಯ

ಇದಲ್ಲದೆ ಶ್ರೀ ಎಂ.ಕೆ. ರಮಾನಂದ, ಶ್ರೀ ಜಿ.ವಿ. ರಂಗಸ್ವಾಮಿ, ಶ್ರೀ ವರದರಾಜ ಆದ್ಯ, ಶ್ರೀ ಸಿ. ಎಸ್. ಶಾಸ್ತ್ರಿ, ಶ್ರೀ ಜೆ. ಎನ್. ಅಯ್ಯರ್, ಶ್ರೀ ಎ. ಎಸ್. ಕೆ. ರಾವ್, ಶ್ರೀ ಜಿ.ವಿ. ಅನಂತಸ್ವಾಮಿ, ಶ್ರೀ ಪಿ.ಆರ್. ಸುಬ್ರಹ್ಮಣ್ಯಂ, ಶ್ರೀ ಆರ್.ಎಲ್.ಎನ್. ವಿಜಯನಗರ್, ಶ್ರೀ ಸೋಮಸುಂದರ್, ಶ್ರೀ ಶೇಷಗಿರಿರಾವ್, ಶ್ರೀ ಕೆ.ಸುಬ್ಬರಾಯನ್, ಡಾ. ಲಲಿತರಾವ್ ಮತ್ತು ಶ್ರೀ ವೆಂಕಟರಾವ್ ಮುಂತಾದವರು ಆಜೀವ ಸದಸ್ಯತ್ವವನ್ನು ಹೆಚ್ಚಿಸುವುದಾಗಿ ಭರವಸೆಯಿತ್ತರು. ಪರಿಷತ್ತಿನ ಬಗೆಗೆ ತಮ್ಮ ವಿಷಯ ಸಂಗ್ರಹ ಇಂದು ಹೆಚ್ಚಾಯಿತೆಂದು ಹೇಳಿ ಅಧ್ಯಕ್ಷರು ಕೈಗೊಂಡಿರುವ ಅಭಿವೃದ್ಧಿ ಕಾರ್ಯದಲ್ಲಿ ಎಲ್ಲರೂ ತಮ್ಮ ಸಂಪೂರ್ಣ ಸಹಕಾರದ ಭರವಸೆ ನೀಡಿದರು.

ಶ್ರೀ ಸದಾನಂದಸುವರ್ಣ ಅವರು ಪರಿಷತ್ತಿಗೆ ಒಂದು ಬೀರುವನ್ನು ದಾನ ಮಾಡಿದ್ದಾರೆ.

ಬೊಂಬಾಯಿನಲ್ಲಿ ಈ ಮುಖ್ಯ ಕಾರ್ಯಕ್ರಮವಾದ ಮೇಲೆ ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಅಧ್ಯಕ್ಷರು ಭಾಗವಹಿಸಿದರು. ಅವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದೆ.

ತಾ. ೭-೧೦-೬೭, ಸುರತ್ಕಲ್ಲಿನ ವಿದ್ಯಾದಾಯಿನಿ ಕಾಲೇಜಿಗೆಂದು ನಡೆಸಿದ ಸಹಾಯಾರ್ಥ ನಾಟ್ಯಪ್ರದರ್ಶನದಲ್ಲಿ ಭಾಗವಹಿಸಿದರು. ಶ್ರೀ ಯೋಗೀಂದ್ರ ದೇಸಾಯಿಯವರ 'ಭವಸಾಗರ' ಎಂಬ ಬಹು ರಮ್ಯವಾದ ನಾಟ್ಯರೂಪಕವನ್ನು ವೀಕ್ಷಿಸಿದರು.

ಬೆಳಗ್ಗೆ ಶ್ರೀ ಆರ್. ಡಿ. ಚಾರ್, ಡಾ. ಲಲಿತಾರಾವ್ ಮತ್ತು ಶ್ರೀ ವೆಂಕಟರಾವ್ ಅವರ ಮನೆಗಳಿಗೆ ಭೇಟಿ.

ತಾ. ೮-೧೦-೬೭, ರಾಷ್ಟ್ರಪ್ರಶಸ್ತಿಯನ್ನು ಪಡೆದ, ಸುರತ್ಕಲ್ಲಿನ ವಿದ್ಯಾದಾಯಿನಿ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಎಂ. ವಾಸುದೇವರಾಯರಿಗೆ ಅವರ ವಿದ್ಯಾರ್ಥಿಗಳು ಮಾಡಿದ ಸನ್ಮಾನ ಸಭೆಯ ಅಧ್ಯಕ್ಷತೆ ವಹಿಸಿದುದು. ಶ್ರೀ ಎಂ. ಕೆ. ರಮಾನಂದರ ಗೃಹದಲ್ಲಿ ಔತಣಕೂಟ.

೯-೧೦-೬೭, ಪ್ರಾತಃಕಾಲ ಶ್ರೀ ಯು. ವಿ. ಉಪಾಧ್ಯ ಅವರ ಮನೆಯಲ್ಲಿ ಸತ್ಕಾರ—ವಿಚಾರ ವಿನಿಮಯ. ಮಧ್ಯಾಹ್ನ ಶ್ರೀ ವರದರಾಜ ಆದ್ಯ ಅವರಿಂದ ಪ್ರಸಿದ್ಧ ಟಾಜ್ ಹೋಟೆಲಿನಲ್ಲಿ ಭೋಜನಕೂಟ.

ಸಂಜೆ ಕವಾಸ್ಜಿ ಜಹಂಗೀರ್ ಹಾಲ್‌ನಲ್ಲಿ ಭಾಷಣ.

ಬ್ರಿಸ್ಟಲ್‌ಗ್ರಿಲ್‌ನಲ್ಲಿ ಭೋಜನಕೂಟ.

ಬೆಳಗ್ಗೆ-ಮಧ್ಯಾಹ್ನ—ಬೊಂಬಾಯಿನ ಹಿರಿಯರನ್ನು ಭೇಟಿಮಾಡಿದ್ದುದು. ಶ್ರೀ ಜೆ. ಎನ್. ಐಯರ್ ಅವರ ಮನೆಯಲ್ಲಿ ಔತಣ. ಆಸ್ತಿಕ ಸಮಾಜದ ಭೇಟಿ.

೧೦-೧೦-೬೭, ಸಂಜೆ, ಮೈಸೂರು ಅಸೋಸಿಯೇಷನ್ನಿನಲ್ಲಿ ಶ್ರೀ ಕೆ. ವಿ. ರಾಮಶೇಷನ್ (ಆಸ್ಬೆಸ್ಟಾಸ್ ಸಿಮೆಂಟ್‌ನ ಪ್ರೊಡಕ್ಷನ್ ಮೇನೇಜರ್) ಅವರ ಅಧ್ಯಕ್ಷತೆಯಲ್ಲಿ ಆಧುನಿಕ ಕನ್ನಡ ಕಾವ್ಯದ ಬಗ್ಗೆ ಭಾಷಣ. ರಾತ್ರಿ, ಮೈಸೂರು ಅಸೋಸಿಯೇಷನ್ನಿನ ಪರ ಭೋಜನ ಕೂಟ.

ಇದೇ ದಿನ ಮುಂಬಯಿ ಕನ್ನಡ ಸಂಘದ ಪುಸ್ತಕ ಭಂಡಾರಕ್ಕೆ ಭೇಟಿ.

ಮೈಸೂರು ಅಸೋಸಿಯೇಷನ್ನಿನಲ್ಲಿ ನಡೆದ ಸಭೆಗೆ ಅಧ್ಯಕ್ಷರ ಅನೇಕ ಹಳೆಯ ವಿದ್ಯಾರ್ಥಿಗಳು ಬಂದು ಅಧ್ಯಕ್ಷರಿಗೆ ತಮ್ಮ ತಮ್ಮ ಮನೆಗಳಿಗೆ ಸತ್ಕಾರ ಸಮಾರಂಭಗಳಿಗೆ ಆಹ್ವಾನಿಸಿದರು. ಎಲ್ಲ ಕಡೆಗೂ ಹೋಗಲಾಗದಿದ್ದುದಕ್ಕೆ ಅಧ್ಯಕ್ಷರು ಕ್ಷಮೆ ಕೇಳಿದರು. ಅವರೆಲ್ಲರೂ ಪರಿಷತ್ತಿಗೆ ಸಹಕಾರ ಹಸ್ತವನ್ನು ನೀಡಿದರು.

೧೧-೧೦-೬೭, ಬೆಳಗ್ಗೆ ಬೊಂಬಾಯಿಯ ವಾಣಿಜ್ಯೋದ್ಯಮಿಗಳು ಮುಂತಾದವರ ಭೇಟಿ. ಸಂಜೆ, ಬೊಂಬಾಯಿನ ಲೇಖಕರ ಬಳಗದ ಸಭೆ, ಶ್ರೀ ಆರ್. ವಿ. ಮೂರ್ತಿಯವರು ಅಧ್ಯಕ್ಷರಾಗಿದ್ದರು. ರಾತ್ರಿ, ಬ್ರಿಸ್ಟಲ್ ಗ್ರಿಲ್‌ನಲ್ಲಿ ಭೋಜನಕೂಟ.

೧೨-೧೦-೬೭, ಬೆಳಗ್ಗೆ ಬೊಂಬಾಯಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಶ್ರೀಮತಿ ಸುಶೀಲಾ ಭುಜಂಗರಾವ್ ಪುಸ್ತಕ ಭಂಡಾರದ ಉದ್ಘಾಟನೆ. (ಈ ಭಂಡಾರದಲ್ಲಿ ಅನೇಕ ಅಪರೂಪದ ಪುಸ್ತಕಗಳಿವೆ. ಪ್ರಸಿದ್ಧ

ವಿದ್ವಾಂಸರೂ ಪುಸ್ತಕ ಭಂಡಾರದ ಶಾಸ್ತ್ರದಲ್ಲಿ ಪರಿಣತರೂ ಆದ ಶ್ರೀ ಶ್ರೀನಿವಾಸ ಹಾವನೂರರ ನೇತೃತ್ವದಲ್ಲಿ ನಡೆ ಯುತ್ತಿದೆ) ಮಧ್ಯಾಹ್ನ ಸಿಂಗರ್ ಕಂಪೆನಿಯ ಉನ್ನತ ಅಧಿಕಾರಿಗಳಾದ ಶ್ರೀ ಸಿ. ಎಸ್. ಶಾಸ್ತ್ರಿಯವರ ಮನೆಯಲ್ಲಿ ಭೋಜನಕೂಟ. ಬೊಂಬಾಯಿನ ಮುಖಂಡರಿಗೆ ಅಧ್ಯ ಕ್ಷರು ಮೈಸೂರು ಅಸೋಸಿಯೇಷನ್ನಿನಲ್ಲಿ ನೀಡಿದ ಸತ್ಕಾರ. ಮೊಗವೀರ ವ್ಯವಸ್ಥಾಪಕ ಮಂಡಳಿಯವರು ನಡೆಸುತ್ತಿ ರುವ ರಾತ್ರಿ ಶಾಲೆಗಳ ಆಶ್ರಯದಲ್ಲಿ ನಡೆದ ಸರಸ್ವತೀ ಪೂಜೆ ಯಲ್ಲಿ ಅಧ್ಯಕ್ಷತೆ. ಸಂಜೆ ಬೊಂಬಾಯಿನ ಕನ್ನಡ ಸಾಹಿತ್ಯ ಸಂಗೀತ ಕಲಾಕ್ಷೇತ್ರದಲ್ಲಿ ನಡೆದ ಶ್ರೀ ಚಿಂತಲಪಲ್ಲಿ ರಾಮ ಚಂದ್ರರಾಯರ ಸಂಗೀತ ಕಚೇರಿಯಲ್ಲಿ ಮುಖ್ಯ ಅತಿಥಿ. ರಾತ್ರಿ ಶ್ರೀ ಎಂ. ಎ. ಅನಂತಸ್ವಾಮಿ ಅವರ ಮನೆಯಲ್ಲಿ ಸತ್ಕಾರಕೂಟ, ಭೇಟಿ; ಪರಿಷತ್ತಿನ ಬಗ್ಗೆ ಪ್ರಚಾರ.

೧೩-೧೦-೬೭ ಬೆಳಗ್ಗೆ, ಮೂಡಬಿದ್ರೆ ಸಂಜೀವರಾಯರ ಮನೆಯಲ್ಲಿ ಭೋಜನಕೂಟ ಮತ್ತು ಬೊಂಬಾಯಿನಿಂದ ಪ್ರಯಾಣ.

ಅಧ್ಯಕ್ಷರು ಈ ಪ್ರವಾಸ ಮಾಡಿದುದರಿಂದ ಪರಿಷತ್ತಿಗೆ ಸುಮಾರು ಹತ್ತು ಸಾವಿರ (ರೂ. ೧೦,೦೦೦) ರೂಪಾಯಿ ಧನಸಹಾಯ ಒದಗಿದಂತಾಗಿದೆ. ಈ ಪ್ರವಾಸ ಸಮಯ ದಲ್ಲಿ ಶ್ರೀ ಜೆ. ಎನ್. ಐಯರ್, ಶ್ರೀ ಮೂಡಬಿದ್ರೆ ಸಂಜೀವ ರಾವ್ ಮತ್ತು ಶ್ರೀ ಎ. ಎಸ್. ಕೆ. ರಾವ್, ಶ್ರೀ ಜಿ. ವಿ. ಅನಂತಸ್ವಾಮಿ ಅವರುಗಳು ಅಧ್ಯಕ್ಷರಿಗೆ ಸಕಲ ವಿಧವಾದ ಸಹಾಯವನ್ನು ಮಾಡಿ ಅವರ ಪ್ರವಾಸವು ಸುಖಮಯ ವಾಗಿಯೂ, ಫಲಪ್ರದವಾಗಿಯೂ ಇರುವಂತೆ ಮಾಡಿದರು. ಅವರಿಗೂ ಸಹಾಯಮಾಡಿದ ಇತರರಿಗೂ ಪರಿಷತ್ತು ವಂದಿಸುತ್ತದೆ.

ಗಮಕಕಲಾ ತರಗತಿಗಳು-೧೯೬೭

[' ಕನ್ನಡನುಡಿ ' ಅಕ್ಟೋಬರ್ ೧೯೬೭ರ ಸಂಚಿಕೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪರಿಷತ್ತಿಗೆ ಕಳುಹಿಸಿ ಕೊಡುವುದು (ಅಚ್ಚಿನ ತಪ್ಪಿನಿಂದ) "೧೯೬೮ನೆಯ ಅಕ್ಟೋಬರ್ ತಿಂಗಳೊಳಗಾಗಿ" ಎಂದು ಅಚ್ಚಾಗಿದೆ. ಅದರ ಬದಲು ಪರೀಕ್ಷಾ ಶುಲ್ಕವನ್ನು ಕಳುಹಿಸುವ ಕಡೆಯ ದಿನಾಂಕ ೩೦-೧೧-೧೯೬೭ ಎಂದು ತಿಳಿಯಬೇಕಾಗಿ ವಿನಂತಿ.]

ದಿನಾಂಕ ೧೧-೧೦-೧೯೬೭ರಲ್ಲಿ ಡಾ. ಎ. ಆರ್ ಕೃಷ್ಣ ಶಾಸ್ತ್ರಿಗಳವರ ದತ್ತಿನಿಧಿಯ ಕಾರ್ಯಕ್ರಮವಾಗಿ ಪರಿಷನ್ಮಂದಿರದಲ್ಲಿ ದೇವರನಾಮ ಸ್ಪರ್ಧೆ ನಡೆಯಿತು. ಗಮಕಿ ಶ್ರೀ ಎಂ. ರಾಘವೇಂದ್ರರಾಯರು, ಶ್ರೀಮತಿ ತಂಗ ವರದರಾಜನ್ ಮತ್ತು ಶ್ರೀಮತಿ ಕಮಲಾ ರಾಮಕೃಷ್ಣ ಅವರು ಪರೀಕ್ಷಕರಾಗಿದ್ದರು. ಸ್ಪರ್ಧೆಯಲ್ಲಿ ಈ ಕೆಳಗಿನ ವರಿಗೆ ಬಹುಮಾನಗಳನ್ನು ಕೊಡಲಾಯಿತು.

ಹಿರಿಯರು

ಶ್ರೀಮತಿಯರಾದ :

(೧) ಜಿ. ಪ್ರೇಮ ಮೊದಲನೆಯ ಬಹುಮಾನ
(೨) ಎಚ್. ಎ. ಪರಿಮಳಾ ಎರಡನೆಯ ಬಹುಮಾನ
(೩) ಎಚ್. ಎಸ್. ಕುಸುಮ ಮೂರನೆಯ ಬಹುಮಾನ

ಕಿರಿಯರು

ಕುಮಾರಿಯರಾದ :

(೧) ಬಿ. ವಿ. ವಿಜಯಲಕ್ಷ್ಮಿ ಮೊದಲನೆಯ ಬಹುಮಾನ
(೨) ಆರ್. ಗಾಯತ್ರಿ ಎರಡನೆಯ ಬಹುಮಾನ

ಇವಲ್ಲದೆ ಕುಮಾರಿ ಕೆ. ತ್ರಿವೇಣಿ ಮತ್ತು ಎಸ್. ಗೀತಾ ಅವರಿಗೆ ವಿಶೇಷ ಬಹುಮಾನಗಳನ್ನು ಕೊಡಲಾಯಿತು. ಈ ಬಹುಮಾನಗಳನ್ನು ಗಮಕಿ ಶ್ರೀ ಎಂ. ರಾಘವೇಂದ್ರ ರಾಯರು ಮತ್ತು ಶ್ರೀಮತಿ ತಂಗ ವರದರಾಜನ್ ಅವರೂ ದಯಪಾಲಿಸಿದರು.

ಜೊತೆಗೆ ಸರಸ್ವತೀ ಪೂಜೆ ಸುಮಂಗಲಿಯರಿಗೆ ಮಂಗಳ ದ್ರವ್ಯ ಚರುಪು ವಿನಿಯೋಗ ಮುಂತಾದ ಕಾರ್ಯಕ್ರಮ ಗಳಿದ್ದುವು.

ಉಪನ್ಯಾಸಮಾಲೆ

ಸಾಹಿತ್ಯಪರಿಷತ್ತಿನ ಆಶ್ರಯದಲ್ಲಿ ಮಲ್ಲೇಶ್ವರದಲ್ಲಿರುವ ಗಾಂಧೀ ಸಾಹಿತ್ಯ ಸಂಘದಲ್ಲಿ ಈ ಕೆಳಗಿನ ಕಾರ್ಯಕ್ರಮ ಗಳು ನಡೆದುವು :

ದಿನಾಂಕ ೮-೧೦-೬೭ರಲ್ಲಿ ದಿ|| ಬಾಳಾಚಾರ್ಯ, ಗೋಪಾಳಾಚಾರ್ಯ ಸಕ್ಕರಿ ("ಶಾಂತಕವಿ") ಅವರ ಕೃತಿಗಳ ಬಗ್ಗೆ ಕವಿಭೂಷಣ ಶ್ರೀ ಬೆಟಗೇರಿ ಕೃಷ್ಣಶರ್ಮ ರವರು ಭಾಷಣ ಮಾಡಿದರು.

ದಿನಾಂಕ ೨೨-೧೦-೧೯೬೭ರಲ್ಲಿ ದಿ|| ಕರ್ಲಮಂಗಲಂ ಶ್ರೀಕಂಠಯ್ಯ ಅವರ ಕೃತಿಗಳ ಬಗ್ಗೆ ಶ್ರೀ ಆರ್. ಎಸ್. ಚಕ್ರಭಾವಿ ಅವರೂ ಮತ್ತು ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರೂ ಭಾಷಣ ಮಾಡಿದರು.

ಸಾಹಿತ್ಯಪರಿಷತ್ತಿನ ಆಶ್ರಯದಲ್ಲಿ ರಾಜಾಜಿನಗರದ ವಿದ್ಯಾವರ್ಧಕ ಸಂಘದ ಸಪ್ತರ್ಷಿಧಾಮದಲ್ಲಿ ಈ ಕೆಳಗಿನ ಕಾರ್ಯಕ್ರಮಗಳು ನಡೆದುವು :

ದಿನಾಂಕ ೮-೧೦-೧೯೬೭ರಲ್ಲಿ ಜಾನಪದ ಸಾಹಿತ್ಯದ ವಿಷಯವಾಗಿ ಕವಿಭೂಷಣ ಶ್ರೀ ಬೆಟಗೇರಿ ಕೃಷ್ಣಶರ್ಮ ರವರು ಉಪನ್ಯಾಸ ಮಾಡಿದರು. ಶ್ರೀಮತಿಯರಾದ ನಲಿನಿ ದೀಕ್ಷಿತ್, ವಿಮಲಾಭಂಡಿವಾಡ, ಕುಮಾರಿ ಸ್ನೇಹಾ, ಸುವರ್ಣಾ ಮತ್ತು ಶ್ರೀ ಎಸ್. ಆರ್. ಗುಡೂರ್–ಇವರು ಗಳಿಂದ ಜಾನಪದ ಸಾಹಿತ್ಯ ವಾಚನ ನಡೆಯಿತು.

ದಿನಾಂಕ ೧೫-೧೦-೧೯೬೭ರಲ್ಲಿ ಕವಿಕೃತಿದರ್ಶನದ ೨೭ನೆಯ ಉಪನ್ಯಾಸಮಾಲೆಯಲ್ಲಿ ಶ್ರೀ ಶಂ. ಭಾ. ಜೋಶಿ ಅವರ ಸಾಹಿತ್ಯಕೃತಿಗಳನ್ನು ಕುರಿತು ಡಾ|| ಎಚ್. ಎನ್. ಕಟ್ಟಿ, ಶ್ರೀ ಜಿ. ಅಶ್ವತ್ಥನಾರಾಯಣ, ಶ್ರೀ ಆರ್. ವಿ. ಕುಲಕರ್ಣಿ–ಇವರುಗಳು ಉಪನ್ಯಾಸ ಮಾಡಿದರು. ಶ್ರೀ ಆರ್. ಎಸ್. ಮುಳಗಿಯವರು ಅಧ್ಯಕ್ಷರಾಗಿದ್ದರು.

ದಿನಾಂಕ ೨೨-೧೦-೧೯೬೭ರಲ್ಲಿ ಪ್ರೊ|| ದೇ· ಜವರೇಗೌಡ ಅವರು "ಭರತಖಂಡದಲ್ಲಿ ಭಾಷಾಸಮಸ್ಯೆ" ಎಂಬ ವಿಷಯ ವನ್ನು ಕುರಿತು ಉಪನ್ಯಾಸ ಮಾಡಿದರು.

ನಿಧನ : ಸಂತಾಪ ಸೂಚಕಸಭೆ

ದಿನಾಂಕ ೨೧-೧೦-೧೯೬೭ರಲ್ಲಿ, ಸುಪ್ರಸಿದ್ಧ ಸಾಹಿತಿ ಗಳಾಗಿದ್ದ ಶ್ರೀಮಾನ್ ಕೆ. ಗೋಪಾಲಕೃಷ್ಣರಾಯರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಗಳಾಗಿದ್ದ ಶ್ರೀಮಾನ್ ಆರ್. ಜಹಗೀರುದಾರರು–ಇವರು ಗಳ ನಿಧನದ ಬಗ್ಗೆ ಪರಿಷನ್ಮಂದಿರದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು. ಪರಿಷದಧ್ಯಕ್ಷರಾದ ಪ್ರೊ|| ಜಿ. ವೆಂಕಟ ಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಡಾ. ರಂ. ಶ್ರೀ. ಮುಗಳಿ, ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮತ್ತು ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮ ಇವರುಗಳು ದಿವಂಗತರು ಮಾಡಿದ ಕನ್ನಡನಾಡು ನುಡಿಗಳ ಸೇವೆಯ ಬಗ್ಗೆ ಮಾತನಾಡಿದರು. ಈ ಕೆಳಗಿನ ಸಂತಾಪ ಸೂಚಕ ನಿರ್ಣಯಗಳನ್ನು ಸಭೆ ಮೌನವಾಗಿ ನಿಂತು ಅಂಗೀಕರಿಸಿತು.

ಶ್ರೀ ಕೆ. ಗೋಪಾಲಕೃಷ್ಣರಾಯರು

"ಉತ್ತಮ ಸಣ್ಣಕತೆಗಳ ಬರಹಗಾರರಾಗಿದ್ದು ಕತೆಗಳು ಮಾತ್ರವಲ್ಲದೆ ಏಕಾಂಕಗಳು, ಕವಿತೆಗಳು, ಕಥನ ಕವನ ಮೊದಲಾದುವುಗಳನ್ನು ಬರೆದು ಕನ್ನಡ ಸಾಹಿತಿಗಳ ಶ್ರೇಣಿ ಯಲ್ಲಿ ಉತ್ತಮ ಸ್ಥಾನವನ್ನು ಪಡೆದಿದ್ದು ಮೂವತ್ತು ವರ್ಷ ಗಳ ಕಾಲ ಕನ್ನಡದ ಸೇವೆಯನ್ನು ಮಾಡಿದ ಶ್ರೀ ಕೆ· ಗೋಪಾಲಕೃಷ್ಣರಾಯರು ತಾ|| ೯-೧೦-೬೭ರಂದು ನಿಧನ ಹೊಂದಿದ ವಾರ್ತೆಯನ್ನು ಕೇಳಿ ಕನ್ನಡನಾಡು ಶೋಕಿಸು ತ್ತದೆ. ಶ್ರೀ ಗೋಪಾಲಕೃಷ್ಣರಾಯರು ತಮ್ಮ ಮನೆಯಲ್ಲಿ ಆಗಿಂದಾಗ್ಗೆ ಸಾಹಿತಿಗಳ ಗೋಷ್ಠಿಯನ್ನು ಏರ್ಪಡಿಸಿ ಸಾಹಿತಿಗಳಿಗೆ ಸಹೃದಯರ ಪ್ರೋತ್ಸಾಹವನ್ನು ದೊರಕಿಸಿ ಕೊಡುತ್ತಿದ್ದರು. ಸಾಹಿತಿಗಳ ಸಂಘವನ್ನು ಸ್ಥಾಪಿಸಿ ಅನೇಕ ವರ್ಷಗಳ ಕಾಲ ಅದರ ಕಾರ್ಯದರ್ಶಿಗಳಾಗಿದ್ದು ಅದರ ಆಶ್ರಯದಲ್ಲಿ ಮೂರುನಾಲ್ಕು ಕತೆಗಾರರ ಸಮ್ಮೇಳನಗಳನ್ನು ನಡೆಸಿದರು. ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. "ಜೀವನ" ಪತ್ರಿಕೆಗೆ ಸಂಪಾದಕರಾಗಿದ್ದು ಸೇವೆ ಸಲ್ಲಿಸುತ್ತಿದ್ದರು. ಅವರ ನಗುಮುಖ, ಸ್ನೇಹಪರತೆ, ಸಹಾನುಭೂತಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿದ್ದ ಆಸಕ್ತಿ ಇವುಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟದ್ದುವು. ಇಂತಹ ಮಹನೀಯರ ನಿಧನದಿಂದ ಕನ್ನಡನಾಡಿಗೂ ನುಡಿಗೂ ಅಪಾರ ನಷ್ಟವುಂಟಾಗಿದೆ."

ಶ್ರೀ ಆರ್. ವಿ. ಜಹಗೀರ್‌ದಾರರು

"ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶರೂ ಕರ್ಣಾಟಕ ವಿಶ್ವದ್ಯಾನಿಲಯದ ಪ್ರಥಮ ಉಪಕುಲಪತಿ ಗಳೂ ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಉದ್ದಾಮ ಪಂಡಿತರೂ ಕನ್ನಡನಾಡು ನುಡಿಗಳ ಉತ್ಕಟಾಭಿ ಮಾನಿಗಳೂ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧಕ್ಷರಾಗಿ ಸಮ್ಮೇಳನವನ್ನು ಯಶಸ್ವಿ ಯಾಗಿ ನಡೆಸಿಕೊಟ್ಟವರೂ ಆದ ಶ್ರೀ ರಂಗಾಚಾರ್ಯ, ಎ. ಜಹಗೀರ್‌ದಾರ್ ಅವರು ತಾ|| ೬-೧೦-೬೭ರಂದು ನಿಧನರಾದುದರಿಂದ ಕನ್ನಡನಾಡು ನುಡಿಗಳಿಗೆ ಅಪಾರ ನಷ್ಟವಾಗಿದೆ. ಅವರ ಮರಣದಿಂದ ಕನ್ನಡ ಸಾಹಿತ್ಯ ಪರಿಷತ್ತು ಒಬ್ಬ ಅಭಿಮಾನಿಯನ್ನು ಕಳೆದುಕೊಂಡಂತಾಗಿದೆ. ಈ ಬಗ್ಗೆ ಈ ಸಭೆಯೂ ಮತ್ತು ಪರಿಷತ್ತೂ ಈ ಮೂಲಕ ತನ್ನ ಸಂತಾಪವನ್ನು ವ್ಯಕ್ತಪಡಿಸುವುದಲ್ಲದೆ ಈ ಇಬ್ಬರು ದಿವಂಗತರ ಆತ್ಮಕ್ಕೂ ಭಗವಂತನು ಸದ್ಗತಿಯನ್ನೀಯ ಲೆಂದೂ ಅವರ ಕುಟುಂಬ ವರ್ಗದವರಿಗೆ ಈ ನಷ್ಟವನ್ನು ಸಹಿಸುವ ಶಕ್ತಿಯನ್ನು ದಯಪಾಲಿಸಲೆಂದೂ ಪ್ರಾರ್ಥಿಸು ತ್ತದೆ."

ಂ ಮಾತ್ರ. ಆ ಪೈಕಿ ಸುಮಾರು ೪೫೦ ಮಂದಿ ಆಜೀವಸದಸ್ಯರು. ರ ಸದಸ್ಯತ್ವದ ಹಣದಬಡ್ಡಿ ಮಾತ್ರ ಪರಿಷತ್ತಿನ ನಿತ್ಯ ಉಪಯೋ ಕ್ಕ ಸಿಗುತ್ತಿದೆ. ಅದು ತಲಾ ಸರಾಸರಿ ವರ್ಷಕ್ಕೆ ಐದು ರೂ. ಆಗು ದೆ. ಉಳಿದ ವಾರ್ಷಿಕ ಸದಸ್ಯರು ವರ್ಷಕ್ಕೆ ಆರು ರೂ. ಯಂತೆ ಡುವವರು. ಈ ಎಲ್ಲರಿಗೂ ವರ್ಷಕ್ಕೆ ಆರು ರೂಪಾಯಿನ ಕನ್ನಡ ಡಿ ; ರೂ. ೨.೫೦ರ ಸಾಹಿತ್ಯ ಪರಿಷತ್ಪತ್ರಿಕೆಗಳನ್ನು ಉಚಿತವಾಗಿ ಡುವುದಲ್ಲದೆ, ಪುಸ್ತಕ ಭಂಡಾರ, ವಾಚನಾಲಯ ಮತ್ತು ಂಸ್ಕೃತಿಕ ಕಾರ್ಯಕ್ರಮಗಳ ಪ್ರಯೋಜನವನ್ನು ಅವರಿಗೆ ರಕಿಸಿಕೊಡುವುದಾಗಿದೆ. ಕಳೆದ ವರ್ಷದಿಂದ ಮೈಸೂರು ಸರ್ಕಾರ ನರು ಪರಿಷತ್ತಿಗೆ ವರ್ಷಕ್ಕೆ ರೂ. ೨೫,೦೦೦ಗಳ ಸಹಾಯ ವ್ಯವನ್ನು ಒದಗಿಸುತ್ತಿದ್ದಾರೆ. ಆದರೆ ಮೇಲೆ ಸೂಚಿಸಿರುವ ಷತ್ತಿನ ಆಶೋತ್ತರಗಳು ನೆರವೇರಬೇಕಾದರೆ ವರ್ಷವೊಂದಕ್ಕೆ ಂದು ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ.

ಲ್ಲ ಕನ್ನಡಿಗರೂ ಯೋಚಿಸಬೇಕಾದ ಒಂದು ದೊಡ್ಡ ಪ್ರಶ್ನೆ ಎಂದರೆ ರಿಷತ್ತಿನಂತಹ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಎಷ್ಟು ದಿನ ಹೀಗೇ ರ್ಕಾರದ ಧನಸಹಾಯವವನ್ನು ನಂಬಿ ಕುಳಿತಿರಬೇಕು ? ಎರಡೂ ರೆ ಕೋಟಿ ಜನ ಕನ್ನಡಿಗರಿರುವ ಕನ್ನಡ ನಾಡಿನಲ್ಲಿ ಆ ಕನ್ನಡಿಗರ ಾಹಿತ್ಯ, ಸಂಸ್ಕೃತಿ, ಕಲೆಗಳ ಅಭಿವೃದ್ಧಿಗೆ ಮೀಸಲಾದ ಏಕೈಕ ್ರತಿನಿಧಿಕ ಸಂಸ್ಥೆ ಸತ್ವಪೂರ್ಣವಾಗಿ ಕಂಗೊಳಿಸುವಂತೆಯೂ ಾರ್ಯಶೀಲವಾಗುವಂತೆಯೂ ಜನರ ಬೆಂಬಲದೊರೆಯಬೇಡವೆ ? ಾಗೆ ದೊರೆತದ್ದೇ ಆದರೆ ಅದರ ಚಟುವಟಿಕೆಗಳು ಹೆಚ್ಚು ಪ್ರಭಾವಾ ತವಾಗಿ, ಶಕ್ತಿಯುತವಾಗಿ, ಸ್ವತಂತ್ರವಾದ ಧೋರಣೆಯನ್ನು ಾಪಿಸಿಕೊಂಡು ಕನ್ನಡಿಗರ ಸರ್ವತೋಮುಖವಾದ ಏಳಿಗೆಗೆ ಹಾಯಕವಾಗಬಲ್ಲದು ಆ ದೃಷ್ಟಿಯಿಂದ ಪರಿಷತ್ತು ಈ ಮನವಿ ನ್ನು ನಿಮಗೆ ಸಲ್ಲಿಸುತ್ತಿದೆ.

ಷಾಭಿಮಾನಿಗಳಾದ ಕನ್ನಡಿಗರು ಪರಿಷತ್ತಿಗೆ ಹೇಗೆ ಸಹಾಯ ಾಡಬಹುದು ?

೧. ಪರಿಷತ್ತಿಗೆ ಕೆಳಗಿನ ಯಾವುದೇ ವಿಶೇಷವರ್ಗದ ಸದಸ್ಯರಾಗಿ ಸೇರ ಬಹುದು. ಇದರಿಂದ ಪರಿಷತ್ತಿನ ಶಾಶ್ವತನಿಧಿಗೆ ಹಣಸೇರಿ ಅದರಿಂದ ಬರುವ ಬಡ್ಡಿ ಪರಿಷತ್ತಿನ ದಿನಬಳಕೆಗೆ ಉಪಯೋಗವಾಗುತ್ತದೆ.

೧.	ಉದ್ಧಾರಕ ವರ್ಗ	ರೂ. ೧,೦೦೦/-
೨.	ಪ್ರದಾತೃ ವರ್ಗ	ರೂ. ೫೦೦/-
೩.	ಆಶ್ರಯದಾತ ವರ್ಗ	ರೂ. ೨೫೦/-
೪.	ಆಜೀವ ಸದಸ್ಯ ವರ್ಗ	ರೂ. ೧೦೦/-

೨. ಗೊತ್ತಾದ ಉದ್ದೇಶಕ್ಕಾಗಿ ದತ್ತಿನಿಧಿಗಳನ್ನು ದಾನಮಾಡುವುದ ಇದರಿಂದ ದಾನಿಗಳ ಹೆಸರಿನಲ್ಲಿ ಪ್ರತಿವರ್ಷವೂ ಸಾಹಿತ್ಯ ಪ್ರಚಾ ನಡೆದು ಅವರ ಹೆಸರು ಚಿರಸ್ಮರಣೀಯವಾಗಿರುತ್ತದೆ.

೩. ಪರಿಷತ್ತಿನ ಗ್ರಂಥಭಂಡಾರಕ್ಕೆ ಬೀರುಗಳ ಅವಶ್ಯಕತೆ ಇದೆ. ಅವ ದಾನಮಾಡಬಹುದು. ದಾನಿಗಳ ಹೆಸರನ್ನು ಆ ಬೀರುಗಳ ಮೇ ಬರೆಸಿಡಲಾಗುತ್ತದೆ.

೪. ಪರಿಷತ್ತಿನ ರಂಗಮಂಟಪದ ಪುನರ್ವ್ಯವಸ್ಥೆಗೆ ರೂ. ೨೫,೦೦೦ ಬೇ ಗಿದೆ. ಇದಕ್ಕಾಗಿ ಹಣ ಕೊಡುವದಾನಿಗಳ ಹೆಸರನ್ನು ಚಿತ್ರಫಲ ಮೇಲೆ ಬರೆಸಿ ತೂಗುಹಾಕಲಾಗುತ್ತದೆ.

೫. ಪರಿಷತ್ತು ಸ್ಥಾಪಿತವಾಗಿ ೫೨ ವರುಷವಾಗಿದ್ದು "ಸುವ ಮಹೋತ್ಸವ" ವನ್ನು ನಡೆಸಲು ತಗಲುವ ಕನಿಷ್ಠಪಕ್ಷ ೨ ರೂ. ಗಳ ಬಗ್ಗೆ ಧನಸಹಾಯವನ್ನು ಕೊಡುವ ದಾನಿಗಳ ಹೆಸರ ಬರೆಸಿ ಫಲಕಗಳಮೇಲೆ ಪ್ರಕಟಿಸಲಾಗುತ್ತದೆ.

೬. ಪುಸ್ತಕ ಪ್ರಕಟನೆಗೆ ಒಂದು ಲಕ್ಷ ರೂಪಾಯಿಗಳಾದರೂ ಅಗ ದಾನಿಗಳು ಪುಸ್ತಕ ಪ್ರಕಟನೆಗೆ ದಾನಮಾಡಿ ಅದರಿಂದ ಬ ಹಣವನ್ನು ಪರಿಷತ್ತು ತನ್ನ ಸಾಹಿತ್ಯ ಸಂಸ್ಕೃತಿಗಳ ಚಟುವ ಗಳಿಗೆ, ಇತರ ಪುಸ್ತಕ ಪ್ರಕಟನೆಗಳಿಗೆ ಬಳಸಿಕೊಳ್ಳಲು ಅವಕ ಕೊಟ್ಟರೆ ಅದರಿಂದ ಸಾಹಿತ್ಯಾಭಿವೃದ್ಧಿಗೆ ಅವರು ಹಿರಿಯ ಕಾ ಸಲ್ಲಿಸಿದಂತಾಗುತ್ತದೆ.

ಹೀಗೆ ಯಾವುದಾದರೊಂದು ವಿಧದಲ್ಲಿ ಕನ್ನಡಿಗರು ಸಹಾಯಮ ಕನ್ನಡ ನಾಡು ನುಡಿ ಸಂಸ್ಕೃತಿ ಕಲೆ—ಇವುಗಳ ಪುರೋಭಿವೃ ಸಹಾಯಕವಾಗಬೇಕೆಂದು ಈ ಮನವಿಯನ್ನು ಪರಿಷತ್ತು ಕನ ಜನಕೋಟಿಯ ಮುಂದೆ ಅರ್ಪಿಸುತ್ತದೆ.

ವೆಂಕಟೇಶ ಸಾಂಗಲಿ
ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿಗಳು

ಜಿ. ವೆಂಕಟಸುಬ್ಬ
ಅಧ್ಯ

ಎನ್. ವರದರಾ
ಗೌರವ ಕೋಶಾಧ್ಯ

Reg. No. B. G. 4—November 1967

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಚಿಕೆ : ೧೨
ಸಂಪುಟ : ೪೦

ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಸಂಪಾದಕ ಮಂಡಲಿ
ಶ್ರೀನಿವಾಸರಾವ್ ಕೊರಟಿ
ಆರ್. ರಾಜಪ್ಪ

ಡಿಸೆಂಬರ್ : ೧೯೭೭

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮

ಕನ್ನಡ ನಾಡುನುಡಿಗಳ ಅಭಿಮಾನಿಗಳಲ್ಲಿ ಬಿನ್ನಹ

ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಗಿ ೫೨ ವರುಷ ಳಿಂದ ಕನ್ನಡ ನಾಡುನುಡಿಗಳ ಸೇವೆಯನ್ನು ಅವ್ಯಾಹತವಾಗಿ ಡೆಸಿಕೊಂಡು ಬರುತ್ತಿದೆ. ಕನ್ನಡನಾಡು ಒಂದು ಪ್ರಾಂತವಾಗು ವರೆಗೂ ಪರಿಷತ್ತು ಕನ್ನಡಿಗರ ಏಕೀಕರಣಕ್ಕೆ ಹೊಡೆದಾಡಿ ಕೀಕರಣವನ್ನು ಸಾಧಿಸಿತು. ಶಬ್ದಮಣಿದರ್ಪಣ, ಪಂಪಭಾರತ, ಂಪರಾಮಾಯಣ, ಕವಿಚರಿತೆಯಂತಹ ಅತ್ಯುತ್ತಮವಾದ ಳೆಗನ್ನಡ ಕಾವ್ಯಗಳನ್ನೂ ಆಧಾರ ಗ್ರಂಥಗಳನ್ನೂ ಪರಿಶೋಧಿಸಿ, ವಕ್ಕೆ ನಿಘಂಟುಗಳನ್ನು ತಯಾರಿಸಿ ಪ್ರಕಟಿಸಿತು. ಸಾಹಿತ್ಯ ಂಸ್ಕೃತಿಗಳಿಂದ ಹಿಡಿದು ವಿಜ್ಞಾನ ವಿಮರ್ಶೆಗಳ ವರೆಗೂ – ಅನೇಕ ಷಯಗಳನ್ನೊಳಗೊಂಡ ಸುಮಾರು ೫೦ ಪುಸ್ತಕಗಳನ್ನು ,ಕಟಿಸಿತು. ಈಗ ೫೧ ವರ್ಷಗಳಿಂದ 'ಕನ್ನಡ ಸಾಹಿತ್ಯ ರಿಷತ್ಪತ್ರಿಕೆ' ಎಂಬ ಪ್ರೌಢ ವಿಷಯಗಳನ್ನೊಳಗೊಂಡ ಾಣ್ಮಾಸಿಕ ಪತ್ರಿಕೆಯನ್ನೂ ೩೦ ವರ್ಷಗಳಿಂದ ಪ್ರಮುಖ ಾಹಿತ್ಯ ವಿಷಯಕವಾದ 'ಕನ್ನಡ ನುಡಿ' ಎಂಬ ಮಾಸಪತ್ರಿಕೆ ುನ್ನೂ ಪ್ರಕಟಿಸುತ್ತಿದೆ. ಕನ್ನಡಿಗರಿಗೆ ಕನ್ನಡ ಭಾಷೆಯಲ್ಲಿ ಭಿಮಾನ ಪಾಂಡಿತ್ಯಗಳನ್ನು ಬೆಳೆಸುವ ಉದ್ದೇಶದಿಂದ ಕನ್ನಡ ಜಾಣ' 'ಕಾವ' ಮತ್ತು 'ರತ್ನ' ಎಂಬ ಮೂರು ಸಾಹಿತ್ಯ ರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ. ಈಗ ೩೦ ವರ್ಷಗಳಿಂದ ನೇಕ ಕೇಂದ್ರಗಳಲ್ಲಿ ಗಮಕ ತರಗತಿಗಳನ್ನು ನಡಸಿ ಕನ್ನಡ ಜನತೆ ಲ್ಲಿ ಕಾವ್ಯಾಭ್ಯಾಸ, ಕಾವ್ಯವಾಚನಾಭಿರುಚಿಗಳನ್ನು ಬೆಳೆಸಿ ಗಮಕ ಲೆಯನ್ನು ಪ್ರಚಾರಮಾಡುತ್ತಿದೆ. ದತ್ತಿನಿಧಿಗಳನ್ನು ದಾನವಾಗಿ ೊಟ್ಟಿರುವ ಮಹನೀಯರ ಹೆಸರಿನಲ್ಲಿ ನಿಷ್ಣಾತರಾದ ಪಂಡಿತರಿಂದ ತ್ತಿ ಉಪನ್ಯಾಸಗಳನ್ನು ಏರ್ಪಡಿಸಿ ಆ ಪೈಕಿ ಅನೇಕ ಉಪನ್ಯಾಸ ಳನ್ನು ಪರಿಷತ್ಪತ್ರಿಕೆಯಲ್ಲಿಯೂ ಪುಸ್ತಕರೂಪವಾಗಿಯೂ ಪ್ರಕಟಿಸ ಾಗುತ್ತಿದೆ. ಪ್ರಾಚೀನ ಸಾಹಿತ್ಯದ ಪ್ರಚಾರಕ್ಕಾಗಿ ಪುಸ್ತಕ ಳನ್ನು ಪ್ರಕಟಿಸಿರುವುದಲ್ಲದೆ ಆ ಸಂಬಂಧವಾದ ಉಪನ್ಯಾಸ ಳನ್ನು ಆಗಾಗ ಏರ್ಪಡಿಸಲಾಗುತ್ತಿದೆ. ಪ್ರತಿವರ್ಷವೂ ಒಂದು ರದವರೆಗೆ ವಸಂತ ಸಾಹಿತ್ಯೋತ್ಸವವನ್ನೂ, ಕಾಳಿದಾಸ ಯಂತಿ, ರಾಜ್ಯೋತ್ಸವ, ಭಾಷಣ ಕಲಾ ತರಗತಿಗಳು, ಕಂಠಪಾಠ ರ್ಧೆಗಳು, ದೇವರನಾಮ ಸ್ಪರ್ಧೆಗಳು—ಹೀಗೆ ಅನೇಕ ಸಾಹಿತ್ತಿಕ ತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದೆ. ದುಸಜ್ಜಿತವಾದ ರಂಗಮಂಟಪವಿದ್ದು ಅದು ಕಲಾವಿಲಾಸಿ ಸಂಘ ಕಾರ್ಯಕ್ರಮಗಳಿಗೂ ನವ್ಯನಾಟಕಗಳ ಪ್ರಯೋಗಕ್ಕೂ ಸಹಾ ಕವಾಗಿದೆ. ಸುಮಾರು ೨೦,೦೦೦ ಪುಸ್ತಕಗಳನ್ನುಳ್ಳ ಕನ್ನಡ ಗ್ರಂಥ ಭಂಡಾರವಿದೆ. ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳನ್ನು ಕೊ ಏರ್ಪಾಟೊಂದನ್ನು ಈ ವರ್ಷದಿಂದ ಕೈಕೊಳ್ಳಲಾಗಿದೆ. ಇ ಒಟ್ಟು ೮೮ ದಿನಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗ ಪರಿಷತ್ತು ತರಿಸುತ್ತಿದೆ. ಈ ಗ್ರಂಥಭಂಡಾರ ಮತ್ತು ವಾಚನಾಲ ಪ್ರಯೋಜನವನ್ನು ಸಾರ್ವಜನಿಕರೂ, ಸ್ನಾತಕೋತ್ತರ ವಿದ ಗಳೂ ಪಡೆಯುತ್ತಿದ್ದಾರೆ. ಪ್ರತಿ ವರ್ಷವೂ ಸಾಹಿತ್ಯ ಸಮ್ ವನ್ನೇರ್ಪಡಿಸಿ ವರ್ಷದಲ್ಲಿ ನಡೆದ ಸಾಹಿತ್ಯ ಕಾರ್ಯಗಳ ಯನ್ನು ವಿವೇಚಿಸಿ ಅದು ಸತ್ವಶಾಲಿಯಾಗಿ ಸರಿಯಾದ ದಾರಿ ಮುಂದುವರಿಯಲು ಬೇಕಾದ ಮಾರ್ಗದರ್ಶನವನ್ನು ಸೂಚಿಸ ತ್ತಿದೆ. ಪ್ರಸಿದ್ಧರಾದ ಸಾಹಿತಿಗಳಿಗೂ ವಿದ್ವಾಂಸರಿಗೂ ಸ ಸಭೆಗಳನ್ನೇರ್ಪಡಿಸಿ ಅವರನ್ನು ಗೌರವಿಸಿ ಅವರಿಂದ ಸ ಪ್ರಪಂಚಕ್ಕಾಗುತ್ತಿರುವ ಸೇವೆಯನ್ನು ಸ್ಮರಿಸಲಾಗುತ್ತಿದೆ. ಎಲ್ಲ ಹೆಚ್ಚಾಗಿ ಪರಿಷತ್ತು ಕನ್ನಡ – ಕನ್ನಡ ನಿಘಂಟನ್ನು ತಯಾ ಮಹತ್ಕಾರ್ಯವನ್ನು ಕೈಗೊಂಡಿದೆ. ಇದು ಡೆಮಿ ⅛ ಆ ೫೦೦೦ ಪುಟಗಳ ಮಹದ್ಗ್ರಂಥ. ಈಗ ಸುಮಾರು ೪೦೦ ಪುಟ ಅಚ್ಚಾಗಿದೆ. ಈ ಮಹಾಕಾರ್ಯಕ್ಕೆ ಸರ್ಕಾರದ ನೆರವೂ ದೊ

ಈ ಮೇಲೆ ಸೂಚಿಸಿರುವ ನಾನಾ ಮುಖವಾದ ಸಾಹಿತ್ಯ ಸ ಕಲೆಗಳ ಚಟುವಟಿಕೆಗಳನ್ನು ಪರಿಷತ್ತು ನಡೆಸಿಕೊಂಡು ತ್ತಿದ್ದರೂ ಅವುಗಳನ್ನು ಇನ್ನೂ ವಿಸ್ತರಿಸುವುದು ಆವಶ್ಯಕ ಇದಲ್ಲದೆ ಪರಿಷತ್ತು ಮಾಡಬೇಕೆಂದು ಇಟ್ಟುಕೊಂಡಿರುವ ಗಳು ಇನ್ನೂ ಬಹಳವಾಗಿವೆ. ಓಲೆ ಪ್ರತಿಗಳ ಸಂಗ್ರಹ, ಗ್ರಂಥಗಳ ಪ್ರಕಟನೆ, ಸಂಶೋಧನಾ ಶಾಖೆಯ ಏಪ ವ್ಯಾಕರಣ-ನಿಘಂಟು, ಪ್ರಾಚೀನ ಸಾಹಿತ್ಯ, ಇತರ ಗ್ರಂಥ ಇತ್ಯಾದಿಗಳ ಪ್ರಕಟನೆ, ಮತ್ತು ವಿವಿಧ ವಿಷಯಗಳ ಉ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಭಾಷೆಗಳಿಗೆ ಭಾಷಾಂತರ ಮಾಡುವುದು, ಪ್ರಕಟಮಾಡ ಸುಸಜ್ಜಿತವಾದ ರಂಗಮಂದಿರದ ಸ್ಥಾಪನೆ ಗ್ರಂಥಭ ಅಭಿವೃದ್ಧಿ ಇತ್ಯಾದಿ ಅನೇಕ ಕಾರ್ಯಕ್ರಮಗಳು ಪರಿ ಯೋಜನೆಯಲ್ಲಿವೆ.

ಇಷ್ಟು ವ್ಯಾಪಕವಾದ ಹಾಗೂ ಮಹತ್ವಪೂರ್ಣ ಕಾಯ ಗಳನ್ನು ಯೋಜಿಸಿಕೊಂಡಿರುವ ಈ ಅಖಿಲ ಕರ್ನಾಟಕದ ಯುಳ್ಳ ಏಕೈಕ ಕನ್ನಡ ಸಂಸ್ಥೆಗೆ ಇರುವ ಸದಸ್ಯ ಸಂಪತ್ತು

(ರಕ್ಷಾಪುಟದ ೩ನೇ ಪುಟ

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಡಿಸೆಂಬರ್ ೧೯೬೭

ಸಂಪುಟ : ೩೦

ಸಂಚಿಕೆ : ೧೨

ಈ ಸಂಚಿಕೆಯಲ್ಲಿ . . .

ದಿನಕ್ಕೊಂದು ಆಯೋಗ

•

ದಿನಕ್ಕೊಂದು ಆಯೋಗ ಮರುಳೆ ತರುವುದೆ ಯೋಗ?
ನಿನ್ನದಲ್ಲದ ನೆಲವ ಕಸಿಯಲಿಕ್ಕೆ!
ಬೇಡ ಬಿಡು; ಬೆಳಗಾವಿ ಕಾರವಾರದ ಎಣಿಕೆ
ಗುಟುಕಲಾಗದ ಮರಳ-ನೀರ ಬಯಕೆ!!

ಹುಚ್ಚುಕುದುರೆಯ ಬೆನ್ನಹತ್ತಿ ಹೊರಟಿಹ ಗಾಂಪ
ನಾ ಬಲ್ಲೆ ನಿನ್ನೆಲ್ಲ ಚಲನವಲನ!
ಮರೆಯದಿರು ಗಡಿಯುದ್ಧ ತೆರೆದು ಕಾದಿಹವಿಂದು
ಕರುನಾಡ ಕೋಟಿ ನಯನ!!

ನೀನರಿಯೆ ಮಂದಮತಿ ನಿನ್ನೆಲ್ಲ ಕೂಟತಂತ್ರ
ಜಪಿಸುವುದು ನಿನಗೆ ತಿರುಗುಮಂತ್ರ!
ತೋಡದಿರು ಮನೆಯ ಮರೆಯಲಿ ಹಾಳುಹೊಂಡ
ನೀ ಮುಳುಗೆ ಅದರೊಳಗೆ ಎಲವೊ ಷಂಡ!!

ನೆಲಕಾಗಿ ಹಂಬಲಿಸಿ ಹಲುಬದಿರು ಎಲೆ ಮರುಳೆ!
ತೀರದೆಂದಿಗೂ ನಿನ್ನ ಮಣ್ಣಹಸಿವು!
ಕೂಡಿ ಕೊನೆ ಒಲುಮೆಯಲಿ ಅಣ್ಣ-ತಮ್ಮದಿರಂತೆ
ಅದರಲಿಹುದು ನಿನಗೆ ನಿತ್ಯಗೆಲುವು!!

ಜಯ್ ಕನ್ನಡಾಂಬೆ

[ಸಂದರ್ಭ: ಮಹಾರಾಷ್ಟ್ರ – ಮೈಸೂರು – ಕೇರಳದ ಗಡಿ ವಿವಾದ ಇತ್ಯರ್ಥಕ್ಕೆ ನಿಯುಕ್ತಗೊಂಡ 'ಮಹಾಜನ್ ಆಯೋಗ' (Mahajan Commission) ಕೊಟ್ಟ ತೀರ್ಪಿನಿಂದ ತೃಪ್ತಿಗೊಳ್ಳದ ನೆಲದಾಹದ ಆಕ್ರಮಣ ಪ್ರವೃತ್ತಿಯ ಮರಾಠಿಗರಿಗೆ, ಅವರು ಮತ್ತೊಂದು ಆಯೋಗದ ಹೊಂಚಿನಲ್ಲಿರುವುದನ್ನರಿತು ಉತ್ತರವಾಗಿ ರಚಿಸಿದುದು. —ಲೇಖಕ]

•

ಕೆ. ಆರ್. ಗಣೇಶರಾವ್

ಪ್ರತಿಮಾವಾದ ಮತ್ತು ಎಸ್ರಾಪೌಂಡ್

‘ **ಸುಮನಾ** ’

ಆಂಗ್ಲಭಾಷಾ ಸಾಹಿತ್ಯದಲ್ಲಿ ಆಧುನಿಕ ಕ್ರಾಂತಿಯಾದ ಮೇಲೆ ನವ್ಯಧಾರೆಯ ನಾಂದಿಯ ರೂಪರೇಷೆಗಳನ್ನು ಗುರುತಿಸುತ್ತ ಖ್ಯಾತಲೇಖಕರಾದ ಹರ್ಬರ್ಟ್ ರೀಡ್ ತಮ್ಮ ಲೇಖನವೊಂದರಲ್ಲಿ :

“ By for the most active part in this opposition was played by an young American who had come to London in 1908 and had quickly made contact with the few figures in contemporary art and letters whom he could respect- Yeats, Wyndham Lewis, then just emerging as a self-styled Vorticist, and the belligerent philosopher T. E. Hulme.”

ಎಂದು ಎಸ್ರಾಪೌಂಡಿನ ಬಗೆಗೆ ಬರೆದಿದ್ದಾರೆ.

ಸಂಪ್ರದಾಯಬದ್ಧ ಜಾರ್ಜಿಯನ್ ಕವಿಗಳಿಂದ ಕಾವ್ಯ ರಚನೆಯ ಮಾರ್ಗವನ್ನು ವಿಮುಕ್ತಗೊಳಿಸಿ, ಸಾಹಿತ್ಯ ಜಗತ್ತಿನ ಎಲ್ಲ ಪ್ರಕಾರಗಳಲ್ಲಿಯೂ ಕ್ರಾಂತಿಯನ್ನುಂಟುಮಾಡಿ, ಹೊಸ ಪಂಥವೊಂದರ ನಿರ್ಮಾತೃ ಹಾಗೂ ಮಾರ್ಗದರ್ಶಕನಾಗಿ, ಹಲವಾರು ಪ್ರಸಿದ್ಧ ಕವಿಗಳನ್ನು ಪ್ರಚೋದಿಸಿ, ಪ್ರೋತ್ಸಾಹಿಸಿ ಆಂಗ್ಲಸಾಹಿತ್ಯದ ಸಿರಿಯನ್ನು ದ್ವಿಗುಣಗೊಳ್ಳುವಂತೆ ಮಾಡಿದ ಆ ತರುಣ ಅಮೇರಿಕನ್ ಮತ್ತಾರೂ ಅಲ್ಲ—ಇಂದು ಎಂಬತ್ತು ವರ್ಷಗಳ ಸುದೀರ್ಘ ಧೀಮಂತ ಬಾಳ್ವೆಯ ಅಂಚಿನಲ್ಲಿರುವ ಕವಿ, ವಿಮರ್ಶಕ ಮತ್ತು ದಾರ್ಶನಿಕನೆಂದು ಸುಪ್ರಸಿದ್ಧನಾಗಿರುವ ಎಸ್ರಾ ಪೌಂಡ್.

ಅರ್ನೆಸ್ಟ್ ಹೆಮಿಂಗ್ವೆ ೧೯೩೨ರಲ್ಲಿ ಪೌಂಡ್‌ನನ್ನು ಕುರಿತು “ Any poet born in this century or in the last ten years of the preceeding century who can honestly say that he has not been influenced by or learned greatly from the work of Ezra Pound deserves to be pitied rather than rebuked ” ಎಂದು ಉದ್ಗಾರ ತೆಗೆದಿದ್ದಾರೆ.

ಪೌಂಡ್ ಸಂಪ್ರದಾಯದ ಸಂಕೋಲೆಯನ್ನು ಮುರಿದು ತನ್ನ ಪ್ರತಿಮಾವಾದ (Imagism) ಪಂಥವನ್ನು ಆರಂಭಿಸಿ ಇಂದಿನ ಆಂಗ್ಲಕಾವ್ಯದ ಅತಿಪ್ರಮುಖ ಬಹುಚರ್ಚಿತ ಸಾಹಿತಿಗಳಾದ ಈಲಿಯೆಟ್, ಜೇಮ್ಸ್ ಜಾಯ್ಸ್, ವಿಂಡ್‌ಹ್ಯಾಮ್ ಲೂಯಿಸ್ ಮುಂತಾದವರನ್ನು ಮುನ್ನಡೆಸಿದನು ; ಯೇಟ್ಸ್‌ಕವಿಗೆ ತನ್ನ ಸಂಭಾಷಣಾ ಸಂಪತ್ತಿಯನ್ನು ಹೆಚ್ಚಿಸಿಕೊಳ್ಳುವಂತೆ ನೆರವಾದನು ; ಚೀನಾದೇಶದ ಕಾವ್ಯ ಸಂಪತ್ತನ್ನು ಸಮಕಾಲೀನ ಆಂಗ್ಲಸಾಹಿತ್ಯದಲ್ಲಿ ಆವಿಷ್ಕರಿಸಿದನು.

ತನ್ನ ಅರವತ್ತು ವರುಷಗಳ ಸಾಹಿತ್ಯಕ ಜೀವನದಲ್ಲಿ ಪೌಂಡ್ ಸುಮಾರು ೭೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾನೆ; ಸಾವಿರದೈನೂರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾನೆ.*

ಅಮೇರಿಕದ ಲೈಬ್ರರಿ ಆಫ್ ಕಾಂಗ್ರೆಸ್ ಸಂಸ್ಥೆಯು (Library of Congress of America) ಪ್ರಥಮ ಬಾಲ್ಲಿಂಜನ್ (Bollingen) ಪ್ರಶಸ್ತಿಯನ್ನು ೧೯೪೯ರಲ್ಲಿ ಪೌಂಡ್‌ನ ‘ ಪಿಸಾನ್ ಕ್ಯಾಂಟೋಸ್ ’ (Pisan Cantos) ಕೃತಿಗೆ ನೀಡಿ ಅವನನ್ನು ಗೌರವಿಸಿತು.

ಅಮೇರಿಕದ ಇಂಗ್ಲಿಷ್ ಇನ್ಸ್ಟಿಟ್ಯೂಟ್ (English Institute) ಸಂಸ್ಥೆಯು ೧೯೫೩ರಲ್ಲಿ ಪೌಂಡ್‌ನ ಸಾಹಿತ್ಯ ಕೃತಿಗಳನ್ನು ಕುರಿತಾದ ಸುದೀರ್ಘ ಅಧ್ಯಯನವನ್ನು ನಡೆಸಿತು.†

Mauberly ಕೃತಿಯನ್ನು ಕುರಿತ ಸಾರವತ್ತಾದ ಸಂಶೋಧನಾ ವಿವೇಚನೆಯೊಂದನ್ನು ಜಾನ್ ಎಸ್ಪಿ (John Espey) ಎಂಬುವನು ಪ್ರಕಟಿಸಿದ್ದಾನೆ; ಆಸ್ಟ್ರೇಲಿಯದ ಮೆಲ್‌ಬೋರ್ನ್ ವಿಶ್ವವಿದ್ಯಾನಿಲಯದವರು ‘Catullan Revolution’ ಗ್ರಂಥವನ್ನು ಪ್ರಕಟಿಸಿ ಅವನಿಗೆ ಗೌರವ ಸಲ್ಲಿಸಿದ್ದಾರೆ. ಇಂಥ ಪ್ರಕಟಣೆಗಳು ಇನ್ನೆಷ್ಟೋ....

೨

ಎಸ್ರಾ ಪೌಂಡ್ ಅಮೇರಿಕದ ಇಡಾಹೊ (Idaho) ಸಂಸ್ಥಾನದ ಹೈಲೆ (Hailey) ಯಲ್ಲಿ ಅಕ್ಟೋಬರ್ ೩೦, ೧೮೮೫ರಂದು ಜನಿಸಿದ. ಇವನ ತಂದೆ ಹೋಮರ್ ಪೌಂಡ್ ಭೂಸಂಬಂಧಿ ಕಚೇರಿಯಲ್ಲಿ ನೌಕರನಾಗಿದ್ದ; ಅನಂತರ

---

* ಡೊನಾಲ್ಡ್ ಗ್ಯಾಲಪ್ (Donald Galup) ಅವರ “ Bibliography of Ezra Pound ” (London 1963).

† ‘ Pound News Letter ’ ಎಂಬ ನಿಯತಕಾಲೀನ ಪತ್ರಿಕೆ ಅವನನ್ನು ಕುರಿತೇ ಇದೆ,

ಅವನು ಫಿಲಿಡೆಲ್ಫಿಯಾ ಮಿಂಟ್‌ನಲ್ಲಿ ಖನಿಜ ಮಿಶ್ರಣ ಪರೀಕ್ಷಕ (Assayer) ನಾಗಿ* ನೇಮಕ ಹೊಂದಿದ. ಎಸ್ರಾ ತನ್ನ ಬಾಲ್ಯದ ದಿನಗಳನ್ನು ಫಿಲಿಡೆಲ್ಫಿಯಾದ ಹೊರ ವಲಯಗಳಲ್ಲಿಯೂ, ನ್ಯೂಯಾರ್ಕಿನಲ್ಲಿಯೂ ಕಳೆದನು. ಅವನು ನ್ಯೂಯಾರ್ಕಿನ ಹ್ಯಾಮಿಲ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿ Ph.B., ಪಡೆದನು. ೧೯೦೬ರಲ್ಲಿ ಪೆನ್‌ಸಿಲ್‌ವೇನಿಯ ವಿಶ್ವವಿದ್ಯಾನಿಲಯದ ಮಾಸ್ಟರ್ ಪದವೀಧರನಾದನು. ಅದೇ ವರ್ಷ (Romanics) ಹ್ಯಾರಿಸನ್ ಫೆಲೋಷಿಪ್ ಪಡೆದು ಯೂರೋಪಿಗೆ ತೆರಳಿದನು. ಯೂರೋಪ್ ಪ್ರವಾಸವನ್ನು ಮುಗಿಸಿ ಅಮೇರಿಕಕ್ಕೆ ಹಿಂದಿರುಗಿದ ಮೇಲೆ, ಪೌಂಡ್ ಇಂಡಿಯಾನ (Indiana) ಸಂಸ್ಥಾನದ ಕ್ರಾಫರ್ಡ್‌ವಿಲೆಯಲ್ಲಿನ ವ್ಯಾಬಷ್ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿಕೊಂಡನು. ಮುಂದಿನ ವರ್ಷ ಪುನಃ ಯುರೋಪಿಗೆ ಪ್ರಯಾಣ ಬೆಳಸಿ ೧೯೦೮ನೇ ಜೂನ್ ತಿಂಗಳಿನಲ್ಲಿ 'A Lume Spento' ಎಂಬ ಹೆಸರಿನಲ್ಲಿ ತನ್ನ ಪ್ರಥಮ ಕವನ ಸಂಕಲನವನ್ನು ವೆನಿಸ್ ನಗರದಲ್ಲಿ ಪ್ರಕಟಿಸಿದನು.

ಮುಂದಿನ ೧೨-೧೩ ವರ್ಷಗಳನ್ನು ಅವನು ಲಂಡನ್ನಿನಲ್ಲಿಯೇ ಕಳೆದನು. ಅಲ್ಲಿ ಪೌಂಡ್ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದನು. ಅಮೇರಿಕ ಮತ್ತು ಲಂಡನ್ನಿನ ಪತ್ರಿಕೆಗಳಿಗಾಗಿ ೫೦೦ಕ್ಕೂ ಹೆಚ್ಚು ಲೇಖನಗಳನ್ನು ಬರೆದು ಪ್ರಕಟಿಸಿದನು.

ಈ ಕಾಲಾವಧಿಯಲ್ಲಿ ಇಂಗ್ಲೆಂಡಿನ ಸಾಹಿತ್ಯಜಗತ್ತಿನಲ್ಲಿ ನವಶಕ್ತಿಯೊಂದರ ಸಂಚಾರವಾಯಿತು; ಹಳೆಯ ಸಂಪ್ರದಾಯವೊಂದು ಕ್ಷೀಣಿಸಿ, ನವ್ಯಮಾರ್ಗಕ್ಕೆ ಎಡೆಕೊಟ್ಟಿತು. ಅದಕ್ಕೆ ಎಸ್ರಾ ಪೌಂಡನೇ ಆದ್ಯಪ್ರವರ್ತಕನಾದನು.

ಲಂಡನ್ನಿನಲ್ಲಿ ಇರುವಾಗ ಪೌಂಡನು ಡೊರೋತಿ ಷೇಕ್ಸ್‌ಪಿಯರಳನ್ನು ಮದುವೆಯಾದನು. ಪೌಂಡ್–ಈಲಿಯೆಟ್‌ರ ಪ್ರಥಮ ಭೇಟಿಯಾದುದು ೧೯೧೪ರ ಸೆಪ್ಟೆಂಬರ್ ದಿನಾಂಕ ೨೨ರಂದು. ಅಂದಿನಿಂದ ಪೌಂಡ್‌ನ ಜೊತೆಗೆ ಟೀ ಸೇವಿಸ ಬಂದವರಲ್ಲಿ ಹಲವರು ಈಲಿಯಟ್ಟರಾಗಿ ಮಾರ್ಪಟ್ಟು, ನವ್ಯಕಾವ್ಯಧಾರೆಯ ಸಶಕ್ತ ಪೋಷಕರಾಗಿ ಅದನ್ನು ಬೆಳಸಲಾರಂಭಿಸಿದರು. 'E. P.' ಸಂಕೇತ ಆಂಗ್ಲ ಸಾಹಿತ್ಯ ಚರಿತ್ರೆಯಲ್ಲಿ ಮನೆಮಾತಾಯಿತು; ಅವನು ತನ್ನ ಪ್ರತಿಮಾವಾದವನ್ನು ಮುಂದಿಟ್ಟು ನವಪಂಥ ಸ್ಥಾಪನೆಗೆ ಕಾರಣನಾದನು.

ಪೌಂಡ್ ೧೯೨೦-೨೧ರಲ್ಲಿ ತನ್ನ 'Villon' ಗೀತರೂಪಕವನ್ನು ರಚಿಸಿದ. ಮುಂದಿನ ಇಪ್ಪತ್ತು ವರ್ಷಗಳನ್ನು ಅವನು ಇಟಲಿಯಲ್ಲಿಯೇ ಕಳೆದನು. ಈ ಅವಧಿಯಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಚೀನಾದೇಶದ ಸುಪ್ರಸಿದ್ಧ ದಾರ್ಶನಿಕನಾದ ಕನ್‌ಫ್ಯೂಷಿಯಸ್‌ನ ತತ್ವಗಳಲ್ಲಿ ಅವನಿಗೆ ಗಹನವಾದ ಆಸಕ್ತಿಯುಂಟಾಯಿತು. ಇದರ ಸ್ಪಷ್ಟ ಪ್ರಭಾವವನ್ನು ಪೌಂಡ್‌ನ ತತ್ಕಾಲೀನ ಕೃತಿಗಳಲ್ಲಿ ಗುರುತಿಸಬಹುದು.

ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ, ಇಟಲಿ ಮತ್ತು ಅಮೇರಿಕಗಳ ನಡುವೆ ಸಮರಾರಂಭವಾದಾಗ ಅಮೇರಿಕದ ಯುದ್ಧನೀತಿಯನ್ನು ಕುರಿತು ಕಟುವಾಗಿ ಪೌಂಡ್ ಟೀಕಿಸಿದುದರಿಂದ ಅವನನ್ನು ಸೆರೆಹಿಡಿಯಲಾಯಿತು. ತನ್ನ ಸರ್ಕಾರದ ನೀತಿಯ ವಿರುದ್ಧ ನಿಂತ ಅವನನ್ನು ರಾಷ್ಟ್ರದ್ರೋಹದ ಆಪಾದನೆಯ ಮೇರೆಗೆ ೧೯೪೫ರಲ್ಲಿ ವಾಷಿಂಗ್‌ಟನ್ನಿಗೆ ವಿಚಾರಣೆಗಾಗಿ ಕರೆದೊಯ್ದರು. ಆದರೆ ಆ ವಿಚಾರಣೆ ನಡೆಯಲೇ ಇಲ್ಲ! ಅಲ್ಲಿ ಅವನನ್ನು ಬುದ್ಧಿವಿಕಲನೆಂದು ಪರಿಗಣಿಸಿ ವಾಷಿಂಗ್‌ಟನ್ನಿನ ಸರ್ಕಾರೀ ಮಾನಸಿಕ ಆರೋಗ್ಯಧಾಮವಾದ ಸೆಂಟ್ ಎಲಿಜಬೆತ್ (St. Elizabeth Govt. Hospital) ಆಸ್ಪತ್ರೆಗೆ ಕಳುಹಿಸಲಾಯಿತು. ಹನ್ನೆರಡು ವರ್ಷಗಳಷ್ಟು ಸುದೀರ್ಘ ಕಾಲವನ್ನು ಪೌಂಡ್ ಅಲ್ಲಿಯೇ ಕಳೆಯಬೇಕಾಯಿತು. ಆಸ್ಪತ್ರೆಯಲ್ಲಿದ್ದ ಆ ಕಾಲದಲ್ಲಿ ಅವನು ಸಾಹಿತ್ಯ, ತತ್ತ್ವಶಾಸ್ತ್ರಗಳನ್ನು ಅಭ್ಯಸಿಸಿದನು. ನೂರಾರು-ಸಾವಿರಾರು ಮಂದಿಗೆ ಸಂದರ್ಶನವಿತ್ತು ಗಂಟೆಗಟ್ಟಲೆ ಸಾಹಿತ್ಯ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಾದಿಗಳನ್ನು ಚರ್ಚಿಸಿದನು. ವಿಶ್ವದೆಲ್ಲೆಡೆಗೂ ಪತ್ರವ್ಯವಹಾರವನ್ನು ಬೆಳಸಿಕೊಂಡನು. ಕೊನೆಗೊಮ್ಮೆ ಅಲ್ಲಿಂದ ಬಿಡುಗಡೆ ಹೊಂದಿ ೧೯೫೮ರ ಏಪ್ರಿಲ್‌ನಲ್ಲಿ ಅವನು ಅಮೇರಿಕವನ್ನು ಬಿಟ್ಟು ಇಟಲಿಗೆ ಬಂದನು. ಮೊದಲು ಟಿರೊಲೊ-ಡಿ-ಮೆರಾನೊ (Tirolo-di-Merano) ನಲ್ಲಿ ಮಗಳೊಂದಿಗೆ ವಾಸಿಸಿ ಈಗ ವೆನಿಸ್‌ನಲ್ಲಿಯೇ ಪೌಂಡ್ ವಾಸಿಸುತ್ತಿದ್ದಾನೆ. ಬದುಕಿನಲ್ಲಿ ಕಂಡ ನಿರಾಶೆ, ಸೋಲುಗಳು ವೃದ್ಧಾಪ್ಯದೊಂದಿಗೆ ಸೇರಿ ಅವನನ್ನು ಸಾಕಷ್ಟು ಹಣ್ಣು ಮಾಡಿವೆ. ಆದರೂ ಅವನೊಬ್ಬ ಕ್ರಾಂತಿಪುರುಷನೆಂಬ ಮಾತನ್ನು ಮರೆಯಲಾಗದು.†

---

* 'Ezra Pound': Charles Norman (A biography-Macmillan Co. 1960).

† "I have fallen into a lethargy, I will never write another line; I regret anything I have ever written . . . "
'English Poetry Today'—Geoffrey Johnson (quoted)—Literary Half-yearly.

೩

ಪೌಂಡ್‌ನ ಮೊದಲ ಕೃತಿ ೧೯೦೮ರಲ್ಲಿ ಪ್ರಕಟವಾದ 'A Lume Spento' ಎಂಬ ಕವನಸಂಗ್ರಹ. ಮುಂದಿನ ವರ್ಷ, ಅಂದರೆ ೧೯೦೯ರಲ್ಲಿ ಅವನ ''Personae' ಪ್ರಕಟವಾಯಿತು. ಸಾಹಿತ್ಯವಿಮರ್ಶೆಯಾದ 'The Spirit of Romance' ೧೯೧೦ ರಲ್ಲಿ ಪ್ರಕಟವಾಯಿತು; ಅವನ ಮೊದಲ 'ಆಧುನಿಕ' ಅಥವಾ 'ನವ್ಯ' ಕವನಗಳಾದ 'Riposte', ಸುನೀತ ಮತ್ತು ಬ್ಯಾಲೆ (Ballet) ಗಳನ್ನೊಳಗೊಂಡ 'ಕಾವಲ್‌ಕಾಂಟಿ'ಯ ಅನುವಾದ (Cavalcanti) ಮತ್ತು 'Seafarer' ೧೯೧೨ರಲ್ಲಿ ಹೊರಬಿದ್ದುವು. ನವ್ಯಧಾರೆಯ ಸತ್ತ್ವಪೂರ್ಣಕೃತಿಯಾದ 'Lustra' ೧೯೧೫ರಲ್ಲಿ ಪ್ರಕಟವಾಯಿತು; ಇದೇ ವರ್ಷ ಮೊದಲ ಚೀನೀಭಾಷಾಂತರ ಗ್ರಂಥ 'Cathay' ಅಚ್ಚಾಯಿತು. ಪೌಂಡ್‌ನ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿದ ಅಮೇರಿಕದ ಪ್ರಖ್ಯಾತ ಪ್ರಾಚ್ಯ ಸಂಶೋಧಕ ಎರ್ನೆಸ್ಟ್ ಫೆನೆಲ್ಲೊಸಾನ ಪತ್ನಿಯು ತನ್ನ ಪತಿಯ ಮರಣಾನಂತರ (೧೯೦೮) ಅವನ ಟಿಪ್ಪಣಿಗಳನ್ನು ಭಾಷಾಂತರಿಸಲು ಅತ್ಯಂತ ಸಮರ್ಥ ವ್ಯಕ್ತಿಯೆಂದು ಪೌಂಡ್‌ನಿಗೆ ನೀಡಿದಳು. ಜಪಾನೀಯ ಸಾಹಿತ್ಯದಲ್ಲಿಯೂ ಆಸಕ್ತಿ ತಳೆದ ಪೌಂಡ್ ಫೆನೊಲ್ಲೊಸಾನ (Ernest Fenellosa) ಟಿಪ್ಪಣಿಗಳನ್ನು ಜೊತೆಗೂಡಿಸಿ ಜಪಾನೀ ರಂಗಭೂಮಿಯನ್ನು ಕುರಿತು ೧೫ ನಾಟಕಗಳನ್ನು ಅನುವಾದಿಸಿ "Noh plays" ಎಂಬ ಹೆಸರಿನಲ್ಲಿ ಪ್ರಕಟಿಸಿದನು (೧೯೧೭). ಅವನ ಮತ್ತೊಂದು ಸುಪ್ರಸಿದ್ಧ ಕೃತಿಯಾದ 'Homage to Sextus Propertius' ಸಹ ೧೯೧೭ರಲ್ಲಿ ಪ್ರಥಮ ಮುದ್ರಣವನ್ನು ಕಂಡಿತು. ೧೯೨೦ರಲ್ಲಿ 'Arnaut Daniel Poems' ಸಂಕಲನವೂ ಮತ್ತು 'Instigations' ಆತ್ಮಚರಿತ್ರೆಯೂ ಹೊರಬಿದ್ದವು. ಅವನ ಇತರ ವಿಮರ್ಶಾಗ್ರಂಥಗಳಲ್ಲಿ 'Indiscretions' (1923), 'How to Read' (1931)—ಇದೇ ಪುಸ್ತಕ ತನ್ನ ವಿಸ್ತೃತರೂಪದಲ್ಲಿ ೧೯೩೪ರಲ್ಲಿ 'The A B C of Reading' ಎಂಬ ಹೆಸರಿನಲ್ಲಿ ಪ್ರಕಟವಾಯಿತು-'Polite Essays' (1937), 'Guide to Kulchur' (1938) ಪ್ರಮುಖವಾದುವು. ವಿಮರ್ಶೆಗಳ ಸಾರವನ್ನೊಳಗೊಂಡು 'Make it New' ಗ್ರಂಥ ಅವನ ಉತ್ಕೃತಿಯಾಗಿದೆ.

ಅವನ ಶ್ರೇಷ್ಠಕೃತಿ 'Cantos' ಇದರ ಒಟ್ಟು ಅಧ್ಯಾಯ (canto) ಗಳ ಸಂಖ್ಯೆ ೧೧೯. ವೈಯಕ್ತಿಕ ಸೋಲು, ನಿರಾಶೆಗಳ ಪರಿಣಾಮವಾಗಿ ರಚಿತ ಇದಕ್ಕೆ 'ಪಿಸಾನ್ ಕ್ಯಾಂಟೋಸ್' ಎಂಬ ಇನ್ನೊಂದು ಹೆಸರೂ ಇದೆ. ಅದನ್ನು ಪೌಂಡ್‌ನ 'Poetic Journal' ಎಂದಿದ್ದಾರೆ ಹಲವರು; ಅವನ ಅನುಭವ ಮತ್ತು ನೆನಪುಗಳ ಸಾರಸರ್ವಸ್ವವಾಗಿರುವುದರಿಂದ ಅದು ಅವನ ವೈಯಕ್ತಿಕ ಹಾಗೂ ಸ್ವಾಂತ ಕೃತಿಯಾಗುಳಿದಿದೆ. ಕ್ಯಾಂಟೊಗಳು ಪೌಂಡ್‌ನ ಮಹತ್ವಪೂರ್ಣ ಸಾಧನೆಯೆನಿಸಿವೆ. "Pound has moments of real impersonality: he writes of his own personal tragedy with an utter lack of self-pity' ಎಂದಿದ್ದಾನೆ ಅಲ್ವರೆಜ್ (Alvarej A).

ಅವನ ಯಶಸ್ವೀ ರಚನೆಗಳೆಂದರೆ ಕವನಗಳು. ಪೌಂಡ್‌ನ ಅಸಂಖ್ಯ ಕೃತಿಗಳಲ್ಲಿ ಜನಸಾಮಾನ್ಯರ ಸ್ವತ್ತಾಗಿ ಉಳಿದಿರುವುದು ಅವನ 'Mauberley' ಹಾಗೂ 'Sextus Propertius' ಗಳು ಮಾತ್ರ. ಇವೆರಡು ಕವನಸಂಕಲನಗಳೂ ಅವನ ಪ್ರತಿನಿಧಿ ರಚನೆಗಳಾಗಿವೆ.

ನಿಜಕ್ಕೂ ಪೌಂಡ್‌ನ ಕವನಗಳು ಅವನ ಬಾಳಿನ ಸ್ಮಾರಕಗಳೇ, ಚರಮಗೀತೆಗಳೇ ಆಗಿವೆ. ಈ ಅಭಿಪ್ರಾಯವನ್ನು ಈಲಿಯೆಟ್ ಸಹ ಒಪ್ಪುತ್ತಾರೆ.

೪

ಎಸ್ರಾ ಪೌಂಡ್ ತನ್ನ ಪಂಥಕ್ಕೆ ಪ್ರತಿಮಾವಾದ 'Imagism' ಎಂದು ಹೆಸರಿಸಿದ್ದಾನೆ. ಅದರ ಆವಿರ್ಭಾವವೂ ರೋಮಾಂಚಕಾರಿ ಕತೆಯಾಗಿದೆ.*

ಮೊಟ್ಟಮೊದಲು 'E. P.' ಲಂಡನ್ನಿಗೆ ಬಂದಾಗ (೧೯೦೮) ಯೇಟ್ಸ್, ವಿಂಡ್‌ಹ್ಯಾಂವ್ ಲೂಯಿಸ್ ಮತ್ತು ಹ್ಯೂಮ್ ಮೊದಲಾದವರು ಪರಿಚಿತರಾದರು. ತರುಣ ಕವಿ ರಿಚರ್ಡ್ ಆಲ್‌ಡಿಂಗ್‌ಟನ್, 'H. D.' ಎಂಬಕ್ಷರಗಳ ಸಂಕೇತದಿಂದ ಕವಿತೆಗಳನ್ನು ಬರೆಯುತ್ತಿದ್ದ ಅವನ ಅಮೆರಿಕನ್ ಹೆಂಡತಿ, ಜಾನ್ ಫ್ಲೆಚರ್ (John Fletcher) ಮತ್ತು ಲಂಡನ್ನಿನ ಫ್ಲಿಂಟ್ (Flint) ಮೊದಲಾದವರು ಪೌಂಡ್‌ನ ಜೊತೆಗೂಡಿ ಈ ವಾದವನ್ನು ಬೆಳಸಿದರು.

೧೯೧೨ರಲ್ಲಿ ಪೌಂಡ್, ಎಚ್. ಡಿ. ಮತ್ತು ಆಲ್ಡಿಂಗ್‌ಟನ್ ಮೂವರೂ ಕಲೆತು, ಕಾವ್ಯರಚನೆಯಲ್ಲಿ ತಮ್ಮದೇ ಆದ ಕೆಲವು ಪ್ರತ್ಯೇಕ ನಿಯಮಗಳನ್ನು ಅನುಸರಿಸಬೇಕೆಂಬ ನಿರ್ಧಾರಕ್ಕೆ ಬಂದರು. ಅದೇ ವರ್ಷ ಜನವರಿಯಲ್ಲಿ ನ್ಯೂ

---

* 'Imagism' ಬಗೆಗೆ ಸಂಪೂರ್ಣ ವಿವರಗಳನ್ನು ತಿಳಿಯಬೇಕಾದರೆ Coffman ಬರೆದ ಆ ಹೆಸರಿನ ಗ್ರಂಥವನ್ನು ನೋಡಬಹುದು.

ಏಜ್ (New Age) ಪತ್ರಿಕೆಯು ಹ್ಯೂಮ್‌ನ ಐದು ಕವನಗಳನ್ನು ಪ್ರಕಟಿಸಿತು. ಇದನ್ನು ಬಿಟ್ಟರೆ, ನವ್ಯ ಪಂಥವನ್ನು ಆರಂಭಿಸಿದವರು ಮೇಲಿನ ಗುಂಪಿನ ಕವಿಗಳೇ.

ಇದೇ ಸಮಯದಲ್ಲಿ ಫ್ರಾನ್ಸಿನ ಸಾಹಿತ್ಯ ಜಗತ್ತಿನಲ್ಲಿಯೂ ನವೋದಯದ ಸೂಚನೆಗಳ ಬೀಜಾಂಕುರವಾಗಿತ್ತು. ಸುಪ್ರಸಿದ್ಧ ವಿಮರ್ಶಕ ರೆಮಿ ಗಾರಮೆಂಟ್‌ನ (Remy de Gourment) ಸಮರ್ಥ ಮಾರ್ಗದರ್ಶನದಲ್ಲಿ ಹೊಸಪಂಥವೊಂದು ಪ್ರಾರಂಭವಾಗಿತ್ತು. ಗಾರಮೆಂಟ್‌ನ ಅಂತ್ಯ ದಿನಗಳವರೆಗೂ ಪೌಂಡ್ ಅವನೊಂದಿಗೆ ಪತ್ರವ್ಯವಹಾರವಿರಿಸಿಕೊಂಡಿದ್ದ. ಹೀಗಾಗಿ ಬ್ರಿಟನ್ ಮತ್ತು ಫ್ರಾನ್ಸ್‌ನ ಎರಡು ನವ್ಯ ಪಂಥದವರೂ ಪರಸ್ಪರ ವಿಷಯವಿನಿಮಯಗಳನ್ನು ಹೊಂದಿದ್ದರಲ್ಲದೆ, ಪರಸ್ಪರ ಸಹಾನುಭೂತಿ ತಾಳ್ಮೆಗಳನ್ನುಳ್ಳವರಾಗಿದ್ದರು.

ಅವನ ನೂತನ ಪಂಥದ ನಿಯಮಗಳು ಅವನ ಮಾತುಗಳಲ್ಲಿ ಇಂತಿವೆ :

"1. Direct treatment of the "thing" whether subjective or objective.
2. To use obsolutely no word that does not contribute to the presentation.
3. As regarding rhythm : to compose in the sequence of the musical phrase, not in sequence of a metronome."

೧೯೧೩ರಲ್ಲಿ "ಪೊಯಟ್ರಿ" ಪತ್ರಿಕೆ (Poetry Magazine) ಗಾಗಿ ಬರೆದ ಲೇಖನವೊಂದರಲ್ಲಿ ಪೌಂಡ್ ಇನ್ನಷ್ಟು ವಿವರವಾಗಿ ತಮ್ಮ ಪಂಥದ ನಿಯಮಗಳನ್ನು ಪರಿಚಯ ಮಾಡಿಸಿದ್ದಾನೆ.

"Use no superflous word, no adjective, which does not reveal something ... Do not re-tell the mediocre verse what has already been done in good prose ... Don't imagine that the art of poetry is any simpler than the art of music, or that you can please the expert before you have spent atleast as much effort on the art of music ... use either no ornament or good ornament ..."

ಫೆನೆಲ್ಲೊಸಾನ ಚೀನೀಸಾಹಿತ್ಯಕ ಟಿಪ್ಪಣಿಗಳನ್ನು ಅಧ್ಯಯನ ಮಾಡುತ್ತಿರುವಾಗ ಪೌಂಡ್‌ನ ಮನಸೆಳೆದುದು ಚೀನಾ ದೇಶದ ಸಾಹಿತ್ಯ ರಚನೆಯಲ್ಲಿನ ಸುಲಭತೆ ಮತ್ತು ಸುಭಗತೆ. ಪದಪದವೂ ಪ್ರತಿಮೆಗಳಂತೆ ತೋರುವ ಅಲ್ಲಿನ ಕಲೆ ಪೌಂಡ್‌ನಿಗೆ ಮನದಟ್ಟಾಗಿರಬೇಕು. ಇದೇ ಅವನ ಮೇಲೆ ಪ್ರಭಾವಬೀರಿ, ನವಪಂಥದ ನಿರ್ಮಿತಿಗೆ ಕಾರಣವಾಗಿರಬೇಕು.

'New Age' ಪತ್ರಿಕೆಯ ಸಂಪಾದಕಿ Hariet Manroeಗೆ ಬರೆದ ಪತ್ರವೊಂದರಲ್ಲಿ 'E. P.' ತನ್ನ 'Imagism' ನಿಯಮಕ್ಕೊಳ್ಳಪಟ್ಟ ಕಾವ್ಯರಚನೆಯ ಬಗೆಗೆ ಹೀಗೆ ಬರೆದಿದ್ದಾನೆ:—

"Poetry must be as well written as prose ... departing in no way from speech save by a heightened intensity. There must be no book of words, no periphrases, no invensions ... Rhythm must have meaning. It can't be merely a careless dash off, with no grip, and no real hold to the words and sense, a tumpy tum tumty tum tum ta ... There must be no cliches, set phrases, stereotyped journalese..."

೩

ಪೌಂಡನ ವಿಮರ್ಶೆಯ ತೀಕ್ಷ್ಣತೆ ಬೆರಗುಗೊಳಿಸುವಂಥದು. ಮೊದಲ ಬಾರಿಗೇ ಕಾವ್ಯಮೌಲ್ಯಗಳನ್ನು ಗುರುತಿಸಬಲ್ಲ ಜಾಗ್ರತಪ್ರಜ್ಞೆ ಪೌಂಡನದು. ಅವನ ಪಾಲಿಗೆ ವಿಮರ್ಶೆ ಮೌಲ್ಯನಿರ್ದೇಶನ ಮಾತ್ರವಲ್ಲ, 'It is a professional activity—a process of refinement, above all, a refinement of language to make it new, to make it precise, to make it clear.'

ಅವನು ಇಂಗ್ಲಿಷ್‌ನೊಂದಿಗೆ ಫ್ರೆಂಚ್ ಭಾಷೆಯನ್ನು ಬೆರಸಿ ಕಾವ್ಯರಚನೆ ಮಾಡಿದುದು ಒಂದು ವೈಶಿಷ್ಟ್ಯ. ಫ್ರೆಂಚ್ ಮತ್ತು ರೋಮನಿಕ್ಸ್‌ಗಳಲ್ಲಿ ಅವನು ಪರಿಣತನಾಗಿದ್ದುದಲ್ಲದೆ ಚೀನಾದ ದಾರ್ಶನಿಕ ಕನ್‌ಫ್ಯೂಷಿಯಸ್‌ನ ಉಪದೇಶಗಳ ಮೂಲಪಾಠಾಂತರಗಳನ್ನು ಅಭ್ಯಾಸ ಮಾಡಿದ್ದನು. ಜೊತೆಗೆ ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಲ್ಲಿ ಅಪಾರ ಆಸಕ್ತಿ ಅವನಿಗಿತ್ತು. ಆಸ್ಪತ್ರೆಯಲ್ಲಿದ್ದಾಗ ದಿನನಿತ್ಯ ಅವನೊಡನೆ ಚರ್ಚೆಗಾಗಿ ಬರುತ್ತಿದ್ದ ಸಂದರ್ಶಕರೊಂದಿಗೆ ಗಂಟೆಗಟ್ಟಲೆ ಭ್ರಮಿತನಂತೆ ಅರ್ಥಶಾಸ್ತ್ರದ, ರಾಜ್ಯಶಾಸ್ತ್ರದ ಬಿಕ್ಕಟ್ಟುಗಳನ್ನು ಕುರಿತು ಚರ್ಚಿಸುತ್ತಿದ್ದ ಪೌಂಡ್‌ನ ಚಿತ್ರವೊಂದನ್ನು ತನ್ನ ಲೇಖನದ ಪ್ರಸ್ತಾವನೆಯಲ್ಲಿ ಅಲ್ವರೆಜ್ ನೀಡಿದ್ದಾನೆ. ತನ್ನ ಅಭಿಪ್ರಾಯಗಳನ್ನು ಕುರಿತು ಅರ್ಥಶಾಸ್ತ್ರಜ್ಞ ಮೇಜರ್ ಡಾಗ್ಲಸ್‌ನೊಡನೆ ಪೌಂಡ್ ಪತ್ರವ್ಯವಹಾರ ನಡೆಸಿದ್ದಂತೆ ಕಾಣುತ್ತದೆ. ಅಧಿಕ ಬಡ್ಡಿಯ ಮೇಲೆ

ಪಡೆವ ಸಾಲಸೋಲಗಳ ಬಗೆಗೆ ಅವನ ಕಳಕಳಿಯ ಭಾವನೆಗಳು ಸಮರಾನಂತರ ಸಂಪೂರ್ಣ ಸತ್ಯವೆನಿಸಿವೆ.* ಪೌಂಡ್‌ನ ಕೃತಿಗಳನ್ನು ಒಳಹೊಕ್ಕು ನೋಡಿದರೆ ಅವನ ದುರ್ಭರ ಮಾನಸಿಕ ಯಾತನೆಯ ನೆಳಲು ಗೋಚರಿಸುತ್ತದೆ. ಹನ್ನೆರಡು ವರ್ಷಗಳು ಮಾನಸಿಕ ವಿಕಲತೆಯ ಆರೋಪದಿಂದ ಆಸ್ಪತ್ರೆಯಲ್ಲಿ ಕಳೆಯಬೇಕಾಗಿ ಬಂದರೆ ಆಗಬಹುದಾದ ಮೂಲವೇದನೆಯ ಸ್ಪಷ್ಟ ಪರಿಚಯು ದೊರೆಯುತ್ತದೆ.

ಅವನ ಕಾವ್ಯಕೃತಿಗಳು, ಅಧಿಕಾರಯುತವಾದ ವಿವೇಚನೆಗಳಿಂದ ಕೂಡಿದ ವಿಮರ್ಶಾ ಗ್ರಂಥಗಳು, ಭಾಷಾ ಪ್ರಭುತ್ವ ಇವು ಪೌಂಡ್‌ನನ್ನು ಚಿರಸ್ಥಾಯಿಯನ್ನಾಗಿ ಮಾಡಿವೆ. ಅಲ್ವರೆಜ್‌ನ ಈ ವಾಕ್ಯಗಳೊಂದಿಗೆ ಈ ಪರಿಚಯವನ್ನು ಮುಗಿಸಬಹುದು:

"He is the only poet in the last three hundred years to write English as though he had never read Shakespeare. For with Shakespeare the English Language crystalized out."

* "Usury is a cancer, Finance a disease and war the dying agony of a civilization strangled by debt and Taxation. These were the ideas that Pound attampted to put into action during the war"-H. Read.

ಶ್ರೀ ಅಜಿತ್‌ಕುಮಾರ್

ಕಾವ್ಯಸ್ಫೂರ್ತಿ

ಯಾರ ಲಕ್ಷ್ಯದಲಿಟ್ಟು ಈ ಕವನಗಳ ಬರೆದೆ–
ಪ್ರಶ್ನಿಸುವರೆಲ್ಲ
ತಿಳಿಸಬಲ್ಲೆಯೇನು
ನೀನು ?
ತಿಳಿಯೆ–
ಬಿಡು,
ನಾ
ನೇ
ಸಾರಿ ಬಿಡುವೆ :
ಕವನ ಹಲವಲಿ ನೀನು ;
ಉಳಿವಲೊ–
ಅವುಗಳಲು
ಬಹುಶಃ ನೀನಿರುವೆ. . .
ಕೊನೆಯಲುಳಿದುದೊಂದು, ಅದರಲಿ ?
ಅದರದಿನ್ನೂ ಅರೆಯಾಗಿಯೇ ಇಹುದಲ್ಲ. . . !
ಅದರಲೂ
ನಿನ್ನ ನೆಳಲೆ
ಬಹು ಪಾಲು. . .
ನನ್ನ ಬಾಳಿನೊಂದೆ ಆದ್ಯಂತ ಕವಿತೆ
ನೀ ಬಾರ !

—(ಕನ್ನಡಕ್ಕೆ) **ಪ್ರೇಮಕುಮಾರ**

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

ತಿ. ತಾ. ಶರ್ಮ

ಶಾಸನಗಳಲ್ಲಿ, ಸಾಹಿತ್ಯದಲ್ಲಿ, ಕುಂತಳ

ಕುಂತಳ ದೇಶವೆಂದರೆ ಕರ್ನಾಟಕ. ಅನೇಕ ಶಿಲಾ ಶಾಸನಗಳಲ್ಲಿ ಕುಂತಳ ದೇಶದ ಪ್ರಸ್ತಾಪವಿದೆ. ಅನೇಕ ಗ್ರಂಥಗಳಲ್ಲಿ ಕುಂತಳ ದೇಶ ಕುರಿತ ಮಾತಿದೆ. ಈ ವಿಚಾರವಾಗಿ ವಿದ್ವಾಂಸರು, ಸಂಶೋಧಕರು, ವ್ಯವಸ್ಥಿತ ರೀತಿಯಿಂದ ಸಂಶೋಧನೆ ನಡೆಸಬೇಕಾದ ಆವಶ್ಯಕತೆ ಇದೆ.

ವರಾಹಮಿಹಿರನ 'ಬೃಹತ್ಸಂಹಿತೆ'ಯಲ್ಲಿ 'ಕುಂತಳ' ಎಂಬ ಮಾತು ದೇಶವಾಚಕವಾಗಿ ಕಂಡುಬರುತ್ತದೆ.

ಮಹಾಭಾರತದ ರಾಜಸೂಯಕ ಪರ್ವದಲ್ಲಿ (೩೪–೨೨) ಕಂಡುಬರುವ ಈ ಶ್ಲೋಕಗಳೆರಡನ್ನು ನೋಡಿ :

"ಆಕರ್ಷಾಃ ಕುನ್ತಲಶ್ಚೈವ ಮಾಲವಾಶ್ಚಾನ್ಧ್ರಕಾಸ್ತಥಾ
ದ್ರಾವಿಡಾಃ ಸಿಂಹಲಾಶ್ಚೈವ ರಾಜಾ ಕಾಶ್ಮೀರಕಾಸ್ತಥಾ"

"ಭಿಲ್ಲಿಕಾಃ ಕುನ್ತಲಾಶ್ಚೈವ ಸೌಹೃದಾ ನಲ ಕಾನನಾಃ
ಕೋಕುಟ್ಟಕಾಃ ಸ್ತಥಾಚೋಲಾಃ ಕೊಂಕಣಾ ಮಾಲವಾಸ್ತಥಾ"

ಅಜಂತದಲ್ಲಿ ದೊರೆತಿರುವ ಶಿಲಾಶಾಸನದಲ್ಲಿ 'ಕುಂತಲ' ಎಂಬ ಹೆಸರು ಕಂಡುಬರುತ್ತದೆ.

[1] "Mention of Kuntala in an inscription at Ajanta, seems to indicate that Ajanta itself was in Kuntala"

ಜಾನ್ ಫೆಯಿತ್‌ಫುಲ್ ಫ್ಲೀಟರು ಬರೆದ "ಕನ್ನಡ ರಾಜವಂಶಾವಳಿ" ಎಂಬ ಗ್ರಂಥದಲ್ಲಿ ಈ ವಿಚಾರವಾಗಿ ಹೇಳಿರುವುದನ್ನು ಹೀಗೆ ಸಂಗ್ರಹ ಮಾಡಿ ಹೇಳಬಹುದು.

ಚಾಳುಕ್ಯರ ರಾಜ್ಯಭಾರ ಕಾಲದಲ್ಲಿ ಕುಂತಲ ದೇಶಕ್ಕೆ ಉತ್ತರದಲ್ಲಿ ನರ್ಮದಾನದಿ ಇತ್ತು ; ದಕ್ಷಿಣದಲ್ಲಿ ತುಂಗಭದ್ರಾ ನದಿ ಇತ್ತು ; ಪಶ್ಚಿಮದ ಕಡೆ ಅರಬಿ ಸಮುದ್ರ ; ಪೂರ್ವಕ್ಕೆ ಗೋದಾವರಿ ನದಿ ಮತ್ತು ಪೂರ್ವಘಟ್ಟಗಳು. ನಾಸಿಕ್ ಮತ್ತು ಕಲ್ಯಾಣಗಳು ಬೇರೆ ಬೇರೆ ಕಾಲದಲ್ಲಿ ಆ ದೇಶದ ರಾಜಧಾನಿಗಳಾಗಿದ್ದುವು. ಅನಂತರ [2] ದಕ್ಷಿಣ ಮಹಾರಾಷ್ಟ್ರಕ್ಕೆ ಕುಂತಳವೆಂಬ ಹೆಸರು ಬಂತು. ಈ ಭಾಗದಲ್ಲಿ ಮೈಸೂರು ಸಂಸ್ಥಾನದ ಉತ್ತರ ಭಾಗವೂ ಸೇರಿತ್ತೆಂದು ಹಲವು ವಿದ್ವಾಂಸರ ಅಭಿಪ್ರಾಯ.[3]

'ದಶಕುಮಾರ ಚರಿತ್ರೆ'ದಲ್ಲಿ ವಿದರ್ಭ ದೇಶದ ಅಧೀನ ರಾಜ್ಯವನ್ನಾಗಿ ಕುಂತಳ ರಾಜ್ಯವನ್ನು ತೋರಿಸಲಾಗಿದೆ. ಆದರೆ ಹತ್ತನೆಯ ಶತಮಾನದಲ್ಲಿ ಕುಂತಳ ದೇಶದಲ್ಲಿ ವಿದರ್ಭ ನಗರವಿದ್ದಂತೆ ತಿಳಿದುಬರುತ್ತದೆ.[4] ಅನಂತರ ಶಿಲಾಶಾಸನಗಳಲ್ಲಿ ಕುಂತಳ ದೇಶವನ್ನೇ ಕರ್ನಾಟಕ ದೇಶವೆಂದು ಕರೆಯಲಾಗಿದೆ. 'ಕುಂತಳ' ವೆಂದರೆ ಕರ್ನಾಟಕವೆಂದೇ ಡಾ|| ಭೂಲರವರು ಅಭಿಪ್ರಾಯಪಟ್ಟಿದ್ದಾರೆ.[5]

'ತಾರಾತಂತ್ರ'ದಲ್ಲೂ ಸಹ 'ಕರ್ನಾಟ' ಅಂದರೆ 'ಮಹಾರಾಷ್ಟ್ರ' ಎಂದು ಹೇಳಲಾಗಿದೆ. 'ಮಾರ್ಕಾಂಡೇಯ'ಪುರಾಣದಲ್ಲಿ (ಅ. ೫೭) ಮಧ್ಯಪ್ರದೇಶದಲ್ಲೊಂದು ಕುಂತಲ, ದಕ್ಷಿಣ ದೇಶದಲ್ಲೊಂದು 'ಕುಂತಲ'ವೆಂದು ಹೇಳಿದೆ. ಎರಡು ಕುಂತಲ ದೇಶಗಳಿವೆಯೆಂದು ಮತ್ತೆ ಎಲ್ಲೂ ಹೇಳಿರುವುದು ಕಂಡುಬರುವುದಿಲ್ಲ.

ಶಿವಮೊಗ್ಗ ಜಿಲ್ಲೆಯ ಸೊರಬದ ತಾಲ್ಲೂಕು ಕೂಬತ್ತೂರು ಕುಂತಳ ದೇಶದ ರಾಜಧಾನಿ. ಪರಂಪರಾಗತವಾಗಿ ಹೇಳಿ ಕೇಳುವಂತೆ ಇದು ಚಂದ್ರಹಾಸನ ರಾಜಧಾನಿ.[6]

ಪಶ್ಚಿಮ ಚಾಳುಕ್ಯ ರಾಜರೆಲ್ಲ "ಕುಂತಳೇಶ್ವರ"ರು ; "ಕುಂತಳದೇಶಾಧಿಪತಿ" ಗಳು. ಅವರು ಕುಂತಳ ದೇಶಕ್ಕೆ ಮಾತ್ರ ಪ್ರಭುಗಳಲ್ಲ ; ಅವರ ಸಾಮ್ರಾಜ್ಯ ವಿಸ್ತಾರವಾ

1 Archaeological Survey, West. Ind. Vol. IV p. 126, 127

2 Bhandarkar's Deccan Sc. xii

3 J. R. H. S. 1911 p. 182

4 Dasa Kumara Charita ch. 8

5 Dr. Buhler,s note : Introduction to Vikramanka Deva Charita

6 Mysore and Coorg Vol II p. 357

ದುದು. ಕುಂತಳ ದೇಶದ ವಿಭಾಗಗಳನ್ನು ಹೀಗೆ ಗುರುತಿಸ ಬಹುದು :

ಬನವಾಸಿ	೧೨,೦೦೦	ತೊರಗಲೆ	೬,೦೦೦
ಹಾನುಂಗಲ್	೫೦೦	ಕೆಳವಾಡಿ	೩೦೦
ಪುಲಿಗೆರೆ	೮೦೦	ಕಿಸುಕಾಡು	೭೦
ಬೆಳ್ವೊಲ	೩೦೦	ಬಾಗಡಗೆ	೭೦
ಕೂಂದಿ	೩,೦೦೦	ತರ್ದ್ದೆವಾಡಿ	೧,೦೦೦

"It is very interesting to note that Kuntala country of seven and a half lakhs (of villages?); Rattapādi of earliar records. Western Chalukyas claimed suzerainty over this. This country was first ruled by Mauryas of the Nanda-Gupta race and after them by the Rashtra Kuta Kings."[7]

ಮೌರ್ಯ, ಶಾತವಾಹನ, ಗುಪ್ತ, ರಾಜವಂಶಗಳ ಕಾಲ ದಿಂದಲೂ ಕುಂತಲ ರಾಜ್ಯವೆಂಬುದೊಂದು ಗಣ್ಯ ದೇಶ ವಾಗಿತ್ತೆಂಬುದನ್ನು ಗಮನಿಸಬೇಕು.

ಮದರಾಸಿನ ಸಂಸ್ಕೃತ ಹಸ್ತಪ್ರತಿಗಳ ೧೯೧೬-೧೯೧೯ ನೆಯ ವಾರ್ಷಿಕ ವರದಿಯಲ್ಲಿ ಹೀಗಿದೆ:

"No. 95. Bharata Charita–Krishna mentions Pravara Sena, the author of Setu as the King of Kuntala."[8]

ಈ ಪ್ರವರಸೇನನ ಚರಿತ್ರೆಯನ್ನು ಗುರುತಿಸಬೇಕಾಗಿದೆ.

ಏಳನೆ ಶತಮಾನದ ಕನ್ನಡ ಹೆಸರುಗಳು

ಚಿತ್ರದುರ್ಗದ ಜಿಲ್ಲೆ, ದಾವಣಗೆರೆ ತಾಲ್ಲೂಕು ಅನು ಗೋಡು ಹೋಬಳಿಯಲ್ಲಿ ಹೊನ್ನೂರೆಂಬುದೊಂದು ಹಟ್ಟಿ. ಅಲ್ಲಿನ ಗಂಗಪ್ಪ ಎಂಬುವರ ಬಳಿ ತಾಮ್ರಶಾಸನದ ಮೂರು ಹಲಗೆಗಳಿದ್ದುವು.[9] ಮೈ ಸೂ ರು ಪ್ರಾಚ್ಯಲಿಪ್ಯನ್ವೇಷಣ ಶಾಖಾಧಿಕಾರಿಗಳು ಆ ಶಾಸನವನ್ನೋದಿ, ಪಾಠವನ್ನು, ಅದರ ಭಾಷಾಂತರವನ್ನು, ಅದರ ಮೇಲೆ ತಮ್ಮ ಟೀಕೆ ಯನ್ನೂ ಪ್ರಕಟಿಸಿದ್ದಾರೆ. ಭಾಷೆ ಸಂಸ್ಕೃತ, ಲಿಪಿ ಕನ್ನಡ; ೩೬ ಪಾದಗಳಿವೆ.

ಲಿಪಿಯ ರೂಪರೇಖೆಗಳ ಸಹಾಯದಿಂದ ಶಾಸನವು ಕ್ರಿ.ಶ. ಏಳನಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು ; ವಿಕ್ರಮಾದಿತ್ಯನ ಆಳ್ವಿಕೆ ; ಅವನಾಳ್ವಿಕೆಯ ಹದಿನಾರನೆಯ ವರ್ಷದಲ್ಲಿ ಹುಟ್ಟಿದ್ದು. ಅಂದರೆ ಕ್ರಿ.ಶ. ೬೭೦ ಎಂದು ಖಂಡಿತ ವಾಗಿ ಹೇಳಬಹುದು. ಕಾಂಚೀಪುರವನ್ನು ಗೆದ್ದ ಮೊದಲ ನೆಯ ವಿಕ್ರಮಾದಿತ್ಯನಿವನೇ (ಬಾದಾಮಿ ಚಾಳುಕ್ಯರು) ಎಂಬುದು ನಿರ್ವಿವಾದ.

ಇದೊಂದು ಭೂದಾನ ಶಾಸನ. ಇಪ್ಪತ್ತು ಮಂದಿ ಬ್ರಾಹ್ಮಣರಿಗೆ ೫೦೦ ನಿವರ್ತನ ಗದ್ದೆಯನ್ನು ಕೊಟ್ಟುದಾಗಿ ಇದರಿಂದ ತಿಳಿದು ಬರುತ್ತದೆ. ಆ ಬ್ರಾಹ್ಮಣರಾದರೋ

> " ವೇದವೇದಾಂಗೇತಿಹಾಸ ಪುರಾಣ ಧರ್ಮ
> ಶಾಸ್ತ್ರ ಪಾರಗಸ್ಯ, ಅಗ್ನಿಷ್ಟೋಮಾದಿ ಯಜ್ಞಾ
> ವಭೃತ ಸ್ನಾನ ಪವಿತ್ರೀಕೃತ . . ."

ರೆನಿಸಿದವರು. ಅವರಲ್ಲಿ ಕೆಲವರ ಹೆಸರುಗಳನ್ನು, ಅವರು ಯಾವ ಯಾವ ಗೋತ್ರಗಳಿಗೆ ಸೇರಿದವರೆಂಬುದನ್ನು ಇಲ್ಲಿ, ಕೊಡಲಾಗಿದೆ.

(೧) ಭಾರದ್ವಾಜಗೋತ್ರ—ಗಣಜ್ಜ, ಬಾಳುಜ್ಜ; ದೇವಣಜ್ಜ.
(೨) ಕಾಶ್ಯಪಗೋತ್ರ—ಕೊನಜ್ಜ, ಇಡುಮ್ಬಜ್ಜ, ದೂದಜ್ಜ, ನಾರಣಜ್ಜ.
(೩) ಆತ್ರೇಯಗೋತ್ರ—ಮೆಜಜ್ಜ, ನಾಗಜ್ಜ, ರೇವಜ್ಜ.
(೪) ಕೌಂಡಿನ್ಯಗೋತ್ರ—ನನ್ದಜ್ಜ.
(೫) ಶಾಂಡಿಲ್ಯಗೋತ್ರ—ಮುಸಜ್ಜ.
(೬) ಗೌತಮಗೋತ್ರ—ಕಾಡಜ್ಜ.
(೭) ಕೌಶಿಕಗೋತ್ರ—ಕಾರಿಜ್ಜ.

ಈ ಹತ್ತು ಹದಿನಾಲ್ಕು ಹೆಸರುಗಳನ್ನು ಪರೀಕ್ಷಿಸಿ ನೋಡಿ ದರೆ ಕನ್ನಡ ಜನರ ಹೆಸರುಗಳೇ ಇರಬೇಕೆಂದು ಹೇಳಬೇಕಾ ಗುತ್ತದೆ. ಇಡುಂಬ, ದೂದ, ಮುಸ, ಕಾಡ, ಕಾರಿ, ರೇವ, ಎಂಬ ಮಾತುಗಳಂತೂ ಸಂಸ್ಕೃತವಲ್ಲ. ಏನೇ ಆಗಲಿ ಈ ಅಂಕಿತ ನಾಮಗಳನ್ನು ಕುರಿತು ಸೂಕ್ಷ್ಮ ಪರೀಕ್ಷೆ ಮಾಡಬೇಕಾದದ್ದು ಅವಶ್ಯಕ. ಸಂಶೋಧಕರಿಗೆ ಇಲ್ಲಿ ಸಾಕಾದಷ್ಟು ಅವಕಾಶವಿದೆ.

ರಾಜಕೀಯ ಪಾರಿಭಾಷಿಕ ಶಬ್ದಗಳು

ಅನೇಕ ಶಿಲಾಶಾಸನಗಳಲ್ಲಿ ರಾಜಕೀಯಕ್ಕೆ ಸಂಬಂಧ ಪಟ್ಟಂತೆ ಪಾರಿಭಾಷಿಕ ಶಬ್ದಗಳು ಹತ್ತಾರಲ್ಲ ನೂರಾರು,

---

7 No. 211 Madras Epigraphical Report 1914, p, 88

8 Madras Mss Report, 1916-19

9 No. 30 Mys. Archgl. Report, 1939

ಸಾವಿರಾರು, ಸಿಗುತ್ತವೆ. ಅವುಗಳನ್ನೆಲ್ಲ ಆರಿಸಿ, ಪಟ್ಟಿ ಮಾಡಿ, ನಿಷ್ಕೃಷ್ಟಾರ್ಥವನ್ನು ಕೊಡುವುದು ಅತ್ಯಂತ ಅವಶ್ಯಕ. ಈ ದಾರಿಯಲ್ಲಿ ಹೋಗಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಬಹಳ ಲಾಭ ಉಂಟಾಗುತ್ತದೆ.

[10] ತ್ರಿಭುವನಮಲ್ಲದೇವ, ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರ ಪೆರ್ಮಾಡಿದೇವರಸ ಏರಂಬರಗೆಯ ರಾಜಧಾನಿಯಿಂದ ಕಿಸುಕಾಡೆಪ್ಪತ್ತು, ಕೆಳವಾಡಿ ಮೂನೂರು, ಬಾಗಡಗೆ ಎಪ್ಪತ್ತು, ನರೆಯಂಗಲ್ಲು ಹನ್ನೆರಡು, ಇಷ್ಟನ್ನೂ ಆಳುತ್ತಿದ್ದ ಬಗೆ ಇದು :

"ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನೆಯಿಂ,
ಸುಖಸಂಕಥಾ ವಿನೋದದಿಂ, ರಾಜ್ಯಂಗೆ
ಯುತ್ತಮಿರ್ದು, ಪುರಾತನಮಪ್ಪಧರ್ಮಂ
ಗಳಂ ಪ್ರತಿಪಾಲಿಸುತ್ತ, ಧರ್ಮಪ್ರಸಂಗ
ಮಾದಲ್ಲಿ, ಧರ್ಮಂಗಳ್ಗೆಲ್ಲ ಸಾಸನಮಾಗಲ್ವೇ
ಳ್ಕುಮೆಂದು ಕಾರುಣ್ಯಂಗೆಯ್ಯಲ್."

"ಶಾಸನಪ್ರಭುತ್ವ"ದ ಸೊಲ್ಲು ಇಲ್ಲಿ ಕೇಳಿಬರುತ್ತಿದೆ.

ಮಹಾಸಾಮಂತ ಅಚುಗಿದೇವ, ಅವನ ಮಗ ಭೂಲೋಕಮಲ್ಲ ಪೆರ್ಮಾಡಿಯ[11] ಶಾಸನದಲ್ಲಿ

"ತ್ರಿಭೋಗಾಭ್ಯನ್ತರ ಸಿದ್ಧಿಯಿಂ
ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನೆಯಿಂ
ದಾಳುತ್ತಮಿರೆ"

ಎಂಬುದಾಗಿ ಹೇಳಿದೆ. "ತ್ರಿಭೋಗಾಭ್ಯನ್ತರಸಿದ್ಧಿ" ಎಂಬುದಕ್ಕೆ ಸರಿಯಾದ ಅರ್ಥವನ್ನು ಕೊಡಬೇಕು. 'ತ್ರಿಭೋಗ'ಗಳು ಯಾವುದೆಂಬುದು ಗೊತ್ತಾಗಬೇಕು.

ಹತ್ತನೆಯ ಶತಮಾನದ ನೊಳಂಬರ ಕಾಲದ[12] ಶಿಲಾಶಾಸನವೊಂದರಲ್ಲಿ

"ನೊಳಂಬಾಧಿರಾಜರ್ ಸುಖಾನುರಾಗದೊಳಿರೆ"

ಎಂಬುದಾಗಿ 'ರಾಜ್ಯಭಾರ ಮಾಡುತ್ತಿರೆ' ಎನ್ನುವುದಕ್ಕೆ ಬದಲಾಗಿ ಹೇಳಲಾಗಿದೆ. "ಸುಖಾನುರಾಗ" ಎಂಬ ಮಾತು ಬಹಳ ಅರ್ಥಪೂರ್ಣವಾಗಿದೆ.

ಮತ್ತೊಂದು[13] ಶಾಸನದಲ್ಲಿ ಹೀಗಿದೆ :

"ಶ್ರೀಮನ್ಮಹಾಪ್ರಧಾನ, ಮನೆವೆರ್ಗಡೆ, ಕುಂದ
ಮಾರಾಯರ್ ಮೈಸೆನಾಡಾ ತಾವಱಿ ಕೆ
ಱಿಯನುಭಯ ಸಮಯದಿಂದಾ
ಳುತ್ತುಮಿರೆ."

"ಉಭಯ ಸಮಯ" ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕಾಗಿದೆ.

[14] ಹನ್ನೆರಡನೆಯ ಶತಮಾನದ (ಕ್ರಿ.ಶ. ೧೧೧೮) ಶಾಸನವೊಂದರಲ್ಲಿ

"ಶ್ರೀಮತ್ತ್ರಿಭುವನ ಪೊಯಳ್ಸದೇವರು
ಗಂಗವಾಡಿ ತೊಂಬತ್ತಱುಸಾಯಿರಮಂ
ಏಕಮತದಿಂ ರಾಜ್ಯಂಗೆಯುತ್ತಂ ಇರೆ"

ಎಂಬುದಾಗಿ ಹೇಳಿದೆ. "ಏಕಮತದಿಂ" ಎಂಬ ಮಾತು ಗಮನಾರ್ಹವಾಗಿದೆ.

ರಾಷ್ಟ್ರಕೂಟ ಅಕಾಲವರ್ಷನ ಕಾಲದ ಶಾಸನವೊಂದರಲ್ಲಿ ಕಾರ್ತಿಕೇಯ ತಪೋಧನಾಥಪತಿ, ಗಣಧರಯ್ಯನು

"ಕೊಳ್ಗಲ್ಲಾಳೆ ಲೋಹಾಸನಮಸ್ತಕ
ಸ್ಥಿತನಾಗಿ ರಾಜ್ಯಂಗೆಯುತ್ತುಂ"[15]

ಎಂದಿದೆ. ಇದಕ್ಕೆ ಅರ್ಥ ಮಾಡುವುದು ಸುಲಭವಲ್ಲ.

ಹರುಷವಿಚಾರ ಚಾವಡಿ, ಮಂಡೆಗದ್ಯಾಣ, ಮನೆವಣ, ಕುರುಹುಗಲ್ಲು, ನಂಬುಗೆಯ ನಿರೂಪ, ವಾರ್ತಾಪಾಲನ, ನಿಧಾಯಕ, ನಿಬಂಧಕ, ಬಾಹತ್ತರ ನಿಯೋಗಾಧಿಪತಿ, ರಾಣುವೆಯವರು—ಇಂತಹ ಶಬ್ದಗಳಿಗೆ ಲೆಕ್ಕವೇ ಇಲ್ಲ.

ನಾನು ಸೈನಿಕ, ಸಾಹಿತಿಯಲ್ಲ

"ನಾನು ಸೈನಿಕ, ಸಾಹಿತಿಯಲ್ಲ. ಹೊಡೆಯುವುದು, ಹೊಡೆಸಿಕೊಳ್ಳುವುದು ; ಕೊಲ್ಲುವುದು, ಕೊಲ್ಲಿಸಿಕೊಳ್ಳುವುದು ; ಇದು ನನ್ನ ವೃತ್ತಿ. ಈ ಕೆಲಸದಲ್ಲಿ ನಾನು ನಿಪುಣ. ಸಾಹಿತಿಗಳಾಗಿ ನೀವು, ಹಿಂದುಮುಂದು ನೋಡದೆ ನನಗಾಹ್ವಾನ ಕೊಟ್ಟು, ದುಡುಕಿದಿರಿ. ಅದರ ಫಲವನ್ನು ನೀವು ಉಣಲೇ ಬೇಕು."

10 No. 119 S I. I. Vol XI P. II Bombay-Karnataka.

11 No. 129 S. I. I. Vol XI P. II

12 No. 48 Mys. Archgl. Report 1924

13 No. 18 Mys. Archgl. Report 1924

14 No 22 ,, ,, ,,

15 No. 67 S. I. I. Vol IX P. 1

ಎಂದಾರಂಭಿಸಿದ ಅಮೆರಿಕದ ದಂಡನಾಯಕನೊಬ್ಬ ಸಾಹಿತ್ಯ ಸಂಸ್ಥೆಯೊಂದರಲ್ಲಿ. ಮುಂದುವರಿಸಿದ :

"ನನ್ನನ್ನು ಹೆತ್ತ ತಾಯಿ ನನ್ನ ಕೈಗೊಂದು ಕತ್ತಿಯನ್ನು ಕೊಟ್ಟಳು ; ಲೇಖಣಿಯನ್ನು ಕೊಡಲಿಲ್ಲ. ಹುಟ್ಟು ಗುಲಾಮರ ಹೊಟ್ಟೆಯಲ್ಲಿ ಪ್ರತಿಭಾಶಾಲಿಗಳು, ಕವಿಗಳು, ಹುಟ್ಟುವುದಿಲ್ಲ. ಈಗ ನಮ್ಮ ದೇಶದಲ್ಲಿ ಹುಟ್ಟುತ್ತಿರುವವರೆಲ್ಲ ಷಂಡರು. ಇಂತಹ ಷಂಡರು, ಗುಲಾಮರನ್ನೆಲ್ಲ, ಕತ್ತರಿಸಿ ಹಾಕು. ಆಮೇಲೆ ವೀರರೂ, ವೀರ ಮಾತೆಯರೂ, ಸ್ವತಂತ್ರರೂ, ಪ್ರತಿಭಾಶಾಲಿಗಳೂ, ಕವಿಗಳೂ, ಕಲಾವಿದರೂ ಹುಟ್ಟುತ್ತಾರೆ. ಇದು ನನ್ನ ತಾಯಿ ನನಗೆ ಕೊಟ್ಟ ಸಂದೇಶ. ಆ ಪವಿತ್ರ ಸಂದೇಶವನ್ನು ಆಚರಣೆಗೆ ತರುವುದೊಂದೇ ನನ್ನ ಕರ್ತವ್ಯ."

ಸ್ವಲ್ಪ ಹೆಚ್ಚುಕಡಿಮೆ ೧೫೦ ವರ್ಷಗಳಾದುವು. ಅಂದಿನಿಂದಲೇ ಆರಂಭವಾಯಿತು ಅಮೆರಿಕದಲ್ಲಿ ಪ್ರತಿಭಾಶಾಲಿಗಳ, ಮಹಾಸಾಹಿತಿಗಳ, ಕಲಾವಿದರ ಅವತಾರ!

ತಾಯಿ ಈತನ ಕೈಗೆ ಕತ್ತಿ ಕೊಡುವುದಕ್ಕೆ ಮೊದಲು ಅಮೆರಿಕದ ಜನ, ಜೀವನ, ಸಾಹಿತ್ಯ, ಈ ವಿಚಾರಗಳನ್ನು ಕುರಿತು ಅದೇ ದಂಡನಾಯಕ ಕೊಡುವ ಶಬ್ದಚಿತ್ರವಿದು!

"ಅಮೆರಿಕದ ಜನ ಹೇಗಿದ್ದರು? ಪುಸ್ತಕ, ಸಾಹಿತ್ಯ, ಕವಿ, ಈ ಮಾತುಗಳೇ ಬಳಕೆಯಲ್ಲಿ ಇರಲಿಲ್ಲ. ಓದುವವರು ಕೆಲವರಿದ್ದರು ; ಅವರ ಆದರ್ಶ ಇಂಗ್ಲಿಷ್! ಇಂಗ್ಲಿಷ್ ಕವಿಗಳು, ಇಂಗ್ಲಿಷ್ ಕಲಾವಿದರು, ಇನ್ನು ಯಾರೂ ಇಲ್ಲ. ಯಂಗ್, ಪೋಲಕ್, ಅಡಿಸನ್, ವಾಟ್ಸ್, ಇವರೆ ಅಮೆರಿಕದ ಮಹಾಕವಿಗಳು! ಮಾದರಿಗಳು! ಕಾದಂಬರಿಕಾರ ಸರ್ ವಾಲ್ಟರ್ ಸ್ಕಾಟ್ ಒಬ್ಬನೆ! ನಾಚಿಕೆ ಹೇಸಿಕೆ ಇಲ್ಲದವರೆಲ್ಲ ಷೇಕ್ಸ್‌ಪಿಯರ್ ಭಕ್ತಶಿರೋಮಣಿಗಳು! ಪ್ರಾಟೆಸ್ಟೆಂಟರ ಪಾಲಿಗೆ ಮಿಲ್ಟನ್ ಒಬ್ಬನೆ ಮಹಾಕವಿ. ಮಾನ ಮರ್ಯಾದೆಯುಳ್ಳವರು ಯಾರೂ ಬೈರನ್, ಷೆಲ್ಲಿಗಳ ಹೆಸರನ್ನೂ ಉಚ್ಚರಿಸುತ್ತಿರಲಿಲ್ಲ. ಬರ್ನ್ಸ್—ಪಾಪ ಕೂಸು! ಅವನನ್ನು ಹೆತ್ತ ತಾಯಿಗೇ ಅವನನ್ನು ಕಂಡರೆ ನಾಚಿಕೆ."

ಸಾಕು. ಇಂದಿನ ಭಾರತದ, ಕನ್ನಡ ನಾಡಿನ, ಜನಜೀವನ ಚಿತ್ರ ನೋಡಿ! ೧೯೬೮ರ ಮೂಡುವುದರಲ್ಲಿದೆ! ಇಂದೂ ನಮಗೆ ಇಂಗ್ಲೆಂಡ್, ಇಂಗ್ಲಿಷ್, ಆದರ್ಶ! ಸಂಸ್ಕೃತ, ದೇಶಭಾಷೆಗಳು, "ಇಕ್ಕಳ" ದಿಂದಲೂ ತಾಕಲು ಅರ್ಹವಾದುವುಗಳಲ್ಲ. ಇದು ಮನೋಧರ್ಮಕ್ಕೆ ಬಂದಿರುವ ಗ್ಲಾನಿ, ಹಾನಿ. ಈ ಗ್ಲಾನಿ, ಈ ವಿಪತ್ತಿನಿಂದ ಪಾರಾಗಬೇಕಾದರೆ ನಮ್ಮೆಲ್ಲರ ಒಳಗೇ ಕ್ರಾಂತಿ ಜ್ವಾಲೆಗಳೇಳಬೇಕು. ಎಲ್ಲ ದೋಷ, ದೌರ್ಬಲ್ಯಗಳೂ ನಾಶವಾಗಬೇಕು. ಎಲ್ಲ ಕಳಂಕಗಳೂ ಧ್ವಂಸವಾಗಬೇಕು.

ರಾಜ್ಯಶಕ್ತಿ ಒಂದು ಕತ್ತಿ,
ತಿಳಿವಳಿಕೆಯುಳ್ಳವರ ಕೈಯಲ್ಲಿ ಅದು ಉಪಕಾರಿ,
ಇಲ್ಲದವರ ಕೈಯಲ್ಲಿ ಅಪಾಯಕಾರಿ.

—ಡಿ.ವಿ.ಜಿ.

ಬಸವಣ್ಣನವರ ವಚನಗಳಲ್ಲಿ ಮಾನವಲೋಕ

ಸಂಗಮನಾಥ ಜಿ. ಹಂಡಿ

'ಕೊಲುವೆನೆಂಬ ಭಾಷೆ ದೇವನದು; ಗೆಲುವೆನೆಂಬ ಭಾಷೆ ಭಕ್ತನದು' ಎಂಬ ಧೀರಭಾಷೆ ತೊಟ್ಟು ಯಶವಶನಾದ ಬಸವೇಶನು, ಜೀವನದ ಅನಂತ ಹಂತಗಳಲ್ಲಿ ಹಾಯ್ದು ತನ್ನದೇ ಆದ ಒಂದು ವಿಶಿಷ್ಟ 'ಹಾದಿ' ಹಾಕಿದ್ದಾನೆ. ಅನಂತ ಸಂಪರ್ಕಗಳಿಂದ ಅವನ ಅನುಭವ ಅನಂತ ಮುಖವಾಗಿದೆ. ಈ ಅನಂತತೆಯಲ್ಲಿಯೂ, ನಡೆದಂತೆ ನುಡಿಯುವ-ನುಡಿದಂತೆ ನಡೆಯುವ ಏಕತೆ ಇದೆ. ಅಂತೆಯೆ ಅವನ ವಚನಗಳು ಸ್ವಾನುಭವ ಶಕ್ತಿಸಹಿತಗಳಾಗಿ ಸತ್ವಯುತವಾಗಿವೆ. ಸಮಸ್ತ ಮಾನವರ ಮನದ ಮಿಡಿತಗಳಾಗಿವೆ. ಶರಣರ ವಚನಗಳಲ್ಲಿ ಧರ್ಮ-ಕಾವ್ಯಧರ್ಮಗಳು ಇರುವದಕ್ಕಿಂತಲೂ ವಾಸ್ತವಿಕ ವಿಚಾರಗಳಿದ್ದುದು ಮಹತ್ವದುದಾಗಿದೆ. 'ವಚನಗಳಲ್ಲಿ ಶಿವಶರಣರು ಅಂತರಂಗದ ಆಳವಾದ ಅನುಭವಕ್ಕೆ ಕನ್ನಡಿ ಹಿಡಿದಿದ್ದಾರೆ, ನಿರ್ಭಯವಾದ ಆತ್ಮನಿರೀಕ್ಷಣೆಯನ್ನು ಮಾಡಿದ್ದಾರೆ.'[೧] ಬಸವಣ್ಣನ ರಕ್ತಗತ ವಿಚಾರಗಳು, ಅಂದಿನ ಜನರ ಕಂಠವನ್ನಾಶ್ರಯಿಸಿ ಇಂದು ಮಸಿ ಮುಖಾಂತರ ಮೂಡಿವೆ, ಎಂದು ಹೇಳಬಹುದು. ಆದುದರಿಂದ ಬಸವಣ್ಣನ ವಚನದ ಭಾಷೆ ಆಚರಣೆಯ ಭಾಷೆ, ಪ್ರಚಾರದ ಬೋಧನೆಯ ಭಾಷೆಯಲ್ಲ. ಈ ನಿರ್ಭಯ-ನಿಷ್ಠುರದ ನುಡಿಯಲ್ಲಿ ಪರತಂತ್ರ-ಬಿದ್ದು ನುಡಿವ ಕಾರಣ-ಕಾರ್ಯಗಳು ಇಲ್ಲ. ಬಸವಣ್ಣನೇ ಈ ಮಾತನ್ನು ಸ್ಪಷ್ಟವಾಗಿ ಸಾರಿ ಸಾರಿ ಹೇಳಿದ್ದಾನೆ.

[೨] ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ,
ಲೋಕವಿರೋಧಿ, ಶರಣನಾರಿಗಂಜುವನಲ್ಲ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ||೭೫೩||

'ಎಲ್ಲ ವಚನಕಾರರಿಗಿಂತ ಹೆಚ್ಚಾಗಿ ಅವನಲ್ಲಿ ನಿಸ್ಸಂಕೋಚವಾದ ಅಂತರ್ನಿರೀಕ್ಷಣೆಯ ಪ್ರವೃತ್ತಿ ಇದೆ.'[೩] 'ಅವನ ವಚನಗಳು ಬರೀ ನಟನೆಯಲ್ಲ. ಅವು ಅಂತರಂಗಸ್ಫುರಿತ ನೈಸರ್ಗಿಕ ಭಾವಗಳು'[೪] ಎಂದು ವಿಮರ್ಶಕರು ಸತ್ಯದಾರತಿಯನ್ನೆತ್ತಿದ್ದಾರೆ. ಬಸವಣ್ಣನ ವಚನಗಳಲ್ಲಿ ಸತ್ಯಾಂಶಗಳಧಿಕವಾಗಿರುವುದರಿಂದ ಅವನ ವೈಯಕ್ತಿಕ ಹಾಗೂ ಆ ಕಾಲದ ಐತಿಹಾಸಿಕ ಮತ್ತು ಸಾಮಾಜಿಕ ಸತ್ಯಸಂಗತಿಗಳು ದೊರೆಯುತ್ತವೆ. ಈ ದೆಸೆಯಲ್ಲಿ ಮಾನವಲೋಕ ಕುರಿತು ಆಡಿದುದನ್ನು-ಅವನ ವಚನರಾಶಿಯನ್ನು ಕಣ್ಮುಂದಿಟ್ಟುಕೊಂಡು ನೋಡಬೇಕಾದುದು; ಪ್ರಸ್ತುತ ಉದ್ದೇಶವಾಗಿದೆ.

ಬಸವಣ್ಣನದು ಸಮಗ್ರದೃಷ್ಟಿ; ಸಮಷ್ಟಿ ದೃಷ್ಟಿ. ಸಿರಿ, ಅಧಿಕಾರ, ಕುಲ, ನೆಲಗಳಲ್ಲಿ ಭಿನ್ನತೆಗಾಣದ-ಭೇದ ಮಾಡದ ಸಮಭಾವನೆ-ಸಂಪೂರ್ಣಕಲ್ಪನೆಗಳು ಬಸವಣ್ಣನ ವ್ಯಕ್ತಿತ್ವ ವಿಕಾಸದ ಕುರುಹುಗಳು. ಮಾನವರಲ್ಲಿಯೇ ಹಿರಿ-ಕಿರಿಯರೆಂದು ಗೆರೆಗೊರೆದು ಹೇಳದವನಿಗೆ ಲೋಕಗಳೂ ಮೇಲುಕೀಳುಗಳೆಂದು ಹೊಳೆಯಲಾರವು. ಆದುದರಿಂದ ಬಸವಣ್ಣನು ಮಾನವಲೋಕವನ್ನು-ಮಹಾದೇವನ ಲೋಕಕ್ಕೆ ಸರಿಯಾಗಿ-ದೊರೆಯಾಗಿ ಕಂಡು ಬಾಳಿದ್ದಾನೆ; ಭಜಿಸಿದ್ದಾನೆ. ಮರ್ತ್ಯರ ಮಾನವರ ಲೋಕವನ್ನು ಅಮೃತರ-ಅಮರರ ಲೋಕವನ್ನಾಗಿಸಿ ಅರ್ಚಿಸಿದ್ದಾನೆ-ಆರಾಧಿಸಿದ್ದಾನೆ. ನರಲೋಕ ಹರಲೋಕಗಳ ಉಗಮ ಮಾನವನ ಆಚಾರವನ್ನವಲಂಬಿಸಿ ಅವನ ಭಾವನಾಲೋಕದಲ್ಲಿವೆಯಲ್ಲದೆ ಅಸ್ತಿತ್ವದಲ್ಲಿಲ್ಲ. ಬಸವಣ್ಣನ ದೃಷ್ಟಿಯಲ್ಲಿ ಅವುಗಳಿಗೆ ಸರ್ವತಂತ್ರ ಸ್ವತಂತ್ರ ಸ್ಥಾನವಿಲ್ಲ. ಮಾನವನ ಆಚಾರ-ವಿಚಾರ; ನಡೆ-ನುಡಿ; ಮಾತು-ಕೃತಿಗಳ ಮುಖಾಂತರ ಲೋಕಾಂತರಗಳಾಗುತ್ತಿವೆಯಲ್ಲದೆ ಮೂಲತಃ ಸ್ಥಾನಾಕ್ರಮಿತವಾದವುಗಳಲ್ಲ. ಬಸವಣ್ಣನೇ ಹಲವು ಸಲ ಇಹಲೋಕ-ಪರಲೋಕಗಳ ಭೇದಾಂತರ ಮಾಡಿ ಆಡಿ ತೋರಿಸಿದ್ದಾನೆ, ಅವುಕೂಡ ಭಾವೋದ್ರೇಕದಿಂದಾಡಿದಾಗ ಬಂದವುಗಳೆಂಬುದು; ಅವನ ವಚನಗಳನ್ನೆಲ್ಲಾ ಅರಗಿಸಿಕೊಂಡಾಗ ಅರ್ಥವಾಗುತ್ತದೆ.

---

೧ ಡಾ|| ರಂ. ಶ್ರೀ. ಮುಗಳಿ—'ಕನ್ನಡಸಾಹಿತ್ಯ ಚರಿತ್ರೆ' ಪುಟ ೧೫೧.

೨ ಪ್ರಾ|| ಶಿ. ಶಿ. ಬಸವನಾಳ—'ಬಸವಣ್ಣನವರ ಷಟ್‌ಸ್ಥಳದ ವಚನಗಳು.

೩ ಡಾ|| ರಂ. ಶ್ರೀ. ಮುಗಳಿ—'ಕನ್ನಡ ಸಾಹಿತ್ಯ ಚರಿತ್ರೆ' ಪುಟ ೧೬೩.

೪ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ—'ಭಕ್ತಿ ಭಾಂಡಾರಿ ಬಸವಣ್ಣನವರು' ಪುಟ ೧೪-೧೫.

* ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ,
ಪರಲೋಕ ದೂರನ? (ವ. ೬೪)
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ! (ವ. ೪೨೨)
ಸ್ವರ್ಗಮರ್ತ್ಯ ಪಾತಾಳದೊಳಗೆ (ವ. ೫೨೮)
ಸಿರಿಯಾಳನಿಂದೆ ಮಾನಿಸಲೋಕಗಂಡೆ (ವ. ೭೪೧)
ದೇವಲೋಕವೆಂಬುದೇನೋ? ಮರ್ತ್ಯಲೋಕ
ವೆಂಬುದೇನೋ? (ವ. ೯೪೬)

ಹೀಗೆ ತನ್ನ ವಚನಗಳಲ್ಲಿ ಸಂದರ್ಭಕ್ಕನುಸಾರವಾಗಿ ಉಪಯೋಗಿಸಿದ್ದಾನೆ. ತನ್ನ ಅಂತರಂಗವನ್ನು ಪ್ರದರ್ಶನ ಮಾಡುವ ಬಸವಣ್ಣನು ಆರ್ತಭಾವನಾವಶನಾದಾಗ ಜನರ-ಮನಗಳಲ್ಲಿ ಆಳವಾಗಿ ಬೆಳೆದಿದ್ದ ವಿಚಾರಕ್ಕನುಗುಣವಾಗಿ ವ್ಯಕ್ತಗೊಳಿಸಿದ್ದರೂ ತನ್ನ ವಿಚಾರಕ್ಕನುಗುಣವಾಗಿಯಲ್ಲವೆಂಬುದನ್ನು ಮನನಮಾಡಿಕೊಂಡರೆ ಮಾತ್ರ ಲೇಖನದ ಉದ್ದೇಶ ಸಾರ್ಥಕವಾಗುವುದು.

'ಕೂಡಲಸಂಗಮದೇವರನಱಿವರೆ ಶರಣರ ಸಂಗವೇ ಮೊದಲು' ಎನ್ನುವ ಬಸವಣ್ಣನ ದೃಷ್ಟಿಯಲ್ಲಿ ಕೂಡಲಸಂಗಮದೇವರ ಲೋಕವನರಿವರೆ ಶರಣರಿರುವ ಮಾನವ ಲೋಕವೇ ಮೊದಲಾದದ್ದು. ಬಸವಣ್ಣನಿಗೆ ಶಿವನಿಗಿಂತಲು ಶಿವನ ಶರಣರು ಶ್ರೇಷ್ಠರು. 'ಉಪಮಿಸಬಾರದ ಉಪಮಾತೀತರು; ಕಾಲಕರ್ಮರಹಿತರು; ಭವವಿರಹಿತರು; ಅಘಟಿತ ಘಟನಾಚರಿತರು; ಸ್ವತಂತ್ರ ಧೀರರು; ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರು' ಆದ ಕೂಡಲಸಂಗನ ಶರಣರು, 'ನಿದ್ರೆಗೆಯ್ದರೆ ಜಪ; ಎದ್ದು ಕುಳಿತರೆ ಶಿವರಾತ್ರಿ; ನಡೆದರೆ ಪಾವನ; ನುಡಿದರೆ ಶಿವತತ್ವ, ಕಾಯವೇ ಕೈಲಾಸ' ಎಂದು ತನ್ನ ತರ್ಕತಂತ್ರದ ಮಂತ್ರವನ್ನು ಹೇಳುತ್ತಾನೆ. ಅಂತೆಯೆ—

ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯಾ;
ಬಡವನೆಂದೆನ್ನ ಕಾಡದಿರಯ್ಯಾ;
ಎನಗೆ ಒಡೆಯರುಂಟು ಕೂಡಲಸಂಗನ ಶರಣರು.
(ವ. ೩೨೩)

ಎಂದು ತನ್ನ ಒಡೆಯರ ಹೆಸರು ಹೇಳಿ ಶಿವನನ್ನೇ ಹೆದರಿಸುತ್ತಾನೆ.

ಅಲ್ಲದೆ
ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ
ಮೇಲಡಗಿತ್ತು
ನಾಗೇಂದ್ರ ಘನವೆಂಬೆನೆ?
ಪಾರ್ವತಿಯ ಕಿಱುಕುಣಿಕೆಯ ಮುದ್ರಿಕೆಯಾಯಿತ್ತು
ಅಂತಹ ಪಾರ್ವತಿ ಘನವೆಂಬೆನೆ?
ಪರಮೇಶ್ವರನ ಅರ್ಧಾಂಗಿಯಾದಳು
ಅಂತಹ ಪರಮೇಶ್ವರನೆ ಘನವೆಂಬೆನೆ?
ನಮ್ಮ ಕೂಡಲ ಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು!
(ವ. ೮೭೬)

ಎಂದು ಶರಣರನ್ನು ಸರ್ವಶ್ರೇಷ್ಠರನ್ನಾಗಿಯೂ, ಶಿವನ ವಾಸಸ್ಥಾನರನ್ನಾಗಿಯೂ ಬಣ್ಣಿಸುತ್ತಾನೆ. ಬಸವಣ್ಣನು 'ಭಕ್ತದೇಹಿಕನಪ್ಪದೇವನು ಸದ್ಭಕ್ತರ ಬಳಿಯಲು ಬಪ್ಪನಾಗಿ' ಮತ್ತು 'ಹದುಳಿಗರಾದಲ್ಲಿಪ್ಪ ನಮ್ಮ ಕೂಡಲಸಂಗಮದೇವ' ನೆಂದು ಮೇಲಿಂದ ಮೇಲೆ ಹೇಳಿ ಖಚಿತಗೊಳಿಸುತ್ತಾನೆ. ಈ ವಿಚಾರಸರಣಿ ಸರಪಳಿಯಲ್ಲಿ ಮಾನವ-ದೇವಲೋಕಗಳಲ್ಲಿ ಭೇದವಿಲ್ಲದೆ, ಒಂದಾಗಿರುವ ಹೊಂದಿಕೆ ಇದೆ. ಶಿವನು, ಶರಣರ ಮನದ ಕೊನೆಯ ಮೊನೆಯ ಮೇಲಡಗಿದರೆ, ಆ ಶರಣರು ಈ ಮಾನವ ಲೋಕದ ಮಡಿಲಲ್ಲಿ ಬಾಳಿದವರಾಗಿದ್ದಾರೆ. ಆದುದರಿಂದ ಶಿವನು ಈ ಲೋಕದಲ್ಲಿಯೇ ಮಾದರ ಚೆನ್ನಯ್ಯನ ಮನೆಯಲುಂಡು; ಬಾಣನ ಬಾಗಿಲವ ಕಾಯ್ದು; ನಂಬಿಯ ಕುಂಟಲಿಗನಾಗಿ ಮಾನಸಲೋಕವಾಸಿಯಾಗಿದ್ದಾನೆ. ವಸ್ತ್ರವನೀಡಿದ ದಾಸ; ಮಗನನ್ನಿತ್ತ ಸಿರಿಯಾಳ; ವಧುವನ್ನರ್ಪಿಸಿದ ಬಲ್ಲಾಳ; ಹಾಲೂಡಿಸಿದ ಕೊಡಗೂಸು; ಕಣ್ಣನ್ನಿತ್ತ ಕಣ್ಣಪ್ಪರಂಥ ಸರ್ವಾರ್ಪಣ ಸೇವಾಸಕ್ತ ಅಸಂಖ್ಯಾತ ಶರಣ ಸಂದೋಹವಾಸಿಯಾದ ಶಿವನು ನರಲೋಕಸ್ಥನಾದುದರಿಂದ, ಈ ನರಲೋಕವೇ ಹರಲೋಕ.

ಮುಗ್ಗುಲಲ್ಲಿದ್ದುದನ್ನು ಕೈಯಾರೆ ಸರಿಸಿ, ಮುಗಿಲತ್ತಾಶಿಸಿ ಗೋಣೊಡ್ಡುವದು ಮಾನವನ ಸ್ವಭಾವ. ಹತ್ತಿರದ್ದು ಹಗುರಾಗಿ, ದೂರದ್ದು ಭಾರವಾಗಿ ಕಾಣುವುದು ಮಾನವನ ಗುಣದೋಷವದು.

ಬೇಱೂರಲಿದ್ದು ಬಂದ ಜಂಗಮನೆ ಲಿಂಗವೆಂದು
ಮನೆಯಲ್ಲಿದ್ದ ಜಂಗಮನುದಾಶೀನವ ಮಾಡಿದರೆ
ನಾನು ಬೆಂದೆನಯ್ಯಾ! (ವ. ೪೧೦)

---

* ಈ ವಚನಾ ಭಾಗಗಳ ಮುಂದೆ ತೋರಿಸಿದ ಸಂಖ್ಯೆಗಳು ಪ್ರಾ॥ ಶಿ. ಶಿ. ಬಸವನಾಳರು ಸಂಪಾದಿಸಿದ 'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಪ್ರಥಮ ಮುದ್ರಣ ೧೯೫೪ರಲ್ಲಿಯವು.

ಸಾರಿದ್ದವರ ದೂರದವರೆಂದು ಬೇಱೆಮಾಡಿದರೆ,
ಕೂಡಲಸಂಗಮದೇವ ಸಿಂಗಾರದ ಮೂಗ
ಹಲುದೋಱೆ ಕೊಯ್ಯದೆ ಮಾಣ್ಬನೇ? (ವ. ೪೧೪)

ಹೀಗೆ ಹತ್ತಿರಿದ್ದವರ; ಸಮೀಪದ ಜಂಗಮರ ಮರೆತು ದೂರದವರ ದಾರಿ ನೋಡುವವರಂತೆ, ಕಾಲಿಗಾಧಾರವಾದ; ಹೊಟ್ಟೆಗೆ ಆಹಾರವನ್ನೀಯುವ ಮಾನವಲೋಕವನ್ನು ನಿರಾಕರಿಸಿ, ಮೇಲಿನ ಲೋಕಕ್ಕೆ ಆಕರ್ಷಿತರಾಗಿರುವ ಜನ ಜಂಗುಳಿಯನ್ನು ಕಂಡು ಬಸವಣ್ಣನು ಅಗಾಧಪಟ್ಟಿದ್ದರೆ, ಅಗಾಧವೇನಲ್ಲ. ನೈಜಸ್ವರೂಪವನ್ನರಿಯದೆ ರೂಢಿವಶನಾದ ಮೂಢನಂಬಿಗೆಗಳನ್ನು ನಂಬಿ ಕಾಲಕಳೆಯುವ ಹೀನ ಜೀವಿಗಳ ಕಂಡು ಬಸವಣ್ಣನು ಕೋಪಗೊಂಡಿರಬೇಕು; ಕಣ್ತೆರೆಸಬೇಕೆಂದು ಮರುಕ್ಷಣದಲ್ಲಿಯೇ ಕನಿಕರಗೊಂಡಿರಲೂ ಬೇಕು. ವೀರಶೈವನಿಗೆ ಇದೇ ಕಡೆಯ ಜನ್ಮ; ಇಲ್ಲಿಯೇ ಅವನಿಗೆ ಮೋಕ್ಷವಿದೆ. ಅವನ ಇಷ್ಟಲಿಂಗವೇ ದೇವರು, ಬೇರೆ ಲಿಂಗ ಹುಡುಕುತ್ತ ಮೂರ್ತಿ ಪೂಜಿತನಾಗಿ ಅಲೆದಾಡಬೇಕಾದುದಿಲ್ಲ. ಇದೇ ಜನ್ಮದಲ್ಲಿಯೇ ಮೋಕ್ಷಪಡೆಯುವದರಿಂದ ಮತ್ತೆ ಭವಗಳ ಬಳಲಾಟವಿಲ್ಲ. ಆದುದರಿಂದ ಮೋಕ್ಷಪಡೆಯುವ ಈ ಜನ್ಮದ ಜೀವಲೋಕವನ್ನು ಬಿಟ್ಟು ಮಹಾದೇವಲೋಕವೆಂದು ಮಗುದೊಂದು ಲೋಕಕ್ಕೇ ಮನಬಯಸಬೇಕಾದುದಿಲ್ಲ.

ಭಕ್ತನಿರ್ದ ಠಾವೇ ದೇವಲೋಕ;
ಭಕ್ತನಂಗಳವೇ ವಾರಣಾಶಿ;
ಕಾಯಕವೇ ಕೈಲಾಸ!
ಇದು ಸತ್ಯ ಕೂಡಲಸಂಗಮ ದೇವ. (ವ. ೧೪೫)

ಬಸವಣ್ಣನು ತನ್ನ ನಿಶ್ಚಿತವಿಚಾರಕ್ಕೆ ನಿದರ್ಶನವಾಗಿ ಮತ್ತೆ ಮತ್ತೆ ಇದೇ ನಿರ್ಧಿೀದಾತ್ಮಕ ನಿದರ್ಶನಗಳನ್ನು ಕೊಡುತ್ತಾನೆ. ಸತ್ಯವಂತರು; ಸದಾಚಾರಿಗಳು; ಸನ್ಮಾರ್ಗಿಗಳು; ಸಜ್ಜನರು; ಸಾತ್ವಿಕರು–ಇರುವ ಲೋಕ ಶಿವಲೋಕ. ಅಸತ್ಯರು; ಅನಾಚಾರಿಗಳು; ದುರ್ಮಾರ್ಗಿಗಳು; ದುರ್ಜನರು; ತಾಮಸರು; ಪಾಪಾತುರರಾಗಿರುವವರ ಲೋಕ–ನರಕ. ಪರಮಾತ್ಮನ ಪ್ರಸನ್ನಭಾವದಿಂದ ಪರಿಸ್ಫುರಣಗೊಂಡು, ಸ್ವಲೀಲಾವಿನೋದಕ್ಕಾಗಿ ವಿಕಸಿತವಾದ ಈ ಲೋಕವು ಆನಂದದಾಯಕ–ಮಂಗಳಾತ್ಮಕವಾದ ಶಿವಲೋಕವು. ಶರಣರು ಜನಿಸಿ ತನುಮನ ಶುದ್ಧಿಯಾಗಿ ತಿಳಿಯಾಗಿ ಹರಿದು ಒಂದೆಡೆ ಸೇರಿದಾಗ ಅದು ಸದ್ಗುಣ ಸಿದ್ಧರ ಸಾಗರವಾಗಿ ಶಿವಲೋಕವಾಗುತ್ತದೆ. ಇಲ್ಲಿ ಹರಿದು ಅಲ್ಲಿ ಸೇರಬೇಕು, ಸಂಗ್ರಹಿತವಾಗಿ ನಿಂತು 'ಮಲೆತಾಗ' ಮತ್ತೆ ಇಲ್ಲಿಯೇ ಬಂದು ಪ್ರವಹಿಸಬೇಕು. ಆದುದರಿಂದ ಶಿವಾಚಾರಯುಕ್ತವಾದ ಈ ಲೋಕವೇ ಶಿವಲೋಕ; ಇದೊಂದೇ ಲೋಕ. ಇದರಲ್ಲಿಯೇ ತಮ್ಮ ಶೀಲತಾರತಮ್ಯದಿಂದ ಭಿನ್ನಲೋಕ ಪಡೆಯುತ್ತಾರೆ.

ದೇವಲೋಕ ಮರ್ತ್ಯಲೋಕವೆಂಬುದು ಬೇಱೆ
ಮತ್ತುಂಟೆ? (ವ. ೧೪೫)
ದೇವಲೋಕ ಮರ್ತ್ಯಲೋಕವೆಂಬುದು
ಬೇಱಿಲ್ಲಕಾಣಿ ಭೋ! (ವ. ೨೪೫)
ದೇವಲೋಕವೆಂಬುದೇನೋ, ಮರ್ತ್ಯಲೋಕ
ವೆಂಬುದೇನೋ?
ಆವುದರಲ್ಲಿಯೂ ಭೇದವೇನಯ್ಯಾ? (ವ. ೯೪೬)
ಸ್ವರ್ಗಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ
(ವ. ೫೭೮)

ಲೋಕವೆಂಬುದೊಂದೇ, ಅದು ಮಾನವನ ಆಚಾರಗಳ ಮೇಲೆ ಅವಲಂಬಿಸಿ ಭಿನ್ನಭಿನ್ನವಾಗುತ್ತದೆ. ತನ್ನ ವಿಚಾರ ತಾರತಮ್ಯವರಿಯದೆ, ಲೋಕದ ಭೇದವನರಿಯುವ ಭಾವ ಬಸವಣ್ಣನಲ್ಲಿಯೂ ಒಮ್ಮೊಮ್ಮೆ ಮಿಂಚಿ ಮಾಯವಾಗಿರಬಹುದು. ಯಾವುದನ್ನೂ ಮುಚ್ಚಿಟ್ಟುಕೊಳ್ಳದ ಅವನು ತನ್ನ ಸ್ವಭಾವದೋಷ ನಿವಾರಣೆಗಾಗಿ ಒಂದು ನಿರ್ಧಾರದ ನುಡಿಯನ್ನಿಡುತ್ತಿದ್ದಾನೆ.

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲಱಿಯೆ. (ವ. ೯೪೬)

'ತನ್ನ ವಿಚಾರಿಸಲೊಲ್ಲದ; ಇದಿರು ವಿಚಾರಿಸಹೋದ' ಮನದ ಶಿರವ ತರಿದು ಭಾವನಿಂದೆಯ ನೀಗಿದ ಮೇಲೆ ಬಸವಣ್ಣನು, ದೇವಲೋಕ ಬೇರೆ ಇದೆ ಎಂಬವರ ಕುರಿತು ಕೆಳಗಿನ ಒಂದು ವಚನವನ್ನು ಹೇಳುತ್ತಾನೆ.

ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು,
ಇದು ಕಾರಣ, ಕೂಡಲಸಂಗಮದೇವರ ಲೋಕವ
ಹಂಚಿಕೊಳ್ಳಿ ನಿಮುನಿಮಗೆ! (ವ. ೭೬೧)

'ಬ್ರಹ್ಮಪದವಿಯನೊಲ್ಲೆ; ವಿಷ್ಣುಪದವಿಯನೊಲ್ಲೆ; ರುದ್ರಪದವಿಯನೊಲ್ಲೆ; ಮತ್ತಾವ ಪದವಿಯನೊಲ್ಲೆನಯ್ಯಾ! ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಪ್ಪ ಮಹಾ ಪದವಿಯನೆ ಕರುಣಿಸಯ್ಯಾ!' ಎಂದು ಪ್ರಾರ್ಥಿಸಿಕೊಳ್ಳುವಲ್ಲಿ, ಬ್ರಹ್ಮ–ವಿಷ್ಣು–ರುದ್ರರಿಗಿಂತಲೂ ಶರಣರು ಶ್ರೇಷ್ಠರೆನ್ನುವಂತೆ ಬ್ರಹ್ಮಲೋಕ – ವೈಕುಂಠ – ಕೈಲಾಸಗಳಿಗಿಂತಲೂ ಶರಣರಿರುವ ಮಾನವಲೋಕವು ಶ್ರೇಷ್ಠವೆಂಬ ಅಂತರ್ಧ್ವನಿಯೂ ಇದೆ.

ಮಾನವರ ಆಚಾರಗಳನ್ನಾಶ್ರಯಿಸಿ ಲೋಕ ವ್ಯತ್ಯಾಸಗಳಾಗುತ್ತವೆಂಬುದನ್ನೂ ಈ ಮೊದಲೇ ಹೇಳಿದ್ದೇನಾದರೂ ಬಸವಣ್ಣನ ವಚನಗಳಾಧಾರ ಸಹಿತವಾಗಿ ಹೇಳುವುದು ಸೂಕ್ತವಾದುದು.

ಸತ್ಯವ ನುಡಿವುದೇ ದೇವಲೋಕ, ಮಿಥ್ಯವ
ನುಡಿವುದೇ ಮರ್ತ್ಯಲೋಕ
ಆಚಾರವೆ ಸ್ವರ್ಗ, ಅನಾಚಾರವೆ ನರಕ (ವ. ೨೬೯)
'ಅಯ್ಯಾ' ಎಂದಡೆ ಸ್ವರ್ಗ, 'ಎಲವೊ'
ಎಂದಡೆ ನರಕ (ವ. ೨೪೦)

ಎಂದು ನಡೆನುಡಿಗಳನ್ನಾಧರಿಸಿ ಲೋಕವಿವೇಕವನ್ನೀಯುತ್ತಿದ್ದಾನೆ. ಶಿವಾಚಾರ ಸಂಪನ್ನರು ವಾಸಿಸುವ ಲೋಕ ಶಿವಲೋಕವಾಗಿ ಕರ್ತಾರನ ಕಮ್ಮಟವಾಗುತ್ತದೆ. ಇಲ್ಲಿ ಸಲ್ಲುವರು ಅಲ್ಲಿ ಸಲ್ಲಿ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲದವರಾಗಿ, 'ಇಲ್ಲಿ' 'ಅಲ್ಲಿ' ಗಳೆಲ್ಲಾ 'ಒಂದೇ' ಆಗಿ ಪರಿಣಮಿಸುತ್ತವೆ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವ. (ವ. ೧೫೫)

ಎಲ್ಲವೂ ಒಂದಾದುದರಿಂದ ಮಾನವಲೋಕವೇ ಶಿವಲೋಕ.

ಶಿವಲೋಕಕ್ಕೆ ಸರಿ ಬೇಱೆ ಲೋಕವಿಲ್ಲ (ವ. ೭೪೬)

ಆದುದರಿಂದ

ನಮ್ಮ ಕೂಡಲಸಂಗನ ಶರಣರಿಲ್ಲದ ಊರು, ದೇಶ–
ವನವಾಸ, ನರವಿಂಧ್ಯ ಕಾಣರಣ್ಣಾ! (ವ. ೧೫೬)

ಸ್ವಾಗತ

ಬನ್ನಿ ಕವಿಗಳೆ ಕಾವ್ಯ ಸೆಲೆಗಳೆ
ಭಾವದೀಪ್ತಿಯ ಕುಡಿಗಳೆ
ನಾಡ ನಾಡಿಯ ಮಿಡಿದು ಹಾಡುವ
ಕ್ರಾಂತಿ ಚೇತನ ಕಿಡಿಗಳೆ

ಪಂಪ ರನ್ನರ ಬಸವ ಶರಣರ
ದಾಸ ಶ್ರೇಷ್ಠರ ಕೃತಿಗಳು
ನಾಡ ದೇವಿಯ ನುಡಿಯ ಬೆಳಗಿಪ
ದಿವ್ಯ ಕನ್ನಡ ಸ್ಮೃತಿಗಳು

ನಾಡ ಜನಮನ ಕೊಳೆಯ ಕಳೆಯುತ
ಭಾವಶುದ್ಧಿಯ ಗೈಯುವ
ಜೀವ ದೇವರ ಐಕ್ಯಕೆಳಸುವ
ಜ್ಞಾನಮಂದಿರಕೊಯ್ಯುವ

ಇಂದಿನೀ ಕವಿ ಮೇಳದಿಂದಲಿ
ಉಕ್ಕಿಹರಿಯಲಿ ಸ್ಫೂರ್ತಿಯು
ದಿಕ್ಕುದಿಕ್ಕಿಗು ಹರಡಲೆಂದಿಗು
ಕನ್ನಡಾಂಬೆಯ ಕೀರ್ತಿಯು

ನಿಮ್ಮ ಸ್ವಾಗತಕಾಗಿ ನಮ್ಮಯ
ಪುಳಕಗೊಂಡಿವೆ ತನುಮನ
ಹರ್ಷಹೊನಲದು ಸೂಸಿಹರಿವುದು
ಭಾಗ್ಯವೆಮಗಿದು ಈ ದಿನ

ಶಂ. ಗು. ಬಿರಾದಾರ

(ತಿಕೋಟಾದಲ್ಲಿ ಜರುಗಿದ ಕವಿಸಮ್ಮೇಳನದಲ್ಲಿ ಹಾಡಿದ ಸ್ವಾಗತ ಗೀತೆ)

ಕನ್ನಡ ಸಾಹಿತ್ಯ ಪ್ರಕಾರ ಪರಿಶೀಲನೆ

(ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ)

ವ್ಯವಸ್ಥೆ : ಕನ್ನಡಿಗರ ಕೂಟ, ಬೆಂಗಳೂರು-೪

ಸಮೀಕ್ಷಕ : ಕೆ. ಶ್ರೀನಿವಾಸ್

ಸ್ಥಳ : ಶ್ರೀರಾಮ ಮಂದಿರ, ನರಸಿಂಹರಾಜ ಕಾಲೊನಿ

ಕನ್ನಡ ಸಾಹಿತ್ಯದಲ್ಲಿ ಆಗಿರುವ ಪ್ರಗತಿ ಅಪಾರವಾದುದು. ಸಾಮಾನ್ಯ ಚುಟುಕುಗಳಿಂದ ಶ್ರೇಷ್ಠಮಟ್ಟದ ಕಾವ್ಯಗಳವರೆಗೆ ಸಾಹಿತ್ಯಪ್ರಕಾರಗಳು ಬೆಳೆದು ನಿಂತಿವೆ. ಆದರೆ ನಮ್ಮ ಜನತೆ ಇವುಗಳ ಪರಿಚಯವನ್ನು ಹೊಂದದೆ, ತಾಟಸ್ಥ್ಯಧೋರಣೆ ತಾಳಿರುವಂತಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಇವುಗಳಲ್ಲಿ ಪ್ರಮುಖವಾದುದು ಪ್ರಚಾರದ ಅಭಾವ. ಅನ್ಯಭಾಷೆಗಳಿಗೆ ಭಾಷಾಂತರಿಸುವುದಕ್ಕಿಂತ ಮಿಗಿಲಾಗಿ, ನಮ್ಮ ಜನರಿಗೇ ನಮ್ಮ ಸಾಹಿತ್ಯದ ಹಿರಿಮೆ, ಅನನ್ಯತೆಗಳನ್ನು ವಿವರಿಸಬೇಕಾಗಿದೆ. ಹಲವರು ಸಾಹಿತ್ಯದಲ್ಲಿ ಆಸಕ್ತಿ ಹೊಂದಿದವರಾದರೂ, ಅವರೆಲ್ಲ ಸಾಹಿತ್ಯವನ್ನು ವಿಶೇಷವಾಗಿ ಅಭ್ಯಾಸಮಾಡಲಾಗುವುದಿಲ್ಲ. ಅವರಿಗೆ ಅಡ್ಡಿ ಆತಂಕಗಳು ಬಹಳ. ಕೆಲವರು ಕೃತಿಗಳನ್ನು ಓದಿದರೂ, ಕೃತಿಗಳ ಸೂಕ್ಷ್ಮ ಅಂಶಗಳನ್ನು ಗ್ರಹಿಸಲಾರದೆ ಹೋಗುತ್ತಾರೆ. ಇವರೆಲ್ಲರ ಹಾಗೂ ಸಾಹಿತ್ಯದ ನಡುವೆ ಸೇತುವೆ ನಿರ್ಮಾಣದಲ್ಲಿ ಸಂಘ, ಸಂಸ್ಥೆಗಳು ಮಹತ್ತರ ಸೇವೆ ಸಲ್ಲಿಸಬಹುದಾಗಿದೆ. ಈ ಘನವಾದ ಉದ್ದೇಶವನ್ನು ಹೊಂದಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡಿಗರ ಕೂಟವು "ಕನ್ನಡ ಸಾಹಿತ್ಯ ಪ್ರಕಾರ ಪರಿಶೀಲನೆ" ಎಂಬ ದೀರ್ಘ ಕಾರ್ಯಕ್ರಮವನ್ನು ಕೈಗೊಂಡಿತು. ತಿಂಗಳಿಗೆ ಒಂದೊಂದು ಪ್ರಕಾರವನ್ನು ಆರಿಸಿಕೊಂಡು ಅದರ ವಿವಿಧ ಅಂಶಗಳ ಬಗ್ಗೆ ತಜ್ಞರ ಭಾಷಣಗಳನ್ನು ಏರ್ಪಡಿಸಲಾಗಿತ್ತು.

ನಾಟಕ, ಕಾದಂಬರಿ, ಕವಿತೆಗಳಾದಿಯಾಗಿ ಹತ್ತು ಪ್ರಕಾರಗಳ ಪರಿಶೀಲನೆ ನಡೆದಿದೆ. ಸಾಮಾನ್ಯವಾಗಿ ಪ್ರಕಾರದ ಹುಟ್ಟು, ಬೆಳವಣಿಗೆ, ಅದರ ವಿಶಿಷ್ಟತೆ, ಪ್ರಕಾರದ ವಿವಿಧ ಅಂಶಗಳ ಬಗ್ಗೆ ಚರ್ಚಿಸಲಾಯಿತು. ನವ್ಯಸಾಹಿತ್ಯದಲ್ಲಿ ಆ ಪ್ರಕಾರದ ವಿಕಾಸದ ಬಗ್ಗೆ ವಿಶೇಷವಾಗಿ ವಿವೇಚಿಸಲಾಯಿತು. ಭಾಷಣಗಳು ಕೇವಲ ಸಪ್ಪೆ ಪರಿಚಯಗಳಾಗಲಿ, ಅಂಧ ಪ್ರಶಂಸೆಗಳಾಗಲಿ ಆಗದೆ ಹಲವಾರು ಬಾರಿ ಉನ್ನತಮಟ್ಟದ ವಿಮರ್ಶೆಗಳಾಗಿದ್ದವು.

ಪ್ರಕಾರಗಳ ಬಗ್ಗೆ ವಿವೇಚಿಸಿದ ತಜ್ಞರುಗಳು ಆ ಕ್ಷೇತ್ರದಲ್ಲಿ ನುರಿತವರೇ ಆಗಿದ್ದಾರೆ. ಭಾಗವಹಿಸಿದ್ದ ಗಣ್ಯರಲ್ಲಿ ಶ್ರೀಯುತರುಗಳಾದ ಪು. ತಿ. ನರಸಿಂಹಾಚಾರ್, ತಿ. ತಾ. ಶರ್ಮ, ಎಂ. ವಿ. ಸೀತಾರಾಮಯ್ಯ, ಕೆ. ನರಸಿಂಹಮೂರ್ತಿ, ನಾರಾಯಣ ಸಂಗಮ, ಶಿವರಾಂ [ರಾಶಿ], ಆರ್. ಎಲ್. ನರಸಿಂಹಯ್ಯ, ಸಂಪದ್ಗಿರಿರಾವ್, ಎಂ. ವಿ. ಕೃಷ್ಣರಾವ್ ಮುಂತಾದವರಿದ್ದಾರೆ. ಇವರೆಲ್ಲರಿಗೂ ಕೂಟ ಕೃತಜ್ಞವಾಗಿದೆ.

ಈ ಕಾರ್ಯಕ್ರಮ ಬಹು ಯಶಸ್ವಿಯಾಗಿ ನಡೆದು ಜನರ ಮನ್ನಣೆ ಗಳಿಸಿದೆ. ಇದಕ್ಕೆ ಹಲವಾರು ವ್ಯಕ್ತಿಗಳ, ಸಂಸ್ಥೆಗಳ ಸಹಕಾರ, ಬೆಂಬಲಗಳು ಕಾರಣ. ಮೊದಲನೆಯದಾಗಿ ಈ ಕಾರ್ಯಕ್ರಮ ನಡೆಯುವಲ್ಲಿ ಉತ್ತೇಜನ ನೀಡಿ, ವಿವಿಧ ರೀತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನೆರವಾಗಿದೆ. ನರಸಿಂಹರಾಜ ಕಾಲೊನಿಯ ಶ್ರೀರಾಮ ಮಂದಿರದ ಅಧಿಕಾರಿಗಳು ಉಚಿತವಾಗಿ ಸ್ಥಳಾವಕಾಶ ನೀಡಿ ಸಹಕರಿಸಿದ್ದಾರೆ. ಹಲವಾರು ವ್ಯಕ್ತಿಗಳು ತಮ್ಮದೇ ಆದ ರೀತಿಯಲ್ಲಿ ನೆರವಾಗಿದ್ದಾರೆ. ಇವರಲ್ಲಿ ಅತಿ ಮುಖ್ಯರಾದವರು ಪರಿಷತ್ತಿನ ಹಾಗೂ ಕೂಟದ ಅಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯ ಅವರು. ಅವರು ನೀಡಿರುವ ಮಾರ್ಗದರ್ಶನ ಅಮೂಲ್ಯವಾದುದು. ಇವೆಲ್ಲ ಅಂಶಗಳಿಗಿಂತ ಮುಖ್ಯವಾದುದು ಜನರ ಉತ್ತೇಜನ. ಈ ವಿಷಯದಲ್ಲಿ ಕೂಟ ಬಹಳ ಭಾಗ್ಯಶಾಲಿ. ಈ ಎಲ್ಲ ವ್ಯಕ್ತಿ, ಸಂಸ್ಥೆಗಳಿಗೂ ಕೂಟ ಕೃತಜ್ಞವಾಗಿದೆ.

ಸಾಮಾನ್ಯವಾದ ಎಲ್ಲ ಪ್ರಕಾರಗಳನ್ನೂ ಪರಿಶೀಲಿಸಿರುವುದಾಗಿದೆ ಎಂದು ನಂಬಿ ಕೂಟವು ಪರಿಶೀಲನೆಯನ್ನು ಉಪಸಂಹರಿಸಿದೆ. ತನ್ನ ಉದ್ದೇಶಪೂರ್ಣವಾಗಿ ಸಫಲವಾಗಿದೆಯೆಂದು ಅದು ಘೋಷಿಸಿದರೆ ಅತಿಯಾದೀತು. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ವ್ಯಕ್ತಿಯ ಪೂರ್ಣ ಪರಿವರ್ತನೆ ಅಸಾಧ್ಯವೇ ಸರಿ. ಆದರೆ ಪ್ರತಿ ಕಾರ್ಯಕ್ರಮದಲ್ಲಿಯೂ ನೆರೆಯುತ್ತಿದ್ದ ಇನ್ನೂರೈವತ್ತರಷ್ಟು ಮಂದಿಯಲ್ಲಿ ಹಲವರಾದರೂ ಸಾಹಿತ್ಯದ ಕಡೆ ಗಮನ ಹರಿಸಿದ್ದರೆ ಕೂಟ ಧನ್ಯ. ಇದೇ ಉದ್ದೇಶದಿಂದ ಕೂಟವು ಕೂಡಲೇ "ಕನ್ನಡ ಕವಿಪರಂಪರೆ" ಎಂಬ ಮತ್ತೊಂದು ಬೃಹತ್ ಕಾರ್ಯಕ್ರಮವನ್ನು ಕೈಗೊಳ್ಳಲಿದೆ. ಮತ್ತೆ ಎಲ್ಲ ಅಭಿಮಾನಿಗಳ ಸಹಕಾರವನ್ನು ಕೂಟ ನಿರೀಕ್ಷಿಸುತ್ತದೆ.

ಕನ್ನಡ ಸಾಹಿತ್ಯ ಪ್ರಕಾರ ಪರಿಶೀಲನೆ : ಕಾರ್ಯಕ್ರಮಗಳು

ಸಂಖ್ಯೆ	ತಾರೀಕು	ಪ್ರಕಾರ	ಅಧ್ಯಕ್ಷರು	ಭಾಷಣಕಾರರು	ವಿಷಯ
೧	೧೬-೬-೬೬	ನಾಟಕ	ಶ್ರೀ ಜಿ. ವೆಂಕಟಸುಬ್ಬಯ್ಯ	೧. ಶ್ರೀ ಪರ್ವತವಾಣಿ	ವಸ್ತು ಮತ್ತು ನಿರೂಪಣೆ
				೨. ಶ್ರೀ ನಾಣಿ (ಬಿ. ಎಸ್.)	ರಂಗಸಜ್ಜಿಕೆ ಮತ್ತು ದೀಪಾಲಂಕಾರ
				೩. ಶ್ರೀ ಸಿ. ಬಿ. ಜಯರಾವ್	ಪ್ರಯೋಗ ಮತ್ತು ಪ್ರಚಾರ (ಸೆಪ್ಟೆಂಬರ್ ೬೭ರ ಕನ್ನಡ ನುಡಿಯಲ್ಲಿ ಕಾರ್ಯಕ್ರಮದ ವರದಿಯನ್ನು ಕಾಣಬಹುದು)
೨	೨೪-೭-೬೬	ಕಾದಂಬರಿ	ಶ್ರೀ ನಾರಾಯಣ ಸಂಗಮ	೧. ಶ್ರೀ ಕೆ. ವಿ. ಅಯ್ಯರ್	ವಸ್ತು ಮತ್ತು ನಿರೂಪಣೆ ('ನುಡಿ'ಯಲ್ಲಿ ಪ್ರಕಟಿತ)
				೨. ಶ್ರೀ ಎಂ. ವಿ. ಸೀತಾರಾಮಯ್ಯ	ಕನ್ನಡ ಕಾದಂಬರಿಯ ಮೇಲೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ
				೩. ಶ್ರೀ ಕಿ. ರಂ. ನಾಗರಾಜ	ಕಾದಂಬರಿ ಪ್ರಕಾರ ವಿಮರ್ಶೆ
೩	೨೮-೮-೬೬	ಸಣ್ಣ ಕಥೆ	ಶ್ರೀ ಎಸ್. ಎಸ್. ಸೀತಾರಾಮಶಾಸ್ತ್ರಿ	೧. ಶ್ರೀ ಕೆ. ನರಸಿಂಹಮೂರ್ತಿ	ಸಣ್ಣಕತೆಯ ಚರಿತ್ರೆ ಮತ್ತು ಸ್ವರೂಪ ವೈವಿಧ್ಯ ಕನ್ನಡದಲ್ಲಿ ಬೆಳೆದುಬಂದ ಬಗೆ.
				೨. ಶ್ರೀ ಹೆಚ್. ಕೆ. ರಾಮಚಂದ್ರಮೂರ್ತಿ	ಸಣ್ಣಕತೆಗಳಲ್ಲಿ ಪಾತ್ರಸೃಷ್ಟಿ
				೩. ಶ್ರೀ ಪಿ. ಲಂಕೇಶ್	ಸಣ್ಣಕತೆಗಳಲ್ಲಿ ನಾವೀನ್ಯ
				೪. ಶ್ರೀ ಕೆ. ಶ್ರೀನಿವಾಸ್	ಸಣ್ಣಕತೆಗಳಲ್ಲಿ ನಾವೀನ್ಯ
೪	೨೫-೯-೬೬	ಹಾಸ್ಯ ಸಾಹಿತ್ಯ	ಡಾ॥ ಎಂ. ಶಿವರಾಂ	೧. ಡಾ॥ ಎಂ. ಶಿವರಾಂ	ಜೀವನದಲ್ಲಿ ಹಾಸ್ಯ
				೨. ಶ್ರೀ ಅ. ರಾ. ಮಿತ್ರ	ಕನ್ನಡ ಸಾಹಿತ್ಯದಲ್ಲಿ ಹಾಸ್ಯಪ್ರವೃತ್ತಿ
				೩. ಶ್ರೀಮತಿ ಸುನೀತಿ ಕೃಷ್ಣಸ್ವಾಮಿ	ಹಾಸ್ಯದ ವಿವಿಧ ಮುಖಗಳು
೫	೧೬-೧೦-೬೬	ಕವನಗಳು	ಶ್ರೀ ಪು. ತಿ. ನರಸಿಂಹಾಚಾರ್	೧. ಶ್ರೀ ಆರ್. ಜಿ. ಕುಲಕರ್ಣಿ	ಕನ್ನಡದ ಕಾವ್ಯಪರಂಪರೆ
				೨. ಶ್ರೀ ಕ. ವೆಂ. ರಾಜಗೋಪಾಲ	ಕಾವ್ಯ ಸೌಂದರ್ಯ
				೩. ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ	ಕಾವ್ಯದಲ್ಲಿ ನವೀನ ಮಾರ್ಗ
				೪. ಶ್ರೀಮತಿ ಶ್ರೀಲೇಖ	ಇಂದಿನ ಕಾವ್ಯಗಳಲ್ಲಿ ಒಲವು ನಿಲವುಗಳು (ಏಪ್ರಿಲ್ ೬೭ರ ಕನ್ನಡ ನುಡಿಯಲ್ಲಿ ಪ್ರಕಟಿತ)

ಅ ಪ ವಾ ದ

ಕೈವಾರ ರಾಜಾರಾವ್

(ಹಿಂದಿನ ಸಂಚಿಕೆಯಿಂದ)

ಮಂಡೋದರಿ :

ಯುದ್ಧರಂಗದ ಸೋಲು
ಮನವ ಕದಡಿರಬಹುದು. ಮನವು ಮಂಕಾದಾಗ
ಮರೆತ ವಿಷಯಗಳೆಲ್ಲ ತಲೆಯೆತ್ತಿ ನಿಲ್ಲುವುವು.
ಕಾಡುವುವು ದುಷ್ಟ ಗ್ರಹಗಳ ರೀತಿ ಭಯಪಡಿಸಿ.
ಅಂತೆಯೇ ಹಿಂದೊಮ್ಮೆ ನಡೆದ ಘಟನೆಯ ನೆನಪು
ಸುಳಿದಿಹುದೆ ಮನದಲ್ಲಿ ? ಮನದಂತರಾಳದಲಿ
ಸುಪ್ತವಾಗಡಗಿದ್ದ ಶಾಪವದು ಮರುಕಳಿಸಿ
ಚಿತ್ತವನು ಕದಡಿಹುದೆ ? ಶಾಪ ಕೈಗೂಡುವೊಲು
ಇಂತಾಗುವುದು ಸಹಜ. ಆ ಚಿತ್ತವಿಕೃತಿಯೇ
ಮಗಳ ಭ್ರಮೆಯನು ತಂದು ಒಡ್ಡಿಹುದೆ ?

ರಾವಣ :

ಯಾವುದದು ?

ಮಂಡೋದರಿ :

ಹಿಂದೊಮ್ಮೆ ರಾಜ್ಯಗಳ ಗೆದ್ದ ಲೋಲಾಪ್ತಿಯಲಿ
ಸಣ್ಣವಯಸಿನ ಯುವತಿ, ಪತಿವ್ರತೆಯ ವ್ರತಗೆಡಲು
ಕೊಡಲಿಲ್ಲವೇ ನಿನಗೆ ಶಾಪವನು. ಮಗಳ ಸಮ-
ನಾಗಿರುವ ನನ್ನನ್ನು ಪತಿತೆಯೆನಿಸಿದ ನಿನಗೆ
" ಮಗಳ ಕಾಮಿಸಿದಂದು ಸಮನಿಸಲಿ ಸಾವಂದು."
–ಆ ಕತೆಯ ಪೇಳಲಿಲ್ಲವೆ ನನಗೆ ಬಂದಾಗ ?
ಭಯಗೊಂಡ ತೆರವಿತ್ತು ನಿನ್ನ ಮನವಾ ದಿನದಿ.

ರಾವಣ :

ಅಹುದಹುದು ಜ್ಞಾಪಕಕೆ ಬರುತಿಹುದು ಆ ಮಾತು.
' ಮಗಳ ಕಾಮಿಸಿದಂದು ಸಮನಿಸಲಿ ಸಾವಂದು '
ಹೌದು ದಿಟ. ಆದರೆನಗಾ ಭಯವು ಬಾಧಿಸದು.
ಶಾಪವಚನವ ಕೇಳ್ದ ಅಂದಿನಿಂದಿನವರೆಗು
ಆ ಬಗೆಯ ಸನ್ನಿವೇಶವು ಹೇಗೆ ಒದಗುವುದೊ
ಎಂಬುದನು ತಿಳಿಯದವನಾಗಿಹೆನು. ನಾ ಹಡೆದ
ಮಗಳಿಲ್ಲ. ಹೀಗಿರಲು ಅವಳ ಕಾಮಿಪದೆಂತು ?
ಇಂತಿರಲು ಆ ಭಾವ ಹೊಳೆದುದೇತಕೊ ಕಾಣೆ.

ಮಂಡೋದರಿ :

ಸುಪ್ತವಾಗಡಗಿದ್ದ ಶಾಪವದು ಮನದಸ್ಮೃತಿ-
ಪಥದಲ್ಲಿ ಸುಳಿದುಬರೆ ಮಗಳ ಭಾವನೆ ಮನಕೆ
ಹೊಳೆದಿಹುದು. ಇದನುಳಿದು ಬೇರಾವ ಕಾರಣವ
ನಾ ಕಾಣೆ; ಆ ಭಾವದಂತರಾಳದಲಿನ್ನು.

ರಾವಣ :

ಲೋಕೈಕ ವೀರನಹ ನನ್ನ ಈ ಪಾಷಾಣ-
ಹೃದಯದಲಿ ಅನುಕಂಪವುಕ್ಕಿಸುವ ಜಾನಕಿಯ
ಮಾತಿನಲಿ ಯಾವುದೋ ಗುಟ್ಟಿಹುದು.

ಮಂಡೋದರಿ :

ಗುಟ್ಟಿಲ್ಲ,
ಆರ್ಯಪುತ್ರನ ಮನವು ಪಾಪಕ್ಕೆ ಬಲಿ ಬಿದ್ದು
ಈ ಬಗೆಯ ಇಲ್ಲದರ್ಥವನು ಚಿಂತಿಸುತ ಭ್ರಮೆ-
ಗೊಂಡಿಹುದು. ಪತಿವ್ರತೆಯ ಮಾತಿನಲಿ ಬಲ್ಪುಂಟು
ಇಂತು ಪರಿಣಾಮವನು ತರಬಲ್ಲ ಬಲ್ಪುಂಟು.

ರಾವಣ :

ಅಂತಲ್ಲ ಮಂಡೋದರೀ ದೇವಿ ! ಪತಿವ್ರತೆಯ-
ರೆಷ್ಟು ಜನ ರಾವಣನ ಜರೆದಿಲ್ಲ ? ಬೇಡಿಲ್ಲ ?

ಮಂಡೋದರಿ :

ಇರಬಹುದು. ನೂರಾರು ಮಹಿಳೆಯರು ಪತಿವ್ರತೆ-
ಯರಾದವರು ಜರೆದು ಬೇಡಿರಬಹುದು. ಆದೊಡೇಂ
ಅವರಲ್ಲಿ ಸೀತೆಯಂತಹ ಮಹಾಪತಿವ್ರತೆಯ-
ರಿರಲಿಲ್ಲ.

ರಾವಣ :

ಎಂತಾದರೂ ಇರಲಿ. ಅವಳೆನ್ನ
ಬೇಡಿದಾ ಸಮಯದಲಿ ಆ ಸೀತೆ ಎನ್ನುದರ-
ದಲಿ ಜನಿಸಿ ಬೆಳೆದ ಮಗಳಂತೆಯೇ ಭಾಸವಾ-
ಯಿತು ಮನಕೆ ಕರುಳು ಮಿಡಿದಂತಾಯ್ತು.

ಮಂಡೋದರಿ :

ಆರ್ಯಪು-
ತ್ರನ ಮನವು ಮಾಯೆಯಲಿ ಮುಸುಕಿಹುದು ಬುದ್ಧಿಭ್ರಮಿ-
ಸಿರುವವೊಲು ತೋರುವುದು. ಜನಕರಾಜನ ಸ್ವಂತ
ಮಗಳಲ್ಲವೇ ಸೀತೆ?

ರಾವಣ :

ಜನಕರಾಜನ ಮಗಳು
ಅಹುದು ದಿಟ. ಆದರವನಾ ಸತಿಯು ಸೀತೆಯನು
ಬಸುರಿನಲಿ ಹೊತ್ತು ಹಡೆದವಳಲ್ಲ.

ಮಂಡೋದರಿ : (ಅಚ್ಚರಿ, ಭಯಗಳಿಂದ)

ಏನ ಪೇ
ಳಿದೆ ದೇವ, ಏನ ಪೇಳಿದೆ ದೇವ?

ರಾವಣ :

ಜಾನಕಿಯು
ಜನಕರಾಜನು ಪಾಲಿಸಿದ ಕುವರಿ. ಯಜ್ಞವನು
ಮಾಡುವಾನೆವದಲ್ಲಿ ಭೂಮಿಯನು ಶೋಧಿಸಲು
ಹೊರಟಂದು ಉಪವನದಿ ಸಿಕ್ಕ ಮಗು. ಅದ ಕಂಡು
ನೃಪತಿಯೋಚಿಸುತಿರಲು, ಮಂತ್ರಿ ಪೌರೋಹಿತರು
ಶಿಶುವಿನಾ ಶುಭಲಕ್ಷಣವ ನೋಡಿ, ಈ ಕನ್ಯೆ
ಉತ್ತಮರ ಕುಲದವಳು ಸಾರ್ವಭೌಮನ ಪುತ್ರಿ
ಸ್ವೀಕರಿಸಬಹುದೆನಲು, ಜನಕನದ ಸಾಕಿದನು.
ಹೆತ್ತವರ ಹೃದಯದಾ ಕಠಿಣತೆಗೆ ಮನನೊಂದು
ಸ್ವಂತ ಮಗಳಂತೆಯೇ ಬೆಳೆಸಿದನು.

ಮಂಡೋದರಿ :

ಹಾ ಸೀತೆ!

[ಮಂಡೋದರಿಯು ಮೈಬೆವರಿ ಪ್ರಜ್ಞೆ ತಪ್ಪಿ ಬೀಳುವಳು. ರಾವಣನು ಶೈತ್ಯೋಪಚಾರ ಮಾಡುವನು.]

ರಾವಣ :
ಪ್ರಿಯ ರಮಣಿ! ಏನಿಂತು ವ್ಯಥೆಗೊಂಡೆ? ಪ್ರಜ್ಞೆ ತ-
ಪ್ಪಿದೆಯೇಕೆ?

ಮಂಡೋದರಿ :
(ಚೇತರಿಸಿಕೊಂಡು) ಬೇಗನುಡಿ ಪತಿದೇವ. ಈ ಸೀತೆ
ಜನಕರಾಜನ ಸ್ವಂತ ಮಗಳಲ್ಲ? ಪಾಲಿಸಿದ
ಕುವರಿಯೇ? ಪಾಲಿಸಿದ ಕುವರಿಯೇ ಹಾ! ಅಯ್ಯೋ!
ನಾ ಕೆಟ್ಟೆ.

[ಮಂಡೋದರಿಯು ಪುನಃ ಪ್ರಜ್ಞೆ ತಪ್ಪುವಳು. ರಾವಣನು ಶೈತ್ಯೋಪಚಾರ ಮಾಡುವನು]

ರಾವಣ :

ಮಂಡೋದರೀದೇವಿ! ಏನಿದೀ
ಅಚ್ಚರಿಯು, ಅತ್ತ ಸೀತೆಯು ಮನವ ಕಲಕಿಹಳು.
ಇತ್ತನೀ ಮನದನ್ನೆ 'ಹಾ ಸೀತೆ ಹಾ ಸೀತೆ'—
ಎನುತ ಕಂಗೆಡುತಿರುವೆ. ಹೇಳಲಾಗದ ಬೇಗೆ
ಮನವ ಸುಡುವಂದದಲಿ ಪ್ರಜ್ಞೆ ತಪ್ಪುತಲಿರುವೆ.

[ಮಂಡೋದರಿ ಚೇತರಿಸಿಕೊಳ್ಳಲು]

ಪ್ರಿಯ ರಮಣಿ! ಏಕಿಂತು? ಮುಖದ ಕಾಂತಿಯು ಅಳಿದು
ಬಣ್ಣಗುಂದಿದುದೇಕೆ ಕ್ಷಣದಲ್ಲಿ. ಏನಾಯ್ತು?
ಪ್ರಜ್ಞೆ ತಪ್ಪಿದೆಯೇಕೆ?

ಮಂಡೋದರಿ :

ಹೇಳು ನೀನಿನ್ನೊಮ್ಮೆ
ಜನಕರಾಜನ ಸೀತೆ ಪಾಲಿಸಿದ ಕುವರಿಯೇ?

ರಾವಣ :
ಅಹುದಹುದು ಮನದನ್ನೆ.

ಮಂಡೋದರಿ :

ಪತಿದೇವ! ಜಾನಕಿಯ
ವಯಸು ಎಷ್ಟಿರಬಹುದು? ಪುಟ್ಟಿದುದು ಯಾವಾಗ?

ರಾವಣ :
ಏಕಿಂತು ಕೊರಳಸೆರೆ ಬಿಗಿದು ನುಡಿಯದುರುತಿದೆ?
ಮಂಡೋದರೀದೇವಿ! ಹಿಂದೊಮ್ಮೆ ಇಂದ್ರಾದಿ
ರಾಜರುಗಳೆಲ್ಲರನು ಸದೆಬಡಿದು ಐದು ವರು-
ಷದ ಕಾಲ ವಿಜಯಯಾತ್ರೆಯ ಮಾಡಿ ಬಂದೆನೇ
ವೈಭವದಿ? ಆ ಕಾಲ ಸೀತೆ ಜನಿಸಿದ ಕಾಲ.
ರಾಜರ್ಷಿ ಜನಕನಿಗೆ ಪುತ್ರಿ ಸಿಕ್ಕಿದಳೆಂದು
ತಿಳಿದು ಬಂದುದು ನನಗೆ ಯಾತ್ರೆಯಲಿ ಇದ್ದಾಗ.
ಏಕೆನ್ನ ಪ್ರಿಯ ರಮಣಿ? ನಿನ್ನ ಮನವಾವುದೋ
ಚಿಂತೆಯಲಿ ಬಲು ಬಳಲಿ ಬೆಂಡಾಗುತಿರುವಂತೆ
ಭಾಸವಾಗುತ್ತಲಿದೆ. ಮನದ ಚಿಂತೆಯದೇನು
ಹೇಳೆನಗೆ . . .

ಮಂಡೋದರಿ : (ಅಧೀರೆಯಾಗಿ)

ಆರ್ಯಪುತ್ರನ ಕ್ಷಮೆಯ ಬೇಡುವೆನು.

ರಾವಣ :

ಏನಾಯ್ತು, ಏನಾಯ್ತು ? ವಿಷಯವೇನದ ಹೇಳು
ಭಯಬೇಡ.

ಮಂಡೋದರಿ :

ಜ್ಞಾಪಕಕೆ ಬರುತಿಹುದು ನನಗೀಗ.
ಆ ಕಾಲದಲಿ ನಡೆದ ಅತಿ ದುರಂತದ ಕಥೆಯು.
ಈ ನಿನ್ನ ಪೂಜ್ಯ ಮಂಡೋದರಿಯು ಕುಹಕವಾ-
ಡಿದ ವಿಧಿಗೆ ಪಕ್ಕಾಗಿ ಮಾಡಬಾರದ ಕಾರ್ಯ-
ಮಾಡಿದಂತಹ ಕಥೆಯು. ಕರುಳ ಕೊರೆಯುವ ಕಥೆಯು.
ವಿಧಿಯ ಮೋಸದ ಆಟ. ಬಾಯ್ ಬರದು ಪೇಳಲಿಕೆ.
ಪೇಳದೆಯು ಇರಲಾರೆ. ಭಯವಾಗುತಿರುತಿಹುದು.
ಕ್ಷಮೆದೋರು. ನೀಡು ನೀನಭಯವನು.

ರಾವಣ :

(ಆತುರದಿಂದ) ಭಯಬೇಡ.
ಏನು ಏನದ ಹೇಳು ?

ಮಂಡೋದರಿ :

ಆರ್ಯಪುತ್ರನು ಅಂದು
ದೀರ್ಘಕಾಲದವರೆಗೆ ದಿಗ್ವಿಜಯದಾಸೆಯಲಿ
ಹೊರಟಂದು ಗರ್ಭವತಿಯಾಗಿದ್ದೆ.

ರಾವಣ :

(ಆಶ್ಚರ್ಯದಿಂದ) ಏನೆಂದೆ ?
ಗರ್ಭವತಿ ? (ನೆನಪುಗೊಂಡಂತೆ) ಅಹುದಹುದು.
ಅಂದು ನಾ ಲಂಕೆಯಿಂ
ಪೊರಟಕಾಲದಿ ನೀನು ಗರ್ಭವತಿಯಾಗಿದ್ದೆ.
ಜ್ಞಾಪಕಕೆ ಬರುತಿಹುದು. ಹೌದು ನಿಜ. ಜ್ಞಾಪಕಕೆ
ಬರುತಿಹುದು. ಆದರಾಗರ್ಭ ಬಲಿಯದ ಮುನ್ನ
ಕರಗಿದುದು ಎಂಬ ಸುದ್ದಿಯ ಕೇಳಿದಂತೆನಗೆ
ನೆನಪಿಹುದು.

ಮಂಡೋದರಿ :

ಆ ಸುದ್ದಿ ನಿಜವಲ್ಲ.

ರಾವಣ :

(ಆಶ್ಚರ್ಯ ಕುತೂಹಲಗಳಿಂದ) ನಿಜವಲ್ಲ !
ನಿನ್ನ ಈ ಮಾತುಗಳು ಒಗಟಿಯಂದದಿ ಗಹನ
ವಾಗಿಹುವು. ನಿಜವಲ್ಲ ? . . . ಮತ್ತೇನು ? ರಾವಣನು
ತನಗೆ ತಿಳಿಯದ ಹಾಗೆ ಮತ್ತೊಂದು ಶಿಶುವಿಂಗೆ
ತಂದೆಯಾಗಿಹನೇನು ?

ಮಂಡೋದರಿ :

ಅಹುದಹುದು ಪತಿದೇವ.

ರಾವಣ :

ಆ ನಿನ್ನ ಮಗಳೆ ಈ ಜಾನಕಿಯು ?

ಮಂಡೋದರಿ :

ಇರಬಹುದು.

ರಾವಣ :

ಇರಬಹುದು . . . ಬಹುದಲ್ಲ. ಇರಬೇಕು, ಇರಬೇಕು.
ಬಲನಾದ ಈ ತೆರದ ಸಂಬಂಧವಿಲ್ಲದಿರೆ
ರಾವಣೇಶನ ಮನವು ಭ್ರಮೆಗೊಳುವುದಾಶ್ಚರ್ಯ.
ನಡೆಯಲಾರದು ಹಾಗೆ. ತಾಯಿ ಮಗಳನು ಹಡೆದು
ತಂದೆಗದ ತಿಳಿಸದುದು ಅತಿಶಯದ ಆಶ್ಚರ್ಯ.

ಮಂಡೋದರಿ :

ಅದಕೆ ಕಾರಣವಿಹುದು. ಆರ್ಯಪುತ್ರನು ಹೊರಟು
ಹತ್ತಾರು ಮಾಸಗಳು ಕಳೆದರೂ ಗರ್ಭ ಬೆಳೆ-
ಯುವ ಚಿಹ್ನೆ ತೋರಿ ಬಂದಿರಲಿಲ್ಲ. ಅಂತೆಯೇ
ತಮಗೆ ಆ ಸುದ್ದಿಯನು ಕಳುಹಿದೆನು.

ರಾವಣ :

ಅಚ್ಚರಿಯು.
ಆಮೇಲೆ ?

ಮಂಡೋದರಿ :

. . . ಅಂತೆಯೇ ನನಗಾದುದಚ್ಚರಿಯು.
ಬಸಿರು ಬೆಳೆಯದೆ ಇತ್ತು ಋತುಕ್ರಮವು ನಿಂತಿತ್ತು.
ದಿನಕಳೆದು ವ್ಯೆಗೂಡೆ, ಭಯದಿ ಸಖಿಯನು ಕೇಳೆ-
'ನಾನಂದು ದಿನಕಳೆದ ತುಂಬು ಗರ್ಭಿಣಿ'ಯೆಂದು
ಪೇಳಿದಳು. ಎರಡು ವರುಷವು ತುಂಬಿ ಮೂರು ತಿಂ-
ಗಳು ಕಳೆದು ಬಂದಿತ್ತು ಆ ದಿನಕೆ. ಮನಬೆದರಿ-
ದುದು ಕೇಳಿ, ಪತಿಯು ಊರನು ಬಿಟ್ಟ ಎರಡು ವರು-
ಷದ ಮೇಲೆ ತುಂಬು ಗರ್ಭಿಣಿಯೆಂದು ಪೇಳಿದುದ
ಕೇಳುತಲೆ ಭೀತಿತಟ್ಟಿತು ಮನಕೆ. ಲೋಕಾಪ-
ವಾದ ಭೀತಿಗೆ ಮನವು ಬಲುಬೆದರೆ ಸಖಿಯುಪಾ-
ಯವನೊಂದನರುಹಿದಳು. ಅದರಂತೆ ತೀರ್ಥಯಾ-
ತ್ರೆಯ ನೆವದಿ ರಾಜ್ಯದಿಂ ಪೊರಮಟ್ಟು ಬರುತಮಿರೆ,

ಮಿಥಿಲೆಯನು ಬಳಿಸಾರೆ. ಅಲ್ಲಿ ಪುಟ್ಟಿತು ಒಂದು
ಪೆಣ್ಗೂಸು. ಮನವನೋಹಿಸುತಿರುವ ಚೆಲುವು ಶಿಶು-
ವನು ಕಂಡು, ಕರುಳನೋಹವು ಸೆಳೆಯೆ, ಮುತ್ತಿಟ್ಟು
ಅಪ್ಪುತ್ತ ಆದರಿಸುತಿರಲಾಗಿ ಮನಕೆ ಸುಳಿ-
ದುದು ನನ್ನ ಮುಂದಿದ್ದ ಅಪವಾದ. ಬೇರೊಂದು
ಮಾರ್ಗವಾ ಸಮಯದಲಿ ಹೊಳೆಯದಿರೆ ಅವಸರದಿ
ಆ ಶಿಶುವನುದ್ಯಾನದೊಳು ಬಿಟ್ಟು ಬಂದಾಯ್ತು.
ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ, ಎಲ್ಲ ಕಡೆ
ದೇವನಿಗೆ ತಪ್ಪುಕಾಣಿಕೆ ಸಲಿಸಿ ಗುಟ್ಟಿನಲಿ
ಬಂದಾಯ್ತು ಈ ಊರ್ಗೆ. ದುಃಖದಲಿ ಬಂದಾಯ್ತು.

ರಾವಣ :
ಹಡೆದುದಾಯಿತು ನೀನು, ದಿವ್ಯ ಸ್ತ್ರೀಮೂರ್ತಿಯನು
ಹತ್ತಾರು ವರುಷಗಳು ಉರುಳಿದುವು. ನೀ ಹಡೆದ
ಹೆಣ್ಣ ಸುಖದುಃಖಗಳ ಆಗುಹೋಗುಗಳನ್ನು
ಅರಿವ ಬಯಕೆಯು ನಿನ್ನ ಬಾಧಿಸದೆ ಪೋದುವೇ?

ಮಂಡೋದರಿ :
ಹೇಗೆ ಬಾಧಿಸದಿಹುದು? ಹೆತ್ತ ಕರುಳಲ್ಲವೇ?
ದಿನದಿನಕೆ ಆ ನೆನಪು ಕರುಳ ಕೊರೆಯುತಲಿತ್ತು.

ರಾವಣ :
ಅವಳ ಸುದ್ದಿಯ ತಿಳಿವ ಯತ್ನ ಮಾಡಿದಿಯೇನು?

ಮಂಡೋದರಿ :
ಅದು ಒಂದು ದಾರುಣದ ಕತೆಯಾಯ್ತು. ಕೇಳದನು.
ಮಗುವನಾ ಬಿಡಲೊಲ್ಲೆ ತಾಯ್ತನದ ಪ್ರೇಮದಲಿ
ಆದರಾಯೆನ್ನ ಸಖಿ ಅದಕೆ ಒಪ್ಪಿದಳಿಲ್ಲ.
ಮಗುವ ಬಿಡದೊಡೆ ಕಡೆಗೆ ಪತಿಯು ಬಿಡುವನು ನಿನ್ನ.
ನಿನ್ನ ಪಾತಿವ್ರತ್ಯದಲಿ ಶಂಕೆ ಹುಟ್ಟುವುದು.
ಹುಟ್ಟಿಸಿದ ದೇವ ತಾ ಹುಲ್ಲು ಮೇಯಿಸದಿಹನೆ
ಹೆದರದಿರು. ಎಲ್ಲ ಬಗೆಯಲಿ ನಿನಗೆ ತೃಪ್ತಿಕರ
ವಾಗಿರುವ ಆಶ್ರಯವ ದೊರಕಿಪೆನು. ನಿನ್ನ ಈ
ಗುಟ್ಟಾದ ತಾಯ್ತನವು ಗುಟ್ಟಾಗಿ ಇರಬೇಕು.
ರಾಜಕುಲದಲಿ ಪುಟ್ಟಿದೀ ಮಗುವು ಅಂತೆಯೇ
ವೈಭವದಿ ಬೆಳೆಯುವೊಲು ಮಾಡುವೆನು. ಎಂದೆನುತ
ತಾಯ ತೊಡೆಯಿಂದೆತ್ತಿ ಕೊಂಡುಪೋದಳು ಶಿಶುವ.
ಅಪವಾದ ಭೀತಿಯಿಂ, ಸಖಿಯ ಬಲವಂತಕ್ಕೆ
ತಳೆಬಾಗಿ ತೊರೆಯಬೇಕಾಯ್ತೆಂದು ತನುಜೆಯನು.

ಆ ಶಿಶುವು ಧರ್ಮಾತ್ಮರಾದವರ ಕೈಸೇರಿ
ಬಹು ಸುಖದಿ ಇಹುದೆಂದು, ಯೋಚನೆಗೆ ಕಾರಣವು
ಇರದೆಂದು ಪೇಳಿದಳು ಎನ್ನ ಸಖಿ. ಮಕ್ಕಳಿಗೆ
ಹಂಬಲಿಸಿ ಹಸಿದಿದ್ದ ತಾಯ್ ಬಳಿಗೆ, ಮಕ್ಕಳಿ-
ಲ್ಲದ ಮನೆಗೆ ಸೇರಿತಾ ಮಗುವೆಂದು ಹೇಳಿದಳು.
ಶ್ರೀಮಂತ ಮನೆತನವು ಸುಖಕೆ ಕೊರತೆಯು ಇಲ್ಲ-
ವೆಂದೆನಲು ಅವಳ ಮಾತನು ನಂಬಿ ತಾಯ್ತನದ
ಅಳಲನದುಮಿಟ್ಟು ವಿಧಿಯಿಲ್ಲದೆಲೆ ಹೊರಟಾಯ್ತು
ಊರಿಂದ. ಗಟ್ಟಿಮನಸನು ಮಾಡಿ ತೊರೆದೆವಾ
ಪಟ್ಟಣವ. ಬಹುಕಾಲವದರ ಯೋಚನೆಯಿಂದ
ಕೃಶಳಾದೆ. ಕಾಲ ಮರೆಸಿತು ಅದನು. ನೀವಂದು
ಜೈತ್ರಯಾತ್ರೆಯ ಮುಗಿಸಿ ಬಂದಾಗ ಪೇಳಲಂ-
ಜಿದೆ ನಾನು, ಆ ಕಷ್ಟದನುಭವವ. ಸುತೆಯ ಶೋ
ಕವು ಮತ್ತೆ ಮರುಕಳಿಸಿ ಕಾಡಿತ್ತು. ತಡೆಯಲಾ-
ರದೆ ಅದನು ಆ ಕೂಸ ಸುಖದುಃಖಗಳನರಿತು
ಬಾರೆಂದು ಕಳುಹಿದೆನು ಆ ಸಖಿಯನಿನ್ನೊಮ್ಮೆ.
ಬಂದು ಹೇಳಿದಳವಳು. ಸಂರಾಜ್ಞಿ! ನೀ ಹಡೆದ
ಹೆಣ್ಣುಮಗು ರಾಜನಾಶ್ರಯದಲ್ಲಿ ರಾಜವೈ-
ಭವದಿಂದ ಸುಖಸಂಪದಗಳಿಂ ಮೆರೆಯುತಿದೆ.
ನಿನಗಿನ್ನು ಅದರ ಯೋಚನೆ ಬೇಡವೆಂದೆನಲು
ಮನಸಿನ ಕುತೂಹಲಕೆ ಕೇಳಿದೆನು ಹೇಳೆಂದು.
ಯಾರದರ ಪಾಲಕರು? ಎಂದೆನ್ನೆ, ಅದರಿಂದ
ಗುಟ್ಟು ರಟ್ಟಾಗುವುದು ಅರಿಯದಿರುವುದೆ ಒಳಿತು
ಎಂದೆನ್ನೆ ಸುಮ್ಮನಿರಬೇಕಾಯ್ತು. ಆ ಮಗಳು
ರಾಜವೈಭವದಿಂದ ಬದುಕುತಿರ್ದುದ ಕೇಳಿ
ಮರುಗುತಿದ್ದೆನ್ನಮನ ಸಂತಸದಿ ಹಿಗ್ಗಿತ್ತು.
ಗುಟ್ಟರಿತ ಆ ಸಖಿಯು ದೇವಪಾದವ ಸೇರೆ
ಅಪವಾದ ಭೀತಿಯಲಿ ಕಡಿಯಿತಾ ಸಂಬಂಧ.
ಸೌಖ್ಯವಾಗಿಹಳೆಂದು ಹೇಳುತಿದ್ದುದು ಮನವು.

ರಾವಣ :
ನಿನ್ನ ಸುತೆ ಜನಕರಾಜನ ಪುತ್ರಿಯೆಂದೆನಿಸಿ
ಆ ದೊರೆಯ ಪಾಲನೆಯಲಿಹಳೆಂದು ಪೇಳಲಿ-
ಲ್ಲವೆ ಸಖಿಯು?

ಮಂಡೋದರಿ :
ಅವಳು ಪೇಳಿದುದಿಲ್ಲ ಆ ಮಾತ.

ರಾವಣ :
ಸಂಗತಿಯ ಮರೆಸಿಡಲು ಕಾರಣಗಳೇನಿತ್ತೋ?

ಮಂಡೋದರಿ :
ಏನಿತ್ತೋ ಅರಿಯೆನದ. ಆ ಕಾರಣದ ಹಿಂದೆ
ವಿಧಿಯಾಟ ಅಡಗಿದ್ದುದೆಂದು ನಾನರಿಯುವೆನು.
ರಾಜನಾಶ್ರಯದಲ್ಲಿ ರಾಜವೈಭವದಿಂದ
ಬಾಳುತಿದೆ ಎಂತೆಂದು ಮಾತ್ರವೇ ಪೇಳಿದಳು.
ಸತ್ಯವೇನಿಹುದೆಂದು ಊಹಿಸಿದೆ ನಾನೀಗ
ಸೀತೆ ಪುಟ್ಟಿದ ಕಾಲ ರಾಜಾಶ್ರಯದ ಸುದ್ದಿ
ಮೇಲಾಗಿ ಅನುಪಮದ ರೂಪ ಸಾದೃಶ್ಯಗಳು
ಇವುಗಳಿಂ ಅರಿತೆನಾ ಸೀತೆ ತಾ ಮಗಳೆಂದು
ತಾಯ್ತನದ ಕರುಳಕರೆ ಖಚಿತಗೊಳಿಸಿಹುದದನು.

ರಾವಣ :
ಈ ಸೀತೆ ನನ್ನ ಮಗಳೇ ದಿಟವು. ಕರುಳ ಕರೆ,
ಮಗಳೆಂಬ ನುಡಿ ನನ್ನ ಮನವ ಕದಡಿದ ಬಗೆಯು
ರಕ್ತಸಂಬಂಧವನು ಒಡೆದು ತೋರಿಸುತಿಹುದು.
ಮಂಡೋದರೀ ದೇವಿ! ಈಗರಿತೆ ನಾನವಳ
ರೂಪಸಾದೃಶ್ಯದಾ ಕಾರಣವ, ಮನಕೆ ಸುಳಿ-
ದಾ ಶಾಪದಿಂಗಿತವ. ಏನ್ ವಿಧಿಯ ಆಟವೋ?
"ಮಗಳ ಕಾಮಿಸಿದಂದು ಸಮನಿಸಲಿ ಸಾವಂದು"–
ಎಂಬ ಶಾಪವ ಕೇಳಿ ಅಪಹಾಸ್ಯಗೈದಿದ್ದೆ.
ನನಗೆ ಮಗಳೇ ಇಲ್ಲ, ಕಾಮಿಸುವುದೆಂತೆಂದು.
ಆ ಧೈರ್ಯ ಶಾಪವನು ಮರೆಯುವೊಲು ಮಾಡಿತ್ತು
ದೂರವಾಗಿದ್ದೆ ನಾನಾ ಶಾಪಭಯದಿಂದ.
ಹಣೆಯ ಬರಹದ ಮುಂದೆ ನಾವಲ್ತು. ಅಚ್ಚರಿಯು,
ದೈವವೆಂತೀ ಸನ್ನಿವೇಶವನು ಸೃಷ್ಟಿಸಿತು?

ಮಂಡೋದರಿ :
ಕರುಳ ಕೊರೆಯುತಲಿಹುವು ಆ ನೆನಪು ಘಟನೆಗಳು.

ರಾವಣ :
ವ್ಯಥಿಸದಿರು, ವ್ಯಥಿಸದಿರು. ಈ ಎಲ್ಲ ಘಟನೆಗಳು
ವಿಧಿಯು ನಿಯಮಿಸಿದಂತೆ ನಡೆದಿಹುವು. ಹಾ ವಿಧಿಯೆ!
ನಿನ್ನ ಮೀರುವರಾರು? ಧೀರ ರಾವಣ ಕೂಡ
ಬಲಿಯಾದನೇ ನಿನಗೆ? ಮಂಡೋದರಿ ದೇವಿ!
ಪತಿವ್ರತೆಯರೆಲ್ಲರಲಿ ಉತ್ತಮಳು ನೀ ದೇವಿ.
ಏಕಿಂತು ಮಂಕುಕವಿದುದು ನಿನ್ನ ತಿಳಿವಿಂಗೆ?
ಸಲುವ ಮೂರೊಂಭತ್ತು ತಿಂಗಳದು ಆ ಫಲವು
ಅತಿಮಹಿಮೆಯುತರಾದ ಲೋಕವಂದ್ಯರೆನಿಪ್ಪ
ವೈಮೆಗಾರರು ಜನಿಸುವಾ ಫಲವು, ಗಜಫಲವು.
ಆದರ್ಶ ವ್ಯಕ್ತಿಗಳು ಲೋಕದಲಿ ಜನಿಸುವೊಲು
ಆ ಶುದ್ಧ ಪುಣ್ಯಜೀವಿಗಳ ಕುರುಹೆನುವಂತೆ
ನಡೆಯುವುವು ಈ ಬಗೆಯ ಪ್ರಕೃತಿ ವೈಚಿತ್ರ್ಯಗಳು.
ಮಂಡೋದರೀ ದೇವಿಯಂಥವರ ಪುಣ್ಯದಲಿ
ಸಲ್ಲುವುದು ಆ ಬಯಕೆ. ಅರಿಯದೆಯೆ ಪೋದೆಯಲ?

ಮಂಡೋದರಿ :
ನಾನು ಕೇಳಿದುದಿಲ್ಲ ಆ ಪರಿಯ. ಅದರ ಮಾ-
ಹಾತ್ಮ್ಯೆಯನು ಅರಿಯಲಾರದೆ ಹೋದೆ. ನಿರ್ಭಾಗ್ಯೆ.
ಹೆಣ್ಣು ಸಂತಾನಕ್ಕೆ ಹಂಬಲಿಸಿ ಹಂಬಲಿಸಿ
ಅತಿಯಾಸೆಯಲ್ಲಿರಲು, ಪರಮಾತ್ಮ ಕೃಪೆದೋರಿ
ಲೋಕವಂದ್ಯಳೆನಿಪ್ಪ ಸೀತೆಯಂತಹ ಮಗಳ
ವರವಾಗಿ ಕರುಣಿಸಿರೆ, ಸಲ್ಲದಾ ಅಪವಾದ
ಭೀತಿಯಲಿ ಕಳೆದುಕೊಂಡೆನೆ ಅವಳ. ಪರಮಾತ್ಮ-
ನಾನಂದ ಮೂರುತಿಯ ಕಣ್ದಣಿಯ ನೋಡುವಾ-
ಸೆಯ ಸಲಿಸೆ ತಪಮಾಡಿ ತಪಮಾಡಿ, ಪರಮಾತ್ಮ
ಪ್ರತ್ಯಕ್ಷನಾದಂದು ಕುರುಡಿಯೊಳು ಕಣ್ಮುಚ್ಚಿ
ನೀ ಬೇಡ ಹೋಗುಹೋಗೆಂದು ದೂಡಿದವೊಲಾ-
ಯ್ತೆನ್ನ ಬಗೆ. ಕುಹಕವಾಡಿತು ವಿಧಿಯು. ದೇವನಾ
ಲೀಲೆಯನು ಅರಿಯಲಾರದೆ ಹೋದೆ.

ರಾವಣ :
ಏನನಾ-
ಹುತವಾಯ್ತು. ಸಂಗತಿಯನೀರೀತಿ ಮರಸುವರೆ?

ಮಂಡೋದರಿ :
ಪತಿದೇವ! ಅಂದಿನಾ ಮನದ ಬಗೆಯೇ ಬೇರೆ,
ಸಂದರ್ಭವೇ ಬೇರೆ. ರಾವಣೇಶ್ವರನಂದು
ಅತಿಪರಾಕ್ರಮದಿಂದ ಲೋಕ ಲೋಕಗಳನ್ನು
ಗೆಲ್ಲುತಿದ್ದಾ ಕಾಲ. ದಿಗ್ವಿಜಯ ಬಾವುಟವ
ತುದಿಗೆತ್ತಿ ಹೆಮ್ಮೆಯಿಂ ಮೆರೆಯುತಿದ್ದಾ ಕಾಲ.
ನೂರಾರು ಸುಂದರೀ ಮೂರ್ತಿಯರು ರಾವಣನ
ಓಲೈಸಿ ಸೇವಿಸುತ ಪಂಚೇಂದ್ರಿಯಂಗಳಿಗೆ
ಸುಖದ ಸಾರವ ಧಾರೆ ಎರೆಯುತಿದ್ದಾ ಕಾಲ.
ಕೈಹಿಡಿದ ಈ ಪಾಪಿ ಮಂಡೋದರಿಯ ನೆನಪ
ಮರೆಸಿದಂಥಾ ಕಾಲ. ಆ ಕಾಲ. ಅಂದಿನಾ
ಲೋಲುಪತೆಯಂತಹುದು. ಆ ವಿಷಮ ಸಮಯದಲಿ
ಪತಿಯು ಯಾತ್ರೆಗೆ ಹೊರಟ ಎರಡು ವರುಷದ ಮೇಲೆ
ತಾಯಾದೆನೆಂಬ ಕಟುವಾರ್ತೆಯನು ಪೇಳಿದೊಡೆ

ಸಹಿಸುವರೆ ಗಂಡಸರು? ಚಕ್ರೇಶ್ವರನ ಪ್ರೇಮ
ಮಂಜಿನೊಲು ಕರಗದೆ? ಸತಿಯ ಪಾತಿವ್ರತ್ಯ
ವನು ಶಂಕಿಸದೆ ಲೋಕ? ಇಂತಿರಲು ವಾರ್ತೆಯನು
ಪ್ರಕಟಿಪುದು ಯುಕ್ತವಾಗಿರುತಿತ್ತೆ?

ರಾವಣ :

ಪತಿವ್ರತಾ
ಮೂರುತಿಯೆ ನೀನಿರಲು ಎನ್ನಮನ ನಿನ್ನಲ್ಲಿ
ಸಂಶಯವ ಪಡುತಿತ್ತೆ?

ಮಂಡೋದರಿ :

ಆ ದಿನದಿ ನನ್ನಲ್ಲಿ
ಆ ಧೈರ್ಯವಿರಲಿಲ್ಲ. ಹೆಚ್ಚು ಹೇಳಿದೊಡೇನು
ವಿಧಿಯಾಡಿಸಿತು ಅಂದು. ನನ್ನಿಂದ ಈ ಕಷ್ಟ
ಬಂದಿಹುದು ರಾವಣಗೆ, ಲಂಕಾಧಿನಾಥನಿಗೆ.
ಮಗಳಾದ ಸೀತೆಗೂ ಅನ್ಯಾಯ ಮಾಡಿದೆನು.
ಪರಿಹಾರ ವೇನಿದಕೆ?

ರಾವಣ :

ಹೆಚ್ಚು ಮಾತಿಂದೇನು
ಪತಿವ್ರತೆಯ ಶಾಪವೇ ನಿನಗೆ ಆ ದಿನದಲ್ಲಿ
ಆ ರೀತಿ ಪ್ರೇರಿಸಿತು. ಮಂಕು ಕವಿಸಿತು ನಿನ್ನ
ಅನುಭವದ ಅರಿವಿಂಗೆ. (ದುಃಖದಿಂದ) ಹಾ! ಸೀತೆ!
ಗುರುತರದ
ಅಪರಾಧ ವೆಸಗಿಹೆನು ನಿನ್ನಲ್ಲಿ. ಹಾ ಸೀತೆ!
ಹಾ ಮಗಳೆ! ಮಗಳೆಂದು ಕರೆವ ಯೋಗ್ಯತೆ ನನಗೆ
ಎಲ್ಲಿಯದು? ಹೇ ದೇವ! ಏನು ಮಾಡುವುದೀಗ?
ಎನ್ನವೊಲು ಮಗಳ ಕಾಡಿಸಿದಂಥ ಪಾಪಿಗಳು
ಯಾರಿಹರು? ಈ ತೆರದ ಅಪವಾದ ಬಂದುದೇ
ರಾವಣಗೆ . . .

ಮಂಡೋದರಿ :

ಪತಿದೇವ! ಎಲ್ಲಿಯದು ಅಪವಾದ?
ಅರಿತರಿತು ಹೀನಮಾರ್ಗದಿ ನಡೆವುದಪರಾಧ.
ನೀನಿದನು ಅರಿಯದಿಹೆ. ಈ ಸೀತೆ ಜನಕರಾ-
ಜನು ಹೆತ್ತ ಮಗಳೆಂಬ ಭ್ರಮೆಯಲ್ಲಿ ನೆನೆಪಾಗ-
ದಿತ್ತೆನಗೆ; ಬಲುಹಿಂದೆ ನಡೆದ ಈ ವಿಷಯಗಳು.
ಮೇಲಾಗಿ ಮಾಡುವವರಾವಲ್ಲ, ಬಿಡುವವರು
ನಾವಲ್ಲ. ಮನುಜರಿಗೆ ಸ್ವಾತಂತ್ರ್ಯವೆಲ್ಲಿಯದು?

ರಾವಣ :

ನಿಜ ದೇವಿ. ಸ್ವಾತಂತ್ರ್ಯವೆಂಬುವುದು ಈ ಲೋಕ-
ದೊಳಗಿಲ್ಲ. ಎಲ್ಲ ಕಾರ್ಯದ ಹಿಂದೆ, ಎಲ್ಲ ಚಿಂ-
ತೆಯ ಹಿಂದೆ ಯಾವುದೋ ಶಕ್ತಿ ನೆಲಸಿಹುದಲ್ಲಿ.
ನಡಸುವುದು ಲೋಕವನು. ಮನುಜ ಮೃಗ ಪಕ್ಷಿಗಳು
ಸಚರಚರ ಜೀವಿಗಳು ಎಲ್ಲರೂ ಆ ಶಕ್ತಿ
ನಡಸುವೊಲು ನಡೆಯುತ್ತ ತಾವೆ ನಡೆವವರೆಂದು
ಹಿಗ್ಗುತ್ತ ಜೀವನವ ನಡೆಸುವರು. ಮಾಯದಲಿ
ಮೋಹಿತರು.

ಮಂಡೋದರಿ :

ಆದೊಡೇಂ, ಪರಮಾತ್ಮ ಕಾರಣಕೆ
ಒಂದು ಗುರಿಯನು ತೋರಿ ಕಾರ್ಯವನು ನಡಸುವನು.
ಆ ಗುರಿಗೆ ನಾನು ಬಲಿಬಿದ್ದಿಹೆನು. ನಾ ಪಾಪಿ
ಬುಡವಿಲ್ಲದಪವಾದ ಭೀತಿಯಲಿ ಸ್ವಾರ್ಥವನೆ
ಚಿಂತಿಸುತ ಮಹದನರ್ಥವ ತಂದೆ. ಮೂರು ನವ-
ಮಾಸ ಬಸುರಲಿ ಪಡೆದ ಕನ್ಯೆಯನು, ಮಗಳಂತೆ
ರಮಿಸಿ ಬೆಳೆಸುವ ಬದಲು ನೋವಿನಿಂನರಳಿಸಿಹೆ.
ಪತಿ ಪರಾಯಣೆಯಾಗಿ ರಾಜ ಸುಖವನು ತೊರೆದು
ಕಾಡಿಂಗೆ ಬಂದರೂ ಇಲ್ಲಿಯೂ, ಶಾಂತಿಯನು
ದೊರಕಿಸದೆ, ಪತಿಯನಗಲಿಸಿ, ನಮ್ಮ ರಾಕ್ಷಸರ
ಮಧ್ಯದಲಿ, ವನದಲ್ಲಿ, ಬಂದಿಯಾಗಿರಿಸಿಹೆವು.
ಇಂತವಳ ಕಷ್ಟಪಡಿಸುತಲಿಹೆವು. ಅಷ್ಟು ಮಾ-
ತ್ರವೆ ಅಲ್ಲ. ಲಂಕೆಗೂ ಅದರೆಲ್ಲ ಪ್ರಜೆಗಳಿಗೂ
ಲಂಕೆಯಧಿನಾಥನಿಗು ಸಂಕಟವ ತಂದಿಹೆನು.
ಲಂಕೆಯತಿ ವೀರರನು, ಮೈದುನರ ಬಲಿಗೊಟ್ಟು
ರಾವಣೇಶ್ವರನನ್ನು ಈ ರೀತಿ ವ್ಯಥೆಗೆ ಗುರಿ
ಮಾಡಿಹೆನು. ಈ ಪಾಪಕುಂಟೆ ಪ್ರಾಯಶ್ಚಿತ್ತ?

ರಾವಣ : (ಸಮಾಧಾನಪಡಿಸುತ್ತಾ)

ವ್ಯಥಿಸದಿರು, ವ್ಯಥಿಸದಿರು ಶಾಂತಿ ತಂದುಕೊ ಮನಕೆ.
ನಮ್ಮ ಯತ್ನವ ಮೀರಿ ನಡೆದ ಸಂಗತಿಗಳಿವು.
ನಡೆದವುಗಳಿನ್ನೊಮ್ಮೆ ಹಿಂದಿರುಗಿ ಬಹವಲ್ಲ.
'ಮಗಳ ಕಾಮಿಸಿದಂದು ಸಮನಿಸಲಿ ಸಾವಂದು'
ಎಂಬ ಶಾಪದ ನುಡಿಯು ಫಲಿಸುವಂತಹ ಕಾಲ
ಬಂದಿಹುದು. ವಿಧಿನಿಯಮವಂತಿರಲು ಅನುಭವಿಸ
ಬೇಕದನು. ತಪ್ಪಿಸಲು ಸಾಧ್ಯವೇ ನಮ್ಮಿಂದ?
ಆದುದಾಯಿತು ಈಗ. ಮುಂದೇನು ಎಂಬುದನು

ಯೋಚಿಸುವ. ನಡೆದುದನು ದೈವಲೀಲೆಯಿದೆನ್ನು.
ಇನ್ನು ಮುಂದಾದರೂ ಸೀತೆಯಲಿ ಕ್ಷಮೆಬೇಡಿ . . .

ಮಂಡೋದರಿ : (ಆವೇಶದಿಂದ ಝುಗ್ಗನೆದ್ದು)

ನೋಡಲ್ಲಿ ಬರುತಿಹಳು, ಬರುತಿಹಳು. ಹಾ ಮಗಳೆ !
ಹಾ ಸೀತೆ ! ಕ್ಷಮೆದೋರು ಕ್ಷಮೆದೋರು. ಇಂತುಗ್ರ–
ರೂಪದಲಿ ಕೊಲಬೇಡ ಕೊಲಬೇಡ. ಕ್ಷಮೆಯ ಬೇ–
ಡುತಲಿಹೆವು ಪಾಪಿಗಳು ಪಾಪಿಗಳು.

ರಾವಣ : (ಸಂತೈಸುತ್ತಾ)

ನೋಡಿಲ್ಲಿ
ಮಂಡೋದರೀ ದೇವಿ. ಏಕಿನಿತು ಭಯಗೊಂಡೆ
ಶಾಂತವಾಗಿರು ದೇವಿ. ಶಾಂತಿ ತಂದುಕೊ ಮನಕೆ.
ಸೀತೆ ಬಂದಿಹಳಿಲ್ಲ. ಭಯಬೇಡ.

ಮಂಡೋದರಿ :

ಜೀವೇಶ !
ನನಗೆ ಭಯವಾಗುತಿದೆ. ಜಾನಕಿಯ ಪ್ರತಿರೂಪ
ಗಹಗಹಿಸಿ ನಗುತ ಕಣ್ಮುಂದೆ ನಿಂತಂತಿಹುದು.

ರಾವಣ :

ಹೆದರದಿರು ಹೆದರದಿರು. ಶಾಂತಿ ತಂದುಕೊ ಮನಕೆ.
ಮನದ ವೇದನೆ ಇಂಥ ಚಿತ್ರಗಳ ಸುಳಿಸುವುವು
ಚಿತ್ತಪಟಲದ ಮೇಲೆ. ಗೆಲಬೇಕು ಧೈರ್ಯದಲಿ.

ಮಂಡೋದರಿ : (ಆಸೆಯಂಕುರಿಸೆ)

ದೈವವಿಧಿ ನಿಯಮಗಳು ಒಂದು ಬಗೆ ಇರಬಹುದು.
ಮಾನವನು ಅವುಗಳನು ಬದಲಿಸಲು ಶಕ್ತನಾ–
ಗಿರದಿಹನೆ? ಯಮನನ್ನು ಗೆದ್ದಳಾಸಾವಿತ್ರಿ.
ಬಾಲ ಮಾರ್ಕಂಡೇಯ ವಿಧಿನಿಯಮವನು ಮೀರಿ
ತುಂಬಿದಾಯುಷ್ಯವನು ಪಡೆದಿಹನು. ನನಗೀಗ
ಹೊಳೆದಿಹುದು ಹೊಸದೊಂದು ಯೋಚನೆಯು. ಈ ಸೀತೆ
ಮಗಳೆಂದು ಅರಿತಿಹೆವು ಈ ಕ್ಷಣದಿ. ಮಗಳ ಕಾ–
ಮಿಸಿದಂಮ ಸಮನಿಸಲಿ ಸಾವಂದು–ಎಂಬ ಈ
ಶಾಪದಾ ಮಾತದೊಂದೆಡೆಯಿರಲಿ. ಅರಿಯದೆಲೆ
ಕಾಮಿಸಿದೆ. ಅರಿತೊಡನೆ ಪರಿಹಾರ ಚಿಂತಿಸುತ
ಯುದ್ಧವನು ನಿಲ್ಲಿಸುವ. ಮೃತ್ಯುವನು ಜಯಿಸೋಣ
ಈ ತೆರದಿ.

ರಾವಣ :

ಮೃತ್ಯುವನು ಜಯಿಸೋಣ, ಜಯಿಸೋಣ.
ಮಗಳೆಂದು ಅರಿಯದೆಲೆ ಮಾಡಿದಾ ಪಾಪಕ್ಕೆ
ತಕ್ಕ ಪ್ರಾಯಶ್ಚಿತ್ತವನು ಗೈದು, ಕೃತಕೃತ್ಯ
ರಾಗೋಣ. ಶಾಂತಿಯನು ದೊರಕಿಸುವ ತಪಸಿನಲಿ.
ಬೇಗ ಬಾ, ಹೋಗೋಣ. ರಾಜರ್ಷಿ ಜನಕನಿಗೆ
ಮಗಳೆನಿಸಿದಾ ಸೀತೆಗೆಲ್ಲ ವಿಷಯವನರುಹಿ,
ಕ್ಷಮೆಬೇಡಿ, ಪತಿಯಾದ ರಾಮಚಂದ್ರನ ಬಳಿಗೆ
ಸೇರಿಸುವ. ಇಂದ್ರಜಿತುವನು ಕರೆಸಿ ಲಂಕೆ ಪ–
ಟ್ಟವ ಕಟ್ಟಿ, ಈ ರಾಜ್ಯವನು ತೊರೆದು ಪ್ರಕೃತಿ ಸುಂ–
ದರಿಯ ಶಾಂತತೆಯ ನೆಲೆವೀಡಾದ ಋಷ್ಯಾಶ್ರ–
ಮಂಗಳಲಿ ವಿಹರಿಸುತ ತಪವ ಗೈಯ್ಯುವ ಮುಂದೆ.
ಪಾಪಕ್ಕೆ ಕ್ಷಮೆಯನ್ನು ಬೇಡುತ್ತ ತಪದಿಂದ
ದೇವನನು ಅರ್ಚಿಸುವ.

ಮಂಡೋದರಿ : (ಸಮಾಧಾನದಿಂದ)

ತಪದಿಂದ ದೇವನನು
ಅರ್ಚಿಸುವ, ಅರ್ಚಿಸುವ.

ಚಾರ : (ಪ್ರವೇಶಿಸಿ, ಆತುರದಿಂದ)
ರಾವಣೇಶ್ವರ ದೇವ !

ರಾವಣ :
[ತಾನು ಹೇಳುತ್ತಿದ್ದುದನ್ನು ಮರೆತು ತಕ್ಷಣ ಬಿಲ್ಲಿಗೆ ಕೈಹಾಕುವನು. ಅವನ ಮನಸ್ಸು ತಪಸ್ಸಿನರಂಗದಿಂದ ಯುದ್ಧರಂಗಕ್ಕೆಳಿಯುವುದು. ತಂದೆಯಾಗಿದ್ದ ರಾವಣನ ಮನಸ್ಸು ಕ್ರಮೇಣ ಕದನ ಕುತೂಹಲಿಯಾಗಿ ಮಾರ್ಪಡುವುದು.]
(ಆತುರದಿಂದ) ಯುದ್ಧರಂಗದ ಸುದ್ದಿ ತಂದಿಹೆಯ ?

ಚಾರ :

ಅಹುದಹುದು
ಪ್ರಭುದೇವ.

ರಾವಣ :

ಬೇಗಬೇಗನೆ ಹೇಳು, ತಳುವದಿರು.
ಯಾವ ಸುದ್ದಿಯನು ತಂದಿಹೆ ಪೇಳು ?

ಚಾರ :

ಇಂದ್ರಜಿತು
ಲಕ್ಷ್ಮಣರು ಯುದ್ಧವನು ಮಾಡಿದರು.

ರಾವಣ (ಅತ್ಯಾತುರದಿಂದ)

ಪರಿಣಾಮ ?

ಚಾರ :
ಇಂದ್ರಜಿತು ಉರುಳಿದನು. ಲಕ್ಷ್ಮಣನು ಸೈನ್ಯವನು
ಭಂಜಿಸಲು ಸೋತಿತೆಮ್ಮಯ ಸೇನೆ. ಅರಿಸೇನೆ
ಜಯಕಾರದಲಿ ಹಿಗ್ಗಿ ಮೆರೆಯುತಿದೆ.

ಮಂಡೋದರಿ : (ಶೋಕದಿಂದ ಗದ್ಗದಳಾಗಿ)
ಹೋದೆಯಾ
ಇಂದ್ರಜಿತು, ಹೋದೆಯಾ !

ರಾವಣ : (ದುಃಖವನ್ನು ತಡೆದುಕೊಳ್ಳುತಾ)
ಇಂದ್ರಜಿತು ಉರುಳಿದನು.
ಸತ್ತನೇ ರಾಕ್ಷಸರ ಮುಕುಟಮಣಿ ಇಂದ್ರಜಿತು.

೨ನೇ ಚಾರ : (ಪ್ರವೇಶಿಸಿ)
ಸತ್ತನಾ ಇಂದ್ರಜಿತು. ಬಾ ಬೇಗ ಜನಪಾಲ.

[ಶೋಕವನ್ನು ತಡೆಯಲಾರದೆ ಮಂಡೋದರಿ ಮೂರ್ಛೆ ಬೀಳುವಳು. ರಾವಣನು ನೀರನ್ನು ಸಿಂಪಡಿಸಿ ಉಪಚರಿಸುವನು. ಮಂಡೋದರಿ ಎಚ್ಚರಗೊಳ್ಳುವಳು.]

ಮಂಡೋದರಿ : (ವಿಲಾಪಿಸುತ್ತಾ)
ಇಂದ್ರಜಿತು, ಇಂದ್ರಜಿತು.

ರಾವಣ :
ವೀರನಾರಿಯು ನೀನು
ವಿಲಪಿಸಲು ಸಮಯವೇ ? ಧೈರ್ಯವನು ತಂದುಕೋ.

೨ನೆಯ ಚಾರ :
ಶತ್ರುಗಳು ಊರೊಳಗೆ ನುಗ್ಗಿಹರು, ಜನತೆ ಹಾ-
ಹಾಕಾರ ಮಾಡುತ್ತ ಕರೆಯುತಿರುವರು ನಿಮ್ಮ.
ತಡಮಾಡದಿರು ದೇವ, ಬಾ ಬೇಗ ಸೇನೆಯನು
ಕಾಪಾಡು.

ರಾವಣ : (ಕೆರಳಿ)
ಕೇಳಿದೆಯ ಮಂಡೋದರೀದೇವಿ.
ಕೇಳಿದೆಯ ಶತ್ರುವಿನ ಕೆಚ್ಚನ್ನು . . . ಇಂದ್ರಜಿತು !
ಬಲು ಪರಾಕ್ರಮಿ ನೀನು. ಬಂಧು ಮಿತ್ರರು ಅಳಿಯೆ
ಜಯವ ಸಾಧಿಸಿ ಕೊಡುವೆ ನೀನೆಂದು ನಂಬಿದ್ದೆ.
ಆ ಆಸೆ ಬಯಲಾಯ್ತು. ರಣದಲ್ಲಿ ದೇಹವನು
ಅರ್ಪಿಸಿದೆ ನನಗಾಗಿ. ಏನುಕೊಡುವೆನು ನಿನಗೆ ?
ಇಂದ್ರಜಿತು. ವೀರಾಗ್ರಣಿಯು ನೀನು, ಇಂದ್ರನನು
ಗೆದ್ದವನು. ನಿನ್ನ ಸಾವಿನ ಸೇಡತೀರಿಸುವ
ಕಾರ್ಯವನು ನನಗುಳಿಸಿ ಹೋದೆಯಾ ? ಇಂದ್ರಜಿತು.
ಅದನೆ ಮಾಡುವೆ ನಾನು.

೩ನೆಯ ಚಾರ : (ಪ್ರವೇಶಿಸಿ)
ಪ್ರಭುದೇವ, ಪ್ರಭುದೇವ !
ಅರಿಸೇನೆ ರಾಜಧಾನಿಗೆ ನುಗ್ಗಿ ಸೂರೆಗೆ-
ಯ್ಯುತಲಿಹುದು. ಪ್ರಜೆಗಳೆಲ್ಲರು ನಿಮ್ಮ ನೆಚ್ಚಿ ಮೊರೆ-
ಯಿಡುತಿಹರು. ನಂಬಿದರ ಕಾಪಾಡು. ನೋಡಲ್ಲಿ,
ಮೂಲಬಲ ಕೂಡುತಿದೆ. ಕಹಳೆ ಧ್ವನಿಯಾಗುತಿದೆ.
ಬೇಗ ಬಾ, ಬೇಗ ಬಾ, ವಂದಿಪೆವು ಪ್ರಭುದೇವ.

[ತೆರೆಯಲ್ಲಿ ಕಹಳೆ ತಮಟೆಗಳ ಶಬ್ದ. 'ಪ್ರಭುಗಳು ಬಂದರೆ', 'ಸೈನಿಕರು ಸಿದ್ಧವಾಗಿರುವರೆಂದು ತಿಳಿಸಿರಿ' 'ಅಯ್ಯೋ ! ತಡವೇಕೆ ? ತಡಮಾಡಿರೆ ಶತ್ರುಗಳು ರಾಣಿವಾಸಕ್ಕೂ ಬಂದಾರು.' ಮುಂತಾದ ಸೈನಿಕರು ಆಡಿಕೊಳ್ಳುವ ಮಾತು ಕೇಳಿಬರುವುದು.]

ರಾವಣ :
ಹೋಗಿ. ಬರುತಿಹೆನೆಂದು ಪೇಳಿ ಜನಗಳಿಗೆಲ್ಲ.
ಹೆದರದಿರಿ. ಮೂಲಬಲ ಕೂಡಿಸಿರಿ. ರಣರಂಗ
ದಲಿ ನಮ್ಮ ಶಕ್ತಿಯನು ತೋರೋಣ.

[ಸೇವಕರು ಹೋಗುವರು]

[ಮಾತು ಮಾತಿಗೂ ಕೋಪದಿಂದ ಕಿಡಿಕಿಡಿಯಾಗಿ ಆವೇಶದಿಂದ]

ಬರುತಿಹೆನು,
ಬರುತಿಹೆನು ಪ್ರಜೆಗಳೇ, ಮಿತ್ರರೇ, ಸೈನಿಕರೆ,
ಬರುತಿಹೆನು. ಜನಶೂನ್ಯವಾಗಿರುವ ರಾಜ್ಯದಲಿ
ಕುಂಭಕರ್ಣನು ಮಡಿದ ರಾಜ್ಯದಲಿ, ಇಂದ್ರಜಿತು
ಅಸುವನೊಪ್ಪಿಸಿದ ರಾಜ್ಯದಲಿ, ಒಬ್ಬಂಟಿಗನು
ಉಳಿವನೇ ರಾವಣನು ? ಹಗೆಯರಪಹಾಸ್ಯಕ್ಕೆ
ತಲೆತಗ್ಗಿ ಜೀವಗಳ್ಳರ ತೆರದಿ ಜೀವಿಪನೆ
ರಾವಣನು ? ಈ ವೀರ ರಾವಣನ ಕೀರ್ತಿಕಲ-
ಶದ ಮೇಲೆ ' ಸ್ವಾರ್ಥಕ್ಕೆ ಸಕಲವನು ಬಲಿಗೊಟ್ಟು
ಆಮೇಲೆ ಬಾಂಧವ್ಯವನು ಬೆಳೆಸಿ ಬದುಕಿದನು '-
ಎಂತೆಂಬ ಕಲೆನಿಂತು ಅಪವಾದ ಬರದಿರಲಿ.
ಹೇ ಧಾತ್ರಿ ! ಲಂಕಾಧಿ ದೇವತೆಯೆ ! ನಮಿಸುವೆನು.
ಕಡೆಯಸಲ ನಮಿಸುವೆನು. ಗೆದ್ದುಬರೆ ಮಡಿದವರ
ಸೇಡು, ಇಲ್ಲದೊಡೆ ವೀರರ ಸ್ವರ್ಗ, ಮಂಡೋದ-
ರೀದೇವಿ ! ವಿಧಿಯ ಮುಷ್ಟಿಯ ಹಿಡಿತದಲಿ ಸಿಕ್ಕಿ
ನರಳುವನು ಮಾನವನು. ಯೋಚಿಸುವನೊಮ್ಮೊಮ್ಮೆ
ವಿಧಿಯ ಗೆಲ್ಲುವೆನೆಂದು. ನಗುತಿಹುದು ವಿಧಿಯವನ

ಹಿಂದುಗಡೆ ನಿಂತಿದ್ದು. ವಿಧಿಯು ಬರೆಹವ ಬರೆವ
ಬ್ರಹ್ಮನೇ ಅದನಳಿಸಲರಿಯದೆಯೆ ತಪಿಸುವನು.
ಇನ್ನುಳಿದ ಬಡಜನರ ಪಾಡೇನು ? ಹಂಚಿಕೆಯ
ಹೂಡಿದೆವು ವಿಧಿಯ ಮೀರುವೆವೆಂದು ಒಂದುಕ್ಷಣ
ಮಗಳ ಮೋಹದಲಿದ್ದು ಸುಖದ ಕನಸನು ಕಂಡು
ಹಿಗ್ಗಿದೆವು. ಕರ್ತವ್ಯವನು ಕೂಡ ಮರೆಸಿತ್ತು
ಆ ಮೋಹ. ಆದೊಡೇಂ ವಿಧಿಯ ಕೈಮೇಲಲ್ತೆ ?
ಅದಕೆಯೇ ಗೆಲುವಲ್ತೆ ? ಗುರಿಯಿಟ್ಟ ಬಾಣದೊಲು
ಬಂದಿತಾ ಇಂದ್ರಜಿತುವಿನ ಸುದ್ದಿ. ಆ ಮಾತು
ಹಾಗಿರಲಿ. ಯುದ್ಧದಲಿ ಗೆದ್ದು ಬರೆ ರಾಮನಿಗೆ
ಸೀತೆಯನು ಒಪ್ಪಿಸುತ, ಕ್ಷಮೆಯ ಕೇಳುವ ನಾವು.
ಇಲ್ಲದೊಡೆ ಗುಟ್ಟುಗುಟ್ಟಾಗಿಯೇ ಇರಬೇಕು.
ಅಪವಾದ ದೂರವಾಗಿರಬೇಕು. ನೆನಪಿರಲಿ.

[ಹೋಗುವನು]

ಮಂಡೋದರಿ : (ನಿರಾಶಳಾಗಿ)

ತಪ್ಪುಮಾಡಿದ ನಾವು ಪರಿಹಾರ ಗೋಪುರವ
ಕಟ್ಟುತ್ತ ಇರುವಲ್ಲಿ ಸಿಡಿಲಿನಂದದಿ ಎರಗಿ
ಸುದ್ದಿಯನು ಸಾರುತ್ತ ಸಿಡಿಸಿದರು ಗೋಪುರವ.
ಎನ್ನಾಸೆ ಕುಸಿಯಿತಾ ಮರಳ ಮನೆಯಂದದಲಿ.
ವಿಧಿಯು ಅವತಾರವೆನೆ ಬಂದನೀ ರಣಚಾರ
ಮಾನವರ ಯತ್ನಗಳ ದೈವವೇ ಮುರಿವಂತೆ . . .

ಹಾ ಸೀತೆ ! ಹಾ ಮಗಳೆ ! ಎಷ್ಟುನೊಂದೆಯೆ ತಾಯಿ.
ಬರುತಿಹೆನು ಬಳಿಗೀಗ ನಿನ್ನ ಪೆತ್ತಾತಾಯಿ.
ಪೆತ್ತದಿನ ಬಿಟ್ಟುದಕೆ ಇಂದು ನೋಡುವೆ ನಿನ್ನ.
ತಾಯಿಯಂದದಿ ಕಾಣು, ಕ್ಷಮಿಸು ಈ ಪಾಪಿಯನು.
ನೀನರಿಯೆ ನಿನಗೆ ನಾಗೈದ ಅಪರಾಧಗಳ.
ಅಪವಾದ ಭೀತಿಯಲಿ ತಿಳಿಸಲಾಗದು ಅದನು,
ನಿನಗೆ, ಈ ಲೋಕಕ್ಕೆ. ಹೆತ್ತತಾಯಾದರೂ,
ನಾನಿನ್ನ ತಾಯೆಂದು ಹೇಳಿಕೊಳ್ಳುವ ಭಾಗ್ಯ
ವೆನಗಿಲ್ಲ. ನೀನರಿಯೆ ಅನ್ಯಾಯಗೈದವರು
ಜನುಮ ಕೊಟ್ಟವರೆಂದು. ದುಃಖಗಳ ಸಹಿಸುವುದು
ಕ್ಷಮಿಸುವುದು ಹೆಣ್ಣಜನುಮದ ಹಿರಿಮೆ. ಬರುತಿಹೆನು
ನಿನ್ನನಾ ಸಂತಯಿಸೆ. ನಿನ್ನಂತೆ ನೊಂದಿಹೆನು
ಬೆಂದ ಹೃದಯದ ಮೇಲೆ ಪ್ರೇಮಾಮೃತವ ಸೂಸಿ
ತಾಯ್ತನದ ವಾತ್ಸಲ್ಯವನು ತೋರಿ ಸಂತಯಿಸು.
ಜನಪಾಲ ! ಏನೆಂದೆ ? ಕಡೆಯ ಮಾತೇನೆಂದೆ ?
'ನೆನಪಿರಲಿ, ಅಪವಾದ ದೂರವಾಗಿರಬೇಕು '–
ದೂರವಾಗಿರಬೇಕು ಅಪವಾದವೆಂದೆಯಾ ?
ಅಪವಾದವೆಲ್ಲಿಯದು ಸೀತೆಯನು ಕಳುಹಿದರೆ ?
ಅಲ್ಲಿಲ್ಲ. ವಿಧಿಯ ಬರೆಹದೊಳುಂಟು ಅಪವಾದ.
ರಾವಣಿಯ ಜಾನಕಿಯ ಮಾಡಿದುದು ಅಪವಾದ
ರಾವಣನ ಅಳಿವಿಂಗೆ ಕಳುಹಿದುದು ಅಪವಾದ.

[ನಿಧಾನವಾಗಿ ತೆರೆ ಬೀಳುವುದು]

ವಿನಂತಿ

ಬೆಂಗಳೂರಿನ ಸುಪ್ರಸಿದ್ಧ ಸಾಹಿತಿಗಳಾಗಿದ್ದ ದಿವಂಗತ ಶ್ರೀ ಕೆ. ಗೋಪಾಲಕೃಷ್ಣರಾಯರು ಮತ್ತು ಮುಂಬಯಿಯ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ ಆರ್. ಎ. ಜಹಗೀರುದಾರರು ಇವರ ನಿಧನದ ಬಗ್ಗೆ ಮುಂದಿನ ತಿಂಗಳ 'ಕನ್ನಡ ನುಡಿ' ಸಂಚಿಕೆಯನ್ನು ದಿವಂಗತರ ಸ್ಮರಣ ಸಂಚಿಕೆಯಾಗಿ ಪ್ರಕಟಸಬೇಕೆಂದು ಯೋಚಿಸಲಾಗಿದೆ. ದಿವಂಗತರನ್ನು ಬಲ್ಲ ಕನ್ನಡ ಲೇಖಕರಿಂದ ಲೇಖನಗಳನ್ನು ಡಿಸೆಂಬರ್ ದಿನಾಂಕ ೧೫ರ ಒಳಗಾಗಿ ಸ್ವೀಕರಿಸಲಾಗುತ್ತದೆ. —ಸಂ.

ವಿಮರ್ಶನರಂಗ

ರಕ್ತಸಿಂಹಾಸನ : ಕಾದಂಬರಿ ಲೇ : ರಮಾತನಯ ಪ್ರ : ಪುರೋಗಾಮಿ ಸಾಹಿತ್ಯ ಸಂಘ, ಪುಟ, ೯೦ ಬೆಲೆ : ೧–೭೫

ಗುಲ್ಬರ್ಗ ರಾಜ್ಯದ ಸಿಂಹಾಸನಕ್ಕಾಗಿ ನಡೆದ ಹೋರಾಟ ಐತಿಹಾಸಿಕ ಕಾದಂಬರಿ.

ನರ್ತಕಿ ರಜಿಯಾ ದಾವುದ್ ಖಾನನ ಮಡದಿಯಾಗಿ ಸಿಂಹಾಸನವನ್ನೇರುವ ಬಯಕೆಯಿಂದ ಸುಲ್ತಾನ ಅಲ್ಲಾವುದ್ದೀನನನ್ನು ಕೊಲೆ ಮಾಡುತ್ತಾಳೆ. ಆದರೆ ತಾನು ಮಾಡಿದ ತಪ್ಪನ್ನು ಮುಚ್ಚಿಡಲು ರಜಿಯಳನ್ನು ಕಣ್ಣುಕಟ್ಟಿ ಕಾಡಿಗೆ ಕಳುಹಿಸಿ ದಾವುದ್ ಖಾನನು ಸಿಂಹಾಸನವನ್ನೇರುತ್ತಾನೆ. ಮಂತ್ರಿ ಫಜಲುದ್ದೀನನು ರಜಿಯಳನ್ನು ಕಾಮಿಸಿ ಮನೆಗೆ ಕರೆತರುತ್ತಾನೆ. ಇತ್ತ ದಾವುದ್ ಖಾನನು ಮಡಿದ ಸುಲ್ತಾನನ ಮಗಳಾದ ರೂಪರವಾರಳನ್ನು ಪ್ರೇಮಿಸಿ ಮದುವೆಯಾಗಲಿಚ್ಛಿಸುತ್ತಾನೆ. ಸತ್ಯ ಸಂಗತಿ ತಿಳಿದ ರೂಪರವಾರಳು ಸುಲ್ತಾನನ ಮಗನನ್ನು ವಂಚಿಸಿ ಕರೆತಂದು ಅಂಧನನ್ನಾಗಿ ಮಾಡಿ ಸುಲ್ತಾನನ ಮಡದಿಯ ಕೈಗಿಡುತ್ತಾಳೆ. ರಜಿಯಳು ವಿವಾಹಕ್ಕೆ ಸಿದ್ಧವಾಗಿದ್ದ ಸುಲ್ತಾನನನ್ನು ಮಸೀದಿಯಲ್ಲೇ ಕೊಲೆಮಾಡುತ್ತಾಳೆ. ಹಿಂದಿನ ಸುಲ್ತಾನರ ಪುತ್ರ ಮುಜಾಹಿದನು ಪುನಃ ರಾಜನಾಗುತ್ತಾನೆ. ಇದಿಷ್ಟು ಕಾದಂಬರಿಯ ಕಥೆ.

ಇದೊಂದು ಅದ್ಭುತ, ರಮ್ಯ, ಅಮಾನುಷ, ಘಟನೆಗಳಿಂದ ಕೂಡಿದ ಕಾದಂಬರಿ. ಸುಂದರವಾದ ಶೈಲಿ ಕಥೆಯಲ್ಲಿ ಮುಂದೋಟವಿದೆ. ಐತಿಹಾಸಿಕ ಕಾದಂಬರಿಗಳನ್ನೋದುವವರಿಗೆ ಇದು ಒಳ್ಳೆಯ ಕಾದಂಬರಿ.

* * *

ಜೋಡಿಹಕ್ಕಿ : ಕಾದಂಬರಿ ಲೇ : ಶಾರದೆ, ಸುರುಚಿ ಪ್ರಕಾಶನ ಸರಸ್ವತೀಪುರಂ, ಮೈಸೂರು–೪ ಪುಟ, ೧೬೪ ಬೆಲೆ : ರೂ. ೩–೦೦

ಈಚೆಗೆ ಬರುತ್ತಿರುವ ಕಾದಂಬರಿಗಳಂತೆ ಇದೂ ಒಂದು ಕಾಲೇಜಿನ ಪ್ರಣಯ ಕಥೆ.

ಲಾಯರು ಗೋಪಾಲಕೃಷ್ಣರಾಯರ ಎರಡನೆ ಮಗಳು ಶಾಲಿನಿ "ಜೋಡಿಹಕ್ಕಿ" ಕವನವನ್ನು ಹಾಡಿ ಕಾಲೇಜಿನಲ್ಲಿ ಎಲ್ಲರ ಮನಸೆಳೆಯುವಳು. ಅದನ್ನು ಬರೆದ ಕವಿ ಭಾಸ್ಕರನ ಗೆಳೆತನ ಅವನ ತಂಗಿ ಭಾಗೀರಥಿಯಿಂದ ಬೆಳೆಯಿತು. ಅವರು ಮೈಸೂರಿಗೆ ದಸರೆಯಲ್ಲಿ ಹೋದಾಗ ನ್ಯಾಯಾಧೀಶರ ಮಗ ಶ್ರೀಧರನ ಪರಿಚಯವಾಗಿ ಅವನನ್ನು ಭಾಗೀರಥಿ ಗುಪ್ತವಾಗಿ ಪ್ರೀತಿಸುತ್ತಾಳೆ. ಆದರೆ ಶ್ರೀಧರನ ಮನಸ್ಸೆಲ್ಲಾ ಶಾಲಿನಿಯ ಮೇಲೆ ನೆಟ್ಟಿರುತ್ತದೆ. ಇಷ್ಟರಲ್ಲಿ ಶಾಲಿನಿಯನ್ನು ಭಾಸ್ಕರನಿಗೆ ಕೊಟ್ಟು ಮದುವೆ ನಡೆಸಬೇಕೆಂಬ ಉದ್ದೇಶದಿಂದ ಶಾಲಿನಿಯ ತಂದೆತಾಯಿಗಳು ಭಾಸ್ಕರನ ಮನೆಗೆ ಬಂದಾಗ ಅವನ ತಾಯಿ ಅಂಬುಜಮ್ಮ ತಮ್ಮ ಹಿಂದಿನ ವೈರವನ್ನು ನೆನೆದು ಇವರ ಕೋರಿಕೆಯನ್ನು ತಿರಸ್ಕರಿಸುತ್ತಾಳೆ. ಈ ವಿಷಯ ತಿಳಿದ ಶಾಲಿನಿ ಶ್ರೀಧರನೊಂದಿಗೆ ವಿವಾಹವಾಗಲು ಸಮ್ಮತಿಸುತ್ತಾಳೆ. ಶಾಲಿನಿ, ಭಾಸ್ಕರ, ಭಾಗೀರಥಿ ಮೂವರೂ ಭಗ್ನ ಪ್ರಣಯಿಗಳಾಗುತ್ತಾರೆ. ಇದಿಷ್ಟು ಕಾದಂಬರಿಯ ಹಂದರ.

ಇಲ್ಲಿ ಕಥೆ ಕುಂಟುತ್ತಾ ಸಾಗುತ್ತದೆ. ಸಂಭಾಷಣೆ ಕೆಲವು ಕಡೆ ಜೀವಂತವಾಗಿದೆ. ಒಟ್ಟಿನಲ್ಲಿ ಮನರಂಜನೆಯ ದೃಷ್ಟಿಯಿಂದ ಈ ಕಾದಂಬರಿಯನ್ನು ಓದಿ ಮುಗಿಸಿದ ಮೇಲೆ ಮನಸ್ಸಿನಲ್ಲಿ ಯಾವ ಪಾತ್ರವೂ ಉಳಿಯದಿರುವುದು ವಿಷಾದಕರ.

* * *

ಜಲಪಾತ : ಕಾದಂಬರಿ ಎಸ್. ಎಲ್. ಭೈರಪ್ಪ, ಪ್ರ : ಸಾಹಿತ್ಯ ಭಂಡಾರ ಹುಬ್ಬಳ್ಳಿ ಪುಟ. ೨೪೮ ಬೆಲೆ : ರೂ. ೪–೦೦

ಲೇಖಕರು ಕೃತಕ ಸಾಧನಗಳಿಂದ ಸಂತಾನವನ್ನು ನಿಯಂತ್ರಿಸುವ ಕಾರ್ಯದಲ್ಲಿ ವ್ಯಕ್ತಿಗಳಲ್ಲಿ ಆಗುವ ಮನೋವಿಪ್ಲವ ಹಾಗೂ ಮುಂಬಯಿಯ ಯಾಂತ್ರಿಕಜೀವನದ ಸುತ್ತ ಈ ಕಾದಂಬರಿಯನ್ನು ಹೆಣೆದಿದ್ದಾರೆ.

ಇದರಲ್ಲಿ ಬರುವ ಶ್ರೀಪತಿ ಕಲಾವಿದ. ತಂದೆಯನ್ನು ಕಳೆದುಕೊಂಡು ಮಾವನ ಆಶ್ರಯದಲ್ಲಿ ತನ್ನ ಕಲೆಯನ್ನು ಅಭಿವೃದ್ಧಿಗೊಳಿಸುತ್ತಾನೆ. ಅನಂತರ ಮುಂಬಯಿಯನ್ನು ಸೇರುವನು. ಅವನ ಹೆಂಡತಿ ವಸುಂಧರೆ. ಮುಂಬಯಿ ಸೇರಿದ ಮೇಲೆ ಅವಳೂ ಸಂಗೀತವನ್ನು ಕಲಿತುಕೊಳ್ಳುತ್ತಾಳೆ. ಜೀವನದಲ್ಲಿ ಅದನ್ನು ಬದುಕಿಸಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ವ್ಯವಹಾರ ಕುಶಲಿಯಾದ ಮಾತ್ರನಿಗೆ ಶ್ರೀಪತಿಯ ಕಲೆ ಹಣಗಳಿಸುವ ಸಾಧನ, ಆದರೆ ಶ್ರೀಪತಿಗೆ ತನ್ನ ಕಲೆ ಅಂತರಂಗದ ಅಭೀಪ್ಸೆಯ ಅಭಿವ್ಯಕ್ತಿ. ಹೀಗಾಗಿ ಶ್ರೀಪತಿ ಮುಂಬಯಿಯ ಯಾಂತ್ರಿಕ ಜೀವನಕ್ಕೆ ಒಗ್ಗಿಕೊಳ್ಳಲಾರದೆ ತೊಳಲುತ್ತಾನೆ. ಅಲ್ಲಿನ ಯಾಂತ್ರಿಕ ಜೀವನ, ಹೃದಯ ರಾಹಿತ್ಯ ಬದುಕು, ಕಸಾಯಿಖಾನೆ ವರ್ಣನೆ ಮತ್ತು

ಮಾತ್ರಾನಿಯ ಆಡಂಬರದ ಮದುವೆ ಮಾರ್ಮಿಕವಾಗಿ ಬಂದಿದೆ. ಅವು ನಿರ್ದಯ ವ್ಯವಹಾರ-ನಿಷ್ಠ ಮುಂಬಯಿಯ ಉದ್ರಿಕ್ತ ವಾತವರಣವನ್ನು ಪ್ರತಿಬಿಂಬಿಸುತ್ತದೆ. ಅದೇ ಆಫೀಸಿನ ಟೈಪಿಸ್ಟ್ ರೆಬೆಲೋ ತಾನು ಮ್ಯಾನೇಜರ್ ಆಗಿ ಆರುನೂರು ರೂಪಾಯಿಯ ಸಂಬಳ ಪಡೆದು ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಆಸೆ ಉಳ್ಳವಳು. ಈ ಉದ್ದಿಶ್ಯ ಸಾಧನೆಗಾಗಿ ಅವಳು ತನ್ನ ರೂಪ ಯೌವನಗಳ ಮೋಡಿಯನ್ನು ಮಾತ್ರಾನಿಗೆ ಬೀಸುವಳು. ದೂರದಲ್ಲಿ ರೈಲ್ವೆ ಕೆಲಸದಲ್ಲಿರುವ ತನ್ನ ಗಂಡನನ್ನು ಪ್ರೀತಿಸುತ್ತಿದ್ದೇನೆ ಎಂಬ ಸುಳ್ಳು ಕಲ್ಪನೆಯಲ್ಲಿ ಅವಳು ಆತ್ಮವಂಚನೆ ಮಾಡಿಕೊಂಡು ಬೇರೆಯವರೊಡನೆ ಸ್ವಚ್ಛಂದ ಜೀವನವನ್ನು ನಡೆಸಿ ತನ್ನ ಲೈಂಗಿಕ ತೃಷ್ಣೆಯನ್ನು ತೀರಿಸಿಕೊಳ್ಳುತ್ತಾಳೆ. ಕಲಾವಿದ ಶ್ರೀಪತಿಯು ಅವಳಿಗೆ ಬಲಿಯಾಗುತ್ತಾನೆ. ಈ ಪ್ರಸಂಗದಲ್ಲಿ ಲೇಖಕರು ಅವನ ಸಂವೇದನೆಯನ್ನಾಗಲೀ ನಂಬಿದ ಪತ್ನಿಗೆ ದ್ರೋಹ ಬಗೆಯುತ್ತಿರುವೆನೆಂಬ ತಾಕಲಾಟವನ್ನಾಗಲೀ ಚಿತ್ರಿಸುವ ಗೊಡವೆಗೆ ಹೋಗದಿರುವುದು ಆಶ್ಚರ್ಯ. ನೆರೆಯವರಾದ ಹುಬ್ಬಳ್ಳಿಯ ಸುಧಾಬಾಯಿ ಮಕ್ಕಳಿಗಾಗಿ ಬಹುವಾಗಿ ಹಂಬಲಿಸಿ, ಗಂಡನ ವಿಚಿತ್ರ ಕಲ್ಪನೆಯಿಂದಾಗಿ ಮಾತೃತ್ವದ ಆನಂದದಿಂದ ವಂಚಿತಳಾಗಿ ಶ್ರೀಪತಿಯ ಮಗು ವಿಶ್ವನನ್ನೇ ಪ್ರೀತಿಯಿಂದ ಕಾಣುತ್ತಾಳೆ. ಅವಳ ಗಂಡ ನಾಡಗೌಡರು ಪಶುವೈದ್ಯ ಕಾಲೇಜಿನ ಅಧ್ಯಾಪಕ. ಅವನು ಭ್ರೂಣ ವಿಜ್ಞಾನದಲ್ಲಿ ಸಂಶೋಧನೆ ನಡೆಸುತ್ತಿದ್ದಾನೆ. ಕೃತಕ ಸಾಧನಗಳಿಂದ ಪಶುಗಳಿಗೆ ಗರ್ಭಧಾರಣ ಮಾಡಿಸಿ ಉತ್ತಮ ತಳಿಗಳನ್ನು ಪಡೆಯುವ ಆಸೆ ಅವನದು. ಮನುಷ್ಯರಲ್ಲಿಯೂ ಧೃಡಕಾಯ ಹೊಂದಿರುವವರ ಜೀವಾಣುಗಳಿಂದ ಸಂತಾನ ಪಡೆದರೆ ಪೌರುಷವಂತರೂ, ನಿರೋಗಿಗಳೂ ಆದ ಉತ್ತಮ ಸಂತಾನ ಪಡೆಯಬಹುದೆಂಬ ವಾದ ಅವನದು. ಇದನ್ನು ಜೀವನದಲ್ಲಿ ಸಾಧಿಸಹೊರಟು ಅವನು ತನ್ನ ಹೆಂಡತಿಯನ್ನು ನಿರ್ದಯದಿಂದ ನಡೆಸಿಕೊಳ್ಳುತ್ತಾನೆ. ತನ್ನ ಪತ್ನಿಗೆ ಪರಪುರುಷರ ವೀರ್ಯದಿಂದ ಮಕ್ಕಳನ್ನು ಪಡೆಯಲು ಸೂಚಿಸಿದಾಗ ಆಕೆ "ಗಂಡನೆ ಹಾಗಾದರೆ ಹೆಂಗಸಿನ ಧರ್ಮ ಕರ್ಮ ಹ್ಯಾಂಗ ಉಳೀಬೇಕು ?" ಎಂದು ಹೇಳಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಅವಳು ಸತ್ತನಂತರ ನಾಡಗೌಡನಿಗೆ ಜಗತ್ತು ಶೂನ್ಯವೆನಿಸುತ್ತದೆ. ತಾನು ಯಾರಿಗಾಗಿ ಬದುಕಬೇಕೆಂಬ ಪ್ರಶ್ನೆ ಮೂಡುತ್ತದೆ. ಕಸಾಯಿಖಾನೆಯಲ್ಲಿ ಕೆಲಸಕ್ಕೆಬಾರದ ಪಶುಗಳನ್ನು ನಿರ್ದಯಿಗಳಾಗಿ ಕೊಲ್ಲುವುದನ್ನು ನೋಡುತ್ತಿದ್ದ ಅವನಿಗೆ ನಿರುಪಯೋಗಿಯಾದ ತನಗೆ ಜಗತ್ತಿನಲ್ಲಿ ಸ್ಥಾನವಿಲ್ಲವೆಂದು ತಿಳಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಇತ್ತ ಕೃತಕ ಲೈಂಗಿಕ ಜೀವನದಿಂದ ಬೇಸತ್ತ ಶ್ರೀಪತಿ ನಿಸರ್ಗದ ಕರೆಗೆ ಓಗೊಟ್ಟು ಇನ್ನೊಂದು ಮಗುವಿನ ತಂದೆಯಾಗುತ್ತಾನೆ. ಆದರೆ ಹುಟ್ಟಿದ ಮಗುವಿಗೆ ಬೇಕಾದ ಜೀವನ ವೆಚ್ಚಗಳನ್ನು ಮುಂಬಯಿಯಲ್ಲಿ ಒದಗಿಸಲಾರದೆ ವರು ಪುನಃ ತಮ್ಮ ಹಳ್ಳಿ ಅಗ್ರಹಾರಕ್ಕೆ ಹಿಂದಿರುಗುವತ್ತಾರೆ. ಆದರೆ ಈ ಅವಧಿಯಲ್ಲಿ ಅಗ್ರಹಾರ ಕೆಟ್ಟು ಎರಡನೆ ಮುಂಬಯಿಯಾಗಿರುತ್ತದೆ. ಕಲಾವಿದ ಶ್ರೀಪತಿ ಶ್ರಮಜೀವಿಯಾಗಿ ಅಲ್ಲಿ ಬದುಕಲು ಕಷ್ಟವಾಗುತ್ತದೆ. ತನ್ನ ಎರಡನೆ ಮಗುವಿಗೆ ಖಾಯಿಲೆಯಾಗಿ ಸರಿಯಾದ ವೈದ್ಯಕೀಯ ನೆರವಿಲ್ಲದೆ ಅದು ಸತ್ತಾಗ ಅವನು ಮತ್ತೆ ತಾಯಿಯಾಗಲಿರುವ ವಸುವನ್ನು ಅವಳ ಅಕ್ಕನ ಮನೆಯಲ್ಲಿ ಬಿಟ್ಟು, ಮುಂಬೆಯಿಗೆ ಹೊರಡುತ್ತಾನೆ. ಅಲ್ಲಿನ ಯಾಂತ್ರಿಕ ಜೀವನಕ್ಕೆ ಮತ್ತೆ ಶರಣು ಬರುತ್ತಾನೆ. ಇದಿಷ್ಟು ಈ ಕಾದಂಬರಿಯ ಕಥೆ.

ಇಲ್ಲಿ ಲೇಖಕರು ಅನೇಕ ವಿಚಾರಗಳನ್ನು ಓದುಗರ ಮುಂದೆ ಇಟ್ಟಿದ್ದಾರೆ. ಅಡಿಗೆ ಮಾಡುವುದೂ ಒಂದು ಯಜ್ಞ ಹಾಗೇ ಮಾಡಿಸುವುದೂ ಒಂದು ಯಜ್ಞ ಎಂದು ತಿಳಿದು ಅನ್ನದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟ ಶ್ರೀಪತಿ ಅತ್ತೆ ಮಾವಂದಿರ ಚಿತ್ರ ಮನೋಜ್ಞವಾಗಿ ಬಂದಿದೆ. ನಾಡಗೌಡ, ರೆಬೆಲೋ, ಮಾತ್ರಾನಿ ಇವರುಗಳು ಹಳೆಯ ಸಂಪ್ರದಾಯವನ್ನು ತಿರಸ್ಕರಿಸಿ ಹೊಸದಕ್ಕೆ ಹೊಂದಿಕೊಂಡವರು. ಇದು ಸಾಧ್ಯವಾಗದೆ ತೊಳಲಾಡುವ ಶ್ರೀಪತಿಯ ಚಿತ್ರ, ನಾಡಗೌಡನ ಅಂಧಃಪತನ ಚೆನ್ನಾಗಿ ಚಿತ್ರಿತವಾಗಿದೆ. ಸುಧಾಬಾಯಿ ಹಾಗೂ ವಸು ನಮ್ಮ ಹಿಂದೂಧರ್ಮದ ಪ್ರತೀಕವೆಂಬಂತಿದ್ದಾರೆ.

ಆದರೆ ಕಾದಂಬರಿಕಾರರು ಜೋಗ ಹಾಗೂ ಖಂಡಾಲದಲ್ಲಿ ಮಾಡಿರುವ ಚಿತ್ರಕಲೆಯ ವ್ಯಾಖ್ಯಾನ, ವಸುವಿನ ಸಂಗೀತ ಕಲೆಯ ಏರಿಳಿತಗಳು ಇವುಗಳನ್ನು ಸೂಚ್ಯಗೊಳಿಸಿದ್ದರೆ ಚೆನ್ನಾಗಿರುತ್ತಿತ್ತು. ಶ್ರೀಪತಿ ರೆಬೆಲೊ ಜೊತೆಗೆ ಕಳೆದ ದಿನಗಳು, ಕಾಮಾಟಿಪುರದ ಚಿತ್ರಣ, ಅಲ್ಲಿ ನಾಶವಾಗುತ್ತಿರುವ ಪೌರುಷದ ಭೀಭತ್ಸ ವರ್ಣನೆ, ವಸುವಿನ ಪ್ರಸವ, ವೇದನೆ ಇವುಗಳು ಸಂಗ್ರಹವಾಗಿ ಬಂದಿದ್ದರೆ ಕಾದಂಬರಿಗೆ ಇನ್ನೂ ಕಳೆ ಕಟ್ಟುತ್ತಿತ್ತು, ಈಗ ಅನಾವಶ್ಯಕ ಚರ್ಚೆಯ ಮರುಳುಗಾಡಿನಲ್ಲಿ ಕಥೆಯ ಓಯಸಿಸ್ಸನ್ನು

ಹುಡುಕಿಕೊಂಡು ಅಲೆಯಬೇಕಾಗುತ್ತದೆ. ಒಟ್ಟಿನಲ್ಲಿ ಜಲಪಾತ ಒಂದು ಉತ್ತಮ ಕಾದಂಬರಿ.

ಆದರೆ ವಂಶವೃಕ್ಷದಂತಹ ಕಾದಂಬರಿಯನ್ನು ಕೊಟ್ಟ ಲೇಖಣಿಯಿಂದ ಇದು ಬಂದಿತೆಂದರೆ ನಿರಾಶೆಯಾಗದಿರದು.

ಮಂಜುಳಾ

ಹರಿಯದ ನದಿ: ಲೇ. ಶ್ರೀ 'ನರಸು'. ಪ್ರಕಾಶಕರು: ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರಂ, ಬೆಂಗಳೂರು-೪. ಪುಟಗಳು ೧೨೫. ಬೆಲೆ: ರೂ. ೧-೫೦.

'ನರಸು' ಅಂಕಿತದಲ್ಲಿ ಶ್ರೀ ನಾ. ಡಿಸೋಜ ರವರ ಚೊಚ್ಚಲ ಕಾದಂಬರಿ ಸದ್ಯದ ಕೃತಿ. ಈಗಾಗಲೇ ಸಣ್ಣ ಕಥಾ ಕ್ಷೇತ್ರದಲ್ಲಿ ಹೆಸರಾಂತ ಇವರು ಕಾದಂಬರೀ ರಚನೆಯಲ್ಲಿ ತಮ್ಮ ಸ್ಥಾನವನ್ನು ಪಡೆದಿದ್ದಾರೆ.

ಕಥೆ, ಕ್ರಿಶ್ಚಿಯನ್ ಸಮಾಜದ 'ಶೀಲ' ಎಂಬ ಕನ್ಯೆಯ ನಿಶ್ಚಿತಾರ್ಥಗಳು, ಮತ್ತು ಅವುಗಳ ವಿಫಲತೆ, ಈ ಕೇಂದ್ರದ ಸುತ್ತಲೂ ಹೆಣೆಯಲ್ಪಟ್ಟಿದೆ. ಮಾನವ ಸ್ವಭಾವ ಯಾವ ಸಮಾಜದಲ್ಲೂ ಒಂದೇ. ಈ ದೃಷ್ಟಿಯಿಂದ ಹಿಂದೂ, ಕ್ರಿಸ್ತ ಮುಸ್ಲಿಂ ಸಮಾಜಗಳ ಗುಣಾವಗುಣಗಳ ಏಕತೆ ಕಂಡು ಬರುತ್ತದೆ.

ಈ ಪುಸ್ತಕವನ್ನು ಇನ್ನೂ ಉತ್ತಮ ಕಾಗದದಲ್ಲಿ ತಪ್ಪಿಲ್ಲದಂತೆ ಮುದ್ರಿಸಲು ಸಾಕಷ್ಟು ಸೌಲಭ್ಯತೆಗಳಿತ್ತು. ಆದರೆ ಮಾನ್ಯ ಲೇಖಕರು ಈ ಕಡೆ ಅಷ್ಟು ಗಮನವಿತ್ತ ಹಾಗೆ ಕಾಣಿಸುತ್ತಿಲ್ಲ. ಒಟ್ಟಿನಲ್ಲಿ 'ಹರಿಯದ ನದಿ'ಯನ್ನು ಹರಿಸಿದ್ದಾರೆ. ಅವರ ಈ ಪ್ರಯತ್ನಕ್ಕೆ ನಮ್ಮ ಬೆಂಬಲವಿದೆ.

* * *

ಪ್ರಾಕ್ಟೀಸಿನ ಪರದಾಟ (ನಾಟಕ): ಲೇ. ಶ್ರೀ ರಘುಸುತ, ಪ್ರಕಾಶಕರು: ಹಂಸಧ್ವನಿ. ಪ್ರಕಾಶನ, ವಿಶ್ವೇಶ್ವರಪುರಂ. ಬೆಂಗಳೂರು-೪. ಪುಟಗಳು ೪೩. ಬೆಲೆ ರೂ. ೧-೦೦.

ಎಷ್ಟೋ ಸಲ ಪರದೆಯ ಮುಂದೆ ಆಡುತ್ತಿರುವ ನಾಟಕಗಳಿಗಿಂತಲೂ ಪರದೆಯ ಹಿಂದೆ ನಡೆಯುವ ನಾಟಕಗಳು ಬಹಳ ಸ್ವಾರಸ್ಯವಾಗಿರುತ್ತವೆ. ಕಲಾವಿಲಾಸೀ ನಟರನ್ನು ಸೇರಿಸಿ ನಾಟಕವಾಡಲು ಪ್ರಯತ್ನಿಸಿದ ಒಬ್ಬ ನಾಟಕ ಕಂಪೆನಿಯ ಯಜಮಾನನ ಪರದಾಟವೇ ಈ ನಾಟಕದ ವಸ್ತು. ಕೆಲ ಪಾತ್ರಗಳ ಚಿತ್ರಣ ಸ್ವಲ್ಪ ಅತಿ ಎನಿಸಿದರೂ ರಂಜಕವಾಗಿಯೂ ನೈಜವಾಗಿಯೂ ಮತ್ತು ಸುಂದರವಾಗಿಯೂ ರೂಪಗೊಂಡಿವೆ. ಹಲವಾರು ಸಲ ಪ್ರೇಕ್ಷಕರನ್ನು ನಗಿಸುವುದರಲ್ಲಿ ಲೇಖಕರು ಯಶಸ್ವಿಗಳಾಗಿದ್ದಾರೆ. ಈಚೀಚಿನ ಕೆಲವು ನಗೆಯೇ ತಾರದ ನಗೆ ನಾಟಕಗಳಿಗಿಂತಲೂ ಇದು ಬಹಳ ಉತ್ತಮವಾಗಿದೆ. ವಿಲಾಸೀ ತಂಡಗಳು ಹೆಚ್ಚು ಖರ್ಚಿಲ್ಲದೆ ಆಡಲು ಸಹ ಯೋಗ್ಯವಾಗಿದೆ.

ಲೇಖಕರು ತಮ್ಮ ಈ ಉದ್ಯಮವನ್ನು ಮುಂದುವರಿಸಿದಲ್ಲಿ ಭವಿಷ್ಯದಲ್ಲಿ ಇನ್ನೂ ಉತ್ತಮ ನಾಟಕಗಳನ್ನು ನೀಡಬಲ್ಲರು.

* * *

ಜೇನ ಹನಿಗಳು: ಸಂಪಾದಕರು ಶ್ರೀ ಕ. ರಾ. ಕೃ. ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫. ಪುಟಗಳು ೧೫೦. ಬೆಲೆ ರೂ. ೩-೫೦.

ಜನಪದ ಸಾಹಿತ್ಯ ನಮ್ಮ ನಾಡಿನ ಅಪೂರ್ವ ಸಂಪತ್ತು. ಈ ಸಂಪತ್ತಿನ ಸಂಗ್ರಹಣೆಯಲ್ಲಿ ಶ್ರೀ ಕ. ರಾ. ಕೃ. ಅವರ ಸ್ಥಾನ ತುಂಬಾ ಹಿರಿದು. ಎಲ್ಲೋ ಮೂಲೆಗುಂಪಾಗಿ ಕೇಳುವವರಿಲ್ಲದೆ ಹರಿದು ಹಂಚಿಹೋಗಿದ್ದ ಈ ಅಮೂಲ್ಯ ವಜ್ರದ ಖನಿಯನ್ನು ಶ್ರೀ ಕ. ರಾ. ಕೃ. ಅವರು ಶೋಧಿಸಿ, ಸಂಗ್ರಹಿಸಿ, ಪರಿಷ್ಕರಿಸಿ, ನಮ್ಮ ನಾಡಿನ ಸಾಹಿತ್ಯ ಭಂಡಾರವನ್ನು ತುಂಬಿದ್ದಾರೆ. ಅದಕ್ಕೆ ನಮ್ಮ ನಾಡು ಜನತೆ ಋಣಿಗಳು.

ಪ್ರಸ್ತುತ ಸಂಕಲನದಲ್ಲಿ ಶೃಂಗಾರ, ಭಕ್ತಿ, ಹಾಸ್ಯ, ಕರುಣಾರಸ ಪ್ರಧಾನವಾದ ಹಲವಾರು ಮುತ್ತುಗಳಿವೆ. ನಮ್ಮ ಜನ ಲೇಖಕರ ಈ ಪ್ರಯತ್ನಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಬೇಕು. ಸೊಗಸಾದ ಮುದ್ರಣ, ಆಕರ್ಷವಾದ ಅಟ್ಟೆ, ಒಳ್ಳೇ ಕಾಗದ ಇವುಗಳಿಂದ ಕೂಡಿದ ಈ ಗ್ರಂಥ ಕನ್ನಡ ಸಾರಸ್ವತ ಸಂಸಾರಕ್ಕೆ ಸುಂದರವಾದ ಕೊಡುಗೆ.

ಕೆ. ಎಸ್. ಸೂಲಿಬೆಲೆ

ಸುದ್ದಿ ಸಂಗ್ರಹ

ಜೀವನ ಪತ್ರಿಕೆಗೆ ಪುನಃಶ್ಚೇತನ

ಸುಮಾರು ಎರಡು ದಶಕಗಳ ಹಿಂದೆ ಧಾರವಾಡದ ಗೆಳೆಯರ ಬಳಗದ ಆಶ್ರಯದಲ್ಲಿ ಆರಂಭವಾಗಿ ಬೆಂಗಳೂರಿಗೆ ಬಂದು ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರ ಉದಾರ ಪೋಷಣೆಯಲ್ಲಿ ಚೆನ್ನಾಗಿ ಮೈ ತುಂಬಿಕೊಂಡು ಬೆಳೆದು, ನಾಡು ನುಡಿಗಳ ಸೇವೆಯಲ್ಲಿ ತನ್ನ ವೈಶಿಷ್ಟ್ಯತೆಯನ್ನು ಕಾಯ್ದುಕೊಂಡು ಬಂದಿದ್ದ "ಜೀವನ" ಪತ್ರಿಕೆಯು ಇತ್ತೀಚೆಗೆ ಕೆ. ಗೋಪಾಲಕೃಷ್ಣರಾಯರ ಸಂಪಾದಕತ್ವದಲ್ಲಿ ಪ್ರಗತಿಪಥದಲ್ಲಿ ಸಾಗಿತ್ತು. ಶ್ರೀಯುತರ ಅಕಾಲ ಮರಣದಿಂದಾಗಿ ಜೀವನ ಪತ್ರಿಕೆಗೆ ಭರಿಸಲಾಗದ ನಷ್ಟವುಂಟಾಯಿತು. ಈ ಪತ್ರಿಕೆಯ ಭವಿಷ್ಯದ ಬಗ್ಗೆ ಕನ್ನಡಿಗರು ಕಳವಳ ವ್ಯಕ್ತಪಡಿಸುತ್ತಿರುವ ಈ ಸಂದರ್ಭದಲ್ಲಿ ಒಂದು ಆಶಾಕಿರಣ ಕಾಣಿಸಿಕೊಂಡಿದೆ. ಹೊಸ ವರ್ಷದಿಂದ ಜೀವನ ಪತ್ರಿಕೆಯು ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದ ಆಶ್ರಯದಲ್ಲಿ ಕನ್ನಡದ ಕಟ್ಟಾಳು ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ನೇತೃತ್ವದಲ್ಲಿ ಮತ್ತೆ ಪ್ರಕಟವಾಗುವ ನಿರೀಕ್ಷೆ ಇದೆ. ಶ್ರೀಯುತರಾದ ಮಾಸ್ತಿ, ರಾಜರತ್ನಂ, ಮುಗಳಿ, ಗೋಕಾಕ ಇವರ ನೆರವಿನಿಂದ ಪತ್ರಿಕೆಯು ಪುನಃಶ್ಚೇತನ ಪಡೆದು ದೀರ್ಘಕಾಲ ನಾಡುನುಡಿಗಳ ಸೇವೆ ಮಾಡಲೆಂದು ಹಾರೈಸುತ್ತೇವೆ.

ಕನ್ನಡಿಗರಿಗೊಂದು "ಕನ್ನಡ ಪ್ರಭ"

ಸುಮಾರು ಮೂರು ಕೋಟಿ ಕನ್ನಡಿಗರು ಇರುವ ಈ ಕನ್ನಡನಾಡಿನಲ್ಲಿ ಒಂದು ಲಕ್ಷಕ್ಕೆ ಮುಟ್ಟಿರುವ ದಿನ ಇಲ್ಲವೇ ವಾರ ಪತ್ರಿಕೆಗಳು ಇಲ್ಲವೆಂದರೆ ಸೋಜಿಗದ ಸಂಗತಿಯೇ ಸರಿ. ಇರುವ ಹಲಕೆಲವು ದಿನ ಹಾಗೂ ವಾರ ಪತ್ರಿಕೆಗಳೂ ಐವತ್ತು ಸಾವಿರ ಗಡಿಯಲ್ಲಿ ಇರುವಂಥವು. ಹೀಗೆ ಕನ್ನಡನಾಡಿನಲ್ಲಿ ವೃತ್ತ ಪತ್ರಿಕೆಗಳ ಬೆಳವಣಿಗೆಗೆ ಮಹದವಕಾಶವಿರುವುದನ್ನು ಅರಿತು ಮುಂಬಯಿಯ ಇಂಡಿಯನ್ ಎಕ್ಸ್‌ಪ್ರೆಸ್ ಗುಂಪಿನ ಸಂಸ್ಥೆಯವರು ಕನ್ನಡದಲ್ಲಿ ಒಂದು ದಿನ ಪತ್ರಿಕೆಯನ್ನು ಆರಂಭ ಮಾಡಿದ್ದಾರೆ. ತೆಲುಗು, ತಮಿಳು, ಮಲೆಯಾಳಿ ಭಾಷೆಗಳಲ್ಲಿ ಜನತೆಗೆ ಸುದ್ದಿಯನ್ನು ಒದಗಿಸುವ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡುತ್ತ ಬಂದಿರುವ ಈ ಸಂಸ್ಥೆಯವರು ಈಗ "ಕನ್ನಡ ಪ್ರಭ" ಪತ್ರಿಕೆಯ ಮೂಲಕ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗಳಿಗೆ ಪ್ರತ್ಯಕ್ಷವಾಗಿ, ಕನ್ನಡ ಜನತೆಗೆ ಪರೋಕ್ಷವಾಗಿ ಸೇವೆ ಸಲ್ಲಿಸಲು ಮುಂದೆ ಬಂದಿರುವುದು ಶ್ಲಾಘನೀಯ ಸಂಗತಿ. ಶ್ರೀಗಳಾದ ಎಸ್. ಎಸ್. ಸೀತಾರಾಮಶಾಸ್ತ್ರಿ ಮತ್ತು ಕೆ. ಎಸ್. ರಾಮಕೃಷ್ಣಮೂರ್ತಿ ಅವರ ನುರಿತ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಈ ಪತ್ರಿಕೆ ದಿನ ದಿನಕ್ಕೂ ಬೆಳೆದು ಕನ್ನಡ ಲೇಖಕರಿಗೆ, ಕಲಾವಿದರಿಗೆ ಕಲ್ಪವೃಕ್ಷವಾಗಲಿ; ಕನ್ನಡಿಗರ ಜ್ಞಾನತೃಷೆಯನ್ನು ಹಿಂಗಿಸುವ ಕಾಮಧೇನುವಾಗಲಿ ಎಂದು ಹಾರೈಸುತ್ತೇವೆ.

ಕನ್ನಡನಾಡಿನ ಇತಿಹಾಸ

ಹರಿದು ಹಂಚಿಹೋಗಿದ್ದ ಕನ್ನಡನಾಡು ಒಂದಾಗಿ ಒಂದು ದಶಕವೇ ಕಳೆದಿದ್ದರೂ ಇದುವರೆಗೆ ನಾಡಿನ ಸಮಗ್ರ ಇತಿಹಾಸವನ್ನು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಚಿತ್ರಿಸುವ ಪ್ರಯತ್ನವನ್ನು ಬೃಹದ್ಪ್ರಮಾಣದಲ್ಲಿ ಯಾರೊಬ್ಬರೂ ಕೈಗೊಳ್ಳದಿರುವುದು ಪರಿಶೋಚನೀಯ. ಈಗ ಪ್ರಕಟವಾಗಿರುವ ಪರಿಷತ್ತಿನ ಕನ್ನಡನಾಡಿನ ಚರಿತ್ರೆ ಈ ದಿಶೆಯಲ್ಲಿ ಬಂದಿರುವ ಒಂದು ಗಮನಾರ್ಹವಾದ ಕೃತಿ. ಆದರೆ ಗಂಗ, ಕದಂಬ, ರಾಷ್ಟ್ರಕೂಟ, ಹೊಯ್ಸಳ, ಚಾಲುಕ್ಯ, ವಿಜಯನಗರ, ಮೈಸೂರು ಅರಸರು—ಮೊದಲಾದ ಹಿರಿಯ ರಾಜವಂಶಗಳ ಬಗೆಗೆ ಇಂಗ್ಲಿಷಿನಲ್ಲಿ ಕೆಲವು ಗ್ರಂಥಗಳು ಪ್ರಕಟವಾಗಿದ್ದರೂ ಆ ಬಗ್ಗೆ ಕನ್ನಡದಲ್ಲಿ ಸ್ವತಂತ್ರ ಗ್ರಂಥಗಳು ಇನ್ನೂ ಪ್ರಕಟವಾಗಬೇಕಾಗಿವೆ. ಇವರಲ್ಲದೆ ನೊಳಂಬ, ಬಾಣ, ರಟ್ಟ, ಅಲುಪ, ಸಂತಾಲ ಮೊದಲಾದ ನೂರಕ್ಕೂ ಹೆಚ್ಚಿನ ಸಣ್ಣಪುಟ್ಟ ಅರಸು ಮನೆತನಗಳೂ, ಸಣ್ಣಪುಟ್ಟ ಸ್ಥಾನಿಕರೂ, ಪಾಳೆಯಗಾರರೂ ಕನ್ನಡನಾಡಿನಲ್ಲಿ ಆಗಿಹೋಗಿದ್ದಾರೆ. ಅವರ ಇತಿಹಾಸವನ್ನು ಅರಿಯುವ ಪ್ರಯತ್ನ ಇನ್ನೂ ಕನ್ನಡನಾಡಿನ ವಿದ್ವಾಂಸರಿಂದ ಆಗಬೇಕಾಗಿದೆ. ಇಂತಹ ಪ್ರಯತ್ನಗಳು ಇತಿಹಾಸ ಸಂಸ್ಥೆಗಳಿಂದಲೂ, ವಿಶ್ವವಿದ್ಯಾನಿಲಯ, ಸರಕಾರದ ದ್ರವ್ಯ ಸಹಾಯ ಪಡೆದಿರುವ ಸಂಸ್ಥೆಗಳಿಂದಲೂ, ಅಕೆಡೆಮಿಗಳಿಂದಲೂ ಕಷ್ಟಸಾಧ್ಯವಾದ ಕೆಲಸ. ಹೀಗಿರುವಲ್ಲಿ ಮೈಸೂರಿನ ವಿಶ್ವವಿದ್ಯಾನಿಲಯದ ನಿವೃತ್ತ ಇತಿಹಾಸ ಹಾಗೂ ರಾಜ್ಯಶಾಸ್ತ್ರದ ಪ್ರೊಫೆಸರರೂ, ಹಲವಾರು ಗ್ರಂಥಗಳನ್ನು ಕನ್ನಡ ಇಂಗ್ಲಿಷ್ ಭಾಷೆಗಳನ್ನು ಬರೆದು ಕೀರ್ತಿವೆತ್ತ ಸಂಶೋಧ

ಕರೂ ಆದ ಡಾ. ಎಂ. ವಿ. ಕೃಷ್ಣರಾಯರು, ಶ್ರೀ ಕೇಶವ ಭಟ್ಟರ ಸಹಕಾರದಿಂದ ಈ ಸಾಹಸವನ್ನು ಕೈಗೊಂಡು ಒಂದು ಸಾವಿರ ಪುಟಕ್ಕೂ ಮೀರಿದ ಬೃಹತ್‌ಗ್ರಂಥವನ್ನು ಬರೆದಿದ್ದಾರೆ. ಸದ್ಯದಲ್ಲಿಯೇ ಬೆಂಗಳೂರಿನ ಸುಪ್ರಸಿದ್ಧ ಪ್ರಕಟಣಕಾರರಾದ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದವರಿಂದ ಈ ಕೃತಿ ಪ್ರಕಟವಾಗಲಿದೆ ಎಂದು ತಿಳಿದುಬಂದಿದೆ.

ಹೊಸ ತ್ರೈಮಾಸಿಕ "ಸಮನ್ವಯ"

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಸಾಕ್ಷಿ, ಲಹರಿ, ಸಂಕ್ರಮಣ, ಮನ್ವಂತರ—ಮೊದಲಾದ ನಿಯತ, ಅನಿಯತ ಕಾಲಿಕ ಪತ್ರಿಕೆಗಳು ಮಾಡುತ್ತ ಬಂದಿರುವ ಸೇವೆ ಹಿರಿದಾದುದು. ಈ ನಿಟ್ಟಿನಲ್ಲಿ ಬೆಂಗಳೂರಿನ ಕೆಲವು ಮಿತ್ರರು ಒಂದು ಸಾಹಸಕಾರ್ಯವನ್ನು ಕೈಗೊಂಡಿದ್ದಾರೆ. ಶ್ರೀ ವಿನಾಯಕ ಅವರ ನೇತೃತ್ವದಲ್ಲಿ ಏರ್ಪಟ್ಟಿರುವ ಸಾಹಿತ್ಯ ಸಮಿತಿಯು "ಸಮನ್ವಯ" ತ್ರೈಮಾಸಿಕದ ಪ್ರಥಮ ಸಂಚಿಕೆಯನ್ನು ಪ್ರಕಟಿಸಿದ್ದಾರೆ. ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಒಂದು ಸರಳ ಸಮಾರಂಭದಲ್ಲಿ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಈ ಸಂಚಿಕೆಯಲ್ಲಿ ಶ್ರೀಗಳಾದ ಗೋಕಾಕ, ರಾಜನಾಥ, ಶಿವರುದ್ರಪ್ಪ, ಮೊಕಾಶಿ, ರಂಜನಭಟ್ಟ, ಹೇಮಂತ, ವಿ. ಜಿ. ಭಟ್ಟ, ಎಕ್ಕುಂಡಿ, ನಿರಂಜನ ಅವರುಗಳು ಲೇಖನ ಹಾಗೂ ಕವನಗಳನ್ನು ಬರೆದಿದ್ದಾರೆ. ವಾರ್ಷಿಕ ಚಂದಾ: ನಾಲ್ಕು ಸಂಚಿಕೆಗಳಿಗೆ ರೂ. ೧೦-೦೦. ಬಿಡಿ ಸಂಚಿಕೆಯ ಬೆಲೆ: ರೂ. ೩-೦೦.

ಪ್ರತಿಗಳಿಗೆ:—
ಸಮನ್ವಯ ಪ್ರಕಾಶನ,
೯/೧, ಮೂರನೆ ಕ್ರಾಸ್,
ನೆಹರೂ ನಗರ,
ಬೆಂಗಳೂರು-೨೦

ರಾಜ್ಯದ ಹಿರಿಯ ಕಲಾವಿದರಿಗೆ ಸರ್ಕಾರದ ಸನ್ಮಾನ

ಸಾಹಿತ್ಯ ಮತ್ತು ಕಲೆಯ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಈ ಕೆಳಗೆ ಕಾಣಿಸಿದ ಕಲಾವಿದರನ್ನು ರಾಜ್ಯ ಸರ್ಕಾರವು ಸನ್ಮಾನಿಸಿದೆ.

೧. ಶ್ರೀ ವೀಣೆ ದೊರೆಸ್ವಾಮಿ ಐಯ್ಯಂಗಾರ್ (ಸಂಗೀತ)
೨. ಶ್ರೀ ಶಿವರಾಮ ಕಾರಂತ (ಸಾಹಿತ್ಯ)
೩. ಶ್ರೀ ಬಿಂದೂರಾವ್ (ಭಾರತ ವಾಚನ)
೪. ಶ್ರೀಮತಿ ಬಿ. ಜಯಮ್ಮ (ಅಭಿನಯ)
೫. ಶ್ರೀ ಶ್ರೀನಿವಾಸ ಕುಲಕರ್ಣಿ (ನೃತ್ಯ)
೬. ಶ್ರೀ ರುಮಾಲೆ ಚನ್ನಬಸವಯ್ಯ (ಚಿತ್ರಕಲೆ)

ರಾಜ್ಯದ ಕಲಾವಿದರಿಗೆ ಸಂಗೀತ ನಾಟಕ ಅಕೆಡೆಮಿಯ ಪ್ರಶಸ್ತಿಗಳು

೧೯೬೭ರ ರಾಜ್ಯ ಅಕೆಡೆಮಿ ಪ್ರಶಸ್ತಿಗಾಗಿ ಕೆಳಗೆ ಕಂಡ ಕಲಾವಿದರನ್ನು ರಾಜ್ಯದ ಸಂಗೀತ ನಾಟಕ ಅಕೆಡೆಮಿಯವರು ಆರಿಸಿದ್ದಾರೆ.

೧. ಶ್ರೀಮತಿ ಎನ್. ನಾಗರತ್ನಮ್ಮ (ಕರ್ನಾಟಕ ಸಂಗೀತ)
೨. ಶ್ರೀ ಡಿ. ಸೀನಪ್ಪ (ಹಿಂದೂಸ್ತಾನಿ ಸಂಗೀತ)
೩. ಶ್ರೀಮತಿ ಲಕ್ಷ್ಮೀಸಾನಿ, ಶ್ರೀ ಎಂ. ಜಿ. ಮರಿರಾವ್ (ನಾಟಕ)
೪. ಶ್ರೀಮತಿ ಮಲ್ಲಪ್ಪ ದೇವದಾಸಿ (ನಾಟಕ-ವಿಶೇಷ ಪ್ರಶಸ್ತಿ)
೫. ಶ್ರೀಮತಿ ಮಾಯಾರಾವ್ (ನೃತ್ಯ)
೬. ಶ್ರೀ ಕುರಿಯಾ ವಿಠಲಶಾಸ್ತ್ರಿ (ಯಕ್ಷಗಾನ)
೭. ಶ್ರೀ ಕಂಸಾಲೆ ಮಹದೇವಯ್ಯ (ಜಾನಪದ ನೃತ್ಯ)
೮. ಶ್ರೀಮತಿ ಪಂಢರಿಬಾಯಿ ಮತ್ತು ಶ್ರೀ ಸುಂದರ ರಾವ್ ನಾಡಕರ್ಣಿ (ಚಲನಚ್ಚಿತ್ರ)

ಮೈಸೂರಿನಲ್ಲಿ ಕವಿಗೋಷ್ಠಿ

ವಯಸ್ಕರ ಶಿಕ್ಷಣ ಸಮಿತಿ ತನ್ನ ಬೆಳ್ಳಿಯ ಹಬ್ಬವನ್ನು ಆಚರಿಸಿದ ಸಂದರ್ಭದಲ್ಲಿ ಹಿರಿಯ ಕವಿ ಪು. ತಿ. ನರಸಿಂಹಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ಭಾರತದ ವಿವಿಧ ಭಾಷೆಗಳ ೧೧ ಕವಿಗಳ ಗೋಷ್ಠಿ ಏರ್ಪಡಿಸಲಾಗಿತ್ತು.

ಸರ್ವಶ್ರೀ ಡಾ|| ಜಿ. ವರದರಾಜರಾವ್, ಯು. ಆರ್. ಅನಂತಮೂರ್ತಿ, ಎಸ್. ನಾರಾಯಣಶೆಟ್ಟಿ, ಸಿ. ಪಿ. ಕೃಷ್ಣಕುಮಾರ್, ಪರಮೇಶ್ವರಭಟ್ಟ, ಸಿ. ಜಿ. ಪುರುಷೋತ್ತಮ (ಸಂಸ್ಕೃತ) ಬಿ. ರಾಮಯ್ಯ (ತೆಲಗು), ರಫತ್ (ಉರ್ದು) ಎ. ಆರ್. ದೇಶಪಾಂಡೆ (ಮರಾಠಿ) ಇವರುಗಳು ಭಾಗವಹಿಸಿದ್ದರು.

ಅಧ್ಯಕ್ಷತೆ ವಹಿಸಿದ್ದ ಪು. ತಿ. ನ. ಅವರು ಮಾತನಾಡಿ ವಿಶಾಲವಾದ ಜನಸಮೂಹವನ್ನು ನೆನಪಿನಲ್ಲಿಟ್ಟುಕೊಂಡು ನಮ್ಮ ಜೀವನವನ್ನು ಬೆಳೆಸುವ ರೀತಿಯಲ್ಲಿ ನಮ್ಮ ಶಿಕ್ಷಣ

[೩೫ನೆಯ ಪುಟ ನೋಡಿ]

ಹಾಗೂ ವಿಶಿಷ್ಟ ವ್ಯವಹಾರಗಳು ಕನ್ನಡದಲ್ಲಿ ನಡೆಯಬೇಕೆಂದೂ, ಕನ್ನಡದ ನೆಗಡಿ ಆದವರಿಗೆ ಇಂಗ್ಲಿಷ್ ಕ್ಯಾನ್ಸರ್ ಬರುವುದಿಲ್ಲವೆಂದೂ ಅಭಿಪ್ರಾಯಪಟ್ಟರು.

ನೊಬೆಲ್ ಸಾಹಿತ್ಯ ಪಾರಿತೋಷಕ

ಲ್ಯಾಟಿನ್ ಅಮೇರಿಕದ ಇಂಡಿಯನ್ನರ ಸಂಪ್ರದಾಯಗಳ ಮೇಲಿನ ಬರವಣಿಗೆಗಾಗಿ ೬೭ ವರ್ಷ ವಯಸ್ಸಿನ ಗ್ವಾಟಮಾಲದ ಮಿಗುಯೆಲ್ ಅಂಜೆಲ್ ಅಸ್ಟೂರಿಯಸ್ ಸಾಹಿತಿಗೆ ೧೯೬೭ನೇ ಸಾಲಿನ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ನೀಡಲಾಗಿದೆ.

ವಿನಾಯಕ ಕೃಷ್ಣ ಗೋಕಾಕರಿಗೆ ಪ್ರಶಸ್ತಿ

ಕನ್ನಡ ನಾಡಿನ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಕರ್ನಾಟಕ ವಿಶ್ವವಿದ್ಯಾನಿಲಯವು ಕಳೆದ ತಿಂಗಳು ಮೂವರು ಗಣ್ಯ ವ್ಯಕ್ತಿಗಳಿಗೆ ಗೌರವ ಪ್ರಶಸ್ತಿಗಳನ್ನು ನೀಡುವುದರ ಮೂಲಕ ತನ್ನನ್ನು ತಾನೇ ಗೌರವಿಸಿಕೊಂಡಿತು. ಇವರಲ್ಲಿ ಕೈಗಾರಿಕಾ ಲೈಸೆನ್ಸಿಂಗ್ ಕಾರ್ಪೊರೇಷನ್ನಿನ ಅಧ್ಯಕ್ಷರಾದ ಪದ್ಮಭೂಷಣ ಎಂ. ಎಸ್. ಥ್ಯಾಕರ್, ಹೆಚ್. ಎಂ. ಟಿ. ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಪದ್ಮಶ್ರೀ ಎಂ. ಎಸ್. ಪಾಟೀಲ್ ಇದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ, ಕವಿಗಳೂ, ವಿಮರ್ಶಕರೂ ಆದ ಪದ್ಮಶ್ರೀ ವಿನಾಯಕ ಕೃಷ್ಣ ಗೋಕಾಕ ಅವರಿಗೆ ಡಾಕ್ಟರೇಟ್ ಆಫ್ ಲೆಟರ್ಸ್ ಗೌರವ ಪದವಿಯನ್ನು ನೀಡಿ, ಕನ್ನಡದ ಸುಪುತ್ರರನ್ನು ಗೌರವಿಸಿತು. ಕುಲಪತಿ ಹಾಗೂ ರಾಜ್ಯದ ರಾಜ್ಯಪಾಲರಾದ ಶ್ರೀ ಜಿ. ಎಸ್. ಪಾಠಕರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕೇಶವದಾಸರಿಂದ ಪರದೇಶದಲ್ಲಿ ಕನ್ನಡದ ಸೇವೆ

ಕನ್ನಡ ಸಾಹಿತ್ಯಕ್ಕೆ ಹರಿದಾಸರು ಕೊಟ್ಟ ಕಾಣಿಕೆ ವಿಶಿಷ್ಟವಾದುದು. ಭಕ್ತಿ ಪಂಥವನ್ನು ಭಾರತದಲ್ಲೆಲ್ಲಾ ಹರಡಿದ ಕೀರ್ತಿ ಅವರದು. ಶ್ರೀಪಾದರಾಜ, ವ್ಯಾಸ, ಪುರಂದರ, ಕನಕ, ಜಗನ್ನಾಥ, ಮಹೀಪತಿ, ಪ್ರಸನ್ನ ವೆಂಕಟದಾಸರೇ ಮೊದಲಾದ ಹರಿದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದ ಕಣಜವನ್ನು ಸಂಮೃದ್ಧಗೊಳಿಸಿವೆ. ಇತ್ತೀಚೆಗೆ ಈ ಪರಂಪರೆಯಲ್ಲಿ ಬೇಲೂರು ಕೇಶವದಾಸರು ಅಮೋಘವಾದ ಸೇವೆಯನ್ನು ಮಾಡಿದ್ದಾರೆ. ವೇಣುಗೋಪಾಲದಾಸರು, ಭದ್ರಗಿರಿ ಕೇಶವದಾಸರಂಥವರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದು ದೇಶ ಕಾಲ ಧರ್ಮಕ್ಕೆ ಅನುಗುಣವಾಗಿ ಹರಿದಾಸ ವಾಙ್ಮಯವನ್ನೂ, ಕೀರ್ತನ ಕಲೆಯನ್ನೂ ಅಳವಡಿಸಿಕೊಂಡು ಅದನ್ನು ಜನಪ್ರಿಯಗೊಳಿಸುತ್ತಿದ್ದಾರೆ. ಕೀರ್ತನ ಕಲೆಯಲ್ಲಿ ನಿಷ್ಣಾತರಾಗಿರುವ ಭದ್ರಗಿರಿ ಕೇಶವದಾಸರು ಬೆಂಗಳೂರಿನ ರಾಜಾಜಿನಗರದಲ್ಲಿ ದಾಸಾಶ್ರಮವನ್ನು ಕಟ್ಟಿರುವುದಲ್ಲದೆ, ಪುರಂದರೋಪನಿಷತ್ತನ್ನೂ ದಾಸವಾಣಿಯನ್ನೂ ಪ್ರಕಟಿಸುತ್ತ ಬಂದಿದ್ದಾರೆ; ಕನ್ನಡದಲ್ಲಿ ಬರೆದು ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಇತ್ತೀಚೆಗೆ ಇಂಗ್ಲೆಂಡು, ಅಮೇರಿಕಾ, ಯೂರೋಪಿನ ಹಲವು ದೇಶಗಳಿಗೆ ಭೆಟ್ಟಿಕೊಟ್ಟು ಕೀರ್ತನ ಕಲೆಯನ್ನು ಪ್ರಚಾರ ಮಾಡಿ ಬಂದರು. ಇಂಗ್ಲೆಂಡಿನಲ್ಲಿ ಪಾಂಡುರಂಗ ರುಕುಮಾಯಿ ಮಂದಿರವೊಂದನ್ನು ನಿರ್ಮಿಸಲು ನೆರವಾದರು. ರೋಂನ ವಾಟಿಕನ್ ಅರಮನೆಗೆ ಭೆಟ್ಟಿಕೊಟ್ಟು ತ್ರಿಮತಾಚಾರ್ಯರ ಬಗೆಗೆ ಸನಾತನ ಹಿಂದೂ ಧರ್ಮದ ಬಗೆಗೆ ಪೋಪರಿಗೆ ಮಾಹಿತಿ ತಿಳಿಸಿ ಕನ್ನಡ ಸಂಸ್ಕೃತಿಯನ್ನು ಪರಿಚಯ ಮಾಡಿಕೊಟ್ಟರು. ಇತ್ತೀಚೆಗೆ ವಿದೇಶದ ಪ್ರವಾಸದಿಂದ ಹಿಂದಿರುಗಿದ ಶ್ರೀಯುತರನ್ನು ನಗರದ ಗಣ್ಯರು ಸ್ವಾಗತಿಸಿ ಗೌರವಿಸಿದರು.

ರಾಜ್ಯದ ಅಂತರ ಕಾಲೇಜ್ ಕನ್ನಡ ನಾಟಕ ಸ್ಪರ್ಧೆ

ಮೈಸೂರು ರಾಜ್ಯ ಸಂಗೀತ ನಾಟಕ ಅಕೆಡೆಮಿಯ ಸಹಕಾರದಿಂದ ರಾಜ್ಯದ ನಾಟಕ ಸಂಘ ಥಿಯೇಟರ್ ಕೇಂದ್ರವು ಡಿಸೆಂಬರ್ ೧೧ರಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯ ವಿಶ್ವವಿದ್ಯಾನಿಲಯಗಳ ಅಂತರ ಕಾಲೇಜು ಕನ್ನಡ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದೆ.

ವಿಜಯಿಗಳಿಗೆ ಉಲ್ಲಾಳ ಮತ್ತು ಬಿ. ಎನ್. ವಿಜಯ ಮತ್ತು ಕಂಪೆನಿಯ ಪರ್ಯಾಯ ಪಾರಿತೋಷಕ ನೀಡಲಾಗುವುದು.

ವಿವರಗಳಿಗೆ :—

ಪ್ರಧಾನ ಕಾರ್ಯದರ್ಶಿ

ನಾಟ್ಯಸಂಘ

ನಂ. ೨೨, ಶೇಷಾದ್ರಿ ರಸ್ತೆ

ಬೆಂಗಳೂರು ೧೯

ಮಹಿಳಾ ಲೇಖಕಿಯರ ಅಪ್ರಕಟಿತ ಕಥೆಗಳು

ನಗರದ ರೇಖಾ ಪ್ರಕಾಶನದ ಆಶ್ರಯದಲ್ಲಿ ನಾಡಿನ ಸುಮಾರು ನೂರು ಮಹಿಳಾ ಲೇಖಕಿಯರ ಅಪ್ರಕಟಿತ ಸಣ್ಣ ಕಥೆಗಳ "ಕಾಮಧೇನು" ಎಂಬ ಸಂಕಲನವೊಂದು ಸರ್ವಶ್ರೀ ಸೂರ್ಯನಾರಾಯಣ ಚಡಗ, ನಾರಾಯಣ ಬಲ್ಲಾಳ ಮತ್ತು ರಮಾತನಯ ಇವರ ಸಂಪಾದಕತ್ವದಲ್ಲಿ ಸದ್ಯದಲ್ಲೇ ಪ್ರಕಟವಾಗಲಿದೆ.

ಅಭಿನಯತರಂಗ

ಹೊಸ ಯೋಜನೆ ಸಾಧನಗಳಿಗೆ ಮೊದಲಿನಿಂದಲೂ ಹೆಸರಾಂತ "ಚಿತ್ರ ಕಲಾವಿದ"ರು ಈಗ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿ, ಅಭಿನಯ ರಂಗದಲ್ಲಿ ಒಂದು ದಿಟ್ಟ ತನದ ಹೆಜ್ಜೆ ಇಟ್ಟಿದ್ದಾರೆ. ಉದಿತೋದಿತ ನಟರಿಗೆ, ಕಲಾವಿದರಿಗೆ ಅಭಿನಯ ಕಲೆಯಲ್ಲಿ ತರಪೇತು ನೀಡಿ, ಅವರಲ್ಲಿ ಹುದುಗಿರಬಹುದಾದ ನಟನಾ ಸಾಮರ್ಥ್ಯವನ್ನು ಬೆಳಕಿಗೆ ತಂದು, ಅಭಿನಯ ಕಲೆಯಲ್ಲಿ ಯೋಗ್ಯ ಮಾರ್ಗ ದರ್ಶನ ನೀಡಲು, ಬೆಂಗಳೂರಿನ ಕಲಾಮಂದಿಂದ ಅಭಿನಯ ಶಿಕ್ಷಣ ಕೇಂದ್ರವನ್ನು ಆರಂಭಿಸಿದ್ದಾರೆ. ಈ ಶಾಲೆಯ ಉದ್ಘಾಟನೆಯನ್ನು ಇತ್ತೀಚೆಗೆ ಪರಿಷತ್ತಿನ ಜಿ. ವೆಂಕಟಸುಬ್ಬಯ್ಯ ಅವರ ಅಧ್ಯಕ್ಷತೆಯಲ್ಲಿ ಡಾ. ಎ. ಎಂ. ನಟೇಶ್ (ಯುನೆಸ್ಕೊ ಪ್ರಸಾರ ಸಲಹಾಧಿಕಾರಿ, ಜಾಂಬಿಯಾ) ಅವರ ಮಾರ್ಗದರ್ಶನದಲ್ಲಿ ಆರಂಭವಾಯಿತು. ರಾಜ್ಯದ ವಿದ್ಯಾ ಇಲಾಖೆಯ ಜಾಯಿಂಟ್ ಡೈರೆಕ್ಟರ್ ಆದ ಎಸ್. ಆರ್. ರೋಹಿಡೇಕರ್ ಅವರು ಉದ್ಘಾಟಿಸಿದರು.

ಕನ್ನಡ ಪುಸ್ತಕ ಪ್ರದರ್ಶನ ಕೇಂದ್ರ

ಮೈಸೂರು ರಾಜ್ಯದ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘದ ಸಹಕಾರದಿಂದ ಮದರಾಸಿನ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ಕನ್ನಡ ಪುಸ್ತಕ ಪ್ರದರ್ಶನ ಕೇಂದ್ರವನ್ನು ಬೆಂಗಳೂರಿನ ಗಾಂಧೀನಗರದಲ್ಲಿ ಸ್ಥಾಪಿಸಿದ್ದಾರೆ. ಕನ್ನಡದಲ್ಲಿ ಹೊಸದಾಗಿ ಪ್ರಕಟವಾಗುವ ಪುಸ್ತಕಗಳನ್ನು ಒಂದೆಡೆ ಪ್ರದರ್ಶಿಸಿ, ಪುಸ್ತಕ ವ್ಯಾಪಾರಿಗಳಿಗೂ, ಕೊಳ್ಳುವವರಿಗೂ ನೂತನ ಪುಸ್ತಕಗಳನ್ನು ಕಣ್ಣಾರ ನೋಡುವ ಅವಕಾಶ ಕಲ್ಪಿಸಿಕೊಡುವುದು. ಈ ಪ್ರದರ್ಶನದ ಒಂದು ಪ್ರಮುಖ ಉದ್ದೇಶ. ಇದುವರೆಗೆ ಒಂದು ಸಾವಿರಕ್ಕೂ ಮೀರಿದ ಪುಸ್ತಕಗಳ ಸಂಗ್ರಹವಾಗಿವೆ. ಕನ್ನಡನಾಡಿನ ಬಹುತೇಕ ಪ್ರಕಾಶಕರು ತಮ್ಮ ಪ್ರಕಟನೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಇದುವರೆಗೆ ಬಂದಿರುವ ಪುಸ್ತಕಗಳ ಪಟ್ಟಿಯನ್ನು ೧೯೬೭ನೆ ಡಿಸೆಂಬರ್ ತಿಂಗಳೊಳಗಾಗಿ ಮುದ್ರಿಸಿ, ರಾಜ್ಯದ ಎಲ್ಲ ಪುಸ್ತಕ ವ್ಯಾಪಾರಿಗಳಿಗೂ, ಗ್ರಂಥ ಭಂಡಾರಗಳಿಗೂ, ಸೆಕೆಂಡರಿ ಶಾಲೆಗಳಿಗೂ ಕಳುಹಿಸಿ ಕೊಡಲಾಗುವುದೆಂದು ತಿಳಿದು ಬಂದಿದೆ.

ನಗರದಲ್ಲಿ ಇನ್ನೊಂದು ಸಂಸ್ಕೃತ ಕಾಲೇಜು

ಬೆಂಗಳೂರಿನಲ್ಲಿ ಮಾತ್ರವಲ್ಲ, ರಾಜ್ಯದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕದಿರುವುದು ಶೋಚನೀಯ ಸಂಗತಿಯಾಗಿತ್ತು. ಈಗ ಕೆಲಸ ಮಾಡುತ್ತಿರುವ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ತನ್ನ ಅಸ್ತಿತ್ವದ ನೂರು ವರ್ಷಗಳನ್ನು ಕಂಡಿದ್ದರೂ, ಇದುವರೆಗೂ, ಆ ಸಂಸ್ಥೆಯ ಶತಮಾನೋತ್ಸವದ ಪ್ರಸ್ತಾಪವಾಗಲೀ, ಅಲ್ಲಿ ದುಡಿದು ದಣಿದ ಸಂಸ್ಕೃತ ಪಂಡಿತರ ಉಪಕಾರ ಸ್ಮರಣೆಯಾಗಲೀ, ಈಗಿನ ಅಧ್ಯಾಪಕ ವರ್ಗದವರ ಸಂಬಳಸಾರಿಗೆಯನ್ನು ಉತ್ತಮಪಡಿಸುವ ಬಗ್ಗೆ ಸರಕಾರ ಹಾಗೂ ಸಾರ್ವಜನಿಕರ ಆಸಕ್ತಿಯಾಗಲೀ ಇಲ್ಲದಿರುವ ಈ ಸಮಯದಲ್ಲಿ, ಸಂಸ್ಕೃತ ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ಕುರಿತು ಡಾ. ಕೆ.ಎಂ. ಮುನಷಿ ಅವರು ಮಾಡಿದ ಭಾಷಣದಿಂದ ಪ್ರೇರಣೆಗೊಂಡು, ಭಾರತೀಯ ಸಂಸ್ಕೃತ ವಿದ್ಯಾಪೀಠವು ನಗರದಲ್ಲಿ ಒಂದು ನೂತನ ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಮುಂದೆಬಂದಿರುವುದು ಸಂತೋಷದ ಸಂಗತಿಯಾಗಿದೆ. ಈ ವರ್ಷವಿಂದ ಆರಂಭವಾಗಲಿರುವ ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಅಲಂಕಾರ, ವಿದ್ವತ್, ಮಾಧ್ಯಮ, ಪರೀಕ್ಷೆಗಳಿಗೆ ಸೇರಿಸಿಕೊಳ್ಳಲಾಗುವುದು. ಉದ್ಯೋಗಿಗಳಿಗೆ ನೆರವಾಗಲು ಪ್ರಾತಃಕಾಲ ಹಾಗೂ ಸಂಜೆಯ ತರಗತಿಗಳನ್ನು ನಡೆಸಲಾಗುವುದು.

ವಿವರಗಳಿಗೆ :—
ಓರಿಯಂಟಲ್ ಹೈಸ್ಕೂಲ್
೧೭ನೇ ಬ್ಲಾಕ್
ಕುಮಾರಾಪಾರ್ಕ್ ಪಶ್ಚಿಮ
ಬೆಂಗಳೂರು-೨೦

ಸಂಪಾದಕೀಯ

ಮಹಾರಾಷ್ಟ್ರದ ಮೊಂಡುತನ

ಮಹಾಜನದ ವರದಿಯ ಬಗ್ಗೆ ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ವಿಚಿತ್ರ ವ್ಯವಹಾರಗಳು, ಪತ್ರಿಕಾ ಪ್ರಕಟನೆಗಳು, ಸಾರ್ವಜನಿಕ ಭಾಷಣಗಳು-ಇವುಗಳು ಮತ್ತೊಮ್ಮೆ ಬಾಲಿಶ ಪ್ರವೃತ್ತಿಯು ಎಲ್ಲಿಯವರೆಗೆ ಹೋಗಬಹುದು ಎಂಬುದನ್ನು ದೃಷ್ಟಾಂತಪಡಿಸುತ್ತಿವೆ. ಮಹಾರಾಷ್ಟ್ರದ ದೃಷ್ಟಿಯೇ ಸರಿಯೆಂದು ತನ್ನ ಮೂಗಿನ ನೇರಕ್ಕೆ ಮಾತ್ರ ನೋಡುವ ಪ್ರವೃತ್ತಿ ರಾಷ್ಟ್ರದ ಹಿತಕ್ಕೆ ಅಪಾಯಕಾರಿ. ಮೈಸೂರಿನವರು ಕಳೆದುಕೊಂಡಿರುವಷ್ಟನ್ನೂ ಮಹಾರಾಷ್ಟ್ರ ಕಳೆದುಕೊಂಡಿಲ್ಲ. ಹೀಗಿದ್ದೂ ಸಜ್ಜನಿಕೆಗೆ ತಗ್ಗಿ ನಡೆಯುವ ಮೈಸೂರಿನವರ ಒಳ್ಳೆಯತನವನ್ನು ದೌರ್ಬಲ್ಯವೆಂದು ತಪ್ಪಾಗಿ ಭಾವಿಸುವ ಅದೂರದೃಷ್ಟಿಯನ್ನು ಮಹಾರಾಷ್ಟ್ರದ ಮುಖಂಡರು ಇನ್ನಾದರೂ ತ್ಯಜಿಸಲಿ. ಇಲ್ಲದಿದ್ದರೆ ಮುಂದೆ ಅವರಿಗೆ ಇದರಿಂದ ಅಪಾಯವುಂಟಾಗುತ್ತದೆ. ಮೈಸೂರು ತನ್ನಲ್ಲಿರುವ ಯಾವ ಭಾಗಗಳನ್ನೂ ಬಿಡುವುದಿಲ್ಲವೆಂಬ ಹಟಪ್ರದರ್ಶನಕ್ಕೆ ತೊಡಗಬೇಕಾದೀತು.

ಮಕ್ಕಳಕೂಟದ ರಜತಮಹೋತ್ಸವ ಮತ್ತು ಮಕ್ಕಳ ಸಮ್ಮೇಳನ

ದಿ|| ಕಲ್ಯಾಣಮ್ಮನವರ ಹೆಸರು ಮಕ್ಕಳ ಕೂಟದ ಹೆಸರಿನೊಡನೆ ಬೆರತುಕೊಂಡಿರುವುದು, ಆಕೆಯ ನಿಸ್ವಾರ್ಥ ಪರಹಿತೈಕ ಶರಣವಾದ ಬಾಳಿಗೆ ಒಂದು ಉಚಿತ ಸ್ಮಾರಕವಾಗಿದೆ. ಆಕೆಯ ಅಂತರಂಗದ ಕರುಣೆಯ ಫಲವಾಗಿ ಇಂದು ಮಕ್ಕಳ ಕೂಟ ತನ್ನ ಇಪ್ಪತ್ತೈದನೆಯ ವರ್ಷದ ಹಬ್ಬವನ್ನು ಆಚರಿಸುವ ಆನಂದವನ್ನು ಅನುಭವಿಸಿತು. ಬೆಂಗಳೂರಿನ ನಾಗರಿಕರಿಗೆಲ್ಲ ಈ ಉತ್ಸವದಿಂದ ತುಂಬ ಸಂತೋಷವಾಯಿತು.

ಈ ಸಂದರ್ಭದಲ್ಲಿಯೇ ೧೯ನೆಯ ಮಕ್ಕಳ ಸಮ್ಮೇಳನವೂ ವೈಭವದಲ್ಲಿ ನಡೆಯಿತು. ಕುಮಾರಿ ಜಯಶ್ರೀ ಅಧ್ಯಕ್ಷತೆಯನ್ನು ವಹಿಸಿ ತುಂಬ ಮುದ್ದಾಗಿ ಜನರೆಲ್ಲರ ಮನಸ್ಸನ್ನೂ ಮೆಚ್ಚಿಸುವಂತೆ ಮಾತನಾಡಿದಳು. ದೇಶದ ನಾನಾ ಕಡೆಗಳಿಂದ ಮಕ್ಕಳು ಬಂದು ಕುಣಿದು ಕುಪ್ಪಳಿಸಿದ್ದು ನೋಡುವವರಿಗೆಲ್ಲ ನಾಡಿನ ಭವಿಷ್ಯದ ಚಿತ್ರವನ್ನು ತಂದಿತು. ಕೆನರಾ ಬ್ಯಾಂಕಿನ ಅಧಿಕಾರ ವರ್ಗದವರು ಈ ಎರಡು ಉತ್ಸವಗಳಲ್ಲೂ ಆಧಾರವಾಗಿ ನಿಂತು ನೆರವಾಗಿ ಇತರ ಬ್ಯಾಂಕುಗಳಿಗೆಲ್ಲ, ಅತ್ಯುತ್ತಮವಾದ ಮಾರ್ಗದರ್ಶನ ಮಾಡಿದರು.

ಶ್ರೀಮತಿ ಬನಶಂಕರಮ್ಮನವರೂ ಅವರ ಸಹಾಯಕರೂ ಶ್ರಮಿಸಿ ಈ ಎರಡು ನಾಡ ಹಬ್ಬಗಳನ್ನು ನೆರವೇರಿಸಿ ನಾಡಿನ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಮಕ್ಕಳಕೂಟವು ಬೆಳೆದು ನಾಡಿಗೆ ಹಿರಿಯ ಸಂಸ್ಥೆಯಾಗಿ ಬಾಳಲಿ ಎಂದು 'ನುಡಿ'ಯ ಆಸೆ.

ಡಾ. ಗೋಕಾಕ್, ವಿ.ಕೃ.

ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳೂ ಪ್ರಸಿದ್ಧ ವಿದ್ವಾಂಸರೂ, ಕನ್ನಡದ ಹಿರಿಯ ಲೇಖಕರೂ ಆದ ವಿನಾಯಕ ಕೃಷ್ಣ ಗೋಕಾಕರಿಗೆ ಕರ್ನಾಟಕ ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಿದೆ. ಇವರಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಸಂತೋಷವಾಗಿದೆ. ಈ ಹಿರಿಯ ಲೇಖಕರ ಸೇವೆ ಬಹುಮುಖವಾದುದು. ಅವರ ಕಾರ್ಯಕ್ಷೇತ್ರ ವಿಸ್ತಾರವಾದುದು. ನಾಡು ಇವರಿಂದ ಅನೇಕ ಬಗೆಯ ಲಾಭವನ್ನು ಪಡೆದಿದೆ. ಅಂಥವರಿಗೆ ಈ ಗೌರವ ಸಂದಿರುವುದು ಸಹಜವೇ ಆಗಿದೆ. ಶ್ರೀ ಗೋಕಾಕರ ಸಾರಸ್ವತ ಸೇವೆ ಮುಂದುವರಿಯಲೆಂದೂ, ಅವರಿಗೆ ಇಂಥ ಹಲವಾರು ಸನ್ಮಾನಗಳು ಬಂದು ನಾಡು ಸಂತೋಷಪಡಲೆಂದೂ ದೇವರು ಅವರನ್ನು ಬಹುಕಾಲ ಸುಖವಾಗಿಟ್ಟಿರಲೆಂದೂ ಕನ್ನಡ ಸಾಹಿತ್ಯ ಪರಿಷತ್ತು ಹಾರೈಸುತ್ತದೆ.

ಪರಿಷತ್ತಿನ ಸುದ್ದಿಗಳು

ಪರಿಷತ್ತಿನಲ್ಲಿ ರಾಜ್ಯೋತ್ಸವ

ಕನ್ನಡ ಸಾಹಿತ್ಯ ಪರಿಷತ್ತು ನವೆಂಬರ್ ೬ ಮತ್ತು ೭ರಂದು ಎರಡು ದಿನಗಳ ಕಾಲ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆದ ಉತ್ಸವದ ಮೊದಲನೆಯ ದಿನ ಪರಿಷತ್ತಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನ್ಯಾಯಮೂರ್ತಿ ಶ್ರೀ ತುಕೋಳ ಅವರು ಭಾಷಣಮಾಡಿದರು. ಕನ್ನಡನಾಡು ಒಂದಾಗಬೇಕೆಂದು ಕನ್ನಡಿಗರು ಹೂಡಿದ ಚಳುವಳಿ ಮೊದಲುಗೊಂಡು ಭಾಷಾವಾರು ಪ್ರಾಂತಗಳಾಗಿ ಕನ್ನಡ ರಾಜ್ಯ ಸ್ಥಾಪಿತವಾಗಿರುವವರೆಗಿನ ಚರಿತ್ರೆಯನ್ನೂ ಮತ್ತು ಅದರಿಂದ ಕನ್ನಡ ದೇಶಕ್ಕೂ ಜನತೆಗೂ ಭಾಷೆಯ ಅಭಿವೃದ್ಧಿಗೂ ಆಗಿರುವ ಉಪಕಾರವನ್ನೂ ವಿವರಿಸಿ ಇನ್ನು ಮುಂದೆಯೂ ಆಗಬೇಕಾಗಿರುವ ಭಾಷಾ ಸೇವೆಯನ್ನು ನಿರ್ದೇಶಿಸಿದರು. ಅನಂತರ ಶ್ರೀ ಎಂ. ಆರ್. ಅನಂತಸ್ವಾಮಿ ಮತ್ತು ಅವರ ಸಂಗಡಿಗರಿಂದ ಕನ್ನಡ ಗೀತೆಗಳ ಗಾಯನ ನಡೆಯಿತು.

ಎರಡನೆಯ ದಿನ ಅಂದರೆ ದಿನಾಂಕ ೭ರಂದು ಪ್ರಸಿದ್ಧ ಲೇಖಕರಾದ ಶ್ರೀ ಆರ್. ವಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಬಿ. ವಿ. ಸುಂದರ ರಾಜೈಂಗಾರ್ ಅವರು ಕರ್ಣಾಟಕ ಸಂಸ್ಕೃತಿಯ ವೈಭವದ ಬಗ್ಗೆ ವಿಚಾರಪೂರ್ಣ ಭಾಷಣ ಮಾಡಿದರು.

ಅನಂತರ ಮನರಂಜನೆಯ ಕಾರ್ಯಕ್ರಮದ ಅಂಗವಾಗಿ ನಗರದ ಚಿತ್ರಾ ಕಲಾವಿದರು ಶ್ರೀ ಎ. ಎಸ್. ಮೂರ್ತಿ ಅವರಿಂದ ವಿರಚಿತವಾದ "ನಾಡಪ್ರೇಮಿ" ಎಂಬ ನಾಟಕವನ್ನು ಅಭಿನಯಿಸಿದರು.

ಈ ಎರಡು ದಿವಸಗಳಲ್ಲಿಯೂ ಕರ್ಣಾಟಕ ಸಂಸ್ಕೃತಿಯ ವೈಭವವನ್ನು ಕಣ್ಣಮುಂದೆ ನಿಲ್ಲಿಸುವಂತೆ ಸಂಗೀತ, ಸಾಹಿತ್ಯ, ಶಿಲ್ಪಕಲೆ ನೃತ್ಯ, ಸಾಧುಸಂತರು, ರಾಮಾಯಣ ಮಹಾಭಾರತ ಕಾವ್ಯಗಳು–ಇವುಗಳನ್ನು ಪರಿಚಯ ಮಾಡಿಕೊಡುವ ಸುಮಾರು ವಿವರಣೆಯನ್ನೊಳಗೊಂಡ ಸಾವಿರ ಚಿತ್ರಪಟಗಳನ್ನು ಪ್ರದರ್ಶನದಲ್ಲಿಡಲಾಗಿತ್ತು. ಅದು ತುಂಬ ಜನಾಕರ್ಷಣೀಯವಾಗಿತ್ತು.

ಶ್ರೀಮತಿ ಆರ್. ಕಲ್ಯಾಣಮ್ಮ ಅವರ ಕೃತಿಗಳ ಪರಿಚಯ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ದಿನಾಂಕ ೨೬ರಂದು ಶ್ರೀಮತಿ ಆರ್. ಕಲ್ಯಾಣಮ್ಮ ಅವರ ಸಾಹಿತ್ಯ ಕೃತಿಗಳ ಪರಿಚಯವನ್ನು ಶ್ರೀಮತಿ ಕೆ. ಟಿ. ಒನಂಕರಮ್ಮನವರು ಮಾಡಿಕೊಟ್ಟರು. ಇದು ಪರಿಷತ್ತಿನ ಆಶ್ರಯದಲ್ಲಿ ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆಯುತ್ತಿರುವ ಕವಿಕೃತಿ ಸ್ಮರಣೆಯ ಹತ್ತನೆಯ ಉಪನ್ಯಾಸಮಾಲೆಯಾಗಿದೆ.

ನಗರದ "ಕನ್ನಡಿಗರ ಕೂಟ"ದಲ್ಲಿ ದ್ವಾದಶ ಕವಿಕಾವ್ಯ ವಿಚಾರ ವಿಮರ್ಶೆ ಉಪನ್ಯಾಸಮಾಲೆಯ ಉದ್ಘಾಟನೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಬಸವನಗುಡಿಯ ಕನ್ನಡಿಗರ ಕೂಟದಲ್ಲಿ ನವೆಂಬರ್ ೨೩ರಂದು ಗುರುವಾರ ದ್ವಾದಶ ಕವಿಕಾವ್ಯ ವಿಚಾರ ವಿಮರ್ಶೆ ಉಪನ್ಯಾಸಮಾಲೆಯ ಉದ್ಘಾಟನೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ. ವಿ. ಕೃ. ಗೋಕಾಕ್ ಅವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ರೀಡರ್ ಆದ ಡಾ. ಜಿ. ಎಸ್. ಶಿವರುದ್ರಪ್ಪನವರು "ಪಂಪ ಮಹಾಕವಿ"ಯ ಬಗ್ಗೆ ಉಪನ್ಯಾಸಮಾಡಿದರು. ಇನ್ನು ಮುಂದೆ 'ಕೂಟ'ದಲ್ಲಿ ಕನ್ನಡ ಕವಿಪರಂಪರೆಯಲ್ಲಿ ಶ್ರೇಷ್ಠರಾದ ರನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಜನ್ನ ರುದ್ರಭಟ್ಟ, ಕುಮಾರವ್ಯಾಸ, ರತ್ನಾಕರ, ಲಕ್ಷ್ಮೀಶ, ಬಸವಣ್ಣ, ಅಕ್ಕಮಹಾದೇವಿ ಇವರ ಬಗ್ಗೆ ಉಪನ್ಯಾಸ ಕ್ರಮವಾಗಿ ನಡೆಯಬೇಕೆಂದು ಗೊತ್ತಾಗಿದೆ.

ಶ್ರೀಮತಿ ತಿರುಮಲೆ ರಾಜಮ್ಮ ಅವರ ಸಾಹಿತ್ಯಸೇವೆ ಕುರಿತು ಉಪನ್ಯಾಸ

'ಭಾರತಿ' ನಾಮಾಂಕಿತ ಶ್ರೀಮತಿ ತಿರುಮಲೆ ರಾಜಮ್ಮ ಅವರ ಸಾಹಿತ್ಯ ಕೃತಿಗಳ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ

ಆಶ್ರಯದಲ್ಲಿ ನವೆಂಬರ್ ೧೫ರಂದು ರಾಜಾಜಿನಗರದ ವಿದ್ಯಾ ವರ್ಧಕ ಸಂಘದಲ್ಲಿ ಉಪನ್ಯಾಸ ಕಾರ್ಯಕ್ರಮ ಜರುಗಿತು. ಶ್ರೀಮತಿ ರಾಜಮ್ಮ ಅವರ ಕೃತಿಗಳನ್ನು ಕುರಿತು ಶ್ರೀಯುತ ಬಿ. ಶ್ರೀ. ಪಾಂಡುರಂಗರಾಯರು ಮತ್ತು ಶ್ರೀಮತಿ ಕಮಲಮ್ಮ ಹಂಪನಾ ಅವರು ಮಾತನಾಡಿದರು. ಇದು ಪರಿಷತ್ತಿನ ಆಶ್ರಯದಲ್ಲಿ ರಾಜಾಜಿನಗರದ ವಿದ್ಯಾವರ್ಧಕ ಸಂಘದಲ್ಲಿ ಜರುಗುತ್ತಿರುವ ೨೮ನೇ ಉಪನ್ಯಾಸಮಾಲೆಯಾಗಿದೆ.

ಪರಿಷತ್ತಿಗೆ ಇಬ್ಬರು ಮಹನೀಯರ ಭೇಟಿ

ಬೊಂಬಾಯಿನಿಂದ ಬಂದಿದ್ದ ಶ್ರೀಮಾನ್ ಮೂಡಬಿದ್ರಿ ಎನ್. ಸಂಜೀವರಾಯರು ಮತ್ತು ಶ್ರೀ ಜೆ. ಎನ್. ಐಯರ್ ಅವರುಗಳು ಕನ್ನಡ ಸಾಹಿತ್ಯ ಪರಿಷತ್ತು ನಡಸುತ್ತಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ವಿಚಾರಿಸಿ ಅವರ ಕೆಲಸ ಕಾರ್ಯಗಳ ವಿಚಾರವಾಗಿ ತಮ್ಮ ಮೆಚ್ಚುಗೆಯನ್ನೂ ಶುಭಾಶಯಗಳನ್ನೂ ಕೋರಿದ್ದಾರೆ. ಇದಕ್ಕಾಗಿ ಪರಿಷತ್ತು ಅವರಿಗೆ ಕೃತಜ್ಞವಾಗಿದೆ.

ಶ್ರೀ ಜೆ. ಎನ್. ಐಯರ್ ಅವರಿಗೆ ಮೈಸೂರು ಶ್ರೀಮನ್ಮಹಾರಾಜರವರು ಅವರ ಸೇವಾ ಧುರೀಣತೆಯ ಮೆಚ್ಚುಗೆಯಾಗಿ “ರಾಜಸೇವಾಸಕ್ತ” ಎಂಬ ಬಿರುದನ್ನು ದಯಪಾಲಿಸಿರುವುದನ್ನು ಕೇಳಿ ಪರಿಷತ್ತು ಅವರಿಗೆ ತನ್ನ ಶುಭಾಶಯಗಳನ್ನು ಸಲ್ಲಿಸುವುದಲ್ಲದೆ ಅವರಿಂದ ಕನ್ನಡ ನಾಡು ನುಡಿಗಳ ಸೇವೆ ಇನ್ನೂ ಹೆಚ್ಚಾಗಿ ನಡೆಯಲೆಂದು ಹಾರೈಸುತ್ತದೆ.

ಶ್ರೀಮತಿ ಲಕ್ಷ್ಮೀ ಜಿ. ವೆಂಕಟಸುಬ್ಬಯ್ಯ ದತ್ತಿ ನಿಧಿ

ಈ ಮೇಲಿನ ದತ್ತಿನಿಧಿಯಾದ ರೂ. ೮೦೦೦ ಗಳಿಂದ ಬರುವ ವಾರ್ಷಿಕ ಬಡ್ಡಿ ಹಣದ ವಿನಿಯೋಗದ ಬಗ್ಗೆ ದಾತೃಗಳು ಬರೆದಿರುವ ಕಾಗದದ ಈ ಕೆಳಗಿನ ವಿವರಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ :

೧. ೧೯೦೦ನೇ ಇಸವಿಯಿಂದೀಚೆಗೆ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೆಲಸಮಾಡಿ ಪ್ರಭಾವ ಬೀರಿರುವ ಒಬ್ಬರ ಜೀವನ ವಿವರಗಳು, ಸಾಹಿತ್ಯ ಕೃಷಿ, ಇತರರ ಮೇಲೆ ಅವರಿಂದಾದ ಪ್ರಭಾವ, ಅವರ ಗ್ರಂಥಗಳ ಕಿರು ಪರಿಚಯ–ಇವುಗಳನ್ನು ಒಳಗೊಂಡ ಒಂದು ಚಿಕ್ಕ ವಿಮರ್ಶಾ ಪುಸ್ತಕವನ್ನು ಪ್ರತಿವರ್ಷವೂ ಪ್ರಕಟಿಸಬೇಕು. ಇದನ್ನು “ಶ್ರೀಮತಿ ಲಕ್ಷ್ಮೀ ಜಿ. ವೆಂಕಟಸುಬ್ಬಯ್ಯ ದತ್ತಿ ನಿಧಿ ಗ್ರಂಥಮಾಲೆ” ಎಂದು ಕರೆಯಬೇಕು.

೨. ಪ್ರತಿವರ್ಷವೂ ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಈ ಪುಸ್ತಕವು ಪ್ರಕಟವಾಗತಕ್ಕದ್ದು.

೩. ಈ ಪುಸ್ತಕವನ್ನು ಬರೆಯುವವರು ಆ ವಿಷಯವನ್ನು ಕುರಿತು ಮುಂಚೆ ಕರ್ನಾಟಕದ ಯಾವ ಭಾಗದಲ್ಲಾದರೂ ಒಂದು ಉಪನ್ಯಾಸವನ್ನು ಕೊಡತಕ್ಕದ್ದು. ಈ ಉಪನ್ಯಾಸವನ್ನು ಪುಸ್ತಕ ರೂಪವಾಗಿ ಬರೆದು ಕೊಟ್ಟ ಮೇಲೆ ಅವರಿಗೆ ಒಂದು ನೂರು ರೂಪಾಯಿಗಳನ್ನು ಸಂಭಾವನೆಯಾಗಿ ಕೊಟ್ಟು, ಬಡ್ಡಿಯ ಮಿಕ್ಕ ಹಣದಿಂದ ಪುಸ್ತಕವನ್ನು ಮುದ್ರಣ ಮಾಡಿಸತಕ್ಕದ್ದು.

೪. ಪುಸ್ತಕವು ಕ್ರೌನ್ ⅛ ಆಕಾರದ ೮೦ ಪುಟಗಳಷ್ಟಿರತಕ್ಕದ್ದು.

೫. ಯಾವ ವರ್ಷದಲ್ಲಿಯಾದರೂ ಹೀಗೆ ಪುಸ್ತಕವನ್ನು ಪ್ರಕಟಿಸುವುದು ಸಾಧ್ಯವಾಗದಿದ್ದಲ್ಲಿ ಆ ವರ್ಷದ ಬಡ್ಡಿಯು ದತ್ತಿಯ ಮೂಲನಿಧಿಗೆ ಸೇರತಕ್ಕದ್ದು.

೬. ದಾತೃವಿನ ಒಪ್ಪಿಗೆಯಿಲ್ಲದೆ ಈ ನಿಯಮಗಳಲ್ಲಿ ಯಾವ ಬದಲಾವಣೆಯೂ ಆಗತಕ್ಕದ್ದಲ್ಲ.

ದಯಮಾಡಿ ಈ ನಿಯಮಗಳನ್ನು ಪ್ರಕಟಿಸಿ ಇವುಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ವಿನಯವಾಗಿ ಬೇಡಿಕೊಳ್ಳುತ್ತೇನೆ.

ಇಂತು

ಪರಿಷತ್ತಿನ ಆಜೀವ ಸದಸ್ಯ

ಜಿ. ವೆಂಕಟಸುಬ್ಬಯ್ಯ

೨೭–೯–೧೯೬೭

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ

ಚಾಮರಾಜಪೇಟೆ :: ಬೆಂಗಳೂರು-೧೮

ಪರಿಷತ್ತಿನ ಅಂಗರಚನೆ

ಪರಿಷತ್ತಿನ ಅಂಗರಚನೆ

ಈಗಿರುವ ನಿಬಂಧನೆಗಳು :

ಹೆಸರು

೧. ಈ ಸಂಸ್ಥೆಗೆ ಹೆಸರು **ಕನ್ನಡ ಸಾಹಿತ್ಯ ಪರಿಷತ್ತು.**

ವ್ಯಾಪ್ತಿ, ಕಾರ್ಯಸ್ಥಾನ

೨. ಪರಿಷತ್ತಿನ ವ್ಯಾಪ್ತಿ ಕನ್ನಡ ನಾಡು ಮತ್ತು ಕನ್ನಡ ನುಡಿ ಬಳಕೆಯಲ್ಲಿರುವ ಮಿಕ್ಕ ಕಡೆಗಳು. ಪರಿಷತ್ತಿನ ಕೇಂದ್ರ ಕಾರ್ಯಸ್ಥಾನ ಬೆಂಗಳೂರು.

ಉದ್ದೇಶ, ಕಾರ್ಯಸಾಧನೆ

೩. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿ ; ಮತ್ತು ಕನ್ನಡಿಗರ ಸಾಂಸ್ಕೃತಿಕ ಏಕೀಕರಣ—ಇವು ಪರಿಷತ್ತಿನ ಗುರಿಗಳು.

ಇವುಗಳ ಸಾಧನೆಗೆ ಕೈಕೊಳ್ಳಬೇಕಾದ ಕಾರ್ಯಗಳು :

(೧) ಸಮ್ಮೇಳನಗಳು, ವಸಂತ ಸಾಹಿತ್ಯೋತ್ಸವ, ನಾಡಹಬ್ಬ ಮುಂತಾದ ಉತ್ಸವಗಳು, ಉಪನ್ಯಾಸಗಳು, ಸ್ಪರ್ಧೆಗಳು, ಪ್ರಚಾರ ;

(೨) ಕನ್ನಡ ಸಂಘಗಳ, ಪುಸ್ತಕ ಭಂಡಾರಗಳ, ವಾಚನಾಲಯಗಳ ಸ್ಥಾಪನೆ ;

ದಿನಾಂಕ ೫-೧೧-೧೯೬೭ರಲ್ಲಿ ಸೇರಿದ್ದ ಕಾರ್ಯಸಮಿತಿ ಸೂಚಿಸಿರುವ ತಿದ್ದುಪಡಿಗಳು :

ಹೆಸರು

೧. (ಅ) ಈ ಸಂಸ್ಥೆಯ ಹೆಸರು **ಕನ್ನಡ ಸಾಹಿತ್ಯ ಪರಿಷತ್ತು** ಎಂದು ಇರತಕ್ಕದ್ದು.

(ಆ) ಈ ನಿಬಂಧನೆಗಳಲ್ಲಿ ಮುಂದೆ ಇದನ್ನು ಪರಿಷತ್ತು ಎಂದು ಕರೆಯಲಾಗುವುದು.

ವ್ಯಾಪ್ತಿ

೨. ಪರಿಷತ್ತಿನ ವ್ಯಾಪ್ತಿ ಕನ್ನಡನಾಡು ಮತ್ತು ಕನ್ನಡನುಡಿ ಬಳಕೆಯಲ್ಲಿರುವ ಮತ್ತು ನಾಡು ನುಡಿಗಳ ಹಿತಕ್ಕೆ ಸಂಬಂಧಪಟ್ಟ ಎಲ್ಲ ಕಡೆಗಳು.

ಕಾರ್ಯಾಲಯ

೩. ಪರಿಷತ್ತಿನ ಕೇಂದ್ರ ಕಾರ್ಯಾಲಯ ಬೆಂಗಳೂರು ಆಗಿರತಕ್ಕದ್ದು.

ಉದ್ದೇಶ

೪. ಕನ್ನಡಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿ ಆಗಿರತಕ್ಕದ್ದು.

ಕಾರ್ಯಸಾಧನೆ

೫. ನಾಲ್ಕನೆಯ ನಿಬಂಧನೆಯಲ್ಲಿ ನಿರೂಪಿತವಾದ ಪರಿಷತ್ತಿನ ಉದ್ದೇಶ ಸಾಧನೆಗೆ ಈ ಕೆಳಗೆ ಕಾಣಿಸಿದ ಕಾರ್ಯಗಳನ್ನು ಕೈಕೊಳ್ಳತಕ್ಕದ್ದು :—

(ಅ) ಸಮ್ಮೇಳನ, ಸಾಹಿತ್ಯೋತ್ಸವ, ನಾಡಹಬ್ಬ, ಮುಂತಾದ ಉತ್ಸವಗಳು, ಉಪನ್ಯಾಸಗಳು, ಸ್ಪರ್ಧೆಗಳು, ಕಲಾಪ್ರದರ್ಶನಗಳು.

(೩) ಓಲೆ ಪ್ರತಿಗಳ ಸಂಗ್ರಹ, ಹಳೆಯ ಗ್ರಂಥಗಳ ಪ್ರಕಟನೆ;

(೪) ವ್ಯಾಕರಣ, ನಿಘಂಟು, ಚರಿತ್ರೆ, ಪರಿಶೋಧನೆ, ತತ್ತ್ವವಿಚಾರ, ಆಧುನಿಕ ಶಾಸ್ತ್ರಗಳು, ಪಾರಿಭಾಷಿಕ ಕೋಶ—ಮುಂತಾದುವನ್ನು ಕುರಿತು ಹೊಸ ಗ್ರಂಥಗಳ ಪ್ರಕಟನೆ;

(೫) ನೂತನ ಕಾಲಕ್ಕೆ ತಕ್ಕ ಜ್ಞಾನಪ್ರಸಾರಣೆಯ ಪುಸ್ತಕಗಳು;

(೬) ಪರಿಷತ್ತಿನ ಮತ್ತು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪ್ರಚಾರಕ್ಕಾಗಿ ಪತ್ರಿಕೆಗಳು;

(೭) ಸಾಹಿತ್ಯ ಮತ್ತು ಗಮಕ ತರಗತಿಗಳು, ಪರೀಕ್ಷೆಗಳು;

(೮) ಗ್ರಂಥಭಾಷೆಯ ಏಕೀಕರಣ;

(೯) ಬಿರುದು, ಬಹುಮಾನಗಳು ಗ್ರಂಥಕರ್ತರಿಗೆ ಸಹಾಯ.

ಇವುಗಳಲ್ಲದೆ ಇಂಥ ಇತರ ಕಾರ್ಯಗಳನ್ನೂ ಪರಿಷತ್ತು ಕೈಗೊಳ್ಳಬಹುದು.

(ಅ) ಕನ್ನಡ ಸಂಘಗಳ, ಪುಸ್ತಕ ಭಂಡಾರಗಳ, ವಾಚನಾಲಯಗಳ, ಕನ್ನಡ ಶಾಲೆಗಳ ಸ್ಥಾಪನೆ, ಅವುಗಳಿಗೆ ಪ್ರೋತ್ಸಾಹ.

(ಇ) ಓಲೆ ಪ್ರತಿಗಳ ಸಂಗ್ರಹ, ಹಳೆಯ ಗ್ರಂಥಗಳ ಪ್ರಕಟನೆ, ತಾಮ್ರಪಟ ಶಿಲಾಶಾಸನ ಪ್ರತಿಗಳು, ಐತಿಹಾಸಿಕ ಕಾಗದ ಪತ್ರಗಳು, ನಾಣ್ಯಗಳು ಇತ್ಯಾದಿ ಪ್ರಾಚ್ಯ ವಸ್ತುಸಂಗ್ರಹ.

(ಈ) ಸಂಶೋಧನಾ ಶಾಖೆಯ ಏರ್ಪಾಟು, ಸಾಹಿತ್ಯ, ಕಲೆ, ಇತಿಹಾಸ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ವ್ಯವಸ್ಥೆ, ಸಂಶೋಧಕ ವಿದ್ಯಾರ್ಥಿಗಳಿಗೆ ಸೌಕರ್ಯ.

(ಉ) ವ್ಯಾಕರಣ, ನಿಘಂಟು, ಚರಿತ್ರೆ, ಪರಿಶೋಧನೆ, ತತ್ತ್ವವಿಚಾರ, ಪಾರಿಭಾಷಿಕ ಕೋಶ, ಪ್ರಾಚೀನ ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿಗಳ ಪ್ರಕಟಣೆ, ಪ್ರಕಟಣೆಗೆ ಸಹಾಯ.

(ಊ) ಹೊಸಕಾಲಕ್ಕೆ ತಕ್ಕಂತೆ ವಿಜ್ಞಾನ, ಧರ್ಮ, ದರ್ಶನ, ಸಮಾಜಶಾಸ್ತ್ರ, ರಾಜನೀತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ಬರಸುವುದು, ಪ್ರಕಟಿಸುವುದು, ಪ್ರಕಟಿಸಲು ಸಹಾಯಮಾಡುವುದು.

(ಎ) ವಿವಿಧ ವಿಷಯಗಳ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಉತ್ತಮ ಕನ್ನಡ ಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರ ಮಾಡಿಸುವುದು, ಪ್ರಕಟಿಸುವುದು.

(ಏ) ಸಾಹಿತ್ಯ, ಸಂಗೀತ, ಗಮಕ ತರಗತಿಗಳ ಮತ್ತು ಪರೀಕ್ಷೆಗಳ ಏರ್ಪಾಟು.

(ಐ) ಪಾಂಡಿತ್ಯ ಪೋಷಣೆ: (೧) ಭಾಷೆ, ಸಾಹಿತ್ಯ, ಇತಿಹಾಸ, ಕಲೆ, ಶಾಸ್ತ್ರ, ದರ್ಶನ, ಮುಂತಾದ ಕ್ಷೇತ್ರಗಳಲ್ಲಿ ಕೆಲಸಮಾಡಿ ವಿಶೇಷ ಜ್ಞಾನಾನುಭವವುಳ್ಳ ಹಿರಿಯ ವಿದ್ವಾಂಸರನ್ನೂ, ಸಾಹಿತಿಗಳನ್ನೂ ಆಗಾಗ ಒಂದೊಂದು ಕಡೆ ಸೇರಿಸಿ ವಿಚಾರವಿನಿಮಯಕ್ಕೆ ಅವಕಾಶ ಕಲ್ಪಿಸುವುದು.

(೨) ಪ್ರೌಢ ಗ್ರಂಥಗಳ ನಿರ್ಮಾಪಕರಿಗೆ ಪ್ರೋತ್ಸಾಹ, ಧನ ಸಹಾಯ.

(೩) ಕನ್ನಡದ ಹಿರಿಯ ವಿದ್ವಾಂಸರಿಗೂ, ಸಾಹಿತಿಗಳಿಗೂ ಸನ್ಮಾನ, ಪ್ರಶಸ್ತಿ, ಬಿರುದು, ಬಹುಮಾನ.

ಇವುಗಳಲ್ಲದೆ ಇಂಥ ಇತರ ಕಾರ್ಯಗಳನ್ನೂ ಪರಿಷತ್ತು ಕೈಗೊಳ್ಳತಕ್ಕದ್ದು.

ಅಂಗರಚನೆ

ಸದಸ್ಯ ವರ್ಗಗಳು

೪. ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಎಲ್ಲ ವ್ಯಕ್ತಿಗಳೂ, ಸಂಸ್ಥೆಗಳೂ ಸದಸ್ಯರಾಗಬಹುದು. ಸದಸ್ಯರಲ್ಲಿ ೬ ವರ್ಗಗಳಿರತಕ್ಕದ್ದು.

೧. ಉದ್ಧಾರಕರು	....	ರೂ.	೧,೦೦೦
೨. ಪ್ರದಾತೃಗಳು	....	ರೂ.	೫೦೦
೩. ಆಶ್ರಯದಾತರು	....	ರೂ.	೨೫೦
೪. ಆಜೀವ ಸದಸ್ಯರು	....	ರೂ.	೧೦೦
೫. ವಾರ್ಷಿಕ ಸದಸ್ಯರು	....	ರೂ.	೬
೬. ಅಂಗಸಂಸ್ಥೆಗಳು : (ಅ) ಆಜೀವ		ರೂ.	೧೫೦
(ಆ) ವಾರ್ಷಿಕ		ರೂ.	೧೨

ಅಂಗಸಂಸ್ಥೆಗಳು

೫. (೧) ಕನ್ನಡ ವಾಙ್ಮಯಸೇವೆಯನ್ನೇ ಗುರಿಯಾಗಿಟ್ಟುಕೊಂಡಿರುವ ಕನ್ನಡ ಸಂಘಗಳು, ಸಾಹಿತ್ಯ ಸಂಸ್ಥೆಗಳು ಮುಂತಾದುವು **ಅಂಗಸಂಸ್ಥೆಗಳು.**

(೨) ಯಾವುದಾದರೊಂದು ಕಾರಣದಿಂದ ಅಪೇಕ್ಷಾಪತ್ರವನ್ನು ಒಪ್ಪಿಕೊಳ್ಳದೆ ಇದ್ದರೆ ಪ್ರವೇಶ ಧನವನ್ನು ಹಿಂದಕ್ಕೆ ಕೊಡಲಾಗುವುದು.

ಅಂಗರಚನೆ

೬. ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಸಂಸ್ಥೆಗಳು ಮತ್ತು ೨೧ ವರ್ಷಗಳ ಮತ್ತು ಅದಕ್ಕೆ ಮೇಲ್ಪಟ್ಟ ವಯಸ್ಸಿನ ಎಲ್ಲ ವ್ಯಕ್ತಿಗಳು ಪರಿಷತ್ತಿನ ಸದಸ್ಯತ್ವವನ್ನು ಪಡೆಯಬಹುದು.

ಸದಸ್ಯರಲ್ಲಿ ಈ ಕೆಳಗಿನಂತೆ ವರ್ಗಗಳಿರತಕ್ಕದ್ದು:—

೧. ಪೋಷಕರು	ರೂ.	೩೦೦೦
೨. ಉದ್ಧಾರಕರು	,,	೧೦೦೦
೩. ಪ್ರದಾತೃಗಳು	,,	೫೦೦
೪. ಆಜೀವ ಸದಸ್ಯರು	,,	೨೫೦
೫. ಸಾಮಾನ್ಯ ಸದಸ್ಯರು (ವಾರ್ಷಿಕ)	,,	೧೨
೬. ಸದಸ್ಯ ಸಂಸ್ಥೆಗಳು—		
(ಅ) ಪೋಷಕ ಸಂಸ್ಥೆಗಳು	,,	೫೦೦೦
(ಆ) ಆಜೀವ ಸಂಸ್ಥೆಗಳು	,,	೫೦೦
(ಇ) ವಾರ್ಷಿಕ ಸಂಸ್ಥೆಗಳು	,,	೨೫

ಗ್ರಂಥ ಭಂಡಾರದ ಅಭಿಮಾನಿಗಳು ವರ್ಷವೊಂದಕ್ಕೆ ಆರು ರೂಪಾಯಿಯನ್ನು ಕೊಟ್ಟು ನಿಯಮಾನುಸಾರ ಗ್ರಂಥಭಂಡಾರದ ಪ್ರಯೋಜನವನ್ನು ಮಾತ್ರ ಪಡೆಯತಕ್ಕದ್ದು. ಇವರಿಗೆ ಸದಸ್ಯತ್ವದ ಯಾವ ಇತರ ಹಕ್ಕುಬಾಧ್ಯತೆಗಳೂ ಇರತಕ್ಕದ್ದಲ್ಲ.

ಹೊಸದಾಗಿ ಸದಸ್ಯರಾಗಿ ಸೇರುವವರು ವ್ಯಕ್ತಿಗೆ ಒಂದು ರೂಪಾಯಿಯಂತೆಯೂ ಸಂಸ್ಥೆಗೆ ಎರಡು ರೂಪಾಯಿಗಳಂತೆಯೂ ಪ್ರವೇಶಧನವನ್ನು ಕೊಡತಕ್ಕದ್ದು.

(೩) ಅಂಗಸಂಸ್ಥೆಗಳಿಗೆ ಪರಿಷತ್ತಿನ ಉದ್ದೇಶ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ತಮ್ಮ ರಚನೆ, ಕಾರ್ಯಕಲಾಪ ಮುಂತಾದ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರತಕ್ಕದ್ದು.

(೪) ಯಾವುದಾದರೊಂದು ಅಂಗಸಂಸ್ಥೆ ಇನ್ನು ಮುಂದೆ ಹಾಗೆ ಅಂಗವಾಗಿರಲು ಅನರ್ಹವಾದುದೆಂದು ತಿಳಿದುಬಂದು ವಾರ್ಷಿಕಾಧಿವೇಶನ ಕಾಲದಲ್ಲಿ ಅಧಿವೇಶನಕ್ಕೆ ಬಂದಿರುವ ಸದಸ್ಯರ ಮೂರರಲ್ಲೆರಡು (⅔) ಭಾಗದ ಮತದಿಂದ ಹಾಗೆ ನಿರ್ಣಯವಾದರೆ, ಪರಿಷತ್ತು ಅಂಥ ಸಂಸ್ಥೆಯ ಸಂಬಂಧವನ್ನು ಬಿಟ್ಟುಬಿಡತಕ್ಕದ್ದು. ಆ ಸಂದರ್ಭದಲ್ಲಿ ಅಂಥ ಸಂಸ್ಥೆಗೆ ಒಂದು ತಿಂಗಳ ಮುಂತಿಳಿವಳಿಕೆ ಕೊಡತಕ್ಕದ್ದು.

(೫) ಅಂಗಸಂಸ್ಥೆಗಳು ಪರಿಷತ್ತಿನ ಮುಖ್ಯ ಧ್ಯೇಯಗಳಾದ ಸಾಹಿತ್ಯ ಸೇವೆ, ಪತ್ರಿಕೆ ಮತ್ತು ಗ್ರಂಥಗಳ ಪ್ರಕಟನೆ, ಪ್ರಚಾರ ಮುಂತಾದ ಕಾರ್ಯಗಳಲ್ಲಿ ನೆರವಾಗತಕ್ಕದ್ದು.

(೬) ಅಂಗಸಂಸ್ಥೆಗಳು ಪರಿಷತ್ತಿನ ವಾರ್ಷಿಕ ಸಭೆಗೆ ತಮ್ಮ ಪರವಾಗಿ ಒಬ್ಬೊಬ್ಬ ಸದಸ್ಯರನ್ನು ಕಳಿಸಿ ಅವರ ಮೂಲಕ ತಮ್ಮ ಮತವನ್ನು ಸೂಚಿಸಬಹುದು.

೬. ಪರಿಷತ್ತಿಗೆ ಸದಸ್ಯರಾಗಿ ಸೇರಲು ಬಯಸುವವರು ಇಬ್ಬರು ಸದಸ್ಯರ ಅನುಮೋದನೆಯನ್ನು ಪಡೆದಿರುವ ಅಪೇಕ್ಷಾಪತ್ರವನ್ನು ೬ನೇ ನಿಬಂಧನೆಯಲ್ಲಿ ಕಾಣಿಸಿರುವಂತೆ ಆಯಾ ವರ್ಗದ ಸದಸ್ಯತ್ವಕ್ಕಾಗಿ ಕನಿಷ್ಠ ಪಕ್ಷ ಕೊಡತಕ್ಕ ಚಂದಾ ಹಣದೊಡನೆ ಸಲ್ಲಿಸತಕ್ಕದ್ದು. ಅಂಥವರನ್ನು ಆಯಾ ವರ್ಗದ ಸದಸ್ಯರಾಗಿ ಸೇರಿಸಿಕೊಳ್ಳಲು ಅಧ್ಯಕ್ಷರಿಗೆ ಸಂಪೂರ್ಣ ಅಧಿಕಾರವಿರತಕ್ಕದ್ದು. ಹಾಗೆ ಸೇರಿಸಿಕೊಳ್ಳದಿದ್ದರೆ ಆ ಅಪೇಕ್ಷಾಪತ್ರವನ್ನು ಕಾರ್ಯಸಮಿತಿಯ ಮುಂದಿನ ಸಭೆಯಲ್ಲಿ ತೀರ್ಮಾನಕ್ಕಾಗಿ ತರತಕ್ಕದ್ದು.

ಸದಸ್ಯತ್ವ

೬. (೧) ಪರಿಷತ್ತಿಗೆ ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಇಬ್ಬರು ಸದಸ್ಯರ ಅನುಮೋದನೆಯನ್ನು ಪಡೆದಿರುವ ತಮ್ಮ ಅಪೇಕ್ಷಾ ಪತ್ರವನ್ನು ೬ನೆಯ ನಿಬಂಧನೆಯಲ್ಲಿ ಕಾಣಿಸಿರುವಂತೆ ಆಯಾ ವರ್ಗದ ಸದಸ್ಯತ್ವಕ್ಕಾಗಿ ಕನಿಷ್ಠ ಪಕ್ಷ ಕೊಡತಕ್ಕ ಚಂದಾಹಣ ಮತ್ತು ಪ್ರವೇಶಧನಗಳೊಡನೆ ಸಲ್ಲಿಸತಕ್ಕದ್ದು. ಅಂಥವರನ್ನು ಆಯಾ ವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಧ್ಯಕ್ಷರಿಗೆ ಅಧಿಕಾರವಿರತಕ್ಕದ್ದು. ಮತ್ತು ಅದಕ್ಕೆ ಮುಂದಿನ ಕಾರ್ಯಸಮಿತಿಯ ಒಪ್ಪಿಗೆ ಪಡೆಯತಕ್ಕದ್ದು. ಯಾವ ಕಾರಣದಿಂದಲಾದರೂ ಅಪೇಕ್ಷಾ ಪತ್ರವನ್ನು ಒಪ್ಪಿಕೊಳ್ಳದೆ ಇದ್ದರೆ ಅವರು ಕೊಟ್ಟಿದ್ದ ಮೊಬಲಗನ್ನು ಹಿಂದಿರುಗಿಸತಕ್ಕದ್ದು.

(೨) ಪರಿಷತ್ತಿನ ಸಾಮಾನ್ಯ ಸದಸ್ಯತ್ವದ ಅವಧಿ ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಇರತಕ್ಕದ್ದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಆ ವರ್ಷಕ್ಕೆ ಆ ಸದಸ್ಯತ್ವ ಸಲ್ಲತಕ್ಕದ್ದು.

(೩) ವಾರ್ಷಿಕ ಸಾಮಾನ್ಯ ಸದಸ್ಯರು ತಮ್ಮ ಸದಸ್ಯತ್ವದ ಚಂದಾ ಹಣವನ್ನು ಆ ವರ್ಷದ ಮಾರ್ಚಿ ತಿಂಗಳ ಅಂತ್ಯದೊಳಗಾಗಿ ಸಲ್ಲಿಸಿ ಸದಸ್ಯತ್ವವನ್ನು ಮುಂದುವರಿಸಿ ಕೊಳ್ಳಬಹುದು. ಹಾಗೆ ಮುಂದುವರಿಸಿಕೊಳ್ಳದಿದ್ದರೆ ಸದಸ್ಯತ್ವವು ರದ್ದಾಗುತ್ತದೆ.

(೪) ಆಜೀವ ಸದಸ್ಯರು ೫೦ ರೂ.ಗಳಂತೆ ಐದು ಕಂತುಗಳಲ್ಲಿ ಒಂದು ವರ್ಷದೊಳಗಾಗಿ ಸದಸ್ಯತ್ವದ ಪೂರ್ಣ ಚಂದಾಹಣವನ್ನು ಸಲ್ಲಿಸತಕ್ಕದ್ದು.

(೫) ಉಳಿದ ವಿಶೇಷವರ್ಗದ ಸದಸ್ಯರು ತಮ್ಮ ಚಂದಾ ಹಣವನ್ನು ನಾಲ್ಕು ಕಂತುಗಳಲ್ಲಿ ಒಂದು ವರ್ಷದೊಳಗಾಗಿ ಸಲ್ಲಿಸತಕ್ಕದ್ದು.

(೬) ವಿಶೇಷವರ್ಗದ ಸದಸ್ಯರ ಹಕ್ಕು ಸದಸ್ಯತ್ವದ ಚಂದಾಹಣದ ಮೊದಲ ಕಂತು ಪಾವತಿಯಾಗಿ ಸದಸ್ಯತ್ವ ಅಂಗೀಕಾರವಾದಾಗಲಿಂದ ಬರತಕ್ಕದ್ದು.

(೭) ಸಾಮಾನ್ಯ ಸದಸ್ಯರು ತಮ್ಮ ಹಣವನ್ನು ಮೇಲಿನ ೭ (೩) ನಿಬಂಧನೆಯ ನಿಬಂಧನೆಯ ಪ್ರಕಾರ ಸಲ್ಲಿಸದೇ ಹೋದರೆ ಅವರಿಗೆ ಸದಸ್ಯತ್ವದ ಹಕ್ಕುಗಳು ಸಲ್ಲತಕ್ಕದ್ದಲ್ಲ.ಚಂದಾ ಹಣ ಒಂದು ವರ್ಷಕ್ಕಿಂತ ಹೆಚ್ಚಾಗಿ ಬಾಕಿ ನಿಂತರೆ ಅಂಥ ಬಾಕಿದಾರರ ಹೆಸರನ್ನು ಪರಿಷತ್ತಿನ ಸದಸ್ಯರ ಪಟ್ಟಿಯಿಂದ ತೆಗೆದುಹಾಕತಕ್ಕದ್ದು.

(೮) ಆಜೀವ ಸದಸ್ಯರು ಮತ್ತು ವಿಶೇಷವರ್ಗದ ಸದಸ್ಯರು ೭ (೪) (೫) ನಿಬಂಧನೆಯ ಪ್ರಕಾರ ತಮ್ಮ ಚಂದಾ ಹಣವನ್ನು ಸಲ್ಲಿಸದೇ ಹೋದರೆ ಅವರಿಗೆ ಸದಸ್ಯತ್ವದ ಹಕ್ಕುಗಳು ಸಲ್ಲತಕ್ಕದ್ದಲ್ಲ. ಚಂದಾಹಣ ಮೊದಲನೆಯ ಕಂತು ಪಾವತಿ ಮಾಡಿದಾಗಲಿಂದ ಒಂದು ವರ್ಷದೊಳಗಾಗಿ ಪೂರ್ಣವಾಗಿ ಪಾವತಿಯಾಗತಕ್ಕದ್ದು. ಸಲ್ಲದಿದ್ದರೆ ಬಾಕಿ ನಿಂತ ಆರು ತಿಂಗಳನಂತರ ಪರಿಷತ್ತಿನ ಯಾವ ಹಕ್ಕಿಗಾಗಲೀ ಅಂಥ ಬಾಕಿದಾರರಿಗೆ ಅರ್ಹತೆ ಇರುವುದಿಲ್ಲ. ಅವರ ಹೆಸರಿನಲ್ಲಿ ಬಾಕಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ನಿಂತರೆ ಅಂಥವರ ಹೆಸರನ್ನು ಪರಿಷತ್ತಿನ ಆಜೀವ ಮತ್ತು ವಿಶೇಷ ಸದಸ್ಯರ ಪಟ್ಟಿಯಿಂದ ತೆಗೆದು ಹಾಕುವುದಲ್ಲದೆ ಅದವರಿಂದ ಸಂದಾಯವಾದ ಹಣವನ್ನು ಹಿಂದಿರುಗಿಸತಕ್ಕದ್ದಲ್ಲ.

(೯) ಯಾವುದೇ ವ್ಯಕ್ತಿಯು ಅಥವಾ ಸಂಸ್ಥೆಯು ಪರಿಷತ್ತಿನ ಸದಸ್ಯತ್ವಕ್ಕೆ ಅನರ್ಹವೆಂದು ಕಾರ್ಯಸಮಿತಿಗೆ ಕಂಡುಬಂದರೆ ಅಥವಾ ಯಾವುದೇ ಸದಸ್ಯರ ಅಥವಾ ಯಾವುದೇ ಸಂಸ್ಥೆಯ ವರ್ತನೆಯು ಪರಿಷತ್ತಿನ ಗೌರವ ಉದ್ದೇಶ ಕಾರ್ಯ

ಗಳಿಗೆ ವಿರೋಧವೆಂದು ಕಾರ್ಯ ಸಮಿತಿಯು ಅಭಿಪ್ರಾಯಪಟ್ಟರೆ ಅಂಥ ವ್ಯಕ್ತಿ ಅಥವಾ ಸಂಸ್ಥೆಯ ಸದಸ್ಯತ್ವವನ್ನು ವಜಾ ಮಾಡುವ ಅಧಿಕಾರವು ಕಾರ್ಯ ಸಮಿತಿಗೆ ಇರತಕ್ಕದ್ದು. ಆದರೆ ಇಂಥ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನದಲ್ಲಿ ಸದಸ್ಯರ ಬಹುಮತದಿಂದ ಒಪ್ಪಿಗೆ ಪಡೆಯತಕ್ಕದ್ದು.

ಸದಸ್ಯತ್ವದ ಹಕ್ಕುಬಾಧ್ಯತೆಗಳು

೬. (೧) ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲ ಹಕ್ಕುಗಳು ೨೫ನೆಯ ನಿಬಂಧನೆಗೆ ಒಳಪಟ್ಟು ಅವರಿಗೆ ಬರತಕ್ಕದ್ದು.

(೨) ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ ಇತ್ಯಾದಿ ಕಾರ್ಯಗಳಲ್ಲಿ ನಿಯಮಾನುಸಾರ ಭಾಗವಹಿಸುವ ಅಧಿಕಾರವಿರತಕ್ಕದ್ದು.

(೩) ಪುಸ್ತಕ ಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳನ್ನು ನಿಯಮಾನುಸಾರ ಪಡೆಯಲು ಅಧಿಕಾರವಿರತಕ್ಕದ್ದು.

(೪) ಪರಿಷತ್ತಿನ ಪ್ರಕಟನೆಗಳನ್ನು ಸದಸ್ಯರು ಸ್ವಂತ ಪ್ರಯೋಜನಕ್ಕಾಗಿ ಒಂದೊಂದು ಪ್ರತಿಯನ್ನು ಮುಕ್ಕಾಲು ಬೆಲೆಗೆ ಪಡೆಯಲು ಬಾಧ್ಯರಾಗಿರತಕ್ಕದ್ದು.

(೫) ಕನ್ನಡ ನುಡಿ, ಪರಿಷತ್ಪತ್ರಿಕೆಗಳನ್ನು ಉಚಿತವಾಗಿ ಪಡೆಯತಕ್ಕದ್ದು.

(೬) ವಾರ್ಷಿಕ ಸಭೆಗಳಲ್ಲಿಯೂ ಮತ್ತು ಕಾರ್ಯಕಾರೀ ಸಮಿತಿಯ ಸದಸ್ಯರ ಆಯ್ಕೆಯಲ್ಲಿಯೂ ಸಕಲ ಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆಯ ಕಾರ್ಯಕಲಾಪಗಳ ನಿರ್ಣಯಗಳ ಬಗ್ಗೆಯೂ ೨೫ನೆಯ ನಿಬಂಧನೆಗೆ ಒಳಪಟ್ಟು ಮತ ಕೊಡುವ ಅಧಿಕಾರವಿರತಕ್ಕದ್ದು.

ಸದಸ್ಯತ್ವದ ಹಕ್ಕುಬಾಧ್ಯತೆಗಳು

೭. ಪರಿಷತ್ತಿನ ಉತ್ಸವ, ಉಪನ್ಯಾಸ ಮುಂತಾದ ಸಾರ್ವಜನಿಕ ಕಾರ್ಯಗಳು, ಪುಸ್ತಕ ಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳು, ಪ್ರಕಟನೆಗಳು—ಇವುಗಳ ಪ್ರಯೋಜನವನ್ನು ನಿಯಮಾನುಸಾರ ಪಡೆದುಕೊಳ್ಳಲು ಎಲ್ಲ ಸದಸ್ಯರಿಗೂ ಅಧಿಕಾರವಿರುತ್ತದೆ.

೮. (೧) ಪರಿಷತ್ತಿನ ವಾರ್ಷಿಕ ಸದಸ್ಯತ್ವದ ಅವಧಿ ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಇರತಕ್ಕದ್ದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಆ ವರ್ಷಕ್ಕೆ ಆ ಸದಸ್ಯತ್ವ ಸಲ್ಲತಕ್ಕದ್ದು.

(೨) ವಾರ್ಷಿಕ ಸದಸ್ಯರು ತಮ್ಮ ಸದಸ್ಯತ್ವದ ಚಂದಾ ಹಣವನ್ನು ಪ್ರತಿವರ್ಷ ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ಸಲ್ಲಿಸತಕ್ಕದ್ದು.

(೩) ಆಜೀವ ಸದಸ್ಯರು ೫೦ ರೂಪಾಯಿಗಳಿಗೆ ಕಡಮೆಯಿಲ್ಲದ ಕಂತುಗಳಲ್ಲಿ ಒಂದು ವರ್ಷದೊಳಗಾಗಿ ತಮ್ಮ ಚಂದಾಹಣವನ್ನು ಸಲ್ಲಿಸತಕ್ಕದ್ದು.

(೪) ಉಳಿದ ವಿಶೇಷ ವರ್ಗದ ಸದಸ್ಯರು ತಮ್ಮ ವಂತಿಗೆಯಲ್ಲಿ ಕನಿಷ್ಠ ೧೦೦ ರೂಪಾಯಿಗಳನ್ನಾದರೂ ಮೊದಲು ಕೊಡತಕ್ಕದ್ದು; ಉಳಿದ ಹಣವನ್ನು ಆ ವರ್ಷಾಂತ್ಯದೊಳಗೆ ಸಲ್ಲಿಸತಕ್ಕದ್ದು.

(೫) ಹಾಗೆ ಸಲ್ಲಿಸದೆ ಹೋದರೆ ಅವರಿಗೆ ಸದಸ್ಯತ್ವದ ಹಕ್ಕುಗಳು ಸಲ್ಲತಕ್ಕದ್ದಲ್ಲ. ಚಂದಾಹಣ ವರ್ಷದ ಆರಂಭದಲ್ಲಿ ಮುಂಗಡವಾಗಿ ಸಲ್ಲತಕ್ಕದ್ದು. ಸಲ್ಲದಿದ್ದರೆ ಬಾಕಿ ನಿಂತ **ಮೂರು ತಿಂಗಳ**ನಂತರ ಪರಿಷತ್ತಿನ ಯಾವ ಹಕ್ಕಿಗಾಗಲಿ ಅಂಥ ಬಾಕೀದಾರರಿಗೆ ಅರ್ಹತೆ ಇರುವುದಿಲ್ಲ. ಚಂದಾ ಹಣವು ಒಂದು ವರ್ಷಕ್ಕಿಂತ ಹೆಚ್ಚಾಗಿ ಬಾಕಿ ನಿಂತರೆ ಅಂಥ ಬಾಕೀದಾರರ ಹೆಸರನ್ನು ಪರಿಷತ್ತಿನ ಸದಸ್ಯರ ಪಟ್ಟಿಯಿಂದ ತೆಗೆದುಹಾಕತಕ್ಕದ್ದು.

(೬) ಯಾವುದೇ ಕಾರಣಗಳಿಂದ ಪರಿಷತ್ತಿನ ಸದಸ್ಯರಾಗಿರಲು ಅನರ್ಹರೆಂದು ಯಾರಾದರೂ ಸದಸ್ಯರ ಬಗ್ಗೆ ಕಾರ್ಯಸಮಿತಿ ಅಭಿಪ್ರಾಯಪಟ್ಟರೆ ಪರಿಷತ್ತಿನ ವಾರ್ಷಿಕ ಸಭೆಗೆ ಬಂದಿರುವ ಸದಸ್ಯರಲ್ಲಿ ⅔ ರಷ್ಟು ಮಂದಿ ಅದನ್ನು ಒಪ್ಪಿದರೆ ಅಂಥವರ ಹೆಸರನ್ನು ಪರಿಷತ್ತಿನ ಸದಸ್ಯರ ಪಟ್ಟಿಯಿಂದ ತೆಗೆದುಹಾಕತಕ್ಕದ್ದು.

ಸದಸ್ಯ ಸಂಸ್ಥೆಗಳ ಹಕ್ಕುಬಾಧ್ಯತೆಗಳು

೯. ಸಕಲ ಸದಸ್ಯರ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿಯೂ ಮತ್ತು ಮತದಾನ ಮಾಡುವುದಕ್ಕಾಗಿಯೂ ಪ್ರತಿಯೊಂದು ಸದಸ್ಯ ಸಂಸ್ಥೆಯು ಒಬ್ಬ ಪ್ರತಿನಿಧಿಯನ್ನು ಕಳಿಸಬಹುದು. ಸದಸ್ಯ ಸಂಸ್ಥೆಯ ಅಧಿಕಾರಿಗಳಿಂದ ಅಂಥ ಪ್ರತಿನಿಧಿಯ ಹೆಸರು ಪರಿಷತ್ತಿಗೆ ಸಭೆಗೆ ಮೊದಲೆ ಮುಂಚಿತವಾಗಿ ಲಿಖಿತ ಮೂಲಕ ತಿಳಿಸಬೇಕು. ಅಂಥ ಪ್ರತಿನಿಧಿಗೆ ಚುನಾವಣೆಗಳಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಧಿಕಾರವಿರುವುದಿಲ್ಲ. ಆದರೆ ಅಂಥ ಪ್ರತಿನಿಧಿಯು ಸ್ವತಃ ಪರಿಷತ್ತಿನ ಸದಸ್ಯರಾಗಿದ್ದರೆ ಆ ಕಾರಣದಿಂದ ಅಭ್ಯರ್ಥಿಯಾಗಿ ನಿಲ್ಲಬಹುದು. ಮತ್ತು ಆತನಿಗೆ ಸಂಸ್ಥೆಯ ಪ್ರತಿನಿಧಿಯಾಗಿ ಒಮ್ಮೆಯೂ, ಸ್ವತಃ ಸದಸ್ಯತ್ವದ ಹಕ್ಕಿನಿಂದ ಒಮ್ಮೆಯೂ ಹೀಗೆ ಎರಡು ಸಲ ಮತದಾನ ಮಾಡುವ ಅಧಿಕಾರವಿರತಕ್ಕದ್ದು.

ಕಾರ್ಯಸಮಿತಿ

೯. ಪರಿಷತ್ತಿನ ಆಡಳಿತಗಳನ್ನೆಲ್ಲ ಈ ಮುಂದಿನಂತೆ ಏರ್ಪಾಡಾದ **ಕಾರ್ಯಸಮಿತಿ** ನೋಡಿಕೊಳ್ಳತಕ್ಕದ್ದು.

ಕಾರ್ಯಸಮಿತಿಯಲ್ಲಿ ಅಧಿಕಾರಿವರ್ಗದವರೂ **ಸೇರಿ ೧೫ ಅಥವಾ ೧೬ ಮಂದಿ** ಸದಸ್ಯರು ಇರತಕ್ಕದ್ದು. (ಅಧಿಕಾರಿವರ್ಗ : ಅಧ್ಯಕ್ಷರು, ಒಬ್ಬರು ಅಥವಾ ಇಬ್ಬರು ಕಾರ್ಯದರ್ಶಿಗಳು, ಕೋಶಾಧಿಕಾರಿಗಳು.) ಇವರಲ್ಲದೆ ಇನ್ನೂ ಇಬ್ಬರು ಸದಸ್ಯರನ್ನು ಜತೆಗೆ ಸೇರಿಸಿಕೊಳ್ಳಲು ಕಾರ್ಯಸಮಿತಿಗೆ ಅಧಿಕಾರವಿರತಕ್ಕದ್ದು. ಮತ್ತು, ಸಮ್ಮೇಳನಾಧ್ಯಕ್ಷರು ಪರಿಷತ್ತಿನ ಸದಸ್ಯರಾಗಿದ್ದರೆ ಅವರು ಕಾರ್ಯಸಮಿತಿಯ ಸದಸ್ಯರಾಗಿರತಕ್ಕದ್ದು.

ಮೇಲೆ ಕಂಡವರಲ್ಲದೆ, ಅಧ್ಯಕ್ಷರೇನಾದರೂ ಈಗಿರುವ ಗೌರವ ಕಾರ್ಯದರ್ಶಿಗಳ ಜೊತೆಗೆ ಮತ್ತೊಬ್ಬರು ಗೌರವ ಕಾರ್ಯದರ್ಶಿಗಳನ್ನು ನೇಮಿಸಿಕೊಂಡರೆ ಆ ಕಾರ್ಯದರ್ಶಿಗಳೂ ಕಾರ್ಯಸಮಿತಿಯ ಸದಸ್ಯರಾಗಿರತಕ್ಕದ್ದು.

ಸದಸ್ಯರು — : *ಮುಂಬಯಿ ಕರ್ನಾಟಕದಿಂದ ೪, ಮೈಸೂರು ಕರ್ನಾಟಕದಿಂದ ೪, ಮದರಾಸು ಕರ್ನಾಟಕದಿಂದ (ಕೊಡಗು ಸೇರಿ) ೨, ಹೈದರಾಬಾದು ಕರ್ನಾಟಕದಿಂದ ೨—ಹೀಗೆ ಇರತಕ್ಕದ್ದು.

ಪರಿಷತ್ತಿನ ಸಕಲ ಸದಸ್ಯಸಂಖ್ಯೆಯ ಅನುಮತಿಯಿಲ್ಲದೆ ಪರಿಷತ್ತಿನ ಸ್ಥಿರಚರಸ್ವತ್ತನ್ನಾಗಲಿ, ಇತುಗಂಟುಗಳನ್ನಾಗಲಿ ಮಾರಾಟಮಾಡಕೂಡದು.

* ಮುಂಬಯಿ ಕರ್ನಾಟಕದಿಂದ ಇತ್ಯಾದಿಗಳಿಗೆ ಆಯಾ ಪ್ರಾಂತದ ಕನ್ನಡಿಗರಿಂದ ಎಂದು ಅರ್ಥ ಮಾಡಿಕೊಳ್ಳತಕ್ಕದ್ದು.

ಕಾರ್ಯಸಮಿತಿ

೧೦. (ಅ) ಪರಿಷತ್ತಿನ ಆಡಳಿತಗಳನ್ನೆಲ್ಲ ಈ ಮುಂದಿನಂತೆ ರಚಿತವಾದ ಕಾರ್ಯಸಮಿತಿ ನಡೆಸತಕ್ಕದ್ದು.

ಕಾರ್ಯಸಮಿತಿಯಲ್ಲಿ ಅಧಿಕಾರಿ ವರ್ಗದವರೂ ಸೇರಿ ೨೦ ಮಂದಿ ಸದಸ್ಯರಿರತಕ್ಕದ್ದು.

ಅಧಿಕಾರಿವರ್ಗ

(೧)	ಅಧ್ಯಕ್ಷರು	೧
(೨)	ಕಾರ್ಯದರ್ಶಿಗಳು	೧ ಅಥವಾ ೨
(೩)	ಕೋಶಾಧಿಕಾರಿಗಳು	೧
(೪)	ಮೈಸೂರು ದೇಶದ ನಾಲ್ಕು ರೆವಿನ್ಯೂ ಆಡಳಿತ ವಿಭಾಗಗಳಿಂದ (ಮೈಸೂರು, ಬೆಳಗಾಂ, ಗುಲ್ಬರ್ಗ, ಬೆಂಗಳೂರು) ಒಂದೊಂದು ವಿಭಾಗದಿಂದ ಇಬ್ಬರು ಪ್ರತಿನಿಧಿಗಳು.	೮
(೫)	ಬೆಂಗಳೂರು ನಗರ ವಿಭಾಗದಿಂದ	೩
(೬)	ಹೊರನಾಡ ಕನ್ನಡಿಗರ ಪ್ರತಿನಿಧಿಗಳು	೧
(೭)	ಸದಸ್ಯ ಸಂಸ್ಥೆಗಳ ಪ್ರತಿನಿಧಿಗಳು	೧
(೮)	ಹಿಂದಿನ ಪರಿಷತ್ತಿನ ಅಧ್ಯಕ್ಷರು	೧
(೯)	ನೂರು ಮಂದಿಗಿಂತ ಹೆಚ್ಚಿನ ಸದಸ್ಯರನ್ನುಳ್ಳ ಜಿಲ್ಲಾ ಪ್ರತಿನಿಧಿಗಳು (ಇವರನ್ನು ಅಧ್ಯಕ್ಷರು ಎರಡಕ್ಕೆ ಮೀರದ ಸಂಖ್ಯೆಯಲ್ಲಿ ನಾಮಕರಣ ಮಾಡತಕ್ಕದ್ದು.)	೨
		೧೯ ಅಥವಾ ೨೦

ರೆವಿನ್ಯೂ ಆಡಳಿತ ವಿಭಾಗಗಳಿಂದ ಚುನಾಯಿತರಾಗುವ ಸದಸ್ಯರು ಆ ರೆವಿನ್ಯೂ ಆಡಳಿತ ವಿಭಾಗಗಳಲ್ಲೇ ವಾಸಿಸುವಂತಹವರಾಗಿರಬೇಕು. ಮತ್ತು ಆಯಾ ವಿಭಾಗಗಳಲ್ಲಿರುವ ಸದಸ್ಯರೇ ಆ ಸದಸ್ಯರನ್ನು ಚುನಾಯಿಸಬೇಕು.

ಅಧ್ಯಕ್ಷರನ್ನು ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರತಕ್ಕದ್ದು.

(ಅ) ಕನಿಷ್ಠಪಕ್ಷ ೧೦೦ ಮಂದಿ ಸದಸ್ಯರಾದರೂ ಇರುವ ಜಿಲ್ಲೆಯಲ್ಲಿ ಪರಿಷತ್ತಿನ ಶಾಖಾ ಸಂಸ್ಥೆಯೊಂದನ್ನು ನೇಮಿಸತಕ್ಕದ್ದು.

(ಇ) ಜಿಲ್ಲಾ ಶಾಖೆಗಳ ಹಣ-ಕಾಸು ಆಸ್ತಿ, ಠೇವಣಿ ಮೊದಲಾದ ವಿಷಯಗಳಲ್ಲಿ ಪರಿಷತ್ತಿಗೆ ಅಧೀನವಾಗಿರಬೇಕು.

(ಈ) ಜಿಲ್ಲಾ ಸಮಿತಿಯ ಕಾರ್ಯಕಾರೀ ಸಮಿತಿಯಲ್ಲಿ ಐದು ಮಂದಿ ಸದಸ್ಯರಿರತಕ್ಕದ್ದು.

(ಉ) ಈ ಆಯ್ಕೆ ಜಿಲ್ಲಾ ಶಾಖಾ ಸಮಿತಿಯ ಸಕಲ ಸದಸ್ಯರ ವಾರ್ಷಿಕ ಸಭೆಯಲ್ಲಿ ನಡೆಯತಕ್ಕದ್ದು.

(ಊ) ಆಯಾ ಜಿಲ್ಲೆಯಿಂದ ಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟವರು ಆಯಾ ಜಿಲ್ಲಾ ಕಾರ್ಯಕಾರೀ ಸಮಿತಿಯ ಸದಸ್ಯರಾಗಿರತಕ್ಕದ್ದು.

(ಎ) ಜಿಲ್ಲಾ ಸಮಿತಿಯ ಮೂಲಕ ಪರಿಷತ್ತಿಗೆ ಸಂದಾಯವಾಗುವ ಸದಸ್ಯರ ಚಂದಾ ಹಣದಲ್ಲಿ ಶೇಕಡಾ ೨೫ರಷ್ಟು ಭಾಗವು ಜಿಲ್ಲಾ ಸಮಿತಿಗೆ ಸೇರತಕ್ಕದ್ದು.

(ಏ) ಆಜೀವ ಸದಸ್ಯರ ಅಥವಾ ವಿಶೇಷ ವರ್ಗದ ಸದಸ್ಯರ ಚಂದಾ ಹಣದಲ್ಲಿ ಯಾವ ಅಂಶವೂ ಜಿಲ್ಲಾ ಸಮಿತಿಗೆ ಸೇರತಕ್ಕದ್ದಲ್ಲ. ದತ್ತಿನಿಧಿಗೆ ಸಂಬಂಧಿಸಿದ ಹಣವೂ ಪರಿಷತ್ತಿಗೆ ಸೇರತಕ್ಕದ್ದು.

(ಐ) ಜಿಲ್ಲಾ ಶಾಖೆಯ ಕಾರ್ಯಕಾರೀ ಸಮಿತಿಯಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಒಬ್ಬರು ಕೋಶಾಧಿಕಾರಿ ಇರತಕ್ಕದ್ದು.

(ಒ) ಜಿಲ್ಲಾ ಸಮಿತಿಯ ಕಾರ್ಯ ಚಟುವಟಿಕೆಗಳು ಪರಿಷತ್ತಿನ ನಿಬಂಧನೆಗಳಿಗೆ ಅನುಗುಣವಾಗಿ ಅದರ ಮೇಲ್ವಿಚಾರಣೆಗೆ ಒಳಪಟ್ಟು ಇರತಕ್ಕದ್ದು.

(ಓ) ಪರಿಷತ್ತಿನ ಮತ್ತು ಜಿಲ್ಲಾಶಾಖೆಯ ಈ ಚುನಾವಣೆಗಳು ರಚಿತವಾಗುವ ಉಪನಿಬಂಧನೆಗಳ ಪ್ರಕಾರ ನಡೆಯತಕ್ಕದ್ದು.

೧೦. ಕಾರ್ಯಸಮಿತಿಯ ಚುನಾವಣೆಯು ಪ್ರತಿ ತ್ರೈವಾರ್ಷಿಕ ಸಕಲ ಸದಸ್ಯ ಸಭೆಯಲ್ಲಿ ನಡೆಯತಕ್ಕದ್ದು. ಆ ಸಭೆಯಲ್ಲಿ ನೆರೆದ ಸದಸ್ಯರು ಮುಂದಿನ ತ್ರೈವಾರ್ಷಿಕ ಅವಧಿಗೆ ಅಧ್ಯಕ್ಷರನ್ನೂ, (ಕಾರ್ಯದರ್ಶಿಗಳು, ಕೋಶಾಧಿಕಾರಿಗಳನ್ನುಳಿದು) ಉಳಿದ ೧೨ ಮಂದಿ ಸದಸ್ಯರನ್ನೂ ಚುನಾಯಿಸತಕ್ಕದ್ದು.

೧೧. ಪರಿಷತ್ತಿನ ಅಧ್ಯಕ್ಷರು ತಾವು ಚುನಾಯಿತರಾದೊಡನೆ ಪರಿಷತ್ತಿನ ಸದಸ್ಯರಲ್ಲಿ ಒಬ್ಬರನ್ನು ಅಥವಾ ಇಬ್ಬರನ್ನು ಕಾರ್ಯದರ್ಶಿಗಳನ್ನಾಗಿಯೂ ಒಬ್ಬರನ್ನು ಕೋಶಾಧಿಕಾರಿಗಳನ್ನಾಗಿಯೂ ನಿಯಮಿಸಿಕೊಳ್ಳತಕ್ಕದ್ದು. ಅಧ್ಯಕ್ಷರೂ, ಕಾರ್ಯದರ್ಶಿಗಳೂ ಕೋಶಾಧಿಕಾರಿಗಳೂ ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿ ವಾಸಿಸತಕ್ಕದ್ದು.

ಕಾರ್ಯಸಮಿತಿಯ ವಿವರಗಳು

೧೨. (೧) ಯಾವ ಕಾರಣದಿಂದಲಾದರೂ ಕಾರ್ಯದರ್ಶಿ, ಕೋಶಾಧಿಕಾರಿ ಇವರ ಸ್ಥಾನಗಳು ತೆರವು ಆದರೆ ಅಧ್ಯಕ್ಷರು ಆ ಸ್ಥಾನಗಳಿಗೆ ಪರಿಷತ್ತಿನ ಸದಸ್ಯರಲ್ಲಿ ಬೇರೆ ಯಾರನ್ನಾದರೂ ನಿಯಮಿಸಿಕೊಳ್ಳಬಹುದು.

ಕಾರ್ಯಸಮಿತಿ ಅಧ್ಯಕ್ಷರು ಮತ್ತು ಸದಸ್ಯರ ಆಯ್ಕೆ

೧೧. ಅಧ್ಯಕ್ಷರ ಮತ್ತು ಕಾರ್ಯ ಸಮಿತಿಯ ಸದಸ್ಯರ ಆಯ್ಕೆ ಮೂರು ವರ್ಷಕ್ಕೊಮ್ಮೆ ಅಂಚೆಯ ಬ್ಯಾಲೆಟ್ ಮೂಲಕ ನಡೆಯತಕ್ಕದ್ದು. ಎಲ್ಲ ಚುನಾವಣೆಗಳೂ ಉಪನಿಬಂಧನೆಗಳ ಪ್ರಕಾರ ನಡೆಯತಕ್ಕದ್ದು. ಅಧ್ಯಕ್ಷರೂ ಕಾರ್ಯದರ್ಶಿಗಳೂ ಮತ್ತು ಕೋಶಾಧಿಕಾರಿಗಳೂ ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿ ವಾಸಿಸತಕ್ಕದ್ದು.

ಕಾರ್ಯದರ್ಶಿ ಕೋಶಾಧಿಕಾರಿಗಳ ಆಯ್ಕೆ

೧೨. (ಅ) ಕಾರ್ಯದರ್ಶಿಗಳನ್ನೂ ಕೋಶಾಧಿಕಾರಿಗಳನ್ನೂ ಆರಿಸಿಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

(ಆ) ಯಾವ ಕಾರಣದಿಂದಲಾದರೂ ಕಾರ್ಯದರ್ಶಿ ಕೋಶಾಧಿಕಾರಿ ಇವರ ಸ್ಥಾನಗಳು ತೆರವು ಆದರೆ ಅಧ್ಯಕ್ಷರು ಆ ಸ್ಥಾನಗಳಿಗೆ ಪರಿಷತ್ತಿನ ಸದಸ್ಯರಲ್ಲಿ ಬೇರೆ ಯಾರನ್ನಾದರೂ ನಿಯಮಿಸಿಕೊಳ್ಳಬಹುದು.

(ಇ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಕಾರ್ಯ ಸಮಿತಿ ಮುಂದಿನ ಸಕಲ ಸದಸ್ಯ ಸಭೆಯವರೆಗೆ ಪರಿಷತ್ತಿನ ಸದಸ್ಯರಲ್ಲಿ ಯಾರನ್ನಾದರೂ ಅಧ್ಯಕ್ಷರನ್ನಾಗಿ ಆರಿಸಿಕೊಳ್ಳತಕ್ಕದ್ದು ಮತ್ತು ಆ ಮುಂದಿನ ವಾರ್ಷಿಕಾಧಿವೇಶನದಲ್ಲಿ ಉಳಿದ ಕಾಲಾವಧಿಯವರೆಗೆ ಮುಂದಿನ ಅಧ್ಯಕ್ಷರನ್ನು ಅಂಚೆಯ ಬ್ಯಾಲೆಟ್ ಮೂಲಕ ಆರಿಸತಕ್ಕದ್ದು.

(ಈ) ಅಧ್ಯಕ್ಷರು, ಕಾರ್ಯದರ್ಶಿಗಳು, ಕೋಶಾಧಿಕಾರಿಗಳು ಯಾವ ಕಾರಣದಿಂದಲಾದರೂ ತಮ್ಮ ಕಾರ್ಯಗಳನ್ನು ತಾತ್ಕಾಲಿಕವಾಗಿ (ಎರಡು ತಿಂಗಳಿಗೆ ಕಡಮೆಯಿಲ್ಲದೆ ಆರು ತಿಂಗಳಿಗೆ ಹೆಚ್ಚಾಗದ ಅವಧಿಯಲ್ಲಿ) ನಿರ್ವಹಿಸಲು ಸಾಧ್ಯವಿಲ್ಲದಿದ್ದಲ್ಲಿ ಆ ಕಾಲ ಪರ್ಯಂತ ಕಾರ್ಯ ಸಮಿತಿಯ ಒಬ್ಬ ಸದಸ್ಯರಿಗೆ ಆ ಅಧಿಕಾರವನ್ನು ವಹಿಸಿಕೊಡಲು ಕಾರ್ಯ ಸಮಿತಿಗೆ ಅಧಿಕಾರವಿರತಕ್ಕದ್ದು.

(೨) ಯಾವ ಕಾರಣದಿಂದಾಗಲಿ ಅಧ್ಯಕ್ಷಸ್ಥಾನ ತೆರಪಾದಾಗ ಕಾರ್ಯಸಮಿತಿ ಮುಂದಿನ ವಾರ್ಷಿಕ ಸಕಲ ಸದಸ್ಯ ಸಭೆಯವರೆಗೆ ಪರಿಷತ್ತಿನ ಸದಸ್ಯರಲ್ಲಿ ಯಾರನ್ನಾದರೂ ಅಧ್ಯಕ್ಷರನ್ನಾಗಿ ಆರಿಸಿಕೊಳ್ಳತಕ್ಕದ್ದು ಮತ್ತು ಆ ವಾರ್ಷಿಕ ಸಭೆಯಲ್ಲಿ ಉಳಿದ ಕಾಲಾವಧಿಯವರೆಗೆ ಮುಂದಿನ ಅಧ್ಯಕ್ಷರನ್ನು ಆರಿಸತಕ್ಕದ್ದು.

(೩) ಯಾವ ಕಾರಣದಿಂದಾಗಲಿ ಅಧ್ಯಕ್ಷರು ತಮ್ಮ ಕಾರ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲದಿದ್ದಲ್ಲಿ ಆ ಕಾಲಪರ್ಯಂತ ಕಾರ್ಯ ಸಮಿತಿಯು ತನ್ನ ಸದಸ್ಯರೊಬ್ಬರಿಗೆ ಅವರ ಅಧಿಕಾರವನ್ನೂ, ಜವಾಬ್ದಾರಿಯನ್ನೂ ವಹಿಸಲು ಅಧಿಕಾರವಿರತಕ್ಕದ್ದು.

ಸದಸ್ಯ ಸ್ಥಾನದ ತೆರಪು

೧೩. (೧) ಕಾರ್ಯಸಮಿತಿಯ ಸದಸ್ಯರ ಸ್ಥಾನಗಳಲ್ಲಿ ಯಾವುದಾದರೂ ತೆರಪಾದರೆ ಆ ಸ್ಥಾನಕ್ಕೆ ಕಾರ್ಯಸಮಿತಿಯು ಮತ್ತೊಬ್ಬ ಸದಸ್ಯರನ್ನು ಮುಂದಿನ ಚುನಾವಣೆ ನಡೆಯುವವರೆಗೆ ನೇಮಿಸಿಕೊಳ್ಳತಕ್ಕದ್ದು.

(೨) ಯಾವ ಕಾಲದಲ್ಲಾಗಲಿ ಕಾರ್ಯಸಮಿತಿಯ ಯಾವ ಅಧಿಕಾರ ಸ್ಥಾನವಾಗಲಿ, ಸದಸ್ಯಸ್ಥಾನವಾಗಲಿ ತೆರಪಾಗಿ ನಿಂತಿದೆಯೆಂಬ ಕಾರಣದಿಂದ ಆ ಕಾಲದಲ್ಲಿ ಆ ಸಮಿತಿ ನಡೆಸುವ ಕಾರ್ಯಕ್ರಮಗಳು ಅಕ್ರಮಗಳೆನಿಸಲಾರವು.

(೩) ಕಾರ್ಯಸಮಿತಿಯ ಚುನಾವಣೆ ಆದೊಡನೆಯೇ ಸಮಿತಿಯ ಮೊದಲನೆಯ ಸಭೆ ಅಲ್ಲೇ ಸೇರತಕ್ಕದ್ದು.

೧೪. (೧) ಕಾರ್ಯಸಮಿತಿಯ ಸಭೆ ವರ್ಷಕ್ಕೆ ಕನಿಷ್ಠಪಕ್ಷ ಮೂರು ಸಲ ಸಾಮಾನ್ಯವಾಗಿ ಮೂರು ತಿಂಗಳ ಅಂತರದಲ್ಲಿ ಸೇರತಕ್ಕದ್ದು.

(೨) ಕಾರ್ಯಸಮಿತಿಯ ಸಭೆಗಳಲ್ಲಿ ಒಂದನ್ನು ಮೈಸೂರು ಪ್ರಾಂತ ಬಿಟ್ಟು ಮಿಕ್ಕ ಪ್ರಾಂತಗಳ ಒಂದು ಸ್ಥಳದಲ್ಲಿ ನಡಸತಕ್ಕದ್ದು; ಉಳಿದ ಎರಡು ಸಭೆಗಳಲ್ಲಿ ಒಂದನ್ನು ಬೆಂಗಳೂರಿನ ಹೊರಗೆ ಮೈಸೂರು ಪ್ರಾಂತದ ಒಂದು ಸ್ಥಳದಲ್ಲಿ ನಡಸಬಹುದು.

ಸದಸ್ಯ ಸ್ಥಾನದ ತೆರಪು

೧೩. (೧) ಕಾರ್ಯ ಸಮಿತಿಯ ಸದಸ್ಯರ ಸ್ಥಾನಗಳಲ್ಲಿ ಯಾವುದಾದರೂ ತೆರಪಾದರೆ ಆ ಸ್ಥಾನಕ್ಕೆ ಕಾರ್ಯ ಸಮಿತಿಯು ಮತ್ತೊಬ್ಬ ಸದಸ್ಯರನ್ನು ಮುಂದಿನ ತ್ರೈವಾರ್ಷಿಕ ಚುನಾವಣೆ ನಡೆಯುವವರೆಗೆ ನೇಮಿಸಿಕೊಳ್ಳತಕ್ಕದ್ದು.

(೨) ಯಾವ ಕಾಲದಲ್ಲಾಗಲಿ ಕಾರ್ಯಕಾರೀ ಸಮಿತಿಯ ಯಾವ ಅಧಿಕಾರ ಸ್ಥಾನವಾಗಲಿ ತೆರಪಾಗಿ ನಿಂತಿದೆ ಎಂಬ ಕಾರಣದಿಂದ ಆ ಕಾಲದಲ್ಲಿ ಆ ಸಮಿತಿ ನಡೆಸುವ ಕಾರ್ಯಗಳು ಅಕ್ರಮಗಳೆನಿಸಲಾರವು.

(೩) ಚುನಾವಣೆಯಾದ ಮೇಲೆ ಹೊಸ ಕಾರ್ಯ ಸಮಿತಿ ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿದ ದಿನದಿಂದ ೧೫ ದಿನಗಳ ಒಳಗೆ ಬೆಂಗಳೂರಿನಲ್ಲಿ ಸೇರತಕ್ಕದ್ದು.

ಕಾರ್ಯಸಮಿತಿಯ ಸಭೆ

೧೪. (ಅ) ಕಾರ್ಯಸಮಿತಿಯ ಸಭೆ ವರ್ಷಕ್ಕೆ ಕನಿಷ್ಠಪಕ್ಷ ಮೂರು ಸಲ ಸಾಮಾನ್ಯವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಎರಡು ತಿಂಗಳ ಅಂತರದಲ್ಲಿ ಸೇರತಕ್ಕದ್ದು. ಬೆಂಗಳೂರಿನಲ್ಲಿ ಎರಡು ಸಲವಂತೂ ಸೇರಲೇಬೇಕು.

(ಆ) ಪರಿಷತ್ತಿನ ಅಧ್ಯಕ್ಷರೇ ಕಾರ್ಯಸಮಿತಿಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವರು ಹಾಜರಿಲ್ಲದಿರುವ ಸಂದರ್ಭಗಳಲ್ಲಿ ಕಾರ್ಯಸಮಿತಿ ಹಾಜರಿರುವ ಸದಸ್ಯರೊಬ್ಬರನ್ನು ಆ ಸಭೆಗೆ ಅಧ್ಯಕ್ಷರಾಗಿರುವಂತೆ ಪ್ರಾರ್ಥಿಸಿ ಸಭೆ ನಡೆಸತಕ್ಕದ್ದು.

ತಿಳಿವಳಿಕೆ

೧೫. ಕಾರ್ಯಸಮಿತಿಯ ಸಾಮಾನ್ಯ ಸಭೆಗಳನ್ನು ಕುರಿತು ತಿಳಿವಳಿಕೆ ಪತ್ರಗಳನ್ನು ಹತ್ತು ದಿನಗಳಿಗೆ ಮುಂಚೆ ಸದಸ್ಯರಿಗೆ ತಲಪುವಹಾಗೆ ಕಳಿಸಿ ಕೊಡತಕ್ಕದ್ದು.

೧೬. ಜರೂರು ಸಂದರ್ಭದಲ್ಲಿ ಕಾರ್ಯಸಮಿತಿ ಸೇರುವ ಸಮಯವನ್ನು ಇಷ್ಟುಮಟ್ಟಿಗೆ ಪೂರ್ವಭಾವಿಯಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂಬ ಕಾಲವ್ಯವಧಾನದ ನಿರ್ಬಂಧವಿಲ್ಲ.

ಜರೂರು ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

ಆವಶ್ಯಕ ಸಂಖ್ಯೆ

೧೭. (೧) ಕಾರ್ಯಸಮಿತಿಯ ಸಭೆಗೆ ಕಾರ್ಯನಿರ್ವಾಹಾಧಿಕಾರವಿರುವುದಕ್ಕೆ ಐದು ಸದಸ್ಯರಾದರೂ ಬಂದಿರತಕ್ಕದ್ದು; ಈ ಐವರಲ್ಲಿ ಮೂವರಾದರೂ ಪರಿಷತ್ತಿನ ಅಧಿಕಾರಿಗಳಲ್ಲದವರಾಗಿರತಕ್ಕದ್ದು.

(೨) ಈ ಆವಶ್ಯಕ ಸಂಖ್ಯೆಯಷ್ಟು ಮಂದಿ ಸದಸ್ಯರು ಬಾರದೆ ಇದ್ದರೆ ಕಾರ್ಯಸಮಿತಿಯ ಸಭೆಯನ್ನು ಮುಂದೆ ಒಂದು ದಿನಕ್ಕೆ ತಳ್ಳಿಟ್ಟು ಆಗ ಆವಶ್ಯಕ ಸಂಖ್ಯೆ ಇರಲಿ, ಇಲ್ಲದಿರಲಿ ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯವಿವರವನ್ನು ಪರ್ಯಾಲೋಚಿಸಿ ತೀರ್ಮಾನಿಸಲು ಕಾರ್ಯಸಮಿತಿಗೆ ಅಧಿಕಾರವಿರುತ್ತದೆ.

ನೌಕರರ ನೇಮಕ ಮುಂತಾದ್ದು

೧೮. ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರರನ್ನೂ, ಸೇವಕರನ್ನೂ, ನಿಯಮಿಸುವುದಕ್ಕೂ, ದಂಡಿಸುವುದಕ್ಕೂ, ತೆಗೆದುಹಾಕುವುದಕ್ಕೂ. ಅವರ ಸಂಬಳಗಳನ್ನೂ, ಬಹುಮಾನವನ್ನೂ, ಭತ್ಯವನ್ನೂ ಗೊತ್ತುಮಾಡುವುದಕ್ಕೂ ಉಪನಿಬಂಧನೆಗಳಿಗನುಸಾರವಾಗಿ ಕಾರ್ಯಸಮಿತಿಗೆ ಅಧಿಕಾರವಿರತಕ್ಕದ್ದು.

ತಿಳಿವಳಿಕೆ

೧೫. ಕಾರ್ಯಸಮಿತಿಯ ಸಾಮಾನ್ಯ ಸಭೆಗಳನ್ನು ಕುರಿತು ತಿಳಿವಳಿಕೆ ಪತ್ರಗಳನ್ನು ಹತ್ತು ದಿನಗಳಿಗೆ ಮುಂಚೆ ಸದಸ್ಯರಿಗೆ ತಲಪುವಂತೆ ಕಳಿಸಿಕೊಡತಕ್ಕದ್ದು.

೧೬. ಜರೂರು ಸಂದರ್ಭದಲ್ಲಿ ಕಾರ್ಯಸಮಿತಿ ಸೇರುವ ಸಮಯವನ್ನು ಇಷ್ಟುಮಟ್ಟಿಗೆ ಪೂರ್ವಭಾವಿಯಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂಬ ಕಾಲವ್ಯವಧಾನದ ನಿರ್ಬಂಧವಿಲ್ಲ. ಜರೂರು ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

ಆವಶ್ಯಕ ಸಂಖ್ಯೆ

೧೭. (೧) ಕಾರ್ಯಸಮಿತಿ ಸಭೆಗೆ ಕಾರ್ಯನಿರ್ವಹಣಾಧಿಕಾರವಿರುವುದಕ್ಕೆ ಒಂಬತ್ತು ಸದಸ್ಯರಾದರೂ (Quorum) ಬಂದಿರಬೇಕು. ಈ ಒಂಬತ್ತರಲ್ಲಿ ಐವರಾದರೂ ಪರಿಷತ್ತಿನ ಅಧಿಕಾರಿಗಳಲ್ಲದವರಾಗಿರತಕ್ಕದ್ದು.

(೨) ಈ ಆವಶ್ಯಕ ಸಂಖ್ಯೆಯಷ್ಟು ಮಂದಿ ಸದಸ್ಯರು ಬಾರದೆ ಇದ್ದರೆ ಕಾರ್ಯಸಮಿತಿಯ ಸಭೆಯನ್ನು ಮುಂದೆ ಒಂದು ದಿನಕ್ಕೆ ತಳ್ಳಿಟ್ಟು ಆಗ ಆವಶ್ಯಕ ಸಂಖ್ಯೆ ಇರಲಿ, ಇಲ್ಲದಿರಲಿ, ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯವಿವರವನ್ನು ಪರ್ಯಾಲೋಚಿಸಿ ತೀರ್ಮಾನಿಸಲು ಕಾರ್ಯ ಸಮಿತಿಗೆ ಅಧಿಕಾರವಿರುತ್ತದೆ.

ನೌಕರರ ನೇಮಕ ಮುಂತಾದ್ದು

೧೮. ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರರನ್ನೂ ಸೇವಕರನ್ನೂ ನಿಯಮಿಸುವುದಕ್ಕೂ ದಂಡಿಸುವುದಕ್ಕೂ, ತೆಗೆದುಹಾಕುವುದಕ್ಕೂ, ಅವರ ಸಂಬಳಗಳನ್ನೂ ಬಹುಮಾನವನ್ನೂ ಗೊತ್ತುಮಾಡುವುದಕ್ಕೂ ಕಾರ್ಯ ಸಮಿತಿಗೆ ಅಧಿಕಾರವಿರತಕ್ಕದ್ದು.

ಉಪನಿಬಂಧನೆಗಳು

೧೯. (೧) ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ, ಆವಶ್ಯಕ ವಿದ್ದಾಗ, ಉಪನಿಬಂಧನೆಗಳನ್ನು ಮಾಡಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರ ಕಾರ್ಯಸಮಿತಿಗೆ ಇರತಕ್ಕದ್ದು. ಹೀಗೆ ಮಾರ್ಪಾಟಾದ ಉಪ ನಿಬಂಧನೆಗಳ ವಿವರವನ್ನು ಮುಂದಿನ "ಕನ್ನಡನುಡಿ"ಯಲ್ಲಾಗಲಿ ಅಥವಾ "ಪರಿಷತ್ಪತ್ರಿಕೆ"ಯಲ್ಲಾಗಲಿ ವಿಶದವಾಗಿ ಸದಸ್ಯರ ಅವಗಾಹನೆಗೆ ತರತಕ್ಕದ್ದು. ಪರಿಷತ್ತಿನ ಸದಸ್ಯರ ಸಭೆಯಾಗಲೀ, ಕಾರ್ಯಸಮಿತಿಯಾಗಲೀ ಬದಲಾಯಿಸುವವರೆಗೂ ಇವು ನಡೆಯತಕ್ಕದ್ದು.

(೨) ಈ ನಿಬಂಧನೆ ಅಥವಾ ಉಪನಿಬಂಧನೆಗಳಲ್ಲಿ ಯಾವುದಾದರೂ ತಿದ್ದುಪಾಟು ಬದಲಾವಣೆ ಆದರೆ ತತ್ಪೂರ್ವ ನಡೆದ ಕಾರ್ಯಕ್ರಮಗಳು ಅಕ್ರಮಗಳೆನಿಸಲಾರವು.

ವಾರ್ಷಿಕ ಸಭೆ : ಕಾಲ–ಸ್ಥಾನ

೨೦. ವಾರ್ಷಿಕಸಭೆ ಮಾರ್ಚಿ ತಿಂಗಳೊಳಗಾಗಿ ಕಾರ್ಯಸಮಿತಿ ಗೊತ್ತುಮಾಡುವ ಸ್ಥಳದಲ್ಲಿ ನಡೆಯತಕ್ಕದ್ದು.

ತಿಳಿವಳಿಕೆ ಪತ್ರ : ೬ ವಾರ ಕಾಲ

೨೧. ವಾರ್ಷಿಕ ಸಭೆಯ ತಿಳಿವಳಿಕೆ ಪತ್ರವನ್ನು ಅಂಥ ಸಭೆ ಕೂಡುವುದಕ್ಕೆ **ಆರು ವಾರ** ಮುಂಚಿತವಾಗಿ ಸದಸ್ಯರಿಗೆ ಕಳಿಸತಕ್ಕದ್ದು.

ಸದಸ್ಯರ ಸೂಚನೆಗೆ ಕಾಲ

೨೨. (೧) ಪರಿಷತ್ತಿನ (ಅ) ಸಾಮಾನ್ಯ ನಿಬಂಧನೆಗಳು ಮತ್ತು (ಆ) ಕಾರ್ಯಕಲಾಪಗಳು—ಇವುಗಳ ವಿಷಯವಾಗಿ ಸೂಚನೆಗಳನ್ನು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಇಪ್ಪತ್ತು ದಿನಗಳ ಮುಂಚೆ ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಸದಸ್ಯರು ಕಾರ್ಯದರ್ಶಿಗಳಿಗೆ ಬರಹದ ಮೂಲಕ ಕಳಿಸತಕ್ಕದ್ದು. ಅಂಗರಚನೆಯ ತಿದ್ದುಪಾಟನ್ನು ಸೂಚಿಸುವ ಸದಸ್ಯರು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠಪಕ್ಷ ಮೂವತ್ತು

ಉಪನಿಬಂಧನೆಗಳು

೧೯. (೧) ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಆವಶ್ಯಕವಿದ್ದಾಗ ಉಪನಿಬಂಧನೆಗಳನ್ನು ಮಾಡಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರ ಕಾರ್ಯಸಮಿತಿಗೆ ಇರತಕ್ಕದ್ದು. ಹೀಗೆ ಮಾರ್ಪಾಟಾದ ಉಪನಿಬಂಧನೆಗಳ ವಿವರವನ್ನು ಮುಂದಿನ ಕನ್ನಡನುಡಿಯಲ್ಲಿ ಅಥವಾ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

(೨) ಈ ನಿಬಂಧನೆ ಅಥವಾ ಉಪನಿಬಂಧನೆಗಳಲ್ಲಿ ಯಾವುದಾದರೂ ತಿದ್ದುಪಾಟು, ಬದಲಾವಣೆ ಆದರೆ ತತ್ಪೂರ್ವ ನಡೆದ ಕಾರ್ಯಕ್ರಮಗಳು ಅಕ್ರಮಗಳೆನಿಸಲಾರವು.

ವಾರ್ಷಿಕ ಸಭೆ : ಕಾಲ, ಸ್ಥಾನ

೨೦. ವಾರ್ಷಿಕ ಸಭೆ ಜೂನ್ ತಿಂಗಳೊಳಗಾಗಿ ಬೆಂಗಳೂರಿನಲ್ಲಿ ಪರಿಷದಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯತಕ್ಕದ್ದು.

ತಿಳಿವಳಿಕೆ

೨೧. ವಾರ್ಷಿಕ ಸಭೆಯ ತಿಳಿವಳಿಕೆ ಪತ್ರವನ್ನು ಅಂಥ ಸಭೆ ಕೂಡುವುದಕ್ಕೆ ಆರು ವಾರ ಮುಂಚಿತವಾಗಿ ಸದಸ್ಯರಿಗೆ ಕಳಿಸತಕ್ಕದ್ದು.

ಸದಸ್ಯರ ಸೂಚನೆಗೆ ಕಾಲ

೨೨. (೧) ಪರಿಷತ್ತಿನ (ಅ) ಸಾಮಾನ್ಯ ನಿಬಂಧನೆಗಳು ಮತು (ಆ) ಕಾರ್ಯಕಲಾಪಗಳು ಇವುಗಳ ವಿಷಯವಾಗಿ ಸೂಚನೆಗಳನ್ನು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಇಪ್ಪತ್ತು ದಿನಗಳ ಮುಂಚೆ—ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಸದಸ್ಯರು ಕಾರ್ಯದರ್ಶಿಗಳಿಗೆ ಬರಹದ ಮೂಲಕ ಕಳಿಸತಕ್ಕದ್ದು. ಅಂಗರಚನೆಯ ತಿದ್ದುಪಾಟನ್ನು ಸೂಚಿಸುವ ಸದಸ್ಯರು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠಪಕ್ಷ ಮೂವತ್ತು ದಿನಗಳಿಗೆ ಕಡಿಮೆಯಾಗಿಲ್ಲದಷ್ಟು

ದಿನಗಳಿಗೆ ಕಡಿಮೆಯಾಗಿಲ್ಲದಷ್ಟು ಮುಂಚಿತವಾಗಿ ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಕಳಿಸತಕ್ಕದ್ದು.

(೨) ಅಂಥ ಸೂಚನೆಗಳನ್ನು ಕಾರ್ಯದರ್ಶಿಗಳು ಸಭೆ ನಡೆಯುವುದಕ್ಕೆ ಕನಿಷ್ಠಪಕ್ಷ ಒಂದು ವಾರದ ಮೊದಲು ಎಲ್ಲ ಸದಸ್ಯರಿಗೂ ತಿಳಿಯಪಡಿಸತಕ್ಕದ್ದು.

ಕಾರ್ಯಸೂಚಿ

೨೩. ವಾರ್ಷಿಕ ಸಭೆಯಲ್ಲಿ ನಡೆಯತಕ್ಕ ಕಾರ್ಯಗಳ ವಿವರವೇನೆಂದರೆ:--

(೧) ಕಾರ್ಯಸಮಿತಿ ಒಪ್ಪಿಸುವ ವಾರ್ಷಿಕ ವರದಿಯನ್ನೂ, ಆಯವ್ಯಯ ಶೋಧಕರು ಪರಿಶೀಲಿಸಿದ ಲೆಕ್ಕದ ಪಟ್ಟಿಗಳನ್ನೂ ಅಂಗೀಕರಿಸುವುದು;

(೨) ಮುಂದಿನ ವರ್ಷಕ್ಕೆ ಆಯವ್ಯಯ ಶೋಧಕರ ನೇಮಕ;

(೩) ಮುಂದಿನ ವರ್ಷದ ಆಯವ್ಯಯದ ಅಂದಾಜುಪಟ್ಟಿಯ ವ್ಯವಸ್ಥೆ;

(೪) ಕಾರ್ಯಸಮಿತಿಯ ಸೂಚನೆಗಳು;

(೫) ಸದಸ್ಯರು ನಿಯಮಾನುಸಾರವಾಗಿ ಕಳಿಸುವ ಇತರ ಸೂಚನೆಗಳು;

(೬) ೧೧ನೆಯ ನಿಬಂಧನೆಯಂತೆ ಚುನಾವಣೆ ನಡೆದ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರನ್ನೂ, ಕಾರ್ಯಸಮಿತಿಯ ಸದಸ್ಯರನ್ನೂ ಚುನಾಯಿಸುವುದು.

೨೪. ಪ್ರತಿಯೊಂದು ಸದಸ್ಯ ಸಭೆಯಲ್ಲಿಯೂ **ಇಪ್ಪತ್ತೈದು** ಮಂದಿಗೆ ಕಡಿಮೆ ಇಲ್ಲದೆ ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲಿಯೇ ಆಗಲಿ ಕ್ಲುಪ್ತ ಕಾಲಾನಂತರ ಅರ್ಧ ಗಂಟೆಯೊಳಗಾಗಿ ಈ ಆವಶ್ಯಕ ಸಂಖ್ಯೆಯಷ್ಟು ಸದಸ್ಯರು ಸೇರದಿದ್ದರೆ ಆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಯ ದಿನ, ಕಾಲ ಮತ್ತು ಸ್ಥಳ ಇವುಗಳನ್ನು ಅಧ್ಯಕ್ಷರು ನಿಶ್ಚಯಿಸಿ ಒಡನೆಯೇ ತಿಳಿಸತಕ್ಕದ್ದು, ಅಂಥ ಮುಂದಿನ ಸಭೆಯಲ್ಲಿ ಹೊಸ ನಿಯಮಗಳು ಯಾವುವನ್ನೂ ಚರ್ಚೆಗೆ ತಾರದಿದ್ದರೆ ಆವಶ್ಯಕ ಸಂಖ್ಯೆ ಇರಬೇಕೆಂಬ ನಿರ್ಬಂಧವಿರುವುದಿಲ್ಲ.

ಮುಂಚಿತವಾಗಿ ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಕಳಿಸತಕ್ಕದ್ದು.

(೨) ಅಂಥ ಸೂಚನೆಗಳನ್ನು ಕಾರ್ಯದರ್ಶಿಗಳು ಸಭೆ ನಡೆಯುವುದಕ್ಕೆ ಕನಿಷ್ಠಪಕ್ಷ ಒಂದು ವಾರದ ಮೊದಲು ಎಲ್ಲ ಸದಸ್ಯರಿಗೂ ತಿಳಿಯಪಡಿಸತಕ್ಕದ್ದು.

ಕಾರ್ಯಸೂಚಿ

೨೩. ವಾರ್ಷಿಕ ಸಭೆಯಲ್ಲಿ ನಡೆಯತಕ್ಕ ಕಾರ್ಯಗಳ ವಿವರವೇನೆಂದರೆ:

(೧) ಕಾರ್ಯ ಸಮಿತಿ ಒಪ್ಪಿಸುವ ವಾರ್ಷಿಕ ವರದಿಯನ್ನೂ ಆಯವ್ಯಯ ಶೋಧಕರು ಪರಿಶೀಲಿಸಿದ ಲೆಕ್ಕದ ಪಟ್ಟಿಗಳನ್ನೂ ಅಂಗೀಕರಿಸುವುದು.

(೨) ಮುಂದಿನ ವರ್ಷಕ್ಕೆ ಆಯವ್ಯಯ ಶೋಧಕರ ನೇಮಕ.

(೩) ಮುಂದಿನ ವರ್ಷದ ಆಯವ್ಯಯದ ಅಂದಾಜು ಪಟ್ಟಿಯ ವ್ಯವಸ್ಥೆ.

(೪) ಕಾರ್ಯ ಸಮಿತಿಯ ಸೂಚನೆಗಳು.

(೫) ಸದಸ್ಯರು ನಿಯಮಾನುಸಾರವಾಗಿ ಕಳಿಸುವ ಇತರ ಸೂಚನೆಗಳು.

(೬) ೧೧ನೆಯ ನಿಬಂಧನೆಯಂತೆ ಚುನಾವಣೆ ನಡೆಯುವ ವಾರ್ಷಿಕ ಸಭೆಯಲ್ಲಿ ಅಂಚೆಯ ಮೂಲಕ ಬಂದ ಮತಗಳನ್ನು ನಿಬಂಧನೆಯ ಪ್ರಕಾರ ಎಣಿಸಿ ಫಲಿತಾಂಶವನ್ನು ಪ್ರಕಟಿಸತಕ್ಕದ್ದು.

ಸಕಲ ಸದಸ್ಯ ಸಭೆಯ ನಿರ್ದಿಷ್ಟ ಸಂಖ್ಯೆ

೨೪. ಪ್ರತಿಯೊಂದು ಸದಸ್ಯ ಸಭೆಯಲ್ಲಿಯೂ ಐವತ್ತು ಮಂದಿಗೆ ಕಡಿಮೆ ಇಲ್ಲದೆ ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲೇ ಆಗಲಿ ಕ್ಲುಪ್ತ ಕಾಲಾನಂತರ ಅರ್ಧ ಗಂಟೆಯೊಳಗಾಗಿ ಈ ಆವಶ್ಯಕ ಸಂಖ್ಯೆಯಷ್ಟು, ಸದಸ್ಯರು ಸೇರದಿದ್ದರೆ ಆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಯದಿನ, ಕಾಲ ಮತ್ತು ಸ್ಥಳ ಇವುಗಳನ್ನು ಅಧ್ಯಕ್ಷರು ನಿಶ್ಚಯಿಸಿ ಒಡನೆಯೇ ತಿಳಿಸತಕ್ಕದ್ದು. ಅಂಥ ಮುಂದಿನ ಸಭೆಯಲ್ಲಿ ಹೊಸ ವಿಷಯ ಯಾವುದನ್ನೂ ಚರ್ಚೆಗೆ ತರತಕ್ಕದ್ದಲ್ಲ.

ಸದಸ್ಯರ ಮತಕೊಡುವ, ಅಭ್ಯರ್ಥಿಯಾಗುವ ಅಧಿಕಾರ

೨೫. ಪರಿಷತ್ತಿನ ಎಲ್ಲ ಆಯ್ಕೆಗಳ ಬಗ್ಗೆಯೂ ಅಭ್ಯರ್ಥಿಯಾಗುವ ಅಧಿಕಾರ ಆಯಾ ಆಯ್ಕೆಗಳು ನಡೆಯುವ ತಾರೀಖಿಗೆ ಅರವತ್ತು ದಿವಸಗಳಿಗೆ ಮುಂಚೆ ಸದಸ್ಯರಾಗಿರುವವರಿಗೆ ಮಾತ್ರ ಇರತಕ್ಕದ್ದು ; ಮತ್ತು ತಮ್ಮಿಂದ ಪರಿಷತ್ತಿಗೆ ಚಂದಾ ಹಣದ ಬಾಕಿ ಮೂರು ತಿಂಗಳಿಗಿಂತ ಹೆಚ್ಚಾಗಿದ್ದರೆ ಮತ ಕೊಡುವ ಮತ್ತು ಅಭ್ಯರ್ಥಿಯಾಗುವ ಅಧಿಕಾರವನ್ನು ಉಪಯೋಗಿಸಲು ಅಂಥ ಬಾಕಿದಾರರಿಗೆ ಅರ್ಹತೆ ಇರುವುದಿಲ್ಲ.

ಅಂಗಸಂಸ್ಥೆಯು ಅಧಿಕಾರ

೨೬. ಪರಿಷತ್ತಿನ ಸದಸ್ಯ ಸಭೆಗಳಲ್ಲಿ ತನ್ನ ಮತವನ್ನು ಕೊಡುವುದಕ್ಕಾಗಿ ಪರಿಷತ್ತಿನ ಪ್ರತಿಯೊಂದು ಅಂಗಸಂಸ್ಥೆಯೂ ಒಬ್ಬ ಪ್ರತಿನಿಧಿಯನ್ನು ನಿಯಮಿಸಬಹುದು ; ಹಾಗೆ ಅದು ನಿಯಮಿಸಿದಾಗ ಆ ಪ್ರತಿನಿಧಿಯ ಹೆಸರನ್ನು ಪರಿಷತ್ತಿನ ಕಾರ್ಯದರ್ಶಿಗಳಿಗೆ ತಿಳಿಸಬೇಕು. ಅಂಥ ಪ್ರತಿನಿಧಿಗೆ ಚುನಾವಣೆಗಳಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಧಿಕಾರವಿರುವುದಿಲ್ಲ. ಆದರೆ ಅಂಥ ಪ್ರತಿನಿಧಿ ತಾನು ಸ್ವತಃ ಪರಿಷತ್ತಿನ ಸದಸ್ಯನಾಗಿದ್ದರೆ ಆ ಕಾರಣದಿಂದ ಅಭ್ಯರ್ಥಿಯಾಗಿ ನಿಲ್ಲಬಹುದು ; ಮತ್ತು ಆತನಿಗೆ ಎಲ್ಲ ವಿಷಯಗಳಲ್ಲಿಯೂ ಸಂಸ್ಥಾ ಪ್ರತಿನಿಧಿಯಾಗಿ ಒಮ್ಮೆಯೂ, ಸ್ವತಃ ಸದಸ್ಯನಾಗಿ ಮತ್ತೊಮ್ಮೆಯೂ ಮತ ಕೊಡುವ ಅಧಿಕಾರವಿರುತ್ತದೆ.

೨೭. ಎಲ್ಲ ತೀರ್ಮಾನಗಳೂ ಸಭೆಯಲ್ಲಿರುವ ಸದಸ್ಯರ ಬಹುಮತದಿಂದ ಆಗತಕ್ಕದ್ದು. ಆದರೆ ಅಂಗರಚನೆಯ ತಿದ್ದುಪಾಟುಗಳನ್ನು ಮಾಡುವ ಸಂದರ್ಭದಲ್ಲಿ ಹಾಜರಿದ್ದವರಲ್ಲಿ **ನಾಲ್ಕರಲ್ಲಿ ಮೂ:ು** ಭಾಗಕ್ಕೆ ಕಡಮೆ ಇಲ್ಲದಷ್ಟು ಬಹುಮತವಿರಬೇಕು.

ಸದಸ್ಯರ ಮತಕೊಡುವ, ಅಭ್ಯರ್ಥಿಯಾಗುವ ಅಧಿಕಾರ

೨೫. (೧) ಸಕಲ ಸದಸ್ಯರ ಸಭೆಯಲ್ಲಿ ಮತ್ತು ಅಧ್ಯಕ್ಷರ ಹಾಗೂ ಕಾರ್ಯಸಮಿತಿಯ ಚುನಾವಣೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಚಂದಾ ಹಣವನ್ನು ಪೂರ್ತಿಯಾಗಿ ಸಲ್ಲಿಸಿ ಮತದಾರ ಪಟ್ಟಿಯಲ್ಲಿ ಹೆಸರು ಉಳ್ಳ ಸದಸ್ಯರಿಗೆ ಮಾತ್ರ ಇರತಕ್ಕದ್ದು.

(೨) ಸಕಲ ಸದಸ್ಯರ ಸಭೆಗೆ ಮುಂಚೆ ತೊಂಭತ್ತು ದಿವಸಗಳ ಅವಧಿಯಲ್ಲಿ ಸದಸ್ಯರಾದವರಿಗೆ ಮತಾಧಿಕಾರ ಅಥವಾ ಅಭ್ಯರ್ಥಿಯಾಗಿ ನಿಲ್ಲುವ ಅಧಿಕಾರವಿರತಕ್ಕದ್ದಲ್ಲ.

೨೬. ಎಲ್ಲ ತೀರ್ಮಾನಗಳೂ ಸಭೆಯಲ್ಲಿರುವ ಸದಸ್ಯರ ಬಹುಮತದಿಂದ ಆಗತಕ್ಕದ್ದು. ಆದರೆ ಅಂಗರಚನೆಯ ತಿದ್ದುಪಾಟುಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದವರಲ್ಲಿ **ಮೂರರಲ್ಲಿ ಎರಡು ಭಾಗಕ್ಕೆ** ಕಡಿಮೆ ಇಲ್ಲದಷ್ಟು ಬಹುಮತವಿರಬೇಕು.

ವಿಶೇಷ ಸಭೆಗೆ ತಿಳಿವಳಿಕೆ

೨೮. ವಿಶೇಷ ಸಭೆಯ ತಿಳಿವಳಿಕೆ ಪತ್ರವನ್ನು ೨೧ ದಿನಗಳ ಮುಂಚೆ ಸದಸ್ಯರಿಗೆ ತಲಪುವ ಹಾಗೆ ಕಳಿಸಿಕೊಡತಕ್ಕದ್ದು.

ಸಾಹಿತ್ಯ ಸಮ್ಮೇಳನ

೨೯. ಪರಿಷತ್ತು ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಸಾಹಿತ್ಯ ಸಮ್ಮೇಳನವನ್ನು ನಡಸಬಹುದು. ಆದರೆ ಯಾವ ಭಾಗದ ಮುಖಂಡರಾಗಲಿ ಸಮ್ಮೇಳನವನ್ನು ತಮ್ಮೂರಲ್ಲಿ ನಡಸುವೆವೆಂದು ಸಭೆ ಸೇರಿ ತೀರ್ಮಾನಮಾಡಿ ಆ ವಿಷಯವನ್ನು ಪರಿಷತ್ತಿನ ಕಾರ್ಯಸಮಿತಿಗೆ ಬರಹದ ಮೂಲಕ ತಿಳಿಯಪಡಿಸಿ ಆಹ್ವಾನ ಕೊಟ್ಟರೆ ಆ ಸ್ಥಳದಲ್ಲಿ ಸಮ್ಮೇಳನ ನಡಸುವ ಬಗ್ಗೆ ಕಾರ್ಯಸಮಿತಿ ಪರ್ಯಾಲೋಚಿಸಿ ನಿರ್ಧರಿಸತಕ್ಕದ್ದು.

೩೦. (೧) ಕಾರ್ಯಸಮಿತಿ ಆಯಾ ವರ್ಷದ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸಿ ಸ್ವಾಗತ ಸಮಿತಿಗೆ ತಿಳಿಸತಕ್ಕದ್ದು. ಸ್ವಾಗತ ಸಮಿತಿಯು ಇಷ್ಟಪಟ್ಟರೆ ಇನ್ನೂ ಇಬ್ಬರಿಗೆ ಹೆಚ್ಚಿಲ್ಲದೆ ಹೆಸರುಗಳನ್ನು ಸೂಚಿಸಿ ಕಾರ್ಯಸಮಿತಿಗೆ ತಿಳಿಸತಕ್ಕದ್ದು. ಈ ಎಲ್ಲ ಹೆಸರುಗಳನ್ನೂ ಸೇರಿಸಿ ಕಾರ್ಯಸಮಿತಿಯವರು ತಮಗೆ ಸೂಕ್ತ ತೋರುವ ಕ್ರಮದಲ್ಲಿ ಪಟ್ಟಿಯನ್ನು ಸಿದ್ಧಪಡಿಸಿ ಆ ಕ್ರಮದಲ್ಲಿ ಸೂಚಿತರಾದವರ ಒಪ್ಪಿಗೆಯನ್ನು ಪಡೆದು

ವಿಶೇಷ ಸಭೆ

೨೭. (೧) ಕಾರ್ಯ ಸಮಿತಿಗೆ ಆವಶ್ಯವೆಂದು ಕಂಡುಬಂದಾಗ ಅಥವಾ ಮತಕೊಡುವ ಅಧಿಕಾರವುಳ್ಳ ಸದಸ್ಯ ಸಂಖ್ಯೆಯ ೩ರಷ್ಟು ಮಂದಿ ಸದಸ್ಯರು ಬರಹ ಮೂಲಕ ಅಪೇಕ್ಷಿಸಿದಾಗ ಸಕಲ ಸದಸ್ಯರ ವಿಶೇಷ ಸಭೆಯನ್ನು ಕರೆಯತಕ್ಕದ್ದು.

(೨) ವಿಶೇಷ ಸಭೆಯ ತಿಳಿವಳಿಕೆ ಪತ್ರವನ್ನು ೨೧ ದಿನಗಳ ಮುಂಚೆ ಸದಸ್ಯರಿಗೆ ತಲಪುವ ಹಾಗೆ ಕಳಿಸಿಕೊಡತಕ್ಕದ್ದು.

ಸಾಹಿತ್ಯ ಸಮ್ಮೇಳನ

೨೮. (೧) ಸಾಮಾನ್ಯವಾಗಿ ಪ್ರತಿವರ್ಷ ಸಾಹಿತ್ಯ ಸಮ್ಮೇಳನ ನಡೆಯತಕ್ಕದ್ದು.

(೨) ಪರಿಷತ್ತಿನ ಜಿಲ್ಲಾ ಶಾಖೆಗಳು ತಮ್ಮ ಜಿಲ್ಲೆಯ ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ನಡೆಯಬೇಕಾದಾಗ ಅವು ಸಮ್ಮೇಳನ ನಡೆಸುವ ಪ್ರಯತ್ನಗಳನ್ನು ಮಾಡತಕ್ಕದ್ದು.

(೩) ಪರಿಷತ್ತಿನ ಶಾಖಾ ಕಚೇರಿಗಳಿಲ್ಲದ ಕಡೆ ಆ ಜಿಲ್ಲೆಯ ಮುಖಂಡರು ತಮ್ಮ ಜಿಲ್ಲೆಯಲ್ಲಿ ಸಮ್ಮೇಳನವನ್ನು ನಡಸಲು ತೀರ್ಮಾನಿಸಿ ಪರಿಷತ್ತಿನ ಕೇಂದ್ರ ಕಚೇರಿಗೆ ಬರಹದ ಮೂಲಕ ತಿಳಿಸಿದರೆ ಆಗ ಪರಿಷತ್ತು ಸಮ್ಮೇಳನವನ್ನು ಆ ಜಿಲ್ಲೆಯಲ್ಲಿ ನಡಸುವ ಏರ್ಪಾಡು ಮಾಡತಕ್ಕದ್ದು.

(೪) ಸಮ್ಮೇಳನ ನಡೆಯುವ ಜಿಲ್ಲಾ ಸ್ಥಳಗಳಲ್ಲಿ ಸ್ವಾಗತ ಸಮಿತಿ ರಚನೆ ಆಗತಕ್ಕದ್ದು.

೨೯. (೧) ಕಾರ್ಯ ಸಮಿತಿ ಆಯಾ ವರ್ಷದ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸಿ ಸ್ವಾಗತ ಸಮಿತಿಗೆ ತಿಳಿಸತಕ್ಕದ್ದು. ಸ್ವಾಗತ ಸಮಿತಿಯು ಇಷ್ಟಪಟ್ಟರೆ ಇನ್ನೂ ಇಬ್ಬರಿಗೆ ಹೆಚ್ಚಿಲ್ಲದೆ ಹೆಸರುಗಳನ್ನು ಸೂಚಿಸಿ ಕಾರ್ಯ ಸಮಿತಿಗೆ ತಿಳಿಸತಕ್ಕದ್ದು. ಹೀಗೆ ಸೂಚಿತರಾದವರ ಒಪ್ಪಿಗೆಯನ್ನು ಬರಹದಮೂಲಕ ಪಡೆಯತಕ್ಕದ್ದು. ಈ ಹೆಸರುಗಳನ್ನೂ ಆಯ್ಕೆಯ ಪತ್ರದಲ್ಲಿ ಅಕಾರಾದಿ ಕ್ರಮದಲ್ಲಿ ಅಚ್ಚುಹಾಕಿಸತಕ್ಕದ್ದು. ಅನಂತರ ಪರಿಷತ್ತಿನ ಸದಸ್ಯರೆಲ್ಲರೂ

ಆಯ್ಕೆಯನ್ನು ನಡಸತಕ್ಕದ್ದು. ಪರಿಷತ್ತಿನ ಸದಸ್ಯರೆಲ್ಲರೂ ಪತ್ರದ ಮೂಲಕ ಪ್ರತಿಯೊಬ್ಬರೂ ಬೇರೆ ಬೇರೆಯಾಗಿ (ಬ್ಯಾಲೆಟ್ ರೀತಿಯಲ್ಲಿ) ಈ ಸೂಚಿತ ಜನರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು.

(೨) ಸಮಸಂಖ್ಯೆಯ ಮತ ಬಂದ ಸಂದರ್ಭದಲ್ಲಿ ಗಣಕರು ಚೀಟಿಯ ಮೂಲಕ ನಿರ್ಣಯಿಸತಕ್ಕದ್ದು.

ಕಾರ್ಯಸಮಿತಿಯ ವಿಶೇಷಾಧಿಕಾರ

೩೧. ಯಾವ ಸಂದರ್ಭದಲ್ಲಾಗಲಿ, ಯಾವ ಕಾರಣದಿಂದಾಗಲಿ ಅಂಗೀಕರಿಸಿದ ಸ್ಥಳದಲ್ಲಿ ಸಮ್ಮೇಳನವನ್ನು ನಡಸಲಾಗದಿದ್ದರೆ ಅಥವಾ ಚುನಾವಣೆಯಾಗಿದ್ದವರು ಅಧ್ಯಕ್ಷರಾಗಿ ಬರಲು ಆಗದಿದ್ದರೆ ಅಥವಾ ಇತರ ಅನಿವಾರ್ಯಗಳು ಯಾವುದಾದರೂ ಸಂಭವಿಸಿದರೆ ಅಂಥ ವಿಶೇಷ ಸನ್ನಿವೇಶಗಳಲ್ಲಿ ಬೇರೆ ಏರ್ಪಾಟುಗಳನ್ನು ಮಾಡಿ ಸಮ್ಮೇಳನವನ್ನು ನೆರವೇರಿಸುವುದಕ್ಕೂ ಅಥವಾ ಮುಂದಕ್ಕೆ ಹಾಕುವುದಕ್ಕೂ ಕಾರ್ಯಸಮಿತಿಗೆ ಅಧಿಕಾರವಿರುತ್ತದೆ.

ವಿಷಯ ನಿರ್ಧಾರಕ ಮಂಡಲಿ

೩೨. ಸಮ್ಮೇಳನದಲ್ಲಿ ಆಲೋಚಿಸತಕ್ಕ ವಿಷಯಗಳನ್ನು ನಿರ್ಧರ ಮಾಡುವುದಕ್ಕಾಗಿ ಒಂದು ವಿಷಯ ನಿರ್ಧಾರಕ ಮಂಡಲಿಯನ್ನು ನೇಮಿಸತಕ್ಕದ್ದು. ಅದರ ರಚನೆ ಮುಂದೆ ಹೇಳುವಂತಿರತಕ್ಕದ್ದು:—

(೧) ಸಮ್ಮೇಳನಕ್ಕೆ ಬಂದಿರುವ ಪರಿಷತ್ತಿನ ಕಾರ್ಯಸಮಿತಿಯ ಎಲ್ಲ ಸದಸ್ಯರು ;

(೨) ಸಮ್ಮೇಳನದ ಅಧ್ಯಕ್ಷರು ;

(೩) ಸಮ್ಮೇಳನಕ್ಕೆ ಬಂದಿರುವ ಹಿಂದಿನ ಸಮ್ಮೇಳನಗಳ ಅಧ್ಯಕ್ಷರು ;

(೪) ಸ್ವಾಗತ ಮಂಡಲಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ;

(೫) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಪರಿಷತ್ತಿನ ಇಬ್ಬರು ಸದಸ್ಯರು ;

(೬) ಸ್ವಾಗತ ಮಂಡಲಿಯವರು ನಿಯಮಿಸುವ ಐದು ಮಂದಿ ;

(೭) ಪ್ರತಿನಿಧಿಗಳು ತಮ್ಮಲ್ಲಿ ಆರಿಸುವ ಹತ್ತು ಮಂದಿ.

ಪತ್ರದ ಮೂಲಕ ಪ್ರತಿಯೊಬ್ಬರೂ ಬೇರೆ ಬೇರೆಯಾಗಿ (ಬ್ಯಾಲೆಟ್ ರೀತಿಯಲ್ಲಿ) ಈ ಸೂಚಿತ ಜನರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು. ಸ್ವಾಗತ ಸಮಿತಿ ಮತ್ತು ಪರಿಷತ್ತಿನ ಕಾರ್ಯಸಮಿತಿಯ ಒಮ್ಮತದ ಸೂಚನೆ ಇದ್ದಲ್ಲಿ ಚುನಾವಣೆಯ ಅಗತ್ಯವಿಲ್ಲ.

(೨) ಸಮಸಂಖ್ಯೆಯ ಮತ ಬಂದ ಸಂದರ್ಭದಲ್ಲಿ ಗಣಕರು ಚೀಟಿಯ ಮೂಲಕ ನಿರ್ಣಯಿಸತಕ್ಕದ್ದು.

ಕಾರ್ಯಸಮಿತಿಯ ವಿಶೇಷಾಧಿಕಾರ

೩೦. ಯಾವ ಸಂದರ್ಭದಲ್ಲಾಗಲೀ, ಯಾವ ಕಾರಣದಿಂದಲಾಗಲೀ ಅಂಗೀಕರಿಸಿದ ಸ್ಥಳದಲ್ಲಿ ಸಮ್ಮೇಳನವನ್ನು ನಡಸಲಾಗದಿದ್ದರೆ ಅಥವಾ ಚುನಾವಣೆಯಾಗಿದ್ದವರು ಅಧ್ಯಕ್ಷರಾಗಿ ಬರಲು ಆಗದಿದ್ದರೆ ಅಥವಾ ಇತರ ಅನಿವಾರ್ಯಗಳು ಯಾವುದಾದರೂ ಸಂಭವಿಸಿದರೆ ಅಂಥ ವಿಶೇಷ ಸನ್ನಿವೇಶಗಳಲ್ಲಿ ಬೇರೆ ಏರ್ಪಾಟುಗಳನ್ನು ಮಾಡಿ ಸಮ್ಮೇಳನವನ್ನು ನೆರವೇರಿಸುವುದಕ್ಕೂ ಅಥವಾ ಮುಂದಕ್ಕೆ ಹಾಕುವುದಕ್ಕೂ ಕಾರ್ಯ ಸಮಿತಿಗೆ ಅಧಿಕಾರವಿರುತ್ತದೆ.

ವಿಷಯ ನಿರ್ಧಾರಕ ಮಂಡಲಿ

೩೧. ಸಮ್ಮೇಳನದಲ್ಲಿ ಆಲೋಚಿಸತಕ್ಕ ವಿಷಯಗಳನ್ನು ನಿರ್ಧಾರ ಮಾಡುವುದಕ್ಕಾಗಿ ಒಂದು ವಿಷಯನಿರ್ಧಾರಕ ಮಂಡಲಿಯನ್ನು ನೇಮಿಸತಕ್ಕದ್ದು. ಅದರ ರಚನೆ ಮುಂದೆ ಹೇಳುವಂತಿರತಕ್ಕದ್ದು:—

(೧) ಸಮ್ಮೇಳನಕ್ಕೆ ಬಂದಿರುವ ಪರಿಷತ್ತಿನ ಕಾರ್ಯ ಸಮಿತಿಯ ಎಲ್ಲ ಸದಸ್ಯರು ;

(೨) ಸಮ್ಮೇಳನದ ಅಧ್ಯಕ್ಷರು ;

(೩) ಸಮ್ಮೇಳನಕ್ಕೆ ಬಂದಿರುವ ಹಿಂದಿನ ಸಮ್ಮೇಳನಗಳ ಅಧ್ಯಕ್ಷರು ;

(೪) ಸ್ವಾಗತ ಮಂಡಲಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ;

(೫) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಪರಿಷತ್ತಿನ ಇಬ್ಬರು ಸದಸ್ಯರು ;

(೬) ಸ್ವಾಗತ ಮಂಡಲಿಯವರು ನಿಯಮಿಸುವ ಐದು ಮಂದಿ ;

(೭) ಪ್ರತಿನಿಧಿಗಳು ತಮ್ಮಲ್ಲಿ ಆರಿಸುವ ಹತ್ತು ಮಂದಿ.

೮

ಆದಾಯ ಭಾಗ

೩೩. ಸಮ್ಮೇಳನದ ಪ್ರತಿನಿಧಿ ಶುಲ್ಕ ಪರಿಷತ್ತಿಗೆ ಸಲ್ಲತಕ್ಕದ್ದು.

ಪರಿಷತ್ಸಮ್ಮೇಳನದ ಸ್ವಾಗತ ಸಮಿತಿಯವರಲ್ಲಿ ನಿಂತ ಉಳಿತಾಯದ ಮೊಬಲಗನ್ನು ಆ ಸಮಿತಿಯವರು ಪರಿಷತ್ತಿಗೆ ಸಲ್ಲಿಸತಕ್ಕದ್ದು.

ವಿಶೇಷ ವಿಚಾರಗಳು

ಆಡಳಿತ ವರ್ಷ

೩೪. ಪರಿಷತ್ತಿನ ಆಡಳಿತ ವರ್ಷ **ಜನವರಿಯಿಂದ ಡಿಸೆಂಬರ್ ೩೧ರ** ವರೆಗೆ ಎಂದು ಬಗೆಯತಕ್ಕದ್ದು.

ಲೆಕ್ಕಗಳು

೩೫. ಪರಿಷತ್ತಿನ ಲೆಕ್ಕಗಳೆಲ್ಲವನ್ನೂ ಪರಿಷತ್ತಿನ ಸದಸ್ಯರಲ್ಲಿ ಯಾರಿಗೇ ಆಗಲಿ ನೋಡಲು ಅಧಿಕಾರವಿರತಕ್ಕದ್ದು.

ವ್ಯವಹಾರ

೩೬. ಪರಿಷತ್ತಿನ ಮುಖ್ಯವಾದ ಆಡಳಿತಗಳಲ್ಲಿ ಎಂದರೆ ಲೇವಾದೇವಿಗಳಲ್ಲಿಯೂ, ಕೋರ್ಟಿನ ವ್ಯವಹಾರಗಳಲ್ಲಿಯೂ–ಅಧ್ಯಕ್ಷರಾಗಲೀ, ಕಾರ್ಯದರ್ಶಿಗಳಾಗಲೀ ಪರಿಷತ್ತಿನ ಪರವಾಗಿ ತಮ್ಮ ರುಜುವನ್ನು ಹಾಕಿ ಪರಿಷತ್ತಿನ ಮುದ್ರೆಯನ್ನೊತ್ತಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಆದಾಯ ಭಾಗ

೩೨. (೧) ಸಮ್ಮೇಳನದ ಪ್ರತಿನಿಧಿ ಶುಲ್ಕ ಪರಿಷತ್ತಿಗೆ ಸಲ್ಲತಕ್ಕದ್ದು.

(೨) ಪರಿಷತ್ಸಮ್ಮೇಳನದ ಸ್ವಾಗತ ಸಮಿತಿಯವರಲ್ಲಿ ನಿಂತ ಉಳಿತಾಯದ ಮೊಬಲಗಿನ ಅರ್ಧಭಾಗವನ್ನು ಪರಿಷತ್ತಿಗೂ ಉಳಿದ ಅರ್ಧಭಾಗವನ್ನು ಇರುವ ಕಡೆ ಜಿಲ್ಲಾ ಕಚೇರಿಗೂ ಸಲ್ಲಿಸತಕ್ಕದ್ದು.

(೩) ಪರಿಷತ್ತಿನ ಶಾಖಾ ಕಚೇರಿಗಳಿಲ್ಲದ ಕಡೆ ಉಳಿತಾಯದ ಪೂರ್ಣ ಮೊಬಲಗನ್ನು ಪರಿಷತ್ತಿನ ಕೇಂದ್ರ ಕಚೇರಿಗೆ ಸಲ್ಲಿಸತಕ್ಕದ್ದು.

ವಿಶೇಷ ವಿಚಾರಗಳು

ಆಡಳಿತ ವರ್ಷ

೩೩. ಪರಿಷತ್ತಿನ ಆಡಳಿತ ವರ್ಷ ಜನವರಿ ಒಂದರಿಂದ **ಡಿಸೆಂಬರ್** ಮೂವತ್ತೊಂದರ ವರೆಗೆ ಎಂದು ಬಗೆಯತಕ್ಕದ್ದು.

ಲೆಕ್ಕಗಳು

೩೪. ಪರಿಷತ್ತಿನ ಲೆಕ್ಕಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳಿಂದ ಲಿಖಿತಮೂಲಕ ಪಡೆಯತಕ್ಕದ್ದು.

ವ್ಯವಹಾರ

೩೫. ಸಕಲ ಸದಸ್ಯರ ಸಭೆಯ ಒಪ್ಪಿಗೆ ನಿರ್ಣಯ ಆಗದೆ ಪರಿಷತ್ತಿನ ಆಸ್ತಿಗಳನ್ನಾಗಲೀ ಠೇವಣಿಗಳನ್ನಾಗಲೀ ಕ್ರಮ ಆಧಾರ ಮುಂತಾದುವುಗಳನ್ನು ಮಾಡತಕ್ಕದ್ದಲ್ಲ.

೩೬. ಪರಿಷತ್ತಿನ ಮುಖ್ಯವಾದ ಆಡಳಿತಗಳಲ್ಲಿ ಎಂದರೆ ಲೇವಾದೇವಿಗಳಲ್ಲಿಯೂ ಕೋರ್ಟಿನ ವ್ಯವಹಾರಗಳಲ್ಲಿಯೂ ಅಧ್ಯಕ್ಷರಾಗಲೀ ಕಾರ್ಯದರ್ಶಿಗಳಾಗಲೀ ಪರಿಷತ್ತಿನ ಪರವಾಗಿ ತಮ್ಮ ರುಜುವನ್ನು ಹಾಕಿ ಪರಿಷತ್ತಿನ ಮುದ್ರೆಯನ್ನೊತ್ತಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಅಧ್ಯಕ್ಷರು ಮತ್ತು ಕಾರ್ಯಸಮಿತಿ ಸದಸ್ಯರ ಚುನಾವಣೆಗೆ ಸಂಬಂಧಪಟ್ಟ ಉಪನಿಬಂಧನೆಗಳು

೧. (ಅ) ಕಾರ್ಯಸಮಿತಿ ನಿರ್ದಿಷ್ಟ ವರ್ಷದ ಅವಧಿಯು ಮುಗಿದ ಆರು ತಿಂಗಳಿನೊಳಗಾಗಿ ಮುಂದಿನ ಕಾರ್ಯಸಮಿತಿಗೆ ಚುನಾವಣೆ ನಡೆಯತಕ್ಕದ್ದು.

(ಆ) ಚುನಾವಣೆ ನಡೆಯುವ ಕನಿಷ್ಟ ಮೂರು ತಿಂಗಳ ಮೊದಲು ಕಾರ್ಯಸಮಿತಿಯು ಸಭೆ ಸೇರಿ ಚುನಾವಣಾ ಕಾರ್ಯಕ್ರಮವನ್ನು ನಡೆಸಿಕೊಡಲು ಸದಸ್ಯರಲ್ಲಿ ಒಬ್ಬರನ್ನು ಚುನಾವಣಾಧಿಕಾರಿಯೆಂದು ಸರ್ವಾನುಮತದಿಂದ ಆರಿಸಿ ಪ್ರಕಟಿಸಬೇಕು. ಚುನಾವಣಾಧಿಕಾರಿಯು ಯಾವ ಅಧಿಕಾರ ಸ್ಥಾನಗಳಿಗೂ ಅಭ್ಯರ್ಥಿಯಾಗಿ ನಿಲ್ಲತಕ್ಕದ್ದಲ್ಲ.

(ಇ) ಅವರು ಈ ಕೆಳಗಿನ ನಿಯಮಕ್ಕನುಸರಿಸಿ ಚುನಾವಣಾ ಕಾರ್ಯಕ್ರಮವನ್ನು ಗೊತ್ತುಪಡಿಸಿ ನಡೆಸಿಕೊಡಬೇಕು.

೨. (ಅ) ಚುನಾವಣೆ ನಡೆಯುವ ಎಪ್ಪತ್ತೈದು ದಿನಗಳ ಮೊದಲು ಸದಸ್ಯರ ಪಟ್ಟಿಯನ್ನು ವಿಭಾಗಗಳಾಗಿ ವಿಂಗಡಿಸಿ ಪರಿಷತ್ತಿನ ಕಚೇರಿಯಲ್ಲಿ ಪ್ರಕಟಿಸಬೇಕು.

(ಆ) ಈ ಬಗ್ಗೆ ಯಾರದಾದರೂ ಆಕ್ಷೇಪಣೆ ಇದ್ದರೆ ಅಂಥವುಗಳನ್ನು ಐದುದಿನ ಅವಕಾಶ ಕೊಟ್ಟು-ಸ್ವೀಕರಿಸಿ-೬೫ದಿನಗಳ ಮೊದಲು ಅಂತಿಮವಾಗಿ ಚುನಾವಣೆಗೆ ಅರ್ಹರಾದ ಸದಸ್ಯರ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟಿಸತಕ್ಕದ್ದು.

(ಇ) ನಾಮಪತ್ರಗಳ ಸ್ವೀಕಾರದ ಕೊನೆಯ ದಿವಸವನ್ನು ಪ್ರಕಟಿಸಬೇಕು.

(ಈ) ನಾಮಪತ್ರಗಳ ಸ್ವೀಕಾರದ ದಿವಸಕ್ಕೂ ಚುನಾವಣೆ ನಡೆಯುವ ದಿನಕ್ಕೂ ಕನಿಷ್ಠ ೫೦ ದಿವಸಗಳ ಅಂತರವಾದರೂ ಇರಬೇಕು.

(ಉ) ನಾಮಪತ್ರಗಳ ಸ್ವೀಕಾರದ ದಿನದಿಂದ ಮೂರು ದಿವಸಗಳೊಳಗಾಗಿ ಅವುಗಳ ಪರಿಶೀಲನೆ ನಡೆಸಬೇಕು.

(ಊ) ನಾಮಪತ್ರಗಳ ಪರಿಶೀಲನೆಯಾದನಂತರ ನಾಮಪತ್ರವನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಮೂರು ದಿವಸಗಳ ಅವಧಿಯ ಅವಕಾಶವಿರಬೇಕು.

(ಋ) ಅನಂತರ ಉಳಿದಿರುವ ಸ್ಪರ್ಧಿಗಳ ಹೆಸರನ್ನು ಆಯಾ ವಿಭಾಗದಲ್ಲಿ ಅಕಾರಾನುಕ್ರಮವಾಗಿ ಪ್ರಕಟಿಸಬೇಕು.

(ೠ) ಚುನಾವಣೆ ನಡೆಯುವ ಕನಿಷ್ಟ ಮೂವತ್ತು ದಿವಸಗಳ ಮೊದಲು ಎಲ್ಲ ಸ್ಪರ್ಧಿಗಳ ಹೆಸರನ್ನು ಪ್ರಕಟಿಸಲೇಬೇಕು.

(ಎ) ಅಗತ್ಯವಾದಷ್ಟೇ ನಾಮಪತ್ರಗಳು ಬಂದರೆ ಅವರು ಚುನಾವಣೆ ಇಲ್ಲದೆ ಅವಿರೋಧವಾಗಿ ಆಯ್ಕೆಯಾದರೆಂದು ಸಾರಬೇಕು.

೩. (ಅ) ಪರಿಷದಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಿಲ್ಲುವವರು ಸ್ವಯಂ ಸುಪ್ರಸಿದ್ಧ ಸಾಹಿತಿಗಳಾಗಿದ್ದು ಹತ್ತಾರು ವರ್ಷಗಳಿಂದ ಸಾಹಿತ್ಯಸೇವೆ ಮಾಡುತ್ತಿರುವವರಾಗಿರಬೇಕು.

(ಆ) ಅಧ್ಯಕ್ಷ ಚುನಾವಣೆಗೆ ಮಾತ್ರ-ಮೂರು ನಾಮಪತ್ರಕ್ಕಿಂತ ಹೆಚ್ಚಿಗೆ ನಾಮಪತ್ರಗಳು ಬಂದು ನಿರ್ದಿಷ್ಟ ಅವಧಿಯಲ್ಲಿ ಯಾರೂ ಹಿಂದೆಗೆದುಕೊಳ್ಳದಿದ್ದರೆ ಅವುಗಳ ಪರಿಶೀಲನೆಗೆ ಕೂಡಲೇ ಕಾರ್ಯಸಮಿತಿ ಸಭೆ ಸೇರತಕ್ಕದ್ದು. ಅವುಗಳಲ್ಲಿ ಮೂರು ನಾಮಪತ್ರಗಳನ್ನು ಮಾತ್ರ ಸ್ಪರ್ಧಿಸಲು ಒಪ್ಪಿಗೆ ಕ್ರಮದಲ್ಲಿ (**Order of preference**) ಶಿಫಾರ್ಸು ಮಾಡುವುದಕ್ಕೂ ಉಳಿದವುಗಳನ್ನು ತಿರಸ್ಕರಿಸುವುದಕ್ಕೂ ಕಾರ್ಯಸಮಿತಿಗೆ ಅಧಿಕಾರವಿರುತ್ತದೆ. ಆ ಮೂರು ಮಂದಿಗೆ ಮಾತ್ರ ಸ್ಪರ್ಧಿಸಲು ಅಧಿಕಾರವಿರತಕ್ಕದ್ದು.

೪. (ಅ) ಆಯಾ ವಿಭಾಗದಿಂದ ಸ್ಪರ್ಧೆಗೆ ನಿಲ್ಲುವ ವ್ಯಕ್ತಿಯು ಆಯಾ ವಿಭಾಗದಲ್ಲಿ ವಾಸಿಸತಕ್ಕವರೇ ಆಗಿರಬೇಕು. ಅವರುಗಳು ಪರಿಷತ್ತಿನ ಸದಸ್ಯರಿಂದ ಸೂಚನೆ, ಅನುಮೋದನೆ ಮಾಡಲ್ಪಟ್ಟವರಾಗಿರಬೇಕು.

(ಆ) ಆಯಾ ಕ್ಷೇತ್ರಗಳ ಪರವಾಗಿ ನಿಂತ ಕಾರ್ಯಸಮಿತಿ ಸದಸ್ಯರನ್ನು ಆರಿಸುವ ಹಕ್ಕು ಆಯಾ ಕ್ಷೇತ್ರಗಳಲ್ಲಿನ ಸದಸ್ಯರಿಗೆ ಮಾತ್ರ ಸೀಮಿತವಾಗಿರುತ್ತದೆ. ಅಧ್ಯಕ್ಷರ ಚುನಾವಣೆಗೆ ಮಾತ್ರ ಸಕಲ ಸದಸ್ಯರೂ ಮತವನ್ನು ಚಲಾಯಿಸತಕ್ಕದ್ದು.

(ಇ) ಸ್ಪರ್ಧಿಸುವ ಉಮೇದುವಾರರು ಕನಿಷ್ಠ ಮೂರುವರ್ಷದ ಹಿಂದಿನಿಂದಲಾದರೂ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

೫. (ಅ) ಅಂಗಸಂಸ್ಥೆಯು ಪ್ರತಿನಿಧಿ ಚುನಾವಣೆಗೆ ನಿಲ್ಲುವುದಾದರೆ ಅದಕ್ಕೆ ಸೂಚಕರ ಅಗತ್ಯತೆ ಇಲ್ಲ.

(ಆ) ಅಂಗಸಂಸ್ಥೆಗಳ ಪ್ರತಿನಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಯಾರೂ ಹಿಂದೆಗೆದುಕೊಳ್ಳದೆ ಮೂರಕ್ಕಿಂತ ಹೆಚ್ಚಿಗೆ ಸಂಸ್ಥೆಯ ಪ್ರತಿನಿಧಿಗಳು ಚುನಾವಣೆಗೆ ನಿಂತರೆ ಆಗ ಕಾರ್ಯಸಮಿತಿ ಸಭೆ ಸೇರಿ ಅವುಗಳಲ್ಲಿ ಮೂರನ್ನು ಮಾತ್ರ ಒಪ್ಪಿಗೆ ಕ್ರಮದಲ್ಲಿ (Order of preference) ಚುನಾವಣೆಗೆ ಶಿಫಾರ್ಸುಮಾಡಿ ಉಳಿದವುಗಳನ್ನು ತಿರಸ್ಕರಿಸುವ ಹಕ್ಕು ಕಾರ್ಯಸಮಿತಿಗೆ ಇರುತ್ತದೆ.

೬. (ಅ) ಚುನಾವಣಾ ಸಂಬಂಧದಲ್ಲಿ ತೋರಬಹುದಾದ ಭಿನ್ನಾಭಿಪ್ರಾಯಗಳ ಬಗ್ಗೆ ಚುನಾವಣಾಧಿಕಾರಿಗಳಿಗೆ ಇಪ್ಪತ್ತೈದು ರೂಪಾಯಿಗಳ ರುಸುಮಿನೊಡನೆ ದೂರು ಕೊಡಬಹುದು. ಆದರೆ ಆ ಬಗ್ಗೆ ಚುನಾವಣಾಧಿಕಾರಿಯ ತೀರ್ಮಾನವೇ ಕೊನೆಯ ತೀರ್ಮಾನವಾಗಿರತಕ್ಕದ್ದು.

(ಆ) ಅಂಚೆ ರವಾನೆಗೆ ಸಾಕಷ್ಟು ಕಾಲಾವಕಾಶವನ್ನು ಕೊಟ್ಟು ಪರಿಷತ್ತಿನ ಕಚೇರಿಗೆ ಮತಪತ್ರ ತಲಪುವ ಕೊನೆಯ ದಿನಾಂಕವನ್ನು ಗೊತ್ತುಮಾಡಿ, ಆ ದಿನ ಕಳೆದ ನಂತರ ಚುನಾವಣಾಧಿಕಾರಿಗೆ ಅಂಚೆಯ ಮೂಲಕ ಬಂದಿರುವ ಮತಪತ್ರಗಳ ಲಕೋಟೆಗಳನ್ನು ತಲುಪಿಸತಕ್ಕದ್ದು.

(ಇ) ಸದಸ್ಯರ ಪಟ್ಟಿಯನ್ನೂ ಮತ್ತು ನಾಮಕರಣ ಪತ್ರಗಳನ್ನೂ (Nomination papers) ಕ್ಲುಪ್ತವಾದ ಬೆಲೆಗೆ ಮಾರತಕ್ಕದ್ದು.

(ಈ) ಮತಗಳನ್ನು ಎಣಿಕೆಮಾಡುವ ಮತ್ತು ಫಲಿತಾಂಶವನ್ನು ಪ್ರಕಟನೆ ಮಾಡುವ ದಿನಾಂಕಗಳನ್ನು ಮುಂಚೆಯೇ ಗೊತ್ತುಮಾಡಬೇಕು. ಫಲಿತಾಂಶ ಪ್ರಕಟವಾದ ಒಂದು ತಿಂಗಳೊಳಗಾಗಿ ಹೊಸದಾಗಿ ಚುನಾಯಿತರಾದವರ ಮೊದಲ ಕಾರ್ಯಸಭೆ ಚುನಾವಣಾಧಿಕಾರಿಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸೇರತಕ್ಕದ್ದು ಮತ್ತು ಹಳೆಯ ಕಾರ್ಯಕರ್ತರು ತಮ್ಮ ಅಧಿಕಾರವನ್ನು ಹೊಸ ಅಧಿಕಾರಿಗಳಿಗೆ ವಹಿಸಿಕೊಡತಕ್ಕದ್ದು.

ಾತ್ರ. ಆ ಪೈಕಿ ಸುಮಾರು ೪೫೦ ಮಂದಿ ಆಜೀವಸದಸ್ಯರು. ೃತ್ವದ ಹಣದಬಡ್ಡಿ ಮಾತ್ರ ಪರಿಷತ್ತಿನ ನಿತ್ಯ ಉಪಯೋ ದೆ. ಅದು ತಲಾ ಸರಾಸರಿ ವರ್ಷಕ್ಕೆ ಐದು ರೂ. ಆಗು ಳಿದ ವಾರ್ಷಿಕ ಸದಸ್ಯರು ವರ್ಷಕ್ಕೆ ಆರು ರೂ. ಯಂತೆ ಸರು. ಈ ಎಲ್ಲರಿಗೂ ವರ್ಷಕ್ಕೆ ಆರು ರೂಪಾಯಿನ ಕನ್ನಡ ; ರೂ. ೨.೫೦ರ ಸಾಹಿತ್ಯ ಪರಿಷತ್ಪತ್ರಿಕೆಗಳನ್ನು ಉಚಿತವಾಗಿ ಡುವುದಲ್ಲದೆ, ಪುಸ್ತಕ ಭಂಡಾರ, ವಾಚನಾಲಯ ಮತ್ತು ಸ್ಕೃತಿಕ ಕಾರ್ಯಕ್ರಮಗಳ ಪ್ರಯೋಜನವನ್ನು ಅವರಿಗೆ ಕಿಸಿಕೊಡುವುದಾಗಿದೆ. ಕಳೆದ ವರ್ಷದಿಂದ ಮೈಸೂರು ಸರ್ಕಾರ ು ಪರಿಷತ್ತಿಗೆ ವರ್ಷಕ್ಕೆ ರೂ. ೭೫,೦೦೦ಗಳ ಸಹಾಯ ವನ್ನು ಒದಗಿಸುತ್ತಿದ್ದಾರೆ. ಆದರೆ ಮೇಲೆ ಸೂಚಿಸಿರುವ ತ್ತಿನ ಆಶೋತ್ತರಗಳು ನೆರವೇರಬೇಕಾದರೆ ವರ್ಷವೊಂದಕ್ಕೆ ು ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ.

ಕನ್ನಡಿಗರೂ ಯೋಚಿಸಬೇಕಾದ ಒಂದು ದೊಡ್ಡ ಪ್ರಶ್ನೆ ಎಂದರೆ ತ್ತಿನಂತಹ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಎಷ್ಟು ದಿನ ಹೀಗೇ ರದ ಧನಸಹಾಯವವನ್ನು ನಂಬಿ ಕುಳಿತಿರಬೇಕು? ಎರಡೂ ೋಟಿ ಜನ ಕನ್ನಡಿಗರಿರುವ ಕನ್ನಡ ನಾಡಿನಲ್ಲಿ ಆ ಕನ್ನಡಿಗರ ತ್ಯ, ಸಂಸ್ಕೃತಿ, ಕಲೆಗಳ ಅಭಿವೃದ್ಧಿಗೆ ಮೀಸಲಾದ ಏಕೈಕ ನಿಧಿಕ ಸಂಸ್ಥೆ ಸತ್ವಪೂರ್ಣವಾಗಿ ಕಂಗೊಳಿಸುವಂತೆಯೂ ರ್ಶೀಲವಾಗುವಂತೆಯೂ ಜನರ ಬೆಂಬಲದೊರೆಯಬೇಡವೆ? ದೊರೆತದ್ದೇ ಆದರೆ ಅದರ ಚಟುವಟಿಕೆಗಳು ಹೆಚ್ಚು ಪ್ರಭಾವಾ ಾಗಿ, ಶಕ್ತಿಯುತವಾಗಿ, ಸ್ವತಂತ್ರವಾದ ಧೋರಣೆಯನ್ನು ಕೊಂಡು ಕನ್ನಡಿಗರ ಸರ್ವತೋಮುಖವಾದ ಏಳಿಗೆಗೆ ಯಕವಾಗಬಲ್ಲದು. ಆ ದೃಷ್ಟಿಯಿಂದ ಪರಿಷತ್ತು ಈ ಮನವಿ ನಿಮಗೆ ಸಲ್ಲಿಸುತ್ತಿದೆ.

ಭಿಮಾನಿಗಳಾದ ಕನ್ನಡಿಗರು ಪರಿಷತ್ತಿಗೆ ಹೇಗೆ ಸಹಾಯ ಬಹುದು?

ಪರಿಷತ್ತಿಗೆ ಕೆಳಗಿನ ಯಾವುದೇ ವಿಶೇಷವರ್ಗದ ಸದಸ್ಯರಾಗಿ ಸೇರ ಬಹುದು. ಇದರಿಂದ ಪರಿಷತ್ತಿನ ಶಾಶ್ವತನಿಧಿಗೆ ಹಣಸೇರಿ ಅದರಿಂದ ಬರುವ ಬಡ್ಡಿ ಪರಿಷತ್ತಿನ ದಿನಬಳಕೆಗೆ ಉಪಯೋಗವಾಗುತ್ತದೆ.

೧.	ಉದ್ಧಾರಕ ವರ್ಗ	ರೂ. ೧,೦೦೦/-
೨.	ಪ್ರದಾತೃ ವರ್ಗ	ರೂ. ೫೦೦/-
೩.	ಆಶ್ರಯದಾತ ವರ್ಗ	ರೂ. ೨೫೦/-
೪.	ಆಜೀವ ಸದಸ್ಯ ವರ್ಗ	ರೂ. ೧೦೦/-

೨. ಗೊತ್ತಾದ ಉದ್ದೇಶಕ್ಕಾಗಿ ದತ್ತಿನಿಧಿಗಳನ್ನು ದಾನಮಾಡುವುದು. ಇದರಿಂದ ದಾನಿಗಳ ಹೆಸರಿನಲ್ಲಿ ಪ್ರತಿವರ್ಷವೂ ಸಾಹಿತ್ಯ ಪ್ರಚಾರ ನಡೆದು ಅವರ ಹೆಸರು ಚಿರಸ್ಮರಣೀಯವಾಗಿರುತ್ತದೆ.

೩. ಪರಿಷತ್ತಿನ ಗ್ರಂಥಭಂಡಾರಕ್ಕೆ ಬೀರುಗಳ ಆವಶ್ಯಕತೆ ಇದೆ. ಅವನ್ನು ದಾನಮಾಡಬಹುದು. ದಾನಿಗಳ ಹೆಸರನ್ನು ಆ ಬೀರುಗಳ ಮೇಲೆ ಬರೆಸಿಡಲಾಗುತ್ತದೆ.

೪. ಪರಿಷತ್ತಿನ ರಂಗಮುಂಟಪದ ಪುನರ್ವ್ಯವಸ್ಥೆಗೆ ರೂ. ೨೫,೦೦೦ ಬೇಕಾಗಿದೆ. ಇದಕ್ಕಾಗಿ ಹಣ ಕೊಡುವದಾನಿಗಳ ಹೆಸರನ್ನು ಚಿತ್ರಫಲಕದ ಮೇಲೆ ಬರೆಸಿ ತೂಗುಹಾಕಲಾಗುತ್ತದೆ.

೫. ಪರಿಷತ್ತು ಸ್ಥಾಪಿತವಾಗಿ ೫೨ ವರುಷವಾಗಿದ್ದು "ಸುವರ್ಣ ಮಹೋತ್ಸವ" ವನ್ನು ನಡೆಸಲು ತಗಲುವ ಕನಿಷ್ಠಪಕ್ಷ ೨ ಲಕ್ಷ ರೂ. ಗಳ ಬಗ್ಗೆ ಧನಸಹಾಯವನ್ನು ಕೊಡುವ ದಾನಿಗಳ ಹೆಸರನ್ನು ಬರೆಸಿ ಫಲಕಗಳಮೇಲೆ ಪ್ರಕಟಿಸಲಾಗುತ್ತದೆ.

೬. ಪುಸ್ತಕ ಪ್ರಕಟನೆಗೆ ಒಂದು ಲಕ್ಷ ರೂಪಾಯಿಗಳಾದರೂ ಅಗತ್ಯ. ದಾನಿಗಳು ಪುಸ್ತಕ ಪ್ರಕಟನೆಗೆ ದಾನಮಾಡಿ ಅದರಿಂದ ಬರುವ ಹಣವನ್ನು ಪರಿಷತ್ತು ತನ್ನ ಸಾಹಿತ್ಯ ಸಂಸ್ಕೃತಿಗಳ ಚಟುವಟಿಕೆಗಳಿಗೆ, ಇತರ ಪುಸ್ತಕ ಪ್ರಕಟನೆಗಳಿಗೆ ಬಳಸಿಕೊಳ್ಳಲು ಅವಕಾಶ ಕೊಟ್ಟರೆ ಅದರಿಂದ ಸಾಹಿತ್ಯಾಭಿವೃದ್ಧಿಗೆ ಅವರು ಹಿರಿಯ ಕಾಣಿಕೆ ಸಲ್ಲಿಸಿದಂತಾಗುತ್ತದೆ.

ಹೀಗೆ ಯಾವುದಾದರೊಂದು ವಿಧದಲ್ಲಿ ಕನ್ನಡಿಗರು ಸಹಾಯಮಾಡಿ ಕನ್ನಡ ನಾಡು ನುಡಿ ಸಂಸ್ಕೃತಿ ಕಲೆ—ಇವುಗಳ ಪುರೋಭಿವೃದ್ಧಿಗೆ ಸಹಾಯಕವಾಗಬೇಕೆಂದು ಈ ಮನವಿಯನ್ನು ಪರಿಷತ್ತು ಕನ್ನಡ ಜನಕೋಟಿಯ ಮುಂದೆ ಅರ್ಪಿಸುತ್ತದೆ.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

ಜಿ. ವೆಂಕಟಸುಬ್ಬಯ್ಯ
ಅಧ್ಯಕ್ಷರು

ಎನ್. ವರದರಾಜನ್
ಗೌರವ ಕೋಶಾಧ್ಯಕ್ಷರು

Reg. No. B. G. 4—December 1967

Licensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಚಪ್ಪ

ಕನ್ನಡ ನುಡಿ

ದಿವಂಗತರಾದ

ಕೆ. ಗೋಪಾಲಕೃಷ್ಣರಾಯರು

ಮತ್ತು

ಆರ್. ಎ. ಜಹಗೀರುದಾರರು

ವಿಶೇಷ ಸಂಚಿಕೆ

ಸಂಚಿಕೆ : ೧ ಸಂಪುಟ : ೪೦

ಜನವರಿ : ೧೯೬೮

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ,

ಸ್ವೀಕಾರ

ಕಾದಂಬರಿಗಳು

ಸುಳಿಗಾಳಿ; ಲೇ: ರಘುಸುತ, ಪ್ರ: ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರ, ಬೆಂಗಳೂರು-೪, ಪುಟಗಳು ೨೦೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಧರ್ಮಶ್ರೀ; ಲೇ: ಭೈರಪ್ಪ, ಎಸ್. ಎಲ್, ಪ್ರ: ಮ. ಗೋವಿಂದರಾವ್, ಸಾಹಿತ್ಯಭಂಡಾರ, ಹುಬ್ಬಳ್ಳಿ ೨೦, ಪುಟ: ೮+೩೬೯, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೫-೨೫, ೧೯೬೭.

ಮೆಚ್ಚಿದ ಗಂಡು; ಲೇ: ಕೆ. ಸರೋಜಾರಾವ್, ಪ್ರ: ಸಾಹಿತ್ಯ ಮಂದಿರ, ಹನುಮಂತ ನಗರ, ಬೆಂಗಳೂರು-೧೯, ಪುಟ: ೨೨೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಮಾಗಿದ ಮನಸ್ಸು; ಲೇ: ಶಿವಾನಂದರಾವ್, ಬಿ. ಸಿ., ಪ್ರ: ರಾಜಕಮಲ್ ಪ್ರಕಾಶನ, ೧, ಹೂವಾಡಿಗರ ಬೀದಿ, ಬಳೇಪೇಟೆ, ಬೆಂಗಳೂರು-೨, ಪುಟ: ೨ + ೨ + ೨೧೨, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೨-೫೦, ೧೯೬೬.

ಬೀಸಿದ ಬಲೆ; ಲೇ: ಗಣೇಶಮಲ್ಯ, ಕೆ., ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, (ದ.ಕ.), ಪುಟ: ೧೬೩, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಪುಣ್ಯಪ್ರಭಾವ; ಲೇ: ಹೆರಂಜೆ ರಘು ರಾಮ ಹೆಗ್ಡೆ, ಪ್ರ: ಹೆಗ್ಡೆ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು-೪, ಪುಟ: ೭+೧೫೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ರಾಜಮಹಾರಾಜರು; ಲೇ: ಮನೋಹರ ಮಳಗಾಂವಕರ್, ಪ್ರ: ಕರ್ನಾಟಕ ಸಹಕಾರೀ ಪ್ರಕಾಶನ, ೧೬೪, ೧ನೇ ಮೈನ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮, ಪುಟ: ೩೫೧, ಬೆಲೆ: ರೂ. ೬-೫೦, ೧೯೬೭.

ಕವನ

ರಸಸೃಷ್ಟಿ; ಲೇ: ಜಯವಂತ ಪ. ಮುಂಡಿ, ಪ್ರ: ಲಲಿತ ಸಾಹಿತ್ಯಮಾಲೆ, ಧಾರವಾಡ, ಪುಟ: ೮+೪೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೫.

ಪರಪುಟ್ಟ; ಲೇ: ಆನಂದಕುಮಾರ, ಪ್ರ: ಲಲಿತ ಸಾಹಿತ್ಯಮಾಲೆ, ಧಾರವಾಡ, ಪುಟ: ೬+೭೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೨೫, ೧೯೬೭.

ಹಂಬಲ ಹಣತೆ; ಲೇ: ಜಿ. ನೀಲಕಂಠಂ, ಪ್ರ: ಜಿ. ನೀಲಕಂಠಂ, ಕೆಂಪಾಪುರ ಅಗ್ರಹಾರ, ಬೆಂಗಳೂರು-೨೩, ಪುಟ: ೪೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ಇಲ್ಲ, ಪ್ರಕಟವಾದ ವರ್ಷ-ಇಲ್ಲ.

ತುಂಬಿದ ಬಿಂದಿಗೆ; ಲೇ: "ಕಮಲನಾಭ", ಪ್ರ: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, (ದ. ಕ.), ಪುಟ: ೭೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ಫೌಸ್ಟ್; (ಮೊದಲನೆಯ ಭಾಗ) ಲೇ: ಗಯಟೆ, ಪು. ತಿ. ನರಸಿಂಹಾಚಾರ್ಯರ ಭಾಷಾಂತರ, ಪ್ರ: ಸಾಹಿತ್ಯ ಅಕಾಡೆಮಿ, ರವೀಂದ್ರ ಭವನ, ಹೊಸದೆಹಲಿ-೧, ಪುಟ: ೨೪೪, ಬೆಲೆ: ರೂ. ೬-೦೦, ೧೯೬೭.

ಹರಕೆ; ಲೇ: ವೈ. ಶ್ರೀ. ಸಂಪತ್‌ಕುಮಾರ್, ಪ್ರಕಾಶಕರು: ಸಾಹಿತ್ಯಸುಧೆ, ನಂ. ೨೧, ಬಿ.ಇ.ಎಲ್. ಕಾಲೊನಿ, ಜಾಲಹಳ್ಳಿ, ಬೆಂಗಳೂರು-೧೩, ಪುಟ: ೪೪, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ಭವತಿ ಭಿಕ್ಷಾಂದೇಹಿ; ಲೇ: ಮಜಿಬೈಲು ಭಾಸ್ಕರ ಭಂಡಾರಿ, ಪ್ರ: ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು, ಮಂಗಳೂರು-(ದ.ಕ.), ಪುಟ: ೪೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ಸಾಕ್ಷಿ; ಲೇ: ವಿರೂಪಾಕ್ಷಗೌಡ, ಪ್ರ: ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಪುಟ: ೪೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ನೆಲದ ನುಡಿ; ಸಂಪಾದಕರು: ವಿಸಾಜಿ, ಜಿ. ಬಿ., ಪ್ರ: ಗೆಳೆಯರ ಬಳಗ, ಕೋಹಿನೂರ, ತಾಲ್ಲೂಕು ಬಸವಕಲ್ಯಾಣ, ಜಿಲ್ಲೆ: ಬೀದರ, ಪುಟ: ೫೬, ಆಕಾರ: ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಜನವರಿ ೧೯೬೮

ಸಂಪುಟ : ೩೧

ಸಂಚಿಕೆ : ೧

ಈ ಸಂಚಿಕೆಯಲ್ಲಿ . . .

ಶ್ರೀ ಕೆ. ಗೋಪಾಲಕೃಷ್ಣರಾಯರಿಗೆ

■

ಬೇಸರವಾಯಿತೆ ಭೂಮಿಯ ವಾಸವು
ಹಾರಿತೆ ಮನಸು ಪರಗತಿಗೆ ?
ಸಂಕಟದಿಂದಲಿ ರೋದಿಸುತಿರುವೆವು
ಕರುಣೆಯು ಬಾರದೆ ದೇವರಿಗೆ ?
ಈ ಇಳಿವಯಸಲಿ ನಮ್ಮಗಳೆಲ್ಲರ
ತೊರೆಯುವ ಕಾರಣವೇನಿತ್ತು ?
ವಿಧಿರಾಯನು ನಿನಗೋಲೆಯ ಬರೆದನೆ ?
ಕಳುಹಿದನೇ ಜವ ಕಿಂಕರರ ?
ನಿಷ್ಠುರರು ಜವನಾಜ್ಞಾಧಾರರು
' ಬಾರೆನು ' ಎಂದರೆ ಸಾಕಾಗಿತ್ತು !
[ಜವನೇ ಬಂದರೂ ಓಡಿಸುವಂತಹ
ಧೈರ್ಯವು ನಿನ್ನೆದೆಯೊಳಡಗಿತ್ತು !]

ಅಲ್ಲೇನಿರುವುದು ? ಸ್ವರ್ಗದ ಬಯಲಲಿ ;
ಹಸುರಿನ ಹುಲ್ಲಿನ ಹಾಸಿಗೆಯೆ ?
ಮೂಗಿಗೆ ಕಂಪನ್ನೀಯುತ ಮೈ ಮನ
ತಣಿಸುವ ಹುವ್ವಿನ ವಾಸನೆಯೆ ?
ಬೇಸರವಾದೊಡೆ ಮುದಗೊಳಿಸಲು ಮನ
ಏನಿಹುದಲ್ಲಿ ? ಸ್ವರ್ಗದಲಿ ?
ಭೂಮಿಯಲಿಲ್ಲದ ಸುಂದರ ಕನಸದು
ಅಲ್ಲೇನಿರುವುದೋ ನಾನರಿಯೆ.

ಇನ್ನಾರೆಮಗಿಂದು ದಾರಿಯ ತೋರುವರು ;
ಹೇಳದೆ ಕೇಳದೆ ಅಗಲಿದೆಯಾ ?
ಕನ್ನಡನುಡಿಯ ಕಂದೀಲನು ಬೆಳಗಲು
ಇನ್ನೆಂದಿಗೂ ನೀನಿಲ್ಲಿಗೆ ಬಾರೆಯಾ ?
ನೀನೆಟ್ಟದಗಿಡ ಚಿಗುರೊಡೆದಿರುವುದು
ಅದ ಕಾಣಲು ಒಮ್ಮೆ ಬಂದುಬಿಡು ;
ಕಿರಿಯ ಪೀಳಿಗೆಗೆ ಮಾರ್ಗವ ತೋರುತ
ನಿರತ ಅವರ ಜೊತೆ ಇದ್ದುಬಿಡು !

■

ವೈ. ಜಿ. ಗಿರಿಶಾಸ್ತ್ರಿ

ಕಣ್ಮರೆಯಾದ
ಶ್ರೀ ಕೆ. ಗೋಪಾಲಕೃಷ್ಣರಾಯರು

ಸಿ. ಕೆ. ವೆಂಕಟರಾಮಯ್ಯ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹುಕಾಲ ಸೇವೆಯನ್ನು ಸಲ್ಲಿಸಿ ಶ್ರೇಷ್ಠಸ್ಥಾನವನ್ನು ಗಳಿಸಿದ್ದ ಗೆಳೆಯ ಶ್ರೀ ಕೆ. ಗೋಪಾಲಕೃಷ್ಣರಾಯರು ೮-೧೦-೧೯೬೭ರಂದು ನಿಧನ ಹೊಂದಿದರೆಂಬ ವಿಷಾದಕರವಾದ ವಾರ್ತೆಯನ್ನು ಕೇಳಿದಾಗ ಬಹಳ ದುಃಖವಾಯಿತು. ಅವರಿಗೂ ನನಗೂ ಬಹುಕಾಲದ ಸ್ನೇಹ. ಅವರ ಅಕಾಲ ಮರಣದಿಂದ ಅವರ ಬಂಧುಮಿತ್ರರಿಗೂ, ಕನ್ನಡ ಸಾಹಿತ್ಯಕ್ಷೇತ್ರಕ್ಕೂ, ಅಪಾರ ನಷ್ಟ. ಅವರ ಕುಟುಂಬಕ್ಕೆ ಸೇರಿದವರ ದುಃಖಕ್ಕಂತೂ ಇತಿಮಿತಿಯೇ ಇಲ್ಲ. ಅವರ ಅಕಾಲಮರಣವೆಷ್ಟು ಅನಿರೀಕ್ಷಿತವೋ ಅಷ್ಟೇ ದುಃಖಕರ.

ಅವರು ಸರಕಾರದ ಹುದ್ದೆಯಲ್ಲಿದ್ದಾಗಿನಿಂದಲೂ ಗ್ರಂಥ ರಚನೆಯಿಂದ ಕನ್ನಡ ಸಾಹಿತ್ಯಕ್ಕೆ ಉತ್ತಮ ಸೇವೆಯನ್ನು ಸಲ್ಲಿಸಿದವರು. ಸರಕಾರದ ಅಥವಾ ಯಾವುದಾದರೂ ಸಂಸ್ಥೆಯ ಸೇವೆಯಲ್ಲಿದ್ದು ಕೆಲಸಮಾಡುವುದರ ಜೊತೆಗೆ ಗ್ರಂಥರಚನೆ ಮುಂತಾದ ರೀತಿಗಳಲ್ಲಿ ಸಾಹಿತ್ಯಸೇವೆ ಮಾಡುವುದು ಎಷ್ಟು ಶ್ರಮದಾಯಕವೆಂಬುದು ಅನುಭವೈಕವೇದ್ಯ. ಅವೆರಡನ್ನೂ ಹೊಂದಿಸಿಕೊಂಡು ಸರಿದೂಗಿಸಿಕೊಂಡು ಹೋಗುವುದು ಬಹಳ ಕಷ್ಟದ ಕೆಲಸವೆಂಬುದು, ಹಾಗೆ ದುಡಿದಿಲ್ಲದವರಿಗೆ ಮನಮುಟ್ಟಿ ಗೋಚರವಾಗುವುದು ಸುಲಭವಲ್ಲ. ಶ್ರೀ ಗೋಪಾಲಕೃಷ್ಣರಾಯರು ಆ ಕಷ್ಟದ ಕೆಲಸವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಸರಕಾರದ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದರು. ಕೆಲಸಮಾಡುವುದೇ ಶಕ್ಯವಿಲ್ಲದಷ್ಟು "ಕಾಯಿಲೆ" ಯಾದಲ್ಲದೆ, ಸಾಮಾನ್ಯವಾದ ದೇಹಾಲಸ್ಯ ನಿಮಿತ್ತವಾಗಿ ಅವರು ರಜವನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ದುಡಿಮೆಯೂ ದೇವರ ಸೇವೆಯೆಂದು ನಂಬಿ ತ್ರಿಕರಣಶುದ್ಧವಾಗಿ "ಅಠಾರಾ ಕಚೇರಿ"ಯಲ್ಲಿ ದುಡಿಯುತ್ತಿದ್ದವರಲ್ಲಿ ಅವರೂ ಒಬ್ಬರೆಂದು ಧಾರಾಳವಾಗಿ ಹೇಳಬಹುದು. ಆಗ್ಗೆ ಕೂಡ "ಚೂಪುಗಾರಿಕೆ" ಯಿಂದ ಕೆಲಸಮಾಡುತ್ತಿದ್ದವರ ಸಂಖ್ಯೆಯೇ ಹೆಚ್ಚು. ಪ್ರತಿಯೊಂದು ಕಚೇರಿಯಲ್ಲಿ ಕೂಡ ಆ ಬಗೆಯವರ ಸಂಖ್ಯೆಯು ಹೆಚ್ಚು; ಶ್ರಮವನ್ನು ಲಕ್ಷ್ಯಮಾಡದೆ ಕರ್ತವ್ಯ ನಿಷ್ಠೆಯಿಂದ ದುಡಿಯುವ ತಮ್ಮ ಜೊತೆಯವರಾದ ಕೆಲವರಲ್ಲಿ ಅವರಿಗೆ ಕನಿಕರ ಮತ್ತು ತಾತ್ಸಾರ. "ಮೈಸೂರು ಗವರ್ನಮೆಂಟನ್ನೇ ತಲೆಯ ಮೇಲೆ ಹೊತ್ತಿರೋ ಹಾಗೆ ಗೂರಾಡಿಕೊಂಡು ಕೆಲ್ಸಮಾಡ್ತಾರೆ. ಮೂಗಿಗೆ ಕವಡೆ ಕಟ್ಟಿಕೊಂಡು ಹೀಗೆ ಗಾಣದೆತ್ತಿನಂತೆ ದುಡಿದರೆ ಯಾವ ದೇವ್ರಿಗೆ ಪ್ರೀತಿಯೋ!" ಎಂದು ಮುಂತಾಗಿ ಬಗೆಬಗೆಯ ಉದ್ಗಾರಗಳನ್ನು ತೆಗೆಯುತ್ತಿದ್ದುದು, ಆ ಬಗೆಯವರಲ್ಲಿ ಕೆಲವರ ನಿತ್ಯವಿಧಿಯಾಗಿದ್ದಿತು. ಕರ್ತವ್ಯನಿಷ್ಠೆಯಿಂದ ಶ್ರಮಿಸುತ್ತಿದ್ದ ಕೆಲವರಲ್ಲಿ ಕೂಡ, ಮುಖವನ್ನು ಗಂಟು ಹಾಕಿಕೊಂಡು ಸಿಡಿಮಿಡಿಗೊಳ್ಳುತ್ತ ದುಡಿಯುತ್ತಿದ್ದವರದೊಂದು ಗುಂಪು, ಶ್ರಮವನ್ನೇ ಪರಿಗಣಿಸದೆ ನಗುನಗುತ್ತ ಕೆಲಸಮಾಡುತ್ತಿದ್ದವರದೊಂದು ಗುಂಪು; ಈ ಎರಡನೆಯ ಗುಂಪಿಗೆ ಸೇರಿದ್ದವರು ಶ್ರೀ ಕೆ. ಗೋಪಾಲಕೃಷ್ಣರಾಯರು. ರೋಗಗ್ರಸ್ತವಾದ ತಮ್ಮ ಹೆಣ್ಣುಮಗುವೊಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆಯುತ್ತಿದ್ದ ಆತಂಕದ ದಿನಗಳಲ್ಲಿ ಕೂಡ ಅವರು ಹೇಗೆ ಆಸ್ಥೆಯಿಂದ ನಗುನಗುತ್ತ ಕೆಲಸಮಾಡಿದರೆಂಬುದನ್ನು ನಾನು ಬಲ್ಲೆ. ಆ ಮಗುವಿಗೆ ಆರೋಗ್ಯವಾದಮೇಲೆ ಪೂರ್ಣಸಂತೋಷಗಳಿಂದ ಅವರು ನಕ್ಕನಗೆಯು ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ; ಆದರೆ, ಗೆಳೆಯ ಗೋಪಾಲಕೃಷ್ಣರಾಯರು ಮಾತ್ರ ಕಣ್ಮರೆಯಾಗಿ ನಮ್ಮನ್ನು ದುಃಖಕ್ಕೀಡುಮಾಡಿದ್ದಾರೆ. ಇನ್ನೆಲ್ಲಿ ಆ ನಗೆ!

ಶ್ರೀ ಗೋಪಾಲಕೃಷ್ಣರಾಯರು ತಮ್ಮ ಬಂಧುಮಿತ್ರರಲ್ಲಿ ಬಹಳ ಪ್ರೀತಿ ವಿಶ್ವಾಸಗಳಿಂದ ವರ್ತಿಸುತ್ತಿದ್ದರು. ಹಿರಿಯರಿಗೂ ಕಿರಿಯರಿಗೂ ಅವರು ಅಚ್ಚುಮೆಚ್ಚಾಗಿದ್ದರು. ಅವರೊಡನೆ ಮಾತನಾಡುವುದೇ ಒಂದು ಸಂತೋಷ. ಅದಕ್ಕೆ ಅವರು ಆತ್ಮೀಯತೆಯಿಂದ ಸ್ನೇಹಮಮತೆಗಳನ್ನು ತೋರಿಸುತ್ತಿದ್ದುದೇ ಮುಖ್ಯಕಾರಣ. ತಮಗೆ ಆಪ್ತರಾದವರನ್ನು ಕಾಣುವುದು ಕೆಲವು ದಿನಗಳಷ್ಟು ತಡವಾದಾಗ ಅವರಿಗುಂಟಾಗುತ್ತಿದ್ದ ಆತಂಕಕ್ಕೆ ಇತಿಮಿತಿಯಿರಲಿಲ್ಲ. ಕಾಡು

ಹರಟೆಯಲ್ಲಿ ಅವರೆಂದೂ ಆಸಕ್ತಿ ತೋರಿದವರಲ್ಲ. ಅವರು ತಮ್ಮ ಸ್ನೇಹಿತರೊಡನೆ ಸಾಮಾನ್ಯವಾಗಿ ಚರ್ಚಿಸುತ್ತಿದ್ದುದು, ಸಾಹಿತ್ಯ ಸಂಬಂಧವಾದ ಮತ್ತು ಧಾರ್ಮಿಕ ಸ್ವಭಾವದ ನಾನಾ ವಿಚಾರಗಳನ್ನು ಮಾತ್ರವೇ; ತಾವು ನೋಡಿಬಂದ ಪ್ರೇಕ್ಷಣೀಯ ಸ್ಥಳಗಳ ವಿಚಾರವನ್ನೂ, ಯಾತ್ರಾಸ್ಥಳಗಳ ವಿಚಾರವನ್ನೂ, ಅಲ್ಲಿಯ ತಮ್ಮ ಅನುಭವಗಳನ್ನೂ ತಮ್ಮ ಆಪ್ತರೊಡನೆ ಉತ್ಸಾಹದಿಂದ ಹೇಳುತ್ತಿದ್ದರು. ಅವರು ಹಾಗೆ ಹೇಳಿದ ಅನೇಕ ಸಂಗತಿಗಳು ಈಗಲೂ ನನ್ನ ನೆನಪಿನಲ್ಲಿವೆ; ಆದರೆ ಅವರು ಮಾತ್ರ ಅಕಾಲಮರಣಕ್ಕೆ ಗುರಿಯಾಗಿ ಕಣ್ಮರೆಯಾಗಿದ್ದಾರೆ.

ಅವರು ಬಹುಮುಖವಾದ ಸಾಹಿತ್ಯ ಸೇವೆಯನ್ನು ಸಲ್ಲಿಸಿ ಕನ್ನಡ ನಾಡು ನುಡಿಗಳಿಗೆ ಉಪಕಾರ ಮಾಡಿದ್ದಾರೆ. ಅನೇಕ ಸಣ್ಣ ಕತೆಗಳನ್ನು ಬರೆದು ಖ್ಯಾತಿಯನ್ನು ಪಡೆದಿದ್ದಾರೆ. ಅವರು ಬರೆದ "ಬಂಗಾರದ ಡಾಬು", "ಡಾಕ್ಟರ್ ಸಂಕೇತ್" ಮುಂತಾದ ಸಣ್ಣಕತೆಗಳನ್ನು ಓದಿದವರೆಲ್ಲರೂ ಆನಂದಿಸಿದ್ದಾರೆ. ಅವರು ಹಲವು ಕವಿತೆಗಳನ್ನೂ, ಏಕಾಂಕ ನಾಟಕಗಳನ್ನೂ, ಕಥನ ಕವನಗಳನ್ನೂ ಬರೆದು ಕನ್ನಡ ಸಾಹಿತ್ಯ ಭಂಡಾರವನ್ನು ವೃದ್ಧಿಗೊಳಿಸಿದ್ದಾರೆ. ಈಚೆಗೆ ಅವರು ಹಲವಾರು ಭಕ್ತಿಗೀತಗಳನ್ನು ರಚಿಸಿದರು. ಸಾಹಿತ್ಯ ವಿಚಾರಗಳ ಚರ್ಚೆಗಾಗಿ ಮತ್ತು ಧಾರ್ಮಿಕವಾದ ಹಾಗೂ ಸಾಹಿತ್ಯ ಸಂಬಂಧವಾದ ಶ್ರೇಷ್ಠಗ್ರಂಥಗಳ ವಾಚನಕ್ಕಾಗಿ ಅವರು ತಮ್ಮ ಮನೆಯಲ್ಲಿ ಅನೇಕ ಸಾರಿ ಸಾಹಿತಿಗಳ ಮತ್ತು ಸಾಹಿತ್ಯಪ್ರೇಮಿಗಳ ಗೋಷ್ಠಿಗಳನ್ನು ಏರ್ಪಡಿಸುವ ಮೂಲಕವೂ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯವರಾಗಿ ಕೆಲಸಮಾಡಿ ಅನೇಕ ವರ್ಷಗಳ ಕಾಲ ಶ್ರದ್ಧಾಸಕ್ತಿಗಳಿಂದ ಅಮೋಘ ಸೇವೆ ಸಲ್ಲಿಸಿದವರು, ಶ್ರೀ ಗೋಪಾಲಕೃಷ್ಣರಾಯರು. ಹಲವು ಸಂಸ್ಥೆಗಳಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ಸೇವೆಯು ಲಭಿಸಿ ಉಪಕಾರವಾಗಿದೆ. ಅವರ ಸ್ನೇಹ ಸೌಜನ್ಯಗಳು, ಅವರ ಕರ್ತವ್ಯನಿಷ್ಠೆ, ಅವರ ಸೌಹಾರ್ದ, ಅವರ ಸಾಹಿತ್ಯಪ್ರೇಮ, ಅವರ ಕಾರ್ಯದಕ್ಷತೆ ಮುಂತಾದ ಶ್ರೇಷ್ಠಗುಣಗಳನ್ನು ಅವರ ಪರಿಚಯದ ಸುಯೋಗವನ್ನು ಪಡೆದಿದ್ದವರೆಲ್ಲರೂ ಬಲ್ಲರು. ಅವರು ಸಾಹಿತಿಗಳ ಸಂಘವನ್ನು ಸ್ಥಾಪಿಸಿ ಕೆಲಸಮಾಡಿದುದು, ಅದರ ಕಾರ್ಯದರ್ಶಿ ಸ್ಥಾನದಲ್ಲಿದ್ದು ಅದರ ಆಶ್ರಯದಲ್ಲಿ ಹಲವು ಸಾರಿ ಕತೆಗಾರರ ಸಮ್ಮೇಳನಗಳನ್ನು ನಡೆಯಿಸಿದುದು ಮತ್ತು "ಜೀವನ" ಪತ್ರಿಕೆಯ ಸಂಪಾದಕರಾಗಿ ಈಚಿನ ಕೆಲವು ವರ್ಷಗಳಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದುದು—ಈ ಮೂರೂ ಅವರ ಕಾರ್ಯದಕ್ಷತೆಗೂ, ಅವರ ಉತ್ಸಾಹ ಶ್ರದ್ಧೆಗಳಿಗೂ ನಿದರ್ಶನಗಳು.

ನಮ್ಮ ನಾಡಿನ ಸಾಹಿತಿಗಳಲ್ಲಿ ಶ್ರೇಷ್ಠರೆನಿಸಿದವರಲ್ಲೊಬ್ಬರಾಗಿದ್ದ ಶ್ರೀ ಕೆ. ಗೋಪಾಲಕೃಷ್ಣರಾಯರ ಅಕಾಲಮರಣದಿಂದ ಸಾಹಿತ್ಯ ಪ್ರಪಂಚಕ್ಕೂ ಅವರ ಬಂಧುಮಿತ್ರರಿಗೂ ಅಪಾರ ನಷ್ಟವುಂಟಾಗಿದೆ. ಅವರ ಬಂಧುಮಿತ್ರರ ದುಃಖವನ್ನು ವರ್ಣಿಸಲಳವಲ್ಲ; ಆದರೆ, ಭಗವಂತನ ಸಂಕಲ್ಪಕ್ಕೆ ಎದುರಿಲ್ಲವೆಂದು ಭಾವಿಸಿ ವಿಯೋಗ ದುಃಖವನ್ನು ಸಹಿಸದೆ ಗತ್ಯಂತರವಿಲ್ಲ. ಅವರ ಅಕಾಲಮರಣದಿಂದ ದುಃಖಿತರಾಗಿರುವ ಅವರ ಮಿತ್ರರಲ್ಲಿ ನಾನೂ ಸೇರಿ ಸಂಕಟಪಡುತ್ತಿದ್ದೇನೆ. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನೂ ಸದ್ಗತಿಯನ್ನೂ ಕರುಣಿಸಿ, ವಿಯೋಗ ದುಃಖವನ್ನು ಸಹಿಸಲು ಅವರ ಕುಟುಂಬದವರಿಗೆ ಶಕ್ತಿಯನ್ನು ದಯಪಾಲಿಸಲೆಂದು ಆ ದಯಾಮಯನನ್ನು ನಾನು ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಗೋಪಾಲಕೃಷ್ಣರಾಯರು

ಸ್ನೇಹಪರ ಜೀವನದ ಸೌಜನ್ಯ ಮೂರ್ತಿ
ತರುಣ ಕತೆಗಾರರಿಗೆ ತುಂಬಿದನು ಸ್ಫೂರ್ತಿ!
ಕನ್ನಡದ ಸೇವೆಯನು ನಿಷ್ಠೆಯಲಿ ಮಾಡಿ
'ಜೀವನ'ದ ಕೈಂಕರ್ಯ ಮುಗಿಸಿದನು ನೋಡಿ!

●

ಜಿ. ಎಸ್. ಅನ್ನದಾನಿ

ಕನ್ನಡನುಡಿ' ೭ ನವಂಬರ ೧೯೬೮.

ನಾನು ಕಂಡ ಕೆ. ಗೋಪಾಲಕೃಷ್ಣರಾಯರು

■□ ಎಂ. ವಿ. ಸೀತಾರಾಮಯ್ಯ

ಗೋಪಾಲಕೃಷ್ಣರಾಯರನ್ನು ನಾನು ಮೊದಲು ಕಂಡದ್ದು ಅವರ 'ಕಂಡದ್ದು ನಾಲ್ಕು ಸರ್ತಿ' ಎಂಬ ಕತೆಯನ್ನು 'ಪ್ರಬುದ್ಧ ಕರ್ಣಾಟಕ'ದಲ್ಲಿ (ಸುಮಾರು ೧೯೩೯-೪೦ರಲ್ಲಿ) ಓದಿ, ಮೆಚ್ಚಿಕೊಂಡು, ಅದರ ಸವಿನೆನಪು ನನ್ನ ಮನಸ್ಸಿನಲ್ಲಿ ಊರಿದ್ದ ತರುಣದಲ್ಲಿ. ಆಗ ನಾನು ಇನ್ನೂ ವಿದ್ಯಾರ್ಥಿ. ದಿವಂಗತ ತೀ.ನಂ.ಶ್ರೀ. ಯವರು ಮೈಸೂರಿನ ಲಕ್ಷ್ಮೀಪುರದಲ್ಲಿ ಒಂದು 'ಹೊರಮನೆ'ಯಲ್ಲಿ (out-house) ಬಾಡಿಗೆಗೆ ಇದ್ದರು. ಗುರುಗಳಾದ ಅವರ ಮನೆಗೆ ನಾನು ಆಗಾಗ್ಗೆ ಹೋಗಿಬರುತ್ತಿದ್ದುದು ವಾಡಿಕೆ. ನನ್ನ ಕತೆಗಾರಿಕೆಗೆ ಅವರು ಹೊಯ್ನೀರೆಯುತ್ತಿದ್ದರು ಆಗ. 'ಕಂಡದ್ದು ನಾಲ್ಕು ಸರ್ತಿ' ಚೆನ್ನಾಗಿದೆ ಎಂದು ಅವರೊಂದಿಗೆ ನನ್ನ ಮೆಚ್ಚಿಗೆಯನ್ನು ತಿಳಿಸಿದ್ದುಂಟು.

ಒಂದು ದಿನ, ಮಧ್ಯಾಹ್ನದ ಮೇಲೆ ಮೂರರ ವೇಳೆ ಎಂದು ಕಾಣುತ್ತದೆ, ಅವರ ಮನೆಗೆ ರೂಢಿಯಂತೆ ತಿಂಡಿ ತೀರ್ಥದ ಸಮಯಕ್ಕೆ ಸರಿಯಾಗಿಯೆ ಹೋಗಿದ್ದೆ! ನಾನು ಹೋದಾಗಲೆಲ್ಲ 'ಗುರು-ಶಿಷ್ಯ'ರಿಬ್ಬರಿಗೂ ತಿಂಡಿ ತಂದು ಮುಂದಿಡುವುದು ಗುರುಪತ್ನಿ ಜಯಲಕ್ಷ್ಮಮ್ಮನವರ ವಾಡಿಕೆ. ಅಂದು ನಾನು ಹೋದಾಗ ತಿಂಡಿತೀರ್ಥವನ್ನು ಹಂಚಿಕೊಳ್ಳಲು ಮೂರನೆಯವರೊಬ್ಬರಿದ್ದರು: ಅವರು ಪದ್ಮಾಸನ ಹಾಕಿಕೊಂಡು, ಗೋಡೆಯನ್ನು ಒರಗಿ ಕುಳಿತಿದ್ದರು. ತಡಪು (ವೇಷ್ಟಿಯ ಪಂಚೆ) ಉಟ್ಟಿದ್ದರು; ಜರತಾರಿ ಅಂಚಿನ ಪಂಚೆ ಎಂದು ನೆನಪು. (ಮದುವೆಯ ಸಂಕಲಿಕೆ ಪಂಚೆ ಇದ್ದರೂ ಇರಬಹುದು). 'ಪಪ್ಪಳಿಮನೆ'ಯ ಅಂಗಿ ಧರಿಸಿದ್ದರು; ತಲೆಯ ಮೇಲೆ 'ಫೆಲ್ಟ್ ಕ್ಯಾಪ್' ಅವರ ಗುಂಡು ಮುಖಕ್ಕೆ ಒಪ್ಪಿತ್ತು. (ಆಗ ಅವರಿಗೆ ಮೀಸೆಯೂ ಗಂಟು ಹಾಕಿದ್ದ ತುಂಬುಗೂದಲಿನ ಜುಟ್ಟೂ ಇದ್ದಂತೆ ಚೆನ್ನಾಗಿ ನೆನಪು; ಅವರನ್ನು ಮತ್ತೆ ಬೆಂಗಳೂರಿನಲ್ಲಿ, ೧೯೪೮ರಲ್ಲಿ, ನೋಡಿದಾಗ ಎರಡೂ ಮಾಯವಾಗಿದ್ದುವು! ಅಂದಿನ ರೂಢಿಯಂತೆ). ಶ್ಯಾಮವರ್ಣದ ಅವರ ಮುಖವನ್ನು ಅವರ ಕೊರಳನ್ನು ಬಳಸಿದ್ದ ಜರಿಯ ಅಂಚಿನ ಶಲ್ಯದ ಬಿಳುಪು ಗೌರವಾನ್ವಿತವಾಗಿ ಮಾಡಿತ್ತು.

ನಾನು ಹೋದೊಡನೆಯೆ "ಸೀತಾರಾಮು, ಇವರೆ ಗೋಪಾಲಕೃಷ್ಣರಾಯರು. 'ಕಂಡದ್ದು ನಾಲ್ಕು ಸರ್ತಿ'ಯನ್ನು ಬರೆದವರು" ಎಂದು ಹೇಳಿ, ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟರು ತೀ.ನಂ.ಶ್ರೀ.ಯವರು. ಅಂದು ಆದ ಪರಿಚಯ ಆತ್ಮೀಯವಾದ ಸ್ನೇಹವಾಗಿ ತಿರುಗಲು ಹೆಚ್ಚುಕಾಲ ಬೇಕಾಗಲಿಲ್ಲ; ನಾನು ಬೆಂಗಳೂರಿಗೆ ಬಂದು, ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿ ಎಂದು ಕೆಲಸದಲ್ಲಿ ನಿಂತ ಮೇಲೆ, ಪರಿಷತ್ತಿನ ಕಾರ್ಯಾಲಯಕ್ಕೆ ಆಗಾಗ್ಗೆ ಬರುತ್ತಿದ್ದ ಅವರು ನನ್ನನ್ನು ಗಾಂಧೀ ಬಜಾರಿನ ಅವರ ಮನೆಗೆ ಆಗಾಗ್ಗೆ ಕರೆದುಕೊಂಡು ಹೋಗಿ, ತಿಂಡಿತೀರ್ಥ ಕೊಟ್ಟು, ಆದರಿಸುತ್ತಿದ್ದರು. ಅಂದಿನಿಂದ ಮೊನ್ನಿನವರೆಗೆ ನಾನು ಅವರನ್ನು ಕಂಡಿರುವುದು ನಾಲ್ಕು ಸರ್ತಿ ಅಲ್ಲ, ಸಾವಿರಾರು ಸರ್ತಿ.

ಆಗ 'ಅವರ ಮನೆ' ಎಂದರೆ ಗಾಂಧಿಬಜಾರಿನ ಸರ್ಕಲ್ಲಿನ ದಕ್ಷಿಣ ಭಾಗದಲ್ಲಿ ಒಂದು ಮೂಲೆಯಲ್ಲಿದ್ದ ಪೂರ್ವಕಾಲದ ಅಟ್ಟದ ಮನೆ. ಅಟ್ಟದ ಮೇಲೆ ಒಂದಂಕಣದ ಕತ್ತಲಿಡಿದ ಕೋಣೆ ಗೋಪಾಲಕೃಷ್ಣರಾಯರ 'ದಿವಾನಖಾನೆ.' ಆರಾಮವಾಗಿ ಕುಳಿತರೆ, ನಾಲ್ಕೈದುಜನ ಮಾತ್ರ ಕುಳಿತುಕೊಳ್ಳಬಹುದಾಗಿತ್ತು ಅಲ್ಲಿ. ಆದರೆ, ಗೋಪಾಲಕೃಷ್ಣರಾಯರ ಉದಾರ ಸ್ವಭಾವದಿಂದಾಗಿ, ಅವರು ಆಗಾಗ್ಗೆ ಏರ್ಪಡಿಸುತ್ತಿದ್ದ ಸಾಹಿತ್ಯ ಕೃತಿವಾಚನ ಗೋಷ್ಠಿಗಳಿಗೆ ಆ ಅಟ್ಟದ ಮೇಲೆ ನೆರೆಯುತ್ತಿದ್ದ ಸಾಹಿತ್ಯಾಭಿಮಾನಿ ಮಿತ್ರರ ಸಂಖ್ಯೆಯನ್ನು ನೆನೆದರೆ ಅದು 'ಪುಷ್ಪಕ ವಿಮಾನ'ವೆ ಆಗಿತ್ತು! ಇಂಥ ಗೋಷ್ಠಿಗಳಲ್ಲಿ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿರುವುದು ಎಂದರೆ ಶ್ರೀ. ಪು. ತಿ. ನ. ಅವರು ತಮ್ಮ 'ಅಹಲ್ಯಾ' ಗೀತ ರೂಪಕವನ್ನು ಮೊದಲ ಸಲ ಓದಿದ್ದು.

ಗೋಪಾಲಕೃಷ್ಣರಾಯರು ತಮ್ಮ ಹಣಕಾಸಿನ ಕೊರತೆಯ ಬಗೆಗೆ ಎಂದೂ ನನ್ನೊಡನೆ ತಮ್ಮ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಂಡದ್ದು ನೆನಪಿಲ್ಲ. ತಮ್ಮ ಚಿಕ್ಕಪ್ಪನವರೊಂದಿಗೆ ಅವಿಭಕ್ತ ಕುಟುಂಬದಲ್ಲಿ ಇದ್ದರೂ ಅವರು ಗೃಹಕೃತ್ಯದ ಯಜಮಾನಿಕೆಯ ಬಹುಪಾಲನ್ನು ಹೊತ್ತಿದ್ದರು.

ತಮ್ಮಂದಿರನ್ನು ಓದಿಸಿ ಮುಂದಕ್ಕೆ ತರಬೇಕಾದ ಹೊಣೆಯೂ ಅವರ ಹೆಗಲ ಮೇಲೆ ಬಿದ್ದಿತ್ತು. ಸರ್ಕಾರದ ಸೆಕ್ರೆಟರಿಯಟ್ಟಿನಲ್ಲಿ ಗುಮಾಸ್ತರಾಗಿದ್ದ ಅವರಿಗೆ ಕೈತುಂಬ ಸಂಬಳ ಬರುತ್ತಿತ್ತು ಎನ್ನುವಹಾಗಿರಲಿಲ್ಲ. ಅವರದ್ದು ದಟ್ಟ ದಾರಿದ್ರ್ಯವೂ ಅಲ್ಲ, ಶ್ರೀಮಂತಿಕೆಯೂ ಅಲ್ಲ. ಇಂಥ ಪರಿಸ್ಥಿತಿಯಲ್ಲಿ, ಶ್ರೀಮಂತರು ಮಾತ್ರ ನಡಸಬಹುದಾಗಿದ್ದ ರೀತಿಯಲ್ಲಿ ಅವರು ಆಗಾಗ್ಗೆ ಈ ಸಾಹಿತ್ಯ ಕೂಟಗಳನ್ನು ಸ್ವಂತ ವೆಚ್ಚದಿಂದ ನಡಸುತ್ತಿದ್ದರು. ಇದಕ್ಕೆ ಕಾರಣ, ಅವರ ಅಪಾರವಾದ ಸಾಹಿತ್ಯದ ಅಭಿಮಾನ ಮತ್ತು ಸ್ನೇಹಪರತೆ. ಅವರ ಈ ಕೈಂಕರ್ಯದಲ್ಲಿ ಅವರ ಮೊದಲ ಧರ್ಮಪತ್ನಿ ಸೌ|| ಸೀತಮ್ಮ ನಗೆಮೊಗದಿಂದ ಸದಾ ಸೇವೆಗೆ ಸಿದ್ಧವಾಗಿದ್ದರು. ಗೋಪಾಲಕೃಷ್ಣರಾಯರ ಮನೆ, ಜೇಬು ಚಿಕ್ಕವಾಗಿದ್ದುವು : ಆದರೆ ಈ ದಂಪತಿಗಳ ಮನಸ್ಸು, ಕೈ ಧಾರಾಳವಾಗಿದ್ದುವು.

ಹೊರಗಿನ ಲೋಕದೊಂದಿಗೆ ಹೇಗೆ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರೋ ಕುಟುಂಬ ವರ್ಗದವರಲ್ಲಿಯೂ ಅವರ ಮಮತೆ ವಿಶ್ವಾಸಗಳು ಹೆಜ್ಜೆ ಹೆಜ್ಜೆಗೂ ಕಂಡುಬರುತ್ತಿದ್ದುವು. ತಮ್ಮ ತಮ್ಮಂದಿರನ್ನು ಮುಂದಕ್ಕೆ ತಂದು ಸ್ವಾವಲಂಬಿಗಳನ್ನಾಗಿ ಮಾಡಬೇಕೆಂದು ತುಂಬ ಉತ್ಸಾಹ ತೋರಿಸುತ್ತಿದ್ದರು. ಅವರು ತಮ್ಮ ಚಿಕ್ಕಪ್ಪನವರಿಂದ ಬೇರೆಯಾಗಿ, ಬಸವನಗುಡಿ 'ಈಸ್ಟ್ ಆಂಜನೇಯ ಟೆಂಪಲ್ ರಸ್ತೆ'ಯಲ್ಲಿ ಮನೆ ಮಾಡಿಕೊಂಡ ಮೇಲೆ, ತಮ್ಮಂದಿರಿಂದಲೂ ಬೇರೆಯಾಗಬೇಕಾದ ಅನಿವಾರ್ಯ ಒದಗಿಬಂತು. ತಮ್ಮ ಹೃದಯವೇ ಇಬ್ಭಾಗವಾಯಿತೋ ಎಂಬಂತೆ ವೇದನೆ ಪಟ್ಟರು ಆಗ. ಆದರೆ, ಹೊರಗೆ ಮಾತ್ರ ವ್ಯಕ್ತಪಡಿಸಲಿಲ್ಲ. ಮೊದಲ ಹೆಂಡತಿಯನ್ನು ಹಳೆಯ ಮನೆಯಲ್ಲಿಕಳೆದುಕೊಂಡು ಹೊಸ ಮನೆಗೆ ಬಂದ ಮೇಲೂ, ಹಳೆಯ ನೆನಪು ಹಿಂಬಾಲಿಸಿತು ; ಹೊಸಮನೆ, 'ಸೀತಾ ವಿಲಾಸ' ಆಯಿತು. ಎರಡನೆಯ ಸಂಬಂಧಕ್ಕೆ ಅಪಚಾರವಾಗದಂತೆ, ನೋವಾಗದಂತೆ, ಮೊದಲ ಸಂಬಂಧದೊಂದಿಗೆ ನೆನಪಿನ ನಂಟು ಇಟ್ಟುಕೊಂಡಿದ್ದ ಹೃದಯವಂತಿಕೆ ಗೋ. ಕೃ. ಅವರದ್ದು.

ಗೋಪಾಲಕೃಷ್ಣರಾಯರ ಸ್ವಭಾವ ಅಸಾಧಾರಣವಾದದ್ದು. ಮುಖದಲ್ಲಿ ಯಾವಾಗಲೂ ಮುಗುಳ್ನಗೆ ; ಒಳಗೆ ಯಾವುದೋ ಚಿಂತೆಯ ಹುಳುವಿನ ಕೊರತೆ. ದುಃಖ ಕಷ್ಟಗಳನ್ನು ನುಂಗಿಕೊಂಡು, ತಮ್ಮ ಸುಖಸಂತೋಷಗಳನ್ನು ಮಾತ್ರ ಇತರರೊಂದಿಗೆ ಹಂಚಿಕೊಳ್ಳುತ್ತಿದ್ದರು. ಮೊದಲ ಪತ್ನಿ ತೀರಿಕೊಂಡಾಗ, ಕೆಲವು ಕಾಲ ಅವರ ಬಾಳು ಬರಿದಾಗಿತ್ತು ; ಸುಶೀಲಮ್ಮ ಬಂದು ಅದನ್ನು ತುಂಬಿದರು ; ಅವರ ಬಾಳಿಗೂ, ಮನೆಗೂ ಬೆಳಕು ನೀಡಿದರು. ಅನಿರೀಕ್ಷಿತವಾಗಿ, ಗೋಪಾಲಕೃಷ್ಣರಾಯರು ತೀರಿಕೊಂಡದ್ದರಿಂದ, ಅವರ ಬಾಳ ಬೆಳಕನ್ನು ದೈವ ಆರಿಸಿತು. ಮನೆಯ ಮಟ್ಟಿಗೆ ಆ ಬೆಳಕು ಆರಿದಂತೆ ಕಂಡಿರಬಹುದು. ಆದರೆ, ಸುಶೀಲಮ್ಮನವರ ಹೃದಯದಲ್ಲಿ ಅದು ಬೆಳಗುತ್ತಿದೆ. ನಾನು ಅವರ ದುಃಖ ವಿಚಾರಿಸುವುದಕ್ಕೆಂದು ಅವರ ಮನೆಗೆ ಹೋದಾಗ, ನನ್ನ ಕಣ್ಣು ಒದ್ದೆಯಾಗಿ ಕಂಠ ಗದ್ಗದಿತವಾಗಲು, ಸುಶೀಲಮ್ಮ ನನ್ನನ್ನೂ ನನ್ನ ಪತ್ನಿಯನ್ನೂ 'ದುಃಖಿಸಬಾರದು' ಎಂದು ಸಮಾಧಾನ ಪಡಿಸುತ್ತ ತಳೆದ ತಾತ್ತ್ವಿಕವಾದ ದಿಟ್ಟ ನಿಲವು ನನ್ನನ್ನು ಬೆರಗುಗೊಳಿಸಿತು. ಬೆರಗಿಗೆ ಕಾರಣವಿಲ್ಲ ಎನ್ನಿಸುತ್ತಿದೆ ಈಗ. ಸುಮಾರು ಎರಡು ದಶಕಗಳಿಂದ ಈಚೆಗೆ ಗೋಪಾಲಕೃಷ್ಣರಾಯರು ಕತೆ ಬರೆಯುವುದನ್ನು ಬಹುಮಟ್ಟಿಗೆ ನಿಲ್ಲಿಸಿಬಿಟ್ಟಿದ್ದರು. ಕಥಾ ರಚನೆಗೆ ಬಹಿರ್ಮುಖತೆ ಅಗತ್ಯ ; ಅವರು ಈಚೀಚೆಗೆ ಹೆಚ್ಚು ಹೆಚ್ಚು ಅಂತರ್ಮುಖಿಗಳಾಗಿದ್ದರು. ಎಂದೂ ದೈವ ಭಕ್ತರಾಗಿದ್ದ ಅವರ ದೈವಭಕ್ತಿ ಈಚಿನ ದಿನಗಳಲ್ಲಿ ನಾನಾ ಪ್ರಕಾರಗಳಲ್ಲಿ ಬೆಳಗುತ್ತಿತ್ತು. ಭಕ್ತಿಪ್ರಧಾನವಾದ ಹಾಡುಗಳ ರಚನೆ, ತೀರ್ಥಯಾತ್ರೆ, ಮನೆಯಲ್ಲಿ ಪೂಜೆಪುನಸ್ಕಾರ ಹಬ್ಬ ಹರಿದಿನಗಳನ್ನು ಸಾರ್ವಜನಿಕ ಸಮಾರಂಭಗಳಂತೆ ಆಚರಿಸುವುದು ಸಹಜವಾಗಿಯೆ ಗೋಪಾಲಕೃಷ್ಣರಾಯರ ದಿವ್ಯ ಜೀವನಪಥವನ್ನು ನೇರ್ಪಡಿಸುತ್ತಿದ್ದುವು. ಇಂಥ ಹೊನ್ನ ಹಾದಿಯಲ್ಲಿ, ಪಕ್ವವಾಗುತ್ತಿದ್ದ ಒಂದು ಜೀವನದ ಕೈಹಿಡಿದು ನೆಳಲಾಗಿ ನಡೆದ ಹೆಣ್ಣುಜೀವದ ನೇಮ ನಿಲುವು ದಿಟ್ಟವಾಗಿರದೆ, ನೆಟ್ಟನಾಗಿರದೆ, ಸೊಟ್ಟ ಹೇಗಾದೀತು ?

ಗೋಪಾಲಕೃಷ್ಣರಾಯರು ಕತೆಗಾರರೆಂದು ಹೆಸರು ಮಾಡಿದರು. ಶ್ರೀನಿವಾಸರ ಸಂಪ್ರದಾಯದಲ್ಲಿ ಮೊಮ್ಮೊದಲು ಕಥಾರಚನೆಗೆ ತೊಡಗಿ, ಸಹೃದಯರ ಗಮನವನ್ನು ಸೆಳೆದ ಕೆಲವು ಕತೆಗಾರರ ಹೆಸರುಗಳನ್ನು ಸ್ಮರಿಸುವಂದು ಆನಂದರ ಹೆಸರಾದ ಕೂಡಲೆ ಇವರದ್ದು ತಟ್ಟನೆ ನೆನಪಿಗೆ ಬರುತ್ತದೆ. ಅವರ ಕತೆಗಳ ಪ್ರಶಂಸೆಗಾಗಲಿ ವಿಮರ್ಶೆಗಾಗಲಿ ಇದು ಸಂದರ್ಭವಲ್ಲ. ಕನ್ನಡ ಸಣ್ಣ ಕತೆಗಳ ಬೆಳವಣಿಗೆಯಲ್ಲಿ ಅವರ ಪಾತ್ರ ಹಿರಿದು ಎಂದರೆ ಸಾಕು. ನೂರೊಂದು ಕತೆಗಳನ್ನು ಬರೆದು ಒಟ್ಟಿಗೆ ಪ್ರಕಟಿಸಬೇಕೆಂಬ ಅವರ ಆಶೆ ನೆರವೇರದಿದ್ದರೂ, ಅವರು ಬರೆದು ಬಿಟ್ಟುಹೋಗಿರುವ ಕತೆಗಳ ಸಂಖ್ಯೆ ಸ್ವಲ್ಪವೇನಲ್ಲ. ಸುಮಾರು ೪೦ ಕತೆಗಳು ಸಂಕಲನ ರೂಪದಲ್ಲಿ ಪ್ರಕಟವಾಗಿವೆ. ಇನ್ನು ಒಂದೆರಡು ಸಂಕಲಗಳಾಗುವಷ್ಟು ಕತೆಗಳಾದರೂ ಬೇರೆ ಬೇರೆ ಪತ್ರಿಕೆಗಳಲ್ಲಿ ಚೆದುರಿವೆ. ಯಾರಾದರೂ ಪ್ರಕಾಶಕರು

ಮುಂದೆ ಬಂದು ಅವನ್ನೆಲ್ಲಾ ಕಲೆಹಾಕಿ ಪ್ರಕಟಿಸಿದರೆ, ದಿವಂಗತರ ನೆನಪಿಗೆ ಅದೊಂದು ಅಮೂಲ್ಯ ಕಾಣಿಕೆಯಾಗುವುದು.

ಕತೆಗಾರರಾಗಿ ಮಾಡಿದ ಸಾಹಿತ್ಯ ಸೇವೆಗೆ ಕಡಮೆಯದಲ್ಲ ಸಂಘ ಸಂಸ್ಥೆಗಳ ಮೂಲಕ ಅವರು ಸಲ್ಲಿಸಿರುವ ಸೇವೆ. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕಾರ್ಯದರ್ಶಿಯಾಗಿ, ಮೊತ್ತಮೊದಲ ವಿದ್ಯಾರ್ಥಿ ಕವಿ ಸಮ್ಮೇಳನವನ್ನು ನಡಸಿದ ಕೀರ್ತಿ ಅವರದ್ದು. ದಿವಂಗತ ಬಿ. ಎಂ. ಶ್ರೀ. ಯವರ ಮತ್ತು ಪೂಜ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮಾರ್ಗದರ್ಶನದಲ್ಲಿ ಸಾಹಿತಿಗಳ ಸಂಘವನ್ನು ಕಟ್ಟಿ, ಬೆಳಸಿ, ಅದರ ಆಶ್ರಯದಲ್ಲಿ ಮೂರು ಸಣ್ಣ ಕತೆಗಾರರ ಸಮ್ಮೇಳನವನ್ನು ನಡಸಿ, ಆ ಮೂಲಕವೂ ಕನ್ನಡ ಸಣ್ಣ ಕತೆಗಳ ಬೆಳವಣಿಗೆಗೆ ಶ್ರಮಿಸಿದರು. ಕೆಲವು ವರ್ಷ ಕಾಲ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ಈಚೆಗೆ "ಜೀವನ" ಮಾಸ ಪತ್ರಿಕೆಯ ಸಂಪಾದಕರಾಗಿ, ಅವರು ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಗೆ ಸಲ್ಲಿಸಿದ ಸೇವೆಯನ್ನು ಕನ್ನಡ ಲೋಕ ಬಲ್ಲದು.

ಗೋಪಾಲಕೃಷ್ಣರಾಯರ ಪಾರ್ಥಿವ ದೇಹ ಕಣ್ಮರೆಯಾಯಿತು, ದಿಟ; ಆದರೆ ಅವರ ಚೈತನ್ಯದ ಅಂಶಗಳಾದ ಅವರ ಸ್ನೇಹಪರತೆ, ಸೌಜನ್ಯ, ನಿಗರ್ವ, ಬದುಕಿನ ಒಳ್ಳಿತರಲ್ಲಿ ವಿಶ್ವಾಸ, ಉಪಕಾರ ಬುದ್ಧಿ, ಕಷ್ಟಸ್ಥಿತಿಯಲ್ಲಿರುವವರ ಬಗೆಗೆ ಅನುಕಂಪ, ಎಡರುತೊಡರುಗಳನ್ನು ಎದುರಿಸುವ ಎದೆಗಾರಿಕೆ...ಇಂಥ ಮಾನವೀಯ ಗುಣಗಳು ಅವರ ಸಾಹಿತ್ಯ ಕೃತಿಗಳಲ್ಲಿಯೂ ಎಂದೆಂದೂ ಬೆಳಗುತ್ತಿರುತ್ತವೆ.

ನಾನು ಅವರ ಅವ್ಯಾಜಮೈತ್ರಿ, ಆದಾರಾತಿಥ್ಯ, ಔದಾರ್ಯ ಇವುಗಳನ್ನು ಬಹುಕಾಲ ಸವಿದು ಸಂತಸಪಟ್ಟಿದ್ದೇನೆ; ಆ ಸವಿನೆನಪಿನಲ್ಲಿ ಈ ನಾಲ್ಕು ನುಡಿಗಳ ಕಾಣಿಕೆಯನ್ನು ಅವರ ಮಾಸದ ನೆನಪಿಗಾಗಿ ಇಲ್ಲಿ ಕಂಬನಿಯೊಂದಿಗೆ ಸಲ್ಲಿಸುತ್ತಿದ್ದೇನೆ.

ಸಹೃದಯಿ ಗೋ. ಕೃ.

ನಾನಂದು ಮಣಿದಾಗ ಎರಡೂ ಕೈಯೆತ್ತಿದಿರಿ,
ತುಣುಕು ಕವಿತೆಯ ಬಗೆಗೆ ಬಹು ಮೆಚ್ಚಿ ಹೊಗಳಿದಿರಿ.
'ಕವಿಯಾತ್ಮನಿಗೆ ನಮನ ಹಿರಿದು ಕಿರಿದಿಲ್ಲ'–ಎಂದು,
ಹರಸಿನ್ನು ಆರುವರುಷವೂ ಸಂದಿಲ್ಲ.
ಕನ್ನಡದ ಜನಪದದ ಸಂಸ್ಕೃತಿಯ ನಮಗಿಂದು,
ಕನ್ನಡಿಯ ಹಿಡಿದಂತೆ ಕತೆಯೊಳಗೆ ಹಿಡಿತಂದು,
ಮನುಕುಲದ ಮೌಲ್ಯವನು ಪೂರ್ಣ ಅರುಹಿದಿರಿ.
ಹಿರಿಯ 'ಜೀವನ'ವನ್ನು ಬಹುಕಾಲ ನಡೆಸಿದಿರಿ.
ಕಿರಿಯರೊಂದಿಗೆ ನೀವು ಹಿರಿಯಣ್ಣ, ಕತೆಗಾರ,
ಹಸುಳೆಮನ ಹೊರಗೊಳಗೆ ಶುಭ್ರ ವಿಚಾರ–ಆಚಾರ.
ನುಗ್ಗಿ ನಡೆಮುಂದೆಂದು ಬೆನ್ನ ಚಪ್ಪರಿಸಿದಿರಿ,
ನುಗ್ಗುತ್ತಲೇ ಇರುವೆ ನಾನು ಎಡವಿದರೂ,
ಮುಂದೆ ನಡೆದಿರಿ ನೀವು ಮುಂದೆ ಮೇಲಕ್ಕೇರಿ,
ಮೊದಲೆ ತೆರಳಿದ ಜ್ಯೋತಿ ದಾರಿಬೆಳಕಿನಲಿ,
ಸೇರಿದಿರಿ ಅಲ್ಲಿ 'ಕವಿಯಾತ್ಮ ಸಂಘ' ದಲಿ,
ಮರಳಿ ಭವಬಂಧನದ ಹಂಗೆಲ್ಲ ತೊರೆದಿಹಿರಿ.
ನುಡಿಗುಡಿಯ ಕಟ್ಟಿದಿರಿ ಕತೆಯ ಕಟ್ಟಡದಿಂದ.
'ಗೋ.ಕೃ. ಸಹೃದಯಿ' ನಡೆಯುವೆವು ನಿಮ್ಮದಾರಿ ಬೆಳಕಿಂದ
ಸರಸತಿಯ ಸಿರಿಪದದ ಹೂವಾಗಿ ಅರಳಿದಿರಿ
ಬಾಡದಿಹ ತಾಣದಲಿ ಮುಕ್ತಿ ಪಡೆಯುವಿರಿ.

ಎಚ್. ಎಂ. ರಂಗನಾಥ್

ನನ್ನ ಗೆಳೆಯ ಗೋಪಾಲ್

○● ತ. ಸು. ಶಾಮರಾಯ

'ಬೆಂದನೆಲದಿಂದೊಡನೆ ಹೊಸ ಹಸುರು ಹೊಮ್ಮು ವುದೆ?' ಎಂದು ಕವಿ ಕುವೆಂಪು ಬೇರೊಂದು ಸಂದರ್ಭದಲ್ಲಿ ಹೇಳಿದ ಮಾತನ್ನೇ ನಾನೂ ಇಂದು ಹೇಳಬೇಕಾಗಿದೆ. ನನ್ನ ಮತ್ತು ಆತನ ಗೆಳೆತನ ನಲವತ್ತು ವರ್ಷಗಳಿಗೂ ದೀರ್ಘವಾದುದು. ಈ ಸುದೀರ್ಘಕಾಲದ ಈಚೆಯ ಅಂಚಿನಲ್ಲಿ ನಿಂತು ಸಿಂಹಾವಲೋಕನ ಮಾಡಿದಾಗ, ಆ ಗೆಳೆತನ ನನ್ನ ಜೀವನವಲ್ಲಿ ಎಂತಹ ಸುಂದರವಾದ ನಂದನವನ್ನು ನಿರ್ಮಿಸಿತ್ತು ಎಂಬುದನ್ನು ನೆನೆನೆನೆದು ನನ್ನ ಜೀವ ಅಸಹ್ಯ ವೇದನೆಯನ್ನು ಅನುಭವಿಸುತ್ತದೆ. ನಾನಿಗ ಆತನನ್ನು ಕುರಿತು ಹೆಚ್ಚು ಬರೆಯಲಾರೆ. ನನ್ನ ಮತ್ತು ಆತನ ಗೆಳೆತನ ಆರಂಭವಾದ ಸಂದರ್ಭವನ್ನು ಮಾತ್ರ ಇಲ್ಲಿ ಸೂಚಿಸಿ, ನಾನು ನನ್ನ ಬಾಷ್ಪಾಂಜಲಿಯನ್ನು ಆತನಿಗೆ ಅರ್ಪಿಸುತ್ತೇನೆ.

೧೯೩೩ನೆಯ ಇಸವಿ ನವೆಂಬರ್ ತಿಂಗಳೊ, ಡಿಸೆಂಬರ್ ತಿಂಗಳೊ–ನನಗೀಗ ಜ್ಞಾಪಕವಿಲ್ಲ. ನಾನು ಆಗ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದೆ–ನಮ್ಮ ಶಾಲೆಯ ವಾರ್ಷಿಕೋತ್ಸವ ನಡೆಯಿತು. ಅದರ ಅಂಗವಾಗಿ ನಡೆದ ಕಾವ್ಯವಾಚನ ಸ್ಪರ್ಧೆಯಲ್ಲಿ ನಾನು ಭಾಗವಹಿಸಿದ್ದೆ. ನನ್ನ ಸರದಿಯನ್ನು ಮುಗಿಸಿ ನಾನು ಸ್ವಸ್ಥಾನಕ್ಕೆ ಬಂದು ಕುಳಿತುಕೊಳ್ಳುತ್ತಲೆ ಪ್ರೇಕ್ಷಕ ವೃಂದದಲ್ಲಿದ್ದ ವಿದ್ಯಾರ್ಥಿಯೊಬ್ಬ ನನ್ನ ಬಳಿಗೆ ಬಂದು Congratulations ಎಂದು ಕಿವಿಯಲ್ಲಿ ಪಿಸುಗುಟ್ಟಿ ಹೊರಟುಹೋದ. ನಾನು ಆತನತ್ತ ನೋಡಿದೆ. ದುಂಡನೆಯ ಆ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು. ಸ್ಪರ್ಧೆಯ ಕಾರ್ಯಕ್ರಮ ಮುಗಿಯುತ್ತಲೆ ನಾನು ಆತನ ಬಳಿಗೆ ಹೋಗಿ, ಆತನ ಪರಿಚಯ ಮಾಡಿಕೊಂಡೆ. ಆತನೂ ನಮ್ಮ ಶಾಲೆಯ ವಿದ್ಯಾರ್ಥಿಯೇ; ನನಗಿಂತಲೂ ಒಂದು ತರಗತಿ ಮೇಲಿದ್ದ. ಆತನ ಹೆಸರು ಕೆ. ಗೋಪಾಲಕೃಷ್ಣರಾವ್. ಆತನ ಮಂದಹಾಸದಂತೆ ಆತನ ಮಾತೂ ಬಹು ಮಧುರ. ಆತನ ಆ ಮಾತಿನ ಮೋಡಿಗೆ ಪರವಶನಾಗಿ ನಾನು ಅವನನ್ನು ಹಿಂಬಾಲಿಸಿದೆ. ಹೊಸತರಗುಪೇಟೆಯಿಂದ ಹೊರಟವನು ಶಂಕರಪುರದಲ್ಲಿದ್ದ ನಮ್ಮ ಮನೆಯನ್ನು ದಾಟಿ, ಬಸವನಗುಡಿಯ ಮುಖ್ಯರಸ್ತೆಯಲ್ಲಿದ್ದ (ಅದನ್ನು ಈಗ ಗಾಂಧಿಬಜಾರ್ ಎಂದು ಕರೆಯುತ್ತಾರೆ) ಆತನ ಮನೆಯನ್ನು ಮುಟ್ಟಿದಾಗಲೆ ನನಗೆ ಎಚ್ಚರವಾದುದು. ಗಂಟೆಯಾಗಲೆ ಎಂಟಾಗಿದ್ದುದರಿಂದ ನಾನು ಈ ಹೊಸ ಸ್ನೇಹಿತನಿಗೆ ನಮಸ್ಕಾರ ಹೇಳಿ, ಮನೆಗೆ ಹಿಂದಿರುಗಿದೆ.

ಆ ದಿನವೇ–ಶ್ರೀ ಗೋಪಾಲಕೃಷ್ಣರಾಯರೊಡನೆ ನನಗೆ ಗೆಳೆತನ ಆರಂಭವಾದ ದಿನ–ಸುದಿನ. ಅದೆಂತಹ ಅಮೃತ ಘಳಿಗೆಯೊ! ನಮ್ಮಿಬ್ಬರ ಗೆಳೆತನ ದಿನದಿನಕ್ಕೆ ಬೆಳೆಯುತ್ತಾ ಹೋಯಿತು. ನಾನು ಬೆಂಗಳೂರಲ್ಲಿ ಇದ್ದಷ್ಟು ಕಾಲ ನಾವು ಪರಸ್ಪರ ಸೇರದ ದಿನವೇ ಇರಲಿಲ್ಲ. ನಮ್ಮ ಪರಿಚಯವಾದ ಮರುದಿನ ಸಂಜೆ ಆತ ನನ್ನನ್ನು ಶಾಲೆಯ ಬಳಿ ಸಂಧಿಸಿ ತನ್ನ ಮನೆಗೆ ಕರೆದೊಯ್ದ. ಆ ಮನೆಯ ಮುಂಭಾಗ ಒಂದು ಕಟ್ಟಿಗೆಯ ಅಂಗಡಿ. ಅದನ್ನು ದಾಟುತ್ತಲೆ ಒಂದು ಸಣ್ಣ ಕೈಸಾಲೆ. ಅಲ್ಲಿಯೇ ಅಟ್ಟಕ್ಕೆ ಏರಿಹೋಗಲು ಮೆಟ್ಟಲು. ಅದನ್ನು ಏರಿಹೋದರೆ ಒಂದು ಪುಟ್ಟ ಕೊಠಡಿ ಸಿಕ್ಕುವುದು. ಅದೇ ಶ್ರೀ ಗೋಪಾಲಕೃಷ್ಣರಾಯರ ವ್ಯಾಸಂಗದ ಕೊಠಡಿ. ಆತ ನನ್ನನ್ನು ಒಂದು ಆಸನದ ಮೇಲೆ ಕೂಡಿಸಿ, ತನ್ನ ಸಾರಸ್ವತ ಭಂಡಾರವನ್ನೆಲ್ಲ ನನಗೆ ತೋರಿಸಿದ. ಅದು ಸಾಕಷ್ಟು ಶ್ರೀಮಂತವಾಗಿತ್ತು. ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಆಂಗ್ಲಮಹಾಕವಿಗಳ ಕೃತಿಗಳೆಲ್ಲ ಅಲ್ಲಿದ್ದವು. ತಿಂಡಿಯನ್ನು ತಿನ್ನಲೆಂದು ಮನೆಯಲ್ಲಿ ಕೊಡುತ್ತಿದ್ದ ಹಣವನ್ನೆಲ್ಲ ಆತ ಪುಸ್ತಕಕೊಳ್ಳಲು ಬಳಸುತ್ತಿದ್ದನಂತೆ! ಅಲ್ಲಿದ್ದ ಒಂದೊಂದು ಗ್ರಂಥದಿಂದಲೂ ಅತ್ಯುತ್ತಮವಾದ ಕಾವ್ಯಭಾಗಗಳನ್ನು ಬಾಯಿಂದ ಹೇಳುತ್ತಾ, ಅವುಗಳ ಸಾಹಿತ್ಯ ಸೌಂದರ್ಯವನ್ನು ಆತ ಮನಮೋಹಕವಾಗಿ ವರ್ಣಿಸಿದ. ನಾನು ಆತನ ಪಾಂಡಿತ್ಯ ರಸಿಕತೆಗಳಿಗೆ ಮುಗ್ಧನಾಗಿ ಕುಳಿತಿರಲು, ಆತ ಅಂದವಾಗಿ ರಟ್ಟುಹಾಕಿದ್ದ ಬಿಳಿಹಾಳೆಯ ಪುಸ್ತಕವೊಂದನ್ನು ತೆರೆದು, ಅದರಲ್ಲಿ ಬರೆದಿದ್ದ ಇಂಗ್ಲಿಷ್ ಕವನಗಳನ್ನು ಓದಿ, ಅವುಗಳಲ್ಲಿದ್ದ ರಸಸ್ಥಾನಗಳನ್ನು ವಿವರಿಸಿದ. ನಾನು ಬೆಪ್ಪು ಬೆಪ್ಪಾಗಿ 'ಇದು ಯಾವ ಕವಿಯವು?' ಎಂದು ಕೇಳಿದೆ. ಆತ ತನ್ನ ಮುಗುಳ್ನಗೆಯನ್ನು ಕ್ಷಣಕಾಲ ಮೌನದಲ್ಲಿ ಮುಚ್ಚಿಟ್ಟು, 'ಇವು ನಿಮಗೆ ಹಿಡಿಸಿದುವೆ?' ಎಂದು ಮರುಪ್ರಶ್ನೆ ಮಾಡಿದ.

ನಾನು, ಹಾಗೆ ಹೇಳಲು ಶಕ್ತಿಯಾಗಲಿ, ಅಧಿಕಾರವಾಗಲಿ ಇಲ್ಲದಿದ್ದರೂ 'ಅಹುದು, ತುಂಬ ಚೆನ್ನಾಗಿವೆ' ಎಂದೆ. ಆತನ ಮುಖದಮೇಲೆ ನಗೆಯ ನವಿಲು ನರ್ತಿಸಿತು. ತುಂಬ ಸಂಕೋಚದಿಂದ, ತುಟಿಗಳನ್ನು ನಾಲಗೆಯಿಂದ ಸವರಿ ಕೊಳ್ಳುತ್ತಾ 'ಇವು ನಾನೇ ಬರೆದುವು' ಎಂದರು. ನಾನು ಆಶ್ಚರ್ಯದಿಂದ ಮೂಕನಾಗಿ ಹೋದೆ.

ಸಾಹಿತ್ಯಪ್ರೇಮಿ ಗೋಪಾಲಕೃಷ್ಣರಾಯರು ಪ್ರತಿಭಾ ಶಾಲಿಗಳಾದ ಹತ್ತೆಂಟು ಜನ ವಿದ್ಯಾರ್ಥಿಗಳನ್ನು ಸೇರಿಸಿ ಕೊಂಡು 'ಶ್ರೀರಾಮ ವಿಜಯ ಸಂಘ'ವೆಂಬ ಒಂದು ಸಂಘವನ್ನು ಸ್ಥಾಪಿಸಿದ್ದರು. ಎಂಜನಿಯರಿಂಗ್ ಇಲಾಖೆ ಯಲ್ಲಿ ಉನ್ನತ ಪದವಿಗೇರಿ, ಈಗ ವಿಶ್ರಾಂತರಾಗಿರುವ ಶ್ರೀ ಎ. ಶೇಷಪ್ಪ, ಶ್ರೀ ಎಚ್. ಎನ್. ಸುಬ್ಬರಾವ್, ನ್ಯಾಷನಲ್ ಹೈಸ್ಕೂಲಿನಲ್ಲಿ ಗಣಿತದ ಅಧ್ಯಾಪಕರಾಗಿರುವ ಎಚ್. ಎಸ್. ಶಿವರಾಮಯ್ಯ ಮೊದಲಾದವರು ಅದರ ಸದಸ್ಯರಾಗಿದ್ದರು. ಶ್ರೀ ಗೋಪಾಲಕೃಷ್ಣರಾಯರು ಅದರ ಕಾರ್ಯದರ್ಶಿಗಳು. ಅವರ ಕೃಪೆಯಿಂದ ನಾನೂ ಸದಸ್ಯ ನಾದೆ. ವಾರಕೊಮ್ಮೆ ತಪ್ಪದೆ ನಡೆಯುತ್ತಿದ್ದ ಅದರ ಕಾರ್ಯ ಕ್ರಮಗಳಲ್ಲಿ ಶ್ರೀ ಗೋಪಾಲಕೃಷ್ಣರಾಯರ ಇಂಗ್ಲಿಷ್ ಕವನಗಳ ಪಠಣವೊಂದು ಅನಿವಾರ್ಯವಾದ ಅಂಗವಾಗು ತ್ತಿತ್ತು. ನಾನು ಸದಸ್ಯನಾಗಿ ಹೋದ ಮೊದಲ ಸಭೆ ಮುಗಿಯುತ್ತಿದ್ದಂತೆಯೆ ನಾನೂ ಗೋಪಾಲಕೃಷ್ಣರಾಯರೂ 'ವಾಕಿಂಗ್' ಹೊರಟು ನರಹರಿರಾಯನ ಗುಡ್ಡವನ್ನು ಏರಿದೆವು. ಮಾತು ಅಂದಿನ ಸಭೆಯ ಕಾರ್ಯಕ್ರಮದ ಕಡೆ ತಿರುಗಿತು. ನಾನು ಹೇಳಿದೆ–'ನೀವು ಕವನಗಳನ್ನು ಇಂಗ್ಲಿಷಿ ನಲ್ಲಿ ಏಕೆ ಬರೆಯುತ್ತೀರಿ? ನೀವು ಯಾರಿಗಾಗಿ ಬರೆಯುತ್ತೀರಿ? ಗುಡ್ಡಕ್ಕೆ ಕಲ್ಲು ಹೊರುವ ಕೆಲಸ ಏಕೆ? ಕನ್ನಡದಲ್ಲಿ ಬರೆಯ ಬಾರದೆ?' ಎಂದೆ. ಇದರಿಂದ ಆತನಿಗೆ ಕಸಿವಿಸಿಯಾಗ ಬಹುದೆಂದು ನಾನು ಭಾವಿಸಿದ್ದೆ. ಆದರೆ ಹಾಗೇನೂ ಆಗಲಿಲ್ಲ. ಆತನ ಮುಗುಳ್ನಗೆ ಸ್ವಲ್ಪವೂ ಬಾಡಲಿಲ್ಲ. [ಅದು ಎಂದೂ ಯಾವ ಕಾರಣದಿಂದಲೂ ಬಾಡಲಿಲ್ಲ.] ವಿಸ್ಮೃತಿಯಲ್ಲಿದ್ದವನು ಎಚ್ಚರಗೊಳ್ಳುವಂತೆ ಆತ 'ಹೌದು ನಿಜ. ಆಗಲಿ, ಪ್ರಯತ್ನಿಸುತ್ತೇನೆ' ಎಂದ. ಮುಂದಿನ ವಾರ ನಡೆದ ಸಭೆಯಲ್ಲಿ ಆತ ದೇವರಸ್ತುತಿ ರೂಪವಾದ ಒಂದು ಪದ್ಯವನ್ನೂ 'ಕಮಲೆಯ ಹುಚ್ಚು' ಎಂಬ ಕವನ ವನ್ನೂ ಕನ್ನಡದಲ್ಲಿ ರಚಿಸಿ, ಹಾಡಿದ. ಅವು ಸದಸ್ಯರೆಲ್ಲ ರಿಗೂ ಮೆಚ್ಚಿಗೆಯಾದವು. ಎಲ್ಲರೂ ಅವನ್ನು ತುಂಬು ಕಂಠದಿಂದ ಹೊಗಳಿದರು. ಅಂದು ಆತ ಕನ್ನಡ ಕವಿ ಯಾದ. ಅಲ್ಲಿಂದ ಮುಂದೆ ಆತನು ನನಗೆ ಬರೆದ ಎಷ್ಟೋ ಪತ್ರಗಳು ಕವಿತೆಗಳೇ ಆಗಿದ್ದವು.

ಇದಾದ ಕೆಲವು ದಿನಗಳಲ್ಲಿ ನಾವು ಪರಸ್ಪರ ಅಗಲಬೇಕಾ ಯಿತು. ಅಷ್ಟರೊಳಗೆ ನಮ್ಮ ಗೆಳೆತನ ಹಾಲು ನೀರಿನಂತೆ ಬೆರೆತುಹೋಗಿತ್ತು. ನಾನು ಆತನ ಅಚ್ಚುಮೆಚ್ಚಿನ 'ಶಾಮಣ್ಣ'ನಾಗಿದ್ದೆ; ಆತ ನನ್ನ ಗೋಪಾಲ್ ಆಗಿದ್ದ. ನಾವು ಅಗಲುವ ಹಿಂದಿನ ದಿನ ರಾತ್ರಿಯೆಲ್ಲ ಅದೆಷ್ಟು ಮಾತನಾಡಿದೆವೊ, ಅದೇನು ಮಾತನಾಡಿದೆವೊ! ನನ್ನನ್ನು ಬೀಳ್ಕೊಳ್ಳಲೆಂದು ನನ್ನ ಮನೆಗೂ, ಆತನನ್ನು ಬೀಳ್ಕೊಳ್ಳ ಲೆಂದು ಆತನ ಮನೆಗೂ ನಾವು ಎಡೆ ತಾಕುತ್ತಾ ಆ ರಾತ್ರಿ ಯೆಲ್ಲ ಕಳೆದುಹೋಯಿತು. ಪರಸ್ಪರ ಅಗಲುವ ಮುನ್ನ ನಮ್ಮಿಬ್ಬರ ಕಣ್ಣಲ್ಲಿಯೂ ಕಂಬನಿ ತುಂಬಿತು. ಅದಾದ ನಲವತ್ತೆರಡು ವರ್ಷಗಳ ಮೇಲೆ ನಾವಿಬ್ಬರೂ ಶಾಶ್ವತವಾಗಿ ಅಗಲುತ್ತೇವೆಂದು ನಮಗೇನು ಗೊತ್ತು? ಹಾಗೆ ಗೊತ್ತಿ ದ್ದರೆ ನಾವು ಪರಸ್ಪರ ಸೋದರರಂತೆ ವ್ಯವಹರಿಸಿ ನಮ್ಮ ದುಃಖ ಇಷ್ಟು ಅಪಾರವಾಗುವುದಕ್ಕೆ ಅವಕಾಶವನ್ನು ನಾವಾಗಿಯೇ ಕಲ್ಪಿಸಿಕೊಳ್ಳುತ್ತಿದ್ದೇವೇನು? ಯಾರಿಗೆ ಗೊತ್ತು? ಅವನ ಕಡೆಗಾಲವನ್ನು ಅವನು ಅರಿತಿದ್ದನೊ ಏನೊ! ಇಲ್ಲದಿದ್ದರೆ ಸಾಯುವ ಹಿಂದಿನ ದಿನ ನನ್ನನ್ನು ಬೆಂಗಳೂರಿಗೆ ಆಹ್ವಾನಿಸಿ, ಆತನೇಕೆ ಪತ್ರ ಬರೆದ? ಪತ್ರದ ಹಿಂದೆಯೇ ಆತ ಸತ್ತ ತಂತಿಯೂ ಬರಬೇಕೆ?

More than as a writer Gopal Krishna Rao is rembered as a man in whom sweetness and light blended perfectly.

C. H. PRAHLADA RAO

ದಿವಂಗತ ಕೆ. ಗೋಪಾಲಕೃಷ್ಣರಾಯರು

□□ ಬಿ. ಶಿವಮೂರ್ತಿ ಶಾಸ್ತ್ರೀ

ಕನ್ನಡನಾಡಿನ ಹಿರಿಯ ಸಾಹಿತಿಗಳೂ "ಜೀವನ" ಪತ್ರಿಕೆಯ ಸಂಪಾದಕರೂ ಸಾಹಿತ್ಯ ಪರಿಷತ್ತಿನ ಮಾಜಿ ಕಾರ್ಯದರ್ಶಿಗಳೂ ಆಗಿದ್ದ ಕೆ. ಗೋಪಾಲಕೃಷ್ಣರಾಯರು ದಿನಾಂಕ ೮-೧೦-೧೯೬೭ರಂದು ಬೆಳಗ್ಗೆ ಬಸವನಗುಡಿಯಲ್ಲಿರುವ ಅವರ ಮನೆಯಲ್ಲಿ ಭೌತಿಕ ದೇಹವನ್ನುಳಿದು ಭಗವಂತನ ಪಾದವನ್ನು ಸೇರಿದರು ಎಂಬ ವಿಷಯವು ಕನ್ನಡ ಸಾಹಿತಿಗಳೆಲ್ಲರಿಗೂ ಕಳವಳವನ್ನುಂಟುಮಾಡಿದೆ.

ದಿವಂಗತ ಕೆ. ಗೋಪಾಲಕೃಷ್ಣರಾಯರಿಗೂ ನನಗೂ ಸುಮಾರು ಮೂವತ್ತು ವರ್ಷಗಳ ಪರಿಚಯ. ಪ್ರಾಯೇಣ ಪರಿಷತ್ತಿನ ಕಾರ್ಯಕಲಾಪಗಳು, ಸಾಹಿತ್ಯ ಸಮ್ಮೇಳನಗಳು, ನಗರದ ಸಾಂಸ್ಕೃತಿಕ ಕಾರ್ಯಗಳು, ಶ್ರೀ ಪುರಂದರದಾಸರ ಪುಣ್ಯೋತ್ಸವ ಮೊದಲಾದ ಸಮಾರಂಭಗಳು ಇಂತಹ ಕಡೆಗಳಲ್ಲಿ ಅವರೂ ನಾನೂ ಆಗಾಗ ಸೇರುತ್ತಿದ್ದೆವು. ಅವರಲ್ಲಿದ್ದ ಸತ್ಯಸಂಧತೆ, ದೈವಭಕ್ತಿ, ಔದಾರ್ಯ, ಪ್ರಾಮಾಣಿಕತೆ, ಸ್ನೇಹಪರತೆ, ಮೊದಲಾದ ಸದ್ಗುಣಗಳು ನನ್ನ ಮನಸ್ಸಿಗೆ ಬಂದು ನನ್ನ ಮತ್ತು ಅವರ ಸ್ನೇಹ ಕಡೆಯವರಿಗೂ ಉಳಿದು ಸುಭದ್ರವಾಗಲು ಕಾರಣವಾಯಿತು. ೧೯೫೬ನೆಯ ವರ್ಷದ ಮಧ್ಯದಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಚುನಾಯಿತನಾದ ಮೇಲೆ ಸರಸ ಸಾಹಿತಿ ಕೆ. ಕೋಪಾಲಕೃಷ್ಣರಾಯರು ಕಾರ್ಯದರ್ಶಿಯಾಗಿರುವಂತೆ ಅವರನ್ನು ಒಪ್ಪಿಸಿದೆನು. ಅದರಂತೆ ಅವರು ಒಪ್ಪಿಕೊಂಡು ಸುಮಾರು ೫ ವರ್ಷಗಳ ಕಾಲ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಅತ್ಯಂತ ಪ್ರಾಮಾಣಿಕತನದಿಂದಲೂ, ಶ್ರದ್ಧೆಯಿಂದಲೂ ಕೆಲಸಮಾಡಿ ಜನಗಳ ಮೆಚ್ಚುಗೆಯನ್ನು ಪಡೆದು ಪರಿಷತ್ತಿನ ಏಳಿಗೆಗೆ ಅವರು ನೆರವಾದರು.

ಕೆ. ಗೋಪಾಲಕೃಷ್ಣರಾಯರು ಸರ್ಕಾರಿ ಕೆಲಸದಲ್ಲಿದ್ದು ವಿವಿಧ ಇಲಾಖೆಗಳಲ್ಲಿ ಸೇವೆಸಲ್ಲಿಸಿದರು. ಮಾನ್ಯ ಕೆ. ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಹಿರಿಯ ಸಾಹಿತಿಗಳಾದ ಅವರು ಆ ಮಹನೀಯರ ಆಪ್ತ ಕಾರ್ಯದರ್ಶಿಯಾಗಿದ್ದು ಉತ್ತಮವಾದ ಸೇವೆಯನ್ನು ಸಲ್ಲಿಸಿದರು. ಅಲ್ಲದೆ ಆಮರಣ ಪರ್ಯಂತರವಾಗಿ ಶ್ರೀ ಕೆ. ಹನುಮಂತಯ್ಯನವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರಲ್ಲಿದ್ದ ಸವಿನೆನಪಿಗಾಗಿ "ಕುಮಾರ ಕೃಪ" ಎಂಬ ಒಂದು ಕವನಸಂಗ್ರಹ ಪ್ರಕಟಿಸಿದರು.

ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದಾಗ ಸಮ್ಮೇಳನಗಳನ್ನು ನಡೆಸುವ ವಿಚಾರ, ಸಮಾರಂಭಗಳನ್ನು ಮಾಡುವ ವಿಚಾರ, ಪರೀಕ್ಷೆಗಳನ್ನು ನಡೆಸುವ ವಿಚಾರ, ಮತ್ತು ಗ್ರಂಥಗಳನ್ನು ಪ್ರಕಟಿಸುವ ವಿಚಾರಗಳಲ್ಲಿ ತುಂಬಾ ಶ್ರದ್ಧೆಯಿಂದಲೂ, ರಾಷ್ಟ್ರೀಯ ಭಾವನೆಯಿಂದಲೂ ಕೆಲಸ ಮಾಡುತ್ತಿದ್ದರು. ಪರಿಷತ್ತಿನ ಘಟನೆ ಕನ್ನಡದ ಏಳಿಗೆಗಳಿಗೆ ಅನುಗುಣವಾಗಿ ಕಾರ್ಯಕಲಾಪ ನಡೆಸುತ್ತಿದ್ದರು.

ಮತಧರ್ಮದ ಆಚರಣೆಯಲ್ಲಿ ಇವರು ದ್ವೈತಮತದ ಸಿದ್ಧಾಂತವನ್ನು ಚಾಚೂ ತಪ್ಪದೆ ಆಚರಿಸುತ್ತಿದ್ದರು. ಪರಮ ವೈಷ್ಣವರಾಗಿದ್ದ ಅವರು ಶ್ರೀ ರಾಘವೇಂದ್ರಸ್ವಾಮಿಗಳ ಭಕ್ತರಾಗಿದ್ದರು. ಆದರೆ ಇವರು ಸಾರ್ವಜನಿಕ ಜೀವನದಲ್ಲಿ ಎಲ್ಲಾ ಮತ ಪಂಥದವರಲ್ಲಿಯೂ ಬೆರತು ಸಕಲರ ಪ್ರೀತಿ ವಿಶ್ವಾಸಗಳಿಗೂ ಪಾತ್ರರಾಗಿದ್ದರು. ನಿಜಕ್ಕೂ ಅವರು ಸಮನ್ವಯ ದೃಷ್ಟಿಯನ್ನು ಅಳವಡಿಕೊಂಡಿದ್ದರು. ಶ್ರೀ ಪುರಂದರದಾಸರ ೪೦೦ ವರ್ಷಗಳ ಉತ್ಸವದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನನಗೂ ಆ ಉತ್ಸವದಲ್ಲಿ ಸೇವೆಸಲ್ಲಿಸಲು ಅವಕಾಶ ಕಲ್ಪಿಸಿದ್ದರು.

ಸಹೃದಯರಾದ ಇವರಿಗೆ ಸಂಗೀತ, ಕಾವ್ಯವಾಚನ, ಗೋಷ್ಠಿಗಾನ, ಭಜನೆ, ನಾಟಕ, ನೃತ್ಯ ಮೊದಲಾದ ವಿಚಾರಗಳಲ್ಲಿ ತುಂಬಾ ಆಸಕ್ತಿ ಇತ್ತು. ನಗರದಲ್ಲಿ ನಡೆಯುವ ಇಂತಹ ಪ್ರಮುಖ ಕಾರ್ಯಗಳಿಗೆ ತಪ್ಪದೆ ಅವರು ಹಾಜರಾಗುತ್ತಿದ್ದರು. ಎಲ್ಲರೊಡನೆಯೂ ಕೂಡಿ ಸಂತೋಷದಿಂದ ಕಾಲಕಳೆಯುತ್ತಿದ್ದರು. ಒಳ್ಳೆಯ ಚಿತ್ತಶುದ್ಧಿಯನ್ನು ಭಗವಂತನ ಕೃಪೆಯಿಂದ ಅವರು ಪಡೆದಿದ್ದರು. ಸತ್ಪುರುಷರಾದ ಸಾಹಿತಿಗಳಿಗೆ ಮಾತ್ರ ಇಂತಹ ಸಿದ್ಧಿ ಲಭ್ಯವಾಗುತ್ತದೆ. ಈ ಗುಣವಿಶೇಷದಿಂದ ಇವರನ್ನು ಓರ್ವ ಸಮಕಾಲೀನ 'ರಸಋಷಿ' ಎಂದೂ ಕರೆಯಬಹುದು.

ಸಹೃದಯರಾದ ಕೆ. ಗೋಪಾಲಕೃಷ್ಣರಾಯರು ಸಾಹಿತಿ, ಆಶುಕವಿ ಮತ್ತು ಕತೆಗಾರ ಎನಿಸಿಕೊಂಡಿದ್ದರು.

ಸುಮಾರು ನಲವತ್ತು ವರ್ಷಗಳ ಲೋಕಜೀವನ ಕಾಲದಲ್ಲಿ ಕುಮಾರ ಕೃಪ ಮತ್ತು ಗೀತೆಗಳು ಎಂಬ ಎರಡು ಕವನ ಕೃತಿಗಳು ಬೆಳಕಿಗೆ ಬಂದುವು. ಅನಾಥೆ ಮತ್ತು ಇತರ ನೀಳ್ಗತೆಗಳು ಎಂಬ ಇನ್ನೊಂದು ಗ್ರಂಥ ಅವರಿಂದ ರಚಿತವಾಗಿದೆ. ಹುಟ್ಟು ಕತೆಗಾರರಾದ ಅವರು ೬೦-೭೦ ಸಣ್ಣ ಕತೆಗಳನ್ನು ಬರೆದಿರುತ್ತಾರೆ. ಉಡುಗೊರೆ, ಬಂಗಾರದ ಡಾಬು, ನಟಿ, ಹತ್ತು ಕತೆಗಳು, ಸೋತು - ಗೆದ್ದರು, ರಾಜಾಯಿ, ಮೊದಲಾದ ಕಥಾಸಂಗ್ರಹಗಳು ಅವರಿಂದ ಪ್ರಕಟವಾಗಿವೆ.

ಪ್ರತಿಭಾಶಾಲಿಗಳಾದ ಅವರು ಅಪರಾಧಿ, ಆಶೆ-ನಿರಾಶೆ, ಕನ್ಯಾರ್ಥಿ, ಸಾಕು ಕೂಸು, ರುಗ್ಣಶಯ್ಯೆ, ಚಿರಸಮಸ್ಯೆ, ಪಾರ್ಕಿನ ಲಚುಮಿ, ಎಂಬ ಏಳು ನಾಟಕಗಳನ್ನು ಬರೆದಿರುತ್ತಾರೆ. ಕೆನ್‌ಸಿಂಗ್‌ಟನ್ ಪಾರ್ಕ್, ಹರಿದಾಸ ಸಾಹಿತ್ಯ ಎಂಬ ಇವರ ಪ್ರಬಂಧಗಳು ವಿದ್ವಾಸರ ಮನ್ನಣೆಗೆ ಪಾತ್ರ ವಾಗಿವೆ.

ಇವರು ಪರಿಷತ್ ಕಾರ್ಯದರ್ಶಿಗಳಾಗಿದ್ದಾಗ ಆಧುನಿಕ ಗದ್ಯಸಾಹಿತ್ಯ ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇಂಗ್ಲಿಷ್ ಭಾಷೆಯಲ್ಲಿ ಇವರು ಎರಡು ಕೃತಿಗಳನ್ನು ಬರೆದಿರುತ್ತಾರೆ—(1) Dr. Suseela Sanketh (short story), (2) Sisters (one Act play).

ಇವರ ಧರ್ಮಪತ್ನಿಯವರಾದ ಶ್ರೀಮತಿ ಕೆ. ಜಿ. ಸುಶೀಲಮ್ಮನವರು 'ಗುರುರಾಜ ಚರಿತೆ' ಎಂಬ ಒಂದು ಗ್ರಂಥವನ್ನು ಬರೆದಿರುತ್ತಾರೆ. ಇದರಲ್ಲಿ ಕೂಡ ಕವಿ ಕೆ. ಗೋಪಾಲ ಕೃಷ್ಣರಾಯರ ಕೈವಾಡ ಇದೆಯೆಂದು ತಿಳಿಯಬಹುದು. ಕೆ. ಗೋಪಾಲಕೃಷ್ಣರಾಯರ ಜನನ ತಾ. ೯-೮-೧೯೦೬. ಮರಣ ತಾ. ೮-೧೦-೧೯೬೭, ಅವರ ಜೀವಿತಕಾಲ ೬೧ ವರ್ಷ.

೧೯೬೭ನೇ ಸೆಪ್ಟೆಂಬರ್ ೫ರಂದು ಇವರಿಗೆ ಷಷ್ಟಿಶಾಂತಿ ಮಹೋತ್ಸವ ನಡೆಯಿತು. 'ಗೀತೆಗಳು' ಎಂಬ ಅವರ ಕವನಸಂಗ್ರಹ ಅಂದು ಪ್ರಕಟವಾಯಿತು. ಅವರ ಅಭಿಮಾನಿಗಳು, ಸ್ನೇಹಿತರು, ಬಂಧುಗಳು ಸಭೆಯಲ್ಲಿ ತುಂಬಿದ್ದರು. ನಾನೂ ನನ್ನ ಸ್ನೇಹಿತರೂ ಅವರನ್ನು ಅಂದು ಸನ್ಮಾನಿಸಲು ಸಭೆಗೆ ಹೋಗಿದ್ದವು. ಷಷ್ಠಿಶಾಂತಿಗೆ ಕಾರಣಕರ್ತರಾದ ಅವರು ಮತ್ತು ಅವರ ಧರ್ಮಪತ್ನಿಯವರು ಸಭೆಗೆ ಬಂದು ಹೋಗುವವರನ್ನು ಸ್ವಾಗತಿಸುತ್ತಾ ಓಡಾಡುತ್ತಿದ್ದರು. ವಯೋವೃದ್ಧರಾದ ಇಬ್ಬರು ದೊಡ್ಡ ಮನುಷ್ಯರು ಸಭೆಯಲ್ಲಿ ಅಗ್ರಸ್ಥಾನದಲ್ಲಿ ಕುಳಿತಿದ್ದರು. ಅದು ಯಾವುದಾದರೊಂದು ಸಮ್ಮೇಳನವೋ ಎಂಬಂತೆ ಥಟ್ಟನೆ ನೋಡಿದವರಿಗೆ ಭಾಸವಾಗುತ್ತಿತ್ತು.

ಹಿರಿಯರು ರಾಯರನ್ನು "ಶತಮಾನಂ ಭವತು" ಎಂದು ಹಾರೈಸುತ್ತಿದ್ದರು. ಕೆ. ಗೋಪಾಲಕೃಷ್ಣರಾಯರು ಮತ್ತು ಅವರ ಧರ್ಮಪತ್ನಿಯವರು ಎಲ್ಲರಿಗೂ ತಲೆಬಾಗಿ ನಮಿಸುತ್ತಿದ್ದರು. ಆಗ ಅವರಲ್ಲಿ ಹೆಚ್ಚಿನ ಸಲುಗೆಯುಳ್ಳ ನಾನು "ಏನು ! ರಾಯರೇ, ಇಂದು ನಿಮ್ಮ ಷಷ್ಟಿಶಾಂತಿ ಮಹೋತ್ಸವ, ನೀವೂ ನಿಮ್ಮ ಧರ್ಮಪತ್ನಿಯವರೂ ಹಸೆಯ ಮೇಲೆ ಕುಳಿತುಕೊಳ್ಳಬೇಕು, ಬಂದವರು ನಿಮ್ಮನ್ನು ಆಶೀರ್ವದಿಸಬೇಕು. ಆದರೆ ಈ ಸಭೆಯು ಅದಕ್ಕೆ ವಿಭಿನ್ನವಾಗಿ ತೋರುತ್ತಿದೆಯಲ್ಲಾ, ನೀವು ಓಡಾಡುತ್ತಿರುವಿರಿ, ಆಹ್ವಾನಿತರಾದ ವೃದ್ಧರಿಬ್ಬರು ಉನ್ನತಾಸನದಲ್ಲಿ ಕುಳಿತಿದ್ದಾರೆ, ನಾವು ಯಾರಿಗೆ ಹೂವಿನ ಹಾರವನ್ನು ಹಾಕಬೇಕು, ಶಾಲು ಹೊದಿಸಬೇಕು" ಎಂದು ಕೇಳಿದೆನು. ಅದಕ್ಕೆ ಅವರು ವಿನಯದಿಂದ "ದೊಡ್ಡವರ ಸೇವೆಯಲ್ಲಿ ಎಲ್ಲವೂ ಅಡಗಿವೆ" ಎಂದು ಹೇಳಿದರು. ಆಗ ನನಗೆ "ಸುಖಸ್ಯಮೂಲಂ ವೃದ್ಧೋಪ ಸೇವನಾ" ಎಂಬ ಆರ್ಯಚಾಣಕ್ಯನ ಮಾತು ನೆನಪಿಗೆ ಬಂತು. ರಾಯರ ಸರಳ, ಮುಗ್ಧಭಾವನೆಗಳನ್ನು ಕಂಡು ಆಶ್ಚರ್ಯವಾಯಿತು.

ಒಟ್ಟಿನಲ್ಲಿ ಕೆ. ಗೋಪಾಲಕೃಷ್ಣರಾಯರು—ನನ್ನ ಅಭಿಪ್ರಾಯದಂತೆ ಕನ್ನಡಿಗರಿಗೆ ಮರೆಯಲಾಗದ ವ್ಯಕ್ತಿ. ಪರಿಷತ್ತಿನಲ್ಲಿ ಅವರ ಭಾವಚಿತ್ರ ಇರಬೇಕೆಂದು ನನ್ನ ಆಶೆ. ಅವರ ಒಂದು ಭಾವಚಿತ್ರವನ್ನು ನಾನು ಪರಿಷತ್ತಿಗೆ ಕಾಣಿಕೆಯಾಗಿ ಕೊಟ್ಟಿದ್ದೇನೆ. ಅದನ್ನು ಪರಿಷತ್ತಿನಲ್ಲಿ ಅಲಂಕರಿಸಲು ಅದರ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಕನ್ನಡ ನುಡಿಯಲ್ಲಿ ಅವರ ಹೆಸರಿನ ಒಂದು ಸ್ಮರಣಸಂಚಿಕೆ ಬರಬೇಕೆಂಬುದು ನನ್ನ ಆಕಾಂಕ್ಷೆ. ಅದೂ ಈಗ ಕಾರ್ಯರೂಪಕ್ಕೆ ಬಂದಿದೆ. ಅವರ ಗ್ರಂಥಗಳು ಹೆಚ್ಚು ಹೆಚ್ಚು ಪ್ರಚಾರಕ್ಕೆ ಬರಬೇಕೆಂಬುದು ಮತ್ತೊಂದು ನನ್ನ ಬಯಕೆ. ಅದು ಕಾಲಕ್ರಮದಲ್ಲಿ ಆಗಬೇಕಾದ ಕಾರ್ಯ. ಈಗಾಗಲೇ ಕೆಲವು ಮಂದಿ ಮಿತ್ರರು ಈ ಬಗೆಗೆ ಪ್ರಯತ್ನಿಸುತ್ತಿದ್ದಾರೆಂಬುದು ಸಮಾಧಾನ.

ಹುಟ್ಟಿದವರು ಸಾಯಲೇಬೇಕೆಂಬುದು ಸೃಷ್ಟಿನಿಯಮ. ಹುಟ್ಟು ಸಾವಿನ ಬುತ್ತಿ ಕಟ್ಟಿಕೊಂಡೇ ಬರುತ್ತದೆ. ನವರಂಧ್ರಮಯ ಘಟದಲ್ಲಿ (ದೇಹದಲ್ಲಿ) ಭುವನಂ ಎಂಬ ನೀರು (ಪ್ರಾಣ) ಹಲವಾರು ವರ್ಷ ಇರುವುದು ಆಶ್ಚರ್ಯವೇ ಹೊರತು ಹೋಗುವುದು ಅಚ್ಚರಿಯಲ್ಲ ಎಂಬ

ಕವಿ ವಾಕ್ಯದಂತೆ ಸಾವು ನರನಿಗೆ ಅನಿವಾರ್ಯವೆನಿಸುತ್ತದೆ. "ಜಾತಸ್ಯ ಮರಣಂ ಧೃವಂ" ಪ್ರಸಿದ್ಧವಾಗಿದೆ. ಕೆ. ಗೋಪಾಲಕೃಷ್ಣರಾಯರು ೬೧ ವರ್ಷ ಒಳ್ಳೆಯ ಬಾಳನ್ನು ಬಾಳಿ ಕನ್ನಡ ನಾಡು ನುಡಿಗಳಿಗೆ ಉತ್ತಮ ಸೇವೆ ಸಲ್ಲಿಸಿ ಆದರ್ಶ ಗೃಹಸ್ಥರೆನಿಸಿಕೊಂಡು ಹೋಗಿರುತ್ತಾರೆ. ಅವರ ಮರಣ ಕೂಡ ಸುಖಮಯವೆನಿಸಿದೆ. "ಶರಣನ ಗುಟ್ಟು ಮರಣದಲ್ಲಿ" ಎಂದು ಹಿರಿಯರು ಹೇಳಿದ್ದಾರೆ. ಈ ದೃಷ್ಟಿಯಿಂದಲೂ ಅವರು ಸ್ಮರಣಾರ್ಹರಾಗಿದ್ದಾರೆ. ಅವರ ಪವಿತ್ರಾತ್ಮನಿಗೆ ಭಗವಂತನು ಶಾಂತಿಯನ್ನೂ ಅವರ ಪತ್ನೀಪುತ್ರಾದಿಗಳಿಗೆ ಮನಸ್ಸಮಾಧಾನವನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುವುದು ಇಂದು ನಮ್ಮ ಕರ್ತವ್ಯವಾಗಿದೆ.

ಸುಲೋಚನೆಯ ಸ್ವಯಂವರ

ನಡೆದಳು ಪೂಮಾಲೆವಿಡಿದಾಕೆ ಚೆಲ್ವರ
ನೆಡಬಲದಲ್ಲಿ ನಿಟ್ಟಿಸುತ
ಒಡನೆ ಮಹೇಂದ್ರಿಕೆಯೆಂಬ ಕಟ್ಟಿಗೆಕಾತಿ
ನುಡಿದು ಕಾಣಿಸಿದಳೇನೆಂಬೆ

* * *

ಬಗಸೆಗಣ್ಬೆಳಗಿನ ಮಾಲೆವೆರಸಿ ನಸು
ನಗೆವೆಳಗಿನ ಮಾಲೆಗೂಡಿ
ತೆಗೆದು ಪೂಮಾಲೆಯನಿಟ್ಟಳಾತನಿಗೆ ಹೆ
ಣ್ಣುಗಳುಬ್ಬಿ ಜಯಜಯವೆನಲು

—ರತ್ನಾಕರವರ್ಣಿ
ಭರತೇಶವೈಭವ

ಸ್ನೇಹರಸ

○● ಆರಯ್ಯ

ಡೇಮನ್ ಮತ್ತು ಪಿಥಿಯಾಸ್ ಇವರ ಸ್ನೇಹ ನ ಭೂತೋ ನ ಭವಿಷ್ಯತಿ. ಸಾಹಿತ್ಯದಲ್ಲಿಯಾಗಲಿ ಜೀವನದಲ್ಲಿಯಾಗಲಿ ಇಂತಹ ಸ್ನೇಹ ಅತಿ ವಿರಳ. ಇದೊಂದು ಅನುಭವ ವೇದ್ಯ ವಾದ ಸುಭಾಷಿತ. ಏತಕ್ಕೆಂದರೆ ಸ್ವಂತ ಸಾಹಸದಿಂದ ಅನೇಕ ಶತ್ರುಗಳನ್ನು ಸಂಪಾದಿಸಿದ ಧೀರ ಈ ಲೇಖಕ; ಸುದೈವದಿಂದ ನಾಲ್ಕಾರು ಸನ್ಮಿತ್ರರೂ ಲಭಿಸಿದ್ದುಂಟು. ಜೀವನದ ಎರಡು ಅಮೃತ ಫಲಗಳ ರುಚಿಯನ್ನು ನಾನು ಮೊದಲ ಸವಿದದ್ದು ದಿ. ಗೋಪಾಲಕೃಷ್ಣರಾಯರ ಸಹವಾಸ ದಿಂದ.

" ಕೆಳೆಯಂಗಾಯ್ತುಸುವೋಕ್ಷಂ ; ಆ ಗ ದೆ ನ ಗ ಂ ಬಾಷ್ಪಾಂಬು ಮೋಕ್ಷಂ."

ಆಗ್ಗೆ ನಾನು ಸೊಂಡೇಕೊಪ್ಪದಲ್ಲಿ ವರಪೂಜೆಯಲ್ಲಿ ತೊಡಗಿದ್ದೆ.

" But, at my back, I always hear Timis winged chariat drawing near."

ಹೆಚ್ಚು ಕಾಲಹರಣ ಮಾಡದೆ ಈ ಸ್ನೇಹಋಣವನ್ನು ತೀರಿಸಲು ಯತ್ನಿಸುತ್ತೇನೆ.

ಈ ಋಣ ಬಹುಕಾಲದಿಂದ ನನ್ನನ್ನು ಬಾಧಿಸುತ್ತಿದೆ ಎಂಬ ಅಂಶ "ನಾ ಕಂಡ ಕರ್ಣಾಟಕದ" ಒಂದು ಪರಿಚ್ಛೇದದಿಂದ ವ್ಯಕ್ತವಾಗುತ್ತದೆ. ಆಗ್ಗೆ ಶ್ರೀಯುತ ರಾಗಿದ್ದು ಈಗ ಪದ್ಮಶ್ರೀ ಎಂದು ಲೋಕವಿಖ್ಯಾತರಾಗಿರುವ ನನ್ನ ಇನ್ನೊಬ್ಬ ಸನ್ಮಿತ್ರರ ವ್ಯಕ್ತಿ ಪರಿಚಯ ಮಾಡಿ ಕೊಡುವಾಗ ಹೀಗೆ ಬರೆದದ್ದುಂಟು : "೧೯೨೮ರ ಸುಮಾರಿಗೆ ನನಗೂ ಶ್ರೀ ಕೇಶವನ್ ಅವರಿಗೂ ಪ್ರಥಮ ಪರಿಚಯ ವಾಯಿತು. ಪರಿಚಯ ಮಾಡಿಕೊಟ್ಟವರು ಕನ್ನಡನಾಡಿ ನಲ್ಲಿ ಈಗ ಸುಪ್ರಸಿದ್ಧ ಕಥೆಗಾರರಾಗಿರುವ ಆಗ ತರುಣ ಕವಿ ಎಂದು ನಾವು ಭಾವಿಸಿದ್ದ ಶ್ರೀ ಕೆ. ಗೋಪಾಲಕೃಷ್ಣರಾಯರು. ಈ ಮಹನೀಯರು ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಸುಪ್ರಸಿದ್ಧ ಕಾರ್ಯದರ್ಶಿಗಳಲ್ಲೊಬ್ಬರು. ಇವರು ಕಾರ್ಯದರ್ಶಿಗಳಾಗಿ ಕೀರ್ತಿಗಳಿಸಿ ನಮಗೆ ಮೇಲ್ಪಂಕ್ತಿ ಯನ್ನು ಹಾಕಿದ್ದ ಶ್ರೀ ಸಿ. ಕೆ. ವೆಂಕಟರಾಮಯ್ಯ ನವರಂತೆಯೇ ಉತ್ಸಾಹಶಾಲಿಗಳು; ವನಸುಮದಂತೆ ಸೌರಭ ವನ್ನು ಸೂಸತಕ್ಕವರು. ತರುಣ ಲೇಖಕರಾದ ಶ್ರೀ ಡಿ. ಆರ್. ರಾಮಯ್ಯ, ಶ್ರೀ ದಿನಕರ ದೇಸಾಯಿ, ಶ್ರೀ ಜಿ. ವಾಸುದೇವ ರಾವ್, ಶ್ರೀ ಇ. ಎ. ಭಾಸ್ಕರರಾವ್ ಮುಂತಾದ ಮಹನೀಯ ರನ್ನು ಒಟ್ಟುಗೂಡಿಸಿ ಇವರ ಮೂಲಕ ಕರ್ಣಾಟಕ ಸಂಘದ ಚಟುವಟಿಕೆಯನ್ನು ಭರದಿಂದ ಸಾಗಿಸುವುದರಲ್ಲಿ ಪೂಜ್ಯಗುರು ಗಳಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿ, ಶ್ರೀ ಟಿ. ಎಸ್. ವೆಂಕಣ್ಣಯ್ಯ ಇವರುಗಳಿಗೆ ರಾಯರು ಬಲಗೈ ಅಂತಿದ್ದರು." (೧೯೫೩)

ಎ. ಆರ್. ಕೃ. ಅವರು ತಮ್ಮ ಮಿತ್ರರ ಬಗ್ಗೆ ಮಾಡಿದ ಪ್ರಶಂಸೆ, ಅಲ್ಪ ಬದಲಾವಣೆ ಮಾಡಿದರೆ, ರಾಯರಿಗೂ ಅನ್ವಯಿಸುತ್ತದೆ: "ಶ್ರೀಯುತರು ಪುಣ್ಯವಂತರು, ಒಳ್ಳೆಯವ ರೆನಿಸಿಕೊಂಡು, ನಯವಾದ ನವಿರಾದ ಸಾತ್ವಿಕ ಜೀವನ ವನ್ನು ಜೀವಿಸಿ, ಗಂಟುನಂಟು ಎರಡನ್ನೂ ಉಳಿಸಿಕೊಂಡು, ದೇವರಿಗೂ ಮನುಷ್ಯರಿಗೂ ಮೆಚ್ಚಿಕೆಯಾಗಿ ಬಾಳಿ ಕಣ್ಮರೆ ಯಾದರು."

ಶ್ರೀನಿವಾಸ ಲಿಖಿತ " ನಮ್ಮ ಸಾಹಿತ್ಯದ ಅಶ್ವಿನೀದೇವತೆ ಗಳು " ಎಂಬ ಲೇಖನದ ಒಂದು ಭಾಗವನ್ನೂ ರಾಯರ ಪ್ರಶಂಸೆಗಾಗಿ ಅಳವಡಿಸಬಹುದು :–"ಕನ್ನಡದ ಕೆಲಸಕ್ಕಾಗಿ ಅಲ್ಲದಿದ್ದರೆ ನನ್ನ ರಾಯರ ಪರಿಚಯ ಸ್ನೇಹವಾಗಬೇಕಾದ ಕಾರಣ ಇರಲಿಲ್ಲ. . . ನನಗಿಂತ ಸುಮಾರು ಒಂದು ದಶಕದ ಹಿಂದೆಯೇ ಅವರಿಗೆ ಕನ್ನಡದೀಕ್ಷೆ ಬಂದಿತ್ತು. ರಾಯರು ಶುದ್ಧ ಚೇತನರು, ಋಜುಸ್ವಭಾವದವರು, ಕಾರ್ಯತತ್ಪರರು, ಸ್ವಾಮಿನಿಷ್ಠೆಯುಳ್ಳವರು." (ಬೆಳ್ಳಿಯ ಸಂಚಿಕೆ)

ಇದಕ್ಕೆ ಮೊದಲೇ ವಿದ್ಯಾರ್ಥಿಕವಿಗಳ ಸಮ್ಮೇಳನವನ್ನು ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಸಿ ಕೀರ್ತಿಗಳಿಸಿದ್ದರು. ಆದರೆ ಪ್ರ ಬು ದ್ಧ ಕರ್ಣಾಟಕದ ೧೯೨೬–೨೭ರ ಸಂಪುಟವು ನನ್ನಲ್ಲಿ ಕಳೆದುಹೋಗಿ, ಮಾನಸ ಗಂಗೋತ್ರಿಯ ಪ್ರಸಾರಾಂಗದಲ್ಲೂ ದೊರೆಯಲಿಲ್ಲ. DECCAN HERALDನಲ್ಲಿ ರಾ ಯ ರ ಕ ಥೆ ಯ ರೂಪಾಂತರವನ್ನು ಐದು ಕಾಲಮ್ಮಿನಷ್ಟು ಭರ್ತಿಮಾಡಲು ಐವತ್ತು ಮೈಲಿ ಸುವೇಗದ ಮೇಲೆ ಸುತ್ತಬೇಕಾಯಿತು. ರಾಯರು ಬರೆದ ಕಥಾಸಂಕಲನದ ಪ್ರತಿಗಳು ರಾಯರ ಮನೆಯಿಂದ ಮಾಯವಾಗಿರುವುದಲ್ಲದೆ, ಅದನ್ನು ಪ್ರಕಟನೆ ಮಾಡಿದ ಅವರ ಮಾನ್ಯ ಮಿತ್ರ ಶ್ರೀ ತಳಕಿನ ಶ್ಯಾಮರಾಯ

ರಲ್ಲೂ ದೊರೆಯಲಿಲ್ಲ. ಹೀಗಾಗಿ ರಾಯರ ಕೃತಿಗಳನ್ನು ಪತ್ತೆಹಚ್ಚಲು ಒಂದು ಸಂಶೋಧಕ ಮಂಡಲಿಯನ್ನು ನಿಯೋಜಿಸಬೇಕಾಗಿದೆ!

ಮೇಲೆ ತಿಳಿಸಿರುವ ಘಟನೆಗಳಿಂದ, ಉದಾಹರಿಸಿರುವ ಲೇಖನಗಳಿಂದ, ಒಂದು ಅಂಶ ವ್ಯಕ್ತವಾಗುತ್ತದೆ—೧೯೩೬ ರಿಂದ ಕಾಲು ಶತಮಾನ ಪರ್ಯಂತ ಕನ್ನಡ ಪ್ರಪಂಚದಲ್ಲಿ ಕಂಡುಬಂದ ಚಲನವಲನಗಳನ್ನು ಚಾರಿತ್ರಿಕ ದೃಷ್ಟಿಯಿಂದ ನೋಡಬಯಸುವರು ರಾಯರ ಕೃತಿಗಳನ್ನು ಕಡ್ಡಾಯವಾಗಿ ಪರಾಂಬರಿಸಬೇಕು. "He was an uncommon common man." ಉದ್ದೇಶಪೂರ್ವಕವಾಗಿ ಕಾಲವನ್ನು ಮಿತಿಗೊಳಿಸಿದೆ. ರಾಯರಿಗೆ ಸಮಕಾಲಿನ ಪ್ರಜ್ಞೆ ಇತ್ತು ಎಂದು ನಾನು ಭಾವಿಸುವುದಿಲ್ಲ. ಅವರು ಒಂದು ರೀತಿಯಲ್ಲಿ ರಾಜಕೀಯಕ್ಕಿಳಿದು, ವ್ಯಾಪಾರ ಉದ್ಯಮಗಳ ರಂಗವನ್ನು ಪ್ರವೇಶಿಸಿ ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದರು. ಅದರಿಂದ ಅವರ ಯಶಸ್ಸು ಶಾಶ್ವತವಾಗಲು ಸಹಾಯವಾಯಿತೆಂದು ಹೇಳಲು ಸಾಧ್ಯವಿಲ್ಲ. ಇದು ವಾದಗ್ರಸ್ತವಾದ ವಿಷಯ. ಆದರೂ ಎರಡನೆಯ ಮಹಾಯುದ್ಧದಿಂದೀಚೆಗೆ ಅವರು ಹೆಚ್ಚಿಗೆ ಏನೂ ಸಾಧಿಸಲಿಲ್ಲ ಎಂದು ವಾದಿಸುವುದು ಸಕಾರಣವಾಗಿದೆ.

ಸಮಕಾಲೀನ ಸಾಹಿತ್ಯದ ಮೌಲ್ಯಗಳ ವಿಷಯದಲ್ಲಿ ಹೀಗೆ ಎಂದು ಅಂತಿಮ ನಿರ್ಧಾರಕ್ಕೆ ಬರುವುದು ಮೂರ್ಖತನ. ಆದುದರಿಂದ ಈ ಚರ್ಚೆಯನ್ನು ಇಲ್ಲಿಗೇ ಬಿಟ್ಟು, ಈ ಕಾಲಪರಿಮಿತಿಯ ಪ್ರಯೋಜನವನ್ನು ವಿವರಿಸಬಹುದು. ಇದರಿಂದ ವಿಷಯ ನಿರೂಪಣೆಯು ನಿಷ್ಪೃಷ್ಟವಾಗಿಯೂ, ನಿರ್ದುಷ್ಟವಾಗಿಯೂ, ಸಂಕ್ಷಿಪ್ತವಾಗಿಯೂ ಆಗಬಹುದೆಂಬ ನಂಬಿಕೆಯುಂಟು. ಇದು ಸಾಧು ಎಂದು ಮಹಾಜನರು ಒಪ್ಪಿದರೆ ಚಾರಿತ್ರಿಕ ಹಿನ್ನೆಲೆ, ಟೀಕೆ ಟೋಕೆಗಳನ್ನೊಳಗೊಂಡ ಒಂದು ಗ್ರಂಥವನ್ನು ಪ್ರಕಟಿಸಬೇಕೆಂಬ ಉದ್ದೇಶವಿದೆ.

ಈ ಸಂಕಲನವನ್ನು ಸರ್ವಾಂಗ ಸುಂದರವಾಗಿ, ಸರ್ವಜನಾದರಣೀಯವಾಗಿಸಲು ಅನೇಕ ಸನ್ಮಿತ್ರರು ತಾವಾಗಿಯೇ ಮುಂದೆ ಬಂದಿದ್ದಾರೆ. ಇಂಥವರ ವಿಷಯದಲ್ಲಿ "ಗುಣಾನ್ ಪ್ರಕಟೀಕರೋತಿ" ಎಂಬ ಸುಭಾಷಿತವು ಅರ್ಥವತ್ತಾಗಿದೆ. ಇವರಲ್ಲಿ ಆಶ್ರಯದಿಂದ ಮಹೋದಯರಾದ ಶ್ರೀ ಕೆ. ಹನುಮಂತಯ್ಯನವರ ಹೆಸರನ್ನು ಮೊದಲು ಹೇಳಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ.ವೆಂ., ಕೀರ್ತನ ಕೇಸರಿ ಶ್ರೀ ಶಿವಮೂರ್ತಿಶಾಸ್ತ್ರಿಗಳು, ಕತೆಗಾರರ ಪ್ರಪಿತಾಮಹ ಶ್ರೀನಿವಾಸ, ಕವಿವರ್ಯ ಅಂಬಿಕಾತನಯದತ್ತ, ಕುಲಪತಿಗಳಾದ ವಿನಾಯಕ, ಮೂರು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಹಾಗೂ ಅಧ್ಯಾಪಕರುಗಳು ಈ ಉದ್ಯಮಕ್ಕೆ ಸಹಾಯ ಮಾಡುವ ನಿರೀಕ್ಷೆಯುಂಟು.

ಸಂಪಾದಕ ಮಂಡಲಿಯೊಂದು ಸದ್ಯದಲ್ಲೇ ಸಭೆ ಸೇರಿ ಮುಂದಿನ ಕಾರ್ಯಕ್ರಮನ್ನು ಗೊತ್ತುಮಾಡಲಿದೆ. ಈ ಸಾಹಿತ್ಯ ಸೇವೆಯಲ್ಲಿ ಭಾಗವಹಿಸಲು ಇಷ್ಟವುಳ್ಳ ಮಹಿಳೆಯರೂ ಮಹನೀಯರೂ ಸಂಚಾಲಕರೊಂದಿಗೆ ಪತ್ರ ವ್ಯವಹಾರ ನಡೆಸಬೇಕೆಂದು ಕೋರಲಾಗಿದೆ.

ಆಸೆ

ನಿನ್ನ ಕೊರಳಿನೊಳಿರುವ ಹಾರವನು ಸೇರಲೆಂ
ದೆನ್ನ ಮನಮುಕುಳ ತಳಮಳಿಸಲು
ಇನ್ನು ಉರಿ ಬಿಸಿಲಿಂದ ಕಂದಿಸದೆ ಕರುಣಿಪುದೊ
ನಿನ್ನ ಮಾಲೆಯೊಳೊಂದು ಸ್ಥಳವ

—ಗೋ. ಕೃ.

ಗೋ. ಕೃ. ರವರ ಕೆಲವು ನೆನಪುಗಳು

●● ಶ್ರೀಮತಿ ಸುಬ್ಬಲಕ್ಷ್ಮಿ

ಶ್ರೀಮಾನ್ ಕೆ. ಗೋಪಾಲಕೃಷ್ಣರಾಯರು ನಿಧನರಾದ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ ತಕ್ಷಣವೇ ನನಗೆ ದಿಗ್ಭ್ರಮೆಯಾಯಿತು. ಹಿಂದಿನ ದಿನವಷ್ಟೇ ನಮ್ಮ ಯಜಮಾನರು ಅವರೊಡನೆ ಮಾತನಾಡಿಕೊಂಡು ಬಂದಿದ್ದರು. ಸುದ್ದಿ ಓದಿದೊಡನೆ ಅವರ ಮನೆಗೆ ಧಾವಿಸಿದೆವು. ಆದರೆ ಯಾವಾಗಲೂ ನಮ್ಮನ್ನು ಆದರದಿಂದ ಸ್ವಾಗತಿಸಿ ಸವಿಮಾತುಗಳಿಂದ ಸತ್ಕರಿಸುತ್ತಿದ್ದ ಗೋ. ಕೃ. ಇಲ್ಲದ್ದರಿಂದ ನಮಗೆಲ್ಲಾ ದುಃಖ ಒತ್ತರಿಸಿ ಬಂತು. ಅವರ ಮನೆಯಲ್ಲಿ ಎಲ್ಲಾ ಚಿಕ್ಕ ಚಿಕ್ಕ ಮಕ್ಕಳು. ಯಾರೂ ಸಂಪಾದಿಸುತ್ತಿಲ್ಲ. ಇನ್ನೂ ಓದುವುದೇ ಮುಗಿದಿಲ್ಲ. ಹೆಣ್ಣುಮಕ್ಕಳಿಗೆ ಮದುವೆ ಆಗಿಲ್ಲ. ಇಂತಹ ಪರಿಸ್ಥಿತಿಯಲ್ಲಿರುವ ಕುಟುಂಬವನ್ನು ನಡುನೀರಿನಲ್ಲಿ ಕೈಬಿಟ್ಟು ಹೊರಟು ಹೋದರು. ಅವರು ಯಾವಾಗಲೂ ಭಕ್ತಿಯಿಂದ ಪೂಜಿಸುತ್ತಿದ್ದ ರಾಘವೇಂದ್ರಸ್ವಾಮಿಗಳೇ ಆ ಮಕ್ಕಳನ್ನು ಕಾಪಾಡಬೇಕು.

ಗೋಪಾಲಕೃಷ್ಣರಾಯರು ಕಪಟವಂಚನೆಗಳನ್ನರಿಯದ ಸರಳ ಹೃದಯದವರು. ಅವರು ಯಾರನ್ನೂ ದ್ವೇಷಿಸುತ್ತಿರಲಿಲ್ಲ. ಶತ್ರುಗಳನ್ನು ಮಿತ್ರರೆಂದೇ ತಿಳಿಯುತ್ತಿದ್ದರು. ಸ್ನೇಹಿತರನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಿದ್ದರು. ಯಾರು ಬಂದು ಏನು ಸಹಾಯ ಕೇಳಿದರೂ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಅದು ಅವರಿಂದ ಸಾಧ್ಯವಿಲ್ಲದಿದ್ದರೆ ಯಾರಿಂದ ಸಾಧ್ಯವೋ ಅವರೊಡನೆ ವ್ಯವಹರಿಸಿ ಅವರ ಕೆಲಸ ಮಾಡಿಸಿಕೊಡುತ್ತಿದ್ದರು. ಅವರು ಸ್ಪಷ್ಟವಾಗಿ ನಿಧಾನವಾಗಿ ಮಾತಾಡುತ್ತಿದ್ದರು. ಅವರ ಮಾತಿನಿಂದ ಬೇರೆಯವರಿಗೆ ನೋವಾಗಬಾರದೆಂದು ತೂಗಿ ತೂಗಿ ಮಾತಾಡುತ್ತಿರುವರೋ ಎನ್ನಿಸುತ್ತಿತ್ತು.

ಮಕ್ಕಳನ್ನು ಕಂಡರೆ ವಿಪರೀತ ವಿಶ್ವಾಸ. ಮಗು ಹೇಗಿದ್ದರೂ ಸರಿ ಅದನ್ನು ಎತ್ತಿ ಆಡಿಸುತ್ತಿದ್ದರು. ಊಟ ಮಾಡುವಾಗ ಕೂಡ ಅವರು ನಮ್ಮ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಿದ್ದುದು ನನ್ನ ಕಣ್ಣಿಗೆ ಕಟ್ಟಿದಂತಿದೆ. ಅವರ ಮಕ್ಕಳು ತಪ್ಪು ಮಾಡಿದಾಗ ಕೂಡ ಅವರನ್ನ ಶಿಕ್ಷಿಸುತ್ತಿರಲಿಲ್ಲ.

ಅತಿಥಿಗಳನ್ನು ಸತ್ಕರಿಸುವುದೆಂದರೆ ಅವರಿಗೆ ತುಂಬಾ ಉತ್ಸಾಹ. ಇದಕ್ಕಾಗಿ ಆಗಾಗ ಪೂಜೆ ಪುರಸ್ಕಾರಗಳ ನೆಪದಲ್ಲಿ, ಬಂಧು ಮಿತ್ರರನ್ನು ಊಟಕ್ಕೆ ಕರೆಯುತ್ತಿದ್ದರು. ಪ್ರಸಿದ್ಧ ಕವಿಗಳು ಸಂಗೀತಗಾರರೂ ಆಹ್ವಾನಿಸಲ್ಪಟ್ಟಿರುತ್ತಿದ್ದರು. ಆಗ ನಮ್ಮನ್ನು ಸಹ ಮರೆಯದೆ ಕರೆಯುತ್ತಿದ್ದರು. ಎಲ್ಲರಿಗೂ ಒಂದೇ ವಿಧವಾದ ಸ್ವಾಗತವಿರುತ್ತಿತ್ತು. ಒಂದುಸಲ ರಾಘವೇಂದ್ರಸ್ವಾಮಿಗಳ ಭಕ್ತರೊಬ್ಬರಿಗೆ ಪಾದಪೂಜೆಯ ಸಮಾರಂಭವಿತ್ತು. ನೆಂಟರಿಷ್ಟರೆಲ್ಲ ಬಂದಿದ್ದರು ಆಗ ಅಲ್ಲಿ ಒಂದು ಬೆಳ್ಳಿಯಬಟ್ಟಲು ಕಳವಾಯಿತು. ಆಗ ಆ ರಾಘವೇಂದ್ರಸ್ವಾಮಿಗಳ ಭಕ್ತರು 'ಕಳ್ಳರನ್ನು ಈಗಲೇ ಹಿಡಿದುಕೊಡುತ್ತೇನೆ' ಎಂದರು. ಆದರೆ ಅದಕ್ಕೆ ಗೋ. ಕೃ. ಒಪ್ಪಲಿಲ್ಲ. 'ಒಂದು ಬೆಳ್ಳಿಯ ಬಟ್ಟಲಿಗೋಸ್ಕರ ನಮ್ಮ ಮನೆಗೆ ಬಂದ ಒಬ್ಬ ಅಥಿತಿಗೆ ನಾಲ್ಕು ಜನರೆದುರು ಅವಮಾನವಾಗುವುದು ಬೇಡ, ಎಂದರು. ಇದರಿಂದ ಅವರು ಅಥಿತಿಗಳನ್ನು ಎಷ್ಟು ಗೌರವಿಸುತ್ತಿದ್ದರು ಎನ್ನುವುದು ಗೊತ್ತಾಗುತ್ತದೆ.

ಅವರು ಪ್ರತಿದಿನ ದೇವರಪೂಜೆ ಮಾಡುತ್ತಿದ್ದರು. ದೇವರಲ್ಲಿ ಅಪಾರವಾದ ನಂಬಿಕೆ. ಅವರ ದಾಯಾದಿಯೊಬ್ಬರು ಯಾವುದೋ ವಿಷಯಕ್ಕೆ ಅವರೊಡನೆ ಜಗಳವಾಡಿ ಕೆಟ್ಟ ಮಾತುಗಳನ್ನಾಡಿದಾಗಲೂ ಅವರು ತಿರುಗಿ ಅವರಿಗೆ ಬಯ್ಯಲಿಲ್ಲ. 'ದೇವರು ನಿನಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ' ಎಂದು ಹೇಳಿ ಒಳಗೆ ಹೊರಟು ಹೋದರು. ಒಂದೆರಡು ವರುಷಗಳನಂತರ ಆ ದಾಯಾದಿ ತಾನಾಗಿಯೇ ಬಂದು ಅವರ ಕ್ಷಮೆ ಕೇಳಿ ಅವರ ಆತ್ಮೀಯರಲ್ಲಿ ಒಬ್ಬರಾದರು.

ಅವರು ಜೀವನದಲ್ಲಿ ಬಹಳ ಕಷ್ಟ ನಷ್ಟಗಳನ್ನನುಭವಿಸಿದ್ದರು. ಪದೇ ಪದೇ ಕಾಹಿಲೆ ಬೀಳುತ್ತಿದ್ದ ಅವರ ಪತ್ನಿಯನ್ನು ಬಹಳ ಕಷ್ಟಪಟ್ಟು ವಿಧಿಯೊಡನೆ ಹೋರಾಡಿ ಉಳಿಸಿಕೊಂಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಸರ್ಕಾರಿ ಕೆಲಸದಲ್ಲಿದ್ದುದರಿಂದ ಬೆಳಗ್ಗೆ ಮನೆಬಿಟ್ಟು ಹೊರಟರೆ ಸಾಯಂಕಾಲ ಮನೆಗೆ ಬರುತ್ತಿದ್ದರು. ಆದುದರಿಂದ ಮನೆಯ ಆಗು ಹೋಗುಗಳನ್ನು ವಿಚಾರಿಸಲು ಅವರಿಗೆ ಸಮಯವೇ ಇರಲಿಲ್ಲ. ಅದನ್ನು ಅಷ್ಟಾಗಿ ಮನಸ್ಸಿಗೆ

ತೆಗೆದುಕೊಳ್ಳುತ್ತಲೂ ಇರಲಿಲ್ಲ. ಮನೆಯವರ ಜವಾಬ್ದಾರಿ ಎಲ್ಲಾ ಅವರ ಪತ್ನಿಯದೇ.

ಅವರು ಅರವತ್ತು ವರುಷದ ಶಾಂತಿಯನ್ನು ತಮ್ಮ ಮನೆಯಲ್ಲಿ ಮಾಡಿಕೊಂಡರು. ಆ ಸಂದರ್ಭದಲ್ಲಿ ಶ್ರೀಮಾನ್ ಮಾಸ್ತಿಯವರು, 'ಗೋಪಾಲಕೃಷ್ಣರಾಯರು ಅರವತ್ತು ವರುಷದ ತರುಣರು' ಎಂದು ಹೇಳಿದ ಮಾತು ಅಕ್ಷರಶಃ ಸತ್ಯ. ನಿವೃತ್ತರಾದಮೇಲೂ ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದರು. ಬೆಳಗ್ಗೆ ಊಟಮಾಡಿಕೊಂಡು ಸೈಕಲ್ಲೇರಿ ಹೊರಟರೆಂದರೆ ಮನೆಗೆ ಬರುತ್ತಿದ್ದುದು ಸಾಯಂಕಾಲ ಏಳು ಗಂಟೆಗೇ. ಇದರ ಜೊತೆಗೆ ಜೀವನ ಪತ್ರಿಕೆಯ ಕೆಲಸವನ್ನು ನಿರ್ವಹಿಸುತ್ತಿದ್ದರು. ಯುವಕರಿಗಿಂತ ಹೆಚ್ಚು ಉತ್ಸಾಹದಿಂದ ದುಡಿಯುತ್ತಿದ್ದರು.

ಗೋ. ಕೃ. ದಂಪತಿಗಳು ಬಹಳ ಅನ್ಯೋನ್ಯವಾಗಿದ್ದರು. ಹದಿನಾಲ್ಕು ವರುಷದಿಂದ ನಾವು ಅವರ ನಿಕಟವರ್ತಿಗಳಾಗಿದ್ದೇವೆ. ಒಂದು ದಿನವೂ ಅವರು ಜಗಳವಾಡಿ ಮನಸ್ತಾಪ ಮಾಡಿಕೊಂಡುದನ್ನು ನಾನು ನೋಡಿರಲಿಲ್ಲ. ಅವರು ನಿಧನರಾಗುವುದಕ್ಕೆ ನಾಲ್ಕು ದಿನ ಮುಂಚೆಯಷ್ಟೇ ಅವರ ಪತ್ನಿಯನ್ನು ಬಲವಂತವಾಗಿ ಅವರ ಭಾವಮೈದುನನ ಮನೆಗೆ ಕಳುಹಿಸಿದ್ದರು. ಆಕೆ ಇಲ್ಲೇ ಇದ್ದು ಇವರ ಆಕಸ್ಮಿಕ ಮರಣವನ್ನು ನೋಡಿದ್ದರೆ ಆ ಆಘಾತವನ್ನು ಸಹಿಸಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಆದುದರಿಂದಲೇ ವಿಧಿ ಆಕೆಯನ್ನು ದೂರದ ಬೊಂಬಾಯಿಗೆ ಎಳೆದುಕೊಂಡು ಹೋಯಿತೇನೋ ಎನ್ನಿಸುತ್ತದೆ.

ನಾವು ಅವರಲ್ಲಿಗೆ ಹೋದಾಗಲೆಲ್ಲ ಆತ್ಮೀಯತೆಯಿಂದ ಸ್ವಾಗತಿಸಿ ಯಾವುದಾದರೊಂದು ಕುತೂಹಲ ಕೆರಳಿಸುವ ಕಥೆಯನ್ನು ಹೇಳಿ ನಮ್ಮನ್ನು ಸಂತೋಷಪಡಿಸುತ್ತಿದ್ದ ಆತ್ಮೀಯ ಬಂಧು ಗೋಪಾಲಕೃಷ್ಣರಾಯರ ನಿಧನದಿಂದ ನಮಗೆ ಅಪಾರನಷ್ಟವಾಗಿದೆ. ಅವರ ಕುಟುಂಬದವರಿಗೂ ಗೆಳೆಯರಿಗೂ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಸಂತರಂತೆ ಬದುಕಿ ಬಾಳಿದ ಗೋ. ಕೃ. ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ತಾಳ್ಮೆಯ ತಪ

ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು
ಸುಳಿನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬಿರಿಸು ಬಿಂಕದ ನುಡಿಯ ನೀ ತಾಳು
ಹಲಧರಾನುಜನನ್ನು ಹೃದಯದಲಿ ತಾಳು

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೊ ಹಾಲಿಗೆ ನೀರನಿಕ್ಕುವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು

—ಶ್ರೀ ವಾದಿರಾಜರು

"ಕೆ. ಗೋ"

೦□ ಸಿ. ಕೆ. ನಾಗರಾಜರಾವ್

ಬಹಳ ನಿಕಟವಾದ ಸಂಪರ್ಕ ಇದ್ದವರ ಬಗೆಗೆ ಬರೆಯುವುದು ಬಹಳ ಕಷ್ಟದ ಕೆಲಸ. ಶ್ರೀ ಗೋಪಾಲ ಕೃಷ್ಣರಾಯರಿಗೂ ನನಗೂ ಸುಮಾರು ೩೭ ವರ್ಷಗಳ ಪರಿಚಯ ಎಂದ ಮೇಲೆ ನನ್ನ ಕೆಲಸ ಬಹಳ ತೊಡಕಿನದು ಎಂಬುದು ಸ್ವಯಂವೇದ್ಯ. ಗೋಪಾಲಕೃಷ್ಣರಾಯರು ನನಗಿಂತ ೮-೧೦ವರ್ಷ ಹಿರಿಯರು. ಅವರ ತಮ್ಮ (ದಿವಂಗತ ರಾಜಗೋಪಾಲ್) ನಾನು ಜೊತೆಯಲ್ಲಿ ಒಂದೇ ತರಗತಿಯಲ್ಲಿ ಓದಿದವರು. ಒಂದೇ ಗುಂಪಿನ ಪರವಾಗಿ ಫುಟ್‌ಬಾಲ್ (ನಾನು ಗೋಲ್‌ಕೀಪರ್-ಅವನು ಫುಲ್ ಬ್ಯಾಕ್) ಆಡಿದವರು. ದೇಶಿಯ ವಿದ್ಯಾಶಾಲೆಯ "ಪ್ರತಾಪ್ ಶತಕ್" ದಳದ ಸದಸ್ಯರು. ಎಲ್ಲಕ್ಕೂ ಮಿಗಿಲಾಗಿ ಗಾಂಧೀ ಬಜಾರಿನ ಸರ್ಕಲ್ ಬಳಿ ಇದಿರು ಬದರಾಗಿ ವಾಸವಾಗಿದ್ದವರು.

ಪ್ರೌಢಶಾಲೆಯಲ್ಲಿದ್ದಾಗಲೆ ನನಗೆ ಬರೆಯುವ ಚಟ. ಅದಕ್ಕೆ ಪ್ರೋತ್ಸಾಹ, ಸಲಹೆ, ನೆರವು ಕೊಟ್ಟವರು ದಿವಂಗತ ಡಾಕ್ಟರ್ ವಿ. ಎಲ್. ಗುರುಮೂರ್ತಿ (ಅವನು ಸಹಪಾಠಿ). ಪ್ರಸಿದ್ಧ ಸಣ್ಣಕತೆಗಾರರಾದ 'ಶ್ರೀ ಸ್ವಾಮಿ.' ನನ್ನ ಈ ಚಟ ರಾಜಗೋಪಾಲ್‌ಗೆ ತಿಳಿದುದರಿಂದ ಆ ವೇಳೆಗಾಗಲೇ 'ನಮ್ಮ ಜಟಕ ಸಾಹೇಬು' ಎಂಬ ಸಣ್ಣ ಕಥೆ ಬರೆದು ಪ್ರಸಿದ್ಧರಾಗಿದ್ದ ಅವನ ಅಣ್ಣ ಗೋಪಾಲಕೃಷ್ಣರಾಯರ ಪರಿಚಯ ಮಾಡಿಸಿದ. ವಯಸ್ಸಿನ ಅಂತರವಿದ್ದರೂ ನನ್ನ ಅವರ ಸ್ನೇಹ ಸಮವಯಸ್ಕ ಸ್ನೇಹದಂತೆ ಬೆಳೆದುಬಂತು. ಒಂದು ರೀತಿಯಲ್ಲಿ ನಾನು ಅದೃಷ್ಟವಂತ. ನನಗಿರುವ ಆತ್ಮೀಯ ಸ್ನೇಹಿತರಲ್ಲಿ ಹೆಚ್ಚುಮಂದಿಯೆಲ್ಲ ನನಗಿಂತ ವಯಸ್ಸಿನಲ್ಲಿ ಹಿರಿಯರಾದವರೇ. ಈ ಮಾತನ್ನು ಹೇಳುವಾಗ ನನಗೆ ದಿವಂಗತ ನೆಗಳೂರು ರಂಗನಾಥರ, ದಿವಂಗತ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳ ಹಾಗೂ ದಿವಂಗತ ದೇವುಡು ನರಸಿಂಹ ಶಾಸ್ತ್ರಿಗಳ ಸ್ಮರಣೆ ಬರುತ್ತಿದೆ. ಅವರುಗಳ ಜೊತೆಗೂಡಲು ಈ ಗೋಪಾಲಕೃಷ್ಣರಾಯರಿಗೆ ಅದೇನು ಆತುರವಾಗಿತ್ತೆಂಬುದು ಭರಿಸಲಾಗದ ಸಂಗತಿ.

ದೇಹ ಶಾಶ್ವತವಲ್ಲ. ಆದರೂ ಎಲ್ಲಕ್ಕೂ ಕಾಲಾಕಾಲಗಳು ಇರುವಾಗ 'ಕೆ.ಗೋ' ನಮ್ಮನ್ನು ಇಷ್ಟು ಬೇಗ ಅಗಲಿದ್ದು ಅತ್ಯಂತ ದುಃಖದ ವಿಷಯ. ಅದಕ್ಕಿಂತ ದುಃಖದ ವಿಷಯ ನನಗೆ ಒಡನೆಯೇ ಅವರ ಆಕಸ್ಮಿಕ ಮರಣದ ವಿಷಯ ತಿಳಿಯದೆ ಇದ್ದುದು; ಅವರ ಪಾರ್ಥಿವ ಶರೀರದ ಅಂತ್ಯದರ್ಶನಕ್ಕೆ ಅವಕಾಶವಿಲ್ಲದೆ ಹೋದುದು. ಶ್ರೀಮತಿ ಗೋಪಾಲಕೃಷ್ಣರಾಯರಿಗೇ ಅದು ಸಾಧಿಸಲಿಲ್ಲ ಎಂದಾಗ ಋಣಾನುಬಂಧದ ಜಾಡು ಅಗೋಚರ ಎಂದು ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಅವರ ಪಾರ್ಥಿವ ಶರೀರ ಇಲ್ಲದೆ ಹೋದರು ಹಿಂದಿನ ಕೆಲವು ಘಟನೆಗಳು ನೆನಪುಗಳು ನಿತ್ಯ ನೂತನವಾಗಿ ಜೀವಂತವಾಗಿ ಅಚ್ಚಳಿಯದೆ ಉಳಿದಿದೆ.

ಅವರ ಕಥೆಗಾರಿಕೆಯ ಬಗೆಗೆ, ಕವಿತಾವ್ಯಾಮೋಹದ ಬಗೆಗೆ ನಾನು ಬರೆಯಹೋಗುವುದಿಲ್ಲ. ಆದರೆ ವ್ಯಕ್ತಿಗತವಾದ ಅವರ ರೀತಿ ನೀತಿಗಳ ಬಗೆಗೆ ಕೆಲವು ಘಟನೆಗಳನ್ನು ನಿರೂಪಿಸುತ್ತೇನೆ.

ನೆರೆಹೊರಕೆ ಮತ್ತು ಸಾಹಿತ್ಯಾಭ್ಯಾಸದ ಚಟ ನಮ್ಮ ಸ್ನೇಹವನ್ನು ಬೆಳೆಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಸೇವಾಕಾರ್ಯ ನಮ್ಮಲ್ಲಿನ ಸ್ನೇಹವನ್ನು ಇನ್ನೂ ನಿಕಟವಾಗಿಸಿತು. ದಿವಂಗತ ಬಿ. ಎಂ. ಶ್ರೀ. ಅವರ ನೇತೃತ್ವದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುವ ಅವಕಾಶ ನಮ್ಮಗಳಿಗೆ ದೊರಕಿತು. ತದನಂತರದಲ್ಲಿ ಶ್ರೀ ಮಾಸ್ತಿ ಅವರು ನಮ್ಮಗಳ ಸೇವಾ ಮನೋಧರ್ಮ ಕಂಡು ಬಹಳ ಜವಾಬ್ದಾರಿಯುತ ಕೆಲಸಗಳನ್ನು ವಹಿಸಿಬಿಟ್ಟರು. ಅವರುಗಳ ಮಾರ್ಗದರ್ಶನದಲ್ಲಿ ನಾವು ಕಂಡುಕೊಂಡ ಸತ್ಯದ ಜಾಡು ಹಿಡಿದು ಮುಂದಡಿಯಿಡಬೇಕಾಯಿತು. ಸತ್ಯದ ಜಾಡು ಸ್ವಲ್ಪ ಕಷ್ಟದ ಜಾಡೇ. ಮೆದು ಸ್ವಭಾವದ ಗೋಪಾಲಕೃಷ್ಣರಾಯರಿಗೆ ಕೆಲವೊಮ್ಮೆ ತೀರ ಸಣ್ಣ ವಿಷಯವೂ ಆಡಳಿತ ನಿರ್ವಹಣೆಯಲ್ಲಿ ಬಹಳ ತೊಡಕಿನದಾಗಿ ಕಂಡುಬರುತ್ತಿತ್ತು. ಅಂತಹ ಸಂದರ್ಭದಲ್ಲಿ ನನ್ನ ಸಲಹೆ ಅವರ ತೊಡಕು ನಿವಾರಣೆಗೆ ನೆರವಾಗುತ್ತಿತ್ತು. ಸರ್ಕಾರಿ ಕಛೇರಿಯಲ್ಲಿಯೇ ಇಡಿ ಜೀವಮಾನ ಕಳೆದ ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಅದನ್ನು ಪ್ರಯೋಗಿಸ ಹೊರಟು ತುಂಬಾ ನೋವಿಗೆ ಗುರಿಯಾದುದುಂಟು. ಆದರೆ ಸಾರ್ವಜನಿಕ ಸೇವೆಮಾಡಬೇಕೆಂಬ ಅವರ ಬಯಕೆ ಮಾತ್ರ ಹಾರ್ದಿಕವಾದುದು. ಅದು ಕಾರಣ ಆ ನೋವುಗಳನ್ನು ನುಂಗಿಕೊಂಡು ಮುನ್ನಡೆದು ಬರುಬರುತ್ತಾ ಅವರು ಈ ರೀತಿಗೂ ಬಹುಮಟ್ಟಿಗೆ ಹೊಂದಿಕೊಂಡರು. ಸ್ವಭಾವ

ತುಂಬಾ ಮೆದುವಾದರೂ ಅವರು ಮನಸ್ಸಿನಲ್ಲಿ ತಾಳಿಕೊಂಡಿದ್ದ ಗುರಿ ಬಹಳ ಉನ್ನತಮಟ್ಟದ್ದು. ಅಲ್ಲಿಗೆ ಏರುವುದು ಕಷ್ಟವೆಂದು ಗೊತ್ತಿದ್ದರೂ ಏರಿಯೇ ಏರುತ್ತೇನೆ; ಆಗ ಹೀಗೆಯೇ ಮಾಡುತ್ತೇನೆ ಎಂದು ಮುಂತಾಗಿ, ಮುಂದಾಗಬಹುದಾದುದನ್ನೆಲ್ಲ ತಮ್ಮ ಮನೋರಂಗದಲ್ಲಿ ಕಲ್ಪಿಸಿಕೊಂಡು ಸ್ವಾರಸ್ಯವಾಗಿ ಅದನ್ನೆಲ್ಲ ತಮ್ಮ ಆತ್ಮೀಯ ಸ್ನೇಹಿತರಿಗೆ ಹೇಳಿಕೊಳ್ಳುತ್ತಿದ್ದುದುಂಟು. ಬಸವಣ್ಣನ ಗುಡಿಯ ಹಿಂದಿನ ಬಂಡೆಗಳ ಮೇಲೆ ಕುಳಿತು–ಬ್ಯೂಗಲ್ ರಾಕ್ ಶಿಖರವೇರಿ ಕುಳಿತು–ನರಹರಿರಾಯರ ಗುಡ್ಡದ ಮೇಲೆ ಕುಳಿತು–ಇಲ್ಲ ಲಾಲ್‌ಬಾಗ್‌ನಲ್ಲಿರುವ ಕೆಂಪೇಗೌಡ ನಿರ್ಮಿತ ಮಂಟಪದ ಬಳಿ ಬಂಡೆಯ ಮೇಲೆ ಕುಳಿತು–ಎಳೆ ಮಗುವಿನಂತೆ ತಮ್ಮ ಆ ಕಲ್ಪನೆಗಳನ್ನೆಲ್ಲ ತೋಡಿಕೊಳ್ಳುತ್ತಿದ್ದರು. ಆ ಸಂದರ್ಭಗಳಲ್ಲಿ ಅವನ್ನೆಲ್ಲ ಕೇಳಿದ ನಾವು ಅವರಿಗೆ ಹುರುಪುತುಂಬಿದರೆ ವಾಸ್ತವವಾಗಿ ಗುರಿಸಾಧಿಸಿದಷ್ಟೇ ಆನಂದವನ್ನು ಅವರು ಅನುಭವಿಸುತ್ತಿದ್ದರು.

ಎಳೆಯ ಮಗುವಿನಂತೆ ಎಂದು ಹೇಳಿರುವುದು ಸಕಾರಣವಾಗಿಯೇ. ಏಕೆಂದರೆ ಆತನ ಮನಸ್ಸಿನಲ್ಲಿ ಕೋಪ, ಅಸಮಾಧಾನ, ಸಂಶಯಗಳು ಎಷ್ಟು ಬೇಗ ಉತ್ಪನ್ನವಾಗುತ್ತಿದ್ದವೋ ಅಷ್ಟೇ ಬೇಗ ಮಾಯವಾಗುತ್ತಿದ್ದವು. ನಾನೇ ಹಲವು ಸಲ ಅವರೊಂದಿಗೆ ಅಂತಹ ಘಟನೆಗಳಿಗೆ ಗುರಿಯಾಗಬೇಕಾಯಿತು. ಒಂದೆರಡು ಘಟನೆ ಸ್ಮರಿಸಿಕೊಳ್ಳಬಹುದು.

ಅವರ ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ (ಇದು ಇಪ್ಪತ್ತು ವರ್ಷಗಳ ಹಿಂದಿನದು) ನಾನು ಅವರಿಂದ ಅಧಿಕಾರ ಸ್ವೀಕರಿಸಿದೆ. ಅವರ ಅಧಿಕಾರವಧಿಯಲ್ಲಿ ಪರಿಷತ್ತಿಗೆ ಒಂದು ಪದಾರ್ಥವನ್ನು ತರಿಸಿದ್ದರು. ಹಣಕೊಟ್ಟಿರಲಿಲ್ಲ. ಗೋಪಾಲಕೃಷ್ಣರಾಯರ ಮೆದು ಸ್ವಭಾವ ಅರಿತ ಅವರು, ಅದರ ದುರುಪಯೋಗ ಮಾಡಿಕೊಂಡು ತಾವು ಬೇರೆಲ್ಲೂ ಮಾರಲಾಗದಿದ್ದ ಆ ಪದಾರ್ಥವನ್ನು ಪರಿಷತ್ತಿಗೆ ತಗಲು ಕಟ್ಟಿದ್ದರು. ಅದನ್ನು ನೋಡಿದ ನಾನು ತಜ್ಞರಿಂದ ಅದರ ಪರಿಶೀಲನೆ ನಡೆಸಿ ಅದರ ಉಪಯುಕ್ತತೆಯ ಬಗೆಗೆ ಅವರ ಸಲಹೆ ಪಡೆದು ಅದನ್ನು ಹಿಂತಿರುಗಿಸುವುದೆಂದು ತೀರ್ಮಾನಿಸಿದೆ. ಉದ್ದಿಶ್ಯ ಇಷ್ಟೆ. ಹಣದ ಕೊರತೆ ಇರುವ ಪರಿಷತ್ತು ಅಷ್ಟು ಹಣ ಕೊಟ್ಟು ಉಪಯೋಗವಿಲ್ಲದ ವಸ್ತುವನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು. ಈ ತೀರ್ಮಾನದಿಂದ ಅದನ್ನು ಕೊಟ್ಟಾತನಿಗೆ ಸಿಟ್ಟುಬಂತು–ಹೇಗೋ ಕುದುರಿಸಿದ್ದ ವ್ಯಾಪಾರ ಕೈಬಿಟ್ಟಿತಲ್ಲಾ ಎಂದು. ಅವರು ತಮ್ಮ ಸ್ನೇಹಿತರು ಗೋಪಾಲಕೃಷ್ಣರಾಯರ ಬಳಿ ಹೋಗಿ ನನ್ನ ಮೇಲೆ ಚಾಡಿ ಹೇಳಿದರು, ಸಲ್ಲದ ಆರೋಪಗಳನ್ನು ಮಾಡಿದರು. ಪಾಪ, ಗೋಪಾಲಕೃಷ್ಣರಾಯರು ಅವರ ಮಾತನ್ನು ಸಂಪೂರ್ಣವಾಗಿ ನಂಬಿಬಿಟ್ಟರು. ನೇರವಾಗಿ ಬಂದು ನನ್ನ ಮೇಲೆ ರೇಗಿದರು. ಅವರ ಮಾತುಗಳನ್ನೆಲ್ಲಾ ಶಾಂತವಾಗಿ ಕೇಳಿ ಆಮೇಲೆ ನಾನು ಎಲ್ಲ ವಿಷಯವನ್ನೂ ಅವರಿಗೆ ವಿವರಿಸಿದೆ. "ನೋಡಿ ನಿಮ್ಮನ್ನು ನಂಬಿಸಿ ಸ್ನೇಹದ ದುರುಪಯೋಗ ಪಡಿಸಿಕೊಂಡು ಪರಿಷತ್ತಿಗೆ ದಂಡ ತೆರುವ ಹಾಗೆ ಮಾಡಿದ್ದಾರೆ" ಎಂಬುದನ್ನು ಅವರಿಗೆ ಮನದಟ್ಟು ಮಾಡಿಸಿದೆ. ಒಡನೆಯೇ ಅವರು ಹಸುಮಗುವಿನಂತೆ, "ನನಗೆ ಈ ತಂತ್ರ ತಿಳಿಯಲೇ ಇಲ್ಲ. ಪರಿಷತ್ತಿಗೆ ಎಂದೂ ನಷ್ಟವಾಗಬಾರದು. ನೀವು ಮಾಡಿದ್ದು ಸರಿ. ಅಷ್ಟು ಅವನು ತರಲೆಮಾಡಿದರೆ ನಾನೇ ಅದರ ಹಣ ಬಿಸಾಟುಬಿಡುತ್ತೇನೆ" ಎಂದರು. "ನಿಮ್ಮ ಹತ್ತಿರಾನೂ ಬಿಸಾಡೋ ಅಷ್ಟು ಹಣ ಇಲ್ಲ. ನೀವು ಸುಮ್ಮನೆ ಇರಿ ನಾನೆಲ್ಲಾ ಸರಿಮಾಡುತ್ತೇನೆ." ಎಂದೆ. ಸುಮ್ಮನಾದರು.

ಅವರಿಗೆ ಬಾಯಿಚಪಲ ಸ್ವಲ್ಪ ಜಾಸ್ತಿ. ಊಟತಿಂಡಿಗಳಲ್ಲಿ ಅವರು ಅಚ್ಚುಕಟ್ಟುತನವನ್ನು ಬಯಸುತ್ತಿದ್ದರು. ಎಲ್ಲವೂ ತುಂಬಾ ರುಚಿಕಟ್ಟಾಗಿಯೂ ಇರಬೇಕು ಅವರಿಗೆ. ಆದರೆ ತಾನೊಬ್ಬನೇ ತಿನ್ನಬೇಕೆಂಬ ಸ್ವಾರ್ಥವಿಲ್ಲ. ಸ್ನೇಹಿತರುಗಳಿಗೆಲ್ಲಾ ರುಚಿಕಟ್ಟಾದ ತಿನಿಸುಗಳನ್ನು ಹೊಟ್ಟೆಬಿರಿಯ ಉಪಚಾರ ಮಾಡಿ ತೃಪ್ತಿಪಡಿಸಬೇಕು ಅವರು. ನಮ್ಮ ಮನೆಯ ಬಿಸಿಬೇಳೆಭಾತ್ ನನ್ನ ಮಿತ್ರವರ್ಗದಲ್ಲಿ ಸ್ವಲ್ಪ ಹೆಸರುವಾಸಿ. (ಈಗ ಅದೆಲ್ಲ ಕನಸು–ಮೂರು ರೂಪಾಯಿ ಕೆಜಿ ತೊಗರಿಬೇಳೆ, ಎರಡು ರೂಪಾಯಿ ಅಕ್ಕಿ ಹತ್ತು ಹನ್ನೆರಡು ರೂಪಾಯಿ ಬೆಣ್ಣೆ–ಅಂದಾಗ ಅದು ಕನಸಲ್ಲದೆ ಮತ್ತೇನು!) ನಾನೇನು ಅದರ ಪ್ರಚಾರ ಮಾಡಿದವನಲ್ಲ. (ಇದಂತೂ ಖಂಡಿತ ಪ್ರಚಾರವಲ್ಲ). ಒಂದುದಿವಸ ಏನೋ ಮಾತು ಬಂದಾಗ ಬಿಸಿಬೇಳೆಭಾತ್ ವಿಷಯವೂ ಬಂದಿತ್ತು. 'ನಾನು ಊಟಕ್ಕೆ ಬಂದಾಗ ಯಾವಾಗಲೂ ನಿಮ್ಮ ಮನೇಲಿ ಬಿಸಿಬೇಳೆಭಾತ್ ಮಾಡಿಸಿಯೇ ಇಲ್ಲ' ಎಂದಿದ್ದರು. 'ಅದಕ್ಕೇನು ಮಾಡಿಸಿದರಾಯಿತು' ಎಂದಿದ್ದೆ. ಶ್ರೀ ಗೋವಿಂದಪೈ ಅವರೂ ಶ್ರೀ ಶಿವರಾಮ ಕಾರಂತರೂ ಒಟ್ಟಿಗೆ ಒಮ್ಮೆ ಬೆಂಗಳೂರಿಗೆ ಬಂದಿದ್ದರು. ನಮ್ಮಲ್ಲಿ ಒಂದು ಪುಟ್ಟ ಭೋಜನಕೂಟ ಏರ್ಪಡಿಸಿದ್ದೆ. ಆಗ ಕಾಲ ಚೆನ್ನಾಗಿತ್ತು. (ನಮ್ಮ ರೂಪಾಯಿಗೆ ಕೊಳ್ಳುವ ಅಪಾರ ಶಕ್ತಿ ಇತ್ತು ಅನ್ನುವ ಅರ್ಥದಲ್ಲಿ) ಅಂತಹ ಭೋಜನಕೂಟಗಳು ಆಗಾಗ ನಡೆಯುತ್ತಿದ್ದವು. ಎಲ್ಲರಿಗೂ ಲಿಖಿತ ಆಮಂತ್ರಣವನ್ನು ಕಳಿಸಿದ್ದೆ. ಅಂದು ಬಿಸಿಬೇಳೆಭಾತ್ ಮಾಡಿಸಿದ್ದೆ.

ಅಂದಮೇಲೆ ಗೋಪಾಲಕೃಷ್ಣರಾಯರನ್ನು ಮರೆತೇನೆಯೆ. ಎಲ್ಲರೂ ಊಟಕ್ಕೆ ಬಂದರು. ಮಾಸ್ತಿ ಅವರು, ಸಿ. ಕೆ. ವಿ. ಅವರು, ಮೋಟಗಾನಹಳ್ಳಿ ಅವರು, ಸುಬ್ಬರಾಯಪ್ಪನವರು, ದೇವುಡು ಅವರು, ಕಾರಂತರು, ಭಾರದ್ವಾಜರು, ಶ್ರೀನಿವಾಸ ಮೂರ್ತಿಗಳು, ಅ.ನ. ಕೃ ಅವರು, ರಾಜಾರಾಯರು ಮೊದಲಾದವರು. ಆದರೆ ಗೋಪಾಲಕೃಷ್ಣರಾಯರೇ ಬರಲಿಲ್ಲ. ಅಂದು ಗೋವಿಂದಪೈ ಅವರೇ ಎರಡು ಮೂರುಗಂಟೆ ತಡವಾಗಿ ಬಂದರು. ಶ್ರೀ ವೆಂಕಟಪ್ಪನವರ ಜಗತ್ಪ್ರಸಿದ್ಧ ಕಲಾಕೃತಿಗಳನ್ನು ನೋಡಲು ಅವರು ಹೋಗಿಬಿಟ್ಟರಂತೆ. ಅಲ್ಲಿಂದ ಬರಲು ತಡವಾಯಿತು ಎಂದು ಬಂದಕೂಡಲೇ ಕ್ಷಮಾಪಣೆ ಕೇಳಿದರು–ಈ ಎಲ್ಲ ಅತಿಥಿಗಳನ್ನು ಕಾಯಿಸಬೇಕಾಯಿತಲ್ಲಾ ಎಂದು. ಊಟ ಆದ ಮೇಲೆ ಶ್ರೀಮತಿ ಎಸ್. ಜಿ. ವೆಂಕಟಸುಬ್ಬಮ್ಮನವರು ನನ್ನನ್ನು ಕರೆದು ಒಂದು ಮಾತನ್ನು ಹೇಳಿದರು. ಆಗ ನನಗೆ ಗೊತ್ತಾಯಿತು ಏನು ಪರಿಪಾಟಾಗಿದೆ ಎಂಬುದು. ಗೋಪಾಲಕೃಷ್ಣರಾಯರ ಹೆಸರಿದ್ದ ಆಮಂತ್ರಣ ಪತ್ರವನ್ನು ಶ್ರೀಮತಿ ಅವರಿಗೆ ಕೊಟ್ಟಿದ್ದ ಆಳು. ಅವರು ಬಹಳ ಯೋಚಿಸಿ ಹೀಗೆ ಏನೋ ಅದಲುಬದಲಾಗಿದೆ ಎಂದು ಊಹಿಸಿ ಊಟಕ್ಕೆ ಬಂದಿದ್ದರು. ನಮ್ಮ ಈ ಮಿತ್ರರು ತಮಗೆ ಆಹ್ವಾನವಿಲ್ಲವೆಂದು ಬರಲಿಲ್ಲ. ಆಮೇಲೆ ಸಂಜೆ ನಾನೇ ಅವರ ಮನೆಗೆ ಹೋಗಿ ಕರೆದು ತಂದು ಬಿಸಿಬೇಳೆಭಾತ್, ಅಂಬೊಡೆ, ಮಜ್ಜಿಗೆಹುಳಿ ಕೊಟ್ಟೆ. ವಿಷಯ ಎಲ್ಲ ತಿಳಿದು ಪರಿತಾಪಗೊಂಡಿದ್ದರು. ಒಳ್ಳೆ ಕಂಪನಿ ತಪ್ಪಿತೆಂದು ನಾಲ್ಕಾರು ಸಲ ಅಂದುಕೊಂಡರು. ಶ್ರೀಮತಿ ವೆಂಕಟಸುಬ್ಬಮ್ಮನವರ ಹೆಸರಿನ ಆಮಂತ್ರಣ ಪತ್ರ ನಿಮ್ಮಮನೆಗೆ ಮುಟ್ಟಿರುವಾಗ, ಶ್ರೀಮತಿ ಅವರ ಹಾಗೆಯೇ ನೀವು ಬಂದಿದ್ದರೆ ಒಳಿತಾಗುತ್ತಿತ್ತು ಎಂದೆ 'ಹೌದು ಹಾಗೆ ಮಾಡಿದ್ದರೆ ಚೆನ್ನಾಗಿತ್ತು. ಮುಖ್ಯ ನನಗೆ ಲಭ್ಯವಿಲ್ಲ' ಎಂದರು.

ತಾವು ಬರೆದುದನ್ನು ಮಿತ್ರರಿಗೆ ಓದಿತೋರಿಸುವುದು ಸಾಮಾನ್ಯವಾಗಿ ಎಲ್ಲ ಸಾಹಿತಿಗಳ ಚಟ. ಕೆಲವೊಮ್ಮೆ "ಬೋರ್" ಸಹ ಮಾಡುವ ಹಕ್ಕು ತಮ್ಮದು ಎಂದು ಅವರು ಭಾವಿಸಿರುತ್ತಾರೆ. ಆದರೆ ಬೇರೆ ಲೇಖಕರನ್ನು ತಮ್ಮ ಮನೆಗೆ ಕರೆಸಿಕೊಂಡು ತಮ್ಮ ಇತರ ಮಿತ್ರರನ್ನೂ ಕರೆಕಳಿಸಿ ಅವರುಗಳಿಗೆಲ್ಲ ಕಾಫಿತಿಂಡಿ, ಕೆಲವೊಮ್ಮೆ ಊಟದ ವ್ಯವಸ್ಥೆ ಸಹಮಾಡಿ "ಬೋರ್" ಮಾಡಿಸಿಕೊಳ್ಳುವ ಹವ್ಯಾಸ 'ಕೆ.ಗೋ.' ಅವರದಾಗಿತ್ತು. ಅವರ ಈ ಹವ್ಯಾಸ ಅವರೆಲ್ಲ ಮಿತ್ರರಿಗೆ ಕೆಲವೊಮ್ಮೆ ಇಬ್ಬಗೆಯ ರಸದೂಟವನ್ನು ಒದಗಿಸಿ ಕೊಟ್ಟಿವೆ. ಅತ್ಯುತ್ತಮ ಸಾಹಿತ್ಯ ಕೃತಿಗಳ (ಕೈಬರಹದ ಪ್ರತಿ) ವಾಚನ ಅವರಲ್ಲಿ ಜರುಗಿದೆ. ಆ ವಿಷಯದಲ್ಲಿ ಅವರು ಒಂದು ತರಹ ಸಿ. ಐ. ಡಿ. ಕೆಲಸ ಮಾಡುತಿದ್ದರೆನ್ನಬಹುದು. ಸಾಹಿತ್ಯ ಕೃತಿಗಳೆಲ್ಲ ಬಯಲಿಗೆ ಬರುವುದಕ್ಕೆ ಮುಂಚೆ 'ಸಾಹಿತ್ಯ ಕ್ರೈಮ್'ಗಳೇ. ಅದು ಇನ್ನು ಗುಟ್ಟಾಗಿರುವಾಗಲೇ ಅದನ್ನು ಪತ್ತೆಹಚ್ಚಿ ಅದನ್ನು ಬಯಲಿಗೆಳೆಯುವ ಅವರ ಹವ್ಯಾಸಕ್ಕೆ ನಾನು ಬಲಿಬಿದ್ದಿದ್ದೆ.

ಹನ್ನೆರಡನೆಯ ಶತಮಾನದಲ್ಲಿ ವಿರಾಜಮಾನಳಾಗಿದ್ದ ಮಹಾಶರಣೆ "ಅಕ್ಕಮಹಾದೇವಿ"ಯ ಜೀವನಕ್ಕೆ ಸಂಬಂಧಿಸಿದ ಚಲನಚಿತ್ರದ ಸಲುವಾಗಿ ಚಿತ್ರಕಥೆ ಸಂಭಾಷಣೆಗಳನ್ನು ಬರೆದಿದ್ದೆನೆಂಬುದನ್ನು ಪತ್ತೆಹಚ್ಚಿ (ಇದು ನಡೆದುದು ೧೯೫೦ನೇ ಇಸವಿಯಲ್ಲಿ) ನನಗೆ ಯಾವ ಬಗೆಯ ಸುಳುವನ್ನೂ ಕೊಡದೆ ಎಲ್ಲ ವ್ಯವಸ್ಥೆ ಮಾಡಿ ಬೆಳಗ್ಗೆ ನಮ್ಮ ಮನೆಗೆ ಬಂದು ಬಲವಂತದಿಂದ ಹಸ್ತಪ್ರತಿ ಸಮೇತ ತಮ್ಮ ಮನೆಗೆ ಕರೆದೊಯ್ದು ಓದಿಸಿದರು. ಪ್ರಸಿದ್ಧ ಸಂಗೀತ ವಿದ್ವಾಂಸರಾದ ಆನೂರು ಸೂರಿ ಅವರು ಇಂದಿಗೂ ಆ ದಿನಸವನ್ನು ಸ್ಮರಿಸಿಕೊಳ್ಳುತ್ತಾರೆ. ಹಾಗೆಯೇ ನನ್ನ ಹರಿಶ್ಚಂದ್ರ ನಾಟಕ ಮತ್ತು ಅಮೃತಮತಿ ಚಿತ್ರಕಥೆಯನ್ನೂ ನನ್ನಿಂದ ಅವರಲ್ಲಿ ಓದಿಸಿದ್ದಾರೆ. ಅವರ ಸಾಹಿತ್ಯ ಸೇವೆಯ ಪ್ರಕಾರಗಳಲ್ಲಿ ಈ ಪ್ರಕಾರವೂ ಒಂದು.

ಅವರು ಬರೆದ ಬಹುಮಟ್ಟಿನ ಎಲ್ಲ ಹಸ್ತಪ್ರತಿಗಳನ್ನೂ ನೋಡುವ ಅವಕಾಶ ನನಗೆ ಬಹಳ ದಿನಗಳವರೆಗೆ ಇತ್ತು. ಆದರೆ ಇತ್ತೀಚಿನ ೬-೮ ವರ್ಷಗಳಲ್ಲಿ ನನ್ನ ಕಾರ್ಯಕ್ಷೇತ್ರ ವಿಸ್ತಾರವಾಗಿ ಊರಿನಿಂದ ಹೊರಗೆ ಇರುವ ಸಂದರ್ಭವೇ ಹೆಚ್ಚಾದುದರಿಂದ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶ ತಗ್ಗಿತ್ತು.

ತೈತ್ತರೀಯದಲ್ಲಿ ಒಂದು ಮಾತು ಬರುತ್ತದೆ. ವಿದ್ಯಾಭ್ಯಾಸ ಮುಗಿಸಿಕೊಂಡು ಗುರುಕುಲದಿಂದ ಹಿಂತಿರುಗುವ ವಿದ್ಯಾರ್ಥಿಗಳಿಗೆ ಗುರುಗಳು ಕೆಲವು ಸೂಚನೆ ಕೊಟ್ಟು ಕಳಿಸುತ್ತಿದ್ದರು. ಆ ಸಂದರ್ಭದಲ್ಲಿ ಅವರು, 'ನಿನಗೆ ಗೌರವ ಇರುವ ನಿನ್ನ ನಂಬಿಕೆ ಪಡೆದಿರುವ ಹಿರಿಯರು ಯಾವ ಆಚರಣೆಯನ್ನು ಪಡೆದಿರುತ್ತಾರೆಯೋ ಯಾವ ರೀತಿ ನಡೆದುಕೊಳ್ಳುತ್ತಾರೆಯೋ ನೀನು ಹಾಗೆಯೇ ಆಚರಿಸು. ಹಾಗೆಯೇ ನಡೆದುಕೋ' ಎಂದು ಹೇಳುತ್ತಿದ್ದರು. ಇದರ ಅನುಸರಣೆಯನ್ನು 'ಕೆ. ಗೋ.' ಮಾಡುತ್ತಿದ್ದರೆನ್ನಬಹುದು. ಬಿ. ಎಂ. ಶ್ರೀ ಅವರ ಹಾಗೆ, ಮಾಸ್ತಿ ಅವರ ಹಾಗೆ, ಡಿ. ಎಲ್. ಎನ್. ಅವರ ಹಾಗೆ ತಾವೂ ಆಗಬೇಕು ಎಂಬ ಆಸೆಯನ್ನೂ ಅದರ ಸಾಫಲ್ಯದತ್ತಣ ಅವರ ಪ್ರಯತ್ನವನ್ನೂ ನಾವು 'ಕೆ. ಗೋ.' ಅವರಲ್ಲಿ ಕಾಣಬಹು

ದಾಗಿತ್ತು. ಯಾರಾದರೂ ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಕಂಡು ಇತರರು ಮೆಚ್ಚಿದುದು 'ಕೆ. ಗೋ.'ಅವರ ಗಮನಕ್ಕೆ ಬಂದರೆ ತಾವೂ ಹಾಗೆಯೇ ಒಳ್ಳೆಯ ಕೆಲಸ ಮಾಡಬೇಕು–ಮೆಚ್ಚಿಕೆ ಪಡೆದುಕೊಳ್ಳಬೇಕು ಎಂಬ ಬಯಕೆ ಅವರಲ್ಲಿ ಅಂಕುರವಾಗುತ್ತಿತ್ತು. ಅವರಲ್ಲಿ ಆತ್ಮಸಿಮರ್ಶೆ ಗಿಂತ ಆತ್ಮವಿಶ್ವಾಸ ಮಿಗಿಲಾಗಿತ್ತು. ಈ ಕಾರಣದಿಂದ ಅವರು ತಮಗೆ ಮೀರಿದ ಹೊರೆಯನ್ನು ಹೇರಿಕೊಂಡು ಒಳಗೇ ಕೊರಗಿದುದುಂಟು.

ಶ್ರೀ ಮಾಸ್ತಿ ಅವರು ಶ್ರೀ ಬೇಂದ್ರೆ ಅವರಿಂದ ಹೊತ್ತ ಹೊರೆ 'ಜೀವನ'ವನ್ನು 'ಕೆ. ಗೋ.'ಅವರು ತಮ್ಮ ಹೆಗಲಿಗೇರಿಸಿಕೊಂಡರು. ಅದು ತಮ್ಮ ಹೆಗಲೇರಿದಾಗ 'ಕೆ. ಗೋ' ಅವರು ನಿಜವಾಗಿ ಪುಳಕಗೊಂಡರು. ಮಾಸ್ತಿ ಅವರು ಬೆಳಗಿದ 'ಜೀವನ' ತಾನು ಹಿಡಿಯುವಂತಾಯಿ ತೆಂದು ತಪಸ್ಸಿದ್ಧಿ ಪಡೆದವರಂತೆ ಹಿಗ್ಗಿದರು. ಹರೆಯದ ಉತ್ಸಾಹದಲ್ಲಿ ದೇಹದ ದಣಿವಿನತ್ತ ಗಮನವೀಯದೆ ಅದಕ್ಕೆ ದುಡಿದರು. ಕಡೆಗೆ ಕಣ್ಮರೆಯೂ ಆದರು. ಕೆಲವೊಮ್ಮೆ ನಮಗೆ ಸಿಕ್ಕ ವರವೇ ನಮಗೆ ಶಾಪವಾಗಿ ಪರಿಣಮಿಸುತ್ತದೆ, ಭಸ್ಮಾಸುರನ ವರದ ಹಾಗೆ. ಆದರೆ ಅದು ಶಾಪ ಎಂಬ ಅರಿವಿರುವುದಿಲ್ಲ ಅಷ್ಟೆ. ಆದರೆ ಅದು ಶಾಪವೆಂಬ ಅರಿ ವಿಲ್ಲದಿರುವಿಕೆಯಷ್ಟರ ಮಟ್ಟಿಗೆ ಮಾತ್ರ ದುಡಿಯುವವನ ಭಾಗಕ್ಕೆ ವರವಾಗಿ ಉಳಿಯುತ್ತದೆ. ಎಂತಲೇ ಜಗತ್ತಿ ನಲ್ಲಿ ಸೇವಾಕಾರ್ಯ ನಡೆದುಕೊಂಡು ಬಂದಿದೆ.

'ಕೆ.ಗೋ.' ಅವರಿಗೆ 'ಕುಮಾರ ಕೃಪಾ'ದಲ್ಲಿ ಭಕ್ತಿ ಸಾಕ್ಷಾತ್ಕಾರವಾಯಿತೆಂದು ಆದಕಾರಣ ಭಕ್ತಿಗೀತೆಗಳ ರಚ ನೆಗೇ ತಮ್ಮ ಕಾವ್ಯಧಾರೆಯನ್ನು ಮೀಸಲಿಡುವುದಾಗಿಯೂ ಅವರು ಹೇಳಿದ್ದರು. ಮಾತುಮಾತಿಗೆ ಪುರಂದರದಾಸರು, ವಿಜಯವಿಠ್ಠಲದಾಸರು, ಜಗನ್ನಾಥದಾಸರು, ತ್ಯಾಗರಾಜರು ಕನಕದಾಸರು ಮೊದಲಾದ ಭಕ್ತಾಗ್ರಣಿ ವಾಗ್ಗೇಯಕಾರರ ಬಗೆಗೇ ಅವರು ಇತ್ತೀಚೆಗೆ ಮಾತನಾಡುತ್ತಿದ್ದರು. ಆ ಬಗೆಯ ಭಕ್ತಿಗೀತೆಗಳ ರಚನೆಗೆ ತೊಡಗಿದಾಗಿನಿಂದ ಅವರ ಚಿತ್ತಕ್ಕೆ ಒಂದು ನೆಮ್ಮದಿ ಸಿಕ್ಕಿತೆಂದು ಹೇಳಿದರೆ ತಪ್ಪಾಗ ಲಾರದು. ಬಹುಶಃ ಒಂದು ಬಗೆಯ ತೃಪ್ತಿಯೂ ಅವರಲ್ಲಿ ನೆಲೆಸಿತ್ತೆಂದು ಹೇಳಬಹುದು. ಅವರ ಮರಣಕ್ಕೆ ಬಹುಶಃ ನಾಲ್ಕಾರು ವಾರಗಳ ಮುಂಚೆ ಇರಬೇಕು, ಮಾತಿಗೆ ಮಾತು ಬಂದು ಸರ್ಕಾರಿ ಕೆಲಸದಿಂದ ನಿವೃತ್ತಿ ಪಡೆದಮೇಲೆ ನೀವೇಕೆ ಮತ್ತೆ ಛೇಂಬರ್ ಆಫ್ ಕಾಮರ್ಸ್ ಕಛೇರಿಯಲ್ಲಿ ಕೆಲಸ ಮಾಡುತ್ತೀರಿ ಎಂದೆ. 'ಕಾಲ ಕೆಟ್ಟಿತು. ಹೊಟ್ಟೆ ತುಂಬಬೇಕಲ್ಲ. ಬಹಳ ದೊಡ್ಡ ಕೆಲಸವೇ ನನಗೆ ಬಂದಿತ್ತು ಶ್ರೀ ಹನುಮಂತಯ್ಯನವರ ಕೃಪೆಯಿಂದ. ಆದರೆ ಬೆಂಗಳೂರು ಬಿಟ್ಟುಹೋಗಲು ಮನಸ್ಸು ಒಗ್ಗುವು ದಿಲ್ಲ. ಇಡೀ ಆಯುಷ್ಯವೇ ಇಲ್ಲಿ ಕಳೆದಿದ್ದೇನೆ. ಇನ್ನಷ್ಟು ದಿವಸ ಹೀಗೆ ಕಾಲ ಹಾಕಿದರಾಯಿತು ಎಂದು ಹೋಗಲಿಲ್ಲ' ಎಂದಿದ್ದರು.

ಅವರ ಅಂದಿನ ನುಡಿ ಚಿರಶಾಂತಿಯನ್ನರಸುತ್ತ ಹೊರಟ ಹೆಜ್ಜೆಯೆಂಬುದರ ಅರಿವು ಬಹುಶಃ ಅವರಿಗೇ ಇಲ್ಲದಿರ ಬಹುದು. ಆದರೆ ಅದೆಷ್ಟು ನಿಜ!

ಅವರ ಭಕ್ತಿಗೀತೆಗಳ ಸಂಗೀತ ಕಛೇರಿ ಒಂದು ಇತ್ತೀ ಚೆಗೆ ಜರುಗಿತು. ಅಂದಿನ ಅವರ ತೃಪ್ತಿ ಅವರಿಗೆ ಚಿರ ಶಾಂತಿಯನ್ನು ಬೇಗ ದೊರಕಿಸಿಕೊಟ್ಟಿತು ಎಂದರೆ ಅದು ಋಣಾನುಬಂಧಕ್ಕೆ ಹೊಂದುವ ಮಾತಾಗುತ್ತದೆ.

ನನ್ನ ಅವರ ಋಣಾನುಬಂಧ ಜೀವಂತವಾಗಿರ ಬೇಕೆಂಬುದು ಭಗವದಿಚ್ಛೆಯೆಂದು ಕಾಣುತ್ತದೆ. ಎಂತಲೇ ನನ್ನ ಮಗಳು 'ಕೆ. ಗೋ.' ರಚಿಸಿರುವ "ಮುರಲಿ", "ವೀಣೆ", "ಸ್ನೇಹ" ಮೊದಲಾದ ಗೀತೆಗಳನ್ನು ಹಾಡು ತ್ತಲೇ ಇರುತ್ತಾಳೆ–ಮನೆಯಲ್ಲಿ ಮತ್ತು ಸಾರ್ವಜನಿಕ ವೇದಿಕೆಯ ಮೇಲೆ.

ನಾನು ವೈಯಕ್ತಿಕವಾಗಿಯೂ ಹಾಗು ಕರ್ನಾಟಕ ಲೇಖಕ ಸಂಘದ ಅಧ್ಯಕ್ಷನಾಗಿ ಸಂಘದ ಪರವಾಗಿಯೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗಕ್ಕೆ ಹಾರ್ದಿಕ ಅನುತಾಪವನ್ನು ಈ ನನ್ನ ಸ್ಮರಣೆಗೆ ಜೊತೆಗೂಡಿಸಿ ಸಮರ್ಪಿಸುತ್ತೇನೆ.

ದಿವಂಗತ ಆರ್. ಎ. ಜಹಗೀರದಾರರು

■■ ಟಿ. ಕೆ. ತುಕೋಳ

ನಾನು ೧೯೩೪ರಲ್ಲಿ ವಕೀಲಿಯನ್ನಾರಂಭಿಸಿದಾಗ ಶ್ರೀಯುತ ಜಹಗೀರದಾರರವರು ಮುಂಬೈ ಹಾಯಕೋರ್ಟಿನಲ್ಲಿ ಹೆಸರುಗಳಿಸಿದ ಕೆಲವೇ ವಕೀಲರುಗಳಲ್ಲಿ ಒಬ್ಬರಾಗಿದ್ದರು. ಆಗಿನ ಮುಂಬೈ ಪ್ರಾಂತದ ದಕ್ಷಿಣ ಜಿಲ್ಲೆಗಳಿಂದ-ಕನ್ನಡ ಮತ್ತು ಮರಾಠಿ ಬಿಡುವಿಲ್ಲದಷ್ಟು ಮೊಕದ್ದಮೆಗಳು ಅವರಲ್ಲಿ ಬರುತ್ತಿದ್ದವು. ಇವರು ವಿಜಾಪೂರ ಜಿಲ್ಲೆಯಲ್ಲಿ ೧೮೯೦ರ ಸುಮಾರಕ್ಕೆ ಅಗರಬೇಡ ಗ್ರಾಮದಲ್ಲಿ ಪ್ರಸಿದ್ಧ ಆದ್ಯಮನೆತನದಲ್ಲಿ ಜನ್ಮಪಡೆದರು. ತಮ್ಮ ಉಚ್ಚ ಶಿಕ್ಷಣವನ್ನು ಪುಣೆಯ ಫರ್ಗೂಸನ್ ಕಾಲೇಜಿನಲ್ಲಿ ಮುಗಿಸಿ, ಅದೇ ನಗರದಲ್ಲಿ ಲಾ ಕಾಲೇಜದಲ್ಲಿ ತಮ್ಮ ನ್ಯಾಯ ಶಿಕ್ಷಣವನ್ನು ಪಡೆದರು. ೧೯೧೫ರಲ್ಲಿ ಮುಂಬೈ ಶಹರದಲ್ಲಿ ತಮ್ಮ ವಕೀಲವೃತ್ತಿಯನ್ನು ಆರಂಭಿಸಿದರು.

ನಾನು ಅವರನ್ನು ಮೊದಲು ಕಂಡದ್ದು ೧೯೩೨ ಮೇ ಅಥವಾ ಜೂನ್ ತಿಂಗಳಲ್ಲಿ. ಸುಮಾರಾಗಿ ಪ್ರತಿವರ್ಷ ಬೇಸಿಗೆ ರಜೆಯಲ್ಲಿ ವಿಜಾಪುರಕ್ಕೆ ಬರುತ್ತಿದ್ದರು. ಆ ಸಮಯದಲ್ಲಿ ನನ್ನ ಮಿತ್ರರೊಬ್ಬರ ಮನೆಯಲ್ಲಿ ಅವರ ಪರಿಚಯವಾಯಿತು. ಅವರು ತುಂಬಾ ಸರಳಜೀವಿಗಳು, ಖಾದೀ ಭಕ್ತರು, ಶುಭ್ರ ಖಾದಿಯೇ ಮೆಚ್ಚುಗೆ ಪಡೆದ ಇವರ ಉಡುಪು. ಮಾತಿನಲ್ಲಿ ಸ್ಪಷ್ಟತೆ, 'ಗಾಂಭೀರ್ಯ ಮತ್ತು ಆಕರ್ಷಕಶಕ್ತಿ ಸಹಜವಾಗಿ ಕಂಡುಬರುತ್ತಿದ್ದವು. ಹೊಸಬರನ್ನು ತಮ್ಮ ಸ್ನೇಹಯುಕ್ತ ಭಾಷೆಯಿಂದ ತಮ್ಮವರನ್ನಾಗಿ ಪರಿವರ್ತಿಸುವ ಶಕ್ತಿ ಅವರದಾಗಿತ್ತು. ಅದೇ ವರ್ಷದಲ್ಲಿ ಕೆಲವು ಮೊಕದ್ದಮೆಗಳನ್ನು ನಾನು ಕೊಡಲು ಹೋದಾಗ, ಅವರ ಅಭ್ಯಾಸಿಕ ಸ್ವಭಾವ, ಕಾನೂನು ಪಾಂಡಿತ್ಯ, ಗೂಢ ಪ್ರಶ್ನೆಗಳನ್ನು ತಿಳಿಯುವ ತೀಕ್ಷ್ಣಬುದ್ಧಿ ಮತ್ತು ಮೊಕದ್ದಮೆಯಲ್ಲಿ ಅಡಕವಾದ ಜಟಿಲ ಪ್ರಶ್ನೆಗಳನ್ನು ಸಾಧಕ ತೀರ್ಪುಗಳೊಡನೆ ಸ್ಪಷ್ಟೀಕರಿಸುವ ಸಾಮರ್ಥ್ಯ-ಇವುಗಳ ಅರಿವು ಚನ್ನಾಗಿ ಆಯಿತು. ತರ್ಕಮಾಡುವ ವಿಧಾನದಲ್ಲಿ ಅವರು ನಿಷ್ಣಾತರು. ನ್ಯಾಯಮೂರ್ತಿಗಳ ಪ್ರಶ್ನೆಗಳನ್ನು ಶಾಂತ ರೀತಿಯಿಂದ ತಿಳಿದುಕೊಂಡು ತಾಳ್ಮೆಯಿಂದ ಉತ್ತರಕೊಡುವ ವಿಶಿಷ್ಟ ರೀತಿಯೇ ಕೋರ್ಟುಗಳಲ್ಲಿ ಅವರು ದೊರಕಿಸಿದ ಪ್ರಿಯತೆಗೆ ಕಾರಣವೆಂದು ಹೇಳಬಹುದು.

ಶ್ರೀಯುತರು ಹಿಂದೂಶಾಸನದಲ್ಲಿ ಪರಿಣತರು. ಅವರಿಗಿದ್ದ ಸಂಸ್ಕೃತ ಭಾಷಾಪ್ರಭುತ್ವವು, ಅನೇಕ ಜಟಿಲ ಪ್ರಮೇಯಗಳನ್ನು ಮನು, ಯಾಜ್ಞ್ಯವಲ್ಕ್ಯ, ಮಿತಾಕ್ಷರ ಇತ್ಯಾದಿ ಟೀಕಾಕಾರರ ಉಕ್ತಿಗಳಿಂದ ವಿಶದೀಕರಿಸಲು ತುಂಬಾ ಸಹಾಯಕಾರಿಯಾಗಿತ್ತು. ದತ್ತಕ ಮೊಕದ್ದಮೆಯಲ್ಲಿ [ಭೀಮಾಬಾಯಿ ವಿ. ಗುರುನಾಥಗೌಡ ೬೦ ಇಂಡಿಯನ್ನ ಅಪೀಲ್ ೨೫] ಪ್ರೀವ್ಹಿ ಕೌನ್ಸಿಲ್‌ದಲ್ಲಿ ವಾದ ಸಲ್ಲಿಸಲು ಅಕ್ಟೋಬರ್ ೧೯೩೨ರಲ್ಲಿ ಇವರು ಇಂಗ್ಲೆಂಡಕ್ಕೆ ಹೋಗಿದ್ದರು. ಆ ವ್ಯಾಜ್ಯದಲ್ಲಿ ದೊರೆತ ಜಯದಿಂದ ದತ್ತಕ ಕಾನೂನು ಬದಲಾವಣೆ ಹೊಂದಿತು. ಅವಿಭಾಜ್ಯ ಹಿಂದೂ ಕುಟುಂಬದಲ್ಲಿಯ ವಿಧವೆಯು ತನ್ನ ಗಂಡನ ಪ್ರತಿಬಂಧವಿರದಿದ್ದರೆ ಕುಟುಂಬದಲ್ಲಿಯ ಇತರ ಸಹಭಾಗಿಗಳ ಅನುಮತಿ ಪಡೆಯದೆ ಮುಂಬೈಪ್ರಾಂತದ ದಕ್ಷಿಣ ಮಹಾರಾಷ್ಟ್ರೀಯ ಸೀಮೆಯಲ್ಲಿ ತನ್ನ ಗಂಡನಿಗೆ ದತ್ತಕ ಮಾಡಿಕೊಳ್ಳಬಹುದೆಂದು ಈ ನಿರ್ಣಯವು ಸಾರಿತು. ದತ್ತಕ ಕಾನೂನಿನಲ್ಲಿ ಈ ನಿರ್ಣಯವು ಹೊಸದೊಂದು ಅಧ್ಯಾಯವನ್ನಾರಂಭಿಸಿತೆಂದು ಹೇಳಬಹುದು.

ಹಾಯಕೋರ್ಟಿನಲ್ಲಿ ದಿವಾಣಿ [civil] ಮತ್ತು ಫೌಜದಾರಿ [criminal] ಮೊಕದ್ದಮೆಗಳನ್ನು ನಡೆಸಿಕೊಂಡು ಹೋಗುವ ಸರಿಸಮಾನ ಸಾಮರ್ಥ್ಯವನ್ನು ಪಡೆದ ವಕೀಲರುಗಳ ಸಂಖ್ಯೆ ತೀರ ಕಡಿಮೆ. ಶ್ರೀಯುತ ಜಹಗೀರದಾರರು ಅಂಥವರಲ್ಲಿ ಒಬ್ಬರು. ಆದುದರಿಂದಲೇ, ಆಗಿನ ಮುಂಬೈ ಸರಕಾರದವರು ಅವರನ್ನು ೧೯೩೯ರಲ್ಲಿ ಸರಕಾರಿ ವಕೀಲರೆಂದು ನೇಮಕಗೊಂಡ ಕೆಲವೇ ದಿವಸಗಳಲ್ಲಿ ಬ್ರಿಟಿಶ ಸರಕಾರದವರ ದಬ್ಬಾಳಿಕೆಗೆ, ಅನೇಕ ರಾಜಕೀಯ ಮುಖಂಡರು ಆಹುತಿಯಾಗಿ ಕೋರ್ಟುಗಳಲ್ಲಿ ಅಪರಾಧಿಗಳೆಂದು ವಿಚಾರಣೆಗೆ ನಿಲ್ಲಿಸಲ್ಪಟ್ಟರು. ಕಾನೂನಿನ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯ ಇವರ ಸ್ವದೇಶಾಭಿಮಾನವನ್ನು ಕೆರಳಿಸಿತು. ಆಗ ೧೯೪೨ರಲ್ಲಿ ಅಧಿಕಾರಕ್ಕೆ ತಿಲಾಂಜಲಿಯನ್ನು ಕೊಟ್ಟು, ರಾಜಕಾರಣಿಗಳ ರಕ್ಷಣೆಗೆ ಅಣಿಯಾಗಿ ನಿಂತರು. ಆಗ ಇವರು ತೋರಿದ ಧೈರ್ಯ, ಸ್ವಾರ್ಥತ್ಯಾಗ ಮತ್ತು ದೇಶಾಭಿಮಾನಗಳನ್ನು ಅನೇಕ ರಾಷ್ಟ್ರೀಯ ಮುಂದಾಳುಗಳು ಶ್ಲಾಘಿ

ಸಿದರು ; ಸಹೋದ್ಯೋಗಿಗಳು ಧನ್ಯವಾದಗಳನ್ನರ್ಪಿಸಿದರು. ಅವರ ಜೀವನದಲ್ಲಿ ಇದೊಂದು ಮಹತ್ವದ ಘಟನೆಯೆಂದು ಹೇಳಬಹುದು. ಇವರು ಮುಂಬೈ ಹಾಯಕೋರ್ಟಿನ ವಕೀಲರ ಸಂಘದ ಅಧ್ಯಕ್ಷರೆಂದು ಎರಡು ಸಲ ನಿಯೋಜಿತ ರಾಗಿದ್ದರು. ಸಹೋದ್ಯೋಗಿಗಳಲ್ಲಿ ಒಳ್ಳೇ ಪ್ರತಿಷ್ಠೆಯಿಂದ ಆ ಕಾರ್ಯವನ್ನು ನಿರ್ವಹಿಸಿದರು. ಸಂಘದ ಸದಸ್ಯರು ತಮ್ಮ ಸಭಾಂಗಣದಲ್ಲಿ ಇವರ ಭಾವಚಿತ್ರವನ್ನು ೧೯೪೨ ರಲ್ಲಿ ಅನಾವರಣ ಮಾಡಿಸಿ, ಇವರಿಗಿದ್ದ ತಮ್ಮ ಆದರ ಕೃತಜ್ಞತೆ ವ್ಯಕ್ತಪಡಿಸಿದರು. ಈ ರೀತಿ ಮನ್ನಣೆ ಪಡೆದ ಮಹನೀಯರಲ್ಲಿ ಇವರೊಬ್ಬರೇ ಕನ್ನಡಿಗರೆಂಬ ಮಾತು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಇವರ ಕಾನೂನು ಪಾಂಡಿತ್ಯ ಸಮತೋಲ ಬುದ್ಧಿ ಮತ್ತು ದೇಶಾಭಿಮಾನ ಇವುಗಳನ್ನರಿತ ಅಗ್ರಗಣ್ಯ ಮುಖಂಡರಾದ ದಿವಂಗತ ಮಾನ್ಯ ಶ್ರೀ ವಲ್ಲಭಭಾಯಿ ಪಟೇಲರೂ ಮತ್ತು ಮಾನ್ಯ ಬಾಳಾಸಾಹೇಬ ಖೇರರವರೂ ಇವರನ್ನು ಮುಂಬೈ ಹಾಯ ಕೋರ್ಟಿನ ನ್ಯಾಯಸ್ಥಾನಕ್ಕೆ ೧೯೪೬ ಆಗಸ್ಟ ಸುಮಾರಕ್ಕೆ ನಿಯಮಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದರೆಂದು ಪ್ರತೀತಿ. ಆದರೆ ಇವರು ಪ್ರಾಪ್ತವಾದ ಹೊಸ ಅಧಿಕಾರ ಸ್ಥಾನವನ್ನು ವಕೀಲರಿಗೆ, ಕಕ್ಷಿಗಾರರಿಗೆ ತುಂಬಾ ಸಮಾಧಾನ ವಾಗುವಂತೆ ನಿರ್ವಹಿಸಿದರು. ಅವರಲ್ಲಿದ್ದ ನ್ಯಾಯ ಪ್ರಿಯತೆ, ನ್ಯಾಯನಿಷ್ಠುರತೆ ಮತ್ತು ಕಾನೂನು ಪಾಂಡಿತ್ಯಗಳ ಮೂಲಕ ಆ ಸ್ಥಾನವನ್ನು ಸಹ ಘನತೆಯಿಂದ ಅಲಂಕರಿಸಿ ದರು.

ಭಾರತದ ರಾಜ್ಯ ಘಟನೆಯ ನಿಯಮದಂತೆ, ನ್ಯಾಯ ಮೂರ್ತಿ ಸ್ಥಾನದಿಂದ ನಿವೃತ್ತಿ ಹೊಂದಿದವರು, ತಾವು ನ್ಯಾಯಮೂರ್ತಿಗಳಾಗಿದ್ದ ಹಾಯಕೋರ್ಟಿನಲ್ಲಿ ವಕೀಲಿ ಮಾಡಲು ಪ್ರತಿಬಂಧವಿದೆ ; ಮುಂಬರುವ ಬಾಧೆ ತಪ್ಪಿಸಲು ಅವರು ೧೯೫೦ ಜನವರಿ ದಿನಾಂಕ ೨೬ರ ಮೊದಲೇ ತಮ್ಮ ಅಧಿಕಾರದಿಂದ ನಿವೃತ್ತರಾದರು.

ಅಧಿಕಾರದಿಂದ ನಿವೃತ್ತಿ ಪಡೆದು ತಮ್ಮ ವಕೀಲವೃತ್ತಿ ಯನ್ನು ಮೊದಲಿನಂತೆಯೇ ಮುಂದುವರಿಸಿದರು. ಅಷ್ಟ ರಲ್ಲಿಯೇ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಮೊದಲನೆ ಉಪಕುಲಪತಿಗಳಾಗುವ ಬಹುಮಾನ ಇವರದಾಯಿತು. ಪ್ರೊ. ಡಿ. ಪಿ. ಪತ್ರಾವಳಿ ಯವರು ರಿಜಿಸ್ಟ್ರಾರರಾಗಿ ಇವರ ನೇತೃತ್ವದಲ್ಲಿ ವಿಶ್ವವಿದ್ಯಾ ಲಯದ ಕಟ್ಟುಪಾಡು ನಿಬಂಧನೆಗಳನ್ನು ರಚಿಸಿತು. ಈಗಿನ ವಿಶ್ವವಿದ್ಯಾಲಯ ಆಡಳಿತ ಸೂತ್ರಗಳ ಮತ್ತು ವಿದ್ಯಾಕಾರ್ಯ ನೀತಿಯ ತಳಹದಿ ಇವರದೇ. ಇವರು ಉಪಕುಲಪತಿಗಳೆಂದು ನಿಯಮಿಸಲ್ಪಟ್ಟಾಗ ಕೇಂದ್ರ ಸರಕಾರದಲ್ಲಿ ಸ್ಥಾನಪಡೆದ ಶ್ರೀ ಚಕ್ರವರ್ತಿ ರಾಜಗೋಪಾಲಚಾರಿಯವರು, "ದಯ ವಿಟ್ಟು ಹೋಗಿರಿ ಮತ್ತು ಹೊಸ ಕೂಸನ್ನು ಪೋಷಿಸಿರಿ." [Please go and nurse the new baby] ಎಂದು ಆಶೀ ರ್ವದಿಸಿದ್ದರಂತೆ.

ಮುಂಬೈಯಲ್ಲಿ ನೆಲೆಸಿದ ಕನ್ನಡಿಗರಿಗೆಲ್ಲ ಇವರು ಮಿತ್ರರೂ, ಮಾರ್ಗದರ್ಶಕರೂ ಮತ್ತು ಹಿತವಾದಿಗಳೂ ಆಗಿದ್ದರು. ಕನ್ನಡಿಗರ ಸಂಘಕ್ಕೆ ವಿವಿಧರೀತಿಯಲ್ಲಿ ಸೇವೆ ಯನ್ನು ಸಲ್ಲಿಸಿದರು. ಕರ್ನಾಟಕ ಪ್ರಗತಿಪರ ಶಿಕ್ಷಣ ಸಂಸ್ಥೆ [Karnatak Progressive Education Society]ಯ ಅಧ್ಯಕ್ಷರಾಗಿಯೂ ಕಾರ್ಯಮಾಡಿದರು.

ಇವರ ಮರಣದಿಂದ ಕನ್ನಡ ನಾಡಿನ ಒಬ್ಬ ಪ್ರತಿಭಾ ವಂತ ವ್ಯಕ್ತಿಯ ಕಣ್ಮರೆಯಾದಂತಾಯಿತು. ವಿವಿಧ ಕ್ಷೇತ್ರ ಗಳಲ್ಲಿ ಇವರು ಕನ್ನಡ ನಾಡಿಗೆ, ನುಡಿಗೆ, ಸಂಸ್ಥೆಗಳಿಗೆ ಸಲ್ಲಿಸಿದ ಸೇವೆಯು ಚಿರಸ್ಮರಣೀಯವಾಗಿದೆ. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ದುಡಿಮೆ

ಹರಿವ ನೀರಿಗೆ ತಡೆಯಕಟ್ಟಿ ಬೆಳೆ ನೂರ್ಮಡಿಸಿ
ಧುಮುಕುವಾ ಧಾರೆಯಿಂ ಬೆಳಕ ತರಿಸಿ
ಅಣುವ ವಿಭಜಿಸಿ ಆದರ ಶಕ್ತಿಯನ್ನನುಗೊಳಿಸಿ
ಅಮಿತ ಸಂಪದನಿಳೆಗೆ ತಂದಿತ್ತೆ ಶ್ರಮಿಸಿ

—ಗೋ.ಕೃ.

ಸರಸ ಸಜ್ಜನಿಕೆಯ, ನ್ಯಾಯಬದ್ಧ ಜಾಗಿರದಾರರು

◆◆ ಸ. ಸ. ಮಾಳವಾಡ

ದಿವಂಗತ ಆರ್. ಎ. ಜಾಗಿರದಾರರು ತಮ್ಮ ಸರಸ ಸಜ್ಜನಿಕೆ-ಕರ್ನಾಟಕದ ಬಗೆಗೆ ಉತ್ಕಟ ಅಭಿಮಾನಗಳಿಂದ ಅನೇಕರಿಗೆ ಸುಪರಿಚಿತರಾಗಿದ್ದರು. ಮುಂಬಯಿಯಲ್ಲಿಯ ಕನ್ನಡ ಚಟುವಟಿಕೆಗಳಿಗೆ ಅವರು ಆಧಾರಸ್ಥಂಭವಾಗಿದ್ದರು. ನಾನು ಅವರೊಂದಿಗೆ ಆತ್ಮೀಯವಾದ ಪರಿಚಯ ಪಡೆದುಕೊಳ್ಳಲು ಈ ಅಂಶಗಳೆಲ್ಲ ಕಾರಣವಾಗಿದ್ದವು. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಬಗೆಗೆ ಪೂರ್ವಭಾವಿಯಾದ ಚಟುವಟಿಕೆಗಳಿಂದಾಗಿ ನನಗೆ ಅವರೊಡನೆ ನಿಕಟವಾದ ಸಂಬಂಧವೊದಗಿ ಬಂದಿತು. ಮುಂದೆ ಅವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಯಾಗಿ ಧಾರವಾಡಕ್ಕೆ ಬಂದಾಗ ಆ ಸಂಬಂಧವು ಹೆಚ್ಚು ಆತ್ಮೀಯವಾಗಿಯೂ ಪರಿಣಮಿಸಿತು.

ದಿವಂಗತರು ಮುಂಬಯಿಯಲ್ಲಿ ಪ್ರತಿಷ್ಠಿತ ನ್ಯಾಯವಾದಿ. ಮುಂದೆ ಹಾಯ್‌ಕೋರ್ಟಿನ ನ್ಯಾಯಮೂರ್ತಿ ಆದ ಕಾಲದಲ್ಲಿ ಅಹಂಕಾರದಿಂದ ಬೀಗುವ ಸನ್ನಿವೇಶವಿತ್ತು. ಆದರೆ ಅವರು ತಮ್ಮ ಸೌಜನ್ಯದಿಂದ ಸ್ನೇಹಪರತೆಯಿಂದ ಜನತೆಯ ಹೃದಯದಲ್ಲಿ ಅಚ್ಚುಮೆಚ್ಚಿನ ಸ್ಥಾನಪಡೆದರು. ಮುಂಬಯಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಅಷ್ಟೊಂದು ಆಸಕ್ತಿ ವಹಿಸುವುದು ಆಗಿನ ಸರಕಾರದ ಧೋರಣೆಯ ದೃಷ್ಟಿಯಿಂದ ಸುರಕ್ಷಿತವೆಂದು ಭಾವಿಸುವಂತಿರಲಿಲ್ಲ. ಹಾಗಿದ್ದರೂ ದಿವಂಗತರು ಕನ್ನಡದ ಚಟುವಟಿಕೆಗಳಲ್ಲಿ ಪ್ರಮುಖವಾಗಿಯೇ ಭಾಗವಹಿಸುತ್ತಿದ್ದರು. ಅಲ್ಲದೆ ತಮ್ಮ ಗೌರವಾನ್ವಿತ ಸ್ಥಾನದಿಂದಾಗಿ ಕನ್ನಡದ ಚಟುವಟಿಕೆಗಳಿಗೆ ಬಲವನ್ನು, ಘನತೆಯನ್ನು ತಂದುಕೊಟ್ಟರು. ಮುಂಬಯಿಯಲ್ಲಿ ಕನ್ನಡ ನಾಡಹಬ್ಬವು ಅವ್ಯಾಹತವಾಗಿ ಪ್ರಭಾವಪೂರ್ಣವಾಗಿ ನಡೆಯುವಂತಹ ಸಂಘಟನೆಯನ್ನು ರೂಪಿಸಿದರು.

ತಮ್ಮ ಮೃದುವಾದ ನಡೆನುಡಿ, ನ್ಯಾಯಬದ್ಧ ವ್ಯವಹಾರ, ಗಣ್ಯಸ್ಥಾನ, ಸ್ನೇಹಪರತೆಗಳಿಂದ ಅವರು ಗಳಿಸಿದ ಜನಪ್ರಿಯತೆಯು ಮುಂಬಯಿ ಕರ್ನಾಟಕ ಸಂಘದ ಆಗಿನ ಮಹತ್ವದ ಸಾಧನಸಂಪತ್ತಿಯಾಗಿತ್ತು. ಅವರ ಆಮಂತ್ರ[ಣ]ದನ್ವಯ ನಾನೊಮ್ಮೆ ಮುಂಬಯಿ ನಾಡಹಬ್ಬದ ಅತಿ[ಥಿ]ಯಾಗಿ ಹೋದಾಗ ಮೇಲ್ಕಂಡ ಮಾತಿನ ಮನವರಿ[ಕೆ] ನನಗೆ ಆಯಿತು. ನಾನು ಅವರ ಆಮಂತ್ರಣ ಸ್ವೀಕರಿಸಿ[ದ] ಸನ್ನಿವೇಶವೂ ಇಲ್ಲಿ ಉಲ್ಲೇಖನೀಯವೆನಿಸುತ್ತಿದೆ. [ಆ] ಅವಧಿಯಲ್ಲಿ ಕರ್ನಾಟಕ ಕಾಲೇಜಿಗೆ ಮುಂಬಯಿ ಕಡೆ[ಯಿಂದ] ಒಬ್ಬರು ಹೊಸದಾಗಿ ಪ್ರಿನ್ಸಿಪಾಲರಾಗಿ ಬಂದಿದ್ದರು. ಅವರಿಗೆ ಯಾರೋ ಹೇಳಿದ್ದರಂತೆ; ಕರ್ನಾಟಕ ಕಾಲೇಜಿನ ಅಧ್ಯಾಪಕರು ಸಾರ್ವಜನಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ. ಅದನ್ನು ನಿಯಂತ್ರಿಸಬೇಕಾದುದು ಆವಶ್ಯಕ, ಎಂದು. ಅವರು ಧಾರವಾಡಕ್ಕೆ ಬಂದು ಹೊಸ ಹುದ್ದೆಯನ್ನು ವಹಿಸಿಕೊಂಡ ಕೂಡಲೆ ಒಂದು ಪರಿಪತ್ರವನ್ನು ಹೊರಡಿಸಿದರು. ಕಾಲೇಜಿನ ಅಧ್ಯಾಪಕರ ಸಾರ್ವಜನಿಕ ಆಮಂತ್ರಣಗಳನ್ನು ಸ್ವೀಕರಿಸುವುದಕ್ಕೆ ಪೂರ್ವಭಾವಿಯಾಗಿ ಪ್ರಿನ್ಸಿಪಾಲರ ಒಪ್ಪಿಗೆ ಪಡೆಯಬೇಕೆಂಬುದು ಪರಿಪತ್ರದ ಒಕ್ಕಣೆಯಾಗಿತ್ತು. ಕೆಲಮಟ್ಟಿಗೆ ಹಟವಾದಿಯೇ ಆದ ನಾನು ಆಗ ಒಂದು ನಿರ್ಧಾರ ಕೈಕೊಂಡೆ. ಸಾರ್ವಜನಿಕ ಆಮಂತ್ರಣ ಸ್ವೀಕರಿಸುವ ಬಗೆಗೆ ನಾನಾಗಿಯೇ ಅಧಿಕಾರಿಗಳ ಹತ್ತಿರ ಹೋಗಕೂಡದೆಂಬುದೆ ನನ್ನ ನಿರ್ಧಾರವಾಗಿತ್ತು. ಇಂತಹ ಸನ್ನಿವೇಶದ[ಲ್ಲಿ] ದಿವಂಗತ ಜಾಗೀರದಾರರ ಆಮಂತ್ರಣ ನನಗೆ ಬಂದಿತು. ಪರಿಸ್ಥಿತಿಯನ್ನರಿತ ದಿವಂಗತರು ತಾವಾಗಿಯೇ ಪ್ರಿನ್ಸಿಪಾ[ಲ]ರಿಗೆ ಬಿನ್ನಹ ಕಳಿಸಿದರು. ನಾನು ಮುಂಬಯಿಗೆ ಹೋ[ಗ]ಬೇಕೆಂದು ಪ್ರಿನ್ಸಿಪಾಲರೇ ನನಗೆ ತಿಳಿಸಿದರು.

ಕರ್ನಾಟಕ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬರು[ವು]ದಕ್ಕೆ ಮೊದಲು 'ಕರ್ನಾಟಕ ವಿದ್ಯಾಪೀಠ ಸಮಿತಿ' ಯ[ು] ಆ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿತ್ತು. ೧೯೪೫ರ[ಲ್ಲಿ] ಪುನರ್ನಿಯೋಜಿತವಾದ ವ್ಯವಸ್ಥಾಪಕ ಮಂಡಳದ[ಲ್ಲಿ] ದಿವಂಗತರು ಅಧ್ಯಕ್ಷರಾಗಿ, ನಾನು ಕೋಶಾಧಿಕಾರಿಯಾ[ಗಿ] ನೇಮಕಗೊಂಡೆವು. ಈ ಮೂಲಕವಾಗಿಯೂ ನನ[ಗೆ]

ಸಂಬಂಧ ಬೆಳೆದುಬಂದಿತು. ೧೯೪೬ರ ನಾಡಹಬ್ಬದ ಕಾಲಕ್ಕೆ 'ಕರ್ನಾಟಕ ವಿದ್ಯಾಪೀಠ ಸಮಿತಿ'ಗಾಗಿ ನಿಧಿ ಸಂಗ್ರಹಿಸುವುದೆಂದು ನಿರ್ಣಯವಾಯಿತು. ಆ ವರುಷ ನಾಡಹಬ್ಬಕ್ಕಾಗಿ ಆಮಂತ್ರಣಗಳು ಬಂದಾಗ ಕ. ವಿ. ಸಮಿತಿಗೆ ನಿಧಿ ಸಂಗ್ರಹವಾಗುವ ಸ್ಥಳಗಳಿಗೆ ಮಾತ್ರ ಉಪನ್ಯಾಸಕ್ಕಾಗಿ ಹೋಗುವುದೆಂದು ನಾನು ನನ್ನ ಮಟ್ಟಿಗೆ ನಿರ್ಧಾರ ಕೈಕೊಂಡೆ. ನನ್ನ ಈ ನಿರ್ಧಾರವು ಫಲಪ್ರದವಾಗುವ ದಿಸೆಯೂ ದಿವಂಗತರ ಪ್ರಭಾವಿಯಾದ ನೆರವು ನನಗೆ ದೊರೆಯಿತು. ತಾವಾಗಿಯೇ ಕೆಲವು ಸ್ಥಳಗಳಿಗೆ ಕಾಗದ ಬರೆದು ನಾನು ಅಲ್ಲಿ ಹೋದಾಗ ನಿಧಿ ಸಂಗ್ರಹಿಸಿ ಕೊಡಬೇಕೆಂದು ಅವರು ತಿಳಿಸಿದ್ದರು.

ಆ ಕಾಲದ ಮುಂಬಯಿ ರಾಜ್ಯದ ಸರಕಾರವು ಪುಣೆಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗೆಗೆ ಆತುರವಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಬಗೆಗೆ ಉದಾಸೀನತೆಯೂ ಕಂಡುಬರುತ್ತಿತ್ತು. ಪುಣೆಯ ವಿಶ್ವವಿದ್ಯಾಲಯ ಸ್ಥಾಪನೆಯೊಂದಿಗೇ ಕರ್ನಾಟಕ ವಿದ್ಯಾಲಯದ ಬೇಡಿಕೆಯನ್ನು ಬಲವತ್ತರವಾಗಿ ಪ್ರತಿಪಾದಿಸುವುದು ಕನ್ನಡಿಗರ ಭೂಮಿಕೆಯಾಗಿತ್ತು. ಆಗ ಕನ್ನಡಿಗರ ಬೇಡಿಕೆಯನ್ನು ಶಕ್ತಿಯುತವಾಗಿ ಮಂಡಿಸದೆ ಹೋಗಿದ್ದರೆ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ತಡವಾಗುವಂತಿತ್ತು. ಈ ದಿಸೆಯಲ್ಲಿ ದಿವಂಗತರು ಮಹತ್ವದ ಪಾತ್ರ ವಹಿಸಿದರು. ೭-೧೦-೧೯೪೬ರಂದು ಕರ್ನಾಟಕ ವಿದ್ಯಾಪೀಠ ಸಮಿತಿಯ ನಿಯೋಗವೊಂದು ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳನ್ನು ಸಂದರ್ಶಿಸಿ ಮನವಿ ಸಲ್ಲಿಸಿತು. ಆ ನಿಯೋಗದಲ್ಲಿ ಕೆಳಗಣ ಸದಸ್ಯರಿದ್ದರು:

(೧) ಶ್ರೀ ಆರ್. ಎ. ಜಾಗಿರದಾರ, ಮುಂಬಯಿ (ಅಧ್ಯಕ್ಷ)
(೨) ಪ್ರೊ. ಎಸ್. ಎಸ್. ಬಸವನಾಳ
(೩) ಶ್ರೀ ಆರ್. ಎಸ್. ಹುಕ್ಕೇರಿಕರ
(೪) ಶ್ರೀ ಬಶೆಟ್ಟೆಪ್ಪ ತಟ್ಟಿ, ಲಕ್ಷ್ಮೇಶ್ವರ
(೫) ಪ್ರೊ. ಎಸ್. ಎಸ್. ಮಾಳವಾಡ (ಕಾರ್ಯದರ್ಶಿ)

ಶ್ರೀ ಬಿ. ಜಿ. ಖೇರ ಅವರು ಆಗ ಮುಂಬಯಿ ರಾಜ್ಯದ ಕ್ಷಣ ಸಚಿವ ಮತ್ತು ಮುಖ್ಯಮಂತ್ರಿ ಆಗಿದ್ದರು. ಪುಣೆಯಲ್ಲಿ ಮುಂಬಯಿ ವಿಧಾನಸಭೆಯ ಅಧಿವೇಶನ ನಡೆದಿತ್ತು. ೕ ಖೇರ ಅವರಿಗೆ ಆಗ ಕಾರ್ಯಬಾಹುಲ್ಯದ ಒತ್ತಡ ತ್ತು. ಆದರೂ ಆರ್. ಎ. ಜಾಗಿರದಾರರ ಪ್ರಭಾವದಿಂದಾಗಿ ನಿಯೋಗದ ಸದಸ್ಯರು ಮುಖ್ಯಮಂತ್ರಿಗಳನ್ನು ಪುಣೆಯಲ್ಲಿಯೇ ಸಂದರ್ಶಿಸುವುದು ಸಾಧ್ಯವಾಯಿತು. ಆ ಸಂದರ್ಶನದ ಕಾಲಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೆ ದಿವಂಗತರ ವ್ಯಕ್ತಿತ್ವದ ಪ್ರಯೋಜನ ಹೇಗೆ ದೊರೆಯಿತೆಂಬುದನ್ನು ನಾನು ಪ್ರತ್ಯಕ್ಷ ಕಂಡುಕೊಂಡೆ. ಸಂದರ್ಶನದ ಕಾಲಕ್ಕೆ ಮುಖ್ಯಮಂತ್ರಿಗಳ ಆಶ್ವಾಸನವನ್ನು ಜಾಗಿರದಾರರು ಪಡೆದುಕೊಂಡರು. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಕಲ್ಪನೆ ಆಗ ಮೂರ್ತಸ್ವರೂಪವನ್ನು ಪಡೆಯಿತು.

೧೯೪೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿತವಾದಾಗ ದಿವಂಗತರು ಪ್ರಥಮ ಉಪಕುಲಪತಿಯೆಂದು ನೇಮಕಗೊಂಡುದು ಅತ್ಯಂತ ಸಹಜವಾಗಿತ್ತು. ಗಣ್ಯತೆ, ಅರ್ಹತೆ, ಆಸ್ಥೆ—ಇವೆಲ್ಲ ಅವರಲ್ಲಿ ಏಕೀಭವಿಸಿದ್ದವು. ಮೊದಲು ಮುಂಬಯಿಯಲ್ಲಿ, ಅನಂತರ ಧಾರವಾಡದಲ್ಲಿ ಒಂದೆರಡು ಚಿಕ್ಕ ಕೋಣೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕಚೇರಿ ಆರಂಭವಾಯಿತು. ದಿವಂಗತರ ತೀರ ಸಾದಾ, ಸರಳ ವ್ಯಕ್ತಿತ್ವಕ್ಕೆ ಆ ಕಚೇರಿ ಸಂಕೇತವಾದಂತಿತ್ತು. ಆದರೆ ಆ ಕಚೇರಿಯಲ್ಲಿ ನಡೆದ ಪೂರ್ವಭಾವಿಯಾದ ಕಾರ್ಯದಿಂದ ಕರ್ನಾಟಕ ವಿಶ್ವವಿದ್ಯಾಲಯದ ತಳಹದಿ ಭದ್ರವಾಯಿತು. ನಿಯಮಾವಳಿಗಳು ಸಿದ್ಧವಾಗಿ ಕಾರ್ಯಾಚರಣೆ ಸುಗಮವಾಯಿತು. ದಿವಂಗತರ ಸವಿಯಾದ ಸ್ವಭಾವದಿಂದಾಗಿ ಆರಂಭದ ಕಾರ್ಯವೆಲ್ಲ ಸುಸೂತ್ರವಾಗಿ ಸಾಗಿತು. ಆಗ ಅವರನ್ನು ಧಾರವಾಡದಲ್ಲಿ ಸತ್ಕರಿಸಿದ ಸಾರ್ವಜನಿಕ ಸಭೆಯಲ್ಲಿಯ ಸಹಜ ಸ್ವಚ್ಛಂದ ವಾತಾವರಣದ ನೆನಹು ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಅವರು ಈಗ ನಮ್ಮಿಂದ ಅಗಲಿರುವಾಗ ಆ ನೆನಹು ವ್ಯಥೆಯಾಗಿ ಪರಿಣಮಿಸುತ್ತಿದೆ. ಅಂತಹ ಸಜ್ಜನರು ವಿರಳ.

ಕೃತ್ರಿಮವನ್ನರಿಯದ ಮುಗ್ಧಮನಸ್ಸು ಅವರದಾಗಿತ್ತು. ಮುಂಬಯಿಯಲ್ಲಿ ನಿಯಮಬದ್ಧ ಜೀವನವನ್ನು ರೂಢಿಸಿಕೊಂಡ ಅವರಿಗೆ ಧಾರವಾಡದಲ್ಲಿ ಹೊಸತು ಅನುಭವ ದೊರೆತಂತಾಯಿತು. ಒಂದು ತೀರ ಸಣ್ಣ ವಿಷಯದ ಬಗೆಗೆ ಅವರ ಮನ ಮುದುಡಿಕೊಂಡಂತಾಗಿತ್ತು. ಒಮ್ಮೆ ಅವರೊಂದಿಗೆ ಕಾರಿನಲ್ಲಿ ವಿಶ್ವವಿದ್ಯಾಲಯದ ಕಚೇರಿಯತ್ತ ಹೊರಟಾಗ ಅವರೇ ಹೇಳಿದರು:

"ಧಾರವಾಡದ ಬೀದಿಗಳಲ್ಲಿ ಕಾರು ಚಲಿಸುವಾಗ ಹಾರ್ನ್ ಬಾರಿಸಿದರೂ ಜನ ಸರಿದು ದಾರಿ ಬಿಡುವದಿಲ್ಲ. ಅಲ್ಲದೆ ಧಾರವಾಡದ ಬೀದಿಗಳಲ್ಲಿ ಎಮ್ಮೆಗಳೂ ಕಾರಿನ

ಸಂಚಾರಕ್ಕೆ ವಿಶೇಷ ತಡೆಯನ್ನುಂಟುಮಾಡುತ್ತವೆ. ಮುಂಬಯಿಯಲ್ಲಿ ಹಾಗಿಲ್ಲವಲ್ಲ!."

ಈ ಮಾತಿನಲ್ಲಿ ನಮ್ಮ ಜನ ಸರಿಯಾಗಿ ವರ್ತಿಸುತ್ತಿಲ್ಲ ವೆಂಬ ವ್ಯಥೆ ಹುದುಗಿತ್ತು.

"ಒಳ್ಳೇ ಟ್ರೇನಿಂಗ್ ಕೊಟ್ಟರೆ ನಮ್ಮ ಜನ ಸರಿಯಾಗಿ ವರ್ತಿಸುವರು. ಆಗ ನಮ್ಮ ದನಗಳೂ ಸುಧಾರಿಸ ಬಹುದು" ಎಂದು ನಾನು ಹೇಳಬೇಕಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತೆಯ ವಿಷಯ ದಲ್ಲಿ ದಿವಂಗತರು ನಮ್ಮ ಜನಕ್ಕೆ ಒಳ್ಳೇ ಟ್ರೇನಿಂಗ್ ಕೊಟ್ಟರು. ಪ್ರಥಮ ಉಪಕುಲಪತಿಯಾಗಿ ಅವರು ಮಾಡಿದ ಕಾರ್ಯದಲ್ಲಿ ಇದೂ ಒಂದು ಮಹತ್ವದ ಮಾತಾ ಗಿದೆ. ಸೋಮಾರಿತನ, ನಿಯಮಬದ್ಧವಲ್ಲದ ವರ್ತನೆ, ಸ್ವಂತ ಪ್ರಯೋಜನಕ್ಕೆಂದೋ, ಪ್ರತಿಷ್ಠೆಗೆಂದೊ, ವಿಶ್ವ ವಿದ್ಯಾಲಯದ ಸಮಿತಿಗಳನ್ನು ಸೇರುವುದು—ಇವುಗಳ ಬಗೆಗೆ ಅವರು ನೊಂದುಕೊಳ್ಳುತ್ತಿದ್ದರು. ಮೃದುವಾಗಿ ಯಾದರೂ ನಿರ್ಧಾರದೊಂದಿಗೆ ಈ ಬಗೆಗೆ ಅವರು ಆಗಾಗ ವಿಶ್ವವಿದ್ಯಾಲಯದ ಸಭೆಗಳಲ್ಲಿ ಮಾತನಾಡುತ್ತಿದ್ದರು.

ಅವರು ಉಪಕುಲಪತಿಯಾದ ಅವಧಿಯಲ್ಲಿ ನಾನು ಕರ್ನಾಟಕ ವಿಶ್ವವಿದ್ಯಾಲಯದ ಬಹುಶಃ ಎಲ್ಲ ಸಮಿತಿ ಗಳಲ್ಲಿ ಸದಸ್ಯನಾಗಿದ್ದೆ. ಆಗಿನ ನನ್ನ ಉತ್ಸಾಹವೊಂದು ಕಾರಣವಾದರೆ ದಿವಂಗತರು ನನ್ನಲ್ಲಿಟ್ಟ ನಂಬಿಕೆಯೂ ಮಹತ್ವದ ಕಾರಣವಾಗಿತ್ತು. ನನ್ನ ಹೆಸರು ಇಷ್ಟೊಂದು ಸಮಿತಿಗಳಲ್ಲಿ ಏಕೆ ಇರಬೇಕು? ಎಂಬ ಪ್ರಶ್ನೆಯನ್ನು ಆಸಕ್ತರೊಬ್ಬರು ಒಂದು ಸಮಿತಿಯ ಸಭೆಯಲ್ಲಿ ಎತ್ತಿದರು. ಆಗ ದಿವಂಗತರು ಕೊಟ್ಟ ಉತ್ತರವನ್ನು ಸ್ಮರಣೆಗೆ ತಂದು ಕೊಳ್ಳುವಾಗ ನನ್ನ ಕಣ್ಣುಗಳು ತೇವಗೊಳ್ಳುತ್ತಿವೆ. ಅವರು ಆಗ ಹೇಳಿದ ಮಾತನ್ನು ಹೀಗೆ ಸಂಗ್ರಹಿಸ ಬಹುದು.

"ಸಮಿತಿಯ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ಭಾಗವಹಿಸುವವರು, ಸಂಬಂಧಪಟ್ಟ ವಿಷಯವನ್ನು ಅಭ್ಯ ಸಿಸಿ ವಸ್ತುನಿಷ್ಠ, ನ್ಯಾಯಸಮ್ಮತ ನಿಲುವೆಯನ್ನು ತಳೆ ಯುವವರು ನನಗೆ ಎಲ್ಲ ಸಮಿತಿಗಳಲ್ಲಿ ಬೇಕು. ಅಂತಹವರ ಹೆಸರುಗಳನ್ನು ನನ್ನ ಕಡೆಗೆ ಕೊಡಿರಿ. ಅವರೆಲ್ಲರನ್ನೂ ಸಮಿತಿಗಳಲ್ಲಿ ಸೇರಿಸುತ್ತೇನೆ."

ಉತ್ಸಾಹಯುಕ್ತ ದುಡಿಮೆ, ಪೂರ್ತಿಯಾದ ಅಭ್ಯಾಸ, ವಸ್ತುನಿಷ್ಠ, ನ್ಯಾಯಬದ್ಧ ನಿಲುವೆ-ದಿವಂಗತರ ಕಾರ್ಯ ಪದ್ಧತಿಯ ಪ್ರಮುಖ ಲಕ್ಷಣಗಳಾಗಿದ್ದವು. ಅಂತೆಯೆ ಅವರ ಬಗೆಗೆ ನನ್ನಲ್ಲಿ ಗೌರವಭಾವವಿದೆ. ತಾವು ಸ್ವತಃ ನಿಸ್ಸೀಮ ಶ್ರದ್ಧೆಯಿಂದ ಪ್ರಾಮಾಣಿಕತನದಿಂದ ಕೆಲಸಮಾಡುತ್ತಿ ದ್ದರು. ತಮ್ಮ ಸೌಜನ್ಯಯುಕ್ತ ಪ್ರಭಾವದಿಂದಾಗಿ ಜನತೆಯ ಸಹಕಾರವನ್ನು ಪಡೆಯುತ್ತಿದ್ದರು.

ಅವರ ನ್ಯಾಯಬದ್ಧ ನಿಲುವೆಯ ಬಗೆಗೆ ಒಂದು ಮಹತ್ವದ ಘಟನೆಯನ್ನು ಇಲ್ಲಿ ಉದಾಹರಿಸಬೇಕಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ ಧಾರವಾಡದ ನೆರೆಯಲ್ಲಿ 'ಛೋಟಾ ಮಹಾಬಳೇಶ್ವರ' ಎಂಬ ಹೆಸರಿನ ನಿವೇಶನವನ್ನು ಕ. ವಿ. ಆಯೋಗವು ಶಿಫಾರಸು ಮಾಡಿತ್ತು. ಸರಕಾರ ಅದನ್ನು ಒಪ್ಪಿಕೊಂಡು ಆ ನಿವೇಶನವನ್ನು ಕೊಡಲು ನಿರ್ಧರಿಸಿತ್ತು. ವಿಶ್ವವಿದ್ಯಾ ಲಯವು ಆರಂಭವಾದಾಗ ಕೆಲಕಾಲ ಟ್ರೇನಿಂಗ್ ಕಾಲೇ ಜಿನ ಒಂದು ಭಾಗದಲ್ಲಿ ಕಾರ್ಯಕಲಾಪಗಳು ನಡೆಯು ತ್ತಿದ್ದವು. 'ಛೋಟಾ ಮಹಾಬಳೇಶ್ವರ'ವು ನಗರಕ್ಕೆ ದೂರವಾಗುವುದು; ಅಲ್ಲಿ ಕಟ್ಟಡಗಳನ್ನು ಕಟ್ಟಿಸಲು ಬಹಳ ವೆಚ್ಚ ತಗಲುತ್ತದೆ, ಆದುದರಿಂದ ಆ ನಿವೇಶನವನ್ನು ಬಿಟ್ಟುಗೊಟ್ಟು ಕಲೆಕ್ಟರರ ಪ್ರಾಂಗಣದಲ್ಲಿ ವಿಶ್ವವಿದ್ಯಾಲ ಯದ ಕಟ್ಟಡಗಳನ್ನು ಕಟ್ಟಬೇಕೆಂದು ಕೆಲವರಿಗೆ ಅನಿಸಿತು. ಅಂತಹವರು ಸಿಂಡಿಕೇಟಿನ ಹಿರಿಯ ಸದಸ್ಯರನ್ನು ಕಂಡು ಅವರ ಮನವೊಲಿಸಿದರು. ಈ ಬದಲಾವಣೆಯು ಸರಿ ಯಾಗಲಿಕ್ಕಿಲ್ಲವೆಂಬುದು ಜಾಗಿರದಾರರ ಅಭಿಪ್ರಾಯವಾ ಗಿತ್ತು. ಆದರೆ ಸಿಂಡಿಕೇಟಿನ ಹಿರಿಯ ಸದಸ್ಯರ ಸಲಹೆ ಯಂತೆ ಈ ಪ್ರಶ್ನೆಯನ್ನು ಸಿಂಡಿಕೇಟಿನ ಸಭೆಯಲ್ಲಿ ಪರಿಶೀಲಿ ಸಲು ಒಪ್ಪಿಕೊಂಡರು. ಅಲ್ಲಿ ದೀರ್ಘ ಚರ್ಚೆ ನಡೆಯಿತು. ನಿವೇಶನವನ್ನು ಬದಲಾಯಿಸಲು ಬಹುಮತದ ಬೆಂಬಲ ದೊರೆಯುವ ಸನ್ನಿವೇಶವುಂಟಾಯಿತು. ಬಹುಮತದಿಂದ ಇಂತಹ ನಿರ್ಣಯ ಸ್ವೀಕರಿಸಿದರೂ ಅದು ನಿಯಮಬಾಹ್ಯ ವಾಗುವುದೆಂದು ನಾನು ವಾದಿಸಿದೆ. ನನ್ನ ನಿಲುವೆ ಯನ್ನು ಲಿಖಿತರೂಪದಲ್ಲಿ ಕೊಟ್ಟು ಅದನ್ನೂ, ನನ್ನ ಭಿನ್ನ ಮತವನ್ನೂ Record ಮಾಡಿಕೊಳ್ಳಬೇಕೆಂದು ಹೇಳಿದೆ. ಇದುವರೆಗೆ ಸಿಂಡಿಕೇಟ್ ಸಭೆಗಳಲ್ಲಿ ಇಂತಹ ಪರಿಪಾಠ ವಿಲ್ಲ. ಆದುದರಿಂದ ಹಾಗೆ ಮಾಡಕೂಡದು ಎಂಬುದು ಬಹುಮತೀಯ ಸದಸ್ಯರು ವಾದಿಸಿದರು. ಆ ಬಗೆಯ ವಾದ ಸ್ವೀಕೃತವಾಗಿದ್ದರೆ ಈ ಪ್ರಶ್ನೆಯು ಆಡಳಿತೆಯ ರಕ್ಷೆಗೆ ಸೇರಿದ್ದೆಂಬ ಭೂಮಿಕೆಯ ಮೇಲೆ ಅದನ್ನು ಸೆನೇಟ್ ಸಭೆಯ ಪರಿಶೀಲನೆಗೆ ತರದೆಯಿರುವ ಧೋರಣೆ ಅಲ್ಲಿ ಅಡಕ ವಾಗಿತ್ತು. ನಾನು ಪಟ್ಟು ಹಿಡಿದೆ. ನನ್ನ ನಿಲುವೆ ನ್ಯಾಯಬದ್ಧವೆಂದು ಜಾಗಿರದಾರರು Ruling ಕೊಟ್ಟು ನನ್ನ ಭಿನ್ನಮತವನ್ನು Record ಮಾಡಿಕೊಂಡರು. ಇದ

ರಿಂದಾಗಿ ಸಿನೇಟ್ ಸಭೆಯಲ್ಲಿ ಈ ಪ್ರಶ್ನೆಯನ್ನು ಪರಿಶೀಲಿಸಲು ಅವಕಾಶವೊದಗಿತು. ಒಂದೇ ಒಂದು ಭಿನ್ನಮತದೊಂದಿಗೆ ಸಿಂಡಿಕೇಟ್ ಸಭೆಯಲ್ಲಿ ಸ್ವೀಕೃತವಾದ ನಿರ್ಣಯವನ್ನು ಸಿನೇಟ್ ಸಭೆ ಬಹುಮತದಿಂದ ತಳ್ಳಿಹಾಕಿತು. 'ಥೋಟಾ ಮಹಾಬಳೇಶ್ವರ'ವು ಕ. ವಿ. ದ ನಿವೇಶನವೆಂದು ತೀರ್ಮಾನವಾಯಿತು. ಇಂದು ಅಲ್ಲಿ ಡಾ. ಡಿ. ಸಿ. ಪಾವಟೆಯವರ ಪ್ರತಿಭೆಯ ಫಲವಾಗಿ ಸುಂದರ, ಸಮೃದ್ಧ, ಸಕಲ ಸೌಕರ್ಯಯುಕ್ತ ನಗರವೊಂದು ರೂಪುಗೊಂಡು ದೇಶವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಸಿಂಡಿಕೇಟ್ ಸದಸ್ಯರಲ್ಲಿ ನಾನು ಕಿರಿಯ, ಪ್ರಭಾವಶಾಲಿಯೂ ಆಗಿರಲಿಲ್ಲ. ಹಿರಿಯರು ಪ್ರಭಾವಶಾಲಿಗಳು ಬೇರೊಂದು ಅಭಿಪ್ರಾಯ ತಳೆದಿರುವಾಗಲೂ ಜಾಗಿರದಾರರು ನ್ಯಾಯಬದ್ಧ ನಿಲವೆಯನ್ನು ಬೆಂಬಲಿಸಿದರು. ಅದರ ಉತ್ಕೃಷ್ಟ ಫಲವನ್ನು ಈಗ ಈ ವಿ. ದ ಕ್ಯಾಂಪಿನಲ್ಲಿ ಕಾಣಬಹುದಾಗಿದೆ.

ದಿವಂಗತರು ಉಪಕುಲಪತಿಯಾದ ಅವಧಿಯಲ್ಲಿ ಕಾರ್ಯ ನಿಧಾನವಾಗಿ ಸಾಗಿತು; ಸರಕಾರಿ ಗ್ರಾಂಟಿನ ಹಣವನ್ನೆಲ್ಲ ವೆಚ್ಚಮಾಡಲಾಗಲಿಲ್ಲ—ಎಂಬ ಒಂದು ಅಭಿಪ್ರಾಯವಿರುವುದೂ ನನಗೆ ಗೊತ್ತಿದೆ. ಆದರೆ ಪ್ರಥಮ ಉಪಕುಲಪತಿಯ ಕಾರ್ಯವನ್ನು ನಿಲುಮೆಯನ್ನು ಸನಿಹದಿಂದ ಕಂಡವರ ಅಭಿಪ್ರಾಯ ಬೇರೆ ತೆರನಾಗಿಯೇ ಇದೆ. ಪ್ರಥಮ ಉಪಕುಲಪತಿಯಾಗಿ ಜಾಗಿರದಾರರು ಸತ್ಸಂಪ್ರದಾಯಗಳನ್ನು ಆರಂಭಿಸಿದರು. ವಿಶ್ವವಿದ್ಯಾಲಯದ ಆಡಳಿತೆಯಲ್ಲಿ ಪ್ರಜಾರಾಜ್ಯದ ತತ್ತ್ವಗಳನ್ನು ರೂಢಿಸಿದರು. ವಿಶ್ವವಿದ್ಯಾಲಯದ ಎಲ್ಲ ಸಮಿತಿಗಳ ಸದಸ್ಯರ, ಸಾರ್ವಜನಿಕರ ಅಂದಿನ ಸರಕಾರದ ಸದಭಿಪ್ರಾಯದ ಬಲವನ್ನು ವಿಶ್ವವಿದ್ಯಾಲಯಕ್ಕೆ ಒದಗಿಸಿಕೊಟ್ಟರು. ಇದು ಮೌಲಿಕವಾದ ಅಂಶವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಸರಸ ಸಜ್ಜನಿಕೆಯ, ನ್ಯಾಯಬದ್ಧ ಜೀವಿ ಆರ್. ವಿ. ಜಾಗಿರದಾರರಿಗೆ ಆಧುನಿಕ ಕರ್ನಾಟಕ ನಿರ್ಮಾಪಕರಲ್ಲಿ ಮಹತ್ವದ ಸ್ಥಾನವಿದೆಯೆಂದು ನಾನು ಭಾವಿಸುತ್ತೇನೆ.

ಕಾದಂಬರಿಕಾರ ಶ್ರೀ ಮ. ರಾಮಮೂರ್ತಿ ಅವರ ಮರಣ

ಕನ್ನಡ ನಾಡಿನ ಸುಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರೂ, ನಿಷ್ಠಾವಂತ ಪ್ರತಿಕೋದ್ಯೋಗಿಗಳೂ, ಕನ್ನಡ ಚಳುವಳಿಯ ಹಿರಿಯ ನಾಯಕರೂ ಆದ ಮ. ರಾಮಮೂರ್ತಿ ಅವರು ದಿನಾಂಕ ೨೭-೧೨-೧೯೬೭ರಂದು ಅಕಾಲ ಮರಣಕ್ಕೆ ತುತ್ತಾದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರು ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳೂ ದೇಶಭಕ್ತರೂ ಆಗಿರುವ ವೀರಕೇಸರಿ ಸೀತಾರಾಮ ಶಾಸ್ತ್ರಿಗಳವರ ಜ್ಯೇಷ್ಠಪುತ್ರರು. ಶ್ರೀಯುತರು ಕನಕಪುರದ ರಸ್ತೆಯಲ್ಲಿರುವ ತಲಘಟ್ಟಪುರದ ಬಳಿ ತೋಡಿಸುತ್ತಿದ್ದ ತಮ್ಮ ಬಾವಿಯೊಂದನ್ನು ನೋಡಲು ತಮ್ಮ ಇಬ್ಬರು ಮಕ್ಕಳೊಡನೆ ಹೋಗಿದ್ದರು. ಬಾವಿಯು ಕುಸಿದು ಶ್ರೀ ರಾಮಮೂರ್ತಿ ಅವರನ್ನೂ, ಅವರ ಇಬ್ಬರು ಮಕ್ಕಳನ್ನೂ ಆಹುತಿ ತೆಗೆದುಕೊಂಡಿತು. ಮೃತರಿಗೆ ವೃದ್ಧ ತಂದೆತಾಯಿಗಳೂ ಪತ್ನಿಯೂ ಸೋದರ ಸೋದರಿಯರೂ ಇದ್ದಾರೆ. ಅವರ ಮರಣದಿಂದ ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಪಾರ ನಷ್ಟವುಂಟಾಗಿದೆ.

ನಿರ್ಮಲಾಂತಃಕರಣ ತೋರಿದ ಮಾವ :

ಆರ್. ಎ. ಜಹಗೀರ್‌ದಾರ್

□□ ಶ್ರೀಮತಿ ತೇಜಸ್ವಿನಿ ಆರ್. ಜಹಗೀರ್‌ದಾರ್

ನನ್ನ ಮಾವನವರು-ಅಲ್ಲ ಕಾಕಾ ಅವರು (ಶ್ರೀ ಆರ್. ಎ. ಜಹಗೀರ್‌ದಾರ್) ೬-೧೦-೬೭ ರಂದು ನಿಧನರಾದಾಗ 'ಶರಣನ ಭಾಗ್ಯವು ಮರಣದಲ್ಲಿ' ಎಂಬ ವಚನ ಅನುಭವಕ್ಕೆ ಬಂದಿತು. ಸೊಸೆಯನ್ನು ಮಗಳೋಪಾದಿಯಲ್ಲಿ ನೋಡಿಕೊಂಡ ಆತ್ಮೀಯ ಜೀವ ಕಣ್ಮರೆಯಾದಾಗ ಆಗುವ ದುಃಖವನ್ನು ವರ್ಣಿಸಲು ಅಸಾಧ್ಯ. ಇದು ನನ್ನ ಸ್ವಂತ ಅನುಭವ. ಅತ್ತೆಯ ಮನೆಗೆ ಮಗಳನ್ನು ಕಳಿಸಲು ಬಂದ ನಮ್ಮ ತಂದೆಯವರಿಗೆ (ಬಿಂದೂರಾವ್ ದೇಶಪಾಂಡೆ) "ಇನ್ನು ಈಕೆ ನನ್ನ ಮಗಳು" ಎಂದು ಹೇಳಿದ ಮಾತುಗಳು ಇನ್ನೂ ಕಣ್ಮುಂದಿವೆ. ಪತ್ರದಲ್ಲಿ ಮಾವನವರಿಗೆ ನಮಸ್ಕಾರಗಳು ಎಂದು ಬರೆದಾಗ ಕಾಕಾ ಅಂತ ಕರೆಯಲು ಹೇಳು ಎಂದು ನುಡಿದ ಆ ದೊಡ್ಡ ಮನಸ್ಸು ಏಕಾಏಕಿ ನಮ್ಮನ್ನು ಅಗಲಿಹೋದಾಗ ಆಗುವ ಸಂಕಟ ಅಸದಳ.

ಹಸುಗೂಸಿನ ಮನಸ್ಸು

ನಮ್ಮ ಕಾಕಾ ಅವರದು ಹೂವಿನಂಥ ಮನಸ್ಸು. ಹಸುಗೂಸಿನ ಮನಸ್ಸನ್ನು ಅವರು ನೋಯಿಸುತ್ತಿರಲಿಲ್ಲ ಒಣ ಡಂಭಾಚಾರ, ಗರ್ವ, ಸಿಟ್ಟು, ದುರಭಿಮಾನ, ದುರ್ವಿಚಾರಗಳು ಅವರ ಸಮೀಪಕ್ಕೂ ಸುಳಿಯುತ್ತಿರಲಿಲ್ಲ. ಅವರು ಸಾಧು-ಸಜ್ಜನ-ಪುರುಷರಾಗಿದ್ದರು. ಅದ್ಯ ಮನತನವೇ ದೊಡ್ಡದು. ಆಧುನಿಕ ಕಾಲದಲ್ಲಿ ಈ ಮನೆತನದ ಕೀರ್ತಿ ಪತಾಕೆಯನ್ನು ಹಾರಿಸಿದವರು ನಮ್ಮ ಕಾಕಾ ಶ್ರೀ ರಂಗಾಚಾರ್ಯರು.

ಅವರು ನಿಷ್ಣಾತ ಕಾಯದೆ ಪಂಡಿತರು. ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನ್ಯಾಯಾಂಗ ಮತ್ತು ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಿದರು. ಪ್ರಸಿದ್ಧಿಯ ಬೆನ್ನು ಹತ್ತದ ಅವರನ್ನು ಸಮಾಜದ ಉನ್ನತ ಸ್ಥಾನಮಾನಗಳು ತಾವಾಗಿಯೇ ಅನುಸರಿಸಿಕೊಂಡು ಬಂದವು. ಶ್ರೀ ಸರಸ್ವತಿ ಮತ್ತು ಸಂಸ್ಕೃತಿಯ ವರದಹಸ್ತ ಅವರ ಮಸ್ತಕದ ಮೇಲಿತ್ತು. ಆದರೂ ಅವರ ಸಾಧು ಸ್ವಭಾವದಲ್ಲಿ ಎಂದಿಗೂ ಬದಲಾವಣೆಯಾಗಲಿಲ್ಲ. ಬಡವ ಬಲ್ಲಿದರೆಂಬ ಭೇದ ಭಾವ ಅವರಲ್ಲಿರಲಿಲ್ಲ. ಯಾರು ಬಂದರೂ ಅವರಿಗೆ ಆದರದ ಸ್ವಾಗತ.

'ನಾನು ಇಷ್ಟೊಂದು ಮುಂದೆ ಬರುವುದಕ್ಕೆ ನಿನ್ನ ಅತ್ತೆಯ ಪ್ರೋತ್ಸಾಹವೇ ಕಾರಣ. ಅವಳು ನನ್ನ ಗೃಹಲಕ್ಷ್ಮಿ, ಮಾತ್ರವಲ್ಲ ಭಾಗ್ಯಲಕ್ಷ್ಮಿಯೂ ಆಗಿದ್ದಳು' ಎಂದು ಕಾಕಾ ಅವರು ಉದ್ಗರಿಸಿದ್ದುಂಟು.

ಸ್ವಾತಂತ್ರ್ಯ ಸಂಗ್ರಾಮ

ಕಾಕಾ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದುಂಟು. ೧೯೪೨ರ ಚಲೇಜಾವ್ ಚಳುವಳಿಯ ಕಾಲಕ್ಕೆ ಅವರು ಅನೇಕ ಚಳವಳಿಗಾರರಿಗೆ ಆಶ್ರಯ ನೀಡಿದ್ದರು. ಶಿಕ್ಷಣಕ್ಕಾಗಿ ಬಡವಿದ್ಯಾರ್ಥಿಗಳಿಗೆ ಅವರು ಮಾಡಿದ ಸಹಾಯ ಅಷ್ಟಿಷ್ಟಲ್ಲ.

ಆಧುನಿಕ ಶಿಕ್ಷಣವೇತ್ತರಾಗಿದ್ದರೂ, ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿ ಕಾಕಾ ಅವರಿಗಿತ್ತು. ಎಲ್ಲ ಹಬ್ಬ-ಹುಣ್ಣಿಮೆಗಳನ್ನೂ ಸಂಪ್ರದಾಯಬದ್ಧವಾಗಿ ಚಾಚೂ ತಪ್ಪದೆ ನೆರವೇರಿಸುತ್ತಿದ್ದರು. ಇತ್ತೀಚೆಗೆ ನಿವೃತ್ತರಾದಮೇಲೆ ದೇವರ ಧ್ಯಾನ, ತಮ್ಮ ಮಗನಿಗೆ ಕಾಯದೆ ವಿಷಯದಲ್ಲಿ ಸಲಹೆ ನೀಡುವುದು, ಮೊಮ್ಮಕ್ಕಳೊಡನೆ ನಲಿದಾಟ, ಆಧ್ಯಾತ್ಮಿಕ ವಾಚನ ಮತ್ತು ಜಾಗತಿಕ ಘಟನೆಗಳ ಚರ್ಚೆ ಮಾಡುತ್ತ ಕಾಲ ಕಳೆಯುತ್ತಿದ್ದರು.

ಇಂಥಹ ಸದ್ಗುಣಗಳಿಂದ ಕೂಡಿದ್ದ ದೇವತಾ ಸ್ವರೂಪಿ ಕಾಕಾ ಅವರು ನಮ್ಮನ್ನು ಅಗಲಿ ಹೋಗುವರೆಂಬ ಕಲ್ಪನೆಯಾದರೂ ಹೇಗೆ ಬರಬೇಕು! ಅವರಿಗೆ ಈವರೆಗೂ ರಕ್ತದ ಒತ್ತಡ, ಹೃದಯ ವಿಕಾರ, ಮಧುಮೇಹ ಇಲ್ಲವೆ ಮತ್ಯಾವ ವ್ಯಾಧಿಯೂ ಇರಲಿಲ್ಲ. ಆದರೆ ವಿಧಿ ಲಿಖಿತವನ್ನು ತಪ್ಪಿಸುವವರಾರು?

ಅಕ್ಟೋಬರ್ ೫ನೇ ತಾರೀಖು ಸಾಯಂಕಾಲ

ಮಾತುಂಗಾದಲ್ಲಿರುವ ಕಾಕಾ ಅವರ ಹಿರಿಯ ಮಗಳ ಮನೆಯಲ್ಲಿ ಸತ್ಯನಾರಾಯಣ ಪೂಜೆಯಿತ್ತು. ನಾನು ಬೆಳಿಗ್ಗೆ ಹತ್ತುಗಂಟೆಗೆ ಊಟಮುಗಿಸಿ ಮಾತುಂಗಾಕ್ಕೆ ಹೋಗಿದ್ದೆ. ಅವರಿಗಾಗಿ ರೆಫ್ರಿಜರೇಟರಿನಲ್ಲಿ ಮೋಸಂಬಿ ರಸವನ್ನು ತೆಗೆದಿಟ್ಟಿದ್ದೆ. ಮಧ್ಯಾಹ್ನ ಮೋಸಂಬಿ ರಸ ತೆಗೆದುಕೊಂಡರು. ಸಾಯಂಕಾಲ ಚಹಾ–ಫಲಹಾರ ಸ್ವೀಕರಿಸಿ ಮಗಳ ಮನೆಗೆ ಎಲ್ಲರೊಂದಿಗೆ ಬಂದರು. ಮಗಳ ಮಗ ದೋತರ ಉಟ್ಟು ಸತ್ಯನಾರಾಯಣ ಪೂಜೆ ಮಾಡುವುದನ್ನು ನೋಡಿ ಸಂತೋಷಪಟ್ಟರು. ಅನಂತರ ಕುಟುಂಬದ ಎಳೆಯರು ಹಿರಿಯರೊಂದಿಗೆ ನಗೆಯಾಡುತ್ತ ಊಟ ಮುಗಿಸಿದರು.

ನಾವು ಹೆಂಗಸರು ಊಟಕ್ಕೆ ಕುಳಿತಾಗ ಹೊರಗಿನಿಂದಲೇ ಕೂಗಿ ಹೇಳಿದರು. ನೀವು ಒಳಗೆ ಏನು ಊಟಮಾಡುತ್ತೀರೋ ಹೊರಗೆ ನನ್ನ ಮುಂದೆ ಕುಳಿತು ಊಟ ಮಾಡಿರಿ ಎಂದು. ಎಂತಹ ಅಂತಃಕರಣ! ಮಾತುಂಗಾದಿಂದ ಕಾಕಾ ನಾವೂ ಎಲ್ಲರೂ ರಾತ್ರಿ ಹತ್ತುಗಂಟೆಗೆ ಮನೆಗೆ ಬಂದೆವು. ಬಂದನಂತರ ನಿತ್ಯದ ಪ್ರಕಾರ ಅಡಿಕೆಪುಡಿ ತಿಂದು ತಮ್ಮ ರೂಮಿಗೆ ಹೋದರು.

೬ನೇ ತಾರೀಖು ಬೆಳಿಗ್ಗೆ ನಾನು ಹಾಲು ತೆಗೆದುಕೊಳ್ಳುವಾಗ ಎದ್ದುಬಂದು, "ಎದೆ ನೋಯುತ್ತಿದೆ ಬೆವರು ಬರುತ್ತದೆ" ಎಂದರು. ನಾನು ಕೂಡಲೇ ನಮ್ಮ ಯಜಮಾನರನ್ನು ಎಬ್ಬಿಸಿದೆ. ಅವರು ಕಾಕಾ ಅವರನ್ನು ಹಾಸಿಗೆಯ ಮೇಲೆ ಮಲಗಿಸಿ ಎದೆ ತಿಕ್ಕ ಹತ್ತಿದರು. ಡಾಕ್ಟರ್‌ರಿಗೆ ಫೋನ್ ಮಾಡಬೇಕೆಂದಾಗ "ಇನ್ನೂ ರಾತ್ರಿ ಇದೆ. ಡಾಕ್ಟರಿಗೆ ಸುಮ್ಮನೆ ತೊಂದರೆ ಕೊಡಬೇಡ. ನೀವೂ ಮಲಗಿಕೊಳ್ಳಿ" ಎಂದರು. ಎದೆ ನೋಯುತ್ತಿದ್ದರೂ ಇನ್ನೊಬ್ಬರಿಗೆ ತೊಂದರೆ ಕೊಡಬಾರದೆಂಬ ಅವರ ಸ್ವಭಾವಕ್ಕೆ ಇನ್ನೇನು ನಿದರ್ಶನ ಬೇಕು?

ಡಾಕ್ಟರ್‌ರು ಲಘು ಹೃದಯಾಘಾತವೆಂದು ಹೇಳಿ ಪ್ರಥಮೋಪಚಾರ ನೀಡಿದರು. ಅನಂತರ ಅವರನ್ನು "ಬಾಂಬೆ ಹಾಸ್ಪಿಟಲ್"ಗೆ ಸೇರಿಸಲಾಯಿತು. ನಮಗೆ ವಿಪರೀತ ಭಯ. ಆದರೆ ಕಾಕಾ ಶಾಂತವಾಗಿಯೇ ಇದ್ದರು. ಸಾವು ಹತ್ತಿರದಲ್ಲಿ ಬಂದು ನಿಂತಾಗಲೂ 'ನಿಮ್ಮೆಲ್ಲರ ಊಟ ಆಯಿತೆ?' ಎಂದು ಕೇಳಿದರು. ಮನೆಗೆ ಹೋಗಿ ಮೊಮ್ಮಕ್ಕಳನ್ನು ಕರೆತರಲು ಮತ್ತು ಚಹಾ ತೆಗೆದುಕೊಂಡು ಬರಲು ಹೇಳಿದರು. ಮಗ ಅವರ ಬಳಿಯಲ್ಲೇ ಇದ್ದ. ಸ್ವಲ್ಪಹೊತ್ತಿನಲ್ಲಿಯೇ ಕಾಕಾ ಇಲ್ಲವಾಗುವರೆಂದು ನಮಗೆ ಗೊತ್ತಿದ್ದರೆ ನಾವು ಅಲ್ಲಿಂದ ಹೊರಡುತ್ತಲೇ ಇರಲಿಲ್ಲ. ಆದರೇನು ಮನೆಗೆ ಬಂದು ಸ್ವಲ್ಪಹೊತ್ತಿನಲ್ಲಿಯೇ ಕಾಕಾ ಅಗಲಿದ ಅಘಾತಕಾರಿ ಸುದ್ದಿ ಬಂದಿತು. ಆಸ್ಪತ್ರೆಗೆ ಬಂದು ನೋಡಿದಾಗ ಅವರಿಗೆ ನಿದ್ದೆ ಹತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ಏಕೆಂದರೆ ಅವರ ಮುಖದಲ್ಲಿ ಶಾಂತತೆ ಎದ್ದು ಕಾಣುತ್ತಿತ್ತು.

ಅಂತಃಕರಣಮೂರ್ತಿ ಶ್ರೀ ಸತ್ಯನಾರಾಯಣನ ಪಾದಾರವಿಂದವನ್ನು ಸೇರಿತು. ಅವರ ಆತ್ಮದ ಬೆಳಕು, ಅವರ ವರದ ಹಸ್ತ ನಮಗೆ ಸಂಸಾರದಲ್ಲಿ ದಾರಿದೀಪವಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕೂಡಲ ಸಂಗಮದೇವ

ಶಿವಶರಣರ ಗುರು ಬಸವಣ್ಣ, ನಿನ್ನನು
ಸವಿ ವಚನಗಳಲಿ ಹಾಡಿದನಣ್ಣ
ಶರಣರ ವಚನಾಮೃತಸಾರ, ನಿನ್ನಯ
ವರಪ್ರಸಾದದ ಮತಿಸಂಸ್ಕಾರ.

—ಗೋ. ಕೃ.

ತರೀಕೆರೆಯಲ್ಲಿ ನಡೆದ ಜಾನಪದ ಸಾಹಿತ್ಯ ಸಮ್ಮೇಳನದ ವರದಿ

■■ ನೈಶಿಲಭಟ್ಟ

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಅತ್ಯಂತ ಮಹತ್ವದ ಘಟನೆಗಳಲ್ಲಿ ಒಂದು ಎನ್ನಬಹುದಾದ ಕನ್ನಡ ಜಾನಪದ ಸಾಹಿತ್ಯ ಸಮ್ಮೇಳನ ಈ ತಿಂಗಳ ೬ ಮತ್ತು ೭ನೆಯ ತಾರೀಖು ತರೀಕೆರೆಯಲ್ಲಿ ಬಹಳ ಯಶಸ್ವಿಯಾಗಿ ಜರುಗಿತು. ಜಾನಪದ ಸಾಹಿತ್ಯವನ್ನು ಕುರಿತ ಸಮಾರಂಭ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮೊದಲನೆಯದಾದರಿಂದ ಇದು ನಮ್ಮ ಸಾಹಿತ್ಯಚರಿತ್ರೆಯಲ್ಲಿ ಸದಾ ಸ್ಮರಣೀಯವಾಗಿ ಉಳಿಯುವಂಥ ಬಹು ಮುಖ್ಯವಾದ ಘಟನೆಯಾಗಿದೆ. ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಸಮ್ಮೇಳನದ ಅಧ್ಯಕ್ಷತೆ ವಹಿಸಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅವರು ಬರಲಾಗದಿದ್ದುದರಿಂದ ಕನ್ನಡದ ಮತ್ತೊಬ್ಬ ಪ್ರಸಿದ್ಧ ಸಾಹಿತಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷರಾಗಿ ಸಮ್ಮೇಳನದ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಎರಡು ದಿನಗಳೂ ಈ ಸಮ್ಮೇಳನ ಅದ್ದೂರಿಯಾಗಿ, ಅತ್ಯಂತ ಸಾರ್ಥಕ ರೀತಿಯಲ್ಲಿ ಜರುಗಿತು. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳೂ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತೂ ಈ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳಿಸಿದ್ದುವು.

ವೈಭವಪೂರ್ಣ ಸಮಾರಂಭ

ಈ ಸಮ್ಮೇಳನವನ್ನು ಬಹು ದೊಡ್ಡ ಪ್ರಮಾಣದಲ್ಲಿ ಮತ್ತು ಆದಷ್ಟು ವೈಭವಪೂರ್ಣವಾಗಿ ನಡೆಸಲು ಸಾಧ್ಯವಿದ್ದ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗಿತ್ತು. ಇದರಲ್ಲಿ ಭಾಗವಹಿಸಲು ಕರ್ನಾಟಕದ ಬೇರೆ ಬೇರೆ ಗ್ರಾಮ, ನಗರಗಳಿಂದ ಆಹ್ವಾನಿತರಾಗಿ ಬಂದಿದ್ದ ಪ್ರತಿನಿಧಿಗಳಲ್ಲಿ ಜನಪದ ಸಾಹಿತ್ಯದ ಸಂಗ್ರಹಕಾರರು, ವಿಮರ್ಶಕರು, ಪ್ರಚಾರಕರು, ಅಭಿಮಾನಿಗಳು ಎಲ್ಲ ಸೇರಿದ್ದರು. ಮಾತ್ರವಲ್ಲ. ಅನೇಕ ಹಳ್ಳಿಗಳಿಂದ ಜನಪದ ಸಾಹಿತ್ಯವನ್ನು ಅದರ ನೈಜಧಾಟಿಯಲ್ಲಿ ತಕ್ಕ ತಾಳವಾದ್ಯಗಳೊಡನೆ ಹಾಡಬಲ್ಲ ಗ್ರಾಮಕಲಾವಿದರನ್ನೂ ಕರೆಸಲಾಗಿತ್ತು. ಹೀಗೆ ಒಂದು ಕಡೆ ಗ್ರಾಮಕಲೆಯ ಜೀವಂತ ಪ್ರದರ್ಶನ ಮತ್ತೊಂದು ಕಡೆ ವಿಚಾರವಂತರಿಂದ ಅದರ ಸತ್ವದ ವಿಮರ್ಶನ—ಈ ಎರಡೂ ಕಾರ್ಯಗಳನ್ನು ಏಕಕಾಲದಲ್ಲಿ ಒಂದೇ ವೇದಿಕೆಯ ಮೇಲೆ ನಡೆಸಿ ಅದರ ಸಂಪೂರ್ಣ ಸ್ವರೂಪವನ್ನು ಪ್ರಚುರಪಡಿಸುವ ವಿಶಿಷ್ಟಯೋಜನೆ ಈ ಸಮ್ಮೇಳನದ ಬಹು ಮಹತ್ವದ ಅಂಶವಾಗಿತ್ತೆನ್ನಬಹುದು. ಗ್ರಾಮಕಲಾವಿದರನ್ನು ಆರಿಸಿದ್ದ ರೀತಿ, ಜನಪದ ಸಾಹಿತ್ಯದ ವೈವಿಧ್ಯ, ಸತ್ವಗಳನ್ನು ಸಭೆಯೆದುರು ಬಹು ಪ್ರಭಾವಶಾಲಿಯಾಗಿ ನಿರೂಪಿಸಲು ಸಹಾಯಕವಾಗಿತ್ತು. ಕರಪಾಲದ ಹಾಡುಗಳು, ಹೆಳವರ ಪದ, ಕಂಸಾಳೆ ಹಾಡುಗಳು, ಜುಂಜಪ್ಪನ ಹಾಡು, ಮಂಟೇದೇವರ ಪದಗಳು, ಯಕ್ಷಗಾನ, ದೀಪನೃತ್ಯ, ಚೌಡಿಕೆ, ಡೊಳ್ಳುಕುಣಿತ, ಕೋಲಾಟ, ವೀರಗಾಸೆ ಕುಣಿತ, ಪಂಢರಿ ಭಜನೆ—ಇತ್ಯಾದಿ ಅನೇಕ ರೀತಿಯ ಜಾನಪದ ಗೀತೆಗಳನ್ನು, ಕುಣಿತಗಳನ್ನು ಅವುಗಳ ನೈಜಧಾಟಿಯಲ್ಲಿ, ಮೂಲರೂಪದಲ್ಲಿ ಮೊದಲಬಾರಿಗೆ ಭಾರಿ ಸಭೆಯೊಂದರ ಎದುರಿನಲ್ಲಿ ಪ್ರದರ್ಶಿಸುವ ಏರ್ಪಾಟನ್ನು ಮಾಡಿಕೊಳ್ಳಲಾಗಿತ್ತು.

ಆರನೆಯ ತಾರೀಖು ಸಮ್ಮೇಳನಕ್ಕಾಗಿ ಹೊರ ಊರುಗಳಿಂದ ಬಂದ ಪ್ರತಿನಿಧಿಗಳ ಒಂದು ಗುಂಪು ತರೀಕೆರೆಯಲ್ಲಿ ಇಳಿದಾಗ ತರೀಕೆರೆ ಸಂಭ್ರಮದ ವಾತಾವರಣವನ್ನು ಹೊತ್ತು ನಿಂತಿತ್ತು. ತರೀಕೆರೆಗೆ ಸುತ್ತಮುತ್ತಲ ಹಳ್ಳಿ ಊರುಗಳಿಂದ ಅಪಾರ ಪ್ರಮಾಣದಲ್ಲಿ ಜನ ಬರತೊಡಗಿತ್ತು. ಆಹ್ವಾನಿತರಾಗಿ ಬಂದಿದ್ದ ಪ್ರತಿನಿಧಿಗಳ ಊಟ ವಸತಿಗಳಿಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಲಾಗಿತ್ತು. ಸಮ್ಮೇಳನ ನಡೆಸಲು ಕಟ್ಟಲಾದ ಡಾ|| ಬಿ. ಎಸ್. ಗದ್ದಗೀ

ಮತ ಚಪ್ಪರ ಕಣ್ಣುಸೆಳೆಯುವಷ್ಟು ಸುಂದರವಾಗಿ ನಿರ್ಮಾಣವಾಗಿತ್ತು. ಹಸಿರು ಚಪ್ಪರದಲ್ಲಿ ಮಾಡಲಾದ ವಿದ್ಯುದ್ದೀಪದ ವ್ಯವಸ್ಥೆ, ಆಸನ ವ್ಯವಸ್ಥೆ, ಉಪನ್ಯಾಸಕರು ಮತ್ತು ಗ್ರಾಮಕಲಾವಿದರಿಗಾಗಿ ನಿರ್ಮಿಸಿದ್ದ ಸುಂದರ ವೇದಿಕೆ, ಚಪ್ಪರದ ಸುತ್ತಲೂ ಮಹಾರಾಜರು, ಬೇಂದ್ರೆಯವರು, ಅ. ನ. ಕೃ. ಇವರಿಗೆ ಸ್ವಾಗತ ಕೋರಿ ತೂಗುಹಾಕಿದ್ದ ವಸ್ತ್ರತೋರಣಗಳು—ಇವೆಲ್ಲ ಸಮ್ಮೇಳನದ ವ್ಯವಸ್ಥಾಪಕರ ಶ್ರದ್ಧೆ, ಕಾರ್ಯದಕ್ಷತೆಗಳನ್ನು ಎತ್ತಿ ತೋರುವಂತಿದ್ದವು. ಬೆಳಿಗ್ಗೆ ೯ ಗಂಟೆಯ ಹೊತ್ತಿಗಾಗಲೇ ಸಮ್ಮೇಳನದ ಚಪ್ಪರ ಜನರಿಂದ ತುಂಬಿಹೋಗಿತ್ತು. ಮಾತ್ರವಲ್ಲ. ಇನ್ನೂ ಸಮ್ಮೇಳನ ಆರಂಭವಾಗಿರದಿದ್ದರೂ ಚಪ್ಪರದ ಮಗ್ಗುಲಿನ ತಗ್ಗು ಬಯಲಲ್ಲಿ ಉತ್ಸಾಹದಿಂದ ಡೊಳ್ಳು ಕುಣಿತ ಆರಂಭಿಸಿದ್ದ ಗ್ರಾಮಕಲಾವಿದರನ್ನು ನೋಡಲು ದಿನ್ನೆಯ ಮೇಲೆ ಒಂದು ದೊಡ್ಡ ಸಭೆ ಸೇರಿತ್ತು.

೧೦ ಗಂಟೆಗೆ ಕವಿ ಬೇಂದ್ರೆಯವರ ಮೆರವಣಿಗೆಗೆ ಏರ್ಪಾಟಾಗಿತ್ತು. ಜಾನಪದ ಸತ್ವಕ್ಕೆ ಅತ್ಯುತ್ತಮ ಮಟ್ಟದಲ್ಲಿ ಅಭಿವ್ಯಕ್ತಿ ನೀಡಿದ ಈ ಕವಿಯ ಮೆರವಣಿಗೆಗೆ ಬಹಳ ಸಂಭ್ರಮದ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅವರ ಗೈರುಹಾಜರಿಯಿಂದ ಅವರಿಗಾಗಿ ಕಾದಿದ್ದ ಜನಕ್ಕೆ ಭಾರಿ ನಿರಾಶೆಯೇ ಆಯಿತೆನ್ನಬೇಕು. ಮಧ್ಯಾಹ್ನ ೧೨ ಗಂಟೆಗೆ ಆಗಮಿಸಿದ ಮಹಾರಾಜರನ್ನು ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಹನುಮಯ್ಯ, ಮುಖ್ಯ ಕಾರ್ಯದರ್ಶಿ ಶ್ರೀ ಕೆ. ಆರ್. ಲಿಂಗಪ್ಪ, ಮತ್ತು ಸಮಿತಿಯ ಸದಸ್ಯರು ಸ್ವಾಗತಿಸಿದರು. ಗಮಕ ಕಲಾನಿಧಿ ಜೋಳದ ರಾಶಿ ದೊಡ್ಡನಗೌಡರಿಂದ ಪ್ರಾರ್ಥನೆಯಾದ ಮೇಲೆ ಶ್ರೀ ಜಿ. ಹೆಚ್. ಹನುಮಯ್ಯನವರು ಮಹಾರಾಜರನ್ನು ಮತ್ತು ನಾಗರಿಕರನ್ನು ಸಮ್ಮೇಳನಕ್ಕೆ ಸ್ವಾಗತಿಸುತ್ತಾ ಗ್ರಾಮಾಂತರ ಪ್ರದೇಶದಲ್ಲಿ ನಡೆಯುತ್ತಿರುವ ಈ ಸಮ್ಮೇಳನವನ್ನು ಉದ್ಘಾಟಿಸುವುದಕ್ಕೆ ಬರಲೊಪ್ಪಿದ ಮಹಾರಾಜರ ಔದಾರ್ಯಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು. ಶ್ರೀ ಎಲ್. ಬಿ. ತಮ್ಮಯ್ಯನವರು ಸಮ್ಮೇಳನಕ್ಕೆ ಯಶಸ್ಸು ಕೋರಿ ಬಂದಿದ್ದ ಸಂದೇಶಗಳನ್ನು ಓದಿದರು. ಕಾರ್ಯದರ್ಶಿ ಕೆ. ಆರ್. ಲಿಂಗಪ್ಪನವರು ಮಹಾರಾಜರಿಗೆ ಬಿನ್ನವತ್ತಳೆ ಅರ್ಪಿಸಿದರು.

ಅಪೂರ್ವ ಘಟನೆ

ಅನಂತರ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಂದ ಸಮ್ಮೇಳನದ ಉದ್ಘಾಟನೆ ನಡೆಯಿತು. ಇದೊಂದು ಅಪೂರ್ವ ಘಟನೆಯೆನ್ನಬೇಕು. ಪಂಡಿತ ಕವಿಗಳಿಂದ ರಚಿತವಾದ ಪ್ರೌಢ ಕಾವ್ಯಗಳಿಗೇ ರಾಜರು ಮೊದಲಿನಿಂದಲೂ ಆಶ್ರಯ ನೀಡುತ್ತಿದ್ದುದು ಭಾರತೀಯ ಸಾಹಿತ್ಯ ಚರಿತ್ರೆಗೆ ಸುವೇದ್ಯವಾದ ವಿಷಯ. ಆದರೆ ಆ ದಿನ ಮೊದಲ ಬಾರಿಗೆ, ಸಾಮಾನ್ಯ ಜನರ ಬದುಕಿನಿಂದ ಹುಟ್ಟಿಬಂದ ಗ್ರಾಮಸಾಹಿತ್ಯದ ಸಮಾರಂಭವನ್ನು ಮಹಾರಾಜರೊಬ್ಬರು ಉದ್ಘಾಟಿಸಿದರು.

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಲಿಖಿತ ಭಾಷಣದಲ್ಲಿ ತಮ್ಮನ್ನು ಈ ಸಮ್ಮೇಳನ ಉದ್ಘಾಟಿಸಲು ಕರೆದದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ "ಜನಪದ ಸಾಹಿತ್ಯ ಈಚೀಚೆಗೆ ವಿದ್ಯಾವಂತರಿಂದ ಹೆಚ್ಚುಹೆಚ್ಚಾಗಿ ಸಂಗ್ರಹಗೊಂಡು ಬೆಳಕಿಗೆ ಬರುತ್ತಿರುವುದು ಸಮಾಧಾನದ ಸಂಗತಿಯೆಂದೂ ಕಾಂತಾಸಮ್ಮಿತ ಮಾರ್ಗದಲ್ಲಿ ಧರ್ಮ ಪ್ರತಿಪಾದನೆಗೆ ಕಾರಣವಾದ ಈ ಸಾಹಿತ್ಯ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಬೇಕಾಗಿದೆಯೆಂದೂ ತಿಳಿಸಿದರು. ಈ ಸಮ್ಮೇಳನದ ವಿಶಿಷ್ಟ ಸಾಧನೆಯೆನ್ನಬಹುದಾದ "ಹೊನ್ನ ಬಿತ್ತೇವು ಹೊಲಕೆಲ್ಲ" ಎಂಬ ಸಹಸ್ರ ಪುಟಗಳ ಸುಂದರ ಗ್ರಂಥವು ಮಹಾರಾಜರ ಹಸ್ತದಿಂದ ಬಿಡುಗಡೆಗೊಂಡಿತು. ಜಾನಪದ ಸಾಹಿತ್ಯಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ದಿ|| ಡಾ. ಬಿ. ಎಸ್. ಗದ್ದಗೀಮಠರ ಪತ್ನಿಯವರಿಗೆ ಮಹಾರಾಜರ ಹಸ್ತದಿಂದ ಒಂದು ಸಹಸ್ರ ರೂಪಾಯಿಗಳನ್ನು ಕೃತಜ್ಞತೆಯ ಕಾಣಿಕೆಯಾಗಿ ನೀಡಲಾಯಿತು.

ರಾಜ್ಯದ ಆಹಾರ ಸಚಿವರಾದ ಶ್ರೀ ಬಿ. ಡಿ. ಜತ್ತಿಯವರು ಜಾನಪದಕ್ಕೆ ಸಂಬಂಧಿಸಿದ ಕಲಾವಸ್ತುಗಳು, ಚಿತ್ರಗಳು, ಕೈಬರೆಹದಲ್ಲಿದ್ದ ಜಾನಪದ ಗೀತೆಗಳು—ಮೊದಲಾದವುಗಳಿಂದ ಕೂಡಿದ ಜಾನಪದ ವಸ್ತುಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಇಂಥ ವಸ್ತುಗಳನ್ನು ನಾಡಿನ ಕಣ್ಣ ಮುಂದೆ ಇಡಲು ಜಾನಪದ ಕಲಾಮಂದಿರವೊಂದರ ಅಗತ್ಯ ವಿಶೇಷವಾಗಿದೆಯೆಂದೂ ಅದು ಶೀಘ್ರದಲ್ಲಿಯೇ ಆಗಲೆಂದು ಹಾರೈಸುವುದಾಗಿಯೂ ಮಾನ್ಯ ಸಚಿವರು ತಿಳಿಸಿದರು.

ಡಾ|| ಬೇಂದ್ರೆಯವರು ಕಳಿಸಿಕೊಟ್ಟ ಲಿಖಿತಭಾಷಣವನ್ನು ಶ್ರೀ ಚನ್ನವೀರ ಕಣವಿಯವರು ಸಭೆಗೆ ಓದಿದರು. ಜಾನಪದ ಶೈಲಿಯಲ್ಲಿಯೇ ರಚಿಸಿದ ಕೆಲವು ತ್ರಿಪದಿಗಳಿಂದ ಕೂಡಿದ ಅವರ ಭಾಷಣ ತುಂಬ ವಿಚಾರಪೂರ್ಣವಾಗಿತ್ತು.

ಅಧ್ಯಕ್ಷರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಜನಪದಸಾಹಿತ್ಯ ಹೊರದೇಶಗಳಲ್ಲಿ ಹೇಗೆ ಎಲ್ಲರ ಗಮನ ಸೆಳೆಯುವಂತಾಗಿದೆಯೆಂದು ಹೇಳಿ ಇಂಗ್ಲೆಂಡ್‌ನಲ್ಲಿ

ಲಿಟ್ಲ್ ಬ್ರದರ್ಸ್ ಮಾಡಿದ ಕೆಲಸವನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಹನುಮಂತ ತರೀಕೆರೆಯಿಂದ ಲಂಕೆಗೆ ಹಾರಿದ ನೆಂಬುದನ್ನು ತಿಳಿಸುವ ತ್ರಿಪದಿಯೊಂದನ್ನು ಹಾಡಿ ಹೇಳಿ ಆ ಕಥೆಯನ್ನು ಹಾಸ್ಯಪೂರ್ಣವಾಗಿ ವಿವರಿಸಿದರು. ಜಾನಪದ ಕವಿಯೊಬ್ಬ ತರೀಕೆರೆಯಿಂದ ಹನುಮಂತನನ್ನು ಲಂಕೆಗೆ ಹಾರಿಸಿದ್ದಕ್ಕೆ ಸರಿಯಾಗಿ ಈಗ ತರೀಕೆರೆಯಲ್ಲಿ ಜಾನಪದ ಸಮ್ಮೇಳನ ನಡೆಯುತ್ತಿದೆಯೆಂದು ಹೇಳಿದರು.

ಶ್ರೀ ಗುರುಚನ್ನಬಸಪ್ಪನವರ 'ವಂದನಾರ್ಪಣೆಯೊಂದಿಗೆ ೨ ಗಂಟೆಗೆ ಮೊದಲ ಕಾರ್ಯಕ್ರಮ ಮುಗಿಯಿತು. ಮಧ್ಯಾಹ್ನ ೩ ಗಂಟೆಗೆ ಶ್ರೀ ನಾಗೇಗೌಡರ ಅಧ್ಯಕ್ಷತೆಯಲ್ಲಿ ಪ್ರಥಮ ದಿನದ ವಿಚಾರಗೋಷ್ಠಿ ಜರುಗಿತು.

ಬಹು ವಿಚಾರಪೂರ್ಣವಾಗಿ ಮಾತನಾಡಿದ ಶ್ರೀ ಎಚ್. ಎಲ್. ನಾಗೇಗೌಡರು—ಜನಪದ ಸಾಹಿತ್ಯ ಎಲ್ಲ ಭಾಷಾ ಸಾಹಿತ್ಯಗಳ ಮೂಲಸತ್ವ. ಅದರ ಸಂಗ್ರಹ ಕಾರ್ಯ ಅತಿ ಮುಖ್ಯವಾದುದು. ಈಗ ಕೆಲಮಟ್ಟಿಗೆ ಸಂಗ್ರಹವಾಗಿದ್ದರೂ ಆಗಬೇಕಾದದ್ದು ಅರಮನೆ ತುಂಬು ವಷ್ಟಿದೆ. ಯಂತ್ರಪ್ರಗತಿಯ ಪರಿಣಾಮವಾಗಿ ಇಂದು ಹಳ್ಳಿ ನಾಗರಿಕ ವಾತಾವರಣಕ್ಕೆ ತಿರುಗುತ್ತಿದೆ. ಈ ಪರಿ ವರ್ತನೆಯೊಡನೆಯೇ ಜಾನಪದ ಸಾಹಿತ್ಯ ಕ್ಷಿಪ್ರವಾಗಿ ನಶಿಸು ತ್ತಿದೆ ಎಂದು ತಿಳಿಸಿ ಈ ಸಾಹಿತ್ಯವನ್ನು ಕಂಠದಲ್ಲಿ ಧರಿಸಿ ಉಳಿಸಿರುವ ಕೆಲವು ವ್ಯಕ್ತಿಗಳು ಇನ್ನೂ ಉಳಿದಿದ್ದಾರೆ. ಅವರು ತಿಳಿದ ಸಾಹಿತ್ಯವೂ ಅವರೊಡನೆ ಮಣ್ಣಾಗಲು ಬಿಡದಂತೆ ಬೇಗ ಅದರ ಸಂಗ್ರಹಕಾರ್ಯ ನಡೆಯಬೇಕು. ಶರಾವತಿಗೆ ಅಣೆಕಟ್ಟು ಹಾಕಬೇಕು, ಹಾಕಲಿಲ್ಲ; ಹತ್ತು ವರ್ಷದ ಮೇಲೆ ಹಾಕಬಹುದು. ಆದರೆ ಜಾನಪದ ಸಾಹಿತ್ಯ ಈಗ ಕೈತಪ್ಪಿತೆಂದರೆ ಇನ್ನು ಸಿಗುವುದಿಲ್ಲ. ಸರ್ಕಾರ ಈ ಕಡೆ ಸ್ವಲ್ಪ ಮನಸ್ಸು ಹಾಕಿ ಇದರ ಸಂಗ್ರಹ ಕಾರ್ಯ ವನ್ನು ದೊಡ್ಡ ಪ್ರಮಾಣದಲ್ಲಿ ಜರುಗಿಸಲು ನೆರವಾಗ ಬೇಕು—ಎಂದರು.

ಅನಂತರ ಡಾ|| ಜಿ. ಎಸ್. ಶಿವರುದ್ರಪ್ಪನವರು ಬೋಧ ಪ್ರದವಾದ ಭಾಷಣ ಮಾಡಿ ಹಿಂದೆ ವಿಪುಲವಾಗಿ ಸೃಷ್ಟಿ ಯಾದ ಜಾನಪದ ಸಾಹಿತ್ಯ ಇಂದು ಕಣ್ಮರೆಯಾಗುತ್ತಿರುವು ದರ ಕಾರಣಗಳನ್ನು ವಿಶ್ಲೇಷಿಸಿದರು. ಯಂತ್ರಯುಗದ ಪ್ರಭಾವದಿಂದಾಗಿ ಬೀಸೆಕಲ್ಲು ಮೂಲೆಗೆ ಬಿತ್ತು. ಈ ಬೀಸೆ ಕಲ್ಲು ಒಂದು ಅರ್ಥದಲ್ಲಿ ಜಾನಪದ ಜೀವನದ ಪ್ರತಿಭಾ ಚಕ್ರ. ತಮ್ಮ ಕರ್ಮಚಕ್ರದಲ್ಲಿ ಬದುಕನ್ನು ಬೀಸಿ ಬೀಸಿ ಎಸೆದ ಜನ ಅಪೂರ್ವವಾದ ಸಾಹಿತ್ಯವನ್ನು ಸೃಷ್ಟಿಸಿದರು, ಯಾವಾಗ ಬೀಸೆಕಲ್ಲು ಮೂಲೆಗೆ ಬಿದ್ದು ಅದರ ಮೇಲೆ ಜೇಡ ಬಲೆ ಹೆಣೆಯಿತೋ ಆಗಲೇ ಈ ಸಾಹಿತ್ಯದ ಒಂದು ಕಾಲು ಮುರಿಯಿತು. ಇದಲ್ಲದೆ ಹಬ್ಬ, ಹರಿದಿನ, ವಿವಾಹ —ಇತ್ಯಾದಿ ಧಾರ್ಮಿಕ ಪದ್ಧತಿಗಳು ಈಗ ದಿನೇ ದಿನೇ ಮೊಟಕಾಗುತ್ತಾ ನಡೆದು ಆ ಪ್ರಸಂಗಗಳಲ್ಲಿ ಸೃಷ್ಟಿಗೊಂಡು ಪ್ರಚುರಗೊಳ್ಳುತ್ತಿದ್ದ ಹಾಡುಗಳೂ ಕಣ್ಮರೆಯಾಗುತ್ತಾ ನಡೆ ದುವು. ಹಳ್ಳಿ ಹಳ್ಳಿಗೂ ಸಿನಿಮಾ, ನಾಟಕಗಳ ಹಾಡು ಗಳು ನುಗ್ಗಿ, ಲಾಕ್ಷಣವಾದ ಹಾಡುಗಳು ಸತ್ವಪೂರ್ಣವಾದ ಜಾನಪದ ಗೀತೆಗಳನ್ನು ಮರೆಗೆ ತಳ್ಳಿದುವು. ಸೃಷ್ಟಿಸುವು ದಿರಲಿ, ಅವುಗಳನ್ನು ಪ್ರಶಂಸಿಸಬಲ್ಲ ಸಾಮರ್ಥ್ಯವನ್ನೂ ನಮ್ಮ ಜನ ಕಳೆದುಕೊಂಡಿದ್ದಾರೆ. ಆದರೆ ಈ ಜಾನಪದ ಕಾವ್ಯಧರ್ಮ ನಗರಗಳಲ್ಲಿರುವ ಬೇಂದ್ರೆ, ರಾಜರತ್ನಂ ಈಚೆಗೆ ಕಂಬಾರ ಇಂಥ ಕವಿಗಳ ಮನೋಧರ್ಮವಾಗಿ ಇನ್ನೂ ಉತ್ಕೃಷ್ಟ ಅಭಿವ್ಯಕ್ತಿಯ ಸಾಧನವಾಗುತ್ತಿದೆ ಎಂದರು. 'ಜೋಗದ ಜೋಕು' ತರೀಕೆರೆ ರೈಲು ದುರಂತ ಮತ್ತು ಕಡ್ಲೆಮಕ್ಕಿ ಸ್ಟೇಷನ್ ದುರಂತ ಘಟನೆಗಳನ್ನು ಕುರಿತ ಜಾನಪದ ಗೀತಗಳು ಈಚೆಗೆ ಸೃಷ್ಟಿಯಾದ ಕೆಲವು ಸುಂದರ ಜಾನಪದ ಗೀತಗಳೆಂದು ತಿಳಿಸಿದರು.

ಅನಂತರ ಶ್ರೀ ಕೇಶವಭಟ್ಟರು ತಮ್ಮ ದೀರ್ಘವಾದ ಲಿಖಿತ ಭಾಷಣವನ್ನು ನಿರರ್ಗಳವಾಗಿ ಓದಿ ಜಾನಪದ ಗೀತ ಗಳ ನಿದರ್ಶನಗಳನ್ನಿತ್ತು ಅದರ ಸೌಂದರ್ಯದ ಅನೇಕಾಂಶ ಗಳನ್ನು ತೋರಿಸಿಕೊಟ್ಟರು.

ಮತ್ತೊಬ್ಬ ಉಪನ್ಯಾಸಕರಾದ ಶ್ರೀ ಎಸ್. ಅನಂತ ನಾರಾಯಣ ಅವರು ಆರು ರೀತಿಯ ಲಾವಣಿಗಳನ್ನು ಹಾಡಿ ತೋರಿಸಿದರು. ಲಾವಣಿ ಮೂಲತಃ ಕನ್ನಡ ಪದ ಅಲ್ಲ. ಜನಸಮೂಹ ಎಂಬ ಅರ್ಥ ಕೊಡುವ 'ಲಾವ್‌ಣೀ' ಎಂಬ ಮರಾಠಿ ಪದದಿಂದ ಬಂದಿರಬೇಕು. ಜನಗಳು ಗುಂಪು ಸೇರಿದಲ್ಲಿ ತಾನೇ ತಾನಾಗಿ ಉಕ್ಕು ರಸಗಂಗೆ ಈ ಲಾವಣಿ ಎಂದು ಹೇಳಿ ಲಾವಣಿ ಮತ್ತು ಕಥನ ಕವನ ಗಳ ಸ್ವರೂಪ ಭೇದವನ್ನು ವಿವರಿಸಿ, ಹಾಡಲು ಲಾವಣಿ ಓದಲು ಕಥನ ಕವನ ಎಂದು ತಿಳಿಸಿದರು.

ಈ ಸಮ್ಮೇಳನದ ಕಾರ್ಯಕಲಾಪಗಳಿಗೆ ಬಹುವಾಗಿ ದುಡಿದ ಶ್ರೀ ಜೀಶಂಪ ಕಡೆಯ ಉಪನ್ಯಾಸಕರಾಗಿ ಮಾತ ನಾಡಿ ಜನಪದ ಸಾಹಿತ್ಯಕ್ಕೆ ಪಾಶ್ಚಾತ್ಯ ದೇಶದಲ್ಲಿ ದೊರಕಿದ ಮಹತ್ವವನ್ನೂ ಅದರ ಉದ್ಧಾರಕ್ಕೆ ನಡೆದ ಪ್ರಯತ್ನವನ್ನೂ ತಿಳಿಸಿ ಕನ್ನಡದಲ್ಲಿ ಜಾನಪದ ಸಾಹಿತ್ಯದ ಪ್ರಚಾರಕ್ಕೆ ನಡೆದ ಕಾರ್ಯದ ಚರಿತ್ರೆಯನ್ನು ನಿರೂಪಿಸಿದರು.

ಈ ಗೋಷ್ಠಿ ಸಂಜೆ ೭ಕ್ಕೆ ಕೊನೆಗಂಡಿತು. ರಾತ್ರಿ ೮ರಿಂದ ೧೧-೩೦ರ ವರಗೆ ಅನೇಕ ಸ್ವಾರಸ್ಯಕರವಾದ ಸಾಂಸ್ಕೃತಿಕ

ಕಾರ್ಯಕ್ರಮುಗಳು ನಡೆದುವು. ದಾವಣಗೆರೆಯ ಮಹಂತೇಶ್ ಮತ್ತು ವೃಂದದವರ ಗಾಯನವಂತೂ ಎಲ್ಲರ ಮನ ಸೆಳೆಯಿತು. ಸಭೆಯ ಕೋರಿಕೆಯಂತೆ ಅವರು ಮತ್ತೆ ಮತ್ತೆ ಹಾಡಬೇಕಾಯಿತು.

ಶಬ್ದ ಮಣಿ ದೀಪ

೭ನೆಯ ತಾರೀಖು ಪ್ರಾತಃಕಾಲ ಪ್ರೊ. ಜವರೇಗೌಡರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಎರಡನೆಯ ವಿಚಾರಗೋಷ್ಠಿ ಸೇರಿತು.

ಶ್ರೀ ಚನ್ನವೀರ ಕಣವಿಯವರು 'ಜಾನಪದ ಸಾಹಿತ್ಯದಲ್ಲಿ ಪ್ರತಿಮಾ ವಿಧಾನ' ಎಂಬ ವಿಷಯ ಕುರಿತು ಮಾತನಾಡಿ ಕೆಲವು ಮನೋಹರವಾದ ಜಾನಪದ ಗೀತ ಭಾಗಗಳನ್ನು ವಿಮರ್ಶಿಸಿದರು. ಸುಂದರವಾದ ಶಬ್ದ ಚಿತ್ರಗಳಲ್ಲಿ ಭಾವನೆ ಮೈತಾಳುವುದನ್ನೇ ಪ್ರತಿಮೆ ಎಂದು ವಿವರಿಸಿದ ಅವರು ಉಪಮೆ ರೂಪಕ ಮೊದಲಾದ ಅಲಂಕಾರಗಳಲ್ಲಿ ಕಾಣಿಸಿಕೊಳ್ಳುವ ಪ್ರತಿಮಾ ರೂಪಗಳನ್ನೂ ಕುರಿತು ವಿವೇಚಿಸಿದರು. ಸಾಹಿತ್ಯದಲ್ಲಿ ಪ್ರತಿಮೆಗಳು ಜ್ಯೋತಿದಾನ ಮಾಡುವ ಶಬ್ದಮಣಿ ದೀಪಗಳು ಎಂದು ವಿವರಿಸಿದರು.

ಪ್ರೊ. ಎಸ್. ವಿ. ಪರಮೇಶ್ವರಭಟ್ಟರು ಜಾನಪದ ಛಂದಸ್ಸುಗಳಲ್ಲಿ ಒಂದಾದ ಏಳೆಯನ್ನು ಕುರಿತು ರಂಜಕವಾಗಿ ಮಾತನಾಡಿದರು. ತ್ರಿಪದಿಯ ಮೂಲರೂಪವೇ ಏಳೆ. ಎರಡು ಸಾಲಿನ ಛಂದಸ್ಸಾದ ಏಳೆ ಕ್ರಮೇಣ ಮೂರು ಸಾಲುಗಳ ತ್ರಿಪದಿಯಾಗಿ ಪರಿಣಮಿಸಿತು. ಲಾವಣ್ಯವತಿಯಾದ ಮಗಳ ವೈಭವದ ಎದುರು ಮುತ್ತೈದೆಯಾದ ತಾಯಿ ಮಂಕಾಗಿ ತೋರುವಂತೆ ಸತ್ವಪೂರ್ಣ ತ್ರಿಪದಿಯ ಜನಪ್ರಿಯತೆ ಹೆಚ್ಚಾದಂತೆ ಏಳೆಯ ಬಳಕೆ ಕಡಿಮೆಯಾಯಿತು. ನಾವು ಬಳಸುವ ಎಷ್ಟೋ ಗಾದೆಗಳೂ ಸಹ ಲಯಬದ್ಧವಾಗಿದ್ದು ಏಕಪಾದದ ಏಳೆಯೆಂಬುದನ್ನು ನಿದರ್ಶನ ಸಹಿತವಾಗಿ ತೋರಿಸಿಕೊಟ್ಟರು.

ಅನಂತರ ಡಾ|| ಹಾ.ಮಾ. ನಾಯಕರು ಭಾಷಾಶಾಸ್ತ್ರದ ದೃಷ್ಟಿಯಿಂದ ಜಾನಪದ ಸಾಹಿತ್ಯದ ಉಪಯೋಗ ಕುರಿತು ಮಾತನಾಡಿದರು. ಜಾನಪದ ಎಂದರೆ ಕೇವಲ ಗ್ರಾಮ ಸಾಹಿತ್ಯವೆಂದು ಮಾತ್ರ ಅರ್ಥವಾಗದೆ ಗ್ರಾಮಜೀವನದ ಸಮಸ್ತಾಂಶಗಳನ್ನೂ ಅದು ಒಳಗೊಳ್ಳುತ್ತದೆ. ಜಾನಪದ ಮತ್ತು ಭಾಷಾಶಾಸ್ತ್ರಗಳೆರಡೂ ಸಾಂಸ್ಕೃತಿಕ ಮಾನವ ಶಾಸ್ತ್ರದ ಎರಡು ಶಾಖೆಗಳು. ಇವೆರಡಕ್ಕೂ ಇರುವ ಸಂಬಂಧವನ್ನು ಮೊದಲು ತಿಳಿಸಿಕೊಟ್ಟವರು ಅಮೆರಿಕದ ಖ್ಯಾತ ಭಾಷಾಶಾಸ್ತ್ರಜ್ಞರಾದ ಬ್ಲೂಮ್‌ಫೀಲ್ಡ್, ಸಪೀರ್ ಮತ್ತು ಬೊಯಾಸ್ ಮೊದಲಾದವರು. ಆದಿವಾಸಿಗಳ ಆಚಾರ ವ್ಯವಹಾರಗಳಿಗೂ ಅವರ ಆಡುಮಾತಿಗೂ ಇರುವ ನಿಕಟಸಂಬಂಧವನ್ನು ಅವರು ಗುರುತಿಸಿದರೆಂದು ಹೇಳಿದರು.

ಭಾಷಾಶಾಸ್ತ್ರಜ್ಞರನ್ನು ಕಾಡುವ ಎಷ್ಟೋ ಕ್ಲಿಷ್ಟ ಸಮಸ್ಯೆಗಳಿಗೆ ಜಾನಪದ ಸಾಹಿತ್ಯ ಉತ್ತರ ಒದಗಿಸಿದೆ ಎಂದು ನಿದರ್ಶನ ಸಹಿತವಾಗಿ ಆಕರ್ಷಕವಾಗಿ ಅವರು ಭಾಷಾಶಾಸ್ತ್ರದ ಪ್ರಗತಿಗೆ ಜಾನಪದ ಜೀವನದ ತಿಳಿವಳಿಕೆ ಅಗತ್ಯ ಎಂದು ಒತ್ತಿ ಹೇಳಿದರು.

ಆಚಾರ-ಅರ್ಥ

ಶ್ರೀ ಸುಜನಾ ಜಾನಪದ ಜೀವನದ ಆಚಾರ ವ್ಯವಹಾರಗಳ ಹಿಂದೆ ಅಡಗಿರುವ ಆರ್ಥದ ಆವಿಷ್ಕಾರ ಇನ್ನೂ ಆಗಬೇಕಾಗಿದೆಯೆಂದು ತಿಳಿಸಿ ಅರ್ಥ ತಿಳಿಯದೆ, ಮೂಢನಂಬಿಕೆಗಳೆಂದು ನಾವು ಹಳಿಯುತ್ತಿರುವ ಎಷ್ಟೋ ಸಂಪ್ರದಾಯ ನಂಬಿಕೆಗಳಿಗೆ ಅರ್ಥಪೂರ್ಣವಾದ ವಿಚಾರ ಬುನಾದಿಯಾಗಿದೆಯೆಂಬುದನ್ನು ಸ್ಪಷ್ಟಪಡಿಸಿದರು. ಕಡೆಯಲ್ಲಿ ಮಾತನಾಡಿದ ಶ್ರೀ ಮತಿಘಟ್ಟ ಕೃಷ್ಣಮೂರ್ತಿಗಳು ಕೆಲವು ಜಾನಪದ ಕಥೆಗಳನ್ನು ಹೇಳಿ ಅವುಗಳ ಮೂಲಕ ಹೇಗೆ ಉದಾತ ನೀತಿ ತತ್ವಗಳ ಪ್ರಚಾರ ನಡೆದಿದೆ ಎಂಬುದನ್ನು ಮನಗಾಣಿಸಿದರು.

ಈ ದ್ವಿತೀಯ ವಿಚಾರಗೋಷ್ಠಿಯ ಅಧ್ಯಕ್ಷ ಭಾಷಣ ಮಾಡಿದ ಪ್ರೊ. ಜವರೇಗೌಡರು ಜಾನಪದ ಜೀವನದ ನಂಬಿಕೆಗಳು, ಸಂಪ್ರದಾಯಗಳು, ಒಗಟುಗಳು, ಗಾದೆಗಳು, ವೈದ್ಯ ವಿಚಾರಗಳನ್ನು ಪ್ರಸ್ತಾಪಿಸಿ ಹಳೆಯವೆಂಬ ಕಾರಣಕ್ಕಾಗಿ ನಾವು ಇವುಗಳನ್ನು ಕಂದಾಚಾರವೆಂದು ಜರಿಯುವುದು ಸಲ್ಲ. ವೈಜ್ಞಾನಿಕ ಬುದ್ಧಿಯ ಜನಗಳೆಂದು ಹಲವರು ಮೆಚ್ಚಿಕೊಳ್ಳುವ ಪಾಶ್ಚಾತ್ಯರಲ್ಲಿಯೂ ಇಂಥ 'ಕಂದಾಚಾರ'ಗಳು ಇವೆಯೆಂದು ಹೇಳಿ ಅದಕ್ಕೆ ಹೇರಳವಾಗಿ ಸ್ವಾರಸ್ಯಕರವಾದ ನಿದರ್ಶನಗಳನ್ನಿತ್ತರು. ಜಾನಪದ ಸಾಹಿತ್ಯದಲ್ಲಿ ಅಡಗಿರುವ ಅಪರೂಪ ಶಬ್ದಭಂಡಾರ ಯಾರನ್ನೂ ದಂಗುಬಡಿಸುತ್ತದೆ. ಕೇವಲ ವೃತ್ತಿಸಂಬಂಧವಾದ ಪದಗಳನ್ನು ಸಂಗ್ರಹಿಸಿದರೂ ಸಾಕು ಕಿಟೆಲ್ ನಿಘಂಟುವಿನ ಗಾತ್ರಕ್ಕೂ ಮೀರಿ ಬೆಳೆಯುತ್ತದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಸಾಹಿತ್ಯವನ್ನು ವಿಶೇಷ ಅಧ್ಯಯನದ ವಿಷಯವಾಗಿ ಎಂ. ಎ. ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಶಾಲಾ ಕಾಲೇಜು ಅಧ್ಯಾಪಕರು ಬೇಸಿಗೆಯ ರಜದಲ್ಲಿ ಸುತ್ತಮುತ್ತಲ ಹಳ್ಳಿ

ಗಳಲ್ಲಿ ಈ ಸಾಹಿತ್ಯದ ಸಂಗ್ರಹಕಾರ್ಯ ಮಾಡಿದರೂ ಎಷ್ಟೋ ಕೆಲಸವಾಗುತ್ತದೆ ಎಂದು ತಿಳಿಸಿದ ಅವರು ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಿರುವ ಜಾನಪದ ವಸ್ತುಸಂಗ್ರಹಾಲಯಕ್ಕೆ ಗ್ರಾಮ ಕಲೆಯನ್ನು ಪ್ರತಿನಿಧಿಸುವ ಯಾವ ವಸ್ತುಗಳಿದ್ದರೂ ಕಳಿಸಿಕೊಡಬೇಕೆಂದು ಸಭಿಕರಲ್ಲಿ ವಿನಂತಿ ಮಾಡಿಕೊಂಡರು.

ಜನಪದ ಗಾನಗೋಷ್ಠಿ

ವಿಚಾರಗೋಷ್ಠಿ ಮುಗಿದಮೇಲೆ ಜನಪದ ಗಾನಗೋಷ್ಠಿ ಆರಂಭವಾಯಿತು. ನ್ಯಾಯಾಧೀಶ ಶ್ರೀ ಕೋ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜಾನಪದ ಕಲಾವಿದರಿಂದ ತುಂಬಿದ್ದ ಆ ವೇದಿಕೆಯನ್ನು ಅನಧಿಕೃತ ಶಾಸಕರ ಶಾಸನ ಸಭೆಯೆಂದು ಕರೆದು ಜನಮನವನ್ನು ನಿಜವಾಗಿ ಆಳುವ, ಅಲ್ಲಿ ನೀತಿಪ್ರಜ್ಞೆಯನ್ನು ಮೂಡಿಸುವ ಶಾಸಕರು ಕಲಾವಿದರು ಎಂದು ಬೋಧಪ್ರದವಾದ ಮಾತುಗಳನ್ನಾಡಿದರು. ಭಾಗವಹಿಸಿದ ಕಲಾವಿದರಲ್ಲಿ ಎಪ್ಪತ್ತೈದು ವರ್ಷಕ್ಕೂ ಮೀರಿದ ಸೋಬಾನೆ ಚಿಕ್ಕಮ್ಮನಂಥ ವೃದ್ಧಮಹಿಳೆ ಕೂಡ ಇದ್ದರು.

ಮಧ್ಯಾಹ್ನ ಮೂರೂವರೆ ಗಂಟೆಗೆ ಸಭೆಯಲ್ಲಿ ಕೆಲವು ಮುಖ್ಯ ಸೂಚನೆಗಳನ್ನು ಮಂಡಿಸಿ, ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು. 'ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನಿಡಬೇಕು' 'ಜಾನಪದ ಸಾಹಿತ್ಯ ಕೃತಿಗಳನ್ನು ಸರ್ಕಾರ ಕೊಳ್ಳಬೇಕು', 'ಜಾನಪದ ಸಾಹಿತ್ಯಪರಿಷತ್ತಿನ ಸ್ಥಾಪನೆ' ಮತ್ತು 'ಜಾನಪದ ಕಲಾಮಂದಿರದ ನಿರ್ಮಾಣ'—ಇತ್ಯಾದಿ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಸಾಯಂಕಾಲ ಆರೂವರೆ ಗಂಟೆಗೆ ಸಮ್ಮೇಳನದ ಮುಕ್ತಾಯ ಸಮಾರಂಭ ಆರಂಭವಾಯಿತು. ಆ ಸಮಾರಂಭದಲ್ಲಿಯೇ ಜಾನಪದ ಕಲಾವಿದರಿಗೆ ಮತ್ತು ಕ್ಷೇತ್ರ ಕಾರ್ಯಕರ್ತರಿಗೆ ಸನ್ಮಾನ ಏರ್ಪಡಿಸಲಾಗಿತ್ತು. ಅದೇ ಸಂದರ್ಭದಲ್ಲಿ ತರೀಕೆರೆಯ ಶ್ರೀ ಎಚ್. ಟಿ. ವೆಂಕಟರಾವ್ ಅವರು ಜನಪದ ರಂಗಮಂದಿರದ ನಿರ್ಮಾಣಕ್ಕೆ ಸಹಾಯವಾಗಿ ೧೧೦೦೧ ರೂ.ಗಳನ್ನು ವಾಗ್ದಾನ ಮಾಡಿದರು. ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ಇನ್ನೂ ಅನೇಕ ದಾನಿಗಳು ರಂಗಮಂದಿರ ನಿರ್ಮಾಣಕ್ಕೆ ಸಹಾಯ ನೀಡಲು ಮುಂದೆ ಬಂದರು.

ಗಮಕ ಕಲಾನಿಧಿ ಜೋಳದ ರಾಶಿ ದೊಡ್ಡನಗೌಡರು ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರ ಮತ್ತು ಹೊಲತಿಯರ ಸಂಭಾಷಣೆಯ ಭಾಗವನ್ನು ಮಧ್ಯೆ ಮಧ್ಯೆ ವಿವರಣೆ ನೀಡುತ್ತಾ ಸೊಗಸಾಗಿ ವಾಚಿಸಿದರು.

ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳು ಮುಕ್ತಾಯ ಭಾಷಣ ಮಾಡುತ್ತಾ ತರೀಕೆರೆಯ ಜನರ ಆದರ ಸೌಜನ್ಯಗಳನ್ನು ಕೊಂಡಾಡಿದರು. ಪಂಡಿತ ಕವಿಗಳ ಮಾರ್ಗ ಕಾವ್ಯಗಳಲ್ಲಿ ಇಲ್ಲದ ವಿಶಿಷ್ಟತರದ ಸೊಗಸು ಮತ್ತು ನಾಡಿನ ಸಂಸ್ಕೃತಿ ಜಾನಪದ ಸಾಹಿತ್ಯದಲ್ಲಿದೆ ಎಂದು ವಿವರಿಸಿದರು.

ಸಮ್ಮೇಳನಾಧ್ಯಕ್ಷರಾಗಿದ್ದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಜಾನಪದ ಸಮ್ಮೇಳನವೊಂದನ್ನು ಏರ್ಪಡಿಸಿ ಅಷ್ಟು ಅದ್ಭುತ ರೀತಿಯಲ್ಲಿ ಅದನ್ನು ನಡೆಸಿದ್ದಕ್ಕೆ ಮತ್ತು ತಮಗೆ ತೋರಿದ ಆದರ ಸೌಜನ್ಯಗಳಿಗೆ ತರೀಕೆರೆಯ ಜನರನ್ನು ವಂದಿಸಿದರು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಕಲಾಪ್ರದರ್ಶನ

ಸಮ್ಮೇಳನ ಮಂಟಪದ ಪಕ್ಕದ ಕಟ್ಟಡವೊಂದರಲ್ಲಿ (ಮುದ್ರಿತ ಮತ್ತು ಅಮುದ್ರಿತ) ಜಾನಪದ ಸಾಹಿತ್ಯ ಕೃತಿಗಳನ್ನೂ ರಾಜ್ಯದ ಪ್ರಸಿದ್ಧ ಚಿತ್ರಕಲಾವಿದರು ರಚಿಸಿದ ಸುಂದರ ಚಿತ್ರಗಳನ್ನೂ ಪ್ರದರ್ಶನಕ್ಕೆ ಇಡಲಾಗಿತ್ತು. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ, ಕರ್ಣಾಟಕ ವಿಶ್ವವಿದ್ಯಾನಿಲಯ, ವಯಸ್ಕರ ಶಿಕ್ಷಣ ಸಮಿತಿ ಮತ್ತು ರಾಜ್ಯದ ವಾರ್ತಾ ಇಲಾಖೆಯವರು ತಮ್ಮ ಪ್ರಕಟನೆಗಳನ್ನೂ ಇತರ ಉಪಯುಕ್ತ ಪುಸ್ತಕಗಳನ್ನೂ ಪ್ರದರ್ಶನಕ್ಕೆ ಇಟ್ಟಿದ್ದರು. ಎರಡು ದಿನಗಳೂ ಸಹಸ್ರಾರು ಜನ ಈ ಮಳಿಗೆಗಳಿಗೆ ಭೇಟಿಯಿತ್ತು ಅವುಗಳನ್ನು ಕುತೂಹಲದಿಂದ ವೀಕ್ಷಿಸಿದ್ದಲ್ಲದೆ ಅವರಲ್ಲಿ ಅನೇಕರು ಉಪಯುಕ್ತ ಗ್ರಂಥಗಳನ್ನು ಕಂಡರು.

ತರೀಕೆರೆಯಲ್ಲಿ ನಡೆದ ಈ ಜಾನಪದ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಚರಿತ್ರೆಯಲ್ಲೇ ಮೊದಲನೆಯದಾಗಿದ್ದು ಬಹು ವೈಭವಪೂರ್ಣವಾಗಿ ನಡೆಯಿತು. ಜಾನಪದ ಸಾಹಿತ್ಯ ಕುರಿತು ಮೊದಲಬಾರಿಗೆ ಸಹಸ್ರ ಪುಟಗಳ ಗ್ರಂಥವೊಂದು ಹೊರಬಂತು. ಈ ಸಮ್ಮೇಳನವೇ ಆದಿಯಾಗಿ, ಇದೇ ಕಾರಣವಾಗಿ ಮುಂದೆ ಈ ಕ್ಷೇತ್ರದಲ್ಲಿ ನಡೆಯಬಹುದಾದ ಸಾಹಿತ್ಯ ಚಟುವಟಿಕೆಗಳನ್ನು ಕಲ್ಪಿಸಿಕೊಂಡಾಗ ತರೀಕೆರೆಯ ಜನತೆ ಮತ್ತು ಕಲಾಪ್ರಿಯರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಎಷ್ಟು ಮಹತ್ವದ್ದೆಂಬುದು ಅರಿವಾದೀತು.

ವಿಮರ್ಶನರಂಗ

ವಿನೋದ: ೧೬ನೇ ವಾರ್ಷಿಕ ಸಂಚಿಕೆ—ಪುಟಗಳು: ೨೮೧, ಬೆಲೆ: ರೂ. ೧-೭೫.

ಕನ್ನಡದಲ್ಲಿ ವಿನೋದ, ಹಾಸ್ಯ ಬರಹಗಳಿಗೆ ಮೀಸಲಾಗಿರುವ ಪತ್ರಿಕೆಗಳು ಅತಿವಿರಳ. ಅಂತಹ ಒಂದು ಅಪೂರ್ವ ಪತ್ರಿಕೆ ಕೊರವಂಜಿಯೂ ಕನ್ನಡಿಗರ ಅನಾದರಕ್ಕೆ ತುತ್ತಾಗಿ ನಿಂತುಹೋಯಿತು. ಕಳೆದ ಹದಿನೈದು ವರ್ಷಗಳಿಂದಲೂ 'ವಿನೋದ'ದಂತಹ ಉತ್ತಮ ದರ್ಜೆಯ ಹಾಸ್ಯರಸಪ್ರಧಾನವಾದ ಮಾಸಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಕೀರ್ತಿ ದೇಶಹಳ್ಳಿ ಜಿ. ನಾರಾಯಣ ಅವರದು. ಕಳೆದ ವರ್ಷ ಪತ್ರಿಕೆಯ ಹದಿನೈದನೆಯ ಹುಟ್ಟುಹಬ್ಬವನ್ನು ಅದು ವಿಜೃಂಭಣೆಯಿಂದ ಆಚರಿಸಿತು. ಈ ಬಾರಿ ಸ್ವಾತಂತ್ರ್ಯೋತ್ಸವ ಹಾಗೂ ಹದಿನಾರನೆಯ ವಾರ್ಷಿಕ ಸಂಚಿಕೆಯಾಗಿ ಹೊರಬಿದ್ದಿರುವ ಈ ಸಂಚಿಕೆಯಲ್ಲಿ ಕನ್ನಡದ ಎಲ್ಲ ಹಾಸ್ಯ ಬರಹಗಾರರು ತಮ್ಮ ರಸದೌತಣವನ್ನು ನೀಡಿದ್ದಾರೆ. ಇವರಲ್ಲಿ ರಾಶಿ, ಗೊರೂರು, ದಾಶರಥಿ ದೀಕ್ಷಿತ್, ಮಿತ್ರ ಮುಂತಾದವರನ್ನು ನೋಡಬಹುದು. ಲೇಖನಗಳ ಸೊಗಸನ್ನು ವ್ಯಂಗ್ಯಚಿತ್ರಗಳು ಹೆಚ್ಚಿಸಿವೆ. ಇದು ಸಂಗ್ರಹಯೋಗ್ಯ ಸಂಚಿಕೆ ಎನ್ನುವುದರಲ್ಲಿ ಸಂಶಯವಿಲ್ಲ.

* * *

ಪ್ರದೀಪ: ಸಂ. ವಿನೀತ ರಾಮಚಂದ್ರರಾವ್, ಪುಟಗಳು: ೬೦, ಬೆಲೆ: ರೂ. ೧.

"ಪ್ರಜ್ವಲಿತೋ ಜ್ಞಾನಮಯ ಪ್ರದೀಪಃ" ಎಂಬ ಹಿರಿಯ ಆದರ್ಶವನ್ನು ಹೊತ್ತು ಧಾರವಾಡದ ವಿ. ರಾಮಚಂದ್ರರಾಯರು ಪ್ರದೀಪದ ಈ ವಿಶೇಷ ಸಂಚಿಕೆಯನ್ನು ಹೊರಡಿಸಿದ್ದಾರೆ. ಭಗವಾನ್ ಸತ್ಯಸಾಯಿ ಅವರ ಆಶೀರ್ವಾದ, ರಾಜ್ಯದ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಸಂದೇಶ ಹೊತ್ತು ಬಂದಿದೆ. ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ಸತ್ಯಸಾಯಿ ಅವರ ಸೂಕ್ತಿಗಳೂ, ಶ್ರೀ ಗುರುನಾಥ ಜೋಶಿ, ಸಿಂಪಿ, ಪ್ರೊ. ವೆಂಕಪ್ಪಶಾಸ್ತ್ರಿ, ಪ್ರಹ್ಲಾದ ನರೇಗಲ್ಲ, ಶ್ರೀಮತಿ ಪ್ರಭುದಾಸಿ ನಿವೇದಿತಾ ಅವರ ಉತ್ತಮ ಲೇಖನಗಳೂ ಪದ್ಮಶ್ರೀ ವಿ. ಕೆ. ಗೋಕಾಕ ಮತ್ತು ದಿವಂಗತ ಕೆ. ಗೋಪಾಲಕೃಷ್ಣರಾಯರ ಕವನಗಳೂ ಪ್ರದೀಪದ ಕಾಂತಿಯನ್ನು ವೃದ್ಧಿಸಲು ನೆರವಾಗಿವೆ. ಆಧ್ಯಾತ್ಮ ವಿಚಾರಗಳಲ್ಲಿ ಆಸಕ್ತರಾದವರಿಗೆ ಪ್ರದೀಪ ನಿಜಕ್ಕೂ ದಾರಿದೀಪವಾಗಿದೆ.

* * *

ಪರಿಮಳ: ಪ್ರ. ಶ್ರೀ ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ನಂಜನಗೂಡು, ಪುಟಗಳು ೧೦೮, ಬೆಲೆ — ?

ಶ್ರೀ ಮಂತ್ರಾಲಯದ ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳಲ್ಲಿ ಪರಿಮಳವು ಅರ್ಪಿಸಿರುವ ಭಕ್ತಿ ಕುಸುಮಾಂಜಲಿ ಇದು. ಇದರಲ್ಲಿ ಶ್ರೀ ಮಠಾಧೀಶರಿಂದ ಸಂದೇಶ, ಪಂಡರೀನಾಥಾಚಾರ್ಯ ಗಲಗಲಿ, ವಿದ್ವಾನ್ ಆರ್. ಜಯರಾಮಾಚಾರ್ಯ, ರಿತ್ತಿ ವೆಂಕಣ್ಣಾಚಾರ್ಯ, ಹಾ. ರಾ. ಪುರೋಹಿತ, ಕಾಶೀ ಶ್ರೀಪಾದಾಚಾರ್ಯ, ಸುಬೋಧ ರಾಮರಾವ್ ಮೊದಲಾದ ವಿದ್ವಾಂಸರು ಬರೆದಿರುವ ಮಾಧ್ವ ಸಂಪ್ರದಾಯದ ಧಾರ್ಮಿಕ ಸಾಹಿತ್ಯದ ರಸದೌತಣವಿದೆ. ಡಾ. ಪಂಚಮುಖಿ, ಬಿ. ಎನ್. ಕೇಶವ ಅವರು ಬರೆದಿರುವ ಇಂಗ್ಲಿಷ್ ಲೇಖನಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಕೊನೆಯಲ್ಲಿ ಕೊಟ್ಟಿರುವ ಪರಿಮಳ ಪಂಚಾಂಗ ಓದುಗರಿಗೆ ಪ್ರಯೋಜನಕಾರಿಯಾಗಿದೆ. ಮಾಧ್ವ ಗುರುಪೀಠಗಳ ಶ್ರೀಪಾದಂಗಳ ಅನೇಕ ಭಾವಚಿತ್ರಗಳು ಆಕರ್ಷಕವಾಗಿವೆ.

* * *

ದರ್ಶನ: ಪಶ್ಚಿಮ ಬಂಗಾಳ ದುರ್ಗಾಪುರದ ದ ಕರ್ಣಾಟಕ ಸಂಘದ ಸ್ಮರಣ ಸಂಚಿಕೆ, ೧೯೬೬, ಪುಟಗಳು ೧೩೬, ಬೆಲೆ ?.

ದರ್ಶನದಲ್ಲಿ ಕರ್ಣಾಟಕ ಸಂಘದ ಸದಸ್ಯರು ಕನ್ನಡ, ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳಲ್ಲಿ ಬರೆದ ಅನೇಕ ಲೇಖನಗಳೂ, ಡಾ. ಮಾಸ್ತಿ, ಡಾ. ಶಿವರಾಂ, ಶ್ರೀ ಜಿ. ಪಿ. ರಾಜರತ್ನಂ, ಶ್ರೀ ಎಂ. ವಿ. ಸೀ. ಮೊದಲಾದ ಕನ್ನಡ ನಾಡಿನ ಹಿರಿಯ ಲೇಖಕರ ಲೇಖನಗಳೂ ಒಂದೆಡೆ ಸೇರಿವೆ. ಹೊರನಾಡಿನ ಕನ್ನಡಿಗರ ಈ ಸಾಹಿತ್ಯಸೇವೆ ಮೆಚ್ಚುವಂತಹದು. ಸಂಚಿಕೆಯ ಮುದ್ರಣ, ಚಿತ್ರಗಳು ಸುಂದರವಾಗಿವೆ. ರಾಷ್ಟ್ರನಾಯಕರಲ್ಲಿ ಹಲವರ ಸಂದೇಶಗಳನ್ನು ಹೊತ್ತು ಇದು ಹೊರಬಿದ್ದಿದೆ.

* * *

ಖಾದಿ ಮತ್ತು ಗ್ರಾಮೋದ್ಯೋಗ: ಮೈಸೂರು ರಾಜ್ಯ ಖಾದೀ ಗ್ರಾಮೋದ್ಯೋಗ ಮಂಡಲಿ, ಬೆಂಗಳೂರು-೨, ಇದರ ಏಳನೇ ವಾರ್ಷಿಕ ಸಂಚಿಕೆ, ಪುಟಗಳು ೬೪, ಬೆಲೆ ?.

ಗ್ರಾಮಾಭ್ಯುದಯ ಭಾರತೀಯ ಜನಜೀವನದ ಜೀವಾಳ. ಗ್ರಾಮೀಣ ಜನತೆಗೆ ಕಲ್ಯಾಣವಾದಂದೇ ಭಾರತದ ಕಲ್ಯಾಣ. ಇದನ್ನು ಅರಿತು ಗಾಂಧೀಜಿ ಅವರು ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು, ತಮ್ಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ. ಈ ಸಂಚಿಕೆಯಲ್ಲಿ ಶ್ರೀಗಳಾದ ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ರಾಷ್ಟ್ರರಕ್ಷಣೆಯಲ್ಲಿ ಗ್ರಾಮಗಳ ಪಾತ್ರ ಹಾಗೂ ಗಾಂಧೀಜೀ ಅವರನ್ನು ಕುರಿತು ಸಂಪತ್ ಕುಮಾರನ್ ಅವರು ಬರೆದಿರುವ ಲೇಖನಗಳು ಸ್ವಾರಸ್ಯವಾಗಿವೆ. ಜೇನಿನ ಬೇಸಾಯ, ಸ್ವಾವಲಂಬನೆ, ನಾರಿನ ಉಪಯೋಗಗಳು, ಇಟ್ಟಿಗೆ ತಯಾರಿಕೆ- ಇವೇ ಮೊದಲಾದ ಗ್ರಾಮೋದ್ಯೋಗಗಳನ್ನು ಕುರಿತ ಲೇಖನಗಳೂ ಧೇಬರರ ವೈಚಾರಿಕ ಲೇಖನವೂ ಚೆನ್ನಾಗಿವೆ.

* * *

ನನ್ನ ಆತ್ಮೀಯರಿಗೆ: ಲೇಖಕರು: ಜಿ. ರಾಘವೇಂದ್ರರಾವ್, ಪ್ರಕಾಶಕರು: ಶ್ರೀ ಮಾರಿಕಾಂಬಾ ಪ್ರಕಾಶನ ವಿಭಾಗ, ಶಿರಸಿ (ಉ. ಕನ್ನಡ), ಪುಟಗಳು: ೧೩೦, ಬೆಲೆ: ರೂ. ೧-೫೦.

ಶ್ರೀ ಜಿ. ರಾಘವೇಂದ್ರರಾಯರು ಬಳ್ಳಾರಿಯಲ್ಲಿ ಹುಟ್ಟಿ ಕೋಲಾರ ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸಮಾಡಿ ಕಡೆಗೆ ಉತ್ತರ ಕರ್ನಾಟಕದ ಶಿರಸಿಯ ಶ್ರೀ ಮಾರಿಕಾಂಬಾ ಮಾಧ್ಯಮಿಕ-ಪ್ರೌಢಶಾಲೆಗಳಲ್ಲಿ ಕೆಲಸಮಾಡಿ, ಮುಖ್ಯೋಪಾಧ್ಯಾಪಕರಾಗಿ ನಿವೃತ್ತರಾದವರು. ಇವರು ೧೯೬೬ರಲ್ಲಿ ತೀರಿಕೊಂಡರು. ಎಲ್ಲರಿಂದಲೂ 'ನಿಷ್ಕಲ್ಮಷ ಹೃದಯದವರೆಂದು' ಸಜ್ಜನರೆಂದು ಹೊಗಳಿಸಿಕೊಂಡ ಶ್ರೀಯುತರು ತಾವು ಅಧ್ಯಾಪಕ ವೃತ್ತಿಯಲ್ಲಿದ್ದಾಗ ತಮ್ಮ ಆಧ್ಯಾತ್ಮಿಕ ತೃಷೆಯನ್ನು ಹಿಂಗಿಸಿಕೊಳ್ಳಲು, ಸಾಧನೆಯಲ್ಲಿ ಮುಂದುವರೆಯಲು ತಾವು ಓದಿದ ಗ್ರಂಥಗಳ ಸಾರವನ್ನೂ, ಸೂಕ್ತಿಗಳನ್ನೂ ಒಂದೆಡೆ ಬರೆದಿಡುತ್ತಿದ್ದರು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೃತಿರೂಪದಲ್ಲಿ ತಂದು ಆತ್ಮೀಯರಿಗೆ ಅರ್ಪಿಸಲಾಗಿದೆ. ರಾಘವೇಂದ್ರರಾಯರು ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ ಸಾಹಿತ್ಯಗಳಿಂದಲೂ ತಮ್ಮ ಜೀವನಕ್ಕೆ ಬೆಳಕು ನೀಡಿದ ರಾಮಾಯಣ, ಭಾರತ, ಭಾಗವತ, ಧರ್ಮಪದ, ಗೀತೆ, ಉಪನಿಷತ್ತುಗಳಿಂದಲೂ, ಜೈನ, ಸಿಖ್, ಮುಸ್ಲಿಮರ ಧಾರ್ಮಿಕ ಗ್ರಂಥಗಳಿಂದಲೂ, ಹರಿದಾಸ, ಶಿವಶರಣರ ಕೃತಿಗಳಿಂದಲೂ ಅಮೂಲ್ಯವಾದ ವಚನಾಮೃತಗಳನ್ನು ಓದುಗರ ಸಲುವಾಗಿ ಇಲ್ಲಿ ಕೊಟ್ಟಿದ್ದಾರೆ. ಈ ಕೃತಿಯನ್ನು ಓದಿದ ಮೇಲೆ ದಿವಂಗತರ ಬಗ್ಗೆ ಯಾರಿಗಾದರೂ ಆತ್ಮೀಯತೆ, ಗೌರವಗಳು ಮೂಡದೆ ಇರುವುದಿಲ್ಲ.

* * *

ಲೋಕದೇವ ನೆಹರು: ಮೂಲ: ರಾಮಧಾರಿಸಿಂಹ 'ದಿನಕರ್' ಅನುವಾದಕರು: ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ, ಪ್ರಕಾಶಕರು: ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರ, ಮೈಸೂರು-೪, ಪುಟಗಳು ೨೧೨, ಬೆಲೆ ರೂ. ೪-೫೦.

ನೆಹರು ಅವರನ್ನು ಕುರಿತು ಕನ್ನಡಕ್ಕೆ ಬಂದಿರುವ ಗ್ರಂಥಗಳಲ್ಲೆಲ್ಲಾ ಇದು ವಿಶಿಷ್ಟವಾದ ಕೃತಿ. ಅವರನ್ನು ಲೋಕದೇವ ಎಂದು ಕರೆದವರು ವಿನೋಬಾಜಿ ಅವರು. ಅವರನ್ನು ತೀರ ಹತ್ತಿರದಿಂದ ನೋಡಿ, ಅವರನ್ನು ಕುರಿತು ನೆನಹುಗಳನ್ನು ಶ್ರೀ ದಿನಕರರು ಹಿಂದೀ ಭಾಷೆಯಲ್ಲಿ ಬರೆದಿಟ್ಟಿದ್ದಾರೆ. ಅದರ ಅನುವಾದವೇ ಈ ಕೃತಿ. ಇದರಲ್ಲಿ ಎರಡು ಭಾಗಗಳಿವೆ: ನೆನಹುಗಳು ಮತ್ತು ಗಾಂಧಿ-ಜವಹರ್. ಇವುಗಳಲ್ಲಿ ಮೊದಲನೆಯ ಭಾಗವು ನೆಹರು ಅವರನ್ನು ಕುರಿತ ಲೇಖಕರ ಮಧುರ ಸ್ಮೃತಿಗಳು, ಎರಡನೆಯ ಭಾಗದಲ್ಲಿ ಅವರ ಜೀವನದ ವಿಹಂಗಮ ನೋಟವೂ ಬಂದಿವೆ. ದಿನಕರರು ಪಾರ್ಲಿಮೆಂಟಿನ ಸದಸ್ಯರಾಗಿ, ಮೇಲಾಗಿ ಶ್ರೇಷ್ಠಕವಿಯಾಗಿ ನೆಹರೂರವರ ಅಭಿಮಾನ ಗೌರವಗಳಿಗೆ ಪಾತ್ರರಾದವರು. ಅವರನ್ನು ಸ್ವಯಂ ನೆಹರೂರವರೇ 'ಮಹಾಕವಿ' ಎಂದು ಕರೆದದ್ದುಂಟು. ಅವರು ಹಲವಾರು ಭಾರತೀಯ ಸಂಸ್ಕೃತಿ ನಿಯೋಗಗಳ ಸದಸ್ಯರಾಗಿ ವಿದೇಶಯಾತ್ರೆ ಮಾಡಿದ್ದಾರೆ. ಇಂದಿರಾಜಿ ಅವರಿಗೆ ಹಿಂದಿ ಕಲಿಸಿಕೊಟ್ಟ ಮನೆಯ ಮೇಷ್ಟ್ರು ಆಗಿದ್ದರು ಅವರು. ಹೀಗೆ ನೆಹರು ಕುಟುಂಬದ ನಿಕಟಪರಿಚಯ ಪಡೆದಿದ್ದ ದಿನಕರರು ತಮಗೆ ಸಹಜವಾದ ಕಾವ್ಯಮಯ ಶೈಲಿಯಲ್ಲಿ ನೆಹರು ಜೀವನ ಸ್ಮೃತಿಗಳನ್ನು ಬರೆದಿಟ್ಟಿದ್ದಾರೆ. ಹಿಂದಿಯಲ್ಲಿ ಜನಪ್ರಿಯ ಕೃತಿಯಾದ ಈ ಗ್ರಂಥವನ್ನು ಮೇ. ರಾಜೇಶ್ವರಯ್ಯ ಮತ್ತು ಪ್ರದಾನ ಗುರುದತ್ತರು ಅಷ್ಟೇ ಸ್ವಾರಸ್ಯವಾಗಿ, ಕಾವ್ಯಮಯ ಭಾಷೆಯಲ್ಲಿ ಅನುವಾದಿಸಿಕೊಟ್ಟು ಕನ್ನಡಿಗರೆಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಇದೊಂದು ನೆಹರು ಅಭಿಮಾನಿಗಳೆಲ್ಲರೂ ಓದಲೇಬೇಕಾದ ಕೃತಿ.

—ಕೊ. ಶ್ರೀ.

ಸುದ್ದಿ ಸಂಗ್ರಹ

ಕೋಲಾರ ಜಿಲ್ಲಾ ಲೇಖಕರ ಪರಿಚಯ

'ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಕೋಲಾರದ ಜನಪ್ರಿಯ ಸಾಹಿತಿಗಳಾದ ತಮ್ಮನ್ನು ನಾನು ತಮ್ಮ ಹಲವು ಕೃತಿ, ಲೇಖನಗಳಿಂದ ಪರಿಚಯ ಹೊಂದಿದ್ದರೂ, ಈಗ ನೇರ ಪತ್ರ ಬರೆಯುವ ಸದವಕಾಶ ಒದಗಿ ಬಂದಿರುವುದು ಸಂತೋಷದ ಸಂಗತಿ. ಕೋಲಾರದ ಎಲ್ಲ 'ಲೇಖಕರ ಸಮಗ್ರ ಪರಿಚಯ' ಮಾಡಿಕೊಡುವಂತಹ ಕಿರುಗ್ರಂಥವನ್ನು ಪ್ರಕಟಿಸುವ ಹಿರಿಯ ಉದ್ದೇಶದಿಂದ ವಿಷಯ ಸಂಗ್ರಹ ಕಾರ್ಯವನ್ನು ತ್ವರಿತಗೊಳಿಸಲು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

'ನನ್ನ ಈ ಕಾರ್ಯದಲ್ಲಿ ತಮ್ಮ ಸಹಕಾರ ಅತ್ಯಾವಶ್ಯಕ. ಅದಕ್ಕಾಗಿ ತಾವು ತಮ್ಮ ಹೆಸರು (ಕಾವ್ಯ ನಾಮ), ವಿಳಾಸ (ಪ್ರಸ್ತುತ), ಜನನ ತಾರೀಖು, ಉದ್ಯೋಗ ಮತ್ತು ಬರೆದಿರುವ ಕೃತಿಗಳ ಬಗ್ಗೆ ಸೂಕ್ಷ್ಮ ಪರಿಚಯ, 'ಕನ್ನಡ ಸಾಹಿತ್ಯಕ್ಕೆ ಮಾಡಿರುವ ಸೇವೆ'— ಇತ್ಯಾದಿ ವಿಷಯಗಳನ್ನು ಆದಷ್ಟು ಬೇಗ ನನಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ. ಆದರೆ ಎಲ್ಲರ ವಿಳಾಸವನ್ನು ಪಡೆಯುವುದರಲ್ಲಿ ಅಸಮರ್ಥನಾಗಿರುವುದರಿಂದ ತಾವು ತಮಗೆ ತಿಳಿದಿರುವ, ಪರಿಚಯವಿರುವ ಇತರ ಸಾಹಿತಿ ಮಿತ್ರರ ವಿಳಾಸವನ್ನು ತಿಳಿಸಬೇಕಾಗಿ ನಮ್ಮ ವಿನಂತಿ.'

ವಿಳಾಸ
ರಘುಸುತ
ಹಂಸಧ್ವನಿ ಪ್ರಕಾಶನ
ವಿಶ್ವೇಶ್ವರಪುರಂ, ಬೆಂಗಳೂರು-೪

ಕರ್ನಾಟಕ ವಿಶ್ವವಿದ್ಯಾನಿಲಯಕೆ ನೂತನ ಕುಲಪತಿ

ಕರ್ನಾಟಕ ವಿಶ್ವವಿದ್ಯಾನಿಲಯದ ನೇತಾರರಾಗಿ ಒಂದು ದಶಕಕ್ಕೂ ಹೆಚ್ಚಿನ ಸೇವೆ ಸಲ್ಲಿಸಿ ಪಂಜಾಬಿನ ರಾಜ್ಯಪಾಲರಾಗಿ ತೆರಳಿದ ಡಾ|| ಪಾವಟೆ ಅವರ ಸ್ಥಾನವನ್ನು ಯಾರು ಅಲಂಕರಿಸುವರೆಂಬ ಊಹಾಪೋಹ ಇದ್ದ ಸಮಯದಲ್ಲಿ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎ. ಎಸ್. ಅಡಕೆ ಅವರು ಚುನಾಯಿತರಾದುದು ಸಂತೋಷವನ್ನುಂಟುಮಾಡಿದೆ. ಶ್ರೀಯುತರು ತಮ್ಮ ಅಧಿಕಾರಾವಧಿಯಲ್ಲಿ ಸುರತ್ಕಲ್ಲಿನ ಕಾಲೇಜನ್ನು ಅಂತರರಾಷ್ಟ್ರೀಯ ಖ್ಯಾತಿಗೆ ಒಯ್ದ ಶಿಲ್ಪಿಗಳು. ಮುವತ್ತೇಳು ವರ್ಷಗಳ ಹಿಂದೆ ಮುನ್ಸಿಪಲ್ ಇಂಜಿನಿಯರಾಗಿ ಜೀವನವನ್ನು ಆರಂಭಿಸಿ ಇಂದು ಕೀರ್ತಿಶಿಖರವನ್ನೇರಿರುವ ಶ್ರೀ ಅಪ್ಪಾ ಸಾಹೇಬ ಎಸ್. ಅಡಕೆ ಅವರ ನೇತೃತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದೆಂದು ನಿರೀಕ್ಷಿಸಬಹುದಾಗಿದೆ.

ಬಿಂದೂರಾಯರಿಗೆ ಸನ್ಮಾನ

ಗಮಕ ಕಲೆಯ ಭೀಷ್ಮಾಚಾರ್ಯರೆಂದು ಪ್ರಸಿದ್ಧರಾಗಿರುವ ಗೌರವಾನ್ವಿತರಾದ ಶ್ರೀ ಸಂ. ಗೋ. ಬಿಂದೂರಾಯರಿಗೆ ಮಕ್ಕಳ ಮಂಟಪದಲ್ಲಿ ಸನ್ಮಾನಿಸಲಾಯಿತು. ಡಾ|| ಮಾಸ್ತಿ ಅವರು ಅಧ್ಯಕ್ಷತೆ ವಹಿಸಿದ್ದರು. ಸರ್ವಶ್ರೀ ಸುಬೋಧ ಎಂ. ರಾಮರಾವ್, ಪಡಕೋಣೆ ರಮಾನಂದರಾಯರು, ಬಿ ಪುಟ್ಟಸ್ವಾಮಯ್ಯ, ಸಂಪದ್ಗಿರಿರಾಯರು ಮೊದಲಾದವರು ಆಗಮಿಸಿದ್ದರು. ಶ್ರೀ ಪಾಂಡುರಂಗರಾಯರು ಅತಿಥಿಗಳನ್ನು ಸ್ವಾಗತಿಸಿದರು. ಶೀಘ್ರದಲ್ಲಿ ಶತಮಾನವನ್ನು ಸಮೀಪಿಸಲಿರುವ ಬಿಂದೂರಾಯರಿಗೆ ಸಂಭಾವನಾ ಗ್ರಂಥವೊಂದನ್ನು ಸಮರ್ಪಿಸಬೇಕೆಂದು ಸೂಚಿಸಿದರು.

ಶರಣದರ್ಶನ ಪ್ರದರ್ಶನ

ಬಸವಣ್ಣನರ ಎಂಟನೂರನೆಯ ಜಯಂತ್ಯುತ್ಸವದ ಅಂಗವಾಗಿ ಒಂದು ಶರಣದರ್ಶನದ ಪ್ರದರ್ಶನ ಏರ್ಪಾಡಾಗಲಿದೆ. ಈ ಪ್ರದರ್ಶನದಲ್ಲಿ ಬಸವೇಶ್ವರರ ಜೀವನಕ್ಕೆ ಸಂಬಂಧಿಸಿದ ಪ್ರಕಟಿತ ಹಾಗೂ ಅಪ್ರಕಟಿತ ಪುಸ್ತಕಗಳ ಪ್ರದರ್ಶನ, ಶಿವಶರಣರ ಭಾವಚಿತ್ರಗಳು, ಕಸೂತಿ, ಅವರ ಜೀವನಕ್ಕೆ ಸಂಬಂಧಿಸಿದ ಕ್ಷೇತ್ರ ವಿವರಗಳು ಮತ್ತು ಶರಣರ ಜೀವನ ಹಾಗೂ ಉಪದೇಶಗಳಿಗೆ ಸಂಬಂಧಿಸಿದಂತೆ ಶಿಲಾ ಹಾಗೂ ಕಂಚಿನಪ್ರತಿಮೆಗಳ ಪ್ರದರ್ಶನ ನಡೆಯಲಿದೆ.

ವಿವರಗಳಿಗೆ
ಶ್ರೀ ಸಿದ್ಧರಾಮಪ್ಪಕುಭೆ
ಬಸವ ಕಲ್ಯಾಣ,
ಬಿದರ್ ಜಿಲ್ಲೆ

ಸಾಹಿತ್ಯದ ಅರ್ಥ ಮತ್ತು ವಿಸ್ತಾರ

ದಕ್ಷಿಣ ಕನ್ನಡ ಜಿಲ್ಲೆಯ ಚೊಕ್ಕಾಡಿಯಲ್ಲಿ ಕಳೆದ ತಿಂಗಳು ವಸಂತ ಸಾಹಿತ್ಯ ಸಂಘದ ಆಶ್ರಯದಲ್ಲಿ ಸಾಹಿತ್ಯದ ಅರ್ಥ ಮತ್ತು ವಿಸ್ತಾರ ಎಂಬ ವಿಷಯದ ಬಗೆಗೆ ಒಂದು ವಿಚಾರಗೋಷ್ಠಿ ನಡೆಯಿತು. ಇದರಲ್ಲಿ ಶ್ರೀಯುತರಾದ ಸುಬ್ಬರಾಯ ಚೊಕ್ಕಾಡಿ, ರಾಮಚಂದ್ರ ದೇವ, ಕೃಷ್ಣಭಟ್ಟ, ಜಿ. ಎಸ್. ಭಟ್ಟ, ಎನ್. ಸತ್ಯ ಮೂರ್ತಿ, ಶ್ರೀಕೃಷ್ಣ, ಲಕ್ಷ್ಮೀಶ, ಜಿತ್ತಪ್ಪ, ಪದ್ಮನಾಭ ಮತ್ತು ಡಿ. ಎನ್. ಮೂರ್ತಿ ಮೊದಲಾದ ಕಿರಿಯ ಲೇಖಕರು ಭಾಗವಹಿಸಿದ್ದರು.

ಮೈಸೂರಿನ ಕಲಾವಿದರಿಗೆ ಮಧ್ಯಪ್ರದೇಶದ ಆಹ್ವಾನ

ಭಾರತ ಸರಕಾರದಿಂದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ, ಜನವರಿಯಲ್ಲಿ ಮೈಸೂರಿನ ಕಲಾವಿದರ ತಂಡವೊಂದನ್ನು ಮಧ್ಯಪ್ರದೇಶಕ್ಕೆ ಆಹ್ವಾನಿಸಲು, ಮಧ್ಯಪ್ರದೇಶದ ಕಲಾಪರಿಷತ್ ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

ಧರ್ಮಸ್ಥಳದಲ್ಲಿ ಬಾಹುಬಲಿ ವಿಗ್ರಹದ ಸ್ಥಾಪನೆ

ಕನ್ನಡ ನಾಡಿನಲ್ಲಿ ಶ್ರವಣಬೆಳಗೊಳ, ಕಾರ್ಕಳ, ವೇಣೂರು, ಬಸದಿಗಳಲ್ಲಿರುವ ಭಗವಾನ್ ಬಾಹುಬಲಿಯ ವಿಗ್ರಹಗಳು ಪ್ರವಾಸಿಕರ ಹಾಗೂ ಜೈನಬಾಂಧವರ ಆದರ ಗೌರವಗಳಿಗೆ ಪಾತ್ರವಾಗಿವೆ. ಈಗ ಧರ್ಮಸ್ಥಳದಲ್ಲಿ ಶ್ರೀ ರತ್ನವರ್ಮ ಹೆಗ್ಗಡೆಯವರು, ಸುಮಾರು ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸುಮಾರು ೪೨ ಅಡಿಗಳ ಎತ್ತರದ ಮೂರ್ತಿಯನ್ನು ಪ್ರತಿಷ್ಠಾಪಿಸಲು ನಿಶ್ಚಯಿಸಿದ್ದಾರೆ. ಈ ವಿಗ್ರಹದ ನಿರ್ಮಾಣಕಾರ್ಯವು ಈಗಾಗಲೇ ಶಿಲ್ಪಿ ಆರ್. ಗೋಪಾಲ ಜನಾರ್ಧನ ಶೆಣೈ ಅವರಿಂದ ಕಾರ್ಕಳದ ಸಮೀಪದ ಬಂಡೆಯ ಬಳಿ ಆರಂಭವಾಗಿದ್ದು, ಅದನ್ನು ಸಂಪೂರ್ಣಗೊಂಡ ಮೇಲೆ ಧರ್ಮಸ್ಥಳಕ್ಕೆ ಸಾಗಿಸುವ ವಿಚಾರವಿದೆ.

ಕಾರ್ಕಳದ ಅನುಭವಿ ಶಿಲ್ಪಿಗಳಾದ ಶ್ರೀ ಜನಾರ್ದನ ಗೋಪಾಲ ಶೆಣೈ ಅವರು ಈ ಕಾರ್ಯವನ್ನು ಈಗಾಗಲೇ ಆರಂಭಿಸಿದ್ದಾರೆಂದು ತಿಳಿದುಬಂದಿದೆ.

ಮದರಾಸಿನಲ್ಲಿ ಕನ್ನಡ ಬಳಗ

ಮದರಾಸಿನಲ್ಲಿರುವ ಕನ್ನಡಿಗರ ಒಕ್ಕೂಟಕ್ಕಾಗಿ ಇತ್ತೀಚೆಗೆ ಕನ್ನಡ ಬಳಗವೆಂಬ ಒಂದು ಸಂಘ ಸ್ಥಾಪನೆಯಾಗಿದೆ.

ಬಳಗದ ವ್ಯವಸ್ಥಾಪಕ ಸಮಿತಿಯಲ್ಲಿ ಈ ಕೆಳಕಂಡವರಿದ್ದಾರೆ.

ಪ್ರೊ. ಎಂ. ಎ. ಭಟ್, ಡಾ. ಜಿ. ಆರ್. ಭಟ್, ಶ್ರೀ ಬಿ. ಕೆ. ಸರ್ವೋತ್ತಮರಾವ್, ಶ್ರೀಮತಿ ಶಾಂತಾರಾವ್, ಶ್ರೀ ಕೆ. ಎಸ್. ಭಟ್, ಮತ್ತು ಶ್ರೀ ಹೆಚ್. ಕೆ. ಲಕ್ಷ್ಮಣ ರಾವ್.

ನಗರದಲ್ಲಿ ಉಪಸಂಪಾದಕರ ತರಬೇತಿ ಶಿಬಿರ

ದಿನಪತ್ರಿಕೆಗಳ ಉಪಸಂಪಾದಕರಿಗೆ ತರಬೇತಿ ನೀಡುವ ನಾಲ್ಕುವಾರಗಳ ಶಿಕ್ಷಣ ಕಳೆದ ತಿಂಗಳಿನಲ್ಲಿ ನಡೆಯಿತು. ಶಿಕ್ಷಣವನ್ನು ಪ್ರೆಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಹಿರಿಯ ಪತ್ರಿಕೋದ್ಯಮಿಗಳಾದ ಶ್ರೀ ಎಂ. ಶಿವರಾಮ್ ಮತ್ತು ಬ್ರಿಟನ್ನಿನ ಥಾಮ್‌ಸನ್ ಫೌಂಡೇಷನ್ನಿನ ಜೇಮ್ಸ್ ಲೂಯಿಸ್ ಅವರು ಪ್ರಮುಖ ವೀಕ್ಷಕರಾಗಿದ್ದರು.

ಲೇಖಕ ಭವನ

ಕನ್ನಡನಾಡಿನ ತರುಣ ಲೇಖಕ ಸಂಘವು ಬೆಂಗಳೂರು ನಗರದಲ್ಲಿ ಒಂದು ಲೇಖಕ ಭವನವನ್ನು ನಿರ್ಮಿಸಲು ಯೋಜನೆ ಹಾಕಿಕೊಂಡಿದೆ. ಇದಕ್ಕೆ ಸುಮಾರು ಮೂರೂವರೆ ಲಕ್ಷ ರೂಪಾಯಿಗಳು ತಗಲುವ ನಿರೀಕ್ಷೆ ಇದೆ. ಇದಕ್ಕೆ ಬೇಕಾದ ನಿವೇಶನವನ್ನು ಸರಕಾರದವರು ಕೊಡುವ ಭರವಸೆ ಇತ್ತಿರುವುದಾಗಿ ತಿಳಿದು ಬಂದಿದೆ. ಕಟ್ಟಡದ ಭಾವಿ ಕಾರ್ಯಕ್ರಮವನ್ನು ರೂಪಿಸಲು ನಗರದ ಪ್ರಮುಖರ ಒಂದು ಸಮಿತಿಯನ್ನು ರಚಿಸಲಾಗುವುದೆಂದು ಸಂಘದ ಕಾರ್ಯದರ್ಶಿ ಶ್ರೀ ಬಿ. ಕೃಷ್ಣಭಟ್ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ.



ಪರಿಷತ್ತಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು
ಡಾ. ತ್ರಿಗುಣಸೇನ್ ಅವರನ್ನು ಆಹ್ವಾನಿಸುತ್ತಿರುವುದು



ಹೊರನಾಡ ಕನ್ನಡಿಗರೊಡನೆ ಅಧ್ಯಕ್ಷರು



ಡಾ. ತ್ರಿಗುಣಸೇನ್ ಭಾಷಣ ಮಾಡುತ್ತಿರುವುದು



ಡಾ. ತ್ರಿಗುಣಸೇನ್ ಅವರಿಗೆ ಅಧ್ಯಕ್ಷರು ಪರಿಷತ್ತಿನ ಕಾರ್ಯಕಲಾಪಗಳ
ಪರಿಚಯ ಮಾಡಿಕೊಡುತ್ತಿರುವುದು

ಪರಿಷತ್ತಿನ ಸುದ್ದಿಗಳು

ಡಾ. ಶಿವರಾಂ ಅವರ ಕೃತಿಗಳ ಬಗ್ಗೆ ಉಪನ್ಯಾಸ

ದಿನಾಂಕ ೧೦-೧೨-೧೯೬೭ನೆಯ ದಿನ ಪರಿಷತ್ತಿನ ಆಶ್ರಯದಲ್ಲಿ ರಾಜಾಜೀ ನಗರದ 'ಸಪ್ತರ್ಷಿಧಾಮ' ದಲ್ಲಿ "ಡಾ|| ಎಂ. ಶಿವರಾಂ ಅವರ ಕೃತಿಗಳ" ಬಗ್ಗೆ ಶ್ರೀ ಜಿ. ಪಿ. ರಾಜರತ್ನಂ ಅವರು ಉಪನ್ಯಾಸ ಮಾಡಿದರು. ಇದು 'ಸಪ್ತರ್ಷಿಧಾಮ'ದ ಕವಿ-ಕೃತಿ ದರ್ಶನದ ೨೯ನೆಯ ಉಪನ್ಯಾಸವಾಗಿತ್ತು.

ಹೊರನಾಡ ಕನ್ನಡಿಗರು–ಪರಿಷತ್ತಿಗೆ ಭೇಟಿ

ದಿನಾಂಕ ೧೧-೧೨-೧೯೬೭ನೆಯ ದಿನ ಪರಿಷನ್ಮಂದಿರದಲ್ಲಿ ಪ್ರೊ|| ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಹೊರನಾಡ ಕನ್ನಡಿಗರಿಗೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಇರಬೇಕಾದ ಸಂಬಂಧದ ಬಗ್ಗೆ ವಿಚಾರವಿನಿಮಯವನ್ನು ನಡೆಸಲು ಸಭೆಸೇರಿದ್ದಿತು. ಬೊಂಬಾಯಿನಿಂದ ಬಂದಿದ್ದ ಶ್ರೀಯುತರಾದ ಯು. ವಿ. ಉಪಾಧ್ಯೆ, ಪಿ. ಆರ್. ಸುಬ್ರಮಣ್ಯಂ, ಎಂ. ಎಸ್. ಎಸ್. ಮೂರ್ತಿ, ಕೆ. ಎಸ್. ವಾಸುದೇವಮೂರ್ತಿ ಮತ್ತು ಜಿ. ವಿ. ರಂಗಸ್ವಾಮಿ ಅವರುಗಳು ಹೊರನಾಡ ಕನ್ನಡಿಗರ ಸಮಸ್ಯೆಗಳನ್ನು ಸಭೆಗೆ ಪರಿಚಯಮಾಡಿ ಕೊಟ್ಟರು. ಶ್ರೀ ಜಿ. ನಾರಾಯಣ, ಶ್ರೀ ತಿ. ತಾ. ಶರ್ಮ ಮೊದಲಾದ ಅನೇಕರು ಪರಿಷತ್ತಿನ ಸಮಸ್ಯೆಗಳನ್ನು ಅವರಿಗೆ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು ಪರಸ್ಪರ ಕಷ್ಟಸುಖಗಳನ್ನರಿತು ಒಂದಕ್ಕೊಂದು ಪೂರಕವಾಗಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವ ಬಗ್ಗೆ ಸಲಹೆ ಸೂಚನೆಗಳನ್ನಿತ್ತರು.

ದಿ|| ರಾಷ್ಟ್ರಕವಿ ಗೋವಿಂದಪೈ ಅವರ ಕೃತಿಗಳನ್ನು ಕುರಿತು ಉಪನ್ಯಾಸ

ರಾಷ್ಟ್ರಕವಿ ಗೋವಿಂದಪೈ ಅವರ ಸಾಹಿತ್ಯ ಕೃತಿಗಳ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಡಿಸೆಂಬರ್ ೨೪ರಂದು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಡಾ. ಜಿ. ಎಸ್. ಶಿವರುದ್ರಪ್ಪನವರು ದಿ|| ಪೈ. ಅವರ ಕೃತಿಗಳನ್ನು ಕುರಿತು ಉಪನ್ಯಾಸ ಮಾಡಿದರು. ಪರಿಷತ್ತಿನ ಆಶ್ರಯದಲ್ಲಿ ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆಯುತ್ತಿರುವ ಉಪನ್ಯಾಸ ಮಾಲೆಯಲ್ಲಿ ಇದು ೧೨ನೆಯ ಉಪನ್ಯಾಸವಾಗಿದೆ.

ಕವಿಚಕ್ರವರ್ತಿ ರನ್ನ: ಉಪನ್ಯಾಸ

ಕನ್ನಡ ಕವಿಚಕ್ರವರ್ತಿ ರನ್ನ ಕವಿಯನ್ನು ಕುರಿತು ದಿನಾಂಕ ೨೪-೧೨-೧೯೬೭ರಂದು ಪರಿಷತ್ತಿನ ಆಶ್ರಯದಲ್ಲಿ ಬಸವನಗುಡಿಯ ಕನ್ನಡಿಗರ ಕೂಟದಲ್ಲಿ ಉಪನ್ಯಾಸ ಮಾಲೆಯನ್ನು ಏರ್ಪಡಿಸಲಾಗಿತ್ತು. ಪರಿಷದಧ್ಯಕ್ಷರಾದ ಪ್ರೊ|| ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು, ಶ್ರೀ ಎಂ. ವಿ. ಚಕ್ರವರ್ತಿ ಅವರುಗಳು ಭಾಷಣಮಾಡಿ ರನ್ನ ಕವಿ ಕಾವ್ಯಗಳ ಪರಿಚಯ ಮಾಡಿಕೊಟ್ಟರು.

ಪರಿಷತ್ತಿನ ಅಂಗರಚನೆಯ ಅಂಗೀಕಾರ

ದಿನಾಂಕ ೨೪-೧೨-೧೯೬೭ನೆಯ ಭಾನುವಾರ ಬೆಳಗ್ಗೆ ೯ ಘಂಟೆಗೆ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಪರಿಷದಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆಯು ಸೇರಿ ಪರಿಷತ್ತಿನ ನಿಬಂಧನೆಗಳ ತಿದ್ದುಪಡಿಯನ್ನು ಮಾಡಿತು. ಈಗ ಸುಮಾರು ೧೨ ವರ್ಷಗಳಿಂದ ಈ ನಿಬಂಧನೆಗಳ ತಿದ್ದುಪಡಿ ಪ್ರಯತ್ನ ನಡೆಯುತ್ತಿದ್ದು ಈಸಲದ ಸಭೆಯಲ್ಲಿ ಅದು ಕೂಲಂಕಷವಾಗಿ ಚರ್ಚೆಯಾಗಿ ಒಪ್ಪಲಾಯಿತು. ಈ ಸಲದ ಸಭೆ ತುಂಬಾ ಸಹಕಾರದ ಮನೋಭಾವನೆಯಿಂದ ನಡೆದು ಒಂದೇ ಒಂದು ಅಧಿವೇಶನದಲ್ಲಿ ಎಲ್ಲ ನಿಬಂಧನೆಗಳೂ ಒಪ್ಪಿತವಾದುದು ಒಂದು ವಿಶೇಷ ವಿಷಯವಾಗಿದೆ.

ಪರಿಷತ್ತಿಗೆ ಡಾ|| ತ್ರಿಗುಣಸೆನ್ ಅವರ ಭೇಟಿ

ದಿನಾಂಕ ೨೪-೧೨-೧೯೬೭ನೆಯ ಭಾನುವಾರ ಸಂಜೆ ೫ ಗಂಟೆಗೆ ಕೇಂದ್ರದ ವಿದ್ಯಾಮಂತ್ರಿಗಳಾದ ಡಾ|| ತ್ರಿಗುಣಸೆನ್‌ರವರು ಪರಿಷನ್ಮಂದಿರಕ್ಕೆ ಭೇಟಿಯಿತ್ತರು. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರು, ತಿ. ತಾ. ಶರ್ಮರವರು, ವಿ. ಕೃ. ಗೋಕಾಕರವರು, ಎಸ್. ವಿ. ಜೇವೂರರವರು, ರಂ. ಶ್ರೀ.

ಮುಗಳಿಯವರೇ ಮೊದಲಾದ ಐವತ್ತು ಸುಪ್ರಸಿದ್ಧ ಸಾಹಿತಿಗಳು ದಯಮಾಡಿಸಿದ್ದರು. ಅಧ್ಯಕ್ಷರಾದ ಪ್ರೊ|| ಜಿ. ವೆಂಕಟಸುಬ್ಬಯ್ಯನವರು ಪರಿಷತ್ತು ೫೨ ವರುಷಗಳಿಂದ ನಡಸುತ್ತಿರುವ ಕೆಲಸವನ್ನೂ ಅದರ ಕೊರತೆಗಳನ್ನೂ ವಿಶೇಷವಾಗಿ ಆರ್ಥಿಕ ತೊಂದರೆಗಳನ್ನೂ ಪರಿಚಯಮಾಡಿಕೊಟ್ಟರು. ಡಾ|| ಸೆನ್‌ರವರು ತಮಿಳು, ಮಹಾರಾಷ್ಟ್ರ, ಬಂಗಾಳಿ ಮುಂತಾದ ಸಾಹಿತ್ಯ ಪರಿಷತ್ತುಗಳು ವರ್ಷಕ್ಕೆ ಐವತ್ತು ಪುಸ್ತಕಗಳಂತೆ ಪ್ರಕಟನೆ ಮಾಡುತ್ತಾ ಆರ್ಥಿಕ ಮುಗ್ಗಟ್ಟನ್ನೇ ಕಾಣದಿರುವಾಗ ಕನ್ನಡ ಸಾಹಿತ್ಯಪರಿಷತ್ತು ಅಂತಹ ಆರ್ಥಿಕ ಮುಗ್ಗಟ್ಟಿನಲ್ಲಿರುವುದಕ್ಕೆ ತಮ್ಮ ಆಶ್ಚರ್ಯವನ್ನು ಸೂಚಿಸಿ ಪ್ರಾಂತ ಸರಕಾರವು ಸಹಾಯಮಾಡಬೇಕೆಂದೂ ಕೇಂದ್ರ ಸರ್ಕಾರದಿಂದ ಸಾಧ್ಯವಾದ ಸಹಾಯವನ್ನು ಮಾಡುವುದಾಗಿ ಭರವಸೆ ನೀಡಿದರು. ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರ ವಂದನಾರ್ಪಣೆಯೊಂದಿಗೆ ಸಭೆ ಮುಗಿಯಿತು.

೧೯೬೭ರ "ರತ್ನ" ಪರೀಕ್ಷೆಯ ಫಲಿತಾಂಶ

ಮೊದಲನೆಯ ತರಗತಿ

೩೪೨.

ಎರಡನೆಯ ತರಗತಿ

೧, ೮, ೫೨, ೭೦, ೭೭, ೧೨೪, ೧೨೫, ೧೨೭, ೧೩೩, ೧೪೩, ೧೪೪, ೧೪೮, ೧೯೩, ೨೦೯, ೨೨೫, ೨೬೫, ೨೭೪, ೩೨೧, ೩೩೭, ೩೪೧, ೩೫೭, ೩೬೭, ೩೬೮, ೩೮೭, ೪೦೫, ೪೦೬, ೪೦೯, ೪೧೩.

ಮೂರನೆಯ ತರಗತಿ

೯೮, ೧೧೨, ೧೩೬, ೧೩೭, ೧೪೦, ೧೪೧, ೧೪೫, ೧೪೭, ೧೪೯, ೧೫೦, ೧೫೫, ೧೬೧, ೧೬೩, ೧೬೫, ೧೭೬, ೧೭೭, ೧೮೦, ೧೮೪, ೧೯೧, ೨೦೫, ೨೦೬, ೨೨೭, ೨೩೧, ೨೩೮, ೨೩೯, ೨೪೩, ೨೪೬, ೨೫೮, ೨೬೪, ೨೬೬, ೨೬೭, ೨೭೦, ೨೭೧, ೨೭೨, ೨೭೩, ೨೮೭, ೨೯೧, ೨೯೬, ೩೦೨, ೩೧೫, ೩೧೭, ೩೧೮, ೩೨೨, ೩೩೦, ೩೩೮, ೩೩೯, ೩೪೩, ೩೫೬, ೩೭೬, ೩೮೦, ೩೮೨, ೩೮೫, ೪೦೦, ೪೦೮, ೪೧೨.

ಬಾಕಿ ಉಳಿದಿದ್ದ ಸಂಸ್ಕೃತ ವಿಭಾಗದಲ್ಲಿ ಉತ್ತೀರ್ಣರಾಗಿ ರತ್ನಪರೀಕ್ಷೆಯಲ್ಲಿ ತೇರ್ಗಡೆಯಾದವರು :

೩, ೧೭೮, ೧೮೯, ೩೫೪, ೪೦೭.

ಸಂಸ್ಕೃತ ವಿಭಾಗದಲ್ಲಿ ತೇರ್ಗಡೆಯಾಗದೆ ಫಲಿತಾಂಶವನ್ನು ತಡೆಹಿಡಿದಿರುವುದು :

೯, ೧೨೮, ೧೮೩, ೪೦೨.

ಪರೀಕ್ಷೆಗೆ ಕುಳಿತವರು : ೧೬೦ ಮಂದಿ.

ತೇರ್ಗಡೆಯಾದವರು : ೧೦೨ ಮಂದಿ. ೬೪%

ಪರಿಷತ್ತಿನ ಸದಸ್ಯರಲ್ಲಿ ವಿನಂತಿ

೧೯೬೭ರ ಸದಸ್ಯರ ವಾರ್ಷಿಕ ಚಂದಾ ಹಣದ ಅವಧಿ ಡಿಸೆಂಬರ್ ತಿಂಗಳಿಗೆ ಮುಗಿಯುತ್ತದೆ. ಆದುದರಿಂದ ೧೯೬೮ನೆಯ ಸಾಲಿನ ಪರಿಷತ್ತಿನ ಸದಸ್ಯತ್ವದ ಚಂದಾ **ಆರು** ರೂಪಾಯಿಗಳನ್ನು ದಯೆಯಿಟ್ಟು ಕೂಡಲೇ ಕಳುಹಿಸಿ ಪರಿಷತ್ತಿಗೆ ನೆರವು ನೀಡಬೇಕೆಂದು ಪ್ರಾರ್ಥಿಸುತ್ತೇವೆ.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

ಸಂಪಾದಕೀಯ

ಡಿ. ವಿ. ಜಿ. ಅವರಿಗೆ ಸಾಹಿತ್ಯ ಅಕಾಡೆಮಿಯವರ ಗೌರವ

ಡಿ. ವಿ. ಗುಂಡಪ್ಪನವರು ಕನ್ನಡನಾಡಿನ ಹಿರಿಯ ನಾಯಕಮಣಿಗಳಲ್ಲಿ ಮುಖ್ಯರಾದವರು. ನಾಡಿನ ಅನೇಕ ಕಾರ್ಯಕ್ಷೇತ್ರಗಳಲ್ಲಿ ಅವರ ಸೇವಾಪರತೆಯ ಪ್ರಭಾವಗಳು ಕಾಣಬರುತ್ತಿವೆ. ಸಾಹಿತ್ಯ, ರಾಜಕಾರಣ, ಆಡಳಿತ, ಶಿಕ್ಷಣ, ಸಂಶೋಧನ, ಸಾರ್ವಜನಿಕ ವ್ಯವಹಾರ, ಗ್ರಂಥ ಪ್ರಕಟಣೆ ಮುಂತಾದ ವಿಷಯಗಳಲ್ಲಿ ತೀವ್ರಾಸಕ್ತಿಯನ್ನು ಹೊಂದಿ ಅನೇಕರಿಗೆ ಮಾರ್ಗದರ್ಶನ ಮಾಡಿದ್ದಾರೆ.

ಕನ್ನಡ ಸಾಹಿತ್ಯಪರಿಷತ್ತಿನ ಪ್ರಾರಂಭದ ಕಾಲದಿಂದಲೂ ಅದರಲ್ಲಿ ಆಸಕ್ತಿ ವಹಿಸಿ, ಪರಿಷದಧ್ಯಕ್ಷರಾಗಿದ್ದಾಗ ಪರಿಷತ್ತಿನ ಕಾರ್ಯಕಲಾಪಗಳಿಗೆ ಹೊಸತನವನ್ನು ತಂದಿತ್ತ ಕೀರ್ತಿ ಅವರದಾಗಿದೆ. ವಸಂತ ಸಾಹಿತ್ಯೋತ್ಸವ, ಪುಸ್ತಕ ಪ್ರದರ್ಶನ, ಉಪಾಧ್ಯಾಯ ಶಿಕ್ಷಣ, ಪುಸ್ತಕ ಭಂಡಾರದ ವ್ಯವಸ್ಥೆ ಮುಂತಾದುವು ಒಂದು ರೂಪವನ್ನು ಪಡೆದುದು ಅವರ ಕಾಲದಲ್ಲಿ.

ಕನ್ನಡದಲ್ಲಿ ಕವಿಗಳಾಗಿ ಅತ್ಯುತ್ತಮ ಕವನಮಾಲಿಕೆಗಳನ್ನು ನಮಗೆ ಒದಗಿಸಿದ್ದಾರೆ. 'ಬೇಲೂರಿನ ಶಿಲಾಬಾಲಿಕೆಯರು' ಎಂಬಂಥ ರಸವತ್ತಾದ ಕವನಗಳು, 'ಶ್ರೀರಾಮ ಪರೀಕ್ಷಣ'ದಂಥ ತೀಕ್ಷ್ಣವಾದ ಮಾನವ ವ್ಯವಹಾರ ವಿಮರ್ಶೆಯಿಂದ ಕೂಡಿದ ವಿದ್ವತ್ಕಾವ್ಯ, 'ಮಂಕುತಿಮ್ಮನ ಕಗ್ಗ' ದಂಥ ಅನುಭವ ರಸಾಯನ, 'ಉಮರನ ಒಸಗೆ' ಯಂಥ ಅನುವಾದಗಳು, ಕಾವ್ಯ ಮೀಮಾಂಸೆಯನ್ನು ಕುರಿತ ಗದ್ಯಕೃತಿಗಳು, ಮಕ್ಕಳ ಕಥೆಗಳು, ಜೀವನ ಚರಿತ್ರೆ, ನಾಟಕ, ರಾಜ್ಯಶಾಸ್ತ್ರ, ಬಾಳಿಗೊಂದು ನಂಬಿಕೆ ಮುಂತಾಗಿ ಅನೇಕ ಮುಖವಾದ ಗ್ರಂಥ ರಚನೆಯಿಂದ ಕನ್ನಡಸಾಹಿತ್ಯಕೋಶವನ್ನು ತುಂಬಿಸಿದ್ದಾರೆ.

ಶ್ರೀಮದ್ ಭಗವದ್ಗೀತೆಯನ್ನು ಕುರಿತ ಅವರ ಗ್ರಂಥಕ್ಕೆ 'ಜೀವನ ಧರ್ಮಯೋಗ' ವೆಂದು ಅವರು ಹೆಸರುಕೊಟ್ಟಿರುವುದರಲ್ಲಿಯೇ ಅವರ ದೃಷ್ಟಿ ಸೂಚಿತವಾಗಿದೆ. ಈ ಬೃಹದ್ಗ್ರಂಥವು ಶ್ರೀಯುತರ ಜೀವನಾನುಭವದ ಜ್ಞಾನವನ್ನೆಲ್ಲ ಅಳವಡಿಸಿಕೊಂಡು ಮೈದಾಳಿದೆ. ಇದರಲ್ಲಿ ಜನಸಾಮಾನ್ಯದ ಆವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಗೀತೆಯ ಬೋಧನೆಯನ್ನು ಪರಿಶೀಲಿಸಲಾಗಿದೆ. ನಮ್ಮ ನಡುವೆ ಅನೇಕ ವೇಳೆ ತೀಕ್ಷ್ಣವಾದ ವೈಮನಸ್ಯವನ್ನು ಬೆಳೆಸಿದ ದ್ವೈತಾದ್ವೈತ ವಿಶಿಷ್ಟಾದ್ವೈತಗಳನ್ನು ಸಾಮರಸ್ಯ ದೃಷ್ಟಿಯಿಂದ ಕಾಣುವುದು ಸಾಧ್ಯವೆಂಬುದನ್ನು ಈ ಗ್ರಂಥ ದೃಷ್ಟಾಂತಪಡಿಸುತ್ತದೆ. ಗೀತೆಯು ಕೇವಲ ಮೋಕ್ಷಶಾಸ್ತ್ರವಲ್ಲ, ಅದು ಜೀವನಶಾಸ್ತ್ರವೂ ನಿಜವೆಂಬ ತತ್ವದ ಧೋರಣೆಯಿಂದ ಈ ಗ್ರಂಥದ ಬೆಲೆ ಹೆಚ್ಚಿದೆ.

ಇಂಥ ಗ್ರಂಥಕ್ಕೆ ಕೇಂದ್ರದ ಸಾಹಿತ್ಯ ಅಕಾಡೆಮಿಯ ಗೌರವ ಸಂದಿರುವುದು ಕನ್ನಡಿಗರಿಗೆಲ್ಲ ಸಂತೋಷವನ್ನುಂಟುಮಾಡಿದೆ. ಈ ಪಾರಿತೋಷಕದಿಂದ ಡಿ. ವಿ. ಜಿ. ಯವರ ಹಿರಿಮೆಗೆ ಹೊಸದಾಗಿ ಹೆಚ್ಚಳವಾಗಬೇಕಾಗಿಲ್ಲ. ಬಹುಕಾಲದಿಂದ ಅವರಿಗೆ ನಾಡಿನಲ್ಲಿ ಸಂದಿರುವ ಗೌರವದಲ್ಲಿ ಇದೂ ಲೀನವಾಗಿರುತ್ತದೆ. ಆದರೆ ಈ ಕೇಂದ್ರ ಗೌರವವೂ ಈಗ ಸಂದಿರುವುದು ನಾಡಿನ ಕಿರಿಯರಿಗೆ ಸಂತೋಷವನ್ನುಂಟುಮಾಡಿದೆ. ಸಾಹಿತ್ಯ ಪರಿಷತ್ತಿನ ಸದಸ್ಯರು 'ಕನ್ನಡ ನುಡಿ' ಯ ಮೂಲಕ ಈ ಸಮಯವನ್ನು ಉಪಯೋಗಿಸಿಕೊಂಡು ಶ್ರೀ ಡಿ. ವಿ. ಜಿ. ಯವರಿಗೆ ಅಭಿವಂದನೆಯನ್ನು ಸಲ್ಲಿಸುತ್ತಾರೆ. ಅವರ ಪ್ರೋತ್ಸಾಹದ ಬೆಂಬಲ ಸದಾ ನಮಗಿರಲೆಂದು 'ಕನ್ನಡ ನುಡಿ' ಹಾರೈಸುತ್ತದೆ.

ಪರಿಷತ್ತಿಗೆ ಹೊಸ ಅಂಗರಚನೆ

ಸುಮಾರು ಹದಿನೈದು ವರ್ಷಗಳಿಂದಲೂ ಕನ್ನಡ ಸಾಹಿತ್ಯ ಪರಿಷತ್ತಿನ ಅಂಗರಚನೆಯು ಸೂಕ್ತವಾಗಿಲ್ಲವೆಂದೂ ಅದನ್ನು ತಿದ್ದುಪಡಿ ಮಾಡಿ ಇಂದಿನ ಸ್ಥಿತಿಗತಿಗೆ ಹೊಂದಿಸಬೇಕೆಂದೂ ಸದಸ್ಯರು ಅಪೇಕ್ಷಿಸುತ್ತಿದ್ದರು. ಇದಕ್ಕಾಗಿಯೆ ಒಂದು ತಜ್ಞರ ಸಮಿತಿಯೂ ನೇಮಕವಾಗಿತ್ತು. ಅನೇಕ ಸಲ ಸಭೆಸೇರಿ ಈ ಸಮಿತಿಯು ಒಂದು ಅಂಗರಚನೆಯನ್ನು ನಿರ್ಮಿಸಿತು. ಆದರೆ ಅದನ್ನು ಒಪ್ಪಲು ಎಷ್ಟು ಸಭೆಗಳನ್ನು ಕರೆದರೂ ಚರ್ಚೆಯಲ್ಲಿಯೇ ಸಭೆಗಳು ಮುಕ್ತಾಯವಾಗುತ್ತಿದ್ದುವು.

ಕಳೆದ ಸಾರ್ವಜನಿಕ ವಾರ್ಷಿಕ ಸಭೆಯಲ್ಲಿ ಅಂಗರಚನೆ ತಿದ್ದುಪಡಿಯಾಗಿ ಆ ಬಳಿಕ ಮುಂದಿನ ಚುನಾವಣೆಗಳು ನಡೆಯಬೇಕೆಂದು ಸಭೆ ತೀರ್ಮಾನಿಸಿತು.

ಆ ಸಾರ್ವಜನಿಕ ಸಭೆಯ ಆದೇಶವನ್ನೇ ಗಮನದಲ್ಲಿಟ್ಟುಕೊಂಡು ಕಾರ್ಯಸಮಿತಿಯು ಎಲ್ಲ ದೃಷ್ಟಿಯಿಂದಲೂ ಒಪ್ಪಿಗೆಯಾಗಬಹುದಾದ ಹೊಸ ಅಂಗರಚನೆಯನ್ನು ರಚಿಸಿ ೧೯೬೦ನೇ ಡಿಸೆಂಬರ್ ೨೪ರಂದು ಸರ್ವಸದಸ್ಯರ ವಿಶೇಷ ಸಭೆಯ ಮುಂದೆ ಒಪ್ಪಿಗೆಗಾಗಿ ಮಂಡಿಸಿತು.

೫ ಗಂಟೆಗಳ ದೀರ್ಘ ಚರ್ಚೆಯಾದ ಬಳಿಕ ಕೆಲವು ಉಪಯುಕ್ತವಾದ ತಿದ್ದುಪಡಿಗಳೊಡನೆ ಈ ಹೊಸ ಅಂಗ ರಚನೆಯನ್ನು ಸಭೆ ಒಪ್ಪಿಕೊಂಡಿದೆ. ಬಹುಕಾಲದಿಂದ ಕುಂಟುತ್ತಿದ್ದ ಹೊಸ ಅಂಗರಚನೆಯ ಕಾರ್ಯ ಪೂರೈಸಿರುವುದು ಪರಿಷತ್ತಿಗೂ, ಅದರ ಅಭಿಮಾನಿಗಳಿಗೂ ತುಂಬ ಸಂತೋಷವನ್ನುಂಟುಮಾಡಿದೆ. ಈಗಿನ ಅಂಗರಚನೆಯಂತೆ ಪರಿಷತ್ತಿನ ಅಖಿಲ ಕರ್ಣಾಟಕ ವ್ಯಾಪ್ತಿಯನ್ನು ಭದ್ರಪಡಿಸಲಾಗಿದೆ. ಇನ್ನೂ ಅನೇಕ ವಿಧದಲ್ಲಿ ನೂತನ ಅಂಗರಚನೆಯಿಂದ ಪರಿಷತ್ತಿನ ಮುಂದಿನ ಅನೇಕ ಕಾರ್ಯಕ್ರಮಗಳು ಸುಗಮವಾಗಬಹುದೆಂದು ಎಲ್ಲರೂ ನಂಬಿದ್ದಾರೆ. ಇದಕ್ಕೆ ಸಹಾಯಕರಾದ ಎಲ್ಲರನ್ನೂ ಪರಿಷತ್ತು ಅಭಿನಂದಿಸುತ್ತದೆ.

ಹಿಂದಿ – ಕನ್ನಡ

ಇಂದು ದೇಶ ಮತ್ತೆ ಪ್ರಸಾತದ ಅಂಚಿನಲ್ಲಿ ನಿಂತಿದೆ. ಉತ್ತರದ ಕಡೆಯವರು ಹಿಂದಿಯನ್ನು ದಕ್ಷಿಣದ ಮೇಲೆ ತಕ್ಷಣ ಹೇರಲು ಮಾಡುತ್ತಿರುವ ಪ್ರಯತ್ನ ವಿಫಲವಾಗುವುದಷ್ಟೇ ಅಲ್ಲದೆ ವಿರೋಧ ಪರಿಣಾಮವನ್ನೇ ಮಾಡೀತು. ಇಂದು ಮದರಾಸಿನ ಕಡೆ ನಡೆಯುತ್ತಿರುವ ಎಲ್ಲ ಆಂದೋಲನಕ್ಕೆ ಔತ್ತರೇಯರೇ ಕಾರಣರಾಗಿದ್ದಾರೆ. ಈ ಸ್ಥಿತಿ ವಿಷಮಿಸಿದರೆ ದೇಶದ ಒಗ್ಗಟ್ಟಿಗೇ ತೊಂದರೆಯುಂಟಾಗುತ್ತದೆ. ಹಿಂದಿನ ಹೆದರಿಕೆ, ಉತ್ತರ ದಕ್ಷಿಣ ವಿಭಜನೆಯ ಹಂಚಿಕೆ ಶಕ್ತಿಸಂಪಾದಿಸಿದರೆ ಆಶ್ಚರ್ಯವಲ್ಲ.

ಕನ್ನಡದ ಜನ ಎಂದೂ ಸೌಮ್ಯ ಸ್ವಭಾವದವರು. ಬಹುದೂರ ಹೋಗಿ ಹೊಂದಿಕೆಗೆ ಪ್ರಯತ್ನಪಡತಕ್ಕವರು. ಇಂಥವರಿಗೂ ಹಿಂದೀವಾದಿಗಳ ಉಗ್ರತೆ ಅಸಹ್ಯವಾಗಿ ಕಾಣುತ್ತಿದೆ. ಇಂಗ್ಲಿಷಿನ ಸ್ಥಾನ ಏನೇ ಇರಲಿ, ಇಲ್ಲದಿರಲಿ, ಪ್ರಾಂತಭಾಷೆಯ ಸ್ಥಾನವನ್ನು ಮೊದಲು ಸ್ಥಿರಪಡಿಸದಿದ್ದರೆ, ಇನ್ನಾವ ಭಾಷೆಯಾದರೂ ಅದೇ ಪ್ರಾಂತೀಯರಿಗೆ ಬೇರೆ ಭಾಷೆಯಾಗಿಯೇ ಕಾಣುತ್ತದೆ.

ಇಂದು ಕನ್ನಡ ದೇಶದಲ್ಲಿ ಹಿಂದಿಯನ್ನು ಕಲಿತಿರುವ ಕಲಿಯುತ್ತಿರುವ ಜನಕ್ಕೇನೂ ಕಡಮೆಯಿಲ್ಲ. ಮೈಸೂರು ಸರಕಾರ ಹಿಂದಿಗೆ ಖರ್ಚುಮಾಡುತ್ತಿರುವ ಹಣವೂ ಕಡಮೆಯಿಲ್ಲ. ಹೀಗಿದ್ದೂ ತಾಳ್ಮೆತಪ್ಪಿದರೆ, ಕೇಡು ನಿಶ್ಚಯ. ಈ ಬಗ್ಗೆ ಔತ್ತರೇಯರು, ಉಗ್ರ ಹಿಂದೀವಾದಿಗಳು ಪುನರಾಲೋಚನೆ ಮಾಡಿದರೆ ಅವರಿಗೇ ಒಳ್ಳೆಯದು; ದೇಶಕ್ಕೆ ಹಿತ. ಉಗ್ರತೆಯನ್ನು ಮುಂದುವರಿಸಿದರೆ ಉಗ್ರಪರಿಣಾಮವನ್ನೇ ಅನುಭವಿಸಬೇಕಾಗುತ್ತದೆ. ಅನಿವಾರ್ಯವಾಗಿ 'ಕನ್ನಡ ನುಡಿ' ಈ ಎಚ್ಚರಿಕೆಯನ್ನು ನೀಡುತ್ತಿದೆ.

ಡಾ. ತ್ರಿಗುಣಸೇನರು

ಸಾಹಿತ್ಯ ಪರಿಷತ್ತಿಗೆ ಭೇಟಿನೀಡಿ ಡಾ. ತ್ರಿಗುಣಸೇನರು ತುಂಬ ಪ್ರೋತ್ಸಾಹದ ಮಾತುಗಳನ್ನು ಆಡಿದ್ದಾರೆ. ತ್ರಿಗುಣಸೇನರು ಶಿಕ್ಷಣತಜ್ಞರಾಗಿ, ದೇಶ ಭಾಷಾಭಿವೃದ್ಧಿಯ ಅಧ್ವರ್ಯುಗಳಾಗಿ ಈಗಾಗಲೇ ಜನಪ್ರಿಯರಾಗಿದ್ದಾರೆ. ಅವರ ವಿದ್ವತ್ತು, ವಿನಯ, ದಕ್ಷತೆಗಳಿಂದ ದೇಶದ ಭಾಷಾ ಸಮಸ್ಯೆಗಳು ಪರಿಹಾರವಾಗಿ ಶಿಕ್ಷಣ ಕ್ಷೇತ್ರವು ಫಲದಾಯಕವಾಗಲೆಂದು 'ಕನ್ನಡ ನುಡಿ' ಹಾರೈಸುತ್ತದೆ.

ದೇಶ ಭಾಷೆಯ ಪ್ರೋತ್ಸಾಹದ ಬಗ್ಗೆ ಸೇನರ ಮಾತುಗಳನ್ನು ಕನ್ನಡಿಗರು ವಿಶ್ವಾಸದಿಂದ ಸ್ವೀಕರಿಸುತ್ತಾರೆ. ಅವರಿಗೆ ಕನ್ನಡ ಸಾಹಿತಿಗಳು ತೀವ್ರ ಸಹಾಯದ ಬೆಂಬಲವನ್ನು ನೀಡಲು ಪರಿಷತ್ತು ಮುಂಬರುತ್ತದೆ; ಸೇನರಿಗೆ ಯಶಸ್ಸು ಲಭಿಸಲೆಂದು ಹಾರೈಸುತ್ತದೆ.

ಕಂಬನಿ

ಕನ್ನಡದ ಜನಪ್ರಿಯ ಪತ್ತೇದಾರಿ ಕಾದಂಬರಿಕಾರ ಶ್ರೀ ರಾಮಮೂರ್ತಿಯವರು ಡಿಸೆಂಬರ್ ೨೫ರಂದು ತಾವು ತೋಡಿಸುತ್ತಿದ್ದ ಬಾವಿಯಲ್ಲಿ ಅಪಘಾತಕ್ಕೆ ಈಡಾಗಿ ಸಾವನ್ನಪ್ಪಿದರೆಂಬ ಸುದ್ದಿ ಕನ್ನಡ ಸಾಹಿತ್ಯ ಪರಿಷತ್ತಿಗೂ ಕನ್ನಡ ವಾಚಕ ವರ್ಗಕ್ಕೂ ಸಿಡಿಲಿನಂತೆ ಬಡಿದಿದೆ. ದಿ. ರಾಮಮೂರ್ತಿಯವರು ಪರಿಷತ್ತಿನ ಮೇಲೆ ತುಂಬ ಮಮತೆಯುಳ್ಳವರಾಗಿದ್ದರು. ಈ ಸಂಸ್ಥೆಯ ಮೂಲಕ ನಾಡಿನ ಹಿತವನ್ನು ಸಾಧಿಸಬಹುದೆಂದು ಅವರ ಹಿರಿಯಾಸೆಯಾಗಿದ್ದಿತು. ದುರಂತದ ಹಿಂದಿನ ಬೆಳಗ್ಗೆ ಪರಿಷತ್ತಿನ ನೂತನ ಅಂಗರಚನೆಯ ಬಗ್ಗೆ ತೀವ್ರಾಸಕ್ತಿಯನ್ನು ವಹಿಸಿ ಸಭೆಯಲ್ಲಿ ಕೊನೆಯತನಕ ಇದ್ದು ಅಂಗರಚನೆಗೆ ಒಂದು ಸ್ವರೂಪ ತರುವುದರಲ್ಲಿ ತುಂಬ ಸಹಾಯಮಾಡಿದ್ದರು.

ದಿ. ರಾಮಮೂರ್ತಿಯವರ ಈ ಅಕಾಲ ಮರಣಕ್ಕಾಗಿ ಕನ್ನಡ ನುಡಿಯು ಕಂಬನಿ ಸುರಿಸುತ್ತದೆ; ದಿವಂಗತರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ನಮ್ರವಾಗಿ ದೇವರನ್ನು ಪ್ರಾರ್ಥಿಸುತ್ತದೆ.

ವಿಮರ್ಶೆ

ಸಾಹಿತ್ಯ ಮತ್ತು ಪ್ರತೀಕ; ಭೈರಪ್ಪ, ಡಾ|| ಎಸ್.ಎಲ್; ಪ್ರ: ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ಪುಟ: ೪+೬೮, ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೧-೭೫, ೧೯೬೭.

ಹರಿಹರನ ಗಿರಿಜಾ ಕಲ್ಯಾಣ; ಸಂಚಾಲಕರು: ಶಿವ ಲಿಂಗಯ್ಯ, ಕೆ. ಪಿ., ಪ್ರ: ಸತ್ಕೃತಿ ಸಮೀಕ್ಷಾಗೋಷ್ಠಿ, ಬೆಂಗಳೂರು, ಪುಟ: ೨+೩+೫೦, ಬೆಲೆ: ರೂ. ೦-೫೦, ೧೯೬೭.

ಸಹೃದಯ ಸ್ಫುರಣ; ಲೇ: ಸಂಗಮನಾಥ, ಜಿ. ಹಂಡಿ, ಪ್ರ: ಶೈಲಜಾ ಪ್ರಕಾಶನ, ಬಿಜಾಪುರ, ಪುಟ: ೮+೧೫೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೫೦, ೧೯೬೭.

ಕಾವ್ಯವ್ಯಾಸಂಗ; ಲೇ: ಪ್ರೊ. ಎಲ್. ಆರ್. ಹೆಗಡೆ, ಪ್ರ: ಮನೋಹರ ಘಾಣೇಕರ, ಸಮಾಜ ಬುಕ್ ಡಿಪೋ, ಧಾರವಾಡ, ಪುಟ: ೧೬೭, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೦೦, ೧೯೬೭.

ಪ್ರಬಂಧ

ಲೋಕದೇವ ನೆಹರೂ; ಮೂಲ ಲೇಖಕರು: ರಾಮ ಧಾರಿಸಿಂಹ 'ದಿನಕರ್', ಅನುವಾದಕರು: ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ ಗುರುದತ್ತ, ಪ್ರ: ರಾ. ವೆಂ. ಶ್ರೀ. ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು-೪, ಪುಟ: ೧೩+೨೧೦, ಬೆಲೆ: ರೂ. ೪-೫೦, ೧೯೬೭.

ಮಾತಿನ ಬಳ್ಳಿ; ಲೇಖಕರು: ಜಿ. ಎ. ರೆಡ್ಡಿ, ಪ್ರ: ಮಯೂರ ಪ್ರಕಾಶನ, ಕೃಷ್ಣರಾಜಪುರಂ, ಹಾಸನ, ಪುಟ ೧೨೭, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨ ೧೦, ೧೯೬೭.

ಚಾರುಚಯನ; ಲೇ: ಕೊಡತ್ತೂರು ಅನಂತಪದ್ಮನಾಭ ಉಡುಪ ಪ್ರ: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದ.ಕ.), ಪುಟ: ೭೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ತಲೆಮಾರಿನ ಹಿಂದೆ; ಲೇ: ಸಿಂಪಿ ಲಿಂಗಣ್ಣ, ಪ್ರ: ವ್ಹಿ. ಎಸ್. ಸಿಂಪಿ, ಅರವಿಂದ ಗ್ರಂಥಾಲಯ, ಚಡಚಣ, ಪುಟ: ೧೧+೧೪೦, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೭೫, ೧೯೬೭.

ಕಾಗದ ಚೂರು; ವೀರೇಂದ್ರ ಸಿಂಪಿ, ಪ್ರ: ವ್ಹಿ. ಎಸ್. ಸಿಂಪಿ, ಅರವಿಂದ ಗ್ರಂಥಾಲಯ, ಚಡಚಣ, ಪುಟ: ೭+೭೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೨೫, ೧೯೬೭.

ಕನ್ನಡದ ಕವಿರತ್ನಗಳು; ಲೇ: ಭಾಸ್ಕರ ಪಡುಬಿದ್ರಿ, ಪ್ರ: ಪ್ರೇಕ್ಷಕ ಪಬ್ಲಿಕೇಶನ್ಸ್, ೩೧, ಮಹಾವೀರ ಬಿಲ್ಡಿಂಗ್, ನಂ. ೧೧, ಹೋಮಜಿ ಸ್ಟ್ರೀಟ್, ಮುಂಬಯಿ-೧, ಪುಟ: ೧೪೯, ಅಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦.

ಆರೋಗ್ಯಶಾಸ್ತ್ರ

ಸೊಳ್ಳೆ ಹರಡುವ ರೋಗಗಳು; ಲೇ: ಭಾರತೀ ಸುತ, ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು-೧೮, ಪುಟ: ೨+೪೨, ಬೆಲೆ: ರೂ. ೧-೫೦, ೧೯೬೫.

ಕಥಾಸಂಕಲನ

ಮೊಲ್ಲೆ-ಮಲ್ಲಿಗೆ; ಲೇ: ಶೇಷನಾರಾಯಣ, ಪ್ರ: ಕಾವೇರಿ ಪ್ರಕಾಶನ, ೨೨/೨೭, ಸಮೀರಪುರ, ಚಾಮರಾಜಪೇಟೆ, ಬೆಂಗಳೂರು ೧೮, ಪುಟ: ೬+೧೬೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೦೦, ೧೯೬೭.

ಸಂಜೆಮಲ್ಲಿಗೆ; ಲೇ: ಶಾಂತದೇವಿ ಕಣವಿ, ಪ್ರ: ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು, ಪುಟ: ೭+೧೧೪, ಆಕಾರ: ಕ್ರೌನ್ ಅಷ್ಟದಳ, ಬೆಲೆ: ೨-೫೦, ೧೯೬೭.

ಮೇರಿ ಕೊಟ್ಟ ಬೆಂಡೋಲೆ; ಲೇ: ಎಸ್. ಸದಾಶಿವ ರಾವ್, ಪ್ರ: ನವಯುಗ ಎಂಟರ್‌ಪ್ರೈಸ್ ಲಿ., ನವಯುಗ ಪ್ರೆಸ್, ಉಡುಪಿ, ಪುಟ: ೧೨೩, ಆಕಾರ, ಕ್ರೌನ್ ಅಷ್ಟದಳ, ಬೆಲೆ: ರೂ. ೧-೮೦, ೧೯೬೬.

ಸಂದರ್ಶನ; ಲೇ: ಪ್ರೊ. ವಿಶ್ವನಾಥ ಕಾರ್ನಾಡ, ಪ್ರ: ಪ್ರೇಕ್ಷಕ ಪಬ್ಲಿಕೇಶನ್, ೩೧, ಮಹಾವೀರ ಬಿಲ್ಡಿಂಗ್ಸ್, ಹೋಮಜಿ ಸ್ಟ್ರೀಟ್, ಮುಬಯಿ ೧, ಪುಟ: ೧೦+೧೨೦. ಅಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ಅಮೂಲ್ಯ ಕಾಣಿಕೆ; ಲೇ: ದಾನಪ್ಪ ಸಿ. ಜತ್ತಿ, ಪ್ರ: ಶಾರದಾಂಬ ಸಾಹಿತ್ಯಮಾಲೆ, ತಿಕೋಟಾ, ಆಕಾರ: ಕ್ರೌನ್ ಅಷ್ಟದಳ, ಪುಟ: ೫+೨+೯೭, ಬೆಲೆ: ರೂ. ೧-೫೫, ೧೯೬೪.

ಚಿಟ್ಟೆಯಾಗಿ ಹಾರಿತು; ಲೇ: ಪದ್ಮಾ, ಎಂ. ಸಿ., ಪ್ರ: ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪, ಪುಟ: ೬-೧೬೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ರಥದ ಕುದುರೆಗಳು; ಲೇ: ಅನ್ನದಾನಿ, ಜಿ. ಎಸ್. ಪ್ರ: ಗ್ರಾಮಸೇವಕ ಗ್ರಂಥಮಾಲೆ, ಯಡಹಳ್ಳಿ, ತಾಲ್ಲೂಕು-ಬೀಳಗಿ, ಜಿಲ್ಲೆ-ವಿಜಾಪುರ, ಪುಟ: ೯೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ೧-೫೦, ೧೯೬೭.

Reg. No. B. G. 4— Janaury 1968

Lincensed to Post without
pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಕನ್ನಡ ನುಡಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ.

ಸ್ವೀಕಾರ

ಜೀವನ ಚರಿತ್ರೆ

ಕಲೆಯೇ ಕಾಯಕ; (ಗುಬ್ಬಿ ವೀರಣ್ಣನವರ ಆತ್ಮಕಥೆ) ಲೇ: ವೀರಣ್ಣನವರು, ಜಿ. ಎಚ್; ಪ್ರ: ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು; ಪುಟ: ೧೮ + ೧೮೮; ಬೆಲೆ: ರೂ. ೮–೦೦, ೧೯೬೭.

ಸ್ವಾಮಿ ವಿವೇಕಾನಂದ; ಲೇ: ಕುಲಕರ್ಣಿ, ಎ. ಎಸ್. ಪ್ರ: ಎಂ. ಎ. ಕುಲಕರ್ಣಿ, ಬೆಳಗಾವಿ, ಪುಟ: ೪೬; ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೦–೬೦, ೧೯೬೭.

ಮಹಾಶರಣೆ ಹೇಮರಡ್ಡಿ ಮಲ್ಲಮ್ಮನ ಚರಿತ್ರಸಾರ; ಲೇ: ಮಹಾರುದ್ರಪ್ಪ, ಮಹಾಲಿಂಗಪ್ಪ ಮಿರ್ಜಿ; ಪ್ರ; ಗುರುಸಿದ್ಧಪ್ಪ ಮಹಾಲಿಂಗಪ್ಪ ಮಿರ್ಜಿ, ಅಡ್ವೋಕೇಟರು ದಾಜೀನಪೇಟೆ, ಹುಬ್ಬಳ್ಳಿ; ಪುಟ: ೩ + ೭೫; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩–೦೦, ೧೯೬೭.

ದೇವರ ಸ್ತೋತ್ರಗಳು

ಮುಕುಂದಮಾಲಾ ಎಂಬ ಸ್ತೋತ್ರ ಮುಕ್ತ ಮಂಜರಿ; ಸಂ: ಜಿ. ಪಿ. ರಾಜರತ್ನಂ; ಪ್ರ: ಲಕ್ಷ್ಮೀನೃಸಿಂಹ ನಿಲಯ. ೨೩೮, ೮ನೇ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೩೨, ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೦–೩೭, ೧೯೫೫.

ಶ್ರೀ ರಾಮನಾಮ; ಸಂ: ಜಿ. ಪಿ. ರಾಜರತ್ನಂ, ಪ್ರ: ಲಕ್ಷ್ಮೀನೃಸಿಂಹ ನಿಲಯಂ, ೨೩೮, ೮ನೇ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦–೩೩, ೧೯೫೬.

ಕಸ್ತೂರಿ ತಿಲಕಂ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೨; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦–೩೭, ೧೯೫೭.

ಜಯಮಂಗಳಂ; ಸಂಪಾ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೨; ಆಕಾರ: ಕ್ರೌನ್ ಅಷ್ಟದಳ, ಬೆಲೆ: ೦–೩೭, ೧೯೫೭.

ಪ್ರಾಣೇಶ್ವರಪ್ರಾಪ್ತಿ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೫; ಆಕಾರ: ಕ್ರೌನ್ ಅಷ್ಟ ದಳ, ಬೆಲೆ: ರೂ. ೦–೫೦, ೧೯೫೯.

ತಿರುಪ್ಪಾವೈ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೮೦; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧–೦೦. ೧೯೬೧.

ಶ್ರೀ ವಿಷ್ಣುಚಿತ್ತ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೨; ಬೆಲೆ: ರೂ. ೦–೫೦, ೧೯೬೦.

ಕೃಷ್ಣಸೇವಾವ್ರತಂ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೩೯; ಆಕಾರ: ಕ್ರೌನ್ ಅಷ್ಟ ದಳ, ಬೆಲೆ: ರೂ. ೦–೭೫, ೧೯೬೨.

ಮಾಧವಪದ ಮಾಧುರ್ಯ; ಸಂ: ಜಿ. ಪಿ. ರಾಜರತ್ನಂ ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೬೪; ಆಕಾರ: ಕ್ರೌನ್ ಅಷ್ಟ ದಳ, ಬೆಲೆ: ರೂ. ೧–೦೦, ೧೯೬೫.

ಶ್ರೀ ಸಾಯಿ ಚಿಂತನ; ಸಂ: ಜಿ. ಪಿ. ರಾಜರತ್ನಂ; ಪ್ರ: 'ವಿದೇಹ' ೭೭೧, ೧೭ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩; ಪುಟ: ೭೨; ಆಕಾರ: ಕ್ರೌನ್ ಅಷ್ಟ ದಳ, ಬೆಲೆ: ರೂ. ೧–೨೫, ೧೯೬೭.

ನಾಟಕ

ವಿಕಾಸ; ಲೇ: ಭಟ್ಟ, ಕೆ. ಎನ್. ಶಿರಾಡಿಪಾಡಿ; ಪ್ರ: ವಿಚಾರಸಾಹಿತ್ಯಮಾಲೆ, ಕಡಿರುದ್ಯಾವರ, (ದ. ಕ.) ಪುಟ: ೪೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧–೦೦, ೧೯೬೭.

ಮುದ್ದುಮಲ್ಲಿ; ಲೇ: ಮಣಿ, ರಾ. ಸು. ಪ್ರ: ಮಣಿ ಪ್ರಕಾಶನ, ಪದ್ಮಾಲಯ, ೨೮೪೭/೯–೨೦, ಜಯನಗರ, ಬೆಂಗಳೂರು-೪; ಪುಟ: ೩೭, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦–೭೫, ೧೯೬೭.

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಫೆಬ್ರವರಿ ೧೯೬೮

ಸಂಪುಟ : ೩೧

ಸಂಚಿಕೆ : ೨

ಈ ಸಂಚಿಕೆಯಲ್ಲಿ . . .

ಪ್ರಾರ್ಥನೆ

[ಗೀತಾಂಜಲಿಯಿಂದ]

ಮನಸ್ಸೆಲ್ಲಿ ನಿಶ್ಶಂಕವೋ, ತಲೆಯೆಲ್ಲಿ ನೆಟ್ಟಗೆ ಮೇಲಕ್ಕೆ ಎತ್ತಿರುವುದೋ,

ಜ್ಞಾನಕ್ಕೆ ತಡಸಿಲ್ಲದ ಸ್ವತಂತ್ರವೆಲ್ಲಿದೆಯೋ,

ಎಲ್ಲಿ ಸಂಸಾರದ ಅರಗೋಡೆಗಳ ಇಟ್ಟಣೆಯಿಂದ ಜಗತ್ತು ಹೋಳು ಹೋಳಾಗಿ ವಿಂಗಡಿಸಲ್ಪಟ್ಟಿರುವುದಿಲ್ಲವೋ

ಮಾತುಗಳೆಲ್ಲಿ ನಿಮ್ನವಾದ ಸತ್ಯದಿಂದ ಜಲಕ್ಕನೆದ್ದು ಮೂಡುವುವೋ,

ಎಲ್ಲಿ ದಣಿವರಿಯದ ಗಾನವು ಪೂರ್ಣತೆಯ ಕಡೆಗೆ ತನ್ನ ಕಯ್ಗಳನ್ನು ಚಾಚುತ್ತಿದೆಯೋ,

ಎಲ್ಲಿ ವಿವೇಕದ ನಿರ್ಮಲವಾದ ಪ್ರವಾಹವು ನಿರ್ಜೀವವಾದ ಕಟ್ಟಳೆಗಳ ಭಯಾನಕವಾದ ಉಸುಬು ಕಾಡಿನಲ್ಲಿ ಹಾದಿಗೆಟ್ಟಿಲ್ಲವೋ,

ಎಲ್ಲಿ ಸದಾ ಹರಹುತ್ತಿರುವ ಆಚಾರ ವಿಚಾರಗಳಲ್ಲಿ ನೀನೆ ನಮ್ಮ ಮನಸ್ಸನ್ನು ಮುಂದೊಯ್ಯುತ್ತಲಿರುವೆಯೋ,

ನನ್ನ ತಂದೆಯೇ, ಆ ಸ್ವಾತಂತ್ರ್ಯ ಸ್ವರ್ಗದಲ್ಲಿ ನನ್ನೀ ಮಾತೃಭೂಮಿಯನ್ನು ಎಚ್ಚರಗೊಳಿಸು.

—ಎಂ. ಗೋವಿಂದ ಪೈ

ಊರ್ವರೆಯ ಉಡಿ ಸೇರಿದ ಧನ್ಯಾತ್ಮ

●● ವೈ. ಸು. ಶೇಷಗಿರಿರಾಯ

It matters not how long we live, but how!

ಜೀವನ ಸಂಗ್ರಾಮದಲ್ಲಿ ನಿರಸ್ತ್ರರಾಗಿಯೇ ಹೋರಾಡುವ ಮನೋಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದ ಹುಟ್ಟು ಪ್ರಚಂಡ ಎಂ. ರಾಮಮೂರ್ತಿಗಳ ಪ್ರತಿಭೆ ಚತುರ್ಮುಖ ವಾಗಿತ್ತು. ಕಾರ್ಯ ವ್ಯಾಪ್ತಿಯೂ ಒಂದೇ ರಂಗಕ್ಕೆ ಸೀಮಿತವಲ್ಲ. ಎಲ್ಲವನ್ನೂ ಮಾಡಬಲ್ಲೆನೆಂಬ ಆತ್ಮನಂಬಿಕೆ; ಯಶಸ್ಸು ಶತಸಿದ್ಧವೆಂಬ ಒರಟು ಹಠ.

ಒಮ್ಮೆ ನೋಡಿದರೂ ಸಾಕು. ಮನಸ್ಸಿನಲ್ಲಿ ನೆಟ್ಟು ಹೋಗುವ ಆಜಾನುಬಾಹುವಿನ ಆಕಾರ. ಮಾತೂ ಅಷ್ಟೆ. ಖಂಡ ತುಂಡ. ಸ್ಪಷ್ಟ. ಘಟ್ಟಿಯಾಗಿ ಎಳೆದೆಳೆದು ಆಡುವ ಗುಡುಗಿನ ಅಬ್ಬರ.

ಆಕಾರದಷ್ಟೇ ವಿಚಾರ; ವಿವೇಚನೆ. ಎದುರಾಳಿಯ ವಾದಕ್ಕೆ ಬಡಪಟ್ಟಿಗೂ ಸೊಪ್ಪುಹಾಕದ ವಿಶ್ಲೇಷಣೆ.

ಹೊಸತನವೆ ಬಾಳು

ಪತ್ರಕರ್ತರಾಗಿ, ಸಾಹಿತಿಯಾಗಿ, ಕನ್ನಡ ಚಳುವಳಿ ಗಾರರಾಗಿ, ವಾಗ್ಮಿಗಳಾಗಿ ಕಡೆಗೆ ಕೃಷಿಕರಾಗಿ ರಾಮ ಮೂರ್ತಿ ಕನ್ನಡಿಗರಿಗೆ ಪರಿಚಿತರು. ಈ ಎಲ್ಲ ಕ್ಷೇತ್ರಗಳಲ್ಲೂ ಅವರದೇ ಆದ ವ್ಯಕ್ತಿತ್ವ; ಲೋಕ ರೂಢಿಗೆ ವಿಭಿನ್ನವಾದ ಜಾಡು; ಹಿಡಿದ ಕೆಲಸವನ್ನು ಕಡೆ ಮುಟ್ಟಿಸಿಯೇ ತೀರುವ ಪರಾಕ್ರಮದ ಪಟ್ಟು; ಅದಲ್ಲದರಲ್ಲೂ ಯಾವುದೋ ನವ್ಯತೆ; ಜನತೆಯನ್ನು ನವ್ಯತೆಗೆ ಆಕರ್ಷಿಸುವ ಚಾಕಚಕ್ಯತೆ. ಗೆಲು ವಾದರೆ "ಲಾ ಕರೋನಾ" ಚುಟ್ಟಾ ಸೇದಿ ಮುಗಿಸಿದಂತಹ ತೃಪ್ತಿ. ಸೋಲು ಹೆಗಲೇರಿದರೆ ಮುಗಿದ, ತುಂಡು ಚುಟ್ಟಾ ವನ್ನು ಬಿಸಾಡುವಷ್ಟು ಲಾಘವ ಪ್ರವೃತ್ತಿ.

"ಹೊಸತನವೆ ಬಾಳು; ಹಳಸಿಕೆಯೆಲ್ಲವು ಸಾವು"– ಇದು ರಾಮಮೂರ್ತಿಗಳ ಜೀವನ ವೇದಾಂತ. ಸಿಡಿಲ ಸೇನೆಯೆ ಬರಲಿ; ನೆಲವೆ ಬಾಯ್ಬಿಡಲಿ – ಗುರಿಯತ್ತಲೇ ಗಮನ; ಅನ್ಯ ವಿಷಯಗಳು ಗೌಣ.

ಹೊಸತನಕ್ಕೆ ಸದಾ ಆಹ್ವಾನ ನೀಡುತ್ತಿದ್ದ ಅವರಿಗೆ ವೈವಿಧ್ಯದಲ್ಲಿ ಅಪಾರ ಅಭಿರುಚಿ. ದೊಡ್ಡಣ್ಣನವರ ಮೈದಾನ ದಲ್ಲಿ "ಬಾಂಬೆ ಷೋ" ನಡೆಸಿದ ಅನುಭವವೂ ಇತ್ತು; ಸುಭಾಷ್ ನಗರದಲ್ಲಿ ವೈಭವದ ರಾಜ್ಯೋತ್ಸವವನ್ನು ಆಚರಿಸಿದ ಕೀರ್ತಿಯೂ ಹೆಗಲೇರಿತ್ತು.

ರಾಮಮೂರ್ತಿಯವರು "ಗುರು ಮನೆ"ಯಲ್ಲಿ ಕಲಿತದ್ದು ಅಷ್ಟಕ್ಕಷ್ಟೆ. ಜೀವನ ವಿಶ್ವವಿದ್ಯಾನಿಲಯದಲ್ಲೇ ಅವರ ಸಾಧನೆ, ಅಧ್ಯಯನ, ಪ್ರವಚನ. ಜೀವನಾನುಭವವೇ ಪದವಿ; ಡಾಕ್ಟರೇಟ್.

ಸಾಂಪ್ರದಾಯಕ ರೂಢಿಗೆ ಎಂದೂ ಅವರಿಂದ ಪುರಸ್ಕಾರ ವಿಲ್ಲ; ಹೊಸ ಮಾರ್ಗದ ಆವಿಷ್ಕಾರವೇ ಹುಟ್ಟು ಗುಣ; ಹಂಬಲ.

ಸಿಗಾರಿಗೆ ಮಾನ್ಯತೆ

ಕನ್ನಡದಲ್ಲಿ ಎರಡು ಮೂರು ರೂಪಾಯಿಗಳಿಗೆ ಕಡಮೆ ಯಾಗಿ ಕಾದಂಬರಿಗಳು ದೊರಕದಿದ್ದ ಹದಿನೈದು ವರ್ಷಗಳ ಹಿಂದೆಯೇ ರಾಮಮೂರ್ತಿಗಳು ಕೇವಲ ಒಂಬತ್ತಾಣೆಗೆ ಕಾದಂಬರಿ ಕೊಡುವ ಕಿಸೆ ಹೊತ್ತಗೆಯ ಹೊಸ ಪ್ರಯೋಗ ನಡೆಸಿ ಸಾಧಿಸಿದರು. ಈ ಮಾಲೆಯಲ್ಲಿಯೇ ಅವರ ಪ್ರಥಮ ಪತ್ತೆದಾರಿ ಕಾದಂಬರಿ "ಕಾಲುವೆ ಮನೆ" ಪ್ರಕಟವಾಯಿತು; ಸಾವಿರ ಪುಸ್ತಕ ಅಚ್ಚು ಹಾಕಿಸಿ ಮಾರಾಟಕ್ಕೆ ಕನಿಷ್ಠ ನಾಲ್ಕು ವರ್ಷವಾದರೂ ಕಾಯಬೇಕಾಗಿದ್ದ ಆ ಕಾಲದಲ್ಲಿ ರಾಮಮೂರ್ತಿಗಳು ಹತ್ತು ಸಾವಿರ ಪುಸ್ತಕ ಅಚ್ಚು ಹಾಕಿಸಿ ಹದಿನೈದು ದಿನಗಳಲ್ಲಿ ಕೈತೊಳೆದುಕೊಂಡುಬಿಡುತ್ತಿದ್ದರು.

"ಆಷ್‌ಟ್ರೇ ಮೇಲೆ ಉರಿಯುತ್ತಿರುವ ಸಿಗಾರು"– ಇದು ರಾಮಮೂರ್ತಿಗಳು ತಮ್ಮ ಪುಸ್ತಕಗಳ ಮೇಲೆ ಹಾಕುತ್ತಿದ್ದ ಲಾಂಛನವಾಗಿತ್ತು. ಸಂಗಾತಿ ಸಿಗಾರಿಗೆ ಅಷ್ಟಾದರೂ ಮಾನ್ಯತೆ ಬೇಡವೆ!

"ಪತ್ತೇದಾರಿ ರಾಮಮೂರ್ತಿ" ಎಂದು ಜನತೆ ಗುರುತಿಸು ತ್ತಿದ್ದರೇ ವಿನಾ, ರಾಮಮೂರ್ತಿಗಳ ಲೇಖಣಿ–ವಿವೇಚನೆ ಕೇವಲ ಪತ್ತೇದಾರಿ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರ ಲಿಲ್ಲ. ಪ್ರಣಯ ವ್ಯವಹಾರಗಳೇ ಪ್ರಧಾನವಾಗಿದ್ದ ಅನೇಕ ಸಾಮಾಜಿಕ ಕಾದಂಬರಿಗಳನ್ನು ಅವರು ಬರೆದು "ಭಲೇ"

ಅನ್ನಿಸಿಕೊಂಡಿದ್ದರು. ಅವರು ಬರೆದ ಐತಿಹಾಸಿಕ "ಇತ್ತರಗಿ ಸೀಮೆ" ಕಾದಂಬರಿ, ಪ್ರವಾಸ ಸಾಹಿತ್ಯದ "ಕಾವೇರಿ" ಕನ್ನಡದ ಉತ್ತಮ ಗ್ರಂಥಗಳಾಗಿ ಉಳಿದಿವೆ. "ರಜಾಕರ ಗುಪ್ತಚಾರ" ಅವರ ಸಾಹಿತ್ಯ ಸರಮಾಲೆಯ ಒಂದು ಮಾಣಿಕ್ಯ.

ಪತ್ರಕರ್ತ

ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದ ಕಾಲದಲ್ಲಿ ರಾಮಮೂರ್ತಿಗಳು ಹೊರಡಿಸುತ್ತಿದ್ದ "ವಂದೇ ಮಾತರಂ" ಪತ್ರಿಕೆ ಸಂಬಂಧಿಸಿದವರಿಗೆ ಸಿಂಹವಾಣಿಯಾಗಿತ್ತು. "ಘೋಷಿಸುವ ಕಂಠಗಳು ಅರವತ್ತು ಕೋಟಿ; ಝುಳಪಿಸುವ ಖಡ್ಗಗಳು ಮೂವ್ವತ್ತು ಕೋಟಿ; ಅನಿತು ಬಲೆ ನೀನಬಲೆ ಎನಿತು ಎಲೆ ತಾಯಿ"–ಇದು ಅವರ ಪತ್ರಿಕೆಯ ಪ್ರತಿ ಸಂಚಿಕೆಯ ತಾರಕ ಮಂತ್ರ.

ಅನೇಕ ವರ್ಷಗಳ ಕಾಲ ರಾಮಮೂರ್ತಿಗಳು ಪ್ರಕಟಿಸಿದ ಬೋಧಪ್ರದ "ಕಾಮಕಲಾ" ಮಾಸ ಪತ್ರಿಕೆ ಜನಪ್ರಿಯವಾಗಿತ್ತು; ಕಡೆಗೊಮ್ಮೆ ಪ್ರತಿಕೂಲ ವಾತಾವರಣವೇರ್ಪಟ್ಟು ಕೈಸುಟ್ಟುಕೊಳ್ಳಬೇಕಾಯಿತು.

ಕನ್ನಡ ಚಳವಳಿಗಾಗಿ ಕರ್ನಾಟಕ ಸಂಯುಕ್ತ ರಂಗವು ಹೊರಡಿಸುತ್ತಿದ್ದ "ಯುವಜನ" ವಾರ ಪತ್ರಿಕೆಗೆ ರಾಮಮೂರ್ತಿ ಸಂಪಾದಕರಾಗಿ ಶ್ರಮಿಸಿದರು.

ಅವರು ಇತ್ತೀಚಿಗೆ "ಸುಜನ" ಎಂಬ ಸ್ವಂತ ವಾರ ಪತ್ರಿಕೆಯನ್ನು ಆರಂಭಿಸಿದ್ದರು. ಚುಟ್ಟಾ ಕಚ್ಚಿ, ಸೈಕಲ್ ಹತ್ತಿ, ಅವರೇ ಅಂಗಡಿಗಳಿಗೆ "ಸುಜನ" ಹಾಕಿ ಬರುತ್ತಿದ್ದರು.

ಕನ್ನಡದ ಗರ್ಜನೆ

ಶ್ರೀ ಅ.ನ. ಕೃಷ್ಣರಾಯರ ನೇತೃತ್ವದಲ್ಲಿ ಆರಂಭವಾದ ರಚನಾತ್ಮಕವಾದ ಕನ್ನಡ ಚಳುವಳಿಯಲ್ಲಿ ರಾಮಮೂರ್ತಿಗಳು ಲೇಖಣಿಯನ್ನು ಬದಿಗಿರಿಸಿ ನಿರಂತರವಾಗಿ ಸೇವೆ ಸಲ್ಲಿಸಿದರು. ಕನ್ನಡ ಚಳವಳಿಯ ಕಾಲದಲ್ಲಿಯೇ "ಎಂ. ರಾಮಮೂರ್ತಿ"ಗಳು ಮ. ರಾಮಮೂರ್ತಿ ಆದರು. ಆ ಕಾಲದಲ್ಲೇ ಅವರು ಮನೆಯಲ್ಲಿ ಮಾತೃಭಾಷೆಯಾದ ತೆಲುಗು ಮಾತನಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಸಂಯುಕ್ತ ರಂಗದ ಪ್ರಧಾನ ಕಾರ್ಯದರ್ಶಿಯಾಗಿ ಅವರು ಹಾಕಿದ ಗರ್ಜನೆ ನಡಸಿದ ಚಳವಳಿಗಳಿಂದ ಕನ್ನಡದ ಉತ್ಕರ್ಷಕ್ಕೆ ಗಣನೀಯವಾದ ಪರಿವರ್ತನೆಗಳಾದವು; ಮುಂದಿನ ಕನ್ನಡದ ಕೆಲಸಕ್ಕೆ ಮಾರ್ಗ ಹಸನಾಯಿತು.

ವಿವಿಧ ಕಾರಣಗಳಿಂದ ಕನ್ನಡ ಚಳವಳಿಯ "ಕಾವು" ಇಳಿದು ಹೋಗಲು ರಾಮಮೂರ್ತಿ ಮತ್ತೆ ಲೇಖಣಿ ಹಿಡಿದರು. ಸಾಹಿತ್ಯವೊಂದೇ ಹೊಟ್ಟೆ ತುಂಬಿಸಲಾರದೆಂದು ತೋಟದಲ್ಲಿ ಕೋಳಿ ಸಾಕಿದರು. ಈ ವಿಪ್ರಸಾಹಿತಿಗೆ ಏಕೋ ಕೋಳಿ ಆಗಿ ಬರಲಿಲ್ಲ. ಅನಂತರ ತರಕಾರಿ, ಹಣ್ಣು ಹಂಪಲುಗಳನ್ನು ಬೆಳೆಯಲಾರಂಭಿಸಿದರು. ಈ ಕೃಷಿಗೆ ಬಾವಿಯ ಅಗತ್ಯವಿತ್ತು . . .

ಸ್ವರ್ಗಕ್ಕೆ ಕಿಚ್ಚು

ರಾಮಮೂರ್ತಿಗಳದು ಚೊಕ್ಕವಾದ ಚಿಕ್ಕ ಸಂಸಾರ. ಬೆಚ್ಚನೆಯ ಸ್ವಂತ ಮನೆ ಇರದಿದ್ದರೂ, ವೆಚ್ಚಕ್ಕೆ ಕೈತುಂಬಾ ಹೊನ್ನು ಇಲ್ಲವಾದರೂ ಇಚ್ಛೆಯನರಿವ ಮಹಾಸತಿ ದೊರೆತಿದ್ದುದರಿಂದಲೇ ಅವರು ಧೈರ್ಯವಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚಿದ್ದರು.

ರಾಮಮೂರ್ತಿಗಳಿಗೆ ಲವ–ಕುಶರಂತಹ ಮುದ್ದಾದ ವರ್ಚಸ್ವಿಗಳಾದ ಇಬ್ಬರೇ ಮಕ್ಕಳು. ಅವರ ದಾಂಪತ್ಯ ಜೀವನದ ಬಹು ವರ್ಷದ ನಂತರ ಜನಿಸಿದ್ದ ದಿನಕರ ಮನೆಯ ಬೆಳಕಾಗಿದ್ದ. ತಂದೆಯ ಪ್ರೇಮದ ಪುತ್ರನಾಗಿದ್ದ. ದಿನಕರನನ್ನು ಬಿಜಾಪುರದ ಸೈನಿಕ ಶಾಲೆಗೆ ಕಳುಹಿಸಿ ಮಗನನ್ನು ದೇಶದ ಸತ್ಪ್ರಜೆಯನ್ನಾಗಿ ಮಾಡಬೇಕೆಂಬುದು ರಾಮಮೂರ್ತಿಗಳ ಹೃದ್ಗತವಾಗಿತ್ತು. ದಿನಕರನ ತಮ್ಮ ಮಂಜುನಾಥ ಆ ಮನೆಯ ಜೀವನಾಡಿಯಾಗಿದ್ದ. ದಂಪತಿಗಳ ಅನ್ಯೋನ್ಯತೆಗೆ ಸಂಬಂಧ ಸೇತುವೆಯಾಗಿದ್ದ.

ಮುಗ್ಧೆ, ಮ ಮ ತಾ ಮ ಯಿ, ಸಹೃದಯಸಂಪನ್ನೆ ಕಮಲಮ್ಮನವರು ರಾಮಮೂರ್ತಿಗಳ ಜೀವನ ಸಂಗಾತಿಯಾಗಿ ಪತಿಗೆ ಅನುಕೂಲ ಸತಿಯಾಗಿ, ಮುದ್ದು ಮಕ್ಕಳ ಮಾತೃವಾಗಿ ತಮ್ಮ ನಾರೀ ಬದುಕನ್ನು ಸಾರ್ಥಕ್ಯ ಪಡಿಸಿಕೊಂಡಿದ್ದಾರೆ. ಪತಿ ಗಳಿಸಿದ ಕೀರ್ತಿಗೆ ಪರೋಕ್ಷ ಭಾಜನರಾಗಿದ್ದಾರೆ.

ತೋಟದ ಸಸ್ಯ ಸಂಪದಕ್ಕೆ ನೀರುಣಿಸುವ ಸಲುವಾಗಿ ತೋಡಿಸಿದ ಬಾವಿ ಧಣಿಗೇ ಮೃತ್ಯುವಾಯಿತು; ರಾಮಮೂರ್ತಿಗಳ ಪಾಲಿಗೆ ಪಾತಾಳ ಬಿಲದ ಬಾಗಿಲಾಯಿತು; ವಂಶದ ಎರಡು ಕುಡಿಗಳಿಗೂ ಮಿತ್ಯಾಯಿತು.

ಆಪ್ತ ಮಿತ್ರರ "ರಾಮು", ಓದುಗರ "ಪತ್ತೇದಾರಿ ರಾಮಮೂರ್ತಿ", ಕನ್ನಡಿಗರ "ಮ. ರಾಮಮೂರ್ತಿ",

ಇತರರ "ಚುಟ್ಟಾ ರಾಮಮೂರ್ತಿ"–ಎಲ್ಲರ ಪಾಲಿಗೂ ಇನ್ನಿಲ್ಲ.

ಊರ್ವರೆಯ ಉಡಿಗೆ

ನೂರಾರು ಕೃತಿಗಳಿಂದ ಜನತೆಯನ್ನು ರಂಜಿಸಿ, ವಿಚಾರ ಪ್ರಚೋದಿಸಿ, ಚಳವಳಿ, ವೇದಿಕೆಗಳಿಂದ ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸಿ, "ವೀರಕೇಸರಿ"ಯ ಸಮರ್ಥ ಪುತ್ರರಾಗಿ ಧೀಮಂತ ಬಾಳ್ವೆ ನಡೆಸಿ, ಜೀವನದ ಮಟ ಮಟ ಮಧ್ಯಾಹ್ನದಲ್ಲಿ ಊರ್ವರೆಯ ಉಡಿಯಲ್ಲಿ ಅಡಗಿ ಹೋದ ಮ. (ಮರೆಯಲಾಗದ) ರಾಮಮೂರ್ತಿ ಕೀರ್ತಿ ದೇಹಿಗಳಾಗಿ ಅನಂತಕಾಲ ಕನ್ನಡ ನಾಡಿನಲ್ಲಿ ಉಳಿಯುವುದು ನಾವು ಉಸಿರಾಡುತ್ತಿರುವಷ್ಟೇ ಸತ್ಯ. ಪರಲೋಕದ ಪುಣ್ಯ ದ್ವಾರದಲ್ಲಿ ನಿಂತು ಕನ್ನಡ ಉನ್ನತಿಯನ್ನು ಹಾರೈಸುತ್ತಿರುವ ಆ "ಚೈತನ್ಯ"ಕ್ಕೆ ಕನ್ನಡಿಗರ ಮಹಾ ಪ್ರಣಾಮ.

('ಕನ್ನಡಪ್ರಭ' ಕೃಪೆಯಿಂದ)

ಕರುನಾಡ ಕೀರ್ತಿ ಮ. ರಾಮಮೂರ್ತಿ

●

ಹುಟ್ಟಿನಿಂದಲೆ ಧೀರ, ಚಳವಳಿಯ ವೀರ,
ಮೆಟ್ಟಿನಿಂತೆನೀ ಕನ್ನಡವನುಳಿದ ಮಾತನು ನೇರ.
ನೂರು, ಸಾವಿರವಿರಲಿ ಜನ–ಸಿಡಿಲ ಮಾತು,
ಯಾರಮೇಲಾದರೂ ಪರಿಣಾಮ ಮಾಡೀತು.
ಎದುರಾಳಿ ನುಡಿದಾಗ ನೀವು ಸಿಡಿಲು ಮಿಂಚು,
ಒಂದೆ ನಿಮಗೆದುರಾಳಿ ತಿರೆ–ಹೂಡಿತ್ತು ಸಂಚು!
ಕನ್ನಡದ ಬದುಕಿದೇ ತನ್ನ ಬದುಕೆಂದಿತ್ತು ನಿಮ್ಮಾತ್ಮ,
ನಿಮ್ಮ ವೀರವಾಣಿಯು ಮೊಳಗಿ–ಬೆಳಗಿತ್ತು ನಮ್ಮಾತ್ಮ.

* * *

ನಮ್ಮ ಜನ ನಮ್ಮ ನೆಲದಲ್ಲೆ ಹಿರಿದಾಗಿ ಬಾಳಿ
ಹೆಮ್ಮೆಯಲಿ ತಲೆಯೆತ್ತಿ ನಿಲ್ಲಲಿಲ್ಲ –
ಇದು ನಿಮ್ಮ ಕೊರಗು–ಅದಕಾಗಿ ಕಟ್ಟಿದ್ದ
ಕಂಕಣವ ಕೊನೆಯುಸಿರವರೆಗೂ ಬಿಚ್ಚಲಿಲ್ಲ.
ಊರಚಿಂತೆಗೆ ವೀರನಾಯ್ಕ ಬಡವಾದಂತೆ,
ನಿಮ್ಮ ಚಿಂತೆಗೆ ನಿಮಗೆ ಬಿಡುವಿಲ್ಲ–ವಾಸ ಕನ್ನಡ
ಜನದ ಸಂತೆ!

ನಿಮ್ಮ ಯೋಜನೆ ನೂರು, ಆಸೆ ಸಾವಿರ!
ಕನ್ನಡದ ನೆಲದಲ್ಲಿ ಮೊಳೆತ ಬೀಜಸಾರ.
ಇನ್ನೆಲ್ಲಿ ನಿಮ್ಮ ಆ ಧೀರ ವಾಣಿಯ ಸದ್ದುಸಡಗರ,
ಮಣ್ಣಲ್ಲಿ ಮಣ್ಣಾಗಿ ಸಜೀವ ಸಮಾಧಿಯಾಯಿತೆ ಧೀರ!
ಬದುಕ ನೀಡುವ ಭುವಿಯೆ ಮುನಿದು ಮಿತ್ಯಾಯಿತು,
ಅದಕೆ ಸಾಲದು ಒಂದೆ ಜೀವ–ಐದನೆಳೆಯಿತು.

* * *

ನಡೆನುಡಿಯು, ತನುಮನಗಳೆಲ್ಲವೂ ಧೀರ ಗಂಭೀರ,
ನಾಡು ಋಣಿ ನಿಮ್ಮ ಮನೆತನಕೆ ವೀರ!
ನಿಮ್ಮಂತೆ ನಡೆದರೆ ಆಗಲದು ನಿಮಗೆ ಸ್ಮಾರಕ,
ನಮ್ಮ ಕರ್ತವ್ಯ ಪ್ರಜ್ಞೆಗೆ ನೀವು ದಿವ್ಯ ಬೆಳಕು.
ಹಿರಿ ಕಿರಿಯರೆಲ್ಲರಿಗೂ ಮಮತೆಯ ಬಂಧು
ಮ. ರಾಮಮೂರ್ತಿ,
ಕರುನಾಡು–ನುಡಿ–ಗುಡಿಯಿರುವನಕ ಅಮರ
ನಿಮ್ಮ ಕೀರ್ತಿ.

ದಿನಾಂಕ ೧-೧-೧೯೬೭ರಂದು ಪರಿಷತ್ತಿನಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ಓದಿದ್ದು

●

ಎಚ್. ಎಂ. ರಂಗನಾಥ್

ದಿವಂಗತ ಶ್ರೀ ಬಲಿಪ ನಾರಾಯಣ ಭಾಗವತರು

■■ ಕೆ. ಪು. ಸೀತಾರಾಮ ಕೆದಿಲಾಯ

ಯಕ್ಷಗಾನ ಕಲಾತಪಸ್ವಿ ಶ್ರೀ ಬಲಿಪ ನಾರಾಯಣ ಭಾಗವತರು ಕಳೆದ ೧೯೭೭ನೆಯ ಇಸವಿ ಡಿಸೆಂಬರ್ ತಿಂಗಳ ತಾರೀಕು ೩ನೆಯ ಶನಿವಾರ ರಾತ್ರಿ ನಿಧನರಾದರು. ಬರಿಯ ನಾಲ್ಕೈದು ದಿವಸಗಳಿಂದ ಅಸ್ವಸ್ಥರಾಗಿದ್ದ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಕೊಂಡುಹೋದರೂ ಉಳಿಸಲು ಅಸಾಧ್ಯವಾಯಿತು. ಅವರ ನಿಧನದಿಂದಾಗಿ ಯಕ್ಷಗಾನದ ಹಿರಿಯ ಭಾಗವತರನ್ನು ಕನ್ನಡನಾಡು ಕಳೆದುಕೊಂಡಂತಾಗಿದೆ.

ಈಗ ಕೇರಳಕ್ಕೆ ಸೇರಿದ ಕಾಸರಗೋಡು ತಾಲ್ಲೂಕಿನ ಪಡ್ರೆ ಗ್ರಾಮದ ಬಲಿಪರಜೂಲು ಅವರ ಜನ್ಮಸ್ಥಳ. ತಂದೆ ಕರಾಡ ಬ್ರಾಹ್ಮಣವರ್ಗಕ್ಕೆ ಸೇರಿದ ಮಹಾದೇವಭಟ್ಟರು. ತಾಯಿ ದುರ್ಗೆ (ದುಗ್ಗಮ್ಮ) ಎಂಬುವರು. ಬಲಿಪ ನಾರಾಯಣ ಭಾಗವತರಿಗೆ ಬಾಲ್ಯದಲ್ಲಿಯೇ ಯಕ್ಷಗಾನದಲ್ಲಿ ಬಹಳ ಅಭಿರುಚಿ ಇತ್ತು. ಯಕ್ಷಗಾನ, ಬಯಲಾಟ, ತಾಳಮದ್ದಳೆ ಕೂಟಗಳಿಗೆ ಎಳವೆಯಲ್ಲಿಯೇ ತಪ್ಪದೆ ಹೋಗುತ್ತಿದ್ದರು. ಮುಂದೆ ಪ್ರಸಿದ್ಧ ಭಾಗವತರಾದ ಶಂಕರ ಪಾಡಾಳಿಯವರಲ್ಲಿ ಯಕ್ಷಗಾನದ ಹಾಡುಗಾರಿಕೆಯನ್ನು ಅಭ್ಯಾಸಮಾಡಿದರು. ಅಷ್ಟರಲ್ಲಿಯೇ ತೃಪ್ತರಾಗದೆ ವಿದ್ವಾಂಸರಾದ ಕೂಡ್ಲು ಸುಬ್ರಾಯ ಶ್ಯಾನುಭಾಗರ ಶಿಷ್ಯರಾಗಿ ಸುಮಾರು ಹತ್ತು ವರ್ಷಗಳವರೆಗೆ ಹಾಡುಗಾರಿಕೆಯ ಸಾಧನೆಯನ್ನು ಮುಂದುವರಿಸಿದರು. ಈ ಕಾಲದಲ್ಲಿ ಶಾಸ್ತ್ರೀಯ ಸಂಗೀತದ ಅಭ್ಯಾಸವನ್ನೂ ಮಾಡಿದರು. ಆದುದರಿಂದ ಮುಂದೆ ಯಕ್ಷಗಾನದ ಹಾಡುಗಾರಿಕೆಯಲ್ಲಿ ನಿರ್ದಿಷ್ಟವಿಧಾನವನ್ನು ಕಂಡುಹಿಡಿಯಲು ಸಮರ್ಥರಾದರು.

ಹಳ್ಳಿಗರು ತಮ್ಮ ಮನೋರಂಜನೆಗಾಗಿ ಪ್ರದರ್ಶಿಸುತ್ತಿದ್ದ ಯಕ್ಷಗಾನ ಕಲೆಯಲ್ಲಿ ವಿದ್ವಜ್ಜನರೂ ಆಸಕ್ತಿವಹಿಸುವಂತೆ ಶ್ರಮಿಸಿದರು. ಯಕ್ಷಗಾನದ ಸರ್ವವಿಷಯಗಳನ್ನೂ ಕೂಲಂಕಷವಾಗಿ ಅರಿತು ಪರಿಣತರಾಗಿ ನೂತನ ವಿಧಾನಗಳನ್ನು ಆಚರಣೆಗೆ ತಂದರು. ಹಿಂದಿನ ಭಾಗವತರು ಕೋಟು ಧರಿಸಿ ಮುಂಡಾಸು ಕಟ್ಟಿ ವೇಷಧಾರಿಗಳ ಹಿಂದೆ ನಿಂತುಕೊಂಡೇ ಹಾಡುತ್ತಿದ್ದರು. ಬಲಿಪರು ರಂಗಸ್ಥಳದಲ್ಲಿ ವೇಷಧಾರಿಗಳ ಹಿಂಬದಿಯಲ್ಲಿ ಕುಳಿತು ಹಾಡುವ ರೂಢಿಯನ್ನು ತಂದರು. ಆ ಕಾಲದಲ್ಲಿ ವಿಶಾಲಪ್ರದೇಶದಲ್ಲಿ ನಿರ್ಮಿಸಿದ ರಂಗಸ್ಥಳದಲ್ಲಿ ಬಯಲಾಟವು ಜರುಗುತ್ತಿತ್ತು. ಆಗ ಇಂದಿನಂತೆ ಧ್ವನಿವರ್ಧಕಗಳ ಬಳಕೆ ಇರಲಿಲ್ಲ. ಆದರೂ ಅವರ ಹಾಡುಗಳು ಮೂರು ನಾಲ್ಕು ಮೈಲು ದೂರದವರೆಗೆ ಜಾಗಟೆ, ಚೆಂಡೆ, ಮದ್ದಳೆಗಳ ನಾದದೊಂದಿಗೆ ಕೇಳಿಸುತಿತ್ತು. ಅವರ ಕಂಠಸ್ವರವು ಅದ್ವಿತೀಯವಾಗಿತ್ತು. ರಸಪ್ರತೀತಿಗೆ ಅನುಕೂಲವಾಗುವಂತೆ ಉಪಯುಕ್ತ ರಾಗಗಳನ್ನು ಹಾಡುಗಳಿಗೆ ಹೊಂದಿಸಿ, ಅರ್ಥಕ್ಲಿಷ್ಟತೆ ಉಂಟಾಗದಂತೆ ಸ್ಪಷ್ಟವಾಗಿ ಅಕ್ಷರಗಳನ್ನು ಉಚ್ಚರಿಸಿ ಹಾಡುತಿದ್ದರು. ಅನೇಕ ಯಕ್ಷಗಾನ ಪ್ರಸಂಗಗಳು ಕಂಠಪಾಠವಾಗಿದ್ದುವು. ಅವರು ತೆಂಕುತಿಟ್ಟಿನ ಅನೇಕ ಮೇಳಗಳಲ್ಲಿ ಹಲವು ವರ್ಷಗಳಲ್ಲಿ ಭಾಗವತರಾಗಿ ಊರೂರುಗಳಲ್ಲಿ ಸಂಚರಿಸಿದರು. ಅನೇಕ ಭಾಗವತರಿಗೂ ವೇಷಧಾರಿಗಳಿಗೂ ಗುರುಗಳಾಗಿ ಪ್ರಸಿದ್ಧಿಹೊಂದಿದರು. ಕೊನೆಗೆ ವೃದ್ಧಾಪ್ಯದ ದೆಸೆಯಿಂದ ಮೇಳಗಳೊಡನೆ ಅಲೆದಾಡುವುದನ್ನು ಬಿಟ್ಟರೂ ವಿಶೇಷ ಆಹ್ವಾನಗಳಿದ್ದರೆ ಯಕ್ಷಗಾನ ಬಯಲಾಟ ತಾಳಮದ್ದಳೆಗಳ ಕೂಟಗಳಿಗೆ ಹೋಗುತ್ತಿದ್ದರು. ತಮ್ಮ ಕೊನೆಗಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಮನೆಮಾಡಿಕೊಂಡು ನೆಲಸಿದ್ದರು.

ಕಳೆದ ೧೯೭೭ನೆಯ ಇಸವಿ ನವಂಬರ್ ೧೮ರಂದು ಬಂಟ್ವಾಳ ತಾಲೂಕಿನ ಕುರ್ನಾಡು ಮುಡಿಪು ಎಂಬಲ್ಲಿ ಇರ ಸೋಮನಾಥೇಶ್ವರ ಯಕ್ಷಗಾನ ನಾಟಕ ಮಂಡಳಿಯವರ ಕಲಾಪ್ರದರ್ಶನದಲ್ಲಿ ಭಾಗವತರಾಗಿ ಭಾಗವಹಿಸಿದ್ದರು. ಎಪ್ಪತ್ತಾರು ವರ್ಷ ಪ್ರಾಯದಲ್ಲಿಯೂ ಅವರ ಕಂಠಸ್ವರವು ಹೃದಯಂಗಮವಾಗಿತ್ತು. ಮರಣಹೊಂದುವ ನಾಲ್ಕೈದು ದಿನಗಳ ಹಿಂದೆ ಕಾರ್ತಿಕ ಪೂರ್ಣಿಮೆಯ ದಿನ ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವರ ಸನ್ನಿಧಿಯಲ್ಲಿ ತನ್ನ ಕೊನೆಯ ಹಾಡುಗಾರಿಕೆಯನ್ನು ನಡೆಸಿದ್ದರು. ತಮ್ಮ ಹುಟ್ಟೂರಾದ ಪಡ್ರೆ ಗ್ರಾಮಕ್ಕೆ ಹೋಗಿ ತನ್ನ ಬಂಧುಮಿತ್ರರನ್ನು ಕೊನೆಯಬಾರಿ ಸಂದರ್ಶಿಸಿದರು. ತಮಗೆ ಪ್ರಿಯವಾದ ಪಂಚವಟಿ ವಾಲಿ ಸುಗ್ರೀವರ ಕಾಳಗದ ಪದ್ಯಗಳನ್ನು ಮಿತ್ರರ ಸಮ್ಮುಖದಲ್ಲಿ ಸುಶ್ರಾವ್ಯವಾಗಿ ಹಾಡಿ ಅವರನ್ನು ಸಂತೋಷಪಡಿಸಿದ್ದರು.

ಕಳೆದ ಅರ್ಧಶತಮಾನ ಕಾಲ ಯಕ್ಷಗಾನ ಕಲೆಗಾಗಿ ಶ್ರಮಿಸಿದ ಬಲಿಪರಿಗೆ ಮೈಸೂರು ಸರಕಾರವು ನಿವೃತ್ತ ಕಲಾವಿದರೆಂದು ಮಾಸಿಕ ನಿವೃತ್ತಿ ವೇತನವನ್ನು ನೀಡುತ್ತಿತ್ತು. ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಪ್ರಶಸ್ತಿ ಸಂಭಾವನೆಗಳನ್ನು ಇತ್ತು ಪ್ರೋತ್ಸಾಹಿಸಿತ್ತು. ಅನೇಕ ಸಂಘಸಂಸ್ಥೆಗಳು ಪಾರಿತೋಷಕಗಳನ್ನು ನೀಡಿ ಮಾನಪತ್ರಗಳನ್ನು ಅರ್ಪಿಸಿದ್ದವು. ೧೯೬೫ನೆಯ ಏಪ್ರಿಲ್ ತಿಂಗಳಲ್ಲಿ ಕಾಸರಗೋಡಿನ ಮಧೂರು ಗಣಪತಿ ದೇವಸ್ಥಾನದಲ್ಲಿ ಜರಗಿದ ಕೋಟಿನಾಮಾರ್ಚನಾ ಮಹೋತ್ಸವ ಕಾಲದಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳು ಶಾಲು ಮತ್ತು ರಜತ ಪಾತ್ರೆಗಳನ್ನು ಕೊಟ್ಟು ಪುರಸ್ಕರಿಸಿದ್ದರು.

ಬಲಿಪರು ಸುಮಾರು ಇಪ್ಪತ್ತು ಯಕ್ಷಗಾನ ಪ್ರಬಂಧಗಳನ್ನು ರಚಿಸಿರುವರು. ಈಗ ಯಕ್ಷಗಾನ ಪ್ರಸಂಗಗಳಾಗಿರುವ ಪ್ರಚಲಿತ ಕಥಾವಸ್ತುಗಳನ್ನೇ ಆರಿಸಿ, ನವೀನ ರೀತಿಯಲ್ಲಿ ಬಯಲಾಟ ತಾಳಮದ್ದಳೆ ಕೂಟಗಳಿಗೆ ಅನುಕೂಲವಾಗುವಂತೆ ಬರೆದಿರುವರು. ಸರಳ ಶೈಲಿಯ ವಿವಿಧ ರಾಗ ತಾಳ ಬದ್ಧವಾದ ಹಾಡುಗಳು ಅವರ ಕೃತಿಗಳಲ್ಲಿ ಗೋಚರಿಸುವುವು. ಅವರು ರಚಿಸಿದ ಅಮೂಲ್ಯ ಕೃತಿಗಳನ್ನು ಪ್ರಕಟಿಸುವುದು ಯಕ್ಷಗಾನ ಕಲಾಭಿಮಾನಿಗಳಿಗೆ ಸೇರಿದೆ.

ರಾಮಾಯಣ ಪ್ರಸಂಗಗಳ ಕರ್ತೃ ಕುಂಬಳೆಯ ಪಾರ್ತಿ ಸುಬ್ಬನಲ್ಲವೆಂದು ಡಾ|| ಶಿವರಾಮ ಕಾರಂತರು ಅಭಿಪ್ರಾಯಪಟ್ಟಾಗ ಪಾರ್ತಿ ಸುಬ್ಬನು ಕುಂಬಳೆಯವನೆಂದೂ, ಅವನೇ ರಾಮಾಯಣ ಪ್ರಸಂಗಗಳ ಕರ್ತೃವೆಂದೂ ತಮ್ಮ ಹೇಳಿಕೆಯನ್ನು ವ್ಯಕ್ತಪಡಿಸಿರುವರು. ಪಾರ್ತಿ ಸುಬ್ಬನು ಭಾಗವಹಿಸುತ್ತಿದ್ದ ಬಯಲಾಟಗಳನ್ನು ನೋಡಿರುವೆವೆಂದು ಬಲಿಪರ ಅಜ್ಜ ಕೃಷ್ಣಭಟ್ಟರು ಹೇಳುತ್ತಿದ್ದರಂತೆ! ಈ ವಿಷಯವನ್ನು ಬಲಿಪರು ಜನತೆಯ ಮುಂದೆ ವಿಶದಪಡಿಸಿರುವರು. ಪಾರ್ತಿ ಸುಬ್ಬನ ರಾಮಾಯಣ ಪ್ರಸಂಗಗಳು ಅವರಿಗೆ ಅಚ್ಚುಮೆಚ್ಚಾಗಿದ್ದುವು.

ನಾನು ೧೯೬೬ನೆಯ ಅಕ್ಟೋಬರ್ ತಿಂಗಳಲ್ಲಿ ಪಂಚವಟಿ ವಾಲಿ ಸುಗ್ರೀವರ ಕಾಳಗವನ್ನು ಸಂಪಾದಿಸುವ ಅಪೇಕ್ಷೆಯಿಂದ ಅವರ ವಿಟ್ಲದ ಮನೆಗೆ ಹೋಗಿದ್ದೆನು. ಆ ದಿನ ರಾತ್ರಿ ಬಾಯಿಗೆ ಬರುತಿದ್ದ ಪಂಚವಟಿ ವಾಲಿ-ಸುಗ್ರೀವರ ಕಾಳಗವನ್ನು ಸಂಪೂರ್ಣವಾಗಿ ನಿದ್ರೆ ಬಿಟ್ಟು ಹಾಡಿದರು. ಅವರ ಸ್ಮರಣಶಕ್ತಿಯನ್ನು ಕಂಡು ಆಶ್ಚರ್ಯಪಟ್ಟು ಹಾಡುಗಳನ್ನು ಬರೆದುಕೊಂಡೆನು. ನನ್ನ ಯಕ್ಷಗಾನ ಛಂದಸ್ಸು ಪುಸ್ತಕವನ್ನು ಓದಿ ಅವರು ಹಿಂದೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹಿರಿಯರಾದ ಅವರಲ್ಲಿ ಮರಳಿ ಸಂಭಾಷಿಸುವ ಭಾಗ್ಯ ನನಗಿಲ್ಲವಾಯಿತು. ತಮ್ಮ ಜೀವಿತದ ಕೊನೆಯವರೆಗೂ ಯಕ್ಷಗಾನ ಕಲೆಗಾಗಿ ದುಡಿದ ಶ್ರೀ ಬಲಿಪ ನಾರಾಯಣ ಭಾಗವತರು ಅಳಿದರೂ ಅವರ ಹೆಸರು ಚಿರಸ್ಥಾಯಿಯಾಗಿದೆ.

ಲೋಕದಾಟ

●

ಏನಪೇಳ್ಲಿ ಲೋಕದಾಟ ಒಂದು ತಿಳಿಯದಮ್ಮಾ
ಮಾನವಂಗೆ ತಿಳಿಯದಂತೆ ಸೃಜಿಸುತಿಹನು ಬೊಮ್ಮ || ಪ ||

ಬುದ್ಧಿವಂತ ಮನುಜರೆಲ್ಲ ಸಿದ್ಧಿ ಕಾಣ್ಬುದಿಲ್ಲ
ಸಿದ್ಧಿಕಾಣ್ಬ ಮನುಜರೆಲ್ಲ ಬುದ್ಧಿವಂತರಲ್ಲ || ೧ ||

ಹಣವ ಗಳಿಪ ಮನುಜರೆಲ್ಲ ಗುಣದಿ ಶ್ರೇಷ್ಠರಲ್ಲ
ಗುಣದಿ ಶ್ರೇಷ್ಠ ಮನುಜರೆಲ್ಲ ಹಣವ ಗಳಿಪುದಿಲ್ಲ || ೨ ||

ಸೊಗದಿ ಉಂಬ ಮನುಜರೆಲ್ಲ ಗುಣದಿ ಶ್ರೇಷ್ಠರಲ್ಲ
ಕಷ್ಟಪಡುವ ಮನುಜರೆಲ್ಲ ಸೊಗದಿ ಉಣುವುದಿಲ್ಲ || ೩ ||

ಜಯವ ಗಳಿಪ ಮನುಜರೆಲ್ಲ ಶಕ್ತಿವಂತರಲ್ಲ
ಶಕ್ತಿವಂತ ಮನುಜರೆಲ್ಲ ಜಯವ ಗಳಿಪುದಿಲ್ಲ || ೪ ||

ಹಣೆಯ ಬರಹ ಗೆಲ್ಲೆ ನರಗೆ ಸುಲಭಸಾಧ್ಯವಲ್ಲ
ಮಣಿದು ಶಿವನ ನೆನೆಯಲವಗೆ ಮುಕ್ತಿಯೀವನಲ್ಲ || ೫ ||

■

ಪಿ. ಬಸವಣ್ಣ

ಗೋವಿಂದ ಪೈ ಅವರ 'ಗೀತಾಂಜಲಿ'

□□ **ಸುಮುನಾ**

ಆಧುನಿಕ ಕನ್ನಡ ಸಾಹಿತ್ಯಕ್ಕೆ ಬಹುಮುಖ ಸೇವೆ ಸಲ್ಲಿಸಿದ, ನುಡಿಯ ಬೆಳವಣಿಗೆಗೆ ನೆರವಾದ ಹಿರಿಯರಲ್ಲಿ ದಿವಂಗತ ರಾಷ್ಟ್ರಕವಿ ಗೋವಿಂದ ಪೈಯವರ ಸ್ಥಾನ ಕಡಮೆಯದೇನಲ್ಲ. ಅವರು ತಮ್ಮ ಸುದೀರ್ಘ ಬಾಳಿನಲ್ಲಿ ಆರು ದಶಕಗಳಿಗೂ ಮಿಕ್ಕು ಸಾರಸ್ವತ ಸೇವೆಯನ್ನು ಸಲ್ಲಿಸಿದವರು. ಸಂಶೋಧನ ಜಗತ್ತಿಗಂತೂ ಅವರ ಕೊಡುಗೆ ಅದ್ವಿತೀಯವಾದುದು. ನಾಡು, ನುಡಿ, ಆಳಿದ ಅರಸುಮನೆತನಗಳ ಪ್ರಾಚೀನತೆಯ ಬಗೆಗೆ ಅಧಿಕಾರಯುತವಾಗಿ ನುಡಿಯಬಲ್ಲ ಅನುಪಮ ವಿದ್ವತ್ತು ಪೈಯವರದಾಗಿತ್ತು. ಮಂಜೇಶ್ವರದ ಹಿರಿಯ ಕವಿ, ಸಂಶೋಧಕರು ನಾಲ್ಕು ವರ್ಷಗಳ ಹಿಂದೆ ನಮ್ಮನ್ನಗಲಿದುದು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ತುಂಬಲಾಗದ ನಷ್ಟವಾಗಿದೆ.

ಕಳೆದ ವರ್ಷ (೧೯೬೬) ಗೋವಿಂದಪೈಯವರ ಅಮೂಲ್ಯ ಸಾರಸ್ವತ ಕೊಡುಗೆಯನ್ನು ಸಮಗ್ರರೂಪದಲ್ಲಿ ಪರಿಚಯ ಮಾಡಿಕೊಡಬಲ್ಲ 'ಗೋವಿಂದಪೈ ವಾಙ್ಮಯ ದರ್ಶನ' ಎಂಬ ಗ್ರಂಥವೊಂದನ್ನು ಶ್ರೀ ಶ್ರೀನಿವಾಸ ಹಾವನೂರ ಮತ್ತು ಶ್ರೀ ಮ. ವಿ. ನಾಯಕ–ಅವರು "ರಾಷ್ಟ್ರಕವಿ ಗೋವಿಂದಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ" ಸಂಸ್ಥೆಯ ಆಶ್ರಯದಲ್ಲಿ, ಸಂಪಾದಿಸಿ ಪ್ರಕಟಿಸಿ ಆ ಮೂಲಕ ಸಾಹಿತ್ಯಾಭ್ಯಾಸಿಗಳಿಗೆ ಹಾಗೂ ಪೈಯವರ ಸಾರಸ್ವತದಲ್ಲಿ ಆಸಕ್ತರಾದ ಸಂಶೋಧಕರಿಗೆ ಮಹೋಪಕಾರವನ್ನು ಮಾಡಿದ್ದಾರೆ. "ಗೋವಿಂದಪೈಯವರ ಸಾಹಿತ್ಯ ಸೃಷ್ಟಿ ಅಗಾಧವಾದುದು. ಕವಿತೆ, ನಾಟಕ, ಖಂಡಕಾವ್ಯ, ಪ್ರಬಂಧ–ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಅವರು ಸಿದ್ಧಹಸ್ತರು. ಸಾಹಿತ್ಯ ಮತ್ತು ಇತಿಹಾಸ ಸಂಬಂಧವಾದ ಸಂಶೋಧನೆಯಲ್ಲಂತೂ ಅವರು ಅದ್ವಿತೀಯರು . . . ಅವರ ಲೇಖನಗಳ ವಿಸ್ತಾರ, ವಿಷಯ ವೈವಿಧ್ಯ, ವಿಚಾರ ಸಂಪತ್ತಿನ ಕಡೆಗೆ ಗಮನ ಹರಿಸಿದಾಗ, ಎಂಥ ವಿದ್ವಾಂಸನಾದರೂ ದಿಗ್ಭ್ರಮೆಗೊಳ್ಳದಿರಲಾರನು."[1] ಅವರ ಪ್ರಬಂಧಗಳ ಸಂಖ್ಯೆ ಸುಮಾರು ೧೮೦, ಕವಿತೆಗಳದ್ದು ೧೪೪೪; ಕೇವಲ ಇವುಗಳನ್ನೇ ಒಟ್ಟುಗೂಡಿಸಿ ಪ್ರಕಟಿಸಿದರೆ ಸುಮಾರು ೮೫೦೦ ಪುಟಗಳಷ್ಟಾಗುತ್ತದೆ–ಎಂದು ಈ ಗ್ರಂಥದಲ್ಲಿ ತೋರಿಸಲಾಗಿದೆ.[2] ಇಷ್ಟಾದರೂ "ಪೈ ಬರೆದುದು ಏನೇನು? ಮತ್ತು ಎಲ್ಲೆಲ್ಲಿ? ಎಂಬುದರ ಖಚಿತವಾದ ಸಮಗ್ರ ಕಲ್ಪನೆ ಯಾರಿಗೂ ಇರಲಿಲ್ಲ. ತಮ್ಮ ಕೃತಿಗಳ ಪ್ರಕಟನೆಯ ವಿಚಾರದಲ್ಲಿ ಸ್ವತಹ ಪೈಯವರು ನಿರಾಸಕ್ತರಾಗಿದ್ದರು. ಇಷ್ಟೇ ಅಲ್ಲ, ಇತರರು ಆ ಕೆಲಸ ಮಾಡುವುದಕ್ಕೆ ಮುಂದೆ ಬಂದರೆ ವಿರೋಧಿಸುತ್ತಿದ್ದರು."[3] ಅಂತಹ ನಿರಾಸಕ್ತ, ನಿರ್ಲಿಪ್ತ ಗುಣ ಅವರದು. ಇಂತಹ ಪರಿಸ್ಥಿತಿಯಲ್ಲಿಯೂ ಪೈಯವರ ಸಾಹಿತ್ಯದಲ್ಲಿ ಅಚಲಶ್ರದ್ಧೆ, ಆಸಕ್ತಿಗಳನ್ನಿಟ್ಟುಕೊಂಡು ಆಳವಾಗಿ ಅಭ್ಯಸಿಸಿ, ಅವರಿಗೆ ಚಿರಪರಿಚಿತರೇ ಆಗಿದ್ದ ಶ್ರೀ ಹಾವನೂರ ಹಾಗೂ ಶ್ರೀ ನಾಯಕ ಅವರು ತಮ್ಮ 'ಗೋವಿಂದಪೈ ವಾಙ್ಮಯ ದರ್ಶನ' ಕೃತಿಯ ಮೂಲಕ ದಿವಂಗತ ಪೈಯವರ ಸಮಗ್ರ ಸಾರಸ್ವತ ನಿಧಿಯನ್ನು ವೈಜ್ಞಾನಿಕ ದೃಷ್ಟಿಯಿಂದ ವಿವೇಚಿಸಿ, ವಿಶ್ಲೇಷಿಸಿ ಸುಸಮರ್ಥವಾಗಿ ಪರಿಚಯ ಮಾಡಿಕೊಡುವ ಪ್ರಯತ್ನದಲ್ಲಿ ಯಶಸ್ವಿಗಳಾಗಿ, ಕೃತಕಾರ್ಯರಾಗಿದ್ದಾರೆ. ನಿಜಕ್ಕೂ "ಇಷ್ಟೊಂದು ವಿಸ್ತಾರವಾಗಿ ಒಬ್ಬ ಲೇಖಕನ ವಾಙ್ಮಯ ದರ್ಶನವನ್ನು ಮಾಡಿಸುವ ಗ್ರಂಥವು ಭಾರತೀಯ ಭಾಷೆಗಳಲ್ಲಿ ಬೇರೊಂದಿಲ್ಲ"[4] ಎಂಬ ಮಾತು ಅತಿಶಯೋಕ್ತಿಯೆನಿಸದು.

೨

ಸುಮಾರು ೨೦೦ ಪುಟಗಳ ಈ ಹೊತ್ತಗೆಯಲ್ಲಿ, ೧೯೦೦ ರಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಅಚ್ಚಾದ ಪೈಯವರ ಪ್ರಪ್ರಥಮ ಕವನದಿಂದ ಮೊದಲಾಗಿ, ೧೯೭೨ರಲ್ಲಿ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದ ಅವರ ಕೊನೆಯ ಲೇಖನದವರೆಗಿನ ಪರಿಮಿತ ಅವಧಿಯ ನಡುವೆ ಪೈಯವರ ಲೇಖನಿಯಿಂದ ಸೃಜಿಸಲ್ಪಟ್ಟ ಅಗಾಧ ಹಾಗೂ ಅಸಂಖ್ಯ ಲೇಖನಗಳನ್ನು, ಕವನಗಳನ್ನು, ನಾಟಕಗಳನ್ನು, ಕಾವ್ಯವನ್ನು

---

1 ದೇಜಗೌ ಅವರ ಲೇಖನ, ಪುಟ ix

2 ಅದೇ ಪುಟ ix (ಹಾರೈಕೆ–ದೇ. ಜ. ಗೌ.)

3 ಅದೇ ಪುಟ xii (ಪ್ರಸ್ತಾವನೆ–ಹಾವನೂರ ಮತ್ತು ನಾಯಕ್)

4 ಅದೇ ಪುಟ xvii (ಈ ಪುಸ್ತಕವನ್ನು ಕುರಿತು–ಕು. ಶಿ. ಹರಿದಾಸ ಭಟ್.)

ಒಂದೊಂದಾಗಿ ತೆಗೆದುಕೊಂಡು, ಕಾಲಾನುಕ್ರಮದಲ್ಲಿ ಅವುಗಳನ್ನು ವಿಂಗಡಿಸಿ, ಅವುಗಳ ವಸ್ತುವನ್ನು ಸಂಗ್ರಹಿಸಿ, ಅವರ ಅಭಿಪ್ರಾಯಗಳನ್ನು ನಿರೂಪಿಸಿ, ತಮ್ಮದೇ ಆದ ವಿಶಿಷ್ಟ ಬಗೆಯಲ್ಲಿ ಸಂಪಾದಕರು ಒಂದು ಸ್ವಸಂಪೂರ್ಣ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇತಿಹಾಸ, ಸಂಶೋಧನೆ, ನಾಟಕ, ಸಾಹಿತ್ಯ, ಕವಿತೆ ಮತ್ತು ಮುನ್ನುಡಿ, ಗ್ರಂಥವಿಮರ್ಶೆಗಳೆಂಬ ಆರು ಬಗೆಯ ವಿಭಜನೆಗಳಲ್ಲಿ ಪೈ ವಾಙ್ಮಯದ ಸಿಂಹಾವಲೋಕನವನ್ನು ಮಾಡುವ ಪ್ರಯತ್ನ ಇಲ್ಲಿ ನಡೆದಿದೆ. ಉಪಯುಕ್ತವಾದ ಗ್ರಂಥಸೂಚಿ, ಅಕಾರಾದಿಗಳೂ ಕೃತಿಯ ಬೆಲೆಯನ್ನು ಹೆಚ್ಚಿಸಿವೆ.

ಇಷ್ಟಾದರೂ "ಆ ಕೆಲಸ ಪರಿಪೂರ್ಣವಾಗಿದೆ ಎಂದು ಹೇಳುವ ಸಾಹಸ ನಮಗಿಲ್ಲ" ಎಂದು ಸಂಪಾದಕರು ತಿಳಿಸಿರುವುದು ಅವರ ವಿನಯವನ್ನು, ಸೌಜನ್ಯವನ್ನು ಸೂಚಿಸುತ್ತದೆ. ನಿಜಕ್ಕೂ ಗೋವಿಂದ ಪೈಗಳವರ ಬಿಡಿ ಲೇಖನಗಳ ಸಂಖ್ಯೆ ಎಷ್ಟೆಂಬುದು ವಿವಾದಾಸ್ಪದವಾದುದೇ; ನಾಡಿನ ಪ್ರಸಿದ್ಧ, ಅಪ್ರಸಿದ್ಧ ಪತ್ರಿಕೆಗಳಿಗೆಲ್ಲ ಅವರು ತಾರತಮ್ಯವೆಣಿಸದೆ ಲೇಖನಗಳನ್ನು ಕಳುಹಿಸುತ್ತಿದ್ದರಾಗಿ, ಅವರ ಲೇಖನಗಳು ದಿಕ್ಪಾಲಾಗಿ ಚೆದುರಿಹೋಗಿವೆ. ಪ್ರಸ್ತುತ ಲೇಖನದ ಉದ್ದೇಶವೂ ಆ ದಿಸೆಯಲ್ಲಿ ನಡೆಸಿದ ಒಂದು ಕಿರುಪ್ರಯತ್ನವಾಗಿದೆ.

೩

ರಾಷ್ಟ್ರಕವಿ ಗೋವಿಂದಪೈಯವರು ವಿಶ್ವಕವಿ ರವೀಂದ್ರರ "ಗೀತಾಂಜಲಿ"ಯ ಸುಮಾರು ೩೫ ಕವನಗಳನ್ನು ೧೯೩೪ರಷ್ಟು ಹಿಂದೆಯೇ ಕನ್ನಡಿಸಿದ್ದಾರೆಂಬ ಸಂಗತಿಯಾಗಲಿ, ಆ ಕವನಗಳ ಉಲ್ಲೇಖನವಾಗಲಿ ಶ್ರೀ ಹಾವನೂರರ 'ಗೋವಿಂದಪೈ ವಾಙ್ಮಯ ದರ್ಶನ'ದಲ್ಲೆಲ್ಲಿಯೂ ಕಂಡುಬಂದಂತಿಲ್ಲ. ಅದರ ಸಂಪೂರ್ಣ ವಿವರಗಳು ಇಂತಿವೆ.

೧೯೩೫ನೆಯ ಇಸವಿ ಸೆಪ್ಟೆಂಬರ್ ೧೫ನೆಯ ದಿನಾಂಕದ, "ಕನ್ನಡ ಸಹಕಾರಿ" (ಸಂಪಾದಕರು : ಮಂಗೇಶ ವಿಟ್ಠಲ್ ರಾವ್, ಮಂಗಳೂರು) ಪಾಕ್ಷಿಕ (Fortnightly) ಪತ್ರಿಕೆಯ ೫ನೆಯ ಸಂಚಿಕೆಯಲ್ಲಿ ಮೊದಲಬಾರಿಗೆ ರವೀಂದ್ರರ 'ಗಿತಾಂಜಲಿಯ' ಮೊದಲೆರಡು ಇಂಗ್ಲಿಷ್ ಕವನಗಳ ಅನುವಾದ ಗೋವಿಂದಪೈಯವರ ಅಂಕಿತದಲ್ಲಿ ಪ್ರಕಟವಾಗಿದೆ. ರವೀಂದ್ರರ ಇಂಗ್ಲಿಷ್ ಅನುವಾದದ ಸರಳತೆ, ಗದ್ಯರೂಪತೆಗಳನ್ನು ಪೈಯವರ ಭಾಷಾಂತರವೂ ಉಳಿಸಿಕೊಂಡಿದೆ. ಹುಡುಕಿದರೂ ಈ ಭಾಷಾಂತರದಲ್ಲಿ ಆಡಂಬರಕ್ಕಾಗಿ ಬಳಸಿದ ಪದವೊಂದದಾದರೂ ದೊರಕದಾಗಿದೆ; ನಿರೂಪಣೆ ನೇರವಾಗಿ ಮನಮುಟ್ಟುವಂತಿದೆ :

"ನೀನು ನನ್ನನ್ನು ಮುಗಿವಿಲ್ಲದಂತೆ ಮಾಡಿರುವಿ ದೇವಾ, ನಿನ್ನ ಲೀಲೆಯಂತಿದೆ. ಈ ಬಡಬಕ್ಕರೆಯನ್ನು ನೀನು ಮರಳಿ ಮರಳಿ ಬರಿಗೈಯುತ್ತಿರುವೆ, ಅಂತೆಯೇ ಅದನ್ನು ನವಜೀವನದಿಂದ ಸದಾ ತುಂಬಿಸುತ್ತಿರುವೆ.

"ಈ ಬಿದಿರಿನ ಕಿರುಗೊಳಲನ್ನು ನೀನು ತಪ್ಪತಪ್ಪಲಲ್ಲಿಯೂ ಗಿರಿಗಿರಿಯಲ್ಲಿಯೂ ಒಯಿದು ಇದರಿಂದ ನಿತ್ಯ ನವೀನವಾದ ಮಾಧುರ್ಯವನ್ನು ಊದುತ್ತಿರುವೆ.

"ನಿನ್ನ ಕೆಯ್ಗಳ ಅಮೃತಸ್ಪರ್ಶದ ಹರ್ಷದಿಂದ ನನ್ನ ಈ ಚಿಕ್ಕ ಬಗಸೆಯಲ್ಲಿಯೇ ಸುರಿಯುತ್ತಿರುವೆ. ಯುಗಗಳೇನೊ ಸರಿದು ಹೋಗುತ್ತಿವೆ–ಆದರೂ ನೀನು ಎರೆಯುತ್ತಿರುವೆ, ಇಲ್ಲಿ ಇನ್ನೂ ತುಂಬಲೆಡೆಯಿದೆ."

[ಸಂಚಿಕೆ ೫, ಪುಟ ೧೦೪, 'ಕನ್ನಡ ಸಹಕಾರಿ'
ಸೆಪ್ಟೆಂಬರ್ ೧೫, ೧೯೩೫]

ಈ ೩೫ ಕವನಗಳಲ್ಲಿಯೂ ಎದ್ದು ಕಾಣುವ ಗುಣವೆಂದರೆ ಅವುಗಳಲ್ಲಿನ ಸರಳ ಅಭಿವ್ಯಕ್ತತೆ; ಇದೇ ಅದರ ವಿಶಿಷ್ಟತೆಯೂ ಆಗಿದೆ. ವಿಶ್ವಕವಿಯು ಗಹನ ವಿಚಾರಗಳನ್ನು ಹೇಗೆ ತಮ್ಮ 'ಗೀತಾಂಜಲಿ'ಯಲ್ಲಿ ಸರಳ ಭಾಷೆಯಲ್ಲಿ ನಿವೇದಿಸಿದ್ದಾರೆಯೋ, ಅಂತೆಯೇ ಗೋವಿಂದಪೈಯವರೂ ಸುಲಭವಾದ ಆಡುನುಡಿಯಲ್ಲಿ, ಗದ್ಯರೂಪವನ್ನೇ ಉಳಿಸಿಕೊಂಡು ಅನುವಾದಿಸಿದ್ದಾರೆ. ಉದಾಹರಣೆಗೆ ೩ನೆಯ ಪದ್ಯದ ಈ ಕೆಲವು ಸಾಲುಗಳನ್ನು ಗಮನಿಸಿ :

"ನಿನ್ನ ಹಾಡಿನ ಹೊಳಹಿನಿಂದ ಭುವನವು ಬೆಳಗುತ್ತಿದೆ. ನಿನ್ನ ಗಾನದ ಜೀವನೋಚ್ಛ್ವಾಸವು ಗಗನವೆಲ್ಲವನ್ನು ತುಂಬಿ ಹರಿದಾಡುತ್ತಿದೆ. ನಿನ್ನ ಗೀತದ ಪವಿತ್ರವಾದ ಪ್ರವಾಹವು ಅಡ್ಡಗಲ್ಲುಗಳೆಲ್ಲವನ್ನು ನುಗ್ಗಿ ಮುಂದೆ ಹಾಯುತ್ತಲಿದೆ.

"ನನ್ನ ಹೃದಯವಾದರೋ, ನಿನ್ನ ಸ್ವರದೊಂದಿಗೆ ತನ್ನ ಸ್ವರವನ್ನೂ ಸೇರಿಸಿ ಹಾಡಬೇಕೆಂಬ ಲವಲವಿಕೆಯಿಂದ ಸ್ವರವನ್ನು ಹುಡುಕಾಡಿ ವೃಥಾ ತಳಮಳಿಸುತ್ತಿದೆ. ಉಲಿದಾಡಬೇಕೆಂದು ಬಲು ಆತುರ–ಆದರೆ ನನ್ನ ಉಲಿವಿಂದ ಸ್ವರವೇನೂ ವಿಸುಕದೆ, ನಾನು ಹತಾಶನಾಗಿ ಅರಚುತ್ತಿರುವೆನು. ನನ್ನೊಡೆಯಾ, ಇದೋ—ನಿನ್ನ ಗಾನಜಾಲದ ಎಣಿಕೆಯಿಲ್ಲದ ಪಾಶಗಳಲ್ಲಿ ನೀನು ನನ್ನೆದೆಯನು ಸೆರೆ ಹಿಡಿದಿರುವೆ!"

[ಸಂಚಿಕೆ ೬, ಪುಟ ೧೧೬; : ಸಹಕಾರಿ'
ಸೆಪ್ಟೆಂಬರ್ ೩೦, ೧೯೩೫]

"ಗೀತಾಂಜಲಿ"ಯ ಪ್ರಖ್ಯಾತ ಕವನವಾದ ೩ನೆಯ ಪದ್ಯದ ಭಾಷಾಂತರ ಎಷ್ಟು ಸುಂದರವಾಗಿ ಪೈಯವರ ಸಹಜ ನುಡಿಗಳಲ್ಲಿ ಹೊರಹೊಮ್ಮಿದೆ—

"ನನ್ನ ಗಾನವು ತನ್ನ ಶೃಂಗಾರಗಳನ್ನು ಕಳಚಿರುವುದು. ಇನ್ನು ಅಲಂಕಾರದ ಹೆಚ್ಚಳವಾಗಲಿ, ಭೂಷಣಗಳ ಹೆಚ್ಚಳವಾಗಲೀ ಅದಕ್ಕಿಲ್ಲವು. ನಮ್ಮ ಕೂಡಿಕೆಗೆ ಅಲಂಕಾರಗಳಿಂದ ತೊಂದರೆಯಲ್ಲದೆ ಬೇರೆಯಿಲ್ಲ; ನಮ್ಮ ಸಲ್ಲಾಪದೆಡೆಯಲ್ಲಿ ಅವು ಗಲಿಗಲಿಸಿ, ಅವುಗಳ ಗಲಹಿನಲ್ಲಿ ನಿನ್ನ ಸೂಸುಲಿಗಳು ತೇಲಿಹೋದುವು.

"ನಿನ್ನನ್ನು ನೋಡುವಾಗ ನನ್ನ ಕವಿತೆಯ ಒಯ್ಯಾರವು ನಾಚಿಕೆಯಿಂದ ಮಾಯವಾಗುತ್ತದೆ. (ಸಾಯುತ್ತದೆ?) ಕಬ್ಬಿಗರೊಡೆಯಾ, ನಾನು ನಿನ್ನಡಿಗಳ ಬಳಿಯಲ್ಲಿ ತಂಗಿರುವೆನು. ನನ್ನ ಜೀವನವನ್ನು ಒಂಟಿಯಂತೆ ನೆಟ್ಟನೆ ಸರಳಗೆಯ್ದು ನಿನಗಿತ್ತರೆ ನನಗೆಷ್ಟೋ ಸಾಕು. ನೀನೇ ಅದನ್ನು ಗಾನದಿಂದ ತುಂಬಿಸಿ ಕೊಳಲು ಮಾಡಿಕೊಳ್ಳುವಿ."

[ಸಂಚಿಕೆ: ೮; ಪುಟ ೧೪೦; 'ಸಹಕಾರಿ'
ಅಕ್ಟೋಬರ್ ೩೧, ೧೯೨೬.]

೧೯೨೭ರ ಜನವರಿಯ ಮೊದಲ ಪಕ್ಷದ ಸಂಚಿಕೆಯವರೆಗೂ ಪ್ರತಿಸಂಚಿಕೆಯಲ್ಲಿಯೂ ಎರಡೆರಡು ಅನುವಾದಿತ ರಚನೆಗಳು ಪ್ರಕಟವಾಗಿವೆ. ೧೯೨೮ರ ಜನವರಿಯ ಸಂಚಿಕೆಯಿಂದ ೩-೪ ಕವನಗಳು ಅಚ್ಚಾಗಿವೆ. ೧೯೨೮ರ ಮೇ ತಿಂಗಳ ೩೧ನೇ ದಿನಾಂಕದ ಸಂಚಿಕೆಯಲ್ಲಿ ಅವರ "ಗೀತಾಂಜಲಿ"ಯ ೩೫ನೆಯ ಕವನ ಅಚ್ಚಾಗಿದೆ. "Where the mind is without fear and the head is held high" ಎಂದು ಮೊದಲಾಗುವ 'ಗೀತಾಂಜಲಿ'ಯ ೩೫ನೆಯ ಕವನದ ಅನುವಾದ ಈ ಸಂಚಿಕೆಯ ಆರಂಭದಲ್ಲೇ ಕೊಡಲಾಗಿದೆ.

ಈ ಕವನದ ಅಡಿಯಲ್ಲಿಯೇ "ಮುಂದುವರೆಯುವುದು" ಎಂಬ ಸೂಚನೆಯಿದ್ದರೂ, ಅದೇ ವರ್ಷದ ನವೆಂಬರ್ ತಿಂಗಳ ಸಂಚಿಕೆಗಳವರೆಗೆ ಪೈಗಳ 'ಗೀತಾಂಜಲಿ'ಯ ಯಾವ ಕವನವೂ ಅಚ್ಚಾದಂತಿಲ್ಲ. ಮುಂದೆ ಆ ಪತ್ರಿಕೆಯೇ ನಿಂತುಹೋಗಿರಬಹುದಾಗಿ, ಅವರ ಅನುವಾದವೂ ಅಲ್ಲಿಗೆ ಪರಿಸಮಾಪ್ತಿಗೊಂಡಿರಬೇಕು. ಬೇರಾವ ಪತ್ರಿಕೆಯಲ್ಲಿಯಾಗಲೀ ಇದರ ಪರಂಪರೆ ಮುಂದುವರೆದಂತೆ ನಿದರ್ಶನವಿಲ್ಲ. ಆದರೂ ಈ ೩೫ ಅನುವಾದಿತ ಕವನಗಳ ಪ್ರಮಾಣ ಅಲ್ಪವೆಂದೇನೂ ಅನ್ನುವಂತಿಲ್ಲ.

೪

'ಗೀತಾಂಜಲಿಯ ಮೊದಲ ಇಂಗ್ಲಿಷ್ ಅನುವಾದ (ಸ್ವತಃ ಟಾಗೂರರೇ ಭಾಷಾಂತರಿಸಿದುದು) ೧೯೧೨ರಲ್ಲಿ ಪ್ರಕಟವಾಯಿತು. ಅದೇ ವರ್ಷ ಅವರಿಗೆ ಆ ಕೃತಿಗಾಗಿ ನೊಬೆಲ್ ಪಾರಿತೋಷಕ ದೊರೆಯಿತು. ಅಂದಿನಿಂದ 'ಗೀತಾಂಜಲಿ' ವಿಶ್ವದ ಹಲವು ಭಾಷೆಗಳಿಗೆ ಪರಿವರ್ತಿತವಾಗಿ ಲೋಕಪ್ರಿಯವಾಗಿದೆ.

ಕನ್ನಡದಲ್ಲಿಯೂ 'ಗೀತಾಂಜಲಿ'ಯ ಹಲವು ಭಾಷಾಂತರಗಳು ಹುಟ್ಟಿವೆ; ಹುಟ್ಟುತ್ತಲೂ ಇವೆ. ಸರ್ವಶ್ರೀ ಬೂದಿಹಾಳುಮಠ, ನರೇಗಲ್ಲ ಪ್ರಹ್ಲಾದರಾಯರು, ಪದ್ಮರಾಜ ಹುನಗುಂದ, ಸ. ಪ. ಗಾಂವಕರ್ ಡಾ. ಬಿ. ಬೊಮ್ಮಯ್ಯ ಮತ್ತು ವೆಂಕಟರಾಯ ಆನಂದ ಶಣೈ ಅವರ ಗದ್ಯ-ಪದ್ಯ ಅನುವಾದಗಳು ಪ್ರಕಟವಾಗಿವೆ. 'ಗೀತಾಂಜಲಿ'ಯ ಹಲವು ಕವನಗಳನ್ನು ತಮ್ಮ ರವೀಂದ್ರನಾಥ ಠಾಕೂರ್ ಗ್ರಂಥಕ್ಕಾಗಿ ಶ್ರೀ ಮಾಸ್ತಿಯವರೂ, ಕುವೆಂಪು ಅವರೂ ಮತ್ತು ನಾರಾಯಣ ಸಂಗಮರೂ ಅನುವಾದಿಸಿದ್ದಾರೆ. ಆದರೆ, ದಿವಂಗತ ಪೈಯವರ ಭಾಷಾಂತರವೇ ಈ ದಿಸೆಯಲ್ಲಿ ನಡೆದ ಪ್ರಥಮ ಸಫಲ ಪ್ರಯತ್ನವೆನ್ನಬಹುದು. ಅವರ ಅನುವಾದದ ಸರಳತೆ, ಸ್ಪಷ್ಟತೆ, ಸಹಜತೆಗಳು ಮಿಕ್ಕ ಹಲವು ಭಾಷಾಂತರಗಳಲ್ಲಿ ಅಪರೂಪವಾಗಿ ಕಂಡುಬಂದಿವೆ. ಪೈಯವರ ಉತ್ತಮ ಸಾರಸ್ವತ ಕೊಡುಗೆಯಲ್ಲಿ 'ಗೀತಾಂಜಲಿ'ಯ ಈ ೩೫ ಅನುವಾದಿತ ರಚನೆಗೆ ಒಂದು ವಿಶಿಷ್ಟ ಸ್ಥಾನವಿದೆಯೆಂಬುದರಲ್ಲಿ ಸಂದೇಹವಿಲ್ಲ.

ಅಲ್ಬರೂನಿ ಕಾಲದ ಕನ್ನಡ ನಾಡು

◆◆ ಕಪಟರಾಳ ಕೃಷ್ಣ ಕಲ್ಬುರ್ಗಿ

ಮಹಮ್ಮದ ಗಝನಿಯ ಕಾಲದಲ್ಲಿ ಅಲ್ಬೆರೂನಿಯೆಂಬ ಮಹಾಪಂಡಿತನು ಭಾರತಕ್ಕೆ ಬಂದು, (೧೦೧೭-೧೦೩೦ A.D) ವರೆಗೆ ಇದ್ದನು. ಇವನು ತನ್ನ ಕಾಲದ ಭೌಗೋಲಿಕ ವರ್ಣನೆ, ರಾಜ್ಯಗಳ ವರ್ಣನೆಗಳನ್ನು ತನ್ನ ಗ್ರಂಥದಲ್ಲಿ ವಿಸ್ತೃತವಾಗಿ ಮಾಡಿರುವನು. ಇವನು ಉತ್ತರ ಹಿಂದುಸ್ಥಾನದಲ್ಲಿದ್ದನು, ದಕ್ಷಿಣಕ್ಕೆ ಬಂದಿರಲಿಲ್ಲ. ಗೋದಾವರಿಯ ವರೆಗೆ ಇವನು ಬರೆದಿಟ್ಟ ಸಂಗತಿಗಳು ಪೂರ್ಣವಾಗಿವೆ. ತನ್ನ ಗ್ರಂಥದಲ್ಲಿ ಭೌಗೋಳಿಕ ಮಾಹಿತಿಯನ್ನು "ಧಾರದಿಂದ ದಕ್ಷಿಣಕ್ಕೆ ಭೂಮಿಹರಿ ೩೦ ಫರ್ಸಖ, ಕಂದ ೩೦ ಫರ್ಸಖ; ನಮಾವರ ನರ್ಮದೆಯ ದಂಡೆಯ ಮೇಲೆ ೧೦ ಫರ್ಸಖ, ಅಲಿಸಪೂರ ೩೦ ಫರ್ಸಖ, ಮಂಡಗೀರ ಗೋದಾವರಿಯ ದಂಡೆಯ ಮೇಲೆ ೬೦ಫರ್ಸಖ ಮತ್ತು- ಧಾರದಿಂದ ದಕ್ಷಿಣಕ್ಕೆ ತೆರಳಿದರೆ ನಮಿಯ್ಯಾ ಎಂಬ ದರಿಯು ೭ ಫರ್ಸಖವಿರುವದು. ಮಹಾರಕ್ತ ದೇಶ ೧೦ ಫರ್ಸಖ, ಕೊಂಕಣ ಪ್ರಾಂತ ಮತ್ತು ಅದರ ರಾಜಧಾನಿಯಾದ "ಠಾಣೆ" ಸಮುದ್ರ ದಂಡೆಯಲ್ಲಿ ೨೫ ಫರ್ಸಖ, ಕೊಂಕಣ ವೈದಾನಿನಲ್ಲಿ "ದನಕ" (ದಂಡಕಾರಣ್ಯ) ವಿರುವುದು. ಮತ್ತೊಂದು ಕಡೆಯಲ್ಲಿ–"ಠಾಣೆಯಿಂದ ಸಮುದ್ರದಂಡೆವಿಡಿದು 'ಲಾರಾನ್' ಪ್ರಾಂತವಿರುವುದು. ಜೀಮೂರ ಎಂಬ ಪಟ್ಟಣವು ಇದೇ ಪ್ರಾಂತದಲ್ಲಿರುವದು. ಅಲ್ಲಿಂದ "ವಲ್ಲಭ", ಕಂಜಿ (ಕಂಚಿ?) ದರ್ವಡ, (ದ್ರಾವಿಡ) ಎಂದು ಹೇಳುವರು. (Trubuner's oriental series page 203 vol· II)

ಫರ್ಸಖ ಅಂದರೆ ೩ ಮೈಲು.

ಇವನು ಬರೆದ ಭೌಗೋಳಿಕ ವರ್ಣನೆಯಲ್ಲಿ 'ಮಹಾರಕ್ತ ದೇಶವು' ಗೋದಾವರಿ ನದಿ ಮತ್ತು ಕೊಂಕಣ ಠಾಣೆ ಜಿಲ್ಲೆಯ ಮೇಲ್ಭಾಗದಲ್ಲಿಯೂ, ಧಾರ (ಮೂಲವಾದ ರಾಜಧಾನಿ) ಪಟ್ಟಣದ ದಕ್ಷಿಣಕ್ಕೆ ಇರುವದೆಂದು ತಿಳಿದು ಬರುವದು. 'ಲಾರಾನ್' ಎಂಬ ಸಮುದ್ರ ದಂಡೆಯ ಪ್ರದೇಶವನ್ನು ಹೇಳಿ "ವಲ್ಲಭ" ರಾಜ್ಯವನ್ನು ಹೇಳುವನು. ಈ ವಲ್ಲಭ ರಾಜ್ಯವೇ ಕಲ್ಯಾಣ ಚಾಲುಕ್ಯರಾಜ್ಯ ಆ ಕಾಲಕ್ಕೆ. ಇದೇ ಅಲ್ಬೆರೂನಿಯು ಹಿಂದುಸ್ಥಾನದ ಲಿಪಿಗಳನ್ನು ಹೇಳುತ್ತಾನೆ. ಕಾಶ್ಮೀರ ಮತ್ತು ವಾರಣಾಸಿ, ಕನ್ನೋಜ (ಇದಕ್ಕೆ ಮಧ್ಯಪ್ರದೇಶವೆನ್ನುವನು)ದಲ್ಲಿ ಉಪಯೋಗಿಸಲ್ಪಡುವ "ಸಿದ್ಧಮಾತ್ರ ಲಿಪಿ" ಮಾಲವಾ ಪ್ರಾಂತದ "ನಾಗರ ಲಿಪಿ", ಸಿಂಧ ಮತ್ತು ಭಾಟಿಯಾದ "ಅರ್ಧನಾಗರಲಿಪಿ"; "ಕರ್ಣಾಟಕ ದೇಶದಲ್ಲಿಯ ಕರ್ಣಾಟಕ ಲಿಪಿ–ಯಾವ ದೇಶದಿಂದ ಸೈನ್ಯವು ಬರುವುದು ಆ ಸೈನ್ಯದಲ್ಲಿಯ ಜನರು ಕನ್ನಡಿಗರು ಎಂದು ಕರೆಯಲ್ಪಡುತ್ತಾರೆ. "ಅವರ ಲಿಪಿ" ಎಂದು ವಿಶೇಷಣ ಕೊಟ್ಟಿರುವನು. (Page 173) (The Karnata used in Karnata Desa, whence those troops came which in the armies as known as Kannara).

ಈ ವರ್ಣನೆಯ ಮೇಲಿಂದ ಅಲ್ಬೆರೂನಿಯ ಕಾಲಕ್ಕೆ ದಕ್ಷಿಣದಿಂದ ಉತ್ತರದೇಶಕ್ಕೆ ಹೋಗುವ ಸೈನ್ಯವೆಂದರೆ ಕಲ್ಯಾಣದ ಚಾಲುಕ್ಯ ಅಥವಾ ಅಲ್ಬೆರೂನಿಯ ವಲ್ಲಭರ ರಾಗಿದ್ದಿತು. ಅಲ್ಬೆರೂನಿಯ ಕಾಲಕ್ಕೆ ಉತ್ತರ ಹಿಂದುಸ್ಥಾನದಲ್ಲಿ ಪ್ರಸಿದ್ಧಿಯನ್ನು ಪಡೆದವರು ಮರಾಠರಲ್ಲ, ಕನ್ನಡಿಗರೇಯಾಗಿದ್ದರು. ಅಲ್ಬೆರೂನಿಯ ಕಾಲಕ್ಕೆ ಈಗಿನ ಮರಾಠರ ಆ ಪೂರ್ವಜರು ಮಾಲಪ್ರಾಂತದ ದಕ್ಷಿಣ ಮತ್ತು ಗೋದಾವರಿಯ ಉತ್ತರದಲ್ಲಿ ಇರುತ್ತಿದ್ದರು. ಅವರು ಆ ಕಾಲಕ್ಕೆ ಯೋದ್ಧಾಗಳೆಂದು ಉತ್ತರದಲ್ಲಿ ಪ್ರಸಿದ್ಧಿಪಡೆದಿರಲಿಲ್ಲ.

ಲೇಖನಮಾಲೆ ೫

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

●● ತಿ. ತಾ. ಶರ್ಮ

ಕಬ್ಬಿನಂತಿರಬೇಕು, ಬಿದಿರಂತಲ್ಲ

ಸೌಂದರ್ಯಾನಂದ ಪ್ರಜ್ಞೆಯಿಂದ, ಪ್ರತಿಮಾ ಕಲ್ಪನಾ ಶಕ್ತಿಯಿಂದ, ಶಬ್ದ ಚಿತ್ರಗಳನ್ನು ರೂಪುಗೊಳಿಸುವ ನೈಪುಣ್ಯತೆ ರತ್ನಾಕರವರ್ಣಿಗೇ ಮೀಸಲು. 'ಭರತೇಶ ವೈಭವ' ವನ್ನು ಓದಿದವರು ಯಾರೂ 'ಇದು ಉತ್ಪ್ರೇಕ್ಷೆಯ ಮಾತು' ಎಂದು ಹೇಳಲಾರರು. ಅವನು ರಚಿಸಿ, ಬಳಸುವ ಮಾತುಗಳೇ ಸಾಕು; ಕೆಲವನ್ನು ಇಲ್ಲಿ ಕೊಡಲಾಗಿದೆ.

ಅಧ್ಯಾತ್ಮರಸ	ತಂಪಿನ ಸೊಡರು
ಆಚಾರಶೀಲ	ತಂತ್ರ ಸಂಭಾವಿತ
ಅರುಣದಿಬ್ಬಣ	ತತ್ವಶೀಲ
ಅಂಗಸುಖಿ	ನಗೆಯ ಹುಟ್ಟು
ಅಲುಬುವ ಬಟ್ಟಲು	ನೇಮದಾಣ
ಇಂಗಿತ ಕುಶಲಿ	ನೈಜನಿಸ್ಮಿತ
ಉಂಡುಪವಾಸಿ	ನುಡಿಯ ಕೇಡು
ಉದ್ಧಾರ ಕೀರ್ತಿ	ಪರಿಹಾಸ ಗೋಷ್ಠಿ
ಏರುಸೋಪಾನ	ಪನ್ನೀರು ಸಾದು
ಕಡು ಸಂಯಮಿ	ಬಳಸಿ ಬ್ರಹ್ಮಚಾರಿ
ಕಾಂತಿಯೊಡ್ಡು	ಬಟ್ಟಬಯಲು
ಕರುಣೆಯ ಕರುಳು	ಬಚ್ಚಬರಿದು
ಗಾಡಿವೋಡಿ	ಬಿರುಬೆದರು
ಗಿಂಡಿಯೂಳಿಗ	ಭಾವರಂಜಕ
ಗೀತಕಾಂತೆ	ಭಾವದೃಷ್ಟಿ
ಗಾಣಕಾರ್ತಿ	ಭಾವವಿಮಾನ
ಗಂಭೀರ ಗರ್ವ	ಭಾಷೆಗೆ ನಿಲುಕದ ಭಾವ
ಚಿತ್ತ ಚಿಗುರಿಸು	ಭೋಗಪರಿಶ್ರಮ
ಜನಜಾಲ	ಭೋಗಮೂರ್ಛೆ
ಜೀವಬಲ	ಮುಖವೀಣೆ
ಛಾಯಾ ಪ್ರತಿಮೆ	ಮನದನುಭವ
ತಗ್ಗು ಸೋಪಾನ	ಮೋಕ್ಷದ ಗುಳಿಗೆ
ಮುಖಶುದ್ಧಿ	ವಚನಸುಲಭ
ಮೈಯ ಬೆತ್ತಲೆ	ವಿನೋದ ವಿನಯ
ಮನಬೋಳು	ವ್ಯವಹಾರ ಬ್ರಹ್ಮಚರ್ಯ
ಮನದ ಕತ್ತಲೆ	ಶಾಸ್ತ್ರಲಾಲನೆ
ರಣಕಥೆ	ಸಾಹಿತ್ಯಕೇಳಿ
ರಾಜವಿಡಾಯ	ಸ್ವರ್ಗಸರಣಿ
ಲಾವಣ್ಯ ಜಲಧಿ	ಸ್ವರಮಂಡಲ
ತಿಪ್ಪದ ಪುತ್ಥಳಿ	ಸುಖಸಿದ್ಧಿ
ವಸ್ತುಶಕ್ತಿ	ಸಮರಲಂಪಟ
ವಿದ್ಯಾತಂತ್ರ	ಸುಖದ ಕೀಲು
ವನಕ್ರೀಡೆ	ಹೃದಯತಂತ್ರ
ವಾರಿಕ್ರೀಡೆ	

" ಕಬ್ಬಿನಂತಿರಬೇಕು ಬಿದಿರಂತೆ
ರಚಿಸಲೇಕಬ್ಬೆ ?
ಹೇಳಿಲೆ ಸರಸ್ವತಿಯೆ "

ಎಂದು ಮೂದಲಿಸಿ ಕೇಳಿದ ಕನ್ನಡ ಕವಿ ರತ್ನಾಕರ!

" ಪಂಚೇರ್ಬದನೆಕಾಯಂ "

ದಿವಂಗತ ತ್ಯಾಗರಾಜ ಪರಮಶಿವ ಕೈಲಾಸಂರವರಿಗೂ, ನನಗೂ, ಮಧ್ಯೆ, ಬಳಸುವ ಮಾತುಗಳ ಅಂತಸ್ತು ಕುರಿತು ಆಗಾಗ ಬಿಸಿ ಬಿಸಿ ಮಾತು ಆಗುತ್ತಿತ್ತು. ಒಂದು ಸಂದರ್ಭದ ಸಂಭಾಷಣವಿದು.

ನಾನು : ಗ್ರಾಮ್ಯಶಬ್ದಗಳನ್ನು ಬಳಸುವುದೆ? ಕನ್ನಡ ಕುಲಗೆಟ್ಟು ಹೋದೀತು.

ಅವರು : ಕೆಡುವುದಕ್ಕೆ ಕನ್ನಡಕ್ಕೊಂದು ಕುಲವೆಂಬುದುಂಟೇನು ? ಗ್ರಾಮ್ಯ, ನಾಗರಿಕ, ಇತ್ಯಾದಿಯಾಗಿ ವರ್ಗೀಕರಣ ಮಾಡಿದವರು ಯಾರು? ದೊಡ್ಡಸ್ತಿಕೆಯ ಚೇಷ್ಟೆಯವರು. ಈ ಚೇಷ್ಟೆಯ ಚತುರಾನನರು ಮಾರ್ಕೆಟ್ಟಿಗೆ

ಹೋಗಿ "ನಾನೊಂದು ಪಂಚೇರ್ಬದನೆಕಾಯಂ ಕೊಳ್ಳ ಲುಜ್ಜುಗಿಸಿರ್ಪೆಂ. ಬೆಲೆ ಏನಾನುಮಾಗಿರ್ಕುಂ?" ಎಂದಾ ರಂಭಿಸಿಬಿಟ್ಟರೆ ಮಾರ್ಕೆಟ್ಟಿನ ಮುಕ್ಕರಿಯ ಮಹಾಕಾಳಿ ಅವನ ತಲೆಯಮೇಲೆ ಶಿಲಾವರ್ಷವನ್ನೇ ಸುರಿಸಿಬಿಡುತ್ತಾಳೆ.

ನಾನು : ಮಾತು ಸಭ್ಯರಾಡುವಂತಿರಬೇಕು ; ಗಂಭೀರ ವಾಗಿರಬೇಕು.

ಅವರು : ಸಭ್ಯ, ಗಂಭೀರ, ಗ್ರಾಮ್ಯ—ಇವೊಂದೂ ಬೇಡ. ಆಡುವುದೊಂದು, ಬರೆಯುವುದಿನ್ನೊಂದು, ಖಂಡಿತ ವಾಗಿಯೂ ಬೇಡ. ನೀನಾಡುವುದನ್ನೇ ಬರೆಯುತ್ತಾ ಬಾ. ನಾಳೆ ನಿಘಂಟುಕಾರ ನೀನು ಬಳಸಿದ ಮಾತುಗಳನ್ನೇ ನಿಘಂಟುವಿನಲ್ಲಿ ಪೋಣಿಸುತ್ತಾನೆ. ಹೃದಯದ ಭಾವ ನಾಲಿಗೆಯಲ್ಲಿ ನುಡಿಯಬೇಕು. ನುಡಿದುದು ಭಾಷೆಯಲ್ಲಿ ಪ್ರತಿಬಿಂಬಿಸಬೇಕು. ಇಲ್ಲಿ ಗ್ರಾಮ್ಯವೇನು, ಸಭ್ಯವೇನು? ನಾನೂ ನೀನೂ, ನಾನೂ ನನ್ನ ಮಗು, ನನ್ನ ಮಗಳು ನನ್ನಾಳು—ಎಲ್ಲರೂ ಬಳಸುವ ಮಾತುಗಳು ಗ್ರಾಮ್ಯ ವಲ್ಲವೆ? ನಿಘಂಟುವಿನಲ್ಲಿರುವ ಮಾತುಗಳು ಮೊದಲು ಮೊದಲು ಗ್ರಾಮ್ಯಗಳೆ. ಅವುಗಳನ್ನು ನಮ್ಮ ತಾತ ಮುತ್ತಾತಂದಿರು ಆಡುತ್ತಿದ್ದರು. ಗ್ರಾಮ್ಯ ಬಳಸು, ಆಡು, ಬರೆ; ಹತ್ತಿಪ್ಪತ್ತು ವರ್ಷಗಳಲ್ಲಿ ನೀನು ಕನ್ನಡ-ಕನ್ನಡ ನಿಘಂಟುವಿನೊಳಗವತರಿಸುತ್ತಿ! ಕಿಟ್ಟೆಲ್ ಬದುಕಿದ್ದು, ಅವನೇನಾದರೂ ತನ್ನ ನಿಘಂಟುವಿನ ಎರಡನೆ ಛಾಪೆ ತೆಗೆದಿದ್ದರೆ, ನೀನೂ ನಾನೂ ಆಡ್ತಾ ಇರೋ ಮಾತು ಗಳನ್ನೆಲ್ಲ ಅದರಲ್ಲಿ ತುರುಕಿಬಿಡುತ್ತಿದ್ದ.

ವಿಮರ್ಶಕರು ವಿಚಾರಪರರು ಮೆಲುಕುಹಾಕಲು ಸಾಕಷ್ಟು ಮೇವಿದೆ ಇಲ್ಲಿ.

ನೃಪತುಂಗನ ಕಾಲದಲ್ಲಿ

"ಕವಿರಾಜಮಾರ್ಗ"ಕ್ಕೆ ಹಿಂದಿನ ಕಾವ್ಯಗಳು ಇದುವರೆಗೆ ನಮಗೆ ಸಿಕ್ಕಿಲ್ಲ. ಆದರೆ ನೃಪತುಂಗ ಅಮೋಘವರ್ಷನ ಕಾಲದ ಶಿಲಾಶಾಸನಗಳು ಶಿಥಿಲವಾಗಿ, ಚೂರುಪಾರು ಸಾಹಿತ್ಯ ಮಾತ್ರ ಸಿಗುತ್ತದೆ. ಅವುಗಳ ಸಹಾಯದಿಂದ ಆ ಕಾಲದ ಕನ್ನಡ ಗದ್ಯ, ಪದ್ಯಗಳ ರೂಪರಚನೆಗಳನ್ನು ತಿಳಿದುಕೊಳ್ಳಬಹುದು.

ಧಾರವಾಡ ಜಿಲ್ಲೆಯ ನವಲ್ಗುಂದ ತಾಲ್ಲೂಕಿನ ಶಿಸುವಿನಹಳ್ಳಿ ಹನುಮಂತದೇವರ ಗುಡಿಯಲ್ಲಿ ಕ್ರಿ. ಶ. ೮೭೨ರಲ್ಲಿ ಹುಟ್ಟಿದ, ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲದ* ಶಾಸನವೊಂದಿದೆ. ಇದೊಂದು ದಾನಶಾಸನ. ಅದರಿಂದ ಎತ್ತಿಕೊಟ್ಟಿರುವ ಗದ್ಯ ಪದ್ಯಗಳಿವು.

"ಶ್ರುತಿಯೊಳ್ವಿಶ್ರುತ ವಿಸ್ವ
ಸ್ಮೃತಿಯೊಳ್ವ್ಯಾಕರಣ ಕಾವ್ಯ ನಾಟಕ ತರ್ಕ
ಸ್ಥಿತಿಯೊಳ್ಸರ್ವಾಗಮದೊ
ಳ್ಚತುರ್ಮುಖ ಪ್ರತಿಮರಯ್ವದಿಂಬರ್ವಿಪ್ರರ್"

"ಮೊದಲೊಳ್ಸುಸೂಳ ಹಾಟಂ
ವಿದಿತ ಶ್ರೀಸಳುಕಿರಾಜ್ಯದೊಳ್ಪಡೆದು ಮಹಾ
ಸದಮಲಸರ್ವಕ್ರಿತುಗಳ
ನುದಾರತರಮಾಗೆ ಬೇಳ್ಪ ವಿಪ್ರೋತ್ತಮರಂ"

"ಕರೆಯಿಸಿ ಪಾದಪ್ರಕ್ಷಾಳನಪೂರ್ಬಕಂ ಸಹಿರಣ್ಯಾ
ನ್ನುಪ್ಪದೆಜೆಯನುಟೀದೊಸೆಲ್ಲಾ ಕಾಲಕ್ಕಮಿದ
ನರಸರುಮೂರುಂ ಕಾದೊಡಶ್ವಮೇಧ ಫಲಮುಕ್ಕು
ಮಿಲ್ಲಿಸೊಲ್ಲಗೆಯ ತುಪ್ಪಮು ನುಣ್ಣೆನೆಂಬಾತಂ
ಬಾರಣಾಸಿಯೊಳ್ಸಾಸಿರಂ ಗೋಬಾಳಸ್ತ್ರೀ ದ್ವಿಜ
ಗುರುಗಳಂ ಕೊನ್ದ ಪಂಚಮಹಾ ಪಾತಕರಪ್ಪರ್"

ಕವಿಕೃತ ಸಾಹಿತ್ಯ ಸಿಗುವವರೆಗೆ ಶಾಸನ ಸಾಹಿತ್ಯದಿಂದಲೆ ತೃಪ್ತರಾಗೋಣ.

ಕನ್ನಡ ಲಿಪಿ ಸೌಂದರ್ಯ

ಗದಗ ತಾಲ್ಲೂಕು ಸೊರಟೂರು ಜೀರ್ಣಜಿನ ಬಸ್ತಿಯ ಬಳಿಯೊಂದು† ಶಾಸನಗಲ್ಲು ಬಿದ್ದಿದೆ. ಇಮ್ಮಡಿ ಸೋಮೇಶ್ವರ ಭುವನೈಕಮಲ್ಲದೇವನ ಸಾಮಂತ ದಂಡ ನಾಯಕ ಬಲದೇವಯ್ಯ ಜಿನಾಲಯಕ್ಕೆ ಮಾಡಿದ ದಾನ ಕುರಿತು ಈ ಶಾಸನದಲ್ಲಿ ಹೇಳಿದೆ.

"ಭುವನೈಕಮಲ್ಲ ವಲ್ಲಭ ತೇಜೋವಿರಾಜಿತ
ಪ್ರಾರಬ್ಧಪ್ರವೀಣಂ | ಸಮ್ಯಕ್ತ್ವಶೀಳ ಪ್ರಮಾಣ
ನಿರ್ವಾಣಂ | ವಿಶಮಾದೇಶ ಕೌಶಳ ವ್ಯಾ
ಪಾರ ಯೋಗನ್ಧರಂ | ಕುಂತಳಾಧೀಶ
ಹಿತೋಪದೇಶ ಧುರನ್ಧರ | ಚನ್ದನ ಬ
ಹಳ ಪರಿಮಳಾಮೋದಂ | ಜಿನೇನ್ದ್ರ ಚರ
ಣಾರ್ಚನ ವಿನೋದಂ | ದೀನ ಹೀನ ನಾನಾ
ಮನುಜ ಪರಿಪೋಷಣಂ | ವಿಜಯ ಕಟಕ
ವಿಭೂಷಣ | ನಣ್ಣನ ವಜ್ರಂ | ಸ್ವಾಮಿದ್ರೋಹ
ಶಿರಚ್ಛೇದಕಂ"

ಎಂಬ ಶಾಸನ ಭಾಗವು ಅಧ್ಯಯನಾರ್ಹವಾಗಿದೆ. ಈ ಶಾಸನವನ್ನು ಬರೆದದ್ದು ೨೫-೧೨-೧೦೭೧ ರಂದು.

---

* No. 14. S.I.I. Vol. XI P. I.

† No. 111. S. I. I. Vol. XI P. I.

ಸರಸತರಮಾದುವೆನ್ದ
ಕ್ಕರಿಗರ್ಬ್ಬಣ್ಣಿಪಿನ ಮಿಾ ಶಿಲಾ ಶಾಸನಮಂ
. . . . . . **ಮುತ್ತಿನ**
ಸರಿಗೆಯನನುಕರಿಸೆ ಕನ್ನಪಯ್ಯಂ ಬರೆದಂ

ಎಂಬುದು ಕಡೆಯ ಪದ್ಯ. "ಮುತ್ತಿನ ಸರಿಗೆ" ಯಂತೆ ಬರೆದನಂತೆ!

ಹದಿಮೂರನೆಯ ಶತಮಾನದಲ್ಲಿ ಎರಡನೆಯ ಗುಣ ವರ್ಮ 'ಪುಷ್ಪದಂತ ಪುರಾಣ' ಬರೆದ. ಈ ಪುರಾಣ ವನ್ನು ಮಾದಿರಾಜನೆಂಬವ ಒಂದು ಪ್ರತಿಮಾಡಿದ. ಲಿಪಿ ಲೇಖನ ಚತುರ "ಕನ್ನಡ ಲಿಪಿ ಸೌಂದರ್ಯ" ಕುರಿತು ಹೇಳಿರುವುದನ್ನಾಲಿಸಿ.

"ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪೊರ್ಕುಟಿ
ಚೆಲ್ವು, ಮಾತ್ರೆಯೊಳ್
ನಿಂದ ಬೆಡಂಗು, ಬಳ್ಳಿಯೊಳೊಡಂಬಡುತಿರ್ಪ
ನಯಂ, ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್
ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜ ವಿಬುಧಂ ವಿಬುಧೋ
ದಿತ ನವ್ಯಕಾವ್ಯಮಂ"

ಅನುಭವಿಗಳು ನೀತಿವಿದರು

"ಅಸಾಧ್ಯವಾಗಿ ಓದಿದವರು ಪುಸ್ತಕಗಳನ್ನು ಬರೆಯು ತ್ತಾರೆ. ಅವರ ಗುರುಗಳಾದರೋ ಅವರಿಗೇನೇನೋ, ಎಷ್ಟೆಷ್ಟೋ, ಕಲಿಸುತ್ತಾರೆ. ಆದರೆ ಬರೆಯುವವರಿಗೆ ಅನು ಭವವಾದರೋ ಎಳ್ಳಷ್ಟೂ ಇಲ್ಲ. ಲೇಖಕರನೇಕರು ಇಂದು ಎರವಲು ಪದಾರ್ಥದಿಂದ, ಕಡತಂದ ಹೆರವರ ಅನುಭವ ಫಲದಿಂದ, ಬರೆಯುತ್ತಾರೆ. 'ಇದು ನನ್ನದು' ಎಂದು ಪ್ರಾಮಾಣಿಕತೆಯಿಂದ ಹೇಳಲು ಅವರಲ್ಲಿ ಸ್ವಲ್ಪವೂ ಇಲ್ಲ." ಇದು ಹಿರಿಯ ಮಹಾಸಾಹಿತಿಗಳೊಬ್ಬರು ಹೇಳಿದ ಮಾತು. ಇದು ಅಕ್ಷರಶಃ ನಿಜವಲ್ಲವಾದರೂ ಈ ಮಾತಿನ ತಿರುಳನ್ನು ಯಾರೇ ಆಗಲಿ ಒಪ್ಪಬೇಕು. ಕನ್ನಡದಲ್ಲಿ ಗ್ರಂಥರಚನೆ, ಕಾವ್ಯರಚನೆ, ಮಾಡಬಯಸುವವರೆಲ್ಲ ಮೆಲುಕು ಹಾಕಲು ಯೋಗ್ಯವಾದ ಮಾತಿದು. ಜೀರ್ಣಿಸಿಕೊಂಡ ಆಹಾರ ರಕ್ತಗತವಾದೀತು. ಅನುಭವ ಮೂಲವಾದ ಮಾತು ಸಾಹಿತ್ಯವಾದೀತು. ಅದು ಹತ್ತುಕಾಲ ನಿಲ್ಲುವಂತಾದೀತು. ಅವರು ಹೇಳಿದ್ದಾರೆ; ಇವರು ಹೇಳಿದ್ದಾರೆ; ಹೀಗೆ ಎತ್ತಿತ್ತಿ ಕೊಟ್ಟು ಬರೆದದ್ದು ಸಾಹಿತ್ಯವೆನಿಸದು. "ಕವಿರಾಜ ಮಾರ್ಗ" ಕಾರ

"ನೆನೆ ನೆನೆದು ಪೆಱರ ಮಾತುಗ
ಳನೆ ನೆಗಟ್ಟಿರೆ ಕೃತಿಯೊಳಿಡುವನಂ ನಗದ ಗುಹಾ
ಧ್ವನಿವೊಲನರ್ಥ ವಚನಂ
ತನಗಾಗಿಸಲಱಿಯ ನುಚಿತ ವಾಕ್ಚತುರತೆಯಂ"

ಎಂಬುದಾಗಿ ಒಂದು ಸಾವಿರ ವರ್ಷಗಳ ಹಿಂದೆಯೇ ಹೇಳಿದ! ತೂಕದ ಮಾತು; ಮನವೊಪ್ಪಿ, ಸೋಲುವ ಮಾತು.

"ಮಾತಱಿವರ್ಕೆಲಬರ್ಜ್ಜಗ
ತೀತಳಗತ ಮನುಜರೊಳಗೆ ಮಾತಱಿವವರೊಳ್
ನೀತಿವಿದ ರಮಳ ರಮಳ ಕವಿತಾ
ನೀತಿಯುತರ್ಕೆಲರೆ ಪರಮಕವಿ ವೃಷಭರ್ಕಳ್"

ಎಂಬುದಾಗಿಯೂ ಆತ ಹೇಳಿ "ನೀತಿವಿದರ" ಕಡೆ ನಮ್ಮ ಗಮನವನ್ನೆಳೆಯುತ್ತಾನೆ. "ಸ್ವಂತ ಅನುಭವ" ದಿಂದ ಬರೆಯಬೇಕು; "ನೀತಿವಿದ" ರಾಗಿರಬೇಕು. 'ನೀತಿ' ಜನ್ಮ ಜನ್ಮಾಂತರಗಳಿಂದ ಪಡೆವ ಪವಿತ್ರ ಗುಣ. 'ಅನುಭವ ಒಳ್ಳೆಯ ಜೀವನ, ನಿರ್ಮಲ ಜೀವನ ನಡೆಸಿ, ಪಡೆದ ಸಂಯಮ ಫಲ.

ಊರಿಗಿಟ್ಟ ಹೆಸರುಗಳು

ಊರ ಹೆಸರುಗಳನ್ನು ಕುರಿತು ಅಧ್ಯಯನ ಮಾಡುವುದ ರಲ್ಲಿ ಕುತೂಹಲವನ್ನು ನನ್ನಲ್ಲಿ ಉಂಟುಮಾಡಿದವರು ಸ್ವರ್ಗವಾಸಿ ಪಂಜೆ ಮಂಗೇಶರಾಯರು. ಸಮಯ ಸಿಕ್ಕಿ ದಾಗಲೆಲ್ಲ, ಮೈಸೂರು ಸಂಸ್ಥಾನದ ಗ್ರಾಮಗಳ ಪಟ್ಟಿಗಳ ಪುಟಗಳನ್ನು ತಿರುವಿಹಾಕುವುದು ಅಭ್ಯಾಸವಾಯಿತು; ಈ ಅಭ್ಯಾಸವು ಒಂದು ರೀತಿಯ ಅಧ್ಯಯನಕ್ಕೆ ನನ್ನನ್ನು ಒಯ್ದಿತು.

ಮೊದಲು ಬೆಂಗಳೂರು ಜಿಲ್ಲೆಯ ನಾನಾ ತಾಲ್ಲೂಕುಗಳ ಊರ ಹೆಸರುಗಳನ್ನೆಲ್ಲ ವರ್ಗೀಕರಣ ಮಾಡಿದೆ. ಮೃಗ ಪಕ್ಷಿ, ಕ್ರಿಮಿಕೀಟಗಳ ವರ್ಗದಲ್ಲಿ ಈ ಹೆಸರುಗಳು ಕಂಡು ಬಂದವು.

ಹುಲಿಕಲ್ಲು	ಮಂಗನಹಳ್ಳಿ
ನರೀಪುರ	ಕೋಗಿಲು
ಹುಳವಾಡಿ	ಚೇಳುಕೆರೆ
ಗೆದ್ದಲಹಳ್ಳಿ	ಕೊಕ್ಕರೆಪಡಿಯ
ಜೇಡಹಳ್ಳಿ	ಗೂಳ್ಯ
ನಾಗಸಂದ್ರ	ಕಾಗಿಮಡು

ಮಿಶ್ರವರ್ಗವೊಂದನ್ನು ವಿಂಗಡಿಸಿದ್ದೆ. ಆ ವರ್ಗದಲ್ಲಿ ಕಂಡುಬಂದ ಹೆಸರುಗಳಿವು :

ಹಾಡೋಸಿದ್ದಾಪುರ	ಕೊಡತಿ
ಕಣ್ಣುಮಿಟಕೆ	ಶೀಕೋಟೆ
ತಿಣ್ಣಲು	ಕೈಕತ್ತಿ
ಹುವ್ವಿನಾಣೆ	ದೊಡ್ಡಕೋಲಿಗ
ಹೆತ್ತಕ್ಕಿ	ಅಂಬಲಿಪುರ
ಉಮ್ಮಲು	ಕಣೇಕಲ್ಲು
ಕುಂದಾಣ	ಗಾಳಿಪೂಜೆ
ತೊಗರಿಘಟ್ಟ	ಕೂಗೇನಹಳ್ಳಿ
ಗಲಿಬಿಲಿಕೋಟೆ	ಕತ್ತಿಹೊಸಳ್ಳಿ
ಹಣಬೆ	ಅಡಿಕೆವಾಳ
ಓಜೇನಹಳ್ಳಿ	ಪಂಡಿತಪುರ
ಗರುಡಗಲ್ಲು	ತಪಸೀಪುರ

ಗಿಡ ಬಳ್ಳಿ, ಹಣ್ಣುಕಾಯಿ, ಇತ್ಯಾದಿಗಳ ವರ್ಗದಲ್ಲಿ

ಗೇರಹಳ್ಳಿ	ಶೀಗೆಹಳ್ಳಿ
ಕನ್ನೆಲ್ಲಿ	ಶ್ರೀಗಂಧದ ಕಾವಲು
ಜಾಲಹಳ್ಳಿ	ಸೋರ್ಹುಣಿಸೆ
ಹರಳೂರು	ಎಳ್ಳುಕುಂಟೆ
ತಾವರೆಕೆರೆ	ಹುಳಿಮಾವು
ಯಲಚೇನಹಳ್ಳಿ	ಕುಂಬಳಗೋಡು
ಕಕ್ಕೇಹಳ್ಳಿ	ನೆಲ್ಲುಕುಂಟೆ
ಮುತ್ತಕದಹಳ್ಳಿ	ಹುರುಳಿ-ಚಿಕ್ಕನಹಳ್ಳಿ
ಹೆಸರಘಟ್ಟ	ಸಂಪಿಗೆಹಳ್ಳಿ
ಹೊನ್ನೇಹಳ್ಳಿ	ಹೊರಮಾವು

ಮುಂತಾದ ಹೆಸರುಗಳು ಕಣ್ಣಿಗೆ ಬಿದ್ದವು. ವರ್ಗೀಕರಣ ಮಾಡಿ ಒಂದೊಂದು ಊರಿನ ಹೆಸರನ್ನು ಕುರಿತು "ಈ ಊರಿಗೆ ಈ ಹೆಸರನ್ನೇಕೆ ಇಟ್ಟರು ?" ಎಂಬ ಪ್ರಶ್ನೆ ಮೇಲಿಂದ ಮೇಲೆ ನನ್ನ ವಿಚಾರಪಥದಲ್ಲಿ ಅಡ್ಡಬಂದು ನಿಲ್ಲುತ್ತಿತ್ತು. ಇಷ್ಟು ಹೆಸರುಗಳ ಸಹಾಯದಿಂದಲೇ ಯಾವ ತರದ ಅನುಮಾನಮಾಡುವುದೂ ಸರಿಯಲ್ಲವೆಂದು ಭಾವಿಸಿ, ಒಂದೊಂದು ಜಿಲ್ಲೆಯ ಹೆಸರುಗಳನ್ನೂ ವರ್ಗೀಕರಣಮಾಡಿ, ಪಟ್ಟಿಗಳನ್ನು ಸಿದ್ಧಗೊಳಿಸಿ, ಮುಂದಿಟ್ಟುಕೊಂಡು, ಆಲೋಚನೆ ಮಾಡಲಾರಂಭಿಸಿದೆ. ಮುಂದಿನ ತಿಂಗಳು ಕೋಲಾರ ಜಿಲ್ಲೆಯ ಹೆಸರುಗಳಲ್ಲಿ ಕೆಲವನ್ನು ಕೊಡುತ್ತೇನೆ. ಅನಂತರ ಮುಂದಿನ ಮಾತು.

ಗಣಿ ಉದ್ಯಮ

ಸತ್ತೆಮ್ಮೆಗೊಡ್ಡಿನಾ ತೊಗಲು ಸುಲಿದಂತಿಹುದು
ಸೀಸದಂತಹ ಕಲ್ಲು ಕೆದರೆ ಗುಡ್ಡ
ಹಾವು ಹರಿದಾಡಿದೊಲು ಬಾಗಿ ಬಂಕಿದ ದಾರಿ
ಹೇರಲಣಿ ಲಾರಿಗಳು ಅಡ್ಡದಿಡ್ಡ.
ಹುಲ್ಲುಗುಡ್ಡದ ತುಂಬ ದನಹಿಂಡು ಮೇಯುತಿದೆ
ಅಕ್ಕಿಯಲಿ ಕಂಡಂತೆ ಕಲ್ಲುಹರಳು
ತಲೆಗುರ್ಜಿಬಿಟ್ಟಂತೆ ಬೆಳೆದ ಹುಲ್ಲಿನ ನಿಲುವು
ಸಾಕ್ಷಿಯನು ಹಾಕಿತ್ತು ಗಾಳಿ ಬರಲು.
ಬಳಿಯೆ ಬಯಲಿನ ಹೊಲಕೆ ಬಂತು ಬೆಸ್ಸನೆ ಜಸ್ಸು
ಬೀಡಿ ಚಹದಂಗಡಿಗೆ ಇಲ್ಲ ಸ್ಥಳವು

ಬಂಗಾರ ಬೆಲೆಮಾಡಿ ಬಯಲನ್ನು ಮಾರಿಹರು
ಸವ್ವಾರಿ ಹೂಡಿಹುದು ಎಲ್ಲ ಕುಲವು.
ನಾಲ್ಕೈದಿನ ಕಳೆದಿಹವು ಮುಗಿಲುಮುಟ್ಟಿದೆ ಬಾಳು
ಬೆಂಚಿ – ಪಣವಿನ ರಸ್ತೆ – ಉದ್ಯಾನವು
ಪಾಯಿಖಾನೆಯೊ ಹುಲುಸು, ಗಠಾರಗಳ ಘೇರಾವೋ
ಸಿನಿಮ ಸರ್ಕಸ್ಸುಗಳ ಸಂತಾನವು.
ಅಡವಿ ದೆವ್ವನ ಮನೆಯ ಊರ ದೆವ್ವವು ಹೊಕ್ಕು
ಮ್ಯಾಂಗನೀಸಿನ ಜಿನ್ನು ಹಾಕಿದಂತೆ
ಧ್ಯಾನ ತಪಗೈವುದಕೆ ಲಾಯಖಿದ್ದಾಸ್ಥಳವು
ಗದ್ದಲದ ಜಂಜಾಟ ದಿನವೂ ಸಂತೆ.

ಕೆ. ವಿರೂಪಾಕ್ಷಗೌಡ

ಜನ್ನನ ಯಶೋಧರ ಚರಿತೆ

೦೦ ಎಂ. ಎಸ್. ಸ್ವಾಮಿ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಜನ್ನನಿಗೆ ಹಿರಿದಾದ ಸ್ಥಾನವಿದೆ. ಅವನು ತನ್ನ ಮೂರು ಕೃತಿರತ್ನಗಳನ್ನು ನೀಡಿ ಕನ್ನಡ ಸಾಹಿತ್ಯ ಶ್ರೀ ಮಾಲಿಕೆಯನ್ನು ಹೆಚ್ಚಿಸಿದನು. ಕವಿಯೊಂದಿಗೆ ಕ್ಷಾತ್ರಾಜೀವನವನ್ನು ಸಾಗಿಸಿದ ಜನ್ನನ ಲೋಕಾನುಭವ ಬಹುಮುಖವಾದುದು. ಲೇಖಣಿಕೆಯನ್ನು ಹಿಡಿದು ತೊಡಗಿದನೆಂದರೆ ಕಾವ್ಯ ರಚಿಸುವುದರಲ್ಲಿ ಎಷ್ಟು ನಿಷ್ಣಾತನೋ ಖಡ್ಗ ಹಿಡಿದು ತುಡುಕಿ ಯುದ್ಧ ಮಾಡುವು ದರಲ್ಲಿಯೂ ಅಷ್ಟೇ ಅವನು ನಿಪುಣನು. ಕನ್ನಡ ಸಾಹಿತ್ಯ ದಲ್ಲಿ ಇಂತಹ 'ಖಟ್ಗಕಳಾಪಾಂಡಿತ್ಯ' ಗಳೆರಡರಲ್ಲಿಯೂ ಅಂತಹ ಶಕ್ತಿಯನ್ನು ಸಾಧಿಸಿದ ಕೀರ್ತಿ ಮೊದಲು ಮಹಾ ಕವಿ ಪಂಪನಿಗೆ ಸೇರಿದರೆ, ತರುವಾಯ ಅದು ಜನ್ನನಿಗೆ ಸಲ್ಲು ತ್ತದೆ. ಆದುದರಿಂದ ಅವನು ನರಸಿಂಹ ಬಲ್ಲಾಳನ ಆಸ್ಥಾನ ದಲ್ಲಿ 'ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ' ಯಾಗಿ ಬಹುಮುಖ ವ್ಯಕ್ತಿತ್ವವನ್ನು ಮೆರೆದಿದ್ದಾನೆ. ಅನ್ನದ ಋಣಕ್ಕೆ ಅವನು ಕಾಳಗ ಮಾಡಿ ಅರಸನನ್ನು ಮೆಚ್ಚಿಸಿ, 'ನಾಟ್‌ಪ್ರಭು' ಎಂಬು ಬಿರುದನ್ನು ಗಳಿಸಿ ಕೊಂಡರೆ, ಅರಸನ ಸತ್ಕಥಾಸಂಕೀರ್ತನೆಗಾಗಿ ಕಾವ್ಯಗಳನ್ನು ಬರೆದು 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದನು. ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ಜನ್ನ ಮೂರನೆಯ ಕವಿಚಕ್ರವರ್ತಿ ಪಟ್ಟವನ್ನೇರಿ ಪೊನ್ನ-ರನ್ನರಂತಹ ಹಿರಿಯ ಕವಿಗಳ ಸಾಲಿನಲ್ಲಿ ಸೇರಿದನು.

'ಯಶೋಧರ ಚರಿತೆ' ಜನ್ನನ ಕಾವ್ಯಗಳಲ್ಲಿಯೇ ಸುಂದರವಾದ ಕೃತಿ. ಅವನ ಕವಿತಾಶಕ್ತಿಯ ಧವಳಕೀರ್ತಿ ಈ ಕಾವ್ಯದ ಮೇಲೆಯೇ ನಿಂತಿದೆ. ಇದು ೩೧೦ ಕಂದ ಪದ್ಯಗಳನ್ನೊಳಗೊಂಡ ನಾಲ್ಕು ಅವತಾರದ ಅತಿ ಚಿಕ್ಕ ಬಂಧ. ಅವತಾರದ ಕೊನೆಗೆ ಬರುವ ಒಂದೆರಡು ವೃತ್ತ ಪದ್ಯಗಳನ್ನು ಬಿಟ್ಟರೆ ಇಡೀ ಕಾವ್ಯ ಕಂದ ಗದ್ಯಗಳಲ್ಲಿಯೇ ನಿರೂಪಿತವಾಗಿರುವುದರಿಂದ ಇದೊಂದು ಕನ್ನಡ ಸಾಹಿತ್ಯ ದಲ್ಲಿ ಅಪೂರ್ವ ಕೃತಿಯೆಂದು ಹೇಳಬಹುದು. ಮೂಲ ಕಾವ್ಯದಿಂದ ಕಥೆಯನ್ನು ಆಯ್ದುಕೊಳ್ಳುವಾಗ ಯಾವು ದಕ್ಕೂ ಬಾಧೆಬರದಂತೆ ಕಥೆಯನ್ನು ನಡಸಿಕೊಂಡು ಹೋಗಿರುವುದರಲ್ಲಿ ಅವನು ಕೌಶಲವನ್ನು ತೋರಿಸಿದ್ದಾನೆ. ಪಾತ್ರಪೋಷಣೆ, ಸನ್ನಿವೇಶ ನಿರ್ಮಾಣ, ಅಲಂಕಾರದ ಔಚಿತ್ಯ, ಪದಲಾಲಿತ್ಯ ಮೊದಲಾದುವುಗಳಲ್ಲಿ ಕವಿಯ ಕವಿತಾ ಶಿವಶಕ್ತಿ ಗರಿಗೆದರಿ ತಾಂಡವ ನಾಟ್ಯವಾಡಿರುವು ದನ್ನು ಕಾಣುತ್ತೇವೆ. ಅವನ ಪ್ರತಿಭೆ ಪಾಂಡಿತ್ಯಗಳೆರಡನ್ನು ಮೆಚ್ಚುಕೊಳ್ಳುತ್ತೇವೆ. ಆದರೂ ಅವನು ತನ್ನ ಕಾವ್ಯದಲ್ಲಿ ಕಾಮವಿಕಾರತೆಯನ್ನು ಸ್ವೈರವಾಗಿ ಚಿತ್ರಿಸಿದ್ದಾನೆಂದು ಕೆಲವು ವಿಮರ್ಶಕರ ವಾಗ್ಬಾಣಗಳಿಗೆ ಗುರಿಯಾಗಬೇಕಾ ಯಿತು. ಈ ವಿಮರ್ಶೆ ಅಷ್ಟೊಂದು ಸಾಧುವೆನಿಸಲಾರದು. ಜನ್ನ ತನ್ನ ಕಾವ್ಯವನ್ನು ಹಿಂದಣ ಸಂಸ್ಕೃತ, ಪ್ರಾಕೃತ, ಕನ್ನಡ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡಿರುವುದರ ಮೂಲದಲ್ಲಿರುವಂತೆಯೇ ಕಾಮವಿಕಾರತೆಯನ್ನು ಚಿತ್ರಿಸಿರು ವುದರಿಂದ, ವಿಮರ್ಶಕರ ವಾಗ್ಬಾಣಗಳಿಗೆ ಜನ್ನನೊಬ್ಬ ನೇಕೆ ಪಾತ್ರನಾಗಬೇಕು?

ಕಾಮವಿಕಾರತೆಯನ್ನು ನಿರೂಪಿಸುವುದು ಯಶೋಧರ ಚರಿತೆಯ ಮುಖ್ಯ ಉದ್ದೇಶವಾಗಿರದೆ, ಆತ್ಮನ ಊರ್ಧ್ವ ಮುಖಗೊಳಿಸುವ ಜೈನತತ್ತ್ವ ಬೋಧೆಯೇ ಇಲ್ಲಿಯ ಮುಖ್ಯ ಉದ್ದೇಶವೂ ಕಾವ್ಯದ ಫಲಶ್ರುತಿಯೂ ಆಗಿದೆ. ಜೀವದಯಾಷ್ಟಮಿ ದಿವಸ ಪಾರಾಯಣ ಮಾಡುವ ಭಕ್ತ ರಿಗೆ ಜೈನಧರ್ಮ ಹಾಗೂ ಅಹಿಂಸೆಗಳು ಮನದಲ್ಲಿ ನೆಲೆ ಗೊಳ್ಳಲೆಂದು ಇಂತಹ ಜೈನತತ್ತ್ವ ಪ್ರಧಾನವಾದ ಕಥೆ ಗಳನ್ನು ಹೇಳಬೇಕಾಗುತ್ತದೆ. 'ಶ್ರಾವಕ ಜನದುಪ ವಾಸಂ ಜೀವದಯಾಷ್ಟಮಿಯೊಳಗೆ ಪಾರಣ ಕವಿಗಳ್ಗೀ ವಸ್ತುಕದಿಂದುದ್ಭಾವಿಸೆ' ಎಂದು ಕವಿಯೇ ಕಾವ್ಯದ ಉದ್ದೇಶವನ್ನು ಕಥಾವತಾರದಲ್ಲಿಯೇ ಹೇಳಿರುವದನ್ನು ಇಲ್ಲಿ ನೆನೆಯಬೇಕು. ಆದುದರಿಂದ ಕವಿಯು ಇಟ್ಟು ಕೊಂಡ ಉದ್ದೇಶ ಹಾಗೂ ಜೈನತತ್ತ್ವಗಳ ಹಿನ್ನೆಲೆಯಲ್ಲಿ ಕಾವ್ಯವನ್ನು ಓದಿದರೆ ಕಾವ್ಯ ನಮ್ಮ ಅಂತಃಕರಣಕ್ಕೆ ಮೆಚ್ಚುಗೆಯಾಗುತ್ತದೆ, ಜನ್ನನಿಗೆ ಕಟು ವಿಮರ್ಶೆಯೂ ತಪ್ಪುತ್ತದೆ.

ಕಾವ್ಯದ ಕಥೆಯನ್ನು ಹೀಗೆ ಸಂಗ್ರಹಿಸಬಹುದು:

ಉಜ್ಜೇನಿಯ ದೊರೆ ಯಶೌಘ, ಆತನ ಅರಸಿ ಚಂದ್ರ ಮತಿಯರಿಗೆ ಯಶೋಧರ ಒಬ್ಬನೇ ಮಗ. 'ನೋಡುವ

ಕಣ್ಗಳಲ್ಲಿ ಸಿರಿ, ಮಾತನಾಡುವ ಬಾಯ್ಗಳ ರಸಾಯನ' ಅವನ ರೂಪು. ಒಂದು ದಿನ ಅರಸ ನೆರೆತ ತಲೆಗೂದಲನ್ನು ಕಂಡು ಜೀವನದಲ್ಲಿ ಜಿಗುಪ್ಸೆಪಟ್ಟು, ಮಗನಾದ ಯಶೋಧರನಿಗೆ ಪಟ್ಟಗಟ್ಟಿ, ತಾನು ತಪೋವನಕ್ಕೆ ತೆರಳುತ್ತಾನೆ. ಅಮೃತಮತಿ ಯಶೋಧರನ ಮನಃಪ್ರಿಯೆ. ಆಕೆ ಕಾಮನ ಕೈಯ ಕುಸುಮ ಬಾಣದಂತೆ ಅರಸನ ಚಿತ್ತವನ್ನು ಆಕರ್ಷಿಸುವ ಬೆಡಗುಗಾರ್ತಿ. ಇಬ್ಬರೂ ಸಮರೂಪಿಗಳು; ಸಮಸ್ಕಂದರು. ಅನುಪಮವಾದ ದಂಪತಿಗಳ ಈ ಮಧುರ ಜೀವನ ವಿಧಿಗೆ ಬೇಡವಾಯಿತು. ಅವನ ಕೈವಾಡಕ್ಕೆ ಸೋಲೆಂಬುದುಂಟೇ?

ಒಂದು ದಿನ ಮಧ್ಯರಾತ್ರಿ ಪ್ರಶಾಂತ ವಾತಾವರಣ ಎಲ್ಲೆಲ್ಲಿಯೂ ಆವರಿಸಿದೆ. ಯಶೋಧರ–ಅಮೃತಮತಿ ಪ್ರಣಯಿಗಳು ಅರಮನೆಯ ಕರುಮಾಡದಲ್ಲಿ ಸುಖನಿದ್ರೆಯಲ್ಲಿದ್ದಾರೆ. ಆಗ ಅರಮನೆಯ ಬದಗನೊಬ್ಬ ವಿನೋದಕ್ಕೆಂದು ಹಾಡುತ್ತಾನೆ. ಹಾಡು ನಿಶ್ಶಬ್ದವನ್ನು ಭೇದಿಸಿಕೊಂಡು ಬರುತ್ತದೆ 'ಅನುಣ್ದನಿ ನಿದ್ರೆಗೆ ಕತಕ ಬೀಜಮಾಯ್ತು' ಎನ್ನುವಂತೆ ಅಮೃತಮತಿ ನಿದ್ರೆಯಿಂದ ತಿಳಿದು ಹೃದಯ ಮುಟ್ಟುವಂತೆ ಹಾಡಿದ ಗಾಯಕನಿಗೆ ತನ್ನ ಮನವನ್ನೇ ಪಸಾಯದಾನವಾಗಿ ಅರ್ಪಿಸುತ್ತಾಳೆ. ಇನ್ನೇನು ಮುಂದಿನ ಕೆಲಸ ಬಹುಬೇಗ ಜರಗುತ್ತವೆ.

ವಿಕಲಸ್ವಾಂತೆಯಾದ ಅಮೃತಮತಿಗೆ ಗಾಯಕನನ್ನು ನೋಡುವ, ಕೂಡುವ ಚಿಂತೆ ಕಡಲ್ವರಿದುಕ್ಕುತ್ತದೆ. ಬೆಳಗಾದುದೇ ತಡ–ತನ್ನ ಆಪ್ತದೂತಿಯನ್ನು ನಲ್ಲನ ತಾಣಕ್ಕೆ ಕಳುಹಿಸುತ್ತಾಳೆ. ದೂತಿ ಅಲ್ಲಿ ಕಂಡದ್ದೇನು? ನವಯೌವನದ ಮನಮೋಹಕನಾದ ಪುರುಷನನ್ನಲ್ಲ–ಅಷ್ಟಾವಕ್ರನನ್ನು! ಮುದಿಕುರೂಪಿಯನ್ನು! ದೂತಿಗೆ ಸಹನೆ ಮೀರಿತು. 'ಚಿತ್ರಮಪಾತ್ರೇ ರಮತೀ ನಾರೀ' ಎಂಬುದು ಸಮಾನಿಸಿದುದು' ಎಂದು ಸ್ತ್ರೀ ಜಾತಿಯನ್ನೇ ನಿಂದೆಗೆ ಗುರಿ ಮಾಡುತ್ತಾಳೆ. 'ಅಮೃತಮತಿಯೆತ್ತ ರೂಪಾಧಮ ಅಷ್ಟಾವಂಕನೆತ್ತ' ಎಂದು ಬಿಸುಸುಯ್ಯುತ್ತಾಳೆ. ಅಸಹಾಯಕಳಾದ ದೂತಿ ಮಾಡುವುದಾದರೂ ಏನು? 'ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ' ಎಂದು ಸೃಷ್ಟಿಕರ್ತನನ್ನು ಶಪಿಸುವುದೊಂದೆ ಅವಳ ಕೆಲಸವಾಗುತ್ತದೆ. 'ತನ್ನ ಮಾರ್ಗವ ಲಗ್ನನೇತ್ರೆ'ಯಾದ ಅಮೃತಮತಿಯ ಬಳಿ ಲಗುಬಗೆಯಿಂದ ದೂತಿ ಬರುತ್ತಾಳೆ. ಪಾಪ! ಅವಳು ಏನೆಂದು ಹೇಳಬೇಕು? ಸಖೀ, ಅಮೃತಮತಿ 'ಇಂತಪ್ಪ ಕಾಮದೇವಂಗೆ ಎಂತಾಯ್ತು' ನಿನ್ನ ಪ್ರೀತಿ. ಆತನ ರೂಪರಾಶಿಯನ್ನು ಹೋಲಿಸಿ ಹೇಳಬೇಕಾದರೆ 'ಮೇದಿನಿಯೊಳ್ ಆತನಲ್ಲದೆ ಇಲ್ಲ' ಎಂದು ಮೂದಲಿಕೆಯಾಡುತ್ತಾಳೆ. ಇನಿಯನ ಧ್ವನಿಗೇ ಕಾಮಿತಳಾದ ಅಮೃತಮತಿ, ಅವನ ರೂಪವನ್ನು ಕೇಳಿ ಉಬ್ಬಿಹೋಗುತ್ತಾಳೆ. ಉನ್ಮಾದಕ್ಕೆ ವಶಳಾದ ಅವಳಿಗೆ ದೂತಿಯ ಮಾತು ಮನಮೋಹಕವಾಗುತ್ತದೆ. ಇನ್ನೂ ಹೆಚ್ಚು ಹೊತ್ತು ಅವಳು ಸಹಿಸಳು. 'ಪೇಟಿಗ್ ಪೇಟಿಗ್ ಕಾದಲನಂತಿರೆ ಚಲ್ವನೆ' ಎಂದು ಅವನ ಚಲುವನ್ನು ಬಣ್ಣಿಸಲು ತ್ವರಿಪಡಿಸುತ್ತಾಳೆ. ತಾನು ಕಂಡ ಮಾವಟಿಗನ ಅಸಹ್ಯವಾದ ಚಿತ್ರವನ್ನು ದೂತಿ ಅವಳ ಕಣ್ಮುಂದೆ ಕಟೆದು ನಿಲ್ಲಿಸುತ್ತಾಳೆ:

ಪಱಿದಲೆ ಕುಱಿನೋಸಲಱಿಗ
ಣ್ಣೊಱಿವಾಯ್ ಹಪ್ಪಳಿಕೆ ಮೂಗು ಮುರುಟದ ಕಿವಿ ಬಿ
ಬ್ಬಿಱಿವಲ್ ಕುಸಿಗೊರಲಿಱಿದೆರ್ದೆ
ಪೊಱಂಟಬೆನ್ ಬಾತ ಚಸಿಱಡಂಗಿದ ಜಘನಂ

ಇಷ್ಟೇ ಅಲ್ಲ–ಮುದುಗರಡೆಯ ಮುರುಟಾದ ಕರಿಯ ತೊಗಲು, ಮುರಿದ ಕತ್ತೆಯ ಕಾಲು, ಹೊಲಸು ನಾರುವ ಮೈ, ಅಂಕುಡೊಂಕಾದ ಆಕೃತಿ–ಇದು ನಿನ್ನ ಇನಿಯನ ರೂಪು ಎಂದು ಭೀಭತ್ಸವಾಗಿ ಬಣಸುತ್ತಾಳೆ.

ಆಗ ಅಮೃತಮತಿಯ ಅವಸ್ಥೆ ಏನಾಗಿರಬೇಕು ಬಲ್ಲಿರಾ? 'ಪುಳಿಂದನ ಕಡೆಗಟ್ಟನಿಂಪ ವನಹರಿಣಿಯವೊಲ್, ಅವಳು ದಿಗ್ಭ್ರಾಂತಳಾಗಿ ಮೂರ್ಛೆ ಹೋಗುತ್ತಾಳೆ ಎಚ್ಚರ. ತಿಳಿದಮೇಲೆ ಅವಳು ಅಪಾತ್ರನಲ್ಲಿ ಅಳುಪಿದುದ್ದಕ್ಕಾಗಿ ತನ್ನ ಮನೋದೌರ್ಬಲ್ಯಕ್ಕೆ ನಾಚಿದಳೇ? ಎಂದು ಹೀಗೆ ನೂರಾರು ಅನುಕಂಪನಾ ಪ್ರಶ್ನೆಗಳು ಸಹೃದಯರ ಮನಸ್ಸಿನಲ್ಲಿ ಉದ್ಭವಿಸಬಹುದಲ್ಲವೆ? ಆದರೆ ಯಾರ ಅಂತಃಕರಣಕ್ಕೂ ನಿಲುಕದ ಮನೋನಿರ್ಧಾರ ಅವಳದು. ದೂತಿಗೆ ಪ್ರತಿಯಾಗಿ ಕೊಡುವ ಆಕೆಯ ಮಾತುಗಳನ್ನೇ ಕೇಳಿ. ಎಂತಹ ಕಾಠಿಣ್ಯ; ಆದರೂ ಎಂತಹ ಲೋಕಾಭಿರಾಮ:

ಕರಿದಾದೊಡೆ ಕತ್ತುರಿಯಂ
ಮುರಿದಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೈಯ್ಯೊಳ್

ಇಷ್ಟಕ್ಕೆ ನಿಲ್ಲಲಿಲ್ಲ ಅವಳ ಪ್ರೇಮಾಲಾಪ–' ಬಲುವಾದೊಡೆ ಕೋಟಲೆಯೇವುದೋ ಕಾರ್ಯಮಾಗೆ ಕಾರಣದಿಂದ'ಎಂದು ರೂಪಕ್ಕೂ ಪ್ರೇಮಕ್ಕೂ ಯಾವ ಸಂಬಂಧ? ಎಂದು ಪ್ರಶ್ನಿಸಿ ಅದನ್ನು ಧಿಃಕರಿಸುತ್ತಾಳೆ. ಮಾವುಟಿಗನಲ್ಲಿಯ 'ಪೊಲ್ಲಮೆ' ಆಕೆಗೆ ಲೇಸಾಗಿ ಕಾಣುತ್ತದೆ ಅವನೇ ಅವಳಿಗೆ ಕುಲದೈವ, ಕಾಮದೇವ, ಇಂದ್ರ, ಚಂದ್ರ–ಸರ್ವಸ್ವ! ಅಮೃತಮತಿ

ಜಾರಿದಳು. ಜಾರಿ ಪ್ರಪಾತಕ್ಕೆ ಬಿದ್ದಳು. ಒಂದು ಸಲ ಜಾರಿದ ಹೆಣ್ಣು ಮತ್ತೆ ಚೇತರಿಸಿಕೊಳ್ಳುವುದು ಕಠಿಣ. ಮದನೋನ್ಮಾದವೇ ಅಂತಹದ್ದು. 'ಅದು ಎನ್ನರುಮಂ ಮತಿಗೆಡಿಪುದು ಚೋದ್ಯಮಲ್ತು ಮದದೋನ್ಮಾದಂ 'ಎಂಬ ನಾಗಚಂದ್ರನ ಮಾತು ಸತ್ಯ. ಪರಾಂಗನಾವಿರತನಾದ ರಾವಣನಂತಹವನೇ ಒಮ್ಮೆ ಜಾರಿ ಹಳ್ಳಕ್ಕೆ ಬಿದ್ದನೆಂದ ಮೇಲೆ ಪಾಪ! ಅಮೃತಮತಿ ಎಷ್ಟರವಳು! ದೂತನಿಗೆ ಲಂಚಕೊಟ್ಟು ಕಳಿಸಿ, ಇತ್ತ ತಾನು ಮಾವಟಿಗನನ್ನು ಕೂಡುತ್ತಾಳೆ.

'ಬೇವಂ ಮೆಚ್ಚಿದ ಕಾಗೆಗೆ ಮಾವಳಿದಪ್ಪಂತೆ' ಅಮೃತ ಮತಿಗೆ ಅರಸನ ಮೇಲಿನ ಸ್ನೇಹ ಕ್ರಮೇಣ ಕಡಮೆಯಾ ಗುತ್ತ ನಡೆಯುತ್ತದೆ. ಹೆಂಡತಿಯಲ್ಲಾದ ಈ ಪರಿವರ್ತನೆ ಯನ್ನು ಕಂಡು ಶಂಕಿತನಾದ ಯಶೋಧರ ಒಂದು ದಿನ ಹುಸಿ ಮಲಗುತ್ತಾನೆ. ಅವನಿಗೆ ನಿದ್ರೆ ಹತ್ತಿದೆಯೆಂದೇ ಭ್ರಮಿಸಿ ಅಮೃತಮತಿ ಮೆಲ್ಲನೆ ಗಂಡನ ತೋಳಸೆರೆಯಿಂದ ಜಾರಿ, ಮಾವುತನನ್ನು ಸೇರುತ್ತಾಳೆ. 'ದೋಷದ ಬೆನ್ನೊಳೆ ಸಂದಿಸುವ ಖಡ್ಗದಂತೆ' ಅರಸ ಹಿರಿದೆ ಖಡ್ಗದೊಂದಿಗೆ ಅವಳ ಬೆನ್ನ ಹಿಂದೆಯೇ ನಡೆಯುತ್ತಾನೆ. ಇತ್ತ ಮಾವು ತನು ಅಮೃತಮತಿ ಬರುವದು ದಿನಕ್ಕಿಂತ ಅಂದು ಕೊಂಚ ತಡವಾದುದಕ್ಕೆ ಸೈರಿಸದೆ, ಆಕೆ ತಂದ ಮಾಳಾಮಳಯಜ ತಾಂಬೂಲಾದಿಗಳನ್ನು ಕೆದರಿ, ತೋರು ಮುಡಿಯನ್ನು ಹಿಡಿದು 'ಕಳಹಂಸೆಗೆ ಗಿಡಿಗನೆಱಗಿದಂತೆ' ಬಾರೇಳು ಮೂಡುವಂತೆ ಬಾರಿಸುತ್ತಾನೆ; ಮನಬಂದಂತೆ ಒದೆಯು ತ್ತಾನೆ. ಜಾರನ ಏಟುಗಳನ್ನು ನಿತ್ತರಿಸಿಕೊಂಡು ಅಮೃತ ಮತಿ ಅವನ ಕಾಲುಗಳ ಮೇಲೆ ಬಿದ್ದು ಪರಿಪರಿಯಾಗಿ ಹಲಬುತ್ತಲೇ 'ನಲ್ಲನೆ ಬಡಿ; ಮುನಿಯದಿರ್' ಎಂದು ಸೆರಗೊಡ್ಡಿ ಬೇಡಿಕೊಳ್ಳುತ್ತಾಳೆ. ಮಾವಟಿಗನ ಹೊರತು ತನಗೆ 'ಮಿಕ್ಕಗಂಡರ್ ಸವ ಸಹೋದರರ್' ಎಂದು ಅವ ನಿಗೆ ನಂಬುಗೆ ಬರುವಂತೆ ತಿಳಿಸುತ್ತಾಳೆ. ಅವಳ ಸಹ್ಯ ವಲ್ಲದ ಈ ವರ್ತನೆಯನ್ನು ಕಂಡು ಯಾವ ಗಂಡಸಿಗೆ ತಾನೆ ರೋಷಬಾರದು? ಮರೆಯಲ್ಲಿ ನಿಂತು ಇವೆಲ್ಲವನ್ನು ನೋಡುತ್ತಿದ್ದ ಗಂಡನಾದ ಯಶೋಧರನಿಗೆ ಹೇಗಾಗಿರ ಬೇಕು? ಇಬ್ಬರನ್ನು ಒಂದೇ ಏಟಿಗೆ ತುಂಡರಿಸಲು ಅವನ 'ಬಾಳ್ ನಿಮಿರ್ದುದು; ತೋಳ್ ತೂಗಿದುದು; ಮನಂ ಕನಲ್ದುದು' ಆದರೆ ಅವನು ಕ್ಷತ್ರಿಯನಲ್ಲವೆ? 'ಪರನೃಪ ನಲ್ಲದೆ ಈ ಪುಳಕರನ್ ಇಱಿವುದೆ ಮತ್ ಭುಜಾಸಿಯಿದು' ಎಂದು ಉಕ್ಕಿ ಬಂದ ರೋಷವನ್ನು ಅದುಮಿಕೊಳ್ಳುತ್ತಾನೆ. ಅಂದಿನಿಂದ ಅವಳ ದುರ್ನಯಕ್ಕೆ ಜುಗುಪ್ಸೆಗೊಂಡು, ಹೆಂಡ ತಿಯ ಸಂಗವನ್ನು ತೊರೆಯುತ್ತಾನೆ. ಮಾವುತನೊಂದಿಗೆ ತನಗಿದ್ದ ಸಂಬಂಧದ ವಿದ್ಯಾಮಾನ ಅರಸನಿಗೆ ಆಗಲೆ ತಿಳಿದುಹೋಗಿದೆಯೆಂಬುದನ್ನು ಅರಿತುಕೊಳ್ಳಲು ಅಮೃತ ಮತಿಗೆ ಹೆಚ್ಚು ದಿನಗಳು ಬೇಕಾಗಲಿಲ್ಲ.

ಒಂದು ದಿನ ಚಂದ್ರಮತಿ ಯಶೋಧರನಲ್ಲಾದ ಬದ ಲಾವಣೆ ಕಂಡು ಅವನ ಮ್ಲಾನತೆಗೆ ಕಾರಣವನ್ನು ಕೇಳು ತ್ತಾಳೆ. ಹೆಂಡತಿಯ ಕೇಡನ್ನು ಬಿಚ್ಚಿ ಮನಸ್ಸಿನಿಂದ ಹೇಳು ವುದಕ್ಕೆ ಅವನ ಮನಸ್ಸು ಹೇಸುತ್ತದೆ. ಹಿಂದಿನ ರಾತ್ರಿ ಕಂಡ ಕೆಟ್ಟ ಕನಸಿನ ನೆಪದಲ್ಲಿ ಅಮೃತಮತಿಯ ದುರ್ನಯ ವನ್ನು ನಿರೂಪಿಸುತ್ತಾನೆ. 'ಪೊಂದಾವರೆ ಕೊಳದ ಅಂಚೆ ಕಳಿಲ್ ತಾವರೆ ಕೊಳದೊಳಗೆ ನಲಿವ ಹಂಸನಂ ಕಂಡೆ' ಎಂಬುದು ಅವನ ಕನಸಿನ ಮರ್ಮ. ತಾಯಿಗೆ ಮನದ ದುಗುಡವನ್ನು ತಿಳಿಸದೆ ಪಾರದೆನಲ್ಲ ಎಂದು ಅರಸ ಸಮಾ ಧಾನಪಟ್ಟುಕೊಂಡ. ಆದರೆ ತಾನೊಂದು ಬಯಸಿದರೆ ವಿಧಿಯೊಂದು ಬಯಸಿತು. ಕಂಡ ಕನಸು ಸಾಮಾನ್ಯ ವಾದುದಲ್ಲ. ಘೋರವಾದುದು. ಚಂಡಿಕೆಗೆ ಬಲಿನೀಡಿ ಮುಂಡಣ ಕೇಡನ್ನು ಕಳೆದುಕೊಳ್ಳಬೇಕೆಂದು ತಾಯಿ ನಿರ್ಣಯಿಸುತ್ತಾಳೆ. ಇದರಿಂದ ಯಶೋಧರನ ಮನ ನೊಂದು ಹೋಗುತ್ತದೆ. 'ಜೀವದಯೆ, ಜೈನಧರ್ಮ, ಜೀವಹಿತಂ ನಂಬುವರ್ಗೆ ಹಿಂಸೆಯ ಮೋಹಂ ಭಾವಿತಮೆ' ಎಂದು ಜೈನ ತತ್ತ್ವವನ್ನು ಅವಳಿಗೆ ಬೋಧಿಸುತ್ತಾನೆ. ಹಿಂಸೆಯಿಂದ ಶುಭವನ್ನು ಕೋರುವುದು ಧರ್ಮವಲ್ಲ. ಅದು ಅವಿವೇಕದ ಪರಮಾವಧಿ. 'ಹಿಂಸೆಯಿಂ ಮಾಡುವ ಕೇಡ ನೆಂತು ಕೞಿವೆಂ ಬೞಿಯಂ' ಎಂದು ತಾಯಿಗೆ ಸವಾಲು ಹಾಕುತ್ತಾನೆ. ಕೊನೆಗೆ ಹಿಟ್ಟಿನ ಕೋಳಿಯನ್ನು ಬಲಿನೀಡ ಬೇಕೆಂದು ನಿರ್ಣಯವಾಗುತ್ತದೆ. ನಿಶ್ಚಿತ ದಿನದಲ್ಲಿ ದೇವಿಗೆ ಬಲಿನೀಡುತ್ತಾರೆ. ವಿಧಿಯ ದುರ್ವಿಪಾಕವನ್ನು ಬಲ್ಲವ ರಾರು? ಹಿಟ್ಟಿನ ಕೋಳಿಯ ರೂಪಕ್ಕೆ ಆಶ್ರಯಿಸಿದ್ದ ಬೆಂತರ ನೊಂದು ಕು ಕ್ಕೊ ಕ್ಕೊS ಎಂದು ಕೂಗಿ ಸಾಯುತ್ತದೆ.

ಹೆಂಡತಿಯ ಕೇಡಿನಿಂದ ಮೊದಲೇ ನೊಂದ ಯಶೋ ಧರನ ಮನ ತಾಯಿಯ ಪ್ರೇರಣೆಯಿಂದಾದ ಹಿಂಸೆಯಿಂದ ಮತ್ತಷ್ಟು ಕದಡುತ್ತದೆ.

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ
ತೆಮಗೆ ಬಲಿಯಾಯ್ತು ಹಿಂಸನ
ಮಮೋಘಶರಮಾಯ್ತು ಕೆಡೆದುದಾತ್ಮ ಕುರಂಗಂ

ಎಂದು ತನ್ನ ಆತ್ಮದ ಕೇಡಿಗೆ ಕಾರಣರಾದ ಹೆಂಡತಿ

ಮತ್ತು ತಾಯಿಯರನ್ನು ದೂರುತ್ತಾನೆ. 'ಭಾವನೆಯಿಂದಂ ಅಪ್ಪುದಾಸ್ರವಂ ಎನಗೆ ಇಂತಪ್ಪ ಪಾಪವಿದಿರ್ ವಂದ ಪುದೋ' ಮುಂದಣ ಕೇಡಿಗೆ ಚಿಂತಿಸಿ, ಮಗನಾದ ಯಶೋ ಮತಿಗೆ ಪಟ್ಟಗಟ್ಟಿ, ತಪಕ್ಕೆ ತೆರಳಲು ಸಿದ್ಧನಾಗುತ್ತಾನೆ. ಆಗ ಅಮೃತಮತಿ ತಾನೂ ಪತಿಯೊಂದಿಗೆ ವನಕ್ಕೆ ಬರುವುದಾಗಿ ತಿಳಿಸಿ, ಅಂದು ತಾಯಿ ಮಕ್ಕಳಿಬ್ಬರನ್ನು ತನ್ನ ಮನೆಗೆ ಆರೋಗಿಸಿ ಅವರಿಗೆ ಸಂಜಿನ ಲಡ್ಡುಗೆಯನ್ನು ಉಣಬಡಿಸಿ, ಇಬ್ಬರನ್ನು ಸಾಯಿಸುತ್ತಾಳೆ. 'ಮನಸಿಜನ ಮಾಯೆ ವಿಧಿಯ ವಿಳಸನದ ನೆರಂಬಡೆ ಕೊಂದು ಕೂಗದೆ ನರನಂ' ದಿಟ. ಅದು ನೂರಕ್ಕೆ ನೂರು ದಿಟ.

ಹಿಂಸೆಯನ್ನು ಕೇವಲ ಮನದಲ್ಲಿ ತಂದ ಪ್ರಾಯಶ್ಚಿತ್ತ ಕ್ಕಾಗಿ ತಾಯಿ-ಮಕ್ಕಳಿಬ್ಬರೂ ವಿವಿಧ ಪಶು-ಪ್ರಾಣಿಗಳಾಗಿ ಕಡುವೈರದಿಂದ ಆರು ಜನ್ಮದಲ್ಲಿ ಹುಟ್ಟುತ್ತಾರೆ. ಕೊನೆಯ ಏಳನೆಯ ಜನ್ಮದಲ್ಲಿ ಮಗನಾದ ಯಶೋಮತಿಗೆ ಕುಸುಮಾ ವಳಿಯಲ್ಲಿ ಅಭಯರುಚಿ ಮತ್ತು ಅಭಯಮತಿ ಎಂಬ ಹೆಸರಿನಿಂದ ಅಣ್ಣತಂಗಿಯರಾಗಿ ಜನಿಸುತ್ತಾರೆ. ಎಳೆ ವಯಸ್ಸಿನಲ್ಲಿಯೇ ಸುದತ್ತಾಚಾರ್ಯ ಮುನಿಗಳಲ್ಲಿ ಜೈನ ದೀಕ್ಷೆವಹಿಸಿ, ಹಿಂಸೆಯಲ್ಲಿಯೇ ನೆಲೆಗೊಂಡ ಮಾರಿದತ್ತನಿಗೆ ತಮ್ಮ ಕಥೆಯನ್ನು ಹೇಳಿ, ಅವನನ್ನು ಸನ್ಮಾರ್ಗಕ್ಕೆ ತಂದು ತರುವಾಯ ಅವರು ದೇಹ ಮುಡುಪಿ, ಈಶಾನ ಕಲ್ಪದಲ್ಲಿ, ದೇವತೆಗಳಾಗುತ್ತಾರೆ. ಇತ್ತ ಅಮೃತಮತಿ ಪಾಪದ ಹೊರೆಯಾಗಿ ಸತ್ತು, ಧೂಮಪ್ರಭೆಯೆಂಬ ನರಕದಲ್ಲಿ ನರಳು ತ್ತಾಳೆ. ಕಾವ್ಯವನ್ನು ಓದಿದ ಮೇಲೆ ಧರ್ಮದಲ್ಲಿ ಶ್ರದ್ಧೆಯಿದ್ದ ವರಿಗೆ ಕವಿ ಒಂದು ಮಾತನ್ನು ಹೇಳುತ್ತಾನೆ. ಕವಿಯ ಈ ಭರತವಾಕ್ಯದೊಂದಿಗೆ ಪ್ರಕೃತ ಲೇಖನವನ್ನು ಮುಕ್ತಾಯ ಗೊಳಿಸಬಹುದು.

ಅದಱಿಂ ತನ್ನಂತಿರೆ ಬಗೆ
ವುದು ಪೆಱರಂ ಪ್ರಾಣಿಹಿಂಸೆಯಂ ಮಾಡಲ್ ವೇ
ಡ ದಯಾಮೂಲಂ ಧರ್ಮ
ಪದುಳಿಸಿ ಕೇಳ್ ಮಗನೆ ಹಿತಮಿದು ಉಭಯ ಭಾವಕ್ಕಂ

ಜನ್ನನ ಪ್ರತಿಭೆಯಿಂದ ಮೈವೆತ್ತು ನಿಂತ ಈ ಕಾವ್ಯ ಓದಿ ದಷ್ಟು ಮತ್ತೊಮ್ಮೆ ಓದಬೇಕೆನಿಸುತ್ತದೆ. ಓದಿಯೇ ಅದರ ರಸಸ್ವಾದನೆ ಮಾಡಬೇಕು. ಇದು ರಸಿಕರಿಗೊಂದು ರಸ ಘಟ್ಟ

ಪರಿಷತ್ತಿನ ಸದಸ್ಯರಲ್ಲಿ ವಿನಂತಿ

೧೯೬೭ರ ಸದಸ್ಯರ ವಾರ್ಷಿಕ ಚಂದಾ ಹಣದ ಅವಧಿ ಡಿಸೆಂಬರ್ ತಿಂಗಳಿಗೆ ಮುಗಿಯುತ್ತದೆ. ಆದುದರಿಂದ ೧೯೬೮ನೆಯ ಸಾಲಿನ ಪರಿಷತ್ತಿನ ಸದಸ್ಯತ್ವದ ಚಂದಾ ಆರು ರೂಪಾಯಿಗಳನ್ನು ದಯೆಯಿಟ್ಟು ಕೂಡಲೇ ಕಳುಹಿಸಿ ಪರಿಷತ್ತಿಗೆ ನೆರವು ನೀಡಬೇಕೆಂದು ಪ್ರಾರ್ಥಿಸುತ್ತೇವೆ.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

ಹೊಸಗನ್ನಡ ಕವಿಗಳು ಹಾಗೂ ತ್ರಿಪದಿ

●● ಬಂಡೇರಂಗರಾವ್ ಸರ್‌ಮೊಕದ್ದಂ

ದ್ರಾವಿಡ ಛಂದೋಪ್ರಭೇದಗಳಲ್ಲಿ ಒಂದಾದ ತ್ರಿಪದಿಯನ್ನು, ಶಾಸನವೊಂದರಲ್ಲಿ 'ಸರಸ್ವತಿಯ ತೆಳುವಸಿಱ್' ಎಂದು ಕರೆಯಲಾಗಿದೆ. ಕವಿಗಳು ಕೋಮಲಾಂಗನೆಯರ ತ್ರಿವಳಿಯನ್ನು ವರ್ಣಿಸುತ್ತಾರೆ. ಆದುದರಿಂದ ತ್ರಿಪದಿಯನ್ನು ಸರಸ್ವತಿಯ 'ತಿವಳಿ' ಎಂದೂ ಕರೆಯಬಹುದು. ಬಸಿರಿನಿಂದ ಜನಿಸುವ ಮಕ್ಕಳ ಹಾಗೆ ಸರಸ್ವತಿಯ ಬಸಿರಾದ ತ್ರಿಪದಿಯಿಂದ ಸಾಂಗತ್ಯ, ಷಟ್ಪದಿ, ಪಿರಿಯಕ್ಕರ, ಮೊದಲಾದ ಮಕ್ಕಳು ಜನಿಸಿ ಬಂದಿದ್ದಾರೆ. ಆದುದರಿಂದ—

ಕನ್ನಡ ಲಯಗಳ ತಾಯಿಯು ತಾನಾಗಿ[1]
'ಕನ್ನಡ ಲಯಕೆ ಗಾಯತ್ರಿ' | ತ್ರಿಪದಿಯು
'ಕನ್ನಡ ಛಂದೋ ಗಂಗೋತ್ರಿ'

ಎಂದು ಕರೆಯಬಹುದು. ಈ ತ್ರಿಪದಿಯು ಮೊದಲು ಅಂಶಗಣದ ಮಟ್ಟಾಗಿದ್ದು ನಡುಗನ್ನಡ ಕಾಲಕ್ಕೆ ಮಾತ್ರಾಗಣಕ್ಕೆ ತಿರುಗಿತು. ಆದರೆ ಹೊಸಗನ್ನಡ ಕವಿಗಳು ಮೇಲಿನ ಎರಡೂ ರೂಪಗಳನ್ನು ಉಳಸಿಕೊಂಡಿದ್ದಾರೆ. ಕೆಲವು ಕವಿಗಳ ಉದಾಹರಣೆಗಳ ಮೂಲಕ ಈ ಅಂಶವನ್ನು ಸ್ಪಷ್ಟಗೊಳಿಸಬಹುದು.

ಹಲಸಂಗಿ ಚನ್ನಮಲ್ಲಪ್ಪನವರ ಕವನಗಳಲ್ಲಿ ಬಳಕೆಯಾದ ತ್ರಿಪದಿಗಳು ಅಂಶಗಣದಂತೆ ನಡೆಯುತ್ತವೆ.

ವಿ ವಿ ವಿ ವಿ
ನೆಲವಂತ | ನಿಂತೇವ | ನೀರಾಗಿ | ನುಂಗೀತ

ವಿ ಬ್ರ ವಿ ವಿ
ಬೆಣ್ಣೆಲ್ಲ | ಜಾಣೆ | ಬಿಳಿಸುಣ್ಣ | ತಂಗೆಮ್ಮ

ವಿ ಬ್ರ ವಿ
ಪರಿಮಳ | ವಲ್ಲ | ವಿಷಗಾಳಿ ||

ಇದರಂತೆ ತೀ. ನಂ. ಶ್ರೀಕಂಠಯ್ಯನವರ 'ಒಲುಮೆ' ಯಲ್ಲಿನ ತ್ರಿಪದಿಗಳೂ ಅಂಶಗಣಾನ್ವಿತವಾಗಿವೆ.

ವಿ ವಿ ವಿ ವಿ
ಹನ್ನೊಂದು | ಹೊಡೆಯಿತು | ಅಣ್ಣನ | ಕೋಣೆಯ

ವಿ ಬ್ರ ವಿ ವಿ
ಲಿನ್ನುದೀ | ವಿಗೆಯೆ | ಆರಿಲ್ಲ | ಇಂದೇಕೆ

ವಿ ಬ್ರ ವಿ
ಮುನ್ನಿಲ್ಲ | ದೋದ | ಹಿಡದಾನ ||

ವಿ ವಿ ವಿ ವಿ
ಚೆನ್ನೆತೌ | ರೂರಿಗೆ | ಹೋದಳು | ಅವನಿಗೆ

ವಿ ಬ್ರ ವಿ ವಿ
ತನ್ನಮಂ | ಚದಲಿ | ಮನಸಿಲ್ಲ | ಅದರಿಂದ

ವಿ ಬ್ರ ವಿ
ಇನ್ನುದೀ | ವಿಗೆಯೇ | ಆರಿಲ್ಲ ||

ಕವಿವರ್ಯ ದ. ರಾ. ಬೇಂದ್ರೆಯವರು ಬಳಸಿದ ತ್ರಿಪದಿಗಳು ಮಾತ್ರಾಗಣಕ್ಕೆ ಸರಿಹೋಗುತ್ತವೆ.

೫ ೫ ೫ ೫
ಮಳೆಬರುವ | ಕಾಲಕ್ಕೆ | ಒಳಗ್ಯಾಕ | ಕುಂತೇವೊ

೫ ೩ ೫ ೫
ಇಳೆಯೊಳಗೆ | ಜಳಕ | ಮಾಡೋಣ | ನಾವೂನು

೫ ೩ ೫
ಮೋಡಗಳ | ಆಟ | ಆಡೋಣ ||

೫ ೫ ೫ ೫
ಎಷ್ಟಕ | ನ್ನಡಿಹರಳು | ಬೆಸುಕೂ | ಡೀತೇನ

೫ ೩ ೫ ೫
ಹಸ್ತಕರು | ಳೀನ | ಕುಡಿಚಿವುಟ | ಕಡೆಗೊಮ್ಮೆ

೫ ೩ ೫
ಸ್ವಸ್ತಿಎಂ | ದಾರ | ಫಲವೇನ ||

ಇದರಂತೆ ಗಿರಡ್ಡಿ ಗೋವಿಂದರಾಜರ 'ರಸವಂತಿ' ಯಲ್ಲಿ ಬರುವ ತ್ರಿಪದಿಗಳು ಮಾತ್ರಾಗಣಾನ್ವಿತವಾಗಿವೆ.

---

1 ಕನ್ನಡ ಲಯಗಳ ತಾಯಿ ತ್ರಿಪದಿಯಲ್ಲ; ಏಳೆ ಎಂದು ಕೆಲವರು ಹೇಳಬಹುದು. ಆದರೆ 'ಏಳೆ' ತ್ರಿಪದಿಯ ಬಾಲ್ಯಾವಸ್ಥೆ ಎಂದು ಹೇಳಬಹುದು. ಏಳೆಯ ಎರಡನೆಯ ಸಾಲನ್ನು ಪುನರಾವರ್ತಿ ಮಾಡಿದರೆ ತ್ರಿಪದಿಯಾಗುವದು. ಆದುದರಿಂದ 'ಏಳೆ' ಎಳೆಯ ಹುಡುಗಿ ಆಗಿದ್ದು ತ್ರಿಪದಿ ಬೆಳೆದ ತರುಣಿಯಾಗಿದ್ದಾಳೆ ಎಂದು ಹೇಳಬಹುದು.

೫ ೫ ೫ ೫
ಅತ್ತಿಗೆಯ | ಅಕ್ಕರತಿ | ಎಷ್ಟಾದ | ರೇನಂತ

೫ ೩ ೫ ೫
ನೀನಿಲ್ದ | ಮನಿಯು | ಭಣಽಭಣ | ಹಡೆದವ್ವ

೫ ೩ ೫
ಹೊರಗ ಬಿಸಿ | ಲೆಲ್ಲ | ರಣಽರಣ ||

ಕವಿ 'ಸುಲೋಚನ' ರ 'ಪ್ರಣಯಿನಿ' ಎಂಬ ಕವನ ಸಂಗ್ರಹದಲ್ಲಿಯೂ ಮಾತ್ರಾ ತ್ರಿಪದಿಯನ್ನೇ ಕಾಣುತ್ತೇವೆ.

೫ ೫ ೫ ೫
ಲಂಚವನು | ಕೊಟ್ಟವನು | ಸರಪಂಚ | ನಾಗುವನು

೫ ೩ ೫ ೫
ಕೊಂಚವೂ | ಲಂಚ | ಕೊಡದಾತ | ಹಾಳೂರ

೫ ೩ ೫
ಕೆಂಚನೆನಿ | ಸುವನು | ಮಂಗಣ್ಣ ||

ಇನ್ನು ಕೆಲವು ಕವಿಗಳು ತ್ರಿಪದಿಯನ್ನೇ ಬಳಸಿದ್ದರೂ ಅವು ಸರಿಯಾಗಿ ನಿಯಮಕ್ಕೆ ಹೊಂದಿಕೊಳ್ಳುವುದಿಲ್ಲ. ಉದಾಹರಣೆಗಾಗಿ ಸೋಮಶೇಖರರ ಈ ಪದ್ಯವನ್ನು ನೋಡಬಹುದು.

ಬೆಲ್ಲದ ಪೆಂಟ್ಯಾಗಿ ಎಲ್ಲಾರು ಕೂಡೇವ
ಕಲ್ಲಾಗ ನೀರ ತರಿಸೇವ | ಕನ್ನಡದ
ಕೀರುತಿ **ಮುಗಿಲಾಗ** ಬರಿಸೇವ ||[1]

ಇಲ್ಲಿ ಮೇಲಿನ ಎರಡು ಚರಣಗಳು ಅಂಶಗಣವಾಗಿದ್ದರೂ ಹತ್ತನೆಯ ಸ್ಥಾನದಲ್ಲಿ ಬ್ರಹ್ಮದ ಬದಲಾಗಿ ವಿಷ್ಣು ಬಂದಿದೆ. ಇಂತಹ ನಿಯಮಶೈಥಿಲ್ಯದ ಇನ್ನೊಂದು ಪದ್ಯವನ್ನು ಜಿ. ಪಿ. ರಾಜರತ್ನಂ ಅವರ "ರತ್ನನ ಪದಗಳು" ಎಂಬಲ್ಲಿ ಕಾಣುತ್ತೇವೆ.

1 ಬೆಳದಿಂಗಳು ಕವನಸಂಗ್ರಹ.

ನೋಡ್ದಾಗಿ ಮೇಗಡೆ ಮೆಲ್ಮೈಲ್ನೆ ನೀವೋಗು
ಅನಿಮುಳೆ ರೂಪಾವ ತಾಳೇನು | ನಾಬಂದು
ನಿನ್ ಜೊತೆಗೆ ಆಯಾಗಿ ಬಾಳೇನು ||

ಇದಲ್ಲದೆ, ಶ್ರೀನಿವಾಸರ 'ಅರುಣ' ದಲ್ಲಿ, 'ಗೋಕಾಕರ 'ಪಯಣ'ದಲ್ಲಿ, ಸೋಮೇಶ್ವರ ಧೊಡ್ಡಮನಿಯವರ 'ನವಿಲೂರ ಮನೆಯಿಂದ' ಸಂಗ್ರಹದಲ್ಲಿ ಅನೇಕ ತ್ರಿಪದಿಗಳನ್ನು ಕಾಣಬಹುದು.

ತ್ರಿಪದಿಯಲ್ಲಿಯೇ ಕಾವ್ಯವನ್ನು ರಚಿಸಿದವರೆಂದರೆ 'ಜಯದೇವಿ ತಾಯಿ' ಯವರು. ಇವರ ಸಿದ್ಧರಾಮೇಶ್ವರ ಪುರಾಣ ತ್ರಿಪದಿಯಲ್ಲಿದೆ. ಇದಲ್ಲದೇ "ತಾಯಿಯ ಪದಗಳು" ಎಂಬ ಕವನ ಸಂಗ್ರಹವೂ ತ್ರಿಪದಿಯಲ್ಲಿದೆ. ಉದಾಹರಣೆಗಾಗಿ ಈ ಪದ್ಯವನ್ನು ನೋಡಬಹುದು :

ಬುದ್ಧನ ಕಂಡಾಗ ಸಿದ್ಧನ ನೆನದೇನ
ಸಿದ್ಧಾರ್ಥಿ ಸಿದ್ಧಾಂತ ಒಂದುಮಾಡಿ | ನೋಡಿದೆ
ಸಿದ್ಧಬಸವ ಬುದ್ಧ ಬ್ಯಾರೇನ ||

ಒಟ್ಟಿನಲ್ಲಿ, ಶಾಸನದಲ್ಲಿ ಸೆಲೆವೊಡೆದು, ಹಳಗನ್ನಡ ಕಾವ್ಯಗಳಲ್ಲಿ ಸುಳಿದಾಡಿ, ಅಕ್ಕಮಹಾದೇವಿ ಮೊದಲಾದವರ ವಚನಗಳಲ್ಲಿ ಜುಳುಜುಳಿಸಿ ಸರ್ವಜ್ಞನ ವಚನಗಳಲ್ಲಿ ಧೀಂಕಿಟ್ಟ ತ್ರೀಪದಿ-ಗಂಗೆ[2] ಹೊಸಗನ್ನಡದ ಕವಿಗಳ ಕವನಗಳಲ್ಲಿಯೂ ಹರಿದಿದ್ದಾಳೆಂಬುದನ್ನು ತೋರಿಸುವದೇ ಪ್ರಸ್ತುತ ಲೇಖನದ ಉದ್ದೇಶವಾಗಿದೆ.

2 ಇನ್ನೊಂದು ವೈಚಿತ್ರ್ಯವೆಂದರೆ, ಡಾ|| ಕೆ. ಕೃಷ್ಣಮೂರ್ತಿಯವರ 'ಧ್ವನ್ಯಾಲೋಕ ಮತ್ತು ಲೋಚನಸಾರ' ಎಂಬ ಗ್ರಂಥದಲ್ಲಿ ಒಂದು ತ್ರಿಪದಿಯನ್ನು (ಪುಟ ೪೩) ಉದಾಹರಿಸಲಾಗಿದೆ. ಅದು ಹೀಗಿದೆ :

ನೂರು ಸಲ ಚುಂಬನವು ಸಾವಿರಾಲಿಂಗನವು
ಬಿಟ್ಟರೂ ಮತ್ತೆ ಸಂಭೋಗ | ಪ್ರಿಯಜನಕೆ
ಪುನರುಕ್ತಿ ಮಾತ್ರ ತಾನಿಲ್ಲ ||

ವಿಮರ್ಶನರಂಗ

'ಹೊಳಹು-ಸುಳುಹು' ಲೇ : ಸೂರ್ಯಸಿಂಹಾಸನಾಧೀಶ್ವರ, ಶ್ರೀ ಜ. ಚ. ನಿ. ಪ್ರ : 'ಭವತಾರಿಣಿ' ಶ್ರೀ ಚೌಳುಬೀದಿ, ಬೆಂಗಳೂರು-೨ ಬೆಲೆ : ೧-೫೦ ಪುಟ : ೧೦೮

ಸಾಹಿತ್ಯಾಭ್ಯಾಸಿಯಾದ ವ್ಯಕ್ತಿ-ಅನುರಕ್ತನಾಗಲಿ, ವಿರಕ್ತನಾಗಲಿ, ತನ್ನ ಭಾವತರಂಗದಲ್ಲಿನ ಭಾವನೆಗಳಿಗೆ 'ಶಬ್ದ' ಶರೀರವನ್ನು ಮೂಡಿಸಬೇಕಾಗುತ್ತದೆ. ಆಗ ಆ ಭಾವನೆಗಳು ಶಾಶ್ವತ. ಇಲ್ಲವಾದರೆ ಎಂದೋ ಬಂದು ಹೋಗುವ ಅತಿಥಿಗಳಂತೆ ಮಂಗಮಾಯವಾಗಿಬಿಡಬಹುದು. ಅಂತೆಯೇ ಶ್ರೀ ಜ. ಚ. ನಿ. ಅವರು ತಮ್ಮ ಮನೋರಂಗದ ವಿಚಾರ ಲಹರಿಗೆ ಭಾಷೆಯ ತೊಡಿಗೆಯನ್ನಿಟ್ಟು ಹೊಳೆದಂತೆ ಸುಳಿಸಿದ್ದಾರೆ. ಇಲ್ಲಿ ಬರುವ ವಿಚಾರವೆಲ್ಲ ಆಧ್ಯಾತ್ಮದ್ದು. ಮಾನವನಾಗಿ ಹುಟ್ಟಿ ಜೀವನತರಂಗದಲ್ಲಿ ತನ್ನ ಪಾತ್ರ ಅಭಿನಯಿಸುವ ವ್ಯಕ್ತಿಯ ಮನೋವ್ಯಾಪಾರ, ಅದರ ವಿಚಾರ ದೀಪ್ತಿಗಳ ದರ್ಶನ ಇಲ್ಲಿ ಆಗಿದೆ. ಕಾಯಕದಂತೆ ಜೀವನವನ್ನು ಭಕ್ತಿಭಾವನೆಯಿಂದ ಸಾಧಿಸಿ ಅವನು 'ಚಿತ್' ಆಗಬೇಕು. ಮಾನವ-ಮಹಾನುಭಾವ ಪದವಿಗೇರಬೇಕು. ಈ ಹಾದಿಯಲ್ಲಿ ಏನೆಲ್ಲ ಸಾಧಿಸಬೇಕೋ ಆ ಎಲ್ಲ ಅಂಶಗಳನ್ನೂ ಶ್ರೀಗಳು ಅಪ್ಪಣೆಕೊಡಿಸಿದ್ದಾರೆ. ಶೈವಾಗಮ ತತ್ವ-ನಿತ್ಯಜೀವನ ಸತ್ಯ-ಅದನ್ನನುಭವಿಸುವಜೀವಿ-ಅಂಗನೆನಿಸಿ ಲಿಂಗರೂಪಿಯಾಗಬೇಕು ಎಂದಾಗ 'ಶ್ರೀ'ಗಳವರ 'ನುಡಿಶ್ರೀ' ಬಾಳಿಗೆ ಹಿಡಿದ ರನ್ನಗನ್ನಡಿಯಾಗಿದೆ. ಇಂತಹ ಮನದ ಮಂದಾರಗಳು ಹತ್ತಾರು ಹುಟ್ಟಿಬರಲಿ.

* * *

ಹರಿಹರ ಕವಿಯ ಕೆಲವು ಮಹೋನ್ನತ ವಿಚಾರಗಳು : ಲೇ : ಬಿ. ಸಿ. ಜವಳಿ; ಎಂ. ಎ. ಪ್ರ : ಕರ್ಣಾಟಕ ವಿಶ್ವವಿದ್ಯಾಲಯ ಬೆಲೆ : ಇಪ್ಪತ್ತೈದು ಪೈಸೆ ಪುಟ : ಒಂದುನೂರು

ಜಗತ್ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯಕ್ಕೆ ಸ್ಥಾನವಿದೆಯೆ? ಇಲ್ಲವೆ? ಎಂಬ ಪ್ರಶ್ನೆಗಳು ಬಂದಾಗ ಕನ್ನಡ ಸಾಹಿತ್ಯಾವಲೋಕನಗೈದು. ಪಂಪ, ರನ್ನ, ನಾಗಚಂದ್ರ ಜನ್ನ, ವಚನಕಾರರು, ಹರಿಹರ, ರಾಘವಾಂಕ ಮೊದಲಾದ ಕವಿಗಳ ವಸ್ತು, ಶೈಲಿ, ಧರ್ಮ ನಿರ್ವಹಣೆಗೆ ತಲೆದೂಗಿದ ವಿದ್ವತ್ಪೂರ್ಣ ವ್ಯಕ್ತಿಗಳೆಲ್ಲರೂ ಸ್ಥಾನವೇಕಿಲ್ಲ ಎಂಬ ಸವಾಲು ಹಾಕದಿರಲಾರರು. ಹಾಗೆಯೆ ಈ ಪ್ರಸ್ತುತದ ಕೃತಿಯಲ್ಲಿ ಆ ಪ್ರಶ್ನೆಗೆ ಸಾಕಷ್ಟು ಉತ್ತರ ದೊರೆತಿದೆ.

'ಹರಿಹರ' ಹಲವಾರು ರಗಳೆಗಳನ್ನು ರಚಿಸಿ 'ರಗಳೆಯ ಕವಿ', 'ಭಕ್ತಕವಿ', ಎಂಬ ಪ್ರಖ್ಯಾತನಾಗಿರುವನು. ಹಾಗೆಯೆ ಸಮಾಜ ಸುಧಾರಕನೂ ಹೌದು. ತನ್ನ ಕಾವ್ಯಕ್ಕೆ 'ಭಕ್ತ'ರ ಚರಿತ್ರೆಯನ್ನು 'ವಸ್ತು'ವಾಗಿಸಿಕೊಂಡು, ಅಲ್ಲಿ, ಒಲುಮೆ, ಕುಲದ ಕಂದಾಚಾರ, ಧರ್ಮ, ನೀತಿ, ದಾಂಪತ್ಯಜೀವನ, ವೇಶ್ಯಾಜೀವನದ ಸಮಸ್ಯೆ, ಪಂಚಾಯತಿ ಧರ್ಮ, ಪ್ರಾಮಾಣಿಕತನ, ನ್ಯಾಯಾನ್ಯಾಯದ ವಿಮರ್ಶೆ, ಛಲ, ಇವೆಲ್ಲದರ ವಿಚಾರ ನಡೆಸಿದ್ದಾನೆ.

ಈ ಕೃತಿಯಲ್ಲಿ ಮಲುಹಣ, ಪ್ರಭುದೇವ, ಮನುಚೋಳ, ಮಾದರ ಚನ್ನಯ್ಯ, ತಿರುನೀಲಕಂಠರು, ಈ ಐವರು ಶರಣರಲ್ಲಿ ಕವಿ ನಮಗೆ ಐದು ವಿಧ ಧರ್ಮ ನಿರೂಪಣೆ ಮಾಡಿಕೊಟ್ಟಿದ್ದಾನೆ. ಮಲುಹಣ, ಪ್ರಭುದೇವರ ಕಥೆಯಲ್ಲಿ ಕಾಮದ ಕಾವು ಆರಿ, ಪ್ರೇಮದ ಹೊನಲು ಹರಿದ ವಿಷಯ; ಹಾಗೂ ಮನದ ಆತುರತೆ ಜಾರಿ ಭಕ್ತಿಯ ಸಂಸ್ಕಾರ ದೊರೆತ ವಿಷಯವನ್ನು ನಿರೂಪಿಸಿದ್ದಾನೆ. ಮಾದರ ಚನ್ನಯ್ಯನ ಕೃತಿಯಲ್ಲಿ ಭಕ್ತಿಯ ಪರಾಕಾಷ್ಠತೆಯನ್ನು ಕಾಣುತ್ತೇವೆ. ತಿರುನೀಲಕಂಠರ ಕೃತಿಯಲ್ಲಿ ಪ್ರಾಮಾಣಿಕತನ, ಛಲ, ಇವುಗಳ ನಿರೂಪಣೆಯನ್ನು ಕಾಣುತ್ತೇವೆ. ಈ ಎಲ್ಲ ವಿಷಯಗಳ ಸಮಗ್ರವಿವರಣೆ ಈ ಕಿರುಹೊತ್ತಿಗೆಯಲ್ಲಿ ಆಗಿದೆ. ಹರಿಹರನ ಸಂಪೂರ್ಣ ಕೃತಿಗಳನ್ನು ಓದಿ ಪರಿಚಯ ಮಾಡಿಕೊಳ್ಳಲಾಗದ ಸಹೃದಯ ಸಮುದಾಯಕ್ಕೆ ಈ ಕೃತಿಯಿಂದ ಮಹದುಪಕಾರವಾಗಿದೆ. ಇಲ್ಲಿನ ವಿಚಾರ ಸರಣಿ ಸ್ತುತ್ಯಾರ್ಹವಾದುದು. ಆದರೆ ಮಾನವನ ಮೂಲ ಭಾವಗಳಲ್ಲಿ (ಸ್ಥಾಯೀ ಭಾವಗಳಲ್ಲಿ) 'ಛಲ'ವೂ ಒಂದು ಎಂಬ ಹೇಳಿಕೆ ವಿಚಾರಾರ್ಹ. 'ಛಲ'ವೇ ಸ್ಥಾಯೀಭಾವವಾದರೆ ಅದರಿಂದ ನಿಷ್ಪತ್ತಿಹೊಂದುವ 'ರಸ'ಯಾವುದು? ಇದಕ್ಕೆ ಸಮಾಧಾನವನ್ನು ಲೇಖಕರು ಹೇಳಬೇಕಾಗುತ್ತದೆ. ಮುದ್ರಣ ಕಾರ್ಯನಿರ್ವಹಣೆಯಲ್ಲಿನ ದೋಷಗಳಿಂದಾಗಿ ಅರ್ಥ ವ್ಯತ್ಯಾಸವಾಗಿದೆ. ಒಟ್ಟಿನಲ್ಲಿ ಪ್ರಗತಿ ಸಮಾಜದ ಸತ್ಪ್ರಜೆ ಎನಿಸಿಕೊಳ್ಳ ಬಯಸುವ ವ್ಯಕ್ತಿಗಳಿಗೆ ಈ ಕೃತಿ ಮಹದುಪಕಾರಿಯಾಗಿದೆ.

* * *

'ಕನ್ನಡ ಕವಿ-ಕಾವ್ಯದರ್ಶನ' ವಾಗ್ವಿಲಾಸ ಪ್ರಕಾಶನ; ಸಂ. ಸಗರಕೃಷ್ಣಾಚಾರ್ಯ; ಪಂ. ಕೆ. ಪಿ. ಶಿವಲಿಂಗಯ್ಯ, ಪ.ಎಂ.ಜಿ. ನಿಂ. ಬೆಲೆ: ಮೂರು ರೂಪಾಯಿಗಳು; ಪುಟ: ಅರವತ್ತು.

ಹಿಂದಿನ ಹಾಗೂ ಇಂದಿನ ಕನ್ನಡ ಕವಿಗಳ ಪರಿಚಯ ಮತ್ತು ಅವರ ಕಾವ್ಯದರ್ಶನ ಈ ಕೃತಿಯಲ್ಲಿ ಆಗಿದೆ. ಯಾದರೂ ಇದರಲ್ಲಿ ಸತ್ವದ ಕೊರತೆಯನ್ನು ಕಾಣಲಾಗುತ್ತದೆ. ಬಿ. ಎಂ. ಶ್ರೀ, ಪಂಜೆಯವರು, ಶ್ರೀನಿವಾಸ, ದ.ರಾ. ಬೇಂದ್ರೆ, ಪು. ತಿ. ನ. ರವರಂತಹ ಕವಿಗಳ ಹಾಗೂ ಈ ಸಂಪ್ರದಾಯದಲ್ಲಿ ಬೆಳೆದು ಬಂದು ಪಕ್ವಗೊಂಡಿರುವ ನಿಸ್ಸಾರ್ ಅಹಮದ್, ಲಂಕೇಶ್, ಸಿದ್ದಯ್ಯ ಪುರಾಣಿಕರು ಮುಂತಾದ ಉತ್ಸಾಹ ಶೀಲ ಕವಿಗಳ ಕವನ ಸಂಚಯವೂ ಆಗಿದೆ. (ಇದೊಂದು ಮಹತ್ವದ ಕೆಲಸವೆನ್ನಬಹುದು.) ಕೆಲವೊಂದು ಕವಿಗಳು ಪ್ರಯತ್ನಪಟ್ಟು ಈ ಕೃತಿಗಾಗಿಯೇ ಕವನ ರಚಿಸಿರುವುದೂ, ಅನಂತರ ಆ ಉದ್ದಿಮೆಯನ್ನು ಕೈಬಿಟ್ಟಂತೆಯೂ ಕಾಣುತ್ತದೆ. ಅಲ್ಲದೆ ಜಿ. ಎಸ್. ಶಿವರುದ್ರಪ್ಪ, ಕಣವಿ, ಈಶ್ವರಸಣಕಲ್ಲ, ಜಿ. ಎಸ್. ಸಿದ್ದಲಿಂಗಯ್ಯ, ಕಂಬಾರ, ಕೆ. ಎಸ್. ನ. ಇಂತಹ ಕವಿಗಳ ಕೃತಿಕಾಣದೆ ಓದುಗನಿಗೆ ನಿರಾಶೆಯಾಗದಿರದು. ಈ ಕೆಲಸ ಸಾಹಸವೇ ಆದರೂ ಚೊಕ್ಕವಾಗಿ ನಿರ್ವಹಿಸಿರುವ ಈ ಕಾರ್ಯ ಸ್ತುತ್ಯಾರ್ಹವೇ ಸರಿ. ಆದರೆ ಸತತವಾಗಿ 'ಕಾವ್ಯ-ಕವನ' ರಚನೆ ಉದ್ದಿಮೆಯಾಗುಳ್ಳ ಕವಿಗಳ 'ಕೃತಿ' ಸಂಗ್ರಹವಾದರೆ ಈ ಕಾರ್ಯ ಮತ್ತಷ್ಟು ಸೂಕ್ತವೆನಿಸೀತು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಒಂದೇ ಕವಿಯ ಕೆಲವಾರು ಕವನಗಳನ್ನು ಕೂಡಿಸಿದರೂ ಚಿಂತಿಲ್ಲ. ವ್ಯವಸಾಯದಲ್ಲಿರುವ ಕವಿಗಳ ಕೃತಿಯನ್ನೇ ಸಂಗ್ರಹಿಸುವುದು ಸೂಕ್ತ.

ಆರ್. ರಾಚಪ್ಪ

ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ ಲೇಖಕರು: ಟಿ. ಬಿ. ಹುಹೇಶವಾಡಿ, ಎಂ.ಎ.ಬಿ.ಎಡ್. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪುಟ: ೭೨, ಬೆಲೆ: ೨೫ ಪೈಸೆ.

ಕನ್ನಡನಾಡಿನ ವೀರಪರಂಪರೆ ಇಡೀ ಭಾರತದಲ್ಲೇ ಅದ್ವಿತೀಯವಾದುದು. ಕನ್ನಡ ನಾಡು ಸಾಮ್ರಾಜ್ಯಗಳ ಜನನಿ, ಕಲಿಗಳ ಬೀಡು ಎನ್ನುವುದನ್ನು ಕದಂಬ, ಗಂಗ, ರಾಷ್ಟ್ರಕೂಟ, ಚಾಳುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ರಾಜ ವಂಶಗಳ ಇತಿಹಾಸ ಸಾರಿ ಹೇಳುತ್ತದೆ. ಲೋಕ ಜೀವನದಲ್ಲಿ ವ್ಯಾಪ್ತವಾದ ಈ ವೀರ, ಯುದ್ಧವೀರ, ದಾನವೀರ, ದಯಾವೀರ, ಧರ್ಮವೀರಗಳು ಹೇಗೆ ಧರ್ಮವನ್ನೂ ಹೊಕ್ಕು ವೀರಶೈವ, ವೀರವೈಷ್ಣವವಾದವು ಎನ್ನುವುದು ಅತ್ಯಂತ ಕುತೂಹಲಕಾರಕವಾದ ಸಂಗತಿ. ಲೇಖಕರು ವೀರರಸದ ಮಹತ್ವವನ್ನು ಪ್ರತಿಪಾದಿಸಿ ಅನಂತರ ಶಾಸನಗಳಲ್ಲಿ ಪ್ರತಿಪಾದಿತವಾದ ವೀರ್ಯವನ್ನು ಸೋದಾಹರಣವಾಗಿ ಮುಂಡಿಸಿದ್ದಾರೆ. ಹಳಗನ್ನಡ ಸಾಹಿತ್ಯದ ಪಂಪ, ರನ್ನ, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರದೇವ ಇವರುಗಳ ಕಾವ್ಯದಲ್ಲಿ ಬರುವ ವೀರರಸದ ಪ್ರಸಂಗಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಅನಂತರ ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆಯ ಸಾಹಿತ್ಯ ಚರಿತ್ರೆಯನ್ನೂ ಕೊಟ್ಟಿದ್ದಾರೆ. ಹೀಗೆ ಪ್ರಾಚೀನ ಸಾಹಿತ್ಯದ ಸಿಂಹಾವಲೋಕನ ಮಾಡಿದಾಗ ನೇಮಿಚಂದ್ರ, ರುದ್ರಭಟ್ಟ ಮತ್ತು ನಂಜುಂಡಕವಿಯನ್ನು ಕೈಬಿಟ್ಟು ಬರಿಯ ಹೆಸರನ್ನು ಹೇಳಿರುವುದು ಸಮಂಜಸದೆನಿಸದು. ವೀರರಸದ ಪ್ರಭೇದಗಳನ್ನು ಹೇಳುವಾಗ ಭಾರತೀಯ ಕನ್ನಡ ಸಾಹಿತ್ಯಕ್ಕೆ ಕನ್ನಡಿಗರೇನಾದರೂ ಹೊಸಭೇದವೊಂದನ್ನು ಸೇರಿಸಿದ್ದಾರೆಯೆ ಎನ್ನುವುದನ್ನು ವಿಚಾರಮಾಡಬಹುದಾಗಿತ್ತು. ಧಾರ್ಮಿಕ ಸಾಹಿತ್ಯದಲ್ಲಿ ಅದರಲ್ಲೂ ಶರಣರ ವಚನಗಳಲ್ಲಿ ಕಂಡುಬರುವ ಕ್ಷಾತ್ರ ಹೇಗೆ ವಿವರಿಸಬಹುದು? ಇದು ವೀರರಸದ ಹೊಸಪ್ರಭೇದವೊಂದಾಗದೆ? ಇದು ಕನ್ನಡಿಗರ ಕೊಡುಗೆಯಲ್ಲವೆ? ಎನ್ನುವುದನ್ನು ಚರ್ಚಿಸಬಹುದಾಗಿತ್ತು. ಮನೋವಿಕಾರಿಗಳನೇಕರ ಮಾಯಾನಿರಸನದಲ್ಲಿ ಶರಣರು ತೋರುವ ಸ್ಥೈರ್ಯ ಯಾವ ವೀರನ ಸಾಹಸಕ್ಕೂ ಕಡಮೆಯಾಗದು. ಇರಲಿ ವೀರಕ್ಕೆ ಹಿನ್ನೆಲೆಯಾಗಿ ಕನ್ನಡ ನಾಡಿನ ಐತಿಹಾಸಿಕ ಪರಂಪರೆಯನ್ನೂ ಕೊಡಬಹುದಾಗಿತ್ತು. ಇವೆಲ್ಲಕ್ಕೂ ಮಿಗಿಲಾಗಿ ಪಂಪ, ರನ್ನ, ಮೊದಲಾದವರ ವೀರ್ಯದ ಆದರ್ಶವೇನಿತ್ತು ಎನ್ನುವುದನ್ನು ಲೇಖಕರು ಚರ್ಚಿಸಿಲ್ಲ. ಪಂಪ ರನ್ನರ ಈ ಪದ್ಯಗಳಲ್ಲಿ ಕನ್ನಡಿಗರ ವೀರ್ಯದ ಅದೆಂಥ ಆದರ್ಶವಿದೆ! ಎನ್ನುವುದನ್ನು ಇಲ್ಲಿನ ಈ ಪದ್ಯಗಳಲ್ಲಿ ನೋಡಬಹುದು: ಖಾಂಡವವನ ದಹನದ ಪ್ರಸಂಗದಲ್ಲಿ ಅಗ್ನಿಗೆ ಅರ್ಜುನ ಸಹಾಯಮಾಡದಿದ್ದರೂ ಆಗಿತ್ತು ಎನ್ನುವ ಅರ್ಥಗಳಲ್ಲಿ ಕೃಷ್ಣ ಹೇಳುವಾಗ ಅರ್ಜುನನು ವೀರರಸದ ಆರ್ಣವವನ್ನೇ ಉಗ್ಗಡಿಸುತ್ತಾನೆ:

ಒತ್ತಿ ತಱುಂಬಿ ನಿಂದ ರಿಪುಭೂಜಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ತನ್ನ ಮಱೆವೊಕ್ಕೊಡೆ ಕಾಯದೆ, ಚಾಗ
ದೊಳ್ಪಿನ |
ಚೊತ್ತದೆ ಮಾಣ್ದು ಬಾಳ್ವ ಪುಟುವಾನಸನೆಂಬನ
ಜಾಂಡವೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ
ಮುರಾಂತಕಾ ||
ಪಂ. ಭಾ. ೪-೭೫.

ಇದೇ ರೀತಿ ಗದಾಯುದ್ಧ ನಾಟಕದಲ್ಲಿ ರನ್ನ ಹೇಳುವ ಈ ಮಾತುಗಳು ವೀರರಸದ ಅದೆಂಥ ಭವ್ಯ ಆದರ್ಶವನ್ನು ನಮ್ಮ ಕಣ್ಣಮುಂದೆ ನಿಲ್ಲಿಸುತ್ತದೆ:

ತುಱುಗೋಳೊಳ್ ಪೆಣ್ಬುಯ್ಯಲೊ |
ಳಱುವೆಸದೊಳ್ ನಂಟನೆಡಱೊಳೂರಲವಿನೊಳಂ ||
ತಱುಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತುಂ ಷಂಡಂ ||

ಸಾ. ಭೀ. ವಿ. II-೨೪.

ಆದರೆ ಇಷ್ಟು ಸಣ್ಣ ಹೊತ್ತಿಗೆಯಲ್ಲಿ ಇಷ್ಟೆಲ್ಲ ನಿರೀಕ್ಷಿಸುವುದು ತಪ್ಪಾಗುವುನೋ ಏನೋ? ಕನ್ನಡ ಸಾಹಿತ್ಯದ ವೀರರಸದ ಸಮಗ್ರ ಅಧ್ಯಯನ ನಡೆಯಬೇಕಾದ ಕಾಲ ಇದು. ಕನ್ನಡ ಸಾಹಿತ್ಯದಲ್ಲಿ ವೀರರಸ ನಿರೂಪಣೆ ಹೇಗೆ ನಡೆದಿದೆ ಎಂಬುದರ ಸಂಕ್ಷಿಪ್ತ ಪರಿಚಯಮಾಡಿಕೊಡುವುದರಲ್ಲಿ ಈ ಪುಸ್ತಕ ಸಾರ್ಥಕತೆಯನ್ನು ಪಡೆದಿದೆ.

* * *

ಅಕ್ಕಮಹಾದೇವಿ ಮತ್ತು ಮೀರಾಬಾಯಿ: ಲೇಖಕರು: ಎಸ್. ಎಸ್. ಕಬ್ಬಿನ, ಪ್ರಕಾಶಕರು: ಕರ್ಣಾಟಕ ವಿಶ್ವವಿದ್ಯಾಲಯ, ಪುಟ: ೭೩, ಬೆಲೆ: ೨೫ ಪೈಸೆ.

ಅಕ್ಕಮಹಾದೇವಿ ಮತ್ತು ಮೀರಾಬಾಯಿ ಇವರಿಬ್ಬರ ಬಾಳು, ಆದರ್ಶ, ಸಾಧನೆ, ಇವುಗಳಲ್ಲಿ ಅದ್ಭುತ ಸಾಮ್ಯವಿದೆ. ಆದರೆ ಮೀರಾಬಾಯಿಗೆ ದೊರೆತಷ್ಟು ಖ್ಯಾತಿ ಆಕೆಗಿಂತಲೂ ಹಿಂದೆ ಆಗಿಹೋದ ಮಹಾಸಾಧಕಿ ಮಹಾದೇವಿಗೆ ದೊರೆಯದುದು ಕನ್ನಡಿಗರ ದುರ್ದೈವ. ಅವರೀರ್ವರು ಪ್ರೇಮಮೋಹಿನಿಯರು, ರಾಣಿಯರು, ಕಾವ್ಯಕೋಗಿಲೆಯರು. ಒಬ್ಬಳು ರಾಜಾಸ್ಥಾನದ ಮರುಮಂದಾಕಿನಿಯಾದರೆ ಮತ್ತೊಬ್ಬಾಕೆ ಕನ್ನಡನಾಡಿನ ಪ್ರೇಮಜಾಹ್ನವಿ. ಇಬ್ಬರೂ ಮಧುರ ರಸದ ಸಾಕಾರಮೂರ್ತಿಗಳು. ಈ ಈರ್ವರ ಮಧುರರಸ ಮಂಡಿತವಾಣಿ ವಿಶ್ವಭಾರತಿಗೂ ಅಲಂಕರಣವಾಗಬಲ್ಲುದು. ಕಾರಣ ಅವು ಹೆಣ್ಣಿನ ಹೃದಯದ ಸ್ವಂತ ಉದ್ಗಾರಗಳು, ಆದ್ದರಿಂದ ಅಲ್ಲಿಯ ಅನನ್ಯ ತನ್ಮಯತೆ ಅಸಾಧಾರಣ. ಇಷ್ಟೇ ಇವರಲ್ಲಿರುವ ಸಾಮ್ಯ. ಅನಂತರ ವೈಷಮ್ಯವೇ ಪ್ರಾಧಾನ್ಯ. ಒಬ್ಬಳು ಶೈವಳಾದರೆ ಮತ್ತೊಬ್ಬಳು ಕೃಷ್ಣನ ಆರಾಧಿಕೆ... ಶೈವಧರ್ಮದಲ್ಲಿ ರೂಪೋಪಾಸನೆಯ ಸ್ಥಾನವೇನು ಎಂಬುದನ್ನು ಲೇಖಕರು ಚರ್ಚಿಸಿಲ್ಲ. ಅಕ್ಕಮಹಾದೇವಿಯ ಭಕ್ತಿಮಾಧುರ್ಯಭಾವದಲ್ಲೇ ಮುಗಿಯದೆ ಅದ್ವೈತ ಅನುಲಿನಾನಂದದಲ್ಲಿ ಲೀನವಾಗುತ್ತದೆ. ಮೀರಾಳ ವಿಷಯವಾಗಿ ಹೀಗೆ ಹೇಳುವಂತಿಲ್ಲ. ಮೀರಾ ಮತ್ತು ಮಹಾದೇವಿ ಇಬ್ಬರೂ ಯೋಗದ ಪ್ರಭಾವಕ್ಕೆ ಸಿಲುಕಿದ್ದಾರೆ. ಈ ನಿಟ್ಟಿನಲ್ಲೂ ಚರ್ಚೆ ಅಗತ್ಯ. ಒಟ್ಟಿನಲ್ಲಿ ಲೇಖಕರ ಪ್ರಯಾಸ ಸಫಲವಾಗಿದೆ. ಇಂಥ ಪ್ರಯತ್ನವನ್ನು ಹಿಂದಿಯಲ್ಲೂ ಅವರು ನಡೆಸಲಿ.

ಮ. ಸು. ಕೃ.

ಕದಡಿದ ಮನ: ಲೇ: ಶ್ರೀ ಸಿ. ಐ. ಕೃಷ್ಣಸ್ವಾಮಿಶಾಸ್ತ್ರಿ, ಬಿ. ಎ. ಪ್ರ: ವಿವೇಕ ಸಾಹಿತ್ಯ ಮಾಲೆ, ಮಂಗಳೂರು-೩ ಪು.: ೧೬೧, ಬೆಲೆ: ೨-೫೦

ರಮೇಶ ಮುಕ್ತಾ ಬಾಲ್ಯಪ್ರೇಮಿಗಳು. ಆದರೆ ಕಾಲಪ್ರವಾಹದಲ್ಲಿ ಅವರು ಬೇರೆ ಬೇರೆಯಾಗಿ ರಮೇಶ, ಮುಕ್ತಾಳ ಪ್ರೇಮದಲ್ಲಿ ಅನುಮಾನಿಸಿ ಬೇರೆ ಮದುವೆಯಾಗುವನು. ಮುಕ್ತಾಳ ಜೀವನ ದುರಂತದಲ್ಲಿ ಮುಗಿಯುವುದು. ಈ ಹಂದರದಲ್ಲಿ ಲೇಖಕರು ಒಂದು ಉತ್ತಮ ಕಾದಂಬರಿಯ ಕಟ್ಟಡವನ್ನೆಬ್ಬಿಸಿದ್ದಾರೆ. ರಮೇಶ, ಮುಕ್ತಾ, ಶ್ರೀಕಾಂತ ಭಾಗೀರಥಮ್ಮ ಎಲ್ಲಾ ನಮ್ಮ ಕಣ್ಮುಂದೆ ಸುಳಿದು ಮಾಯವಾಗುವ ಸಮಾಜದ ವಿವಿಧ ಮುಖಗಳೇ.

ಲೇಖಕರ ಶೈಲಿಯಲ್ಲಿ ಹಲವೆಡೆ ಭಾಷಣಗಳ ಕಡೆ ಒಲವು ಇರುವಂತೆ ಭಾಸವಾಗುತ್ತದೆ. ಸಾಮಾನ್ಯ ಸಂಭಾಷಣೆಗಳೂ ಕೂಡ ಭಾಷಣಗಳಾಗಿ ಪರಿವರ್ತನೆಗೊಳ್ಳುತ್ತವೆ. ನಿರೂಪಣೆಯಲ್ಲಿ ಬಿಗಿಯಿಲ್ಲ. ಈ ಕೆಲದೋಷಗಳನ್ನು ಪರಿಹರಿಸಿದರೆ ಲೇಖಕರಿಗೆ ಉತ್ತಮ ಭವಿಷ್ಯವಿದೆ. ಅವರಿಂದ ನಾವು ಇನ್ನೂ ಉತ್ತಮ ಕಾದಂಬರಿಗಳನ್ನು ನಿರೀಕ್ಷಿಸಬಹುದು.

* * *

ಸಂಗ್ರಹ ರಾಮಾಯಣ: ಸಂಗ್ರಾಹಕರು-ಅಳವಡಿಸಿರುವವರು ಶ್ರೀ ಬಿ. ಎಸ್. ಎಸ್. ಕೌಶಿಕ್, ವಾಲ್ಮೀಕಿ ಗಮಕ ಕಲಾ ಪಾಠಶಾಲೆ, ಮೈಸೂರು. ಇದರ ಸ್ಥಾಪಕರು ಮತ್ತು ಅಧ್ಯಾಪಕರು ಪುಟ: ೪೦ ಬೆಲೆ: ೦-೬೦ ಪೈಸೆ.

ರಾಮಾಯಣದ ಕಥೆಯನ್ನು ಲಕ್ಷ್ಮೀಶನ ಜೈಮಿನಿ ಭಾರತ ಮತ್ತು ಕವಿ ಮುದ್ದಣ್ಣನ "ಶ್ರೀರಾಮ ಪಟ್ಟಾಭಿಷೇಕ" ಈ ಗ್ರಂಥಗಳಿಂದ ಆಯ್ದು, ಸರಳ ಭಾಷೆಯಲ್ಲಿ ಅರ್ಥ ತಾತ್ಪರ್ಯಾದಿಗಳನ್ನು ವಿವರಿಸಿ ಕಾವ್ಯವಾಚನಕ್ಕೆ ಅನುಕೂಲವಾಗುವಂತೆ ಪ್ರಕಟಿಸಿರುವುದು ಈ ಹೊತ್ತಿಗೆಯ ಹೆಚ್ಚಳ.

ಭಗವಂತನ ನಾಮಸ್ಮರಣೆ, ಕಥೆ, ವಿಚಾರ, ಜೊತೆಗೆ ಕಾವ್ಯದಲೇಪ ಹೊಂದಿಕೊಂಡಂತೆ ಮಧುರವಾಚನ ಕಲೆ,

ಈ ಮೂರು ಸೇರಿದರೆ ಸಹೃದಯಿಗಳಿಗೆ ರಸದೂಟವಾಗುತ್ತದೆ. ಶ್ರೀ ಕೌಶಿಕರ ಈ ಸಾಹಿತ್ಯ ಸೇವೆಗೆ ಕನ್ನಡನಾಡು ಚಿರಋಣಿ.

* * *

ಬಾಸಿಂಗ ಬಲ : ಲೇ: ಶ್ರೀ ವಿ. ರಘುರಾಮರೆಡ್ಡಿ, ಪ್ರ : ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರಂ, ಬೆಂಗಳೂರು-ಪುಟ ೯೬ ಬೆಲೆ: ೧-೫೦

ಶ್ರೀ ರಘುರಾಮರೆಡ್ಡಿಯವರ ಕಥಾ ಸಾಹಿತ್ಯ ಈ ಹನ್ನೊಂದು ಕತೆಗಳ ಸಂಕಲನದಿಂದ ಮತ್ತೊಂದು ಮೈಲಿಗಲ್ಲನ್ನು ದಾಟಿದೆ. ಮುಖ್ಯವಾಗಿ ಅವರು ಜೀವನದಲ್ಲಿನ ನೋವು, ದಾರುಣತೆ, ದುಃಖ, ಸಂಕಟಗಳನ್ನು ಅರಸುತ್ತಾ ಹೊರಟಿದ್ದಾರೆ. ಕೆಲವು ಕತೆಗಳು ಚರ್ವಿತ ಚರ್ವಣಗಳಾಗಿ ಕಂಡರೂ ಅವರ ನಿರೂಪಣೆಯಲ್ಲಿ ಆಕರ್ಷಣೆಯಿದೆ. ಆದರೆ ಅವರ ಶೈಲಿಯಲ್ಲಿ ಮಾತ್ರ ಇನ್ನೂ ಆ ಮೊನಚು ಉದಯಿಸಿಲ್ಲ. ಇನ್ನೂ ಆಳವಾದ ಅಭ್ಯಾಸ ಸಾಧನೆಗಳ ಫಲವಾಗಿ ಅವರು ಆ ಗುರಿಯನ್ನು ಸಾಧಿಸುವರೆಂಬ ಧೈರ್ಯ ನಮಗಿದೆ.

ಆಕರ್ಷಕವಾದ ಹೊರಕವಚ, ಮುದ್ರಣ ಉತ್ತಮವಾಗಿದ್ದರೂ ಅಕ್ಷರ ದೋಷಗಳು ವಿಪರೀತವಾಗಿ ಓದುಗರಿಗೆ ಹಲವು ಸಲ ಬೇಜಾರನ್ನು ಮಾಡಬಹುದು. ಶ್ರೀಯುತರು ಈ ವಿಚಾರದಲ್ಲಿ ಸ್ವಲ್ಪ ಮನಸ್ಸುಕೊಡಬೇಕು. ಒಟ್ಟಿನಲ್ಲಿ ಬಾಸಿಂಗ ಬಲ ಒಂದು ಒಳ್ಳೆಯ ಕಥಾ ಸಂಕಲನ.

* * *

ಭಾರತ ರಾಜ್ಯ ಘಟನೆ : ಲೇ. ಶ್ರೀ ಜಿ. ಎಂ. ಪಾಟೀಲ, ಪ್ರ: ಕರ್ಣಾಟಕ ವಿಶ್ವವಿದಾಲಯ, ಧಾರವಾಡ, ಪುಟ. ಕ್ರಮವಾಗಿ ೭೯, ಮತ್ತು ೪೦, ಬೆಲೆ: ೦-೨೫ ಪೈ.

ಕರ್ಣಾಟಕ ವಿಶ್ವವಿದ್ಯಾಲಯ ಜ್ಞಾನಪ್ರಸಾರಕ್ಕಾಗಿ ಅನೇಕ ಮುಖ್ಯ ಮತ್ತು ಜನಪ್ರಿಯ ಯೋಜನೆಗಳನ್ನು ಕೈಕೊಂಡಿರುವುದು ಪ್ರಶಾಂಸಾರ್ಹ. ಈ ಯೋಜನೆಗಳಲ್ಲಿ ಉಪನ್ಯಾಸ ಗ್ರಂಥಮಾಲೆಯೂ ಒಂದು. ಸಾಹಿತ್ಯ, ವಿಜ್ಞಾನ, ಸಮಾಜಶಾಸ್ತ್ರ ಇತ್ಯಾದಿ ಶಾಖೆಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ಆರಿಸಿ ಶಾಸ್ತ್ರೀಯ ಸರಣಿಯಲ್ಲಿ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಕನ್ನಡ ಜನತೆಗೆ ಮುಟ್ಟುವಂತೆ ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಹೊರತಂದಿರುವುದೇ ಈ ಪ್ರಸ್ತುತ ಯೋಜನೆಯ ಒಂದು ಮುಖ್ಯ ಗುರಿಯಾಗಿದೆ.

ಮೊದಲನೆಯ ಪುಸ್ತಕದಲ್ಲಿ ಸ್ವತಂತ್ರ ಭಾರತವು ರಚಿಸಿರುವ ತನ್ನದೇ ಆದ ಸಂವಿಧಾನದ ರೂಪ ರೇಖೆಗಳನ್ನು ಸಂಕ್ಷಿಪ್ತವಾಗಿ ಅಳವಡಿಸಲಾಗಿದೆ. ಸಂವಿಧಾನದ ಪ್ರಕಾರ, ಸರಕಾರದ ರಚನೆ ಮತ್ತು ಅದರ ಅಧಿಕಾರ, ಪ್ರಜೆಗಳ ಹಕ್ಕು, ಸಾಧನೆಗಳು ಜನತಾ ಕಲ್ಯಾಣಕ್ಕಾಗಿ ಈ ಘಟನೆಗಳ ಸೂಕ್ತ ಉಪಯೋಗದ ವಿವರಣೆ ಮತ್ತು ಕಾರ್ಯಾಂಗ ನ್ಯಾಯಾಂಗ ಮತ್ತು ಶಾಸಕಾಂಗಗಳ ಹುಟ್ಟು ಬೆಳವಣಿಗೆ ಈ ವಿಚಾರಗಳ ಒಂದು ಸಂಕ್ಷಿಪ್ತ ನಿರೂಪಣೆಯಿದೆ.

ಎರಡನೇ ಕಿರು ಹೊತ್ತಿಗೆಯಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳ ಹುಟ್ಟು ಬೆಳವಣಿಗೆ ಧ್ಯೇಯ ಧೋರಣೆಗಳು, ಪದ್ಧತಿಗಳು ರೀತಿ ನೀತಿಗಳು, ಕಾಯದೆಯ ಆವಶ್ಯಕತೆ ಮತ್ತು ರೂಪ ರೇಖೆಗಳು ರಾಜ್ಯ ಸರಕಾರದ ಹೊಣೆ ಮತ್ತು ಅಧಿಕಾರ ಮತ್ತು ನೌಕರ ವರ್ಗ ಇತ್ಯಾದಿ ವಿವರಗಳನ್ನು ಒಳಗೊಂಡಿದೆ. ಶ್ರೀ ಸಾಮಾನ್ಯನಿಗೆ ಬಹಳ ಉಪಯುಕ್ತವಾದ ಪುಸ್ತಕ.

* * *

ಅನಿರೀಕ್ಷಿತ ಭೇಟಿ: (ನಗೆ ಬರಹಗಳು) ಲೇ : ಶ್ರೀ ವಿ. ರಘುರಾಮರೆಡ್ಡಿ, ಪ್ರ : ಭುವನ ಭಾರತೀ ಪ್ರಕಾಶನ ಪು. : ೪೦ ಬೆಲೆ: ೧-೦೦.

ಕನ್ನಡ ಸಾಹಿತ್ಯ ಪ್ರೇಮಿಯೊಬ್ಬ ಒಂದು ರೂಪಾಯಿ ಕೊಟ್ಟು ಸಂತೋಷದಿಂದ ಅನಿರೀಕ್ಷಿತ ಭೇಟಿಯನ್ನು ಕೊಂಡು ಮನೆಯಲ್ಲಿ ಪುಸ್ತಕವನ್ನು ತೆರೆದು ಹಾಯಾಗಿ ಕಣ್ಣೋಡಿಸಿದಾಗ ಅವನಿಗೆ ಕಾದಿರುವುದು ನಿರಾಸೆಯೆ ಸರಿ. ಜೀವನದ ನಾನಾ ಮುಖಗಳನ್ನು ನಗೆಗಣ್ಣಿನಿಂದ ನೋಡಿದ್ದರೂ ಅವರ ಆ ನೋಟದಲ್ಲಿ ಇನ್ನೂ ಪೂರ್ಣ ಪ್ರಜ್ಞೆ ಮೂಡಿಲ್ಲ. ನಗೆ ಸಾಂಬಾರು ದಿನಸುಗಳನ್ನು ಸರಿಯಾಗಿ ಬೆರೆಸಲು ಅನುವು ದೊರೆತಿಲ್ಲ. ಪುಸ್ತಕದಲ್ಲಿ ಅಚ್ಚು ದೋಷಗಳು ವಿಪರೀತ.

ಮುಖ್ಯ ರೆಡ್ಡಿಯವರಿಗೆ ನಗೆ ದೃಷ್ಟಿದೆಯಿದೆ. ಆದರೆ ಲೇಖನಿಯು ಹದವಾಗಬೇಕು. ಮಾತಿನಲ್ಲಿ ಇನ್ನೂ ನವುರು ಬೇಕು. ಜೀವನವನ್ನು ಆಳವಾಗಿ ನೋಡುವ ಶಕ್ತಿ ಬೇಕು. ಆಗ ನಾವು ಈ ಲೇಖಕರಿಂದ ಇನ್ನೂ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದು.

ಡಿ. ಮಾಧವಮೂರ್ತಿ

ಮಲ್ಲಯುದ್ಧ (ಕುಸ್ತಿ) : ಲೇ : ವಿ. ಪಿ. ವರದರಾಜನ್; ಪ್ರ : ಪದುಮನಾಭ ಪ್ರಿಂಟರ್ಸ್ ಕಬ್ಬನ್‌ಪೇಟೆ, ಬೆಂಗಳೂರು-೨ ಪುಟ : ೧೮೪ × xxiii ಬೆಲೆ : ರೂ ೯-೫೦, ೧೯೬೭.

ಕನ್ನಡದಲ್ಲಿ ಮಲ್ಲಯುದ್ಧವನ್ನು ಕುರಿತ ಮೊದಲ ಪುಸ್ತಕ ಇದು. ಲೇಖಕರು ಹೇಳುವಂತೆ, " ಮಲ್ಲ ವಿದ್ಯೆಗೆ ಕರ್ನಾಟಕ

ಎತ್ತಿದಕೈ. ನನ್ನ ಮೊದಲ ಹೊತ್ತಿಗೆ ಕನ್ನಡದಲ್ಲಿ ಅಚ್ಚಾಗ ಬೇಕೆಂದು ಆಸೆ. ಪ್ರಚಾರ ಹಾಗೂ ವ್ಯಾಪಾರ ದೃಷ್ಟಿಯಿಂದ ಇಂಗ್ಲಿಷಿನಲ್ಲಿ ಗ್ರಂಥ ಹೊರತರುವುದು ಸರಿಯೆನಿಸಿದರೂ, ಪ್ರಪ್ರಥಮವಾಗಿ ಕನ್ನಡದಲ್ಲಿ ಬರೆದು ಮುಂದಿನ ಭಾಷಾಂತರ ಗಳಿಗೆ ಕನ್ನಡ ಗ್ರಂಥವೇ ಮೂಲಗ್ರಂಥವಾಗಲಿ, ಕನ್ನಡ ನಾಡಿನ ಮೂಲೆ ಮೂಲೆಗೂ ಗ್ರಾಮ ಗ್ರಾಮಕ್ಕೂ ಈ ಗ್ರಂಥ ಮುಟ್ಟಲೆಂಬ ಹೆಬ್ಬಯಕೆಯಿಂದ ಕನ್ನಡದಲ್ಲೇ ಬರೆದು ನಾಡಿಗೆ ಸಮರ್ಪಿಸಿದ್ದೇನೆ." ಇಂಥ ಅತ್ಯುತ್ತಮ ದೇಶ ಭಾಷಾಭಿಮಾನದಿಂದ ಪ್ರೇರಿತರಾಗಿ ಶ್ರೀ ವರದರಾಜನ್ ಈ ಗ್ರಂಥವನ್ನು ಬರೆದಿದ್ದಾರೆ.

ಇದರಲ್ಲಿ ೨೦೦ಕ್ಕೂ ಮೀರಿ ಚಿತ್ರಗಳಿವೆ. ಕುಸ್ತಿಯ ಪಟ್ಟು ಗಳಿಗೆ ಆಯಾ ಪಟ್ಟಿಗೆ ತಕ್ಕ ಸಂಸ್ಕೃತ ಹೆಸರನ್ನು ಹೊಸ ದಾಗಿ ನಿರ್ಮಾಣಮಾಡಲಾಗಿದೆ. ಈ ಹೆಸರುಗಳೆಲ್ಲ ಉಚಿತ ವಾಗಿವೆ.

ಕನ್ನಡದ ಅಭ್ಯಾಸಿಗಳಿಗೆ, ನಮ್ಮ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅನೇಕ ಕುಸ್ತಿಯ ಪಟ್ಟುಗಳ ಹೆಸರಿರುವುದು ಗೊತ್ತಿದೆ. ಆದರೆ ಆ ಹೆಸರಿನ ಅರ್ಥ ನಮಗೆ ತಿಳಿಯದು. ತರಗತಿಗಳಲ್ಲಿ ಪಾಠ ಹೇಳುವಾಗ ಅದು ಒಂದು ರೀತಿಯ ಪಟ್ಟು ಎಂದು ಹೇಳಿ ಮುಂದೆ ಹೋಗುತ್ತೇವೆ. ಈ ಪದ್ಯ ವನ್ನು ನೋಡಬಹುದು.

ಕರವಲಯ ಬೀಸಲೆವು ಡೊಕ್ಕರ
ವುರಗ ಬಂಧನ ಬಾಹುದಣೆ ಬೊ
ಪ್ಪರ ಚಡಿಕೆ ಮೋಹು ಪೆರತೊಲಗಡಿಮುಂಡಿ ತಳಹತ್ತ
ಸಿರಲಗಡಿ ದಣುವಟ್ಟೆ ಬೊಕ್ಕೆಯ
ಕರತಳಗ ಖಮ್ಮರಿ ಮುಥಾಳಾಂ
ಕರಲಗಡಿ ಮೊದಲಾದ ಬಿನ್ನಣಗಳಲಿ ಕಾದಿದರು.

ಇಂಥ ಪದಗಳನ್ನು ಪಟ್ಟಿಮಾಡಿ ಇವುಗಳಿಗೆ ನಿಜವಾದ ಅರ್ಥವೇನೆಂಬುದನ್ನು ಕುಸ್ತಿಯ ಪರಿಣತರು ನಿರ್ಧರಮಾಡಿ ದರೆ ಕನ್ನಡ ಭಾಷೆಗೆ ತುಂಬ ಸಹಾಯಮಾಡಿದಂತಾಗು ತ್ತದೆ.

ಈ ಗ್ರಂಥವು ಒಳ್ಳೆಯ ಕನ್ನಡದಲ್ಲಿ ಸುಲಭವಾಗಿ ಅರ್ಥ ವಾಗುವಂತೆ ಬರೆಯಲ್ಪಟ್ಟಿದೆ. ಸ್ವತಃ ಕುಸ್ತಿಯಲ್ಲಿ ಪರಿಣತರೂ ಕನ್ನಡದಲ್ಲಿ ಆಸಕ್ತರೂ ಆದ ವರದರಾಜನ್ ಅವರ ಪ್ರಯತ್ನವು ತುಂಬ ಸ್ತುತ್ಯವಾದುದು. ಅವರ ಕನ್ನಡ ಲೇಖನ ಶ್ರದ್ಧೆ ಹೆಚ್ಚಲಿ. ಇನ್ನೂ ಅನೇಕ ಇಂಥ ಗ್ರಂಥಗಳು ಅವರಿಂದ ಬೆಳಕಿಗೆ ಬರಲಿ.

ಜಿ. ವೆಂಕಟಸುಬ್ಬಯ್ಯ

'ಸಮನ್ವಯ'– ತ್ರೈಮಾಸಿಕ (ಪ್ರಥಮ ಸಂಚಿಕೆ) ನವೆಂಬರ್ ೧೯೬೭; ಸಮನ್ವಯ ಪ್ರಕಾಶನ; ಬೆಂಗಳೂರು; ಪುಟ: ೬೦, ಬೆಲೆ ರೂ ೩

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತ ಬಂದಿರುವ 'ಸಾಕ್ಷಿ' 'ಮನ್ವಂತರ,' 'ಕವಿತಾ', 'ಲಹರಿ', 'ಸಂಕ್ರಮಣ' ಮತ್ತು 'ಸಮೀಕ್ಷಕ' ಗಳೊಡನೆ ಮತ್ತೊಂದು ತ್ರೈಮಾಸಿಕ 'ಸಮನ್ವಯ'ವೂ ಸೇರಿಕೊಳ್ಳುವುದು ಸಂತೋಷದ ಸಂಗತಿಯಾಗಿದೆ. ನವ್ಯ ಸಾಹಿತ್ಯ ಪಂಥದ ಆದ್ಯಪ್ರವರ್ತಕರೂ, ವಿಮರ್ಶಕರೂ ಆದ ಶ್ರೀ ವಿನಾಯಕರ ಸಮರ್ಥ ನೇತೃತ್ವದಲ್ಲಿ, ಸಮನ್ವಯ ಪ್ರಕಾಶನ ತನ್ನ ಪ್ರಥಮ ಸಂಚಿಕೆಯನ್ನು ಹೊರತಂದಿದೆ. ಇದಕ್ಕೆ ಮುನ್ನುಡಿಯಾಗಿ ತಾನು ರೂಪಿಸಿಕೊಂಡಿರುವ ಹದಿನಾರು ಸೂತ್ರಗಳನ್ನು ಘೋಷಿಸಿಕೊಂಡು, ಅವುಗಳ "ಬೆಳಕಿನಲ್ಲಿ 'ಸಮನ್ವಯ' ತನ್ನ ಪ್ರೇರಣೆಯನ್ನು ಕಂಡು ಕೊಂಡಿದೆ." "ಸಾಹಿತ್ಯದ ವಿವಿಧ ಒಲವು–ನಿಲವುಗಳಿಗೆಲ್ಲ ಇದೊಂದು ವೇದಿಕೆ. ಏಕೆಂದರೆ ಸಮನ್ವಯವು ಪಕ್ಷಾತೀತ" ಎಂಬ ದೃಷ್ಟಿಕೋಣ ಗಮನಾರ್ಹವಾಗಿದೆ. ಸರ್ವಶ್ರೀ ವಿನಾಯಕ (ಇವರ ಕವನವೊಂದೂ ಸೇರಿದೆ), ಪ್ರೊ. ರಾಜ್ ನಾಥ್, ಶಿವರುದ್ರಪ್ಪ, ಮೊಕಾಶಿ, 'ರಂಜನ'ಭಟ್ಟ, ನಿರಂಜನ–ಇವರ ಲೇಖನಗಳೊಂದಿಗೆ, ಹೇಮಂತ, ವಿ. ಜಿ. ಭಟ್ಟ, ಎಕ್ಕುಂಡಿ ಇವರ ಕವನಗಳೂ ಸೇರಿ, 'ಸಮನ್ವಯ'ದ ಪ್ರಥಮ ಸಂಚಿಕೆ ಅತ್ಯುತ್ತಮ ಮುದ್ರಣವನ್ನು ಪಡೆದು, ಸರ್ವಾಂಗ ಸುಂದರವಾಗಿ ಹೊರಬಿದ್ದಿದೆ. ಸೂಕ್ಷ್ಮಾತಿ ಸೂಕ್ಷ್ಮ ಸಂವೇದನೆಗಳೊಂದಿಗೆ, ಕ್ಲಿಷ್ಟತಮವಾಗಿ ಹಲವು ವೇಳೆ ಅಸಂಬದ್ಧವೆನಿಸಿ ಸಾಮಾನ್ಯ ಓದುಗನಿಗಿರಲಿ, ಸಾಹಿತ್ಯದ ಪರಿಚಯವಿರುವವರಿಗೂ ಭ್ರಮೆ ಹುಟ್ಟಿಸುವ ಆಧುನಿಕ ವಿಚಾರಧಾರೆಗಳ ಸಮರ್ಥ ಪರಿಚಯವನ್ನು ಮಾಡಿಕೊಡುವುದರ ಮೂಲಕ ಸಾಹಿತ್ಯವನ್ನು ಕುರಿತು ಅರ್ಥವಂತಿಕೆ, ಆಸಕ್ತಿಗಳನ್ನು ಹೆಚ್ಚಿಸುವ ದಿಶೆಯಲ್ಲಿಯೂ 'ಸಮನ್ವಯ' ಯಶಸ್ವಿಯಾಗಲೆಂದು ಹಾರೈಸುತ್ತೇವೆ.

"ಸುಮನಾ"

ಸುದ್ದಿ ಸಂಗ್ರಹ

'ಕನ್ನಡ ಸಂಸ್ಕೃತಿ' ಗ್ರಂಥದ ಬಿಡುಗಡೆ

ಬೆಂಗಳೂರಿನ ಸಹಕಾರಿ ಮಂದಿರದವರು ತಾವು ಪ್ರಕಟಿಸಿರುವ ಮದರಾಸು ವಿಶ್ವವಿದ್ಯಾನಿಲಯದ ಪ್ರೊ|| ಮರಿಯಪ್ಪ ಭಟ್ಟರು ಬರೆದಿರುವ 'ಕನ್ನಡ ಸಂಸ್ಕೃತಿ'ಗ್ರಂಥವನ್ನು ಬಿಡುಗಡೆ ಮಾಡುತ್ತ ಆ ಮೂಲಕ ಶ್ರೀಯುತರ ಷಷ್ಟ್ಯಬ್ದ ಮಹೋತ್ಸವವನ್ನು ಆಚರಿಸಿದರು.

ಈ ಉತ್ಸವಕ್ಕೆ ಕನ್ನಡನಾಡಿನ ವಿದ್ವಾಂಸರನೇಕರು ಆಗಮಿಸಿದ್ದರು.

ರಾಜ್ಯದ ಅರ್ಥಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಧ್ಯಕ್ಷತೆ ವಹಿಸಿದ್ದರು.

ಕನ್ನಡದಲ್ಲಿ ಗೆಜೆಟ್

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲು ತೀರ್ಮಾನಿಸಿರುವ ರಾಜ್ಯಸರಕಾರವು ೧೯೬೮-೬೯ನೆಯ ಆರ್ಥಿಕ ವರ್ಷದಿಂದ ಮೈಸೂರು ಗೆಜೆಟನ್ನು ಪೂರ್ಣವಾಗಿ ಕನ್ನಡದಲ್ಲಿ ಪ್ರಕಟಿಸಲು ನಿರ್ಧರಿಸಿದೆ. ಈಗ ಕೆಲವು ಪ್ರಕಟನೆಗಳನ್ನು ಮಾತ್ರ ಕನ್ನಡದಲ್ಲಿ ಪ್ರಕಟಿಸಲಾಗುತ್ತಿದೆ.

ಇದು ರಾಜ್ಯ ಸರಕಾರದ ದಿಟ್ಟತನದ ಹೆಜ್ಜೆಯಾಗಿದೆ.

ಕರ್ಣಾಟಕ ಜಾನಪದ ಪರಿಷತ್

ತರೀಕೆರೆಯಲ್ಲಿ ಕಳೆದ ತಿಂಗಳು ನಡೆದ ಜಾನಪದ ಸಾಹಿತ್ಯ ಸಮ್ಮೇಳನದಲ್ಲಿ ಸ್ವೀಕೃತವಾದ ನಿರ್ಣಯದಂತೆ ಈಗ ಅಖಿಲ ಕರ್ಣಾಟಕ ಪರಿಷತ್ತು ಎಂಬ ಸಂಸ್ಥೆ ಆರಂಭವಾಗಿದೆ. ಇದರ ಕೇಂದ್ರ ಕಾರ್ಯಾಲಯವು ಮೈಸೂರಿನಲ್ಲಿ ಇದ್ದು ಜಾನಪದ ಸಾಹಿತ್ಯ ಸಂಗ್ರಹಣೆ ರಕ್ಷಣೆ, ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಶ್ರಮಿಸುವುದು. ಇದಕ್ಕೆ ಮಾನಸ ಗಂಗೋತ್ರಿಯ ಕನ್ನಡ ವಿಭಾಗದ ಮುಖ್ಯಾಧಿಕಾರಿಗಳಾಗಿರುವ ಪ್ರೊ|| ದೇ. ಜವರೇಗೌಡರು ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಪರಿಷತ್ತಿನ ಇತರ ಸದಸ್ಯರು: ಸರ್ವಶ್ರೀ ಕೆ. ಆರ್. ಲಿಂಗಪ್ಪ (ಉಪಾಧ್ಯಕ್ಷ), ಡಾ|| ಹಾ. ಮ. ನಾಯಕ (ಕೋಶಾಧಿಕಾರಿ), ಜಿ. ಶಂ. ಪರಮಶಿವಯ್ಯ ಮತ್ತು ಗೊ. ರು. ಚನ್ನಬಸಪ್ಪ (ಕಾರ್ಯದರ್ಶಿ), ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪಿ. ಆರ್. ತಿಪ್ಪೇಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ, ಸಿಂಪಿ ಲಿಂಗಣ್ಣ, ತಲ್ಲೂರ ರಾಯನಗೌಡ ಪಾಟೀಲ, ಈಶ್ವರ ಚಂದ್ರ, ಚಿಂತಾಮಣಿ, ಕ. ರಾ. ಕೃಷ್ಣಸ್ವಾಮಿ, ಕೆ. ವಿರೂಪಾಕ್ಷಗೌಡ, ಕೆ. ವಿ. ವೀರಪ್ಪ, ಟಿ. ಕೇಶವಭಟ್ಟ, ಎಲ್. ಆರ್. ಹೆಗ್ಗಡೆ, ಕೆ.ಸಿ. ಭೀಮಯ್ಯ, ಹೆಚ್. ಎಲ್. ನಾಗೇಗೌಡ, ಜಿ. ಎಸ್. ಶಿವರುದ್ರಪ್ಪ, ಚನ್ನವೀರಕಣವಿ ಮತ್ತು ಜಿ. ವೆಂಕಟಸುಬ್ಬಯ್ಯ.

ಈ ಪರಿಷತ್ತಿಗೆ ಮಹಾ ಪೋಷಕರಾಗುವಂತೆ ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರನ್ನೂ ಗೌರವ ಪೋಷಕರಾಗುವಂತೆ ವಿದ್ಯಾ ಸಚಿವರನ್ನೂ, ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನೂ, ಡಾ|| ಮಾಸ್ತಿ ವೆಂಕಟೇಶಐಯಂಗಾರ್, ಡಾ|| ದ. ರಾ. ಬೇಂದ್ರೆ, ಡಾ|| ಕೆ. ವಿ. ಪುಟ್ಟಪ್ಪ, ಬೆಟಗೇರಿ ಕೃಷ್ಣಶರ್ಮ ಬಿ. ಶಿವಮೂರ್ತಿ ಶಾಸ್ತ್ರಿ ಅವರನ್ನೂ ಕೇಳಿಕೊಳ್ಳಲಾಗಿದೆ.

ಶ್ರೀರಂಗರಿಗೆ ಫೆಲೋಷಿಪ್

ಕನ್ನಡ ನಾಡಿನ ಹೆಸರಾಂತ ನಾಟಕಕಾರರೂ, ವಿಚಾರವಾದಿಗಳೂ ಆದ ಶ್ರೀ ಆದ್ಯ ರಂಗಾಚಾರ್ಯರಿಗೆ ಕೇಂದ್ರದ ಸಂಗೀತ ನಾಟಕ ಅಕಾಡೆಮಿಯವರು ಶ್ರೀಯುತರ ಸೇವೆಯನ್ನು ಮನಗೊಂಡು ಫೆಲೋಷಿಫ್ ಇತ್ತು ಗೌರವಿಸಿದೆ.

ಈ ಬಾರಿ ಮೈಸೂರಿನ ಭಾಗವತ ಮೇಳಕ್ಕೂ ಪ್ರಶಸ್ತಿಯನ್ನು ನೀಡಲಾಗಿದೆ.

ಹೈದರಾಬಾದಿನಲ್ಲಿ ಮೈತ್ರಿ ಸಂಘ

ಹೈದರಾಬಾದ್ ಆಂಧ್ರ ಪ್ರದೇಶದ ರಾಜಧಾನಿಯಾದರೂ ಅಲ್ಲಿ ಅನೇಕ ಕನ್ನಡಿಗರು ನೆಲೆಸಿದ್ದಾರೆ. ಪರಸ್ಥಳದಿಂದ ಬರುವ ಕನ್ನಡಿಗರಿಗೆ ವಸತಿ ಸೌಕರ್ಯ ಕಲ್ಪಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ವಾಚನಾಲಯ, ಪುಸ್ತಕ ಭಂಡಾರಗಳನ್ನು ನಡೆಸುವುದು ಇದೇ ಮೊದಲಾದ ಉದ್ದೇಶಗಳಿಗಾಗಿ ಸುಮಾರು ಹತ್ತುಲಕ್ಷ ರೂಪಾಯಿಗಳ ವೆಚ್ಚದಲ್ಲಿ ಏಳಂತಸ್ತಿನ ಒಂದು ಮಂದಿರ ನಿರ್ಮಾಣವಾಗಲಿದೆ. ಇದಕ್ಕೆ ಮೈತ್ರಿಭವನವೆಂದು ಹೆಸರಿಡಲಾಗಿದೆ. ಇದಕ್ಕೆ ಮೈಸೂರು ಸರಕಾರದಿಂದ ಎರಡು ಲಕ್ಷ ರೂಪಾಯಿಗಳನ್ನು ಕಾಣಿಕೆ ನೀಡಲಾಗುವುದೆಂದು ತಿಳಿದು ಬಂದಿದೆ. ಶ್ರೀ ನಿಜಲಿಂಗಪ್ಪ

ನವರು ಇದರ ಶಂಕುಸ್ಥಾಪನೆಯನ್ನು ಕಳೆದ ತಿಂಗಳು ನೆರವೇರಿಸಿದರು. ಆಂಧ್ರ ಸರಕಾರ ಇದಕ್ಕೆ ನೆರವಾಗುವ ಆಶ್ವಾಸನವಿತ್ತಿದೆ.

ದಿ. ರಾಮಮೂರ್ತಿ ಅವರ ಪತ್ನಿಗೆ ನೆರವು

ಇತ್ತೀಚಿಗೆ ದುರಂತಕ್ಕೆ ಬಲಿಯಾದ ಕನ್ನಡದ ಕಟ್ಟಾಳು ಮ. ರಾಮಮೂರ್ತಿ ಅವರ ಸಂತಾಪ ಸೂಚಕ ಸಭೆಯೊಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರ ನೇತೃತ್ವದಲ್ಲಿ ನಡೆಯಿತು. ಸರ್ವಶ್ರೀ ಅ. ನ. ಕೃ., ಲಕ್ಷ್ಮೀನಾರಾಯಣ, ವಾಟಾಳ್ ಮುಂತಾದವರು ಮಾತನಾಡಿದರು.

ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಶ್ರೀಮತಿ ಕಮಲಮ್ಮ ರಾಮಮೂರ್ತಿ ಅವರಿಗೆ ನೆರವಾಗಬೇಕೆಂಬ ಅಭಿಪ್ರಾಯ ಸಭೆಯಲ್ಲಿ ಪ್ರಕಟವಾಯಿತು. ಅದರಂತೆ ಶ್ರೀಮತಿ ಅವರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುವಂತೆ ಕನ್ನಡ ಅಭಿಮಾನಿಗಳಿಂದ ಕೊಡುಗೈಯ ನೆರವನ್ನು ಕೋರಲಾಗಿದೆ. ಸಿಂಡಿಕೇಟ್ ಬ್ಯಾಂಕ್, ಗಾಂಧಿನಗರ ಬೆಂಗಳೂರು ಅವರಿಗೆ ಹಣವನ್ನು ಕಳುಹಿಸಿಕೊಡಬೇಕೆಂದು ಒಂದು ಪತ್ರಿಕಾ ಪ್ರಕಟಣೆ ತಿಳಿಸುತ್ತದೆ.

ಕೂಡಲಸಂಗಮಕ್ಕೆ ಬೃಹತ್ ಯೋಜನೆ

ಶ್ರೀ ಬಸವೇಶ್ವರರ ಎಂಟನೇ ಶತಮಾನೋತ್ಸವದ ಸಂದರ್ಭದಲ್ಲಿ ತಿರುಪತಿ, ಶ್ರೀಶೈಲ, ಧರ್ಮಸ್ಥಳ ಕ್ಷೇತ್ರಗಳ ಮಾದರಿಯಲ್ಲಿ ಕೂಡಲ ಸಂಗಮ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಒಂದು ಕೋಟಿ ರೂಪಾಯಿಗಳ ವೆಚ್ಚದ ಒಂದು ಬೃಹತ್ ಯೋಜನೆಯನ್ನು ರಾಜ್ಯ ಸರಕಾರ ಮತ್ತು ಬಸವ ಸಮಿತಿಗಳು ಕೈಗೊಳ್ಳಲಿದೆ ಎಂದು ಮಾನ್ಯ ಮಂತ್ರಿಗಳಾದ ಎಸ್. ಆರ್. ಕಂಠಿ ಅವರು ಬಸವ ಕಲ್ಯಾಣದಲ್ಲಿ ಕಳೆದ ತಿಂಗಳು ತಿಳಿಸಿದರು.

ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಬಸವ ಕಲ್ಯಾಣ ಸಂಗಮ ಕ್ಷೇತ್ರಗಳು ಅಖಿಲ ಭಾರತದ ಪುಣ್ಯ ಕ್ಷೇತ್ರಗಳ ಮಾಲಿಕೆಯಲ್ಲಿ ಅಗ್ರಸ್ಥಾನವನ್ನು ಅಲಂಕರಿಸುವುದರಲ್ಲಿ ಸಂದೇಹವಿಲ್ಲ.

ಕನ್ನಡ ಅಭಿವೃದ್ಧಿಗೆ ರಾಜ್ಯಮಂಡಳಿ ರಚನೆ

ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವ ವಿಚಾರವನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ಮಾಡಿಸಲು ರಾಜ್ಯ ಸರಕಾರವು ಒಂದು ರಾಜ್ಯಮಟ್ಟದ ಸಮಿತಿಯನ್ನು ರಚಿಸಿದೆ. ಪ್ರಾದೇಶಿಕ ಭಾಷೆಯ ಬೆಳವಣಿಗೆ, ಪಠ್ಯ ಪುಸ್ತಕಗಳ ನಿರ್ಮಾಣಗಳ ಬಗ್ಗೆ ಇದು ಸಲಹೆ ಮಾಡುವುದು. ಇದರಲ್ಲಿ ಮೂರು ವಿ. ವಿ. ಗಳ ಉಪಕುಲಪತಿಗಳೂ, ವಿದ್ಯಾ ಇಲಾಖೆಯ ಕಾರ್ಯದರ್ಶಿ ಡಿ. ಪಿ. ಐ. ತಾಂತ್ರಿಕ ಶಿಕ್ಷಣ ಮತ್ತು ಕಾಲೇಜು ಶಿಕ್ಷಣ ಡೈರೆಕ್ಟರುಗಳೂ ಸದಸ್ಯರಾಗಿರುವರು.

ಐ. ಎ. ಎಸ್. ಅಧಿಕಾರಿಗಳು ಮತ್ತು ಕನ್ನಡ

ರಾಜ್ಯದಲಿರುವ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳು ಇನ್ನು ಮುಂದೆ ಕನ್ನಡ ಕಲಿತವರಾಗಿರಬೇಕಾದ ಪ್ರಸಂಗ ಬಂದಿದೆ. ಈಗ ರಾಜ್ಯದಲ್ಲಿರುವ ಅಧಿಕಾರಿಗಳು ಕನ್ನಡವನ್ನು ಕಲಿಯದ ಹೊರತು ಅವರಿಗೆ ಬಡ್ತಿ ದೊರೆಯುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ರಾಜ್ಯ ವಿಧಾನ ಸಭೆಯಲ್ಲಿ ಹೇಳಿರುವುದು ಸ್ವಾಗತಾರ್ಹವಾಗಿದೆ.

ಮಹಾಜನ್ ಅವರ ನಿಧನ

ಭಾರತದ ಮಾಜಿ ಶ್ರೇಷ್ಠ ನ್ಯಾಯಾಧೀಶರೂ, ಮೈಸೂರು ಮಹಾರಾಷ್ಟ್ರ, ಕೇರಳ ಗಡಿ ವಿವಾದಗಳ ಬಗ್ಗೆ ಏರ್ಪಡಿಸಿದ್ದ ಏಕ ಸದಸ್ಯ ಸಮಿತಿಯ ನಾಯಕರೂ ಆಗಿದ್ದ ಪಂಜಾಬಿನ ಶ್ರೀ ಮೆಹರ್ ಚಂದ್ ಮಹಾಜನ್ ಅವರು ಕಳೆದ ತಿಂಗಳು ದಿನಾಂಕ ೧೧-೧೨-೬೭ ರಂದು ದೆಹಲಿಯಲ್ಲಿ ತೀರಿಕೊಂಡರು. ಶ್ರೀಯುತರು ತಮ್ಮ ನಿಷ್ಪಕ್ಷಪಾತ ವರದಿಯಿಂದ ಕನ್ನಡಿಗರ ಅಭಿಮಾನ ಗೌರವಗಳಿಗೆ ಪಾತ್ರರಾಗಿದ್ದರು. ದಿವಂಗತರ ಆತ್ಮಕ್ಕೆ ಶಾಂತಿ ದೊರಕಲಿ.

ಮೈಸೂರಿನಲ್ಲಿ ಶ್ರೀನಿವಾಸ ಸಾಹಿತ್ಯ ದರ್ಶನ

ಕನ್ನಡ ಸಾಹಿತ್ಯಕ್ಕೆ ಕಳೆದ ಐದು ಆರು ದಶಕಗಳಿಂದಲೂ ಸೇವೆ ಸಲ್ಲಿಸಿ ಕನ್ನಡ ಸಣ್ಣ ಕಥೆಗಳ ಜನಕರೆಂದು ಖ್ಯಾತನಾಮರಾದ ಡಾ|| ಮಾಸ್ತಿ ವೆಂಕಟೇಶಐಯ್ಯಂಗಾರ್-ಶ್ರೀನಿವಾಸ- ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುವ ಒಂದು ಸಮಾರಂಭ ಇತ್ತೀಚಿಗೆ ಮೈಸೂರಿನಲ್ಲಿ ಜರುಗಿತು. ಈ ಸನ್ಮಾನೋತ್ಸವಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ|| ಶ್ರೀ ಮಾಲಿ ಅವರು ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀನಿವಾಸ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಒಂದು ವಿಶೇಷ ಕಾರ್ಯಕ್ರಮ ಮಹಾ

ರಾಜ ಕಾಲೇಜಿನ ಶತಮಾನೋತ್ಸವಭವನದಲ್ಲಿ ನಡೆಯಿತು. ಇದರಲ್ಲಿ ಶ್ರೀಯುತರಾದ ಪ್ರೊ|| ಎಸ್. ವಿ. ರಂಗಣ್ಣ, ಪ್ರೊ|| ದೇ. ಜವರೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಸರ್ವಶ್ರೀ ಸಿ. ಪಿ. ಕೆ., ಡಾ|| ಎಚ್. ತಿಪ್ಪೇರುದ್ರಸ್ವಾಮಿ, ಹೆಚ್. ಜೆ. ಲಕ್ಕಪ್ಪಗೌಡ, ಡಾ|| ಹಾ. ಮಾ. ನಾಯಕ, ಪು. ತಿ. ನ., ಡಾ|| ಜಿ. ವರದರಾಜಾರಾವ್, ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟ, ಪ್ರೊ|| ಎಚ್. ಎಸ್. ಕೃಷ್ಣ ಸ್ವಾಮಿ ಐಯ್ಯಂಗಾರ್, ಡಾ|| ಎನ್. ಎಸ್. ಅನಂತ ರಂಗಾಚಾರ್, ಕೆ. ಶಿವರಾಮ ಐತಾಳ್, ಎಂ.ರಾಮರಾವ್ ಮುಂತಾದವರು ಮಾತನಾಡಿ ಮಾಸ್ತಿ ಅವರ ಸಾಹಿತ್ಯ ದರ್ಶನವನ್ನು ಮಾಡಿಕೊಟ್ಟರು.

ಈ ಎಲ್ಲ ಭಾಷಣಗಳನ್ನೂ ಗ್ರಂಥರೂಪದಲ್ಲಿ ಪ್ರಕಟಿಸುವ ವಿಚಾರವಿದೆ ಎಂದು ತಿಳಿದು ಬಂದಿದೆ.

ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು

೧೯೬೭ರ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಈ ಕೆಳಗಿನ ಪುಸ್ತಕಗಳಿಗೆ ಕೊಡಲಾಗಿದೆ.

ಇಂಗ್ಲಿಷ್ : ಶಾಡೋ ಫ್ರಂ ಲಡಖ್ (ಕಾದಂಬರಿ) ಶ್ರೀ ಭವಾನಿ ಭಟ್ಟಾಚಾರ್ಯ.

ಮಲೆಯಾಳಂ : ಥಮರತೋಸಿ (ಕಾವ್ಯ) ಶ್ರೀ ಕುನ್ನಿ ರಾಮನ್ ನಾಯರ್.

ಹಿಂದಿ : ಅಮೃತ್ ಔರ್ ವಿಷ್ (ಕಾದಂಬರಿ) ಶ್ರೀ ಅಮೃತ್‌ಲಾಲ್ ನಗರ್.

ಸಂಸ್ಕೃತ : ಚಿತ್ರಕಾವ್ಯ ಕೌತುಕಂ (ಕಾವ್ಯ) ಶ್ರೀ ರಾಮರೂಪ್ ಪಾಠಕ್.

ತಮಿಳು : ವೀರರ್ ಉಲಗಂ (ಐತಿಹಾಸಿಕ ಘಟನೆಗಳು) ಶ್ರೀ ಕೆ. ವಿ. ಜಗನ್ನಾಥನ್.

ಉರ್ದು : ಪಥ್ಥರ್‌ಝುಕ್ ಕಿ ಆವಾಜ್ (ಸಣ್ಣ ಕಥೆಗಳು) ಶ್ರೀ ಕುರುತುಕ್ ಐನ್–ಹೈದರ್.

ಕನ್ನಡ : ಶ್ರೀಮದ್ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮ ಯೋಗ (ತತ್ವ) : ಶ್ರೀ ಡಿ. ವಿ. ಜಿ.

ಪಂಡಿತ ಎಚ್. ಶೇಷ ಅಯ್ಯಂಗಾರ್ ಅವರ ನಿಧನ

ಮದರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಪಂಡಿತ ಎಚ್. ಶೇಷ ಅಯ್ಯಂಗಾರ್ ಅವರು ಇತ್ತೀಚೆಗೆ ತೀರಿಕೊಂಡು ವಿದ್ವಾಂಸ ಲೋಕಕ್ಕೆ ಅಪಾರ ನಷ್ಟ ವುಂಟಾಗಿದೆ. ಶ್ರೀಯುತರು ಮೈಸೂರು – ಮದರಾಸುಗಳಲ್ಲಿ ಕನ್ನಡಕ್ಕಾಗಿ ದುಡಿದಿದ್ದುದಲ್ಲದೆ, ಕವಿರಾಜಮಾರ್ಗ, ಶಾಂತಿ ಪುರಾಣ, ಪುಷ್ಪದಂತ ಪುರಾಣ, ನೇಮಿನಾಥ ಪುರಾಣ, ಖಗೇಂದ್ರಮಣಿದರ್ಪಣ ಮೊದಲಾದ ಪ್ರಾಚೀನ ಕನ್ನಡ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ.

ಪರಿಷತ್ತಿನ ಸುದ್ದಿಗಳು

ಸಕಲ ಸದಸ್ಯರ ವಿಶೇಷ ಸಭೆ

ತಾ|| ೨೪-೧೨-೧೯೬೭ನೆಯ ಭಾನುವಾರ ಬೆಳಗಿನ ೯ ಗಂಟೆಗೆ ಪರಿಷತ್ತಿನಲ್ಲಿ ಪ್ರೊ|| ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಸಭೆಯ ನಡವಳಿಕೆಗಳು.

(೧) ಮೇಲೆ ಕಂಡ ಸಭೆಗೆ ದಯಮಾಡಿಸಿದ್ದ ಪರಿಷತ್ತಿನ ಸದಸ್ಯರ ಪಟ್ಟಿಯನ್ನು ಅನುಬಂಧವಾಗಿ ಕೊಟ್ಟಿದೆ.

(೨) ಸಭೆಯ ಪ್ರಾರಂಭದಲ್ಲಿ ಗೌರವ ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರು ಸದಸ್ಯರಿಗೆ ಸ್ವಾಗತವನ್ನು ಕೋರಿ, ದಿನಾಂಕ ೫-೧೧-೬೭ರಲ್ಲಿ ಸೇರಿದ್ದ ಕಾರ್ಯಸಮಿತಿ ಸೂಚಿಸಿದ್ದ ನಿಬಂಧನೆಗಳ ತಿದ್ದುಪಡಿಗಳನ್ನು ಒಂದೊಂದಾಗಿ ಓದಿ ಸಭೆಯ ಮುಂದೆ ಮಂಡಿಸಿದರು. ಅನಂತರ ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಚರ್ಚಿಸಿ, ಸೂಕ್ತ ಬದಲಾವಣೆಗಳೊಡನೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

(೩) ಈ ಮೇಲಿನಂತೆ ಸಭೆಯಲ್ಲಿ ತಿದ್ದುಪಾಟಾಗಿ ಅಂಗೀಕೃತವಾದ ನಿಬಂಧನೆಗಳನ್ನು ಮೈಸೂರು ಸೊಸೈಟಿ ರಿಜಿಸ್ಟ್ರಾರವರ ಒಪ್ಪಿಗೆ ಮತ್ತು ಅಧಿಕೃತ ಅಂಗೀಕಾರಕ್ಕೆ ಕಳುಹಿಸತಕ್ಕದ್ದೆಂದೂ ಅಂತಹ ಅಂಗೀಕಾರಕ್ಕೆ ಅವಶ್ಯಕವೆಂದು ರಿಜಿಸ್ಟ್ರಾರವರು ಸೂಚಿಸುವ ಬದಲಾವಣೆಗಳನ್ನು ಈ ನಿಬಂಧನೆಗಳಲ್ಲಿ ಅಳವಡಿಸಿಕೊಳ್ಳಲು ಪರಿಷದಧ್ಯಕ್ಷರಿಗೆ ಅಧಿಕಾರವಿರತಕ್ಕದ್ದೆಂದೂ ತೀರ್ಮಾನಿಸಲಾಯಿತು.

(೪) ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರಿಂದ ವಂದನಾರ್ಪಣೆಯಾಯಿತು.

ಅನುಬಂಧ

ಶ್ರೀಗಳಾದ, ಶ್ರೀಮತಿಯರಾದ :

೧. ಜಿ. ಅಶ್ವತ್ಥನಾರಾಯಣ, ೨. ಕೆ.ಎಂ. ಕೃಷ್ಣರಾವ್, ೩. ಎನ್. ಪದ್ಮಾವತಮ್ಮ, ೪. ಸಿ. ವೀರಪ್ಪ, ೫. ಗುಂ. ಶ್ರೀ ಶಿವಶಂಕರ, ೬. ಶ್ರೀವತ್ಸ, ೭. ಬಿ.ವಾಸುದೇವರಾವ್, ೮. ಬಿ. ಎನ್. ವೆಂಕಟೇಶ್, ೯. ಎ. ಮ. ಶ್ರೀನಿವಾಸರಾವ್, ೧೦. ಡಿ. ಸಿ. ಸುಬ್ಬರಾಯಪ್ಪ, ೧೧. ಎನ್. ಪಿ. ರೇವಡಿ, ೧೨. ಎಸ್. ಕೆ. ಶ್ರೀಪತಿರಾವ್, ೧೩. ಎನ್. ನಾರಾಯಣ ಬಲ್ಲಾಳ, ೧೪. ಮ. ನರಸಿಂಹಮೂರ್ತಿ, ೧೫. ಬಿ. ಶ್ರೀ. ಪಾಂಡುರಂಗರಾವ್, ೧೬. ಟಿ. ಎಸ್. ಶ್ಯಾಮರಾವ್, ೧೭. ಬಿ. ನೀಲಕುಮಾರ್, ೧೮. ಬಿ. ಸಿ. ರಂಗಪ್ಪ, ೧೯. ಕೈವಾರ್ ದ್ವಾರಕಾನಾಥ್, ೨೦. ಹೆಚ್. ಎನ್. ರಾಮರಾವ್, ೨೧. ಮತ್ತೂರು ಕೃಷ್ಣಮೂರ್ತಿ, ೨೨. ಸಿ. ಆರ್. ರಾಮಚಂದ್ರರಾವ್, ೨೩. ತೊ. ಸು. ಸುಬ್ರಹ್ಮಣ್ಯಂ, ೨೪. ಜಿ. ಕೆ. ಗುಂಡೂರಾವ್, ೨೫. ಸೂರ್ಯನಾರಾಯಣ ಚಡಗ, ೨೬. ಎಚ್. ಎಂ. ರಂಗನಾಥ್, ೨೭. ಅ. ಸತ್ಯಪಾಲ, ೨೮. ಹೀ. ಚಿ. ಶಾಂತವೀರಯ್ಯ, ೨೯. ಎಂ. ವಿ. ಸುಬ್ಬರಾವ್, ೩೦. ನಾ. ವರದರಾಜನ್, ೩೧. ಕೆ. ಟಿ. ಬನಶಂಕರಮ್ಮ, ೩೨. ನಾರಾಯಣರಾವ್ ಪಿನ್ನೆ, ೩೩. ಜಿ. ಲಲಿತ, ೩೪. ಅನಂತಶರ್ಮ ಭುವನಗಿರಿ, ೩೫. ತಿ. ತಾ. ಶರ್ಮ, ೩೬. ಕೆ. ಎಸ್. ಶ್ರೀನಿವಾಸಮೂರ್ತಿ, ೩೭. ನಾರಾಯಣ ಎಸ್. ಹೆಗಡೆ, ೩೮. ಎಸ್. ಬಿ. ವಸಂತರಾಜಯ್ಯ, ೩೯. ಡಿ. ಮಾಧವಮೂರ್ತಿ, ೪೦. ವೈ. ಆರ್. ಅಶ್ವತ್ಥನಾರಾಯಣರಾವ್, ೪೧. ಎನ್. ಎಸ್. ರಾಮಪ್ರಸಾದ, ೪೨. ನ. ನರಹರಿರಾವ್, ೪೩. ನಂ. ಶ್ರೀ ಜಯಲಕ್ಷ್ಮಿ, ೪೪. ಟಿ. ಸಿ. ಗಣಪತಿರಾವ್. ೪೫. ಸೂ. ಸುಬ್ರಹ್ಮಣ್ಯಂ, ೪೬. ವಿ. ಆರ್. ಪುಟ್ಟಣ್ಣ, ಮ. ರಾಮಮೂರ್ತಿ, ೪೮. ವೆಂಕಟದಾಸು, ೪೯. ನೆ. ಲ. ಭೈರಣ್ಣ, ೫೦. ಬಿ. ಶ್ರೀನಿವಾಸಮೂರ್ತಿ, ೫೧. ಬೀ. ನಂಜಪ್ಪ, ೫೨. ಡಿ.ನಂ. ಶೇಷಾದ್ರಿ, ೫೩. ಕಾ. ಸ. ಧರಣೇಂದ್ರಯ್ಯ, ೫೪. ಮ.ನ. ರಾಮನರಸಯ್ಯ, ೫೫. ಕೆ. ಪಿ. ಶಿವಲಿಂಗಯ್ಯ, ೫೬. ಕೋಟಿ ಭಾಸ್ಕರರಾವ್, ೫೭. ಆದ್ಯ ರಾಮಾಚಾರ್ಯ, ೫೮. ರಂ. ಶ್ರೀ. ಮುಗಳಿ, ೫೯. ಕೆ. ಆರ್. ಪದ್ಮನಾಭರಾವ್, ೬೦. ಹಾ. ಸೂ. ನಾಗೇಂದ್ರ, ೬೧. ಆರ್. ಶಂಕರನಾರಾಯಣರಾವ್, ೬೨. ಕೆ. ಎನ್. ಶ್ರೀಹರಿ, ೬೩. ಆರ್. ವಿ. ಶೇಷಾದ್ರಿ ಗವಾಯಿ, ೬೪. ಆರ್. ಎಚ್. ರಾಜು, ೬೫. ಎ. ಆರ್. ಬಸವರಾಜಯ್ಯ, ೭೬. ನ್ಯೆ. ಶಿ. ಲಕ್ಷ್ಮೀನಾರಾಯಣ ಭಟ್ಟ, ೬೭. ಕೈವಾರ ರಾಜಾರಾವ್, ೬೮. ಶೇಷನಾರಾಯಣ ೬೯. ಹಂಪ. ನಾಗರಾಜಯ್ಯ, ೭೦. ಜಿ. ವೆಂಕಟಸುಬ್ಬಯ್ಯ.

ಪರಿಷತ್ತಿನಲ್ಲಿ ದಿವಂಗತ ರಾಮಮೂರ್ತಿಯವರಿಗೆ ಸಂತಾಪ

ತಾ|| ೧-೧-೬೮ ರಂದು ಸಂಜೆ ಪರಿಷನ್ಮಂದಿರದಲ್ಲಿ ಶ್ರೀ ಮ. ರಾಮಮೂರ್ತಿಯವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ಪರಿಷದಧ್ಯಕ್ಷ ಪ್ರೊ|| ಜಿ. ವೆಂಕಟಸುಬ್ಬಯ್ಯ

ನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಅನೇಕ ಮಂದಿ ಪರಿಷತ್ಸದಸ್ಯರೂ ನಾಡು ನುಡಿಗಳ ಅಭಿಮಾನಿಗಳೂ ಪಾಲ್ಗೊಂಡಿದ್ದರು.

ಮೊದಲಲ್ಲಿ ಅಧ್ಯಕ್ಷ ಶ್ರೀ ವೆಂಕಟಸುಬ್ಬಯ್ಯನವರು ಶ್ರೀ ರಾಮಮೂರ್ತಿಯವರಿಗೆ ಪರಿಷತ್ತಿನಲ್ಲಿದ್ದ ಪ್ರೇಮ, ಪರಿಷತ್ತಿನ ಎಲ್ಲ ಕಾರ್ಯಗಳಲ್ಲಿಯೂ ಅವರು ನೀಡುತ್ತಿದ್ದ ಸಹಾಯ ಸಹಕಾರಗಳನ್ನು ಪ್ರಸ್ತಾಪಿಸಿ, ಅಂತಹ ಮಿತ್ರರು ಸಾಹಿತಿಗಳು, ಧೀರರು, ಕನ್ನಡ ಅಭಿಮಾನಿಗಳನ್ನು, ದುರಂತ ಮರಣದಿಂದ ಕಳೆದುಕೊಂಡಿರುವುದರ ಬಗ್ಗೆ ತಮ್ಮ ಮತ್ತು ಪರಿಷತ್ಸದಸ್ಯರ ಶೋಕವನ್ನು ಸೂಚಿಸಿದರು. ಶ್ರೀ ಎಚ್. ಎಂ. ರಂಗನಾಥ್ ಅವರು ದಿವಂಗತರನ್ನು ಕುರಿತು ಬರೆದ ಕವಿತೆಯನ್ನು ಶ್ರೀ ಆ. ಸತ್ಯಪಾಲರು ಓದಿದರು. ದಿವಂಗತರ ಸೋದರ ಶ್ರೀ ಎಂ. ಲಕ್ಷ್ಮೀನಾರಾಯಣ ಅವರು, ಶ್ರೀ ಅ. ನ. ಕೃಷ್ಣರಾಯರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ದಿವಂಗತ ರಾಮಮೂರ್ತಿಯವರ ಪ್ರತಿಭೆ, ಪತ್ರಕರ್ತರಾಗಿ, ಕಾದಂಬರಿಕಾರರಾಗಿ, ನಾಡು ನುಡಿಗೆ ಅವರು ಸೇವೆ ಸಲ್ಲಿಸಿದ ಸೇವೆ, ಬರಹಗಾರನಾಗಿ ಅವರು ಪಟ್ಟ ಬವಣೆ, ಅವರಿಗೆ ಚಳುವಳಿಯಲ್ಲಿದ್ದ ಪ್ರಿಯತೆ, ಮುಂತಾದ ಅವರ ಬಹುಮುಖ ಪ್ರತಿಭೆಯನ್ನು ಕುರಿತು ಗುಣಗಾನ ಮಾಡಿದರು. ಶ್ರೀ ರಾಮಮೂರ್ತಿಯವರ ದುರಂತ ಮರಣದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ದುರಂತಕ್ಕೀಡಾದವರ ಪಾರ್ಥಿವ ಶರೀರಗಳನ್ನು ಹೊರತೆಗೆಯುವುದರಲ್ಲಿ ಸಹಾಯಕರಾದವರಿಗೆ ಕೃತಜ್ಞತೆಯನ್ನರ್ಪಿಸುವ ನಿರ್ಣಯವನ್ನೂ ಸಭೆ ಗೌರವದಿಂದೆದ್ದುನಿಂತು, ಮೌನವಾಗಿ ಅಂಗೀಕರಿಸಿತು. ಆ ನಿರ್ಣಯಗಳನ್ನು ಈ ಕೆಳಗೆ ಕೊಟ್ಟಿದೆ. :

"ದಿನಾಂಕ ೨೫-೧೨-೬೦ರಂದು ಉಜ್ವಲ ಕನ್ನಡ ಭಾಷಾಭಿಮಾನಿಗಳೂ ವೀರ ಕನ್ನಡ ಹಿತೈಷಿಗಳೂ ಸುಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರೂ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿದ್ದು ಅದರ ಪುರೋಭಿವೃದ್ಧಿಯಲ್ಲಿ ತುಂಬಾ ಆಸಕ್ತರಾಗಿದ್ದವರೂ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳಲ್ಲಿಯೂ ವಿಶೇಷ ಶ್ರದ್ಧೆವಹಿಸಿ ಸಹಕರಿಸುತ್ತಾ ಪರಿಷತ್ತಿನ ಬೆಂಬಲಿಗರಾಗಿದ್ದವರೂ ಉತ್ತಮ ಸಾಹಿತಿಗಳೂ ವಾಗ್ಮಿಗಳೂ ಆಗಿದ್ದ ಶ್ರೀಮಾನ್ ಎಂ. ರಾಮಮೂರ್ತಿಯವರು ತಮ್ಮ ಇಬ್ಬರು ಗಂಡು ಮಕ್ಕಳೊಡನೆ ಭಾವಿಯ ಮಣ್ಣು ಕುಸಿದು ಆಕಸ್ಮಿಕ ಅಪಘಾತಕ್ಕೆ ಒಳಗಾಗಿ ನಿಧನರಾದ ಈ ದುಃಖ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸದಸ್ಯರ ಶೋಕವನ್ನು ವ್ಯಕ್ತಪಡಿಸಿ ದಿವಂಗತರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ದೇವರನ್ನು ಪ್ರಾರ್ಥಿಸುತ್ತದೆ."

"ಈ ಸಂದರ್ಭದಲ್ಲಿ ಭಾವಿಯ ಆಳದಲ್ಲಿ ಹೂತುಹೋಗಿದ್ದ ದಿವಂಗತ ಶ್ರೀ ಎಂ. ರಾಮಮೂರ್ತಿ ಮತ್ತು ಅವರ ಮಕ್ಕಳ ದೇಹಗಳನ್ನು ಬಾವಿಯಿಂದ ಹೊರ ತೆಗೆಯಲು ವಿಶ್ವಪ್ರಯತ್ನಗಳನ್ನು ಮಾಡಿದ ಪೋಲೀಸ್ ಡೆಪ್ಯುಟಿ ಕಮೀಷನರಾದ ಶ್ರೀ ವಿಜಯ ದೇವರಾಜ ಅರಸರು ಹೋಮ್‌ಗಾರ್ಡ್ಸ್ ಕಮ್ಯಾಂಡೆಂಟ್ ಜನರಲ್‌ರಾದ ಶ್ರೀ ಆರ್. ಎ. ಮುಂಡುಕೂರ್ ಅವರು, ಬೆಂಗಳೂರು ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್‌ರಾದ ಶ್ರೀ ಆರ್.ಎ. ಶ್ರೀಧರನ್ ಅವರು ಚನ್ನಪಟ್ಟಣದ ಡಿ. ಎಸ್. ಪಿ.ಗಳಾದ ಶ್ರೀ ಶ್ರೀನಿವಾಸಲು ಅವರು, ಕಾನಕಾನಹಳ್ಳಿ ಪೋಲೀಸ್ ಇನ್ಸ್‌ಪೆಕ್ಟರಾದ ಶ್ರೀ ಚನ್ನೇಗೌಡರು, ಸಬ್‌ಇನ್‌ಸ್ಪೆಕ್ಟರ್ ಶ್ರೀ ಶಿವರಾಮಯ್ಯನವರು, ಹೆಡ್ ಕಾನ್ಸ್‌ಟೇಬಲ್ ಶ್ರೀ ಖಾದರ್ ಅವರು, ಹೋಂಗಾರ್ಡ್ಸ್ ಚೀಫ್ ಇನ್‌ಸ್ಪೆಕ್ಟರಾದ ಶ್ರೀ ಎ. ಟಿ. ರಾಮಸ್ವಾಮಿ ಅವರು ಮತ್ತು ಅಗ್ನಿಶಾಮಕದಳ, ರಿಸರ್ವ್ ಪೋಲೀಸ್‌ದಳ, ಎಂ. ಇ. ಜಿ. ಸ್ಕ್ವಾಡ್-ಇವರುಗಳ ಸೇವೆಯನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ."

ಗಾಂಧೀ ಸಾಹಿತ್ಯ ಸಂಘದಲ್ಲಿ ೧೩ನೆಯ ಉಪನ್ಯಾಸಮಾಲೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆದ ಉಪನ್ಯಾಸ ಮಾಲೆ ೧೩-ಕವಿಕೃತಿ ಸ್ಮರಣೆಯ ಅಂಗವಾಗಿ ಡಾ|| ರಂ. ಶ್ರೀ ಮುಗಳಿ ಅವರು ದಿ|| 'ಮಧುರ ಚೆನ್ನ'ರ ಕೃತಿಗಳ ಬಗ್ಗೆ ದಿನಾಂಕ ೨೮-೧-೧೯೬೮ರಲ್ಲಿ ಉಪನ್ಯಾಸ ಮಾಡಿದರು.

ವಿದ್ಯಾವರ್ಧಕ ಸಂಘ : ಉಪನ್ಯಾಸ ಮಾಲೆ ೩೦

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವಿದ್ಯಾವರ್ಧಕ ಸಂಘದ ೩೦ನೆಯ ಉಪನ್ಯಾಸಮಾಲೆ ದಿನಾಂಕ ೧೪-೧-೧೯೬೮ರಂದು ನೆರವೇರಿತು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರು ವಹಿಸಿದ್ದರು. ಉಪನ್ಯಾಸಕರು : ಶ್ರೀಗಳಾದ ಪಿ. ಆರ್. ಮುಂಡೇವಾಡಿ, ಆರ್. ಜಿ. ಕುಲಕರ್ಣಿ, ಜಿ. ಎಸ್. ಯಕ್ಕುಂಡಿ.

ಸಂಪಾದಕೀಯ

ಹಿಂದೀ ವಿರೋಧ ಚಳುವಳಿ

ಬೆಂಗಳೂರು ಹಿಂದೆಂದೂ ನಡೆಸದ ರೀತಿಯಲ್ಲಿ ಭಾಷೆಯ ಪರವಾದ ಒಂದು ಪ್ರದರ್ಶನವನ್ನೇ ನಡೆಸಿಬಿಟ್ಟಿತು. ಅಪಾರವಾದ ಧನಹಾನಿ, ಪ್ರಾಣಹಾನಿಯುಂಟಾಗಿ ಜನರಿಗೆಲ್ಲ ಅತೀವ ವೇದನೆಯುಂಟಾಗಿದೆ. ನಿರಪರಾಧಿಗಳಾದ ಜನ ಸಾವುನೋವಿಗೆ ಈಡಾಗಿದ್ದಾರೆ. ಅಪರಾಧಿಗಳಾರೊ ತಿಳಿಯದೆ ಆಡಳಿತ ಹುಡುಕಾಡತೊಡಗಿದೆ.

ಈ ಪ್ರಸಂಗದಿಂದ ಕನ್ನಡನಾಡು ಪಾಠ ಕಲಿಯಬೇಕಾಗಿದೆ. ಕನ್ನಡದ ಜನದಷ್ಟು ಅಹಿಂಸಾವಾದಿಗಳೂ ಪರಮತ ಸಹಿಷ್ಣುಗಳೂ ವಿವಿಧ ಭಾಷಾ ಪ್ರೇಮಿಗಳೂ, ಅನ್ಯಾಭಿಪ್ರಾಯ ನಿರೂಪಣಾವಕಾಶ ನಿರ್ಮಾಪಕರೂ ಭಾರತದಲ್ಲಿಯೇ ಬೇರೆ ಯಾರೂ ಇಲ್ಲ. ಬೆಂಗಳೂರಿನಲ್ಲಿ ಎಲ್ಲ ಭಾಷೆಗಳ ಜನರೂ ಇದ್ದಾರೆ. ಎಷ್ಟೋ ವೇಳೆ ಕನ್ನಡದ ಸಂಕಷ್ಟಗಳನ್ನೇ ಬೆಳೆಸಿಕೊಂಡು ಇತರ ಭಾಷೆಗಳಿಗೆ ಇಲ್ಲಿಯ ಜನ ಅವಕಾಶ ಮಾಡಿಕೊಟ್ಟಿದ್ದಾರೆ. ಇಂಥ ಕಡೆಯಲ್ಲಿ ಕನ್ನಡ ಅಳುಕಿ ಬಳುಕಿ ಬಾಳಬೇಕಾಗಿದೆ.

ಮೊನ್ನೆ ತಾನೆ ವಿಶ್ವ ತಮಿಳು ಸಮ್ಮೇಳನವನ್ನು ವೈಭವದಿಂದ ಮೆರೆಸಿದ ತಮಿಳು ಸರಕಾರ ವಿಶ್ವದ ದೃಷ್ಟಿಯನ್ನೇ ಆಕರ್ಷಿಸಿದೆ. ಆಂಧ್ರದಲ್ಲಿ ಸಾಹಿತ್ಯದ ಬಗ್ಗೆ ಹೊಸ ಹುರುಪು ಉಂಟಾಗಿ ಹಿಂದಿದ್ದ ಪ್ರೋತ್ಸಾಹಕ್ಕೆ ನವಚೈತನ್ಯ ಮೂಡಿಬಂದಿದೆ. ಮಲೆಯಾಳದಲ್ಲಿ ಸಾಹಿತ್ಯ ಪ್ರಪಂಚದಲ್ಲಿ ಬಡತನವೆಂಬುದೇ ಇಲ್ಲ. ಈ ಎಲ್ಲ ಭಾಷೆಗಳ ನಡುವೆ ನಿಂತ ಕನ್ನಡಕ್ಕೆ ಬಡತನ ದೈನ್ಯ ಉಪವಾಸ ಸಲ್ಲೇಖನ ವ್ರತಗಳು ಉಡುಗೊರೆಯಾಗಿವೆ. ಒಂದು ಸಮ್ಮೇಳನಕ್ಕೆ ತಮಿಳರು ೧೫ ಲಕ್ಷ ರೂಪಾಯಿಗಳನ್ನು ವ್ಯಯ ಮಾಡುತ್ತಾರೆ. ಒಂದು ಪುಸ್ತಕ ಒಂದು ಲಕ್ಷ ಪ್ರತಿಗಳು ಮಾರಾಟವಾಗುತ್ತವೆ. ಒಂದು ಸ್ಪರ್ಧೆಯಲ್ಲಿ ಗೆದ್ದ ಕಾದಂಬರಿಗೆ ಹತ್ತುಸಾವಿರ ರೂಪಾಯಿಗಳನ್ನು ಸಣ್ಣ ಕತೆಗೆ ಎರಡು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡುತ್ತಾರೆ. ನಮ್ಮಲ್ಲಿ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಕಳುಹಿಸಿ ಆರಂಭದಿಂದಲೇ ಕನ್ನಡದ ಅವಹೇಳನವನ್ನು ಕಲಿಸಿಕೊಡುತ್ತೇವೆ. ತಮಿಳುನಾಡಿನಲ್ಲಿ ಎಲ್ಲ ಶಾಲೆಗಳೂ ಕಾನ್‌ವೆಂಟ್ ಶಾಲೆಗಳೂ ತಮಿಳನ್ನೇ ಕಲಿಸಬೇಕೆಂದು ಕಡ್ಡಾಯವಾದ ಕಾನೂನು ಮಾಡುತ್ತಾರೆ. ನಮ್ಮಲ್ಲಿ ಅವರವರ ಒಳ್ಳೆಯತನಕ್ಕೆ ಅವಕಾಶ ಮಾಡುತ್ತೇವೆ. ಹೀಗಾಗಿ ಕನ್ನಡ ನಾಡಿನ ಚೈತನ್ಯ ಕೇಂದ್ರವಾದ ಬೆಂಗಳೂರಿನಲ್ಲಿ ಕನ್ನಡ ಸಾಯುತ್ತಿದೆ; ಇತರ ಭಾಷೆಗಳು ಬೆಳೆಯುತ್ತಿವೆ. ಜನ ಸಂತೋಷದಿಂದ ತಮ್ಮ ಔದಾರ್ಯವನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ನಾಡಿನ ಸತ್ವವೃಕ್ಷಕ್ಕೆ ಕೊಡಲಿಯಿಡುತ್ತಿದ್ದೇವೆಂಬ ಅರಿವೇ ನಮಗೆ ಇಲ್ಲವಾಗಿ ಹೋಗುತ್ತಿದೆ.

ಚಿಂತಿಸಿದರೆ ತಿಳಿಯುತ್ತದೆ; ಔದಾರ್ಯ ಆತ್ಮನಾಶಕ್ಕೆ ಹಾದಿಯಾಗಬಾರದು. ಮನೆಗೆ ಮಾರಿಯಾಗಿ ಹೆರರಿಗುಪಕಾರಿಯಾಗಬಾರದೆಂದು ನಾಡಿನ ಗಾದೆ ನುಡಿಯುತ್ತಿದೆ.

ಈಗಲಾದರೂ ಕನ್ನಡ ನಾಡಿನಲ್ಲಿ ಕನ್ನಡದ ಸ್ಥಾನವೇನು ಎಂಬುದನ್ನು ನಿರ್ಧಾರಮಾಡಬೇಕಾದ ಅಗತ್ಯ ಒದಗಿದೆ. ಸರಕಾರವೂ ಸಾಹಿತಿಗಳೂ, ಶಿಕ್ಷಣತಜ್ಞರೂ ಒಟ್ಟು ಸೇರಿ ಕನ್ನಡದ ಸ್ಥಾನವನ್ನೇ ಭದ್ರಪಡಿಸಿ ಇತರ ಭಾಷೆಗಳಿಗೆ ಯಾವ ಯಾವ ಸ್ಥಾನವೆಂಬುದನ್ನು ನಿರ್ಧಾರಪಡಿಸಬೇಕು. ಕನ್ನಡ ಜನರಿಗೆ ಕನ್ನಡವೇ ಸತ್ಯ. ಇಲ್ಲಿರುವ ಇತರ ಭಾಷಾಭ್ಯಾಸಿಗಳಿಗೂ ಕನ್ನಡವೇ ಮೊದಲು – ಎಂಬುದೂ ಸತ್ಯ. ಈ ದೃಢ ನಿರ್ಧಾರಕ್ಕೆ ಕಾನೂನಿನ ಚೈತನ್ಯವನ್ನು ಒದಗಿಸುವ ಆತ್ಮಗೌರವ, ಆತ್ಮಪ್ರತ್ಯಯಗಳು ಬೇಗ ಬೆಳಕಿಗೆ ಬರಲೆಂದು ' ನುಡಿ ' ಹಾರೈಸುತ್ತದೆ.

'ಶ್ರೀನಿವಾಸ' ಸಾಹಿತ್ಯ

ಮೈಸೂರಿನ ನಾಗರಿಕರು ಕನ್ನಡದ ಹಿರಿಯ ಲೇಖಕರಾದ 'ಶ್ರೀನಿವಾಸ'ರನ್ನು ಆಹ್ವಾನಿಸಿ, ಸನ್ಮಾನಮಾಡಿ ಒಂದು ಅತ್ಯುತ್ತಮವಾದ ಸಂಪ್ರದಾಯವನ್ನು ಹಾಕಿದ್ದಾರೆ. ಅರ್ಧ ಶತಮಾನ ನಾಡಿನ ಸಾಹಿತ್ಯ ಪ್ರಪಂಚದಲ್ಲಿ ಸತತವಾಗಿ ಕೃಷಿಮಾಡಿ ವಿವಿಧ ಪ್ರಕಾರಗಳಲ್ಲಿ ಬಹು ಬೆಲೆ ಬಾಳುವ, ಪ್ರಭಾವ ಬೀರುವ, ಅನುಸರಣೀಯವಾದ ಕೃತಿಗಳನ್ನು ರಚಿಸಿ ನಾಡಿನ ಕಣ್ಮಣಿಯಾಗಿ 'ಶ್ರೀನಿವಾಸ'ರು ಬೆಳಗುತ್ತಿದ್ದಾರೆ. ಅವರ ಸಾಹಿತ್ಯ ಕೃತಿಗಳಲ್ಲಿ ಯಾವುದನ್ನು ಆರಿಸಿದರೂ ಅವರ ವಿಶಿಷ್ಟ ಗುಣಗಳಾದ ಸರಳತೆ ಮತ್ತು ಸ್ಪಷ್ಟತೆಗಳೂ, ವೈಶಾಲ್ಯ ಮತ್ತು ವಿಶ್ವಸಾಮಾನ್ಯವಾದ ಸಹಾನುಭೂತಿಗಳೂ, ಮನಸ್ಸನ್ನು ಸೆರೆಹಿಡಿಯುವ ಮಾನವೀಯತೆಯೂ ಕಂಡುಬರುತ್ತವೆ. ವೈಚಿತ್ರ್ಯವಿಲ್ಲದ ಆಕರ್ಷಣೆ, ಆಡಂಬರವಿಲ್ಲದ ಸೌಂದರ್ಯ, ವಿನಯದಿಂದ ಕೂಡಿದ ಪ್ರೌಢಿಮೆ, ಆಶಾವಾದದಿಂದ ಬೆಳಗುವ ಪ್ರಯತ್ನ ಇವುಗಳು ಅವರ ಕೃತಿಗಳ ಮುಖ್ಯ ಗುಣಗಳು.

ಸಣ್ಣಕತೆಗಳ 'ಶ್ರೀನಿವಾಸ'ರೆಂದು ಪ್ರಸಿದ್ಧರಾದರೂ, ಕವನರಚನೆಯಲ್ಲಿ ಕಾದಂಬರಿ ನಿರ್ಮಾಣದಲ್ಲಿ ನಾಟಕ ಸೃಷ್ಟಿಯಲ್ಲಿ, ವಿಮರ್ಶೆಯ ತೂಕದಲ್ಲಿ ಅನುವಾದದ ವೈವಿಧ್ಯದಲ್ಲಿ ವಿಶ್ವದ ಘಟನೆಗಳ ಪರಿಚಯಾತ್ಮಕ ಲೇಖನದಲ್ಲಿ ಅವರು ಅಪಾರ ಕಾರ್ಯವನ್ನೇ ಮಾಡಿದ್ದಾರೆ. ನಾಡಿನ ಕಿರಿಯರಿಗೆ ಮಾರ್ಗದರ್ಶಕರಾಗಿದ್ದಾರೆ; ಇಂದೂ ಚೈತನ್ಯದ ಮೂರ್ತಿಗಳಾಗಿದ್ದಾರೆ.

ಇಂಥ ವ್ಯಕ್ತಿಯನ್ನು ಮೈಸೂರು ನಗರ ಸನ್ಮಾನಿಸಿರುವುದು ನಾಡಿಗೆಲ್ಲ ಸಂತೋಷವನ್ನುಂಟು ಮಾಡಿದೆ. ಈ ಸಂದರ್ಭದಲ್ಲಿ ವಿದ್ವಾಂಸರು ಮಾಡಿದ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಪ್ರಕಟ ಮಾಡುತ್ತಿರುವುದು ಸ್ತುತ್ಯವಾದ ಕೆಲಸ. ನಾಡಿನ ಇತರ ನಗರಗಳು ಹೀಗೆ ಒಬ್ಬೊಬ್ಬ ಹಿರಿಯ ಲೇಖಕನನ್ನು ಸನ್ಮಾನಿಸಿ ಆ ಲೇಖಕನ ಬರಹಗಳನ್ನು ಕುರಿತು ವಿದ್ವಾಂಸರ ಲೇಖನಗಳನ್ನು ಪ್ರಕಟಿಸಿದರೆ ಅಂಥ ಗ್ರಂಥವೆಲ್ಲ ಒಟ್ಟು ಸೇರಿ ಆಧುನಿಕ ಕನ್ನಡದ ಬೆಳೆಯ ಸ್ಪಷ್ಟನಿರೂಪಣೆಯಾಗುತ್ತದೆ. ಮುಂದಿನ ಪೀಳಿಗೆಗೆ ಅಭ್ಯಾಸಕ್ಕೂ ಮಾರ್ಗದರ್ಶನಕ್ಕೂ ಅದರಿಂದ ಸಹಾಯ ಒದಗುತ್ತದೆ.

ಈ ಸನ್ಮಾನಕ್ಕೆ ಶ್ರಮಿಸಿ ಸತ್ಕಾರವನ್ನು ಮಾಡಿರುವ ಎಲ್ಲ ಕಾರ್ಯಕರ್ತರನ್ನೂ ಪರಿಷತ್ತು ಅಭಿನಂದಿಸುತ್ತದೆ.

ಕಾರಂತ ಹಾಗೂ ಬೇಂದ್ರೆ ಅವರಿಗೆ ರಾಷ್ಟ್ರಪ್ರಶಸ್ತಿ

ಈ ಬಾರಿಯ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳೂ, ಕಲಾವಿದರೂ ಆದ ಶ್ರೀ ಕೋಟಾ ಶಿವರಾಮ ಕಾರಂತ ಅವರಿಗೆ **ಪದ್ಮಭೂಷಣ** ಪ್ರಶಸ್ತಿಯೂ, ನಾಡಿನ ವರಕವಿಗಳಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರಿಗೆ **ಪದ್ಮಶ್ರೀ** ಪ್ರಶಸ್ತಿಯೂ ದೊರೆತಿರುವುದು ನಾಡಿನ ಕನ್ನಡಿಗರೆಲ್ಲರಿಗೂ ಸಂತೋಷವನ್ನು ಉಂಟುಮಾಡಿದೆ.

ವಿಜಯಶ್ರೀ; ಲೇ: ಮಹದೇವಯ್ಯ, ಟಿ. ಎನ್. ಪ್ರ: ಬಿ. ವೀರಭದ್ರಯ್ಯ, 'ವಸಂತವಿಹಾರ' ಮಸಗೋಡು ಎಸ್ಟೇಟ್, ಸೋಮವಾರ ಪೇಟೆ, ಕೊಡಗು, ಪುಟ: ೨+೧೫೨; ಆಕಾರ: ಕೌನ್ ಅಷ್ಟದಳ, ಬೆಲೆ: ೨-೦೦, ೧೯೬೭.

ಕಣ್ಣು ತೆರೆಯಿತು; ಲೇ: ಸದಾನಂದ ಸುವರ್ಣ; ಪ್ರ: ರಂಗರಶ್ಮಿ ಪ್ರಕಾಶನ, ಮುಂಬಯಿ, ಪುಟ: ೫೨; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೨೫, ೧೯೬೭.

ಅಚ್ಚಾದ ಮಗ; ಲೇ: "ಮೌನಿ" ಪ್ರ: ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ, ಪುಟ: ೧೫+೪; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೩೦, ೧೯೬೭.

ಶಿಕ್ಷಣ

ನಮ್ಮ ಪಠ್ಯಪುಸ್ತಕಗಳು; ಸಂ: ವೆಂಕಟೇಶ ಕುಲಕರ್ಣಿ; ಪ್ರ: ವೆಂಕಟೇಶ ಕುಲಕರ್ಣಿ, ಕಾಮನಕಟ್ಟಿ; ಧಾರವಾಡ-೧; ಪುಟ: ೪+೫೦; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೫೦, ೧೯೬೭.

ಬಾಲ ಸಾಹಿತ್ಯ

ಕನ್ನಡ ನಾಡಿನ ಕಲಿ; ಲೇ: ಜವರೇಗೌಡ, ದೇ; ಪ್ರ: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ೧೬೪, ೧ನೇ ಮೈನ್‌ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮; ಪುಟ: ೨೮; ಬೆಲೆ: ರೂ. ೧-೦೦, ೧೯೬೭.

ಮಾತನಾಡಿದ ಗಿಳಿ; ಲೇ: ಪರಮೇಶ್ವರ; ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ೧೬೪, ೧ನೇ ಮೈನ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮; ಪುಟ: ೨೭; ಬೆಲೆ: ರೂ. ೧-೦೦, ೧೯೬೭.

ವೈದ್ಯಶಾಸ್ತ್ರ

ಕೆಲವು ವೈದ್ಯಕೀಯ ಮತ್ತು ಮನೋವೈಜ್ಞಾನಿಕ ನಿಬಂಧನೆಗಳು; ಲೇ: ಡಾ|| ರಮಾಕಾಂತ ಅಗ್ನಿಹೋತ್ರಿ; ಪ್ರ: ಪ್ರಕಾಶ ಪ್ರೆಸ್, ಮಡಕೇರಿ; ಪುಟ: ೫೨, ಬೆಲೆ: ರೂ. ೧-೭೫, ೧೯೬೫.

ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಆಧುನಿಕ ಭೌತಶಾಸ್ತ್ರದ ಪಿತಾಮಹ ಸರ್ ಐಸಾಕ್ ನ್ಯೂಟನ್; ಲೇ: ಆರ್. ವಿ. ಅಬ್ಬಿಗೇರಿ; ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೭+೫೫; ಬೆಲೆ: ರೂ. ೦-೨೫, ೧೯೬೭.

ಪ್ರಜಾಪ್ರಭುತ್ವದ ಮೂಲತತ್ವಗಳು; ಲೇ: ಬಕ್ಕಪ್ಪ, ಕೆ.ವಿ. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೮+೬೨; ಬೆಲೆ: ರೂ. ೦-೨೫, ೧೯೬೭.

ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ; ಲೇ: ಡಾ|| ದಾನೇಶ್, ಎ. ಚಿಕ್ಕೆ; ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೮+೬೫+೧೮; ಬೆಲೆ: ರೂ. ೦-೨೫, ೧೯೬೭.

ಹರಿಜನ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ; ಲೇ: ಕಡೇತೋಟದ, ಎನ್. ಕೆ; ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೮+೩೮; ಬೆಲೆ: ರೂ. ೦-೨೫, ೧೯೬೭.

ಗ್ರಾಮಾಭ್ಯುದಯದ ಯೋಜನಾಂಗಗಳು; ಲೇ: ಡಾ|| ಮೇಟಿ, ಟಿ. ಕೆ; ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೮+೫೮; ಬೆಲೆ: ರೂ. ೦-೨೫, ೧೯೬೭.

ಸರ್ವಜ್ಞ ಕವಿ (ಜೀವನ ಹಾಗೂ ಕಾವ್ಯ); ಲೇ: ವಿವಿಧ ಬರಹಗಾರರು; ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೧೧೦; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ರಸಾಯನಿಕ ಕಿಣ್ವಗಳು; ಲೇ: ರಾವ್, ಎಂ.ಎಸ್.ಎಸ್. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೭+೬೭; ಬೆಲೆ: ರೂ. ೦-೨೫, ೧೯೬೭.

ಹೃದಯಘಾತ; ಲೇ: ಡಾ|| ಶಂಕರ್, ಪಿ. ಎಸ್. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ: ೬+೭೬; ಬೆಲೆ: ರೂ. ೦-೨೫, ೧೯೬೭.

ಕುವೆಂಪು ಸೃಜಿಸಿದ ಮೂರು ಪಾತ್ರಗಳು; ಲೇ: ಬಿರಾದಾರ, ಡಾ|| ಎಂ. ಜಿ. ಪ್ರ: ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ, ಪುಟ: ೭+೭೩; ಬೆಲೆ: ರೂ. ೦-೨೫, ೧೯೬೭.

Reg. No. B. G. 4— February 1968

Lincensed to Post without
pre-payment, Licence No 1

ಬಿ. ಎಂ. ಶ್ರೀಕಂಠಯ್ಯ, ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಶ್ರೀನಿವಾಸರಾವ್ ಕೊರಟಿ

ಆರ್. ಶಿವಪ್ಪ

ಕನ್ನಡ ನುಡಿ

ಮಾರ್ಚಿ ೧೯೭೮

ಸಂಪುಟ ೪೧

ಸಂಚಿಕೆ

ಕನ್ನಡ ಸಾಹಿತ್ಯ ಪರಿಷತ್ತು

ಸ್ವೀಕಾರ

ಕಾದಂಬರಿ

ಕಾರಣಪುರುಷ; ಲೇ: ಮುಗಳಿ, ರಂ. ಶ್ರೀ ಪ್ರ: ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಪುಟ: ೧೯೬; ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೪-೦೦, ೧೯೬೭.

ಕಾಡಿನ ಮಕ್ಕಳು; ಮೂಲಲೇಖಕರು, ಜಯಸಿಂಗ್; ಹಿಂದಿ-ಕನ್ನಡ ಅನುವಾದಕರು: ಹರಿಜಿತ್, ಜಿ. ಜೆ; ಪ್ರ: ಹೇಮಂತ ಸಾಹಿತ್ಯ, ಭಾಷ್ಯಂ ರಸ್ತೆ, ಬೆಂಗಳೂರು-೨; ಪುಟ: ೧೯೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಹಾಲು-ಜೇನು; ಲೇ: ಜಯತೀರ್ಥ ರಾಜಪುರೋಹಿತ; ಪ್ರ: ವ್ಯವಸ್ಥಾಪಕರು, ಕನ್ನಡ ಬುಕ್ ಡಿಪೋ, ನೇತಾಜಿ ರೋಡು, ರಾಯಚೂರು; ಪುಟ: ೧೧+೧೮೨, ಆಕಾರ: ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಕಲಾದರ್ಶಿ: ಲೇ: ಇಂದಿರಾ, ಎಂ. ಕೆ. ಪ್ರ: ಗೀತಾ ಏಜನ್ಸೀಸ್, ಬಳೇಪೇಟೆ ಚೌಕ, ಬೆಂಗಳೂರು-೨; ಪುಟ: ೨೫೯, ಬೆಲೆ: ರೂ. ೩-೫೦, ೧೯೬೭.

ಸಣ್ಣ ಕತೆ

ತೂಗುಮಣೆ: ಲೇ: ನಾಗೇಂದ್ರರಾವ್, ಎಂ. ಎಸ್. ಪ್ರ: ನಲಂದ ಸಾಹಿತ್ಯ ಪ್ರಕಾಶನ, ಟಾಟಾ ಸಿಲ್ಕ್ ಫಾರಂ, ೩ನೇ ಬ್ಲಾಕ್, ಬಸವನಗುಡಿ, ಬೆಂಗಳೂರು-೪; ಪುಟ; ೭೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ಪೌರಪ್ಪನ ಪಂಚಾಯಿತಿ; ಲೇ: ಜಯತೀರ್ಥ ರಾಜ ಪುರೋಹಿತ; ಪ್ರ: ವ್ಯವಸ್ಥಾಪಕರು, ಕನ್ನಡ ಬುಕ್ ಡಿಪೋ, ನೇತಾಜಿ ರೋಡು, ರಾಯಚೂರು; ಪುಟ: ೮+ ೧೨೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೨೫, ೧೯೬೭.

ನಾಟಕ

ಕಂಕಣಬಲ; ಲೇ: ಪಾಂಡುರಂಗರಾವ್, ಡಿ. ಪ್ರ: ಹರಿಹರೇಶ್ವರ ಬುಕ್ ಡಿಪೋ, ಹರಿಹರ ಪ್ರಕಾಶನ, ಹರಿಹರ; ಪುಟ: ೩೭, ಆಕಾರ: ಕ್ರೌನ್ ಅಷ್ಟದಳ; ಬೆಲೆ: ರೂ. ೦-೭೫, ೧೯೬೭.

ಗದಾಯುದ್ಧ; ಲೇ: ಹರಿಜಿತ್, ಜಿ. ಜೆ. ಪ್ರ: ಭುವನ ಭಾರತಿ ಪ್ರಕಾಶನ, ಬೆಂಗಳೂರು; ಪುಟ: ೩೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ಅನವಾರ ಮಠದ ಮಹಾತ್ಮಾ ಶ್ರೀ ಚರಬಸವತಾತನವರ ಪೌರಾಣಿಕ ನಾಟಕ: ಲೇ: ನಾಗಪ್ಪ ಶಾಂತವೀರಪ್ಪ ಶೆಟ್ಟರ, ಪ್ರ: ಯದುಗಿರಿ ಶ್ರೀ ಜಿ. ಎಂ. ಗುರುಬಸವಶಾಸ್ತ್ರಿಗಳು, ಶಹಾಪುರ, ಗುಲಬರ್ಗ ಜಿಲ್ಲಾ; ಪುಟ: ೧೦೧, ಬೆಲೆ: ರೂ. ೨-೦೦, ೧೯೬೮.

ಕವನ

ಕಾಲ-ಕವಿ; ಸಂಪಾ: ಹುಬ್ಬಳ್ಳಿ; ಎಸ್. ಜಿ. ಉಮಾಪತಿಶಾಸ್ತ್ರಿ ಮತ್ತು ಕಾ. ಫ. ಸೆ. ಜಿ. ಎಸ್., ಪ್ರ: ಬಸವೇಶ್ವರ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳ ಕರ್ನಾಟಕ ಸಾಹಿತ್ಯ ಸಂಘ, ಬಾಗಿಲುಕೋಟೆ; ಪುಟ: ೩+೩೯, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೭೫, ೧೯೬೭.

ಬೆಳೆದು ಬೆಳಗಲಿ; ಲೇ: ವಾಣೀಸುತ; ಪ್ರ: ರಂ. ಗು. ವಾಸಿಷ್ಠ, ೨೩೧, ೬ನೇ ಅಡ್ಡರಸ್ತೆ, ಈಜುವಕೊಳದ ಬಡಾವಣೆ, ಬೆಂಗಳೂರು-೩; ಪುಟ: ೧೧+೪೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

- ನೂರೊಂದು ಕವನ; ಲೇ: ರವೀಂದ್ರನಾಥ ಠಾಕೂರ್ ಪ್ರ: ಸಾಹಿತ್ಯ ಅಕಾಡೆಮಿ, ನವದೆಹಲಿ; ಪುಟ: ೮+೩೧೧, ಬೆಲೆ: ರೂ. ೮-೦೦, ೧೯೬೭.

ಗುಲಾಬಿ; ಲೇ: ಚನ್ನಬಸವಣ್ಣ, ಪಿ.; ಪ್ರ: ಜಿ ಪಿ. ಭಂಡಾರೆ, ಶ್ರೀ ಹರಿಹರೇಶ್ವರ ಬುಕ್ ಡಿಪೊ ಮೈನ್ ರಸ್ತೆ,

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಮಾರ್ಚ್ ೧೯೬೮

ಸಂಪುಟ : ೩೧

ಸಂಚಿಕೆ : ೩

ಈ ಸಂಚಿಕೆಯಲ್ಲಿ . . .

ಕುಂಕುಮಭೂಮಿ

ಕೆ. ಎಸ್. ನರಸಿಂಹಸ್ವಾಮಿ

ಅಲೆದಾಗ ನಕ್ಕದ್ದು ನುಣುಪು ಕುಂಕುಮ ಭೂಮಿ ;
ಗುದ್ದಲಿಯ ಕೆಲಸ ಅಲ್ಲಿಗೆ ನಿಂತಿದೆ.
ಪಂಚಾಂಗದಂತೆ ಮಳೆಯೂ ಬಿತ್ತು ಹತ್ತು ಹನಿ ;
ಬೆವರಿಳಿದು ಬೊಗಸೆ ಹಾಗೂ ತುಂಬಿದೆ.

ಸರದಿ ಬದಲಾಯಿಸುವ ಕುದುರೆಯಾಳಿನ ನೆರಳು,
ಮುರಿದ ಅರಮನೆಯಲ್ಲಿ ರಾಜಠೀವಿ,
ದೇಗುಲದ ಗೋಪುರದ ತನಕ ಹಬ್ಬಿದ ಮರಳು,
ಹೊತ ಕಣ್ಣಿನ ಮುಂದೆ ಸೊನ್ನೆ-ಬೀದಿ.

ಚೆಲ್ಲಿದಷ್ಟೂ ಕಾಳು ಪಯಿರಾಗಲಿಲ್ಲೆನುವ
ಚಿಂತೆ ಚಪ್ಪರದೊಳಗೆ ಚಿನ್ನದ ಕಿಡಿ.
ಬಿತ್ತ ಚೆಲ್ಲಿದೆ ಬೆಳೆದ ಹಳೆಯ ಮಾತಿನ ಭೂತ ;
ಯಾರ ಅಬ್ಬರವಿಲ್ಲಿ ನಿಲ್ಲುವ ನುಡಿ !

ಕೈಗೆ ಸಿಕ್ಕಿದ್ದನ್ನೆ ಒರಗಿ ನಿಟ್ಟುಸಿರೆಳೆದು
ಹಳದಿಯಾಗಿದ್ದಾಳೆ ನಾಳೆ-ಬಸಿರಿ.
ಒಂದಿರುಳ ಹಿಗ್ಗು ಏಳೆಂಟು ತಿಂಗಳ ನೋವು ;
ಒಡಲ ತುಂಬುವ ಸಮಯ ಕಿರಣಲಹರಿ.

ಹೆಣ್ಣೊ, ಗಂಡೋ ? – ಹೆತ್ತಮೇಲೆ ಹೆಸರಿಡಬಹುದು ;
ಹುಟ್ಟಬಾರದು ಹೇಳಿಕೊಟ್ಟ ಮಾತು,
ಧೃತಿಗೆಟ್ಟ ಮಾತು, ಬೆಳೆಯಲಿ ತನ್ನತನದ ಮಗು,
ಕಣ್ಣು ಮಿಂಚಲಿ ತಾಯಹಾಲ ಕುಡಿದು.

ಇಲ್ಲಿದ್ದರಂತೆ ಕಲ್ಲಲ್ಲಿ ರುಜುವಿಟ್ಟವರು,
ಕಾಡುಕೋಣನ ಬೇಟೆಯಾಡಿದವರು.
ಬೆಳೆದುಗುರಿನಿಂದ ಹಾವಿನ ಹುತ್ತ ಬಗಿದವರು,
ಎತ್ತರದ ಹದ್ದುಗಳ ಕೆಡಹಿದವರು,

ಮುಚ್ಚುಮರೆಯಿರದೆ ಬಾಳಿದ ಪೂರ್ಣಜೀವಿಗಳು,
ಕೆಚ್ಚೆದೆಯ ತೇಜಸ್ವಿ ಕಲೆಗಾರರು,
ಬಿದ್ದಮಳೆ ಬೀಸುಗಾಳಿಗೆ ಮೈಯ ತೆರೆದವರು,
ಉಪಶಾಂತರಾದಿವಂದ್ಯರು, ಸಹಜರು.

ಎಲ್ಲ ಶಿಖರಗಳಲ್ಲಿ ಬಾವುಟವ ನಟ್ಟವರು,
ಮೊದಲ ಬೆಳಗಿನ ಧ್ವನಿಯನೆತ್ತಿದವರು,
ಕೆಂಡಚೆಲ್ಲಿದ ಸಂಜೆಯಲ್ಲಿ ಮನೆಬಿಟ್ಟವರು,
ಎಷ್ಟು ಬೆಳಗಾದರೂ ಬಾರದವರು.

ಹುಟ್ಟಿದ್ದು ಗಟ್ಟಿಯಾಗಲಿ ಬೆಳೆದು ಅವರಂತೆ;
ತುಂಬುರಕ್ತದ ಹಾಡು ಕೇಳಿಬರಲಿ.
ನೆಲದೊಡಲ ಕೆಂಪು, ನೀರೊಡಲ ಹಾವಿನ ಹೊಲಿಗೆ,
ಬಾನ ತಳಮಳ ಹೆತ್ತ ನೋವ ಸ್ಮರಿಸಿ,

ಹಸಿರೆಲೆಗಳಲ್ಲಿ ಮಾಸದ ಕಣ್ಣು ಥಳಥಳಿಸಿ
ತಪ್ಪು ಹೆಜ್ಜೆಗಳನ್ನು ಸರಿಪಡಿಸಲಿ!
ನೆಲದಾಳದಲ್ಲಿ ಬೇರಿಳಿದ ಮರಗಳು ಬದುಕಿ
ಎಲ್ಲ ಕಾಲಗಳಲ್ಲಿ ಹೂವ ತೊಡಲಿ!

ಕಲಾದೇವಿ

•

ಓ ಕಲಾದೇವಿಯೇ! ನಿನ್ನ ಸಾಮ್ರಾಜ್ಯದಲಿ
ನೋವು – ಬೇವುಗಳಿಲ್ಲ; ದುಕ್ಕ – ದುಗುಡಗಳಿಲ್ಲ.
ಎಲ್ಲಿ ನೋಡಿದರಲ್ಲಿ ನಲ್ನಲವಿನುಲಿಯಲ್ಲಿ
ಮಾನಸವು ಹಿರಿಹಿಗ್ಗಿ ಸಂತಸದ ಸಿರಿಸುಗ್ಗಿ.

'ಲೋಕವಿದು ಶೋಕದಾಯತನವಿದೆ'ಯೆಂಬವರು
ನಿನ್ನ ಮಧುಮಯ ಮಧುರ ಮಾಯಾ ವಿಲಾಸದಲಿ
ಸಿಲುಕಿದರೆ ಐಂದ್ರಜಾಲಿನಿಯ ಕುಂಚಿಕೆಯಿಂದ
ಮೋಹನವನಾಂತಂತೆ ಪಡುವರಮಿತಾನಂದ

ವಿಶ್ವದ ಮಹಾಶಕ್ತಿ ಮಾನವರಿಗೊಲಿದಿತ್ತ
ಸ್ವರ್ಗೀಯ ವರದಾನದಂತಿರುವೆ. ಸಂತ್ರಸ್ತ
ಜನಮನವ ವೀಕ್ಷಣಾಮೃತದಿಂದ ಸೇಚಿಸುವೆ.
ಚೈತನ್ಯ ರಸಧಾರೆಯಿಂದೊಸೆದು ತಂಪಿಸುವೆ.

ಶಿಲೆಗಳಿಗೆ ನಯವಾಗಿ ರೂಪಿತ್ತ ಕೈವಾಡ,
ವರ್ಣವಿನ್ಯಾಸದಲಿ ರೂಪರೇಖೆಯ ಚಿತ್ರ,
ಸಂಗೀತ ಸರಸತೆಯ ಸ್ವರ್ಗೀಯ ಮಾಧುರ್ಯ,
ಸಾಹಿತ್ಯ ಸೌಂದರ್ಯ ಸುವಿಲಾಸ ಚಾತುರ್ಯ,

ನಾಟ್ಯ ನೃತ್ಯಗಳಲ್ಲಿ ಅಭಿನಯದ ನಾವೀನ್ಯ,
ಮಂದಿರೋದ್ಯಾನಗಳ ವಿರಚನೆಯ ನೈಪುಣ್ಯ
ಇವು ನೀನು ವಾಸಕೆಂದಳವಡಿಸಿಕೊಂಡಿರುವ
ಸ್ವರ್ಣ ಸ್ವಪ್ನದ ಸತ್ಯ ಸಂಕೇತ ನಿಲಯಗಳು.

•

ಅನ್ಮೆಂಬಳ ಶಂಕರನಾರಾಯಣ ನಾವಡ

ಸಿದ್ಧಹಸ್ತ ಸಿದ್ದವನಹಳ್ಳಿ ಕೃಷ್ಣಶರ್ಮ

ಒಂದು ಪರಿಚಯಾತ್ಮಕ ರೂಪಕ

•• ನೀಲತ್ತಹಳ್ಳಿ ಕಸ್ತೂರಿ

"ಗಾಂಧೀಜಿ ಎಂದರೆ ಒಬ್ಬ ವ್ಯಕ್ತಿಯಲ್ಲ. ಅದು ಒಂದು ಪಂಥ. ಶಿಲ್ಪದಲ್ಲಿ ಜಕಣಾಚಾರಿ ಇದ್ದ ಹಾಗೆ."

"ಸರೋಜಿನಿದೇವಿ ಭಾರತ ಕಾವ್ಯಾಂಬರದ ಬೆಳುದಿಂಗಳು. ಹಿಂದುಸ್ಥಾನದ ಕವಿಚೂತವನ ಕೋಗಿಲೆ. ಆಕೆಯ ವಾಣಿ ವೇಣುಗಾನ, ಭಾಷಣ ರಸಗಂಗೆ, ಆಕೆಯ ಜೀವನ ನಿರಂತರ ಸೌಂದರ್ಯೋಪಾಸನೆ . . ."

"ನೋಡುವುದಕ್ಕೆ ವಿನೋಬಾ ಆಕರ್ಷಕ ವ್ಯಕ್ತಿಯಲ್ಲ ಮೈಮೇಲೆ ಬಟ್ಟೆ ಬಹಳವಿಲ್ಲ. ಉಡುವುದು ಒಂದು ಖಾದೀ ತುಂಡು ಪಂಚೆ. ಮೇಲೊಂದು ಉತ್ತರೀಯ, ಚಳಿಗಾಲದಲ್ಲಿ ಒಂದು ಕಂಬಳಿ, ಮೈಕಟ್ಟು ತೀರ ಒಣಕಲು. ಮೊದಲೇ ಸೀರ ಸಿಪ್ಪಾಡಿ, ಮೇಲೆ ತಪೋಜೀವನದ ನಿಷ್ಠುರ ಸಂಯಮ, ಬಣ್ಣ ಸ್ವಲ್ಪ ನೀಲ. ಆದರೆ ಕಣ್ಣು ಮಾತ್ರ ನಂದಾದೀಪದಂತೆ ನಿಚ್ಚಳವಾಗಿ ಸ್ಥಿರವಾಗಿ ಹೊಳೆಯುತ್ತವೆ. ಒಳಗೆ ತುಂಬಿಹೋದ ಶಾಂತಿಯ ಬೆಳಕು ಕಣ್ಣಲ್ಲಿ ಕೋಡಿ ಹರಿಯುತ್ತ ಎಳೆತನದಲ್ಲಿದ್ದ ಬೈರಾಗಿ ಭಾವಪರವಶತೆಯ ಕಳೆ. ಸಾಧನೆ ಅಭ್ಯಾಸಗಳಿಂದ ಸ್ವಚ್ಛವಾಗಿ ಶುದ್ಧವಾಗಿ, ಜಗಜ್ಜೇತೃ ಜ್ಞಾನಯೋಗಿಯ ಪ್ರಭೆಯಾಗಿದೆ. ಆ ಕಣ್ಣಲ್ಲೇ ಅವರ ಜೀವ."

"ರಾಧಾಕೃಷ್ಣನ್ ಸ್ವಲ್ಪ ಎತ್ತರವಾದ ಆಳು. ಆದರೂ ಎಂಥ ಕಿರುಬಾಗಿಲಿನಲ್ಲೂ ಇವರು ತಲೆ ತಗ್ಗಿಸಿಲ್ಲ. ತಮ್ಮ ಎತ್ತರಕ್ಕೆ ತಕ್ಕಂತೆ ಬಾಗಿಲು ಹಿಗ್ಗಿಸಿ ಒಳಗೆ ನುಗ್ಗಿದ್ದಾರೆ. ಎಲ್ಲೆಡೆಯಲ್ಲೂ ಅದೇ ಗಾಂಭೀರ್ಯ, ವಿನಯ, ನಿರಹಂಕಾರ; ಅದೇ ಅಂತಃಕರಣ, ಅದೇ ಅವರ ಬಾಳಿನ ಹೂವಿನ ನಾಲ್ಕು ದಳ."

"ವಲ್ಲಭಭಾಯಿಗೂ ರಸಕ್ಕೂ ಬೆಂಕಿಗೆ ನೀರಿಗೆ ಇದ್ದ ಹಾಗೆ. ಸಾಹಿತ್ಯ ಕಲೆ ವಲ್ಲಭಭಾಯಿ ಇದ್ದ ಕಡೆ ಸುಳಿಯುವುದೇ ಇಲ್ಲ. ತತ್ವಶಾಸ್ತ್ರವಂತೂ ಅವರ ಎದುರಿನಲ್ಲಿ ನಿಲ್ಲಲಾರದೆ ತಲೆಮರೆಸಿಕೊಳ್ಳುತ್ತದೆ."

—ಇವು ಸಿದ್ದವನಹಳ್ಳಿ ಕೃಷ್ಣಶರ್ಮರ ಚಿತ್ರಣಸಿದ್ಧಿಗೆ ಸಾಕ್ಷಿಗಳು. ಚಿತ್ರಕಲಾವಿದ ಕುಂಚದಿಂದ ಬಣ್ಣದಿಂದ ಕಲಾಸೃಷ್ಟಿ ಮಾಡುತ್ತಾನೆ, ಸೊಬಗು ತುಂಬುತ್ತಾನೆ, ಭಾವಗಳನ್ನು ತೋಡಿಕೊಳ್ಳುತ್ತಾನೆ. ಅಂತೆಯೆ ಶರ್ಮಾಜಿಯವರೂ. ಇವರ ಕುಂಚ ಲೇಖಣಿ. ಬಣ್ಣ ಶಾಯಿ. ವಸ್ತು ಜೀವನ ಅಷ್ಟೆ. ಆದರೆ ಒಂದು ರೇಖೆಯನ್ನು ಹೀಗೆ ಎಳೆದು ಅದರಲ್ಲೆ ಭಾವಸರ್ವಸ್ವವನ್ನು ಅಭಿವ್ಯಕ್ತಿಗೊಳಿಸುವ ಚಿತ್ರಕಲೆ ಇದು. ಕೆಲವೇ ಮಾತುಗಳಲ್ಲಿ ಇಡೀ ವ್ಯಕ್ತಿತ್ವವನ್ನೇ ಕಡೆದು ನಿಲ್ಲಿಸುವ ಶಿಲ್ಪ ಇದು. ಬೇಲೂರಿನ ಶಿಲ್ಪದಂತೆ ಅಗಾಧ ಅಲ್ಲ, ಅಸ್ಪಷ್ಟ ಅಲ್ಲ, ಸರಳ, ಸುಂದರ. ಚಿಕ್ಕದು ಚೊಕ್ಕವಾದುದು. ಕಿರಿದರೊಳ್ ಪಿರಿದರ್ಥಮಂ ತಿಳಿಸುವ ಮೋಡಿ.

ವ್ಯಕ್ತಿ ಚಿತ್ರಗಳಲ್ಲಿ ಶರ್ಮಾಜಿಯವರದು ವಿಶಿಷ್ಟ ರೀತಿ. ಆ ಚಿತ್ರಗಳ ಸೊಗಸೇ ಸೊಗಸು. ಅವರು ಹಿಂದುಸ್ತಾನದ, ಕರ್ನಾಟಕದ ಅನೇಕ ಮಹಾವ್ಯಕ್ತಿಗಳ ಪುತ್ಥಳಿಗಳನ್ನು ಕಡೆದು ನಮ್ಮೆದುರು ನಿಲ್ಲಿಸಿದ್ದಾರೆ. "ದೀಪಮಾಲೆ"ಯನ್ನು ಹಚ್ಚಿಟ್ಟಿದ್ದಾರೆ. "ಕನ್ನಡದ ಕಿಡಿಗಳ"ನ್ನು ಚಿಮ್ಮಿಸಿದ್ದಾರೆ. "ಕುಲದೀಪಕರ"ನ್ನು ತೋರಿಕೊಟ್ಟಿದ್ದಾರೆ. ಇವರ ಕೈಯಲ್ಲಿ ವಿನೋಬಾ 'ಅನ್ನಾವತಾರ' ಆಗಿದ್ದಾರೆ. ಪರ್ಣಕುಟಿಯ ಆ ಋಷಿ, ಹಿಂದುಸ್ತಾನದ ಅನಭಿಷಿಕ್ತ ಸಾಮ್ರಾಟ ಬಾಪೂಜಿಯನ್ನು ಒಂದಲ್ಲ, ಎರಡಲ್ಲ ಹತ್ತೂ ಸುತ್ತಿನಿಂದ ನೋಡಿ ಬಣ್ಣಿಸಿ, ಆ ಮೂರ್ತಿಯ ನಾನಾ ಭಂಗಿಗಳನ್ನು ಕಂಡು ಚಿತ್ರಿಸಿದ್ದಾರೆ.

ಒಂದೊಂದೇ ಪದದಲ್ಲೊ, ಒಂದೊಂದೇ ವಾಕ್ಯದಲ್ಲೊ ಇಡೀ ವ್ಯಕ್ತಿತ್ವವನ್ನೇ ಮೂಡಿಸುವ ಕಲೆ ಇವರ ವೈಶಿಷ್ಟ್ಯ.

"ಪಂಡಿತ ಮದನಮೋಹನ ಮಾಲವೀಯರ ಪವಿತ್ರ ವರ್ತನೆ, ಮೋತೀಲಾಲರ ಅಖಂಡ ವೈಭವ, ಚಿತ್ತರಂಜನದಾಸರ ತ್ಯಾಗಜೀವನ, ಜವಾಹರಲಾಲರ ಧೀರೋದಾತ್ತತೆ ವಲ್ಲಭಭಾಯಿಯ ಚತುರೋಪಾಯ ಸಮರ್ಥತೆ, ಎಲ್ಲಕ್ಕಿಂತ ಹೆಚ್ಚಾಗಿ ಗಾಂಧೀಜಿಯ ಪ್ರಶಾಂತ ರಮಣೀಯ ಜೀವನ" ಎಂಬ ವ್ಯಕ್ತಿ ವೈಭವ ವರ್ಣನೆ ಕನ್ನಡದ ಆದಿಕವಿ ಪಂಪನ ಪದ್ಯವನ್ನು ನೆನಪಿಗೆ ತರುವುದಲ್ಲವೇ?

ಸರಳತೆ, ನೇರನುಡಿ ಶರ್ಮಾಜಿಯವರ ಬರೆಹದ ಇನ್ನೊಂದು ಲಕ್ಷಣ. ಮಾತು ಅಂಬಿನಂತೆ ನೇರವಾಗಿ

ಚಿಮ್ಮುತ್ತದೆ. ಅಂಕುಡೊಂಕಾಗಿ ಲಾಸ್ಯವಾಡುತ್ತ ಹರಿವ ಅಬ್ಬಿಯಂತೆ ಅಲ್ಲ. ಒಂದೊಂದು ಮಾತೂ ಅರ್ಥಪಿಂಡ, ಶಕ್ತಿಪಿಂಡ, ಸೂತ್ರದಂತೆ ಇರುವ ವಾಕ್ಯಗಳು. ಅವರ ಮಾತಿನ ಮಂಟಪದಲ್ಲಿ ಅರಳಿದ ಹೂಗಳಿವು :

"ಜನಪ್ರಿಯತೆಯಲ್ಲ, ಜನಪೂಜ್ಯತೆ ಮುಖ್ಯ."

"ಎಲ್ಲದರಲ್ಲೂ ನಮ್ಮ ಗುರಿ ಶ್ರೇಯ, ಪ್ರೇಯವಲ್ಲ. ಪ್ರಿಯವಲ್ಲ. ಋತ. ಅಧರಕ್ಕೆ ಸಿಹಿಯಲ್ಲ. ಉದರಕ್ಕೆ ಸಿಹಿ"

"ಇವತ್ತು ಸುರೆ, ನಾಳೆ ಅಪ್ಸರೆ, ಒಂದರ ಹಿಂದೆ ಒಂದು. ಅಪ್ಸರೆಯ ಜನ್ಮವೂ ಸುರೆಯಲ್ಲಿ. ಹೆಂಡದ ಸೆಟ್ಟರಿದ್ದಲ್ಲಿ ಹಾದರದ ಭಟ್ಟರು ಹಾಜರು !"

"ಮನಸ್ಸು ಗಾಳಿಯ ಹಾಗೆ. ಅದಕ್ಕೆ ಬೇಲಿ ಇಲ್ಲ. ವಿಶ್ವ ಸಂಚಾರಿ, ತ್ರಿಭುವನ ವಿಹಾರಿ !"

ಎಂಥ ಕ್ಲಿಷ್ಟ ಗಾಢ ವಿಷಯವನ್ನಾಗಲಿ, ತತ್ವ ಚಿಂತನ ವನ್ನಾಗಲಿ, ಸರಳವಾಗಿ ಸುಲಿದ ಬಾಳೆಯ ಹಣ್ಣಿನಂದದಿ ಹೇಳುವ ಕಲೆ ಶರ್ಮಾಜಿಯವರದು. ವಿಜ್ಞಾನದ ವಿದ್ಯಾರ್ಥಿ ಗಳಿಗೂ ಅರ್ಥವಾಗುವುದು ಕಷ್ಟವಾದ "ರಾಮನ್ ಪರಿ ಣಾಮ" (Raman effect)ವನ್ನು ಬಣ್ಣಿಸಿರುವ ರೀತಿ ಯಿದು :

"ಬೆಳಕಿನ ಕಣ್ಣುಮುಚ್ಚಾಲೆಯ ಮಾತು ಹೇಳಿತಷ್ಟೆ. ಅದೇ ರಾಮನ್ ಸಿದ್ಧಾಂತ. ಬೆಳಕು ನೀರಿನಲ್ಲಿ ಮುಳುಗಿ ಕರಗಿದಾಗ ಬಣ್ಣ ಹುಟ್ಟಿ, ಕಡಲು ನೀಲಿಯಾಯಿತು. ಇದೇ ದಾರಿ ನಡೆದು ಪ್ರಯೋಗದಮೇಲೆ ಪ್ರಯೋಗನಡೆಸಿ, ಬೆಳಕಿನ ಬಸಿರಿನಲ್ಲಿರುವ ಬಣ್ಣ ಬಣ್ಣದ ಸಂತೆಯನ್ನು ಕಂಡರು. ಅದರ ಮಾರೀಚ ವಿದ್ಯೆಯನ್ನು ಅರಿತರು, ಇಲ್ಲಿದ್ದ ಬಣ್ಣ ಅಲ್ಲಿಲ್ಲ. ಬೆಳಕು ಅಲ್ಲಿ ಹರಿದರೆ ಒಂದು ಬಣ್ಣ ಹೋಗುತ್ತದೆ, ಒಂದು ಬಣ್ಣ ಬರುತ್ತದೆ; ನೀರಿನಲ್ಲಿ ಕರಗಿದಾಗ, ಗಾಜಿನಲ್ಲಿ ತೂರಿ ದಾಗ, ಇದು ಸ್ಪಷ್ಟವಾಗಿ ಖಚಿತವಾಗಿ ತಿಳಿಯಿತು. ದೀಪದ ಕಿರಣದಲ್ಲಿ ಇಲ್ಲದ ಬಣ್ಣ, ಬಣ್ಣದ ಗೆರೆ,ಆ ಬೆಳಕನ್ನು ಹೀರಿದ ಗಾಜಿನ ಇನ್ನೊಂದು ಮಗ್ಗುಲಲ್ಲಿ ಕಾಣುವ ಬಣ್ಣದ ಸಾಲಿ ನಲ್ಲಿ ಕಂಡುಬಂತು. ಗಾಜಿಗೆ ತಗಲುವ ಮೊದಲು ಆ ಕಿರಣ ದಲ್ಲಿ ಅವು ಇರಲಿಲ್ಲ. ಗಾಜೂ ಬೆಳಕೂ ಸೇರಿ ಈ ಗೆರೆ ಬಂದವು. ಇವನ್ನು ರಾಮನ್‌ಗೆರೆ ಎನ್ನುತ್ತಾರೆ. ಈ ಬಣ್ಣದ ಸಾಲಿಗೆ ರಾಮನ್ ಬಣ್ಣದಸಾಲು ಎನ್ನುತ್ತಾರೆ."

ಗದ್ಯವನ್ನು ಗದ್ಯದಂತೆ ರಚಿಸುವುದು ಸಾಮಾನ್ಯ. ಆದರೆ ಅದರಲ್ಲಿ ಪದ್ಯದಲ್ಲಿರುವ ಕಾವ್ಯಗುಣವನ್ನು ಒಸರಿಸುವುದಕ್ಕೆ ವಿಶೇಷವಾದ ಕುಶಲಕಲೆ ಬೇಕು. ಸಂಸ್ಕೃತಕಾವ್ಯ ಸಾರ್ವ ಭೌಮ ಬಾಣಭಟ್ಟನ ಕಾದಂಬರಿ ಗದ್ಯಕೃತಿಯೆ. ಆದರೂ ಅದು ಮಹಾಕಾವ್ಯ. ಕನ್ನಡದ ಶರಣರ ವಚನಗಳ ಧಾಟಿ ಗದ್ಯ. ಆದರೆ ಧ್ವನಿ ಕಾವ್ಯ. ಮುದ್ದಣ ಕವಿಯ ರಾಮಾಶ್ವ ಮೇಧ ಗದ್ಯರಚನೆಯೆ. ಆದರೆ ಅದು ಕಾವ್ಯವಲ್ಲ ಎನ್ನಲಾಗುವುದೇ ? ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೀಗೆ ಗದ್ಯಕ್ಕೆ ಕಾವ್ಯದ ಮೆರಗು ಕೊಟ್ಟವರಲ್ಲಿ ಶರ್ಮಾಜಿ ಪ್ರಮುಖರು.

"ಮಕ್ಕಳು ನಕ್ಷತ್ರಗಳು ಇದ್ದಂತೆ. ಭೂಮಿಯಮೇಲೆ ನಿಂತು ನೋಡಿದರೆ ಅವು ಮಿರುಗುವ ಕಿರುತಾರೆಯಾಗಿ ಕಾಣುತ್ತವೆ. ಮೇಲೆ ಏರಿ ನೋಡಬಲ್ಲೆವಾದರೆ ಅವು ಕಿರಿದೂ ಗುಂಡೂ ಆಗಿ ಕಾಣಲಿಕ್ಕಿಲ್ಲ. ಅಖಂಡ ಜ್ಯೋತಿಯಾಗಿ ಕಂಡಾವು. ನಮ್ಮ ಕಣ್ಣು ಆತ್ಮದ ದೃಷ್ಟಿಯಿಂದ ಬೆಳಗಿದರೆ ಮಕ್ಕಳ ಪರಿಶುದ್ಧಾತ್ಮದ ಪ್ರಕಾಶ ಕಂಡೀತು."

"ಗಾಂಧೀಜಿ ವಿರೋಧಗಳ ಕೂಡಲಿ. ಹಿಂದೆ ಮುಂದೆ ಇಲ್ಲದ ಧ್ಯೇಯವಾದಿ ಆಗಿದ್ದೂ ಸಾಟಿಯಿಲ್ಲದ ವ್ಯವಹಾರ ಕುಶಲಿ. ಒಂದು ಕಡೆ ಮಿತಿಗಾಣದ ಕ್ಷಾತ್ರ ಧೈರ್ಯ, ಮತ್ತೊಂದೆಡೆ ಮಾನಮೋಷದ ವೈಶ್ಯವಿವೇಕ. ಇತ್ತ ಸುಧಾ ರಣೆಯ ಕ್ರಾಂತಿಕಾರ ಪರಶುರಾಮ, ಅತ್ತ ಸನಾತನ ಸಂಪ್ರ ದಾಯ ಸಂರಕ್ಷಕ ಶ್ರೀರಾಮ. ಹಳೆಯದರ ಪೂಜೆ ಬಿಟ್ಟಿಲ್ಲ. ಹೊಸದರ ಸೃಷ್ಟಿಗೂ ಎತ್ತಿದ ಕೈ. ವೈರಾಗ್ಯದ ಚಕ್ರವರ್ತಿ ಆಗಿದ್ದೂ 'ರಾಗಪೂರ್ಣವಾದ' ರಾಜಕೀಯದಲ್ಲಿ ಮುಳು ಗಿದಾರೆ. ಪಾರಲೌಕಿಕದಲ್ಲಿ ಗುರಿ, ಕ್ರಿಯಾರಂಗ ತೀರಾ ಲೌಕಿಕ."

ಇಲ್ಲಿ ಗದ್ಯ ಕಾವ್ಯವಾಗಿದೆ. ಇಂಥ ಎಷ್ಟೋ ಉದಾಹರಣೆ ಗಳನ್ನು ಕೊಡಬಹುದು.

ಶರ್ಮಾಜಿಯವರ ಲೇಖನ ಕೃಷಿ "ವರ್ಧಾಯಾತ್ರಿ" ಯಿಂದ ಮೊದಲು ಮಾಡಿ ಇತ್ತೀಚಿನ ಕೃತಿ 'ರಾಮಾವ ತಾರ'ದ ವರೆಗೆ ಸಾಗಿದೆ. ಈ ಕೃತಿಮಾಲೆಯಲ್ಲಿ ಉದ್ದಕ್ಕೂ ಕಾಣುವ ವೈಶಿಷ್ಟ್ಯವೆಂದರೆ ಅವರ ಅನುಭವ ಹಣ್ಣಾಗುತ್ತಿ ರುವುದು, ಭಾವ ಪಕ್ವವಾಗುತ್ತಿರುವುದು. ಇದಕ್ಕೆ ಅವರ 'ರಾಮಾವತಾರ' ಗ್ರಂಥ ಸಾಕ್ಷಿ.

ಶ್ರೀಮದ್ರಾಮಾಯಣ ತುಂಬ ಕಲಿತವರಿಗೆ ಮಾತ್ರ ಅಲ್ಲ. ಅಕ್ಷರ ಬಲ್ಲ ಎಲ್ಲರಿಗೂ, ಹಳ್ಳಿಯವರಿಗೆ, ಕಾರ್ಮಿಕರಿಗೆ, ಮಕ್ಕಳಿಗೆ ಎಲ್ಲರಿಗೂ ಅರ್ಥವಾಗುವಂತೆ ಇರಬೇಕು ಎಂಬ ಉದ್ದೇಶ್ಯದಿಂದ 'ರಾಮಾವತಾರ' ರಚಿತವಾಗಿದೆ. ಇದ ಕ್ಕಿಂತ ಸರಳವಾಗಿ ಇನ್ನಾರೂ ಹೇಳಲಾರರು ಎನ್ನುವಂತಿದೆ ಶ್ರೀರಾಮನ ದಿವ್ಯಕಥೆ.

ಉದಾಹರಣೆಗೆ ಅಯೋಧ್ಯೆಯ ವರ್ಣನೆ ಹೀಗಿದೆ :

"ಸರಯೂ ತೀರದಲ್ಲಿ ಕೋಸಲ ದೇಶ. ದೇಶ ಧನ ಧಾನ್ಯ ಸಮೃದ್ಧ. ಅದರ ರಾಜಧಾನಿ ಜಗಪ್ರಸಿದ್ಧ ಆದ ಅಯೋಧ್ಯಾ

ಪಟ್ಟಣ. ಅದನ್ನು ಕಟ್ಟಿಸಿದವನು ವೈವಸ್ವತಮನು. ಹನ್ನೆರಡು ಯೋಜನ ಉದ್ದ ಎರಡು ಯೋಜನ ಅಗಲ ಊರು. ತಗ್ಗು ದಿನ್ನೆ ಇಲ್ಲದೆ ಸಮನೆಲದಲ್ಲಿ ಇದೆ. ಜೂಜು ಆಡುವ ಮಣೆಯ ಹಾಗೆ ಅಷ್ಟಪಾದಾಕಾರದಲ್ಲಿ, ನಗರದ ನಟ್ಟ ನಡುವೆ ಅರಮನೆ. ಅರಮನೆಯ ನಾಲ್ಕುದಿಕ್ಕಿಗೂ ನಾಲ್ಕು ಬೀದಿ. ಐಮೂಲೆಯಾಗಿ ಇನ್ನೂ ನಾಲ್ಕು ಬೀದಿ. ಬೀದಿಗಳು ಬಹಳ ಅಗಲ. ನಿತ್ಯವೂ ಬೀದಿಗಳಲ್ಲಿ ನೀರು ಚೆಲ್ಲಿ ಗಮಗಮಿಸುವ ಹೂಗಳನ್ನು ಎರಚಿ ಅವನ್ನು ಸಿಂಗರಿಸುತ್ತಾರೆ...

ಆ ಪಟ್ಟಣದ ನಿರ್ಮಾಣದಲ್ಲಿ ಇದು ಹುಳುಕು ಎಂದು ತೋರಿಸುವ ಹಾಗೆ ಇಲ್ಲ. ದೇವೇಂದ್ರನ ಅಮರಾವತಿಯ ಹಾಗೆ ಇದೆ. ಆ ನಗರವನ್ನೂ ಕೋಸಲ ರಾಜ್ಯವನ್ನೂ ಬಹಳ ಮೇಲ್ದಸೆಗೆ ತಂದ ದಶರಥ. ಅಮರಾವತಿಯಲ್ಲಿ ದೇವೇಂದ್ರ, ಅಯೋಧ್ಯೆಯಲ್ಲಿ ದಶರಥ. ಒಂದೇ ಮಾದರಿ...

ವಿದ್ಯಾವಿನಯ ಸಂಪನ್ನರು ಮಂತ್ರಿಗಳು, ನೀತಿಕುಶಲರು, ಶ್ರೀಮಂತರು, ಬುದ್ಧಿವಂತರು, ಸಂಯಮಿಗಳು, ಶಾಸ್ತ್ರ ತಿಳಿದವರು. ಮಂತ್ರ ನಿಪುಣತೆಯಲ್ಲಿ ಹೆಸರು ಆದವರು. ಪರಾಕ್ರಮದಲ್ಲಿ ಅವರಿಗೆ ಎದುರು ಇಲ್ಲ. ಸಲ್ಲದುದನ್ನು ಮಾಡಲು ಅಂಜುವ ಜನ. ಸದಾ ಎಚ್ಚರಿಕೆ, ತಾಳ್ಮೆಯಲ್ಲಿ ಮೇಲುಗೈ. ಪ್ರತಾಪದಲ್ಲಿ ಎತ್ತಿದ ಕೈ, ಯಾವಾಗಲೂ ಮುಗುಳು ನಗೆ. ಯಾರೊಡನೆ ಮಾತಾಡಿದರೂ ಅಕ್ಕರೆ, ಕಿರಿಕಿರಿ ಇಲ್ಲವೇ ಇಲ್ಲ. ಸಿಟ್ಟಿನಲ್ಲೂ ಸುಳ್ಳು ಆಡರು. ಕಾಮಕ್ಕೆ ಅರ್ಥಕ್ಕೆ ಆಶಿಸಿ ಹುಸಿನುಡಿಯರು."

ಕನ್ನಡದ ನಾಲ್ಕಾರು ಹಿರಿಯರು ಶರ್ಮಾಜಿಯವರ ಬರೆಹವನ್ನು ಕುರಿತು ಮುಕ್ತಕಂಠದಿಂದ ಹೊಗಳಿದ್ದಾರೆ:

"ನಮ್ಮ ಈಗಿನ ಗದ್ಯಲೇಖನ ಬಹು ವಿಧದ ಸೌಂದರ್ಯವನ್ನು ಬೆಳೆಸಿಕೊಂಡಿದೆ. ಶ್ರೀಕೃಷ್ಣಶರ್ಮರ ಈ ಗ್ರಂಥದ ಲೇಖನದಲ್ಲಿ ಅದು ವಿಚಿತ್ರವಾದ ಒಂದು ಸೌಂದರ್ಯವನ್ನು ಪಡೆದಿದೆ ಎಂದು ನನಗೆ ಕಾಣುತ್ತಿದೆ. ಶ್ರೀ ಶರ್ಮರವರು ಕಥನ ವರ್ಣನ ಟೀಕೆ ಇವನ್ನು ಯಾವುದೂ ಅತಿಯಾಗದಂತೆ ಒಂದು ಹದದಲ್ಲಿ ಬೆರೆಸಿ ಬರೆದಿರುವ ಈ ಗ್ರಂಥದ (ಪರ್ಣಕುಟಿ) ರೀತಿ ಇಂಥ ಕೃತಿಗೆ ಚೆನ್ನಾಗಿ ಒಪ್ಪುವ ಅತ್ಯುತ್ತಮ ರೀತಿ."

—ಮಾಸ್ತಿ

"ವರ್ಧಾಯಾತ್ರೆಯು ತಿಳಿವಿನಲ್ಲಿ, ತಾತ್ವಿಕ ಗ್ರಂಥ, ರೀತಿಯಲ್ಲಿ ಉತ್ತಮ ಸಾಹಿತ್ಯ ಚಿತ್ರಕನ ಚಿತ್ರಕರ್ಮ ಕೌಶಲದೊಡನೆ ನಾಟಕಕಾರನ ಪಾತ್ರಾವಿಷ್ಕರಣದ ಪ್ರಾವೀಣ್ಯವು ಇಲ್ಲಿ ಮಸಗಿದೆ. ಕಥನ ಕೌಶಲ, ತತ್ತ್ವ ಗ್ರಂಥನೆ, ವರ್ಣನ, ವಿನೋಧ ವಿಲಾಸ ಮೊದಲಾದ ಅನೇಕ ಗುಣಗಳು ಕೃಷ್ಣಶರ್ಮರ ಮನಃಶಕ್ತಿಗಳ ಪರಿಪಾಕದೊಡನೆ ಸ್ವಚ್ಛಂದವಾಗಿ ಇಲ್ಲಿ ಬಂದಿದೆ."

—ಬೇಂದ್ರೆ

"ಶರ್ಮರು ರಸಜ್ಞರು, ಭಾವಜ್ಞರು, ಕಲಾವಿದರು ಮೇಲಾಗಿ ವಿಮರ್ಶಕರು... ಮಾತಿನ ಮೇಲೂ ಶಕ್ತಿಯ ಸ್ವಾತಂತ್ರ್ಯದ, ಹಾಸ್ಯದ ಮುದ್ರೆಯನ್ನೊತ್ತಿದ್ದಾರೆ. ಕೆಲವು ಕಡೆ ಅವರ ಪರವಶತೆಯು ಅವರ ಗದ್ಯವನ್ನು ಕವಿತೆಯ ಮಟ್ಟಕ್ಕೇರಿಸುತ್ತದೆ. ವಾಚಕರನ್ನು ಮೇಲಕ್ಕೆಳೆಯುತ್ತದೆ."

—ತಿರುಮಲೆ ತಾತಾಚಾರ್ಯ ಶರ್ಮ

"ಇವರ ಲೇಖನಗಳನ್ನು ಓದುವಾಗ, ಎ. ಜಿ. ಗಾರ್ಡಿನರ್, ಎಮಿಲ್ ಲಡ್‌ವಿಗ್, ಇಲ್ಲದೆ ಗುಂಥರ್ ಇವರ ನೆನಪಾಗುತ್ತದೆ. ನಿಸರ್ಗ, ನಿರ್ಝರದಂತೆ ಇವರ ಶೈಲಿ ಒಮ್ಮೊಮ್ಮೆ ಸ್ಫಟಿಕ ಶಿಲೆಯಲ್ಲಿ ಜಳ ಜಳ ಹರಿಯುವಂತೆ, ಇನ್ನೊಮ್ಮೆ ಕೊಳ್ಳದಲ್ಲಿ ಗಂಭೀರವಾಗಿ ಸಾಗಿರುವಂತೆ, ಮತ್ತೊಮ್ಮೆ ಬಂಡೆಯಿಂದ ಬಂಡೆಗೆ ಹಾರುತ್ತಿರುವಂತೆ ಕಂಗೊಳಿಸುವುದು. ಅದರಲ್ಲಿ ಯಾವಾಗಲೂ ಒಂದು ಕುಣಿತವಿದೆ, ಒಂದು ಹಗುರು ಇದೆ, ಒಂದು ಚೆಲ್ಲಾಟವಿದೆ."

—ದಿವಾಕರ್

"ಅವರ ಗೆಯ್ದ ಯಾತ್ರೆಗಳೂ ಹಾರಿಸಿದ ಕಿಡಿಗಳೂ ಕಲೆ ಹಾಕಿದ ಸಂಗತಿಗಳೂ ಸಾಹಿತ್ಯದ ಸಿದ್ಧಿಯನ್ನು ಒದಗಿಸುವಂತೆ ವಿಮರ್ಶೆಯ ತೀಕ್ಷ್ಣ ಬುದ್ಧಿಯನ್ನು ಅರಳಿಸುತ್ತವೆ. ಹರಿತವಾದ ಅವರ ಗದ್ಯಶೈಲಿ ಇಂದಿನ ಕನ್ನಡ ತಾನು ಪ್ರೀತಿಯಿಂದ ತಲೆದುಡಿಗೆಯಲ್ಲಿ ಚುಚ್ಚಿಕೊಂಡ ಗರಿಗಳಲ್ಲಿ ಒಂದಾಗಿದೆ. ಪತ್ರಿಕೋದ್ಯಮವು ಹೇಗೆ ಸಾಹಿತ್ಯವಾಗಬಲ್ಲದೆಂಬುದನ್ನು ನಾವು ಇವರ ಲೇಖನಗಳಲ್ಲಿ ಕಾಣುತ್ತೇವೆ. ನಾನು ತಿಳಿದ ಮಟ್ಟಿಗೆ ಇಂದು ಇಂತಹ ಸಾಹಿತಿ-ಪತ್ರಿಕೋದ್ಯಮಿಗಳು ಇವರೊಬ್ಬರೇ... ಕೃಷ್ಣಶರ್ಮರ ಕ್ರಾಂತಿ ದರ್ಶನದಲ್ಲಿ ಸೂರ್ಯಕಾಂತದ ಗುಣವಿದೆ. ಇದರ ಅಭ್ಯಾಸನ ಜನಮನದ ಶುಚಿಯನ್ನು ಕಾಯುವುದರಲ್ಲಿ ಸಂಶಯವಿಲ್ಲ."

—ವಿ. ಕೃ. ಗೋಕಾಕ್

"ಇವರ 'ಪರ್ಣಕುಟಿ' ಇವರ ಸಾಹಿತ್ಯ ಮೀಮಾಂಸೆಗೆ ಅನುಗುಣವಾದ ಕೃತಿ. ಅದು ಬಂದು ಉತ್ತಮವಾದ ಕೃತಿ. ಅದು ಈ ಯುಗದ ಶ್ರೇಷ್ಠವಾದ ಗದ್ಯ

ಕೃತಿಯೂ ಹೌದು. ಅದರ ತಿರುಳು ಸ್ವದೇಶಿ ಎಂಬುದು ಅದರ ಶ್ರೇಷ್ಠತೆಗೆ ಕಾರಣವಲ್ಲ. ಅದರ ಭಾಷೆಯಲ್ಲಿ ಕನ್ನಡ ಕಾವ್ಯದ ಸ್ವರ ಮಿಡಿಯುತ್ತಿದೆ ಎಂಬುದೇ ಆ ಕಾರಣ" ಎನ್ನುವುದು ತರುಣ ವಿಮರ್ಶಕ ಕೀರ್ತಿನಾಥ ಕುರ್ತುಕೋಟಿಯವರ ಮಾತು.

ಮಾತಿಗಿಂತಲೂ, ಕೃತಿ ಮೇಲು ಎಂಬುದು ಶರ್ಮಾಜಿ ಅವರ ಬಾಳಿನ ಸೂತ್ರ. ಅವರು ಎಂದೂ ಅಧಿಕಾರವನ್ನು ಬಯಸಿದವರಲ್ಲ; ಪ್ರಸಿದ್ಧಿಗಾಗಿ ಹಂಬಲಿಸಿದವರಲ್ಲ. ಎಲೆ ಮರೆಯ ಕಾಯಿಯಂತೆ, ಸದ್ದು ಗದ್ದಲವಿಲ್ಲದೆ ಅವರು ಕನ್ನಡನಾಡು ನುಡಿಗಳ ಸೇವೆ ಮಾಡುತ್ತ ಬಂದಿದ್ದಾರೆ.

ತಾವು ಕಂಡ ಗಾಂಧೀದರ್ಶನವನ್ನು ಅವರು 'ಗಾಂಧಿ ಸಾಹಿತ್ಯ ಸಂಘ'ದ ರೂಪದಲ್ಲಿ ಕೃತಿಗಿಳಿಸಿದ್ದಾರೆ. ಇದೊಂದು ಸಾರ್ವಜನಿಕ ಸಂಸ್ಥೆಯಾದರೂ ಇಲ್ಲಿ ಅಧಿಕಾರಿಗಳಿಲ್ಲ; ಚುನಾವಣೆಗಳಿಲ್ಲ. ಎಲ್ಲ ಸದಸ್ಯರೂ ಬಂದು ಕುಟುಂಬದ ವ್ಯಕ್ತಿಗಳಂತೆ-ಸಹಕರಿಸಿ ಕೆಲಸಮಾಡುತ್ತಿದ್ದಾರೆ. ಅವರ ಪ್ರಭಾವಕ್ಕೆ ಸಿಲುಕಿದ ಹಲವರು ಇಂದು ಉತ್ತಮ ಲೇಖಕರಾಗಿದ್ದಾರೆ; ಸಮರ್ಥ ವಾಗ್ಮಿಗಳಾಗಿದ್ದಾರೆ. ಅವರ ನೇತೃತ್ವದಲ್ಲಿ ಗಾಂಧಿ ಸಾಹಿತ್ಯ ಸಂಘವು ಶ್ರೀ ರಾಮಾರಾಧ್ಯರ ಸಹಕಾರದಿಂದ ಗಮಕ ರೂಪಕಗಳನ್ನು ರೂಪಿಸಿ, ಪ್ರಸಾರ ಮಾಡಿದೆ; ಗಾಂಧಿ ಸಾಹಿತ್ಯದ ಬಗೆಗೆ ಅನೇಕ ವಿಚಾರಪೂರ್ಣಗ್ರಂಥಗಳನ್ನು ಪ್ರಕಟಿಸಿದೆ. ಸಿದ್ದವನಹಳ್ಳಿ ಕೃಷ್ಣಶರ್ಮರ ಜೀವನದ ಪಡಿನೆಳಲಾಗಿ ತನ್ನ ಇಪ್ಪತ್ತೈದು ವರ್ಷಗಳ ಸಾರ್ಥಕ ಜೀವನವನ್ನು ಮುಗಿಸುತ್ತಿರುವ ಗಾಂಧಿ ಸಾಹಿತ್ಯ ಸಂಘ ಅವರ ಜೀವನದರ್ಶನ-ಕರ್ತೃತ್ವ ಶಕ್ತಿಗೆ ಸಾಕ್ಷಿಯಾಗಿ ನಿಂತಿದೆ.

ಈ ಸಂಘದಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ಕನ್ನಡದ ಜನತೆ ಅನುವುಮಾಡಿಕೊಟ್ಟರೆ ಅದೇ ಶರ್ಮಾಜಿ ಅವರಿಗೆ ಕನ್ನಡಿಗರು ಅರ್ಪಿಸಬಹುದಾದ ಕೃತಜ್ಞತೆ.

ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ಬರಹಗಳು

ಸ್ವತಂತ್ರ

- ಪರ್ಣಕುಟಿ
- ವರ್ಧಾಯಾತ್ರೆ
- ದೀಪಮಾಲೆ
- ಕುಲದೀಪಕರು
- ಕನ್ನಡದ ಕಿಡಿಗಳು
- ಕನ್ನಡದ ಸಮಸ್ಯೆ
- ದೇಶೀಸಂಸ್ಥಾನಗಳಲ್ಲಿ
- ನಿರ್ಭಾಗ್ಯ ಬೋರೇಗೌಡ
- ಕಾಮಧೇನು
- ಭಗವದ್ಗೀತೆ
- ಸಹಕಾರ-ಸರ್ವೋದಯ
- ಸಹಕಾರ-ಪಂಚಾಯಿತಿ
- ಸರದಾರ ವಲ್ಲಭಭಾಯಿ
- ವಿನೋಬಾ
- ಮಾತಿನಮಂಟಪ (೨ ಭಾಗ)
- ವಿದ್ಯಾರ್ಥಿಗಳಲ್ಲಿ ಅಶಿಸ್ತು
- ತುಂಗಭದ್ರಾಯೋಜನೆ
- ರಾಮಾವತಾರ (೩ ಭಾಗ)
- ನಮ್ಮ ಊರು
- ನಮ್ಮ ಭೂಮಿ
- ಸಿರಿಗನ್ನಡ

ಅನುವಾದಗಳು :

ಗಾಂಧಿಸಾಹಿತ್ಯ

- ಸಂವಾದಮಾಲೆ
- ಪ್ರಸಾದ ದೀಕ್ಷೆ
- ಸಂಕ್ಷಿಪ್ತ ಆತ್ಮಕಥೆ
- ಹಿಂದ್‌ಸ್ವರಾಜ್ಯ
- ಮಂಗಲ ಪ್ರಭಾತ
- ಅನಾಸಕ್ತಿಯೋಗ
- ರಾಜಕೀಯ ಪತ್ರಗಳು
- ಗೀತಾಮಾತೆ
- ಸಂಭಾಷಣೆ
- ಪತ್ರಗುಚ್ಛ
- ಗೃಹಮಾಧುರಿ
- ಮೂಲಶಿಕ್ಷಣ
- ಜೀವನ ಶಿಕ್ಷಣ

ಆರೋಗ್ಯ ರಹಸ್ಯ
ಸರ್ವೋದಯ
ನೀತಿಧರ್ಮ
ನಿರ್ಮಾಣಕಾರ್ಯಕ್ರಮ
ಇನ್ನು ಸಾಕು
ರಾಜನೀತಿ
ಆಗಸ್ಟ್ ೯ರ ತರುವಾಯ

ವಿನೋಬಾ ಸಾಹಿತ್ಯ

ಸರ್ವೋದಯ ವಿಚಾರ
ಭೂದಾನಯಜ್ಞ-ಯಾತ್ರೆ
ಸರ್ವೋದಯ ಯಾತ್ರೆ
ದೀಕ್ಷಾ
ಕಾರ್ಯಕರ್ತರಿಗೆ
ಗೀತಾಪ್ರವಚನ
ಸ್ಥಿತಪ್ರಜ್ಞದರ್ಶನ
ಸಾಹಿತ್ಯ-ಸಾಹಿತಿ
ಗಾಂಧಿ-ಮಾರ್ಕ್ಸ್
ಭೂದಾನಗಂಗೆ
ರಾಮನಾಮ
ಶ್ರದ್ಧಾಂಜಲಿ
ಒಟ್ಟಾಗಿ-ಒಳ್ಳೆಯವರಾಗಿ
ಹಳ್ಳಿಹಳ್ಳಿಯಲ್ಲಿ ಸ್ವರಾಜ್ಯ
ಧರ್ಮಚಕ್ರಪ್ರವರ್ತನೆ
ಶಾಸನಮುಕ್ತಸಮಾಜ
ಸರ್ವೋದಯ ದೃಷ್ಟಿ
ಉಪನಿಷತ್ ಅಧ್ಯಯನ
ಈಶಾವಾಸ್ಯವೃತ್ತಿ
ಸ್ವರಾಜ್ಯಶಾಸ್ತ್ರ
ಶಿಕ್ಷಣವಿಚಾರ
ಆಶ್ರಮ ಜೀವನ
ಶಾಂತಿಸೇನ
ನಾಮಮಾಲೆ
ಬಿರುಗಾಳಿ ಬರಲಿದೆ

ಸರ್ವೋದಯ ಸಾಹಿತ್ಯ

ನಮ್ಮ ರಾಜ್ಯ
ಸರ್ವೋದಯ-ಒಂದು ದರ್ಶನ
ಸರ್ವೋದಯದ ಸಾಂಸ್ಕೃತಿಕ ಆಧಾರ
ಮಾನವೀಯ ಕ್ರಾಂತಿ
ಗ್ರಾಮರಾಜ್ಯ
ಸಾಮ್ಯವಾದ-ಸಾಮ್ಯಯೋಗ
ಭೂಕ್ರಾಂತಿಯ ಕಥೆ
ಬೆಂಗಳೂರಿನಲ್ಲಿ ವಿನೋಬಾ
ಲೋಕರಾಜ್ಯ
ಹಳ್ಳಿಯಲ್ಲಿ ಬಂಡಾಯ
ವೇದಧರ್ಮ
ಹಿಂದೂಧರ್ಮ

ಗಾಂಧೀವಾದ

ಗಡಿನಾಡಿನಲ್ಲಿ
ದಿನಚರಿಯ ಕೆಲವು ಪುಟ
ನನ್ನ ಜೊತೆಗಾರರು
ಗಾಂಧೀಜೀ
ವ್ಯಾವಹಾರಿಕ ಅಹಿಂಸೆ
ಶಾಶ್ವತ ಅರ್ಥಶಾಸ್ತ್ರ
ನಯೀತಾಲೀಂ
ನಯೀತಾಲೀಮಿನಲ್ಲಿ ಕಲಾಶಿಕ್ಷಣ
ಪೂರ್ವಬುನಿಯಾದಿ
ಬಾಳುವೆಯ ತಳಹದಿ
ಮಹಾತ್ಮಗಾಂಧೀ
ಬಂಗಾರದಮಾಯೆ
ಶಿಕ್ಷಣಮಾಧ್ಯಮ
ಗಾಂಧೀಜಿಯ ಅಧ್ಯಾತ್ಮ ಸಾಧನೆ
ಹೊಚ್ಚಹೊಸಗೀಳು
ಮಹಾತ್ಮಾಗಾಂಧೀ
ಗಾಂಧಿಯೋಜನೆ
ಮಹಾತ್ಮಗಾಂಧೀ [ನೆಹರು]
ಮಹಾತ್ಮಾಗಾಂಧೀ-[ರೊಮೇರೋಲಾ]
ಬಿಡುಗಡೆಯ ಬೆಲೆ
ಸತಿ ಕಸ್ತೂರಿಬಾ

ಇತರ

ರಾಜೇಂದ್ರಪ್ರಸಾದರ ಆತ್ಮಕಥೆ
ನಮ್ಮ ಹಿಂದುಸ್ತಾನ
ಭಾರತಸಮಸ್ಯೆ
ವಿಧಿಸೆಳೆದತ್ತ
ತಿಳಿವಿನ ಹಣತೆ (ಅಬ್ದುಲ್ ಬಹಾ)
ಪಂಚಾಯತಿರಾಜ್ಯ
ಸಂಕಲನ
ಮಕ್ಕಳಪಾಲನೆಪೋಷಣೆ
ದಕ್ಷಿಣ ಭಾರತದ ದೇವಾಲಯಗಳು
ಬೇಟೆಗಾರನ ಮಗ
ಜಪಾನೀಕತೆಗಳು
ಸಹಕಾರಸಂಘ
ಕಾರ್ಯನಿರ್ವಾಹಕ ಸಮಿತಿ
ಗ್ರಾಮಾಂತರ ಋಣಪರಿಶೀಲನೆಯ ವರದಿ
ಸ್ವಾತಂತ್ರ್ಯದ ಹದಿನೇಳು ಹೆಜ್ಜೆ
ತೆಲುಗಿನ ಕತೆಗಳು
ಅಸಾಮಿ ಕತೆಗಳು
ಹೊಟ್ಟೆಗಿಲ್ಲವೇಕೆ ?
ಸ್ವರಾಜ್ಯವೇ ಶರಣ್ಯ
ಹಿಟ್ಲರ್ ಯಾರು ?
ಮಹಾಯುದ್ಧದ ನಕ್ಷೆಗಳು
ಮೆಸೊಪೊಟೋಮಿಯಾ ಸಾಹಿತ್ಯ ಚರಿತ್ರೆ
ಪ್ರಾಚೀನ ಈಜಿಪ್ಟ್ ಸಾಹಿತ್ಯ
ಕೃಷ್ಣಾವತಾರ (ಐದು ಭಾಗ)
ಜಗತ್‌ಕಥಾವಲ್ಲರಿ
ನೆಹರೂ–ಮೋತಿಲಾಲ್, ಜವಹರಲಾಲ್
ಖಗೋಳಪುರಾಣ
ನೀನೂ ವಿಜ್ಞಾನಿಯಾಗು
ಪಂಚಾಯಿತಿ ಶಾಸನ
ನಮ್ಮ ಪಾರ್ಲಿಮೆಂಟ್
ವುಡ್ರೋ ವಿಲ್ಸನ್
ಹಿಂದೂ ಕುಟುಂಬ–ಪುನರ್ದರ್ಶನ
ಗತಕಾಲದ ಗುರುತುಗಳು
ಆಧುನಿಕ ಮಾನವನ ಹೋರಾಟ
ಭೂವಿವರಣೆ (ಡಡ್ಲಿಸ್ಟ್ಯಾಂಪ್)
ಅಮೆರಿಕಾದ ರಾಜಕೀಯ ಪದ್ಧತಿ

ಸಂಪಾದಿತ

ಮೂಲಶಿಕ್ಷಣದ ಕೈಪಿಡಿ
ಸಮಾಜ ಶಿಕ್ಷಣ
ಭೂದಾನಯಜ್ಞ–ಸಮಗ್ರದರ್ಶನ
ವಿನೋಬಾ ವಿಚಾರಲಹರಿ
ಜಮನ್‌ಲಾಲ್ ಬಜಾಜ್
ಸರ್ವೋದಯ (೮ ಸಂಪುಟ)
ವಿಶ್ವಕರ್ನಾಟಕ

ಪ್ರಾಚೀನ ಪ್ರೌಢ ಕವಿಕೃತಿಗಳ ಸಂಪಾದಕನಿಗೆ ಇರಬೇಕಾದ ಯೋಗ್ಯತೆಗೂ ಅಧಿಕಾರಕ್ಕೂ ಒಂದು ಮಿತಿಯನ್ನು ಕಲ್ಪಿಸುವುದಕ್ಕೆ ಆಗುವುದಿಲ್ಲ. ಅವು ಎಷ್ಟೆಷ್ಟು ಮಿಗಿಲಾಗಿರುತ್ತವೆಯೋ ಅಷ್ಟಷ್ಟು ಅವನ ಸಂಪಾದನ ಕಾರ್ಯ ಶ್ರೇಷ್ಠವಾಗುತ್ತದೆ.

ಡಿ. ಎಲ್. ಎನ್.

ಜಿನವಲ್ಲಭನ ಗಿರಿಶಾಸನ

◆◆ ಡಾ|| ಪಾಂಡುರಂಗರಾವ ದೇಸಾಯಿ

ನಮ್ಮ ನಾಡಿನ ನೆಚ್ಚಿನ ಆದಿಕವಿ ಪಂಪನ ಕುರಿತು ಕೇಳಿದಷ್ಟೂ ಕಂಡಷ್ಟೂ ಸವಿಯೇ. ಈಚಿಗೆ ಆತನ ವಿಚಾರವಾಗಿ ಒಂದು ಹೊಸ ಶಾಸನವು ದೊರೆತುದನ್ನು ಕೇಳಿ ಸಂತೋಷಪಟ್ಟಿದ್ದೆನು. ಆ ಶಾಸನದ ಪಾಠವನ್ನು ಉದ್ಧರಿಸಿ, ಅದನ್ನು ಆಧಾರವಾಗಿ ಇಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯದ ಗಣ್ಯ ಕನ್ನಡ ಪ್ರಾಧ್ಯಾಪಕರಿಬ್ಬರು, ಡಾ|| ಆರ್. ಸಿ. ಹಿರೇಮಠ ಮತ್ತು ಪ್ರೊ|| ವಿ. ಜಿ. ಕುಲಕರ್ಣಿ ಇವರು ಬರೆದ ಉದ್ಬೋಧಕ ಲೇಖನಗಳನ್ನು (Karnatak University Journal, Humanities, Vol. XI, 1967) ಓದಿ ಆನಂದಿಸಿದೆನು. ಆದರೆ ಆ ಕುರಿತು ಆಲೋಚಿಸಿದಂತೆ ಅವುಗಳಲ್ಲಿ ಕೆಲವು ನ್ಯೂನಾಂಶಗಳು ನನಗೆ ತೋರಿದವು. ಅವರು ಹೇಳಿದ ವಿಷಯ ಇನ್ನೂ ಸೊಗಸಾಗಿದ್ದರೆ ಚೆನ್ನಾಗಿತ್ತು, ಎಂಬ ಅತೃಪ್ತಭಾವವೇ ಈ ಲೇಖನವನ್ನು ಬರೆಯಲು ನನ್ನನ್ನು ಪ್ರೇರಿಸಿದೆ.

ಈ ಕುರಿತು ಶಾಸನ ಪಾಠಸಹಿತ ಮೂಲಲೇಖನ ತೆಲುಗು ಮಾಸಪತ್ರಿಕೆ ಭಾರತಿಯ ೧೯೬೭ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾಗಿದೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ|| ಡಿ. ಕೆ. ಭೀಮಸೇನರಾವ ಇವರ ಸಹಕಾರದಿಂದ ಹೈದರಾಬಾದ ಪುರಾತತ್ವ ಶಾಖೆಯ ಡಾ|| ವೆಂಕಟರಮಣಯ್ಯ ಅವರು ಆ ಲೇಖನವನ್ನು ಸಿದ್ಧಪಡಿಸಿದರು. ಆ ಲೇಖನದಲ್ಲಿಯ ಕೆಲವು ವಿಷಯಗಳು ಚರ್ಚಾಸ್ಪದವಾಗಿವೆ. ಅವುಗಳನ್ನೆಲ್ಲ ಇಲ್ಲಿ ಎತ್ತಿಕೊಂಡಿಲ್ಲ ವಿಸ್ತಾರಭಯದಿಂದ. ಪ್ರಕಟವಾಗಿದ್ದ ಈ ಶಾಸನ ಪಾಠದಲ್ಲಿಯೂ ಕೆಲವು ವಾಚನ ದೋಷಗಳಿವೆ.

ಚಾರಿತ್ರಿಕ ಹಿನ್ನೆಲೆ

ಶಾಸನವನ್ನು ಸಮಗ್ರವಾಗಿ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರಿಂದ ಸೂಚಿತವಾಗುವ ಸಂಗತಿಗಳು ಹೀಗೆ :

ಪಂಪನು ವಿಕ್ರಮಾರ್ಜುನ ವಿಜಯವನ್ನು ಬರೆದು ಅರಿಕೇಸರಿಯಿಂದ ಧರ್ಮಪುರವನ್ನು ಸಂಭಾವನೆಯಾಗಿ ಪಡೆದನು. ಈ ವಿಷಯವು ಪಂಪನ ತಮ್ಮನಾದ ಜಿನವಲ್ಲಭನಿಗೆ ಹರ್ಷದಾಯಕವಾಯಿತು. ಆತನು ಈ ಘಟನೆಯ ಸ್ಮೃತಿಯನ್ನು ಚಿರಸ್ಥಾಯಿಗೊಳಿಸಬೇಕೆಂದು ಆಲೋಚಿಸಿದನು. ಅದಕ್ಕಾಗಿ ತನ್ನ ಊರಿಂದ ಬಹುದೂರವಲ್ಲದ ಒಂದು ಖ್ಯಾತ ಜೈನಸ್ಥಳವನ್ನು ಗೊತ್ತುಮಾಡಿದನು. ಅದು ವೃಷಭಗಿರಿ. ಅದು ಆದಿ ತೀರ್ಥಂಕರನಾದ ಋಷಭ ಅಥವಾ ವೃಷಭನ ಸನ್ನಿಧಾನದಿಂದ ಪವಿತ್ರವೆನಿಸಿ ಜಿನಭಕ್ತರಿಗೆ ಯಾತ್ರಾಸ್ಥಳವಾಗಿತ್ತು ; ಪಂಪನ ದತ್ತಿಗ್ರಾಮವಾದ ಧರ್ಮಪುರದಿಂದ ಕಿರಿದಂತರದಲ್ಲಿ ಇತ್ತು.

ವೃಷಭಗಿರಿ ಒಂದು ಬೆಟ್ಟದಸಾಲು ಆಗಿದ್ದರೆ, ಆ ಗಿರಿಪಂಕ್ತಿಯಲ್ಲಿ ಅದರ ದಕ್ಷಿಣಭಾಗದಲ್ಲಿ ಪ್ರಾಮುಖ್ಯವಾಗಿ ಕಂಗೊಳಿಸುವ ಸಿದ್ಧಶಿಲೆ, ಆ ಗಿರಿಯ ಒಂದು ವಿಶಾಲ ಹಾಸುಬಂಡೆ ಆಗಿತ್ತು. ಈ ಸಿದ್ಧಶಿಲೆಯ ಬಂಡೆಗಲ್ಲಿನ ಮೇಲೆ ವಿಗ್ರಹಗಳನ್ನು ಕೆತ್ತಿಸಬಹುದಾಗಿತ್ತು, ಶಾಸನವನ್ನು ಕೊರೆಯಿಸಬಹುದಾಗಿತ್ತು. ವೃಷಭಗಿರಿಯ ವರ್ಣನೆಯನ್ನು ಓದುವಾಗ ಬೆಟ್ಟದ ಸಾಲುಗಳಿಂದ ಶೋಭಿಸುವ ಕೊಪ್ಪಳ ಮತ್ತು ಶ್ರವಣಬೆಳುಗೊಳ ಈ ಜೈನ ಕ್ಷೇತ್ರಗಳು ನೆನಪಿಗೆ ಬರುತ್ತವೆ.

ತನ್ನ ಆಲೋಚನೆಯನ್ನು ಅನುಷ್ಠಾನಗೊಳಿಸಲು ಇದೇ ತಕ್ಕ ಸ್ಥಳವೆಂದು ಜಿನವಲ್ಲಭನು ನಿರ್ಧರಿಸಿದನು. ಪಂಪನ ಮನೆಯವರಿಗೆ, ಆದಿ ತೀರ್ಥಂಕರನಾದ ವೃಷಭನ ಮೇಲೆ ವಿಶೇಷ ಶ್ರದ್ಧೆ ಇದ್ದಿತೆಂದು ತೋರುತ್ತದೆ. ಈ ಕಾರಣದಿಂದಲೇ ಏನೋ, ಪಂಪನು ಆದಿಪುರಾಣವನ್ನು ರಚಿಸಿರಬೇಕು. ಇಂಥ ಇಷ್ಟ ದೈವತದ ಸಂಪ್ರದಾಯ ಜೈನರಲ್ಲೂ ಇದ್ದಿತು ಎನ್ನುವುದಕ್ಕೆ ಪೊನ್ನನ ಶಾಂತಿಪುರಾಣ, ರನ್ನನ ಅಜಿತಪುರಾಣದಂತಹ ಕೃತಿಗಳು ಸಾಕ್ಷಿಯಾಗಿವೆ.

ವೃಷಭಗಿರಿಯ ಶಿಖರದಲ್ಲಿ ವೃಷಭನಾಥನ ವಿಗ್ರಹವು ಪೂಜೆಗೊಳ್ಳುತ್ತಿತ್ತು. ಆದರೆ ಆತನ ಶಾಸನದೇವತೆ, ಯಕ್ಷಿಣಿ ಚಕ್ರೇಶ್ವರಿಯ ವಿಗ್ರಹವಿದ್ದಿತೋ ಇಲ್ಲವೊ? ಅದಕ್ಕಾಗಿ ಚಕ್ರೇಶ್ವರಿಯನ್ನು ಅಲ್ಲಿ ಸ್ಥಾಪಿಸಬೇಕಲ್ಲವೆ? ಜಿನವೃಂದವನ್ನು, ಜೈನವಿಗ್ರಹಗಳ ಪಂಕ್ತಿಯನ್ನು (ಪಂಚಪರಮೇಷ್ಠಿ, ಚೌವೀಸ ತೀರ್ಥಂಕರ, ಸಹಸ್ರಕೂಟ, ಇತ್ಯಾದಿ) ಸ್ಥಾಪಿಸುವದು ಜೈನರ ಒಂದು ಸಂಪ್ರದಾಯ. ಇದಕ್ಕೆ ಅನುಗುಣವಾಗಿ ಜಿನಪ್ರತಿಮೆಗಳಿಗೆ ಸಿದ್ಧಶಿಲೆಯಲ್ಲಿ ಸ್ಥಾನವು ದೊರೆಯಬೇಕು.

ಇನ್ನೊಂದು ಮುಖ್ಯವಾದ ಕಾರ್ಯ. ಇಂಥ ಪುಣ್ಯಸ್ಥಳ

ದಲ್ಲಿ ಅಣ್ಣ ಪಂಪನ ಅಪೂರ್ವ ಸಾಧನೆಯನ್ನು ಘೋಷಿಸುವ ಶಿಲಾಶಾಸನವನ್ನು ಕೊರೆಯಿಸುವುದು. ಇಂಥ ಸಾರ್ವಜನಿಕ ಪವಿತ್ರಸ್ಥಳದಲ್ಲಿ ಶಾಸನವಿದ್ದರೆ ಆತನ ಸಾಧನೆ ಲೋಕ ಪ್ರಸಿದ್ಧಿಯನ್ನು ಪಡೆದೀತು.

ಧರ್ಮಕಾರ್ಯಕ್ಕಾಗಿ ಗ್ರಾಮಗಳನ್ನು ದಾನವಾಗಿ ಸಲ್ಲಿಸುವ ಪದ್ಧತಿ, ವಿದ್ಯಾಪ್ರಸಾರಕ್ಕೆ ಅಗ್ರಹಾರಗಳನ್ನು ಕೊಡುವ ರೂಢಿ, ಸಾರ್ವತ್ರಿಕವಾಗಿದ್ದರೂ ಪಂಪನಂತೆ ಒಂದು ಕಾವ್ಯವನ್ನು, ಅದೂ ವಿಕ್ರಮಾರ್ಜುನ ವಿಜಯದಂಥ ಲೌಕಿಕ ಕಾವ್ಯವನ್ನು ಬರೆದು ದಾನವನ್ನು ಪಡೆದ ಉದಾಹರಣೆ ಅಪೂರ್ವವೆಂದೇ ಹೇಳಬೇಕು. ಇಂಥ ಅಸಾಧಾರಣ ಔದಾರ್ಯವನ್ನು ಪ್ರಕಟಿಸಿದ ಅರಿಕೇಸರಿ ಮಹಾರಾಜನು ಲೋಕೋತ್ತರ ಪುರುಷನಾದರೆ, ಅದನ್ನು ಪಡೆದಂಥ ಪಂಪನಾದರೂ ಲೋಕೋತ್ತರ ವ್ಯಕ್ತಿಯೇ ಸೈ. ಈ ಲೋಕೋತ್ತರ ಚಾರಿತ್ರಿಕ ವಿಷಯವನ್ನು ದಿಗ್‌ದೇಶದ ಜನರು ಅರಿಯಬೇಕು. ಅದಕ್ಕೆ ಉಚಿತ ಪ್ರಸಿದ್ಧಿಯನ್ನು ಕೊಡುವದು ಪಂಪನ ಗುಣಗ್ರಾಹಿಗಳು ಮಾಡಬೇಕಾದ ಕಾರ್ಯ. ಈ ಕಾರ್ಯವನ್ನು ಭರತನಂತೆ ಬಂಧುಪ್ರೇಮಿ, ಪಂಪನ ತಮ್ಮನಾದ ಜಿನವಲ್ಲಭನಲ್ಲದೆ ಬೇರಾರು ಮಾಡಬಲ್ಲರು ?

ಅರಿಕೇಸರಿ ಧರ್ಮಪುರವನ್ನು ದಾನಮಾಡಿದನು. ಈ ವಿಷಯವನ್ನು ನಿವೇದಿಸುವ ತಾಮ್ರಶಾಸನವನ್ನು ಪಂಪನಿಗೆ ದಯಪಾಲಿಸಿದನು. ಆದರೆ ತಾಮ್ರಶಾಸನವು, ದತ್ತಿ ಪಡೆದವನು ತನ್ನ ಮನೆಯಲ್ಲಿ ಇಟ್ಟುಕೊಂಡು ಕಾಪಾಡುವ ಸೊತ್ತು. ಅದು ಸಾರ್ವಜನಿಕ ಪ್ರದರ್ಶನದ ವಸ್ತುವಲ್ಲ. ಸಾರ್ವಜನಿಕರಿಗೆ ಅದನ್ನು ನೋಡುವ, ಅದರಲ್ಲಿಯ ವಿಷಯಗಳನ್ನು ಓದಿ ಅರಿತುಕೊಳ್ಳುವ ಅವಕಾಶ ಕಡಿಮೆ. ಪಂಪನು ಮಹಾಕಾವ್ಯವನ್ನು ಬರೆದನಂತೆ, ಅರಿಕೇಸರಿ ದೊರೆ ಅದನ್ನು ಮೆಚ್ಚಿಕೊಂಡನಂತೆ, ಆತನಿಗೆ ಒಂದು ಗ್ರಾಮವನ್ನು ಬಹುಮಾನವಾಗಿ ಕೊಟ್ಟನಂತೆ, ಇದೇನು ಸೋಜಿಗ ! ಎಂದು ಆ ಭಾಗದ ಜನರು ಕರ್ಣಾಕರ್ಣಿಯಾಗಿ ಕೇಳಿ ತಮ್ಮತಮ್ಮೊಳಗೆ ಮಾತಾಡಿಕೊಳ್ಳುವರು. ಅದರ ಪ್ರತ್ಯಕ್ಷನಿದರ್ಶನ ಜನಸಾಮಾನ್ಯರಿಗೆ ಹೇಗೆ ದೊರೆಯಬೇಕು ? ಅದಕ್ಕಾಗಿ ವೃಷಭಗಿರಿಯಂಥ ಯಾತ್ರಾಸ್ಥಳದಲ್ಲಿ ಅದರ ಶಿಲಾಖಂಡದ ಮೇಲೆ ಈ ವಿಷಯವನ್ನು ಸಾರಿ ಹೇಳುವಂಥ ಭವ್ಯ ಶಿಲಾಶಾಸನವನ್ನು ಕೆತ್ತಿಸುವುದೇ ಉತ್ತಮ ಉಪಾಯವಲ್ಲವೇ ?

ಇಂಥ ಒಂದು ಹಿನ್ನೆಲೆಯ ಆವರಣದಲ್ಲಿ ಕರೀಮನಗರ ಜಿಲ್ಲೆಯ ಗಂಗಾಧರ ಗ್ರಾಮದ ಬಳಿಯಲ್ಲಿ ಬೊಮ್ಮಲಗುಟ್ಟ ಎಂಬ ಗುಡ್ಡದ ಬಂಡೆಯ ಮೇಲೆ ಪಂಪನ ಕುರಿತು ಹೊಸದಾಗಿ ದೊರೆತ ಅಪೂರ್ವ ಶಿಲಾಶಾಸನವು ನಿರ್ಮಾಣವಾಗಿರಬೇಕು. ಬೊಮ್ಮಲಗುಟ್ಟ ಎಂಬ ಹೆಸರು ಬರಲು ಕಾರಣವು ಹೀಗೆ : ಬೊಮ್ಮಲಗುಟ್ಟ ಎಂದರೆ ಬೊಂಬೆಗಳಿರುವ ಗುಡ್ಡ. ಈ ಬೊಂಬೆಗಳು ಜಿನವಲ್ಲಭನು ಚೊಕ್ಕಟವಾಗಿ ಕೆತ್ತಿಸಿದ ಜಿನಪ್ರತಿಮೆಗಳಾಗಿರಬೇಕು. ಈ ಶಾಸನವನ್ನು ಕೊರೆಯಿಸಿದ ಪಂಪನ ತಮ್ಮನಾದ ಜಿನವಲ್ಲಭನು ಅಣ್ಣನಲ್ಲಿ ಅಪಾರ ಆದರ, ವಿಶ್ವಾಸವನ್ನು ತಳೆದವನು. ಅಣ್ಣನಂತೆ ಸಾರಸ್ವತ ಪ್ರಪಂಚದಲ್ಲಿ ಗಣ್ಯನು, ವಿಶಾರದನು, ರಸಿಕನು, ಕಲಾವಂತನು, ಉದಾರ ಹೃದಯನು, ದಾನಧುರೀಣನು ಆಗಿರಬೇಕು. ಶಾಸನದ ರಚನೆ ಮತ್ತು ಎರಡನೆಯ, ಮೂರನೆಯ ಪದ್ಯಗಳಲ್ಲಿಯ ಆತನ ವರ್ಣನೆಯಿಂದ ಆತನು ಕವಿ, ಗಮಕಿ, ವಾಗ್ಮಿಯು ; ಕನ್ನಡ, ಸಂಸ್ಕೃತ, ತೆಲುಗು ಸಾಹಿತ್ಯಗಳಲ್ಲಿ ಬಲ್ಲಿದನು ಆಗಿದ್ದನೆಂದು ಗೊತ್ತಾಗುತ್ತದೆ. ಆತನಿಗೆ ' ವಾಚಕಾಭರಣ ' ಎಂದರೆ ' ಗಮಕ–ವಿದ್ವಾನ್' ಎಂಬಂತಹ ಬಿರುದಿನ ಪ್ರಶಸ್ತಿ ಇದ್ದಿತು. ಈ ಶಾಸನವು ಪಂಪನ ಹಿರಿಮೆಯ ಪ್ರಸಿದ್ಧಿಗೆ ಒಂದು ಅಪೂರ್ವ ಸಾಕ್ಷಿ. ಇಂಥ ಬೇರೆ ಶಾಸನಗಳು ದೊರೆಯದೆ ಇರುವುದರಿಂದ ಅದು ಅಪೂರ್ವವಾಗಿದೆ. ಪಂಪನಿಗೆ ಇಂಥ ನಿಸ್ಸೀಮ ಬಂಧುಪ್ರೇಮಿ ಒಡಹುಟ್ಟಿದ ಸೋದರನೊಬ್ಬನು ಇದ್ದನೆಂಬ ಸಂಗತಿಯನ್ನು ಮೊದಲು ಬಾರಿ ಸಾರಿ ಹೇಳುತ್ತಿರುವದು ಅದರ ಇನ್ನೊಂದು ಅಪೂರ್ವತೆ. ಮೇಲೆ ಚಿತ್ರಿಸಿದಂತೆ ಒಂದು ಚಾರಿತ್ರಿಕ ಹಿನ್ನೆಲೆಯ ಆವರಣವನ್ನು ಕಲ್ಪಿಸಿಕೊಳ್ಳದೆ ಇದ್ದರೆ, ಈ ಶಾಸನದ ಯಥಾರ್ಥ ಇಂಗಿತ, ಅಭಿಪ್ರಾಯಗಳನ್ನು ಗ್ರಹಿಸಲಿಕ್ಕೆ ಪ್ರಯಾಸವಾಗುತ್ತದೆ. ಆದರೆ ಈ ಚಿತ್ರಣವು ಕಲ್ಪನೆ ಮಾತ್ರವಲ್ಲ, ಅದಕ್ಕೆ ಶಾಸನದಲ್ಲಿಯೇ ಸಾಕಷ್ಟು ಆಧಾರಗಳು ದೊರೆಯುತ್ತವೆ. ಅದು ಹೇಗೆ ಎಂಬುದನ್ನು ಎತ್ತಿ ತೋರಿಸುವುದು ಅವಶ್ಯಕ.

ಶಾಸನದ ಆವರಣ ಮತ್ತು ಅರ್ಥವಿವರಣೆ

ವಿಷಯಗಳ ದೃಷ್ಟಿಯಿಂದ ಸಮಗ್ರಶಾಸನವನ್ನು ಹೀಗೆ ಭಾಗಭಾಗವಾಗಿ ವಿಂಗಡಿಸಿ ಎತ್ತಿತೋರಿಸಬಹುದು. ಮೊದಲ ಗದ್ಯವು ಪಂಪನ ತಮ್ಮ ಜಿನವಲ್ಲಭನ ದೇಶ, ಕುಲ, ಗೋತ್ರ, ವಂಶವನ್ನು ನಿರೂಪಿಸಿ, ಆತನು ವೃಷಭಗಿರಿಯ ಪ್ರದೇಶದಲ್ಲಿ ಪಂಪನಿಗೆ ನಿರ್ಮಿಸಿದ ಸ್ಮಾರಕಗಳನ್ನು ಹೆಸರಿಸುತ್ತದೆ. ಅನಂತರ ಒಂದನೆಯ ಸಂಸ್ಕೃತ ಪದ್ಯವು ವೃಷಭಗಿರಿಯಲ್ಲಿ ನಡೆಯತಕ್ಕ ಉತ್ಸವವನ್ನು ವರ್ಣಿಸುತ್ತದೆ. ಮುಂದಿನ ಮೂರು ಪದ್ಯಗಳಲ್ಲಿ ಜಿನಧರ್ಮಪರಾಯಣನಾದ ಜಿನವಲ್ಲಭನ ಗುಣಗಳನ್ನು ಪ್ರಶಂಸಿಸಿದೆ. ಅನಂತರದ ಐದು

ಪದ್ಯಗಳು ಭಾರತವನ್ನು ಬರೆದು ಅರಿಕೇಸರಿಯಿಂದ ಧರ್ಮಪುರವನ್ನು ಪಡೆದ ಪಂಪನ ಅಸಾಧಾರಣ ಪ್ರತಿಭಾಪ್ರಖ್ಯಾತಿಯನ್ನು ಚಿರಸ್ಥಾಯಿಗೊಳಿಸಲು ಜಿನವಲ್ಲಭನು ವೃಷಭಗಿರಿಯಲ್ಲಿ ಕೆತ್ತಿಸಿದ ಶಾಸನದ ಉದ್ದೇಶ ಮತ್ತು ವಿಶಿಷ್ಟತೆಯನ್ನು ವಿಶದಗೊಳಿಸುತ್ತವೆ. ಆಮೇಲಿನ ಮೂರು ತೆಲುಗು ಪದ್ಯಗಳು ಜಿನವಲ್ಲಭನ ಧರ್ಮಭಾವನೆಯನ್ನು, ಸದ್ಗುಣಗಳನ್ನು ಹೊಗಳುತ್ತವೆ. ಕೊನೆಯ ಕಿರುಗದ್ಯವು ವೃಷಭಗಿರಿಯ ಸಿದ್ಧ ಶಿಲೆಯಮೇಲೆ ಈ ಶಾಸನವನ್ನು ಕೊರೆದ ಲಿಪಿ ಶಿಲ್ಪಿಯನ್ನು ಸ್ಮರಿಸುತ್ತದೆ.

ವೃಷಭಗಿರಿ ವೃಷಭನಾಥನ ವಿಗ್ರಹದಿಂದ ವಿರಾಜಿಸಿ, ಪವಿತ್ರ ಪರ್ವತವೆನಿಸಿ ಜಿನಭಕ್ತರಿಗೆ ಪವಿತ್ರ ಯಾತ್ರಾಸ್ಥಳವಾಗಿತ್ತು ಎಂಬ ಮಾತಿಗೆ ಐದನೆಯ ಪದ್ಯದಲ್ಲಿಯ 'ವೃಷಭೇಶ್ವರ ಬಿಂಬ ಸನಾಥಮೆಂಬ ಅಲಂಪು ಒದವೆ' ಎಂಬ ಉಕ್ತಿಯೂ, ಮೂರನೆಯ ಪದ್ಯದಲ್ಲಿಯ, 'ಅಧಿಷ್ಠಿತ ದಿಗಂಬರೋ ವೃಷಭಶೈಲ' ಮತ್ತು 'ಅಜಸ್ರಜಿನವನ್ದನಾಗತ ಮುನೀಶ್ವರ ಶ್ರಾವಕ ಪ್ರಜಾ' ಎಂಬ ಪದಸಮೂಹವೂ ಸಮರ್ಥನೆಯನ್ನು ನೀಡುತ್ತವೆ. ಈ ವೃಷಭಗಿರಿ 'ಅನಾದಿ ಸಂಸಿದ್ಧ ತೀರ್ಥ'ವಾಗಿತ್ತೆಂದು ಆರಂಭದ ಗದ್ಯದಲ್ಲಿ ಹೇಳಿದೆ. ಈ ಗಿರಿಯನ್ನು ಪಂಪನ ಕೀರ್ತಿಯ ಮೂರ್ತಿಗೆ ಹೋಲಿಸಿದುದನ್ನು (೫ನೆಯ ಪದ್ಯ), ಅದೇ ಗದ್ಯದಲ್ಲಿ ಬರುವ ಕುಲದೈವ ಎಂಬ ಪದವನ್ನು ಒಂದು ವಿಧದಿಂದ ಲಕ್ಷಿಸಿದರೆ ಪಂಪನ ಮನೆತನಕ್ಕೂ ಈ ವೃಷಭಗಿರಿಗೂ, ಅಲ್ಲಿಯ ವೃಷಭನಾಥ ತೀರ್ಥಂಕರನಿಗೂ, ಆತ್ಮೀಯ ಸಂಬಂಧವಿದ್ದಿರಬೇಕು ಎಂದೆನಿಸುತ್ತದೆ.

ಸಿದ್ಧಶಿಲೆ ವೃಷಭಗಿರಿಯ ಒಂದು ಭಾಗವೇ ಆಗಿತ್ತು. ಅದು ಆದರಿಂದ ದೂರವಾಗಿರಲಿಲ್ಲ, ಎಂಬ ನನ್ನ ಪ್ರತಿಪಾದನೆಗೆ ಆರಂಭ ಗದ್ಯದಲ್ಲಿ ಬರುವ 'ವೃಷಭ ತೀರ್ಥದ ದಕ್ಷಿಣ ದಿಶಾಭಾಗದೀ ಸಿದ್ಧಶಿಲೆ' ಎಂಬ ವರ್ಣನೆ, ಮತ್ತು ಐದನೆಯ ಪದ್ಯದಲ್ಲಿಯ 'ದಕ್ಷಿಣಾರ್ಥದ ವೃಷಭಾದ್ರಿ' ಎಂಬ ವಿವರಣೆ ಪೋಷಕವಾಗಿವೆ. ಅದೇ ಪದ್ಯದಲ್ಲಿಯ ಮುಂದೆ ಈ ವೃಷಭಾದ್ರಿಯ ದಕ್ಷಿಣಭಾಗವನ್ನು ಎಂದರೆ ಸಿದ್ಧಶಿಲೆಯನ್ನು ಜಿನವಲ್ಲಭನು ತಾನು ಕೆತ್ತಿಸಿದ ಜಿನವಿಗ್ರಹಗಳಿಂದಾಗಿ ಜಿನಚೈತ್ಯವನ್ನಾಗಿ ಮಾಡಿದನೆಂದು ನಿರ್ದೇಶಿಸಿದೆ. 'ವೃಷಭಗಿರಿಯ ಸಿದ್ಧಶಿಲೆಯೊಳ್' ಎಂಬುದಾಗಿ ಕೊನೆಯ ಗದ್ಯವಾಕ್ಯದಲ್ಲಿ ಬರುವ ಸುಸ್ಪಷ್ಟ ನುಡಿ ಇದೆಲ್ಲವನ್ನು ಖಚಿತಪಡಿಸುವ ಅಸಂದಿಗ್ಧ ಪ್ರಮಾಣವಾಗಿದೆ.

ಪಂಪನ ಕೀರ್ತಿಗೆ ತಾಮ್ರ ಶಾಸನವು ಸಾಲದು; ಶಿಲಾಶಾಸನವೇ ಅದಕ್ಕೆ ಸಮರ್ಪಕ ಸ್ಮಾರಕ, ಎಂಬ ಜಿನವಲ್ಲಭನ ಹೃದ್ಗತವನ್ನು ಮೇಲೆ ಸ್ಪಷ್ಟೀಕರಿಸಿದ್ದೇನೆ. ಆ ಸ್ಮಾರಕದ ಪೂರ್ಣ ಸ್ವರೂಪವು ಆರಂಭದ ಗದ್ಯದಿಂದಲೂ ಒಂಬತ್ತನೆಯ ಪದ್ಯದಿಂದಲೂ ಸ್ಫುಟವಾಗುತ್ತದೆ. ಸಿದ್ಧಶಿಲೆಯ ಮೇಲೆ ಕೆತ್ತಿದ ಜಿನಪ್ರತಿಮೆಗಳು, ಆ ಗಿರಿಯಲ್ಲಿ ಇಲ್ಲವೆ ಹತ್ತಿರದಲ್ಲಿ ಕಟ್ಟಿದ ತ್ರಿಭುವನತಿಲಕ ಎಂಬ ಬಸದಿ, ಕವಿತಾಗುಣಾರ್ಣವ ಎಂಬ ಕೆರೆ, ಮದನವಿಳಾಸ ಎಂಬ ಉಪವನ ಇನ್ನೂ ಮಿಗಿಲಾಗಿ ಮಹತ್ವಪೂರ್ಣವಾದ ಈ ಶಿಲಾಶಾಸನ; ಇವೇ ಪಂಪನ ಕುರಿತು ಜಿನವಲ್ಲಭನು ಪ್ರತಿಷ್ಠೆಗೊಳಿಸಿದ ಸ್ಮಾರಕಗಳ ಸಮುದಾಯವು. ಇವೆಲ್ಲವೂ ಆ ಗಿರಿಯ ಮೇಲ್ಭಾಗದಲ್ಲಿ ಮತ್ತು ಅಕ್ಕಪಕ್ಕದಲ್ಲಿ ಇರತಕ್ಕಂತಹವು.

ಮೇಲಿನ ವಿವೇಚನೆಯಿಂದ ಪಂಪನನ್ನು ಕುರಿತು ಜಿನವಲ್ಲಭನು ರಚಿಸಿದ, ಕೆತ್ತಿಸಿದ, ಸ್ಥಾಪಿಸಿದ, ಅವರ ಕೀರ್ತಿ ಶಾಸನಕ್ಕಾಗಿ ನಾವು ಬೇರೆ ಕಡೆಗೆ ಹೋಗಿ ಹುಡುಕಾಡುವ ಅಗತ್ಯವಿಲ್ಲ ಎಂಬ ವಿಷಯ ಸ್ಪಷ್ಟವಾಗುತ್ತದೆ. ನಮಗೀಗ ದೊರೆತ ಈ ಶಿಲಾಶಾಸನವೇ ಆ ಶಾಸನ. ಜಿನವಲ್ಲಭನೇ ಇದರ ಕರ್ತೃ. ಅದರ ರಮ್ಯ ಅಕ್ಷರ ಪಂಕ್ತಿಗಳು ವೃಷಭಗಿರಿಯಲ್ಲಿ ಸಿದ್ಧಶಿಲೆಯ ಹಾಸುಬಂಡೆಯ ಉನ್ನತ ಸ್ಥಾನದಲ್ಲಿ ಈ ಹೊತ್ತಿಗೂ ಪರಿಶೋಭಿಸುತ್ತ ಪ್ರಕಾಶಮಾನವಾಗಿರುವವು.

ಸಿದ್ಧಶಿಲೆ ಎಂಬಂತಹ ಹೆಸರು ಜೈನ ಆವರಣದಲ್ಲಿ ಪರಿಚಿತವಾದುದು. ಜೈನರು ನಿತ್ಯಪೂಜಿಸುವ ಪಂಚಪರಮೇಷ್ಠಿಗಳಲ್ಲಿ ಸಿದ್ಧರು ಒಬ್ಬರು; ಮಿಕ್ಕ ನಾಲ್ವರು, ಜಿನ, ಉಪಾಧ್ಯಾಯ, ಆಚಾರ್ಯ ಮತ್ತು ಸಾಧು. ಪ್ರಸ್ತುತ ಶಾಸನವು 'ನಮಃ ಸಿದ್ಧೇಭ್ಯಃ' ಎಂಬ ನಮನದಿಂದ ಆರಂಭವಾಗುತ್ತದೆ. ಸಿದ್ಧರು ಈ ಸ್ಥಳದಲ್ಲಿ ತಪವನ್ನು ಆಚರಿಸುವರು ಎಂಬ ಆಖ್ಯಾಯಿಕೆಯಿಂದ ಈ ಶಿಲೆಗೆ ಆ ಹೆಸರು ಬಂದಿರಬೇಕು. ಗುಂತಕಲ್ಲಿಗೆ ಸ್ವಲ್ಪ ಅಂತರದಲ್ಲಿ ಕೊನಕೊಂಡ್ಲ ಎಂಬ ಗ್ರಾಮವಿದೆ. ಅದು ಜೈನರ ಆದ್ಯ ಗುರು ಕುಂಡಕುಂದಾಚಾರ್ಯರಿಗೆ ಸಂಬಂಧ ಪಟ್ಟ ಸ್ಥಳವೆಂದು ಒಂದು ಲೇಖನದಲ್ಲಿ ಸ್ಥಾಪಿಸಿದ್ದೇನೆ. ಆ ಗ್ರಾಮದ ನೆರೆಯಲ್ಲಿ ಗುಡ್ಡದ ಸಾಲುಗಳಿದ್ದು, ಅವುಗಳಿಗೆ 'ರಸಾಸಿದ್ಧುಲಗುಟ್ಟ' ಎಂದರೆ 'ರಸಸಿದ್ಧರಗುಡ್ಡ' ಎಂಬ ವಾಡಿಕೆಯ ಹೆಸರಿದೆ. ಈ ವಿಷಯವನ್ನು ಇಲ್ಲಿ ಸ್ಮರಿಸಬಹುದು.

(ಮುಂದುವರಿಯುವುದು)

ಲೇಖನಮಾಲೆ ೬

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

◆◆ ತಿ. ತಾ. ಶರ್ಮ

ಮಾನವ ಮಾತು

ಮಾನವ ಹೊಸಬನಲ್ಲ; ನಿನ್ನೆಮೊನ್ನೆ ಹುಟ್ಟಿದವನಲ್ಲ. ಮಾ+ನವ! ಬಹಳ ಹಳಬ! ಹಾಗೆಯೇ ಅವನು ಆಡುವ ಮಾತೂ ಸಹ ಹೊಸದಲ್ಲ, ಬಹಳ ಹಳೆಯದು. ಮಾನವ ನಷ್ಟೇ ಹಳೆಯದಾಗದೆ ಇದ್ದರೂ ಅವನು ಮಾತನಾಡಲು ಎಂದು ಆರಂಭಿಸಿದನೋ ಅಷ್ಟು ಹಳೆಯದು. ಅವನು ಮಾತನಾಡಲು ಆರಂಭಿಸಿದ್ದು ಯಾವಾಗ? ಅದನ್ನರಿಯಲು ಸಾಧ್ಯವಿಲ್ಲ; ವಿಜ್ಞಾನಿಗಳಿನ್ನೂ ಈ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆಸಿಲ್ಲ.

ಮಾತನಾಡದ ಪ್ರಾಣಿವರ್ಗದಿಂದ ಮನುಷ್ಯ ಪ್ರತ್ಯೇಕ ವಾದದ್ದು ಅವನು ಮಾತನಾಡಲು ಆರಂಭಿಸಿದಂದಿನಿಂದ. ಮನುಷ್ಯನೆಂದರೆ "ಆಲೋಚನೆ ಮಾಡುವ ಪ್ರಾಣಿ" ಎಂದು ಕೆಲವರು ಹೇಳುವರು; ಇರಬಹುದು. ಆದರೆ ಮನುಷ್ಯ ನನ್ನು "ಮಾತನಾಡುವ ಪ್ರಾಣಿ" ಎಂದು ಕರೆಯುವುದು ಹೆಚ್ಚು ಉಚಿತವೆಂದು ಕಾಣುತ್ತದೆ. ಮನುಷ್ಯ ಆಲೋಚ ನೆಯ ಪ್ರಾಣಿ ಮಾತ್ರವೇ ಆಗಿದ್ದರೆ ಅವನ ಆಲೋಚನೆ ಸದ್ದಿಲ್ಲದೆ ಅವನಲ್ಲೇ ಜೀರ್ಣವಾಗಿ ಹೋಗುತ್ತಿತ್ತು. ಅವನು ಮಾತನಾಡಲು ಸಮರ್ಥನಾದ್ದರಿಂದ ಅವನ ಆಲೋಚನೆ ಗಳು ಅವನ ಸುತ್ತಮುತ್ತಣವರಿಗೂ ಲಭ್ಯವಾಯಿತು. ಸುತ್ತಮುತ್ತ ಸುಳಿದಾಡುವವರೂ ಮಾತನಾಡಲಾರಂಭಿಸಿ ದರು. ಅವರ ವಿಚಾರಗಳೂ ಇವನಿಗೆ ಲಭ್ಯವಾಯಿತು. ಹೀಗೆ ವಿಚಾರಗಳ ಪರಸ್ಪರ ವಿನಿಮಯದಿಂದ, ಪರಸ್ಪರ ಅನುಭವ ಲಾಭದಿಂದ ಮನುಷ್ಯ ಬೆಳೆದ; ಮೂಕಪ್ರಾಣಿ ಗಳಿಂದ ಭಿನ್ನನಾದ. ಅಷ್ಟು ಮಾತ್ರವಲ್ಲ, ಬೃಹಸ್ಪತಿಯೇ ಆದ!

ಮಾತು ಪರಸ್ಪರ ವಿಚಾರವಿನಿಮಯಕ್ಕೊಂದು ಅಪೂರ್ವ ಮಾಧ್ಯಮ. ಈ ವಿನಿಮಯ ವ್ಯಾಪಾರ ಬೆಳೆದಂತೆಲ್ಲ, ವಿಸ್ತಾರವಾದಂತೆಲ್ಲ ಮಾತುಗಳೂ ಬೆಳೆಯುತ್ತವೆ; ಮಾತು ಗಳ ರೂಪರಚನೆ, ರುಚಿ ಸವಿ, ನಾದ ಮೋದ, ಮೊದಲಾ ದುವೂ ಬೆಳೆಯುತ್ತವೆ. ಈ ಮಾತಿನ ಬೆಳೆವಣಿಗೆ ಬಹಳ ವಾಗಿ ಮಾತನಾಡುವವರ ಸಂಸ್ಕಾರ, ಅನುಭವಗಳನ್ನು ಬಹಳಮಟ್ಟಿಗೆ ಅವಲಂಬಿಸಿರುತ್ತದೆ. ಪ್ರಭು-ಪ್ರಜೆ, ತಂದೆ-ಮಗ, ತಾಯಿ-ಮಗಳು, ಸತಿ-ಪತಿ, ಅಕ್ಕ-ತಂಗಿ, ಸನ್ಯಾಸಿ-ಸಂಸಾರಿ, ಗೆಳೆಯ-ಗೆಳೆಯ, ನೆರೆ-ಹೊರೆ, ಗುರು-ಶಿಷ್ಯ - ಇವರ ಸಂಭಾಷಣೆಗಳನ್ನು ಎಚ್ಚರಿಕೆಯಿಂದ ಗುರುತಿಸಿದಾಗ ಒಂದೊಂದು ವರ್ಗದ ಸಂಭಾಷಣೆಯಲ್ಲೂ ಒಂದೊಂದು ತರದ ನಾದ-ಮೋದ, ದೂರ-ಸಮೀಪ, ಸ್ನೇಹ-ಔದಾಸೀನ್ಯ, ಗಾಂಭೀರ್ಯ-ನೈಚ್ಯ ಇತ್ಯಾದಿ ಲಕ್ಷಣ ಗಳಿದ್ದು ಕಾಣುತ್ತವೆ. ಒಂದೊಂದು ಗುಂಪು ಬಳಸುವ ಮಾತುಗಳೇ ಬೇರೆ; ಆ ಮಾತುಗಳನ್ನು ಉಚ್ಚರಿಸುವ ರೀತಿಯೇ ಬೇರೆ.

ಮನವೆಂತು, ಮಾತಂತು; ಮನೆಯೆಂತು, ಮಾತಂತು; ಸಂಸಾರವೆಂತು, ಮಾತು ಅಂತು, ಸಮಾಜವೆಂತು, ಸಂಭಾ ಷಣೆ ಅಂತು. ಮಾತು, ಶೈಲಿ, ರಸ, ಭಾವ, ಇವೆಲ್ಲ ಸುಪುಷ್ಟವಾಗಿ, ಕೋಮಲವಾಗಿ, ಹೃದಯಂಗಮವಾಗಿ, ಮೈಮರೆಸುವಂತಾಗಿರಬೇಕಾದರೆ ಮನ, ಮನೆ, ಸಂಸಾರ, ಸಮಾಜ, ಜನಪದ ಜೀವನದಲ್ಲಿ, ಸಂಸ್ಕಾರದಲ್ಲಿ ಬಹಳ ಉನ್ನತ ಪದ ಮುಟ್ಟಿರಬೇಕು. ಇಲ್ಲವಾದರೆ ಎಲ್ಲ ರೂಕ್ಷ, ಕಿರಾತ, ಭಯಂಕರ.

ಜನ ಬೇರೆಯಲ್ಲ, ಜನಜೀವನ ಬೇರೆಯಲ್ಲ, ಭಾಷಾ ಸಾಹಿತ್ಯ ಬೇರೆಯಲ್ಲ. ಇದು ಬಹಳ ಹಳೆಯ ಮಾತು. ಮಾತಿಗೆ, ಮಾತುಗಳ ಸರಣಿಗೆ, ಗುಣ, ಗೌರವ, ಗಾಂಭೀರ್ಯಗಳು ಬರಬೇಕಾದರೆ; ಅದು ಅಭಯಪ್ರಧಾನ ಲಕ್ಷಣದಿಂದ, ಅಮೃತಪ್ರಾಯವಾಗಿ, ಇರಬೇಕಾದರೆ, ಮಾತನಾಡುವ ಜನರ ಸಭ್ಯತೆಯ ಮಟ್ಟ ಹೆಚ್ಚಬೇಕು. ಈ "ಪದ"ವನ್ನು ಮುಟ್ಟಬೇಕಾದರೆ ಬಾಯಿಲ್ಲದ ಮನುಷ್ಯ, ಎಷ್ಟು ಕಾಲ ಕಾದಿರಬೇಕು, ಒದ್ದಾಡಿರಬೇಕು, ಪ್ರಯೋಗಮಾಡಿರಬೇಕು, ತಪಸ್ಸನ್ನೇ ಮಾಡಿರಬೇಕು? ಯೋಚಿಸಿ!

“ ಸುಖೇ ದುಃಖೇ ಸಮೇಕೃತ್ವಾ”

ಕೋಲಾರ ಜಿಲ್ಲೆಯ ನಾನಾ ತಾಲ್ಲೂಕುಗಳ ಹಳ್ಳಿಗಳನ್ನೆಲ್ಲ ಹುಡುಕಿ ಒಂದು ಪಟ್ಟಿ ಮಾಡಿ ನೋಡಿದಾಗ “ಇದೆಂತಹ ಜನ? ಇಂತಹ ವಿಚಿತ್ರವಾದ ಹೆಸರುಗಳನ್ನೆ ತಮ್ಮ ಊರಿಗಿಡುವುದು” ಅನ್ನಿಸುತ್ತದೆ. ಈ ಹೆಸರುಗಳನ್ನು ನೋಡಿ:

ಛತ್ರಕೋಡಿ	ತಮಕ	ದಿಂಬ
ಕೆಂಬೋಡಿ	ಜಾರ್ಲದಿನ್ನೆ	ಹರಟ
ಉಪವಾಸಪುರ	ಉಪ್ಪುಕುಂಟೆ	ತೊಟ್ಲಿ
ಮುಳ್ಳಹಳ್ಳಿ	ಕಂಸನಹಳ್ಳಿ	ಬಲ್ಲ
ಕುಕ್ಕಲದೊಡ್ಡಿ	ಭಂಗವಾದಿ	ತಿನ್ನಲಿ
ಅಂಬ್ಲಿಕಲ್ಲು	ಮಿಂಡಹಳ್ಳಿ	ಪಾಯಸಂಪಲ್ಲಿ
ಭೀಮನವಡ್ಡು	ಈಜುಗುಂಟೆ	ಬಾಣಾಲಪಲ್ಲಿ
ಗುರಗಂಜಿಗುಟ್ಟ	ಗುರ್ರ್ರಾಲಗಡ್ಡ	ಚಾಪೂರು
ದೋಮಲಪಲ್ಲಿ	ಪುಲಿಗುಂಡ್ಲು	ಗೂಬಲಪಲ್ಲಿ
ಎಂಡಪಲ್ಲಿ	ಎನುಮುಲಪಾಡಿ	ತಿಣಕಲ್
ಚೀಮಲಗುಟ್ಟ	ಏನುಗದಲೆ	ತಿಗಣೆ
ಕುಕ್ಕಲದಿನ್ನ	ಹಿತ್ತಲಹಳ್ಳಿ	ತಿಕ್ಕಪಲ್ಲಿ
ಚೀಗಟೇಗಲಗುಟ್ಟ	ನೊಣಮಂಗಲ	ಅಹನ್ಯ
ಅಧಿಕಾರಹಟ್ಟಿ	ಗುವ್ವಲಪಲ್ಲಿ	ಮಸಿಕ
ಗಡಿಬಿಡಿ ಜಂಗಮನ ಹಳ್ಳಿ	ಕೀಳಕಂಬಳಿ	ಪಿಚ್ಚಪಲ್ಲಿ
ತುಮ್ಮಲಪಲ್ಲಿ	ಬೀಡಿಕೆರೆ	ಅದರಂಗಿ
ಕೈಲಂಚ	ಬಾಣಂತನಹಳ್ಳಿ	ಗಬ್ಬೂರು

ಈ ಹೆಸರುಗಳನ್ನಾರಿಸಿ ತಮ್ಮೂರಿಗಿಟ್ಟ ಜನ ಬಹಳ ರೂಕ್ಷಾವಸ್ಥೆಯಲ್ಲಿದ್ದಿರಬೇಕೆನಿಸುತ್ತದೆ. ಆದರೆ ಈ ಪಟ್ಟಿಯಲ್ಲಿ ಕಾಣಬರುವ ಹೆಸರುಗಳನ್ನು ನೋಡಿ:

ಚೆಲುವನಹಳ್ಳಿ	ತೋರಣಕಂಬ	ಮದನಹಳ್ಳಿ
ಪದ್ಮಘಟ್ಟ	ಕೋಗಿಲೇರಿ	ವಿಕಟಕವಿ
ಹೂಹಳ್ಳಿ	ಮುಚ್ಚಟ್ಲದಿನ್ನ	ಮದ್ದಲಖಾನ
ಯಾಲಕ್ಕಿವಾರಿ ದಿನ್ನ	ಕಾಮಸಾನಿಪಲ್ಲಿ	ಗಂಧಂವಾರಿಪಲ್ಲಿ
ಕೀರಮಂದೆ	ಚಿನ್ನಾರದೊಡ್ಡಿ	ಸುಂದರಪಾಳ್ಯ
ತೇರುಬೀದಿ	ಕರ್ಪೂರ	ಹಸುರುವಾಣಿ
ಹೊನ್ನಕಲಶಪುರ	ಮಂಟಪ	ಮಕ್ಕಳಂದ
ಅಂಗಜನಹಟ್ಟಿ	ಭಾರತೀಪುರ	ಚಕ್ರಭಾವಿ

ಇಲ್ಲಿ ಜನರಿಗೆ ಸೌಂದರ್ಯದ ಕಲ್ಪನೆ, ಸುಖಜೀವನದ ಅನುಭವ, ವಿನೋದ-ವಿಲಾಸ ಲಾಲಸೆ, ಈ ಗುಣಗಳೆಲ್ಲ ಇರುವುದು ವ್ಯಕ್ತವಾಗುತ್ತದೆ. ಗಿಣಿಯಲ್ಲಿ ಒಂದು ಬಗೆಯ ಸೌಂದರ್ಯ ಕಂಡರೆ, ಗೂಬೆಯಲ್ಲಿ ಇನ್ನೇನೋ ಅಮೂಲ್ಯವಾದ ಪಾಠವನ್ನು ಕಂಡಿದ್ದಾರೆ. ಗಂಧದ ಊರಿನಲ್ಲು ಇರಲು ಇಷ್ಟಪಟ್ಟಿದ್ದಾರೆ; ಗಬ್ಬೂರಿನಲ್ಲೂ ವಾಸಮಾಡುವ ಸಹನೆ ತೋರಿಸಿದ್ದಾರೆ. ಸೊಳ್ಳೇಪುರ, ಚೀಮಲಗುಟ್ಟಗಳ ಸುಖಾನುಭವವೂ ಅವರಿಗಿದೆ; ಸುಂದರಪಾಳ್ಯದ ಜೀವನಾನುಭವವೂ ಇದೆ. ಹಂದಿಕುಂಟೆಯಲ್ಲಿ ಸ್ನಾನಮಾಡಿದ್ದಾರೆ; ಚಕ್ರಭಾವಿಯ ನೀರು ಕುಡಿದಿದ್ದಾರೆ!

ಭವ್ಯನಾಗರಿಕತೆ ಹೂತುಕೂತಿದೆ

ಕನ್ನಡನಾಡಿನ ಜೀವನಭಾಗ್ಯದ ಸಂಪೂರ್ಣಚಿತ್ರ ಲಭ್ಯವಾಗಬೇಕಾದರೆ ಮೂಲಸಾಧನ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಕನಿಷ್ಟ ಪಕ್ಷ ಎರಡುಸಾವಿರ ವರ್ಷಗಳ ಇತಿಹಾಸವನ್ನು, ಸರ್ವತೋಮುಖವಾದ ಇತಿಹಾಸವನ್ನು, ಎಲ್ಲೂ ಊನಬಾರದ ಹಾಗೆ, ಬರೆಯಬಹುದಾಗಿದೆ. ಮೂಲಸಾಧನ ಸಾಮಗ್ರಿಗಳೀಗ ಲಭ್ಯವಾಗಿರುವುದರ ಜತೆಗೆ ಶಿಥಿಲವಾಗಿ ಮಣ್ಣುಗೂಡುತ್ತಿರುವ ವಾಸ್ತು, ಶಿಲ್ಪ, ಚಿತ್ರಕರ್ಮ, ಶಾಸನ, ನಾಣ್ಯ, ಹಸ್ತಪ್ರತಿಗಳು, ಲೋಹಕರ್ಮ—ಮೊದಲಾದವುಗಳ ಸಂಗ್ರಹವಾಗಬೇಕು. ಭೂಮಿಯಲ್ಲಿ ಹೂತುಕೂತಿವೆ ಎಷ್ಟೋ ಸಾಧನೋದಾಹರಣೆಗಳು. ಹತ್ತಾರು ಪ್ರಾಚೀನ ಕ್ಷೇತ್ರಗಳಲ್ಲಿ ಭೂಶೋಧನೆಗಳಾಗಬೇಕಾಗಿದೆ. ವಿದ್ಯಾರತ್ನ ಶ್ರೀಮಾನ್ ಆರ್. ಎಸ್. ಪಂಚಮುಖಿಯವರು ಧಾರವಾಡದ “ಕನ್ನಡ ಸಂಶೋಧನಾಲಯ”ದ ಅಧಿಕಾರಿಗಳಾಗಿದ್ದಾಗ ಪ್ರಕಟಿಸಿದ ವರದಿ (೧೯೪೧-೪೬) ಯಲ್ಲಿ ಹೇಳಿದ ಈ ಮಾತುಗಳನ್ನು ೧೯೬೭-೬೮ರಲ್ಲೂ ಯಾರೂ ಗಮನಿಸಿರುವ ಹಾಗಿಲ್ಲ. ಇದು ಕರ್ನಾಟಕದ ದುರ್ದೈವ.

“ಯವನ ಭೂಗೋಳಕಾರ ಟಾಲೆಮಿಯು ವ್ಯಾಪಾರ ಮತ್ತು ಇತಿಹಾಸ ದೃಷ್ಟಿಯಿಂದ ಅಮೂಲ್ಯವಾದುವೆಂದು ಹಿಪ್ಪೊಕೌರ, ಇಂಡೆ, ಪೆಟಿರ್ಗಳ, ಬಾಡಿಯಮುಯಿ, ಎಂಬ ಹೆಸರುಗಳನ್ನೂ ಹೇಳುತ್ತಾನೆ. ಸಂಬಂಧಪಟ್ಟಂತೆ ನೋಡಿದಾಗ ಅವೆಲ್ಲ ಬಿಜಾಪುರ ಜಿಲ್ಲೆಯಲ್ಲೆ ಇವೆ. (ಮುಂಬಯಿ ಆಧಿಪತ್ಯ) ಅವುಗಳನ್ನು ಇಂಡಿ, ಪಟ್ಟದಕಲ್, ಬಾದಾಮಿ, ಹಿಪ್ಪರ್ಗಿಗಳೆಂದು ಗುರುತಿಸಬಹುದು. (ಹಿಪ್ಪರಗಿಗೆ ಬದಲಾಗಿ ಕೊಲ್ಲಾಪುರವೆಂದು ಅನುಮಾನ ಮಾಡಲಾಗಿದೆ). ಏನೇ ಆಗಲಿ ಇವೆಲ್ಲ

ಕ್ಷೇತ್ರಗಳ ಪರಿಶೋಧನೆ ಮೊದಲಾಗಬೇಕು. ಶಾಸನಗಳೀ ಸ್ಥಳಗಳಿಗೆ ಸಂಬಂಧಪಟ್ಟಂತೆ ಸಾಕಷ್ಟು ಆಶ್ಚರ್ಯಕರ ವಿವರಗಳನ್ನು ಕೊಡುತ್ತವೆ. ಹಳೆ ಶಾಸನಗಳಲ್ಲಿ ಪಟ್ಟದಕಲ್ಲು ಬಾದಾಮಿ ಚಾಳುಕ್ಯರ ರಾಜರು ಪಟ್ಟಕ್ಕೇರುತ್ತಿದ್ದ ಸ್ಥಳವೆಂದು ಹೇಳಿದೆ. 'ಪಟ್ಟದ ಕಿಸುವೊಳಲ್' ಎಂಬುದು ಅದರ ಕೀರ್ತಿ. ಮಲಪ್ರಭಾ ದಂಡೆಯಲ್ಲೇ ಪ್ರಾಚೀನ ನಗರವೊಂದಿರಬೇಕೆಂಬುದನ್ನು ನಾನು ಗುರುತಿಸಿರುತ್ತೇನೆ. ಮಡಕೆ ಚೂರುಗಳು, ಇಟ್ಟಿಗೆಗಳು, ಕಟ್ಟಡಗಳ ವಿಕಲಾಂಗಗಳೂ ಅಲ್ಲಿ ಸಿಕ್ಕಿವೆ. ಹೆರಕಲ್ ಬಳಿ ದೊರೆತ ಅವಶೇಷಗಳಂತೆಯೇ ಇವೆ. ಬನವಾಸಿ (ಉತ್ತರ ಕನ್ನಡ), ಲಕ್ಷ್ಮೇಶ್ವರ (ಮಿರಜ್), ಹಲಸಿ (ಬೆಳಗಾಂ ಜಿಲ್ಲೆ), ಕಡಲೆವಾಡ (ಬಿಜಾಪುರ ಜಿಲ್ಲೆ) ಮುಂತಾದ ಕಡೆಗಳಲ್ಲೂ ಭೂಶೋಧನೆಗಳಾಗಬೇಕಾಗಿವೆ."[1]

ಇದಕ್ಕಿಂತ ಹೆಚ್ಚಾಗಿ ಅವರ "ಮೊರೆ" ಯನ್ನು ಪ್ರಕಟಿಸಬೇಕಾಗಿಲ್ಲ. ಇತ್ತೀಚೆಗೆ ಡಾ|| ಶೇಷಾದ್ರಿಗಳು ಗುಲ್ಬರ್ಗ ಜಿಲ್ಲೆಯ[2] ಸನದಿ ಬಳಿ ಶಾತವಾಹನರ ಕಾಲದ ಬೌದ್ಧ ಸ್ಥೂಪಾವಶೇಷಗಳನ್ನು ಕಂಡುಹಿಡಿದಿದ್ದಾರೆ.

ಸಾಹಿತ್ಯ ಕಲೆ-ನೀತಿ

ಮಾನವ ಜೀವನದಲ್ಲಿ ಲಿಂಗಬಾಂಧವ್ಯ-ಗಂಭೀರವಾದ ಮಾತುಗಳಿಂದ ಹೇಳಬೇಕಾದರೆ ಸ್ತ್ರೀಪುರುಷರ ಬಾಂಧವ್ಯ ಪ್ರಧಾನ ಭಾಗವನ್ನಾಕ್ರಮಿಸಿದೆ. ಈ ಬಾಂಧವ್ಯದ ಕಥೆ ಬಹಳ ಹಳೆಯದು. ಆದರೆ ಇಂದಿನ ಜೀವನದಲ್ಲಿ ಲಿಂಗ ವಿಚಾರವೇ ಎಲ್ಲ ಕ್ಷೇತ್ರಗಳಲ್ಲೂ ಎದ್ದು ಕಾಣುತ್ತದೆ. ಇದು ಸರಿಯೋ, ತಪ್ಪೋ—ಆ ವಿಚಾರ ಅಥವಾ ವಾದ ಇಲ್ಲಿ ಅಪ್ರಕೃತ. ಈ ವಿಚಾರವನ್ನೇ ವಿಶಿಷ್ಟ ಅಧ್ಯಯನವನ್ನಾಗಿ ಮಾಡಿಕೊಂಡಿರುವ ಲೇಖಕರೊಬ್ಬರು ಹೇಳುವ ಈ ಮಾತನ್ನು ಕೇಳಿ:

"What is, however, significant for our time, and is a sign of the "Sensate Period" of each civilization, is that alluring, provocative aspects of sex are today more openly and more frequently despicted than in former ages. A glance at any magazine rack or page of movi advertisements in any big city nowadays will suffice to bear ont this statement."

ತುಚ್ಛ ಶೃಂಗಾರ ಲೀಲಾವಿಲಾಸಗಳ ನಾನಾ ಭಂಗಿಗಳಿಂದ ಕೂಡಿದ ಸ್ತ್ರೀ ಚಿತ್ರಗಳಿಲ್ಲದ ವ್ಯಾಪಾರ ಪ್ರಕಟನೆಯೇ ಇಲ್ಲ! ಹಲ್ಲುಜ್ಜಿಕೊಳ್ಳುವುದರಿಂದಾರಂಭಿಸಿ, ಸೀರೆಯುಟ್ಟು ಸಂಜೆ ವಿಹಾರಕ್ಕಾಗಿ ಹೊರಡುವವರೆಗಿನ ಸಾಲುಚಿತ್ರಗಳಂತೆ ಪತ್ರಿಕೆಗಳಲ್ಲಿ ಪ್ರಕಟನೆಗಳು ಬರುತ್ತವೆ.

ಈ ವ್ಯಾಧಿ ಕನ್ನಡ ಸಾಹಿತ್ಯ ಪ್ರಕಟಣೆಗಳನ್ನೂ ಬಾಧಿಸಲಾರಂಭವಾಗಿದೆ. ತಲೆತಗ್ಗಿಸಬೇಕಾದಂತಹ ವರ್ಣಚಿತ್ರಗಳನ್ನೂ ರಕ್ಷಾಪತ್ರಗಳ ಮೇಲೆ ಪ್ರದರ್ಶಿಸುವರು. ಅಚ್ಚು ಮಾಡಲು ಹೇಸಿಕೆಯಾಗುವಂತಹ ವಾಕ್ಯಗಳನ್ನೂ, ವಚನಗಳನ್ನೂ, ಬರೆದು ತಮ್ಮ "ಕಾವ್ಯ" ಗಳ ಪುಟಗಳನ್ನು ಕಶ್ಮಲಗೊಳಿಸುವರು. ಇದು "ಸ್ವಾತಂತ್ರ್ಯ ಯುಗ"; ಒಪ್ಪೋಣ. "ಸ್ವಚ್ಛಂದವೃತ್ತಿ" ಆರೋಗ್ಯ ಸೂಚಕವಲ್ಲ. ಲಂಗುಲಗಾಮಿಲ್ಲದ ಜೀವನದಲ್ಲಿ ಸುಂದರ ಸೃಷ್ಟಿಯೇನಾದೀತು?

"ಕಲೆಗೂ ನೀತಿಗೂ ಏನು ಸಂಬಂಧ?" ಎಂದು ಮುಷ್ಟಿಯನ್ನಾಡಿಸಿ ಕೇಳುವವರಿದ್ದಾರೆ. ಇದು ಬಹಳ ದೊಡ್ಡ ವಿಚಾರ. "ಸಾಹಿತ್ಯ-ಕಲೆ-ನೀತಿ" ಈ ಮೂರರ ವಿಚಾರವಾಗಿ ವಿದ್ವಾಂಸರು, ಅನುಭವಿಗಳು, ಕಲಾವಿದರು, ಪ್ರಾಮಾಣಿಕತೆಯಿಂದ ಚರ್ಚೆಮಾಡುವುದು ಅವಶ್ಯಕ. ಈ ಬಗೆಯ ಚರ್ಚೆಯಿಂದ ಬಹಳ ಲಾಭವಾಗುತ್ತದೆ. ಕಿರಿಯರಿಗೆ ದಾರಿತೋರಿಸಿಕೊಟ್ಟಂತಾಗುತ್ತದೆ.

ಬೇರೆಯಾದರೂ ಬೇರುಗಳೊಂದೇ

"ಒರಗು" (ಪಂಪಭಾರತ, ೧೧-೪೭)
"ಒಡ್ಡ" (,, ೬-೭೧)
"ಎಕ್ಕಸಕ್ಕ" (,, ೧೧-೧೩೭)
"ಬೋನ" (,, ೩-೭೯)

ಈ ನಾಲ್ಕು ಮಾತುಗಳನ್ನಾರಿಸಿಕೊಟ್ಟು, "ಸಮಗ್ರ ಆಂಧ್ರ ಸಾಹಿತ್ಯ"[1] ಗ್ರಂಥಕರ್ತರಾದ ಶ್ರೀ ಆರುದ್ರರು ಇವೆಲ್ಲ ತೆಲುಗು ಪದಗಳೆಂದು ಹೇಳುತ್ತಾ—

1 Progress of Kannada Research in Bombay Province, 1941-46, P. 47.

2 The Quarterly Journal of the Mythic Society, April 1965, Jan. 1966, Vol. LVI, P. 35.

1 ಸಮಗ್ರ ಆಂಧ್ರ ಸಾಹಿತ್ಯಂ, ಚಾಳುಕ್ಯ ಯುಗಂ. ಪು. ೩೯.

"ಇಂತಹ ಕನ್ನಡ ಮರೆಯಲ್ಲಿ ತೆಲುಗು ರೂಪಗಳು ಕಂಡುಬರುತ್ತವೆ. ಪಂಪ ಕವಿ "ಬೇಯಿಸಿದ ಅನ್ನ" ವೆಂಬ ಅರ್ಥದಲ್ಲಿ 'ಬೋನ' ವನ್ನು ಬಳಸಿದರೆ ರನ್ನ ಕವಿಯು "ಎಸರು" ಎಂಬ ತೆಲುಗು ಪದವನ್ನೇ ಉಪಯೋಗಮಾಡಿದ್ದಾನೆ. ಇವನು ಕನ್ನಡ ರತ್ನತ್ರಯದಲ್ಲಿ ಮೂರನೆಯವ. ವೆಂಗೀವಿಷಯದ ಕಮ್ಮನಾಡಿಗೆ ಸೇರಿದ ಮಲ್ಲಪಾರ್ಯನೂ, ಪುನ್ನಮಾರ್ಯನೂ, ಪ್ರೇರೇಪಿಸಲಾಗಿ, ಪೊನ್ನಕವಿ ಕನ್ನಡದಲ್ಲಿ "ಶಾಂತಿಪುರಾಣ" ವೆಂಬ ಜೈನಪುರಾಣ ಬರೆದ. ಒಟ್ಟಿನಮೇಲೆ ಕನ್ನಡ ರತ್ನತ್ರಯದಲ್ಲಿ ಮೂವರೂ ತೆಲುಗು ಸಂಬಂಧ ಉಳ್ಳವರೇ. ಆದ್ದರಿಂದಲೇ ಇವರು ತೆಲುಗು ಛಂದಸ್ಸುಗಳನ್ನು ಕನ್ನಡ ಭಾಷೆಗೆ ಕಾಣಿಕೆಯನ್ನಾಗಿ ಅರ್ಪಿಸಿದ್ದಾರೆಂದು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ."

ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.* ಗಡಿಯಾರದ ಶ್ರೀ ರಾಮಕೃಷ್ಣ ಶರ್ಮರವರು ಇನ್ನೂ ಸ್ಪಷ್ಟವಾಗಿ "ಕವಿರಾಜಮಾರ್ಗ" ವನ್ನು ಕುರಿತು ಬರೆಯುತ್ತಾ

"ಕನ್ನಡದೊಳಕ್ಕೆ ಪ್ರಾಕೃತ ಛಂದಸ್ಸುಗಳಿಂದ ಕಂದ, ರಗಳೆಗಳನ್ನೂ, ತೆಲುಗಿನಿಂದ ದ್ವಿಪದ, ಸೀಸ, ಗೀತಗಳನ್ನೂ ತೆಗೆದುಕೊಳ್ಳಲಾಗಿದೆ"

ಅಂದಿದ್ದಾರೆ.

ಕನ್ನಡ–ತೆಲುಗು ಭಾಷೆಗಳ ಬಾಂಧವ್ಯ "ನೆರೆ–ಹೊರೆ" ಯಂತೆಂದು ಭಾವಿಸುವುದು ತಪ್ಪು. ಒಂದು ಕಾಲದಲ್ಲಿ ಇವೆರಡೂ ಭಾಷೆಗಳು 'ಬೇರೆಯಲ್ಲ' ಅನ್ನುವ ಹಾಗಿತ್ತು. ನಾನಾ ಕಾರಣಗಳಿಂದ ಕ್ರಮವಾಗಿ "ಬೇರೆ" ಯಾದುವು. ಆದರೂ ಇವುಗಳ "ಬೇರು" ಗಳೊಂದೇ.

---

* ಆಂಧ್ರಪ್ರದೇಶ ಸಾಹಿತ್ಯ ಅಕಾಡೆಮಿಯವರ "ದಕ್ಷಿಣಭಾರತ ಸಾಹಿತ್ಯಗಳು."

ತಾಯ ತಪ್ಪಿದ ಹಸುಳೆ

ತಾಯ ತಪ್ಪಿದ ಹಸುಳೆ
ನಾನೆಂದು ನೀನರಿತು
ನಿನ್ನ ಮಮತೆಯ ಮಡಿಲೊ
ಳಿಟ್ಟು ಸಲಹು.

ಹಗಲಿರುಳಿನಲಿ ಸುಳಿವ
ನೋವು ನಲಿವಿನ ನಡುವೆ
ನಿನ್ನ ಮರೆಯದ ತೆರದಿ
ನನ್ನ ಉಳಿಸು.

ಗೆಲುವು ಸೋಲಿನ ಸುಳಿಗೆ
ಸಿಲುಕಿ ಸೊರಗದ ತೆರದಿ
ಸಮತೆ ಚಿತ್ತವನಿತ್ತು
ನಿತ್ಯ ಬೆಳೆಸು.

ನನ್ನದೆಂಬುದೆ ಸತ್ಯ
ಅನ್ಯವೆಲ್ಲವು ಮಿಥ್ಯ
ಎಂಬ ಗೊಂದಲದಿಂದ
ನನ್ನ ಗೆಲಿಸು.

ಜಾತಿಮತಗಳ ಪಂಕ
ಹುಗಿದು ಹೂಳುವ ಮುನ್ನ
ಕರುಣೆ ಹಸ್ತವನಿತ್ತು
ನನ್ನನುದ್ಧರಿಸು.

ನಾನು ನನ್ನದು ಎಂಬ
ಮೋಹ ಪಾಶವ ಕಳೆದು
ನನ್ನೊಳ್ಳಪ್ಪ ನಾಂ ಗೆಲಲು
ನೀನು ಹರಸು.

ಕೆ. ಆರ್. ಗಣೇಶರಾವ್

ವಿಷಾದಯೋಗ

◆◆ ಮ. ಸು. ಕೃಷ್ಣಮೂರ್ತಿ

ಮನುಷ್ಯ ಹುಟ್ಟಿದಾಗ ಅಳುತ್ತಾನೆ: ಸಾಯುವಾಗ ಅವನ ನೆಂಟರಿಷ್ಟರು ಅತ್ತು ಅವನನ್ನು ಬೀಳ್ಕೊಡುತ್ತಾರೆ. ಈ ರೀತಿ ಅಳು ಮನುಷ್ಯನ ಹುಟ್ಟು ಸಾವುಗಳ ಒಡನಾಡಿ : ಅಷ್ಟೇ ಅಲ್ಲ ಅದು ಬದುಕಿನ ಒಡನಾಡಿಯೂ ಹೌದು ಎಂದು ಅನುಭವ ಹೇಳುತ್ತದೆ. ಇದನ್ನೇ ಕುರಿತು ಬುದ್ಧ ಹೇಳಿದ. "ಸವ್ವಂ ದುಃಖಂ" ಎಲ್ಲವೂ ದುಃಖಮಯ. ಬೌದ್ಧ ಧರ್ಮದಲ್ಲಿ ಆ ದುಃಖ ಆರ್ಯ ಸತ್ಯಗಳಲ್ಲಿ ಒಂದು. ದುಃಖ ಈ ರೀತಿ ಮನುಷ್ಯನಿಗೆ ಹಾಸಲುಂಟು ಹೊದಿಯಲುಂಟು. ನಮ್ಮ ಬದುಕಿಗೆ ಇಷ್ಟೊಂದು ನಿಕಟವಾಗಿರುವ ಈ ದುಃಖ ಮಾತ್ರ ಯಾರಿಗೂ ಬೇಡ. ಪ್ರಪಂಚದ ಎಲ್ಲ ದಾರ್ಶನಿಕರು ಸಾಧು ಸಂತರು ಈ ದುಃಖದಿಂದ ದೂರವಾಗಿ ಚಿರಂತನ ಆನಂದವನ್ನು ಅರಸಲು ಹೊರಟ ಮಹಾಪುರುಷರು.

ತೈತ್ತರೀಯ ಉಪನಿಷತ್ತಿನ ಆನಂದವಲ್ಲಿಯಲ್ಲಿ"ಈ ಜಗತ್ತಿನಲ್ಲಿ ಎಲ್ಲವೂ ಆನಂದಮಯ. ಜೀವಿಗಳು ಹುಟ್ಟುವುದು ಆನಂದದಿಂದ. ಆನಂದದತ್ತ ಅವು ಹೋಗುತ್ತವೆ. ಆನಂದವೇ ಬ್ರಹ್ಮ" ಎಂಬ ಮಾತುಗಳು ಬರುತ್ತವೆ. ಬದುಕು ಮತ್ತು ಅದರ ಆಚೆ ಈಚೆ ಇವೆಲ್ಲವೂ ಆನಂದಮಯ ಎಂಬುದು ತಾತ್ವಿಕವಾಗಿ ನಿಜವಿರಬಹುದು. ಆದರೆ ಅನುಭವದ ಜಗತ್ತಿನಲ್ಲಿ ನಲಿವಿಗಿಂತ ನೋವೇ ಹೆಚ್ಚು, ನಗೆಗಿಂತ ಕಂಬನಿಯೇ ಹೆಚ್ಚು. ದುಃಖವನ್ನು ನಿರ್ನಾಮ ಮಾಡಲು ಬಹಳ ಜನರೇನೋ ಪ್ರಯತ್ನಪಟ್ಟರು. ಆದರೆ ದುಃಖ ಅಷ್ಟು ಸುಲಭವಾಗಿ ಮಾಯವಾಗುವ ವಸ್ತುವೇ? ಅದು ಅನಿವಾರ್ಯವಾಗಿರುವಾಗ ಅದರೊಡನೆ ಸಹಬಾಳ್ವೆ ನಡೆಸಬೇಕು ; ಇಲ್ಲವೆ ಸಂಗರಾಹಿತ್ಯವನ್ನು ಕಲಿಯಬೇಕು.

ನಿಜವಾಗಿ ನೋಡಿದರೆ ದುಃಖ ಇಲ್ಲವೆ ವಿಷಾದ ನಾವು ಎಣಿಸಿರುವಷ್ಟು ಕೆಟ್ಟದ್ದಲ್ಲ. ಅಷ್ಟೇ ಅಲ್ಲ, ನಾವು ಬಾಯಲ್ಲಿ ಬೇಡವೆಂದರೂ ದುಃಖವನ್ನು ದೂರೀಕರಿಸುವುದಿಲ್ಲ. ಅದನ್ನು ಬಯಸುವವರೂ ಉಂಟು. ಬಯಸುವುದೇನು? ದುಃಖವಿಲ್ಲದೆ ನಾವು ಬಾಳುವುದೇ ಅಸಾಧ್ಯ. ದುಃಖ ಅಷ್ಟೊಂದು ತ್ಯಾಜ್ಯವಿದ್ದರೆ ನಾವೇಕೆ ದುರಂತ ನಾಟಕಗಳನ್ನು ಮತ್ತೆ ಮತ್ತೆ ನೋಡುತ್ತೇವೆ? ಕಾಸುಕೊಟ್ಟು ಚೇಳಿನ ಕೈಲಿ ಕುಟುಕಿಸಿಕೊಳ್ಳುವಷ್ಟು ಮೂರ್ಖರೇ ನಾವು? ಹಾಗಾದರೆ ಈ ದುಃಖದಲ್ಲೂ ಏನೋ ಒಂದು ವಿಧವಾದ ಸ್ವಾರಸ್ಯವು ಇರಬೇಕು. ಸ್ವಾರಸ್ಯವೇ ಅಲ್ಲ, ಸುಖವೇ ಇರಬೇಕು. ದುಃಖದಲ್ಲಿ ಸುಖ ಹೇಗಿರುತ್ತದೆ ಎಂಬುದನ್ನು ಕುರಿತು ದಾರ್ಶನಿಕರು ವಿವೇಚನೆ ನಡೆಸಿದ್ದಾರೆ. ದುಃಖದಲ್ಲಿ ಸುಖವುಂಟಾಗಲು ಹಲವು ಕಾರಣಗಳಿರಬಹುದು :

೧. ಮನುಷ್ಯ ತನ್ನ ಇಲ್ಲವೆ ತನ್ನ ಪ್ರಿಯಜನರ ದುಃಖದಲ್ಲಲ್ಲದಿದ್ದರೆ ಇತರರ ದುಃಖವನ್ನು ಕಂಡು ಕೊನೆಯ ಪಕ್ಷ ತಾನು ಆ ದುಃಖದಿಂದ ದೂರವಾಗಿದ್ದೇನಲ್ಲ ಎಂದು ಸುಖವನ್ನು ಅನುಭವಿಸಬಹುದು.

೨. ದುಃಖಾಂತ ನಾಟಕಗಳನ್ನು ನೋಡುವಾಗ 'ಇದು ಬರಿಯ ನಾಟಕ, ಬದುಕಲ್ಲ' ಎಂಬ ಅರಿವಿನಿಂದ ದುಃಖಕ್ಕೆ ಬದಲು ಸುಖವುಂಟಾಗಬಹದು.

೩. ಶೋಪೆನ್‌ಹೌರನ ಪ್ರಕಾರ – ದುರಂತ ನಾಟಕಗಳನ್ನು ನೋಡುವುದರಿಂದ ನಮಗೆ ಬದುಕಿನ ನಿಸ್ಸಾರತೆಯ ಅನುಭವವಾಗುತ್ತದೆ. ಮನುಷ್ಯನ ಬದುಕಿನಲ್ಲಿ ವಿಷಾದವೇ ಹೆಚ್ಚಾಗಿದೆ. ಅವನ ಬಹುಪಾಲು ಆಶೋತ್ತರಗಳು ಈಡೇರುವುದಿಲ್ಲ. ಆದ್ದರಿಂದ ಸಮದುಃಖಿಯನ್ನು ಕಂಡು ನಾನೊಬ್ಬನೇ ಅಲ್ಲ ಕಂಬನಿ ಮಿಡಿಯುತ್ತಿರುವವನು, ನನ್ನ ಜೊತೆಗೆ ಇತರರೂ ಇದ್ದಾರೆ ಎಂಬ ಅರಿವು ಅವನ ಸುಖಕ್ಕೆ ಕಾರಣವಾಗುತ್ತದೆ.

೪. ಅರಿಸ್ಟಾಟಲಿನ ದುಃಖಾತ ನಾಟಕಗಳಲ್ಲಿ ದೊರೆಯುವ ಸುಖಾನುಭವಕ್ಕೆ ಥಾರ್ಸಿಸ್ ಎಂಬ ಶಬ್ದವನ್ನು ಬಳಸಿದ್ದಾನೆ. ಥಾರ್ಸಿಸ್ ಎಂದರೆ ಹೃದಯ ವಿರೇಚನ. ವಿರೇಚನೌಷಧದಿಂದ ಶರೀರ ಶುದ್ಧವಾಗುವಂತೆ ಕಲೆಗಾರನ ಚಿಕಿತ್ಸೆಯಿಂದ ನಮ್ಮ ಭಾವನೆಗಳ ಶುದ್ಧೀಕರಣ ನಡೆಯುತ್ತದೆ.

ಕೆಲವು ವೇಳೆ ರೋದನ ಅಥವಾ ದುಃಖ ಅತ್ಯಗತ್ಯವಾಗುತ್ತದೆ. ಜಗತ್ತಿನಲ್ಲಿ ಹಲವು ತೆರನಾದ ಜನರಿದ್ದಾರೆ. ತುಂಬ ಭಾವುಕರು ಇಲ್ಲವೆ ತುಂಬ ಕಲ್ಲೆದೆಯವರು. ದುರಂತ ನಾಟಕಗಳನ್ನು ನೋಡುವುದರಿಂದ ಈ ಎರಡು ವರ್ಗದ ಜನರಿಗೂ ಲಾಭ. ಕಲ್ಲೆದೆಯವನು ಭಾವುಕನಾಗುತ್ತಾನೆ, ತುಂಬ ಭಾವುಕರಾದವರು ಕೊಂಚ ಕಠೋರವಾಗುತ್ತಾರೆ. ಇಂಥ ಒಂದು ಚಿಕಿತ್ಸೆ ಬದುಕಿಗೆ ಅವಶ್ಯಕ. ಇಲ್ಲವಾದರೆ ಭಯಂಕರ ಪರಿಣಾಮಗಳಾಗುತ್ತವೆ. ಅತ್ಯಂತ ದುಃಖ

ವಾದರೂ ಅಳದೇ ಇದ್ದವನ ಎದೆ ಒಡೆದು ಒಡೆದು ಅವನು ಸಾಯುವುದುಂಟು. ಇಲ್ಲವೆ ಮೂಕನಾಗುವ ಸನ್ನಿವೇಶವೂ ಉಂಟು.

ಹಾಬ್ಸ್ ಮತ್ತು ಲಾಕೆಯ ಪ್ರಕಾರ ದುಃಖಾಂತ ನಾಟಕಗಳ ದರ್ಶನದಿಂದ ನಮ್ಮ ಕಲ್ಪನಾಶಕ್ತಿ ಜಾಗೃತವಾಗುತ್ತದೆ. ನಾವು ಭಾವಸಾಹಚರ್ಯದಲ್ಲಿ ಸುಖವನ್ನು ಅನುಭವಿಸುತ್ತೇವೆ. ಕಾಳಿದಾಸನ ಪ್ರಕಾರ ಅನುಭವ ದುಃಖಾತ್ಮಕವಾಗಿರಬಹುದು. ಆದರೆ ಅದರ ನೆನೆಹು ಪರಿಭಾವನೆಯಿಂದ ನಮಗೆ ಸುಖವೇ ಉಂಟಾಗುತ್ತದೆ. 'ರಘುವಂಶ' ದಲ್ಲಿ ಒಂದು ಸುಂದರವಾದ ಸನ್ನಿವೇಶ ಬರುತ್ತದೆ. ರಾವಣನನ್ನು ಸಂಹರಿಸಿ ಲಂಕೆಯನ್ನು ಗೆದ್ದು ರಾಮ ಅಯೋಧ್ಯೆಗೆ ಹಿಂತಿರುಗಿದ. ಅವನು ವನವಾಸದಲ್ಲಿ ಪಟ್ಟ ಬವಣೆ ಮೊದಲಾದುವುಗಳನ್ನು ಅವನ ಚಿತ್ರಕಾರ ಸುಂದರವಾಗಿ ಚಿತ್ರಿಸುತ್ತಾನೆ. ಆ ಚಿತ್ರಗಳನ್ನು ನೋಡಿದಾಗ ರಾಮನಿಗೆ ದುಃಖದ ಬದಲು ಸುಖವೇ ಆಯಿತಂತೆ:

" ತಯೋರ್ಯಥಾ ಪ್ರಾರ್ಥಿತಮಿಂದ್ರಿಯಾರ್ಥಾ ನಾ
ಸೇದುಷೋಃಸದ್ಮಸು ಚಿತ್ರವತ್ಸು |
ಪ್ರಾಪ್ತಾನಿ ದುಃಖಾನ್ಯಪಿ ದಂಡಕೇಷು ಸಂಚಿಂತ್ಯಮಾನಾನಿ
ಸುಖಾನ್ಯಭೂವನ್ ||

ರಸಾನುಭವದ ರಹಸ್ಯವೇ ಇಲ್ಲಿದೆ. ವ್ಯಾವಹಾರಿಕ ಜಗತ್ತಿನ ಅನುಭವಗಳು ದುಃಖಜನ್ಯವಾಗಿರಬಹುದು. ಆದರೆ ಅವೇ ಕಲಾಜಗತ್ತಿನಲ್ಲಿ ಆನಂದದಾಯಕವಾಗಿರುತ್ತವೆ.

ಇದು ಕಲೆ ಕಲ್ಪನೆಯ ಜಗತ್ತಿನ ಮಾತಾಯಿತು. ವಾಸ್ತವಿಕ ಜಗತ್ತಿನಲ್ಲೂ ಕೂಡ ದುಃಖದಲ್ಲಿ ಸುಖವನ್ನು ಕಾಣಬಹುದು. ಅಷ್ಟೇ ಅಲ್ಲ. ದುಃಖದಲ್ಲಿರುವ ಸುಖ ಸುಖದಲ್ಲಿರುವ ಸುಖಕ್ಕಿಂತ ಮಿಗಿಲಾದುದು ಎಂದು ಷೆಲ್ಲಿ ಹೇಳುತ್ತಾನೆ: " The pleasure of sarrow is more pleasant than the pleasure of pleasure itself."

ಈ ನೋವು ನಲಿವಿಗಿಂತ ಮಧುರವಾಗಿರುವುದರಿಂದಲೋ ಏನೋ 'ನೋಂಪಿ'ಗಳು ನಮ್ಮಲ್ಲಿ ಹೆಚ್ಚು ಪ್ರಚಲಿತವಾದವು. ನೋವೇ ನನಗಿರಲಿ ಎನ್ನುವ ಜನರೂ ಉಂಟು. ಒಮ್ಮೆ ಕೃಷ್ಣ ಕುಂತಿಯನ್ನು ಏನಾದರೂ ವರಬೇಡುವಂತೆ ಕೇಳಿದನಂತೆ. ಅದಕ್ಕೆ ಕುಂತಿ ಬೇಡಿದ ವರ ವಿಚಿತ್ರವಾಗಿದೆ:

" ವಿಪದಸ್ಸಂತು ನಶ್ಶಶ್ವತ್ ತತ್ರ ತತ್ರ ಜಗದ್ಗುರೋ |
ಭವತೋದರ್ಶನಂ ಯತ್ಸ್ಯಾದ ಪುನರ್ಭವದರ್ಶನಂ

ನಿನ್ನ ದರ್ಶನ ನನಗೆ ಮತ್ತೆ ಮತ್ತೆ ಆಗಬೇಕಾದರೆ ನನಗೆ ಪದೇ ಪದೇ ವಿಪತ್ತುಗಳು ಬರಲಿ, ಸುಖ ಬೇಡ. ಸುಖದಲ್ಲಿ ನಾನು ನಿನ್ನನ್ನು ಮರೆಯುವ ಸಂಭವವೇ ಹೆಚ್ಚು. ಇದೇ ಅರ್ಥ ಬರುವ ಮಾತನ್ನು ಸಂತ ಕಬೀರನು ಹೇಳುತ್ತಾನೆ:

" ಸುಖಕೇ ಮಾಥೇಸಿಲ್ ಪರೈಜೋ ನಾಮ ಹೃದಯಸೇ
ಜಾಯ್
ಬಲಿಹಾರೀ ವಾ ದುಕ್ಖಕೀ ಪಲ್‌ಪಲ್ ನಾಮ ರಟಾಯ್ ||

ದೇವರನ್ನು ಮರೆಸುವ ಸುಖಕ್ಕೆ ಕಲ್ಲುಬೀಳ. ದೇವನ ನಾಮವನ್ನು ಅನುಕ್ಷಣವೂ ಜಪಿಸಲು ನೆರವಾಗುವ ದುಃಖಕ್ಕೆ ನಮೋ ನಮೋ.

ರವೀಂದ್ರನಾಥ ಠಾಕೂರರಂತೂ ದುಃಖವೇ ಆತ್ಮಸಾಕ್ಷಾತ್ಕಾರದ ಸಾಧನ ಎನ್ನುತ್ತಾರೆ: "Our greatest hope is in this that suffering is these. It is the language of imperfection. This suffering has driven man with his prayer to knock at the gate of infinite in him."

ಜೀವ ದೇವರನ್ನು ಒಂದುಗೂಡಿಸುವ ಸಾಧನವೇ ಯೋಗ. ದೇವರ ಬಳಿಗೆ ನಮ್ಮನ್ನು ಮುಟ್ಟಿಸುವ ಈ ದುಃಖ ನಿಜಕ್ಕೂ ಯೋಗ. ಆದ್ದರಿಂದಲೇ ಗೀತೆಯಲ್ಲಿ ಅರ್ಜುನನ ವಿಷಾದವನ್ನು ವಿಷಾದಯೋಗ ಎಂದು ಕರೆದಿದೆ. ಅರ್ಜುನನಿಗೆ ವಿಷಾದವಾಗದಿದ್ದರೆ ವಿಶ್ವರೂಪ ದರ್ಶನವೂ ಆಗುತ್ತಿರಲಿಲ್ಲ.

ಠಾಕೂರರ ಮಾತಿನಂತೆ ದುಃಖ ದೇವರನ್ನು ಕಾಣುವ ಸಾಧನವೊಂದೇ ಅಲ್ಲ. ಬದುಕಿನ ಸಾಧನವೂ ಹೌದು. ಅದಿಲ್ಲದೇ ಇದ್ದರೆ ಮಾನವನ ಬದುಕು ಇನ್ನೂ ದಾರುಣವಾಗುತ್ತಿತ್ತು. ಬರಿಯ ಸುಖವೇ ಯಾವಾಗಲೂ ಇದ್ದರೆ ಜೀವನ ತುಂಬ ನೀರಸವಾದೀತು. ಬೆಳುದಿಂಗಳ ಚೆಲುವನ್ನು ಅಮಾವಾಸ್ಯೆಯ ಕತ್ತಲೆಯನ್ನು ಕಂಡುಂಡವನು ಹೆಚ್ಚು ಚೆನ್ನಾಗಿ ಅನುಭವಿಸುತ್ತಾನೆ. ಬರಿಯ ಸುಖ ಎಂದರೆ ಬರಿಯ ಸಿಹಿಯನ್ನೇ ತಿನ್ನು ಎಂದಂತೆ ಓಕರಿಕೆ ಬರತೊಡಗುತ್ತದೆ. ಸಿಹಿಯ ಜೊತೆಗೆ ಖಾರವೂ ಇದ್ದರೆ ಸಿಹಿಯ ಸವಿ ಹೆಚ್ಚಾದೀತು.

ದುಃಖದಿಂದ ಬಾಳಿಗೆ ವೈವಿಧ್ಯವುಂಟಾಗುತ್ತದೆ. ಬಾಳು ಈ ವೈವಿಧ್ಯದಿಂದ ಸಹ್ಯವಾಗುತ್ತದೆ; ಸುಖಮಯವಾಗುತ್ತದೆ. ದುಃಖ ವೈವಿಧ್ಯಕ್ಕಾಗಿಯೇ ಅಲ್ಲ ಜೀವನದ ಅನಿವಾರ್ಯ ಬೇಡಿಕೆಗಳಲ್ಲಿ ಒಂದು. ಅದು ಬದುಕಿನ ಒಂದು Craving ಅನಿವಾರ್ಯವಾದ ಬಯಕೆ.

ದುಃಖ ಎಲ್ಲರಿಗೂ ಒಂದೇ ಸಮನಾಗಿರುವುದಿಲ್ಲ. ಎಲ್ಲರಿಗೂ

ಒಂದೇ ಅಲ್ಲ. ಸುಖ ದುಃಖಗಳ ಅರ್ಥವನ್ನು ಶಾಸ್ತ್ರಕಾರರು ಹೀಗೆ ಹೇಳಿದ್ದಾರೆ:

" ಅನುಕೂಲ ವೇದನೀಯಮಿದಂ ಸುಖಂ |
ಪ್ರತಿಕೂಲ ವೇದನೀಯಮಿದಂ ದುಃಖಂ ||

ಒಬ್ಬನಿಗೆ ಸುಖವಾದದ್ದು ಮತ್ತೊಬ್ಬನಿಗೆ ಸುಖವಾಗಿರ ಬಹುದು, ಒಬ್ಬನ ದುಃಖ ಮತ್ತೊಬ್ಬನ ಸುಖವಾಗುತ್ತದೆ. ರೋಂನಗರ ಉರಿಯುತ್ತಿದ್ದಾಗ ನೀರೋ ಪಿಟೀಲು ಬಾರಿಸುತ್ತ ಅಪೂರ್ವ ಆನಂದದಲ್ಲಿದ್ದನಂತೆ. ಇದು ಮನಸ್ಸಿನ ವಿಕೃತಿ ಅಷ್ಟೆ. ದುಃಖ ಮನಸ್ಸಿಗೆ ಪ್ರತಿಕೂಲವಾದ ವೇದನೆ ಮಾತ್ರವಲ್ಲ, ಮನಸ್ಸಿಗೆ ಅನುಕೂಲವಾದ ವೇದನೆಯೂ ಹೌದು. ಕೆಟ್ಟದ್ದನ್ನು ಹಾನಿಯನ್ನು ನೋಡುವುದರಿಂದ ಮಾತ್ರ ದುಃಖವಾಗುವುದಿಲ್ಲ. ಸುಂದರವಾದ, ಒಳ್ಳೆಯ ವಸ್ತುವನ್ನು ನೋಡಿದರೂ ಕೂಡ ಯಾವುದೋ ಒಂದು ವಿಧವಾದ ಅನಿರ್ವಚನೀಯ ವೇದನೆಯುಂಟಾಗುತ್ತದೆ. ಕಾಳಿದಾಸ ಇದನ್ನೇ ಹೀಗೆ ಹೇಳಿದ್ದಾನೆ :

" ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್
ಪರ್ಯುತ್ಸುಕೀ ಭವತಿಯತ್ ಸುಖಿನೋಪಿಜಂತುಃ |
ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ
ಭಾವಸ್ಥಿರಾಣಿ ಜನನಾಂತರ ಸೌಹೃದಾನಿ ||

"ರಮ್ಯವಾದ ವಸ್ತುಗಳನ್ನು ಕಂಡಾಗ ಇನಿದನಿಯನ್ನು ಆಲಿಸಿದಾಗ ಜೀವಿ ಸುಖಿಯಾಗಿದ್ದರೂ ಒಂದು ವಿಧವಾದ ತಳಮಳವನ್ನು ಅನುಭವಿಸುತ್ತಾನೆ. ಆ ಚೇತನ ತನ್ನ ಮನಸ್ಸಿನಲ್ಲಿ ಸ್ಥಿರವಾದ ಜನನಾಂತರ ಸಂಸ್ಕಾರಗಳ, ಆದರೆ ಪೂರ್ವಸ್ಮರಣೆಯಿಂದ ನರಳುತ್ತಿರುತ್ತಾನೆ.

ಈ ರೀತಿ ಒಳ್ಳೆಯದನ್ನು ಕಂಡಾಗ ಕೇಳಿದಾಗ ಕೂಡ ನೋವಿನ ಅನುಭವವೇ ಅಗುತ್ತದೆ ಎಂದರೆ ಅದರ ವ್ಯಾಪಕತೆಯ ಅರಿವಾದೀತು.

(ಮುಂದುವರಿಯುವುದು)

ಒಲಿದು ನೀ ನೆಲೆಯಾಗು ಎನಗೆ

ದಾಮೋದರ ಬಾಳಿಗ

ಒಲಿದು ನೀ ನೆಲೆಯಾಗು ಎನಗೆ. ಬೈಗು ಭರದಿಂದ ಇಳಿದಿಹುದು ಕೆಳಗೆ ;
ಸುಳಿವ ಕತ್ತಲ ದಟ್ಟಣಿಯೊಳಗೆ ಸೈಗೇಯುತೊಲಿಯಯ್ಯ ಎನಗೆ !
ನಿರಾಧಾರನು ನಾನು ಸುಖ ಉಲ್ಲಾಸಗಳೆಲ್ಲ ಹಾರಿ ಹೋಗೆ :
ತಾರಕ ಸುಧಾರಕ ನೀನು ದುಃಖಾರ್ತ ನಿರ್ಗತಿಕರೆಲ್ಲ ಬಗೆಗೆ.
ಒಲಿದು ನೀ ನೆಲೆಯಾಗು ಎನಗೆ !

ತತ್ತರಿಪ ಜೀವನದ ಕಿರುದಿನವು ಕ್ಷೀಣ ದಿಸೆಯೊಳಿಹುದು ;
ಬಿತ್ತರದ ಭೌಮ ಭಾಗ್ಯಭೋಗಕ್ಕೆಲ್ಲ ಭಂಗುರದ ಮುಸುಕು ;
ಸುತ್ತುಮುತ್ತಲು ಕಾಣುತಿಹೆ ಪಲ್ಲಟನ, ನಶ್ವರ, ಹುಳುಕು ;
ನಿತ್ಯ ಶಾಶ್ವತ ನಿನಗೆ, ಹೇ ದೇವರದೇವ !-ಎನ್ನದಿದು ಪರಾಕು
ಒಲಿದು ನೀ ನೆಲೆಯಾಗು ಎನಗೆ !

ಗಳಿಗೆಗಳಿಗೆಗೂ ಬೇಕೆನೆಗೆ ನಿನ್ನ ಸನಿಹ ಸಾಕ್ಷಾತ್ಕಾರ ;
ಖಳ ಪಾಪಪ್ರೇರಕನ ಬಲ ಮುರಿಯೆ ಬೇಕು ಸಾಕಾರ !
ಇಳೆಯೊಳಗನ್ಯ ಆಶ್ರಯವೆನಗಿಲ್ಲ ಮಾರ್ಗದರ್ಶಕರಿಲ್ಲ ನಿನ್ನ ತೆರ !
ಹೊಳೆವ ಹೊಂಬಿಸಿಲಿನಲಿ, ಕಾರ್ಮುಗಿಲ ದಿಗಿಲಿನಲಿ, ನೀನೆನಗೆ ಆಧಾರ !
ಒಲಿದು ನೀ ನೆಲೆಯಾಗು ಎನಗೆ !

ಅಭಯಹಸ್ತವೆ ನಿನ್ನದೆನಗಿರಲು ಇದಿರಾಳಿಯ ದಾಳಿಗಂಜಲಾರೆ ;
ಕೆಟ್ಟಕೇಡಿನಲಿರದು ದುಷ್ಟಭಾರ ; ಕಟುವಾಗದು ಸುರಿವಶ್ರುಧಾರೆ ;
ಎಲ್ಲಿ ಮೃತ್ಯುವಿನ ಕ್ರೂರ ದಾಡೆ ? ಘೋರ ಮಸಣ ? ಯಾರಿಗೊ ವಿಜಯ ?
ಎನ್ನದೇ ನಿಶ್ಚಿತದ ಗೆಲವು !-ನೀನೊಲಿದು ಸನಿಯದಲೆ ನೈತೋರೊ ಇನಿಯ,
ಒಲಿದು ನೀ ನೆಲೆಯಾಗು ಎನಗೆ !

ಮಹಾರಾಷ್ಟ್ರ ಸಾಹಿತ್ಯ ಸಂಸ್ಕೃತಿ ಮಂಡಳದ ಯೋಜನೆ ಮತ್ತು ಸರಕಾರದ ನೆರವು

◆◆ ಮ. ಗ. ಶೆಟ್ಟಿ

ಮಹಾರಾಷ್ಟ್ರ ಸಾಹಿತ್ಯ ಮತ್ತು ಸಂಸ್ಕೃತಿಗೆ ಉನ್ನತ ಸ್ಥಾನ ದೊರೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಮಹಾರಾಷ್ಟ್ರದ ಅಂದಿನ ಮುಖ್ಯ ಮಂತ್ರಿ ಶ್ರೀ ಯಶವಂತರಾವ್ ಚವ್ಹಾಣ ಅವರು ೧೯೬೦ರ ನವಂಬರ ತಿಂಗಳಲ್ಲಿ ಈ ಮಂಡಳವನ್ನು ಉದ್ಘಾಟಿಸಿದರು. ಆ ಸಂಸ್ಥೆ ಏಳು ವರ್ಷಗಳಲ್ಲಿ ಸಾಧಿಸಿದ ಪ್ರಗತಿ, ನಮಗೆ ಮಾರ್ಗದರ್ಶಕವಾಗಿ, ಕನ್ನಡದ ಸರ್ವಾಂಗೀಣ ಪ್ರಗತಿಗೆ ನೆರವು ನೀಡಲು ಪ್ರಚೋದಕವಾದೀತೆಂದು ನಂಬಿದ್ದೇನೆ. 'ಸೊಕ್ಕಿನಲ್ಲಿ ತಲೆಯೆತ್ತಿ ಜೊತೆಯವರ ಕೂಟದಲಿ ನಾವು ಸಮ ನಿಮುಗೆಂದು ನಿಲುವ ಬಲ' ಕನ್ನಡ ತಾಯ ಮಕ್ಕಳಿಗೆ ಬಂದೀತೆಂದು ಹಾರೈಸುತ್ತೇನೆ.

ಮಂಡಳ ಸ್ಥಾಪನೆಯ ಉದ್ದೇಶ

ಮರಾಠಿ ಭಾಷೆಯು ಪ್ರಾಚೀನ ಅರ್ವಾಚೀನ ವಿಚಾರ ಧಾರೆಗಳನ್ನು ಲಲಿತವಾಗಿ ಪ್ರಕಟಿಸುವಂತೆ, ಯಾವುದೇ ವಿಚಾರವನ್ನು ಪ್ರಕಟಪಡಿಸಲು ಪ್ರಬಲ ಸಾಧನವಾಗುವಂತೆ ಮರಾಠಿ ಭಾಷೆಯನ್ನು ಸರ್ವ ಸಮರ್ಥವನ್ನಾಗಿ ಮಾಡುವುದೇ ಈ ಸಂಸ್ಥೆಯ ಉದ್ದೇಶ. ಮರಾಠಿ ಭಾಷೆಗೆ ಇಂಥ ಶಕ್ತಿಯನ್ನು ತಂದುಕೊಡುವುದಕ್ಕಾಗಿ ಮಹಾರಾಷ್ಟ್ರದಲ್ಲಿಯ ವಿದ್ಯಾವಂತ ಮತ್ತು ಕಲಾವಂತರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿ ಅವರಲ್ಲಿ ಸಹಕಾರವನ್ನುಂಟುಮಾಡಬೇಕಾಗಿತ್ತು. ಈ ಮಹಾನ್ ಉದ್ದೇಶ ಸಾಧನೆಗಾಗಿ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದ ವಿದ್ಯಾಲಯ, ವಿದ್ಯಾಪೀಠಗಳಲ್ಲಿ ದುಡಿಯುವ ಮತ್ತು ವೈಯಕ್ತಿಕವಾಗಿಯಾಗಲೀ ಸಾಮೂಹಿಕವಾಗಿಯಾಗಲೀ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿ ದುಡಿಯುವ ಲೇಖಕರ ಮತ್ತು ಸಂಶೋಧಕರ ನೆರವು ಪಡೆಯುವುದು ಅನಿವಾರ್ಯವಾಗಿದ್ದಿತು.

ಈ ಏಳು ವರ್ಷಗಳಲ್ಲಿ ಮಾಡಿದ ಕಾರ್ಯಕಲಾಪಗಳ ಮತ್ತು ಕೈಕೊಂಡ ಯೋಜನೆಗಳ ಸಂಕ್ಷಿಪ್ತ ವರದಿಯನ್ನು ಇದರಡಿಯಲ್ಲಿ ನಿವೇದಿಸಲಾಗಿದೆ.

ವಿಶ್ವಕೋಶ

ಆಧುನಿಕ ಶಾಸ್ತ್ರ, ವಿಜ್ಞಾನ, ತಂತ್ರಗಳ ವಿವರಣೆ; ಕಾಯಿದೆ ಶಾಸನಗಳ ವ್ಯವಹಾರ; ಇತ್ಯಾದಿಗಳನ್ನು ದೇಶೀಯ ಭಾಷೆಯಲ್ಲಿ ಮಾಡಲು ಅನೇಕ ಪರಿಭಾಷಾ ಕೋಶ ಅರ್ಥಾತ್ ಶಬ್ದಕೋಶಗಳು ತಯಾರಾಗುತ್ತಲಿವೆ. ಹೊಸ ಶಬ್ದವೊಂದು ರೂಢಿಯಲ್ಲಿ ಬರಬೇಕಾಗಿದ್ದರೆ ಅದನ್ನು ಅನೇಕ ಸಲ ವ್ಯವಹಾರದಲ್ಲಿ ಪ್ರಯೋಗಿಸಬೇಕಾಗುತ್ತದೆ. ಅದಕ್ಕಾಗಿ ವಿಶ್ವಕೋಶವನ್ನು ಸಿದ್ಧಪಡಿಸಲು ೧೯೬೨ರಲ್ಲಿ ವಾಯಿಯಲ್ಲಿ ಕಾರ್ಯಾಲಯವನ್ನು ಸ್ಥಾಪಿಸಿ ಅನೇಕ ತಜ್ಞರೊಡನೆ ವಿಚಾರ ವಿನಿಮಯ ನಡಸಿ ವಿಶ್ವಕೋಶದ ರೂಪರೇಷೆಯನ್ನು ಸಿದ್ಧಪಡಿಸಿತು. ಯಾವತ್ತೂ ವಿದ್ಯಾ ಶಾಖೆಯಲ್ಲಿಯ ಮೂಲಭೂತ ಮಹತ್ವದ ಕಲ್ಪನೆಗಳು ವ್ಯಕ್ತವಾಗುವಂತೆಯೂ, ಆಯಾ ಜ್ಞಾನ ಶಾಖೆಯ ವಿವರಗಳ ಉಪೋದ್ಘಾತಗಳ ರಚನೆಯಾಗುವಂತೆಯೂ **ಒಂದೊಂದು ಸಾವಿರ ಪುಟಗಳ ೧೯ ಭಾಗಗಳನ್ನು** ಪ್ರಕಟಪಡಿಸಲು ಉದ್ದೇಶಿಸಿದೆ. ಈ ಕಾರ್ಯಾಲಯದಲ್ಲಿ ವಿಶ್ವಕೋಶ ರಚನೆಯ ಹಾಗೂ ಹೊರಗಿನಿಂದ ಬಂದ ಲೇಖನಗಳ ಪರಿಶೀಲನೆಯ ಬಗ್ಗೆ ಎಂಟು ನೂರಕ್ಕೂ ಮಿಕ್ಕಿ ಲೇಖಕರು ದುಡಿಯುತ್ತಿದ್ದಾರೆ.

ಮಹಾರಾಷ್ಟ್ರದ ಇತಿಹಾಸ

ವಿಶ್ವಕೋಶ ರಚನೆಯ ಜೊತೆಗೆ ಇನ್ನಿತರ ಮಹತ್ವದ ಕಾರ್ಯಗಳನ್ನೂ ಈ ಮಂಡಳ ನಿರ್ವಹಿಸುತ್ತದೆ. ಇತಿಹಾಸ-**ಪೂರ್ವಕಾಲದಿಂದ ಅರ್ವಾಚೀನ ಕಾಲದವರೆಗೆ ಮಹಾರಾಷ್ಟ್ರದ ಇತಿಹಾಸವನ್ನು ೨ ಸಾವಿರ ಪುಟ**ಗಳಲ್ಲಿ ತಯಾರಿಸುವ ಬಗ್ಗೆ ವಿದ್ವಾಂಸರಿಗೆ ಒಪ್ಪಿಸಿದೆ.

ಆಡುಭಾಷೆಯ ಅಭ್ಯಾಸ ಮತ್ತು ಎರಡು ಭಾಷೆಯ ಶಬ್ದಕೋಶ

ಪೂನಾ ಡೆಕ್ಕನ ಕಾಲೇಜಿನ ಭಾಷಾಶಾಸ್ತ್ರಜ್ಞರಾದ ಡಾ. ಘಾಟಗೆಯವರ ಸಂಪಾದಕತ್ವದಲ್ಲಿ ಆಡುಭಾಷೆಯ ಅಧ್ಯಯನ, ದಕ್ಷಿಣ ಕನ್ನಡದ ಕೊಂಕಣಿ, ಕುಡಾಳಿ, ಕುಣಬಿ ಇವು ಪ್ರಸಿದ್ಧವಾಗಿದ್ದು ಇನ್ನೂ ಅನೇಕ ಕೃತಿಗಳು ಪ್ರಕಾಶವಾಗುವವು. ಭಾರತದೊಳಗಿನ ಕನ್ನಡ, ತೆಲುಗು, ತಮಿಳು, ಬಂಗಾಲಿ, ಉರ್ದು, ಗುಜರಾತಿ ಇತ್ಯಾದಿ ಹನ್ನೆರಡು ಪ್ರಾದೇಶಿಕ ಭಾಷೆಗಳ ಅಭ್ಯಾಸ ಮರಾಠಿಯು

ಮೂಲಕ ನಡೆಯುವ ಅವಕಾಶವಾಗಬೇಕೆಂದು ಎರಡೆರಡು ಭಾಷೆಗಳ ಶಬ್ದಕೋಶ, ಭಾಷಾಪ್ರವೇಶ, ಮತ್ತು ವಾಚನ ಪಾಠಮಾಲೆಯೆಂಬ ಪುಸ್ತಕತ್ರಯಿಯನ್ನು ಪ್ರಕಟಿಸುವ ಯೋಜನೆಯನ್ನು ಇಟ್ಟುಕೊಂಡಿದೆ. ಇದರಂತೆ ವಿದೇಶೀ ಭಾಷೆಯ ಅಧ್ಯಯನಕ್ಕೂ ಯೋಜನೆ ಇದೆ. ಇದಕ್ಕೆ ಅಂತರಭಾರತೀ, ವಿಶ್ವಭಾರತೀ ಎಂಬಹೆಸರು ಕೊಡಲಾಗಿದೆ. ಉರ್ದು, ಮರಾಠಿ; ಕನ್ನಡ ಮರಾಠಿ ಶಬ್ದಕೋಶಗಳು, ಕನ್ನಡ ಭಾಷಾ ಪ್ರವೇಶ ಮತ್ತು ವಾಚನ ಪಾಠಮಾಲೆ, ಗುಜರಾತಿ ಮರಾಠಿ ಶಬ್ದಕೋಶ, ಬಂಗಾಲಿ ಭಾಷಾಪ್ರವೇಶ ಇವುಗಳ ಮುದ್ರಣ ಪ್ರತಿ ಸಿದ್ಧವಾಗಿದೆ.

ಶಾಸ್ತ್ರೀಯ ಗ್ರಂಥಮಾಲೆ

ಸಾಮಾನ್ಯ ಸುಶಿಕ್ಷಿತನಿಗೆ ಆಧುನಿಕ ವಿಜ್ಞಾನದ ಪರಿಚಯವಾಗಬೇಕೆಂದು "ಮಾನವೀ ಆನುವಂಶಿಕತೆ, ಮನುಷ್ಯನ ಮಿದುಳು ಮತ್ತು ಅವುಗಳ ಕಾರ್ಯ, ಪ್ರಾಣಿ ಸೃಷ್ಟಿ, ರೇಡಿಯೋ ದುರಸ್ತಿ" ಇತ್ಯಾದಿ ಪುಸ್ತಕಗಳು ಪ್ರಕಾಶಿತವಾಗಿದ್ದು ಇನ್ನೂ ಅನೇಕ ಪುಸ್ತಕಗಳು ಪ್ರಕಟವಾಗಲಿವೆ. ಪಾಶ್ಚಿಮಾತ್ಯ ಸಾಹಿತ್ಯದಲ್ಲಿಯ ಉತ್ಕೃಷ್ಟ ಗ್ರಂಥಗಳ ಭಾಷಾಂತರದ ಯೋಜನೆ ನಡೆದಿವೆ. ಸಮಾಜಶಾಸ್ತ್ರದ ಮೇಲೆ ಇಂಗ್ಲಿಷಿನಲ್ಲಿ ಮೆಥಾಯವ್ಹರ ಮತ್ತು ಪೇಜ ರಚಿಸಿದ ಸಮಾಜಶಾಸ್ತ್ರ, ಮಾನವೇಂದ್ರನಾಥರಾಯರ ಬುದ್ಧಿವಾದ ಪ್ರೇರಣಾ ಮತ್ತು ಕ್ರಾಂತಿ ಮೊದಲಾದ ಪುಸ್ತಕಗಳ ಕರಡು ಪ್ರತಿ ಸಿದ್ಧವಾಗಿದೆ.

ಎಂಟು ಸಮಿತಿ

ಈ ಮಂಡಳದ ವಿವಿಧ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು (೧) ಶೇಕ್ಸಪಿಯರ ಸಮಿತಿ (೨) ವಿಜ್ಞಾನಸಮಿತಿ (೩) ಮಾನವ್ಯ ವಿದ್ಯಾಸಮಿತಿ (೪) ಲಲಿತ ಕಲಾಸಮಿತಿ (೫) ಭಾಷಾಂತರ ಸಮಿತಿ (೬) ವಿಶ್ವಕೋಶ ಸಮಿತಿ (೭) ಮರಾಠಿ ಮಹಾಕೋಶ ಸಮಿತಿ (೮) ಪ್ರಕಾಶನ ಸಮಿತಿ ಎಂಬ ಎಂಟು ಸಮಿತಿಗಳನ್ನು ಸ್ಥಾಪಿಸಿದೆ. ಕಲಾಸಂಗ್ರಹಾಲಯವು ಬೇಗನೇ ನಿರ್ಮಾಣವಾಗಲಿದೆ.

ಸಂಸ್ಥೆಗಳಿಗೆ ನೆರವು

ಮಹಾರಾಷ್ಟ್ರದಲ್ಲಿ ಅನೇಕ ಸಾಹಿತ್ಯ ಸಂಸ್ಥೆ ಮತ್ತು ವ್ಯಕ್ತಿಗಳು ಖಾಸಗೀ ರೀತಿಯಿಂದ ಮಹತ್ವದ ಕೆಲಸವನ್ನು ಮಾಡುತ್ತಲಿವೆ. ಅವು ವ್ಯವಸ್ಥಿತವಾಗಿ ನಡೆಯುವಂತೆ ಈ ಮಂಡಳವು ಸಂಪಾದನ ಮತ್ತು ಪ್ರಕಾಶನಗಳಿಗೆ ಧನಸಹಾಯ ನೀಡುತ್ತಿವೆ. ಭಾರತೀಯ ಸಂಸ್ಕೃತ ಕೋಶ ಮಂಡಳ-ಪುಣೆ, ತತ್ವಜ್ಞಾನ ಕೋಶ ಮಂಡಳ-ಪುಣೆ, ಸಮಾಜ ಪ್ರಬೋಧನ ಸಂಸ್ಥೆ-ಪುಣೆ, ಭಾರತ ಇತಿಹಾಸ ಸಂಶೋಧನ ಮಂಡಳ-ಪುಣೆ, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ, ವಿದರ್ಭ ಸಂಶೋಧನ ಮಂಡಳ-ನಾಗಪುರ, ಭಾರತೀಯ ಚರಿತ್ರಕೋಶ ಮಂಡಳ-ಪುಣೆ, ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು-ಪುಣೆ ಇತ್ಯಾದಿ ಸಂಸ್ಥೆಗಳಿಗೆ ಮೇಲಿಂದ ಮೇಲೆ ಬಹಳಷ್ಟು ನೆರವು ನೀಡಿದುದರಿಂದ ಸಂಶೋಧನ ಮತ್ತು ಪ್ರಕಾಶನದ ಪ್ರಗತಿಯಾಗುತ್ತಲಿದೆ. ಮರಾಠಿ ವಾಙ್ಮಯ ಕೋಶದ ಒಂದು ಭಾಗವನ್ನು ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು ಪ್ರಸಿದ್ಧ ಮಾಡಿದೆ, ಇತರ ಭಾಗಗಳ ಸಂಪಾದನೆ ನಡೆದಿದೆ. ಭಾರತೀಯ ಸಂಸ್ಕೃತಿ ಕೋಶದ ನಾಲ್ಕು ಭಾಗ ಪ್ರಸಿದ್ಧವಾಗಿದೆ. ಸಮಾಜ ಪ್ರಬೋಧನ ಸಂಸ್ಥೆ ಪ್ರತಿವರ್ಷ ಆರರಿಂದ ಎಂಟು ಪುಸ್ತಕಗಳನ್ನು ಪ್ರಕಾಶಪಡಿಸುತ್ತದೆ. ಭಾರತೀಯ ಚರಿತ್ರಕೋಶ ಮಂಡಳದ ಭಾರತೀಯ ಪ್ರಾಚೀನ ಸ್ಥಲಕೋಶ ಪ್ರಕಾಶನವಾಗಲಿದೆ. ಕೈ. ಹರಿನಾರಾಯಣ ಆಪ್ಟೆ ಅವರ ಅಪ್ರಕಾಶಿತ ವಾಙ್ಮಯದ ಪುನರ್ಮುದ್ರಣಕ್ಕಾಗಿ ಆರ್ಯಭೂಷಣ ಮುದ್ರಣಾಲಯಕ್ಕೆ **ನೂರಕ್ಕೆ ಅರವತ್ತರಷ್ಟು** ಸಹಾಯ ಧನವಿತ್ತುದರಿಂದ ಅಲ್ಪ ಬೆಲೆಯಲ್ಲಿ ದೊರೆಯಲು ಅವಕಾಶವುಂಟಾಗಿದೆ. ಸಹಾಯ ಧನದ ನೆರವಿನಿಂದ **ಇನ್ನೂರು** ಪುಸ್ತಕಗಳು ಬೆಳಕು ಕಂಡಿವೆ.

ನಿಯತಕಾಲಿಕಗಳಿಗೆ ನೆರವು

ಮರಾಠಿಯಲ್ಲಿ ಗಂಭೀರ ವಿಷಯಗಳಿಗೆ ಮುಡಿಪಾಗಿದ್ದ ಪತ್ರಿಕೆ ಮತ್ತು ನಿಯತ ಕಾಲಿಕಗಳಿಗೆ ಹಾನಿ ತುಂಬಿಕೊಟ್ಟಿದೆ. ಅವುಗಳಲ್ಲಿ ಈ ಕೆಳಗಿನ ಪತ್ರಿಕೆಗಳು ಪ್ರಮುಖವಾಗಿವೆ:

(೧) ನವಭಾರತ-ವಾಯಿ (೨) ಸೃಷ್ಟಿಜ್ಞಾನ-ಪುಣೆ (೩) ಸಾಹಿತ್ಯ ಸಹಕಾರ-ಮುಂಬಯಿ, (೪) ಮಹಾರಾಷ್ಟ್ರ ಸಾಹಿತ್ಯ ಪತ್ರಿಕೆ-ಪುಣೆ, (೫) ಸಮಾಜ ಪ್ರಬೋಧನ ಪತ್ರಿಕೆ-ಪುಣೆ, (೬) ಭಾರತ ಇತಿಹಾಸ ಸಂಶೋಧನ ಮಂಡಳ-ಪುಣೆ, (೭) ಪ್ರತಿಷ್ಠಾನ-ಔರಂಗಾಬಾದ, (೮) ಯುಗವಾಣಿ ನಾಗಪುರ, (೯) ವಾರ್ಷಿಕ ವಿದರ್ಭ ಸಂಶೋಧನ-ನಾಗಪುರ (೧೦) ಆಲೋಚನಾ-ಮುಂಬಯಿ.

ಮೈಸೂರು ಸರಕಾರವು ಈ ದಿಶೆಯಲ್ಲಿ ಸಾಹಿತ್ಯ ಪ್ರಕಾಶನಕ್ಕೆ ನೆರವು ನೀಡಿ, ಸಾಹಿತ್ಯದ ಅಭಿವೃದ್ಧಿಯಲ್ಲಿ ನವಮನ್ವಂತರ ಸ್ಥಾಪಿಸಬೇಕೆಂದು ನಿರೀಕ್ಷಿಸಬಹುದೆ?

ವಿಮರ್ಶನರಂಗ

ಪ್ರಣತಿ: ಭಿಲಾಯಿ ಕನ್ನಡ ಸಂಘದವರ ವಾರ್ಷಿಕ ಸಂಚಿಕೆ.

ಕನ್ನಡನಾಡಿನಿಂದ ದೂರವಿದ್ದುಕೊಂಡೂ ಭಿಲಾಯಿಯ ಕನ್ನಡಿಗರು ಕನ್ನಡ ಸಂಘವನ್ನು ಕಟ್ಟಿಕೊಂಡು ಕನ್ನಡ ನಾಡುನುಡಿಗಳ ಸೇವೆಯನ್ನು ಸ್ತುತ್ಯವಾದ ರೀತಿಯಲ್ಲಿ ಮಾಡುತ್ತಾ ಬಂದಿದ್ದಾರೆ. ಈ ಸಂಚಿಕೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಂಘದ ಸದಸ್ಯರು ಬರೆದ ಹಾಸ್ಯಲೇಖನಗಳೂ, ವೈಚಾರಿಕ ಬರಹಗಳೂ ಇವೆ. ಕಡೆಯಲ್ಲಿ ಸಂಘದ ಸದಸ್ಯರ ಪರಿಚಯ ಮಾಡಿಕೊಟ್ಟಿದ್ದಾರೆ. ಈ ಬಗೆಯ ಕೆಲಸ ಇತರ ಸಂಘಗಳಲ್ಲೂ ನಡೆದರೆ ಹೊರನಾಡಿನಲ್ಲಿರುವ ಕನ್ನಡಿಗರ ಪರಿಚಯಮಾಡಿಕೊಳ್ಳಲು ಎಲ್ಲರಿಗೂ ಸುಲಭವಾದೀತು.

* * *

ಕೆನಡಾದಲ್ಲಿ ಕನ್ನಡಿಗ—ಪತ್ರ ಸಂಕಲನ; ಶ್ರೀ ವಿ. ಶೆಟ್ಟಿ ಪೆಂಡಕೂರು, ಪ್ರಕಾಶಕ: ಜಿ. ವಿ. ಪೆಂಡಕೂರು, ರಾಮನಗರ (ಬಳ್ಳಾರಿ), ಪುಟ. ೧೪೩, ಬೆಲೆ. ರೂ. ೧-೫೦.

ಬಳ್ಳಾರಿ ಜಿಲ್ಲೆಯವರಾದ ಕನ್ನಡಿಗ ವೆಂಕಟಾಚಲಶೆಟ್ಟಿ ಪೆಂಡಕೂರು ಅವರು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಕೆನಡಾ ದೇಶಕ್ಕೆ ತೆರಳಿ, ಅಲ್ಲಿಯೇ ವಿವಾಹಿತರಾಗಿ ನೆಲಸಿರುವವರು. ೧೯೫೫ ರಿಂದ ೧೯೬೬ ರವರೆಗಿನ ಹನ್ನೊಂದು ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರು ತಮ್ಮ ಮನೆಯವರಿಗೆ ಬರೆದ ಐವತ್ತೇಳು ಪತ್ರಗಳ ಸಂಕಲನವಾಗಿ 'ಕೆನಡಾದಲ್ಲಿ ಕನ್ನಡಿಗ' ಹೊರಬಿದ್ದಿದೆ.

ಈ ಪತ್ರಗಳು ಓದುಗರಿಗೆ ಕೆನಡಾದೇಶದ ಜನಜೀವನ, ಸಂಸ್ಕೃತಿ, ಸಮಾಜ ವ್ಯವಸ್ಥೆ, ಆರ್ಥಿಕ ಸಂಪನ್ಮೂಲಗಳು, ವ್ಯವಹಾರ-ಉದ್ಯಮಗಳು, ತಾಂತ್ರಿಕ ಪ್ರಗತಿ ಮತ್ತು ಶಿಕ್ಷಣ ವಿಧಾನಗಳನ್ನು ಕುರಿತು ಸುಂದರವಾಗಿ ಪರಿಚಯ ಮಾಡಿಕೊಡಬಲ್ಲವು. ತಾಯ್ನಾಡಿನಿಂದ ಬಹುದೂರ ನೆಲೆಸಿದ್ದರೂ ಸರ್ವದಾ ಇಲ್ಲಿನದೇ ನೆನಪು ಅವರಿಗೆ. ಈ ತರುಣರಿಗೆ ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಅವ್ಯವಸ್ಥೆಯನ್ನು ಕುರಿತೇ ಕಳಕಳಿ. "ನಮ್ಮ ನಾಡಿನಲ್ಲಿ ಸ್ವಚ್ಛವಾದ ಗಾಳಿಬೀಸಬೇಕು. ತಿಳಿಯಾದ ನೀರು ಹರಿಯಬೇಕು. ಹಳೆಯ ಹೊಲಸೆಲ್ಲಾ ತೊಲಗಬೇಕು. ಅಂತಾದರೆ ನವಜೀವನ." (ಪುಟ ೧೨೩) ಎನ್ನುವ ಅವರ ವಿಚಾರಧಾರೆ ಪ್ರಶಂಸನೀಯವಾದುದು.

ಇಲ್ಲಿನ ಪತ್ರಗಳ ಪ್ರಮುಖ ಮೌಲ್ಯ ಅವುಗಳ ಸರಳತೆಯಲ್ಲಿದೆ. ಯಾವ ಆಡಂಬರತೆಯ ಸೋಂಕೂ ಇಲ್ಲದೆ ನೈಜವಾಗಿ ಹೃದಯದಿಂದ ಹೊರಬಿದ್ದು, ಹೃದಯವನ್ನೇ ತಾಕಬಲ್ಲ ಪ್ರಭಾವ, ಶಕ್ತಿಗಳನ್ನು ಪಡೆದಿವೆ. ವಿಷಯ ಮಂಥನ, ಸ್ವವಿಮರ್ಶೆ, ಆತ್ಮಪರಿಚಯ—ಇವು ಸರಳವಾದ ನುಡಿಯಲ್ಲಿ ಮೂಡಿವೆ. ಕೆಲವೆಡೆ ನೇರಭಾಷಾಂತರವಾಗಿದ್ದು ಅಸಹಜತೆಯ ಛಾಯೆ ಉಳಿದುಕೊಂಡಿದೆ; ಅಂತಸ್ಥು, ಲೆಕ್ಕ, ಧರ, ನಿಶ್ಚೇಷ್ಟಿತ, ಖಣ, ಕೂಲಂಕುಷ, ಮಾಯ, ಮುಖ್ಖಾಲು, ಹತ್ತನ್ನೆರಡು, ಮಿಕ್ಕಿ, ಗ್ರಾಡ್ಯುಯೇಟ್, ರಿಜಿಸ್ಟ್ರಾರ್, ಅಸರುದ್ಧ—ಇವೇ ಮುಂತಾದ ಹಲವು ಅಪಪ್ರಯೋಗಗಳು, ತಪ್ಪುಗಳು ಅಲ್ಲಲ್ಲಿ ಇಣಿಕಿವೆ. ಅಂತರ್ರಾಷ್ಟ್ರೀಯ ಅರ್ಥವಂತಿಕೆ ಹೆಚ್ಚುತ್ತಿರುವ ಈ ಕಾಲದಲ್ಲಿ ದೇಶವಿದೇಶಗಳ ನಡುವೆ ಪರಸ್ಪರ ಅರಿವು ಮೂಡಬೇಕಾಗಿರುವುದು ಸ್ವಾಭಾವಿಕವಾಗಿದೆ. ಈ ದಿಶೆಯಲ್ಲಿ ಶ್ರೀ ಪೆಂಡಕೂರು ಅವರ ಪತ್ರಗಳು ಸ್ವಲ್ಪಮಟ್ಟಿಗಾದರೂ ನೆರವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

* * *

"ಮುಕ್ತಿಶ್ರೀ"—ಸ್ಮರಣ ಸಂಚಿಕೆ; ಪ್ರಕಾಶಕರು: ಶ್ರೀ ಮಹಾವೀರ ಮಿಷನ್, ಶಂಕರಪುರಂ, ಬೆಂಗಳೂರು-೮; ಬೆಲೆ: ರೂ. ೨-೦೦.

ಕಳೆದ ಮಾರ್ಚ್ ತಿಂಗಳು ಶ್ರವಣಬೆಳಗೊಳದಲ್ಲಿ ನಡೆದ ಬಾಹುಬಲಿಯ ಮಹಾಮಸ್ತಕಾಭಿಷೇಕದ ವಿಶೇಷ ಸಂದರ್ಭದಲ್ಲಿ ಬೆಂಗಳೂರಿನ ಶ್ರೀ ಮಹಾವೀರ ಮಿಶನ್‌ನವರು ಹೊರತಂದ ಸ್ಮರಣ ಸಂಚಿಕೆ 'ಮುಕ್ತಿಶ್ರೀ.' ಜಿನಧರ್ಮ, ಜಿನತತ್ತ್ವ, ಗೊಮ್ಮಟಜಿನ, ಶ್ರವಣಬೆಳಗೊಳದ ಸ್ಥಳ ಮಹಾತ್ಮೆ, ಗೊಮ್ಮಟಶಿಲ್ಪಕರ್ತೃ ಚಾವುಂಡರಾಯನನ್ನು ಕುರಿತು ಡಾ. ಡಿ. ವಿ. ಜಿ., ಡಾ. ಉಪಾಧ್ಯೆ, ಡಾ. ಮುಗುಳಿ, ಮಿರ್ಜಿ, ಪ್ರೊ. ಎಸ್. ಕೆ. ಆರ್., ಪು. ತಿ. ನ., ಮೊದಲಾದ ಹಿರಿಯರ ಹಾಗೂ ಹಲವು ಕಿರಿಯ ಲೇಖಕರ ಉಪಯುಕ್ತ ಪರಿಚಯಾತ್ಮಕ ಲೇಖನಗಳನ್ನೂ, ಕವನಗಳನ್ನೂ ಒಳಗೊಂಡಿದೆ. ತ್ರಿಭಾಷಾ ವಿಷಯ ಸಂಗ್ರಹಣೆ ಮತ್ತು ಮುದ್ದಾದ ಕೆಲವು ವರ್ಣಚಿತ್ರಗಳನ್ನೊಳಗೊಂಡಿರುವುದು ಇದರ ಮತ್ತೊಂದು ವೈಶಿಷ್ಟ್ಯ. ಇಂತಹ ಸಮಯೋಚಿತ, ಉಪಯುಕ್ತ ಸಂಚಿಕೆಯನ್ನು ಪ್ರಕಟಿಸಿರುವ ಶ್ರೀ ಮಹಾವೀರ ಮಿಶನ್ ಸಂಸ್ಥೆಯವರು ಅಭಿನಂದನಾರ್ಹರು.

—'ಸುಮನಾ'

ಮೂಲಕ ನಡೆಯುವ ಅವಕಾಶವಾಗಬೇಕೆಂದು ಎರಡೆರಡು ಭಾಷೆಗಳ ಶಬ್ದಕೋಶ, ಭಾಷಾಪ್ರವೇಶ, ಮತ್ತು ವಾಚನ ಪಾಠಮಾಲೆಯೆಂಬ ಪುಸ್ತಕತ್ರಯಿಯನ್ನು ಪ್ರಕಟಿಸುವ ಯೋಜನೆಯನ್ನು ಇಟ್ಟುಕೊಂಡಿದೆ. ಇದರಂತೆ ವಿದೇಶೀ ಭಾಷೆಯ ಅಧ್ಯಯನಕ್ಕೂ ಯೋಜನೆ ಇದೆ. ಇದಕ್ಕೆ ಅಂತರಭಾರತೀ, ವಿಶ್ವಭಾರತೀ ಎಂಬಹೆಸರು ಕೊಡಲಾಗಿದೆ. ಉರ್ದು, ಮರಾಠಿ ; ಕನ್ನಡ ಮರಾಠಿ ಶಬ್ದಕೋಶಗಳು, ಕನ್ನಡ ಭಾಷಾ ಪ್ರವೇಶ ಮತ್ತು ವಾಚನ ಪಾಠಮಾಲೆ, ಗುಜರಾತಿ ಮರಾಠಿ ಶಬ್ದಕೋಶ, ಬಂಗಾಲಿ ಭಾಷಾಪ್ರವೇಶ ಇವುಗಳ ಮುದ್ರಣ ಪ್ರತಿ ಸಿದ್ಧವಾಗಿದೆ.

ಶಾಸ್ತ್ರೀಯ ಗ್ರಂಥಮಾಲೆ

ಸಾಮಾನ್ಯ ಸುಶಿಕ್ಷಿತನಿಗೆ ಆಧುನಿಕ ವಿಜ್ಞಾನದ ಪರಿಚಯವಾಗಬೇಕೆಂದು "ಮಾನವೀ ಆನುವಂಶಿಕತೆ, ಮನುಷ್ಯನ ಮಿದುಳು ಮತ್ತು ಅವುಗಳ ಕಾರ್ಯ, ಪ್ರಾಣಿ ಸೃಷ್ಟಿ, ರೇಡಿಯೋ ದುರಸ್ತಿ" ಇತ್ಯಾದಿ ಪುಸ್ತಕಗಳು ಪ್ರಕಾಶಿತವಾಗಿದ್ದು ಇನ್ನೂ ಅನೇಕ ಪುಸ್ತಕಗಳು ಪ್ರಕಟವಾಗಲಿವೆ. ಪಾಶ್ಚಿಮಾತ್ಯ ಸಾಹಿತ್ಯದಲ್ಲಿಯ ಉತ್ಕೃಷ್ಟ ಗ್ರಂಥಗಳ ಭಾಷಾಂತರದ ಯೋಜನೆ ನಡೆದಿವೆ. ಸಮಾಜಶಾಸ್ತ್ರದ ಮೇಲೆ ಇಂಗ್ಲಿಷಿನಲ್ಲಿ ಮೆಕಾಯವ್ಹರ ಮತ್ತು ಪೇಜ ರಚಿಸಿದ ಸಮಾಜಶಾಸ್ತ್ರ, ಮಾನವೇಂದ್ರನಾಥರಾಯರ ಬುದ್ಧಿವಾದ ಪ್ರೇರಣಾ ಮತ್ತು ಕ್ರಾಂತಿ ಮೊದಲಾದ ಪುಸ್ತಕಗಳ ಕರಡು ಪ್ರತಿ ಸಿದ್ಧವಾಗಿದೆ.

ಎಂಟು ಸಮಿತಿ

ಈ ಮಂಡಳದ ವಿವಿಧ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು (೧) ಶಿಕ್ಷಣಪ್ರಿಯರ ಸಮಿತಿ (೨) ವಿಜ್ಞಾನಸಮಿತಿ (೩) ಮಾನವ್ಯ ವಿದ್ಯಾಸಮಿತಿ (೪) ಲಲಿತ ಕಲಾಸಮಿತಿ (೫) ಭಾಷಾಂತರ ಸಮಿತಿ (೬) ವಿಶ್ವಕೋಶ ಸಮಿತಿ (೭) ಮರಾಠಿ ಮಹಾಕೋಶ ಸಮಿತಿ (೮) ಪ್ರಕಾಶನ ಸಮಿತಿ ಎಂಬ ಎಂಟು ಸಮಿತಿಗಳನ್ನು ಸ್ಥಾಪಿಸಿದೆ. ಕಲಾಸಂಗ್ರಹಾಲಯವು ಬೇಗನೇ ನಿರ್ಮಾಣವಾಗಲಿದೆ.

ಸಂಸ್ಥೆಗಳಿಗೆ ನೆರವು

ಮಹಾರಾಷ್ಟ್ರದಲ್ಲಿ ಅನೇಕ ಸಾಹಿತ್ಯ ಸಂಸ್ಥೆ ಮತ್ತು ವ್ಯಕ್ತಿಗಳು ಖಾಸಗೀ ರೀತಿಯಿಂದ ಮಹತ್ವದ ಕೆಲಸವನ್ನು ಮಾಡುತ್ತಲಿವೆ. ಅವು ವ್ಯವಸ್ಥಿತವಾಗಿ ನಡೆಯುವಂತೆ ಈ ಮಂಡಳವು ಸಂಪಾದನ ಮತ್ತು ಪ್ರಕಾಶನಗಳಿಗೆ ಧನ ಸಹಾಯ ನೀಡುತ್ತಿವೆ. ಭಾರತೀಯ ಸಂಸ್ಕೃತ ಕೋಶ ಮಂಡಳ-ಪುಣೆ, ತತ್ವಜ್ಞಾನ ಕೋಶ ಮಂಡಳ-ಪುಣೆ, ಸಮಾಜ ಪ್ರಬೋಧನ ಸಂಸ್ಥೆ-ಪುಣೆ, ಭಾರತ ಇತಿಹಾಸ ಸಂಶೋಧನ ಮಂಡಳ-ಪುಣೆ, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ, ವಿದರ್ಭ ಸಂಶೋಧನ ಮಂಡಳ-ನಾಗಪುರ, ಭಾರತೀಯ ಚರಿತ್ರಕೋಶ ಮಂಡಳ-ಪುಣೆ, ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು-ಪುಣೆ ಇತ್ಯಾದಿ ಸಂಸ್ಥೆಗಳಿಗೆ ಮೇಲಿಂದ ಮೇಲೆ ಬಹಳಷ್ಟು ನೆರವು ನೀಡಿದುದರಿಂದ ಸಂಶೋಧನ ಮತ್ತು ಪ್ರಕಾಶನದ ಪ್ರಗತಿಯಾಗುತ್ತಲಿದೆ. ಮರಾಠಿ ವಾಙ್ಮಯ ಕೋಶದ ಒಂದು ಭಾಗವನ್ನು ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು ಪ್ರಸಿದ್ಧ ಮಾಡಿದೆ, ಇತರ ಭಾಗಗಳ ಸಂಪಾದನೆ ನಡೆದಿದೆ. ಭಾರತೀಯ ಸಂಸ್ಕೃತಿ ಕೋಶದ ನಾಲ್ಕು ಭಾಗ ಪ್ರಸಿದ್ಧವಾಗಿದೆ. ಸಮಾಜ ಪ್ರಬೋಧನ ಸಂಸ್ಥೆ ಪ್ರತಿವರ್ಷ ಆರರಿಂದ ಎಂಟು ಪುಸ್ತಕಗಳನ್ನು ಪ್ರಕಾಶಪಡಿಸುತ್ತದೆ. ಭಾರತೀಯ ಚರಿತ್ರಕೋಶ ಮಂಡಳದ ಭಾರತೀಯ ಪ್ರಾಚೀನ ಸ್ಥಲಕೋಶ ಪ್ರಕಾಶನವಾಗಲಿದೆ. ಕೈ. ಹರಿನಾರಾಯಣ ಆಪ್ಟೆ ಅವರ ಅಪ್ರಕಾಶಿತ ವಾಙ್ಮಯದ ಪುನರ್ಮುದ್ರಣಕ್ಕಾಗಿ ಆರ್ಯಭೂಷಣ ಮುದ್ರಣಾಲಯಕ್ಕೆ **ನೂರಕ್ಕೆ ಅರವತ್ತರಷ್ಟು** ಸಹಾಯ ಧನವಿತ್ತುದರಿಂದ ಅಲ್ಪ ಬೆಲೆಯಲ್ಲಿ ದೊರೆಯಲು ಅವಕಾಶವುಂಟಾಗಿದೆ. ಸಹಾಯ ಧನದ ನೆರವಿನಿಂದ **ಇನ್ನೂರು** ಪುಸ್ತಕಗಳು ಬೆಳಕು ಕಂಡಿವೆ.

ನಿಯತಕಾಲಿಕಗಳಿಗೆ ನೆರವು

ಮರಾಠಿಯಲ್ಲಿ ಗಂಭೀರ ವಿಷಯಗಳಿಗೆ ಮುಡಿಪಾಗಿದ್ದ ಪತ್ರಿಕೆ ಮತ್ತು ನಿಯತ ಕಾಲಿಕಗಳಿಗೆ ಹಾನಿ ತುಂಬಿ ಕೊಟ್ಟಿದೆ. ಅವುಗಳಲ್ಲಿ ಈ ಕೆಳಗಿನ ಪತ್ರಿಕೆಗಳು ಪ್ರಮುಖವಾಗಿವೆ :

(೧) ನವಭಾರತ-ವಾಯಿ (೨) ಸೃಷ್ಟಿಜ್ಞಾನ-ಪುಣೆ (೩) ಸಾಹಿತ್ಯ ಸಹಕಾರ-ಮುಂಬಯಿ, (೪) ಮಹಾರಾಷ್ಟ್ರ ಸಾಹಿತ್ಯ ಪತ್ರಿಕೆ-ಪುಣೆ, (೫) ಸಮಾಜ ಪ್ರಬೋಧನ ಪತ್ರಿಕೆ-ಪುಣೆ, (೬) ಭಾರತ ಇತಿಹಾಸ ಸಂಶೋಧನ ಮಂಡಳ-ಪುಣೆ, (೭) ಪ್ರತಿಷ್ಠಾನ-ಔರಂಗಾಬಾದ, (೮) ಯುಗವಾಣಿ ನಾಗಪುರ, (೯) ವಾರ್ಷಿಕ ವಿದರ್ಭ ಸಂಶೋಧನ-ನಾಗಪುರ (೧೦) ಆಲೋಚನಾ-ಮುಂಬಯಿ.

ಮೈಸೂರು ಸರಕಾರವು ಈ ದಿಶೆಯಲ್ಲಿ ಸಾಹಿತ್ಯ ಪ್ರಕಾಶನಕ್ಕೆ ನೆರವು ನೀಡಿ, ಸಾಹಿತ್ಯದ ಅಭಿವೃದ್ಧಿಯಲ್ಲಿ ನವ ಮನ್ವಂತರ ಸ್ಥಾಪಿಸಬೇಕೆಂದು ನಿರೀಕ್ಷಿಸಬಹುದೆ?

ವಿಮರ್ಶನರಂಗ

ಪ್ರಣತಿ: ಭಿಲಾಯಿ ಕನ್ನಡ ಸಂಘದವರ ವಾರ್ಷಿಕ ಸಂಚಿಕೆ.

ಕನ್ನಡನಾಡಿನಿಂದ ದೂರವಿದ್ದುಕೊಂಡೂ ಭಿಲಾಯಿಯ ಕನ್ನಡಿಗರು ಕನ್ನಡ ಸಂಘವನ್ನು ಕಟ್ಟಿಕೊಂಡು ಕನ್ನಡ ನಾಡುನುಡಿಗಳ ಸೇವೆಯನ್ನು ಸ್ತುತ್ಯವಾದ ರೀತಿಯಲ್ಲಿ ಮಾಡುತ್ತಾ ಬಂದಿದ್ದಾರೆ. ಈ ಸಂಚಿಕೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಂಘದ ಸದಸ್ಯರು ಬರೆದ ಹಾಸ್ಯಲೇಖನಗಳೂ, ವೈಚಾರಿಕ ಬರಹಗಳೂ ಇವೆ. ಕಡೆಯಲ್ಲಿ ಸಂಘದ ಸದಸ್ಯರ ಪರಿಚಯ ಮಾಡಿಕೊಟ್ಟಿದ್ದಾರೆ. ಈ ಬಗೆಯ ಕೆಲಸ ಇತರ ಸಂಘಗಳಲ್ಲೂ ನಡೆದರೆ ಹೊರನಾಡಿನಲ್ಲಿರುವ ಕನ್ನಡಿಗರ ಪರಿಚಯಮಾಡಿಕೊಳ್ಳಲು ಎಲ್ಲರಿಗೂ ಸುಲಭವಾದೀತು.

* * *

ಕೆನಡಾದಲ್ಲಿ ಕನ್ನಡಿಗ—ಪತ್ರ ಸಂಕಲನ; ಶ್ರೀ ವಿ. ಶೆಟ್ಟಿ ಪೆಂಡಕೂರು, ಪ್ರಕಾಶಕ: ಜಿ. ವಿ. ಪೆಂಡಕೂರು, ರಾಮನಗರ (ಬಳ್ಳಾರಿ), ಪುಟ. ೧೪೩, ಬೆಲೆ. ರೂ. ೧-೫೦.

ಬಳ್ಳಾರಿ ಜಿಲ್ಲೆಯವರಾದ ಕನ್ನಡಿಗ ವೆಂಕಟಾಚಲಶೆಟ್ಟಿ ಪೆಂಡಕೂರು ಅವರು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಕೆನಡಾ ದೇಶಕ್ಕೆ ತೆರಳಿ, ಅಲ್ಲಿಯೇ ವಿವಾಹಿತರಾಗಿ ನೆಲಸಿರುವವರು. ೧೯೫೫ ರಿಂದ ೧೯೬೬ ರವರೆಗಿನ ಹನ್ನೊಂದು ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರು ತಮ್ಮ ಮನೆಯವರಿಗೆ ಬರೆದ ಐವತ್ತೇಳು ಪತ್ರಗಳ ಸಂಕಲನವಾಗಿ 'ಕೆನಡಾದಲ್ಲಿ ಕನ್ನಡಿಗ' ಹೊರಬಿದ್ದಿದೆ.

ಈ ಪತ್ರಗಳು ಓದುಗರಿಗೆ ಕೆನಡಾದೇಶದ ಜನಜೀವನ, ಸಂಸ್ಕೃತಿ, ಸಮಾಜ ವ್ಯವಸ್ಥೆ, ಆರ್ಥಿಕ ಸಂಪನ್ಮೂಲಗಳು, ವ್ಯವಹಾರ-ಉದ್ಯಮಗಳು, ತಾಂತ್ರಿಕ ಪ್ರಗತಿ ಮತ್ತು ಶಿಕ್ಷಣ ವಿಧಾನಗಳನ್ನು ಕುರಿತು ಸುಂದರವಾಗಿ ಪರಿಚಯ ಮಾಡಿಕೊಡಬಲ್ಲವು. ತಾಯ್ನಾಡಿನಿಂದ ಬಹುದೂರ ನೆಲೆಸಿದ್ದರೂ ಸರ್ವದಾ ಇಲ್ಲಿನದೇ ನೆನಪು ಅವರಿಗೆ. ಈ ತರುಣರಿಗೆ ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಅವ್ಯವಸ್ಥೆಯನ್ನು ಕುರಿತೇ ಕಳಕಳಿ. "ನಮ್ಮ ನಾಡಿನಲ್ಲಿ ಸ್ವಚ್ಛವಾದ ಗಾಳಿಬೀಸಬೇಕು. ತಿಳಿಯಾದ ನೀರು ಹರಿಯಬೇಕು. ಹಳೆಯ ಹೊಲಸೆಲ್ಲಾ ತೊಲಗಬೇಕು. ಆಂತಾದರೆ ನವಜೀವನ." (ಪುಟ ೧೨೩) ಎನ್ನುವ ಅವರ ವಿಚಾರ-ಧಾರೆ ಪ್ರಶಂಸನೀಯವಾದುದು.

ಇಲ್ಲಿನ ಪತ್ರಗಳ ಪ್ರಮುಖ ಮೌಲ್ಯ ಅವುಗಳ ಸರಳತೆಯಲ್ಲಿದೆ. ಯಾವ ಆಡಂಬರತೆಯ ಸೋಂಕೂ ಇಲ್ಲದೆ ನೈಜವಾಗಿ ಹೃದಯದಿಂದ ಹೊರಬಿದ್ದು, ಹೃದಯವನ್ನೇ ತಾಕಬಲ್ಲ ಪ್ರಭಾವ, ಶಕ್ತಿಗಳನ್ನು ಪಡೆದಿವೆ. ವಿಷಯ ಮಂಥನ, ಸ್ವವಿಮರ್ಶೆ, ಆತ್ಮಪರಿಚಯ—ಇವು ಸರಳವಾದ ನುಡಿಯಲ್ಲಿ ಮೂಡಿವೆ. ಕೆಲವೆಡೆ ನೇರಭಾಷಾಂತರವಾಗಿದ್ದು ಅಸಹಜತೆಯ ಛಾಯೆ ಉಳಿದುಕೊಂಡಿದೆ; ಅಂತಸ್ಥು, ಲೆಕ್ಕ, ಧರ, ನಿಶ್ಚೇಷ್ಠಿತ, ಖಣ, ಕೂಲಂಕುಷ, ಮಾಯ, ಮುಖ್ಯಾಲು, ಹತ್ತನ್ನೆರಡು, ಮಿಕ್ಕಿ, ಗ್ರಾಡ್ಯುಯೇಟ್, ರಿಜಿಸ್ಟ್ರಾರ್, ಅಸರುದ್ಧ—ಇವೇ ಮುಂತಾದ ಹಲವು ಅಪಪ್ರಯೋಗಗಳು, ತಪ್ಪುಗಳು ಅಲ್ಲಲ್ಲಿ ಇಣಿಕಿವೆ. ಅಂತರ್ರಾಷ್ಟ್ರೀಯ ಅರ್ಥವಂತಿಕೆ ಹೆಚ್ಚುತ್ತಿರುವ ಈ ಕಾಲದಲ್ಲಿ ದೇಶವಿದೇಶಗಳ ನಡುವೆ ಪರಸ್ಪರ ಅರಿವು ಮೂಡಬೇಕಾಗಿರುವುದು ಸ್ವಾಭಾವಿಕವಾಗಿದೆ. ಈ ದಿಶೆಯಲ್ಲಿ ಶ್ರೀ ಪೆಂಡಕೂರು ಅವರ ಪತ್ರಗಳು ಸ್ವಲ್ಪಮಟ್ಟಿಗಾದರೂ ನೆರವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

* * *

"ಮುಕ್ತಿಶ್ರೀ"—ಸ್ಮರಣ ಸಂಚಿಕೆ; ಪ್ರಕಾಶಕರು: ಶ್ರೀ ಮಹಾವೀರ ಮಿಷನ್, ಶಂಕರಪುರಂ, ಬೆಂಗಳೂರು-೮; ಬೆಲೆ: ರೂ. ೨-೦೦.

ಕಳೆದ ಮಾರ್ಚ್ ತಿಂಗಳು ಶ್ರವಣಬೆಳಗೊಳದಲ್ಲಿ ನಡೆದ ಬಾಹುಬಲಿಯ ಮಹಾಮಸ್ತಕಾಭಿಷೇಕದ ವಿಶೇಷ ಸಂದರ್ಭದಲ್ಲಿ ಬೆಂಗಳೂರಿನ ಶ್ರೀ ಮಹಾವೀರ ಮಿಶನ್‌ನವರು ಹೊರತಂದ ಸ್ಮರಣ ಸಂಚಿಕೆ 'ಮುಕ್ತಿಶ್ರೀ.' ಜಿನಧರ್ಮ, ಜಿನತತ್ತ್ವ, ಗೊಮ್ಮಟಜಿನ, ಶ್ರವಣಬೆಳಗೊಳದ ಸ್ಥಳ ಮಹಾತ್ಮೆ, ಗೊಮ್ಮಟಶಿಲ್ಪಕರ್ತೃ ಚಾವುಂಡರಾಯನನ್ನು ಕುರಿತು ಡಾ. ಡಿ. ವಿ. ಜಿ., ಡಾ. ಉಪಾಧ್ಯೆ, ಡಾ. ಮುಗುಳಿ, ಮಿರ್ಜಿ, ಪ್ರೊ. ಎಸ್. ಕೆ. ಆರ್., ಪು. ತಿ. ನ., ನೊದಲಾದ ಹಿರಿಯರ ಹಾಗೂ ಹಲವು ಕಿರಿಯ ಲೇಖಕರ ಉಪಯುಕ್ತ ಪರಿಚಯಾತ್ಮಕ ಲೇಖನಗಳನ್ನೂ, ಕವನಗಳನ್ನೂ ಒಳಗೊಂಡಿದೆ. ತ್ರಿಭಾಷಾ ವಿಷಯ ಸಂಗ್ರಹಣೆ ಮತ್ತು ಮುದ್ದಾದ ಕೆಲವು ವರ್ಣಚಿತ್ರಗಳನ್ನೊಳಗೊಂಡಿರುವುದು ಇದರ ಮತ್ತೊಂದು ವೈಶಿಷ್ಟ್ಯ. ಇಂತಹ ಸಮಯೋಚಿತ, ಉಪಯುಕ್ತ ಸಂಚಿಕೆಯನ್ನು ಪ್ರಕಟಿಸಿರುವ ಶ್ರೀ ಮಹಾವೀರ ಮಿಶನ್ ಸಂಸ್ಥೆಯವರು ಅಭಿನಂದನಾರ್ಹರು.

—'ಸುಮನಾ'

ಹೃದಯ ತರಂಗ (ಕವನ ಸಂಕಲನ): ಕವಿ: ಎಂ. ರಾಧಾ ಕೃಷ್ಣರಾವ್, ಪ್ರಕಾಶಕರು: ವಾಗ್ದೇವಿ ಪ್ರಕಾಶನ, ಬೀಚ್‌ರೋಡ್ ಕಾಸರಗೋಡು, ಆಕೃತಿ ಕ್ರೌನ್ ೧/೮, ಪುಟಗಳು: ೪೬; ಬೆಲೆ: ೦–೫೦ ಪೈಸೆ.

ಲೇಖಕರ ಮೊದಲ ಸಂಕಲನವಾಗಿರುವ ಇದರಲ್ಲಿ ಇಪ್ಪತ್ತೊಂದು ಕವನಗಳಿವೆ. ದೇಶಭಕ್ತಿ, ವಿರಹ, ವಿಷಾದ ವಿಚಾರಗಳ ಕವನಗಳನ್ನಿಲ್ಲಿ ಶಿಲ್ಪಿ ಕಾಣುತ್ತೇವೆ. ರಚನೆಯಲ್ಲಿ ಭಾವಸ್ಪಂದನವಿದೆ. ಕೆಲವಂತೂ ಒಳ್ಳೆಯ ರೂಪಕ, ಉಪಮೆ, ದೃಷ್ಟಾಂತ ಮೈತಾಳಿವೆ. ಕವನಗಳಲ್ಲಿ ಕರ್ತವ್ಯಕ್ಕೆ ಕರೆಯಿದೆ; ಧೈರ್ಯಶೌರ್ಯಗಳಿಗೆ ಪ್ರಚೋದನೆಯಿದೆ. ಏಳಿ ಏಳಿ, ಜೈತ್ರಯಾತ್ರೆ, ಆಹ್ವಾನ, ಆಯುಧಪೂಜೆ, ಎಂಬ ಕವನಗಳಲ್ಲಿ ರಾಷ್ಟ್ರಜಾಗೃತಿಯ ಪ್ರೇರಣೆಯಿದೆ. ರಚನೆಯಲ್ಲಿ ಶಾಂತಿಯಿದೆ, ಕುಣಿತವಿದೆ.

* * *

ಪಕ್ಷಿನೋಟ: (ಕವನ ಸಂಕಲನ): ಕವಿ: ಕೆ. ಮಹೇಶ್, ಪ್ರಕಾಶನ: "ಹಂಸಧ್ವನಿ", ವಿಶ್ವೇಶ್ವರಪುರಂ, ಬೆಂಗಳೂರು. ಆಕೃತಿ: ಕ್ರೌನ್ ೧/೮, ಪುಟಗಳು: ೨೪; ಬೆಲೆ: ೦–೬೦ ಪೈಸೆ.

ಇದರಲ್ಲಿ ಹದಿನೆಂಟು ಕವನಗಳು ಸಮಾವೇಶವಾಗಿವೆ. ಈ ಕವನಗಳು ಮಾತಾನಾಡಿದಂತೆ ಸರಳವಾಗಿ ರಚಿತವಾದವು. ಭಾವೋತ್ಕಟತೆಯಿಂದ ಹೊಮ್ಮಿದ ಕವನವೊಂದೂ ಇಲ್ಲವೆನ್ನದೆ ವಿಧಿಯಿಲ್ಲ. ಇವುಗಳಲ್ಲಿ ಪದ್ಯಗಳ, ಪಾದಗಳ ವಿಂಗಡಣೆ ಕಾಣುವುದಾದರೂ ಅವು ಯಾವೊಂದು ನಿಯಮಕ್ಕೂ ಒಳಪಟ್ಟಿಲ್ಲ. ಪ್ರೇಮ–ಪ್ರಣಯಗಳೇ ಹೆಚ್ಚಿನ ಕವನಗಳಿಗೆ ವಸ್ತುವನ್ನೊದಗಿಸಿವೆ. ಈ ಕವಿಯ ಮನವೂ ಬುದ್ಧಿಯೂ ಇನ್ನಷ್ಟು ಉಜ್ವಲವಾಗಿ ಒಳ್ಳೆಯ ಕವನಗಳ ಸೃಷ್ಟಿಗೆ ಪ್ರೇರಕವಾಗಲೆಂದು ಹಾರೈಸಬಹುದು.

* * *

ಹೂಹಂದರ (ಕವನ ಸಂಕಲನ): ಕವಿ: ಅಲ್ಲಮಪ್ರಭು ಛಬ್ಬಿ; ಪ್ರಕಾಶಕರು: ಎ. ಎಸ್. ಛಬ್ಬಿ, ಪ್ರಕಾಶ ಪ್ರಕಾಶನ, ಶಿರಹಟ್ಟಿ; ಆಕೃತಿ: ಕ್ರೌನ್ ೧/೮, ಪುಟಗಳು: ೪೮, ಬೆಲೆ: ರೂ. ೧–೫೦.

ಇದು ಇಪ್ಪತ್ತೈದು ಕವನಗಳ ಸಂಗ್ರಹ. ಕವಿವರ ಬೇಂದ್ರೆಯವರಿಗೆ ಅವರ ಎಪ್ಪತ್ತನೆಯ ಹುಟ್ಟುಹಬ್ಬದ ಕಾಣಿಕೆಯಾಗಿ ಅರ್ಪಣವಾಗಿದೆ. ಪ್ರೊ|| ವಿ. ಕೆ. ಗೋಕಾಕರ ಮುನ್ನುಡಿಯ ವಾಕ್ಯವಚದಿಂದ ಇನ್ನಷ್ಟು ಶೋಭಾವಹವಾಗಿದೆ. ಇದರಲ್ಲಿರುವ ಕವನಗಳು ಸರಳ–ಲಲಿತ ಪದಗಳ ವಿಶ್ವಾಸದಿಂದ ಕಂಗೊಳಿಸುತ್ತವೆ. ಕವಿಗಿರುವ ಸೂಕ್ಷ್ಮ ನಿರೂಪಣೆಗೂ ಆ ನಿರೀಕ್ಷಣೆಗೆ ತಕ್ಕುದಾದ ಅಭಿವ್ಯಕ್ತಿಗೂ ಇಲ್ಲಿನ ಹಲವು ಕವನಗಳು ಸಾಕ್ಷ್ಯವಾಗಿವೆ. ಕೆಲವು ಕವನಗಳಲ್ಲಿ ತೀರ ಚೊಕ್ಕತನವನ್ನು ಕಾಣುತ್ತೇವೆ. ಕವಿಭಾವನೆಯಲ್ಲಿ ಹೆಚ್ಚಿನ ಹೊಸತನವಿಲ್ಲದಿದ್ದರೂ ಮಾತಿತಲ್ಲಿ ಉಜ್ವಲತೆಯಿದೆ.

* * *

ಪರಪುಟ್ಟ (ಕವನಗಳು): ಕವಿ: ಆನಂದಕುಮಾರ; ಪ್ರಕಾಶಕರು: ಲಲಿತ ಸಾಹಿತ್ಯಮಾಲೆ, ಧಾರವಾಡ; ಆಕೃತಿ: ಕ್ರೌನ್ ೧/೮, ಪುಟಗಳು ೪+೭೬; ಬೆಲೆ: ರೂ. ೧–೨೫.

ಎಪ್ಪತ್ತುಮೂರು ಕವನಗಳನ್ನು ಈ ಸಂಕಲನದಲ್ಲಿ ಮುದ್ರಿಸಲಾಗಿದೆ. ಇವನ್ನು ಬಂಗಾರ, ಒರೆಗಲ್ಲು ವೀರಶ್ರೀ–ಎಂಬ ಮೂರು ವರ್ಗವಾಗಿ ಗಣಿಸಲಾಗಿದೆ. "ಬಂಗಾರ"–ಎಂಬುದು ದಾಂಪತ್ಯಕ್ಕೆ ಸಂಬಂಧಿಸಿದ ಒಲವಿನ ಮುಖಗಳಿಂದ ಕೂಡಿದೆ. "ಒರೆಗಲ್ಲು" ಎಂಬುದು ದೇವರು, ತತ್ವ ವಿಚಾರ, ನೀತಿ–ವಿಷಯಕವಾಗಿದೆ. "ವೀರಶ್ರೀ" ಎಂಬ ಭಾಗವು ದೇಶಭಕ್ತಿ, ಜನತೆಯ ಏಕತೆಗಳಿಗೆ ಪ್ರೇರಣೆ ಕೊಡುವುದರೊಡನೆ ಶೌರ್ಯವನ್ನು ಎತ್ತಿಹಿಡಿಯುತ್ತದೆ. ಧ್ವನಿ, ವಕ್ರೋಕ್ತಿಗಳ ಸರಳ–ಸರಸವೆನಿಸುವ ಈ ರಚನೆ ಪದ್ಯ ಲಕ್ಷಣಗಳಿಂದ ಕೂಡಿದ ಇನ್ನಷ್ಟು ಕಲಾತ್ಮಕತೆಯನ್ನು ತಾಳಿ, ವಿಕಸಿತ ಕವಿದೃಷ್ಟಿಯುಳ್ಳ ಕವಗಳನ್ನು ಪ್ರಸ್ತುತ ಕವಿಗಳಿಂದ ಕಾಣುವಂತೆ ಆಗಲಿ.

—ಟಿ. ಕೇಶವಭಟ್ಟ

ಬೀಸಿದ ಬಲೆ: (ಕುತೂಹಲಕಾರಿ ಕಾದಂಬರಿ) ಲೇ: ಕೆ. ಗಣೇಶ ಮಲ್ಯ, ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಪುಟ: ೧೬೩, ಬೆಲೆ: ೨–೫೦.

ಇತ್ತೀಚಿಗೆ ಕೆನರಾ ಬ್ಯಾಂಕಿನಿಂದ ಎರಡು ಲಕ್ಷ ರೂಪಾಯಿಗಳು ವಿಸ್ಮಯಕಾರಕರೀತಿಯಲ್ಲಿ ಕಳುವಾದ ರೋಮಾಂಚನಕಾರೀ ಘಟನೆಯನ್ನು ಕುರಿತು ರಚಿಸಿದ ಕಾದಂಬರಿ 'ಬೀಸಿದ ಬಲೆ.' ಇಲ್ಲಿ ಬರುವ ದಿನೇಶಕುಮಾರನ ಪಾತ್ರ, ಅವನ ಸುತ್ತ ಹೆಣೆದಿರುವ ಸನ್ನಿವೇಶ, ಅವನು ಮಾಡುವ ಬ್ಯಾಂಕ್ ದರೋಡೆಗಳ ಚಿತ್ರಣ, ಮುಂತಾದವುಗಳು ಸ್ಪಷ್ಟವಾಗಿ ಜೀವನದಮೇಲೆ ಬುನಾದಿಯನ್ನು ತಳೆದಿಲ್ಲ. ಒಂದು ವಿಶಿಷ್ಟ ರೀತಿಯ ಪತ್ತೇದಾರಿ ಕಾದಂಬರಿಯ ಜಾತಿಗೆ ಸೇರಿದರೂ ಪತ್ತೇದಾರಿ ಅಂಶಗಳನ್ನು ಪಂಜುಹತ್ತಿಕೊಂಡು ಹುಡುಕಬೇಕು. ಕಾದಂಬರಿ ಎಂದರೇನೆಂಬುದನ್ನೇ ಅರ್ಥಮಾಡಿಕೊಳ್ಳದ ಪ್ರತಿಫಲ ಈ ಕಾದಂಬರಿ. ಆನಂದಕುಮಾರನ ಅವ್ಯವಸ್ಥಿತವಾದ ಜೀವನದಾತ ಇದ್ದಕ್ಕಿದ್ದಂತೆಯೇ ಪತ್ತೇದಾರ ದಿವಾಕರನಿಗೆ ಸಹಾಯ ಮಾಡುವುದು ಸೋಜಿಗದ ಸಂಗತಿ. ಇದೊಂದು ವಿಫಲಯತ್ನ. ಕೇವಲ ಯಾಂತ್ರಿಕ ನಿರೂಪಣೆ. ಬೊಂಬಾಯಿ, ದೆಹಲಿಯ ಜೀವನವನ್ನು ಪರಿಚಯಮಾಡಲು ಹೊರಟ ವ್ಯರ್ಥಪ್ರಯತ್ನ ಇದು.

ಪುಣ್ಯಪ್ರಭಾವ: (ಸಾಮಾಜಿಕ ಕಾದಂಬರಿ) ಲೇ: ಹೆರಂಜೆ ರಘು ರಾಮ ಹೆಗ್ಗಡೆ. ಪ್ರಕಾಶಕರು: ಹೆಗ್ಡೆ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು-೪, ಪುಟ: ೧೪೫, ಬೆಲೆ: ರೂ. ೨-೦೦.

ಕುಂದಾಪುರ ತಾಲ್ಲೂಕಿನ ಕಂದಾವರ ಹಳ್ಳಿಯ ರಾಮಯ್ಯನವರ ಜೀವನಚರಿತ್ರೆಯಂತಿರುವ ಈ ಕೃತಿ ಅನೇಕ ರೀತಿಯಲ್ಲಿ ಓದುಗರ ಮನ ಸೆಳೆಯುತ್ತದೆ. ರಾಮಯ್ಯನವರ ಧಾರ್ಮಿಕ ಶ್ರದ್ಧೆ, ನಿಷ್ಕಪಟ ಮನೋಭಾವ ಮುಂತಾದುವುಗಳು ಇಲ್ಲಿ ಸ್ಪಷ್ಟವಾಗಿ ಒಡಮೂಡಿವೆ. ರಾಮಯ್ಯನವರ ಒಳ್ಳೆಯತನವೇ ಅವರ ದುರಂತ ಜೀವನಕ್ಕೆ ಕಾರಣವೆಂಬಂತಿದೆ. ಸೀತಾರಾಮ ಪ್ರಭುಗಳು ಮೋಸದಿಂದ ಅಸಹಾಯಕ ಪರಿಸ್ಥಿತಿಯಲ್ಲಿದ್ದ ರಾಮಯ್ಯನವರನ್ನು ಹೇಗೆ ಬಲೆಗೆ ಹಾಕಿಕೊಂಡರೆಂಬುದು ಹೃದಯವಿದ್ರಾವಕವಾಗಿ ಚಿತ್ರಿತವಾಗಿದೆ. ಮಕ್ಕಳು ವೆಂಕಟರಾಮು, ರಾಮಕೃಷ್ಣ, ಕೃಷ್ಣಮೂರ್ತಿ ಇವರ ಜೀವನ ಹೇಗೆ ಬಿರುಗಾಳಿಗೆ ಸಿಕ್ಕು ತಲ್ಲಣಿಸುವದು ಕಣ್ಣಿಗೆ ಕಟ್ಟುವಂತಿದೆ. ಮಾಧವರಾಯ ನಂಥವರು ಸಮಾಜವನ್ನು ಕೆಡಿಸುವ ವಿಷಹುಳುಗಳು, ಸರೋಜಳ ನೀತಿಬಾಹಿರತನ ಮನಮುಟ್ಟುವಂತೆ ಬಂದಿವೆ. ಓದುಗರ ಅಂತರಂಗವನ್ನು ಕಲಕಿ ಅನುಕಂಪ ಹುಟ್ಟಿಸುವ ಈ ಕೃತಿ ಉತ್ತಮವಾದದು.

* * *

ತೂಗುಮಣೆ: (ಕಥಾಸಂಕಲನ) ಲೇ: ಎಂ. ಎನ್. ನಾಗೇಂದ್ರ ರಾವ್. ಪ್ರಕಾಶಕರು: ನಲಂದಾ ಸಾಹಿತ್ಯ ಪ್ರಕಾಶನ ೧೦೦/೨ ತಾತಾಸಿಲ್ಕ್‌ಫಾರಂ, ೩ನೇ ಬ್ಲಾಕ್ ಬಸವನಗುಡಿ, ಬೆಂಗಳೂರು-೪ ಪುಟ: ೯೬ ಬೆಲೆ: ೧-೫೦.

ಈ ಸಂಕಲನದ ಎಂಟು ಕಥೆಗಳಲ್ಲಿ ಹೃದಯವನ್ನು ಸೆರೆಹಿಡಿಯುವ ಸನ್ನಿವೇಶಗಳುಂಟು; ಘಟನೆಗಳುಂಟು. ಪುಸ್ತಕದ ಶೀರ್ಷಿಕೆಯನ್ನು ಹೊತ್ತ "ತೂಗುಮಣೆ" ಸಾಮಾನ್ಯ ಕಥೆ. ಪ್ರೇಮಿಗಳಿಬ್ಬರ ರಮಣೀಯತೆಯ ಜೊತೆಗೆ ಅವರ ವ್ಯಾವಹಾರಿಕ ಪ್ರಜ್ಞೆಯನ್ನು ತೇಲಿಸುತ್ತದೆ. "ನೆನೆದಂತೆ ಕನಸಿ"ನಲ್ಲಿ ಲಲಿತೆ-ಶಂಕರರ ತಿಳಿಹಾಸ್ಯದ ಸುಂದರ ಕನಸಿನ ಕಲ್ಪನೆಯಿದೆ. ಅವರ ಭಾವನೆಗೂ ಸತ್ಯಕ್ಕೂ ಇರುವ ಅಂತರ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ. "ಕರಿಗಿರಿರಾಯರು ಸತ್ತರು" ಬಹಳ ಪೀಚಾದ ಕಥೆ. ಸಮಾಜದ ಅಣಕು ಚಿತ್ರ "ಕಂಠಿಯ ಪಿಟೀಲು" ಬಲು ಸಾಧಾರಣ ಚಿತ್ರ "ರಾಗಾನುರಾಗ"ದಲ್ಲಿ ಸಂಗೀತ ಅನುಭವೇದ್ಯ ಎಂಬುದನ್ನು ಮಾರ್ಮಿಕವಾಗಿ ತೋರಿಸುತ್ತದೆ. "ಬಂಡೆಯ ಕೊರಗು" ದೇವವಿಗ್ರಹ ರೂಪ ತಾಳಿದ ಕಲ್ಲಿನ ಕಥೆ. "ಅಪ್ಸರಾಪಹರಣ" ಮನೋರೋಗಿಯ ಹೃದಯ ಸ್ಪರ್ಶಿ ಚಿತ್ರ.

ಈ ಸಂಗ್ರಹದಲ್ಲಿರುವ ಎಲ್ಲ ಕಥೆಗಳೂ ಹೃದಯಸ್ಪರ್ಶಿ. ನಾಗೇಂದ್ರರಾವ್ ಅವರು ಅಭಿನಂದನಾರ್ಹರು.

* * *

ಬದುಕು ಜಟಕಾ ಬಂಡಿ: (ಸಾಮಾಜಿಕ ನಾಟಕ) ಲೇ 'ಎಚ್ಕೆ' ಕರ್ಕೇರ ಪ್ರಕಾಶಕರು: ಪೂರ್ಣಿಮಾ ಪ್ರಕಾಶನ, ಮುಂಬಯಿ, ಬೆಲೆ: ೨-೦೦.

ಕೇವಲ ನಗಿಸುವುದನ್ನೇ ಗುರಿಯಾಗುಳ್ಳ ನಾಟಕಗಳು ಹೊರಬರುತ್ತಿರುವ ಈ ಕಾಲದಲ್ಲಿ ಇದೊಂದು ಉತ್ತಮ ದರ್ಜೆಯ ನಾಟಕವೆನ್ನಬಹುದು. ಸ್ತ್ರೀಸ್ವಾತಂತ್ರ್ಯ, ವರ ದಕ್ಷಿಣೆ ಮುಂತಾದ ಹಳೆಯ ಸಮಸ್ಯೆಗಳನ್ನುಳ್ಳದ್ದೇ ಆದರೂ ನಾಟಕದ ವಸ್ತು ವಿನ್ಯಾಸದಲ್ಲಿ ಅದನ್ನು ನಡೆಸಿರುವ ರೀತಿಯಲ್ಲಿ ಹೊಸತನವನ್ನು ಕಾಣಬಹುದು. ಚಂಪಾ ಸ್ತ್ರೀ ಸ್ವಾತಂತ್ರ್ಯದ ಪ್ರತೀಕವಾದರೆ ರಮೇಶ ವರದಕ್ಷಿಣೆಗೆ ಬಲಿಯಾದ ಪ್ರಾಣಿ, ಮಾಧವರಾಯ-ಸುಮಿತ್ರ ನಾಟಕದ ಕೇಂದ್ರ ವ್ಯಕ್ತಿಗಳು. ಚಂಪಾ, ಸುರೇಂದ್ರ, ರಮೇಶ, ರಾಜು ಎಲ್ಲ ವ್ಯಕ್ತಿಗಳು ಸೇರುವ ಸ್ಥಳ ಮಾಧವನ ಮನೆ. ಕೆಲ ಸಂಭಾಷಣೆಗಳು ಚುರುಕಾಗಿವೆ. ಹಲವು ಕಡೆಬರುವ ಅಭಿಪ್ರಾಯ ನಿರೂಪಣೆಗಳು ಸಂಭಾಷಣೆಗಳಾಗದೆ ಭಾಷಣಗಳಾಗಿವೆ. ಒಟ್ಟಿನಲ್ಲಿ ನಾಟಕ ಪ್ರಭಾವ ಬೀರಬಲ್ಲದು.

* * *

ಗ್ರಾಮಾಭ್ಯುದಯದ ಯೋಜನಾಂಗಗಳು: (ಕರ್ಣಾಟಕ ವಿಶ್ವವಿದ್ಯಾನಿಲಯದ ಉಪನ್ಯಾಸ ಗ್ರಂಥ) ಲೇ: ಡಾ॥ ಟಿ. ಕೆ. ಮೋಟೆ ಪ್ರಕಾಶಕರು: ಕರ್ಣಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ: ೫೮, ಬೆಲೆ: ೨೫ ಪೈಸೆ.

ಸಾಮಾನ್ಯ ಜನತೆಗೆ ಇಂಥ ಪತ್ರಿಕೆಗಳ ಮೂಲಕ ಪ್ರಸಾರ ಮಾಡುವ ಜ್ಞಾನ ಸಫಲತೆ ಪಡೆಯುತ್ತದೆ. ದೇಶ ಮುಂದುವರಿಯಬೇಕಾದರೆ ಗ್ರಾಮಗಳ ಅಭಿವೃದ್ಧಿಯಾಗಬೇಕು. ಹಾಗಾಗಲು ಯೋಜನೆಗಳು ಹೇಗೆ ಪಾತ್ರವಹಿಸುತ್ತಿವೆ ಎಂಬದನ್ನು ತಿಳಿಸುವ ಈ ಪತ್ರಿಕೆ ಮೆಚ್ಚತಕ್ಕದ್ದು. ಯೋಜನಾಂಗಗಳು ಮತ್ತು ಗ್ರಾಮೀಣ ಸಮಾಜ ಈ ಎರಡು ಘಟಕಗಳ ಮಧ್ಯೆ ಹೆಚ್ಚು ಅಂತರ ಉಳಿಯದಂತೆ ಬದುಕು ಸಾರ್ಥಕಗೊಳಿಸಲು ಈ ವಿಚಾರದ ಅರಿವು ಅಗತ್ಯ. ಸಹಕಾರ, ಪಂಚಾಯತಿರಾಜ್ಯ ಸಮಾಜ-ಅಭಿವೃದ್ಧಿಗಳ ಯೋಜನೆಗಳು ಮುಂತಾದ ಅಂಶಗಳನ್ನು ಅಂಕಿ ಅಂಶಗಳಿಂದ ವಿವರಿಸಿರುವ ಈ ಪುಸ್ತಕ ಅದರ ಗುರಿಯನ್ನು ಸಾಧಿಸುತ್ತದೆ.

ಎಂ ಚಂದ್ರಶೇಖರ್

ಬಸವತತ್ವ ದರ್ಶನ: ಸಂಪಾದಕರು: ದಾನಪ್ಪ ಜತ್ತಿ ಶಾರದಾಂಬ ಸಾಹಿತ್ಯ ಮಂದಿರ, ತಿಕೋಟಾ ಪುಟ: ೮೯ ಬೆಲೆ: ರೂ. ೧-೦೦.

ಎಂಟುನೂರು ವರ್ಷಗಳ ಹಿಂದೆ ಆಗಿ ಹೋದ 'ಯುಗ ಪ್ರವರ್ತಕ" ಬಸವಣ್ಣನವರ ಭಕ್ತಿ, ಆಚಾರ, ವಿಚಾರ, ಸುಧಾರಣೆ, ನೀತಿಗಳ ಪರಿಚಯ ಮಾಡಿಕೊಡುವ ಮಹದುದ್ದೇಶದಿಂದ ಈ ಕೃತಿಯನ್ನು ಅಣ್ಣನವರ ಎಂಟನೇ ಶತಮಾನೋತ್ಸವದ ನೆನಪಿಗಾಗಿ ಪ್ರಕಟಮಾಡಲಾಗಿದೆ. ಅಣ್ಣನವರ ಸಾಧನೆಗಳ ವಿವಿಧ ಮುಖಗಳ ಪರಿಚಯ ಮಾಡಿಕೊಟ್ಟು ಅವರ ಮಾರ್ಗದರ್ಶನದ ಆದರ್ಶನದಲ್ಲಿ ಜಗತ್ತು ಸಾಗಿ ಸಾರ್ಥಕತೆಯನ್ನು ಗಳಿಸಬೇಕೆಂಬ ಸದುದ್ದೇಶದಿಂದ ಈ ಕೃತಿಯನ್ನು ಹೊರತಂದಿದ್ದಾರೆ. ಇಲ್ಲಿ ಶ್ರೀ. ಮ. ನಿ. ಪ್ರ. ಸಂಗನ ಬಸವ ಮಹಾಶಿವಯೋಗಿಗಳವರು, ಬಂಥನಾಳ ಅವರು 'ಜಗದ್ವಂದ್ಯ ಬಸವಣ್ಣನವರು' ಎಂಬ ಲೇಖನವನ್ನು ಅಪ್ಪಣೆ ಕೊಡಿಸಿದ್ದಾರೆ. ತಮ್ಮ ಅಧಿಕಾರಕ್ಕೆ ತಕ್ಕಂತೆ ಶ್ರೀಗಳು ಅಣ್ಣನವರನ್ನು ಆಧ್ಯಾತ್ಮಿಕ ದೃಷ್ಟಿಯಲ್ಲಿ ಅಳೆದು ಅಲೌಕಿಕ-ದೈವೀ ಪುರುಷರೆಂದು ನಿರೂಪಿಸಿದ್ದಾರೆ. ಆದರೆ ಲೌಕಿಕರಾಗಿ ಬಾಳಿ ಹೇಗೆ ಅಣ್ಣನವರು ಜಗದ್ವಂದ್ಯರಾದರು ಎಂಬ ಅಂಶ ಅಲ್ಲಿ ಹೇಳಲಾಗಿಲ್ಲ. ವೇದಾಂತಾಚಾರ್ಯ ಮುಧೋಳ ಮೃತ್ಯುಂಜಯ ಮಹಾಸ್ವಾಮಿಗಳವರು 'ಆನುತುಂಬಿ' ಎಂಬ ಲೇಖನದಲ್ಲಿ 'ತುಂಬಿ' ಎಂಬ ಮಾತಿನ ಅರ್ಥ ಮತ್ತು 'ಆನು' ಎಂಬ ಮಾತಿನ ಅರ್ಥವನ್ನು ಆಧ್ಯಾತ್ಮ ದೃಷ್ಟಿಯಲ್ಲಿ ಅಳೆದಿದ್ದಾರೆ. ಆದರೆ 'ತುಂಬಿ' ಎಂಬ ಮಾತಿನ ಶ್ಲೇಷಾರ್ಥದ ಸಾರ್ಥಕತೆ ಇಲ್ಲಿ ಸಂಪೂರ್ಣವಾಗಿ ವ್ಯಕ್ತವಾಗಿಲ್ಲ.

ಉಳಿದ ಲೇಖನಗಳಲ್ಲಿ ಶ್ರೀ 'ಸ್ವಾದು' ಅವರ ಲೇಖನ ವಿಚಾರಶೀಲವಾಗಿದ್ದು ಅಣ್ಣನವರ ಸಾಧನೆಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಹಾಗೆಯೇ ಶ್ರೀ ಶಂ. ಗು. ಬಿರಾದಾರ, ಶ್ರೀ ಸಿಂಪಿ ಲಿಂಗಣ್ಣ ಚಡಚಣ, ಶ್ರೀ ಶಾಂತರಸ, ಶ್ರೀ ಬಿ. ಎಚ್. ಶ್ರೀಧರ, ಅಬ್ಬಿಗೇರಿ, ಶ್ರೀ ಜಯದೇವ ಶ್ರೀಮತಿ ಸರಸ್ವತಿದೇವಿ ಗೌಡರ, ದಾನಪ್ಪ ಜತ್ತಿಯವರ ಲೇಖನಗಳು ಅಣ್ಣನವರು ಹಿಡಿದ ಹಾದಿ, ಅವರ ಸಮಾಜ, ಸ್ವವಿಡಂಬನೆ, ಅವರು ಬಳಸಿಕೊಳ್ಳುವ 'ಬಾಳೆ'ಯ ಉಪಮೆ,-ಅನುಭಾವ,-ಅವರ ಬದುಕು ಸಂದೇಶ-ಸುಧಾರಣೆ,-ತತ್ವ-ಇವುಗಳ ವಿವರಣೆಯನ್ನು ವೈಶಿಷ್ಟ್ಯಪೂರ್ಣವಾಗಿ ಮಾಡಿಕೊಟ್ಟಿದ್ದಾರೆ. ಈಶ್ವರಚಂದ್ರ ಚಿಂತಾಮಣಿಯವರ "ಕೂಡಲ ಸಂಗಮದ ರಹಸ್ಯವೇನು?" ಎಂಬ ಲೇಖನದಲ್ಲಿರುವ ವಿಚಾರ ಒಳ್ಳೆಯ ಅಂಶವಾದರೂ ಅದರಲ್ಲಿ ಶ್ರೀ ಶ್ರೀ ಕುಮಾರ ಸ್ವಾಮಿಗಳ ಅಭಿಪ್ರಾಯ ಯಾವುದು, ಪ್ರಸ್ತುತ ಲೇಖಕರ ಅಭಿಪ್ರಾಯ ಯಾವುದು ಎಂಬಂಶಗಳು ಸ್ಪಷ್ಟವಾಗಿಲ್ಲ. ಲೇಖನ ಓದುವಾಗ ಅದು ಶ್ರೀಗಳವರ ಅಭಿಪ್ರಾಯ ಎಂಬಂತೆ ಇದ್ದು ಅದನ್ನು ಉದ್ಧರಿಸಿದಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಈ ಕೃತಿ ಬಸವಣ್ಣನವರ ಬಾಳಿನ ವಿವಿಧ ಮುಖಗಳಿಗೆ ಹಿಡಿದ ರನ್ನಗನ್ನಡಿ.

* * *

ಮಾಗಿದ ಮನಸ್ಸು: ಲೇ: ಬಿ. ಪಿ. ಶಿವಾನಂದರಾವ್ ಪ್ರಕಾಶಕರು: ರಾಜಕಮಲ್ ಪ್ರಕಾಶನ, ಬೆಂಗಳೂರು, ಪುಟ: ೨೨೫ ಬೆಲೆ: ೨-೦೦.

ಈಗಾಗಲೇ 'ಕತೆ' ಕಾದಂಬರಿಗಳ ಮೂಲಕ ಪರಿಚಯವಾಗಿ, ಸಾಹಿತ್ಯ ವ್ಯವಸಾಯದಲ್ಲಿ ಮಾಗುವ ಹಾದಿಯನ್ನೇ ಅನುಸರಿಸಿ ಉದಯೋನ್ಮುಖ ಲೇಖಕರ ಲಕ್ಷಣಗಳನ್ನು ಸೂಸುತ್ತಿರುವ ಶಿವಾನಂದರಾವ್‌ರವರು, ಈ ಕೃತಿಯಲ್ಲಿ, ಈ ಹಿಂದೆ ಅನೇಕ ಕಾದಂಬರಿಕಾರರು ನಿರೂಪಿಸಿರುವ ಜೀವನದ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. "ಕಾದಂಬರಿ ಅನುಭವ ಪ್ರಪೂರ್ಣವಾಗಿರಬೇಕು" ಎಂಬ ಮಾತಿಗೆ ಅನುಸಾರವಾಗಿ ಈ ಕೃತಿಯಲ್ಲಿ ನಾವು ಅನುಭವದ ಸುಳಿಯನ್ನು ಕಾಣಬಹುದು. "ಓದುಗ ಈ ಕಾದಂಬರಿಯನ್ನು ಓದಿದಾಗ ಒಂದಲ್ಲ ಒಂದು ವಿಧವಾದ ಬಾಳಘಟನೆಗಳನ್ನು ನೆನೆಯದಿರಲಾರ" ಎಂಬ ಉಡುಪರ ಅಭಿಪ್ರಾಯ ಸಾಮಾನ್ಯವಾಗಿ ಎಲ್ಲ ಕೃತಿಗಳಲ್ಲೂ ಕಂಡಂತೆ ಇಲ್ಲಿಯೂ ಒಪ್ಪಬಹುದಾದ ಮಾತೇ ಆಗಿದೆ.

ಇಲ್ಲಿ ಬರುವ 'ಶ್ಯಾಮೂ', 'ಸುಶೀಲ', ಶಾಂತಮ್ಮ ಮಾಧವರಾಯ್ರು, ರಾಘವೇಂದ್ರಾಚಾರ್ಯರು, ರಮೇಶ, ಎಲ್ಲರೂ ಜೀವಂತ ಪಾತ್ರಗಳೇ. ಆದರೆ ಕೋರ್ಟಿನಲ್ಲಿ ಗುಮಾಸ್ತೆಯಾಗಿದ್ದು ಪಿತ್ರಾರ್ಜಿತವಾದ ಅಲ್ಪಸ್ವಲ್ಪ ಆಸ್ತಿಯ ಆಶ್ರಯದಲ್ಲಿ ತಮ್ಮ ಜೀವನವನ್ನು ಸುಖವಾಗಿಸಿಕೊಳ್ಳುವ ಮಾಧವರಾಯ್ರ ಜಾಣ್ಮೆ ಈ ಜಗತ್ತಿನಲ್ಲಿ ಎಷ್ಟು ಜನರಿಗಿದೆ? ಅಂತ ವಿಶಾಲ ಭಾವನೆಯ ಜನರು ಕಾಕುಕೊಂಕಿನ ಈ ಜಗತ್ತಿನಲ್ಲಿ ಎಷ್ಟು ಜನರಿದ್ದಾರೆ? ಇದ್ದರೂ ಅವರಿಗೆ ಉಳಿಗಾಲವಿದೆಯೇ? ಎಂಬೆಲ್ಲ ಪ್ರಶ್ನೆ ಓದುಗನಲ್ಲಿ ಮೂಡದಿರಲಾರವು. ಶ್ಯಾಮೂ-ಸುಶೀಲ, ಇವರಲ್ಲಿ ಸೋದರತೆಯ ಸೌಹಾರ್ದ್ರತೆ; ಯುವಕ-ಯುವತಿಯರಲ್ಲಿ ಮೂಡುವ ಪ್ರಣಯ ಚಿತ್ರ ಸಹಜವಾಗಿ ಬಂದಿದೆ.

ಮುದ್ರಣಕಾರ್ಯದಲ್ಲಿ ಎಚ್ಚರ ವಹಿಸಬಹುದಾಗಿತ್ತು. ಒಟ್ಟಿನಲ್ಲಿ ಈ ಕಾದಂಬರಿಯಿಂದ-ಶ್ರೀ ಶಿವಾನಂದರಾವ್‌ರವರು-ಒಳ್ಳೆಯ ಅಭ್ಯಾಸ ದೊರೆತರೆ ಒಳ್ಳೆ ಕಾದಂಬರಿಕಾರರಾಗುವರೆಂಬ ಭರವಸೆ ಓದುಗರಿಗೆ ಒದಗುತ್ತದೆ.

ಆರ್. ರಾಚಪ್ಪ

ಸುದ್ದಿ ಸಂಗ್ರಹ

ನಾಗರಭಾವಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಕಟ್ಟಡಗಳು

ಕಳೆದ ತಿಂಗಳು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ಸೆನೆಟ್ ಸಭೆಯು ವಿಶ್ವವಿದ್ಯಾನಿಲಯದ ಮಾಸ್ಟರ್‌ಪ್ಲಾನನ್ನು ಪರಿಶೀಲಿಸಿ, ತನ್ನ ಒಪ್ಪಿಗೆಯನ್ನು ನೀಡಿತು. ಈ ಯೋಜನೆಯಂತೆ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಗರಕ್ಕೆ ಆರು ಮೈಲಿ ದೂರದಲ್ಲಿರುವ ನಾಗರಭಾವಿಯಲ್ಲಿ ಸುಮಾರು ೩೫೦ ಎಕರೆ ಭೂಮಿಯನ್ನು ವಶಪಡಿಸಿಕೊಂಡಿರುವುದಲ್ಲದೆ, ಸಾಹಿತ್ಯ, ಕಲಾಶಾಸ್ತ್ರ ವಿಭಾಗ, ಗ್ರಂಥಾಲಯ, ವಿದ್ಯಾರ್ಥಿ ನಿಲಯಗಳು ಮತ್ತು ಅಧ್ಯಾಪಕರ ವಸತಿಗಳನ್ನು ಕಲ್ಪಿಸಿಕೊಡಲಾಗುತ್ತದೆ.

ಈ ಕಟ್ಟಡ ನಿರ್ಮಾಣ ಕಾರ್ಯ ಸದ್ಯದಲ್ಲೇ ಆರಂಭವಾಗಲಿದೆ ಎಂದು ತಿಳಿದು ಬಂದಿದೆ.

ಮಲೆನಾಡಿನಲ್ಲಿ ಜನಪದ ಸಾಹಿತ್ಯ ಸಂಗ್ರಹಕಾರ್ಯ

ಈಗಾಗಲೇ ಇಪ್ಪತ್ತಕ್ಕೂ ಹೆಚ್ಚಿನ ಜಾನಪದ ಗೀತೆಗಳ ಸಂಕಲನಗಳನ್ನು ಪ್ರಕಟಿಸಿರುವ ಕ. ರಾ. ಕೃಷ್ಣಸ್ವಾಮಿ ಅವರು ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಸಂಚರಿಸಿ ನೂರಾರು ಜನಪದ ಗೀತೆಗಳನ್ನು ಸಂಗ್ರಹಿಸಿದರು. ಬೆಂಗಳೂರಿನ ಚಿತ್ರಗಾರ ಟಿ. ಕೇಸರಿಸಿಂಗರೊಂದಿಗೆ ಆಯಾ ಪ್ರದೇಶದ ಅಂಟಿಕೆ ತಂಟಿಕೆ, ಹಾಡು, ಕೋಲಾಟ ಮೊದಲಾದುವುಗಳ ಧ್ವನಿಮುದ್ರಣ ಹಾಗೂ ಕಲಾವಿದರ ಛಾಯಾಚಿತ್ರಗಳನ್ನು ತೆಗೆದುಕೊಂಡರು.

ಈಗಾಗಲೇ ಶ್ರೀಯುತರು ತಮ್ಮ ಮಿತ್ರರ ನೆರವಿನಿಂದ ಸುಮಾರು ಹತ್ತುಸಾವಿರ ಪುಟಗಳಷ್ಟು ಕೈಬರಹದ ಜನಪದ ಸಾಹಿತ್ಯವನ್ನು ಸಂಗ್ರಹಿಸಿರುವರೆಂದು ತಿಳಿದು ಬಂದಿದೆ. ಈ ದಿಸೆಯಲ್ಲಿ ಕ. ರಾ. ಕೃ. ಅವರ ಪ್ರಯತ್ನ ಸ್ತುತ್ಯವಾದುದು.

ಪಿ. ಯು. ಸಿ. ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರ

ಇನ್ನುಮುಂದೆ ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಪಿ ಯು. ಸಿ. ಹಂತದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಅಭ್ಯಾಸ ಮಾಡಿದರೂ ಅವರು ಇಚ್ಛೆಪಟ್ಟರೆ ತಮ್ಮ ಉತ್ತರ ಪತ್ರಿಕೆಯನ್ನು ಕನ್ನಡದಲ್ಲಿ ಬರೆಯುವ ಅವಕಾಶವನ್ನು ನೀಡಲಾಗಿದೆ ಎಂದು ತಿಳಿದು ಬಂದಿದೆ. ಮುಂದೆ ಈ ಅವಕಾಶವನ್ನು ಪದವೀಮಟ್ಟಕ್ಕೂ ವಿಸ್ತರಿಸುವ ಸಂಭವವಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಧ್ವ ತತ್ತ್ವ ಪೀಠ

ಕರ್ನಾಟಕವು ಸರ್ವಧರ್ಮಗಳ ಸಂಗಮ ಕ್ಷೇತ್ರ. ಶೈವ, ಜೈನ, ಬೌದ್ಧ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಧರ್ಮಗಳು ಈ ನಾಡಿನಲ್ಲಿ ಪೋಷಣೆಗೊಂಡು ಸಂವೃದ್ಧವಾಗಿ ಬೆಳೆದಿವೆ. ಈ ದಿಸೆಯಲ್ಲಿ ಮೈಸೂರಿನ ಮಾನಸ ಗಂಗೋತ್ರಿಯು ಉಡುಪಿಯಲ್ಲಾಗಲೀ, ಮಂಗಳೂರಿನಲ್ಲಾಗಲೀ ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಮಾಧ್ವ ಪೀಠವನ್ನು ನಿರ್ಮಿಸಲು ಯೋಚಿಸುತ್ತಿದೆ. ಇದಕ್ಕೆ ಬೇಕಾಗುವ ಹಣವನ್ನು ಉಡುಪಿಯ ಅಷ್ಟಮಠಗಳಿಂದಲೂ, ಇನ್ನಿತರ ಉದಾರಿಗಳಿಂದಲೂ ಸಂಗ್ರಹಿಸಿಕೊಡುವುದಾಗಿ ಪರ್ಯಾಯ ಪೀಠಾಧೀಶ್ವರರಾದ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ್ವರ ತೀರ್ಥ ಶ್ರೀ ಪಾದಂಗಳವರು ಆಶ್ವಾಸನೆಯಿತ್ತಿರುವುದಾಗಿ ತಿಳಿದುಬಂದಿದೆ.

ದಿ|| ಮಹದೇವಯ್ಯನವರ ಸಾಹಿತ್ಯ ಸೇವೆ

ದಿವಂಗತ ಟಿ. ಎನ್. ಮಹದೇವಯ್ಯನವರ ನಾಲ್ಕು ನಾಟಕಗಳ ಸಂಕಲನ 'ವಿಜಯಶ್ರೀ' ಗ್ರಂಥವನ್ನು ಇತ್ತೀಚೆಗೆ ಮೈಸೂರಿನಲ್ಲಿ ಪ್ರೊ|| ಎಸ್. ವಿ. ರಂಗಣ್ಣನವರು ಬಿಡುಗಡೆ ಮಾಡಿದರು.

ಶ್ರೀ ಮಹದೇವಯ್ಯನವರ ಅನೇಕ ಕೃತಿಗಳು ಅವರ ಜೀವಿತ ಕಾಲದಲ್ಲಿ ಪ್ರಕಟವಾಗಲಿಲ್ಲ. ಅವರು ಅನೇಕ ಕಥೆ, ಕವನ, ನಾಟಕಗಳನ್ನು ಬರೆದಿದ್ದು, ಶ್ರೀ ಮಹದೇಶ್ವರ ಸ್ವಾಮಿಯ ಭಕ್ತರೂ ಆಗಿದ್ದರು. ಅವರ ಎಲ್ಲ ಅಪ್ರಕಟಿತ ಗ್ರಂಥಗಳನ್ನೂ ಪ್ರಕಟಿಸಲು ಒಂದು ಯೋಜನೆ ಸಿದ್ಧವಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಗಲಗಲಿ ರಾಮಾಚಾರ್ಯರಿಗೆ ಸನ್ಮಾನ

ಈ ಶತಮಾನದ ಆರಂಭದಲ್ಲಿ ದೇಶಭಾಷಾ ಪತ್ರಿಕೆಗಳು ವಿರಳವಾಗಿದ್ದ ಕಾಲದಲ್ಲಿ ಮಧುರವಾಣಿ ಎಂಬ ಸಂಸ್ಕೃತ ಪತ್ರಿಕೆಯನ್ನು ಸ್ಥಾಪಿಸಿ ಕರ್ನಾಟಕದಲ್ಲಿ ನವೋದಯಕ್ಕೆ ಕಾರಣರಾದವರಲ್ಲಿ ಒಬ್ಬರಾದ ಸಂಸ್ಕೃತ ಕವಿ ಶ್ರೀ ಗಲಗಲಿ

ರಾಮಾಚಾರ್ಯರಿಗೆ ಸನ್ಮಾನಮಾಡಲು ಒಂದು ಸಮಿತಿ ರಚಿತವಾಗಿದೆ. ಇದರಲ್ಲಿ ಪ್ರೊ. ಕೆ. ಟಿ. ಪಾಂಡುರಂಗಿ, ಸರ್ವಶ್ರೀ ಪಿ. ಆರ್. ಮುಂಡೇವಾಡಿ, ಜಿ. ಎನ್. ಶ್ಯಾನು ಭೋಗ್, ಅರವಿಂದಜೋಷಿ, ಎಸ್. ಎಸ್. ವಾಸುದೇವ ಬಲ್ಲಾಳ, ಪ್ರೊ. ಎಸ್. ಕೆ. ರಾಮಚಂದ್ರರಾವ್ ಮುಂತಾದ ಗಣ್ಯರು ಇದ್ದಾರೆ.

ಸಂಸ್ಕೃತ ಕಾವ್ಯ ತರಂಗಿಣೀ

ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ನೀರುಂಡು ಸಂವೃದ್ಧಿಯಾಗಿ ಬೆಳೆದಿದ್ದರೂ ಕನ್ನಡದಿಂದ ಸಂಸ್ಕೃತಕ್ಕೆ ಹೋಗಿರುವ ಸಾಹಿತ್ಯ ವಿರಳವೆಂದೇ ಹೇಳಬಹುದು. ಅದರಲ್ಲೂ ಆಧುನಿಕ ಕನ್ನಡ ಸಾಹಿತ್ಯದ ಪರಿಚಯ ಸಂಸ್ಕೃತ ಭಾಷೆಯಲ್ಲಿ ಬಂದಿರುವುದು ಅಪರೂಪ. ಈ ಅಪರೂಪ ಸಾಹಸದಲ್ಲಿ ಮೈಸೂರಿನ ಮಾನಸ ಗಂಗೋತ್ರಿಯ ಸಂಸ್ಕೃತ ವಿಭಾಗದಲ್ಲಿ ರೀಡರ್ ಪದವಿಯಲ್ಲಿರುವ ಶ್ರೀ ಜಿ. ಪುರುಷೋತ್ತಮ ಅವರು ಅಸಾಧಾರಣ ಯಶಸ್ಸನ್ನು ಪಡೆದು ಕನ್ನಡಿಗರೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಅವರು ಈ ಮೊದಲು ಕುವೆಂಪು ಅವರ ಕವನಗಳನ್ನು ಸಂಸ್ಕೃತ ಭಾಷೆಗೆ ಅನುವಾದಿಸಿ, ಕಾವ್ಯತರಂಗಿಣಿ (ಭಾಗ-೧) ಪ್ರಕಟಿಸಿದ್ದರು. ಈಗ ಅದರ ಎರಡನೆಯ ಭಾಗವನ್ನು ಹೊರತಂದು, ಕನ್ನಡೇತರಭಾಷೆಯ ಬಂಧುಗಳಿಗೆ ಸಂಸ್ಕೃತದ ಉಡಿಗೆಯಲ್ಲಿ ಕನ್ನಡದ ಉದ್ದಾಮ ಕವಿಗಳಾದ, ಬಿ.ಎಂ. ಶ್ರೀ., ಡಿ. ವಿ. ಜಿ., ವಿ. ಸೀ. ಅವರ ಕೃತಿಗಳ ಜೊತೆಗೆ ಪ್ರಾಚೀನ ಕವಿಯಾದ ಸರ್ವಜ್ಞನನ್ನೂ ಅದೇ ಛಂದಸ್ಸಿನಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಈ ಪ್ರಯತ್ನಕ್ಕೆ ದೇಶ ವಿದೇಶಗಳ ಸಂಸ್ಕೃತ ವಿದ್ವಾಂಸರು ಮೆಚ್ಚಿಕೆಯನ್ನು ಸೂಚಿಸಿದ್ದಾರೆ.

ಪ್ರತಿಗಳಿಗೆ: ಜಯಮಾರುತಿ ಪಬ್ಲಿಷರ್ಸ್, ೨೮೯/೧ ವಿನೋಬಾರೋಡ್, ವಿ. ವಿ. ಮೊಹಲ್ಲಾ, ಮೈಸೂರು-೨

ಭಾಗವತದ ಮುಕ್ತಾಯ ಸಮಾರಂಭ

ಸುಪ್ರಸಿದ್ಧ ಕವಿಗಳೂ, ಗಮಕ ವಿದ್ವಾಂಸರೂ ಆದ ಶ್ರೀ ಎಂ. ಎಸ್. ಅನಂತಪದ್ಮನಾಭರಾಯರು, ಶಿವಮೊಗ್ಗದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ, ಈಗ ಸುಮಾರು ಒಂಭತ್ತು ತಿಂಗಳುಗಳಿಂದಲೂ ನಡೆಸುತ್ತಿದ್ದ ಚಾಟುವಿಟ್ಠಲನಾಥ ಕವಿಯ ಭಾಗವತ ಕಾವ್ಯವಾಚನದ ಮಂಗಳವು ನಗರದ ನ್ಯಾಯಾಧೀಶರಾದ ಶ್ರೀ ಶ್ರೀನಿವಾಸ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೆಂಗಳೂರಿನಿಂದ ಆಗಮಿಸಿದ್ದ ಗಮಕ ವಿದುಷಿ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್, ಕುಮಾರವ್ಯಾಸನ ಮಂಗಳ ಶ್ಲೋಕಗಳಿಂದ ಪ್ರಾರ್ಥನೆ ಮಾಡಿ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಶ್ರೀ ಅನಂತ ಪದ್ಮನಾಭರಾಯರು ಭಾಗವತದ ಮುಕ್ತಾಯ ಭಾಗವನ್ನೂ ವಾಚನ ಮಾಡಿದರು.

ನಗರದ “ಮಲೆನಾಡು ವಾರ್ತಾ” ಪತ್ರಿಕೆಯ ಸಂಪಾದಕರಾದ ಶ್ರೀ ಭೂಪಾಲಂ ಚಂದ್ರಶೇಖರಯ್ಯನವರೂ, ಸುಪ್ರಸಿದ್ಧ ವ್ಯಾಖ್ಯಾನಕಾರರಾದ ಲಕ್ಷ್ಮೀಕೇಶವಶಾಸ್ತ್ರಿಗಳೂ ಬಿ. ಶ್ರೀ. ಪಾಂಡುರಂಗರಾಯರೂ, ಅನಂತಪದ್ಮನಾಭರಾಯರ ಕಾವ್ಯ ವಾಚನ, ಹಾಗೂ ಸಾಹಿತ್ಯ ಸೇವೆಯನ್ನು ಶ್ಲಾಘಿಸಿ ಮಾತಾಡಿದರು. ಅನಂತರ ಶ್ರೀ ರಾಯರಿಗೆ ಶಾಲು ಹೊದಿಸಿ, ಗೌರವ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಮಹಿಳಾ ಸಾಹಿತ್ಯ ವಾಹಿನಿ

ಕನ್ನಡ ಸಾಹಿತ್ಯಕ್ಕೆ ಕರ್ನಾಟಕದ ಮಹಿಳೆಯರು ಪ್ರಾಚೀನ ಕಾಲದಿಂದಲೂ ನೀಡಿರುವ ಕೊಡುಗೆ ಅಲ್ಪವಾದುದೇನೂ ಅಲ್ಲ. ಅಕ್ಕಮಹಾದೇವಿ, ಕಂತಿ, ಹೊನ್ನಮ್ಮ ಹೆಳವನಕಟ್ಟೆ ಗಿರಿಯಮ್ಮ-ಹೆಸರಿಸಬಹುದಾದ ಕೆಲವು ಸ್ತ್ರೀರತ್ನಗಳು. ಆಧುನಿಕ ಕಾಲದಲ್ಲಿಯೂ ಅನೇಕ ಪ್ರತಿಭಾವಂತ ವನಿತೆಯರು ಗ್ರಂಥರಚನೆಮಾಡಿ ಸಾಹಿತ್ಯಕ್ಕೆ ಅಪೂರ್ವವಾದ ಸೇವೆ ಸಲ್ಲಿಸಿದ್ದಾರೆ. ಈ ದಿಸೆಯಲ್ಲಿ ಬೆಂಗಳೂರಿನ ಕನ್ನಡ ಲೇಖಕಿಯರ ಸಂಘವು ಒಂದು ದಿಟ್ಟತನದ ಹೆಜ್ಜೆಯನ್ನಿಟ್ಟಿದೆ. ೧೯೬೭ರಲ್ಲಿ ಬೆಳಕು ಕಂಡ ಕನ್ನಡನಾಡಿನ ಎಲ್ಲ ಬರೆಹಗಾರ್ತಿಯರ ಕೃತಿಗಳನ್ನು ಒಟ್ಟು ಗೂಡಿಸಿ, ಮಾರ್ಚ್ ೧೭ರಂದು ಕಲಾಮಂದಿರದಲ್ಲಿ ಪುಸ್ತಕ ಪ್ರದರ್ಶನ ಮಾಡಲಿದ್ದಾರೆ. ನಾಡಿನ ಎಲ್ಲ ಲೇಖಕಿ, ಪ್ರಕಾಶಕರಿಂದ ನೆರವನ್ನು ಕೋರಿದ್ದಾರೆ.

ವಿವರಗಳು :
ಸಂಚಾಲಕರು
ಕನ್ನಡ ಲೇಖಕಿಯರ ಸಂಘ
ಕಲಾಮಂದಿರ, ಗಾಂಧಿಬಜಾರ್
ಬೆಂಗಳೂರು-೪

ರಾಜ್ಯದ ಆಡಳಿತಭಾಷೆಯಾಗಿ ಕನ್ನಡ

ಕೆಲವು ವರ್ಷಗಳ ಹಿಂದೆ ರಾಜ್ಯ ಸರಕಾರವು ಕನ್ನಡವನ್ನು ರಾಜ್ಯ ಭಾಷೆಯಾಗಿ ಅಂಗೀಕರಿಸಿದ್ದರೂ ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿರಲಿಲ್ಲ. ಈಗ ತಾಲ್ಲೂಕು ಮಟ್ಟದಲ್ಲಿ ಎಲ್ಲ ಇಲಾಖೆಗಳಲ್ಲಿಯೂ ಕನ್ನಡ

ವನ್ನೇ ಆಡಳಿತ ಭಾಷೆಯಾಗಿ ಬಳಸಬೇಕೆಂಬ ತೀರ್ಮಾನಕ್ಕೆ ಬಂದು, ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದು ಸ್ತುತ್ಯಾರ್ಹವಾದ, ದಿಟ್ಟತನದ ಹೆಜ್ಜೆಯಾಗಿದೆ. ಇದರಿಂದ ಕನ್ನಡ ಜನತೆಯ ಬಹುಕಾಲದ ಬೇಡಿಕೆ ಈಡೇರಿದಂತಾಗಿದೆ.

ವಿಶ್ವಕೋಶ ಮೈಸೂರು ವಿಶ್ವವಿದ್ಯಾನಿಲಯಕ್ಕೆ

ಕರ್ಣಾಟಕ ರಾಜ್ಯ ನಿರ್ಮಾಣವಾದ ಮೇಲೆ ರಾಜ್ಯ ಸರಕಾರವು ನಾಡು ನುಡಿಗಳ ಸರ್ವತೋಮುಖ ಅಭಿವೃದ್ಧಿಯ ಸಲುವಾಗಿ ವಿಶ್ವಕೋಶ ಹಾಗೂ ಕನ್ನಡ - ಕನ್ನಡ ಶಬ್ದಕೋಶಗಳ ಮಹಾಯೋಜನೆಯನ್ನು ಕೈಗೊಂಡು ವಿಶ್ವಕೋಶವನ್ನು ಸಂಸ್ಕೃತಿ ಪ್ರಚಾರ ಸಂಸ್ಥೆಗೂ, ಶಬ್ದಕೋಶವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೂ ಒಪ್ಪಿಸಿದ್ದಿತು. ಈ ದಿಸೆಯಲ್ಲಿ ವಿಶ್ವಕೋಶದ ಮಂದಪ್ರಗತಿಯನ್ನು ಮನಗೊಂಡು ಅದರ ಕಾರ್ಯವನ್ನು ತ್ವರಿತಗೊಳಿಸಲು ಈ ಕಾರ್ಯವನ್ನು ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡಲಿದೆ ಎಂದು ತಿಳಿದು ಬಂದಿದೆ.

ಇದರಿಂದ ವಿಶ್ವಕೋಶದ ರಚನೆ ತ್ವರಿತ ಗತಿಯಲ್ಲಿ ನಡೆದು, ಪ್ರಥಮ ಸಂಪುಟವು ಈ ವರ್ಷದ ಅವಧಿಯಲ್ಲೇ ಪ್ರಕಟವಾಗಬಹುದೆಂದು ನಿರೀಕ್ಷಿಸಬಹುದಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ-ಕನ್ನಡ ಶಬ್ದಕೋಶದ ರಚನೆಯಲ್ಲಿ ಈಗಾಗಲೇ ಐದು ಸಂಚಿಕೆಗಳನ್ನು ಪ್ರಕಟಿಸಿರುವ ಸಂಗತಿಯನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶ್ರೀನಿವಾಸಾಚಾರ್ ಅವರಿಗೆ ರಾಷ್ಟ್ರಪ್ರಶಸ್ತಿ

ವಿಶಿಷ್ಟವಾದ ಶ್ರೇಷ್ಠಮಟ್ಟದ ಕಲಾಕೌಶಲ್ಯಕ್ಕಾಗಿ ಈ ವರ್ಷದ ರಾಷ್ಟ್ರಪ್ರಶಸ್ತಿಗಳನ್ನು ಪಡೆದವರಲ್ಲಿ ಮೈಸೂರಿನ ಶ್ರೀ ಎನ್. ಶ್ರೀನಿವಾಸಾಚಾರ್ಯರೂ ಒಬ್ಬರಾಗಿದ್ದಾರೆ. ಅವರು ಕಂಚಿನ ಎರಕ ಹೊಯ್ಯುವ ಕಲೆಯಲ್ಲಿ ನಿಷ್ಣಾತರು. ಇವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ದ್ರವ್ಯ ದೊರಕಿದೆ. ಅಂಗವಸ್ತ್ರ ಮತ್ತು ಹಿತ್ತಾಳೆಯ ಪ್ರಶಸ್ತಿ ಫಲಕಗಳನ್ನು ರಾಷ್ಟ್ರಪತಿಗಳು ನೀಡಿದರು. ಇದು ಮೈಸೂರಿನ ಕಲಾಪ್ರೌಢಿಮೆಗೆ ಸಂದ ಗೌರವವಾಗಿದೆ.

ಶ್ರೇಷ್ಠಸೇವೆಗಾಗಿ ರಾಷ್ಟ್ರಪ್ರಶಸ್ತಿ

ಈ ಬಾರಿಯ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡದ ವಿವಿಧ ರಂಗಗಳಲ್ಲಿ ಶ್ರೇಷ್ಠ ಸೇವೆ ಸಲ್ಲಿಸಿರುವ ಐವರು ಮಹನೀಯರಿಗೆ ರಾಷ್ಟ್ರಪ್ರಶಸ್ತಿಗಳನ್ನು ಇತ್ತು ಗೌರವಿಸಲಾಗಿದೆ. ಅವರಲ್ಲಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಡಾ. ಶಿವರಾಮ ಕಾರಂತ, ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ. ಸಿ. ಮೋದಿ ಇವರಿಗೆ ಪದ್ಮ ಭೂಷಣ ಪ್ರಶಸ್ತಿಗಳೂ, ಕವಿಗಳಾದ ಶ್ರೀ ಬೇಂದ್ರೆ, ಸಮಾಜ ಸೇವಾಕರ್ತೆ ಶ್ರೀಮತಿ ಸುಧಾರೆಡ್ಡಿ, ಡಿ. ಎನ್. ಕೃಷ್ಣಯ್ಯ ಶೆಟ್ಟಿ ಇವರುಗಳಿಗೆ ಪದ್ಮಶ್ರೀ ಪ್ರಶಸ್ತಿಗಳೂ ದೊರಕಿವೆ.

ಚಿತ್ರಕಲಾವಿದರಿಗೆ ರಾಜ್ಯದ ಸನ್ಮಾನ

ಸುಪ್ರಸಿದ್ಧ ಚಿತ್ರ ಕಲಾವಿದರಾದ ಸರ್ವಶ್ರೀ ಕೆ. ಕೆ. ಹೆಬ್ಬಾರ್, ದೇವನಹಳ್ಳಿ ಹನುಮಂತಾಚಾರ್, ಹಾಲಭಾವಿ ಮತ್ತು ಯಲವಟ್ಟಿ ಇವರುಗಳಿಗೆ ೧೯೬೭-೬೮ನೇ ಸಾಲಿನ ರಾಜ್ಯ ಪ್ರಶಸ್ತಿಗಳನ್ನು ನೀಡಲು ರಾಜ್ಯ ಲಲಿತ ಕಲಾ ಅಕಾಡಮಿಯು ನಿರ್ಧರಿಸಿದೆ.

ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು

ರಾಜ್ಯದ ಸಾಹಿತ್ಯ ಅಕಾಡಮಿಯು ಪ್ರೊ. ಡಿ. ಎಲ್. ನರಸಿಂಹಾಚಾರ್, ಶ್ರೀ ಶಂ. ಬಾ. ಜೋಶಿ, ಶ್ರೀ ಸಿಂಪಿ ಲಿಂಗಣ್ಣ, ಪ್ರೊ. ಮರಿಯಪ್ಪ ಭಟ್ಟ ಮತ್ತು ಶ್ರೀಮತಿ ತಿರುಮಲೆ ರಾಜಮ್ಮ - ಈ ಐವರು ಸಾಹಿತಿಗಳಿಗೆ ೧೯೬೭ರ ಸಾಹಿತ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಶ್ರೀ ವೆಂಕೋಬದಾಸರ ನಿಧನ

ಕೀರ್ತನ ಕಲೆಯಲ್ಲಿ ಕೀರ್ತಿ ಪಡೆದಿದ್ದ ಶ್ರೀ ವೆಂಕೋಬದಾಸರು ತೀರಿಕೊಂಡುದು ಕೀರ್ತನ ಕಲೆಗೆ ಅಪಾರ ನಷ್ಟ ಉಂಟಾಗಿದೆ. ಶ್ರೀಯುತರು ಪುರಂದರದಾಸವರೇಣ್ಯರ ಆರಾಧನಾ ಮಹೋತ್ಸವದ ಸೇವಾಕಾರ್ಯದಲ್ಲಿ ನಿರತರಾಗಿರುವಾಗಲೇ ದೇಹವನ್ನು ತೊರೆದರು.

ಚಾಮರಾಜಪೇಟೆಯ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ ಸಮಿತಿಯವರು ಶ್ರೀ ವೇಣುಗೋಪಾಲದಾಸರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ರಾಜ್ಯ ಭಾಷಾ ಪರಿಷತ್ತಿನ ಪ್ರಥಮ ಸಮ್ಮೇಳನ

ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜ್ಯ ಭಾಷಾ ಪರಿಷತ್ತಿನ ಪ್ರಥಮ ಸಮ್ಮೇಳನವು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಸಮಾವೇಶಗೊಂಡಿತ್ತು. ರಾಷ್ಟ್ರಕವಿ ಡಾ|| ಕು.ವೆಂ.ಪುರವರು ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ಶ್ರೀ ಜಿ.

ವೆಂಕಟಸುಬ್ಬಯ್ಯ ಮತ್ತು ಶ್ರೀ ತಿ. ತಾ. ಶರ್ಮ ಅವರುಗಳು ಭಾಗವಹಿಸಿದ್ದರು.

"ಕನ್ನಡ ಭಾಷೆಯು ಶಿಕ್ಷಣ ಮಾಧ್ಯಮವಾಗುವುದಕ್ಕೆ, ಆಡಳಿತ ಭಾಷೆಯಾಗುವುದಕ್ಕೆ, ನ್ಯಾಯಾಲಯದ ಭಾಷೆಯಾಗುವುದಕ್ಕೆ ಸಂವೃದ್ಧವಾಗಿ ಬೆಳೆದಿದೆ" ಎಂದು ರಾಷ್ಟ್ರಕವಿಗಳು ತಮ್ಮ ಭಾಷಣದಲ್ಲಿ ನುಡಿದರು.

ಅಖಿಲ ಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಳನ

ಅಖಿಲ ಭಾರತೀಯ ಸಂಸ್ಕೃತ ಸಾಹಿತ್ಯ ಸಮ್ಮೇಳನದ ಕಾರ್ಯಕಾರಿ ಸಮಿತಿಯ ಸಭೆಯು ಇತ್ತೀಚೆಗೆ ನವದೆಹಲಿಯಲ್ಲಿ ಕೇಂದ್ರ ಗೃಹ ಖಾತಾ ಸ್ಟೇಟ್ ಸಚಿವ ಶ್ರೀ ಎ. ಸಿ. ಶುಕ್ಲ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಬಾರಿ ಸಮ್ಮೇಳನವನ್ನು ದಕ್ಷಿಣದಲ್ಲಿ ನಡೆಸಬೇಕೆಂದು ತೀರ್ಮಾನಿಸಿತು.

ಉಡುಪಿಯಲ್ಲಿ ಸಂಸ್ಕೃತ ಗೋಷ್ಠಿ

ಫೆಬ್ರವರಿ ತಿಂಗಳ ಮೊದಲ ವಾರದಲ್ಲಿ ಉಡುಪಿಯ ಸಂಸ್ಕೃತ ಮಹಾಪಾಠ ಶಾಲೆಯ ಆಶ್ರಯದಲ್ಲಿ ಮಹಾಕವಿ ಕಾಳಿದಾಸ ಕೃತ ಶಾಕುಂತಲ ನಾಟಕವನ್ನು ಕುರಿತ ಒಂದು ಸಂಸ್ಕೃತ ಕಾರ್ಯಕ್ರಮ ಏರ್ಪಟ್ಟಿತ್ತು. ಶ್ರೀ ಭಂಡಾರಕೇರಿ ಶ್ರೀಪಾದಂಗಳವರು ಇದನ್ನು ಉದ್ಘಾಟಿಸಿದರು. ಶ್ರೀ ಪೇಜಾವರದ ಶ್ರೀಪಾದಂಗಳು ನಿಯೋಜಕರಾಗಿದ್ದರು.

ಸರ್ವಶ್ರೀ ಗು. ಭಿ. ಜೋಶಿ, ಪಾಂಡುರಂಗಿ, ಗುರುರಾಜಾಚಾರ್ಯ, ಅಗ್ರಹಾರ ಗೋಪಾಲಕೃಷ್ಣ ಭಟ್ಟ, ಕಾಶಿ ಜಿತೇಂದ್ರಿಯಾಚಾರ್ಯ, ಗಲಗಲಿ ಪಂಢರಿನಾಥಾಚಾರ್ಯ, ಸಾಣೂರು ಭೀಮಭಟ್ಟ, ಎಂ. ರಾಜಗೋಪಾಲಾಚಾರ್ಯ, ವರದರಾಜ ಬಲ್ಲಾಳ, ಅಲೆವೂರು ಸೀತಾರಾಮಾಚಾರ್ಯ, ಕೋರಂಗರವಾಡಿ ಸೀತಾರಾಮಾಚಾರ್ಯ, ಕಾಪು ಹಯಗ್ರೀವಾಚಾರ್ಯ, ಕಾಪು ಹಯವದನ ಪುರಾಣಿಕ, ಕೆ. ಹರಿದಾಸ ಉಪಾಧ್ಯಾಯ, ಬನ್ನಂಜೆ ಗೋವಿಂದಾಚಾರ್ಯರು ಭಾಗವಹಿಸಿದ್ದರು.

ಉಡುಪಿಯಲ್ಲಿ ಕಾವ್ಯ ವಾಚನ

ಉಡುಪಿಯ ಕೃಷ್ಣಮಂದಿರದಲ್ಲಿ ಈಗಿನ ಪರ್ಯಾಯ ಪೀಠಾಧಿಪತಿಗಳಾದ ಶ್ರೀ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ್ವರತೀರ್ಥ ಶ್ರೀಪಾದಂಗಳವರ ಮತ್ತು ಭಂಡಾರಕೇರಿ ಮಠಾಧೀಶರ ಸಮ್ಮುಖದಲ್ಲಿ ಶ್ರೀ ಪಾಂಡುರಂಗರಾಯರ ಪ್ರಾಸಂಗಿಕ ನಿರೂಪಣೆಯೊಡನೆ, ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾಯರು ಕುಮಾರವ್ಯಾಸ ಭಾರತದಿಂದ ಶ್ರೀಕೃಷ್ಣರಾಯಭಾರ ಭಾಗವನ್ನು ವಾಚನ ಮಾಡಿದರು. ಪೇಜಾವರ ಸ್ವಾಮಿಗಳು ಅನುಗ್ರಹ ಭಾಷಣ ಮಾಡಿದರು.

ಹಿಂದಿ ಮತ್ತು ತಮಿಳು ಭಾಷೆಗೆ 'ಭರತೇಶ ವೈಭವ'

ಮಹಾಕವಿ ರತ್ನಾಕರ ವರ್ಣಿಯ 'ಭರತೇಶ ವೈಭವ' ಕಾವ್ಯ ಸಂಪೂರ್ಣವಾಗಿ ಹಿಂದಿ ಮತ್ತು ತಮಿಳು ಭಾಷೆಗಳಿಗೆ ಪದ್ಯರೂಪದಲ್ಲಿ ಅನುವಾದವಾಗುತ್ತಿದೆ. ಶ್ರೀಯುತರುಗಳಾದ ಎಂ. ದೇವೇಗೌಡ, ಜಿ. ಬ್ರಹ್ಮಪ್ಪ ಮತ್ತು ಎಸ್. ಎಜಾಸ್ ಉದ್ದೀನ್ ಇವರುಗಳು ಈಗಾಗಲೆ ಮೊದಲೆರಡು ಸಂಧಿಯ ಪದ್ಯಗಳನ್ನು ಹಿಂದಿಗೆ ಅನುವಾದ ಮಾಡಿದ್ದಾರೆ. ಶ್ರೀ ಡಿ. ಕೃಷ್ಣಮೂರ್ತಿ ಮತ್ತು ಹಂಪನಾ ಅವರು ತಮಿಳು ಅನುವಾದವನ್ನು ಕೈಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಶ್ರೇಷ್ಠ ಕಾವ್ಯವೊಂದನ್ನು ಅನ್ಯಭಾಷೆಯವರಿಗೆ ಪರಿಚಯ ಮಾಡಿಕೊಡುವ ಶ್ರೀಯುತರುಗಳ ಈ ಪ್ರಯತ್ನ ಬೇಗ ಯಶಸ್ವಿಯಾಗಲೆಂದು ನುಡಿ ಹಾರೈಸುತ್ತದೆ.

ಕಳೆದ ತಿಂಗಳು ನಮ್ಮನ್ನು ಅಗಲಿದ ಹೊಸಗನ್ನಡ ಸಾಹಿತ್ಯದ ಆಚಾರ್ಯಪುರುಷರಲ್ಲಿ ಒಬ್ಬರಾದ ಡಾ|| ಎ. ಆರ್. ಕೃಷ್ಣಶಾಸ್ತ್ರಿ ಅವರ ಪವಿತ್ರ ಸ್ಮರಣೆಗಾಗಿ ಏಪ್ರಿಲ್ ಮತ್ತು ಮೇ ತಿಂಗಳ 'ಕನ್ನಡ ನುಡಿ' ಸಂಚಿಕೆಗಳನ್ನು ವಿಶೇಷ ಸಂಚಿಕೆಯಾಗಿ ಪ್ರಕಟಿಸಲು ಯೋಚಿಸಲಾಗಿದೆ. ಈ ಸಂಚಿಕೆಗೆ ಶ್ರೀಯುತರನ್ನು ಚನ್ನಾಗಿ ಬಲ್ಲ ಕನ್ನಡ ವಿದ್ವಾಂಸರಿಂದ ವಿದ್ವತ್ಪೂರ್ಣ ಲೇಖನಗಳನ್ನು ಕೋರಿವೆ. ಲೇಖನಗಳನ್ನು ಕಳುಹಿಸಿಕೊಡಲು ಕೊನೆಯ ದಿನಾಂಕ ೧೫–೪–೧೯೬೮.

ಬೆಂಗಳೂರು
ದಿನಾಂಕ ೧–೩–೧೯೬೮

ಸಂಪಾದಕ
'ಕನ್ನಡ ನುಡಿ'

ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ

ಮಹನೀಯರಲ್ಲಿ ವಿಜ್ಞಾಪನೆ :

ಪರಿಷತ್ತು ಸ್ಥಾಪಿತವಾಗಿ ೫೩ ವರ್ಷಗಳಿಗೆ ಬಂದಿದೆ. ಈಗ್ಗೆ ಮೂರು ವರ್ಷಗಳಿಗೆ ಮೊದಲೇ ಅದರ ಸುವರ್ಣೋತ್ಸವವನ್ನು ನಡೆಸಬೇಕಾಗಿತ್ತು. ಆದರೆ ಅನೇಕ ಕಾರಣಗಳಿಂದ, ಮುಖ್ಯವಾಗಿ ಆರ್ಥಿಕ ಅಡಚಣೆಗಳಿಂದ, ಅದನ್ನು ನಡೆಸಲಾಗಲಿಲ್ಲ. ಅದನ್ನು ಇದೇ ಜೂನ್–ಜುಲೈ ತಿಂಗಳುಗಳಲ್ಲಿ ನಡೆಸಬೇಕೆಂದು ಗೊತ್ತುಮಾಡಲಾಗಿದೆ. ಐವತ್ತು ವರುಷಗಳಿಂದ ಬೆಂಗಳೂರಲ್ಲಿ ಸಾಹಿತ್ಯ ಸಮ್ಮೇಳನ ನಡೆಯದಿರುವುದನ್ನು ಗಮನಿಸಿ, ಈ ವರುಷದ ಕನ್ನಡ ಸಾಹಿತ್ಯ ಸಮ್ಮೇಳನವನ್ನೂ ಕೂಡ ಆ ಸುವರ್ಣ ಮಹೋತ್ಸವದ ಜೊತೆಗೆ ನಡೆಸಬೇಕೆಂದು ಯೋಚಿಸಲಾಗಿದೆ. ಸುವರ್ಣ ಮಹೋತ್ಸವದ ನೆನಪಿಗಾಗಿ ಹೊಸ ಕಟ್ಟಡವನ್ನು ಕಟ್ಟಬೇಕೆಂದೂ, ಹಿರಿಯ ಸಾಹಿತಿಗಳನ್ನು ಬರಮಾಡಿಕೊಂಡು ಗೌರವಿಸಬೇಕೆಂದೂ, ಬೃಹದ್ಗ್ರಂಥವೊಂದನ್ನು ಪ್ರಕಟಿಸಬೇಕೆಂದೂ ಪರಿಷತ್ತು ಆಸೆ ಇಟ್ಟುಕೊಂಡಿದೆ. ಈ ಎಲ್ಲ ಕಾರ್ಯಗಳಿಗೆ ಲಕ್ಷಾಂತರ ರೂಪಾಯಿಗಳು ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. ಕನ್ನಡ ನಾಡಿನ ಮತ್ತು ಕನ್ನಡ ನುಡಿಯ ಈ ಮಹತ್ಕಾರ್ಯಕ್ಕೆ ಎಲ್ಲರ ತನುಮನ ಧನ ಸಹಾಯಗಳನ್ನು ಪರಿಷತ್ತು ಅಪೇಕ್ಷಿಸುತ್ತದೆ.

ಕನ್ನಡ ನಾಡಿನ ಎಲ್ಲ ಸಂಘ ಸಂಸ್ಥೆಗಳೂ, ಶಾಲಾ ಕಾಲೇಜುಗಳೂ, ಸಹಕಾರ ಸಂಘಗಳೂ, ಬ್ಯಾಂಕುಗಳೂ, ಚಿತ್ರ ಮಂದಿರದ ಮಾಲೀಕರೂ, ಚಿತ್ರ ವ್ಯವಹಾರದ ಸಂಸ್ಥೆಗಳೂ, ಸಾಹಿತಿಗಳೂ ಎಲ್ಲ ಕನ್ನಡಿಗರೂ ಈ ಸಮಾರಂಭವನ್ನು ತಮ್ಮ ಸಮಾರಂಭವೆಂದೇ ಭಾವಿಸಿ ಪರಿಷತ್ತಿಗೆ ಧನಸಹಾಯವನ್ನು ಒದಗಿಸಿಕೊಟ್ಟು ಈ ಮಹೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಪರಿಷತ್ತು ತುಂಬ ಕಳಕಳಿಯಿಂದ ಪ್ರಾರ್ಥಿಸುತ್ತದೆ.

ಹಂಪ. ನಾಗರಾಜಯ್ಯ
ಗೌ॥ ಕಾರ್ಯದರ್ಶಿ

ಪರಿಷತ್ತಿನ ಸುದ್ದಿಗಳು

ಅಮೇರಿಕದಲ್ಲಿ ಹೊಸ ನಾಟಕ ಪ್ರಯೋಗಗಳು

ದಿನಾಂಕ ೨೭-೧-೧೯೬೮ರಂದು ಪರಿಷನ್ಮಂದಿರದಲ್ಲಿ ಅಮೇರಿಕದಿಂದ ದಯಮಾಡಿಸಿದ್ದ ಡಾ|| ಹ್ಯಾಚ್ ಅವರು ಅಮೇರಿಕದಲ್ಲಿ ನಾಟಕ ರಚನೆಯಲ್ಲಿ ಮತ್ತು ನಾಟಕರಂಗ ದಲ್ಲಿ ಹೊಸ ಪ್ರಯೋಗಗಳು ಎಂಬ ವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು. ಪರಿಷದಧ್ಯಕ್ಷ ಪ್ರೊ|| ವೆಂಕಟ ಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ

ದಿನಾಂಕ ೮-೨-೧೯೬೮ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಿವೃತ್ತ ಕನ್ನಡ ಪ್ರಾಧ್ಯಾಪಕರೂ, ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತರೂ ಬಹುಭಾಷಾ ಪಂಡಿತರೂ ಸುಪ್ರಸಿದ್ಧ ಲೇಖಕರೂ ಆಗಿದ್ದ ಡಾ|| ಎ. ಆರ್. ಕೃಷ್ಣ ಶಾಸ್ತ್ರಿಗಳವರ ನಿಧನದ ಪ್ರಯುಕ್ತ ಸಂತಾಪ ಸೂಚಕ ಸಭೆ ಯನ್ನು ಏರ್ಪಡಿಸಿತ್ತು. ಶ್ರೀಗಳಾದ ತಿ. ತಾ. ಶರ್ಮ ಅವರು, ಎಂ. ವಿ. ಸೀತಾರಾಮಯ್ಯನವರು, ಎಚ್. ಎಂ ಶಂಕರನಾರಾಯಣರಾಯರು, ಮಾಧವ ಮಲ್ಯ ಅವರು ಮತ್ತು ದಿವಂಗತರ ಸಹೋದರ ಶ್ರೀ ಎ. ಆರ್. ಶ್ರೀಕಂಠ ಶಾಸ್ತ್ರಿಗಳು ಡಾ|| ಕೃಷ್ಣಶಾಸ್ತ್ರಿಗಳನ್ನು ಕುರಿತು ಮಾತ ನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ|| ಜಿ. ವೆಂಕಟ ಸುಬ್ಬಯ್ಯನವರು ಈ ಕೆಳಗಿನ ಸಂತಾಪ ಸೂಚಕ ನಿರ್ಣಯ ವನ್ನು ಮಂಡಿಸಿದರು. ಪರಿಷತ್ತಿನ ಸದಸ್ಯರೂ ನಾಡನುಡಿ ಗಳ ಅಭಿಮಾನಿಗಳೂ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಎರಡು ನಿಮಿಷಗಳ ಮೌನದಿಂದ ದಿವಂಗತರಿಗೆ ತಮ್ಮ ಗೌರವವನ್ನು ಸೂಚಿಸಿದರು.

ನಿರ್ಣಯ

"ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪ ಕರೂ ಕನ್ನಡನಾಡಿನ ವಿದ್ವನ್ಮಣಿಗಳೂ ಉದ್ದಾಮ ಸಾಹಿತಿ ಗಳೂ ಶ್ರೇಷ್ಠ ಸಂಶೋಧಕರೂ ಆದರ್ಶಪ್ರಾಯರೂ ಆದ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರು ದಿ. ೧-೨-೧೯೬೮ ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದುದರಿಂದ ಕನ್ನಡ ನಾಡುನುಡಿಗಳಿಗೆ ಅಪಾರ ನಷ್ಟವಾಗಿದೆ. ಅವರು ಅಧ್ಯಾಪಕ ರಾಗಿ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದವರಲ್ಲದೆ ತಾವು ಸ್ಥಾಪಿಸಿದ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ತಾವೇ ಪ್ರಾರಂಭ ಮಾಡಿದ 'ಪ್ರಬುದ್ಧ ಕರ್ಣಾಟಕ'ದ ಮೂಲಕವೂ ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಗೆ ಕಾರಣವಾಗಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ, ಸ್ವಾಮಿ ಶಿಷ್ಯ ಸಂವಾದ, ನಾಗಮಹಾಶಯ, ಭಾಸ ಕವಿ, ಸಂಸ್ಕೃತ ನಾಟಕ ಗಳು, ವಚನ ಭಾರತ, ಬಂಕಿಮಚಂದ್ರ, ನಿರ್ಮಲ ಭಾರತೀ– ಮುಂತಾದ ಗ್ರಂಥಗಳನ್ನು ಪ್ರಕಟಿಸಿ ಶ್ರೇಷ್ಠ ಗ್ರಂಥಕರ್ತ ರೆನಿಸಿಕೊಂಡ ಅವರು ಅನೇಕ ಗ್ರಂಥಕರ್ತರನ್ನು ಪ್ರೋತ್ಸಾಹಿಸಿ ಬೆಳಕಿಗೆ ತಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿರುವ ಕನ್ನಡ-ಕನ್ನಡ ನಿಘಂಟಿನ ಪ್ರಥಮ ಸಂಪಾದಕರಾಗಿ ಅವರು ಪರಿಷತ್ತಿಗೆ ಸಲ್ಲಿಸಿರುವ ಸೇವೆ ಅಮೋಘವಾದುದು. ಕನ್ನಡ ಸ್ಥಾನಮಾನಗಳನ್ನು ಕಾಪಾಡುವುದರಲ್ಲಿ ಅವರು ತಳೆದಿದ್ದ ದಿಟ್ಟತನದ ಸ್ಫೂರ್ತಿದಾಯಕವಾದ ನಿಲವು ಕನ್ನಡಿಗರಿಗೆಲ್ಲ ಎಂದೆಂದಿಗೂ ಮಾರ್ಗದರ್ಶಕವಾಗಿರತಕ್ಕದ್ದು.

ಹೀಗೆ ಕನ್ನಡ ನಾಡುನುಡಿಗಳಿಗೆ ಬಹುಮುಖವೂ ಸತ್ವ ಪೂರ್ಣವೂ ಆದ ಸೇವೆ ಸಲ್ಲಿಸಿದ ಡಾ|| ಕೃಷ್ಣಶಾಸ್ತ್ರಿಗಳ ನಿಧನಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸೇರಿರುವ ಈ ಸಭೆ ತನ್ನ ಅಪಾರ ಸಂತಾಪವನ್ನು ವ್ಯಕ್ತ ಪಡಿಸುತ್ತದೆ ಮತ್ತು ಭಗವಂತನು ದಿವಂಗತರ ಆತ್ಮಕ್ಕೆ ಸದ್ಗತಿಯನ್ನು ದಯಪಾಲಿಸಲೆಂದೂ, ಅವರ ಕುಟುಂಬ ವರ್ಗಕ್ಕೆ ಅವರ ನಿಧನದಿಂದಾಗಿರುವ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲೆಂದೂ ಈ ಸಭೆ ಪ್ರಾರ್ಥಿಸುತ್ತದೆ."

ವಿದ್ಯಾವರ್ಧಕ ಸಂಘ : ಉಪನ್ಯಾಸಮಾಲೆ ೩೧

ದಿನಾಂಕ ೧೧-೨-೧೯೬೮ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವಿದ್ಯಾವರ್ಧಕ ಸಂಘದಲ್ಲಿ ೩೧ನೆಯ ಉಪನ್ಯಾಸಮಾಲೆಯು ನೆರವೇರಿತು. ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಕೃತಿಗಳನ್ನು ಕುರಿತು ಶ್ರೀ ಅ. ರಾ. ಮಿತ್ರ ಅವರು ಉಪನ್ಯಾಸ ಮಾಡಿದರು.

ಸಾಹಿತ್ಯ ಕಾರ್ಯಕ್ಕೂ ಕಂಪ್ಯೂಟರ್

ಕೇವಲ ಅಂಕಿ ಸಂಖ್ಯೆಗಳ ಗಣನೆಗೆ ಸಂಬಂಧಿಸಿದ ಕಂಪ್ಯೂಟರ್ ಸಾಹಿತ್ಯಿಕ ಕಾರ್ಯಕ್ಕೂ ಪ್ರಯೋಜನವಾಗಬಹುದೆ? ಈ ವಿಚಾರವನ್ನೆತ್ತಿಕೊಂಡು, ಮುಂಬಯಿ ಕನ್ನಡ ಸಾಹಿತಿಗಳಾದ ಹಾವನೂರ ಶ್ರೀನಿವಾಸರು ಇದೇ ೧೪-೨-೧೯೬೮ರಂದು ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಉಪನ್ಯಾಸವನ್ನು ಮಾಡಿದರು.

ಪ್ರಪಂಚದ ಕಾರ್ಯ ವ್ಯಾಪ್ತಿಯಲ್ಲಿ ಸರ್ವವ್ಯಾಪಿಯಾದ ಕಂಪ್ಯೂಟರ್ ಪ್ರವೇಶಿಸದ ರಂಗವೇ ಇಲ್ಲ. ಅದು ಗಗನ ಯಾತ್ರೆಯನ್ನು ಮೊದಲ್ಗೊಂಡು ವಧೂವರ ಜೋಡಣೆಯವರೆಗೂ ಪ್ರಯೋಜನಕಾರಿಯಾಗಿದೆ ಎಂಬುದಾಗಿ ತಿಳಿಯಪಡಿಸುತ್ತಾ, ೧೯ನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಕುರಿತು ವಿಶೇಷ ಅಭ್ಯಾಸದಲ್ಲಿ ತೊಡಗಿರುವ ಶ್ರೀ ಹಾವನೂರರು ತಮ್ಮ ಸ್ವಂತದ ಸಾಹಿತ್ಯಾಭ್ಯಾಸದಲ್ಲಿಯೇ ಕಂಪ್ಯೂಟರಿನ ಪ್ರಯೋಜನದ ಪ್ರಯೋಗಮಾಡಿ, ಯಶಸ್ವಿಯಾಗಿದ್ದಾರೆ. ಮೊದಲು ಮೂಲಸಾಮಗ್ರಿಯನ್ನು ಒದಗಿಸುವ ರೀತಿ, ಅದನ್ನು ವಿಶಿಷ್ಟ (punched) ಕಾರ್ಡುಗಳ ಮೇಲೆ ವೆಜ್ಜಗಳ (punches) ಮೂಲಕ ಅಂಕಿಗಳಿಗೆ ರೂಪಾಂತರಿಸುವ ರೀತಿ, ಆಗ ಕಂಪ್ಯೂಟರ್ ಮನುಷ್ಯನ ಮೆದುಳಿನಂತೆಯೇ ಕೆಲಸಮಾಡುತ್ತ ಎಲ್ಲ ಸಾಮಗ್ರಿಯನ್ನೂ ಕಾಯ್ದಿರಿಸಿಕೊಂಡು, ಅನಂತರ ನಾವು ಕೇಳಿದ ಯಾವುದೇ ಸಮಸ್ಯೆಗೆ 'ಉತ್ತರ'ವನ್ನು ನೀಡುವ ಬುದ್ಧಿವಂತಿಕೆ, ಈ ಉತ್ತರವು ಅಂಕಿಗಳ ರೂಪದಲ್ಲೇ ಇದ್ದದ್ದು, ಕಂಪ್ಯೂಟರಿಗೆ ಜೋಡಿಸಿದ ಟೆಲಿಪ್ರಿಂಟರಿನ ಮೂಲಕ ಶಬ್ದಗಳಲ್ಲಿಯೆ ಮುದ್ರಿತವಾಗಿ ಹೊರಬರುವ ಆಶ್ಚರ್ಯಕರವಾದ ಕಂಪ್ಯೂಟರಿನ ಕೆಲಸದ ವಿಧಾನವನ್ನು ಉದಾಹರಣೆಗಳೊಡನೆ ವಿವರಿಸಿದರು.

ಶ್ರೀ ಹಾವನೂರರು ತಮ್ಮ ಅಭ್ಯಾಸಕ್ಕಾಗಿ ಕೈಕೊಂಡ ಈ ಪ್ರಥಮ ಪ್ರಯೋಗವು ೧೯ನೇ ಶತಮಾನದ ಪತ್ರಿಕೆಗಳನ್ನು ಕುರಿತದ್ದಾಗಿತ್ತು. ಕನ್ನಡದಲ್ಲಿ ಮೊತ್ತಮೊದಲಿನ ಪತ್ರಿಕೆ ಯಾವುದು? ಎಂದು ಪ್ರಕಟವಾಯಿತು? ದಿನಪತ್ರಿಕೆಗಳು ಯಾವು ಇದ್ದವು? ಇಂದಿಗೂ ಬದುಕಿರುವ ಪತ್ರಿಕೆಗಳಾವುವು? ಪತ್ರಿಕೆಗಳನ್ನು ಹೊರಡಿಸುವವರ ಆಗಿನ ಧೋರಣೆ ಏನಿದ್ದಿತು--ಇವೇ ಮುಂತಾದ ಸ್ವಾರಸ್ಯಕರ ಅಂಶಗಳು ಕಂಪ್ಯೂಟರಿನ ಸಹಾಯದಿಂದ ಖಚಿತವಾಗಿ ಮತ್ತು ಕ್ಷಣಾರ್ಧದಲ್ಲಿಯೇ ಟೆಲಿಪ್ರಿಂಟರಿನಂತೆಯೇ ಅಚ್ಚಾಗಿ ಬಂದ ವಿಷಯ ಸಾಮಗ್ರಿಯನ್ನು ವಿಶದೀಕರಿಸಿದರು.

ಪರಿಷದಧ್ಯಕ್ಷ ಪ್ರೊ|| ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ಹಂ. ಪ. ನಾಗರಾಜಯ್ಯನವರು ವಂದನಾರ್ಪಣೆ ಮಾಡಿದರು.

ಗಾಂಧಿ ಸಾಹಿತ್ಯ ಸಂಘದಲ್ಲಿ ೧೪ನೆಯ ಉಪನ್ಯಾಸಮಾಲೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆದ ಉಪನ್ಯಾಸಮಾಲೆಯ ಕವಿಕೃತಿ ಸ್ಮರಣೆಯ ಅಂಗವಾಗಿ ದಿ|| ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಕೃತಿಗಳ ಬಗ್ಗೆ ಪ್ರೊ. ಎಚ್. ಎಂ. ಶಂಕರನಾರಾಯಣರಾಯರು ದಿನಾಂಕ ೨೫-೨-೧೯೬೮ರಂದು ಉಪನ್ಯಾಸ ಮಾಡಿದರು.

ಕನ್ನಡ–ಕನ್ನಡ ನಿಘಂಟಿನ ೪ನೇ ಸಂಚಿಕೆಯ ಬಿಡುಗಡೆ

ದಿನಾಂಕ ೨೪-೨-೧೯೬೮ರಂದು ಪರಿಷತ್ತಿನಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಕನ್ನಡ–ಕನ್ನಡ ನಿಘಂಟಿನ ೪ನೇ ಸಂಚಿಕೆಯನ್ನು ಪರಿಷತ್ತಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಬಿಡುಗಡೆಮಾಡಿದರು. ಪತ್ರಿಕಾಕರ್ತರಿಗೆ ನೀಡಿದ ನಿಘಂಟಿನ ಹಾಗೂ ಪರಿಷತ್ತಿಗೆ ಸಂಬಂಧಿಸಿದ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

ಕನ್ನಡ ಸಾಹಿತ್ಯ ಪರಿಷತ್ತು ೧೯೫೪-೫೫ರಿಂದ ನಿಘಂಟಿನ ಕೆಲಸವನ್ನು ಪ್ರಾರಂಭ ಮಾಡಿತು. ಆದರೆ ಇದಕ್ಕಿಂತ ಹಿಂದಿನಿಂದಲೂ ಶಬ್ದಸಂಗ್ರಹ ಕಾರ್ಯವೇ ಮುಂತಾದ ಪೂರ್ವಭಾವಿ ಸಿದ್ಧತೆಗಳನ್ನು ಮಾಡುತ್ತಿತ್ತು. ಈ ನಿಘಂಟು ಬೃಹತ್ ಪ್ರಮಾಣದ್ದಾಗಿದ್ದು ಕ್ರೌನ್ ೧/೪ರ ಆಕಾರದಲ್ಲಿ (೧೦೦ ಪುಟಗಳ ೫೦ ಸಂಚಿಕೆಗಳು) ಒಟ್ಟು ೫೦೦೦ ಪುಟಗಳ ವ್ಯಾಪ್ತಿಯನ್ನು ಪಡೆದಿದೆ. ಈ ದೊಡ್ಡ ಕೆಲಸಕ್ಕೆ ಬೇಕಾದ ಆರ್ಥಿಕ ಅನುಕೂಲ ಪರಿಷತ್ತಿಗೆ ಸಾಲದಿದ್ದುದರಿಂದ ಕೆಲಸ ನಿಧಾನವಾಗಿ ಸಾಗುತ್ತಿತ್ತು. ೧೯೬೧ರಲ್ಲಿ ಸರ್ಕಾರ ನೆರವಿಗೆ ಬಂದು ೧೫ ಲಕ್ಷ ರೂಪಾಯಿಗಳ ಧನಸಹಾಯ ನೀಡಿತು. ಅಂದಿನಿಂದ ಈ ಕೆಲಸ ವ್ಯವಸ್ಥಿತವಾಗಿಯೂ ಶೀಘ್ರವಾಗಿಯೂ ನಡೆಯುವಂತಾಗಿ ಶ್ರೀ ಜಿ. ವೆಂಕಟಸುಬ್ಬಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎರಡು ತಿಂಗಳಲ್ಲಿ ಅಂದರೆ ೨೬-೧೨-೧೯೬೪ರಲ್ಲಿ ನಿಘಂಟಿನ ಮೊದಲನೆಯ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ತರುವಾಯ ಡಿಸೆಂಬರ್ ೧೯೬೫ರಲ್ಲಿ ಎರಡನೆಯ ಸಂಚಿ

ಕೆಯೂ, ಜನವರಿ ೧೯೭೦ರಲ್ಲಿ ಸಂಕ್ಷಿಪ್ತ ಸೂಚಿಯೂ, ಜುಲೈ ೧೯೭೦ರಲ್ಲಿ ಮೂರನೆಯ ಸಂಚಿಕೆಯೂ ಪ್ರಕಟವಾದುವು. ಇಂದು ನಾಲ್ಕನೆಯ ಸಂಚಿಕೆ ಪ್ರಕಟವಾಗಲಿದೆ.

ನಿಘಂಟು ಕಾರ್ಯ ಪ್ರಾರಂಭವಾದಾಗ ಅದರ ವ್ಯಾಪ್ತಿಯನ್ನು ಕ್ರಿ. ಶ. ೧೮೦೦ರ ಒಳಗಿನ ಅವಧಿಯಲ್ಲಿ ದೊರೆಯುವ ಶಾಸನ ಗ್ರಂಥಗಳ ಶಬ್ದಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ ಕೆಲಸ ಮುಂದುವರಿದಂತೆ ಪ್ರಚಲಿತವಿರುವ ಪಾರಿಭಾಷಿಕ ಶಬ್ದಗಳನ್ನೂ ಶಾಸ್ತ್ರೀಯ ಧಾರ್ಮಿಕ ಶಬ್ದಗಳನ್ನೂ ಈ ನಿಘಂಟಿನಲ್ಲಿ ಅಳವಡಿಸಬೇಕೆಂದು ತೀರ್ಮಾನಿಸಲಾಯಿತು. ಈ ದೃಷ್ಟಿಯಿಂದ ಶಬ್ದಸಂಗ್ರಹ ಕಾರ್ಯವನ್ನು ಪುನಃ ಆರಂಭಿಸಿ ಈ ಪರಿಭಾಷೆಗಳಿಗೆ ಸಂಬಂಧಿಸಿದ ಶಬ್ದಗಳನ್ನೆಲ್ಲಾ ಸಂಗ್ರಹಿಸಲಾಯಿತು. ವರ್ಣಾನುಕ್ರಮಣಿಕೆಯಲ್ಲಿ ಅನುಸರಿಸಿದ ವಿಧಾನ, ಮುದ್ರಣದಲ್ಲಿ ಮಾಡಿಕೊಂಡ ಕೆಲವು ಬದಲಾವಣೆಗಳಿಂದ ನಿಘಂಟಿನ ಮುದ್ರಣ ಕಾರ್ಯ ತಡವಾಯಿತು.

ನಿಘಂಟಿಗೆ ಬೇಕಾದ ಸಂಪಾದಕ ಸಿಬ್ಬಂದಿ ಕನಿಷ್ಠಪಕ್ಷ ಎಂ.ಎ. ಪದವೀಧರರು. ಅವರಿಗೆ ವಿಶ್ವವಿದ್ಯಾಲಯಗಳಲ್ಲಿ ಮತ್ತು ಇತರ ಹಿರಿಯ ವಿದ್ಯಾಸಂಸ್ಥೆಗಳಲ್ಲಿ ಕೊಡುವ ವೇತನವನ್ನು ಪರಿಷತ್ತು ಕೊಡಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಅವರು ವಿಶ್ವವಿದ್ಯಾಲಯ ಅಥವಾ ಹಿರಿಯ ವಿದ್ಯಾಸಂಸ್ಥೆಗಳಲ್ಲಿ ಕೆಲಸಕ್ಕಾಗಿ ಪ್ರಯತ್ನ ಪಡುತ್ತಿದ್ದು ಕೆಲಸದ ಭದ್ರತೆ ಮತ್ತು ಆಕರ್ಷಕ ವೇತನದ ದೃಷ್ಟಿಯಿಂದ ನಿಘಂಟು ಕಚೇರಿಯಲ್ಲಿ ಬಹಳ ದಿನ ಸೇವೆ ಸಲ್ಲಿಸುತ್ತಿರಲಿಲ್ಲ. ಹೀಗಾಗಿ ತುಂಬಾ ತೊಡಕಾದ ಹಾಗೂ ವಿಶೇಷ ಪರಿಶ್ರಮ ಮತ್ತು ತಯಾರಿ ಬೇಕಾದ ಈ ನಿಘಂಟು ಕಚೇರಿಯ ಹುದ್ದೆಯಲ್ಲಿ ಯಾರೂ ದೀರ್ಘಕಾಲ ಉಳಿಯುತ್ತಿರಲಿಲ್ಲ. ಅಮೇಲೆ ವಿಶ್ವವಿದ್ಯಾನಿಲಯದ ವೇತನವನ್ನೇ ಕೊಟ್ಟರೂ ಕೆಲಸದ ಭದ್ರತೆಯ ದೃಷ್ಟಿಯಿಂದ ಸಂಪಾದಕ ಸಿಬ್ಬಂದಿಯಲ್ಲಿ ಆಗಾಗ ಬದಲಾವಣೆಗಳಾಗುತ್ತಿದ್ದುವು. ಆದರೆ ಈ ಪರಿಷತ್ತಿನಲ್ಲಿ ಒಂದು ಮೂಲ ಸಿಬ್ಬಂದಿ ವರ್ಗವನ್ನು ಕಾಯಂ ಆಗಿ ಇಟ್ಟುಕೊಳ್ಳಬೇಕೆಂದು ಗೊತ್ತುಮಾಡಿರುವುದರಿಂದಲೂ, ಅನುಭವಸ್ಥ ನಿವೃತ್ತರಾದವರು, ವಿಶ್ವವಿದ್ಯಾಲಯ ಮತ್ತು ವಿದ್ಯಾ ಇಲಾಖೆಯಲ್ಲಿರುವವರುಗಳನ್ನು ಎರವಲು ತಂದುಕೊಂಡು ಅಂತಹ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತಿರುವುದರಿಂದಲೂ ಈ ತೊಂದರೆ ನಿವಾರಣೆಯಾಗಿದೆ. ನಿಘಂಟು ಸಂಪಾದಕರ ಹುದ್ದೆಯನ್ನು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಹುದ್ದೆಗೆ ಸರಿಸಮಾನವಾಗಿ ಮಾಡಬೇಕೆಂಬ ಪರಿಷತ್ತಿನ ಸೂಚನೆಯನ್ನು ಸರ್ಕಾರವು ಒಪ್ಪಿದೆ. ಇಷ್ಟರಲ್ಲೇ ಇದು ಕಾರ್ಯಗತವಾಗುವ ನಿರೀಕ್ಷೆಯಿದೆ. ಈಗ ಸಂಪಾದಕ ಸಿಬ್ಬಂದಿಯಲ್ಲಿ ೯ ಮಂದಿ ಕೆಲಸ ಮಾಡುತ್ತಿದ್ದಾರೆ. ಕೆಲಸವನ್ನು ತ್ವರಿತಗೊಳಿಸುವ ಉದ್ದೇಶದಿಂದ ಇನ್ನೂ ೮ ಮಂದಿಯನ್ನು ನೇಮಕ ಮಾಡಬೇಕಾಗಿದೆ. ಅದಕ್ಕೆ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ.

ಇಲ್ಲಿಯವರೆಗೆ ಒಟ್ಟು ಏಳು ಲಕ್ಷಕ್ಕಿಂತಲೂ ಹೆಚ್ಚು ಪ್ರಯೋಗಗಳನ್ನು ಸಂಗ್ರಹಿಸಿ ಪ್ರಯೋಗ ಪಟ್ಟಿಕೆಗಳಲ್ಲಿ ಬರೆದಿಡಲಾಗಿದೆ. ಕಚೇರಿಯಲ್ಲಿ 'ಮ' ಕಾರದ ವರೆಗೆ ೨೬೦೮೭ ಪುಟ ಮೊದಲ ಹಸ್ತಪ್ರತಿಯನ್ನು ಬರೆದಿಡಲಾಗಿದೆ. ನಿಘಂಟು ಸಂಪಾದಕ ಸಮಿತಿಯ ಕೆಲಸವನ್ನು ಹಗುರಗೊಳಿಸುವುದಕ್ಕಾಗಿಯೂ, ಮತ್ತು ಪ್ರಕಟನೆಯ ಕಾರ್ಯವನ್ನು ತ್ವರಿತಗೊಳಿಸುವುದಕ್ಕಾಗಿಯೂ ಈ ಕೆಳಗಿನ ಸದಸ್ಯರನ್ನುಳ್ಳ ಒಂದು ಉಪಸಂಪಾದಕ ಸಮಿತಿಯನ್ನು ನಿಯಮಿಸಿದೆ :

೧. ಶ್ರೀ ಡಿ. ಎಲ್. ನರಸಿಂಹಾಚಾರ್ಯರು
೨. ಶ್ರೀ ಜಿ. ವೆಂಕಟಸುಬ್ಬಯ್ಯನವರು
೩. ಶ್ರೀ ರಂ. ಶ್ರೀ. ಮುಗಳಿಯವರು
೪. ಶ್ರೀ ಡಿ. ಜವರೇಗೌಡರು

ಈ ಮೇಲಿನ ಎಲ್ಲ ಏರ್ಪಾಟುಗಳಿಂದ ನಿಘಂಟಿನ ಮುಂದಿನ ಸಂಚಿಕೆಗಳು ಬೇಗ ಬೇಗನೆ ಪ್ರಕಟವಾಗುವ ಭರವಸೆಯಿದೆ.

ಈ ನಿಘಂಟುವಿಗೆ ಒಂದು ಹೊಸ ಶಕ್ತಿಯನ್ನು ಕೊಡುತ್ತಿರುವವರು ನಮ್ಮ ವಿದ್ಯಾಮಂತ್ರಿಗಳಾದ ಶ್ರೀ ಕೆ. ವಿ. ಶಂಕರಗೌಡರು. ಅವರು ನಿಘಂಟು ಸಂಪಾದಕ ಸಮಿತಿಯವರನ್ನು ಭೇಟಿಮಾಡಿ ಅನುಕೂಲ ಅನಾನುಕೂಲಗಳನ್ನು ವಿಚಾರಿಸಿ ತಿಳಿದುಕೊಂಡು ಬೇಕಾದ ಸಿಬ್ಬಂದಿ ಧನಸಹಾಯಗಳನ್ನು ಒದಗಿಸಿಕೊಟ್ಟು ವಿಶೇಷವಾದ ಉತ್ತೇಜನವನ್ನು ಕೊಡುತ್ತಿದ್ದಾರೆ. ಅವರ ಪ್ರೋತ್ಸಾಹ ಪರಿಷತ್ತಿಗೆ ಒಂದು ದೊಡ್ಡ ಬೆಂಬಲವಾಗಿದೆ.

ಇದುವರೆಗೆ ಶಬ್ದಸಂಗ್ರಹಕಾರ್ಯ ಮುಗಿದು ಶೇಕಡ ೬೦ ರಷ್ಟು ಮೊದಲ ಹಸ್ತಪ್ರತಿ ಸಿದ್ಧವಾಗಿದೆ. ಈವರೆಗೆ ೪೫೦೦ ಪುಟಗಳಷ್ಟು ಪರಿಷ್ಕೃತ ಹಸ್ತಪ್ರತಿಯನ್ನು ಸಂಪಾದಕ ಸಮಿತಿ ಒಪ್ಪಿದೆ. ಈಗ ಈ ಪುಟಗಳು ಅಚ್ಚಾಗಬೇಕಾಗಿದೆ. ಮೇಲೆ ವಿವರಿಸಿರುವ ಹೊಸ ಏರ್ಪಾಟುಗಳಿಂದ ಈ ಎಲ್ಲ ಉಳಿದ ಕಾರ್ಯಗಳು ಬೇಗಬೇಗನೆ ಮುಗಿದು, ಕನ್ನಡ ನಿಘಂಟು ೧೯೭೭ರೊಳಗಾಗಿ ಪೂರ್ಣವಾಗಿ ಪ್ರಕಟವಾಗುವು

ದೆಂದು ಪರಿಷತ್ತಿಗೆ ನಂಬಿಕೆ ಇದೆ. ಈ ಬಗ್ಗೆ ಪರಿಷತ್ತು ಸರ್ಕಾರದೊಡನೆ ಹೊಸ ಒಪ್ಪಂದವನ್ನು ಮಾಡಿಕೊಂಡು ಈ ಪಾಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ನಿಘಂಟನ್ನು ಪೂರ್ತಿಯಾಗಿ ಪ್ರಕಟಿಸುವ ಹೊಣೆಯನ್ನು ಹೊತ್ತುಕೊಂಡಿದೆ. ಈಗಿರುವ ವ್ಯವಸ್ಥೆಯಿಂದ ಇದು ಸಾಧ್ಯವೆನ್ನುವುದು ಸ್ಪಷ್ಟವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಗತಿ

ಪ್ರೊ. ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಚುನಾಯಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿ ದಿನಾಂಕ ೨೬-೧೦-೧೯೬೪ ರಿಂದ ಕೆಲಸಮಾಡುತ್ತಿದೆ.

ಈ ಮೇಲಿನ ಕಾರ್ಯ ಸಮಿತಿ ಕಾರ್ಯ ನಿರ್ವಹಿಸಿಕೊಂಡಾಗ ಅದರ ತಲೆಯಮೇಲಿದ್ದ ದೊಡ್ಡ ಭಾರ ಪರಿಷತ್ತಿನ ೪೫ ಸಾವಿರ ರೂಪಾಯಿಗಳ ಸಾಲ. ಇದರಿಂದಾಗಿ ಪರಿಷತ್ತು ಗ್ರಂಥ ಪ್ರಕಟಣೆ, ಸಾಹಿತಿಕ ಚಟುವಟಿಕೆಗಳು ಮುಂತಾದ ಯಾವ ಕಾರ್ಯಗಳಲ್ಲಿಯೂ ಪ್ರವರ್ತಿಸುವುದು ಸಾಧ್ಯವಾಗದೇ ಹೋಯಿತು. ಈ ದಿನಕ್ಕೆ ಆ ಸಾಲವೆಲ್ಲಾ ತೀರಿದೆ.

ಸರ್ಕಾರದ ಸಹಾಯ ದ್ರವ್ಯ ವರ್ಷಕ್ಕೆ ರೂ. ೭೫೦೦ ಇದ್ದುದು ೧೯೬೬-೬೭ರಿಂದ ರೂ. ೨೫೦೦೦ಕ್ಕೆ ಹೆಚ್ಚಿದೆ. ಇದರಿಂದ ಪರಿಷತ್ತಿನ ಕಚೇರಿಯನ್ನು ವಿಸ್ತರಿಸಿ ಕೆಲಸ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಏರ್ಪಾಟು ಮಾಡಲಾಗಿದೆ.

ಆರ್ಥಿಕ ತೊಂದರೆಗಳಿಂದ ನಿಂತುಹೋಗಿದ್ದ 'ಕಾವ' 'ಜಾಣ' ಪರೀಕ್ಷೆಗಳ ಜೊತೆಗೆ 'ರತ್ನ' ಪರೀಕ್ಷೆಯನ್ನೂ ಪರಿಷತ್ತು ಪ್ರಾರಂಭಮಾಡಿದೆ.

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ ತನ್ನ ವೆಚ್ಚವನ್ನು ತಾನೇ ಸಂಪಾದಿಸಿಕೊಳ್ಳುವಂತೆ ವ್ಯವಸ್ಥೆಮಾಡಿದೆ.

ಕನ್ನಡ ನುಡಿ ಮತ್ತು ಪರಿಷತ್ಪತ್ರಿಕೆಗಳು ಉತ್ತಮ ಸಾಹಿತ್ಯ ಪತ್ರಿಕೆಗಳಾಗಿ ಮಾರ್ಪಾಟಾಗಿವೆ.

'ಕರ್ಣಕರ್ಣಾಮೃತ' ಪಠ್ಯಪುಸ್ತಕವಾಗಿ ಅದರಿಂದ ಪರಿಷತ್ತಿಗೆ ರೂ. ೮೦೦೦ ಗಳ ದತ್ತಿನಿಧಿ ದೊರಕಿದೆ. ಇದಲ್ಲದೆ ಕಾಳಿದಾಸನ ದೃಷ್ಟಿ ಸೃಷ್ಟಿ, ಗಮಕ ಪ್ರವೇಶದಾಯಿನಿ, ಗಮಕ ಪ್ರಚಾರ ಬೋಧಿನಿ ಪುಸ್ತಕಗಳು ಪರಿಷತ್ತಿನಿಂದ ಪ್ರಕಟವಾಗಿವೆ. ಕವಿಚರಿತೆ ಭಾಗ ೨ ಮತ್ತು ೩ ಪ್ರಕಟನೆಗೆ ಸಿದ್ಧವಾಗಿವೆ.

ಸಮ್ಮೇಳನದ ವಿಶೇಷ ಸಂಚಿಕೆಗಳು ಮುನ್ನೋಟ, ಪಡುವಣ, ಅಭಿಷೇಕ, ವೈಶಿಷ್ಟ್ಯಪೂರ್ಣವಾದ ಲೇಖನಗಳನ್ನೊಳಗೊಂಡು ಪ್ರಕಟವಾಗಿವೆ.

ಪರಿಷತ್ತಿನ ರಂಗಮಂಟಪದ ರಿಪೇರಿ ಕಾರ್ಯ ನಡೆದು ಈಗ ಅದರ ಲೋಪದೋಷಗಳು ಇಲ್ಲದಂತಾಗಿ ಅದು ಹೆಚ್ಚು ಆಕರ್ಷಕವಾಗಿದೆ. ಮತ್ತು ಹೆಚ್ಚು ಸಂಘ ಸಂಸ್ಥೆಗಳು ಅದರ ಪ್ರಯೋಜನವನ್ನು ಪಡೆಯುತ್ತಿವೆ.

ಇವೆಲ್ಲಕ್ಕಿಂತ ಹೆಚ್ಚಾದ ಒಂದು ಮಹತ್ವದ ಸಂಗತಿ ಎಂದರೆ ಪರಿಷತ್ತಿನ ಅಂಗರಚನೆಯಲ್ಲಾಗಿರುವ ಬದಲಾವಣೆ. ಹನ್ನೆರಡು ವರ್ಷಗಳಿಂದ ಈ ಬದಲಾವಣೆಯ ಪ್ರಯತ್ನ ನಡೆದಿದ್ದು ಅದು ಈಗ ಸಾರ್ಥಕವಾಗಿರುವುದು ವಿಶೇಷದ ವಿಷಯ. ಕನ್ನಡ ಪ್ರದೇಶಗಳು ಒಂದುಗೂಡಿ ಕನ್ನಡ ರಾಜ್ಯವಾದ ಮೇಲೂ ಕೂಡ ಪರಿಷತ್ತಿನ ಕಾರ್ಯಸಮಿತಿ ಸದಸ್ಯತ್ವ ಮುಂಬಯಿ ಕರ್ಣಾಟಕ, ಮದರಾಸು ಕರ್ಣಾಟಕ, ಹೈದರಾಬಾದು ಕರ್ಣಾಟಕ ಎಂದು ಮುಂತಾಗಿ ವಿಂಗಡಿಸಿದ ವಿಭಾಗಗಳ ಹೆಸರಿನಲ್ಲಿತ್ತು. ಕನ್ನಡ ನಾಡಿನ ಎಲ್ಲ ಪ್ರಜೆಗಳ ವಿವರವಾದ ಪ್ರಾತಿನಿಧ್ಯ ಅದರಲ್ಲಿರಲಿಲ್ಲ. ಪರಿಷತ್ತಿನ ನಿಯಮಾವಳಿಗಳು ಹೊಸ ಸನ್ನಿವೇಶಕ್ಕೆ ತಕ್ಕಂತೆ ಈಗ ರೂಪಿತವಾಗಿದೆ. ಅದರಂತೆ ಈಗ ಪರಿಷತ್ತಿನ ಕಾರ್ಯಸಮಿತಿಯಲ್ಲಿ ಕನ್ನಡನಾಡಿನ ಪ್ರತಿ ಜಿಲ್ಲೆಗೆ ಒಬ್ಬರಂತೆಯೂ ಹೊರನಾಡ ಕನ್ನಡಿಗರ ಪ್ರತಿನಿಧಿಯಾಗಿ ಇಬ್ಬರೂ, ಅಂಗಸಂಸ್ಥೆಗಳ ಪ್ರತಿನಿಧಿಯಾಗಿ ಒಬ್ಬರೂ, ಮೈಸೂರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳೂ, ಮೈಸೂರು, ಬೆಂಗಳೂರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳಾಗಿ ಒಬ್ಬೊಬ್ಬರೂ ಮೈಸೂರು ರಾಜ್ಯದ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರೂ ಕಾರ್ಯಸಮಿತಿಯಲ್ಲಿರುತ್ತಾರೆ. ಇದರಿಂದ ಪರಿಷತ್ತಿನ ಕಾರ್ಯಸಮಿತಿಯು ಎಲ್ಲ ಕನ್ನಡಿಗರಿಗೂ ವಿದ್ಯಾ ಇಲಾಖೆಯ ವಿಶ್ವವಿದ್ಯಾನಿಲಯಗಳ ಪ್ರಾತಿನಿಧಿಕವಾಗಿ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಕೆಲಸಮಾಡಲು ಸಾಧ್ಯವಾಗುತ್ತದೆ. ಈ ಬದಲಾವಣೆಯನ್ನು ಎಲ್ಲ ಕನ್ನಡಿಗರೂ ಗಮನಕ್ಕೆ ತಂದುಕೊಂಡು ಸದಸ್ಯರಾಗಿ ಸೇರಿ ಅದರ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಗಳಾಗಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ.

ಇದೇ ವರುಷದ ಜೂನ್ ಜುಲೈ ತಿಂಗಳಲ್ಲಿ ಪರಿಷತ್ತು ತನ್ನ ಸುವರ್ಣಮಹೋತ್ಸವವನ್ನು ನೆರವೇರಿಸಬೇಕೆಂದೂ ಅದೇ ಸಂದರ್ಭದಲ್ಲಿ ಸಾಹಿತ್ಯ ಸಮ್ಮೇಳನವನ್ನು ಕೂಡ ನಡೆಸಬೇಕೆಂದೂ ಉದ್ದೇಶ ಹೊಂದಿದೆ. ಈ ಸುವರ್ಣ

ಮಹೋತ್ಸವದ ನೆನಪಿಗಾಗಿ ಹೊಸ ಕಟ್ಟಡವನ್ನು ಕಟ್ಟಬೇಕೆಂದೂ ಹಿರಿಯ ಸಾಹಿತಿಗಳನ್ನು ಬರಮಾಡಿಕೊಂಡು ಗೌರವಿಸಬೇಕೆಂದೂ ಸಂಸ್ಮರಣಕ್ಕಾಗಿ ಬೃಹದ್ಗ್ರಂಥವೊಂದನ್ನು ಪ್ರಕಟಿಸಬೇಕೆಂದೂ ಯೋಚಿಸಿಕೊಂಡಿದೆ. ಈ ಎಲ್ಲ ಕಾರ್ಯಗಳಿಗೆ ಒಂದೂವರೆ ಲಕ್ಷ ರೂಪಾಯಿ ತಗಲುವುದೆಂದು ಅಂದಾಜು ಮಾಡಲಾಗಿದೆ. ಈ ಬಗ್ಗೆ ಖಚಿತವಾದ ವಿವರಗಳನ್ನು ಪತ್ರಿಕೆಗಳಿಗೆ ಕೊಡುವುದಾಗುತ್ತದೆ. ಈ ಬೃಹತ್ಕಾರ್ಯದಲ್ಲಿ ಪತ್ರಿಕೆಗಳು ತಮ್ಮ ಸಹಾಯ ಸಹಕಾರಗಳನ್ನು ನೀಡಿ ಈ ಪ್ರಯತ್ನ ಸಫಲವಾಗುವ ಹಾಗೆ ಮಾಡಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ.

ಫೆಬ್ರುವರಿ ೧೯೬೮ರಲ್ಲಿ ನಡೆದ ಗಮಕ ಪ್ರವೇಶ ಪರೀಕ್ಷೆಗಳ ಫಲಿತಾಂಶ:

ಮೊದಲನೆಯ ತರಗತಿ

(ಅಂಕಗಳ ಅನುಕ್ರಮದಲ್ಲಿ)

೧೪೨, ೧೪೦, ೧೨೫, ೧೪೧, ೫೭, (೧೨೦-೪೯), ೬೧, ೫೫, ೧೩೯, (೫೧, ೪), ೫೦, ೧೩೮, ೪೨, ೯೭ ಮತ್ತು ೫೬.

ಎರಡನೆಯ ತರಗತಿ

೨, ೩, ೫, ೨೫, ೩೨, ೪೬, ೪೭, ೪೮, ೫೨, ೫೯, ೬೫, ೭೭, ೮೫, ೮೬, ೧೦೧, ೧೧೦, ೧೧೩, ೧೧೫, ೧೨೭, ೧೨೮ ಮತ್ತು ೧೩೩.

ಮೂರನೆಯ ತರಗತಿ

೧, ೬, ೮, ೯, ೧೦, ೧೨, ೧೩, ೧೪, ೧೬, ೧೭, ೧೮, ೨೦, ೨೧, ೨೩, ೨೪, ೨೬, ೨೭, ೨೯, ೩೦, ೩೧, ೩೬, ೩೭, ೩೮, ೩೯, ೪೦, ೪೩, ೪೪, ೪೫, ೫೩, ೫೪, ೫೮, ೬೦, ೬೨, ೬೭, ೬೯, ೭೦, ೭೧, ೭೨, ೭೩, ೭೫, ೭೬, ೭೮, ೭೯, ೮೦, ೮೧, ೮೨, ೮೪, ೮೭, ೮೮, ೮೯, ೯೩, ೯೪, ೯೫, ೯೬, ೯೮, ೯೯, ೧೦೦, ೧೦೨, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೧, ೧೧೨, ೧೧೪, ೧೧೬, ೧೧೭, ೧೧೮, ೧೨೧, ೧೨೨, ೧೨೩, ೧೨೪, ೧೨೬, ೧೩೪, ೧೩೫ ಮತ್ತು ೧೪೩.

ಶಿವಮೊಗ್ಗ ಕೇಂದ್ರದ ವಿದ್ಯಾರ್ಥಿಗಳಾದ ಶ್ರೀ ಸತ್ಯನಾರಾಯಣ ಶಾಸ್ತ್ರೀ (ಕ್ರಮಾಂಕ ೧೪೨) ಅವರು ಪ್ರಥಮ ತರಗತಿಯಲ್ಲಿ ಮೊದಲಿಗರಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ನಾಡಿನ ಮಠಾಧಿಪತಿಗಳು ಯತಿವರ್ಯರು ಕನ್ನಡದ ಕೈಹಿಡಿದು ನಡೆಸಬೇಕು

"ಕನ್ನಡವು ಬೆಳೆಯಬೇಕಾದರೆ ಬೆಳೆದು ನಾಡಿನ ಒಳಿತನ್ನು ಇನ್ನೂ ಅಧಿಕವಾಗಿ ಸಾಧಿಸಬೇಕಾದರೆ ನಾಡಿನ ಮಠಾಧಿಪತಿಗಳು ಯತಿವರ್ಯರು ಕನ್ನಡವನ್ನು ಕೈಹಿಡಿದು ನಡಸಬೇಕು, ಬಳಸಿ ಬೆಳೆಸಬೇಕು. ಅವರವರ ಮತಧರ್ಮಗಳು ತತ್ವ ಪ್ರಚಾರಗಳು ನಾಡಿನ ಮೂಲೆಮೂಲೆಗಳನ್ನು ಮುಟ್ಟಬೇಕಾದರೆ ಕನ್ನಡ ಒಂದೇ ನಮ್ಮ ಗತಿ" ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ವೆಂಕಟಸುಬ್ಬಯ್ಯನವರು ಕರೆ ನೀಡಿದ್ದಾರೆ.

ಶ್ರವಣಬೆಳಗೊಳದ ಶ್ರೀ ಮಠದ ಶ್ರೀ ಚಾರುಕೀರ್ತಿ ಸ್ವಾಮಿಗಳು ವೆಂಕಟಸುಬ್ಬಯ್ಯನವರನ್ನು ಬರಮಾಡಿಕೊಂಡು ಅವರಿಗೆ ಸುವರ್ಣಪದಕವನ್ನೂ "ವಿದ್ಯಾಲಂಕಾರ" ಎಂಬ ಪ್ರಶಸ್ತಿಯನ್ನೂ ಇತ್ತು ಸನ್ಮಾನ ಮಾಡಿದಾಗ ಶ್ರೀಯುತರು ಜೈನ ಸಾಹಿತ್ಯದ ಹಿರಿಮೆಯನ್ನು ವಿವರಿಸುತ್ತಾ ಹೀಗೆ ಹೇಳಿದರು.

೪೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಪಂಡಿತ ಶ್ರೀ ಎಸ್. ಪಿ. ಪದ್ಮಣ್ಣ ಅವರಿಗೂ ಈ ಸಂದರ್ಭದಲ್ಲಿ ಸುವರ್ಣಪದಕವನ್ನೂ "ಭಕ್ತ ಕವಿಶೇಖರ" ಎಂಬ ಪ್ರಶಸ್ತಿಯನ್ನೂ ಶ್ರೀಗಳು ದಯಪಾಲಿಸಿದರು.

ಡಿ. ವಿ. ಜಿ. ಸತ್ಕಾರ ಸಮಾರಂಭ



ಸಂತೃಪ್ತ ಡಿ. ವಿ. ಜಿ.





ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಬಿನ್ನವತ್ತಳೆಯನ್ನು ಸಮರ್ಪಿಸುತ್ತಿರುವುದು



ಕನ್ನಡ - ಕನ್ನಡ ನಿಘಂಟಿನ ನಾಲ್ಕನೆಯ ಸಂಚಿಕೆಯ ಬಿಡುಗಡೆ ಸಂದರ್ಭದಲ್ಲಿ
ನಡೆದ ಪತ್ರಿಕಾಸಮ್ಮೇಳನ

ಡಾ|| ಡಿ. ವಿ. ಜಿ. ಅವರಿಗೆ ಪರಿಷತ್ತಿನ ಸನ್ಮಾನ

ದಿನಾಂಕ ೨೯-೨-೧೯೬೭ರಂದು ಕನ್ನಡ ಸಾಹಿತ್ಯ ಪರಿಷತ್ತು 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ' ಗ್ರಂಥದ ಮೂಲಕ ಭಾರತದ ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ಗಳಿಸಿದ ಡಾ. ಡಿ. ವಿ. ಗುಂಡಪ್ಪನವರನ್ನು ಅವರ ಸ್ವಗೃಹದಲ್ಲಿ ಅಭಿನಂದಿಸಿ ಗೌರವಿಸಿತು.

ಆರಂಭದಲ್ಲಿ ಡಿ. ವಿ. ಜಿ. ಅವರು ಬರೆದಿರುವ 'ವನಸುಮದಲೆನ್ನ ಜೀವನ' ಎಂಬ ಗೀತೆಯನ್ನು ಶ್ರೀ ಕೈವಾರ ರಾಜಾರಾವ್ ಅವರ ಕುಮಾರಿಯರಾದ ಮಾಲತಿ ಮತ್ತು ಪದ್ಮ ಅವರು ಸುಶ್ರಾವ್ಯವಾಗಿ ಹಾಡಿದರು.

ಅನಂತರ ಪರಿಷತ್ತಿನ ಗೌರವ ಕೋಶಾಧಿಕಾರಿಗಳಾದ ಶ್ರೀ ವರದರಾಜನ್ ಅವರು–ಬಹಿರಂಗ ಸಭೆ ಸಮಾರಂಭಗಳಿಗೆ ಸಮ್ಮತಿಸದಿದ್ದ ಡಿ. ವಿ. ಜಿ. ಅವರನ್ನು ಅವರ ಸ್ವಗೃಹದಲ್ಲಿಯೇ ಸನ್ಮಾನಿಸಿ ಗೌರವಿಸಬೇಕಾಗಿ ಬಂದ ವಿಶೇಷ ಸಂದರ್ಭವನ್ನು ತಿಳಿಸಿ ಎಲ್ಲರನ್ನೂ ಸ್ವಾಗತಿಸಿದರು.

ಸುಪ್ರಸಿದ್ಧ ಕವಿಗಳೂ, ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ರೀಡರ್ ಆಗಿರುವ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಮಾತನಾಡಿ ವನಸುಮವೇ ಡಿ. ವಿ. ಜಿ. ಅವರ ಬದುಕಿನ ಧ್ಯೇಯ, ಅದೇ ಅವರು ನಮಗೆ ನೀಡಿದ ಮಾರ್ಗದರ್ಶನವೆಂದರು. ವನಸುಮದಂತೆ ಜೀವನ ನಡೆಸಿ ಭಗವದ್ಗೀತೆಯ ವ್ಯಾಖ್ಯಾನ ಬರೆಯಲು ಕಾರಣವಾದ ಮನೋಸ್ಥಿತಿ ಮತ್ತು ಮಂಕುತಿಮ್ಮನ ಕಗ್ಗ ಬರೆಯಲು ಬೇಕಾದ ನಿರ್ಲಿಪ್ತ ಮನೋಧರ್ಮ ಇವೇ ಅವರ ಜೀವನಸತ್ವವೆಂದು ಹೇಳಿದರು.

ಅನಂತರ ಶ್ರೀ ಪಿ. ಶ್ರೀನಿವಾಸರಾಯರು ಮಾತನಾಡಿ ಡಿ. ವಿ. ಜಿ. ಅವರ ಸ್ನೇಹ ದೊರತುದು ತಮ್ಮ ಸುದೈವವೆಂದು ಹೇಳಿದರು. ಪರಿಷತ್ತಿನ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರು ಪಂಡಿತ ಸನ್ಮಾನದ ಸಂಕೇತವಾಗಿ ಶ್ರೀಯುತರಿಗೆ ಶಾಲನ್ನು ಹೊದಿಸಿ, ಪುಷ್ಪಹಾರವನ್ನು ಹಾಕಿ ಬಿನ್ನವತ್ತಳೆಯನ್ನು ಸಮರ್ಪಿಸಿದರು.

ಅವರು ತಮ್ಮ ಭಾಷಣದಲ್ಲಿ ಜೀವನದಲ್ಲಿ ಅನೇಕ ದಾಖಲೆಗಳನ್ನು ಸ್ಥಾಪಿಸಿರುವ ಡಿ. ವಿ. ಜಿ. ಅವರು ಮಾನವನ ಬದುಕಿನಲ್ಲಿ ಅತಿ ಹೆಚ್ಚಿನದೆನಿಸಬಹುದಾದಷ್ಟು ದೀರ್ಘಕಾಲ ಬದುಕಿ ಹೊಸ ದಾಖಲೆಯನ್ನು ಸ್ಥಾಪಿಸಬೇಕೆಂದೂ, ಪರಿಷತ್ತಿಗೆ ದೀರ್ಘಕಾಲ ಮಾರ್ಗದರ್ಶನ ಮಾಡಬೇಕೆಂದೂ ಕೋರಿದರು.

ತಮಗೆ ನೀಡಿದ ಸನ್ಮಾನಕ್ಕಾಗಿ ಡಾ. ಡಿ. ವಿ. ಗುಂಡಪ್ಪನವರು ಮಾತನಾಡುತ್ತಾ, ತಮ್ಮ ಸಂಗಡಿಗರಾಗಿದ್ದು ಬಹಳ ಕಾಲ ಆಪ್ತರಾಗಿದ್ದ ದಿವಂಗತ ತಳುಕಿನ ವೆಂಕಣ್ಣಯ್ಯ, ಬಿ. ಎಂ. ಶ್ರೀಕಂಠಯ್ಯ, ಎಂ. ಆರ್. ಶ್ರೀನಿವಾಸಮೂರ್ತಿ, ಎ. ಆರ್. ಕೃಷ್ಣಶಾಸ್ತ್ರೀ ಮೊದಲಾದ ಮಿತ್ರರನ್ನು ಕಳೆದುಕೊಂಡ ತಮ್ಮ ಬದುಕು ಬಡವಾಗಿದೆ ಎಂದು ಹೇಳಿದರು.

ಪರಿಷತ್ತಿನ ಮುನ್ನಡೆಯ ಬಗ್ಗೆ ಸೂಚನೆಗಳನ್ನು ನೀಡುತ್ತ ಇಂದು ನಾಡಿನಲ್ಲಿ ಪಾಂಡಿತ್ಯ ಕಡಿಮೆಯಾಗುತ್ತಿದೆಯೇನೋ ಎಂಬ ಶಂಕೆ ಬರುತ್ತಿದೆ ಎಂದರು. ಈ ದಿಸೆಯಲ್ಲಿ ಪರಿಷತ್ತಿನಿಂದ ಮೂರು ಉಪಕಾರಗಳಾಗಬೇಕಾಗಿವೆ. ಮೊದಲನೆಯದು ನಿಘಂಟು. ಪರಿಷತ್ತು ಕೈಗೊಂಡಿರುವ ಈ ಕೆಲಸ ಕೈಬಿಡಬಾರದು. ಈಗ ಬರುತ್ತಿರುವ ಸಂಚಿಕೆಗಳ ಪ್ರಗತಿ ಸಾಲದು. ತಿಂಗಳಿಗೆ ಒಂದು ಸಂಚಿಕೆಯಾದರೂ ಬಿಡುಗಡೆಯಾಗಿ, ಶೀಘ್ರವಾಗಿ ಕನ್ನಡ-ಕನ್ನಡ ನಿಘಂಟು ಕನ್ನಡ ಜನತೆಯ ಕೈಸೇರಲು ಪ್ರಯತ್ನಿಸಬೇಕು. ಎರಡನೆಯದು ಕನ್ನಡಕ್ಕೆ ಒಂದು ಶ್ರೇಷ್ಠಮಟ್ಟದ ಪಾಂಡಿತ್ಯಪೂರ್ಣವಾದ ವ್ಯಾಕರಣ ಒದಗಿಸಬೇಕು. ಈ ದಿಸೆಯಲ್ಲಿ ದಿವಂಗತ ಬಿ. ಮಲ್ಲಪ್ಪನವರ ಶಬ್ದಾದರ್ಶವನ್ನು ಪರಿಷತ್ತು ವಿದ್ವಾಂಸರಿಂದ ಸಂಸ್ಕರಿಸಿ ಪ್ರಕಟಿಸಲು ಮುಂದೆ ಬರಬೇಕು. ಮೂರನೆಯದಾಗಿ ಪಾಂಡಿತ್ಯಕ್ಕೆ ಪ್ರೋತ್ಸಾಹ ನೀಡುವುದರ ಜೊತೆಗೆ ಅಲಭ್ಯ ಹಳಗನ್ನಡ ಗ್ರಂಥಗಳು ಪ್ರಕಟವಾಗಿ ಎಲ್ಲರಿಗೂ ದೊರಕುವಂತೆ ಮಾಡಬೇಕು—ಈ ಮಾರ್ಗದಲ್ಲಿ ಪರಿಷತ್ತು ಕೆಲಸಮಾಡಬೇಕು ಎಂದು ಹೇಳಿದರು. ಪತ್ರಿಕಾಕರ್ತರ ಕಡೆ ತಿರುಗಿ ಅವರು ಸಹಜವಾದ ಭಾಷೆಯನ್ನು ಬಳಸಬೇಕೆಂದು ಬಿನ್ನವಿಸಿದರು.

ತಮಗೆ ಸಾಹಿತ್ಯ ಅಕಾಡಮಿಯವರು ನೀಡಿದ ಸನ್ಮಾನಕ್ಕಿಂತ, ತಮ್ಮನ್ನು ಬಲ್ಲ ಕಿರಿಯರು ನೀಡಿದ ಈ ಸನ್ಮಾನ ತುಂಬ ಸಂತೋಷ ತೃಪ್ತಿಗಳನ್ನು ತಂದಿವೆ ಎಂದು ಹೇಳಿ ಕನ್ನಡ ಜನತೆಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು.

ಕಡೆಯಲ್ಲಿ ಶ್ರೀ ಅನ್ನದಾನಯ್ಯ ಪುರಾಣಿಕ ಅವರು ಪರಿಷತ್ತಿನ ಪರವಾಗಿ ವಂದನಾರ್ಪಣೆ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು

ಡಾ. ಡಿ. ವಿ. ಗುಂಡಪ್ಪ ಅವರಿಗೆ

ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ

ಎಂಬ ಕೃತಿಗೆ

ಭಾರತದ ಸಾಹಿತ್ಯ ಅಕಾದಮಿ ಪ್ರಶಸ್ತಿ ದೊರೆತ ಸಂದರ್ಭದಲ್ಲಿ

ಸಮರ್ಪಿಸಿದ

ಸನ್ಮಾನ ಪತ್ರ

ಪೂಜ್ಯರೇ,

ಕನ್ನಡ ಸಾಹಿತ್ಯದ ಕೀರ್ತಿಶ್ರೀಯ ಅಭ್ಯುದಯಕ್ಕೆ ಕಾರಣರೂ, ಸಂಸ್ಕೃತ ಕನ್ನಡ ಇಂಗ್ಲಿಷು ಭಾಷೆಗಳಲ್ಲಿ ಉದ್ದಾಮ ಪಂಡಿತರೂ, ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸಿ ಬೆಳೆಯಿಸಿದವರೂ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಶಾಸನಶಾಸ್ತ್ರ, ದರ್ಶನಶಾಸ್ತ್ರಗಳಲ್ಲಿ ವಿದ್ವಾಂಸರೂ ಆದ ತಮ್ಮನ್ನು ಈ ದಿನ ಸ್ವಾಗತಿಸಿ ಪರಿಷತ್ಸದಸ್ಯರ ಸಮ್ಮುಖದಲ್ಲಿ ಕನ್ನಡಿಗರ ಕೃತಜ್ಞತೆಯನ್ನೂ ಗೌರವವನ್ನೂ ಸಮರ್ಪಿಸಲು ನಮಗೆಲ್ಲ ಸಂತೋಷವಾಗಿದೆ. ಈ ಸಮಾರಂಭಕ್ಕೆ ಒಪ್ಪಿಗೆಯಿತ್ತುದಕ್ಕೆ ತಮಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

೧೯೦೭ರಲ್ಲೇ ತಾವು ಸಾರ್ವಜನಿಕ ಜೀವನವನ್ನು ಪ್ರವೇಶಿಸಿ ಕನ್ನಡ ದಿನಪತ್ರಿಕೆಯಾದ 'ಭಾರತಿ'ಗೆ ಸಹ ಸಂಪಾದಕರಾಗಿದ್ದಿರಿ. ೧೯೧೩ರಿಂದ ೧೯೨೧ರ ವರೆಗೆ 'ಕರ್ಣಾಟಕ' ವೆಂಬ ಇಂಗ್ಲಿಷ್ ದ್ವೈವಾಸರ ಪತ್ರಿಕೆಗೆ ಪ್ರಧಾನ ಸಂಪಾದಕರಾಗಿ ಪತ್ರಿಕಾ ವ್ಯವಸಾಯಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟಿರಿ. ೧೯೪೫ರಿಂದ ಗೋಖಲೆ ಸಾರ್ವಜನಿಕ ಸಂಸ್ಥೆಯ ಕಾರ್ಯದರ್ಶಿಗಳೂ ಅದರ ಮಾಸಪತ್ರಿಕೆಯ ಸಂಪಾದಕರೂ ಆಗಿದ್ದುಕೊಂಡು ಸಾರ್ವಜನಿಕ ವಿಷಯಗಳಮೇಲೆ ಸೂಚನೆ ಟಿಪ್ಪಣಿಗಳನ್ನು ಬರೆಯುತ್ತಾ ಜನರ, ದೇಶದ ಸಮಸ್ಯೆಗಳಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದೀರಿ.

ದೇಶದ ರಾಜಕೀಯ ಜೀವನದಲ್ಲಿಯೂ ತಾವು ವಹಿಸಿದ ಪಾತ್ರ ಮಹತ್ವದ್ದಾಗಿದೆ. ೧೯೨೬ರಿಂದ ೧೯೪೦ರ ವರೆಗೆ ಮೈಸೂರು ಶಾಸನ ಸಭೆ, ವಿಶ್ವವಿದ್ಯಾನಿಲಯದ ಕೌನ್ಸಿಲ್, ಸೆನೆಟ್ ಇತ್ಯಾದಿ ಸಭೆಗಳಲ್ಲಿ ಭಾಗವಹಿಸುತ್ತಿದ್ದು, ದೇಶದ ರಾಜಕೀಯ ವಿಷಯಗಳಲ್ಲಿಯೂ ವಿಶ್ವವಿದ್ಯಾನಿಲಯದ ಆಡಳಿತ ವಿಷಯಗಳಲ್ಲಿಯೂ ತಮ್ಮ ವಿದ್ವತ್ತಿನ ಪ್ರಭಾವ ಬೀರಿದ್ದೀರಿ.

೧೯೩೨ರ ಹೊತ್ತಿಗೇ ತಮ್ಮ ಸಾಹಿತ್ಯಸೇವೆ ಕನ್ನಡ ನಾಡಿನಲ್ಲೆಲ್ಲ ಪ್ರಭಾವಶಾಲಿಯಾಗಿದ್ದು ಕನ್ನಡದ ಜನರು ಆ ವರ್ಷ ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಿ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಪರಿಷತ್ತು

ಈ ಸಂಸ್ಥೆಯು ಕಟ್ಟಡಕ್ಕೆ ಬಂದಮೇಲೆ ೧೯೩೩ರಿಂದ ೧೯೩೭ರ ವರೆಗೆ ತಾವು ಪರಿಷತ್ತಿನ ಉಪಾಧ್ಯಕ್ಷರಾಗಿದ್ದು ಬಹುಮಟ್ಟಿಗೆ ಅಜ್ಞಾತವಾಗಿದ್ದ ಈ ಸಂಸ್ಥೆಯ ಸತ್ವವನ್ನೂ ಪ್ರಾಧಾನ್ಯವನ್ನೂ ಅಖಿಲಕರ್ಣಾಟಕ ಜನತೆಯಗಮನಕ್ಕೆ ತಂದುಕೊಟ್ಟು ಪ್ರಚಾರಮಾಡಿದಿರಿ. ವಸಂತಸಾಹಿತ್ಯೋತ್ಸವ, ಗ್ರಂಥ ಪ್ರದರ್ಶನ, ಗಮಕ ವಾಚನ ತರಗತಿಗಳು, ಕನ್ನಡ ಶಿಕ್ಷಕರಿಗೆ ತರಪೇತಿ ಶಿಬಿರ ಮುಂತಾಗಿ ಕಾರ್ಯವಿಸ್ತರಣೆಯನ್ನು ಮಾಡಿದಿರಿ; ಕನ್ನಡ ಜನಮನವನ್ನು ಒಂದುಗೂಡಿಸುವ ಮಹತ್ಪ್ರಯತ್ನವನ್ನು ಕೈಗೊಂಡಿರಿ.

೧೯೬೧ರಲ್ಲಿ ತಮ್ಮ ವಿದ್ವತ್ತು ಪ್ರತಿಭೆ ಪ್ರಭಾವಗಳನ್ನು ಗಣನೆಗೆ ತಂದುಕೊಂಡು ಮೈಸೂರು ವಿಶ್ವವಿದ್ಯಾನಿಲಯವು ತಮಗೆ ಡಾಕ್ಟರೇಟ್ ಪದವಿಯನ್ನು ಕೊಟ್ಟು ಸನ್ಮಾನಿಸಿದುದು ಉಚಿತವೇ ಆಗಿದೆ.

ರಮ್ಯವಾದ ಮಕ್ಕಳ ಕತೆಗಳು, ಆದರ್ಶ ಪುರುಷರ ಜೀವನ ಚರಿತ್ರೆಗಳು, ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಬೋಧಪ್ರದವಾದ ಉಪನ್ಯಾಸಗಳು, ಪ್ರದರ್ಶನಾರ್ಹವೂ ಪ್ರಭಾವಪೂರ್ಣವೂ ಆದ ಉತ್ತಮ ನಾಟಕಗಳು, ಅತ್ಯುತ್ತಮ ಭಾವಕಾವ್ಯಗಳು, ಮನಸ್ಸಿಗೆ ಆಹ್ಲಾದವನ್ನೂ ಶಾಂತಿಯನ್ನೂ ತರುವ ಮನನ ಕಾವ್ಯಗಳು - ಇವುಗಳನ್ನು ನಿರಂತರವಾಗಿ ಬರೆದು ಕನ್ನಡಿಗರಿಗೆ ರಾಜಕೀಯ ಪ್ರಜ್ಞೆ, ಸ್ವಾತಂತ್ರ್ಯದಾಹ, ಸಾಹಿತ್ಯಾಭಿರುಚಿಗಳನ್ನು ಒದಗಿಸಿದ್ದೀರಿ. ತೀಕ್ಷ್ಣಜ್ಞಾನಜನ್ಯವೂ ಶುದ್ಧಜೀವನ ಮಾರ್ಗದರ್ಶಕವೂ ಸಾಹಿತ್ಯಪ್ರಪಂಚದಲ್ಲಿ ಕ್ರಾಂತಿಕಾರಕವೂ ಆದ 'ಮಂಕುತಿಮ್ಮನ ಕಗ್ಗ'ದಂತಹ ಗ್ರಂಥರತ್ನವು ತಮ್ಮಿಂದ ನಾಡಿಗೆ ಒದಗಿರುವುದನ್ನು ನೆನೆಸಿಕೊಂಡು ಕನ್ನಡಿಗರು ತಮಗೆ ಕೃತಜ್ಞರಾಗಿದ್ದಾರೆ.

ಇವೆಲ್ಲಕ್ಕಿಂತ ಹಿರಿದಾದ ಪ್ರಭಾವಶಾಲಿಯಾದ ವಿದ್ವತ್ಪೂರ್ಣವಾದ ಹಾಗೂ ಜೀವನಾನುಭವವನ್ನೆಲ್ಲ ಎರಕಹೊಯ್ದು ತಮ್ಮ ಐವತ್ತು ವರುಷಗಳ ತಪಸ್ಸಿನ ಫಲವಾಗಿ ಕನ್ನಡಿಗರಿಗೆ ದೊರಕಿರುವ ಮಹಾಗ್ರಂಥ **"ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ."** ಇದು ಇಂದಿನ ವಿಜ್ಞಾನಯುಗದ ತಿಳಿವಳಿಕೆಗೂ ಹಿಂದಿನಶಾಸ್ತ್ರ ತತ್ತ್ವನಿಯಮಗಳ ಯುಕ್ತಾಯುಕ್ತತೆಯನ್ನು ಹೆಜ್ಜೆಹೆಜ್ಜೆಗೂ ಪ್ರಶ್ನೆಮಾಡುವ ತರ್ಕಬುದ್ಧಿಗೂ ಸಮಂಜಸವಾಗಿ ಉತ್ತರ ಹೇಳುವ ಗ್ರಂಥ. ಸರ್ವಾಂಗ ಸಂಪೂರ್ಣವಾದ ಸಾರ್ಥಕ ಜೀವನದರ್ಶನ ಇದರಲ್ಲಿದೆ. ಇದನ್ನು ಓದುವಾಗ ಗೀತಾಚಾರ್ಯನ ಸಾನ್ನಿಧ್ಯದ ನಿಕಟಪರಿಚಯವು ನಮಗೆ ಆಗುವಂತಾಗುತ್ತದೆ. ಸರ್ವಾಂಗೀಣ ದೃಷ್ಟಿಯಿಂದ ಗೀತೆಯನ್ನು ವಿವೇಚಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಈ ಗ್ರಂಥದ ಪ್ರಭಾವ ಮಹತ್ತರವಾಗಿದೆ. ಇದು ಅನುವಾದಗೊಂಡರೆ, ಆಯಾ ಭಾಷೆಯ ಜನರಿಗೂ ಇದು ಜೀವನಧರ್ಮಯೋಗವನ್ನು ಬೋಧಿಸಿ ಶಾಂತಿಯನ್ನು ಸ್ಥಾಪಿಸಬಲ್ಲುದಾಗಿದೆ. ಇಂತಹ ಉದ್ಗ್ರಂಥಕ್ಕೆ ಸಾಹಿತ್ಯ ಅಕಾದಮಿಯು ಸನ್ಮಾನ ನೀಡಿರುವುದು ಔಚಿತ್ಯಪೂರ್ಣವಾಗಿದೆ.

ಹೀಗೆ ಕನ್ನಡ ನಾಡಿನ ವರಪುತ್ರರೂ ಕನ್ನಡ ಪತ್ರಿಕಾ ವ್ಯವಸಾಯಕ್ಕೆ ಮಾರ್ಗದರ್ಶಕರೂ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿದವರೂ ಸಾರ್ವಜನಿಕ ಸೇವಾನಿರತರೂ ಸಾಹಿತ್ಯ ಪರಿಷತ್ತನ್ನು ಸ್ವಂತ ಶ್ರಮದಿಂದ ಬೆಳೆಯಿಸಿದವರೂ ಅನೇಕ ಸಾಹಿತ್ಯ ಗ್ರಂಥಗಳಲ್ಲಿ ವಿದ್ವತ್ತು ಪ್ರತಿಭೆಗಳನ್ನು ಪ್ರಕಾಶಪಡಿಸಿದವರೂ, ಇಡೀ ಜೀವನಾನುಭವವನ್ನೇ ಗೀತಾತಾತ್ಪರ್ಯದಲ್ಲಿ ಬಟ್ಟಿಯಿಳಿಸಿ ಸಮಸ್ತ ಜನತೆಗೆ ಜೀವನಧರ್ಮಯೋಗವನ್ನು ಉಪದೇಶಿಸಿದವರೂ ಆದ ತಮಗೆ ಅಕಾದಮಿ ಪ್ರಶಸ್ತಿ ದೊರೆತ ಈ ಸಂದರ್ಭದಲ್ಲಿ ಸನ್ಮಾನಿಸುವ ಅವಕಾಶವನ್ನು ತಾವು ದೊರಕಿಸಿಕೊಟ್ಟಿರುವುದಕ್ಕೆ ನಮಗೆ ತುಂಬ ಸಂತೋಷವಾಗಿದೆ. ತಾವು ಪೋಷಿಸಿ ಬೆಳಸಿದ ಪರಿಷತ್ತಿಗೆ ದೊರಕಿರುವ ಈ ಅವಕಾಶ ಅಪೂರ್ವವೆಂದೇ ಭಾವಿಸುತ್ತೇವೆ.

ತಾವು ನೂರು ಕಾಲ ಇದ್ದು ಕನ್ನಡ ಜನತೆಯನ್ನು ಸನ್ಮಾರ್ಗದಲ್ಲಿ ನಡೆಸಲು ಸಲಹೆ ಸೂಚನೆಗಳನ್ನು ಕೊಡುತ್ತ ಆಶೀರ್ವದಿಸುತ್ತಿರಬೇಕೆಂದೂ ಪರಮಾತ್ಮನು ತಮಗೂ ತಮ್ಮವರೆಲ್ಲರಿಗೂ ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂದೂ ಹಾರೈಸುತ್ತೇವೆ.

ಜಿ. ವೆಂಕಟಸುಬ್ಬಯ್ಯ
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು

ಬೆಂಗಳೂರು
೨೯-೨-೧೯೬೮

ಸಂಪಾದಕೀಯ

ಪರಿಷತ್ತಿನ ಸುವರ್ಣಮಹೋತ್ಸವ

ಎರಡು ವರ್ಷಗಳ ಹಿಂದೆಯೇ ಆಚರಿಸಬೇಕಾಗಿದ್ದ ಪರಿಷತ್ತಿನ ಸುವರ್ಣ ಮಹೋತ್ಸವವು ಹಣದ ಅಭಾವದಿಂದ, ಪರಿಷತ್ತಿನ ಬಡತನದಿಂದ ಇಲ್ಲಿಯವರೆಗೂ ಮುಂದೂಡಲ್ಪಟ್ಟಿತ್ತು. ಈಗಲೂ ಪರಿಷತ್ತಿನ ಬಡತನವೇನೂ ನಿವಾರಣೆಯಾಗಿಲ್ಲ. ಆದರೆ ಪರಿಷತ್ತಿನ ಮೇಲಿದ್ದ ಸಾಲದ ಹೊರೆ ಇಳಿದಿದೆ. ಆದುದರಿಂದ ಸುವರ್ಣ ಮಹೋತ್ಸವವನ್ನು ನೆರವೇರಿಸಬೇಕೆಂದೂ ಪರಿಷತ್ತಿನ ಘನತೆ ಗೌರವಗಳಿಗೆ ಅದು ತಕ್ಕಂತೆ ಇರಬೇಕೆಂದೂ ತೀರ್ಮಾನಮಾಡಲಾಗಿದೆ.

ಈ ವರ್ಷವನ್ನೇ ಪರಿಷತ್ತಿನ ಸುವರ್ಣ ಮಹೋತ್ಸವದ ವರ್ಷವನ್ನಾಗಿ ಆಚರಿಸಲಾಗುವುದು. ನಾಡಿನ ಎಲ್ಲ ಜಿಲ್ಲೆಗಳಲ್ಲಿಯೂ ಈ ಉತ್ಸವದ ಏರ್ಪಾಟು ನಡೆದು ಜನರಿಗೆ ಪರಿಷತ್ತಿನ ಸತ್ವದ ಪರಿಚಯವಾಗುವಂತಾಗಬೇಕು. ಪರಿಷತ್ತಿನ ಹಿರಿಮೆಗೆ ದುಡಿದವರೆಲ್ಲರನ್ನೂ ಸನ್ಮಾನ ಮಾಡಬೇಕು. ಪರಿಷತ್ತಿನ ಕಟ್ಟಡ ವಿಸ್ತಾರಗೊಂಡು ಒಂದು ಭವ್ಯವಾದ ರಂಗ ಮಂದಿರ ನಿರ್ಮಾಣವಾಗಬೇಕು. ಒಂದು ರಂಗಮಂದಿರ ಅದರ ಮೇಲೆ ನಾಡಿನ ಸಾಹಿತಿಗಳು ಬೆಂಗಳೂರಿಗೆ ಆಗಮಿಸಿದರೆ ಇಳಿದುಕೊಳ್ಳಲು ಸೌಕರ್ಯಗಳು, ಪರಿಷತ್ತಿನ ಕಚೇರಿಯ ವಿಸ್ತಾರ, ಪುಸ್ತಕಭಂಡಾರದ ವ್ಯವಸ್ಥೆ, ಪ್ರಸಿದ್ಧ ಪ್ರಾಚೀನ ಆಧುನಿಕ ಗ್ರಂಥಗಳ ಪ್ರಕಟನೆ, ಸಾಹಿತ್ಯದ ವ್ಯಾಸಂಗಕ್ಕೆ ಅತ್ಯಗತ್ಯವಾದ ಸಹಾಯಕ ಕೋಶಗಳ ನಿರ್ಮಾಣ ಮುಂತಾಗಿ ಒಂದು ವ್ಯವಸ್ಥಿತ ಯೋಜನೆಯನ್ನು ರೂಪಿಸಬೇಕೆಂದೂ ಯೋಚಿಸಲಾಗಿದೆ. ಪ್ರೈಮರಿ, ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವನ್ನು ಬೋಧೆಮಾಡುವವರಿಗೆ ತಕ್ಕ ಶಿಕ್ಷಕ ತರಬೇತಿ ಶಿಬಿರವನ್ನು ವ್ಯವಸ್ಥಿತವಾಗಿ ನಡೆಸಬೇಕು. ಕನ್ನಡ ಬಾರದ ಸರಕಾರದ ಅಧಿಕಾರಿಗಳಿಗೆ ಕನ್ನಡವನ್ನು ಹೇಳಿಕೊಡುವುದಕ್ಕೆ, ಅವರನ್ನು ಪರೀಕ್ಷಿಸುವುದಕ್ಕೆ ಒಂದು ಏರ್ಪಾಟು ನಡೆಯಬೇಕು. ಆಡಳಿತ ಭಾಷೆಯಾಗಿ ಕನ್ನಡವು ಬೆಳೆಯಬೇಕಾದರೆ ಅಗತ್ಯವಾದ ಸಹಾಯವನ್ನು ಪರಿಷತ್ತು ಒದಗಿಸಬೇಕು. ನಾಡಿನ ಎಲ್ಲ ಸಾಹಿತ್ಯ ಚಟುವಟಿಕೆಗಳ ಒಂದು ಮಾಹಿತಿ ತಿಂಗಳಿಗೊಮ್ಮೆ ಸಾರ್ವಜನಿಕರಿಗೆ ಒದಗುವಂತಾಗಬೇಕು. ಪ್ರತಿ ತಿಂಗಳೂ ಪ್ರಕಟವಾದ ಕನ್ನಡ ಗ್ರಂಥಗಳ ಪ್ರದರ್ಶನಕ್ಕೆ ಶಾಶ್ವತವಾದ ಏರ್ಪಾಟು ನಡೆಯಬೇಕು. ಕನ್ನಡ ಪುಸ್ತಕ ಭಂಡಾರಗಳಿಗೆ ಹೊಸ ಪುಸ್ತಕಗಳನ್ನೆಲ್ಲ ಒದಗಿಸುವ ವ್ಯವಸ್ಥೆಯಾಗಬೇಕು. ಪರಿಷತ್ತಿನ ಅಚ್ಚುಕೂಟ ಬೆಳೆದು ಪರಿಷತ್ತಿಗೆ ಆದಾಯ ತರುವಂತಾಗಬೇಕು. ಪರಿಷತ್ತಿನ ಕನ್ನಡ ವಿದ್ವಾಂಸರನ್ನು ಶಾಶ್ವತವಾಗಿ ನೇಮಿಸಿಕೊಂಡು, ವಿಶ್ವವಿದ್ಯಾನಿಲಯದಂತೆ ವೇತನವನ್ನೂ ನಿಗದಿಮಾಡಿ ವಿದ್ವದ್ವರ್ಧನಕ್ಕೆ ತಳಪಾಯ ಹಾಕಬೇಕು.

ಇದಕ್ಕೆಲ್ಲ ಅಪಾರ ಹಣ ಬೇಕು

ಇದನ್ನು ಒದಗಿಸುವ ಹೊಣೆ ನಮ್ಮ ಸರಕಾರದ್ದು, ನಮ್ಮ ಜನತೆಯದು. ಈ ಕಡೆಗೆ ನಾಡಿನ ವಿದ್ವಾಂಸರ, ವಿದ್ಯಾಭಿಮಾನಿಗಳ, ಉದಾರಿಗಳ, ಸಂಘ ಸಂಸ್ಥೆಗಳ ಗಮನ ಹರಿಯಲಿ ಎಂದು ಪರಿಷತ್ತು ಪ್ರಾರ್ಥಿಸುತ್ತದೆ.

ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳು

ಕನ್ನಡದ ವಿದ್ವತ್ತು ಬೆಳೆಯುವುದಕ್ಕೆ ಈ ಶತಮಾನದ ಆದಿಯಿಂದಲೂ ದುಡಿದು ಯಶಸ್ಸು ಸಂಪಾದಿಸಿದವರಲ್ಲಿ ಡಾ. ಕೃಷ್ಣಶಾಸ್ತ್ರಿಗಳು ಮುಖ್ಯರಾದವರು. ಅವರ ವ್ಯಕ್ತಿತ್ವದಲ್ಲಿ ಬಹಿರಂಗದ ನೈಷ್ಠುರ್ಯ ಅಂತರಂಗದ ಮಾರ್ದವ ಎರಡೂ ಸೇರಿಕೊಂಡಿದ್ದುವು. ನಿಷ್ಕೃಷ್ಟವಾದ ಜ್ಞಾನ, ಸಂಗ್ರಹವಾದರೂ ಸ್ಪಷ್ಟವಾದ ನಿರೂಪಣಕ್ರಮ, ಬಾಳಿನಲ್ಲಿ ಬರವಣಿಗೆಯಲ್ಲಿ ಅಚ್ಚುಕಟ್ಟು, ಸ್ನೇಹದಲ್ಲಿ ಒಂದು ಮಿತಿ, ವಿದ್ಯಾದಾನದಲ್ಲಿ ಅಧಿಕ ಆಸಕ್ತಿ, ಅಧ್ಯಾಪಕರನ್ನು ಸಿದ್ಧಪಡಿಸುವುದರಲ್ಲಿ ಆತ್ಮೀಯವಾದ ಶಿಕ್ಷಣಕ್ರಮ, ಔದಾರ್ಯ, ಧಾರ್ಮಿಕದೃಷ್ಟಿ, – ಇವೆಲ್ಲ ಗುಣಗಳ ರಸಪಾಕವಾಗಿದ್ದರು ಶ್ರೀ ಕೃಷ್ಣಶಾಸ್ತ್ರಿಗಳು. ಅವರ

ಸಾಮೀಪ್ಯದ ಸುಖವನ್ನು ಅನುಭವಿಸಿದವರಿಗೆ, ಅವರ ವಿದ್ವತ್ತಿನ ಪ್ರಯೋಜನ ಯಾವ ರೀತಿಯಲ್ಲಿ ಅಯಾಚಿತವಾಗಿ ಪ್ರಭಾವವನ್ನು ಬೀರುತ್ತಿತ್ತು ಎಂಬುದು ತಿಳಿದಿರುವ ಸಂಗತಿ. ಬರಹಕ್ಕೆ ಯಾವುದನ್ನು ಇಳಿಸಬೇಕಾದರೂ, ಅವರು ಪೂರ್ವ ಸಿದ್ಧತೆಯಲ್ಲಿ ಸಂಪೂರ್ಣವಾದ ಹೊರತು, ಪ್ರಯತ್ನವನ್ನು ಮಾಡುತ್ತಿರಲಿಲ್ಲ. ಸಿದ್ಧತೆಯೆಲ್ಲ ಆದಮೇಲೆ ಬರವಣಿಗೆಗೆ ಕುಳಿತರೆ ಒಂದು ಕಡೆಯಾದರೂ ಅಡೆತಡೆಗಳನ್ನು ಅನುಭವಿಸುತ್ತಿರಲಿಲ್ಲ. ಅಪರ ವಯಸ್ಸಿನಲ್ಲಿಯೂ ಅವರು ಮಧ್ಯಾಹ್ನದ ಹೊತ್ತು ನಿದ್ದೆಮಾಡುತ್ತಿರಲಿಲ್ಲ. 'ವಚನ ಭಾರತ'ವನ್ನು ಬರೆಯುವಾಗಲಂತೂ ೫-೬ ಗಂಟೆಗಳ ಕಾಲ ಒಟ್ಟಿಗೆ ಬರೆಯುತ್ತಿದ್ದರು. ಅವರ ಸಾರಸ್ವತ ತಪಸ್ಸಿನ ಮಾರ್ಗ ಎಂದಿಗೂ ಇತರರಿಗೆ ಮಾರ್ಗದರ್ಶಕವಾಗಿತ್ತು.

ಇಂಥ ಉದಾತ್ತ ವ್ಯಕ್ತಿಯನ್ನು ನಾಡು ಕಳೆದುಕೊಂಡಿದೆ. ಅವರ ಬದುಕು, ಬರಹ, ಎರಡೂ ಕನ್ನಡಿಗರನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಿರಲಿ.

'ಭ್ರಷ್ಟಾಚಾರ' ನಾಟಕ

ಬೆಂಗಳೂರಿನಲ್ಲಿ ಇತ್ತೀಚೆಗೆ 'ಭ್ರಷ್ಟಾಚಾರ' ನಾಟಕವನ್ನು **'ಮಾಸ್ಟರ್ ಹಿರಿಯಣ್ಣಯ್ಯ'** ನವರು ಪ್ರದರ್ಶಿಸುತ್ತಿದ್ದಾರೆ. ಜನ ಪ್ರತಿನಿತ್ಯವೂ ಕಿಕ್ಕಿರಿದು ವೀಕ್ಷಿಸುತ್ತಿದ್ದಾರೆ. ದಿ|| ಹಿರಣ್ಣಯ್ಯನವರನ್ನು ರಂಗದಮೇಲೆ ಕಂಡಿದ್ದವರಿಗೆ ಅವರ ಮಾತಿನ ವೈಖರಿ, ಜನರನ್ನು ನಗಿಸಿ ವಿಚಾರವಂತರನ್ನಾಗಿ ಮಾಡುತ್ತಿದ್ದ ವ್ಯಂಗ್ಯೋಕ್ತಿಯ ಆಳ ಚಿರಪರಿಚಿತವಾಗಿದೆ. ಅವರ ಮಕ್ಕಳಾದ ಶ್ರೀ ನರಸಿಂಹಮೂರ್ತಿಗಳು ಆ ಕಲೆಯನ್ನು ಇನ್ನೂ ಬೆಳೆಸಿದ್ದಾರೆ. ಅನಾಯಾಸವಾಗಿ ಅವರ ಬಾಯಿಂದ ಸರಳವಾದ ಕನ್ನಡ ಹೊರಹೊಮ್ಮುತ್ತದೆ. ವ್ಯಂಗ್ಯದ ಚಾಟಿಯೇಟು ತುಂಬಿದ ನಗೆಯ ಹಿಂದೆ ತೀವ್ರವಾದ ನೋವನ್ನೆಬ್ಬಿಸುತ್ತದೆ. ಸಮಾಜದ ನೀತಿಯನ್ನು ಟೀಕಿಸುವ ಅವರ ಮಾತಿನ ಗಾಢವಾದ ಸತ್ವ ಎಲ್ಲರ ಅರಿವಿಗೆ ಬರುತ್ತದೆ. ನಾಟಕ ಪೂರೈಸಿದ ಮೇಲೆ ನಮ್ಮನ್ನು ನಾವೇ ಪರೀಕ್ಷೆಗೆ ಒಳಗುಮಾಡಿದಂತಾಗುತ್ತದೆ.

ಇದು ಜನತಾ ರಂಗಮಂದಿರದ ಜನತಾ ನಾಟಕ. ಶ್ರೀ ನರಸಿಂಹಮೂರ್ತಿಯವರ ನಟ ನಟಿ ವರ್ಗದವರೆಲ್ಲರೂ ಉಚಿತವಾದ ಅಭಿನಯದಿಂದ ನಾಟಕಕ್ಕೆ ಮೆರಗನ್ನು ತರುತ್ತಿದ್ದಾರೆ. ಈ ನಾಟಕದ ಪ್ರದರ್ಶನದ ಪರಿಣಾಮವಾಗಿ ನಮ್ಮ ಸಮಾಜದ ವ್ಯಕ್ತಿಗಳಲ್ಲಿ ಇರುವ ಸ್ವಾರ್ಥ ತೊಲಗಿ ನಾಡಿನ ಸೌಖ್ಯ ಬೆಳೆಯುವಂತಾಗಲಿ. ನಟ ನರಸಿಂಹಮೂರ್ತಿಯವರ ಅಭಿನಯ ಕಲೆ ಬೆಳೆದು ಬೆಳಗಲಿ.

Statement about ownership and other particulars about

KANNADA NUDI (Kannada)

(to be pablished in the first issue every year after last day of February)

FORM IV

(SEE RULE 8)

1. *Place of Publication*	....	BANGALORE
2. *Periodicity of its Publication*	....	MONTHLY
3. *Printer's Name*	....	B. M. SRIKANTIA PRESS (Kannada Sahitya Parishat)
Nationality	...	INSTITUTION
Address	....	Kannada Sahitya Parishat, Pampamahakavi Road, Chamarajpet, Bangalore-18
4. *Publisher's Name*	....	KANNADA SAHITYA PARISHAT
Nationality	...	RIGISTERED PUBLIC CULTURAL INSTITUTION
Address	...	Pampamahakavi Road, Chamarajpet, BANGALORE-18
5. *Editors' Name*	....	(1) G. Venkatasubbiah (2) Srinivasa Rao Korati (3) N. Rachappa
Nationality	....	INDIAN
Address	....	(1) 58, VII, Block, Jayanagar, Bangalore-11 (2) 22/12 'Anadanilaya', Chamarajpet west Bangalore-18 (3) Hosalli Extension, Magadi Road, Bangalore-23
6. *Registration No.*		R. N. 13252/57
7. *Name and Addresses of individuals who own the newspapers and partners or shareholders holding more than one per-cent of the total capital.*		KANNADA SAHITYA PARISHAT, BANGALORE

I G. Venkatasubbiah, here by declare that the particulars given above are true to the best of my knowledge and belief.

4th March 1968
Bangalore

G. VENKATASUBBIAH
President, Kannada Sahitya Parishat

ಹರಿಹರ ; ಪುಟ : ೧೦+೫೯, ಆಕಾರ : ಕ್ರೌನ್ ಅಷ್ಟದಳ, ಬೆಲೆ : ರೂ, ೧-೦೦, ೧೯೬೭.

ಬಾಲಸಾಹಿತ್ಯ

ಕುಂಬಾರನ ಅದೃಷ್ಟ ; ಲೇ : ಉಮಾದೇವಿ ; ಪ್ರ : ಶಂಕರ್ ಸಾಹಿತ್ಯ ಮಾಲೆ, ಪಟಾಡಿ ಹೌಸ್, ಹೊಸದೆಹಲಿ ; ಪುಟ : ४८, ಆಕಾರ : ಕ್ರೌನ್ ಅಷ್ಟದಳ, ಬೆಲೆ : ರೂ. ೦-೭೫, ೧೯೬೭.

ಸೂರ್ಯಕಾಂತಿ ; ಲೇ : ಉಮಾದೇವಿ ಶಂಕರ್‌ರಾವ್ ; ಪ್ರ : ಶಂಕರ್ ಸಾಹಿತ್ಯ ಮಾಲೆ, ಪಟಾಡಿ ಹೌಸ್, ಹೊಸ ದೆಹಲಿ ; ಪುಟ : ೩೮, ಆಕಾರ: ಕ್ರೌನ್ ಅಷ್ಟದಳ, ಬೆಲೆ : ರೂ. ೦-೩೫, ೧೯೬೭.

ಇತರೆ

ಉಪನಿಷದ್-ದರ್ಶನ ; (ಭಾಗ-೨); ಲೇ : ಪಾಂಡು ರಂಗಿ, ಕೆ. ಟಿ ; ಪ್ರ : ಬುಲಿಬಿಂದು ಮಾಧವ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ ; ಪುಟ : ೧೫೨, ಆಕಾರ : ಕ್ರೌನ್ ಅಷ್ಟದಳ, ಬೆಲೆ : ರೂ. ೨-೫೦, ೧೯೬೭.

ಮುಕುಂದಮಾಲಾ ; ಅನು : ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ; ಪ್ರ : ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ ; ಪುಟ : ४+೨೩ ; ಆಕಾರ : ಕ್ರೌನ್ ಅಷ್ಟದಳ, ಬೆಲೆ : ೧೯೬೭.

ಕನ್ನಡ ಸಂಸ್ಕೃತಿ ; ಲೇ : ಮರಿಯಪ್ಪ ಭಟ್ಟರು ; ಪ್ರ : ಪಿ. ಎಸ್. ಭಟ್, ಮ್ಯಾನೇಜಿಂಗ್ ಡೈರೆಕ್ಟರ್, ಸಹಕಾರೀ ಪ್ರಕಾಶನಮಂದಿರ ನಿಯಮಿತ, ಚಾಮರಾಜಪೇಟೆ, ಬೆಂಗ ಳೂರು-೧೮ ; ಪುಟ: ೧೬+೩४೮, ಬೆಲೆ : ರೂ. ೮-೦೦, ೧೯೬೭.

ವಾಙ್ಮಯ ತಪಸ್ಸು ; ಲೇ : ಕಡೆಂಗೋಡ್ಲು ಶಂಕರಭಟ್ಟ; ಪ್ರ : ಪಿ. ಎಸ್. ಭಟ್, ಮ್ಯಾನೇಜಿಂಗ್ ಡೈರೆಕ್ಟರ್, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಚಾಮರಾಜಪೇಟೆ, ಬೆಂಗಳೂರು-೧೮ ; ಪುಟ : ೨೭೭, ಬೆಲೆ : ರೂ. ೬, ೧೯೬೭.

ಪ್ರಭಾತ ಕಾಲ (ಮಕ್ಕಳ ಗೀತೆಗಳು) ಲೆ : ನಾರಾಯಣ ರಾವ್ ಶಿಂಧೆ ; ಪ್ರ : ಗೌರಿಶ್ರೀ ಪ್ರಕಾಶನ, ಬೆಂಗ ಳೂರು-೨೭ ; ಪುಟ : ೨+೨+೩೨, ಬೆಲೆ : ರೂ. ೦-೭೫, ೧೯೬೮.

ಗೀತೆಯ ಭೂಮಿಕೆ ; ಲೇ : ಶ್ರೀ ಅರವಿಂದರು ; ಅನು : ಲಿಂಗಣ್ಣ, ಸಿ. ಪಿ. ಅರವಿಂದ ಗ್ರಂಥಾಲಯ ಚಡಚಣ, ಪುಟ : ೭+೯೬, ಆಕಾರ : ಅಷ್ಟದಳ, ಬೆಲೆ : ರೂ. ೧-೫೦. ೧೯೬೭.

ಬಸವ ಸಾಹಿತ್ಯ ದರ್ಪಣ ; (ಭಾಗ ೧) ಲೇ : ಗುಂಜಾಳ, ಎಸ್. ಆರ್ ; ಪ್ರ : ಅಧ್ಯಕ್ಷರು ಬಸವ ಸಮಿತಿ, ಬೆಂಗ ಳೂರು ; ಪುಟ : ೨೨+४೧೮+೮, ಬೆಲೆ : ರೂ. ೮-೦೦, ೧೯೬೭.

ಜೀವತರಂಗ ; ಬಾಳೇಶ ಲಕ್ಷೆಟ್ಟಿ ; ಪ್ರ : ಉದಯ ಪ್ರಕಾಶನ, ಗೋಕಾಕ ; ಪುಟ : ೭+೭+೫೯, ಆಕಾರ : ಕ್ರೌನ್ ಅಷ್ಟದಳ, ಬೆಲೆ : ರೂ. ೧-೨೫, ೧೯೬೭.

English-Books :

Towards a Better Life ; Author : publication Division, Ministry of Information and Broad casting, Government of India New Delhi 6 ; Pages : 299, Price : Rs. 2·00, 1967.

Modern Kannada Fiction; (A critical Anthology); Ed-by Krishna Murthy, M. G ; the Department of Indian Studies, the University of Wisdom Madison 1967. Pages : xxv + 225, Price : (£ 5/) Rs. 37-50, 1965.

Disceptive catalogue of Manuscripts in the Kannada Research Institute Dharwar vol VI Pub : Karanataka Research Institnte, Karanataka University Dharwar 1965. Pages : 166, Price : Rs. 3 00.

Summaries of Inscriptions (1943 - 44 to 1949 - 50) Kannada Research Institute 1966. Pages 91, Price : 3-50.

Local Taxation in urban areas ; Author : Nanjappa, D. M. and Nadakarni, M. V. Pub : S. S. Wodeyar, Registrar, Karnataka University, Dharwar ; Pages : 63, Price : Rs. 3-00, 1967.

Reg. No. B. G. 4—March 1968

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಸಂಪಾದಕ ಮಂಡಲಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಕನ್ನಡ ನುಡಿ

ದಿವಂಗತ ಎ. ಆರ್. ಕೃ.

ವಿಶೇಷ ಸಂಚಿಕೆ

ಏಪ್ರಿಲ್–ಮೇ ೧೯೬೮

ಸಂಪುಟ ೩೧

ಸಂಚಿಕೆ ೪–೫

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ,

ಕನ್ನಡ ನುಡಿ

‘ಕನ್ನಡ ನುಡಿ’ ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಏಪ್ರಿಲ್–ಮೇ ೧೯೬೮
ಸಂಪುಟ : ೩೧
ಸಂಚಿಕೆ : ೪–೫

ಈ ಸಂಚಿಕೆಯಲ್ಲಿ . . .

ಶ್ರದ್ಧಾಂಜಲಿ

ಜನಮನಂ ವಿಕಸಿಸುಗೆ ಬುದ್ಧಿಯುಜ್ವಲಿಸುಗೆ-
ಲ್ಲರೊಳೊಲವು ಮೂಡಿ ನಲ್ಗೆಯ್ಮೆಗಾಗಿಯೆ ಕೂಡಿ
ನಾಡ ಕಲೆ ವಿದ್ಯೆ ಸಂಸ್ಕೃತಿಗಾನಮಂ ಹಾಡಿ
ಸಾಹಿತ್ಯಮಧುರಸ ಪಾತ್ರರಕ್ಷಯರಾಗಿ
ಶುಭಶೌರ್ಯ ಸೌಖ್ಯಸಂಪತ್ತುಮುಂತಪ್ಪಗುಣ
ರಾಶಿ ಜನರಾಶಿಯಲಿ ಸಂವರ್ಧಿಸಲಿ ಎಂಬ
ನಲ್ಬರಕೆಗೇಂ ಕೊರತೆ ? ನುಡಿದಂತೆ ನಡೆವುದೇ ?
ನಡೆವುದನೆ ನಡೆದದಂ ನುಡಿವುದೆಂಬುದನೆ ತೋ-
ರಿದ ಮುನೀಷಂ ಪೆರ್ಮೆಗಿಂಬಪ್ಪನಿರ್ದಪಂ.

ಸಜ್ಜನಮನೋಲ್ಲಾಸಿ ಭಾಷಾವಿಕಾಸಿ ಚಿರ
ಸಾಹಿತ್ಯಸುಶ್ವಾಸಿ ವಿಶ್ವಾಸಿ ವಿಶ್ವವಿ-
ದ್ಯಾಲಯಾಧ್ಯಾಪಕಮತಲ್ಲಿಕಾ ಖ್ಯಾತನುಂ
ಲೇಖಕಂ ಶೋಧಕಂ ಸತ್ಕೃತಿವಿಮರ್ಶಕಂ
ಮೆರೆವ ಸಾಹಿತ್ಯ ಪರಿಷತ್ಪತ್ರಕರ್ತಂ ಪ್ರ-
ಬುದ್ಧ ಕರ್ಣಾಟಕದ ಜನಕಂ ಚಿರಖ್ಯಾತ-
ನಮರ ಕೃತಿವರ್ಗಮಂ ಕನ್ನಡದ ತಾಯ್ಗಿತ್ತು
ಅಮರಗತಿವಡೆದೊಡಂ ಭಾವಗೋಚರನಪ್ಪ
ದಾರಿತೋರುತ್ತಿರ್ಪ ಕೃಷ್ಣಶಾಸ್ತ್ರಿಗಳಿಗಿದು
ಕನ್ನಡಿಗರೊಳ ಉಸಿರಿನಂತೆ ಚಲಿಸುವರಿಗಿದು
ನಮನಕೃತಿ ನೆನೆವ ಕೃತಿಯಕ್ಕೆ ತುಭ್ಯಂ ನಮೋ.

ಟಿ. ಕೇಶವ ಭಟ್ಟ

ದಿ॥ ಎ. ಆರ್. ಕೃ. ಅವರ ಕೆಲವು ಅಪ್ರಕಟಿತ ಪತ್ರಗಳು

... This is very badly edited and printed. It should not be relied upon for future ಪ್ರಯೋಗs. A ಪ್ರಯೋಗ from this is given under ಅಕ್ಕೈಬಟ್ಟು. This should be carefully scrutinized with the help of Mss, and other ಪ್ರಯೋಗs containing the word. A single ಪ್ರಯೋಗ should always be looked upon with suspicion.

1-4-1957 A. R. K.

★

ಅಕ್ಕಸಗಾರ is found with ರೆಫ in the draft; But it may remain as ಗಾಱ in the final form. I find ಅಕ್ಕಸಗಾಱಳು was omitted at the meeting. So I have given personal instructions to Mr—to omit it. Please see that the column headings are correct before the two pages are printed.

Thanks

A. R. K.

★

It is possible that ಆಯಕ is one word=ಅಕೆ [Telugu scholars drive ಅಕೆ from ಆ+ಅಕ] we must go through whole of ಮೋಹನ ತರಂಗಿಣಿ carefully and collect all the instances of ಆಯಕ and ಅಕ್ಕ. If ಆಯಕ occurs elsewhere they must also be noted. Probably we can get some instances of the kind. If we verify all the ಪ್ರಯೋಗs of ಅಕ and ಅಕ್ಕ.

7-12-56 A. R. K.

[ಈ ಪತ್ರಗಳು ದಿ॥ ಎ. ಆರ್. ಕೃಷ್ಣಶಾಸ್ತ್ರಿಗಳು ಕನ್ನಡ-ಕನ್ನಡ ನಿಘಂಟಿನ ಗೌ. ಸಂಪಾದಕರಾಗಿದ್ದಾಗ ಬರೆದವು. ಶ್ರೀಯುತರು ನಿಘಂಟಿನ ಬಗೆಗೆ ತಳೆದ ಆಸ್ಥೆ, ತಮ್ಮ ಕಾರ್ಯದಲ್ಲಿ ತೋರಿಸಿದ ಶ್ರದ್ಧೆ ಹಾಗೂ ಅಚ್ಚುಕಟ್ಟುತನಗಳು ಇಲ್ಲಿ ಎದ್ದು ಕಾಣುತ್ತವೆ. ಅವರ ನಿಖರವಾದ ಪಾಂಡಿತ್ಯ, ವಿಮರ್ಶನ ಶಕ್ತಿಗಳಿಗೆ ಇವು ಸಾಕ್ಷಿಯಾಗಿವೆ. ಇವುಗಳನ್ನು ಪ್ರಕಟಿಸಲು ಕೊಟ್ಟ ಶ್ರೀ ಎನ್. ಬಸವಾರಾಧ್ಯ, ಎಂ.ಎ., ಅವರಿಗೆ ಕೃತಜ್ಞತೆಗಳು—ಸಂ.]

ಕೊನೆಯ ಸಂಭಾಷಣೆ: ಡಿ. ವಿ. ಜಿ.

ಪ್ರೊ. ಜಿ. ವೆಂಕಟಸುಬ್ಬಯ್ಯನವರೂ, ರಾಜಾರಾಯರೂ ಕೃಪೆಮಾಡಿ ಬಂದಿದ್ದ ದಿನದಿಂದ ಎರಡು ಮೂರು ದಿನಗಳ ತರುವಾಯ ಶ್ರೀಮಾನ್ ಕೃಷ್ಣಶಾಸ್ತ್ರಿಗಳು ನನ್ನ ಮನೆಗೆ ಬಂದಿದ್ದರು. ಆಗಿನ ಮಾತುಕಥೆಯಲ್ಲಿ ಒಂದು ಭಾಗ ಹೀಗೆ :

ಡಿ. ವಿ. ಜಿ : ಏನು, ಉರಿಬಿಸಿಲಿನಲ್ಲಿ ಬಂದುಬಿಟ್ಟಿರಲ್ಲಾ ?

ಶಾಸ್ತ್ರೀ : ಪೇಪರಿನಲ್ಲಿ ಈಗತಾನೇ ಓದಿದೆ. ನಿಮ್ಮನ್ನು ನೋಡಬೇಕು ಎನ್ನಿಸಿತು, ಬಂದೆ.

ಡಿ. ವಿ. ಜಿ : ಸಂತೋಷ. ಯಾವ ಕಾರಣದಿಂದಲಾದರೂ ಬಂದಿರಲ್ಲಾ. ನಾನಂತೂ ಬಂದು ನಿಮ್ಮನ್ನು ನೋಡುವ ಹಾಗಿಲ್ಲ. ಆದರೆ, 'ನೋಡಬೇಕು' ಎಂದುಕೊಳ್ಳುತ್ತಿದ್ದೆ.

ಶಾಸ್ತ್ರೀ : ನಿಮಗೆ ಒಂದು ಲಕ್ಷರೂಪಾಯಿ ಬರಬೇಕಾಗಿತ್ತು. ಇದು ಏನು ಮಹಾ ?

ಡಿ. ವಿ. ಜಿ : ಅದು ಹೇಗೆ ಒಂದು ಲಕ್ಷ ಎಂದು ನಿಗದಿ ಮಾಡಿದಿರಿ ?

ಶಾಸ್ತ್ರೀ : ಮರೆತು ಹೋಯಿತೆ ? ನೀವು ಹೇಳಿದ್ದು ? ಗೋ|| ಸಾ|| ವಿ|| ಸಂಸ್ಥೆ ಪ್ರಾರಂಭ ಮಾಡುವ ಮುಂಚೆ ನಾವು ಮಾತನಾಡಿಕೊಳ್ಳುತ್ತಿದ್ದಾಗ ಈ ಕಾರ್ಯಕ್ಕೆ ಒಂದು ಲಕ್ಷ ರೂಪಾಯಿ ಬೇಕು ಎಂದು ನೀವು ಹೇಳಲಿಲ್ಲವೆ ?

ಡಿ. ವಿ. ಜಿ : ಹೌದು. ಆಗಿನ ಲೆಕ್ಕಾಚಾರದ ಪ್ರಕಾರ ಒಂದು ಲಕ್ಷವಾಗಿದ್ದದ್ದು ಈ ಹೊತ್ತು ಐದು ಲಕ್ಷವಾಗಿದೆ. ಅಷ್ಟು ಬೇಕು, ಈಗ.

ಶಾಸ್ತ್ರೀ : ಒಂದು ಲಕ್ಷವನ್ನು ಕೊಡಲಾರದ ದೇಶ ಐದು ಲಕ್ಷವನ್ನು ಕೊಟ್ಟೀತೆಂದು ಹೇಗೆ ಭರವಸೆ ಬರುತ್ತದೆ ?

ಡಿ. ವಿ. ಜಿ : ಏನೋ ಆಶೆಯನ್ನಿಟ್ಟುಕೊಂಡೇ ನಾವು ಬದುಕಬೇಕಾಗಿದೆ. ಕತ್ತೆಯ ಕಣ್ಣ ಮುಂದೆ ಹಿಡಿದ ಹುಲ್ಲಿನ ಕುಚ್ಚನ್ನು ನೋಡಿಕೊಂಡು ಅದು ಮುಂದೆ ನಡೆದಂತೆ.

ದಿನಾಂಕ ೨-೨-೧೯೬೮

ಒಂದು ಅಪ್ರಕಟಿತ ಲೇಖನ

ಗ್ರಂಥಪ್ರಕಾಶನ – ಓದುಗರ ದೃಷ್ಟಿಯಿಂದ

ದಿ|| ಎ. ಆರ್. ಕೃಷ್ಣಶಾಸ್ತ್ರೀ

ಆದಷ್ಟು ಅಗ್ಗದ ಬೆಲೆಯಲ್ಲಿ ಆದಷ್ಟು ಉತ್ತಮವಾದ ಸರಕು ಸುಲಭವಾಗಿ ದೊರೆಯಲಿ ಎಂದು ಆಸೆ ಪಡುವುದು ಮನುಷ್ಯನ ಸ್ವಭಾವ. ಆದಷ್ಟು ಬೇಗ, ಆದಷ್ಟು ಹೆಚ್ಚಾಗಿ ಲಾಭ ಸಂಪಾದಿಸಬೇಕೆಂಬುದು ವ್ಯಾಪಾರಿಗಳ ಉದ್ದೇಶ. ವ್ಯಾಪಾರಿಗಳಿಗೂ ಗಿರಾಕಿಗಳಿಗೂ ಈ ಜಗ್ಗಾಟ ಇದ್ದೇ ಇರುತ್ತದೆ. ಪುಸ್ತಕ ಪ್ರಪಂಚವು ಇದಕ್ಕೆ ಹೊರತಲ್ಲ.

ವ್ಯಾಪಾರವೆಂದ ಮೇಲೆ, ಅಂಗಡಿಯಲ್ಲಿ ವ್ಯಾಪಾರವಾಗುವ ಸರಕು ಇರಬೇಕಾಗುತ್ತದೆ. ಅದನ್ನು ಆಕರ್ಷಕವಾಗಿ ಇಡುತ್ತಾರೆ; ಅದಕ್ಕೆ ಬೆರಕೆ ಹಾಕುತ್ತಾರೆ,—ಲಾಭದ ದೃಷ್ಟಿಯಿಂದ. ಪಠ್ಯ ಪುಸ್ತಕಗಳು ಅಕ್ಕಿ ಬೇಳೆಯಂತೆ—ಅವು ಖರ್ಚಾಗಿಯೇ ಆಗಬೇಕು; ಎಷ್ಟೇ ಬೆಲೆ ಏರಲಿ, ಖರ್ಚು ಆಗುತ್ತವೆ. ಆದ್ದರಿಂದ ಪಠ್ಯ ಪುಸ್ತಕ ಪ್ರಕಾಶನದಲ್ಲಿ, ಪ್ರಕಾಶಕ ವ್ಯಾಪಾರಿ ಗ್ರಂಥಕರ್ತ ಎಲ್ಲರಿಗೂ ಲಾಭವಿದೆ ಎಂಬ ಭಾವನೆ ಇದೆ—ಇದು ಸ್ವಲ್ಪಮಟ್ಟಿಗೆ ನಿಜ. ಹಿಂದೆ ಈ ಕೆಲಸವನ್ನು ಸರ್ಕಾರವೇ ಮಾಡುತ್ತಿತ್ತು. ಈಗ ಖಾಸಗಿಯವರೂ ಮಾಡುತ್ತಿದ್ದಾರೆ. ಆದರಿಂದ ನಾನಾ ವಿಧವಾದ ಅಸಮಾಧಾನಗಳಿಗೆ ಕಾರಣವಾಗಿದೆ. ಅಸಮಾಧಾನ ಈ ಕಾಲಕ್ಕೇ ಎಲ್ಲೆಲ್ಲೂ ಬಂದ ಒಂದು ಲಕ್ಷಣವೆಂದು ತೋರುತ್ತದೆ.

ಸರ್ಕಾರ ಪ್ರಕಾಶನ ಪಡಿಸಿದರೆ ಪುಸ್ತಕದ ಬೆಲೆ ಅಗ್ಗವಾಗಿರುತ್ತಿತ್ತು. ಈಗ ಅದೂ ಹೆಚ್ಚಾಗಿದೆ. ಇಂಗ್ಲಿಷ್ ಕನ್ನಡ ನಿಘಂಟು, ಜೈಮಿನಿ ಭಾರತ, ಕುಮಾರವ್ಯಾಸ ಭಾರತ—ಇವುಗಳನ್ನು ಸರ್ಕಾರವು ಅಗ್ಗದ ಬೆಲೆಗೆ ಮಾರಿದರೆ, ಸಿಕ್ಕಿದವರಿಗೆ ಸೀರುಂಡೆಯಾಯಿತು. ವಿಶ್ವವಿದ್ಯಾನಿಲಯದವರು ಹನ್ನೆರಡಾಣೆಗೆ ಮಾರುತ್ತಿದ್ದ ಪುಸ್ತಕಗಳ ಬೆಲೆ ಏರಿತು. ಇದರಲ್ಲಿ, ಸರ್ಕಾರ ತಾನೇ ಏಕೆ ನಷ್ಟಮಾಡಿಕೊಳ್ಳಬೇಕು ? ಅಥವಾ ಲಾಭ ಮಾಡಿಕೊಳ್ಳಬಾರದು ?—ಎಂಬ ಭಾವನೆ ಇದೆ. ಇದರಿಂದ ಆಗುವ ನಷ್ಟ ನಷ್ಟವಲ್ಲ, ಬರುವ ಲಾಭ ಲಾಭವಲ್ಲ. ಈಗಲೂ ಅವರು ಪ್ರಕಾಶಪಡಿಸುವ ಮೂರಾಣೆ-ನಾಲ್ಕಾಣೆಯ ಪುಸ್ತಕಗಳು ತುಂಬ ಜನಪ್ರಿಯವಾಗಿವೆ, ಅವುಗಳ ಸಾವಿರಾರು ಪ್ರತಿಗಳು ಖರ್ಚಾಗುತ್ತವೆ. ಅವು ಅಗ್ಗದ ಬೆಲೆಗೆ ಮುಗ್ಗಿದ ಜೋಳ ಎನ್ನುವಂತಿಲ್ಲ. ಅವು ಅಗ್ಗದ ಬೆಲೆಗೆ ಸುಗ್ಗಿಯ ಜೋಳ. ವಿದ್ವಾಂಸರು ಮಾತ್ರ ಅದರಲ್ಲಿ ಬರೆಯುತ್ತಾರೆ. ಇವು ಹೆಚ್ಚಾಗಿ ಖರ್ಚಾದರೆ, ಅದು ಲೇಖಕರ ಯೋಗ್ಯತೆಯ ಜೊತೆಗೆ ನಮ್ಮ ಜನರ ಆರ್ಥಿಕ ಸ್ಥಿತಿಯನ್ನೂ ಸೂಚಿಸುತ್ತದೆ ಎಂದೂ ಇಟ್ಟುಕೊಳ್ಳಬಹುದು.

ವಿದ್ಯೆ ಹರಡಿದ ಮೇಲೆ, ಉದ್ಯೋಗ ಕಡಮೆಯಾದ ಮೇಲೆ, ಹೊತ್ತು ಹೋಗುವುದಕ್ಕೆಂದು ತಾವಾಗಿಯೆ ಓದಿಕೊಳ್ಳುವ ಅಭ್ಯಾಸ ಹೆಚ್ಚಾಯಿತು—ಅದರಲ್ಲಿಯೂ ಹೆಂಗಸರಲ್ಲಿ. ರಾಮಾಯಣ, ಭಾರತಗಳು ದೊರೆಯದಾದವು, ರುಚಿಸದಾದವು. ಈ ಸಮಯದಲ್ಲಿ ಕಥೆ ಕಾದಂಬರಿಗಳು ಬಂದುವು. ಈಗ ಕೆಲವು ವರ್ಷಗಳ ಕೆಳಗೆ ಇಂಗ್ಲಿಷ್ ಅಗ್ಗದ ಕಾಂಬರಿಗಳನ್ನು ಅನುಸರಿಸಿ ಕನ್ನಡದಲ್ಲಿಯೂ ಒಂದೂವರೆ ರೂಪಾಯಿನ ಮಾಲೆ ಹುಟ್ಟಿಕೊಂಡಿತು. ಹೊರಗಿನ ಬಣ್ಣದ ಚಿತ್ರ ಇದರ ಒಂದು ಮುಖ್ಯ ಲಕ್ಷಣ—ಪುಸ್ತಕಕ್ಕೆಲ್ಲಾ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಚಿತ್ರದ ರಟ್ಟಿಗೇ ಆಗುತ್ತದೆಂದು ತೋರುತ್ತದೆ. ಅದಿಲ್ಲದಿದ್ದರೆ ಬಿಮ್ಮೆನ್ನುತ್ತದೆ—ಬರಿ ಕಿವಿ, ಬರಿ ಕೈಗಳಂತೆ. ಈ ಮಾಲೆಗಳಲ್ಲಿ ಬೇರೆ ಬೇರೆ ಜಾತಿಯ ಗ್ರಂಥಗಳು—ಪದ್ಯ, ಗದ್ಯ, ಪ್ರಬಂಧ, ನಾಟಕ ಇತ್ಯಾದಿ—ಬಂದರೂ ಕಥೆ ಕಾದಂಬರಿಗಳೇ ಹೆಚ್ಚು. ಇವನ್ನು ಬರೆಯುವುದೂ ಸುಲಭ, ಓದುವುದೂ ಸುಲಭ. ಅಭ್ಯಾಸವಾದರೆ ದಿನಕ್ಕೆ ಒಂದು ಪುಸ್ತಕದಂತೆ ಓದಿ ಮುಗಿಸಬಹುದು — ಕೆಲವು ವೇಳೆ ಒಂದೊಂದು ಪುಟಕ್ಕೆ ಹತ್ತಾರು ಪಂಕ್ತಿಗಳು ಮಾತ್ರ ವಿರಳ ವಿರಳವಾಗಿ ಅಚ್ಚಾಗಿರುವುದೂ ಒಂದು ಕಾರಣ. ಪ್ರಣಯ ಕಥೆಗಳೆಂದರೆ ಅಲ್ಲಷ್ಟು ಇಲ್ಲಷ್ಟು ಓದಿ ಕೊನೆಯ ಕೆಲವು ಪುಟಗಳನ್ನು ಓದಿದರೆ ಸಾಕು—ಬಹುಮಟ್ಟಿಗೆ ಒಂದರ ಹಾಗೆ ಒಂದು ಇರುತ್ತದೆ.

ಹಿಂದೆ ನಾಟಕ ಬರೆದರೆ ಅದರಲ್ಲಿ ಶೃಂಗಾರವೋ ವೀರವೋ ಪ್ರಧಾನವಾಗಿರಬೇಕೆಂಬ ನಿಯಮವಿತ್ತು. ಈಗಲೂ ಒಟ್ಟಿನ ಮೇಲೆ, ಕಾದಂಬರಿಯಲ್ಲಿ ಅಷ್ಟೇ. ಅವುಗಳಲ್ಲಿಯೂ ಮೊದಲು ಶೃಂಗಾರ—ಅದರ ನಾನಾ ವೇಷಗಳಲ್ಲಿ. ಅದೇ ನಮಗೆ—ಬರೆಯುವವರಿಗೆ, ಓದುವವರಿಗೆ—ಅರ್ಥವಾಗುವುದು. ಅದಕ್ಕೇ ಅವೇ ಹೆಚ್ಚು. ಶೃಂಗಾರ ಹಣೆಗೆ ಕುಂಕುಮವಿಟ್ಟುಕೊಂಡ ಹಾಗೆ—ಅದು ದೊಡ್ಡದಾದರೆ ಆಡಂಬರವಾಗುವುದು. ಮಾರಮ್ಮನಂತಾಗುವುದು, ಸಣ್ಣದಾದರೆ

ಸೋಕಿಯಾಗುವುದು. ಇಲ್ಲದೆಯೇ ಹೋದರೆ ಹಣೆ ಬೋಳಾಗುವುದು. ಇದರ ಮೇಲೆ ಬೇಕಾದಷ್ಟು ಚರ್ಚೆಯಾಗಿದೆ; ಆಕ್ಷೇಪಣೆ ಸಮಾಧಾನಗಳು ಬಂದಿವೆ. ಶೃಂಗಾರದಲ್ಲಿ ಒಂದು ಬಗೆಯದು ಈರುಳ್ಳಿಯ ಹಾಗೆ—ವಾಸನೆ ಕಟು, ಸುಲಿಯುವ ಹಾಗೆ ಕಣ್ಣಿನಲ್ಲಿ ನೀರು; ಸರಿಯಾಗಿ ಬೇಯದಿದ್ದರೆ ದುರ್ವಾಸನೆ, ಬೆಂದರೇನೋ ರುಚಿ; ತುಂಬ ನೇಮದವರನ್ನು ಬಿಟ್ಟು ಮಿಕ್ಕವರೆಲ್ಲರೂ ಯಥೇಚ್ಛವಾಗಿ ಅದರ ಹೋಳು ಹಾಕಿಸಿಕೊಂಡು ತಿನ್ನುತ್ತಾರೆ; ಊಟವಾದ ಮೇಲೆ ಹೊಟ್ಟೆ ಭಾರವಾಗಿ ಮತ್ತು ಒಂದು ನಿದ್ರೆ ಹೊಡೆಯುತ್ತಾರೆ. ಮಾಡುವ ಹಾಗೆ ಮಾಡಿದರೆ ಈರುಳ್ಳಿ ಅಡಿಗೆಗೆ ರುಚಿ ಇಲ್ಲವೆನ್ನುವ ಹಾಗಿಲ್ಲ—ಅದನ್ನು ಎಲ್ಲಾ ತಿಂಡಿಗೂ ಹಾಕಬಹುದು. ಕೆಲವರಿಗೆ ಅದು ಹಾಕದೆ ಅಡಿಗೆ ಮಾಡಿದರೆ ರುಚಿಸುವುದೇ ಇಲ್ಲ. ಹಾಗೇ ಕೆಲವರಿಗೆ—ಬರೆಯುವವರಿಗೆ ಓದುವವರಿಗೆ—ಅದು ಬೇಕೇ ಬೇಕು; ಪ್ರಕಾಶಕರು ಗಿರಾಕಿ ಇರುವ ಸರಕನ್ನು ಇಡುತ್ತಾರೆ; ಅಂಥದನ್ನು ಕೇಳುತ್ತಾರಲ್ಲ ಎಂದು ತಯಾರು ಮಾಡುವವರು ತಯಾರಿಸುತ್ತಾರೆ.

ಇಂಥ ಪುಸ್ತಕಗಳನ್ನು ಓದಬಾರದು, ಬರೆಯಬಾರದು ಎಂದು ಎಲ್ಲಾ ದೇಶಗಳಲ್ಲಿಯೂ ಹೇಳುತ್ತಾರೆ—ಆದರೆ, ಓದುತ್ತಾರೆ, ಬರೆಯುತ್ತಾರೆ. ನಿಷೇಧ ಮಾಡಿದರೂ ನಡೆಯುವುದಿಲ್ಲ. ಶೃಂಗಾರದೃಷ್ಟಿಯಿಂದ ಆಕ್ಷೇಪಣೀಯವೆನ್ನಬಹುದಾದ ಎಷ್ಟೋ ಇಂಗ್ಲಿಷ್ ಕಥೆ ಕಾದಂಬರಿಗಳು ಜನಪ್ರಿಯವಾಗಿವೆ, ನಾನಾ ಬಗೆಯ ಮುದ್ರಣಗಳಲ್ಲಿವೆ. ಇಂದಿನ ಜನಪ್ರಿಯರಾದ, ಗಣ್ಯರಾದ ನಮ್ಮ ದೇಶದ ಗ್ರಂಥಕರ್ತರಲ್ಲಿಯೂ ಇಂಥವು ಕಾಣದೆ ಇಲ್ಲ. 'ಸಂನ್ಯಾಸಿಯ ಒಂದು ಹಳೆಯ ಕಥೆ'ಯಲ್ಲಿಯೂ ಒಬ್ಬ ಹೆಂಗಸು ಬರುತ್ತಾಳೆ—ಅವನು ಮೋಹಪಡುತ್ತಾನೆ; ಆದರೆ ಕೊನೆಗೆ ಉದ್ಧಾರವಾಗುತ್ತಾನೆ. ಠಾಕೂರರ ಅಂಥದೇ ಒಂದು ಕಥೆಯಲ್ಲಿ ಸಂನ್ಯಾಸಿಯು ಪತಿತನಾಗಿ, ಆದರೆ ಪಶ್ಚಾತ್ತಾಪಪಟ್ಟು, ತನ್ನನ್ನು ನಂಬಿದವಳಿಗೆ 'ಕುಂಭೀಪಾಕ'ವನ್ನು ತೋರಿಸುತ್ತಾನೆ. ಲೇಖಕನಲ್ಲಿರಬೇಕಾದದ್ದು ಅನುಭವ, ಪ್ರಾಮಾಣಿಕತೆ. ವಿಧವೆ ಸಧವೆ-ಸೂಳೆ ಗರತಿ ಇವರನ್ನು ತಂದ ಮಾತ್ರಕ್ಕೇ ಕಥೆ ಅಶ್ಲೀಲವಾಗುವುದಿಲ್ಲ. ಕೋರ್ಟು ಕಛೇರಿ ಮಠಗಳು ಇದನ್ನು ತೀರ್ಮಾನಿಸಲಾರವು. ಒಬ್ಬರು ಹೌದೆಂದದ್ದನ್ನು ಇನ್ನೊಬ್ಬರು ಅಲ್ಲವೆನ್ನುತ್ತಾರೆ. ಕೆಲವು ನಿಜವಾಗಿಯೂ ಅಸಹ್ಯವಾದ ಕಥೆಗಳಿರುತ್ತವೆ—ಒಂದು ವಾರ ಪತ್ರಿಕೆಯಲ್ಲಿ ಈಚೆಗೆ ಪ್ರಕಟವಾದ ಇಂಥ ಜೈನೀ ಕಥೆಗಳು ಒಬ್ಬ ಎಂ.ಎ. ಪದವೀಧರರೇ ಬರೆಯುತ್ತಿದ್ದದ್ದು ಇದಕ್ಕೆ ಉದಾಹರಣೆ. ಉತ್ತಮ ಸಾಹಿತ್ಯ ಸಂಸ್ಕಾರ ಉಳ್ಳವರು ಪ್ರಾಮಾಣಿಕವಾಗಿ, ಅನುಭವಕ್ಕೆ ಬಂದದ್ದನ್ನು ಬರೆಯಬಲ್ಲದ್ದನ್ನು, ಬರಿಯ ದುಡ್ಡಿಗಲ್ಲ, ಬರೆದು ಪೆಟ್ಟಿಯಲ್ಲಿಡಬೇಕು; ಪ್ರಕಾಶಕರು ಪ್ರಕಾಶಪಡಿಸಬೇಕು. ಸ್ವಾತಂತ್ರ್ಯವಿಲ್ಲದಿದ್ದರೆ ಸಾಹಿತ್ಯದ ಬೆಳವಣಿಗೆ ಕುಗ್ಗುತ್ತದೆ. ಓದುಗರ ಮನಸ್ಸು ಸಂಕುಚಿತವಾಗುತ್ತದೆ. ಚಾಪಲ್ಯ ಸ್ವಭಾವದ ಕೆಲವರಿಗೆ ಶಿಥಿಲವಾದ ಬರವಣಿಗೆಯ ಮೇಲೆ ಮೋಹ; ಆದರೆ ಬರೆಯಲು ಧೈರ್ಯ ಸಾಲದು; ಅವರ ಬರವಣಿಗೆ ಸಿಹಿ ಸಾಲದ ಸಪ್ಪೆ ಪಾಯಸ. ಸರ್ ವಾಲ್ಟರ್ ರ್ಯಾಲೆಗೆ ಎಲಿಜಬೆತ್ ರಾಣಿಯ ಮೇಲೆ ಮೋಹ, ಆದರೆ ಅದನ್ನು ಹೇಳಿಕೊಳ್ಳಲು ಧೈರ್ಯವಿಲ್ಲ. ಆದ್ದರಿಂದ ಅವಳು ಓಡಾಡುತ್ತಿದ್ದ ಕಡೆಯಲ್ಲಿ ಅವಳ ಕಣ್ಣಿಗೆ ಬೀಳುವಂತೆ ಅವನು—

"ಏರಬೇಕೆಂಬಾಸೆ, ಬೀಳುವೆನೆಂಬಾ ಭೀತಿ!"

ಎಂದು ಬರೆದನಂತೆ. ಅವಳು ಅದರ ಕೆಳಗೆ—

"ಹಾಗಿರುವುದಾದರೆ, ಏರದಿರುವುದೆ ನೀತಿ!"

ಎಂದು ಬರೆದಳಂತೆ. ಇವರೂ ಇಂಥ ಸಪ್ಪೆ ಕಥೆಗಳನ್ನು ಬರೆಯದಿರುವುದು ವಾಸಿ; ಪ್ರಕಾಶಕರಿಗೆ ಅವುಗಳಿಂದ ಲಾಭವಿಲ್ಲ. ಓದುವವರಿಗೆ ಇಹವಿಲ್ಲ, ಪರವಿಲ್ಲ.

ಕೊನೆಯದಾಗಿ ಒಂದು ಸಂಗತಿಯನ್ನು ಹೇಳಬೇಕು. ಈಗಿನ ಕಾಲದಲ್ಲಿ ರಟ್ಟಿನ ಚಿತ್ರವನ್ನಾಗಲಿ, ಕಾದಂಬರಿಯ ಹೆಸರನ್ನಾಗಲಿ ನಂಬಿಕೊಂಡು ಯಾವ ಪುಸ್ತಕವನ್ನೂ ಕೊಳ್ಳುವ ಹಾಗಿಲ್ಲ, ಕೈಗೆ ತೆಗೆದುಕೊಳ್ಳುವ ಹಾಗಿಲ್ಲ. ಅನೇಕ ವೇಳೆ ಮೋಸ. ಆದರೆ ಕೆಲವು ನಿಜವಾಗಿಯೂ ಒಳ್ಳೆಯ, ರಸವತ್ತಾದ ಪುಸ್ತಕಗಳು ಬರುತ್ತವೆ. ಅದಷ್ಟನ್ನೇ ಕಾಯಲೂ ಆರಿಸಲೂ ಆಗುವುದಿಲ್ಲ. ಮಾಲೆಗಳಿಗೆ ಖಾಯಂ ಚಂದಾದಾರರಾಗೋಣವೆಂದರೆ ಎಷ್ಟು ಮಾಲೆಗಳಿಗಾಗುವುದು? ಅವುಗಳಲ್ಲಿ ಬರುವ ಎಲ್ಲಾ ಪುಸ್ತಕಗಳೂ ಒಂದೇ ರುಚಿಯವಾಗಿಯೂ ಇರುವುದಿಲ್ಲ. ಇನ್ನು ವಿಮರ್ಶೆಗಳನ್ನೂ ನಂಬುವ ಹಾಗಿಲ್ಲ. ನಿಷ್ಪಕ್ಷಪಾತವಾಗಿ ಬರೆಯುವ ವಿಮರ್ಶೆಗಳು ಎಷ್ಟು ಬರುತ್ತಿವೆ? ಈಚೆಗೆ ಪುಸ್ತಕ ಭಂಡಾರಗಳೂ, ಸರ್ಕ್ಯೂಲೇಟಿಂಗ್ ಲೈಬ್ರರಿಗಳೂ ಹೆಚ್ಚಾಗಿವೆ. ಆದರೆ ಬೆಂಗಳೂರಿನಂಥ ದೊಡ್ಡ ಊರಿಗೆ ಅವು ಏನೂ ಸಾಲವು. ಹೊಸ ಹೊಸ ಪುಸ್ತಕಗಳೂ ಅಪರೂಪ; ಈ ಬಗ್ಗೆ ಪ್ರಕಾಶಕರೇ ಒಟ್ಟಾಗಿಯೋ, ಬೇರೆಯಾಗಿಯೋ ಏನಾದರೂ ಒಂದು ಯೋಜನೆ ಮಾಡಬಾರದೇ?

ನನ್ನ ತಂದೆಯ ನೆನಪು

ಶ್ರೀಮತಿ ಕೆ. ಶಾಂತಾ

"ಅಣ್ಣಯ್ಯ ಎಲ್ಲಿ?" ಬೆಳಗ್ಗೆ ಹಾಸಿಗೆಯಿಂದ ಏಳುತ್ತಿದ್ದ ಹಾಗೇ ಕೇಳುತ್ತಿದ್ದೆ ನಾನು. ನಮ್ಮ ತಾಯಿ "ಡಿಕ್ಷ್ನರಿ ಮೀಟಿಂಗ್ ಅಂತೆ ಪರಿಷತ್‌ನಲ್ಲಿ. ಬೆಂಗಳೂರಿಗೆ ಹೋಗಿದ್ದಾರೆ" ಎನ್ನುತ್ತಿದ್ದರು.

ಮೀಟಿಂಗ್ ಅಂದರೇನೋ, ಪರಿಷತ್ ಅಂದರೇನೋ, ಡಿಕ್ಷ್ನರಿ ಅಂದರೇನೋ ಗೊತ್ತಿಲ್ಲದ ವಯಸ್ಸು ನನಗೆ. ಬೆಂಗಳೂರು ಎಂದರೆ ಗೊತ್ತಿತ್ತು. ನಾನು ಹುಟ್ಟಿದ್ದು ಬೆಂಗಳೂರಿನಲ್ಲಿ. ನನಗೆ ೪-೫ ವರ್ಷ ಆಗುವವರೆಗೆ ಬೆಂಗಳೂರಿನಲ್ಲೇ ಇದ್ದೆವು. ಆಮೇಲೆ ಮೈಸೂರಿಗೆ ಬಂದೆವು.

ನಮ್ಮ ತಂದೆ ಊರಿನಲ್ಲಿರದಿದ್ದರೆ ಮನೆಯ ವಾತಾವರಣ ತೀರಾ ಸಪ್ಪೆಯಾಗುತ್ತಿತ್ತು. ಅಡಿಗೆ ಕೂಡಾ! ನನಗೆ, ನಮ್ಮ ತಾಯಿಗೆ ಎಷ್ಟು ಆಗಬೇಕು? ಜೊತೆಗೆ ಇಂಥಹುದೇ ಆಗಬೇಕೆಂಬ ನಿರ್ಬಂಧ ನಮ್ಮಿಬ್ಬರಿಗೂ ಇರಲಿಲ್ಲ.

ಮನೆಯ ಹಿತ್ತಲಲ್ಲಿ ಮಾವಿನ ಮರವಿತ್ತು. ಹಣ್ಣಿನ ಕಾಲದಲ್ಲಿ ಕಾಯಿ ಬಿಟ್ಟಿದ್ದರೆ ಒಂದೋ ಎರಡೋ ಹೆಚ್ಚಿ ಗೊಜ್ಜು ಇಲ್ಲ ಚಟ್ನಿ ಮಾಡಿ, ಒಂದು ಅನ್ನ ಮಾಡಿದರೆ, ಅಂದಿನ ನಮ್ಮಿಬ್ಬರ ಅಡಿಗೆ ಆಗಿಹೋಗುತ್ತಿತ್ತು.

ನಮ್ಮ ತಂದೆಯವರು ಆಗಾಗ್ಗೆ ಮಾರ್ಕೆಟ್ಟಿಗೆ ಹೋದಾಗ ಒಂದೆರಡು ವೀಸೆಯಷ್ಟು ಆಲೂಗಡ್ಡೆ ಈರುಳ್ಳಿ ತರುತ್ತಿದ್ದರು. ಅದಾದರೆ ನಾಲ್ಕು ದಿನ ಇರುತ್ತದೆ, ಕೆಡುವುದಿಲ್ಲ, ತರಕಾರಿ ಇಲ್ಲದ ದಿನಕ್ಕೆ ಉಪಯೋಗಿಸಿಕೊಳ್ಳಬಹುದು ಎಂದು. ಆಲೂಗಡ್ಡೆ ಈರುಳ್ಳಿ ಯಾವಾಗಲೂ ಇರುತ್ತಿತ್ತು. ಈರುಳ್ಳಿ ಹಾಕಿ ಗೊಜ್ಜುಮಾಡಿ ಅನ್ನ ಮಾಡಿಕೊಂಡರೆ ನನ್ನ ಮತ್ತು ನಮ್ಮ ತಾಯಿಯ ಅಡಿಗೆ ಊಟ ಆಗಿಹೋಗುತ್ತಿತ್ತು.

ಊಟಕ್ಕೆ ಕುಳಿತಾಗಲೂ ಯಾರಲ್ಲೂ ಮಾತಿಲ್ಲ. ಅಡಿಗೆ ಮನೆ, ಊಟದ ಮನೆಯಲ್ಲಿ ಕುಳಿತು ಊಟ ಮಾಡುವುದು ಸಹಾ ನಮಗೆ ಬೇಜಾರು. ತಟ್ಟೆಯಲ್ಲಿ ಕಲಸಿ ಹಾಕಿಕೊಂಡು ಹಜಾರದಲ್ಲಿ ಬಂದು ಊಟ ಮಾಡುತ್ತಿದ್ದೆವು.

ನಮ್ಮ ತಂದೆ ಒಬ್ಬರು ಇದ್ದರೆ ಎಲ್ಲಾ ಕೆಲಸ ಪಾಂಗಿತವಾಗಿ ನಡೆಯುತ್ತಿತ್ತು. ಅವರಿಲ್ಲದ ದಿನ ಎಲ್ಲರಿಗೂ ಎಲ್ಲಕ್ಕೂ ಮಂಕು, ಅಸಡ್ಡೆ, ಬೇಜಾರು.

ಆ ವಯಸ್ಸು ಕಳೆದು ಸ್ವಲ್ಪ ದೊಡ್ಡವಳಾದೆ. ಬಾಕಿ ಯಾವ ವಿಷಯಗಳು ತಿಳಿಯದಿದ್ದರೂ ಅವರ ಅಂದಿನ ದಿನಚರಿ ಗೊತ್ತಿತ್ತು. ಅವರು ಊರಿಗೆ ಹೊರಡುವ ಹೊತ್ತಿಗೆ ಎದ್ದಿರುತ್ತಿದ್ದೆ.

ಆ ದಿನ ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು ನೀರೊಲೆಗೆ ಉರಿ ಹಾಕಿ ನೀರು ಕಾಯಿಸಿಕೊಂಡು ಸ್ನಾನ ಮಾಡಿ, ಮನೆಯ ಆವರಣದಲ್ಲಿದ್ದ ಗಿಡಗಳಿಂದ ಹೂವುಗಳನ್ನು ಕಿತ್ತು ತಂದು [ಆಗ ಇನ್ನೂ ಕತ್ತಲೆ ಕತ್ತಲೆಯಾಗೇ ಇರುತ್ತಿತ್ತು] ದೇವರ ಪೂಜೆ ಮಾಡುತ್ತಿದ್ದರು. ನಾವು ಮೈಸೂರಿನಲ್ಲಿದ್ದ ಕಾಲದಲ್ಲಿ ಬೆಳಗ್ಗೆ ಹೊತ್ತು ಮನೆಗೆ ಹಾಲು ಬರುತ್ತಿದ್ದುದು ಎಂಟು ಗಂಟೆಗೇ. ಅವರಿಗೆ ಇನ್ನು ಕಾಫಿ ಯೋಚನೆ ಎಲ್ಲಿ?

ನಾವು ಇದ್ದ ಬಡಾವಣೆಗೂ ರೈಲ್ವೇ ಸ್ಟೇಷನ್ನಿಗೂ ತುಂಬ ದೂರ ಇತ್ತು. ಮೈಸೂರಿನಿಂದ ಬೆಂಗಳೂರಿಗೆ ಮೊದಲನೇ ರೈಲು ಹೊರಡುವ ಹೊತ್ತಿಗೆ ಮೈಸೂರಿನಲ್ಲಿ ಆಗ ಯಾವ ಬಸ್ಸೂ ಇರಲಿಲ್ಲ, ಗಾಡಿಯೂ ಸಿಕ್ಕುತ್ತಿರಲಿಲ್ಲ. ಅದಕ್ಕೋಸ್ಕರ ಹಿಂದಿನ ದಿನ ನಮ್ಮ ಮನೆಯ ಜವಾನನಿಗೆ ರಾತ್ರಿ ನಮ್ಮ ಮನೆಯಲ್ಲೇ ಮಲಗುವಂತೆ ಹೇಳುತ್ತಿದ್ದರು. ತಮ್ಮ ಕೆಲಸವಾದ ನಂತರ ಅವನನ್ನು ಎಬ್ಬಿಸಿ ತಮ್ಮ ಸೂಟ್ ಕೇಸನ್ನು, ಮತ್ತು ಬೆಂಗಳೂರಿಗೆ ತೆಗೆದುಕೊಂಡು ಹೋಗುವ ಸಾಮಾನನ್ನು ಅವನ ಜೊತೆ ಸ್ಟೇಷನ್ನಿಗೆ ಕಳುಹಿಸುತ್ತಿದ್ದರು. ಅವರದು ಆಕರ್ಷಕವಾದ ಪುಟ್ಟದಾದ ಸೂಟ್ ಕೇಸ್. ಯಾವಾಗಲೂ ಅವರು ಪ್ರಯಾಣ ಹೊರಡುವಾಗ ಅದು ಅವರಿಗಿರಬೇಕು. ಕಾರಣ, ಅದರಲ್ಲಿ

ಯಾವಾಗಲೂ ಒಂದು ದಿನದ ಬಟ್ಟೆ, ವಿಭೂತಿಯ ಸಣ್ಣ ಡಬ್ಬಿ, ಸಣ್ಣ ಚಾಕು, ಟವಲ್ಲು, ಕರ್ಚೀಫುಗಳು. ಹೀಗೇ ಏನೇನೋ ಸಾಮಾನುಗಳು ಖಾಯಂ ಆಗಿ ಆ ಸೂಟ್ ಕೇಸ್‌ನಲ್ಲೇ ಇರುತ್ತಿದ್ದುವು. ಪ್ರಯಾಣ ಹೊರಡಬೇಕಾದರೆ ಹೊಸದಾಗಿ ಅವರು ಸಿದ್ಧತೆ ಮಾಡಿಕೊಳ್ಳಬೇಕಾಗಿರಲಿಲ್ಲ. ಆ ಸೂಟ್‌ಕೇಸನ್ನು ಎತ್ತಿಕೊಂಡು ಹೊರಟರೆ ಸಾಕಾಗಿತ್ತು.

ಜವಾನ ರೈಲ್ವೇ ಸ್ಟೇಷನ್ ತಲಪುವ ಹೊತ್ತಿಗೆ ಮನೆಯಿಂದ ಸೈಕಲ್ಲನ್ನು ಹತ್ತಿಕೊಂಡು ಹೊರಡುತ್ತಿದ್ದರು. ದಾರಿಯಲ್ಲಿ ಮಹಾರಾಜ ಕಾಲೇಜಿನ ಆವರಣದಲ್ಲಿದ್ದ ರಾಮಯ್ಯರ್ ಹೋಟಲಿನಲ್ಲಿ ಕಾಫಿ ಉಪಹಾರ ಮುಗಿಸಿಕೊಂಡು ಪುನಃ ಸೈಕಲ್ಲೇರಿ ರೈಲು ಹೊರಡುವ ವೇಳೆಗೆ ರೈಲ್ವೇ ಸ್ಟೇಷನ್‌ಗೆ ತಲಪುತ್ತಿದ್ದರು.

ಜವಾನ ಟಿಕೆಟ್ ತೆಗೆದುಕೊಂಡು ಸಿದ್ಧವಾಗಿರುತ್ತಿದ್ದ. ಸೈಕಲ್ಲನ್ನು ಜವಾನನ ಕೈಲಿ ಕೊಟ್ಟು, ಮನೆಗೆ ತೆಗೆದುಕೊಂಡು ಹೋಗಿ ಇಡುವಂತೆ ಹೇಳುತ್ತಿದ್ದರು. ಜವಾನ ಮನೆಗೆ ಸೈಕಲ್ಲನ್ನು ತಂದಿಟ್ಟರೆ ನಮ್ಮ ತಂದೆ ಊರುಬಿಟ್ಟರು ಎಂದು ನಮಗೆಲ್ಲ.

ಹೊರಡುವಾಗಲೇ ಸ್ಟೇಷನ್ನಿನಿಂದ ಮದ್ದೂರಿಗೆ ಊಟಕ್ಕೆ ವೈರ್ ಮಾಡುತ್ತಿದ್ದರು. ಅವರು ಪ್ರಯಾಣ ಮಾಡುತ್ತಿದ್ದುದು ಮೊದಲನೆಯ ತರಗತಿ ಇಲ್ಲವೇ ಎರಡನೆಯ ತರಗತಿಯಲ್ಲಿ. ಅಲ್ಲಿ ಹೆಚ್ಚು ಗಲಾಟೆ ಇರುತ್ತಿರಲಿಲ್ಲ. ರೈಲು ಮದ್ದೂರಿಗೆ ಸುಮಾರು ಒಂಭತ್ತು ಒಂಭತ್ತೂವರೆಗೆ ಬರುತ್ತಿತ್ತು. ಊಟವನ್ನು ರೈಲು ಗಾಡಿಗೇ ತಂದುಕೊಡುತ್ತಿದ್ದರು. ಊಟ ಮಾಡಿ ಪುನಃ ತಮ್ಮ ಪ್ರಯಾಣ ಮುಂದುವರೆಸುತ್ತಿದ್ದರು.

ನಮ್ಮ ತಂದೆ ಪ್ರಯಾಣ ಮಾಡಬೇಕಾದರೆ ದಾರಿ ಉದ್ದಕ್ಕೂ ಏನಾದರೂ ಕೊಳ್ಳುತ್ತಲೇ ಇರಬೇಕು. ಮೈಸೂರಿನಿಂದ ಹೊರಟರೆ ಶ್ರೀರಂಗಪಟ್ಟಣದಲ್ಲಿ ಅಂಜೂರ, ಮಂಡ್ಯದಲ್ಲಿ ಕಬ್ಬು, ಮದ್ದೂರಿನಲ್ಲಿ ತಿಂಡಿ, ಚನ್ನಪಟ್ಟಣದಲ್ಲಿ ಹೂವು, ಕೊಬ್ಬರೀ ಬರ್ಫಿ, ಹಲಸಿನಹಣ್ಣು, ಬಾಳೇಹಣ್ಣು, ಇಲ್ಲ ಪರಂಗಿಹಣ್ಣು — ಬಣ್ಣದ ಸಾಮಾನು (ಯಾವುದಾದರೂ ಮೊಮ್ಮಕ್ಕಳಿಗೆ) ಇನ್ಯಾವುದೋ ಸ್ಟೇಷನ್ನಿನಲ್ಲಿ ಎಳನೀರು ಹೀಗೆ ಪ್ರಯಾಣದ ಉದ್ದಕ್ಕೂ ಅವರು ಏನಾದರೂ ಕೊಳ್ಳಲೇಬೇಕು.

[ಮುಂದೆ ಹೇಳುವ ವಿಷಯ ಈಚೆಗೆ ಶ್ರೀ ಡಿ. ವಿ. ಜಿ. ಅವರನ್ನು ಭೇಟಿ ಮಾಡಿದಾಗ ಅವರೇ ಹೇಳಿದ್ದು.]

ನಮ್ಮ ತಂದೆ ಬೆಂಗಳೂರು ತಲಪುವ ಹೊತ್ತಿಗೆ ಡಿ.ವಿ.ಜಿ. ಎಂ.ಆರ್. ಶ್ರೀನಿವಾಸಮೂರ್ತಿ, ಸಿ.ಕೆ. ವೆಂಕಟರಾಮಯ್ಯ ಮುಂತಾದವರೆಲ್ಲ ಸೇರಿರುತ್ತಿದ್ದರು. "ಕೆಲಸ ಆರಂಭಿಸೋಣವೇ?" "ತಡೀರಿ, ಕೃಷ್ಣಶಾಸ್ತ್ರಿ ಬರಲಿ." ಏತಕ್ಕೆ?

ನಮ್ಮ ತಂದೆ ಮೈಸೂರಿನಲ್ಲೇ ರಾಮಯ್ಯರ್ ಹೋಟಲಿನಲ್ಲಿ ತಮ್ಮ ಉಪಹಾರವಾದನಂತರ, ಸಿಹಿ, ಕಾರದ ತಿಂಡಿಯ ಪೊಟ್ಟಣಗಳನ್ನು ಕಟ್ಟಿಸಿಕೊಂಡು ಬರುತ್ತಿದ್ದರು. ಅದಕ್ಕಾಗಿ ಅವರು ಕಾಯುತ್ತಿದ್ದರು.

ನಮ್ಮ ತಂದೆ ಸೀದಾ ರೈಲ್ವೇ ಸ್ಟೇಷನ್‌ನಿಂದ ಪರಿಷತ್ತಿಗೇ ಬರುತ್ತಿದ್ದರು. ಬರುತ್ತಿದ್ದ ಹಾಗೇ ತಿಂಡಿ ಪೊಟ್ಟಣ ಬಿಚ್ಚಿ ಫಲಹಾರ. ಯಾರೋ ಒಬ್ಬರು ಕಾಫೀ ತರಿಸುತ್ತಿದ್ದರು. ಕಾಫೀ ಸಮಾರಾಧನೆ ಆದಮೇಲೆ ಮಾಟಂಗಿನ ಕೆಲಸ ಆರಂಭವೆಂದು ಡಿ. ವಿ. ಜಿ. ಅವರ ಹೇಳಿಕೆ.

ಪರಿಷತ್ತಿಗೆ ಬಂದ ತಕ್ಷಣ ತಮ್ಮ ಸೂಟ್‌ಕೇಸನ್ನು ಪರಿಷತ್ತಿನ ಆಳಿನ ಕೈಲಿ ನಮ್ಮ ಅಕ್ಕನ ಮನೆಗೆ ಕಳುಹಿಸುತ್ತಿದ್ದರು. ಆಗ ನಮ್ಮ ಅಕ್ಕ ಬಸವನಗುಡಿಯಲ್ಲಿರುವ ನಮ್ಮ ತಂದೆಯವರ ಸ್ವಗೃಹದಲ್ಲೇ ಇದ್ದಳು. ಸೂಟ್‌ಕೇಸ್ ಮನೆಗೆ ಬಂದರೆ ನಮ್ಮ ಅಕ್ಕನವರ ಮನೆಗೆಲ್ಲಾ "ಅಣ್ಣಯ್ಯ ಬಂದಿದಾನೆ" ಎಂದು ಸಂಭ್ರಮ. ಎದುರು ನೋಡುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ಅವರಿಗೆ ಸ್ವಂತ ಮನೆಗಿಂತಲೂ ಹೆಚ್ಚು. ಅದರ ನೆರಳಿನಲ್ಲಿ ಕುಳಿತು ಕೆಲಸ ಮಾಡುವುದೆಂದರೆ, ಹೆಣ್ಣು ತೌರುಮನೆಯಲ್ಲಿ ಕುಳಿತು ಹೋಳಿಗೆ ಪಾಯಸ ಊಟ ಮಾಡಿದಂತೆ. ಒಮ್ಮೆ ಅವರೇ ಹೇಳಿದ್ದರು "ಕನ್ನಡ ಸಾಹಿತ್ಯ ಪರಿಷತ್ತನ್ನು ನನ್ನ ಸ್ವಂತ ಮನೆಗಿಂತ ಹೆಚ್ಚಾಗಿ ಕಟ್ಟಿಸಿದೆ. [ಅದಕ್ಕೆ ಹಣ ಒದಗಿಸಿದ್ದು ನನಗೆ ಗೊತ್ತಿಲ್ಲ. ಆ ವಿಷಯ ಅವರು ನನಗೆ ಹೇಳಲೂ ಇಲ್ಲ. ಕೇಳಿದರೆ ಹೇಳುತ್ತಲೂ ಇರಲಿಲ್ಲ] ಕಟ್ಟಡ ತುಂಬಾ ಚೆನ್ನಾಗಿ ಬಂತು ಎಂದು ಸಂಭ್ರಮಪಟ್ಟೆ. ಆದರೆ ಒಳಗೆ ಹೋಗಿ ಒಮ್ಮೆ ಮಾತನಾಡಿದ ತಕ್ಷಣ ಆ ಸಂತೋಷವೆಲ್ಲ ಕರ್ಪೂರ ಹೊತ್ತಿಸಿದಂತಾಯಿತು. ಕಾರಣ ಪ್ರತಿಧ್ವನಿ! ಕಟ್ಟಿಸಿದ ಇಂಜಿನಿಯರು, ಕಂಟ್ರ್ಯಾಕ್ಟರ್‌ನ್ನು ಹೋಗಿ ನೋಡಿದೆ. ಅದಕ್ಕೆ ಅವರು ಈಗ ಏನು ಮಾಡುವುದಕ್ಕೂ ಆಗುವುದಿಲ್ಲ. ಹಜಾರದ ತುಂಬಾ ದೊಡ್ಡ ದೊಡ್ಡ ಫೋಟೋಗಳನ್ನು ಹಾಕಿಬಿಡಿ, ಆಗ ಪ್ರತಿಧ್ವನಿ ಬರುವುದಿಲ್ಲ" ಎಂದರು. ಈಗ ಪರಿಷತ್ತು ದೊಡ್ಡ ದೊಡ್ಡ ಫೋಟೋಗಳಿಂದ ತುಂಬಿರುವುದು ಇದೂ ಒಂದು ಕಾರಣವಿರಬಹುದು.

ನಮ್ಮ ತಂದೆಯವರ ಮನೆ ಬಸವನಗುಡಿ ಎರಡನೆಯ ರಸ್ತೆಯಲ್ಲಿ ಇದ್ದರೂ ಅದು ಅವರಿಗೆ ಪರಿಷತ್ತಿನ ಹತ್ತಿರ ಇದ್ದ ಹಾಗೆ. ಎಂದಾದರೂ ಪರಿಷತ್ತಿಗೆ ಹೋಗಬೇಕಾದರೆ ನಾವೆಲ್ಲಾ ರಿಕ್ಷಾನೋ, ಬಸ್ಸೋ, ಗಾಡಿಯೋ, ಟ್ಯಾಕ್ಸಿಯೋ ಹುಡುಕುತ್ತಿದ್ದೆವು. ನಮ್ಮ ತಂದೆಗೆ ಮಾತ್ರ ಪರಿಷತ್ತು ಬಹಳ ಹತ್ತಿರ. "ಎಷ್ಟು ಮಹಾ ದೂರ ಇರುವುದಕ್ಕೆ ಗಾಡಿ, ಬಸ್ಸು, ಕಾರು ಬೇಕು. ನಡದೇ ಹೋಗೋಣ" ಎನ್ನುತ್ತಿದ್ದರು. ಅವರ ಮನಸ್ಸಿಗೆ ಪರಿಷತ್ತು ಬಹಳ ಹತ್ತಿರವಿದ್ದುದರಿಂದ ನಡಿಗೆ ದೂರದಲ್ಲೂ ಅವರಿಗೆ ಹತ್ತಿರ ಇರುತ್ತಿತ್ತು.

ಕೆಲವು ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನವರು ಅಲ್ಲಿಯವರೆಗಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆಲ್ಲಾ ಬಿನ್ನವತ್ತಳೆಯನ್ನು ನೀಡಿತು. ನಮ್ಮ ತಂದೆಯವರೂ ಅವರಲ್ಲಿ ಒಬ್ಬರು. ಆಗಲೂ ಹೀಗೇ ಆಯಿತು. ನಾವೆಲ್ಲಾ "ಬಿಸಿಲು, ದೂರ. ನಾವು ಮಾಡಿಕೊಂಡಿರುವ ಅಲಂಕಾರವೆಲ್ಲಾ ಕೆಟ್ಟುಹೋಗುತ್ತೆ ಎಂದು ಗೊಣಗಿಕೊಂಡೆವು. ಆದರೆ ನಮ್ಮ ತಂದೆ ಮಾತ್ರ [ಅವರಿಗೆ ಅಲಂಕಾರವೇ ಬೇಕಿರಲಿಲ್ಲ] ತಮ್ಮ ಪಂಚೆ, ಷರಟು, ವಲ್ಲಿಯಿಂದ ಅಲಂಕೃತರಾಗಿ ನಮ್ಮನ್ನು ನಡೆಸಿಕೊಂಡೇ ಪರಿಷತ್ತಿಗೆ ಬಂದರು.

ಪರಿಷತ್ತಿನಲ್ಲಿ ಮೀಟಿಂಗ್ ಮುಗಿಸಿಕೊಂಡು ಸಂಜೆ ನಮ್ಮ ಅಕ್ಕನ ಮನೆಗೆ ಬರುತ್ತಿದ್ದರು. ಮಕ್ಕಳೆಲ್ಲಾ "ಅಣ್ಣಯ್ಯ ಪೆಟ್ಟಿಗೇ ತೆಗೀ" "ಅದರಲ್ಲಿ ಏನೂ ತಂದಿಲ್ಲ ಕಣ್ರೀ" ಅವರಿಗೂ ಗೊತ್ತಿತ್ತು ಬರೀ ಕೈಲಿ ಬಂದಿರೋಲ್ಲ ಎಂದು. ತಾವೇ ಪೆಟ್ಟಿಗೆ ತೆಗೆದು ತಮಗಾಗಿ ತಂದಿದ್ದ ಚಾಕ್‌ಲೇಟ್ ಪೆಪ್ಪರಮೆಂಟ್‌ಗಳನ್ನು ಬಾಯಿತುಂಬಾ ತುಂಬಿಕೊಂಡು ನಲಿಯುತ್ತಿದ್ದರು.

ನಮ್ಮ ಅಕ್ಕನ ಜೊತೆ ಮನೆಯ ಯೋಗಕ್ಷೇಮ ವಿಚಾರಿಸಿ, ಮೊಮ್ಮಕ್ಕಳೊಂದಿಗೆ ಲಾಲ್‌ಬಾಗಿಗೆ ಹೋಗಿ ರಾತ್ರಿ ಎಂಟು ಗಂಟೆಗೆ ಮನೆಗೆ ಹಿಂದಿರುಗುತ್ತಿದ್ದರು. ನಮ್ಮ ಭಾವ, ಮೊಮ್ಮಕ್ಕಳು, ಇವರ ಜೊತೆ ಊಟ ಮಾಡಿ ಮಲಗುತ್ತಿದ್ದರು.

ಪುನಃ ಮಾರನೆಯ ದಿನ ಮೊದಲ ರೈಲಿಗೆ ಹೊರಟು ಕಾಲೇಜಿನ ಹೊತ್ತಿಗೆ ಸರಿಯಾಗಿ ಮೈಸೂರಿಗೆ ಬಂದು ಸೇರುತ್ತಿದ್ದರು. ನಮ್ಮ ಅಕ್ಕನವರ ಮನೆಯವರು "ಇದೊಂದು ದಿನ ಇರು ಅಣ್ಣಯ್ಯ" ಎಂದರೆ " ಇಲ್ಲಮ್ಮ, ಕೆಲಸ ಇದೆ" ಎಂದು ಹೊರಡುತ್ತಿದ್ದರು. ಅಕಸ್ಮಾತ್ ಏನಾದರೂ ಆ ದಿನ ಕಾಲೇಜಿಗೆ ರಜಾ ಇದ್ದರೆ, ಇಲ್ಲ ಕೆಲಸವಿಲ್ಲದಿದ್ದರೆ, ಮೊದಲನೇ ರೈಲಿನಲ್ಲೇ ಹೊರಟು ಮಾರ್ಗ ಮಧ್ಯದಲ್ಲಿ ಶ್ರೀರಂಗಪಟ್ಟಣದಲ್ಲಿ ಇಳಿಯುತ್ತಿದ್ದರು. ಅದರ ಸಮೀಪದಲ್ಲಿರುವ ಗಂಜಾಂನಲ್ಲಿ ನಮ್ಮ ಇನ್ನೊಬ್ಬ ಅಕ್ಕ ಇದ್ದಳು. ಅವರ ಮನೆಯಲ್ಲಿ ಆ ದಿನ ಮಧ್ಯಾಹ್ನ ತಂಗುತ್ತಿದ್ದರು. ನಮ್ಮ ಅಕ್ಕನಿಗೆ ಬೆಂಗಳೂರು ಸೇಬು ಕಂಡರೆ ಇಷ್ಟ ಎನ್ನುವುದನ್ನು ಮರೆಯುತ್ತಿರಲಿಲ್ಲ. ನಾಲ್ಕು ಮಕ್ಕಳ ತಾಯಿ ಆಗಿದ್ದರೂ "ನಿನಗೆ ಸೇಬು ಕಂಡರೆ ಇಷ್ಟ ಎಂದೇ ತಂದಿದೇನೆ, ತಗೋ" ಎಂದು ಕೈಗೆ ಕೊಡುತ್ತಿದ್ದರು. ಮಧ್ಯಾಹ್ನ ಅವರ ಮನೆಯಲ್ಲಿ ಊಟ ಮಾಡಿಕೊಂಡು ರಾತ್ರಿಯ ವೇಳೆಗೆ ಮೈಸೂರಿಗೆ ಸೇರುತ್ತಿದ್ದರು.

ನಮ್ಮ ತಂದೆ ಊರಿಗೆ ಬಂದುಬಿಟ್ಟರೆ ನನಗೆ ಪುನಃ ಸಮಾಧಾನ. ಊರು ಬಿಟ್ಟು ಹೊರಟರೆ ಅವರು ಬರುವ ತನಕ ಮಂಕಾಗಿರುತ್ತಿದ್ದೆ. ಅವರು ಪ್ರತಿ ಸಲ ಮೀಟಿಂಗಿಗೆ ಹೋದಾಗಲೂ ಹೀಗೇ ಆಗುತ್ತಿತ್ತು.

ಒಮ್ಮೊಮ್ಮೆ ನನ್ನ ಸ್ಕೂಲಿಗೆ ರಜಾ ಇದ್ದಾಗ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಆಗ ನಾನೂ ಈ ಸುಖವನ್ನೆಲ್ಲಾ ಅನುಭವಿಸುತ್ತಿದ್ದೆ.

* * *

ಇಂದು ನಮ್ಮ ಪೂಜ್ಯ ತಂದೆಯವರನ್ನು ನೆನೆಸಿಕೊಂಡಾಗ ಅವರ ಸತತ ದುಡಿಮೆಯ ಆ ಚಿತ್ರ ಕಣ್ಣಿಗೆ ಕಟ್ಟಿದಂತೆ ಆಗುವುದು. ಇಲ್ಲಿ ವೈಯಕ್ತಿಕವೆನಿಸಬಹುದಾದ ಸಂಗತಿಗಳನ್ನಷ್ಟೇ ಬರೆದಿದ್ದರೂ ದಿವಂಗತ ಕೃಷ್ಣಶಾಸ್ತ್ರಿಗಳ ಗಂಭೀರ ಸ್ವಭಾವದ ಹಿಂದೆ ಇದ್ದ ಮೃದು ಸ್ವಭಾವದ ಇನ್ನೊಂದು ಮುಖದ ಪರಿಚಯ ಮಾಡಿಕೊಡುವುದಷ್ಟೇ ಈ ಬರಹದ ಉದ್ದೇಶ.

ದಿವಂಗತರಾದ ಗುರುವರ್ಯರು

ಸಿ. ಕೆ. ವೆಂಕಟರಾಮಯ್ಯ

ಡಾಕ್ಟರ್ ಎ. ಆರ್. ಕೃಷ್ಣಶಾಸ್ತ್ರಿಗಳು ದಿವಂಗತರಾದುದರಿಂದ, ಕನ್ನಡನಾಡಿನ ಉದ್ದಾಮ ವಿದ್ವಾಂಸ ಲೇಖಕರಾದ ಪ್ರಖ್ಯಾತ ಮಹನೀಯರೊಬ್ಬರು ಕಣ್ಮರೆಯಾದಂತಾಯಿತು. ಅವರು ಶ್ರೇಷ್ಠ ಗ್ರಂಥಕರ್ತರಾಗಿದ್ದುದರ ಜೊತೆಗೆ, ಆದರ್ಶ ಗುರುವರ್ಯರಾಗಿಯೂ, ಅನೇಕ ಸದ್ಗುಣಗಳಿಂದ ತಮ್ಮ ಮಿತ್ರರಿಗೆ ಅತ್ಯಂತ ಪ್ರಿಯರಾಗಿಯೂ, ಕಿರಿಯರಿಗೆ ವಾತ್ಸಲ್ಯಯುತ ಮಾರ್ಗದರ್ಶಕರಾಗಿಯೂ ಇದ್ದ ಪುಣ್ಯಾತ್ಮರು. ಕಳೆದ ಫೆಬ್ರವರಿ ತಿಂಗಳು ಒಂದನೆಯ ತಾರೀಖಿನ ರಾತ್ರಿ ಅವರು ಕಣ್ಮರೆಯಾದರೆಂಬ ವಾರ್ತೆಯನ್ನು ಕೇಳಿ ಅವರ ಬಂಧು ಮಿತ್ರರಿಗೂ ಅವರ ಶಿಷ್ಯರಿಗೂ ಉಂಟಾದ ದುಃಖವನ್ನು ವರ್ಣಿಸಲಳವಲ್ಲ. ಅವರ ನಿಧನದಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅಪಾರ ನಷ್ಟವುಂಟಾಗಿದೆ. ಅವರ ಕುಟುಂಬಕ್ಕೆ ಸೇರಿದವರ ವಿಯೋಗದುಃಖವೆಷ್ಟೆಂಬುದನ್ನು ಊಹಿಸಿಕೊಳ್ಳಬೇಕೇ ಹೊರತು, ಅದನ್ನು ವಿವರಿಸುವುದು ಶಕ್ಯವಿಲ್ಲ.

ಅವರಲ್ಲಿ ಶಿಕ್ಷಣ ಪಡೆದುದು, ಶಿಷ್ಯರ ಪುಣ್ಯಪರಿಪಾಕ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅವರ ಶಿಷ್ಯನಾಗಿದ್ದ ಪುಣ್ಯವು ನನ್ನದೂ ಹೌದು. ಆ ಬಳಿಕ ಅವರ ವಾತ್ಸಲ್ಯದ ಸುಯೋಗವನ್ನು ಪಡೆದವರಲ್ಲಿ ನಾನೂ ಒಬ್ಬ. ಅವರು ಸೆಂಟ್ರಲ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ನೇಮಕವಾದಾಗ ಅವರ ಮೊಟ್ಟಮೊದಲನೆಯ ತಂಡದ ಶಿಷ್ಯರ ಗುಂಪಿನಲ್ಲಿ ನಾನೂ ಸೇರಿದ್ದೆ. ಆಗಿನಿಂದ ಸುಮಾರು ಐವತ್ತು ವರ್ಷಗಳ ಅವಧಿಯ ಅವರೊಂದಿಗಿನ ನನ್ನ ಸಂಬಂಧದ ನೆನಪುಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಲಿಚ್ಛಿಸುತ್ತೇನೆ.

ನಮ್ಮ ಗುರುವರ್ಯರು ಸೆಂಟ್ರಲ್ ಕಾಲೇಜಿಗೆ ಕನ್ನಡದ ಅಧ್ಯಾಪಕರಾಗಿ ದಯಮಾಡುವ ಸಂತೋಷದ ಸುದ್ದಿಯನ್ನು ಕೇಳಿದಾಗ, ಮುಂದೆ ಅವರ ಶಿಷ್ಯರಾಗಬೇಕಾಗಿದ್ದ ಕನ್ನಡದ ವಿದ್ಯಾರ್ಥಿಗಳಿಗೆ-ಎಂದರೆ, ಕನ್ನಡವನ್ನು ಐಚ್ಛಿಕ ದ್ವಿತೀಯ ಭಾಷೆಯಾಗಿ ಆರಿಸಿಕೊಂಡಿದ್ದ ವಿದ್ಯಾರ್ಥಿಗಳಿಗೆ-ಅತ್ಯಾನಂದವಾದುದಲ್ಲದೆ, ತಲೆಗಳಲ್ಲಿ ಕೋಡುಗಳು ಮೂಡಿದಂತೆಯೂ ಆಯಿತು, ತರುಣವಯಸ್ಸಿನ ಉತ್ಸಾಹಭರದಲ್ಲಿ. ಆದರೂ, ಆ ಸಂತಸವಾರ್ತೆಯನ್ನು ನಾವು ನಂಬಲಾರದೆಹೋದೆವು; ನಮ್ಮಲ್ಲಿ ಕೆಲವರು ಉತ್ಸಾಹದಿಂದ ಕುಣಿದಾಡಿದ ಮೇಲೆ, ಅದು ಸುಳ್ಳು ಸುದ್ದಿಯಾಗಿರಬೇಕೆಂದುಕೂಡ ಶಂಕಿಸಿದೆವು. ಶ್ರೀ ಕೃಷ್ಣಶಾಸ್ತ್ರಿಗಳವರು ತಮ್ಮ ಪೂಜ್ಯ ತಂದೆಯವರೇ ಮುಂತಾದ ವಿದ್ವನ್ಮಣಿಗಳಲ್ಲಿ ಸಂಪ್ರದಾಯ ಬದ್ಧವಾದ ಸಂಸ್ಕೃತ ಶಿಕ್ಷಣವನ್ನು ಪಡೆದು ವಿದ್ವತ್ತನ್ನು ಗಳಿಸಿದ್ದರೆಂದೂ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಪ್ರಖ್ಯಾತ ಪ್ರಾಧ್ಯಾಪಕರುಗಳಾಗಿದ್ದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಶ್ರೀ ಎಂ. ಹಿರಿಯಣ್ಣನವರು ಮುಂತಾದ ವಿದ್ವನ್ಮಣಿಗಳ ಪಟ್ಟ ಶಿಷ್ಯರಾಗಿ ವ್ಯಾಸಂಗ ಮಾಡಿ "ಎಂ. ಎ.," ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೆಂದೂ ತಿಳಿದು ಬಂದುದೇ ಅದಕ್ಕೆ ಕಾರಣ; ವಿಶ್ವವಿದ್ಯಾನಿಲಯದ ವ್ಯಾಸಂಗವನ್ನು ಪೂರೈಸಿ "ಎಂ.ಎ.," ಪ್ರಶಸ್ತಿಯನ್ನು ಪಡೆದವರೆಂದಿಗೂ ಕನ್ನಡದ ಅಧ್ಯಾಪಕರಾಗಿ ಕೆಲಸ ಮಾಡಲು ಸಮ್ಮತಿಸಲಾರರೆಂದೇ ಕೆಲವರು ವಿದ್ಯಾರ್ಥಿಗಳು ತೀರ್ಮಾನಿಸಿ, ಇತರರ ಉತ್ಸಾಹವನ್ನು ಕುಗ್ಗಿಸಿದರು. ಆಗ್ಗೆ ಕನ್ನಡ ಭಾಷೆಗೊದಗಿದ್ದ ದುರ್ದೆಶೆಯೇ ಆ ತೀರ್ಮಾನಕ್ಕೆ ಮುಖ್ಯ ಕಾರಣ. ಆ ದುರ್ದೆಶೆಯ ಸ್ವರೂಪವನ್ನು ಕೊಂಚ ವಿವರಿಸಿದ್ದಲ್ಲದೆ, ಆಗ್ಗೆ ನಮ್ಮ ಗುರುವರ್ಯರು ತೋರಿಸಿದ ಕನ್ನಡ ಭಾಷೆಯ ಮೇಲಿನ ಪ್ರೇಮದ ಮತ್ತು ಅಭಿಮಾನದ ಬೆಲೆಯನ್ನು ಸರಿಯಾಗಿ ಗ್ರಹಿಸುವುದು-ಕನ್ನಡದ ಸ್ಥಾನ ಮಾನಗಳು ಹೆಚ್ಚಿಯೂ ಹೆಚ್ಚುತ್ತಲೂ ಇರುವ ಈಗಿನ ಸಮಯದಲ್ಲಿ-ಸುಲಭವಲ್ಲವೆಂದು ಹೇಳಬಹುದು. ಆಗಿನ ಕಾಲದಲ್ಲಿ, ಕನ್ನಡಿಗರಲ್ಲೇ ಬಹುಮಂದಿಗಳಿಗೆ ಕನ್ನಡದ ಮೇಲೆ ಅಭಿಮಾನವಿರಲಿಲ್ಲ. ಅಭಿಮಾನವಿಲ್ಲದಿದ್ದರೆ ಹೋಗಲಿ,

ತಮ್ಮ ತಾಯಿ ನುಡಿಯಾದ ಕನ್ನಡದಲ್ಲಿ ಮಾತನಾಡುವುದೇ ತನುಗೆ ಅಪಮಾನವೆಂಬುದು, ಇಂಗ್ಲಿಷ್ ಭಾಷೆಯನ್ನು ಬಲ್ಲವರಲ್ಲಿ ಬಹುಸಂಖ್ಯೆಯವರಿಗಿದ್ದ ಭಾವನೆ. ಇಂಗ್ಲಿಷ್ ಭಾಷೆಯನ್ನರಿಯದ ಕನ್ನಡ ಮತ್ತು ಸಂಸ್ಕೃತ ಪಂಡಿತರಲ್ಲಿ ಮತ್ತು ಕನ್ನಡ ಲೇಖಕರಲ್ಲಿ ಅವರಿಗೆ ತಿರಸ್ಕಾರ ಭಾವನೆ. ಇಂಗ್ಲಿಷ್ ಭಾಷೆಯನ್ನು ಬಲ್ಲವರಲ್ಲಿ ಅನೇಕರು ತಮ್ಮನ್ನು ಕೀಳೆಂದು ಕಾಣುತ್ತಿದ್ದುದಕ್ಕಾಗಿ ಪಂಡಿತರಿಗೆ ಮನೋವ್ಯಥೆ. ಪಂಡಿತರಿಗೆ ತಾವು ಮಾಡುತ್ತಿದ್ದ ಅನ್ಯಾಯದ ಅರಿವೇ ಅವರಿಗಿರಲಿಲ್ಲ. ಸಮಾಜದಲ್ಲಿ ಇಂದುಕೂಡ, ಪಂಡಿತರಿಗೆ ಯಾವ ಸ್ಥಾನಮಾನಗಳು ಲಭಿಸಬೇಕಾದುದು ಯುಕ್ತವೋ ಅವು ಲಭಿಸುತ್ತಿಲ್ಲ; ಇಂಗ್ಲಿಷ್ ಭಾಷೆಯನ್ನರಿಯದ ಪಂಡಿತರಲ್ಲಿ ಕೂಡ ಸಂಸ್ಕೃತಿಯಿರುತ್ತದೆಂಬ ಭಾವನೆಯೇ ಅನೇಕರಲ್ಲಿಲ್ಲ. ಇನ್ನು ಐವತ್ತು ವರ್ಷಗಳ ಹಿಂದೆ ಅವರಿಗೆ ಅನ್ಯಾಯವಾಗಿದ್ದುದರಲ್ಲಿ ಆಶ್ಚರ್ಯವೇನು? ಇಂಗ್ಲಿಷ್ ಭಾಷೆಯನ್ನರಿಯದ ಕನ್ನಡ ಪಂಡಿತರಲ್ಲಿ ಮತ್ತು ಸಂಸ್ಕೃತ ಪಂಡಿತರಲ್ಲಿ, ಇಂಗ್ಲಿಷ್ ಭಾಷೆಯನ್ನು ಬಲ್ಲವರಲ್ಲಿ ಬಹುಮಂದಿಗೆ ಇಂದಿಗಿಂತ ಹೆಚ್ಚಿನ ತಿರಸ್ಕಾರ ಬುದ್ಧಿ. ಅದರ ಪರಿಣಾಮವಾಗಿ, ಸಮಾಜದಲ್ಲಿ ಸುಲಭವಾಗಿ ಗೌರವವನ್ನು ಗಿಟ್ಟಿಸುವ ಅಪೇಕ್ಷೆಗೆ ಸಿಕ್ಕಿದ ಕೆಲವರು ಪಂಡಿತರು ಕನ್ನಡದಲ್ಲಿ ಮಾತನಾಡುವಾಗ ಇಂಗ್ಲಿಷ್ ಭಾಷೆಯ ಕೆಲವು ಪದಗಳನ್ನು ಸೇರಿಸಿ-ಇಂಗ್ಲಿಷ್ ಭಾಷೆಯನ್ನು ಬಲ್ಲವರು ಉಭಯ ಭಾಷೆಗಳ ಪದಗಳನ್ನೂ ಸೇರಿಸಿ ಮಾತನಾಡುತ್ತಿದ್ದಂತೆಯೇ- "ಕಲಬೆರಕೆಯ" ಕನ್ನಡದಲ್ಲಿ ಮಾತನಾಡತೊಡಗಿ ತಮ್ಮ ಜೊತೆಯ ಇತರ ಪಂಡಿತರುಗಳಿಗಿಂತ ತಾವು ಮೇಲೆಂದು ಭಾವಿಸುವುದು ವಾಡಿಕೆಯಾಯಿತು. ಇಂಗ್ಲಿಷ್ ಭಾಷೆಯ ಪದಗಳನ್ನು ಸರಿಯಾಗಿ ಪ್ರಯೋಗಿಸದೆ ತಪ್ಪಿದ ಸಂದರ್ಭಗಳಲ್ಲಿ ವಿಚಿತ್ರ ಸನ್ನಿವೇಶಗಳೂ ಆಗಾಗ್ಗೆ ಉಂಟಾಗುತ್ತಿದ್ದುವು. ಅದಕ್ಕೆ ಹಲವು ನಿದರ್ಶನಗಳಿದ್ದರೂ ಆಗಿನ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ಅವುಗಳಲ್ಲೊಂದನ್ನು ಇಲ್ಲಿ ಸೂಚಿಸುವುದು ಅಪ್ರಕೃತವಲ್ಲವೆಂದು ನನಗೆ ತೋರುತ್ತದೆ. ಬೆಂಗಳೂರಿನ ಒಂದು ಪ್ರೌಢಶಾಲೆ. ಅದರ ಆಡಳಿತ ಕ್ರೈಸ್ತರದು; ಮುಖ್ಯಾಧಿಕಾರಿ (Principal) ಇಂಗ್ಲೆಂಡಿನವರು. ಕನ್ನಡ ಪಂಡಿತರು, ತಮ್ಮಲ್ಲಿ ಬಹಳ ಅವಿಧೇಯತೆಯಿಂದ ವರ್ತಿಸಿದ ವಿದ್ಯಾರ್ಥಿಯೊಬ್ಬನಮೇಲೆ ಅಸಮಾಧಾನಪಟ್ಟು "ನಿನಗೆ ಚೆನ್ನಾಗಿ ಮಾಡಿಸುತ್ತೀನಿ, ಪ್ರಿನ್ಸಿಪಾಲರ ಕೈಲಿ" ಎಂದು ಹೇಳಿ ಮುಖ್ಯಾಧಿಕಾರಿಯವರಲ್ಲಿಗೆ ಹೋಗಿ ಆ ವಿದ್ಯಾರ್ಥಿಯ ಹೆಸರನ್ನೂ, ಅವನು ವ್ಯಾಸಂಗ ಮಾಡುತ್ತಿದ್ದ ತರಗತಿಯನ್ನೂ ಅವರಿಗೆ ತಿಳಿಸಿ, "ಸಾರ್, ದಿಸ್ ಈಸ್ ಎ ವೆರಿ ಇಂಪಾರ್ಟೆಂಟ್ ಬಾಯ್, ಯು ಮಸ್ಟ್ ಡು ಹಿಮ್ ವೆಲ್" ಎಂದು ಹೇಳಿದರಂತೆ. ಅವರು ಹೇಳಲುದ್ದೇಶಿದ್ದುದು "ಸ್ವಾಮಿ, ಇವನು ಬಹಳ ಅವಿಧೇಯನಾದ ಹುಡುಗ. ನೀವು ಅವನಿಗೆ ಚೆನ್ನಾಗಿ ಮಾಡಬೇಕು" ಎಂದು. ಚೆನ್ನಾಗಿ ಮಾಡಬೇಕು ಎಂದರೆ ಚೆನ್ನಾಗಿ ಶಿಕ್ಷೆ ಮಾಡಬೇಕೆಂದರ್ಥ, ಆಡು ಮಾತಿನಲ್ಲಿ. "ಅವಿಧೇಯ" ಎಂಬುದಕ್ಕೆ ಇಂಗ್ಲಿಷ್ ಭಾಷೆಯಲ್ಲಿ "ಇಂಪರ್ಟಿನೆಂಟ್" ಎನ್ನಬೇಕೆಂಬುದನ್ನು ಪಂಡಿತರೇನೊ ಒಬ್ಬರನ್ನು ಕೇಳಿ ಗಟ್ಟಿಮಾಡಿಕೊಂಡಿದ್ದರು; ಆದರೆ ಮತ್ತಾರೋ "ಇಂಪಾರ್ಟೆಂಟ್" ಎಂದು ಇನ್ನೊಂದು ಸನ್ನಿವೇಶದಲ್ಲಿ ಆಡಿದ ಮಾತು ಕಿವಿಗೆ ಬಿದ್ದು ಅವಿಧೇಯ ಎಂಬುದಕ್ಕೆ ಇಂಗ್ಲಿಷಿನಲ್ಲಿ "ಇಂಪಾರ್ಟೆಂಟ್" ಎಂತ ತಪ್ಪಾಗಿ ಗ್ರಹಿಸಿ ಅದನ್ನು ಮುಖ್ಯಾಧಿಕಾರಿಯವರೆದುರಿಗೆ ಪ್ರಯೋಗಿಸಿದರು. ಆ ವಿದ್ಯಾರ್ಥಿಯ ವಿಷಯವಾಗಿ ಕನ್ನಡ ಪಂಡಿತರು ತಮಗೆ ಹೇಳಿದುದನ್ನು ಕೇಳಿ, ಅವನು ಬಹಳ ಬುದ್ಧಿವಂತನಾದ ಮತ್ತು ಗುಣವಂತನಾದ ಹುಡುಗನಾಗಿದ್ದ ಕಾರಣ, ಕನ್ನಡ ಪಂಡಿತರ ಮಾತುಗಳಲ್ಲಿ "ವೆರಿ ಇಂಪಾರ್ಟೆಂಟ್ ಬಾಯ್" (ಬಹಳ ಮುಖ್ಯವಾದ ಹುಡುಗ") ಎಂದು ಸೂಚಿತವಾಯಿತೆಂದೂ, ಅವನಿಗೆ ಸಹಾಯ ಮಾಡಬೇಕೆಂಬುದು ತನುಗೆ ಕನ್ನಡ ಪಂಡಿತರ ಸಲಹೆಯೆಂದೂ ಮುಖ್ಯಾಧಿಕಾರಿಯವರು ಭಾವಿಸಿ, ಪ್ರಸನ್ನರಾಗಿ, ತಲೆದೂಗಿದರು. ಕನ್ನಡ ಪಂಡಿತರು ಅವರಿಗೆ ಕೈಮುಗಿದು ತೃಪ್ತಿಯಿಂದ ಹಿಂತಿರುಗಿದರು; ಆ ವಿದ್ಯಾರ್ಥಿಗೆ ತಕ್ಕ ಶಿಕ್ಷೆಯಾಗುತ್ತದೆಂದು ಅವರು ನಿರೀಕ್ಷಿಸುತ್ತಿದ್ದರು; ಎರಡು ದಿನಗಳಾದ ಬಳಿಕ ಅವನಿಗೆ ಶುಲ್ಕ ವಿನಾಯತಿ ("ಫ್ರೀಷಿಪ್") ಲಭಿಸಿತೆಂದು ಕೇಳಿದಾಗ ಅವರ ಮನಸ್ಸಿಗೆ ಹೇಗಾಗಿರಬೇಕೆಂಬುದನ್ನು ವಿವರಿಸುವುದಕ್ಕಿಂತ ಊಹಿಸಿಕೊಳ್ಳುವುದೇ ಮೇಲು. ಆಗಿನ ದಿನಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಬಲ್ಲವರಲ್ಲಿ ಮುಕ್ಕಾಲುಮೂರು ವೀಸ ಭಾಗದವರು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದಾಗ ಇಂಗ್ಲಿಷ್ ಭಾಷೆಯಲ್ಲಿ ಮಾತ್ರವೇ ಮಾತನಾಡುತ್ತಿದ್ದುದೂ ಕನ್ನಡದಲ್ಲಿ ಮಾತನಾಡುವುದಕ್ಕೆ ಸುತರಾಂ ಸಮ್ಮತಿಸದಿರುತ್ತಿದ್ದುದೂ ವಾಡಿಕೆ. ಕನ್ನಡದಲ್ಲಿ ಭಾಷಣಗಳು ನಡೆಯುವುದೇ ಯುಕ್ತವಾಗಿದ್ದ ಸಂದರ್ಭಗಳಲ್ಲಿ ಕೂಡ, ಭಾಷಣಗಳು ನಡೆಯುತ್ತಿದ್ದುದು ಇಂಗ್ಲಿಷ್ ಭಾಷೆಯಲ್ಲಿ. ವಿದ್ಯಾವಂತರಾಗಿದ್ದವರಲ್ಲಿ ಕನ್ನಡದ ಅಭಿಮಾನಿಗಳಾದ ಮಹನೀಯರೂ ಕೆಲವರಿದ್ದರು. ಆದರೆ ಅವರ ಸಂಖ್ಯೆಯೂ

ಬಹಳ ಕಡಮೆ. ಹೀಗಿದ್ದ ಪರಿಸ್ಥಿತಿಯಲ್ಲಿ, ತೆಲುಗು ತಮ್ಮ ಮಾತೃಭಾಷೆಯಾಗಿದ್ದ-ಆಗಿನ ದಿವಾನರಾದ-ಶ್ರೀ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ರಾಜ್ಯ ಭಾಷೆಯಾದ ಕನ್ನಡ ಭಾಷೆಯಮೇಲಿನ ಅಭಿಮಾನದಿಂದ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ೧೯೧೫ನೆಯ ಸಂವತ್ಸರ ದಲ್ಲಿ ಸ್ಥಾಪಿಲು ಪ್ರಧಾನ ಪಾತ್ರವಹಿಸಿದ ದೂರದೃಷ್ಟಿ ಯನ್ನು ಎಷ್ಟು ಕೊಂಡಾಡಿದರೂ ಸಾಲದು. ಕನ್ನಡದ ಮೇಲಿನ ಮಮತೆಯಿಂದ ಶ್ರೀಮನ್ಮಹಾರಾಜ ಶ್ರೀಮನ್ನಾ ಲ್ವಡಿ ಕೃಷ್ಣರಾಜೇಂದ್ರ ಒಡೆಯರವರು ಮಹಾಪೋಷಕ ರಾಗಿಯೂ, ಶ್ರೀಮದ್ಯುವರಾಜ ಶ್ರೀ ಕಂಠೀರವ ನರಸಿಂಹ ರಾಜ ಒಡೆಯರವರು ಅಧ್ಯಕ್ಷರಾಗಿಯೂ ಇರಲು ಸಮ್ಮ ತಿಸಿ ಸಹಾಯ ಮಾಡಿದರು. ಮುಂದೆ ಅವರಿಬ್ಬರೂ ಪರಿ ಷತ್ತಿನ ಕಟ್ಟಡಕ್ಕಾಗಿ ಉದಾರವಾಗಿ ಧನ ಸಹಾಯ ಮಾಡಿ ದರು. ಪರಿಷತ್ತಿನ ಮೊಟ್ಟಮೊದಲನೆಯ ಉಪಾಧ್ಯಕ್ಷ ರಾದ ಶ್ರೀ ಹೆಚ್. ವಿ. ನಂಜುಂಡಯ್ಯನವರ ಮತ್ತು ಕೆಲ ವರು ಸದಸ್ಯರ ಮಾತೃಭಾಷೆಯು ಕನ್ನಡವಲ್ಲ; ಉಳಿದ ಸದಸ್ಯರ ಮಾತೃಭಾಷೆಯು ಕನ್ನಡ. ಅವರೆಲ್ಲರೂ ಪರಿ ಷತ್ತಿನ ಮೇಲಿನ ಅಭಿಮಾನದಿಂದ ಆಗ್ಗೆ ಮೂರು ವರ್ಷ ಗಳಿಂದ ಶ್ರಮಿಸುತ್ತಿದ್ದರು. ಆದರೂ ಇಂಗ್ಲಿಷ್ ಭಾಷೆ ಯನ್ನು ಬಲ್ಲ ಕನ್ನಡಿಗರಲ್ಲಿ ಕನ್ನಡದಮೇಲೆ ಅಭಿಮಾನ ವಿದ್ದವರ ಸಂಖ್ಯೆಯು ತೀರ ಕಡಮೆ; ಉಳಿದ ಬಹುಮಂದಿಗೆ ಕನ್ನಡ ಭಾಷೆಯಲ್ಲಿ ತುಚ್ಛಭಾವನೆ. ಕನ್ನಡದ ಏಳಿಗೆ ಗಾಗಿ ಶ್ರಮಿಸುತ್ತಿದ್ದವರ ಮತ್ತು ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುತ್ತಿದ್ದವರ ಸಂಖ್ಯೆಗಳು ತೀರಾ ಪರಿಮಿತ. ಅವ ರನ್ನು ಇತರರನೇಕರು ಅಪಹಾಸ್ಯ ಮಾಡುತ್ತಿದ್ದುದು ವಾಡಿಕೆ. ವಿಶ್ವವಿದ್ಯಾನಿಲಯಗಳ ಪದವೀಧರರಾದ ಕನ್ನಡಿಗ ರಲ್ಲೇ ಬಹುಮಂದಿಗೆ ಕನ್ನಡದಲ್ಲಿ ತುಚ್ಛಭಾವನೆ. ಈ ಬಗೆಯ ಸನ್ನಿವೇಶದಲ್ಲಿ "ಎಂ.ಎ.," ಪ್ರಶಸ್ತಿಯುಳ್ಳವರು ಕನ್ನಡ ಅಧ್ಯಾಪಕರಾಗಿ ಸೆಂಟ್ರಲ್ ಕಾಲೇಜಿಗೆ ಬರಲಾರ ರೆಂದು ಕೆಲವರು ವಿದ್ಯಾರ್ಥಿಗಳಿಗೆ ತೋರಿದುದರಲ್ಲಿ ಆಶ್ಚರ್ಯ ವಿಲ್ಲ. ಕನ್ನಡದ ಏಳಿಗೆಗಾಗಿ ದುಡಿಯುವ ದೀಕ್ಷೆಯನ್ನು ವಹಿಸಿದವರು ಎಂತಹ ಸನ್ನಿವೇಶದಲ್ಲಿ ಕೆಲಸಮಾಡಬೇಕಾ ಗಿದ್ದಿತೆಂಬುದನ್ನು ಈಗ ಸೂಚಿತವಾದ ಸಂಗತಿಗಳಿಂದ ಸ್ವಲ್ಪಮಟ್ಟಿಗೆ ಗ್ರಹಿಸಬಹುದಾಗಿದೆ.

ಕನ್ನಡದ ಪುರೋಭಿವೃದ್ಧಿಗಾಗಿ ಶ್ರಮಿಸುವ ದೀಕ್ಷೆ ಯನ್ನು ಪಡೆದಿದ್ದ ನಮ್ಮ ಗುರುವರ್ಯರು—ಡಾಕ್ಟರ್ ಎ. ಆರ್. ಕೃಷ್ಣಶಾಸ್ತ್ರಿಗಳು—ಕನ್ನಡದ ಅಧ್ಯಾಪಕರಾಗಿ ಸೆಂಟ್ರಲ್ ಕಾಲೇಜಿಗೆ ಬಂದೇ ಬಂದರು. ಕನ್ನಡವನ್ನು ಐಚ್ಛಿಕ ಭಾಷೆಯಾಗಿ ಆರಿಸಿಕೊಂಡಿದ್ದ ವಿದ್ಯಾರ್ಥಿಗಳಾಗಿದ್ದ ನಮ್ಮೆಲ್ಲರ ಪುಣ್ಯವಶದಿಂದ; ಪುಣ್ಯವಶದಿಂದಲೆನ್ನುವುದರಲ್ಲಿ ಲೇಶವೂ ಅತಿಶಯೋಕ್ತಿಯಿಲ್ಲ. ಅವರು, ಆಗ್ಗೆ ಸೆಂಟ್ರಲ್ ಕಾಲೇಜಿನ "ಪ್ರಿನ್ಸಿಪಾಲ್" ಪದವಿಯಲ್ಲಿದ್ದ ಶ್ರೀ ಜೆ. ಜಿ. ಟೇಟ್ ಸಾಹೇಬರಿಗೆ ತಮ್ಮ ಪಾಂಡಿತ್ಯದಿಂದಲೂ, ಪಾಠ ಕ್ರಮದ ದೆಸೆಯಿಂದಲೂ, ಸದ್ಗುಣಗಳಿಂದಲೂ, ಅಚ್ಚುಮೆಚ್ಚಾದರು. ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಭಾಷಾ ಪ್ರಾಧ್ಯಾಪಕರಾಗಿದ್ದ ಶ್ರೀ ಟೇಟ್ ಸಾಹೇಬರೂ, ಮದರಾ ಸಿನ ಪ್ರೆಸಿಡೆನ್ಸಿ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶ್ರೀ ಮಾರ್ಕ್‌ಹಂಟರ್ ಸಾಹೇಬರೂ ತಮ್ಮ ವಿದ್ವತ್ತಿಗೂ ಬೋಧನ ಸಾಮರ್ಥ್ಯಕ್ಕೂ ಸುಪ್ರಸಿದ್ಧರಾಗಿದ್ದರು. ಅವರಿ ಬ್ಬರಿಗೂ ಸರಿದೂಗುವಂತಿದ್ದ ಪ್ರಾಧ್ಯಾಪಕರೇ ಆಗ್ಗೆ ದಕ್ಷಿಣ ಭಾರತದಲ್ಲಿರಲಿಲ್ಲವೆಂಬುದು, ಅವರು ಗಳಿಸಿದ್ದ ಅಸಾಧಾರಣ ಖ್ಯಾತಿ. ಶ್ರೀ ಟೇಟ್ ಸಾಹೇಬರಿಗೆ ಅಚ್ಚುಮೆಚ್ಚಾಗುವು ದೆಂದರೆ ಸಾಮಾನ್ಯ ಸಂಗತಿಯಾಗಿರಲಿಲ್ಲ. ಅದರಿಂದಲೂ, ಕನ್ನಡ ಪಾಠಪ್ರವಚನಗಳ ಪರಿಯೇ ಬೇರೆಯಾಗಿ ವಿದ್ಯಾ ರ್ಥಿಗಳ ಮನಸ್ಸನ್ನು ಕುಣಿಸಿ ತಣಿಸುತ್ತಿದ್ದುದರಿಂದಲೂ, ನಮ್ಮ ಗುರುವರ್ಯರು ಅಧ್ಯಾಪಕರಾಗಿ ಬಂದುದಕ್ಕಾಗಿ ನಮಗೆ ಹೆಮ್ಮೆಯುಂಟಾಯಿತು. ಅವರು ಬಂದುದಕ್ಕಿಂತ ಮುಂಚೆ ಪಂಡಿತರಿಂದ ವಿದ್ವತ್ಪೂರ್ಣವಾಗಿ ಪಾಠಗಳು ನಡೆ ಯುತ್ತಿದ್ದುದು ನಿಜವಾದರೂ ಅವು ಪಠ್ಯಪುಸ್ತಕಗಳಷ್ಟಕ್ಕೇ ಪರಿಮಿತವಾಗಿದ್ದುವು; ಹೊಸದಾಗಿ ಬಂದ ಅಧ್ಯಾಪಕರೂ ಪಠ್ಯಪುಸ್ತಕಗಳನ್ನೇ ವಿದ್ವತ್ಪೂರ್ಣವಾಗಿ ಬೋಧಿಸುತ್ತಿದ್ದ ರಾದರೂ, ತುಲನಾತ್ಮಕವಾಗಿ ಮೂರು ಸಾಹಿತ್ಯ ಗ್ರಂಥ ಗಳಿಂದಲೂ—ಎಂದರೆ, ಕನ್ನಡ ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯ ಗ್ರಂಥಗಳಿಂದಲೂ—ಅವಶ್ಯ ಪ್ರಸಂಗಗಳಲ್ಲಿ ಸೂಕ್ತತೋರಿದಂತೆ ಅವರಿಂದ ಸೂಚಿತವಾಗುತ್ತಿದ್ದ ಸಂಗತಿ ಗಳಿಂದ ಕೂಡಿ, ಅವರ ಪಾಠಪ್ರವಚನಗಳು ಹೆಚ್ಚು ಸ್ವಾರಸ್ಯ ವಾಗಿಯೂ ಹೆಚ್ಚು ಬೋಧಪ್ರದವಾಗಿಯೂ ಇರುತ್ತಿದ್ದುವು. ಇಂಗ್ಲಿಷ್ ಭಾಷೆಯನ್ನು ವ್ಯಾಸಂಗ ಮಾಡಿಲ್ಲದಿದ್ದ ಪಂಡಿತ ರಿಂದ ಅದು ಸಾಧ್ಯವಿರಲಿಲ್ಲವಾದರೂ, ಅವರ ಆಳವಾದ ಪಾಂಡಿತ್ಯಕ್ಕಾಗಿ ಅವರು ವಿಶೇಷ ರೀತಿಯಲ್ಲಿ ಗೌರವವನ್ನು ಗಳಿಸಿದ್ದರು- ಅವರ ಸೇವಾವಧಿಯು ಮುಕ್ತಾಯವಾದುದ ರಿಂದ ಅವರು ನಿವೃತ್ತರಾಗಿದ್ದರು. ಅನಂತರ, ಅವರ ಹುದ್ದೆಗಿಂತ ಹೆಚ್ಚಿನದಾಗಿದ್ದ ("ಟ್ಯೂಟರ್" ಎಂಬ ಹೆಸರಿನ) ಹುದ್ದೆಗೆ ನೇಮಕವಾಗಿ ಬಂದವರು, ಶ್ರೀ ಎ.ಆರ್. ಕೃಷ್ಣಶಾಸ್ತ್ರಿಗಳು. ಅವರ ಸಮನ್ವಯ ಬುದ್ಧಿಯೂ ಸಮತಾ ಭಾವನೆಯೂ ಆಶ್ಚರ್ಯಕರವಾಗಿದ್ದುವು. ಪಂಡಿ

ತರುಗಳಲ್ಲಿ ಮತ್ತು ಸಂಸ್ಕೃತ ಭಾಷೆಯಲ್ಲಿ ಅವರಿಗೆ ಬಹಳ ಗೌರವ; ಅವರು ಇಂಗ್ಲಿಷ್ ವ್ಯಾಸಂಗ ಮಾಡಿದ್ದವರಲ್ಲಿ ಕೆಲವರಂತೆ ಪಂಡಿತರಲ್ಲಿ ತಿರಸ್ಕಾರ ಬುದ್ಧಿಯಿಂದಿದ್ದವರಲ್ಲ; ಇಂಗ್ಲಿಷ್ ಭಾಷಾ ಪ್ರೇಮಿಯೊಬ್ಬರು ಅವರಿಗೆ ಸಂತೋಷ ವಾಗುತ್ತದೆಂಬ ಉದ್ದೇಶದಿಂದ, "ನೀವು ಬಂದುದರಿಂದ ಸೆಂಟ್ರಲ್ ಕಾಲೇಜಿನ ಕನ್ನಡ ವ್ಯಾಸಂಗ ಶಾಖೆಗೆ ಶಾಲು ಗಳ ತಲೆಮಾರಿನಿಂದ ಬಿಡುಗಡೆಯಾಯಿತು" ಎಂದು ತಾತ್ಪರ್ಯವಾಗುವಂತೆ ಇಂಗ್ಲಿಷ್ ಭಾಷೆಯಲ್ಲಿ ಹೇಳಿದಾಗ, ಅವರು ನಗುತ್ತಲೇ "ಬಿಡುಗಡೆಯಾಗಲಿಲ್ಲ, ಸ್ವಾಮಿ, ಬಿಡು ಗಡೆಯಾಗಲಿಲ್ಲ. ನನ್ನ ವಿಚಾರ ತಮಗೆ ಪೂರ್ತಿಯಾಗಿ ತಿಳಿದಿಲ್ಲ. ನಾನೂ ಶಾಲುಗಳ ಮನೆತನದವನೇ. ಇಂಗ್ಲಿಷ್ ಭಾಷೆಯಲ್ಲಿ ವ್ಯಾಸಂಗ ಮಾಡಿರುವ ನಾವು ಆ ಭಾಷೆಯ ನ್ನರಿಯದ ಪಂಡಿತರಿಗಿಂತ ಮೇಲೆಂಬ ಭಾವನೆಯನ್ನಾಗಲಿ, ಸಂಸ್ಕೃತ ಮತ್ತು ಕನ್ನಡ ಭಾಷೆಗಳು ಕೀಳೆಂಬ ಭಾವನೆಯ ನ್ನಾಗಲಿ, ಎಷ್ಟು ಬೇಗ ಬಿಟ್ಟರೆ ಅಷ್ಟು ಒಳ್ಳೇದು, ನೋಡಿ. ಪಂಡಿತರುಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ವ್ಯಾಸಂಗ ಮಾಡೋಕೆ ಅವಕಾಶವೇನಾದ್ರೂ ದೊರೆತಿದ್ರೆ, ನಮ್ಮನ್ನ ಮೀರಿಸುತ್ತಿದ್ದರೋ ಏನೋ! ನಮ್ಮಂತೆಯಂತೂ, ಖಂಡಿತ ವಾಗಿಯೂ ಇರ್ತಿದ್ರು" ಎಂದು ಕನ್ನಡದಲ್ಲಿ ನುಡಿದು ಬಿಸಿ ಮುಟ್ಟಿಸಿದುದೂ ಉಂಟು. ಅವರು ಸ್ವಭಾವತಃ ವಿನಯ ಶೀಲರು; ಬಿರುನುಡಿಗಳಿಗೂ ಅವರಿಗೂ ಬಹಳ ದೂರ; ಆದರೆ ಅಗತ್ಯವೆನಿಸಿದಾಗ ಅಪ್ರಿಯಸತ್ಯವನ್ನು ನಿರ್ದಾಕ್ಷಿಣ್ಯ ವಾಗಿ ನುಡಿಯಲು ಅವರು ಹಿಂತೆಗೆಯುತ್ತಿರಲಿಲ್ಲ. ಇಂಗ್ಲಿಷ್ ಭಾಷೆಯನ್ನರಿಯದ ಪಂಡಿತರಲ್ಲಿ ಕೆಲವರು ಅದನ್ನು ಹೂಣ ಭಾಷೆಯೆಂದು ಕರೆದು ಅಪಹಾಸ್ಯ ಮಾಡುತ್ತಿದ್ದುದೂ ಅವರಿಗೆ ಸರಿಬೀಳುತ್ತಿರಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿದ್ದ ಸದುಕ್ತಿಗಳಿಗೂ ಸುಂದರ ವಾಕ್ಯಗಳಿಗೂ ಸಲ್ಲುತ್ತಿದ್ದಷ್ಟೇ ಪ್ರಶಂಸೆಯು ಸಂಸ್ಕೃತ ಮತ್ತು ಕನ್ನಡ ಭಾಷೆಗಳಿದ್ದವಕ್ಕೆ ಲಭಿಸದ ಸನ್ನಿವೇಶವಿದ್ದುದಕ್ಕಾಗಿ ಅವರು ಮರುಗುತ್ತಿದ್ದರು. ಅದೇ ಅವರ ಕ್ರತುಶಕ್ತಿಯಾಗಿ ಪರಿಣಮಿಸಿ, ಕನ್ನಡದ ಪುರೋಭಿವೃದ್ಧಿಗಾಗಿ ತಮ್ಮ ಕಾರ್ಯಕ್ಷೇತ್ರದಲ್ಲಿ ಅವರು ಶ್ರದ್ಧೆಯಿಂದ ದೀಕ್ಷೆ ತಳೆಯುವಂತೆ ಮಾಡಿತೆಂದು ನನಗೆ ತೋರುತ್ತದೆ. ಅವರೊಂದಗಿನ ನನ್ನ ಸಂಬಂಧದ ನೆನಪು ಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಲಿಚ್ಛಿಸುತ್ತೇನೆ.

ಈ ಲೇಖನದಲ್ಲಿ ಹಿಂದೆಯೇ ಸೂಚಿತವಾಗಿರುವಂತೆ, ಅವರ ಪಾಠಪ್ರವಚನಗಳು ವಿದ್ವತ್ಪೂರ್ಣವಾಗಿಯೂ ತುಲ ನಾತ್ಮಕವಾಗಿಯೂ ಇರುತ್ತಿದ್ದುವು. ಅದನ್ನು ಸ್ಪಷ್ಟಪಡಿಸು ವುದಕ್ಕಾಗಿ ಕೆಲವು ನಿದರ್ಶನಗಳನ್ನು ಉದಾಹರಿಸುವುದು ಅಪ್ರಕೃತವಲ್ಲ. ಒಂದು ದಿನ ಸ್ವದೇಶಾಭಿಮಾನದ ಪ್ರಸ್ತಾಪ ಬಂದಾಗ, ಸರ್ ವಿಲಿಯಂ ಸ್ಕಾಟ್ ಬರೆದಿರುವ ಕವನದ ವಿಚಾರವನ್ನೆತ್ತಿ ಅವರು, "ಅದು ಶ್ರೇಷ್ಠವಾದ ಮತ್ತು ಮನ ಮೋಹಕವಾದ ಕವನ. ಅದನ್ನು ಎಷ್ಟು ಕೊಂಡಾಡಿದರೂ ಸಾಲದು. ಅದನ್ನು ಮನಸ್ಸಿಟ್ಟು ಓದಿದರೆ, ಸ್ವದೇಶ ಪ್ರೇಮ ವೃದ್ಧಿಯಾಗೋದು ಖಂಡಿತ. ಇಂಗ್ಲಿಷ್ ಬಲ್ಲ ಜನ ಅದನ್ನ ಕೊಂಡಾಡ್ತಾರೆ. ಆದರೆ, ಆ ನಮ್ಮ ಜನರೆಲ್ಲ ನಮ್ಮ ದೇಶದ 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ಮನಮೋಹಕ ವಾಣಿಗಳನ್ನ ಆ ಮಟ್ಟಿಗೆ ಕೊಂಡಾ ಡ್ತಾರೆಯೇ–ಅನ್ನೊಂದು ಸಂದೇಹ. ನೀವೇ ಹೇಳಿ, ಜನನಿಯೂ ಜನ್ಮಭೂಮಿಯೂ ಸ್ವರ್ಗಕ್ಕಿಂತ ಹೆಚ್ಚೆಂಬ ಭಾವನೆ ಎಷ್ಟು ಚೆನ್ನ! ತಾಯಿ ಮೇಲಿನ ಪ್ರೀತಿ, ಜನ್ಮ ಭೂಮಿಯ ಮೇಲಿನ ಅಭಿಮಾನ—ಎರಡೂ ತುಂಬಿವೆ, ಆ ವಾಕ್ಯದಲ್ಲಿ. ಜನನಿಯೂ ಜನ್ಮಭೂಮಿಯೂ ಸ್ವರ್ಗ ಕ್ಕಿಂತ ಹೆಚ್ಚು. ಆದ್ದರಿಂದ, ಸ್ವದೇಶದ ವಾಸ, ಸ್ವರ್ಗ ವಾಸ ಕ್ಕಿಂತ ಹೆಚ್ಚು. ಸ್ವರ್ಗ ಸುಖವನ್ನು ಬಯಸಿ ಹಾತೊರೆ ಯದೆ, ಜನನಿಯ ಮತ್ತು ಜನ್ಮಭೂಮಿಯ ಸೇವೆ ಮಾಡಿ ಜೀವನವನ್ನ ಸಾರ್ಥಕಪಡಿಸಿಕೊಳ್ಳಬೇಕಂತ ಅದರ ಆಶಯ. ಆ ವಾಕ್ಯವನ್ನು ಹೇಳಿರೋದು ಯಾರು ಗೊತ್ತೆ? ಶ್ರೀರಾಮ ಚಂದ್ರ. ಅವು ವಾಲ್ಮೀಕಿ ಮಹರ್ಷಿ ಶ್ರೀರಾಮನಿಂದ ನುಡಿ ಯಿಸಿರುವ ಮಾತುಗಳು" ಎಂದು ಹೇಳಿದರು. ಈಗ್ಗೆ ಐವತ್ತು ವರ್ಷಗಳ ಹಿಂದೆ ಅವರು ಆಡಿದ ಆ ಮಾತುಗಳು ನಿನ್ನೆ ಆಡಿದಂತೆ ನೆಲಸಿವೆ ನನ್ನ ಮನಸ್ಸಿನಲ್ಲಿ. ಅವರಿಂದ ಆ ಮಾತುಗಳನ್ನು ಕೇಳಿದುದರ ಸತ್ಪರಿಣಾಮವಾಗಿ ನನಗೆ ರಾಮಾಯಣವನ್ನು ಶ್ರದ್ಧೆಯಿಂದ ಓದಬೇಕೆಂಬ ಸ್ಫೂರ್ತಿ ಯುಂಟಾಯಿತು. ಸಂವಿಧಾನ ರಚನೆ, ಪಾತ್ರ ರಚನೆ ಮುಂತಾದ ವಿಚಾರಗಳನ್ನೆತ್ತಿ ಅವರು ಕನ್ನಡದ ನಮ್ಮ ಪಠ್ಯ ಪುಸ್ತಕಗಳಿಂದ ಮಾತ್ರವೇ ಅಲ್ಲದೆ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯಗಳ ಹಲವು ಗ್ರಂಥಗಳಿಂದಲೂ ನಿದರ್ಶನ ಗಳನ್ನು ಸೂಚಿಸಿ ಹೃಯಂಗಮವಾಗಿ ಬೋಧಿಸುತ್ತಿದ್ದರು. ಅದನ್ನು ವಿಸ್ತಾರವಾಗಿ ಇಲ್ಲಿ ವಿಚಾರ ಮಾಡುವುದು ಶಕ್ಯವೇ ಅಲ್ಲವಾದುದರಿಂದ ಪ್ರಾಸಂಗಿಕವಾಗಿ ಒಂದೆರಡು ಸಂಗತಿಗಳನ್ನು ಸೂಚಿಸಬಹುದಾಗಿದೆ. ಪಂಪ ರನ್ನರ ಮತ್ತು ಷೇಕ್ಸ್‌ಪಿಯರ್ ಕಾಳಿದಾಸರ ಪಾತ್ರ ರಚನಾ ವೈಭವವನ್ನು ಸಂಕ್ಷೇಪವಾಗಿ ವಿವರಿಸಿದ ಮೇಲೆ ಕುಮಾರ ವ್ಯಾಸ ಭಾರತದಲ್ಲಿಯ ಪಾತ್ರ ರಚನೆಯ ಸೊಬಗನ್ನು ಸೂಚಿಸಿ ಅವರು ಆಡಿದ ಮಾತುಗಳನ್ನು ಮರೆಯುವುದು ಸಾಧ್ಯವೇ ಇಲ್ಲ; ಅವರು ಆಡಿದ ಮಾತುಗಳಿವು:

" ಕವಿಯೋ ನಾಟಕಕಾರನೋ ಕಾದಂಬರಿಕಾರನೋ ಹೀಗೆ ಪಾತ್ರಗಳಿಂದ ನುಡಿಯಿಸುವ ಮಾತುಗಳು ಆ ಆ ಪಾತ್ರಗಳ ಸ್ವಭಾವಕ್ಕೆ ತಕ್ಕಂತಿರಬೇಕು. ರಾಜನ ಮಾತಿನ ರೀತಿಯೇ ಬೇರೆ, ರಾಣಿಯ ಮಾತಿನ ರೀತಿಯೇ ಬೇರೆ. ಆಳಿನ ಮಾತುಗಳಂತೆ ಆಶ್ರಮ ವಾಸಿ ಸಂನ್ಯಾಸಿಯ ಅಥವಾ ಋಷಿಯ ಮಾತುಗಳಿದ್ದರೆ, ಪಟ್ಟಣಿಗರ ಮಾತುಗಳಂತೆ ಹಳ್ಳಿಯವರ ಮಾತುಗಳಿದ್ದರೆ ಅಥವಾ ಪಂಡಿತರ ಮಾತುಗಳಂತೆ ಪಾಮರರ ಮಾತುಗಳಿದ್ದರೆ, ಕಲೆಗಾರಿಕೆಗೆ ಲೋಪ. ಈ ಸಂದರ್ಭಗಳಲ್ಲಿ ಪರಸ್ಪರವಾಗಿ ಶೈಲಿಗಳಲ್ಲಿ ಮತ್ತು ಪರಸ್ಪರವಾಗಿ ಭಾವನೆಗಳ ಮಟ್ಟಗಳಲ್ಲಿ ವ್ಯತ್ಯಾಸವಿರಲೇಬೇಕು. ಕುಮಾರವ್ಯಾಸನ ಭಾರತದಲ್ಲಿ ನೋಡಿ: ಋಷಿಗಳು ಪರಮೇಶ್ವರನಲ್ಲಿಗೆ ಹೋಗಿ ಅರಿಕೆ ಮಾಡುವ ತಮ್ಮ ದಿನಚರಿಯ ವರ್ಣನೆಯ 'ಶಾಂತಿಯೇ ಮನೆ ನಿಮ್ಮ ಚರಣದ| ಚಿಂತೆಯೇ ಮನೆವಾರ್ತೆ ವರವೇ| ದಾಂತ ತತ್ತ್ವರಹಸ್ಯಮನನಾದಿಗಳು ಸರ್ವಸ್ವಾ ||' ಎಂಬ ಮಾತುಗಳನ್ನು ನೋಡಿ. ಋಷಿಗಳಿಗೆ ಅನುರೂಪವಾದ ಮಾತುಗಳು! ಅವುಗಳ ಭಾವೋನ್ನತಿಯೆಷ್ಟು! ಅವುಗಳ ಔಚಿತ್ಯವೆಷ್ಟು! ದ್ರೌಪದೀ ಸ್ವಯಂವರ ಕಾಲದಲ್ಲಿ—ಮತ್ಸ್ಯ ಯಂತ್ರವನ್ನು ಭೇದಿಸೋದು ದುರ್ಯೋಧನ ಮುಂತಾದ ಕ್ಷತ್ರಿಯ ವೀರರಿಗೆ ಅಸಾಧ್ಯವಾದುದನ್ನು ಕಂಡು—ಬ್ರಾಹ್ಮಣನಿವಹದಲ್ಲಿ ಯಾರಾದರೂ ಆ ಕೆಲಸ ಮಾಡಿ ದ್ರೌಪದಿಯನ್ನು ವಿವಾಹ ಮಾಡಿಕೊಳ್ಳಬಹುದೆಂತ ಅವಳ ಅಣ್ಣ ಧೃಷ್ಟದ್ಯುಮ್ನ ಸಾರಿಸಿದಾಗ ಬ್ರಾಹ್ಮಣರೂ, ವಟುಗಳೂ, ದ್ರೌಪದಿಯ ಸಖಿಯರೂ ಆಡುವ ಮಾತುಗಳು ಅವರವರ ಸ್ವಭಾವಕ್ಕೆ ತಕ್ಕಂತೆ ಲಘುವಾಗಿಯೂ ಹಾಸ್ಯ ಭರಿತವಾಗಿಯೂ ಇರುವಂತೆ ಚಿತ್ರಿಸಿದ್ದಾನೆ, ನಮ್ಮ ಕುಮಾರವ್ಯಾಸ. ಬೆಕ್ಕಸಬೆರಗಾದ ಮತ್ತು ಚಾಪ ವಿದ್ಯೆಯ ಗಂಧವನ್ನರಿಯದ ಬ್ರಾಹ್ಮಣರು 'ವಚನಶೂರರು ನಾವು ಪಾರ್ಥಿವ| ನಿಚಯವೇ ಭುಜಶೂರರನಿಬರ|| ನಚಲ ಧನುಭಂಗಿಸಿತು ನಮಗೀ ವಿದ್ಯೆ ವೈದಿಕವೇ|| ಉಚಿತವಲ್ಲಿದು ನಮ್ಮ ಸಾಹಸ| ರಚನೆಯನು ನೋಡುವರೆ ಪಂಡಿತ| ನಿಚಯವಿದುರಲಿ ನಿಲಲಿ ತೋರುವೆವಲ್ಲಿ ವಿಸ್ಮಯವಾ||' ಎಂದು ಮುಂತಾಗಿ ಹೇಳಿದರೆ, ಭೋಜನದಲ್ಲಿ ಬೇಕಾದರೆ ಪರೀಕ್ಷೆಗೆ ಸಿದ್ಧವೆಂದು ಒದರುತ್ತಿದೆ 'ಧೂರ್ತವಟುನಿಕರಾ'. ಬ್ರಾಹ್ಮಣ ವೇಷದ ಅರ್ಜುನ ಮತ್ಸ್ಯ ಯಂತ್ರದ ಕಡೆಗೆ ಹೊರಟುದನ್ನ ಕಂಡು ಹೆಂಗುಸರು ಅಪಹಾಸ್ಯ ಮಾಡಿ ಘೊಳ್ಳೆಂದು ನಗುತ್ತಾರೆ. ಅದನ್ನು 'ಲಹರಿ ಮುಸಗಿದುದತ್ತ ಕಾಂತಾ| ಬಹಳ ಪಾರಾವಾರ . . .' ಎಂದು ಮುಂತಾಗಿ ವಿನೋದವಾಗಿ ವರ್ಣಿಸುತ್ತಾನೆ, ಕವಿ; ಅವರನ್ನ ಚಪಲೆಯರೆಂದು ಸೂಚಿಸಿದ್ದಾನೆ; ಮಹಿಳೆಯರ ದೊಡ್ಡ ಗುಂಪಿನ ಸಮುದ್ರ ಲಹರಿ ಮುಸಗುತ್ತೆ; ಹುಬ್ಬುಗಳ ಹಾರಿಕೆಗಳ ತೆರೆ ಮಾಲೆಗಳು, ಬೆಳುನಗುವಿನ ಬುದ್ಬುದ, ಗಹಗಹಿಸಿ ಗಟ್ಟಿಯಾಗಿ ನಗುವ ರೀತಿಗಳ ರಭಸ, ಚಲದ್ದೃಷ್ಟಿಗಳ ಮರಿಮೀನ ಹೊಳಹುಗಳು; ವಿಪ್ರವೇಷದ ಅರ್ಜುನನನ್ನ ವಿಪ್ರನೆಂದೇ ಭಾವಿಸಿ, 'ಎಲವೊ ಮಟ್ಟಿಯ ಮದನ ದರ್ಭೆಯ| ತಿಲದ ಮನ್ಮಥ ವಿಮಲಧೋತ್ರದ ತಳಿರುಗಾಸೆಯ ಕಾಮುಕೃಷ್ಣ ಜಿನದ ಕಂದರ್ಪಾ|| ನಳಿನಮುಖಿಯನು ವರಿಸು ಬಾ . . .' ಎಂದು ಅಪಹಾಸ್ಯ ಮಾಡುವರು 'ನಗುತ' ಚಪಲೆಯರು! ಅವರು ಅಸಾಧ್ಯವೆಂದು ಭಾವಿಸಿದ್ದುದು ನಡೆದುಹೋಗುವುದು. ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸಿದ ಮೇಲೆ ದ್ರೌಪದಿ ಅವನಿಗೆ ವರಮಾಲೆಯನ್ನು ಹಾಕಿ ಅವನ ಪಾರ್ಶ್ವದಲ್ಲಿ ನಿಂತಾಗಲೂ ಅವರಿಗೆ ನಗುವೇ! ಆಗ ಅವರು ದ್ರೌಪದಿಯನ್ನು ಹಾಸ್ಯಮಾಡುತ್ತಾರೆ; "...ಹೊತ್ತನು| ಹರನಹಗೆ ಹಾರುವಿಕೆಯನು ನಂ| ಮುರಸಿ ನೆರೆ ಹಾರುವಿತಿಯೆಂದರು ನಗುತ ಚಪಲೆಯರೂ||". ಹೇಗಿದೆ, ನೋಡಿ! ಕೊಂಚ ಹೊತ್ತಿಗೆ ಹಿಂದೆ 'ಮಟ್ಟಿಯ ಮದನ ದರ್ಭೆಯ ತಿಲದ ಮನ್ಮಥ' ಎಂದು ಮುಂತಾಗಿ ಅಪಹಾಸ್ಯ! ಅವನ ಕೊರಳಿಗೆ ದ್ರೌಪದಿಯ ವರಮಾಲೆ ಬಿದ್ದಕೂಡಲೆ, ಅವನು ಬ್ರಾಹ್ಮಣ ವೇಷವನ್ನು ತಳೆದ ಮನ್ಮಥ! ಇದೇ ಪ್ರಪಂಚ ಸ್ವಭಾವ! ಆ ಮಾತಿರಲಿ. ಪಾತ್ರಗಳ ಸ್ವಭಾವಗಳಿಗೆ ತಕ್ಕಂತೆ ಪಾತ್ರಗಳಿಂದ ಮಾತನಾಡಿಸಿರುವ ಕುಮಾರವ್ಯಾಸನ ಜಾಣ್ಮೆಯ ಮೋಡಿಯನ್ನ ನೋಡಿ. ಒಂದೊಂದೇ ಮಾತಿನ ಬಿತ್ತರದಿಂದ ಪಾತ್ರಸ್ವಭಾವದ ಸಾರವೇ ನಮಗರಿವಾಗುವಂತೆ ಮಾಡಬಲ್ಲ ನಮ್ಮ ಕವಿ. ಶ್ರೀಕೃಷ್ಣ 'ಮಾಯಾಸಿದ್ಧ'! ಅರ್ಜುನ 'ಕಾರ್ಮುಕಯೋಗಸಿದ್ಧ'! ಇನ್ನೊಂದು ಸಂಗತಿ ಕೂಡ ಗಮನಾರ್ಹ: ಒಂದೇ ಸನ್ನಿವೇಶದಲ್ಲಿ ಪಾತ್ರಗಳು ತಮ್ಮ ತಮ್ಮ ಸ್ವಭಾವಕ್ಕೆ ತಕ್ಕ ಹಾಗೆ ನುಡಿಯುವಂತೆ ಚಿತ್ರಿಸುವುದು ಉತ್ತಮ ಕಲೆಗಾರಿಕೆ. ಪರಮೇಶ್ವರನನ್ನು ತಪಸ್ಸಿನಿಂದ ಒಲಿಸಿಕೊಂಡು ದಿವ್ಯಾಸ್ತ್ರಗಳನ್ನು ಪಡೆಯೋಕೆ ಪಾರ್ಥ ಹೊರಟಿದ್ದಾನೆ, ಇಂದ್ರಕೀಲಗಿರಿಗೆ. ಆ ಸನ್ನಿವೇಶದಲ್ಲಿ ಕವಿ, 'ಆಡದಿರಸತ್ಯವನು ಕಪಟವ| ಮಾಡದಿರು ನಾಸ್ತಿಕರೊಡನೆ ಮಾ| ತಾಡದಿರು ಕೆಳೆಗೊಳ್ಳದಿರು ವಿಶ್ವಾಸ ಘಾತಕರಾ|| ಖೋಡಿಗಳೆಯದಿರಾರುವನು . .' ಎಂದು ಯುಧಿಷ್ಠಿರನಿಂದಲೂ, 'ನೆನೆಯದಿರು ತನುಸುಖವ ಮನದಲಿ| ನೆನೆ ವಿರೋಧಿಯ ಸಿರಿಯನೆನ್ನಯ| ಘನತರದ ಪರಿಭವವ ನೆನೆ . . .' ಎಂದು ಮುಂತಾಗಿ ದ್ರೌಪದಿಯಿಂದಲೂ

ನುಡಿಯಿಸಿರುವುದೇ ಇದಕ್ಕೆ ಒಳ್ಳೇ ನಿದರ್ಶನ." ಈ ಬಗೆಯ ಹೃದಯಂಗಮವಾದ ಬೋಧೆಯಿಂದ, ಶಿಷ್ಯರ ಸಾಹಿತ್ಯ ಪ್ರೇಮವನ್ನು—ವಿಶೇಷವಾಗಿ ಕನ್ನಡ ಸಾಹಿತ್ಯ ಪ್ರೇಮವನ್ನು—ವೃದ್ಧಿಗೊಳಿಸುತ್ತಿದ್ದರು, ನಮ್ಮ ಗುರುವರ್ಯರು.

ಅವರಿಗೆ ನನ್ನಲ್ಲಿ ಬಹಳ ವಾತ್ಸಲ್ಯವಿದ್ದುದು ನನ್ನ ಪುಣ್ಯ. ನಾನು ಬರೆದ "ಸಮ್ಮಾರ್ಜನಿಯ ಹೇಳಿಕೆ" ಎಂಬ ಅಭಿಧಾನದ ಒಂದು ಪ್ರಬಂಧವನ್ನೂ, ನಲವತ್ತು ಪುಟಗಳ ಮತ್ತೊಂದು ಪುಸ್ತಕ ವಿಮರ್ಶಾ ಪ್ರಬಂಧವನ್ನೂ, ಇತರ ಕೆಲವು ಪ್ರಬಂಧಗಳನ್ನೂ ಅವರು ವಿಶೇಷವಾಗಿ ಮೆಚ್ಚಿಕೊಂಡಿದ್ದುದೇ ಅದಕ್ಕೆ ಮುಖ್ಯ ಕಾರಣ; ನಾನು ಬಾಲ್ಯದಲ್ಲಿ ಸಂಸ್ಕೃತವನ್ನು ಕಲಿತು ವ್ಯಾಸಂಗ ಮಾಡಿದ್ದೆನೆಂಬ ಸಂಗತಿಯೂ ಅವರಿಗೆ ಪ್ರಿಯವಾಯಿತು. ನಮ್ಮಿಬ್ಬರಲ್ಲಿ ಆತ್ಮೀಯತೆಯ ಅನುಬಂಧವಿದ್ದಿತೆಂದರೂ ಅತಿಶಯೋಕ್ತಿಯಾಗುವ ಶಂಕೆಯಿಲ್ಲದೆ ಅದು ಸಲ್ಲುತ್ತದೆ. ಅವರು ನುಡಿದಂತೆ ನಡೆಯುತ್ತಿದ್ದವರು. ಅವರ ಪ್ರಾಮಾಣಿಕತೆಯಂತೂ, ಅಚ್ಚರಿಯನ್ನುಂಟುಮಾಡುವಂತಿದ್ದ ಅಮೋಘ ಗುಣ. ಆ ಗುಣದ ದೆಸೆಯಿಂದ, ಅವರು ಮುಚ್ಚುಮರೆಯಿಲ್ಲದೆ ಮಾತನಾಡುತ್ತಿದ್ದರೆಂಬ ಖ್ಯಾತಿಯನ್ನು ಗಳಿಸಿದರು. ಅವರ ಮಾತುಗಳಲ್ಲಿ ಅವರ ಸಹೋದ್ಯೋಗಿಗಳಿಗೆ ಬಹಳ ಗೌರವ. ತಮಗೆ ಅಪ್ರಿಯವಾದುದನ್ನೇ ಅವರು ತಿಳಿಸಿದರೂ, ಅದನ್ನು ಅವರ ಸಹೋದ್ಯೋಗಿಗಳು ಸಾವಧಾನವಾಗಿ ಪರ್ಯಾಲೋಚಿಸಿ ಅವರ ಸಲಹೆಗಳಂತೆ ನಡೆದ ಕೆಲವು ಸಂದರ್ಭಗಳೂ ಉಂಟು. ಅವರು (ಸಂಬಂಧಪಟ್ಟವರಿಗೆ) ಒಂದು ಮಾತನ್ನು ಹೇಳಿದರೆ ಸಾಕು, ಬಡವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಗಳು (freeships) ತಪ್ಪದೆ ಲಭಿಸುತ್ತಿದ್ದುವು; ವಿದ್ಯಾರ್ಥಿಗಳು ನಿಜವಾಗಿಯೂ ಬಡವರಾಗಿದ್ದರೇ—ಎಂಬುದನ್ನು ಅವರು ಕೂಲಂಕಷವಾಗಿ-ತಮಗೆ ತೃಪ್ತಿಯುಂಟಾಗುವ ಮಟ್ಟಿಗೆ—ವಿಚಾರಿಸಿಕೊಂಡ ಬಳಿಕ ಆ ವಿಚಾರವಾಗಿ ಪ್ರಾಮಾಣಿಕತೆಯಿಂದ ವ್ಯವಹರಿಸುತ್ತಿದ್ದುದೇ ಅದಕ್ಕೆ ಕಾರಣ; ಹೀಗೆ ಸಹಾಯ ಮಾಡುವುದರಲ್ಲಿ ಸಹಾಯವನ್ನು ಪಡೆಯಬೇಕಾದ ವಿದ್ಯಾರ್ಥಿಗಳು ತಮ್ಮ ಶಿಷ್ಯರೇ ಅಲ್ಲವೇ—ಎಂಬ ಸಂಗತಿಯನ್ನೇ ತಮ್ಮ ಮನಸ್ಸಿಗೆ ತಂದುಕೊಳ್ಳದೆ ಯಾರು ಹೆಚ್ಚು ಅರ್ಹರಾಗಿ ಬಡವರಾಗಿರುತ್ತಿದ್ದರೋ ಆ ವಿದ್ಯಾರ್ಥಿಗಳಿಗೆ ಮಾತ್ರವೇ ಸಹಾಯವಾಗುವಂತೆ ವರ್ತಿಸುತ್ತಿದ್ದರು. ಪ್ರಾಮಾಣಿಕತೆಯಿಂದ ಕರ್ತವ್ಯಪಾಲನೆಯಾಗಬೇಕಾದ ನಿಷ್ಠೆಗೆ ಲೋಪಬಂದು ವಿದ್ಯಾರ್ಥಿಗಳಿಗೆ ಅನ್ಯಾಯವಾದ ಸಂದರ್ಭಗಳಲ್ಲಿ ತಮ್ಮ ಸಹೋದ್ಯೋಗಿಗಳ ನಿಷ್ಠುರವನ್ನು ಕಟ್ಟಿಕೊಂಡು ನ್ಯಾಯವನ್ನು ದೊರೆಯಿಸುವುದಕ್ಕೆ ಸಿದ್ಧವಾಗಿರುತ್ತಿದ್ದುದು ಅವರ ದೊಡ್ಡ ಗುಣ. ಕಾಲೇಜಿನ ನಾನಾ ತರಗತಿಗಳ ಪರೀಕ್ಷೆಗಳ ಸಂಬಂಧವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಉತ್ತರ ಪತ್ರಿಕೆಯಲ್ಲಿಯ ಉತ್ತರವನ್ನೂ ಓದಿ ಪ್ರತ್ಯೇಕ ಪ್ರತ್ಯೇಕವಾಗಿ ಅಂಕಗಳನ್ನು ಕೊಡುವ ಕ್ರಮವನ್ನು ಬಿಟ್ಟು ಪ್ರತಿಯೊಂದು ಉತ್ತರ ಪತ್ರಿಕೆಯಲ್ಲಿಯ ಉತ್ತರಗಳನ್ನೆಲ್ಲ ಒಟ್ಟಿಗೆ ಓದಿ ಯುಕ್ತವೆಂದು ತೋರಿದಷ್ಟು ಅಂಕಗಳನ್ನು ಕೊಡುವ ಹೊಸ ಬಗೆಯ ಕ್ರಮವನ್ನು ವಿಜ್ಞಾನಶಾಖೆಯ ಒಬ್ಬರು ಅಧ್ಯಾಪಕರು ಏರ್ಪಡಿಸಿಕೊಂಡುದರ ದೆಸೆಯಿಂದ ಅನೇಕ ವಿದ್ಯಾರ್ಥಿಗಳಿಗೆ ದೊರೆಯಬೇಕಾಗಿದ್ದಷ್ಟು ಅಂಗಳು ದೊರೆಯದೆ ಅನ್ಯಾಯವಾಯಿತು. ಆಗ ಅವರು ವಿಜ್ಞಾನಶಾಖೆಯ ಆ ಅಧ್ಯಾಪಕರೊಡನೆ ವಿದ್ಯಾರ್ಥಿಗಳ ಪರವಾಗಿ ವಾದಿಸಿ ನ್ಯಾಯವನ್ನು ದೊರೆಯಿಸಿದುದಲ್ಲದೆ ಆ ಅಧ್ಯಾಪಕರು ಹೊಸಬಗೆಯ ಕ್ರಮವನ್ನು ಕೈಬಿಟ್ಟು—ಹಿಂದಿನಿಂದ ನಡೆದು ಬಂದಿದ್ದ ಕ್ರಮವನ್ನೇ ಅನುಸರಿಸಿ—ಉತ್ತರಗಳಿಗೆ ಎಂದಿನಂತೆ ಪ್ರತ್ಯೇಕ ಪ್ರತ್ಯೇಕವಾಗಿ ಅಂಕಗಳನ್ನು ಕೊಡುವಂತೆ ಮಾಡಿದರು. ಪೂರ್ವಭಾವಿಯಾಗಿ ಅಪ್ಪಣೆ ಪಡೆಯದೆ ವಿದ್ಯಾರ್ಥಿಗಳು ಕಾಲೇಜಿನಿಂದಹೋಗಿ ಶ್ರೀಮತಿ ಸರೋಜಿನಿನಾಯ್ಡು ಅವರ ಮಾಡಿದ ಭಾಷಣವನ್ನೂ ಕವನಗಳ ವಾಚನವನ್ನೂ ಕೇಳಿದ ಸಂದರ್ಭದಲ್ಲಿ—ಆಗ್ಗೆ ಸೆಂಟ್ರಲ್ ಕಾಲೇಜಿನ ಮುಖ್ಯಾಧಿಕಾರಿ (Principal) ಪದವಿಗೆ ಬಂದಿದ್ದ ಡಾಕ್ಟರ್ ಮೆಟ್ಕಾಫ್ ಅವರು ನಡೆಯಿಸಿದ ಅಧ್ಯಾಪಕ ಪ್ರಾಧ್ಯಾಪಕರುಗಳೇ ಮುಂತಾದವರ ರಹಸ್ಯಗೋಷ್ಠಿಯೊಂದರಲ್ಲಿ ವಿದ್ಯಾರ್ಥಿಗಳ ಪರವಾಗಿ ಅವರು ನಿರ್ಭಯವಾಗಿ ವಾದಿಸಿ ವಿದ್ಯಾರ್ಥಿಗಳ ಮೇಲೆ ಆಕ್ರೋಶವು ಕಡಮೆಯಾಗುವಂತೆಯೂ ವಿದ್ಯಾರ್ಥಿಗಳಿಗೆ ದಂಡನೆಯಾಗದಂತೆಯೂ ಮಾಡಿದುದೂ ಉಂಟು! ಇಂಗ್ಲಿಷ್ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಬೋಧಕರಾದ ಅಧ್ಯಾಪಕ ವರ್ಗದವರೆಲ್ಲರೂ ತಮ್ಮ ವಿದ್ಯಾರ್ಥಿಗಳು ಸಾಹಿತ್ಯ ಪ್ರೇಮವನ್ನು ವೃದ್ಧಿಪಡಿಸಿಕೊಳ್ಳಬೇಕೆಂದು ಪದೇ ಪದೇ ಬೋಧಿಸುತ್ತಿದ್ದೂ, ವಿದ್ಯಾರ್ಥಿಗಳು ಸಾಹಿತ್ಯ ಪ್ರೇಮದಿಂದ ಸಾರ್ವಜನಿಕ ಸಭೆಗೆ ಹೋದುದಕ್ಕಾಗಿ ಅವರನ್ನು ಆಕ್ಷೇಪಿಸಿ ದಂಡಿಸುವ ಯೋಚನೆ ಮಾಡುವುದು ಪ್ರಾಮಾಣಿಕತೆಯ ವರ್ತನೆಯಲ್ಲ, ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ದಂಡಿಸಿದರೆ ವಿರಸಕ್ಕೆ ಮಾರ್ಗವಾಗಬಹುದು, ಪೂರ್ವಭಾವಿಯಾಗಿ ಅನುಮತಿ ಪಡೆಯದೆ ವಿದ್ಯಾರ್ಥಿಗಳು ಸಾರ್ವಜನಿಕ ಸಭೆಗೆ ಹೋಗಿ ತಮ್ಮ ತಮ್ಮ ತರಗತಿಗಳ ಪಾಠಗಳಿಗೆ ತಪ್ಪಿಸಿಕೊಂಡುದೇನೊ ಅಪರಾಧ, ಮುಂದೆಂದೂ ಹಾಗೆ ಮಾಡಕೂಡದೆಂದು ವಿದ್ಯಾರ್ಥಿಗಳಿಗೆ

ಬುದ್ಧಿ ಹೇಳಿ ಎಚ್ಚರಿಸಿದರೇ ಸಾಕು—ಎಂಬಿವು ಅವರ ವಾದದ ಮುಖ್ಯಾಂಶಗಳು. ಅವರ ವಾದವೇ ಅಂಗೀಕೃತ ವಾಯಿತು. ಪ್ರಾಮಾಣಿಕತೆಗೆ ಅವರು ಪಡೆದಿದ್ದ ಖ್ಯಾತಿಯೇ ಕಾರಣ. ತಮ್ಮ ಮೇಲಿನ ಅಧಿಕಾರಿಗಳ ಮುಖೋಲ್ಲಾಸಕ್ಕಾಗಿ ಅವರೆಂದಿಗೂ ಆತ್ಮಸಾಕ್ಷಿಗೆ ವಿರೋಧ ವಾಗಿ ವರ್ತಿಸಿದವರಲ್ಲ; ಅಷ್ಟು ಪರಿಶುದ್ಧವಾದುದು ಮತ್ತು ಉತ್ತಮವಾದುದು ಅವರ ಪ್ರಾಮಾಣಿಕತೆ. ಪ್ರತಿಯೊಂದು ಭಾಷೆಗೂ ಅದರದರ ಸೌಂದರ್ಯವೂ, ಇತಿಮಿತಿಗಳೂ ಉಂಟೆಂಬುದನ್ನು ಪ್ರಾಮಾಣಿಕತೆಯಿಂದ ಪರಿಶೀಲಿಸಿ ಮನ ವರಿಕೆ ಮಾಡಿಕೊಳ್ಳಬೇಕೆಂದೂ, ಯಾವ ಭಾಷೆಯ ವಿಚಾರ ದಲ್ಲಾಗಲಿ ದುರಭಿಮಾನವನ್ನಿಟ್ಟುಕೊಳ್ಳುವುದು ಸರಿಯಲ್ಲ ವೆಂದೂ ಅವರು ಹೇಳುತ್ತಿದ್ದರು. ಆ ಸಂಬಂಧವಾಗಿ ಒಂದು ಸಂದರ್ಭದಲ್ಲಿ ಅವರು ಸೂಚಿಸಿದ ಮಾತುಗಳ್ನು ಇಲ್ಲಿ ನೋಡಬಹುದಾಗಿದೆ: "ಉದಾಹರಣೆಗಾಗಿ ಹೇಳೋದಾದರೆ ಕನ್ನಡದ ಆಡುಮಾತಿನ 'ನಿನ್ನ ತಾಯಿತಂದೆಗಳಿಗೆ ನೀನು ಎಷ್ಟನೇ ಮಗ?' ಎಂಬ ಪ್ರಶ್ನೆಯನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆಮಾಡೋದು ಶಕ್ಯವಿಲ್ಲ. ಕನ್ನಡಭಾಷೆಯಿಂದ ಇಂಗ್ಲಿಷ್‌ಗೆ ತರ್ಜುಮೆ ಮಾಡಲಾಗದ ಎಷ್ಟೋ ಸುಂದರ ವಾಕ್ಯಗಳು ಕನ್ನಡ ಕಾವ್ಯಗಳಲ್ಲಿವೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿಯ 'ಶಿವನಂತೆ ಗಂಗಾಹಿಮಕರಾನ್ವಿತಂ' ಎಂಬುದನ್ನಾಗಲಿ, 'ಈತಂ ಮಹಾಹಿತನೆಮಗೆಸರ್ವಥಾ ಮಿತ್ರನಹುದು' ಎಂಬುದನ್ನಾಗಲಿ, ಆದರಲ್ಲಿರುವಂತೆ ಒಟ್ಟಿಗೆ ಎರಡೆರಡು ಅರ್ಥಗಳನ್ನು ಸೇರಿಸಿ ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡೋಕಾಗುತ್ತೆಯೆ? ಇಂಗ್ಲಿಷಿನಲ್ಲಿರುವ 'airy nothing' ಮುಂತಾದುವುಗಳನ್ನು ಅವುಗಳ ಪೂರ್ಣಾರ್ಥ ಬರುವಂತೆ ಅಷ್ಟಷ್ಟೇ ಪದಗಳಲ್ಲಿ ಕನ್ನಡಕ್ಕೆ ಭಾಷಾಂತರ ಮಾಡೋಕೆ ಆಗುತ್ತೆಯೆ? ಅಭಿಜ್ಞಾನ ಶಾಕುಂತಲ ನಾಟಕದಲ್ಲಿಯ "ನ ಖಲು ನ ಖಲು ಬಾಣಃ" ಎಂಬ ಮಾತುಗಳನ್ನು ಅವುಗಳ ನಿಷೇದಾರ್ಥವು ಅವು ಗಳಷ್ಟೇ ಮಟ್ಟಿನ ರಭಸದಿಂದ ಸ್ವಾರಸ್ಯವಾಗಿ ಸ್ಫುರಿಸು ವಂತೆ ಯಾವ ಭಾಷೆಯಲ್ಲಯಾದರೂ ತರ್ಜುಮೆ ಮಾಡೋದು ಸಾಧ್ಯವೇ? ಪ್ರತಿಯೊಂದು ಭಾಷೆಯಲ್ಲಿಯ ಈ ಬಗೆಯ ನ್ಯೂನತೆಗಳನ್ನೂ ಪ್ರಾಮಾಣಿಕತೆಯಿಂದ ಗಮನಿಸಿ ಮನವರಿಕೆ ಮಾಡಿಕೊಳ್ಳಬೇಕು. ಆ ಭಾಷೆಯ ಸೊಬಗುಗಳನ್ನೂ ಸವಿಯಬೇಕು." ಅವರು ಆಡಿದ ಆ ಮಾತುಗಳನ್ನು ಮರೆಯುವುದು ಸಾಧ್ಯವೇ ಇಲ್ಲ. ಅವರು "ಮೆದುಳು ಕೈಕೊಟ್ಟರೆ ಏನು ಮಾಡಬೇಕಾಗುತ್ತೆ?" ಎಂದು ಹೇಳಿದ ಪ್ರಸಂಗವನ್ನೂ—ಅವರು ಮುಚ್ಚುಮರೆ ಯಿಲ್ಲದೆ ಮಾತನಾಡುತ್ತಿದ್ದಾಗ ಪ್ರಾಮಾಣಿಕತೆಯ ನಿದರ್ಶನವಾಗಿ – ಇಲ್ಲಿ ಸೂಚಿಸಬಹುದಾಗಿದೆ: ಒಮ್ಮೆ ಸೀತಾದೇವಿಯು ಶ್ರೀರಾಮನ ಕೊರಳಿಗೆ ವರಮಾಲೆಯನ್ನು ಹಾಕಿದ ಸಂಗತಿಯನ್ನು ಕುರಿತ ಪಂಪರಾಮಾಯಣದ ವೃತ್ತದಲ್ಲಿಯ "ಮಾಲೆಯ ಮೇಲೆ ತುಂಬಿಯ ತೆರಂಬೊಲೆ-ದಾಡೆ ಕೇಕರಮಾಲೆ" ಮತ್ತು "ಶಿರೀಷಮಾಲೆಯಂ ನೀಳ್ದ ಬಾಹುಲತೆ ಸೋಲಿಸೆ"– ಎಂಬೆರಡು ವಾಕ್ಯಗಳನ್ನೂ ವಿವರಿಸಿ ಹೇಳಿದ ಮಾತುಗಳಿವು: "ಕುಸುಮ ಕೋಮಲೆ ಯಾದ ಸೀತೆ ಶ್ರೀರಾಮನ ಕೊರಳಿಗೆ ಸುಮಮಾಲೆಯನ್ನು ಹಾಕಿದ ಸನ್ನಿವೇಶವನ್ನು ವರ್ಣಿಸಿದ ಈ ವಾಕ್ಯಗಳಲ್ಲಿಯ ಪದಪ್ರಯೋಗಗಳೆಷ್ಟು ಮೃದುವಾದ ಶಬ್ದ ಸಂಪತ್ತಿನಿಂದ ಕೂಡಿ ಎಷ್ಟು ಮಧುರವಾಗಿವೆ, ನೋಡಿ. ಸೀತೆ ಕೈಗಳಲ್ಲಿ ಕುಸುಮಮಾಲೆಯನ್ನು ಹಿಡಿದು ನಿಂತಿದ್ದಾಳೆ. ಅವಳ ನೀಲನೇತ್ರಗಳಿಂದ ಕೇಕರಮಾಲೆ ಆ ಸುಮಮಾಲೆಯ ಮೇಲೆ ತುಂಬಿಯ ತೆರದಲ್ಲಿ ಹರಿದಾಡುತ್ತಿದೆ. ನೀಡಿದ ಬಾಹುಲತೆ ಶಿರೀಷಮಾಲೆಯನ್ನು ಏಳಿಸುತ್ತದೆ. ಶಿರೀಷ ಪುಷ್ಪವೇ ಅತ್ಯಂತ ಮೃದು. ಅದನ್ನೇಳಿಸುವ ಆ ಬಾಹುಲತೆ ಶಿರೀಷಮಾಲೆಗಿಂತ ಕೋಮಲವೆಂಬ ವರ್ಣನೆ ಎಷ್ಟು ಸೊಗಸಾಗಿದೆ, ನೋಡಿ. ಇಷ್ಟು ಕೋಮಲೆಯಾದ ಸೀತೆ 'ರಾಮನ ಮೇರುಗೆ ಮಾಲೆ ಸೂಡಿದಳ್'! ಆ ಸುಮ ಮಾಲೆಯೊಡನೆ, ಕೇಕರಮಾಲೆಯನ್ನು 'ರಾಮನ ಮೇರುಗೆ' ಸೀತೆ ಸೂಡಿದಳೆಂಬುದೂ ಕವಿಯ ಆಶಯವೇನೊ-ಎನ್ನಿಸೋ ಹಾಗಿದೆ, ಅಲ್ಲವೆ?" ಆ ಮಾತುಗಳನ್ನು ಕೇಳಿದಾಗ ಉಂಟಾದ ಆನಂದವು ಅಷ್ಟಿಷ್ಟಲ್ಲ. ಆ ವೃತ್ತವನ್ನು ಪೂರ್ತಿ ಯಾಗಿ ಬರೆದುಕೊಳ್ಳಬೇಕೆಂದು ನನಗೆ ಆಶೆಯಾಯಿತು. ಸ್ವಲ್ಪ ಹೊತ್ತಿನ ಬಳಿಕ ಅವರ ಬಳಿಗೆ ಹೋಗಿ ಅದನ್ನು ತಿಳಿಸಿದಾಗ ಅವರು ನಕ್ಕು "ಆ ವೃತ್ತದ ಸ್ವಲ್ಪ ಭಾಗ ಜ್ಞಾಪಕವಿತ್ತು. ಉಳಿದ ಭಾಗ ಜ್ಞಾಪಿಸಿಕೊಳ್ಳಬೇಕೆಂತ ಪ್ರಯತ್ನ ಮಾಡಿದ್ದು ಸಾಗಲಿಲ್ಲ. ಮೆದುಳು ಕೈಕೊಟ್ಟರೆ ಏನು ಮಾಡೋಕಾಗುತ್ತೆ? ನಾಳೆ ಬಂದು ನೋಡಿ. ಪೂರ್ತಿ ಯಾಗಿ ವೃತ್ತ ಬರೆದುಕೊಳ್ಳೋರಂತೆ" ಎಂದರು. ಮುಚ್ಚು ಮರೆಯಿಲ್ಲದೆ ಮಾತನಾಡಿದ ಅವರ ಪ್ರಾಮಾಣಿಕತೆಯನ್ನು ಕಂಡು ವಿಸ್ಮಯವಾಯಿತು.

ಈಗ್ಗೆ ಐವತ್ತುವರ್ಷಗಳ ಹಿಂದೆ–೧೯೧೯ನೆಯ ಸಂವತ್ಸರ ದಲ್ಲಿ–ನಮ್ಮ ಗುರುವರ್ಯರು "ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ"ವನ್ನು ಸ್ಥಾಪಿಸಿದರು. ಕನ್ನಡದ ಪುರೋಭಿವೃದ್ಧಿಗಾಗಿ ಸಂಘವನ್ನು ಸ್ಥಾಪಿಸುವುದರಲ್ಲಿ ಅವರಿಗಿದ್ದ ಉತ್ಸಾಹವನ್ನೂ, ಸಂಘವನ್ನು ಸ್ಥಾಪಿಸಿ ವೃದ್ಧಿ

ಗೊಳಿಸುವುದಕ್ಕಾಗಿ ಅವರು ವಹಿಸಿದ ಶ್ರಮವನ್ನೂ ವರ್ಣಿಸ ಲಳವಲ್ಲ. ಮೈಸೂರು ಸಂಸ್ಥಾನದಲ್ಲಿ-ಎಂದರೆ ಹಳೆಯ ಮೈಸೂರು ರಾಜ್ಯದಲ್ಲಿ-ಏರ್ಪಟ್ಟ ಸಂಘಗಳಲ್ಲಿ ಅದೇ ಮೊಟ್ಟ ಮೊದಲನೆಯದು. (ಅದರ ಮಾದರಿಯನ್ನು ಮೇಲ್ಪಙ್ತಿ ಯನ್ನೂ ಅನುಸರಿಸಿ ಅನೇಕ ಸ್ಥಳಗಳಲ್ಲಿ ಕನ್ನಡ ಭಾಷೆಯ ಏಳಿಗೆಗಾಗಿ ಆ ಬಳಿಕ ಹಲವಾರು ಸಂಘಗಳು ಏರ್ಪಟ್ಟು ಉತ್ಸಾಹದಿಂದ ಶ್ರಮಿಸತೊಡಗಿದವು) ಅದನ್ನು ಅವರು ಸ್ಥಾಪಿಸುವ ಕಾರ್ಯದಲ್ಲಿ ಉದ್ಯುಕ್ತರಾದಾಗಿನಿಂದ ಅದರ ಪ್ರಾರಂಭೋತ್ಸವವು ನಡೆಯುವವರೆಗೂ ಆ ಬಳಿಕಲೂ ಅವರೊಡನೆ ನಾನಾ ಕೆಲಸಗಳಿಗಾಗಿ ಸುತ್ತಾಡು ವುದೇ ಮುಂತಾದ ಸೇವಾವಕಾಶದ ಸುಯೋಗವು ನಮ್ಮಲ್ಲಿ ಕೆಲವರಿಗೆ ಲಭಿಸಿತು. ಹಾಗೆ ಕೆಲಸಮಾಡಿದುದರಿಂದ ನಮ್ಮ ವ್ಯಾಸಂಗಕ್ಕೆ ಅಡ್ಡಿಯಾಯಿತೆಂದು ಅವರು ಹೇಳಿ ದಾಗ ನಾನು "ಈ ದೊಡ್ಡ ಕೆಲಸಕ್ಕಿಂತ ಇನ್ನಾವುದೂ ಹೆಚ್ಚಲ್ಲ, ಸಾರ್. ಈ ಕೆಲಸ ಸಿಕ್ಕಿದ್ದು ನಮ್ಮ ಭಾಗ್ಯ, ಸಾರ್" ಎಂದೆ. ಅವರು ಕಂಬನಿದುಂಬಿ, ಉತ್ತರಕ್ಷಣ ದಲ್ಲಿ ಸಂಯಮವನ್ನು ತೋರಿ, "ಭಾವನೆ ಹೀಗಿರಬೇಕು" ಎಂದರು. ನಿಷ್ಠುರ ಸತ್ಯವನ್ನು ನುಡಿದಾಗ ಒಮ್ಮೊಮ್ಮೆ ಹೊರನೋಟಕ್ಕೆ ಅವರು ಕೊಂಚ ಕಠಿನ ಸ್ವಭಾವದವ ರೆಂಬ ತಪ್ಪು ಅಭಿಪ್ರಾಯಕ್ಕೆ ಅವಕಾಶವಿದ್ದಿತಾದರೂ, ಅವರ ಹೃದಯವು ಬೆಣ್ಣೆಯಂತೆ ಮೃದು; ಶಿಷ್ಯರಲ್ಲಿ ಅವರಿಗೆ ಬಹಳ ಪ್ರೀತಿ; ಸಂಘದ ಅಧ್ಯಕ್ಷರಾಗಿದ್ದ ಪ್ರಾಧ್ಯಾಪಕ (professor) ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರಲ್ಲಿ ಅವರು ತೋರುತ್ತಿದ್ದ ಗೌರವ ವಿಶ್ವಾಸಗಳೂ, ಸಂಘದ ಪ್ರಾರಂಭೋತ್ಸವದಲ್ಲಿ ಅಧ್ಯಕ್ಷಭಾಷಣವನ್ನು ಕನ್ನಡದಲ್ಲಿ ಮಾಡಿ ಹರಸಿದ ಮಾನ್ಯ ಹಿರಿಯ ವಿದ್ವಾಂಸರಾದ ಶ್ರೀ ಆರ್. ನರಸಿಂಹಾಚಾರ್ಯರಲ್ಲಿ ಅವರು ತೋರಿಸಿದ ಗೌರವ ವಿಶ್ವಾಸಗಳೂ ಕಿರಿಯರಿಗೆ ಮಾರ್ಗದರ್ಶಕವಾಗಿದ್ದು ವೆಂಬುದರಲ್ಲಿ ಲೇಶವೂ ಅತಿಶಯೋಕ್ತಿಯಿಲ್ಲ. ಸಂಘದ ಪ್ರಾರಂಭೋತ್ಸವವು ನೆರವೇರಿದ ಬಳಿಕ ಸಂಘದ ಆಶ್ರಯ ದಲ್ಲಿ ಮೊದಲನೆಯ ಭಾಷಣವು ನನ್ನಿಂದಲೂ, ಎರಡನೆಯ ಭಾಷಣವು (ನನ್ನ ಸಹಪಾಠಿಯವರಾಗಿದ್ದು ನನ್ನ ಪ್ರಿಯ ಮಿತ್ರರಾಗಿರುವ) ಶ್ರೀ ಎಸ್. ವಿ. ರಂಗಣ್ಣನವರಿಂದಲೂ ನಡೆಯಬೇಕೆಂದು ಹೇಳಿ, ಆ ರೀತಿ ಭಾಷಣಗಳನ್ನೇರ್ಪಡಿಸಿ ಹರ್ಷಿಸಿದರು. ಆ ಬಳಿಕ ಆಗಿಂದಾಗ್ಗೆ ಅನೇಕರಿಂದ ಕನ್ನಡದಲ್ಲಿ ಭಾಷಣಗಳನ್ನೇರ್ಪಡಿಸಿ ನಲಿದರು. ಸ್ವಲ್ಪ ಕಾಲದ ತರುವಾಯ ಸಂಘದ ಆಶ್ರಯದಲ್ಲಿ ಅವರು "ಪ್ರಬುದ್ಧ ಕರ್ಣಾಟಕ" ಪತ್ರಿಕೆಯನ್ನು ಪ್ರಕಟಿಸ ಲಾರಂಭಿಸಿದರು. ಅದರ ಸಂಪಾದಕರಾಗಿ ಅನೇಕ ವರ್ಷ ಗಳ ಕಾಲ ಆದರ್ಶರೀತಿಯಲ್ಲಿ ಶಿಸ್ತಿನಿಂದಲೂ ಅಚ್ಚುಕಟ್ಟಿ ನಿಂದಲೂ, ಕೆಲಸಮಾಡಿದರು. ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವಶಾಸ್ತ್ರ ಮುಂತಾದುವುಗಳನ್ನು ಕುರಿತ ವಿದ್ವತ್ಪೂರ್ಣ ಲೇಖನಗಳನ್ನು ವಿದ್ವಾಂಸರಿಂದ ಬರೆಯಿಸಿ ಪತ್ರಿಕೆಯಲ್ಲಿ ಅವರು ಪ್ರಕಟಿಸಿದರು. ಸಂಘದ ಆಶ್ರಯದಲ್ಲಿ "ಇಂಗ್ಲಿಷ್ ಗೀತೆಗಳು" ಮುಂತಾದ ಗ್ರಂಥಗಳು ಪ್ರಕಟವಾದುವು. "ಪ್ರಬುದ್ಧ ಕರ್ಣಾಟಕ" ಪತ್ರಿಕೆಯಲ್ಲಿ ಅವರ ಸಂಪಾದಕೀಯ ಲೇಖನಗಳನ್ನೋದುವುದೇ ಒಂದು ಹಬ್ಬದಂತೆ ತೋರಿ, ರಸದೂಟಕ್ಕೆ ಮನಸ್ಸು ಮತ್ತೆ ಮತ್ತೆ ಹಾತೊರೆಯುತ್ತಿದ್ದಿ ತೆಂದರೆ, ಅದರಲ್ಲಿ ಸ್ವಲ್ಪವೂ ಆಶ್ಚರ್ಯವಿಲ್ಲ. ಅವರು ಸಂಪಾದಕರಾಗಿದಷ್ಟು ಕಾಲವೂ, ಅವರು ಸಂಪಾದಕತ್ವ ವನ್ನು ಬಿಟ್ಟಾಗಿನಿಂದ ಇದುವರೆಗೂ, ಆ ಪತ್ರಿಕೆಯಿಂದ ಕನ್ನಡ ಭಾಷೆಗೂ ಸಾಹಿತ್ಯಕ್ಕೂ ಅಮೋಘಸೇವೆಯಾಗಿರುವು ದಲ್ಲದೆ, ಎಷ್ಟು ಜಟಿಲವಾದ ವಿಷಯಗಳನ್ನು ಬೇಕಾದರೂ ಕನ್ನಡದಲ್ಲಿ ಸರಳವಾಗಿ ಮತ್ತು ಸುಲಲಿತವಾಗಿ ಬರೆಯ ಬಹುದೆಂಬ ಮಟ್ಟಿಗೆ ಕನ್ನಡ ಭಾಷೆಗೆ ಸತ್ತ್ವವಿದೆಯೆಂಬ ಸಂಗತಿಯೂ ಚೆನ್ನಾಗಿ ವ್ಯಕ್ತವಾಗಿದೆ. ಶ್ರೀ ಎಸ್. ವಿ. ರಂಗಣ್ಣನವರೂ, ಇತರ ಕೆಲವರು ಮಿತ್ರರೂ, ನಾನು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಅವರಿಂದ ಸಂಘವು ಸ್ಥಾಪಿತವಾಗಿ ಪತ್ರಿಕೆಯ ಪ್ರಕಟಣೆಯೂ ಪ್ರಾರಂಭವಾಯಿತೆಂಬುದು ನಮ್ಮ ಹೆಮ್ಮೆ; ಅವರ ಪ್ರಿಯ ಶಿಷ್ಯರಾಗಿದ್ದುದು ನಮ್ಮ ಪ್ರಿಯಮಿತ್ರರಾದ ಶ್ರೀ ಎಸ್. ವಿ. ರಂಗಣ್ಣನವರ ಮತ್ತು ನನ್ನ ಭಾಷಣಗಳು "ಪ್ರಬುದ್ಧ ಕರ್ಣಾಟಕ" ಪತ್ರಿಕೆಯಲ್ಲಿ ಪ್ರಕಟವಾದುದೂ, ಅವುಗಳು ಜನಪ್ರಿಯವಾದುದನ್ನು ಕಂಡು ನಮ್ಮ ಗುರುವರ್ಯರಿ ಗುಂಟಾದ ಸಂತೋಷವೂ, ನಾನು ಎಂದೂ ಮರೆಯ ಲಾರದ ಆನಂದದ ಸಂಗತಿಗಳು. ನಮ್ಮಿಬ್ಬರ ವಿಚಾರವನ್ನು ಪತ್ರಿಕೆಯ ರಜತಮಹೋತ್ಸವ ಸಂಚಿಕೆಯಲ್ಲಿ ಕೂಡ ವಿಶ್ವಾಸದಿಂದ ಬರೆದಿರುವ ಅವರ ಶಿಷ್ಯಪ್ರಿಯತೆಯನ್ನು ಎಷ್ಟು ಕೊಂಡಾಡಿದರೂ ಸಾಲದು.

ನಾನು ಸೆಂಟ್ರಲ್ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ೧೯೧೮ನೆಯ ಸಂವತ್ಸರದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ದವರು ಕನ್ನಡ ಗ್ರಂಥಲೇಖನ ಸ್ಪರ್ಧೆಯನ್ನೇರ್ಪಡಿಸಿ, ಒಟ್ಟು ಕನ್ನಡನಾಡಿನಲ್ಲಿ ಯಾರು ಬೇಕಾದರೂ (ಸೂಚಿತ ವಿಷಯಗಳ ಮೇಲೆ) ಗ್ರಂಥಗಳನ್ನು ಬರೆದು ಆ ಬಹುಮಾನ ಸ್ಪರ್ಧೆಗೆ ಕಳುಹಬಹುದೆಂದು ಪ್ರಕಟಿಸಿದರು. ಆ ಬಹು ಮಾನ ಸ್ಪರ್ಧೆಯ ಫಲಿತಾಂಶಗಳು ಅದರ ಮುಂದಿನ

ಸಂವತ್ಸರದಲ್ಲಿ ಪ್ರಕಟವಾದಾಗ ನಾನಿನ್ನೂ ವಿದ್ಯಾರ್ಥಿಯಾಗಿಯೇ ಇದ್ದೆ. ಆ ಸ್ಪರ್ಧೆಯಲ್ಲಿ ನನಗೆ ಏಳನೂರು ರೂಪಾಯಿಗಳ ಬಹುಮಾನ ಲಭಿಸಿದ್ದುದು ತಿಳಿದಾಗ ಗುರುಗಳಿಗೆ ಉಂಟಾದ ಸಂತೋಷವನ್ನೂ, ಅದರ ಪರಿಣಾಮವಾಗಿ ಅವರು ನುಡಿದ ಮಾತುಗಳನ್ನೂ, ಎಷ್ಟು ಕೊಂಡಾಡಿದರೂ ಸಾಲದು. ಅವರು ಆ ಸಂಗತಿಯನ್ನು ಪತ್ರಿಕೆಯಲ್ಲಿ ಕೂಡ ಸೂಚಿಸಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದ್ದರು. ಅವರ ಶಿಷ್ಯಪ್ರಿಯತೆಯ ದೊಡ್ಡ ಗುಣವನ್ನು ಕೃತಜ್ಞತೆಯಿಂದ ಸ್ಮರಿಸುವ ಕರ್ತವ್ಯ ಬುದ್ಧಿಯಿಂದ ಮಾತ್ರವೇ ಇದನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಅದೇ ರೀತಿ ಅವರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿ ಅವರಲ್ಲಿ ಗೌರವಭಕ್ತಿಗಳನ್ನು ತೋರುವ ಕರ್ತವ್ಯಬುದ್ಧಿಯಿಂದ ನಾನು ಮತ್ತೆ ಕೆಲವು ವಿಷಯಗಳನ್ನು ಸೂಚಿಸಬೇಕಾಗಿದೆ. ನಾನು ಸರಕಾರಿ ಕೆಲಸಕ್ಕೆ ಸೇರಿದಮೇಲೆ ರಚಿಸಿದ ನಾನಾ ಗ್ರಂಥಗಳ ವಿಚಾರದಲ್ಲಿ ಅವರು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ನಾನು ಬರೆದ ನಾಟಕಗಳ ರಂಗಪ್ರದರ್ಶನಗಳಿಗೆ ನನ್ನ ಪ್ರಾರ್ಥನೆಯನ್ನಂಗೀಕರಿಸಿ ದಯಮಾಡಿ ತಮ್ಮ ಹರ್ಷವನ್ನು ಸೂಚಿಸಿ ಆಶೀರ್ವದಿಸಿದರು. ನನ್ನ ಭಾಷಣಗಳನ್ನು ಕೇಳಿ ಸಂತೋಷಿಸಿ ಪ್ರೋತ್ಸಾಹದ ನುಡಿಗಳನ್ನಾಡಿದರು. ಮೈಸೂರು ಸರಕಾರದ ವಿದ್ಯಾಭ್ಯಾಸ ಶಾಖೆಯ ಪಠ್ಯಪುಸ್ತಕ ಸಮಿತಿ, ಪಂಡಿತ ಪರೀಕ್ಷೆಯ ಪರೀಕ್ಷಕರ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯದ "ಬೋರ್ಡ್ ಆಫ್ ಸ್ಟಡೀಸ್ ಇನ್ ಕನ್ನಡ" ಎಂಬ ಸಮಿತಿ ಮತ್ತು ಪರೀಕ್ಷಕರ ಸಮಿತಿ, "ಇಂಗ್ಲಿಷ್-ಕನ್ನಡ ನಿಘಂಟು ಸಂಪಾದಕ ಸಮಿತಿ" ಮುಂತಾದುವುಗಳಲ್ಲಿ ಅವರೊಡನೆ ಸದಸ್ಯನಾಗಿ ಕೆಲಸ ಮಾಡಿದಾಗ ಅವರು ವಿಶೇಷವಾಗಿ ವಾತ್ಸಲ್ಯ ತೋರಿದ್ದರು. ನನಗೆ "ರಾಜಸೇವಾಸಕ್ತ" ಎಂಬ ಬಿರುದೂ "ಪದಶ್ರೀ"ಪ್ರಶಸ್ತಿಯೂ ಲಭಿಸಿದಾಗ ಅವರು ವಾತ್ಸಲ್ಯದಿಂದ ಅಭಿನಂದಿಸಿ ಆಶೀರ್ವದಿಸಿದ್ದರು.

ನಮ್ಮ ಗುರುವರ್ಯರು ಅನೇಕ ಭಾಷೆಗಳನ್ನು ಬಲ್ಲವರಾಗಿ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಉದ್ದಾಮ ಪಾಂಡಿತ್ಯವನ್ನು ಗಳಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಪದವಿಯವರೆಗೂ ಕ್ರಮ ಕ್ರಮವಾಗಿ ಮೇಲಕ್ಕೇರಿ, ವಿದ್ಯಾರ್ಥಿಗಳಿಗೆಲ್ಲ ಅತ್ಯಂತ ಪ್ರಿಯರಾಗಿದ್ದರು. ಡಾ|| ಡಿ. ವಿ. ಗುಂಡಪ್ಪನವರು, ರಾಜಸೇವಾಸಕ್ತ ಡಾ|| ಮಾಸ್ತಿ ವೆಂಕಟೇಶ ಐಯಂಗಾರ್ಯರು, ಡಾ|| ಎ. ಎನ್. ನರಸಿಂಹಯ್ಯನವರು, ಶ್ರೀ ವಿ. ಸೀತಾರಾಮಯ್ಯನವರು, ದಿವಂಗತ ಶ್ರೀ ಟಿ. ಎಸ್. ವೆಂಕಣ್ಣಯ್ಯನವರು, ದಿವಂಗತ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ಮುಂತಾದ ಅವರ ಪರಮ ಮಿತ್ರರಲ್ಲಿ ಅವರಿಗಿದ್ದ ಪ್ರೀತಿ ವಿಶ್ವಾಸಗಳು ಆದರ್ಶಸ್ವರೂಪದವುಗಳೆಂದರೆ ತಪ್ಪಾಗಲಾರದು. ಶಿಷ್ಯರಲ್ಲಿ ಅವರಿಗೆ ಅಸಾಧಾರಣ ವಾತ್ಸಲ್ಯ. ತಮ್ಮ ಶಿಷ್ಯರಲ್ಲಿ ಬಡವರಾಗಿದ್ದ ಕೆಲವರಿಗೆ ಅವರು ಧನಸಹಾಯ ಮಾಡಿದರೆಂದೂ ಕೇಳಿದ್ದೇನೆ. ಅವರು ಸಂಪ್ರದಾಯಪ್ರಿಯರಾಗಿದ್ದರು; ಆದರೆ ಸಂಪ್ರದಾಯಪ್ರಿಯರನೇಕರಲ್ಲಿ ಕಂಡುಬರುವ ಸಂಕುಚಿತ ಭಾವನೆಗಳಿಗೂ ಅವರಿಗೂ ಬಹಳ ದೂರ; ಸಂಪ್ರದಾಯಪ್ರಿಯರಾಗಿದ್ದೂ ಉದಾರ ಹೃದಯರಾಗಿರುವವರ ಗುಂಪಿಗೆ ಸೇರಿದವರವರು. ಅವರ ಅಗಾಧ ಪಾಂಡಿತ್ಯಕ್ಕೆ ಒಪ್ಪವಿಡುವಂತಿದ್ದುವು, ಶೀಲಶುದ್ಧಿ ಮುಂತಾದ ಅವರ ಉದಾತ್ತ ಗುಣಗಳು. ಅವರ ಸ್ನೇಹಪರತೆ, ಸೌಹಾರ್ದತೆ, ಉದ್ಯೋಗಶೀಲತೆ, ದೈವಭಕ್ತಿ, ಸರಳತೆ, ಗುರುಭಕ್ತಿ, ನ್ಯಾಯವರ್ತನೆ, ವ್ಯಾಸಂಗಪ್ರೇಮ, ಜನಾಭಿಮಾನ, ಭಾಷಾಭಿಮಾನ ಮುಂತಾದ ಸದ್ಗುಣಗಳು ಕಿರಿಯರಿಗೆ ಮಾರ್ಗದರ್ಶಕವಾಗಿ ಹಿರಿಯರಿಗೆ ಪ್ರಿಯವಾಗಿದ್ದುವು ಮತ್ತು ಮಿತ್ರರಿಗೆ ಚಿತ್ತಾಕರ್ಷಕವಾಗಿದ್ದುವು; ಅವರಲ್ಲಿ ಸಕಲರಿಗೂ ಪ್ರೀತಿ ಗೌರವಗಳುಂಟಾದುದಕ್ಕೆ ಅವರ ಸದ್ಗುಣಗಳೇ ಕಾರಣ.

ಅವರು ತಮ್ಮದೇ ಆದೊಂದು ವಿಶೇಷ ರೀತಿಯ ಅಭಿಮಾನದಿಂದ ನಾಲ್ಕು ರೀತಿಗಳಲ್ಲಿ ಕನ್ನಡಕ್ಕೆ ಅಮೋಘ ಸೇವೆಯನ್ನು ಸಲ್ಲಿಸಿದರು. ಮೊದಲನೆಯದಾದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ಇಪ್ಪತ್ತೆಂಟು ವರ್ಷಗಳ ಕಾಲ ಕೆಲಸಮಾಡಿ ಶಿಷ್ಯರ ಸಾಹಿತ್ಯಾಭಿರುಚಿಯನ್ನೂ, ಕನ್ನಡ ಸಾಹಿತ್ಯದಮೇಲಿನ ಅಭಿಮಾನವನ್ನೂ ಅವರು ವೃದ್ಧಿಪಡಿಸಿದರು. ಎರಡನೆಯದಾಗಿ, ಸೆಂಟ್ರಲ್ ಕಾಲೇಜಿನಲ್ಲಿ ಸ್ಥಾಪಿಸಿದ "ಕರ್ಣಾಟಕ ಸಂಘ"ದ ಮೂಲಕವೂ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯ ಮೂಲಕವೂ ಕನ್ನಡ ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿಯೂ ಸಹ, ಕನ್ನಡದ ಏಳಿಗೆಗೆ ಅಮೂಲ್ಯ ಸೇವೆಯನ್ನು ಸಲ್ಲಿಸಿದರು. ಮೂರನೆಯದಾಗಿ, ತಮ್ಮ ಭಾಷಣಗಳ ಮೂಲಕವೂ ತಾವು ತಳೆದಿದ್ದ ಕನ್ನಡದ ಪುರೋಭಿವೃದ್ಧಿ ಸಾಧನಾ ದೀಕ್ಷೆಗನುಗುಣವಾದ ಭಾಷಾಭಿಮಾನ ಭಾವನೆಗಳನ್ನು ಸೂಚಿಸಿ, ಜನಸಾಮಾನ್ಯರಲ್ಲಿ ಕನ್ನಡದಮೇಲಿನ ಅಭಿಮಾನವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಿ ಅನರ್ಘ್ಯವಾಗಿ ಸೇವೆ ಸಲ್ಲಿಸಿದರು; ಕನ್ನಡದ ಮೇಲಿನ ಮಮತೆಯಿಂದ ಕನ್ನಡದ ನವೋದಯಕ್ಕಾಗಿ ತ್ರಿಕರಣ ಶುದ್ಧವಾದ ಸೇವೆಯನ್ನು ಸಲ್ಲಿಸಿದ ಕರ್ಮಯೋಗಿಗಳವರು.

ಅವರಿಗೆ ಸಂಸ್ಕೃತ ಭಾಷೆಯ ವಿಚಾರವಾಗಿ ಯಾವ ಭಾವನೆ ಯಿದ್ದಿತೆಂಬುದಕ್ಕೆ, "ಸಂಸ್ಕೃತದಲ್ಲಿ ಸಾರವತ್ತಾದದ್ದೆಲ್ಲ ಕನ್ನಡದಲ್ಲಿ ಒದಗಿದರೆ ಸಂಸ್ಕೃತ ಬದುಕುತ್ತದೆ, ಕನ್ನಡ ಬೆಳೆಯುತ್ತದೆ" ಎಂಬ ದೂರದೃಷ್ಟಿಯ ಮಾತುಗಳೇ ನಿದರ್ಶನ; ನಾವು ಇಂಗ್ಲಿಷ್ ಭಾಷೆಯನ್ನು ಕಡೆಗಾಣದೆ ಅದರಿಂದ ಪ್ರಯೋಜನ ಹೊಂದಬೇಕೆಂಬ ವಿಚಾರವನ್ನು "ನಮ್ಮನ್ನು ನಾವು ತಿಳಿದುಕೊಳ್ಳುವುದಕ್ಕೆ ಸಹಾಯ ಮಾಡಿದ್ದು ಇಂಗ್ಲೀಷು. ಸ್ವಹಸ್ತ ಪರಹಸ್ತಗಳಿಂದ ನಮ್ಮ ಕಣಜವನ್ನು ತುಂಬುವ ಸಂಪತ್ತು ಉಳ್ಳದ್ದು ಇಂಗ್ಲೀಷು" ಎಂಬ ಎಣೆಯಿಲ್ಲದ ಹಿತವಚನಗಳು ವ್ಯಕ್ತಗೊಳಿಸುತ್ತವೆ. ಕನ್ನಡದ ಮೇಲಿನ ಅವರ ಅಸೀಮ ಪ್ರೇಮವನ್ನು ಹೃದಯಂಗಮವಾಗಿ ವ್ಯಕ್ತಗೊಳಿಸಿ ಕನ್ನಡಿಗರಲ್ಲಿ ಉತ್ಸಾಹವನ್ನೂ ಸ್ವಭಾಷಾಪ್ರೇಮವನ್ನೂ ತುಂಬುವ ಉಪದೇಶರೂಪದ ನೊಂದ ನುಡಿಗಳಿವು: "ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ, ಮಿಕ್ಕ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ, ಈ ಕಡೆ ಬಂಗಾಳಕೊಲ್ಲಿಯಿದೆ, ಆ ಕಡೆ ಅರಬ್ಬೀ ಸಮುದ್ರವಿದೆ, ಗುಡಿಸಿಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ." ಹಿಂದೀ ಭಾಷೆಯ ಉಗ್ರಪಕ್ಷದ ಚಳುವಳಿಯಿಂದ ಕನ್ನಡದ ಏಳಿಗೆಗೆ ಅಡ್ಡಿಯುಂಟಾಗುವುದೆಂಬುದನ್ನು ಅವರು ಬಹಳ ಹಿಂದೆಯೇ ಮನಗಂಡು, "ಕನ್ನಡಿಗರೇ, ನೀವು ಮಾತ್ರ ನಿಮ್ಮ ಕನ್ನಡದ ಅಭಿಮಾನವನ್ನು ಕಾಪಾಡಿಕೊಳ್ಳಿ. ಮೋಹಕ್ಕೆ ಸಿಲುಕಬೇಡಿ. ವಿಚಾರಮಾಡಿ, ನಿಮ್ಮ ಕನ್ನಡದ ಅಭಿಮಾನವೆಂಬ ಕಾಮಧೇನು ಎಚ್ಚರವಾಗಿದ್ದರೆ, ಬ್ರಹ್ಮದಂಡ ಮುಂದೆ ಇದ್ದರೆ, ನಮ್ಮನ್ನು ಯಾವ ವಿಶ್ವಾಮಿತ್ರನ ಹಿಂದೀಪಡೆಯೂ ಏನೂ ಮಾಡಲಾರದು" ಎಂಬ ವಿವೇಕವಾಣಿಗಳಿಂದ ಕನ್ನಡಿಗರನ್ನು ಎಚ್ಚರಿಸಿದರು. ಅದರಿಂದ ತಾವು ಕಟುವಾದ ಟೀಕೆಗೆ ಗುರಿಯಾದುದಕ್ಕಾಗಿ ಲೇಶಮಾತ್ರವೂ ಚಿಂತಿಸದೆ ಧೀರತೆಯಿಂದ, "ನಾನು ಜೇನು ಗೂಡಿಗೆ ಕೈ ಇಟ್ಟಿದ್ದೇನೆ; ಜೇನು ಎದ್ದಿದೆ; ಅದು ನನ್ನನ್ನು ಕಡಿದರೆ ಚಿಂತೆಯಿಲ್ಲ. ನಮ್ಮ ಜನಕ್ಕೆ ಜೇನುತುಪ್ಪ ದೊರಕಿದರೆ ಸರಿ" ಎಂದು ನುಡಿದ ಮಾತುಗಳು ಅವರ ಹೃದಯವನ್ನೇ ನಮ್ಮೆದುರಿಗೆ ಹಿಡಿದಂತಿವೆ. ಅವರು ತಮ್ಮದೇ ಆದೊಂದು ಆಸ್ಥೆಯಿಂದ ಸೂಚಿಸಿರುವ "ಮಾತೃಭಾಷೆಯ ಮೂಲಕ ಕಲಿತದ್ದೇ ಮೈಹತ್ತುವುದು, ಮಾತೃಭಾಷೆಯಲ್ಲಿ ಬರೆದದ್ದೇ ನಿಲ್ಲುವುದು" ಎಂಬ ನಿರ್ಧರವಾಣಿಗಳು ಮನನಯೋಗ್ಯವಾಗಿವೆ. ನಾಲ್ಕನೆಯದಾಗಿ, ಸ್ಫೂರ್ತಿದಾಯಕವಾಗಿ ಉತ್ತಮ ಗದ್ಯರಚನೆಗೆ ಮಾರ್ಗದರ್ಶಿಗಳಾಗಿರುವ ಶ್ರೇಷ್ಠ ಗ್ರಂಥಗಳನ್ನು ರಚಿಸಿಯೂ ಅವರು ಕನ್ನಡಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿ ಕನ್ನಡಿಗರ ಶಾಶ್ವತ ಕೃತಜ್ಞತೆಗೆ ಪಾತ್ರರಾದರು. ಅವರು ರಚಿಸಿರುವ "ಸಂಸ್ಕೃತ ನಾಟಕ", "ಭಾಸಕವಿ", "ವಚನ ಭಾರತ", "ಕಥಾಮೃತ", "ಬಂಕಿಮಚಂದ್ರ" ಮುಂತಾದ ಗ್ರಂಥರತ್ನಗಳು ಕನ್ನಡ ಸಾಹಿತ್ಯ ಭಂಡಾರದಲ್ಲಿ ಶಾಶ್ವತವಾಗಿ ತೊಳಗುತ್ತವೆಂಬುದರಲ್ಲಿ ಸಂದೇಹವಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಿಂದ ಅವರಿಗೆ "ಡಾಕ್ಟರೇಟ್" ಪ್ರಶಸ್ತಿ ಗೌರವವು ಲಭಿಸಿತು. ಅವರ "ಬಂಕಿಮಚಂದ್ರ" ಗ್ರಂಥಕ್ಕೆ ಭಾರತದ ಸಾಹಿತ್ಯ ಅಕಾಡೆಮಿಯ "ಅವಾರ್ಡ್" (ಪ್ರಶಸ್ತಿ ಗೌರವವು) ಲಭಿಸಿತು. ಅನೇಕ ಸಾವಿರ ಶಿಷ್ಯ ಪ್ರಶಿಷ್ಯರ ಮತ್ತು ಇತರ ಅಸಂಖ್ಯಾತ ವಿದ್ವನ್ಮಣಿಗಳ ಹೃದಯಗಳಲ್ಲಿ ಕನ್ನಡ ನಾಡುನುಡಿಗಳ ಮೇಲಿನ ಅಚಲಪ್ರೇಮವೂ ಅಮಿತ ಕ್ರಿಯಾಶಕ್ತಿಯೂ ನಂದಾದೀಪಗಳಂತೆ ತೊಳಗುವಂತೆ ಮಾಡಿದ ಮಹೋಪಕಾರವೂ ಅವರದಾಗಿದೆ. ಅವರು ದೈವಾಧೀನರಾದುದರಿಂದ, ಕನ್ನಡ ಸಾಹಿತ್ಯಾಕಾಶದಲ್ಲಿ ತೊಳಗುತ್ತಿದ್ದ ಉಜ್ವಲ ತಾರೆಯೊಂದು ಕಣ್ಮರೆಯಾದಂತಾಗಿದೆ. ಅವರ ಕಾಯವಳಿದಿದ್ದರೂ, ಅವರ ಕೀರ್ತಿಯೇನೂ ಉಳಿದೇ ಇರುತ್ತದೆ. ಸಾಧು ಜೀವಿಗಳಾಗಿದ್ದ ಮತ್ತು ಸಾಹಿತ್ಯ ತಪಸ್ವಿಗಳಾಗಿದ್ದ ಆ ಪುಣ್ಯಶ್ಲೋಕರನ್ನು ಸ್ಮರಿಸಿದ ದಿನವೇ ಸುದಿನ: ಅವರನ್ನು ಸ್ಮರಿಸುವುದೇ ಒಂದು ಪುಣ್ಯ ಕಾರ್ಯ.

ಜಿನವಲ್ಲಭನ ಗಿರಿಶಾಸನ

(೧೯೬೮ ಮಾರ್ಚ ಸಂಚಿಕೆಯಿಂದ ಮುಂದುವರಿದುದು)

ಡಾ|| ಪಾಂಡುರಂಗರಾವ ದೇಸಾಯಿ

ಧರ್ಮಪುರ ಎಲ್ಲಿ?

ಇನ್ನೊಂದು ಮುಖ್ಯ ಪ್ರಶ್ನೆ. ಪಂಪನು ಪಡೆದ ಧರ್ಮಪುರವು ಎಲ್ಲಿರಬೇಕು? ಇದಕ್ಕೆ ಉತ್ತರ ನನ್ನ ತಿಳಿವಳಿಕೆಯಂತೆ ಈ ಶಾಸನದ ಒಂದನೆಯ ಪದ್ಯದಲ್ಲಿ ದೊರೆಯುತ್ತದೆ. ಈ ಸಂಸ್ಕೃತ ಪದ್ಯವು ಅರ್ಥಪೂರ್ಣವೂ, ಮನೋಹರವೂ ಆಗಿದೆ. ಜಿನವಲ್ಲಭನು ಪಂಪನ ಉನ್ನತಕೀರ್ತಿಯ ಸ್ಮಾರಕವಾಗಿ ವೃಷಭಗಿರಿಯ ಪ್ರದೇಶದಲ್ಲಿ ತ್ರಿಭುವನತಿಲಕ ಎಂಬ ಬಸದಿಯನ್ನು ಕಟ್ಟಿಸಿದನು. ಕವಿತಾಗುಣಾರ್ಣವ ಕೆರೆಯನ್ನು ಅನುಗೊಳಿಸಿದನು. ಸಿದ್ಧಶಿಲೆಯ ಮೇಲೆ ಶಾಸನದೇವತೆ ಚಕ್ರೇಶ್ವರಿಯ ವಿಗ್ರಹವನ್ನು ಕೆತ್ತಿಸಿದನು. ಜಿನಬಿಂಬಗಳನ್ನೂ ಜಿನಪ್ರತಿಮೆಗಳನ್ನೂ ನಿರ್ಮಿಸಿದನು. ಜೊತೆಗೆ ಶಾಸನವನ್ನು ಬರೆಯಿಸಿದನು. ಈ ಪುಣ್ಯಕಾರ್ಯದ ಪರಿಸಮಾಪ್ತಿಗೆ ಆತನೊಂದು ಸಮಾರಂಭವನ್ನು, ಉತ್ಸವವನ್ನು ಮಾಡಿರಬೇಕು. ಅದು ಪ್ರತ್ಯೇಕ ಉತ್ಸವ ಆಗಿರಬಹುದು. ಇಲ್ಲವೆ ವೃಷಭಗಿರಿಯಲ್ಲಿ ಎಂದಿನಂತೆ ನಡೆಯುತ್ತಿದ್ದ ಧಾರ್ಮಿಕ ಉತ್ಸವದ ಸುಸಂದರ್ಭದಲ್ಲಿ ಜೊತೆಗೊಂಡಿರಬೇಕು. ಹೀಗೆ ದ್ವಿಗುಣಿತವಾಗಿರಬಹುದಾದ ಉಲ್ಲಾಸದ ಮಹೋತ್ಸವವನ್ನು ಈ ಪದ್ಯವು ವರ್ಣಿಸುತ್ತದೆ. ಈ ಉತ್ಸವವನ್ನು ನೋಡಲು ಉತ್ಸುಕರಾಗಿದ್ದ ಯಾತ್ರಿಕರ ಸಂಭಾಷಣೆಯ ಛಾಯೆ ಈ ಪದ್ಯದಲ್ಲಿ ಬಂದುದರಿಂದ ಅದರ ಸ್ವಾರಸ್ಯವು ಕಳಸವಿಟ್ಟಿದೆ.

ಒಬ್ಬ ಯಾತ್ರಿಕನು ಇನ್ನೊಬ್ಬನಿಗೆ ಹೇಳುತ್ತಾನೆ: "ಅಣ್ಣಯ್ಯ, ಧರ್ಮಪುರಕ್ಕೆ ಹೋಗುವ, ನಡೆ." (ಭ್ರಾತರ್ ಧರ್ಮಪುರಂ ಪ್ರಯಾಮ) ಇನ್ನೊಬ್ಬನು ಕೇಳುತ್ತಾನೆ: "ಏಕೆ?" (ಹಿಮ್)? ಅದಕ್ಕೆ ಉತ್ತರಃ "ಅಲ್ಲಿಗೆ (ಧರ್ಮಪುರಕ್ಕೆ) ಪ್ರಯಾಣ ಮಾಡಿದರೆ, ಅಲ್ಲಿಂದ (ಅತಃ) ಜಿನನಿಗೋಸ್ಕರ ನಡೆಯಲಿರುವ ಹಾಲಿನ ಧಾರಾಭಿಷೇಕದಲ್ಲಿ ಮುಳುಗಿಹೋದ ವೃಷಭಗಿರಿಯ ಉಚ್ಚಶಿಖರದ ಸೊಬಗನ್ನು ಕಾಣುತ್ತೇವೆ. ಇನ್ನೂ ಮೇಲಾಗಿ, ಯಾತ್ರೆಗೆ ಬಂದ ಸಕಲ ಜಿನಭಕ್ತರ ಸನ್ಮಾನದಲ್ಲಿ ನಿರತನಾದ, ಆರ್ಯಪಂಪನ ಸೋದರನಾದ, ಭೀಮನ ಪುತ್ರನನ್ನು ಅಲ್ಲಿ (ಅತ್ರ) ಕಾಣುತ್ತೇವೆ."

ಧರ್ಮಪುರಕ್ಕೆ ಹೋದ ಯಾತ್ರಿಕನು ವೃಷಭಗಿರಿಯಲ್ಲಿ ನಡೆಯಲಿರುವ ಮಹೋತ್ಸವವನ್ನು ಅಷ್ಟು ಸುಲಭವಾಗಿ ಕಣ್ಣಾರೆ ಕಾಣಬೇಕಾದರೆ ಅದು ಆ ಪರ್ವತದಿಂದ ನಿರಾಯಾಸವಾಗಿ ನಡೆದು ಹೋಗುವಷ್ಟು ಕಿರಿದಂತರದಲ್ಲಿ ಇದ್ದಿರಬೇಕಲ್ಲವೇ? ಈ ಪದ್ಯದಲ್ಲಿಯ ವರ್ಣನೆಯ ಆಧಾರದಿಂದ ಧರ್ಮಪುರವು ವೃಷಭಗಿರಿಯ ಪಕ್ಕದಲ್ಲಿ ಇದ್ದಿರಬೇಕು ಎಂದು ಇಟ್ಟುಕೊಂಡರೆ, ಅದು ಸಹಜವೆನಿಸುತ್ತದೆ. ಈ ಸಂಗತಿ ಮೇಲಿನ ಇತರ ಸಂಗತಿಗಳಿಗೆ ಸುಸಂಗತವೂ ಆಗುತ್ತದೆ. ವೃಷಭನಾಥನ ಭಕ್ತನು, ವೃಷಭಗಿರಿಯಲ್ಲಿ ಆಕರ್ಷಣೆ ಉಳ್ಳವನು ಆದ ಪಂಪನು ಆ ಗಿರಿಯ ಪಕ್ಕದಲ್ಲಿಯ ಗ್ರಾಮವನ್ನು ಬಯಸಿ, ಇಲ್ಲವೆ ಬಯಸದೆ ಪಡೆದಿರುವ ಸಂಭವವು ಇಲ್ಲದೆ ಇಲ್ಲ. ಅದು ಗಂಗಾಧರ ಗ್ರಾಮವೇ ಏಕಾಗಬಾರದು? ಹೆಚ್ಚಿನ ಸಂಶೋಧನೆಯನ್ನು ಕೈಕೊಳ್ಳದೆ ಈ ವಿಷಯವನ್ನು ತೀರ್ಮಾನಿಸಲು ಸಾಧ್ಯವಿಲ್ಲ. ಸಂಭವನೀಯತೆ, ಸಾಧ್ಯತೆಯನ್ನು ಮಾತ್ರ ಸೂಚಿಸುತ್ತೇನೆ.

ತಮ್ಮ ತೆಲುಗು ಲೇಖನದಲ್ಲಿ ಡಾ|| ವೆಂಕಟರಮಣಯ್ಯ ವೃಷಭಗಿರಿಯನ್ನು ಖಚಿತವಾಗಿ ಕಂಡುಹಿಡಿಯಲಾಗದೆ ಕೈಬಿಟ್ಟಿದ್ದಾರೆ. ಡಾ|| ಆರ್. ಸಿ. ಹಿರೇಮಠರು ಹೀಗೆ ಅಭಿಪ್ರಾಯಪಟ್ಟಿದ್ದಾರೆ:

> "ಇದರಿಂದಾಗಿ ಸಂಶೋಧಕರಿಗೆ ಬೊಮ್ಮಲಗುಟ್ಟ (=ಸಿದ್ಧಶಿಲೆ)ದ ಉತ್ತರಕ್ಕೆ ಹೋಗಿ ವೃಷಭಾದ್ರಿಯಲ್ಲಿರುವ ಪಂಪನ ಶಾಸನವನ್ನೂ, ಅಲ್ಲಿಂದ ದಕ್ಷಿಣಕ್ಕೆ ಒಂದು ಪಂಪನಿಗೆ ದತ್ತಿಯಾಗಿ ಸಂದ ಧರ್ಮಪುರವನ್ನೂ ಗುರುತಿಸಲು ಹೊಸ ಸೂಚನೆ ಲಭಿಸುತ್ತದೆ. ಈ ದಿಸೆಯಲ್ಲಿ ಸಂಶೋಧಕರು ಮುಂದುವರಿಯಬೇಕು."

ಮೇಲೆ ವಿವರಿಸಿದಂತೆ ಪಂಪನ ಶಾಸನಕ್ಕಾಗಿ ನಾವು ಬೇರೆ ದಿಕ್ಕಿಗೆ ಹೋಗುವ ಆವಶ್ಯಕತೆಯಿಲ್ಲ. ಈಗ ಬೆಳಕಿಗೆ ಬಂದಿರುವ ಸಿದ್ಧಶಿಲೆಯ ಮೇಲಿನ ರಮ್ಯ ಶಾಸನವೇ ಪಂಪನ ಆ ಶಾಸನವಾಗಿರಬೇಕು.

ಪಂಪ, ತಂದೆ, ತಾಯಿ

ಜಿನವಲ್ಲಭನು ನೆರವೇರಿಸಿದ ಮಹೋತ್ಸವದ ಕಾಲದಲ್ಲಿ ಪಂಪನು ಬಾಳಿದ್ದನೆ? ಏಕೆ ಬಾಳಿರಬಾರದು? ಬಾಳಿರದೆ ಇದ್ದರೆ ಆ ಸ್ಮಾರಕಗಳು, ಆ ಸಮಾರಂಭವು, ಜಿನವಲ್ಲಭನ ಆ ಆನಂದದ ಉದ್ಗಾರಗಳು, ಅಭಿನಂದನ ಪುರಸ್ಕಾರಗಳು ಪ್ರಕಟವಾಗುತ್ತಲೇ ಇರಲಿಲ್ಲ.

ಪಂಪನು ಬಾಳಿದ್ದರೆ ಈ ಉತ್ಸವದಲ್ಲಿ ಭಾಗಿಯಾದ್ದನೆ? ಏಕೆ ಆಗಿರಬಾರದು? ಹಾಗಿದ್ದರೆ ಶಾಸನದಲ್ಲಿ ಆತನ ನಾಮ ನಿರ್ದೇಶವೇಕಿಲ್ಲ? ಅಪ್ರಾಸಂಗಿಕವಾಗಿ, ಅನಾವಶ್ಯಕವಾಗಿ, ಖ್ಯಾತಿಯನ್ನು ಬಯಸದೆ ಇರುವುದು, ಮೌನದಿಂದಲೇ ಮನ್ನಣೆ ಪಡೆಯುವುದು ಮಹಾತ್ಮರ ಲಕ್ಷಣವಲ್ಲವೆ?

ಪಂಪಭಾರತದ ಒಂದು ಪಾಠದಂತೆ ಅಭಿರಾಮ ದೇವರಾಯನು ಪಂಪನ ತಂದೆ ಎಂದು ಹೇಳಿರುವುದಕ್ಕೂ ಈ ಶಾಸನದಂತೆ ಭೀಮಪಯ್ಯನು ಆತನ ತಂದೆ ಎಂದು ಹೇಳಿರುವುದಕ್ಕೂ ವಿರೋಧವೇನಿಲ್ಲ. ಅದಕ್ಕಾಗಿ ಭೀಮಪಯ್ಯನೆಂಬುದೆ ಆತನ ತಂದೆಯ ಹೆಸರು, ಅಭಿರಾಮ ದೇವರಾಯನೆಂಬುದು ಅಲ್ಲ, ಎಂದು ಸಾಧಿಸುವುದು ಯುಕ್ತವಾಗಲಾರದು. ಇಬ್ಬಗೆಯ ಜೋಡು ಹೆಸರುಗಳ ರೂಢಿ ಅಪರೂಪವೇನಲ್ಲ. ಅವು ಎಲ್ಲಿಯೂ ದೊರೆಯುತ್ತವೆ. ದೇವರಾಯ ಅಥವಾ ಅಭಿರಾಮ ದೇವರಾಯ ಎಂಬುದು ಪ್ರತಿಷ್ಠೆಯ ನಾಮಧೇಯವಾಗಿರಬೇಕು. ಅದಕ್ಕಾಗಿ ಒಂದನ್ನು ಬಿಟ್ಟು ಇನ್ನೊಂದನ್ನು ಹಿಡಿಯುವ ಅಗತ್ಯವಿಲ್ಲ. ಒಂದಕ್ಕೊಂದು ಅಭ್ಯಂತರವಿಲ್ಲದೆ ಎರಡನ್ನೂ ಸ್ವೀಕರಿಸಬಹುದು.

ಶಾಸನದ ಮೂಲ (ಭಾರತಿಯಲ್ಲಿ ಪ್ರಕಟವಾದ) ತೆಲುಗು ಲಿಪಿಯ ಪಾಠದಲ್ಲಿ ಜಿನವಲ್ಲಭನ ತಾಯಿಯ ಹೆಸರು ಉಕ್ತವಾಗಿದೆ. ಶಾಸನದಲ್ಲಿನ ಆ ಭಾಗವು ಹೀಗಿದೆ:

"ಜೋಯಿಸಸಿಂಘನ ಮರ್ಮ ವಬ್ಬಣಬ್ಬೆಯ ಮಗಂ... ಜಿನವಲ್ಲಭಂ." ಮರ್ಮ ಎಂಬ ಪದದ ಮುಂದೆ ಡಾ|| ವೆಂಕಟರಮಣಯ್ಯ ಅನುಸ್ವಾರವನ್ನು ಕಲ್ಪಿಸಿ ಸೇರಿಸಿದ್ದಾರೆ. ಇದು ಅನಾವಶ್ಯಕ. ಇಲ್ಲಿ ಸಂಧಿಯಾಗಿದೆ: ಮರ್ಮಂ + ಅಬ್ಬಣಬ್ಬೆ = ಮರ್ಮವಬ್ಬಣಬ್ಬೆ. ಇದರಿಂದ ಆ ತಾಯಿಯ ಹೆಸರು 'ಅಬ್ಬಣಬ್ಬೆ' ಎಂದಾಗುತ್ತದೆ. ಇದನ್ನು ಆ ಲೇಖಕರು ಗಮನಿಸದೆ 'ವಬ್ಬಣಬ್ಬೆ' ಎಂಬ ಹೆಸರನ್ನು ಹಲವೆಡೆಗಳಲ್ಲಿ ನಿರ್ದೇಶಿಸಿದ್ದಾರೆ.

ಡಾ|| ಹಿರೇಮಠರು ಡಾ|| ವೆಂಕಟರಮಣಯ್ಯ ಅವರ ತೆಲುಗು ಪಾಠವನ್ನು ಇದ್ದಕ್ಕಿದ್ದ ಹಾಗೆ ಎತ್ತಿಕೊಂಡಿದ್ದಾರೆ. 'ಮರ್ಮ' ಪದದ ಮುಂದೆ ಅನುಸ್ವಾರವನ್ನು ಇಟ್ಟುಕೊಂಡಿದ್ದಾರೆ. ಬಳಿಕ 'ವಬ್ಬಣಬ್ಬೆ' ಎಂಬುದನ್ನು 'ಪಬ್ಬಣಬ್ಬೆ' ಎಂದು ಮಾರ್ಪಡಿಸಿದ್ದಾರೆ. ಈ ಮಾರ್ಪಾಟವು ನಿರಾಧಾರವಾಗಿದೆ. ಅಚ್ಚಿನ ತೆಲುಗು ಲಿಪಿಯಲ್ಲಿ ವಕಾರಕ್ಕೂ ಪಕಾರಕ್ಕೂ ಅತ್ಯಲ್ಪ ಭೇದವಿದೆ. ಇದನ್ನು ಆ ಲೇಖನವನ್ನೇ ಲಕ್ಷ್ಯಪೂರ್ವಕ ನೋಡಿದರೆ ಗೊತ್ತಾಗುತ್ತದೆ. ಇದು ದೃಷ್ಟಿದೋಷದಿಂದಾದ ಪ್ರಮಾದವಿರಬಹುದು. ಈ ಕಾರಣಗಳಿಂದ ಜಿನವಲ್ಲಭನ ತಾಯಿಯ ಹೆಸರು 'ಅಬ್ಬಣಬ್ಬೆ' ಎಂದಿರಬೇಕಲ್ಲದೆ 'ವಬ್ಬಣಬ್ಬೆ' ಎಂದಾಗಲಿ, 'ಪಬ್ಬಣಬ್ಬೆ' ಎಂದಾಗಲಿ ಅಲ್ಲ.

ಅರಿಕೇಸರಿ-ಪಂಪರು

ಕನ್ನಡ ಸಾಹಿತ್ಯದ ಜೀವನಾಡಿಯಂತಿರುವ ಪಂಪ, ನಾಗವರ್ಮ, ಪೊನ್ನರಂತಹ ಉದ್ದಾಮ ಸಾಹಿತ್ಯಾಚಾರ್ಯರ ಮೂಲಸ್ಥಾನಗಳು ನಿಜಾಮಾಬಾದ, ಕರೀಮನಗರ, ಗುಂಟೂರು, ಮೊದಲಾದ ಆಂಧ್ರಪ್ರದೇಶದಲ್ಲಿ ದೊರೆಯುತ್ತಿರುವುದು ನಮಗೀಗ ಒಂದು ಸೋಜಿಗ ಸಮಸ್ಯೆಯಾಗಿ ತೋರುತ್ತಿದೆ. ಈ ಸಮಸ್ಯೆಯನ್ನು ಕುರಿತು ಮತ್ತು ಪಂಪನ ಕುರಿತು ಕೆಲವು ವಿಚಾರಗಳನ್ನು ವ್ಯಕ್ತಮಾಡುವ ನನ್ನ ಲೇಖನವೊಂದು 'ಅರಿಕೇಸರಿ-ಪಂಪರು' ಎಂಬ ಶೀರ್ಷಿಕೆಯಲ್ಲಿ ಬಹಳ ಹಿಂದೆ (ಪ್ರಾಚೀನ ಕರ್ನಾಟಕ, ಸಂಪುಟ, ಸಂಚಿಕೆ ೧, ೧೯೩೩) ಪ್ರಕಟವಾಗಿದೆ. ಆ ಲೇಖನವನ್ನು ಅನೇಕರು ಲಕ್ಷಿಸಿಲ್ಲವೆಂದು ಕಂಡದ್ದರಿಂದ ಮತ್ತು ಅದರಲ್ಲಿಯ ಕೆಲವು ಮಾತುಗಳು ಇಂದಿಗೂ ವಿಚಾರಣೀಯವೆನಿಸಿದುದರಿಂದ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಇಲ್ಲಿ ಹೇಳುವುದು ಅಪ್ರಸ್ತುತವಾಗಲಾರದು. ಆ ಮುಖ್ಯಾಂಶಗಳು ಹೀಗೆ:

ಪಂಪನ ಪೋಷಕನಾದ ಅರಿಕೇಸರಿಯ ವಂಶಸ್ಥಾಪಕ ಯುದ್ಧಮಲ್ಲನು ಕರ್ನಾಟಕದ ಉತ್ತರ ಮತ್ತು ಈಶಾನ್ಯ ಸೀಮೆಗಳಲ್ಲಿ ವಿಸ್ತೀರ್ಣರಾಜ್ಯವನ್ನು ಸಂಪಾದಿಸಿ ಸಪಾದಲಕ್ಷ ಭೂಮಿಗೆ ಒಡೆಯನಾದನು. ವೆಂಗಿ ಮಂಡಲವು, ಕಲಿಂಗತ್ರಯವು ಆತನ ಆಧಿಪತ್ಯಕ್ಕೆ ಒಳಪಟ್ಟಿದ್ದುವು. ಯುದ್ಧಮಲ್ಲನಿಗೂ ಈ ರಾಜವಂಶಕ್ಕೂ ನಿಜಾಮಾಬಾದ

ಜಿಲ್ಲೆಯಲ್ಲಿರುವ ಬೋಧನ ಪುರವು ಪ್ರಥಮ ರಾಜಧಾನಿಯಾಗಿತ್ತು. ಇದು ಪ್ರಾಚೀನ ಪಟ್ಟಣ. ಇದರ ಪೂರ್ವದ ಹೆಸರು ಪೋದನ. ಈ ವಿಷಯವು ಪಂಪಭಾರತ, ಪರಭಣಿ ಶಾಸನ ಮತ್ತು ವೇಮುಲವಾಡ ಶಾಸನಗಳಿಂದ ವೇದ್ಯವಾಗುತ್ತದೆ. ನನ್ನೀ ಲೇಖನ ಪ್ರಕಟವಾಗುವ ಕಾಲಕ್ಕೆ ದಿವಂಗತ ಗೋವಿಂದ ಪೈ ಅವರು ಇದೇ ಅಂಶವನ್ನು ಪ್ರತಿಪಾದಿಸುವ ತಮ್ಮ ಸ್ವತಂತ್ರ ಲೇಖನವನ್ನು ಪ್ರಕಟಿಸಿದರು. ಕುಮಾರ ವ್ಯಾಸನು ಈ ಪಟ್ಟಣವನ್ನು ವಿಪ್ರಪುರ, ಬಹುಧಾನ್ಯನಗರಿ ಎಂದು ನಿರ್ದೇಶಿಸಿ ಇದು ಪಾಂಡವರ ಕಾಲದ ಏಕಚಕ್ರನಗರವೆಂಬಂತೆ ತನ್ನ ಬ ಕ ವ ಧ ಪ ರ್ವ ದ ಲ್ಲಿ ವರ್ಣಿಸಿರುವನು.

ಪಂಪನ ಪೋಷಕ ಎರಡನೆಯ ಅರಿಕೇಸರಿ ಮತ್ತು ಈತನ ಮೊಮ್ಮಗ ಮೂರನೆಯ ಅರಿಕೇಸರಿ ಇವರ ಕಾಲಕ್ಕೆ ಬೋಧನದಿಂದ ಸ್ಥಳಾಂತರ ಹೊಂದಿ ಲೆಂಬುಳ ಪಾಟಕ ಎಂದರೆ ಇಂದಿನ ಕರೀಮನಗರ ಜಿಲ್ಲೆಯ ವೇಮುಲವಾಡ ನಗರವು ಈ ರಾಜರ ರಾಜಧಾನಿಯಾಗಿತ್ತು.

ಅರಿಕೇಸರಿಯ ವಂಶಜರು ವೆಂಗಿಮಂಡಲದ ಅಧಿಪತಿಗಳು ಆದುದರಿಂದ ಅವರ ಈ ಎರಡೂ ರಾಜಧಾನಿಗಳು, ಬೋಧನ ಮತ್ತು ವೇಮುಲವಾಡ, ಈ ಮಂಡಲದಲ್ಲಿ ಇದ್ದಂತಾಯಿತು. ಅಂದರೆ ವೆಂಗಿಮಂಡಲವು ನಿಜಾಮಾಬಾದ, ಕರೀಮನಗರ ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿರಬೇಕೆಂದು ನಿಷ್ಪನ್ನವಾಗುತ್ತದೆ. ಇದೇ ಕಾಲಕ್ಕೆ ಆಂಧ್ರದಲ್ಲಿ, ಇಮ್ಮಡಿ ಪುಲಕೇಶಿಯ ಕಾಲದಿಂದ ಸ್ಥಾಪನವಾದ ಪೂರ್ವ ಚಾಲುಕ್ಯ ವಂಶಜರು ವೆಂಗಿನಾಡನ್ನು ಆ ಳು ತ್ತಿ ದ್ದು, ವೆಂಗಿಯ ಚಾಳುಕ್ಯರು ಎಂದು ಪ್ರಸಿದ್ಧಿ ಪಡೆದಿರುವರು. ಒಂದೇ ಕಾಲಕ್ಕೆ ಒಂದೇ ಸಮಗ್ರ ನಾಡನ್ನು ಇಬ್ಬರು ಖ್ಯಾತ ರಾಜಕುಲದವರು ಆಳುವದು ಅಸಂಗತ ವಿಷಯವಾದುದರಿಂದ ಈ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಇವರ ಆಳಿಕೆಗಳು ನಡೆದಿದ್ದವು ಎಂದು ಇಟ್ಟುಕೊಳ್ಳಬೇಕಾಗುತ್ತದೆ. ಈ ಮುಂದಿನ ವಿವೇಚನೆ ಈ ವಿಷಯವನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ.

ಎರಡು ವೆಂಗಿನಾಡುಗಳು

ವೆಂಗಿ ಒಂದು ಮಹಾಮಂಡಲವಾಗಿದ್ದು ಅದು ಸ್ಥೂಲವಾಗಿ ಗೋದಾವರಿಯ ದಕ್ಷಿಣಭಾಗದಲ್ಲಿ ಪ ಶ್ಚಿ ಮ ಕ್ಕೆ ಮಂಜರಾನದಿಯಿಂದ ಪೂರ್ವಕ್ಕೆ ಗೋದಾವರಿ, ಕೃಷ್ಣಾ ನದಿಗಳ ನ ಡು ವ ಣ ಮುಖಪ್ರದೇಶದವರೆಗೆ ಹಬ್ಬಿತ್ತು. ಇದರ ಪಶ್ಚಿಮ ಭಾಗದಲ್ಲಿ ನಿಜಾಮಾಬಾದ, ಕರೀಮನಗರ, ವರಂಗಲ್, ನಲಗೊಂಡ, ಈ ಜಿಲ್ಲೆಗಳ ಪ್ರದೇಶವಿದ್ದು, ಅದು ಅರಿಕೇಸರಿಯ ವಂಶದವರ ವಶದಲ್ಲಿ ಇದ್ದಿತು. ಇದರ ಪೂರ್ವಭಾಗವನ್ನು ವೆಂಗಿಯ ಪೂರ್ವಚಾಳುಕ್ಯರು ಆಳುತ್ತಿದ್ದರು.

ಈ ಪೂರ್ವ, ಪಶ್ಚಿಮ ವೆಂಗಿಮಂಡಲಗಳಲ್ಲಿ ಮೊದಲಿನದು ತೆಲುಗು ಭಾಷೆ, ಸಂಸ್ಕೃತಿಯಿಂದ ಪ್ರಭಾವಿತವಾಗಿದ್ದರೆ, ಎರಡನೆಯದು ಪಶ್ಚಿಮ ವೆಂಗಿ ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿಯ, ಪ್ರಭಾವವನ್ನು ಅಳವಡಿಸಿಕೊಂಡಿತ್ತು.

ಈ ಪಶ್ಚಿಮವೆಂಗಿ, ಹನ್ನೆರಡನೆಯ ಶತಮಾನದವರೆಗೆ ಕರ್ನಾಟಕದ ಒಂದು ಪ್ರದೇಶವೇ ಎನಿಸಿದ್ದಿತು ಎನ್ನುವದಕ್ಕೆ ದೊರೆಯುವ ಹಲವು ಆಧಾರಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಬಹುದು. ಕನ್ನಡ ಭಾಷಾಸಾಹಿತ್ಯವನ್ನು ಉದ್ದೀಪನಗೊಳಿಸಿದ ಪಂಪನಂತಹ ಕನ್ನಡ ಸರಸ್ವತಿಯ ಮುಕುಟದ ಉಜ್ವಲ ರತ್ನಗಳು ಬೆಳಗಿದುದು, ಕನ್ನಡ ಸಾಹಿತ್ಯಗಂಗೆ ಮೊದಮೊದಲು ಸೂಸಿಹರಿದುದು ಈ ವೆಂಗಿ ನಾಡಿನಲ್ಲಿ. ಕರೀಮನಗರ ಜಿಲ್ಲೆಯಲ್ಲಿ ನಿರ್ಮಾಣವಾದ ಪರಭಣಿ, ವೇಮುಲವಾಡ ಶಾಸನಗಳ ಭಾಷೆ ಸಂಸ್ಕೃತವಾದರೂ ಲಿಪಿ ಕನ್ನಡ. ಈ ಶಾಸನಗಳಲ್ಲಿ ಕನ್ನಡ ಪ್ರಭಾವವು ಗೋಚರವಾಗುತ್ತದೆ. ಬೋಧನದಲ್ಲಿ ೧೧ನೆಯ ಶತಮಾನದ ಶುದ್ಧ ಕನ್ನಡ ಶಾಸನವು ದೊರೆತಿದೆ. ವರಂಗಲ್ ಜಿಲ್ಲೆಯ ಭುವನಗಿರಿಗ್ರಾಮದ ವಿಷ್ಣುಭಟ್ಟ ಎಂಬ ಕವಿ ಉಸ್ಮಾನಬಾದ ಭಾಗದ ಶುದ್ಧವಾಡಿ ಗ್ರಾಮದಲ್ಲಿ ದೊರೆತಿರುವ ಅಚ್ಚ ಕನ್ನಡ ಶಿಲಾಶಾಸನವನ್ನು ಬರೆದಿರುವನು. ವರಂಗಲ್, ನಲಗೊಂಡ ಜಿಲ್ಲೆಗಳಲ್ಲಿ ಕನ್ನಡ ಶಿಲಾಶಾಸನಗಳು ದೊರೆಯುತ್ತವೆ. ಆ ಭಾಗದಲ್ಲಿ ಬಂಡಿಹಾಳ, ಮುಷ್ಟಿಹಾಳ, ಜೀಡೀಕಲ್ಲು, ದೇವರಕೊಂಡ, ಮುಂತಾದ ಕನ್ನಡ ಊರ ಹೆಸರುಗಳು, ಕನ್ನಡ ಮನೆಮಾತಿನ ಅವಶೇಷಗಳು ಸಿಕ್ಕುತ್ತವೆ. ಪರಭಣಿ ಶಾಸನದಲ್ಲಿ ಉಕ್ತವಾದ ಸಬ್ಬಿದೇಶ ಸಹಸ್ರವು ಮಂಥಣಿ ತಾಲ್ಲೂಕನ್ನು ಒಳಗೊಂಡ ಕರೀಮನಗರ ಜಿಲ್ಲೆಯ ಈಶಾನ್ಯ ಪ್ರದೇಶವಾಗಿರಬೇಕು. ಸಬ್ಬಿಸಹಸ್ರರಾಷ್ಟ್ರವು ಗೋದಾವರಿಯ ದಕ್ಷಿಣತೀರ ಪ್ರದೇಶದಲ್ಲಿ ಹಬ್ಬಿತ್ತೆಂದು ಕ್ರಿ. ಶ. ೧೩೭೦ರಲ್ಲಿ ರಚಿತವಾದ ಆಂಧ್ರ ಪದ್ಮ ಪುರಾಣದ ಉತ್ತರಖಂಡದ ಸಮಾಪ್ತಿ ಲೇಖನದಲ್ಲಿ ಹೇಳಿದೆ.

ಇದುವರೆಗೆ ಹೇಳಿದುದು ಆ ನನ್ನ ಹಿಂದಿನ ಲೇಖನದ ಸಾರಾನುವಾದ. ಡಾ|| ವೆಂಕಟರಮಣಯ್ಯ ಅ ವ ರು ಗಂಗಾಧರ ಶಾಸನವನ್ನು ಕುರಿತ ತಮ್ಮ ಲೇಖನದಲ್ಲಿ, ಪೂರ್ವಚಾಲುಕ್ಯ ರಾಜ್ಯಸ್ಥಾಪನೆಯ ಕಾಲದಲ್ಲಿ ಸಮಾವೇಶಗೊಂಡಿದ್ದ ವೆಂಗಿಮಂಡಲವು ಕಾಲಕ್ರಮದಲ್ಲಿ ಈ ರಾಜ್ಯವು ವಿಸ್ತಾರ ಹೊಂದಿದಂತೆ ಹೆಚ್ಚುಪ್ರದೇಶವನ್ನು ವ್ಯಾಪಿಸಿತು

ಎಂದು ತೋರಿಸಿದ್ದಾರೆ. ಈ ವಿಷಯವು ಮೇಲೆ ಉದ್ಧರಿಸಿದ ನನ್ನ ಪ್ರತಿಪಾದನೆಗೆ ಪೋಷಕವಾಗಿದೆ.

ಕಮ್ಮೆಕುಲ

ಕಮ್ಮೆಕುಲದ ವಿಚಾರವಾಗಿ ಬಸವೇಶ್ವರರ ಕುರಿತು ಮುಂದಿನ ತಿಂಗಳು ಪ್ರಕಟವಾಗಲಿರುವ ನನ್ನ ಇಂಗ್ಲಿಷ್ ಗ್ರಂಥದಲ್ಲಿ ವಿವೇಚಿಸಿದ್ದೇನೆ. ಆದುದರಿಂದ ಇಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಸೂಚಿಸುವೆ. ಈ ಕುಲದ ಅಥವಾ ವಂಶದ ಬ್ರಾಹ್ಮಣರ ಮೂಲಸ್ಥಾನವು ಕಮ್ಮೆನಾಡು ಆಗಿರಬೇಕು. ಕರ್ಮರಾಷ್ಟ್ರ ಎಂಬುದಾಗಿ ಪ್ರಾಚೀನ ಶಾಸನಗಳಲ್ಲಿ ಇದು ಉಕ್ತವಾಗಿದೆ. ಕರ್ಮರಾಷ್ಟ್ರವು ನೆಲ್ಲೂರು ಜಿಲ್ಲೆಯ ಉತ್ತರದ, ಗುಂಟೂರು ಜಿಲ್ಲೆಯ ದಕ್ಷಿಣದ ಪ್ರದೇಶವಾಗಿತ್ತು. ಮುಂದೆ ಈ ಹೆಸರು ಕಮ್ಮನಾಡು, ಕಮ್ಮೆನಾಡು ಎಂದು ಬಳಕೆ ಆಯಿತು. ಜಿನವಲ್ಲಭನ ಶಾಸನದಲ್ಲಿ ಬರುವ ಈ ಕಮ್ಮೆಯ ಉಲ್ಲೇಖವು ನನಗೆ ಇದುವರೆಗೆ ದೊರೆತ ಶಾಸನಸ್ಥ ಉಲ್ಲೇಖಗಳಲ್ಲಿ ಹೆಚ್ಚು ಪ್ರಾಚೀನವಾದುದು. ಅನಂತರ ೧೧೧೧ನೆಯ ಕ್ರಿ. ಶ.ದ ಆಲೂರ ಶಾಸನದಲ್ಲಿ (Epigraphia Indica, Vol. XVI) ಈ ಮಾತು ಬರುತ್ತದೆ. ಈ ಶಾಸನದಲ್ಲಿ ಕಮ್ಮೆಕುಲೋದ್ಭವನಾದ ಮಹಾ ಸೇನಾಧಿಪತಿ ವೆಣ್ಣೆಯ ಭಟ್ಟನು ಕೀರ್ತಿತನಾಗಿದ್ದಾನೆ. ವಿಪ್ರಕುಲ ಕಮಲ ಭಾಸ್ಕರ, ಪಾರ್ವರೊಳ್ಗಂಡ, ಸರಸ್ವತೀವಲ್ಲಭನೆಂದು ಆತನನ್ನು ಸ್ತೋತ್ರಮಾಡಿದೆ. ಅಲ್ಲದೆ ಸಪ್ತಗ್ರಾಮಾಗ್ರಗಣ್ಯನೆಂದು ವರ್ಣಿಸಿದೆ. ಪ್ರಸ್ತುತ ಜಿನವಲ್ಲಭನ ಶಾಸನದಲ್ಲಿಯೂ 'ಸಪ್ತಗ್ರಾಮ'ದ ನಿರ್ದೇಶವಿದೆ. ಈ ಪದಕ್ಕೆ ಸಾಂಪ್ರದಾಯಕ ವಿಶಿಷ್ಟ ಅರ್ಥವಿರಬೇಕು.

ಹೆಚ್ಚು ಸಂಶೋಧನವಾಗಬೇಕು

ಅತೃಪ್ತಭಾವದಿಂದ ಪ್ರಾರಂಭಿಸಿದ ಈ ಲೇಖನವನ್ನು ಅತೃಪ್ತಭಾವದಿಂದ ಮುಗಿಸಬೇಕಾಗಿದೆ. ಏಕೆಂದರೆ ಕೆಲವು ವಿಷಯಗಳು ಇನ್ನೂ ಸಂದಿಗ್ಧವಾಗಿಯೇ ಉಳಿದಿವೆ. ಮುಖ್ಯವಾಗಿ ನಾನು ಆ ಪ್ರದೇಶವನ್ನು ಸಂದರ್ಶಿಸಿಲ್ಲ. ಗಂಗಾಧರ ಗ್ರಾಮದ ಪರಿಸರವನ್ನು, ಶಾಸನವಿದ್ದ ಬೆಟ್ಟದ ಪ್ರದೇಶವನ್ನು ಪ್ರತ್ಯಕ್ಷವಾಗಿ ಕಂಡು ಕೂಲಂಕಷ ಸಂಶೋಧನ ಮಾಡಿಲ್ಲ. ಇದು ಅಗತ್ಯವಾಗಿ ಮಾಡಬೇಕಾದ ಕಾರ್ಯ. ಸಂಶೋಧನವು ಅಪೂರ್ಣವಾದರೆ ಪ್ರಯೋಜನವು ಅಪೂರ್ಣವಾಗುತ್ತದೆ. ನನ್ನ ನ್ಯೂನತೆಯ ಅರಿವು ನನಗಿದೆ.

ಬಾಷ್ಪಾಂಜಲಿ

ಮಧುರ

●

ದೇವರಿಗದೆನಿತು ಕರುಬು !
ಒಳಿತೆಲ್ಲ ತನಗೇ ಬೇಕು
ಏನಿವನ ಸೊಕ್ಕು
ನಮ್ಮ ಗುರುಗಳನೆ ಎಳೆದೊಯ್ಯುವ ಹಕ್ಕು
ಅವಗೊಬ್ಬಗೆ !

* * *

ಇದ್ದಾರೆ ಆ ಹಿರಿಯ ಇನ್ನೂ ನಮ್ಮಲ್ಲಿ
'ವಚನ ಭಾರತ' ಅಮೃತವರ್ಷ 'ಕಥಾಮೃತ' ರೂಪದಲ್ಲಿ,
'ಸಂಸ್ಕೃತ ನಾಟಕ' ವಿಮರ್ಶೆ ವಿಚಕ್ಷಣೆಯಲ್ಲಿ.
ಸರಳ, ಸುಸ್ಮಿತ, ವದನ;
ಜಗದಂತರಾಳವ – ಜೀವನದಾಳವ—,
ಕರ್ದುಕಿ ನೋಡುವೆನೆಂಬ
ನಚ್ಚು ದೃಷ್ಟಿಯಲ್ಲಿ.

ಬಳಿ ಬಂದವರನೆಲ್ಲ ತಬ್ಬುವೆನು
ಎಂಬ – ವಿಶಾಲ ಹೃದಯ.
ಆ ನಿಲುವು – ಠೀವಿ – ಗಾಂಭೀರ್ಯ
ಕನ್ನಡಿಗರ ಕೆಚ್ಚು – ನಚ್ಚು
ಅಭಿಮಾನದ ಮೂರ್ತಿರೂಪ.

* * *

ಆಚಾರ್ಯ ಇಂದಿನ ಪೀಳಿಗೆಯ—
ಎಂದೆಂದಿನ ಸಾಹಿತ್ಯಾರಾಧಕ;
ವೀರ ಸೇನಾನಿ,
ಬನ್ನಿ ನಾನಿರುವೆ ಮುಂದೆ
ಎಂಬ ನಂಬಿಗೆಯನಿತ್ತು ನಡೆಸಿದ—
ಹಳತು – ಹೊಸತರ
ಸಮ್ಮಿಲವೇ ಮೂರ್ತಿವೆತ್ತ
ಎ. ಆರ್. ಕೃ


ಪಂಪನನ್ನು ಕುರಿತ ಗಂಗಾಧರಂ ಶಾಸನ— ಒಂದು ತಿದ್ದುಪಡಿ

ಎಂ. ಎಂ. ಕಲಬುರ್ಗಿ

ಪಂಪನ ತಮ್ಮನಾದ ಜಿನವಲ್ಲಭನು ಬರೆಯಿಸಿದ ಶಿಲಾ ಶಾಸನವೊಂದು ಇತ್ತೀಚೆಗೆ ಲಭಿಸಿದುದು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಒಂದು ಚಿರಸ್ಮರಣೀಯ ಘಟನೆ. 'ಭಾರತಿ' (೧೯೬೬ ಮಾರ್ಚ) ಎಂಬ ತೆಲುಗು ಪತ್ರಿಕೆಯ ಮೂಲಕ ವಿಶೇಷ ಲೇಖನದೊಂದಿಗೆ ಇದನ್ನು ಬೆಳಕಿಗೆ ತಂದವರು ಡಾ|| ಎನ್. ವೆಂಕಟರಮಣಯ್ಯನವರು. ಪಂಪನಿಗೆ ಸಂಬಂಧಿಸಿದ ಹಲವು ಅಪೂರ್ವ ಸಂಗತಿಗಳನ್ನೊಳಗೊಂಡ ಈ ಶಾಸನದ ಪ್ರಾರಂಭ ಪಾಠ ಹೀಗಿದೆ:[೧]

"... ಸ್ವಸ್ತಿ ಸಮಸ್ತ ಸಕಳಕಳಾಳಾಪ ಪ್ರವೀಣಂ ಭವ್ಯರತ್ನಾಕರ ಗುಣಪಕ್ಷಪಾತಿ ವೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಱ್ಱು ಕಮ್ಮೆಬ್ರಾಹ್ಮಣಂ ಜಮುದಗ್ನಿ ಪಂಚಾರ್ಷೇಯಂ ಶ್ರೀವತ್ಸ ಗೋತ್ರಂ ಗುಣ್ಡಿಕಱ್ಱು ನಿಡುಂಗೊಣ್ಡೆಯಭಿಮಾನಚನ್ದ್ರನ ಮರ್ಮಂ ಭೀವಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ[ಂ]* ವಬ್ಬಣಬ್ಬೆಯ ಮಗಂ . . . ಜಿನವಲ್ಲಭಂ"

ಈ ಗದ್ಯಭಾಗವನ್ನು ಮತ್ತು ಶಾಸನೋಕ್ತ ಕೆಲವು ಒಳ ವಿಷಯಗಳನ್ನು ಅವಲಂಬಿಸಿ ಶ್ರೀಯುತರು ತಮ್ಮ ಲೇಖನದಲ್ಲಿ ಪಂಪನ ವಂಶಚಿತ್ರವನ್ನು ಹೀಗೆ ಕೊಟ್ಟಿದ್ದಾರೆ:



ಶ್ರೀ ವೆಂಕಟರಮಣಯ್ಯನವರು ಕೊಟ್ಟ ಮೇಲಣ ಭಾಗದಲ್ಲಿ ಕಂಡುಬರುವ ಪಾಠದೋಷವನ್ನು ತಿದ್ದಿ ಈ ವಂಶಚಿತ್ರವನ್ನು ಸೇರಿಸಿಕೊಡುವುದು ಪ್ರಸ್ತುತ ಲೇಖನದ ಉದ್ದೇಶ.

* * *

"...ಅಭಿಮಾನಚನ್ದ್ರನ ಮರ್ಮಂ ಭೀಮಪ್ಪಯ್ಯನ ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ[ಂ]* ವಬ್ಬಣಬ್ಬೆಯ ಮಗಂ . . . ಜಿನವಲ್ಲಭಂ"

ಈ ವಾಕ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಗೆ ಅದರ ಸಂಯೋಜನೆಯಲ್ಲಿ ಅವ್ಯವಸ್ಥೆ, ಅರ್ಥದಲ್ಲಿ ಅಸ್ಪಷ್ಟತೆ ಕಂಡುಬರುತ್ತಿದ್ದು ಅದನ್ನು ಎರಡು ವಿಧದಲ್ಲಿ ಪರೀಕ್ಷಿಸಬಹುದಾಗಿದೆ.

೧. ಈ ಶಾಸನದ ಇನ್ನೊಂದು ಕಡೆಗೆ ಜಿನವಲ್ಲಭನನ್ನು "ಭೀಮತನುಜಂ" ಎಂದು ಹೇಳಿರುವುದರಿಂದ ಈ ವಂಶಚಿತ್ರದಲ್ಲಿ ತೋರಿಸಿದಂತೆ ಭೀಮಪಯ್ಯನ ಮಗನು ಜಿನವಲ್ಲಭ ಎಂಬುದು ಸುಸ್ಪಷ್ಟ. ಆದರೆ ಈ ವಾಕ್ಯದಿಂದ ಭೀಮಪ್ಪಯ್ಯನಿಗೆ ಸಂಬಂಧಿಸಿದ ಬೆಳ್ವೊಲದಣ್ಣಿಗೆರೆ (=ಭೀಮಪಯ್ಯನ ಬೆಳ್ವೊಲದಣ್ಣಿಗೆಱೆ) ಎಂಬ ಅರ್ಥ ಹೊರಡುತ್ತಿದೆಯೇ ಹೊರತು ಭೀಮಪಯ್ಯನ ಮಗ ಜಿನವಲ್ಲಭ ಎಂಬ ಅರ್ಥ ಹೊರಡುವುದಿಲ್ಲ. ಅದಕ್ಕಾಗಿ 'ಭೀಮಪಯ್ಯನ' ಎಂಬುದರ ಮುಂದೆ 'ಮಗಂ' ಎಂಬುದನ್ನು ಹೊಸದಾಗಿ ಸೇರಿಸಬೇಕೆನಿಸುತ್ತದೆ. ಆಗ . . . ಅಭಿಮಾನ ಚನ್ದ್ರನ ಮರ್ಮಂ ಭೀಮಪಯ್ಯನ [ಮಗಂ*] ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ

---


೧. ಈ ಶಾಸನದ ಪೂರ್ಣಪಾಠಕ್ಕಾಗಿ 'Journal of the Karanatak University' (Humanities Vol. XI) 1967ರಲ್ಲಿ ಡಾ|| ಆರ್. ಸಿ. ಹಿರೇಮಠ ಅವರ ಲೇಖನವನ್ನು ನೋಡಬಹುದು.

[೦*] ವಬ್ಬಣಬ್ಬೆಯ ಮಗಂ . . . ಜಿನವಲ್ಲಭಂ" ಎಂಬ ಪಾಠಸಿದ್ಧವಾಗುತ್ತದೆ. ಇದರಿಂದ ಅಭಿಮಾನಚಂದ್ರನ ಮೊಮ್ಮಗನಾದ ಭೀಮಪಯ್ಯನ ಮಗನೂ, ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮೊಮ್ಮಗನೂ, ವಬ್ಬಣಬ್ಬೆಯ ಮಗನೂ (ಆದ) ಜಿನವಲ್ಲಭ ಎಂಬ ಸ್ಪಷ್ಟ ಅರ್ಥ ಹೊರಡುತ್ತದೆ. ಆದರೆ ಇಲ್ಲಿಯ 'ಭೀಮಪಯ್ಯನ[ಮಗಂ]*' ಮತ್ತು 'ವಬ್ಬಣಬ್ಬೆಯ ಮಗಂ' ಎಂಬ ಎರಡು ಹೇಳಿಕೆಗಳ ಮಧ್ಯ 'ಜೋಯಿಸ ಸಿಂಘನ ಮರ್ಮ[೦]*' ಎಂಬುದು ಸೇರಿಕೊಂಡಿದೆ. ಇದರಿಂದ ಒಂದೇ ಕಡೆಗೆ ಬರಬೇಕಾದ ತಂದೆ ತಾಯಿಗಳ ಹೆಸರುಗಳಿಗೆ ಅಜ್ಜನ ಹೆಸರು ಅಡ್ಡಗಟ್ಟಿದಂತಾಗಿದೆ. ಇದರಿಂದಾಗಿ ನಾವು ಊಹಿಸಿದ ಈ ಪಾಠದಲ್ಲಿ ಅರ್ಥಸಂಶಯ ಇನ್ನೂ ಉಳಿದುಕೊಳ್ಳುತ್ತದೆ. ಅದಕ್ಕಾಗಿ ಈ ತಿದ್ದುಪಡಿಯನ್ನು ಕೊಂಚ ಬದಿಗಿರಿಸಿ ಇನ್ನೊಂದು ತಿದ್ದುಪಡಿಯನ್ನು ಹೀಗೆ ಊಹಿಸಬಹುದು.

೨. ಮೇಲಣ ವಾಕ್ಯದ 'ಜೋಯಿಸಸಿಂಘನ ಮರ್ಮ[೦]*' ಎಂಬಲ್ಲಿಯ ಅನುಸ್ವಾರ ಚೌಕ ಕಂಸಿನಲ್ಲಿದ್ದುದರಿಂದ ಅದು ಸಂಪಾದಕರು ಹೊಸದಾಗಿ ಸೇರಿಸಿದುದೆಂದು ತಿಳಿದುಬರುತ್ತದೆ. ಈಗ ಅನುಸ್ವಾರಕ್ಕೆ ಬದಲು ನಾವು 'ಳ್' ವರ್ಣವನ್ನು ಊಹಿಸಿಕೊಳ್ಳಬೇಕು. ಆಗ 'ಅಭಿಮಾನ ಚನ್ದ್ರನ ಮರ್ಮಂ ಭೀಮಪಯ್ಯನ, ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ[ಳ್]* ವಬ್ಬಣಬ್ಬೆಯ ಮಗಂ . . . ಜಿನವಲ್ಲಭಂ' ಎಂಬ ಪಾಠ ಸಿದ್ಧವಾಗುತ್ತದೆ. ಇದರಿಂದ ನಮ್ಮ ಮೊದಲನೆಯ ತಿದ್ದುಪಡಿಯಿಂದ 'ಅಜ್ಜನ ಹೆಸರು ಅಡ್ಡಬರುತ್ತದೆ' ಎಂಬ ಸಂದೇಹ ನಿವಾರಣೆಯಾಗಿ 'ಅಭಿಮಾನ ಚಂದ್ರನ ಮೊಮ್ಮಗನಾದ ಭೀಮಪಯ್ಯನ ಬೆಳ್ವೊಲದಣ್ಣಿಗೆರೆಯ ಜೋಯಿಸ ಸಿಂಘನ ಮೊಮ್ಮಗಳಾದ ವಬ್ಬಣಬ್ಬೆಯ ಮಗನಾದ. . .ಜಿನವಲ್ಲಭ' ಎಂಬ ಸುಸ್ಪಷ್ಟ ಅರ್ಥ ಹೊರಡುತ್ತದೆ. ವಾಕ್ಯಯೋಜನೆ ಸರಿಗೊಳ್ಳುತ್ತದೆ.

ಅದಕ್ಕಾಗಿ 'ಜೋಯಿಸ ಸಿಂಘನ [೧]ಮರ್ಮ[ಳ್][೧] ಮಗಂ' ಎಂಬ ಪಾಠವೇ ಗ್ರಾಹ್ಯವಾದುದೆಂದು ನಮ್ಮ ಅಭಿಪ್ರಾಯ.

ಒಟ್ಟಿನಲ್ಲಿ ಜಿನವಲ್ಲಭನು ಇಲ್ಲಿ ತನ್ನ ತಂದೆಯ ಹೆಸರನ್ನು ಹೇಳಿಲ್ಲ. ಅದರಂತೆ ತನ್ನ ತಾಯಿಯ ತಂದೆಯ ಹೆಸರನ್ನು ಹೇಳಿಲ್ಲ. ಕೇವಲ ತನ್ನ ತಂದೆಯ ಅಜ್ಜನ (ಅಭಿಮಾನ ಚಂದ್ರ) ಹೆಸರನ್ನು ಹೇಳಿದ್ದಾನೆ. ಅದರಂತೆ ತನ್ನ ತಾಯಿಯ ಅಜ್ಜನ (ಜೋಯಿಸಸಿಂಘನ) ಹೆಸರನ್ನು ಹೇಳಿದ್ದಾನೆ. ಅದಕ್ಕಾಗಿ ಶ್ರೀ ವೆಂಕಟರಮಣಯ್ಯನವರು ಹೇಳುವಂತೆ ವಬ್ಬಣಬ್ಬೆಯು ಜೋಯಿಸ ಸಿಂಘನ ಮಗಳಲ್ಲ. ನಾವು ಹೇಳುವಂತೆ ಮೊಮ್ಮಗಳು. ಇಷ್ಟು ಹಿನ್ನೆಲೆಯಲ್ಲಿ ಜಿನವಲ್ಲಭನ ವಂಶಚಿತ್ರವನ್ನು ಹೀಗೆ ರೇಖಿಸಬಹುದು.



೧–೧ ಚೌಕ ಕಂಸಿನಲ್ಲಿ ಸಂಪಾದಕರು ಸೇರಿಸಿದ ಅನುಸ್ವಾರವನ್ನು ಅದಕ್ಕೆ ಬದಲು ನಾವು ಸೇರಿಸಿದ 'ಳ್' ವರ್ಣವನ್ನು ಬಿಟ್ಟುಕೊಟ್ಟು 'ಮರ್ಮಳಬ್ಬಣಬ್ಬೆ' ಎಂದು ಸ್ವಲ್ಪ ತಿದ್ದಿಕೊಂಡು ಓದಿದರೆ 'ಮೊಮ್ಮಗಳಾದ' ಎಂಬ ನಮ್ಮ ಅರ್ಥವೇ ಹೊರಡುತ್ತದೆ. ಆಗ ತಾಯಿಯ ಹೆಸರು ಮಾತ್ರ (ಮರ್ಮಳ್+ಅಬ್ಬಣಬ್ಬೆ=ಮರ್ಮಳಬ್ಬಣಬ್ಬೆ) ಅಬ್ಬಣಬ್ಬೆ ಎಂದಾಗುತ್ತದೆ. ಶಾಸನ ಲಿಪಿಸೂಕ್ಷ್ಮಜ್ಞರು ಈ 'ಳ್ವ' ವರ್ಣಗಳಾಗಿ ಮೂಲಶಾಸನವನ್ನು ಪರೀಕ್ಷಿಸಬೇಕು. ಒಟ್ಟಿನಲ್ಲಿ ಪಂಪನ ತಾಯಿಯ ಹೆಸರು ಅಬ್ಬಣಬ್ಬೆಯೋ, ವಬ್ಬಣಬ್ಬೆಯೋ ಆಗಿರಲಿ, ಆಕೆಮಾತ್ರ ಜೋಯಿಸ ಸಿಂಘನ ಮಗಳಲ್ಲ; ಮೊಮ್ಮಗಳು.

ನಾನು ಕಂಡಿದ್ದ ಡಾ। ಕೃಷ್ಣಶಾಸ್ತ್ರಿಗಳವರು

ವ್ಯಾಕರಣತೀರ್ಥ
ಚಂದ್ರಶೇಖರಶಾಸ್ತ್ರಿಗಳು

ತ್ರಿಭಾಷಾ ಪಂಡಿತರೂ, ಸದ್ಗುಣಮಂಡಿತರೂ ಖಂಡಿತವಾದಿಗಳೂ ಆಗಿದ್ದ ಎ. ಆರ್. ಕೃಷ್ಣಶಾಸ್ತ್ರಿಗಳವರ ಪರಿಚಯವಾದದ್ದು ಸುಮಾರು ೩೦ ವರ್ಷಗಳ ಹಿಂದೆ—ಮಡಕೇರಿಯಲ್ಲಿ. ೧೯೩೨ನೆಯ ಇಸ್ವಿಯಲ್ಲಿ ಡಿ.ವಿ.ಜಿ. ಯವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಲನ ಕೂಡಿತ್ತು. ಆ ಸಮ್ಮೇಲನಕ್ಕೆ ನಾನು ಹೋಗಿ ಆಮಂತ್ರಣ ಕೊಟ್ಟು ೧೯೩೩ನೆಯ ಇಸ್ವಿಯಲ್ಲಿ ಕಾರ್ಯದರ್ಶಿಯಾಗಿ ಹುಬ್ಬಳ್ಳಿಯಲ್ಲಿ ಸಾಹಿತ್ಯ ಸಮ್ಮೇಲನ ಮಾಡಿದಾಗ, ಶ್ರೀಮಾನ್ ಬಿ.ಎಮ್. ಶ್ರೀ ಡಿ.ವಿ.ಜಿ., ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ. ಆರ್. ಶ್ರೀನಿವಾಸಮೂರ್ತಿ, ಎ. ಆರ್. ಕೃಷ್ಣಶಾಸ್ತ್ರಿ ಮೊದಲಾದ ಸಾಹಿತ್ಯ ಧುರೀಣರ ಪರಿಚಯವಾಯಿತು.

ಡಾ. ಕೃಷ್ಣಶಾಸ್ತ್ರಿಗಳ ನಿಕಟ ಪರಿಚಯವಾದದ್ದು ೧೯೪೦ರಲ್ಲಿ. ನಾನು ಧಾರವಾಡದ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷನಾಗಿ ಚುನಾವಣೆಯಿಂದ, ಆರಿಸಿ ಬಂದಾಗ ಆ ಕಾಲದಲ್ಲಿ ಅವರು ನನಗೆ ಒಂದು ಅಭಿನಂದನೆಯ ಪತ್ರವನ್ನು ಬಹಳ ಆತ್ಮೀಯತೆಯಿಂದ ಬರೆದಿದ್ದರು. ಆ ಪತ್ರ ಈಗಲೂ ನನ್ನಲ್ಲಿದೆ. ಅಂದಿನಿಂದ ಅವರು ನನಗೆ ಸ್ನೇಹಿತರಾಗಿದ್ದರು.

ಮರು ವರ್ಷವೇ ಅಂದರೆ ೧೯೪೧ರಲ್ಲಿ ಅವರು ಹೈದರಾಬಾದಿನಲ್ಲಿ ಕೂಡಿದ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರಾಗಿ ಆರಿಸಿಬಂದರು. ಹೈದರಾಬಾದಿನಲ್ಲಿ ನನಗೂ ಅವರಿಗೂ ಒಂದೇ ಕೋಣೆಯಲ್ಲಿ ವಾಸಸ್ಥಾನದ ವ್ಯವಸ್ಥೆ ಮಾಡಿದ್ದರು. ಆಗ ಮೂರು ದಿನಗಳವರೆಗೆ ಅನೇಕ ವಿಷಯಗಳ ವಿವೇಚನೆ ಮಾಡುವ ಸಂದರ್ಭ ಒದಗಿದ್ದಿತು. ನಾನು ಸಮ್ಮೇಲನಾಧ್ಯಕ್ಷನಿದ್ದಾಗ ಕರ್ಣಾಟಕದಲ್ಲಿ ಸಂಚಾರ ಮಾಡಿ ಮಾಡಿದ ಪ್ರಚಾರ ಮಾಡಿದ ವರದಿಯನ್ನು ಒಂದು ದಿನ ಬಹಳ ರಾತ್ರಿಯವರೆಗೆ ತಯಾರಿಸುತ್ತಲಿದ್ದೆನು. ಆಗ ಶಾಸ್ತ್ರಿಗಳವರು—ನಾನು ಸಿದ್ಧಪಡಿಸಿದ ವರದಿಯನ್ನು ನೋಡಿ "ಶಾಸ್ತ್ರಿಗಳೇ ನನ್ನಿಂದ-ನಿಮ್ಮಂತೆ ಸಂಚಾರ ಮಾಡುವುದು ಸಾಧ್ಯವಲ್ಲವೆಂದು ಮುಗುಳು ನಗೆಯಿಂದ ಹೇಳಿದ್ದುದು—

೩೪ ವರ್ಷಗಳಾದರೂ ನನ್ನ ನೆನಪಿನಲ್ಲಿದೆ. ಆಗ ಸಮ್ಮೇಲನದ ಪ್ರಾರಂಭದಲ್ಲಿ ಹಳೆ-ಹೊಸ ಅಧ್ಯಕ್ಷರೆಂದು ಇಬ್ಬರ ಫೋಟೊ ಸ್ವಾಗತ ಸಮ್ಮೇಲನದವರು ತೆಗದುಕೊಂಡದ್ದು ನನ್ನಲ್ಲಿದೆ. ಅದನ್ನೇ ಈಗ ಪ್ರಕಟಿಸಲಾಗಿದೆ.

ಸಂಸ್ಕೃತ ಪಂಡಿತರ ಮನೆಯಲ್ಲಿ ಜನಿಸಿ—ಬಾಲ್ಯದಲ್ಲಿಯೆ ಸಂಸ್ಕೃತಾಧ್ಯಯನವನ್ನು ತಮ್ಮ ತಂದೆಯವರಲ್ಲಿ ಪ್ರಾರಂಭಿಸಿ ಎಮ್. ಎ. ಡಿಗ್ರಿ ಪಡೆದು ತಿಂಗಳಿಗೆ ೫೦ ರೂಪಾಯಿ ವೇತನ ಪಡೆದು ಕಾಲೇಜಿನಲ್ಲಿ ಅಧ್ಯಾಪಕರಾಗಿ ಡಾಕ್ಟರೇಟ್ ಪದವಿ ದೊರಕಿಸಿ ಸೆಂಟ್ರಲ್ ಗೌರ್ನ್ಮೆಂಟಿನ ಅಕಾಡಮಿ ಪ್ರಶಸ್ತಿ ಗಳಿಸಿ ಕನ್ನಡ ಸಾಹಿತ್ಯಕ್ಕೆ ಮಹತ್ತ್ವದ ಕಾಣಿಕೆ ಸಲ್ಲಿಸಿ ಕೀರ್ತಿಕಾಯರಾಗಿದ್ದ ಶಾಸ್ತ್ರಿಗಳ ಜನ್ಮ ಸಾರ್ಥಕವಾಗಿರುತ್ತದೆ.

ಮನುಷ್ಯನಾಗಿ ಹುಟ್ಟಿ ಮನುಷ್ಯತ್ತ್ವವನ್ನು ಸಂಪಾದಿಸಿ, ಕೀರ್ತಿಕಾಯರಾಗುವ ಸುಯೋಗ ಎಲ್ಲರಿಗೂ ದೊರೆಯುವುದಿಲ್ಲ. ಕೆಲವರಿಗೆ ಮಾತ್ರ ಸಾಧ್ಯವಾದುದು. ಅಂಥವರಲ್ಲಿ ಕೃಷ್ಣಶಾಸ್ತ್ರಿಗಳೂ ಒಬ್ಬರಾಗಿರುತ್ತಾರೆ.

ಮನುಷ್ಯರಿಗೆ ವ್ಯವಹಾರದಲ್ಲಿ ದಕ್ಷತೆ, ಮತ್ತು ಶಾಂತಿ ಎರಡೂ ಬೇಕಾಗುತ್ತವೆ. ಎರಡರಲ್ಲಿ ಒಂದಿಲ್ಲದಿದ್ದರೆ ಅವನ ಬಾಳು ಹಸನವಾಗುವುದಿಲ್ಲ. ದಕ್ಷತೆಯಿದ್ದು ಶಾಂತಿ ಇಲ್ಲದಿದ್ದರೆ ಅವನು ಗಣ್ಯ ವ್ಯಕ್ತಿಯಾಗುವುದಿಲ್ಲ! ಶಾಂತಿಯಿದ್ದು ದಕ್ಷತೆಯಿಲ್ಲದಿದ್ದರೆ ಅವನು ಯೋಗ್ಯನೆಂದು ಗಣಿಸಲ್ಪಡುವುದಿಲ್ಲ. ಈ ಎರಡೂ ಗುಣಗಳು ಶಾಸ್ತ್ರಿಗಳಲ್ಲಿದ್ದವು.

ಅವರ ಸಾಹಿತ್ಯದ ಬಗ್ಗೆ ಹೆಚ್ಚಿಗೆ ಬರೆಯುವ ಕಾರಣವಿಲ್ಲ. ಅವರ ಗದ್ಯಶೈಲಿಯು ಪ್ರೌಢವಾಗಿಯೂ, ಅಮೋಘವಾಗಿಯೂ ಇದೆ. ಅವರ "ಸಂಸ್ಕೃತ ನಾಟಕ"ವಾಗಲಿ ನಾಟಕಗಳಾಗಲಿ ಇತರ ಗ್ರಂಥಗಳೇ ಆಗಲಿ ಕನ್ನಡ ಸಾಹಿತ್ಯದಲ್ಲಿ ದಿವ್ಯರತ್ನಗಳಾಗಿ ಪ್ರಕಾಶಮಾನಗಳಾಗಿವೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘ ಸಂಸ್ಥಾಪಿಸಿ ಪ್ರಬುದ್ಧಕರ್ಣಾಟಕ ಪ್ರಬುದ್ಧವಾಗಿಯೇ ಬೆಳೆದದ್ದು

ಅವರ ಗೌರವಕ್ಕೆ ಕಾರಣವಾಗಿದೆ. ಕನ್ನಡ ಭಾಷೆಯ ಉಜ್ವಲಾಭಿಮಾನಿಗಳಾಗಿದ್ದರೆಂಬುದಕ್ಕೆ ಅವರು ಹೈದರಾಬಾದಿನ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ಮಾಡಿದ ಭಾಷಣವೇ ಸಾಕ್ಷಿಯಾಗಿದೆ.

ಇಂಥ ಶ್ರೇಷ್ಠ ತರಗತಿಯ ಸಾಹಿತ್ಯ ಸೇವಕರನ್ನು ಕಳೆದ್ಕೊಂಡದ್ದು ಅಪಾರ ಹಾನಿಯಾದರೂ " ಪುನರಪಿ ಜನನಂ-ಪುನರಪಿ ಮರಣಂ" ಎಂಬ ಶಂಕರಾಚಾರ್ಯರ ಉಕ್ತಿಯಂತೆ ಹುಟ್ಟಿದವನು ಸಾಯಲೇಬೇಕು. ಆಯುಷ್ಯ ತೀರಿದಲ್ಲದೆ ಮರಣವಿಲ್ಲವೆಂದು ಶ್ರೀ ಬಸವೇಶ್ವರರು ಹೇಳಿದಂತೆ ಆಯುಷ್ಯ ಮುಗಿದಮೇಲೆ ಉಳಿಯುವುದು ಯಾರಿಗೂ ಸಾಧ್ಯವಲ್ಲ. ಶ್ರೀ ಕೃಷ್ಣಶಾಸ್ತ್ರಿಗಳವರಂತೆ ಪ್ರತಿಯೊಬ್ಬ ಕನ್ನಡಿಗನೂ ಭಾಷಾ ಸೇವೆಯ ಕಾರ್ಯ ಕೈಕೊಂಡರೆ ಅವರಿಗೆ ಯೋಗ್ಯಕಾಣಿಕೆ ಸಲ್ಲಿಸಿದಂತಾಗುತ್ತದೆ. ಶ್ರೀ ಆನಂದ ಯತಿವರ್ಯರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ದಿ|| ಶ್ರೀ ಎ. ಆರ್. ಕೃಷ್ಣಶಾಸ್ತ್ರಿ ಅವರನ್ನು ನೆನೆದು

ಚ. ಈಶ್ವರಪ್ಪ ಚಿಕ್ಕೊಳ್

ಕನ್ನಡದ ಮುನ್ನಡೆವ ಆಚಾರ್ಯರಿನ್ನಿಲ್ಲ
ಕನ್ನಡದ ಸೇನಾನಿ ಎಮ್ಮನಗಲಿದರಲ್ಲ
ಹಿತಮಿತದ ಸರಳಮಾತಿನ ಶ್ರೀ ಎ. ಆರ್. ಕೃಷ್ಣಶಾಸ್ತ್ರಿ
ವಿದ್ವತ್ತು ಘನತೆ ಗೌರವದ ಹಿರಿಯ ಆಸ್ತಿ
ಸಿಕ್ಕಲಾರದು ಇನ್ನು ನಿಮ್ಮಂಥ ಆದರ್ಶವ್ಯಕ್ತಿ
ಕನ್ನಡಿಗರೆಲ್ಲ ಹರಸುವೆವಿಂದು ಲಭಿಸಲಿ ನಿಮಗೆ ಮುಕ್ತಿ
ನಿಮ್ಮ ಕೊಡುಗೆಯು ನಮಗೆ ಮರೆಯಲಾರದ ಭಾಗ್ಯ
ನಿಮ್ಮಂಥ ಪುತ್ರರತ್ನರ ಪಡೆದುದು ನಾಡ ಸೌಭಾಗ್ಯ
ಕನ್ನಡದ ಪೋಷಣೆಗೆ ನೆರವಾದ ಹಿರಿಯರು ನೀವು
ನಿಮ್ಮ ದಾರಿದೀವಿಗೆಯಲ್ಲಿ ಬೆಳಕುಕಂಡೆವು ನಾವು
ಕನ್ನಡ ನವೋದಯದ ಶ್ರೇಷ್ಠ ನಿರ್ಮಾಪಕರು ನೀವು
ನಿಮ್ಮ ಕೃತಿರತ್ನಗಳು ಕನ್ನಡ ಸಾಹಿತ್ಯದ ಕೈಗನ್ನಡಿಗಳಾಗಿಹವು
ಕನ್ನಡ ಸಾಹಿತ್ಯಪ್ರಪಂಚಕೆ ನಿಮ್ಮ ಸೇವೆಯು ಮಿಗಿಲು
ನಿಮ್ಮ ಜ್ಯೋತಿಯನೊತ್ತು ಮೆರೆಯಲೆಂದೊಂದೂ ಕನ್ನಡದ ಮುಗಿಲು
ಕನ್ನಡದ ಕಟ್ಟಾಳು ಬಹುಭಾಷಾ ಸಾಹಿತ್ಯದುನ್ನತಿಯ ಮೇರು
ಕರ್ಮಶೀಲರು ನೀವು ಕನ್ನಡದ ಹೆಮ್ಮೆಯ ಪುತ್ರರತ್ನರು
ನಿಮ್ಮನಗಲಿದ ನಮಗಿಂದು ಸಹಿಸಲಾರದ ಶೋಕ
ಇಹದ ಜೀವನ ಸಾಕುಮಾಡಿನ್ನು ಸೇರಿದಿರಿ ಪರಲೋಕ
ಬೇಡುವೆವು ನಿಮ್ಮ ಬದುಕುಬಾಳುಗಳೆಲ್ಲ ನಮಗೆ ರುಚಿಸಲೆಂದು
ಹರಸುವೆವು ನಿಮ್ಮಾತ್ಮಕ್ಕೆ ಚಿರಶಾಂತಿ ದೊರೆಯಲೆಂದು.

★

ಕನ್ನಡದ ದ್ರೋಣಾಚಾರ್ಯ ಕೃಷ್ಣಶಾಸ್ತ್ರಿಗಳು

ಪ್ರೊ॥ ಬಿ. ಎಚ್. ಶ್ರೀಧರ

ದಿವಂಗತರ ಗುಣಗಾನವನ್ನು ದ್ವಿಮುಖಮನಸ್ಕತೆಯ ರಾಜಕೀಯ ಕಾವಿರುವ ಇಂದಿನ ದಿನಮಾನಗಳಲ್ಲಿ ನಾನಾ ಕಾರಣಗಳಿಗಾಗಿ ಮಾಡಲಾಗುತ್ತದೆ. ಹಾಗೆ ಮಾಡುವವರ ಮತ್ತು ಮಾಡಿಸಿಕೊಂಬವರ ಬಗ್ಗೆ—

"ಜೀವಂತಿ ಚ ಪ್ರಿಯಂತೇ ಚ ತದ್ವಿಧಾಃ ಕ್ಷುದ್ರಜಂತವಃ" ಎಂದು ಪ್ರಾಮಾಣಿಕ ಇತಿಹಾಸಕಾರ ಹೇಳದಿರಲಾರ. ಆದರೆ ದಿವಂಗತ ಕೃಷ್ಣಶಾಸ್ತ್ರಿಗಳ ಬಗ್ಗೆ ಆತನು—

"ಅನೇನ ಸದೃಶೋಲೋಕೇ ನ ಭೂತೋ ನ ಭವಿಷ್ಯತಿ" ಎಂದು ೨೦ನೆಯ ಶತಮಾನದ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದ ಹಿನ್ನೆಯಲ್ಲಿ ಹೇಳದೆ ಉಳಿಯಲಾರ. ಏಕೆಂದರೆ, ಶಾಸ್ತ್ರಿಗಳು ಈ ಶತಮಾನದ ಕನ್ನಡನಾಡ ಸಂಸ್ಕೃತಿಯ ಒಂದು ತುಂಬಿದ ಕೊಡ. ಹೃದಯ-ಬುದ್ಧಿ-ವ್ಯಕ್ತಿತ್ವಗಳ ಗುಣಗಳಲ್ಲಿ ಶಾಸ್ತ್ರಿಗಳು ಶಾಸ್ತ್ರೀಯವಾಗಿದ್ದುದು ಮಿಕ್ಕವರಿಗೆ ಒಂದು ಉನ್ನತ ಮಾದರಿಯಾಗಿತ್ತು.

ಕೃಷ್ಣಶಾಸ್ತ್ರಿಗಳು ಓಡಾಡುತ್ತಿದ್ದ ಒಂದು ಸರ್ವಾಂಗ ಸಮನ್ವಿತ ಕನ್ನಡ ಸಂಸ್ಕೃತಿಯ ಮಾದರಿ ಮೂರ್ತಿ— ಎನ್ನಲು ಸಾಕಷ್ಟು ಕಾರಣಗಳಿವೆ. ವಚನ ಸಾಹಿತ್ಯದ, ದಾಸ ಸಾಹಿತ್ಯದ, ತದಿತರ ಅಭಿಜಾತ ಸಾಹಿತ್ಯದ ಹಾಗೂ ಆಧುನಿಕ ಸಾಹಿತ್ಯದ ಚತುರ್ವಿಧವಾದ ಪ್ರಕಾರ (Pattern of literary art)ಗಳನ್ನು ಸಮದೃಷ್ಟಿಯಿಂದ ನೋಡಿ ಗುಣದೋಷ ವಿಮರ್ಶೆ ಮಾಡಬಲ್ಲ ಅಭಿರುಚಿಪಕ್ವತೆ ಅವರ ಬೋಧನದಲ್ಲಿ ಕಂಡುಬರುತ್ತಿತ್ತು. ಅವರು ಎರಡು ಅರ್ಥಗಳಲ್ಲಿ ಕನ್ನಡದ ದ್ರೋಣಾಚಾರ್ಯರು: ಸಾಹಿತ್ಯ-ಭಾಷೆ-ವಿಮರ್ಶೆಗಳಲ್ಲಿಯ ಪಾಂಡಿತ್ಯ-ರುಜಿಜ್ಞತೆಗಳ ಅರ್ಥದಲ್ಲಿ ಮತ್ತು ಮಹಾರಾಜ ಕಾಲೇಜಿನ ಗರುಡಿಯಾಚಾರ್ಯ ಸ್ಥಾನದಲ್ಲಿದ್ದ ಅರ್ಥದಲ್ಲಿ. ಗಾಂಧಿಯವರು ಹೇಳಿದಂತೆ ಭಾರತೀಯರ ಜೀವನದ ಸರ್ವಕ್ಷೇತ್ರಗಳ ಮೌಲ್ಯಗಳೂ ನಿತ್ಯಧೀನ. ಈ ಮಾನದಂಡದಂತೆ Gentleman "ಧಾರ್ಮಿಕ" ಎಂದೆನ್ನಿಸಿದ್ದ, ಸದ್‌ಗೃಹಸ್ಥಿತೆಯ ಉದಾತ್ತಮೂರ್ತಿ ಎನ್ನಿಸಿದ್ದ ಶಾಸ್ತ್ರಿಗಳಿಗೆ ಅನ್ವರ್ಥನಾಮವಿರುವಾಗ "ಪ್ರೊಫೆಸರ್" ಎಂಬ ಉಪಾಧಿ ಅನವಶ್ಯಕ. ಲೋಕಶಾಸ್ತ್ರ-ಆತ್ಮಶಾಸ್ತ್ರಗಳೆರಡರಲ್ಲೂ ಅವರು ಆಳವಾದ ವ್ಯಾವಹಾರಿಕ ಪಾಂಡಿತ್ಯವನ್ನು ಪಡೆದು ಸಫಲರಾಗಿದ್ದುದರಿಂದ ಅವರೆದುರು ನಿಂತಾಗ ಶಿಷ್ಯಕೋಟಿಗೆ ಅವರ ವ್ಯಕ್ತಿತ್ವದ ಸರ್ವಾಂಗ ಸೌಂದರ್ಯ ನಿಮಿಷಾರ್ಧದಲ್ಲಿ ಸಾಕ್ಷಾತ್ಕಾರವಾಗುತ್ತಿತ್ತು.

ಶಾಸ್ತ್ರಿಗಳು **Humanist** ಮಾನವತವಾದಿಗಳಾಗಿದ್ದರೆಂದು ವರ್ಣಿಸುವುದು ಅಪದ್ಯಾಪ್ತ. "ದಯಾ ಸರ್ವಭೂತೇಷು' ಎಂಬ ಆದ್ಯ ಆತ್ಮಗುಣ ಉಳ್ಳ ಅವರಿಗೆ ಅಂಥ ವರ್ಣನೆ ಅವ್ಯಾಪ್ತಿದೋಷವುಳ್ಳದ್ದಾದೀತು. ರಾ ಜ ನು ರಾಜರ್ಷಿ ಎಂದಾಗುವಂತೆ ಅವರು ಗೃಹಸ್ಥ ಸಂನ್ಯಾಸಿ ಅಥವಾ "ಗೃಹರ್ಷಿ" ಗಳಾಗಿದ್ದರೆಂಬುದು ಯಥಾರ್ಥ ಸತ್ಯ. ಕಾರುಣ್ಯವೇ ಅವರ ತಾರುಣ್ಯ ಸ್ಥಾನದಲ್ಲಿತ್ತು. ಆ ಜಂಗಮ ಕನ್ನಡ ಶಿಲ್ಪಕಲಾ ಮೂರ್ತಿಯ ಔಚಿತ್ಯಜ್ಞತೆ ಮಾತು, ಬರಹ, ನಡತೆ, ಬೋಧನಗಳೆಲ್ಲವುಗಳಲ್ಲೂ ಸ್ಫುಟವಾಗಿ ಪ್ರಕಟವಾಗುತ್ತಿತ್ತು. "ಸಮತ್ವಂ ಯೋಗ ಉಚ್ಯತೇ" ಎಂಬ ಸೂತ್ರಕ್ಕೆ ಅವರು ಜೀವಂತ ಭಾಷ್ಯವಾಗಿದ್ದರು. ಗಾರ್ಹಸ್ಥ ಜೀವನದಲ್ಲಿಯ ವೈಯಕ್ತಿಕ ಮನಃಕ್ಲೇಶಗಳ ತೀಕ್ಷ್ಣತೆಯಿಂದಾಗಲಿ ಸುತ್ತಲಿನ ಆ ಈ ಸ್ಥಾನಾಪನ್ನರು ಆಗೀಗ ತೋರಿಸಿದ ಅನಾದರಗಳ ಉಗ್ರತೆಯಿಂದಾಗಲಿ ಅವರ "ಶಿಲಾಶೈಲೋಪಮ" ಶರೀರದಲ್ಲಿದ್ದ ಕುಸುಮ ಕೋಮಲ ಜೀವಾತ್ಮನು ಕಂಗೆಡಲಿಲ್ಲ. ವರಕವಿ ಬೇಂದ್ರೆ ಹಿಡಿದ ಧೋರಣದಂತೆ "ನನ್ನ ಪಾಡೆನಗಿರಲಿ" ಎಂದು ತಮ್ಮ ವೈಯಕ್ತಿಕ ಲಾಭ ಲಾಭಾ ಜ ಯಾ ಪ ಜ ಯ ಗ ಳ ಬಗ್ಗೆ ಸಂಪೂರ್ಣ ಮೌನವನ್ನು ವಹಿಸಿ, ಶಿಷ್ಯಲೋಕವಿಹಿತಕಾಮರಾಗಿ ಬಾಳಿದ ಚತುರ್ಮುಖ (ಬಂಗಾಳಿ, ಕನ್ನಡ, ಸಂಸ್ಕೃತ, ಇಂಗ್ಲಿಷು) ಸರಸ್ವತಿಗಳಾದ ಶಾಸ್ತ್ರಿಗಳ ಜೀವನವೊಂದು ಸೌಹಾರ್ದದ ನಂದನವನ, ಸೌಶೀಲ್ಯದ ರತ್ನ ಭಂಡಾರ, ಸೌರಸ್ಯದ ಮಾನಸ ಸರೋವರ. ಗಾಂಭೀರ್ಯ ಕೆಡದ ಅಹಿಂಸಾ

ತ್ಮಕವಾದ ಅವರ ಹಾಸ್ಯಪ್ರಸಾದವು ಆತ್ಮವಿಕಾಸದ ಉಚ್ಚ ಮಟ್ಟವನ್ನು ಪ್ರತಿಬಿಂಬಿಸುತ್ತಿತ್ತು. ಅವರೊಂದು ಕನ್ನಡ ಜೀವನ ಧರ್ಮಗ್ರಂಥವಾಗಿದ್ದರೆಂದರೆ ಹೆಚ್ಚಾಗದು. ಗಾಂಗೇಯನು ಪ್ರತಿಜ್ಞೆಯನ್ನು ಮುರಿದರೆ ಹರಿ-ಹರ-ಹಿರಣ್ಯ-ಗರ್ಭರು ನಗರೇ ? ಎಂದು ಪಂಪ ನುಡಿಸಿದ್ದಾನೆ. ಭೀಷ್ಮನಿಗೆ ಹರಿಹರಬ್ರಹ್ಮರಷ್ಟೇ ಸರಿಸಮಾನರೆಂಬ ಧ್ವನಿ ಅಲ್ಲಿದೆ. ಹಾಗೇ ಶಾಸ್ತ್ರಿಗಳ ಜೀವನ ಧರ್ಮಯೋಗಕ್ಕೆ ಜೀವಂತ ಉದಾಹರಣೆಯಾಗಿ ಈಗ ಇರುವವರು ಡಿ.ವಿ.ಜಿ. ಒಬ್ಬರು ; ಇಂಥ ದ್ರೋಣರಿಗೆ ಹೊಯ್‌ಕೈ ಆಗಬಲ್ಲವರು ಅಂಥ ಭೀಷ್ಮರೊಬ್ಬರೇ ಅಲ್ಲವೆ' ?

ಕೃಷ್ಣ ಶಾಸ್ತ್ರಿಗಳ ಹೆಸರು " ಕೃಷ್ಣ ಶಾಸ್ತ್ರಿಗಳೆ "ಂದಿರುವುದರ ಬದಲು " ರಾಮಾಶಾಸ್ತ್ರಿಗಳೆಂ"ದ್ದಿದ್ದಿದ್ದರೆ ಚೆನ್ನಾಗಿರುತ್ತಿತ್ತು—ಎಂದು ನನಗನ್ನಿಸುತ್ತಿತ್ತು. ಕೃಷ್ಣನ ತಂತ್ರಶೀಲಕ್ಕಿಂತ ರಾಮನ ಧೀರೋದಾತ್ತತೆಯೇ ಅವರ ನಿಲುವಿನಲ್ಲಿ ಎದ್ದು ಕಾಣುತ್ತಿತ್ತು. ಅವರೊಂದು ರಾಮಮನಸ್ಕತೆಯ ಮಾಸಿರಿ ; ಕಾಯದೆಬದ್ಧ ಆಚಾರವಂತಿಕೆಯ ಶಿಸ್ತು-ಸಂಯಮ-ನೇರ್ಪುಗಳು ವೇಷ-ಭಾಷೆ-ವರ್ತನೆಗಳಲ್ಲಿ ಮೂಡಿದ್ದುವು. ಅವರು ಧರಿಸಿದ " ಕತ್ತರಿ ಪೇಟ " ಮಾತ್ರ ಅರ್ಥಪೂರ್ಣವಾಗಿತ್ತೆನ್ನಬಹುದು ; ಅದರ ಜ್ಯಾಮಿತೀಯ ಅಂಗವಿನ್ಯಾಸವು ಅವರ ಆಚಾರ ನಿಯಮದ, ವ್ರತಸ್ಥ ಜೀವನದ ಸುಪ್ರತೀಕವಾಗಿತ್ತು.

ಬಿ.ಎಂ.ಶ್ರೀಗಳ ರಾಜವೈಭವದ ಚಹರೆಗಳನ್ನು ನಾವು ಕೃಷ್ಣ ಶಾಸ್ತ್ರಿಗಳಲ್ಲಿ ಕಾಣಲಿಲ್ಲ. ವೆಂಕಣ್ಣಯ್ಯನವರ ಬಾಹ್ಯ ವ್ಯಕ್ತಿತ್ವದ ನಮ್ರತಾಸೂಚಕವಾದ ಬಾಗು ಅವರಲ್ಲಿರಲಿಲ್ಲ. " ಘನಃಸ್ಪಷ್ಟೋಧೀರಃ ಸಮದ ವೃಷಭ ಸ್ನಿಗ್ಧ ಮಧುರಃ " ಎಂಬ ಸ್ವರದಿಂದ ಸೂಚಿತವಾಗುವ ಭಾಸನಿರ್ಮಿತ ಭರತನನ್ನು ನೆನಪಿಗೆ ತಂದುಕೊಡುವ ಅವರ ಎತ್ತರದ, ನೇರವಾದ ಗಂಭೀರ ವ್ಯಕ್ತಿತ್ವವು ಅವರ ವಿದ್ಯಾ ಗುರುಗಳಿಗೆ ಹೇಗೆ ಆದರ್ಶರೀತಿಯಲ್ಲಿ ಮಣಿದಿತ್ತೋ ಹಾಗೇ ಅವರ ವಿದ್ಯಾರ್ಥಿಗಳ ಆತ್ಮಗಳನ್ನು ಮಣಿಯಿಸಿತ್ತು. ಕಾಳಿದಾಸನೂ ಅವನು ರಚಿಸಿದ ಪಾತ್ರಗಳೂ ಅವರಿಗೆ ಅಪ್ರಿಯವಾಗಿರದಿದ್ದರೂ ಭಾಸನೂ ಅವನು ನಿರ್ಮಿಸಿದ ಪಾತ್ರಗಳೂ ಅವರ ಆತ್ಮಕ್ಕೆ ರವೆಯಷ್ಟಾದರೂ ಹೆಚ್ಚು ಸಂತೋಷವನ್ನು ಕೊಟ್ಟಿದ್ದವೆಂಬುದನ್ನು ಅವರ ವಿಮರ್ಶಾತ್ಮಕ ಬರಹಗಳಿಂದಲೂ ಬೋಧನಗಳಿಂದಲೂ ತಿಳಿದುಕೊಳ್ಳಲಾಗುತ್ತಿತ್ತು ; ಹರಿ-ಹರೈಕ್ಯಜ್ಞನಾದರೂ ಒಬ್ಬ ಕವಿ " ತಥಾಪಿ ಭಕ್ತಿಃ ತರುಣೇಂದು ಶೇಖರೇ " ಎಂದದ್ದನ್ನು ಇಲ್ಲಿ ಅನ್ವಯಿಸಿಕೊಳ್ಳುವುದು ಅಗತ್ಯ. ಅವರು ಹೃತ್ಪೂರ್ವಕವಾಗಿ ಮೆಚ್ಚಿಕೊಂಡಿದ್ದ ಪಾತ್ರಗಳ ಜೀವನನೀತಿಗಳ ಮೇಲಿನಿಂದ ಅವರ ಅಂತರಾತ್ಮನ ಸ್ವರೂಪದ ಮುಖ್ಯಾಂಶಗಳನ್ನು ಊಹಿಸಬಹುದು. " ಅಕೃತ್ವಾಪರ ಸಂತಾಪಂ | ಅಗತ್ವಾ ಖಲನಮ್ರತಾಂ || ಅನುತ್ಸೃಜ್ಯ ಸತಾಂ ಮಾರ್ಗಂ | ಯತ್ ಸ್ವಲ್ಪಮಪಿ ತದ್ ಬಹು || " ಎಂಬುದು ಅವರ ಜೀವನದ ಬ್ರಹ್ಮಸೂತ್ರವಾಗಿತ್ತು—ಎಂದರೆ ಅಂಥ ಸಮರ್ಥ ಊಹೆಯಾದೀತು.

ಸ್ವತಂತ್ರ ಭಾರತದಲ್ಲೀಗ ವಿದ್ಯಾವಂತ-ಅವಿದ್ಯಾವಂತ-ಅರ್ಧ ವಿದ್ಯಾವಂತರೆಂಬ ಭೇದವಿಲ್ಲದೆ, ಪ್ರಾಧಿಕಾರಿ-ಅಪ್ರಾಧಿಕಾರಿ ಎಂಬ ವ್ಯತ್ಯಾಸವಿಲ್ಲದೆ, ಪ್ರಜೆ-ಪ್ರಶಾಸಕ ಎಂಬ ವಿಂಗಡವಿಲ್ಲದೆ, ಗುರು-ಶಿಷ್ಯ ಎಂಬ ವರ್ಗೀಕರಣವಿಲ್ಲದೆ ಅನೇಕರಲ್ಲಿ ತ್ರಿಕರಣಶುದ್ಧಿಯು ಆವಿಯಾಗಿಹೋಗಿ ಸಹಜೀವಿಗಳ ಬಗೆಗಿನ ಎ ದೆ ಯೊ ಂ ದು ಮರಳುಗಾಡಾಗುತ್ತಿರುವ ಅತ್ಯಂತ ದುಃಖಕರ ಆವರಣದಲ್ಲಿ ಶಾಸ್ತ್ರಿಗಳಂಥ " ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ " ಎಂಬ ರಾಜಮಾರ್ಗಗಾಮಿಗಳೊಬ್ಬರು ನಮ್ಮ ಸಮಾಜದಿಂದ ಕಣ್ಮರೆಯಾಗಿ ಹೋದರೆ ಸಮಾಜದ ಆರೋಗ್ಯಕ್ಕೆ ಎಷ್ಟು ನಷ್ಟ ಎಂಬುದನ್ನು ಹೇಳತೀರದು. ಒಂದು ಮಹಾಗ್ರಂಥ ಎಷ್ಟೇ ದೊಡ್ಡದಾದರೂ ಅದು ಹೇಳುವುದು ವಿಚಾರವನ್ನು ಆಚಾರವನ್ನಲ್ಲ. ಅಷ್ಟೇ ಸಾಕಾಗಿದ್ದರೆ ನಮ್ಮ ಶಾಲಾ ಕಾಲೇಜುಗಳಿಗಿಂದು ಉಪಾಧ್ಯಾಯರೇ ಬೇಕಾಗುತ್ತಿರಲಿಲ್ಲ ; ಗ್ರಂಥಗಳನ್ನು ವಿದ್ಯಾರ್ಥಿಗಳ ಮುಂದೆ ಜವಾನರ ಮೂಲಕ ಇಡಿಸಿಹೋದರೆ ಸಾಕಾಗುತ್ತಿತ್ತು. ಹಾಗಿಲ್ಲ; ಅದು ಸಾಲದು—ಎಂಬುದು ಅನುಭವಕ್ಕೆ ಬಂದಿರುವುದರಿಂದ ಉಪಾಧ್ಯಾಯರ ಆವಶ್ಯಕತೆ ಇನ್ನೂ ಉಳಿದಿದೆ. ಹಾಗೇ ಸಮಾಜಕ್ಕೂ—ಅದರಲ್ಲೂ ವಿದಗ್ಧ ಸಮಾಜಕ್ಕೆ ಇನ್ನೂ ಹೆಚ್ಚಾಗಿ—ಶಾಸ್ತ್ರಿಗಳಂಥ ಪರಿಪಕ್ವ ಅಭಿರುಚಿಸಂಪನ್ನರೂ ಪಾಂಡಿತ್ಯಸಂಪನ್ನರೂ ಉಳಿದಿರುವುದು ಅತ್ಯಂತ ಆವಶ್ಯಕ. ಆದರೆ ಶಾಸ್ತ್ರಿಗಳೊಂದು ಉಪಕಾರ ಮಾಡಿಹೋಗಿದ್ದಾರೆ : ಗ್ರಂಥಗಳಷ್ಟನ್ನೇ ತಮ್ಮ ಹಿಂದೆ ಬಿಟ್ಟುಹೋಗಿಲ್ಲ ; ತಮ್ಮ ಹರಿತವಾದ ಸಂಶೋಧನಾತ್ಮಕ ಪಾಂಡಿತ್ಯದ ಸತ್‌ಪರಂಪರೆಯನ್ನು ಕಾಯ್ದುಕೊಂಡು ಹೋಗಲು ತಕ್ಕ ಮಾನವಪುತ್ರರನ್ನೂ ಸಿದ್ಧಗೊಳಿಸಿ ಹೋಗಿದ್ದಾರೆ. ಶ್ರೀಮಾನ್ ಜಿ. ವೆಂಕಟಸುಬ್ಬಯ್ಯನವರು, ಶ್ರೀಯುತ ದೇ. ಜವರೇಗೌಡರು, ಡಾ. ಹಾ. ಮಾ. ನಾಯಕರು, ಡಾ. ವರದರಾಜರಾಯರು, ಡಾ. ಚಿದಾನಂದಮೂರ್ತಿಗಳು, ಡಾ. ಪ್ರಭುಶಂಕರರು, ಶ್ರೀ ಆರ್. ಎಸ್. ರಾಮರಾಯರು, ಶ್ರೀ ಪರಮೇಶಭಟ್ಟರು, ಮತ್ತು ಅನೇಕ ನಿಶಿತಮನಿಗಳು ಶಾಸ್ತ್ರಿಗಳ ಜ್ಯಾಮಿತೀಯ ದೃಷ್ಟಿಕೋನದ ಹೊಳಹನ್ನು ಪಡೆದು ತಮ್ಮದೇ ಆದ ರೀತಿ

ಯಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉತ್ತಮ ಮಟ್ಟದ ಭಾಷಾ-ಸಾಹಿತ್ಯ-ಸಂಶೋಧನಗಳ ರೂಪದ ಸೇವೆಯನ್ನು ಸಲ್ಲಿಸುತ್ತಿರುವುದು ಅಭಿಮಾನಾಸ್ಪದವಾಗಿದೆ.

ಸಂಸ್ಕೃತ ಸಾಹಿತ್ಯದ ಹಿರಿಮೆಯನ್ನು ಕಂಡು ಉಂಡು ಅನುಭವಿಸಿ ಅರಗಿಸಿಕೊಂಡು ಹೊಸಗನ್ನಡದ ಪೋಷಣೆಗೆ ಬಳಸಿಕೊಳ್ಳಲು ಅನುಕೂಲವಾಗುವಂಥ ಗ್ರಂಥಗಳನ್ನು ಆದರ್ಶ ಹೊಸಗನ್ನಡ ಶೈಲಿಯಲ್ಲಿ (ಗದ್ಯರೂಪದಲ್ಲಿ) ಬರೆದಿಟ್ಟ ಪುಣ್ಯವು ಶಾಸ್ತ್ರಿಗಳಿಗೆ ಸೇರಿದ್ದು. ವಿದೇಶೀಯ ವಿದ್ವಾಂಸರನ್ನೂ ರಸಿಕರನ್ನೂ ಸಂಶೋಧಕರನ್ನೂ ಸಾಹಿತಿಗಳನ್ನೂ ಭಾಷಾ ಶಾಸ್ತ್ರಜ್ಞರನ್ನೂ ಎಂದಿನಿಂದಲೂ ಹೆಚ್ಚಾಗಿ ಆಕರ್ಷಿಸುತ್ತ ಬಂದ ಒಂದೇ ಒಂದು ಭಾಷಾ ಮತ್ತು ಸಾಹಿತ್ಯ (ವಾಙ್ಮಯ) ಎಂದರೆ ಸಂಸ್ಕೃತ. ಅದು ಭಾರತೀಯರೆಲ್ಲರ ಸ್ವತ್ತು. ಕನ್ನಡಿಗರು ಐತಿಹಾಸಿಕ ಕಾಲದಿಂದಲೂ ಅದರ ಸಂಪದಭಿವೃದ್ಧಿಗೆ ಉತ್ತಮ ಕಾಣಿಕೆಗಳನ್ನು ಸಲ್ಲಿಸಿದವರು—ಎಂಬುದನ್ನು ಬಲ್ಲ ಶಾಸ್ತ್ರಿಗಳಿಗೆ ಸಂಸ್ಕೃತ ಕನ್ನಡಕ್ಕಿಂತ ಕಡಿಮೆ ಆದರಾರ್ಹವಾಗಿದ್ದಿಲ್ಲ. ಕನ್ನಡವು ಸಂಸ್ಕೃತಕ್ಕೆ ಸಲ್ಲಿಸಬೇಕಾದ ಕೃತಜ್ಞತೆಯ ಪ್ರಮಾಣ ಅವರಿಗೆ ಗೊತ್ತು. ಇನ್ನು ಮುಂದೆಯೂ ಕನ್ನಡ ಮುಂತಾದ ದೇಶಭಾಷೆಗಳ ಕೈಮೈಮನಗಳು ಪುಷ್ಟವಾಗಬೇಕಾದರೆ ರಸದೃಷ್ಟಿಯಿಂದಲೂ ವಿಜ್ಞಾನ ದೃಷ್ಟಿಯಿಂದಲೂ ಸಂಸ್ಕೃತ ಶಬ್ದಕೋಶವನ್ನೂ ಶಾಸ್ತ್ರ ಗ್ರಂಥಗಳನ್ನೂ ಅವಲೋಕಿಸಬೇಕಾಗುವುದೆಂಬ ಅನಿವಾರ್ಯತೆಯ ಸಾಂಸ್ಕೃತಿಕ ಮುನ್ನೋಟ ಶಾಸ್ತ್ರಿಗಳಿಗಿತ್ತು. ಈಗ ಕನ್ನಡವು ರಾಜ್ಯ ವ್ಯವಹಾರಗಳ ಮತ್ತು ಆಡಳಿತದ ಹಾಗೂ ಬೋಧನದ ಮಾಧ್ಯಮವಾಗಲು ಹೊರಳಿರುವುದರಿಂದ ಅದರ ಸಿದ್ಧತೆಗೆ ಸಿದ್ಧರಾಗುವ ವಿದ್ವಾಂಸರಿಗೆ ಸಂಸ್ಕೃತ ಏನನ್ನು ಕೊಡಬಹುದು—ಎಂಬ ಅರಿವಿನ ಅರುಣೋದಯವಾಗುತ್ತಿದೆ ಎಂಬುದಕ್ಕೆ ಮೈಸೂರಿನ ದ್ರವ್ಯ ಮಂತ್ರಿಗಳು ಮಾಡಿದ ಆಯವ್ಯಯ ಪತ್ರವನ್ನು ಮಂಡಿಸುವ ಭಾಷಣದ ಕನ್ನಡ ಭಾಷಾಂತರದ ಅಚ್ಚುಕಟ್ಟುತನವೇ ಸಾಕ್ಷಿ. ಸಂಸ್ಕೃತದ ಸಹಾಯವನ್ನು ಬಹಿಷ್ಕರಿಸಿದ "ಪ್ರಬುದ್ಧ ಕರ್ಣಾಟಕ"ದ "ಮೆಂಡಲ್ ಸಂಚಿಕೆ" ಅದರ ವಿರುದ್ಧ ಸಾಕ್ಷಿ! ಹಿತ, ಮಿತ, ಮೃದುಮಧುರವಾದ ಸಂಸ್ಕೃತ ಪದಗಳ ಆಯ್ಕೆಯಿಂದ ಹೊಸಗನ್ನಡ ಭಾಷಾ ಶೈಲಿಗೆ ಮೆರುಗು ಕೊಟ್ಟ ಶ್ರೇಯಸ್ಸು ಶಾಸ್ತ್ರಿಗಳಿಗೂ ಮಹಾಕವಿ ಕುವೆಂಪುಗಳಿಗೂ ಮೊದಲು ಸಲ್ಲಬೇಕು. ಅವರಂತೆಯೇ ಶ್ರೀ ಪು.ತಿ.ನ. ಅವರಿಗೂ ಸಲ್ಲಬೇಕು. ಈ ಮುಂಧೋರಣದ ಸಾಂಸ್ಕೃತಿಕ ಪ್ರಯೋಗಕ್ಕೆ ಕನ್ನಡನಾಡು ಋಣಿ. ಸಂಸ್ಕೃತದ ಸಂಸ್ಕಾರವಿಲ್ಲದವರಿಗೆ "ಷಷ್ಟ್ಯಬ್ಧಿ" ಯಲ್ಲದೆ "ಷಷ್ಟ್ಯಬ್ದ" ಸಮಾರಂಭವಾಗದು!

ಶಾಸ್ತ್ರಿಗಳು ಬರೆದಿಟ್ಟ ಗ್ರಂಥಗಳ ಅಭ್ಯಾಸವೊಂದೇ ಅವರು ಕೀರ್ತಿಶೇಷರಾಗಿ ಹೋದ ಇಂದಿನ ಕಾಲಮಾನದಲ್ಲಿ ಉಳಿದ ಕರ್ತವ್ಯ. ಅವರ ಪರಾನುಕಂಪ ಔದಾರ್ಯ, ಸ್ನೇಹ ಮಮತೆ, ನಿಯಮನಿಷ್ಠೆ, ಸತ್ಯವ್ರತ, ತಾರ್ಕಿಕಬುದ್ಧಿ ಮತ್ತೆ, ಮುಗುಳ್ನಗೆಯ ಪ್ರಸಾದ, ಸೂಕ್ಷ್ಮಜ್ಞತೆ, ಸ್ಥಿತಪ್ರಜ್ಞ ಮನಃಪ್ರಣಾಳಿಗಳು ಹೊಸಗನ್ನಡದ ತರುಣವರ್ಗಕ್ಕೆ ಮಾರ್ಗದರ್ಶಿಕ ಕೈದೀವಿಗಳಾಗಿವೆ. ಅವರ ಆಶೀರ್ವಾದ ಬಲದಿಂದ ಕನ್ನಡಿಗರ ವಿದ್ವತ್ತೆಯ ದೃಷ್ಟಿ, ರಸಜ್ಞತೆಗಳು ಭಾರತೀಯ ಧರ್ಮದ ಚೌಕಟ್ಟಿನಲ್ಲಿ ಅಚ್ಚುಕಟ್ಟಾಗಿ ಬೆಳೆದು ಚಾಲುಕ್ಯರ ಹಾಗೂ ವಿಜಯನಗರದ ಅರಸರ ಕಾಲದ ಪ್ರೌಢತೆಯನ್ನು ಮುಟ್ಟಿ ಮರೆಯದಿದು—ಎಂದು ಅವರ ಆದರ್ಶಗಳ ಆರಾಧಕರೆಲ್ಲರಿಗೂ ಪ್ರತ್ಯಾಶೆಯುಂಟಾಗದಿರದು.

ಮಿಕ್ಕ ಎಲ್ಲ ಜನರನ್ನೂ ಅವರ ಮಾತನ್ನೂ ಅಟ್ಟಬಿಟ್ಟು ಕನ್ನಡವನ್ನು ಏಕನಾದ ತಂಬೂರಿಯ ತಂಬೂರಿಯ ತಂತಿಯಂತೆ ನಿಲ್ಲಿಸಬೇಕೆಂಬುದು ನಮ್ಮ ಅಭಿಪ್ರಾಯವಲ್ಲ; ಎಲ್ಲವೂ ಬೇಕು, ಎಲ್ಲರೂ ಬೇಕು; ಆದರೆ ಅವರು ವೀಣೆಯ ತಂತಿಗಳಂತೆ ಸೇರಿ ಮಧುರವಾದ ಗಾನವನ್ನು ಬೀರಿ ದೇಶಕ್ಕೆ ಗೌರವವನ್ನೂ ಸುಖವನ್ನೂ ತರಬೇಕು.

* *

ಕನ್ನಡದ ಮನೆಯಲ್ಲಿ ಕನ್ನಡವೇ ಯಜಮಾನಿಯಾಗಿರಬೇಕು - ಮಿಕ್ಕಿದ್ದು ಹಕ್ಕಿದ್ದನ್ನು ತಿಂದುಕೊಂಡು ಚಾಕರಿಮಾಡಿಕೊಂಡಿರುವ ಕೀಳುಜಾತಿಯ ಪರಿಚಾರಕಿಯಂತಿರಬಾರದು.

ಎ. ಆರ್. ಕೃ.

ಪೂಜ್ಯ ಎ. ಆರ್. ಕೃ. ಅವರನ್ನು ಕುರಿತು ನಾಲ್ಕು ನೆನಪಿನ ಮಾತು

ಎಂ. ವಿ. ಸೀತಾರಾಮಯ್ಯ

ದಿವಂಗತ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳನ್ನು ನಾನು ಮೊದಲು ಸಂಧಿಸಿದ್ದು, ಅವರಿಗೆ ನಾನು ಚಹಾ ಸ್ನಾನ ಮಾಡಿಸಿದಾಗ.

ಚಹಾ ಸ್ನಾನ! ಅದು ನಡೆದದ್ದು ಹೀಗೆ:

ಕೃಷ್ಣಶಾಸ್ತ್ರಿಗಳು ನನ್ನ ಬಾಲ್ಯದಿಂದಲೂ ನನ್ನನ್ನು ಬಲ್ಲವರಾಗಿದ್ದರು. ಈ ಸಂಗತಿ ನನಗೇ ತಿಳಿದಿರಲಿಲ್ಲ. ಅವರೇ ತಿಳಿಸಿದವರು:

"ನಿನ್ನ ತಂದೆ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿಯಲ್ಲಿ part time ಗುಮಾಸ್ತರಾಗಿರಲಿಲ್ಲವೆ? ಗುಮಾಸ್ತರು ಕ್ಯಾಷಿಯರು ಅಕೌಂಟೆಂಟು ಎಲ್ಲ ಅವರೆ. ಆಗ ನಾನು ಸೊಸೈಟಿಯ ಸದಸ್ಯ. ನಿನ್ನ ಅಣ್ಣನೂ ಕೆಲಸ ಮಾಡುತ್ತಿದ್ದ. ನೀನೂ ಬಂದು ರೂಲುಗೀಲು ಹಾಕಿ ಕೊಟ್ಟು ನಿಮ್ಮ ತಂದೆಗೆ ನೆರವಾಗುತ್ತಿದ್ದೆ" ಎಂದು. ಮೈಸೂರು ಸಾಹಿತ್ಯ ಸಮ್ಮೇಳನದ ಅತಿಥಿಗಳ ಬಿಡಾರದಲ್ಲಿ–ಎಂದರೆ ಮಹಾರಾಜರವರ ಕಾಲೇಜಿನ ಹಾಸ್ಟಲಿನ ಕಟ್ಟಡದ ಕೊಟಡಿಯೊಂದರಲ್ಲಿ – ಮೊತ್ತಮೊದಲಿಗೆ ಆತ್ಮೀಯವಾದ ರೀತಿಯಲ್ಲಿ ನನ್ನ ಪರಿಚಯ ಮಾಡಿಕೊಂಡರು.

ಪರಿಚಯ ಮಾಡಿಕೊಂಡದ್ದು, ಚಹಾ ಸ್ನಾನವಾದ ಮೇಲೆ. ಮಹಾರಾಜ ಕಾಲೇಜಿನ ಕರ್ಣಾಟಕ ಸಂಘದ ಸದಸ್ಯ ಎಂಬ ನಿಮಿತ್ತವಾಗಿ ಕೇವಲ ಒಂದು ರೂಪಾಯಿ ಶುಲ್ಕ ಕೊಟ್ಟು ಸ್ವಾಗತ ಸಮಿತಿಯ ಸದಸ್ಯ ಎನ್ನಿಸಿ ಕೊಂಡಿದ್ದರೂ, ಕೆಲಸಮಾಡುತ್ತಿದ್ದದ್ದು ಸ್ವಯಂಸೇವಕ ನಾಗಿ. ಅದರಿಂದಾಗ, ಕೃಷ್ಣಶಾಸ್ತ್ರಿಗಳಿದ್ದ ಕೊಟಡಿಗೆ ಒಂದುದಿನ ಮಧ್ಯಾಹ್ನಾತ್ಪರ ಚಹಾ ತೆಗೆದುಕೊಂಡು ಹೋಗಿ ಕೊಡುವ ಕೆಲಸ ನನ್ನ ಪಾಲಿಗೆ ಬಂದಿತ್ತು. ಒಂದು ರೈಲು ತಂಬಿಗೆಯ ತುಂಬ ಚಹಾ ತೆಗೆದುಕೊಂಡು ಹೋಗಿದ್ದೆ. ಜೊತೆಗೆ ಲೋಟಗಳನ್ನು ಕೊಂಡೊಯ್ಯುವುದನ್ನು ಮರೆತಿದ್ದೆ. ಲೋಟಾ ತರುತ್ತೇನೆಂದಾಗ, ಅದೇ ಕೊಟಡಿಯಲ್ಲಿದ್ದ ಕೃಷ್ಣ ಶಾಸ್ತ್ರಿಗಳ ಆಪ್ತಮಿತ್ರರೊಬ್ಬರು, "ಶಾಸ್ತ್ರಿಗಳಿಗೆ ಪಾತ್ರೆ ಎತ್ತಿಕೊಂಡು ನೀರು ಕುಡಿದು ಅಭ್ಯಾಸ, ತಂಬಿಗೆ ಎತ್ತಿ ಕೊಂಡೇ ಕುಡಿದು ಬಿಡುತ್ತಾರೆ. ಆ ಮೇಲೆ ನಾವು ಕುಡಿಯೋಣ" ಎಂದು ಸೂಚಿಸಿದರು. ಕೃಷ್ಣಶಾಸ್ತ್ರಿಗಳು ಹಾಗೆಯೇ ಮಾಡಿಬಿಟ್ಟರು! ನಾನು ಬಂದ ನಗುವನ್ನು ತಡೆದುಕೊಂಡಿದ್ದೆ. "ಲೋಟ ತರದೆ ಇದ್ದದ್ದಕ್ಕೆ ಈಗ ನಿನಗೆ ಶಿಕ್ಷೆ. ಉಳಿದ ಅರ್ಧವನ್ನು ನೀನು ಕುಡಿಯಬೇಕು" ಎಂದು ಆದೇಶವಿತ್ತು, ರೈಲುಚೆಂಬನ್ನು ಕೈಗೆ ಕೊಟ್ಟರು. ನಾನೂ ಅವರ ಹಾಗೆಯೇ ಕುಡಿಯಹೋಗಿ, ಚೆಂಬನ್ನು ಮೇಲಕ್ಕೆತ್ತಿದೆ; ಚಹಾ ಧಾರಾಕಾರವಾಗಿ ಬಾಯಿಗೆ ಬೀಳ ತೊಡಗಿತು. ಈ ನಡುವೆ ಕೃಷ್ಣಶಾಸ್ತ್ರಿಗಳ ಮಿತ್ರರು ಮತ್ತೆ ಹಾಸ್ಯದ ಚಟಾಕಿ ಹಾರಿಸಿದರು. ತಡೆದುಕೊಂಡಿದ್ದ ನಗು, ಬಾಯಿತುಂಬ ತುಂಬಿದ್ದ ಚಹಾದೊಂದಿಗೆ ಚಿಲುಮೆಯಂತೆ ಉಕ್ಕಿ, ಎದುರಿಗೆ ನಿಂತಿದ್ದ ಕೃಷ್ಣಶಾಸ್ತ್ರಿಗಳ ಶುಭ್ರವಾದ ಬೆಳ್ಳನೆಯ ತೆಳ್ಳನೆಯ ಷರಟಿನ ಎದೆಯ ಭಾಗದ ಮೇಲೆ ಪಿಚಕಾರಿಯಿಂದ ಹೊಡೆದಹಾಗೆ ಹರಡಿಕೊಂಡು, ಅದನ್ನು ತೋಯಿಸಿತು. ಕ್ಷಣ ಕಾಲ ನನಗೆ ದಿಕ್ಕೇ ತೋಚದ ಹಾಗಾಯಿತು. "ತಪ್ಪಾಯಿತು ಸಾರ್, ಕ್ಷಮಿಸಬೇಕು" ಎಂದು ಚೆಂಬನ್ನು ಕೆಳಗಡೆ ಇಟ್ಟು ಕೈಜೋಡಿಸಿ ನಿಂತೆ. "ಇದಕ್ಕೆ ಕಾರಣ—ರಾಯರು, ನೀನಲ್ಲ. ಇನ್ನೊಂದು ರೈಲು ಚೆಂಬು ಟೀ ತೆಗೆದುಕೊಂಡು ಬಾ. ಅವರಿಗೂ ಇದೇ ಶಿಕ್ಷೆ ವಿಧಿಸೋಣ. ಹಾಗೆಯೇ ನೀರನ್ನು ತೆಗೆದುಕೊಂಡು ಬಾ. ಟೀ ಕಲೆ ತೊಳೆದುಕೊಳ್ಳೋಣ" ಎಂದು ಸ್ವಲ್ಪವೂ ಅಸಮಾಧಾನಪಟ್ಟುಕೊಳ್ಳದೆ, ಕೋಪಿಸಿಕೊಳ್ಳದೆ, ಬೇಸರ ಪಟ್ಟುಕೊಳ್ಳದೆ, ನನ್ನನ್ನು ವಿಶ್ವಾಸದಿಂದ ನಡಸಿಕೊಂಡರು. ಕೃಷ್ಣಶಾಸ್ತ್ರಿಗಳ ಸಹನಶೀಲಕ್ಕೆ ಇದೊಂದು ಚಿಕ್ಕ ನಿದರ್ಶನ.

೧೯೩೩ರಲ್ಲಿ ನಾನು ಬೆಂಗಳೂರಿಗೆ ಬಂದಂದಿನಿಂದ ಮೊನ್ನೆ ಪೂಜ್ಯ ಶಾಸ್ತ್ರಿಗಳು ತೀರಿಕೊಳ್ಳುವವರೆಗೆ ಅವರನ್ನು ನೂರಾರು ಸಲ ಬೇರೆಬೇರೆ ಸನ್ನಿವೇಶ ಸಂದರ್ಭಗಳಲ್ಲಿ ಕಂಡಿದ್ದೇನೆ. ಬೆಳಗ್ಗೆಯ ಹೊತ್ತಿನಲ್ಲಿ, ಅಗತಾನೆ

ಪ್ರಾತರಾಹ್ನಿಕ ದೇವತಾರ್ಚನೆಗಳನ್ನು ಮುಗಿಸಿಕೊಂಡು ಹೊರಬಂದು ನನ್ನನ್ನು ವಿಶ್ವಾಸದಿಂದ ಮಾತನಾಡಿಸ ಬಂದ ವೇಳೆಯಲ್ಲಿ, ಮಡಿಯಲ್ಲಿದ್ದ ಶಾಸ್ತ್ರಿಗಳು ನನ್ನಲ್ಲಿ ಭಕ್ತಿಯನ್ನು ಹುಟ್ಟಿಸುತ್ತಿದ್ದರು. ಪಂಚಕಚ್ಚೆ ಹಾಕಿ, ಮುಂಜೆರಗನ್ನು ಮೇಲಕ್ಕೆ ಎತ್ತಿಕಟ್ಟಿ ಉಟ್ಟ ಪಂಚೆಯಲ್ಲಿಯೇ ಅವರು ಬರುತ್ತಿದ್ದರೆ ಉನ್ನತ ವಕ್ಷಸ್ಥಲದ ಅವರ ದೃಢವಾದ ಮೈಕಟ್ಟು ಅವರ ನೇರನಿಲುವಿಗೆ ಚೆನ್ನಾಗಿ ಒಪ್ಪುತ್ತಿತ್ತು; ಅವರ ಗಟ್ಟಿಮನಸ್ಸಿಗೆ ಗಟ್ಟಿಯ ಮೈಯೂ ಕಾರಣವಾಗಿದ್ದಿರ ಬೇಕು. ತಮ್ಮ ನಿಲುವಿನ ಪಟ್ಟನ್ನು ಎಂದಿಗೂ ಬಿಟ್ಟು ಕೊಡದ ಭಾಷಾಸಾಹಿತ್ಯರಂಗದ ಜಟ್ಟಿ ಎನ್ನುವುದಕ್ಕೆ ಅವರ ಧೀರವಾದ ನಿಲುವು, ಧೀರವಾದ ನಡಿಗೆ ನಿತ್ಯವೂ ಸಾಕ್ಷಿ ನುಡಿಯುತ್ತಿದ್ದುವು. ಪ್ರಾಧ್ಯಾಪಕರಾಗಿ ಮೈಸೂರಿಗೆ ತೆರಳುವವರೆಗೆ, ನಾನು ಕಂಡುಬಲ್ಲಂತೆ ಅವರ ಹೊರ ಸುತ್ತಾಟವೆಲ್ಲ ಸೈಕಲ್ ಮೇಲೆಯೇ; ಸೈಕಲ್ಲು ಹಿಡಿಗೆ ನೇತುಬಿಟ್ಟ, ಪಾಟಲವರ್ಣದ ದಾರದ, ಒಂದು ಬಲೆಯ ಚೀಲ; ಅದರಲ್ಲಿ 'ಸಂಸ್ಕೃತ ನಾಟಕ'ದ್ದೊ 'ಪರಿಷತ್ಪತ್ರಿಕೆ' ಯದೊ ಕರಡಚ್ಚು; ಒಂದೆರಡು ಪುಸ್ತಕಗಳು; ಯಾವುದೋ ಲೇಖನದ ಹಸ್ತಪ್ರತಿ. ನಾನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಹಾಯಕ ಕಾರ್ಯದರ್ಶಿಯಾಗಿದ್ದ ಕಾಲ (೧೯೩೪–೧೯೩೮); ಕೃಷ್ಣಶಾಸ್ತ್ರಿಗಳು ಪರಿಷತ್ಪತ್ರಿಕೆಯ ಸಂಪಾದಕರು; ನಾನು ಅವರಿಗೆ ಸಹಾಯಕ. ಅವರು ಮನೆಯಿಂದ ಸೈಕಲ್ ಮೇಲೆ ಬಂದು, ಪರಿಷತ್ತಿನ ಹೆಬ್ಬಾಗಿಲು ಮೆಟ್ಟಿಲ ಬಳಿ ಸೈಕಲ್‌ನಿಂದ ಇಳಿಯುತ್ತಿದ್ದರು; ಪರಿಷತ್ತಿನ ಆಳು ಅವನು ಆಗ ಹಾಜರಿದ್ದು ಅವರನ್ನು ಕಂಡರೆ ಸೈಕಲ್ ಈಸಿಕೊಂಡು ಮೆಟ್ಟಿಲು ಹತ್ತಿಸಲು ಧಾವಿಸಿಹೋದರೆ, "ಬೇಡ ಬಿಡಪ್ಪ, ನಿತ್ಯ ನೀನೇ ಇರುತ್ತೀಯಾ?" ಎಂದು ತಾವೇ ಸೈಕಲ್ಲನ್ನು ಎತ್ತಿಕೊಂಡು ಮೆಟ್ಟಿಲು ಹತ್ತಿ, ಅದನ್ನು ಒಳಕ್ಕೆ ತರುತ್ತಿದ್ದರು. ಇದು ಅವರ ಸ್ವಾವಲಂಬನ ವೃತ್ತಿ. ತಮ್ಮ ಕೈಲಾಗುವ ಕೆಲಸಕ್ಕೆ ಸಾಧಾರಣವಾಗಿ ಇತರರನ್ನು ಕುರಿಯುತ್ತಿರಲಿಲ್ಲ, ನೆಚ್ಚಿಕೊಳ್ಳುತ್ತಿರಲಿಲ್ಲ. ಪರಿಷತ್ಪತ್ರಿಕೆಯ ಕರಡಚ್ಚನ್ನು ಜರೂರಾಗಿ ಬೆಂಗಳೂರು ಪ್ರೆಸ್ಸಿಗೆ ತಲಪಿಸ ಬೇಕು. 'ಕಳಿಸಿಕೊಡುತ್ತೇನೆ, ಕೊಡಿ ಸಾರ್' ಎಂದು ಕೇಳಿದರೆ, "ಬೇಡ ಬಿಡಯ್ಯ. ಪರಿಷತ್ತಿನ 'ಡೆಲಿವರಿ' ಎಂದರೆ ಗಜಪ್ರಸವ ನಾನೇ ತೆಗೆದುಕೊಂಡು ಹೋಗಿ ಕೊಡುತ್ತೇನೆ." ಎಂದು ಕರಡಚ್ಚನ್ನು ಪ್ರೆಸ್ಸಿಗೆ ಕೊಟ್ಟು, ಕಾಲೇಜಿಗೆ ಹೋಗುತ್ತಿದ್ದರು.

ಎಷ್ಟೇ ಸಣ್ಣ ಕೆಲಸವಾಗಲಿ, ಅದನ್ನು ಹೊತ್ತಿಗೆ ಗೊತ್ತಿಗೆ ಮಾಡಬೇಕು. ಅವರದ್ದು ಮರವಿನ ಸ್ವಭಾವ ಅಲ್ಲ. ಆದರೂ, ಸ್ಮರಣಶಕ್ತಿಯಮೇಲೆ ಎಲ್ಲ ಭಾರವನ್ನೂ ಹಾಕ ಕೂಡದು ಎಂದು ಅವರ ಅನುಭವಸಿದ್ಧ ಅಭಿಪ್ರಾಯ. ಆದರೆ, ಕಾರ್ಯಕ್ರಮವನ್ನು ನೆನಪುಕೊಡುವ ಆಲೇಖ್ಯ ಪಟ್ಟಿ ಅವರ ಮೇಜಿನಮೇಲೆ ಇರುತ್ತಿರಲಿಲ್ಲ; ಅವರ ಜೇಬಿನಲ್ಲಿ ಸದಾ ಒಂದು ಬಿಳಿಯ ಖಾಲಿ ಕಾರ್ಡು; ಅದರ ಮೇಲೆ ಮಾಡಬೇಕಾದ ಕೆಲಸಗಳನ್ನು ಬರೆದಿಟ್ಟುಕೊಂಡಿರುತ್ತಿದ್ದರು. ಪ್ರತಿ ಕಾರ್ಯಸೂಚಿಯನ್ನೂ ಒಂದು ಚೌಕಳಿ ಹಾಕಿ, ಅದರಲ್ಲಿ ಗುರುತಿಸುತ್ತಿದ್ದರು; ಕೆಲಸ ಮಾಡಿಯಾದಮೇಲೆ, ಚೌಕಳಿಯನ್ನು 'ಕ್ರಾಸ್' ಮಾಡಿಬಿಡುತ್ತಿದ್ದರು–'ಈ ಕೆಲಸ ಮಾಡಿಯಾಯಿತು' ಎಂದು. ಎರಡು ಕಡೆಯೂ ಕಾರ್ಡು ಭರ್ತಿಯಾದಮೇಲೆ, 'ಕ್ರಾಸ್' ಮಾಡದೆ ಉಳಿದಿದ್ದ ಕಾರ್ಯಸೂಚಿಗಳನ್ನು ಹೊಸ ಕಾರ್ಡಿಗೆ ವರ್ಗಾಯಿಸಿಕೊಂಡು, ಅದನ್ನು ಬಳಿಯಲ್ಲಿಟ್ಟು ಕೊಳ್ಳುತ್ತಿದ್ದರು.

ಕೆಲಸದಲ್ಲಿ ಮೇಲು ಕೀಳು, ಇದು ತಾವು ಮಾಡಬಹುದಾದದ್ದು ಇದು ಮಾಡಬಾರದ್ದು ಎಂಬ ಭಾವನೆ ಅವರಲ್ಲಿ ಇರಲಿಲ್ಲ. ಪರಿಷತ್ತಿನ ಆಳು ತಾನಾಗಿ ಅರಿತುಕೊಂಡು ಅವರ ಕೆಲಸದ ಮೇಜಿನ ಧೂಳು ಹೊಡೆದರೆ ಬೇಡ ಎನ್ನುತ್ತಿರಲಿಲ್ಲ; ಹೊಡೆಯಲಿಲ್ಲ, ಅದನ್ನು ತಾವೇ ಹೊಡೆದುಕೊಳ್ಳುತ್ತಿದ್ದರು; ಅದಕ್ಕೆಂದೇ ಮೇಜಿನ ಸಂದೂಕದಲ್ಲಿ ಒಂದು ಬಟ್ಟೆಯ ತುಂಡನ್ನು ಇರಿಸಿಕೊಂಡಿರುತ್ತಿದ್ದರು. ಬಟ್ಟೆಯ ತುಂಡು ಒಂದೇ ಅಲ್ಲ ಅಲ್ಲಿ ಇರುತ್ತಿದ್ದುದು: ಬಿಸ್ಕತ್ತು ಪ್ಯಾಕೆಟ್ಟು (Puff ಬಿಸ್ಕತ್ತೆಂದರೆ ಅವರಿಗೆ ತುಂಬ ಇಷ್ಟ) ಬಾದಾಮಿ ಪೆಪ್ಪರುಮಿಂಟು, ಕಾರದ ಗೋಡಂಬಿ ಮುಂತಾದ ಕುರುಕು ತಿಂಡಿ ತಿನಸು ಸದಾಸಿದ್ಧ–ಕ್ಷಮ್ಯವಾದ, ಹಿತಮಿತವಾದ ಜಿಹ್ವಾಚಾಪಲ್ಯದ ಕುರುಹಾಗಿ, ಮಧುರ ಮನೋಧರ್ಮದ ಪ್ರತೀಕವಾಗಿ. ಅವರ ಕೋಣೆಯನ್ನು ಪ್ರವೇಶಿಸಿದವರಿಗೆಲ್ಲ ಬಾಯಿ ಸಿಹಿಯಾಗುವುದರ ಮೂಲಕ ಅವರ ಮೇಜಿನ ಒಳಗುಟ್ಟು ಗೊತ್ತಾಗಿಹೋಗುತ್ತಿತ್ತು. ಪರಿಷತ್ತಿನ ಕಾರ್ಯಾಲಯದಲ್ಲಿ ನನ್ನಿಂದ ಏನಾದರೂ ಕೆಲಸವಾಗಬೇಕಾಗಿದ್ದರೆ, ನನ್ನನ್ನು ತಮ್ಮ ಕೋಣೆಗೆ ಬರಮಾಡಿಕೊಳ್ಳದೆ ತಾವೇ ನನ್ನ ಮೇಜಿನ ಬಳಿಗೆ ಬಂದುಬಿಡುತ್ತಿದ್ದರು. 'ನಾನೇ ಬರುತ್ತಿದ್ದೆ ಸಾರ್, ಹೇಳಿಕಳಿಸಿದ್ದರೆ' ಎಂದು ನಾನು ತಿಳಿಸಿದರೆ, ಅವರು ಕೊಡುತ್ತಿದ್ದ ಉತ್ತೇಜಕ ಉತ್ತರ: "ನೀನು ಬಂದರೆ ನಿನಗೆ ಪೆಪ್ಪರುಮೆಂಟು ಕೊಡಬೇಕಾಗುತ್ತೆ ಅಂತ ನಾನೇ ಬರುತ್ತಿದ್ದೇನೆ ಎಂದು ನೀನು ತಿಳಿದಿದ್ದೀಯೇನೋ? ಅಂಥಾದ್ದೇನಿಲ್ಲ. ಕಾಲೇಜಿನಲ್ಲೂ ಕುಳಿತಿರುವುದು ಇಲ್ಲ ನಿಂತಿರುವುದು, ಮನೆಯಲ್ಲೂ

ಕುಳಿತಿರುವುದು, ಇಲ್ಲೂ ಕುಳಿತಿರುವುದು. ಹೊರಕ್ಕೆ ಹೊರಟರೆ ಸೈಕಲ್ಲು. ಸ್ವಲ್ಪ ಕಾಲಾಡಲಿ ಅಂತ ಹೇಗೆ ಮಾಡುತ್ತೀನಿ" ಎಂದು ಮುಗುಳುನಗೆ ನಗುತ್ತ, ಷರಟಿನ ಜೇಬಿಗೆ ಕೈ ಹಾಕಿ ಒಂದು ಬಾದಾಮಿ ಪೆಪ್ಪರುಮಿಂಟನ್ನು ನನ್ನ ಮುಂದೆ ಇಡುತ್ತಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ಅವರನ್ನು ಭೇಟಿಮಾಡಲು ಹೋದವರು ಅಂದಿನ ಕರ್ಣಾಟಕ ಸಂಘದ ಅವರ ಕೋಣೆಯಲ್ಲಿ 'ನಾರಾಯಣ'ನ ಹೋಟಲಿನ ತುಪ್ಪದ ದೋಸೆಯ ಆತಿಥ್ಯವನ್ನು ಸ್ವೀಕರಿಸದೆ ಹಿಂತಿರುಗುವಂತಿರಲಿಲ್ಲ.

ಕರ್ತವ್ಯನಿರ್ವಹಣೆಯಲ್ಲಿ ಅವರದ್ದು ಉಗ್ರ ನೈಷ್ಠುರ್ಯ ಮಾರ್ಗ. ತಮಗೆ ಸತ್ಯ ಎಂದು ತೋರಿದ್ದನ್ನು ಆಡುತ್ತಿದ್ದರು, ಮಾಡುತ್ತಿದ್ದರು—ನಿತ್ಯವ್ಯವಹಾರದಲ್ಲಿಯೂ ಅಷ್ಟೆ, ಸಾಹಿತ್ಯ ಪ್ರಪಂಚದಲ್ಲಿಯೂ ಅಷ್ಟೆ. ಒಳಗೊಂದು ಹೊರಗೊಂದು ಇಲ್ಲದ ಸ್ಫಟಿಕ ಶುಭ್ರ ಶೀಲ. ಹಲವು ವರ್ಷಗಳ ಹಿಂದೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರು ಪ್ರಾಧ್ಯಾಪಕರಾಗಿದ್ದಾಗ, ಆರು ತಿಂಗಳಕಾಲ ರಜಾ ತೆಗೆದುಕೊಂಡರು. ನಾನು ಇಂಗ್ಲಿಷ್ ಕನ್ನಡ ನಿಘಂಟುವಿನ ಕಚೇರಿಯಲ್ಲಿ ಸಂಪಾದಕೀಯ ಸಹಾಯಕ. "ತಾವು ರಜಾ ಹೋಗುವುದರಿಂದ ಖಾಲಿ ಬೀಳುವ ಕನ್ನಡ ಅಧ್ಯಾಪಕನ ಸ್ಥಾನಕ್ಕೆ ನನ್ನನ್ನ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ ಸಾರ್. ವಿಶ್ವವಿದ್ಯಾನಿಲಯದಲ್ಲಿ ಕೆಲಸಕ್ಕೆ ಸೇರಿದ ತಾರೀಖಿನ ಲೆಕ್ಕದ ಪ್ರಕಾರ ಈಗ ಹಂಗಾಮಿ ಅಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಟಿ. ಎಸ್. ಶಾಮರಾಯರು ನನಗಿಂತ ಜೂನಿಯರ್. ನೀವು ನನ್ನನ್ನ ಈಗ ಅಧ್ಯಾಪಕನಾಗಿ ನೇಮಿಸದಿದ್ದರೆ, ಅವರೇ ನೇಮಕಗೊಳ್ಳುತ್ತಾರೆ. ಮುಂದೆ ಎಂದೋ ನಾನು ಅಧ್ಯಾಪಕನಾದರೆ, ಅವರು ನನ್ನ ಸೀನಿಯರ್ ಆಗಿಬಿಡುತ್ತಾರೆ"—ಎಂದು ನನ್ನ ದೃಷ್ಟಿಯಲ್ಲಿ ನನಗೆ ನ್ಯಾಯವೆಂದು ಕಂಡ ಬೇಡಿಕೆಯನ್ನು ಅವರ ಮುಂದಿಟ್ಟೆ, ಅವರು ನಿಘಂಟು ಸಮಿತಿಯ ಸಭೆಗೆ ಬಂದಿದ್ದಾಗ. "ಒಂದು 'ರೆಪ್ರೆಸೆಂಟೇಷನ್' ಕೊಡು" ಎಂದರು; ಕೊಟ್ಟೆ. ತಮಗೆ ಅತ್ಯಂತ ಆಪ್ತರಾದ ದಿವಂಗತ ವೆಂಕಣ್ಣಯ್ಯನವರ ತಮ್ಮನಿಗೇ ನೇಮಕ ಮಾಡಿಸುತ್ತಾರೆ, ನನಗೆಲ್ಲಿ ದೊರೆಯುತ್ತದೆ—ಎಂದು ನನ್ನ ಪೂರ್ವನಿಶ್ಚಿತ. ಆದರೆ, ಇದು ಸುಳ್ಳಾಯಿತು. ನನ್ನನ್ನೇ ಹಂಗಾಮಿ ಅಧ್ಯಾಪಕ ಎಂದು ಶಿಫಾರಸು ಮಾಡಿದ್ದರು; ಅದರಂತೆ ನೇಮಕವೂ ಆಯಿತು. ಇದರಿಂದಾಗಿ, ವಿಶ್ವವಿದ್ಯಾನಿಲಯದ ಅಧ್ಯಾಪಕರ ಪಟ್ಟಿಯಲ್ಲಿ ನನ್ನ 'ಸೀನಿಯಾರಿಟಿ' ಖಚಿತವಾಯಿತು: ನಾನು ಸೀನಿಯರ್, ಶ್ಯಾಮರಾಯರು ಜ್ಯೂನಿಯರ್. ನನಗೆ ಕಿರೀಟ ಬರಲಿಲ್ಲ, ಶ್ಯಾಮರಾಯರ ಸಿಂಹಾಸನ ಕಳೆದು ಹೋಗಲಿಲ್ಲ. ಈ ಅಲ್ಪವಾದ ಸಂಗತಿಯನ್ನು ಉಲ್ಲೇಖಿಸಿರುವುದರ ಉದ್ದೇಶ, ಕೃಷ್ಣಶಾಸ್ತ್ರಿಗಳ ನ್ಯಾಯನಿಷ್ಠುರತೆಯನ್ನು ಸ್ಪಷ್ಟಪಡಿಸುವುದು. ಇನ್ನೊಂದು ಇಂಥದೇ ಸಂದರ್ಭ. ಪ್ರಾಧ್ಯಾಪಕಸ್ಥಾನದಿಂದ ಅವರು ನಿವೃತ್ತರಾಗಿದ್ದರು. ತೆರಪಾದ ಒಂದು ಉಪಪ್ರಾಧ್ಯಾಪಕ ಸ್ಥಾನಕ್ಕೆ ಇತರರೊಂದಿಗೆ ನಾನೂ ಅರ್ಜಿ ಹಾಕಿದ್ದೆ. ಒಂದು ಶಿಫಾರಸು ಪತ್ರವನ್ನು ಕೊಡಬೇಕೆಂದು ಅವರನ್ನು ಪ್ರಾರ್ಥಿಸಿದೆ. ಅದಕ್ಕೆ ಅವರು ಕೊಟ್ಟ ನೇರವಾದ ಉತ್ತರ:

"—ನವರು ನಿನಗಿಂತ ಸೀನಿಯರ್ ಆಗಿದ್ದಾರೆ. ದಕ್ಷರಾದ ಉಪಾಧ್ಯಾಯರು ಅಂತ ಹೆಸರುಪಡೆದಿದ್ದಾರೆ. ವಯಸ್ಸಿನಲ್ಲಿಯೂ ನಿನಗಿಂತ ದೊಡ್ಡವರು. ಬರೆವಣಿಗೆಯ ಕೆಲಸವನ್ನೇನೋ ನೀನು ಹೆಚ್ಚಾಗಿ ಮಾಡಿದ್ದೀಯೆ, ದಿಟ. ಆದರೂ, ಆ ಸ್ಥಾನ ಅವರಿಗೆ ದೊರಕಬೇಕಾದ್ದು ನ್ಯಾಯ ಅಂತ ನನ್ನ ತಿಳಿವಳಿಕೆ. ಹೀಗಿರುವಾಗ, ನಿನಗೆ ಪ್ರಯೋಜನವಾಗುವಂತೆ ಶಿಫಾರಸುಪತ್ರ ಬರೆದು ಕೊಡಲು ಸಾಧ್ಯವಿಲ್ಲ." ಇದೇ ರೀತಿ, ಮತ್ತೊಮ್ಮೆ ಅದೇ ತೆರನ ಉದ್ಯೋಗವೊಂದಕ್ಕೆ ಅಪೇಕ್ಷೆಪತ್ರ ಸಲ್ಲಿಸುವ ಸಂದರ್ಭ ಬಂತು. "ನಿಮ್ಮ ಹೆಸರನ್ನು 'ರೆಫರೆನ್ಸ್' ಎಂಬ ಕಡೆ ಸೂಚಿಸಲು ನಿಮ್ಮ ಅಪ್ಪಣೆ ಬೇಕು ಆಶೀರ್ವಾದ ಮಾಡಿ" ಎಂದು ಅವರನ್ನು ಪ್ರಾರ್ಥಿಸಿಕೊಂಡೆ. "ಅಪ್ಪಣೆಯನ್ನೂ ಕೊಡುತ್ತೇನೆ; ಬಾಯಿ ತುಂಬ ಆಶೀರ್ವಾದವನ್ನೂ ಮಾಡುತ್ತೇನೆ. ಆದರೆ ನನ್ನ ಆಶೀರ್ವಾದ ಫಲಿಸುವುದಿಲ್ಲ, ಸಂದರ್ಭ ಹಾಗಿದೆ" ಎಂದು ನಕ್ಕರು. ನುಡಿದಂತೆ ನಡೆಯುವವರು ಕೃಷ್ಣಶಾಸ್ತ್ರಿಗಳು. ಇದ್ದದ್ದನ್ನ ಇದ್ದ ಹಾಗೆ ಹೇಳುವ ಖಂಡಿತವಾದಿ. ಆದರೆ ಲೋಕ ವಿರೋಧಿ ಮಾತ್ರ ಅಲ್ಲ.

ಸಾಹಿತ್ಯ ವಿಚಾರಗಳಲ್ಲಿಯೂ ಹಾಗೆಯೇ, ಅವರದ್ದು ಸ್ಪಷ್ಟವಾದ ವಾಕ್ಕು. ನಿಜವಾದ ವಿಮರ್ಶಕರಾಗಿದ್ದರು ಅವರು. ಅವರ ವಿಮರ್ಶಾಸಾಹಿತ್ಯ ಕನ್ನಡ ಲೋಕದ ಮುಂದೆ ಕೃತಿರೂಪದಲ್ಲಿಯೆ ಇರುವಲ್ಲಿ, ಆ ವಿಚಾರವನ್ನು ಇಲ್ಲಿ ತಿಳಿಸಬೇಕಾದದ್ದು ಅನಾವಶ್ಯಕ. ವಿಮರ್ಶೆಯ ಮೂಲಕ ಸಾಹಿತ್ಯಕೃತಿಗಳ ನೈಜ ಮೌಲ್ಯವನ್ನು ತಿಳಿಸುವುದರ ಜೊತೆಗೆ, ಪ್ರತಿಭೆಯನ್ನು ಗುರುತಿಸಿ, ಸಮಯೋಚಿತವಾದ ಉತ್ತೇಜನ ಕೊಟ್ಟು ಅದನ್ನು ಬೆಳಕಿಗೆ ತರುವುದರಲ್ಲಿ ಅವರು ಯಾವಾಗಲೂ ಮುಂದು. ಬರಹಗಾರರಿಗೆ ಅದು ಅಯಾಚಿತವಾಗಿ ದೊರೆಯುತ್ತಿತ್ತು. ಅವರವರ ಜಾಯಮಾನ ಶಕ್ತಿಸಾಮರ್ಥ್ಯಗಳನ್ನರಿತು ಅದಕ್ಕೆ ತಕ್ಕ ಹಾಗೆ ಅವರಿಂದ ಕೆಲಸ ಮಾಡಿಸುತ್ತಿದ್ದರು. ಬಿ. ವೆಂಕೋಬರಾಯ

ರಿಂದ ‘ಮೈಸೂರು ದೇಶದ ವಾಸ್ತುಶಿಲ್ಪವನ್ನು ಬರೆಯಿಸಿದರು; ರಾಜರತ್ನಂ ಅವರಿಂದ ‘ಚೀನಾ ದೇಶದ ಬೌದ್ಧ ಯಾತ್ರಿಕರು’ ಬರೆಯಿಸಿ, ಅವರ ಧಾರ್ಮಿಕ ಸಾಹಿತ್ಯ ರಾಶಿಗೆ ಅಡಿಪಾಯ ಹಾಕಿಸಿದರು; ಕೆ. ಎಸ್. ನರಸಿಂಹಸ್ವಾಮಿಯವರ ‘ಮೈಸೂರು ಮಲ್ಲಿಗೆ’ಯನ್ನು ಅರಳಿಸಿದವರೆ ಅವರು; ಅವರ ಹೊಯ್ನೀರಿಲ್ಲದಿದ್ದರೆ, ಅದು ಕಾಡು ಮಲ್ಲಿಗೆಯಾಗಿಯೆ ಉಳಿಯುತ್ತಿತ್ತೇನೋ. ಕೈವಾರ ರಾಜಾರಾಯರ ಏಕಾಂಕ ನಾಟಕಗಳೆಲ್ಲ ಒಂದೇ ಸಂಪುಟದಲ್ಲಿ ಪ್ರಕಟವಾಗುವಂತೆ ಏರ್ಪಾಡು ಮಾಡಿದರು; ಹಾಗೆ ಪ್ರಕಟಿಸಲು ಯಾರೂ ಒಪ್ಪದಿದ್ದರೆ, ವೆಚ್ಚವನ್ನೆಲ್ಲ ತಾವೇ ವಹಿಸಿಕೊಂಡು ಪ್ರಕಟಿಸಲು ಸಿದ್ಧರಾಗಿದ್ದರು. ನನ್ನ ಬರವಣಿಗೆಗಳ ವಿಚಾರದಲ್ಲಿ ಮೊದ ಮೊದಲು ಅವರಿಗೆ ಆಸ್ಥೆ ಇರಲಿಲ್ಲ; ನನ್ನ ಅನೇಕ ಬರಹಗಳಲ್ಲಿ ಕ್ರಾಂತಿಕಾರಿ ಭಾವನೆಗಳಿರದಿದ್ದರೂ ಸಾಂಪ್ರದಾಯಿಕ ಮೌಲ್ಯಗಳನ್ನು ಒರೆಗೆ ಹಚ್ಚಿ ನೋಡುವ ಪ್ರಯತ್ನವಿತ್ತು. ಇದು ಅವರಿಗೆ ಹಿಡಿಸುತ್ತಿರಲಿಲ್ಲ. ಒಂದು ನಿದರ್ಶನ: ‘ಪ್ರಬುದ್ಧ ಕರ್ಣಾಟಕ’ಕ್ಕೆ ಏನಾದರೂ ಒಂದು ಲಘುವಾದ ಕೃತಿಯನ್ನು ಕೊಡು ಎಂದು ಒಮ್ಮೆ ನನ್ನನ್ನು ಕೇಳಿದರು. ಆಗತಾನೇ ಬರೆದು ಮುಗಿಸಿದ್ದ ‘ತೆರೆಮರೆಯ ಚಿತ್ರಗಳು’ ಎಂಬ ನಾಟಕದ ಹಸ್ತಪ್ರತಿಯನ್ನು ಅವರಿಗೆ ಒಪ್ಪಿಸಿದೆ. ಕೆಲವು ದಿನಗಳಾದಮೇಲೆ ಅದನ್ನು ನನಗೆ ಹಿಂತಿರುಗಿಸಿದರು. ಅದನ್ನು ಕೊಡುವಾಗ, “ನಾಟಕದ ವಸ್ತು ನನಗೆ ಹಿಡಿಸಲಿಲ್ಲ. ಬರೆವಣಿಗೆಯೇನೋ ಚೆನ್ನಾಗಿದೆ. ಆದರೆ, ‘ಪ್ರಬುದ್ಧ ಕರ್ಣಾಟಕ’ದಲ್ಲಿ ಅದನ್ನು ಪ್ರಕಟಿಸಲು ನನ್ನ ಮನಸ್ಸು ಒಪ್ಪುವುದಿಲ್ಲ,” ಎಂದು ಖಡಾಖಂಡಿತವಾಗಿ ನುಡಿದರು. (ವಸಂತಸೇನೆ ಚಾರುದತ್ತನನ್ನು ವರಿಸಿದ ಹಾಗೆ, ಇಂದಿನ ಸಮಾಜದ ‘ವಸಂತಸೇನೆಯೊಬ್ಬಳು ‘ವಧು’ವಾಗುವ ಪ್ರಕರಣವೇ ನಾಟಕದ ವಸ್ತು). “ನಿಮಗೆ ಒಪ್ಪಿಗೆ ಆಗುವ ಹಾಗೆ ಏನಾದರೂ ಬದಲಾವಣೆ ಮಾಡುವುದಿದ್ದರೆ ಹೇಳಿ, ಮಾಡಿಕೊಡುತ್ತೇನೆ” ಎಂದು ನಾನು ತಿಳಿಸಿದೆ.

“ನನ್ನ ಒಪ್ಪಿಗೆಯಾಗಲಿಲ್ಲ ಎಂದ ಮಾತ್ರಕ್ಕೆ ಬದಲಾವಣೆ ಮಾಡಬೇಕು ಅಂತ ಅರ್ಥವೆ? ಹಾಗಲಗಿಡದಲ್ಲಿ ದ್ರಾಕ್ಷಿ ಹಣ್ಣು ಬಿಡುವಹಾಗೆ ಮಾಡುವುದಕ್ಕಾಗುತ್ತೆಯೆ? ಹಾಗಲಗಿಡವೂ ಇರಬೇಕು ದ್ರಾಕ್ಷಿ ಬಳ್ಳಿಯೂ ಇರಬೇಕು. ಹಾಗಲಕಾಯಿ ಸೇರುವವರೂ ಇದ್ದಾರೆ” ಎಂದು ಒಂದು ವಿಧದಲ್ಲಿ ನನ್ನ ನಾಟಕದ ವಿಮರ್ಶೆಯನ್ನೇ ಮಾಡಿದರು; ಬೇರೆಯಕಡೆ ಪ್ರಕಟಿಸಬಹುದು ಬೇಕಾದರೆ ಎಂಬ ಸೂಚನೆ ಅಡಗಿತ್ತು, ಅವರ ಮಾತಿನಲ್ಲಿ. ಇಷ್ಟು ಹೇಳಿದ್ದರ ಉದ್ದೇಶ, ಒಂದು ಕೃತಿಯ ಬಗೆಗೆ ಅಭಿಪ್ರಾಯ ತಿಳಿಸುವಲ್ಲಿ ಅವರು ಹೇಗೆ ಪ್ರಾಮಾಣಿಕವಾಗಿರುತ್ತಿದ್ದರು ಎಂಬುದು. ಲೇಖಕರಿಗೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದಲೋ ಇಲ್ಲವೆ ಕೃತಿಯ ಬಗೆಗೆ ನಾಲ್ಕು ಒಳ್ಳೆಯ ಮಾತಾಡಿ ಲೇಖಕನ ಕೃತಜ್ಞತಾಪೂರ್ವಕ ಗೌರವಕ್ಕೆ ತಾವು ಪಾತ್ರರಾಗಬೇಕೆಂಬ ಅಭಿಲಾಷೆಯಿಂದಲೋ ಅವರು ಎಂದೂ ಹುಸಿ ಮೆಚ್ಚಿಗೆಯ ಮಾತನ್ನು ಆಡಿದವರಲ್ಲ; ಕಟುವಾದ ಟೀಕೆಯನ್ನು ಮಾಡಿದರೆ, ಲೇಖಕರು ಮನಸ್ಸಿನಲ್ಲಿ ನೊಂದುಕೊಂಡಾರು ಎಂದು ಅಳುಕಿ ಅಂಥ ಟೀಕೆಯನ್ನು ಮಾಡದೆ ಬಿಡುತ್ತಿರಲಿಲ್ಲ. ಈ ಸೂತ್ರವನ್ನು ಅನುಸರಿಸುವಲ್ಲಿ, ಅವರು ಹಿರಿಯರು ಕಿರಿಯರು ಪರಿಚಿತರು ಅಪರಿಚಿತರು ಎಂಬ ಭೇದವನ್ನು ಎಣಿಸುತ್ತಿರಲಿಲ್ಲ. ಪೂಜ್ಯ ಮಾಸ್ತಿಯವರ ‘ಸುಬ್ಬಣ್ಣ’ದ ಹಸ್ತಪ್ರತಿಯಲ್ಲಿ ತಮಗೆ ಅನುಚಿತ ಎಂದು ಕಂಡ ಒಂದುಮಾತು ಅವರಿಂದ ಮಾರ್ಪಟ್ಟಮೇಲೆ ‘ಪ್ರಬುದ್ಧ ಕರ್ಣಾಟಕ’ದಲ್ಲಿ ಪ್ರಕಟಿಸಿದ ಸಂಗತಿ ಪ್ರಸಿದ್ಧವಾಗಿದೆ.

ಕೃತಿ ವಿಮರ್ಶೆಯಲ್ಲಿ ಮಾತ್ರವಲ್ಲ, ಎಲ್ಲ ವಿಚಾರಗಳಲ್ಲಿಯೂ ಅವರ ನಡೆ ನೇರ; ನಿಷ್ಠುರ ಎನ್ನುವಮಟ್ಟಿಗೆ ನೇರ. ನಾನು ಪರಿಷತ್ತಿನ ಉದ್ಯೋಗದಲ್ಲಿದ್ದಾಗ, ‘ಶಿಲಾಮುಖ ಮತ್ತು ಇತರ ಕಥೆಗಳು’ ಎಂಬ ನನ್ನ ಹೊಸ ಪ್ರಕಟನೆಯ ಪ್ರತಿಯೊಂದನ್ನು ಗೌರವಾರ್ಥವಾಗಿ ಅವರ ಕೈಗೆ ಒಪ್ಪಿಸಹೋದೆ. ಅವರು ಪುಸ್ತಕವನ್ನು ಕೈಗೆ ತೆಗೆದುಕೊಂಡು, ನನ್ನ ಮೇಜಿನ ಎರಡು ಪಕ್ಕಗಳಲ್ಲಿಯೂ ಹಿಂಬದಿಯಲ್ಲಿ ಇದ್ದ, ಎರಡು ಚಿಕ್ಕ ಅಲಮಾರುಗಳ ಮೇಲೆ ಕಣ್ಣಾಡಿಸಿದರು. ಅವರ ಇಂಗಿತವೇನೆಂಬುದು ನನಗೆ ಹೊಳೆಯಿತು. ಆ ಎರಡು ಅಲಮಾರುಗಳಲ್ಲಿ ಪರಿಷತ್ಪತ್ರಿಕೆಗೆ ವಿನಿಮಯವಾಗಿ ಬರುತ್ತಿದ್ದ ವಿದ್ವತ್ ಪತ್ರಿಕೆಗಳನ್ನು ಇರಿಸುವ ಏರ್ಪಾಡಿತ್ತು. ಪತ್ರಿಕೆಗಳ ಹೆಸರುಗಳನ್ನು ‘ಇಂಡಿಯನ್ ಇಂಕಿ’ನಲ್ಲಿ ಪಟ್ಟಿಕೆಗಳ ಮೇಲೆ ಅಂದವಾಗಿ ಬರೆದು ಆಯಾ ಪತ್ರಿಕೆಯ ಕೆಳಗೆ ಬಡುಹಲಗೆಗೆ ಜೋಡಿಸುವ ಕೆಲಸವನ್ನು ಶಾಸ್ತ್ರಿಗಳು ನನಗೆ ವಹಿಸಿದ್ದರು. ಆ ಕೆಲಸವನ್ನು ನಾನು ಬಿಡುವಿನ ವೇಳೆಯಲ್ಲಿ ಮಾಡತಕ್ಕದ್ದೆಂದೂ ಗೊತ್ತಾಗಿತ್ತು. ಈಗ ಹೇಗೋ ಕಾಣೆ; ಅಗ, ಪರಿಷತ್ತಿನ ಉದ್ಯೋಗಿಗಳಿಗೆ ಬಿಡುವು ಎನ್ನುವುದು ಗಗನಕುಸುಮ. ಕೆಲಸ ಅರೆವಾಸಿಯೂ ಮುಗಿದಿರಲಿಲ್ಲ. ಶಾಸ್ತ್ರಿಗಳು ನಾನು ಕೊಟ್ಟ ಗೌರವಾರ್ಥ ಪ್ರತಿಯನ್ನು ನನ್ನ ಮೇಜಿನ ಪಕ್ಕದಲ್ಲಿದ್ದ ಗೂಡುಕಪಾಟಿನ (ಪಿಜನ್ ಹೋಲ್) ಒಂದು ಗೂಡಿನಲ್ಲಿ ಇರಿಸಿ, “ನೀನು ಆ ಕೆಲಸವನ್ನು ಮಾಡಿ ಮುಗಿಸಿದ ಮೇಲೆ ನಾನು ಈ ಪುಸ್ತಕವನ್ನು ತೆಗೆದುಕೊಂಡು ಓದುತ್ತೇನೆ” ಎಂದು

ನುಡಿದರು. “ಅದಕ್ಕೂ ಇದಕ್ಕೂ ಏನು ಸಂಬಂಧ, ಸರ್” ಎಂದು ನಾನು ನೊಂದುಕೊಂಡು ಕೇಳಿದೆ. “ನಾನು ನಿನಗೆ ವಹಿಸಿದ ಕೆಲಸ ನಿನ್ನ ಉದ್ಯೋಗಕ್ಕೆ ಸಂಬಂಧಪಟ್ಟದ್ದಲ್ಲ. ನನಗಾಗಿ ವಿಶ್ವಾಸದಿಂದ ಮಾಡುವ ಕೆಲಸ. ನೀನು ಅದನ್ನು ಬೇಗನೆ ಮಾಡಿ ಮುಗಿಸಿ ನಿನ್ನ ವಿಶ್ವಾಸವನ್ನು ತೋರಿಸಿದರೆ, ನೀನು ‘ಗೌರವ ವಿಶ್ವಾಸಪೂರ್ವಕ’ ಕೊಟ್ಟಿರುವ ಪುಸ್ತಕವನ್ನು ನಾನೂ ವಿಶ್ವಾಸದಿಂದ ಓದಿ ಸಂತೋಷಪಡುತ್ತೇನೆ” ಎಂದು ಹುಬ್ಬು ಗಂಟನ್ನು ಸಡಿಲಿಸಿ, ಮುಗುಳುನಗೆ ನಗುತ್ತ ತಮ್ಮ ಕೋಣೆಗೆ ಹೊರಟುಹೋದರು. ತಂದೆ ತಾಯಿ ಮಕ್ಕಳಿಗೆ ತಿಂಡಿಯ ಲಂಚದ ಆಸೆ ತೋರಿಸಿ ಕೆಲಸಮಾಡಿಸಿಕೊಳ್ಳುವುದು ಹೀಗೆ ತಾನೆ? ಒಪ್ಪಿಕೊಂಡ ಕೆಲಸವನ್ನು ಬೇಗನೆ ಮಾಡಿ ಮುಗಿಸದೆ ಕರ್ತವ್ಯಲೋಪ ಮಾಡಿರುವೆನೆಂದು ನನಗನ್ನಿಸಿತು. ಒಂದೆರಡು ದಿನಗಳಲ್ಲಿಯೆ ಆ ಕೆಲಸವನ್ನು ಮುಗಿಸಿಬಿಟ್ಟೆ. ಕೆಲವು ದಿನಗಳಾದ ಮೇಲೆ ಶಾಸ್ತ್ರಿಗಳು ಮತ್ತೆ ಆ ಕಡೆ ಬಂದಾಗ, ಮುಗಿದ ಕೆಲಸವನ್ನು ಕಂಡು, ಮುಖಪ್ರಸನ್ನತೆಯಿಂದ ತಮ್ಮ ಮೆಚ್ಚುಗೆಯನ್ನು ಸೂಚಿಸಿ, ಹೊರಟುಹೋದರು. ನನ್ನ ಕರ್ತವ್ಯ ನಾನು ಮಾಡಿದ್ದರೂ, ನಾನು ಕೊಟ್ಟಿದ್ದ ಪುಸ್ತಕವನ್ನು ತೆಗೆದುಕೊಳ್ಳದೆಯೇ ಹೊರಟುಹೋದರಲ್ಲಾ ಎಂದು ನನಗೆ ಕೊಂಚ ಅಸಮಾಧಾನವೇ ಆಯಿತು. ಮರೆತಿರಬಹುದು. ನಾನೇ ತೆಗೆದುಕೊಂಡು ಹೋಗಿ ಅವರ ಕೈಗೆ ಒಪ್ಪಿಸುವುದೇ ಉಚಿತ ಎಂದುಕೊಂಡು ಕಪಾಟಿನ ಗೂಡಿಗೆ ಕೈಹಾಕಿದೆ. ಅಲ್ಲಿ ಪುಸ್ತಕ ಇರಲಿಲ್ಲ! ತಾವು ವಹಿಸಿದ್ದ ಕೆಲಸ ಮುಗಿದದ್ದನ್ನು ಕಂಡು, ನನಗೆ ಗೊತ್ತಿಲ್ಲದ ಹಾಗೆ ಅವರೆ ಪುಸ್ತಕವನ್ನು ತೆಗೆದುಕೊಂಡು ಹೋಗಿರಬೇಕೆಂದು ಸುಲಭವಾಗಿ ಊಹಿಸಿದೆ. ಕೆಲವು ಕಾಲವಾದ ಮೇಲೆ ಅವರು ಅನಿರೀಕ್ಷಿತವಾಗಿ ಪ್ರಶ್ನಿಸಿದರು: “ಪುಸ್ತಕ ಸ್ವಂತ ಪ್ರಕಟನೆ ಎನ್ನುವ ಹಾಗೆ ಕಾಣುತ್ತೆ. ಎಷ್ಟು ಖರ್ಚಾಯಿತು?” “ಗೊರೂರು ರಾಮಸ್ವಾಮಯ್ಯಂಗಾರರು ಪ್ರಕಟಿಸಿದ್ದ ನನ್ನ ‘ಶಿಲಾಮುಖ’ ಪುಸ್ತಕದ ಪ್ರತಿಗಳನ್ನು ಅವರಿಂದ ಪಡೆದುಕೊಂಡೆ. ಇನ್ನು ಕೆಲವು ಕತೆಗಳನ್ನು ಅಚ್ಚು ಮಾಡಿಸಿ ಸೇರಿಸಿ, ಈ ಪುಸ್ತಕ ಮಾಡಿದ್ದೇನೆ. ಮುನ್ನೂರು ರೂಪಾಯಿಯಷ್ಟು ಖರ್ಚಾಗಿದೆ” ಎಂದು ಅವರಿಗೆ ತಿಳಿಸಿದೆ. “ಪುಸ್ತಕ ಓದಿದೆ. ಚೆನ್ನಾಗಿದೆ. ಎರಡು ಪ್ರತಿಗಳನ್ನ ಪಠ್ಯ ಪುಸ್ತಕ ಸಮಿತಿಯ ಸೆಕ್ರೆಟರಿಗಳಿಗೆ ಕಳಿಸು ನೋಡೋಣ” ಎಂದು ಶಾಸ್ತ್ರಿಗಳು ಸೂಚಿಸಿದರು. (ಅವರು ಪಠ್ಯ ಪುಸ್ತಕ ಸಮಿತಿಯ ಅಧ್ಯಕ್ಷರು ಎಂಬ ಸಂಗತಿ ಆಮೇಲೆ ನನಗೆ ಗೊತ್ತಾಯಿತು.) ಅವರು ಹೇಳಿದ ಹಾಗೆಯೇ ಮಾಡಿದೆ. ಒಂದೆರಡು ತಿಂಗಳುಗಳಾದ ಮೇಲೆ ಅವರೇ ಫಲಿತಾಂಶವನ್ನೂ ತಿಳಿಸಿಬಿಟ್ಟರು: “ಹೆಚ್ಚಿನದೇನನ್ನೂ ಮಾಡಲಾಗಲಿಲ್ಲ ಸೀತಾರಾಮಯ್ಯ. ಎಸ್. ಎಸ್. ಎಲ್.ಸಿ. ನಾನ್‌ಡೀಟೇಲ್ಡ್ ಪುಸ್ತಕವಾಗಿ ಮಾಡಲು ನಿನ್ನ ಪುಸ್ತಕದ ಶೈಲಿ ತುಂಬ ಪ್ರೌಢ ಅಂತ ಅಭಿಪ್ರಾಯ ಬಂತು. ಯು. ಟಿ. ಸಿ. ಪರೀಕ್ಷೆಗೆ ಗೊತ್ತುಮಾಡಿದ್ದೇವೆ. ೧೫೦–೨೦೦ ಪ್ರತಿಗಳು ಖರ್ಚಾಗಬಹುದು.” “ಇಷ್ಟೇ ಸಾಕು, ಸಾರ್. ಪುಸ್ತಕ ಅಚ್ಚು-ಹಾಕಿಸಲು ಮಾಡಿದ್ದ ಸಾಲ ತೀರುತ್ತದೆ” ಎಂದು ನನ್ನ ತೃಪ್ತಿಯನ್ನು ಸೂಚಿಸಿದೆ. ಸಲಿಗೆಯಿರುವ ದೊಡ್ಡವರಿಗೆ ‘ಥ್ಯಾಂಕ್ಸ್’ ಕೊಡುವ ಹಾಗಿರಲಿಲ್ಲ; ಮನಸ್ಸಿನಲ್ಲಿಯೆ ಅವರನ್ನು ವಂದಿಸಿದೆ. ‘ಆಡದೆಯೆ ಕೊಡುವವನು ರೂಢಿಯೊಳಗುತ್ತಮನು’ ಎಂಬ ಸರ್ವಜ್ಞ ಸೂಕ್ತಿಗೆ ಪೂಜ್ಯ ಶಾಸ್ತ್ರಿಗಳು ಶ್ರೇಷ್ಠ ನಿದರ್ಶನ.

ಕನ್ನಡ ಸಾಹಿತ್ಯ ಸರ್ವಾಂಗ ಸಂಪುಷ್ಟವಾಗಬೇಕೆಂಬುದು ಅವರ ಆಶಯವಾಗಿತ್ತು. ಕಥೆ ಕಾದಂಬರಿ ನಾಟಕ ಮುಂತಾದ ಸೃಷ್ಟ್ಯಾತ್ಮಕ ಸಾಹಿತ್ಯಕ್ಕೆ ಅವರು ವಿರೋಧಿಗಳೇನಲ್ಲ. ಹಾಗಿದ್ದರೆ, ‘ಶ್ರೀಪತಿಯ ಕಥೆಗಳು’ ಅವರ ಲೇಖನಿಯಿಂದ ಮೂಡುತ್ತಿರಲಿಲ್ಲ; ‘ಕಥಾಮೃತ’ವನ್ನು ತಮ್ಮ ಇಳಿವಯಸ್ಸಿನಲ್ಲಿ ರಚಿಸುತ್ತಿರಲಿಲ್ಲ. ಆದರೂ, ನಾನು ಕಥೆ ಕಾದಂಬರಿಗಳನ್ನು ಬರಯುತ್ತಿದ್ದುದರ ಬಗೆಗೆ ಅವರಿಗೆ ಸ್ವಲ್ಪ ಅಸಮಾಧಾನವಿತ್ತು. ಅದನ್ನವರು ಒಮ್ಮೆ ಸ್ಪಷ್ಟವಾಗಿ ತಿಳಿಸಿದ್ದರು: ಕಥೆ ಕಾದಂಬರಿ ಬರೆಯತಕ್ಕವರು ಬೇಕಾದಷ್ಟು ಮಂದಿ ಹುಟ್ಟಿಕೊಂಡಿದ್ದಾರೆ. ಕನ್ನಡ ಎಂ.ಎ. ಪರೀಕ್ಷೆ ಮಾಡಿ, ಪಾಂಡಿತ್ಯ ಸಂಪಾದನೆ ಮಾಡಿಕೊಂಡು, ನೀನು ಕಥೆ ಬರೆಯುತ್ತ ಕುಳಿತುಕೊಳ್ಳುವುದು ಮಹಾ ಸಂಗೀತ ವಿದ್ವಾಂಸ ಹರಿಕಥೆ ಮಾಡುವುದಕ್ಕೆ ಹೊರಟ ಹಾಗೆ. ನಿನಗೆ ಶಕ್ತಿ ಇದೆ, ಯಾವುದಾದರೂ ಹಳಗನ್ನಡ ಗ್ರಂಥವನ್ನು ಸಂಪಾದನೆ ಮಾಡು. ಪಾಂಡಿತ್ಯಪೂರ್ಣ ಲೇಖನಗಳನ್ನು ಇನ್ನೂ ಹೆಚ್ಚಾಗಿ ಬರಿ” ಎಂದು ನಿಜವಾದ ವಾತ್ಸಲ್ಯದಿಂದ ಬುದ್ಧಿವಾದ ಹೇಳಿದರು. ನಾನು ಸಮಾಧಾನದಿಂದಲೇ ಉತ್ತರ ಕೊಟ್ಟೆ; ವೆಂಕಣ್ಣಯ್ಯನವರ ಒತ್ತಾಸೆಯಿಂದ ಕನ್ನಡ ಎಂ.ಎ. ತರಗತಿಗೆ ಸೇರಿದ ಸಂದರ್ಭವನ್ನು ಅವರ ನೆನಪಿಗೆ ತಂದುಕೊಟ್ಟೆ. “ಹೌದು ಹೌದು, ನೀನು ಚಿತ್ರಗಾರನಾಗಬೇಕು ಅಂತ ಅವರ ಆಸೆ ಇತ್ತು. ನನಗೂ ಅದೇ ಆಸೆಯಿತ್ತು. ಬ್ರಷ್ಷು ಕೈಗೆ ಸಿಕ್ಕಲಿಲ್ಲ, ನೀನು ಲೇಖನಿ ಹಿಡಿದೆ. ಹೋಗಲಿ ಬಿಡು” ಎಂದು ಅವರೂ ಸಮಾಧಾನ ತಳೆದರು. “ಅಷ್ಟೇ ಅಲ್ಲ ಸಾರ್. ಕಥೆ ಕಾದಂಬರಿ ಬರೆದರೆ ನಾಲ್ಕು ಕಾಸೂ ಬರುತ್ತೆ. ನಮ್ಮ ಸೀಮೆಯಲ್ಲಿ ಪಾಂಡಿತ್ಯಕ್ಕೆ ಏನು ಬೆಲೆಯಿದೆ? ಪ್ರಮೂಷನ್

ಕೊಡುವಾಗ ಕೂಡ ಅದು ಲೆಕ್ಕಕ್ಕೆ ಬರುವುದಿಲ್ಲ" ಎಂದು ಸ್ನೇಹಿತರೊಬ್ಬರ ಪಾಡನ್ನು ನೆನೆದು ನುಡಿದೆ. ಅವರಿಗೂ ಅರ್ಥವಾಯಿತು; "ಅದೂ ದಿಟ ಅಂತ ಇಟ್ಟುಕೋ. ಆದರೂ. . . .**ಪಾಂಡಿತ್ಯದ ಕೆಲಸವನ್ನ ಕರ್ತವ್ಯ ಅಂತ ಮಾಡಬೇಕು**" ಎಂದರು. ಅವರ ಕೊನೆಯ ಮಾತು ನನ್ನ ಮನಸ್ಸಿಗೆ ನಾಟಿತು. ಏಕೆಂದರೆ, ಕೃಷ್ಣಶಾಸ್ತ್ರಿಗಳು ಬದುಕು ಪಾಂಡಿತ್ಯಕ್ಕೆ ಮೀಸಲಾಗಿತ್ತು. ಪಾಂಡಿತ್ಯದ ಕೆಲಸವನ್ನು ಅವರು ಕರ್ತವ್ಯಕರ್ಮವಾಗಿ ನಡೆಸಿಕೊಂಡು ಬಂದಿದ್ದರು.

ಪೂಜ್ಯ ಶಾಸ್ತ್ರಿಗಳು ತೀರಿಕೊಳ್ಳುವುದಕ್ಕೆ ಕೆಲವು ಕಾಲ ಮುಂಚೆ ಅಪಘಾತವೊಂದಕ್ಕೆ ಸಿಕ್ಕಿ, ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ನೋಡಿಕೊಂಡು ಬರಲು ಹೋಗಿದ್ದಾಗ, 'ಕವಿರಾಜಮಾರ್ಗ'ವನ್ನು ಸಂಪಾದನೆ ಮಾಡುತ್ತಿರುವ ಸಂಗತಿಯನ್ನು ಅವರಿಗೆ ತಿಳಿಸಿದೆ. ಅವರು ತುಂಬ ಸಂತೋಷಪಟ್ಟರು. ಅವರು ಗುಣಮುಖರಾಗಿ ಮನೆಗೆ ಬಂದಮೇಲೆ ಮತ್ತೆ ಅವರನ್ನು ನೋಡಲಿಲ್ಲ. ಕವಿರಾಜಮಾರ್ಗದ ಮುದ್ರಣಕಾರ್ಯ ಮುಗಿಯುತ್ತ ಬಂದಿದ್ದು, ಅದರ ಒಂದು ಪ್ರತಿಯನ್ನು ಅವರಿಗೆ ಅರ್ಪಿಸಲು ಅವರ ಮನೆಗೆ ಹೋಗಬೇಕೆಂದು ಯೋಚಿಸಿದ್ದೆ. ಆದರೆ, ಆ ಭಾಗ್ಯ ನನ್ನ ಪಾಲಿಗೆ ಬರಲಿಲ್ಲ. ಅವರ ನಿಧನದ ಬಗೆಗೆ ಪರಿಷತ್ತಿನಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ನಾಲ್ಕು ಮಾತನ್ನು ಆಡಬೇಕಾದ ದೌರ್ಭಾಗ್ಯ ಒದಗಿಬಂತು. ಆ ದಿನ ಸಂಜೆ, ಭಾಷಣ ಮಾಡುವುದಕ್ಕೆ ಮುಂಚೆ, ಕವಿರಾಜಮಾರ್ಗ ಗ್ರಂಥದ ಮೊದಲ ಪುಟಗಳ ಕರಡಚ್ಚನ್ನು ಪರಿಶೀಲಿಸಲೆಂದು ಪರಿಷತ್ತಿನ ಅಚ್ಚುಕೂಟಕ್ಕೆ ಹೋಗಿದ್ದೆ. 'ಅರ್ಪಣಪತ್ರ'ದ ಪುಟದಲ್ಲಿ, 'ದಿವಂಗತ ಟಿ.ಎಸ್. ವೆಂಕಣ್ಣಯ್ಯನವರಿಗೆ' ಎಂದು ಬರೆದಿದ್ದೆ; ಅದರ ಕೆಳಗೆ, ಮತ್ತು 'ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳಿಗೆ' ಎಂದು ಸೇರಿಸಿದೆ.

ಮೈಸೂರಿನವರು, ಧಾರವಾಡದವರು, ಮಂಗಳೂರಿನವರು, ಹೈದರಾಬಾದಿನವರು, ಕೊಡಗಿನವರು ಎನ್ನುವುದಕ್ಕಿಂತ 'ಕನ್ನಡಿಗರು' ಎನ್ನುವುದು ಶ್ರೇಯಸ್ಸು. ಕನ್ನಡಿಗರು, ಮರಾಠಿಗರು, ತೆಲುಗರು, ತಮಿಳರು ಎನ್ನುವುದಕ್ಕಿಂತ 'ಭಾರತೀಯರು' ಎನ್ನುವುದು ಮತ್ತೂ ಶ್ರೇಯಸ್ಸು. ಭಾರತೀಯರು, ಇಂಗ್ಲೀಷರು, ಅಮೇರಿಕನರು, ಆಫ್ರಿಕನರು ಎನ್ನುವುದಕ್ಕಿಂತ 'ನಾವೆಲ್ಲ ಈ ಭೂಮಿತಾಯಿಯ ಮಕ್ಕಳು' ಎನ್ನುವುದು – ವಿಶ್ವಭಾವನೆಯು – ಸರ್ವೋತ್ತಮ.

* *

ನಮ್ಮ ನಾಡಿನ ಸೇವೆಗೆ, ಜನರ ನುಡಿಯ ಸೇವೆಗೆ, ಅವರ ಸಾಮರ್ಥ್ಯ ತಕ್ಕಷ್ಟಿಲ್ಲವೆಂದು ಯಾರೂ ಭಾವಿಸಲಾರರು; ಕನ್ನಡ ನಾಡು ಎಂದಿಗೂ ಹಿಂದೆಬೀಳದು.

ಎ. ಆರ್. ಕೃ.

ಒಂದು ಭಾಷಾಂತರದ ಕಥೆ

ಶಾ. ಬಾಲುರಾವ್

ದಿ|| ಎ. ಆರ್. ಕೃಷ್ಣಶಾಸ್ತ್ರಿಗಳಿಂದ ಕನ್ನಡಕ್ಕೆ ಸಂದ ಬಹುಮುಖ ಸೇವೆಗಳಲ್ಲಿ ಅವರು ಬಂಗಾಳಿಯಿಂದ ಮಾಡಿದ ಭಾಷಾಂತರಗಳಿಗೆ ಒಂದು ಪ್ರಮುಖವಾದ ಸ್ಥಾನವಿದೆ. ಅವರ ಮಾತಿನಲ್ಲಿಯೇ ಹೇಳುವುದಾದರೆ ಅವರಿಗೆ ಬಂಗಾಳಿ 'ಕರ್ಮಧರ್ಮ ಸಂಯೋಗದಿಂದ ಬಹಳ ಹಿಂದೆಯೇ ಪರಿಚಯವಾಗಿ ಅದು ಬೇರೆ ಬೇರೆ ಸಂದರ್ಭಗಳಲ್ಲಿ ಬೆಳೆದು ಬಂತು'. ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಮೊತ್ತ ಮೊದಲಿನ ಕಾಣಿಕೆಗಳೂ ('ಸ್ವಾಮಿ-ಶಿಷ್ಯಸಂವಾದ' ಮತ್ತು 'ನಾಗಮಹಾಶಯ'), ಹಾಗೆಯೇ ಕೊಟ್ಟ ಕೊನೆಯ ಕೃತಿಯೂ (ರವೀಂದ್ರನಾಥ ಠಾಕೂರರ 'ನಿಬಂಧ ಮಾಲಾ' ಭಾಗ ಎರಡು) ಬಂಗಾಳಿಯಿಂದ ಮಾಡಿದ ಭಾಷಾಂತರಗಳೇ. ಹೀಗೆ ಅವರ ಸಾಹಿತ್ಯ ರಚನೆಯ ನಾಂದಿ ಭರತವಾಕ್ಯಗಳೆರಡೂ ಬಂಗಾಳಿಯ ಭಾಷಾಂತರಗಳಿಂದಲೇ ಆದುದು ಕರ್ಮಧರ್ಮ ಸಂಯೋಗವೇ ಸರಿ!

ಶಾಸ್ತ್ರಿಗಳು ಭಾಷಾಂತರಿಸಿದ ರವೀಂದ್ರರ 'ನಿಬಂಧ ಮಾಲಾ' ಕನ್ನಡದ ರಸಾನುವಾದಗಳಲ್ಲೊಂದು. ರವೀಂದ್ರನಾಥ ಠಾಕೂರರು ಪ್ರಥಮತಃ ಕವಿಯಾದರೂ ಅವರ ಸಾಹಿತ್ಯಸೃಷ್ಟಿ ಬರಿಯ ಕವಿತೆಯಷ್ಟಕ್ಕೇ ಮೀಸಲಾಗಿರಲಿಲ್ಲ. ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ರವೀಂದ್ರರು ಕೈಹಾಕದ ಸಾಹಿತ್ಯ ಪ್ರಕಾರವೇ ಇರಲಿಲ್ಲವೇನೋ. ಕವಿತೆ, ಗೀತೆ, ಕಾದಂಬರಿ, ನಾಟಕ, ಬಾಲಸಾಹಿತ್ಯ, ಪತ್ರಸಾಹಿತ್ಯ, ವಿಮರ್ಶೆ, ಲಲಿತ ಸಾಹಿತ್ಯಿಕ ಪ್ರಬಂಧಗಳು, ಗಂಭೀರ ವಿಷಯಕ ಪ್ರಬಂಧಗಳು-ಹೀಗೆ ಅವರ ಪ್ರತಿಭೆಯ ಆಕ್ಟೋಪಸ್ ಹತ್ತೂ ದಿಕ್ಕಿಗೆ ಸೊಂಡಿಲು ಚಾಚಿ ಸಫಲತೆ ಪಡೆದಿತ್ತು. ಇಷ್ಟೆಲ್ಲ ಸಾಹಿತ್ಯ ಪ್ರಕಾರಗಳಲ್ಲಿ ದುಡಿದಿದ್ದರೂ ಅವರು ಕವಿತೆಯಷ್ಟೇ ಸಮತೂಕದಲ್ಲಿ ಯಶಸ್ಸು ಸಾಧಿಸಿದ್ದು ತಮ್ಮ ಸಾಹಿತ್ಯಿಕ ಪ್ರಬಂಧಗಳಲ್ಲಿ. ರವೀಂದ್ರರ ಇತರ ಸಾಹಿತ್ಯ ಸಾರ್ವತ್ರಿಕವಾಗಿ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಮೆಚ್ಚಿಕೆಯಾಗಿಲ್ಲ. ಕವಿತೆಯ ಬಗ್ಗೆ ಹೇಳುವುದಾದರೆ ರವೀಂದ್ರರ ಕಾಲಾನಂತರದ ಈ ಕಾಲು ಶತಮಾನದಲ್ಲಿ ಕಾಲ-ಧರ್ಮ ರುಚಿ ಬದಲಾದಂತೆ ಅದೂ ಹಳಸಿದೆ. 'ಕಲ್ಲೋಲ', 'ಪರಿಚಯ' ಪಂಥಗಳವರ ಪ್ರಗತಿಕಾವ್ಯ, ನವ್ಯಕಾವ್ಯಗಳು ಬಂದು, ಅವೂ ಮೂಲೆಗೆ ಸರಿದು ಈಗ 'ಕೃತ್ತಿವಾಸ' ಪಂಥದ 'ಹಸಿದ ಯುವಪೀಳಿಗೆ'ಗೆ (Hungry generation) ದಾರಿಮಾಡಿಕೊಟ್ಟಿದೆ. ಇಷ್ಟಾದರೂ ಸಾಹಿತ್ಯಿಕ ಪ್ರಬಂಧಗಳ ಸೊಗಸು, ಸವಿ ಆರಿಲ್ಲ. ಅವು ಇಂದಿಗೂ ಹಸನೇ. ರವೀಂದ್ರರ ಈ ಒಂದು ಮಹತ್ವದ ಸಾಹಿತ್ಯಪ್ರಕಾರದ ಸಾರವನ್ನು 'ನಿಬಂಧ ಮಾಲಾ'ದ ಮೂಲಕ, ಗುಣ ಲಾಲಿತ್ಯಗಳಲ್ಲಿ ಮೂಲಕ್ಕೆ ಸರಿದೊರೆಯಾಗುವಂತೆ ಕನ್ನಡಕ್ಕೆ ತಂದುಕೊಟ್ಟು, ನಮ್ಮ ಸಾಹಿತ್ಯದ ಸಿರಿಸಂಪದವನ್ನು ಹೆಚ್ಚಿಸಿದ ಕೀರ್ತಿ ಕೃಷ್ಣಶಾಸ್ತ್ರಿಗಳದ್ದು. 'ನಿಬಂಧಮಾಲಾ'ವನ್ನು ಓದಿದವರೆಲ್ಲರೂ ಇದನ್ನು ಬಲ್ಲರು. ಆದರೆ ಶಾಸ್ತ್ರಿಗಳು ಆ ಭಾಷಾಂತರವನ್ನು ಮಾಡಿದ ಹಿನ್ನೆಲೆ, ಅದಕ್ಕೆ ಅವರು ವಹಿಸಿದ ಶ್ರಮ, ಪಟ್ಟ ಕಷ್ಟ, ವೈಯಕ್ತಿಕವಾಗಿ ಅದರಿಂದ ಅವರ ದೇಹ ಮನಸ್ಸುಗಳಮೇಲೆ ಉಂಟಾದ ಪರಿಣಾಮ ಪ್ರಾಯಶಃ ಅನೇಕರಿಗೆ ತಿಳಿಯದು. ಒಂದೇ ಮಾತಿನಲ್ಲಿ ಹೇಳುವುದಾದರೆ ಶಾಸ್ತ್ರಿಗಳ ಪಾಲಿಗೆ ಆ ಭಾಷಾಂತರ ಯಾಜಕನನ್ನೇ ಆಹುತಿ ಬೇಡಿದ ಘೋರ ಸಾಹಿತ್ಯಯಜ್ಞವಾಯಿತು!

ರವೀಂದ್ರನಾಥ ಠಾಕೂರರ ಶತಮಾನೋತ್ಸವ ನೆರವೇರಿದುದು ೧೯೬೧ರಲ್ಲಿ. ದಿಲ್ಲಿಯ ಸಾಹಿತ್ಯ ಅಕಾದಮಿ ಅದಕ್ಕೆ ಎರಡು ವರ್ಷಗಳ ಮುಂಚಿನಿಂದಲೇ ಉತ್ಸವಾಚಾರಣೆಯ ಅಂಗವಾಗಿ ಒಂದು ವಿಸ್ತೃತ ಕಾರ್ಯಕ್ರಮ ಹಾಕಿಕೊಂಡಿತ್ತು. ರವೀಂದ್ರರ ಬರವಣಿಗೆಗಳಲ್ಲಿ ಪ್ರಾತಿನಿಧಿಕ ಹಾಗೂ ಸಾರವತ್ತಾದುದೆಲ್ಲವನ್ನೂ ಎಂಟು ಸಂಪುಟಗಳಲ್ಲಿ ಸಂಗ್ರಹಿಸಿ, ಅವೆಲ್ಲವನ್ನೂ ಭಾರತದ ಪ್ರತಿಯೊಂದು ಭಾಷೆಗೂ ಅನುವಾದ ಮಾಡಿಸುವುದು ಕಾರ್ಯಕ್ರಮದ

ಒಂದು ಮುಖ್ಯಾಂಶವಾಗಿತ್ತು. ಒಂದೊಂದು ಭಾಷೆಯಲ್ಲಿಯೂ ಬಂಗಾಳಿಯಿಂದ ಭಾಷಾಂತರಿಸಬಲ್ಲ ಕನಿಷ್ಠ ಹತ್ತು ಜನ ಸಾಹಿತಿಗಳು–ಕವಿತೆಯನ್ನು ಮಾಡಲು ಕವಿಗಳೇ, ಕಾದಂಬರಿಯನ್ನು ಮಾಡಲು ಕಾದಂಬರಿಕಾರರೇ ಎಲ್ಲಿ ಸಿಗಬೇಕು? ಕನ್ನಡದ ಪುಣ್ಯ; ಪ್ರಬಂಧಗಳ ಎರಡು ಸಂಪುಟಗಳನ್ನು ಸರ್ವಸಮರ್ಥವಾಗಿ ಕನ್ನಡಿಸಿ ಕೊಡಬಲ್ಲ ವಿದ್ವಾಂಸರೊಬ್ಬರಿದ್ದರು. ಅವರೆಂದರೆ ಕೃಷ್ಣಶಾಸ್ತ್ರಿಗಳು. ಶಾಸ್ತ್ರಿಗಳಿಗೆ ಸವಿನಯ ಪ್ರಾರ್ಥನೆ ಹೋಯಿತು. ಅವರು ಆಗ 'ಬಂಕಿಮಚಂದ್ರ'ದ ಮುದ್ರಣದಲ್ಲಿ ಮುಳುಗಿದ್ದರು. ಅವರ ಮಾತು ಯಾವಾಗಲೂ ಖಡಾಖಂಡಿತ. ಅವರೆಂದೂ ಅಡ್ಡಗೋಡೆಯಮೇಲೆ ದೀಪ ಇಟ್ಟವರಲ್ಲ; ಅವರು ಮುರಿದರೆ ಕಡ್ಡಿ ಎರಡೇ ತುಂಡು! 'ಕ್ಷಮಿಸಿ, ನನ್ನಿಂದಾಗದು' ಎಂದುಬಿಟ್ಟರು.

ಆಗಿನ್ನೂ ನನಗೆ ವೈಯಕ್ತಿಕವಾಗಿ ಶಾಸ್ತ್ರಿಗಳ ಪರಿಚಯ ಇರಲಿಲ್ಲ. ಅದಕ್ಕೆ ಸಾಧ್ಯತೆ, ಅವಕಾಶಗಳೂ ಇರಲಿಲ್ಲ. ಅವರಿಗೂ ನನಗೂ ವಯಸ್ಸಿನಲ್ಲಿ ನಲವತ್ತು ವರ್ಷಗಳ ಅಂತರ; ನಾನು ಕಾಲೇಜಿನ ಕಟ್ಟೆ ಹತ್ತುವ ಮೊದಲೇ ಅವರು ಕೆಲಸದಿಂದ ನಿವೃತ್ತರಾಗಿದ್ದವರು. ಆದರೂ ಇನ್ನೊಂದು ದೃಷ್ಟಿಯಿಂದ ಅವರು ಎಂದಿನಿಂದಲೂ ನನ್ನ ಹೃದಯವರ್ತಿಯಾಗಿದ್ದರು. ಶಾಸ್ತ್ರಿಗಳ ಅಳಿಯಂದಿರಾದ ದಿ|| ನರಹರಿರಾಯರು ನನ್ನ ಊರಾದ ಶ್ರೀರಂಗಪಟ್ಟಣದವರೇ. ಅವರದೂ ನನ್ನ ತಂದೆಯವರದೂ ಒಂದೇ ಕಸಬು: ವಕೀಲವೃತ್ತಿ. ಇಬ್ಬರಿಗೂ 'ಹೋಗು–ಬಾ' ಅನ್ನುವಷ್ಟರ ಮಟ್ಟಿನ ಸ್ನೇಹ, ಸಲಿಗೆ. ಹೀಗಾಗಿ ಕೃಷ್ಣಶಾಸ್ತ್ರಿಗಳ ಮಾತು, ಹಾಗೆಯೇ ಕನ್ನಡ ಸಾರಸ್ವತ ಪ್ರಪಂಚಕ್ಕೆ ನಮ್ಮೂರಿನ ಎರಡು ಹೆಗ್ಗೊಡಿಗೆಗಳಾದ ಬಿ. ಎಂ. ಶ್ರೀ. ಮತ್ತು ಎಲ್. ಎಸ್. ಸುಬ್ಬರಾಯರ ಮಾತು, ಒಂದಲ್ಲ ಒಂದು ನೆಪದಲ್ಲಿ ಮನೆಯ ಹೊರ ತೊಟ್ಟಿಯಿಂದ ಹಿಡಿದು ಅಡಿಗೆಯ ಕೋಣೆಯವರೆಗೆ ಸುಳಿದು ಹೋಗದ ದಿನವೇ ಇರಲಿಲ್ಲವೆನ್ನಬಹುದು. ನಾವು ಹುಡುಗರು ಈ ಹೆಸರುಗಳ ಮಹಿಮೆ ಮಹಾತ್ಮ್ಯಗಳನ್ನು ತೊಟ್ಟಿಲಿನಿಂದಲೇ ಕೇಳಿ ಬೆಳೆದವರು.

೧೯೬೦ರ ಆರಂಭದಲ್ಲಿ ಒಂದು ದಿನ ಅಕಾದಮಿಯ ಕಚೇರಿಯಲ್ಲಿ ಕಾರ್ಯಾಚರಣೆಗೆಂದು ನನ್ನ ಪಾಲಿಗೆ ಬಂದ ಕಾಗದಗಳಲ್ಲಿ ಒಂದು ತೀರಾ ಸಾಮಾನ್ಯವಾದ ಪತ್ರವಿತ್ತು: 'ನಿಮ್ಮ ಕಾರ್ಯಕ್ರಮ ತಿಳಿಯಬೇಕಾಗಿದೆ, ವಾರ್ಷಿಕ ವರದಿ ಕಳುಹಿಸಿಕೊಡಿ' ಎಂಬುದು ಅದರ ಒಕ್ಕಣೆ. ನೋಡಿದರೆ ಅದು ಕೃಷ್ಣಶಾಸ್ತ್ರಿಗಳದ್ದು! ಮುಂದೆ ಪ್ರಕಟವಾದ ಅವರ 'ನಿರ್ಮಲ ಭಾರತಿ'ಗೋ ಏನೋ ಅಕಾದಮಿಯಿಂದ ಯಾವ ಸಹಾಯ ಪ್ರೋತ್ಸಾಹಗಳು ಸಿಗಬಹುದೆಂದು ವಿಚಾರಿಸಿ ನೋಡುವುದು ಅವರ ಉದ್ದೇಶವಾಗಿತ್ತು. ಆ ಸುಮಾರಿಗೆ ಬಿ. ಎಂ. ಶ್ರೀ ಅವರ ಒಂದು ಜೀವನ ಚರಿತ್ರೆ ಬರೆಯಬೇಕೆಂದು ಆಶಿಸಿ ಅವರ ಹಲವರು ಸಂಬಂಧಿಗಳಿಂದಲೂ ಶಿಷ್ಯ ಮಿತ್ರರಿಂದಲೂ ಸಾಮಗ್ರಿ ಕೂಡಿಸಲು ಆರಂಭಿಸಿದ್ದೆ. ಕೃಷ್ಣಶಾಸ್ತ್ರಿಗಳು 'ಶ್ರೀ' ಅವರ ಪಟ್ಟಶಿಷ್ಯರು. 'ಶ್ರೀ' ಅವರ ಬಗ್ಗೆ ಅವರಿಗೆ ಗೊತ್ತಿರುವಷ್ಟು ಬೇರೆ ಯಾರಿಗೂ ತಿಳಿಯದು ಎಂದು ಕೇಳಿದ್ದೆ. ಆದರೆ ಪೂರ್ವಪರಿಚಯವಿಲ್ಲದೆ ಅವರ ಬಳಿ ಹೋಗುವುದಾದರೂ ಹೇಗೆ? ಹಾಗೆ ಹೋಗಿ ಕೇಳಿದರೂ ಯಾವನೋ ದಾರಿಹೋಕನೊಬ್ಬನ ಖಯಾಲಿಗೆ ಸೊಪ್ಪು ಹಾಕಿ ಅವರು 'ಶ್ರೀ' ಅವರ ಬಗ್ಗೆ ಸಾಮಗ್ರಿ ಪೂರೈಸುವ ತೊಂದರೆ ತೆಗೆದುಕೊಂಡಾರೆ? ಅದೂ ನಾನು ದೂರದ ದಿಲ್ಲಿಯಲ್ಲಿರುವುದರಿಂದ, ಪತ್ರಮುಖೇನ? ಈ ಶಂಕೆ ಸಂಕೋಚಗಳಿಂದಾಗಿ ನಾನು ಅವರಿಗೆ ದೂರವಾಗಿಯೇ ಉಳಿದಿದ್ದೆ. ಶಾಸ್ತ್ರಿಗಳ ವೈಯಕ್ತಿಕ ಪರಿಚಯ ಭಾಗ್ಯಕ್ಕೆ ಹಾತೊರೆದಿದ್ದ ನನಗೆ ಈಗ ಅನಾಯಾಸವಾಗಿ ಒಂದು ಅವಕಾಶ ಒದಗಿಬಂದಿತ್ತು. ಅವರ ಕಾಗದಕ್ಕೆ ಅಧಿಕೃತವಾಗಿ ಉತ್ತರಿಸಿ, ವಾರ್ಷಿಕ ವರದಿ ಕಳುಹಿಸಿಕೊಟ್ಟೆ; ಯಥಾಪ್ರಕಾರ ಉತ್ತರಕ್ಕೆ ಕನ್ನಡದಲ್ಲಿ ಸಹಿ ಹಾಕಿದೆ. ಊಹೆ ತಪ್ಪಾಗಲಿಲ್ಲ: ವಾರದ ಮೇಲೆ ಶಾಸ್ತ್ರಿಗಳಿಂದ ನನ್ನ ವಿಳಾಸಕ್ಕೆ ಒಂದು ಪತ್ರ ಬಂತು: 'ದೂರದ ದೆಹಲಿಯಿಂದ ಬಂದ ಕಾಗದದಲ್ಲಿ ಕನ್ನಡದ ರುಜುವಿರುವುದನ್ನು ಕಂಡು ಆಶ್ಚರ್ಯವೂ ಸಂತೋಷವೂ ಆಗಿದೆ. ನೀವು ಯಾರು? ಪರಿಚಯ ಮಾಡಿಕೊಡಿ' ಎಂದು ಅವರು ಬರೆದಿದ್ದರು. ರೋಗಿ ಬಯಸಿದ್ದುದೂ ವೈದ್ಯ ಹೇಳಿದ್ದುದೂ ಒಂದೇ ಆಗಿತ್ತು–ಹಾಲು ಅನ್ನ! ಇದ್ದ ಕೋಡುಗಳನ್ನೆಲ್ಲಾ ಮುಂದೆ ಮಾಡಿ ಪ್ರವರ ಒಪ್ಪಿಸಿ ಕೈಮುಗಿದೆ. 'ತಾವು ಹಲವು ವಿಧದಲ್ಲಿ ನನಗೆ ಆತ್ಮೀಯರಾಗಿದ್ದೀರಿ' ಎಂದು ಹತ್ತಿರಕ್ಕೆ ಕರೆದುಕೊಂಡರು. ಆ ಪತ್ರ ಬಂದ ದಿನ ನನ್ನ ಬದುಕಿನ ಸುದಿನಗಳಲ್ಲೊಂದು.

ಶಾಸ್ತ್ರಿಗಳ ಪರಿಚಯವಾಯಿತು, ಸಲಿಗೆಯೂ ಬೆಳೆಯಿತು. 'ಶ್ರೀ' ಅವರ ಜೀವನಚರಿತ್ರೆ ಬರೆಯುವ ನನ್ನ ಹವಣಿಕೆಯನ್ನು ತಿಳಿಸಿದೆ. ಇಲ್ಲವೆನ್ನದೆ ಸಂತೋಷದಿಂದ ಒಂದೊಂದು ಸಾರಿಗೆ ನಾಲ್ಕುನಾಲ್ಕು ಪುಟಗಳ ಕಾಗದ ಬರೆದು ತಮಗೆ ತಿಳಿದುದೆಲ್ಲವನ್ನೂ ತಿಳಿಸಿಕೊಟ್ಟರು; ಕೇಳಿದ ಪ್ರಶ್ನೆಗಳೆಲ್ಲಕ್ಕೂ ತಾಳ್ಮೆಯಿಂದ ಉತ್ತರಿಸಿದರು. ಒಂದು

ಯತ್ನ ಫಲಿಸಿತು. ಇನ್ನೊಂದು ರವೀಂದ್ರರ ಪ್ರಬಂಧಗಳದ್ದು. ಸಮರ್ಥ ಅನುವಾದಕರು ದೊರೆಯದೆ ಕೃತಿ ಕನ್ನಡಕ್ಕಿಲ್ಲವಾಗುವುದಲ್ಲ ಎಂಬ ಚಿಂತೆ ನನ್ನನ್ನು ಕೊರೆಯುತ್ತಿತ್ತು. ಈಗ ವೈಯಕ್ತಿಕ ಪರಿಚಯವಾಗಿರುವುದರಿಂದ ಶಾಸ್ತ್ರಿಗಳನ್ನು ಇನ್ನೊಮ್ಮೆ ಕೇಳಿ ನೊಡಬಾರದೇಕೆ ಎನ್ನಿಸಿತು. ಅಕಾದಮಿಯ ಕಾರ್ಯದರ್ಶಿ ಶ್ರೀ ಕೃಪಲಾನಿಯವರೊಡನೆ ಮಾತನಾಡಿ, ಮತ್ತೊಮ್ಮೆ ಕನಿಷ್ಠ ಒಂದು ಸಂಪುಟವನ್ನಾದರೂ ಅನುವಾದ ಮಾಡಿಕೊಡುವಂತೆ ಕೇಳೋಣವೆಂದೆ. ಅವರಾಗಲೇ ಒಮ್ಮೆ ಇಲ್ಲವೆನ್ನಿಸಿಕೊಂಡು ಪೆಚ್ಚಾಗಿದ್ದರು. ಆದರೂ ಒಪ್ಪಿ ಕಾಗದ ಬರೆದರು. ಕನ್ನಡದ ಮರ್ಯಾದೆಯನ್ನು ಮುಂದೊಡ್ಡಿ ದಮ್ಮಯ್ಯ ಗುಡ್ಡೆ ಹಾಕಿ ನಾನೂ ಬರೆದೆ. ಪುಣ್ಯ ಕೂಡಿಬಂದಿತ್ತು. ಶಾಸ್ತ್ರಿಗಳು ಭಾಷಾಂತರಿಸಿ ಕೊಡಲು ಒಪ್ಪಿದರು. ಮುಂದಿನ ಕಥೆಯನ್ನು ಅವರ ಮಾತಿನಲ್ಲಿಯೇ, ಅವರ ಕಾಗದಗಳಿಂದಲೇ ಉದ್ಧರಿಸಿ ನೋಡೋಣ :

> 'ಕೆಲಸವನ್ನೇನೋ ಒಪ್ಪಿಕೊಂಡಿದ್ದೇನೆ. ಈಗ ಸುಮಾರು ಆರು ತಿಂಗಳ ಕೆಳಗೇ ಶ್ರೀ ಮೂರ್ತಿರಾಯರು ಇದನ್ನು ಸೂಚಿಸಿದ್ದರು. ನಾನು ಬೇಡವೆಂದಿದ್ದೆ. ಆದರೆ ಅವರು ದೆಹಲಿಗೆ ಹೋದಾಗ ಶ್ರೀ ಕೃಪಲಾನಿಯವರಲ್ಲಿ ಮಾತನಾಡಿ ಅವರ ಕೈಲಿ ಬರಸಿದರು, ತಾವೂ ಬರೆದರು. ಆಗಲೂ ಬೇಡವೆಂದೆ. ಮತ್ತೆ ಆಹ್ವಾನ ಬಂತು-ಒಂದು ಭಾಗವನ್ನಾದರೂ ಮಾಡಬೇಕೆಂದು ; ನಿಮ್ಮ ಒತ್ತಾಯವೂ ಬಂತು ; ಮೊಂಡಾಟ ಮಾಡಬಾರದೆಂದು ಒಪ್ಪಿಕೊಂಡಿದ್ದೇನೆ . . . ದೇಹದಾರ್ಢ್ಯವೂ ವಿಶ್ರಾಂತಿಯೂ ಇಲ್ಲದೆ ದುಡಿಯಬೇಕಾಗಿದೆ. ಇನ್ನೇನು ಕೆಲಸವನ್ನೂ ಕೈಕೊಳ್ಳಬಾರದೆಂದಿದ್ದೆ. ಆದರೂ ಒಪ್ಪಿಕೊಳ್ಳಬೇಕಾಯಿತು.'

ಶಾಸ್ತ್ರಿಗಳು ಒಪ್ಪಿಗೆಕೊಟ್ಟು ಕರಾರುಪತ್ರಕ್ಕೆ ಸಹಿ ಹಾಕಿದಾಗ ಅವರಿಗೆ ತಾವು ಒಪ್ಪಿಕೊಂಡ ಕೆಲಸ ಎಷ್ಟು ಬೃಹತ್ ಪ್ರಮಾಣದ್ದೆಂಬ ಸ್ಪಷ್ಟವಾದ ಕಲ್ಪನೆಯಿರಲಿಲ್ಲ. ಸಂಗ್ರಹದ ಪಟ್ಟಿಯನ್ನು ನೋಡಿದ್ದರು. ಅಂದಾಜಿನ ಮೇಲೆ ಸುಮಾರು ೨೫೦-೩೦೦ ಪುಟಗಳಾಗಬಹುದೆಂದುಕೊಂಡಿದ್ದರೇನೋ. ಅದರ ಅಗಾಧತೆಯ ಅರಿವಾದದ್ದು ಮುಂದೆ ಬಂಗಾಳಿಯ ಮೂಲಗಳ ಕಟ್ಟು ಅವರ ಕೈ ಸೇರಿದಾಗಲೇ. ಅದನ್ನು ಕಂಡು ಗಾಬರಿಯಾಗಿ ಶ್ರೀ ಕೃಪಲಾನಿಯವರಿಗೆ ಬರೆದರು :

> The volume of essays before me is staggering-More than 500 pages. I shall try to do my best. The work is in my opinion enough food for two energetic young men for at least one year. I presume you know that I am an old man of 71.'

ಮತ್ತೆ ನನಗೆ ಬರೆದ ಪತ್ರದಲ್ಲಿ :

> 'ನನಗೆ ಕೊಟ್ಟಿರುವ ಕೆಲಸ ಹೆಚ್ಚಾಗಿದೆ. ಯಾರೊಬ್ಬರು ಇಷ್ಟು ಕೆಲಸವನ್ನು ಆರು ತಿಂಗಳು ವರ್ಷದಲ್ಲಿ ಮಾಡಲಾರರು.'

ಇಷ್ಟಾದರೂ ಶಾಸ್ತ್ರಿಗಳು ಹಿಂಜರಿಯಲಿಲ್ಲ. ಇಟ್ಟ ಹೆಜ್ಜೆಯನ್ನು ಹಿಂದೆಗೆಯುವುದು ಅವರ ಜಾಯಮಾನಕ್ಕೇ ಬಂದದ್ದಲ್ಲ. ಕೆಲಸ ಉತ್ಸಾಹದಿಂದಲೇ ಶುರುವಾಯಿತು.

> 'ಸಾಧ್ಯವಾದರೆ ಡಿಸೆಂಬರ ಹೊತ್ತಿಗೆ ಕೊಟ್ಟುಬಿಡಬೇಕೆಂದಿದ್ದೇನೆ. ಠಾಕೂರರ ಉತ್ಸವದ ಹೊತ್ತಿಗೆ ಪುಸ್ತಕ ಬಂದರೆ ಸಂತೋಷ. ಕನ್ನಡಿಗರು-ಅದರಲ್ಲಿಯೂ ಮೈಸೂರ ಕನ್ನಡಿಗರು-ಮಾತಿನ ಶೂರರು ಎನ್ನಿಸಿಕೊಂಡಿದ್ದಾರೆ.'

ಆದರೂ ನಡುನಡುವೆ ಒಮ್ಮೊಮ್ಮೆ ಕೆಲಸದ ಅಗಾಧತೆ ಶಾಸ್ತ್ರಿಗಳ ಗಂಡದೆಯನ್ನೂ ನಡುಗಿಸುತ್ತಿತ್ತೇನೋ. ತಾವು ಒಪ್ಪಿಕೊಳ್ಳದಿದ್ದರೇ ಚೆನ್ನಾಗಿತ್ತು ಅನ್ನಿಸುತ್ತಿತ್ತೇನೋ. ಏನೇ ಇರಲಿ, ಕೊಟ್ಟ ಭಾಷೆಗೆ ತಪ್ಪದೆ ಒಪ್ಪಿಕೊಂಡಿದ್ದನ್ನು ಮಾಡಿಮುಗಿಸಿಯೇ ತೀರುವೆನೆಂಬ ತಮ್ಮ ಪ್ರಕೃತಿಸಹಜವಾದ ಛಲದಿಂದ ಕೆಲಸವನ್ನು ಮುಂದುವರಿಸಿದರು.

> '"ಬಂಕಿಮ ಚಂದ್ರ". . . ಅದಕ್ಕೆ ತುಂಬ ಶ್ರಮ ಪಡಬೇಕಾಯಿತು. ಅಲ್ಲಿಂದ ಮುಂದೆ ಮತ್ತೆ ಯಾವ ಕೆಲಸವನ್ನೂ ಹಿಡಿಯುವುದಿಲ್ಲವೆಂದೂ ಸೋಮಾರಿಯಾಗಿ "ವಿಶ್ರಾಂತಿ" ಪಡೆಯಬೇಕೆಂದೂ ಇದ್ದೆ. ಮೂರ್ತಿರಾಯರ ಕೃಪೆಯಿಂದ ನಿಮ್ಮ ಕೆಲಸ ಬಂತು. ಅವರ, ನನ್ನ, ನಿಮ್ಮ, ಕನ್ನಡಿಗರ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾಗಿದೆ. ಕೆಲಸ ತುಂಬಾ ಕಷ್ಟ—ಭಾವ, ಭಾಷೆ ಎಲ್ಲಾ. ಆದರೂ ಕನ್ನಡದ ಭಾಷಾಂತರ ತಮಿಳು-ತೆಲುಗು-ಮಲೆಯಾಳಗಳಿಗಿಂತ ತೃಪ್ತಿಕರವಾಗಿರುತ್ತದೆಂದೂ ಕ್ಷಿಪ್ರವಾಗಿ ಬರುತ್ತದೆಂದೂ ನಂಬಿದ್ದೇನೆ. ಅದಕ್ಕೆ ಬೇಕಾದ ಪ್ರಯತ್ನ ಜಾಗರೂಕತೆಗಳನ್ನೂ ಕೈಕೊಂಡಿದ್ದೇನೆ. ಈಗ ಮತ್ತಾವ ಕೆಲಸವನ್ನೂ ಮುಟ್ಟುತ್ತಿಲ್ಲ.

ಮತ್ತೆ :

'ಈಚೆಗೆ ನನ್ನ ದೇಹದಾರ್ಢ್ಯ ತುಂಬ ಕಮ್ಮಿಯಾಗಿ ಮೊದಲಿನಂತೆ ಕೆಲಸಮಾಡಲು ಆಗುತ್ತಿಲ್ಲ. ಆದರೂ ಒಪ್ಪಿಕೊಂಡಮೇಲೆ ಶಕ್ತಿ ಮೀರಿ ಕೆಲಸಮಾಡಿ ನಿಮ್ಮ ಹೊತ್ತಿಗೆ ಒದಗಿಸಬೇಕೆಂದು ಯೋಚಿಸುತ್ತಿದ್ದೇನೆ.'

ಭಾಷಾಂತರ ಕಷ್ಟಸುಖಗಳು ಎಲ್ಲರಿಗೂ ಒಂದೇ ಆಗಿರುವುದಿಲ್ಲ. ಅವರವರ ಸಂಸ್ಕಾರ, ಅನುಭವ, ಶ್ರದ್ಧೆ, ಪರಿಶ್ರಮಗಳಿಗೆ ಹೊಂದಿಕೊಂಡಂತೆ ಅವು ಒಬ್ಬೊಬ್ಬ ಭಾಷಾಂತರಕಾರರಿಗೆ ಒಂದೊಂದು ಬಗೆಯಾಗಿರುತ್ತವೆ; ಕೊನೆಯಲ್ಲಿ ಕೊಂಡ ಫಲ ಸಹ ಆ ಕಷ್ಟಸುಖಗಳಿಗೆ ತಕ್ಕಂತೆ ಬೇರೆಬೇರೆಯಾಗುತ್ತದೆ. ಭಾಷಾಂತರ ಒಂದು ಸಾಹಿತ್ಯಕರ್ಮವೇ ಅಲ್ಲವೇನೋ ಎಂಬಂತೆ ಶೀಘ್ರಲಿಪಿ ಕಾರರನ್ನು ಮುಂದೆ ಕೂರಿಸಿಕೊಂಡು ವಾರಕ್ಕೊಂದು ಪುಸ್ತಕದಂತೆ ಹೇಳಿ ಬರೆಯಿಸುವ ಯಂತ್ರಪ್ರತಿಭೆಯ ಕಾಂಪ್ಯುಟರ್‌ಗಳೂ ನಮ್ಮಲ್ಲಿ ಇದ್ದಾರೆ. ಅದನ್ನೂ ಒಂದು ತಪಸ್ಸೆಂದು ಬಗೆದು, ಇದೋ ಅದೋ ಎಂದು ಪರ್ಯಾಯ ಪದಗಳೊಡನೆ ಹೋರಾಡುತ್ತ, ತಿದ್ದಿ ತೀಡಿ, ಮೂಲವನ್ನೇ ನಾಚಿಸುವಂತಹ ತದ್ವತ್ ಜೀವಂತ ಪ್ರತಿಮೂರ್ತಿಯನ್ನು ಕಡೆದು ನಿಲ್ಲಿಸುವವರೂ ಇದ್ದಾರೆ. ಭಾಷಾಂತರದ ವಿಷಯ ದಲ್ಲಿ ಶಾಸ್ತ್ರಿಗಳು ಇಟ್ಟುಕೊಂಡಿದ್ದ ಗೊತ್ತುಗುರಿಗಳು ಸ್ಪಷ್ಟ, ನಿರ್ದಿಷ್ಟ :

'ಮೂಲದ ಸೌಂದರ್ಯ, ಪ್ರೌಢಿಮೆ ಎರಡೂ ಬರಬೇಕು. ಭಾಷಾಂತರವಾಗಬಾರದು. ಪ್ರಾಮಾಣಿಕವಾಗಿರ ಬೇಕು . . . '

ಮತ್ತೆ :

'ನಾನು ಹಣಕಾಸಿನ ವಿಚಾರ ಮಾಡುತ್ತಿಲ್ಲ. (ಒತ್ತು ಶಾಸ್ತ್ರಿಗಳದ್ದೇ) ಅದು ಮುಖ್ಯವಲ್ಲ. ಕೆಲಸ ಚೆನ್ನಾಗಿ ಸಕಾಲದಲ್ಲಿ ಆಗಬೇಕೆಂಬುದಷ್ಟೇ ನನ್ನ ಗುರಿ. ಈಗ ಮಾಡುವ ಕೆಲಸ ಇದುವರೆಗೆ ನಾನು ಮಾಡಿದ ಕೆಲಸದಮಟ್ಟಿಗಾದರೂ ಬಂದಿದೆ ಎಂದು ಜನ ಹೇಳುವಂತಿರಬೇಕು. '

ಬಂಗಾಳಿಯ ಅದರಲ್ಲೂ ರವೀಂದ್ರರ ಕೃತಿಯ ಅನುವಾದ ವೆಂದಮೇಲೆ ಅದಕ್ಕೆ ಅದರದೇ ವಿಶಿಷ್ಟ ಸಮಸ್ಯೆಗಳು. ಶಾಸ್ತ್ರಿ ಗಳು ಆ ಕಗ್ಗಂಟುಗಳೆಲ್ಲವನ್ನೂ ಬಿಡಿಸಿಕೊಂಡು ಮುಂದು ವರೆದರು :

'ಸಂಸ್ಕೃತದ ಜಟಿಲ ಮಾತುಗಳಿಗೆ ಸಂಸ್ಕೃತದ ಅರ್ಥ ವಿಲ್ಲ, ಮೋಸ!' 'ಎಷ್ಟೇ ನಿಘಂಟುಗಳ ಸಹಾಯ ವಿರಲಿ, ಕೆಲವು ವೇಳೆ ಠಾಕೂರರ ಭಾಷೆಯಲ್ಲಿ ಅಪೂರ್ವ ರೂಪಗಳೂ ಶಬ್ದಗಳೂ ಪ್ರಯೋಗಗಳೂ ಬಾಯಿಮಾತುಗಳೂ ಬರುತ್ತವೆ. ಅವುಗಳನ್ನು ಬಂಗಾಳಿ ಆಡುವವರಿಂದಲೇ ತಿಳಿಯಬೇಕಾಗುತ್ತದೆ. ಇಲ್ಲದಿದ್ದರೆ ಭಾಷಾಂತರ ಪ್ರಾಮಾಣಕವಾಗುವುದಿಲ್ಲ' 'ಇಲ್ಲಿ ಒಂದು Bengali Association ಇದೆ. ಅಲ್ಲಿಂದ ಏನಾದರೂ ಸಹಾಯ ದೊರೆಯಬಹುದೋ ಎಂದು ವಿಚಾರಿಸಿದೆ. ನಮ್ಮ ಜನದಂತೆ ಅವರೂ ಕಾದಂಬರಿಗಳನ್ನು ಹೆಚ್ಚಾಗಿ ಉಪಯೋಗಿಸುವಂತೆ ಕಾಣುತ್ತದೆ. ಅವರಿಂದ ಏನೂ ಸಹಾಯ ದೊರೆಯು ವಂತೆ ಕಾಣುವುದಿಲ್ಲ.' 'ಬಂಗಾಳಿ ಎಷ್ಟಾದರೂ ಪರಭಾಷೆ. ಅದನ್ನು ಆದಷ್ಟು ಪ್ರಾಮಾಣಿಕವಾಗಿ, ಹತ್ತಿರವಾಗಿ ಮಾತ್ರ ಕನ್ನಡಿಸಬಹುದು. ಮಿಕ್ಕ ಕಡೆ ಪ್ರಶ್ನಚಿಹ್ನೆಯೋ ಅಡಿಟಿಪ್ಪಣಿಯೋ ಇರುತ್ತವೆ. ಆದರೆ ಅದರ ಜ್ಞಾನ ಠಾಕೂರರ ಬರವಣಿಗೆಯೊಡನೆ ಹೋರಾಡುತ್ತ ಬಲಗೊಳ್ಳುತ್ತಿದೆ.' 'ಠಾಕೂರರ ಪ್ರಬಂಧಗಳಲ್ಲಿ ಪದ್ಯಗಳು ಬರುವುದು ಹೆಚ್ಚು. ಇವು ಗಳ ಭಾಷಾಂತರ ತುಂಬ ಕಾಲ ಹಿಡಿಯುತ್ತದೆ. ನಾನು ಕವಿಯಲ್ಲ; ಚೆನ್ನಾಗಿ ಬರದಿದ್ದ ಕಡೆಯಲ್ಲಿ ಗದ್ಯವಾಗಿ ಕೊಡಲೇ ಬೇಕಾಗುತ್ತದೆ.' 'ಇದುವರೆಗೆ ೧೦-೧೫ ಕವಿತೆಗಳನ್ನೆಲ್ಲಾ ಮೂಲದ ಛಂದಸ್ಸು, ಛಾಯೆ ಬರುವಂತೆ ಪದ್ಯರೂಪವಾಗಿಯೇ ಭಾಷಾಂತ ರಿಸಿದ್ದೇನೆ. ಅವು ಚೆನ್ನಾಗಿ ಬಂದಿವೆಯೆಂದೇ ನನ್ನ ಭಾವನೆ.'

'ನಿಬಂಧಮಾಲಾ' ಒಂದು ಪುಸ್ತಕದಿಂದ ಮಾಡಿದ ಸಂಗ್ರಹವಲ್ಲ; ಅದು ರವೀಂದ್ರರು ಸಾಹಿತ್ಯ ರಚನೆಗೆ ಕೈ ತೊಡಗಿಸಿದಾಗಿನಿಂದ ಹಿಡಿದು ಕಡೆಯವರೆಗಿನ ಅವರ ಹಲ ವಾರು ಪುಸ್ತಕಗಳಿಂದ ಆಯ್ದು ಮಾಡಿದ ಸಂಕಲನ. ಸಂಗ್ರಹದಲ್ಲಿನ ಒಂದೊಂದು ಪ್ರಬಂಧವೂ ಸ್ವತಂತ್ರ ಲೇಖ ನವೇ ಆದರೂ ಶಾಸ್ತ್ರಿಗಳಿಗೆ ಇಡೀ ಪುಸ್ತಕ ಓದಿ, ಅದರ ಹಿಂದು ಮುಂದುಗಳನ್ನು ತಿಳಿಯುವವರೆಗೆ ತೃಪ್ತಿಯಾಗು ತ್ತಿರಲಿಲ್ಲ.

'ನೀವು ಕಳುಹಿಸಿದ ಯಾವ ಪುಸ್ತಕವನ್ನೂ ಪೂರ್ತಿ ಓದದೆ ಕೆಲಸಕ್ಕೆ ಕೈಹಾಕಿಲ್ಲ. ಅದರಿಂದ ಅನೇಕ ವೇಳೆ ಠಾಕೂರರ ಚಿತ್ತವೃತ್ತಿ, ಮನೋಭಾವ, ಲೇಖನ ದೃಷ್ಟಿಗಳು ಸ್ಪಷ್ಟವಾಗುತ್ತವೆ.'

ಒಟ್ಟಿನ ಸಂಗ್ರಹ ೪೪೦ ಪುಟಗಳದ್ದಾದರೂ ಅದನ್ನು ಕನ್ನಡಿ

ಸುವ ಮುನ್ನ ಶಾಸ್ತ್ರಿಗಳು ಅದೆಷ್ಟು ಸಾವಿರ ಪುಟಗಳನ್ನು ಓದಿಕೊಂಡರೆಂಬುದನ್ನು ದೇವರೇ ಬಲ್ಲ!

ಮೊದಲೇ ಕಷ್ಟದ ಕೆಲಸ; ಜೊತೆಗೆ ಗಾತ್ರವೂ ದೊಡ್ಡದು. ಇವಷ್ಟೇ ಸಾಲದೆಂಬಂತೆ ಇನ್ನೂ ಒಂದು ಕಾಲ್ತೊಡಕು ಶಾಸ್ತ್ರಿಗಳ ನಡೆಯನ್ನು ತಡೆಯಲು ನೋಡಿತು. ನಾವು ಯಾವ ಯಾವ ಗ್ರಂಥಗಳಿಂದ ಸಂಗ್ರಹ ಮಾಡಿದ್ದೆವೋ ಅವುಗಳಲ್ಲಿ ಕೆಲವದರ ಅಚ್ಚಿನ ಪ್ರತಿ ದೊರೆಯದೆ ಅನಿವಾರ್ಯವಾಗಿ ಅವುಗಳ ಟಂಕಿತ ಪ್ರತಿಗಳನ್ನು (Typed Copies) ಅವರಿಗೆ ಕಳುಹಿಸಲಾಗಿತ್ತು. ಒಂದೆರಡರವಂತೂ ಮೂರನೆಯ, ನಾಲ್ಕನೆಯ ಕಾರ್ಬನ್ ಪ್ರತಿಗಳು. ಶಾಸ್ತ್ರಿಗಳು ಎಪ್ಪತ್ತರ ಇಳಿವಯಸ್ಸಿನಲ್ಲಿ ಆ ಮಸಕು ಪ್ರತಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದಿಕೊಂಡು ಅನುವಾದ ಮಾಡಬೇಕಾಗಿತ್ತು :

'"ಚೀಟಿ ಪತ್ರ" ತುಂಬ Colloquial ಆಗಿರುವುದರಿಂದಲೂ ಜ, ಞ, ಕ್ಷ ಇಂಥ ಅಕ್ಷರಗಳು ಕಲಸಿ ಹೋಗುವುದರಿಂದಲೂ ಓದುವುದು ಸಾಧ್ಯವೇ ಆಗಿಲ್ಲ. ಮೊದಲೇ ಬಂಗಾಳಿ ಅಕ್ಷರ-ಅಚ್ಚಿನದೇ ತೊಡಕು, ರೋಮನ್ ಲಿಪಿರಾಜ! ಒತ್ತಿಲ್ಲ-ಗುಣಿಸಿಲ್ಲ.'

ಶಾಸ್ತ್ರಿಗಳು ಜಗ್ಗಲಿಲ್ಲ. ಆ ಮಸಕು ಪ್ರತಿಗಳ ಗೋಪ್ಯ ಬಿಡಿಸಿ, ಮೊದಲು ಕನ್ನಡ ಅಕ್ಷರದಲ್ಲಿ ಲಿಪ್ಯಂತರ ಮಾಡಿಕೊಂಡು, ಆಮೇಲೆ ಅನುವಾದಕ್ಕೆ ತೊಡಗಿದರು :

'"ಪತ್ರಧಾರಾ" section is finished. . .I had to struggle hard with the 15th letter . . . More time had to be spent on deciphering, and copying out in Kannada characters first, then on actual translation work.' (ಶಾಸ್ತ್ರಿಗಳು ಕನ್ನಡ ಪತ್ರಗಳ ನಡುವೆ ಒಮ್ಮೊಮ್ಮೆ ಇಂಗ್ಲಿಷಿಗೆ ತಿರುಗುತ್ತಿದ್ದುದೂ ಉಂಟು.)

ಶಾಸ್ತ್ರಿಗಳು 'ನಿಬಂಧಮಾಲಾ'ವನ್ನು ಕನ್ನಡಿಸಿ ಕೊಡಲು ಒಪ್ಪಿದ ಆರಂಭದಲ್ಲಿಯೇ ನನಗೆ ಒಂದು ಷರತ್ತು ಹಾಕಿದರು :

'ಕನ್ನಡದ ಅಭಿಮಾನಿಗಳೂ ನನ್ನಲ್ಲಿ ವಿಶ್ವಾಸವಿರುವವರೂ ಆದ ನೀವು ಅಲ್ಲಿದ್ದೀರೆಂಬ ಭರವಸೆಯಿಂದ ಕೆಲಸ ಮಾಡುವವನಾಗಿದ್ದೇನೆ. ಯಾವಾಗಲೂ ಶ್ರೀ ಕೃಪಲಾನಿಯವರಿಗೆ ನಾನು ಬರೆಯುವುದಕ್ಕಾಗುವುದಿಲ್ಲ. ಕನ್ನಡದ ಕಷ್ಟಸುಖಗಳನ್ನರಿಯದ ಅವರಿಂದ ಹೆಚ್ಚು ಸಹಾಯವೂ ಆಗಲಾರದು. ಆದ್ದರಿಂದ ನಿಮಗೆ ಬರೆಯುತ್ತೇನೆ.' 'ನಾನು ಕಲ್ಕತ್ತೆಯಲ್ಲಿದ್ದವನಲ್ಲ; ಬಂಗಾಳಿ ಜೀವನವನ್ನು ನೋಡಿದವನಲ್ಲ; ಘನವಾದ ಸಾಹಿತ್ಯ ವಿಷಯ ಬಂದಾಗ ಅರ್ಥಮಾಡಿಕೊಳ್ಳಬಲ್ಲೆ; ಜನಜೀವನದ ಸಾಂಸಾರಿಕ ಪ್ರಪಂಚದ, ಚಿಲ್ಲರೆ ಸಂಗತಿಗಳು ಬಂದರೆ ಅರ್ಥಮಾಡಿಕೊಳ್ಳಲಾರೆ. ಅವು ಬಂಗಾಳಿಗಳಿಗೆ ಎಷ್ಟು ಸುಲಭವೋ ನನಗೆ ಅಷ್ಟು ಕಷ್ಟ. ಅವುಗಳಿಗೆ ಬಂಗಾಳಿಗಳ ಸಹಾಯ ಬೇಕೇ ಬೇಕು. ಅಂಥ ಸಂದರ್ಭ ಬಂದಾಗ ಸಂದೇಹಗಳನ್ನು ಬರೆದು ಕಳುಹಿಸುತ್ತೇನೆ. ತೊಂದರೆ ತೆಗೆದುಕೊಂಡು, ಸಹಿಸಿಕೊಂಡು ವಿಚಾರ ಮಾಡಿ ಉತ್ತರ ಬರೆಯಿರಿ. ಭಾಷಾಂತರ ಆದಷ್ಟು ತೃಪ್ತಿಕರವಾಗಿರಲಿ; ಆಕ್ಷೇಪಣೆಗಳು ಬರದಂತಿರಲಿ.'

ನನಗೆ ಪ್ರಾಣಸಂಕಟಕ್ಕಿಟ್ಟುಕೊಂಡಿತು. ನನಗಿದ್ದ ಬಂಗಾಳಿ ಜ್ಞಾನವೆಂದರೆ ಕಷ್ಟದಿಂದ ಅಕ್ಷರಕ್ಕೆ ಅಕ್ಷರ ಕೂಡಿಸಿ ಪದಬಿಡಿಸಿ, ಅರೆಬರೆ ಅರ್ಥಮಾಡಿಕೊಳ್ಳುವಷ್ಟೇನೋ. ಶಾಸ್ತ್ರಿಗಳು ಎತ್ತುವ ಸಂದೇಹಗಳನ್ನು, ಅವು ಚಿಲ್ಲರೆ ಸಂಗತಿಗಳಿಗೆ ಸಂಬಂಧಿಸಿದವೇ ಆದರೂ, ಬಂಗಾಳಿ ವಿದ್ವಾಂಸರಿಗೆ ವಿವರಿಸಿ ಹೇಳಿ, ಅವರು ಕೊಡಬಹುದಾದ ಪರಿಹಾರಗಳನ್ನು ವಾಪಸು ಶಾಸ್ತ್ರಿಗಳಿಗೆ ತಿಳಿಸುವ ಯೋಗ್ಯತೆ ನನಗೆಲ್ಲಿ? ಆದರೂ ಭಾಷಾಂತರದ ಕೆಲಸಕ್ಕೆ ಅಡ್ಡಿಯಾಗಬಾರದಲ್ಲವೆ? ವಸ್ತುಸ್ಥಿತಿಯನ್ನು ಶಾಸ್ತ್ರಿಗಳಿಗೆ ಮರೆಮಾಚದೆ ತಿಳಿಸಿ ನನ್ನ ಕೈಲಾದುದನ್ನು ಸಂತೋಷದಿಂದ ಮಾಡುವೆನೆಂದೆ. ಅಲ್ಲಿಂದಾಚೆಗೆ ಶಾಸ್ತ್ರಿಗಳಿಂದ ತಿಂಗಳಿಗೆ ಎರಡು ಮೂರು ಪತ್ರಗಳು ಬರುತ್ತಿದ್ದವು. ಒಂದೊಂದರಲ್ಲೂ 'ಶ್ರೀ' ಅವರ ಜೀವನಕ್ಕೆ ಸಂಬಂಧಿಸಿದಂತೆ ಒಂದಿಷ್ಟು ವಿಷಯ, ಭಾಷಾಂತರದ ಪ್ರಗತಿಯ ವರದಿ, ಲೋಕಾಭಿರಾಮವಾಗಿ ನಾಲ್ಕಾರು ಮಾತು, ಕೊನೆಗೆ ಭಾಷಾಂತರದಲ್ಲಿ ತಲೆಹಾಕಿದ ಸಂದೇಹಗಳ ಪಟ್ಟಿ-ಒಂದೆರಡು ಪುಟಗಳಷ್ಟು. ಮುಂದೆ ಶಾಸ್ತ್ರಿಗಳಿಗೆ ಬೆಂಗಳೂರಿನಲ್ಲಿಯೇ ರಾಮಕೃಷ್ಣ ಮಠದವರಿಂದ ಯೋಗ್ಯಸಹಾಯ ಸಿಗುವವರೆಗೆ ಈ ಸಂದೇಹಗಳ ಜಡಿಮಳೆ ಎಡೆಬಿಡದೆ ಸುರಿಯುತ್ತಲೇ ಇತ್ತು. ಅವುಗಳ ಮಾದರಿ ಹೀಗೆ :

'"ಪಿಯಾಲ" ಮರ ನಮಗೆ ಗೊತ್ತೆ? ಅಮರಟೀಕಿನಲ್ಲಿ "ಮೊರಟೆಗಿಡ" ಎಂದಿದೆ.

"ಬೌ-ಕಥಾ-ಕಓ" ಹೀಗೆಂದು ಕೂಗುವ ಹಕ್ಕಿ ತಾನೇ?

"ತೊಮಾರ್ ಬ ಉಮಾ" ಯಾರು? Foot-note ನಲ್ಲಿ ಹೆಸರು ಸಂಬಂಧ ಬರೆಯಬೇಕು.

"ಯೂ ದೇರ್ ಮಧ್ಯೇ ಅಭಾವ್ ಓ ಅಭಾವೇರ್ ಪೂ ರ್ಣ ತಾ ರ್ ನಿತ್ಯಲೀಲಾ"- ಎಂದರೇನು? ಅಕ್ಷರಾರ್ಥ ಸುಲಭ. "ಅಭಾವದ ಪೂರ್ಣತೆ" ಎಂದರೇನು?

"ಅಸೀಮ ಅವ್ಯಕ್ತ, ಆಯತನೇ ಸೇಈ ಸೀಮಾ ಕಿಂತು ವೈಚಿತ್ರ್ಯೇ ಸೇ ಅಂತಹೀನ"—ಇದಕ್ಕೆ ಹಿಂದೆ ಮುಂದೆ ನೋಡಿ ಸಂದರ್ಭಾನುಸಾರವಾಗಿ ಅರ್ಥ ಮಾಡಿದ್ದೇನೆ. ಮನಸ್ಸಿಗೆ ಬಂದರೂ ಬರೆಯುವುದು ಕಷ್ಟ. ಅಲ್ಲಿಯವರನ್ನು ವಿಚಾರಮಾಡಿ ಏನು ಹೇಳುತ್ತಾರೋ ತಿಳಿಸಿ.'—ಇತ್ಯಾದಿ.

ಶಾಸ್ತ್ರಿಗಳ ಕಾಗದ ಬಂದೊಡನೆಯೇ ಎಷ್ಟೇ ತುರ್ತಿನ ಕೆಲಸವಿದ್ದರೂ ಬದಿಗೊತ್ತಿ, ಮೂಲ ಗ್ರಂಥಗಳಲ್ಲಿ ಅವರು ಎತ್ತಿದ ಸಂದೇಹಗಳ ಸಂದರ್ಭಗಳನ್ನು ಹುಡುಕುವುದು; ಆದಷ್ಟು ಅರ್ಥಮಾಡಿಕೊಳ್ಳುವುದು; ಮಾರನೆಯ ದಿನ ಅಕಾದೆಮಿಯ ಕಚೇರಿಯಲ್ಲಿ ಗುರುತಿನ ಬಂಗಾಳಿ ವಿದ್ವನ್ಮಿತ್ರರನ್ನು ಸೇರಿಸಿ, ಅವರೊಡನೆ ಒಂದೊಂದು ಸಂದೇಹವನ್ನೂ ಆಮೂಲಾಗ್ರವಾಗಿ ಚರ್ಚಿಸುವುದು; ದೊರೆತ ಪರಿಹಾರಗಳನ್ನು ಶಾಸ್ತ್ರಿಗಳಿಗೆ ಬರೆದು ತಿಳಿಸುವುದು-ಇದು ಮುಂದಿನ ಕೆಲವು ತಿಂಗಳುಗಳ ಒಂದು ಮಾಮೂಲಿನ ಕಾರ್ಯಕ್ರಮವಾಯಿತು. ಶಾಸ್ತ್ರಿಗಳನ್ನು ಸುಲಭದಲ್ಲಿ ತೃಪ್ತಿಪಡಿಸಲಾಗುತ್ತಿರಲಿಲ್ಲ; ಎಷ್ಟೇ ಅಲ್ಪವಾದ ಸಂದೇಹವಾಗಲಿ ಅದು ಪೂರ್ತಿ ನಿವಾರಣೆಯಾಗುವವರೆಗೂ ಅವರು ಬಿಡುತ್ತಿರಲಿಲ್ಲ. ಕಾಗದದ ಕೊನೆಗೆ 'More ವ್ಯಾಯಾಮ in my next' ಎನ್ನುತ್ತಿದ್ದರು. ಆಗಾಗ್ಗೆ ಉತ್ತೇಜನಕರವಾದ ಮಾತುಗಳನ್ನಾಡಿ ಹುರಿದುಂಬಿಸುತ್ತಿದ್ದುದೂ ಉಂಟು. ಒಂದು ಸಲ 'ನನ್ನ ಅನುಮಾನ ಪರಿಹಾರಕ್ಕಾಗಿ ನೀವು ತುಂಬ ತೊಂದರೆ ತೆಗೆದುಕೊಂಡಹಾಗೆ ಕಾಣುತ್ತೆ. ಆ ತೊಂದರೆಗೆ ತಕ್ಕಷ್ಟು ಪ್ರತಿಫಲವೇನಿಲ್ಲ' ಅಂದರು. 'ಪ್ರತಿಫಲ' ಎಂಬ ಮಾತನ್ನು ಕೇಳಿ ತಬ್ಬಿಬ್ಬಾಗಿ 'ಏನು ಅರ್ಥವಿಟ್ಟು ಹಾಗೆ ಬರೆದಿರಿ?' ಎಂದು ಕೇಳಿದೆ. '"ಪ್ರತಿಫಲ" ಎಂಬ ಮಾತಿಗೆ "ಪ್ರಯೋಜನ" "ಉಪಯೋಗ" ಎಂಬುದಿಷ್ಟೇ ನನ್ನ ಅರ್ಥ. ಒಳ್ಳೆಯ ಕೆಲಸವನ್ನು ನಾನು ಎಂದೂ ಹಣದ ಕೊಳಗದಲ್ಲಿ ಅಳೆದಿಲ್ಲ' ಎಂದು ಸಮಾಧಾನ ಮಾಡಿದರು.

ರವೀಂದ್ರರ ಬರವಣಿಗೆಯ ತುಂಬ ಒಗಟುಭಾಷೆ, ಗೂಢಾರ್ಥ. ಶಾಸ್ತ್ರಿಗಳು ಎತ್ತುತ್ತಿದ್ದ ಸಂದೇಹಗಳು ಒಮ್ಮೊಮ್ಮೆ ನಮ್ಮ ಬಂಗಾಳಿ ಮಂಡಳಿಯ ವಿದ್ವತ್ತಿಗೂ ಎಟಕುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಕೂಡಲೇ ಶಾಂತಿನಿಕೇತನದ 'ರವೀಂದ್ರಸದನ'ಕ್ಕೆ ಬರೆದು, ಅಲ್ಲಿಯ ರವೀಂದ್ರ-ಸಾಹಿತ್ಯಪಟುಗಳಿಂದ ಪರಿಹಾರ ತರಿಸಿ ಶಾಸ್ತ್ರಿಗಳಿಗೆ ಒದಗಿಸಲಾಗುತ್ತಿತ್ತು. ಒಂದೊಂದು ಸಾರಿ ನಮ್ಮ ಬಂಗಾಳಿ ಮಂಡಳಿ ನೀಡಿದ ಪರಿಹಾರಕ್ಕೂ ಶಾಸ್ತ್ರಿಗಳು 'ಹಿಂದೆ ಮುಂದೆ ನೋಡಿ ಸಂದರ್ಭಾನುಸಾರವಾಗಿ' ಊಹಿಸುತ್ತಿದ್ದ ಪರಿಹಾರಕ್ಕೂ ವಿರೋಧ ಬರುತ್ತಿತ್ತು. ಅಂಥ ಕೆಲವೊಂದು ಸಂದರ್ಭಗಳಲ್ಲಿ ಬಂಗಾಳಿ ವಿದ್ವಾಂಸರು ಬಂಗಾಳಿಗಳಲ್ಲದ ಕೃಷ್ಣಶಾಸ್ತ್ರಿಗಳು ಊಹಿಸಿದ್ದ ಪರಿಹಾರ ಕೇಳಿ ಅವಾಕ್ಕಾಗಿ, ತಮ್ಮದಕ್ಕಿಂತ ಅವರದೇ ಹೆಚ್ಚು ಸಮಂಜಸವೆಂದು ಒಪ್ಪಿ, ಅವರ ಬಂಗಾಳಿ ಜ್ಞಾನ ಪಾಂಡಿತ್ಯಗಳಿಗೆ ತಲೆದೂಗುತ್ತಿದ್ದುದುಂಟು. ಹೀಗೆ ಆ ಜನಕ್ಕೆ ಶಾಸ್ತ್ರಿಗಳನ್ನು ಕಂಡರಿಯದಿದ್ದರೂ ಅವರ ಬಗ್ಗೆ ಗೌರವ ಬೆಳೆಯಿತು. ತತ್ಫಲವಾಗಿ, ಅಕಾದೆಮಿ ಅನುವಾದಕ್ಕೆಂದು ಸಿದ್ಧಪಡಿಸಿದ್ದ ಎಂಟು ಸಂಪುಟಗಳಲ್ಲಿ ಒಂದು ಭಾಗವಾದ ರವೀಂದ್ರರ 'ಯೋಗಾಯೋಗ' ಕಾದಂಬರಿಗೆ ಪರಿಚಯಾತ್ಮಕ ಮುನ್ನುಡಿ ಬರೆದುಕೊಡಬೇಕೆಂದು ಶಾಸ್ತ್ರಿಗಳಿಗೆ ಕೋರಿಕೆ ಹೋಯಿತು; ಮುಂದೆ ಆ ಮುನ್ನುಡಿಯನ್ನು ಭಾರತೀಯ ಭಾಷೆಗಳಿಗೆಲ್ಲಾ ಅನುವಾದಿಸಿ ಆಯಾ ಭಾಷಾಂತರಗಳೊಡನೆ ಪ್ರಕಟಿಸುವುದು ಉದ್ದೇಶವಾಗಿತ್ತು. ಬಂಗಾಳಿಗಳು ತುಂಬ ಸ್ವಾಭಿಮಾನಿಗಳು; ಹಾಗೆ ರವೀಂದ್ರರ ಕೃತಿಯೊಂದಕ್ಕೆ ಬಂಗಾಳಿಯಲ್ಲದವರಿಂದ ಮುನ್ನುಡಿ ಬರೆಸಲು ಮುಂದಾದ ಸಂದರ್ಭ ಅದೊಂದೆಯೇ! ಅದು ಶಾಸ್ತ್ರಿಗಳಿಗೂ ಕನ್ನಡಕ್ಕೂ ಗೌರವದ ಮಾತಾಗಿತ್ತೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ! ಆದರೆ ಶಾಸ್ತ್ರಿಗಳಾಗಲೇ ಬೆಟ್ಟ ಹೊತ್ತಿದ್ದವರು. ಹೊತ್ತಿಗೆ ಸರಿಯಾಗಿ ಅನುವಾದ ಮುಗಿಸಿ ಮಾತುಳಿಸಿಕೊಂಡರೆ ಅವರಿಗೆ ಸಾಕಾಗಿತ್ತು. ಇನ್ನೂ ಹೆಚ್ಚು ಹೊರೆ ಬೇಡ ಎಂದುಬಿಟ್ಟರು.

ಶಾಸ್ತ್ರಿಗಳ ಭಾಷಾಂತರ ನಿಷ್ಠೆಗೆ ಪ್ರಮಾಣವಾಗಿ ನಿಲ್ಲುವ ಎರಡು ರತ್ನ ನಿದರ್ಶನಗಳಿವೆ; ಅವನ್ನು ಹೇಳದೆ ಬಿಡುವಂತಿಲ್ಲ: ರವೀಂದ್ರರ 'ಪಥೇ ಓ ಪಥೇರ್ ಪ್ರಾಂತೇ' ಯಲ್ಲಿ ಒಂದು ಕಡೆ 'ಯೂಥಿ, ಜಾತಿ, ಸೇ ಉತಿ' ಎಂಬ ಮೂರು ಹೂಗಳ ಹೆಸರು ಬರುತ್ತದೆ.* ಸಾಧಾರಣ ಭಾಷಾಂತರಕಾರರಾಗಿದ್ದರೆ ಆ ಹೊತ್ತಿಗೆ ತಮಗೆ ಸರಿಯೆಂದು ತೋಚಿದ ಯಾವುವೋ ಮೂರು ಹೂಗಳ ಕನ್ನ

---

* 'ನಿಬಂಧಮಾಲಾ', ಭಾಗ ಎರಡು, ಪುಟ ೧೩೨, ಸಾಲು ೨

ಡದ ಹೆಸರನ್ನು ಹಾಕಿ ಕೈತೊಳೆದುಕೊಳ್ಳುತ್ತಿದ್ದರು. ಶಾಸ್ತ್ರಿಗಳ ರೀತಿ ಅದಲ್ಲ. 'ಯೂಥಿ ಯಾವುದು? ಸೇಉತಿ ಯಾವುದು? ಯೂಥಿ ಮೊಲ್ಲೆಯೆ? ಚಂಡು ಹೂವೇ? ಸೇವಂತಿಗೆಯ ಭೇದವೆ? ನಾನು ಎರಡೂ ಸೇವಂತಿಗೆ ಎಂದುಕೊಂಡಿದ್ದೆ. ಸಂಸ್ಕೃತದಲ್ಲಿ ಯೂಥಿಕಾ ಕುಸುಮ ಎಂದರೆ ಸೇವಂತಿಗೆ ಎಂದೇ ಅರ್ಥ–ಪಟ್ಟಿಗಳು ಗುಂಪಾಗಿರುವುದು (ಯೂಥ–ಗುಂಪು). ಮುಂದೆ ಜಾತಿ ಸೇಉತಿಗಳ ಪ್ರಸ್ತಾಪ ಬರುತ್ತದೆ, ಯೂಥಿಯದು ಇಲ್ಲ.' ಎಂದು ಪ್ರಶ್ನೆ ಎತ್ತಿದರು. ಅದಕ್ಕೆ ನಮ್ಮ ಬಂಗಾಳಿ ಮಂಡಳಿ ಒದಗಿಸಿದ ಪರಿಹಾರವೆಂದರೆ ಆ ಹೂಗಳ ಇಂಗ್ಲಿಷ್ ನಾಮಗಳು, ಲ್ಯಾಟಿನ್ ನಾಮಗಳು, ಮೇಲೆ ಹೂಗಿಡಗಳದ್ದೊಂದಿಷ್ಟು ವರ್ಣನೆ. ಇದು ಗಂಟಿಗೆ ಗಂಟು ಹಾಕಿ ಗಂಟು ಬಿಡಿಸುವ ಪ್ರಯತ್ನ. ಹೂಗಳು ಕಣ್ಣ ಮುಂದಿದ್ದರೆ ಅವುಗಳ ಕನ್ನಡದ ಹೆಸರುಗಳನ್ನು ಗುರುತಿಸಬಹುದಾಗಿತ್ತೇನೋ. ಕಂಡಂತೆಯೇ ಬಂಗಾಳಿ ಮಂಡಳಿಯ ಉತ್ತರ ಶಾಸ್ತ್ರಿಗಳಿಗೆ ತೃಪ್ತಿಕೊಡಲಿಲ್ಲ. ಅವರು ಮತ್ತೆ ಕೆದಕಿದರು:

> 'ತುಂಬ ಗೊಂದಲಕ್ಕಿಟ್ಟುಕೊಂಡಿದೆ. "ಜಾತಿ" ಜಾಜಿಯೇ ಎಂಬುದು ನನ್ನ ದೃಢವಾದ ನಂಬಿಕೆ. ಯೂಥಿ ಸೇವಂತಿಗೆಯೇ ಎಂದುಕೊಂಡಿದ್ದೆ. ಬಂಕಿಮ ಚಂದ್ರರ "ಪುಷ್ಪನಾಟಕ"ದಲ್ಲಿ (ಪುಟ ೩೦) ಬರುವ ಸೇವಂತಿಗೆಗೆ "ಯೂಥಿ"ಯೇ ಮೂಲ. ಜೊತೆಯಲ್ಲಿ "ಸೇಉತಿ"ಯೂ ಬಂದಾಗ ಸಂದೇಹಬಂತು. ತಿಳಿಯದ ಬಂಗಾಳಿ ಮಾತುಗಳಿಗೆ ತಿಳಿಯದ ಲ್ಯಾಟಿನ್ ಮಾತುಗಳನ್ನು ಕೊಟ್ಟೇನು ಪ್ರಯೋಜನ? ಸಸ್ಯಶಾಸ್ತ್ರಜ್ಞರನ್ನು ಯಾರು ಹುಡುಕಿಕೊಂಡು ಹೋಗುತ್ತಾರೆ . . . ಇತ್ಯಾದಿ'

ಇಷ್ಟಾದರೂ ಸಮಸ್ಯೆ ಬಗೆಹರಿಯಲಿಲ್ಲ. ಶಾಸ್ತ್ರಿಗಳೂ ಬಿಡಲಿಲ್ಲ. ಮುಂದಿನ ಕಾಗದದಲ್ಲಿ ತಾವೇ ಪರಿಹಾರೋಪಾಯ ಹುಡುಕಿದ್ದರು: ಅದರ ಲಕೋಟೆ ಎಂದಿಗಿಂತ ಭಾರವಾಗಿತ್ತು. ಒಡೆದೊಡನೆಯೇ ಏನೋ ಒಂದು ಬಗೆಯ ವಿಚಿತ್ರ ಕಂಪು. ಒಳಗಡೆ ನಾಲ್ಕಾರು ಒಣ ಹೂಗಳಿದ್ದವು. ಒಂದೊಂದಕ್ಕೂ ಚೀಟಿ ಕಟ್ಟಿ, ಅಂಕಿ ಹಚ್ಚಿದ್ದರು. ಇವುಗಳನ್ನು ನಿಮ್ಮವರಿಗೆ ತೋರಿಸಿ ಯಾವುದು ಯೂಥಿ, ಯಾವುದು ಜಾತಿ, ಯಾವುದು ಸೇಉತಿ ಎಂದು ಪತ್ತೆಮಾಡಿ ಬರೆಯಿರಿ ಎಂದಿದ್ದರು!

ಇನ್ನೊಮ್ಮೆ ರವೀಂದ್ರರ 'ಚಿಠಿಪತ್ರ'ವನ್ನು ಅನುವಾದಿಸುತ್ತಿದ್ದಾಗ 'ಛಾತಿಮ ಗಾಛ' ಎಂಬ ಒಂದು ಮರದ ಪ್ರಸ್ತಾಪ ಬಂತು.* 'ಇದು ಯಾವುದು? ನಮಗೆ ತಿಳಿದದ್ದೇ' ಎಂದು ಕೇಳಿದರು. ಉತ್ತರವಾಗಿ, ನಮ್ಮ ಬಂಗಾಳಿ ಮಂಡಳಿಯಿಂದ ತಿಳಿದುಬಂದಂತೆ, ಅವರ ಸಂಸ್ಕೃತ ಮತ್ತು ಲ್ಯಾಟಿನ್ ಹೆಸರುಗಳನ್ನು ತಿಳಿಸಿ, ನಳ–ಚಕ್ರವರ್ತಿ ಅದರ ಎಲೆಗಳನ್ನು ಎಣಿಸಿದ್ದನೆಂದು ಹೇಳಲಾದ ಕಥೆಯನ್ನು ಶಾಸ್ತ್ರಿಗಳಿಗೆ ತಿಳಿಸಿದೆ. ಅವರು ಅದರ ಕನ್ನಡ ಸಮಾನ ಪದವನ್ನು ಶೋಧಿಸ ಹೊರಟು ದೊಡ್ಡ ಸಂಶೋಧನೆಗೇ ಇಳಿದರು:

> '"ಸಪ್ತಪರ್ಣ"ಯನ್ನು (ಛಾತಿಮ ಗಾಛ"ದ ಸಂಸ್ಕೃತ ನಾಮ) ಅಮರದಲ್ಲಿ ಕೊಟ್ಟಿದೆ. "ಏಳಲೆ ಬಾಳೆ" ಎಂದು ಟೀಕು. ಇದು ಅಕ್ಷರಶಃ ಭಾಷಾಂತರವಾಗಿ ಕಾಣುತ್ತದೆ. ಏಳಲೆ ಬಾಳೆ ನಿಜವಾಗಿ ಇಂಗ್ಲೀಷಿನ Travellers' Tree ತೆಂಗಿನಮರದ ತಾಳು; ಬೀಸಣಿಗೆಯಂತೆ ಮೇಲಣ ಬಾಳೆ ಎಲೆಯಂಥ ಎಲೆಗಳು–ಸಣ್ಣ ಮುಳ್ಳು ಮುಳ್ಳಾದ ಕಾಯಿ ಗೊಂಚಲು . . . ನಳಚಕ್ರವರ್ತಿ ಏಕೆ, ಶಿಶು ಚಕ್ರವರ್ತಿಯೂ ಇವನ್ನು ಎಣಿಸಬಹುದು. ಅವನು ಎಣಿಸಿದ್ದು ತಾರೆಯ ಮರ ಎಂದು ಪ್ರಸಿದ್ಧಿ. ಇದು ಮುತ್ತುಗದ ಮರದಂತೆ ಇರುತ್ತದೆ: ಅಗಲವಾದ ಎಲೆ, ದಟ್ಟವಾದ ನೆರಳು. ಇದ್ದ ಕಾಯಿ 'ತ್ರಿಫಲೆ' ಗಳಲ್ಲಿ ಒಂದು. ಒಣಗಿದ ಅತ್ತಿಕಾಯಿಯಂತೆ ಇರುತ್ತವೆ, ಸಪ್ತಚ್ಛದ (Cf. ಛದ with ಛಾತಿಮ್) ಎಂದು ಹೆಸರಿರುವಂತೆ ತೋರುತ್ತದೆ.'

ಅಬ್ಬಾ! ಎಂಥ ಸಸ್ಯ ಸಂಪತ್ತಿನ ಜ್ಞಾನ! ಹಿಂದೆ ಯೂಥಿ ಜಾತಿ ಸೇಉತಿಗಳ ಮಾದರಿಗಳನ್ನೇನೋ ಲಕೋಟೆಯಲ್ಲಿ ಹಾಕಿ ಕಳುಹಿಸಿದ್ದರು. ಆದರೆ ಏಳೆಲೆ ಬಾಳೆಯ ಮರವನ್ನು ಕತ್ತರಿಸಿ ಕಳುಹಿಸುವುದಾದರೂ ಹೇಗೆ? ಟೀಕೆಯ ಮಗ್ಗುಲಲ್ಲಿ ಏಳಲೆ ಬಾಳೆಯ ಒಂದು ಮಸಿ ಚಿತ್ರ ಬಿಡಿಸಿದರು; ಇದನ್ನು ನಿಮ್ಮವರಿಗೆ ತೋರಿಸಿ ಇದು ಛಾತಿಮಗಾಛೇ ಹೌದೆಂದು ನಿಶ್ಚಯ ಮಾಡಿ ಬರೆಯಿರಿ ಎಂದರು. ಶಾಸ್ತ್ರಿಗಳು ಮನಸ್ಸು ಮಾಡಿದ್ದರೆ ಉತ್ತಮ ಚಿತ್ರಕಾರರೂ ಆಗಬಹುದಿತ್ತೆಂದು ಹೇಳುವಂತಿತ್ತು ಆ ಚಿತ್ರ.

ಶಾಸ್ತ್ರಿಗಳು ಏನನ್ನೇ ಮಾಡಲಿ, ಅದು ಶುಚಿರುಚಿಗಳಿಂದ ಕೂಡಿ ಅಚ್ಚುಕಟ್ಟಾಗಿರಬೇಕು. ಕೈಬರೆಹದ ಮಾತೂ

---

* 'ನಿಬಂಧಮಾಲಾ,' ಪುಟ ೧೬೩, ಸಾಲು ೨೬

ಹಾಗೆಯೇ; ಅದು ಬರೆಹದಷ್ಟೇ ಮುಖ್ಯ. ಅವರು ವಿನಯಕ್ಕಾಗಿ ತಮ್ಮ ಹಸ್ತಾಕ್ಷರವನ್ನು ಮೋಡಿಯೆಂದು ಕೊಂಡರೂ ಎಪ್ಪತ್ತನೆಯ ವಯಸ್ಸಿನಲ್ಲಿ ಸಹ ಅದೆಷ್ಟು ದುಂಡು, ಮುದ್ದು! 'ನಿಬಂಧಮಾಲಾ'ದ ಹಸ್ತಪ್ರತಿಯ ಬಗ್ಗೆ ಹೀಗೆ ಬರೆದರು:

> 'ನೀವು ಇಷ್ಟು ಮೋಡಿ ಬರೆಯಲಾರಿರಿ. ಪ್ರಾಯಶಃ ಹಿಂದಿನಕಾಲದ ಮೋಡಿಯನ್ನು ಓದಲೂ ಆರಿರಿ. ನನಗೆ ಮಾಧ್ಯಮಶಾಲೆಯ ಪಾಠಕ್ರಮದಲ್ಲಿ ವಾರಕ್ಕೊಂದು ಸಾರಿ "ಕಾಗದ ಓದುವುದು" ಎಂಬುದೇ ಒಂದು ಪಾಠವಿತ್ತು. ನಾವು ಮೋಡಿ ಕಾಗದಗಳನ್ನು ತಂದು ಮೇಷ್ಟರಿಂದ ಓದಿಸಿಕೊಳುತ್ತಿದ್ದೆವು. ನಾವು ನೀವು ಬರೆಯುವುದು ಮೋಡಿಯಲ್ಲ, ವೇಗದ ಬರವಣಿಗೆ ನಿಧಾನವಾಗಿ ಗುಂಡಗೆ ಬರೆಯಲು ತಾಳ್ಮೆಯನ್ನೂ ಕಾಲವನ್ನೂ ಎಲ್ಲಿ ತರೋಣ. ನಿಮ್ಮ 'ನಿಂಬಂಧಮಾಲೆ'ಯೂ ಹೀಗೆ ಇರುತ್ತದೆಂದು ಹೆದರಬೇಡಿ. ಅಚ್ಚಿಗೆ ಕೊಡಬೇಕಾಗಿರುವುದರಿಂದ ನಿಧಾನವಾಗಿಯೂ ಸ್ಪಷ್ಟವಾಗಿಯೂ ಬರೆಯುತ್ತೇನೆ. ಬರೆಯುವುದಕ್ಕಿಂತ ನಕಲು ಮಾಡುವುದು ಕಷ್ಟ. ನಕಲ್ ಲಿಖನೇವಾಲಾಕು ಅಖಲ್ ನೈ!'

ಮಸಿಕಾಗದಗಳ ವಿಷಯದಲ್ಲಿಯೂ ಅದೇ ಚೊಕ್ಕತನ:

> 'ನಾನು ಈ ಕೆಲಸಕ್ಕಾಗಿಯೇ ಈಗ ಬರೆಯುತ್ತಿರುವಂಥ ಷೀಟುಗಳನ್ನು ಮಾಡಿಸಿದ್ದೇನೆ . . . ನನ್ನ ಮಟ್ಟಿಗೆ ಹೇಳುವುದಾದರೆ ನಾನೂ ಈ ಕೆಲಸವನ್ನೂ ಪೂರ್ತಿ ಜವಾಬುದಾರಿ ಗ್ರಹಿಸಿ ಮಾಡುತ್ತಿದ್ದೇನೆ ಎಂದು ಭರವಸೆ ಕೊಡಬಲ್ಲೆ.'

ಹೌದು, ಕೆಲಸದ ಅಗತ್ಯಕ್ಕೆ ತಕ್ಕಂತೆ ಉದ್ದಗಲಗಳನ್ನು ಗೊತ್ತುಮಾಡಿ, ವಿಶೇಷವಾಗಿ ಹೇಳಿ ಮಾಡಿಸಿದ ನಡುವೆ ಮಡಿಸಿದ ಎರಡೆರಡು ಹಾಳೆಗಳ ದಪ್ಪಕಾಗದ-ಮಧ್ಯೆ ಕಾರ್ಬನ್ ಇಟ್ಟು ಪ್ರತಿಮಾಡಲು ಅನುಕೂಲವಾಗುವಂತೆ. ಅವುಗಳ ಮೇಲೆ ಪುಟಕ್ಕೆ ಇಷ್ಟೇ ಸಾಲುಗಳಿರಬೇಕೆಂದು ನಿಷ್ಕರ್ಷಿಸಿ ಒತ್ತಿಸಿದ ಸಾಲುಗೆರೆಗಳು!

ಶಾಸ್ತ್ರಿಗಳ ಭಾಷಾಂತರಕಾರ್ಯ ಮುಂದುವರಿದಂತೆ ನಮ್ಮನ್ನು ಇನ್ನೊಂದು ಪ್ರಶ್ನೆ ಎದುರಿಸಿತು. ಅಕಾದೆಮಿಯ ನಿಯಮ ನಡುವಳಿಕೆಗಳ ಪ್ರಕಾರ ಒಬ್ಬರು ಮಾಡಿದ ಕೆಲಸವನ್ನು ಅವರೆಷ್ಟೇ ದೊಡ್ಡವರಿರಲಿ ಇನ್ನೊಬ್ಬರು ಓದಿನೋಡಿ ಸಮ್ಮತಿ ಕೊಡಬೇಕು. ಶಾಸ್ತ್ರಿಗಳು ಕನ್ನಡಕ್ಕೇ ಹಿರಿಯರು, ಆಚಾರ್ಯರು. ಅವರು ನಮ್ಮ ನಿಯಮಕ್ಕೆ ಅದು ಕೇವಲ ಔಪಚಾರಿಕವೆಂದರೂ ಒಪ್ಪಿಯಾರೆ? ಹಿಂದೆ ಕನ್ನಡದವರೇ ಒಬ್ಬಿಬ್ಬರು ಸಾಹಿತಿಗಳು ಅದನ್ನು ಕೇಳಿ 'ಗುರ್' ಅಂದಿದ್ದುದುಂಟು. ಅದಕ್ಕೆ ತಲೆಬಾಗಲು ಇಚ್ಛಿಸದೆ ನಿಮ್ಮ ಕೆಲಸ ನಿಮ್ಮಲ್ಲಿಯೇ ಇರಲಿ ಎಂದು ನಿರಾಕರಿಸಿದ್ದವರೂ ಉಂಟು. ಬೆಕ್ಕಿನ ಕತ್ತಿಗೆ ಗಂಟೆ ಕಟ್ಟಲು ನನ್ನನ್ನೇ ಬಿಟ್ಟರು; ವಿಷಯವನ್ನು ಸಂಕೋಚ ಭಯಗಳಿಂದಲೇ ಶಾಸ್ತ್ರಿಗಳ ಮುಂದಿಟ್ಟೆ. ಆತ್ಮವಿಶ್ವಾಸದಿಂದ ಪ್ರಾಮಾಣಿಕವಾಗಿ ಕೆಲಸಮಾಡುವವರಿಗೆ ಯಾರ ಅಂಜಿಕೆಯೇನು! 'ನಾನು ವಿಧಿ ನಿಯಮಗಳನ್ನು ಗೌರವಿಸತಕ್ಕವನು, ನನಗಾಗಿ ಯಾವ ರಿಯಾಯಿತಿಯನ್ನೂ ಕೇಳುವುದಿಲ್ಲ. ನಿಮ್ಮ ಕಾರ್ಯಕ್ರಮ ಹೇಗೋ ಹಾಗೆ ನಡಸಿ' ಎಂದು ಅಪ್ಪಣೆ ಕೊಟ್ಟರು.

ಶಾಸ್ತ್ರಿಗಳು ಭಾಷಾಂತರಕ್ಕೆ ತೊಡಗಿದ್ದು ೧೯೬೦ರ ಜೂನ್‌ನಲ್ಲಿ; ಶತಾಬ್ದಿಯ ಉತ್ಸವ ೬೧ರ ಮೇನಲ್ಲಿ ಪ್ರಾರಂಭವಾಗಿ ನವೆಂಬರ್‌ವರೆಗೂ ನಡಯುವುದಿತ್ತು. ಆ ಒಂದು ಒಂದೂವರೆ ವರ್ಷಗಳೊಳಗೆ ಭಾಷಾಂತರ ಮುಗಿದು, ಅಚ್ಚಾಗಿ, ಪುಸ್ತಕ ಓದುಗರ ಕೈಸೇರಿರಬೇಕೆಂಬುದು ಶಾಸ್ತ್ರಿಗಳ ಅಪೇಕ್ಷೆಯಾಗಿತ್ತು. ಅದಕ್ಕೆ ದಣಿವೆನ್ನದೇ ದುಡಿದರು.

> 'ಎಂಟುದಿನದ ಪ್ರವಾಸ, ಆಮೇಲೆ ಎಂಟುದಿನದ ಆಯಾಸ; ಈಗ ಭಾಷಾಂತರದ ಎಂಜಿನ್ ಮತ್ತೆ ಕೆಲಸ ಮಾಡಲಾರಂಭಿಸಿದೆ. ಆದರೆ ಬೆಂಗಳೂರಿಗೂ ದೆಹಲಿಗೂ ತುಂಬ ದೂರ! ರೈಲು ಎಂದು ಅಲ್ಲಿಗೆ ತಲಪುತ್ತದೆಯೋ ಏನೋ! ಅದು ನಾನು Express ಎಂದುಕೊಂಡಿದ್ದೇನೆ. Express, Passenger, Goods, Shuttle-Broad Gauge, Metre Gauge, Narrow Gauge - ಯಾವುದಾಗುತ್ತದೆಯೋ ಗೊತ್ತಿಲ್ಲ. Aeroplane ಅಂತೂ ಅಲ್ಲ.'

ಶಾಸ್ತ್ರಿಗಳ ರೈಲು ಎಕ್ಸ್‌ಪ್ರೆಸ್ಸೇ ಆಯಿತು; ಕಾಲಕ್ಕೆ ಸರಿಯಾಗಿಯೇ ಅಲ್ಲಿ ತಲಪಿತು. ೬೦ರ ಡಿಸೆಂಬರ ಹೊತ್ತಿಗೆ ಹಸ್ತಪ್ರತಿಯ ೨೫೦ ಪುಟಗಳ ಮೊದಲ ಕಂತು ಸಿದ್ಧವಾಗಿ, ಅಚ್ಚಾದ ಪುಸ್ತಕದಂತೆ ಅಂದವಾದ ರಟ್ಟು ಕಟ್ಟಿ ನಮ್ಮ ಕೈಸೇರಿತು. ಮತ್ತೆ ೬೧ರ ಮಾರ್ಚ್ ವೇಳೆಗೆ ೨೦೦ ಪುಟಗಳ ಎರಡನೆಯ ಕಂತು, ಮೇ ಮುಗಿಯುವುದರೊಳಗೆ ೨೩೦ ಪುಟಗಳ ಕೊನೆಯ ಕಂತು ಬಂದು ತಲಪಿದವು. ಕೊಟ್ಟ ಮಾತಿನಂತೆ ಶತಮಾನೋತ್ಸವದ ಪ್ರಾರಂಭದ ಹೊತ್ತಿಗೇ ಶಾಸ್ತ್ರಿಗಳು ಅನುವಾದ ಮುಗಿಸಿದ್ದರು. ಮೊದಲ ಕಂತಿನಲ್ಲಿ ಅವರ ಅನುವಾದದ ವೇಗ ತಿಂಗಳಿಗೆ ನಲವತ್ತು ಪುಟಗಳಷ್ಟಾದರೆ ಎರಡನೆಯ ಮೂರನೆಯ ಕಂತುಗಳಲ್ಲಿ ಅದು

ದ್ವಿಗುಣಿತವಾಗಿ ತಿಂಗಳಿಗೆ ಎಂಬತ್ತು ಪುಟಗಳಿಗೇರಿತ್ತು. ಶಾಸ್ತ್ರಿಗಳು ವೃದ್ಧಾಪ್ಯ ಸಹಜವಾದ ರಕ್ತದ ಒತ್ತಡದಿಂದ ಬಳಲುತ್ತಿದ್ದರು. ಶತಮಾನೋತ್ಸವ ಹತ್ತಿರವಾದಂತೆ ಆತಂಕ ಹೆಚ್ಚಿ, ಅನುವಾದದ ವೇಗವೂ ಹೆಚ್ಚಿ, ಅನುವಾದಕ್ಕೆ ತಕ್ಕಂತೆ ಒತ್ತಡವೂ ಹೆಚ್ಚಿತ್ತು; ದೇಹ ಮನಸ್ಸುಗಳು ಬಳಲಿದ್ದುವು. ಆದರೆ ಶಾಸ್ತ್ರಿಗಳು ಎಂದೂ ತಮ್ಮ ಕಾಗದಗಳಲ್ಲಿ ಅದರ ಸುಳಿವು ಕೊಟ್ಟಿರಲಿಲ್ಲ; ಅನುವಾದವನ್ನೂ ಕೈಬಿಡಲಿಲ್ಲ. 'ಸಾಹಿತ್ಯ ವಿಚಾರ್,' 'ಬಾಂಗ್ಲ ಸಾಹಿತ್ಯೇರ್ ಕ್ರಮವಿಕಾಸ್' ಎಂಬ ಒಟ್ಟು ೨೬ ಪುಟಗಳ ಎರಡು ಪ್ರಬಂಧಗಳನ್ನೂ ಆ ಸಂಪುಟಕ್ಕೆಂದೇ ಬರೆಸಿದ್ದ ಶ್ರೀ ಬುದ್ಧದೇವ ಬಸು ಅವರ ಮುನ್ನುಡಿಯನ್ನೂ ಅವರಿಂದ ಭಾಷಾಂತರಿಸುವುದಾಗಲಿಲ್ಲ. ಕೈಕೊಂಡ ಕೆಲಸದ ಒತ್ತಡಕ್ಕೆ ಸಿಕ್ಕು ಅವರ ದೇಹಸ್ಥಿತಿ ನುಚ್ಚುನೂರಾದ ಸಂಗತಿ ನಮಗೆ ತಿಳಿದದ್ದು ಅವರ ಹಸ್ತಪ್ರತಿಯ ಕೊನೆಯ ಕಂತು ನಮ್ಮ ಕೈಸೇರಿದಾಗಲೇ. ಆ ಸುದ್ದಿಯ ಕರಿಯ ತೆರೆ ಥಟ್ಟನೆ ನಮ್ಮ ಮೈಮೇಲೆ ಬಿದ್ದಿತ್ತು. ಆಗ ಅವರು ಬರೆದ ಕಾಗದ ಎದೆಯೊಡೆಯುವಂತಿತ್ತು :

'... The translation is complete, and copied, but for two essays. I don't know when I will be able to translate these two essays since my health has completely given way under the strain. I am adviced complete rest because of brain fag . . . I am writing this with great difficulty.'

ಮತ್ತೆ ವಾರದ ಮೇಲೆ :

'. . . I am completely broken down physically and mentally.'

ಶಾಸ್ತ್ರಿಗಳು ಜೀವಂತರಾಗಿದ್ದ ಮುಂದಿನ ಏಳುವರ್ಷಗಳಲ್ಲಿ ಅವರು ಏನನ್ನೂ ಬರೆದ ಹಾಗೆ ಕಾಣೆ. ಆಪ್ತೇಷ್ಟರಿಗೆ ಕಾಗದ ಬರೆಯುವುದು ಅವರಿಂದಾಗುತ್ತಿರಲಿಲ್ಲ. ಅವರ ಮುಂದಿನ, ಹಾಗೂ ಕೊನೆಯ, ಕಾಗದ ಬಂದದ್ದು ಮೂರು ವರ್ಷಗಳ ಮೇಲೆ, ೬೪ರ ಜನವರಿಯಲ್ಲಿ :

'ನನ್ನ ಆರೋಗ್ಯ ದಿನದಿನಕ್ಕೆ ಕೆಡುತ್ತಿದೆ. ಸರಿಯಾಗಿ ಬರೆಯಲೂ ಆಗುತ್ತಿಲ್ಲ . . . ಈಚೆಗೆ ನನ್ನ ಲೇಖನ, ಪುಸ್ತಕ ಯಾವುದೂ ಪ್ರಕಟವಾಗಿಲ್ಲ. ಯಾವುದಕ್ಕೂ ತುಂಬ ಅಶಕ್ತನಾಗಿದ್ದೇನೆ. ತಮ್ಮ ನಿಬಂಧ ಮಾಲಾವೇ ಕೊನೆಯದಾಯಿತು.'

ಕಾಗದ ಶಾಸ್ತ್ರಿಗಳದ್ದೇ ಎಂದು ಅನುಮಾನ ಹುಟ್ಟಿಸುವಷ್ಟು ಬೇರೆಯಾಗಿತ್ತು. ನೋಡಿ ಅಭ್ಯಾಸವಾಗಿದ್ದ ಮುದ್ದಾದ ದುಂಡನೆಯ ಕೈ ಬರೆಹದ ಬದಲು ಅಕ್ಷರಗಳೆಲ್ಲಾ ಓರೆ ಕೋರೆ, ಕಲಸುಮೇಲೋಗರ; ಅಲ್ಲಲ್ಲಿ ಕಾಗುಣಿತ ಸಹ ತಪ್ಪಿದ್ದು ಆಮೇಲೆ ತಿದ್ದಿದಂತಿತ್ತು. ಶಾಸ್ತ್ರಿಗಳಿಗೆ ಕೈನಡುಕ ಹುಟ್ಟಿದ್ದುದು ಎದ್ದು ಕಾಣುತ್ತಿತ್ತು. ಓದುತ್ತಿದ್ದಂತೆ ನನ್ನೊಳಗಿನಿಂದ ಯಾರೋ 'ಇದರಲ್ಲಿ ನಿನ್ನದೂ ತಪ್ಪಿಲ್ಲವೆ?' ಎಂದು ಕೇಳಿದಂತಾಯಿತು. ಕಣ್ಣೊರೆಸಿಕೊಂಡೆ. ವಯಸ್ಸು ಯೋಗ್ಯತೆಗಳ ಅಂತರವನ್ನು ಲೆಕ್ಕಿಸದೆ ಹತ್ತಿರಕ್ಕೆ ಕರೆದುಕೊಂಡು ಪ್ರೀತಿ ವಿಶ್ವಾಸಗಳನ್ನೆರೆದ ಆ ಹಿರಿಯ ಜೀವಕ್ಕೆ ಮತ್ತೊಮ್ಮೆ ನಾನು ದೂರದಿಂದಲೇ ಕೈಮುಗಿದೆ.

ಶಾಸ್ತ್ರಿಗಳು ಒಪ್ಪಿ ಭಾಷಾಂತರ ಮಾಡದಿದ್ದರೆ ಕನ್ನಡಕ್ಕೆ ಒಂದು ದೊಡ್ಡ ಸಾಹಿತ್ಯಕೃತಿ ಇಲ್ಲವಾಗುತ್ತಿತ್ತು. ಆದರೆ ಕಡೆಗಾಲದ ಅನಾರೋಗ್ಯವಿಲ್ಲದೆ ಅವರು ಇನ್ನೂ ಹೆಚ್ಚು ಕಾಲ ನಮ್ಮ ನಡುವೆ ಗೆಲುವಾಗಿರುತ್ತಿದ್ದರೇನೋ. ಇವೆರಡರಲ್ಲಿ ಯಾವುದು ಲಾಭ, ಯಾವುದು ನಷ್ಟ ಎನ್ನೋಣ?

ಜೀವನ ಹೇಗಿದ್ದರೆ ಸಾಹಿತ್ಯ ಹಾಗೆ ಆಗುತ್ತದೆ; ಆ ಸಾಹಿತ್ಯವನ್ನು ಓದಿದವರೂ ಹಾಗೇ ಆಗುತ್ತಾರೆ.

* *

ಉತ್ತಮವಾಗಿ ಜೀವಿಸುವುದು ಹೇಗೆ? ಎಂದು ಕೇಳಿದರೆ 'ಜೀವಿಸುತ್ತ ಹೋಗುವುದರಿಂದ' ಎಂಬುದೇ ಉತ್ತರ.

ಎ. ಆರ್. ಕೃ.

ಸವಿನೆನಪು

ತಿ. ತಾ. ಶರ್ಮ

ನಮ್ಮೆಲ್ಲರ ಪ್ರೀತಿ, ವಿಶ್ವಾಸ, ಗೌರವ, ಆದರಗಳಿಗೆ ಪಾತ್ರರಾಗಿದ್ದ ಸ್ವರ್ಗವಾಸಿ ಕೃಷ್ಣಶಾಸ್ತ್ರಿಗಳ ಸ್ಮರಣೆಮಾಡಿ, ಆಮೂಲಕ ಅವರು ಯಾವ ಆದರ್ಶ ಸಾಧನೆಗಾಗಿ ತಮ್ಮ ಆಯುಸ್ಯ, ಜ್ಞಾನ, ಅನುಭವ, ಎಲ್ಲವನ್ನೂ ಉಪಭೋಗ ಮಾಡಿದರೋ ಆ ಆದರ್ಶದ ಕಡೆ ನಾವೂ ಮುಖಮಾಡಿ, ನಮ್ಮ ನಮ್ಮ ಯೋಗ್ಯತಾನುಸಾರ, ಅದನ್ನು ಸಾಧಿಸಿ, 'ಸಾರ್ಥಕ ಜೀವನ ನಡೆಸಿದೆವು' ಎಂದು ಸಮಾಧಾನ ಪಡೆಯೋಣ.

ಕೃಷ್ಣಶಾಸ್ತ್ರಿಗಳು ಜ್ಞಾನಾರ್ಜನೆಯನ್ನು ಎರಡು ಮುಖವಾಗಿ ಮಾಡಿದರು. ಪೂರ್ವಾಭಿಮುಖವಾಗಿ ನಿಂತು ಸಂಸ್ಕೃತ, ಕನ್ನಡ ಭಾಷಾ ಸಾಹಿತ್ಯಗಳ ಅಧ್ಯಯನಮಾಡಿ, ಆಳವಾದ ಜ್ಞಾನ ಗಳಿಸಿದರು. ಶತ ಶತಮಾನಗಳ ಪರಂಪರಾನುಗತ ಮಾರ್ಗದ ಸಂಯಮ ಸಂಸ್ಕಾರಗಳಿಂದ ಜ್ಞಾನವನ್ನು ತಮ್ಮದನ್ನಾಗಿ ಮಾಡಿಕೊಂಡರು. ಪಶ್ಚಿಮಾಭಿಮುಖವಾಗಿ ನಿಂತು ಇಂಗ್ಲಿಷ್ ಭಾಷಾಸಾಹಿತ್ಯಾಭ್ಯಾಸ ಮಾಡಿದರು; ಆಧುನಿಕ-ನಾಗರಿಕ-ವೈಜ್ಞಾನಿಕ ವಿಶ್ವದೊಂದಿಗೆ ನಿಕಟಸಂಪರ್ಕ ಕಲ್ಪಿಸಿಕೊಂಡರು, ಚಿಕಿತ್ಸಕ ಬುದ್ಧಿಯನ್ನು ಬೆಳೆಸಿಕೊಂಡರು; ವಿಮರ್ಶಾತ್ಮಕ, ಸಂಶೋಧನಾತ್ಮಕ ಇಂದ್ರಿಯವೊಂದನ್ನು ಬೆಳೆಸಿ ಅದನ್ನು ಹರಿತಗೊಳಿಸಿಕೊಂಡರು. ಇಷ್ಟನ್ನೆಲ್ಲ ಅವರೇತಕ್ಕಾಗಿ ಮಾಡಿದರು? ಕೇವಲ ಆತ್ಮತೃಪ್ತಿಗಾಗಿ ಅಲ್ಲ! ತಾವಿದ್ದ ಉದ್ಯೋಗ ಕ್ಷೇತ್ರದಲ್ಲೇ ಉನ್ನತ ಸ್ಥಾನ ಗಳಿಸಲಿಕ್ಕಾಗಿ ಅಲ್ಲ! ಅವೆರಡೂ ಅವರಿಗೆ ತಾವಾಗಿಯೇ ಬಂದುವು. ಆ ಕಥೆಯನ್ನು ಹೇಳುವುದು ನನ್ನ ಉದ್ದೇಶ್ಯವಲ್ಲ. ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, 'ಪ್ರಬುದ್ಧ ಕರ್ಣಾಟದ'ದ ಸಂಪಾದಕರಾಗಿ, ಅವರು ಮಾಡಿರುವ ಕೆಲಸ ಎಲ್ಲರ ಕಣ್ಮುಂದಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ, ಇಂಗ್ಲಿಷ್-ಕನ್ನಡ, ಕನ್ನಡ-ಕನ್ನಡ, ನಿಘಂಟು ಸಮಿತಿಗಳಲ್ಲಿ ಅವರು ಸಲ್ಲಿಸಿರುವ ಸೇವೆ ಅವರಿಗೆ ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯನ್ನು ತರುವಂತಹುದಾಗಿದೆ.

ಗ್ರಂಥ ಸಂಪಾದನೆ, ವಿಮರ್ಶಾ ಕ್ಷೇತ್ರಗಳೆರಡರಲ್ಲೂ ಅವರು ತಮ್ಮ ವ್ಯಕ್ತಿತನದ ಮುದ್ರೆಯನ್ನೊತ್ತಿದರು.

ಅಧ್ಯಾಪಕ-ಪ್ರಾಧ್ಯಾಪಕರಾಗಿ ಅವರು ಹೇಗೆ ಪಾಠಹೇಳುತ್ತಿದ್ದರೆಂಬುದನ್ನು ಕುರಿತು ಬಾಯ್ತೆರೆಯಲು ನನಗಧಿಕಾರವಿಲ್ಲ; ನಾನವರ ಶಿಷ್ಯನಾಗುವ ಭಾಗ್ಯ ಕಟ್ಟಿಕೊಂಡು ಬರಲಿಲ್ಲ; ಆದರೆ ಅವರು ಕನ್ನಡ ಭಾಷಾ ಸಾಹಿತ್ಯಗಳ ಬೆಳವಣಿಗೆಗೆ ಏನು ಕೆಲಸ ಮಾಡಿದರು, ಹೇಗೆ ಆ ಕೆಲಸ ಮಾಡಿರೆಂದು ಸೂಚಿಸಲು "ಪ್ರಬುದ್ಧ ಕರ್ನಾಟಕ"ದ ಕಡೆಗೆ ಮಾತ್ರ ನಾನು ಬೆರಳಿಟ್ಟು ತೋರಿಸಬಲ್ಲೆ. ಭಾಷೆಗೆ ಶಬ್ದ ಸಂಪತ್ತಿಯ, ಶಬ್ದ ಶುಚಿಯ, ಸತ್ವಶೈಲಿಯ ವರ್ಚಸ್ಸನ್ನು ಕೊಟ್ಟರು. ಸಾಹಿತ್ಯಕ್ಕಾದರೋ ಇತಿಹಾಸ ಮತ್ತು ಕಲೆಯ ಶಕ್ತಿ, ಸೌಂದರ್ಯಗಳ ಕಾಂತಿಯನ್ನು ಕೊಟ್ಟರು. ಕನ್ನಡ ಗದ್ಯ ಸಾಹಿತ್ಯದ ಈ ಅರ್ಧ ಶತಮಾನದ ಕಥೆಯೆಂದರೆ ಕೃಷ್ಣಶಾಸ್ತ್ರಿಗಳ ತಪಸ್ಸಿನ ಕಥೆ. ಈ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ. ಈ ಕ್ಷೇತ್ರದಲ್ಲಿ ಅವರು ಮಾಡಿ ಗಳಿಸಿದ ತಪಶ್ಶಕ್ತಿಯನ್ನು ತಮ್ಮ ವಿದ್ಯಾರ್ಥಿಗಳಿಗೂ ಹಂಚಿದರು; ವಿದ್ಯಾರ್ಥಿಗಳಲ್ಲದ ಆದರೆ ಸಾಹಿತ್ಯ ವ್ಯವಹಾರದಲ್ಲಿ ನಿರತರಾದವರಿಗೂ ಹಂಚಿದರು. ಅವರು ಹಂಚುವುದೇನು; ಆ ತಪಸ್ಸಿನ ಫಲದ ಪರಿಣಾಮ ಕನ್ನಡಿಗರ ಮೇಲೆಲ್ಲ ಆಯಿತು.

ತಮ್ಮ ಉದ್ದೇಶ್ಯ ಸಾಧನೆಗೆ ಅವರು ತಮ್ಮ ಗುರುವೇದಿಕೆಯೊಂದನ್ನು ಸಾಧನ ಮಾಡಿಕೊಂಡರು. ಪತ್ರಿಕಾವೇದಿಕೆಯೊಂದನ್ನು ಸಾಧನವನ್ನಾಗಿ ಮಾಡಿಕೊಂಡರು. ಗುರುವೇದಿಕೆ ಶಾಲಾ ಕಾಲೇಜು ವರ್ಗಗಳ ನಾಲ್ಕು ಗೋಡೆಗಳ ಆವರಣಕ್ಕೆ ಮಾತ್ರ ಮಿತಿಗೊಂಡರೆ ಪತ್ರಿಕಾವೇದಿಕೆ ಕನ್ನಡನಾಡಿಗೆಲ್ಲ ವ್ಯಾಪಿಸಿತು. ಕನ್ನಡನಾಡಿನ ಮೇರೆ ಗೆರೆಗಳನ್ನೂ ಮೀರಿತು. ಆ ಪತ್ರಿಕಾ ಸಂಪಾದಕರಾಗಿ, ಆ ಪದಕ್ಕೊಂದು

ಗಂಭೀರ ಗೌರವದ ಮುದ್ರೆಯನ್ನೊತ್ತಿದರು; ಅಧಿಕಾರ ಮುದ್ರೆಯನ್ನೊತ್ತಿದರು. ಪತ್ರಿಕಾವೃತ್ತಿಯ ಸೋದರಗಣಕ್ಕೆ ಸೇರಿದವನಾಗಿ, ಅದರಲ್ಲಿ ಮೂವತ್ತು ವರ್ಷಗಳ ಪ್ರತ್ಯಾಕ್ಷಾನುಭ ಉಳ್ಳವನಾಗಿ, ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಪತ್ರಿಕೆಯ "ಸಾಹಿತ್ಯ" ನಿತ್ಯಸಂಕಟಕ್ಕೆ, ದಾಸ್ಯವಿಮೋಚನಾ ಸಂಗ್ರಾಮಕ್ಕೆ, ವಾದಗ್ರಸ್ತ ವಿಷಯಗಳಿಗೆ ವಿನ್ಯಾಸಲಾಗಿತ್ತು. ಅವರ ಪತ್ರಿಕೆಯಾದರೋ ಸುಂದರ ಸಾಹಿತ್ಯಸೃಷ್ಟಿಗೆ ಹುಟ್ಟಾಗಿತ್ತು; ಸ್ಫೂರ್ತಿಮೂಲವಾಗಿತ್ತು. ಈ ವಿಚಾರವಾಗಿಯೇ ನಾನೂ, ಶಾಸ್ತ್ರಿಗಳೂ, ವೆಂಕಣ್ಣಯ್ಯನವರೂ, ಶ್ರೀನಿವಾಸಮೂರ್ತಿಗಳೂ, ಎಷ್ಟೋ ಸಾರಿ ಮಾತನಾಡಿದ್ದೇವೆ. ಒಮ್ಮೆ "ವಿಶ್ವಕರ್ನಾಟಕ"ದ ಯುಗಾದಿ ಸಂಚಿಕೆ ಹೊರಬಿತ್ತು. ಅದರ ಮಾತನ್ನೆತ್ತಿ ಕೃಷ್ಣಶಾಸ್ತ್ರಿಗಳು ಹೇಳಿದ ಮಾತನ್ನು ನಾನೆಂದಿಗೂ ಮರೆಯುವಹಾಗಿಲ್ಲ. ಭಾರತದ ನಾನಾ ದೇಶಭಾಷಾ ಸಾಹಿತ್ಯ ಕುರಿತು, ಪ್ರಬಂಧಗಳನ್ನು ಬರೆಸಿ, ಆ ಸಂಚಿಕೆಯಲ್ಲಿ ಕೊಡಲಾಗಿತ್ತು. ವಿಜ್ಞಾನ, ರಾಜಕಾರಣ, ಸಾಹಿತ್ಯ—ಹೀಗೆ ಮೂರು ವಿಭಾಗ ಮಾಡಿ, ವಿದ್ವಾಂಸರಿಂದ ಲೇಖನಗಳನ್ನು ಬರೆಸಿ, ತರಿಸಿ, ಪ್ರಕಟಿಸಲಾಗಿತ್ತು.

> "ನಮ್ಮ ಹತ್ತಿರ ಬೆಳ್ಳಿಯಿಲ್ಲ; ಬಂಗಾರವಿಲ್ಲ; ಆದರೆ ಯಾವುದು ಇದೆಯೋ ಅದನ್ನು ನಿರ್ವಂಚನೆಯಾಗಿ ಕೊಡುತ್ತೇವೆಂದು "ಪ್ರಬುದ್ಧ ಕರ್ನಾಟಕ"ದ ಯುಗಾದಿ (ಮೊದಲನೆಯ) ಸಂಚಿಕೆಯಲ್ಲಿ ಕೊಟ್ಟರೆ, ನೀವು "ವಿಶ್ವಕರ್ನಾಟಕ"ದ ಯುಗಾದಿ ಸಂಚಿಕೆಯಲ್ಲಿ ಚಿನ್ನ ಬೆಳ್ಳಿ ಮಾತ್ರವಲ್ಲ ವಜ್ರ ವೈಡೂರ್ಯಗಳನ್ನೇ ಕೊಟ್ಟಿರುವಿರಲ್ಲ. ಭಾರತದ ನಾನಾ ಭಾಷಾ ಸಾಹಿತ್ಯಗಳ ಮೇಲಿನ ಪ್ರಬಂಧಗಳ ಸಂಗ್ರಹ ಪ್ರಕಟನೆಗೆ ಕನ್ನಡದಲ್ಲಿ ಇದೇ ಮೊದಲು. ದೂರದೃಷ್ಟಿಯುತವಾದ ಕೆಲಸವಿದು. "ವಿಶ್ವಕರ್ನಾಟಕ"ದ ಆದರ್ಶಕ್ಕೆ ಒಪ್ಪುವ ಕೆಲಸವಿದು."

"ಕೃಷ್ಣಶಾಸ್ತ್ರಿಗಳ ಬಾಯಿಂದ ಎಂತಹ ಮೆಚ್ಚುಗೆಯ ಮಾತನ್ನು ಪಡೆದಿದ್ದಿರಿ–ಶರ್ಮ" ಅಂದರು ಶ್ರೀ ಶ್ರೀನಿವಾಸಮೂರ್ತಿಗಳು. ಒಳ್ಳೆಯ ಕೆಲಸವನ್ನು ಮೆಚ್ಚದ ಲೋಭಿಗಳಲ್ಲ ಶಾಸ್ತ್ರಿಗಳು. ಎಲ್ಲಿ ಶಕ್ತಿ, ಎಲ್ಲಿ ಪ್ರತಿಭೆ, ಎಲ್ಲೊಂದು ನಾವೀನ್ಯತೆ ಕಂಡರೆ, ಅಲ್ಲಿ ಶಾಸ್ತ್ರಿಗಳು ನಿಷ್ಪಕ್ಷಪಾತವಾಗಿ ಶ್ಲಾಘನೆ ಮಾಡಿದ್ದಾರೆ. ಎಲ್ಲಿ ಅವಶ್ಯಕವೆನಿಸಿತೋ ಅಲ್ಲಿ ಮುಚ್ಚುಕತ್ತಿ ಹಿಡಿದಿದ್ದಾರೆ; ಕೃಪಾಲೇಶವಿಲ್ಲದೆ ಪ್ರಯೋಗಿಸಿದ್ದಾರೆಂದು ಶ್ರೀನಿವಾಸಮೂರ್ತಿಗಳಿಗೆ ನಾನು ಸಮಾಧಾನ ಹೇಳಿದ್ದುಂಟು.

'ಅಶ್ವತ್ಥಾಮನ್' ಕುರಿತು, 'ಟೊಳ್ಳು ಗಟ್ಟಿ' ಕುರಿತು, ಶ್ರೀನಿವಾಸಮೂರ್ತಿಗಳ 'ಹರಿಹರನ ಗಿರಿಜಾ ಕಲ್ಯಾಣ ಪ್ರಬಂಧ' ಕುರಿತು ನಮ್ಮಿಬ್ಬರ ಮಧ್ಯೆ ಕೊಂಚ 'ವಿರಸ' ವಾದದ್ದುಂಟು. ಆದರೆ ಅದು ನಮ್ಮಿಬ್ಬರ ಸ್ನೇಹಕ್ಕೆ ಎಳ್ಳಷ್ಟೂ ಊನವನ್ನುಂಟುಮಾಡಿಲ್ಲ. "ಭೂತೋಚ್ಚಾಟನೆಗೆ ನೀವು ಆಚಾರ್ಯಪಟ್ಟ ಕಟ್ಟಿಕೊಂಡಿರುವ ಹಾಗಿದೆ" ಎಂದವರೊಮ್ಮೆ ಅಂದಾಗ "ಶಾಸ್ತ್ರಿಗಳೇ, ನಾನು ಕಟ್ಟಿಕೊಳ್ಳುವುದೇನು; "ನಾನಾಗರ್ಭಸ್ಸ್ವಯಮಾಚಾರ್ಯ ಪುರುಷ" ಅಂದಾಗ ಅದರ ಪರಿಣಾಮ ಅವರ ಪರಿಹಾಸ ಮನೋಧರ್ಮದ ಆಳ ನೀಳಗಳನ್ನಳೆಯಲು ಅವಕಾಶ ಕೊಟ್ಟಿತು.

"ವಿಶ್ವಕರ್ನಾಟಕ"ದಲ್ಲಿ ನಾನು ಬಳಸುತ್ತಿದ್ದ ಮಾತುಗಳನ್ನು ಕುರಿತು ಶಾಸ್ತ್ರಿಗಳು ನನಗೆ ಬಹಳ ಧೈರ್ಯ ಕೊಟ್ಟರು. Round Table Conference ಗೆ "ಚಕ್ರಗೋಷ್ಠಿ" ಎಂಬ ಪದಪ್ರಯೋಗ ಮಾಡಿದಾಗ ಅವರಿಗಾದ ಆನಂದಕ್ಕೆ ಪಾರವೇ ಇಲ್ಲ. ಅವರೂ ಡಾ|| ನರಸಿಂಹಯ್ಯನವರೂ ಇಬ್ಬರೂ ಮನೆಗೆ ಬಂದು ನನ್ನ ಬೆನ್ನು ತಟ್ಟಿದರು!

> "ಯಾಕೆ ಹೀಗೆ ಮಾಡುತ್ತೀರಿ; "ಪ್ರಬುದ್ಧ ಕರ್ಣಾಟಕ" ಕ್ಕೊಂದು ಲೇಖನ ಬರೆಯಬೇಕು."

ಅಂದರು ಶಾಸ್ತ್ರಿಗಳು.

> "ಪ್ರಬುದ್ಧ ಕರ್ಣಾಟಕಕ್ಕೆ ನೀವು ನಿರ್ಧರಿಸಿರುವ ಮಟ್ಟಕ್ಕೆ ನನ್ನ ಲೇಖನ ಬಂದೀತೆ ಎಂಬ ಭಯ"

ಅಂದೆ ನಾನು. "ನಿಮಗೆ ಭಯ" ಅನ್ನುತ್ತ ಕಡೆಗೊಪ್ಪಿಸಿದರು.

'ಕೇಶಿದಂಡನಾಯಕ" ನನ್ನು ಕುರಿತೊಂದು ಲೇಖನ ಬರೆದೆ. ಅದನ್ನು ಪ್ರಕಸಿದ ಮೇಲೆಂದೋ ಒಂದು ಕಡೆ ನಾವಿಬ್ಬರೂ ಕಲೆತಾಗ

> "ಶರ್ಮ, ಈ ಲೇಖನದಲ್ಲಿ ನೀವು ತೋರಿಸಿರುವ ಸಂಯಮ, ಶಾಸ್ತ್ರ ಮರ್ಯಾದೆ ವಿಶ್ವಕರ್ನಾಟಕದಲ್ಲೇಕೆ ತೋರಿಸುವುದಿಲ್ಲ?"

ಎಂದು ಕೇಳಿದರು.

> "ಶಾಸ್ತ್ರಿಗಳೆ ಪ್ರ. ಕ. ದಲ್ಲಿ ಶಾಸ್ತ್ರಮರ್ಯಾದೆ ಸರಿ. ವಿ. ಕ. ದಲ್ಲಿ ಶಸ್ತ್ರಮರ್ಯಾದೆ ಸರಿ"

ಅನ್ನುತ್ತಲೆ ಶಾಸ್ತ್ರಿಗಳು ಬಾಯಿಮುಚ್ಚಿಸುವುದರಲ್ಲಿ, ವ್ಯಂಗ್ಯ ಪ್ರತ್ಯುಕ್ತಿ (Repartee) ಯಲ್ಲಿ ನೀವು ನಿಸ್ಸೀಮರು ಅಂದರು. ಆ ದಿನಗಳ ನೆನಪು ಬಂದಾಗಲೆಲ್ಲ ನನಗೆ

ರೋಮಾಂಚವಾಗುತ್ತವೆ. ವೆಂಕಟನಾರಣಪ್ಪನವರು, ಶ್ರೀನಿವಾಸಮೂರ್ತಿಗಳು, ವೆಂಕಣ್ಣಯ್ಯನವರು, ಕೃಷ್ಣ ಶಾಸ್ತ್ರಿಗಳ ಕಾಲ ಮತ್ತೆ ಬರುತ್ತದೆಯೆ ಅನ್ನಿಸುತ್ತದೆ.

"ವಿಶ್ವಕರ್ನಾಟಕ"ದ ಸಾಹಿತ್ಯ ಸಂಚಿಕೆಯ ಮೇಲೆ

ಪೊಸಕಾಲದ ನವಿಲಾಟಂ
ಶಿಶುಗಳ ಮುದ್ದಾಟ ಹರಿಣ ಹರಿಣಿಯನೋಟಂ
ರಸಕವಿಗಳ ಕರ್ನಾಟಂ
ಸತಿಪತಿಯೊಡಗೂಡಿದಂತೆ ಕನ್ನಡ ಜಾಣಾ"

ಪದ್ಯಕೊಟ್ಟು, ಅದಕ್ಕೆ ತಕ್ಕಂತೆ ಒಂದು ರೇಖಾ ಚಿತ್ರವನ್ನು ಹಾಕಿದ್ದನ್ನು ಕಂಡ ಶಾಸ್ತ್ರಿಗಳ ಆನಂದಕ್ಕೆ ಪಾರವೇ ಇಲ್ಲ. ಶ್ರೀ ಬಿ. ವೆಂಕೋಬರಾಯರು ಬಂದು

"ಶರ್ಮ, ಆ ರೇಖಾ ಚಿತ್ರ ಚೆನ್ನಾಗಿಲ್ಲ. ನಾನು ಬೇರೆ ಬರೆದು ಕೊಡುತ್ತೇನೆ"

ಅಂದರು. ಶಾಸ್ತ್ರಿಗಳು ಕೇವಲ ವಿದ್ವಾಂಸರು ಮಾತ್ರವಲ್ಲ, ವಿಮರ್ಶಕರು ಮಾತ್ರವಲ್ಲ, ಉತ್ತಮ ಕಲಾವಿದರು. ರಸ ಕವಿಗಳ ನವಕರ್ನಾಟಕವನ್ನು ನಿರ್ಮಿಸಲು ಶ್ರಮಿಸಿದ ಮಹಾ ಭಾಷಾಭಕ್ತರು, ದೇಶಭಕ್ತರು.

ಕನ್ನಡದ ಕೃಷಿಕ

ಎಲ್. ಗುಂಡಪ್ಪ

★★

ನುಡಿಯೊಲವು ಬೇಲಿ, ಕಡುನಿಷ್ಠೆ ಬಾಗಿಲು ಬೀಗ,
ಅರಿವುಗೋಲೆತ್ತಿದೆಚ್ಚರಿಕೆ ಕಾವಲುಗಾರ,
ನಡುವೆ ಕನ್ನಡದ ಹೊಲ, ದುಡಿಯುತಿಹ ಕೃಷಿಗಾರ
ಸಂಸ್ಕೃತಾಂಗ್ಲಗಳ ಹಿರಿಯೆತ್ತುಗಳ ಪಳಗಿಸುತ,
ಹರಿತ ಬುದ್ಧಿಯ ಗುಳದ ಮೊನೆಯನಣಿಗೂಡಿಸುತ,
ಸಂತತೋದ್ಯಮದ ಬಲ್ನೇಗಿಲನೆ ಹೂಡಿಹನು;
ಉತ್ತಿಹನು, ಭಾವಬೀಜವ ಚೆಲ್ಲಿ ಬಿತ್ತಿಹನು,
ಸಂಸ್ಕೃತದ ಸಾಹಿತ್ಯಸಾಗರದ ತೂಬೆತ್ತಿ
ರಸಜೀವನವ ಹರಿಸಿ ಕಾಲುವೆಯ ತುಂಬಿಹನು.
ಹುಲಿಸು ಪೈರನು ಬೆಳೆದು ಕುಯ್ದು ಕಾಳೊಕ್ಕಿಹನು.
ಎಂಥ ಬೆಳೆ! – ಕವಿತೆ, ಕಥೆ, ಕಾವ್ಯ, ಕಾದಂಬರಿ,
ನಾಟಕ, ವಿಮರ್ಶೆ, ಪ್ರಾಚೀನ ಸಂಶೋಧನೆ,
ವಾದ, ಪ್ರತಿವಾದ, ಲಘು ಟಿಪ್ಪಣಿ, ನಿರುಕ್ತ ಇಂ
ತೆನಿತೆನಿತೋ ಹೊಸರುಚಿಯ ರಸಪಾಕಕನುವಪ್ಪ
ಹಲತೆರದ ಸಾಹಿತ್ಯದಮೃತಫಲವಿತ್ತಿಹನು:
ಕನ್ನಡದ ತೋಟವನು ಶೃಂಗಾರಗೊಳಿಸಿಹನು;
ಒಳಸಾರ ಹೊರ ಅಲಂಕಾರಗಳ ಚೆನ್ನೆಸಗಿ
ಒಳ್ಳೆ ಸಸಿಕಾಳನೆಲ್ಲೆಡೆ ಪಸರಿಸಿಹನು.
ಕನ್ನಡದ ಚಿಣ್ಣರಿಗೆ ದುಡಿದ ನುಡಿರೈತ
ಅಂಬಳೆಯ ಶ್ರೀ ಕೃಷ್ಣಶಾಸ್ತ್ರಿ ತಾನೀತ.

೧೯೫೨ರಲ್ಲಿ ಬರೆದ ಕವನ

['ಜೀವನ' ಪತ್ರಿಕೆ ಕೃಪೆಯಿಂದ]

ನಾ ಕಂಡ "ಕನ್ನಡ ವ್ಯಾಸ" ಪ್ರೊ। ಎ. ಆರ್. ಕೃಷ್ಣಶಾಸ್ತ್ರಿಗಳು

ಬಿ. ಶಿವಮೂರ್ತಿ ಶಾಸ್ತ್ರೀ

ಅಗಾಧವಾದ ಪಾಂಡಿತ್ಯ, ಅಸದೃಶವಾದ ಸತ್ಯಸಂಧತೆ, ಅತುಲವಾದ ಮಾನಪ ಪ್ರೇಮ ಇವೆಲ್ಲಕ್ಕೂ ಮಿಗಿಲಾದ ದೈವಭಕ್ತಿ ಮತ್ತು ದೇಶಭಕ್ತಿ ಇವೆಲ್ಲವುಗಳೂ ಒಟ್ಟುಗೂಡಿದ್ದ ಕನ್ನಡನಾಡಿನಮಹಾ ಪುರುಷರು ಪ್ರೊ. ಎ. ಆರ್. ಕೃಷ್ಣ ಶಾಸ್ತ್ರಿಗಳು. ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕನ್ನಡ ಸಾಹಿತ್ಯ ಪ್ರಪಂಚಕ್ಕೂ ಕನ್ನಡ-ಕನ್ನಡ ಕೋಶಕ್ಕೂ ಪ್ರಬುದ್ಧ ಕರ್ನಾಟಕ ತ್ರೈಮಾಸಿಕಕ್ಕೂ ತಮ್ಮ ಆಯುಷ್ಯವನ್ನು ಮೀಸಲಾಗಿಟ್ಟಿದ್ದರು ಎಂದು ನಾವು ತಿಳಿಯಬಹುದು. ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಉನ್ನತಿಗೆ, ಕನ್ನಡನಾಡಿನ ಸರ್ವಾಂಗೀಣ ಪ್ರಗತಿಗೆ ವೀರಕಂಕಣವನ್ನು ಕಟ್ಟಿದ್ದ ಮಹನೀಯರು ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು. ಅವರು ಕನ್ನಡದಲ್ಲಿ ರಚಿಸಿದ ಮತ್ತು ಸಂಪಾದಿಸಿದ ಕೃತಿಗಳು ಕನ್ನಡನಾಡು ಇರುವವರೆಗೆ ಇರತಕ್ಕವುಗಳು. ವಚನ ಭಾರತ, ಕಥಾಮೃತ, ನಿರ್ಮಲ ಭಾರತಿ, ಬಂಕಿಮಚಂದ್ರ, ಸಂಸ್ಕೃತ ನಾಟಕ, ಭಾಸಕವಿ, ನಾಗಮಹಾಶಯ, ಶ್ರೀಪತಿಯ ಕಥೆಗಳು, ಸರ್ವಜ್ಞ ಕವಿ ಮೊದಲಾದ ಅವರ ಕೃತಿಗಳು ಕನ್ನಡ ಸಾಹಿತ್ಯ ಸಂಪತ್ತನ್ನು ಅಧಿಕಗೊಳಿಸಿವೆ. ಕನ್ನಡ ಕೈಪಿಡಿಯಲ್ಲಿ ಅವರು ಬರೆದಿರುವ 'ಅಲಂಕಾರ ಶಾಸ್ತ್ರದ ಚರಿತ್ರೆ' ಅಗಾಧವಾದ ಅವರ ವಿದ್ವತ್ತಿಗೆ ನಿದರ್ಶನವಾಗಿದೆ. ಅವರು ಸಂಪಾದಿಸಿರುವ ಹರಿಶ್ಚಂದ್ರಕಾವ್ಯ ಸಂಗ್ರಹ ಅದಕ್ಕೆ ಬರೆದಿರುವ ಪೀಠಿಕೆ (ಪ್ರೊ. ಟಿ. ಎಸ್. ವೆಂಕಣ್ಣಯ್ಯನವರೊಡನೆ ಕೂಡಿಕೊಂಡು) ಗ್ರಂಥ ಸಂಪಾದನೆ ಮಾಡಬೇಕೆನ್ನುವವರಿಗೆ ಮಾರ್ಗದರ್ಶನವಾಗಿದೆ. ಕನ್ನಡ ಕವಿಕಾವ್ಯ ಮಾಲೆಯಲ್ಲಿ ಪ್ರಕಟವಾಗಿರುವ ಮಾನ್ಯ ಶಾಸ್ತ್ರಿಗಳ "ಭಾಷಣಗಳು ಮತ್ತು ಲೇಖನಗಳು" ಎಂಬ ಗ್ರಂಥವು ಅವರ ಅಗಾಧವಾದ ಜ್ಞಾನಕ್ಕೆ ಭಂಡಾರವೆನಿಸಿದೆ.

ಕನ್ನಡನಾಡು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಬಹುಮುಖವಾಗಿ ಗೌರವಿಸಿದೆ. ಹೈದರಾಬಾದಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಿದ್ದರು (೧೯೪೧). ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನು ಕೊಟ್ಟಿತು. ನಾಡಿನ ವಿದ್ವಾಂಸರು ಒಟ್ಟುಗೂಡಿ ೧೯೫೭ರಲ್ಲಿ ಅವರಿಗೆ "ಅಭಿನಂದನೆ" ಎಂಬ ಗಂಭೀರವಾದ ವಿದ್ವತ್ಪೂರ್ಣವಾದ ಗ್ರಂಥವೊಂದನ್ನು ಸಮರ್ಪಿಸಿದರು. ಅಕಾಡೆಮಿಯವರು ಅವರ 'ಬಂಕಿಮಚಂದ್ರ' ಎಂಬ ಗ್ರಂಥಕ್ಕೆ ಅಖಿಲಭಾರತ ಗೌರವ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು. ಇವೆಲ್ಲಕ್ಕೂ ಮಿಗಿಲಾಗಿ ಎರಡೂವರೆ ಕೋಟಿ ಕನ್ನಡ ಜನರು ಅವರನ್ನು ಪಂಡಿತವರೇಣ್ಯ, ಕನ್ನಡತಪಸ್ವಿ, ಕನ್ನಡವ್ಯಾಸ, ಕನ್ನಡಕುಲದ ಆಧಾರ ಸ್ತಂಭ, ಪ್ರಾಮಾಣಿಕ, ಪ್ರತಿಭಾಸಂಪನ್ನ, ಸ್ಮರಣೀಯ ಕನ್ನಡ ಮಹಾಪಂಡಿತ, ಆದರ್ಶ ಶಿಕ್ಷಕ, ಪ್ರತಿಭಾವಂತ ವಿಮರ್ಶಕ, ಸ್ನೇಹಮಯಜೀವಿ ಎಂದು ಮೊದಲಾಗಿ ಹಾಡಿ ಹರಸಿತು. ಇದಕ್ಕಿಂತ ಹೆಚ್ಚಿನ ಮಾನ-ಮನ್ನಣೆಗಳನ್ನು ಪಡೆಯಲು ಮತ್ತಾವ ಕನ್ನಡಿಗನಿಗೆ ತಾನೇ ಸಾಧ್ಯವಾದೀತು?

ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರಾಚೀನ ಪರಂಪರೆಯಲ್ಲಿ ಹುಟ್ಟಿಬೆಳೆದವರು. ಅವರ ತಂದೆಯವರು ದಿ॥ ಅಂಬಳೆ ರಾಮಕೃಷ್ಣಶಾಸ್ತ್ರಿಗಳು. ಶ್ರೀ ಶಾಸ್ತ್ರಿಗಳವರಿಗೆ ಸಂಸ್ಕೃತ, ಕನ್ನಡ, ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳಲ್ಲಿ ತುಂಬಿದ ಪಾಂಡಿತ್ಯವಿದ್ದಿತು. ಅವರು ಪ್ರಾಚೀನ ಗ್ರಂಥಗಳನ್ನಲ್ಲದೆ ಶಿಲಾ ಶಾಸನಗಳನ್ನೋದಿ ಹೆಚ್ಚಿನ ವೈದುಷ್ಯವನ್ನು ಗಳಿಸಿದ್ದರು. ತೆಲುಗು, ತಮಿಳು ಭಾಷೆಗಳನ್ನೂ ಅರಿತಿದ್ದರು. ಶ್ರೀ ಕೃಷ್ಣಶಾಸ್ತ್ರಿಗಳ ಜನನ ೧೨-೨-೧೮೯೦ರಲ್ಲಿ. ಅವರ ಮರಣ ತಾ॥ ೧-೨-೧೯೬೮ರಲ್ಲಿ. ಅವರು ಬಾಳಿ ಬದುಕಿದುದು ೭೮ ವರ್ಷಗಳು ಮಾತ್ರ. ಈ ಸುದೀರ್ಘವಾದ ಕಾಲದಲ್ಲಿ ಅವರು ಕನ್ನಡ ಕುಲಗುರುಗಳಾಗಿಯೇ ಬಾಳಿದರು. ಕನ್ನಡನಾಡಿನಲ್ಲಿ ಅವತರಿಸಿದ ಪುಣ್ಯ ಶ್ಲೋಕರಾದ ಆರ್. ನರಸಿಂಹಾಚಾರ್ಯರು, ಟಿ. ಎಸ್. ವೆಂಕಣ್ಣಯ್ಯನವರು, ಪಂಜೆ ಮಂಗೇಶರಾಯರು, ಎಂ. ಗೋವಿಂದಪೈಗಳು, ಪ್ರೊ. ಎಸ್. ಎಸ್, ಬಸವನಾಳರು, ಡಾ. ಫ. ಗು.

ಹಳಕಟ್ಟಿಯವರು, ಪ್ರೊ. ಬಿ. ಎಂ. ಶ್ರೀಕಂಠಯ್ಯನವರು, ಎಂ. ಆರ್. ಶ್ರೀನಿವಾಸಮೂರ್ತಿಗಳು, ಆಲೂರು ವೆಂಕಟ ರಾಯರು, ದೇವುಡು ನರಸಿಂಹಶಾಸ್ತ್ರಿಗಳು ಮೊದಲಾದ ಮಹಾ ಪಂಡಿತೋತ್ತಮರ ಪಂಕ್ತಿಗೆ ಸೇರತಕ್ಕವರು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು. ಅವರು ಬರೆದಿರುವ ಕನ್ನಡ ಭಾರತವನ್ನು ಓದಿದವರು ಅವರನ್ನು ಕನ್ನಡ ವ್ಯಾಸರೆಂದು ಕರೆದಿರುವುದು ಯಥೋಚಿತವಾಗಿದೆ. ಆದಿಪಂಪ, ಕುಮಾರ ವ್ಯಾಸರ ಅನಂತರ ಭಾರತವನ್ನು ಅರಗಿಸಿಕೊಂಡ ಮಹಾನು ಭಾವರು ಶ್ರೀ ಶಾಸ್ತ್ರಿಗಳು. ಡಾ. ಎ. ಆರ್. ಕೃಷ್ಣಶಾಸ್ತ್ರಿ ಗಳು ಅತ್ಯುತ್ತಮವಾದ ಜೀವನಾದರ್ಶಗಳನ್ನು ಅಳವಡಿಸಿ ಕೊಂಡವರು.

(೧) ಅವರು ಸದಾ ಕಾರ್ಯತತ್ಪರರಾಗುತ್ತಿದ್ದರು. ಸೋಮಾರಿತನಕ್ಕೆ ಅವರ ಮನೆಯಲ್ಲಿ ಸ್ಥಳವಿರಲಿಲ್ಲ.

(೨) ಅವರು ಸದಾ ಸತ್ಯವನ್ನೇ ನುಡಿಯುತ್ತಿದ್ದರು. ಅವರದು ಅಭಯ ಜೀವನ. ಇನ್ನೊಬ್ಬರ ಸಂತೋಷಕ್ಕಾಗಿ ಅವರು ಅಸತ್ಯವನ್ನು ಎಂದೂ ಹೇಳಿಲ್ಲ. ಅವರು ಮತ್ತೊ ಬ್ಬರ ಮನನೋಯುವಂತೆ ಎಂದೂ ಮಾತನಾಡಿದವರಲ್ಲ.

(೩) ಮಧ್ಯಾಹ್ನದ ವೇಳೆಯಲ್ಲಿ ಅವರು ಎಂದೂ ಮಲ ಗಿದವರಲ್ಲ. ರಾತ್ರೆ ವೇಳೆಗೆ ಸರಿಯಾಗಿ ಮಲಗಿ ಬೆಳಗಿನ ಜಾವದಲ್ಲಿ ಎದ್ದು, ತಮ್ಮ ಅಭ್ಯಾಸವನ್ನು, ಗ್ರಂಥ ಲೇಖನ ವನ್ನು ನಡೆಸುತ್ತಿದ್ದರು. ಅವರು ಭೋಜನವಾದ ಮೇಲೆ ತಿಂಡಿ ತಿನಸುಗಳನ್ನು ತಿನ್ನುತ್ತಿದ್ದರು. ಅವರ ಬಾಯಿರುಚಿ ಗಳನ್ನು ಚೆನ್ನಾಗಿ ತಿಳಿದಿದ್ದರು.

ಅವರು ಸದಾ ಆರೋಗ್ಯವಾಗಿಯೇ ಬಾಳಿ ಬದುಕಿದರು.

ಕಡೆಕಡೆಯಲ್ಲಿ ವಯೋಧರ್ಮಕ್ಕನುಗುಣವಾಗಿ ರೋಗ ಅವರನ್ನು ಆಕ್ರಮಿಸಿತು.

"ಜಾತಸ್ಯ ಮರಣಂ ಧ್ರುವಂ" ಎಂಬಂತೆ ಅವರು ಕಡೆಗೆ ಸಂತೋಷವಾಗಿ ಮರಣವನ್ನು ಅಪ್ಪಿದರು. ಮರಣಕ್ಕೆ ಅವರು ಹೆದರಲು ಯಾವ ಕಾರಣವೂ ಇರಲಿಲ್ಲ.

ಕರ್ಣಾಟಕದಲ್ಲಿ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಮಿಗಿಲಾದ ಕೀರ್ತಿ ತಂದುದು ಅವರ ಸುಂದರವೂ ಶುದ್ಧವೂ ಸುಪ್ರೌಢವೂ ಆದ ಗದ್ಯ ಶೈಲಿಯಲ್ಲಿ ಬರೆದ ವಚನ ಭಾರತ, ಕಥಾಮೃತ, ಬಂಕಿಮಚಂದ್ರ ಕೃತಿಗಳು. ಚಂಪೂ ಶೈಲಿಯಲ್ಲಿ ಆದಿಪಂಪ, ರಗಳೆ ಕೃತಿಗಳಲ್ಲಿ ಹರೀಶ್ವರ ಷಟ್ಪದಿಗಳಲ್ಲಿ ಲಕ್ಷ್ಮೀಶ, ತ್ರಿಪದಿಗಳಲ್ಲಿ ಸರ್ವಜ್ಞ, ರತ್ನಾಕರ, ಕಂದಗಳಲ್ಲಿ ಷಡಕ್ಷರಿ, ಕೃತಿಗಳಲ್ಲಿ ಪುರಂದರ ಹಳ ಗನ್ನಡ ಶೈಲಿಯಲ್ಲಿ ಮುದ್ದಣ ಸೀಮಾ ಪುರುಷರಾದಂತೆ ಕನ್ನಡ ಗದ್ಯ ಶೈಲಿಯಲ್ಲಿ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿ ಗಳು ಶ್ರೇಷ್ಠ ಪುರುಷರಾಗಿದ್ದಾರೆ. ಆದ್ದರಿಂದಲೇ ಅವರು ಕನ್ನಡವ್ಯಾಸ ಎಂಬ ಬಿರುದಿಗೆ ಅರ್ಹರು.

ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳನ್ನು ನಾನು ಮೊದಲು ಕಂಡುದು ಮೈಸೂರಿನಲ್ಲಿ ನಡೆದ ಒಂದು ಕನ್ನಡ-ಕನ್ನಡ ಸಂಪಾದಕ ಮಂಡಲಿಯ ಸಭೆಯಲ್ಲಿ. ಆ ವರ್ಷ ನಾನು ಮೈಸೂರು ಸರ್ಕಾರದ ಪ್ರತಿನಿಧಿಯಾಗಿ ಕೋಶ ಸಂಪಾದಕ ಮಂಡಳಿಯ ಸದಸ್ಯನಾಗಿ ಸೇರಿದ್ದೆನು. ಆಗ ಕನ್ನಡದ ಪ್ರಮುಖ ಅಧ್ವರ್ಯರಾಗಿದ್ದ ಮಾನ್ಯ ಶಾಸ್ತ್ರಿಗಳನ್ನು ಸನಿಹದಲ್ಲಿ ಕಂಡು ಮಾತನಾಡುವ ಅವಕಾಶವಾಯಿತು. ಸಭೆಯಲ್ಲಿ ಕನ್ನಡ ಶಬ್ದಗಳ ಅರ್ಥವನ್ನು ನಿರ್ಣಯಿಸುವ ಬಗೆಗೆ ಅವರು ತೆಗೆದುಕೊಳ್ಳುತ್ತಿದ್ದ ಆಸಕ್ತಿ, ಚರ್ಚೆ ಮಾಡು ತ್ತಿದ್ದ ವಿಧಾನ, ತೀರ್ಮಾನಿಸುತ್ತಿದ್ದ ರೀತಿ ಇವುಗಳನ್ನು ಕಂಡು ನನಗೆ ನಿಜಕ್ಕೂ ಆಶ್ಚರ್ಯವಾಗುತ್ತಿದ್ದಿತು. ಕನ್ನಡಿ ಗರಿಗೆ ಒಂದು ಅಧಿಕೃತವಾದ ಕೋಶ ಬೇಕು ಎಂಬ ಬಗೆಗೆ ಅವರಿಗೆ ಅಚಲವಾದ ಅಭಿಮಾನವಿದ್ದಿತು. ಕನ್ನಡ ಕ್ಕೊಂದು ಕೋಶಬೇಕು ಎಂದು ಅವರು ಹಟಮಾಡಿ ಕೈಗೊ ಳ್ಳದಿದ್ದರೆ ಈಗ ಸಾಹಿತ್ಯ ಪರಿಷತ್ತಿನಲ್ಲಿ ಮೆಲ್ಲ ಮೆಲ್ಲನೆ ಬೆಳಕು ಕಾಣುತ್ತಿರುವ ಕನ್ನಡ-ಕನ್ನಡ ಕೋಶದ ಸಂಚಿಕೆ ಗಳು ನಮಗೆ ಕಾಣಸಿಗುತ್ತಿರಲಿಲ್ಲ. ಆದುದರಿಂದ ಕನ್ನಡ ಕೋಶಕ್ಕೆ ಅವರನ್ನು ಪಿತಾಮಹರೆನ್ನಬಹುದು.

ಪ್ರಬುದ್ಧ ಕರ್ಣಾಟಕವನ್ನು ನಾನು ಸುಮಾರು ೪೦ ವರ್ಷಗಳಿಂದ ಕ್ರಮವಾಗಿ ಓದುತ್ತಿದ್ದೇನೆ. ಅದರಲ್ಲಿ ಬರುವ ಸುಪ್ರೌಢವಾದ ಲೇಖನಗಳಿಗೂ, ಗ್ರಂಥ ವಿಮರ್ಶೆಗಳಿಗೂ ನಾನು ಬಹಳವಾಗಿ ಮನಸೋತಿದ್ದೇನೆ. ಪ್ರಬುದ್ಧ ಕರ್ಣಾ ಟಕದ ಸಂಚಿಕೆಗಳಲ್ಲಿ ಕಂಡುಬರುವ ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳ ಪಾಂಡಿತ್ಯ ಪ್ರತಿಭೆಗಳನ್ನು ನಾನು ಹಲವು ವೇಳೆ ಮೆಚ್ಚಿಕೊಂಡು ತಲೆದೂಗಿದ್ದೇನೆ. ತಲೆಬಾಗಿದ್ದೇನೆ.

೧೯೫೬ನೆಯ ಜೂನ್ ತಿಂಗಳಿನಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗುವ ಸದವಕಾಶವು ದೊರೆ ಕಿತು. ಆಗ ಕನ್ನಡ ಕೋಶಕ್ಕೆ ಸಂಬಂಧಪಟ್ಟಂತೆ ಮೇಲಿಂದ ಮೇಲೆ ಅವರನ್ನು ಕಾಣುತ್ತಿದ್ದೆನು. ೧೯೬೧ರಲ್ಲಿ ಪರಿಷತ್ತು ಮತ್ತು ಸರ್ಕಾರಗಳಿಗೆ ಕನ್ನಡ ಕೋಶದ ಪ್ರಕಟ ನೆಯ ಬಗೆಗೆ ಒಂದು ಕರಾರು ಮಾಡಿಕೊಳ್ಳಬೇಕಾಯಿತು. ಆ ಸಂದರ್ಭದಲ್ಲಿ ನಾನು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿ ಗಳನ್ನು ಕಂಡು ಕರಾರಿನ ನಿಯಮಗಳನ್ನು ಅರುಹಿ ಅದಕ್ಕೆ ಅವರ ಒಪ್ಪಣೆ ಮತ್ತು ಆಶೀರ್ವಾದಗಳನ್ನು ಬೇಡಿದೆನು. ಈ ಸಂದರ್ಭಗಳಲ್ಲಿ ಪರಿಷತ್ತಿನ ಕಾರ್ಯದರ್ಶಿಗಳೂ, ನನ್ನ ಆಪ್ತ ಗೆಳೆಯರೂ ಆಗಿದ್ದ ದಿವಂಗತ ಕೆ. ಗೋಪಾಲಕೃಷ್ಣ

ರಾಯರು ಸದಾ ನನ್ನ ಸಂಗಡ ಇರುತ್ತಿದ್ದರು. ಅವರು ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ಅನುಗ್ರಹಕ್ಕೆ ಬಹಳ ವಾಗಿ ಪಾತ್ರವಾಗಿದ್ದರು.

ನಾನು ಪರಿಷತ್ತಿನ ಅಧ್ಯಕ್ಷನಾಗಿದ್ದ ಕಾಲದಲ್ಲಿ ಕೆಲವು ಪ್ರಮುಖ ಸಾಹಿತಿಗಳು ಪರಿಷತ್ತಿಗೆ ಬರದಂತೆ ಪ್ರತಿಜ್ಞೆ ಮಾಡಿದ್ದಾರೆ ಎಂಬ ಒಂದು ಮಾತು ನನಗೆ ಕೇಳಿಬಂದಿತು. ಈ ವಿಷಯವನ್ನು ನಾನೂ ಶ್ರೀ ಗೋಪಾಲಕೃಷ್ಣರಾಯರೂ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ಗಮನಕ್ಕೆ ತಂದಾಗ ಅವರು ಅದಕ್ಕಾಗಿ ಬಹಳ ವ್ಯಸನಪಟ್ಟರು. ಪರಿಷತ್ತಿನ ಸಭೆಯಲ್ಲಿ ಯಾವ ಗುಂಪುಗಾರಿಕೆಯೂ ಇರಬಾರದೆಂದು ಹೇಳಿದರು. ಈ ತರಹ ಭಾವನೆಗಳು ಕನ್ನಡದ ಏಳಿಗೆಗೆ ಕಂಟಕಪ್ರಾಯವಾದಾವು ಎಂದು ಅವರು ನಿರೂಪಿಸಿದರು. ಅವರ ಈ ಉದಾರ ಭಾವನೆಗಳನ್ನು ಕಂಡು ನನ್ನ ಮನಸ್ಸಿಗೆ ಬಹಳ ಸಂತೋಷವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿಗೆ ರಾಷ್ಟ್ರಪತಿಗಳಾದ ಡಾ|| ರಾಜೇಂದ್ರ ಪ್ರಸಾದರು, ಡಾ|| ರಾಧಾಕೃಷ್ಣನ್‌ರವರು, ಮೈಸೂರು ಮಹಾರಾಜರವರು ಮೊದಲಾದ ಮಹನೀಯರು ಸಂದರ್ಶನವಿತ್ತಿದ್ದಾಗ ಶಾಸ್ತ್ರಿಗಳು ಮೊದಲ ಸಾಲಿನಲ್ಲಿ ಕುಳಿತಿರುತ್ತಿದ್ದರು. ಪರಿಷತ್ತಿನ ಏಳಿಗೆಗೆ ಹರ್ಷಿಸುತ್ತಿದ್ದರು. ೧೯೬೭ನೆಯ ಫೆಬ್ರುವರಿ ೨ನೆಯ ತಾರೀಖಿನಿಂದ ಫೆಬ್ರುವರಿ ತಾ|| ೯ರ ವರೆಗೆ ನಾನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇರಬೇಕಾಗಿದ್ದಿತು. ನನ್ನ ವಾಸದ ಕೊಟಡಿಯ ಸಮೀಪದಲ್ಲಿಯೇ ಮತ್ತೊಂದು ಸ್ಥಳದಲ್ಲಿ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ಬೇನೆಯಿಂದ ಬಳಲಿ ಹಾಸಿಗೆ ಹಿಡಿದಿದ್ದರು. ಆಗ ದಿನವೂ ನಾನು ಅವರ ಹಾಸಿಗೆಯ ಹತ್ತಿರ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದೆನು. ಆಗ ಪ್ರಸಂಗವಶಾತ್ ಅವರು ನನ್ನ ಸಂಗಡ ಮಾತನಾಡುತ್ತಿದ್ದ ವಿಷಯ ಅವರ ಆರೋಗ್ಯವನ್ನು ಕುರಿತಾದುದಲ್ಲ. ಹುಟ್ಟಿದ ದೇಹ ಒಮ್ಮೆ ಸಾಯಲೇ ಬೇಕು, ಅದಕ್ಕಾಗಿ ಚಿಂತಿಸುವುದೇಕೆ ? ಮನೆಯಲ್ಲಿ ಇರುವದಕ್ಕಿಂತ ಆಸ್ಪತ್ರೆಯಲ್ಲಿ ಇದ್ದರೆ ಉಪಚಾರ ಚೆನ್ನಾಗಿ ನಡೆಯುತ್ತದೆ. ಮರಣವನ್ನು ತಪ್ಪಿಸಿಕೊಳ್ಳಲು ನಾನು ಇಲ್ಲಿಗೆ ಬಂದಿಲ್ಲ. ಅದು ಸಾಧ್ಯವೂ ಅಲ್ಲ. ಆದರೆ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವದು ವಿವೇಕಿಯ ಲಕ್ಷಣ. ಅದಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೆ ಎಂದು ಅವರು ಬಹಳ ಸರಳವಾಗಿ ಹೇಳುತ್ತಿದ್ದರು. ಅವರ ಆ ದಿಟ್ಟತನವನ್ನು ಕಂಡು ನನಗೆ ಆಶ್ಚರ್ಯವಾಗುತ್ತಿತ್ತು. ನಾನು ಆಸ್ಪತ್ರೆಯಲ್ಲಿ ಇದ್ದ ಸುಮಾರು ಎಂಟು ದಿವಸಗಳು ಅವರು ನನ್ನಲ್ಲಿ ಮಾತನಾಡುತ್ತಿದ್ದ ವಿಷಯ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕನ್ನಡ ನಿಘಂಟು ಮತ್ತು ಸಾಹಿತ್ಯ ಪರಿಷತ್ತು ಇವುಗಳನ್ನು ಕುರಿತುದೇ ಆಗಿರುತ್ತಿದ್ದಿತು. ನಾನು ಆಸ್ಪತ್ರೆಯನ್ನು ಬಿಟ್ಟು ಮನೆಗೆ ಬರುವ ದಿನ (೯-೨-೧೯೬೭) ಶಾಸ್ತ್ರಿಗಳನ್ನು ಕಂಡು ಕೈ ಮುಗಿದು ಬಂದೆನು. ಅವರು ನಾನು ಇನ್ನೂ ಕೆಲವು ದಿನ ಆಸ್ಪತ್ರೆಯಲ್ಲಿ ಇರಬೇಕಾಗಿದೆ, ಡಾಕ್ಟರ್ ಹೇಳಿದ್ದಾರೆ ಎಂದು ಹೇಳಿದರು. ಆಗ ನಾನು ಕನ್ನಡ ಗುರುಗಳಾದ ತಮ್ಮ ಆರೋಗ್ಯವು ಬೇಗನೆ ಕುದುರಲಿ, ತಾವು ಆರೋಗ್ಯದಿಂದ ಮನೆಗೆ ಹಿಂತಿರುಗುವಂತೆ ಆಗಲಿ, ತಮ್ಮ ಜ್ಞಾನಾನುಭವಗಳ ಪ್ರಯೋಜನ ನಮ್ಮ ಕರ್ನಾಟಕಕ್ಕೆ ಇನ್ನೂ ಹೆಚ್ಚು ಹೆಚ್ಚು ದೊರಕುವಂತಾಗಲಿ ಎಂದು ಹೇಳಿ ಶಾಸ್ತ್ರಿಗಳಿಗೆ ಕೈ ಮುಗಿದು ಹೊರಟುಬಂದೆನು. ಆಮೇಲೆ ಅವರ ಕಡೆಗಾಲದವರೆಗೆ ನಾನು ಶ್ರೀ ಶಾಸ್ತ್ರಿಗಳನ್ನು ನೋಡಲು ಸಾಧ್ಯವಾಗಲಿಲ್ಲ. ದೈವೇಚ್ಛೆಗೆ ಉಪಾಯವಿಲ್ಲ. ಪತ್ರಿಕೆಗಳಲ್ಲಿ ಓದಿದೆನು: ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು (ತಾ||೨-೨-೬೮) ದಿವಂಗತರಾದರೆಂದು. ಅಂದು ನಾನು ಪರಸ್ಥಳದಲ್ಲಿದ್ದುದರಿಂದ ಅವರ ಅಂತ್ಯ ದರ್ಶನ ಪಡೆಯಲು ಕೂಡ ಸಾಧ್ಯವಾಗಲಿಲ್ಲವಲ್ಲಾ ಎಂದು ಬಹಳವಾಗಿ ಮರುಗಿದೆನು. ಮಿಂಚು ಮಾಯವಾಯಿತು, ಕಾಲ ಕಳೆದುಹೋಯಿತು. ಆದರೆ ಅವರ ಕೀರ್ತಿ ಕನ್ನಡನಾಡನುಡಿ ಇರುವವರೆಗೆ ಇರುತ್ತದೆಂಬುದರಲ್ಲಿ ಸಂಶಯವಿಲ್ಲ. ಶ್ರೀ ಶಾಸ್ತ್ರಿಗಳಲ್ಲಿ ಗೌರವವುಳ್ಳ ನಾವುಗಳು ಕನ್ನಡನಾಡುನುಡಿಗಳ ರಕ್ಷಣೆಗೆ ಟೊಂಕ ಕಟ್ಟುವುದೊಂದೇ ಅವರಿಗೆ ನಾವು ಸಲ್ಲಿಸಬೇಕಾದ ಗುರುಕಾಣಿಕೆಯಾಗಿದೆ.

ಶ್ರೀಪತಿಯ ಕತೆಗಳು

‘ ಸುಮನಾ ’

ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಗದ್ಯ ರಚನಾಕಾರರನ್ನು ಕುರಿತು ಆಲೋಚಿಸುವಾಗೆಲ್ಲ ಆಚಾರ್ಯ ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಡಿ. ವಿ. ಜಿ., ಮಾಸ್ತಿ, ವಿ. ಸೀ.ಯವರ ನೆನಪಾಗುತ್ತದೆ. ಇದೇ ಪಂಕ್ತಿಗೆ ಸೇರ ಬಲ್ಲ ಹಾಗೂ ಧೃವತಾರೆಯಂತೆ ಕಾಂತಿಯುಕ್ತವಾಗಿ ಬೆಳ ಗುವ ಇನ್ನೊಂದು ಹೆಸರು ಡಾ|| ಎ. ಆರ್. ಕೃಷ್ಣಶಾಸ್ತ್ರಿ ಗಳವರದು. ಇವರಲ್ಲಿ ಒಬ್ಬೊಬ್ಬರೂ ಅತಿರಥ, ಮಹಾ ರಥರು ಪ್ರತಿಯೊಬ್ಬರೂ ತಮ್ಮದೇ ಆದ ವಿಶಿಷ್ಟ ಶೈಲಿಯಿಂ ದಾಗಿ ಕನ್ನಡ ಗದ್ಯಸಾಹಿತ್ಯವನ್ನು ಬೆಳಸಿದವರು ; ಅದ ಕ್ಕೊಂದು ನಿರ್ದಿಷ್ಟ ನಡೆಯನ್ನಿತ್ತವರು. ಇವರ ಶೈಲಿ ಯಲ್ಲಿ ಕನ್ನಡ ಗದ್ಯ ಒಂದು ಬಗೆಯ ಧಾತುವನ್ನೂ, ಪುಷ್ಟಿ ಯನ್ನೂ ಪಡೆಯಿತು; ತನ್ಮೂಲಕ ಸಂಪನ್ನವಾಗಿ ಸಾಹಿ ತ್ಯವೂ ಸಂಪದ್ಭರಿತವಾಯಿತು.

ನವೋದಯ ಸಾಹಿತ್ಯದ ಬಳ್ಳಿ ಚಿಗುರಿ ದಾಂಗುಡಿಯಿ ಡುವ ಹೊತ್ತಿಗಾಗಲೇ ‘ ಪದ್ಯಂ ವಧ್ಯಂ, ಗದ್ಯಂ ಹೃದ್ಯಂ ’ ಎಂಬ ಮುದ್ದಣವಾಣಿ ಪ್ರಚಲಿತವಾಗಿದ್ದುದಲ್ಲದೆ ವಿದ್ವಾಂಸ ರಲ್ಲಿಯೂ ಆ ನಂಬಿಕೆ ಬೇರೂರಿತ್ತು. ಅನಂತರದ ಸಂಧಿ ಕಾಲದಲ್ಲಿ ಕವಿತಾವಾಹಿನಿ ಹರಿದಷ್ಟೇ ತೀವ್ರವಾಗಿ ಗದ್ಯವೂ ಬೆಳೆಯಿತು (ವಿಶೇಷವಾಗಿ ಸಣ್ಣಕತೆ ಮತ್ತು ಕಾದಂಬರಿ ಪ್ರಕಾರಗಳು). ಆದರೆ, ಕವಿತೆ ಮುಟ್ಟಿದ ಸ್ಥಿತಿಯನ್ನು ಗದ್ಯ ಮುಟ್ಟಿತೋ ಇಲ್ಲವೋ ಹೇಳಲಾಗದು. ಸಾಹಿತಿಗಳಲ್ಲಿ ಹೆಚ್ಚು ಜನದ ಮನಸ್ಸು ಕವಿತೆಯ ಕಡೆಗೆ ಓಲಿ, ಅದಕ್ಕೆ ಒಲಿದಿದ್ದುದೇ ಇದಕ್ಕೆ ಕಾರಣವೆನ್ನಬಹುದು ಇದಕ್ಕೆ ಒಂದೆರಡು ಅಪವಾದಗಳು ಇಲ್ಲದಿಲ್ಲ. ಆಧುನಿಕ ಕನ್ನಡ ಕವಿತೆಗೆ ‘ಶ್ರೀ’ಯವರು ಹೇಗೆ ಆಚಾರ್ಯ ಪುರುಷರಾದರೊ ಅಂತೆಯೇ ಹೊಸಗನ್ನಡ ಗದ್ಯಕ್ಕೂ ಅವರು ಆದ್ಯಪ್ರವ ರ್ತಕರಾದರು. ಅವರ ಆವೇಶ ಸ್ಫೂರ್ತಿಗೆ, ಮಾತಿನ ಬಲುಮೆಗೆ ನೋಡಿಗೆ ತಕ್ಕಂತೆ ಬಾಗಿ ಬಳುಕಿ ನಡೆಯಬಲ್ಲ ದಾಗಿತ್ತು ಭಾಷೆ. ಅವರ ಭಾಷಣಗಳ ಓಜೋಯುಕ್ತ ಶೈಲಿ ಹಾಗೂ ಕನ್ನಡ ಕೈಪಿಡಿಯ ‘ಕನ್ನಡ ಸಾಹಿತ್ಯ ಚರಿತ್ರೆ’ಯ ಗದ್ಯ ಶ್ರೇಷ್ಠ ದರ್ಜೆಯದು. ಅದೇ ದಾರಿ ಯಲ್ಲಿ ನಡೆದು ಅವರ ಆದರ್ಶವನ್ನು–ಕನ್ನಡದೇಳ್ಗೆ–ತಮ್ಮ ಬಾಳಿನ ಆದರ್ಶವನ್ನಾಗಿಸಿಕೊಂಡು ಅವರ ಮಿತ್ರರು, ಶಿಷ್ಯರು, ಸಹೋದ್ಯೋಗಿಗಳು ಅನೇಕರು–ಅವರ ಮಾತೃ ಭಾಷೆ, ಜೀವನ ಧರ್ಮ, ಉದ್ಯೋಗ ಬೇರೆ ಬೇರೆಯವಾ ದರೂ ಸಹ–ಕನ್ನಡದ ಕಾವನ್ನು ಮೈಗೂಡಿಸಿಕೊಂಡು, ಸಾಹಿತ್ಯದ ವಿವಿಧ ಪ್ರಕಾರಗಳತ್ತ ತಮ್ಮ ಒಲವನ್ನು ಹರಿಸಿ ಕನ್ನಡಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿದರು.

ಡಾ|| ಎ. ಆರ್. ಕೃ. ಅವರೂ ಕನ್ನಡದ ಉನ್ನತಿಗಾಗಿ ಶ್ರಮಿಸಿದ ಹಿರಿಯರಲ್ಲೊಬ್ಬರು. ಕನ್ನಡ ಭಾಷೆಯನ್ನು ಬೆಳಸಿದ ಪತ್ರಿಕೆಯೆನೆಸಿರುವ ‘ ಪ್ರಬುದ್ಧ ಕರ್ಣಾಟಕ ’ದ ಸಂಸ್ಥಾಪಕರೂ, ಮೈಸೂರು ವಿಶ್ವ ವಿದ್ಯಾನಿಲಯದ ಪ್ರಾಧ್ಯಾಪಕರೂ ಅವರೆಂದ ಮೇಲೆ ಕನ್ನಡದ ಬಗೆಗೆ ಅವರಿ ಗಿದ್ದ ಅಭಿಮಾನವನ್ನು ಅಳೆಯುವ ಪ್ರಯತ್ನ ಸಲ್ಲದು. ಒಂದು ಮಾತಿನಲ್ಲಿ ಹೇಳುವುದಾದರೆ ಎ. ಆರ್. ಕೃ. ಅವರು ಕನ್ನಡಕ್ಕಾಗಿ ಬಾಳಿದರು, ಅದನ್ನೂ ಬಾಳಿಸಿದರು.

ಅವರು ಬರವಣಿಗೆಗೆ ತೊಡಗಿದ ಕಾಲ ಮೇಲೆ ತಿಳಿಸಿದಂತೆ ಸಂಧಿಕಾಲವಾಗಿತ್ತು. ಕನ್ನಡ ಕವಿತೆಗೆ ಕವಿಜನಮನ ಒಲಿದಿದ್ದ ಆ ಕಾಲದಲ್ಲಿ ಎ. ಆರ್. ಕೃ. ಅವರು ಗದ್ಯವನ್ನು ಮಾತ್ರ ತಮ್ಮ ಕ್ಷೇತ್ರವನ್ನಾಗಿ ಹೇಗೆ ಆರಿಸಿಕೊಂಡರೆಂಬುದು ಇಂದಿಗೂ ಅಚ್ಚರಿಯ ಸಂಗತಿಯಾಗಿದೆ. ಇಂದಿನ ಅತ್ಯು ತ್ತಮ ಗದ್ಯಕಾರರೆನಿಸಿಕೊಂಡವರೆಲ್ಲ ಬಹುಪಾಲು ಕವಿ ಗಳೂ ಆಗಿದ್ದಾರೆಂಬುದೇ ಇದಕ್ಕೆ ನಿದರ್ಶನ. ಆದರೂ ಎ. ಆರ್. ಕೃ. ಅವರು ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ಸವ್ಯಸಾಚಿಗಳಾಗಿದ್ದಾರೆ.

ಅವರು ಬರೆದಿರುವುದು ಇಂದಿನ ಹಲವರಿಗೆ ಹೋಲಿಸಿ ದರೆ ಹೆಚ್ಚೇನೂ ಅಲ್ಲ–ಸಂಖ್ಯೆಯಲ್ಲಿ–ಎನಿಸುತ್ತದೆ. ಅವರ ಗ್ರಂಥಗಳನ್ನು ಕೈ ಬೆರಳುಗಳಿಂದ ಎಣಿಸಬಹುದಾಗಿದೆ.

ಆದರೆ, ಬರೆದುದು ಅಲ್ಪವಾದರೂ ಚೊಕ್ಕಚಿನ್ನ, ಕಾಗೆ ಬಂಗಾರವಲ್ಲ; ಚಿರಕಾಲ ಉಳಿಯಬಲ್ಲ ಗುಣವನ್ನು ಅವು ಪಡೆದಿವೆ. ಪ್ರತಿಯೊಂದೂ ಗುಣಗಾತ್ರಗಳೆರಡರಲ್ಲಿಯೂ ಹಿರಿದೆನಿಸುವಂತಹವೇ. ಅವರ ಸಮಗ್ರ ರಚನೆ ೪೦೦೦ ಪುಟಗಳಷ್ಟಾಗಬಹುದು. ಅವರು ಮನಸ್ಸು ಮಾಡಿದ್ದರೆ ಇನ್ನೂ ಹೆಚ್ಚು ಬರೆಯಬಲ್ಲವರಾಗಿದ್ದರು. ಆದರೆ ಬರೆದುದೆಲ್ಲ ಚೊಕ್ಕವಾಗಿರಬೇಕು, ಉತ್ತಮ ಗುಣದ್ದಾಗಿರಬೇಕು, ಸಪ್ರಮಾಣವಾಗಿರಬೇಕು, ಎಂಬ ಹಿರಿಯಾಸೆ ಅವರಲ್ಲಿ ಇಲ್ಲದಿದ್ದಲ್ಲಿ ಅವರ ಸಾಹಿತ್ಯ ಕೃತಿಗಳು ಅಸಂಖ್ಯವಾಗುತ್ತಿತ್ತೇನೊ! ಪರಿಷ್ಕೃತ ಸಾಹಿತ್ಯದ ಒಂದು ಪುಟ ಅವರಿಗೆ ಒಂದು ಗ್ರಂಥಕ್ಕೆ ಸಮನಾದುದು; ಇಂತಹ ಉದಾತ್ತ ಮನೋಧರ್ಮದಿಂದ ಹೊರಬಿದ್ದ ರಚನೆಗಳು ಉತ್ಕೃಷ್ಟವಲ್ಲದೆ ಮತ್ತೇನು?

ಅವರ ವಿದ್ವತ್ತು ಅಪಾರವಾದುದು, ಅನುಪಮವಾದುದು. ಕೇವಲ ಕನ್ನಡಕ್ಕೇ ಅವರ ಪಾಂಡಿತ್ಯ ಸೀಮಿತವಾಗಿರಲಿಲ್ಲ; ಇಂಗ್ಲಿಷ್, ಗ್ರೀಕ್, ಬಂಗಾಳಿಗಳಲ್ಲಿ ಅವರಿಗೆ ಆಳವಾದ ಪಾಂಡಿತ್ಯವಿತ್ತು. ಎಲ್ಲಕ್ಕಿಂತ ಮಿಗಿಲಾಗಿ ದೇವಭಾಷೆಯೆನಿಸಿದ ಸಂಸ್ಕೃತದತ್ತ ಅವರ ಒಲವು ಹೆಚ್ಚು. ಸಂಸ್ಕೃತದಲ್ಲಿ ಅವರು ಮಹೋಪಾಧ್ಯಾಯರು. ಅವರ ವಿದ್ವತ್ತಿಗೆ, ಪ್ರತಿಭೆಗೆ 'ವಚನಭಾರತ', 'ಕಥಾಮೃತ' ಮತ್ತು 'ಸಂಸ್ಕೃತ ನಾಟಕ' ಸಾಕ್ಷಿಯಾಗಿವೆ. ಅವರ ಆಳವಾದ ಅಭ್ಯಾಸ, ಅವಿರತ ಶ್ರದ್ಧೆ, ಪರಿಷ್ಕೃತ ತಿಳಿವಳಿಕೆಗಳಿಗೆ ಉದಾಹರಣೆಯಾಗಿ ಅವರ ಸಂಶೋಧನಾತ್ಮಕ ಸಾಹಿತ್ಯವೆನ್ನಬಹುದಾದ 'ಭಾಸಕವಿ' ಹಾಗೂ 'ಸಂಸ್ಕೃತ ನಾಟಕ' ದಲ್ಲಿ ಪ್ರತಿಯೊಂದು ಪರಿಚ್ಛೇದದ ಕೊನೆಗೆ ಅವರು ನೀಡಿರುವ ಲೇಖನ ಸಾಮಗ್ರಿಯನ್ನು ಪರಿಶೀಲಿಸಬಹುದು. ಇತ್ತೀಚಿನ ಅವರ ಕೃತಿಯಾದ 'ಬಂಕಿಮಚಂದ್ರ' ಸಾಹಿತ್ಯ ಅಕಾಡೆಮಿಯವರಿಂದ ಪುರಸ್ಕೃತವಾಗಿದೆ. ಸ್ವಭಾಷಾ ವ್ಯಾಮೋಹ, ದುರಭಿಮಾನ, ಭಾಷಾ ಮಾತ್ಸರ್ಯ ಹೆಚ್ಚುತ್ತಿರುವ ಈ ಕಾಲದಲ್ಲಿ ಕನ್ನಡ ಗ್ರಂಥಕಾರರೊಬ್ಬರು ಪರಭಾಷೆಯೆನ್ನಬಹುದಾದ ಬಂಗಾಳಿಯ ಶ್ರೇಷ್ಠ ಸಾಹಿತಿಯೊಬ್ಬನನ್ನು-ಅವನ ಅಸಂಖ್ಯ ಕೃತಿಗಳನ್ನು ಆಮೂಲಾಗ್ರವಾಗಿ ಮೂಲದಲ್ಲಿಯೇ ಅಭ್ಯಸಿಸಿ, ಅವನ ಜೀವನ-ಕೃತಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಸಮಗ್ರ ಸಾಹಿತ್ಯವನ್ನೂ ಅವಲೋಕಿಸಿ, ವಿಮರ್ಶಾಪೂರ್ವಕವಾಗಿ ಸಹೃದಯತೆಯಿಂದ ಅಧಿಕಾರಯುತವಾಗಿ ತಮ್ಮ ಜನತೆಗೆ ಪರಿಚಯಮಾಡಿಕೊಡಬಲ್ಲರೆಂಬುದಕ್ಕೆ ಅವರ ಆ ಕೃತಿ ನಿದರ್ಶನವಾಗಿದೆ. ಅವರು ಸಂಪಾದಿಸಿರುವ 'ಹರಿಶ್ಚಂದ್ರ ಕಾವ್ಯಸಂಗ್ರಹ'ದ ಮುನ್ನುಡಿ ಹಾಗೂ ವಚನಭಾರತ, ಕಥಾಮೃತಗಳಿಗೆ ಬರೆದಿರುವ ವಿಸ್ತಾರವಾದ ಉಪೋದ್ಘಾತಗಳು ಎಷ್ಟು ಉಪಯುಕ್ತವಾಗಿವೆಯೆಂಬುದನ್ನೂ, ಅವು ಆಯಾ ಕೃತಿಗಳ ಬೆಲೆಯನ್ನು ಹೆಚ್ಚಿಸಿರುವುದನ್ನೂ ಈ ಸಂದರ್ಭದಲ್ಲಿ ನೆನೆಯಬಹುದು. ವಚನಭಾರತ ಸಂಸ್ಕೃತ ನಾಟಕ ಮತ್ತು ಬಂಕಿಮಚಂದ್ರ ಕೃತಿಗಳು ಕನ್ನಡ ಗದ್ಯ ಸಾಹಿತ್ಯಕ್ಕೆ ಎ. ಆರ್. ಕೃ. ಅವರ ವೈಶಿಷ್ಟ್ಯಪೂರ್ಣ ಕೊಡುಗೆಗಳಾಗಿವೆ.

೨

ಶ್ರೀ ಎ. ಆರ್. ಕೃ. ಅವರು ಸಣ್ಣಕತೆಗಳ ಕ್ಷೇತ್ರದಲ್ಲಿಯೂ ಕೈಹಾಕಿ ಸಿದ್ಧಹಸ್ತರಾಗಿದ್ದಾರೆ. ಅವರ ಕತೆಗಳು ಸಂಖ್ಯೆಯಲ್ಲಂತೂ ಬಹು ಕಡಮೆ—'ಪ್ರಬುದ್ಧ ಕರ್ಣಾಟಕ'ದಲ್ಲಿ ಬೆಳಕು ಕಂಡವು ಹನ್ನೆರಡು ಮತ್ತು ಇತ್ತೀಚಿನದು ಒಂದು; ಒಟ್ಟು ಹದಿಮೂರು ಮಾತ್ರ. ಇವು 'ಶ್ರೀಪತಿಯ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಸಂಗೃಹೀತವಾಗಿವೆ. ಅವರ ಮೊದಲ ಸಣ್ಣಕತೆ ೧೯೨೩ರಷ್ಟು ಹಿಂದೆಯೇ ಅಚ್ಚಾಯಿತು. ಇತ್ತೀಚಿನದೆಂದರೆ ೧೯೪೪ರಲ್ಲಿ ಪ್ರಕಟವಾಗಿರುವ 'ಭೀಮಣ್ಣನ ಬುದ್ಧಿವಂತಿಕೆ'. ಈ ೨೨ ವರ್ಷಗಳ ನಡುವಣ ಅವಧಿಯಲ್ಲಿ ಅವರು ಬರೆದವು ಹನ್ನೆರಡು ಮಾತ್ರ ಎಂಬ ಸಂಗತಿ ಸೋಜಿಗದ್ದು. ಅವರು ಸಣ್ಣಕತೆ ಬರೆಯಲು ಪ್ರಾರಂಭಿಸುವ ಕಾಲಕ್ಕಾಗಲೇ 'ಶ್ರೀನಿವಾಸ'ರು ಸಣ್ಣಕತೆಗಳ ಕ್ಷೇತ್ರವನ್ನು ಹಸನುಮಾಡಿ ಹೆಸರುಗಳಿಸಿದ್ದರು. ಬಹುಶಃ ಎ.ಆರ್.ಕೃ. ಅವರ ಸಣ್ಣಕತೆಗಳಲ್ಲಿ ಅವರ ಪ್ರಭಾವವನ್ನು ಕಾಣಲಾಗದಿದ್ದರೂ ರಚನೆಯ ಪ್ರೇರಣೆ ಅವರಿಂದಲೇ ಒದಗಿರಬೇಕು, ದೊರೆತಿರಬೇಕು.

ಶ್ರೀ ಶಾಸ್ತ್ರಿಗಳು ಹಲವು ಹೆಸರುಗಳಲ್ಲಿ ಈ ಸಣ್ಣಕತೆಗಳನ್ನು ಬರೆದಿರುತ್ತಾರೆ—ಉದಾ. ಗೆ ಶ್ರೀಪತಿ, ಕಮಲ, ಆರ್. ಎ. ಕಪ್ಪಣ್ಣ, ಶಾಮಣ್ಣ, ಗೋಪಾಲ, ಪದ್ಮನಾಭ ಇತ್ಯಾದಿ. ವಿವಿಧ ನಾಮಧೇಯಗಳನ್ನು ನಿರ್ದೇಶಿಸುವುದರ ಹಿಂದೆ ಅವರ ಉದ್ದೇಶವೇನಿತ್ತೆಂಬುದು ಇಂದಿಗೂ ಅನಿರ್ದಿಷ್ಟವಾಗಿಯೇ ಉಳಿದಿದೆ.

"ಈ ಕತೆಗಳು ತಮ್ಮದೇ ಆದ ವ್ಯಕ್ತಿತ್ವದಿಂದ ಕೂಡಿವೆ: ... ಜೀವನದ ಕಷ್ಟ ಕಾರ್ಪಣ್ಯಗಳು ಕತೆಗಾರರ ಮನಸ್ಸನ್ನು ಕರಗಿಸಿವೆ, ಬಹುಶಃ ಇಲ್ಲಿನ ಕತೆಗಳಲ್ಲೆಲ್ಲ ಒಂದಲ್ಲ ಒಂದು ರೀತಿಯ ಕ್ಲೇಶದಿಂದ ಕೂಡಿರುವ ಸನ್ನಿವೇಶಗಳನ್ನು ಕಾಣಬಹುದು. ಜೀವನದಲ್ಲಿ ಕ್ಲೇಶ ಇರಬೇಕೆ? ಅದು

ಅಪರಿಹಾರ್ಯವೆ? ಅದರ ಉದ್ದೇಶವೇನು?—ಎಂಬ ಪ್ರಶ್ನೆಗಳಿಗೆ ಸಮಾಧಾನವನ್ನು ಕತೆಗಳಲ್ಲಿ ಅರಸಬಹುದು."

'ಶ್ರೀಪತಿ'ಯ ಒಂದೆರಡು ಕಥೆಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವುದರ ಮೂಲಕ ಅವರ ಕಥನ ಕೌಶಲ, ವಸ್ತುವನ್ನು, ಆಯುವ ದೃಷ್ಟಿ, ನಿರ್ವಹಣೆಗಳನ್ನು ಪರಿಶೀಲಿಸಬಹುದು.

೩

ಅವರ ಮೊಟ್ಟಮೊದಲ ಕತೆ 'ನನ್ನ ಸ್ನೇಹಿತ' ೧೯೩೩ರ ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚಾಗಿದೆ. ಈ ಕತೆಯ ನಾಯಕ ಕಿಟ್ಟು (ಕಿಟ್ಟಣ್ಣ) ಬೆಂಗಳೂರಿನಲ್ಲಿ F.A. ಓದುತ್ತಿರುವಾಗ ದೊಡ್ಡ ಮನುಷ್ಯರೊಬ್ಬರು ಮರುಳು ಮಾಡಿ ತಮ್ಮ ಮಗಳನ್ನು ಅವನಿಗೆ ಗಂಟು ಹಾಕಿಸುತ್ತಾರೆ. ಈ ಮೊದಲು ಅವನು ತನ್ನ ಸೋದರ ಮಾವನ ಮಗಳಾದ ಪುಟ್ಟುವನ್ನು ಮೆಚ್ಚಿರುತ್ತಾನೆ. ಮೊದಲಿಂದ ಅವರಿಗೆ ಗಂಡ-ಹೆಂಡತಿ ಎಂದು ಹಾಸ್ಯ ಮಾಡುತ್ತಿರುತ್ತಾರೆ. ಆದರೆ ಜಾತಕ ಕೂಡಿ ಬರದೆಂಬ ಕಾರಣಕ್ಕಾಗಿ ಕಿಟ್ಟುವಿನ ತಂದೆ ಈ ವಿವಾಹಕ್ಕೆ ನಕಾರ ಸಚಿಸುತ್ತಾನೆ. ಹೊಸದಾಗಿ ಬಂದ ಶ್ರೀಮಂತ ಹೆಂಡತಿಯೊ ಸಾಕ್ರೆಟೀಸ್‌ನ ಹೆಂಡತಿಯಾಗಿ ಪ್ರತಿಬಿಂಬಿಸುತ್ತಾಳೆ ಗುಣದಲ್ಲಿ. ಸಂಸಾರದಲ್ಲಿ ಹೊಂದಿಕೊಂಡುಹೋಗುವುದನ್ನೇ ಅರಿಯದೆ ಮಾತು ಮಾತಿಗೂ ಅವನನ್ನು ಹಂಗಿಸಿ, ಪೀಡಿಸಿ ಸ್ವಭಾವತಹ 'ರಸಿಕ'ನಾದ ಕವಿಮನೋಧರ್ಮದ (ಕೆಲವು ಜನಪ್ರಿಯ ಕವನಗಳ ಕರ್ತೃ ಸಹ) ಅವನಿಗೆ ಸರ್ವದಾ ಬೇಸರಗೊಳಿಸುತ್ತಾಳೆ. ಒಮ್ಮೊಮ್ಮೆ ಅವನು 'ತಾನು ಪುಟ್ಟುವನ್ನು ಮದುವೆ ಮಾಡಿಕೊಂಡಿದ್ದರೆ'ಎಂದು ಯೋಚಿಸುವ ಹಾಗಾಗುತ್ತಿತ್ತು. ಆದರೆ ಈ ವೇಳೆಗೆ ಪುಟ್ಟುವಿನ ಲಗ್ನವೂ ಆಗಿತ್ತು. ಅವಳ ಜಾತಕದ ಫಲದಂತೆ ಅವಳ ಕೈಹಿಡಿದವನು ಅನಿರೀಕ್ಷಿತವಾಗಿ ವರ್ಷದೊಳಗೆ ಸ್ವರ್ಗಸ್ಥನಾದನು. ಪುಟ್ಟುವಿನ ದುಃಸ್ಥಿತಿಗಾಗಿ ಕಿಟ್ಟಣ್ಣನಿಗೆ ಮರುಕ, ವ್ಯಥೆ, ಜೊತೆಗೆ ಅವಳು ಗಂಡ ಸತ್ತಾಗ ಮೂರು ತಿಂಗಳ ಗರ್ಭಿಣಿ ಬೇರೆ. ಅವಳನ್ನು ಕಾಣಬೇಕೆಂದು ಹಳ್ಳಿಗೆ ಅವನು ಹೋದಾಗ 'ಯಾವ ಸೌಭಾಗ್ಯವಿದೆ'ಯೆಂದು ಅವಳು ಮುಖ ತೋರಿಸುವುದಿಲ್ಲ.

ಅವಳಿಗೆ ಹುಟ್ಟಿದ ಮಗುವಿಗೆ 'ಕಿಟ್ಟಣ್ಣ'ನೆಂದೇ ಹೆಸರಿಟ್ಟಳು. ಅವನು ಕಿಟ್ಟಣ್ಣನ ತದ್ರೂಪು ಬೇರೆ ಇನ್ನೊಮ್ಮೆ ಅವಳನ್ನು ಕಾಣಬೇಕೆಂದು ಬಯಸಿ ಹಳ್ಳಿಗೆ ಹೋದಾಗ ಅವಳು ಸರಿಯಾದ ಜೊತೆ ದೊರೆತದ್ದರಿಂದ ಕಾಶೀಯಾತ್ರೆಗೆ ಹೋಗಿರುತ್ತಾಳೆ. ಮನೆಯಲ್ಲಿದ್ದ ಮುದುಕಿಯ ಕೈಗೆ ಅವಳಿಗಾಗಿ ತಂದಿದ್ದ ಉಡುಗೊರೆಯನ್ನೂ ಮಗುವಿಗಾಗಿ ತಂದಿದ್ದ ಪೆಪ್ಪರ್‌ಮೆಂಟು ಚೀಲವನ್ನೂ ಕೊಟ್ಟು ನಿರಾಶನಾಗಿ ಹಿಂದಿರುಗುತ್ತಾನೆ.

ಹಲವು ವರ್ಷಗಳುರುಳಿವೆ. ಕಿಟ್ಟಣ್ಣನಿಗೆ ಅತೀವ ದೇಹಾಲಸ್ಯ. ತಾನು ಈ ಬಾರಿ ಉಳಿಯುವುದಿಲ್ಲವೆಂದು ಅರಿತಿದ್ದರೂ ಗೆಳೆಯನಿಗಾಗಿ ಔಷಧ ಕುಡಿಯುತ್ತಾನೆ. ಸಾಯುವುದರೊಳಗಾಗಿ ಒಮ್ಮೆ ಪುಟ್ಟುವನ್ನು ಕಾಣಬೇಕೆಂಬ ಅವನ ಹಿರಿಯಾಸೆಗೆ ಪುಟವಿಟ್ಟಂತೆ ಒಂದು ಸಂಜೆ ಅವಳು ಬರುತ್ತಾಳೆ-(ಅವಳಿಗೆ ಬೆಂಗಳೂರಿಗೆ ಬಂದಾಗ ಇಲ್ಲಿಗೆ ಬರಬೇಕೆಂಬ ಮನಸ್ಸು ಇರುವುದಿಲ್ಲವಾದರೂ ಜೊತೆಯವರಾದ ಸುಬ್ಬಣ್ಣನವರು ಹಣದ ಅಡಚಣೆ ಇತ್ಯಾದಿ ಕಾರಣಗಳಿಂದ ತಮಗೆ ಗುರುತಾಗಿದ್ದ ಕಿಟ್ಟಣ್ಣನನ್ನು ಕಾಣಲೇಬೇಕಿದ್ದುದರಿಂದ ಅವಳೂ ಬರಬೇಕಾಗುತ್ತದೆ.) ಅವಳಿಗೂ ಆರೋಗ್ಯ ಉತ್ತಮವಾಗಿರುವುದಿಲ್ಲ.

"ಅವರು ಒಬ್ಬರನ್ನೊಬ್ಬರು ನೋಡಿದಾಗ ಇಬ್ಬರೂ ಅಪ್ರತಿಭರಾದರು. ಈಗ ಅವರು ಮೊದಲಿನ ಪುಟ್ಟು-ಕಿಟ್ಟಣ್ಣರಾಗಿರಲಿಲ್ಲ. ಆದರೂ ಇಬ್ಬರಿಗೂ ಅವರು ಮೊದಲಿನ ಹಾಗೆಯೇ ಇದ್ದರೆಂದು ಭ್ರಾಂತಿ! ಒಳಗೆ ದೂಡಿ ಬೀಗ ಹಾಕಿದ್ದ ದುಃಖಕ್ಕೆ ಬಾಗಿಲು ತೆಗೆದು ಕೊಟ್ಟಂತಾಯಿತು. ಆಮೇಲೆ ಇಬ್ಬರಿಗೂ ರೋಗ ದಿನೇ ದಿನೇ ಹೆಚ್ಚುತ್ತಾ ಬಂತು" ಈ ನಡುವೆ, ಪುಟ್ಟುವಿನ ಮಗನನ್ನು ತನಗೆ ಮಕ್ಕಳಿಲ್ಲವೆಂದು ಕಿಟ್ಟಣ್ಣ 'ದತ್ತು' ತೆಗೆದುಕೊಂಡು ಅವನ ಹೆಸರಿಗೆ ಆಸ್ತಿಯ ಉಯಿಲನ್ನು ಬರೆಯುತ್ತಾನೆ.

ಕಿಟ್ಟಣ್ಣನಿಗೆ ಮಾಡಿದ ಔಷಧೋಪಚಾರ ವ್ಯರ್ಥವಾದಂತೆ ಅವನು ತನ್ನ ಕೊನೆಯುಸಿರನ್ನೆಳೆಯುತ್ತಾನೆ; ಅವನನ್ನು ಅಗಲಲಾರದೆ ಪುಟ್ಟುವೂ ಹಿಂಬಾಲಿಸುತ್ತಾಳೆ— (ವಾಸ್ತವ ಜೀವನದಲ್ಲಿ ಅವನೊಡನೆ ಬದುಕಲಾಗದಿದ್ದರೂ ಪರದಲ್ಲಿಯಾದರೂ ಈ ಅಭಿಲಾಷೆ ಈಡೇರಬಹುದೆಂಬ ಆಸೆಯಿಂದಲೇನೋ).

ಕತೆಗಾರರು 'ಪರಿಶಿಷ್ಟ'ವನ್ನು ಬರೆಯುತ್ತಾ ಕಿಟ್ಟಣ್ಣನ ಆಸ್ತಿ-ಪಾಸ್ತಿಗಳ ವಿವರಗಳನ್ನು ವ್ಯವಸ್ಥೆ ಮಾಡಿಸಿ, ಅವನ ಹೆಂಡತಿಯ ಜೀವನಕ್ಕೆ ಏರ್ಪಾಡು ಮಾಡುತ್ತಾರೆಂಬುದನ್ನೂ ಪುಟ್ಟುವಿನ ಮಗುವಿಗೆ ಹಳ್ಳಿಗೆ ಹೋಗಿದ್ದಾಗ ಕಿಟ್ಟಣ್ಣ ನೀಡಿದ್ದ ಉಡುಗೊರೆ ಏನೆಂಬುದನ್ನೂ ವಿವರಿಸುತ್ತಾರೆ. ಅದರೊಳಗೆ ಇದ್ದುದು "ನಕಾಸೆ ಕೆಲಸಮಾಡಿದ ಒಂದು ಗಂಧದ ಮರದ ಸಣ್ಣ ಪೆಟ್ಟಿಗೆ; ಅದರೊಳಗೆ ಕಿಟ್ಟಣ್ಣನು ಬರೆದ ಪದ್ಯಗಳ ಸಣ್ಣ ಪುಸ್ತಕ; ಮೂರು

ಸಣ್ಣ ಪಟಗಳು—ಒಂದು ಸರಸ್ವತಿಯದು, ಒಂದು ವಿವೇಕಾನಂದರು, ಮತ್ತೊಂದು ಕಿಟ್ಟಣ್ಣನ ಪಟ."

'ದಾಂಪತ್ಯ ಸ್ವರ್ಗದಲ್ಲಿ ಆದದ್ದು' ಎಂಬ ಆಂಗ್ಲ ಉಕ್ತಿ ಒಂದಿದೆ. ಈ ಸಂದರ್ಭದಲ್ಲಿ ಅದು ನೆನಪಾಗುತ್ತದೆ. ಅನುಕೂಲ ದಾಂಪತ್ಯವಾಗಬೇಕಾದರೆ ಪರಸ್ಪರರಲ್ಲಿ ಪ್ರೀತಿ–ವಿಶ್ವಾಸಗಳಿರಬೇಕು. ಕೇವಲ ವಿವಾಹವಾದಾಕ್ಷಣ ಮಾನಸಿಕ ಸಮ್ಮಿಲನವಾದಂತೆನ್ನಲಾಗದು—ಇದು ಇಲ್ಲದಿದ್ದರೆ ವಿವಾಹ ಒಂದು ಬಂಧನ ಎನಿಸುತ್ತದೆ. ಇಲ್ಲಿ ಕತೆಯ ನಾಯಕ ಪುಟ್ಟುವನ್ನು ಮದುವೆಯಾಗಿದ್ದಿದ್ದರೆ ಸುಖ–ಸಂತೋಷಗಳಿಂದ ಇರಬಹುದಾಗಿತ್ತು. ಆದರೆ, ತನ್ನ ಸುಖಕ್ಕೆಲ್ಲ ತಿಲಾಂಜಲಿ ನೀಡಿದಂತೆ ಅವನ ಮದುವೆ ಲಕ್ಷ್ಮಿಯೊಡನೆ ನಡೆದುಹೋಗುತ್ತದೆ. ಪಾಲಿಗೆ ಬಂದದ್ದು ಪಂಚಾಮೃತವೆಂದು ಕಿಟ್ಟು–ಪುಟ್ಟು ಇಬ್ಬರೂ ಯತ್ನಿಸಿದರೂ ವಿಧಿ ಅವರಿಗೆ ವಿರೋಧವಾಗಿದೆ. ಕೈಹಿಡಿದವನನ್ನೂ ವರ್ಷವೊಂದಕ್ಕೇ ಕಳೆದುಕೊಂಡು ವಿಧವೆಯಾಗಿ ಆಜೀವ ಪರ್ಯಂತ ಬಾಳಿನ ಅಸಹಾಯಕತೆ, ಕಠೋರತೆಗಳನ್ನು ಎದುರಿಸಬೇಕಾಗುತ್ತದೆ ಪುಟ್ಟು. ಕಿಟ್ಟುವಾದರೊ ಒಲ್ಲದ ಹೆಂಡತಿಯೊಡನೆ ಬಾಳಬೇಕಾಗುತ್ತದೆ. ಅವಳನ್ನು ತಿದ್ದಲು ಯತ್ನಿಸಿದನಾದರೂ ಅವಳು ಬಗ್ಗುವವಳಾಗಿರಲಿಲ್ಲ. ಉತ್ತಮ ಶಿಕ್ಷಣ, ಸಹನೆಗಳಿಂದ ಕೆಲವರನ್ನು ಸರಿಪಡಿಸಬಹುದು ಇನ್ನು ಕೆಲವರು — ಜಡಭರತನ ವಂಶಜರಿರಬೇಕು — ನೊಂಡರು ; ಏನು ಮಾಡಿದರೂ ಅವರನ್ನು ತಿದ್ದಲಾಗದು; ಆ ದಿಸೆಯಲ್ಲಿ ನಡೆವ ಎಲ್ಲ ಪ್ರಯತ್ನ ಗೋರ್ಕಲ್ಲ ಮೇಲೆ ಸುರಿದ ಮಳೆ! ಅಂಥವರಿಗೆ ಅನುರಾಗದ, ಸಮರಸದ ಕಲ್ಪನೆ ಮೂಡುವುದೇ ಇಲ್ಲ. ಕಿಟ್ಟುವಿನ ಮಾತಿನಲ್ಲಿಯೇ ಹೇಳುವುದಾದರೆ ಅಂಥವರು—"ಬೇವಿನ ಗಿಡ! ಏನು ಮಾಡಲಿ ಮಾಡದಿರಲಿ, ಅದರಲ್ಲಿ ಬಿಡುವುದು ಬೇವಿನ ಹಣ್ಣೇ!" ಆದರೆ ಪುಟ್ಟುವಂಥವರು—"ಮಾವಿನ ಗಿಡದ ಹಾಗೆ, ಏನು ಮಾಡಲಿ ಮಾಡದಿರಲಿ, ಅದರಲ್ಲಿ ಬಿಡುವುದು ಮಾವಿನ ಹಣ್ಣೇ!" ಬೇವಿನ ಹಣ್ಣಿನಂತಹ ಹೆಂಡತಿಯನ್ನು ಏಕೆ ತೊರೆಯಬಾರದು ಎಂಬ ಪ್ರಶ್ನೆ ಏಳಬಹುದಾದರೂ ಕಿಟ್ಟಣ್ಣನಂತಹ ಉದಾತ್ತ ಮನೋಭಾವದ ವ್ಯಕ್ತಿಯ ಉತ್ತರ—"ಪಾಪ! ಅಂಥ ಅಪರಾಧ ಅವಳಲ್ಲೇನಿದೆ? ಅದು ಅವಳ ಸ್ವಭಾವವೆಂದು ಆಗಲೇ ಹೇಳಿದೆನಷ್ಟೆ . . . ಮದುವೆಯಾದರೆ ಸುಖವಾಗಿರುತ್ತೇವೆ, ಹೀಗಿರುತ್ತೇವೆ, ಹಾಗಿರುತ್ತೇವೆ, ಎಂದು ನಮಗೆ ಹೇಗೆ ಆಶೆಯಿರುತ್ತದೆಯೊ ಹಾಗೆಯೇ ಅವರಿಗೂ ಆಶೆಯಿರುತ್ತದೆ. ನಮ್ಮ ಮನಸ್ಸಿಗೆ ಒಪ್ಪುವಂತೆ ಮತ್ತೊಬ್ಬರು ನಡೆಯುತ್ತಿಲ್ಲವೆಂದು ಆಕ್ಷೇಪಣೆ ಮಾಡತಕ್ಕ ನಾವು, ಮತ್ತೊಬ್ಬರಿಗೆ ಅನುಕೂಲವಾಗಿರುವಂತೆ ನಡೆಯಬೇಕೋ ಇಲ್ಲವೊ".

ಆದರೆ, ಎಲ್ಲರೂ ಕಿಟ್ಟಣ್ಣನಂತಹವರೇ–ಅಷ್ಟು ವಿಶಾಲ ಹೃದಯರೇ–ಇರುವುದಿಲ್ಲ ಸಮಾಜದಲ್ಲಿ. ಅವನ ಒಟ್ಟು ಸಿದ್ಧಾಂತ ಇದು–"ಕೆಲವರು ಮದುವೆ ಮಾಡಿಕೊಳ್ಳುವುದು ಕಾಲಿಗೆ ಮುಳ್ಳು ಚುಚ್ಚಿಕೊಳ್ಳುವ ಹಾಗೆ; ಇನ್ನು ಕೆಲವರು ಮದುವೆ ಮಾಡಿಕೊಳ್ಳುವುದು ಕಲ್ಲಿನಮೇಲೆ ಕಲ್ಲಿಟ್ಟು ಕುಟ್ಟುವ ಹಾಗೆ. ಇನ್ನು ಕೆಲವರು ಎಲ್ಲಿಯೋ ಕೆಲವರು ಮದುವೆ ಮಾಡಿಕೊಳ್ಳುವುದು ಎರಡು ಹೂಗಳು ಸೇರುವ ಹಾಗೆ"–

ನಿಜ, ಅನುಕೂಲ ದಾಂಪತ್ಯ ಎರಡು ಹೂಗಳು ಸೇರಿದಂತಿರುತ್ತದೆ. ಜೀವನದಲ್ಲಿ ಸುಖ ಸಂತೃಪ್ತಿ ದೊರೆತು ಸಫಲ ದಾಂಪತ್ಯವಾಗಬೇಕಾದರೆ ಎರಡು ಹೃದಯಗಳು, ಮನಸ್ಸುಗಳು ಪರಸ್ಪರ ಅರಿತು ಒಂದಾಗಬೇಕು. ಹಾಗಾಗದೆ ಗಂಡು–ಹೆಣ್ಣುಗಳ ಮನಸ್ಸು, ನಡೆ ನುಡಿ ಉತ್ತರ–ದಕ್ಷಿಣ ಧ್ರುವಗಳಾದರೆ ವಿಷಮತೆ ಸುಳಿಯುತ್ತದೆ. ಬಾಳು ಒಡೆದ ಹಾಲಿನಂತಾಗುತ್ತದೆ, ಬದುಕು ದುರ್ಭರವಾಗಿ ಅಸಹನೀಯವಾಗುತ್ತದೆ. ಪುಟ್ಟು–ಕಿಟ್ಟುರ ಅನ್ಯೋನ್ಯ ಮನಸ್ಸನ್ನೂ ಕಿಟ್ಟು–ಲಕ್ಷ್ಮಿಯರ ವಿಷಮತೆಯನ್ನೂ ಹೋಲಿಸಿದಾಗ ಇದು ಸತ್ಯವೆನಿಸೀತು.

*　　　*　　　*

ಹೃದಯ ಮನಸ್ಸುಗಳ ಸಮ್ಮಿಲನ ಅನುಕೂಲ ದಾಂಪತ್ಯದ ಅತ್ಯಾವಶ್ಯಕತೆ ಎಂಬ ತತ್ವವನ್ನು ಎ. ಆರ್. ಕೃ. ಅವರು 'ನನ್ನ ಸ್ನೇಹಿತ' ಕತೆಯಲ್ಲಿ ಪ್ರತಿಪಾದಿಸಿದರೆ 'ಶ್ಯಾನುಭೋಗನ ಪುಣ್ಯ' ಕತೆಯಲ್ಲಿ ಸೌಜನ್ಯದ ಬೆಲೆಯನ್ನು ಪರಿಚಯ ಮಾಡಿಕೊಡುತ್ತಾರೆ. ಈಗ್ಗೆ ೩೦–೪೦ ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಶಾನುಭೋಗನೆಂದರೆ ಆ ಹಳ್ಳಿಯ ದಣಿ ಎಂದು ಭಾವಿಸುತ್ತಿದ್ದರು. ಆದರೆ, ಆ ಊರಿನಲ್ಲಿ ಪುಂಡಪೋಕರಿಗಳ ಸಂತೆಯಿದ್ದರೊ ಅವರ ಜೀವ ಯಾವಾಗಲೂ ಗಂಡಾಂತರದಲ್ಲಿದ್ದದ್ದೇ. ಎಷ್ಟೇ ನ್ಯಾಯಪರನಾಗಿ ನಿಷ್ಪಕ್ಷಪಾತನಾಗಿ ಪ್ರಾಮಾಣಿಕನಾಗಿ ಆತ ಕೆಲಸ ಮಾಡುತ್ತಿದ್ದರೂ ಒಮ್ಮೊಮ್ಮೆ ಅನ್ಯಾಯ, ತಪ್ಪು ಆಗುವುದುಂಟು; ಅದರ ಪರಿಣಾಮ ತೀವ್ರವಾಗುವುದುಂಟು. ಶಾನುಭೋಗ ಶಾಮಣ್ಣ ಅಂತಹದೊಂದು ಸಂದರ್ಭದಲ್ಲಿ ಸಿಕ್ಕಿಬಿದ್ದು, ತಮ್ಮ ಧರ್ಮಪತ್ನಿ ಲಕ್ಷ್ಮಿದೇವಮ್ಮನವರ "ಮಹಾತ್ಮ್ಯೆ"ಯಿಂದ ಪುಂಡರ ಕೈಗೆ ಸಿಕ್ಕಿ ಕೊಲೆಯಾಗದೆ ಉಳಿದುಕೊಂಡ ಕತೆಯನ್ನು ಎ. ಆರ್. ಕೃ. ಅವರು ಅವರು ಇಲ್ಲಿ ವಸ್ತುವನ್ನಾಗಿಸಿಕೊಂಡಿದ್ದಾರೆ.

ಒಂದು ಪುಷ್ಯಶುದ್ಧ ಹುಣ್ಣಿಮೆಯ ದಿನ; ಬನಶಂಕರಿಯ ಪೂಜೆ ನಡೆಯುತ್ತಿದೆ- ಲಕ್ಷ್ಮೀದೇವಮ್ಮನವರ ಮನೆಯಲ್ಲಿ. ಅವರು ಒಳಗೆ ಅಡಿಗೆ ಮಾಡುತ್ತಿದ್ದರು. ಆಗ ೧೦-೧೫ ಜನ ರೈತರು ಆ ಮನೆಯ ಕಡೆಗೆ ಬಹು ಕ್ಷುಭಿತರಾಗಿ ಬರು ತ್ತಿದ್ದಾರೆ. ಆಕೆ ಅದನ್ನು ಕಂಡು ಗಾಬರಿಯಾದರು. 'ಮಂಗಳಾರತಿಯ ಸಮಯ' ವೆನ್ನುತ್ತಿದ್ದರೂ ಕೂಡಲೇ ಆಕೆ ನೀರುತರುವ ನೆಪಹಾಕಿ ಹೊರಹೊರಟರು. ರೈತರು ಬಾಗಿಲಿಗೆ ಆ ಸಮಯಕ್ಕೆ ಬಂದು ಒಳಗೆ ನುಗ್ಗುವುದ ರಲ್ಲಿದ್ದು ಆಕೆಯನ್ನು ಕಂಡು ತಟ್ಟನೆ ನಿಂತರು. ಅವರ ಮುಖವನ್ನು ಕಂಡು ಅರ್ಧ ತಣ್ಣಗಾದರವರು. "ಶಾನು ಭೋಗರೆಲ್ಲಮ್ಮ?" ಬಂದವರು ಉದ್ರಿಕ್ತರಾಗಿ ಪ್ರಶ್ನಿಸಿದರು. ಇನ್ನೂ ಬಂದಿಲ್ಲವೆಂದು ತಿಳಿಸಿ, ಏನಾಗಿರಬಹುದೆಂದು ಊಹಿಸಿ, ಆಕೆ ಅವರನ್ನು ಕೂರಿಸಿ, ಬಾಯಾರಿಕೆಗಿತ್ತು ಸತ್ಕರಿಸಿ, ಹಬ್ಬಕ್ಕೆಂದು ಮಾಡಿದುದನ್ನೆಲ್ಲ ಬಡಿಸಿ ಊಟ ವಿತ್ತು, ತಮ್ಮ ಸೌಜನ್ಯತೆಯಿಂದ ಅವರ ಕೋಪ ಶಮನ ವಾಗಲು ದಾರಿಮಾಡಿಕೊಟ್ಟರು. (ಅವರು ಬಂದಿದ್ದುದನ್ನು ತಿಳಿದಿದ್ದ ರಾಮಣ್ಣ ಆ ಸಮಯದಲ್ಲಿ ಮನೆಯ ಹಿಂದಿನ ಕೊಠಡಿಯಲ್ಲಿ ಅಡಗಿರುತ್ತಾನೆ).

ಎಲ್ಲರ ಊಟವಾದಮೇಲೆ ಹೊರಡುವ ಮುನ್ನ ಆ ರೈತರು ತಾವು ತಂದಿದ್ದ ಮಚ್ಚುಗಳನ್ನು ತೋರಿಸಿ "ಅಮ್ಮ, ಇವತ್ತು ನಿನ್ನ ಗಂಡನ್ನ ಬದುಕಿಸಿಕೊಂಡೆ; ಹೋಗು, ನಿನ್ನ ತಾಳೀಪುಣ್ಯ ಚೆನ್ನಾಗಿತ್ತು. ಹಾಲು, ತುಪ್ಪ ಇಟ್ಟು ನಮ್ಮನ್ನು ಕೊಂದೆ"—ಎಂದರು.

"ಏನೊಪ್ಪ, ಸರ್ಕಾರದ ನೌಕರಿಯೇ ಕೆಟ್ಟದ್ದು; ಹಿಂದೆ ಕೆರೆ ಮುಂದೆ ಭಾವಿ; ನಿಮ್ಮ ಕಡೆ ಸೇರಿದರೆ, ಸುಬೇದಾರರು ಎಳಕೊಂಡು ಬಾ ಶಾನುಭೋಗನ್ನ ಅಂತಾರೆ; ಅವರಿಗೆ ಸಹಾಯವಾದರೆ ನೀವು, ಬನ್ನಿ ಒಡೆಯೋಣ ಶಾನುಭೋಗನ ತಲೇನ ಅಂತೀರಿ. ಶಾನುಭೋಗರಿಲ್ಲದಿದ್ದರೆ ಒಂದು ಗಳಿಗೆ ನಡೆಯುವ ಹಾಗಿಲ್ಲ; ಶಾನುಭೋಗರು ನಿಮಗೂ ಬೇಕು, ಸರ್ಕಾರಕ್ಕೂ ಬೇಕು; ಸರ್ಕಾರದ ಕೆಲಸ ಹುಟ್ಟುವುದು ನಡೆಯುವುದು ಮುಗಿಯುವುದು ಎಲ್ಲಾ ಶಾನುಭೋಗ ರಿಂದಲೇ; ಆದರೂ ಅವರು ಮಾತ್ರ ಯಾವಾಗ ಏನೋ ಅಂತ ಎಡಗೈಲಿ ಜೀವ ಹಿಡಿದುಕೊಂಡು ಕೆಲಸ ಮಾಡ ಬೇಕು. ಇಷ್ಟಾದರೂ ಶಾನುಭೋಗರು ಸುಲುಕೊಂಡು ತಿಂತಾರೇ ಅಂತ ದೂರು ತಪ್ಪುವುದಿಲ್ಲ. ನಿಮ್ಮ ಹತ್ತಿರ ವೆಲ್ಲಾ ಸುಲುಕೊಂಡು ತಿಂದು ನಾವು ಮನೆಯ ಮೇಲೆ ಹಾಕಿಕೊಂಡಿರುವ ಬಂಗಾರದ ಕಳಶಗಳನ್ನು ನೀವು ಕಾಣಿರಾ? . . . ನಾನು ನಿಮಗೆ ಹಾಲು ತುಪ್ಪ ಇಟ್ಟೆ ಅಂದಿರಿ. ಹಾಲು ತುಪ್ಪಕ್ಕೆ ಏನು ಕಮ್ಮಿ ಅಪ್ಪಾ! ನಿಮ್ಮ ಮನೆಗೆ ಈಗ ನಾನು ಬಂದರೆ ನನಗೆ ನೀವು ಒಬ್ಬೊಬ್ಬರೂ ಹತ್ತು ಹತ್ತು ಸೇರು ಹಾಲು ಕೊಡಬಲ್ಲಿರಿ"-ಎಂದು ಸಮಾ ಧಾನ ಮಾಡಿ ಆಕೆ ಅವರನ್ನು ಹಿಂದಿರುಗಿಸಿ, ತನ್ನ ಗಂಡ ನನ್ನು ಜೀವಸಹಿತ ರಕ್ಷಿಸಿಕೊಳ್ಳುತ್ತಾಳೆ-ತನ್ನ ಸಮ ಯೋಚಿತ ನಡವಳಿಕೆಯಿಂದ, ಸೌಜನ್ಯದಿಂದ. ಇದರ ಚಿತ್ರಣ ಹೃದಯಂಗಮವಾಗಿ ಮೂಡಿದೆ. ಆದರೆ ಇದನ್ನೆಲ್ಲ ಇಂದು ನಾವು ಕಾಣುವುದು ತೀರಾ ಅಪರೂಪವಾಗಿದೆ. ಅದಕ್ಕೂ ಕತೆಗಾರರೇ ಸಮಾಧಾನ ನೀಡುತ್ತಾರೆ-"ಜನರು ಕಾಲ ಕೆಟ್ಟು ಹೋಯಿತು ಕಾಲ ಕೆಟ್ಟು ಹೋಯಿತು ಎನ್ನು ತ್ತಾರೆ. ಕಾಲ ಕೆಟ್ಟು ಹೋಯಿತೋ ನಾವೇ ಕೆಟ್ಟು ಹೋದೆವೋ!" ಈ ಮಾತು ಸತ್ಯಸ್ಯಸತ್ಯ. ಕೆಡುತ್ತಿರುವ ವರು ನಾವಲ್ಲದೆ ಕಾಲವಲ್ಲ! "ನಮ್ಮ ನಡೆ ನುಡಿ ಚೆನ್ನಾಗಿ ದ್ದರೆ ಕಾಪಾಡುವ ದೇವರು ಹ್ಯಾಗೋ ಕಾಪಾಡುತ್ತಾನೆ" ಎಂಬುದು ಇಲ್ಲಿ ಕತೆಗಾರರು ಪ್ರತಿಪಾದಿಸಿರುವ ಎತ್ತಿ ತೋರಿಸಿರುವ ಆದರ್ಶ; ಇದನ್ನು ಲಕ್ಷ್ಮೀದೇವಮ್ಮನವರು ಸ್ಥಿರೀಕರಿಸಿ ತೋರಿಸುತ್ತಾರೆ.

ಕತೆಗಾರರ ಲೇಖನಿ ಅಡೆತಡೆಯಿಲ್ಲದೆ ಸರಾಗವಾಗಿ ಓಡು ತ್ತದೆ; ಸಹಜವಾಗಿ ಸರಳವಾಗಿ ನೈಜವಾಗಿ ಪಾತ್ರಗಳು ತಂತಾನೆ ರೂಪಗೊಳ್ಳುತ್ತವೆ, ವರ್ಣಗೊಳ್ಳುತ್ತವೆ. ಕೃತ ಕತೆಯ ಅಂಶವೇ ಸುಳಿಯದಂತೆ ಅವರು ಕತೆಯನ್ನು ಹೆಣೆಯಬಲ್ಲರು. ಕೆಲವೇ ಮಾತುಗಳಲ್ಲಿ, ಪದಗಳಲ್ಲಿ ನಿರಾಡಂಬರವಾಗಿ ಅವರು ಪಾತ್ರಗಳನ್ನು ಕೆತ್ತಬಲ್ಲರು, ಕಡೆಯಬಲ್ಲರು: ಅವರು ಚಿತ್ರಿಸಿರುವ ಲಕ್ಷ್ಮೀದೇವಮ್ಮನ ಚಿತ್ರಣ ಇದು—

"ಒಂದು ದಿನವೂ ಒಬ್ಬರಾದರೂ ಮನೆಯಲ್ಲಾಗಲಿ ಹೊರಗಾಗಲಿ ಸಿಡುಕಿನಿಂದ ಮಾತನಾಡಿದುದಿಲ್ಲ; ಮನೆಯ ಯಜಮಾನಿಯು ಗೃಹಲಕ್ಷ್ಮಿಯಂತಿದ್ದಳು . . . ಆಕೆಯು ಒಳ್ಳೆಯ ಲಕ್ಷಣವಂತೆ; ಅಗಲವಾದ ದುಂಡುಮುಖ; ವಿಶಾಲವಾದ ಹಣೆ; ಹಣೆಯಲ್ಲಿ ಅಡ್ಡ ಕುಂಕುಮವಿಲ್ಲದೆ ಒಂದು ಸಲವಾದರೂ ಬೊಟ್ಟನ್ನು ಇಟ್ಟುಕೊಂಡಿದ್ದಾಗಲಿ ಬರಿಯ ಹಣೆಯಲ್ಲಿ ಇದ್ದದ್ದಾಗಲಿ ಇಲ್ಲವೇ ಇಲ್ಲ. ಕೆನ್ನೆ ಕೈಕಾಲುಗಳಲ್ಲಿ ಯಾವಾಗಲೂ ಹಚ್ಚಗೆ ಅರಿಸಿನ. ಕಿವಿ ಯಲ್ಲಿ ತಪ್ಪಲೆಯೋಲೆ; ಅವುಗಳನ್ನು ಎತ್ತಿಕಟ್ಟಿರುವ ಮೂರೆಳೆಯ ಹಳೆಯ ಕಾಲದ ಸರಪಣಿ; ಇವು ಮತ್ತು ಮಾಂಗಲ್ಯ ಇವಿಷ್ಟೇ ಮೈಮೇಲಿದ್ದ ಚಿನ್ನ. ನೋಡುವು ದಕ್ಕೆ ಬಹು ಸೌಮ್ಯ ಮುಖ; ಮಾತನಾಡುವುದು ಬಹು ನಿಧಾನ . . ." ನಿಜಕ್ಕೂ ಓದುತ್ತಿದ್ದಂತೆಲ್ಲ ಈ ಸೌಮ್ಯ

ಮೂರ್ತಿಯ ಚಿತ್ರ ಕಣ್ಣಿಗೆ ಕಟ್ಟುತ್ತದೆ; ಗೌರವವನ್ನೂ ಆದರವನ್ನೂ ಹುಟ್ಟಿಸುತ್ತದೆ. ಕೆಲವೇ ಪದಗಳಲ್ಲಿ ಶೀಲವೇ ಮೂರ್ತಿವೆತ್ತಂತೆ ಹೀಗೆ ಚಿತ್ರಿಸುವುದು ಎ. ಆರ್. ಕೃ. ಅವರ ವಿಶಿಷ್ಟತೆ.

*   *   *

ಸಂಕಲನದ ಇನ್ನೊಂದು ಹೃದಯಸ್ಪರ್ಶಿ ಕತೆ 'ನಾಗರ ಪಂಚಮಿ' ಈ ಹಬ್ಬ ಅಣ್ಣ-ತಮ್ಮಂದಿರಿಗೆ, ಅಕ್ಕ-ತಂಗಿಯರಿಗೆ ಹೆಸರಾಂತುದು. ಈ ಕತೆಯ ನಾಯಕನಿಗೂ ದುರದೃಷ್ಟದಿಂದ 'ನನ್ನ ಸ್ನೇಹಿತ' ಕತೆಯ ನಾಯಕ ಕಿಟ್ಟಣ್ಣನ ಹೆಂಡತಿಯಂಥವಳೇ ಒಬ್ಬಳು ದೊರಕಿರುತ್ತಾಳೆ. ಮದುವೆಯಾಗುವವರೆಗೂ ಸಹೋದರ-ಸಹೋದರಿಯರ ವಾತ್ಸಲ್ಯದ ನಡುವೆ ಯಾವ ಗೋಡೆಯೂ ಅಡ್ಡವಿರುವುದಿಲ್ಲ; ಆ ನಂತರವೂ ಇರುವುದಿಲ್ಲ - ಸುದೈವದಿಂದ ಅತ್ತಿಗೆಯಾಗಿಯೊ ಹೆಂಡತಿಯಾಗಿಯೊ ಬರುವ ಹೆಣ್ಣು ಸರಿಯಾಗಿದ್ದರೆ, ಸೌಜನ್ಯೆಯಾಗಿದ್ದರೆ. ಇಲ್ಲದಿದ್ದರೆ 'ಅಣ್ಣ ನಮ್ಮವನಾದರೆ ಅವನ ಹೆಂಡತಿ ನಮ್ಮವಳಾದಾಳೇನು?' ಎಂಬುದಂತೂ ಸುಪ್ರಸಿದ್ಧ ನಾಣ್ಣುಡಿಯಾಗಿದೆ. ಒಮ್ಮೊಮ್ಮೆ ಈ ವಾತ್ಸಲ್ಯ ಒಡಹುಟ್ಟಿದವರೊಡನೆ - ಹೆಚ್ಚುತ್ತಿರುವುದುಂಟು, ಅಡೆತಡೆಯಿಲ್ಲದೆ; ಒಮ್ಮೊಮ್ಮೆ ಕುಡಿ ಮುರಿದು ಬೀಳುವುದೂ ಉಂಟು. ಇಂಥ ಒಂದು ಸನ್ನಿವೇಶ ಕತೆಯಲ್ಲಿದೆ.

ಕಥಾನಾಯಕನ ತಂಗಿ 'ಅದೃಷ್ಟವಂತೆಯಲ್ಲ'; ಗಂಡ ಉನ್ನತ ವಿದ್ಯಾಭ್ಯಾಸಕ್ಕೆಂದು ತೆರಳಿ, ಕ್ಷಯಕ್ಕೆ ತುತ್ತಾಗುತ್ತಾನೆ. ಅವಳಿಗೆ ಅತ್ತೆ ಮಾವಂದಿರೂ ಇಲ್ಲ; ಒಂದು ಮನೆ, ಸ್ವಲ್ಪ ಜಮೀನು, ಅಲ್ಪ ಸ್ವಲ್ಪ ಒಡವೆ ಇವು ಮಾತ್ರ. ಗಂಡನನ್ನು ಕಳೆದುಕೊಂಡ ಮೇಲೆ ತೌರೇ ಹೆಣ್ಣುಮಕ್ಕಳಿಗೆ ದಿಕ್ಕು. ಇವಳಿಗೆ ಉಳಿದವನೊಬ್ಬನೆ ತೌರಿನವನಾಗಿ-ಅಣ್ಣ. ಆದರೆ, ಆಕೆ "ಅಣ್ಣನ ಮನೆ ಸೇರಿ ಅತ್ತಿಗೆ ಕೈಲಿ ಅನುಭವಿಸುವುದಕ್ಕಿಂತ ದೂರ ಇದ್ದು ದುರ್ಜನವಾಗುವುದೇ ಒಳ್ಳೆಯದು" ಎಂದು ತನ್ನ ಮನೆಯಲ್ಲಿಯೇ ಇದ್ದುಬಿಟ್ಟಳು. ಆದರೆ ಆಗಾಗ ಅವರು ಪರಸ್ಪರ ನೋಡಿಕೊಂಡು ಬರುತ್ತಿದ್ದರು.

ಒಂದು ನಾಗರ ಪಂಚಮಿಯ ಮಾರನೆಯ ದಿವಸ ಅಣ್ಣ ತಂಗಿಯನ್ನು ನೋಡಲು ಬಂದಾಗ ಅವಳಿಗೆ ತಡೆಯಲಾರದಷ್ಟು ದುಃಖವಾಗಿ ಅಳು ಉಕ್ಕಿಬರುತ್ತದೆ. ಒಂದು ದಿನಕ್ಕೂ ಆ ರೀತಿ ವರ್ತಿಸದಿದ್ದ-ಎಂಥ ದುರ್ಭರ ಸಂದರ್ಭದಲ್ಲಿಯೂ ಅವಳ ಈ ನಡವಳಿಕೆಯಿಂದ ಅಣ್ಣನಿಗೆ ಆಶ್ಚರ್ಯವಾಗುತ್ತದೆ. "ಎದ್ದು ಹೋಗಿ ಕಣ್ಣೀರನ್ನು ಒರಸಿ ಹತ್ತಿರ ಕೂರಿಸಿಕೊಳ್ಳೋಣವೆನ್ನಿಸಿತು. ಆದರೆ ಆ ಕಾಲ ಹೋಯಿತು. ಅವೆಲ್ಲಾ ಹುಡುಗತನದಲ್ಲಿ ಕಚ್ಚಾಡುತ್ತ ಸಮಾಧಾನ ಮಾಡುತ್ತಾ ಇದ್ದ ಕಾಲಕ್ಕೇ ಆಗಿಹೋಯಿತು. ವಯಸ್ಸಾದ ಮೇಲೆ ನಮ್ಮಲ್ಲಿ ಅಣ್ಣ ತಂಗಿಯರು ಬೇರೆ; ಬೆನ್ನಲ್ಲಿ ಬಿದ್ದವರೂ, ಅಲ್ಲ ಒಡಹುಟ್ಟಿದವರೂ ಅಲ್ಲ. ಒಬ್ಬರನ್ನೊಬ್ಬರು ಮುಟ್ಟುವುದುಂಟೆ?" (ಸಂಪ್ರದಾಯದ ಈ ಉಗ್ರ ನಿಯಮವನ್ನು ಕುರಿತು ಕತೆಗಾರರ ವಿಡಂಬನಾತ್ಮಕ ಟೀಕೆಯನ್ನು ಇಲ್ಲಿ ಗುರುತಿಸಬಹುದಾಗಿದೆ.) ಸ್ವಲ್ಪ ಸಮಾಧಾನ ಪಡಿಸಿದ ನಂತರ ಅವಳು ತಿಳಿಸುತ್ತಾಳೆ-" ನಿನ್ನೆ ದಿನ ನಾಗರಪಂಚಮಿಯಾಯಿತಲ್ಲಾ ಹಿಂದಿನದೆಲ್ಲಾ ಜ್ಞಾಪಕಕ್ಕೆ ಬಂತು. ಹೋದ ವರ್ಷ ಅಪ್ಪ ಇದ್ದ, ನಾನೂ ಹೀಗಿರಲಿಲ್ಲ. ಎಲ್ಲರೂ ಒಂದು ಕಡೆ ಸೇರಿ ಹಬ್ಬ ಮಾಡಿದೆವು. ಈ ವರ್ಷ ಹೀಗಾಯಿತು. ಇದನ್ನು ನೆನಸಿಕೊಂಡು ಒಲೆಯ ಮೇಲೆ ಎಸರು ಇಟ್ಟವಳು ಏನೂ ತೋರದೆ ಹಾಗೇ ತಲೇ ಮೇಲೆ ಕೈಹೊತ್ತುಕೊಂಡು ಕೂತುಬಿಟ್ಟೆ. ಇದು ಒಡಹುಟ್ಟಿದವರ ಹಬ್ಬ; ಅಣ್ಣಯ್ಯನ ಮನೆಗಾದರೂ ಹೋಗಿ ನೋಡಿಕೊಂಡು ಬರಲೆ? ನನಗೆ ನೀನೇ ಎನ್ನುವರು ಮತ್ತೊಬ್ಬರು ಇಲ್ಲ ಎನಿಸಿತು..."

ಅದರಂತೆ ಅತ್ತಿಗೆಯ ದೌರ್ಜನ್ಯವನ್ನು ತಿಳಿದೂ ಆಕೆ ಅಣ್ಣನ ಮನೆಗೆ ಹೋಗಿಬರಲು ನಿಶ್ಚಯಿಸಿದಾಗ 'ಅತ್ತಿಗೆ ಒಳಗಿಲ್ಲ'ವೆಂಬ ಸಂಗತಿ ತಿಳಿಯುತ್ತದೆ. ಆದರೇನಂತೆ, ಹಬ್ಬದ ದಿನ ಅಣ್ಣ ಸ್ವಯಂ ಕೈಸುಟ್ಟುಕೊಂಡು ಬೇಯಿಸಿಕೊಳ್ಳುವ ಬದಲು ನಾನು ಅಲ್ಲಿಯೇ ಹೋಗಿ ಅಡಿಗೆ ಮಾಡಿ ಅವನಿಗೆ ಮಕ್ಕಳಿಗೆ ಇಟ್ಟರಾಯಿತೆಂದು ಹೋದಳು. ಆದರೆ ಅಲ್ಲಿ ಆದದ್ದೇ ಬೇರೆ! ಅದನ್ನೆಲ್ಲ ಹೇಗೆ ಅಣ್ಣನಿಗೆ ತಿಳಿಸಿ, ಅಣ್ಣ-ಅತ್ತಿಗೆಯರ ನಡುವೆ ಏಕೆ ತಾನು ವಿರಸದ ಮುಳ್ಳಾಗಬೇಕು ಎಂದು ವಿವೇಕ ಅವಳನ್ನು ತಡೆಯಿತು. ಆದರೆ, ಅಣ್ಣನ ಒತ್ತಾಯ ಹೆಚ್ಚಾದಾಗ ಹೇಳಲೇಬೇಕಾಯಿತು—

"ನಿಮ್ಮ ಮನೆಯ ತನಕ ಬಂದೆ; ಹೊರಗಿನ ಕೊಠಡಿಯ ಬಾಗಿಲನ್ನು ತೆಗೆದುಕೊಂಡು ಅತ್ತಿಗೆನ್ಮ್ಮ ಕುಳಿತಿದ್ದರು; ಮನೆಯ ಬಾಗಿಲು ಹಾಕಿತ್ತು. ನಾನು ಬಾಗಿಲ ಹತ್ತಿರ ಬಂದು ನಿಂತುಕೊಂಡು ಯಾರನ್ನಾದರೂ ಕೂಗಬೇಕು ಅಂತ ಇದ್ದೆ. ಅಷ್ಟು ಹೊತ್ತಿಗೆ ಅವಳು 'ಇದನ್ನು ಯಾರು ಕರೆಸಿದರೋ ಕಾಣೆ ಹಬ್ಬದ ದಿನ; ಮುತ್ತೈದೆಯೇ ಸಾವಿತ್ರಿಯೆ? ಏನು ಅಗ್ಗ ಅಂತ ಇಲ್ಲಿಗೆ ಬಂದಳೋ ಕಾಣೆ ಕೈ ಬೀಸಿಕೊಂಡು! ಮಾವನವರು ಮಾಡಿಟ್ಟ ಆಸ್ತಿಯನ್ನು ಗಂಟುಹಾಕಿಕೊಂಡು ಅಣ್ಣನ ಮನೆ ತೊಳೆಯುವುದಕ್ಕೆ; ಬಾಮ್ಮ ತಂಗಿ, ಹೊಟ್ಟೆ ಬಿರಿಯ ಕಡುಬು ತಿಂದು ಹೋಗು ಅಂತ. ಇವರಿಗೆ ಬುದ್ಧಿ ಇದ್ದರೆ ಹೌದೋ ಅಲ್ಲವೋ; ಮೂರು ಹೊತ್ತೂ ತಮ್ಮವರು ತಮ್ಮವರು, ತಮ್ಮ ಬಳಗ

ಅಂತ ಬಡಕೋತಾರೆ . . ." ಎಂದು ಒಂದು ನಿಮಿಷದಲ್ಲಿ ಪಟಪಟನೆ ನೂರು ಮಾತನಾಡಿಬಿಟ್ಟಳು. ನನಗೆ ಯಾರನ್ನೂ ಕೂಗುವುದಕ್ಕೆ ಬಾಯಿಬರಲಿಲ್ಲ, ಅಣ್ಣಯ್ಯ! ಹಬ್ಬದ ದಿನ ಲಕ್ಷಣವಾಗಿ "ಬಡಕೋತಾರೆ" ಅನ್ನುವ ಮಾತು ಕೇಳಿದ ಕೂಡಲೇ ಯಾಕೋ ಬಹು ಸಂಕಟವಾಗಿ ಎರಡು ಕಿವಿಗಳನ್ನೂ ಮುಚ್ಚಿಕೊಂಡು ಹಾಗೇ ಹಿಂತಿರುಗಿಬಿಟ್ಟೆ . . ."

ಹೆಂಡತಿಯ ಸ್ವಭಾವವನ್ನರಿತಿದ್ದ ಅಣ್ಣನಾದರೂ ತನ್ನ ಸಂಸಾರ ಮೂರಾಬಟ್ಟೆಯಾದುದನ್ನು ತಂಗಿಯೊಡನೆ ತೋಡಿಕೊಂಡು ತನ್ನ ಹೃದಯವನ್ನು ಹಗುರಮಾಡಿಕೊಳ್ಳುತ್ತಾನೆ ಹಾಗೂ ಬೆಂದ ಅವಳ ಒಡಲಿಗೂ ತಂಪನ್ನೆರೆಯುತ್ತಾನೆ. ಅನಂತರ, ಅಂದು ಆಫೀಸಿಗೆ ರಜೆಹಾಕಿ, ತಂಗಿಯೊಡನೆಯೇ ಊಟಮಾಡಿ, (ಪತ್ನಿಗೆ ತಿಳಿಯದಂತೆ) ಹೊತ್ತಿಗೆ ಸರಿಯಾಗಿ ಮನೆ ಸೇರುತ್ತಾನೆ. ಹೀಗೆ ನಾಗರಪಂಚಮಿಯ ಮಾರನೆಯ ದಿನ ಈ ಅಣ್ಣ-ತಂಗಿಯರು ಹಬ್ಬ ಆಚರಿಸುತ್ತಾರೆ-ತಮ್ಮದೇ ಆದ ರೀತಿಯಲ್ಲಿ.

೪

ಈ ಸಂಕಲನದ ಎಲ್ಲ ಕತೆಗಳನ್ನು ಪರಿಶೀಲಿಸುವುದಕ್ಕೆ ಇದು ಎಡೆಯೂ ಅಲ್ಲ, ಅದರ ಆವಶ್ಯಕತೆಯೂ ಕಂಡು ಬರುವುದಿಲ್ಲ. ಮಿಕ್ಕ ಒಂಭತ್ತು ಕತೆಗಳೂ ವಸ್ತು ವೈವಿಧ್ಯಕ್ಕೆ ಹೆಸರಾಗಿವೆ. ಒಂದು ವಿವಾಹ ನಿಷ್ಕರ್ಷೆಯಾದನಂತರ ಅದು ನೆರವೇರುವುದಿಲ್ಲವೆಂದು ಜ್ಯೋತಿಷ ಬಲ್ಲವರೊಬ್ಬರು ನುಡಿದು, ಅದರಂತೆಯೇ ವಿವಾಹ ಸಮಯದಲ್ಲಿ ವರನ ಕಡೆಯವರೊಬ್ಬರು ಮೃತರಾಗಿ ಅದು ನಿಲ್ಲಬೇಕಾದ ವಸ್ತು "ಜ್ಯೋತಿಷಕ್ಕೆ ಬಹುಮಾನ" ಕತೆಯದಾದರೆ, ಅಗ್ಗದಲ್ಲಿ ಮದುವೆಮಾಡಿ ಕೈತೊಳೆಯಬೇಕೆಂದುಕೊಂಡಿದ್ದ ವೆಂಕಟರಮಣಯ್ಯ ಕೊನೆಗೆ ಕೈ ಸುಟ್ಟುಕೊಂಡು ಒಂದಕ್ಕೆ ನಾಲ್ಕರಷ್ಟು ಖರ್ಚುಮಾಡಿದ ಪ್ರಸಂಗ 'ಅಗ್ಗದ ಮದುವೆ'ಯದು. ಅಗ್ಗದ ಬಾಡಿಗೆಗೆ ಬೆಂಗಳೂರಿನಲ್ಲಿ ಮನೆ ಸಿಕ್ಕಿತೆಂದು ಭೂತನಿವಾಸ ಸೇರಿ ಅದರ ವಸ್ತುಸ್ಥಿತಿ ತಿಳಿದಾಕ್ಷಣ ಖಾಲಿಮಾಡಿ ಓಡುವ ಕತೆ 'ಬಂಗಲಿಯ ವಾಸ'ದಲ್ಲಿದೆ; ಸರ್ಕೀಟು ಬರುತ್ತಿದ್ದ ಹಿರಿಯ ಅಧಿಕಾರಿಗಳನ್ನೆಲ್ಲ ಸಮಯೋಚಿತ ನೆಪಗಳಿಂದ, ಆಟಗಳಿಂದ ಒಲಿಸಿಕೊಂಡು, ಬೀಸುವ ದೊಣ್ಣೆಯನ್ನು ತಪ್ಪಿಸಿಕೊಳ್ಳುತ್ತಿದ್ದ ತಾಲ್ಲೂಕ್ ಅಮಲ್ದಾರರೊಮ್ಮೆ ಯೂರೋಪಿಯನ್ ಅಧಿಕಾರಿಯೊಬ್ಬನ ಕೈಗೆ ಸಿಕ್ಕಿ ಸುಳ್ಳುಹೊಟ್ಟೆನೋವಿನ ನೆಪಹೂಡಿದುದಕ್ಕಾಗಿ ಹೆಚ್ಚು ಹೆಚ್ಚು ಹರಳೆಣ್ಣೆ ಕುಡಿದು ತಾವೇ ಚಳ್ಳೆಹಣ್ಣು ತಿನ್ನಬೇಕಾಗಿ ಬಂದು, ಒದ್ದಾಡಿದ ಪ್ರಸಂಗ 'ಗೋಟಿನಲ್ಲಿ ಸಿಕ್ಕಿಕೊಂಡ ಕತ್ತರಿ'ಯಲ್ಲಿದೆ. ಅತ್ತೆ ಎನಿಸಿಕೊಂಡವಳೊಬ್ಬಳು ಮನೆಯಲ್ಲಿ ಇದ್ದರೆ ತನ್ನ ಮಗ, ಮಗಳು, ಸೊಸೆಯರ ಮೇಲೆ ಅವಳು ಹೇಗೆ ವರ್ತಿಸಿಯಾಳೆಂಬ ವಿಡಂಬನಾತ್ಮಕ ಚಿತ್ರ 'ಅತ್ತೆ'ಯಲ್ಲಿದೆ; ಇದು ಪ್ರಬಂಧದಂತೆ ಪ್ರಾರಂಭವಾದರೂ ಮುಂದೆಲ್ಲ ಸಂಭಾಷಣಾತ್ಮಕವಾಗಿ ಬೆಳೆಯುತ್ತದೆ. ಸಣ್ಣಕತೆಗಳ ಲಕ್ಷಣಗಳಾವುವೂ ಇಲ್ಲಿ ಇಲ್ಲದ್ದರಿಂದ ಇದು ವ್ಯಕ್ತಿಚಿತ್ರವೆನ್ನಲರ್ಹವಾಗಿದೆ; ಕುತೂಹಲಕಾರಿಯೂ ಆಗಿದೆ. ಬೆಂಗಳೂರಿನಲ್ಲಿ ಕಷ್ಟಪಟ್ಟು ಅತೀವ ಬುದ್ಧಿವಂತಿಕೆಯಿಂದ ಮನೆಕಟ್ಟಿಸಿ ಹೆಚ್ಚು ಬಾಡಿಗೆಯ ದುರಾಸೆಯಿಂದ ಮೋಸಗಾರನೊಬ್ಬನಿಗೆ ಮನೆಯನ್ನು ಬಾಡಿಗೆಗಿತ್ತು, ನಂತರ ಅವನನ್ನು ಉಪಾಯದಿಂದ ಬಿಡಿಸಿದ ಕತೆ 'ಭೀಮಣ್ಣನ ಬುದ್ಧಿವಂತಿಕೆಯದು.' ಮಧ್ಯಮವರ್ಗದ ಸಂಸಾರಿಯೊಬ್ಬನು ಊಟಕ್ಕೆ ಕುಳಿತಾಗ ಪತ್ನಿಯಿಂದ ಊಹಿಸಬಹುದಾದ ಉಪಚಾರದ ವಿಡಂಬನಾತ್ಮಕ ರೇಖಾಚಿತ್ರ 'ಊಟದಲ್ಲಿ ಉಪಚಾರ' (ಇದೂ 'ಅತ್ತೆ' ಜಾತಿಯ ವರ್ಗೀಕರಣಕ್ಕೆ ಸೇರಲರ್ಹವಾಗಿದೆ). ಗಂಡುಮಗು ಆಗಬೇಕೆಂಬ ಸತತ ಬಯಕೆ'ಯಿದ್ದರೂ ಹೆಣ್ಣನ್ನು ಹಡೆದು, ಮಗಳು ಅಳಿಯನನ್ನೇ ಮನೆಯಲ್ಲಿಟ್ಟುಕೊಂಡರೂ ಆ ಬಯಕೆ ಮಾಯದೆ ಅಂಕುರಿಸುತ್ತಲೇ ಇದ್ದಾಗ, ಮಗಳು ಗಂಡು ಹಡೆದು ಸಾಯುತ್ತಾಳೆ. ಇದರಿಂದಾಗಿ ಆ ಮಗುವಿನ ರಕ್ಷಣೆ ತನ್ನ ತಲೆಗೇ ಕಟ್ಟಿ, ಆಕೆ ಬೇಡಿದ್ದನ್ನೆಲ್ಲಾ ಅನುಗ್ರಹಿಸಬಲ್ಲ ಗುರುಗಳ ಸಮೀಪ ತನ್ನ ಕಷ್ಟ ತೋಡಿಕೊಳ್ಳುವ, ಸಮಾಧಾನ ಹೊಂದುವ ಕತೆ 'ಗುರುಗಳ ಮಹಿಮೆ.' ಮದರಾಸಿನಲ್ಲಿ ಕೆಲಸಮಾಡಿಕೊಂಡು ಓದುತ್ತಿದ್ದಾಗ ಒಮ್ಮೆ ಪ್ಲೇಗ್ ರೋಗ ಹರಡಿ, ವಾಸವಾಗಿದ್ದ ಮನೆಯಲ್ಲಿಯೇ ಒಬ್ಬಾತ ಹೆಂಡತಿ ಮಕ್ಕಳನ್ನು ಉಳಿಸಿ ದಟ್ಟ ದರಿದ್ರನಾಗಿ ಔಷಧೋಪಚಾರವಿಲ್ಲದೆ ಸತ್ತಾಗ, ಅವನನ್ನು ಸಂಸ್ಕಾರ ಮಾಡಿಸಿ, ಪತ್ನಿಪುತ್ರರಿಗೆ ವ್ಯವಸ್ಥೆ ಮಾಡಿಕೊಟ್ಟು, ತಾನು ಪ್ಲೇಗ್‌ಮಾರಿಗೆ ಸಿಲುಕದೆ ಉಳಿದು ಪರೀಕ್ಷೆಗೂ ಹೋಗಿ, ಸುದೈವದಿಂದ ಪಾಸೂ ಆದ ವೆಂಕಟೇಶಯ್ಯನ ಅನುಭವದ ನಿರೂಪಣೆ 'ದೇವರು ಇದ್ದಾನೆ.'

ಇವುಗಳ ಪರಿಚಯದಿಂದ ಎ. ಆರ್. ಕೃ. ಅವರ ವಸ್ತು ಆಯ್ಕೆಯಲ್ಲಿನ ವೈಶಿಷ್ಟ್ಯ ಕಥನಕಲಾಕೌಶಲ, ನಿರ್ವಹಣೆಗಳ ಪರಿಚಯವಾಗಿರಬಹುದು. ಅವರ ಎಲ್ಲ ಕತೆಗಳೂ ಅತ್ಯುತ್ತಮವೆಂದು ವಾದಿಸಲಾಗುವುದಿಲ್ಲ; ಕೆಲವೆಡೆ ಅನವಶ್ಯಕವಾಗಿ ನಿರೂಪಣೆ ಬೆಳೆದಿರುತ್ತದೆ, ಕತೆಗೆ ಸಂಬಂಧವೇ ಇಲ್ಲದಂತಾಗುತ್ತದೆ; ಆದರೆ, ಅವರು ಬರೆದ ಕಾಲವನ್ನು-ಆಗ ತಾನೇ ಸಣ್ಣಕತೆಗಳು ಹುಟ್ಟಿ ಆ ಕ್ಷೇತ್ರ

ಇನ್ನೂ ಫಲವತ್ತಾಗುತ್ತಿದ್ದ ಕಾಲವದು–ನೆನೆದಾಗ ಅಂದಿನ ರಚನಾತ್ಮಕ ಸೌಲಭ್ಯಗಳನ್ನು ಕುರಿತು ಯೋಚಿಸಿದಾಗ ಇದೆಲ್ಲವೂ ಗೌಣವೆನಿಸುತ್ತದೆ.

ಕೊನೆಯದಾಗಿ ಎ. ಆರ್. ಕೃ. ಅವರ ಕತೆಗಳಲ್ಲಿ ಕಂಡು ಬರುವ ಹಾಸ್ಯದ ಬಗೆಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿ ಈ ಲೇಖನವನ್ನು ಮುಗಿಸಬಹುದು. ಎ. ಆರ್. ಕೃ. ಅವರು ಮಾನವನ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ತಮ್ಮ ಕತೆಯ ವಸ್ತುಗಳನ್ನಾಗಿ ಆಯ್ದರೂ ಅವರ ಮುಖ್ಯ ಉದ್ದೇಶ ಸಾಂಸಾರಿಕ ಚಿತ್ರಣವನ್ನು ನೀಡುವುದು. ಅವರ ಬಹುಪಾಲು ಕತೆಗಳಲ್ಲೆಲ್ಲ ಉತ್ತಮ ಸಾಂಸಾರಿಕ ಜೀವನವೊಂದರಲ್ಲಿನ ಸಾಮರಸ್ಯವನ್ನೊ, ಅಥವಾ ವಿರುದ್ಧವಾಗಿ ಅಲ್ಲಿ ಕಾಣುವ ವಿಷಮತೆಯನ್ನೊ ದರ್ಶಿಸಬಹುದಾಗಿದೆ. ಸಮಸ್ಯೆಗಳನ್ನು ಗಂಭೀರವಾಗಿ ವಿವೇಚಿಸುತ್ತಿದ್ದಾಗಲೂ ಹಲವು ವೇಳೆ ಕತೆಗಾರರು ಹಾಸ್ಯರಸವನ್ನು ಬೆರಸುತ್ತಾರೆ. ಆದರೆ ಆ ಹಾಸ್ಯವಾದರೂ ಎಂಥದ್ದು? ಕರುಳನ್ನು ಇರಿಯುವಂತಹ ಹಾಸ್ಯ. ಅದರಿಂದ ನೋವಿನ ಬೇಗೆ ಹೆಚ್ಚುತ್ತದಲ್ಲದೆ, ನಗೆ ಉಕ್ಕದು. ಉದಾಹರಣೆಗಾಗಿ ಒಂದೆರಡು ನಿದರ್ಶನವನ್ನು ಕೊಡಬಹುದು.

ತಂದೆ ಬದುಕಿದ್ದಾಗ ಅಣ್ಣನ ಹೆಂಡತಿಯಾಗಿ ಬಂದವಳನ್ನು ಕುರಿತು ತಂದೆ ನುಡಿದಿದ್ದ ಒಂದು ಮಾತನ್ನು—"ಅಯ್ಯೋ ಹಾವು ತಂದು ಮನೆಗೆ ಸೇರಿಸಿಕೊಂಡ ಹಾಗಾಯಿತೆ!"—ಎಂದು ತಂಗಿ ಅಣ್ಣನಿಗೆ ನೆನಪಿಸಿದಾಗ, ತನ್ನ ದಾಂಪತ್ಯ ಜೀವನದ ಕಹಿಯನ್ನು ಆವರೆಗೆ ಸ್ಮರಿಸಿದ್ದ ಅಣ್ಣ ನುಡಿದ:

"ಆಗಲಿ, ಆಗಲಿ, ನಾಗರಪಂಚಮಿಯ ಪೂಜೆಗೆ ಅನುಕೂಲವಾಯಿತು; ಜೀವದ ಹಾವೇ ಸಿಕ್ಕಹಾಗಾಯಿತು." ('ನಾಗರ ಪಂಚಮಿ')

ಪ್ಲೇಗಿನಿಂದ ಜನ ಸಾಯುತ್ತಿದ್ದಾಗ, ತನ್ನ ಮನೆಯ ನೆರೆಯವನು ಸತ್ತಾಗ Death Certificate ತರಲೂ ಸಹ ಕಾಸಿಲ್ಲದೆ ಅಲೆಯುತ್ತಿದ್ದಾಗಿನ ಸಂದರ್ಭದಲ್ಲಿ ವೆಂಕಟೇಶಯ್ಯನಿಗೆ ಅವನ ಕತೆಯನ್ನು ಆಲಿಸಿದ ಗೆಳೆಯ ಹೇಳುವುದು—

"ನಿನ್ನ ರುಮಾಲನ್ನು ಅಡುವು ಇಡಬೇಕಾಗಿತ್ತು!"

ಮುಂದೆ ವೆಂಕಟೇಶಯ್ಯ ಮೈಸೂರಿನಲ್ಲಿ ಪ್ಲೇಗ್ ಹೆಚ್ಚಾಗಿ ಜನ ಸತ್ತಾಗ ಅವರನ್ನು ಸಂಸ್ಕರಿಸಲು 'ಕನಕ ಭಟ್ಟನ ಕಂಪೆನಿ' ಎಂದು ಒಂದು 'ಕಂಪನಿ' ಇತ್ತು. ಮದ್ರಾಸಿನಲ್ಲಿ ಅವರೂ ಇಲ್ಲ ಎಂದಾಗ, ಅವನ ಗೆಳೆಯ—

"ಅದೇನು ಜಾಯಿಂಟ್ ಸ್ಟಾಕು ಕಂಪೆನಿಯೊ ಕೋ ಆಪರೇಟಿವ್ ಸೊಸೈಟಿಯೊ . . ."

—ಇವುಗಳನ್ನು ಓದಿದಾಗ ನಗು ಬರುವುದಿಲ್ಲ, ಬದಲಾಗಿ ಅಳು ಉಕ್ಕುತ್ತದೆ. . . ಅಲ್ಲಿನ ಸಂದರ್ಭ ಅಷ್ಟು ಆಳವಾದುದು, ಗಂಭೀರವಾದುದು. ಈ ಹಾಸ್ಯವನ್ನು ಕಂಡಾಗ ಕೈಲಾಸಂರ ವಾಕ್ಯ ನೆನಪಾಗುತ್ತದೆ–

"ಕಿರಿಯಾಳದ ನಗೆನೀರಿನಮೇಲೆ
ತಿರುಗುತ ಬಹುವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು!"

ಎ. ಆರ್. ಕೃ. ಅವರ ಎಲ್ಲ ಕತೆಗಳನ್ನೂ ಓದಿದಾಗ ಅವರ ಮನೋಧರ್ಮದ ಅರಿವಾಗುತ್ತದೆ. ಪ್ರತಿಯೊಂದು ಕತೆಯಲ್ಲಿಯೂ ಅವರು ಏನೋ ಆದರ್ಶವನ್ನು, ಸಂದೇಶವನ್ನು ನಮಗಾಗಿ ನೀಡಿರುತ್ತಾರೆ. ಅದನ್ನು ಆಚರಿಸಿದಾಗ ಅರಿತಾಗ ತಿಳಿವಳಿಕೆ ಮೂಡಿ ಅರ್ಥವಂತಿಕೆ ಬೆಳೆಯುತ್ತದೆ. ಬಾಳೂ ಹಸನಾಗುತ್ತದೆ—

"ಸಂಸಾರದಲ್ಲಿ ಸೌಖ್ಯವಿಲ್ಲವೆಂದಲ್ಲ; ಇರುವಷ್ಟಿದೆ, ಇರುವವರಿಗಿದೆ. ಇರಲೇಬೇಕೆಂಬುದೇ ಸಂಸಾರ ಕಟ್ಟುವುದರ, ಕಟ್ಟಿಕೊಳ್ಳುವುದರ ಉದ್ದೇಶ. ಆದರೆ ನಾವು ಒಲಿದರೆ ಅದು ಒಲಿಯಬೇಕಲ್ಲ! ಪ್ರಾಪ್ತಿ ಇಲ್ಲದ್ದಕ್ಕೆ ಬಾಯಿಬಾಯಿಬಿಟ್ಟರೆ ಬರುತ್ತದೆಯೇ?" (ಊಟದಲ್ಲಿ ಉಪಚಾರ)

"ಎಂಥ ಬುದ್ಧಿವಂತನಾದರೂ ಇದರಿಂದ ಇನ್ನೂ ಬುದ್ಧಿ ಕಲಿಯುವುದು ಇದ್ದೇ ಇರುತ್ತದೆ; ಒಳ್ಳೆಯವರಿಗಿಂತ ಕೆಟ್ಟವರಿಂದ ಕಲಿಯುವುದು ಇರುತ್ತದೆ" (ಭೀ. ಬುದ್ಧಿವಂತಿಕೆ)

"ಜನರು ಕಾಲ ಕೆಟ್ಟುಹೋಯಿತು, ಕಾಲ ಕೆಟ್ಟುಹೋಯಿತು ಎನ್ನುತ್ತಾರೆ. ಕಾಲ ಕೆಟ್ಟು ಹೋಯಿತೋ ನಾವು ಕೆಟ್ಟು ಹೋದೆವೋ! ನಮ್ಮ ನಡೆ ನುಡಿ ಚೆನ್ನಾಗಿದ್ದರೆ ಕಾಪಾಡುವ ದೇವರು ಹ್ಯಾಗೋ ಕಾಪಾಡುತ್ತಾನೆ" (ಶ್ಯಾನುಭೋಗನ ಪುಣ್ಯ),

ಈ ಉಕ್ತಿಗಳು ಬದುಕನ್ನು ತಿದ್ದಿಕೊಳ್ಳಲು ನೆರವು ನೀಡುತ್ತವೆಂಬುದರಲ್ಲಿ ಸಂಶಯವೇನು?

ದಿವಂಗತ
ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳು

ಎನ್. ಬಸವಾರಾಧ್ಯ

ಕನ್ನಡ ಸಾರಸ್ವತ ಲೋಕಕ್ಕೆ ಡಾ|| ಕೃಷ್ಣಶಾಸ್ತ್ರಿಗಳನ್ನು ಪರಿಚಯ ಮಾಡಿಕೊಡುವುದು ಸಾಹಸದ ಮಾತೇ ಸರಿ. ಆದರೂ ಅವರ ವಿದ್ಯಾರ್ಥಿಯಾಗಿ ಅವರ ನೇತೃತ್ವದಲ್ಲಿ ಕೆಲ ಕಾಲ ನಿಘಂಟಿನ ಕೆಲಸ ಮಾಡಿರುವ ನಾನು ಈ ಕೆಲವು ಅಂಶಗಳನ್ನು ನಿರೂಪಿಸಿಕೊಳ್ಳುತ್ತೇನೆ.

ನಾನು ನಿಘಂಟು ಕಚೇರಿಗೆ ೧೯೫೫ನೆಯ ಇಸವಿಯಲ್ಲಿ ಬಂದು ಸೇರಿದೆ. ಆಗ ಪ್ರಾ|| ಡಿ. ಎಲ್. ನರಸಿಂಹಾಚಾರ್ಯರು ನಿಘಂಟಿನ ಮುಖ್ಯ ಸಂಪಾದಕರಾಗಿದ್ದರು. ಡಾ|| ಕೃಷ್ಣಶಾಸ್ತ್ರಿಗಳು ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೫೭ನೆಯ ಇಸವಿಯಲ್ಲಿ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಹಿಂದಿರುಗಿದರು. ಇಲ್ಲಿಯವರೆಗೆ ಶ್ರೀ ಕೃಷ್ಣಶಾಸ್ತ್ರಿಗಳಿಗೂ ನನಗೂ ನಿಘಂಟಿನ ಕಾರ್ಯದಲ್ಲಿ ನೇರವಾದ ಪರಿಚಯವಿರಲಿಲ್ಲ. ಶ್ರೀ ನರಸಿಂಹಾಚಾರ್ಯರು ಮೈಸೂರಿಗೆ ಹಿಂತಿರುಗಿದ ಮೇಲೆ ನಿಘಂಟಿನ ಮುಖ್ಯ ಸಂಪಾದಕರ ಹುದ್ದೆ ತೆರವಾಯಿತು. ಹೀಗಿರುವಲ್ಲಿ ಒಂದು ದಿನ ಶ್ರೀ ಶಾಸ್ತ್ರಿಗಳು ಕಚೇರಿಗೆ ಬಂದರು. ನನ್ನನ್ನು ಒಂಟಿಯಾಗಿ ಹೊರಗೆ ಕರೆದು "ಏನಪ್ಪಾ, ನರಸಿಂಹಾಚಾರ್ಯರು ಮೈಸೂರಿಗೆ ಹೊರಟು ಹೋದರು. ಇನ್ನು ನೀನು ಅವರ ಸ್ಥಾನವನ್ನು ತೆಗೆದುಕೊಂಡು ಕೆಲಸವನ್ನು ಮುಂದುವರಿಸಿಕೊಂಡು ಹೋಗಬೇಕು"ಎಂದು ಹೇಳಿದರು. ಅದಕ್ಕೆ ನಾನು "ನನ್ನ ಗುರುಗಳು ಕುಳಿತ ಪೀಠದಲ್ಲಿ ಕುಳಿತುಕೊಂಡು ಕೆಲಸ ಮಾಡುವ ಯೋಗ್ಯತೆ ನನಗಿಲ್ಲ ಸಾರ್. ನನಗಿಂತ ಹೆಚ್ಚು ವಿದ್ವಾಂಸರನ್ನು ಆ ಹುದ್ದೆಗೆ ನೇಮಿಸುವುದು ವಾಸಿ ಸಾರ್"ಎಂದು ನಮ್ರವಾಗಿ ಹೇಳಿದೆ. ಕೂಡಲೇ ಶ್ರೀ ಶಾಸ್ತ್ರಿಗಳು "ನರಸಿಂಹಾಚಾರ್ಯರು ನಿಘಂಟಿನ ಕೆಲಸಕ್ಕಾಗಿ ನಿನ್ನನ್ನು ಆರಿಸಿ ಕರೆದುಕೊಂಡು ಬಂದಿದ್ದಾರೆ. ನಿನ್ನ ಯೋಗ್ಯತೆ ಅವರಿಗೆ ಚೆನ್ನಾಗಿ ಗೊತ್ತಿದೆ. ಅಲ್ಲದೆ ನೀನು ಸಂಪಾದಿಸಿರುವ ಹರಿಶ್ಚಂದ್ರ ಕಾವ್ಯವೇ ಮೊದಲಾದ ಗ್ರಂಥಗಳಿಂದ ನೀನು ಈ ಕೆಲಸಕ್ಕೆ ಯೋಗ್ಯ ಎಂದು ನಾನು ಭಾವಿಸಿದ್ದೇನೆ. ಗುರುಗಳು ಕುಳಿತ ಪೀಠದಲ್ಲಿ ಹೇಗೆ ಕುಳಿತುಕೊಳ್ಳುವುದು ಎಂದು ಯೋಚಿಸಬೇಡ "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬಂತೆ ನೀನು ಈ ಕೆಲಸವನ್ನು ವಹಿಸಿಕೋ" ಎಂದರು. ನಾನು ಮುಂದಕ್ಕೆ ಮಾತನಾಡಲಾರದೆ "ತಮ್ಮಿಷ್ಟ ಬಂದಂತೆ ಮಾಡಬಹುದು ಸಾರ್" ಎಂದುಬಿಟ್ಟೆ. ಅಲ್ಲಿಗೆ ಆ ಪ್ರಕರಣ ಮುಗಿಯಿತು.

ಹೀಗಿರುವಲ್ಲಿ ಶ್ರೀ ಶಾಸ್ತ್ರಿಗಳೇ ಕೆಲಕಾಲ ಸಂಪಾದಕರ ಕೆಲಸವನ್ನೂ ನೋಡಿಕೊಳ್ಳುತ್ತ ನಿಘಂಟಿನ ಎಂಟು ಪುಟಗಳ ಕರಡನ್ನು ಸಿದ್ಧಪಡಿಸುವ ತರಾತುರಿಯಲ್ಲಿದ್ದರು. ಅದಕ್ಕೆ ಬೇಕಾದ ಮಾಹಿತಿಗಾಗಿ ಕಚೇರಿಗೆ ಆಗಿಂದಾಗ್ಗೆ ಬರುತ್ತಿದ್ದರು. ಜೊತೆಗೆ ನಾನೂ ಒಂದೆರಡು ಬಾರಿ ಅವರ ಮನೆಗೆ ಹೋಗಿಬರುತ್ತಿದ್ದೆ. ಈ ಎಲ್ಲ ಪ್ರಕರಣಗಳನ್ನೂ ನೆನೆದಾಗ ಶ್ರೀ ಶಾಸ್ತ್ರಿಗಳ ಅಚ್ಚುಕಟ್ಟುತನ ಕಾರ್ಯಶ್ರದ್ಧೆ, ಪರಿಪೂರ್ಣ ಪಾಂಡಿತ್ಯ ಕಣ್ಮುಂದೆ ನಿಲ್ಲುತ್ತವೆ.

ಶಾಸ್ತ್ರಿಗಳು ಯಾವುದಾದರೂ ಕೆಲಸವನ್ನು ವಹಿಸಿಕೊಂಡರೆ ಎಷ್ಟು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು ಎಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಗೌರವ ಸಂಪಾದಕರಾಗಿ ಅವರು ಇದ್ದ ಕಾಲದಲ್ಲಿ ಕಚೇರಿಗೆ ಆಗಾಗ್ಗೆ ಬಂದು ನಡೆಯುತ್ತಿದ್ದ ಕೆಲಸವನ್ನು ನೋಡುತ್ತಿದ್ದರು. ಜತೆಗೆ ಆಯಾದಿನ ಬರೆದ ಹಸ್ತಪ್ರತಿಯನ್ನು ಮನೆಗೆ ತರಿಸಿಕೊಂಡು ವಿವರವಾಗಿ ಪರಿಶೀಲಿಸಿ ತಮ್ಮ ಸಲಹೆ ಸೂಚನೆಗಳೊಂದಿಗೆ ಹಿಂತಿರುಗಿಸುತ್ತಿದ್ದರು.

ಶಾಸ್ತ್ರಿಗಳು ಸಂಪಾದಕ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ದಕ್ಷತೆಯಿಂದ ಭೂಷಣಪ್ರಾಯವಾಗಿ ನಿರ್ವಹಿಸುತ್ತಿದ್ದರು. ಸದಸ್ಯರಿಗೆ ಬೇಸರವಾಗದಂತೆ ಆಗಾಗ ಚುಟುಕಗಳನ್ನು ಹಾರಿಸುತ್ತಿದ್ದರು. ಉಪಹಾರದ ಸಮಯದಲ್ಲಿ ಒಬ್ಬ ಸದಸ್ಯರು "ಶಾಸ್ತ್ರಿಗಳೇ ತಮ್ಮ ಆರೋಗ್ಯ ಹೇಗಿದೆ?" ಎಂದು ಕೇಳಿದರು. ಅದಕ್ಕೆ ಅವರು "ಈ ಕಾಯಕಲ್ಪ

ತಗೊಳ್ಳುತ್ತಿರುವಾಗ ನನ್ನ ಆರೋಗ್ಯಕ್ಕೆ ಕೊರತೆಯಿಲ್ಲ" ಎಂದರು. ಅಂದಿನ ಉಪಹಾರದಲ್ಲಿ ಬಾದಾಮಿ ಹಲ್ವವನ್ನು ತರಿಸಲಾಗಿತ್ತು. ಅದನ್ನೇ ಶಾಸ್ತ್ರಿಗಳು ಕಾಯಕಲ್ಪ ಎಂದು ಕರೆದದ್ದು.

ಶಾಸ್ತ್ರಿಗಳು ಖಂಡಿತ ಸ್ವಭಾವದವರು. ಕಡ್ಡಿ ತುಂಡಾದಂತೆ ಮಾತನಾಡಿಬಿಡುತ್ತಿದ್ದರು. ಒಮ್ಮೆ ಯಾರೋ ಶಾಸ್ತ್ರಿಗಳನ್ನು ಹೊಗಳಿದರು. ಅದನ್ನು ಕೇಳಿದ ಶಾಸ್ತ್ರಿಗಳು "ಸ್ವಾಮಿ, ಆ ಹೊಗಳಿಕೆ ನನಗಲ್ಲ, ರಾಜನುಹಾರಾಜರಿಗೆ" ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು. ಅವರಿಗೆ ಯಾರ ದಾಕ್ಷಿಣ್ಯವೂ ಬೇಕಾಗಿರಲಿಲ್ಲ. ಇದ್ದುದನ್ನು ಇದ್ದಂತೆ ಹೇಳಿಬಿಡುವುದು ಅವರ ಸ್ವಭಾವವಾಗಿತ್ತು.

ನಿಘಂಟಿನ ಕೆಲಸ ನಿಧಾನವಾಗಿ ಸಾಗುತ್ತಿದ್ದ ವಿಷಯದಲ್ಲಿ ಶಾಸ್ತ್ರಿಗಳಿಗೆ ಅಸಮಾಧಾನವಿತ್ತು. ಮೊದಲನೆಯ ಸಂಚಿಕೆಯನ್ನು ಅವರ ಮನೆಗೆ ತೆಗೆದುಕೊಂಡು ಹೋಗಿ ಕೊಟ್ಟಾಗ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ನನ್ನನ್ನು ಕುರಿತು "ಏನಪ್ಪಾ, ಮೈಸೂರಿಗೆ ಹಿಂತಿರುಗಿಬಿಡಬೇಕೆಂದಿದ್ದಲ್ಲಾ. ಈಗ ನೋಡು, ಒಂದು ಸಂಚಿಕೆ ಹೊರಬಂದಿದೆಯಲ್ಲಾ. ಬಹಳ ಸಂತೋಷ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ" ಎಂದು ಆಶೀರ್ವದಿಸಿದರು.

ಶ್ರೀ ಶಾಸ್ತ್ರಿಗಳು ಸ್ವಲ್ಪ ನಿಷ್ಠುರ ಸ್ವಭಾವದವರು. ಆದರೂ ಏಕೋ ಏನೋ ನನ್ನಲ್ಲಿ ಅಪರಿಮಿತವಾದ ವಿಶ್ವಾಸವನ್ನಿಟ್ಟುಕೊಂಡಿದ್ದರು. ಕನ್ನಡ ನಿಘಂಟಿಗೆ ಶಾಸ್ತ್ರಿಗಳು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ಪ್ರಾರಂಭದ ಕಾಲದಲಿ ಅವರ ಮಾರ್ಗದರ್ಶನ ವಿಶೇಷ ಫಲಕಾರಿಯಾಯಿತು. ಈ ಎಲ್ಲ ಹಿರಿಯರ ನಿರಂತರ ದುಡಿಮೆ, ನಿಸ್ವಾರ್ಥ ಸೇವೆಗಳಿಂದ ನಿಘಂಟಿನ ಕಾರ್ಯ ಸುಗಮವಾಯಿತು: ಈ ದೃಷ್ಟಿಯಿಂದ ಶ್ರೀಯುತರು ಪ್ರಾತಃಸ್ಮರಣೀಯರಾಗಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಶಾಸ್ತ್ರಿಗಳು ಸಲ್ಲಿಸಿರುವ ಸೇವೆ ಅನುಪಮವಾದುದು. 'ಪ್ರಬುದ್ಧ ಕರ್ಣಾಟಕ' ಇಂದು ಗಳಿಸಿರುವ ವಿಖ್ಯಾತಿಯು ಶಾಸ್ತ್ರಿಗಳವರಿಗೆ ಸಲ್ಲತಕ್ಕುದ್ದಾಗಿದೆ. ಅದರ ಹುಟ್ಟು, ಬೆಳೆವಣಿಗೆ, ಪ್ರಸಾರಕ್ಕಾಗಿ ಶಾಸ್ತ್ರಿಗಳು ಕಾಯೇನವಾಚಾ ಮನಸಾ ದುಡಿದಿದ್ದಾರೆ.

ಶಾಸ್ತ್ರಿಗಳು ರಚಿಸಿರುವ "ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ", "ಭಾಸಕವಿ", "ಸಂಸ್ಕೃತ ನಾಟಕ", "ವಚನ ಭಾರತ", "ಕಥಾಮೃತ" "ಬಂಕಿಮಚಂದ್ರ" ಮೊದಲಾದ ಒಂದೊಂದು ಕೃತಿಯೂ ಅವರ ಅಪಾರ ವಿದ್ವತ್ತಿಗೆ ನಿದರ್ಶನವಾಗಿ ನಿಂತಿವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ಶಾಸ್ತ್ರಿಗಳ ಹೆಸರು ಚಿರಂತನವಾಗಿ ನಿಲ್ಲತಕ್ಕದ್ದಾಗಿದೆ. ಅವರ ಸಾಹಿತ್ಯಮಾರ್ಗ ಸರ್ವರಿಗೂ ಆದರ್ಶಪ್ರಾಯವಾಗಿದೆ, ಅನುಕರಣೀಯವಾಗಿದೆ.

ಕನ್ನಡ ಸಾಹಿತ್ಯ ಲೋಕದಿಂದ ಕಣ್ಮರೆಯಾಗಿರುವ ಶ್ರೀ ಶಾಸ್ತ್ರಿಗಳು ತಮ್ಮ ಮೇರುಕೃತಿಗಳಿಂದ ಅಮರರಾಗಿದ್ದಾರೆ.

ಪ್ರಕೃತ ರಾಜಕೀಯ ಪರಿಸ್ಥಿತಿಯಲ್ಲಿ ಕನ್ನಡಿಗರು, ತಾವು ಕನ್ನಡಿಗರು, ತಮ್ಮ ತಾಯಿನುಡಿ ಕನ್ನಡ, ಅದು ಉಳಿಯಬೇಕು, ಅದರಿಂದ ತಾವು ಬದುಕಬೇಕು, ಬೆಳೆಯಬೇಕು ಎಂಬುದನ್ನು ನಿರ್ಧರ ಮಾಡಿಕೊಂಡು, ಅದನ್ನು ಉಳಿಸಿ, ತಾವೂ ಉಳಿದು ಶಕ್ತಿ ಗಳಿಸಬೇಕು, ವಿದ್ಯೆ ಗಳಿಸಬೇಕು, ಸಂಪತ್ತು ಗಳಿಸಬೇಕು . . . ಕನ್ನಡಿಗರು ತಮ್ಮ ಕನ್ನಡವನ್ನೂ ಕನ್ನಡತನವನ್ನೂ ಉಳಿಸಿಕೊಂಡರೆ ಅದೇ ಸಾಕಾಗಿದೆ.

* *

ಮಿತಿಯಲ್ಲಿ ಎಲ್ಲವೂ ಒಳ್ಳೆಯದೇ, ಅತಿಯಿಂದ ಅಮೃತವೂ ವಿಷ.

ಎ. ಆರ್. ಕೃ.

ನಾನು ಕಂಡ
ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು

ಎಂ. ಆರ್. ವರದಾಚಾರ್ಯ

ದಿವಂಗತ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳನ್ನು ನಾನು ಮೊದಲು ನೋಡಿದುದು ಸುಮಾರು ೫೭ ವರ್ಷಗಳ ಹಿಂದೆ. ಅವರ ತೀರ್ಥರೂಪರೂ ನನ್ನ ಸಂಸ್ಕೃತ ವಿದ್ಯಾ ಗುರುವೂ ಮೈಸೂರು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರ ಪ್ರಾಧ್ಯಾಪಕರೂ ಆಗಿದ್ದ ಬ್ರಹ್ಮಶ್ರೀ ಅಂಬಳೆ ರಾಮಕೃಷ್ಣಶಾಸ್ತ್ರಿಗಳವರ ಮನೆಯಲ್ಲಿ. ಬ್ರ. ಶ್ರೀ ರಾಮಕೃಷ್ಣಶಾಸ್ತ್ರಿಗಳ ಮನೆಯು ಆಗ ಮೈಸೂರು ಶಿವರಾಮಪೇಟೆಯ ಉತ್ತರದ ಕಡೆ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿ ಇದ್ದಿತೆಂದು ನೆನಪು. ರಾಮಕೃಷ್ಣಶಾಸ್ತ್ರಿಗಳು ಆಯುರ್ವೇದದಲ್ಲಿ ಪಾಂಡಿತ್ಯವನ್ನೂ ಪಡೆದಿದ್ದರು. ಆದರೂ ಸಂಪಾದನೆಗಾಗಿ ಅದನ್ನು ಉಪಯೋಗಿಸದೆ—ಪರಿಚಿತರನೇಕರಿಗೆ ಸಾಮಾನ್ಯ ವ್ಯಾಧಿಗಳಿಗೆ ಮಾತ್ರ ಮನೆಯಲ್ಲೇ ಉಚಿತವಾಗಿ ಔಷಧವನ್ನು ಕೊಡುತ್ತಿದ್ದರು. ಅನಿಯತವಾದ ಆಹಾರಾದಿಗಳಿಂದ ಆಗುವ ಅಜೀರ್ಣ ಹೊಟ್ಟೆನೋವುಗಳಿಗೋ, ತಲೆನೋವಿಗೋ ನಾನು ಔಷಧಿಗಾಗಿ ಅವರ ಮನೆಗೆ ಹೋಗುತ್ತಿದ್ದುದುಂಟು.

ಆಗ ಕೃಷ್ಣಶಾಸ್ತ್ರಿಗಳು ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದರೆಂದು ತೋರುತ್ತದೆ. ವಿವಾಹವಾಗಿದ್ದಿತೋ ಇಲ್ಲವೋ ತಿಳಿಯದು. ಬ್ರಹ್ಮತೇಜಸ್ಸಿನಿಂದ ಕೂಡಿ, ಚಟುವಟಿಕೆಯಿಂದ ಇದ್ದ ಅವರನ್ನು ನೋಡಿದರೆ ಸಂತೋಷವಾಗುತ್ತಿತ್ತು. ಅವರೊಡನೆ ನಾನು ಮಾತನಾಡಲು ಕಾರಣವೂ ಅವಕಾಶವೂ ಒದಗಲಿಲ್ಲ. ಮುಂದೆ ನಾನು ೧೯೧೫ರಿಂದ ೧೯೧೮ರ ವರೆಗೆ ದೇವೀರಮ್ಮಣ್ಣಿಯ ಅಗ್ರಹಾರದಲ್ಲಿ, ರಾಮಕೃಷ್ಣಶಾಸ್ತ್ರಿಗಳು ವಾಸಿಸುತ್ತಿದ್ದ ಮನೆಯ ಎದುರು ಮನೆಯಲ್ಲೇ ಇದ್ದೆ. ಕೃಷ್ಣಶಾಸ್ತ್ರಿಗಳನ್ನು ಅಡಿಗಡಿಗೆ ನೋಡುತ್ತಿದ್ದೆನಾದರೂ ಅವರ ಪರಿಚಯ ಆಗಲಿಲ್ಲ. ಶ್ರೀ ಕೃಷ್ಣಶಾಸ್ತ್ರಿಗಳು ಮೈಸೂರಿನ ಓರಿಯಂಟಲ್ ಲೈಬ್ರೆರಿಯಲ್ಲಿ ಕನ್ನಡಪಂಡಿತರಾಗಿದ್ದಾಗ ೧೯೧೯ರಲ್ಲಿ ಮೈಸೂರು ಟ್ರೈನಿಂಗ್ ಕಾಲೇಜಿನಲ್ಲಿ ಉಪಾಧ್ಯಾಯನಾಗಿದ್ದ ನನ್ನನ್ನು ಮೈಸೂರು ವಿಶ್ವವಿದ್ಯಾನಿಲಯದವರು—ಕನ್ನಡ ರಿಸರ್ಚ್ ಸ್ಕಾಲರಾಗಿ ಸಂಸ್ಕೃತ ಪ್ರೊಫೆಸರ್ ಎಂ. ಹಿರಿಯಣ್ಣನವರ ಕೋರಿಕೆಯಂತೆ ತೆಗೆದುಕೊಂಡರು. ಲೈಬ್ರೆರಿಯಲ್ಲಿ ಕೃಷ್ಣಶಾಸ್ತ್ರಿಗಳ ಎದುರುಗಡೆಯಲ್ಲೇ ನನಗೆ ಪೀಠವು ಒದಗಿತು. ನಾನು ಕನ್ನಡ ಪಂಡಿತನೆಂಬುದರಿಂದಲೋ ಪ್ರೊಫೆಸರ್ ಹಿರಿಯಣ್ಣನವರ ಶಿಷ್ಯವಾತ್ಸಲ್ಯಕ್ಕೆ ಪಾತ್ರನೆಂಬುದರಿಂದಲೋ ಶಾಸ್ತ್ರಿಗಳಿಗೆ ನನ್ನಲ್ಲಿ ವಿಶ್ವಾಸವು ಬೆಳೆಯಿತು. ಗುರುಪುತ್ರರೆಂಬುದರಿಂದ ನಾನು ಅವರಲ್ಲಿ ವಿಶೇಷ ಗೌರವದಿಂದಲೇ ವರ್ತಿಸುತ್ತಿದ್ದೆನು. ಅವರು ಕೆಳದಿ ನೃಪವಿಜಯವೆಂಬ ಗ್ರಂಥದ ಸಂಪಾದಕರಾಗಿದ್ದರು. ಆಗ ಅವರು ಬಿ. ಎ. ಪದವೀಧರರಾಗಿದ್ದರು. ಮದರಾಸ್ ವಿಶ್ವವಿದ್ಯಾನಿಲಯದ ಸಂಸ್ಕೃತ ಎಂ. ಎ. ವ್ಯಾಸಂಗವನ್ನು ಮಾಡುತ್ತಿದ್ದರು. ಲೈಬ್ರೆರಿಯಲ್ಲಿ—ಹಳಗನ್ನಡ ವ್ಯಾಕರಣಗಳ ಸಾಮ್ಯವೈಷಮ್ಯಾದಿಗಳನ್ನು ವಿಮರ್ಶಿಸಿ ಬರೆಯುವುದು ನನ್ನ ಮುಖ್ಯ ಕರ್ತವ್ಯವಾಗಿದ್ದಿತಲ್ಲದೆ, ಕ್ಯೂರೇಟರವರು ಹೇಳಿದಂತೆ ಅಲ್ಲಿಯ ಕನ್ನಡ ಗ್ರಂಥ ಸಂಪಾದಕರಿಗೆ ಓಲೆಯ ಪುಸ್ತಕಗಳನ್ನು ಓದಿ ಹೇಳಿ ಸಹಾಯ ಮಾಡಬೇಕಾಗಿದ್ದಿತು.

ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ನಾನು ಕಂಡ ಕೆಲವು ಲೋಪದೋಷಗಳನ್ನು ಬರೆದು, ನನ್ನ ಅಭಿಪ್ರಾಯವು ಸರಿಯೋ ಅಲ್ಲವೋ ಎನ್ನುವುದನ್ನು ತಿಳಿದುಕೊಳ್ಳಲು ಶಾಸ್ತ್ರಿಗಳ ಬಳಿ ಚರ್ಚಿಸುತ್ತಿದ್ದೆನು. ಅಂತಹ ಚರ್ಚೆಯ ಸಮಯದಲ್ಲಿ ಕ್ಯೂರೇಟರ್ ಡಾ. ಶಾಮಶಾಸ್ತ್ರಿಗಳು ಮೇಲ್ವಿಚಾರಣೆಗೆ ಬಂದು, ಪಕ್ಕದಲ್ಲಿ ಕುಳಿತು ಮಾತನಾಡುತ್ತಿರುವ ನಮ್ಮನ್ನು ಆಕ್ಷೇಪಿಸುತ್ತಿದ್ದುದು ಉಂಟು. ಕೃಷ್ಣಶಾಸ್ತ್ರಿಗಳು ಎದಿರು ಮಾತನಾಡದೆ ಸಹನೆಯಿಂದ ಇದ್ದರೂ, ನಾನು "ಬರವಣಿಗೆಗೆ ಸಂಬಂಧಿಸಿದ ವಿಚಾರವನ್ನೇ ಚರ್ಚಿಸುತ್ತಿದ್ದೇವೆ. ಗೃಹಕೃತ್ಯ ವಿಚಾರವೇನೂ ಅಲ್ಲ" ಎಂದು ಉತ್ತರವನ್ನು ಹೇಳುತ್ತಿದ್ದೆನು. ಕ್ಯೂರೇಟರವರು ಹೋದ ಬಳಿಕ "ನೀವು ಸರಿಯಾಗಿ ಹೇಳಿದಿರಿ" ಎಂದು ಅವರು ಪ್ರೋತ್ಸಾಹಿಸುತ್ತಿದ್ದರು.

ಪಂಡಿತ ಟಿ. ಸುಬ್ಬರಾಯಶಾಸ್ತ್ರಿಗಳು ಗದುಗಿನ ಭಾರತವನ್ನೂ ಜಗನ್ನಾಥ ವಿಜಯವನ್ನೂ ಪುನರ್ಮುದ್ರಣಕ್ಕೆ ಸಿದ್ಧಪಡಿಸುವುದರಲ್ಲಿ ಓಲೆಯ ಪುಸ್ತಕಗಳಲ್ಲಿರುವ ಪಾಠವನ್ನು ಅವಶ್ಯ ಸಂದರ್ಭದಲ್ಲಿ ನಾನು ಓದಿ ಹೇಳಬೇಕಾಗಿದ್ದಿತು. ಮುದ್ರಿತ ಪಾಠದಲ್ಲಿರುವ ಪದಕ್ಕೇ ಕೆಲವು ಅಪೂರ್ವ ಸಂದರ್ಭಗಳಲ್ಲಿ ಪಂಡಿತರಿಗೆ ಅರ್ಥವಾಗದೆ ತಿದ್ದಲು ಹೊರಟಾಗ ಅಕಸ್ಮಾತ್ತಾಗಿ ನನಗೆ ತೋರಿ,ಅರ್ಥ ಹೇಳಿದಾಗ ನಿಮ್ಮ ಕಲ್ಪನೆಯೋ ಎಂದು ಪರಿಹಾಸ್ಯ ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಶಾಸ್ತ್ರಿಗಳು ನಿಘಂಟುಗಳನ್ನು ನೋಡಿ ನನ್ನ ಅರ್ಥವು ಸರಿಯೆಂದು ತಿಳಿಸಿ ಸಮರ್ಥಿಸುತ್ತಿದ್ದರು.

ಶ್ರೀಮಾನ್ ಟಿ.ಎಸ್. ವೆಂಕಣ್ಣನಯ್ಯವರು ಮೈಸೂರಿಗೆ ಬಂದಾಗ ಕೃಷ್ಣಶಾಸ್ತ್ರಿಗಳನ್ನು ನೋಡಲು ಓರಿಯಂಟಲ್ ಲೈಬ್ರೆರಿಗೆ ಬರುತ್ತಿದ್ದರು. ಶಾಸ್ತ್ರಿಗಳು, ಅವರ ಪರಿಚಯವನ್ನು ನನಗೆ ಮಾಡಿಕೊಟ್ಟುದಲ್ಲದೆ, ನಾನು ಪ್ರೊಫೆಸರ್ ಹಿರಿಯಣ್ಣನವರ ಕೃಪಾಪಾತ್ರ ಎಂಬುದನ್ನೂ ವೆಂಕಣ್ಣಯ್ಯನವರಿಗೆ ತಿಳಿಸಿ ಅವರಿಗೆ ನನ್ನಲ್ಲಿ ವಿಶ್ವಾಸವುಂಟಾಗುವಂತೆ ಮಾಡಿದರು. ನಾನು ಲೈಬ್ರೆರಿಯಲ್ಲಿ ೧೯೨೧ನೇ ಫೆಬ್ರವರಿಯವರೆಗೆ ಎರಡು ವರ್ಷಗಳ ಕಾಲ ಇದ್ದೆ. ಅನಂತರ ಹಾಸನದ ಗೌ|| ನಾರ್ಮಲ್ ಸ್ಕೂಲಿಗೆ ಸಹಾಯೋಪಾಧ್ಯಾಯನಾಗಿ ಹೊರಟುಹೋದೆನು. ಕೃಷ್ಣಶಾಸ್ತ್ರಿಗಳಿಗೆ ಲೈಬ್ರೆರಿಯಲ್ಲಿ ನನಗಿಂತ ಹೆಚ್ಚು ಮೆಚ್ಚಿಕೆ ವಿಶ್ವಾಸಪಾತ್ರರಾದವರು ಬೇರಾರೂ ಇರಲಿಲ್ಲವೆಂದು ತೋರುತ್ತದೆ. ಸಂತೋಷಕರವಾಗಿದ್ದ ಸತ್ಪುರುಷರಾದ ಅವರ ಸಾನ್ನಿಧ್ಯವು ತಪ್ಪಿದಾಗ ನನ್ನ ಮನಸ್ಸಿಗೆ ಹೆಚ್ಚು ನೋವೇ ಆಯಿತು. "ಸತ್ಸಂಗಾತ್ ಭವನಿಸ್ಪೃಹಃ" ಎಂಬುದನ್ನು ನಾನು ಅನುಸರಿಸಿದೆನು. ನಾನು ಕೃಷ್ಣಶಾಸ್ತ್ರಿಗಳಿಂದಾಗಲಿ ಟಿ. ಎಸ್. ವೆಂಕಣ್ಣಯ್ಯನವರಿಂದಾಗಲಿ ಯಾವ ಪ್ರಯೋಜನವನ್ನೂ ನಿರೀಕ್ಷಿಸಿದವನಲ್ಲ. ಲೈಬ್ರೆರಿಯಿಂದ ಹೊರಟುಹೋದ ಬಳಿಕ ಒಂದೆರಡು ವರ್ಷಗಳಲ್ಲೇ ಅವರಿಬ್ಬರನ್ನೂ ಮರೆತಿದ್ದೆನು, ಅವರು ನನ್ನನ್ನು ಮರೆಯಲಿಲ್ಲ. ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಒಬ್ಬರು ಕನ್ನಡ ಪಂಡಿತರು ಅವಶ್ಯವೆಂದಾಗ—ಟಿ. ಎಸ್. ವೆಂಕಣ್ಣಯ್ಯನವರಿಗೆ ನನ್ನನ್ನೇ ತೆಗೆದುಕೊಳ್ಳುವಂತೆ ಹೇಳಿದುದಲ್ಲದೆ, ನಾನು ಎಲ್ಲಿರುವೆನೆಂಬುದನ್ನು ವಿದ್ಯಾ ಇಲಾಖೆಯಲ್ಲಿ ವಿಚಾರಿಸಿ, ಹಾಸನದ ನಾರ್ಮಲ್ ಸ್ಕೂಲಿನಲ್ಲಿದ್ದ ನನಗೆ—"ಟಿ. ಎಸ್. ವೆಂಕಣ್ಣಯ್ಯನವರ ಮೂಲಕ ಸೆಂಟ್ರಲ್ ಕಾಲೇಜಿಗೆ ಒಂದು ಅರ್ಜಿಯನ್ನು ಹಾಕಿ, ನನ್ನ ವಿದ್ಯಾಯೋಗ್ಯತೆಯ ವಿಚಾರದಲ್ಲಿ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಕೇಳಬಹುದು . . . ಎಂದು ಬರೆಯಿರಿ" ಎಂದು ವಿವರವಾಗಿ ಕಾಗದ ಬರೆದರು. ಆ ಕಾಗದವನ್ನು ಓದಿ ನನಗೆ ಇದೇನು ಕನಸೋ! ನನಸೊ! ಎನ್ನಿಸಿತು. ಅವರು ಬರೆದಿದ್ದಂತೆ ಸೆಂಟ್ರಲ್ ಕಾಲೇಜಿಗೆ ಅರ್ಜಿಯನ್ನೂ ಹಾಕಿದೆನು. ವೆಂಕಣ್ಣಯ್ಯನವರನ್ನು ಕೇಳದೆಯೇ—ಆಗ ಓರಿಯಂಟಲ್ ಲೈಬ್ರೆರಿಯಲ್ಲಿ ಪಂಡಿತರಾಗಿ ಕೆಲಸ ಮಾಡುತ್ತಿದ್ದ ನನಗಿಂತ ಹಿರಿಯರಾದ ಒಬ್ಬರನ್ನು ಲೈಬ್ರೆರಿಗೆ ಬೇಕಿಲ್ಲವೆಂದು ಡಾ. ಶಾಮಶಾಸ್ತ್ರಿಗಳು ಬರೆದುದರಿಂದ ಯೂನಿವರ್ಸಿಟಿಯವರು ಸೆಂಟ್ರಲ್ ಕಾಲೇಜಿಗೆ ಕಳುಹಿಸಿಬಿಟ್ಟರು. ತಮ್ಮ ಪ್ರಯತ್ನವು ನಡೆಯದುದಕ್ಕಾಗಿ ಅಸಮಾಧಾನಗೊಂಡ ಶಾಸ್ತ್ರಿಗಳು ಬೆಂಗಳೂರಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಟ್ರಾನ್ಸ್‌ಲೇಟರಾಗಿದ್ದ ಡಾ. ಎ.ಎನ್. ನರಸಿಂಹಯ್ಯನವರಿಗೆ ಸಹಾಯಕರಾಗಿ ಪಂಡಿತರೊಬ್ಬರು ಬೇಕೆಂದು ತಿಳಿದು, ಆ ಸ್ಥಾನಕ್ಕೆ ನನ್ನನ್ನು ತೆಗೆದುಕೊಳ್ಳುವಂತೆ ಸಹಾಯ ಮಾಡಿದರು. ಶಿವಮೊಗ್ಗಾಕ್ಕೆ ಹೋಗಿ ಒಂದು ವರ್ಷವೂ ಪೂರ್ತಿಯಾಗಿರಲಿಲ್ಲವೆಂದು ತೋರುತ್ತದೆ. ಅನಿರೀಕ್ಷಿತವಾಗಿ ಬೆಂಗಳೂರಿಗೆ ಅದೂ ವಿದ್ಯಾಭ್ಯಾಸದ ಪ್ರಧಾನಾಧಿಕಾರಿಗಳ ಆಫೀಸಿಗೆ ವರ್ಗವಾದುದಕ್ಕೆ ನನಗೆ ಅಚ್ಚರಿಯಾಯಿತು. ಅದೂ ಕೃಪಾಳುಗಳಾದ ಶಾಸ್ತ್ರಿಗಳ ಕೈವಾಡವೇ ಆಗಿರಬೇಕೆಂದು ಬೆಂಗಳೂರಿಗೆ ಬಂದು ಕೆಲಸಕ್ಕೆ ಸೇರಿದೆನು. ಡೈರೆಕ್ಟರವರ ಆಫೀಸಿಗೆ ಬಂದು ಮೂರು ತಿಂಗಳು ಕೂಡ ಆಗಿರಲಿಲ್ಲ. ಸೆಂಟ್ರಲ್ ಕಾಲೇಜಿಗೆ ಯಾವ ಸ್ಥಾನಕ್ಕೆ ನನ್ನನ್ನು ೨ ವರ್ಷಗಳ ಹಿಂದೆ ತೆಗೆದುಕೊಳ್ಳಬೇಕೆಂದಿದ್ದರೋ ಅದೇ ಸ್ಥಾನವು ಖಾಲಿಯಾದುದರಿಂದ—ಕೃಷ್ಣಶಾಸ್ತ್ರಿಗಳ ಇಷ್ಟದಂತೆ ಅಲ್ಲಿಗೆ ನನ್ನನ್ನು ತೆಗೆದುಕೊಂಡರು. ಇದು ನನ್ನ ಆತ್ಮಕಥೆಯಾಗುವುದಾದರೂ ಶಾಸ್ತ್ರಿಗಳ ಗುಣೈಕಪಕ್ಷಪಾತವೂ ಆಶ್ರಿತ ವಾತ್ಸಲ್ಯವೂ ಆರಂಭಿಸಿದ ಕಾರ್ಯವನ್ನು ಪೂರ್ತಿಗೊಳಿಸುವುದರಲ್ಲಿ ಸ್ಥಿರಾಸಕ್ತಿಯೂ ಎಷ್ಟಿದ್ದಿತೆಂಬುದನ್ನು ತೋರಿಸಲೆಂದು ಬರೆಯುತ್ತಿದ್ದೇನೆ.

ಡಾ. ಕೃಷ್ಣಶಾಸ್ತ್ರಿಗಳು ಸ್ಥಿತಪ್ರಜ್ಞರು, ನಿಷ್ಕಾಮ ಕರ್ಮಿಗಳು. ವೇತನಕ್ಕಾಗಿ ಎಷ್ಟು ಕೆಲಸವೊ ಅಷ್ಟನ್ನು ಮಾತ್ರ ಮಾಡುವವರಲ್ಲ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಎಷ್ಟೋ ಅಷ್ಟನ್ನು ಮಾತ್ರವೇ ಬೋಧಿಸುವುದೂ ಅವರ ಉದ್ದೇಶವಲ್ಲ. ಕನ್ನಡಿಗರು ಕನ್ನಡಿಯಂತೆ ಆಗಬೇಕು ಸುಸಂಸ್ಕೃತರಾಗಬೇಕು ಎಂಬುದೇ ಅವರ ಮುಖ್ಯೋದ್ದೇಶ. ಅದಕ್ಕಾಗಿಯೇ ಅವರು ಸೆಂಟ್ರಲ್ ಕಾಲೇಜಿನಲ್ಲಿ ಕರ್ಣಾಟಕ ಸಂಘವನ್ನು ಸ್ಥಾಪಿಸಿದರು. ಪ್ರಬುದ್ಧ ಕರ್ಣಾಟಕ ಪತ್ರಿಕೆಯನ್ನು ಆರಂಭಿಸಿದರು.

ಶಾಸ್ತ್ರಿಗಳ "ದೇವಿಚೌಧುರಾಣಿಯೇ ಮೊದಲಾದ ಕೆಲವು ಪುಸ್ತಕಗಳ ಪಾಠವನ್ನೂ—ಭಗವದ್ಗೀತೆಯ ಪಾಠವೆಂದು ಕೆಲ ವಿದ್ಯಾರ್ಥಿಗಳು ಹೇಳಿದುದು ಉಂಟು.

ಕನ್ನಡನಾಡು ನುಡಿಗಳ ಸೇವೆಯೇ ಅವರ ಮುಖ್ಯ ಗುರಿಯಾಗಿತ್ತು. ಅದಕ್ಕಾಗಿಯೇ ಹೆಚ್ಚು ಕಾಲವನ್ನೂ ಬುದ್ಧಿಯನ್ನೂ ಉಪಯೋಗಿಸುತ್ತಿದ್ದರು. ಅವರು ಸೆಂಟ್ರಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದಾಗ ಕರ್ಣಾಟಕ ಸಂಘದ ಕೊಠಡಿಯೇ ಅವರ ವಿರಾಮ ಕಾಲದ ಕೊಠಡಿಯಾಗಿದ್ದಿತು. ಅವರಿಗೆ ಕಾಲೇಜಿನಲ್ಲಿ ಪಾಠವಿದ್ದುದು ವಾರದಲ್ಲಿ ಆರು ಘಂಟೆ ಮಾತ್ರ. ಪಾಠವಿಲ್ಲದಿದ್ದರೂ ಕಾಲೇಜ್ ನಡೆಯುವವರೆಗೂ ಅಲ್ಲೇ ಇರಬೇಕೆಂಬ ನಿಯಮವು ಹೆಸರು ಮಾತ್ರಕ್ಕೂ ಇರಲಿಲ್ಲ. ಆದರೂ ಬೆಳಗ್ಗೆ ೧೦ ಘಂಟೆಗೆ ಕಾಲೇಜಿಗೆ ಬಂದವರು ಸಂಜೆ ೬ ಘಂಟೆಯವರೆಗೂ ಕೆಲವು ವೇಳೆ ಇನ್ನೂ ಹೆಚ್ಚುಕಾಲ ಕಾಲೇಜಿನಲ್ಲೇ ಇದ್ದು ಎಡೆಬಿಡದೆ ಪ್ರಬುದ್ಧ ಕರ್ಣಾಟಕದ, ಕರ್ಣಾಟಕ ಸಂಘದ ಕೆಲಸವನ್ನು ಮಾಡುತ್ತಿದ್ದರು.

ಅವರು ಕರ್ತವ್ಯನಿಷ್ಠರಾಗಿದ್ದುದು ಮಾತ್ರವೇ ಅಲ್ಲ. ಸಹಾಯಾಧ್ಯಾಪಕರೂ, ವಿದ್ಯಾರ್ಥಿಗಳೂ ಸ್ವಕರ್ತವ್ಯತತ್ಪರರಾಗಿರಬೇಕೆಂಬುದು ಅವರ ನಿಯಮ. ಕಾಲೇಜಿನಲ್ಲಿ ಸರಿಯಾಗಿ ಪಾಠ ಹೇಳತಕ್ಕವರನ್ನು ಪ್ರೋತ್ಸಾಹಿಸುತ್ತಿದ್ದರು. ಅಲ್ಪ ಲೋಪದೋಷವನ್ನೂ ಅವರು ಸಹಿಸರು. ಬೆಂಗಳೂರು ಇಂಟರಮೀಡಿಯೇಟ್ ಕಾಲೇಜಿಗೆ ಕನ್ನಡ ಶಾಲೆಯ ಇನ್‌ಸ್ಪೆಕ್ಷನ್‌ಗಾಗಿ, ಪ್ರೊಫೆಸರಾಗಿದ್ದ ಅವರು ಬಂದಾಗ—ನಾನೂ ಶ್ರೀ ವಿ. ಸೀತಾರಾಮಯ್ಯನವರೂ ವಿದ್ಯಾರ್ಥಿಗಳಿಂದ ಬರೆಸಿದ ಪ್ರಬಂಧ ಪುಸ್ತಕಗಳನ್ನು ಅರವತ್ತು ಎಪ್ಪತ್ತರಂತೆ ಪೇರಿಸಿಟ್ಟಿದ್ದೆವು. ಅವುಗಳಲ್ಲಿ ತುಂಬಾ ಕೆಳಗಿನ ಕೆಲವು ಪುಸ್ತಕಗಳನ್ನು ತೆಗೆದು ನೋಡಿದರು. "ಮೇಲಿನ ಕೆಲವನ್ನು ಮಾತ್ರ ನಾನು ನೋಡುವೆನೆಂದುಕೊಂಡು ಸರಿ ನೋಡಿದ್ದಿರಿ. ಎಲ್ಲವನ್ನೂ ನೋಡಿಲ್ಲ" ಎಂದು ನಮ್ಮನ್ನು ಆಕ್ಷೇಪಿಸಿದರು.

ಶಾಸ್ತ್ರಿಗಳು ನಿಸ್ಪೃಹರು, ಇದ್ದುದರಲ್ಲೇ ತೃಪ್ತಿಪಟ್ಟವರು. ತಮಗೆ ಅನ್ಯಾಯವಾದರೂ, ತಮ್ಮ ಮಿತ್ರರಿಗೆ ಲಾಭವಾಗುವಂತಿದ್ದರೆ—ಸಹಿಸಿ ಸುಮ್ಮನಿರುತ್ತಿದ್ದರು. ಟಿ. ಎಸ್. ವೆಂಕಣ್ಣಯ್ಯನವರಿಗಿಂತಲೂ ಶಾಸ್ತ್ರಿಗಳು ಮೊದಲು ಗೌ. ಸರ್ವಿಸ್ಸಿಗೆ ಸೇರಿದವರಂತೆ. ಆದರೂ ಪ್ರೊಫೆಸರ್ ಪದವಿಯನ್ನು ಮೊದಲು ಅವರಿಗೇ ಕೊಟ್ಟರೂ ತಮಗೆ ಬರಬೇಕಾಗಿದ್ದಿತೆಂದು ಕೇಳದೆ ಕೊರಗದೆ ಇದ್ದರು. ವೆಂಕಣ್ಣಯ್ಯನವರು ಥಳುಕಿನಲ್ಲೇ ಹುಟ್ಟಿದರೂ ಸ್ವಲ್ಪವೂ ಥಳುಕಿಲ್ಲದವರಾಗಿದ್ದಾರೆಂದು ಪದ್ಯದಲ್ಲಿ ಬರೆದು ಶಾಸ್ತ್ರಿಗಳೊಬ್ಬರೇ ಇದ್ದಾಗ ಹೇಳಿದ್ದನ್ನು ಕೇಳಿ ನಕ್ಕರು.

ಶಾಸ್ತ್ರಿಗಳಿಗೆ ಒಂದು ಗಂಡುಮಗುವಾಗಿದ್ದು ಒಂದು ವರ್ಷದೊಳಗೇ ತೀರಿಹೋಯಿತು. ಅದಕ್ಕಾಗಿ ಅವರಿಗೆ ಅಂತರಂಗದಲ್ಲಿ ಕೊರತೆಯಿದ್ದಿತೋ ಏನೋ! ಅವರ ಮುಖದಲ್ಲಿ ನಗುವು ಅಪೂರ್ವವಾಗಿದ್ದಿತು. ನಾನು ಮತ್ತೊಂದು ದುಃಖದ ಸಂದರ್ಭದಲ್ಲಿ ದುಃಖವನ್ನು ಸಮಾಧಾನಪಡಿಸಲು ಹೋದಾಗ, 'ದುಃಖಿಸಬೇಕಾಗಿಲ್ಲ. ಸಂತೋಷಿಸಬೇಕಾಗಿದೆ. ನಿಧನವು ಪಲ್ಲಟವಾಗಿದ್ದರೆ ನಮ್ಮ ಗತಿಯೇನಾಗುತ್ತಿತ್ತು? ಜೀವಾವಧಿ ದುಃಖಿಸಬೇಕಾಗುತ್ತಿತ್ತಲ್ಲಾ' ಎಂದರು. ಅವರು ಸ್ಥಿತಪ್ರಜ್ಞರೆಂಬುದಕ್ಕೆ ಇದೂ ಒಂದು ನಿದರ್ಶನ.

ಶಾಸ್ತ್ರಿಗಳು ಲೋಭವಿಲ್ಲದವರು ಎಂಬುದನ್ನು ನಾನು ಹೇಳಬೇಕಾಗಿಲ್ಲ. ನ್ಯಾಷನಲ್ ಕಾಲೇಜಿನಲ್ಲಿ ಕೊಡುತ್ತೇವೆಂದರೂ ಯಾವ ಸಂಭಾವನೆಯನ್ನೂ ತೆಗೆದುಕೊಳ್ಳದೆ ಎರಡು ವರ್ಷಕಾಲ ಪಾಠ ಹೇಳುತ್ತಿದ್ದುದನ್ನು ನಾನು ಬಲ್ಲೆ.

ಕೃಷ್ಣಶಾಸ್ತ್ರಿಗಳು ಶ್ರೌತಸ್ಮಾರ್ತಕರ್ಮನಿಷ್ಠರು, ದೈವಭಕ್ತರು, ದೈನ್ಯರಹಿತರು. ಪ್ರೊಫೆಸರ್ ಹಿರಿಯಣ್ಣನವರಂತೆ ಮಾದರಿಯ ಪ್ರಾಧ್ಯಾಪಕರು. ಅವರು ಸ್ವರ್ಗಸ್ಥರಾದುದರಿಂದ ಕನ್ನಡನಾಡಿಗೆ ಒಂದು ಅಮೂಲ್ಯರತ್ನವು ಕಳೆದುಹೋದಂತೆ ಆಗಿದೆ.

ಎಷ್ಟು ಆಡಿದರೇನು
ಎಲ್ಲ ಬರಿಮಾತು!
ಕನ್ನಡದ ಕಳಸವೇ
ಬಿದ್ದು ಹೋಯ್ತು!

ಅರ್ಚಕ ವೆಂಕಟೇಶ

ಪೂಜ್ಯ ಎ. ಆರ್. ಕೃಷ್ಣಶಾಸ್ತ್ರಿಗಳ ಪುಣ್ಯಸ್ಮರಣೆ

ಉಮಾದೇವಿ ಶಂಕರರಾವ್

" ನೀನಂದು ಕನಕರಥವನು ತಂದು, ಬಾ ಎಂದು
ಕರೆದಂದು ನಾನು ಧೂಳಾಡುತಿದ್ದೆ
ಹೊಂಬಿಸಿಲು ಹೊಮ್ಮಿತ್ತು, ಖಗಗಾನ ಚಿಮ್ಮಿತ್ತು
ಕಣ್ದೆರೆದುಕೊಂಡಿತ್ತು ಜಗದ ನಿದ್ದೆ.
ತೇರಿನಾ ಬಣ್ಣವನು ಕಂಡೆ
ಮೊದಲು ಮರುಳಾದೆ
ಹುಡುಗಾಟ ಎಂದುಕೊಂಡೆ
ಆದನೇರಿ ಹೋದೆ ! "

(ತಾವರೆಯ ತೇರು : ಕುವೆಂಪು)

ಬಾಲ್ಯದಲ್ಲಿ ಬೀದಿಯ ಮಣ್ಣಿನಲ್ಲಿ ಆಟವಾಡುವಾಗಲೇ ಅನೇಕರು ಒಂದೆರಡೋ-ಕೆಲವೋ-ಹಲವೋ ಹೊಂಗನಸುಗಳನ್ನು ಕಾಣುವರು. ಕೈಶೋರ ಮತ್ತು ಯೌವನದ ಸಂಧಿಕ್ಷಣದಲ್ಲಿ ಬಾಳ ಕ್ಷಿತಿಜದಲ್ಲಿ ಸ್ವರ್ಗೀಯ ಸುಂದರ ದೃಶ್ಯಪರಂಪರೆಗಳು, ದಿವ್ಯವೆಂದೋ ಭವ್ಯವೆಂದೋ ಹೇಳಬಹುದಾದ ಆದರ್ಶಗಳು ಆಶೋತ್ತರಗಳು ಆಕಾಂಕ್ಷೆಗಳು ಅತ್ಯಂತ ಕಮನೀಯ ಕಲ್ಪನೆಗಳು, ಮುಗಿಲು ಮುಟ್ಟುವ ಊಹೆಗಳು ತಲೆದೋರುವುವು.

ಆ ದಿವ್ಯತೆಯ ಅನುಭವವೇನೋ ಬಹುಜನಕ್ಕೆ ಆಗುವುದಾದರೂ ಅದರ ಆವರ್ತಿ, ಅವಧಿ ಅದು ಎಷ್ಟು ಹತ್ತಿರ ಅಥವಾ ದೂರದಿಂದ, ಯಾವ ಮಟ್ಟದಲ್ಲಿ ಎಂಬುವೆಲ್ಲ ಆಯಾ ವ್ಯಕ್ತಿಯ ಪೂರ್ವಸುಕೃತ, ಸಂಸ್ಕಾರ ಪರಿಸರ ವಿದ್ಯೆ, ಬುದ್ಧಿ, ಸಾಧನೆ, ಯೋಗ್ಯತೆ, ಸಂವೇದನಾಶಕ್ತಿ ಇತ್ಯಾದಿಗಳನ್ನವಲಂಬಿಸಿರುತ್ತವೆ. ತೀರ ಜಡ, ಸಂವೇದನಾ ಶೂನ್ಯದಲ್ಲಿ ಯಾವ ಪ್ರತಿಕ್ರಿಯೆಯೂ ಉಂಟಾಗುವುದಿಲ್ಲ.

ಅವರವರ ಆಸೆ, ಮನದೊಲವುಗಳಿಗೆ ಅನುಗುಣವಾಗಿ ಚಿಕ್ಕಂದೇ ಕನಸು ಕಾಣುತ್ತಾರೆ. ಮುಂದೆ ಅದನ್ನು ನನಸಾಗಿಸಲು ಯತ್ನಿಸುತ್ತಾರೆ. ಮತಸ್ಥಾಪಕರಿಗೆ, ಆಚಾರ್ಯರಿಗೆ ಧರ್ಮ ಪ್ರಚಾರದ ಆಸೆ. ಶಿಕ್ಷಣ ಶಾಸ್ತ್ರಜ್ಞರಿಗೆ ಅಕ್ಷರ ಪ್ರಸಾರದ ಗೀಳು. ರಾಜರಿಗೆ, ಯೋಧರಿಗೆ ರಾಜ್ಯ ವಿಸ್ತಾರದ ಬಯಕೆ. ಸಮಾಜ ಸುಧಾರಕನಿಗೆ ಸಮಾಜದ ಕುಂದುಕೊರತೆಗಳನ್ನು ದೂರಗೊಳಿಸುವ, ದೂಷಿತ ಪದ್ಧತಿಗಳನ್ನು ಬದಲಾವಣೆಗಳನ್ನು ಮಾಡುವ ಆಸೆ, ಪುರಾತನ ಪಂಥಿಗಳಿಗೆ ಹಿಂದಿನಿಂದ ಬಂದ ಪದ್ಧತಿಗಳು, ಕಟ್ಟುಕಟ್ಟಲೆಗಳನ್ನೇ ಚಾಚೂತಪ್ಪದೆ ಅನುಸರಿಸಿಕೊಂಡುಬರುವ ಸಂಪ್ರದಾಯ ಶರಣತೆ. ಸರ್. ಎಂ. ವಿಶ್ವೇಶ್ವರಯ್ಯನವರಂಥಹ ಯಂತ್ರಶಿಲ್ಪಿಗಳಿಗೆ ದೇಶದ ಸಂಪದಭಿವೃದ್ಧಿಯ ಯೋಜನೆ, ಸ್ವಾರ್ಥ ಸಾಧಕರಿಗೆ ಎಂದಿಗೂ, ಎಲ್ಲಿಯೂ ತಮಗೇನು ಗಿಟ್ಟೀತು, ಎಷ್ಟನ್ನು ದಕ್ಕಿಸಿಕೊಳ್ಳಬಹುದೆಂಬ ದುಶ್ಚಿಂತೆಯೇ.

ಕಂಡ ಕನಸು ಅಥವಾ ಕಮನೀಯ ದೃಶ್ಯಗಳೇ ಆದರ್ಶಗಳ ಆಧಾರಸ್ತಂಭ, ಉದಾತ್ತಧ್ಯೇಯಗಳ ಧ್ವಜದಂಡಗಳಾಗಬೇಕಿಲ್ಲ. ಬಾಳಿನಲ್ಲಿ ಉಂಡನೋವು, ಅನ್ಯಾಯ ಹೃದಯವನ್ನು ಹಿಂಡುವ ಕರುಣಾಜನಕ ದೃಶ್ಯ, ದುರವಸ್ಥೆಗಳೂ ಯಾವುದೇ ಒಂದು ಕ್ಷೇತ್ರದಲ್ಲಿ ಕಂಡುಬರುವ ಅಭಾವ, ಸೇವೆಯ ಅಗತ್ಯ, ಅವಶ್ಯಕತೆಗಳೂ ಸಹಾ ಜೀವಿತದ ಧ್ಯೇಯವನ್ನು ರೂಪುಗೊಳಿಸಲು ಕಾರಣವಾಗಬಹುದು.

ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು ಸ್ವಲ್ಪ ಹೆಚ್ಚು ಕಡಮೆ ಅವರ ಸಮಕಾಲೀನರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು ಮೊದಲಾದ ಮಹನೀಯರು ಯಾವ ಭವ್ಯ ಸ್ವಪ್ನವನ್ನು ಕಂಡರೋ ಹರಿದುಹಂಚಿದ ಕರ್ಣಾಟಕಕ್ಕಾಗಿ, ನಾಡುನುಡಿಗಳ ಅವನತಿಯ ಬಗೆಗೆ ಎಷ್ಟು ಕುದಿದರೋ, ಯಾವ ಭಾವ ಕುಸುಮಗಳು ಅವರ ಹೃದಯ ಕಮಲಾಕರದಲ್ಲಿ ಮೂಡಿದುವೋ! ಕನ್ನಡದ ಬಗ್ಗೆ ಆ ಮಹನೀಯರುಗಳಿಗೆ ಇದ್ದ ಕಳಕಳಿ ಅಭಿಮಾನ ಕೇವಲ ಗತವೈಭವದ ಸ್ಮರಣೆಯಲ್ಲಿ, ವರ್ತಮಾನ ಸ್ಥಿತಿಗೆ ಅತೃಪ್ತಿಪಟ್ಟುಕೊಂಡು ಗೊಣಗಾಟದ

ಟೀಕೆ ಟಿಪ್ಪಣಿಗಳಲ್ಲಿ ಪರ್ಯವಸಾನವಾಗಲಿಲ್ಲ. ಅವರ ಸಾರ್ಥಕ ಜೀವನದ ಸತತೋದ್ಯಮದ ಫಲ ಪ್ರತ್ಯಕ್ಷವಾಗಿದೆ. ನಾಡಿಗೆ ಅಭ್ಯುದಯ ಕಾಲ ಒದಗಿದಾಗ ಅನೇಕ ಮಹದ್ವ್ಯಕ್ತಿಗಳು ಹುಟ್ಟಿಬರುತ್ತಾರೆ. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಬಿ. ಎಂ. ಶ್ರೀಕಂಠಯ್ಯವರಂಥ ಮಹಾನುಭಾವರು ಗುರುಗಳು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು, ಎಸ್. ವಿ. ರಂಗಣ್ಣನವರು—ಇನ್ನೂ ಎಷ್ಟೋ ಜನ ಮೇಧಾವಿಗಳಾದ ಶಿಷ್ಯರು. ಹಿರಿಯರ ಬೆಂಬಲ-ಪೂಜ್ಯ ಮಾಸ್ತಿಯವರು, ಡಿ. ವಿ. ಗುಂಡಪ್ಪನವರು, ಕೆ. ಎಸ್. ನರಸಿಂಹಸ್ವಾಮಿಯವರು, ವಿ. ಸೀ. ಮೊದಲಾದ ವರಕವಿಗಳ ನೆರವು.

ಯಾವ ಒಂದು ದೊಡ್ಡ ಕೆಲಸವನ್ನೇ ಆಗಲಿ ಸಾಧಿಸಬೇಕಾದರೆ ಸಮಾನ ಧ್ಯೇಯವನ್ನುಳ್ಳ ಸಮರ್ಥರನೇಕರು ಸೇರಿ ದುಡಿಯಬೇಕು, ಅದಕ್ಕಾಗಿ ಬಾಳನ್ನೇ ಮುಡಿಪು ಮಾಡಬೇಕು.

ಬಂಕಿಂಚಂದ್ರರ ಬಗ್ಗೆ ರವೀಂದ್ರನಾಥ ಠಾಕೂರರು "ಲೆಕ್ಕವಿಲ್ಲದಷ್ಟು ಜನ ಲೇಖಕರು ತಮ್ಮ ಸಾಮರ್ಥ್ಯದ ಎಲ್ಲೆಯನ್ನು ಅರಿಯದೆ ಒಂದೇ ನೆಗೆತದಲ್ಲಿ ಲೇಖಕರಾಗಿ ಬಿಡಬೇಕೆಂದು ಪ್ರಯಾಸಪಟ್ಟರು. ಅವರಿಗೆ ಲೇಖನದ ಆಯಾಸ ಕಂಡಿತು. ಆದರ್ಶ ಕಾಣಲಿಲ್ಲ. ಈ ಸಮಯದಲ್ಲಿ ಸವ್ಯಸಾಚಿಯಾದ ಬಂಕಿಮನು ಒಂದು ಕೈಯನ್ನು ರಚನೆಗೂ ಇನ್ನೊಂದು ಕೈಯನ್ನು ನಿವಾರಣೆಗೂ ಉಪಯೋಗಿಸಿದನು" ಎಂದು ಹೇಳಿರುವ ಮಾತುಗಳನ್ನೂ, ಬಂಕಿಂಚಂದ್ರರ ಬಗ್ಗೆ ಹೇಳಿರುವ ಇನ್ನೆಷ್ಟೋ ಮಾತುಗಳನ್ನೂ ಶ್ರೀ ಕೃಷ್ಣಶಾಸ್ತ್ರಿಗಳಿಗೂ ಅನ್ವಯಿಸಬಹುದು. ಅವರು ಕನ್ನಡದ ಸವ್ಯಸಾಚಿಯಾಗಿದ್ದರೆಂದೇ, ಸಾರಸ್ವತ ಯಜ್ಞದ ಸಮರ್ಥ ಅಧ್ವರ್ಯು ಆಗಿದ್ದರೆಂದೇ ಕಳೆಯೇ ಬೆಳೆಯನ್ನು ನುಂಗುವುದು ತಪ್ಪಿತು. ಅನ್ಯ ಭಾಷೆಯನ್ನರಿಯದ ಕನ್ನಡಿಗರಿಗೆ ಕನ್ನಡದಲ್ಲೇ ಸಾಹಿತ್ಯ ಸುಧಾರಸಪಾನ, ಜ್ಞಾನ ವಿಜ್ಞಾನ ವಾರಿಧಿಗಳ ಸ್ನಾನ ಸುಲಭವಾಗುವಂತೆ ಮಾಡುವ ಭಗೀರಥ ಸಾಹಸ ಮಾಡಿ ಕೃತಕೃತ್ಯರಾದರು. ಅನ್ಯಭಾಷೆಗಳ ಸುವಿಶಾಲ ಸಾಹಿತ್ಯಾರಾಮಗಳಲ್ಲಿ ವಿಹರಿಸಿದವರಿಗೆ ಸಹ ಅವರು ಕನ್ನಡದಲ್ಲಿ ಮಾಡಿರುವ ಕೃಷಿ ಕಾರ್ಯವನ್ನು ಕಂಡು ಆಶ್ಚರ್ಯ ಮೆಚ್ಚುಗೆ ಆಗದಿರದು.

ಪೂಜ್ಯ ಮಾಸ್ತಿಯವರು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳನ್ನೂ ಟಿ. ಎಸ್. ವೆಂಕಣ್ಣಯ್ಯನವರನ್ನೂ ಹೊಸಗನ್ನಡದ ಅಶ್ವಿನೀ ದೇವತೆಗಳೆಂದು ಕರೆದಿದ್ದಾರೆ. ಅವರಿಬ್ಬರೂ ಸೇರಿ ಆರಂಭಿಸಿದ ಪ್ರಬುದ್ಧ ಕರ್ಣಾಟಕ-ಸಂಚಯಿಸಿ ಇಡಬೇಕಾದ ಸಂಚಿಕೆಯಾಗಿ ಮುಂದಿನ ಸಂತತಿಯ ಸಲುವಾಗಿ ಕಾದಿಡಬೇಕಾದ ಮೇಲ್ಮಟ್ಟದ ಉತ್ತಮ ಪತ್ರಿಕೆಯಾಗಿ ಹತ್ತಿರ ಹತ್ತಿರ ಅರ್ಧಶತಮಾನ ನಡೆದುಕೊಂಡುಬಂದಿದೆ. ಶ್ರೀಕೃಷ್ಣಶಾಸ್ತ್ರಿಗಳು ೧೩ ವರ್ಷ ಅದರ ಪ್ರಧಾನ ಸಂಪಾದಕರಾಗಿ ದುಡಿದು ಅದು ಯಾವ ಉನ್ನತ ಮಟ್ಟದಲ್ಲಿ, ರೀತಿಯಲ್ಲಿ ನಡೆಯಬೇಕೋ ಹಾಗೆ ಅದಕ್ಕೆ ಭದ್ರವಾದ ಅಡಿಪಾಯ ಹಾಕಿದರು. ಅವರು ಸ್ವತಃ ರಚಿಸಿದ ಮತ್ತು ಪರಿಶೋಧಿಸಿ ಪರಿಷ್ಕರಿಸಿ ಪ್ರಕಟಿಸಿದ ಒಂದೊಂದು ಕೃತಿಯೂ ನಮ್ಮ ಇತಿಹಾಸದ ಮೈಲಿಗಲ್ಲಾಯಿತು. ನಾವು ನ್ಯಾಯವಾಗಿ -ಕೇವಲ ನಮ್ಮ ಕನ್ನಡ ಸಾಹಿತ್ಯವೆಂಬ ಮೋಹದಿಂದಲ್ಲ- ಹೆಮ್ಮೆಪಟ್ಟುಕೊಳ್ಳಬಹುದಾದ ಚಿರಸ್ವತ್ತಾಯಿತು. ನಿರ್ದುಷ್ಟವಾದ ವಿಮರ್ಶೆಗೆ, ಗಂಭೀರವಾದ ಅಡಕವಾದ ಸಾರವತ್ತಾದ ಬರವಣಿಗೆಗೆ ಇಂದಿಗೂ ಅವರು ಮೇಲ್ಪಂಙ್ತಿ. ಎಂಥ ಹಿರಿಯ ಸಾಹಿತಿಗಳ ಕೃತಿಯನ್ನು ವಿಮರ್ಶಿಸಲೂ ಅವರು ಹಿಂದೆಗೆಯುತ್ತಿರಲಿಲ್ಲ. ನಿರ್ಭಯದ ನೇರ ಹೆಜ್ಜೆ, ನಿರ್ದಾಕ್ಷಿಣ್ಯವಷ್ಟೇ ಅಲ್ಲ. ಹೊಸಬರ ಬೆನ್ನು ತಟ್ಟಲು, ಎಳೆಯರ, ಗೆಳೆಯರ ಬರವಣಿಗೆಯಲ್ಲಿ ಏನೋ ಒಂದು ಸತ್ತ್ವ, ಸೌಂದರ್ಯ, ಮಾಧುರ್ಯ ಇದೆ ಎಂದು ಕಂಡಾಗ ಹೊಗಳಿ ಹುರಿದುಂಬಿಸಲು ಅಷ್ಟೇ ಬೇಗ ಮುಂದಾಗುತ್ತಿದ್ದರು. ಆ ಹಿರಿಯ ಚೇತನದಲ್ಲಿ ಅಲ್ಪತನ, ಕಾರ್ಪಣ್ಯ ಇರಲಿಲ್ಲ. ಅವರನ್ನು ಕಂಡದ್ದೇ ಒಂದು ಪುಣ್ಯ.

"ಮರೆಯಾಯ್ತು ಮೇರುಸಮ ಧೀರಗಂಭೀರಮೂರ್ತಿ
ಸಾಹಿತ್ಯಗಗನದಲಿ ಕಾಲಕ್ರಮದಿ ಮಾಸದ ಶುಭಧವಲ ಕೀರ್ತಿ
ನಾಡುನುಡಿಗಳ ಸೇವೆ ಮಾಡಬಯಸುವವರಿಗೆ ಸ್ವರ್ಗೀಯ ಸ್ಫೂರ್ತಿ
ಸರಸ್ವತಿಯ ವರಪುತ್ರ, ಅನಂತದಲಿ ಸೇರಿಹೋದರ್
ಶ್ರೀ ಕೃಷ್ಣಶಾಸ್ತ್ರಿಗಳ್"

* * *

ಈಗ್ಗೆ ಸುಮಾರು ಎರಡೂವರೆ ವರ್ಷಗಳ ಕೆಳಗೆ ದೆಹಲಿಯ ಹತ್ತು ಹೈಯರ್ ಸೆಕೆಂಡರಿ ಸ್ಕೂಲುಗಳಿಗೆ ವಿದ್ಯಾಭ್ಯಾಸ ಇಲಾಖೆಯ ಮುಖ್ಯಾಧಿಕಾರಿಗಳಿಂದ—ಅಂತರಾಷ್ಟ್ರೀಯ ಪ್ರದರ್ಶನ ಏರ್ಪಡಿಸುವಂತೆ ಸೂಚನೆ ಬಂತು. ಲೇಡಿ ಇರ್ವಿನ್ ಹೈಯರ್ ಸೆಕೆಂಡರಿ ಸ್ಕೂಲಿನ ಪ್ರಿನ್ಸಿಪಾಲ್, "ಅಂತರಾಷ್ಟ್ರೀಯ ಜ್ಞಾನ ಹಾಗಿರಲಿ, ಮೊದಲು ನಮ್ಮ ನೆರೆಹೊರೆಯ ಪ್ರಾಂತಗಳ ಬಗ್ಗೆ ತಿಳಿವಳಿಕೆ ಬೆಳೆಸಿಕೊಳ್ಳೋಣ" ಎಂದರು. ಆದಕ್ಕೆ ವಿ. ಇ. ಮುಖ್ಯಾಧಿಕಾರಿಗಳ ಅನುಮೋದನೆ ಸಿಕ್ಕಿತು. ಇರ್ವಿನ್ ಸ್ಕೂಲಿಗೆ ಕರ್ಣಾಟಕದ ಬಗ್ಗೆ

ಪ್ರದರ್ಶನ ಏರ್ಪಡಿಸುವ ಕೆಲಸ ಬಂತು. ನಾನು ಪ್ರಿನ್ಸಿಪಾಲರಿಗೆ: "ಇಂದಿನ ಮಂತ್ರಿಗಳು, ರಾಜಕೀಯ ಮುಖಂಡರುಗಳ ಭಾವಚಿತ್ರ, ಮೈಸೂರು ಸಿಲ್ಕ್‌ಸೀರೆಗಳು, ಮೈಸೂರಿನಲ್ಲಿ ತಯಾರಾದ ಅಂದಚೆಂದದ ಶ್ರೀಗಂಧದ ಮತ್ತು ದಂತದ ಸಾಮಾನುಗಳು—ಇಷ್ಟನ್ನಿಟ್ಟರೆ ಸಾಲದು. ಕನ್ನಡ ನಾಡಿಗೆ ೨೦೦೦ವರ್ಷಗಳ ಉಜ್ವಲ ಇತಿಹಾಸವಿದೆ, ಸಾಹಿತ್ಯ ಇದೆ. ಭವ್ಯಭವಿಷ್ಯವೂ ಇದೆ ಎಂದು ನಂಬುತ್ತೇನೆ.

"ಈ ೨೦೦೦ವರ್ಷಗಳಲ್ಲಿ ನಮ್ಮ ಜನರ ಜೀವನವಸ್ತುಗಳನ್ನು ಸಂಪನ್ನಗೊಳಿಸಿದವರು, ಸಂಗೀತ, ಸಾಹಿತ್ಯ ನೃತ್ಯ, ಚಿತ್ರ, ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿ ಗಣನೀಯ ಕೆಲಸ ಮಾಡಿದವರು—ಅವರೀಗ ಸಂಸ್ಕೃತಿಯ ನಿಜವಾದ ನಿರ್ಮಾಪಕರು; ನಮ್ಮ ಜನಗಳ ಮನೋಧರ್ಮವನ್ನು ತಿದ್ದಿದವರು, ಮಾರ್ಪಡಿಸಿದವರು-Those who moulded the thoughts of our people, improved, changed for better or enriched our way of life,—encouraged or inspired others to do great deeds—they are real leaders" ಎಂದು ಹೇಳಿ ಕರ್ಣಾಟಕದ ಮುಖ್ಯರಾದ ಮತಸ್ಥಾಪಕರ, ಸಾಧುಸಂತರ ಕವಿಗಳ, ಗಾಯಕರ, ಶಿಲ್ಪಿಗಳ, ಗ್ರಂಥಕಾರರ ಮತ್ತು ಆಧುನಿಕ ಜನಜೀವನದ ಯಾವುದೇ ಕ್ಷೇತ್ರದಲ್ಲಿ ಮಹತ್ತರವಾದ ಅಥವಾ ಪರಿಣಾಮಕಾರಿಯಾದ ಕಾರ್ಯಗಳನ್ನು ಪ್ರಯೋಗಗಳನ್ನು ಮಾಡಿದವರ ಬಗ್ಗೆ ಮಾಹಿತಿ, ಅವರ ಚಿತ್ರ, ಸಂಸ್ಥಾನದ ವಿವಿಧ ಔದ್ಯೋಗಿಕ ಪ್ರತಿಷ್ಠಾನಗಳು, ನಿರಾವರೀ ಯೋಜನೆಗಳು community projects-ಇತ್ಯಾದಿಗಳ ಬಗ್ಗೆ ಚಿತ್ರ ಮತ್ತು ನಕಾಶೆಗಳು, ಪ್ರಾಚೀನ ಶಿಲಾಲೇಖಗಳು ಅದರ ನಕಲುಗಳು, ಅಲ್ಲದೆ ಕರ್ಣಾಟಕದ ಮಹಾಪುರುಷರು ಮತ್ತು ಇಂದಿನ ಶ್ರೇಷ್ಠ ಸಾಹಿತಿಗಳು ಮುಂತಾದವರ ಚಿತ್ರ, ಅತ್ಯುತ್ತಮ ಪುಸ್ತಕಗಳ ಪ್ರದರ್ಶನ ಏರ್ಪಡಿಸುವಂತೆ ಸೂಚಿಸಿದೆ. ಪ್ರಬುದ್ಧ ಕರ್ಣಾಟಕದ ಕೆಲವು ಸೂಚನೆಗಳು ಇತರ ಕೆಲವು ಪುಸ್ತಕಗಳ ಕೆಲವು ಭಾಗಗಳನ್ನು ಇಂಗ್ಲಿಷಿನಲ್ಲಿ, ಹಿಂದಿಯಲ್ಲಿ ಅನುವಾದಿಸಿ ತೋರಿಸಿದೆ. ನಮ್ಮ ಕನ್ನಡದ ಎಷ್ಟೋ ಒಳ್ಳೆಯ ಪುಸ್ತಕಗಳು, ಪತ್ರಿಕೆಗಳು ಮೇಲುನೋಟಕ್ಕೆ ಕಣ್ಮನಗಳನ್ನು ಸೆಳೆದುಕೊಳ್ಳುವಂತೆ ಆಕರ್ಷಕವಾಗಿ, ಪ್ರಭಾವೋಪೇತಕವಾಗಿಲ್ಲ. ಕಾಗದ, ಮುದ್ರಣ ಇತ್ಯಾದಿಗಳು ಸಹ ಬಹಳ ತೃಪ್ತಿಕರವಾಗಿಲ್ಲ, ಕಲಾಮಯ ವರ್ಣಚಿತ್ರಗಳಿಲ್ಲ. ಆದರೆ ಒಳಗಿನ ಹೂರಣ ಹೇಗಿದೆ?, ಕೇವಲ ಕ್ಷಣಿಕ ಮನರಂಜನೆಯನ್ನು ಕೊಡದೆ ನಿತ್ಯತೃಪ್ತಿಯನ್ನು ಕೊಡುವ ಗುಣ, ಸತ್ತ್ವ ನಮ್ಮ ಸಾಹಿತ್ಯಕ್ಕಿದೆ ಎಂಬುದನ್ನು ತೋರಿಸುವುದೇ ನನ್ನ ಉದ್ದೇಶವಾಗಿತ್ತು. ಪೂಜ್ಯ ಎ. ಆರ್. ಕೃಷ್ಣಶಾಸ್ತ್ರಿಗಳ ಬಗ್ಗೆ ಮತ್ತು ಮಾಸ್ತಿಯವರ ಬಗ್ಗೆ ಮಾತನಾಡುವಾಗ ಸಹಜವಾಗಿಯೇ ನನ್ನ ಧ್ವನಿ ನನಗೆ ಅವರುಗಳ ಬಗ್ಗೆ ಇರುವ ಅಪಾರ ಗೌರವದಿಂದ ಭಾವಪೂರ್ಣವಾಗಿದ್ದಿತು ಎಂದು ಕಾಣುತ್ತದೆ. ಪ್ರಿನ್ಸಿಪಾಲರೂ, ಇತರ ಉಪಾಧ್ಯಾಯಿನಿಯರೂ ಚಿತ್ರಾರ್ಪಿತ ಪ್ರತಿಮೆಗಳಂತೆ ಮೌನವಾಗಿ ಆಲಿಸುತ್ತಿದ್ದರು.

ನನ್ನ ಮಾತಿನ ಓಘದಲ್ಲಿ ನನಗೆ ವೇಳೆಯ ಪರಿವೆಯೇ ಉಳಿಯಲಿಲ್ಲ; ಇವರುಗಳು ದಾಕ್ಷಿಣ್ಯದಿಂದ ಸುಮ್ಮನಿದ್ದಾರೆ ಎಂದು ಕಿಂಚಿತ್ ಲಜ್ಜಿತಳಾದೆ. ಆದರೆ ಶ್ರೀಮತಿ ಸೇನಗುಪ್ತರು ಹೇಳಿದರು—'ನೀವು ಹೇಳುವ ಮಾತುಗಳನ್ನು ಕೇಳಿದರೆ ಒಬ್ಬೊಬ್ಬ ವ್ಯಕ್ತಿ ಇಷ್ಟು ಅಗಾಧ ಕೆಲಸ ಮಾಡಿರುವುದಾದರೆ, ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳ ಮತ್ತು ಶ್ರೀಮಾನ್ ಮಾಸ್ತಿಯವರ ದೊಡ್ಡ ಸೈಜಿನ ಭಾವಚಿತ್ರಗಳು ದೊರೆತರೆ ನಮ್ಮ ಶಾಲೆಯ Main Hall ನಲ್ಲಿ ಶಾಶ್ವತವಾಗಿ ಇಟ್ಟು ನಮ್ಮ ಗೌರವವನ್ನು ವ್ಯಕ್ತಪಡಿಸುತ್ತೇವೆ. ಮತ್ತು Majestic Mysore ಎಂಬ ಪುಸ್ತಕವನ್ನು ಯಾರಾದರೂ ಮಹನೀಯರು ನಮ್ಮ ಶಾಲೆಯ ಲೈಬ್ರರಿಗೆ ದಾನಮಾಡುವುದಾದರೆ ಬಹಳ ಸಂತೋಷ' ಎಂದರು.

ಮಾತಿಗೂ ಸಾಹಿತ್ಯಕ್ಕೂ ಜಾತಿ ಕಸಬುಗಳಿಲ್ಲ; ಕುಲಕೋಮುಗಳಿಲ್ಲ. ಆಕಾಶದಲ್ಲಿ ಗಾಳಿಬೆಳಕುಗಳು ಹೇಗೋ ಜ್ಞಾನವೂ ಹಾಗೆಯೇ–'ಸರ್ವ ಶುಕ್ಲಾ ಸರಸ್ವತೀ'

ಎ. ಆರ್. ಕೃ.

ಪರಿಷತ್ತು ಮತ್ತು ಕೃಷ್ಣಶಾಸ್ತ್ರಿಗಳು

ಹಂಪ. ನಾಗರಾಜಯ್ಯ

ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳು ಕನ್ನಡನಾಡು ನುಡಿಗಳ ಉತ್ಕಟ ಅಭಿಮಾನಿಗಳೆಂಬುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಅವರು ಕನ್ನಡದ ಪವಿತ್ರ ದೇಗುಲವಾದ ಕನ್ನಡ ಸಾಹಿತ್ಯ ಪರಿಷನ್ಮಂದಿರದ ಅವಿಚ್ಛಿನ್ನ ಭಕ್ತರಾಗಿದ್ದರೆಂಬುದು ಬಹಳ ಜನಕ್ಕೆ ತಿಳಿಯದ ವಿಚಾರ. ಕನ್ನಡ ಸಾಹಿತ್ಯ ಪರಿಷತ್ತಿಗೂ, ಕೃಷ್ಣಶಾಸ್ತ್ರಿಗಳಿಗೂ ತುಂಬ ಹಳೆಯ ಆತ್ಮೀಯ ಸಂಬಂಧವಿದೆ. ಅದು ಐವತ್ತು ವರ್ಷಗಳಷ್ಟು ಹಳೆಯದು. ಅವರ ಮತ್ತು ಪರಿಷತ್ತಿನ ನಿಕಟವರ್ತಿಯಾದ ಪರಿಚಯದ ಸುವರ್ಣ ಮಹೋತ್ಸವವನ್ನು ಬೇಕಾದರೂ ಆಚರಿಸಬಹುದು. ಪರಿಷತ್ತನ್ನು ಅದರ ಜನನ, ಶೈಶವ, ಬಾಲ್ಯ, ಕೌಮಾರ್ಯಗಳಿಂದ ಯೌವನ ಪ್ರೌಢವಸ್ಥೆಗಳನ್ನು ಮುಟ್ಟಿದ ನಿರಂತರ ಪ್ರಗತಿಪಥವನ್ನು ಪ್ರತ್ಯಕ್ಷ ಸಾಕ್ಷಿಯಾಗಿ ಕಂಡವರು ಅವರು.

ಈಗ ಬೆಂಗಳೂರಿನಲ್ಲಿ ಕೋಟೆಯ ಪ್ರೌಢಶಾಲೆಯಿರುವ ಕಟ್ಟಡದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾಯಿತು. ೧೯೧೫ರಲ್ಲಿ ಪ್ರಥಮವಾಗಿ ಪ್ರಾರಂಭವಾದ ಆ ಪುಣ್ಯ ಪವಿತ್ರ ಸಮಾರಂಭ ನಡೆದ ದಿನದಂದು ಸಭೆಯಲ್ಲಿ ಉಪಸ್ಥಿತರಿದ್ದ ಕೆಲವೇ ಕನ್ನಡ ಭಾಷಾಭಿಮಾನಿಗಳಲ್ಲಿ ಕೃಷ್ಣಶಾಸ್ತ್ರಿಗಳೂ ಒಬ್ಬರಾಗಿದ್ದರು. ಅವರ ಜೊತೆಯಲ್ಲಿ ವೆಂಕಣ್ಣಯ್ಯನವರೂ ಉಪಸ್ಥಿತರಾಗಿದ್ದರು. ಕೃಷ್ಣಶಾಸ್ತ್ರಿಗಳಿಗೆ ಬೆಳ್ಳಾವೆ ವೆಂಕಟನಾರಣಪ್ಪನವರ ಪರಿಚಯ ಆದದ್ದು ಈ ಸಂತೋಷ ಸಮಾರಂಭದಲ್ಲೇ. ಅಲ್ಲಿಂದ ಮುಂದೆ ಅವರ ಪರಿಚಯ ತುಂಬ ನಿಕಟತರವಾಯಿತು.

ಕಾಲಾಂತರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೋಟೆ ಕಟ್ಟಡದಿಂದ ಚಾಮರಾಜಪೇಟೆಯ ನಾಲ್ಕನೆಯ ರಸ್ತೆಯಲ್ಲೂ, ಅನಂತರ ಶಂಕರಪುರದಲ್ಲೂ ಮೆಲ್ಲಗೆ ಬೆಳೆಯತೊಡಗಿತು. ತರುವಾಯ ಅದು ಈಗ ಇರುವ ದೊಡ್ಡ ಕಟ್ಟಡಕ್ಕೆ ದಯಮಾಡಿಸಿತು ಈಗ್ಗೆ ಮುವತ್ತೇಳು ವರ್ಷದ ಹಿಂದೆ ಕನ್ನಡದಲ್ಲಿ ಬರೆಯುವ ಬರಹಗಾರರ ಲೆಕ್ಕ ಬೆರಳೆಣಿಕೆಗೆ ನಿಲುಕುವಷ್ಟು ಕಡಮೆಯಾಗಿತ್ತು. ಅವರೆಲ್ಲ ಕೃಷ್ಣಶಾಸ್ತ್ರಿಗಳಿಗೆ ಪರಿಚಯಸ್ಥರೇ ಆಗಿರುತ್ತಿದ್ದರು. ಈಗ ಪರಿಷತ್ತು ಇರುವ ಕಟ್ಟಡದ ಅಸ್ತಿಭಾರ ಹಾಕಿಸುವ ಸಂಭ್ರಮದ ಸಮಾರಂಭದಂದೂ ಕೃಷ್ಣಶಾಸ್ತ್ರಿಗಳು ಹಾಜರಿದ್ದು ಕೊಬ್ಬರಿ ಸಕ್ಕರೆಯ ಚರುಪನ್ನು ತಿಂದು ಬಾಯಿ ಸಿಹಿ ಮಾಡಿಕೊಂಡಿದ್ದರು. ಅನಂತರ ಕಟ್ಟಡವೆದ್ದು ಗೃಹ ಪ್ರವೇಶವೂ ನಡೆಯಿತು. ಶಂಕರಪುರದ ಅಭುಕ್ತ ಮೂಲೆಯೊಂದರಲ್ಲಿ ಬಡ ಮುತ್ತೈದೆಯಂತೆ ಇದ್ದ ಪರಿಷತ್ತು ಆಗಿನ ಹಾರ್ಡಿಂಗ್ ರಸ್ತೆಗೆ, ಈಗಿನ ಪಂಪ ಮಹಾಕವಿ ಬೀದಿಗೆ, ೧೯೩೩ರ ಸುಮಾರಿಗೆ ಬಂತು. ಅಂದಿನಿಂದ ೧೯೬೮ನೆಯ ಇಸವಿಯ ತನಕ, ತಮ್ಮ ಕಡೆಯ ಉಸಿರಿರುವವರೆಗೆ, ಕೃಷ್ಣಶಾಸ್ತ್ರಿಗಳು ಒಂದೇ ಸಮನೆ ಪರಿಷತ್ತಿನ ಅಭ್ಯುದಯವನ್ನು ಕಣ್ತುಂಬ ನೋಡಿ ಆನಂದಿಸುತ್ತಾ ಬಂದಿದ್ದಾರೆ. ಹೀಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಅವರ ಕಣ್ಣೆದುರಿನಲ್ಲಿ ಹುಟ್ಟಿ ಬೆಳೆದು ಪ್ರೌಢಾವಸ್ಥೆಯನ್ನು ಮುಟ್ಟಿದ ಅವರ ಪ್ರೀತಿಯ ಸಾಹಿತ್ಯ ಕೂಸು ಎಂದರೆ ಅತಿಶಯೋಕ್ತಿಯಾಗಲಾರದು.

ಪರಿಷತ್ತಿನ ವಿಚಾರವಾಗಿ ಅವರು ತಳೆದ ನಿಲವು ಎಂಥದು ಎಂಬುದನ್ನು ತಿಳಿಯಬೇಕಾದರೆ ಅವರು ಇದರ ವಿಚಾರವಾಗಿ ಆಗಾಗ್ಗೆ ಆಡುತ್ತಿದ್ದ ಮಾತುಗಳನ್ನು ಅವಲೋಕಿಸಬೇಕು. ಅವರು ೧೯೪೧ರಲ್ಲಿ ಹೈದರಾಬಾದಿನಲ್ಲಿ ನಡೆದ ಇಪ್ಪತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಆಡಿದ ಮಾತುಗಳಲ್ಲಿ ಹಲವು ಕಡೆ ಪರಿಷತ್ತಿನ ವಿಚಾರ ಪ್ರಸ್ತಾಪಿಸಿದ್ದಾರೆ; "ಹೈದರಾಬಾದು ಪ್ರಾಂತ ಕನ್ನಡಿಗರಿಗೆ ಹೆಮ್ಮೆಯ ಪ್ರಾಂತ; ಕನ್ನಡ ಸಾಹಿತ್ಯಗಂಗೆಯ ಗಂಗೋತ್ರಿ; ತಿರುಳ್ಗನ್ನಡದ ಕನ್ನಡಿ; ಕಲಾರತ್ನಗಳ ಖನಿ; ಭಕ್ತಶಿರೋಮಣಿಗಳ ತವರ್ಮನೆ. ಈ ಪ್ರಾಂತದ ರಾಜಧಾನಿಯಾದ ಭಾಗ್ಯನಗರದಲ್ಲಿ ಸಮ್ಮೇಳನ ಸೇರಿರುವುದು ಕನ್ನಡಿಗರ ಅಪೂರ್ವ ಭಾಗ್ಯವೆಂದು ನಾನು ಎಣಿಸುತ್ತೇನೆ. ಈ ಭಾಗ್ಯವು ಸಾಧ್ಯವಾಗಿ ಹೈದರಾಬಾದಿನ

ಕರ್ನಾಟಕರೂ, ಮೈಸೂರಿನ ಕರ್ನಾಟಕರೂ ಅಣ್ಣತಮ್ಮಂದಿರು ಅಕ್ಕತಂಗಿಯರು ಎಂಬ ಭಾವನೆ ಬರುವುದಕ್ಕೆ ಕಾರಣ ಕನ್ನಡ ಸಾಹಿತ್ಯ ಪರಿಷತ್ತು". ಹಲವು ಹತ್ತುಕಡೆ ಹರಿದು ಹಂಚಿಹೋಗಿದ್ದ ಕನ್ನಡನಾಡಿನ ಬೇರೆ ಬೇರೆ ಭಾಗಗಳು ಏಕೀಕರಣವಾದ ಮೇಲೆ ಬಹುಮಟ್ಟಿಗೆ ಒಂದಾಗಿ ಸೇರಿವೆ, ನಿಜ. ಇದರ ಶ್ರೇಯಸ್ಸಿನ ಬಹುಪಾಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಸೇರಬೇಕು, ಸಲ್ಲಬೇಕು. ಇದನ್ನು ಕೃಷ್ಣಶಾಸ್ತ್ರಿಗಳು ಚೆನ್ನಾಗಿ ಬಲ್ಲವರಾಗಿದ್ದರು, ನೇರವಾಗಿ ಕಂಡವರಾಗಿದ್ದರು. "ಕನ್ನಡಿಗರಲ್ಲಿ ಎಷ್ಟು ಒಕ್ಕಟ್ಟು, ಒಂದೆಂಬ ಭಾವನೆ ಇರಬೇಕೋ ಅಷ್ಟೂ ಇಂದು ಇಲ್ಲದಿದ್ದರೂ ಅದು ಇರುವಷ್ಟು ಮಟ್ಟಿಗಾದರೂ ಹುಟ್ಟಿ ಬೆಳೆದಿರುವುದು ಸಾಹಿತ್ಯ ಪರಿಷತ್ತಿನಿಂದ" ಎಂಬುದು ಅವರ ಅಭಿಪ್ರಾಯ. ಕನ್ನಡ ನಾಡು ಒಂದಾಗಬೇಕೆಂಬ ಮಹದಾಶೆಯಿಂದ ಭಾಷಾನುಸಾರಿಯಾದ ಪ್ರಾಂತ ವಿಭಾಗಕ್ಕೆ ಪರಿಷತ್ತು ಮತ್ತು ಇತರ ಭಾಷಾಭಿಮಾನಿಗಳೂ ಕರೆಕೊಟ್ಟರು. ಕನ್ನಡನಾಡನ್ನು ಕಟ್ಟಬೇಕೆಂಬ ಕನಸನ್ನು ಎಲ್ಲರೂ ಕಾಣುತ್ತಿದ್ದಾಗ "ಕನ್ನಡ ಸಾಹಿತ್ಯ ಪರಿಷತ್ತು ಈ ಕನಸನ್ನು ತನ್ನ ಧ್ವಜ ಚಿಹ್ನೆಯಾಗಿ ಎತ್ತಿ ಹಿಡಿಯಿತು" ಎಂಬುದು ಅವರ ಅನ್ನಿಸಿಕೆ.

ತಾಯಿನುಡಿಯ ಅಭಿಮಾನವನ್ನು ತಳೆಯಬೇಕೆಂದು ಕನ್ನಡಿಗರಿಗೆ ತಿಳಿಯಪಡಿಸುವ ಸಲುವಾಗಿ ಪರಿಷತ್ತು ಪ್ರಾರಂಭವಾದರೂ, ಪ್ರಾರಂಭದಲ್ಲಿ ಕನ್ನಡಕ್ಕಿಂತ ಸಂಸ್ಕೃತದ ಮೇಲೇ ಹೆಚ್ಚು ಅಭಿಮಾನವುಳ್ಳ ಅಭಿಮಾನಶೂನ್ಯರೂ ಅದರಲ್ಲಿ ಸದಸ್ಯರಾಗಿ ಸೇರಿದ್ದರು. ಅದನ್ನು ಕುರಿತು ಕೃಷ್ಣಶಾಸ್ತ್ರಿಗಳು ಕೊಟ್ಟ ವಿವರಣೆ ಪರಿಭಾವನಾರ್ಹವಾಗಿದೆ. "ಸಾಹಿತ್ಯ ಪರಿಷತ್ತು ಈ ಭಾವನೆಯನ್ನು ನಮ್ಮಲ್ಲಿ ಉಂಟು ಮಾಡಲು ಬಹುವಾಗಿ ಕೆಲಸ ಮಾಡಿದೆ . . . ಅದರ ಸ್ಥಾಪಕರ ಉದ್ದೇಶವೇ ಇದಾಗಿತ್ತು. ಆದರೆ ಕನ್ನಡಿಗರಲ್ಲಿ ಕಾವು ಏರದು; ಅವರು ಕದಳೀಗರ್ಭಶ್ಯಾಮರೂ ಹೌದು,— ಶೀತರೂ ಹೌದು. ಈ ಸಂದರ್ಭದಲ್ಲಿ ನನಗೆ ಪದೇ ಪದೇ ಒಂದು ಸಂಗತಿ ನೆನಪಿಗೆ ಬರುತ್ತದೆ. ಅದೇನೆಂದರೆ: ಪರಿಷತ್ತು ಸ್ಥಾಪಿತವಾದ ವರ್ಷ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು . . . ಸಮ್ಮೇಳನ ಮುಗಿದ ಮೇಲೆ ಅಲ್ಲಿ ಸೇರಿದ್ದ ಸದಸ್ಯರನ್ನು ಕುರಿತು 'ನಿಮಗೆ ಕನ್ನಡಬೇಕೆ? ಸಂಸ್ಕೃತಬೇಕೆ?' ಎಂದು ಕೇಳಿದರು, ಆಗ ಪ್ರತಿಯೊಬ್ಬರೂ ಸಂಸ್ಕೃತಬೇಕೆಂದರು; ಇಲ್ಲವೆ ಎರಡೂ ಬೇಕೆಂದರು; ಕನ್ನಡಬೇಕು ಎಂದು ಯಾರೂ ನಿಷ್ಕೃಷ್ಟವಾಗಿ ಮಾತನಾಡಲಿಲ್ಲ. ಇದನ್ನೆಲ್ಲ ಶಾಂತವಾಗಿ ಕೇಳುತ್ತಿದ್ದು ಅಧ್ಯಕ್ಷರು ಕೊನೆಗೆ ಎದ್ದು ನಿಂತು 'ಇದು ಕರ್ನಾಟಕ ಸಾಹಿತ್ಯ ಪರಿಷತ್ತು; ನೀವೆಲ್ಲಾ ಅದರ ಸದಸ್ಯರು; ಆದರೆ ಯಾರೊಬ್ಬರೂ ಕನ್ನಡಬೇಕೆಂದು ಧಾರಾಳವಾಗಿ ಹೇಳಲಿಲ್ಲ. ಇದು ಆಶ್ಚರ್ಯ' ಎಂದರು. ಆ ಮಾತನ್ನು ಕೇಳಿ ಅನೇಕರು ತಲೆತಗ್ಗಿಸಿಕೊಂಡರು; ಆದರೂ ಅವರಲ್ಲಿ ಸಂಸ್ಕೃತದ ಅಭಿಮಾನ ಎಷ್ಟುಮಟ್ಟಿಗಿತ್ತೆಂದರೆ, ತಗ್ಗಿದ ತಲೆ, 'ಮುಟ್ಟಿದರೆ ಮುನಿಯು' ಗಿಡದಂತೆ, ಬಹುಬೇಗ ಎದ್ದಿತು; ಶೂಲದಂತೆ ಇರಿಯಬೇಕಾದ ಮಾತು ಮರೆತು ಹೋಯಿತು. ಇಂದು ಅದನ್ನು ಯಾರಾದರೂ ಜ್ಞಾಪಕದಲ್ಲಿಟ್ಟಿದ್ದಾರೆಯೋ ಏನೋ ತಿಳಿಯದು. ಆದರೆ ಪರಿಸ್ಥಿತಿಯು ಆಗಿಗಿಂತ ಈಗ ಅಷ್ಟೇನೂ ಬದಲಾಯಿಸಿಲ್ಲ; ಆಗ ಒಂದು ಭಾಷೆಯ ಮೇಲೆ ಹಿಂದಿನಿಂದ ಬಂದ ಅಭಿಮಾನವಿದ್ದರೆ, ಈಗ ಮತ್ತೊಂದು ಭಾಷೆಯ ಮೇಲೆ ಇಂದು ತಾನೇ ಬಂದ ಅಭಿಮಾನವುಂಟಾಯಿತು. ಮೊದಲೇ ಹುಟ್ಟಿದ ಕಿವಿಗಿಂತ ಆಮೇಲೆ ಹುಟ್ಟಿದ ಕೋಡೇ ಮುಂದಾಯಿತು; ಅದು ತಿವಿಯುವುದಕ್ಕೂ ಮೊದಲಾಯಿತು. ಕನ್ನಡದ ಅಭಿಮಾನವೆಂಬ ಮಗು ತಪ್ಪು ಹೆಜ್ಜೆ ಹಾಕಿಕೊಂಡು ಮುಂದೆ ಮುಂದೆ ಬರುತ್ತಿದ್ದದ್ದು ಹಿಂದಕ್ಕೆ ಸರಿಯಿತು." ಕೃಷ್ಣಶಾಸ್ತ್ರಿಗಳು ಈ ಮಾತುಗಳಲ್ಲಿ ಪರಿಷತ್ತಿನ ಕರ್ತವ್ಯದ ಜೊತೆಗೆ ಅದರ ಸದಸ್ಯರೂ, ಕನ್ನಡಿಗರೂ ಕಾಪಾಡಿಕೊಂಡು ಬರಬೇಕಾದ ತಮ್ಮತನದ ಅಭಿಮಾನವನ್ನು ಸ್ಪಷ್ಟಪಡಿಸಿದ್ದಾರೆ.

ಯಾವುದೇ ಹಿರಿಯ ಪೂಜ್ಯ ಸಂಸ್ಥೆಯಿರಲಿ ಅದನ್ನು ಅವಹೇಳನ ಮಾಡು, ಲಘುವಾಗಿ ಕಾಣುವ ಪ್ರವೃತ್ತಿಯವರು ಎಲ್ಲ ಕಾಲದಲ್ಲೂ ಎಲ್ಲೆಲ್ಲೂ ಇದ್ದೇ ಇರುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾದಾಗಿನಿಂದಲೂ ಅದರ ವಿರೋಧಿಗಳು, ಅದನ್ನು ಕಟುವಾಗಿ ಟೀಕಿಸುವವರು ಇದ್ದರು; ಈಗಲೂ ಇದ್ದಾರೆ. ಅಂಥವರಿಗೆ ಕೃಷ್ಣಶಾಸ್ತ್ರಿಗಳು ಕೊಟ್ಟ ಸುದೀರ್ಘ ಉತ್ತರ ಮನನೀಯವಾಗದೆ, ಉಲ್ಲೇಖನಾರ್ಹವಾಗಿದೆ. "ಪರಿಷತ್ತು ಅದು ಮಾಡಲಿಲ್ಲ, ಇದು ಮಾಡಲಿಲ್ಲ; ಅದು ಮಾಡಬೇಕಾಗಿತ್ತು, ಇದು ಮಾಡಬೇಕಾಗಿತ್ತು ಎಂದು ಸೂಚಿಸುವವರು ಅದು ಹುಟ್ಟಿದಂದಿನಿಂದ ಇದ್ದಾರೆ." ಅದರೂ ಕೆಲಸ ಮಾಡುವವರೆಲ್ಲರೂ ಅಕ್ಷರಶಃ ತನುಮನಧನಗಳನ್ನು ಅದಕ್ಕೆ ಸಮೆಸಿ ಕೆಲಸ ಮಾಡಿಯೂ ಇದ್ದಾರೆ. ಅದರಲ್ಲೇನೂ ಕಡಮೆಯಿಲ್ಲ. ಆದರೆ ಪರಿಷತ್ತೆಂದರೆ ಯಾರು? ಅವರ ನಾಲ್ಕಾರು ಜನ ಅಧಿಕಾರಿವರ್ಗದವರೇ? ಪರಿಷತ್ತು ಒಂದೂವರೆ ಕೋಟಿ ಪ್ರಜೆಯ [ಈಗ ಎರಡೂವರೆ ಕೋಟಿ ಪ್ರಜೆಯ] ಪ್ರತಿನಿಧಿ ಎಂದರೆ, ಈ ನಾಲ್ಕಾರು ಜನ ಸಾಕೇ? ಅವರು ಗೌರವಾರ್ಥವಾಗಿ ಕೆಲಸ ಮಾಡುವವರು; ಎಷ್ಟು ಕಾಲವನ್ನು, ಎಷ್ಟು ಶಕ್ತಿ

ಯನ್ನು, ಎಷ್ಟು ಭಕ್ತಿಯನ್ನು ಎಷ್ಟು ಭುಕ್ತಿಯನ್ನು ಕೊಡಬಲ್ಲರು? ಅದಕ್ಕಿರುವ ಅಡ್ಡಿ ಅನುಪತ್ತಿಗಳನ್ನು ನೋಡಿದರೆ ಈಗ ನಡೆದಿರುವ ಕೆಲಸ ಅಪಾರವಾಗಿದೆ. ಇದನ್ನು ತಕ್ಕಡಿಯಲ್ಲಿ ಅಳೆದು ತೋರಿಸುವುದಕ್ಕಾಗುವುದಿಲ್ಲ. ಕನ್ನಡಿಗರು ತಮ್ಮ ಅಭಿಮಾನದ ಕಣ್ಣಿನಿಂದ ನೋಡಿದರೆ ಆಗ ಇದು ಕಾಣುತ್ತದೆ. ಇನ್ನೂ ಉಳಿದಿರುವ ಕಾರ್ಯಕ್ಕೆ ಹೋಲಿಸಿದರೆ ಇದು ಅತ್ಯಲ್ಪ, ನಿಜ. ಆದರೆ ಯಾವ ಕೆಲಸಕ್ಕೂ ಬೇಕಾದುದು ಧನ, ಜನ, ಅಭಿಮಾನ; ಧನವಿದ್ದರೆ ಮಿಕ್ಕೆರಡೂ ಒದಗುತ್ತವೆ.

"ಪರಿಷತ್ತಿಗೆ ವರ್ಷಕ್ಕೆ ಹತ್ತು ಹದಿನೈದು ಲಕ್ಷ ರೂಪಾಯಿನ ವರಮಾನವಿದ್ದರೆ ಒಂದು ವಿಶ್ವವಿದ್ಯಾನಿಲಯದ ಕೆಲಸವನ್ನೇ ಕೈಕೊಂಡು ಮಾಡಬಹುದು. ಆದರೆ ಅದರ ದಾರಿದ್ರ್ಯ ಲೋಕವಿದಿತವಾಗಿದೆ; ಅದರ ಅಧಿಕಾರಿಗಳು ದಿನಕ್ಕೆ ನಾಲ್ಕು ಸಲ ಕಚೇರಿಗೆ ಬಂದು ಹೋಗಿ ದುಡಿದರೆ, ಅವರಿಗೆ ಗಾಡಿ ಬಾಡಿಗೆಯೆಂದು ನಾಲ್ಕು ಆಣೆ ಕೊಡುವುದಕ್ಕೆ ಅದಕ್ಕೆ ಚೈತನ್ಯವಿಲ್ಲ. ಅವರು ಪುಣ್ಯವಂತರಾದರೆ, ತಾವೇ ಸಾವಿರಾರು ರೂಪಾಯಿ ದಾನ ಮಾಡುತ್ತಾರೆ. ಇಲ್ಲದಿದ್ದರೆ ಸಾಲ ಮಾಡಿಕೊಳ್ಳಬೇಕು. ಮಾಡಿದರೆ ತೀರಿಸುವವರು ಯಾರು? ಮಿಕ್ಕ ಭಾಷೆಗಳಿಗಾಗಿ ದುಡಿಯುತ್ತಿರುವವರಿಗೆ ಇರುವ ಸಂಪಾದನೆಯಲ್ಲಿ ಒಂದು ಭಾಗವನ್ನಾದರೂ ಕೊಡಬಲ್ಲೆವಾದರೆ, ಅವರು ಸಂತೋಷದಿಂದ ಕನ್ನಡಕ್ಕೆ ದುಡಿದಾರು. ಆದರೆ ಕೊಡಲು ಪರಿಷತ್ತಿಗೆ ಹಣವೆಲ್ಲಿದೆ? ಅದರ ಸದಸ್ಯ ಸಂಪತ್ತು ಬಹುದಿನ ಸುಮಾರು ನೂರು ನೂರೈವತ್ತು ಇದ್ದು ಈಗ ವಿಶ್ವಪ್ರಯತ್ನದಿಂದ ಸುಮಾರು ಏಳುನೂರಾಗಿದೆ, ಇವರಲ್ಲಿ ಅನೇಕರು ಆಜೀವ ಸದಸ್ಯರು; ಅವರ ಹಣವನ್ನು ನಿಧಿಯಾಗಿ ಬ್ಯಾಂಕಿನಲ್ಲಿಟ್ಟಿದೆ; ಅದಕ್ಕೆ ಬರುವುದು ವರ್ಷಕ್ಕೆ ಒಂದು ಎರಡು ರೂಪಾಯಿ ಬಡ್ಡಿ; ಹಲವರು ಹೆಸರು ಮಾತ್ರದವರು; ಅವರಿಂದ ಹಣವೇ ಬರುವುದಿಲ್ಲ. ಚಂದಾ ನಾಲ್ಕಾಣೆ ಮಾಡಿದರೆ ಬಹುಜನ ಸೇರುವರೆಂದು ಒಂದು ಸಲಹೆ ಬಂತು; ಒಂದು ಲಕ್ಷ ಜನವಾದರೂ ಸದಸ್ಯರಾದರೆ ಈ ಸಲಹೆ ಪ್ರಯೋಜನ; ಅಂಥ ಕನಸನ್ನು ಕಾಣುವುದು ಸಾಧ್ಯವೇ? ಸರ್ಕಾರದವರು, ಮಠಗಳು, ಮಾನ್ಯ ಮಹನೀಯರು ಈಚೆಗೆ ಉದಾರ ಹಸ್ತದಿಂದ ಸಾವಿರಾರು ರೂಪಾಯಿಗಳನ್ನು ಕೊಟ್ಟಿರುವುದರಿಂದ, ಮುಖ್ಯವಾಗಿ ಮೈಸೂರು ಸರ್ಕಾರದವರು ಪರಿಷತ್ತಿನ ಕೆಲಸ ಹೆಚ್ಚಾಗುತ್ತ ಬಂದಂತೆಲ್ಲ ಧನ ಸಹಾಯವನ್ನು ಹೆಚ್ಚು ಮಾಡಿಕೊಟ್ಟು ಅದರ ಅಭ್ಯುದಯದಲ್ಲಿ ಆಸಕ್ತವಾಗಿರುವುದರಿಂದ, ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರು, ಕಂಠೀರವ ನರಸಿಂಹರಾಜ ಒಡೆಯರವರು, ಶ್ರೀ ಜಯಚಾಮರಾಜ ಒಡೆಯರವರು ಅದನ್ನು ಮಮತೆಯಿಂದ ತಮ್ಮ ಕೃಪಾಛತ್ರದ ನೆರಳಿನಲ್ಲಿ ಪೋಷಿಸಿಕೊಂಡು ಬಂದದ್ದರಿಂದ, ಇದೊಂದು ಸಂಸ್ಥೆಯು ನಿಂತಿದೆ. ಅದು ಬೆಳೆಯಬೇಕಾದರೆ ಮಿಕ್ಕಾದ ಸಂಸ್ಥಾನಾಧಿಪತಿಗಳೂ, ಸಾಹುಕಾರರೂ ಅದಕ್ಕೆ ಸಾಂಪತ್ತಿಕ ಮತ್ತು ನೈತಿಕ ಬೆಂಬಲಗಳನ್ನು ಕೊಡಬೇಕು. ಜನರು ಅದರಲ್ಲಿ ಅಭಿಮಾನವನ್ನಿಟ್ಟು ಸಹಕರಿಸಬೇಕು. ಕನ್ನಡದ ವಾತಾವರಣವನ್ನು ಹಬ್ಬಿಸಿ, ಕನ್ನಡವನ್ನು ಬಲಪಡಿಸಿಕೊಳ್ಳಬೇಕು. **ಪರಿಷತ್ತು ಶಾರದೆಯ ದೇವಸ್ಥಾನ; ಅದಕ್ಕೆ ಗುಡಿ ಗೋಪುರಗಳನ್ನು ಕಟ್ಟಿಸುವುದೂ ಸೇವಾಕಾರ್ಯಕ್ಕೆಂದು ದತ್ತಿ ಬಿಡುವುದೂ ಪೂಜೆ ನಡಸುವುದೂ ಪುಣ್ಯವಾರಗಳನ್ನು ಹಂಚುವುದೂ ಅದರ ಭಕ್ತಾದಿಗಳ ಕೆಲಸ.** ಏನೇ ಆದರೂ, ಇದು ಸರ್ಕಾರದ ಇಲಾಖೆಯಂತೆ ಅಧಿಕಾರ ಬಲದಿಂದ ಕೆಲಸ ನಡಸಲಾರದು. ಇಂಗ್ಲೆಂಡಿನ ರಾಯಲ್ ಏಷಿಯಾಟಿಕ್ ಸೊಸೈಟಿಯಂಥವುಗಳಿಗೂ ಇದು ಸಾಧ್ಯವಿಲ್ಲ. ಇಲ್ಲಿ ಕೆಲಸ ಮಾಡುವುದು ಸತ್ವಕ್ಕಿಂತಲೂ ಹೆಚ್ಚಾಗಿ ಸ್ನೇಹ." ಈ ಮಾತುಗಳಲ್ಲಿ ಪರಿಷತ್ತಿನ ಬಗೆಗೆ ಅವರು ಎಂಥ ಕಳಕಳಿಯ ನಿಲವು ತಳೆದಿದ್ದರೆಂಬುದು ನಿಚ್ಚಳವಾಗಿ ತಿಳಿಯುತ್ತದೆ. ಜೊತೆಗೆ ಪರಷತ್ತನ್ನು ಬೆಳೆಸಲು ಅವರು ಕನ್ನಡಿಗರಿಗೆ ಇಲ್ಲಿ ಕೊಟ್ಟಿರುವ ಕರೆ ಇಂದಿಗೂ ಅನುಸರಣ ಯೋಗ್ಯಮಾರ್ಗದರ್ಶನದ ಮಾತಾಗಿದೆ.

ಕೃಷ್ಣಶಾಸ್ತ್ರಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಒಂದು ಪುಣ್ಯಭೂಮಿಯಾಗಿತ್ತು. ಪರಿಷತ್ತಿನಲ್ಲಿ ಕನ್ನಡ ಸಾಹಿತಿಗಳಿಗೆ ಸಲ್ಲುತ್ತಿದ್ದ ಗೌರವ ಸತ್ಕಾರ ಸನ್ಮಾನಗಳ ಸಭೆಗೆ ಅವರು ಆದಷ್ಟೂ ತಪ್ಪದೆ ಹಾಜರಿರುತ್ತಿದ್ದರು. ಮಹಾಕವಿ ಕುವೆಂಪುರವರಿಗೆ ಕನ್ನಡದಲ್ಲೇ ಮೊಟ್ಟಮೊದಲನೆಯ ಸಲ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ೧೯೫೫ರಲ್ಲಿ ಬಂದಾಗ ಪರಿಷತ್ತಿನಲ್ಲಿ ಒಂದು ಅಭಿನಂದನ ಸಮಾರಂಭ ಆಯಿತು. ಆಗ ಕೃಷ್ಣಶಾಸ್ತ್ರಿಗಳು ಪರಿಷತ್ತಿನ ವೇದಿಕೆಯಿಂದ ಆಡಿದ ನುಡಿಗಳಿವು; "ಭಾರತ ಸಾಹಿತ್ಯ ಪರಿಷತ್ತಿನಿಂದ ಬಹುಮಾನಿತರಾದ ಕನ್ನಡ ಕವಿವರ್ಯ ಪ್ರಿನ್ಸಿಪಾಲ್ ಪುಟ್ಟಪ್ಪನವರನ್ನು ಅಭಿನಂದಿಸುವುದಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿರುವ ಈ ಸಮಾರಂಭದಲ್ಲಿ ಮಾತನಾಡಲು ಅವಕಾಶ ದೊರೆತಿರುವುದಕ್ಕಾಗಿ ನಾನು ತುಂಬ ಸಂತೋಷಿಸುತ್ತೇನೆ. **ಸಾಹಿತ್ಯ ಪರಿಷತ್ತು ಅಖಂಡ ಕರ್ನಾಟಕವನ್ನು ಪ್ರತಿನಿಧಿಸುವ ಸಂಸ್ಥೆ."**

ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಸ್ಥಾನಗಳಲ್ಲಿ ನಿಂತು ಕೃಷ್ಣಶಾಸ್ತ್ರಿಗಳು ತಮ್ಮ ಶಕ್ತ್ಯಾನುಸಾರ ಸೇವೆ ಸಲ್ಲಿಸಿದ್ದಾರೆ. ಅವರು ಪರಿಷತ್ ಪತ್ರಿಕೆಯ ಸಂಪಾದಕರಾಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಪರಿಷತ್ತಿನ ಆಶ್ರಯದಲ್ಲಿ ಸರ್ಕಾರದ ಸಹಾಯದಿಂದ ನಡೆಯುತ್ತಿರುವ ಕನ್ನಡ-ಕನ್ನಡ ನಿಘಂಟಿನ ಪ್ರಥಮ ಸಂಪಾದಕರು ಅವರು. ಅಲ್ಲದೆ ಪರಿಷತ್ತಿಗೆ ಒಂದು ಸಾವಿರ ರೂಪಾಯಿ ಮೊತ್ತದ ದತ್ತಿನಿಧಿಯೊಂದನ್ನು ಬೇರೆ ಅವರು ದಯಪಾಲಿಸಿದ್ದಾರೆ. ಇದಕ್ಕೆಲ್ಲ ಇದ್ದ ಮುಖ್ಯ ಕಾರಣ, ಅವರು ಪರಿಷತ್ತಿಗೆ ಮಾಡುವ ಸೇವೆ, ಕನ್ನಡಕ್ಕೆ ಮಾಡುವ ಸೇವೆಯೆಂದು ಖಚಿತವಾಗಿ ತಿಳಿದಿದ್ದುದು. ಕೃಷ್ಣಶಾಸ್ತ್ರಿಗಳ ಪಾಲಿಗೆ ಪರಿಷತ್ತು ಕನ್ನಡಿಗರ ಪೂಜಾ ಮಂದಿರವಾಗಿತ್ತು.

ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಬಾಷ್ಪಾಂಜಲಿ

ಎಂ. ಆರ್. ವರದಾಚಾರ್ಯ

ಈಶಾ ! ನೀಂ ದಯೆಯಿಲ್ಲದುಯ್ದೆ ನಿಜದಿಂ ಕೃಷ್ಣಾಖ್ಯಸಚ್ಛಾಸ್ತ್ರಿಯಂ |
ದೇಶಾದ್ಯಂತಮು ದುಃಖಗೆಯ್ಸಿ ನಿನಗೇಂಬೇಕಿರ್ದನೋ ಸಗ್ಗದೊಳ್ |
ದೇಶೋದ್ಧಾರಕ ಭಾಷೆಯಾ ಒಲವರಂ ತಾಂ ಮುಖ್ಯಮೆಂದೆನ್ನುತಂ |
ದೇಶಪ್ರೇಮದ ಭಾಷೆಯಂ ಬೆಳೆಸಿದಾ ಕರ್ಣಾಟನಂ ಧನ್ಯನಂ || ೧ ||

ತಾನಧ್ಯಾಪಕರಗ್ರಗಣ್ಯನತುಲಂ ಕರ್ಣಾಟಕಾಚಾರ್ಯನುಂ |
ನಾನಾಸಾರ್ಥಕ ಶಬ್ದಕೋಶರಚನಾಚಾತುರ್ಯ ನಿಷ್ಣಾತನುಂ |
ನಾನಾಭಾಷೆಯ ಕೋವಿದಂ ರಸಿಕನುಂ ರಸಿಕನುಂ ಸಾಹಿತ್ಯಸಮ್ಮೇಳದಾ |
ಸ್ಥಾನಾಧ್ಯಕ್ಷನುಮಾಗಿ ಗೈದನಧಿಕಂ ಸಾಹಿತ್ಯಸಂಸೇವೆಯಾ || ೨ ||

ಕನ್ನಡ ಕನ್ನಡ ಕೋಶದ
ಸನ್ನುತಸಂಘಕ್ಕೆತಾನೆ ಮೊದಲಧ್ಯಕ್ಷಂ |
ಕನ್ನಡ ಸಾಹಿತ್ಯ ಪರಿಷ
ದುನ್ನತಪತ್ರಿಕೆಗೆ ತಾನೆ ಸಂಪಾದಕನುಂ || ೩ ||

ಪರರಾಭಾಷೆಯ ಮೋಹದಿ
ತೊರೆಯುತೆ ವರ ಮಾತೃಭಾಷೆಯಂ ತಾಂ ನುಡಿಯ |
ಲ್ಮರೆತಿರ್ದರ ನೆಳ್ಚರಿಸುತೆ
ಗುರುಭಕ್ತಿಯ ಕನ್ನಡಕ್ಕೆ ಬರಿಸಿದನವರೊಳ್ || ೪ ||

ಧೀರತೆ ಸದುದಾರತೆ ಗಂ
ಭೀರತೆ ಹಿತಭಾಷಿತೆಯುಚಿತಜ್ಞತೆಯೆಂಬೀ |
ಸಾರತರ ಗುಣಗಳೆಲ್ಲಂ
ಸೇರಿರ್ದುವು ಸಹಜಮೆನಿಸಿ ಶಾಸ್ತ್ರಿಯೊಳೆಂದುಂ || ೫ ||

ದೇಶದ ಭಾಷೆಯ ಸೇವೆಯೆ
ಈಶಾನನ ಸೇವೆಯೆಂಬ ಭಾವದೆ ಗೈದಾ |
ಪೇಶಲಗುಣನಾ ಭಾಷಣ
ಕೌಶಲಮಂ ಬಣ್ಣಿಸಲ್ಕೆ ಶಕ್ತನದಾವಂ || ೬ ||

ಗುರುಹಿರಿಯಣ್ಣನ ಶಿಷ್ಯಂ
ನಿರುಪಾಧಿಕ ರಾಮಕೃಷ್ಣ ಕೃಪೆಗಂ ಪಾತ್ರಂ |
ವರವಿದ್ಯಾಲಯದಿರ್ದಂ |
ವರದಂ ದುಃಖಾರ್ತನಾಗಿ ತಾನಿದನೊರೆದಂ || ೭ ||

ಪುಷ್ಪಾಂಜಲಿ

ಸಂಗ್ರಹ :

ಕೊರಟಿ ಶ್ರೀನಿವಾಸರಾವ್

ಎ. ಆರ್. ಕೃ. ಅವರ ಬರವಣಿಗೆಯೆಲ್ಲ ಸಾಮಾನ್ಯವಾಗಿ ಗದ್ಯದಲ್ಲಿದೆ. ಕಥೆ ಜೀವನ ಚರಿತ್ರೆ ಉಪನ್ಯಾಸ ವಿಮರ್ಶೆ ಪೌರಾಣಿಕಥೆ—ಇವು ಅವರು ಕೈಯಾಡಿಸಿರುವ ಸಾಹಿತ್ಯ ಪ್ರಕಾರಗಳು. ಸಂಸ್ಕೃತ ಸಾಹಿತ್ಯದ ಪ್ರಮುಖಭಾಗವನ್ನು ಕನ್ನಡಕ್ಕೆ ಭಟ್ಟಿಯಿಳಿಸಿ, ಅದರ ಮಹತ್ವವನ್ನು ಕನ್ನಡಿಗರಿಗೆ ಪರಿಚಯಮಾಡಿಕೊಟ್ಟು, ಅದರಲ್ಲಿ ಕನ್ನಡಿಗರಿಗೆ ಗೌರವಮೂಡುವಂತೆ ಮಾಡಲು ಪ್ರಯತ್ನಿಸಿ ಕೃತಕೃತ್ಯರಾಗಿದ್ದಾರೆ. ಮೂಲದ ಸ್ವರೂಪ ಕೆಡದಂತೆ, ಅದರ ಸಾರವತ್ತಾದ ಭಾಗ ವನ್ನು ಮಾತ್ರ ಎತ್ತಿ ತೋರಿಸುವುದು ಸುಲಭವಾದ ಕೆಲಸವಲ್ಲ. ಅದಕ್ಕೆ ಬೇಕಾದ ಸ್ವೋಪಜ್ಞತೆ, ಔಚಿತ್ಯಾನೌಚಿತ್ಯ ವಿವೇಕ, ರಸಜ್ಞತೆ—ಇವು ಅವರಲ್ಲಿ ಸಾಕಷ್ಟಿವೆ. ಇವುಗಳ ಜೊತೆಗೆ ಹಿರಿಯ ದನ್ನು ಕಿರಿದರಲ್ಲಿ ಹೇಳುವ ಭಾಷೆ ಅವರಿಗೆ ವಶವಾಗಿದೆ.

ಪ್ರೊ. ದೇ. ಜವರೇಗೌಡ

ದೃಷ್ಟಾಂತಗಳು ಕಾವ್ಯದಲ್ಲಿ ಬಗೆಬಗೆಯಾಗಿ ಕಾಣಿಸಿಕೊಳ್ಳುವ ವಿಚಾರ ಕಾವ್ಯಾಭ್ಯಾಸಿಗಳಿಗೆ ತಿಳಿದದ್ದೇ. ಆದರೆ ಬುದ್ಧಿಪ್ರಧಾನವಾದ ವಿಮರ್ಶೆ ಮುಂತಾದುವುಗಳಲ್ಲಿಯೂ ಇವು ಬರುವುದುಂಟು. ಶ್ರೀಮಾನ್ ಎ. ಆರ್. ಕೃ. ಅವರ ಕೃತಿಗಳ ಬಹುಭಾಗ ಈ ಜಾತಿಗೆ ಸೇರಿದ್ದು.

ಹೆಚ್. ಎಸ್. ಬಿಳಗಿರಿ

ಷಷ್ಟಿಪೂರ್ತಿಯಾಗುವವರೆಗೂ ಸಂಸ್ಕೃತ ಕನ್ನಡ ಸಾಹಿತ್ಯಗಳ ಸಾರಗ್ರಾಹಿಯಾದ ವಿದ್ವತ್ತಿಗಾಗಿಯೇ ಆಯುಷ್ಯವನ್ನು ಸವೆಸಿ, ಆ ವಿದ್ವತ್ತು ಪರಿಪೂರ್ಣವಾಗಲೆಂದು ಇಂಗ್ಲಿಷ್, ಫ್ರೆಂಚ್, ಜರ್ಮನ್, ಬಂಗಾಲಿ ಮುಂತಾದ ನಾನಾ ಭಾಷೆಗಳಲ್ಲೂ ಪ್ರಾವೀಣ್ಯವನ್ನು ಗಳಿಸಿ, ಸಾವಿರಾರು ಶಿಷ್ಯರಿಗೆ ವಿದ್ಯಾದಾನಮಾಡಿ, ವಿಶ್ರಾಂತಿ ಪಡೆಯಬಹುದಾದ ವೇಳೆಯಲ್ಲೂ ಪರಿಪಕ್ವವಾದ ತಮ್ಮ ರಸಿಕತೆ ಯನ್ನೂ, ವಿದ್ವತ್ತನ್ನೂ ನುಡಿಯ ಸೇವೆಗಾಗಿಯೇ ಅವಿಶ್ರಾಂತವಾಗಿ ಧಾರೆಯೆರೆಯುತ್ತಿರುವ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ನಾಡಿಗೆಲ್ಲ ಒಬ್ಬರೇ.

ಡಾ. ಕೆ. ಕೃಷ್ಣಮೂರ್ತಿ

ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಶಿಷ್ಯ ವಾತ್ಸಲ್ಯ ಪ್ರಪೂರ್ಣರಾದ ಗುರುವರ್ಯರು ; ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಉದ್ದಾಮ ಪಂಡಿತರು ; ಕನ್ನಡನಾಡು ನುಡಿಗಳ ಭಕ್ತರಲ್ಲಿ ಅಗ್ರೇಸರಾದವರು. . . . ವಿಷಯ ಪ್ರತಿಪಾದನೆ, ಮುದ್ರಣ, ಚಿತ್ರದ ಆಯ್ಕೆ, ರಕ್ಷಾಕವಚ ಇವುಗಳ ವಿಷಯದಲ್ಲಿ ಅವರ (ಶಾಸ್ತ್ರಿಗಳ) ಅಭಿರುಚಿ ರಸಿಕತೆಗಳು ಯಾರನ್ನಾದರೂ ಮೆಚ್ಚಿಸಿ ತಲೆದೂಗಿಸುತ್ತವೆ. 'ವಚನ ಭಾರತ', 'ಕಥಾಮೃತ'ಗಳ ಪ್ರಕಟನೆಯೇ ಈ ಹೇಳಿಕೆಗೆ ಸಾಕ್ಷಿ. ಅವರೊಂದಿಗೆ ಸುಲಭವಾಗಿ

ಕೆಲಸ ಮಾಡುವುದೂ, ಅವರನ್ನು ಸುಲಭವಾಗಿ ಮೆಚ್ಚಿಸುವುದೂ ಕಷ್ಟ. ಆದರೆ ಅವರೊಂದಿಗೆ ಕೆಲಸಮಾಡುವುದೇ ಸಂತೋಷ, ಅನುಭವ. ಕನ್ನಡಕ್ಕೆ ಶ್ರೀ ಶಾಸ್ತ್ರಿಗಳು ಮಾಡಿರುವ ಸೇವೆ ಸತ್ಸೇವೆ; ಅವರ ಸಹವಾಸ ಸಾಧುಸಂತರ ಸತ್ಸಂಗ.

ಎಚ್. ಎಂ. ಶಂಕರನಾರಾಯಣರಾವ್

ಶಾಸ್ತ್ರಿಗಳು ಕರ್ಮಯೋಗಿಗಳು. ಜೀವನ ಸಾರ್ಥಕ್ಯಕ್ಕೆ ಕರ್ಮ-ಸತ್ಕರ್ಮ, ನಿಷ್ಕಾಮಕರ್ಮ-ಅಗತ್ಯ, ಅನಿವಾರ್ಯ ಎಂದು ನಂಬಿರುವವರು. ಕನ್ನಡಿಗರಾಗಿ ಕನ್ನಡ ಅಧ್ಯಾಪಕರಾಗಿ ಕನ್ನಡ ಸೇವೆ ಮಾಡದೆ ತಮ್ಮ ಋಣ ತೀರದು, ಈ ಕೆಲಸ ರಾಜಕೀಯದಷ್ಟೇ ಮುಖ್ಯವಾದುದು ಎಂದು ಇವರ ತೀರ್ಮಾನ . . . ಶಾಸ್ತ್ರಿಗಳ ಕ್ರಿಯಾಶಕ್ತಿ, ಕಾರ್ಯತತ್ಪರತೆ, ಉತ್ಸಾಹ, ಆತ್ಮಸಮರ್ಪಣೆಗಳನ್ನು ನೋಡಿದರೆ ನೂತನ ಮತಸ್ಥಾಪಕರ, ಮಹಾದಂಡನಾಯಕರ ಜ್ಞಾಪಕ ಬರುತ್ತದೆ . . . ಶಾಸ್ತ್ರಿಗಳು ಉತ್ತಮ ಸಾಹಿತಿಗಳು; ಕತೆಗಾರರು, ವಿಮರ್ಶಕರು, ಪ್ರಬಂಧ ಲೇಖಕರು, ವಾಗ್ಮಿಗಳು ವಿಷಯಕ್ಕೆ ತಕ್ಕ ಶೈಲಿಯನ್ನು ನಿರೂಪಿಸಿಕೊಂಡು, ವಸ್ತುವಿಗೆ ಕಳೆಯನ್ನು, ಓದುಗರಿಗೆ ಸಂತೋಷವನ್ನು ಉಂಟುಮಾಡಿದ್ದಾರೆ.

ಜಿ. ಆರ್. ರಂಗಸ್ವಾಮಿ

ಶ್ರೀ ಶಾಸ್ತ್ರಿಗಳವರು ಬಹಳ ಸರಳ ಸ್ವಭಾವದವರು. ಅವರ ಮುಖವರ್ಚಸ್ಸಿನಲ್ಲಿಯೇ ನಯ, ವಿನಯ, ಸಹನೆ ಮತ್ತು ಶಿಷ್ಟಾಚಾರವರ್ತನೆ ಈ ಸದ್ಗುಣಗಳೆಲ್ಲಾ ಪ್ರತಿಬಿಂಬಿತವಾಗಿವೆ. ಅವರು ಪಾಠ ಹೇಳಿಕೊಡುವ ರೀತಿಯಲ್ಲಿ ಕೂಡ ಈ ಸರಳತೆ ಮತ್ತು ಗಾಂಭೀರ್ಯಗಳು ಕೂಡಿರುತ್ತವೆ.

ಬಿ. ಎಸ್. ಮಾಧವರಾವ್

ಕನ್ನಡದ ಹೊಸ ಸಾಹಿತ್ಯ ಸೃಷ್ಟಿಯಾಗುವ ಕಾಲದಲ್ಲಿ ಶ್ರೀ ಕೃಷ್ಣಶಾಸ್ತ್ರಿಗಳಂಥ ರಸಜ್ಞರೂ ಪಂಡಿತರೂ ಆದ ವಿಮರ್ಶಕರು ದೊರತದ್ದು ಕನ್ನಡದ ಸೌಭಾಗ್ಯ. ಗ್ರಂಥದ ದೋಷಗಳನ್ನು ಕುರಿತು ಅವರು ಮಾಡುತ್ತಿದ್ದ ಕಟುಟೀಕೆ ಕೆಲವರ ಮನನೋಯಿಸಿರಬಹುದು. ಆದರೆ, ಅವರು ಗುಣಪಕ್ಷಪಾತಿಗಳಾಗಿದ್ದ 'ಸಹೃದಯ' ವಿಮರ್ಶಕರಾಗಿದ್ದರೆಂಬುದನ್ನು ನಾವು ಮರೆಯಬಾರದು. ದೋಷೋಚ್ಚಾಟನೆಯನ್ನು ಅವರೆಷ್ಟು ಮಾರ್ಮಿಕವಾಗಿ ಮಾಡುತ್ತಿದ್ದರೋ ಗುಣವನ್ನು ಅಷ್ಟೇ ಹೃದಯಸ್ಪರ್ಶಿಯಾಗಿ ತಿಳಿಯ ಹೇಳುತ್ತಿದ್ದರು.

ಎಂ. ವಿ- ಸೀತಾರಾಮಯ್ಯ

ಮಕ್ಕಳು, ಮಹಿಳೆಯರಲ್ಲಿ ಕನ್ನಡದ ಮೂಲಕ ಜ್ಞಾನವನ್ನು ಹರಡುವಲ್ಲಿ, ಮನೋವಿಕಾಸಗೆಯ್ಯುವಲ್ಲಿ 'ವಚನ ಭಾರತ', 'ಕಥಾಮೃತ' ಎಂಬ ಹಿರಿಯ ಹೊತ್ತಿಗೆಗಳು ವಿಪುಲವಾದ ಸಾಧನವನ್ನೊದಗಿಸಿವೆ.

ಸ. ಸ. ಮಾಳವಾಡ

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳವರನ್ನು 'ಪ್ರಬುದ್ಧ ಕರ್ಣಾಟಕದ ಋಷಿಗಳು' ಎಂದು ವರ್ಣಿಸಬಹುದು. ಅವರ ಹಿರಿಯ ಪಾಂಡಿತ್ಯ, ಸರಳಜೀವನ, ಮಿತವಾದ ನುಡಿ, ಕನ್ನಡಕ್ಕೆ ಅವರು ಸಲ್ಲಿಸಿರುವ ಸೇವೆ ಎಲ್ಲರಿಗೂ ಮಾದರಿಯಾಗಿದೆ.

ಅ. ನ. ಶ್ರೀನಿವಾಸೈಯ್ಯಂಗಾರ್

ಕನ್ನಡ ಸಾಹಿತ್ಯ ಮತ್ತು ನುಡಿಯ ನವೋದಯವನ್ನು ಕುರಿತು ವಿವೇಚಿಸುವಾಗ ಕನ್ನಡಕ್ಕಾಗಿಯೇ ತಮ್ಮತನದ ಸರ್ವಸ್ವವನ್ನೂ ಸಮರ್ಪಿಸಿ, ಕನ್ನಡದ ಸೇವೆಯೇ ಸಾಕ್ಷಾತ್ಕಾರದ ಸಾಧನ ಎಂದು ತ್ರಿಕರಣಪೂರ್ವಕವಾಗಿ ನಂಬಿ ದುಡಿದು ದುಡಿದು ಕಡೆಗೆ ಕನ್ನಡವೇ ಆದ ಕೆಲವು ಮಹಾನು ಭಾವರನ್ನು ನಾವು ಅಗತ್ಯವಾಗಿ ನೆನಸಿಕೊಳ್ಳಬೇಕಾಗುತ್ತದೆ. ಆಚಾರ್ಯ ಶ್ರೀಯವರು, ಪ್ರೊಫೆಸರ್ ವೆಂಕಣ್ಣಯ್ಯನವರು ಇವರ ಪಂಕ್ತಿಯಲ್ಲೇ ನಿಲ್ಲುವ ಮತ್ತೊಬ್ಬರು ಇಂತಹ ಸೇವಾಪುರುಷರೆಂದರೆ ಪ್ರೊಫೆಸರ್ ಶ್ರೀ ಕೃಷ್ಣಶಾಸ್ತ್ರಿಗಳು.

ಡಾ|| ಪ್ರಭುಶಂಕರ

ಸಂಸ್ಕೃತ ಸಾಹಿತ್ಯ ಧರ್ಮಾರಣ್ಯದಲ್ಲಿ 'ಭಾಸಕವಿ' ಪರಮೇಶ್ವರನನ್ನು ಸ್ತುತಿಸಿ, 'ಸಂಸ್ಕೃತ ನಾಟಕ'ದೇವಿಯನ್ನು ಮೆಚ್ಚಿಸಿ 'ವಚನಭಾರತ' ಸಾಕ್ಷಾತ್ಕಾರವನ್ನು ಪಡೆದು ಕನ್ನಡಕ್ಕೆ 'ಕಥಾಮೃತ'ದ ಗದ್ಯಗಂಗೆಯನ್ನು ತಂದ ಭಗೀರಥರು ಶ್ರೀ ಕೃಷ್ಣಶಾಸ್ತ್ರಿಗಳು.

ಪ್ರೊ|| ಜಿ. ವೆಂಕಟಸುಬ್ಬಯ್ಯ

ಶ್ರೀ ಶಾಸ್ತ್ರಿಗಳು ಹೆಚ್ಚಾಗಿ ಮೌನವ್ರತಿಗಳು; ಅವರು ಹೇಳುವಂತೆಯೇ 'ಮಾತು ಬೆಳ್ಳಿ, ಮೌನ ಬಂಗಾರ' ಎಂಬ ಗಾದೆ ಅವರಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಅವರ ಮೌನಸಾಗರದಲ್ಲಿ ಏನೇನು ರತ್ನಗಳು ಅಡಗಿವೆಯೋ? ಅದನ್ನು ಕಡೆದರೆ ಬರತಕ್ಕದ್ದು ವಿಷವಾಹಿಯಲ್ಲ; 'ಕಥಾಮೃತ' ಕನ್ನಡದೇವಿಯ ಕೌಸ್ತುಭ–'ವಚನಭಾರತ.'

ಆರ್. ಎಸ್. ರಾಮರಾವ್

ಶ್ರೀ ಶಾಸ್ತ್ರಿಗಳ ಜೀವನ ನಿಜವಾಗಿಯೂ 'ವನಸುಮ'ದ ಹಾಗೆ; ಅರಳಿದ್ದು ತಿದ್ದಿದ್ದು ಹಾಗೆ, ಅವರಿಗೆ ತಾನು ಉಪಕಾರಿ ಎನ್ನುವ ಭಾವ ಇಲ್ಲ. ಲೋಕಕ್ಕೆ ನನ್ನಿಂದ ಉಪಕಾರವಾಯಿತು ಎಂಬ ವಿಪರೀತ ಮತಿಯೂ ಇಲ್ಲ–ನಿಜವಾಗಿಯೂ 'ವಿಪುಲಾಶ್ರಯವನೀವ ಸಫಲ ಸುಮಭರಿತ ಪಾದಪ'ದಂತೆ ಶಾಸ್ತ್ರಿಗಳು.

ಎಸ್. ವಿ. ಪರಮೇಶ್ವರಭಟ್ಟ

ವಿದ್ಯಾರ್ಥಿಗಳಲ್ಲಿ ಹೊಸಚೈತನ್ಯವನ್ನೂ ಹೊಸಜೀವನೋತ್ಸಾಹವನ್ನು ಹುಟ್ಟಿಸಿ ಅವರಿಂದ ಉತ್ತಮ ಸಾಹಿತ್ಯಸೇವೆಯನ್ನು ಮಾಡಿಸಿ ಆ ಮೂಲಕ ಕನ್ನಡಜನ ಸ್ವದೇಶ, ಸ್ವಭಾಷೆ, ಸ್ವಸಾಹಿತ್ಯ, ಸ್ವಸಂಸ್ಕೃತಿ, ಸ್ವೇತಿಹಾಸ, ಸ್ವಶಕ್ತಿಗಳ ಅರಿವನ್ನು ಉಂಟುಮಾಡಿಕೊಳ್ಳುವಂತೆ ಮಾಡಬೇಕೆಂಬುದೇ ಶ್ರೀ ಶಾಸ್ತ್ರಿಗಳು 'ಪ್ರಬುದ್ಧ ಕರ್ಣಾಟಕ'ವನ್ನು ಪ್ರಾರಂಭಿಸಲು ಮುಖ್ಯಕಾರಣ . . . ಪತ್ರಿಕೆಗೆ ಸಂಬಂಧಪಟ್ಟಂತೆ ಹೆಸರಿನ ಔಚಿತ್ಯ, ಪುಸ್ತಕದ ಆಕಾರ, ಮುಖಚಿತ್ರದ ಮಾಧುರ್ಯ, ಅಕ್ಷರಗಳ ಮಾಟ, ವೈವಿಧ್ಯ, ಕಾಗದದ ನುಣುಪು, ತೂಕ, ರಟ್ಟಿನ ಚಂದ, ಚಮತ್ಕಾರ, ಚಿತ್ರಗಳ ಸೌಂದರ್ಯ ಮತ್ತು ಸಮನ್ವಯ, ಕರಡುಪ್ರತಿಗಳ ಶೋಧನೆ, ಮೊದಲಾದ ಸಣ್ಣ ವಿವರಗಳಿಗೆ ಅವರು ಸಲ್ಲಿಸುತ್ತಿದ್ದ ಪೂರ್ವಾಲೋಚನೆ ಯಾಜ್ಞಿಕ ಕಠೋರನಿಯಮಗಳನ್ನು ಜ್ಞಾಪಕಕ್ಕೆ ತರುತ್ತದೆ.

ಸ್ವಚ್ಛಂದಂ

ಶಾಸ್ತ್ರಿಗಳು ತಮ್ಮ ಹೆಸರು ಅನ್ವರ್ಥವೆನಿಸುವಂತೆ ಸಾಹಿತ್ಯ ಕ್ಷೇತ್ರದಲ್ಲಿ ಶಾಸ್ತ್ರೀಯ ದೃಷ್ಟಿಯನ್ನು ಪಡೆದುದರಿಂದ ಕನ್ನಡ ಸಾಹಿತ್ಯದ ಬೆಳವಣಿಗೆಯು ಶಾಸ್ತ್ರೀಯ ರೀತಿಯಲ್ಲಿ ಆಗುವಂತೆ ಪ್ರಯತ್ನಿಸಿದರು. ಅದಕ್ಕಾಗಿ ಅನೇಕ ಪ್ರಬಂಧಗಳನ್ನು ಬರೆದರು, ವಿಮರ್ಶೆಗಳನ್ನು ಮಾಡಿದರು. ಉಪನ್ಯಾಸಗಳನ್ನಿತ್ತರು, ಪಾಠಗಳನ್ನು ಕಲಿಸಿದರು, ಮಾದರಿಗಾಗಿ ಸಾಹಿತ್ಯವನ್ನು ನಿರ್ಮಿಸಿದರು.

ಮಿರ್ಜಿ ಅಣ್ಣಾರಾಯರು

ಕರ್ಣಾಟಕ ಸಂಘ ವಿದ್ಯಾರ್ಥಿಗಳಿಂದಲೇ ನಡಸಲ್ಪಟ್ಟು, ವಿದ್ಯಾರ್ಥಿಗಳಿಗಾಗಿ ಕೆಲಸಮಾಡಬೇಕೆಂಬುದು ಚಾಲಿತರ ಅಭಿಲಾಷೆಯಾಗಿತ್ತು. ಅದರ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳೇ ಪಾಲುಗೊಳ್ಳುವಂತೆ ಪ್ರೇರೇಪಿಸುವುದಕ್ಕೆ ಏನೇನು ಮಾಡಲು ಸಾಧ್ಯವೊ ಅದೆಲ್ಲವನ್ನು ಮಾಡುತ್ತಿದ್ದರು, ಮಾಡಿಸುತ್ತಿದ್ದರು. ಹಾಗೆಯೇ ಕನ್ನಡದಲ್ಲಿ ಬರೆಯುವ ಅಭ್ಯಾಸವನ್ನು ಇಟ್ಟುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಉತ್ತೇಜನವನ್ನು ಕೊಡುತ್ತಿದ್ದರು. ಕೃಷ್ಣಶಾಸ್ತ್ರಿಗಳು ವಿಜ್ಞಾನ ವಿಷಯವಾದ ಬರವಣಿಗೆಗಳಿಗೆ ತೋರಿಸುತ್ತಿದ್ದ ಆದರ ಉತ್ತೇಜನಗಳನ್ನು ಜ್ಞಾಪಿಸಿಕೊಂಡರೆ ಈಗಲೂ ನನಗೆ ಹುಮ್ಮಸ್ಸುಂಟಾಗುತ್ತದೆ.

ಶ್ರೀ ಬಿ. ಎಲ್. ಸ್ವಾಮಿ

ಸ್ವಾರ್ಥವನ್ನು ಮರೆತು, ಕೀರ್ತಿಯನ್ನು ಬಯಸದೆ ಕನ್ನಡದ ಕಾರಣವನ್ನು ಹೇಗೆ ತಪಸ್ಸಾಗಿ ತಿಳಿದು ಅದರ ಮೇಲ್ಮೆಗಾಗಿ ಅನುಸರಿಸಿ ದುಡಿದ ಪ್ರಾತಃಸ್ಮರಣೀಯರ ಸಾಲಿನಲ್ಲಿ ಪ್ರೊ. ಕೃಷ್ಣಶಾಸ್ತ್ರಿಗಳ ಸ್ಥಾನ ಅತಿ ಎತ್ತರದ್ದು. ಅವರ ದುಡಿಮೆ ಎಲ್ಲರಿಗೂ ಎದ್ದು ಕಾಣಿಸುವಂಥದ್ದಲ್ಲ. ಆದರೆ ಅದರ ಫಲ ಎಲ್ಲರಿಗೂ ವೇದ್ಯವಾದುದು. ಇದು ಶ್ರೀ ಕೃಷ್ಣಶಾಸ್ತ್ರಿಗಳ ವೈಶಿಷ್ಟ್ಯ! . . . ಕನ್ನಡದ ಮಾತು ಬಂದಾಗ ಶ್ರೀ ಕೃಷ್ಣಶಾಸ್ತ್ರಿಗಳು ಕನ್ನಡ ಸಾಹಿತ್ಯವನ್ನು ಪ್ರತಿನಿಧಿಸುವುದು ಮಾತ್ರವಲ್ಲ. ಕನ್ನಡದ ಶಕ್ತಿಯನ್ನೇ ಪ್ರದರ್ಶಿಸುತ್ತಾರೆ.

ಡಾ॥ ಹಾ. ಮಾ. ನಾಯಕ

ಅವರನ್ನು (ಶಾಸ್ತ್ರಿಗಳನ್ನು) ಕುರಿತು ನನಗೆ ಹೊಳೆಯುವ ಒಂದೇ ಮಾತಿನಲ್ಲಿ ಹೇಳುವುದಾದರೆ ಅದೊಂದು ಪೂರ್ಣಕುಂಭ. ತುಂಬಿದ ಕೊಡಕ್ಕೆ ತುಳುಕಾಟವಿಲ್ಲ, ಅವರಲ್ಲಿ ಮಾತಾಟವಿಲ್ಲ, ಅಚ್ಚ ಕೆಲಸ ತಾನೇ . . . ಗ್ರಂಥಗಳು ಕನ್ನಡ ಸಾಹಿತ್ಯದಲ್ಲಿ ಕೀರ್ತಿಸ್ತಂಭಗಳಂತೆ ಸದಾಕಾಲ ಬಾಳತಕ್ಕಂಥವು.

ಎಂ. ಗೋವಿಂದ ಪೈ

೧೯೪೫ರಲ್ಲಿ ಶಾಸ್ತ್ರಿಗಳು ವಿಶ್ರಾಂತರಾದ ಮೇಲೆ, ಅವರನ್ನು ಸತ್ಕರಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದವರು ಎಷ್ಟೋ ಪ್ರಯತ್ನಮಾಡಿದರು. ಶಾಸ್ತ್ರಿಗಳು ಒಪ್ಪಲಿಲ್ಲ. ಅನಂತರ ಅವರಿಗೆ ಒಂದು ಅಭಿನಂದನೆ ಸಂಪುಟವನ್ನು ಸಮರ್ಪಿಸಬೇಕೆಂದು ಪ್ರಯತ್ನ ನಡೆಯಿತು. 'ಕಾಫಿ ತಿಂಡಿಗಿಂತ ಇದು ಉತ್ತಮ' ಎಂದು ಶಾಸ್ತ್ರಿಗಳೂ ಒಪ್ಪಿದರು . . . ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಪುಸ್ತಕವೆಂದರೆ ಪ್ರಾಣ. ಅವರಿಗೆ ಪುಸ್ತಕವೇ ಪೂಜೆ; ಅವರಿಗೆ ಪುಸ್ತಕವೆಲ್ಲ ಪೂಜೆ.

ಜಿ. ಪಿ. ರಾಜರತ್ನಂ

ಪರಿಷತ್ತಿನ ಸುದ್ದಿಗಳು

ಮುಂಬಯಿ ಕನ್ನಡಿಗರ ಬಗ್ಗೆ

ದಿನಾಂಕ ೧೧-೩-೧೯೬೮ರಂದು 'ಜಾಗೃತ ಕರ್ನಾಟಕ' ಎಂಬ ಬೊಂಬಾಯಿಯ ಪತ್ರಿಕೆಯ ಸಹ ಸಂಪಾದಕರಾದ ಡಾ|| ವಸಂತ ದೇಸಾಯಿ, ಎಂ.ಎ., ಪಿ.ಎಚ್. ಡಿ., ಅವರು ಬೊಂಬಾಯಿಯ ಕನ್ನಡಿಗರ ಸಮಸ್ಯೆಯನ್ನು ಕುರಿತು ಮಾತನಾಡಿದರು. ಪರಿಷದಧಿಕಾರಿಗಳೂ ಸದಸ್ಯರೂ ಅವರೊಡನೆ ಕನ್ನಡದ ಹಾಗೂ ಕನ್ನಡಿಗರ ಬಗ್ಗೆ ಇರುವ ಸಮಸ್ಯೆಗಳನ್ನು ಕುರಿತು ವಿಚಾರವಿನಿಮಯ ನಡೆಸಿದರು.

ಉಗಾದಿ ಉತ್ಸವ

ದಿನಾಂಕ ೨೯-೩-೧೯೬೮ರಂದು ಉಗಾದಿಯ ಪ್ರಯುಕ್ತ ಪರಿಷನ್ಮಂದಿರದಲ್ಲಿ ವೇ|| ಎಸ್. ಕೆ. ಪೂರ್ಣಬೋದಾಚಾರ್ಯರಿಂದ ಪಂಚಾಂಗ ಶ್ರವಣ ಮತ್ತು ವರ್ಷಾಫಲವನ್ನು ಕುರಿತು ಉಪನ್ಯಾಸಗಳು ನಡೆದುವು.

ಪರಿಷತ್ತಿಗೆ ಪತ್ರಿಕಾಸಂಪಾದಕರ ಭೇಟಿ

ದಿನಾಂಕ ೮-೪-೧೯೬೮ರಲ್ಲಿ "ಇಂಡಿಯಾ ಮತ್ತು ಇಂಡಿಯನ್ ರೈಟಿಂಗ್ ಟುಡೇ' ಪತ್ರಿಕೆಯ ಸಂಪಾದಕರು ಮತ್ತು ಉಪಸಂಪಾದಕರುಗಳಾದ ಶ್ರೀಯುತ ಪ್ರಭಾಕರ್ ಪಾಂಡ್ಯೆ ಮತ್ತು ಸದಾನಂದ ಭಟ್ಕಲ್ ಇವರುಗಳು ಪರಿಷನ್ಮಂದಿರಕ್ಕೆ ಭೇಟಿ ಇತ್ತು ಭಾರತದ ವಿವಿಧ ಭಾಷೆಗಳ ಬೆಳವಣಿಗೆ ಸೌಹಾರ್ದ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕೊಟ್ಟು ತರುವುದು-ಮುಂತಾದ ವಿಷಯಗಳ ಬಗ್ಗೆ ಪರಿಷತ್ಸದಸ್ಯರು ಮತ್ತು ಅಧಿಕಾರಿಗಳೊಡನೆ ವಿಚಾರ ವಿನಿಮಯ ನಡಸಿದರು.

ಬಸವೇಶ್ವರರ ಅಷ್ಟ ಶತಮಾನೋತ್ಸವ

ದಿನಾಂಕ ೩೦-೪-೧೯೬೮ ಮತ್ತು ೧-೫-೧೯೬೮ರಂದು ಶ್ರೀ ಕೃಷ್ಣರಾಜಪರಿಷನ್ಮಂದಿರದಲ್ಲಿ ಶ್ರೀ ಬಸವೇಶ್ವರರ ಅಷ್ಟ ಶತಮಾನೋತ್ಸವ ಸಮಾರಂಭ ನಡೆಯಿತು. ಮೊದಲ ದಿನದ ಉತ್ಸವದ ಅಧ್ಯಕ್ಷತೆಯನ್ನು ಪ್ರೊ. ಜಿ. ವೆಂಕಟಸುಬ್ಬಯ್ಯನವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿಯವರು ಬಸವೇಶ್ವರರ ವಚನಗಾಯನ ಮಾಡಿದರು-ವೈಣಿಕ ವಿದ್ವಾನ್ ಶ್ರೀ ಎಲ್ ರಾಜಾರಾಯರು ಸಿದ್ಧಪಡಿಸಿದ್ದ ಬಸವೇಶ್ವರರ 'ವಚನಗಾನ ಮಂಜರಿ' ಹಸ್ತಪ್ರತಿಯನ್ನು ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಬಿಡುಗಡೆ ಮಾಡಿದರು. ವಚನಗಳನ್ನು ಹಾಡಲು ಸ್ವರ ಪ್ರಸ್ತಾರ ಹಾಕಿ; ಅದಕ್ಕೆ ಹೇಗೆ ರಾಗಾಲಾಪನೆ, ನೆರವಲು, ಇತ್ಯಾದಿಗಳಿಂದ ಪೂರ್ಣ ಸಂಗೀತ ಕಚೇರಿಯನ್ನೇ ವಚನ ಗಾನದಿಂದ ನಡೆಸಬಹುದೆಂಬುದನ್ನು ಉದಾಹರಣೆಯೊಡನೆ ಎಲ್. ರಾಜಾರಾಯರು ಹಾಡಿ ತೋರಿಸಿದರು. ಡಾ|| ಜಿ. ಎಸ್. ಶಿವರುದ್ರಪ್ಪನವರು ಶ್ರೀ ಜೀರಿಗೆ ಕಟ್ಟಿಬಸಪ್ಪನವರು ಬಸವೇಶ್ವರನ್ನು ಕುರಿತು ವಿದ್ವತ್ಪೂರ್ಣವಾದ ಉಪನ್ಯಾಸ ಮಾಡಿದರು. ಕಾರ್ಯದರ್ಶಿ ಶ್ರೀ ಹಂಪನಾಗರಾಜಯ್ಯನವರಿಂದ ವಂದನಾರ್ಪಣೆಯಾಯಿತು.

ಎರಡನೆಯ ದಿನ ಶ್ರೀ ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಮೊದಲಲ್ಲಿ ಶ್ರೀ ಆರ್. ವಿ. ಶೇಷಾದ್ರಿ ಮತ್ತು ಸಂಗಡಿಗರಿಂದ ವಚನ ಗಾಯನ ನಡೆಯಿತು.

ಶ್ರೀ ಸಿದ್ದಯ್ಯ ಪುರಾಣಿಕರು ಬಸವೇಶ್ವರರನ್ನು ಕುರಿತು ಅಮೋಘವಾದ ಭಾಷಣ ಮಾಡಿದರು. ಅನಂತರ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೊರಟೆ ಶ್ರೀನಿವಾಸರಾಯರು ವಹಿಸಿ ಉತ್ಸವವನ್ನು ಮುಂದುವರೆಸಿದರು. ಅನಂತರ ಶ್ರೀಮತಿ ಕಮಲಮ್ಮ ಹಂಪನಾನವರೂ ಶ್ರೀ ಟಿ. ಆರ್. ಮಹದೇವಯ್ಯನವರೂ ಉಪನ್ಯಾಸಮಾಡಿದರು. ಗೌರವ ಕಾರ್ಯದರ್ಶಿ ಶ್ರೀ ಹಂಪ. ನಾಗರಾಜಯ್ಯನವರಿಂದ ವಂದನಾರ್ಪಣೆ ನಡೆಯಿತು.

ಪರಿಷತ್ತಿನ ಆಶ್ರಯದಲ್ಲಿ ನಡೆದ ಉತ್ಸವ – ಉಪನ್ಯಾಸಗಳು

ಶ್ರೀ ನಿರಂಜನ ಅವರ ಕೃತಿಗಳು

ದಿನಾಂಕ ೧೦-೩-೧೯೬೮ರಂದು ರಾಜಾಜಿನಗರದ "ಸಪ್ತರ್ಷಿಧಾಮ"ದಲ್ಲಿ "ಶ್ರೀ ಕೆ. ಎಸ್. ನಿರಂಜನ ಅವರ ಕೃತಿಗಳ" ಬಗ್ಗೆ ಉಪನ್ಯಾಸವನ್ನೇರ್ಪಡಿಸಿತ್ತು. ಶ್ರೀ ನಿರಂಜನರ ಕತೆ, ಕಾದಂಬರಿಗಳನ್ನು ಕುರಿತು

ಶ್ರೀ ಶೇಷನಾರಾಯಣರೂ ಪತ್ರಿಕಾ ವ್ಯವಸಾಯವನ್ನು ಕುರಿತು ಅಧ್ಯಕ್ಷತೆವಹಿಸಿದ್ದ ಶ್ರೀ ಎಂ. ಪಿ. ಮಹಿಷಿ ಅವರೂ ಉಪನ್ಯಾಸಮಾಡಿದರು. ಇದು ಸಪ್ತರ್ಷಿಧಾಮದ ೩೨ನೆಯ ಉಪನ್ಯಾಸವಾಗಿತ್ತು.

ಶ್ರೀ ಬಿ. ವೆಂಕಟಾಚಾರ್ಯ ಅವರ ಕೃತಿಗಳು

ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆದ ಉಪನ್ಯಾಸಮಾಲೆಯ ಕವಿಕೃತಿ ಸ್ಮರಣೆಯ ಅಂಗವಾಗಿ ದಿ|| ಬಿ. ವೆಂಕಟಾಚಾರ್ಯರ ಕೃತಿಗಳ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ|| ಜಿ. ವೆಂಕಟಸುಬ್ಬಯ್ಯನವರು ದಿನಾಂಕ ೨೪-೩-೧೯೬೮ ರಂದು ಉಪನ್ಯಾಸಮಾಡಿದರು. ಇದು ಗಾಂಧಿ ಸಾಹಿತ್ಯ ಸಂಘದ ಕವಿಕೃತಿ ಸ್ಮರಣೆಯ ೧೫ನೆಯ ಉಪನ್ಯಾಸವಾಗಿತ್ತು.

ಪ್ರೊ|| ಸ. ಸ. ಮಾಳವಾಡ ಅವರ ಕೃತಿಗಳು

ವಿದ್ಯಾವರ್ಧಕ ಸಂಘದ ೩೩ನೆಯ ಉಪನ್ಯಾಸ ಮಾಲೆಯು ದಿನಾಂಕ ೧೪-೪-೧೯೬೮ ರಂದು ನೆರವೇರಿತು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್.ಆರ್. ಮಳಗಿಯವರು ವಹಿಸಿದ್ದರು. ಶ್ರೀ ಕ. ವೆಂ. ರಾಜಗೋಪಾಲ್ ಅವರು, ಶ್ರೀ ಮಾಳವಾಡರ ಸಂಶೋಧನೆಯ ವಿಷಯವನ್ನು ಕುರಿತು ಉಪನ್ಯಾಸಮಾಡಿದರು.

"ಕನ್ನಡಿಗರ ಕೂಟ" ದಲ್ಲಿ ೩ನೆಯ ಕಾರ್ಯಕ್ರಮ

ಬಸವನಗುಡಿಯ ಕನ್ನಡಿಗರ ಕೂಟದಲ್ಲಿ ಏಪ್ರಿಲ್ ೨೮ ರಂದು ನರಸಿಂಹರಾಜಾಕಾಲೋನಿಯ ಮಹಿಳಾಮಂಡಳಿಯ ಸಭಾಂಗಣದಲ್ಲಿ "ಹಂಪೆಯ ಹರಿಹರ" ನ ಬಗ್ಗೆ ಶ್ರೀ ಆರ್. ಜಿ. ಕುಲಕರ್ಣಿಯವರು ಉಪನ್ಯಾಸಮಾಡಿದರು. ಡಾ|| ಜಿ. ಎಸ್. ಶಿವರುದ್ರಪ್ಪನವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಗಾಂಧಿ ಸಾಹಿತ್ಯ ಸಂಘದಲ್ಲಿ ೧೬ನೆಯ ಉಪನ್ಯಾಸಮಾಲೆ

ದಿನಾಂಕ ೨೮-೪-೬೮ ರಂದು ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆದ ಉಪನ್ಯಾಸಮಾಲೆಯ ಕವಿಕೃತಿಯ ಸ್ಮರಣೆಯ ಅಂಗವಾಗಿ ದಿ|| ಚ. ವಾಸುದೇವಯ್ಯನವರ ಕೃತಿಗಳ ಬಗ್ಗೆ ಪಂಡಿತ ಹು. ಮು. ರಾಮಾರಾಧ್ಯರು ಉಪನ್ಯಾಸ ಮಾಡಿದರು.

ಗಮಕ ಪ್ರೌಢ ಪರೀಕ್ಷೆಗಳು—೧೯೬೯

ಗಮಕ ಕಲೆಯ ವಿಶೇಷ ವ್ಯಾಸಂಗದಲ್ಲಿ ಆಸಕ್ತಿಯುಳ್ಳವರ ಉಪಯೋಗಕ್ಕಾಗಿ ೧೯೬೯ನೆಯ ಏಪ್ರಿಲ್-ಮೇ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಗಮಕ ಪ್ರೌಢಪರೀಕ್ಷೆಯನ್ನು ನಡೆಸಲು ತೀರ್ಮಾನಿಸಿದೆ. ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಮತ್ತು ನರಸಿಂಹರಾಜಕಾಲೋನಿಯ ಕಾವ್ಯಗಾಯನ ಕಲಾಮಂದಿರದ ಆಶ್ರಯದಲ್ಲಿ ಮೇಲ್ಕಂಡ ತರಗತಿಗಳು ೧೯೬೮ನೆಯ ಜೂನ್ ತಿಂಗಳ ಮೊದಲನೆಯ ತಾರೀಖಿನಿಂದ ಪ್ರಾರಂಭವಾಗುತ್ತವೆ. ಇತರ ಸ್ಥಳಗಳಲ್ಲಿರುವ ವಿದ್ಯಾರ್ಥಿಗಳು ಸ್ವಂತ ವ್ಯಾಸಂಗದಿಂದ ಈ ಪರೀಕ್ಷೆಗೆ ಕುಳಿತುಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಮೇಲೆ ಹೇಳಿದ ಸಂಸ್ಥೆಗಳ ವ್ಯವಸ್ಥಾಪಕರಿಗಾಗಲೀ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಿಗಾಗಲೀ ಬರೆದು ತಿಳಿದುಕೊಳ್ಳಬಹುದು.

ಗಮಕ ಕಲೆಯ ವಿಶೇಷ ವ್ಯಾಸಂಗದಲ್ಲಿ ಆಸಕ್ತಿಯುಳ್ಳವರ ಉಪಯೋಗಕ್ಕಾಗಿ ೧೯೬೯ನೆಯ ಏಪ್ರಿಲ್-ಮೇ ತಿಂಗಳಿನಲ್ಲಿ ಪರಿಷತ್ತು ಗಮಕ ಪ್ರೌಢ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಿದೆ.

ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹತೆ, ಇತರ ನಿಯಮಗಳು :—

೧. ಪರಿಷತ್ತಿನ ಗಮಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೂ ಪರಿಷತ್ತು ಅಂಗೀಕರಿಸಿರುವ ಗಮಕ ವಿದ್ವಾಂಸರೊಬ್ಬರಲ್ಲಿ ಕನಿಷ್ಠಪಕ್ಷ ಹತ್ತು ತಿಂಗಳಾದರೂ ವ್ಯಾಸಂಗ ಮಾಡಿರುವ ಬಗ್ಗೆ ಪತ್ರವನ್ನು ಪರಿಷತ್ತಿಗೆ ಪ್ರವೇಶ ಪತ್ರದೊಡನೆ ಕಳಿಸಿಕೊಡಬೇಕು.

೨. ಸೀನಿಯರ್ ಗ್ರೇಡ್ ಸಂಗೀತ ಪರೀಕ್ಷೆಯಲ್ಲಿ ತೇರ್ಗಡೆಯಾದವರೂ, ಪರಿಷತ್ತಿನ ಕಾವ, ಜಾಣ ಅಥವಾ ರತ್ನ ಪರೀಕ್ಷೆಯಲ್ಲಿ ತೇರ್ಗಡೆಯಾದವರೂ, ಪ್ರಾಥಮಿಕ ಅಥವಾ ಅದಕ್ಕೆ ಮೇಲ್ಪಟ್ಟ ಯಾವುದಾದರೊಂದು ಶಾಲೆಯಲ್ಲಿ ಕನಿಷ್ಠಪಕ್ಷ ಐದು ವರ್ಷಗಳ ಕಾಲವಾದರೂ ಕೆಲಸಮಾಡಿರುವವರೂ ಈ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿದೆ.

೩. ಮೇಲೆ ಹೇಳಿದ ನಿಯಮಗಳಿಗೆ ಒಳಪಡದೇ ಇದ್ದೂ ತಮ್ಮ ಸ್ವಂತ ಅಭ್ಯಾಸದಿಂದಲೇ ಕೊನೆಯಪಕ್ಷ ನಾಲು ವರ್ಷಗಳ ಕಾಲವಾದರೂ ಕಾವ್ಯ ವಾಚನದಲ್ಲಿ ಅನುಭ

ವನ್ನು ಪಡೆದಿರುವವರು ಆ ಬಗ್ಗೆ ಒಂದು ಪರಿಚಯ ಪತ್ರ ವನ್ನು ಮೇಲೆ ಹೇಳಿರುವ ಗಮಕ ವಿದ್ವಾಂಸರೊಬ್ಬರಿಂದ ಆಗಲಿ ಅಥವಾ ಹಿರಿಯ ಸಾಹಿತಿಗಳೊಬ್ಬರಿಂದಾಗಲಿ ಪಡೆದು ಪ್ರವೇಶ ಪತ್ರದೊಡನೆ ಪರಿಷತ್ತಿಗೆ ಕಳಿಸಿಕೊಡಬೇಕು.

೪. ಈ ಪರೀಕ್ಷೆಗೆ ವ್ಯಾಸಂಗಮಾಡುವ ಪ್ರಾರಂಭದಲ್ಲಿ ಅಪೇಕ್ಷಾಪತ್ರವನ್ನು ಅಭ್ಯರ್ಥಿಗಳು ಪರಿಷತ್ತಿಗೆ ಸಲ್ಲಿಸಬೇಕು. ಅದರ ಜೊತೆಯಲ್ಲಿ ಒಂದು ರೂಪಾಯಿ ಶುಲ್ಕವನ್ನೂ ಕೊಡತಕ್ಕದ್ದು. ಅಪೇಕ್ಷಾ ಪತ್ರದಲ್ಲಿ ಅಭ್ಯರ್ಥಿಗಳು ತಮ್ಮ (೧) ಹೆಸರು (೨) ವಿಳಾಸ (೩) ವಯಸ್ಸು (೪) ಸಾಮಾನ್ಯ ವಿದ್ಯಾಭ್ಯಾಸ.

೫. ಈ ಪರೀಕ್ಷೆಗೆ ಕೂಡಲು ಇರುವ ಅರ್ಹತೆ.

೬. ಶಿಕ್ಷಣವನ್ನು ಕೊಡುವ ಗುರುಗಳ ಹೆಸರು–ಸ್ಥಳ ಇವುಗಳನ್ನು ತಿಳಿಸಿರಬೇಕು. ಈ ಪತ್ರವನ್ನು ತಮ್ಮ ಗುರು ಗಳ ಮೂಲಕ ಪರಿಷತ್ತಿನ ಗೌ|| ಕಾರ್ಯದರ್ಶಿಗಳಿಗೆ ೧೯೬೮ ನೆಯ ಜುಲೈ ತಿಂಗಳ ಹತ್ತನೆಯ ತಾರೀಖಿನೊಳಗಾಗಿ ಕಳಿಸಿ ಕೊಡತಕ್ಕದ್ದು.

೭. ಈ ಪರೀಕ್ಷೆಗೆ ಕೂಡಲು ಹತ್ತು ರೂಪಾಯಿಗಳ ಪರೀಕ್ಷಾ ಶುಲ್ಕವನ್ನು ೧೯೬೮ರ ಡಿಸೆಂಬರ್ ತಿಂಗಳೊಳಗಾಗಿ ತಮ್ಮ ಗುರುಗಳ ಮೂಲಕ ಪರಿಷತ್ತಿಗೆ ಕಳಿಸತಕ್ಕದ್ದು.

೮. ಈ ಪರೀಕ್ಷೆಯನ್ನು ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಸಲಾಗುವುದು. ಸ್ವಂತವ್ಯಾಸಂಗದಿಂದ ಎಂಟುಮಂದಿಗೆ ಕಡಿಮೆ ಇಲ್ಲದಂತೆ ಅಭ್ಯರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಪಕ್ಷದಲ್ಲಿ ಅಂತಹ ಬೇರೆ ಊರುಗಳಲ್ಲಿಯೂ ಈ ಪರೀಕ್ಷೆಯನ್ನು ನಡೆಸಲು ವ್ಯವಸ್ಥೆಮಾಡಲಾಗುವುದು.

೯. ಗಮಕ ಪ್ರೌಢ ತರಗತಿಗಳ ವ್ಯಾಸಂಗದ ಅವಧಿಯು ೧೯೬೮ನೇ ಜೂನ್ ತಿಂಗಳ ಪ್ರಾರಂಭದಿಂದ ೧೯೬೯ನೇ ಮಾರ್ಚಿ ತಿಂಗಳ ಕೊನೆಯವರೆಗೆ ಎಂದರೆ ಹತ್ತುತಿಂಗಳ ಕಾಲವಿರತಕ್ಕದ್ದು.

೧೦. ಗಮಕ ಪ್ರೌಢಪರೀಕ್ಷೆಗೆ (ಅ) ಸಾಹಿತ್ಯ (ಆ) ಗಮಕ ಮತ್ತು (ಇ) ಸಂಗೀತ ವಿಭಾಗಗಳ ಪ್ರತ್ಯೇಕ ಪತ್ರಿಕೆ ಗಳಿರುತ್ತವೆ. ಸಾಹಿತ್ಯ ಭಾಗಕ್ಕೆ ೧೦೦ ಅಂಕಗಳೂ, ಗಮಕ ಮತ್ತು ಸಂಗೀತ ವಿಭಾಗಗಳಿಗೆ ೬೦ ಮತ್ತು ೪೦ ಅಂಕಗಳೂ ಲಿಖಿತ ಪರೀಕ್ಷೆಗೆ ಇಟ್ಟಿರುವ ಪರಮಾವಧಿ ಅಂಕಗಳಾಗಿರು ತ್ತವೆ; ವಾಚನ ವಿಭಾಗಕ್ಕೆ ಪತ್ಯೇಕ ೧೦೦ ಅಂಕಗಳೂ ಇರುತ್ತವೆ.

೧೧. ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಭ್ಯರ್ಥಿಗಳು ಪ್ರತಿಯೊಂದು ವಿಭಾಗದಲ್ಲೂ ಕನಿಷ್ಠಪಕ್ಷ ಶೇಕಡಾ ನಲವತ್ತು ಅಂಕಗಳನ್ನು ಪಡೆಯತಕ್ಕದ್ದು. ಮೊದಲನೆಯ ತರಗತಿ ಯಲ್ಲಿ ತೇರ್ಗಡೆಹೊಂದಲು ಅಭ್ಯರ್ಥಿಯು ಸಾಹಿತ್ಯಭಾಗ ದಲ್ಲಿ ಎಪ್ಪತ್ತು ಅಂಕಗಳನ್ನೂ ಗಮಕ–ಸಂಗೀತ ವಿಭಾಗ ಗಳಲ್ಲಿ ಅರವತ್ತು ಅಂಕಗಳನ್ನೂ ಪಡೆಯಬೇಕು.

೧೯೬೯ರ ಗಮಕ ಪ್ರೌಢ ಪರೀಕ್ಷೆಗೆ ಗೊತ್ತು ಮಾಡಿರುವ ಪಠ್ಯಪುಸ್ತಕಗಳು

೧. ಸಾಹಿತ್ಯ : (ಕಾವ್ಯಭಾಗ) (೧) ಮೈಸೂರು ವಿಶ್ವವಿದ್ಯಾ ನಿಲಯ ಪಠ್ಯ ಪುಸ್ತಕ ಮಾಲೆ-೨೯ "ಕನ್ನಡ ಕಾವ್ಯ ವಲ್ಲರಿ" (೨) ಕನ್ನಡ ಕೈಪಿಡಿ I ಭಾಗ. ಕನ್ನಡ ಸಾಹಿತ್ಯ ಚರಿತ್ರೆ.

೨. ಗಮಕ: (ಶಾಸ್ತ್ರಭಾಗ) "ಕಾವ್ಯಗಾಯನ ಕಲಾ ಸಂಗ್ರಹ" ಪರಿಷತ್ತಿನ ಪ್ರಕಟಣೆ.

೩. ಸಂಗೀತ: (ಶಾಸ್ತ್ರಭಾಗ) ವೈಣಿಕ ವಿದ್ವಾನ್ ಶ್ರೀ ಎಲ್. ರಾಜಾರಾಯರ "ಸಂಗೀತ ಶಾಸ್ತ್ರಸಾರ" ಮತ್ತು "ಸಂಗೀತ ಶಾಸ್ತ್ರ ಚಂದ್ರಿಕೆ".

ಇತರ ಪುಸ್ತಕಗಳು : (೧) "ಕನ್ನಡ ಬಾವುಟ" ಪರಿಷತ್ತಿನ ಪ್ರಕಟಣೆ (೨) "ಸೀತಾಪರಿತ್ಯಾಗ" ಪರಿಷತ್ತಿನ ಪ್ರಕ ಟಣೆ (ಅಥವಾ ಜೈಮಿನಿ ಭಾರತ) (೩) "ಶ್ರೀ" ಅವರು ಬರೆದ "ಅಶ್ವತ್ಥಾಮನ್" ನಾಟಕ.

ಪಠ್ಯ ಭಾಗಗಳು

೧. "ಕಾವ್ಯವಲ್ಲರಿ"ಯಿಂದ (೧) ಭರತ ಬಾಹುಬಲಿ ವ್ಯಾಯೋಗಂ (೨) ದುರ್ಯೋಧನ ವಿಲಾಪಂ (೩) ಪುಷ್ಪರಗಳೆ (೪) ಶಬರಿಗಾದನು ಅತಿಥಿದಾಶರಥಿ (೫) ದ್ಯುಮಣಿ ಅಲ್ಲಮ ಸಿಕ್ಕದಾದನು ತಮದ ಮಾಯೆಗೆ– ಮತ್ತು (೬) ಕೆಡೆದುದು ಸುಪ್ರತೀಕಗಜ–ಈ ಭಾಗಗಳು ಪೂರ್ತಿ. (ಆಯಾ ಕಾವ್ಯದ ಮಂಗಳಾಚರಣೆಯ ಪದ್ಯದೊಡನೆ).

೨. "ಜೈಮಿನಿ ಭಾರತ"ದಿಂದ "ಸೀತಾಪರಿತ್ಯಾಗ"ದ ಭಾಗ ಪೂರ್ತಿ (ಪರಿಷತ್ತಿನ ಪ್ರಕಟಣೆಯಲ್ಲಿರುವ ಭಾಗ ಮಾತ್ರ).

೩. "ಕನ್ನಡ ಬಾವುಟ"ದಿಂದ (೧) "ಹದಿಬದೆಯ ಧರ್ಮದ ಪದ್ಯಗಳು ಪೂರ್ತಿ (೨) ಬಸವಣ್ಣ ಮತ್ತು ಅಕ್ಕಮಹಾದೇವಿ ವಚನಗಳು ವಿದ್ಯಾರ್ಥಿಗಳೇ ಆರಿಸಿದ ಹತ್ತು ಹತ್ತು ವಚನಗಳು.

೪. ನಾಟಕ "ಅಶ್ವತ್ಥಾಮನ್" ('ಶ್ರೀ' ಅವರು ಬರೆದದ್ದು)

೫. ಇತರ ಐಚ್ಛಿಕ ವಿಷಯಗಳು: (೧) ದ್ವಿಪದಿ-ತ್ರಿಪದಿ-ಚೌಪದಿ-ಸೀಸಪದ್ಯ-ದಂಡಕಗಳ ಮಾದರಿ ಪದ್ಯಗಳು (೨) ದಾಸರ ಪದಗಳು ಮತ್ತು ಶಿವಶರಣರ ಕೃತಿಗಳು ಐದೈದು. (೩) ಕುವೆಂಪು, ಡಿ. ವಿ. ಜಿ, ಪು. ತಿ. ನ., ಬೇಂದ್ರೆ, ಚನ್ನವೀರ ಕಣವಿ, ಕಾವ್ಯಾನಂದ ಮತ್ತು ಅಡಿಗ, ಇವರ ಎರಡೆರಡು ಕವಿತೆಗಳು.

ಸೂಚನೆ: ಸಾಹಿತ್ಯ ಭಾಗಕ್ಕೆ ಗೊತ್ತುಮಾಡಿರುವ ಪದ್ಯಭಾಗಗಳ-ಕವಿ-ಕಾವ್ಯ-ಮತ್ತು ಕಥಾ ಭಾಗಗಳ ಪರಿಚಯ ಮತ್ತು ಪದ್ಯ ಜಾತಿಗಳ ಲಕ್ಷಣ ಎಲ್ಲವನ್ನೂ ತಿಳಿದಿರಬೇಕು; ಆಯಾ ಪದ್ಯ ಜಾತಿಯ ನಡೆಯನ್ನು ಎತ್ತಿ ತೋರಿಸುವ ರೀತಿಯಲ್ಲಿ ಗಮಕ ರೀತಿಯಲ್ಲಿ ಪದ್ಯಗಳನ್ನು ಹಾಡುವ ಅಭ್ಯಾಸವನ್ನು ಮಾಡಿದ್ದು, ಗಮಕಕಲೆಯ ಶಾಸ್ತ್ರ ಭಾಗದ ಮುಖ್ಯ ವಿಷಯಗಳನ್ನು ತಿಳಿದುಕೊಂಡಿರಬೇಕು; ಬಳಕೆಯಲ್ಲಿರುವ ಹದಿನೈದು ರಾಗಗಳ ಸ್ವರ ಸಂಚಾರಕ್ರಮ ಮತ್ತು ಲಕ್ಷಣಗಳನ್ನು ವ್ಯಾಸಂಗ ಮಾಡಿರುವುದಲ್ಲದೆ ೨೫ ರಾಗಗಳನ್ನು ಬಳಸಿ ಕಾವ್ಯ ವಾಚನ ಮಾಡುವ ಶಕ್ತಿ ಪಡೆದುಕೊಂಡಿರಬೇಕು. ಒಂದು ಪದ್ಯವನ್ನು ಬೇರೆ ಬೇರೆ ರಾಗಗಳಲ್ಲಿ ಹಾಡುವ ಮಟ್ಟಿಗೆ ಸಾಧನೆಯನ್ನು ಮಾಡಿರಬೇಕು.

೧೯೬೮-೬೯ನೆಯ ಸಾಲಿಗೆ ಗಮಕ ಪ್ರವೇಶ ಪರೀಕ್ಷೆಗೆ ಗೊತ್ತುಮಾಡಿರುವ ಪಠ್ಯ ವಿಷಯಗಳು

I ೧. ಕಾವ್ಯವಿಭಾಗಕ್ಕೆ ಪರಿಷತ್ತಿನಿಂದ ಪ್ರಕಟವಾಗಿರುವ "ಗಮಕ ಪ್ರವೇಶದಾಯಿನಿ" ಎಂಬ ಗ್ರಂಥದಿಂದ ಈ ಕೆಳಗೆ ಸೂಚಿಸಿರುವ ಪದ್ಯಭಾಗಗಳು-(ಅ) ತೊರವೆ ರಾಮಾಯಣದ ಕಥಾಭಾಗದ ಒಟ್ಟು ೧೮ ಪದ್ಯಗಳು (ಆ) ಜೈಮಿನಿಭಾರತದ ಕಥಾಭಾಗದ ಒಟ್ಟು ೨೦ ಪದ್ಯಗಳು (ಇ) ವಿಕ್ರಮಾರ್ಜುನವಿಜಯದ-ಕರ್ಣಜನನ-ಧನುರ್ವಿದ್ಯಾಭ್ಯಾಸ ಭಾಗ ಪೂರ್ತಿ (ಈ) ಕುಮುದೇಂದುರಾಮಾಯಣದ ಯುದ್ಧ ಸನ್ನಾಹಪ್ರಕರಣದ ರಗಳೆ ಪೂರ್ತಿ (ಉ) ಹದಿಬದೆಯ ಧರ್ಮದ ಸಾಂಗತ್ಯದ ಪದ್ಯಗಳು ಪೂರ್ತಿ. (ಊ) ಸರ್ವಜ್ಞನ ವಚನಗಳು ಮೊದಲ ಐದು ಪದ್ಯಗಳು ಮಾತ್ರ.

೨. ಇತರ ಐಚ್ಛಿಕ ವಿಷಯಗಳು: (ಅ) ಬಸವಣ್ಣನವರ ಮತ್ತು ಅಕ್ಕಮಹಾದೇವಿಯ ವಚನಗಳು ಮೂರು ಮೂರು (ಆ) ದಾಸರ ಪದಗಳು ಮತ್ತು ಶಿವಶರಣರ ಕೃತಿಗಳು ಎರಡೆರಡು (ಇ) ಕುವೆಂಪು, ಡಿ. ವಿ. ಜಿ. ಪು. ತಿ. ನ. ಮತ್ತು ದ. ರಾ. ಬೇಂದ್ರೆ ಇವರ ಎರಡೆರಡು ಕವಿತೆಗಳು.

II ೧. ಗಮಕಕಲೆಯ ಶಾಸ್ತ್ರಭಾಗಕ್ಕೆ "ಕಾವ್ಯಗಾಯನ ಕಲಾಸಂಗ್ರಹ" ಪರಿಷತ್ತಿನ ಪ್ರಕಟಣೆ.

೨. ರಾಗಗಳ ಪರಿಚಯಕ್ಕೆ ವೈಣಿಕ ವಿದ್ವಾನ್ ಶ್ರೀ ಎಲ್. ರಾಜಾಯರು ಬರೆದಿರುವ "ಸಂಗಿತ ಶಾಸ್ತ್ರಸಾರ"

ಪ್ರಕಟನೆ

ದಿನಾಂಕ ೨-೪-೧೯೬೮

ದಿನಾಂಕ ೨೪-೩-೧೯೬೮ರಲ್ಲಿ ಸೇರಿದ್ದ ಕಾರ್ಯಸಮಿತಿಯ ಆದೇಶದಂತೆ ಶ್ರೀ ಬಿ. ಕೆ. ರಾಮಚಂದ್ರರಾಯರು, ಬಿ.ಎ., ಎಲ್‌ಎಲ್.ಬಿ., ಹೈಕೋರ್ಟು ಅಡ್ವೊಕೇಟರು-ಅವರನ್ನು ೧೯೬೮ರ ಪರಿಷತ್ತಿನ ಅಧ್ಯಕ್ಷರು ಮತ್ತು ಕಾರ್ಯಸಮಿತಿಯ ಸದಸ್ಯರ ಆಯ್ಕೆಗಾಗಿ ಚುನಾವಣಾಧಿಕಾರಿಯನ್ನಾಗಿ ಗೊತ್ತುಮಾಡಲಾಯಿತು.

ಅದೇ ಕಾರ್ಯಸಮಿತಿಯು ಈ ರೀತಿ ತೀರ್ಮಾನಿಸಿತು:

"ಚುನಾವಣಾಧಿಕಾರಿಯು ಇವತ್ತಿನ ಅಂದರೆ ದಿನಾಂಕ ೨೪-೩-೧೯೬೮ನೆಯ ದಿವಸದಿಂದ ಮೂರು ತಿಂಗಳೊಳ

ಗಾಗಿ ಚುನಾವಣೆ ನಡೆಸಿಕೊಡುವಂತೆ ಅವರನ್ನು ಪ್ರಾರ್ಥಿಸ ತಕ್ಕದ್ದು."

ಚುನಾವಣಾಧಿಕಾರಿಗಳು, ತಮ್ಮ ಕ್ರ. ಸಂ. ಚು. ೧/೬೮ ದಿನಾಂಕ ೨-೪-೧೯೬೮ರ ಕಾಗದದಲ್ಲಿ ಕಾರ್ಯ ಸಮಿತಿಯ ಸಂದೇಶಕ್ಕೂ ಚುನಾವಣಾ ನಿಬಂಧನೆಗಳಿಗೂ ಅನುಸಾರವಾಗಿ "ಚುನಾವಣಾ ಕಾರ್ಯಕ್ರಮ"ವನ್ನು ತಯಾರಿಸಿ ಕಳುಹಿಸಿರುತ್ತಾರೆ. ಅದನ್ನು ಸದಸ್ಯರ ಅವಗಾಹನೆಗಾಗಿಯೂ ಮತ್ತು ಕಾರ್ಯಕ್ರಮಕ್ಕೂ ಈ ಕೆಳಗೆ ಕೊಡಲಾಗಿದೆ.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

"ಅಧ್ಯಕ್ಷರ ಮತ್ತು ಕಾರ್ಯಸಮಿತಿ ಸದಸ್ಯರ ಚುನಾವಣಾ ಕಾರ್ಯಕ್ರಮ

೧. ಜಿಲ್ಲಾ ವಿಭಾಗಗಳಾಗಿ ವಿಂಗಡಿಸಿದ ಸದಸ್ಯರ ಪಟ್ಟಿಯ ಪ್ರಕಟನೆ–ಪರಿಷತ್ತಿನ ಕಚೇರಿಯಲ್ಲಿ ೬-೪-೧೯೬೮

೨. ಈ ಬಗ್ಗೆ ಆಕ್ಷೇಪಣೆಗಳಿಗೆ ಕಡೆಯ ದಿನ ೧೩-೪-೧೯೬೮

೩. ಅಂತಿಮ–ಚುನಾವಣೆ ಮಾಡಲು ಅರ್ಹರಾದ ಸದಸ್ಯರಪಟ್ಟಿಯ ಪ್ರಕಟನೆ–ಪರಿಷತ್ತಿನ ಕಚೇರಿಯಲ್ಲಿ ೨೨-೪-೧೯೬೮

೪. ನಾಮಪತ್ರಗಳ ಸ್ವೀಕಾರದ ಕಡೆಯ ದಿನ ೨-೫-೧೯೬೮

೫. ನಾಮಪತ್ರಗಳ ಪರಿಶೀಲನೆ–ಪರಿಷತ್ತಿನ ಕಚೇರಿಯಲ್ಲಿ ೫-೫-೧೯೬೮ (ಬೆಳಗ್ಗೆ ೯ ಗಂಟೆಯಿಂದ)

೬. ನಾಮಪತ್ರಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಕಡೆಯ ದಿನ ೮-೫-೧೯೬೮

೭. ಉಳಿದ ಸ್ಪರ್ಧಿಗಳ ಹೆಸರುಗಳ ಪ್ರಕಟನೆ–ಪರಿಷತ್ತಿನ ಕಚೇರಿಯಲ್ಲಿ ೧೧-೫-೧೯೬೮

೮. ಮತಪತ್ರಗಳು ಅಂಚೆಯ ಮೂಲಕ ಪರಿಷತ್ತಿನ ಕಚೇರಿಗೆ ತಲಪಬೇಕಾದ ಕಡೆಯ ದಿನ ೨೨-೬-೧೯೬೮

೯. ಫಲಿತಾಂಶ ಪ್ರಕಟನೆ ೨೩-೬-೧೯೬೮"

(ರುಜು) **ಬಿ. ಕೆ. ರಾಮಚಂದ್ರರಾವ್**
ಚುನಾವಣಾಧಿಕಾರಿ

* * *

ಮೇಲಿನ ಚುನಾವಣಾ ಕಾರ್ಯಕ್ರಮ ೧ರಿಂದ ೭ರ ವರೆಗೂ ಈ 'ಕನ್ನಡನುಡಿ' ಪ್ರಕಟವಾಗುವವರೆಗೆ ನಡೆದಿದೆ. ಉಳಿದ ಸ್ಪರ್ಧಿಗಳ ಹೆಸರುಗಳು ಈ ರೀತಿ ಇರುತ್ತವೆ:

ಅಧ್ಯಕ್ಷಸ್ಥಾನಕ್ಕೆ

ಸರ್ವಶ್ರೀ :

೧. ತಿರುಮಲೆ ತಾತಾಚಾರ್ಯ ಶರ್ಮ ಅವರು

೨. ಪಿ. ಎಸ್. ಭಟ್ಟ ಅವರು

೩. ಎಸ್. ಶಂಕರಪ್ಪನವರು

ಕಾರ್ಯಸಮಿತಿ ಸದಸ್ಯಸ್ಥಾನಕ್ಕೆ

ಸರ್ವಶ್ರೀ :

೧. ಜಿ. ಅಶ್ವತ್ಥನಾರಾಯಣ ಅವರು

೨. ಅ. ನ. ಕೃಷ್ಣರಾಯರು

೩. ಜಿ. ಕೆ. ಗುಂಡೂರಾಯರು

೪. ಕಾ. ಸ. ಧರಣೇಂದ್ರಯ್ಯನವರು

೫. ಸಿ. ಎಸ್. ನರಸಿಂಹನ್ ಅವರು

೬. ಕೆ. ಟಿ. ಬನಶಂಕರಮ್ಮನವರು

೭. ಕೆ. ಬಿ. ಬಸವರಾಜನ್ ಅವರು

೮. ಎಚ್. ಎಸ್. ರೇಣುಕಾಪ್ರಸಾದ್ ಅವರು

೯. ಬಿ. ಎನ್. ವೆಂಕಟೇಶ್ ಅವರು

೧೦. ಎಸ್. ಶಂಕರಪ್ಪನವರು

೧೧. ಜಿ. ವಿ. ಶಿವಸ್ವಾಮಿ ಅವರು

೧೨. ಶ್ರೀನಿವಾಸರಾವ್ ರಾಜೀರಾವ್ ಮಂಗಳ ವೇಢೆ ಅವರು

೧೩. ಶ್ರೀವತ್ಸ ಅವರು

೧೪. ಕೆ. ಎನ್. ಶ್ರೀಹರಿ ಅವರು

ಮತಪತ್ರಗಳನ್ನು ಜೂನ್ ಮೊದಲನೇ ವಾರದ ಸುಮಾರಿಗೆ ಪರಿಷತ್ತಿನ ಕಚೇರಿಯಿಂದ ರವಾನೆ ಮಾಡಲಾಗುವುದು.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

ದಿನಾಂಕ ೮–೨–೬೮ರಂದು ಪರಿಷತ್ತಿನಲ್ಲಿ ನಡೆದ ಎ. ಆರ್. ಕೃ. ಸಂತಾಪಸೂಚಕ ನಿರ್ಣಯ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರೂ, ಕನ್ನಡ ನಾಡಿನ ವಿದ್ವನ್ಮಣಿಗಳೂ, ಉದ್ದಾಮ ಸಾಹಿತಿಗಳೂ, ಶ್ರೇಷ್ಠ ಸಂಶೋಧಕರೂ, ಆದರ್ಶಪ್ರಾಯರಾದ ವಿಮರ್ಶಕರೂ, ಹೈದರಾಬಾದು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆದ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರು ದಿನಾಂಕ ೧–೨–೬೮ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದುದರಿಂದ ಕನ್ನಡ ನಾಡು ನುಡಿಗಳಿಗೆ ಅಪಾರ ನಷ್ಟವಾಗಿದೆ. ಅವರು ಅಧ್ಯಾಪಕರಾಗಿ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿರುವರಲ್ಲದೆ ತಾವು ಸ್ಥಾಪಿಸಿದ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಮೂಲಕವೂ ಸಂಘದ ಆಶ್ರಯದಲ್ಲಿ ತಾವೇ ಪ್ರಾರಂಭಮಾಡಿದ ಪ್ರಬುದ್ಧ ಕರ್ನಾಟಕದ ಮೂಲಕವೂ ಕನ್ನಡ ಭಾಷೆ, ಸಾಹಿತ್ಯಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಶ್ರೀ ರಾಮಕೃಷ್ಣಪರಮಹಂಸರ ಚರಿತ್ರೆ, ಸ್ವಾಮಿ ಶಿಷ್ಯಸಂವಾದ, ನಾಗಮಹಾಶಯ, ಭಾಸಕವಿ, ಸಂಸ್ಕೃತ ನಾಟಕ, ವಚನ ಭಾರತ, ಬಂಕಿಮಚಂದ್ರ, ನಿರ್ಮಲ ಭಾರತೀ–ಮುಂತಾದ ಗ್ರಂಥಗಳನ್ನು ಪ್ರಕಟಿಸಿ, ಶ್ರೇಷ್ಠ ಗ್ರಂಥಕರ್ತರೆನಿಸಿಕೊಂಡ ಅವರು ಅನೇಕ ಗ್ರಂಥಕರ್ತರನ್ನು ಪ್ರೋತ್ಸಾಹಿಸಿ ಬೆಳಕಿಗೆ ತಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ ಕನ್ನಡ ಕನ್ನಡ ನಿಘಂಟಿನ ಪ್ರಥಮ ಸಂಪಾದಕರಾಗಿ ಅವರು ಪರಿಷತ್ತಿಗೆ ಸಲ್ಲಿಸಿರುವ ಸೇವೆ ಅಮೋಘವಾದುದು. ಕನ್ನಡದ ಸ್ಥಾನಮಾನಗಳನ್ನು ಕಾಪಾಡುವುದರಲ್ಲಿ ಅವರು ತಳೆದಿದ್ದ ದಿಟ್ಟತನದ ಸ್ಫೂರ್ತಿದಾಯಕವಾದ ನಿಲವು ಕನ್ನಡಿಗರಿಗೆಲ್ಲ ಎಂದೆಂದಿಗೂ ಮಾರ್ಗದರ್ಶಕವಾಗಿರತಕ್ಕದ್ದು.

ಹೀಗೆ ಕನ್ನಡ ನಾಡು ನುಡಿಗಳಿಗೆ ಬಹುಮುಖವೂ ಸತ್ವಪೂರ್ಣವೂ ಆದ ಸೇವೆ ಸಲ್ಲಿಸಿದ ಡಾ|| ಕೃಷ್ಣಶಾಸ್ತ್ರಿಗಳ ನಿಧನಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸೇರಿರುವ ಈ ಸಭೆ ತನ್ನ ಅಪಾರ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಮತ್ತು ಭಗವಂತನು ದಿವಂಗತರ ಆತ್ಮಕ್ಕೆ ಸದ್ಗತಿಯನ್ನು ದಯಪಾಲಿಸಲೆಂದೂ, ಅವರ ಕುಟುಂಬ ವರ್ಗಕ್ಕೆ ಅವರ ನಿಧನದಿಂದಾಗಿರುವ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲೆಂದೂ ಈ ಸಭೆ ಪ್ರಾರ್ಥಿಸುತ್ತದೆ.

'ಕನ್ನಡ ನುಡಿ'ಯ ಬಸವಸಂಚಿಕೆ

'ಕನ್ನಡ ನುಡಿ'ಯ ಜೂನ್ ಮತ್ತು ಜುಲೈ ಸಂಚಿಕೆಗಳು ಬಸವಸಂಚಿಕೆಯಾಗಿ ಪ್ರಕಟವಾಗಲಿದೆ. ಲೇಖಕರಿಂದ ಲೇಖನಗಳನ್ನು ಪ್ರಾರ್ಥಿಸಲಾಗಿದೆ.

ಸಂಪಾದಕ : 'ಕನ್ನಡ ನುಡಿ'

ಎ. ಆರ್. ಕೃ.

ಹಿಂದೊಮ್ಮೆ ನಾನು ಶ್ರೀ ಕೃಷ್ಣಶಾಸ್ತ್ರಿಗಳ ಬಗ್ಗೆ ಬರೆಯುತ್ತಾ ನನ್ನ ಲೇಖನಕ್ಕೆ "ವಚನಭಾರತ ವಚನವ್ಯಾಸ" ಎಂದು ಹೆಸರು ಕೊಟ್ಟಿದ್ದೆ. ನನ್ನ ದೃಷ್ಟಿಯಲ್ಲಿ ಅವರು ಕನ್ನಡ ಗದ್ಯ ಶೈಲಿಗೆ ವ್ಯಾಸರಿದ್ದಂತೆಯೇ. ನಿಷ್ಕೃಷ್ಟವಾದ ವಿದ್ವತ್ತಿಗೆ ಕೃಷ್ಣಶಾಸ್ತ್ರಿಗಳು ಸಜೀವ ದೃಷ್ಟಾಂತವಾಗಿದ್ದರು. ನಗು ಇವರಿಗೆ ಅಪರಿಚಿತವೇನೋ ಎನ್ನುವಂಥ ಬಹಿರಂಗದ ಹೊದಿಕೆಯೊಳಗೆ ಇಂಥ ಮೃದು ಮನಸ್ಸಿನ ಸರಸಿ ಇನ್ನಾರಿದ್ದಾರೆ ಎನ್ನುವಂಥ ಸೌಭಾಗ್ಯವನ್ನೇ ಮುಚ್ಚಿಟ್ಟು ಸಾಮರ್ಥ್ಯದ ಪರಿಚಯ ಪಡೆದವರಿಗೆ ವಾತ್ಸಲ್ಯದ ಸ್ನೇಹದ ಅನಂತವಾದ ವರ್ಣರಂಜಿತ ಪ್ರಪಂಚವನ್ನೇ ತೆರೆದು ತೋರಿಸಿದ ಆಚಾರ್ಯರಾಗಿದ್ದರು, ಅವರು. ಕೃಷ್ಣನು ಬಾಯಿ ತೆರೆದಾಗ ಯಶೋದೆಗೆ ಹದಿನಾಲ್ಕು ಪ್ರಪಂಚವೇ ಕಾಣಿಸಿತಂತೆ. ನಮ್ಮ ಕೃಷ್ಣಶಾಸ್ತ್ರಿಗಳು ಶಾಸ್ತ್ರಗಳ ಬಗೆಗೆ ವ್ಯಾಖ್ಯಾನ ಮಾಡಿದಾಗ ಅಂಥ ನೂತನ ರಸಪ್ರಪಂಚ ಪರಂಪರೆಗಳು ಕೇಳುವವರ ಮನಸ್ಸಿಗೆ ಮೂಡುತ್ತಿದ್ದುವು.

ಶ್ರೀಯುತರು ಸ್ವತಃ ಗರುಡಿಯ ಮನೆಯಲ್ಲಿ ದೈಹಿಕ ವ್ಯಾಯಾಮದ ಅಭ್ಯಾಸ ಮಾಡುತ್ತಿದ್ದರು. ಕನ್ನಡಿಗರಿಗೆ ಇವರು ಎಲ್ಲ ಅರ್ಥದಲ್ಲಿ ಗರುಡಿಯಾಚಾರ್ಯರಾಗಿದ್ದರು. ಕನ್ನಡದ ಸಂಕಷ್ಟಗಳನ್ನೆಲ್ಲ ಎದುರಿಸಲು, ಗೆಲ್ಲಲು ಅವರಲ್ಲಿ ಸಿದ್ಧವಾದ ಪಟ್ಟುಗಳಿದ್ದುವು. ವಿದ್ವಾಂಸ, ಉದಾರಿ, ದೂರದರ್ಶಿ, ನಿಯಮಪಾಲಕ, ನಿರ್ದುಷ್ಟ ವಿಮರ್ಶಕ ಕೃಷ್ಣಶಾಸ್ತ್ರಿಗಳು ಕನ್ನಡಕ್ಕೆ ಮಾಡಿರುವ ಅನೇಕ ಉಪಕಾರಗಳಲ್ಲಿ ಅವರು ನಿರ್ಮಾಣ ಮಾಡಿರುವ ಕನ್ನಡದ ಶೈಲಿ ಮೊದಲ ಸ್ಥಳವನ್ನು ಆಕ್ರಮಿಸುತ್ತದೆ. "ಸಂಸ್ಕೃತ ಸಾಹಿತ್ಯಧರ್ಮಾರಣ್ಯದಲ್ಲಿ ಭಾಸಕವಿ ಪರಮೇಶ್ವರನನ್ನು ಸ್ತುತಿಸಿ ಸಂಸ್ಕೃತ ನಾಟಕ ದೇವಿಯರನ್ನು ಮೆಚ್ಚಿಸಿ, ವಚನ ಭಾರತವನ್ನು ಸಾಕ್ಷಾತ್ಕರಿಸಿಕೊಂಡು ಕನ್ನಡಕ್ಕೆ ಕಥಾಮೃತದ ಗದ್ಯ ಗಂಗೆಯನ್ನು ತಂದ ಭಗೀರಥರವರು." ಅವರ ಪುಣ್ಯಸ್ಮರಣೆಗೆ ಮೀಸಲಾಗಿರುವ ಕನ್ನಡ ನುಡಿಯ ಈ ಸಂಚಿಕೆಯು ಅವರ ನೆನಪನ್ನು ಸದಾ ಹೊಸತು ಮಾಡುತ್ತಿರಲೆಂದು ನಮ್ಮ ಹಾರೈಕೆ.

ಕರ್ನಾಟಕ ವಿಶ್ವವಿದ್ಯಾಲಯದ ಕಂಬನಿ

ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಕನ್ನಡ ಪ್ರಾಧ್ಯಾಪಕರೂ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಉದ್ದಾಮ ಪಂಡಿತರೂ ಹಿರಿಯ ಸಾಹಿತಿಗಳೂ ಆದ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳು ದಿ. ೧-೨-೧೯೬೮ರಂದು ದಿವಂಗತರಾದುದು ಕನ್ನಡ ಸಾರಸ್ವತ ಪ್ರಪಂಚಕ್ಕೆ ತುಂಬಿ ಬಾರದ ಹಾನಿಯಾಗಿದೆ. ಪ್ರಬುದ್ಧ ಕರ್ನಾಟಕ ಪ್ರಚಾರೋಪನ್ಯಾಸಮಾಲೆ ಕನ್ನಡ ಕನ್ನಡ ಕೋಶ ಮುಂತಾದುವೆಲ್ಲ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರಿಂದಲೇ ಸಂಸ್ಥಾಪಿತವಾದುವು. ಶ್ರೀಯುತರು ರಚಿಸಿದ ಸಂಸ್ಕೃತನಾಟಕ, ಭಾಸಕವಿ, ಬಂಗಾಲಿ ಕಾದಂಬರಿಕಾರ ಬಂಕಿಮಚಂದ್ರ ಚಟರ್ಜಿ, ವಚನಭಾರತ ಮುಂತಾದುವು ಕನ್ನಡ ಸಾಹಿತ್ಯದಲ್ಲಿ ಶಾಶ್ವತಕೃತಿಗಳೆನಿಸಿವೆ. ಇಂತಹ ಘನವಿದ್ವಾಂಸರು ಹಾಗೂ ಪುಣ್ಯಜೀವಿಗಳು ಕಣ್ಮರೆಯಾದುದರಿಂದ ಕನ್ನಡನಾಡು ತೀರ ಬಡವಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ ವಿದ್ಯಾರ್ಥಿಗಳೂ ತಮ್ಮ ಅತೀವ ದುಃಖವನ್ನು ವ್ಯಕ್ತಪಡಿಸುತ್ತಾರೆ. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

Reg. No. B. G. 4—APril-May 1968
Lincensed to Post without
pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮

ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಸಂಪಾದಕ ಮಂಡಲಿ
ಶ್ರೀನಿವಾಸರಾವ್ ಕೊರಟಿ
ಆರ್. ರಾಜಪ್ಪ

ಕನ್ನಡ ನುಡಿ

ಬಸವೇಶ್ವರ ಸಂಚಿಕೆ

ಜೂನ್–ಜುಲೈ ೧೯೬೮

ಸಂಪುಟ ೩೧
ಸಂಚಿಕೆ ೬–೭

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,
ಬೆಂಗಳೂರು-೧೮

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಜೂನ್–ಜುಲೈ ೧೯೬೮

ಸಂಪುಟ : ೩೧

ಸಂಚಿಕೆ : ೬–೭

ಈ ಸಂಚಿಕೆಯಲ್ಲಿ . . .

ತಿದ್ದುಪಡಿ : ೨೭ನೆಯ ಪುಟದಲ್ಲಿರುವ ಲೇಖಕರ ಹೆಸರು ಸಂಗಮನಾಥ ಜಿ. ಹಂಡಿ. 'ಶರಣ' ಎಂದು ತಪ್ಪಾಗಿ ಅಚ್ಚಾಗಿದೆ.

ಬಸವ ಮಾರ್ಗ

◆◆

ಬಸವನ ಮಾತೆ ಮಾತು
ಬಸವಣ್ಣನ ಭಕ್ತಿಯ ಓಜೆ ಯೋಜೆ ಕೇಳ್
ಬಸವನ ರೀತಿ ರೀತಿ
ಬಸವಣ್ಣನ ಕಿಂಕರ ವೃತ್ತಿವೃತ್ತಿ ಮೇಣ್
ಬಸವನ ಬಟ್ಟೆ ಬಟ್ಟೆ
ಬಸವಣ್ಣನ ಬಿಂಕದ ಭಾಷೆ ಭಾಷೆ ಹೋ
ಬಸವನ ನಿಷ್ಠೆ ನಿಷ್ಠೆ
ಬಸವಣ್ಣನ ನೇಮವೆ ನೇಮವುರ್ವಿಯೋಳ್ ೧

ಬಸವನ ಗೀತಿ ಗೀತಿ
ಬಸವಣ್ಣನ ನಿರ್ಮಲರೂಪುಕೇಳ್
ಬಸವನ ಗಾಡಿ ಗಾಡಿ
ಬಸವಣ್ಣನ ನಿರ್ಮಲ ಕೀರ್ತಿಕೀರ್ತಿ ಮೇಣ್
ಬಸವನ ಬುದ್ಧಿ ಬುದ್ಧಿ
ಬಸವಣ್ಣನ ಪುಣ್ಯದಲೀಲೆ ಲೀಲೆ ಹೋ
ಬಸವನ ರಕ್ಷೆ ರಕ್ಷೆ
ಬಸವಣ್ಣನ ಶಿಕ್ಷೆಯೆ ಶಿಕ್ಷೆ ಲೋಕದೊಳ್ ೨

ಬಸವನ ಪೆರ್ಮೆ ಪೆರ್ಮೆ
ಬಸವಣ್ಣನ ನೆಚ್ಚಿನ ಕೂರ್ಮೆ ಕೂರ್ಮೆ ಕೇಳ್
ಬಸವನ ಸೀಮೆ ಸೀಮೆ
ಬಸವಣ್ಣನ ಶೀತಳ ಶಾಂತಿ ಶಾಂತಿ ಮೇಣ್
ಬಸವನ ಜಾಣು ಜಾಣ್
ಬಸವದೇವನ ಭಾವದ ಕಾಣ್ಕೆ ಕಾಣ್ಕೆ ಹೋ
ಬಸವನ ಭಕ್ತಿ ಭಕ್ತಿ
ಬಸವಣ್ಣನ ಯುಕ್ತಿಯೆ ಯುಕ್ತಿ ಲೋಕದೊಳ್ ೩

■

ಹಂಪೆಯ ಹರಿಹರದೇವ

ಬಸವ ವಚನಾಮೃತ

ಟಿ. ಕೇಶವಭಟ್ಟ

□○□

ಬಸವಣ್ಣಂ ಶಿವಯೋಗದಿಂದರಿತು ಲೋಕೋದ್ಧಾರಮಂ ದಿವ್ಯವಾ
ಗ್ರಸದಿಂ ಪೇಳ್ದ ವಚಸ್ಸುಧಾಫಲದೆ ನೂರೆಂಟಾಯ್ದು ಛಂದಕ್ಕೆ ಯೋ
ಜಿಸಿ ವೃತ್ತಂಗಳೊಳೆಂದನೀ ಶತಕಮಂ ಬೇರಿಂತುಟಿಲ್ಲೆಂದು ವಾ
ಚಿಸಿ ಸಂತೋಷಿಸಲೆಂದು ಸಜ್ಜನಮನಸ್ಸಂಕಾಶವಂ ಕೇಶವಂ ॥

(ಶಾ.ವಿ.)

ಸಾರಂ ಸಜ್ಜನಸಂಗ ಕಾರ್ಯಮೆನಿಕುಂ, ಬೇಡಯ್ಯ, ದುಸ್ಸಂಗದಿಂ
ದೂರಂ ಸುಸ್ಥಿತನಾಗದಾವ ಫಣಿ ತಾನಾಗಿರ್ದೊಡಂ ನಂಜದೊಂ
ದೇರೂಪಂ ನಮುಗನ್ನರೊಳ್ ಕೆಳೆಯೆ ಬೇಡಂ, ಚಿತ್ತವಾಲಿನ್ನರಂ
ಸೇರಲ್ ಸಿಂಗಿಯ ಕಾಳಕೂಟ ವಿಷವಯ್ಯಾ ಕೂಡಲಾ ಸಂಗಮಾ ॥ ೧ ॥

ಕಲ್ಲಾ ನಾಗರ ಕಂಡು ಹಾಲನೆರೆಯೆಂಬರ್ ನೋಡಿ ನೈಜಾಹಿಯಂ
ಕೊಲ್ಲೆಂಬರ್ ಮೆಲ ಬಂದ ಜಂಗಮನ ಪೋಗೆಂದುಣ್ಣದಾ ಲಿಂಗಕಂ
ಮೆಲ್ಲೀ ಬೋನವನೆಂಬರೆಮ್ಮ ವಿಭು ಭಕ್ತಾಲಕ್ಷ್ಯಮಂ ಗೆಯ್ದವರ್
ಕಲ್ಲಂ ತಾಗಿದ ಮಣ್ಣ ಪೆಂಟೆಯ ತೆರಂ ಚೂರಾಗದೇನಿರ್ಪರೇ? ॥ ೨ ॥

(ಮ.ವಿ.)

ಕೊಲುವಂ ಮಾದಿಗನಾದಪಂ ಹೊಲಸನೊಳ್ಳಿತ್ತೆಂದು ತಿಂಬಾತನೇ
ಹೊಲೆಯಂ ಮೇಣ್ ಕುಲವೇನವಂದಿರ ಕುಲಂ ತಾನಿನ್ನದೇನಾದೊಡೇಂ?
ಕುಲಜರ್ ತಾಮೆನಿಪರ್ ವಿನಮ್ರಶರಣರ್ ಜೀವಾತ್ಮರೆಲ್ಲರ್ಗೆಯೊ
ಳ್ಳೊಲವಿಂ ನಿಚ್ಚದೆ ಲೇಸನೇ ಬಯಸುತಿರ್ಪಾ ಕೂಡಲಾ ಸಂಗನಾ ॥ ೩ ॥

ನುಡಿಯೊಳ್ ಸಂತತವಾಗಿ ನಾಮದಮೃತಂ ತಾಂ ತುಂಬಿ, ರಾಜಿಪ್ಪ ಕ
ಣ್ಣೆಡೆಯೊಳ್ ನಿಮ್ಮತು ಮೂರ್ತಿ ತುಂಬಿ, ಮನದೊಳ್ ನಿಮ್ಮೊಂದು ಸದ್ಧ್ಯಾನದು
ಗ್ಗಡಮೇ ತುಂಬಿ, ಕೊಡಂಕೆಯೊಳ್ ತವ ಯಶಂಗಳ್ ತುಂಬಿ, ಹೇ ಕೂಡಲಾ
ಒಡೆಯಾ! ಸಂಗಮದೇವ! ನಿಮ್ಮ ಚರಣಾಂಭೋಜಾತದೊಳ್ ತುಂಬಿಯಾಂ ॥ ೪ ॥

ಕರು ತಿಂದೆಂಜಲೆನಿಪ್ಪುದರ್ಪಿಸುವ ಪಾಲ್, ನೀರೆಂಬುದಾ ವಾರಿಸಂ
ಚರ ಮತ್ಸ್ಯಂಗಳಿನೆಂಜಲಾಗಿಹುದು, ಪುಷ್ಪಂ ತುಂಬಿಯೆಂಜಲ್, ಶಿವೇ
ಶ್ವರ! ಪೂಜಿಪ್ಪೆನದೆಂತುಟೆಂಜಲನೆ ನಾಂ ಕೈಮೀರಲಾರೆಂ ದಯಾ
ರಸದಿಂ ಸ್ವೀಕರಿಸೆನ್ನ ಕೊಟ್ಟುದನೆ ದೇವಾ ಕೂಡಲಾ ಸಂಗಮಾ ॥ ೫ ॥

ಶಿವನಂ ನಾದಕೊರಲ್ವನೆಂದೆನುತುಮಾ ವೇದಪ್ರಿಯಂ ತಾನೆನು
ತ್ತವೆ ಪೇಳ್ವರ್ ಶಿವನಂತುಟಲ್ತು ದಶಕಂಠಂ ನಾದವಂ ಗೆಯ್ದೊಡಾ
ಯುವದರ್ಧಕ್ಕಿಳಿದತ್ತು ವೇದಮತಿ ಧಾತ್ರಂ ನಷ್ಟಮಾಸ್ತಿಕ್ಯನಾ
ದವನಂತಾ ಪರಿ ನಾದವೇದಕೊಲಿಯಂ ಭಕ್ತಿಪ್ರಿಯಂ ಸಂಗಮಂ ॥ ೬ ॥

ಅರಿಯೆಂ ಪೂಜಿಸಲರ್ಚಿಸಲ್ಕೆ ಶಿವರಾತ್ರಿವ್ರಾತಮಂ ನಿಚ್ಚವಾ
ಚರಿಸಲ್ಕಾರೆನು, ಕಾವಿ ವೇಷದೊಳೆ ಬಂದಾಡುತ್ತಿಹೆಂ ನಿಮ್ಮ ದಾ
ಸರ ದಾಸೀಜನ ದಾಸನಯ್ಯ! ತವ ಭಕ್ತಾವಾಸದಲ್ಲಿರ್ಪ ಕಾ
ಲ್ಮರುಕಂ ಲಾಂಛನಧಾರಿಯುಪ್ಪುದರ ಪೋಷೋದ್ದೇಶನಾಂ ಸಂಗಮಾ ॥ ೭ ॥

ಬಸವೇಶ್ವರ ಚರಿತ್ರೆ

ಕೆಲವು ಸಮಸ್ಯೆಗಳು ಮತ್ತು ಶಾಸನಾದಿ ಆಧಾರಗಳಿಂದ ಅವುಗಳಿಗೆ ಪರಿಹಾರಗಳು

ಟಿ. ಎಸ್. ಮಲ್ಲಪ್ಪ

ಮಹಾತ್ಮ ಗಾಂಧೀಜಿಯವರು ೧೯೨೪ರ ಬೆಳಗಾವಿ ಕಾಂಗ್ರೆಸ್ಸಿನ ೩೯ನೆಯ ಅಧಿವೇಶನದಲ್ಲಿ ಹೀಗೆ ಉದ್ಗಾರ ತೆಗೆದಿದ್ದಾರೆ: 'ಹಿಂದಿನ ಕಾಲದಲ್ಲಿ ಎಂಟುನೂರು ವರ್ಷಗಳ ಆಚೆ ಬಸವೇಶ್ವರರು ಯಾವ ತತ್ತ್ವ ಆಚರಿಸಿ, ಉಪದೇಶ ಮಾಡಿದರೋ, ಅಷ್ಟೆಲ್ಲ ತತ್ತ್ವ ನನಗೆ ಆಚರಿಸಲಿಕ್ಕೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ತ್ವಗಳನ್ನು ನಾನು ಆಚರಿಸುತ್ತಲಿದ್ದೇನೆ. ಸಾಧಕ ಸ್ಥಿತಿಯಲ್ಲಿದ್ದೇನೆ; ಸಿದ್ಧನಲ್ಲ. ಆದರೆ ಬಸವಣ್ಣನವರು ಹೇಳಿದ ತತ್ತ್ವಗಳನ್ನೆಲ್ಲ ಆಚರಣೆಯಲ್ಲಿ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾ ನಿವಾರಣೆ, ಕಾಯಕತತ್ತ್ವ ಬಹು ಮುಖ್ಯವಾದುವು. ಯಾವುದೇ ಪ್ರಕಾರದ ಜಾತಿಭೇದ ಅವರಲ್ಲಿ ಕಂಡುಬರುವುದಿಲ್ಲ. ಈ ಕಾಲದಲ್ಲಿ ಅವರು ಇರುತ್ತಿದ್ದರೆ ಜಗತ್ತಿಗೇ ಪೂಜ್ಯ ವ್ಯಕ್ತಿಯಾಗಿ ಪರಿಣಮಿಸುತ್ತಿದ್ದರು. ಆ ಧರ್ಮಾನುಯಾಯಿಗಳಾದ ನಾವು ಅವರು ಉಪದೇಶಿಸಿದ ತತ್ತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತ ಭೂಮಿಯನ್ನಷ್ಟೇ ಏಕೆ ಜಗತ್ತನ್ನೇ ಉದ್ಧಾರಮಾಡಬಲ್ಲಿರಿ.' ಮಹಾತ್ಮಾಜಿಯವರ ಅಭಿಪ್ರಾಯವೇ ಹೀಗಿತ್ತೆಂದಮೇಲೆ ಸುಪ್ರಸಿದ್ಧ ಕವಯತ್ರಿಯರಾದ ಸರೋಜನೀದೇವಿಯರು ಬಸವಣ್ಣನವರು ಉದ್ಧರಿಸಿದ 'ವೀರಶೈವ ಧರ್ಮವು ಸರ್ವಸೌಹಾರ್ದ್ರಭಾವಾದಿ ಉದಾತ್ತ ತತ್ತ್ವಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದು ವಿಶ್ವಧರ್ಮವಾಗಲು ತಕ್ಕುದು'–ಎಂದು ಘೋಷಿಸಿದುದರಲ್ಲಿ ಆಶ್ಚರ್ಯವೇನಿದೆ?

ಅಸ್ಪೃಶ್ಯೋದ್ಧಾರ, ಹಿಂದೂ ಮಹಮದೀಯರ ಸೌಹಾರ್ದ, ಅಹಿಂಸೆ ಮೊದಲಾದವುಗಳನ್ನು ನುಡಿಯಿಂದ ನಡೆಗೆ ತರಲು ಪ್ರಯತ್ನಿಸಿದ ಮಹಾತ್ಮಾಜಿಯವರು ಈಗಿನ ಕಾಲದಲ್ಲಿ ಹಾಗೆ ಮಾಡಿದುದಕ್ಕಾಗಿ ಪ್ರಾಣಾರ್ಪಣೆಮಾಡಬೇಕಾಯಿತೆನ್ನುವಾಗ, ಅಸ್ಪೃಶ್ಯ ವರನಿಗೆ ಬ್ರಾಹ್ಮಣ ಕನ್ಯೆಯನ್ನು ವಿವಾಹ ಮಾಡಿಸುವಷ್ಟು ಮುಂದೆ, ನುಡಿಯನ್ನು ನಡೆಗೆ ಬಸವಣ್ಣನವರು ತಂದರೆಂದರೆ, ಅವರು ಈ ಸತ್ಕಾರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಬೇಕಾಯಿತೆಂಬುದರಲ್ಲಿ ಅಸಂಭವವಾದುದೇನೂ ಇಲ್ಲ. ಆದರೆ ಪರಮತೀಯನೆಂದು ನಂಬಲ್ಪಟ್ಟ ಬಿಜ್ಜಳನ ಕೈಕೆಳಗೆ ಅಧಿಕಾರಿಯಾಗಿದ್ದು, ಆ ರಾಜನು ಈ ಧರ್ಮಕಾಂತಿಗೆ ವಿರುದ್ಧನಾಗಿದ್ದನೆಂದ ಮೇಲೆ ಬಸವೇಶನು ಧರ್ಮಕ್ರಾಂತಿಯನ್ನು ಮಾಡಲು ಹೇಗೆ ಸಾಧ್ಯವಾಯಿತು? ಬಸವೇಶ್ವರನು ಲಿಂಗಧಾರಿಗಳ ಹೊಟ್ಟೆಯಲ್ಲಿ ಹುಟ್ಟಿದನೆ? ಇಲ್ಲವೇ ಲಿಂಗಧಾರಣೆಯು ಸಾಮಾನ್ಯವಾಗಿ ನಂಬಲ್ಪಟ್ಟಿರುವಂತೆ, ಅವನಿಂದಲೇ ಪ್ರಾರಂಭ ಮಾಡಲ್ಪಟ್ಟಿತೆ? ದಿನಾಂಕ ೧೫-೬-೧೯೬೮ರ 'ಸಾವಧಾನ' ಪತ್ರಿಕೆಯಲ್ಲಿ ಎತ್ತಿರುವ ಪ್ರಶ್ನೆಯಂತೆ–'ಭೀಮಕವಿ ಹರಿಹರ ಇಬ್ಬರೂ ತಪ್ಪುಮಾಡಿರುವರೆಂದೆನಿಸುತ್ತದೆ. ಏಕೆಂದರೆ ಜಾತವೇದ ಮುನಿಯು, ಬಸವೇಶನೊಬ್ಬನಿಗೇ ಲಿಂಗವ ಧರಿಸಿ, ಮನೆಯಲ್ಲಿ ಉಳಿದವರಿಗೆ ಲಿಂಗಧಾರಣ ಮಾಡದಿದ್ದುದರಿಂದ ಒಂದೇ ಮನೆಯಲ್ಲಿ ಭಕ್ತಭವಿಗಳಲ್ಲಿ ಬಳಕೆ ಹೇಗಾಗುತ್ತದೆ.' ಸ್ವಾಮಿ ವಿರೂಪಾಕ್ಷ ಒಡೆಯರು ವೀರಶೈವ ಕರದರ್ಪಣದಲ್ಲಿನ ಅವರ ಲೇಖನದಲ್ಲಿ 'ಲಿಂಗಾಂಗಿಧರ್ಮದ ಶ್ರೇಷ್ಠತ್ವವನ್ನು ತೋರಿಸುವುದಕ್ಕಾಗಿಯೇ ಈತನು ಅಲಿಂಗಿ ಬ್ರಾಹ್ಮಣರ ಹೊಟ್ಟೆಯಲ್ಲಿ ಜನ್ಮವ ತಾಳಿ ಮುಂದೆ ಲಿಂಗಧಾರಿಯಾದನು' ಎಂದಿದ್ದಾರೆ. ಬಿ. ಎಸ್. ಕುಲಕರ್ಣಿಯವರು ವೀರಶೈವ ತ್ರೈಮಾಸಿಕದಲ್ಲಿ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ: "ಬಸವ ಬಿಜ್ಜಳರ ನಡುವೆ ಯಾವ ರೀತಿಯ ಸಂಬಂಧವಿದ್ದಿತು? ಬಿಜ್ಜಳನ ಅಂತ್ಯ ಹೇಗಾಯಿತು? ಬಿಜ್ಜಳನ ಮತ ಯಾವುದು? ಇವೇ ಮೊದಲಾದ ವಿಷಯಗಳು ಇನ್ನೂ ಸಂಶೋಧಕರ ಒಗಟುಗಳಾಗಿಯೇ ಉಳಿದಿವೆ . . . ಬಸವ ಬಿಜ್ಜಳರ ಸಂಬಂಧ ಅರಸು ಮಂತ್ರಿಗಳಲ್ಲಿ ಇರಬೇಕಾದ ಸೌಹಾರ್ದತೆ. ಪ್ರೀತಿವಿಶ್ವಾಸಗಳಿಂದ ಕೂಡಿದಂತೆ ವರ್ಣಿತವಾಗಿರದೆ, ಅದು ಯಾವಾಗಲೂ ತಿಕ್ಕಾಟಗಳಿಂದ ಕೂಡಿದ್ದಾಗಿಯೇ ಇತ್ತೇನೋ ಎನ್ನುವಂತೆ ನಿರೂಪಿಸಲ್ಪಟ್ಟಿದೆ. ಅದರ ನಿಜ

ವಾದ ಸಂಗತಿಗಳು ಪುರಾಣಗಳಲ್ಲಿ ಸರಿಯಾಗಿ ಬಂದಿಲ್ಲ ವೇನೋ ಎಂದು ಬಸವ ಬಿಜ್ಜಳರ ಅರ್ಥಾತ್ ಕಳಚೂರ್ಯರ ಇತಿಹಾಸ ಸಂಶೋಧನೆ ನಡೆದಮೇಲೆ ಗೊತ್ತಾಗಿದೆ." ಈ ವಿಷಯಗಳಮೇಲೆ ಶಾಸನಾದಿ ಆಧಾರಗಳಿಂದ ಬೆಳಕನ್ನು ಬೀರಲಾಗುವುದು.

ಬಸವ ಪೂರ್ವ ಲಿಂಗಿಬ್ರಾಹ್ಮಣ ಪಾಶುಪತ ಮಾಹೇಶ್ವರರು

ಮೊದಲನೆಯದಾಗಿ ಬಸವೇಶ್ವರನ ಕಾಲಕ್ಕೆ ಹಿಂದೆ ಲಿಂಗ ಧಾರಿ ಧರ್ಮವಿದ್ದಿತೇ? ಅಥವಾ ಬಸವೇಶ್ವರನು ಲಿಂಗ ಧಾರಣ ಪದ್ಧತಿಯನ್ನು ಪ್ರಾರಂಭಿಸಿದನೆ? ಎಂಬ ಪ್ರಶ್ನೆಯು ಏಳುವುದು. ಕ್ರಿಸ್ತಶಕೆಯ ಪ್ರಾರಂಭದ ಶತಮಾನ ಗಳಲ್ಲಿ ಆಳಿದ ಪಲ್ಲವರಾಜರುಗಳಲ್ಲಿ ಕೆಲವರಿಗೆ **'ಶಿರಸಿ ಶಂಕರಂ', 'ಶಿವಶಿರಸಿಧಾರಯಿತಾ', 'ಶಿವಚೂಡಾ ಮಣಿ'** ಮೊದಲಾದ ಬಿರುದುಗಳಿದ್ದುದಕ್ಕೆ ಶಾಸನಾಧಾರ ಗಳಿರುವುದರಿಂದ ಲಿಂಗಧಾರೀ ಧರ್ಮವು ಬಸವೇಶ್ವರನ ಕಾಲಕ್ಕಿಂತ ಬಹು ಹಿಂದಿನಿಂದ ಇದ್ದಿತೆಂಬುದರಲ್ಲಿ ಸಂದೇಹ ವಿಲ್ಲ. ವಾಯಲೂರಿನ ರಾಜಸಿಂಹನ ಶಾಸನ ವಿಷಯ ವಾಗಿ (Ep. Ind. Vol. 18) ಶಾಸನ ಸಂಶೋಧಕರಾದ ಎಚ್. ಕೃಷ್ಣಶಾಸ್ತ್ರಿಗಳು ಬರೆದಿರುವ ಲೇಖನವು ಗಮ ನಾರ್ಹವಾಗಿದೆ :

The adjunct ಮಾಹೇಶ್ವರ ಶಿಖಾಮಣಿ ದೀಪ್ತಿಮೌಲಿಃ which occurs in these verses and which literally rendered means one whose diadem shines with the headijewel viz Mahesvara (siva) is rather perplexing. Comparing this with titles like ಶಿವ ಚೂಡಾಮಣಿ etc. which occurs in south Indian Inscriptions Vol. I, No. 18 and 19 . . . all with reference to Rajasimha, it looks as if the king did actually wear a figure of siva or rather his symble linga on his head . . . All these references clearly point to the existance of a linga cult long before the revival of the Veerasaiva faith under the auspicies of the famous Kalachuri Minister Basava (Channa-basava) in which the wearing of Linga plays a prominent part.

ಶ್ರೀ ರಾಮಾನುಜಾಚಾರ್ಯರು ಕ್ರಿ. ಶ. ೧೧೩೭ರ ವರೆಗೆ ಬದುಕಿದ್ದರಾಗಿ ಕೆಲವು ಕಾಲದವರೆಗಾದರೂ ಅವರೂ ಬಸವೇಶ್ವರನೂ ಸಮಕಾಲೀನರಾಗಿದ್ದರೆನ್ನಬಹುದು. ಶ್ರೀ ಮಧ್ವಾಚಾರ್ಯರು ಹದಿಮೂರನೆಯ ಶತಮಾನದ ಆದಿ ಭಾಗದಲ್ಲಿದ್ದವರು. ಆದುದರಿಂದ ಈ ಆಚಾರ್ಯರುಗಳ ಪಂಥಗಳು ಬ್ರಾಹ್ಮಣರಲ್ಲಿ ವಿಂಗಡಗೊಂಡು ತ್ರಿಮತಸ್ಥ ರೆನ್ನುವ ವಿಭಾಗಗಳು ರೂಪುಗೊಂಡುದು ಹದಿನಾಲ್ಕನೆಯ ಶತಮಾನದಲ್ಲಿಯೇ ಎನ್ನಬಹುದು. ಅಂತು ಬಸವೇಶ್ವರ ಪೂರ್ವಯುಗದಲ್ಲಿ ಬ್ರಾಹ್ಮಣರೆಲ್ಲರೂ ಸ್ಮೃತಿಯನ್ನು ಅನು ಸರಿಸುತ್ತಿದ್ದ ಸ್ಮಾರ್ತರೇ. ಇವರಲ್ಲಿ ವೈಷ್ಣವರು ಪಾಂಚ ರಾತ್ರಾಗಮಾನುಯಾಯಿಗಳಾಗಿದ್ದರು. ಶೈವರು ಪಾಶು ಪತಾಗಮಾನುಯಾಯಿಗಳಾಗಿದ್ದರು. ಈ ಪಾಶುಪತ ಮಾಹೇಶ್ವರರು ಕೂರ್ಮಪುರಾಣವು ರಚಿತವಾದ ಕಾಲದಲ್ಲಿ ಮೂರು ಪಂಥದವರಾಗಿದ್ದುದು ಆ ಪುರಾಣದಿಂದ ತಿಳಿಯು ತ್ತದೆ :

> "ತಾಂತ್ರಿಕಂ ವೈದಿಕಂ ಮಿಶ್ರಂ ತ್ರಿಧಾಪಾಶುಪತಂ ಶುಭಂ
> ತಪ್ತಲಿಂಗಾಂಕ ಶೂಲಾದಿಧಾರಣಂ ತಾಂತ್ರಿಕಂ ಮತಂ
> ಲಿಂಗರುದ್ರಾಕ್ಷಿ ಭಸ್ಮಾದಿ ಧಾರಣಂ ವೈದಿಕಂ ಭವೇತ್
> ರವಿಂ ಶಂಭುಂ ತಥಾಶಿಕ್ತಿ ವಿಘ್ನೇಶಂಚ ಜನಾರ್ಧನಂ
> ಯಜಂತಿಸಮಭಾವೇನ ಮಿಶ್ರಂ ಪಾಶುಪತಂ ಶುಭಂ."

ಕೂರ್ಮಪುರಾಣದ ಶ್ಲೋಕದಲ್ಲಿ ಹೇಳಿರುವ ವೈದಿಕ ಪಾಶುಪತವೆಂದರೆ ಲಕುಳೀಶ ಪಾಶುಪತರೆಂಬ, ಡಾ|| ಪಾಠಕ್‌ರ 'Siva cultsin Northern India' ಗ್ರಂಥದ ಅಭಿಪ್ರಾಯವು ಒಪ್ಪತಕ್ಕುದೇ. ಏಕೆಂದರೆ ಲಕುಳೀಶನಿಂದ ಹಿಡಿದು ಭಾಷ್ಯಕಾರ ಶ್ರೀಕಂಠನ ಗುರು ಶ್ವೇತಾಚಾರ್ಯರ ವರೆಗೆ ಗುರುಪರಂಪರೆಯನ್ನು ಹೇಳುವ ಶಿವಮಹಾಪುರಾಣ ದಲ್ಲಿ ಹೇಳಿರುವ ಹಾಗೆ, ಪಾಶುಪತ ವ್ರತವನ್ನು ಆಜೀವ ಪರ್ಯಂತ ಆಚರಿಸುವುದರಿಂದ ಮೋಕ್ಷವಾಗುವುದೆಂದು ಶ್ರೀಕಂಠಭಾಷ್ಯದಲ್ಲಿ ಹೇಳಿದೆ. ಆಜೀವಪರ್ಯಂತ ಆಚರಿಸುವ ದೆಂದರೆ ಮೋಕ್ಷಾಪೇಕ್ಷಿಗಳಾದ ನಿವೃತ್ತರು. **"ಕರಪೂಜಾ ನಿವೃತ್ತಾನಾಂ . . . ಪೂಜಾಕೃತ್ಯತ್ವಾಥತಲ್ಲಿಂಗಂ ಶಿರ ಸಾಧಾರಯೇತ್‌ಸದ್** ಎಂದು ಶಿವಮಹಾ ಪುರಾಣದಲ್ಲಿ ಹೇಳಿದೆ. ಪಾಶುಪತ ಸೂತ್ರಗಳ ಮೊದಲನೆಯ ಅಧ್ಯಾಯ ದಲ್ಲಿಯೇ **'ಲಿಂಗಧಾರೀ'** ಎಂಬ ಸೂತ್ರವಿದೆ. ಇದರ ಕೌಂಡಿನ್ಯ ಭಾಷ್ಯದಲ್ಲಿ **ಲೀಯನಾಲ್ಲಿಂಗನಾಚ್ಚಲಿಂಗಂ ತದ್ಧರಯನ್ ಲಿಂಗಧಾರೀಭವತಿ, ದಂಡಧಾರಿ ವದಿತ್ಯರ್ಥಃ** ಎಂದು ಹೇಳಿದೆ. ದಂಡವನ್ನು ಧರಿಸಿದವರನು ದಂಡಧಾರಿ ಎನ್ನುವಂತೆ ಲಿಂಗವನ್ನು ಧರಿಸಿದವರು ಲಿಂ ಧಾರಿ ಎಂದು ಲಿಂಗಧಾರಿ ಪಡೆದ ಅರ್ಥ ಬರೆದಿರುವರು ಡಾ|| ಭಂಡಾರ್ಕರರು ಪಾಶುಪತರನ್ನು ಲಿಂಗಧಾರಿಗಳೆನ

ವುದಕ್ಕೆ ಪಾಶುಪತ ಸೂತ್ರವಿದರ ಆಧಾರವಿದೆ. **'ಪಾಷಾಣ ಲಿಂಗಂಚಧಾರಿಣಃ ಜಂಗಮಾಃ; ಲಲಾಟೇ ಭುಜದ್ವಯೋಃ ಹೃನ್ನಾಭಿಷುಲಿಂಗಧಾರಿಣಃ ಪಾಶುಪತಾಃ'** ಎಂದು ಶಂಕರವಿಜಯದಲ್ಲಿ ಹೇಳಿದೆ. ಪಂಪನ ಆದಿಪುರಾಣದಲ್ಲಿ (ಕ್ರಿ. ಶ. ೯೪೧) **'ಕುಲಿಂಗಿಗಳು ಜಗಂ ಸೇವಿಸುಗಂ'** ಎಂಬ ಅಸಮಾಧಾನದ ಮಾತಿದೆ. ಜಿನಸೇನನ ಮಹಾಪುರಾಣ (ಕ್ರಿ. ಶ. ೭೮೩) ಕುಲಿಂಗಿಗಳ ವಿಷಯವಿದೆ. ಕ್ರಿ. ಶ. ೫೦೦ರಿಂದ ೭೦೦ರ ಒಳಗೆ ರಚಿಸಲ್ಪಟ್ಟಿರುವುದೆಂಬ ವಡ್ಡಾರಾಧನೆಯಲ್ಲಿ **'ಪೊಲ್ಲಲಿಂಗಿಗಳ ನೆರ್ಚಕ್ಕುಂ'** ಎಂದೂ **'ಪೊಲ್ಲಲಿಂಗಿಗಳರಸರ್ಕಳಿಂ ಪೂಜಿಸೆ ಪಡೆವರ್'** ಎಂದೂ ವ್ಯಥೆಯಿಂದ ಹೇಳಲ್ಪಟ್ಟಿದೆ. ಕ್ರಿ.ಶ ೬-೭ರಿಂದ ೧ನೆಯ ಶತಮಾನದವರೆಗೆ ರಾಜಗುರುಗಳಾಗಿ ಪೂಜಿತರಾಗಿ, ವೇದವೇದಾಂಗಾದಿ ಸಕಲವಿದ್ಯೆಗಳನ್ನು ಕಲಿಸುವ ವಿದ್ಯಾಸಂಸ್ಥೆಗಳ ಸ್ಥಾನಪತಿಗಳಾಗಿದ್ದರೆಂದು ಶಾಸನಗಳಿಂದ ತಿಳಿದುಬರುವ ಪಾಶುಪತ ಗುರುಗಳನ್ನು ಪರಮತೀಯರು ತೆಗಳುವ ಮಾತುಗಳಿವು. ಕ್ರಿ.ಶ. ೧೧೧೩ನೆಯ ಇಸವಿಯ ಶಿಕಾರಿಪುರದ ೯೯ನೆಯ ಶಾಸನದಲ್ಲಿ (VII SK 99) ತಲೆಯಲ್ಲಿ ಲಿಂಗವನ್ನು ಧರಿಸಿದ ಶ್ರೀಕಂಠ ಯೋಗೀಶ್ವರನನ್ನು ಕುರಿತು **'ಈಶ್ವರಪಾದಾಬ್ಜಶೇಖರಂ ದೃಢತಪಃ ಸಂಪತ್ತಿ ಚಾಯಾಸ್ಪಯಂವರನಾಚಾರ್ಯ ಗುಣಾವಳಿ ವಿಳಸಿತಂ ಶ್ರೀಕಂಠಯೋಗೀಶ್ವರಂ'** ಎಂದು ಹೊಗಳಿದೆ. ಈ ಶಾಸನದ ಅಂತ್ಯದಲ್ಲಿರುವ **ಲಿಂಗಲಿಂಗಿಜನ ಸನ್ನಿಧಿಯೊಳ್** ಎಂಬ ಪದಗಳು ಗಮನಾರ್ಹವಾಗಿವೆ. ಆದುದರಿಂದ ಬಸವೇಶ್ವರ ಪೂರ್ವ ಪಾಶುಪತಶೈವ ಮಾಹೇಶ್ವರರಲ್ಲಿ ಲಿಂಗಧಾರಿಗಳಿದ್ದುದರಲ್ಲಿ ಸಂದೇಹವಿಲ್ಲ.

ಬಸವೇಶ್ವರನ ಮಾತಾಪಿತೃಗಳು ಲಿಂಗಿಬ್ರಾಹ್ಮಣಮಾಹೇಶ್ವರರು

ಅರ್ಜುನವಾಡ ಶಿಲಾಶಾಸನದಲ್ಲಿ **'ಬಾಗೆವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜನ ಮಹಿಮೆ'** ಹೇಳಿರುವುದರಿಂದ ಬಸವೇಶ್ವರನು ಬಾಗೆವಾಡಿಯಲ್ಲಿ ಮಾದಿರಾಜ ಮಾದಳಾಂಬೆಯ ಮಗನಾಗಿ ಹುಟ್ಟಿದನೆಂಬುದರಲ್ಲಿ ಸಂದೇಹಕ್ಕೆ ಕಾರಣವಿಲ್ಲ. ಆತನ ಹೆಸರಿನಲ್ಲೂ ಆತನ ತಂದೆಯ ಹೆಸರಿನಲ್ಲೂ ರಾಜನೆಂಬ ಪದವಿರುವುದರಿಂದಲೂ ತಂದೆ ಪುರವರಾಧೀಶ್ವರನೆಂದು ಹೇಳಿರುವುದರಿಂದ ಆತನು ಪ್ರತಿಷ್ಠಿತ ಕುಟುಂಬದಲ್ಲಿ ಜನಿಸಿದನು ಎಂಬುದೂ ಸ್ಪಷ್ಟ. ಕ್ರಿ.ಶ.೧೦೪೪ರಷ್ಟು ಹಿಂದಿನ ಹೊನ್ನವಾಡಿಯ ಶಾಸನದಲ್ಲಿ (No. 83 Bombay Karanatak Inscription Vol. I part I) **'ಬಾಗೆವಾಡಿಯ ಮಹಾಜನರಯ್ನೂರವರು ಮೀಥರ್ಮಮಂ ಪಾಲಿಸುವರ್'** ಎಂದೂ **'ಪಾಶುಪತ ಯೋಗಾಚಾರ್ಯರ್ ಜ್ಞಾನರಾಸಿ ವ್ಯಾಖ್ಯಾನ ದೇವರ... ಭೋಗಕ್ಕಂ ಚಂದ್ರಯ್ಯಭಟ್ಟರ್ ಪಡೆದು ಕುಡೆ'** ಎಂದೂ ಹೇಳಿರುವುದರಿಂದ ಬಾಗೆವಾಡಿಯು ಪಾಶುಪತ ಮಾಹೇಶ್ವರರ ಸ್ವಸ್ಥಾನಗಳಲ್ಲಿ ಒಂದಾಗಿತ್ತೆಂಬುದೂ ಸ್ಪಷ್ಟ. ಇದರ ಸಮೀಪ ಗ್ರಾಮವಾದ ಇಂಗಳವಾಡಿಯು ಪಾಶುಪತ ಮಹೇಶ್ವರರ ಅಗ್ರಹಾರವಾಗಿತ್ತೆಂದು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಬಸವೇಶ್ವರನು ಬೆಳೆದ ವಾತಾವರಣವಿದು. ಬಸವೇಶ್ವರನ ತಂದೆ 'ಕಮ್ಮೆಕುಲದಿಂದ ಮೆರೆದಿರ್ದ'ನೆಂದು ಹರಿಹರನು ಹೇಳಿದ್ದಾನೆ. ಹರಿಹರ ರಾಘವಾಂಕ ಪದ್ಮರಸರ ಕಾಲವನ್ನು ಕರ್ಣಾಟಕ ಕವಿಚರಿತ್ರೆಕಾರರು ಸುಮಾರು ಕ್ರಿ.ಶ. ೧೧೬೫ ಎಂದು ನಿರ್ಧರಿಸಿದ್ದಾರೆ. ಬಸವೇಶ್ವರನ ಜೀವಮಾನವ ಅಂತ್ಯಕಾಲವಿದು. ಕವಿಚರಿತ್ರೆಯಲ್ಲಿ ಹೇಳಿದಂತೆ-"ಸಕಲೇಶ ಮಾದರಸನು . . . ತಂದೆಯಾದ ಮಲ್ಲರಸನನ್ನು ಕಾಣಲು ಅವನು" ನೀನು ಇನ್ನೂ ಐವತ್ತು ವರ್ಷ ಭೂಲೋಕದಲ್ಲಿದ್ದು, ಕಲ್ಯಾಣದಲ್ಲಿ ಧರ್ಮಸಂಸ್ಥಾಪನಾರ್ಥವಾಗಿ ಹುಟ್ಟುವ ಬಸವನೊಡನೆ ಕಾಲವನ್ನು ಕಳೆಯಬೇಕು'-ಎಂದು ಮರಳಿ ಕಳುಹಿದನು. ಇವನ ಮಗ ಮಾಯಿದೇವನು ಅಂಬೆಯಲ್ಲಿದ್ದನು. ಇವನಿಗೆ ನರಸಿಂಹ ಬಲ್ಲಾಳನ ದಂಡನಾಯಕನಾದ ಕಮ್ಮೆಕುಲವಲ್ಲಭ ಗೌರವ್ವನ ಅಕ್ಕ ಮಂಗಳೆಯನ್ನು ಕೊಟ್ಟು ಮದುವೆ ಮಾಡಿದ್ದರು. ಇವರ ಮಗನೇ ಕೆರೆಯ ಪದ್ಮರಸನು." ಬಸವಾನುಯಾಯಿಯಾದ ಸಕಲೇಶಮಾದರಸನ ಮೊಮ್ಮಗ ಕೆರೆಯ ಪದ್ಮರಸನು ಕಮ್ಮೆಜಾತಿಯವನು. ರಾಘವಾಂಕನಿಗೆ ಅವನ ಸೋದರಮಾವನಾದ ಹರಿಹರನು ದೀಕ್ಷಾ ಗುರುವಾದರೆ, ಪದ್ಮರಸನು ಸಮಾಧಿಯನ್ನು ಕರುಣಿಸಿದ ಮೋಕ್ಷ ಗುರು. ಇವರೆಲ್ಲರೂ ಸಂಬಂಧಿಗಳು. ಕಮ್ಮೆಕುಲದವರು. ಬಸವಾನುಯಾಯಿಗಳಾದರೂ ಪಂಡಿತಾರಾಧ್ಯನಂತೆ ಜನಿವಾರವನ್ನು ತ್ಯಜಿಸದೆ ಲಿಂಗಯಜ್ಞೋಪಧಾರಿಗಳಾಗಿದ್ದವರು. ರಾಘವಾಂಕ ಚರಿತ್ರೆಯಲ್ಲಿ ಹೇಳಿದಂತೆ-ರಾಘವಾಂಕನಿಗೆ ಜಾತಕರ್ಮವನ್ನು ಮಾಡಲು **'ಶಿರದೊಳೆಸವ ಲಿಂಗದಿ ಯಜ್ಞಸೂತ್ರದಿಂ. . . ಹರೀಶ್ವರನಲ್ಲಿಗೈತಂದನು'** ಪದ್ಮರಾಜ ಪುರಾಣದಲ್ಲಿ ಹೇಳಿದಂತೆ ಪದ್ಮರಸನು **'ವರಯಜ್ಞಸೂತ್ರಮಂ ಶಕ್ತಿಯೋರುಗುಣಯುತ ಸೂತ್ರದೊಡನೆ ಕೂಡಿ'** ಶಿವಪೂಜೆ ಮಾಡಿದನು. ಆ ಪುರಾಣದ ಎರಡನೆಯ

ಸಂಧಿಯಲ್ಲಿ ಪದ್ಮರಸನಿಗೆ ಜನನವಾದ ಕೂಡಲೆ ಲಿಂಗ ಧಾರಣೆಯಾದುದನ್ನು ಹೇಳಿದೆ. ವಿರೂಪಾಕ್ಷ ಪಂಡಿತನು ಪದ್ಮರಸನನ್ನು '**ಪದ್ಮರಸನೆನಿಸುವ ಬ್ರಾಹ್ಮಣೋತ್ತಮಂ ವೀರಶೈವಾಚಾರ್ಯಂ**' ಎಂದು ಕರೆದಿದ್ದಾನೆ. ಆದುದ ರಿಂದ ಅಂದಿನ ಕಮ್ಮೆಕುಲದ ಬ್ರಾಹ್ಮಣರು ಲಿಂಗಯಜ್ಞೋಪವೀತವನ್ನು ಧರಿಸುವ ವೀರಶೈವ ಬ್ರಾಹ್ಮಣರು. ಕಮ್ಮೆ ಕುಲದ ಬಸವಣ್ಣನೂ ಅವನ ಜನ್ಮದಾತರೂ ಜನ್ಮತಃ ವೀರಶೈವ ಬ್ರಾಹ್ಮಣರೆಂಬುದು ಸ್ಪಷ್ಟ.

ಉಪನೀತನಾದ ಬಸವೇಶ್ವರನು ಜನ್ನಿವಾರಮಂ ತೆಗೆದು ಬಿಸುಟುದು

ಬಸವೇಶ್ವರನ ಅನೇಕ ವಚನಗಳಿಂದ ತಿಳಿದುಬರುವಂತೆ ಆತನು ವೇದೋಪನಿಷತ್ತುಗಳಲ್ಲಿ ಪರಿಣತನಾಗಿದ್ದನು; ಅಲ್ಲದೆ ಮೀಮಾಂಸಕನೊಬ್ಬನನ್ನು ಸೋಲಿಸಿದುದಕ್ಕೆ ಆಧಾರವುಂಟು. ಅಂದಿನ ವಾತಾವರಣದಲ್ಲಿ ಉಪನಯನ ವಿಲ್ಲದೆ ವೇದೋಪನಿಷತ್ತುಗಳ ಅಧ್ಯಯನ ಮಾಡಲು ಸಾಧ್ಯವಾಗುತ್ತಿರಲಿಲ್ಲ; ಯಜ್ಞಯಾಗಗಳಲ್ಲಿ ಹಿಂಸೆಯಿಂದ ಕಣ್ಣೀರಿಡುತ್ತಿದ್ದ ಹೋತನನ್ನು ನೋಡಿ, 'ವೇದವನೋದಿದವರ ಮುಂದೆ ಅಳು ಕಂಡೆಯಾ' ಎಂದು ಕಣ್ಣೀರಿಟ್ಟು ಯಜ್ಞಕಾರ್ಯದಲ್ಲಿ ಭಾಗವಹಿಸಲು ಅಧಿಕಾರವನ್ನು ಕೊಡುವ ಯಜ್ಞೋಪವೀತವನ್ನು ಹದಿನಾರನೆಯ ವರ್ಷ ದಲ್ಲಿ ಪರಿದುಬಿಸುಟುದಕ್ಕೆ ವಚನಗಳ ಆಧಾರವುಂಟು:

"ನಾನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯ"
"ಹಾರುವೆನಯ್ಯಾ ಶರಣಬರವ ಗುಡಿಕಟ್ಟಿ ಕೂಡಲಸಂಗಮ
ದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧನ
ಮಾಡಿದನಾಗಿ"
"ಕಟ್ಟಿದೆನೊರೆಯ ಬಿಟ್ಟೆ ಜನ್ನಿಗೆಯ."

ಕೂಡಲ ಸಂಗಮದಲ್ಲಿ ಧ್ಯಾನಾಧ್ಯಯನ

ಬಸವೇಶ್ವರನು, ಅಕ್ಕನಾಗಮ್ಮ ಅಳಿಯ ಚೆನ್ನ ಬಸವೇಶ್ವರರೊಡನೆ, ಕೂಡಲ ಸಂಗಮದಲ್ಲಿ ಕೆಲವು ಕಾಲ ಆಧ್ಯಾತ್ಮಿಕ ವಿದ್ಯಾಭ್ಯಾಸವನ್ನು ಮಾಡುತ್ತ ಧ್ಯಾನಾಧ್ಯಯನ ನಿರತನಾಗಿ ಇದ್ದುದರಲ್ಲಿ ಸಂದೇಹವಿಲ್ಲ: ಅವರ ಇಷ್ಟಲಿಂಗ ಗಳಿಗೆ ಸಂಗಮೇಶನ ಅಂಕಿತವನ್ನಿಟ್ಟುಕೊಂಡಿದ್ದುದೇ ಅದಕ್ಕೆ ಸಾಕ್ಷಿ. ಅಂದಿನ ವೈದಿಕಾದಿ ವಿದ್ಯಾಭ್ಯಾಸವು ದೇವಸ್ಥಾನ ಗಳಿಗೆ ಸೇರಿದ ಮಠಗಳ ಸ್ಥಾನಪತಿಗಳಾದ ಗುರುಗಳಿಂದ ನಡೆಸಲ್ಪಡುತ್ತಿದ್ದಿತು. ಹಿಂದೆ ಹೇಳಿದ, ಶಿರಸ್ಸಿನಲ್ಲಿ ಲಿಂಗ ವನ್ನು ಧರಿಸಿದ್ದ ಶ್ರೀಕಂಠ ಮುನೀಶ್ವರನಿದ್ದ ಕೇದಾರ ದೇವಸ್ಥಾನ ಮತ್ತು ಅದಕ್ಕೆ ಸೇರಿದ ಕೋಡಿ ಮಠದ ವರ್ಣನೆ ಯನ್ನು ಶಿಕಾರಿಪುರದ ೧೦೨ನೆಯ ಶಾಸನದಲ್ಲಿ ನೋಡ ಬಹುದು: "ನೈಷ್ಠಿಕ ಮುನಿ ಜನಾನುಷ್ಠಾನಾನುಷ್ಠಿತ ಸ್ಥಾನಮುಂ, ಸಾಂಗಯಜುಸ್ಸಾಮಾಥರ್ವಚತುರ್ವೇದ ಸ್ವಾಧ್ಯಾಯಸ್ಥಾನಮುಂ . . . ಧರ್ಮಶಾಸ್ತ್ರ, ಸಕಳ ಕಾವ್ಯ ನಾಟಕ ನಾಟಕಾದಿ ವಿವಿಧ ವಿದ್ಯಾಸ್ಥಾನಮುಂ" ಆಗಿದ್ದಿತು. ಆ ಮಠ. ಕೂಡಲ ಸಂಗಮವೂ ಇಂತಹ ವಿದ್ಯಾಕೇಂದ್ರ ವಾಗಿತ್ತೆಂಬುದು ಅಲ್ಲಿನ ಶಿಲಾ ಲೇಖನದಿಂದ ಕಂಡುಬರುವು ದಾಗಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡೈರೆಕ್ಟರ್ ಡಾ. ಪಿ. ಬಿ. ದೇಸಾಯಿಯವರು ಬಸವೇಶ್ವರ ಸ್ಮಾರಕ ಗ್ರಂಥದಲ್ಲಿ ಬರೆದಿದ್ದಾರೆ. ಕೂಡಲ ಸಂಗಮದ ಸ್ಥಾನಪತಿ ಗಳಾದ ಈಶಾನ ಗುರುಗಳ ಸಾನ್ನಿಧ್ಯದಲ್ಲಿ ಬಸವೇಶ್ವರರು ಹತ್ತು ಹನ್ನೆರಡು ವರ್ಷಗಳವರೆಗಾದರೂ, ಮುಂದೆ ಅವರು ಮಾಡಿದ ಧರ್ಮ ಸಂಸ್ಕರಣಕ್ಕೆ ತಕ್ಕ ಸಂಸ್ಕೃತಿಯನ್ನೂ ವಿದ್ವತ್ತನ್ನೂ ಪಡೆದಿರಬೇಕು. "ಹಿಂದೆ ಹನ್ನೆರಡು ವರ್ಷ ದಲ್ಲಿ ಚಿಂತೆಯಿಂದ ನಿಶ್ಚಿಂತವಾಯಿತ್ತು, ಕೂಡಲ ಸಂಗಮ ದೇವ ಕೃಪಾಮೂರ್ತಿಯಾದ ಕಾರಣ ಆನು ಬದುಕಿದೆನು." ಎಂಬ ಬಸವಣ್ಣನವರ ಉದ್ಗಾರ ಆ ಕಾಲಕ್ಕೆ ಅನ್ವಯಿ ಸುವುದು.

ಲಿಂಗಿಬ್ರಾಹ್ಮಣ ಮಾಹೇಶ್ವರಾನುಯಾಯಿ ಭಾವ ಬಿಜ್ಜಳರಾಯ

ಬಿಜ್ಜಳನು ಜೈನನೆಂಬ ಪ್ರತೀತಿಯನ್ನು ವಿದ್ವಾಂಸರು ಖಂಡಿಸಿದರೂ, ಅದು ಜನರ ಮನಸ್ಸಿನಲ್ಲಿ ಬೆಳೆದು ಉಳಿದು ನಿಂತಿದೆ. ಬಿಜ್ಜಳನು ಜೈನನಲ್ಲ, ಮಾತ್ರವಲ್ಲ; ಅವನು ಲಿಂಗಿ ಬ್ರಾಹ್ಮಣ ಮಾಹೇಶ್ವರಾನುಯಾಯಿಯೂ, ಬಸವೇಶ್ವರನ ಭಾವನೂ ಎಂದರೆ ಸಾಮಾನ್ಯವಾಗಿ ಆಶ್ಚರ್ಯವಾಗದಿರದು. ಬಿಜ್ಜಳನ ವಂಶದ ಮೂಲ ಪುರುಷ ರಾದ ಮಧ್ಯ ಭಾರತದ ಕಟಚ್ಚುರಿಗಳಲ್ಲಿ ಪ್ರಸಿದ್ಧನಾದ ಕೃಷ್ಣರಾಯನು ಅಭೋನದ ತಾಮ್ರಶಾಸನದಂತೆ (IX EP Ind 29) '**ಆಜನ್ಮನ ಏವ ಪಶುಪತಿ ಸಮಾಶ್ರಯ**'ನು. ಈತನ ಮಗ ಶಂಕರಗಣನೂ ಮೊಮ್ಮಗ ಬುದ್ಧರಾಜನೂ ವಡೇರಶಾಸನ (XII EP. Ind. 34) ದಲ್ಲಿ ಹೇಳಿರುವಂತೆ '**ಪರಮ ಮಹೇಶ್ವರರು.**' ದಾವಣಗೆರೆಯ ೪೨ನೆಯ (E.C. XI D G. 42) ಶಾಸನದಲ್ಲಿ ಹೇಳಿದಂತೆ ಕಳಚುರಿ ವಂಶದ ಬಿಜ್ಜಳನ ಮೂಲಪುರುಷ ಕೃಷ್ಣನು ಬ್ರಾಹ್ಮಣ

ಗರ್ಭಸಂಜಾತನು. ದೇಸಾಯಿ ಪಾಂಡುರಂಗರಾಯ ಸಂಪಾದಿತ ಶಾಸನೋಕ್ತವಾಗಿರುವಂತೆ ಬಿಜ್ಜಳನ ವಂಶವು **'ಈಶ್ವರಾಂಶವೆನಿಪುದು.'** ಹರಸೂರು ಭೋಗೇಶ್ವರ ದೇವಾಲಯದ ಶಾಸನದಂತೆ ಬಿಜ್ಜಳನ ತಾತನ ತಾತ ಬಿಜ್ಜನ ಮಗ ಕರ್ಣನ ಬಾಹುಬಲವು **'ಕೆಂತುನ್ವೈರಿ ಸುಲಬ್ಧ'**ವಾದುದು. ಇನ್ನು ಬಿಜ್ಜಳನ ಮಾತಾಮಹನಾದ ಆರನೆಯ ವಿಕ್ರಮಾದಿತ್ಯನ ತಂದೆ ಇಮ್ಮಡಿ ಸೋಮೇಶ್ವರನು ಶ್ರದ್ಧಾವಂತನಾದ ಶೈವನೆಂದು ಮೈಸೂರು ಗೆಜೆಟಿಯರಿನಲ್ಲಿ ಹೇಳಿದೆ. ಈ ಚಾಳುಕ್ಯರ ಕಾಲವು ಬೆಳಗಾವಿಯ ಪಾಶುಪತ ಗುರುಗಳ ಅತ್ಯುಚ್ಛ್ರಾಯ ಕಾಲ. ಕ್ರಿ.ಶ. ೧೧೧೩ನೆಯ ಶಾಸನದಲ್ಲಿ ಅಂದಿನ ಶ್ರೀಕಂಠ ಪಂಡಿತರು (E.C.VII SK. 99) ಶಾಸನದಲ್ಲಿ **'ಈಶ್ವರಪಾದಾಂಬುಜ ಶೇಖರಂ'** ಎಂದು ಹೊಗಳಲ್ಪಟ್ಟಿರುವುದರಿಂದ ಇವರು ಶಿರಸ್ಸಿನಲ್ಲಿ ಲಿಂಗವನ್ನು ಧರಿಸಿದವರು. (EC. VII SK 110 ಮತ್ತು 130) ನೆಯ ಶಾಸನಗಳಲ್ಲಿ ಭುವನೈಕಮಲ್ಲ ಚಾಳುಕ್ಯ ಚಕ್ರವರ್ತಿಯು **'ಪನ್ನಗರಾಜ ಭೂಷಣಪದಾಬ್ಜ ಶೇಖರಂ'** ಎಂದು ಮತ್ತೆ ಮತ್ತೆ ವರ್ಣಿಸಲ್ಪಟ್ಟಿರುವುದರಿಂದ ಈತನು ತಲೆಯಲ್ಲಿ ಲಿಂಗವನ್ನು ಧರಿಸಿದ್ದುದನ್ನು ಹೆಮ್ಮೆಯ ವಿಷಯವಾಗಿ ಭಾವಿಸಿದಂತೆ ಕಾಣುತ್ತದೆ. ಚಾಳುಕ್ಯರ ಇಮ್ಮಡಿಯ ಜಯಸಿಂಹನೂ ಆತನ ಪತ್ನಿ ಸುಗ್ಗಲೆಯೂ, ಪ್ರಸಿದ್ಧ ವಚನಕಾರನೂ ಶಿವಶರಣನೂ ಆದ ದೇವರ ದಾಸಿಮಯ್ಯನ ಶಿಷ್ಯರು. ಇವರು ಬಸವಪೂರ್ವ ಲಿಂಗಧಾರೀ ಧರ್ಮದ ಮಾಹೇಶ್ವರಾನುಯಾಯಿಗಳಾದುದರಿಂದ ವಾದಿರುದ್ರಗಣ ಲಕುಳೀಶ ಪಂಡಿತರ ಕಾಲಂಕರ್ಚಿ ದಾನ ಮಾಡಿದುದು ಶಿಕಾರಿಪುರದ ೧೦೩ನೆಯ ಶಾಸನದಿಂದ ತಿಳಿದುಬರುತ್ತದೆ. ಬಿಜ್ಜಳನ ಮಾತಾಮಹ ವಿಕ್ರಮಾದಿತ್ಯನ ಇನ್ನೊಬ್ಬ ಮಗಳ ಮಗನಾದ ಪೆಮ್ಮಡಿರಾಯನಿಗೆ **'ಮಹಾಮಹೇಶ್ವರ'** ಎಂಬ ಬಿರುದಿದ್ದಿತೆಂಬುದು, ಮಿಥಿಕ್ ಸೊಸೈಟಿ ಜರ್ನಲ್ Vol. V (1) ಪುಟ 26ರಲ್ಲಿ ಉಕ್ತವಾಗಿದೆ. ಇದೇ ಆಧಾರದಲ್ಲಿ ಕಂಡಂತೆ ಚಂದ್ರಭೂಷಣ ಪಂಡಿತರೆಂಬ ಗುರುಗಳು **'ಶಿವಪಾದಾಂಬುರುಹಶೇಖರಂ'** ಎಂದು ಹೊಗಳಲ್ಪಟ್ಟಿದ್ದಾರೆ. ಬಿಜ್ಜಳನ ಮಾತಮಹ ವಿಕ್ರಮಾದಿತ್ಯನ ಒಬ್ಬ ಪತ್ನಿ ಚೋಳರಾಜಕುಮಾರಿ. ಚೋಳರಾಜರು ಅತ್ಯಂತ ಶಿವಭಕ್ತರು. ರಾಜ ರಾಜ ಚೋಳನಿಗೆ **'ಶಿವಪಾದಶೇಖರ'** ಎಂಬ ಬಿರುದಿದ್ದಿತು. ಬಿಜ್ಜಳನು ತನ್ನ ಮಗನಾದ ಸೋವಿದೇವನನ್ನು **'ಸೋಮನಾಥಂ ಕುಡಲ್ ಪೆತ್ತುದ'**ರಿಂದ ಆ ಮಗನಿಗೆ **'ಸೋಮ ಮಹೇಶ್ವರೇಶ್ವರಂ'** ಎಂದು ಬಿರುದಿದ್ದುದೂ, ಬಿಜ್ಜಳನ ಮಗಳ ಮಗನಾದ ಬೊಪ್ಪರಸನಿಗೆ ಶಿವನ ವರದಿಂದ ಹುಟ್ಟಿದುದರಿಂದ ಸೋಮನೆಂದು ಹೆಸರಿಟ್ಟುದೂ ಶಿಕಾರಿಪುರದ ೨೩೩ನೆಯ ಶಾಸನದಿಂದ ತಿಳಿದುಬರುತ್ತದೆ. ಆದುದರಿಂದ ಕಳಚೂರ್ಯ ಬಿಜ್ಜಳನ ಪೂರ್ವವಂಶದ ಮಧ್ಯಭಾರತದ ಕಟಚ್ಚುರಿಗಳೂ ಬಿಜ್ಜಳನ ಮಾತಾಮಹ ಪಿತಾಮಹರ ವಂಶದವರೂ, ಬಂಧು ಬಾಂಧವರೂ ಮಾಹೇಶ್ವರಾನುಯಾಯಿಗಳೆಂಬುದರಲ್ಲಿ ಸಂದೇಹವಿಲ್ಲ.

ತೆಲುಗು, ಕನ್ನಡ ಬಸವ ಪುರಾಣಗಳಲ್ಲಾಗಲೀ ಬಸವರಾಜರಗಳೆಯಲ್ಲಾಗಲೀ ಬಸವೇಶ್ವರ ವಚನಗಳಲ್ಲಾಗಲೀ ಬಿಜ್ಜಳನನ್ನು ಜೈನನೆಂದಿಲ್ಲ. ಈಚಿನ ಚನ್ನಬಸವ ಪುರಾಣದಲ್ಲಿ ಒಂದು ಕಡೆ ಜಿನ ಬಿಜ್ಜಳ ಎಂದಿರುವುದಕ್ಕೆ ಪಾಠಾಂತರವಿರುವುದರಿಂದ ಅದು ಪ್ರಕ್ಷಿಪ್ತವಿರಬೇಕು. ಕಾಕತೀಯ ರಾಜ್ಯದಲ್ಲಿ ಜೈನರಿಗೂ ವೀರಶೈವರಿಗೂ ವೈಮನಸ್ಸುಂಟಾಗಿ ಇತ್ತೀಚಿನ ಗ್ರಂಥಗಳಲ್ಲಿ ಬಿಜ್ಜಳನ ಜೈನೀಕರಣವಾಗಿರಬೇಕು. ಆಧುನಿಕ ಪಂಡಿತನಾದ ಧರಣಿ ಪಂಡಿತನು ಬಿಜ್ಜಳನನ್ನು 'ಜೈನವಂಶಾನ್ವಯ ತಿಳಕ' ಎಂದಿರುವುದು ಸರಿಯಲ್ಲವೆಂಬುದು ಮೇಲಿನ ವಿವೇಚನೆಯಿಂದ ಸ್ಪಷ್ಟ. ಜಿನಬಿಂಬವನ್ನು ಒಡೆದು ಲಿಂಗವನ್ನು ಸ್ಥಾಪಿಸಿದ ಅಬಲೂರು ಶಾಸನೋಕ್ತ ಏಕಾಂತರಾಮಯ್ಯನ 'ಕಾಲಂಕರ್ಚಿ'ದಾನ ಮಾಡಿದ ಬಿಜ್ಜಳನು ಧರಣಿ ಪಂಡಿತನು ಹೇಳುವಂತೆ 'ಜೈನವಾರ್ಧಿವರ್ದನಚಂದ್ರನೂ' ಅಲ್ಲ 'ಜೈನಮಾರ್ಗಾನಂದಪರ'ನೂ ಅಲ್ಲ. ಶಿಕಾರಿಪುರದ ೧೯೬ನೆಯ ಶಾಸನದಲ್ಲಿ 'ಜಿನೇಂದ್ರ ಮಹಿಮಾರ್ಚನಾ ಶಶಿದೇವಿಯೆನಿಪ್ಪ ಜಕ್ಕಲ ಮಹಾಸತಿಯನ್ನು ಹೊಗಳಿರುವಂತೆ, ಯಾವ ಶಾಸನದಲ್ಲಿಯೂ ಬಿಜ್ಜಳನು ಜೈನನೆಂಬಂತೆ ಹೊಗಳಲ್ಪಟ್ಟಿಲ್ಲ; ಜೈನಗುರುಗಳಾರೂ ಬಿಜ್ಜಳನಿಗೆ ಗುರುಗಳಾಗಿದ್ದುದಕ್ಕೆ ಆಧಾರವಿಲ್ಲ. ತದ್ವಿರುದ್ಧವಾಗಿ ತೆಲುಗು ಬಸವಪುರಾಣದ ಮುನ್ನುಡಿಯಲ್ಲಿ ವೇಟೂರು ಪ್ರಭಾಕರ ಶಾಸ್ತ್ರಿಗಳು ಬಿಜ್ಜಳನ ಗುರುವು ಗೋಳಕೀ ಮಠದವರೆಂದು ಹೇಳಿರುವರು. ಇದಕ್ಕೆ ಮಲ್ಲಿಕಾಪುರ ಶಾಸನದ ಆಧಾರವಿದೆ. **'ಶ್ರೀ ವಿಶ್ವೇಶ್ವರ ದೇಶಿಕಃ ಕಲಚುರಿಕ್ಷ್ಮಾಪಾಲ ದೀಕ್ಷಾಗುರು'** ಎಂದು ಅದರಲ್ಲಿ ಹೇಳಿರುವುದಲ್ಲದೆ **'ವಿದ್ಯಾಮಂಟಪವರ್ತಿನಂ ಗಣಪತಿಕ್ಷ್ಮಾಪಾಲ ದೀಕ್ಷಾಗುರುಃ'** ಎಂದೂ ಹೇಳಿದೆ. ಆ ಶಾಸನದಲ್ಲಿಯೇ ವಿಶ್ವೇಶ್ವರ ದೇಶಿಕನನ್ನು **'ಮಹೀಸುರಃ'** ಎಂದರೆ ಬ್ರಾಹ್ಮಣನೆಂದೂ ಹೇಳಿರುವುದಲ್ಲದೆ **'ವೀರಶೈವಾಚಾರ್ಯ ಶತೈರ್ವೃತಃ'** ಎಂದೂ ಹೇಳಿರುವುದರಿಂದ ಈತನು ಹರಿಹರ ರಾಘವಾಂಕರಂತೆ ಲಿಂಗ ಯಜ್ಞೋಪವೀತವನ್ನು ಧರಿಸಿದ ಆರಾಧ್ಯ ಬ್ರಾಹ್ಮಣನಾಗಿರಬೇಕು.

ಕರ್ನಾಟಕಲಾಕುಳರ ಇತಿಹಾಸ ಗ್ರಂಥದಲ್ಲಿ ಈ ಶಾಸನದಲ್ಲಿ ಹೇಳಿರುವ ಗೋಳಕೀಮಠ ವಿಷಯವಾಗಿ ಬರೆಯುತ್ತ ಶ್ರೀಯುತ ಕಪಟರಾಳ ಕೃಷ್ಣರಾಯರು ಹೀಗೆ ಬರೆದಿದ್ದಾರೆ: "ಈ ಶಾಸನದಲ್ಲೂ ಶುದ್ಧ ಶೈವ ಸಂಪ್ರದಾಯದ ಶಿವ ಯೋಗಿಗಳಿಗೆ ವೀರಶೈವಾಚಾರ್ಯರು ಸ್ಥಾನಪತಿ ತಪೋಧನರೆನ್ನಲಾಗಿದೆ . . . ಹರಿಹರ ರಾಘವಾಂಕರು ಬ್ರಾಹ್ಮಣ ರಾಗಿದ್ದು ಈ ಶುದ್ಧ ಶೈವ ಸಂಪ್ರದಾಯದವರಾಗಿದ್ದರೆಂದು ತೋರುವುದು. ಆಂಧ್ರ ದೇಶದಲ್ಲಿ ಶುದ್ಧ ಶೈವ ಸಂಪ್ರದಾಯದ ಶೈವ ಬ್ರಾಹ್ಮಣರು ಇರುವರು." ಕಾಕತೀಯ ಗಣಪತಿಯು ವೀರಶೈವನಾಗಿರುವಂತೆ, ಅವನ ದೀಕ್ಷಾ ಗುರುವೇ ಬಿಜ್ಜಳನಿಗೂ ದೀಕ್ಷಾಗುರುವಾದ್ದರಿಂದ, ಹಾಗೂ ಬ್ರಾಹ್ಮಣ ಗರ್ಭಸಂಜಾತ ಕೃಷ್ಣನ ವಂಶದವನಾದುದರಿಂದ ಬಿಜ್ಜಳನು ಬಸವೇಶ್ವರನಂತೆ, ಲಿಂಗಿಬ್ರಾಹ್ಮಣ ಮಾಹೇಶ್ವರ ವಂಶದವನೆಂಬುದು ಸುಸ್ಪಷ್ಟ.

ಲಕುಳೀಶ ಪಾಶುಪತರಿಗೂ ವೀರಶೈವರಿಗೂ ಇರುವ ಸಂಬಂಧ

ವೀರಶೈವರಿಗೂ ಲಕುಲೀಶ ಪಾಶುಪತರಿಗೂ ಇರುವ ಸಂಬಂಧವು ಅಸ್ಪಷ್ಟವೆಂದು ಮೈಸೂರು ಗೆಜೆಟಿಯರಿನಲ್ಲಿ ಹೇಳಿದೆ. ಕಪಟರಾಳ ಕೃಷ್ಣರಾಯರು ಪೂರ್ವೋಕ್ತ ಗ್ರಂಥದಲ್ಲಿ ಹೇಳಿದಂತೆ–'ಈಗಿನ ಜಂಗಮರು ಮಾಹೇಶ್ವರರು; ಆನೊದಲಿಗರಂತೆ ಅಹುದು. ಕೇದಾರ ಶ್ರೀಶೈಲ ಮುಂತಾದ ಶಿವಾಲಯಗಳು ಈಗಿನ ಜಂಗಮರ ವಶದಲ್ಲಿವೆ. ಕಾಳಾಮುಖರೂ ಇದನ್ನು ಪೂಜ್ಯ ಸ್ಥಾನಗಳೆಂದು ಭಾವಿಸಿದ್ದರು. ಹೂಲಿ ಪಂಚವಣ್ಣಿಗೆ ಮುಂತಾದುವುಗಳು ಈಗಿನ ಜಂಗಮರ ವಶದಲ್ಲಿವೆ . . . ಲಾಕುಳ ಸಿದ್ಧಾಂತವು ಈಗಿನ ಜಂಗಮರ ಪೂರ್ವಜರದು ಎಂಬುದನ್ನು ಒಪ್ಪಬೇಕು. ಶ್ರೀಯುತ ಕಪಟರಾಳರೇ ಹೇಳುವಂತೆ ಲಕುಳೀಶ ಪಾಶುಪತರಲ್ಲಿ ವಿಶಿಷ್ಟದೀಕ್ಷೆಯನ್ನು ಪಡೆದವರು ಕಾಳಾಮುಖರು. ಅನೇಕ ಶಾಸನಗಳಲ್ಲಿ ತಿಳಿದುಬರುವಂತೆ ಪಾಶುಪತ ಮಾಹೇಶ್ವರರ ಗುರುಗಳು ವೇದವೇದಾಂಗಾದಿಗಳಲ್ಲಿ ಪರಿಣತರಾಗಿ ಅವುಗಳ ವಿದ್ಯಾಭ್ಯಾಸವನ್ನು ಮಾಡಿಸುತ್ತಲಿದ್ದುದು ಶ್ರೀಯುತರು ಬಲ್ಲರಾದರೂ ಇವರು ಬ್ರಾಹ್ಮಣರಲ್ಲವೆಂದಿರುವುದು ಆಶ್ಚರ್ಯವೇ ಸರಿ. ಯಾವ ಶಾಸನದಲ್ಲೂ ಈ ಲಾಕುಳ ಪಾಶುಪತರಿಗೆ ಬ್ರಾಹ್ಮಣ ಗೋತ್ರಸೂತ್ರಗಳನ್ನು ಹೇಳಿಲ್ಲವೆಂಬುದೇ ಕಾರಣವೆಂದು ಅವರು ಹೇಳಿರುವುದರಿಂದ ಶಾಸನಾಧಾರದಿಂದಲೇ ಅವರಿಗೆ ಉತ್ತರಿಸಬೇಕಾಗುವುದು. ಫ್ಲೀಟರು ಸಂಪಾದಿಸಿರುವ ಮನಗೋಳಿ ಶಾಸನದಲ್ಲಿ (V, EP. Ind No, 3 pp 10–11) "**ಭುಜಂಗಾವಳೀ ಕುಲ ತಿಲಕ ಕಾಳಾಮುಖನೈಷ್ಠಿಕ ಪರಮ ತಪೋನಿಷ್ಠ ಬ್ರಾಹ್ಮಕುಳ ಬಾಳಬ್ರಹ್ಮಚಾರಿ ಶ್ರೀ ಸದ್ಯೋಜಾತ ಪಂಡಿತರ ಕಾಲಂಕರ್ಚಿ**" ದಾನ ಮಾಡಿದುದನ್ನು ಹೇಳಲಾಗಿದೆ. ಲಾಕುಳ ಪಶುಪತರೆಲ್ಲರೂ ಬ್ರಾಹ್ಮಣರು. '**ಕಾಳಾಮುಖಾಃ ಶ್ರುತಿಮುಖ್ಯಾಃ**' ಎಂಬ ಶಾಸನಾಧಾರವುಂಟು. (Tndingonda plates No. 25 of E. I. xxiii), ಲಾಕುಳಪಾಶುಪತರಲ್ಲಿ ಕಾಳಾಮುಖದೀಕ್ಷೆಯನ್ನು ಒಪ್ಪದವರು ಶುದ್ಧಶೈವ ಲಿಂಗಿಬ್ರಾಹ್ಮಣರು. ಇವರಲ್ಲಿ ಹುಟ್ಟಿದ ಬಸವೇಶ್ವರನು ಸಂಸ್ಕರಿಸಿದ ಮತವೇ ವೀರಶೈವ ಮತ; ಆದರೆ ಕ್ವಚಿತ್ತಾಗಿ ಆಗಮಗಳಲ್ಲಿ ಕಾಣುವ ವೀರಶೈವ ಪದವನ್ನು ಸಂಸ್ಕರಿಸಲ್ಪಟ್ಟ ಮತಕ್ಕೆ ಪಾರಿಭಾಷಿಕ ಪದವನ್ನಾಗಿ ಮಾರ್ಪಡಿಸಿದವರು ಚೆನ್ನಬಸವೇಶ್ವರರು. ಆ ಮೊದಲು ಈ ಪದವು ಬಸವೇಶ್ವರ ವಚನಗಳಲ್ಲಾಗಲೀ ಹಿಂದಿನ ಶಾಸನಗಳಲ್ಲಾಗಲೀ ಉಪಯೋಗಿಸಿಲ್ಲ. ರಾಘವಾಂಕ ಚರಿತ್ರೆ ಹರಿಹರನ ಬಸವದೇವರಾಜ ರಗಳೆ, ಸಿದ್ಧರಾಮ ಚರಿತ್ರೆ ಮೊದಲಾದ ಗ್ರಂಥಗಳಲ್ಲಿಯೂ ಹಿಂದಿನಿಂದ ರೂಢಿಯಲ್ಲಿದ್ದ ಜಂಗಮ, ಮಾಹೇಶ್ವರ, ಶೈವ ಪದಗಳನ್ನು ಸಮಾನಾರ್ಥದಲ್ಲಿ ಉಪಯೋಗಿಸಿರುವರೇ ಹೊರತು ವೀರಶೈವ ಪದವನ್ನಲ್ಲ. ಆದುದರಿಂದ ಹರಿಹರ ರಾಘವಾಂಕ ಸಿದ್ಧರಾಮರು ವೀರಶೈವರೇ ಅಥವಾ ಶೈವರೇ ಎಂಬ ಪ್ರಶ್ನೆಗಳು ಬೃಹದಾಕಾರವಾಗಿ ಎದ್ದಿವೆ.

ಹರಿಹರ ರಾಘವಾಂಕ ಪದ್ಮರಸರು ಲಿಂಗಯಜ್ಞೋಪಧಾರಿಗಳೆಂದು ಹಿಂದೆ ತೋರಿಸಲಾಗಿದೆ. ರಾಘವಾಂಕನ ಸಿದ್ಧರಾಮ ಚರಿತ್ರೆಯಲ್ಲಿ ಹೇಳಿದಂತೆ ಸಿದ್ಧರಾಮನು "**ಬಡವ ಮುಡಗಿದ ಕಡವರದ ತೆರದ ಮುಕುಟದ ಮುರೆಯು ಲಿಂಗಮುಂ**" ಅಲ್ಲಮನಿಗೆ ಉತ್ತಮಾಂಗದ ಮಧ್ಯದ ವಸ್ತ್ರಮಂ ಓಸರಿಸಿ ತೋರಿಸುತ್ತಾನೆ. ಆದುದರಿಂದ ಇವರೆಲ್ಲರೂ ಲಿಂಗಧಾರಿಗಳೆಂಬುದು ಸ್ಪಷ್ಟ. ಶಿವನಿಂದ ಸಿದ್ಧರಾಮನಿಗೆ ಲಾಕುಳವು ದೊರೆಯುತ್ತದೆ. ಇವರೆಲ್ಲರೂ ಲಿಂಗಿಬ್ರಾಹ್ಮಣರು ಅರ್ಥಾತ್ ಶುದ್ಧಶೈವಾಮ್ನಾಯದವರು. ಹರಿಹರನು '**ಕರ್ಮಲತೆಯಂತಿರ್ದ ಜನ್ನಿವಾಟಮುಂ, ಓತನಗಂರಲಂ ಬಿಗಿವಂತಿರ್ದ ಮೌಂಜಿಯುಂ**' ಎನ್ನುವುದರಿಂದ ಹರಿಹರ ರಾಘವಾಂಕರು ಬಸವಾನುಯಾಯಿಗಳಾದವರೇ. ಸಿದ್ಧರಾಮನನ್ನು ಶೂನ್ಯ ಸಿಂಹಾಸನದ ಜಗದ್ಗುರುವಾಗಿ ವೀರಶೈವರು ಇಂದೂ

(೪೫ನೇ ಪುಟ ನೋಡಿ)

ಬಸವರಾಜ ರಗಳೆ

ಎಸ್. ಶಿವಣ್ಣ

[" ಮದ್ಗುರು ಶಾಂತಾ" ಎಂಬ ಅಂಕಿತವುಳ್ಳ " ಬಸವರಾಜ ರಗಳೆ" ಭಕ್ತಿಭಂಡಾರಿ ಬಸವನ ಸ್ತುತಿರೂಪವಾಗಿದೆ. ಈ ರಗಳೆ " ಕವಿಚರಿತೆ 'ಯ ಅನುಕ್ತ ಕೃತಿಗಳಲ್ಲೊಂದಾಗಿದ್ದು ಬಹುಶಃ ಮೊಟ್ಟಮೊದಲಬಾರಿಗೆ ಓಲೆಯರೂಪದಿಂದ ಅಚ್ಚಿನ ರೂಪದಲ್ಲಿ ಹೊರಬರುತ್ತಿದೆ. ಇದರ ಆದಿಯಲ್ಲಿ ಒಂದು ಕಂದವೂ ನಡುವೆ 2×56 ಪಂಕ್ತಿ ಉತ್ಸಾಹರಗಳೆಯೂ ಕೊನೆಯಲ್ಲಿ ಕೃತಿಕರ್ತನ ಅಂಕಿತಯುಕ್ತವಾದ ಕಂದವೂ ಇದೆ. ಪ್ರತಿಪಂಕ್ತಿಯು " ಬಸವರಾಜ" ಎಂದು ಕೊನೆಗೊಂಡಿದೆ. ಈ ಕೃತಿಯ ಪಾಠವನ್ನು " ಕನ್ನಡ ಅಧ್ಯಯನ ಸಂಸ್ಥೆ" (ಮೈಸೂರು)ಯಲ್ಲಿರುವ K. 998 (ಸ್ವೀಕೃತ ಪ್ರತಿ), K. 773 (ಕ) ಮತ್ತು ಇನ್ನೊಂದು ಪ್ರತಿ (ಖ) ಯನ್ನು ಉಪಯೋಗಿಸಿಕೊಂಡು ಪರಿಷ್ಕರಿಸಿದೆ. K. 987ರ ಪಾಠವನ್ನೇ ಮುಖ್ಯ ಪಾಠವನ್ನಾಗಿ ಪರಿಗಣಿಸಲಾಗಿದೆ. ಉಳಿದ ಪ್ರತಿಗಳ ಪಾಠಗಳನ್ನು ಸೂಕ್ತವಾದ ಕಡೆಗಳಲ್ಲಿ ಕೊಟ್ಟಿದೆ. [ಈ ಕೃತಿಯ ಇನ್ನೊಂದು ಪ್ರತಿ ಹೈದರಾಬಾದಿನ " ಉಸ್ಮಾನಿಯ ವಿಶ್ವವಿದ್ಯಾಲಯದ "ದ ಗ್ರಂಥಸಂಗ್ರಹದಲ್ಲಿ ಉಪಲಬ್ಧವಿದೆ.] ಈ ಪ್ರತಿಗಳನ್ನು ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಟ್ಟು ಅಧಿಕಾರದವರ್ಗದವರಿಗೂ, ಪ್ರತಿಯೊಂದರ ಪಾಠಾಂತರಗಳನ್ನು ಗುರುತಿಸಿಕೊಟ್ಟ ಮಿತ್ರರಾದ ಶ್ರೀ ಜಿ. ಜಿ. ಮಂಜುನಾಥನ್ ಅವರಿಗೂ, ಕೃತಿಯ ಅಚ್ಚಿನ ಪ್ರತಿಯನ್ನು ಪರಿಶೀಲಿಸಿದ ಶ್ರೀ ನ. ಕೃಷ್ಣಜೋಯಿಸ್ ಅವರಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ.—**ಲೇಖಕ**]

ಶ್ರೀ ವರಪೂಜಿತ ಚರಣ[1]ನ[1]
ಭಾವಜಮದಶೈಲ ಶಂಭು ಗಿರಿಸುತೆಯರಸನ
ಪಾವನ ಪರಮಜ್ಞಾನಿಯ
ಕೋವಿದನಂ ಪೊಗಳ್ವೆ ನಿತ್ಯ ಬಸವೇಶ್ವರನಂ

ಶ್ರೀ ಮದಮಲ ಚರಣ ಸೇವ್ಯನಮರದನುಜ ಬಸವರಾಜ
ಆಮಯಾದಿನುತಿಯ ತತಿಯ ಪೆರ್ಮೆತೀತ ,, ೧
ಅಂಗ ಲಿಂಗ ಸಂ[2]ಗ[2] ಪ್ರಾಣಲಿಂಗವಾದ ,,
ಜಂಗಮಾಂಗ ಜಂಗಮೈಕ್ಯ ಲಿಂಗ[3]ಸಂಗ[3] ,, ೨
[[4]ಲೋಕಕರ್ತ[4]] ಭರ್ತ ಹರ್ತ ನಿತ್ಯ ಸತ್ಯ ,,
ಮುಕ್ತಿ ಮಾಜನಜಿಂದು ಚರಿಪ ಮಿಥ್ಯದೂರ ,, ೩
ಭಕ್ತಿಶೀಲ ಮುಕ್ತಿಮೂಲ ಸತ್ಯಲೋಲ ,,
ಸತ್ತುಕಾಯ ಚಿತ್ತುಪ್ರಾಣ ಕರ್ತುಸಂಗ ,, ೪

[5]ಕಾಲಕರ್ಮ[5] ದೂರ ಸರ್ವಚಾರ ಲೋಲ ಬಸವರಾಜ
ವ್ಯಾಲ ಕಟಕ ಜ್ವಾಲನೇತ್ರ ಮೂಲಮಂತ್ರ ,, ೫
[6]ಸೂಲಿ[6]ಸುಜನವಂದ್ಯ ಕಲ್ಪಧಾರ ಸಾರ ,,
ಕಾಲಕಾಲ ಕಲುಷದೂರ ಶೀಲಸತ್ಯ ,, ೬
ಆದಿಮಧ್ಯ ಅಂತ್ಯವನ್ನು ಮೀಱೆತೋರ್ಪ ,,
ವೇದನಾದತೀತ ಪಂಚನಾದ ರೂಪ ,, ೭
ಕರುಣಸಾರ ಪೂರಸತ್ಯ ಶರಣ ಸಂಗ ,,
ವರಷಡಧ್ವಕಾದಿಯಾದ ಚಿರದ[7]ಯಾ[7]ಕ್ಷ ,, ೮
ಶ್ರೀಧರಾಬ್ಜತನಯ ಶಕ್ರಸೇವ್ಯಪಾದ ,,
ಮಾಧವಾಕ್ಷಿಕಮಲ ಪೂಜ್ಯಪಾದವನಜ ,, ೯
ಕಮಲ[8]ಪುತ್ರ[8] ಪುತ್ರ [9]ಪಾತ್ರ [10]ಮಿತ್ರ[10] ಗಾದಿ[9] ,,
ಕಮಲ ಮಿತ್ರ ಮಿತ್ರ [11]ಪವನ[11]ನೇತ್ರ ನೈಜ ,, ೧೦

---

[1]ವ[1] (ಕ,ಖ); [2]ದ[2] (ಕ); [3]ದಂದ[3] (ಕ), [3]ದಂಗ[3] (ಖ); [4]ಸರ್ವಲೋಕ[4] (ಕ), [4]ಕರ್ತಲೋಕ[4] (ಖ,ಗ);

[5]ಲೋಕಪರ್ವ[5] (ಕ); [6]ಶೂಲಿ[6] (ಖ); [7]ಯೇ[7] (ಖ); [8]ಮಿತ್ರ[8] (ಖ); [9]ವೈತ್ರವೇತ್ರಪಣದಿ[9] (ಕ); [10]ವೇತ್ರ[10] (ಖ); [11]ವನಜ[11] (ಕ,ಖ).

ಶಾತಕುಂಭ ಕುಧರವಾಸ ಭೂತನಾಥ ಬಸವರಾಜ
ಜ್ಯೋತಿ ಕಾಂತಿಯಿಂದ ಹೊಳೆವ ಜಾತಪೂತ ,, ೧೧

[1]ಮಂತ್ರ ತಂತ್ರ[1] [2]ಕ[2]ರಣಾತೀತ ಮಂತ್ರಮೂರ್ತಿ ,,
ಮಂತ್ರ ಸಪ್ತಕೋಟಿ ಮಹಾಮಂತ್ರ [3]ಮಂತೆ[3] ,, ೧೨

ಆದಿಯಿಂದ ಮೇಲೆ ತೋರ್ಪನಾದಿಶರಣ ,,
ನಾದಬಿಂದು ಕಳೆಯಮೀಱಿದಾದಿ ಮೂಲ ,, ೧೩

ಈವ ಭಕ್ತರಿಷ್ಟಪದವ ಕಾಯ್ವದೇವ ,,
ದೇವ ಶರಣತತಿಯ ಮಾಯ [4]ಪಾಶ[4]ದೂರ ,, ೧೪

ಹರಿಯ ಹತ್ತು ಪ್ರಳಯ[5]ವನ್ನು ಹ[5]ರಿಸಿದಾತ ,,
[6]ಹರಿಯ ಸುತನ ಚಾಪಸಹಿತ ಉರಿಸಿದಾತ[6] ,, ೧೫

ಶರಣ ಹೃದಯ ಸರಸಿ ಹಂಸ ಕರಣ ದೂರ ,,
ಶರಣ ಹರಣ ಮರಣ ದೂರ ಕರಣ ಪೂರ ,, ೧೬

[7]ಸಿಂಧುರಾಜಿನಂಬರಾಳ್ದ ಸಿಂಧು ಜೂಟ ,,
ಇಂದು ಕುಂದವರ್ಣಗಾತ್ರ ಚಂದ್ರಮೌಳಿ[7] ,, ೧೭

ಹುಟ್ಟು ಗೆಟ್ಟು ಬಟ್ಟಬಯಲ ಮೆಟ್ಟಿನಿಂದ ,,
ಇಷ್ಟಪ್ರಾಣಭಾವದಲ್ಲಿ ನಿಷ್ಠೆ ಬಲಿದ ,, ೧೮

ಘೋರ ಗರಳಹಾರ ಕರುಣ ಪಾರವಾರ ,,
ವೀರಶೈವ ಚಕ್ರವರ್ತಿ [8]ಸಾರಕೀರ್ತಿ[8] ,, ೧೯

ಹಮ್ಮುಗೆಟ್ಟು ಕರ್ಮವಳಿದ ನಿರ್ಮಲಾಂಗ ,,
ಕಮ್ಮಗೋಲನಕ್ಷಿಯುಳಿದ ಸಮ್ಮಕೋಶ ,, ೨೦

ಮಾಘಸಲ್ಯಹರ ಸರ್ವಪಾಪ ರಹಿತ ,,
ವಾಘಮುಕ್ತಿ [9]ಶಕ್ತಿ[9]ಯಲ್ಲಿ ಕೂಪನಾದೆ ,, ೨೧

ಕಾಮ ಭೀಮ ಸೋಮ ಧಾಮ ನಾಮ ರಹಿತ ,,
ಸಾಮಗಾನ [10]ಪ್ರೀಯ[10] ಸರ್ವ ಸೀಮೆಯಳಿದ ,, ೨೨

ತಥ್ಯ ಮಿಥ್ಯ ರಾಗದೂರ ಕರ್ತ ನೀನೆ ,,
ಮರ್ತ್ಯಮಾಯ ಭೋಗ [11]ವೋಗ[11]
ಮಿಥ್ಯವಳಿದ ಬಸವರಾಜ ೨೩

ತತ್ವಮಸಿ ಪದಾರ್ಥದಿಂದಲತ್ತ ತೋರ್ಪ ,,
ಅತ್ತಲಿತ್ತ ಸುತ್ತಿ ಸುಳಿವ ಚಿತ್ತವಳಿದ ,, ೨೪

ಯಮಿ ಜನಮಲ ಹೃದಯ [12]ಕ[12]ಮಲ
ಕಮಲ ಮಿತ್ರ ಬಸವರಾಜ
ಕುಮತಿ ಸಮಯ ಕುಮುದಮಿತ್ರ
ಕುಮನರಹಿತ ಬಸವರಾಜ ೨೫

ಕರ್ಮಭಕ್ತಿ ವೇಧೆ ಮೂಱವರ್ಮ ವಱಿದ ,,
ಧರ್ಮ[13]ನನುಜ ಸಿದ್ಧ[13]ವರದ ಕರ್ಮನಾಶ ,, ೨೬

ಗುಣಸುಮಣಿಯಸಾಣೆ ಚಿಂತಮಣಿಯ
ಕಣಿಯು ಬಸವರಾಜ
ಫಣಿಪಹಾರ ಕುಣಿಪಶೂಲ ಗಣಪ ಜನಕ ,, ೨೭

ಅಂಗಭಂಗವಳಿದು ಲಿಂಗವಂಗವಾದ ,,
ಲಿಂಗದಂಗವೆಂಟು ತ್ರಿವಿಧವಂಗವಾದ ,, ೨೮

ದೂರದುರಿತ ವೀರಭರಿತ ಚಾರುಚರಿತ ,,
ವೀರಶೈವಚಾರ ಪಾರವಾರ ಚಂದ್ರ ,, ೨೯

ಹರನ ಲೋಕ ಪುಣ್ಯ ವಸಧಿ ತಾರಪತಿಯು ,,
ವಾರಿಜ[14]ಲ್ಮ[14]ಸುತನ ಶಿರವ ಕರದಿತಾಳ್ದ ,, ೩೦

ಕುಜನಭಂಗ ಸುಜನಸಂಗ ತ್ರಿಜಗವಂದ್ಯ ,,
ಯಜಿನನೋಟ ನುತಿಗಳಿಂದ ಬಜಿಪಗೊ[15]ಲಿ[15]ದ ,, ೩೧

ಅಕ್ಷಪಾದ ನಿಷ್ಠೆ ಮಿತ್ತು ರಕ್ಷಿಪಾತ ,,
ಅಕ್ಷ[16]ಯಾ[16]ಕ್ಷರಾತ್ಮ ಸರ್ವ ಲಕ್ಷ[17]ಣಾಂಕ[17] ,, ೩೨

ದಕ್ಷಮುಖವಿಪಕ್ಷ ಸರ್ವ ಲಕ್ಷತೀತ ,,
ಪಕ್ಷ ಪಕ್ಷವಳಿದು ಪವನ ಭಕ್ಷಸೂತ್ರ ,, ೩೩

ಮೂಱಱಿಂದ ಮುನ್ನ ತೋರ್ಪನಾದಿ ಭಕ್ತ ,,
ಮೂಱು ವಿದ್ಯ[18]ವಱಿದು ವಿದ್ಯರೂಪನಾದ[18] ,, ೩೪

ವರದ ಕರದ ಉರದ ಶಿರದ ಮಾಲೆ ಸುರರ ,,
ಅರಿಗಳಾಱನಱಿದು ಅಷ್ಟ[19]ತತಿ[19]ಯ ನೊದೆದ ,, ೩೫

ಪಂಚಪ್ರಣಮುಕಾಯ ಮನದ ಸಂಚವಳಿದ ,,
ಪಂಚಪರುಷ[20]ದೆ[20]ಱೆಯ ಲಪನ ಪಂಚಕಾರಿ ,, ೩೬

ಸಕಲ ವಕಲ ಸಕಲ ತೀತ ನಿಃ[21]ಕ[21]ಲಾತ್ಮ ,,
ಸಕಲ ಲೋಕರಾಧ್ಯ ಶೈವ ಭಕ್ತ ಬಂಧು ,, ೩೭

ಶ್ರುತಿಯ ತತಿಯ ನುತಿಗೆ ನಿಲುಕದತಿಶಯಾತ್ಮ ,,
ಅತುಳ ಮಹಿಮೆದಾಳ್ದ ಮುಕ್ತಿ ಪ್ರತತಿಗೊಡೆಯ ,, ೩೮

---

[1]ಯಂತ್ರ ಮಂತ್ರ[1] (ಕ,ಖ); [2]ಶ[2] (ಕ); [3]ಮೂರ್ತಿ[3] (ಕ,ಖ) [4]ಮಲಸ[4] (ಕ,ಖ); [5]ದಲ್ಲಿ ಬ[5] (ಕ,ಖ); [6]ಹರಿ ಸುಗೋತ್ರ ಚಾಪಧರರಗೆ ಗುರೂತವಾದ (?)[6] (ಗ); [7]×[7] (ಕ,ಖ); [8]. . .[8] (ಗ); [9]ಭಕ್ತಿ[9] (ಖ); [10]ಪ್ರೇಮ[10] (ಖ); [11]ಪುಗ್ಗ[11] (ಕ,ಖ);

[12]ವಿ[12] (ಕ,ಖ); [13]ನನುನಷ್ಟ[13] (ಖ); [14]ನ್ಮ[14] (ಖ); [15]ಕಿ[15] (ಸ್ವೀ.ಪ್ರ.); [16]ಪು[16] (ಕ), [16]ಯ[16] (ಖ); [17]ಣಾತ್ಮ[17] (ಖ); [18]ರೂಪನಾದ ನಾದಮೂರ್ತಿ[18] (ಸ್ವೀ.ಪ್ರ.), [18]ವಱಿವಿದ್ಯ ರೂಪನಾದ[18] (ಖ); [19]ಕರಿ[19] (ಖ); [20]ವೆ[20] (ಖ); [21]ಷ್ಕ[21] (ಖ).

ಪೂತ ಜಾತ ಖ್ಯಾತ ವಿಶ್ವನಾಥನಮರ ಬಸವರಾಜ
ಮಾತು ಮಥನವಳಿದ ಭಕ್ತಿ[1]ಗೀತ[1]ಚರಿತ ,, ೩೯
ಒಳಗೆ ಹೊಱಗೆ ತೊಳಗೆ ಬೆಳಗೆ ಹೊಳೆವ ಕಳೆಯು ,,
ಕಳೆಯು ಬೆಳಗತಂದು ಭಾವಕರದೊಳಿಟ್ಟೆ ,, ೪೦
ಆಱುಮೂಱು ಮೂವತ್ತಾಱ ತೋಱಿ ಮೆಱೆದ ,,
ಮೂಱು ಮೂವತ್ತೊಂದಕರದಿ ತೋಱಿಮೆಱೆದ ,, ೪೧
ಪ್ರೇತನಾಥ ತಾತ ಹರಣ ಚೇತನಾತ್ಮ ,,
ವಾತಹಾರ ವೈರಿಗಮನ ತಾತಪ್ರೇಮಿ ,, ೪೨
ಬಂದು ಭವದಿ ನೊಂದು ಬೆಂದೆ ತಂದೆ ಸಲಹು ,,
ಹಿಂದು ಮುಂ[2]ದ[2]ಸಂದನಳಿದು ಒಂದು ಮಾಡು ,, ೪೩
ಅಸನ[3]ವ[3]ಸನವಳಿದುಲಿಂಗ ವೆಸನಿಯೆನಿಸು ,,
ಹುಸಿಯ ಕಸವ ಕಳೆದು ಜ್ಞಾನ [4]ಸಸಿ[4]ಯ
ಬೆಳಸು ಬಸವರಾಜ ೪೪

ಆಗು ಹೋಗನಳಿದು ಲಿಂಗದಾಗು ಮಾಡು ,,
ಭೋಗ [5]ಪೂಗ[5]ವಳಿದು ಲಿಂಗ ಭೋಗಿಯೆನಿಸು ,, ೪೫
ಹುಟ್ಟಿ ಬಹಳ ದುಃಖದಿಂದ ಕೆಟ್ಟೆ ಸಲಹು ,,
[6]ದಿಟ್ಟಿ[6]ಯಿಂದ ನೋಡಿ ಶೈವ ಬಟ್ಟೆದೋಱು ,, ೪೬
ಹಲವು [7]ಜಲ್ಮ[7]ದಲ್ಲಿ ತೊಳಲಿ ಬಳಲಿ ಬಂದೆ ,,
ಸಲಹು ನಿಮ್ಮ ಕರುಣದಿಂದ ಮಲಹರಾತ್ಮ ,, ೪೭
ಆಸೆ ಪಾಶದಲ್ಲಿ ಸಿ[8]ಲ್ಕಿ[8] ಘಾಸಿಯಾದೆ ,,
ಆಸೆಯಳಿದು ನಿತ್ಯ ಮೋಕ್ಷದಾಸೆ ದೋಱು ,, ೪೮
ಮದನ ಸೂತ್ರದಿಂದ ನಿಮ್ಮ ಪದವ ಮಱೆದೆ ,,
ಪುದಿದ ಭ್ರಮೆಗಳಿಂದ ಬಹಳ ಮದಡನಾದೆ ,, ೪೯
ಕಾಡದೆನ್ನ ಸಲಹು ನಿಮ್ಮ ಬೇಡಿಕೊಂಬೆ ,,
ಪಾಡುಪಂಥವೆನ್ನೊಳೇಕೆ ಬೇಡ ಸಲಹು ,, ೫೦
ಮತಿಯ [9]ಮಾಯವಳಿದು[9] ನಿಮ್ಮ
ಮತಿಯೊಳಿರಿಸು ಬಸವರಾಜ
ನುತಿಯ [10]ವರ್ನ[10]ವಳಿದು ನಿಮ್ಮ
ನುತಿಯೊಳಿರಿಸು ಬಸವರಾಜ ೫೧

[1]ವಿತತಿ[1] (ಖ); [2]ದು[2] (ಖ); [3]ವ್ಯ[3] (ಖ); [4]ಶಶಿ (ಕ,ಖ); [5]ಹಂಗು[5] (ಖ); [6]ದೃಷ್ಟಿ[6] (ಸ್ವೀ.ಪ್ರ); [7]ನ್ಮ[7] (ಕ); [8]×[8] (ಖ); [9]ತತಿಯನಳಿದು[9] (ಕ); [10]ವರ್ಣ[10] (ಖ); ×(ಖ) ದಲ್ಲಿ ಲುಪ್ತ;

ವಿಷಯ ಕರಣ ಭೂತವಕ್ಷಿ ಮುಸುಕಿ ಮಱೆದೆ ಬಸವರಾಜ
ಕುಸುಬಿಯಲುಬಿ ತೊಳದುಮೆನ್ನ
ಹಸನಮಾಡು ಬಸವರಾಜ ೫೨
ನಿಮ್ಮ ಶಿಷ್ಯ ನಿಮ್ಮ ಭೃತ್ಯ ನಿಮ್ಮ ಲೆಂಕ ,,
ನಿಮ್ಮ ತೊತ್ತು ಬಂಟ ನಿಮ್ಮ ಕೆರ್ಪುಗಾಹಿ ,, ೫೩
ಎನ್ನ ಗತಿಯು ಎನ್ನ ಮತಿಯು ಎನ್ನ ಪತಿಯು ,,
ಎನ್ನ ಕುಲವು ಎನ್ನ [11]ಒ[11]ಲವು ಎನ್ನ [12]ಬ[12]ಲವು ,, ೫೪
ಎನ್ನ ಇರವು ಎನ್ನ ಪರವು ಎನ್ನ ವರವು ,,
[13]ಎನ್ನ ದಾತ ಎನ್ನ ತಾತ ಎನ್ನ ಸಮತೆ[13] ,, ೫೫
ತ್ರಾಹಿ ತ್ರಾಹಿ ಬಸವರಾಜ ತ್ರಾಹಿ ತ್ರಾಹಿ ಬಸವ[14]ರಾಜ[14]
ತ್ರಾಹಿ ತ್ರಾಹಿ ಬಸವ[15]ರಾಜ[15] [16]ಶರಣು ಶರಣು
ಬಸವರಾಜ[16] ೫೬

[17]ಶರಣು ಶರಣಾರ್ಥಿ ಬಸವಾ[17] (?)

ಕಂ || ನೂರೆಂಟು ಬಸವ [18]ಸ್ತುತಿ[18]ಯಂ
ಸಾರಸದಿಂದೋದಿ ಕೇಳಿ ವಿಸ್ತರಿಸು[19]ವರಿಗ[19]
[20]ಪಾರ ನಿಜಭಕ್ತಿ ಮುಕ್ತಿಯಂ
ಸೇರಿಸುವನು ಸತ್ಯಂ[20] ನಿತ್ಯ ಮುದ್ಗುರು ಶಾಂತಾ

ಬಸವರಾಜ ರಗಳೆ ಸಮಾಪ್ತ

[11]ಛ[11] (ಖ); [12]ಫ[12] (ಕ,ಖ); [13]ಎನ್ನ ಗುರುವೆ ಎನ್ನ ತಾತ ಎನ್ನ ಸಮತೆ[13] (ಕ); [14]ಲಿಂಗ[14] (ಕ), [14]ಗುರುವೆ[14] (ಖ); [15]ತಂದೆ[15] (ಕ), [15]ಲಿಂಗ[15] (ಖ); [16]ತ್ರಾಹಿ ತ್ರಾಹಿ ಬಸವ×ಶರಣು×[16] (ಕ), . . .×ತಂದೆ× (ಖ); [17]ಶರಣು ಶರಣು ಶರಣಾರ್ತಿ ಬಸವ ರಾಜಾ[17] (ಕ), [17]ತ್ರಾಹಿ ತ್ರಾಹಿ ಬಸವ ಶರಣು ತ್ರಾಹಿ ತ್ರಾಹಿ ಬಸವರಾಜ ಶರಣು ಶರಣಾರ್ತಿ?[17] (ಖ); [18]ನನುತಿ[18] (ಖ); [19]ವರ್ಗೆ[19] (ಖ); [20]ಮಾರ ಹರ ಭಕ್ತಿ ಮುಕ್ತಿಯ|ತೋಱುದ್ಧರಿಸುವನು[20] (ಖ).

ನೆಲುವಿಗೆಯ ಶಾಂತಯ್ಯನನ್ನು ಕುರಿತು ಒಂದು ಶಾಸನ

ಎಂ. ಎಂ. ಕಲಬುರ್ಗಿ

ಶರಣರ ಆದರ್ಶಕ್ಕೆ ವೀರಶೈವ ತತ್ವಕ್ಕೆ ಶಾಸನ ಬರವಣಿಗೆ ತೀರ ವಿರುದ್ಧ. ಅದಕ್ಕಾಗಿ ನಮ್ಮನಾಡ ಇತಿಹಾಸದಲ್ಲಿ ಸೂರ್ಯನಂತೆ ಬೆಳಗಿಹೋದ ಶಿವಶರಣರು ಬರೆಯಿಸಿದ ಶಾಸನಗಳು ಲಭಿಸಲಾರವು. ವಸ್ತುಸ್ಥಿತಿ ಹೀಗಿರುವಾಗ ಅವರ ಭಕ್ತರು ಬರೆಯಿಸಿದ ಕೆಲವು ಶಾಸನಗಳು ದೊರೆಯುತ್ತಿದ್ದು ಅವುಗಳಲ್ಲಿ ಪ್ರಸ್ತುತ ಶಾಸನವೂ ಒಂದು.

S.I.I. Vol. xx. ನಂ. ೧೩೮ರಲ್ಲಿ ಅಚ್ಚಾದ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಭೂಯಾರ ಗ್ರಾಮದ ಶಾಸನವೊಂದು ಕೆಲದಿನಗಳ ಹಿಂದೆ ನನ್ನ ಗಮನಕ್ಕೆ ಬಂದಿತು. ಅದರ ಮುಖ್ಯಪಾಠ ಹೀಗಿದೆ.

೧. ನೆಲುವಿಗೆಯ ಸಾತ್ಯೆಯ[ಗ]ಳ ಶ್ರೀ ಪಾದಗಳೇ ಶರಣು
೨. ಓಂ ನಮಃ ಶಿವಾಯ | ಸ್ವಸ್ತಿ ಶ್ರೀಮತ್ಕಳಚುರಿ
೩. ಯ ಕುಳ ಭುಜಬಲ ಚಕ್ರವರ್ತ್ತಿ ತ್ರಿಭುವನಮ
೪. ಲ್ಲ ದೇವರು ಕಲ್ಯಾಣದ ನೆಲವೀಡಿನೊಳು ಸುಖಸಂಕಥಾ
೫. ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ತತ್ಪಾದ ಪದ್ಮೋಪಜೀವಿಗಳ
೬. ಪ್ಪ ಶ್ರೀಮನ್ಮಹಾಪ್ರಧಾನಂ ಲಕ್ಷ್ಮೀದೇವ ದಣ್ಣಾನಾಯಕಂ ಮೂ
೭. ವತ್ತಾಱುಂ ಬಾಡವಂ ತ್ರಿಭೋಗಾಭ್ಯಂತರ ಸಿದ್ಧಿಯಿಂದಾಳು
೮. ತ್ತಮಿರ್ದ್ದು ಭುಯ್ಯಾರಕ್ಕೆ ನದೀಸ್ನಾನ ನಿಮಿತ್ತಂ ಬಂದು ಕೂ
೯. ಡಲ ಅಭಿನವ ಮಲ್ಲಿಕಾರ್ಜುನದೇವರಂ ಕಣ್ದು ತಂನ ಪೆರ್ಗ್ಗ
೧೦. [ಡೆ] ನಾಗ್ಯಣನಾಯಕ ಪ್ರಮುಖ ನಾಲುಕು ಕರಣಂಗಳುಂ [ಪೆ]
೧೧. [ರ್ಗ್ಗಡೆ] ನಾಗದೇವನುಂ ಚಿಕ್ಕಚಂಡರಸ ಸಾಂಬರಸಂ ಮಾಚಗಾಲು
೧೨. ಂಡ [ರೇ] ಚಿಗಾಲುಡರು [ಂ] ಮುಖ್ಯವಾಗಿ ಸಮಸ್ತ ಮಾನ್ಯಕಾಱರುಂ
೧೩. ಏಳನೆಯ ಚಿತ್ರಭಾನು ಸಂವತ್ಸರದ ವೈಶಾಖದ ಅಮಾವಾ
೧೪. ಸ್ಯೆ ಸೋಮವಾರ ಬ್ಯತೀಪಾತದಂದು ನೆಲುವಿಗೆಯ ಶಿವಯೋಗಿ
೧೫. ಸಾತ್ಯೆಯ್ಯನನುದ್ದೇಶಿಸಿ ಅವರ ಭ್ರಿತ್ಯ ಬಸವಯ್ಯಂಗೆ ಊರಿಂ ಪಡುವ,
೧೬. ಬೇವಿನೂರದಾರಿಯಿಂ ಬಡಗ, ಅಮ್ಮಬ್ಬೇಶ್ವ[ರ]ದ ಸ್ತಳದಿಂ ಮೂಡ, ಸೂರ್ಯ
೧೭. ದೇವರ ಕೆಯಿಂ ತೆಂಕ, ಸರ್ವನಮಸ್ಯವಾಗಿ ಬಿಟ್ಟರು...

(ಮುಂದೆ ದತ್ತಿಯ ವಿವರಣೆ, ಬಿಜ್ಜಳನ ಮಗ ಸೋವಿದೇವನಕಾಲದ ಇನ್ನೊಂದು ದತ್ತಿ ಇವೆ)

ಶಾಸನದ ಮಿತಿ

ಈ ಶಾಸನದಲ್ಲಿ ಹೇಳಲಾದ "ಕಳಚುರಿ ಭುಜಬಳ ಚಕ್ರವರ್ತಿ ತ್ರಿಭುವನ ಮಲ್ಲದೇವ"ನೆಂದರೆ ಕಳಚುರಿವಂಶದ ಸುಪ್ರಸಿದ್ಧ ಅರಸು ಬಿಜ್ಜಳ. ಬಿಜ್ಜಳನು ಕಲ್ಯಾಣನೆಲೆವೀಡಿನೊಳು ಸು ಖ ಸಂ ಕ ಥಾ ವಿನೋದದಿಂದ ರಾಜ್ಯವಾಳುತ್ತಿರುವಾಗ ಈತನ ಆಳಿಕೆಯ 'ಏಳನೆಯ ಚಿತ್ರಭಾನು ಸಂವತ್ಸರ' ಅಂದರೆ ಕ್ರಿ.ಶ. ೧೧೬೨ರಲ್ಲಿ ಈ ಶಾಸನ ಹುಟ್ಟಿದೆ.

ಮೂವತ್ತಾಱುಂ ಬಾಡ

"ತರ್ದವಾಡಿಯೆಸೆಗುಂ ತತ್ಕುಂತಳ ಕ್ಷೋಣಿಯೊಳ್" "ಆ ವಿಷಯದಲ್ಲಿ ಸೊಗಯಿಸುವುದು ಮೂವತ್ತಾಱುಂ

ಬಾಡಂ" ಎಂದು ಹೇಳುವ ಬೇವಿನೂರ ಶಾಸನ[೧]ದಿಂದ ಕುಂತಳನಾಡಿನ ತರ್ದವಾಡಿ ವಿಷಯದಲ್ಲಿ 'ಮೂವತ್ತಾಱುಂ ಬಾಡ'ವೆಂಬ ಪ್ರದೇಶವೊಂದು ಇದ್ದಿತೆಂದು ತಿಳಿದುಬರುತ್ತದೆ. ಈ 'ಮೂವತ್ತಾಱುಂ ಬಾಡ'ದ ಉಲ್ಲೇಖ ಪ್ರಸ್ತುತ ಶಾಸನದಲ್ಲಿ ಬರುತ್ತಿದ್ದು ೩೬ ಗ್ರಾಮಗಳನ್ನೊಳಗೊಂಡ ಈ ಪ್ರದೇಶವೆಂದರೆ ಈಗಿನ ಇಂಡಿ ತಾಲೂಕಿನ ಒಂದು ಭಾಗ ವಾಗಿರಬಹುದು.

ಲಕ್ಷ್ಮೀದೇವ ದಂಡನಾಯಕ

ಮೇಲೆ ಹೇಳಿದ ಮೂವತ್ತಾಱುಂ ಬಾಡ ಪ್ರದೇಶವನ್ನು ಆಳುತ್ತಿದ್ದವನು ಲಕ್ಷ್ಮೀದೇವ ದಂಡನಾಯಕನು. ಬಿಜ್ಜಳನ ಪಾದಪದ್ಮೋಪಜೀವಿಯಾದ ಈತನು ಒಮ್ಮೆ ಅಮಾವಾಸ್ಯೆಯ ದಿನ ಭೀಮಾತೀರದ ಭೂಯಾರ ಗ್ರಾಮಕ್ಕೆ ನದೀಸ್ನಾನನಿಮಿತ್ತ ಬಂದು, ಅಲ್ಲಿಯ ಅಭಿನವ ಮಲ್ಲಿ ಕಾರ್ಜುನ ದೇವರ ದರ್ಶನ ಪಡೆದು 'ನೆಲುವಿಗೆಯ ಶಿವ ಯೋಗಿ ಸಾತೈಯ್ಯನ ಭೃತ್ಯ ಬಸವಯ್ಯ'ನೆಂಬವನಿಗೆ ಭೂಮಿಯೊಂದನ್ನು ದಾನ ನೀಡಿದನು.

ನೆಲುವಿಗೆಯ ಶಿವಯೋಗಿ ಸಾತಯ್ಯ

ನೆಲುವಿಗೆ ಎಂಬ ಹೆಸರಿನ ಹಲವು ಗ್ರಾಮಗಳಿದ್ದರೂ ಶಾಂತಯ್ಯ ಶರಣನಿಗೆ ಸಂಬಂಧಿಸಿದದು ಗುಲ್ಬರ್ಗಾ ಜಿಲ್ಲೆಯ ಜೀವರಗಿ ತಾಲುಕಿನ ನೆಲುವಿಗೆಯೆಂದು ಪರಂಪರೆಯ ಹೇಳಿಕೆ. ಈ ನೆಲುವಿಗೆಗೂ ಈ ಶಾಸನ ಲಭಿಸಿದ ಭೂಯಾರಕ್ಕೂ ಕೇವಲ ೩೦ ಮೈಲಿನ ಅಂತರವಿದೆ. ಎರಡನೆಯದಾಗಿ ಶಾಂತಯ್ಯ>ಸಾಂತಯ್ಯ>ಸಾತಯ್ಯ ಎಂಬ ಪರಿವರ್ತನೆ ಕನ್ನಡಭಾಷೆಯ ಸಹಜ ವ್ಯಾಪಾರ. ಅದಕ್ಕಾಗಿ ಶಾಸನೋಕ್ತ 'ನೆಲುವಿಗೆಯ ಶಿವಯೋಗಿ ಸಾತೈಯ್ಯ'ನೆಂದರೆ ಶರಣ ಸಮುದಾಯದಲ್ಲಿ ಕಂಡುಬರುವ ನೆಲುವಿಗೆಯ ಶಾಂತಯ್ಯನೇ ಎಂಬುದು ಖಚಿತ.

ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮಾವಳಿ[೨] ಯನ್ನು ಬಿಟ್ಟರೆ ವೀರಶೈವ ಯಾವ ಕೃತಿಯಲ್ಲಿಯೂ ಈ ಹೆಸರು ನನ್ನ ಗಮನಕ್ಕೆ ಬರಲಿಲ್ಲ. ಇತ್ತೀಚಿಗೆ ಪ್ರಕಟ ವಾದ 'ಶಿವಶರಣ ಕಥಾರತ್ನ ಕೋಶ' (ತ. ಸು. ಶಾಮ ರಾಯರು)ದಲ್ಲಿಯು ಈ ಹೆಸರಿಲ್ಲ. ಅದಕ್ಕಾಗಿ ನೆಲುವಿಗೆಯ ಗ್ರಾಮಸ್ಥರಿಂದ ಪತ್ರದ ಮುಖಾಂತರ ಕೆಳಗಣ ವಿಷಯ ವನ್ನು ಸಂಗ್ರಹಿಸಿದ್ದೇನೆ.[೩]

"ನೆಲುವಿಗೆಯಲ್ಲಿ ಶಾಂತಯ್ಯನೆಂಬ ಶರಣನಿದ್ದನು. ಪ್ರತಿನಿತ್ಯ ಸೂರ್ಯೋದಯ ಸಮಯದಲ್ಲಿ ನದೀಸ್ನಾನ ಮಾಡುವಾಗ ನೀರಮೇಲೆ ಕೋಲು ನಿಲ್ಲಿಸುತ್ತಿದ್ದನು. ಇದ ರಿಂದ ಆತನಿಗೆ 'ಕೋಲು ಶಾಂತಯ್ಯ' ಎಂಬ ಇನ್ನೊಂದು ಹೆಸರು ರೂಢವಾಯಿತು. ನೆಲುವಿಗೆಯಲ್ಲಿ ಈಗಲೂ ಶಾಂತಯ್ಯನ ಜೀರ್ಣ ಗವಿಯೊಂದಿದೆ. ಕವಿಚರಿತೆಕಾರರ ಗಮನಕ್ಕೆ ಬಾರದ 'ಮಡಿವಳ ಮಾಚಿದೇವ ಪುರಾಣ' 'ಕೆಂಭಾವಿ ಭೋಗಣ್ಣನ ಪುರಾಣ'ಗಳಲ್ಲಿ ಈತನ ವಿಷಯ ಬರುತ್ತದೆ.

ಈ ಹೇಳಿಕೆಯಿಂದ ನೆಲುವಿಗೆಯ ಶಾಂತಯ್ಯ ಮತ್ತು ಕೋಲಶಾಂತಯ್ಯ ಎಂಬಿವು ಒಬ್ಬ ವ್ಯಕ್ತಿಯ ಎರಡು ಹೆಸರುಗಳೆಂದು ಭಾವಿಸಬೇಕಾಗುತ್ತದೆ. ಆದರೆ ಪಾಲ್ಕುರಿಕೆ ಸೋಮನ ಗಣಸಹಸ್ರನಾಮಾವಳಿಯಲ್ಲಿ ಈ ಎರಡು ಹೆಸರು ಗಳು ಬೇರೆಬೇರೆಯಾಗಿಯೇ ಇವೆ. ಈ ವಿಷಯವಾಗಿ ಹೆಚ್ಚು ಸಂಶೋಧನೆ ನಡೆಯಬೇಕು.

ಈ ಶಾಸನದಿಂದ ನೆಲುವಿಗೆಯ ಶಾಂತಯ್ಯನಿಗೆ ಬಸವಯ್ಯ ನೆಂಬ ಭೃತ್ಯಯಿದ್ದನೆಂದು ತಿಳಿದುಬರುತ್ತದೆ. 'ನೆಲುವಿಗೆಯ ಶಿವಯೋಗಿ ಸಾತೈಯ್ಯನನುದ್ದೇಶಿಸಿ ಅವರ ಭೃತ್ಯ ಬಸವಯ್ಯಂಗೆ' ದತ್ತಿ ನೀಡಲಾಯಿತೆಂದು ಇಲ್ಲಿ ಹೇಳಿರುವುದ ರಿಂದ ದತ್ತಿಪಡೆದದು ಶಾಂತಯ್ಯನಲ್ಲ. ಅವರ ಶಿಷ್ಯ ಬಸವಯ್ಯ. ಬಹುಶಃ ಈ ದಾನಸಂದರ್ಭದಲ್ಲಿ ಶಾಂತಯ್ಯನು ಬದುಕಿದ್ದನೋ ಇಲ್ಲವೋ ಹೇಳಲು ಬರುವುದಿಲ್ಲ. ಒಂದು ವೇಳೆ ಐಕ್ಯವಾಗಿದ್ದರೆ ಈತನು ಬಸವಣ್ಣನವರಿಗೆ ಪ್ರಾಚೀನ ನಾಗುತ್ತಾನೆ. ಆದರೆ ಕಲ್ಯಾಣದ ಭಕ್ತಿ ಆಂದೋಲನೆಯಲ್ಲಿ ಈತನೂ ಪಾಲುಗೊಂಡಿದ್ದನೆಂದು ತಿಳಿದುಬರುವುದರಿಂದ ಬಹುಶಃ ಬಸವಣ್ಣನವರಿಗೆ ಹಿರಿಯ ಸಮಕಾಲೀನನಾಗಿರ ಬೇಕು.

ಒಂದು ಸಂದೇಹ

ಮೊಗಲಾಯಿ ಇಲಾಖೆಯ ಸಿರಿವಾಳ ಗ್ರಾಮದ ಸಿದ್ಧ ಲಿಂಗೇಶ್ವರ[೪] ದೇವಾಲಯದ ಶಾಸನದಲ್ಲಿ "ಶ್ರೀಮದ್ಯಣಿ

---

೧. S.I.I. xx. No. 175

೨. ಗಣಸಹಸ್ರನಾಮಾವಳಿಯಲ್ಲಿ 'ನಿಲಿವಿಗೆಯ ಶಾಂತಮಲ್ಲಯ್ಯ' ಎಂದು ಹೇಳಲಾಗಿದೆ.

೩. ಈ ವಿಷಯುವನ್ನು ಸಂಗ್ರಹಿಸಿ ಕಳಿಸಿದ ಶ್ರೀ ನೀಲಕಂಠಪ್ಪ ದೇವರಮುನಿ ಅವರಿಗೆ ಕೃತಜ್ಞ.

೪. ಶಿವಾನುಭವ (೪–೨)ರಲ್ಲಿ ಈ ಶಾಸನ ಅಚ್ಚಾಗಿದೆ.

ಮಾದ್ಯಷ್ಟಗುಣಸಂಪನ್ನರುಂ ಷಟ್ಕ್ರಿಯಾ ನಿರತರುಂ ಸಾರ ಸೌರಭ್ಯ ಸರ್ವನಿಸ್ಸಂಗರುಮಪ್ಪ ಶಿವಯೋಗಿ ಶಾಂತಮಯ್ಯ ಗಳ ಪುತ್ರ ರೇಣುಕಾಚಾರ್ಯರ ಪ್ರಭಾವವಂತೆಂದೊಡೆ" ಎಂಬ ವಾಕ್ಯವೊಂದಿದೆ. ನೆಲುವಿಗೆ-ಭೂಯರ, ನೆಲುವಿಗೆ-ಸಿರಿವಾಳಗಳು[೫] ಕೇವಲ ೨೫-೩೦ ಮೈಲಿನ ಅಂತರದಲ್ಲಿವೆ. ಅಲ್ಲದೆ ಭೂಯಾರ ಶಾಸನ (ಕ್ರಿ. ಶ. ೧೧೬೨) ಮತ್ತು ಸಿರಿವಾಳ ಶಾಸನ (ಕ್ರಿ.ಶ.೧೧೮೨)ಗಳು ಕೇವಲ ೨೫ ವರುಷ ಗಳ ಅಂತರದಲ್ಲಿ ಹುಟ್ಟಿವೆ. ಅದಕ್ಕಾಗಿ ಈ ಭೂಯಾರ ಶಾಸನದ 'ನೆಲುವಿಗೆಯ ಶಿವಯೋಗಿ ಸಾತ್ಯೆಯ್ಯ' ಮತ್ತು ಸಿರಿವಾಳ ಶಾಸನದ 'ಶಿವಯೋಗಿ ಶಾಂತಿಮಯ್ಯ' ಎಂಬವರು ಏಕವ್ಯಕ್ತಿಯಾಗಿರಬಹುದೇನೋ. ಇದಕ್ಕೆ ಇನ್ನೂ ಸಬಲ ಆಧಾರಗಳು ಬೇಕು.

ಈ ಶಾಸನದ ಮಹತ್ವ

ಕ್ರಿ. ಶ. ೧೧೯೦ರ ಸುಮಾರಿ ಅಬ್ಬಲೂರ ಶಾಸನವೇ ಕಲ್ಯಾಣದ ಶಿವಶರಣರನ್ನು ಕುರಿತ ಪ್ರಾಚೀನತಮ ಶಾಸನವೆಂದು ಬಹುದಿನಗಳಿಂದ ಪಂಡಿತರ ಅಭಿಪ್ರಾಯವಾಗಿತ್ತು. ಆದರೆ ಕ್ರಿ. ಶ. ೧೧೮೪ರ ತಾಳೀಕೋಟೆಯ ಶಾಸನವೇ ಪ್ರಾಚೀನವೆಂದು ನಾನು ಬೇರೊಂದು ಲೇಖನದಲ್ಲಿ ತೋರಿಸಿ ಕೊಟ್ಟಿದ್ದೆನು. ಆದರೆ ಕ್ರಿ. ಶ. ೧೧೬೨ರ ಈ ಭೂಯಾರ ಶಾಸನ ತಾಳಿಕೋಟೆ ಶಾಸನಕ್ಕಿಂತ ಪ್ರಾಚೀನವೂ, ಬಸವಣ್ಣನವರು ಬದುಕಿರುವಾಗ, ಕಲ್ಯಾಣದ ಭಕ್ತಿ ಆಂದೋಲನ ಯೌವನ ಸ್ಥಿತಿಯಲ್ಲಿರುವಾಗ, ಹುಟ್ಟಿದುದೂ ಆಗಿರುವುದರಿಂದ ಶರಣರ ಇತಿಹಾಸದಲ್ಲಿ ಇದಕ್ಕೆ ವಿಶಿಷ್ಟ ಮರ್ಯಾದೆ ಸಲ್ಲುತ್ತದೆ.

ಕ್ರಿ. ಶ. ೧೨೮೦ರ ಮರಡಿಪುರದ ಶಾಸನದ[೬] "ಮರ್ತ್ಯಲೋಕದ ಗಣಂಗಪ (=ಳ್ ?) ಸ್ರೀ (=ಸಿ)ರಿಯಾಳುವ ದಾಸ ದಸವರ್ಮ ದಿ(=ಓ)ಹಿಲ ಉದ್ಭಟ ನಂಬಿ ಕುಂಬಾರ ಗುಂಡ ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜ ದಣ್ಣಾಯಕ ಸುರಿಗೆಯ ಚೆಲ್ವಡರಾಯ ಸಂಗನಬಸವಯ್ಯ ಲಿನಿಮಿತಿ (=ಅನಿಮಿಷ) ಕೇಶವರಾಜ ಜಗದೇವ ದಣ್ಣಾಯಕ ಏಕಾಂತದ ರಾಮಯ್ಯ ಸೊನ್ನಲಿಗೆಯ ರಾಮಯ್ಯ ಹುಲಿಗೆರೆಯ ಪೊನ್ನಯ್ಯ ನೆಲುವಿಗೆಯ ಸಾಂತಯ್ಯ ಸಕಲ ಗಣಪರಿವೇಷ್ಟಿತ ಶ್ರೀ ಕಲಿದೇವರ ಪ್ರಶಸ್ತಿಮಂಗಳಂ" ಎಂಬ ಪ್ರಶಸ್ತಿಗದ್ಯದಲ್ಲಿಯೂ ಈ ನೆಲುವಿಗೆಯ ಶಾಂತಯ್ಯನ ಹೆಸರು ಕಂಡುಬರುತ್ತದೆ. ಒಟ್ಟಿನಲ್ಲಿ ಎರಡು ಶಾಸನಗಳು ಈತನನ್ನು ಹೆಸರಿಸುತ್ತಿದ್ದು, ಇವುಗಳಲ್ಲಿ ಪ್ರಸ್ತುತ ಭೂಯಾರ ಶಾಸನಕ್ಕೆ ಈಗಿನ ಮಟ್ಟಿಗೆ ಕಲ್ಯಾಣಶರಣರನ್ನು ಕುರಿತ ಪ್ರಾಚೀನತಮ ಶಾಸನವೆಂಬ ಮಹತ್ವ ಸಲ್ಲುತ್ತದೆ.

---

೫. ಶಿವಾನುಭವ (೪-೨)ದಲ್ಲಿ ಶಾಸನ ಮೊಗಲಾಯಿ ಇಲಾಖೆಯ ಸಿರಿವಾಳ ಎಂದು ಮಾತ್ರ ಹೇಳಲಾಗಿದೆ. ಮೊಗಲಾಯಿ ಇಲಾಖೆಗೆ ಸಂಬಂಧಿಸಿದ ಗುಲ್ಬರ್ಗಾ ಮತ್ತು ರಾಯಚೂರ ಜಿಲ್ಲೆಗಳಲ್ಲಿ ಒಂದೊಂದು ಸಿರಿವಾಳಗಳಿವೆ. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ನನಗೆ ಬರೆದ ಪತ್ರದಲ್ಲಿ ಈ ಶಾಸನವಿರುವ ಸಿರಿವಾಳ ರಾಯಚೂರ ಜಿಲ್ಲೆಗೆ ಸಂಬಂಧಪಟ್ಟುದೆಂದು ತಿಳಿಸಿದ್ದಾರೆ. ಆದರೆ ಶಾಸನದಲ್ಲಿ ಎಳಿಮೇಲವನ್ನಾಳುವ ಮಂಡಲೇಶ್ವರ ಸಿಂಗಿದೇವನ ಹೆಸರು, ದತ್ತಿಗ್ರಾಮದ ಮುರವಡಿಯ ಹೆಸರೂ ಬರುತ್ತಿದ್ದು ಇವು ಗುಬ್ಬರ್ಗಾ ಜಿಲ್ಲೆಯ ಸಿರಿವಾಳಕ್ಕೆ ಸಮೀಪವಾಗಿವೆ. ಅದಕ್ಕಾಗಿ ಈ ಶಾಸನದ ಸಿರಿವಾಳ ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟುದಾಗಿರಬೇಕೆಂದು ತೋರುತ್ತದೆ. ಈ ಗ್ರಹಿಕೆಯನ್ನೂ ಇಲ್ಲಿ ಇಟ್ಟುಕೊಳ್ಳಲಾಗಿದೆ.

೬. E. C. II ಮಂಡ್ಯ ೮೩

The Vachanas are short pithy sayings and display deep thought and meaning. They appeal to the mind very powerfully and are very impressive, being deeply spiritual. In fact they form a unique kind of literature in Kannada in as much as the like of them are not found in any other. Indian literature.

Dr. P. G. Halakatti

ಒಂದು ಪರಿಶೀಲನೆ

ಬಸವಣ್ಣನವರ ವ್ಯಕ್ತಿತ್ವ

ಟಿ. ಆರ್. ಮಹದೇವಯ್ಯ

ಮಾನವರಲ್ಲಿ ಮಾನವ ಗುಣದ ಮೌಲ್ಯಗಳು ಕಡಿಮೆಯಾಗಿ, ಮೃಗೀಯಭಾವನೆ ಮೈದೋರಿ, ಅಂಧಕಾರ ಕವಿದಿರುವಾಗ, ಆ ಮಾನವರಲ್ಲಿಯೇ ಅಂತರ್ಗತವಾದ ಭಗವತ್ ಶಕ್ತಿಯು ಯಾರೋ ಒಬ್ಬನಲ್ಲಿ ವಿಕಾಸವಾಗಿ, ಮಾನವಕುಲೋದ್ಧಾರವನ್ನುಂಟು ಮಾಡುತ್ತದೆ. ಇದು ಮಾನವ ಇತಿಹಾಸದ ಪುಟಗಳತ್ತ ಕಣ್ಣಾಡಿಸಿದಾಗ ಗೋಚರಿಸುವ ಸತ್ಯಾಂಶ. ಅದನ್ನೇ ನಾವು 'ಯದಾ ಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತಾ ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಂ' ಎಂಬ ಗೀತೋಕ್ತಿಯಂತೆ ಭಗವಂತನು ಲೋಕಕಲ್ಯಾಣ ಮಾಡಲು ಅವತರಿಸಿದನೆಂದು ನಂಬುತ್ತೇವೆ.

ಮನುಷ್ಯರಲ್ಲಿ ಸ್ವಭಾವ ಸಿದ್ಧವಾದ ದೌರ್ಬಲ್ಯಗಳನ್ನೆಲ್ಲಾ ನೀಗಿ, ತಮ್ಮ ದೈವೀಗುಣವನ್ನು ಉದ್ದೀಪನಗೊಳಿಸಿ ಮಾನವ ಕಲ್ಯಾಣವನ್ನು ಚಿಂತಿಸಿ, ಅದಕ್ಕಾಗಿ ತಮ್ಮ ತನವನ್ನೇ ಅರ್ಪಿಸಿದ ಮಾನವ ಶ್ರೇಷ್ಠರ ಕಥೆಗಳಿಗೇನು ನಮ್ಮ ದೇಶದಲ್ಲಿ ಕೊರತೆ ಇಲ್ಲ. ನಾಡಿನಲ್ಲಿ ಎಲ್ಲಿ ನೋಡಿದರೂ ಅವರ ಮಹಾಮಣಿಹದ ಕುರುಹುಗಳು ಕಾಣುತ್ತವೆ, ಎತ್ತ ಕಿವಿದೆರೆದರೂ ಅವರ ತೂರ್ಯವಾಣಿ ಮೊಳಗುತ್ತದೆ, ನಮ್ಮ ಸಂಸ್ಕೃತಿಯ ದ್ಯೋತಕವಾಗಿ ಮೆರೆಯುತ್ತಿವೆ.

ಅಂಥ ಮಾನವ ಪ್ರೇಮಿಗಳು, ಮಹಾನುಭಾವರ, ಮಹಾತ್ಮರ ಜೀವನ ಚರಿತ್ರೆ ಉಳಿದವರಿಗೆ ಮಾರ್ಗದರ್ಶಕ. ಅಂಥವರ ವ್ಯಕ್ತಿತ್ವ ಪರಮ ಪೂಜ್ಯ. Lives of great men make our lives sublime ಎಂಬ ಆಂಗ್ಲ ಹೇಳಿಕೆಯಂತೆ ಮಹಾತ್ಮರ ಬಾಳನೆನಪು ನಮ್ಮನ್ನು ಪುನೀತರನ್ನಾಗಿ ಮಾಡುತ್ತದೆ.

ಅಂಥ ಪುಣ್ಯಪ್ರದವ್ಯಕ್ತಿಗಳಲ್ಲಿ ಬಸವಣ್ಣನವರೂ ಒಬ್ಬರು. ಅವರು ಕನ್ನಡ ನಾಡಿನಲ್ಲಿ, ಹನ್ನೆರಡನೆಯ ಶತಮಾನದಲ್ಲಿ ನಡೆದ ವೈವಿಧ್ಯಮಯವಾದ ಕ್ರಾಂತಿಯ ಹರಿಕಾರರಾಗಿ, 'ಮರ್ತ್ಯಕ್ಕೆ ಮಹವತಂದು' ಮಾನವ ಬಾಳನ್ನು ಬೆಳಗಿದ ಜಗಜ್ಯೋತಿ. ಅವರು ತಮ್ಮ ಬಾಳಿನಲ್ಲಿ ಬರೀ ನುಡಿಯುತ್ತಾ ಸಾಗಿದ 'ವಚನಬ್ರಹ್ಮ'ರಲ್ಲ; ಅದರಂತೆ ನಡೆದು ತೋರಿದ ಧೀಮಂತರು. 'ನುಡಿದಂತೆ ನಡೆ, ನಡೆದಂತೆ ನುಡಿ; ಇದೆ ಜನ್ಮಕಡೆ' ಎಂಬುದು ಅವರ ಸಿದ್ಧಾಂತ. ಅಂತಲೇ ಅವರ ಬಾಳು ಬಂಗಾರವಾಯಿತು; ಮಾತು ಮಾಣಿಕ್ಯವಾಯಿತು. ಅವರ ಬಾಳು ತೆರೆದಿಟ್ಟ ಪುಸ್ತಕ. ನಿಜ. ಆದರೆ ನಾವು ಎಷ್ಟುಮಂದಿ ಅವರ ಬಾಳನ್ನು ಅರ್ಥಮಾಡಿಕೊಂಡಿದ್ದೇವೆ, ಅವರ ವ್ಯಕ್ತಿತ್ವದ ಪೂರ್ಣ ಪರಿಚಯ ಹೊಂದಿದ್ದೇವೆ? ಬಸವಣ್ಣನವರನ್ನು ಕುರಿತಾದ ಸಾಹಿತ್ಯಕ್ಕೇನೂ ಕೊರತೆಯಿಲ್ಲ. ಕನ್ನಡ ಭಾಷೆಯಲ್ಲಷ್ಟೇ ಅಲ್ಲದೆ ಅನ್ಯಭಾಷಾ ಸಾಹಿತ್ಯದಲ್ಲೂ ಅವರ ಬಗ್ಗೆ ಸಂಗತಿಗಳು ದೊರೆಯುತ್ತವೆ. ಅವರ ಹೆಸರು ಶಿಲಾಶಾಸನಗಳಲ್ಲೂ ಉಕ್ತವಾಗಿದೆ.. ಅವರ 'ಆತ್ಮ ಕುಸುಮಾಂಜಲಿ'ಗಳಾದ ಸಾವಿರಾರು ವಚನಗಳು ನಮ್ಮ ಮುಂದಿವೆ. ಇಷ್ಟಿದ್ದರೂ ನಾವು ಬಸವಣ್ಣನವರ ಅಂತರಂಗಿಕ ಜೀವನದ ಬಗ್ಗೆ ಎಷ್ಟು ತಿಳಿದಿದ್ದೇವೆ ಎಂದು ಆತ್ಮಶೋಧನೆ ಮಾಡಿಕೊಂಡರೆ ನಾವು ಬಹುಶಃ ಆ ಭವ್ಯಾತ್ಮನ ವ್ಯಕ್ತಿತ್ವದ ನಿಲುವಿನ ಎತ್ತರವನ್ನಾಗಲೀ, ಅದರ ಆಳವನ್ನಾಗಲೀ, ಅದರ ವ್ಯಾಪ್ತಿ-ದೀಪ್ತಿಗಳನ್ನಾಗಲೀ ಸ್ಪಷ್ಟವಾಗಿ ಕಂಡಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಬಸವಣ್ಣನವರ ಸ್ಪಷ್ಟವಾದ ವ್ಯಕ್ತಿ ಚಿತ್ರವನ್ನು ಅವರ ಎಂಟನೆಯ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಕಾಲಕ್ಕೂ ಪಡೆಯಲಾಗಿಲ್ಲವೆಂಬುದು ನಿಜಕ್ಕೂ ಖೇದಕರ.

ಮಾನವತೆಯ ಮೇಲೆ ಮಂದಾರವಾಗಿ ಅರಳಿದ ಈ ಮಹಾನುಭಾವಿಯ ಅಂತರಂಗಿಕ ಜೀವನದ ಮೌಲ್ಯ ಸಂಗತಿಗಳು ನಿಚ್ಚಳವಾಗಿ ದೊರತಿದ್ದರೆ, ಅದನ್ನು ವ್ಯಕ್ತಪಡಿಸಿ ನಮ್ಮ ಸಾಹಿತ್ಯವು ಇನ್ನೂ ಶ್ರೀಮಂತವಾಗುತ್ತಿತ್ತು. ಸಾಧಕ ಬಸವಣ್ಣನವರ ಸಾಧನೆಯಲ್ಲಿ ಉಂಟಾದ ತೊಂದರೆ

ಅವನ್ನು ಎದುರಿಸಿದ ಬಗೆ, ಪರಿಪೂರ್ಣತೆಯ ಒಂದೊಂದೇ ಮೆಟ್ಟಲೇರಿದಾಗ ಆದ ಅನುಭವ, ಆಗಿನ ಅವರ ಮನಸ್ಥಿತಿ, ಮಾನವನಿಗೆ ಸ್ವಾಭಾವಿಕವಾದ ಮನದ ತಳಮಳ, ಏಳು ಬೀಳು ಇವುಗಳ ಸ್ಪಷ್ಟವಾದ ವಿವರಗಳು ದೊರಕಿದ್ದರೆ ಧಾರ್ಮಿಕರಂಗ ಮತ್ತಷ್ಟು ಉಜ್ವಲವೆನಿಸುತ್ತಿತ್ತು; ಸಾಧಕರಿಗೆ ಸತ್ಯಶೋಧನೆಯ ದಾರಿದೀಪವಾಗುತ್ತಿತ್ತು. ಒಟ್ಟಿನಲ್ಲಿ ಬಸವಣ್ಣನವರ 'ಅಂತರಂಗ-ಬಹಿರಂಗ ವ್ಯಕ್ತಿತ್ವ'ದ ಪೂರ್ಣ ಚಿತ್ರವನ್ನು ತನ್ನ ಹೃನ್ಮಂದಿರದಲ್ಲಿ ತುಂಬಿಕೊಳ್ಳ ಬಯಸುವ ಸಹೃದಯಿಗೆ ನಿರಾಶೆ ಧುತ್ತೆಂದು ಮುಂದೆ ನಿಲ್ಲುತ್ತದೆ.

ಬಸವಣ್ಣನವರ ವ್ಯಕ್ತಿತ್ವವನ್ನರಿಯಲು ಇಷ್ಟುತೊಂದರೆ ಯುಂಟಾಗಲು ಕಾರಣವೇನು ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಬಸವಣ್ಣನವರು ಅಂದಿನ ಅಂಧಕಾರಮಯವಾದ ಸಮಾಜದಲ್ಲಿ ಮಿಂಚಿನಂತೆ ಮಿಂಚಿದರು. ಕಣ್ಣು ಕೋರೈಸುವಷ್ಟು ಉಜ್ವಲ ಪ್ರಕಾಶಮಾನವಾದ ಅವರ ವ್ಯಕ್ತಿತ್ವ ಮರೆಯಾದೊಡನೆ ಮತ್ತೆ ಕುರುಡು ದಟ್ಟೈಸಿತು. ಅವರ ವ್ಯಕ್ತಿತ್ವ, ಬಾಳ ರೀತಿ-ನೀತಿಗಳು ಹತ್ತಿರದಲ್ಲಿರುವವರಿಗೆ ಒಂದು ರೀತಿ, ದೂರವಿದ್ದವರಿಗೆ ಮತ್ತೊಂದು ರೀತಿ ಕಂಡಿತು. ಅಲ್ಲದೆ ಬಸವಣ್ಣನವರ ಜೀತನ ಸಾಮಾನ್ಯರ ದಂತಲ್ಲ; ಅವರದು ವೈವಿಧ್ಯಮಯವಾದ ಬಾಳು. ಅವರು ಭಕ್ತ, ಗೃಹಸ್ಥ, ರಾಜಕಾರಿಣಿ, ಕವಿ, ಧರ್ಮಬೋಧಕ, ಕ್ರಾಂತಿಕಾರಿ, ಎಲ್ಲಕ್ಕಿಂತ ಮಿಗಿಲಾಗಿ ಮಾನವ ಹಿತೈಷಿ. ಇಂಥವರ ವ್ಯಕ್ತಿತ್ವವನ್ನು ಆಮೂಲಾಗ್ರವಾಗಿ ಅರಿಯುವುದು ಸಣ್ಣ ಕೆಲಸವೇನಲ್ಲ. ಬ ಸ ವ ಣ್ಣ ನ ವ ರ ಭವ್ಯ ಬಾಳು ಕತೆಯಾಗಿ ಒಬ್ಬರಿಂದ ಒಬ್ಬೊಬ್ಬರಿಗೆ ಅನೇಕ ವ್ಯತ್ಯಾಸಗಳೊಂದಿಗೆ ಹ ರಿ ಯಿ ತು. ದೈವಭಕ್ತಿಯುಳ್ಳವರನ್ನು, ಮಹಿಮಾಸಂಪನ್ನರನ್ನು ಅವತಾರ ಪುರುಷರೆಂದು ಪರಿಗಣಿಸುವುದು ಜನರ ಬಹುಕಾಲದ ನಂಬಿಕೆ. ವಿಶೇಷವಾಗಿ ಇಂಥ ನಂಬಿಕೆ, ಭಕ್ತಿ, ಒಲವು, ಕೆಲವು ಕಡೆ ದ್ವೇಷಾಸೂಹೆಗಳಿಂದ ಕೂಡಿದ ಸಂಗತಿಗಳು ಜನರ ಮಾತು-ಕತೆಗಳ ಮೂಲಕ ಹರಿದವು. ಇದನ್ನು ಕೇಳಿದ ಕವಿಗಳು ತಮಗೆ ಸೂಕ್ತ ಕಂಡಂತೆ, ತಾನು ರಚಿಸುವ ಕಾವ್ಯದ ಸೊಬಗನ್ನು ಹೆಚ್ಚಿಸಲೋ, ತನ್ನ ಕಾವ್ಯದ ನಾಯಕನ ಮಹತ್ವವನ್ನು ಉಜ್ವಲಗೊಳಿಸಲೋ ಕಲ್ಪನೆಯ ಕುಸುರುಗೆಲಸಮಾಡಿ ಕಾವ್ಯಗಳನ್ನು ಕಟ್ಟಿದರು. ಅಲ್ಲಿ ಮೂಡಿದ ಕಲ್ಪಿತಕಥೆ ನಿಜ ಸಂಗತಿಯನ್ನು ಮರೆಸುವುದೂ ಉಂಟು. ಅದರಲ್ಲೂ 'ಸ್ವಮತ ಮಂಡನೆ, ಪರಮತ ಖಂಡನೆ'ಯನ್ನೇ ಮುಖ್ಯೋದ್ದೇಶವಾಗುಳ್ಳ ಕವಿಗಳಲ್ಲಂತೂ ಮೂಲ ಸಂಗತಿಗಳು ತಿಳಿಯುವಂತೆಯೇ ಇಲ್ಲ.

ಬಸವಣ್ಣನವರನ್ನು ಕುರಿತಾದ ಸಾಹಿತ್ಯವನ್ನು ಎರಡು ಭಾಗ ಮಾಡಬಹುದು:

೧. ಬಸವಣ್ಣನವರನ್ನು ದೇವಾಂಶ ಸಂಭೂತರೆಂದು ನಂಬಿ, ಮಾನವಕುಲೋದ್ಧಾರಕರೆಂದು ಭಾವಿಸಿ, ಅವರನ್ನು ಪೂಜ್ಯಭಾವದಿಂದ ಕಂಡು ಕಾವ್ಯರಚಿಸಿದ ಕವಿಗಳು: ಹರಿಹರ (ಬಸವರಾಜದೇವರ ರಗಳೆ, ೧೨೦೦) ಭೀಮಕವಿ (ಬಸವಪುರಾಣ, ೧೩೬೯), ಷಡಕ್ಷರದೇವ (ವೃಷಭೇಂದ್ರ ವಿಜಯ, ೧೬೭೭) ಇತ್ಯಾದಿ. "ತಮ್ಮ ತಮ್ಮ ಚರಿತ್ರ ನಾಯಕರನ್ನು ಕಾರಣಿಕರೂ, ಅವತಾರಿಗಳೂ, ಅಲೌಕಿಕರೂ ಎಂದು ವರ್ಣಿಸುವ ಹವ್ಯಾಸದಲ್ಲಿ ಸತ್ಯಕ್ಕಿಂತಲೂ, ಯಥಾರ್ಥತೆಗಿಂತಲೂ ಹೆಚ್ಚಾಗಿ ಕಲ್ಪನೆಗೆ ಎಡೆಗೊಟ್ಟುದು ಗೋಚರವಾಗುತ್ತದೆ" ಎಂಬ ಪ್ರೊ. ಶಿ. ಶಿ. ಬಸವನಾಳರ ಮಾತನ್ನು ಇಲ್ಲಿ ನೆನೆಯಬಹುದು. (ಬಸವಣ್ಣನವರ ವಚನಗಳು ಪುಟ. ೧).

೨. ಎರಡನೆಯ ಗುಂಪು ಎಂದರೆ ಬಸವಣ್ಣನವರನ್ನು ದೇವಾಂಶಸಂಭೂತರೆಂದು ನಂಬದೆ, ಅವರನ್ನು, ಅವರ ಧರ್ಮವನ್ನು ಖಂಡಿಸುವ ಗುಂಪು. ಮುಖ್ಯವಾಗಿ ಜೈನ ಕವಿಗಳು. ಉದಾ. ಧರಣಿಪಂಡಿತ (ಬಿಜ್ಜಳರಾಯ ಚರಿತೆ ೧೬೫೦), ಚಂದ್ರಸಾಗರವರ್ಣಿ (ಬಿಜ್ಜನಳರಾಯ ಪುರಾಣ ೧೭೫೦) ಇತ್ಯಾದಿ. ಬಸವಣ್ಣನವರ ಬಗ್ಗೆ ಜೈನ ಮತ್ತು ವೀರಶೈವ ಕವಿಗಳ ದೃಷ್ಟಿ ಬೇರೆಯಾಗಿರುವುದು ಸ್ವಾಭಾವಿಕ. ಮೊದಲ ಗುಂಪಿನ ಕವಿಗಳಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ಬಣ್ಣವೇರಿದ್ದರೆ, ಎರಡನೆಯ ಗುಂಪಿನಿಂದ ಬಣ್ಣಕುಂದಿದೆ. ಈ ಬಣ್ಣದಾಟದಲ್ಲಿ ಅಣ್ಣನವರ 'ನಿಜಬಣ್ಣ'ವನ್ನು ಕಂಡುಕೊಳ್ಳುವುದು ವ್ಯರ್ಥ ಸಾಹಸ.

ಬಸವಣ್ಣನವರು ಚಾರಿತ್ರಿಕ ಪುರುಷರೆಂಬ ಅಂಶವು ಬಿಜ್ಜಳರಾಯನ ಕೆಲವು ಶಾಸನಗಳಿಂದಲೂ ವ್ಯಕ್ತವಾಗಿದೆ. (ಉದಾ. ಎಕ. XI, ದಾವಣಗೆರೆಯ ೪೨ನೇ ಶಾಸನ, ಎಕ. VII ಶಿಕಾರಿಪುರದ ೧೨೩ನೇ ಶಾಸನ). ಆ ಶಾಸನಗಳಲ್ಲಿ ಉಕ್ತವಾಗಿರುವ ಬಿಜ್ಜಳನ ಪ್ರಧಾನಮಂತ್ರಿ ಕಸಪಯ್ಯ ಎಂಬ ವ್ಯಕ್ತಿ ಬಸವಣ್ಣನೇ ಎಂಬ ವಾದವಿದೆ. ಇತ್ತೀಚಿನ ಸಂಶೋಧನೆ, ವಿಚಾರ, ವಿಮರ್ಶೆಗಳು ಆ ಬಗ್ಗೆ ಮತ್ತಷ್ಟು ಸಮಸ್ಯೆಯನ್ನುಂಟು ಮಾಡಿವೆ. ಬಸವಣ್ಣನವರ ಜೀ ವ ನ ದ ಮಹತ್ವಪೂರ್ಣವಾದ ಹಲವು ಸಂಗತಿಗಳು ಸಂದಿಗ್ಧವಾಗಿಯೇ ಉಳಿದಿವೆ. ಒಮ್ಮತವಿಲ್ಲದ ಭಿನ್ನ ರೀತಿಯ ವಿವರಣೆ ಇರುವ ಅವರ ಜೀವನದ ಘಟ್ಟಗಳಾವುವೆಂದರೆ— ೧. ಜನನ, ೨. ಕಪ್ಪಡಿಯಿಂದ ಕಲ್ಯಾಣಕ್ಕೆ

ಹೋದದ್ದು, ೩. ಮಂತ್ರಿಯಾದ ಪ್ರಸಂಗ, ೪. ಸಾಂಸಾರಿಕ ಜೀವನ ಮತ್ತು ೫. ಐಕ್ಯ.

ಬಸವಣ್ಣನವರನ್ನು ಕುರಿತು ಇರುವ ಸಾಧನಗಳಲ್ಲಿ ಸತ್ಯ ಸಂಗತಿಯನ್ನು ನಿರೂಪಿಸುವುದಾವುದು ? ಯಾವ ದಾರಿಯಲ್ಲಿ ಸಾಗಿದರೆ ಅವರ ಸ್ಪಷ್ಟವಾದ ವ್ಯಕ್ತಿತ್ವದ ಅರಿವು ನಮಗುಂಟಾಗುವುದು ಎಂಬುದು ಮುಂದಿನ ಪ್ರಶ್ನೆ.

ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ಬಸವಣ್ಣನವರ ಚಿತ್ರ ಮಸುಕು ಮಸುಕಾಗಿ ಕಾಣಿಸುತ್ತದೆ. ಸಾಧಕನ ಜೀವನವನ್ನು ಅರ್ಥಮಾಡಿಕೊಳ್ಳುವುದು ಕಷ್ಟ; ಅರ್ಥ ಮಾಡಿಕೊಂಡರೂ ಅದನ್ನು ಮನಂಬುಗುವಂತೆ ವ್ಯಕ್ತಪಡಿಸುವುದು ಮತ್ತೂ ಕಷ್ಟ. ಬಸವಣ್ಣನವರ ಹೃದಯ ಸಮೀಪವರ್ತಿಯಾದ ಹರಿಹರ ಅದನ್ನು ನೆರವೇರಿಸಿದ್ದಾನೆ. ಅವರ ಬಾಳಿನ ಘಟನೆಗಳಿಗೂ ಈತನ ಜೀವನಕ್ಕೂ ಅನೇಕ ಸಾಮ್ಯಗಳಿವೆ. ಭಕ್ತಜೀವಿಯಾದ ಹರಿಹರನ ಮನೋಧರ್ಮ ಭಕ್ತಿಭಾಂಡಾರಿ ಬಸವಣ್ಣನವರ ಚಿತ್ತಲಹರಿಯನ್ನು ಕಲೆಯಲ್ಲಿ ಸೆರೆಹಿಡಿಯುವ ಸಾಮರ್ಥ್ಯವನ್ನು ಪಡೆದಿತ್ತು. ದುರ್ದೈವದಿಂದ ಈತನ ಕಾವ್ಯವೂ ಪೂರ್ಣವಾಗಿ ದೊರೆತಿಲ್ಲ. ಕವಿ ಎಂಥವನೇ ಆದರೂ ಸಮಾಜದ ಶಿಶು. ಆ ಕಾಲಮಾನದ ಪ್ರಭಾವಕ್ಕೆ ಒಳಗಾಗುತ್ತಾನೆ. ಹರಿಹರನು ಜನರ ನಂಬಿಕೆ, ಸಂಪ್ರದಾಯಗಳನ್ನು ತನ್ನ ಕಾವ್ಯದಲ್ಲಿ ಮೂಡಿಸಿದ್ದಾನೆ. ಅಲ್ಲದೆ ಕಾವ್ಯನಾಯಕನ ಘನತೆಯನ್ನು ಹೆಚ್ಚಿಸಲು, ಪೂಜ್ಯತೆಯನ್ನು ನೀಡಲು ದೈವತ್ವವನ್ನು ಆರೋಪಿಸಿದ್ದಾನೆ.

ಸುದೈವದಿಂದ ಬಸವಣ್ಣನವರ ಅನೇಕ ವಚನಗಳು ನಮಗೆ ಸಿಕ್ಕಿವೆ. ಅವು ಅವರ ಬಾಳಿನ ಅಂತರಂಗದ ನಿಚ್ಚಳವಾದ ಅಭಿವ್ಯಕ್ತಿ. ಒಳ್ಳೆಯದನ್ನು ಹೇಳಿ ಕೆಟ್ಟದ್ದನ್ನು ಮುಚ್ಚಿಡುವ ಪ್ರವೃತ್ತಿ ಅವರದಲ್ಲ. ನಿರ್ವಂಚನೆಯಿಂದ ಇದ್ದುದನ್ನು ಇದ್ದ ಹಾಗೆ ಹೇಳುವ ಬಿಚ್ಚುಮನಸ್ಸು ಅವರದು. ಅವರ ವಚನಗಳಲ್ಲಿ ಪರಿಪೂರ್ಣತೆಯ ಎಡೆಗೆ ಸಾಗುವ ಸಾಧಕನ ಜೀವನದ ವಿವಿಧ ಅನುಭವಗಳು ನೇರವಾಗಿ, ಸ್ಪಷ್ಟವಾಗಿ, ಸಾರವತ್ತಾಗಿ ರೂಪುಗೊಂಡಿವೆ. ಆತ್ಮಪರಿಶೀಲನದಿಂದ ಅನುಭಾವದವರೆಗಿನ ವಿವಿಧ ನಿರೂಪಗಳು ಅಲ್ಲಿ ಮೈದಾಳಿವೆ. ಆಗಾಗ ತಮಗಾದ ಅನುಭವಗಳನ್ನು ಆಡುನುಡಿಯಲ್ಲಿ ವಚಿಸುತ್ತಿದ್ದ ಅವರ ಈ ನವ್ಯ ಸಾಹಿತ್ಯ ಸಾಧನ ಅವರ ಮನಸ್ಥಿತಿಯನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುತ್ತದೆ. ಈ ವಚನರತ್ನಗಳ ಪ್ರಭೆಯಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಕಂಡುಕೊಳ್ಳಬಹುದು. ಹೀಗೆ ಬಸವಣ್ಣನವರ ನೈಜಚಿತ್ರವನ್ನು ನಮ್ಮೆದುರು ನಿಲ್ಲಿಸುವ ಮಹಾಕಾರ್ಯ ಇನ್ನೂ ಆಗಬೇಕಾಗಿದೆ. ಅವರ ವಚನಗಳನ್ನು ಮುಖ್ಯವಾಗಿರಿಸಿಕೊಂಡು, ಅವರ ಸಮಕಾಲೀನರ ಹೇಳಿಕೆಗಳನ್ನು ಗಣಿಸಿ, ಹರಿಹರನೇ ಮೊದಲಾದ ಕವಿಗಳ ಕಾವ್ಯವನ್ನು ಉಪಯೋಗಿಸಿಕೊಂಡು, ಶಾಸನೋಕ್ತವಾದ ಸಂಗತಿಗಳನ್ನೂ ಪರಿಶೀಲಿಸಿ ಬಸವಣ್ಣನವರ ಸಹಜ ವ್ಯಕ್ತಿತ್ವವನ್ನು ರೂಪಿಸಬೇಕಾಗಿದೆ. ನಾಡಿನ ಪಂಡಿತರು, ವಿಶ್ವವಿದ್ಯಾನಿಲಯಗಳು ಈ ಬಗ್ಗೆ ಕಾರ್ಯೋನ್ಮುಖರಾಗಬೇಕು.

ಬಸವಣ್ಣನವರ ಬಗ್ಗೆ ಇಂದಿನ ಸಮಾಜದಲ್ಲಿ ಎರಡು ಅನಾರೋಗ್ಯ ಪ್ರವೃತ್ತಿಗಳು ಕಾಣುತ್ತಿವೆ: ೧ ಬಸವಣ್ಣನವರನ್ನು ಯಾವುದೋ ಒಂದು ಜಾತಿ, ಮತ, ಪಂಥಕ್ಕೆ ಸೇರಿಸುವ ಸಂಕುಚಿತ ಪ್ರವೃತ್ತಿ. 'ಸಕಲ ಜೀವಾವಳಿಗೆ ಲೇಸನೇ ಬಯಸಿದ' ಮಹಾನುಭಾವವನ್ನು ಒಂದು ಜಾತಿಗೆ ಸೇರಿಸುವುದು ಮಾನವ ಅಲ್ಪತನದ ಪರಮಾವಧಿ. ಮಹಾನುಭಾವರು ಪ್ರಕೃತಿನೀಡುವ ದೈವೀಕೃಪೆ. ಇಂಥವರನ್ನು ಸಮಾಜದ ಒಂದು ಬಣಕ್ಕೆ ಸೇರಿಸುವುದು ಬೆಳಗುವ ಸೂರ್ಯ-ಚಂದ್ರ, ಬೀಸುವಗಾಳಿ, ಸುರಿಯುವಮಳೆಯನ್ನು ಯಾವುದೋ ಒಂದು ಗುಂಪಿಗೆ ಸೇರಿಸ ಬಯಸಿದಂತೆ. ಸತ್ಪುರುಷರು ಇಡೀ ಮಾನವ ಜನಾಂಗದ ಆಧ್ಯಾತ್ಮಸ್ವತ್ತು, ಸಂಪತ್ತು. ಬಸವಣ್ಣನವರನ್ನು ಮಾನವಕುಲೋದ್ಧಾರಕರೆಂಬ ದೃಷ್ಟಿಯಲ್ಲಿ ನಾವು ನೋಡಬೇಕು.

೨. ಬಸವಣ್ಣನವರನ್ನು ದೇವರೆಂದು ಪೂಜಿಸುವುದು: ಮೊದಲನೆಯದು ನಂಬಿಕೆಯಿಲ್ಲದ ನಡೆವಳಿಯಾದರೆ, ಎರಡನೆಯದು ಅತಿನಂಬಿಕೆ ಅಥವಾ ಹುಸಿನಂಬಿಕೆಯ ನಡೆವಳಿ. ಬಸವಣ್ಣನವರು ಮಾನವರೇ. ತಮ್ಮಲ್ಲಿದ್ದ ಸಹಜವಾದ ತನುಗುಣಗಳನ್ನು ಕ್ರಮೇಣ ನೀಗಿಕೊಂಡು, ದೈವೀಗುಣಗಳನ್ನು ವಿಕಾಸಮಾಡಿಕೊಂಡರು. ಇಂಥವರ ಬಗ್ಗೆ ಭಕ್ತಿ, ಅಭಿಮಾನ ತಳೆದ ಜನ ಅವರನ್ನು ಕಾರಣಿಕರು ಎಂದು ಕರೆದರು. ಕವಿಗಳೂ ಅವರಲ್ಲಿ ಸಹೃದಯಿಗಳು ಗೌರವವನ್ನು ಹೊಂದಲೆಂದು ದೇವಾಂಶಸಂಭೂತರೆಂದೇ ಚಿತ್ರಿಸಿದರು. ಬಸವಣ್ಣನವರು ದೇವರೆ? ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ನಾವು ಕಾಣಬೇಕಾದ್ದು ಅವರ ಮಾನವಹೃದಯವನ್ನು, ತನ್ನ ಸಹಜೀವಿಗಳ ಬಗ್ಗೆ ಮಿಡಿಯುವ ಅವರ ಅಂತಃಕರಣವನ್ನು. ಬಸವಣ್ಣನೊಬ್ಬ ಮಾನವಿ, ಆದರ್ಶ ಜೀವಿ. 'ದಯವಿಲ್ಲದ ಧರ್ಮವಾವುದಯ್ಯ, ದಯವೇ ಧರ್ಮದ ಮೂಲವಯ್ಯ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' (ಬಸವ. ೨೪೭) ಎಂದು ಸಾರಿದ ಅವರ ಮನ ಎಷ್ಟು ದೊಡ್ಡದು !

ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೊ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ!
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು.
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಳೈದವು
ಒರ್ವಂಗೆ ಶರಣೆನ್ನ ನಮ್ಮ ಕೂಡಲಸಂಗಮ ದೇವಗೆ.

(ಬಸವ. ೬೨೧)

ತಪ್ಪುಮಾಡಿ, ಪಾಶ್ಚಾತ್ತಾಪದಿಂದ ಬೆಂದು, ಅನ್ಯಮಾರ್ಗ ಕಾಣದೆ ತೊಳಲಾಡುವ ತನ್ನ ಸಹಜೀವಿಗಳಿಗೆ ಕೊಡುವ ಈ ಆಶ್ವಾಸನೆಯಲ್ಲಿ ಕಾಣುವ ಅವರ ಮಾನವತೆ ಎಷ್ಟು ಹಿರಿದು!

'ಕಲ್ಲನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ' (ಬಸವ. ೧೫೪) ಎಂದು ಮಾನವನ ಮನೋದೌರ್ಬಲ್ಯವನ್ನು, ಸತ್ತ್ವಹೀನನಾದ ಆಡಂಬರ ಜೀವನವನ್ನು ಕುರಿತು ಆಡಿದ ಅವರ ಅಮರ ವಾಣಿ ನಮ್ಮ ಕಿವಿಯಲ್ಲಿ ನಿನದಿಸುತ್ತಿರುವಾಗ ಅವರು ನಡೆದು ತೋರಿದ ಪಥದಲ್ಲಿ ಸಾಗದೆ, ಬರೀ ಅವರನ್ನು 'ಕಲ್ಲ ದೇವರು' ಮಾಡಿ ಪೂಜಿಸುವುದು ಅವರಿಗೆ ಅಪಚಾರವೆಸಗಿದಂತೆಯೇ ಸರಿ!

ಬಸವಣ್ಣನವರು ಮುಖ್ಯವಾಗಿ ಮಾನವಿ, ಸಹೃದಯಿ. ಸತ್ಯಾನ್ವೇಷಕ, ದಯಾಸಾಗರ, ಉನ್ನತಮಟ್ಟದ ಕರ್ಮಯೋಗಿ. ಅವರಲ್ಲಿ ಮಾನವನಿಗಿರುವ ಎಲ್ಲಾ ದೌರ್ಬಲ್ಯಗಳೂ ಇದ್ದವು. ಆವರು ಅವನ್ನು ಆತ್ಮಶೋಧನೆಯಿಂದ ಕಂಡುಕೊಂಡು, ತಿದ್ದಿಕೊಳ್ಳುತ್ತಾ ಸಾಗಿ ಪರಿಪೂರ್ಣರಾದರು ಎಂಬುದು ಮುಖ್ಯ. ಬಸವಣ್ಣನವರು ದೇವಾಂಶ ಸಂಭೂತರಾದ್ದರಿಂದ ಮಹಾಕಾರ್ಯವನ್ನು ಸಾಧಿಸಿದರು; ಸಾಮಾನ್ಯರಾದ ನಮಗೆಲ್ಲಿ ಸಾಧ್ಯವೆಂದು ನಾವು ನೈಚಾಚಾರ ತಳೆಯುವುದು ಬೇಡ. ಬಸವಣ್ಣನವರು ದೇವರೆಂದು ದೂರ ದೂಡುವುದು ಬೇಡ, ನಮ್ಮ ಹಾಗೆಯೇ ಮಾನವರು ಎಂದು ತಿಳಿದು ನಮ್ಮೊಡನೆ ಇಟ್ಟುಕೊಳ್ಳೋಣ. ಅವರು ನುಡಿದ ನುಡಿಯನ್ನು ಕೇಳಿ, ಅವರು ನಡೆದ ನಡೆಯಲ್ಲಿ ಸಾಗಿ ಧನ್ಯರಾಗೋಣ.

ಫ್ರೆಂಚ್ ಭಾಷೆಯಲ್ಲಿ ಬಸವೇಶ್ವರರ ವಚನಗಳು

Reveries de Basava ಎಂಬ ಹೆಸರಿನಲ್ಲಿ ಘುಟ್ರಡ್ಸಾಳ (ಮಹೇಶ. ಎಚ್) ಎಂಬುವರು ಪ್ರೊ. ಎಸ್. ಎಸ್. ಬಸವನಾಳ ಮತ್ತು ಪ್ರೊ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಇವರು ಇಂಗ್ಲಿಷ್ ಭಾಷೆಯಲ್ಲಿ ಅನುವಾದಿಸಿದ್ದ ಬಸವಣ್ಣನವರ ವಚನಗಳ ಗ್ರಂಥದ ಆಧಾರದ ಮೇಲೆ ಫ್ರೆಂಚ್ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದಾರೆ. ಇದರಲ್ಲಿ ಬಸವಣ್ಣನವರ ೭೫ ವಚನಗಳಿವೆ. ಧಾರವಾಡದ ನವಕಲ್ಯಾಣ ಮಠದ ಶ್ರೀಕುಮಾರ ಸ್ವಾಮಿಗಳು ಬರೆದಿರುವ ಪ್ರಸ್ತಾವನೆ La Weltan Schauung du Viracivaisme ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಈ ಗ್ರಂಥದಲ್ಲಿ ಬಸವಣ್ಣನವರ ವಚನಗಳೊಂದಿಗೆ ಅಕ್ಕಮಹಾದೇವಿಯ ೬ ವಚನಗಳನ್ನೂ ಫ್ರೆಂಚ್ ಭಾಷೆಗೆ ಅನುವಾದಿಸಿಕೊಡಲಾಗಿದೆ.

ಆಕರ: ಎಸ್. ಆರ್. ಗುಂಜಾಳ ಅವರ ಗ್ರಂಥ

ಬುದ್ಧ-ಬಸವ

ಆರ್. ರಾಚಪ್ಪ

೧

"ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತಾ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಾಂ
ಸೃಜಾಮ್ಯಹಂ"

ಎಂದು ಭಗವಂತ ಭಗವದ್ಗೀತೆಯಲ್ಲಿ ಅಭಯ-ಆಶ್ವಾಸನೆ ಕೊಟ್ಟ. ಆ ಆಶ್ವಾಸನೆಯಂತೆ ಧರ್ಮ ಖಿಲವಾಗುತ್ತಿದ್ದ ಸಮಯಗಳಲ್ಲಿ ಸಂಭವಿಸಿ ಧರ್ಮವನ್ನು ಸಮುದ್ಧರಿಸಿದ್ದಾನೆ. (ದಶಾವತಾರಗಳಲ್ಲಿ ಅಧರ್ಮ ಹೆಚ್ಚಾಗಿ ಧರ್ಮಚ್ಯುತಿ ಬಂದಾಗ ಭಗವಂತ ಸಂದರ್ಭಕ್ಕೆ ತಕ್ಕಂತೆ ಅವತರಿಸಿ ಧರ್ಮವನ್ನು ಉದ್ಧರಿಸಿರುವ ಕತೆಗಳು ಬರುತ್ತವೆ) ಅಂತೆಯೆ ಬುದ್ಧ, ಜಿನ, ಶಂಕರ, ಅಲ್ಲಮ, ಬಸವ, ಮೊದಲಾದ ವಿಭೂತಿ ಪುರುಷರು ಜನ್ಮತಳೆದು ಆಯಾ ಕಾಲದಲ್ಲಿನ ಕೊರತೆಯನ್ನು ತುಂಬಿ ಧರ್ಮೋದ್ಧಾರಮಾಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಬುದ್ಧ-ಬಸವ, ಇವರ ಜೀವನ, ಸಾಧನೆ, ತತ್ವಗಳನ್ನು ವಿವೇಚಿಸುವ ಉದ್ದೇಶವಿಟ್ಟುಕೊಳ್ಳಲಾಗಿದೆ.

'ಸಿದ್ಧಾರ್ಥ' ಶುದ್ಧೋದನ ಚಕ್ರವರ್ತಿಯ ಪುತ್ರ. ಬಹಳ ಕಾಲಕ್ಕೆ ಹುಟ್ಟಿದ ಒಬ್ಬನೇ ಮಗ. ವಂಶಪಾರಂಪರ್ಯವಾಗಿ ಬಂದ ಸಿಂಹಾಸನಕ್ಕೆ ಸಂತತಿಯಿಲ್ಲದಾಯಿತೆಂಬ ಕೊರತೆಯನ್ನು ನೀಗಿ ಶಾಕ್ಯವಂಶವನ್ನು ಬೆಳಗುವ ದಿನಮಣಿಯಂತೆ ಹುಟ್ಟಿ ಬಂದ ಮಗುವಿಗೆ 'ಸಿದ್ಧಾರ್ಥ' ಎಂದು ಹೆಸರಿಟ್ಟು ಹಿಗ್ಗಿದ ಚಕ್ರವರ್ತಿ. ಮಗ ಮುಂದೆ ಸನ್ಯಾಸಿಯಾಗಿ ಮಾನವ ಕೋಟಿಯ ಹೃದಯ ಸಿಂಹಾಸನಸ್ಥನಾಗುತ್ತಾನೆಂಬ ಸುದ್ದಿ ಕಾದಲಗಾಯಿತು ದೊರೆಯೆದೆಗೆ. ಮಗನನ್ನು ರಾಜನಾಗಿಯೇ ಉಳಿಸಿಕೊಳ್ಳುವ ಪ್ರಯತ್ನದಿಂದ ಸುಖ-ಭೋಗಗಳಲ್ಲಿ ಮುಳುಗಿಸಿದನು. ಸಾವು, ನೋವುಗಳ ಚಿತ್ರ ಮಗನಿಗೆ ಗೋಚರಿಸದಂತೆ ವ್ಯರ್ಥ ಸಾಹಸ ಮಾಡಿದನು. ಆದರೇನು ? ವಿಧಿಯ ಆಟದ ಮುಂದೆ ಮಾನವ ಪ್ರಯತ್ನ ಸೀರ್‌ಫುಲ್. ಜಗವ ಬೆಳಗಲು ಹುಟ್ಟಿದ ಮಹಾಪುರುಷ ಭೋಗ ಭಾಗ್ಯಗಳ ಮಧ್ಯೆ ಅಡಗಿ ಕುಳಿತಿರಲು ಸಾಧ್ಯವೆ! ತಾನು ಕಂಡ ಸಾವಿನ-ದುಃಖದ ಚಿತ್ರವನ್ನು ಕಂಡನು. ಕಂಡವನೇ,

"ಆತ್ಮದಾಮಂತ್ರಣವನೋದಿಯುಂ ಭೋಗಾಭಿ
ಲಾಷೆಯಿಂದಿನ್ನು ನಾನಿರಲಾರೆ. ವರಧರ್ಮ
ದೇವತೆಯು ಗುಡಿಗಳಿಂ; ಹೊಲಗಳಿಂ, ವನಗಳಿಂ,
ಸೌಧ ಸೌಧಂಗಳಿಂ ಕೈಬೀಸಿ ಗೋಳಾಡಿ
ಕರೆವುದನು ಕಂಡೂ ಮೊದ್ದನಾಗಿರಲಾರೆ."೧

ಎಂದು ಬಾಳನ್ನು ತೊರೆದು ಹೊರಡನುವಾದನು. ಹೀಗೆ ಒಮ್ಮೆಗೇ ಬದುಕಿನ ಬಂಧನವನ್ನು ಕಿತ್ತೊಗೆದು ಹೊರಡುವುದು ಸುಲಭಸಾಧ್ಯವಲ್ಲ. ಅದಕ್ಕೆಂದೇ ಸಿದ್ಧಾರ್ಥ ತನ್ನ ಮನವ ಕುರಿತು,

"ಹಿಂಜರಿಯದಿರು ಮನವೆ, ಕಲ್ಲಾಗು ಎದೆಯೆ,
ಬೆಣ್ಣೆಯಾಗುವೆ ಮುಂದೆ! ವ್ಯಾಮೋಹವೆ ಸಾಯಿ!
ವೈರಾಗ್ಯವೇ ಕಾಯಿ! ಮುಕ್ತಿ ದೇವತೆ, ತಾಯಿ
ಬಂದೆನ್ನ ಹೃದಯಕಮಲದಿ ನೃತ್ಯವಾಡು "೨

ಎಂದು ಅಂಗಲಾಚಿ ಬೇಡಿದನು, ಹೊರಟು ನಿಂತನು. ಹಸಿದ ಸಿಂಹ ಮೈಕೊಡವಿ ಬೇಟೆಗೆ ಹೊರಡುವಂತೆ; ಮೋಹಪಾಶದಂತಿದ್ದ ಪತ್ನಿ-ಪುತ್ರರ ಬಂಧನದಿಂದ ದೂರಸಾಗಿದನು. ಧ್ಯಾನದಲ್ಲಿ ಕುಳಿತನು. ಪರಿವ್ರಜಿಸಿ ಸರ್ವಜ್ಞನಾದನು. 'ಬುದ್ಧ'ನಾದನು.

'ಬುದ್ಧ' ಜನನದ ಬಗೆಗೆ 'ಅವತಾರ'ದ ಸೋಂಕು ಇಲ್ಲದಿಲ್ಲ. (೧) ಲಲಿತ ವಿಸ್ತರದಲ್ಲಿ ದೇವಪುತ್ರರು ನಡೆ

---

೧ 'ಮಹಾರಾತ್ರಿ': ಪುಟ ೪
೨ ಅದೇ: ಪುಟ ೧೧

ಸುವ ಸಂವಾದ – ಬೋಧಿಸತ್ವನು ಹುಟ್ಟಲು ಯೋಗ್ಯವಾದ ರಾಜವಂಶ ಯಾವುದು ಎಂಬಲ್ಲಿ ದೇವಪುತ್ರರು ಈ ಮಹಾ ಪುರುಷನ ಹುಟ್ಟಿಗೆ ಯೋಗ್ಯವಾದುವೆಂದು ಕೆಲವೊಂದು ರಾಜವಂಶಗಳನ್ನು ಸೂಚಿಸುವಲ್ಲಿ–ಅವರ ವಾದದಲ್ಲಿ – ಈತ ದೈವನಿಯಮದಂತೆ ಧರ್ಮ ಉದ್ಧಾರಕಕ್ಕಾಗಿ ಹುಟ್ಟಿ ಬಂದವ ನೆಂದು ವ್ಯಕ್ತವಾಗುತ್ತದೆ.

(೨) ಬುದ್ಧನು ವಿಷ್ಣುವಿನ ಒಂಬತ್ತನೆ ಅವತಾರವೆಂದೂ ಈ ಅವತಾರದಲ್ಲಿ ಅವನು ಅಸುರರನ್ನು ಮೋದದಲ್ಲಿ ಕೆಡಹಿ, ದೇವತೆಗಳಿಂದ ಅವರ ಉಚ್ಛೇದ ಮಾಡಿಸಿದನು ಎಂದೂ ವಿಷ್ಣು ಪುರಾಣದಲ್ಲಿದೆ. ಅದರ ಸಾರಾಂಶವು ಭಾಗವತದಲ್ಲಿನ

"ತತಃ ಕಲೌ ಸಂಪ್ರಯಾತೇ ಸಂಮೋಹಾಯ ಸುರದ್ವಿಷಾಂ
ಬುದ್ಧೋ ನಾಮ್ನ್ಯಾಜನಸುತಃ ಕೀಕಟೇಷುಭವಿಷ್ಯತಿ."

ಎಂಬಲ್ಲಿ ಸ್ಪಷ್ಟವಾಗಿದೆ.

(೩) ಶುದ್ಧೋದನನು ಮಗನಿಗೆ ಯಾವ ರೀತಿಯಲ್ಲಿಯೂ ಜರಾಮರಣ ವ್ಯಾಧಿಗಳ ದರ್ಶನವಾಗದಂತೆ ಏರ್ಪಡಿಸಿದ್ದರೂ, ದೇವತೆಗಳು 'ನಿರ್ಮಿತ' ಮುದುಕ, ವ್ಯಾಧಿಗ್ರಸ್ಥ, ಮೃತ ನಾದ ವ್ಯಕ್ತಿ, ಮತ್ತು ಪರಿವ್ರಾಜಕರನ್ನು ತೋರಿಸಿ ಅವನಲ್ಲಿ ವಿರಕ್ತಿ ಮೂಡುವಂತೆ ಮಾಡುತ್ತಾರೆ.

(೪) ಮಹಾಪದಾನ ಸುತ್ತದಲ್ಲಿ, ಸಂಬೋಧಿಪಡೆದ ಬೋಧಿಸತ್ವನು; ತಾನು ಅದನ್ನು ಜನಕ್ಕೆ ಉಪದೇಶಿಸಿದರೆ ಅವರಿಗೆ ಅದು ತಿಳಿಯದೆ ತನಗೇ ತೊಂದರೆಯಾಗುವುದೆಂದು ತಾನು ಏಕಾಂಗಿಯಾದನು. ಆಗ ಬ್ರಹ್ಮನು ಬಂದು ಮಂಡಿ ಯೂರಿ ಕೈಮುಗಿದು, 'ಭಗವಾನ್ ಧರ್ಮದೇಶನೆಯನ್ನು ಮಾಡು, ಸುಗತನೆ, ಧರ್ಮದೇಶನೆಯನ್ನು ಮಾಡು; ಧೂಳು ಕಣ್ಣಗಳಲ್ಲಿ ತುಂಬದೆ ಇದ್ದ ಕೆಲವು ಪ್ರಾಣಿಗಳಿವೆ. ಕೇಳಲು ಧರ್ಮ ದೊರಕದ್ದಕ್ಕೆ ಅವು ನಾಶಹೊಂದುತ್ತಿವೆ. ಈ ತೆರ ಧರ್ಮ ತಿಳಿದುಕೊಳ್ಳುವ ಜನರು ದೊರೆಯುವರು" ಎಂದು ಹೇಳಿದನು. ಹೀಗೆ ಬುದ್ಧ ಅವತಾರ ಪುರುಷನೆಂದು ಸಿದ್ಧವಾಗುತ್ತದೆ.†

ಬಸವಣ್ಣನವರು ಬಾಗೇವಾಡಿ ಅಗ್ರಹಾರದಲ್ಲಿ ಮಾದಿ ರಾಜನೆಂಬ ಶಿವ ಬ್ರಾಹ್ಮಣನ ಪತ್ನಿಯಾದ ಮಾದಾಂಬೆಯ ಗರ್ಭದಲ್ಲಿ ಜನಿಸಿದನು. ಮಾತಾಪಿತೃಗಳು ಶಿಶುವಿಗೆ ಜಾತ ಕರ್ಮ ಮಾಡಿಸಿ 'ಬಸವ'ನೆಂದು ಹೆಸರಿಟ್ಟರು. ತನ್ನ ಬಾಲಲೀಲೆಯಿಂದ ತಂದೆ ತಾಯಿಗಳನ್ನು ಸಂತೋಷ ಪಡಿಸುತ್ತಿದ್ದನು. ಆ ತಂದೆ ತಾಯಿಯರು ಅವನ ಬಾಲ್ಯ ದಲ್ಲಿ ತೀರಿಕೊಂಡರು. ಆಗ ಮುತ್ತಜ್ಜಿಯ ಹಾರೈಕೆಯಲ್ಲಿ ಬೆಳೆದನು. ಹೀಗೆ ಹದಿನಾರು ವರ್ಷಕಳೆದು ಯೌವನ ಪ್ರಾಪ್ತವಾಯಿತು. "ಜನನದ ಬಳಿ ವಿಡಿದೆಂತಕ್ಕೆ ಬಂದ ಜನ್ಮನಂ ಶಿವಪೂಜೆಯಲ್ಲಿ ಸವೆಯವೇಳ್ಕುಂ" ಎಂದು ಬಾಗೆವಾಡಿಯನ್ನು ಬಿಟ್ಟು ಕಪ್ಪಡಿ ಸಂಗಮಕ್ಕೆ ಬಂದನು.* ಅಲ್ಲಿಂದ ಮುಂದೆ ಸಂಗಮನ ಅಪ್ಪಣೆಯಂತೆ ಬಿಜ್ಜಳನ ರಾಜ ಧಾನಿಗೆ ಹೊರಟನು. ತನ್ನಲ್ಲಿ ಅಕ್ಷರಜ್ಞಾನವಿದೆ, ಅದನ್ನೇ ಮಾರುತ್ತೇನೆ, ಅದರಿಂದ ಬಂದ ಹೊನ್ನನ್ನು ಜಂಗಮರಿಗೆ ಕೊಟ್ಟು ಅವರ ಅನುಗ್ರಹ ಪಡೆದು ಧನ್ಯನಾಗುತ್ತೇನೆ ಎಂದು ಹೊರಟನು. ತನ್ನ ಬುದ್ಧಿವಂತಿಕೆಯಿಂದ ಭಂಡಾರಿ ಸಿದ್ಧದಂಡಾಧೀಶನನ್ನು ಮೆಚ್ಚಿಸಿ ವರ್ಷಕ್ಕೆ ೧೦೧ ಹೊನ್ನಿ ನಂತೆ ಜೀವಿತದ ಮೇಲೆ ಕೆಲಸಕ್ಕೆ ನಿಂತನು. ಮಕ್ಕಳಿಲ್ಲದಿದ್ದ ಆತನು ಬಸವಣ್ಣನನ್ನು ಮಗನೆಂದೇ ಸಾಕಿದನು. ಸಿದ್ಧ ದಂಡಾಧೀಶನು ಕಾಲಗತಿಯನ್ನೈದಲು ದೊರೆ ಬಿಜ್ಜಳನು ಸಿದ್ಧದಂಡಾಧೀಶನ ಆಸ್ತಿಯೆಲ್ಲವನ್ನೂ ಬಸವಣ್ಣನಿಗೆ ಬರೆಸಿ ಕೊಟ್ಟನು. ಇದಾದ ಕೆಲವು ದಿವಸದ ಮೇಲೆ ಬಸವಣ್ಣನು ಗಂಗಾದೇವಿ, ಮಾಯಿದೇವಿಯರನ್ನು ಮದುವೆಯಾದನು. ಹೀಗೆ ಕ್ರಮೇಣ ಬಸವಣ್ಣನು ಅತ್ಯುನ್ನತ ಪದವಿಗೇರಿದನು. ತಾನು ಕಂಡ ದರ್ಶನವನ್ನು–ಭಕ್ತಿಯನ್ನು ಅನುಷ್ಠಾನಕ್ಕೆ ತಂದನು.

ಸಿಂಗಿರಾಜ ಪುರಾಣದಲ್ಲಿ: ಸಂಗಮದಲ್ಲಿ ಬಸವಣ್ಣ ಸಂಗಮನಲ್ಲಿ ಅಭೇದನಾಗಿರುತ್ತಿರಲಿಲ್ಲ. ಬಲದೇವ ಮಂತ್ರಿ ಈ ವಿಷಯ ತಿಳಿದು, ತನ್ನ ಮಾತಾಮಹರ ದೆಸೆಯಿಂದ ಮಾದಲಾಂಬೆ ತನಗೆ ತಂಗಿ. ಆದ್ದರಿಂದ ತನ್ನ ಮಗಳು ಗಂಗಾಂಬಿಕೆಯನ್ನು ಕೊಟ್ಟು ಮದುವೆ ಮಾಡಲು ನಿಶ್ಚ ಯಿಸಿ ಪತ್ರ ಬರೆದು ಬುದ್ಧಿವಂತರ ಕೈಲಿ ಕಳುಹಿ, ಬಸವಣ್ಣ ನನ್ನು ಬರಮಾಡಿಕೊಂಡು, ಮದುವೆ ಮಾಡಿಕೊಟ್ಟನು. ಬಲದೇವನು ತೀರಿಕೊಂಡನಂತರ ಬಾಚಿರಾಜನ ಬುದ್ಧಿ ಮಾತುಗಳಂತೆ ಬಸವಣ್ಣ ಬಿಜ್ಜಳನ ಕರಣ ಶಾಲೆಯಲ್ಲಿ ಕರಣಿಕ ವೃತ್ತಿ ಕೈಕೊಂಡನು. ಬಸವಣ್ಣನು ತನ್ನ ಬುದ್ಧಿ ವಂತಿಕೆಯಿಂದ ಯಾರೂ ಓದಲಾಗದ ಲಿಪಿಯನ್ನು ಓದಿ ದಂಡಾಧಿನಾಥ ಪದವಿಗೇರಿದನು–ಎಂಬಂಶವಿದೆ. ಇದು ಯಾವುದು ಹೇಗಾದರೂ ಇರಲಿ. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಿಯಾಗಿದ್ದುಕೊಂಡು ಕಾಯಕ ನಡೆಸಿ

---

† 1 2 3 4 'ಭಗವಾನ್ ಬುದ್ಧ'–ಧರ್ಮಾನಂದ ಕೋಸಂಬೀ.

* ಇಲ್ಲಿ ಹರಿಹರನ ಬಸರಾಜ ದೇವರ ರಗಳೆಯ ಕತೆಯನ್ನು ಆರಿಸಿಕೊಳ್ಳಲಾಗಿದೆ.

ಜಂಗಮಾರಾಧನೆ ಮಾಡಿ ಪುನೀತನಾಗುವ ಸಿದ್ಧತೆಯಲ್ಲಿ–ಸಾಧನೆಯಲ್ಲಿದ್ದನು ಎಂಬುದು ಸ್ಪಷ್ಟ.

ಬಸವಣ್ಣನ ಹುಟ್ಟಿನ ಬಗೆಗೆ ಒಂದೊಂದು ಪುರಾಣದಲ್ಲಿ ಒಂದೊಂದು ಹೇಳಿಕೆಗಳಿವೆ. ಬಸವಣ್ಣನವರ ವಚನಗಳನ್ನು ಆಧಾರವಾಗಿಟ್ಟುಕೊಂಡು ಅವರ ಜೀವನವನ್ನು ಅರಿಯಲು ಪ್ರಯತ್ನಿಸಿದವನು ಸಿಂಗಿರಾಜ. "ಬಸವರಾಜನು ಭೂನಳಯದಲ್ಲಿ ಶೈವಧರ್ಮವನ್ನೂ ಭಕ್ತರಿಗೆ ತೋರಿ ಬಂದನು. ಆದರೆ ಆಗ ಅವನು ನಿರ್ದೇಹಿಯಾಗಿದ್ದುದರಿಂದ ದ್ವಾರಪಾಲಕರು ಪುಷ್ಪಕದಲ್ಲಿ ಯಾರನ್ನೂ ಕಾಣದೆ ವಿಸ್ಮಿತರಾಗಿ ನಂದೀಶರುದ್ರನಿಗೆ ಅರುಹಲು, ಆತನಂತರಂಗದಲ್ಲಿ ಬಂದಿರುವವನು ಬಸವೇಶ್ವರನೆಂದು ತಿಳಿದನು. ಅಲ್ಲದೆ ಬಸವ ಪುರಾಣವನ್ನು ಗಣವರರಿಗೆ ತಿಳಿಸಿದನು. ಬಸವೇಶ್ವರನ ಹಲವು ಗಣೇಶ್ವರಾವತಾರಗಳನ್ನೂ ವರ್ಣಿಸಿದನು. ಬಳಿಕ ಬಸವನು ವೃಷಭನಾಗಿ ಕೈಲಾಸದಲ್ಲಿ ಆ ಸ್ಥಾನಕ್ಕೆ ಬಂದುದನ್ನೂ 'ಕ್ರಿಯೆ–ಭಾವ' ಇವುಗಳಿಗೆ ವಾಗ್ವಾದವಾಗಿ 'ಭಾವ' ವೃಷಭ ಮುಖವನ್ನು 'ಕ್ರಿಯೆ' ಸುರರ ಮುಖವನ್ನೂ ಸೇರಿದುವು. 'ಕ್ರಿಯೆ'ಯು ತಮ್ಮಲ್ಲಿ ಸೇರಿದುದರಿಂದ ಸುರರು ಅರಿವುದಪ್ಪಿ ವೃಷಭನನ್ನು ಪೀಡಿಸಿದರು. ವೃಷಭನು ತನ್ನನ್ನು ಕೇಳುವವರೇ ಇಲ್ಲವಲ್ಲ ಎಂದುಕೊಂಡು ಭೂಲೋಕಕ್ಕೆ ಬಂದನು. ಆಗ ಕಾಲಸ್ಥಿತಿ ಬದಲಾಯಿತು. ಶಿವನು ಸಂಗತಿ ತಿಳಿದು, ವೃಷಭನನ್ನು ಕರೆತರುವಂತೆ ಅಮರೇಂದ್ರನಿಗೆ ಆಜ್ಞಾಪಿಸಿದನು. ದೇವತೆಗಳು ಪ್ರಾರ್ಥಿಸಿದರೂ ವೃಷಭ ಬರಲಿಲ್ಲ. ಯುದ್ಧವಾಯ್ತು. ದೇವತೆಗಳು ಸೋತರು. ಆಗ ಭೂದೇವಿ ಪ್ರಾರ್ಥಿಸಿ ವೃಷಭನನ್ನು ಕರೆತಂದಳು. ಅಲ್ಲಿ ಅನಿಮಿಷೇಂದ್ರನಿಗೆ ಲಿಂಗವನ್ನು ಕರುಣಿಸಿದನು. ಲಿಂಗರಹಿತನಾದ ವೃಷಭನು ಕೈಲಾಸಕ್ಕೆ ಬರಲು ದ್ವಾರಪಾಲರು ಲಿಂಗವಿಲ್ಲದವನನ್ನು ಒಳಕ್ಕೆ ಬಿಡದೆ ಬಾಗಿಲಲ್ಲಿ ತಡೆದರು. ಆಗ ಶಿವನು ಬಂದು ವೃಷಭನನ್ನು

"ಫಲವೀವ ವಸ್ತುವನು ಪರಹಿತಾರ್ಥಕೆ ಕೊಟ್ಟು
ಫಲವದಗಣಿತಕಣಾ ಮರ್ತ್ಯದೊಳು ನೀನಿರ್ದ
ನೆಲೆಯೆ ಕೈಲಾಸವಹುದೀ ಪ್ರಮಥರೀ ರುದ್ರಲೋಕ
ಸಹಿತಾನೆಬಹೆನು
ಅಲಸದಂತೀಗಲೇಳ್ನೂರೆಪ್ಪತ್ತಮರಗಣ
ಕುಲಸಹಿತ ಹೋಗೆನುತ್ತುಭಯ ಕರಕಮಲವನು
ತಲೆಯಮೇಲಿಟ್ಟು ನಿನ್ನಯ ನಯನಮನ
ವಚನಕರ ಚರಣಪರುಷವು" ೩

ನಡೆ ಎಂದು ಆಜ್ಞಾಪಿಸುವನು. ಹೀಗೆ ಬಸವಜನನಕ್ಕೆ ಕಾರಣವಾಯ್ತು. 'ಶರಣ ಲೀಲಾಮೃತ'ದಲ್ಲೂ ಇದೇ ರೀತಿಯ ಕಾರಣವಿದೆ. 'ಬಸವ ಪುರಾಣ'ದಲ್ಲಿ ನಾರದರ ಆದೇಶದಂತೆ ಭೂಲೋಕದಲ್ಲಿ ಖಿಲವಾಗುತ್ತಿರುವ ಶೈವಾಚಾರ ಶಿವಭಕ್ತಿಯನ್ನು ಉದ್ಧರಿಸಲು ನಂದೀಶ್ವರನಿಗೆ ಆಜ್ಞೆ ಮಾಡಲು ಬಸವಜನನವಾಯ್ತೆಂದು ಹೇಳಲಾಗಿದೆ. 'ಶಿವತತ್ವ ಚಿಂತಾಮಣಿ'ಯಲ್ಲಿ ಬ್ರಹ್ಮನು ಶಿವನೋಲಗಕ್ಕೆ ಬಂದು 'ದೇವ ನಿಮ್ಮಾಜ್ಞೆಯಂತೆ ಎಲ್ಲವನ್ನು ಸೃಜಿಸಿದೆನು' ಅವುಗಳನ್ನು 'ಅಳ್ಳೈದು ಚಿತ್ತೈಸು' ಎಂದು ಹೇಳಲು ವಿಷ್ಣುವಿಗೆ ಶಿವನು ಲೋಕರಕ್ಷಣಾ ಕಾರ್ಯವನ್ನು ವಹಿಸಿದನು. ಆಗ ವಿಷ್ಣುವು 'ಕೃತಯುಗ ತ್ರೇತೆಯಿಂ ದ್ವಾಪರಂಗಳ ಧರ್ಮಗತಿಯಿಂ ನಡಸಲ್‌ಬಹುದು. ಕಲಿಯುಗಂ ಸಾವಿರ ಕಷ್ಟ, ಅತಿ ದುರಾತ್ಮರ ಕಾಲ, ನಡಸಲೆನಗಸದಳಂ, ಮತಿಯ ಕರುಣಿಪುದದಕೆ ಶಶಿಧರಾ ಹಿತವರಿನ್ನಾರು ಜಗಕೆ"–ಎಂದು ಬಿನ್ನಯಿಸಿದನು. ಶಿವನು ನಂದೀಶನನ್ನು ನೋಡಿ "ಪಾಲೆಸೈ ಧರ್ಮಮಂ ಧರೆಯೊಳವತರಿಸು" ಎಂದು ಹೇಳಲು ನಂದಿ–ಬಸವನಾಗಿ ಹುಟ್ಟಿದನೆಂದಿದೆ. ಹರಿಹರನ ಬಸವರಾಜದೇವರ ರಗಳೆಯಲ್ಲಿ 'ಮಾಲೆಗಾರನೊಬ್ಬ ಸಂಪಗೆ ಅರಳುಗಳನ್ನು ಶಿವನಿಗೆ ಅರ್ಪಿಸಲು ಅದನ್ನು ಶಿವನು ವೃಷಭ ಮುಖನೆಂಬ ಗಣಪನನ್ನು ಸಭೆಗೆ ಹಂಚುವಂತೆ ಆಜ್ಞಾಪಿಸಿದನು. ಹಂಚುವ ಗಡಿಬಿಡಿಯಲ್ಲಿ ವೃಷಭ ಮುಖನು ಷಣ್ಮುಖನಿಗೆ ಹಂಚದೆ ಹಂಚಿದೆನೆಂದು ಸುಳ್ಳು ಹೇಳಿದನು. ತನ್ನ ಎದುರೇ ಸುಳ್ಳಾಡಿದುದಕ್ಕಾಗಿ ಭೂಲೋಕದಲ್ಲಿ ಜನಿಸುವಂತೆ ಆಜ್ಞಾಪಿಸಿದನು"

ಹೀಗೆ ಎಲ್ಲ ಆಧಾರಗಳಿಂದ ಬಸವಣ್ಣ ಶಿವನ ವಾಹನವಾದ ವೃಷಭನೆಂದೂ ತಾನು ಮಾಡಿದ ತಪ್ಪಿಗೊ ಅಥವಾ ಧರ್ಮೋದ್ಧಾರ ಕಾರ್ಯಕ್ಕೋ ಹುಟ್ಟಿಬಂದ ಕಾರಣಿಕನಾಗಿದ್ದಾನೆ.

ಬಾಗೇವಾಡಿಯಲ್ಲಿದ್ದಾಗ ತಂದೆ ತಾಯಂದಿರು ಅವನಿಗೆ ಉಪನಯನ ಮಾಡಲೆಳಸಿದರೆಂದೂ, ಬಸವಣ್ಣನು ಕರ್ಮವೂ ಶಿವಭಕ್ತಿಯೂ ಎಂದೂ ಒಂದಾಗಿರದೆಂದು ಕರ್ಮಲತೆಯಂ ತಿರ್ದ ಜನ್ನಿವಾರಮಂ ಕಳೆದು ಬಿಸುಟು, ಬಾಗೇವಾಡಿಯನ್ನು ಬಿಟ್ಟು ಮಲಪ್ರಹರಿ ಕೃಷ್ಣವೇಣಿಗಳ ಸಂಗಮದಲ್ಲಿದ್ದ ಕಪ್ಪಡಿ ಸಂಗಮಕ್ಕೆ ಬಂದನು" ಎಂದೂ, ಬ್ರಾಹ್ಮಣ ಬಾಲಕನು ನೀರಲ್ಲಿ ಮುಳುಗಿ ಸಾಯಲು ಬಸವಣ್ಣನೇ ಮುಳುಗಿಸಾಯಿಸಿದನೆಂದು ಅವನನ್ನು ಶಿಕ್ಷಿಸಲೆಳಸಿ ಅಟ್ಟಿಸಿಕೊಂಡು ಬಂದ ಜನರಗುಂಪನ್ನು ತಪ್ಪಿಸಿ ಬಸವಣ್ಣ ಕಪ್ಪಡಿಗೆ ಓಡಿ ಬಂದನೆಂದೂ ನಾನಾ ರೀತಿಯಲ್ಲಿ ಹೇಳಲಾಗಿದೆ. ಇದು

---

೩ ಸಿಂಗಿರಾಜಪುರಾಣ ಸಂ. ೪. ಪ. ೪೬.

ಏನೇ ಇರಲಿ ಬಸವಣ್ಣ ಸಾಂಪ್ರದಾಯಿಕ ಅಂಧ ಬದು ಕನ್ನು ತೊರೆದುಬಂದನೆಂಬಂಶ ಅಲ್ಲಿದೆ. ಹೇಗೆ ಬುದ್ಧ ಬಾಳಲ್ಲಿನ ರೋಗ, ಜರೆ, ಮರಣಗಳನ್ನು ಅವುಗಳಿಂದುಂಟಾ ಗುವ ದುಃಖವನ್ನು ಕಂಡು ಹೇಸಿ ಹೊರಬಂದನೋ ಹಾಗೆಯೇ ಬಸವಣ್ಣನೂ ಬಾಳಲ್ಲಿನ ಅಶಾಶ್ವತತೆ, ದುಃಖ, ಇವುಗಳಿಂದ ಮುಕ್ತಿ ಪಡೆವ ದೃಷ್ಟಿಯಿಂದ ಹೊರಬಂದ ನೆಂಬುದು ನಮ್ಮ ಭಾವನೆ. ಹೀಗೆ ಹೊರಬಂದ ಬಸವಣ್ಣ ಇಹದಲ್ಲಿ ಒಪ್ಪುವಂತೆ ಬದುಕು ಸಾಗಿಸುವುದೆಂತು ಎಂದು ಚಿಂತನೆ ಆರಂಭಿಸಿರಬೇಕು. ಸಾಧನೆಗೆ ಮೊದಲಿಟ್ಟಿರ ಬೇಕು. ಶಿವ ತನ್ನ ಆರಾಧ್ಯ ದೇವತೆಯೆಂದು ನಂಬಿ, ಭಕ್ತಿಯಾಚರಣೆಯ ಮೂಲಕ ಮುಕ್ತಿಪದವ ಕಾಣಲು ಹವಣಿಸಿದನು. ಶಿವನಿಗೆ ತನ್ನ ಭಕ್ತನನ್ನು ಮೆರೆಸುವಾಸೆ ಯಾಯ್ತು. (ಬ್ರಹ್ಮ ಬುದ್ಧನಿಗೆ ತಿಳಿಸಿದಂತೆ) ಆತ್ಮೋ ದ್ಧಾರದ ಜೊತೆಗೆ ಲೋಕೋದ್ಧಾರವನ್ನು ಬಸವಣ್ಣ ಎಸ ಗಲಿ ಎಂಬಂತೆ ಅವನನ್ನು ಕಲ್ಯಾಣಕ್ಕೆ ಕರೆತಂದನು.

ಬುದ್ಧನಿಗೆ ಜ್ಞಾನೋದಯವಾದದ್ದು ಗಯೆಯಲ್ಲಿ ; ಬಸ ವಣ್ಣನಿಗೆ ಶಿವಪ್ರೇರಣೆ ದೊರೆತದ್ದು ಸಂಗಮದಲ್ಲಿ. ಜ್ಞಾನ ಪ್ರಸಾರಕ್ಕೆ ಬುದ್ಧನಿಗೆ ಕಾಶಿ, ರಾಜಗೃಹ, ಶ್ರಾವಸ್ತಿ, ಕೌಶಾಂಬಿಗಳು ಕೇಂದ್ರವಾದವು. ಬಸವಣ್ಣನಿಗೆ ಕಲ್ಯಾಣ ಕೇಂದ್ರವಾಯಿತು. ಅವರು ಅಲ್ಲಿದ್ದು ಹೊರಗಿನಿಂದ ಭಕ್ತರ ಸಮುದಾಯವನ್ನು ಆಕರ್ಷಿಸಿದರು. ಬುದ್ಧ ಅಲ್ಲಲ್ಲಿ ಹೋಗಿ ಜ್ಞಾನ ಪ್ರಸಾರ ಮಾಡಿದನು, ಸುಮಾರು ನಲವತ್ತೈದು ವರ್ಷಗಳ ಕಾಲ. ಬಸವಣ್ಣನವರೂ ಹಾಗೆಯೆ.*

೨

ಪರಮಾತ್ಮನ ಸತ್ಯಸ್ವರೂಪವನ್ನು ತಿಳಿದು ಆತನನ್ನು ಅರಿತು, ಆತನ ಕರುಣಾಪಾಂಗ ದೃಷ್ಟಿಗೆ ಭಾಜನರಾದವರು ಯಾರೇ ಆಗಿರಲಿ ಅವರು ಬೋಧಿಸುವ ತತ್ವಗಳು ಒಂದೇ ಆಗಿರುತ್ತವೆ. ಹೀಗೆ ಬುದ್ಧ– ಬಸವರ ಬೋಧೆಯ, ತತ್ವಗಳ ಧ್ಯೇಯವು ಒಂದೇ. ಇವರಿಬ್ಬರ ಬೋಧನೆಯಲ್ಲಿ ವೈಷಮ್ಯ ಗಳಿದ್ದರೂ ಸಾಮ್ಯವನ್ನು ಕಾಣುತ್ತೇವೆ.

ಜೀವದಯೆಯ ಬಗೆಗೆ ಬುದ್ಧ–ಬಸವಣ್ಣವನರ ನಿಲುವು "ದಯವಿಲ್ಲದ ಧರ್ಮವದೇವುದಯ್ಯಾ ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ ; ದಯವೇ ಧರ್ಮದಮೂಲ ವಯ್ಯ."[೪] "ಸಕಲಜೀವಾತ್ಮರಿಗೆ ಲೇಸಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು."[೫] ಎಂಬ ಅಣ್ಣನವರ ಮಾತುಗಳಲ್ಲಿ ಎಲ್ಲ ಜೀವಿಗಳಲ್ಲಿ ತೋರುವ ದಯೆಯೆ ಧರ್ಮ ವೆಂದು ತಿಳಿಯಬಹುದು. ಅಹಿಂಸಾ ಧರ್ಮವನ್ನು ಎತ್ತಿ ಹಿಡಿದ ಬಸವಣ್ಣನವರು ಹಿಂಸೆಯನ್ನೂ, ಹಿಂಸೆ ನಡೆಯುತ್ತಿದ್ದ ಯಾಗಗಳನ್ನೂ ಖಂಡಿಸಿದರು. 'ವೇದ ಘನವೆಂಬನೆ' ಪ್ರಾಣಿ ವಧೆಯ ಹೇಳುತ್ತಿದೆ."[೬] ಎಂದೂ 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತು, ಕೊಂದಹ ರೆಂಬುದನರಿಯದೆ."[೭] ಎಂದು ತನ್ನ ಕಾಲದಲ್ಲಿದ್ದ ರೀತಿ ನೀತಿಗಳನ್ನು ನಿರ್ದಾಕ್ಷಿಣ್ಯವಾಗಿ ನಿಚ್ಚಳಮತಿಯಿಂದ ತಿದ್ದಿದರು.

ಬುದ್ಧದೇವನೂ ತನ್ನ ಅನುಯಾಯಿಗಳನ್ನು ಕುರಿತು "ಜೀವಿಗಳೊಳಗಪರಿಮಿತ ಮೈತ್ರಮಂ ತೋರುತಿರಿ," "ತನ್ನೊಲನ್ಯರ ಬಗೆಯಿ, ತನ್ನೊಲನ್ಯರೊಳಲಿಯಿ, ಎಲ್ಲರಲಿ ದಯೆತೋರಿ"[೮] ಎಂದು ಬೋಧಿಸಿದನು. ಅಲ್ಲದೆ ಅಂಗುಲೀ ಮಾಲನೊಡನೆ ಆಡುವ ಮಾತುಗಳಲ್ಲಿಯೂ ಈ ಅಂಶ ಶ್ರುತವಾಗುತ್ತದೆ . . .

ಸರ್ವದಾ
ಸರ್ವ ಪ್ರಾಣಿಗಳಲ್ಲಿಯೂ ದಂಡವನ್ನು ಇಳಿಸಿದ್ದೇನೆ.
ನೀನು ಇನ್ನೂ ಪ್ರಾಣಿಗಳನ್ನು ಕೊಲ್ಲುತ್ತಿರುವೆ
ಆದುದರಿಂದ ನಾನು ನಿಂತಿದ್ದೇನೆ ನೀನು ನಿಂತಿಲ್ಲ."[೯]

ಹಿಂಸೆಯಿಂದ ಜೀವನ ಸಾಗಿಸುವ ಜೀವಿ ಕರ್ಮಚಕ್ರದ ಸುಳಿಯಲ್ಲಿ ಸಿಕ್ಕಿತೊಳಲುವನು. ಜೀವದಯೆಯ ರಹಸ್ಯ ವರಿತವನು ಆ ಸುಳಿಯಿಂದ ಹೊರತಾಗಿ ಸ್ಥಗಿತನಾಗುವನು ಎಂದೂ, 'ಗೋವು, ಟಗರು, ಹಂದಿ, ಹಕ್ಕಿ, ಜಿಂಕೆ–ಇವು ಗಳನ್ನು ಕೊಂದು ಮಾರುವವನು ಆ ಕೆಲಸದಿಂದ, ಆ ಜೀವನದಿಂದ ಭೋಗರಾಶಿಯನ್ನು ಪಡೆದು ಬದುಕುವುದಿಲ್ಲ. ಏಕೆಂದರೆ ಆ ಮೃಗಪಕ್ಷಿಗಳ ವಧೆಯನ್ನು ಅವರು ಪಾಪದ

---

* ಬಸವಣ್ಣನವರ ಕಾಲನಿರ್ಣಯವನ್ನು 'ಬಸವ ಸಮಿತಿ' ಯವರು ಹೊರ ತಂದಿದ್ದಾರೆ. ಆದರ ಪ್ರಕಾರ ಕ್ರಿ.ಶ. ೧೧೩೧ ರಿಂದ ೧೧೬೭ರವರೆಗೆ ಅವರ ಕಾಲ. ಅಂದರೆ ಅವರ ಸಾಧನೆ ಬೋಧನೆಯ ಕಾಲ ಸುಮಾರು ಎಂಟು ಹತ್ತು ವರ್ಷಕಾಲವಿದ್ದಿರ ಬಹುದು ಎಂದು ನಮ್ಮ ಊಹೆ. (ಬಸವೇಶ್ವರರ ಸಮಕಾಲೀನರು ಪ್ರಸ್ತಾವನೆ xiii)

---

೪ ಬಸವಣ್ಣನವರ ಷಟ್‌ಸ್ಥಲದ ವಚನಗಳು : ಪು ೬೨, ವ ೨೪೨
೫ ಅದೇ : ಪು ೧೫೩, ವ ೫೯೦
೬ ಅದೇ : ಪು ೫೨, ವ ೨೦೮
೭ ಅದೇ : ಪು ೩೪, ವ ೧೨೯
೮ ಗೊಲ್ಗೊಥಾ ಮತ್ತು ವೈಶಾಖಿ : ಪು ೬೩–೬೪
೯ ಬುದ್ಧ ವಚನ ಪರಿಚಯ : ಪು ೧೫೭

ಮನಸ್ಸಿನಿಂದ ಮಾಡುವರು. ಆದುದರಿಂದ ಅವರಿಗೆ ಬಹು ಅಹಿತದುಃಖವುಂಟಾಗುವುದು. ಸತ್ತು ದೇಹ ಮುರಿದ ಮೇಲೆ ಅಪಾಯವೂ, ದುರ್ಗತಿಯೂ, ವಿನಿಪಾತವೂ ಆದ ನರಕದಲ್ಲಿ ಹುಟ್ಟುವರು."೧೦ ಎಂದು ತಿಳಿಸಿ ಪ್ರಾಣಿ ದಯೆಯ ಬಗೆಗೆ ಜನರನ್ನು ತಿದ್ದಿದ್ದಾನೆ. 'ಯಜ್ಞದಲ್ಲಿ ಪ್ರಾಣಿವಧೆಯನ್ನು ಮಾಡುವುದರಿಂದ ಯಜಮಾನನು ಕಾಯಾ, ವಾಚಾ, ಮನಸಾ, ಅಕುಶಲ ಕರ್ಮಗಳನ್ನು ಮಾಡುತ್ತಾನೆ. ಆದುದರಿಂದ ಯಜ್ಞ ಅಮಂಗಳಕರ ಎಂದು ಬುದ್ಧನ ಅಭಿಪ್ರಾಯವಾಗಿತ್ತು."* ಬಸವಣ್ಣನವರೂ ಇದೇ ಕಾರಣಕ್ಕಾಗಿ ಯಜ್ಞಯಾಗಾದಿಗಳನ್ನು ಖಂಡಿಸಿದರೆಂದು ಹಿಂದೆಯೇ ತಿಳಿಸಿಯಾಗಿದೆ.

ಶುದ್ಧ ಜೀವನದ ಬಗೆಗೆ ಈ ಇಬ್ಬರ ಹೇಳಿಕೆಯಲ್ಲಿ ಸಾಮ್ಯವಿದೆ. ಸಾಮಾನ್ಯವಾಗಿ ಈ ಇಬ್ಬರೂ ಅಂದಿನ ಬಾಳಲ್ಲಿದ್ದ ಅಶುದ್ಧತೆಗೆ ಹೇಸಿ ಹೊರಬಂದವರು; ಶುದ್ಧಬಾಳು ಎಂತು ಎಂದು ಅವರು ತಿಳಿಸಲೇಬೇಕಿತ್ತು. ಸಮಾಜಕ್ಕೆ ಸಮಾಧಾನ ಹೇಳಬೇಕಾಗಿತ್ತು.

"ಕಳ್ಳು, ಕೊಲೆ, ಕಳ್ಳತನ, ಸುಳ್ಳು, ಹಾದರ, ಮೋಸ
ವತಿತಿಂಡಿ, ಜೂಜಿವಕೆ ಗಂಟುಬಿದ್ದವನಿಲ್ಲೆ ತನ್ನ
ಬೇರಗೆದಪಂ"೧೧

ಈ ರೀತಿ ಶುಚಿರ್ಭೂತ ಜೀವನಕ್ಕೆ ವಿರೋಧವಾದ ಈ ಗುಣಗಳಿಂದ ಕೂಡಿದ ವ್ಯಕ್ತಿಗೆ ಈ ಹುಟ್ಟು ಸಾವುಗಳ ಜಂಜಡ-ಕೋವರನ ಚಕ್ರದಿಂದ ಬಿಡುಗಡೆಯಿಲ್ಲ. ಅವನ ನಡೆಯೇ ಅವನಿಗೆ ಬಂಧನ-ಬಿಡುಗಡೆ. ತೆರಣಿಯಹುಳು ತಾನೆಯ್ದು ಬಲೆಯೊಳಗೆ ತಾನೆ ಬಂಧಿತವಾಗುವಂತೆ; ಮಾನವಬಾಳು ಅವನಿಗೆ ಭದ್ರ, "ತೊಗಲಿಗಂಟದ ಉಣ್ಣೆಯಂತೆ" ಅವನ ಜೀವನ. ಬಸವಣ್ಣನವರು ಅಂತರಂಗ-ಬಹಿರಂಗ ಶುದ್ಧಿಗೆ ಇರುವ ಮಾರ್ಗ ಯಾವುದು ಎಂಬ ಪ್ರಶ್ನೆಗೆ ಅವರು,

"ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನಬಣ್ಣಿಸಬೇಡ, ಇದಿರಹಳಿಯಲುಬೇಡ."೧೨

ಎಂದು ಹಾಡಿದರು.

ಸ್ವರ್ಗಮರ್ತ್ಯಗಳು ಬೇರೆ ಇಲ್ಲ. ಇಲ್ಲಿ ಸಂದರೆ ಅಲ್ಲಿಯೂ ಸಲ್ಲುವನು. ನಮ್ಮ ನಡೆ-ನುಡಿಗಳಲ್ಲಿ ಸ್ವರ್ಗ-ಮರ್ತ್ಯಗಳ ರಚನೆ. ಆದುದರಿಂದ ಮಾನವ, ಬಾಳಲ್ಲಿ ಋಜು ಜೀವಿಯಾಗಿ ಬದುಕಿದರೆ ಕರವಿಡಿದೆತ್ತಿಕೊಂಬ ಕೂಡಲಸಂಗಮದೇವ ಎಂಬ ನಿಲುವು ಅವರದು.

ಬಸವಣ್ಣನವರು ಜಂಗಮಪ್ರಾಣಿಯಾಗಿ, ಜಂಗಮವೇ ಚರಲಿಂಗವೆಂದು ನಂಬಿದ್ದರು. 'ಸ್ಥಾವರಕ್ಕಳಿವುಂಟು-ಜಂಗಮಕ್ಕಳಿವಿಲ್ಲ'; 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' ಎಂದು ಭಾವಿಸಿದ್ದ ಅನುಭಾವಿಗಳು. ಲಾಂಛನಕೆ ಶರಣೆಂದರು. "ವಿಭೂತಿಯಿಲ್ಲದವರ ಮುಖ ಹೊಲ್ಲ ನೋಡಲಾಗದು." "ಕಳ್ಳ, ಬಂದಿಕಾರ, ಹಾವಾಡಿಗ, ಹಾದರಿಗ, ಭಂಟ, ಓಲೆಕಾರ ನೆಂದನಾದರೆ, ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿರ್ದರೆ ಆದೇ ದ್ರೋಹ."೧೩ ಹೀಗೆ ಲಿಂಗ-ವಿಭೂತಿಯುಳ್ಳದೆಲ್ಲವೂ ಸಂಗಮನೇ ಎಂಬೂ ಸಾಮರಸ್ಯವನ್ನು ಸಾಧಿಸಿದರು ಬಸವಣ್ಣನವರು. ಶೈವಾಚಾರಕ್ಕೆ ಶರಣಾಗಿದ್ದ ಅಣ್ಣನವರು ಎಲ್ಲರನ್ನೂ ಅದರ ದೃಷ್ಟಿಯಲ್ಲಿ ಅಳೆದರು. ಹಾಗಿಲ್ಲದವರನ್ನು ಹಾಗಾಗಿಸಿದರು. ಪ್ರತಿಯೊಬ್ಬರಲ್ಲಿಯೂ 'ಯೋಗ್ಯತೆ'ಯನ್ನರಸಿದರು. ಅದನ್ನು ಬೆಳಗಿಸಿದರು. ಸರ್ವರಲ್ಲಿಯೂ ಶಿವನಿದ್ದಾನೆ ಎಂಬ ನಿಲುವು ಅವರದಾಗಿತ್ತು.

ಬುದ್ಧನೂ ತಾನು ತನ್ನ ಸುತ್ತಲವರೆಲ್ಲರೂ ಮಾನವರೇ ಅವರಲ್ಲೂ ಪರಮಾತ್ಮನಿದ್ದಾನೆ. ಎಂತಹ ಕ್ರೂರಿಯಾದರೂ ಅವನು ಪರಮಾತ್ಮನ ಪ್ರತೀಕವೆಂದೂ ಅವನನ್ನು ಉದ್ಧರಿಸಬೇಕೆಂದವನು. ಅಂಗುಲೀಮಾಲನಂತಹ ಕ್ರೂರಿಯನ್ನು ತಿದ್ದಿ ಸನ್ಯಾಸಿಯಾಗಿಸಿದ್ದು ಈ ಸೂತ್ರದಿಂದಲೆ. ಕ್ರೂರ ಹಾಗೂ ಮನುಷ್ಯರನ್ನು ಕೊಲ್ಲುತ್ತಿದ್ದ 'ನಾಲಾಗಿರಿ' ಎಂಬ ಆನೆಯನ್ನು ಮೈತ್ರಿಯ ಚಿತ್ತದಿಂದ ವ್ಯಾಪಿಸಿ, ಅದರ ಕುಂಭ ಸವರುತ್ತಾ

"ಕುಂಜರ! ನಾಗನಗೊಡವೆ ಬೇಡ, ಅದರಿಂದ
ದುಃಖವೇಸರಿ!
ನಾಗನನ್ನು ಹೊಡೆದವರಿಗೆ ಇಲ್ಲಾಗಲಿಪರದಲ್ಲಾಗಲಿ
ಒಳ್ಳೆಯ ಗತಿಯಿಲ್ಲ.
ಮದಬೇಡ ಪ್ರಮಾದಬೇಡ, ಪ್ರಮತ್ತರ ಸುಗತಿಗೆ
ಹೋಗುವುದೇ ಇಲ್ಲ.
ಸುಗತಿಗೆ ಹೋಗುವುದಕ್ಕೆ ಬೇಕಾದುದನ್ನು ಮಾಡು."೧೪

ಎಂದು ತಿದ್ದಿದೂ ಉಂಟು. ಸೃಷ್ಟಿಯ ಸಕಲವಸ್ತು-ಜೀವಿ

---

೧೦ ಅದೇ: ೧೬೨–೧೬೩
* 'ಭಗವಾನ್ ಬುದ್ಧ': ಪು ೨೫೫
೧೧ ಗೊಲ್ಗೊಥಾ ಮತ್ತು ವೈಶಾಖಿ: ಪು ೬೧
೧೨ ಬ.ಸ.ವ.: ಪು ೫೯, ವ ೨೦೫

೧೩ 'ಭಕ್ತಿಭಾಂಡಾರಿ ಬಸವಣ್ಣ' ಪು ೬೬
೧೪ ಬುದ್ಧ ವಚನ ಪರಿಚಯ: ಪು ೧೫೦

ಗಳಲ್ಲಿ ಪರಮಾತ್ಮ ಆವಿರ್ಭವಗೊಂಡಿದ್ದಾನೆ ಎಂದು ಸಾಧಿಸಿ ತೋರಿದವರು ಬುದ್ಧ-ಬಸವಣ್ಣ.

ಈ ಇಬ್ಬರು ಸಾಧಕರೂ ವಿನಯಶೀಲರು. ವಿನಯದಿಂದ ತಪಸ್ಸಾಧನೆಯನ್ನು ಸಾಗಿಸಬೇಕೆಂದು ಸಾರಿದವರು.

"ಅಲ್ಪ ನಾನೆಂಬುವನು ತಾನೆ ಹಿರಿದಾಗುವನು
ತನ್ನ ಪಥವನು ತಾನೆ ಕಾಣುವನು, ಕಂಡುದನು
ಸಾಧಿಸುತ ಮುಂದೆ ನಡೆವನು ; ಮುಂದೆ ನಡೆನಡೆದು
ತಾಮುಕ್ತನಾಗುವನು ; ಅಂತೆಯೆ ಆ ತಾನು
ಲೋಕಗಳ ಕಲ್ಯಾಣದಾ ವಾಸವಾಗುವನು "೧೫

ಎಂಬುದು ಬುದ್ಧನ ಮಾತು. ಅಣ್ಣನವರು ಅಷ್ಟೇ. ವಿನಯಿಗಳಾಗಿ "ಎನಗಿಂತ ಕಿರಿಯರಿಲ್ಲ". "ನಿಮ್ಮ ದಾಸರ ದಾಸಿಯ ದಾಸ ನಾನಯ್ಯ" ಎಂದು ಮಹಾನುಭಾವ ಪದವಿಗೇರಿದರು.

ಬುದ್ಧ ಇಂದ್ರಿಯೋಪಭೋಗಗಳಲ್ಲಿ ದುಃಖವನ್ನೂ ಸಂಸಾರ ತ್ಯಾಗದಲ್ಲಿ ಸುಖವನ್ನೂ ಕಂಡು ಅಮರ ಹಾಗೂ ಅಲೋಕವಾದ ಯಾವ ಪರಮಶ್ರೇಷ್ಠವಾದ ನಿರ್ವಾಣಪದವಿದೆಯೋ ಅದನ್ನು ಶೋಧಿಸಲು ಮನೆಯಿಂದ ಹೊರಟವನು

"ಬ್ರಹ್ಮಚರ್ಯವೆ, ತಪಸ್ವಿತೆಯೆ, ಚತು
ರಾರ್ಯ ಸತ್ಯಗಳ ದರ್ಶನವೆ, ನಿರ್ವಾಣದ ಪ
ರೋಕ್ಷಾನುಭವನೆ, ಅದೆ ಉತ್ತಮಂ ಮಂಗಲಂ"೧೬

ಎಂದು ತನ್ನ ಅನುಯಾಯಿಗಳಿಗೆ ಬೋಧಿಸಿದನು. ಪಬ್ಬಜ್ಜಾ ಸುತ್ತದಲ್ಲಿ "ಗೃಹಸ್ಥಾಶ್ರಮವೆಂದರೆ ತೊಂದರೆಯ ಮತ್ತು ಹೊಲಸಿನ ಸ್ಥಾನ, ಪ್ರವ್ರಜ್ಯೆ ಎಂದರೆ ಬಯಲು ಹವೆ ಎಂದು ತಿಳಿದು ಬುದ್ಧ ಪ್ರಪ್ರಜ್ಯೆಯನ್ನು ಪಡೆದುಕೊಂಡನು. "ಕಾಮೋಪ ಭೋಗದಲ್ಲಿ ನನಗೆ ದೋಷ ಕಾಣುತ್ತಿದೆ ಮತ್ತು ಏಕಾಂತವಾಸದಲ್ಲಿ ನನಗೆ ಸುಖ ಎನ್ನಿಸುತ್ತಿದೆ"೧೭ ಎಂದು ಬುದ್ಧ ಸಾಧನೆಗೆ ಹೊರಟನೆಂದು ತಿಳಿಯುತ್ತದೆ.

ಬಸವಣ್ಣನವರಾದರೋ—

"ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು
ದೋಷಂಗಳು
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು
ಸತಿಪತಿರತಿಸುಖವ
ಬಿಟ್ಟರೆಸಿರಿಯಾಳ ಚೆಂಗಳೆಯರು ? ಸತಿಪತಿರತಿ ಸುಖ
ಭೋಗೋಪ-
ಭೋಗ ವಿಳಾಸ ಬಿಟ್ಟರೆ ಸಿಂಧು ಬಲ್ಲಾಳರು ? ನಿಮ್ಮ
ಮುಟ್ಟಿ ಪರಧನ
ಪರಸತಿಯರಿಗೆಳಸಿದರೆ ನಿಮ್ಮ ಚರಣಕ್ಕೆ ದೂರ
ಕೂಡಲಸಂಗಮದೇವಯ್ಯ "೧೮

ಸುಖಾತಿಶಯಗಳಿಂದ ಸುತ್ತುವರೆದಿದ್ದರೂ ನಿರ್ಲಿಪ್ತರಾಗಿ ಯಾರು ಸರ್ವವನ್ನೂ ಶಿವಾರ್ಪಣ ಮಾಡುತ್ತಿರುವರೋ ಅವರೇ ಇಂದ್ರಿಯ ನಿಗ್ರಹಿಗಳು, ಎಂದೂ ಪರಸತಿಗೆಳಸದಂತೆ ಮನಸ್ಸನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕೆಂದೂ ಸೂಚಿಸಿದರು. ಆಧುನಿಕ ಕಾಲದಲ್ಲಿ ಮನಶ್ಶಾಸ್ತ್ರಜ್ಞರು "Represson is no solution" ಎಂದು ಹೇಳುತ್ತಿರುವ ತತ್ವವನ್ನೇ ಬಸವಣ್ಣನವರು ಪ್ರತಿಪಾದಿಸಿದರು. 'ಇಹದ ಭೋಗವನ್ನು ಅನುಭವಿಸಬೇಕು. ಸತಿಪತಿಯರೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ದೃಷ್ಟಿ ಅವರದು. ಆದರೆ ಅದರಲ್ಲಿ ಮುಳುಗದೆ ಉದ್ಧಾರ ಮಾರ್ಗದತ್ತ ದೃಷ್ಟಿ ಇರಬೇಕೆಂಬ ನಿಲವು ಬಸವಣ್ಣನವರದು.

ಬುದ್ಧ ತನ್ನ ಅನುಯಾಯಿಗಳಿಗೆ 'ಸ್ತ್ರೀ' ಬಗೆಗೆ ಹೇಗೆ ವರ್ತಿಸಬೇಕೆಂದು ಹೇಳುವಲ್ಲಿ ಅವನ ನಿಲವು ಹೀಗಿದೆ. "ಭಗವಂತ ಹೆಂಗಸರೊಡನೆ ಎಂತು ವರ್ತಿಸಲಕ್ಕುಂ" ಎಂಬ ಪ್ರಶ್ನೆಗೆ 'ನೋಡದಿರಿ'; ನೋಡಬೇಕಾಗೆ ಮಾತಾಡದಿರಿ; ಅವರೆ ನಮ್ಮೊಡನೆ ಮಾತಾಡೆ? ಹಿರಿಯರಂ ತಾಯೆಂದು, ಸರಿಯರನಕ್ಕತಂಗಿಯರೆಂದು, ಕಿರಿಯರಂ ಕೂಸೆಂದು, ಭಾವಿಸುತ ಕಟ್ಟೆಚ್ಚರಿರಿ"೧೯ ಎಂದು ಉತ್ತರಿಸಿದನು. ಇಲ್ಲಿ 'ಕಟ್ಟೆಚ್ಚರಿರಿ' ಎಂಬ ಮಾತನ್ನು ಗಮನಿಬೇಕು. ಸ್ತ್ರೀ ಸಂಗವೇ ಸಲ್ಲದು ಎಂಬುದು ಅವನ ನಿಲವು. "ಬುದ್ಧ ಭಗವಂತನು ಕಪಿಲವಸ್ತುವಿನ ನಿಗ್ರೋಧಾರಾಮದಲ್ಲಿ ಇರುತ್ತಿದ್ದನು. ಆಗ ಮಹಾಪ್ರಜಾ ಸತೀ ಗೋತಮಿಯು ಭಗವಂತನ ಹತ್ತಿರ ಬಂದು "ಭದಂತರೆ, ತಮ್ಮ ಸಂಪ್ರದಾಯದಲ್ಲಿ ಪ್ರವ್ರಜ್ಯೆಯನ್ನು ಸ್ವೀಕರಿಸಲು ಸ್ತ್ರೀಯರಿಗೂ ಅಪ್ಪಣೆಯನ್ನು ಕೊಡಬೇಕು" ಎಂದು ನುಡಿದಳು. ಭಗವಂತನು ಮೂರು ಸಲ ಆಕೆಯ ಬೇಡಿಕೆಯನ್ನು ನಿರಾಕರಿಸಿ

---

೧೫ 'ಯಶೋಧರಾ': ಪು ೨೧

೧೬ ಗೊಲ್ಗೊಥಾ ಮತ್ತು ವೈಶಾಖಿ: ಪು ೫೧

೧೭ 'ಭಗವಾನ್ ಬುದ್ಧ': ಪು ೧೩೨

೧೮ ಭಕ್ತಿಭಾಂಡಾರಿ ಬಸವಣ್ಣನವರು : ಪು ೯೯

೧೯ ಗೊಲ್ಗೊಥಾ ಮತ್ತು ವೈಶಾಖಿ: ಪು ೫೬

ದನು. ಕೊನೆಗೆ ಬುದ್ಧನು ನಿಯಮಿಸಿದ ಎಂಟು ನಿಯಮಗಳನ್ನೂ ಒಪ್ಪಿ ಪ್ರವ್ರಜೆಯನ್ನು ಸ್ವೀಕರಿಸಿದಳು.[೨೦] ಈ ಮಾತು 'ಯಶೋಧರಾ' ನಾಟಕದಲ್ಲಿ ಇನ್ನೂ ಸ್ಪಷ್ಟವಿದೆ. "ಸ್ತ್ರೀಯರಿಗೆ ದೀಕ್ಷೆ ಕೊಡುವೊಡೆ ನಾನು ಮೊಳೆಯಿಟ್ಟ ಧರ್ಮದಾಯುಸ್ಯದಲಿ ಅರ್ಧ ಅಳಿವುದು."[೨೧] ಇದಕ್ಕೆ ಕಾರಣ, ಸ್ತ್ರೀ ಯೋಗ್ಯಳಲ್ಲ ಎಂಬುದಲ್ಲ. ಆದರೆ "ಶ್ರಮಣರಿಗೆ ವ್ರತ ತಪೋನುಷ್ಠಾನ ಕಷ್ಟಕರವಾಗುವುದು; ಹಲಜೀವ ಕೆಡುವುದು, ವ್ಯವಹರಣೆ ಕೆಡುವುದು"[೨೨] ಎಂಬುದಷ್ಟೆ. ಆದರೆ ಬುದ್ಧ ಕೊನೆಗೆ ಸೋತು ಯಶೋಧರಾ, ಅಂಬಾಪಾಲಿ, ಅಂಬಿಕೆಯರಿಗೆ ದೀಕ್ಷೆ ಕೊಡುವನು.

ಬಸವಣ್ಣನವರು ಹೆಣ್ಣು ಬಂಧನವೆಂದೆಣಿಸಲಿಲ್ಲ. ಹೆಣ್ಣು ಮಾಯೆ ಎನಿಸಲಿಲ್ಲ. ಸ್ತ್ರೀಗೂ ಸಮಾನಾಧಿಕಾರ ಕೊಟ್ಟರು. ಅನುಭವ ಮಂಟಪದಲ್ಲಿ ನಿರ್ದಾಕ್ಷಿಣ್ಯವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವ ಸ್ವಾತಂತ್ರ್ಯ ಸ್ತ್ರೀಗೆ ಇದ್ದಿತು. ಸತಿ–ಪತಿಯರು ಒಂದಾಗಿ ಆಚರಿಸುವ ಭಕ್ತಿ ಶ್ರೇಷ್ಠವೆಂದು ಭಾವಿಸಿದ್ದರು. ಸ್ತ್ರೀ ಬಗೆಗೆ ಅಪಾರ ಗೌರವವನ್ನು ತಳೆದಿದ್ದರು. ಪರವನಿತೆಯ 'ತಾಯಸರಿ' ಎಂದೆಣಿಸಿದರು. "ಹರಿವ ಹಾವಿಂಗಂಜೆ, ಉರಿವ ನಾಲಗೆಗಂಜೆ, ಸುರಗಿಯ ಮೊನೆಗಂಜೆ, ಒಂದಕ್ಕಂಜುವೆ, ಒಂದಕ್ಕಳುಕುವೆ, ಪರಸ್ತ್ರೀ ಎಂಬ ಜೂಜಿಂಗಂಜುವೆ"[೨೩] 'ಪರವಧುವಿನ ಬೇಟವವನ ಪ್ರಾಣಕೊಂಡಿತ್ತು' ಎಂದು ಭಾವಿಸಿದ್ದರು. ಆದುದರಿಂದ ಸ್ತ್ರೀ ಸಂಗಿಯಾಗಿಯೂ ಪರಮ ಪದವಿಗೇರುವ ಸಾಧನೆ ಅಣ್ಣನವರದಾಗಿದ್ದಿತೆಂದು ತಿಳಿಯಬಹುದು.

ಬಸವಣ್ಣನವರು ಈ ಜೀವನ ಸಾಧನರಂಗ ಎಂದು ಭಾವಿಸಿ, ಸಾಧನೆಯನ್ನು 'ಕಾಯಕ' ಎಂದರು. ಯಾವುದಾದರು ಕೈಂಕರ್ಯ ಕೈಕೊಂಡು ಅದರ ಹುಟ್ಟುವಳಿಯಿಂದ 'ದಾಸೋಹ' ನಡೆಸಿ ಜಂಗಮ ತೃಪ್ತಿ ಮಾಡಬೇಕು. ಜಂಗಮ ತೃಪ್ತಿಯೇ ಲಿಂಗ ತೃಪ್ತಿ. ಅದರಿಂದ ನಮ್ಮ ಜೀವನ್ಮುಕ್ತಿ. ಆದ್ದರಿಂದಲೇ ಅವರು 'ಕಾಯಕವೇ ಕೈಲಾಸ' ಎಂದು ಸಾರಿದರು.

೩

ಬುದ್ಧನಾಗಲಿ, ಬಸವಣ್ಣನವರಾಗಲಿ, ಆತ್ಮೋದ್ಧಾರ ಒಂದನ್ನೇ ದೃಷ್ಟಿಯಲ್ಲಿಟ್ಟುಕೊಂಡವರಲ್ಲ. ಕಣ್ಣಮುಂದೆ ರಾಶಿಯಾಗಿ ಬೆಳೆಯುತ್ತಿರುವ ಪಾಪ ಸಮುದಾಯದಿಂದ ಸಂತಪ್ತರಾಗಿ ಅಪ್ಪಾ, ಅಣ್ಣಾ, ಎಂಬ ಪ್ರೇಮ ವಚನಗಳಿಂದ ಕೈ ಹಿಡಿದು, ಬುದ್ಧಿಗಲಿಸುವಕೋಮಲ ಹೃದಯ ಅವರದಾಗಿತ್ತು. ಅವರು ನಮ್ಮ ಬಳಿಗೆ ಬಂದು ಮಾತನಾಡುವಾಗ ಅವರನ್ನು ಹೊರಗೆ ಹೋಗಿ ಎಂದು ಹೇಳುವ ಮನಸ್ಸು ಬರದು. ಅಷ್ಟು ಮಧುರ, ಅಷ್ಟು ಮೋಹಕ ಅವರ ಮಾತು. ಇವರು ತಮ್ಮ ಒಳಗನ್ನು ಕಂಡ ಬಗೆ ವಿಶಿಷ್ಟವಾದುದು. ಬಸವಣ್ಣನವರು 'ಎನ್ನ ಮನ ಹತ್ತಿಯ ಹಣ್ಣು' ಎಂದರು. ಅದು ಶಿವಕೃಪೆಯಿಂದ ಪುನೀತವಾಗಬೇಕು. ಅಂಗದ ಗುಣಗಳನ್ನು ಕಳೆದು ಲಿಂಗದ ಗುಣಗಳನ್ನು ಬರಮಾಡಿಕೊಂಡರೆ ನೀವೇ ಸ್ವಯಂ ಲಿಂಗ. ಎಂದು ಬೋಧಿಸಿದರು. ದ್ವೈತ ಭಾವದಿಂದ ಕೂಡಿದ್ದ ಜೀವಿ ಸಾಧನೆಯಿಂದ ಅದ್ವೈತವನ್ನು ಸಾಧಿಸಬಹುದು; ಎಂಬುದು ಅಣ್ಣನವರ ಹೇಳಿಕೆ. "ಬೌದ್ಧ ಧರ್ಮ ಹಿಂದೂ ಧರ್ಮದಂತೆ ಆತ್ಮತತ್ತ್ವವನ್ನು ಒಪ್ಪಿಕೊಳ್ಳಲಿಲ್ಲ.... ಬುದ್ಧನ ಉಪದೇಶಗಳನ್ನು ನೋಡಿದರೆ, ಅವನು ಆತ್ಮನನ್ನು ಕುರಿತು ಚರ್ಚೆ ಮಾಡಿರುವುದು ಎಲ್ಲಿಯೂ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಅದನ್ನು ಅವನು ಪ್ರತಿಪಾದಿಸುವುದೂ ಇಲ್ಲ. ಆ ವಿಚಾರದಲ್ಲಿ ಅವನು ಮಹಾಮೌನಿ. ಜೀವ, ಜಗತ್ತು, ಈಶ್ವರ ಈ ಮೊದಲಾದುವುಗಳ ತಾತ್ವಿಕ ಚರ್ಚೆಗೆ ಬುದ್ಧ ಹೆಚ್ಚು ಮಹತ್ವ ಕೊಡಲಿಲ್ಲ."[೨೪] ಬುದ್ಧ ಇಲ್ಲಿ ವಿಚಾರ ಮಾಡಿದುದು ಜೀವನದಲ್ಲಿ ಹೇಗೆ ಆಚರಿಸಬೇಕು? ಮತ್ತು ಅದರ ನೈತಿಕ ತಳಹದಿಯನ್ನು ಮಾತ್ರ. ಆತ್ಮದ ಬಗೆಗೆ ಮೌನ ತಳೆದರೂ ದೇಹದ ಮೇಲೆ ಒಡೆತನವನ್ನು ನಡೆಸುವ ಸಾಂಕೇತಿಕ ಧರ್ಮಶಕ್ತಿಯನ್ನು ತಿರಸ್ಕರಿಸಿಲ್ಲ. ಬುದ್ಧ ನಾಸ್ತಿಕನಾಗಿದ್ದನೆಂದು ಕೆಲವರ ತಿಳುವಳಿಕೆಯಾಗಿದೆ. ಅವರು ಕೊಡುವ ಕಾರಣ ಅವನು ಈಶ್ವರನನ್ನು ಒಪ್ಪುತ್ತಿದ್ದಿಲ್ಲ ಎಂದು. ಆದರೆ ಇದು ತಥ್ಯವಲ್ಲ. ಏಕೆಂದರೆ ಅಂಗುತ್ತರ ನಿಕಾಯ ಸುತ್ತದಲ್ಲಿ ಈಶ್ವರನ ಬಗೆಗೆ ಈ ರೀತಿ ಹೇಳಲಾಗಿದೆ. ಭಗವಂತನೆನ್ನುತ್ತಾನೆ, 'ಭಿಕ್ಷುಗಳೇ, ಯಾವ ಸುಖ ದುಃಖ ಮತ್ತು ಉಪೇಕ್ಷೆಯನ್ನು ಮನುಷ್ಯ ಪ್ರಾಣಿಯು ಭೋಗಿಸುತ್ತಾನೆಯೋ ಅದೆಲ್ಲ ಈಶ್ವರ ನಿರ್ಮಿತವಾಗಿದೆ (ಇಸ್ಸರ ನಿಮ್ಮಾನ ಹೇತು) ಎಂದು ಪ್ರತಿಪಾದಿಸುವವರನ್ನೂ ಇದು ನಿಮ್ಮ ಮತವಾಗಿದೆಯೆ ಎಂದು ನಾನು ಕೇಳುತ್ತೇನೆ. ಅವರು ಅಹುದು ಎಂದು ಉತ್ತರವನ್ನು ಕೊಟ್ಟ ಮೇಲೆ ಹೀಗೆ ಕೇಳುತ್ತೇನೆ. ನೀವೆಲ್ಲರೂ ಪ್ರಾಣ ಘಾತಕೆ,

---

೨೦ 'ಭಗವಾನ್ ಬುದ್ಧ': ಪು ೧೮೭–೧೮೮

೨೧ 'ಯಶೋಧರಾ': ಪು ೬೯

೨೨ ಅದೇ: ಪು ೭೦

೨೩ ಭಕ್ತಿ ಭಾಂಡಾರಿ ಬಸವಣ್ಣನವರು; ಪು ೧೦೦

೨೪ ಶೂನ್ಯತತ್ತ್ವವಿಕಾಸ ಮತ್ತು ಶೂನ್ಯಸಂಪಾದನೆ: ಪು ೮–೫

ಚೋರ, ಅಬ್ರಹ್ಮಚಾರಿ, ಅಸತ್ಯವಾದಿ, ಪಿಸುಣ, ಬಯ್ಯುವವ, ಬಾಯ್ಬಡಕ, ಇನ್ನೊಬ್ಬರ ಧನವನ್ನು ಇಚ್ಛಿಸುವವ ದ್ವೇಷ್ಟಾ, ಮಿಥ್ಯಾದೃಷ್ಟಿತ (ಮೊದಲಾಗಿ) ಈಶ್ವರನು ನಿರ್ಮಿಸಿರುವನೆಂದೇ ಆಗಿರುವಿರೇನು? ಭಿಕ್ಷುಗಳೇ ಇವರೆಲ್ಲರನ್ನೂ ಈಶ್ವರನು ನಿರ್ಮಿಸಿದನೆಂಬುದು ಸತ್ಯ ಎಂದು ತಿಳಿದರೆ (ಸತ್ಕರ್ಮದ ಬಗ್ಗೆ) ಛಂದವೂ ಉತ್ಸಾಹವೂ ಉಳಿಯುದಿಲ್ಲ; ಇದನ್ನು ಮಾಡಬೇಕು ಇದನ್ನು ಮಾಡಬಾರದು ಎಂಬುದು ಕೂಡ ತಿಳಿಯಲಿಕ್ಕಿಲ್ಲ."[೨೫] ಇಲ್ಲಿ ಮಾನವ ನಿರ್ಮಿತಿ ಈಶ್ವರನಿಂದ ನಿಜ. ಆದರೂ 'ಮಾನವ ಸ್ವಭಾವ' ಅವನಿಂದಲ್ಲ ಎಂಬುದು ಸ್ಪಷ್ಟ.

ಜಾತಿ ಭೇದವನ್ನು ಬುದ್ಧ ಬಸವಣ್ಣನವರಿಬ್ಬರೂ ನಿಷೇಧಿಸಿದ್ದರು. ಜಾತಿವಾದವನ್ನು ಖಂಡಿಸಿ ಬ್ರಾಹ್ಮಣ-ಅಬ್ರಾಹ್ಮಣ ಎಲ್ಲವೂ ಒಂದೆ ಎಂದು ಸಾಧಿಸಿದರು. ಇವರಿಬ್ಬರೂ ಗೃಹತ್ಯಾಗಮಾಡಿದುದು ಕೇವಲ ಆತ್ಮಬೋಧಕ್ಕಲ್ಲ. ತಮ್ಮ ನೆರೆಯವರು ಒಬ್ಬರೊಬ್ಬರೊಡನೆ ಕೂಡಿಕೊಂಡು ನಡೆಯುವಂತಹ ಸಮಾಜರಚನೆಮಾಡಲು. ಆ ಕಾರ್ಯವನ್ನು ಕ್ರಮಬದ್ಧವಾಗಿ ಸಾಗಿಸಿದರು. ಆದರೆ ಸಮಾಜಕ್ಕೆ ಅದು ಬೇಡಾಗಿತ್ತು. ಜಗದಲ್ಲಿನ ಕಾಮ, ಕ್ರೋಧ, ಮೋಹ ಮದ ಮಾತ್ಸರ್ಯ ಲೋಭಗಳಿಗೆ ಮರುಗಿ ಅದರಿಂದ ಬಿಡುಗಡೆಯನ್ನು ಎಂತು ಪಡೆಯಬಹುದೆಂದು ಸಾಧಿಸಿ ಆ ಮಾರ್ಗವನ್ನೇ ಜನತೆಗೂ ಬೋಧಿಸಿದರು. ಇವರ ಬೋಧನೆಯಮಾರ್ಗ ಸಹಜ, ಗಂಭೀರ, ಸುಂದರ. ಬುದ್ಧನ ಬೋಧನೆಯ ಭಾಷೆ ಅಂದಿನ ಕಾಲದ ಗ್ರಾಂಥಿಕ ಭಾಷೆ. ಬಸವಣ್ಣನವರದು ಅಂದಿನ ಕಾಲದ ಸಾಮಾನ್ಯ ಜನತೆಯ ಭಾಷೆ.

'ಬುದ್ಧ-ಬಸವ, ಈ ಇಬ್ಬರು ವಿಭೂತಿ ಪುರುಷರೂ ಮಾನವರಾಗಿ ಹುಟ್ಟಿ ಮಹಾನುಭಾವ ಪದವಿಗೇರಿದ ಮಹಾಸಾಧಕರು. ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಶುದ್ಧಾಂಗ ಶೀಲರು. ಸಾಮಾನ್ಯ ಜನತೆಯಲ್ಲಿನ ಅಜ್ಞಾನವನ್ನು ಕಂಡು, ಮರುಗಿ, ತಿದ್ದಲು ಪ್ರಯತ್ನಿಸಿದರು. ಸಕಲ ಜೀವಿಗಳಿಗೆ ಲೇಸನೆಸಗುವ ಗುರಿ ಹಿಡಿದು ಹೊರಟ ಧೀಮಂತರು. ಇವರ ತತ್ವ-ಮಾರ್ಗ, ವಿಶ್ವಕ್ಕೆ ಮಾದರಿ. ಹೀಗೆ ಈ ಇಬ್ಬರು ಮಹಾನುಭಾವರೂ ಜಗದೋದ್ಧಾರ ಕಾರ್ಯಮಾಡಿ ಅಮರರಾಗಿದ್ದಾರೆ.

---

೨೫ 'ಭಗವಾನ್ ಬುದ್ಧ': ಪು ೨೨೨-೨೨೩

In Karnatak, as far back as eight centuries, Basaveswar the great had envisioned the utmost reform, so we have been thinking of in the twentieth century. He coined a new word for bodily labour **Kayaka**. Bodily labour was worship of god, to him. He declaired **Kayakave Kailasa** (Labour is Heaven). The meaning of productive labour is really heaven. He also placed before the people the ideal that there was no difference between man and woman. Similarly he rejected the authority of any sacred text to weigh heavily on the mind, including that of the Vedas. In sum he taught those doctrines that are acceptable to the modern mind.

Vinoba Bhave

'ಕಾಯಕ' ಕುರಿತು ಬಸವಣ್ಣನವರು ಹಾಗೂ ಸಮಕಾಲೀನ ಶರಣರ ವಿಚಾರಗಳು

ಶರಣ

ಹನ್ನೆರಡನೆಯ ಶತಮಾನದಲ್ಲಿ ಶರಣರು ಸಮಾಜ ಶುಚಿತ್ವಕ್ಕಾಗಿ ಅನೇಕ ಉದಾತ್ತ ಉದ್ದೇಶಗಳನ್ನಿಟ್ಟುಕೊಂಡು ಹೆಣಗಾಡಿದರು. ಸಮಾಜದ ನಾಡಿ ಪರೀಕ್ಷೆ ಮಾಡಿದ ಶರಣರು ಅದರ ಅನಾರೋಗ್ಯದ ಕಾರಣಗಳನ್ನು ಕಂಡು ಹಿಡಿದರು. ಅಂತರಂಗ ಶುದ್ಧಿ ಇಲ್ಲದ ಸಮಾಜವು ತನ್ನ ಉದ್ಧಾರವನ್ನು ಮರೆತು ಬಾಯ್ಸವಿಗಾಗಿ ಬಾಯಿಗೆ ಬಂದಂತೆ ಆಡುತ್ತಿತ್ತು. ಕ್ಷಣಿಕ ಸುಖಕ್ಕಾಗಿ ಸ್ವೇಚ್ಛೆಯಿಂದ ವರ್ತಿಸುತ್ತಿತ್ತು. ಹೀಗೆ ಬಿಟ್ಟರೆ ಸಮಾಜದ ಅನಾರೋಗ್ಯ ಅಧಿಕಗೊಂಡು ಸರ್ವನಾಶವಾಗುವುದು ಖಂಡಿತವೆಂದು ಮನಗಂಡ ಶರಣರು ಸಮಾಜಕ್ಕೆ ಕೆಲವು ಪಥ್ಯಗಳನ್ನು ಹೇಳಿದರು, ಅದರಂತೆ ಮಾಡಿಸಲು ಮನವಾರೆ ದುಡಿದರು. ಅನ್ಯರ ಆರೋಗ್ಯ ಸುಧಾರಿಸುವ ಮುನ್ನ ತಾವು ಆರೋಗ್ಯವಂತರಾಗಿರಬೇಕಾದುದು ಅತ್ಯವಶ್ಯಕವಾದುದರಿಂದ ಶರಣರು ಪಥ್ಯ ಪ್ರತಿಜ್ಞಾಬದ್ಧರಾಗಿ ಬಾಳಿದರು. ಶರಣರ ಪಥ್ಯವು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾದುದು. ಕುಲಗಳಲ್ಲಿ ಮೇಲು ಕೀಳೆಂದು. ಲಿಂಗಗಳಲ್ಲಿ ಸಶಕ್ತ ಅಶಕ್ತವೆಂದು ; ಸಂಪತ್ತಿನಲ್ಲಿ ಬಲ್ಲಿದ ಬಡವನೆಂದು, ಕಾಯಕದಲಿ ಉತ್ತಮ ಅಧಮವೆಂದು ಭೇದಮಾಡಿ ನೋಡಕೂಡದೆಂಬ ಪಥ್ಯಗಳನ್ನು ಸಮಾಜಕ್ಕೆ ಶರಣರು ಹಾಕಿದರು. ಈ ಪಥ್ಯವನ್ನು ಸಮಾಜವು ಅಳವಡಿಸಿಕೊಂಡು ಅದರ ಸರ್ವಾಂಗೀಣೋನ್ನತಿಯಾಗುವಂತೆ ಶರಣ ವೈದ್ಯರ ತಂಡವು ಕಾರ್ಯಾಚರಣೆಗಿಳಿಯಿತು. ಶರಣ ಸಮೂಹದ ಗಣ್ಯ ನಾಯಕರಾದ ಬಸವಣ್ಣನವರು ಸಮತಾವಾದದ ಸಾಕ್ಷಾತ್ಕಾರಕ್ಕಾಗಿ ಮುಖ್ಯ ಅರ್ಚಕರಾದರು. ಇವರನ್ನೇ ಅನುಸರಿಸಿ, ತಮ್ಮ ಜೀವನವನ್ನೇ ತತ್ವಗಳಿಗಾಗಿ ಅರ್ಪಿಸಿದ ಉಳಿದ ಶರಣರೂ ಆರಾಧಕರಾದರು.

ವಚನಕಾರರ ವಿಶಿಷ್ಟ ವಿಚಾರಗಳಲ್ಲಿ ಕಾಯಕ ವಿಚಾರವೂ ಒಂದು. ಮಾನವ ಪರಾವಲಂಬಿಯಾಗಿ ಬಾಳಿ ಪರರ ಸೊತ್ತನ್ನು ಬಳಸಿ ವೈಗಳ್ಳನಾಗದೆ ತಾನು ತನು ತಟ್ಟಿ ಮನ ಮುಟ್ಟಿ ದುಡಿದು ಪಡೆದುಣ್ಣಬೇಕು. ಈ ದುಡಿಮೆಯ ಧನದಲ್ಲಿ ಗಳಿಕೆಯ ಸ್ವಾರ್ಥಭಾವನೆ ಇರದೆ ಸತ್ಪಾತ್ರಕ್ಕೆ ಬಳಕೆಯಾಗುವ ಪರಾರ್ಥ ಪ್ರಯೋಜನದ ಪ್ರಮೇಯವಿರಬೇಕು. ಕಾಯಕ ನಿರತನಾಗುವುದರಿಂದ ಮಾನವನಿಗೆ ಉತ್ಸಾಹ, ನಿಷ್ಠೆ, ಆರೋಗ್ಯ ಭಾಗ್ಯಗಳು ಲಭಿಸುತ್ತವೆ. ಅದರೊಂದಿಗೆ ಸಮಾಜದ ಸಾಂಪತ್ತಿಕ ಸ್ಥಿತಿಯೂ ಸುಧಾರಣೆಗೊಳ್ಳುತ್ತದೆ. ಕಾಯಕನಿರತನ ಚಿತ್ತದಲ್ಲಿ ಅಲ್ಲಸಲ್ಲದ ವಿಚಾರಗಳು ಅಂಕುರಿಸಲಾರವು. ಮಾನವನು ತಾನು ದುಡಿದು ಗಳಿಸಿದುದರ ಬೆಲೆಯ ಸರಿಯಾದ ಕಲ್ಪನೆ ಬರುವದರಿಂದ ದುಂದುಗಾರಿಕೆಯಲ್ಲಿ ಧನ ವಿನಿಯೋಗವಾಗದೆ ಮಿತವ್ಯಯದ ಸತ್ಕಾರ್ಯಕ್ಕೆ ಸಲ್ಲುತ್ತದೆ. ಆದುದರಿಂದ ಪ್ರತಿಯೊಬ್ಬ ಮಾನವನು ಕಾಯಕ ನಿರತನಾಗಬೇಕಾಗುತ್ತದೆ. ಕಾಯಕವೆಂದರೆ ಕೈ ಕೂಲಿಯಲ್ಲ; ಕಾಯಕಧಾರಿಯು ತನ್ನ ಮನೋನಿಗ್ರಹ ಮಾಡಿಕೊಂಡು ಅತ್ತಿತ್ತ ಹರಿವ ಮನದ ಶಿರವ ತರಿದು ಕಾಯಕದಲ್ಲಿ ತಲ್ಲೀನನಾಗಬೇಕು. ಆದುದರಿಂದ ಕಾಯಕ ನಿರತನು ಜಂಗಮ ಮುಂದಿದ್ದರೂ ಜರಿಯಬೇಕು. ಲಿಂಗವನ್ನಾದರೂ ಮರೆಯಬೇಕು. ಕಾಯಕವೇ ಕೈಲಾಸವಾಗಿ ಸ್ವೀಕರಿಸಿದ ಶರಣರು ಲಿಂಗ ಜಂಗಮರ ಸಂಗವನ್ನು ಬಿಡಲು ಸಿದ್ಧರಾದಾರಲ್ಲದೆ ಕಾಯಕವನ್ನು ಕ್ಷಣಕಾಲವೂ ಬಿಡರು. ಸಮಸ್ತ ಶರಣರನ್ನು ಸ್ಮರಿಸಿಕೊಂಡಾಗ ಅವರು ಕಾಯಕಕ್ಕೆ ಕೊಟ್ಟಿರುವ ಮನ್ನಣೆಯ ಮೇಲ್ಮೆ ವ್ಯಕ್ತವಾಗುತ್ತದೆ. ಕಾಯವಿಲ್ಲದ ಜೀವಿ ಚಲಿಸಲಸಾಧ್ಯವಾದಂತೆ ಕಾಯಕವಿಲ್ಲದ ಶರಣ ಜೀವಿಸಲ ಸಾಧ್ಯವೆಂದು ವಿಚಾರಿಸಿ ಜೀವಿಸಿದ್ದಾರೆ. ಇಂಥ ಮನ್ನಣೆಯ ಕಾಯಕ ಕುರಿತು ಶರಣರ ದೃಷ್ಟಿಯಲ್ಲಿ ತರತಮ ಭಾವವಿಲ್ಲ. ಯಾರಿಗೆ ಯಾವ ಕಾಯಕ ಸುಲಭ ಸಾಧ್ಯವೋ ಅವರು ಆ ಕಾಯಕವನ್ನು ಮಾಡಬಹುದು. ಈ ಕಾಯಕ ಕುಲಸೂಚಕವಾದುದಲ್ಲ. ಕುಲದಲ್ಲಿಯೂ ಉಚ್ಚ ನೀಚ ತಮಗಳನ್ನು ಕಾಣದ ಶರಣರು ಕಾಯಕವನ್ನು ಕುಲ

ಸೂಚಕವೆಂದು ವಿಚಾರಿಸಲಿಲ್ಲ. ಈ ಭೂಮಿಯ ಮೇಲೆ ಮೊದಲು ಮಾನವ ಜನಿಸಿ ಅನಂತರ ತನ್ನ ಅನುಕೂಲತೆಗಾಗಿ, ಸಮಯದ ಉಳಿತಾಯಕ್ಕಾಗಿ ಕಾಯಕಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡು ಸಹಕಾರದಿಂದ ಬಾಳಿದ. ಒಬ್ಬೊಬ್ಬನು ಒಂದೊಂದು ಕಾಯಕದಲ್ಲಿ ತಲ್ಲೀನನಾಗುವದರಿಂದ ಅದರಲ್ಲಿ ವಿಶೇಷ ಪರಿಣತಿಯನ್ನು ಪಡೆಯುತ್ತಾನೆ. ಹೀಗಾಗುವದರಿಂದ ಎಲ್ಲರೂ ತಮ್ಮ ತಮ್ಮ ಕಾಯಕಗಳಲ್ಲಿ ಪರಿಣತರಾಗುತ್ತಾರೆ. ಆ ಪರಿಣತಿಯ ಫಲ ತಮ್ಮ ತಮ್ಮಲ್ಲಿ ಎಲ್ಲರಿಗೂ ಉಪಯೋಗವಾಗುತ್ತದೆ. ಒಬ್ಬನೇ ಹತ್ತಾರು ಕಾಯಕಗಳನ್ನು ಮಾಡುವುದರಿಂದ ಒಂದರಲ್ಲಿಯೂ ವಿಶೇಷಾನುಭವವನ್ನು ಪಡೆಯದವನಾಗುತ್ತಾನೆ. ಆದುದರಿಂದ ಅವರೆಲ್ಲರೂ ಕಾಯಕ ಸಹಕಾರದಿಂದ ಸುಖ ಶಾಂತಿಗಳನ್ನು ಪಡೆಯಲು, ಪ್ರಯತ್ನಿಸಿದರು. ಆದರೆ ಸಹಕಾರಕ್ಕಾಗಿ ಉಪಯೋಗಿಸಿದ ಈ ಕಾಯಕ ಸೂತ್ರ ಅಸಹಕಾರ ಪಾತ್ರವನ್ನಾಡಿದಾಗ ಶರಣರು ಇದನ್ನು ಕುರಿತು ಸಮಗ್ರವಾಗಿ ವಿಚಾರ ಮಾಡಿದರು. ಜನ ಕಾಯಕದಲ್ಲಿ ಮೇಲು ಕೀಳುಗಳನ್ನೆಣಿಸತೊಡಗಿದರು. ಇದೂ ಅಲ್ಲದೆ ಕಾಯಕವಿಭಜನೆ ನಿಂತು ಕಾಯಕ ಕೈಕೊಂಡವರ ವಿಭಜನೆ ನಡೆಯಿತು. ಆ ಆ ಕಾಯಕ ಮಾಡುವವರು ಆ ಆ ಕುಲದವರೆಂದು ಹೆಸರಿಸುವಷ್ಟು ಹೀನತನಕ್ಕಿಳಿದರು. ಆಗ ಶರಣರು ಕಾಯಕ ಕುರಿತು ತಮ್ಮ ವಿಚಾರಗಳನ್ನು ಜನತೆಯ ಮುಂದೆ ಇಡತೊಡಗಿದರು. ಕಾಯಕದಲ್ಲಿ ಮೇಲು ಕೀಳುಗಳಿಲ್ಲ; ಯಾವದೇ ಕಾಯಕ ಕೈಕೊಂಡವನೇ ಮೇಲು ಕುಲದವನು, ಕಾಯಕವು ಎಂದೂ ಕುಲಸೂಚಕವಾಗಲಾರದು, ಆಗಬಾರದು. ಚೆನ್ನಯ್ಯ; ಕಕ್ಕಯ್ಯ ; ಮಾಚಯ್ಯ ; ಚಂದಯ್ಯ ; ಚೌಡಯ್ಯ : ಕೇತಯ್ಯ ; ಕನ್ನಪ್ಪ ಮೊದಲಾದ ಶರಣರ ಹೆಸರುಗಳ ಹಿಂದೆ, ಕ್ರಮವಾಗಿ ಇರುವ ಮಾದಾರ, ಡೋಹಾರ, ಮಡಿವಾಳ, ನುಲಿಯ, ಅಂಬಿಗರ, ಮೇದರ, ಗಾಣದ ಮೊದಲಾದ ವೃತ್ತಿಸೂಚಕ ಪದಗಳು ಜಾತಿ ಸೂಚಕಗಳಲ್ಲ. ಹಾಗಾದಲ್ಲಿ ಇಂದು ಬಳಸಿಕೊಳ್ಳುವ ಡಾಕ್ಟರ್, ಪ್ರೊಫೆಸರ್, ಕಾಂಟ್ರಾಕ್ಟರ್, ಪ್ರೊಪ್ರೈಟರ್, ಜಸ್ಟಿಸ್, ಪ್ಲೀಡರ್ ಮೊದಲಾದವುಗಳೂ ಜಾತಿ ಸೂಚಕಗಳಾಗಿ ಪರಿಣಮಿಸುವ ಕಾಲವೂ ಬಂದೀತು ! ಕಾಯಕದಲ್ಲಿ ಉಚ್ಚ ನೀಚ ಭಾವನೆಗಳು ಬೇರೂರಿದುದನ್ನು ಕಿತ್ತು ಹಾಕಲು ಶರಣರು ಸತತ ಶ್ರಮಪಟ್ಟರು. ಕಾಯಕ ಹೀನರಾದ ಜನರು ಅನ್ಯರ ಸೇವಾಶ್ರಮದಲ್ಲಿ ಬಾಳುವುದರಿಂದ ಈ ಭಾವನೆಗಳು ಬರುತ್ತಿವೆಯೆಂದು ಭಾವಿಸಿ ಪ್ರತಿಯೊಬ್ಬನೂ ಕಾಯಕ ವ್ರತಸ್ಥನಾದರೆ ವಿಚಾರವಳಿಯಬಹುದೆಂದು ಯೋಚಿಸಿ ಸಕಲರಿಗೂ ಕಾಯಕ ದೀಕ್ಷೆಯನ್ನು ಕೊಟ್ಟರು. ಆಗಲೂ ಕಾಯಕದಲ್ಲಿ ಮೇಲು ಕೀಳುಗಳನ್ನೆಣಿಸುತ್ತ ಗೊಣಗುವುದು ಆರಂಭವಾದಾಗ ಎಲ್ಲ ಕಾಯಕಗಳೂ ಸರಿಸಮಾನವೆಂದು ಬೋಧಿಸಿದರು. ಆ ದಿಸೆಯಲ್ಲಿ ಬಸವಣ್ಣನವರು ವಿಶೇಷವಾಗಿ ಯತ್ನಿಸಿದರು.

ಬೇಡುವಾತ ಭಕ್ತನಲ್ಲ
ಬೇಡಲಾಗದು ಭಕ್ತನು . . .
ಬೇಡೆನಯ್ಯಾ ಕೂಡಲಸಂಗಮದೇವಾ || ೪೪೭ ||

ಕಾಡುವ ಬೇಡುವ ಜಂಗಮ ಬಂದರೆ
ನೀಡಲುಬಾರದು || ೪೪೮ ||

ಜಂಗಮನೂ ಕಾಡಿ ಬೇಡಿ ಪಡೆದು ವ್ಯೆಗಳ್ಳನಾಗಬಾರದೆಂದು ಬಸವಣ್ಣನವರು ಹೇಳುತ್ತಾರೆ. ಪ್ರತಿಯೊಬ್ಬನೂ ತನಗೆ ಬೇಕಾದುದನ್ನು ತಾನು ಶ್ರಮಪಟ್ಟು ಗಳಿಸಿ ಉಣಬೇಕು.

ಸೆಟ್ಟಿಯೆಂದೆಂಬೆನೆ ಸಿರಿಯಾಳನ ? ಮಡಿವಾಳ
ನೆಂದೆಂಬೆನೆ ಮಾಚಯ್ಯನ ?
ಡೋಹಾರನೆಂದೆಂಬೆನೆ ಕಕ್ಕಯ್ಯನ ? ಮಾದಾರ
ನೆಂದೆಂಬೆನೆ ಚೆನ್ನಯ್ಯನ ?
ಆನು ಹಾರುವನೆಂದರೆ ಕೂಡಲ
ಸಂಗಯ್ಯ ನಗುವನಯ್ಯ || ೩೪೪ ||

ಈ ವಚನವು ವೃತ್ತಿಯಿಂದ ಜಾತಿಯನ್ನೆಣಿಸಬಾರದೆಂಬುದನ್ನು ಎತ್ತಿ ಹೇಳುತ್ತದೆ.

ಭಕ್ತಿಯಿಲ್ಲದ ಬಡವ ನಾನಯ್ಯ ; ಕಕ್ಕಯ್ಯನ
ಮನೆಯಲು ಬೇಡಿದೆ ;
ಚೆನ್ನಯ್ಯನ ಮನೆಯಲು ಬೇಡಿದೆ ; ದಾಸಯ್ಯನ
ಮನೆಯಲು ಬೇಡಿದೆ ;
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದರೆ
ಎನ್ನ ಪಾತ್ರೆ
ತುಂಬಿತ್ತು ಕೂಡಲಸಂಗಮದೇವಾ || ೩೪೬ ||

ಎಂದು ಹೇಳುವಲ್ಲಿ ಮತ್ತು ತಮ್ಮ ಕುಲ ಸಂಬಂಧ ಬಂಧು ಬಳಗ ಕುಲಗೋತ್ರಗಳನ್ನು ಚೆನ್ನಯ್ಯ ಕಕ್ಕಯ್ಯ ಶ್ವಪಚಯ್ಯ ಮೊದಲಾದವರೊಂದಿಗೆ ಹೊಂದಿಸಿ ಹೇಳುವದರಿಂದ ಬಸವಣ್ಣನವರು ಅವರು ಆ ಕುಲದವರೆಂದು ಹೇಳದೆ

ಕಾಯಕದವರೆಂದು ಹೆಮ್ಮೆಯಿಂದ ಹೊಂದಿಸಿಕೊಳ್ಳುತ್ತಾರೆ.

ಮಾದಾರ ಶಿವಭಕ್ತನಾದರೆ ಆತನ ಹೊರೆಯಲಿ
ಭೃತ್ಯನಾಗಿರ್ಪುದು ಕರ ಲೇಸಯ್ಯ || ೧೩೬ ||

ಹೊಲೆಯ ಹೊಲಬಿಗನಾದರೆ
ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ ;
ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯ ;
ಹೊಲಬುಗೆಡಬೇಡ ; ಶಿವಶರಣೆನ್ನಿರಯ್ಯ ;
ನಮ್ಮ ಕೂಡಲಸಂಗನ ಮಹಾಮನೆಯೊಳು
ಮಾದಾರ ಚನ್ನಯ್ಯ ಹೊಲಬಿಗನಯ್ಯ || ೧೩೫ ||

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ,
ನಿಮ್ಮಾಣೆ ! ನಿಮ್ಮ ಪುರಾತನರಾಣೆ !
ತಲೆದಂಡ ! ತಲೆದಂಡ !!
ಕೂಡಲಸಂಗಮದೇವಾ, ಭಕ್ತರ ಕುಲವನರಸಿದರೆ
ನಿಮ್ಮ ರಾಣಿವಾಸದಾಣೆ ! || ೪೫೨ ||

ಈ ವಚನಗಳಿಂದ ಕುಲವಂತನಿಗಿಂತ ಉದ್ಯೋಗವಂತನ ಸಹವಾಸ ಸಖ್ಯ ಸುಖಕರವಾದುದೆಂದು ಬಸವಣ್ಣನವರು ಹೇಳುತ್ತಿದ್ದುದು ಸೂಕ್ತ ವಿಚಾರವಾಗಿದೆ. ಹೊಲಬುಗೆಟ್ಟು ಮಾಡುವ ಶಿವಪೂಜೆಯಾಗಲಿ, ಶಿವಧ್ಯಾನವಾಗಲಿ ಹೆಚ್ಚಲ್ಲ. ಲಿಂಗಜಂಗಮರನ್ನೂ ಮರೆತು ಮಾಡುವ ಕಾಯಕ ಹೆಚ್ಚಿನದು. ಉದ್ಯೋಗ ಹೀನರಾದ ಬ್ರಾಹ್ಮಣ ಜಂಗಮರ ಸಹವಾಸಕ್ಕಿಂತಲೂ ಹೊಲಬಿಗರಾದ ಮಾದಿಗರ ಸಹವಾಸ ಸುಖಮಯವಾದುದು.

ಕಾಯಕದ ವಿಷಯದಲ್ಲಿ ಬಸವಣ್ಣನವರು ತಮ್ಮ ಸಮಕಾಲೀನರಿಂದ ಸಾಕಷ್ಟು ಪ್ರಭಾವ ಹೊಂದಿದ್ದಾರೆ, ಕಾಣಿಕೆ ಕೊಂಡಿದ್ದಾರೆ. ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ, ಮೊದಲಾದಂಥ ಕಾಯಕ ಕಲಿಗಳ ಪ್ರಭಾವ ಬಸವಣ್ಣನವರ ಮೇಲಾಗಿದೆ. ಬಸವಣ್ಣನವರೇ "ಎನ್ನ ಕಾಯಕದ ಶುದ್ಧ ಮಾಡಿದಾತ ಮಡಿವಾಳ" ಎಂದು ತಮ್ಮ ವಚನದಲ್ಲಿ ಸ್ಮರಿಸಿದ್ದಾರೆ. "ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯ" ಎಂದು ಹೆಸರಿಸಿದ್ದಾರೆ. ಆದುದರಿಂದ ಅವರ ಕಾಲದ ಶರಣರಾದ ಬೊಕ್ಕಸದ ಚಿಕ್ಕಣ್ಣ, ಸತ್ತಿಗೆಕಾಯಕದ ಮಾರಿತಂದೆ, ಕಲಕೇತಯ್ಯ, ಮಲ್ಲಿನಾಥಯ್ಯ, ಹೊಡೆಹುಲ್ಲು ಬಂಕಣ್ಣ, ಬಾಚಿಕಾಯಕದ ಬಸವಣ್ಣ, ಅಮ್ಮಿದೇವ ಹಡಪದಪ್ಪಣ್ಣ, ಕಾಳವ್ವೆ, ಮಸಣಮ್ಮ, ಯೇಲೇಶ್ವರದ ಅಕ್ಕಮ್ಮ, ಕದಿರ ಕಾಯಕದ ಕಾಳವ್ವೆ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ ಮೊದಲಾದವರ ಪ್ರಭಾವ ಬಸವಣ್ಣನವರ ಮೇಲಾದುದು ಸಹಜ.

ಕಾಯಕ ತಪ್ಪಿದರೆ ಸೈರಿಸಬಾರದು . . .
ಕರ್ಮಹರ ಕಾಳೇಶ್ವರಾ
—ಬಾಚಿ ಕಾಯಕದ ಕಾಳವ್ವೆ

ಕದಿರು ಮೂರಿಯಲು 'ಏನೂ ಇಲ್ಲ' ಗುಮ್ಮೇಶ್ವರಾ
—ಕದಿರು ಕಾಯಕದ ಕಾಳವ್ವೆ

ಕಾಯಕದಲಿ ನಿರುತನಾದರೆ, ಗುರುದರುಶನವಾದಡೂ
ಮಱೆಯಬೇಕು ;
ಲಿಂಗಪೂಜೆಯಾದಡೂ ಮಱೆಯಬೇಕು ;
ಜಂಗಮ ಮುಂದಿದ್ದಡೂ
ಹಂಗುಹಱಿಯಬೇಕು ಕಾಯಕವೆ ಕೈಲಾಸವಾದ
ಕಾರಣ ಅಮರೇಶ್ವರ
ಲಿಂಗವಾಯಿತ್ತಾದಡೂ ಕಾಯಕದೊಳಗು

* * *

ಕಾಯಕ ನಿಂದಿತ್ತು ಹೋಗಯ್ಯ
ಎನ್ನಾಳ್ದನೆ ಭಾವಶುದ್ಧವಾಗಿ ಮಹಾ
ಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚಯಿಸಿ ಮಾಡಬೇಕು
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ
ಬೇಗ ಹೋಗು ಮಾರಯ್ಯ
—ಆಯ್ದಕ್ಕಿ ಮಾರಯ್ಯ

ಒಂದ ಹಿಡಿದಲ್ಲಿ ಸತ್ತಿಗೆಯವ ಇದಿರ ಉಭಯದ
ಸಂದ ಕಡಿದಲ್ಲಿ
ಕೊಡಲಿಯವ, ಹಿರಿದು ಮುಂದಳ
ತಮವನೊಂದುಗೂಡಿ ಕೆಡಿಸುವ
ದಕ್ಕೆ ಪಂಜಿನವ. ಇಂದು ಅಂದು
ಬೆಸದ ಕಾಯಕ ಐಘಟೇಶ್ವರ
ಲಿಂಗವಿದ್ದಲ್ಲಿಯೇ ಬೆಸನಿಲ್ಲದಿರಬೇಕು
—ಮಾರಿತಂದೆ

ಗಂಧರ್ವಕ್ಕೆ ರಾಗದ ಹೆಸರಿಟ್ಟಂತೆ,
ಸ್ವರವೊಂದು ಸಂಚಾರದ ಪರಿ ಬಣ್ಣ
ಬೇರಾದಂತೆ, ಗೋವರ್ಣ ಹಲವು ಕ್ಷೀರ
ಏಕವರ್ಣವಾದಂತೆ, ಕಾಯಕ
ಹಲವಾದಲ್ಲಿ ಮಾಡುವ ಮಾಟ ಶರಣರೊಳಗಾಟ,
ಲಿಂಗವಕೂಡುವ
ಕೂಟ ಏಕವಾಗಿರಬೇಕು, ಬಸವಣ್ಣ ಪ್ರಿಯ
ನಾಗೇಶ್ವರ ಲಿಂಗವನರಿಯುವದಕ್ಕೆ

—ಬೊಕ್ಕಸದ ಚಿಕ್ಕಣ್ಣ

ಖಂಡಿತ ಕಾಯಕಕ್ಕೆ ಇಂದಿಂಗೆ ನಾಳಿಂಗೆಂಬ
ಸಂದೇಹವಿಲ್ಲದಲ್ಲಿಯೇ
ಸರ್ವಶೀಲ . . . ಇದಕ್ಕೆ ಐಘಟೇಶ್ವರ ಲಿಂಗ ಸಾಕ್ಷಿಯಾಗಿ

—ಮಾರಿತಂದೆ

ಕೂಲಿಕೃಷಿ ಕಾಯಕಂಗಳಿಂದ ಮಾಡುವ
ಗುರುಲಿಂಗ ಜಂಗಮರ ಸೇವೆ
ಅದಾವ ತೆರನೆಂದರಿದು ಭಾವಶುದ್ಧವಾಗಿ
ಮಾಡುವ ಸುಕಾಯಕವಂತ
ನಿರವು ಯೆಂತುಟೆಂದಡೆ . . .

—ಹೊಡೆಹುಲ್ಲು ಬಂಕಣ್ಣ

ಆವ ಜಾತಿ ಗೋತ್ರದಲ್ಲಿ ಬಂದಡೂ
ತಮ್ಮ ತಮ್ಮ ಕಾಯಕಕ್ಕೆ ಭಕ್ತಿಗೆ
ಸೂಚಕವಿಲ್ಲದಿರಬೇಕು . . .
ಚೆನ್ನಬಸವಣ್ಣನ ಸಾಕ್ಷಿಯಾಗಿ
ಕಮಳೇಶ್ವರ ಲಿಂಗವು ತಾನೇ ಎಂದು ಭಾವಿಸುವನು

—ಅಮ್ಮಿದೇವ

. . . ಶಿವಭಕ್ತರು ಕರ್ಮಮೂಲ
ಕಾಯಕವಿಡಿದು ಬಂದ ದ್ರವ್ಯವೇ
ಲಿಂಗಕ್ಕರ್ಪಿತ, ಕಾಯಕ ಹೀನವೆಂದು
ಬಿಟ್ಟು ಹಿಡಿದರೆ ಭಕ್ತನಲ್ಲ
ಪಥಕ್ಕೆ ಸಲ್ಲ. ಪುರಾತನರೊಲ್ಲರು, ಲಿಂಗಮೆಚ್ಚಲ್ಲ.
ಬಸವಪ್ರಿಯ ಕೂಡಲ
ಚೆನ್ನ ಸಂಗಮದೇವ

—ಹಡಪದಪ್ಪಣ್ಣ

ಕೃತ್ಯಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ
. . . ಉರಿಲಿಂಗ ಪೆದ್ದಿಗಳನರಸನಲ್ಲಿ ಸದರವಲ್ಲ ಕಾಣವ್ವ

—ಕಾಳವ್ವೆ

. . . ಸತ್ಯ ಶುದ್ಧ ಕಾಯಕದಾತ ಭಕ್ತ . . .
ರಾಮೇಶ್ವರ ಲಿಂಗದಲ್ಲಿ

—ಏಲೇಶ್ವರದ ಅಕ್ಕಮ್ಮ

ಗುರುಲಿಂಗ ಜಂಗಮಕ್ಕೆ ಉದಾಸೀನವ
ಮಾಡಿದಡೆ ತಪ್ಪನೊಪ್ಪಬಹುದೇ . . .
ನಾನಿಂದ ಕಾಯಕಕ್ಕೆ ಭಂಗ ನಿಮ್ಮಾಣೆ
ನಿಮ್ಮ ಪ್ರಮಥರಾಣೆ ನಿಃಕಳಂಕ
ಮಲ್ಲಿಕಾರ್ಜುನಾ.

* * *

ತನ್ನ ಸುಬುದ್ಧಿಯಿಂದ ಸುಕಾಯಕದಿಂದ
ಗುರುಲಿಂಗ ಜಂಗಮಕ್ಕೆ
ತನು ಮನ ಧನ ಸವೆಯಿಸಿ ಚಿತ್ತಶುದ್ಧನಾಗಿ
ಅಜ್ಯೋತ್ತಿದಂತಿದ್ದುದೇ
ವ್ರತ . . . ನಿಃಕಳಂಕ ಮಲ್ಲಿಕಾರ್ಜುನಾ

ಮೋಳಿಗೆಯ ಮಾರಯ್ಯ

ನೇಮವ ಮಾಡಿಕೊಂಡು ಭಕ್ತರ ಭವನಂಗಳ
ಹೊಕ್ಕು ಕಾಯಕವ
ಮಾಡದೆ ಹೊನ್ನ ಬೇಡಿದೆನೆಂಬುದು ಕಷ್ಟವಲ್ಲವೇ ?
ಆ ಗುಣ ಅಮಳೇಶ್ವರ ಲಿಂಗಕ್ಕೆ ದೂರ . . .?

ಹಾಗದ ಕಾಯಕವ ಮಾಡಿಕೊಂಡು
ಹಣವೊಡ್ಡನ ತಾ ಎಂಬಲ್ಲಿ
ಸತ್ಯ ಕಾಯಕವುಂಟೇ ? ಭಕ್ತರಲ್ಲಿ
ಕಾಯಕಕ್ಕೆ ಕಡಮೆಯಾಗಿ
ತಾಯೆಂಬುದು ಅಮರೇಶ್ವರ ಲಿಂಗಕ್ಕೆ
ಚಿತ್ತಶುದ್ಧ ಕಾಯಕ

—ಆಯ್ದಕ್ಕಿ ಮಾರಯ್ಯ

ಎಲ್ಲರ ಪರಿಯಲ್ಲ ಎನ್ನ ಊಳಿಗ ಬಸವಣ್ಣ
ಚೆನ್ನಬಸವಣ್ಣ ಕೊಟ್ಟ ಕಾಯಕ

—ಬೊಕ್ಕಸದ ಚಿಕ್ಕಣ್ಣ

ಮತ್ತಂ ಭಕ್ತರು ಕಾಯಕವೆಂದು ದಾಯಗಾಱಿಕೆ
ಯಲ್ಲಿ ತಂದು ದಾಸೋಹವ
ಮಾಡಬಹುದೇ? ಒಮ್ಮನವ ತಂದು
ಒಮ್ಮನದಲ್ಲಿಯೇ ಮಾಡಿ
ಇಮ್ಮನವಾಗದ ಮುನ್ನವೆ ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗಕ್ಕೆ ಸಲ್ಲಬೇಕು ಮಾರಯ್ಯ

—ಆಯ್ದಕ್ಕಿ ಮಾರಯ್ಯ

ನಾ ಕಟ್ಟಿಗೆಯ ಹೊತ್ತು ಶಿವಭಕ್ತರ ಮನೆಗೆ
ನೀವು ಕೊಟ್ಟ ಕಾಯಕದ
ಕೃತ್ಯ ಇನ್ನೆಷ್ಟು ದಿನ ಹೇಳಯ್ಯ
ನಿಃಕಳಂಕ ಮಲ್ಲಿಕಾರ್ಜುನಾ

—ಮೋಳಿಗೆಯ ಮಾರಯ್ಯ

. . . ಕಾರೆಯ ಸೊಪ್ಪಾದರೂ ಕಾಯಕದಿಂದ
ಬಂದುದು ಲಿಂಗಕ್ಕರ್ಪಿತ
ವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ
ಇದು ಕಾರಣ ಸತ್ಯ ಶುದ್ಧ
ಕಾಯಕದ ನಿತ್ಯ ದ್ರವ್ಯವಾದರೆ ಚಂದೇಶ್ವರ
ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ

—ನುಲಿಯ ಚಂದಯ್ಯ

. . . ಎನ್ನಂಗದ ಸತ್ತಿಗೆಯ ಕಾಯಕ
ಸಂಗನಬಸವಣ್ಣಂಗೆ ಕಾಯಕ
ನಿಂದುದೆಂಬ ಭಾಷೆ. ಕಾಯಕ ನಿಂದಲ್ಲಿ ಎನಗೆ
ಐಘಟೇಶ್ವರ ಲಿಂಗವಿಲ್ಲಾ ಎಂಬ ಶಪಥ

—ಮಾರಿತಂದೆ

ಬೇಡವೇತಕ್ಕೆ ಕಾಯಕವ ಮಾಡಿಹೆನೆಂದು?
ಕೊಡದೊಡೆ ಒಡಗೂಡಿ
ಬೈಯವೇತಕ್ಕೆ? ಒಡೆಯರು ಭಕ್ತರಿಗೆ
ಮಾಡಿಹೆನೆಂದು ಗಡಿತಡಿಗಳಲ್ಲಿ
ಕವಾಟ ಮಂದಿರದ ಮುಂದೆ ಸಂದಿಗೊಂದಿಯಲ್ಲಿ
ನಿಂದು ಕಾಯವೇತಕ್ಕೆ
ಈ ಗುಣಕಾಯಕದಂದವೆ? ಈ ಗುಣ
ಹೊಟ್ಟೆಗೆ ಕಾಣದ ಸಂಸಾರದ –
"ಘಟ್ಟವನಿರವು"? ಉಭಯ ಭ್ರಷ್ಟಂಗೆ
ಕೊಟ್ಟ ದ್ರವ್ಯ ಮೇಖಲೇಶ್ವರ
ಲಿಂಗಕ್ಕೆ ಮುಟ್ಟದೆ ಹೋಯಿತ್ತು

—ಕಲಕೇತಯ್ಯ

ಆವ ಕಾಯಕವ ಮಾಡಿದರೂ
ಒಂದೇ ಕಾಯಕವಯ್ಯಾ . . .
ಗಂಗೇಶ್ವರ ಲಿಂಗದಲ್ಲಿ

—ಮುಸಣಮ್ಮ

ಆವಾವ ಕಾಯಕದಲ್ಲಿ ಬಂದರೂ ಭಾವಶುದ್ಧವಾಗಿ
ಗುರುಲಿಂಗ ಜಂಗಮಕ್ಕೆ
ಮಾಡುವುದೇ ಶಿವಪೂಜೆ. ಅದು ಚಂದೇಶ್ವರ
ಲಿಂಗಕ್ಕೆ ಒಪ್ಪವಲ್ಲವೇ ಮಡಿವಾಳಯ್ಯ

* * *

ಲಿಂಗಪೂಜೆಗೆ ಷೋಡಶೋಪಚಾರವೆ ಬೇಕು.
ಅದ ಮಾಡುವನ್ನಕ್ಕರ
ಕಾಯಕನಿಂದಿತ್ತು. ಕಾಯಕದೊಳಗೆ
ಮೂಱುಕೋಟಿ ಚಂದೇಶ್ವರ
ಲಿಂಗಕ್ಕೆ ಮಡಿವಾಳಯ್ಯ

—ನುಲಿಯ ಚಂದಯ್ಯ

ಸತಿಸುತ ಮಾತಾಪಿತರಿಗೆಂದು "ಹಡೆದಡೆ"
ನಿಮ್ಮಾಣೆ ಕಂಡಯ್ಯ –
. . . ನಾಚಯ್ಯ ಪ್ರಿಯ ಮಲ್ಲಿನಾಥಯ್ಯ

—ಮಲ್ಲಿನಾಥಯ್ಯ

ಕಾಯಕದಲ್ಲಿ ನಿಂದ ಶರಣಂಗೆ
ಸೇವೆಯವರ ತಪ್ಪ ಹಿಡಿದಹೆನೆಂದರೆ
ಕಾಯಕವೆಂತು ನಡೆವುದಯ್ಯಾ . . . ಕೇಳಾ ಚಂದಯ್ಯ

* * *

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ
ಶಿಲೆಯ ಕುಱುಹು ಹಱೆವುದು. ಜಂಗಮವಾದರೂ
ಕಾಯಕದಿಂದಲೆ ತನ್ನ
ವೇಷದ ಪಾಶ ಹಱೆವುದು. ಇದು ಚಂದೇಶ್ವರ
ಲಿಂಗದಱಿವು ಕೇಳಾ ಪ್ರಭುವೆ . . .

—ನುಲಿಯ ಚೀದಯ್ಯ

ಕಾಯಕವೆಂದು ಕಲ್ಪಿಸಿ ಮಾಡುವಲ್ಲಿ ತುಡುಗುಣಿಯಂತೆ ಮಡದಿ ಮಕ್ಕಳಿಗೆಂದು ಹೆಡಗೆ ಗಳಿಗೆಯಲ್ಲಿ ಹೊಯ್ದು ಕಡಾ ಪರಪತಿಯೆಂದು ಕೊಟ್ಟೊಡೆ ಅದು ಗುರು ಪರ ಚರ ಈ ಮೂಱರೊಡವೆಯಲ್ಲಿ. . . ಐಘಟೇಶ್ವರ ಲಿಂಗಸಾಕ್ಷಿಯಾಗಿ.

—ಮಾರಿತಂದೆ

ಭಕ್ತ ತಾ ಮಾಡುವ ಕಾಯಕ ತನಗೆಂದಡೆ
ಗುರುವಿಂಗೆ ದೂರ. ತನ್ನ
ಸತಿಗೆಂದೊಡೆ ಲಿಂಗಕ್ಕೆ ದೂರ. ತನ್ನ
ಸುತರಿಗೆಂದೊಡೆ ಜಂಗಮಕ್ಕೆ
ದೂರ. ತನ್ನ ಬಂಧುಗಳಿಗೆಂದೊಡೆ
ಸಂಗನಬಸವಣ್ಣ ಮೊದಲಾದ
ಶರಣ ಸಂಕುಲಕ್ಕೆಲ್ಲಕ್ಕೂ ದೂರ, ನನಗೂ ದೂರ,
ಎನ್ನೊಳಗಾದ ನಿಃಕಳಂಕ
ಮಲ್ಲಿಕಾರ್ಜುನ ನಿನಗೂ ದೂರ

* * *

ಖಂಡಿತ ಕಾಯಕವನಂಗೀಕರಿಸಿದ ಭಕ್ತಂಗೆ
ಮತ್ತೆ ಹೆಂಡತಿ ಮಕ್ಕಳು
ಬಂಧುಗಳೆಂದು ಜಂಗಮಕ್ಕೆ ತಂದ
ದ್ರವ್ಯವನವರಿಗಿಕ್ಕಿ ತಾನುಂಡನಾದರೆ
ತಿಂಗಳಲಿ ಸತ್ತ ಹುಳಿತ ನಾಯಕಾಗೆ ತಿಂದು
ಆ ಕಾಗೆಯ ಕೊಂದು
ತಿಂದ ಭಂಡಂಗೆ ಕಡೆ ನಿಃಕಳಂಕ ಮಲ್ಲಿಕಾರ್ಜು
ಲಿಂಗವೇ ನೀವೇ ಬಲ್ಲಿರಿ
—ಮೋಳಿಗೆಯ ಮಾರಯ್ಯ

ಸತ್ಯಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದಕೂಲಿಯ ಬಿಟ್ಟು ಹೇಮ ದಾಸಗೆ ಕಾಮಿನಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ
—ನುಲಿಯ ಚಂದಯ್ಯ

ಈ ಎಲ್ಲ ಮೇಲಣ ವಚನಗಳನ್ನು ಅಭ್ಯಸಿಸಿದಾಗ ಬಸವಣ್ಣನವರ ಆಚಾರ ವಿಚಾರಗಳಿಗೂ ಅವರ ಸಮಕಾಲಿಕರ ಆಚಾರ ವಿಚಾರಗಳಿಗೂ ಎಲ್ಲಂದದಿಂದಲೂ ಹೊಂದುವುದನ್ನು ಕಾಣುತ್ತೇವೆ. ಕಾಯಕವಿಲ್ಲದ ಶರಣನಿಲ್ಲದುದರಿಂದ ಈ ವಿಚಾರದ ಪ್ರತಿಪಾದನೆ ಪ್ರತಿಯೊಬ್ಬನಿಂದಲೂ ಹೊರಹೊಮ್ಮಿದೆ. ಶರಣರ ದೃಷ್ಟಿಯಲ್ಲಿ ಮನ್ನಣೆ ಪಡೆದ ಗುರು ಲಿಂಗ ಜಂಗಮರಿಗಿಂತಲೂ ಮೀರಿದ ಮರ್ಯಾದೆ ಕಾಯಕಕ್ಕೆ ಸಂದಿದೆ. ಹಸಿವಾದೊಡೆ ಉಂಬುದನು ಸತಿಯ ಸಂಭೋಗವನು ತಾನೆ ಮನಮುಟ್ಟಿ ತನುಮುಟ್ಟಿ ಮಾಡುವಂತೆ, ಮಾಡಬೇಕಾದ ಕಾಯಕವನ್ನು ಮಾಡಬೇಕೆಂದು ಹೇಳಿದ, ಮಾಡಿ ತೋರಿಸಿದ ಶರಣರ ನಡೆನುಡಿಗಳ ಬೆಳಕಿನಲ್ಲಿ ಕಾಯಕದ ಕಾಂತಿ ಕಳೆಗಟ್ಟಿದೆ. ಹಿಡಿದುದ ಕಡೆಗಾಣಿಸಿದರೆ ಬೇಡಿದುದ ಪಡೆವ ಕೆಚ್ಚು ಶರಣರ ವಿಚಾರದಲ್ಲಿ ಅರಳಿ ಕಾಯಕದಲ್ಲಿ ಕಾಯಿಯಾಗಿದೆ. ಆದುದರಿಂದ ಎಲ್ಲರೂ ನಿತ್ಯಕಾಯಕ ನಿರತರಾದುದರಿಂದ ಕಾಯಕವು ಬಸವಣ್ಣನವರ ಗೊತ್ತುಗುರಿಗಳ ಜೀವಾಳವಾಗಿದೆ.

ಜಗಜ್ಯೋತಿ ಬಸವಣ್ಣ

ಚ. ಈಶ್ವರಪ್ಪ ಚಿಕ್ಕೋಳ್

ಮತ್ತೊಮ್ಮೆ ಬಾರೊ ಬಾರಣ್ಣ
ಜಗದಣ್ಣ ಕಲ್ಯಾಣದಣ್ಣ ‖ಪ‖

ಭಕ್ತಿಭಂಡಾರಿ ಬಸವಣ್ಣ
ಮೇಲು ಕೀಳುಗಳನಳಿದಣ್ಣ
ಜಾತಿ-ಮತಗಳನೆಣಿಸದಣ್ಣ
ಧರ್ಮಜ್ಞಾನಿ ಬಸವಣ್ಣ ೧

ವಿಶ್ವಮಾನ್ಯ ಬಸವಣ್ಣ
ವಿಶ್ವಬಂಧು ಬಸವಣ್ಣ
ಭಕ್ತಶ್ರೇಷ್ಠ ಬಸವಣ್ಣ
ಜಗಜ್ಯೋತಿ ಬಸವಣ್ಣ ೨

ಕ್ರಾಂತಿಕಾರಿ ಬಸವಣ್ಣ
ಜ್ಞಾನನಿಧಿ ಬಸವಣ್ಣ
ಪವಾಡಪುರುಷ ಬಸವಣ್ಣ
ಪುಣ್ಯಜೀವಿ ಬಸವಣ್ಣ ೩

ಅಷ್ಟಶತಮಾನೋತ್ಸವದಣ್ಣ
ಅಷ್ಟದಿಕ್ಕಿನಲಿ ಬೆಳಗಿದಣ್ಣ
ಜಗಕೊಬ್ಬ ಹಿರಿಯಣ್ಣ
ಎಲ್ಲರವ ನೀನಣ್ಣ ೪

ಶಕಪುರುಷ ಶರಣ ಬಸವಣ್ಣ
ನುಡಿದಂತೆ ನಡೆದಣ್ಣ
ನಡೆದಂತೆ ನುಡಿದಣ್ಣ
ಜಗಬೆಳಗಿ ಬಾರಣ್ಣ ೫

ಕತ್ತಲೆಯನರಿಸಿ ಬಾರಣ್ಣ
ಜ್ಞಾನಜ್ಯೋತಿಯನಚ್ಚಿ ಬಾರಣ್ಣ
ನಿನ್ನ ಭಕ್ತರ ಬಯಕೆ ಬಯಲಾಗಿಸಣ್ಣ
ನಿನ್ನ ನಂಬಿದ ಜನಕೆ ಮುಕ್ತಿ
ಕೊಡು ಬಾರಣ್ಣ ೬

ಬಸವ ವಚನ ಮಧು

ಸುಮನ ಬದರೀನಾಥ

ಮಾನವ ಚೇತನ ಸದಾ ಪ್ರಗತಿಗಾಮಿ. ಅನಂತ ಜೀವನದಲ್ಲಿ ನಿತ್ಯ ನೂತನತೆಯನ್ನು ಅನುಸರಿಸುವುದೇ ಅದರ ಧರ್ಮ. ಕಾಲಕಾಲಕ್ಕೆ ಹಳೆಯ ಮಾರ್ಗವನ್ನು ತೊರೆದು ನವಪಥವನ್ನು ಅನುಸರಿಸುವುದು ಮಾನವ ಸ್ವಭಾವ. ಹೊಸತು ಹಳತಾಗಿ ತನ್ನ ಆವಶ್ಯಕತೆಯನ್ನೂ, ಆಕರ್ಷಣೆಯನ್ನೂ ಕಳೆದುಕೊಂಡು ಸಮಾಜದ ಮುನ್ನಡೆಗೆ ಸಂಕೋಲೆಯಾದಾಗ ಸಂಪ್ರದಾಯದ ಅಂಧಾನುಕರಣೆಗೂ ವೈಚಾರಿಕ ಪ್ರಗತಿಗೂ ಘರ್ಷಣೆ ಅನಿವಾರ್ಯ. ಆ ಕ್ರಾಂತಿ ಮಧ್ಯದಿಂದ ನವ್ಯಮಾರ್ಗವೊಂದು ಉದಯಿಸಿ ಅದರ ಆದ್ಯಪ್ರವರ್ತಕರು ಕಾಲ, ದೇಶ ಮಾನಗಳ ಮೇರೆ ಮೀರಿದ ಮಹಾಪುರುಷರಾಗಿ ಇತಿಹಾಸದಲ್ಲಿ ಚಿರಕಾಲ ಸ್ಮರಣೀಯರಾಗುವರು.

ಬಸವಣ್ಣನವರು ಅಂತಹ ಮಹಾಪುರುಷರು. ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನ ಸಮಾಜದಲ್ಲಿ ಜಾತಿಮತಗಳ ಮಹಾಕ್ರಾಂತಿಯಾದಾಗ ಅದರ ಕೇಂದ್ರ ಬಿಂದುವಾಗಿ ನಿಂತು ಆ ಕ್ರಾಂತಿಗೆ ರೂಪವನ್ನೂ, ಗುರಿಯನ್ನೂ, ವ್ಯಾಪಕತೆಯನ್ನೂ ಕಲ್ಪಿಸಿ ನವ ಪಥದ ಮುಂಬೆಳಗ ಬೆಳಗಿದರು. ವೀರಶೈವ ಮತೋದ್ಧಾರಕರಾಗಿ ತಮ್ಮ ಜೀವನವನ್ನೇ ಅದರ ಅಭಿವೃದ್ಧಿಗೆ ಧಾರೆಯೆರೆದು ಸಮಾಜದಲ್ಲಿ ಅದು ಪ್ರಭಾವಪೂರ್ಣ ಪ್ರಮುಖಸ್ಥಾನ ಪಡೆವಂತೆ ಮಾಡಿದರು. ಕನ್ನಡ ಸಾರಸ್ವತ ಸಂಪತ್ತನ್ನು ತಮ್ಮ ವಚನಗಳ ಅಕ್ಷಯ ನಿಧಿಯಿಂದ ಶ್ರೀಮಂತಗೊಳಿಸಿದರು. ಅವರ ನೆನಹು ಒಂದು ಪುಣ್ಯಸ್ಮರಣೆ. ಅವರ ಜೀವಿತವೇ ಒಂದು ಮಹಾಕಾವ್ಯ. ಅದರ ವಿಸ್ತೃತಿಯನ್ನೂ, ಆಳವನ್ನೂ ಕೂಡಲ ಸಂಗಮದೇವನೊಬ್ಬನೇ ಅರಿಯಬಲ್ಲ.

ವಚನ ಸಾಹಿತ್ಯ, ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಮಹಾಕ್ರಾಂತಿಯು ಕನ್ನಡ ಸಾಹಿತ್ಯದೇವಿಗೆ ನೀಡಿದ ಉಡುಗೊರೆ. ವಚನ ಸಾಹಿತ್ಯ ಗದ್ಯಪದ್ಯಗಳ ಹಿತಮಿತ ಸಮ್ಮಿಶ್ರಣ. ಪದ್ಯದ ಲಯಬದ್ಧ ನಡೆ, ಗಾಂಭೀರ್ಯ, ನಾದಮಾಧುರ್ಯ, ರಸಪೂರ್ಣತೆ, ಭಾವ ನಿರ್ಭರತೆಯೊಡನೆ ಗದ್ಯದ ಸರಳತೆ ಸಹಜತೆ ಮತ್ತು ಅರ್ಥ ವ್ಯಾಪ್ತಿಗಳನ್ನು ಮೈಗೂಡಿಸಿಕೊಂಡ ಸುವರ್ಣ ಮಾಧ್ಯಮ. ಹಳೆಗನ್ನಡವು ತನ್ನ ಅತೀವ ಸಂಸ್ಕೃತ ವ್ಯಾಮೋಹದಿಂದ ಬಿಡುಗಡೆಗೊಂಡು ತನ್ನ ತನವನ್ನು ಕಂಡುಕೊಂಡುದರ ಕುರುಹು. ಕೇವಲ ವಿದ್ಯಾವಂತರಿಗೆ ಮೀಸಲಾಗಿದ್ದ ಕಾವ್ಯ ಜನಸಾಮಾನ್ಯರಿಗೂ ತನ್ನ ಸವಿಯನ್ನು ನೀಡಲು ಆರಿಸಿಕೊಂಡ ಸಾಹಿತ್ಯಪ್ರಕಾರ. ವಚನಗಳ ಛಂದಸ್ಸು ದೇಶೀ, ಭಾಷೆ ಜನಸಾಮಾನ್ಯರ ಆಡು ನುಡಿ, ವಿಷಯ ಸರ್ವ ಜನಾದರಣೀಯ, ಗುರಿ ಸಮಾಜ ಸುಧಾರಣೆ ಇವೇ ವಚನಸಾಹಿತ್ಯದ ಅಪಾರ ಜನಪ್ರಿಯತೆಗೆ ಕಾರಣ. ವಚನ ಸಾಹಿತ್ಯ ವೀರಶೈವ ಧರ್ಮದ ವೇದೋಪನಿಷತ್ತು. ವಚನ ಸಾಹಿತ್ಯದ ಪ್ರಾದುರ್ಭಾವ ಹನ್ನೊಂದನೆಯ ಶತಮಾನದಲ್ಲಾದರೂ ಅದು ಪ್ರವರ್ಧಮಾನಕ್ಕೆ ಬಂದುದು ಹನ್ನೆರಡನೆಯ ಶತಮಾನದಲ್ಲಿ– ಅಂದರೆ ಬಸವಣ್ಣನವರ ಕಾಲದಲ್ಲಿ. ಈ ಸಾಹಿತ್ಯ ಪ್ರಕಾರದಿಂದ ಮುಂದಿನ ದಾಸ ಸಾಹಿತ್ಯಕ್ಕೂ, ಹರಿಹರ, ರಾಘವಾಂಕ ಮುಂತಾದ ಕ್ರಾಂತಿಕಾರಿ ಕವಿಗಳಿಗೂ ಮಾರ್ಗದೊರೆಯಿತು. ಅಂತೆಯೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯದ ಸ್ಥಾನ ಹಿರಿದಾದುದು.

ವೇದಮಂತ್ರಗಳಿಗೆ ಓಂಕಾರವಿದ್ದಂತೆ ಕಾವ್ಯನಾಟಕಗಳಿಗೆ ನಾಂದೀ ಪದ್ಯವಿದ್ದಂತೆ ವಚನ ಸಾಹಿತ್ಯಕ್ಕೆ ಬಸವಣ್ಣನವರ ವಾಕ್‌ಶ್ರೀ. ಅವರು ಸೃಷ್ಟಿಸಿರುವ ಸಾಹಿತ್ಯ ಬೃಹತ್ತಿನಂತೆ ಮಹತ್ತಿನಲ್ಲೂ ಹಿರಿದಾದುದು. ಅಂತಃಸತ್ವದಲ್ಲಾಗಲೀ ಸಂಖ್ಯಾಬಲದಲ್ಲಾಗಲೀ ಅವರನ್ನು ಮೀರಿಸುವ ವಚನಕಾರರಿನ್ನೊಬ್ಬರಿಲ್ಲ. ಹೃದಯವನ್ನು ಮಿಡಿಯುವ, ಭಾವಸ್ಫೂರ್ತಿಯಿಂದ, ಆಳವಾದ ಅನುಭವದಿಂದ, ಸರ್ವ ಜಗತ್ತನ್ನೂ ಒಳಕೊಳ್ಳುವ ವಿಶಾಲ ಸಮನ್ವಯ ದೃಷ್ಟಿಯಿಂದ ಮೂಡಿಬಂದ ಈ ವಚನಾಮೃತ ಹೃದಯದ

ಹಸಿವನ್ನು ತಣಿಸಬಲ್ಲುದು. ಬಸವಣ್ಣನವರು ಸಾವಿರಾರು ವಚನಗಳನ್ನು ರಚಿಸಿದ್ದಾರೆ. ಅವರು ಸ್ಪರ್ಶಿಸದ ವಿಷಯ ವಿಲ್ಲ. ವಿಚಾರಿಸದ ಸಮಸ್ಯೆಯಿಲ್ಲ. ದೈವಭಕ್ತಿ, ಮಾನವ ಸ್ವಭಾವ, ಸಮಾಜಧರ್ಮ, ಶಾಸ್ತ್ರವಿಚಾರ, ಇಹಪರಗಳ ಸಮಷ್ಟಿದೃಷ್ಟಿ, ಪ್ರತಿಯೊಂದಕ್ಕೂ ಅವರ ವಚನಗಳಲ್ಲಿ ಸ್ಥಾನವಿದೆ. ಅಂದಿನ ಸಮಾಜದ ಲೋಪ-ದೋಷಗಳ, ಆಸೆ-ಅಪೇಕ್ಷೆಗಳ, ಭಾವ-ವಿಚಾರಗಳ ರನ್ನಗನ್ನಡಿ ಅದು. ಕವಿ ಹೃದಯದ ಭಾವುಕತೆಯೊಡನೆ ಮೇಳವಿಸಿದ ಸಮಾಜ ಸುಧಾರಕನ ನೈಷ್ಟುರ್ಯ. ವಿಚಾರ ಜಾಗೃತಿಯ ವಿವೇಚನಾ ಶಕ್ತಿಯನ್ನು ಸುಷುಪ್ತಗೊಂಡ ಜನಮನದಲ್ಲಿ ಜಾಗೃತ ಗೊಳಿಸಿ ಸಮಾಜದ ಕುಂದು ಕೊರತೆಗಳಿಗೆ ಕಣ್ದೆರೆಯುವಂತೆ ಮಾಡಿದರು. ಬಸವಣ್ಣನವರು ವೀರಶೈವ ಧರ್ಮ ಮತೋ ದ್ಧಾರಕರಾಗಿರುವಂತೆಯೇ ವಚನ ಸಾಹಿತ್ಯದ ಆದ್ಯ ಪ್ರವರ್ತ ಕರೂ ಆಗಿದ್ದಾರೆ.

ಬಸವಣ್ಣನವರ ವಚನಗಳು ಭಕ್ತಿಪ್ರಾಧಾನ್ಯ. ಅವರ ಮನಭ್ರಮರ ಕೂಡಲಸಂಗಮ ದೇವನ ಚರಣಾರವಿಂದ ಗಳಲ್ಲಿ ಆಶ್ರಯಗೊಂಡು ಕರುಣಾಮೃತಪಾನದಿಂದ ಆನಂದ ಮತ್ತವಾಗಿ ಝೇಂಕರಿಸಿದ ಸ್ತೋತ್ರಗೀತಗಳೇ ಈ ವಚನ ಗಳು. ಆ ದೇವನ ಒಲವಿನ ಪ್ರಸನ್ನತೆ "ಸಸಿಯೊಳಗಣ ರಸದ ರುಚಿ, ನನೆಯೊಳಗಣ ಪರಿಮಳ, ಸ್ನಿಗ್ಧ ಮುಗ್ಧ ಕನ್ಯೆಯ ಸುಂದರ ಸ್ನೇಹ"ದಂತೆ. ಅವರ ವಚನಗಳಲ್ಲಿ ಆರಾಧ್ಯ ದೇವನಲ್ಲಿ ಅನನ್ಯಭಕ್ತಿಯ ವಿವಿಧ ಮುಖಗಳು ಮಿಂಚಿಹೋಗುತ್ತವೆ. "ತಂದೆ ತಾಯಿ ನೀನು, ಬಂಧು ಬಳಗ ನೀನು, ನೀವಲ್ಲದೆ ಮತ್ತಾರೂ ಇಲ್ಲವಯ್ಯಾ, ಹಾಲಲ್ಲದ್ದು, ನೀರಲ್ಲದ್ದು" ಎಂಬ ಸರ್ವಾರ್ಪಣ ಮನೋ ಭಾವವಿದೆ. "ನಂಬಿ ಕರೆದೊಡೆ ಓ ಎನ್ನನೆ ಶಿವನು" ಆ ಪರಮ ಕರುಣಾನಿಧಿ? ನಿನ್ನನ್ನೇ ನಾನು ನಂಬಿದ್ದೇನೆ. ನನ್ನ ಆತ್ಮೋದ್ಧಾರ ಮಾಡುವವನು ನೀನೇ ಎನ್ನುವ ದೃಢ ವಿಶ್ವಾಸ ಅವರದು. ಆ ದೇವನ ಒಲುಮೆಯ ಹದನಾದರೂ ಎನಿತು ಇನಿದು? "ನೀನೊಲಿದರೆ ಕೊರಡು ಕೊನರುವು ದಯ್ಯಾ, ನೀನೊಲಿದರೆ ಬರಡು ಹಯನಹುದಯ್ಯಾ, ನೀನೊಲಿದರೆ ವಿಷವು ಅಮೃತವಹುದಯ್ಯಾ" ಅಂತಹ ಒಲವನ್ನು ನನಗೂ ಉಣಿಸಿ ನನ್ನನ್ನು ತಣಿಸು ತಂದೆ ಎಂದು ಬೇಡುತ್ತಾರೆ. "ಮನ ವಿಕಾರದಿಂದ ಮತಿಗೆಟ್ಟು, ಕಾಯ ವಿಕಾರದಿಂದ ಧೃತಿಗೆಟ್ಟು" ನಿಮ್ಮನ್ನು ಶರಣುಗೊಂಡಿದ್ದೇನೆ. ನನ್ನ ಪಶು ಬುದ್ಧಿಗೆ ವಿಷಯ ಸುಖದ ಹಸಿರತೋರಿ ಮೋಸ ಗೊಳಿಸುವರೆ? ಪಶುವಾನು ಪಶುಪತಿ ನೀನು. ಸತ್ಪಥವ ತೋರಿ ನನ್ನನ್ನು ಕಾಪಾಡು ಎಂಬ ಕಳಕಳಿಯ ಬೇಡಿಕೆ ಯಿದೆ. "ಕರಣೇಂದ್ರಿಯಗಳೆಂಬ ಸೊಣಗ ಮುಟ್ಟದ ಮುನ್ನ ಮನ ನಿಮ್ಮನಯ್ದುವುದೇ" ಎಂಬ ಸಂಶಯ ವ್ಯಕ್ತಗೊಂಡಿದೆ. "ತನ್ನಿಚ್ಛೆಯನುಡಿದರೆ ನಚ್ಚುವುದೀ ಮನವು, ಇದಿರಿಚ್ಛೆಯ ನುಡಿದರೆ ಮೆಚ್ಚದೀ ಮನವು" ಈ 'ಮಾನಸಗಳ್ಳಿ'ಯನ್ನು ಹಿಡಿದು ಬಂಧಿಸಲು ಕೂಡಲ ಸಂಗಮ ದೇವನಿಂದ ಮಾತ್ರ ಸಾಧ್ಯ. ಬಸವಣ್ಣನವರಿಗೆ ಸದಾ ತಾನೊಲಿದ ದೇವನ ಧ್ಯಾನವೆ. "ಎನಗೆ ನಿಮ್ಮ ನೆನಹಾದಾಗಲೇ ಉದಯ. ಎನಗೆ ನಿಮ್ಮ ಮರೆಹಾದಾಗಲೇ ಅಸ್ತಮಾನ, ಎನಗೆ ನಿಮ್ಮ ನೆನಹೇ ಜೀವ" ಎನ್ನುತ್ತಾರೆ. "ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ, ಅಂಬುಜಕೆ ಭಾನುವಿನುದಯದ ಚಿಂತೆ, ಭ್ರಮರಕ್ಕೆ ಪರಿಮಳದ ಬಂಡುಂಬ ಚಿಂತೆ." ಬಸವಣ್ಣ ನವರಿಗೆ "ಕೂಡಲ ಸಂಗಮ ದೇವನ ನೆನೆವುದೇ ಚಿಂತೆ." "ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ, ಕೂಡಲ ಸಂಗಮ ದೇವಾ, ನಿಮ್ಮ ಚರಣದಲಾನು ತುಂಬಿ" ಎಂದು ಭಕ್ತಿಯ ಆವೇಶದಲ್ಲಿ ಮೈಮರೆತು ಹಾಡುತ್ತಾರೆ. ಕೂಡಲ ಸಂಗಮ ದೇವನೊಬ್ಬನೇ ಇಹಪರಗಳೆರಡಕ್ಕೂ ಅಧಿದೇವ. ಅವರ ತನು ಮನ ಹೃದಯ ಗಳ ಒಡೆಯ. ಜ್ಞಾನದಿಂದ ದೇವನನ್ನು ಅರಸಲಾಗದು, ಪಡೆಯಲಾಗದು, ಆಡಂಬರದ ಪೂಜೆಗೆ ಅವನು ನಿಲುಕವ ನಲ್ಲ. ಕೇವಲ ಭಕ್ತಿಯೇ ದೇವನನ್ನು ಸಾಕ್ಷಾತ್ಕರಿಸಿ ಕೊಳ್ಳುವ ದಿವ್ಯಮಾರ್ಗ. "ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲ. ವೇದಪ್ರಿಯ ಶಿವನೆಂಬರು, ವೇದ ಪ್ರಿಯ ಶಿವನಲ್ಲ. ಭಕ್ತಿಪ್ರಿಯ ನಮ್ಮ ಕೂಡಲ ಸಂಗಮ ದೇವಾ" ಎಂದು ಭಕ್ತಿಯ ಹಿರಿಮೆಯನ್ನು ಸಾರುತ್ತಾರೆ. ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಉರದಲ್ಲೊತ್ತಿ ಬಾರಿಸು ಕೂಡಲ ಸಂಗಮದೇವಾ" ಎಂದು ಬೇಡುತ್ತಾರೆ. ಇಂತಾದ ವಾದ್ಯದಿಂದ ಹೊರಹೊಮ್ಮುವ ನಾದ "ಕೂಡಲ ಸಂಗಮ ದೇವಾ" ಎಂಬುದೇ. "ಬಿರಿ ಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದುರುಳುಗೆ" ಎಂದು ಹಾರೈಸುತ್ತಾರೆ. ಚಂಚಲ ಗತಿಯ ಚಪಲ ಮನಕ್ಕಾಗಿ "ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದ ಮನ, ಎಂತಯ್ಯ ಎನಗಿನ್ನಾವುದು ಗತಿ, ಎನಗಿನ್ನಾವುದು ಮತಿ" ಎಂದು ಮರುಗುತ್ತಾರೆ. ದೇವನನ್ನು ಧ್ಯಾನಿಸಿದಷ್ಟೂ ತೃಪ್ತಿಯನ್ನೇ ಅರಿಯರವರು. "ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ ನಾಲಗೆ ನಲಿನಲಿದಾಡುವನ್ನಕ್ಕ ನಿಮ್ಮ ನಾಮಾಮೃತವ

ತಂದಿರಿಸು ಕಂಡಯ್ಯ ಎನಗೆನ್ನ ತಂದೇ" ಎಂದು ಆರ್ತರಾಗಿ ಮೊರೆಯಿಡುತ್ತಾರೆ. "ಜಗದಗಲ ಮುಗಿಲಗಲ ನಿಮ್ಮಗಲ, ಪಾತಾಳದಿಂತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂತ್ತತ್ತ ನಿಮ್ಮ ಶ್ರೀ ಮುಗುಟ, ಅಗಮ್ಯ, ಅಪ್ರಮಾಣ, ಅಪ್ರತಿಮ ಲಿಂಗವೇ ನೀವೆನ್ನ ಕರಸ್ಥಳಕ್ಕೆ ಬಂದಿರಾ" ಎಂದೊಮ್ಮೆ ಹೆಮ್ಮೆಗೊಂಡರೆ ಮತ್ತೊಮ್ಮೆ "ಅಕಟಕಟ ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ ಶಿವ ನಿನಗಿನಿತು ಕೃಪೆಯಿಲ್ಲ" ಎಂದು ದುಃಖಿಸುತ್ತಾರೆ. "ಕರಗಿಸಿ ಎನ್ನ ಮನದ ಕಾಳಿಮೆಯ ತೊಡೆಯಯ್ಯ" ನಿನ್ನ ಸೇವೆಗಾನು ಯೋಗ್ಯನಾಗುತ್ತೇನೆ ಎಂದು ಬೇಡುತ್ತಾರೆ. ಹೀಗೆ ಭಕ್ತಿಯ ಮಹಾಪೂರವೇ ಹರಿದಿದೆ ಇಲ್ಲಿ. ವಚನಗಳು ಭಕ್ತನ ಹೃದಯ ಕರಗಿ ಹರಿದ ಭಾವ ಭಾಗೀರಥಿ. ಓದುಗರನ್ನು ಆತ್ಮೋನ್ನತಿಗೊಯ್ಯುವ ಜ್ಞಾನ ಕ್ರಿಯಾ ಸಮನ್ವಿತವಾದ ಅರಿತು ಆಚರಿಸುವ ನೈಜಭಕ್ತಿ.

ವೀರಶೈವ ಧರ್ಮದ ಸಕಲ ತತ್ತ್ವಗಳನ್ನೂ ಪಂಡಿತ ಪಾಮರರಿಗೆ, ಆಬಾಲವೃದ್ಧರಿಗೆ ಸೂರ್ಯನ ಬೆಳಕಿನಂತೆ, ಸ್ಫಟಿಕಶಿಲೆಯಂತೆ, ಸ್ಪಷ್ಟವಾಗಿ ತಿಳಿಯುವಂತೆ ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ ಬಸವಣ್ಣನವರು. 'ಶರಣಸತಿ ಲಿಂಗಪತಿ'ಭಾವದ ಪರಿಪೂರ್ಣರೂಪವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ನೂರಾರು ಉಪನ್ಯಾಸಗಳು ವಿವರಿಸಲಾಗದ ತತ್ತ್ವವಿಚಾರವನ್ನೆಲ್ಲ ಬಸವಣ್ಣನವರ ಒಂದೇ ವಚನ ಮನಮುಟ್ಟುವಂತೆ ಹೇಳುತ್ತದೆ. "ಕಪ್ಪೆ ಸರ್ಪನ ನೆಳಲಲಿಪ್ಪಂತೆ" ಈ ಸಂಸಾರ ಸದಾಕಾಲವೂ ಮರಣಭಯದಿಂದ ದೂಷಿತವಾದುದು "ಆಶೆಯೆಂಬ ಪಾಶದಲ್ಲಿ" ಭವ ಬಂಧನದ ಮೋಹಕ್ಕೆ ಮಾನವ ಸುಲಭವಾಗಿ ಪಕ್ಕಾಗುತ್ತಾನೆ. "ಸಂಸಾರವೆಂಬುದೊಂದು ಗಾಳಿಯ ಸೊಡರು." ಭಕ್ತಿಯ ರಕ್ಷಣೆಯೊಂದೇ ಅದನ್ನು ತಾಪತ್ರಯದ ವಾತಾಹತಿದಿಂದ ನಂದದಂತೆ ಕಾಪಾಡಬಲ್ಲುದು. "ಮರ್ತ್ಯಲೋಕವೊಂದು ಕರ್ತಾರನ ಕಮ್ಮಟವಯ್ಯಾ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ" ಎಂದು ಇಹಪರಗಳ ನಡುವೆ ಸೇತುವೆ ಕಲ್ಪಿಸಿದ್ದಾರೆ. "ಸತ್ಯವೇ ದೇವರು. ಸತ್ಯವ ನುಡಿವುದೇ ದೇವಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ." ಇನ್ನು ದಯೆ "ದಯೆಯಿಲ್ಲದಾ ಧರ್ಮ ಆವುದಯ್ಯಾ ದಯವೇ ಬೇಕು ಸಕಲಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯಾ" ಎಂದು ಧರ್ಮಕ್ಕೆ ದಯೆಯ ಶ್ರೀ ಕವಚ ವಿತ್ತಿದ್ದಾರೆ. ಜಾತೀಯತೆಯನ್ನು ಮೀರಿದ, ಸರ್ವಸೋದರ ಭಾವದ ವಿಶಾಲಹೃದಯ ಬಸವಣ್ಣನವರದು. ಜನುಮದಿಂದ ಜಾತಿ ಎಂಬುದೊಂದು ಅಧರ್ಮವಾದಿಗಳ ಕಲ್ಪನೆ. "ಕೊಲುವವನೇ ಮಾದಿಗ, ಹೊಲಸ ತಿಂಬುವನೇ ಹೊಲೆಯ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲಸಂಗಮದೇವನ ಶರಣರೇ ಕುಲಜರು" ಎನ್ನುತ್ತಾರೆ. ಕಾಯಕದಿಂದ ವರ್ಗಭೇದವೆ ಹೊರತು ಜನುಮದಿಂದ ಜಾತಿಯಲ್ಲ. ಅಂತಶ್ಶುದ್ಧಿಯ ಅಗತ್ಯವುಂಟಲ್ಲದೆ ಬಹಿರಾಡಂಬರವಲ್ಲ. "ಹೆಂಡದ ಮಡಕೆ ಹೊರಗೆ ತೊಳೆದಂತೆ" ಬರಿಯ ಬಾಹ್ಯಶುದ್ಧಿಯ ಫಲವೇನು? "ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ, ಶಿವಪಥವನೊಲ್ಲದವನೊಡನಾಡದಂತೆ" ಮನವನ್ನು ನೇರ್ಪುಗೊಳಿಸಿ ಪರಸ್ತ್ರೀ ಪರಧನಗಳ ಆಸೆದೊರೆದು ಸಂಯಮಿಯಾಗಿರುವವನೇ ಕುಲಜ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗ ಶುದ್ಧಿ. ಇದೇ ಬಹಿರಂಗ ಶುದ್ಧಿ" ಕೇವಲ ಆಡಂಬರದಿಂದಲ್ಲ. "ಒಳಹೊರಗೊಂದಾಗಿ" ಬಾಳಬೇಕು. ತನ್ನ ದೇವರ ಪೂಜೆಯನ್ನು ಮತ್ತೊಬ್ಬರಿಗೆ ಒಪ್ಪಿಸಬಹುದೆ? "ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೆ?" "ಒಲವಿಲ್ಲದಾ ಪೂಜೆ ನೇಹವಿಲ್ಲದಾ ಮಾಟ"ದಿಂದ ಪ್ರಯೋಜನವೇನು? "ಆ ಪೂಜೆಯು ಆ ಮಾಟವು ಚಿತ್ರದ ರೂಪು, ಚಿತ್ರದಕಬ್ಬು." ಒಪ್ಪಿದರೆ ಸುಖವಿಲ್ಲ ಮೆಲಿದರೆ ರುಚಿಯಿಲ್ಲ. ನೈಜಭಕ್ತಿಯಿಲ್ಲದ ಭಕ್ತನ ರೀತಿ ಹೀಗೆ. ತಾನೇ ಮೇಲೆಂಬ ಹೆಮ್ಮೆ ಎಂದಿಗೂ ಸಲ್ಲದು "ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ವಿನಯವೇ ಶರಣನಿಗೆ ಭೂಷಣ. ಹೊಗಳಿಕೆಯೆಂಬುದೊಂದು ಹೊನ್ನಶೂಲ. "ಅಯ್ಯ ಎಂದೆಡೆ ಸ್ವರ್ಗ. ಎಲವೊ ಎಂದೆಡೆ ನರಕ." ಕೋಪದಿಂದ ಸಾಧಿತವಾಗುವುದಾದರೂ ಏನು? "ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರುಹಿಂಗೆ ಹಾನಿ. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೆ? ಅವರ ಪಾಲಿಗೆ ಕಾಯಕವೇ ಕೈಲಾಸ. ಹೀಗೆ ಬಸವಣ್ಣನವರ ವಚನಗಳಲ್ಲಿ ಅಪಾರ ಅನುಕಂಪ, ನ್ಯಾಯ ಸಮ್ಮತ ದೃಷ್ಟಿ, ಕ್ಷಮಾಪೂರ್ಣ ಔದಾರ್ಯ, ಹೃದಯ ವೈಶಾಲ್ಯ ತುಂಬಿ ಹೊರಸೂಸುತ್ತವೆ.

ಸಾಹಿತ್ಯಿಕ ದೃಷ್ಟಿಯಿಂದಲೂ ಬಸವಣ್ಣನವರ ವಚನಗಳ ಮೌಲ್ಯ ಹಿರಿದು. ಅವರ ಶೈಲಿ ನಿರರ್ಗಳ, ಅತ್ಯಂತ ಸರಳ, ಭಾವಪೂರ್ಣ. ಅಂತರಂಗದಿಂದ ನೇರವಾಗಿ ಹರಿದು ಬಂದ ವಚನಗಂಗೆ. ಜೀವ ಸವಿದಂತೆ "ಅಧರಕ್ಕೆ ಕಹಿ

ಯಾದರೂ, ಉದರಕ್ಕೆ ಸಿಹಿ. ಹೃದಯವನ್ನು ತಟ್ಟಿ ಎಬ್ಬಿಸುವ ರೂಪಕಗಳನ್ನೂ ಉಪಮಾನಗಳನ್ನು ಬಳಸಿ ದ್ದಾರೆ. ಉದಾ. "ಕಪ್ಪೆ ಸರ್ಪನ ನೆಳಲಲಿಪ್ಪಂತೆ ಸಂಸಾರ." "ನೀರಿಂಗೆ ನೈದಿಲೆ ಶೃಂಗಾರ. ಗಗನಕ್ಕೆ ಚಂದ್ರಮನೇ ಶೃಂಗಾರ, ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ." "ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದೊಡೆ ನಿಲ್ಲಬಹುದೇ" ಹೀಗೆ ಉದಾಹರಿಸುತ್ತಾ ಹೋದರೆ ಅವರ ವಚನಗಳೆಲ್ಲವನ್ನೂ ಓದಬೇಕಾಗುವುದು. ಕೆಲವು ವಚನಗಳಂತೂ ಉತ್ತಮ ಭಾವಗೀತೆಗಳು. "ನೀನೊಲಿದರೆ ಕೊರಡು . . . ವಿಷವು ಅಮೃತವಹುದಯ್ಯಾ" "ನಾದ ಪ್ರಿಯ ಶಿವನೆಂಬರು . . . ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವಾ" "ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ" "ವಚನದಲ್ಲಿ ನಾಮಾಮೃತವ ತುಂಬಿ" ಒಂದೇ? ಹಲವಾರು. "ಹಾಲತೊರೆಗೆ ಬೆಲ್ಲದ ಕೆಸರು. ಸಕ್ಕರೆಯ ಮಳಲು ತವರಾಜದ ನೊರೆತೆರೆಯಂತೆ ಬಸವಣ್ಣನವರ ವಚನ ಸವಿಸವಿ. ಇವುಗಳನ್ನು ಹಾಡಲೂಬಹುದು. ಬಿಂದುವಿನಲ್ಲಿ ಸಿಂಧುವಿರುವಂತೆ ಒಂದೊಂದು ವಚನವೂ ತತ್ತ್ವಸಾರ ಸಂಗ್ರಹ. ಅಂತಃಸ್ಫೂರ್ತಿಯಿಂದ ಹೊಮ್ಮಿ ಬಂದ ಅಮೃತಬಿಂದುಗಳು ಇವು. ನುಡಿಯ ಬಗೆಯನ್ನು ಬಣ್ಣಿಸುತ್ತಾ ಬಸವಣ್ಣನವರು "ನುಡಿದರೆ ಮುತ್ತಿನ ಹಾರ ದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರ ಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು" ಎನ್ನುತ್ತಾರೆ. ಆ ಓಜಸ್ಸು, ಆ ತೇಜಸ್ಸು, ಪರಿಶುಭ್ರತೆ, ಸರಳತೆಗಳು ಬಸವಣ್ಣನವರ ವಚನಗಳಲ್ಲಿ ಎದ್ದುಕಾಣು ತ್ತವೆ.

ಬಸವಣ್ಣನವರ ವಚನಗಳು ಸಮಕಾಲೀನ ಜನತೆಯ ಮೇಲೆ ಬೀರಿದ ಪ್ರಭಾವ ಅಪಾರ. ಸಮಾಜ ಸುಧಾರಣೆಗೆ, ವೀರಶೈವ ಮತ ಪ್ರಚಾರಣೆಗೆ ಅವು ದಾರಿತೋರಿದುವು. ಸಂಘಟಿತ ಸಂಸ್ಥೆಯ ಸಂಸ್ಥಾಪನೆಗೆ ಅಸ್ತಿಭಾರ ಹಾಕಿದುವು. ಒಂದು ವಿನೂತನ ಸಾಹಿತ್ಯಸೃಷ್ಟಿ ಮಾಡಿದವು. ಅವು ಇಂದಿಗೂ ಶ್ರದ್ಧಾವಂತರ ದಾರಿದೀಪವಾಗಿ ಜನಮನವನ್ನು ಬೆಳಗುತ್ತಿವೆ.

"ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜ ವಂಪರಿಸಿ ಲಿಂಗವೆಂಬ ಎಲೆಯು ಮೇಲೆ ವಿಚಾರವೆಂಬ ಹೂವಾಯಿತ್ತು. ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿ ಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದೆತ್ತಿಕೊಂಡ." ಇದು ಬಸವಣ್ಣ ನವರ ಬದುಕಿನ ಸಾರಸರ್ವಸ್ವ. ಮನದ ಮೈಲಿಗೆಯನ್ನು ತೊಳೆದು, ಹೃದಯದ ಕತ್ತಲೆಯನ್ನು ಕಳೆದು, ಬುದ್ಧಿಯ ಮಾಂದ್ಯವನ್ನು ಪರಿಹರಿಸಿ, ಆತ್ಮೋದ್ಧಾರಗೈಯುವ, ಬಸವಣ್ಣನವರ ಮನಸ್ಸರಸಿಯಿಂದ ಹರಿದುಬಂದ ಈ ವಚನಗಂಗೆ ಪಾವನತಮ. ಕಾಲ ಅಳಿಸಲಾಗದ ಉದಾಸೀನ ಮಾಡಲಾಗದ, ಅಕ್ಷಯನಿಧಿಯ ಅನನ್ಯ ದೃಷ್ಟಾಂತವಿದು. ಕೂಡಲಸಂಗಮದೇವನ ಶ್ರೀ ಚರಣಗಳಲ್ಲಿ ಅರ್ಪಿತವಾದ ಈ ಕುಸುಮ, ಅಂದಿಗೂ, ಇಂದಿಗೂ, ಎಂದೆಂದಿಗೂ ಪರಿಮಳಿಸುತ್ತಲೇ ಇರುತ್ತದೆ.

ಬಸವ

ಕನ್ನಡದ ಮುಗಿಲುಗಳಲಿ
ಹೊನ್ನಮುಗಿಲು ಬಸವ
ಕನ್ನಡದ ಮುತ್ತುಗಳಲಿ
ಜಾತಿಮುತ್ತು ಬಸವ

—ರ. ಚಂದ್ರಶೇಖರ

ಮಹಾನುಭಾವರಾದ ಶ್ರೀ ಬಸವಣ್ಣನವರ ದೃಷ್ಟಿಯಲ್ಲಿ ಭಕ್ತಿ

ಎಸ್. ಡಿ. ಮೋಟಗಿ

ಶ್ರೀ ಬಸವಣ್ಣನವರ ಜೀವನವೆಂದರೆ ದಿವ್ಯ ಜೀವನ, ಅನುಪಮ ಜೀವನ. ಕರ್ಮಯೋಗಿ ಶ್ರೀ ಸಿದ್ಧರಾಮ, ವೈರಾಗ್ಯಮೂರ್ತಿ ಶ್ರೀ ಅಲ್ಲಮ ಪ್ರಭುದೇವ, ಜ್ಞಾನನಿಧಿ ಶ್ರೀ ಚೆನ್ನಬಸವಣ್ಣ ಹಾಗು ಭಕ್ತಿಭಾಂಡಾರಿ ಶ್ರೀ ಬಸವಣ್ಣನವರೆಂದು ಹೇಳಬಹುದು.

ಈಗ ಬಸವಣ್ಣನವರ ಭಕ್ತಿಯ ಬಗ್ಗೆ ಇದ್ದ ದೃಷ್ಟಿಕೋನವನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

ಪರಮೇಶ್ವರನನ್ನು ಒಲಿಸಿಕೊಳ್ಳುವ ಮಾರ್ಗಗಳಲ್ಲಿ ಭಕ್ತಿಯೊಂದು ಸಾಧನ. ಪೂಜೆ ಪುನಸ್ಕಾರ ದಾನ-ಧರ್ಮ, ವಿನಮ್ರ ವರ್ತನೆ ಮುಂತಾದವುಗಳಿಂದ ನಾವು ದೇವರನ್ನು ಒಲಿಸಿಕೊಳ್ಳಬಹುದು. ಯಾವದೇ ಕೆಲಸ ಮಾಡಿದರೂ ಅದರಲ್ಲಿ ನಿಷ್ಠೆ, ಶ್ರದ್ಧೆ, ದಯೆ ಮುಂತಾದವುಗಳ ಆವಶ್ಯಕತೆಯಿರುವಂತೆ, ಭಕ್ತನಿಗಾದರೂ ದೇವರನ್ನು ಒಲಿಸಿಕೊಳ್ಳಲು ಅವನಲ್ಲಿ ದೃಢವಾದ ನಿಷ್ಠೆ ಬೇಕು.

ಈ ಸಂದರ್ಭದಲ್ಲಿ ಸರ್ವಜ್ಞನು ಹೇಳಿದ್ದನ್ನು ಸ್ಮರಿಸಬಹುದು.

'ನಿಷ್ಠೆಯಿಲ್ಲದೆ ಗುಡಿಯ ಸುತ್ತಿದರೆ ಫಲವೇನು ? ಎತ್ತು ಗಾಣವನು ಸುತ್ತಿದಂತೆ.' ಈ ಮಾತಿನಿಂದ ಭಕ್ತನಲ್ಲಿ ನಿಷ್ಠೆ ಬೇಕು ಎಂಬುದು ಸ್ಪಷ್ಟವಾಗುವುದು.

೧೨ನೇ ಶತಮಾನದಲ್ಲಿ ಕ್ರಾಂತಿಯೆಸಗಿದ ಮಹಾಪುರುಷರಲ್ಲಿ ಬಸವಣ್ಣನವರು ಅಗ್ರಗಣ್ಯರು. ೧೨ನೇ ಶತಮಾನವೆಂದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಡುವಂಥ ಕಾಲ. ೧೨ನೇ ಶತಮಾನವೆಂದರೆ ಶಾಂತಮಯ ವಾತಾವರಣದ ಕಾಲವಲ್ಲ. ಹೋರಾಟ ಕಾಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರು ವೀರಶೈವ ಧರ್ಮದ ಜ್ಯೋತಿ, ನಂದಾ ಜ್ಯೋತಿಯಾಗಿ ಬೆಳಗಲೆಂದು ಪರಿಶ್ರಮಿಸಿದರು. ಇವರ ಆಚಾರ ವಿಚಾರ, ನಡೆನುಡಿ ಮುಂತಾವುಗಳು ವೀರಶೈವರಿಗೆ ಅಷ್ಟೇ ಸೀಮಿತಗೊಳ್ಳದೆ ಜಗತ್ತಿಗೆ ಅನ್ವಯಿಸುವಂಥವು.

ದೇವರಲ್ಲಿ ಯಾವಾಗಲೂ ಮೊರೆಯಿಡುತ್ತಿದ್ದರು. "ಅಯ್ಯಾ ಅಯ್ಯಾ ಎಂದು ಒರಲುತ್ತಿದ್ದೇನೆ: ಓ ಎನ್ನಲಾಗದೆ ಅಯ್ಯಾ, ಆವಾಗಲೂ ನಿಮ್ಮುವ ಕರೆಯುತ್ತಿದ್ದೇನೆ. ಓ ಎನ್ನದೆ ಮೌನವೇ ಕೂಡಲಸಂಗಮದೇವಾ" ಎಂದು ದೇವರಲ್ಲಿ ತಮ್ಮ ದೀನತೆಯನ್ನು ವ್ಯಕ್ತಪಡಿಸುತ್ತಿದ್ದರು.

'ಭಕ್ತಿಯೆಂಬುದು ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು' ಎಂದು ಸಾರಿ ಹೇಳಿದ್ದಾರೆ.

ಇದರಿಂದ ಭಕ್ತಿಯು ಸುಲಭವಲ್ಲ ಎಂಬುದು ಧ್ವನಿತವಾಗುತ್ತದೆ. ಭಕ್ತಿ ಮಾಡಬೇಕಾದರೆ ಉಜ್ವಲ ನಿಷ್ಠೆ ಹಾಗೂ ಮನೋನಿಗ್ರಹಗಳು ಅತ್ಯವಶ್ಯವು.

ಮತ್ತೂ ಮುಂದುವರೆದು ಬಸವಣ್ಣನವರು ದೇವರು ಗುರು, ಲಿಂಗ, ಜಂಗಮರಲ್ಲಿ ಕಾಣುವನೆಂದು ವಚನಸೂತ್ರದಲ್ಲಿ ಹೀಗೆ ನಿರೂಪಿಸಿದ್ದಾರೆ:

"ಶಾಸ್ತ್ರ ಘನವೆಂಬೆನೆ ಕರ್ಮವ ಭಜಿಸುತ್ತದೆ. ವೇದ ಘನವೆಂಬೆನೆ ಪ್ರಾಣಿ ವಧೆಯ ಹೇಳುತ್ತದೆ. ಸ್ಮೃತಿಘನವೆಂಬೆನೆ ಮುಂದಿಟ್ಟು ಅರಸುತ್ತದೆ. ಅಲ್ಲೆಲ್ಲೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲ ಸಂಗಮದೇವಾ !"

ತ್ರಿವಿಧ ದಾಸೋಹದಲ್ಲಿಯೇ ನಾವು ಶಿವನನ್ನು ಕಾಣಬಹುದು ಎಂದು ಹೇಳಿದ್ದಾರೆ.

ದೇವರ ದಾಸಿಮಯ್ಯನು ಭಕ್ತಿಯ ಬಗ್ಗೆ ಹೀಗೆ ನಿರೂಪಿಸಿದ್ದಾನೆ:

'ಹರ ತನ್ನ ಭಕ್ತರ ತಿರುವಂತೆ ಮಾಡುವ, ಒರೆದು ನೋಡುವ ಸುವರ್ಣ ಚಿನ್ನದಂತೆ, ಅರೆದು ನೋಡುವ ಚಂದನದಂತೆ, ಅರಿದು ನೋಡುವ ಕಬ್ಬಿನ ಕೋಲಿನಂತೆ,

ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥಾ.'

ಶಿವನು ತನ್ನ ಭಕ್ತರನ್ನು ಭಿಕ್ಷೆ ಬೇಡುವಂತೆ ಮಾಡುವನು. ಬಂಗಾರವನ್ನು ಒರೆಗೆ ಹಚ್ಚಿ ಪರೀಕ್ಷಿಸುವಂತೆ, ಚಂದನ ಕಟ್ಟಿಗೆಯಂತೆ ಅರೆದು ಪರೀಕ್ಷಿಸುವನು. ಹೀಗೆ ನಾನಾ ರೀತಿಯಿಂದ ಪರೀಕ್ಷಿಸುವನು. ಇಂಥ ಘೋರವಾದ ಪರೀಕ್ಷೆಯಲ್ಲಿ ಭಯಪಡದೆ ಇದ್ದಿದ್ದಾದರೆ, ಕೈ ಹಿಡಿದು ಎತ್ತಿಕೊಂಬುವನು.

ಹೀಗೆ ಪರಮೇಶ್ವರನು ನಮ್ಮನ್ನು ಅನೇಕ ರೀತಿಯಿಂದ ಒರೆಗೆ ಹಚ್ಚುವನು.

ಸಂಸಾರವನ್ನು ಕುರಿತು ಬಸವಣ್ಣನವರು ಒಂದೆಡೆ ಹೀಗೆ ನಿರೂಪಿಸಿದ್ದಾರೆ :

'ಕಪ್ಪೆ ಸರ್ಪದ ನೆರಳಲ್ಲಿ ಇರ್ಪಂತೆ ಎನಗಾಯಿತಯ್ಯ. ಅಕಟಕಟಾ ! ಸಂಸಾರವು ವೃಥಾ ಹೋಯಿತಲ್ಲ, ಕರ್ತೃ ಕೂಡಲ ಸಂಗಮದೇವಾ, ಇವನು ತಪ್ಪಿಸಿ ನನ್ನನು ರಕ್ಷಿಸಯ್ಯ ಪ್ರಭುವೇ !'

ಇದರ ತಾತ್ಪರ್ಯವೇನೆಂದರೆ ಕಪ್ಪೆಯು ಯಾವಾಗಲೂ ಸರ್ಪನ ಹೆಡೆಯ ನೆರಳಿನಲ್ಲಿ ಅಂಜುತ್ತ ಇರುವಂತೆ ನನ್ನ ಜೀವನವು ಯಾವಾಗಲೂ ಭಯಮಯವಾಯ್ತು. ಎಲೈ ಪರಮೇಶ್ವರನೇ, ಈ ಸಂಸಾರದ ಜಂಜಾಟದಿಂದ ತಪ್ಪಿಸಿ ನನಗೆ ನಿಜವಾದ ಜ್ಞಾನವನ್ನು ದಯಪಾಲಿಸೆಂದು ಬೇಡಿಕೊಳ್ಳುತ್ತಾರೆ.

ಈ ಸಂದರ್ಭವನ್ನು ಪ್ರಭುದೇವರು ಸುಂದರವಾಗಿ ತಮ್ಮ ವಚನದಲ್ಲಿ ಕಾಣಿಸಿದ್ದಾರೆ.

'ಆಸೆಗೆ ಸತ್ತುದು ಕೋಟಿ, ಆಯುಷ್ಯಕ್ಕೆ ಸತ್ತುದು ಕೋಟಿ, ಹೊನ್ನು, ಹೆಣ್ಣು, ಮಣ್ಣಿಂಗೆ ಸತ್ತುದು ಕೋಟಿ ಗುಹೇಶ್ವರಾ ಎನಗಾಗಿ ಸತ್ತವನಾರನೂ ಕಾಣೆ.'

ಮುಖ್ಯವಾಗಿ ಪ್ರಭುದೇವರು ಹೀಗೆ ಹೇಳುತ್ತಾರೆ: ಹೊನ್ನು, ಹೆಣ್ಣು ಹಾಗು ಭೂಮಿ ಮೊದಲಾದವುಗಳ ಸಲುವಾಗಿಯೇ ಮಾನವನು ಹೆಣಗಾಡುತ್ತಾನೆ. ಆದರೆ ದೇವರ ಸಮವಾಗಿ ಹೆಣಗಾಡುವವರನ್ನು ಈ ಭೂಮಂಡಲದಲ್ಲಿ ಒಬ್ಬರನ್ನೂ ಕಾಣಲಿಲ್ಲವೆಂದು ಸರಳ ಹಾಗೂ ಸುಂದರ ವಚನದಲ್ಲಿ ಘನವಾದ ತತ್ತ್ವವನ್ನು ಬೀರಿ, ಜನರನ್ನು ಅಂಧಃಕಾರದಿಂದ ಬೆಳಕಿನೆಡೆಗೆ ಒಯ್ಯಲು ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ. ದೇವರನ್ನು ಒಲಿಸಲು ನಾವು ಪ್ರಯತ್ನ ಮಾಡಬೇಕೆಂದು ಸಾರಿದ್ದಾರೆ.

ಮತ್ತೊಂದೆಡೆ ಬಸವಣ್ಣನವರು ಹೀಗೆ ಹೇಳಿದ್ದಾರೆ :

'ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದಿರಯ್ಯ. ಪಶುವೇನಬಲ್ಲುದು ಹಸುರೆಂದೆಳಸುವುದಲ್ಲದೆ ? ವಿಷಯ ರಹಿತನಮಾಡಿ ಭಕ್ತಿರಸವದಣಿಯ ಮೇಯಿಸೆ ಸುಬುದ್ಧಿ ಎಂಬ ಉದಕವ ನೆರೆದು, ನೋಡಿ ಸಲಹಯ್ಯ ಕೂಡಲ ಸಂಗಮದೇವಾ.'

ವಿಷಯವೆಂಬ ಹಸಿರನು ನನ್ನ ಮುಂದೆ, ಪಶುವಿನ ಮುಂದೆ ಇರಿಸಿದಂತೆ ಇಡಬೇಡಿರೆಂದು, ವಿಷಯ ಸುಖದಿಂದ ದೂರಿಡಲು ಅನನ್ಯಭಕ್ತಿಯಿಂದ ಬೇಡಿಕೊಳ್ಳುತ್ತಾರೆ.

ಇನ್ನೊಂದೆಡೆ ಬಸವಣ್ಣನವರು ಹೀಗೆ ಹೇಳಿದ್ದಾರೆ :

'ಮೇರುಗುಣವನರಸುವದೇ ಕಾಗೆಯಲ್ಲಿ ? ಪರುಸಗುಣವನರಸುವದೇ ಕಬ್ಬಿಣದಲ್ಲಿ ? ಸಾಧು ಗುಣವನರಸುವದೇ ಅವಗುಣಿಯಲ್ಲಿ ? ಚಂದನಗುಣವನರಸುವದೇ ತರುಗಳಲ್ಲಿ ? ಸರ್ವಗುಣಸಂಪನ್ನ ಲಿಂಗವೇ ? ನೀನೆನ್ನಲ್ಲಿ ಅವಗುಣವನರಸುವದೇ ಕೂಡಲ ಸಂಗಮದೇವಾ ?'

ಮತಿತಾರ್ಥವೇನೆಂದರೆ ಬಸವಣ್ಣನವರು ತಮ್ಮಲ್ಲಿ ಇನ್ನೂ ಉತ್ಕಟವಾದ ಭಕ್ತಿ ಮೂಡಿಲ್ಲವೆಂದು ಹೇಳುತ್ತಾರೆ. ಉಜ್ವಲವಾದ ಭಕ್ತಿಯನ್ನು ಕೊಟ್ಟು ರಕ್ಷಿಸು ಎಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ.

ಮುಂದೆ ಬಸವಣ್ಣನವರಲ್ಲಿ ಭಕ್ತಿ ಜಾಗೃತಿಯಾದರೂ ತಮ್ಮಲ್ಲಿ ಭಕ್ತಿ ಎಳ್ಳಷ್ಟೂ ಇಲ್ಲವೆಂದು ತಮ್ಮ ಕಿಂಕರಭಾವವನ್ನು ವ್ಯಕ್ತಪಡಿಸಿದ್ದಾರೆ. ಕೆಳಗಿನ ವಚನದಿಂದ ಅದರ ಸ್ಪಷ್ಟಕಲ್ಪನೆ ಬಾರದಿರದು.

'ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ. ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿ ಎಂಬರು. ನಾನೇನ ಪಾಪವ ಮಾಡಿದೆನೋ ? ಬೆಳೆಯದ ಮುನ್ನವೇ ಕೊಯ್ಯುವರೇ ? ಹೇಳಾ ? ಇರಿಯದ ವೀರ, ಇಲ್ಲದ ಸೊಬಗುವ. ಎಲ್ಲ ಒಡೆಯರು ಏರಿಸಿ ನುಡಿವರು, ಎನಗಿದು ವಿಧಿಯೇ ಕೂಡಲ ಸಂಗಮದೇವಾ.'

ಸಾಮಾನ್ಯವಾಗಿ ಜನರು ಹೊಗಳಿಕೆಗೆ ತಲೆದೂಗುತ್ತಾರೆ.

ಆದರೆ ಬಸವಣ್ಣನವರು ತಮ್ಮನ್ನು ಹೊಗಳಬೇಡಿರೆಂದು, ದೇವರಲ್ಲಿ ಬೇಡಿಕೊಳ್ಳುತ್ತಾರೆ. ಇದಕ್ಕೆ ಅವರು ಕೊಟ್ಟ ಸುಂದರ ವಚನವನ್ನು ನೋಡಿರಿ :

'ಎನ್ನವರೊಲಿದು ಹೊನ್ನಸೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳಿಕೆ ಎನ್ನ ಮೈಗೊಂಡಿತಲ್ಲಾ ! ಅಯ್ಯೋ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತಲ್ಲಾ !

ಅಯ್ಯೋ ನೊಂದೆನು, ಸೈರಿಸಲಾರೆನು, ಕೂಡಲ ಸಂಗಮ ದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗಳಿಕೆಗಡ್ಡ ಬಾರಾ ಧರ್ಮಾ.'

ಈ ದೃಷ್ಟಿಯಿಂದ ಬಸವಣ್ಣನವರ ಉದಾತ್ತತೆಯನ್ನು ನೋಡಬಹುದು. ಇನ್ನೊಂದು ದೃಷ್ಟಾಂತದಲ್ಲಿ ಬಸವಣ್ಣ ನವರ ಕಿಂಕರಭಾವದಲ್ಲಿ ಸಂಗಮನಾಥ ದೇವರಿಗೆ ಮೊರೆ ಯಿಡುವದನ್ನು ನಿರೀಕ್ಷಿಸಬಹುದು.

'ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ಎನಗೆ ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲ ಸಂಗಮದೇವಾ, ಹಾಲಲ್ಲದ್ದು, ನೀರಲ್ಲದ್ದು.'

ಇದರ ಮೇಲಿಂದ ಅವರ ಉಚ್ಚಭಾವನೆಯ ಕಲ್ಪನೆ ಬರುತ್ತದೆ. ಇನ್ನೊಂದೆಡೆ ಹೀಗೆ ಹೇಳಿದ್ದಾರೆ.

'ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರ ಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆ ನಯ್ಯ! ಕೂಡಲ ಸಂಗಮದೇವಾ, ನಿಮ್ಮ ಸದ್ಭಕ್ತರ ಪಾದ ವನರಿದಿಪ್ಪ ಮಹಾ ಪದವಿಯನೆ ಕರುಣಿಸಯ್ಯ.'

ಯಾವ ಪದವಿಗೂ ಬಸವಣ್ಣನವರು ಮಹತ್ವ ಕೊಡದೆ ಕೇವಲ ಸದ್ಭಕ್ತರ ಪಾದವನರಿದಿಪ್ಪ ಈ ಪದವಿ ಒಂದೇ ಸಾಕು ಎಂದು ಬೇಡಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಮಾನವನು ಪದವಿಗಾಗಿ ಬಡಿದಾಡು ತ್ತಾನೆ. ಆದರೆ ಬಸವಣ್ಣನವರ ದೃಷ್ಟಿಕೋನವನ್ನು ನೋಡಿ ದರೆ ಎಂಥ ಉದಾತ್ತ! ಎಂಥ ಉಜ್ವಲ!!

ಮತ್ತೂ ಅವರ ವಿನಯವನ್ನು ನೋಡಬಹುದು:

'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ ಎನ್ನ ಮನಸಾಕ್ಷಿ ಕೂಡಲ ಸಂಗಮ ದೇವ ಎನಗಿದೇ ದಿವ್ಯ.

ಬಸವಣ್ಣನವರು ಮಹಾಪುರುಷರಿದ್ದಾಗ್ಯೂ ಅವರ ಕಿಂಕರ ಭಾವನೆಯನ್ನು ಕಾಣಬಹುದು. ಆದರೆ ಶಿವ ಭಕ್ತರಿಗಿಂತ ಹಿರಿಯರಿಲ್ಲ, ಎಂಬಲ್ಲಿ ಶಿವಭಕ್ತರಿಗೆ ಮಹತ್ವ ಕೊಟ್ಟದು ಇದರಿಂದ ಧ್ವನಿತವಾಗುತ್ತದೆ.

ಎಲ್ಲರಿಗೂ ಕಲ್ಯಾಣವಾಗಬೇಕೆಂಬುದೇ ಅವರ ಮನ ದಿಚ್ಛೆ, ಸದಿಚ್ಛೆ ಎಲ್ಲರಲ್ಲಿಯೂ ದೇವತ್ವವನ್ನು ಕಾಣುವ ವಿಶಾಲ ದೃಷ್ಟಿಯಿಂದ ನೋಡುವ ಅಗಾಧ ಆಗಮ್ಯ ಗುಣ ಗಳು ಅವರಲ್ಲಿ ಒಡಮೂಡಿದ್ದವು.

ವಿಶ್ವಬಂಧುತ್ವ ನಮ್ಮಲ್ಲಿ ಮೂಡಬೇಕು ಅಂದರೇನೇ ನಾವು ನಮ್ಮಲ್ಲಿಯ ಪಾಶವೀ ವೃತ್ತಿಯನ್ನು ಹೋಗಲಾಡಿಸಿ, ನಿಜವಾದ ಮಾನವರಾಗಿ ಬಾಳಲು ಯೋಗ್ಯರಾಗುತ್ತೇವೆ. ಮಾನವರಲ್ಲಿ ತರತಮಭಾವ ಹೋಗಬೇಕು. ಎಲ್ಲರಲ್ಲಿಯೂ ಸಮಾನತೆಯನ್ನು ಕಾಣುವ ದೃಷ್ಟಿ ಬರಬೇಕು, ಒಬ್ಬರ ಮನವನ್ನು ನೋಯಿಸಿ, ಗಂಗೆಯ ಸ್ನಾನ ಮಾಡಿದರೆ ಅದ ರಿಂದ ನಮಗೆ ಒದಗುವ ಪುಣ್ಯವಾದರೂ ಎಂಥದು?

ಪರದ್ರೋಹ ಮಾಡುವದು ಎಂದೂ ಯೋಗ್ಯವಲ್ಲವೆಂದು ಅವರು ತಮ್ಮ ಅಮೂಲ್ಯ ವಚನಗಳಿಂದ ತಿಳಿಯಪಡಿಸಿ ದ್ದಾರೆ. ನಮ್ಮನ್ನು ನಾವು ತಿಳಿದು ನೋಡಬೇಕು. ಅಂದರೆ ನಮ್ಮಲ್ಲಿಯ ತಪ್ಪುಗಳು ಕಂಡು ಬಂದು ನಾವು ಹೇಗೆ ನಡೆಯಬೇಕು ಎಂಬುದರ ಅರಿವು ನಮಗಾಗಬೇಕು. ಆಗ ಒಂದು ಸರಳ ತಾತ್ತ್ವಿಕ ದಾರಿಯನ್ನು ಹಿಡಿದೇವು.

ಚೆನ್ನಬಸವಣ್ಣನವರಾದರೂ ಭಕ್ತಿಯ ಮಹತಿಯ ಕುರಿತು ಹೀಗೆ ನಿರೂಪಿಸಿದ್ದಾರೆ:

"ಕಾಮಬೇಡ ಪರಸ್ತ್ರೀಯರಲ್ಲಿ
ಕ್ರೋಧಬೇಡ ಗುರುವಿನಲ್ಲಿ
ಲೋಭಬೇಡ ತನುಮನದಲ್ಲಿ
ಮೋಹಬೇಡ ಸಂಸಾರದಲ್ಲಿ
ಮದಬೇಡ ಶಿವಭಕ್ತರಲ್ಲಿ
ಮತ್ಸರಬೇಡ ಸಕಲ ಪ್ರಾಣಿಗಳಲ್ಲಿ

ಇಂತೀ ಷಡ್ವಿದ ಗುಣವನರಿದು ಮರೆಯ ಬಲ್ಲಡೆ ಆತನೇ ಸದ್ಭಕ್ತ ಕಾಣಾ ಕೂಡಲ ಚೆನ್ನಸಂಗಮದೇವಾ!"

ತಾತ್ಪರ್ಯವೇನಂದರೆ ಈ ಆರು ಗುಣಗಳನ್ನು ಅರಿದು, ಅದರಂತೆ ವರ್ತಿಸುವದೇ ನಿಜವಾದ ಭಕ್ತನೆಂಬುದು ಇದ ರಿಂದ ಧ್ವನಿತವಾಗುತ್ತದೆ.

ನೋಡುವ ದೃಷ್ಟಿ, ಕಾಣುವ ದೃಷ್ಟಿ ನಿರ್ಮಲವಾದಲ್ಲಿ ಎಲ್ಲವೂ ನಿರ್ಮಲವಾಗುವುದು. ಪವಿತ್ರ ಜೀವನವನ್ನು ಸಾಗಿಸಲು ಪ್ರಯತ್ನಿಸಿ ಪಾವನನಾಗಬೇಕು.

ಇನ್ನೊಂದು ಸುಂದರವಾದ ವಚನದಲ್ಲಿ ಶ್ರೀ ಬಸವಣ್ಣ ನವರು ಭಕ್ತಿಯ ಬಗ್ಗೆ ಹೀಗೆ ನಿರೂಪಿಸಿದ್ದಾರೆ:

'ನೆರೆಕೆನ್ನೆಗೆ, ತೆರೆಗಲ್ಲಕೆ, ಶರೀರಗೂಡುವೋಗದ ಮುನ್ನ ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕೈಯನೂರಿ ಕೋಲು ಹಿಡಿಯದ ಮುನ್ನ, ಮುಪ್ಪಿಂದೊಪ್ಪವ ಅಳಿಯದ ಮುನ್ನ, ಮೃತ್ಯು ಮುಟ್ಟದ ಪೂಜಿಸು ಕೂಡಲ ಸಂಗಮದೇವನ.'

ಈ ವಚನವನ್ನು ನೋಡಿದರೆ ಎಂಥ ಘನವಾದ, ಎಂಥ ಉದಾತ್ತ ತತ್ವಗಳಿಂದ ಕೂಡಿದೆ ಎಂಬುದರ ಅರಿವಾಗ

ದಿರದು. ಮಾನವನು ಭಕ್ತಿಯನ್ನು ಮಾಡಬೇಕಾದರೆ ಅಥವಾ ದೇವರನ್ನು ಪೂಜಿಸಬೇಕಾದರೆ ತಾನು ಒಳ್ಳೆ ಸ್ಥಿತಿಯಲ್ಲಿ ಇದ್ದಾಗಲೆ ಮಾಡಿ ಪುನೀತರಾಗಬೇಕು. ತಲೆ ಬೆಳ್ಳಗಾಗುವುದಕ್ಕಿಂತ ಮುನ್ನ, ಹಲ್ಲು ಹೋಗಿ, ಇನ್ನೊಬ್ಬರ ಹಂಗಿಗೆ ಒಳಗಾಗದ ಮುನ್ನ, ಅದರಂತೆ ಕಾಲಮೇಲೆ ಕೈಯೂರಿ ಇನ್ನೊಬ್ಬರ ಆಶ್ರಯವನ್ನು ಕೋರುವ ಮುನ್ನ, ಮುಪ್ಪಿನಿಂದ ತೇಜವು ನಿಸ್ತೇಜವಾಗುವದಕ್ಕಿಂತ ಮುನ್ನ, ಮೃತ್ಯು ಮುಟ್ಟದ ಮುನ್ನ ನಾವು ದೇವರನ್ನು ಒಲಿಸಿ ಸದ್ಗತಿಯನ್ನು ಪಡೆಯಬೇಕು ಅನ್ನುವ ನೀತಿಯನ್ನು ಎಷ್ಟು ಸ್ವಾರಸ್ಯವಾಗಿ, ಮಾರ್ಮಿಕವಾಗಿ ಹಾಗು ಸೊಗಸಾಗಿ ಹೇಳಿದ್ದಾರೆ. ಭಕ್ತಿಯ ದೃಷ್ಟಿಕೋನದ, ನಿಚ್ಚಳ ಕಲ್ಪನೆ ನಮಗೆ ಬಾರದಿರದು.

ಹೀಗೆ ಬಸವಣ್ಣನವರು ಸುಲಭದಲ್ಲಿ ಮುಕ್ತಿ ಮಾರ್ಗದ ಕಲ್ಪನೆಯನ್ನು ಕೊಟ್ಟಿದ್ದಾರೆ.

ಅಂತೇ ಬಸವಣ್ಣನವರನ್ನು 'ಇಲ್ಲೆನ್ನ ದಚಳ'ನೆಂದು ಹರೀಶ್ವರನು ಬೋಧಿಸಿರುತ್ತಾನೆ.

ಶರಣರ ಜೀವನವೆಂದರೆ ಮುಕ್ತಿಯ ಸಾಧನ. ಅಂಥ ಮುಕ್ತಿಯನ್ನು ಪಡೆಯಲು ನಾವೆಲ್ಲರೂ ಪರಿಶ್ರಮಿಸೋಣ.

ಇಂಗ್ಲಿಷಿನಲ್ಲಿ ಬಸವವಾಙ್ಮಯ

1. BASAVA: The Dimension of Universal Man: ... *Hardekar Manjappa*
2. BASAVA: A Homage: ... *S. S. Malwad*
3. BUDDHA AND BASAVA: ... *Sri Kumara Swamiji, Navakalyan Mutt*
4. GLEAMINGS INTO THE SAYINGS OF BASAVESWARA: ... *Tr: Sadasivaiah, T. H. M.*
5. LIFE-TIME OF BASAVESWARA: ... *Channamallikarjuna and Hallabhavi, B. V.*
6. LORD BASAVA: *Talks by Kumara Swamy, Gajendrakar, P. B. Diwakar, R. R.*
7. MESSAGE OF MAHATMA BASAVESWARA A THE BRIEF SKETCH OF LIFE AND TEACHIGS: ... *Jogappa, B.*
8. MESSAGE OF BASAVANNA: ... ,,
9. MUSINGS BASAVA: ... *S. S. Basavanal and Srinivasa Iyengar, K. R.*
10. SAYING OF BASAVA: ... *Masti Venkatesa Iyengar*
11. SELECTED SAYINGS OF BASAVA: ... *Tr: ?*
12. ,, ... *Tr: Bagi, C. S.*
13. SHRI BASAVESWARA: ... *Puranik, Annadanaiah*
14. SHRI BASAVESWARA: ... *A. N. Krishna Rao*
15. SPIRIT OF COSMOS: *Tr: Shivamurthy Swamy, S. R.*
16. SRI BASAVESWARA AND HIS CONTEMPORARIES ... *Jayaram, A. R.*
17. THOUGHTS OF BASAVA: A book meant to revolutionise the world religion ... *Sanganala Math, N. K.*
18. THUS SPAKE BASAVA: ... *Tr: Theodar and Hakari*
19. VACANAS OF BASAVA: A Selection ... *L. M. A. Menezes*
20. WHO IS THE FOUNDER OF THE VIRA SAIVA OR LINGAYAT RELIGION? ... *Basavalingappa Girege*

ಆಕರ: ಎಸ್. ಆರ್. ಗುಂಜಾಳ

ಜನಪದ ಬಸವ

ಹೀ. ಚಿ. ಶಾಂತವೀರಯ್ಯ

ಶರಣ ತಿಂತಿಣಿಯಲ್ಲಿ ಭಕ್ತಿಯ ಬಸವ, ವೈರಾಗ್ಯದ ಅಲ್ಲಮ, ಜ್ಞಾನಿ ಚನ್ನಬಸವ, ಕರ್ಮಯೋಗಿ ಸಿದ್ಧರಾಮ, ಶರಣಸತಿ ಲಿಂಗಪತಿ ಮಹದೇವಿಯರು ಪ್ರಮುಖರೆನ್ನಬಹುದು. ಬಸವನನ್ನು ಕುರಿತು ರಚಿತವಾದ ಗ್ರಂಥಗಳು ಕನ್ನಡದಲ್ಲಿ ಬಹಳವಾಗಿವೆ. 'ಬಸವರಾಜದೇವರ ರಗಳೆ', 'ಬಸವಪುರಾಣ', 'ಶಿವತತ್ವ ಚಿಂತಾಮಣಿ', 'ಸಿಂಗಿರಾಜ ಪುರಾಣ', 'ವೀರಶೈವಾಮೃತ ಮಹಾಪುರಾಣ', 'ಬಸವ ರಾಜ ವಿಜಯ', 'ಶರಣಲೀಲಾಮೃತ' ಮುಂತಾದ ಗ್ರಂಥಗಳಲ್ಲಿ ವಿವರವಾಗಿ ಬಂದಿವೆ.

ಜನತೆಯ ನಾಲಿಗೆಯಮೇಲೆ ನಲಿದಾಡುತ್ತಿರುವ 'ಜನಪದ' ಸಾಹಿತ್ಯದಲ್ಲಿ ಬಸವನ ಚರಿತ್ರೆಯನ್ನು ಕಾಣಬಹುದು. ಕನ್ನಡಿಗರ ಜಿಹ್ವೆಯಲ್ಲಿ ಲಾಸ್ಯವಾಡುತ್ತಿರುವ ಬೀಸುವ ಹಾಡು, ಒನಕೆ ಹಾಡು, ಕೋಲಿನ ಹಾಡು, ಹೋಳಿ ಹಾಡು, ದೋಣಿ ಹಾಡು, ಲಾವಣಿ ಹಾಡು, ಹಂತಿ ಹಾಡು, ಸುಗ್ಗಿಯ ಹಾಡು, ಶೀಗೆ ಹಾಡುಗಳಲ್ಲಿ ಅನೇಕ ಮಹಾತ್ಮರ ಸ್ಮರಣ ಗೀತೆಗಳು ಜೀವಂತ ಉಳಿದಿರುವುದು ಕಂಡುಬರುತ್ತವೆ. ಜನತೆ ಆರಾಧಿಸುವ ದೇವ ದೇವತೆಗಳ ಜತೆಯಲ್ಲಿ ಶಿವಶರಣರಾದ ಬಸವ, ಚನ್ನಬಸವ, ಸಿದ್ಧರಾಮ, ರೇವಣಸಿದ್ಧ, ಗೊಲ್ಲಾಳನಾಥ, ನೀಲಮ್ಮನನ್ನು ಕುರಿತು ಹಾಡುವ ಹಾಡುಗಳು ಪ್ರಸಿದ್ಧವಾಗಿವೆ. ಬಸವನನ್ನು ಕುರಿತು ಹಾಡುವ ಜನಪದ ಗೀತೆಗಳು ವಿವಿಧ ರೀತಿಯಲ್ಲಿವೆ. ಬಸವನ ಇಷ್ಟದೈವವಾದ ಕೂಡಲ ಸಂಗಮನನ್ನು ಕುರಿತ ಗೀತೆ ಇದು :

" ಕೂಡಲ ಸಂಗಯ್ಯ ಹೊಳೆಯಾಗೆ ಹೇಗಿದ್ದೆ
ಹಳ್ಳೊತ್ತಿ ಸಣ್ಣ ಮಳಲೊತ್ತಿ ಗಂಗೇಯ
ನೀರೊತ್ತಿ ಲಿಂಗ ನೆನೆದಾನ "

ಬಸವಣ್ಣನನ್ನು ಕುರಿತು ಹಾಡದ ಹಳ್ಳಿಯ ಜನರಿಲ್ಲ. ಮತ ಭೇದವೆಣಿಸದೆ 'ಬಸವನ ಹಾಡನ್ನು' ವರ್ಷಕ್ಕೊಮ್ಮೆ ಸುಖಸಂಭ್ರಮಗಳಲ್ಲಿ ಹಾಡುತ್ತಾರೆ. ಹೆಂಗೆಳೆಯರಂತೂ ಬೆಳಗಾಗಿ ಬಸವನ ಸ್ಮರಣೆ ಮಾಡಿ ಕೆಲಸದಲ್ಲಿ ತೊಡಗುವುದೂ ಉಂಟು.

ಬಸವೇಶ್ವರರನ್ನು ಕುರಿತು ಉದ್ಗ್ರಂಥಗಳು ಮುಕ್ತ ಕಂಠದಿಂದ ಹೊಗಳಿವೆ. ಚಿಕ್ಕದಾಗಿ ಚೊಕ್ಕದಾಗಿ ಸ್ತುತಿಸಿರುವ 'ಜನಪದ' ಪದಗಳು ಜಿಹ್ವೆಯಿಂದ ಎಂದೂ ಅಗಲದಂತಿವೆ. ಬಸವನ ಲಾವಣಿ, ಹಾಡುಗಳು ಇಂದಿಗೂ ಜನಪ್ರಿಯವಾಗಿರುವುದು ಅವರ ಕೀರ್ತಿಗೆ ಸಾಕ್ಷಿ. ಶಿವಶರಣರ ಜನಪದ ಗೀತೆಗಳು ಇಂದಿಗೂ ಹಳ್ಳಿ ಹಳ್ಳಿಯಲ್ಲಿ ನಲಿಯುತ್ತಿವೆ. ಬಸವಣ್ಣನವರ ಜನಪದ ಗೀತೆಯೊಂದನ್ನು ಇಲ್ಲಿ ಉಲ್ಲೇಖಿಸಿದೆ.

ಸೂಚನೆ :

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥ ೧ ॥

ಬಸವಣ್ಣ ನಿನ್ಹೆಸರು ದೆಶೆದೆಶೆಗೆ ಶಿವಮಂತ್ರ
ಹೊಸ ಮತಕೆ ಮಂತ್ರ ನಿತ್ಯದಲಿ ಒಕ್ಕಲಿಗ
ಹೊಸ ಮಂತ್ರ ಬಸವ ಜಪಿಸುವನು ॥ ೨ ॥

ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥ ೩ ॥

ಬಸವ ಹೂಡಿದ ಬಂಡಿ ಶಿಶುವು ಏರಿತು ನಂದಿ
ದೆಸೆಗೆಟ್ಟಲೋಕ ಕೈಲಾಸ ಕಾಯಕದ
ಉಸಿರಾತು ನಾಡ ಸಿರಿಯಾತು ॥ ೪ ॥

ಕಾಯಕವ ಕಲಿಸಿದಾ ನಾಯಕನು ಬಸವಯ್ಯ
ಜೀಯ ಹೊಸಮತಕೆ ಶಿವಭಕ್ತಿ ಸಾರುದಕೆ
ರಾಯ ಜೀವನದ ಹೊಸ ನುಡಿಗೆ || ೫ ||

ಹಡೆದವ್ವ ಮಾದವ್ವ ಹಡೆದಪ್ಪ ಮಾದರಸು
ಪಡೆದವ್ವ ಅಕ್ಕನಾಗಾಯಿ ಬಸವನಿಗೆ
ಬಿಡದೆ ಸಲಹಿದನು ವರಸಂಗ || ೬ ||

ಬಸವ ನಿನಗೊಬ್ಬಣ್ಣ ಬಸವಗೊಬ್ಬಳೆ ಅಕ್ಕ
ಬಸವ ನಿನ್ಹೆಸರು ಅಮರಾತು ಜಗಕೆಲ್ಲ
ಬಸವ ಕಲ್ಯಾಣ ಹೆಸರಾತು || ೭ ||

ವೇದ ವೇದದವಾದ ಭೇದಹುಟ್ಟಿಸಿ ಜಗಕೆ
ದಾದು ಯಾರಿಲ್ಲ ಹೇಳಲಿಕ್ಕೆ ಬಸವಣ್ಣ
ಭೇದ ಅಳುಕಿಸಿದ ಕುಲಕುಲಕೆ || ೮ ||

ದಾಸೋಹಿ ಬಸವಣ್ಣ ದಾಸೋಹ ಕಲಿಸಿದನು
ದೇಶದೇಶೆಲ್ಲ ಕೇಳುತಲಿ ಹೊಸ ಮಾತ
ಮಾಸಿದವು ವೇದ ಹುಸಿಯೆಂದು || ೯ ||

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ || ೧೦ ||

ಓದಿದನು ಬಸವಯ್ಯ ವೇದದೊಳಗಿನ ಹುಸಿಯ
ಭೇದ ಭೇದವನೆ ಬಿಚ್ಚಿಟ್ಟ ಜನಪದಕೆ
ತೇದುಂಡ ಜೀವಿ ಬಸವಣ್ಣ || ೧೧ ||

ಸಾಧು ಸಾಧೆಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸಮಾತು ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು || ೧೨ ||

ಹುಟ್ಟಿ ಬಂದನು ಬಸವ ಕಟ್ಟುದಕೆ ಕಲ್ಯಾಣ
ಬಿಟ್ಟು ಬಾಗೋಡಿ ನಾಗಾಯಿಯೊಡಗೂಡಿ
ಮೆಟ್ಟು ಮಾಡಿದನು ಸಂಗಮಕೆ || ೧೩ ||

ಬಸವ ಸಾಲಿಯ ಕಲಿತ ಎಸೆವ ಸಂಗಮದೊಳಗೆ
ಹೆಸರು ಪಡಕೊಂಡ ಜಗದೊಳಗೆ ವರಸಂಗ
ಹಸುಮಗನ ಹರಸಿ ಸಲಹಿದನು || ೧೪ ||

ಹುಸಿ ವೇದ ಹಾರವರು ಹಸಗೆಟ್ಟ ಲೋಕದಲಿ
ಗುಸುಮುಸಿಯು ನಡೆಯೆ ಬಸವನಿಗೆ ವರಸಂಗ
ಹೊಸತು ಊದಿದನು ಕಿವಿಮಾತ || ೧೫ ||

ವಾದ ವಾದವೆ ನಡೆದು ವೇದ ವೇದವೆ ಸೋತು
ಭೇದ ಬೇಡೆಂದು ಬಸವಣ್ಣ ಸಾರುದಕೆ
ಹೋದ ಹೋದಲ್ಲಿ ಹೊಸಮಾತು || ೧೬ ||

ಕುದ್ದ ಕುದಿ ಕುದಿಯೆದ್ದು ಬಿದ್ದ ಜಂಗುಳಿಯೆದ್ದು
ಗುದ್ದಾಡಿ ಲೋಕ ಹದ ಬಂತು ಸಾರುದಕೆ
ಗದ್ದಲದ ಬಾಯ್ಗೆ ಮುಳ್ಳಿಟ್ಟು || ೧೭ ||

ಕುದ್ದಲವು ಕಡೆನಿಟ್ಟು ಗದ್ದ ಗದ್ದಲ ಮುಣುಗಿ
ಸದ್ದು ಸದ್ದಾತು ಶಿವನಾಮ ಲೋಕೆಲ್ಲ
ಹೊದ್ದು ಬೆಳಗಾತು ಹಗುರಾತು || ೧೮ ||

ಬಿಜ್ಜಳನು ಕೇಳಿದನು ದರ್ಜೆ ಬಸವನ ಹೆಸರ
ಅಜ್ಜಮ್ಮನೂರು ಸಂಗಮಕೆ ಕರೆತರಲು
ಮರ್ಜಿಯಲಿ ಬಂದ ಬಲದೇವ || ೧೯ ||

ಮೆಚ್ಚಿದನು ಬಲದೇವ ಇಚ್ಛೆಯಲಿ ಮಗಳಿತ್ತ
ಕೆಚ್ಚೆದೆಯ ವೀರ ಬಸವನಿಗೆ ಕಲ್ಯಾಣ
ನೆಚ್ಚಿ ಸಲಹೆಂದು ಕೈ ಮುಗಿದು || ೨೦ ||

ಅರಸ ಬಿಜ್ಜಳರಾಯ ಮರೆತಂದು ಕುಲಮತವ
ಕರೆಸಿ ಬಸವನಿಗೆ ಒಪ್ಪಿಸಿದ ಮಂತ್ರಿಪದ
ಹರುಷದಲಿ ರಾಜಮುದ್ರಿಕೆಯ || ೨೧ ||

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲಿ ಕಟ್ಟಿ ಅನುಭಾವ ಮಂಟಪವ
ಕೂಗು ಕೇಳುತಲಿ ಜನವೆದ್ದು || ೨೨ ||

ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವನುಡಿಯ ಕಾಯಕದ
ಗೂಡಾತು ಲೋಕ ಜನ ಹಿಗ್ಗಿ || ೨೩ ||

ಅರ್ಪಣೆಯ ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ ಹಾಲ್ಹೊಳೆಯ
ತೆಪ್ಪ ದಾಸೋಹ ತೇಲುತಲಿ || ೨೪ ||

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡಕಂಡಲ್ಲಿ ದಾಸೋಹ ಕಾಯಕದ
ಕಂಡ ಜೀವನದ ಶಿವಮಾತು || ೨೫ ||

ಹಾರೂರ ಹರಿದಾಟ ಮಾರಿ ಮಾರಿಗೆ ಮುಸಿಯು
ಊರೂರು ಕಾರಿ ಕಿಡಿಮಾತ ನಾಡೆಲ್ಲ
ಧಾರುವಗೆ ಹೊರತು ಹದನಾತು || ೨೬ ||

ಎರಕ ಹೊಯ್ಯಿತು ಲೋಕ ಸರಸ ಕಾಯಕನುಡಿಯು
ಹರಕ ಹಾರವಗೆ ಕಿರಿಮನಸು ಉಣ್ಣುದಕೆ
ಹರಳುಪ್ಪ ಒಗೆದ ಹಾಲ್ಹೊಳೆಗೆ || ೨೭ ||

ಬನವಾಸಿ ಕುಂತಳಕೆ ಮನೆ ಮಾತು ಅಲ್ಲಮನು
ಮನವೊಪ್ಪಿ ಲೋಕ ಕೈಮುಗಿದು ಕೇಳುತಲಿ
ಜನಕೆ ಊದಿದನು ಶಿವಮಂತ್ರ || ೨೮ ||

ಲಕ್ಕುಂಡಿ ಹೊಲ ಬೆಳೆದು ಮುಕ್ತಾಯಿ ಅಜಗಣ್ಣ
ಮಿಕ್ಕ ಶರಣರಿಗೆ ಶಿವಮಾತು ಪ್ರಭುದೇವ
ಹೊಕ್ಕ ಹೊಕ್ಕಲ್ಲಿ ಹೊನ್ನುಗ್ಗಿ || ೨೯ ||

ಹಾದಿ ಹಾದಿಗೆ ಗುಡಿಯು ಬೀದಿ ಬೀದಿಗೆ ಕೆರೆಯು
ಸಾಧಿಸಿದ ಕಟ್ಟಿ ಸಿದರಾಮ ಸೊನ್ನಲಿಗೆ
ಸಾಧು ಸಿದ್ಧನಿಗೆ ಮನೆಮಾತು || ೩೦ ||

ಸಿದ್ಧ ಪುರುಷನು ಎಂದು ಸಿದ್ಧರಾಮಗೆ ಬಿಮ್ಮು
ಉದ್ದಂಡನಾಗಿ ಆಳಿದನು ಪ್ರಭುದೇವ
ಹೆದ್ದಾರಿ ಬಂದ ಶಿವ ಬೆಳಕು || ೩೧ ||

ಸಿದ್ಧರಾಮನ ಬಿಮ್ಮು ಬಿದ್ದುಹೋಯಿತು ಕರಗಿ
ಬುದ್ಧ ಪ್ರಭುದೇವ ತಿಳಿಹೇಳಿ ಸೊನ್ನಲಿಗೆ
ಸಿದ್ಧ ಶರಣಾದ ಶಿವಮತಕೆ || ೩೨ ||

ಅಲ್ಲಮನು ಸಿದರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆಬಂತು ಬಸವಯ್ಯ
ಎಲ್ಲಿ ಹೋದಲ್ಲಿ ಬೆಲ್ಲಾದ || ೩೩ ||

ಹಪ್ಪರಗಿ ಮಾಚಯ್ಯ ಉಪ್ಪಗಿರಿ ಸಂಗಯ್ಯ
ಅಪ್ಪ ಹರಳಯ್ಯ ಮಂಟಪಕೆ ಲೋಕೆಲ್ಲ
ಬೆಪ್ಪಾಗಿ ಕೂತು ಕಿವಿಗೊಟ್ಟು || ೩೪ ||

ಕಿನ್ನರಿಯ ಬೊಮ್ಮಯ್ಯ ಕಿನ್ನರಿಯ ಬಾರಿಸಲು
ಕುನ್ನಿ ಹಸುಮರೆತು ಕಿವಿಗೊಟ್ಟು ಕಲ್ಯಾಣ
ಚನ್ನಾತು ಲೋಕ ಚೆಲುವಾತು || ೩೫ ||

ಅಲ್ಲಮನೆ ಗುರುವಾದ ಕಲ್ಯಾಣ ಮಂಟಪಕೆ
ಕಲ್ಲೆದೆಯ ಬಂಟ ಮಡಿವಾಳ ಕರುವಾಳ
ಸಲ್ಲಿಸಲು ಸೇವೆ ಮಂಟಪಕೆ || ೩೬ ||

ಹಾರುವರ ಮಧುವರಸ ಊರ ಮಾತನು ಮೀರಿ
ಧಾರೆ ಯೆರೆದಿತ್ತು ಮಗಳನ್ನು ಬೀಗಾದ
ಮಾರಹರ ಭಕ್ತ ಹರಳನಿಗೆ || ೩೭ ||

ಹಾರುವರ ಕುಲಹೊಲೆಯ ಬೇರನ್ನ ಕಿತ್ತೊಗೆದ
ಸಾರಿದನು ಬಸವ ಬೆಂಗುಡಿಗ ಶರಣರಿಗೆ
ಧೀರ ಕಾಯಕವೆ ಕುಲವಾತು || ೩೮ ||

ಕೊಂಡಿಗಳು ಹಾರುವರು ಮಂಡಿಗೆ ಉಣ್ಣುದಕೆ
ಕಂಡ ಕಂಡಲ್ಲಿ ಕುದಿಮಾತನಾಡಿದರು
ಹೆಂಡ ಕುಡಿದಂತೆ ಜೈನರಿಗೆ || ೩೯ ||

ಜೊಂಡ ಜೈನರಮಾತ ಹುಂಡ ಬಿಜ್ಜಳ ಕೇಳಿ
ಕೊಂಡನರಮನೆಗೆ ಶಿವನುರಿಯ ಬೇಡೆಂದು
ದಂಡೇಶ ಬಸವ ತಿಳಿಹೇಳಿ || ೪೦ ||

ಶಿವನಿಗಿಂತಲು ಹೆಚ್ಚು ಶಿವಶರಣರೀಜಗಕೆ
ಶಿವಲೋಕ ಮೆಚ್ಚಿ ಹಾಡುವುದು ಬಿಜ್ಜಳನೆ
ದವಸ ಕಾಯಕದ ಬೆಳೆಬಂದು || ೪೧ ||

ಗದ್ದಲಕೆ ಕಲ್ಯಾಣ ಸದ್ದೆದ್ದು ಜಲ್ಲೆಂದು
ಎದ್ದು ಓಡಾಡಿ ಜನಬಿದ್ದು ಹೌಹಾರಿ
ದದ್ದರಿಸಿ ಲೋಕ ಗಜಬಿಜಿಗೆ || ೪೨ ||

ಅರಸ ಬಿಜ್ಜಳರಾಯ ಮರೆತು ಬಸವನಮಾತ
ಕರಸಿ ಶರಣರಿಗೆ ವಿಷವಿಟ್ಟ ಬಸವಯ್ಯ
ಹೊರವಂಟ ಹೇಸಿ ಮನನೊಂದು || ೪೩ ||

ಶಿವಯೋಗಿ ಮಗ ಬಾರೊ ಶಿವಪುತ್ರ ಚನಬಸವ
ಶಿವನಾಣೆ ಚನ್ನಬಸವಣ್ಣ ಕಲ್ಯಾಣ
ಶಿವಗಳಸ ಬಾರೊ ಮಂಟಪಕೆ | ೪೪ ||

ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚನ್ನಬಸವ ಶರಣರಿಗೆ ಕಂಟಕದ
ಹುರಿಯಾಳು ಕಾಯೊ ಹೊಸಮತವ || ೪೫ ||

ಹೇಳಿ ಹೊರಟನು ಬಸವ ಕೇಳಲಾರದೆ ಮಾತ
ಗೋಳಿಟ್ಟು ಜನವು ಸರಮಾಲೆ ಸಂಗಮಕೆ
ಆಳು ಬಸವಯ್ಯ ದಯವಿಟ್ಟು || ೪೬ ||

ಹರಹರನೆ ವರಸಂಗ ಗುರು ಎನಗೆ ವರಸಂಗ
ಕರುಣನಿಧಿ ಹರನೆ ಸಂಗಮನೆ ಎಂದೆನುತ
ಕರಮುಗಿದ ಬಸವ ಬಯಲಾದ || ೪೭ ||

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು || ೪೮ ||

ಅರಿವುದಕೆ ಕುರುಹೆಂದು ಕರಲಿಂಗ ನೀಕೊಟ್ಟೆ
ಶರಣೆಂಬ ನುಡಿಯ ಚಲಮಾಡಿ ಶಿವಮತಕೆ
ಗುರು ಬಸವಲಿಂಗ ನಿಜಮಂತ್ರ || ೪೯ ||

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ ಶಿವಮತಕೆ
ಬಸವ ಓಂಕಾರ ಶಿವನಾಮ || ೫೦ ||

ಸುಗ್ಗಿಯಲಿ ಒಕ್ಕಲಿಗ ಉಗ್ಗಡಿಸಿ ಹಾಡುವನು
ಕಗ್ಗಾಯಿ ತುಂಬಿ ಹಣ್ಣಾಗಿ ಕಣತುಂಬಿ
ಹಿಗ್ಗುವುದು ಲೋಕ ರಸ ಕುಡಿದು || ೫೧ ||

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹುಲು ಹುಲುಸು ಕಣ ಕಣಕೆ ಒಕ್ಕಲಿಗ
ಬಸವನ ಹೊಲಗೆಲಸ ಕಡೆತನಕ || ೫೨ ||

ಈಶ್ವರನ ನೆನಸಿದರೆ ವಿಷವೆಲ್ಲ ಅಮರೂತ
ಬಿಸಿಲೆಂಬ ದಾರಿ ನೆರಳಾಗಿ ಎಲೆಮನವೆ
ಬಸವಯ್ನ ನೆನಸು ಕೈಲಾಸ || ೫೩ ||

ಹಂತಿಯದು ಹಾಡೆಂದು ಪಂತ ಕಟ್ಟಲು ಬೇಡ
ಕಂತಿ ಕರಗುವುದು ನಿಂತಲ್ಲಿ ಬಸವಯ್ಯ
ಕಂತು ಎದೆಯೊಳಗೆ ಹಾಡಿಸಿದ || ೫೪ ||

ಶರಣು ಶರಣೆಂಬುವೆವು ಹರಣ ಹಾರುವತನಕ
ಕರುಣಿಸಿರಿ ಶರಣ ಬಸವಯ್ಯ ನಮಗಿನ್ನು
ಹರಸಿರಿ ಶರಣ ಬಾಳೆಂದೂ. || ೫೫ ||

ಪುಣ್ಯಪುರುಷ ಬಸವಣ್ಣನಿಗೆ

'ಬಸವ'ನೆಂದಡೆ ಪಾಪದೆಸೆಗೆಟ್ಟು ಪೋಗುವುದು
ಭಕ್ತಿಭಾವವು ಕೂಡೆ ಮನದಿ ಮೂಡುವುದು
"ಅಣ್ಣ"ನೆಂದಡೆ ಸಾಕು ಆನಂದವಾಗುವುದು
ವಚನಾಮೃತವ ಸವಿಯೆ ಚಿತ್ತ ಹಸನಾಗುವುದು
"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ"
ಎಂಬ ವಚನ ಸುಧೆಯಲ್ಲಿಹುದು ಅಂತರಂಗದ ಶುದ್ಧಿ
"ದಯವೆ ಧರ್ಮದ ಮೂಲ"ವೆಂಬ ವಚನವ ಹಾಡೆ
ತುಂಬಿದೆದೆಯಲಿ ಬಂತು ಜನಕೆ ಬುದ್ಧಿ.
"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ"
ಎಂಬ ವಚನದಿ ಬಾಳ ತಿರುಳನಾಲಿಸಿದೆ.
ನಿನ್ನ ಸೊಲ್ಲಿಂದಿಗೂ ಹೊಚ್ಚ ಹೊಸತಾಗಿದೆ
ಎಲ್ಲಿ ಹೋದರು ನಿನ್ನ ನಾಮಾಮೃತವೆ ತುಂಬಿ
ಕಿವಿ ತುಂಬಿ, ಕಣ್ ತುಂಬಿ, ಎದೆಯು ತುಂಬಿ
ಅನವರತ ಹಾಡುತಿದೆ ದನಿ ರಾಗ ತುಂಬಿ.
ನಿನ್ನ ಮಾತೇ ಮಾತು–"ಕಾಯಕವೆ ಕೈಲಾಸ"
ಸುಖ ಕಂಡ್ಯ ನೋಡಯ್ಯ ಭೂಲೋಕ ವಾಸ
ಆ ಚಂದ್ರತಾರಾರ್ಕವಿದುವೆ ಕೈಲಾಸ
ಮಾನವೋದ್ಧರಣಕ್ಕೆ ವಚನ ಸುಮಹಾಸ!
ನ್ಯಾಯ ನಿಷ್ಠುರಿ ನೀನು, ದಾಕ್ಷಿಣ್ಯಪರನಲ್ಲ
ಶರಣಜನ ಕಿಂಕರನು, ಭಕ್ತಜನ ಶಂಕರನು
ಆಗಿ ಲೋಕದಿ ಮೆರೆದ ಮಹಾಪುರುಷ ನೀನು.
ಷಟ್‌ಸ್ಥಲದ ಭಕ್ತಿಯನು, ತ್ರಿವಿಧ ದಾಸೋಹವನು
ಸುಲಭದಲಿ ಪರಮನನು ಸಾಧಿಸುವ ಮಾರ್ಗವನು
ಜನಕೆ ಬೋಧಿಸಿದ ಮಹಾನುಭಾವ ನೀನು.
ಅನುಭವದ ಮಂಟಪದಿ ಶರಣಗೋಷ್ಠಿಯ ನಡೆಸಿ
ಪ್ರಭುವಿನಾದ್ಯತೆಯಲ್ಲಿ ತತ್ವಮಂಥನ ಮಾಡಿ
'ಶೂನ್ಯ ಸಂಪಾದನೆ'ಯ ಜಗಕಿತ್ತ ಮಹಾಶಕ್ತಿ ನೀನು.
ರಾಜಕಾರಣಿಯಾಗಿ, ಸಾಹಿತಿಯು ನೀನಾಗಿ
ಧರ್ಮಕಾರ್ಯದೆ ಜಗಜ್ಜ್ಯೋತಿಯಾಗಿ
ಮುಂದೆ ನುಗ್ಗಿದ ಮಹಾ ವಿಭೂತಿಪುರುಷ ನೀನು.
ಕನ್ನಡಾಂಬೆಯ ಪುಣ್ಯಕೀರ್ತಿ ನೀನು
ನಿನ್ನಂಥ ಜಗದ್ವಂದ್ಯರಿನ್ನುಂಟೆ ಬಸವಾ?
ನಿನ್ನ ನಾಮದ ನೆನಹೆ ಮನಕೆ ದ್ರಾಕ್ಷಾಸವಾ!

ಇದೋ ನಿನಗೆ ನನ್ನ ಬದ್ಧಾಂಜಲಿ!
ಇದೋ ನಿನಗೆ ನನ್ನ ಭಕ್ತ್ಯಂಜಲಿ!

—"ಶಿವಶ್ರೀ"

ಬಸವೇಶ್ವರ ಚರಿತ್ರೆ

(ಹಿಂದಿನ ಪುಟದಿಂದ)

ಪೂಜಿಸುವುದರಿಂದಲೂ ಅವನು ವಚನಕಾರನಾದುದರಿಂದಲೂ ಅವನೂ ಬಸವಾನುಯಾಯಿಯಾದವನೇ. ಎಂದು ಯಾರಿಂದ ಆತನು ವೀರಶೈವ ದೀಕ್ಷೆಯನ್ನು ಪಡೆದನು ಎಂಬುದನ್ನು ತಿಳಿಯದೆ ಅವನು ವೀರಶೈವ ದೀಕ್ಷೆ ಪಡೆದುದನ್ನು ಒಬ್ಬರು ಒಂದು ರೀತಿ ಇನ್ನೊಬ್ಬರು ಇನ್ನೊಂದು ರೀತಿ ಹೇಳಿರುವರಷ್ಟೆ. ಹರಿಹರನು ಬಸವೇಶ್ವರನನ್ನೂ ವೀರಶೈವನೆಂದು ಕರೆದಿಲ್ಲ. ಆದರೆ ಅವನು ವೀರಶೈವನಲ್ಲವೆ?

ಕಲ್ಯಾಣದ ಕ್ರಾಂತಿಯಾದ ಮೇಲೆ ಬಸವೇಶಾನುಯಾಯಿಗಳು ಶ್ರೀಶೈಲ ಉಳುವಿ ಮೊದಲಾದ ಕಾಡುಗಳನ್ನು ಸೇರಬೇಕಾಯಿತು. ಕನ್ನಡ ನಾಡಿನಲ್ಲಿ ೧೩ನೆಯ ಶತಮಾನದ ವೀರಶೈವ ಗ್ರಂಥಕರ್ತರೇ ಇಲ್ಲ. ಪದ್ಮರಸಾದಿಗಳು ಜಾತಿಭೇದವನ್ನು ಮಾಡಿದವರಾದರೂ ಯಜ್ಞೋಪವೀತವನ್ನು ತೆಗೆದು ಹಾಕುವುದರ ಆವಶ್ಯಕತೆಯನ್ನು ಕಾಣಲಿಲ್ಲ. ಲಿಂಗಿಬ್ರಾಹ್ಮಣಲಕುಲೀಶಪಾಶುಪತ ಗುರುಗಳು ಹಿಂದಿನಂತೆ ೧೪ನೆಯ ಶತಮಾನದವರೆಗೂ ಮುಂದುವರೆದರು. ಪ್ರೌಢದೇವರಾಯನ ಕಾಲದಲ್ಲಿ ಅವನು ಬಸವಾನುಯಾಯಿಯಾದಾಗ ೧೦೧ ವಿರಕ್ತರು ಬಸವೇಶ್ವರನು ಸಂಸ್ಕರಿಸಿದ ವೀರಶೈವವನ್ನು ಉದ್ಧರಿಸಿದರು. ಆವರೆಗೂ ವೀರಶೈವರ ಮುಖ್ಯ ಆಧಾರ ಗ್ರಂಥವಾದ 'ಶಿವತತ್ತ್ವಚಿಂತಾಮಣಿ'ಯನ್ನು ಬರೆದ ಪ್ರೌಢದೇವರಾಯನ ಮುಖ್ಯ ಮಂತ್ರಿ ಲಕ್ಕಣ್ಣ ದಂಡೇಶನು '**ಸದ್ಗುರುಮೂರ್ತಿ ಮಲ್ಲಿಕಾರ್ಜುನ ನಾಮಧರನಾದ ಪಾಶುಪತಸದ್ವ್ರತ ಗುಣಾಗ್ರಣಿಯ ಚರಣಾಂಬುಜಕ್ಕೆ ಶರಣು**' ಎಂದು ತನ್ನ ಗುರುವನ್ನು ನಮಿಸಿ, ಅಲ್ಲಮ ಬಸವ ಚನ್ನಬಸವರ ಚರಣಾಂಬುಜಕ್ಕೆ ಶರಣು ಮಾಡಿದ್ದಾನೆ. ನೂತನ ಗಣಂಗಳನ್ನು ನಮಿಸುವಾಗ ಕ್ರಿಯಾಶಕ್ತಿ ದಕ್ಷಿಣ ಮೂರ್ತಿಯತಿ, ಆಕಾಶವಾಸಿಯತಿ ಮೊದಲಾದ ಲಿಂಗಿಬ್ರಾಹ್ಮಣರನ್ನು ವಂದಿಸಿರುವನಲ್ಲದೆ, '**ದ್ವಿಜ ಮಾಹೇಶ್ವರನನರಿವವರ ಚರಣಾಂಬುಜಕೆಶರಣು**' ಎಂದು ಹೇಳಿದ್ದಾನೆ. ಕ್ರಿಯಾಶಕ್ತಿಯ ಮುಖ್ಯ ಶಿಷ್ಯನಾದ ಸಂಹಿತೆಗೆ ವ್ಯಾಖ್ಯಾನ ಬರೆದಿರುವ ಅಂಗೀರಸ ಗೋತ್ರದ ಮಾಧವಾಚಾರ್ಯನ ಶಿಕಾರಿ ಪುರದ ೨೮೧ನೆಯ ಶಾಸನ (VII E. C. sk. 281) ದಲ್ಲಿ ಹೇಳಿದಂತೆ '**ಶ್ರೀಮತ್ಕಾಶೀವಿಳಾಸ ಕ್ರಿಯಾಶಕ್ತಿ ಶಿವದೇಶಿಕಾಧಿಷ್ಠೇನ ಶುದ್ಧಶೈವಾಮ್ನಾಯವರ್ತ್ಮನಾ ನಿಜೇಷ್ಟಲಿಂಗ ಕೃತಾಧಿಷ್ಠಾನಂ ದೇವದೇವಂ . . . ಯಜನ್**' ಎಂದು ಮುಂತಾಗಿ ಹೇಳಿರುವುದರಲ್ಲಿ ಇಷ್ಟಲಿಂಗದಲ್ಲಿ ಅಧಿಷ್ಠಿತನಾದ ಶಿವನನ್ನು ಪೂಜಿಸುವುದನ್ನೂ ಹೇಳಿದೆ. ಇಂದು ವೀರಶೈವರೂ ಆರಾಧ್ಯ ಬ್ರಾಹ್ಮಣ ಶ್ರೀಪತಿರಚಿತ ಶ್ರೀಕರಭಾಷ್ಯವನ್ನು ಗೌರವಿಸುವರು. ಇಂದಿನಂತೆ ಅಂದು ವೀರಶೈವರೂ ಲಿಂಗಯಜ್ಞೋಪವೀತಧಾರಿಗಳಾದ ಶುದ್ಧ ಶೈವಾಮ್ನಾಯದವರೆಂದು ಹೇಳಿಕೊಳ್ಳುತ್ತಿದ್ದ ಪಾಶುಪತರೂ ಎಂದರೆ ಅಂದಿನ ಆರಾಧ್ಯ ಬ್ರಾಹ್ಮಣರೂ ಒಂದೇ ಮತದವರಂತೆ ವರ್ತಿಸುತ್ತಲಿದ್ದರು. ಶ್ರೀಯುತ ಕಪಟರಾಳರು ಈ (ಮಲ್ಲಿಕಾಪುರ) ಶಾಸನದಲ್ಲಿ ಶುದ್ಧಶೈವಸಂಪ್ರದಾಯ ಶಿವಯೋಗಿಗಳಿಗೆ 'ವೀರಶೈವಾಚಾರ್ಯರು . . . ಎನ್ನಲಾಗಿದೆ' ಎಂದಿದ್ದಾರೆ. ಮೇಲಿನ ಶಾಸನದಲ್ಲಿ (ಶಿಕಾರಿಪುರ ೨೮೧) ಇಷ್ಟಲಿಂಗಪೂಜಕ ಮಾಧವಾಚಾರ್ಯನೂ ಅವನಿಂದ ದಾನ ಪಡೆದವರೂ 'ಶುದ್ಧಶೈವಾಮ್ನಾಯ'ದವರೆಂದು ಹೇಳಿದೆ. ಶಾಸನವೊಂದರಲ್ಲಿ (No 14 of B. K and K. I.) ಬಿಜ್ಜಳನು '**ಗೌರೀಕಾಂತಾಮ್ನಾಯ**'ದವನೆಂದು ಹೇಳಿದೆ. ಆದುದರಿಂದ ಬಿಜ್ಜಳನು ಇಷ್ಟಲಿಂಗ ಪೂಜಕ ಮಾಧವಾಚಾರ್ಯನಂತೆ ಶುದ್ಧ ಶೈವಾಮ್ನಾಯದವನೆಂದಾಯಿತು.

ಬಸವ ಬಿಜ್ಜಳರ ಸಂಬಂಧ : ಅವರ ಅಂತ್ಯ

E. C. sk 102 ಶಾಸನದಲ್ಲಿ ಬಿಜ್ಜಳನು '**ಶಿಷ್ಟೇಷ್ಟ ಸಂತರ್ಪಣ**'ಕ್ಕೆ ದಾನಮಾಡಿದುದನ್ನು ಹೇಳಿದೆ. ಅವನ ಅಳಿಯ ಬೊಮ್ಮರಸನ ಭಾವ ಕಸಪಯ್ಯನ ವಿಷಯದಲ್ಲಿ '**ನಿಜೇಷ್ಟ ವಿಶಿಷ್ಟ ಜನಕ್ಕೆ**' ಎಂಬ ಪದಗಳಿವೆ. ಇಷ್ಟ ವಿಶಿಷ್ಟವೆಂದರೆ ಅರ್ಥವಾಗದು; ಇಷ್ಟಲಿಂಗ ವಿಶಿಷ್ಟವೆಂಬುದೇ ಅಭಿಪ್ರಾಯ. ಇಷ್ಟಲಿಂಗಕ್ಕೆ ಇಷ್ಟವೆನ್ನುತ್ತಿದ್ದರು. ಸಿಂಗಿರಾಜ ಪುರಾಣದ ಶಾಸನವೊಂದರಲ್ಲಿ '**ತೊನಸಿ ಸೌಗಂಧಿನಿಯನೊತ್ತಿತೆಂದಿಷ್ಟುವಂ ಬಸವಂಗೀಯೆ**' ಎಂದಿರುವುದರಲ್ಲಿ ಇಷ್ಟವೆಂದರೆ ಇಷ್ಟಲಿಂಗವೆಂಬುದು ಸ್ಪಷ್ಟ. (VII E. C. sk 102)ನೆಯ ಶಾಸನದಲ್ಲಿ ಬಿಜ್ಜಳನ ಅಳಿಯ ಬೊಮ್ಮರಸನನ್ನು '**ಶಿಷ್ಟೇಷ್ಟನಿಕರಾಭರಣಂ**' ಎಂದು ಹೊಗಳಲಾಗಿದೆ.

ಬಿಜ್ಜಳನು ಚಾಣಾಕ್ಷ. ತಾನು ರಾಜ್ಯಾಪಹರಣ ಮಾಡುವ ಮೊದಲು ಸ್ವಧರ್ಮದವರಲ್ಲಿ ಶಕ್ತರಾದ ಕಸಪಯ್ಯ ಬೊಮ್ಮರಸ ಮೊದಲಾದವರನ್ನು ಬಂಧುಗಳನ್ನಾಗಿ ಮಾಡಿಕೊಂಡನು. ಇವರು ರಾಜ್ಯಾಪಹರಣ ಕಾರ್ಯದಲ್ಲಿ ಸಹಾಯಕರಾದ ಹರಸೂರು ಶಾಸನೋಕ್ತರಾದ '**ದುರ್ಮಂತ್ರಿಕಸಪಯಾದಿಗಳ್**'. ಬಿಜ್ಜಳನು ಧರಣಿ

ಪಂಡಿತನು ಹೇಳುವಂತೆ ಬಸವೇಶ್ವರನ ಸೋದರಿ ಪದ್ಮಾವತಿಯೆಂಬುವಳನ್ನು ಮದುವೆಯಾಗಿರಬಹುದು ಇಲ್ಲದಿರಬಹುದು. ಆದರೆ 'ಶಿವತತ್ತ್ವಚಿಂತಾಮಣಿಯಲ್ಲಿ ಹೇಳಿದಂತೆ ಸ್ವಜನನಾದ ಬಸವೇಶನನ್ನು ಮಂತ್ರಿಯನ್ನಾಗಿ ಮಾಡಿಕೊಂಡು '**ಮಂತ್ರಿಗಂ ತನ್ನೊಳಗೆ ಹೊರೆಹುಟ್ಟಿದಂತೆ ಮಾಳ್ಪತೆರದಿ**' ತನ್ನ ತಂಗಿ ನೀಲಾಂಬಿಕೆಯನ್ನು ಕೊಟ್ಟು ಲಗ್ನಮಾಡಿದನು. ಆದರೆ ಬಸವೇಶ್ವರನಿಂದ ರಾಜ್ಯಾಪಹರಣಕ್ಕೆ ಸಹಾಯ ದೊರೆಯದಿದ್ದುದು ಆಶ್ಚರ್ಯವಲ್ಲ. ಆದುದರಿಂದ ಬಸವೇಶ್ವರನಿಗೆ ತನಗೆ ಅಪಾಯವಾಗದ ಅರ್ಥಮಂತ್ರಿ ಪದವಿಯನ್ನು ಕೊಟ್ಟನು. ಕಸಪಯಾದಿಗಳು ಸೈನ್ಯಾಧಿಕಾರಿಗಳಾಗಿ ಬನವಾಸೆ ನಾಡು ಮೊದಲಾದುವುಗಳನ್ನು ಆಳುತ್ತಿದ್ದು ಶಾಸನೋಕ್ತರಾಗಿದ್ದಾರೆ. ಅರ್ಥ ಮಂತ್ರಿಯು ಶಾಸನೋಕ್ತನಾಗಲಿಲ್ಲ. ಭಿನ್ನಾಭಿಪ್ರಾಯಗಳು ಬಂದಮೇಲೂ ತಂಗಿಯ ಗಂಡನಾದ ಬಸವೇಶ್ವರನನ್ನು ಬಿಜ್ಜಳನು ಶಿಕ್ಷಿಸುವುದಾಗಲಿಲ್ಲ. ಆದರೆ ಬಸವಾನುಯಾಯಿಗಳಾದ ಹರಳಯ್ಯ ಮಧುವಯ್ಯಗಳಿಗೆ ಕ್ರೂರವಾದ ಶಿಕ್ಷೆಯಾಯಿತು. ಇಂತಹ ಅನ್ಯಾಯವನ್ನು ತಪ್ಪಿಸಲಾಗದಿರಲು ಶರಣನಿಯಮದಂತೆ ಬಸವೇಶನು ಕಲ್ಯಾಣವನ್ನು ಬಿಟ್ಟು ಸಂಗಮಕ್ಕೆ ಹೋದನು. ತನ್ನ ಹೆಂಡತಿಯ ಅಣ್ಣನಾದ ಬಿಜ್ಜಳನ ಹಾನಿಯನ್ನು ಬಸವೇಶನು ಬಯಸಲಿಲ್ಲ. ಆದರೆ ಗೌರಾಂಕನ ನವನಾಥ ಚರಿತ್ರೆಯಲ್ಲಿ ಹೇಳಿದಂತೆ ನಾಥಸಿದ್ಧರು ಅಂದಿನ ಗೊಂದಲ ಸಮಯದಲ್ಲಿ ಬಿಜ್ಜಳನನ್ನು ಕೊಂದು ಅವನು ನಾಥಸಿದ್ಧನೊಬ್ಬನನ್ನು ಹಿಂಸಿಸಿದುದಕ್ಕಾಗಿ ಸೇಡುತೀರಿಸಿಕೊಂಡರು. ನವನಾಥಸಿದ್ಧ ಚರಿತ್ರೆಯಲ್ಲಿ ಗೌರಾಂಕನು ಹೇಳಿರುವುದನ್ನು ವಿಮರ್ಶಕರು ಗಮನಿಸಿಲ್ಲ. ಈ ವಿಷಯದಲ್ಲಿ ಈ ಕೃತ್ಯ ನಡೆದ ಬಹುಸ್ವಲ್ಪ ಕಾಲದಲ್ಲಿ ಬದುಕಿದ್ದ ರಾಘವಾಂಕನು, ಸಿದ್ಧರಾಮ ಚರಿತ್ರೆಯಲ್ಲಿ '**ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧ ಸಂಕೇತದಂತೆ**' ಎಂದು ಹೇಳಿರುವುದು, ಸಮೀಪಕಾಲದವನೇ ಆದ ಗೌರಾಂಕನ ಹೇಳಿಕೆಯನ್ನು ಸಮರ್ಥಿಸುವುದೆಂಬುದೂ ವಿಮರ್ಶಕರ ಗಮನಕ್ಕೆ ಬಂದಿಲ್ಲ. ಬಿಜ್ಜಳನು ಶಿಕ್ಷಿಸಿದ್ದ ಶರಣರು ಬಿಜ್ಜಳನ ಮರಣದಿಂದ ಹರ್ಷಿಸಿದರು. ಅವರೇ ಕೊಲ್ಲಿಸಿದರೆಂಬ ದೂರು ಬಂದು ಬಿಜ್ಜಳನ ಮಗನ ಆಕ್ರೋಶಕ್ಕೆ ಒಳಗಾದರು. ಇದನ್ನು ಕೇಳಿದ ಬಸವೇಶ್ವರನಿಗೆ ಎದೆಯೊಡೆದಿರಬೇಕು. ಅಸ್ಪೃಶ್ಯೋದ್ಧಾರಕ್ಕಾಗಿ ತಮ್ಮ ಜೀವಿತ ಕಾಲವನ್ನೇ ಕಳೆದ ಮಹಾತ್ಮಾಗಾಂಧಿಯವರಂತೆ ಅಸ್ಪೃಶ್ಯೋದ್ಧಾರಕ್ಕಾಗಿಯೇ ಬಸವೇಶನೂ ಆತ್ಮಾರ್ಪಣ ಮಾಡಬೇಕಾಯಿತು.

ಬಸವಂಣ

ಬಾಗೇವಾಡಿಯ ಬಸವಂಣ
ತೊಳೆದನು ಸಮಾಜದ ಕೊಳೆಯನ್ನ
ತೆರೆಯಿಸಿದನು ಜನರೆಲ್ಲರ ಕಂಣ
ಆದನು ಈ ಜಗಕೆಲ್ಲಾ ಅಂಣ ೧

ಹುಟ್ಟಿದ ಊರು ಬಾಗೇವಾಡಿ
ಮುಂಜಿಯ ಮಾಡಿಕೊಳಲಾರದೆ ಓಡಿ
ಹೊರಟರು ಕಪ್ಪಡಿ ಸಂಗಮಕೆ
ಸಂಗಮನಾಥನ ಕಾಣಲಿಕೆ ೨

ಮನುಕುಲದ ಉದ್ಧಾರಕ
ಓ ! ಸಮಾಜ ಸುಧಾರಕ
ಸಂಗಮನಾಥನ ಆರಾಧಕ
ನಿನ್ನ ತತ್ವಗಳೆಮಗೆ ತಾರಕ ೩

ಹೆಸರು ನಿನ್ನದು ಭಕ್ತಿ ಭಂಡಾರಿ
ದಾನಿಯಾದಿ ನಿನ್ನೈಸಿರಿ ತೂರಿ
ಅನುಭವ ಮಂಟಪ ಕಟ್ಟಿದೆ ನೀ
ಜಾತೀಯತೆಯನು ಅಟ್ಟಿದೆ ನೀ ೪

ಜನತೆಯ ಹಿತವನು ಸಾಧಿಸಲು
ಜಾತೀಯತೆಯನು ಓಡಿಸಲು
ಕೊನೆವರೆವಿಗು ಹೆಣಗಾಡಿದೆ ನೀ
ಸಂಗಮನಾಥನ ಕೂಡಿದೆ ನೀ ೫

ಬಾಗೇವಾಡಿಯ ಬಸವಂಣ
ತೊಳೆದನು ಸಮಾಜದ ಕೊಳೆಯನ್ನ
ತೆರೆಯಿಸಿದನು ಜನರೆಲ್ಲರ ಕಂಣ
ಆದನು ಈ ಜಗಕೆಲ್ಲಾ ಅಂಣ ೬

ಆನಂದ ದೇಶಪಾಂಡೆ

ಸಂಪಾದಕೀಯ

ಮಹಾತ್ಮಾ ಬಸವಣ್ಣನವರು

ನಾಡೆಲ್ಲ ಬಸವೇಶ್ವರೋತ್ಸವವನ್ನು ಆಚರಿಸಿ ಆ ಮಹಾತ್ಮನ ಪುಣ್ಯಸ್ಮರಣೆಮಾಡಿ ಕೃತಕೃತ್ಯವಾಗುತ್ತಿದೆ. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು 'ನುಡಿ'ಯ ಒಂದು ವಿಶೇಷ ಸಂಚಿಕೆಯನ್ನು ಹೊರತಂದು ಆ ಮಹಾವಿಭೂತಿಗೆ ತನ್ನ ಅಲ್ಪ ಕಾಣಿಕೆಯನ್ನು ಸಲ್ಲಿಸುತ್ತಿದೆ.

'ಕಾಯಕವೇ ಕೈಲಾಸ'ವೆಂದು ಸಾರಿದ ಮಹಾವ್ಯಕ್ತಿಯ ಜೀವನದಲ್ಲಿ ಆ ಮಾತಿನ ದೃಷ್ಟಾಂತವೇ ನಿರ್ಮಾಣವಾಯಿತು. ಕಾಯಕವನ್ನು ಅರಿಯದ, ಅದರ ಅರ್ಥವನ್ನು ಅರಿಯದ ಮದಾಂಧರು ತಮ್ಮ ಜನ್ಮಬಲ, ಅಧಿಕಾರಬಲ, ಐಶ್ವರ್ಯಬಲಗಳಿಂದ ನಾಡಿನ ಪ್ರಗತಿಗೆ ಅಡ್ಡಿಯಾಗಿದ್ದಾಗ ಬಸವಣ್ಣನವರು ಈ ತತ್ತ್ವವನ್ನು ಸಾರಿದರು. ಇದರಿಂದ ನಿಜವಾಗಿ ದುಡಿಮೆಯನ್ನೇ ದೇವರೆಂದು ನಂಬಿದ್ದ ಅನೇಕರ ಬದುಕಿಗೆ ಆಸರೆ ಸಿಕ್ಕಿತು. ಶ್ರಮಪಡುವುದು ಕೀಳಲ್ಲವೆಂಬ ಭಾವನೆಯೂ, ಯಾವ ದುಡಿಮೆಯೂ ಕಡಮೆಯಲ್ಲವೆಂಬ ತಿಳಿವೂ ಜನರಲ್ಲಿ ಬೇರೂರಿತು. ಬಾಳು ಸಂಮೃದ್ಧವಾಯಿತು.

ಸ್ತ್ರೀಪುರುಷ ಸಮಾನತೆಯನ್ನು ಸಾರಿ ಬಸವಣ್ಣನವರು ಬೇರೊಂದು ಯುಗವನ್ನೇ ಪ್ರಾರಂಭಿಸಿದರು. ಸಂಸಾರದ ಆಗುಹೋಗುಗಳಿಗೆ ಸಮಾನಕರ್ತವ್ಯವನ್ನೂ ಬಾಧ್ಯತೆಯನ್ನೂ ಹಂಚಿದುದರಿಂದ ಕುಟುಂಬದ ತೇರು ಹೆಚ್ಚು ಸುಗಮವಾಗಿ ಹರಿಯಲಾರಂಭಿಸಿತು.

ಸಕಲ ಜಾತಿಗಳ ಸಮಾನತೆಯನ್ನು ಬೋಧಿಸಿ ಬಸವಣ್ಣನವರು ಮತ್ತೂ ಒಂದು ಸತ್ಯವನ್ನು ಸಾಕ್ಷಾತ್ಕರಿಸಿಕೊಟ್ಟರು. ಅನುಭವಮಂಟಪದಲ್ಲಿ ಎಲ್ಲ ಕಾಯಕದ ಎಲ್ಲ ಜಾತಿಯ ಸ್ತ್ರೀಪುರುಷರು ಅವರವರ ಭಕ್ತಿಪಾರವಶ್ಯವನ್ನು ಮೆರೆದು ಲೋಕಕಲ್ಯಾಣವನ್ನು ಸಾಧಿಸಿದರು. ಕಲ್ಯಾಣವು ಕರ್ಣಾಟಕದ ಕಲ್ಯಾಣಕ್ಕೆ ಬುನಾದಿಯನ್ನು ಹಾಕಿತು.

ಇವಲ್ಲದೆ ಮಾನವನ ಬಾಳಿಗೆ ಬೇಕಾದ ಇತರ ಅನೇಕ ವಿಧವಾದ ಮಾರ್ಗದರ್ಶನವನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ನಾಡಿಗೆ ಬಿಟ್ಟುಹೋಗಿದ್ದಾರೆ. ಸಾಹಿತ್ಯದ ದೃಷ್ಟಿಯಿಂದ ಈ ವಚನಗಳು ಕನ್ನಡದ ಗದ್ಯದ ಬೆಳವಣಿಗೆಗೆ, ಭಾಷೆಯ ಅಭಿವೃದ್ಧಿಗೆ ಅಪಾರವಾದ ಸಹಾಯವನ್ನು ಒದಗಿಸಿದುವು. ವಚನಗಳನ್ನು ಕೇವಲ ಶಾಸ್ತ್ರವೆಂದು ಕರೆದುಬಿಟ್ಟರೆ ಅವುಗಳ ಪ್ರಯೋಜನ ಸೀಮಿತವಾಗಿ ಹೋಗುತ್ತದೆ. ಸಾಹಿತ್ಯವೆಂದು ಕರೆದು ಆ ಅರ್ಥದಲ್ಲಿ ಓದಿದರೆ ಪ್ರಯೋಜನ ಅಧಿಕವಾಗುತ್ತದೆ.

ಬಸವಣ್ಣನವರು ಒಂದು ಪಂಥಕ್ಕೆ ಸೇರಿದ ವ್ಯಕ್ತಿಯಲ್ಲ. ಒಟ್ಟು ನಾಡಿನ ಪುಣ್ಯ. ಯಾರಾದರೂ ಅವರನ್ನು ತಮಗೆ ಮಾತ್ರ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟರೆ ಅವರನ್ನು ನಾವು ಸ್ವಾರ್ಥಿಗಳೆಂದು ಕರೆಯಬೇಕು. ಮತ್ತಾರಾದರೂ ಬಸವಣ್ಣನವರು ನಮಗೆ ಸೇರಿದವರಲ್ಲವೆಂದರೆ ಅವರನ್ನು ಆತ್ಮವಂಚಕರೆಂದು ಕರೆಯಬೇಕು.

ವಿಶ್ವಮಾನವರಾಗಿ ಬಾಳಿದ ಬಸವಣ್ಣನವರ ವಾಣಿ ಕನ್ನಡ ಭಾಷೆಯಲ್ಲಿರುವುದೇ ನಮಗೊಂದು ಹೆಮ್ಮೆ. ಅದನ್ನು ಓದಿ ಪವಿತ್ರಾತ್ಮರಾಗಿ ಬಾಳುವುದು ನಮ್ಮ ಜನರ ಆದ್ಯ ಕರ್ತವ್ಯವಾಗಿದೆ–ಇಂದು.

ಪರಿಷತ್ತಿನ ಸುದ್ದಿಗಳು

ಸಂತಾಪ ಸೂಚಕ ಸಭೆ

ಸುಪ್ರಸಿದ್ಧ ಸಾಹಿತಿಗಳೂ, ಉದ್ದಾಮ ಪಂಡಿತರೂ ನಲವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರೂ ಆಗಿದ್ದ ಶ್ರೀ ಕಡೆಂಗೋಡ್ಲು ಶಂಕರಭಟ್ಟರ ನಿಧನದ ಪ್ರಯುಕ್ತ ಪರಿಷನ್ಮಂದಿರದಲ್ಲಿ ತಾ|| ೩೧-೫-೧೯೬೮ರಂದು ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಿತ್ತು. ಶ್ರೀ ನಿರಂಜನ ಅವರು ದಿವಂಗತರ ಬಗ್ಗೆ ಮಾತನಾಡಿದರು. ಸಭೆ ಮೌನದಿಂದಿದ್ದು ಈ ಕೆಳಗಿನ ಸಂತಾಪ ಸೂಚಕ ನಿರ್ಣಯವನ್ನಂಗೀಕರಿಸಿತು.

ನಿರ್ಣಯ

"ಕನ್ನಡದ ಉತ್ತಮ ಪಂಡಿತರೂ ಕವಿಗಳೂ ವಿಮರ್ಶಕರೂ ಶ್ರೇಷ್ಠದರ್ಜೆಯ ಪತ್ರಿಕೆಗಳಾದ ರಾಷ್ಟ್ರಬಂಧು, ರಾಷ್ಟ್ರಮತ ಇವುಗಳ ಸಂಪಾದಕರಾಗಿದ್ದು ಸೇವೆ ಸಲ್ಲಿಸಿದ ಹಿರಿಯ ಪತ್ರಿಕೋದ್ಯಮಿಗಳೂ ಸ್ವಾತಂತ್ರ್ಯ ಸಮರದಲ್ಲಿ ಶ್ರಮಿಸಿದ ವೀರ ತ್ಯಾಗಿಗಳೂ ಮೆಚ್ಚುಗೆಯ ಉಪಾಧ್ಯಾಯರಾಗಿದ್ದು ಸಹಸ್ರಾರುವಿದ್ಯಾರ್ಥಿಗಳಿಗೆ ಪಾಂಡಿತ್ಯ ದಾನಮಾಡಿದವರೂ ವಿಶೇಷ ಕನ್ನಡಾಭಿಮಾನಿಗಳೂ ಕಾರವಾರದಲ್ಲಿ ನಡೆದ ೪೫ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರೂ ಆಗಿದ್ದ ಕಡೆಂಗೋಡ್ಲು ಶಂಕರಭಟ್ಟರ ನಿಧನದಿಂದ ಕನ್ನಡನಾಡಿಗೂ ನುಡಿಗೂ ಸಾರಸ್ವತ ಪ್ರಪಂಚಕ್ಕೂ ಅಪಾರ ನಷ್ಟವಾಗಿದೆ. ಸಾಹಿತ್ಯ ಪರಿಷತ್ತಿನಲ್ಲಿ ಸೇರಿರುವ ಈ ಸಭೆಯೂ ಈ ಮೂಲಕ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುವುದಲ್ಲದೆ ಅವರ ಆತ್ಮಕ್ಕೆ ಭಗವಂತನು ಶಾಂತಿ ಸದ್ಗತಿಗಳನ್ನೀಯಲೆಂದೂ ಅವರ ಕುಟುಂಬ ವರ್ಗದವರಿಗೆ ಈ ನಷ್ಟವನ್ನು ಸಹಿಸುವ ಶಕ್ತಿಯನ್ನು ದಯಪಾಲಿಸಲೆಂದೂ ಪ್ರಾರ್ಥಿಸುತ್ತದೆ."

ಬಸವರಾಜ ಕಟ್ಟೀಮನಿ ಅವರಿಗೆ ಸನ್ಮಾನ

ಕನ್ನಡದ ಸುಪ್ರಸಿದ್ಧ ಸಾಹಿತಿಗಳೂ ಕಾದಂಬರಿಕಾರರೂ ಆದ ಶ್ರೀಮಾನ್ ಬಸವರಾಜ ಕಟ್ಟೀಮನಿ ಅವರು ಮೈಸೂರು ವಿಧಾನ ಪರಿಷತ್ತಿಗೆ ಸದಸ್ಯರಾಗಿ ನಾಮಕರಣವಾಗಿರುವ ಪ್ರಯುಕ್ತ ಅವರನ್ನು ಅಭಿನಂದಿಸಲು ತಾ|| ೧೮-೬-೧೯೬೮ರಂದು ಸತ್ಕಾರ ಕೂಟವೊಂದನ್ನು ಪರಿಷತ್ತಿನಲ್ಲಿ ಏರ್ಪಡಿಸಲಾಗಿತ್ತು. ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ನಡೆಯಬೇಕಾಗಿರುವ ಕೆಲಸ ಪ್ರಸ್ತಾಪಮಾಡಿ ಶ್ರೀ ಕಟ್ಟೀಮನಿಯವರು ವಿಧಾನಪರಿಷತ್ತಿನಲ್ಲಿ ಕನ್ನಡದ ಪ್ರತಿನಿಧಿಗಳಾಗಿ ಆ ಕುಂದುಕೊರತೆಗಳ ನಿವಾರಣೆಗಾಗಿ ದುಡಿಯುವುದಾಗಿ ಆಶ್ವಾಸನೆ ನೀಡಿದರು.

ಇದೇ ಸಂದರ್ಭದಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ|| ಜ್ಯೋತಿದಾಸ್ ಗುಪ್ತ ಅವರನ್ನು ಬರಮಾಡಿಕೊಂಡು ಸತ್ಕರಿಸಿದುದಲ್ಲದೆ, ಅವರೊಡನೆ ಪರಿಷತ್ತು ಹಾಗೂ ಕನ್ನಡ ಭಾಷಾ ಸಂಬಂಧವಾದ ವಿಚಾರ ವಿನಿಮಯವನ್ನು ನಡೆಸಲಾಯಿತು. ಪರಿಷತ್ತಿನ ಕೆಲಸಗಳ ಬಗ್ಗೆ ಪ್ರಾಧ್ಯಾಪಕರು ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಅಭಿನಂದಿಸಿದರು.

ಭಾರತ ವಾಚನ

ದಿನಾಂಕ ೨೭-೬-೧೯೬೮ರಂದು ಶ್ರೀ ಎಂ. ಆರ್. ರಾಮಕೃಷ್ಣ ಅವರು ಕುಮಾರವ್ಯಾಸ ಭಾರತದಿಂದ 'ದೂರ್ವಾಸಾತಿಥ್ಯ'ವೆಂಬ ಭಾಗವನ್ನು ವಾಚನಮಾಡಿದರು.

ರಾಷ್ಟ್ರಕವಿ ಕುವೆಂಪು ಅವರಿಗೆ ಜ್ಞಾನಪೀಠದ ಪ್ರಶಸ್ತಿ

ಕನ್ನಡದ ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರಿಗೆ ನಾಡಿನ ಸರ್ವೋನ್ನತ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠದ ೧೯೬೭ರ ಸಾಹಿತ್ಯ ಪ್ರಶಸ್ತಿಯು ದೊರಕಿದೆ. ಈ ಪ್ರಶಸ್ತಿ ಗೌರವವು ಶ್ರೀಯುತರ 'ಶ್ರೀರಾಮಾಯಣ ದರ್ಶನಂ' ಮೇರುಕೃತಿಗೆ ಲಭ್ಯವಾಗಿದೆ. ಈ ಮೊದಲು ಈ ಮಹಾಕಾವ್ಯಕ್ಕೆ ಅಖಿಲ ಭಾರತದ ಸಾಹಿತ್ಯ ಅಕಾಡಮಿಯು ಐದು ಸಾವಿರ ರೂಪಾಯಿಗಳ ಬಹುಮಾನವನ್ನಿತ್ತಿದೆ. ಈಗ ಜ್ಞಾನಪೀಠವು ಐವತ್ತು ಸಹಸ್ರ ರೂಪಾಯಿಗಳ ಮೊತ್ತದ ಬಹುಮಾನವನ್ನು ಇತ್ತು ಅವರನ್ನು ಸನ್ಮಾನಿಸಿದೆ. ಇದು ಕನ್ನಡಿಗರೆಲ್ಲರೂ ಹೆಮ್ಮೆಪಡುವ ಸಂಗತಿಯಾಗಿದೆ.

Reg. No. B. G. 4—June-July 1968

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ವಿಮರ್ಶಾ ಸಂಚಿಕೆ

ಆಗಸ್ಟ್ ೧೯೮೮

ಸಂಪುಟ ೩೧
ಸಂಚಿಕೆ ೮

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,
ಬೆಂಗಳೂರು-೧೮

ಸ್ವೀಕಾರ

ಕಾದಂಬರಿ

ಮಮತೆಯ ಮಡಿಲಲ್ಲಿ ; ಲೇ: ಶಿವಾನಂದರಾವ್, ಪ್ರ: ಸಾಹಿತ್ಯ ಕುಟೀರ, ಫೋರ್ಟ್, 'ಸಿ' ಸ್ಟ್ರೀಟ್, ಬೆಂಗಳೂರು-೨, ಪುಟ: ೨/೨೭೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೫೦, ೧೯೬೭.

ಈ ನೆಲ-ಈ ಜಲ ; ಲೇ: ಡಿಸೋಜ, ನಾ, ಪ್ರ: ಪುರೋಗಾಮಿ ಸಾಹಿತ್ಯ ಸಂಘ, ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೬/೨೩೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೪-೭೦, ೧೯೬೮.

ಗೆಜ್ಜೆನಾದ ; ಲೇ: ದಯಾನಂದ ತೊರ್ಕೆ, ಪ್ರ: ಪುರೋಗಾಮಿ ಸಾಹಿತ್ಯ ಸಂಘ. ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೬/೧೭೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೭೦, ೧೯೬೮.

ಭಗವಂತನ ಆತ್ಮಕಥೆ ; ಲೇ: ವಿಶುಕುಮಾರ್, ಪ್ರ: ಪುರೋಗಾಮಿ ಸಾಹಿತ್ಯ ಸಂಘ, ೧೦ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೬/೧೪೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೮.

ನಾಯಿ ನೆರಳು ; ಲೇ: ಭೈರಪ್ಪ, ಎಸ್. ಎಲ್., ಪ್ರ: ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ಪುಟ: ೨೪೫/೧೯, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೪-೭೫, ೧೯೬೮.

ಚಕ್ರತೀರ್ಥ ; ಲೇ: ತ. ರಾ. ಸು., ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೨೧೨/೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಕಪ್ಪುಗುಲಾಬಿ ; ಲೇ: ನಾಗರಾಜ, ತಾ. ರಾ. ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೧೩೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ರಾಜೀವಪುರ ;.ಲೇ: ಭೀಮರಾವ್, ಯಂ. ಜಿ, ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೨೧೯, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೭೦, ೧೯೬೬.

ನಾಟ್ಯಕಸ್ತೂರಿ ; ಲೇ: ತ್ರಿವಿಕ್ರಮ, ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೧೪/೨೦೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೬.

ಸವಿತಾ ; ಲೇ: ಕೃಷ್ಣರಾಯರು ನಾಡಿಗೇರ, ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೧೮೦, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ನೀನು ಬೇಕು ; ಲೇ: ಕೊಮ್ಮೂರಿ ಸಾಂಬಾಜಿರಾವ್, ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೧೯೩, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೭.

ಪ್ರೇಮಾವತಿ ; ಲೇ: ನವಗಿರಿನಂದ, ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೨೭೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೦೦, ೧೯೬೬.

ಮಂಜಿನಕಾನು ; ಲೇ: ಡಿಸೋಜ ನಾ, ಪ್ರ: ರವೀಂದ್ರ ಪುಸ್ತಕ ಭಂಡಾರ, ಕಾರ್ಗಲ್, ಶಿವಮೊಗ್ಗ ಜಿಲ್ಲೆ, ಪುಟ: ೨/೩೨೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೪-೦೦, ೧೯೬೭.

ಒಲಿದು ಬಂದವಳು ; ಲೇ: ಶ್ರೀನಿವಾಸ ಉಡುಪ, ಪ್ರ: ರವೀಂದ್ರ ಪುಸ್ತಕ ಭಂಡಾರ, ಕಾರ್ಗಲ್, ಶಿವಮೊಗ್ಗ ಜಿಲ್ಲೆ, ಪುಟ: ೧೭೯, ಆಕಾರ: ಕ್ರೌನ್ ಅಷ್ಟದಳ, ಬೆಲೆ: ೩-೦೦, ೧೯೬೭.

ಮಿನುಗುತಾರೆ ; ಲೇ: ರವಿಚಂದ್ರ, ಪ್ರ: ರವಿಚಂದ್ರ, ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರ, ಬೆಂಗಳೂರು-೪, ಪುಟ: ೧೯೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೦೦, ೧೯೬೮.

ಸ್ವಭಾವ ; ಲೇ: ವೆಂಕಟಗಿರಿ ಕಡೇಕಾರ್, ಪ್ರ: ಜಲಂಧರ ಪ್ರಕಟನಾಲಯ, ಸಾಗರ, ಪುಟ: ೧೩೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೫೦, ೧೯೬೮.

ವಸಂತಗೀತೆ ; ಲೇ: ಕುಮಾರಿ ಎನ್. ಶಾಂತಾ, ಪ್ರ: ಯುಗ ಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದಕ), ಪುಟ: ೧೩೨, ಬೆಲೆ: ರೂ. ೨-೨೫, ೧೯೬೮.

ಕವನ

ನೂರೊಂದು ಕವನ ; ಲೇ: ರವೀಂದ್ರನಾಥಠಾಕೂರ್, ಪ್ರ: ಸಾಹಿತ್ಯ ಅಕಾದೆಮಿ, ನವದೆಹಲಿ, ಪುಟ: ೮/೩೧೧, ಬೆಲೆ: ರೂ. ೮-೭೦, ೧೯೬೭.

ಗುಲಾಬಿ ; ಲೇ: ಚನ್ನಬಸವಣ್ಣ, ಪಿ., ಪ್ರ: ಜಿ. ಪಿ. ಭಂಡಾರೆ, ಶ್ರೀಹರಿಹರೇಶ್ವರ ಬುಕ್ ಡಿಪೊ, ಮೈನ್ ರಸ್ತೆ, ಹರಿಹರ, ಪುಟ: ೧೦/೨೯, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

(೩ನೇಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜಿಟಿಯರ್ ಆಗಬೇಕು

—ಬಿ.ಎಂ.ಶ್ರೀ

ವಿಮರ್ಶಾ ಸಂಚಿಕೆ

ಸಂಪುಟ : ೩೧

ಸಂಚಿಕೆ : ೮

ಆಗಸ್ಟ್ ೧೯೬೮

ಈ ಸಂಚಿಕೆಯಲ್ಲಿ . . .

ಕುದುರೆಮುಖ

ಕೆ. ಎಸ್. ಶಿವಪ್ಪ

■

ಶ್ರೀಮುಖನ ನೆತ್ತಿಗೇರುವ ಮುನ್ನ ಪಾದ ಬಳಿ ಬಂದಾಗ
ತಾರುಣ್ಯ ಹೊಸ್ತಿಲಲಿ ನಲಿವ ಸಿರಿಕನ್ಯೆಯಂತೆ ದಟ್ಟಕಾಡು
ಜೀವ ಗದ್ದಲದ ಹೆಗ್ಗಲ್ಲಿನಡಿಯಲ್ಲಿ ಸಿಕ್ಕಿ
ಬಿಡುವಿರದ ಜಡಿಮಳೆಯ ರೇಜಿಗೆ ಬಿದ್ದು
ಮುಕ್ಕಾದ ಮನಸ್ಸು ಕಿಚ್ಚುಗೊಂಡೆದ್ದಾಗ–
ಅಂತರಂಗದ ಗುಟ್ಟನರಿವಂತೆ ಮೈಗೊಂಡ ಕಾಡಿನಲಿ
ಪಕ್ಷಿನಿರ್ಮಿತ ಭಾಷಾಕೂಜನವನಾಲಿಸಿದೆ.
ಒಲಿದವಳ ಮೆದುಹೆಜ್ಜೆ ಸಪ್ಪಳವ ಹೊತ್ತಮಾರುತ
ಭೂರಂಗದ ಒಳಹೊರಗು ಹೂಗಂಧ ಚೆಲ್ಲುತ್ತ
ಮುಂಗೊಂಡು ಮುತ್ತುತ್ತ ಬಳಿಸಾರಿ ತಬ್ಬುತ್ತ
ನೊಂದ ಎದೆಗೊ ಎಂಬಂತೆ ಪಿಸುಗುಡುತಲಿತ್ತು.
ಹಳತು ಹೊಸತಿದು ಎಂಬ ಭಾಷೆಗಳ ಭ್ರಮೆಯಿರದ
ಪಕ್ವ ಇಲ್ಲವೆ ಹಸಿಯ ಕಾಮುಗಳ ಗೋಜಿರದ
ಜನಜಾಗೃತಿಯ ಸ್ಮೃತಿಯ ವೈತರಣಿಯಲಿ ಮುಳುಗಿ
ಹೊರಬರುವ ಮುನ್ನ
ತಮ್ಮಲ್ಲಿ ತಾವಾಗಿ ಮೈಮರೆವ ಮಗುವಾಗಿ
ನಲಿವ ಹಳೆಯ ಬುಡಕಟ್ಟುಗಳ ಕಂಡಂತೆ
ಸೃಷ್ಟಿಯಾದಂದೆ ಹೊರಬಂದ ಬಿಸಿಪಾಕವೆಂಬಂತೆ
ಕರೆವ ತುರಗಮುಖನಂತಿರುವ ಗಿರಿಸಖನ ಕಂಡೆ.
ಕವಿ ಶಿಲ್ಪಿ ಕಲೆಗಾರ ಅನುಭವದ ಮೋಕ್ಷಗಳಿಸುವ ಮುನ್ನ
ಅರಣ್ಯಾವಸ್ಥೆಯಲ್ಲಿ ಬಿದ್ದಂತೆ
ಕಂಡರಿಸದ ಬೋಳುಗೊಮ್ಮಟನ ಕಲೆಯಂತೆ ನಿನ್ನ ನೆಲೆ.
ಜಾಂಬವನಂತೆ ದ್ವಾಪರವ ದಾಟಿ ಕಲಿಯಲ್ಲಿ ನಿಂತಾಗ
ಈ ಶತಮಾನದಂಚು ಕಾಯಿಸಿದ ಭೂತಸಮಸ್ಯೆಗಳ
ಮುಂದಿಟ್ಟು
ಪರಿಹಾರವೇನು ಏನೊಂದು ಪ್ರಶ್ನಿಸಿದ ನಾನೊಬ್ಬ
ಪತ್ರಿಕೋದ್ಯಮಿಯಂತೆ ಸೊಟ್ಟ ಸೊಟ್ಟಗೆ ನಿಂತಿದ್ದೆ.
ದೊಡ್ಡಬಾಯಿಯ ತೆರೆದು ಉತ್ತರಿಸುವ ಮೊದಲು
ತುಟಿಬಿಗಿದ ನೀನು ಒಳಗ ಚಿಂತಿಸುತಿದ್ದೆ;
ವಿಜಯೋತ್ಸಾಹಗಳ ಸವಿನೆನಪ ಮೆಲುಕುತ್ತ
ಮುಪ್ಪಿನಲಿ ಕತ್ತಿ ಮೇಲೆತ್ತಲಾಗದ ನೀನು
ಸಮುದ್ರವನೆ ಕಂಡು ತಳಮಳಿಸುತಿರಬಹುದು
ನಿಡುಸುಯ್ಯುತಿರಬಹುದು.

ಅನಿಸುತ್ತ ಹುಚ್ಚೆದ್ದ ಭಾವಗಳ ಸಮುದಾಯ ಕುಣಿವಾಗ
ನಿನ್ನೆತ್ತರಕೆ ಹೊರಟೆ
ನಾ ಏರಲಣಿಯಾದೆ.
ಮಾದೇಶ್ವರನ ಬೆಟ್ಟಕ್ಕೆ ಏರಿದಂತಲ್ಲ
ಏಳುಮಲೆಗಳ ದಾಟಿ ತಿರಿದು ತಿರುಪತಿಯ
ಕಾಣಹೊರಟಂತಲ್ಲ
ಅಂಬ ಅಂಬಾ ಎಂದು ಅರಚಿ ರಿಂಗಣಗುಣಿವ ನನ್ನ ಮೊರೆ
ಮೇಲಿದ್ದು ಕೈವೀಸಿ ಕರೆವ ರಸಋಷಿಯಂತೆ ನಿನ್ನ ಕರೆ.
ಕಿರಣ ತಾಕದ ಆ ಕಿರುದಾರಿಯಲ್ಲಿ
ಪಾತಾಳಕಿಳಿವಂತೆ ಕೊರಕಲಿಗೆ ಇಳಿದು
ಮೈಕೊರೆವ ನೀರ್ ಕುಡಿದು
ಮೇಲೇರಿ
ನಡುನಡುವೆ ಸುಳಿವ ಕಾಡುಕೋಣಗಳ ಕಾಟ
ಶರೀರ ಭಯದಾಟ, ದಾಟಿ
ಪಂಚಕುರಿಗಳ ಹಿಡಿದು
ನಡೆವ ಸಂಯಮದ ನಡೆಗೆ
ಅದೆ ನಿನ್ನೆಡೆಗೆ.
ಏರುತ್ತ ಏರುತ್ತ ತಂಗುತ್ತ ತಡವುತ್ತ
ನೆಲದ ಮುಗ್ಗುವಾಸನೆ ಕಡಿದು
ತುತ್ತತುದಿ ಮುಟ್ಟಿ
ಅಳಿದುಳಿದ ಸತ್ವದಲಿ ಮೇಲೆದ್ದು ನಿಂತಾಗ
ಕಾಡು ಕಾಡೋ ಕಾಡು ಹೆಗ್ಗಾಡು
ಚಂದ್ರಬಿಂಬದ ದ್ವಾರ ಪಕ್ಕನೆ ತೆರೆದಂತೆ
ಅಚ್ಚ ಹಸುರಿನ ನಡುವೆ ಮೂಡಿತಾನಂದ,
ಆಡಿ ಅಡ್ಡಾಡಿದರು ದಣಿಯದಾ ತಣಿವು.
ಲೋಕಚಕ್ರವು ಕಾದು ಪಡುಗೆರೆಗೆ ಹೊತಂತೆ
ಮುಚ್ಚಂಜೆ ಸರಿದಾಗ
ನಾ ಏರಿದಾಗ
ದೂರದಲಿ ಬೆಂಕಿ ತುಣುಕೊಂದ ಕಂಡೆನೆನುವಷ್ಟರಲೆ
ಮಾಲೆಹಾಕಿತು ಬೆಂಕಿ.
' ರುದ್ರಮನೋಹರ ದೃಶ್ಯ' ಎನುವಷ್ಟರಲೆ
ಬೆಳಕು ಬೆರತಂತೆ
ಕುಡಿಕೆಯಾ ನೀರು ಸಾಗರಕೆ ಸಂದಂತೆ
ಅಲ್ಲಿ
ನಾನಿಲ್ಲವಾದೆ.

ತಿದ್ದುಪಡಿಯ ಗಡಿಬಿಡಿ

ಗಂಗಾಧರಂ ಶಾಸನ

ಡಾ. ಪಾಂಡುರಂಗರಾವ ದೇಸಾಯಿ

ಪಂಪನನ್ನು ಕುರಿತು ಈಚೆಗೆ ಪ್ರಕಾಶಕ್ಕೆ ಬಂದ ಗಂಗಾಧರಂ ಶಾಸನದ ಒಂದು ಸ್ಥಳದಲ್ಲಿ ಮೂಲ ಪಾಠವು ಅಪೂರ್ಣವು, ಅಸಮರ್ಪಕವು ಆಗಿದೆ; ಅದನ್ನು ಪರಿಷ್ಕರಿಸದೆ ಇದ್ದರೆ, ಅದಕ್ಕೆ ಸರಿಯಾದ ಅರ್ಥವು ಬರುವದಿಲ್ಲ; ಎಂದು ಗ್ರಹಿಸಿ, ತಿದ್ದುಪಡಿಯನ್ನು ಸೂಚಿಸುವ ಒಂದು ಟಿಪ್ಪಣಿಯನ್ನು ಶ್ರೀ ಎಂ. ಎಂ ಕಲಬುರ್ಗಿ ಅವರು 'ನುಡಿ'ಯ ಮೇ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಈ ಟಿಪ್ಪಣಿಯನ್ನು ಓದಿದ ಬಳಿಕ ಶಾಸನಗಳ ಭಾಷೆ, ಹಳಗನ್ನಡ ಸಾಹಿತ್ಯದ ಕಿಂಚಿತ್ ಪರಿಚಯವುಳ್ಳ ನನಗೆ ವಿಚಿತ್ರವೆನಿಸಿತು. ಇದುವರೆಗೆ ಈ ಶಾಸನವನ್ನು ಅಭ್ಯಸಿಸಿ ಲೇಖನಗಳನ್ನು ಪ್ರಕಟಿಸಿದ ಮೂವರು ನಾಲ್ವರು ಸಂಶೋಧಕ ಪ್ರಾಧ್ಯಾಪಕರಿಗೆ ಗೋಚರವಾಗದಂಥ ಒಂದು ಹೊಸ ವಿಷಯವನ್ನು ಪ್ರಸ್ತುತ ಲೇಖಕರು ತಮ್ಮ ದೀರ್ಘ ಸಂಶೋಧನದಲ್ಲಿ ಕಂಡು ಹಿಡಿದಿದ್ದಾರೆ. ಶಾಸನದ ವಾಕ್ಯರಚನೆಯಲ್ಲಿ ಅವ್ಯವಸ್ಥೆಯನ್ನು ಮೂಲ ಶಾಸನ ಗದ್ಯದಲ್ಲಿ ತಿದ್ದಪಡಿಯನ್ನು ಸೂಚಿಸಿದ್ದಾರೆ. ಅವರ ಲೇಖನದ ಈ ವಿಮರ್ಶೆ ಸುಲಭ ಗ್ರಾಹ್ಯವಾಗುವುದಕ್ಕಾಗಿ ಶಾಸನದ ಪ್ರಕೃತಭಾಗವನ್ನು ಮಾತ್ರ ಇಲ್ಲಿ ಪುನಃ ಉದ್ಧರಿಸುವೆ.

> "ಅಭಿಮಾನ ಚನ್ದ್ರನ ಮರ್ಮಂ ಭೀಮುಪಯ್ಯ
> ನ ಬೆಳ್ವೊಲ ದಣ್ಣಿಗೆಜೆಯ ಜೋಯಿಸ
> ಸಿಂಘನ ಮರ್ಮವಬ್ಬಣಬ್ಬೆಯ ಮಗಂ
> ಜಿನವಲ್ಲಭಂ|"

ಇಲ್ಲಿ ಜಿನವಲ್ಲಭನ ಉಭಯ (ಮಾತೃ-ಪಿತೃ) ಕುಲದ ಪೂರ್ವಜರ ವಿಚಾರವು ಉಕ್ತವಾಗಿದೆ. ಆತನು ಜೋಯಿಸ ಸಿಂಘನ ಮೊಮ್ಮಗ ಅಬ್ಬಣಬ್ಬೆಯ ಮಗ ಎಂಬ ಸಂಗತಿ ಮೇಲಿನ ಗದ್ಯದ ಅಪರಭಾಗದಿಂದ ಸ್ಪಷ್ಟವಾಗುತ್ತದೆ. ತಾತ, ತಾಯಿ, ಮಗ ಹೀಗೆ ಮೂರು ತಲೆಮಾರಿನ ಅನುಕ್ರಮವು ಇಲ್ಲಿ ಸರಳವೇ ಆಗಿದೆ, ಸಾಮಾನ್ಯ ರೂಢಿಗೆ ಅನುಗುಣವೇ ಆಗಿದೆ.

ಇನ್ನು ಜಿನವಲ್ಲಭನ ತಂದೆ ಭೀಮುಪಯ್ಯ. ಆತನ ಹೆಸರು ಸ್ವಲ್ಪ ಹಿಂದೆ, ಹೆಣ್ಣು ತಾತನ ವಿವರಗಳಿಗೆ ಮುಂಚೆ ಬಂದಿದೆ. ಆದರೂ ಆ ಪದವನ್ನು ಸುಗಮವಾಗಿ ಅಬ್ಬಣಬ್ಬೆಯೊಂದಿಗೆ ಹೊಂದಿಸಿ, 'ಭೀಮುಪಯ್ಯನ-ಅಬ್ಬಣಬ್ಬೆಯ ಮಗಂ' ಎಂದು ಅನ್ವಯ ಮಾಡಬಹುದು. ಪಾಶ್ಚಾತ್ಯರ ಅನುಕರಣದಿಂದ ಈಗ ವಿರಾಮ ಚಿಹ್ನೆಗಳನ್ನು ಹೆಚ್ಚಾಗಿ ಬಳಸುತ್ತಿದ್ದ ನಮಗೆ ಇಂಥ ವಾಕ್ಯಯೋಜನೆ ಸ್ವಲ್ಪ ಕ್ಲಿಷ್ಟಕಂಡರೂ ಅಂದಿನವರಿಗೆ ಹಾಗೆ ಅನಿಸುತ್ತಿರಲಿಲ್ಲ. ಓದುವಾಗ, ನುಡಿಯುವಾಗ ಉಚ್ಚಾರಣೆಯ ರೀತಿ, ಧ್ವನಿಪರಿವರ್ತನದ ಇಂಗಿತವನ್ನು ಅರಿತು ಅವರು ಉಚಿತ ಅರ್ಥಗ್ರಹಣ ಮಾಡುತ್ತಿದ್ದರು. ಪ್ರಕೃತ ವಾಕ್ಯದಲ್ಲಿ 'ಭೀಮುಪಯ್ಯನ' ಈ ಪದದ ಮುಂದೆ ಧ್ವನಿಯನ್ನು ಕಿಂಚಿತ್ ದೀರ್ಘಗೊಳಿಸಿ, ವಿರಾಮ ಕಲ್ಪಿಸಿ, ಮುಂದಕ್ಕೆ ಓದಿದರೆ ಸಾಕು. ಇಷ್ಟಾರ್ಥವು ದೊರಕುತ್ತದೆ. ಅದಕ್ಕಾಗಿ ಭೀಮುಪಯ್ಯನ ಪದದ ಮುಂದೆ 'ಮಗಂ' ಎಂಬ ಪದವನ್ನು ಪುನರುಕ್ತವಾಗಿ ಸೇರಿಸುವ ಅಗತ್ಯವು ಇಲ್ಲ. ಹತ್ತನೆಯ ಶತಮಾನದ ನಮ್ಮ ಪೂರ್ವಜರಿಗೆ ಅಂಥ ಅಗತ್ಯವು ಇದ್ದಿಲ್ಲ. ಆ ಪರಂಪರೆಯನ್ನು ತಿಳಿದುಕೊಂಡರೆ ಅದು ನಮಗೂ ಬೇಡ.

ಶ್ರೀ. ಕಲಬುರ್ಗಿಯವರ ಇನ್ನೊಂದು ತಿದ್ದುಪಡಿ ಅಬ್ಬಣಬ್ಬೆಜೋಯಿಸ ಸಿಂಘನ ಮಗಳಲ್ಲ, ಮೊಮ್ಮಗಳು ಎಂಬ ಗ್ರಹಿಕೆಯ ಮೇಲೆ ನಿಂತಿದೆ. ಇದಕ್ಕೆ ಆಧಾರವೇನು? ಭೀಮುಪಯ್ಯ ಅಭಿಮಾನ ಚನ್ದ್ರನ ಮೊಮ್ಮಗ ಎನ್ನುವುದಕ್ಕೆ ಪಂಪಭಾರತದ ಆಧಾರವಿದೆ. ಆದರೆ ಅವರೀ ಸೂಚನೆಗೆ ಅಂತಹದೊಂದು ಸಾಹಿತ್ಯದ ಅಥವಾ ಶಾಸನದ ಪ್ರಮಾಣವನ್ನು ಒದಗಿಸಬೇಡವೇ? ಇಂಥ ಶಾಸನಬದ್ಧ ವಿಷಯದಲ್ಲಿ ನಿರಾಧಾರವಾಗಿ, ಸ್ವಕಪೋಲ ಕಲ್ಪಿತವಾಗಿ ತಿದ್ದುಪಡಿಯನ್ನು ಮಾಡಲು ಸಾಹಸ ತೊಟ್ಟರೆ ಅದಕ್ಕೆ ಇತಿ ಮಿತಿಯೆಲ್ಲಿ? ಇಂಥ ಸಂದರ್ಭದಲ್ಲಿ 'ನಮ್ಮ ಅಭಿಪ್ರಾಯ,' 'ನಮ್ಮ ಅರ್ಥ'ಗಳಿಗೆ ಬೆಲೆಯಿಲ್ಲ. ಹಾಗೆ ಇತರರೂ ತಮ್ಮ ಪರವಾಗಿ ವಾದಿಸಬಹುದು. ಬೆಲೆ ಇರುವುದು ಮೂಲ ಪಾಠಕ್ಕೆ, ಅದರ ಸರಿಯಾದ ತಿಳುವಳಿಕೆಗೆ.

ವಿಮರ್ಶೆಯ ದಾರಿ

ಡಾ. ಜಿ. ಎಸ್. ಶಿವರುದ್ರಪ್ಪ

"ವಿಮರ್ಶೆಯ ಪೂರ್ವಪಶ್ಚಿಮ" ಗ್ರಂಥದಿಂದ

ಸಾಹಿತ್ಯ ವಿಮರ್ಶೆ ಎಂದರೆ ಸಾಕಷ್ಟು ಸಮೃದ್ಧವಾದ ಸಾಹಿತ್ಯವಿರುವಲ್ಲಿ ಶಕ್ತನಾದ ಸೂಕ್ಷ್ಮಜ್ಞನಾದ ಸಹೃದಯನೊಬ್ಬ ಅದನ್ನು ಆಸ್ವಾದಿಸಿ, ಆಲೋಚಿಸಿ, ಅದರ ಗುಣದೋಷಗಳನ್ನು ವಿವೇಚಿಸಿ, ಅದರ ಬೆಲೆಯನ್ನು ಕಟ್ಟುವ ಒಂದು ನಿಷ್ಪಕ್ಷಪಾತವಾದ ಪ್ರಯತ್ನವೆನ್ನಬಹುದು . . . ಎಲ್ಲಿ ಸಾಹಿತ್ಯ ಸೃಷ್ಟಿ ಸಮೃದ್ಧವಾಗಿದೆಯೋ ಅಲ್ಲಿ ಅದನ್ನು ಕೇರಿ ತೂರಿ, ಅದರ ಸೊಗಸನ್ನು ಬೆರಳಿಟ್ಟು ತೋರಿಸುವ ಅಗತ್ಯ ಒದಗುತ್ತದೆ . . .

"ವಿಮರ್ಶೆ ಎಂವರೆ ಕವಿಪ್ರತಿಭೆಯಿಂದ ಹೊರಹೊಮ್ಮುವ ಸುಂದರ ಭಾವಮಯ ಕಾವ್ಯಕ್ಷೇತ್ರಗಳಲ್ಲಿ ಸೂಕ್ಷ್ಮಮತಿಯಾದ ಸಹೃದಯನು ಕೈಗೊಳ್ಳುವ ವಿಹಾರ ಯಾತ್ರೆ ಅಥವಾ ಸಾಹಸ ಯಾತ್ರೆಯ ಕಥನಕಾರ್ಯ"[1] ಈ ಕವಿತೆಯ ಅರ್ಥವೇನು ? ಕವಿಯ ಭಾವವೇನು ? ಎಂದು ಹೊರಡುವುದೇ ವಿಮರ್ಶೆಯ ಮೊದಲ ಹೆಜ್ಜೆ. ಎಂದರೆ ಕಾವ್ಯದ ಭಾವ, ಅರ್ಥ ಉದ್ದೇಶಗಳನ್ನು ವಿಚಾರ ಪೂರ್ವಕವಾಗಿ ವಿಶ್ಲೇಷಿಸಿ ವಿವೇಚಿಸುವುದೇ ವಿಮರ್ಶೆ. ಅದು "ಸಾಹಿತ್ಯವನ್ನು ಕುರಿತ ಕ್ರಮಬದ್ಧವಾದ ವಿವೇಚನೆ."[2] ಇಂಥ ವಿವೇಚನೆಯ ಆರಂಭ ವಿವರಣೆ ವ್ಯಾಖ್ಯಾನಗಳಿಂದ; ಅದರ ನಿಲುಗಡೆ ಕೃತಿಯ ಮೌಲ್ಯ ನಿರ್ಣಯದಲ್ಲಿ. "ಸಾಹಿತ್ಯ ಎನ್ನುವುದು ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡ ಜೀವನ ವ್ಯಾಖ್ಯಾನ ಎನ್ನುವುದಾದರೆ, ಸಾಹಿತ್ಯ ವಿಮರ್ಶೆ ಆ ಜೀವನ ವ್ಯಾಖ್ಯಾನದ ವ್ಯಾಖ್ಯಾನ."[3] ಅದೂ ಒಂದು ಕಲೆ. "ಸಾಹಿತ್ಯವನ್ನು ಬೆಲೆ ಕಟ್ಟುವ ಕಲೆ, ಯಾವ ಯಾವ ಕಾರಣಗಳಿಂದಾಗಿ ಒಂದು ಕೃತಿ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎನ್ನುವುದನ್ನು ನಿರ್ಣಯಿಸುವ ಕಲೆ"[4] ಹೀಗೆ ಕೃತಿಯನ್ನು ಬೆಲೆ ಕಟ್ಟುವ ಪ್ರಯತ್ನ ಬೇರೊಂದು ದೃಷ್ಟಿಯಿಂದ ನೋಡಿದಾಗ ಕೃತಿಯಲ್ಲಿ ಅಂತರ್ಗತವಾಗಿರುವ ಕವಿಯ ಅನುಭವಗಳ ತರ–ತಮರ ವಿವೇಚನೆಯೂ ಹೌದು. ಈ ದೃಷ್ಟಿಯಿಂದ "ವಿಮರ್ಶೆ ಒಂದು ಅನುಭವಕ್ಕೂ ಮತ್ತೊಂದು ಅನುಭವಕ್ಕೂ ಇರುವ ವ್ಯತ್ಯಾಸಗಳನ್ನು ಗುರುತಿಸಿ ಬೆಲೆ ಕಟ್ಟುವ ಪ್ರಯತ್ನ."[5] ಈ ಪ್ರಯತ್ನಕ್ಕೆ ಬೇಕಾದದ್ದು ಒಂದು ಬಗೆಯ ಅಂತರ್ದೃಷ್ಟಿ, ನಮ್ಮಿಂದ ಭಿನ್ನವಾದ ಅನ್ಯ ಮನೋಧರ್ಮಗಳನ್ನು ಪ್ರವೇಶಿಸುವ ಸಾಮರ್ಥ್ಯವೇ ವಿಮರ್ಶೆಯ ಸಾರ. ಮ್ಯಾಥ್ಯೂ ಆರ್ನಾಲ್ಡನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಉಗ್ಗಡಿಸುತ್ತಾನೆ. ಜಗತ್ತಿನಲ್ಲಿ ಯಾವ ಯಾವ ಅತ್ಯುತ್ತಮವಾದ ಆಲೋಚನೆ ಹಾಗೂ ಅನುಭವಗಳಿವೆಯೋ, ಅವುಗಳನ್ನು ಅರ್ಥ ಮಾಡಿಕೊಂಡು ಪ್ರಸಾರ ಮಾಡುವ ಒಂದು ನಿಷ್ಪಕ್ಷಪಾತವಾದ ಪ್ರಯತ್ನವೇ ವಿಮರ್ಶೆ."[6]

ಕವಿಕೃತಿಯೊಂದನ್ನು ಕುರಿತು, ವಿಚಾರಪೂರ್ವಕವಾಗಿ ವಿಶ್ಲೇಷಿಸಿ ವಿವೇಚಿಸುವುದೇ ವಿಮರ್ಶೆಯ ಮೊದಲ ಹೆಜ್ಜೆ ಎಂದೆವು. ಈ ಕ್ರಿಯೆ ಮೂಲತಃ ಬುದ್ಧಿಪ್ರಧಾನವಾದುದು. ಇದು ಕಾವ್ಯಸೃಷ್ಟಿಶಕ್ತಿ ಮತ್ತು ಕಾವ್ಯಾಸ್ವಾದನ ಶಕ್ತಿ ಇವುಗಳಿಂದ ಭಿನ್ನವಾದುದು ಮತ್ತು ವಿಶಿಷ್ಟವಾದುದು. ಕೃತಿನಿರ್ಮಾಣ ಶಕ್ತಿಯೇ ಬೇರೆ, ವಿಮರ್ಶನ ಶಕ್ತಿಯೆ ಬೇರೆ ಎಂದೆನಿಸಿಕೊಂಡರೂ ಅದು ಕಾವ್ಯನಿರ್ಮಾಣ ಶಕ್ತಿಯ ಮತ್ತು ಆಸ್ವಾದನ ಶಕ್ತಿಯ ಜೊತೆ ಜೊತೆಗೆ ಕೂಡ ಇರಬಹುದು. ಆದರೆ ಕೆಲವರು, ಕಾವ್ಯನಿರ್ಮಾಣ ಶಕ್ತಿಗಿರುವಂತಹ ಸ್ಥಾನವನ್ನೇ ವಿಮರ್ಶೆಗೂ ಕೊಡಲು ಪ್ರಯತ್ನಿಸಿರುವುದೂ ಉಂಟು. "ಅದು ಸಾಹಿತ್ಯ ಸೃಷ್ಟಿಯಷ್ಟೇ ವ್ಯಕ್ತಿ ವಿಶಿಷ್ಟವಾದುದು, ಮತ್ತು ಅದೂ ಅಷ್ಟೇ ಪ್ರತಿಭಾ ಸೃಷ್ಟಿಯು."[7] ಏಕೆಂದರೆ "ಕೃತಿ

(೨೨ನೆಯ ಪುಟ ನೋಡಿ)

1. ಕುವೆಂಪು: ಕಾವ್ಯ ವಿಹಾರ
2. Orlo Williams: Contemporary criticism of Literature
3. Hudson: Introduction to the Study of Literature
4. Cassell's Encyclopaedia of Literature
5. I. A. Richards: Principles of Literary Criticism
6. Cassell's Encyclopaedia of Literature
7. L. Abercrombie: Principles of Literary Criticism

ಕಥೆ ಮತ್ತು ಕಾದಂಬರಿ

ಗೆಜ್ಜೆನಾದ—ಲೇಖಕರು: ಶ್ರೀ ದಯಾನಂದ ತೊರ್ಕೆ; ಪ್ರಕಾಶಕರು: ಪುರೋಗಾಮಿ ಸಾಹಿತ್ಯ ಸಂಘ, ೧೧ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩. ಪುಟ ೧೭೧; ಬೆಲೆ : ಮೂರು ರೂಪಾಯಿ

'ಗೆಜ್ಜೆನಾದ'ದಲ್ಲಿ ಹೊರನೋಟಕ್ಕೆ ಗೆಜ್ಜೆಯಾಗಲೀ ಅದರ ನಾದವಾಗಲೀ ಕೇಳಬರದು. ಕಾದಂಬರಿಯಲ್ಲಿ ಆಳವಾಗಿ ಒಳಹೊಕ್ಕು ವಿಚಾರಿಸುವ ಓದುಗನಿಗೆ ಅಸ್ಪಷ್ಟವಾಗಿ ಗೆಜ್ಜೆನಾದ ಕೇಳಿಬರುವುದು.

'ಗೆಜ್ಜೆನಾದ'ದಲ್ಲಿ ವೇಶ್ಯೆ ಎನಿಸಬಹುದಾದ ಗರತಿಯ ಸಾಂಸಾರಿಕ ಚಿತ್ರಣವಿದೆ. ಮಂಜುಳಾ ವಿಶ್ವನಾಥನ ಮಡದಿ, ವಿವಾಹಪೂರ್ವ ಪ್ರೇಮಿ ಕೃಷ್ಣಮೂರ್ತಿಯಲ್ಲಿ ವಿವಾಹ ನಂತರವೂ ತನ್ನ ಪ್ರೇಮ ಸಂಪರ್ಕವನ್ನು ಮುಂದುವರಿಸುವಳು. ಸಹಜವಾಗಿ ಸಮಾಜದಲ್ಲಿ ಈ ವಿಚಾರವಾಗಿ ಬಿರುಗಾಳಿ ಎದ್ದು, ವಿಶ್ವನಾಥನ ಪುನರ್ವಿವಾಹ, ಮಂಜುಳೆಯ ಆತ್ಮಹತ್ಯೆ, ಪ್ರೇಮಿ ಕೃಷ್ಣಮೂರ್ತಿಯ ವಿವಾಹ, ಇವುಗಳೊಡನೆ ಕಾದಂಬರಿಯು ಮುಕ್ತಾಯಗೊಳ್ಳುತ್ತದೆ.

ಪ್ರೇಮ ತ್ರಿಕೋಣದ ಸಾಮಾನ್ಯ ವಸ್ತುವೇ ಈ ಕಾದಂಬರಿಯ ಜೀವಾಳ. ಮಂಜುಳಾ ತಪ್ಪು ಹೆಜ್ಜೆ ಇಟ್ಟಳು, ನಿಜ. ಆದರೆ ಶಿಕ್ಷೆ ಅವಳೊಬ್ಬಳಿಗೆ ಮಾತ್ರ! ಕೃಷ್ಣಮೂರ್ತಿ, ಖಳನಾಯಕ. ಕಾಮಪ್ರೇಮಗಳ ಎರಡು ಸುಖಗಳನ್ನು ಅನುಭವಿಸಿ, ಕೂದಲು ಕೊಂಕದೆ, ಸುಖವಾಗಿ ನಿಜ ವೈವಾಹಿಕ ಜೀವನದಲ್ಲಿ ಕಾಲಿಡುವನು. ವಿಶ್ವನಾಥ-ಮಂಜುಳೆಯ ಕೈ ಹಿಡಿದ ಅರಸಿಕ (?) ನೆನಿಸಬಹುದಾದ ಪಾತ್ರ. ಹಲವಾರು ಸಲ ವಿಶ್ವನಾಥನ ಈ ಮೌಢ್ಯವೇ ಮಂಜುಳೆಯನ್ನು ದುರಂತದೆಡೆಗೆ ಒಯ್ಯಿತೇನೋ ಎಂದೆನಿಸುವುದು. ನಿರ್ಮಲಾ, ಪದ್ಮಿನಿ, ಕಾವೇರಿ, ಈ ಚಿತ್ರಗಳು ಸುಸ್ಪಷ್ಟವಾಗಿ ಮೂಡಿಬಂದಿವೆ.

ಶ್ರೀ ತೊರ್ಕೆಯವರ ಲೇಖನಿಯಲ್ಲಿ ನಿಯಂತ್ರಣವಿದೆ. ಹಿಡಿತವಿದೆ. ಕಥೆ ದುರಂತದ ಕಡೆ ಓಡುತ್ತಿರುವುದು ಓದುಗನಿಗೆ ಮೊದಲೇ ನಿಚ್ಚಳವಾಗಿ ಕಾಣುತ್ತದೆ. ಕಾದಂಬರಿ ಮುಗಿದಾಗ ಮುಕ್ತಾಯ 'ನಾನಾಗಲೇ ಅಂದುಕೊಂಡಿದ್ದೆ' ಎಂದಂತಾಗುತ್ತದೆ. ಅಲ್ಲಿ ಕಾದಂಬರಿಯ ಕಲೆ, ತಂತ್ರಕ್ಕೆ ಪೆಟ್ಟುಕ್ಕಿದಂತಾಗುತ್ತದೆ. (Surprise element) 'ಆಶ್ಚರ್ಯ ಜನಕ ಅಂಶ' ಕಾದಂಬರಿಯ ಅಂತ್ಯದಲ್ಲಿ ಕಂಡುಬರಬೇಕಾದುದು ಯಾರೂ ಅಪೇಕ್ಷಿಸುವ ವಿಚಾರ.

'ಪ್ರೇಮ' ಈ ಕ್ಷೇತ್ರದಲ್ಲಿ ಹಲವಾರು ಕಾದಂಬರಿಗಳು ಈಗಾಗಲೇ ಹೊರಬಿದ್ದು ಬೇಸರ ತಂದಿವೆ. ಓದುಗ ಪ್ರೇಮದ ಒಂದು ಹೊಸ ನೋಟವನ್ನು ಕಾಣಬಯಸುತ್ತಾನೆ. ಲೇಖಕರು ಸಮಾಜದ ಈ ಸಮಸ್ಯೆಯನ್ನು ಒಂದು ಹೊಸ ರೀತಿಯಲ್ಲಿ ಚಿತ್ರಿಸಬಹುದಾಗಿತ್ತು.

ಉತ್ತಮವಾದ ಕಾಗದ, ಮುದ್ರಣ, ಅಚ್ಚುಕಟ್ಟಾದ ಹೊರಕವಚ, ಈ ಪುಸ್ತಕದ ವೈಶಿಷ್ಟ್ಯಗಳು. ಓದುಗನ ವಿಚಾರಗಳನ್ನು ಬಡಿದೆಬ್ಬಿಸುವ ಶಕ್ತಿ [ಈ ಪುಸ್ತಕದಲ್ಲಿದೆ.

*   *   *

ಈ ನೆಲ ಈ ಜಲ—ಲೇ: ಶ್ರೀ ನಾ. ಡಿಸೋಜ; ಪ್ರ: ಪುರೋಗಾಮಿ ಸಾಹಿತ್ಯ ಸಂಘ, ೧೧ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩. ಪುಟ ೨೩೧; ಬೆಲೆ : ನಾಲ್ಕು ರೂಪಾಯಿ

ಶ್ರೀ ನಾ. ಡಿಸೋಜರ ಮೂರನೆಯ ಕಾದಂಬರಿ 'ಈ ನೆಲ ಈ ಜಲ'. ಹಿರಿಯ ಧರ್ಮಜ್ಞ, ಮೊಮ್ಮಗ ಧರ್ಮಣ್ಣ, ಈ ಇಬ್ಬರ ಮಧ್ಯೆ ಮೂರು ತಲಾಂತರಗಳ ಒಂದು ಸಮಾಜ ಜೀವನದ ಸುಂದರ ಚಿತ್ರಣವಿದೆ ಈ ಕಾದಂಬರಿಯಲ್ಲಿ.

ಮಾನವನ ವ್ಯಕ್ತಿತ್ವ, ಸ್ವಭಾವ, ಜೀವನ ಇವುಗಳು ಕಾಲ ಸರಿದಂತೆಲ್ಲಾ ಬದಲಾಗುತ್ತಾ ಬಂದಂತೆ ಕಂಡು, ಹೊಸ ದೃಷ್ಟಿ, ಹೊಸ ಸೃಷ್ಟಿ ಆದಂತೆ ಕಂಡರೂ, ಮೂಲಭೂತ ಸ್ವಭಾವಗಳಲ್ಲಿ ಹತ್ತು ಸಾವಿರ ವರ್ಷಗಳ ಹಿಂದಿನ ಮಾನವ ಸ್ವಭಾವವನ್ನೇ ಹೋಲುತ್ತದೆ. ಸುಖದ ಆಶೆ, ದ್ವೇಷ ಸಂತೋಷ ಪ್ರೇಮ ಕಾಮ, ಎಲ್ಲಾ ಅಷ್ಟೆ. ಅದೇ ಚೌಕಟ್ಟಿನಲ್ಲಿ ಯಾವ ಮಾನವ ಪಾತ್ರಗಳನ್ನು ಬೇಕಾದರೂ ನಾವು ಅಳವಡಿಸಬಹುದು.

ಈ ಕಾದಂಬರಿಯಲ್ಲಿ ಹಿರಿಯ ಧರ್ಮಜ್ಞ, ಕಿರಿಯ ಧರ್ಮಣ್ಣ ಪರಿವರ್ತನೆ ಹೊಂದುತ್ತಿರುವ ಮಾನವ ಧರ್ಮದ ಸಂಕೇತಗಳು ಮಾತ್ರ. ಮಧ್ಯದಲ್ಲಿ ರಂಗನಾಥ ನಮ್ಮ ಸಮಾಜದ, ಈ ನೆಲ ಈ ಜಲ ಸ್ಥಿರ ಸಮಾಜ ಮತ್ತು ಅದರಲ್ಲಿನ ವ್ಯಕ್ತಿಗಳು ನಾನಾ ಹಂತಗಳಲ್ಲಿ ಕಾಣಿಸಿಕೊಂಡು, ತಮ್ಮ ನಾನಾ ಸ್ವಭಾವಗಳನ್ನು ಬೀರಿ, ದುರಂತವಾಗಿಯೇ ಸುಖಸಹಜವಾಗಿಯೇ ರಂಗಸ್ಥಳದಿಂದ ಮರೆಯಾಗುತ್ತಾರೆ.

ಇಲ್ಲಿ ಲೇಖಕರ ಪಾತ್ರ ಹಿರಿದು. ತಾವು ರಂಗದ ಒಂದು ಪಕ್ಕದಲ್ಲಿ ನಿಂತು ನಿರ್ವಿಕಾರವಾಗಿ ಸಮಾಜದ ಈ ಪರಿವರ್ತನಾ ಚಿತ್ರವನ್ನು ಜನತೆಯ ಮುಂದೆ ಪ್ರಸ್ತಾಪಗೊಳಿಸುವರು.

ಸಾವಿರಾರು ವರ್ಷಗಳಿಂದ ಈ ನೆಲ ಈ ಜಲಗಳ ಮೇಲೆ ಪರಕೀಯರ ಧಾಳಿಯಾಗಿದೆ. ಹೊರ ನೋಟಕ್ಕೆ ಈ ಧರ್ಮಕ್ಕೂ ಧಕ್ಕೆ ಬಂದಿದೆ. ಆದರೆ ಈ ಸಂಸ್ಕಾರ ಮಾತ್ರ ಅಚ್ಚಳಿಯದೆ, ದೇವರ ಗುಡ್ಡದ ರಂಗನಾಥನಂತೆ, ಹುಲಿ ದೇವರ ವನದ ಹುಲಿ ದೇವರಂತೆ ನಿರ್ವಿಕಾರವಾಗಿ ನಿಶ್ಚಲವಾಗಿ ನಿಂತಿದೆ.

ಈ ಕಾದಂಬರಿಯ ಪಾತ್ರಗಳು ಸಾಮಾನ್ಯ ಮಾನವರು. ಮಾನವ ಸಹಜ ಲೋಭ ದೋಷಗಳಿಗೆ ಒಳಗಾದವರು. ಅವರಲ್ಲೂ ಕೆಲ ಪಾತ್ರಗಳು ಈ ಸಾಂಸಾರಿಕ ಆಶೆ ಆಕಾಂಕ್ಷೆಗಳನ್ನು ಮೀರಿ ಮೆಟ್ಟಿ ಮೇಲೆ ನಿಲ್ಲುವರು. ಕೆಲ ಪಾತ್ರಗಳು ಲೋಭಕ್ಕೆ ಒಳಗಾಗಿಯೂ ತಮ್ಮ ಪಾವಿತ್ರ್ಯವನ್ನು ಉಳಿಸಿಕೊಳ್ಳುವರು. ಮತ್ತೆ ಹಲವರು ಮಾಯಾಮೋಹಕ್ಕೆ ಒಳಗಾಗಿ ಪತನರಾಗುವರು.

ಶ್ರೀ ನಾ. ಡಿಸೋಜರ ಶೈಲಿ ನಿರೂಪಣೆಯಲ್ಲಿ ಅತಿ ರಂಜನೆಯಿಲ್ಲದೆ ಸಹಜತೆ ಮತ್ತು ಸರಳತೆ ಇದೆ. ಮನಮುಟ್ಟುವ ಕಸುವಿದೆ. ವಿಜ್ಞಾನ ಮತ್ತು ಸಂಪ್ರದಾಯ ಇವೆರಡರ ಘರ್ಷಣೆಯನ್ನು ಅವರು ಇನ್ನೂ ಸುಂದರವಾಗಿ ಚಿತ್ರಿಸಬಹುದಾಗಿತ್ತು. ಈ ನಿಟ್ಟಿನಲ್ಲಿ ಸಪ್ಪೆಯಾಗಿ ಸ್ಪಷ್ಟತೆ ಮೂಡಿಲ್ಲ.

ಪುರೋಗಾಮಿ ಸಾಹಿತ್ಯ ಸಂಘದವರು ಹೊರತರುತ್ತಿರುವ ಪ್ರಕಾಶನಗಳಲ್ಲಿ ನಿಜವಾಗಿಯೂ ಉತ್ತಮ ದರ್ಜೆಗೆ ಸೇರತಕ್ಕ ಗುಣಗಳಿವೆ. ಈ ಪ್ರಕಾಶಕರಿಂದ ನಾವು ಮುಂದೆ ಅನೇಕ ಉತ್ತಮ ಕೃತಿಗಳನ್ನು ಆಶಿಸಬಹುದು.

* * *

ಒಲಿದು ಬಂದವಳು—ಲೇ : ಶ್ರೀ ಶ್ರೀನಿವಾಸ ಉಡುಪ; ಪ್ರ : ರವೀಂದ್ರ ಪುಸ್ತಕ ಭಂಡಾರ, ಕಾರ್ಗಲ್, ಶಿವಮೊಗ್ಗ ಜಿಲ್ಲೆ. ಪುಟ ೧೯೪ ; ಬೆಲೆ : ಮೂರು ರೂಪಾಯಿ

ಪ್ರಕಾಶ ಪತ್ರಿಕೋದ್ಯಮಿ ಭಾರತಿ ಎಂಬ ಹುಡುಗಿಯನ್ನು ಮೆಚ್ಚಿ-ತ್ಯಜಿಸಿ ಕೊನೆಯಲ್ಲಿ ಅವಳನ್ನು ಮದುವೆಯಾಗುವನು. ಇಷ್ಟು ಚಿಕ್ಕ ವಸ್ತುವನ್ನು ೧೯೪ ಪುಟಗಳ ವಿಸ್ತಾರವಾದ ಕಾದಂಬರೀ ಪರಿಸರದಲ್ಲಿ ಆಳವಡಿಸಬೇಕಾದರೆ ಸಾಹಸ, ಅನುಭವ ಮತ್ತು ಆಳವಾದ ಅಭ್ಯಾಸಬೇಕು. ಈಗಾಗಲೇ ತಮ್ಮ ಕಥಾ ಸಂಕಲನ ನಾಟಕ ಮತ್ತು ಕಾದಂಬರಿಗಳಿಂದ ಪರಿಚಿತರಾದ ಶ್ರೀ ಉಡುಪರು ಈ ಸಾಹಸವನ್ನು ಮಾಡಿ ತೋರಿಸಿದ್ದಾರೆ.

ಸಾಮಾನ್ಯವಾದ ಒಂದು ಪ್ರಣಯ ಪ್ರಸಂಗವನ್ನು ರುಚಿಕಟ್ಟಾದ ವರ್ಣನೆಯೊಂದಿಗೆ ಲೇಖಕರು ನಮ್ಮ ಮುಂದಿಟ್ಟಿದ್ದಾರೆ. ವಸ್ತುವಿನಲ್ಲಿ ವಿಶೇಷವಿಲ್ಲದಿದ್ದರೂ ಅದನ್ನು ಪ್ರಸ್ತುತಪಡಿಸುವುದರಲ್ಲಿ ಲೇಖಕರು ಹದವಾಗಿ ಪರಿಕರಗಳನ್ನು ಉಪಯೋಗಿಸಿಕೊಂಡಿದ್ದಾರೆ. ರಂಜನೀಯವಾದ ಶೈಲಿ, ಕುತೂಹಲಕಾರಿ ಘಟನಾ ನಿರೂಪಣೆ, ಮನಮುಟ್ಟುವ ಮಾತಿನ ಜೋಡಣೆ, ಸಾಮಾನ್ಯ ಕಾದಂಬರಿಯೊಂದನ್ನು ಉತ್ತಮ ಕೃತಿಯನ್ನಾಗಿಸಿದೆ.

ಒಳ್ಳೆಯ ಮುದ್ರಣ, ಹಸನಾದ ಕಾಗದ, ಸುಂದರವಾದ ಹೊರಕವಚ, ಈ ಪುಸ್ತಕಕ್ಕೆ ಮೆರಗು ಕೊಟ್ಟಿವೆ.

—ಕೆ. ಎಸ್. ಸೂಲಿಬೆಲೆ

ಸಮುದ್ರದಂಚಿನ ಸಂಜೆ—ಲೇ : ಶ್ರೀ ಪಿ. ವಿ. ಶಾಸ್ತ್ರಿ; ಪ್ರ: ಶ್ರೀ ಮಾರಿಕಾಂಬಾ ಪ್ರಕಾಶನ ವಿಭಾಗ, ಶಿರಸಿ (ಉ. ಕ.) ಪುಟ ೨೦೪ ; ಬೆಲೆ ಎರಡು ರೂಪಾಯಿ

ಲೇಖಕರು ಈಗಾಗಲೇ ಸಣ್ಣ ಕತೆಗಳ ರಚನೆಯಲ್ಲಿ ಹೆಸರು ಗಳಿಸಿದ್ದಾರೆ. ಇದು ಅವರ ಚೊಚ್ಚಿಲ ಕಾದಂಬರಿ. ಉತ್ಸಾಹ ಬಾಹುಳ್ಯದಿಂದಲೋ ಅಥವಾ ಅನುಭವ ಲೋಪದಿಂದಲೋ ಸಹಜವಾಗಿಯೇ ಮುಗ್ಗರಿಸಿದ್ದಾರೆ. ಮತ್ತೆ ಎದ್ದು ಚೇತರಿಸಿಕೊಂಡಿದ್ದಾರೆ.

ನಾಯಕ ರಾಜಣ್ಣ ಯಾವುದೋ ವಿಷಮ ಪರಿಸ್ಥಿತಿಗೆ ಗುರಿಯಾಗಿ, ಮನಸ್ಸಿನ ತೋಲನ ತಪ್ಪಿದಾಗ ಹಾಲುಣಿಸಿದ ಕೈಯ್ಯನ್ನೇ ಕಚ್ಚುವನು. ಪುನಃ ಚೇತರಿಸಿ ತನ್ನ ಸಹಜ ಮನುಷ್ಯ ಮುಖವನ್ನು ಮರೆಯುವ ಕಾಲಕ್ಕೆ ನೋಡಬೇಕಾದವರು ಮುಖದಿರುಹುವರು.

ಶ್ರೀ ಶಾಸ್ತ್ರಿಗಳು ಕಥನ ಕಲೆಯಲ್ಲಿ ಸಿದ್ಧಹಸ್ತರಾದರೂ ಕಾದಂಬರಿಯ ಬೆಳವಣಿಗೆ ಸಾಕಷ್ಟು ಸಹಜವಾಗಿಲ್ಲ. ಅಲ್ಲಲ್ಲಿ ಕಥಾ ಭಾಗವನ್ನು ಎಳೆದಂತೆ ಭಾಸವಾಗಿ ಕಾದಂಬರಿಯ ಓಟ ಕುಂಟುತ್ತದೆ. ನಿರೂಪಣೆಯಲ್ಲಿ ಅಲ್ಲಲ್ಲಿ ಅಸಹಜತೆ ಕಾಣಿಸಿಕೊಳ್ಳುತ್ತದೆ. ಆದರೂ ಪ್ರೌಢ ವಿಚಾರಗಳು ಸತ್ವ ಪೂರಿತವಾದ ಶೈಲಿ, ಕಾವ್ಯಪ್ರಜ್ಞೆ, ಇವು ಈ ಲೇಖಕರು ಕನ್ನಡ ವಾಙ್ಮಯಕ್ಕೆ ಉತ್ತಮ ಕೃತಿಗಳನ್ನು ನೀಡಬಲ್ಲರೆಂಬ ಭರವಸೆ ನೀಡುತ್ತದೆ.

* * *

ಧರ್ಮಶ್ರೀ—ಲೇ: ಶ್ರೀ ಎಸ್. ಎಲ್. ಭೈರಪ್ಪ; ಪ್ರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು ೪೬೯; ಬೆಲೆ: ರೂ. ೫-೨೫

ಸಾಹಿತ್ಯ ಸಾಗರ ಮಥನದಲ್ಲಿ ವಿಷ, ಅಮೃತಗಳೆರಡರ ಜನ್ಮವೂ ಆಯಿತು. ಪ್ರಸ್ತುತ ಗ್ರಂಥ ಆ ಅಮೃತದ ಒಂದು ಮುಖ. ಉತ್ತಮ, ಆರೋಗ್ಯಕರ ಸಾಹಿತ್ಯ ಶೋಧನೆಗೆ ಹೊರಟಾಗ ಅದೇ ಎದುರಿಗೆ ಬಂದಂತೆ ಆಯಿತು.

ಕಾದಂಬರಿ ಎಂಬ ಹೆಸರಿನಲ್ಲಿ ಏನೆಲ್ಲಾ ಕಸ ಕಡ್ಡಿಗಳು ತೇಲಿ ಬರುತ್ತಿರುವಾಗ ಉತ್ತಮ ಕೃತಿ ಲಾಭ ಅಲಭ್ಯವೇ.

ಭಾರತ ವರ್ಷ ಧರ್ಮ ಪ್ರಧಾನ ರಾಷ್ಟ್ರ. ಸಾವಿರಾರು ವರ್ಷಗಳಿಂದ ಅಗಣಿತ ಜನ ಹೊರಗಿನಿಂದ ಇಲ್ಲಿಗೆ ಬಂದರು. ನೆಲಸಿದರು. ಇಲ್ಲಿಯ ಸಂಸ್ಕೃತಿಯಲ್ಲಿ ಬೆರತು ಒಂದಾಗಿ ಹೋದರು. ಆದರೆ ಮತಪ್ರಸಾರದ ಹೆಸರಿನಲ್ಲಿ ಬಂದವರು ತಮ್ಮ ಸಂಸ್ಕೃತಿಯ ಬೀಜವನ್ನು ಇಲ್ಲಿ ಬಿತ್ತಲು ಯತ್ನಿಸಿದರು. ಆಗ ಆದ ಘರ್ಷಣೆಯಲ್ಲಿ ಸಂಸ್ಕೃತಿ ಧರ್ಮಗಳ ಸ್ವರೂಪ, ಏಕತೆ, ಮತಾಂತರ ಹೊಂದಿದ ನಾಯಕನ ಮನಸ್ಸಿನ ಹೊಯ್ದಾಟ, ತುಮುಲ, ಇವುಗಳ ಸುಂದರ ಚಿತ್ರಣ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಹೆಜ್ಜೆ ಹೆಜ್ಜೆಗೂ ಸುಖ ದುಃಖಗಳ ಒಂದು ಸಮ್ಮಿಶ್ರಣದ ದರ್ಶನವಾಗುತ್ತದೆ. "ಸ್ವಧರ್ಮೇ ನಿಧನಃಶ್ರೇಯ" ಎಂಬ ಗೀತಾ ವಾಕ್ಯದ ಅರ್ಥವನ್ನು ನಾವೂ ಮನಗಾಣುತ್ತೇವೆ.

ಲೇಖಕರ ಕಲ್ಪನಾಶಕ್ತಿ ಅದ್ಭುತವಾಗಿದೆ. ನೈಜವಾಗಿದೆ. ಕೃತ್ರಿಮತೆ, ಬಣ್ಣಗಳ ಮೆರಗು ಇಲ್ಲದೆ ತನ್ನ ನಿಜಪ್ರಕಾಶದಿಂದ ಬೆಳಗುತ್ತದೆ. ನಾಯಕನ ವಿಚಾರ ಸಂಸ್ಕೃತಿಗಳ ತಾಕಲಾಟದಲ್ಲಿ ನಮ್ಮನ್ನು ನಾವು ಕಾಣುತ್ತೇವೆ.

ಸುಂದರವಾದ ಶೈಲಿ, ಭಾವಪೂರಿತ ನಿರೂಪಣೆ, ಸರಳ ಸಹಜಭಾಷೆ, ಇವುಗಳು ಈ ಕಾದಂಬರಿಯನ್ನು ಈ ದಶಕದ ಉತ್ತಮ ಕಾದಂಬರಿಗಳ ಸ್ಥಾನದಲ್ಲಿ ತಂದು ನಿಲ್ಲಿಸುತ್ತದೆ.

ಈ ಕಾದಂಬರಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯವು ೧೯೬೬-೬೭ನೇ ವರ್ಷದ ಬಿ. ಎ. ತರಗತಿಯ IIನೇ ಪಾರ್ಟಿಗೆ (ಮೈನರ್) ಉಪಪಠ್ಯ ಪುಸ್ತಕವನ್ನಾಗಿ ಗೊತ್ತು ಮಾಡಿರುವುದು ಗಮನಾರ್ಹವಾದ ಅಂಶ.

* * *

ಡಾಕ್ಟರ್ ಅಘೋರ—ಲೇಖಕಿ: ಶ್ರೀಮತಿ ಮಲ್ಲಿಕಾ, ಪ್ರ: ಶ್ರೀಮತಿ ಮಲ್ಲಿಕಾ, ಗ್ಲೆಂಡೇ ಹೌಸ್, ನಂ. ೭, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-೨೫. ಪುಟ ೪೫೨; ಬೆಲೆ: ರೂ. ೯-೦೦

ವೈದ್ಯಕೀಯ ವೃತ್ತಿ ಮತ್ತು ಸಮಾಜ ಹೇಗೆ ಒಂದಕ್ಕೊಂದು ಹಾಸುಹೊಕ್ಕಾಗಿ ಬೆರೆತು, ಡಾಕ್ಟರ ಜೀವನ ಕೇವಲ ಹಣಗಳಿಸುವುದೇ ಅಲ್ಲ, ಮಾನವ ಸ್ವಭಾವ ಮಾನವೀಯತೆ, ಧರ್ಮ ಪಾಪ ಪುಣ್ಯಗಳ ಒಂದು ಸಮನ್ವಯ ದೃಷ್ಟಿ, ಎಂಬುದನ್ನು ಈ ಕಾದಂಬರಿಯಲ್ಲಿ ಶ್ರೀಮತಿ ಮಲ್ಲಿಕಾರವರು ತೋರಿಸಲು ಹೊರಟಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಮೆಡಿಕಲ್ ಕಾಲೇಜುಗಳು, ಅಲ್ಲಿನ ವಿದ್ಯಾರ್ಥಿ ಜೀವನ, ಡಾಕ್ಟರುಗಳು, ನರ್ಸ್‌ಗಳು ಇವೆಲ್ಲದರ ಮೇಲೂ 'ಕ್ಷ' ಕಿರಣ ಬೀರಿದ್ದಾರೆ. ಲೇಖಕಿಯವರಿಗೆ ಜೀವನವನ್ನು ಆಳವಾಗಿ ಹೊಕ್ಕು ನೋಡುವ ಚೈತನ್ಯವಿದೆ, ಉತ್ಸಾಹವಿದೆ. ನಾಯಕ ಡಾ. ಅಘೋರನ ಒಂದು ವ್ಯಕ್ತಿತ್ವದ ಮಾರ್ಪಾಟನ್ನು ಸುಂದರವಾಗಿ ಚಿತ್ರಿಸಿದ್ದಾರೆ.

ಆದರೆ ಸುಮಾರು ೪೫೦ ಪುಟಗಳ ಈ ಬೃಹತ್ ಕಾದಂಬರಿಯ ಪೂರ್ತ ಸಾಲುಸಾಲಿಗೂ ಅಚ್ಚು ದೋಷಗಳು, ವ್ಯಾಕರಣದ ತಪ್ಪುಗಳು, ಸಡಿಲವಾದ ವಾಕ್ಯ ಬಂಧಗಳು, ಪದಮಿಶ್ರಣ. ಇವುಗಳಿಂದ ಪುಸ್ತಕವನ್ನು ಓದುವುದೇ ಒಂದು ಶ್ರಮವಾಗಿ ವಾಚಕರ ರುಚಿಯನ್ನು ಕೆಡಿಸುತ್ತದೆ. ಇದೇ ಪುಸ್ತಕವನ್ನು ಇನ್ನೂ ಸಂಕ್ಷಿಪ್ತಗೊಳಿಸಿ, ಅಚ್ಚು ದೋಷಗಳನ್ನು ನಿವಾರಿಸಿ ಜನತೆಯ ಮುಂದಿಟ್ಟಿದ್ದರೆ ಅದು ಈ ವಿಷಯದ ಮೇಲೆ ಬರೆದ ಈ ವರ್ಷದ ಅತ್ಯುತ್ತಮ ಪುಸ್ತಕವಾಗುತ್ತಿತ್ತೆಂದು ನಮಗೆ ಅನಿಸುತ್ತದೆ.

* * *

ಹಾಲು-ಜೇನು—ಲೇ: ಶ್ರೀ ಜಯತೀರ್ಥ ರಾಜಪುರೋಹಿತ; ಪ್ರ: ಕನ್ನಡ ಸಾಹಿತ್ಯ ಸಂಘ, ಕಲಬುರ್ಗಿ. ಪುಟ ೧೮೬; ಬೆಲೆ: ರೂ. ೨-೫೦

ಹಾಲು-ಜೇನು, ನಿಜಾಂ ರಾಜ್ಯದ ಸ್ಥಿತ್ಯಂತರವನ್ನು ಚಿತ್ರಿಸುವ, ರಾಜಪುರೋಹಿತರ ಮೊದಲ ಕಾದಂಬರಿ. ಈ

ಕಾದಂಬರಿಯಲ್ಲಿ ಮುಖ್ಯವಾಗಿ ನಮಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಜನ ಜೀವನ, ಸಂಸ್ಕೃತಿ ಮತ್ತು ರಾಜಕೀಯ ಬದಲಾವಣೆಗಳ ಒಂದು ಸಮಷ್ಟಿ ಚಿತ್ರ ದೊರಕುತ್ತದೆ. ಸಾಮಾನ್ಯ ಜನತೆ ಹೈದರಾಬಾದಿನಲ್ಲಿರಲಿ, ಚೀನಾದಲ್ಲಿರಲಿ, ಇಂಗ್ಲೆಂಡಿನಲ್ಲಿರಲಿ, ಜನತೆ-ಜನತೆಯೇ. ಜಾತಿ, ನೀತಿ, ವ್ಯವಹಾರ ಇವೆಲ್ಲಾ ಮಾನವ ನಿರ್ಮಿತ.

ಸ್ವಾರ್ಥಿಗಳು, ರಾಜಕಾರಣಿಗಳು, ಜಾತೀವಾದ ಮುಂದು ಮಾಡಿ ದೇಶವನ್ನು ಒಡೆದು ತಮ್ಮ ಸ್ವಾರ್ಥ ಸಾಧಿಸಿ ಕೊಂಡರು. ಈ ಬೇಗೆಯಲ್ಲಿ ಅಸಂಖ್ಯಾತ ನಿರಪರಾಧಿಗಳು ಬೆಂದುಹೋದರು. ಇಂತಹ ಒಂದು ಸಮಾಜದ ಜೀವಂತ ಚಿತ್ರ ನಮ್ಮ ಮುಂದೆ ಬಿಡಿಸಿದ್ದಾರೆ ಶ್ರೀ ರಾಜಪುರೋಹಿತರು.

ರಾಜಪುರೋಹಿತರ ಕಥಾಕ್ಷೇತ್ರ, ಪಾತ್ರ, ವಸ್ತುಗಳಲ್ಲಿ ವೈವಿಧ್ಯತೆ ಇದೆ. ಸರಳವಾಗಿ ಆಕರ್ಷಕವಾಗಿ ಕಥೆ ಹೇಳುವ ಕಲೆ ಸಿದ್ಧಿಸಿದೆ. ಅವರು ಬಾಳನ್ನು ಆಳವಾಗಿ ಹೊಕ್ಕು ನೋಡಿದ್ದಾರೆ, ನೊಂದಿದ್ದಾರೆ, ನಲಿದಿದ್ದಾರೆ ಸಹ.

ಆದರೂ ಭಾಷೆಯಲ್ಲಿ ಪ್ರಾದೇಶಿಕತ್ವ ಅತಿಯಾಗಿ (ಅವರು ಪುಸ್ತಕದ ಕೊನೆಯ ಪ್ರಾದೇಶಿಕ ಬಳಕೆಯ ಶಬ್ದಾರ್ಥ ಗಳನ್ನು ಕೊಟ್ಟಿದ್ದರೂ ಸಹ) ಓದುಗರಿಗೆ ಕೆಲವೆಡೆ ಕಷ್ಟ ವಾಗಬಹುದು. ತಪ್ಪಿಲ್ಲದ ಮುದ್ರಣ, ಒಳ್ಳೆಯಕಾಗದ ಈ ಪುಸ್ತಕವನ್ನು ಒಳ್ಳೆಯ ಕೊಡುಗೆಯನ್ನಾಗಿಮಾಡಿದೆ.

* * *

ನಾಟ್ಯಕಸ್ತೂರಿ—ಲೇ: ಶ್ರೀ ತ್ರಿವಿಕ್ರಮ; ಪ್ರ: ಸುದರ್ಶನ ಪ್ರಕಾಶನ, ತಾರಾ ನಿವಾಸ ತಿಪಟೂರು. ಪುಟ ೨೦೪; ಬೆಲೆ ರೂ. ೨-೫೦

ಐದು ವರ್ಷಗಳ ಹಿಂದೆ ಪ್ರಕಟವಾದ ಈ ಕಾದಂಬರಿ ಈಗ ಎರಡನೆಯ ಮುದ್ರಣ ಕಂಡಿದೆ. ಅಂದರೆ ಇದು ಸುಮಾರಾಗಿ ಜನಪ್ರಿಯವಾಗಿರಬೇಕೆಂಬ ಅರ್ಥ. ಆದರೆ ಕಾದಂಬರಿಯ ಕೊನೆಯ ಪುಟವನ್ನು ಮುಗಿಸಿದಾಗ ನಮಗೆ ಇದೊಂದು ಅಪೂರ್ಣ ಕೃತಿಯಾಗಿ ಕಂಡುಬರುವುದು. ಲೇಖಕರೇನೋ ಜಾಗ್ರತೆಯಾಗಿಯೇ ಇದರ ಮುಂದಿನ ಭಾಗ 'ನಾಟ್ಯಸರಸ್ವತಿ'ಯಲ್ಲಿ ಕಥೆಯನ್ನು ಮುಗಿಸುವರೆಂದು ಭರವಸೆ ಇತ್ತಿದ್ದಾರೆ.

ನಾಟ್ಯ-ನಾಟ್ಯಶಾಸ್ತ್ರ ಈ ವಿಚಾರಗಳ ಮೇಲೆ ಸತತ ವಾಗಿ ಅಭ್ಯಾಸ ನಡೆಸಿ ಈ ಪುಸ್ತಕವನ್ನು ರಚಿಸಿರುವುದಾಗಿ ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಪುಸ್ತಕ ಓದಿದ ಮೇಲೆ ನಾಟ್ಯಶಾಸ್ತ್ರದ ವಿಚಾರವಾಗಿ ನಮ್ಮ ಜ್ಞಾನ ಅಷ್ಟೇನೂ ಬೆಳೆದ ಹಾಗೆ ಕಾಣಿಸುವುದಿಲ್ಲ. ಇನ್ನು ಕಥಾ ಸಾಹಿತ್ಯ ಸಹಾ ಅಷ್ಟೇನೂ ರಂಜನೀಯವಾಗಿಲ್ಲ. ಕಥೆಯ ಓಟ, ಕಥಾಕ್ಷೇತ್ರದ ವಿಸ್ತಾರ, ಶೈಲಿ ಸಹಾ ಎಲ್ಲಾ ಸಾಧಾರಣ ವಾಗಿದೆ. ಶ್ರೀ ತ್ರಿವಿಕ್ರಮರಂಥಾ ಅನುಭವೀ ಸಾಹಿತಿಗಳಿಂದ ನಾವು ಇನ್ನೂ ಉತ್ತಮ ಸಾಹಿತ್ಯ ಕೃತಿಗಳನ್ನು ಆಶಿಸುತ್ತೇವೆಂಬ ಅಂಶವನ್ನು ಅವರು ಮರೆಯಬಾರದು.

—ಡಿ. ಮಾಧವಮೂರ್ತಿ

ಸುಳಿಗಾಳಿ—ಲೇ: ಶ್ರೀ ರಘುಸುತ; ಪ್ರ: ಹಂಸಧ್ವನಿ ಪ್ರಕಾಶನ, ವಿಶ್ವೇಶ್ವರಪುರ, ಬೆಂಗಳೂರು-೪. ಪುಟ ೩೦೩; ಬೆಲೆ ರೂ. ೩-೫೦

ಶ್ರೀಮಾನ್ ಕುಶ್ವಾಹ್ ಕಾಂತ್‌ರವರ 'ಅಕೇಲಾ' ಎಂಬ ಕಥಾನಕದಿಂದ ಸ್ಫೂರ್ತಿಗೊಂಡು ರಘುಸುತರು ಸುಳಿ ಗಾಳಿಯನ್ನು ರಚಿಸಿದ್ದಾರೆ. ಹಿಂದಿ ಕಥೆಯ ಹಂದರದಿಂದ ಕನ್ನಡದ ಸಾಮಾಜಿಕ ಬಳ್ಳಿಯೊಂದನ್ನು ಹಬ್ಬಿಸಲು ಪ್ರಯತ್ನಿಸಿ ತಮ್ಮ ಪ್ರಯತ್ನದಲ್ಲಿ ಸಫಲರಾಗಿಲ್ಲವೆಂದೇ ಹೇಳಬೇಕು. ಇಲ್ಲಿ ಬರುವ ಪಾತ್ರಗಳು ಜೀವನದಿಂದ ಒಡಮೂಡಿ ಬಂದವಲ್ಲ. ಕಾದಂಬರಿಯಲ್ಲಿ ವ್ಯಕ್ತವಾಗುವ ಘಟನೆಗಳು ಯಾವುದೋ ಲೆಕ್ಕಾಚಾರದ ಮೇಲೆ ನಿಯಂತ್ರಿತ ಗೊಂಡಿವೆ. ಪಾತ್ರಗಳ ಬೆಳವಣಿಗೆ, ಕಥಾಸರಣಿ, ಸಮಸ್ಯೆ ಗಳ ಆವಿಷ್ಕಾರ ಅದರ ಪರಿಹಾರ ಮುಂತಾದವುಗಳು ಕೃತ ಕತೆಯಲ್ಲಿಯೇ ಬೆಳಕು ಕಂಡಿವೆ. ಅಲ್ಲಲ್ಲಿ ಬರುವ ಘಟನೆ ಗಳು ಪತ್ತೆದಾರಿ ಕಾದಂಬರಿಗಳ ನಮೂನೆಯನ್ನು ಹೊಂದು ತ್ತವೆ. ಉದಾಹರಣೆಗೆ, ಖಾದರ್ ಮತ್ತು ಸುಲೋಚನಳ ಪ್ರಸಂಗ; ಖಾದರ್ ಮತ್ತು ಸೇಟ್ ಪ್ರಸಂಗ; ಪ್ರಕಾಶ ಮತ್ತು ಸವಿತಾ ಇವರ ಪ್ರಸಂಗ ಕೇವಲ ಅಪ್ರಬುದ್ಧತೆಯ ಪ್ರತೀಕವೆನಿಸಬಹುದು ಒಮ್ಮೊಮ್ಮೆ. ಗಂಗಾಧರಪ್ಪ, ಶಿವ ಶರಣಪ್ಪ ಸೀತಾರಾಮಯ್ಯ ಮುಂತಾದ ಪಾತ್ರಗಳಲ್ಲಿಯೂ ಈ ಅಂಶ ಎದ್ದು ಕಾಣುತ್ತದೆ. ಕರುಣಾಳ ಪ್ರೇಮ ಪ್ರಸಂಗ ವೊಂದು ಕರುಳು ಮಿಡಿಯುವಂತೆ ಚಿತ್ರಿತವಾಗಿದೆ. ದುರಾದೃಷ್ಟವಶಾತ್ ಅನಗತ್ಯ ವಿಷಯಗಳಿಂದ ಮರೆ ಯಾಗುತ್ತದೆ.

ಒಟ್ಟಿನಲ್ಲಿ ಈ ಕೃತಿ ಬಾಲಿಶ ಕೃತಿಯೆನ್ನಬಹುದು. ಹುಟ್ಟಿ ಬಂದ ಕೃತಿಯಲ್ಲ, ಕಟ್ಟಿದಕೃತಿ. ಶೈಲಿಯಲ್ಲಿ ಹೇಳಿಕೊಳ್ಳುವ ಅಂಶವೇನಿಲ್ಲ.

—ಎಂ. ಚಂದ್ರಶೇಖರ್

ಕಾರಣಪುರುಷ—ಲೇ : ಶ್ರೀ ರಂ. ಶ್ರೀ. ಮುಗಳಿ ; ಪ್ರ : ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟ ೧೦೩ ; ಬೆಲೆ ರೂ. ೪-೦೦

ಕನ್ನಡ ಸಾಹಿತ್ಯ ಚರಿತ್ರಕಾರರೂ, ಖ್ಯಾತ ಕವಿಗಳೂ, ವಿಮರ್ಶಕರೂ, ಪ್ರಾಧ್ಯಾಪಕರೂ ಆದ ಡಾ. ರಂ. ಶ್ರೀ. ಮುಗಳಿಯವರು ಕಾದಂಬರೀಕ್ಷೇತ್ರದಲ್ಲಿಯೂ ಕೈಹಾಕಿ ಯಶಸ್ವಿಗಳಾಗಿದ್ದಾರೆ. ಅವರ ಕಾದಂಬರಿಗಳು ಮೂರು-ಬಾಳುರಿ, ಕಾರಣಪುರುಷ ಮತ್ತು ಅನ್ನ. 'ಬಾಳುರಿ' ಯಲ್ಲಿ ಸುಶಿಕ್ಷಿತ ನಿರುದ್ಯೋಗ ಸಮಸ್ಯೆಯನ್ನೂ, 'ಕಾರಣ ಪುರುಷ'ದಲ್ಲಿ ಕರ್ನಾಟಕದ ಸಮಸ್ಯೆಯನ್ನೂ, 'ಅನ್ನ'ದಲ್ಲಿ ಹಾಹಾಕರ ಹಸಿವು ಅನ್ನಗಳ ಸಮಸ್ಯೆಯನ್ನೂ ವಸ್ತುವನ್ನಾಗಿಸಿಕೊಂಡಿದ್ದಾರೆ. ಈ ಮೂರು ಸಮಸ್ಯಾತ್ಮಕ ಕಾದಂಬರಿಗಳಲ್ಲಿ 'ಕಾರಣಪುರುಷ' ಮತ್ತು 'ಅನ್ನ' ಬೆಲೆಯುಳ್ಳ ಕೊಡುಗೆಯಾಗಿವೆ.

ಪ್ರಸ್ತುತ 'ಕಾರಣಪುರುಷ' ತನ್ನ ಐದನೆಯ ಮುದ್ರಣವನ್ನು ಕಂಡಿರುವುದು ಅದರ ಜನಪ್ರಿಯತೆಯನ್ನು ಸೂಚಿಸುತ್ತದೆ. ಕರ್ನಾಟಕದ ನಾಡು ನುಡಿ ಸಂಸ್ಕೃತಿಗಳಿಗೆ ಸಂಬಂಧಿಸಿದ ಈ ಕಾದಂಬರಿ ಇಂದಿಗೂ ವಿಚಾರಪ್ರವರ್ತಕವಾಗಿರುವುದಲ್ಲದೆ, ಅದರ ಪ್ರೇರಣೆ, ಪ್ರಚೋದನೆಗಳು ಮೂರು ದಶಕಗಳನಂತರ ಇಂದಿಗೂ ಅತ್ಯವಶ್ಯವೆನಿಸುತ್ತವೆ. ಅಂದಿನ ಕನ್ನಡ ನಾಡು ನುಡಿಯ ಶೋಚನೀಯ ಪರಿಸ್ಥಿತಿಯ ಪ್ರತ್ಯಕ್ಷ ಪರಿಚಯವನ್ನು ಮಾಡಿಕೊಟ್ಟು, ತತ್ಕಾಲೀನ ಪರಿಸ್ಥಿತಿಯಲ್ಲಿ ನಾಡು ನುಡಿಗಳನ್ನುದ್ಧರಿಸಿ, ಕನ್ನಡ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿಹಿಡಿದು ಬೆಳಗಬಲ್ಲ ಕಾರಣಪುರುಷನೊಬ್ಬನ ಬರವನ್ನು ಹಾರೈಸಿ, ಆಶಾವಾದವನ್ನು ಬಿತ್ತಿ, ಆ ದಿಸೆಯಲ್ಲಿ ನಡೆವ ಪ್ರಯತ್ನ, ಸಾಧನೆಗಳ ಚಿತ್ರಣ ಕಾದಂಬರಿಯಲ್ಲಿ ಪ್ರತಿಬಿಂಬಿಸಿದೆ.

ಈ ಹಂದರದೊಳಗೆ ಉತ್ಸಾಹೀ ತರುಣನೊಬ್ಬನ ಬದುಕಿನ ಹೋರಾಟದ ಸ್ಥೂಲ ಚಿತ್ರವೂ ನೆಯ್ದುಕೊಂಡಿದೆ. ಸುಶಿಕ್ಷಿತ ತರುಣ ವಾಮಣ್ಣ ಪದವೀಧರನಾಗಿ ವಿವಾಹ ಬಂಧನದಲ್ಲಿ ಸಿಲುಕಿ- ಆದರ್ಶ ಹಾಗೂ ವಾಸ್ತವ ಜೀವನದ ನಿರಂತರ ಹೋರಾಟದಲ್ಲಿ ಜರ್ಜರಿತನಾಗಿ, ಜೀವನ ನಿರ್ವಹಣೆಗಾಗಿ ನೌಕರಿಯ ಬೇಟೆಗೆ ತೊಡಗಿ, ತಾನು ನಿಂತ ನೆಲೆಯನ್ನು ತ್ಯಜಿಸಿ, ಪರನಾಡಿಗೆ ತೆರಳಿ ಅಲ್ಲಿನ ದುರ್ಭರ ಅನುಭವಗಳನ್ನೆಲ್ಲ ಮೈಗೂಡಿಸಿಕೊಂಡರೂ, ಒಮ್ಮೆ ಅನ್ಯಾಯವೊಂದನ್ನು ಪ್ರತಿಭಟಿಸ ಹೋಗಿ ಸಿಕ್ಕಿದ್ದ ಆಸರೆಯನ್ನೂ ಕಳೆದುಕೊಂಡು, ತನ್ನ ನಾಡಿಗೇ ಹಿಂದಿರುಗಿದ. ತನ್ನ ಬಾಳಿನ ಚಿರಂತನ ಕನಸಾಗಿದ್ದ ನಾಡು-ನುಡಿಗಳ ಏಳ್ಗೆಗಾಗಿ ಹುಚ್ಚು ಆವೇಶದಲ್ಲಿ ಕಾರ್ಯರಂಗಕ್ಕೆ ಧುಮುಕಿ ಅಲ್ಲಿನ ನಗ್ನಸತ್ಯವನ್ನು ಮನಗಂಡು, ಬದುಕಿನ ನವೋದಯವನ್ನು ಕಂಡುಕೊಳ್ಳುವನು. ತಮ್ಮದೇ ವಿಚಿತ್ರ ಸಮಸ್ಯೆಯಲ್ಲಿ ಸಿಲುಕಿ ತೊಳಲುತ್ತಿದ್ದರೂ ಅಲ್ಪ ಸಂದೇಶ, ಪ್ರೇರಣೆಗಳನ್ನು ನೀಡಿದ್ದ ಪ್ರೊ. ವೈಶಂಪಾಯನ (ಸತ್ಯಕಾಮರ ಪೂರ್ವಾಶ್ರಮ ನಾಮಧೇಯ), ಮರಳುಗಾಡಿನ ಓಯಸಿಸ್‌ನಂತೆ ವಾಮಣ್ಣನಿಗೆ ದೊರಕಿ, ಸತತ ಪ್ರೋತ್ಸಾಹದ ಚಿಲುಮೆಯಾಗಿದ್ದು ಕಾರಣಪುರುಷನ ಬರವನ್ನು ಹಾರೈಸಿ ಹಾಡಿದ ಕವಿ 'ಕನ್ನಡ ಕೋಗಿಲೆ' ಆನಂದಮೂರ್ತಿ, ನಾಡು-ನುಡಿಗಳ ಉದ್ಧಾರ ಏಕಮಾತ್ರ ವ್ಯಕ್ತಿಯಿಂದ ಅಸಾಧ್ಯವೆಂದರಿತೂ ಶ್ರಮಿಸಿ ನಿರಾಶರಾದ ಕಲ್ಯಾಣರಾಯರು-ಇವರ ಚಿತ್ರಣ ಜೀವಂತವಾಗಿವೆ. "ಕನ್ನಡ ಜನಕ್ಕೆ ಅನ್ನ ನೀರಿಲ್ಲದೆ ಕನ್ನಡನಾಡು ಬೆಳೆಯುವುದಿಲ್ಲ. ಕನ್ನಡ ನಾಡು ನುಡಿಗಳು ಬೆಳೆಯದೆ ಕನ್ನಡ ಜನಕ್ಕೆ ಅನ್ನ ನೀರಿಲ್ಲ, ಬದುಕಿಲ್ಲ, ಬೆಳಕಿಲ್ಲ" (ಪು. ೧೪೦) ಎಂದು ಲೇಖಕರು ಬಣ್ಣಿಸಿದ ಅಂದಿನ ವಿಷಮ ಚಕ್ರ ಇಂದು ಬದಲಾಗಿಲ್ಲವೆಂದು ಅನಿಸುತ್ತದೆಯಾದರೂ "ಕನ್ನಡಿಗರನ್ನು ಮಿಂಚು ಹೊಡೆದೆಬ್ಬಿಸುವ ಹಿರಿಗೆಲಸವಿದೆ. ಅದಕ್ಕೊಬ್ಬ ಮಹಾಯೋಜಕನು ಬೇಕು. ಆ ಕಾರಣಪುರುಷನು ಬರುವನು ಕನ್ನಡವು ಏಳುವುದು, ಬಾಳುವುದು" (ಪು. ೧೪೭) ಎಂಬ ಅವರ ಹೃದಯಾಂತರಾಳದ ಹಾರೈಕೆ, ಆಶಾವಾದ ಇಂದಿಗೂ ಅತ್ಯಗತ್ಯವಾಗಿದೆಯೆಂದು ಯಾರಿಗೂ ಅನಿಸೀತು. ಆಡಳಿತ ಭಾಷೆ, ಶಿಕ್ಷಣಮಾಧ್ಯಮಗಳಿಂದಲೇ ಕನ್ನಡ ನಾಡು-ನುಡಿ-ಸಂಸ್ಕೃತಿಗಳನ್ನು ಉದ್ಧರಿಸಿರುವೆವೆನ್ನುವ ಮನೋಭಾವವನ್ನೂ, ಕೃತಿಯಲ್ಲಿ ಕಾಣಿಸದೆ, ಕೇವಲ ಕನಸು ಕಾಣುವ ಕನ್ನಡಿಗರ ಜಡಪ್ರವೃತ್ತಿಯನ್ನೂ, ಬಾಯಿಮಾತಿನ ಒಣಸತ್ತ್ವವನ್ನೂ ಕಂಡಾಗ "ನಾನು ಕನಸು ಗಂಡ ಆ ಕಾರಣಪುರುಷನು ಇನ್ನೂ ಬಂದಿಲ್ಲ" ಎಂದು ಲೇಖಕರು ಈ ಮುದ್ರಣದ ಮುನ್ನುಡಿಯಲ್ಲಿ ಸಂದೇಹಿಸಿರುವುದು ಯಥಾರ್ಥವೆನಿಸಿದೆ. "ಕನ್ನಡದ ಅನ್ಯಾಯವನ್ನು ತೊಡೆಯುವುದರಲ್ಲಿ ಅನ್ಯರಿಗೆ ಅನ್ಯಾಯವಾಗಕೂಡದು. ಕನ್ನಡದ ಚಳುವಳಿಯಲ್ಲಿ ಭಾರತದ, ಅದೇಕೆ, ಮಾನವ ಜಾತಿಯ ಹಿತವಿದೆ." (ಪು. ೧೫೧) ಎಂಬ ವಿಶಾಲ ಭಾವನೆಯನ್ನು, ಮನೋಧರ್ಮವನ್ನು ಬಿತ್ತಿ, ಕಾರ್ಯರಂಗಕ್ಕಿಳಿಯಲು ಕಾದಂಬರಿ ಪ್ರೇರಣೆ ನೀಡುವಂತಿದೆ. ಒಟ್ಟಿನಲ್ಲಿ, 'ಕಾರಣಪುರುಷ' ಉತ್ತಮ ವಿಚಾರಪ್ರವರ್ತಕ ಕಾದಂಬರಿಯೆಂಬುದರಲ್ಲಿ ಸಂದೇಹವಿಲ್ಲ.

* * *

ಕಲಾದರ್ಶಿ—ಲೇಖಕಿ: ಶ್ರೀಮತಿ ಎಂ. ಕೆ. ಇಂದಿರಾ; ಪ್ರ: ಗೀತಾ ಪಬ್ಲಿಕೇಷನ್ಸ್, ಬೆಂಗಳೂರು. ಪುಟ ೨೬೦; ಬೆಲೆ ರೂ. ೩-೫೦

ಜನಪ್ರಿಯ ಕಾದಂಬರಿಕಾರ್ತಿಯಾದ ಶ್ರೀಮತಿ ಎಂ. ಕೆ. ಇಂದಿರಾ ಅವರ 'ಕಾಲ್ಪನಿಕ ಕೃತಿ'ಯಾದ "ಕಲಾದರ್ಶಿ" ಹೆಸರೇ ಸೂಚಿಸುವಂತೆ ಕಲೆಯನ್ನು, ಚಿತ್ರಕಲಾವಿದನೊಬ್ಬನ ಜೀವನ ಲಹರಿಯನ್ನು ವಸ್ತುವನ್ನಾಗುಳ್ಳ ಕಾದಂಬರಿ. ನಾಯಕ ಕಿಟ್ಟು ತನ್ನ ಕಲಾದರ್ಶಿ (ರೂಪದರ್ಶಿ ?)ಗಾಗಿ ಶೋಧೆ ನಡೆಸಿ, ಕಡೆಗೊಮ್ಮೆ ಮಲೆನಾಡಿನ ಹಿರೇತೋಟದ ರಮ್ಯಪ್ರಕೃತಿ ಸೌಂದರ್ಯದ ನಡುವೆ ತನ್ನ ಬಂಧುಗಳೊಡನೆ ವಾಸಿಸುತ್ತಿದ್ದ ಮುಗ್ಧ ಮನಸ್ಸಿನ ಬಾಲಿಕೆ ಚಿನ್ನಾ(ಪಾಪಚ್ಚಿ)ಳನ್ನು ಕಂಡು, ಮೆಚ್ಚಿ ಬಾಳ ಸಂಗಾತಿಯನ್ನಾಗಿಸಿಕೊಂಡುದು ಸ್ಥೂಲ ಕತೆ. ಮಲೆನಾಡಿನಲ್ಲಿ ಕಲಾವಿದ ಕಿಟ್ಟು ಕಳೆದ ೮-೧೦ ದಿನಗಳ ಅನುಭವವೇ ೨೬೦ ಪುಟಗಳ ಕಾದಂಬರಿಯಲ್ಲಿ ೨೦೦ ಪುಟಗಳನ್ನಾಕ್ರಮಿಸಿ, ಅವನು ತನ್ನ ಕಲಾದರ್ಶಿತ್ವದ ಗುಣಗಳನ್ನು-ಬೇರೆಯವರ ಪಾಲಿಗೆ ತಿರಸ್ಕೃತೆ, ಹಾಸ್ಯಾಸ್ಪದೆ, ಮಂಕಳೆಂದೆಲ್ಲಾ ಅನಿಸಿಕೊಂಡರೂ ಮುಗ್ಧೆ ಚಿನ್ನಾಳಲ್ಲಿ ಗುರುತಿಸಿ, ಅವಳ ಮೌಢ್ಯವನ್ನು ಹೋಗಲಾಡಿಸಿ ನಾಗರಿಕ ಜೀವನ ಸಂಪರ್ಕದಿಂದ ಅವಳ ಬಾಳನ್ನು ಪರಿವರ್ತಿಸಿ, ತನ್ನ ಕಲೆಯ ಬೆಳವಣಿಗೆಗೆ ಸಹಾಯಕಳನ್ನಾಗಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬರುವ ನೆಲಸನ್ನೊಳಗೊಂಡಿದೆ; ಮುಂದಿನದು ಅದರ ಸಾಫಲ್ಯತೆಗೆ ರಚಿಸಲ್ಪಟ್ಟ ಭೂಮಿಕೆ.

ಕಥನ ಕಲೆಯನ್ನು ಸಾಕಷ್ಟು ಕರಗತಮಾಡಿಕೊಂಡಿರುವ ಅನುಭವೀ ಲೇಖಕಿಯರಾದ ಇಂದಿರಾ ಅವರು ಮಲೆನಾಡಿನ ಹಲವು ಪ್ರಾಕೃತಿಕ ನೋಟಗಳನ್ನು, ಅಲ್ಲಿನ ಜನಜೀವನವನ್ನು, ಸೌಜನ್ಯಪೂರ್ಣ ಸರಳ ಕೌಟುಂಬಿಕ ಚಿತ್ರಗಳನ್ನು ಕುರಿತು ಓದುಗರಿಗೆ ಸಮರ್ಥ ಶೈಲಿ ಹಾಗೂ ಒಪ್ಪುವ ಭಾಷೆಯಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. 'ತನ್ನ ಬದುಕಿನಲ್ಲಿ ದೊರೆಯಲಾರದು ಎಂದುಕೊಂಡಿದ್ದ ಒಂದು ಅಪೂರ್ವ ವಸ್ತು'–'ಕಲೆಯ ಕೇಂದ್ರ ಬಿಂದುವಾಗಿದ್ದ ಒಂದು ಪ್ರಮಾಣ ಬದ್ಧ ಅಂಗರೇಖೆ'–'ಅದೂ ಯುವತಿಯ ಅಂಗರೇಖೆ' (ಪು. ೧೧) [–ಇದು ಅಂಗಾಂಗರೇಖೆ (Figure) ಯೋ ಅಥವಾ ಅಂಗಸೌಷ್ಠವವೋ ಸಂದೇಹವಾಗಿಯೇ ಉಳಿದಿದೆ; ಏಕೆಂದರೆ ಅಂಗರೇಖೆ ಜ್ಯೋತಿಷಿಗೆ ಮಾತ್ರ ಸಹಾಯಕವಲ್ಲದೆ ಕಲಾವಿದನಿಗೆ ಹೇಗೆ ನೆರವಾದೀತೋ ತಿಳಿಯದು–]ಯನ್ನು ಹಲವು ವರ್ಷಗಳಿಂದ ಹುಡುಕುತ್ತಿದ್ದರೂ ಮಲೆನಾಡಿನ ಮುಗ್ಧ ಬಾಲೆಯಲ್ಲಿ ಕಂಡು-ಅದೂ ಪ್ರಥಮದರ್ಶನದಲ್ಲಿಯೇ-(ಆಗಿನ್ನೂ ಅವಳಿಗೆ ವಯಸ್ಸು ಹದಿನಾಲ್ಕು) ಅನೇಕ ವರ್ಷಗಳಿಂದ ಹುಡುಕುತಿದ್ದ ಅಪೂರ್ವ ಚೈತನ್ಯ ಈ ಹುಡುಗಿಯಲ್ಲಿ ಅಡಗಿದೆ' (ಪು. ೫೩) ಎಂದು ನಿರ್ಧರಿಸಿ, ಅವಳ ವಿಲಕ್ಷಣ ಗುಣಕ್ಕೆ ವಿಸ್ಮಿತನಾದರೂ 'ನನ್ನ ಪಾಪಚ್ಚಿ' (ಪು. ೪೫) ಎಂದು ಕಥೆಯುದ್ದಕ್ಕೂ ನಿರ್ದೇಶಿಸುವಾಗಲೇ ನಿರೀಕ್ಷಿತ ಅಂತ್ಯವನ್ನು ಊಹಿಸಲು ಸಹಾಯಕವಾಗಿ, ಕಾದಂಬರಿ ಕೊನೆಯವರೆಗೂ ಕುತೂಹಲವನ್ನು ಕಾಯ್ದಿರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿಲ್ಲ. ಆದರೆ, 'ಕಾಮಿಯಾಗಿ, ಪ್ರೇಮಿಯಾಗಿ ಹುಡುಗಿಯನ್ನು ನೋಡುತ್ತಿರಲಿಲ್ಲ, ಕಲಾವಿದನಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ' (ಪು. ೨೩) ಎನ್ನುವ ರೂಪಾರಾಧಕನೇ 'ನಿನಗೊಂದು ಮುತ್ತು ಕೊಡಲಾ ಚಿನ್ನಾ' (ಪು. ೯೦) ಎಂದಾಗ, ೨೪ ವರ್ಷದ ಯುವಕ ೧೪ ವರ್ಷದ ಬಾಲೆಯನ್ನು 'ನನ್ನ ಮದುವೆ ಮಾಡ್ಕೊಳ್ತೀಯಾ' (ಪು. ೧೧೮) ಎಂದು ಪ್ರಶ್ನಿಸುವಾಗ ವಿಸ್ಮಯವಾಗುತ್ತದೆ. 'ಕಲೆ ಒಂದು ತಪಸ್ಸು' (ಪು. ೯೫) ಎಂದು ನಂಬಿದ ಈ ಕಲಾವಿದನೇ ಮುಂದೆ ತನ್ನ ಕಲಾದರ್ಶಿಯ ವಯಸ್ಸು ದೇಹ ಬೆಳೆದಿದ್ದರೂ ಮನಸ್ಸು ಬೆಳೆದಿಲ್ಲ ಎಂಬುದರ ಪಡಿನೆಳಲನ್ನು ಚಿತ್ರಿಸುವುದನ್ನೇ 'ನನ್ನ ಸಾಧನವಾಗಲಿ, ಗುರಿಯಾಗಲಿ, ತಪಸ್ಸಾಗಲಿ!' (ಪು. ೧೯೯) ಹಾಗೂ 'ಅವಳು ನನಗೆ ಸಿಗದಿದ್ದರೆ ನನ್ನ ಕಲೆ ಸತ್ತಂತೆ' (ಪು. ೧೨೪) ಎಂದೆಲ್ಲ ನಿರ್ದೇಶಿಸುವಾಗಲೇ ಅವನ ಕಲೆಯ ಹಿರಿಮೆಯ ದರ್ಶನ, ಧ್ಯೇಯದ ಸಂಕುಚಿತತೆ ಹಾಗೂ ಸಾಫಲ್ಯತೆಯ ಸಾಧನದ ದುರ್ಬಲತೆಗಳು ಗೋಚರವಾಗುತ್ತವೆ. ಮೌನಿ, ಮುಗ್ಧೆ ಎನಿಸಿದ ಬಾಲೆಯು 'ಕಲಾದರ್ಶಿ' ಹಾಡು ಹೇಳೆಂದರೆ, ಹದಿನಾಲ್ಕನೆಯ ವಯಸ್ಸಿಗೇ 'ನಲಿಝೂಂಡ ತಲೆಯ ತೂಗೆ. . .' (ಪು. ೧೨೬) ಎಂಬ ಕೃಷ್ಣ ರಾಸ ಕ್ರೀಡೆಯ ಮಟ್ಟನ್ನೋ, 'ಉರಟಣೆ'ಯ ಹಾಡಾದ 'ಆಡೋಣ ಬಾರೋ ಪ್ರಿಯಾ. . .' (ಪು. ೧೮೩) ಎಂದೋ ಹೇಳಲಾರಂಭಿಸಿದಾಗ, ಕಾದಂಬರಿಕಾರ್ತಿಯರೂ ಸಹ ಸ್ವಲ್ಪ ಎಡವಿದ್ದಾರೆ ಎನ್ನಲೇಬೇಕಾಗುತ್ತದೆ. ಹದಿನಾರನೆಯ ಅಧ್ಯಾಯದಲ್ಲಿ ಏಕಾಗ್ರತೆಯ ಅಭಾವದಿಂದಾಗಿ, ಬಹು ಸಡಿಲತೆ ತಲೆದೋರಿದೆ. ಕಾಮ, ಪ್ರೇಮಾದಿಗಳೆಂದು ಮೊದಲಾಗಿ, ಕಾದಂಬರಿಯ ಕತೆಯ ವಸ್ತುಗಳು ಸಾರ್ವತ್ರಿಕವಾಗಿ ಅವುಗಳೇ ಆಗಿವೆ ಎಂದು ವಾಸ್ತವ ವಸ್ತು ವಿಮರ್ಶೆಯಲ್ಲಿ ತೊಡಗಿ, ಚಿತ್ರಕಲೆಯ ದುರವಸ್ಥೆಯನ್ನೂ ಚಿಂತಿಸಿ, ದಕ್ಷಿಣ, 'ಜಕ್ಕಣ' ಪದಸಂಬಂಧಿ ಭಾಷಾಶಾಸ್ತ್ರ ಚರ್ಚೆಗೆ ಧುಮುಕಿ, ನಾಯಕನ ಸ್ವಕೀಯ ವಿಚಾರಧಾರೆಗೆ

ಮರಳಿ ಪುನರಾರಂಭಿಸುವಾಗ ಕೇವಲ ಸ್ವ-ಅಭಿಪ್ರಾಯಗಳ ಸಂಗ್ರಹವಾಗಿದೆಯೆನಿಸುತ್ತದೆ (೧೨೦-೧೨೫). ಒಮ್ಮೊಮ್ಮೆ "ಸತ್ಯ-ಧರ್ಮ, ಪಾಪ-ಪುಣ್ಯ, ಸ್ವರ್ಗ-ನರಕಗಳ ಬಗ್ಗೆ ಸಾಸಿವೆಯಷ್ಟೂ ನಂಬಿಕೆ ಇಲ್ಲದ ಈ ಕಾಲದಲ್ಲಿ ನಾವೇಕೆ ಅದನ್ನು ಕಟ್ಟಿಕೊಂಡು ಅಳಬೇಕು?" (ಪು. ೧೪೪) ಎನ್ನುವ ವಿಚಿತ್ರ ಉಪದೇಶವೂ ದೊರೆಯುತ್ತದೆ. ಪುಟ ೧೩೩-೩೪ರ ವಿವರಣೆಗಳು ಸ್ವಲ್ಪ ಅತಿಯೆನಿಸುತ್ತವೆ. ಕೆಲವೆಡೆ ನಾಯಕನ ಮಲೆನಾಡಿನ ದೈನಂದಿಕ ದಿನಚರಿಯು ಸುದೀರ್ಘವಾಗಿ ಬೆಳೆದು (Minutest details of routine) ರಸವಿಹೀನವಾಗಿ ಕೇವಲ ವರದಿಯಾಗುಳಿದಿವೆ. ಮಲೆನಾಡಿನ ಗ್ರಾಮ್ಯ ಉಚ್ಚಾರಣೆಗಳಿಗೆ ಪರ್ಯಾಯ ಸೂಚಿಯನ್ನೋ ಅರ್ಥವಿವರಣೆಯನ್ನೋ ಕೊನೆಯಲ್ಲಿ ನೀಡಿದ್ದಲ್ಲಿ ಹೆಚ್ಚಿನ ಉಪಕಾರವಾಗುತ್ತಿತ್ತು. ಮುದ್ರಾರಾಕ್ಷಸನ ಹಾವಳಿಯಂತೂ ಹೆಚ್ಚೆನ್ನುವಷ್ಟಿದೆಯೆಂದು ವಿಷಾದಿಸಬೇಕಾಗಿದೆ.

ಆದರೂ ಕೌಟುಂಬಿಕ ಚಿತ್ರಣಗಳ ರಚನೆಯಲ್ಲಿ ಶ್ರೀಮತಿಯವರದು ಎತ್ತಿದ ಕೈ. ಕಾದಂಬರಿಯ ನಾಯಕನ ಅತ್ತಿಗೆಯ ("ಸಂಜೆ ಆಯ್ತೂಂದ್ರೆ ಹೆಂಡ್ತಿ ಮಗ್ಗುಲಲ್ಲಿ ಹೊಕ್ಕೊಳ್ಳೋದು ಇದ್ದೇ ಇರುತ್ತೆ" (ಪು. ೧೪೭) ಎಂದು ಮೈದುನನೊಂದಿಗೆ ಬಿಚ್ಚುಮನಸ್ಸಿನ ಮಾತು ಆಡಬಲ್ಲ ನೇರಸ್ವಭಾವದವರಾದರೂ) ವಿಶ್ವಾಸ ಸೌಜನ್ಯಗಳು, ತಾಯಿ-ತಂದೆ-ಸೋದರ, ವೃದ್ಧ ಶೇಷಪ್ಪ, ಶಂಕರಭಟ್ಟ, ಪೈಗಳು ಇವರ ವ್ಯಕ್ತಿಚಿತ್ರಗಳು ಚಿಕ್ಕವಾದರೂ ಚೊಕ್ಕವಾಗಿ ಜೀವಂತವೆನಿಸಿವೆ.

"ಯಾವ ಕತೆ, ಕಾದಂಬರಿ, ನಾಟಕ, ಸಿನಿಮಾ ನೋಡಿದರೂ ಕಾಮ, ಪ್ರೇಮ, ಪ್ರಣಯಗಳ ಹಾವಳಿ . . . ಅದರಲ್ಲೇ ಆದಿ ಅಂತ್ಯ" (ಪು. ೧೯೧) ಎನ್ನುವ ಕಾದಂಬರಿಕಾರ್ತಿಯವರ ಅಭಿಪ್ರಾಯವನ್ನು ಒಪ್ಪಿಕೊಳ್ಳದೆ ನಿರ್ವಾಹವಿಲ್ಲವಾದರೂ ಅವರ ಈ ಕಾದಂಬರಿ ಅದಕ್ಕೆ ಯಾವ ಬಗೆಯಲ್ಲಿ ಹೊರತಾಗಿದೆಯೆಂದು ಪ್ರಸ್ತುತ ವಿಮರ್ಶಕನಿಗಂತೂ ಅರ್ಥವಾಗುತ್ತಿಲ್ಲ. ಒಟ್ಟಿನಲ್ಲಿ 'ಕಲಾದರ್ಶಿ' ಓದುಗರನ್ನು ರಂಜಿಸುವುದರಲ್ಲಿ ಸಂದೇಹವಿಲ್ಲ. ಅವರಿಂದ ಇನ್ನೂ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ.

—'ಸುಮನಾ'

ಮಾತನಾಡಿದ ಗಿಳಿ—ಲೇ: ಶ್ರೀ ಪರಮೇಶ್ವರ; ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ನಿಯಮಿತ, ಬೆಂಗಳೂರು-೧೪. ಪುಟ ೨೭; ಬೆಲೆ ರೂ. ೧-೦೦

ಮಕ್ಕಳಿಗಾಗಿ ಬರೆದ "ಮಾತನಾಡಿದ ಗಿಳಿ", "ಸ್ವಾರ್ಥದ ಫಲ" ಮತ್ತು "ಹೊಗಳಿಕೆಯ ಬೆಲೆ" ಎಂಬ ಮೂರು ಕಥೆಗಳನ್ನೊಳಗೊಂಡ ಪುಟ್ಟ ಪುಸ್ತಕವಿದು. ಆಸೆ ದುರಾಸೆಗಳು, ಸ್ವಾರ್ಥ ಸಾಧನೆಗಳು ಹೇಯ ಗುಣಗಳೆಂದು ಸಾರುವುದರಲ್ಲಿ ಈ ಕಥೆಗಳು ಸಾರ್ಥಕ ಹೊಂದಿವೆ. ಚಿತ್ರಗಳು ಪುಸ್ತಕದ ವೈಶಿಷ್ಟ್ಯವನ್ನು ಹೆಚ್ಚಿಸುತ್ತವೆ.

*　　　*　　　*

ಕನ್ನಡ ನಾಡಿನ ಕಲಿ—ಲೇ: ಶ್ರೀ ದೇ. ಜವರೇಗೌಡ; ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ನಿಯಮಿತ, ಬೆಂಗಳೂರು-೧೪. ಪುಟ ೨೪; ಬೆಲೆ ರೂ. ೧-೦೦

"ದೇಶಕ್ಕಾಗಿ ಅಸುತೆತ್ತು ಕಾವ್ಯಕ್ಕೆ ವಸ್ತುವಾದ, ಶಾಸನಗಳಲ್ಲಿ ಉಲ್ಲೇಖಿತನಾದ, ಚರಿತ್ರೆಯಲ್ಲಿ ವಂದ್ಯನಾದ, ಜಾನಪದ ಗೀತೆಗಳಲ್ಲಿ ಸಾವಿಲ್ಲದ ಸ್ಥಾನವನ್ನು ಪಡೆದ" ಕನ್ನಡದ ಕಲಿ ಕುಮಾರ ರಾಮನ ಕಥೆಯಿದು. ಈ ವೀರ ರಸಭರಿತ ಕಥೆಯನ್ನು ಪ್ರಾಧ್ಯಾಪಕ ದೇ. ಜವರೇಗೌಡ ಅವರು ತಮ್ಮದೇ ಆದ ಚಿತ್ತಾಕರ್ಷಕ ಶೈಲಿಯಲ್ಲಿ ಕನ್ನಡನಾಡಿನ ಎಳೆಯರಿಗೆ ಹೇಳಿದ್ದಾರೆ. ಒಗ್ಗಟ್ಟಿನ ಅಭಾವದಿಂದ ನಾಡು ಪರಕೀಯರ ಪಾಲಾದುದನ್ನೂ ಈ ಕಥೆ ಹೇಳುತ್ತದೆ. ನಾಡಿನ ಕಿರಿಯರಲ್ಲಿ ರಾಷ್ಟ್ರ ಪ್ರೇಮ ಮತ್ತು ಐಕ್ಯತಾ ಮನೋಭಾವ ಮೂಡಿಸಿ ಬೆಳೆಸುವುದರಲ್ಲಿ ಈ ಪುಟ್ಟ ಪುಸ್ತಕ ಪ್ರಶಂಸನೀಯ ಸಾಫಲ್ಯ ಪಡೆದಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಪುಸ್ತಕವೂ ಸಚಿತ್ರ-

—ಸೂ. ಸುಬ್ರಹ್ಮಣ್ಯಂ

ಸಂದರ್ಶನ (ಕಥಾ ಸಂಕಲನ)—ಲೇ: ಪ್ರೊ. ವಿಶ್ವನಾಥ ಕಾರ್ನಾಡ, ಎಂ.ಎ., ಭಾಷಾರತ್ನ; ಪ್ರ: ಪ್ರೇಕ್ಷಕ ಪಬ್ಲಿಕೇಶನ್ಸ್, ಮುಂಬಯಿ. ಪುಟ ೧೨೮; ಬೆಲೆ ರೂ. ೨-೮೦

ಪ್ರೊ. ಕಾರ್ನಾಡರ ಈ ಕಥಾ ಸಂಕಲನ ಹನ್ನೊಂದು ಕತೆಗಳನ್ನೊಳಗೊಂಡ ಒಂದು ಪ್ರಯೋಗ. ಸ್ತ್ರೀ ಪುರುಷ ಸಾಮಾಜಿಕ ಸಮಸ್ಯೆಗಳು, ಪ್ರಣಯ-ತ್ಯಾಗ, ಸಾಂಸಾರಿಕ ಕಷ್ಟತಾಪತ್ರಯಗಳು ಪ್ರಚಲಿತ ಕಾರ್ಮಿಕ ಸಮಸ್ಯೆ, ಆಹಾರ, ಅಂಧಶ್ರದ್ಧೆ ಇವೇ ಕುರಿತಾದ ಹಲವಾರು ವಿಚಾರಗಳನ್ನು ತಮ್ಮ ಕಥಾ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ.

ಶ್ರೀ ಕಾರ್ನಾಡರಿಗೆ ತುಂಬ ಉತ್ಸಾಹವಿದೆ. ಭಾವನೆಗಳ ಮೇಲೆ ನಿಯಂತ್ರಣವಿದೆ. ಭಾಷಾ ಮಾಧ್ಯಮ

ವನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿದ್ದಾರೆ. ಆದರೆ ದುರಂತ ಚಿತ್ರಣದ ಕಡೆ ಒಲವು, ಅಸಾಧ್ಯವಾದ ಆದರ್ಶ ಸಾಧನೆಗಳು ಇವು ಕತೆಯ ಓಟದಲ್ಲಿ ತಡೆಯನ್ನುಂಟು ಮಾಡಿವೆ. ಲೇಖಕರಿಗೆ ಕಥನಕಲೆ ಸಾಧಿಸಿದ್ದರೂ ಪಕ್ವ ಸಾಲದು, ಕತೆಗಳಲ್ಲಿ ನೀತಿಯು ಅವಶ್ಯಕವಿದ್ದರೂ ಪಾಠ ಗಳಂತೆ ಆದರೆ ಬೇಸರ ತಂದೀತು.

ಕಥಾ ವಸ್ತುವಾಗಿ ಲೇಖಕರು ನಾನಾ ಕ್ಷೇತ್ರಗಳನ್ನು ಆಯ್ದುಕೊಂಡಿದ್ದರೂ, ಕಥೆಯ ಜಾಡು ಒಮ್ಮುಖವಾಗಿರು ವುದು ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ. ನೇರವಾಗಿ ಕಥೆ ಹೇಳಿದರೂ ಕಥನ ಕಲೆಗೂ ಸ್ವಲ್ಪ ಗಮನ ಕೊಡು ವುದು – ಅತ್ಯವಶ್ಯ. ಶೈಲಿ ಮತ್ತೂ ಹದವಾಗಿ, ಅನುಭವ ಮತ್ತೂ ನವಿರಾದಲ್ಲಿ ಈ ಲೇಖನದಿಂದ ಭವಿಷ್ಯದಲ್ಲಿ ನಾವು ಉತ್ತಮ ಗ್ರಂಥಗಳನ್ನು ಆಶಿಸಬಹುದು. ಪುಸ್ತಕದಲ್ಲಿ ಅಚ್ಚಿನದೋಷಗಳು–ಲೇಖಕರದ್ದು, ಮುದ್ರಕರದ್ದೂ ಕೂಡಿ ಸಾಕಷ್ಟು ಹಾವಳಿಯನ್ನೆಬ್ಬಿಸಿವೆ. ಹೊತ್ತಿಗೆಯ ಅಚ್ಚು ಕಟ್ಟು ಚೆನ್ನಾಗಿದೆ. ಮುಂಬಯಿಯಿಂದ ಕನ್ನಡ ಸೇವೆ ಮಾಡುತ್ತಿರುವ ಲೇಖಕರಿಗೂ, ಪ್ರಕಾಶಕರಿಗೂ ನಮ್ಮ ವಂದನೆ.

—ಡಿ. ಮಾಧವಮೂರ್ತಿ

ವಿಮರ್ಶೆಯಿಲ್ಲದೆ ಕಾವ್ಯ ಬೆಳೆಯುವಂತೆಯೇ ಇಲ್ಲ. ಯಾವ ಪೈರನ್ನು ಬೆಳಸಬೇಕಾದರೂ ದೋಹಳಕ್ರಿಯೆ ಆವಶ್ಯಕ. ಕಾವ್ಯದ ದೋಹಳಕ್ರಿಯೆ ವಿಮರ್ಶೆ. ವಿಮರ್ಶೆ ಮನಸ್ಸಿಗೆ ಕ್ಲೇಶವನ್ನು ತರುವುದು ವಿಮರ್ಶಕನು ತಿರ ಸ್ಕಾರ ಭಾವವನ್ನೂ ಸ್ವಪ್ರತಿಷ್ಠೆಯನ್ನೂ ಮೆರಸವೆಳೆಸುವಾಗಲೇ ಹೊರತು ಸತ್ಕಾವ್ಯ ಪ್ರೀತಿಯಿಂದ ಪ್ರವೃತ್ತನಾದಾಗಲಲ್ಲ. ಸೌಂದರ್ಯದ ಅಂತರ್ಮುಖ ವಾದ ಸತ್ಯಕ್ಕೆ ಕಾವ್ಯ ಆಶ್ರಯವಾಗಿದೆಯೇ, ಇದೊಂದು ಆತ್ಮಕಿರಣ ಪ್ರಸಾರ ಕಾಂತಃಕರಣ ಕಾಂತಕ್ಷೇತ್ರವೇ, ಇದರಿಂದ ನಾಡಿನ ಆತ್ಮೈಶ್ವರ್ಯ ಬೆಳೆಯುತ್ತದೆಯೇ, ಸಂತೋಷ ಸತ್ಪ್ರೋಲ್ಲಾಸಗಳಿಗೆ ಇದರಿಂದ ವೃದ್ಧಿಯೇ ಹ್ರಾಸವೆ? ಇದೀಗ ವಿಮರ್ಶಾ ವಸ್ತು. ನಿರ್ಮಲ ಮನಸ್ಸಿನ ಕುಶಲ ವಿಮರ್ಶಕನಿಂದ ಮಾತ್ರ ಈ ಪ್ರಶ್ನೆಗಳಿಗೆ ಸದುತ್ತರ ಲಭಿಸಬೇಕಾದರೆ.

—ಪು. ತಿ. ನ.

(ಕಾವ್ಯಕುತೂಹಲದಿಂದ)

ಕವಿತ್ರೆ

ಪ್ರಭಾತಕಾಲ—ಲೇ: ಶ್ರೀ ನಾರಾಯಣರಾವ್ ಶಿಂಥೆ; ಪ್ರ: ಗೌರಿಶ್ರೀ ಪ್ರಕಾಶನ, ಬೆಂಗಳೂರು-೩೭. ಪುಟ ೬೩; ಬೆಲೆ ರೂ. ೦-೭೫

ಇದು ಮಕ್ಕಳ ಪದ್ಯಗಳ ಒಂದು ಸಂಕಲನ. ಇದರಲ್ಲಿ ಇಪ್ಪತ್ತೊಂದು ಗೀತಗಳಿವೆ. ಮಾತ್ರಾಗಣ ಘಟಿತವಾಗಿ ಹಾಡಲು ಅಂದವಾಗುವ ಕವನಗಳಿವು. ರಚನೆಯಲ್ಲಿ ವಿಷಯದಲ್ಲಿ ವೈವಿಧ್ಯವಿದೆ. ಕೆಲವು ಸ್ವತಂತ್ರವೂ ಕೆಲವು ಹಿಂದೀ-ಇಂಗ್ಲಿಷ್ ಕವಿತೆಗಳ ಅನುವಾದಗಳೂ ಆಗಿವೆ. ಮಕ್ಕಳಿಗಾಗಿರುವ ಇಲ್ಲಿನ ಪದ್ಯಗಳಲ್ಲಿ ಕೆಲವೆಡೆ ಪ್ರೌಢರಿಗೂ ಕಠಿಣವೆನಿಸಬಹುದಾದ ಸಂಸ್ಕೃತ ಶಬ್ದಗಳು ಮತ್ತು ಸಮಾಸ ಪದಗಳು ಬಂದಿವೆ. 'ಮಯೂರಾರೋಹಿತ ದೃಶ್ಯಮನೋಹರ,' 'ನಿರಭಿಮಾನ ಭಯರಹಿತ ಧುರಂಧರ,' 'ಕೃಷ್ಣಮೇಘ ದಾಷಾಢ'-ಇತ್ಯಾದಿ. ಶಬ್ದದೋಷಗಳಿಗೂ ಕೊರತೆಯಿಲ್ಲ-ಕಾಬುತಲ, ತೊಡವು, ನಾಗರಪಂಚಮೆ-ಮುಂತಾದುವು. 'ಉಯ್ಯಾಲಾಡುವ' ಎಂಬ ಅರ್ಥದಲ್ಲಿ "ಉಯ್ಯಾಲುವ" ಬಂದಿದೆ. 'ಮಯೂರಾರೋಹಿತ'-ಎಂದುದು ಸರಸ್ವತಿಯ ಮೇಲೆ ನವಿಲು ಕುಳಿತುದನ್ನು ಸೂಚಿಸುವುದು. ಪ್ರೊ. ಎಸ್. ಆರ್. ಮಳಗಿಯವರು ಲೇಖಕರನ್ನೂ ಅವರ ಕವನಗಳನ್ನು ಹಾಡಿದಾಗ ಆದ ರಮ್ಯತೆಯನ್ನೂ ಪರಿಚಯ ಮಾಡಿದ್ದಾರೆ.

* * *

ಕಾಲ-ಕವಿ (ಕವನ ಸಂಕಲನ)—ಪ್ರ: ಬಸವೇಶ್ವರ ಆರ್ಟ್ಸ್ ಸೈನ್ಸ್ ಕಾಲೇಜುಗಳ ಕರ್ಣಾಟಕ ಸಾಹಿತ್ಯ ಸಂಘ, ಬಾಗಲುಕೋಟಿ. ಪುಟ ೪೦; ಬೆಲೆ ರೂ. ೦-೭೫

ವಿಜಾಪುರ ಜಿಲ್ಲೆಯ ಕವಿಸಮ್ಮೇಳನವು ೧೫-೯-೬೭ ರಲ್ಲಿ ಶ್ರೀ ಚನ್ನವೀರ ಕಣವಿಯವರ ಅಧ್ಯಕ್ಷತೆಯಲ್ಲಿ ನಡೆದಾಗ, ಭಾಗವಹಿಸಿದ ಆಧುನಿಕ ಕವಿಗಳ ಕವನ ಸಂಕಲನವಿದು. ಅಧ್ಯಕ್ಷರದಲ್ಲದೆ ಇತರ ಹತ್ತುಮಂದಿ ಕವಿಗಳ ರಚನೆಗಳು ಇಲ್ಲಿವೆ. ಶ್ರೀ ಸಿಂಪಿ ಲಿಂಗಣ್ಣನವರ "ಎಲ್ಲಿದೆ ತಪ್ಪು?" ಎಂಬುದು ಮಾತ್ರಾಛಂದಸ್ಸಿನಲ್ಲಿ ರಚಿತವಾಗಿದೆ. ಉಳಿದ ಎಲ್ಲವುಗಳ ದಾರಿ ನವ್ಯವಾಗಿ ರಸವತ್ತಾಗಿದೆ.

* * *

ಹೇಮರೆಡ್ಡಿ ಮಲ್ಲಮ್ಮನ ಚರಿತ್ರಸಾರ—ಲೇ: ಮಹಾರುದ್ರಮ್ಮ ಮಹಾಲಿಂಗಪ್ಪ, ಮಿರ್ಜಿ (ಪುರಾತನರ ಕಂದ); ಪ್ರ: ಗುರುಸಿದ್ದಪ್ಪ ಮಹಾಲಿಂಗಪ್ಪ ಮಿರ್ಜಿ ಆಡ್ವೊಕೇಟ್, ಹುಬ್ಬಳ್ಳಿ. ಪುಟ ೭೫ + ೪

ಕನ್ನಡಿಗರ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಚರಿತ್ರೆಯನ್ನು ಷಟ್ಪದಿ ಕಾವ್ಯವಾಗಿ ದ್ಯಾಂಪುರ ಚನ್ನಕವಿಗಳು ಬರೆದಿರುವರೆಂದೂ ಅದನ್ನೇ ತಾನು ಆಧರಿಸಿ, ಈ ಗದ್ಯಕಥೆಯನ್ನು ರೂಪಿಸಿರುವುದೆಂದೂ ಲೇಖಕರು ಹೇಳಿದ್ದಾರೆ. ಇದರಲ್ಲಿ ೧೬ ಅಧ್ಯಾಯಗಳಿವೆ. ಅನುಕ್ರಮ ಘಟನೆಗಳಿಂದ ಕೂಡಿರುವ ಕಥನ ಶೈಲಿ, ಅಲ್ಲಲ್ಲಿನ ಘಟನೆ ನಿರೂಪಿಸುವ ನೀತಿ, ರಸಯುಕ್ತವಾದ ನಿರೂಪಣೆ, ಅಲಂಕಾರ ಸಹಿತವಾಗಿ ಅಲ್ಲಲ್ಲಿ ಸೊಗಸನ್ನೀವ ವಿವರಣೆ-ಇವುಗಳಿಂದ ಈ ಚರಿತ್ರವು ಆಕರ್ಷವಾಗಿದೆ. ನೀತಿ-ಭಕ್ತಿ-ಸೌಜನ್ಯಗಳನ್ನು ಮೆಚ್ಚುವವರು ಮೆಚ್ಚುವ ಸರಳ-ಸುಂದರ ಚಾರಿತ್ರ ಕಥೆಯಿದು.

—ಟಿ. ಕೇಶವಭಟ್

ಕನ್ನಡದಲ್ಲಿ ಸಂಸ್ಕೃತ ಸುಭಾಷಿತಗಳು—ಲೇ: ಶ್ರೀ ಎಸ್. ಕೆ. ಜೋಶಿ, ಬಿ.ಎ,ಡಿ.ಇಡಿ., ಪ್ರ: ಶ್ರೀ ಟಿ. ಎ. ಕುಲಕರ್ಣಿ ಬಿಎಸ್‌ಸಿ. (ಆನರ್ಸ್) ಬಿ.ಇಡಿ., ೭೯. ಠಳಕವಾಡಿ, ಬೆಳಗಾಂವಿ. ಪುಟ ೪೭, ಬೆಲೆ ರೂ. ೧-೦೦.

ನಮ್ಮ ನಾಡ ಬಾಂಧವರು ಸುಂದರ ಸಂಸ್ಕೃತ ಭಾಷೆಯನ್ನು (Dead language) ಮೃತ ಭಾಷೆಯೆಂದು ಕರೆದು, ಕೈಬಿಟ್ಟು ಪರಭಾಷಾಮೋಹಕ್ಕೆ ಸಿಲುಕಿ ಇಹಪರಗಳನ್ನು ಕೆಡಿಸಿಕೊಂಡು ಕುಳಿತಿರುವ ಸದ್ಯಸ್ಥಿತಿಯಲ್ಲಿ ಲೇಖಕರು ಸಂಸ್ಕೃತ ಸುಭಾಷಿತಗಳ ಒಂದು ಸರಳ ಅನುವಾದವನ್ನು ನಮ್ಮ ಮುಂದಿಟ್ಟಿದ್ದಾರೆ.

ಮೂಲದ ಸ್ವಾರಸ್ಯವನ್ನು ಅನುವಾದದಲ್ಲಿ ತರುವುದು ಕಠಿಣ ಕಾರ್ಯವೇ ಸರಿ. ಆದರೂ ಲೇಖಕರು ಈ ದಿಸೆಯಲ್ಲಿ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಕೆಲವೆಡೆ ಎಡವಿಯೂ ಸಹಾ ಇದ್ದಾರೆ. ಇಲ್ಲಿ ಲೇಖಕರು ಉಪಯೋಗಿಸಿರುವ ಮುಕ್ತ ಛಂದಸ್ಸುಗಳಿಗೆ ಸಂಸ್ಕೃತ ಛಂದಸ್ಸುಗಳಿಗೆ ಅಷ್ಟು ಹೊಂದಿಕೊಳ್ಳುವುದಿಲ್ಲ. ಕೆಲವೆಡೆ ಗದ್ಯದ ಭಾಸವಾಗು

ವುದು. ಕೆಲವು ಪದ ಪ್ರಯೋಗಗಳು ಸುಭಾಷಿತಗಳ ಗಾಂಭೀರ್ಯಕ್ಕೂ ಧಕ್ಕೆತರಬಹುದು.

ಈ ಕೆಲವೊಂದು ಕೊರತೆಗಳನ್ನು ಬಿಟ್ಟರೆ, ಶ್ರೀ ಜೋಶಿಯವರ ಪ್ರಯತ್ನ ಪ್ರಶಂಸನೀಯ. ಇದೇ ರೀತಿ ಅವರು ನಮಗೆ ಸಂಸ್ಕೃತ ಸಾಹಿತ್ಯದ ಸವಿಯನ್ನು ಉಣಬಡಿಸಲಿ ಎಂದು ಬಯಸುತ್ತೇನೆ. ಉತ್ತಮ ಮುದ್ರಣ, ಒಳ್ಳೆಯ ಕಾಗದ ಈ ಪುಸ್ತಕದ ವೈಶಿಷ್ಟ್ಯಗಳು.

—ಡಿ. ಮಾಧವಮೂರ್ತಿ

ನಾನಾಗುವೆ ಗೀಜಗನ ಹಕ್ಕಿ-(ಕವನ ಸಂಗ್ರಹ) ಲೇ: ಶ್ರೀ ನೇಗಿಲಯೋಗಿ, ಪ್ರ: ಜನಪದ ಸಾಹಿತ್ಯ ಅಕಾಡಮಿ, ಜಯನಗರ, ಮೈಸೂರು; ಬೆಲೆ ರೂ. ೨-೦೦.

ನೇಗಿಲಯೋಗಿ ಎಂಬ ಕಾವ್ಯನಾಮದಿಂದ ಬರೆದಿರುವ ಶ್ರೀ ನಾಗೇಗೌಡರ ಈ ಕೃತಿ ಅನೇಕ ರೀತಿಯ ಸಾರ್ಥಕತೆಯನ್ನು ಪಡೆಯುತ್ತದೆ. ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳಾಗಿ ಆಡಳಿತದ ಬಿಡುವಿಲ್ಲದ ಕಾರ್ಯ ಕಲಾಪಗಳ ನಡುವೆ ಸಾಹಿತ್ಯ ಸೇವೆಗಾಗಿ ಅವಕಾಶ ಕಲ್ಪಿಸಿಕೊಳ್ಳುವುದೇ ಕಾವ್ಯ ಪ್ರೇಮಕ್ಕೆ ಹೆಗ್ಗುರುತು. ಇಲ್ಲಿ ಸ್ವತಂತ್ರ ಹಾಗೂ ಅನುವಾದ ಕವನಗಳೂ ಇವೆ. ವೈವಿಧ್ಯಮಯ ವಸ್ತುವಿದೆ. ಶೈಲಿ, ಗ್ರಾಂಥಿಕ ಹಾಗೂ ಜಾನಪದ ಎರಡೂ ಹೌದು. "ಹಳ್ಳಿ ಆಯಾಸದಲಿ ಉಸಿರೆಳೆದು ಕುಸಿಯುತಿದೆ ತುಸು ಬೆಳಕಿನ ಮುಸಿಮುನೆಯಲ್ಲಿ" ಮುಂತಾದ ಸುಂದರ ಶ್ರೀಮಂತ ಶಬ್ದ ಚಿತ್ರಗಳುಂಟು. ಪ್ರಕೃತಿ ರಮ್ಯತೆಯನ್ನು ಆ ಚೆಲುವು ನೋಟಗಳನ್ನು ಈ ಸಂಕಲನದಲ್ಲಿ ಅಲ್ಲಲ್ಲಿ ರಮ್ಯವಾಗಿ ಚಿತ್ರಿಸಿದ್ದಾರೆ. ಎರಡನೆಯ ಭಾಗದಲ್ಲಿ ಕವಯತ್ರಿ ಸರೋಜಿನಿ ದೇವಿಯವರ ಕೆಲವು ಗೀತೆಗಳ ಅನುವಾದಗಳಿವೆ. 'ಚಿತ್ರಿಸ್ಘತ' ಜಾನಪದ ಗೀತೆಗಳ ಅನುವಾದಗಳೂ ಉಂಟು. 'ಅರ್ಪಣೆ' 'ರಾಜ್ಯಕ್ಕೆ ಬಂದ ಸಿಪಾಯಿ' 'ಗೌರಿಬಂದಳು' 'ಕಳೆದುಹೋದ ಯೌವನ' ಮುಂತಾದವು ಕೆಲವು ಉತ್ತಮ ಕೃತಿಗಳು. ಕವಿಗಳಾಗಿ ಕಾಣುವ ನಾಗೇಗೌಡರಿಗಿಂತ ಸಂಶೋಧಕರಾಗಿ ಚಾರಿತ್ರಿಕ ಕೃತಿರಚನಕಾರರಾಗಿ ಖಂಡಿತ ಸಿದ್ಧಿಯನ್ನು ಗಳಿಸಿದ್ದಾರೆ.

* * *

ರಸಸೃಷ್ಟಿ—(ಕವನ ಸಂಕಲನ) ಲೇ: ಶ್ರೀ ಜಯವಂತಪ್ಪಮುಂಡಿ; ಪ್ರ: ಲಲಿತ ಸಾಹಿತ್ಯ ಮಾಲೆ, ಧಾರವಾಡ, ಬೆಲೆ ರೂ. ೧-೦೦.

ಮುದ್ದಣನ ಪರಂಪರೆಯನ್ನು ನೆನಪು ಮಾಡಿಕೊಡುವ ಶ್ರೀ ಮುಂಡಿಯವರ 'ರಸಸೃಷ್ಟಿ' ತಮ್ಮ ಚೊಚ್ಚಲು ಕೃತಿಯಾದರೂ ಸಹೃದಯರನ್ನು ಆಕರ್ಷಿಸುವ ಶಕ್ತಿಯಿದೆ. ಗಿಳಿ, ಮೇಘ, ಭೃಂಗ ಪ್ರೇಮಸಂದೇಶವನ್ನು ಕೊಂಡೊಯ್ಯುವ "ಸಂದೇಶಿ"ಗಳು, ಭಾರತೀಯ ಕಾವ್ಯಕ್ಕೆ ಹೊಸದಲ್ಲ. ಆದರೆ ಈ ತಂತ್ರವನ್ನು ಬಳಸಿದ ಕವಿ ಅದನ್ನು ಎಷ್ಟು ಸುಂದರವಾಗಿ ಬಳಸಿದ್ದಾನೆ ಎಂಬುದರ ಮೇಲೆ ನಿರ್ಣಯವಾಗುತ್ತದೆ. 'ಬಾಗಿ ಬಳುಕಿದಾಸವತೆ' ಮತ್ತು 'ಗೂಳಿಯಂತೆಯೇ ಬೆಳೆದಾ ಆ ಕುಂಬಳ' ಮುಂತಾದ ಭಾವಗೀತೆಗಳನ್ನು ಓದುವಾಗ ರನ್ನನ ನಾಡು ನೆನಪಿಗೆ ಬರುತ್ತದೆ. 'ಇದರರ್ಥವೇನೋ' ಮುಂತಾದ ಕವನಗಳಲ್ಲಿ ಮಾತನ್ನು ಮೀರಿದ ಸಂಜ್ಞೆಗಳ ಹೃದಯಗಳ ಮಾತು ವ್ಯಕ್ತವಾಗಿದೆ. ಅಲ್ಲಲ್ಲಿ ಅತಿಶ್ರೇಷ್ಠವಾದ ಕವಿಯ ಶ್ರೀ ಸಹಜವಾದ ಸ್ವಭಾವಕ್ಕೆ ಹೆಗ್ಗುರುತು.

'ಅಕ್ಕಿ ಆರಿಸುವಾಗ ಹರಳು ಒಗೆಯುವ ರೀತಿ
ಅಲ್ಲಿ ಮೂಡಿದ ಭಾವದರ್ಥವೇನು?
ನನ್ನ ಚಿತ್ರಕೆ ನೀನು ಅರಳು ಹಾರನು ಹಾಕಿ
ಪೂಜೆಗೈಯುತಲಿರುವೆ ಅರ್ಥವೇನು?'

ಮುಂತಾದ ಸೊಗಸಾದ ಕಾವ್ಯ ಭಾವಗಳು ಸಿಗುತ್ತವೆ. ಪ್ರಥಮ ಪ್ರಯತ್ನವಾದರೂ ಸ್ತುತ್ಯಾರ್ಹ.

* * *

ಸ್ಮೃತಿ-(ಕಥನ ಕವನ ಸಂಗ್ರಹ) ಲೇ: ಶ್ರೀ ಲಕ್ಷ್ಮೀನಾರಾಯಣ ಶಾಸ್ತ್ರಿ, ನಾಜಗಾರ; ಪ್ರ: ನೃಪತುಂಗ ಪ್ರಕಾಶನ, ಕಲಬುರ್ಗಿ; ಬೆಲೆ ರೂ. ೧-೦೦.

ಕವಿತೆಗಳಲ್ಲಿ ಶ್ರೀ ಶಾಸ್ತ್ರಿಗಳ ಅಭಿವ್ಯಕ್ತಿಯ ಸಹಜತೆಯನ್ನು ಸ್ಫುಟವಾಗಿ ಗುರುತಿಸಬಹುದು. ಬಂಧದ, ಒಪ್ಪುವ ಶೈಲಿಯ ಬಂಧುರತೆಯು, ಭಾವದ ಮಿಡಿತವು, ಇವರ ಕವನಗಳಲ್ಲಿ ಎದ್ದು ಕಾಣುವ ತ್ರಿವೇಣಿಗಳು. ಕಥನ ಕಲೆಯಲ್ಲಿ ಕರುಳು ಮಿಡಿಯುಸುವ ಶಕ್ತಿ ಇವರಿಗಿದೆ. 'ಹೃದ್ರ ಬಂಡೆ' ಯಲ್ಲಿ ಬರುವ,

'ನನ್ನ ಜೀವನವಿಂತು ಬೆಳಕಿನಲೆ ಕತ್ತಲೆಯ
ಕಾಣುವುಂತಾಗಿಹುದ ಅಣ್ಣ,
ಇಂದು ನೀನೊಮ್ಮೆ ಬಂದಿಲ್ಲಿ ನನ್ನ ಮನೆಯನು ನೋಡು
ಇದ್ದರೂ ಸತ್ತಿರುವ ಜೀವವಿಹುದು.'

ಮುಂತಾದ ಕಡೆ ಹೃದಯವನ್ನು ಭಾರವಾಗಿ ಜಗ್ಗಿಸುವ ಭಾವಗಳು ಬರುತ್ತವೆ. ಅಲ್ಲಲ್ಲಿ 'ನನ್ನ ಮೇಸ್ತ್ರು' 'ನನ್ನ

ಮದುವೆ' ತಿಳಿಯಾದ ನಗೆಯೊಂದಿಗೆ ಎಳೆಯ ವಿಷಾದ ಮೂಡಿದೆ. 'ಸ್ಮೃತಿದಾನ' ಮುಂತಾದ ಗಂಭೀರ ಕೃತಿಗಳೂ ಇವೆ. ಹೊಸ್ದಿಲು ಕೃತಿಯಾದರೂ ಶ್ರೀ ಶಾಸ್ತ್ರಿಗಳಲ್ಲಿ ಗಂಭೀರವಾದ ರಸವತ್ತಾದ ಕಾವ್ಯವನ್ನು ನಿರೀಕ್ಷಿಸಬಹುದು.

*　　*　　*

ನೆರಳು—(ಕವನಗಳು) ಲೇ: ಶ್ರೀ ಎಂ. ಗಂಗಾಧರ ಭಟ್ಟ; ಪ್ರ: ಅಜಂತಾ ಪ್ರಕಾಶನ, ಕಾಸರಗೋಡು; ಬೆಲೆ ರೂ. ೧-೦೦.

ನವ್ಯ ಶೈಲಿಯಲ್ಲಿ ಬರೆದ ಭಟ್ಟ ಅವರ ಈ ಕೃತಿ ತಕ್ಷಣ ಸಹೃದಯರ ಮನಸ್ಸನ್ನು ಆಕರ್ಷಿಸುವುದು ಕಷ್ಟಸಾಧ್ಯ. ವೈಚಾರಿಕ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಕವಿ ಭಾವಗೀತೆಯನ್ನು ಬಳಸಿಕೊಂಡಿದ್ದಾರೆ. ಈ ಸಂಗ್ರಹ ಪ್ರಾಯೋಗಿಕವೂ ಹೌದು. ಮೂಲಭಾವಗಳಿಗೆ ಕಲ್ಪನೆಯ ಕೃತಕ ಹೊದಿಕೆಯನ್ನು ಹೊದಿಸದೆ ಪ್ರಯೋಗ ಶೀಲರಾಗಿರುವ ಕವಿಯನ್ನು ನಾವಿಲ್ಲಿ ಗುರುತಿಸಬಹುದು.

'ಎದುರಿಗಿದೆ ಬಿಸಿನೀರು, ಕೈಯಗಿದೆ ಟಾಯಲೆಟ್
　　　　　　　　　　　　ಸೋಪು,
ಆದರೂ ಕೊಳಚೆಯಲೇ ಮೀಯುತಿದೆ ಜನ'

ಎಂಬ ಮಾತು 'ಯಾನ' ಕವನವನ್ನು ಓದಿದಾಗ ಮಾರ್ಮಿಕವಾಗಿ ಧ್ವನಿಪೂರ್ಣವಾಗಿ ಬರುತ್ತದೆ. 'ದಿಗಂಬರ' ವ್ಯರ್ಥವಾಗಿದೆ ಎನ್ನಬೇಕು. 'ಬೋಧಿವೃಕ್ಷದ ಕೆಳಗೆ' 'ಹೆತ್ತಳಾತಾಯಿ' 'ಮಸಣ ಮಹಲು' ಮುಂತಾದ ಉತ್ತಮ ಕವನಗಳನ್ನು ಅಲ್ಲಲ್ಲಿ ಎದುರಿಸಬಹುದು. ನವ್ಯ ಶೈಲಿಯಲ್ಲಿ ಬರೆಯ ಹೊರಟ ಕವಿಗಳೆಲ್ಲರೂ ಮೊದಮೊದಲು ಎದುರಿಸಬೇಕಾದ ಸಮಸ್ಯೆಗಳನ್ನೇ ಭಟ್ ಅವರು ಎದುರಿಸುತ್ತಿದ್ದಾರೆ. ನವ್ಯ ಎಂದ ಕೂಡಲೇ ಪೂರ್ವಾಗ್ರಹ ಪೀಡಿತರಾಗಿ ನೋಡುವ ಬದಲು ಪ್ರಸನ್ನ ಸಹೃದಯರಾಗಿ ಈ ಕವನ ಸಂಗ್ರಹವನ್ನು ಓದಿದರೆ ಖಂಡಿತಕ್ಕೂ ಒಳ್ಳೆಯ ಅಂಶಗಳಿವೆ.

*　　*　　*

ಭಾವ ಗೀತಾಂಜಲಿ-(ಕವನ ಸಂಗ್ರಹ) ಬೆಲೆ ೭೫ ಪೈಸೆ.

ಸಂವೇದನ-(ಕವನ ಸಂಗ್ರಹ) ಬೆಲೆ ೮-೦೦ ರೂ.

ದೃಷ್ಟಿ ದರ್ಶನ-(ಜ್ಞಾನಾರ್ಜನೆಯ ವಿಚಾರಧಾರೆ) ಪುಟ ೨೨೩, ಬೆಲೆ ೩-೦೦ ರೂ.

ಕೊರವಂಜಿ ಸಾಹಿತ್ಯ-(ಜಾನಪದ) ಪುಟ ೧೭೧, ಬೆಲೆ ೨-೭೫ ರೂ

ಈ ಎಲ್ಲಾ ಕೃತಿಗಳ ಲೇಖಕರು-ಶ್ರೀ ಜ. ಹ. ನಿ.

ಪ್ರ: ಶ್ರೀ ಶೈಲ ಜಗದ್ಗುರು, ವಿದ್ಯಾಪೀಠ ಪುಸ್ತಕ ಭಂಡಾರ, ೪೫, ಹ. ಬ. ಸಮಾಜ ರಸ್ತೆ, ಬೆಂಗಳೂರು-೪

ಶರಣರ ಸೊಲ್ನುಡಿಗಳ ಅನುಭಾವದಿಂದ ಅಮೃತಪಾನ ಮಾಡಿ ಪುನೀತ ಹೃದಯರಾಗಬಯಸುವವರು ಭಾವ ಗೀತಾಂಜಲಿಯ ಗ್ರಂಥಕ್ಕೆ ಶರಣುಹೋಗಬೇಕು. ಆರು ಕವನ ಸಂಕಲನಗಳಿಂದ ಆರಿಸಿದ ಮತ್ತು ಹೊಸದಾಗಿ ಸೇರಿಸಿದ ಕವನ ಸಂಗ್ರಹ ಇದು. ಗೇಯತೆಯ ನಾದ ಮಾಧುರ್ಯ ಪ್ರಧಾನವಾಗಿರುವ ಕವನ ಸಂಗ್ರಹ ಧ್ವನಿ ವಿಶೇಷದ ವಿವಿಧ ವಿಲಾಸದ ಪ್ರತಿಮಾ ವಿಧಾನ ಕೌಶಲದ ತತ್ವದ ತನಿರಸದ ರುಚಿಯನ್ನು ಬಿಡಿಬಿಡಿಯಾಗಿಯೂ ಒಟ್ಟಾಗಿಯೂ ಗಮನಿಸಬಹುದು. ಸಾಹಿತ್ಯಕ ದೃಷ್ಟಿಯಿಂದ ಶುದ್ಧ ಭಾವಗೀತೆಯ ಲಕ್ಷಣಗಳು ಕಡಮೆಯಿದ್ದರೂ ಭಕ್ತಿ ಮಿಶ್ರಿತವಾದ ವಚನಗಳೇ ಹೆಚ್ಚು. ಭಕ್ತ ಸಹೃದಯರ ಹೃದಯವಂತಿಕೆಗೆ ಶ್ರೀಮಂತಿಕೆಯನ್ನು ಪುಷ್ಟಿ ತುಷ್ಟಿಯನ್ನು ಕೊಡುತ್ತವೆ. 'ಜೆಕ್ಕೊಂದು ಬಂತು', 'ಹೊನ್ನ ಹಕ್ಕಿ' 'ಶ್ರೀ ಗಿರಿಗೆ', 'ಸಾಗಿ ಬಾ ಸೀಮೊಲ್ಲಂಘನಕ್ಕೆ' ಮುಂತಾದ ಉತ್ತಮ ಕವನಗಳಿವೆ. ಶ್ಲೇಷಾರ್ಥ ಚಮತ್ಕಾರದಿಂದ ಅಲಂಕಾರಗಳ ಸೆಳೆತದಿಂದ 'ಅಳಿಯ', 'ಓ ಲಿಂಬೆ' ಮುಂತಾದ ಗೀತೆಗಳು ಧ್ವನಿತವಾಗಿವೆ. ಒಟ್ಟಿನಲ್ಲಿ ಭಕ್ತರಿಗೆ ಭಕ್ತಿಯ ರಸಪುಂಜವನ್ನೊದಗಿಸುವ ಕೃತಿ ಇದು. ಆದರೂ ಶುದ್ಧಾಂಗವಾಗಿ ನೋಡಿದಾಗ ಕೆಲವು ಲೋಪದೋಷಗಳನ್ನು ಗುರುತಿಸಬಹುದು.

ಸಂವೇದನೆ: ಇಲ್ಲಿ ಪ್ರಮುಖವಾಗಿ ಶಿವನನ್ನು ಕುರಿತು ಜೀವಿಯ ಶಿವಧೋ ಶಿವಧೋ ಎಂಬ ಕಳಕಳಿಯ ಮೊರೆಯಿದೆ. ಅನಾದಿಕಾಲದಿಂದಲೂ ಜೀವಿ ಶಿವನ ಹತ್ತಿರವಿದ್ದರೂ ದೂರವಿದ್ದಂತೆ ಆಡುವ ಆಟದಿಂದ ಭಕ್ತಿ ಸಾಹಿತ್ಯ ನಿರ್ಮಾಣವಾಗಿದೆ. ಸಂವೇದನ ಕೃತಿಯಲ್ಲಿ ಹೊಸ ಕಾವ್ಯದ ಈ ಸ್ವರ ಸಮ್ಮೇಳನವನ್ನು ಕಾಣುತ್ತೇವೆ. ಇಲ್ಲಿ ಮಧುಭಕ್ತಿ ಅದರ ಅಭಿವ್ಯಕ್ತಿ ಸಹಜ, ನೇರ, ಅಷ್ಟೇ ಉತ್ಕಟ. 'ಗುರುವೆಲ್ಲಿ' 'ನವಿಲಿಂತ ಅಕ್ಕರೆ ನಿನ್ನ ಮೇಲೆ' 'ಹಂಸೆಯ ಹೃದಯ ಆಶೆ', 'ಪ್ರಸಾದ ಪುಷ್ಪ', 'ಆತ್ಮಾರಾಧನ' ಮುಂತಾದ ಉತ್ತಮ ಕವಿತೆಗಳಿವೆ. ಅಲ್ಲಲ್ಲಿ ನಿರ್ಜೀವ ಕೃತಿಗಳ ದರ್ಶನವನ್ನು ವಿಧಿಯಿಲ್ಲದೇ ಮಾಡುತ್ತೇವೆ.

ಜೀವನ ದೃಷ್ಟಿ: ಮನಸ್ಸಿಗೆ ಸೃಷ್ಟಿ ದೃಷ್ಟಿ. ಸಮಷ್ಟಿ ದೃಷ್ಟಿ ಕೂಡಿದಾಗ ಸರ್ವತೋಮುಖ ಬೆಳವಣಿಗೆಯಾಗುತ್ತದೆ. ಹಾಗೆಯೇ ಈ ಗ್ರಂಥದಲ್ಲಿ ಶ್ರೀಗಳವರು ಮನಸ್ಸಿನ

ಒಂಸು ಕವಾಟವನ್ನು ತೆಗೆದು ಜ್ಞಾನ ದೃಷ್ಟಿಯ ಬೆಳಕನ್ನು ಬೀರಿದ್ದಾರೆ. ಇವರ 'ದೃಷ್ಟಿ ಸೃಷ್ಟಿ', 'ದರ್ಶನ ಮತ್ತು ಜೀವನ', 'ದೃಷ್ಟಿದಾನ', 'ದರ್ಶನ ದೃಷ್ಟಿ', 'ದೃಷ್ಟಿ ಸೌಂದರ್ಯ', 'ಸತ್ಯಂ ಶಿವಂ ಸುಂದರಂ', 'ಜ್ಞಾನ ದೃಷ್ಟಿ', 'ಅನುಭವ ದೃಷ್ಟಿ' ಮುಂತಾದ ಪ್ರಬಂಧಗಳಲ್ಲಿ ಶ್ರೀಗಳವರು ತಮ್ಮ ಅನುಭವ ವೈಶಾಲ್ಯತೆಯನ್ನು ವಿವರವಾಗಿ ವಿಸ್ತರಿಸಿ ಸಾಮಾನ್ಯ ಜನಗಳಿಗೆ ಸುಲಭ ವೇದ್ಯವಾಗುವಂತೆ ಮಾಡಿದ್ದಾರೆ. ಇವರ ಶೈಲಿ ಸರಳವಾದರೂ ಅಲ್ಲಲ್ಲಿ ತಡೆಹಿಡಿಯುತ್ತದೆ. ಆಸಕ್ತ ಭಕ್ತರಿಗೆ ಪವಿತ್ರ ಗ್ರಂಥವಾಗಬಲ್ಲದು.

ಕೊರವಂಜಿ ಸಾಹಿತ್ಯ : ಅಕ್ಕಗಳು ನಿರೂಪಿಸಿದ ಕೊರವಂಜಿ ಹಾಡು ಎಂಬ ಕೃತಿಯನ್ನು ಸಂಪಾದಿಸುವಾಗ ಇವರಿಗೆ ಈ ಕೊರವಂಜಿ ಸಾಹಿತ್ಯದ ಬಗ್ಗೆ ಉತ್ಸಾಹ ಬಂದು ಕೆಲವು ಕೊರವಂಜಿ ಗೀತಾವಚನಗಳನ್ನು ಜೋಡಿಸಿದ್ದಾರೆ. ಗಿರಿಜೆ, ಪರಮೇಶ್ವರ, ಅರ್ಜುನ, ಕಿರಾತ. ಶಿವೆಯು ಕಿರಾತಿಯಾಗಿದ್ದಾಳೆ. ಆ ಕಿರಾತೆಯೇ ಕೊರವೆಯೆನ್ನುತ್ತಾರಂತೆ. ಪುರಾಣದಲ್ಲಿ ನಾರದನ ಪಾತ್ರವಿದ್ದಂತೆ ಜನಪದ ಸಾಹಿತ್ಯದಲ್ಲಿ ಕೊರವಂಜಿಯ ಪಾತ್ರ. ಕೊರವಂಜಿ ಇಲ್ಲದೆ ಜನಪದ ಸಾಹಿತ್ಯದ ಯಾವ ಕತೆಯೂ ಕೊನೆಗಾಣದು. ಈ ಸಂಬಂಧಪಟ್ಟ ಹಾಡುಗಳನ್ನು ಸಂಗ್ರಹಿಸಿ ಶ್ರೀಗಳವರು ಸಾಹಿತ್ಯ ಸಹೃದಯರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇಲ್ಲಿ 'ಕೈ ತೋರ ಕೈ ತೋರ ಮುಂಡಿ' ಎಂಬ ಹಾಡನ್ನು ಗಮನಿಸಬಹುದು. ಈ ಹಾಡುಗಳಿಗೆ ರಾಗ ಸಂಯೋಜನೆ ಮಾಡಿರುವುದೊಂದು ವಿಶೇಷ ಅಂಶ. ಇಲ್ಲಿರುವ ಅನೇಕ ಹಾಡುಗಳು ಬೆಡಗಿನ ಹಾಡುಗಳೂ ಆಗಿದ್ದು, ಅರ್ಥಗರ್ಭಿತವಾಗಿವೆ. ಶಿವಶರಣರ ಕೃತಿಗಳಲ್ಲಿ ಈ ಕೊರವಂಜಿ ಸಾಹಿತ್ಯದ ಸ್ಥಾನ ವಿಶಿಷ್ಟವಾದದು.

—**ಎಂ. ಚಂದ್ರಶೇಖರ್**

ಕಾವ್ಯವಿಮರ್ಶೆಯ ಚತುರ್ಮುಖ

೧. ಕಾವ್ಯ ಯಾವ ಸ್ಥಳದಲ್ಲಿ ಚೆನ್ನಾಗಿದೆ, ಯಾವ ಸ್ಥಳದಲ್ಲಿ ಇಲ್ಲ ಎಂದು ಒಂದೊಂದು ಅಂಶವಾಗಿ ವಿವೇಚಿಸಿದರೆ ಅದರ ಗುಣಾವಗುಣಗಳ ವಿಮರ್ಶೆಯಾಗುವುದಿಲ್ಲ. ತಾಜಮಹಲಿನ ಒಂದೊಂದು ಕಲ್ಲನ್ನೂ ಬೇರೆ ಬೇರೆ ಮಾಡಿ ನೋಡಿದರೆ ಕಟ್ಟಡದ ಮಹತ್ವ ಗೊತ್ತಾಗುವುದಿಲ್ಲ; ಒಬ್ಬ ಮನುಷ್ಯನ ಒಂದೊಂದು ಅಂಗವನ್ನೂ ವರ್ಣಿಸಿ ಅವನ ಸೌಂದರ್ಯವನ್ನು ತಿಳಿಸಲಾಗುವುದಿಲ್ಲ. ಕೋಟಿ ಕೊಡ ನೀರನ್ನು ಸಮಾಲೋಚಿಸಿ ಸಾಗರದ ಮಾಹಾತ್ಮ್ಯವನ್ನು ಅನುಭವಕ್ಕೆ ತಂದುಕೊಡಲಾಗುವುದಿಲ್ಲ. ಒಂದು ಸೌಧವನ್ನು ಒಟ್ಟಿಗೆ ನೋಡಿ ಅದರ ಸೌಂದರ್ಯವನ್ನು ಗ್ರಹಿಸಬೇಕು. ಮಹಾಭಾರತ ರಾಮಾಯಣಗಳನ್ನು ಹೀಗೆ ನೋಡಿದರೇ ಅವುಗಳ ಮಹತ್ವ ತಿಳಿಯುವುದು.

೨. ಕವಿಯ ಪ್ರಧಾನ ಗುಣ, ಸೃಷ್ಟಿ; ಅದು ಸ್ವಭಾವಾನುಸಾರಿಯಾಗಿಯೂ ಸೌಂದರ್ಯವಿಶಿಷ್ಟವಾಗಿಯೂ ಇರಬೇಕು.

೩. ಕಾವ್ಯದ ಉದ್ದೇಶ – ಆಧುನಿಕ ಕಾದಂಬರಿಯ ಹಾಗೆ – ಚಿತ್ತರಂಜನ ಮಾತ್ರವಲ್ಲ. ಚದುರಂಗರ ಆಟದಿಂದಲೂ ಚಿತ್ತರಂಜನೆಯಾಗುತ್ತದೆ; ಹಾಗಾದರೆ ಒಬ್ಬ ಪಕ್ಕಾ ಚದುರಂಗದ ಆಟಗಾರನು ಸ್ಕಾಟ್, ಕಾಲಿದಾಸರಿಗಿಂತ ದೊಡ್ಡವನೆ ?

೪. ಕಾವ್ಯದ ಉದ್ದೇಶ ನೀತಿಜ್ಞಾನವೂ ಅಲ್ಲ. ಆದರೆ ನೀತಿಯ ಉದ್ದೇಶವೇನೋ ಕಾವ್ಯದ ಉದ್ದೇಶವೂ ಅದೇಯೆ; ಮನುಷ್ಯನ ಚಿತ್ತೋತ್ಕರ್ಷಸಾಧನ, ಚಿತ್ತಶುದ್ಧಿ ಜನನ; ಅದು ಗೌಣ; ಸೌಂದರ್ಯಸೃಷ್ಟಿ ಮುಖ್ಯ.

ದಿ. ಎ. ಆರ್. ಕೃ.
'ಬಂಕಿಮಚಂದ್ರ' ಗ್ರಂಥದಿಂದ

ನಾಟಕ

ಕುಲಭೂಷಣೆ—(ನಾಟಕ) ಪುಟ ೯೬; ಬೆಲೆ ೧-೫೦. ಲೇ: ಶ್ರೀ ಆರ್. ಎಸ್. ರಾಮರಾವ್, ೫೫೧, ೪ನೇ ಕ್ರಾಸ್, ೮ನೇ ಬ್ಲಾಕ್, ಜಯನಗರ, ಬೆಂಗಳೂರು–೧೧.

ಭಾರತ ದೇಶದ ಮೇಲೆ ಚೀಣವು ಆಕ್ರಮಣ ಮಾಡಿದ ಘಟನೆಗೆ ಸಂವಾದಿಯಾಗುವ ಭಾರತೀಯ ಪ್ರಾಚೀನ ಇತಿಹಾಸವನ್ನು ಸಂಶೋಧಿಸಿ, ಪ್ರಸ್ತುತ ನಾಟಕಕಾರರೂ ಶ್ರೀ ಸಿದ್ಧಯ್ಯಪುರಾಣಿಕರೂ ಸೇರಿ ನಾಟಕ ಬರೆಯಲು ಕಥಾವಸ್ತುವನ್ನು ಆಯ್ದುಕೊಂಡರೆಂತಲೂ ಆ ವಸ್ತುವಿನ ಆಧಾರದಿಂದ ಶ್ರೀ ಪುರಾಣಿಕರು "ಭಾರತವೀರ" ನಾಟಕವನ್ನು ಬರೆದು ಖ್ಯಾತನಾಮರಾದರೆಂತಲೂ ಲೇಖಕರು ಇದರಲ್ಲಿ ತಿಳಿಸಿದ್ದಾರೆ. ಪ್ರಸ್ತುತ ಲೇಖಕರು ಆ ಕಥಾ ವಸ್ತುವಿನಲ್ಲಿ ಯಶೋಧರ್ಮನ ಪಾತ್ರವನ್ನು ಒಂದಿಷ್ಟು ವ್ಯತ್ಯಾಸಗೊಳಿಸಿ, ಬಾಲಾದಿತ್ಯನಿಗೆ ತಂಗಿಯಾಗಿ ಕುಲಭೂಷಣೆಯನ್ನು ಕಲ್ಪಿಸಿ ಸೃಷ್ಟಿಸಿ, ಈ ನಾಟಕವನ್ನು ರಚಿಸಿರುತ್ತಾರೆ. ಭಾರತೀಯರಲ್ಲಿ ರಾಷ್ಟ್ರಗೌರವವನ್ನು ಜಾಗೃತಗೊಳಿಸಿ, ಆಕ್ರಮಣಕಾರರನ್ನು ಶೌರ್ಯ-ಧೈರ್ಯಗಳಿಂದ ಎದುರಿಸುವ ಮನಸ್ಸಿದ್ಧತೆಯನ್ನು ಮಾಡುವಲ್ಲಿ ಇಂತಹ ಐತಿಹಾಸಿಕ ನಾಟಕಗಳೂ ಪಾತ್ರ ವಹಿಸಬಲ್ಲವು. ಈ ನಾಟಕವು ರಂಗದ ಮೇಲೆ ಅತಿ ಪರಿಣಾಮಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಅ. ನ. ಕೃಷ್ಣರಾಯರು ಮುನ್ನುಡಿ ಬರೆದಿದ್ದಾರೆ.

ಟಿ. ಕೇಶವಭಟ್ಟ

ಸಾಷ್ಟಾಂಗ ನಮಸ್ಕಾರ—(ಹೆಂಗಸರ ಪಾತ್ರವಿಲ್ಲದ ಗಂಡಸರ ನಾಟಕ) ಲೇ: ಶ್ರೀ ಎ. ವಿ. ಗುಂಡೂರಾವ್; ಪ್ರ: ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು. ಪುಟ ೩೦; ಬೆಲೆ ೦-೫೦.

ಇದೊಂದು ಹೆಂಗಸರ 'ಕಾಟ'ವಿಲ್ಲದ ಗಂಡಸರ ನಾಟಕ. ಅಭ್ಯಾಸೀ ನಾಟಕ ತಂಡಗಳು ಹೆಣ್ಣು ಪಾತ್ರಗಳನ್ನ ಹುಡುಕುವುದರ ಅವಸ್ಥೆ ನಾಟಕ ಆಡಿ ಆಡಿಸಿದವರಿಗೇ ಗೊತ್ತು. ಈ ದೃಷ್ಟಿಯಿಂದ ಈ ನಾಟಕಕ್ಕೆ ಸ್ವಾಗತವಿದೆ.

ಚಂದ್ರಕಾಂತಯ್ಯ ಮತ್ತು ಸೂರ್ಯಕಾಂತಯ್ಯ, ಒಬ್ಬ ಕವಿ ಮತ್ತೊಬ್ಬ ಚಿತ್ರಕಾರ. ಬಾಡಿಗೆ ಸರಿಯಾಗಿ ಕೊಡದ ಇವರ ಮೇಲೆ ಮನೆ ಮಾಲಿಕ 'ಆರ್ಯಭಟ್ಟ'ನ ಆರ್ಭಟ. ಮಧ್ಯೆ ಬರುವ ಪ್ರಕಾಶಕ (ಪುಸ್ತಕ) ಧರ್ಮಪ್ಪ ಮತ್ತು ಮಾರವಾಡಿ ಮೂಲಚಂದ್. ಈ ಪಂಚ ಪಾತ್ರಗಳು ಅರ್ಧ ಗಂಟೆ ರಂಗದಮೇಲೆ ಓಡಾಡಿ, ಮಾತಾಡಿ, ನಾಟಕ ನಡೆಯುತ್ತಿದೆ ಎಂಬ ಭರವಸೆ ಉಂಟುಮಾಡಿ ಪರದೆ ಬಿದ್ದಾಗ ತಾವೂ ಮಾಯವಾಗುವರು. ಈ ನಾಟಕವನ್ನು ಅಮೆಚೂರ್ ಕಂಪೆನಿಗಳಿಗೋಸ್ಕರ ಬರೆದುದಾಗಿಯೂ ಹಾಸ್ಯದ ಹೊದಿಕೆಯ ಹಿನ್ನೆಲೆಯಲ್ಲಿ ಕಲಾವಿದನ ಶೋಚನೀಯ ಜೀವನವನ್ನ ರೂಪಿಸುವುದೇ ಈ ನಾಟಕದ ಮುಖ್ಯ ಉದ್ದೇಶ್ಯವೆಂದೂ ಲೇಖಕರು ಹೇಳಿಕೊಂಡಿದ್ದಾರೆ.

ಆದರೆ ಈ ನಾಟಕದ ಕಲಾವಿದ ಮತ್ತು ಕವಿಗಳ ವಿಚಾರದಲ್ಲಿ ನಮಗೆ ಅನುಕಂಪ ಮೂಡದೆ ಅವರು ಮೋಸಗಾರರಿರಬಹುದೇ ಎಂಬ ಅನುಮಾನ ಬರುತ್ತದೆ. ಮನರಂಜನೆಯೂ ಅಷ್ಟಷ್ಟೇ. ಹಾಸ್ಯ ಸ್ಪಷ್ಟವಾಗಿ ಮೂಡಿಲ್ಲ. ಉದಾ :–

ಸೂರ್ಯಕಾಂತಯ್ಯ :–"ಅಯ್ಯಾ ಚಂದ್ರು, ಏಕಯ್ಯ ಕುಳಿತಿದ್ದೀಯಾ?

ಚಂದ್ರಕಾಂತಯ್ಯ :–ಅಯ್ಯಾ ಸೂರಿ, ಏಕಯ್ಯ ನಿಂತಿದ್ದೀಯಾ?

ಮನೆ ಮಾಲಿಕ 'ಆರ್ಯಭಟ್ಟ' ಎಂಬ ಹೆಸರೇ ವಿಚಿತ್ರವಾಗಿದೆ. ಲೇಖಕರಿಗೆ ಉತ್ತಮ ದೃಷ್ಟಿಯಿದೆ. ಒಳ್ಳೆ ವಿಚಾರಗಳಿವೆ. ಅವರು ಸ್ವಲ್ಪ ಶ್ರಮಿಸಿದರೆ ಉತ್ತಮ ನಾಟಕಗಳನ್ನು ನಮಗೀಯಬಲ್ಲರೆಂಬ ಭರವಸೆ ನಮಗಿದೆ.

* * *

ನವವಧು (ಸಾಮಾಜಿಕ ನಾಟಕ)—ಲೇ: ಶ್ರೀ ಪೂರ್ಣಪ್ರಜ್ಞ, ಪ್ರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟ ೪೪; ಬೆಲೆ ೧–೭೫.

ಇದು ಕೇವಲ ಮನರಂಜನೆಯೇ ಅಲ್ಲದೆ, ಒಂದು ಸಮಸ್ಯೆಯನ್ನು ಹಿನ್ನೆಲೆಯಾಗುಳ್ಳ ಒಂದು ಕುಟುಂಬ ಚಿತ್ರಣ. ಬಾಲವಿಧವಾ ಪುನರ್ವಿವಾಹವೇ ಆ ಸಮಸ್ಯೆ.

ಒಂಬತ್ತು ಪಾತ್ರಗಳುಳ್ಳ ಈ ನಾಟಕ ಮೂರಂಕಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಆಡುವಮಾತುಗಳು ಉತ್ತರ ಕರ್ನಾಟಕದ ಛಾಯೆಯನ್ನು ತಳೆದಿದ್ದರೂ, ಇಡೀ ಕನ್ನಡ ನಾಡಿಗೇ ಸುಲಭವಾಗಿ ತಿಳಿಯಬೇಕೆಂಬ ಸದುದ್ದೇಶದಿಂದ ಪ್ರಕಾಶಕರು ಪರಿಶೀಲಿಸಿ ತಿದ್ದಲು ಪ್ರಯತ್ನಿಸಿದ್ದಾರೆ. ಈ

ಯತ್ನದಲ್ಲಿ ಕನ್ನಡ ತನ್ನ ಪ್ರಾದೇಶಕತೆಯನ್ನು ಕಳೆದು ಕೊಂಡರೆ ಎಷ್ಟುಮಟ್ಟಿಗೆ ಅದು ಪ್ರಭಾವಶಾಲಿಯಾಗಬಲ್ಲದು ಎಂಬುದು ವಿವಾದಾಸ್ಪದವಾದ ಅಂಶ.

ನಾಟಕದಲ್ಲಿ ಕೆಲಸಲ ಸಂಭಾಷಣೆಗಳು, ಸ್ವಗತಗಳು ಅತಿ ದೀರ್ಘವಾಗಿ ಪ್ರೇಕ್ಷಕರ ಸಹನೆಯನ್ನು ಪರೀಕ್ಷಿಸುತ್ತವೆ, ಲೇಖಕರು ಮಾತು ಬೆಳೆಸದೆ ಸಂಕ್ಷಿಪ್ತತೆಯನ್ನು ಬೆಳಸುವ ಪ್ರವೃತ್ತಿ ಹೊಂದುವುದು ಸೂಕ್ತ. ಲೇಖಕರು ಕೆಲವು ಪ್ರಾತಿನಿಧಿಕ ವಿದೇಶೀ ನಾಟಕಗಳನ್ನು ಅಭ್ಯಸಿಸಿದರೆ ಅವರಿಗೆ ಈ ಅಂಶ ಗೋಚರವಾಗುತ್ತದೆ.

ನಾಟಕಕ್ಕೆ ಆರಿಸಿರುವ ವಸ್ತು, ಕಥೆಯ ಬೆಳವಣಿಗೆ ಚೆನ್ನಾಗಿದೆ. ಅವರ ನಿರೂಪಣೆ ಮನ ಮುಟ್ಟುವಂತಿದೆ. ಮೇಲ್ಕಂಡ ಕೆಲವು ದೋಷಗಳನ್ನು ಪರಿಹರಿಸಿಕೊಂಡರೆ ಅವರು ನಮಗೆ ಮತ್ತೂ ಉತ್ತಮ ನಾಟಕಗಳನ್ನು ನೀಡ ಬಲ್ಲರೆಂಬ ಭರವಸೆ ಇದೆ.

* * *

ನನ್ನ ತಮ್ಮಂಗೊಂದು ಹೆಣ್ಣು (ನಗೆ ನಾಟಕ)—ಲೇ: ಶ್ರೀ ಎನ್. ಎಸ್. ಎನ್. ಮೂರ್ತಿ; ಪ್ರ: ಹೆಚ್. ಹೆಚ್. ರಾವ್ ಅಂಡ್ ಬ್ರದರ್, ವಿರೂಪಾಕ್ಷ ನಿಲಯ, ನಾಗಗೊಂಡನಹಳ್ಳಿ, ಚಿತ್ರ ದುರ್ಗ ಜಿಲ್ಲೆ. ಪುಟ ೩೬; ಬೆಲೆ ರೂ. ೧-೦೦.

ಲೇಖಕರಿಗೆ ದೈವ ಕೃಪೆ, ಗುರುಹಿರಿಯರ ಮತ್ತು ಮಿತ್ರ ಶ್ರೀ ಗುರುಸಿದ್ದಪ್ಪನವರಿಂದ ನಾಟಕ ಬರೆಯಲು ಸ್ಫೂರ್ತಿ ದೊರಕಿತೆಂದೂ ಮತ್ತು ಅವರಿಗೆ ನಗೆನಾಟಕ ಓದುವುದ ರಲ್ಲಿ ಮತ್ತು ನಗಿಸುವ ಪಾತ್ರ ವಹಿಸುವುದರಲ್ಲಿ ಹೆಚ್ಚಿನ ಆಸಕ್ತಿಯೆಂದೂ ಮೊದಲ ಮಾತಿನಿಂದ ತಿಳಿದುಬರುವುದು. ಇದರ ಜೊತೆಗೆ ನಾಟಕ ರಚನೆಯಲ್ಲಿ ಲೇಖಕರಿಗೆ ಸ್ವಲ್ಪ ಅನುಭವವಿದ್ದರೆ ಇದು ಎಷ್ಟು ಉತ್ತಮ ನಾಟಕವಾಗಬಹು ದಿತ್ತು ಎಂದು ಯಾವ ಓದುಗನಿಗಾದರೂ ಅನ್ನಿಸದೆ ಇರದು.

ಹೆಣ್ಣು ನೋಡಲು ತನ್ನ ತಮ್ಮನ ಜೊತೆಯಲ್ಲಿ ಬಂದ ಸುಶೀಲಮ್ಮನಿಗೆ ವಧುವಿನ ರೂಪದಲ್ಲಿ ನಿರಾಶೆಕಾದಿತ್ತು. ಮದುವೆ ನಿಂತಿತು. ಈ ತೆಳು ಹಂದರದ ಮೇಲೆ ನಿಂತಿರುವ ಈ ನಾಟಕದಲ್ಲಿ ನಗಿಸುವ ಅಂಶಗಳೂ ಸಹ ಅಷ್ಟಕ್ಕಷ್ಟೇ. ಒಟ್ಟಿನಲ್ಲಿ ಇದು ಇನ್ನೂ ಹೆಚ್ಚು ಸುಧಾರಿಸಬಹುದಾದ ನಾಟಕ.

ನಾಟಕ ಲೇಖಕರ ಚೊಚ್ಚಲ ಕೃತಿ. ಲೇಖಕರ ಶೈಲಿ ಚೆನ್ನಾಗಿದೆ. ಸ್ವಲ್ಪ ಆಳವಾಗಿ ಅಭ್ಯಾಸ ಮಾಡಿದರೆ ಇವರು ಉತ್ತಮ ನಾಟಕಗಳನ್ನು ರಚಿಸಬಲ್ಲರೆಂಬುದಕ್ಕೆ ಸಾಕ್ಷೀ ಭೂತವಾಗಿದೆ. ಶ್ರೀ ಮೂರ್ತಿಯವರಿಂದ ನಾವು ಇನ್ನೂ ಉತ್ತಮ ನಾಟಕಗಳನ್ನು ಆಶಿಸುತ್ತೇವೆ.

* * *

ದೇವರಿಗೇ ದಿಕ್ಕು (ನಾಟಕ)—ಲೇ: ಶ್ರೀ. ನಾ. ಡಿಸೋಜ, ಪ್ರ: ರವೀಂದ್ರ ಪುಸ್ತಕ ಭಂಡಾರ, ಕಾರ್ಗಲ್, ಶಿವಮೊಗ್ಗ ಜಿಲ್ಲೆ. ಪುಟ ೩೪. ಬೆಲೆ ಒಂದು ರೂಪಾಯಿ.

ದೇವರ ಅಸ್ತಿತ್ವದ ವಿಚಾರವುಳ್ಳ ಈ ನಾಟಕ ಪ್ರೇಕ್ಷಕರ ವಿಚಾರ ಶಕ್ತಿಯನ್ನು ಜಾಗೃತಗೊಳಿಸುವ ಅಂಶಗಳನ್ನು ಹೊಂದಿದೆ. ದೇವರು ಇದ್ದಾನೆಯೇ? ಇದ್ದರೆ ಎಲ್ಲಿ, ಹೇಗೆ, ಯಾವ ರೂಪದಲ್ಲಿ ಇತ್ಯಾದಿ ನಾನಾ ಸಮಸ್ಯೆಗಳು ನಮ್ಮ ಮುಂದೆ ನಿಂತು, ನಾವು ಮುಖ್ಯವಾಗಿ ನಮ್ಮ ಶ್ರದ್ಧೆ ನಂಬಿಕೆ, ಭಕ್ತಿ ಇವುಗಳಲ್ಲಿ ದೇವರ ಸ್ವರೂಪವನ್ನು ಕಾಣುತ್ತೇವೆ.

ಕಟ್ಟುಕಥೆ, ಸ್ವಕಪೋಲ ಕಲ್ಪಿತ ವಿಚಾರಗಳು, ಭ್ರಾಂತಿ, ಮೂಢ ನಂಬಿಕೆ, ಅಂಧ ಶ್ರದ್ಧೆ, ಈ ಬುನಾದಿಯ ಮೇಲೆ ನಿಂತಿರುವ ಸಮಾಜದ ಕೈಯಲ್ಲಿ ದೇವರೂ ಸಹ ಒಂದು ವ್ಯಾಪಾರ ವಸ್ತುವಾಗುವುದರಲ್ಲಿ ಆಶ್ಚರ್ಯವೇನಿಲ್ಲ! ಈ ನಾಟಕವು ನಮ್ಮ ಕಣ್ಮುಂದೆ ಗತಿಸಿದ ಮಾನ್ಯ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳ 'ನಾಗರಿಕ' ನಾಟಕವನ್ನು ತಂದು ನಿಲ್ಲಿಸುತ್ತದೆ. ಅಲ್ಲಿನ 'ನಾಗರಿಕ' ಇಲ್ಲಿ 'ವಿಚಾರಿ'ಯಾಗಿದ್ದಾನೆ ಅಷ್ಟೆ.

ಭಾಷೆಯ ಕಾಠಿಣ್ಯವನ್ನು ತುಸು ಇಳಿಸಿದ್ದರೆ ನಾಟಕ ವನ್ನು ಮತ್ತೂ ರಂಜನೀಯವಾಗಿಸಬಹುದಾಗಿತ್ತು. ಚಿಕ್ಕ ದಾದ ಈ ನಾಟಕ ವಿಲಾಸೀ ಮತ್ತು ವಿಚಾರೀ ನಾಟಕ ಸಂಸ್ಥೆಗಳಿಗೆ ಆಡಲು ಯೋಗ್ಯವಾಗಿದೆ.

* * *

ಜ್ಞಾನದಾನ ಮತ್ತು ಪ್ರಿಯಂವದಾ (ಕಿರುನಾಟಕಗಳು)—ಲೇ: ಶ್ರೀ ಪ್ರಭು ಮತ್ತು ಶ್ರೀ ಎಂ. ಎಸ್. ಆರಾಧ್ಯ; ಪ್ರ: ಪ್ರಥಮ ವಿಲಾಸ ೭೩೯/ ಬಿ.ಬಿ ಗಾರ್ಡನ್ಸ್, ಮೈಸೂರು-೪, ಪುಟ ೬೦; ಬೆಲೆ ೧-೫೦. (ಒಂದೊಂದಕ್ಕೆ)

ಇದೊಂದು ಒಂದೇ ಪುಸ್ತಕದಲ್ಲಿ ಎರಡು ನಾಟಕಗಳನ್ನು ಅಳವಡಿಸಿರುವ ನೂತನ ಪ್ರಯೋಗ. ಜ್ಞಾನದಾನ-ಪ್ರಿಯಂ ವದಾ, ಎರಡೂ ಬೇರೆ ಬೇರೆ ನಾಟಕಗಳು. ಲೇಖಕರೂ ಪ್ರತ್ಯೇಕವೇ. ಗಂಡಭೇರುಂಡದ ಶಿರಗಳಂತೆ, ಪ್ರಕಾಶಕರು ಅದರ ಮುಂಡದಂತೆ ಏಕಶರೀರರು.

ಪ್ರಖ್ಯಾತ ವೇಶ್ಯೆ ವಾಸವದತ್ತೆಯ ಬಾಳನ್ನು ಶುದ್ಧಿ ಗೊಳಿಸಿ ಪ್ರಜ್ವಲಿಸಲು ಬೌದ್ಧ ಸನ್ಯಾಸಿ ಉಪಗುಪ್ತ ಪ್ರಯ

ತ್ನಿಸಿ ಜಯಿಸುವನು. ಕಥಾವಸ್ತುವನ್ನು ಅರಿಸುವುದರಲ್ಲಿ ಲೇಖಕರು ಜಾಣ್ಮೆಯನ್ನು ತೋರಿದ್ದಾರೆ. ಆದರೆ ಕಡೆಯ ನಿರೂಪಣೆ, ಉದ್ದುದ್ದ ಭಾಷಣಗಳು, ಕಥೆಯ ಓಟಕ್ಕೆ ಅಡ್ಡಗಲ್ಲಾಗಿವೆ. ಉತ್ತಮವಾಗಬಹುದಾಗಿದ್ದ ಈ ನಾಟಕ ಈ ಕಾರಣಗಳಿಂದ ತನ್ನ ರಂಜನೀಯ ಶಕ್ತಿಯನ್ನು ಕಳೆದುಕೊಂಡು ಬೇಸರ ತರಿಸುವುದು. ಕೆಲವೆಡೆ ಮಾತುಗಳು ಅತಿ ನಾಟಕೀಯವಾಗಿ ಪ್ರೇಕ್ಷಕರ ಸಹನೆಯನ್ನು ಪರೀಕ್ಷಿಸುವುದು.

ಪ್ರಿಯವಂದಾ 'ಶಾಕುಂತಲಾ' ನಾಟಕದ ಕಥಾ ವಸ್ತುವಿನ ಮೇಲೆ ಆಧಾರಿತವಾಗಿದೆ. ಪ್ರಿಯಂವದೆ ಶಕುಂತಲೆಯ ಪ್ರೀತಿಯ ಸಖಿ. ಮೂಲ ಕಥೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸದಂತೆ ಕಂಡುಬಂದರೂ ಅದು ಅಂಚುಬಿಟ್ಟು ದೂರಹೋಗಿಲ್ಲ. ಪ್ರಿಯಂವದಾ ಪಾತ್ರಚಿತ್ರಣ ಸುಂದರವಾಗಿ ಮೂಡಿ ಬಂದಿದ್ದರೂ, 'ಜ್ಞಾನದಾನ'ದ ಕೆಲದೋಷಗಳು ಈ ನಾಟಕದಲ್ಲೂ ನುಸುಳಿ ಬಂದಿದೆ. ಭಾಷಾ ಶೈಥಿಲ್ಯ, ನಿಸ್ಸಾರವಾದ ನಿರೂಪಣೆ, ಇವುಗಳು ಉತ್ತಮವೆನಿಸಬಹುದಾಗಿದ್ದ ಈ ನಾಟಕಕ್ಕೆ ಧೂಳು ಮುಚ್ಚಿಸಿದೆ.

ಒಟ್ಟಿನಲ್ಲಿ ಈ ಪುಸ್ತಕದಲ್ಲಿ ಎರಡು ಶೀರ್ಷಿಕೆಗಳ ಚಮತ್ಕಾರ ಒಂದರ ಹೊರತು, ಮತ್ತೇನೂ ಹೊಸತಿಲ್ಲ, ಅಚ್ಚು ದೋಷಗಳು ಹೇರಳವಾಗಿದೆ.

—ಕೆ. ಎಸ್. ಸೂಲಿಬೆಲೆ

ಶ್ರೀ ಚರಬಸವ ತಾತನವರ ಪೌರಾಣಿಕ ನಾಟಕ—ಪುಟ ೧೦೧-೯; ಬೆಲೆ ೨-೦೦; ಲೇ: ಶ್ರೀ ನಾಗಪ್ಪಶೆಟ್ಟರ, ಶಹಪುರ; ಪ್ರ: ಜಿ. ಎಂ. ಗುರುಬಸಪ್ಪಶಾಸ್ತ್ರಿ, ಶ್ರೀ ಬಸವರಾಜ ಪ್ರಿಂಟಿಂಗ್ ಪ್ರೆಸ್, ಶಹಪುರ, ಗುಲಬರ್ಗ ಜಿಲ್ಲೆ.

ಸರಸ ಸಂಗೀತ ಪೌರಾಣಿಕ ನಾಟಕವಿದು. ಭಕ್ತಿಪ್ರಧಾನವಾಗಿದೆ. ನೀತಿ-ಭಕ್ತಿ-ಜ್ಞಾನ-ವೈರಾಗ್ಯ ಭಾವನೆಗಳನ್ನು ಸಾಮಾಜಿಕರಲ್ಲಿ ಜಾಗೃತಗೊಳಿಸಲು ಇದು ಸಹಾಯಕವಾದೀತು. ನಾಟಕದಲ್ಲಿ ಹಾಸ್ಯ-ಕರುಣರಸಗಳಲ್ಲಿ ಸನ್ನಿವೇಶಗಳಿದ್ದರೂ ಶಾಂತರಸವೇ ಮುಖ್ಯವಾಗಿದೆ. ಮೂರು ರಜ್ಜುಗಳಿದ್ದು, ಒಟ್ಟು ಇಪ್ಪತ್ತೇಳು ಪ್ರವೇಶ (ದೃಶ್ಯ) ಗಳಿವೆ. ನಾಟಕ ರಚನೆ ಸುಂದರವಾಗಿದ್ದು ಕಲಾ ಕಲ್ಪನೆ, ಸಾಹಿತ್ಯ ರಚನೆಯಲ್ಲಿ ಔಚಿತ್ಯ, ಹಾಡಲು ತಕ್ಕುದೆನಿಸುವ ಕವಿತೆಗಳು ಲೇಖಕರ ಕುಶಲತೆಗೆ ಸಾಕ್ಷಿಗಳಾಗಿವೆ. ಮನೋರಂಜನೆಯೊಡನೆ ತತ್ವದರ್ಶನವೂ ಆಗುವುದರಿಂದ ಒಳ್ಳೆಯ ನಾಟಕವಿದು.

—ಟಿ. ಕೇಶವಭಟ್ಟ

'ವಿಜಯಶ್ರೀ' (ಸಾಮಾಜಿಕ ರೇಡಿಯೋ ನಾಟಕ)—ಟಿ. ಎನ್. ಮಹದೇವಯ್ಯ, ಬಿ.ಎಸ್ಸಿ., ವಸಂತ ವಿಹಾರ, ಮಸಗೋಡು ಎಸ್ಟೇಟ್, ಸೋಮವಾರಪೇಟೆ, ಕೊಡಗು ; ಪುಟ ೧೫೨, ಬೆಲೆ ರೂ. ೨-೦೦.

'ವಿಜಯಶ್ರೀ' ದಿವಂಗತ ಟಿ. ಎನ್. ಮಹದೇವಯ್ಯನವರ ನಾಲ್ಕು ಏಕಾಂಕ ರೇಡಿಯೋ ನಾಟಕಗಳ ಸಂಕಲನ. ೧೯೬೭ರಲ್ಲಿ ಅವರು ಸ್ವರ್ಗಸ್ಥರಾದ ನಂತರ ಅವರ ಬಂಧುಗಳು ಈ ರೇಡಿಯೋ ನಾಟಕಗಳನ್ನು ಒಟ್ಟುಗೂಡಿಸಿ ಪ್ರಕಟಿಸಿದ್ದಾರೆ. ಸ್ವಯಂ ಸಾಹಿತಿಗಳಾಗಿದ್ದ ಅವರು ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದರೆಂಬುದಕ್ಕೆ ಈ ರೂಪಕಗಳು ನಿದರ್ಶನವಾಗಿವೆ. ಮಹಾಕವಿ ಪಂಪನ ಆದಿಪುರಾಣದ ಭರತ-ಬಾಹುಬಲಿ ಪ್ರಸಂಗವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿಸಿರುವ ೧೨ ದೃಶ್ಯಗಳ ಏಕಾಂಕ ನಾಟಕ 'ವಿಜಯಶ್ರೀ'. ಬಾಹುಬಲಿಯ ವೈರಾಗ್ಯೋದಯವನ್ನು ಚಿತ್ರಿಸುತ್ತವೆ. "ಕಥೆ ಹಳೆಯದಾದರೂ ರೂಪಕದಲ್ಲಿನ ದೃಶ್ಯ ಸಂಯೋಜನೆ, ಹೊಸಪಾತ್ರಗಳ ರಚನೆ, ಕಥಾ ನಿರೂಪಣೆಗಳು ಸಂಪೂರ್ಣವಾಗಿ 'ಹೊಸತ'ನ್ನೇ ಒಳಗೊಂಡಿವೆ"ಎಂದಿದ್ದಾರೆ ಲೇಖಕರು. ಆದರೆ ಇದನ್ನು ಎಷ್ಟರಮಟ್ಟಿಗೆ ಸ್ವತಂತ್ರವೆನ್ನಲಾದೀತೆಂಬುದು ಅನಿರ್ದಿಷ್ಟವಾಗಿಯೇ ಉಳಿಯುತ್ತದೆ. ನೂತನ ಪಾತ್ರಗಳಾದ ವೈರಾಗ್ಯಶ್ರೀ-ವಿಜಯಶ್ರೀ ಇವರ ತಾರ್ಕಿಕ ಸಂಭಾಷಣೆ, ಪ್ರಭಾವ, ಘರ್ಷಣೆ, ಅಂತ್ಯದ ವಿಜಯಶ್ರೀಯ ಸೋಲು ರೂಪಕಕ್ಕೆ ಕಳೆಯನ್ನಿತ್ತಿವೆ. ಬಾಹುಬಲಿಯ ವೈರಾಗ್ಯೋದಯದೊಂದಿಗೆ ಭರತನ ಗರ್ವಭಂಗವಾಗುತ್ತದೆಯಾದರೂ, ಪುಟ ೩೪ರಲ್ಲಿನ ಅವನ ವಿನಯ ಅತ್ಯಂತ ಅನಿರೀಕ್ಷಿತ (Too sudden) ವಾಗಿ, ತಂತ್ರ ದೃಷ್ಟಿಯಿಂದ ಅಷ್ಟು ಸಮರ್ಪಕವೆನಿಸುವುದಿಲ್ಲ. ವಿಜಯನಗರ ಸಾಮ್ರಾಜ್ಯೋದಯವನ್ನು ಶ್ರೀರಂಗದ ಯವನ ಧಾಳಿ, ಕಂಪಿಲ, ಆನೆಗೊಂದಿಗಳ ಅವನತಿಯಿಂದ ಹಿಡಿದು ಹರಿಹರ ಸಾಮ್ರಾಜ್ಯ ಸಂಸ್ಥಾಪನೆಯವರೆಗೆ ೯ ದೃಶ್ಯಗಳಲ್ಲಿ 'ವಿದ್ಯಾರಣ್ಯ' ರೂಪಕದಲ್ಲಿ ಚಿತ್ರಿಸಲಾಗಿದೆ. ಮುಖ್ಯ ಕತೆಗೆ ಅಂಗವಾಗಿ ಚಾರಿತ್ರಿಕ ಹಿನ್ನೆಲೆಯನ್ನೂ ಅಲ್ಲಲ್ಲಿ ಸೂಚಿಸಲು 'Flash-back' ಎನ್ನಬಹುದಾದ ತಂತ್ರವನ್ನು ಅಳವಡಿಸಿಕೊಂಡಿರುವುದು ಇವರ ವೈಶಿಷ್ಟ್ಯವಾದರೂ, ಮೊದಲನೆಯ ದೃಶ್ಯದಲ್ಲಿಯೇ ಮೂರು ಬಾರಿ ಅದರ ಬಳಕೆಯಿಂದಾಗಿ ಸಾಧಾರಣತೆ ತಲೆದೋರಿದೆ. ವಿದ್ಯಾರಣ್ಯರ ಪಾತ್ರ ಯಶಸ್ವಿಯಾಗಿದೆ. ಭಕ್ತಿ ಭಂಡಾರಿ ಬಸವಣ್ಣ ಮತ್ತು ಪತ್ನಿ ನೀಲಾಂಬಿಕೆಯರ ಜೀವನ ದರ್ಶನಕ್ಕೆ ಸಂಬಂಧಿಸಿದ ೯ ದೃಶ್ಯಗಳ 'ನೀಲಾಂಬಿಕೆ' ಸಂ

ಲನ ಅತ್ಯುತ್ತಮ ಏಕಾಂಕ. ಬಿಜ್ಜಳನ ಶಿವದ್ರೋಹದಿಂದ ಜಿಹಾಸೆಗೊಂಡ ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿ ಕಪ್ಪಡಿಗೆ ತೆರಳಿದರೂ, ಅಂದಿನ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿಯಿಂದಾಗಿ ಸಾಮಾಜಿಕ ಜೀವನ ಅಲ್ಲೋಲ ಕಲ್ಲೋಲವಾಗಿದ್ದರೂ "ಇಲ್ಲಿಲ್ಲದ ಸಂಗಯ್ಯ ಕಪ್ಪಡಿಯಲ್ಲಿರುವನೇ? ವಿಶ್ವತೋಬಾಹು, ವಿಶ್ವತೋಪಾದ, ವಿಶ್ವತೋಚಕ್ಷುವಾದ ಭಗವಂತನನ್ನು ಅಲ್ಲಲ್ಲಿ ಅರಸಬಹುದೇ? (ಪು. ೧೩೦) ಅಲ್ಲಿ ಉಂಟು ಇಲ್ಲ ಉಂಟೆಂಬ ಈ ಉಭಯ ಸಂದೇಹ ಸಂಗನ ಶರಣರ ಹೃದಯದಲ್ಲಿ ಮೂಡಬಹುದೇ?" ಎಂದು ತಿಳಿದು ನೀಲಾಂಬಿಕೆ ಕಲ್ಯಾಣದಲ್ಲಿಯೇ ಉಳಿದು, ಪತಿ ಶಿವೈಕ್ಯರಾದರೆಂದು ತಿಳಿದಾಕ್ಷಣ ತಾನೂ ಅವರನ್ನು ಹಿಂಬಾಲಿಸಿದ ಕತೆ ಇಲ್ಲಿದೆ. ಅಣ್ಣ ಆಜಗಣ್ಣನ ಅನುಭಾವ ಬದುಕಿನಿಂದ ಸ್ಫೂರ್ತಿ, ದೀಕ್ಷೆ ಪಡೆದು ಶರಣೆಯಾಗಿ ಮುಕ್ತಿಯತಾಯಾದ ಮುಕ್ತಾಯಿಯನ್ನು ಕುರಿತ 'ಮುಕ್ತಾಯಕ್ಕ' ಅದೇ ದೃಶ್ಯಗಳ ಅತಿ ಚಿಕ್ಕ ಏಕಾಂಕ. ಅಜಗಣ್ಣನಿಗಿಂತ ಮಿಗಿಲಾದ ಅವನ ಸೋದರ ಮಾವ ನಂಬಿಯಣ್ಣನ ಅನುಭಾವ ದರ್ಶನವನ್ನು ಲೇಖಕರು ಏಕೋ ಮರೆಮಾಚಿ, ಅವನ ಲೋಕ ವ್ಯವಹಾರದಲ್ಲಿನ ಸಾಮಾನ್ಯತೆಯನ್ನೇ ಇಲ್ಲಿ ಎತ್ತಿ ತೋರಿಸಿರುವುದು ವಿಸ್ಮಯಕರವಾಗಿದೆ. ನಾಲ್ಕೂ ರೂಪಕಗಳಲ್ಲಿ ಕಂಡು ಬರುವ ವಿಶೇಷತೆಯೆಂದರೆ ಸನ್ನಿವೇಶಕ್ಕೆ ಖಚಿತವಾದ, ಪಾತ್ರಕ್ಕೆ ಒಪ್ಪುವ ಸಂಭಾಷಣೆ. ಪ್ರತಿಯೊಂದು ಪಾತ್ರವೂ ಇದರಿಂದಾಗಿ ಜೀವಕಳೆಯನ್ನು ಪ್ರದರ್ಶಿಸಿ ಮನಸ್ಸನ್ನು ಸೆರೆಹಿಡಿಯುತ್ತದೆ. ಲೇಖಕರ ಸುರಮ್ಯ ಶೈಲಿ ಭಾಷಾ ಸಾಮರ್ಥ್ಯ ಮೆಚ್ಚುವಂತಹುದು. ಅಲ್ಲಲ್ಲಿ ಹಲ ಕೆಲವು ಕಿರಿಯ ನ್ಯೂನತೆಗಳಿದ್ದರೂ, ಇದೊಂದು ಉತ್ತಮ ಸಂಗ್ರಹವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ದಿವಂಗತರ ಅಪ್ರಕಟಿತ ಕೃತಿಗಳನ್ನೆಲ್ಲವನ್ನೂ ಇದೇ ರೀತಿ ಅವರ ಬಂಧುಗಳು ಪ್ರಕಟಿಸುವುದರ ಮೂಲಕ, ಅವರ ಸಾಹಿತ್ಯ ಸೇವೆಯನ್ನು ಹೆಚ್ಚು ಪರಿಚಯ ಮಾಡಿಕೊಡುವಂತಾಗಲಿ ಎಂದು ಹಾರೈಸುತ್ತೇವೆ.

—'ಸುಮನಾ'

ಲೇಖಕರ ದ್ವಾದಶ ಸೂತ್ರಗಳು

೧. ಯಶಸ್ಸಿಗಾಗಿ ಬರೆಯಬೇಡಿ. ಹಾಗೆ ಮಾಡಿದರೆ ಯಶಸ್ಸೂ ಬರುವುದಿಲ್ಲ, ಲೇಖನವೂ ಚೆನ್ನಾಗುವುದಿಲ್ಲ; ಲೇಖನ ಚೆನ್ನಾಗಿದ್ದರೆ ಯಶಸ್ಸು ತಾನಾಗಿ ಬರುತ್ತದೆ.

೨. ದುಡ್ಡಿಗಾಗಿ ಬರೆಯಬೇಡಿ; ಆಗ ಜನರಂಜನೆ ಮಾಡಬೇಕಾಗುತ್ತದೆ; ಲೇಖನವು ವಿಕೃತವೂ ಅನಿಷ್ಟವೂ ಆಗುತ್ತದೆ.

೩. ದೇಶಕ್ಕಾಗಲಿ ಮನುಷ್ಯ ಜಾತಿಗಾಗಲಿ ಮಂಗಳ ಸಾಧನೆಯಾಗುವುದಾದರೆ ಅಥವಾ ಸೌಂದರ್ಯಸೃಷ್ಟಿಯಾಗುವುದಾದರೆ ಮಾತ್ರ ಬರೆಯಿರಿ.

೪. ಅಸತ್ಯ, ಅಧರ್ಮ, ಅಹಿತವಾದದ್ದನ್ನು ಬರೆಯಬೇಡಿ; ಅದು ಮಹಾಪಾಪ.

೫. ಬರೆದದ್ದನ್ನು ಥಟ್ಟನೆ ಮುದ್ರಿಸಬೇಡಿ; ಸ್ವಲ್ಪಕಾಲ ಬಿಟ್ಟು ನೋಡಿದರೆ ಅದರ ದೋಷ ಗೊತ್ತಾಗುತ್ತದೆ.

೬. ತಿಳಿಯದ ವಿಷಯಕ್ಕೆ ಕೈಹಾಕಬೇಡಿ.

೭. ಪಾಂಡಿತ್ಯ ಪ್ರಕಾಶನಕ್ಕೆ ಹೋಗಬೇಡಿ. ನಿಮಗೆ ತಿಳಿಯದ ಭಾಷೆಗಳಿಂದ ಎಂದೂ 'ಉದ್ಧಾರ' ಮಾಡಬೇಡಿ.

೮. ಅಲಂಕಾರಕ್ಕೆ ಪ್ರಯತ್ನಿಸಬೇಡಿ; ಅವಶ್ಯವಾದಾಗ ಅದು ತಾನೇ ಬರುತ್ತದೆ.

೯. ಅಲಂಕಾರವೋ ಹಾಸ್ಯವೋ ಚೆನ್ನಾಗಿದೆಯೆನ್ನಿಸಿದಾಗ ನಾಲ್ಕು ಜನ ಸ್ನೇಹಿತರಿಗೆ ಮತ್ತೆ ಮತ್ತೆ ಓದಿ ತೋರಿಸಿ; ತೋರಿಸುವುದಕ್ಕೆ ಸಂಕೋಚವಾದರೆ ಕಿತ್ತುಹಾಕಿ.

೧೦. ಸರಳತೆಯೇ ಅಲಂಕಾರಗಳಲೆಲ್ಲಾ ಶ್ರೇಷ್ಠವಾದ ಅಲಂಕಾರ.

೧೧. ಯಾರನ್ನೂ ಅನುಕರಣ ಮಾಡಬೇಡಿ; ಅದರಿಂದ ದೋಷಗಳನ್ನೇ ಅನುಕರಣ ಮಾಡುತ್ತೀರಿ.

೧೨. ಸಪ್ರಮಾಣವಲ್ಲದ್ದನ್ನು ಬರೆಯಬೇಡಿ.

ದಿ. ಎ. ಆರ್. ಕೃ.
'ಬಂಕಿಮಚಂದ್ರ' ಗ್ರಂಥದಿಂದ

ತತ್ತ್ವಶಾಸ್ತ್ರ

ಶಾಂಕರ ವೇದಾಂತ ಮೂಲತತ್ವಗಳು—ಪುಟ ೧೧೦, ಲೇ: ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು; ಪ್ರ.: ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೇನರಸಿಪುರ, ಹಾಸನ ಜಿಲ್ಲೆ.

ಈ ಗ್ರಂಥಲೇಖಕರಾದ ಶ್ರೀ ಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿದ್ದಾಗ ೧೯೨೦ರಲ್ಲಿ ಸ್ಥಾಪಿಸಿದ ಆಧ್ಯಾತ್ಮ ಪ್ರಕಾಶ ಕಾರ್ಯಾಲಯವು ಆಧ್ಯಾತ್ಮ ವಿದ್ಯಾಲಯವನ್ನು ನಡೆಸುವುದಲ್ಲದೆ, ಆಧ್ಯಾತ್ಮ ವಿದ್ಯಾಪ್ರಸಾರಕ್ಕಾಗಿ ಹೆಚ್ಚಿನ ಸೇವೆ ಸಲ್ಲಿಸುತ್ತಾ ಬಂದಿದೆ. ಉಪನ್ಯಾಸ, ಭಜನೆ, ಉತ್ಸವ ಅನುಷ್ಠಾನಗಳನ್ನು ನಡೆಸುತ್ತಿದೆ. ಸಂಸ್ಕೃತ-ಕನ್ನಡ-ಇಂಗ್ಲಿಷ್ ಭಾಷೆಗಳಲ್ಲಿ ನೂರಾರು ಆಧ್ಯಾತ್ಮ ಗ್ರಂಥಗಳನ್ನು ಪ್ರಕಟಿಸಿದೆ. ವಾಚನಾಲಯ, ಪುಸ್ತಕ ಭಂಡಾರ, ಮುದ್ರಣಾಲಯಗಳನ್ನು ನಡೆಸುತ್ತಿದೆ. 'ಆಧ್ಯಾತ್ಮ ಪ್ರಕಾಶ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದೆ. ಪ್ರಸ್ತುತ ಗ್ರಂಥವು ಶ್ರೀ ಸ್ವಾಮಿಗಳವರು ಮಾಡಿದ ಉಪನ್ಯಾಸಗಳ ಸಂಗ್ರಹ.

ಶಾಂಕರ ವೇದಾಂತ ತತ್ವಗಳನ್ನು ತಿಳಿಯುವುದರಲ್ಲಿ ಹಲವರು ವ್ಯಾಖ್ಯಾನಕಾರರು ತಪ್ಪಿರುವುದನ್ನು ತೋರಿಸಿ, ಶ್ರೀ ಶಂಕರರ ಅಭಿಪ್ರಾಯಕ್ಕೆ ಇಲ್ಲಿ ಸರಿಯಾದ ಕನ್ನಡಿ ಹಿಡಿದಿದೆ. ಅವರ ಪರಿಶುದ್ಧ ಅದ್ವೈತ ತತ್ವಗಳನ್ನು ಶ್ರುತಿ, ಯುಕ್ತಿ-ಅನುಭವಗಳಿಗೆ ಸರಿಯೆನಿಸುವಂತೆ ತಿಳಿಯಲು ಈ ಪುಸ್ತಕವು ಸಹಕಾರಿ.

* * *

ಮೋಹಮುದ್ಗರ—ಪುಟ ೨೮, ಅನುವಾದಕರು: ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು; ಪ್ರ: ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೇನರಸಿಪುರ.

ಶ್ರೀ ಶಂಕರರಿಂದ ರಚಿತವಾಗಿ ಜನಪ್ರಿಯವಾಗಿರುವ "ದ್ವಾದಶ ಮಂಜರಿ" ಮತ್ತು ಅವರ ಶಿಷ್ಯರು ರಚಿಸಿರಬಹುದಾದ "ಚತುರ್ದಶ ಮಂಜರಿ" ಸ್ತೋತ್ರಗಳು ಒಟ್ಟಿಗೆ "ಮೋಹಮುದ್ಗರ" ಎಂಬ ಹೆಸರಿನಿಂದ ಪ್ರಖ್ಯಾತವಾಗಿವೆ. ಇದಕ್ಕೆ "ಭಜ ಗೋವಿಂದಂ" ಎಂಬ ಧ್ರುವಪದವಿರುವುದರಿಂದ "ಭಜಗೋವಿಂದ ಸ್ತೋತ್ರ" ಎನ್ನಲಾಗಿದೆ. ಇದನ್ನು ಪಾಠಾಂತರ, ವಿಮರ್ಶೆ, ಭಾವಾರ್ಥ, ಪದ್ಯಾನುವಾದಗಳೊಡನೆ ಈ ಪುಸ್ತಕದಲ್ಲಿ ಕೊಡಲಾಗಿದೆ. ಕೊನೆಗೆ 'ಷಟ್ಪದೀ ಸ್ತೋತ್ರ'ವೂ ಇದೆ. ಇದರಲ್ಲಿ "ನಹಿ ನಹಿ ರಕ್ಷತಿ ಡುಕುರುಞ ಕರಣೇ" ಎಂಬುದಕ್ಕೆ "ತಪ್ಪು ವ್ಯಾಕರಣದ ಜಪವು ಕಾಪಾಡಲಾರದು" ಎಂದು ಭಾವಾರ್ಥವನ್ನಿತ್ತುದು ಔಚಿತ್ಯಪೂರ್ಣವೂ ಸಂಶುದ್ಧವೂ ಎನಿಸುತ್ತದೆ.

* * *

ಮುಕುಂದಮಾಲಾ—ಪುಟ ೨೪, ಅನುವಾದಕರು: ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸಾಮಿಗಳು, ಪ್ರ: ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೇನರಸಿಪುರ.

ತಮಿಳು ವೈಷ್ಣವರಲ್ಲಿ ಪ್ರಸಿದ್ಧರಾದ ಆಳ್ವಾರರುಗಳಿಂದ ರಚಿತವಾಗಿ ಮೊದಲು ವಿಶಿಷ್ಟಾದ್ವೈತಿಗಳ ಸ್ತೋತ್ರವಾಗಿ ಕ್ರಮಶಃ ವೈಷ್ಣವರೆಲ್ಲರಿಗೂ ಪ್ರಿಯವಾದ ಶ್ಲೋಕಗಳಾಗಿ ಇವು ಪರಿಣಮಿಸಿದವೆಂದು ಲೇಖಕರು ತಿಳಿಸಿದ್ದಾರೆ. ನಾಲ್ವತ್ತು ಶ್ಲೋಕಗಳನ್ನು ಭಾವಾರ್ಥ ಸಹಿತವಾಗಿ ನಾವಿಲ್ಲಿ ಕಾಣುತ್ತೇವೆ. ಪಾಠಾಂತರವು ಅಡಿ ಟಿಪ್ಪಣಿಯಲ್ಲಿದೆ. ಮುಂಬಯಿ ಕಡೆ ಪ್ರಚಲಿತವಿರುವ ಈ ಸ್ತೋತ್ರದ ಪಾಠಾಂತರ ರೂಪವನ್ನು ಕೊನೆಗೆ ಕೊಟ್ಟಿದೆ. ನಿತ್ಯಪಠನೆಗೆ ಅತಿ ಉಪಯುಕ್ತ ಶ್ಲೋಕ ಸಂಗ್ರಹದ ಪುಸ್ತಕವಿದು.

—ಟಿ. ಕೇಶವಭಟ್ಟ

ಜೀವನ ಸಿದ್ಧಾಂತ-(ಭಕ್ತ ಸಂಪುಟ, ಭಕ್ತಿ ಜ್ಞಾನಗಳ ಮೇರು ಕೃತಿ) ಪುಟ ೮೭೨, ಬೆಲೆ ೧೫-೫೦ ರೂ.

ಭಕ್ತ ಸಂಪುಟವಾದ ಈ ಪ್ರಸಕ್ತ ಸಂಪುಟದಲ್ಲಿ ಪಿಂಡ ಸ್ಥಳ, ಮತ್ತು ಪಿಂಡಜ್ಞಾನಸ್ಥಳಗಳಿಂದ ಹಿಡಿದು ಶರಣ ಸ್ಥಳ ಐಕ್ಯಸ್ಥಳದವರೆಗೆ ಭಕ್ತನ ವಿವಿಧ ಸ್ಥೂಲ ಸೂಕ್ಷ್ಮ ಕ್ರಿಯಾ ವಿಶೇಷಗಳನ್ನು ವಿವರಿಸುತ್ತಾ ಭಕ್ತ ಸ್ಥಳದ ಪ್ರಾಮುಖ್ಯತೆಯನ್ನು ವರ್ಣಿಸುತ್ತಾರೆ. ಗ್ರಂಥದ ಉತ್ತರ ಭಾಗದಲ್ಲಿ ಶಿವಾದ್ವೈತ ತತ್ವ, ದೀಕ್ಷಾ, ಶಿಕ್ಷಾ, ಜ್ಞಾನ-ಈ ಗುರುತ್ರಯರ ನಿರೂಪಣೆ ಕ್ರಿಯಾ, ಭಾವ, ಜ್ಞಾನ ಈ ಲಿಂಗತ್ರಯಗಳ ವಿಶೇಷ ಜ್ಞಾನಗಳ ಪರಿಚಯ, ಸ್ವಯ, ಚರಪರಸ್ಥಲಗಳ ಮಾರ್ಮಿಕ ವಿವರಣೆಯನ್ನು ಒದಗಿಸುತ್ತಾ

ಭಕ್ತ, ಗುರುಲಿಂಗ ಜಂಗಮ ಸಾಮರಸ್ಯ ಸ್ಪಷ್ಟಗೊಳಿಸು ತ್ತಾರೆ. ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾಲಿಂಗ ಇವುಗಳ ಪ್ರಾಮುಖ್ಯತೆಯನ್ನು ಸೋದೋ ಹರಣವಾಗಿ ತಿಳಿಸುತ್ತಾ ಭಕ್ತನ ಆಚಾರ, ಗುರು, ಶಿವ, ಜಂಗಮ, ಪ್ರಸಾದ ಲಿಂಗಗಳ ಔಚಿತ್ಯ ಪ್ರಾಮುಖ್ಯತೆ ಗಳನ್ನು ವಿವರ ವಿವರವಾಗಿ ಕೊಡುತ್ತಾರೆ. ಗ್ರಂಥದ ಕೊನೆಯ ಭಾಗವಾದ ಅನುಬಂಧದಲ್ಲಿ ಶಕ್ತಿ, ಭಕ್ತಿಗಳ, ಪಿಂಡಾಂಡ, ಬ್ರಹ್ಮಾಂಡಗಳ ವಿವರಣೆಯನ್ನು ಕೊಡುತ್ತಾ ಗ್ರಂಥವನ್ನು ಭಗವದ್ಗೀತೆಯ ಅನೇಕ ಪೋಷಕ ವಾಕ್ಯ ಗಳಿಂದ ಪೋಷಿಸಿ, ಸಮರ್ಥಿಸುತ್ತಾರೆ. ಈ ಗ್ರಂಥ ವೀರ ಶೈವ ತಂತ್ರ, ಭಕ್ತಿ ಮಾರ್ಗವನ್ನು ಅರ್ಥಮಾಡಿಕೊಳ್ಳುವು ದರಲ್ಲಿ ಸಹಾಯವಾದೀತು. ಆದರೆ ಗ್ರಂಥದ ಶೈಲಿಯ ಬಗ್ಗೆ 'ನೀರಿಳಿಯದ ಗಂಟಲೋಳ್ ಒಮ್ಮೊಮ್ಮೆ ಕಡುಬ ತುರುಕಿ' ದಂತಾಗುತ್ತದೆ.

—ಎಂ. ಚಂದ್ರಶೇಖರ್

ವಿಮರ್ಶೆಯ ದಾರಿ

(ಆನೆಯ ಪುಟದಿಂದ)

ನಿರ್ಮಾಣ ಶಕ್ತಿಯೂ ಮೂಲತಃ ಬೇರೆ ಬೇರೆ ಅಲ್ಲ; ಅವು ಒಂದೇ ಅಖಂಡ ಕ್ರಿಯೆಯ ಎರಡು ಭಾಗಗಳು."[8] . . . ಅವನು ಹೊರಟಿರುವುದು ಕೃತಿ ವಿಚಾರ ನಿರೂಪಣೆಗೇ ಹೊರತು ಕೃತಿ ನಿರ್ಮಾಣಕ್ಕಲ್ಲ. ತನ್ನ ವಿಮರ್ಶೆಯಿಂದ ಕವಿಯ ರಸಾನುಭವದ ವಿವರಣೆ ಆಗಬೇಕೆಂಬುದು ಆತನ ಗುರಿ. ತನ್ನ ವಿಮರ್ಶೆಯಿಂದ ರಸಾನುಭವವನ್ನುಂಟು ಮಾಡಬೇಕೆಂಬುದಲ್ಲ. ರಸಾನುಭವಪೂರ್ವಕವಾದ ಸೃಷ್ಟಿ ಆತನ ಗುರಿಯಾದರೆ ಆತ ಕಾವ್ಯವನ್ನು ಬರೆಯಬಹುದೇ ಹೊರತು ವಿಮರ್ಶೆಯಲ್ಲ. ವಿಮರ್ಶೆ "ಉದ್ದಕ್ಕೂ ಪ್ರತಿಜ್ಞಾ ಪೂರ್ವಕವಾಗಿ ನಡೆಯುವ ಕ್ರಿಯೆ; ಮಾನವಮತಿಯ – ಅದರ ಸಮಸ್ತ ಗುಣದೋಷಗಳನ್ನು ಒಳಗೊಂಡ – ಒಂದು ಬೌದ್ಧಿಕ ಕ್ರಿಯೆ."[9] ಹಾಗೆಂದ ಮಾತ್ರಕ್ಕೆ ವಿಮರ್ಶೆ ಕೇವಲ ಶುಷ್ಕವಾದ, ಅತ್ಯಂತ ನಿಷ್ಕೃಷ್ಟವಾದ, ಒಂದು ಬಗೆಯ ತಾರ್ಕಿಕ ಕ್ರಿಯೆ ಎಂದೂ ಅರ್ಥವಲ್ಲ. ವಿಮರ್ಶಕನಲ್ಲಿಯೂ, ಕವಿಯಲ್ಲಿರುವಂತೆ ಸೃಷ್ಟಿಶೀಲವಾದ ಶಕ್ತಿ ಕಿಂಚಿತ್ತೂ ಇಲ್ಲ ವೆಂದೂ, ಅದು ಕೇವಲ ಬೌದ್ಧಿಕ ಕ್ರಿಯೆ ಎಂದೂ ಅರ್ಥ ವಲ್ಲ. ಕವಿಯ ಆವೇಶದ ನಡುವೆಯೂ ವಿಮರ್ಶನ ಶಕ್ತಿ ಇರುತ್ತದೆ; ವಿಮರ್ಶಕನ ವಿಚಾರ ಶೀಲತೆಯಲ್ಲೂ ಆವೇಶ ಇರುತ್ತದೆ, ಅಲ್ಲ ಇರಬೇಕು. ಏಕೆಂದರೆ "ಭಾವಗ್ರಹಣ ವಿಲ್ಲದ ಬುದ್ಧಿಯಿಂದ ಮಾಡುವ ವಿಚಾರವು ಶುಷ್ಕವಾಗು ವುದು ನಿಜ; ಆದರೆ ಬುದ್ಧಿಮೂಲಕವಾದ ವಿಚಾರವಿಲ್ಲದ ರಸಾನುಭವವು ವಿವೇಚನೆಯಿಲ್ಲದ ಉತ್ಸಾಹದಲ್ಲಿ ಪರಿಣಾಮ ವಾಗುವುದು"[10] . . . ಕೃತಿ ವಿಮರ್ಶನ ಶಕ್ತಿ ಮತ್ತು ಕೃತಿ ನಿರ್ಮಾಣ ಶಕ್ತಿ ಎರಡೂ ಮೂಲತಃ ಬೇರೆ ಬೇರೆ ಅಲ್ಲದಿರ ಬಹುದು; ಆದರೆ ಕೃತಿ ನಿರ್ಮಾಣದ ಸ್ವರೂಪವೂ ಕೃತಿ ವಿಮರ್ಶೆಯ ಸ್ವರೂಪವೂ ಬೇರೆ ಬೇರೆ ಎಂದು ಒಪ್ಪಬೇಕು. ಆದರೆ ಸಾಹಿತ್ಯ ವಿಮರ್ಶೆ ಕೃತಿರಚನೆಯಷ್ಟೇ ವ್ಯಕ್ತಿವಿಶಿಷ್ಟ ವಾದುದು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

8. Nalini Kantha Gupta: Poets and Mystics
9. Orlo Williams: Contemporary Criticism of Literature
10. ಮಾಸ್ತಿ ವೆಂಕಟೇಶ ಅಯ್ಯಂಗಾರ್: ವಿಮರ್ಶೆ ೧

ವಿಮರ್ಶೆ

ಭೂಮಿ ಗೀತಾ-ಕಾವ್ಯ ಪ್ರವೇಶ-(ಅಡಿಗರ ಭೂಮಿ ಗೀತಾದ ವಿಮರ್ಶಾತ್ಮಕ ವಿವರಣೆ) ಮಾಡಿದವರು : ಪ್ರೇಮಸೋದರ, ಪ್ರ. : ಜಯದೇವ ಕುರ್ಕಿ, ಮುನಿಸಿಪಲ್ ಹೈಸ್ಕೂಲು, ತುರುವೇಕೆರೆ. ಪುಟ. ೭೯, ಬೆಲೆ ೧-೨೫ ರೂ.

ನವ್ಯ ಕಾವ್ಯದ ಶ್ರೇಷ್ಠ ಪ್ರತಿನಿಧಿಗಳಾದ ಶ್ರೀ ಎಂ. ಗೋಪಾಲಕೃಷ್ಣ ಅಡಿಗ ಅವರ 'ಭೂಮಿಗೀತಾ' ಎಂಬ ಒಂದು ಕಾವ್ಯದ ವಿಮರ್ಶಾತ್ಮಕ ವಿವರಣೆಯನ್ನು ಒದಗಿಸಿದ 'ಪ್ರೇಮ ಸೋದರ'ರು ಒಂದು ರೀತಿಯಲ್ಲಿ ಸಾಹಸವನ್ನು ಮಾಡಿದ್ದಾರೆನ್ನಬೇಕು. ನವ್ಯ ಕಾವ್ಯದಲ್ಲಿ ಭಾವಕ್ಕಿಂತ ಬುದ್ಧಿಗೆ ಪ್ರಾಧಾನ್ಯತೆ ಎನ್ನುವ ಮಾತು ಆಗಾಗ ಕೇಳಿ ಬರುತ್ತಿದೆ. ಸಂಕ್ರಮಣ ಕಾವ್ಯವಾದ ಈ ನವ್ಯ ಕಾವ್ಯಕ್ಕೆ ಇಂತಹ ವಿವರಣೆ, ವಿಮರ್ಶೆಗಳು ಅಗತ್ಯ. ಕಾರಣ ಸಹೃದಯರಿಗೂ ನವ್ಯ ಕವಿಗೂ, (ಕಾವ್ಯಕ್ಕೂ ಜನತೆಗೂ ಇರುವಂತೆ) ಕಂದರ ಒಂದು ಬೆಳೆದು ನಿಂತಿದೆ. ಇಂತಹ ಪುಸ್ತಕಗಳು ಬಂದರೆ, ಅಂತಹ ಕಂದರದ ಮೇಲೊಂದು ಸೇತುವೆ ಮೂಡಿಸಬಹುದು. ಭೂಮಿಗೀತಾ ಕಾವ್ಯದ ವಿಮರ್ಶೆಗೆ ತೊಡಗಿ ಪ್ರಾಮಾಣಿಕ ಕವಿಯಾದ ಅಡಿಗರು ತಮ್ಮ ಹುಟ್ಟಿನಿಂದ ಮೊದಲುಗೊಂಡು ಭೂಮಿ ತಮಗೆ ನೀಡಿದ ಸ್ಫೂರ್ತಿಯನ್ನೂ ಅದಕ್ಕೆ ತಾವು ನೀಡಿದ ಪ್ರತಿಕ್ರಿಯೆಯನ್ನೂ ವಸ್ತು ನಿಷ್ಠ ದೃಷ್ಟಿಯಿಂದ ನೋಡಿ ಸಿಂಹಾವಲೋಕನ ಕ್ರಮದಿಂದ ಭೂಮಿ ಗೀತಾದಲ್ಲಿ ನಿರೂಪಿಸಿದ್ದಾರೆ ಎಂಬ ಮಾತು ಸತ್ಯಸ್ಯ ಸತ್ಯ. ವಿಮರ್ಶೆಯನ್ನು ಓದಿ ಮುಗಿಸಿದ ಮೇಲೆ ನಮ್ಮ ಅಭಿಪ್ರಾಯಕ್ಕೆ ಹೊಂದಿಕೆ ಆಗುವ ಭೂಮಿಗೀತಾ ಅಡಿಗರ ಅತ್ಯಂತ ಯಶಸ್ವಿ ಕವನ ಮಾತ್ರವಲ್ಲ. ಕನ್ನಡದಲ್ಲಿ ಪ್ರತಿಭಾನ್ವಿತ ಕವಿಯೊಬ್ಬನ ಅಂತರಂಗಿಕ ಹೋರಾಟವನ್ನು ಪ್ರತಿನಿಧಿಸುವ ಕನ್ನಡ ಕಾವ್ಯ ಪರಂಪರೆಯಲ್ಲೊಂದು ಮೈಲುಗಲ್ಲೆಂದು ಹೇಳಬಹುದು. ಈ ವಿಮರ್ಶೆಯಲ್ಲಿ ಅನೇಕ ಲೋಪದೋಷಗಳಿದ್ದರೂ ಕೂದಲು ಸೀಳುವ ವಿವರಣೆಗಳಿದ್ದರೂ ನವ್ಯ ಕಾವ್ಯ ಅರ್ಥಮಾಡಿಕೊಳ್ಳಲು ಬಯಸುವ ಎಲ್ಲ ಸಹೃದಯರಿಗೂ ಕೈಪಿಡಿ ಎಂಬಂತಿದೆ ಇದು.

—ಎಂ. ಚಂದ್ರಶೇಖರ್

ಮಾತಿನ ಬಳ್ಳಿ—ಲೇ: ಶ್ರೀ ಜಿ. ಎ. ರೆಡ್ಡಿ, ಎಂ.ಎ., ಪ್ರ: ಮಯೂರಪ್ರಕಾಶನ, ಕೃಷ್ಣರಾಜಪುರಂ, ಹಾಸನ. ಪುಟ ೧೨೮, ಬೆಲೆ ಸಾದಾ ಪ್ರತಿ ೨-೦೦, ಉತ್ತಮ ಪ್ರತಿ ೪-೦೦.

ಕನ್ನಡದಲ್ಲಿ ಲೌಕಿಕಾಭಿರುಚಿಯ ಭಾವ ಪ್ರಬಂಧಗಳು ತೀರ ಕಡಮೆ. ಆ ಕೊರತೆಯನ್ನು ತುಂಬಲು ಈ ಪುಸ್ತಕವು ಸ್ವಲ್ಪ ನೆರವಾಗಬಲ್ಲುದು. ಇದರಲ್ಲಿ ಲೇಖಕರು ಸ್ವತಃ ಬರೆದ ವಿವಿಧ ವಸ್ತು ವಿಷಯವನ್ನುಳ್ಳ ಏಳು ಭಾವ ಪ್ರಬಂಧಗಳಿವೆ. ಮದುವೆಯ ದಿನಗಳು, ವಸತಿ ಗೃಹದ ಅತಿಥಿಗಳು, ಅತಿ ಮಾತನಾಡುವವರು, ಸೋಮಾರಿಗಳು, ಪೋಸ್ಟ್‌ಮನ್, ನಿಮ್ಮ ಭವಿಷ್ಯ, ಭಾಷಣಗಳು-ಎಂಬೀ ವಿಚಾರಗಳ ಮೇಲಿನ ವಿಚಾರಾತ್ಮಕ ಪ್ರಬಂಧಗಳನ್ನು ನಾವಿಲ್ಲಿ ಕಾಣುತ್ತೇವೆ. ಇಂತಹ ಪ್ರಬಂಧಗಳಲ್ಲಿ ವ್ಯಂಗ್ಯ ಹಾಸ್ಯ, ಅಣಕ, ರಸಭಾವ, ಜೀವನಾನುಭವ, ವಿದ್ವತ್ತು ನೀತಿಗಳು ಪ್ರಕಟವಾದಷ್ಟೂ ಸೊಗಸೆನಿಸುವುದು. ಈ ದಿಶೆಯಲ್ಲಿ ಈ ಪ್ರಬಂಧಗಳು ಉತ್ಕಟದಶೆಗೆ ತಲುಪದಿದ್ದರೂ ತದಭಿಮುಖವಾದ ಪ್ರಯತ್ನ ನಡೆದಿದೆ ಎನ್ನಲು ಅಡ್ಡಿಯಿಲ್ಲ. ಲೇಖಕರಿಗೆ ಈ ತೆರದ ಬರವಣಿಗೆ ಒಗ್ಗುವಂತಿದೆ. ಇವನ್ನು ಇನ್ನೂ ಬೆಳೆಸಿ, ಈ ಕ್ಷೇತ್ರದ ಸಾಹಿತ್ಯ ಸಮೃದ್ಧಿಗೆ ಲೇಖಕರು ಕಾರಣರಾಗುವಂತೆ ಆಶಿಸಬಹುದು.

* * *

ಬಸವಣ್ಣನವರ ದೇವರು—ಲೇ: ಪೂಜ್ಯ ಲಿಂ. ಗ. ಶಿ. ಹುರಳಿ, ಸಂ: ಚಂದ್ರಶೇಖರ ಗ. ಹುರಳಿ, ಪ್ರ: ಇಂದೂ ಪ್ರಕಾಶನ, ಪೋ. ಬಾ. ೬, ಧಾರವಾಡ. ಪುಟ ೮+೫೬+೭, ಬೆಲೆ ೧-೦೦.

ಸಕಲ ಜೀವಾತ್ಮರಿಗೆ ಲೇಸನೆ ಬಯಸಿದ, ಕಾಯಕವೇ ಕೈಲಾಸವೆಂದು ಸಾರಿದ, ಅಂತರಂಗ ಬಹಿರಂಗ ಶುದ್ಧಿಯ ದಾರಿಯನ್ನು ತೋರಿದ, ತನಗಿಂತ ಕಿರಿಯರಿಲ್ಲವೆಂಬ ವಿನಯವನ್ನು ಸಾರಿದ ಭಕ್ತಿ ಭಾಂಡಾರಿ ಬಸವಣ್ಣನವರ ಕುರಿತು ಮಾನ್ಯ ಲೇಖಕರು ಬರೆದ ಲೇಖನಗಳ ಸಂಕಲನವಿದು. ಇದರಲ್ಲಿ ಒಂಭತ್ತು ಲೇಖನಗಳಿವೆ. ನಮ್ಮ ಜನತೆಗೆ ಸನ್ಮಾರ್ಗವನ್ನು ತೋರಿಸಲು ಮಹಾತ್ಮಾ ಬಸವೇಶ್ವರರ ಜೀವನವೂ ಅವರ ವಚನಾಮೃತವೂ ಹೇಗೆ ದಾರಿದೀಪವಾಗಿದೆಯೆಂಬುದನ್ನು ಲೇಖಕರು ಈ ಪುಸ್ತಕದಲ್ಲಿ ಭಾವಪೂರ್ಣವಾಗಿ ವಿವರಿಸಿದ್ದಾರೆ. ಒಳ್ಳೊಳ್ಳೆಯ ವ್ಯಾವಹಾರಿಕ ವಿಷಯಗಳ ದೃಷ್ಟಾಂತಗಳಿಂದ ಪ್ರತಿಪಾದನೆಗಳು ಸೊಗಸಾಗಿವೆ.

* * *

ಶ್ರೀ ಬಸವೇಶ್ವರ ವಚನ ಪ್ರದೀಪಿಕೆ-ಲೇ: ಶ್ರೀ ಮಾ. ನಂ. ನಂಜಪ್ಪನವರು, ಪ್ರ: ಕಲ್ಯಾಣ ಸಾಹಿತ್ಯ ಭಂಡಾರ, ಕಲ್ಯಾಣ ಭವನ, ಚಿಕ್ಕಪೇಟೆ, ಬೆಂಗಳೂರು. ಪುಟ ೧೧+೨೨೮, ಬೆಲೆ ೩-೦೦.

ಜಗಜ್ಯೋತಿ ಬಸವೇಶ್ವರರ ವಚನಗಸಿಯಿಂದ ೨೪೫ ಮಹಾರತ್ನಗಳನ್ನಾಯ್ದು ಈ ಗ್ರಂಥದಲ್ಲಿ ಪೋಣಿಸಲಾಗಿದೆ. ಪೋಣಿಸಿದ ವಚನಗಳ ಕಾಂತಿಯನ್ನು ಓದುಗರ ಚಿತ್ತ ಭಿತ್ತಿಯಲ್ಲಿ ಮೂಡಿಸುವುದಕ್ಕಾಗಿ "ಭಾವಚಂದ್ರಿಕೆ" ಎಂಬ ಹೆಸರಿಂದ ಪ್ರತಿಯೊಂದು ವಚನಕ್ಕೂ ವಿವರಣೆಯನ್ನು ಕೊಟ್ಟು ಮಾನ್ಯ ಲೇಖಕರು ಉಪಕಾರ ಮಾಡಿದ್ದಾರೆ. ಗ್ರಂಥಾರಂಭದಲ್ಲಿ ಲೇಖಕರು ಬರೆದಿರುವ "ಶ್ರೀ ಬಸವೇಶ್ವರ ಸಂದರ್ಶನ"ವೂ ಶ್ರೀ ಬಿ. ಡಿ. ಜತ್ತಿಯವರ ಮುನ್ನುಡಿಯೂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಪ್ರಸ್ತಾವನೆಯೂ ಈ ಪುಸ್ತಕಕ್ಕೆ ಮೆರುಗು ಕೊಡುವಂತಿದೆ.

ಯುಗಪ್ರವರ್ತಕ ಬಸವೇಶ್ವರರ ವಚನಗಳು ಸೂಕ್ತ ವಾದ ಅರ್ಥ-ಭಾವಗಳೊಡನೆ ಪ್ರಚಾರವಾದಷ್ಟೂ ಒಳಿತು. ಅಂತಹ ಪ್ರಚಾರದಲ್ಲಿ ಇಂತಹ ಪುಸ್ತಕ ಪ್ರಕಟಣಗಳಿಂದಾ ಗುವ ಕಾರ್ಯವು ಸಂಸ್ತುತ್ಯವೇ ಸರಿ. ಆದುದರಿಂದ ಕನ್ನಡಿ ಗರು ಇದನ್ನು ಮೆಚ್ಚುವರು.

"ಭಾವಚಂದ್ರಿಕೆ" ಸುದೀರ್ಘ ವ್ಯಾಖ್ಯಾನವನ್ನು ಒಳ ಗೊಂಡಿದ್ದರೂ ಕೆಲವೆಡೆ ಅಸಮರ್ಪಕವಾದುದುಂಟು. ೪ನೆಯ ವಚನದಲ್ಲಿ ಸಮುದ್ರಕ್ಕೂ ಚಂದ್ರನಿಗೂ ತಂದೆ ಮಕ್ಕಳ ಸಂಬಂಧವಿರುವುದನ್ನು ವಿವರಿಸಿದ್ದರೆ ಇನ್ನೂ ಹೃದ್ಯ ವಾಗುತ್ತಿತ್ತು. ಹಾಗೆಯೇ ಗ್ರಹಣ ಕಾಲದಲ್ಲಿ ರಾಹು ಚಂದ್ರನಿಗೆ ಅಡ್ಡ ಬರಲು ಕಾರಣವನ್ನು ವಿವರಿಸಿದ್ದರೆ ಭಾವಕ್ಕೆ ಇನ್ನೂ ಪುಷ್ಟಿ ದೊರೆಯುತ್ತಿತ್ತು. ೫ನೆಯ ವಚನದ ಭಾವವಿವರಣೆಯಲ್ಲಿ "ಮೇರುಗುಣ"ವೆಂದರೆ ಸುವರ್ಣಗರ್ಭತ್ವವಾಗಿದ್ದು ಉಜ್ವಲ ಪ್ರಕಾಶವನ್ನು ದ್ಯೋತಿ ಸುವುದು. ಅಂತಹ ಗುಣವನ್ನು ಕಪ್ಪು ಕಾಗೆಯಲ್ಲಿ ಅರಸುವುದೆ?-ಎಂಬ ಭಾವನೆ ಪ್ರಕಟವಾಗಿಲ್ಲ. ೧೩೨ನೆಯ ವಚನದ ವಿವರಣೆಯಲ್ಲಿ "ಓತಿ" ಎಂಬುದಕ್ಕೆ "ಕೋತಿ" ಎಂಬ ಅರ್ಥವಾಗಿ ಭಾವಿಸಿದುದು ಸರಿಯಲ್ಲ. ಅದರಲ್ಲೇ "ಹೊತ್ತಿಗೊಂದು ಪರಿಯಪ್ಪ ಗೋಸುಂಬೆ" ಎಂಬಲ್ಲಿ ಮನುಷ್ಯರನ್ನು ಕಂಡಾಗ ಓತಿಯು ತಲೆ ಕೆಂಪೇರುವುದನ್ನು ಹೇಳಿದ್ದರೆ, ನಿಜವಾದ ಭಾವವು ಇನ್ನಷ್ಟು ಸ್ಪಷ್ಟವಾಗು ತ್ತಿತ್ತು. ಇಂತಹ ಒಂದೆರಡು ಕಡೆ ಹೊಳೆಯುವ ಅಂಶ ಗಳನ್ನು ಬಿಟ್ಟರೆ, ಒಟ್ಟಿನಲ್ಲಿ 'ಭಾವಚಂದ್ರಿಕೆ' ಚೆನ್ನಾಗಿದೆ ಯೆನ್ನಬಹುದು. ಪುಸ್ತಕದ ರಕ್ಷಾಪತ್ರ, ಮುದ್ರಣ, ಇತ್ಯಾದಿ ಬಹಿರಂಗಗಳು ಆಕರ್ಷಕವಾಗಿವೆ.

—ಟಿ. ಕೇಶವಭಟ್ಟ

ವಿಮರ್ಶೆಯೆಂದರೆ ಬುದ್ಧಿಯನ್ನು ಬಳಸಿ ವಸ್ತುಗಳ ಬೆಲೆಯನ್ನು ನಿಷ್ಕರ್ಷಿಸುವುದು ; ಅದೊಂದು ಸಂಪೂರ್ಣವಾಗಿ ಅನುಭವವನ್ನು ಆಧರಿಸಿ ನಿಂತ ಕಲೆ ; ಉತ್ತಮಾಂಶಗಳನ್ನು ಕಂಡು ಅವುಗಳನ್ನು ಯುಕ್ತರೀತಿಯಿಂದ ಅಳೆದು ಅದರದರ ಬೆಲೆಯನ್ನು ಕಟ್ಟುವುದು. ಅದು ವಿಚಾರದ ಮಗು ಹಾಗೂ ಸಹೋದ್ಯೋಗಿ.

ಬಿ. ಎಚ್. ಶ್ರೀಧರ

ಗುಣ ಅವಗುಣಗಳ ವಿವೇಕವೇ ವಿಮರ್ಶೆ. ವಿಮರ್ಶೆ ಎಂದರೆ ಪ್ರಶಸ್ತಿ ಎಂಬ ರೂಢಮೂಲ ಭಾವನೆ ತೊಲಗದೆ ನಮ್ಮ ಕಾವ್ಯವಿಮರ್ಶೆ ಬೆಳೆಯಲಾರದೆಂಬ ಮಾತು ನಿರ್ವಿವಾದ. ನಮ್ಮ ಹಿರಿಯ ಕವಿಗಳ ಕಾವ್ಯವನ್ನು ಒರೆಗೆ ಹಚ್ಚಿ ತೂಗಿ ನೋಡಬೇಕಾದ ಈ ಕಾಲದಲ್ಲಿ ಟೀಕೆ ಎಂದರೆ, ವಿಮರ್ಶೆ ಎಂದರೆ ಅಗೌರವದ ಸೂಚನೆ ಎಂಬ ಭಾವನೆ ಕಂಡುಬರುತ್ತಿರುವುದು ಶೋಚನೀಯ, ಪ್ರತಿಯೊಂದು ಕಾವ್ಯಮಾರ್ಗದಲ್ಲೂ ಅದರದರ ಗಂಡಾಂತರ ಇದ್ದೇ ಇರುತ್ತದೆ. ಆ ಮಾರ್ಗದಲ್ಲಿ ಸತ್ವವಿದ್ದಾಗ ಆ ಗಂಡಾಂತರಗಳನ್ನು ಮೆಟ್ಟಿನಿಂತು ಕೃತಿ ಸಾರ್ಥಕವಾಗುತ್ತದೆ. ಗುಣದೋಷಗಳ ಮಿಶ್ರಣವಾದ ನಮ್ಮ ಕಾವ್ಯಸಂಪ್ರದಾಯವನ್ನು ವಿವೇಚಿಸಿ ಬೆಲೆಕಟ್ಟುವ ಕೆಲಸ ಈಗ ನಡೆಯಬೇಕಾಗಿದೆ.

ಎಂ. ಗೋಪಾಲಕೃಷ್ಣ ಅಡಿಗ

ಜೀವನ ಚರಿತ್ರೆ

ಭಾರತೀಯ ವಿಜ್ಞಾನಿಗಳು ಭಾಗ ೨—ಲೇ: ಶ್ರೀ ಗೌರೀಶ ಕಾಯ್ಕಿಣಿ, ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ, ಪುಟ: ೧೪೫; ಬೆಲೆ: ರೂ. ೨-೦೦.

ಶ್ರೀ ಕಾಯ್ಕಿಣಿಯವರು ೧೯೬೪ರಲ್ಲಿ ಭಾರತೀಯ ವಿಜ್ಞಾನಿಗಳ ಭಾಗ-೧ ಬರೆದ ಮೂರು ವರ್ಷಗಳ ಬಳಿಕ ಅದರ ಎರಡನೆಯ ಭಾಗವನ್ನು ಕನ್ನಡಿಗರ ಮುಂದಿಟ್ಟಿದ್ದಾರೆ.

ಪ್ರಾಧ್ಯಾಪಕ ರಾಮಚಂದ್ರ, ಶ್ರೀನಿವಾಸ ರಾಮಾನುಜನ್, ಡಾ. ಎಸ್. ಎನ್. ಬೋಸ್, ಡಾ. ಎಸ್. ಎಸ್. ಭಟ್ನಾಗರ್, ಡಾ. ಭಾಭಾ ಈ ಐವರು ಭಾರತೀಯ ವಿಜ್ಞಾನ ವಿನಾಯಕರ ಜೀವನ, ಕಾರ್ಯದ ಪರಿಚಯ ಮಾಡಿಕೊಡಲಾಗಿದೆ. ಶ್ರೀ ಕಾಯ್ಕಿಣಿಯವರೆನ್ನುವಂತೆ ಇಂಥ ಚರಿತ್ರ ಲೇಖನಗಳು ಎಂದೂ ಪರಾಶ್ರಿತ. ಆದರೂ ಶ್ರೀ ಕಾಯ್ಕಿಣಿಯವರು ಈ ಬಳ್ಳಿಯ ಹೂಗಳನ್ನು ತಮ್ಮ ಮನೆಯಂಗಳದಲ್ಲಿ ಬೆಳೆಸಿದಂತೆ ತೋರಗೊಟ್ಟಿದ್ದಾರೆ. ಅವರು ಇಷ್ಟು ಹೃದ್ಯವಾಗಿ ಹೇಳಲು ಸಾಧ್ಯವಾಗಿರುವುದು ಅವರ ಆಳವಾದ ಅಧ್ಯಯನಕ್ಕೆ ಸಾಕ್ಷಿಯಂತಿದೆ. ಅದರಲ್ಲೂ ಆಧುನಿಕ ಮತ್ತು ಸಮಕಾಲೀನ ಭಾರತೀಯ ವ್ಯಕ್ತಿಗಳ ಬಗೆಗೆ ಬರೆಯುವಾಗ ಅಂಶ, ವಿಷಯಗಳ ಕೊರತೆ ಮೊದಲ ಅಡಚಣೆಯಾಗುತ್ತದೆ. ಆದರೆ ಶ್ರೀ ಕಾಯ್ಕಿಣಿಯವರ ಶ್ರಮದಿಂದಾಗಿ ಆ ಕೊರತೆ ಸ್ವಲ್ಪ ಮಟ್ಟಿಗೆ ನೀಗಿದೆಯೆಂದು ಹೇಳಬಹುದು.

ಮೊದಲ ಭಾಗದಲ್ಲಿ ರಾಮನ್, ಬೋಸ್ ಆಗಿದ್ದವರು ಈ ಪುಸ್ತಕದಲ್ಲಿ 'ರಮಣ' ಮತ್ತು 'ಬಸು' (ಪುಟ ೯) ಆಗಿರುವುದು ಆಶ್ಚರ್ಯ! ಮುದ್ರಣ ದೋಷಗಳು ಹೆಚ್ಚು. ವಿಜ್ಞಾನ ಸಾಹಿತ್ಯವನ್ನು, ವಿಜ್ಞಾನಿಗಳ ಚರಿತ್ರೆಯನ್ನು ಜನಪ್ರಿಯ ಶೈಲಿಯಲ್ಲಿ ಹೇಳುವ ಪ್ರಯತ್ನದಲ್ಲಿ ಶ್ರೀ ಕಾಯ್ಕಿಣಿ ಅವರಿಗೆ ಸಿದ್ಧಿ ಲಭಿಸಿದೆಯೆನ್ನಬಹುದು. ಅವರ ಸಾಧನೆ ಸ್ತುತ್ಯಾರ್ಹವಾದುದು; ಅನುಕರಣೀಯ ಯೋಗ್ಯವಾದುದು. ಇಂಥ ಕೃತಿಗಳ ಪ್ರಕಟಣೆಗೆ ಕಾರಣವಾದ "ಮಿಂಚಿನಬಳ್ಳಿ"ಯ ವ್ಯವಸ್ಥಾಪಕರು ಅಭಿನಂದನಾರ್ಹರು.

—ಸೂ. ಸುಬ್ರಹ್ಮಣ್ಯಂ

ಶ್ರೀ ವೇದಾಂತ ದೇಶಿಕರು—ಲೇ: ಶ್ರೀ ಡಿ. ಕೃಷ್ಣಯ್ಯಂಗಾರ್; ಮೈಸೂರು. ಪ್ರ: ಸುದರ್ಶನಂ ಅಂಡ್ ಕಂಪನಿ, ಬೆಂಗಳೂರು-೨ ಬೆಲೆ: ರೂ. ೪-೫೦.

"ರಾಮಾನುಜ ದಯಾಪಾತ್ರಂ, ಜ್ಞಾನವೈರಾಗ್ಯ ಭೂಷಣಂ,
ಶ್ರೀಮದ್ವೇಂಕಟನಾಥಾರ್ಯಂ ವಂದೇ ವೇದಾಂತದೇಶಿಕಂ,
ಶ್ರೀಮಾನ್ ವೇಂಕಟನಾಥಾರ್ಯಃ ಕವಿತಾರ್ಕಿಕಕೇಸರೀ,
ವೇದಾಂತಾಚಾರ್ಯವರ್ಯೋಮೇ ಸನ್ನಿಧತ್ತಾಂ ಸದಾಹೃದಿ."

ಶ್ರೀ ವೈಷ್ಣವ ಧಾರ್ಮಿಕ ವಿಧಿ ಅಥವಾ ತಾತ್ವಿಕ ಅಧ್ಯಯನಾಧಿ ಕಾಲಕ್ಷೇಪ ಆರಂಭವಾಗುವುದು ಈ ಪ್ರಾರ್ಥನಾ ಶ್ಲೋಕದಿಂದ. ರಾಮಾನುಜ ದಯಾಪಾತ್ರರೂ ಜ್ಞಾನ ವೈರಾಗ್ಯ ಭೂಷಣರೂ, ಕವಿಗಳೂ ತಾರ್ಕಿಕ ಸಿಂಹರೂ ವೇದಾಂತಾಚಾರ್ಯರೂ ಆದ ವೆಂಕಟನಾಥರನ್ನು ಸ್ಮರಿಸಿಯೇ ಮುಂದಿನ ಪ್ರಸಂಗಕ್ಕೆ ತೊಡಗುವುದು ಶ್ರೀ ವೈಷ್ಣವ ಸಂಪ್ರದಾಯ. ಇದು ಏಳುನೂರು ವರ್ಷಗಳಿಂದ ನಡೆದುಬಂದಿರುವ ಕ್ರಮ. ಎಂದಮೇಲೆ ವಿಶಿಷ್ಟಾದ್ವೈತ ಸಿದ್ಧಾಂತದ ಇತಿಹಾಸದಲ್ಲಿ ವೆಂಕಟನಾಥರ ಸ್ಥಾನದ ಹಿರಿಮೆ ಮಹಿಮೆಗಳ ಬಗ್ಗೆ ಮತ್ತೆ ಹೇಳಬೇಕಿಲ್ಲ. ವೇದವೇ ಮೊದಲಾದ ಪವಿತ್ರಗ್ರಂಥಗಳಲ್ಲಿ ಬೀಜರೂಪದಲ್ಲಿದ್ದ ವಿಶಿಷ್ಟಾದ್ವೈತ ಸಿದ್ಧಾಂತ ಆಳ್ವಾರುಗಳ ಭಗವನ್ನಿವೇದಿತ ಭಕ್ತಿಪೂರಿತ ಹೃದಯ ಗೀತಗಳ ಅಭಿಪ್ರಾಯವನ್ನು ಪಡೆದು ಭಗವದ್ರಾಮಾನುಜರಿಂದ ದಿವ್ಯಭವನವಾಗಿ ನೆಲೆಗೊಂಡಿತು. ಆ ಭವನಕ್ಕೆ ಶಾಸ್ತ್ರ ಕಾವ್ಯ ಎರಡನ್ನೂ ಬೆಂಬಲ ಸಿಂಗಾರಕ್ಕೆ ಜೋಡಿಸಿ ಪರಿಪೂರ್ಣಗೃಹವಾಗಿ ಮಾಡಿದ ಮಹಾನುಭಾವರಲ್ಲಿ ವೆಂಕಟನಾಥರು ಪ್ರಮುಖರು. ರಾಮಾನುಜರು ಪ್ರತಿಪಾದಿಸಿದ ಶ್ರೀ ವೈಷ್ಣವ ಸಿದ್ಧಾಂತಕ್ಕೆ ಅದರಲ್ಲೂ ಭಕ್ತಿ, ಪ್ರಪತ್ತಿ ಯೋಗಕ್ಕೆ ವೆಂಕಟನಾಥರು ಪಾಂಡಿತ್ಯ ಪ್ರತಿಭೆಗಳಿಂದ ಕೂಡಿದ ವ್ಯಾಖ್ಯಾನವಿತ್ತು, ಶಾಸ್ತ್ರಾಧಾರಗಳನ್ನು ಸೂಚಿಸಿ, ಅದನ್ನು ಸುಭದ್ರವಾಗಿ ನೆಲೆಗೊಳಿಸಿದರು. ಹಿಂದೂಧರ್ಮ ನಡೆದುಬಂದ ದಾರಿಯಲ್ಲಿ ಅಲ್ಲಲ್ಲಿ ಅಲ್ಲಲ್ಲಿ ಮಹಾ ದೀಪ ಸ್ತಂಭಗಳಂತೆ ಮಹಾಪುರುಷರು ಜನ್ಮವೆತ್ತಿದಾರೆ, ದಾರಿಯ ಕತ್ತಲನ್ನು ಕಳೆದಿದಾರೆ, ಹೊಸ ಬೆಳಕನ್ನು ಬೀರಿದ್ದಾರೆ. ಶಂಕರಭಗವತ್ಪಾದರು, ರಾಮಾನುಜರು, ಆನಂದತೀರ್ಥರು, ವಿದ್ಯಾರಣ್ಯರು ಇತ್ಯಾದಿ ಅನೇಕ ಜ್ಞಾನಿಗಳು, ದಾರ್ಶನಿಕರು, ಯತಿಗಳು ಭಕ್ತರು ಅಚ್ಚಳಿಯದ ಪ್ರಭಾವವನ್ನು

ಬೀರಿ ಹೋಗಿದಾರೆ. ಅದೇ ಸಾಲಿನಲ್ಲಿ ಬಂದವರು ವೆಂಕಟ ನಾಥರು. ವಿಶಿಷ್ಟಾದ್ವೈತ ಸಿದ್ಧಾಂತವನ್ನು ದೇಶಿಕರು ಘಂಟಾಘೋಷವಾಗಿ ಸಾರಿದರು, ನೆಲೆಗೊಳಿಸಿದರು. ಅಂತೆಯೆ ಏನೊ ಅವರನ್ನು ಘಂಟಾವತಾರರೆಂದೇ ಕರೆಯುತ್ತಾರೆ. ವಿಷ್ಣುವಿನ ಘಂಟೆಯೆ ದೇಶಿಕರಾಗಿ ಅವತರಿಸಿತೆಂದು ಸಾಂಪ್ರದಾಯಿಕ ನಂಬಿಕೆ. ಅದು ಹೇಗೇ ಇರಲಿ, ಅವರ ವೇದಾಂತ ಘಂಟಾನಾದದಿಂದಾಗಿ ಅವರು ಘಂಟಾವತಾರರೇ ಆಗಿದ್ದರು ಎನ್ನಲಡ್ಡಿಯಿಲ್ಲ.

ವೇದಾಂತ ದೇಶಿಕರು ಎಂದು ಸಾಮಾನ್ಯವಾಗಿ ಪ್ರಖ್ಯಾತರಾಗಿರುವ ಶ್ರೀ ವೆಂಕಟನಾಥರು ಇದ್ದುದು ಏಳು ಶತಮಾನಗಳ ಹಿಂದೆ. ಹಿಂದೂ ದೇಶದಲ್ಲಿ ಆಗ ಪರ್ವಕಾಲ. ಮಲ್ಲಿಕ್ ಕಾಫೂರನ ಮೂಲಕ ಉತ್ತರದಿಂದ ದಕ್ಷಿಣಕ್ಕೆ ಪರಕೀಯರ ಆಕ್ರಮಣ ಆವರಿಸುತ್ತಿದ್ದ ಕಾಲ. ಹಿಂದೂ ಧರ್ಮಕ್ಕೆ ಸಂಸ್ಕೃತಿ ದೊಡ್ಡ ಸವಾಲನ್ನು ಒಡ್ಡುತ್ತಿದ್ದ ಕಾಲ. ಆಗ ದಕ್ಷಿಣದಲ್ಲಿ ಧರ್ಮ ಸಂಸ್ಕೃತಿಗಳ ರಕ್ಷಣೆಗಾಗಿ ಶ್ರೀ ವಿದ್ಯಾರಣ್ಯರು ವಿಜಯನಗರ ರಾಜ್ಯವನ್ನು ಸ್ಥಾಪಿಸಿದರು. ವೇದಾಂತ ದೇಶಿಕರು ಅವರ ಸಮಕಾಲೀನರೇ. ದೇಶಿಕರ ಜೀವಿತದ ಬಗ್ಗೆ ಸಾಂಪ್ರದಾಯಿಕ ಧಾರ್ಮಿಕ ಗ್ರಂಥಗಳಲ್ಲಿ ಹಲವು ಮಾಹಿತಿಗಳು ದೊರೆಯಬಹುದು. ಆದರೆ ಚಾರಿತ್ರಿಕ ದೃಷ್ಟಿಯಿಂದ ಸಾಧಾರವಾಗಿ ರಚಿತವಾದ ಜೀವನ ಚರಿತ್ರೆಗಳು ಕಡಮೆ. ಸಂಸ್ಕೃತ ತಮಿಳುಗಳಲ್ಲಿ ಹಲವಾರು ಗ್ರಂಥಗಳಿವೆಯಂತೆ, ಇಂಗ್ಲೀಷಿನಲ್ಲೂ ಉಂಟು. ಕನ್ನಡದಲ್ಲಿ ದೇಶಿಕರ ಬಗ್ಗೆ ಬಂದಿರುವ ಗ್ರಂಥಗಳು ಅಪರೂಪ. ಬೆರಳೆಣಿಕೆಯಷ್ಟು ಮಾತ್ರ. ಅವರೇ ರಚಿಸಿರುವ ಗ್ರಂಥ ರಾಶಿ ಬಹು ದೊಡ್ಡದು. ಸಂಸ್ಕೃತ ತಮಿಳು ಎರಡರಲ್ಲೂ ತನಿಯಾಗಿ ಹಾಗೂ ಮಣಿಪ್ರವಾಳ ಶೈಲಿಯಲ್ಲಿ ಸಹ ಅವರು ಅಪಾರವಾದ ಅದ್ಭುತವಾದ ಗ್ರಂಥರಚನೆ ಮಾಡಿದಾರೆ. ಸಿದ್ಧಾಂತ ಪ್ರತಿಪಾದಕ ಗ್ರಂಥಗಳು, ಶ್ರೀ ವೈಷ್ಣವ ಆಚಾರಕ್ಕೆ ಸಂಬಂಧಿಸಿದವು, ಹಿಂದಿನ ಆಚಾರ್ಯರುಗಳ ಗ್ರಂಥಗಳಿಗೆ ವ್ಯಾಖ್ಯಾನ ಇದೇ ಅಲ್ಲದೆ ಕಾವ್ಯ ನಾಟಕ ಸ್ತೋತ್ರಗಳನ್ನು ರಚಿಸಿದ್ದಾರೆ. ದೇಶಿಕರ ಸಿದ್ಧಾಂತ ಪರಿಷ್ಕರಣ ಗ್ರಂಥಗಳು, ತತ್ವಪ್ರತಿಪಾದನ ಗ್ರಂಥಗಳು ತತ್ವ ಜಿಜ್ಞಾಸುಗಳಿಗೆ ತಾರ್ಕಿಕರಿಗೆ ಶಾಸ್ತ್ರಾರ್ಥ ಪ್ರಿಯರಿಗೆ ಪಂಡಿತರಿಗೆ ಪ್ರಿಯವಾದರೆ, ಪಾದುಕಾ ಸಹಸ್ರ, ಹಯಗ್ರೀವ ಸ್ತೋತ್ರ, ಅಭೀತಿಸ್ತವ, ಶ್ರೀ ಸ್ತುತಿ, ಹಂಸ ಸಂದೇಶ, ಸಂಕಲ್ಪ ಸೂರ್ಯೋದಯ, ಯಾದವಾಭ್ಯುದಯ ಇತ್ಯಾದಿ ಸ್ತೋತ್ರ, ಕಾವ್ಯ, ನಾಟಕಗಳು ಭಕ್ತರಿಗೆ ಕಾವ್ಯಪ್ರಿಯರಿಗೆ ಸ್ಫೂರ್ತಿಯುತ, ಆನಂದದಾಯಕ ಆಗಿವೆ.

ಇಂಥ ಮಹಾನುಭಾವರ ಜೀವನ ಚರಿತ್ರೆಯೆ ಶ್ರೀ ಡಿ. ಕೃಷ್ಣಯ್ಯಂಗಾರ್ಯರು ಬರೆದಿರುವ "ಶ್ರೀ ವೇದಾಂತ ದೇಶಿಕರು" ಗ್ರಂಥ. ಕನ್ನಡದಲ್ಲಿ ಈ ಬಗ್ಗೆ ಬಂದಿರುವ ಕೆಲವೇ ಗ್ರಂಥಗಳಲ್ಲಿ ಇದು ಹಿರಿದಾದುದು, ಗಾತ್ರದಲ್ಲಷ್ಟೇ ಅಲ್ಲ, ವಿಷಯ ವ್ಯಾಪ್ತಿಯಲ್ಲಿ ಕೂಡ. ಶ್ರೀ ಪರಕಾಲ ಯತೀಂದ್ರರ ಆಶೀರ್ವಾದವನ್ನೂ ಶ್ರೀ ಡಿ. ವಿ. ಜಿ. ಯವರ ಮುನ್ನುಡಿಯನ್ನೂ ಹಲವಾರು ವಿದ್ವಾಂಸರ ಮೆಚ್ಚುಗೆಯನ್ನೂ ಒಳಗೊಂಡ ಈ ಗ್ರಂಥ ದೇಶಿಕರ ಜೀವನ ಚರಿತ್ರೆ ಮಾತ್ರವಲ್ಲ, ಶ್ರೀ ವೈಷ್ಣವ ಸಿದ್ಧಾಂತ ಪರಿಚಯವೂ ಆಗಿದೆ. ಇಲ್ಲಿ ಮೊದಲನೆಯ ಪ್ರಕರಣದಲ್ಲಿ ಏಳುನೂರು ವರ್ಷಗಳಿಂದ ರೂಪಿತವಾಗಿ ನೆಲೆಗೊಂಡಿರುವ ದೇಶಿಕ ಸಂಪ್ರದಾಯದ ಪರಿಚಯವಿದೆ. ಎರಡನೆಯ ಪ್ರಕರಣ ದೇಶಿಕರ ಜೀವನವನ್ನು ಚಿತ್ರಿಸುತ್ತದೆ. ಮೂರನೆಯ ಪ್ರಕರಣದಲ್ಲಿ ದೇಶಿಕರ ಗ್ರಂಥಗಳ ಪಟ್ಟಿ ಹಾಗೂ ಅವುಗಳ ಪರಿಚಯವಿದೆ. ಗ್ರಂಥ ರಾಶಿಯನ್ನು ೧) ಶ್ರೀ ವೈಷ್ಣವ ಸಿದ್ಧಾಂತ ರಹಸ್ಯ ಗ್ರಂಥಗಳು, ೨) ಮತಧರ್ಮ ಮತ್ತು ಪ್ರಕ್ರಿಯಾ ಪ್ರಬಂಧಗಳು, ೩) ಭಕ್ತಿ ಹಾಗೂ ಬೋಧನಾತ್ಮಕ ಕಾವ್ಯಗಳು, ೪) ಇತಿಹಾಸ, ನಾಟಕ, ಗೀತರೂಪಕ ಸಾಹಿತ್ಯ, ೫) ಸ್ವತಂತ್ರ ವೇದಾಂತ ಪ್ರಕರಣ ಗ್ರಂಥಗಳು ಹಾಗೂ ೬) ಭಾಷ್ಯ ಅಥವಾ ವ್ಯಾಖ್ಯಾನ ಸಾಹಿತ್ಯ ಎಂಬ ಆರು ಬಗೆಗಳಾಗಿ ವಿಂಗಡಿಸಿ ಆಯಾ ವಿಭಾಗದ ಗ್ರಂಥಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ ಲೇಖಕರು. ನಾಲ್ಕು ಐದನೆಯ ಪ್ರಕರಣಗಳಲ್ಲಿ ಶ್ರೀ ವೈಷ್ಣವ ಸಿದ್ಧಾಂತದ ಸ್ವರೂಪವನ್ನೂ ದೇಶಿಕರು ಮಾಡಿದ ಪರಿಷ್ಕರಣ ನಿರೂಪಣಾ ಕಾರ್ಯವನ್ನೂ ಸುದೀರ್ಘವಾಗಿ ಬಣ್ಣಿಸಲಾಗಿದೆ. ಸಾಮಾನ್ಯ ಓದುಗರ ಬುದ್ಧಿಶಕ್ತಿಗೆ ಸಾಕಷ್ಟು ಶ್ರಮಸಾಧ್ಯವಾದ ಈ ಪ್ರಕರಣಗಳು ಸಿದ್ಧಾಂತವನ್ನು ಅರಿತುಕೊಳ್ಳುವ ದೃಷ್ಟಿಯಿಂದ ಉಪಯುಕ್ತವಾಗಿವೆ. ಇಂಥಲ್ಲಿ ನಿರೂಪಣೆಯಲ್ಲಿ ಸರಳತೆ ಸುಲಭತೆ ತುಂಬ ಅಗತ್ಯ, ಓದುಗರ ಅದರಲ್ಲೂ ಸಾಮಾನ್ಯರ ದೃಷ್ಟಿಯಿಂದ. ಆರನೆಯ ಪ್ರಕರಣದಲ್ಲಿ ಆಚಾರ್ಯರ 'ಕವಿ ಸಾರ್ವಭೌಮತ್ವ'ದ ದರ್ಶನವಿದೆ. ಹೀಗೆ ವೇದಾಂತ ದೇಶಿಕರ ಭವ್ಯ ದಿವ್ಯ ಜೀವನದ ಬಗ್ಗೆ ಸಾಧನೆ ಸಿದ್ಧಿಗಳ ಬಗ್ಗೆ ಸಮಗ್ರ ಪರಿಚಯ ಮಾಡಿಕೊಡುತ್ತದೆ ಈ ಗ್ರಂಥ.

ಈ ವರ್ಷ ವೇದಾಂತ ದೇಶಿಕರ ಏಳುನೂರನೆಯ ಜಯಂತಿಯ ವರ್ಷ. ನಾಡಿನ ಓದುಗರು ಆ ದಿವ್ಯಾತ್ಮರ ಬಗ್ಗೆ ತಿಳಿದುಕೊಳ್ಳುವಂತೆ ಈ ಗ್ರಂಥವನ್ನು ರಚಿಸಿಕೊಟ್ಟು ಶ್ರೀ ಡಿ. ಕೃಷ್ಣಯ್ಯಂಗಾರ್ಯರು ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

—ನೀಲತ್ತಹಳ್ಳಿ ಕಸ್ತೂರಿ

ಸಮಾಜಶಾಸ್ತ್ರ ಮತ್ತು ವಿಜ್ಞಾನ

ಸೊಳ್ಳೆ ಹರಡುವ ರೋಗಗಳು—ಲೇ : ಶ್ರೀ ಭಾರತೀಸುತ, ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ' ಬೆಂಗಳೂರು-೧೮. ಪುಟ ೪೫, ಬೆಲೆ ೧-೫೦.

ಹೊಸತಾಗಿ ಓದುಗಲಿತ ವಯಸ್ಕರಿಗಾಗಿ ಬರೆದ ಪುಸ್ತಕ ವಿದು. ಕೇಂದ್ರ ಸರಕಾರದ ಶಿಕ್ಷಣ ಶಾಖೆಯಿಂದ ಬಹುಮಾನಗಳಿಸಿದ ಪುಸ್ತಕ. ಇದರಲ್ಲಿ ಮಲೇರಿಯಾ, ಆನೆಕಾಲು, ಹಳದಿಜ್ವರ-ಇತ್ಯಾದಿ ರೋಗಗಳನ್ನು ಪ್ರಸಾರ ಮಾಡುವ ಸೊಳ್ಳೆಗಳ ರೂಪ-ಗುಣಗನ್ನು ಸರಳವಾಗಿ ವಿವರಿಸಲಾಗಿದೆ. ಸಂವಾದಾತ್ಮಕ ಕಥಾಪದ್ಧತಿಯಿಂದ ಮಾಡಿರುವ ನಿರೂಪಣೆ ಓದುಗರ ಚಿತ್ತಕ್ಕೆ ಚೆನ್ನಾಗಿ ಒಗ್ಗುವುದು. ಚಿತ್ರಗಳನ್ನು ಕೊಟ್ಟುದು ಔಚಿತ್ಯಪೂರ್ಣವಾಗಿದ್ದು ಪುಸ್ತಕಕ್ಕೆ ಕಳೆ ತಂದಿದೆ. ಮುಖಪತ್ರ, ಕಾಗದ, ಮುದ್ರಣ-ಎಲ್ಲವೂ ಚೆನ್ನಾಗಿವೆ.

*　　　*　　　*

ಕೆಂಪಮ್ಮನ ಮಗು—ಲೇ: ಡಾ॥ ಅನುಪಮಾ ನಿರಂಜನ ಪ್ರ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು-೧೮, ಪುಟ ೫೦, ಬೆಲೆ ರೂ. ೧-೫೦.

ಸಂಪಿಗೆ ಹಳ್ಳಿಯಲ್ಲಿ ಹೊಸ ಆಸ್ಪತ್ರೆ ಪ್ರಾರಂಭವಾಗಿ ಅಲ್ಲಿಗೆ ಮಹಿಳಾ ಡಾಕ್ಟರೊಬ್ಬರು ಬಂದು, ಹಳ್ಳಿಯ ಸ್ತ್ರೀಯರ ಆರೋಗ್ಯಭಾಗ್ಯಕ್ಕೆ ಕಾರಣರಾದುದನ್ನು ಕಥನ ಕ್ರಮದಲ್ಲಿ ಈ ಪುಸ್ತಕದಲ್ಲಿ ನಿರೂಪಣೆ ಮಾಡಲಾಗಿದೆ. ಹಳ್ಳಿಗರ ಅಂಧಶ್ರದ್ಧೆಯನ್ನು ತೊಲಗಿಸಿ, ಆರೋಗ್ಯಜೀವನಕ್ಕೆ ದಾರಿ ತೋರುವ ಸಲಹೆಗಳು ಇದರಲ್ಲಿವೆ. ಗರ್ಭಿಣಿಯ ಆರೋಗ್ಯ, ಸುಖಪ್ರಸವ, ಬಾಣಂತಿ-ಶಿಶುಗಳ ಆರೈಕೆ, ಶಿಶುಪಾಲನೆ ಪೋಷಣೆಗಳ ವಿಷಯದಲ್ಲಿ ಮಾರ್ಗದರ್ಶನ ಮಾಡುವ ಸಾಹಿತ್ಯವಿದು. ನಿರೂಪಣ ಕ್ರಮವು ಸೊಗಸಾಗಿದೆ. ಗೃಹಿಣಿಯರೆಲ್ಲ ತಿಳಿದುಕೊಳ್ಳಲೇಬೇಕಾದ ಅಂಶಗಳಿಂದ ಕೂಡಿದೆ. ಪ್ರತಿಯೊಂದು ಮನೆಯಲ್ಲಿಯೂ ಇಟ್ಟುಕೊಳ್ಳುವ ಚಿಕ್ಕದಾದ ದರ್ಶಿನಿಯಿದು.

—ಟಿ. ಕೇಶವಭಟ್ಟ

ಭೂಮಿ, ಜನಾಂಗ ಮತ್ತು ಚರಿತ್ರೆ—ಮೂಲ-ಎಲಿಜಬೆತ್ ಎಸ್. ಹೆಫ್‌ಮನ್ ಅನುವಾದ: ಶ್ರೀ ಹೆಚ್. ವಿ. ನಾರಾಯಣ್; ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು. ಪುಟ ೧೨೮, ಬೆಲೆ ರೂ. ೧-೫೦.

'ಭೂಮಾತೆ' ಎನ್ನುತ್ತೇವೆ; 'ಕ್ಷಮಯಾಧರಿತ್ರಿ' ಎನ್ನುತ್ತೇವೆ. ಇಂಥ ಭೂಮಿ ನಾಗರಿಕತೆಗಳ ಹುಟ್ಟು ಬೆಳವಣಿಗೆಗೆ ಹೇಗೆ ನೆರವಾಯಿತು? ಆ ನಾಗರಿಕತೆಗಳ ಪ್ರಭಾವ ಭೂಮಿಯ ಮೇಲೆ ಯಾವ ಪರಿಣಾಮವುಂಟು ಮಾಡಿತು? ಎಂಬ ಗಹನ ವಿಷಯವನ್ನೇ ಕತೆಯಂತೆ ಹೇಳಿಕೊಂಡು ಹೋಗುತ್ತದೆ ಈ ಪುಸ್ತಕ. ಎಲ್ಲ ಮಣ್ಣಿನ ಮಕ್ಕಳೂ ಓದಲು ಯೋಗ್ಯವಾದ ಪುಸ್ತಕ. ಅಚ್ಚುಕಟ್ಟಾದ ಅನುವಾದ.

*　　　*　　　*

ಕೆಲವು ವೈದ್ಯಕೀಯ ಮತ್ತು ಮನೋವೈಜ್ಞಾನಿಕ ನಿಬಂಧಗಳು—ಲೇ: ಶ್ರೀ ಡಾ. ರಮಾಕಾಂತ ಅಗ್ನಿಹೋತ್ರಿ, ಮಡಿಕೇರಿ, ಪುಟ ೫೬ ಬೆಲೆ ರೂ. ೧–೭೫.

ವೈದ್ಯಕೀಯ ಮತ್ತು ಮನಶ್ಶಾಸ್ತ್ರ ವಿಷಯಗಳನ್ನು ಕುರಿತ ಒಂಬತ್ತು ಪ್ರಬಂಧಗಳ ಸಂಕಲನವಿದು. ಆಯುರ್ವೇದದ ಪರಿಭಾಷೆಯ ಜೊತೆಜೊತೆಗೇ ಆಧುನಿಕ ವೈದ್ಯವಿಜ್ಞಾನದ ಪರಿಭಾಷೆಯನ್ನು ಬಳಸಿ ವಿವರಣೆ, ವಿಶ್ಲೇಷಣೆ ನಡಸಿರುವುದು ಈ ಪ್ರಬಂಧಗಳ ಒಂದು ವೈಶಿಷ್ಟ್ಯ. ಮನೋರೋಗಗಳನ್ನು ಕುರಿತ ಲೇಖನ ಇವುಗಳಲ್ಲಿ ಅತ್ಯುತ್ತಮವಾದುದೆಂದು ಹೇಳಬಹುದು. ಆದರೆ ಈ ಸಂಕಲನದ ಎಲ್ಲ ಲೇಖನಗಳೂ ಸಾಕಷ್ಟು ದೀರ್ಘವಾಗಿರದೆ ಅರ್ಥಪೋಷಣೆಗೆ ಅಡ್ಡಿಯುಂಟುಮಾಡಿವೆಯೆನ್ನಬಹುದು. ಈ ಲೇಖನಗಳಲ್ಲಿ ಯಾವೊಂದು ವ್ಯವಸ್ಥೆಯೂ ಇಲ್ಲದಿರುವುದು ಈ ಸಂಕಲನದ ಮತ್ತೊಂದು ಕೊರತೆಯಾಗಿದೆ. ಆದರೂ ಶ್ರೀ ಅಗ್ನಿಹೋತ್ರಿಯವರು ಹೇಳಿರುವಷ್ಟನ್ನು ಚೊಕ್ಕವಾಗಿ ನಿರೂಪಿಸಿದ್ದಾರೆ. ಸಿದ್ಧಿ ಸ್ವಲ್ಪವೇ ಆದರೂ ಅವರ ಈ ಸಾಧನೆ ಪ್ರಶಂಸನೀಯವಾದುದು; ಅನುಕರಣೀಯವಾದುದು.

*　　　*　　　*

ಆಹಾರ ವಿಜ್ಞಾನ-ಪ್ರೋಟೀನ್ ವಿಶೇಷಾಂಕ—ಕೇಂದ್ರ ಆಹಾರ ಸಂಶೋಧನಾಲಯ, ಮೈಸೂರು. ಪುಟ ೫೬ ಬೆಲೆ ರೂ. ೧-೦೦.

ಜೀವನಜಗತ್ತಿಗೆ ಅತ್ಯಾವಶ್ಯಕವಾದ ಆಧಾರವಸ್ತು ಪ್ರೋಟೀನ್. ಈ ವಿಶೇಷಸಂಚಿಕೆ ದೇಹದಲ್ಲಿ ಪ್ರೊಟೀನಿನ

ಬೇಡಿಕೆ-ನೀಡಿಕೆ, ಬದುಕಿಗೆ ಅದು ನೀಡುವ ಬಲ-ಬೆಂಬಲ, ಸಂಶೋಧನಾಲಯದ ಶೋಧನೆ-ತಯಾರಿಕೆಗಳ, ಮೊದಲಾದ ಉಪಯುಕ್ತ ವಿಷಯಗಳನ್ನೊಳಗೊಂಡಿದೆ. ಸಚಿತ್ರ ಸಂಚಿಕೆ. ಪ್ರಶ್ನೋತ್ತರ ವಿಭಾಗದಿಂದ, ಇನ್ನೂ ಹೆಚ್ಚಿನ "ಕನ್ನಡೀಕರಣ"ವಾದ ಸರಳ ಜನಪ್ರಿಯ ಶೈಲಿಯಿಂದ "ಆಹಾರ ವಿಜ್ಞಾನ"ದ ಈ ವಿಶೇಷ ಸಂಚಿಕೆಯನ್ನು ಮತ್ತಷ್ಟು ಸುಂದರಗೊಳಿಸುವ ಸಾಧ್ಯತೆಯಿತ್ತೆನಿಸುತ್ತದೆ. ಆದರೂ ಗೃಹಿಣಿಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಇದೊಂದು ಉಪಯುಕ್ತ ಸಂಚಿಕೆಯೆನಿಸುವುದರಲ್ಲಿ ಸಂಶಯವಿಲ್ಲ. ಆಹಾರ ಸಂಶೋಧನಾಲಯ ವಿವಿಧ ವಿಷಯಗಳನ್ನು ಕುರಿತು ಇನ್ನೂ ಅನೇಕ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವುದೆಂದು ನಾವು ಆಶಿಸುತ್ತೇವೆ.

—ಸೂ. ಸುಬ್ರಹ್ಮಣ್ಯಂ

ಆದರ್ಶ ವಿಮರ್ಶಕನ ಲಕ್ಷಣಗಳು

1 The first requisite of an ideal critic is that he must have a thorough knowledge of the subject he is going to criticise, whether it is History, Economics, Art or Literature.

2 The Second requisite of an ideal critic is that he must have an unbiassed temperament ; he must not be prepossessed in favour of or prejudicial against any particular subject.

3 An ideal critic must again beware of deliberate misrepresentation.

4 The fourth requisite of true crsticism is that proper attention should be paid to time, place and circumstances.

5 The fifth and the most important requisite of an ideal critic is that he should look on both sides of the picture.

6 The sixth and the last requisite of an ideal critic is that he should acknowledge his error, when he is made to understand that he has been in error.

—R. D. Ranade

Essays and Reflections

ಕನ್ನಡ ಪುಸ್ತಕಭಂಡಾರಗಳು

ಕನ್ನಡ ಭಾಷೆಯಲ್ಲಿ ಈಗೀಗ ಪ್ರಕಟವಾಗುತ್ತಿರುವ ಗ್ರಂಥಗಳ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಯಾರೊಬ್ಬರೂ ಎಲ್ಲ ಗ್ರಂಥಗಳ ಅವಲೋಕನ ಮಾಡಿದ್ದಾರೆಂದು ಹೇಳುವುದು ಅಸಾಧ್ಯವಾಗಿದೆ. ಅಲ್ಲದೆ ಪ್ರಕಟಣಮಂದಿರಗಳು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿರುವುದರಿಂದ ಅವು ಅಚ್ಚುಮಾಡುವ ಸುಮಾರು ಸಾವಿರ ಪ್ರತಿಗಳು ಆ ಸುತ್ತಮುತ್ತವೇ ಪ್ರಚಾರಕ್ಕೆ ಬಂದು ರಾಜ್ಯದ ಎಲ್ಲ ಕಡೆಗೆ ಮುಟ್ಟದೆ ಹೋಗುವ ಸಂಭವವುಂಟು. ಕೆಲವು ವರ್ಷಗಳಾದ ಮೇಲೆ ಈ ರೀತಿ ಪ್ರಕಟವಾಗಿದ್ದ ಗ್ರಂಥಗಳು ಯಾರಿಗೂ ಗೊತ್ತಾಗದೆ ಕಣ್ಮರೆಯಾಗುವುದೂ ಸಾಧ್ಯ. ಆದುದರಿಂದ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳವರೆಲ್ಲ ಯೋಚಿಸಿ ಕನ್ನಡದಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳು ಯಾವುದಾದರೂ ಒಂದೆರಡು ಕಡೆ ದೊರಕುವಂತೆ ಏರ್ಪಾಟು ಮಾಡಬೇಕು.

ಈ ಬಗ್ಗೆ ರಾಜ್ಯಸರಕಾರದ ಪುಸ್ತಕ ಭಂಡಾರದ ಕಾಯದೆಯಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾಗಿದೆ. ಆದರೆ ಅದನ್ನು ಪಾಲಿಸುವಲ್ಲಿ ಅನೇಕ ಕೊರತೆಗಳು ತಲೆದೋರಿವೆ. ಪ್ರಕಟನಕಾರರು ತಮ್ಮ ಸ್ವಂತ ಇಚ್ಛೆಯಿಂದಲೇ ಈ ಕಾರ್ಯದಲ್ಲಿ ಪ್ರವರ್ತಿತರಾದ ಹೊರತು ಕಾನೂನಿನ ಬಲದಿಂದ ಗ್ರಂಥಶೇಖರಣೆಯ ಅಗತ್ಯವನ್ನು ಪೂರೈಸುವುದು ಕಷ್ಟವಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಭಂಡಾರದಲ್ಲಿ ಪ್ರಾಚೀನ ಪುಸ್ತಕಗಳು ಅನೇಕ ಇವೆ. ಅಲ್ಲದೆ ಈಚೆಗೆ ಪ್ರಕಟವಾದ ಎಲ್ಲ ಪುಸ್ತಕಗಳನ್ನೂ ಕೊಂಡುಕೊಳ್ಳಬೇಕೆಂಬ ನಿರ್ಧಾರವನ್ನೂ ಮಾಡಿಯಾಗಿದೆ. ಆದರೂ ಹೊಸ ಪ್ರಕಟಣೆಗಳ ಪಟ್ಟಿಯನ್ನು ಸಿದ್ಧ ಮಾಡುವುದೇ ಕಷ್ಟವಾಗಿದೆ. ಕನ್ನಡದ ಪ್ರಕಾಶಕರು ಈ ದಿಸೆಯಲ್ಲಿ ಪರಿಷತ್ತಿಗೆ ಸಹಾಯಕರಾಗಬಹುದು. ಅವರು ಪುಸ್ತಕಗಳನ್ನು ಕಳಿಸದಿದ್ದರೂ, ಅಚ್ಚಾದ ಪುಸ್ತಕಗಳ ಪಟ್ಟಿಯೊಂದನ್ನು ಕ್ರಮವಾಗಿ ಪರಿಷತ್ತಿಗೆ ಕಳಿಸುತ್ತಿದ್ದರೆ ಈ ಭಂಡಾರದಲ್ಲಿ ಕನ್ನಡದ ಎಲ್ಲ ಮುದ್ರಿತ ಗ್ರಂಥಗಳನ್ನೂ ಶೇಖರಿಸುವುದು ಸಾಧ್ಯವಾಗುತ್ತದೆ. ಈ ಕಾರ್ಯದಲ್ಲಿ ಗ್ರಂಥಕರ್ತರೂ ಪ್ರಕಾಶಕರೂ ಸಹಾಯಕರಾಗಲೆಂದು ಪರಿಷತ್ತು ಪ್ರಾರ್ಥಿಸುತ್ತದೆ.

ಪರಿಷತ್ತಿನ ಸುದ್ದಿಗಳು

ಪರಿಷತ್ತಿನ ಆಶ್ರಯದಲ್ಲಿ ನಡೆದ ಉಪನ್ಯಾಸಮಾಲೆಗಳು

ಪ್ರೊ|| ಕೆ. ವಿ. ಅಯ್ಯರ್ ಅವರ ಕೃತಿಗಳು

ದಿನಾಂಕ ೧೨-೫-೧೯೬೮ರಂದು ರಾಜಾಜಿನಗರದ "ಸಪ್ತರ್ಷಿಧಾಮ" ದಲ್ಲಿ ಪ್ರೊ|| ಕೆ. ವಿ. ಅಯ್ಯರ್ ಅವರ ಕತೆ ಕಾದಂಬರಿಗಳನ್ನು ಕುರಿತು ಡಾ|| ಜಿ. ಎಸ್. ಶಿವರುದ್ರಪ್ಪನವರೂ ನಾಟಕಗಳನ್ನು ಕುರಿತು ಶ್ರೀ ಬಿ. ಎಸ್. ನಾರಾಯಣರಾಯರೂ ವ್ಯಕ್ತಿತ್ವವನ್ನು ಕುರಿತು ಅಧ್ಯಕ್ಷತೆ ವಹಿಸಿದ್ದ ಡಾ|| ಎಂ. ಶಿವರಾಂ ಅವರೂ ಉಪನ್ಯಾಸ ಮಾಡಿದರು.

* * *

ದಿ|| ಎಂ. ಎಸ್ ಪುಟ್ಟಣ್ಣ ಅವರ ಕೃತಿಗಳು

ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆದ ಉಪನ್ಯಾಸ ಮಾಲೆಯ ಕವಿಕೃತಿ ಸ್ಮರಣೆಯ ಅಂಗವಾಗಿ ದಿ|| ಎಂ.ಎಸ್. ಪುಟ್ಟಣ್ಣ ಅವರ ಕೃತಿಗಳ ಬಗ್ಗೆ ಶ್ರೀ ಬಿ. ಶ್ರೀ ಪಾಂಡುರಂಗರಾಯರು ದಿನಾಂಕ ೨೬-೫-೧೯೬೮ರಂದು ಉಪನ್ಯಾಸ ಮಾಡಿದರು. ಇದು ಗಾಂಧೀ ಸಾಹಿತ್ಯ ಸಂಘದ ಕವಿಕೃತಿ ಸ್ಮರಣೆಯ ೧೭ನೆಯ ಉಪನ್ಯಾಸವಾಗಿತ್ತು.

* * *

ಶ್ರೀ ಸುಬೋಧ ರಾಮರಾಯರ ಸಾಹಿತ್ಯ ಕೃತಿಗಳು

ವಿದ್ಯಾವರ್ಧಕ ಸಂಘದ ೩೫ನೆಯ ಉಪನ್ಯಾಸ ಮಾಲೆಯು ದಿನಾಂಕ ೯-೬-೧೯೬೮ರಂದು ನೆರವೇರಿತು. ಶ್ರೀ ರಾಮರಾಯರ ವ್ಯಕ್ತಿತ್ವ ಮತ್ತು ಇತರ ಕೃತಿಗಳನ್ನು ಕುರಿತು ಶ್ರೀ ಕೊರಟಿ ಶ್ರೀನಿವಾಸರಾಯರೂ ಮತ್ತು ದಾಸ ಸಾಹಿತ್ಯ ಸೇವೆಯನ್ನು ಕುರಿತು ಡಾ|| ಕೆ. ಎಂ. ಕೃಷ್ಣರಾಯರೂ ಉಪನ್ಯಾಸ ಮಾಡಿದರು.

* * *

ದಿ|| ಹೊಸಕೆರೆ ಚಿದಂಬರಯ್ಯ ಅವರ ಕೃತಿಗಳು

ಗಾಂಧೀ ಸಾಹಿತ್ಯ ಸಂಘದ ೧೮ನೆಯ ಉಪನ್ಯಾಸ ಮಾಲೆಯು ದಿನಾಂಕ ೨೨-೬-೧೯೬೮ರಂದು ನೆರವೇರಿತು. ಶ್ರೀ ಹೊಸಕೆರೆ ಚಿದಂಬರಯ್ಯನವರ ವ್ಯಕಿತ್ವ ಮತ್ತು ಇತರ ಕೃತಿಗಳನ್ನು ಕುರಿತು ಪಂಡಿತ ಶ್ರೀ ಎ. ರಾಮಚಂದ್ರರಾಯರೂ ಅವರ ಆಧ್ಯಾತ್ಮ ಗ್ರಂಥಗಳನ್ನು ಕುರಿತು ಶ್ರೀ ಕಂ. ಸು. ವೆಂಕಟಾದ್ರಿಶರ್ಮರೂ ಉಪನ್ಯಾಸ ಮಾಡಿದರು.

* * *

"ಕನ್ನಡಿಗರ ಕೂಟ"ದಲ್ಲಿ ಕಾರ್ಯಕ್ರಮ

ಬಸವನಗುಡಿಯ ಕನ್ನಡಿಗರ ಕೂಟದಲ್ಲಿ ಜೂನ್ ೩೦ ರಂದು ನರಸಿಂಹರಾಜಾ ಕಾಲೊನಿಯ ಶ್ರೀರಾಮ ಮಂದಿರದಲ್ಲಿ "ರಾಘವಾಂಕ"ನ ಬಗ್ಗೆ ಶ್ರೀ ಟಿ. ಕೇಶವಭಟ್ಟರು ಉಪನ್ಯಾಸ ಮಾಡಿದರು. ಶ್ರೀ ಎಂ. ವಿ. ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸರೋಜಮ್ಮ ಅನಂತರಾಮಯ್ಯನವರು ಹರಿಶ್ಚಂದ್ರ ಕಾವ್ಯದಿಂದ ಆಯ್ದ ಕೆಲವು ಭಾಗಗಳನ್ನು ಗಮಕ ರೂಪಕವಾಗಿ ಹಾಡಿದರು.

ಶ್ರೀ ಕೀಲಕನಾಮ ಸಂವತ್ಸರದ ಸಾಹಿತ್ಯೋತ್ಸವ

ಕೀಲಕನಾಮ ಸಂವತ್ಸರದ ಸಾಹಿತ್ಯೋತ್ಸವವು ದಿನಾಂಕ ೧೫-೭-೧೯೬೮ರಿಂದ ದಿನಾಂಕ ೨೧-೭-೧೯೬೮ರ ಪೂರ್ತಿ ಏಳು ದಿನಗಳ ಪರ್ಯಂತ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದಿನಾಂಕ ೧೫ರಂದು ಉತ್ಸವದ ಉದ್ಘಾಟನೆಯನ್ನು ರಾಜ್ಯದ ಖನಿಜಶಾಸ್ತ್ರ ಇಲಾಖೆಯ ಆಡಳಿತಾಧಿಕಾರಿಗಳಾದ ಶ್ರೀ ಕೆ. ನರಸಿಂಹಮೂರ್ತಿ ಅವರು ನೆರವೇರಿಸಿದರು. ಪ್ರೊ. ಕೆ. ಟಿ. ಪಾಂಡುರಂಗಿ ಅವರು ಶ್ರೀ ಅಸುಂಡಿ ಹುದ್ದಾರ

ಕೃಷ್ಣರಾಯರ ಹರಿದಾಸ ಸಾಹಿತ್ಯ ನಿಧಿಯ ಉಪನ್ಯಾಸವಾಗಿ "ಹರಿದಾಸ ಸಾಹಿತ್ಯದಲ್ಲಿ ಅಪರೋಕ್ಷಜ್ಞಾನಾನುಭವ" ಎಂಬ ವಿಷಯವನ್ನು ಕುರಿತು ವಿದ್ವತ್ಪೂರ್ಣ ಭಾಷಣವನ್ನು ಮಾಡಿದರು. ಮನರಂಜನೆಯ ಕಾರ್ಯಕ್ರಮದಲ್ಲಿ ಶಶಿಕಲಾವಿದರು ಶ್ರೀ ದಾಶರಥಿ ದೀಕ್ಷಿತ್ ವಿರಚಿತ "ಅಳಿಯ ದೇವರು" ಎಂಬ ನಾಟಕವನ್ನು ಅಭಿನಯಿಸಿದರು.

* * *

ಎರಡನೆಯ ದಿನ ಶ್ರೀ ಆರ್. ಚಂದ್ರಶೇಖರಯ್ಯ ಸುಬ್ಬಮ್ಮನವರ ನಿಧಿ ಉಪನ್ಯಾಸವಾಗಿ ಡಾ. ಜಿ. ಎಸ್. ಶಿವರುದ್ರಪ್ಪನವರು "ಬಸವೇಶ್ವರರನ್ನು ಕುರಿತ ಮೊದಲ ಕಾವ್ಯ" ಎಂಬ ವಿಚಾರಪೂರ್ಣ ಭಾಷಣ ಮಾಡಿದರು. ಮನರಂಜನೆಗಾಗಿ ವಿಮಾನಪುರ ಕನ್ನಡ ಸೇವಾಸಮಾಜದ ಕಲಾವಿದರು ವೈನತೇಯ ವಿರಚಿತ "ಮಿಾನಹೆಜ್ಜೆ" ಎಂಬ ನಾಟಕವನ್ನಾಡಿದರು.

* * *

ಮೂರನೆಯದಿನ ಶ್ರೀಮತಿ ಜಾವಳಿ ಮಹಾಲಕ್ಷ್ಮಮ್ಮ ಲಕ್ಷ್ಮಯ್ಯ ಅವರ ನಿಧಿ ಉಪನ್ಯಾಸವಾಗಿ ಶ್ರೀಮತಿ ಡಿ. ಎನ್. ಶಾರದಮ್ಮನವರು "ವೀರಶೈವ ಸಾಹಿತ್ಯದಲ್ಲಿ ಸರ್ವಜ್ಞನ ಸ್ಥಾನ" ಎಂಬ ವಿಷಯವಾಗಿಯೂ ಶ್ರೀ ಕೆ. ಎಸ್. ರಾವ್ ಅವರು "ನೌಕಾಚರಿತ್ರೆ" ಎಂಬ ವಿಷಯವಾಗಿಯೂ ಭಾಷಣ ಮಾಡಿದರು. ಚಿತ್ರಾ ಕಲಾವಿದರು ಶ್ರೀ ಎ. ಎಸ್. ಮೂರ್ತಿ ವಿರಚಿತ "ಆಶಾಪಾಶ" ಎಂಬ ನಾಟಕವನ್ನು ಅಭಿನಯಿಸಿದರು.

* * *

ನಾಲ್ಕನೆಯ ದಿನದಂದು ಶ್ರೀ ಟಿ. ಎನ್. ನಂಜುಂಡಪ್ಪ ದತ್ತಿ ಉಪನ್ಯಾಸವಾಗಿ ಶ್ರೀ ಸಿಂಪಿ ಲಿಂಗಣ್ಣನವರು "ನಮ್ಮ ಸಾಹಿತ್ಯದಲ್ಲಿ ಕನ್ನಡದ ಕೆಚ್ಚು" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಮನರಂಜನೆಯಾಗಿ ಜ್ಞಾನಜ್ಯೋತಿ ಕಲಾವಿದರಿಂದ "ಶಿಡಿಲು ಮರಿ" ನಾಟಕವೂ ಭವಾನಿ ತ್ಯಾಗರಾಜ ನೃತ್ಯಕಲಾಶಾಲೆಯ ಕುಮಾರಿ ಗೀತಾ ಮತ್ತು ಆಶಾ ಇವರಿಂದ ನೃತ್ಯವೂ ನಡೆದುವು.

* * *

ಐದನೆಯ ದಿನ ಈ ಉತ್ಸವದ ಅಂಗವಾಗಿ ಮೈಸೂರು ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಡಿ. ಕೆ. ಭೀಮಸೇನರಾಯರು ವಹಿಸಿದ್ದರು. ಪ್ರಶಸ್ತಿ ವಿಜೇತರಲ್ಲಿ ಪ್ರೊ. ಎಂ. ಮರಿಯಪ್ಪ ಭಟ್ಟರು, ಶ್ರೀ ಸಿಂಪಿ ಲಿಂಗಣ್ಣನವರು ಮತ್ತು ಶ್ರೀಮತಿ ತಿರುಮಲೆ ರಾಜಮ್ಮನವರು ದಯಮಾಡಿಸಿದ್ದರು. ಪ್ರೊ. ಡಿ. ಎಲ್. ನರಸಿಂಹಾಚಾರ್ಯರು ಮತ್ತು ಶ್ರೀ ಶಂ. ಬಾ. ಜೋಶಿಯವರು ತಮ್ಮ ಅನಾರೋಗ್ಯದ ನಿಮಿತ್ತ ಈ ಸಮಾರಂಭಕ್ಕೆ ದಯಮಾಡಿಸಿರಲಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಪ್ರೊ. ದೇ. ಜವರೇಗೌಡರು ತಮ್ಮ ಗುರು ಪ್ರೊ. ನರಸಿಂಹಾಚಾರ್ಯರ ವಿದ್ವತ್ತು ಹಾಗೂ ಸೌಜನ್ಯಗಳನ್ನು ಕುರಿತು, "ಶಬ್ದಬ್ರಹ್ಮ" ಎಂದು ತಮ್ಮ ಗುರುವನ್ನು ಕರೆದು, ನಿರ್ದುಷ್ಟ ಪಾಂಡಿತ್ಯವಿದ್ದರೂ ಅವರಲ್ಲಿ ಸೌಜನ್ಯಕ್ಕೆ ಕೊರತೆಯಿಲ್ಲ ಎಂದು ಮುಕ್ತಕಂಠದಿಂದ ಶ್ರುತಪಡಿಸಿದರು.

ಶ್ರೀ ಆರ್. ವಿ. ಕುಲಕರ್ಣಿ ಅವರು ಶ್ರೀ ಶಂ. ಬಾ. ಜೋಶಿ ಅವರ ಬಗ್ಗೆ ಮಾತನಾಡಿ ಶ್ರೀ ಜೋಶಿ ಅವರು ಕನ್ನಡದಲ್ಲಿ ಹೊಸ ಶೈಲಿಯನ್ನು ರಚಿಸಿದ್ದಾರೆ ಎಂದರು.

ಭಾಷಾ ವಿಜ್ಞಾನದಲ್ಲಿ ಪ್ರೊ. ಮರಿಯಪ್ಪಭಟ್ಟರು ನಡೆಸಿರುವ ಸಂಶೋಧನೆ ಅತ್ಯಮೂಲ್ಯವಾದುದೆಂದು ಮಾತನಾಡಿದ ಶ್ರೀ ಟಿ. ಕೇಶವಭಟ್ಟರು ದೂರದ ಮದರಾಸಿನಲ್ಲಿದ್ದು ಪ್ರೊ. ಭಟ್ಟರು ಅರ್ಹತೆ ಮತ್ತು ಅವಕಾಶ ಇವೆರಡರ ಸದುಪಯೋಗ ಮಾಡಿಕೊಂಡಿದ್ದಾರೆಂದು ತಿಳಿಸಿದರು.

ಶ್ರೀ ಸಿಂಪಿ ಲಿಂಗಣ್ಣನವರ ಬಗ್ಗೆ ಪರಿಚಯ ಮಾಡಿಕೊಡುತ್ತಾ ಈಗ್ಗೆ ಏಳೆಂಟು ವರ್ಷಗಳ ಹಿಂದೆಯೇ ಶ್ರೀ ಲಿಂಗಣ್ಣನವರು "ಆದರ್ಶ ಅಧ್ಯಾಪಕ" ಎಂದು ರಾಷ್ಟ್ರ ಪದಕ ಪಡೆದಿದ್ದರೆಂದು ಶ್ರೀ ವೆಂ. ಮು. ಜೋಶಿಯವರು ಹೇಳಿದರು.

ಶ್ರೀಮತಿ ಚಿ. ನ. ಮಂಗಳಾ ಅವರು ಶ್ರೀಮತಿ ತಿರುಮಲೆ ರಾಜಮ್ಮನವರನ್ನು ಕುರಿತು ಮಾತನಾಡುತ್ತಾ ಅವಕಾಶ ಪ್ರೋತ್ಸಾಹ ಇಲ್ಲದ ಕಾಲದಲ್ಲಿ ಶ್ರೀಮತಿ ರಾಜಮ್ಮನವರು ಸಾಹಿತ್ಯ ಸೃಷ್ಟಿಗೆ ತೊಡಗಿದ ಕ್ರಾಂತಿವಾದಿ ಮಹಿಳೆ ಎಂದು ಹೇಳಿದರು.

ಮೂವರು ಸನ್ಮಾನಿತರೂ ತಮಗೆ ತೋರಿದ ಗೌರವ ನೀಡಿದ ಸನ್ಮಾನದ ಬಗ್ಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತ ಪಡಿಸಿದರು. ಸ್ವಾಗತ ಭಾಷಣ ಮಾಡಿದ ಪರಿಷತ್ತಿನ ಕಾರ್ಯದರ್ಶಿ ಹಂಪ. ನಾಗರಾಜಯ್ಯನವರು ಸಮಾರಂಭದ ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು.

* * *

ಆರನೆಯ ದಿನದಂದು ಶ್ರೀಮತಿ ಸೋಸಲೆ ಗರಳಪುರಿ ವೆಂಕಟಸುಬ್ಬಮ್ಮನವರ ದತ್ತಿನಿಧಿ ಉಪನ್ಯಾಸ ನಡೆಯಿತು. ಶ್ರೀಮತಿ ನಳಿನಿ ಮತ್ತು ನಿರ್ಮಲಾ ಅವರಿಂದ ಪ್ರಾರ್ಥನೆ ನಡೆಯಿತು. ಶ್ರೀಮತಿ ಕೆ. ಟಿ. ಬನಶಂಕರಮ್ಮನವರಿಂದ ಸ್ವಾಗತ ಭಾಷಣವಾದನಂತರ ಕುಮಾರಿಯರಾದ ಕೈವಾರ ಪದ್ಮ ಮತ್ತು ಮಾಲತೀ ಅವರು ಸುಶ್ರಾವ್ಯವಾಗಿ ಹಾಡಿದರು. ಅಶೋಕ ಶಿಶುವಿಹಾರದ ಮಕ್ಕಳಿಂದ ಮತ್ತು ಅಖಿಲ ಕರ್ಣಾಟಕ ಮಕ್ಕಳಕೂಟದವರಿಂದ ನೃತ್ಯ ಮತ್ತು 'ಧರ್ಮ ವ್ಯಾಧ' ಎಂಬ ಕಿರುನಾಟಕ ನಡೆಯಿತು. ಶ್ರೀಮತಿ ತಿರುಮಲೆ ರಾಜಮ್ಮನವರು "ಸ್ತ್ರೀಯರು, ಆರ್ಯ ಸಂಸ್ಕೃತಿ" ಎಂಬ ವಿಚಾರವಾಗಿ ಉಪನ್ಯಾಸ ಮಾಡಿದರು. ಕಡೆಯಲ್ಲಿ ಶ್ರೀಮತಿ ಜಿ. ಲಲಿತಾ ಅವರು ವಂದನಾರ್ಪಣೆ ಮಾಡಿದರು.

* * *

ಏಳನೆಯದಿನದ ಕಾರ್ಯಕ್ರಮದಲ್ಲಿ ಶ್ರೀ ಬೆಳ್ಳಾವೆ ವೆಂಕಟನಾರಾಣಪ್ಪನವರ ದತ್ತಿ ಉಪನ್ಯಾಸವಾಗಿ ಪ್ರೊ. ಪಿ. ಶ್ರೀನಿವಾಸರಾಯರು "ಸಂತತ ಸೃಷ್ಟಿವಾದ" (Continuous creation) ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಮನರಂಜನೆಗೆ ದೇಶೀಯ ವಿದ್ಯಾಶಾಲೆಯ ಹಿಸ್ಟ್ರಿಯಾನಿಕ್ ಕ್ಲಬ್ ಅವರು "ಬದಾಮ್ ರಾಣಿ ಚೌಕಟ್ ಗುಲಾಮ" ಎಂಬ ನಾಟಕವನ್ನು ಅಭಿನಯಿಸಿದರು.

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರು ಏಳುದಿನಗಳ ಸತತ ಕಾರ್ಯಕ್ರಮ ನಡಸಿಕೊಟ್ಟ ಉಪನ್ಯಾಸಕರು ಕಲಾವಿದರು ಮತ್ತು ನಾಟಕ ಸಂಸ್ಥೆಯರಿಗೆ ಪರಿಷತ್ತಿನ ಪರವಾಗಿ ತುಂಬು ಕೃತಜ್ಞತೆ ಗಳನ್ನರ್ಪಿಸಿದರು.

ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಅವರ ಕೃತಿಗಳು

ದಿನಾಂಕ ೧೪-೭-೧೯೬೮ರಂದು ರಾಜಾಜಿನಗರದ "ಸಪ್ತರ್ಷಿಧಾಮ"ದಲ್ಲಿ "ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಅವರ ಕೃತಿಗಳ" ಬಗ್ಗೆ ಉಪನ್ಯಾಸ ನಡೆಯಿತು. ಶ್ರೀ ಬಿ. ಶ್ರೀ. ಪಾಂಡುರಂಗರಾಯರು ಶ್ರೀ ಶರ್ಮರ "ಸಾಹಿತ್ಯ"ವನ್ನು ಕುರಿತು ಶ್ರೀ ನಾರಾಯಣ ಬಲ್ಲಾಳರು "ಶ್ರೀ ಶರ್ಮರೊಡನೆ ಸಂದರ್ಶನ" ಎಂಬ ವಿಷಯ ವಾಗಿಯೂ ಅಧ್ಯಕ್ಷತೆ ವಹಿಸಿದ್ದ ಪ್ರೊ. ಕೆ. ಸಂಪದ್ಗಿರಿ ರಾಯರು "ಶ್ರೀ ಶರ್ಮ ಅವರ ವ್ಯಕ್ತಿತ್ವ" ಎಂಬ ವಿಷಯ ವನ್ನು ಕುರಿತೂ ಉಪನ್ಯಾಸ ಮಾಡಿದರು.

ಪ್ರಕಟಣೆ — ರತ್ನ ಪರೀಕ್ಷೆ ದಿನಾಂಕ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆಸಲ್ಪಡುವ ೧೯೬೮ರ "ರತ್ನ" ಪರೀಕ್ಷೆ ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ದಿನಾಂಕ ೨೩ನೆಯ ಸೋಮವಾರದಿಂದ ೨೯ನೆಯ ಭಾನುವಾರ ಪೂರ್ತ ನಡೆಯುವುದಾಗಿದೆ. ಈಗ ಗೊತ್ತು ಮಾಡಿರುವ ಪ್ರಕಾರ ಬೆಂಗಳೂರು, ಮೈಸೂರು, ಹಲಗೇರಿ, ಬಾದಾಮಿ, ಶಿವಮೊಗ್ಗ ಮತ್ತು ರಾಯಚೂರು - ಈ ಸ್ಥಳಗಳು ಪರೀಕ್ಷಾ ಕೇಂದ್ರ ಗಳಾಗಿರುತ್ತವೆ. ಈ ಮೇಲಿನ ಊರುಗಳಲ್ಲದೆ ಬೇರೆ ಬೇರೆ ಊರುಗಳಿಂದ ಅಭ್ಯರ್ಥನಾಪತ್ರಗಳನ್ನು ಕಳುಹಿಸಿರುವ ಮತ್ತು ಕೇಂದ್ರದ ಬಗ್ಗೆ ಯಾವ ಊರಿನ ಹೆಸರನ್ನೂ ತಿಳಿಸದೆ ಇರುವ ವಿದ್ಯಾರ್ಥಿಗಳಿಗೆ ಮೇಲಿನ ಸ್ಥಳಗಳಲ್ಲಿ ಹತ್ತಿರದ ಊರನ್ನು ಕೇಂದ್ರವಾಗಿ ಗೊತ್ತುಮಾಡಿಕೊಡಲಾಗಿದೆ.

ಹಂಪ. ನಾಗರಾಜಯ್ಯ
ಗೌರವ ಕಾರ್ಯದರ್ಶಿ

ಮಾನಸಗಳ್ಳಿ ; ಲೇ: ಶಾಂತರಸ, ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು, ಪುಟ: ೭೬, ಬೆಲೆ: ರೂ. ೩-೦೦, ೧೯೬೭.

ನದಿಕೋಲು ; ಲೇ: ಚಂದ್ರಕಾಂತ, ಕುಸುನೂರು, ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು, ಪುಟ: ೮೦, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ಬಯಕೆ; ಲೇ: ಪುಲಿಕೇಶಿ, ಪ್ರ: ವಾಗ್ವಿಲಾಸ ಪ್ರಕಾಶನ, ೨೬/೨೩೧೭, ೨ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-೧೦, ಪುಟ: ೧೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೫೦, ೧೯೬೭.

ವಿವಿಧ ಕವನ ಸಂಗ್ರಹ ; ಲೇ: ಕಟ್ಟಿ, ಜಿ. ವ್ಹಿ, ಪ್ರ: ಜಿ. ವ್ಹಿ. ಕಟ್ಟಿ, ವಕೀಲರು, ೧೦೬೩, ಅನಂತಶಯನಗಲ್ಲಿ, ಬೆಳಗಾವಿ, ಪುಟ: ೩೮, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೨೫, ೧೯೬೭.

ಕರ್ತಾರನ ಕಮ್ಮಟೆ; ಲೇ: ರಾಜಶೇಖರ, ಬಡಿಗೇರ, ಪ್ರ: ಕೃಷ್ಣಾತೀರ ಸೌರಭ ಪ್ರಕಾಶನ, ಬನಹಟ್ಟಿ, ಪುಟ: ೫೫, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೨೫, ೧೯೬೮.

ಶಿವಾನಂದ ಲಹರಿ ; ಲೇ: ಮಲ್ಲಾರಿ ಮೇವುಂಡಿ, ಪ್ರ: ಮಲ್ಲಾರಿ ಮೇವುಂಡಿ, ಸಾಧನಕೇರಿ, ಧಾರವಾಡ, ಪುಟ: ೧೪/೧೦೧, ಆಕಾರ; ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೮.

ಕಂಠಿಸರ ; ಸಂ. ವಿರೂಪಾಕ್ಷಗೌಡ, ಕೆ. ಪ್ರ: ಶ್ರೀ ಭುವನೇಶ್ವರಿ ಪ್ರಕಾಶನ, ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಪುಟ: ೬೧, ಆಕಾರ; ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೮.

ಕಾರವಾನ; ಲೇ: ವಿಷ್ಣುಮೂರ್ತಿ, ಎಚ್. ಸಿ., ಪ್ರ: ಪ್ರೊ ಎಮ್. ಬಾನ್, ಡಿಪಾರ್ಟ್‌ಮೆಂಟ್ ಆಫ್ ಇಂಗ್ಲಿಷ್, ಪಿ. ಸಿ. ಜಾಬಿನ್ ಕಾಲೇಜು, ಹುಬ್ಬಳ್ಳಿ, ಪುಟ: ೬೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೩-೦೦, ೧೯೬೮.

ಶ್ರೀಮಾತಾ ; ಲೇ: ಅಂಬಿಕಾತನಯದತ್ತ, ಪ್ರ: ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧, ಪುಟ: ಆಕಾರ: ಕ್ರೌನ್ ಅಷ್ಟದಳ, ಬೆಲೆ: ೨-೦೦, ೧೯೬೮.

ವೇಣುವನ ; ಲೇ: "ಸಹನಾ" ವಾಸಂತಿ ಚಂದ್ರಶೇಖರ, ಪ್ರ: ರೋಹಿಣಿ ಪ್ರಿಂಟರ್ಸ್, ಅರಳೇಪೇಟೆ, ಬೆಂಗಳೂರು-೨, ಪುಟ: ೪/೭೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ನಾಟಕ

ಇದು ಭಾರತದ ದಾರಿ ; ಲೇ: ಕಸ್ತೂರಿ, ನೀಲತ್ತಹಳ್ಳಿ, ಪ್ರ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೧೫೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ಗೋಲಿಯ ಮೈಮೆ, ಲೇ: ಗುಂಡಪ್ಪ, ವೈ. ಎಸ್., ಪ್ರ: ಶ್ರೀ ಚಂಪಕಧಾಮ ಪುಸ್ತಕಾಲಯ, ನರಸಿಂಹರಾಜ ವಿಸ್ತರಣ, ಚಿಂತಾಮಣಿ, ಕೋಲಾರ ಜಿಲ್ಲೆ, ಪುಟ: ೩೬, ಬೆಲೆ: ರೂ. ೦-೬೦, ೧೯೬೭.

ಪ್ರಿಯಂವದಾ ಮತ್ತು ಜ್ಞಾನದಾನ ; ಲೇ: ಎಂ. ಎನ್. ಆರಾಧ್ಯ, ಪ್ರ: ಲೀಲಾ ನಾಗಭೂಷಣರಾವ್, ಕವಿತಾ ಪ್ರಕಾಶನ, ಬಿ.ಬಿ. ಗಾರ್ಡನ್ಸ್, ಮೈಸೂರು-೪, ಪುಟ: ೬೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೫೦, ೧೯೬೮.

ನಂಜು-ನೊರೆಹಾಲು ; ಲೇ: ಶಾಂತರಸ, ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು, ಪುಟ: ೧೦೧, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೨-೦೦, ೧೯೬೭.

ದೇವರಿಗೆ ದಿಕ್ಕು ; ಲೇ: ಡಿಸೋಜ, ನಾ. ಪ್ರ: ರವೀಂದ್ರ ಪುಸ್ತಕ ಭಂಡಾರ, ಕಾರ್ಗಲ್, ಶಿವಮೊಗ್ಗ ಜಿಲ್ಲೆ, ಪುಟ: ೩೪, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ನನ್ನ ತಮ್ಮಗೊಂದು ಹೆಣ್ಣು ; ಲೇ: ಮೂರ್ತಿ, ಎನ್. ಎಸ್. ಎಸ್., ಪ್ರ: ಎನ್. ಎಸ್. ಎಸ್. ರಾವ್ ಅಂಡ್ ಬ್ರದರ್ಸ್, ವಿರೂಪಾಕ್ಷನಿಲಯ, ನಾಗಗೊಂಡನಹಳ್ಳಿ, ಚಿತ್ರದುರ್ಗ ಜಿಲ್ಲೆ, ಪುಟ: ೩೬, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೮.

ಕೂಳಿನಕೊರಗು ; ಲೇ: ಪುಂಡಲೀಕ, ಪಾಟೀಲ, ಪ್ರ: ಕಲಾ ಸಾಹಿತ್ಯ ಕುಟೀರ, ಬೆಳಗಾವಿ, ಗಾಂಧಿನಗರ, ಪುಟ: ೧೪, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೦-೩೭, ೧೯೬೫.

ಗದಾಯುದ್ಧ ; ಲೇ: ಹರಿಜಿತ್, ಜಿ. ಜೆ. ಪ್ರ: ಭುವನಭಾರತಿ ಪ್ರಕಾಶನ, ಬೆಂಗಳೂರು, ಪುಟ: ೪೨, ಆಕಾರ: ಕ್ರೌನ್ ಅಷ್ಟದಳ, ಬೆಲೆ: ರೂ. ೧-೦೦, ೧೯೬೭.

ಅನವಾರ ಮಠದ ಮಹಾತ್ಮಾ ಚರ ಬಸವತಾತನವರ ಪುರಾಣಿಕ ನಾಟಕ ; ಲೇ: ನಾಗಪ್ಪ ಶಾಂತವೀರಪ್ಪ, ಶೆಟ್ಟರ, ಪ್ರ: ಯಾದಗಿರಿ ಜಿ. ಎಂ. ಗುರುಬಸವಶಾಸ್ತ್ರಿಗಳು, ಶಹಾಪುರ, ಗುಲಬರ್ಗಾ ಜಿಲ್ಲಾ, ಪುಟ: ೧೦೧, ಬೆಲೆ: ರೂ. ೨-೦೦, ೧೯೬೮.

Reg. No. B. G. 4—August 1968

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ



ಸಂಪಾದಕ
ಜಿ. ವೆಂಕಟಸುಬ್ಬಯ್ಯ

ಸಂಪಾದಕ ಮಂಡಲಿ
ಶ್ರೀನಿವಾಸರಾವ್ ಕೊರಟಿ
ಆರ್. ರಾಜಪ್ಪ

ಕನ್ನಡ ನುಡಿ

ಸೆಪ್ಟೆಂಬರ್ ೧೯೭೮

ಸಂಪುಟ ೩೧
ಸಂಚಿಕೆ ೯

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ

ಸ್ವೀಕಾರ

ಸಣ್ಣ ಕತೆಗಳು

ಚಕ್ರಬಂಧನ : ಲೇ : ಮಾವಿನಕೆರೆ ರಂಗನಾಥನ್, ಪ್ರ : ಪುರೋಗಾಮಿ ಸಾಹಿತ್ಯ ಸಂಘ, ೧ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೩, ಪುಟ: ೧೨+೧೩೨, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೨-೫೦, ೧೯೬೮.

ಪ್ರಾಣವೀಣೆ ಲೇ: ರಾಮರಾಯರು, ಸಮೇತನಹಳ್ಳಿ, ಪ್ರ.: ರಾಸ ಸಾಹಿತ್ಯ, ರಾಸ ಪ್ರಕಾಶನ, ಮಂಡ್ಯ, ಪುಟ: ೫+೧೦೪, ಆಕಾರ: ಕ್ರೌ. ಅಷ್ಟದಳ, ಬೆಲೆ: ೨-೦೦, ೧೯೬೮.

ಪಾರವ್ವನ ಪಂಚಾಯಿತಿ ಲೇ: ಜಯತೀರ್ಥ ರಾಜ ಪುರೋಹಿತ, ಪ್ರ: ನೃಪತುಂಗ ಪ್ರಕಾಶನ, ಕಲಬುರ್ಗಿ, ಪುಟ: ೮+೧೩೮, ಆಕಾರ: ಕ್ರೌ. ಅಷ್ಟದಳ, ಬೆಲೆ: ೨-೨೫, ೧೯೬೭.

ಜೀವನ ಚರಿತ್ರೆ :

ಯುಗಾವತಾರ ಲೇ: ಶೇಷಾದ್ರಿ ಹೊ. ವೆಂ. ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಗವೀಪುರಂ ಮಾರ್ಗ, ಕೆಂಪೇಗೌಡನಗರ, ಬೆಂಗಳೂರು-೧೯, ಪುಟ: ೧೦+೩೧೫, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೫-೦೦, ೧೯೬೭

ಕೊಳ್ಳದ ಯೋಗಿ ಲೇ: ಮ. ಗು. ತಿವಾರಿ, ಪ್ರ: ಗುರುಪಾದ ಪ್ರಕಾಶನ, ೩೬೦/೪, ಶಹಾಪೂರ ರೋಡ, ಬೆಳಗಾವಿ ಪುಟ: ೧೧+೩೬, ಕ್ರೌ. ಅಷ್ಟದಳ, ಬೆಲೆ: ರೂ. ೧-೦೦, ೧೯೬೮.

ಕಲಿಯುಗದ ಕಲ್ಪವೃಕ್ಷ ಶ್ರೀ ಪರಪ್ಪಸ್ವಾಮಿಗಳು, ಲೇ: ಪುಟ್ಟರಾಜು, ಪ್ರ: ಪುಟ್ಟರಾಜು, ೧೫೫, ಕಿಲಾರಿರೋಡು, ಬೆಂಗಳೂರು-೨, ಪುಟ; ೨+೪೨, ಆಕಾರ: ಕ್ರೌ. ಅಷ್ಟದಳ; ಬೆಲೆ: ಉಚಿತ, ೧೯೬೮.

ಕಂಚಿ ಮಹಾಮುನಿ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಜಗದ್ಗುರು ಲೇ: ಪಟ್ಟಾಭಿರಾಮನ್ ಕೆ. ಪ್ರ; ಶಂಕರ ಸೇವಾ ಸಂಘ, ಕೋಲಾರ, ಪುಟ: ೨೫, ಆಕಾರ: ಕ್ರೌ. ಅಷ್ಟದಳ, ೧೯೬೮.

ಶ್ರೀ ವೇದಾಂತ ದೇಶಿಕರು ಲೇ: ಕೃಷ್ಣಯ್ಯಂಗಾರ್ ಡಿ. ಪ್ರ: ಸುದರ್ಶನಂ ಅಂಡ್ ಕಂಪೆನಿ, ಅವಿನ್ಯೂ ರಸ್ತೆ, ಬೆಂಗಳೂರು-೨, ಪುಟ: ೩೦+೩೬೦, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೪-೦೦, ೧೯೬೪.

ಭಾರತರತ್ನ ಲೇ: ಮರುಳಯ್ಯ ಸಾ. ಶಿ., ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೧೩೨ ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೨-೦೦, ೧೯೬೫.

ಭಕ್ತ ಕವಿಗಳು ಲೇ: ಗುರುನಾಥ ಜೋಶಿ, ಪ್ರ: ಭಾರತೀಯ ಸಾಹಿತ್ಯ ಮಂದಿರ, ಧಾರವಾಡ, ಪುಟ: ೯೫, ಆಕಾರ: ಕ್ರೌ. ಅಷ್ಟದಳ, ಬೆಲೆ: ೧-೫೦,

ಮಹಾಶರಣೆ ಹೇಮರೆಡ್ಡಿ ಮಲ್ಲಮ್ಮನ ಚರಿತ್ರ ಸಾರ ಲೇ: ಮಹಾರುದ್ರಪ್ಪ, ಮಹಾಲಿಂಗಪ್ಪ ಮಿರ್ಜಿ, ಪ್ರ: ಗುರುಸಿದ್ದಪ್ಪ ಮಹಾಲಿಂಗಪ್ಪ ಮಿರ್ಜಿ, ಅಡ್ವೋಕೇಟರು, ದಾಜಿನ ಪೇಟೆ, ಹುಬ್ಬಳ್ಳಿ, ಪುಟ: ೩+೭೫, ಆಕಾರ: ಕ್ರೌ. ಅಷ್ಟದಳ, ೧೯೬೭.

ಸುವರ್ಣ ಸಂಚಿಕೆ

ನ್ಯಾಷನಲ್ ಹೈಸ್ಕೂಲ್ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಸಂ.: ನ್ಯಾಷನಲ್ ಹೈಸ್ಕೂಲ್ ಸುವರ್ಣ ಮಹೋತ್ಸವ ಸಂಚಿಕೆ, ಬೆಂಗಳೂರು, ಪುಟ: ೨೦೪+xxxiii, ೧೯೬೭.

ತತ್ವ

ಗೀತೆಯ ಭೂಮಿಕೆ ಲೇ: ಶ್ರೀ ಅರವಿಂದರು, ಅನು: ಲಿಂಗಣ್ಣ ಸಿಂಪಿ, ಪ್ರ: ವ್ಹಿ. ಎಸ್. ಸಿಂಪಿ, ಅರವಿಂದ ಗ್ರಂಥಾಲಯ, ಚಡಚಣ, ಪುಟ: ೭+೯೬, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೫೦, ೧೯೬೭.

ಮುಕುಂದ ಮಾಲಾ ಅನು; ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು, ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸಿಪುರ, ಪುಟ: ೪+೨೩, ಆಕಾರ; ಕ್ರೌ. ಅಷ್ಟದಳ, ೧೯೬೭.

ಮೋಹಮುದ್ಗರ ಶ್ರೀ ಶಂಕರಾಚಾರ್ಯರವರ ಮತ್ತು ಅವರ ಶಿಷ್ಯರ ಕೃತಿ ಅನು: ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು, ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾ

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು
—ಬಿ.ಎಂ.ಶ್ರೀ

ಸಂಪುಟ : ೩೧
ಸಂಚಿಕೆ : ೯
ಸೆಪ್ಟೆಂಬರ್ ೧೯೬೮

ಈ ಸಂಚಿಕೆಯಲ್ಲಿ . . .

ಯುಗದ ಕವಿಗೆ

ಯುಗದ ಕವಿಗೆ
ಜಗದ ಕವಿಗೆ
ಶ್ರೀರಾಮಾಯಣ ದರ್ಶನದಿಂದಲೆ ಕೈ...
ಮುಗಿದ ಕವಿಗೆ—ಮಣಿಯದವರು ಯಾರು?
ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ
ಕವನತತಿಗೆ ತಣಿಯದವರು ಆರು?
ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ
ಕವಿಯ ಜತೆಗೆ ಕುಣಿಯದವರು ಆರು?

ಕನ್ನಡಿಸಲಿ ಶಿವಜೀವನ
ಮುನ್ನಡಿಸಲಿ ಯುವ-ಜನ-ಮನ
ಇದೆ ಪ್ರಾರ್ಥನೆ ನಮಗೆ
ತಮವೆಲ್ಲಿದೆ ರವಿಯಿದಿರಿಗೆ?
ಉತ್ತಮ ಕವಿ ನುಡಿ-ಚದುರಿಗೆ
ಚಾರುತ್ವದ ಕುಂದಣದಲಿ
ಚಾರಿತ್ರ್ಯದ ರತ್ನ
ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೆ ತೃಪ್ತಿಯು ನಿಮಗೆ

(ಗಂಗೋತ್ರಿ ಕೃಪೆಯಿಂದ)

ಅಂಬಿಕಾತನಯದತ್ತ

ಗಂಗೋತ್ರಿ

ಹಾ. ಮಾ. ನಾಯಕ

ಮೈಸೂರಿನ ಪ್ರಸಿದ್ಧ ಪುಸ್ತಕದಂಗಡಿ ಗೀತಾ ಬುಕ್ ಹೌಸಿನ ತೋರು ಬೀರುಗಳಲ್ಲಿ ಕಳೆದ ಕೆಲವು ತಿಂಗಳುಗಳಿಂದ ಸಾಹಿತ್ಯ ಪ್ರೇಮಿಗಳನ್ನು ಭೀಮಗಾತ್ರದ ಪುಸ್ತಕವೊಂದು ಆಕರ್ಷಿಸುತ್ತಿತ್ತು. ವರ್ಣರಂಜಿತ ಮುಖಚಿತ್ರದ ಆ "ಗಂಗೋತ್ರಿ"–ಕುವೆಂಪು ಅಭಿನಂದನ ಗ್ರಂಥವನ್ನು ಅತ್ಯುತ್ಸಾಹದಿಂದ ಎತ್ತಿ ತೆರೆದು ನೋಡಿದವರು ನಿರಾಶರಾಗುತ್ತಿದ್ದರು. ಅದಕ್ಕೆ ಕಾರಣ ಇಷ್ಟೆ: ಪ್ರಕಾಶಕರು ದೊಡ್ಡದಾದ ಇಂಗ್ಲಿಷ್ ಪುಸ್ತಕವೊಂದಕ್ಕೆ ಈ ಕನ್ನಡ ಮುಖ ಚಿತ್ರವನ್ನು ಸುತ್ತಿ ಪ್ರದರ್ಶಿಸಿದ್ದರು. ಪುಸ್ತಕದ ಬಿಡುಗಡೆ ಇನ್ನೂ ಆಗಿಲ್ಲದಿದ್ದುದರಿಂದ ಪುಸ್ತಕವನ್ನೇ ಅವರು ಅಲ್ಲಿ ಪ್ರದರ್ಶಿಸಿರುವುದು ಸಾಧ್ಯವಿರಲಿಲ್ಲ. ಪ್ರದರ್ಶಿತವಾದ ಪುಸ್ತಕವನ್ನೆತ್ತಿ ನಿರಾಶರಾದವರು ಒಂದು ಬಗೆಯ ಸಮಾಧಾನದಿಂದ ತೆಗೆಯುತ್ತಿದ್ದ ಉದ್ಗಾರವೆಂದರೆ "ಅದೇ ನೋಡಿದೆ. ಗಂಗೋತ್ರಿ ಇಷ್ಟು ದೊಡ್ಡ ಪುಸ್ತಕವೇ ಎಂದು ನನಗೆ ಆಶ್ಚರ್ಯವಾಗಿತ್ತು!" ಪಾಪ, ಕನ್ನಡದ ಒಂದು ಗ್ರಂಥ ಆ ಪ್ರಮಾಣದಲ್ಲಿ ಪ್ರಕಟವಾಗುವುದು ಅವರ ಊಹೆಗೂ ಮೀರಿದ್ದು!

ಆಶ್ಚರ್ಯಪಡಬೇಕಾಗಿಲ್ಲ. ಈಗ ಪುಸ್ತಕವನ್ನೇ ನೋಡಬಹುದು. ಮೊನ್ನೆ ಅದರ ಬಿಡುಗಡೆಯಾಗಿದೆ. ಎಲ್ಲೆಲ್ಲೂ ಅದು ಮಾರಾಟಕ್ಕೆ ದೊರೆಯುತ್ತಿದೆ. ಅರವತ್ತು ರೂಪಾಯಿ ಹಾಗೂ ನೂರು ರೂಪಾಯಿ ಬೆಲೆಯ ಈ ಗ್ರಂಥವನ್ನು ಮಿತ್ರರೊಬ್ಬರು ಹೇಳಿದ ಹಾಗೆ ಕೈಯಲ್ಲಿ ಹಿಡಿದು ಎತ್ತುವುದೂ ಕಷ್ಟವೆ!

"ಗಂಗೋತ್ರಿ" – ಇದು ಕುವೆಂಪು ಅಭಿನಂದನ ಗ್ರಂಥದ ಹೆಸರು. ಕುವೆಂಪು ಅಭಿನಂದನ ಸಮಿತಿಯವರ ಪರವಾಗಿ ಮೈಸೂರಿನ ಗೀತಾ ಬುಕ್‌ಹೌಸ್ ಅವರು ಪ್ರಕಟಿಸಿರುವ ಈ ಗ್ರಂಥ ರಾಜಾಕಾರದ ಒಂದು ಸಾವಿರದ ಒಂದು ನೂರು ಪುಟಗಳನ್ನೊಳಗೊಂಡಿದೆ. ಕನ್ನಡ ಪ್ರಕಟಣ ಪ್ರಪಂಚದಲ್ಲಿ ಇದೊಂದು ಸಾಹಸದ ಹೆಜ್ಜೆ. ಅಭಿನಂದನ ಸಾಹಿತ್ಯದಲ್ಲಿ ಮಹತ್ವದ ಮೈಲಿಗಲ್ಲು. ಕನ್ನಡದಲ್ಲಿ, ಏಕೆ ಯಾವುದೇ ಸಾಹಿತ್ಯದಲ್ಲಿ ಇಂಥ ಪ್ರಕಟಣೆ ಅಪರೂಪ. ಗಾತ್ರವೊಂದನ್ನೇ ತೆಗೆದುಕೊಂಡರೆ ಅಲ್ಲಿ ಇಲ್ಲಿ ಇದಕ್ಕೆ ಹತ್ತಿರ ಹತ್ತಿರ ಬರುವ ಒಂದೆರಡು ಗ್ರಂಥಗಳು ಇದ್ದಾವು. ಆದರೆ ಇಷ್ಟು ದೊಡ್ಡ ಗ್ರಂಥ ಪೂರ್ತಿಯಾಗಿ ಒಬ್ಬ ಕವಿಯ ಜೀವನ, ಕೃತಿಗಳನ್ನೇ ಕುರಿತಿರುವಂಥ ಇನ್ನೊಂದು ಉದಾಹರಣೆ ನನಗೆ ಗೊತ್ತಿಲ್ಲ. ಇದು "ಗಂಗೋತ್ರಿ"ಯ ವಿಶಿಷ್ಟತೆ; ಅದರ ಅದ್ವಿತೀಯತೆ.

* * *

ಸಂಪಾದಕ ಸಮಿತಿಯ ಪರವಾಗಿ ಬರೆದ ಪೀಠಿಕಾರೂಪದ ನಾಲ್ಕು ಮಾತುಗಳಲ್ಲಿ ಪ್ರೊ|| ದೇಜಗೌ ಅವರು ಕನ್ನಡದಲ್ಲಿ ಬೆಳೆದು ಬಂದಿರುವ ಅಭಿನಂದನ ಸಾಹಿತ್ಯವನ್ನು ಸೂಕ್ಷ್ಮವಾಗಿ ಸಮೀಕ್ಷಿಸಿದ್ದಾರೆ. ಈ ವಿಶಿಷ್ಟ ಸಾಹಿತ್ಯ "ಒಂದು ಭಾಷೆಯ ಜನ ತನ್ನ ಸಾಹಿತಿಗಳ ಶಕ್ತಿ ಸಾಮರ್ಥ್ಯ ಸಾಧನೆ ಸಿದ್ಧಿಗಳನ್ನು ಮೆಚ್ಚುವ, ಗೌರವಿಸುವ ವಿಧಾನ" ಎಂದೂ "ಜನತೆಯ ಕಲಾಭಿರುಚಿ, ಸಂಸ್ಕೃತಿ ಪ್ರಜ್ಞೆ, ಮತ್ತು ಉದ್ಧಾರಾಕಾಂಕ್ಷೆ ಇದರಿಂದ ವ್ಯಕ್ತವಾಗುತ್ತದೆ" ಎಂದೂ ಅವರು ಹೇಳಿದ್ದಾರೆ. ಈ ಬಗೆಯ ಗ್ರಂಥಗಳ ಸ್ವರೂಪವನ್ನು ಅವರು ಹೀಗೆ ವಿವರಿಸಿದ್ದಾರೆ:

"ಸಾಮಾನ್ಯವಾಗಿ ಇಂಥ ಅಭಿನಂದನ ಕಾರ್ಯ ಕವಿಯ ಜೀವಿತಕಾಲದಲ್ಲಿ ನಡೆಯುವುದುಂಟು. ಅವನು ತನ್ನ ಕ್ಷೇತ್ರದಲ್ಲಿ ಸಿದ್ಧಿಯ ಹಂತವನ್ನು ಮುಟ್ಟಿದಾಗಲೊ, ಒಂದು ವಯೋಮಿತಿಯನ್ನು ತಲಪಿದಾಗಲೊ ಇಂಥದೊಂದು ಸನ್ಮಾನ ಸಮಾರಂಭ ಏರ್ಪಾಡಾಗುತ್ತದೆ. ಕವಿಯ ವ್ಯಕ್ತಿತ್ವವನ್ನು ಕುರಿತ ಕವನ ಲೇಖನಗಳನ್ನೂ, ಅವನ ಕೃತಿಗಳನ್ನು ಕುರಿತ ವಿಮರ್ಶೆಗಳನ್ನೂ ಸಂಗ್ರಹಿಸಿ, ಭಾವಚಿತ್ರಗಳೊಡನೆ ಗ್ರಂಥವನ್ನು ಮುದ್ರಿಸಿ, ಅವನಿಗೆ ಸಮರ್ಪಿಸುವುದು ರೂಢಿಯ ಸಂಪ್ರದಾಯ. ಇಂಥ ಅಭಿನಂದನ ಗ್ರಂಥವೇ ಶ್ರೇಷ್ಠವಾದದ್ದು. ಕವಿಕೃತಿ ಸಂಬಂಧವಾದ ಲೇಖನಗಳೇ ಅಲ್ಲದೆ ಅನ್ಯ ವಿಷಯ ಸಂಬಂಧವಾದ ಲೇಖನಗಳ ಸಂಗ್ರಹವನ್ನೂ ಗೌರವಾರ್ಥವಾಗಿ ಸಮರ್ಪಿಸುವ ವಾಡಿಕೆಯೂ ಉಂಟು. ಸಹಜವಾಗಿ ಇದರ ಪ್ರಾಶಸ್ತ್ಯ ಕಡಿಮೆ. ಇದು ಮಧ್ಯಮ ರೀತಿಯ ಗ್ರಂಥವೆನ್ನಬಹುದು. ಸಾಹಿತಿ ತೀರಿಕೊಂಡ ನಂತರವೂ ಜೀವನ ಕೃತಿಗಳಿಗೆ ಸಂಬಂಧಿಸಿದ ಗ್ರಂಥವನ್ನು ಪ್ರಕಟಿಸಬಹುದು. ಅಂಥ ಸ್ಮಾರಕ ಗ್ರಂಥವೂ ಅಭಿನಂದನ ಗ್ರಂಥವೆಂಬ ಬಿರುದಿಗೆ ಪಾತ್ರವಾಗಬಹುದು . . . ಒಬ್ಬ ಸಾಹಿತಿಯ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವುದರ ಮೂಲಕ ಇಷ್ಟ ಮಿತ್ರರು ಅವನನ್ನು ಅಭಿನಂದಿಸಬಹುದು.

* * *

"ಕನ್ನಡದಲ್ಲಿ ಶ್ರೀಯವರಿಗೆ ಕೊಟ್ಟ "ಸಂಭಾವನೆ"ಯೇ ಈ ಸಂಪ್ರದಾಯದ ನಾಂದಿಯಾಗಿದೆ. ಅಲ್ಲಿಂದ ಮುಂದೆ ಇದು ಸಮೃದ್ಧವಾಗಿ ಬೆಳೆದುಕೊಂಡು ಬಂದಿದೆ. ಕುವೆಂಪು ಅವರಿಗೆ ಈ ಮೊದಲು ಎರಡು ಅಭಿನಂದನ ಗ್ರಂಥಗಳು ಸಂದಿವೆ. ಮೂರನೆಯದಾದ ಈ "ಗಂಗೋತ್ರಿ"ಯನ್ನು ಕುರಿತು ದೇಜಗೌ ಹೇಳುತ್ತಾರೆ: "... ಈ ಗ್ರಂಥ ಬೃಹತ್ತಾಗಿ ಬೆಳೆದಿದೆ. ಮಹಾಕವಿಗೆ ನೀಡುವ ಕಾಣಿಕೆ ಮಹತ್ತರವಾಗಿರ ಬೇಕಷ್ಟೆ! ... ಪ್ರಾಯಶಃ ಯಾವ ಭಾರತೀಯ ಭಾಷೆ ಯಲ್ಲಿಯೂ ಇಷ್ಟು ಪ್ರಮಾಣದ ನಮನಗ್ರಂಥ ಅಚ್ಚಾಗಿಲ್ಲ ವೆಂದು ಧೈರ್ಯದಿಂದ ಹೇಳಬಹುದಾಗಿದೆ. ಪ್ರಮಾಣದ ಮಾತೂ ಇರಲಿ; ಅನ್ಯ ವಿಷಯಾಸಕ್ತವಾದ ಲೇಖನಗಳ ಸೋಂಕಿಲ್ಲದೆ, ಕೇವಲ ಕವಿಕೃತಿ ದರ್ಶನಕ್ಕೆ ಮೀಸಲಾದ ಲೇಖನಗಳಿಂದ ವ್ಯಾಪ್ತವಾಗಿರುವ ಅಭಿನಂದನ ಗ್ರಂಥಗಳು ಯಾವ ಭಾಷೆಯಲ್ಲಾದರೂ ಅಪರೂಪವೆ ಸರಿ! ಸಾಧಾರಣ ವಾಗಿ ಕುವೆಂಪು ಸಾಹಿತ್ಯದ ಸಮಸ್ತ ಪ್ರಕಾರಗಳ ಪರಿಚಯ ಇಲ್ಲಿ ದೊರಕಬೇಕೆಂಬುದೇ ಸಂಪಾದಕರ ಆಶಯ. ಇಷ್ಟಾ ದರೂ ಕುವೆಂಪು ಸಾಹಿತ್ಯದ ಸಮಗ್ರ ದರ್ಶನ ಇಲ್ಲಿ ಸಿಗುತ್ತ ದೆಂದು ಹೇಳುವಂತಿಲ್ಲ. ಆದರೆ ಇಲ್ಲಿಯ ಲೇಖಕರು ತಾವು ಆರಿಸಿಕೊಂಡ ವಿಷಯಗಳನ್ನು ಕೂಲಂಕಷವಾಗಿ ಪ್ರಾಮಾ ಣಿಕವಾಗಿ ಪ್ರತಿಪಾದಿಸಿದ್ದಾರೆ. ಇಂಥ ಗ್ರಂಥ ಯಾವ ಭಾಷೆ ಗಾದರೂ ಹೆಮ್ಮೆಯ ಕಲಶವಾದೀತು!"

ನಲವತ್ತಮೂರು ಜನ ಲೇಖಕರ ಲೇಖನಗಳಿಂದ ತುಂಬಿ ಕೊಂಡಿರುವ "ಗಂಗೋತ್ರಿ"ಯಲ್ಲಿ ಮೂರು ಭಾಗಗಳಿವೆ. ಮೊದಲಭಾಗದ ಇನ್ನೂರು ಪುಟಗಳಲ್ಲಿ ಕವಿಗಳ ಜೀವನ ಚರಿತ್ರೆಯಿದೆ. ಅವರನ್ನು ತೀರ ಹತ್ತಿರದಿಂದ ಬಲ್ಲ ದೇಜಗೌ ಇದನ್ನು ಬರೆದಿದ್ದಾರೆ. ಕನ್ನಡ ಲೇಖಕರೊಬ್ಬರನ್ನು ಕುರಿತು ಇಷ್ಟು ವಿಸ್ತಾರವಾದ ವಿವರವಾದ ರಸವತ್ತಾದ ಇನ್ನೊಂದು ಚರಿತ್ರೆ ಪ್ರಕಟವಾಗಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಮುಂದಿನ ಮುನ್ನೂರು ಪುಟಗಳ ಎರಡನೆಯ ಭಾಗದಲ್ಲಿ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದ ವಿಸ್ತೃತ ವಿಮರ್ಶೆಯಿದೆ. ಬಹು ದಿನಗಳಿಂದಲೂ ಈ ಕಾವ್ಯವನ್ನು ಅಧ್ಯಯನ ಮಾಡುತ್ತಾ ಬಂದಿರುವ ಕೋ. ಚೆನ್ನಬಸಪ್ಪ ನವರು ಇಲ್ಲಿ ಕಾವ್ಯಾಭ್ಯಾಸಿಗಳಿಗೆ ಮಹತ್ವದ ಪರಿಚಯ ವನ್ನೊದಗಿಸಿದ್ದಾರೆ. ಈ ಪರಿಚಯದೊಡನೆ ರಾಮಾಯಣ ದರ್ಶನಂ ಯಾರಿಗಾದರೂ ಹೆಚ್ಚು ಹತ್ತಿರವಾಗುತ್ತದೆ; ಸುಲಭ ಸಾಧ್ಯವಾಗುತ್ತದೆ.

ಮೂರನೆಯ ಭಾಗ: ಕವಿಕೃತಿ ಸಮೀಕ್ಷೆ. ಇಲ್ಲಿ ಕುವೆಂಪು ವ್ಯಕ್ತಿತ್ವದ ವಿವಿಧ ಮುಖಗಳನ್ನೊಳಗೊಂಡ ಬರಹಗಳು. ಅವರ ಅನೇಕ ಕೃತಿಗಳನ್ನು ಕುರಿತ ಲೇಖನಗಳು ಸೇರಿವೆ; ಒಬ್ಬಿಬ್ಬ ಹೊಸ ಲೇಖಕರ ಜೊತೆಗೆ, ಹಲವು ಸಿದ್ಧಪ್ರಸಿದ್ಧ ಹೆಸರುಗಳು ಕೂಡಿವೆ. ಕುವೆಂಪು ನುಡಿಮುತ್ತುಗಳನ್ನು ಒಂದು ಲೇಖನದಲ್ಲಿ ಸಂಗ್ರಹಿಸಿದೆ; ಇನ್ನೊಂದರಲ್ಲಿ ಅವರ, ಅವರನ್ನು ಕುರಿತ ಸಾಹಿತ್ಯವನ್ನೆಲ್ಲ ಪಟ್ಟಿ ಮಾಡಲಾಗಿದೆ. ಕುವೆಂಪು ಸಾಹಿತ್ಯ ವ್ಯಾಸಂಗಕ್ಕೆ ಈ ಲೇಖನಗಳು ಒಳ್ಳೆಯ ಪ್ರವೇಶವನ್ನೊದಗಿಸುತ್ತವೆ.

* * *

ಕವಿ ಕುವೆಂಪು ತಮ್ಮ ಕನಸಿಗೆ ರೂಪಕೊಟ್ಟು ಮಾನಸ ಗಂಗೋತ್ರಿಯನ್ನು ಕನ್ನಡಿಗರಿಗೆ ಬಳುವಳಿಕೊಟ್ಟರು; ಈಗ ಕನ್ನಡ ಜನ ತಮ್ಮ ಕೃತಜ್ಞತೆ ಕುರುಹಾಗಿ ಅವರಿಗೆ ಈ ಗ್ರಂಥ "ಗಂಗೋತ್ರಿ"ಯ ಉಡುಗೊರೆ ಕೊಟ್ಟಿದ್ದಾರೆ. ಗ್ರಂಥದ ಮೊದಲಿಗೆ ಪ್ರಕಟವಾಗಿರುವ ತಮ್ಮ ಕವಿತೆಯಲ್ಲಿ ನಮ್ಮ ಇನ್ನೊಬ್ಬ ಹೆಮ್ಮೆಯ ಕವಿ ಅಂಬಿಕಾತನಯದತ್ತರು ಹೀಗೆಂದು ದನಿಗೂಡಿಸಿದ್ದಾರೆ:

ಯುಗದ ಕವಿಗೆ
ಜಗದ ಕವಿಗೆ

ಶ್ರೀ ರಾಮಾಯಣ ದರ್ಶನದಿಂದಲೆ ಕೈಮುಗಿದ ಕವಿಗೆ–
ಮಣಿಯದವರು ಯಾರು? ರಾಮಕೃಷ್ಣ ವಚನೋದಿತ
ಪ್ರತಿಭೆ ತೆರೆದ ಕವನ ತತಿಗೆ ತಣಿಯದವರು ಆರು? ಮಲೆ
ನಾಡಿನ ಸೌಂದರ್ಯಕ್ಕೆ ಕುಣಿದಾಡಿದ ಕವಿಯ ಜತೆಗೆ ಕುಣಿಯ
ದವರು ಆರು?

('ಕನ್ನಡಪ್ರಭ' ಕೃಪೆಯಿಂದ)

ದೇಜಗೌ – ಒಂದು ಕಿರಿಯ ಕಾಣಿಕೆ

ಸಾ. ಶಿ. ಮರುಳಯ್ಯ

ಆ ಕಾಲವೂ ಒಂದಿತ್ತು.

ಯಾರ ಸಂಗಡವಾದರೂ ಸರಿಯೇ ಇಂಗ್ಲಿಷಿನಲ್ಲೇ ಸಂಭಾಷಿಸಬೇಕು. ಕನ್ನಡದಲ್ಲಿ ಮಾತನಾಡುವುದು ಅಪಮಾನಕರ; ಒಂದುವೇಳೆ ಇಂಗ್ಲಿಷಿನಲ್ಲಿ ಪ್ರಶ್ನಿಸಿದವರಿಗೆ ಕನ್ನಡದಲ್ಲಿ ಉತ್ತರಿಸಿದರೆ ಅದು ಅಸಭ್ಯವರ್ತನೆ; ungentlemanly. ಮನೆಯಲ್ಲಿ ಮಗು ಅಪ್ಪ, ಅಮ್ಮ ಎಂದರೆ ಅದು ಹಳ್ಳಿಗಮಾರ; ಡ್ಯಾಡಿ, ಮಮ್ಮಿ ಎಂದರೆ ಸುಧಾರಿಸಿದ ಮಗು. ತಂದೆ ತಾಯಿಗಳೂ ಅಷ್ಟೇ ತಮ್ಮ ಮಕ್ಕಳನ್ನು ಕರೆವಾಗ ಹೆಸರೆತ್ತಿ ಕೂಗಿದರೆ ಅದು ಅಸಹ್ಯ! ಗಂಡಿಗೆ ಬಾಬು, ಹೆಣ್ಣಿಗೆ ಬೇಬಿ ಅನ್ನಬೇಕು! ಅದು ಅವರ ಸಂಸ್ಕೃತಿಯ ಲಕ್ಷಣ!

ಕನ್ನಡದಲ್ಲಿ ಓದುವುದು ಹಲವರಿಗೆ ಅಪಮಾನ; ಓದಬೇಕೆಂಬ ಆಸೆ ಇದ್ದರೂ ಒಂದು ವಿಧದ ಬಿಂಕ; ಅರ್ಥವಾಗದಿದ್ದರೂ ರೈಲು ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಇಂಗ್ಲಿಷ್ ಪತ್ರಿಕೆಗಳನ್ನೇ ಕೊಂಡು ಮುಖದ ಮುಂದೆ ಹಿಡಿದುಕೊಳ್ಳುವುದೊಂದು ಷೋಕಿ! ಇನ್ನು ಕೆಲವರಿಗೆ ಕನ್ನಡದಲ್ಲೇನಿದೆ? "ರಾಯ ಹೇಳಿಂದ . . . ಭೂಪ ಕೇಳಿಂದ . . . ಇಷ್ಟು ಬಿಟ್ಟರೆ ಇನ್ನೇನಿದೆ . . . ? ಇಂಗ್ಲಿಷಿನಲ್ಲಿ ಅಬ್ಬಬ್ಬ! ಎಂಥೆಂಥಹ ಹೆಸರುಗಳು ಅವರ ನಾಮೋಚ್ಚಾರಣೆಯೇ ಸಾಕು. ನಮ್ಮ ಜನ್ಮ ಪಾವನ ಮಾಡಲಿಕ್ಕೆ." ಈ ಎಲ್ಲ ಭವ್ಯ ಭಾವನೆಗಳೂ ನಮ್ಮ ಜನರಲ್ಲಿದ್ದ ಕಾಲ ಒಂದಿತ್ತು!

ಈ ಮೌಢ್ಯದ ಮಹಾವೃಕ್ಷಕ್ಕೆ ಮೊದಲು ಕೊಡಲಿಪೆಟ್ಟು ಹಾಕಿದವರು ಆಚಾರ್ಯ ಬಿ. ಎಂ. ಶ್ರೀ. ಅದರ ಕಟ್ಟಿಗೆಗಳನ್ನು ಕುಂಡದಲ್ಲಿ ಹಾಕಿ ಹೋಮ ಮಾಡಿದ ಅಧ್ವರ್ಯು ಆಚಾರ್ಯ ದೇಜಗೌ.

"ದೇಜಗೌ" ಒಂದು ದಿಗ್ಗಜ; ಕನ್ನಡದ ಸ್ವರ್ಣಭೂಮಿಯನ್ನು ತನ್ನ ಕುಂಭಸ್ಥಳದಲ್ಲಿ ಹೊತ್ತು ಮೆರೆಸುತ್ತಿರುವ ಮಹಾಗಜ. ಅವರದು ಸಾಹಸದ ಬಾಳು. ಜೀವನದುದ್ದಕ್ಕೂ ಅವರು ಸೋಲರಿಯದ ಹೋರಾಟ ನಡೆಸಿದ್ದಾರೆ; ಇಂದು ಎರಡೂ ಮುಕ್ಕಾಲು ಕೋಟಿ ಕನ್ನಡಿಗರ ಅಭಿಮಾನಕ್ಕೆ ಪಾತ್ರರಾದ ಮಹಾ ಸಾಹಸಿಯಾಗಿದ್ದಾರೆ. ಕನ್ನಡ ನುಡಿಗಾಗಿ, ಕನ್ನಡಿಗರಿಗಾಗಿ, ಕನ್ನಡ ತಾಯ್ನಾಡಿಗಾಗಿ ತಮ್ಮ ಸಮಸ್ತವನ್ನು ಮೀಸಲಿರಿಸಿದ್ದಾರೆ. ದುಡಿಯುವವರಿಗೆ ದಾರ್ಶಕನಿಕರಾಗಿದ್ದಾರೆ. ಕನ್ನಡಕ್ಕಾಗಿ ನಡೆಯುವ ಹೋರಾಟವೇ ಅವರ ಯಜ್ಞ. 'ಕನ್ನಡಕ್ಕೆ ಗೆಲವಿರಲಿ, ಮಂಗಳವು ಕೂಡಿರಲಿ, ಜೈ ಕನ್ನಡಾಂಬೆ! ಸಿರಿಗನ್ನಡಂ ಗೆಲ್ಗೆ! ಬಾಳ್ಗೆ!!' ಎಂಬ ಜಯಘೋಷವೇ ಅವರ ಮಂತ್ರ. ಪ್ರತಿ ಕನ್ನಡಿಗನ ನಾಡಿ ನಾಡಿಯಲ್ಲೂ ಕನ್ನಡ ನುಡಿಯನ್ನು ಮಿಡಿಸಿ, ನಾಲಗೆಯ ಮೇಲೆ ಕನ್ನಡ ಮಾತುಗಳು ನಲಿದು ನರ್ತಿಸುವಂತೆ ಮಾಡುವುದೇ ಅವರ ಪೂಜೆ. ಈ ನೆಲದ ಮಣ್ಣು ಬೇಕು ಮಾತು ಬೇಡ; ಗಾಳಿ ಬೇಕು ಮಾತು ಬೇಡ; ನೀರು ಬೇಕು ನುಡಿ ಬೇಡ; ಗಾಳಿ ಬೇಕು ಲಿಪಿ ಬೇಡ ಎಂಬ ದ್ರೋಹಿಗಳ ಖಂಡನವೇ ಅವರರ್ಪಿಸಿದ ಹವಿಸ್ಸು!

ಕನ್ನಡನಾಡಿನಲ್ಲಿ ಕನ್ನಡಿಗನಿಗೇ ಸ್ಥಾನ, ಕನ್ನಡಿಗನಿಗೇ ಮಾನ, ಅನ್ಯನ ಹೆಸರೆತ್ತಿದರೆ ಅದು ತುಚ್ಛ ಹೀನ ಎಂದು ಖಂಡಿಸಿ ಕನ್ನಡಿಗನಿಗೆ ಕನ್ನಡನಾಡಿನಲ್ಲಿ ಸ್ಥಾನ ದೊರಕಿಸಿ ಕೊಟ್ಟ ಕೀರ್ತಿ ಪ್ರೊ|| ದೇಜಗೌ ಅವರಿಗೆ ಸಲ್ಲಬೇಕಾಗಿದೆ. ಇದು ಕೇವಲ ಸ್ತುತಿಯಲ್ಲ, ಸತ್ಯ. ಕನ್ನಡಿಗರು ಸತ್ವಹೀನರು, ಸ್ವಾಭಿಮಾನಶೂನ್ಯರು, ಅಲ್ಪ ತೃಪ್ತರು, ಆಲಸಿಗಳು. ಶತಮಾನಗಳ ಸೋಮಾರಿತನ ಇವರಲ್ಲಿ ಮೈಯುಂಡಿದೆ! ಹಿಂದಿನಿಂದಲೂ ತಕ್ಕ ಸ್ಥಾನಮಾನಗಳಿಲ್ಲ; ಇದ್ದರೂ ನುಡಿಯಲು ನಾಲಗೆಯಿಲ್ಲ; ನುಡಿದರೂ ಕೇಳುವ ಕಿವಿಗಳಿಲ್ಲ ಎಂಬ ಭಾವನೆ ಇದೆ. ಹೀಗಾಗಿ ಬಹುದಿನದ ಜಾಡ್ಯವನ್ನು ದೂರ ಮಾಡಲು ಕೈ ಹಾಕಿದವನಿಗೆ ಎಂಟೆದೆ ಬೇಕಾಗುತ್ತದೆ.

ಆಚಾರ್ಯ ಬಿ. ಎಂ. ಶ್ರೀಯವರು ಕನ್ನಡಿಗನ ಮನದ ಮೈಲಿಗೆಯನ್ನು ನೀಗಲು ತುಂಬಾ ಶ್ರಮಿಸಿದರು. ಅವರು ಧೂಳು ಕೊಡವಿದರು. ದೇಜಗೌ ಅವರು ಕನ್ನಡಿಗನ ಜುಟ್ಟು ಹಿಡಿದು ನೆತ್ತಿಯನ್ನೇ ಒದರಿದರು. ಸುಪ್ತ ಚೇತನಗಳನ್ನು ಬಡಿದೆಬ್ಬಿಸಿದರು. ಹೊಸ ಹುರುಪು ತುಂಬಿದರು. ಅವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಸರ್ವಾಂಗ ಸುಂದರವಾಗಿ ಬೆಳೆಯುತ್ತಿದೆ. ಸರ್ವತೋಮುಖ ಪ್ರಗತಿಯನ್ನು ಸಾಧಿಸಿದೆ; ಕನ್ನಡಿಗರು ಜಾಗೃತರಾಗಿದ್ದಾರೆ. ತಮ್ಮತನವನ್ನು ಅರಿಯುವ ಯೋಗ್ಯತೆಯನ್ನು ಸಂಪಾದಿಸಿಕೊಂಡಿ

ದ್ದಾರೆ. ಆಚಾರ್ಯ ಎಸ್. ವಿ. ರಂಗಣ್ಣ, ಡಾ|| ಆರ್ ಸಿ. ಹಿರೇಮಠ, ಡಾ|| ಹಾ. ಮಾ. ನಾಯಕ, ಡಾ|| ಎಚ್. ತಿಪ್ಪೇರುದ್ರಸ್ವಾಮಿ, ಡಾ|| ಪ್ರಭುಶಂಕರ, ಡಾ|| ಚಿದಾನಂದ ಮೂರ್ತಿ, ಶ್ರೀ ಹಂಪ. ನಾಗರಾಜಯ್ಯ, ಸುಜನಾ; ಸಿ. ಪಿ. ಕೆ. ಮೊದಲಾದ ಕನ್ನಡ ನುಡಿಯ ಭಕ್ತರಿಂದ ಶ್ರೇಷ್ಠರೂವಾರಿಗಳಿಂದ ನೂತನ ಕಟ್ಟಡವೊಂದು ನಿರ್ಮಾಣ ವಾಗುತ್ತಿರುವುದು ಕನ್ನಡದ ಶುಭೋದಯದ ಸಂಕೇತ!

ಪ್ರೊ|| ದೇಜಗೌರವರ ಕ್ಷೇತ್ರ ಕನ್ನಡ ಚಳುವಳಿ ಅಥವಾ ಕನ್ನಡ ಪ್ರಚಾರ, ಪ್ರಸಾರಗಳಲ್ಲೇ ಸೀಮಿತವಾಗಿಲ್ಲ. ಕನ್ನಡ ಕೃತಿ ರಚನೆಯೇ ಮೊದಲಾದ ಕೃಷಿ ಕ್ಷೇತ್ರದಲ್ಲೂ ವ್ಯಾಪಿಸಿದೆ. ಶ್ರೀಯುತರು ಶ್ರೀ ರಾಮಾಯಣ ದರ್ಶನಂ-ವಚನಚಂದ್ರಿಕೆ ಮೊದಲಾದ ನಲವತ್ತು ಅಮೂಲ್ಯ ಕೃತಿಗಳನ್ನಿತ್ತು ಕನ್ನಡಮ್ಮನ ಮುಡಿಲು ತುಂಬಿದ್ದಾರೆ. ಮುಡಿಯ ಸಿಂಗರಿಸಿದ್ದಾರೆ. ಅವರ ಅ ಮಿ ತ ಸೇ ವೆ ಕನ್ನಡಿಗರಿಗೆ ಸಂದಿವೆ, ಇನ್ನೂ ಸಲ್ಲಬೇಕಾಗಿದೆ. ಇನ್ನೂ ಅನೇಕ ಉತ್ತಮ ಕೃತಿಗಳು ಅವರ ಲೇಖಣಿಯಿಂದ ಹೊರಬೀಳಲೆಂದು ಕನ್ನಡ ಕುಲಕೋಟಿ ಹಾರಯಿಸುತ್ತಿದೆ.

ಪ್ರೊ|| ದೇಜಗೌರವರನ್ನು ಯಾರಿಗಾದರೂ ಹೊಸದಾಗಿ ಪರಿಚಯಿಸಿಕೊಡುತ್ತ ಅವರಿಗೆ ಐವತ್ತು ವರ್ಷಗಳೆಂದರೆ ಯಾರೂ ನಂಬುವುದಿಲ್ಲ. ಏಕೆಂದರೆ ಅವರ ಮೈಮೇಲೆ ಐವತ್ತು ಯುಗಾದಿಗಳು ಉರುಳಿದ್ದರೂ, ಅವರ ಸದಾ ನಗುವ ದುಂಡುಮುಖ ಹೇಳುತ್ತಿದೆ ಇನ್ನೂ ಮೂವತ್ತೈದು ಎಂದು; ತಲೆ ಕೂದಲು ಹೇಳುತ್ತದೆ ನಾನು ಹಣ್ಣಾಗಲು ಇನ್ನೂ ಕಾಲ ಬೇಕು ಎಂದು; ಅವರ ಉತ್ಸಾಹ ಮಾತ್ರ ಇಪ್ಪತ್ತರ ಹರೆಯದ ಯುವಕನದು. ಅವರ ಸ್ವಭಾವವೂ ಅಂಥದೇ. ತುಂಬಾ ಸರಳ; ತುಂಬಾ ಸಲುಗೆ; ತುಂಬಾ ಆತ್ಮೀಯತೆ. ಅವರೊಡನಿದ್ದರೆ ವಿದ್ಯಾರ್ಥಿಗಳಿಗೆ 'ಗುರುಗಳು' ಎಂಬ ಭಾವನೆಯೇ ಬರುವುದಿಲ್ಲ; ಅಕ್ಕರೆಯ ಅಣ್ಣ ಎಂಬ ಅಭಿಮಾನ ಮೂಡುತ್ತವೆ. ನಾನು ಪ್ರೊಫೆಸರ್, ಇವರು ಚಿಕ್ಕವರು, ನನ್ನ ಶಿಷ್ಯರು; ಇವರನ್ನು ದೂರ ವಿಡಬೇಕು, ಎಂಬ ದೊಡ್ಡತನವನ್ನು ಪ್ರದರ್ಶಿಸಿಕೊಳ್ಳಬೇಕೆಂಬ ಬಡಿವಾರವೇ ಅವರಲಿಲ್ಲ.

ಅದೇ ಅವರ ದೊಡ್ಡತನ. ಅವರ ಈ ದೊಡ್ಡ ಗುಣವೇ ಅವರನ್ನು ದೊಡ್ಡವರನ್ನು ಮಾಡಿದೆ. ಸೆಕ್ರೆಟೇರಿಯಟ್‌ನ ಗುಮಾಸ್ತರಾಗಿ, ಸೆಂಟ್ರಲ್ ಕಾಲೇಜು, ಮಹಾರಾಜಾ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಅಧಿಕಾರಿಗಳಾಗಿ, ಅಲ್ಲೇ ಪರೀಕ್ಷಾಧಿಕಾರಿಗಳಾಗಿ ಶಿವಮೊಗ್ಗೆ ಸಹ್ಯಾದ್ರಿ ಕಾಲೇಜಿನ ಹೆಮ್ಮೆಯ ಪ್ರಿನ್ಸಿಪಾಲರಾಗಿ, ಈಗ ಮೈಸೂರು 'ಮಾನಸ ಗಂಗೋತ್ರಿ'ಯ ಕನ್ನಡ ವಿಭಾಗದ ಪ್ರಧಾನಾಚಾರ್ಯರಾಗಿದ್ದಾರೆ. ಮೈಸೂರಿನ ಮಾನಸಗಂಗೋತ್ರಿ ರಾಷ್ಟ್ರಕವಿ ಶ್ರೀ ಕುವೆಂಪುರವರ ಸಾಧನೆ; ಅದರಲ್ಲಿ ಕನ್ನಡದ ವಿಜಯ ವೈಜಯಂತಿಯನ್ನು ಹಾರಿಸಿದ ಕೀರ್ತಿ ಶ್ರೀ ದೇಜಗೌ ಅವರದು! ಶ್ರೀಯುತರು ಪೂಜ್ಯ ಶ್ರೀ ಕುವೆಂಪುರವರ ಶ್ರೇಷ್ಠ ಶಿಷ್ಯರೂ ಹೌದು.

ಪ್ರೊ|| ದೇಜಗೌ ಅವರದು ಬಹುಮುಖ ಪ್ರತಿಭೆ; ಅದ್ಭುತ ಸಾಹಸ. ಎರಡು ಮೂರು ದಶಕಗಳಲ್ಲಿ ಆಗದ ಕಾರ್ಯವನ್ನು ಅವರು ಎರಡು ಮೂರು ವರ್ಷಗಳಲ್ಲಿ ಮಾಡಿ ತೋರಿಸಿದ್ದಾರೆ. ಗಂಗೋತ್ರಿಯಲ್ಲಿ 'ಕನ್ನಡ ಅಧ್ಯಯನ ಸಂಸ್ಥೆ' ಸ್ಥಾಪಿತವಾಗಿ ಡಾ|| ಹಾ. ಮಾ. ನಾಯಕರೊಡನೆ ಸೇರಿದ ಸಂಪಾದಕತ್ವದಲ್ಲಿ ಒಂದು ಇಂಗ್ಲೀಷಿನ ವಿಚಾರ ಪೂರ್ಣ ಪಾಕ್ಷಿಕ ಪತ್ರಿಕೆಯನ್ನೂ ಹಲವು ಉಪಯುಕ್ತ ಕನ್ನಡ ಗ್ರಂಥಗಳನ್ನೂ ಬೆಳಕಿಗೆ ತಂದಿದ್ದಾರೆ. 'ಶ್ರೀ ಕುವೆಂಪು' ಅಧ್ಯಯನ ಶಾಖೆ, ವಚನ ಸಾಹಿತ್ಯ ಶಾಖೆ, ದಾಸ ಸಾಹಿತ್ಯಶಾಖೆ ಇತ್ಯಾದಿ ಸಾಹಿತ್ಯಾಧ್ಯಯನ ಶಾಖೆಗಳು ರೂಪುಗೊಳ್ಳುತ್ತಿವೆ. ಎಲ್ಲಕ್ಕೂ ಹೆಚ್ಚಾಗಿ ಕನ್ನಡಿಗರಿಗೆ ಮರೆತೇ ಹೋಗಿದ್ದ 'ಜನಪದ ಸಾಹಿತ್ಯ' ಅಧ್ಯಯನ ವಿಶ್ವವಿದ್ಯಾನಿಲಯದ ಮೆಟ್ಟಲೇರಿ ತಾನೂ ಬದುಕಿ ನಮ್ಮ ಸಂಸ್ಕೃತಿಯನ್ನೂ ಬದುಕಿಸುತ್ತಿದೆ.

ಶ್ರೀ ಕೆ. ಆರ್. ಲಿಂಗಪ್ಪ, ಶ್ರೀ ಜೀ. ಶಂ. ಪ. ಮೊದಲಾದ ಜನಪದದ ಕೃಷಿಗಾರರಿಗೆ ಶ್ರೀ ದೇಜಗೌ ಸ್ಫೂರ್ತಿಯಾಗಿದ್ದಾರೆ. ಹೊಸ ಹಳೆಯ ಲೇಖಕರಿಗೂ ಚೈತನ್ಯದ ಚಿರಂತನ ಚಿಲುಮೆಯಾಗಿದ್ದಾರೆ. ಕನ್ನಡಿಗನ ನುಡಿಗೆ ನಾಲಗೆಯಾಗಿ, ನಡೆಗೆ ಹೆಜ್ಜೆಯಾಗಿ, ಅವನ ಮೈಗೊಂದು ಬೆನ್ನೆಲುಬಾಗಿ ಸೇವೆ ಸಲ್ಲಿಸುತ್ತಿರುವ ದೇಜಗೌ ಅವರು ಚಿರಕಾಲ ಬಾಳಲಿ. ಅವರ ಐವತ್ತರ ಹುಟ್ಟು ಹಬ್ಬವನ್ನಾಚರಿಸಿದ ಕನ್ನಡಿಗರಿಗೆ ಅವರ ಷಷ್ಟ್ಯಬ್ದಿ, ಶತಾಬ್ದಿಗಳನ್ನು ಮಾಡುವ ಭಾಗ್ಯ ಲಭಿಸಲಿ.

‘ಪ್ರೊ. ದೇಜಗೌ’; ಬದುಕು-ಬರೆಹ

ಹಂಪ. ನಾಗರಾಜಯ್ಯ

‘ನಾನು ಕೆಲಸವನ್ನಾದರೂ ಬಿಟ್ಟೇನು. ಕನ್ನಡದ ಗೌರವಕ್ಕೆ ಚ್ಯುತಿ ತರುವ ಕೆಲಸ ಮಾಡಲಾರೆ’; ‘ಕೆಲವರಿಗೆ ರಾಮನಿಂದ ಮುಕ್ತಿ, ಕೆಲವರಿಗೆ ಶಿವನಿಂದ ಮುಕ್ತಿ. ನನಗಾದರೋ, ನಾನು ಹಲವು ಸಲ ಹೇಳಿಕೊಂಡಿದ್ದೇನೆ, ಕನ್ನಡದಿಂದಲೇ ಮುಕ್ತಿ’ ಈ ಉಕ್ತಿ ಪ್ರಾಧ್ಯಾಪಕ ಜವರೇಗೌಡರ ಅಂತರಾಳದಿಂದ ಉಕ್ಕಿಬಂದ ಸುಧಾಸೂಕ್ತಿ. “ಕನ್ನಡದ ಕೆಲಸ ನನಗೆ ಬಹಳ ಪ್ರಿಯವಾದದ್ದು; ಈ ವಿಚಾರದಲ್ಲಿ ನನಗೆ ಬರಿಯ ಉತ್ಸಾಹವಿತ್ತು. ಆದರೆ ಅವರಲ್ಲಿ [ಪ್ರೊ. ದೇಜಗೌ ಅವರಲ್ಲಿ] ಉತ್ಸಾಹದ ಜತೆಗೆ ಕ್ರಿಯಾಶೀಲತೆಯೂ ಕೂಡಿಕೊಂಡಿದೆ” ಇದು ಮಹಾಕವಿ ಕುವೆಂಪು ವಾಣಿ.

ಚನ್ನಪಟ್ಟಣ ತಾಲ್ಲೂಕಿಗೆ ಸೇರಿದ ಚಕ್ಕೆರೆ ಗ್ರಾಮದ ಚೆನ್ನಮ್ಮ – ದೇವೇಗೌಡ ದಂಪತಿಗಳಿಗೆ ಆರನೆಯ ಮಗುವಾಗಿ ಜುಲೈ ೬, ೧೯೧೮ರಂದು ಹುಟ್ಟಿ ಗುಡಿಸಿಲಿನಿಂದ ಗಂಗೋತ್ರಿಯ ತನಕ ತ್ರಿವಿಕ್ರಮಸ್ವರೂಪಿಯಾಗಿ ಬೃಹದಾಕಾರವಾಗಿ ಬೆಳೆದು ನಿಂತ ದೇ. ಜವರೇಗೌಡರ ಜೀವನ ಸಮೀಕ್ಷೆ ಎಂಥವರಿಗೂ ಮರೆಯಲಾಗದ ಪಾಠ. ಮೇಲಿಂದ ಮೇಲೆ ಅವರ ಶಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸಲೆಂದೇ ಬಂದ ಅಡ್ಡಿ ಆತಂಕಗಳ ದೊಡ್ಡ ದೊಡ್ಡ ಅಡ್ಡಗೋಡೆಗಳನ್ನು ಸೀಮೋಲ್ಲಂಘನಗೈದ ಅಸೀಮ ಸಾಹಸ ತೋರಿದ ಅವರ ಬದುಕು ಅನೇಕರಿಗೆ ಬೆರಗನ್ನೂ, ಹಲವರಿಗೆ ಮಾರ್ಗದರ್ಶನವನ್ನೂ ಕೆಲವರಿಗೆ ಸ್ಫೂರ್ತಿಯನ್ನೂ ಕೊಡುವಷ್ಟು ಉದ್ಬೋಧಕ. ಇತಿಹಾಸವನ್ನು ವಿಶೇಷ ವಿಷಯವಾಗಿ ಆನರ್ಸ್ ತರಗತಿಗೆ ಆರಿಸಿಕೊಳ್ಳಲು ಮಹಾರಾಜಾ ಕಾಲೇಜಿಗೆ ಅರ್ಜಿ ಹಾಕುವ ಸಮಯದಲ್ಲಿ ಮಹಾಕವಿ ಕುವೆಂಪುರವರ ಹೆಸರನ್ನು ಕೇಳಿದೊಡನೆಯೇ ಕನ್ನಡಕ್ಕೆ ಧಾವಿಸಿದರು. ಮುಂದೆ ಎಫ್. ಎಲ್. ಪರೀಕ್ಷೆಗಾಗಿ ಬೆಳಗಾಮಿಗೆ ಹೋದವರು ಕಾರಣಾಂತರಗಳಿಂದ ವಕೀಲಿ ತಪ್ಪಿ ಕನ್ನಡಕ್ಕೇ ದಕ್ಕಿದರು. ಕನ್ನಡ ಎಂ. ಎ. ಪದವೀಧರರಾದ ಮೇಲೂ ಅವರು ಕೆಲವು ವರ್ಷಕಾಲ ವಿವಿಧ ವೃತ್ತಿಗಳಲ್ಲಿ ಸೇವೆ ಸಲ್ಲಿಸಿದರು. ಬೆಂಗಳೂರಿನ ಸೆಕ್ರಟೇರಿಯಟ್‌ನಲ್ಲಿ ಗುಮಾಸ್ತರಾಗಿ ದುಡಿದು ೧೯೪೬ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಮಾಸ್ತರಾದರು. ಅಲ್ಲಿಂದ ಮೈಸೂರಿನ ಮಹಾರಾಜಾ ಕಾಲೇಜಿಗೆ ವರ್ಗವಾಗಿ ಬಂದರು. ಅಲ್ಲಿ ಕನ್ನಡದ ವಿಭಾಗ ಕುವೆಂಪುರವರ ಮಾರ್ಗದರ್ಶನದೊಡನೆ ತನಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸ್ಥಾನಮಾನಗಳನ್ನು ಒಂದೊಂದಾಗಿ ಪಡೆಯತೊಡಗಿತ್ತು. ಜವರೇಗೌಡರು ಉಪಪ್ರಾಧ್ಯಾಪಕರಾಗಿ ನೇಮಕಗೊಂಡ ಕೆಲವು ವರ್ಷಗಳಲ್ಲೇ ವಿ. ವಿ. ದ. ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಗಳಾದರು. ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿ ಸರಸ್ವತಿ ಸೇವೆ ಮಾಡಿದರು. ಈ ಮಧ್ಯೆ ಕುವೆಂಪುರವರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದವರು ಮೈ. ವಿ. ವಿ. ದ. ಉಪಕುಲಪತಿಗಳಾದರು. ಆ ಅವಧಿಯಲ್ಲಿ ದೇಜಗೌ ಅವರು ಪರೀಕ್ಷಾಧಿಕಾರಿಗಳಾಗಿದ್ದರು. ಅನಂತರ ಜವರೇಗೌಡರು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾದರು. ಕೇವಲ ಒಂದು ವರ್ಷಕಾಲ ಮಾತ್ರ ಆ ಕಾಲೇಜಿನ ಮುಖ್ಯಾಧಿಕಾರಿಯಾಗಿದ್ದು, ಮತ್ತೆ ಮೈಸೂರಿಗೆ ಹಿಂತಿರುಗಿದರು. ಈ ವೇಳೆಗೆ ಸ್ನಾತಕೋತ್ತರ ತರಗತಿಗಳು ಮಹಾರಾಜಾ ಕಾಲೇಜಿನಿಂದ ಮಾನಸಗಂಗೋತ್ರಿಗೆ ರಸಯಾತ್ರೆ ಹೊರಟದ್ದುವು. ಮಾನಸಗಂಗೋತ್ರಿ ಎಂಬ ಹೆಸರನ್ನು ಕೊಟ್ಟವರೂ, ಆ ಪ್ರದೇಶವನ್ನು ಆರಿಸಿದವರೂ ರಾಷ್ಟ್ರಕವಿ ಕುವೆಂಪುರವರೇ ಆಗಿದ್ದರು. ಒಂದು ವರ್ಷಕಾಲ ಅನಧಿಕೃತ ಮುಖ್ಯಸ್ಥರಾಗಿರಬೇಕಾಯಿತು. ಅಧಿಕೃತವಾಗಿ ಕನ್ನಡದ ಪ್ರಾಧ್ಯಾಪಕರಾಗಿ ಜವರೇಗೌಡರು ಅಧಿಕಾರಾರೂಢರಾದರು ೧೯೬೬ರಲ್ಲಿ. ಅಲ್ಲಿಂದ ಈಚೆಗೆ ಕೇವಲ ನಾಲ್ಕೈದು ವರ್ಷಗಳ ಅವರ ಸುಸಮರ್ಥ ನೇತೃತ್ವದಲ್ಲಿ ಕನ್ನಡ ಇಲಾಖೆ ಸಾಧಿಸಿದ ಪ್ರಗತಿ, ನಿರ್ಮಿಸಿದ ನೂತನ ದಾಖಲೆ, ಬೃಹದಾಕಾರವಾಗಿ ಬೆಳೆದ ಬಗೆ – ಇವು ಕನ್ನಡದ ಅಭಿಮಾನಿಗಳೆಲ್ಲ ಬಲ್ಲ ಸಂಗತಿಗಳು.

ದೇಜಗೌ ಅವರು ಪ್ರ. ಕ. ದ ಪ್ರಧಾನ ಸಂಪಾದಕರಾಗಿ ಅದರ ಅಂದಚಂದಗಳನ್ನಷ್ಟೇ ಅಲ್ಲದೆ ಆಂತರಿಕ ಮೌಲ್ಯವನ್ನೂ, ಪುಟ ಸಂಖ್ಯೆಯನ್ನು ದಿನೇದಿನೇ ಹೆಚ್ಚಿಸಿದ್ದಾರೆ. ಡಾ. ಹಾ. ಮಾ. ನಾಯಕರೊಡನೆ ಸಂಪಾದಕರಾಗಿ Kannada Studies ಎಂಬ ಇಂಗ್ಲಿಷ್ ಪತ್ರಿಕೆಯನ್ನು ಬೇರೆ ನಡಸುತ್ತಿದ್ದಾರೆ. ಮೈಸೂರು ರಾಜ್ಯ ಸರಕಾರದ ನೆರವಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿ

ರುವ ಕನ್ನಡ – ಕನ್ನಡ ನಿಘಂಟಿನ ಸದಸ್ಯರಾಗಿದ್ದು ಈಗ ಅದರ ಉಪಾಧ್ಯಕ್ಷರಾಗಿದ್ದುಕೊಂಡು ನಿಘಂಟಿನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಹಿಂದೆ ಪ್ರಕಟಿಸಿದ್ದ ಇಂಗ್ಲಿಷ್–ಕನ್ನಡ ನಿಘಂಟಿನ ಪರಿಷ್ಕಾರ ಕಾರ್ಯ ಈಗ ನಡೆಯುತ್ತಿದ್ದು ಅದರ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಹಲವು ಶಾಖೋಪಶಾಖೆಗಳನ್ನೊಳಗೊಂಡಿರುವ ಕನ್ನಡ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ಅದರ ನಿರ್ದೇಶಕರಾಗಿದ್ದಾರೆ. ಪ್ರಾಚ್ಯ ಕೋಶಾಗಾರದಲ್ಲಿ ಇದುವರೆಗೂ ಇದ್ದ ಕನ್ನಡ ವಿಭಾಗ ಎಲ್ಲ ಕನ್ನಡ ಓಲೆಗರಿಗಳೊಡನೆ ಈಗ ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಸುರಕ್ಷಿತವಾಗಿ ಕಾರ್ಯ ಮಾಡ ತೊಡಗಿದೆ. ದಾಸ ಸಾಹಿತ್ಯಾಭ್ಯಾಸದ ಶಾಖೆ, ಜನಪದ ಸಾಹಿತ್ಯ ಸಂಶೋಧನ ವಿಭಾಗ, ಭಾಷಾಂತರ ವಿಭಾಗ, ಭಾಷಾವಿಜ್ಞಾನ ವಿಭಾಗ, ಹೀಗೆ ಹತ್ತಾರು ಭಾಗವಿಭಾಗಗಳು ಕನ್ನಡ ಅಧ್ಯಯನ ಸಂಸ್ಥೆಯ ವೈಶಾಲ್ಯವನ್ನು ಬಿತ್ತರಿಸುತ್ತಿವೆ. ಜವರೇಗೌಡರು ಪ್ರಾಧ್ಯಾಪಕ ಪದವಿಯನ್ನು ಪಡೆದಾಗ ಕನ್ನಡ ವಿಭಾಗದಲ್ಲಿ ಇದ್ದವರು ಆರು ಜನ ಅಧ್ಯಾಪಕರು. ಈಗ ಕನ್ನಡ ವಿಭಾಗ ಇಪ್ಪತ್ತಾರು ಜನರ ದಷ್ಟಪುಷ್ಟ ಸದೃಢ ಸಂಪನ್ನ ಗೌರವದ ಇಲಾಖೆಯಾಗಿದೆ. ದೇಜಗೌ ಅವರ ಸಹೋದ್ಯೋಗಿಗಳಾಗಿ ನೆರವಿಗೆ ನಿಂತು ಕನ್ನಡದ ಕಾರ್ಯಕ್ಕೆ ಹೆಗಲು ಕೊಟ್ಟಿರುವ ಒಬ್ಬೊಬ್ಬರ ಹೆಸರೂ ಹೆಮ್ಮೆ ಮೂಡಿಸುತ್ತದೆ. ಪ್ರಾ. ಡಾ. ಹಾ. ಮಾ. ನಾಯಕ, ಡಾ. ಎಲ್. ಬಸವರಾಜು, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ. ಪ್ರಭುಶಂಕರ, ಡಾ. ಎಂ. ಚಿದಾನಂದಮೂರ್ತಿ, ಶ್ರೀ ಎಸ್. ನಾರಾಯಣಶೆಟ್ಟಿ, ಶ್ರೀ ಸಿ. ಪಿ. ಕೃಷ್ಣಕುಮಾರ ಮುಂತಾದವರು ಯಾವುದೇ ಸಂಸ್ಥೆಯ ಅಭಿಮಾನವನ್ನು ಉಕ್ಕಿಸುವ ಗೌರವವನ್ನು ಮೂಡಿಸುವ ಕನ್ನಡದ ಓಜರು. ಇವರ ಮತ್ತು ಇತರರ ಸ್ನೇಹ ಸಹಾಯ ಸಹಕಾರಗಳಿಂದ ಜವರೇಗೌಡರಿಗೆ ಮತ್ತಷ್ಟು ಬಲ, ಬೆಂಬಲ, ಸ್ಫೂರ್ತಿದೊರೆತಂತಾಗಿದೆ. ಇಂಥ ಪೂರಕ ಪರಿಸರ ಅವರ ದಕ್ಷ ಆಡಳಿತಕ್ಕೆ ಕೋಡುಮೂಡಿಸಿದೆ. ತಮ್ಮ ಸಮರ್ಥ ಆಡಳಿತ ನಿರ್ವಹಣೆಯಲ್ಲಿ ಅವರು ತೋರುವ ದೂರದೃಷ್ಟಿ ವಿವೇಕ ಹಲವರ ಪ್ರಶಂಸೆಗೆ ಪಾತ್ರವಾಗಿದೆ.

ಮಹಾರಾಜಾ ಕಾಲೇಜಿಗೆ ಒಂದು ನೂರು ವರ್ಷಗಳ ಹೆಮ್ಮೆಯ ಇತಿಹಾಸವಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅರ್ಧ ಶತಮಾನಕ್ಕೂ ಹೆಚ್ಚಿನ ಹಿನ್ನೆಲೆಯಿದೆ. ಆದರೆ ಅದರಲ್ಲಿ ಕನ್ನಡಕ್ಕೊಂದು ಪ್ರತ್ಯೇಕವಾದ ವಿಶಿಷ್ಟವಾದ ಇತಿಹಾಸ ಪ್ರಾರಂಭವಾದುದು ಕೇವಲ ನಲವತ್ತೆರಡು ವರ್ಷಗಳಿಂದೀಚೆಗೆ. ಹಿಂದಿನವರು ಕನ್ನಡಕ್ಕೆ ನೆಲೆಬೆಲೆಗಳು ಸ್ಥಾನಮಾನಗಳು ಅಷ್ಟಾಗಿ ಇಲ್ಲದ ದುರ್ದಿನಗಳಲ್ಲಿ ದುಡಿದ ದೊಡ್ಡವರು; ಅವರ ದೈಹಿಕ ದುಡಿಮೆಯೂ ಕಡಮೆಯಿರಲಿಲ್ಲ. ಕನ್ನಡ ನಾಡಿನ ಮೂಲೆಯಿಂದ ಮೂಲೆಗೆ, ದೂರದಿಂದ ದೂರಕ್ಕೆ, ಊರಿಂದೂರಿಗೆ ಅಲೆದಲೆದು ಕನ್ನಡದ ಕಹಳೆಯನ್ನು ಮಾರ್ಮೊಳಗಿಸಿದ ಗುರುಶಿಷ್ಯ ಪರಂಪರೆಯನ್ನು ಯಾರೂ ಮರೆಯುವಂತಿಲ್ಲ. ಅವರೆಲ್ಲರ ವೈಯಕ್ತಿಕ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಇಂದು ಕನ್ನಡಕ್ಕೆ ಅಂದಿನ ದುಸ್ಥಿತಿಯಿಲ್ಲ. ಕನ್ನಡಕ್ಕೆ ಸಲ್ಲಬೇಕಾದ ಎಲ್ಲ ಯೋಗ್ಯ ಪುರಸ್ಕಾರ ಪ್ರಾಪ್ತವಾಗುವುದಕ್ಕೆ ತಕ್ಕ ಕಸಿ ನಡೆದಿದೆ. ಅದರಿಂದಾಗಿ ಕನ್ನಡ ಕೆಸುವು ಪಡೆದಿದೆ, ಅವರಿಂದಾಗಿ ಕನ್ನಡ ಗೆಲವು ಕಂಡಿದೆ. ಇಂಥ ಶ್ರೇಯಸ್ಸಿಗಾಗಿ ಶ್ರಮಿಸಿದ ಶ್ರೀಯುತರು ಹಲವರು.

ವಾಸ್ತವವಾಗಿ ಅದರ ಅಂಕುರಾರ್ಪಣೆಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಮಾಡಿದವರು ಬಿ. ಎಂ. ಶ್ರೀ. ಯವರು. ಅವರು ಅಂದು ಆಡಿದ ಸರ್ವೋತ್ಕೃಷ್ಟ ನಾಂದಿಯಿಂದ ಆರಂಭವಾದ ಕನ್ನಡ ವಿಭಾಗ ಅವರ ಶ್ರೇಷ್ಠ ಸಹೋದ್ಯೋಗಿ ತಳುಕಿನ ವೆಂಕಣ್ಣಯ್ಯನವರ ತ್ಯಾಗಮಯವಾದ ಆದರ್ಶ ಜೀವನದಿಂದ ಕನ್ನಡದ ನೆಲದಲ್ಲಿ ಕನ್ನಡದ ಕಾಳೊಂದು ಬಿತ್ತನೆ ಪಡೆಯಿತು. ಅವರ ಅನಂತರ ಪ್ರಾಧ್ಯಾಪಕರಾಗಿ ಬಂದ ಕೃಷ್ಣಶಾಸ್ತ್ರಿಗಳ ಕಾಲದಲ್ಲಿ ಕನ್ನಡದ ಕಾಳು ಮೊಳಕೆಯೊಡೆಯಿತು. ಅವರ ಶಿಷ್ಯಪರಂಪರೆಯ ಮೂಲಕ ಈ ಕುಡಿ ದಾಂಗುಡಿಯಿಟ್ಟು ಬೆಳೆಯಲಾರಂಭಿಸಿತು. ಅವರಲ್ಲಿ ಮಹಾಕವಿ ಕುವೆಂಪುರವರ ಹೆಸರಂತೂ ಪ್ರಪ್ರಥಮವಾಗಿ ಹೇಳಲೇಬೇಕಾದುದು. ಕನ್ನಡ ನಾಡಿನ ವಿದ್ಯಾ ಇಲಾಖೆಯಲ್ಲೇ ಕನ್ನಡಕ್ಕೊಂದು ಕೋಡು ಮೂಡಿದ್ದು ರಾಷ್ಟ್ರಕವಿ ಕುವೆಂಪುರವರ ಕಾಲದಲ್ಲಿ. ಕನ್ನಡಿಗರ ಅಸ್ತಿತ್ವಕ್ಕೆ ಅನಂತಕಾಲ ಅಗತ್ಯವಾದ ಕನ್ನಡ ಕೋಟೆಯನ್ನು ಕಟ್ಟಿದ ಕೀರ್ತಿ ಕುವೆಂಪುರವರದು. ಅವರು ಹಂತಹಂತವಾಗಿ ಕನ್ನಡದ ಪುರೋಭಿವೃದ್ಧಿಯನ್ನು ಸಾಹಸದಿಂದ ವ್ಯಕ್ತಿಮಹಿಮೆಯಿಂದ ಸಾಧಿಸಿದರು. ಸಾಮಾನ್ಯ ಅಧ್ಯಾಪಕ ಪದವಿಯಿಂದ ವಿಶ್ವವಿದ್ಯಾನಿಲಯದ ಅತ್ಯುಚ್ಚ ಗೌರವ ಸ್ಥಾನವಾದ ಉಪಕುಲಪತಿಯತನಕ ದಿನೇದಿನೇ ಶುಕ್ಲಪಕ್ಷದ ಚಂದ್ರನಂತೆ ವರ್ಧಿಸಿದ 'ಕಿಶೋರ ಚಂದ್ರಕವಿ' ಕುವೆಂಪುರವರು ಕನ್ನಡದ ಕಿರೀಟವಾಗಿ ಶೋಭಿಸಿದರು. ಅವರು ಕನ್ನಡಕ್ಕೆ ವಿಶ್ವವಿದ್ಯಾವರಣದಲ್ಲಿ ಅದುವರೆಗೆ ಅಲ್ಲಲ್ಲಿ ಅನವಶ್ಯಕವಾಗಿ ಅಡಗಿದ್ದ ಅಸಡ್ಡೆಯನ್ನು ನೀಗಿದರು,

ಕನ್ನಡದ ಕಾಳು ಕುಡಿಯಿಟ್ಟು ಚಿಗುರ ತೊಡಗಿದ್ದುದು ಇವರ ಅಧಿಕಾರಾವಧಿಯಲ್ಲಿ ತೋರನುರನಾಗಿ ಬೆಳೆಯಿತು. ಆ ಕನ್ನಡ ವೃಕ್ಷಕ್ಕೆ ಆಚಾರ್ಯದ್ವಯರಾದ ತೀನಂಶ್ರೀ ಮತ್ತು 'ದೊಲನ'ರವರು ಅಗತ್ಯವಾದ ಪಾಂಡಿತ್ಯದ ಬಲ ನೀಡಿ ಅದು ಪ್ರಬಲವಾಗುವಂತೆ ಮಾಡಿದರು. ಹೀಗಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಕನ್ನಡ ಪ್ರಾಧ್ಯಾಪಕ ಸ್ಥಾನ ಒಂದು ಪರಂಪರಾಗತವಾದ ಪಾವಿತ್ರ್ಯವನ್ನು ಪಡೆದ ಪೀಠವಾಗಿದೆ. ಆ ಪೀಠಪರಂಪರೆಯನ್ನು ಚೆನ್ನಾಗಿ ಬಲ್ಲವರು ಸಾಕಷ್ಟು ಅಪೂರ್ವ ಅಂತಸ್ಸತ್ವವಿದ್ದ ಹೊರತು ಅದನ್ನು ಅಡರುವ ಸಾಹಸ ಮಾಡರು.

ದೇಜಗೌ ಅವರು ಪಾಂಡಿತ್ಯ ಪ್ರತಿಭೆ ಪರಿಶುದ್ಧತೆಗಳ ಹಿರಿಮೆ ಹೊತ್ತ ಹಿರಿಯ ಗುರುಗಳ ಬಳಿ ಕಲಿತು ದೊಡ್ಡ ಗರಡಿಯಲ್ಲಿ ಪಳಗಿ ಬೆಳಗಿದವರು. ಬಿಎಂಶ್ರೀ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃ., ಕುವೆಂಪು, ತೀನಂಶ್ರೀ, ದೊಲನರವರಂಥ ಗುರುಶ್ರೇಷ್ಠರ ಶಿಷ್ಯರೆಂದ ಮೇಲೆ ಮತ್ತೇನು ಪ್ರಶಸ್ತಿಬೇಕು? ಅವರು ಪ್ರಾಧ್ಯಾಪಕರಾಗಿ ನೇಮಕವಾದಂದಿನಿಂದ ಈಚೆಗೆ ಸಾಧಿತವಾಗಿರುವ ಕೇವಲ ಐದು ವರ್ಷಗಳ ಸಾಧನೆಯಷ್ಟೇ ಸಾಕು ಅವರ ಬಹುಮುಖ ವ್ಯಕ್ತಿತ್ವದ ದರ್ಶನಕ್ಕೆ. ಕುವೆಂಪುರವರು ಕಟ್ಟಿದ ಕನ್ನಡದ ಕೋಟೆಯನ್ನೂ ಇಂದು ಅಭೇದ್ಯವಾದ ವಜ್ರಖಚಿತ ಕನ್ನಡ ಕೋಟೆಯಾಗುವಂತೆ ಶಕ್ತಿದಾನ ಮಾಡಿ ಶ್ರಮಿಸುತ್ತಿರುವವರು ದೇಜಗೌ ಅವರು. ಪ್ರಾ. ದೇಜಗೌ ಅವರ ದಕ್ಷ ನೇತೃತ್ವದಲ್ಲಿ ಇಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆ ಹತ್ತಾರು ಹೊಸಹೊಸ ದಾಖಲೆಗಳನ್ನು ಸ್ಥಾಪಿಸುತ್ತಾ ಸರ್ವತೋಮುಖ ಅಭಿವೃದ್ಧಿ ಹೊಂದುತ್ತಿದೆ. ಕನ್ನಡದ ಕಲ್ಪವೃಕ್ಷ ಸುಪಕ್ವ ಅಮೃತ ಫಲಗಳನ್ನು ಕೊಡತೊಡಗಿವೆ. ಕನ್ನಡಕ್ಕೆ ಸರ್ವಮಾನ್ಯತೆ ದೊರೆಯುವಂತೆ ಮಾಡಿ, ಕನ್ನಡದ ಕೂಗು ಎತ್ತರದಲ್ಲಿ ನಿನದಿಸುವಂತೆ ವ್ಯವಸ್ಥೆಗೊಳಿಸಿದವರು ಗೌಡರು. ಕನ್ನಡದ ಬಗೆಗೆ ಗೌಡರು ಬೆಳಸಿಕೊಂಡ ಆಳವಾದ ಅವ್ಯಾಜ ಅಹೇತುಕ ಒಲವು ಅವರನ್ನು ಎಷ್ಟುದೂರ ಒಯ್ದಿದೆಯೆಂಬುದು ಒಂದು ಸುದೀರ್ಘ ಕಥನ. ಕನ್ನಡಕ್ಕಾಗಿ ಅವರು ತಮ್ಮನ್ನು ತಾವು ಅರ್ಪಿಸಿಕೊಂಡುಬಿಟ್ಟರೆಂಬುದು ಸಾಸಿವೆಯಲ್ಲಿ ಸಾಗರವನ್ನು ಸೆರೆಹಿಡಿದುಕೊಟ್ಟಂತೆ ಸಂಗ್ರಹವಾಗಿ ಹೇಳಿದ ಮಾತಾದೀತು. ಈ ಕನ್ನಡ ಪ್ರೇಮ ಕನ್ನಡ ದೀಕ್ಷೆ ಕುವೆಂಪು ದತ್ತ ದೇಣಿಗೆ ದೇಜಗೌ ಅವರಿಗೆ. ಜವರೇಗೌಡರ ಮೇಲೆ ಕುವೆಂಪು ಬೀರಿದ ಪ್ರಭಾವ ಅನ್ಯಾದೃಶವಾದದ್ದು. ದೇಜಗೌ ಅವರ ಕಳೆದ ಮೂರು ದಶಕಗಳ ಅಖಂಡ ತಪಸ್ಸು ಅದಕ್ಕೊಂದು ಉಜ್ವಲ ಜ್ವಲಂತ ನಿದರ್ಶನ. ಮಹಾಕವಿ ಕುವೆಂಪು ಹಾಗೂ ಮಹಾಸಾಧಕ ದೇಜಗೌರವರ ಸಂಬಂಧವನ್ನು ಕಂಡಾಗ ಸ್ಮರಿಸಿದಾಗ ಪಕ್ಕನೆ ನೆನಪಾಗುವ ಗುರುಶಿಷ್ಯ ಜೋಡಿಯೆಂದರೆ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರ ಸಂಬಂಧ. ಈ ಹೋಲಿಕೆ ಬಾಹ್ಯನೋಟಕ್ಕೆ ತಕ್ಷನೆ ತೋರಿದ ಪೋಣಿಸುವಿಕೆಯಾಗಿ ಕಂಡರೂ ಸಾವಧಾನದ ಸಮೀಕ್ಷೆಗೆ ಈ ಸಾದೃಶ್ಯದ ಸೊಗಸು ಔಚಿತ್ಯ ಭಾಸವಾಗುತ್ತದೆ.

ಪ್ರಾ. ದೇಜಗೌ ಅವರು ಸ್ವಾಭಾವಿಕವಾಗಿ ಅತ್ಯಂತ ಸರಳರು, ತೀರ ನಿರಾಡಂಬರರು. ವೇಷಭೂಷಣಗಳಲ್ಲಿ ಅಲಂಕಾರ, ಆಡಂಬರ ಅಲ್ಪಸ್ವಲ್ಪವೂ ಇಲ್ಲ. ಸ್ನಾತಕೋತ್ತರ ತರಗತಿಗಳ ಪ್ರಮುಖ ಪ್ರಾಧ್ಯಾಪಕರಾದರೂ, ಸುಮಾರು ಮುಕ್ಕಾಲು ಶತಮಾನದ ಇತಿಹಾಸವಿರುವ ಶ್ರೇಷ್ಠ ಮೈಸೂರು ವಿಶ್ವವಿದ್ಯಾನಿಲಯದ ಕಲಾವಿಭಾಗಕ್ಕೆ 'ಡೀನ್' ಆಗಿದ್ದರೂ ಅವರ ಉಡುಪು ಶ್ರೀ ಸಾಮಾನ್ಯನಂತೆಯೇ ಸಾದಾ. ಕೆಲಸಕ್ಕೆ ಸೇರಿದ ಹೊಸದರಲ್ಲಿ ಸೂಟ್ ಹಾಕುತ್ತಿದ್ದರು. ಅನಂತರ ಕ್ಲೋಸ್‌ಕಾಲರ್ ಕೋಟು ತೊಡುತ್ತಿದ್ದರು; ಈಗಲೂ ಒಮ್ಮೊಮ್ಮೆ ಇದನ್ನು ಧರಿಸುತ್ತಾರೆ. ಆದರೆ ಈಗ ಬಹುವಾಗಿ ಬುಷ್‌ಶರಟು ಪ್ಯಾಂಟು–ಇದಿಷ್ಟೇ ಅವರ ಉಡಿಗೆ ತೊಡಿಗೆ. ದೇಜಗೌರವರು ಸರಸ ಸಜ್ಜನಿಕೆಗಳಿಗೆ ಹೆಸರಾಂತವರು. ಮಾತುಕತೆಯಲ್ಲಿ ತುಂಬ ಸರಸ. ನಡುನಡುವೆ ನವಿರಾದ ವಿನೋದ. ಅವರ ಅಂತರಂಗವನ್ನು ಚೆನ್ನಾಗಿ ಅರಿತವರು ಯಾರೂ ಅವರಿಂದ ದೂರ ಸರಿಯರು. ಅದಕ್ಕೂ ಒಂದು ಹೆಜ್ಜೆ ಮುಂಬರಿದು ಅವರ ಮನೋಧರ್ಮವನ್ನು ಅರ್ಥಮಾಡಿಕೊಂಡವರು ಯಾರೂ ಅವರನ್ನು ಮರೆಯರು. ಇದರ ಇನ್ನೂ ಹೆಚ್ಚಿನ ಮತ್ತೊಂದು ಸೊಗಸೆಂದರೆ ಅಪರಿಚಿತರೂ ಅವರ ಬಳಿ ಸುಳಿದ ಕೆಲವೇ ನಿಮಿಷಗಳಲ್ಲಿ ಸುಪರಿಚಿತರಂತೆ ಆತ್ಮೀಯ ಭಾವನೆ ತಳೆಯುತ್ತಾರೆ. ಜವರೇಗೌಡರ ಮತ್ತೊಂದು ಹೆಚ್ಚಳವೆಂದರೆ ಅವರಿಗೆ ಕಿರಿಯರ ಅಭ್ಯುದಯದಲ್ಲಿರುವ ಆಸಕ್ತಿ. ಅವರಿಗೆ ಕಾರ್ಯನಿರತ ತರುಣರನ್ನು ಕಂಡರೆ ತುಂಬ ವಿಶ್ವಾಸ. ಕನ್ನಡಕ್ಕೊಂದು ಗಂಡುಮೆಟ್ಟಿನ ದಂಡು ಕಟ್ಟುವ ಸಿಪಾಯಿ ಕೆಲಸ ಮಾಡಲು ಹೊರಟಿರುವುದೇ ಇದಕ್ಕೆ ಹಿನ್ನೆಲೆ. ಗೌಡರು ಸ್ವಭಾವತಃ ಮೃದು; "ಮೃದೂನಿ ಕುಸುಮಾದಪಿ". ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯ. ಆದರೆ ಕನ್ನಡಕ್ಕೆ ವಿರೋಧಿಗಳನ್ನೂ ವಿರೋಧವನ್ನೂ ಕಂಡಾಗ ಕಠಿಣರು, "ಕಠೋರಾಣಿ ವಜ್ರಾದಪಿ"; ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್. ಕನ್ನಡದ

ಅಭ್ಯುದಯದ ಹಾದಿಯಲ್ಲಿ ಕನ್ನಡಿಗರೇ ಕಂಟಕರಾಗಿರುವುದು ಕನ್ನಡಿಗರಿಗೊಂದು ಅಭಿಶಾಪ. ಅಂಥವರ ತರಾಟೆಗೆ ಸಂದರ್ಭ ಬಂದಾಗ ಗೌಡರು ರುದ್ರಾವತಾರಂ ಗ.ಡ, ನೊಸಲೊಳ್ ಕಣ್ ಗ.ಡ. ಕನ್ನಡಕ್ಕಾಗಿ ಜೋಗದ ಜಲಪಾತದಂತೆ ಭೋರ್ಗರೆವ ಧೈರ್ಯಸ್ಥೈರ್ಯಗಳನ್ನು ಕಂಡು ವಿರೋಧಿಗಳು ತಲ್ಲಣಿಸುವರು. ಕನ್ನಡಕ್ಕೆ ದ್ರೋಹ ಬಗೆಯುವ ದ್ರೋಹಿಗಳನ್ನು ಎದುರಿಸುವ ಪ್ರಸಂಗ ಬಂದಾಗ ಅವರು ಕೆರಳಿದ ಕಾಳಿಂಗ. ಆದರೆ ಅಕುಟಿಲ ಸ್ನೇಹ ಸೌಜನ್ಯಗಳಿಂದ ಸಭ್ಯರಾಗಿ ವರ್ತಿಸುವರೊಡನೆ ಅವರು ಸದಾ ಅರಳಿದ ಬಾಸಿಂಗ. "ಸಾಹಿತ್ಯ ಸೃಷ್ಟಿಗಿಂತ ಕನ್ನಡ ಪ್ರಚಾರ ಜರೂರಿನ ಕಾರ್ಯವಾಗಿದೆ. ಕನ್ನಡ ಉಳಿದರೆ ಸಾಹಿತ್ಯವು ಉಳಿದೀತು, ಅದು ಅಳಿದರೆ ಸಾಹಿತ್ಯ ಅಳಿದೀತು. ರಾಷ್ಟ್ರಾಭ್ಯುದಯ ಆತ್ಮವಿಶ್ವಾಸವುಳ್ಳ ತರುಣರನ್ನವಲಂಬಿಸಿದೆ; ಪರಭಾಷಾ ಮಾಧ್ಯಮದಿಂದ ಅವರ ಆತ್ಮವಿಶ್ವಾಸ ಕುಸಿದು ಬೀಳುತ್ತಿದೆ. ಪರಕೀಯರಿಂದ ಬುದ್ಧಿ ಮಾತ್ರವಲ್ಲ, ಗಂಡಸುತನವನ್ನು ಎರವು ಪಡೆಯುತ್ತಿರುವ ಸ್ವಾರ್ಥಿಗಳಿಂದ ಪಟ್ಟಭದ್ರ ಹಿತಾಸಕ್ತರಿಂದ ಕನ್ನಡದ ಕೊಲೆಯಾಗುತ್ತಿದೆ ; ಕನ್ನಡದ ಅವನತಿ ಕನ್ನಡಿಗರ ಅವನತಿಯಾಗುತ್ತದೆ. ಇದೇ ನಿಜದ ನೆಲೆ. ಈ ನೆಲೆಯ ನೆಲೆ ತಿಳಿದಂದಿನಿಂದ ಕನ್ನಡಕ್ಕಾಗಿ ತನು ತೆತ್ತಿದ್ದೇನೆ, ಮನ ತೆತ್ತಿದ್ದೇನೆ, ಧನ ತೆತ್ತಿದ್ದೇನೆ. ಕನ್ನಡವೆಂಬ ತ್ರ್ಯಕ್ಷರಿಯೆ ನನ್ನ ಗಾಯತ್ರಿ; ಕನ್ನಡವೇ ನನ್ನ ತಾಯಿತಂದೆ, ಅದೇ ನನ್ನ ಬಂಧು ಬಳಗ, ಅದೇ ನನ್ನ ಜಾತಿ, ಅದೇ ನನ್ನ ಗತಿಮತಿ. ಯಾವ ಸಭೆಯಲ್ಲಿಯೇ ಆಗಲಿ, ಯಾರ ಸಮ್ಮುಖದಲ್ಲಿಯೇ ಆಗಲಿ, ಕೇಳದು ಕನ್ನಡವನ್ನು ಹೀಗಳೆದರೆ ನಾನು ನನ್ನ ಹೆಸರನ್ನು [ಜವರೇಗೌಡ] ಸಾರ್ಥಕಪಡಿಸಿಕೊಂಡೇನು! ಕನ್ನಡದ ಗೆಲ್ಲಕ್ಕಾಗಿ ಎಂಥ ಅವಮಾನವನ್ನಾದರೂ ಸಹಿಸಿಯೇನು. ನನಗಾಗಿ ನಾನು ಸಾಧಿಸಬೇಕಾದ್ದೇನೂ ಇಲ್ಲ; ಮುಂದಿನ ಪೀಳಿಗೆಗಾಗಿ ನಾಡಿನ ಹಿತಕ್ಕಾಗಿ ಕನ್ನಡದ ಬಾವುಟವನ್ನೇರಿಸಿ ಹಾರಿಸಬೇಕಾಗಿದೆ. ಈ ಬಾವುಟದ ರಕ್ಷಣೆಗಾಗಿ ಪ್ರಾಣಕೊಡಲು ಸಿದ್ಧ. ಕನ್ನಡಕ್ಕಾಗಿ ವಿಪತ್ತೊದಗಿದಾಗ ಮಹಾಕಾಳಿ ಮೈದುಂಬಿದಂತಾಗುತ್ತದೆ; ನಾರಸಿಂಹ ಮೈಮೇಲೆ ಬಂದಂತಾಗುತ್ತದೆ. ಇಲ್ಲಿಯ ತನಕ ದಂಡೋಪಾಯದಿಂದಲೇ ಕನ್ನಡಕ್ಕೆ ಸ್ಥಾನಮಾನಗಳನ್ನು ಸಂಪಾದಿಸಿದಂತಾಗಿದೆ. ಶಠರಿಗೆ ಶಾಠ್ಯವೇ ಮದ್ದು ; ಅವರು ಅಧಿಕಾರಾರೂಢರಾಗಿರುವ ತನಕ ಸಾಮದಾನಗಳಿಗೆ ವಿನಯಕ್ಕೆ ಬೆಲೆಯಿಲ್ಲ. ಸಾಮದ ಮೂಲಕ ಹತ್ತು ವರ್ಷಗಳಲ್ಲಿ ಸಾಧಿಸಬಹುದಾದ್ದನ್ನು ದಂಡದ ಮೂಲಕ ಒಂದು ದಿನದಲ್ಲಿ ಸಾಧಿಸಬಹುದಾದರೆ ಅದೇ ಗ್ರಾಹ್ಯ : ಉಳಿದದ್ದು ತ್ಯಾಜ್ಯ. ಇದು ನನಗೆ ತಿಳಿದಿರುವ ನೀತಿಸೂತ್ರ, ಕನ್ನಡದ ಹಗೆ ನನಗೆ ಹಗೆ – ಅವನು ಬಂಧುವಾಗಲಿ ಮಂತ್ರಿಯಾಗಲಿ ಯಾರೇ ಆಗಿರಲಿ. ಕನ್ನಡಕ್ಕೆ ವಿರೋಧ ವೊದಗಿದಾಗ ಕನ್ನಡದ ಆಚಾರ್ಯರ ಆಶೀರ್ವಾದದಿಂದ ಬುಲ್‌ಡೋಜರಂತೆ ನುಗ್ಗುತ್ತೇನೆ"– [ದೇಜಗೌ – ವ್ಯಕ್ತಿ ಮತ್ತು ಸಾಹಿತ್ಯ : ಪುಟ ೩೧]

ಆದುದರಿಂದಲೇ ಜವರೇಗೌಡರು ಶತ್ರು ಭಯಂಕರರೆಂದೂ, ಮಿತ್ರಶಂಕರರೆಂದೂ ಕೀರ್ತಿತವಾಗಿರುವುದು. ಕನ್ನಡಕ್ಕಾಗಿ ಈ ತಕುಲಾತಿ, ಕಳಕಳಿ, ವೀರನಿಷ್ಠೆ ಅನತ್ರ ದುರ್ಲಭ. ಇಂದು ಅವರನ್ನು ಒಂದಲ್ಲ ಒಂದು ಕ್ಷೇತ್ರದಲ್ಲಿ ಸ್ಥಾನ ಗೌರವದಲ್ಲಿ ಗುರುತಿಸದವರಿಲ್ಲ. ವಿಶಾಲ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ದೇ.ಜ.ಗೌ. ಅವರದು ಅತ್ಯಂತ ಎತ್ತರದ ಮನ್ನಣೆಯ ಹೆಸರು. ಪಾಂಡಿತ್ಯ ಪ್ರಪಂಚದಲ್ಲಂತೂ ಅವರದು ಗೌರವಾರ್ಹ ಅಭಿದಾನ. ವಿದ್ವಾಂಸರ ಮಂಡಲಿಯಲ್ಲಿ ಅವರಿಗೆ ವಿಶೇಷ ಮಾನ್ಯತೆ; ಕನ್ನಡಿಗರ ಅಭಿಮಾನಕ್ಕೆ ಪಾತ್ರರಾದವರ ಶ್ರೇಣಿಯಲ್ಲಿ ಅಗ್ರತೆ.

ಪ್ರಾ. ದೇಜಗೌರವರ ಸಾಹಿತ್ಯ ಸೃಷ್ಟಿಯೂ ಸಮೃದ್ಧವಾಗಿದೆ. ಅವರ ಮೂವತ್ತಕ್ಕೂ ಮಿಕ್ಕಿದ ಕೃತಿಗಳು, ಸುಮಾರು ನೂರು ಲೇಖನಗಳು ಈ ಮಾತಿಗೆ ಕನ್ನಡಿ ಹಿಡಿದು ತೋರಿಸುತ್ತವೆ. ಬದುಕಿನ ಹಲವು ಮುಖಗಳ ಸಾರವತ್ತಾದ ಅನುಭವದತ್ತವಾದ ಜ್ಞಾನಪಾಕದಿಂದ, ನೂರಾರು ವ್ಯಕ್ತಿ ಶಕ್ತಿಗಳ ಸಂಘ ಸಂಸ್ಥೆಗಳ ನಿಕಟ ಸಂಪರ್ಕದಿಂದ ಅವರ ಬರವಣಿಗೆಗೆ ವಿಶಿಷ್ಟ ಮೊನಚು ಬಂದಿದೆ. ಮಕ್ಕಳಿಂದ ಮುದುಕರವರೆಗೆ, ಅನುವಾದದಿಂದ ಸ್ವತಂತ್ರ ಕೃತಿಯವರೆಗೆ, ಜೀವನ ಚರಿತ್ರೆಯಿಂದ ಕವಿಕಾವ್ಯ ವಿಮರ್ಶೆಯವರೆಗೆ ಅವರ ಬರಹ ಹಬ್ಬಿದೆ. ಜವರೇಗೌಡರು ಆದರ್ಶ ಅಧ್ಯಾಪಕರು, ಸಮರ್ಥ ಪ್ರಾಧ್ಯಾಪಕರು, ದಕ್ಷ ಆಡಳಿತಗಾರರು, ಮೇಲ್ಮಟ್ಟದ ಅನುವಾದಕರು, ನಿರ್ಮತ್ಸರ ವಿಮರ್ಶಕರು, ಸಂಶೋಧಕರು ಹಾಗೂ ಸಹೃದಯರು. ಜವರೇಗೌಡರು ಅನುವಾದ ಮಾಡಿರುವ ಹೊತ್ತಗೆಗಳು ಒಟ್ಟು ನಾಲ್ಕು: ನೆನಪು ಕಹಿಯಲ್ಲ (೧೯೬೧), ಹಮ್ಮು-ಬಿಮ್ಮು (೧೯೬೧), ಅಕ್ಬರ್ (೧೯೬೩), ಮತ್ತು ಪುನರುತ್ಥಾನ (೧೯೬೫). ಭಾಷಾಂತರ ಕಷ್ಟ ಸಾಧ್ಯ ಕೆಲಸವೆಂಬುದನ್ನು ನೆನಪಿನಲ್ಲಿಡಬೇಕು. ಭಾಷಾಂತರಕ್ಕೂ ಲೇಖಕನಿಗೆ ಬಹಳ ಶಕ್ತಿಯಿರಬೇಕು. ಅಲ್ಲದೆ ಅತ ಅದಕ್ಕೆ ತುಂಬ ಸಿದ್ಧತೆ ಮಾಡಿಕೊಳ್ಳಬೇಕು. ಭಾಷಾಂತರವೆಂಬುದು ಪರಕಾಯ ಪ್ರವೇಶದಂತೆ ಕಠಿಣತರ ಹಾಗೂ ಜವಾಬ್ದಾರಿ

ಯುತ ಪವಿತ್ರ ಕಾಯಕ. ಈ ಕಾಯಕದಲ್ಲಿ ಅನುವಾದಕ ಎಚ್ಚರತಪ್ಪಿ ಎಡವಿದರೆ ಅವನಿಗೆ ಕಟ್ಟಿಟ್ಟ ಬುತ್ತಿಯಂತೆ ಬರುವ ಅಪಾದನೆ 'ಕೊಲೆಗಡುಕ'. ಜೊತೆಗೆ ಆತನಿಗೆ ಎರಡೂ ಭಾಷೆಗಳಲ್ಲಿ ಅಪಾರವಾದ ಪಾಂಡಿತ್ಯ ಪ್ರಭುತ್ವಗಳು ಪ್ರಾಪ್ತವಾಗಿರಬೇಕು. ಆಯಾ ಭಾಷೆಯ ಮರ್ಜಿ ತಿಳಿದಿರಬೇಕು. ಆದುದರಿಂದಲೇ ಅನುವಾದವೂ ಒಂದು ಮೇಲ್ಮಟ್ಟದ ಕಲೆಯೆಂದು ಹೇಳುವುದು. ಈ ಕಲೆಯ ಮರ್ಮ ಜವರೇಗೌಡರಿಗೆ ವಶವರ್ತಿ.

'ನೆನಪು ಕಹಿಯಲ್ಲ' ಎಂಬುದು ಭಾರತರತ್ನ ಪಂಡಿತ ಜವಾಹರಲಾಲ ನೆಹರೂರವರ ತಂಗಿ ಕೃಷ್ಣಾ ಹತೀಸಿಂಗರ With no Regrets ಎಂಬ ಹೆಸರಿನ ಆತ್ಮಕಥೆಯ ಹೃದಯಂಗಮವಾದ ಅನುವಾದ. ಹಮ್ಮು ಬಿಮ್ಮು ಎಂಬ ಗ್ರಂಥ ಜೇನ್ ಆಸ್ಟಿನ್ನಳ Pride and Prejudice ಎಂಬ ಕಾದಂಬರಿಯ ಭಾಷಾಂತರ. ಹದಿನೆಂಟನೆಯ ಶತಮಾನದ ಶ್ರೇಷ್ಠ ಕಾದಂಬರಿಕಾರ್ತಿ ಜೇನ್ ಆಸ್ಟಿನ್. Emma, Sense and Sensibility, Northanger, Abbey, Mansfield Park, Persuation ಮುಂತಾದ ಕಾದಂಬರಿಕಾರ್ತಿಯಾದ ಆಸ್ಟಿನ್ನಳ ಕೀರ್ತಿ ಕಳಶ Pride and Prejudice. ಅದು ಜಗತ್ತಿನ ಉತ್ಕೃಷ್ಟ ಕಾದಂಬರಿಗಳ ಸಾಲಿನಲ್ಲಿ ಸೇರಿದ ಕೃತಿ; ಡಿಸ್ರೇಲಿ ಹದಿನೇಳು ಬಾರಿ ಓದಿದ, ಸರ್ ವಾಲ್ಟರ್ ಸ್ಕಾಟ್ ಪ್ರಶಂಸಿಸಿದ ಗ್ರಂಥ. ಈ ಕೃತಿಯನ್ನು ಇಪ್ಪತ್ತು ಪುಟಗಳ ಪ್ರೌಢ ಪೀಠಿಕೆಯೊಡನೆ ಕನ್ನಡಕ್ಕೆ ಅನುಕರಣೀಯವಾಗಿ ಅನುವಾದ ಮಾಡಿದ್ದಾರೆ ಜವರೇಗೌಡರು. ಇದೂ ಕೂಡ ಕನ್ನಡಕ್ಕೊಂದು ಕೊಡುಗೆ. ಹಮ್ಮು ಬಿಮ್ಮು ಎಂಬ ಹೆಸರಂತೂ ಮಹಾಕವಿ ಕುವೆಂಪು ಕಲ್ಪನೆಯ ಫಲ, ಅದ್ಭುತವಾಗಿದೆ.

ಹಿಂದೂಕುಷ್‌ನಿಂದ ಗೋದಾವರಿತನಕ, ಬಂಗಾಳದಿಂದ ಗುಜರಾತಿನ ತನಕ ವಿಸ್ತಾರವಾದ ಭಾರತವನ್ನು ಆಳಿದ ೧೬ನೆಯ ಶತಮಾನದ ಸಾರ್ವಭೌಮ ಅಕ್ಬರ್‌ನ ಜೀವನ ಚರಿತ್ರೆಯನ್ನು ಲಾರೆನ್ಸ್ ಬಿನಿಯನ್ ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಅದರ ಕನ್ನಡಾನುವಾದವೇ 'ಅಕ್ಬರ್.' ಭಾರತದ ರಾಷ್ಟ್ರೀಯ ಗ್ರಂಥಮಾಲೆಯ ವತಿಯಿಂದ ಈ ಗ್ರಂಥದ ಕನ್ನಡಾನುವಾದ ಕಾರ್ಯ ಜವರೇಗೌಡರಿಗೆ ಒಪ್ಪಿಸಿದ್ದು ಕನ್ನಡಕ್ಕೊಂದು ಲಾಭ. ಈ ಹೊತ್ತಗೆಯಲ್ಲಿ ಕನ್ನಡದ ಓಟ ಚೇತೋಹಾರಿಯಾಗಿದೆ, ಮನಮೋಹಕವಾಗಿದೆ. 'ಪುನರುತ್ಥಾನ' ಟಾಲ್‌ಸ್ಟಾಯ್ ಬರೆದ Resurrection ಎಂಬ ಕಾದಂಬರಿಯ ತರ್ಜುಮೆ. ಲಿಯೊಟಾಲ್‌ಸ್ಟಾಯ್ ರಷಿಯಾ ದೇಶದ ಹಿರಿಯ ಸಾಧಕ. ಆತ ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಸಲ್ಲುವ ಮಹಾನ್ ಲೇಖಕ. ತನ್ನ ಅತ್ಯಂತ ಪ್ರಾಮಾಣಿಕ ಜೀವನದಿಂದ ಆತ ಹಲವು ಹಿರಿಯ ವಿಭೂತಿ ಚೇತನಗಳ ಗೌರವಕ್ಕೆ ಪಾತ್ರ. ಮಹಾತ್ಮ ಗಾಂಧಿಯವರಂತೆ ಆತ ಕೂಡ ಸತ್ಯಾನ್ವೇಷಿ. ಬರವಣಿಗೆ ಹಾಗೂ ಬಾಳಿನ ಮಹೋನ್ನತಿಯಿಂದ ಟಾಲ್‌ಸ್ಟಾಯ್ ಮಹಾವ್ಯಕ್ತಿ. ಉತ್ಕೃಷ್ಟ ಗುಣಗಣದಿಂದ ಕಂಗೊಳಿಸಿದ ಟಾಲ್‌ಸ್ಟಾಯ್ ರಷಿಯಾದ ಕಾವ್ಯರ್ಷಿಯೆಂದು ಕೀರ್ತಿತನಾಗಿದ್ದಾನೆ. War and Peace; Anna-karenina, Resurrection ಮುಂತಾದ ಕಾದಂಬರಿಗಳ ಕರ್ತೃವಾಗಿ ದೊಡ್ಡ ಸಾಹಿತಿಯೆಂದು ಹೆಸರು ಪಡೆದ ಅವನ ಜೀವನ ಪುನರುತ್ಥಾನ ಕಾದಂಬರಿಯಲ್ಲಿ ಅಪ್ರತ್ಯೇಕವೆಂಬಂತೆ ಸೇರಿಕೊಂಡಿದೆಯೆಂದು ವಿಮರ್ಶಕರು ಅಭಿಪ್ರಾಯಿಸಿದ್ದಾರೆ. ಹೀಗಾಗಿ ಲೇಖಕನ ಬಾಳಿನಮೇಲೆ ಬೆಳಕು ಬೀರುವ ಈ ಬೃಹದ್ ಗಾತ್ರದ ಕಾದಂಬರಿ ಅವಶ್ಯ ಅಭ್ಯಾಸನೀಯ, ಅನುವಾದ ಯೋಗ್ಯ. ಜೊತೆಗೆ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ರಷಿಯಾದಲ್ಲಿ ನಡೆದ ಸರ್ವವ್ಯಾಪಿ ವಿಪ್ಲವವನ್ನು ಚಿತ್ರಿಸುತ್ತದೆ. ಆ ಕ್ರಾಂತಿಯ ಕಾರಣ ಹಾಗೂ ಹಿನ್ನೆಲೆಗಳ ಜೊತೆಜೊತೆಯಲ್ಲೇ ಅಂದಿನ ಸಮಾಜ ಚಿತ್ರಣವೂ ಈ ಕಾದಂಬರಿಯಲ್ಲಿ ರೂಪಗೊಂಡಿದೆ. ಶ್ರೀಮಂತ ವರ್ಗದ ಸಂತೃಪ್ತ ಭೋಗ ಜೀವದ, ದೀನದಲಿತರ ಕಷ್ಟ ಕಾರ್ಪಣ್ಯಗಳ ದಾರಿದ್ರ್ಯದ ಜೀವನ, ಅವುಗಳ ಫಲಾಫಲ, ಸೆರೆಮನೆಗಳ ಚರಿತ್ರೆ, ಇವೆಲ್ಲದರ ಅಂತರ್ಯದಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುವ ದೈವೀಭಾವನೆಯ ಮಾನವೀಯತೆ–ಮುಂತಾದುವೆಲ್ಲ ಪದರ ಪದರವಾಗಿ ಪುನರುತ್ಥಾನ ಪುಸ್ತಕದಲ್ಲಿ ಪ್ರತಿಫಲಿಸಿದೆ. ಹಸಿದವರ ಕೂಗು, ತಿಂದವರ ತೇಗು–ಇದು ಅನಿವಾರ್ಯ ಅಪರಿಹಾರ್ಯ ದೃಶ್ಯ. ವಿಶ್ವವ್ಯಾಪಿ ಸತ್ಯ. ಈ ಸತ್ಯದ ಪ್ರತಿನಿಧಿಗಳಂತೆ ಅನೇಕ ಪಾತ್ರ ಸಂನಿವೇಶ ಎಲ್ಲ ಇಲ್ಲಿ ಮೂಡಿವೆ. ಆದರೂ ನೆಕ್ಲುದೋವ್, ಮಾಸ್ಲೋವ ಮುಂತಾದವರ ಪಾತ್ರಗಳು ಅನ್ಯಾದೃಶವೆಂಬಂತೆ ಅರಳಿ ನಿಂತಿವೆ. ಮೊದಲೆರಡು ಮುಖ್ಯ ಪಾತ್ರಗಳು ಜಾರುವ ದಾರಿಯಲ್ಲಿ ಅಡ್ಡಾಡಿಯ ಅಧಃಪಾತಕ್ಕೆ ಚಾರಿತ್ರ್ಯಹೀನ ಪ್ರಪಾತಕ್ಕೆ ಕುಸಿದ ಕಥೆಯನ್ನು ಸಾರುವಂತೆ ಮತ್ತೆ ಅದರಿಂದ ಮೇಲಕ್ಕೆ ಪುಟಿದು ನಿಂತು ಪುನರುತ್ಥಾನವಾದ ಕಥೆಯನ್ನೂ ತಿಳಿಸುತ್ತದೆ. ಇದರಿಂದಾಗಿ ಈ ಕಾದಂಬರಿ ಶೀಲದ ಶಿಖರದಿಂದ ಬಿದ್ದ ಕಥೆಯೂ ಹೌದು, ಪಶ್ಚಾತ್ತಾಪದತ್ತ ಸಂಯಮದಿಂದ ಎದ್ದ ಕಥೆಯೂ ಹೌದು.

ಡೆಮ್ಮಿ ಅಷ್ಟದಳಾಕಾರದ ಆರುನೂರು ಪುಟಗಳ ಈ ಕೃತಿಯನ್ನು ಮಹಾ ದಾರ್ಶನಿಕ ಟಾಲ್‌ಸ್ಟಾಯ್‌ಗೆ ಅಪಚಾರ

ವಾಗದಂತೆ ತುಂಬ ಎಚ್ಚರಿಕೆಯಿಂದ ಪ್ರಾಧ್ಯಾಪಕ ಜವರೇಗೌಡರು, ಕೇವಲ ಒಂದು ವರ್ಷದ ಅಲ್ಪಾವಧಿಯಲ್ಲಿ ಅನುವದಿಸಿದ್ದಾರೆ. ಇದರಿಂದಾಗಿ ಇಂಗ್ಲಿಷಿನಲ್ಲಿ ಓದುವ ಸೌಭಾಗ್ಯ ಪಡೆದ ಕೋಟ್ಯಂತರ ಜನಕ್ಕೆ ಮಾತ್ರ ಮೀಸಲಾಗಿದ್ದ ಶ್ರೇಷ್ಠ ಕೃತಿಯೊಂದು ಇಂಗ್ಲಿಷ್ ಬಾರದ ಕನ್ನಡಿಗರಿಗೂ ದಕ್ಕಿದಂತಾಗಿದೆ. ಪುನರುತ್ಥಾನಕ್ಕೆ ಕೈ ಹಾಕುವ ಮೊದಲು ಅನುವಾದ ಮಾಡುವ ಕಲೆಯಲ್ಲಿ ಸಿದ್ಧಹಸ್ತರಾಗಿದ್ದರು ಗೌಡರು; ತಮ್ಮ ಹಿಂದಿನ ಮೂರು ಅನುವಾದಗಳಿಂದ ಪಳಗಿದ ಮೇಲೆ ಪುನರುತ್ಥಾನವನ್ನು ಭಾಷಾಂತರ ಮಾಡಿದ್ದು ಲೇಸಾಯಿತು. ಈ ಭಾಷಾಂತರದಿಂದ ಕನ್ನಡಿಗರಿಗೊಂದು ರಸದೌತಣದ ಆತ್ಮಸಂಸ್ಕಾರಕ್ಕೆ ಅನುವು ಮಾಡಿಕೊಟ್ಟು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ಈ ಅನುವಾದ ಗ್ರಂಥಕ್ಕೆ ರಷ್ಯಾದ ಪರವಾಗಿ ಒಂದು ಸಾವಿರ ರೂಪಾಯಿಯ ಬಹುಮಾನ ಕೂಡ ಬಂದಿರುವುದನ್ನು ಇಲ್ಲಿ ಸ್ಮರಿಸಕೊಳ್ಳಬಹುದು.

ಕನ್ನಡ ಭಾಷೆ ಅದೆಷ್ಟು ಹಾಳತವಾಗಿ ಹದವಾಗಿ ಹೊಂದಿಕೊಂಡಿದೆಯೆಂಬುದನ್ನು ನೋಡಬೇಕಾದರೆ ಪುನರುತ್ಥಾನಕ್ಕೆ ಯಾತ್ರೆಗೈಯಬೇಕು. ಹಾಗೆ ಮಾಡಿದಲ್ಲಿ ಅವರಿಗೆ ನೀರಸವಾದ ಸಪ್ಪೆಯಾತ್ರೆಯಲ್ಲ, ಅದೊಂದು ಆನಂದದಾಯಿಯಾದ ರಸಯಾತ್ರೆಯಾಗಿ ಪರಿಣಮಿಸುತ್ತದೆ. ಕನ್ನಡದಲ್ಲಿ ಈ ಬಗೆಯ ಈ ಮಟ್ಟದ ಅನುವಾದ ಕೃತಿಗಳು ಬಹಳ ಕಡಮೆ. ಅಷ್ಟೇಕೆ ಈ ಮಾದರಿಯ ಮೇಲ್ಪಂಕ್ತಿಯ ಭಾಷಾಂತರ ಕೃತಿಗಳು ಹೊಸಗನ್ನಡದಲ್ಲಿ ಬರಿಯ ಬೆರಳೆಣಿಕೆಗಷ್ಟೇ ಸೀಮಿತವೆಂದರೂ ಸರಿಯೆ. ಪುನರುತ್ಥಾನ ಜವರೇಗೌಡರ ಭಾಷಾಂತರ ಕೃತಿಗಳಲ್ಲೇ ಏಕೆ ಕನ್ನಡದ ಭಾಷಾಂತರ ಕೃತಿಗಳಲ್ಲಿಯೇ ಒಂದು ಮಹತ್ತರ ಮೈಲಿಗಲ್ಲು. ಅಚ್ಚಗನ್ನಡದ ತನಿಸೊಗಸು ಪುನರುತ್ಥಾನದಲ್ಲಿ ಎಲ್ಲೆಲ್ಲಿಯೂ ಸೂಸಾಡಿದೆ.

ಜವರೇಗೌಡರು ಮಕ್ಕಳಿಗಾಗಿ ಅತ್ಯಮೂಲ್ಯವಾದ ಜೀವನ ಚರಿತ್ರೆಗಳನ್ನು ಒದಗಿಸಿದ್ದಾರೆ. ಮೇಡಂ ಕ್ಯೂರಿ, ಋಷಿಕವಿ ರವೀಂದ್ರರು, ನಮ್ಮ ನೆಹರು, ಬೆಂಗಳೂರು ಕೆಂಪೇಗೌಡ, ಗೋಪಾಲಕೃಷ್ಣ ಗೋಖಲೆ, ಷಡಕ್ಷರದೇವ, ವಿದ್ಯಾಪೀಠಗಳು, ನಂಜುಂಡಕವಿ, ಕಡುಗಲಿ ಕುಮಾರರಾಮ–ಇವೆಲ್ಲ ಗೌಡರ ಗದ್ಯಗ್ರಂಥಗಳು. ಹರಿಹರನ ಗಿರಿಜಾಕಲ್ಯಾಣ ಸಂಗ್ರಹ, ನಯಸೇನನ ಧರ್ಮಾಮೃತ ಸಂಗ್ರಹ, ಆಂಡಯ್ಯನ ಕಬ್ಬಿಗರ ಕಾವ, ನೇಮಿಚಂದ್ರನ ಲೀಲಾವತಿ, ಕನಕದಾಸನ ರಾಮಧಾನ್ಯಚರಿತೆ ಹಾಗೂ ನಳಚರಿತ್ರೆ, ರನ್ನನ ಅಜಿತಪುರಾಣ ತಿಲಕ–ಇವೆಲ್ಲ ಸಂಪಾದಿತ ಕಾವ್ಯಗಳು. ನಂಜುಂಡ ಕವಿ ಎಂಬ ಪುಸ್ತಕ ಆ ಕವಿಯನ್ನು ಕುರಿತ, ಅವನ ಕಾವ್ಯ ಕುರಿತ ಏಕೈಕ ವಿವರವಾದ ವಿಮರ್ಶೆಯಾಗಿದ್ದು ಕವಿ ಕಾವ್ಯ ವಿಮರ್ಶೆ ಯಾವ ರೀತಿಯಲ್ಲಿದ್ದರೆ ಉಚಿತವಾಗಿರುತ್ತದೆಂಬುದಕ್ಕೆ ಉದಾಹರಣೆಯಾಗಿದೆ. ನಳಚರಿತ್ರೆಯ ಪೀಠಿಕೆ ತುಂಬ ಬೋಧಪ್ರದ. ವಿಚಾರ ಪ್ರಚೋದಕ ಹಾಗೂ ಪಾಂಡಿತ್ಯಪೂರ್ಣವಾಗಿದೆ. ಅದರಲ್ಲಿ ಅವರ ಸಂಶೋಧಕ ಪ್ರಜ್ಞೆಯ ಔನ್ನತ್ಯ ಚೆನ್ನಾಗಿ ಪ್ರತಿಫಲಿತವಾಗಿದೆ. ಶಾಸ್ತ್ರೀಯ ಪಾಂಡಿತ್ಯದ ಶಾಶ್ವತ ಕುರುಹಾಗಿ ನಿಂತಿದೆ ಲೀಲಾವತಿ ಕಾವ್ಯದ ಮುನ್ನುಡಿ.

ಜವರೇಗೌಡರ ಎಲ್ಲ ಬರವಣಿಗೆಯನ್ನೂ ಓದಿದಾಗ ಓದುಗರನ್ನು ಸೆರೆಹಿಡಿಯುವ ಮುಖ್ಯ ಗುಣವೆಂದರೆ ಅವರ ಗದ್ಯದ ವಿಲಾಸ ವೈಭವಗಳ ಪರಾಕಾಷ್ಠೆಯನ್ನು ಅನುಭವಿಸಿ ಆನಂದಿಸಬೇಕಾದರೆ ಗದ್ಯದ ಹಿನ್ನೆಲೆ ತಿಳಿಯುವುದು ಅಗತ್ಯ. ಗದ್ಯ ಪದ್ಯದಷ್ಟೇ ಅಥವಾ ಪದ್ಯಕ್ಕಿಂತ ಪ್ರಾಚೀನ ಕಲೆ. ಕನ್ನಡದಲ್ಲಿ ಉಪಲಬ್ಧವಾಗಿರುವ ಮೊಟ್ಟಮೊದಲನೆಯ ಕೃತಿ ಕವಿರಾಜಮಾರ್ಗದಲ್ಲಿಯೇ ಗದ್ಯ ಪದ್ಯ ಕವಿಗಳ ಉಲ್ಲೇಖವಿದ್ದರೂ ಆ ಕೃತಿಗಳು ಅನುಪಲಬ್ಧ. ಸಂಸ್ಕೃತದಲ್ಲೇನೋ ಬಾಣನ ಹರ್ಷಚರಿತ ಹಾಗೂ ಕಾದಂಬರಿಗಳು ಗದ್ಯದಲ್ಲಿ ರತ್ನಮಕುಟ ಪ್ರಾಯವಾಗಿವೆ. ಅವನ ಮಹಿಮೆ ಹಾಗೂ ಪ್ರಭಾವ ಅನಂತರದ ಲೇಖಕರಮೇಲೆ ಎಷ್ಟು ಹಿರಿದು ಹಾಗೂ ಗಾಢವಾದುದೆಂದರೆ 'ಬಾಣೋಚ್ಛಿಷ್ಟಂ ಜಗತ್ಸರ್ವಂ' ಹಾಗೂ 'ಕಾದಂಬರೀ ರಸಜ್ಞಾನಂ ಪೀತ್ವಾಽಹಾರಮಪಿನ ರೋಚತೇ' ಎಂಬ ಹೇಳಿಕೆ ಹೊರಟುವು. ಜೊತೆಗೆ ಗದ್ಯ ಕೂಡ ಕವಿಯ ಶಕ್ತಿಯನ್ನಳೆಯುವ ಮಾಪಕವೆಂಬರ್ಥದ 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಮಾತೂ ಹೊಮ್ಮಿತು. ಮುಂದೆ ನಮ್ಮ ಮುದ್ದಣನಂತೂ ತನ್ನ ಮಡದಿ ಮನೋರಮೆಯ ಬಾಯಲ್ಲಿ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂಬ ನುಡಿಗಡಣವನ್ನು ಆಡಿಸಿಯೇ ಬಿಟ್ಟನು.

ಪದ್ಯ ಮೂಡಿದ್ದು, ಗದ್ಯ ಮಾಡಿದ್ದು ; ಪದ್ಯ ಹುಟ್ಟಿದ್ದು ; ಗದ್ಯ ಕಟ್ಟಿದ್ದು ; ಪದ್ಯ ಹಾಡಿದರೆ ಗದ್ಯ ಮಾತಾಡುತ್ತದೆ–ಎಂಬ ಈ ಪದಪುಂಜಗಳನ್ನು ಸ್ಮರಣೆಗೆ ತಂದುಕೊಂಡರೆ ಗದ್ಯ ಪದ್ಯಗಳ ಸ್ವರೂಪ ಸ್ವಭಾವ ಪರಿಚಯ ಸುಲಭಸಾಧ್ಯ. ಸಾರಾಂಶವಿಷ್ಟೆ, ಗದ್ಯ ಪದ್ಯಗಳು ಪರಸ್ಪರ ಪೂರಕ, ಪೋಷಕ ಪ್ರೇರಕವೇ ಹೊರತು ಎಂದೂ ಅವು ಒಂದಕ್ಕೊಂದು ವಿರೋಧವಲ್ಲ. ಎರಡೂ ಕಲೆಗಳೇ. ಗದ್ಯಕಲೆಯ ತಿರುಳೆಂದರೆ ಅದು ಎಲ್ಲಿಯೂ ಪದ್ಯತನವನ್ನು ಮುಟ್ಟದೆಯೇ ಕಾವ್ಯ ಗುಣವನ್ನು ತೋರಿಸುವುದು. ಅಂದರೆ ಪದ್ಯ

ಎಂದೂ ಪೂರ್ಣ ಗದ್ಯವಾಗಬಾರದು, ಗದ್ಯ ಎಂದೂ ಪೂರ್ಣ ಪದ್ಯವಾಗಬಾರದು. ಅದರವರ ಪರಿಧಿಯಲ್ಲೇ ಅವು ಅರಳ ಬೇಕು. ಅವೇ ಅವುಗಳ ಚೆಲುವು, ಸ್ವಾರಸ್ಯ. ಓದುಗರು ನಿರೀಕ್ಷಿಸುವುದು, ಅದು ಗದ್ಯವಾಗಲಿ ಪದ್ಯವಾಗಲಿ, ಒಂದು ಸಮನಾದ ರಸಸ್ಥಿತಿ. ಪದ್ಯಗದ್ಯಗಳನ್ನು ಜಾಮೂನು ಮತ್ತು ಚಿರೋಟಿಗಳಿಗೆ ಹೋಲಿಸುತ್ತಾ ಕವಿಯೊಬ್ಬರು 'ಪದ್ಯದ್ದು ಶ್ರೀರಾಮಕೃಷ್ಣ ಪರಮಹಂಸರ ರೀತಿ; ಗದ್ಯದ್ದು ನಾಗಮಹಾಶಯನ ರೀತಿ' ಎಂದೂ, 'ಪದ್ಯದಲ್ಲಿ ವಾಸ್ತವ ಹುಚ್ಚಿಗೇರಬೇಕು; ಗದ್ಯದಲ್ಲಿ ಹುಚ್ಚು ವಾಸ್ತವಕ್ಕಿಳಿಯ ಬೇಕು' ಎಂದೂ ಹೇಳಿರುವುದು ಮನನೀಯವಾಗಿದೆ: ಅಷ್ಟೇ ಅರ್ಥಗರ್ಭಿತವಾಗಿದೆ. ವಿಷಯ ಸ್ಪಷ್ಟತೆ, ಭಾವ ವಿಶದತೆ, ವಿಪರೀತವಲ್ಲದ ವಿಶೇಷಣಗಳ ಬಳಕೆ, ಅನುಚಿತವಾಗದೆ ಅರ್ಥದೀಪ್ತಿಗೆ ಅನುಕೂಲವಾಗಿ ಬರುವ ಅಲಂಕಾರಗಳ ಸಮುಚಿತ ಪ್ರಯೋಗ, ಸ್ಫುಟವಾದ ವರ್ಣನೆ, ನೇರವಾದ ವಿವರಣೆ-ಇವು ಗದ್ಯದ ಕೆಲವು ಪ್ರಮುಖ ಲಕ್ಷಣಗಳು.

ಈ ಮಾನದಂಡದಿಂದ ಅಳೆದಾಗ ದೇಜಗೌರವರು ಹೊಸಗನ್ನಡ ಗದ್ಯದ ಆಚಾರ್ಯ ಶಿಲ್ಪಿಯೆಂದು ಧೈರ್ಯ ವಾಗಿ, ಧಾರಾಳವಾಗಿ ಹೇಳಬಹುದು. ಅವರದು ಸಂಸ್ಕೃತ ಭೂಯಿಷ್ಠವಾದ ಪೆಡಸು ಗದ್ಯವಲ್ಲ, ದೀರ್ಘ ಸಮಾಸಗಳ ಕ್ಲಿಷ್ಟ ಗದ್ಯವೂ ಅಲ್ಲ. ಅವರದು ಅಚ್ಚುಕಟ್ಟಾದ, ಅಡಕ ವಾದ, ಸಕ್ಕದ ಪಾಗದಗಳು ಕೈಹಿಡಿದು ಅನ್ಯೋನ್ಯತೆ ಯಿಂದ ಸಪ್ತಪದಿಯಿಡುವ ಕನ್ನಡದ ಸಾಜದ ಶೈಲಿ. ಆ ಶೈಲಿಯಲ್ಲಿ ತೂಕವಿದೆ, ಅನುಭವದತ್ತವಾದ ಪಾಕವಿದೆ. ಜೊತೆಗೆ ಕಾವ್ಯಾಭ್ಯಾಸದಿಂದ ಬಂದ ನಯನಾಜೋಕು ಸೊಗಸು ಲಾವಣ್ಯವೂ ಸೇರಿದೆ. ಇದರೊಡನೆ ಪ್ರತಿಭೆ ಪಾಂಡಿತ್ಯಗಳ ಫಲವಾದ ಬಿಗಿ ಬನಿಗಳೂ ಸಮಾವೇಶ ವಾಗಿವೆ. ಮಿಗಿಲಾಗಿ ಗ್ರಾಮ್ಯರಮ್ಯವಾದ ಸರಳತೆಯೂ ಸಮ್ಮಿಳಿತವಾಗಿದೆ. ಸುಲಭ, ಸುಲಲಿತ, ಹಾಗೂ ಸುಗಮ ವಾಗಿರುವುದು ಅವರ ಶೈಲಿಯ ಸೊಗಸನ್ನು ಹೆಚ್ಚಿಸಿವೆ. ಇವೆಲ್ಲದರಿಂದ ಅವರ ಬರವಣಿಗೆ ಸುಲಭಗ್ರಾಹ್ಯವಾಗಿದ್ದು ಹೃದಯ ಸಂಸ್ಪರ್ಶಿಯಾಗಿದೆ. ಉತ್ತಮವಾದ ಗದ್ಯದ, ಆದರ್ಶ ಬರವಣಿಗೆಯ ನಿಜವಾದ ಸರಿಯಾದ ಸ್ವರೂಪ ಇದಲ್ಲದೆ ಮತ್ತಾವುದು? ಪ್ರಾ. ಜವರೇಗೌಡರು ಈ ತೆರ ನಾದ ಕನ್ನಡದ ಗಂಧ ಬೀರುವ ಗದ್ಯವನ್ನು ರಚಿಸಿ ಕನ್ನ ಡಕ್ಕೆ ಮಹದುಪಕರಿಸಿದ್ದಾರೆ. ಅವರ ಮಾತುಗಳನ್ನು ಅವ ರಿಗೇ ಅನ್ವಯಿಸಿ ಹೇಳುವುದಾದರೆ, ಇಂಥ ಗದ್ಯದಿಂದ ಭಾಷೆ ಮತ್ತು ಸಾಹಿತ್ಯಗಳು ಶ್ರೀಮಂತವಾಗುತ್ತವೆ, ವೀರ್ಯ ವತ್ತಾಗುತ್ತವೆ, ಬಹುರೂಪಿಯಾಗಿ ಬೆಳೆಗುತ್ತವೆ.

ಹೊಸಗನ್ನಡ ಲೇಖಕರಲ್ಲಿ ಕಥನ ಶೈಲಿ ಕೇವಲ ನಾಲ್ಕೈದು ಜನ ಲೇಖಕರಲ್ಲಿ ಮಾತ್ರ ಯಶಸ್ವಿಯಾಗಿರು ವುದು ಕಾಣದೊರೆಯುತ್ತದೆ. ಕಥನ ಶೈಲಿಯ ಗದ್ಯಕ್ಕೆ ಪ್ರಸಾದ, ಮಾಧುರ್ಯ ಹಾಗೂ ಸರಸತೆ ಪ್ರಧಾನ ಲಕ್ಷಣ ಗಳು. ಹಮ್ಮು-ಬಿಮ್ಮು, ಅಕ್ಬರ್, ಪುನರುತ್ಥಾನ ಮುಂತಾದ ಅನುವಾದ ಕೃತಿಗಳಿಂದ ಹಿಡಿದು ನಂಜುಂಡ ಕವಿ, ರಾಷ್ಟ್ರಕವಿ ಕುವೆಂಪು ಮೊದಲಾದ ಸ್ವತಂತ್ರ ಕೃತಿಗಳ ತನಕ ಈ ಬಗೆಯ ಮಾದರಿಯಾದ ಕಥನ ಶೈಲಿಯನ್ನು ಸಂದರ್ಶಿಸಬಹುದು. ಕನ್ನಡದ ನಯ ನುಣ್ಪುಗಳನ್ನು ನೇರವಾಗಿ ನೋಡಬೇಕೆನ್ನುವವರು ಪುನರುತ್ಥಾನವನ್ನು ತಪ್ಪದೆ ಪಠಿಸಬೇಕು. ಕನ್ನಡ ನುಡಿಯ ಬನಿಪಾಕಗಳನ್ನು ತನಿತನಿಯಾಗಿ ತೆರೆತೆರೆಯಾಗಿ ತೆರೆದು ತೋರಿಸಿದ್ದಾರೆ ಈ ಕೃತಿ ರತ್ನದಲ್ಲಿ. ಈಗ ಅವರು ಸಿದ್ಧಪಡಿಸುತ್ತಿರುವ ಟಾಲ್ ಸ್ಟಾಯ್ ರಚಿತ War and Peace ಎಂಬ ಬೃಹದ್ ಕಾದಂಬರಿಯ ಕನ್ನಡ ಅನುವಾದ. ಯುದ್ಧ ಮತ್ತು ಶಾಂತಿ ಯಲ್ಲಿ ಈ ಗದ್ಯ ಇನ್ನೂ ಒಂದು ಹಂತ ಮೇಲೇರಿರುವುದನ್ನು ಅದು ಅಚ್ಚಾಗಿ ಹೊರಬಂದಮೇಲೆ ಕಾಣಬಹುದು. ಇನಿ ದಾದ ಕನ್ನಡ ಮಾತಿನ ಗತ್ತು ಗಮ್ಮತ್ತು, ಒನಪು ಒಯ್ಯಾರ ಹಾಗೂ ತಿರುವು ಮುರುವುಗಳು ಗೌಡರ ಬರಹ ದಲ್ಲಿ ಒಂದಾಗಿ ಬೆರೆತುಹೋಗಿವೆ. ಅವರ ಸಮಸ್ತ ಗದ್ಯ ಗ್ರಂಥಗಳನ್ನು, ಒಟ್ಟು ಇಪ್ಪತ್ತೆರಡು, ಸಮೀಕ್ಷಿಸಿ ಸಂಕ್ಷಿಪ್ತ ವಾಗಿ ಅವುಗಳ ಸಮಷ್ಟಿ ವೈಶಿಷ್ಟ್ಯವನ್ನೂ ಒಂದು ಪದ ಪುಂಜದಲ್ಲಿ ಅಳವಡಿಸಿ ನುಡಿಯುವುದಾದರೆ ಅಲ್ಲಿ ದೇಸೀಯ ದಿಗ್ವಿಜಯವನ್ನೇ ದರ್ಶಿಸಬಹುದು. ಕನ್ನಡದ ಆಡು ನುಡಿಯ ಸೊಗಡು ಅವರ ಎಲ್ಲ ಬರವಣಿಗೆಯಲ್ಲಿ ವಾಸನೆ ಬಡಿಯುತ್ತಿರುತ್ತದೆ. ಅವರ ಗದ್ಯ ಕನ್ನಡದ ಕಂಪು ಓದು ಗರ ಮೂಗಿಗೆ ಅಳ್ಳೆ ಬಿರಿಯುವಂತೆ ಬೀರುತ್ತಿರುತ್ತದೆ.

ಚಾಟಿ ಏಟಿನ ಚುರುಕು ಮತ್ತು ಮೊನಚು ಎಷ್ಟು ತೀವ್ರತರವಾಗಿ ಗದ್ಯದಲ್ಲಿ ಮೂಡಬಹುದೆಂಬುದಕ್ಕೆ ಅವರ ಗದ್ಯದಿಂದ ಒಂದು ಉದಾಹರಣೆ ಕೊಡಬಹುದು. 'ಲೋಕದ ಕೊಳೆಯನ್ನು ಗುಡಿಸಿ, ರೋಗರುಜಿನಗಳು ಹರಡದಂತೆ ತಡೆ ಗಟ್ಟುವ ಶಕ್ತಿ ಸಾಧನಗಳಲ್ಲಿ ಪತ್ರಿಕೆಯೂ ಒಂದು, ಅದು ಒಂದನೆಯದೂ ಆಹುದು. ಕವಿ ಆಶೀರ್ವಾದ ಶಕ್ತಿಯಾದರೆ ಪತ್ರಿಕೆ ಪಾವನ ಶಕ್ತಿಯಾಗಬೇಕು; ಈ ಎರಡು ಶಕ್ತಿಗಳು ಸ್ವಧರ್ಮಬಾಹಿರವಾದಾಗ ಲೋಕಕ್ಕೆ ಕೇಡು ತಪ್ಪದು. ಮಾತೃಹೃದಯದ ಕವಿದೃಷ್ಟಿಯ ವೈಜ್ಞಾನಿಕಮತಿಯ ಗಾಂಧಿನಿಷ್ಠೆಯ ಚತುರ ರಾಜಕಾರಿಣಿ ಸಂಪಾದಕನಾದಾಗ ಪತ್ರಿಕಾಶಕ್ತಿ ಲೋಕರಕ್ಷೆಯಾಗಿ ವರ್ಧಿಸುತ್ತದೆ; ಇಲ್ಲವಾ

ದರೆ ಅದು ರಾವಣಶಕ್ತಿಯಾಗಿ ಲೋಕಕಂಟಕವಾಗುತ್ತದೆ. ಜಾತಿಗರ ಹಿಡಿದಿರುವ ಶಕ್ತಿಗಳಿಗೆ ಪತ್ರಿಕೆಗಳೂ ಒಮ್ಮೊಮ್ಮೆ ಸಾಮಿಾಲಾಗುವುದುಂಟು. ಪತ್ರಿಕಾಕರ್ತ ಮನಸ್ಸು ಮಾಡಿದರೆ ಕ್ಷಣಾರ್ಧದಲ್ಲಿ ಒಬ್ಬನನ್ನೇರಿಸಿ ಮತ್ತೊಬ್ಬನನ್ನು ಕೆಳಗಿಳಿಸಬಲ್ಲ; ಲಫಂಗನಿಗೆ ಕಿರೀಟಧಾರಣೆ ಮಾಡಿಸಿ, ಸಭ್ಯನ ಮುಖಕ್ಕೆ ಮಸಿ ಬಳಿದು ಪಾತಾಳಕ್ಕೆ ನೂಕಬಲ್ಲ. ಸ್ವಜಾತೀಯನೊ ಸ್ವಬಂಧುವೊ ಕೊಪ್ಪಲಿನಲ್ಲಿಮಾಡಿದ ಕ್ಷುದ್ರಭಾಷಣ ಮುಖ ಪುಟದಲ್ಲಿ ದಪ್ಪಕ್ಷರದಲ್ಲಿ ಅಚ್ಚಾಗುತ್ತದೆ; ಅನ್ಯ ಜಾತೀಯ ನಗರಭವನದ ವೇದಿಕೆಯ ಮೇಲೆ ಮಾಡಿದ ವಿದ್ವದ್ಭಾಷಣ ಅಸ್ಪೃಶ್ಯವಾಗುತ್ತದೆ, ತಿರಸ್ಕರಣೀಯವಾಗುತ್ತದೆ. ಸ್ವಜಾತೀಯನಿಗೆ ಕುಗ್ರಾಮದ ಕ್ಷುದ್ರಮಠ ನೀಡುವ ಬಿರುದು ಸಂಪಾದಕೀಯ ವಸ್ತುವಾದರೆ ಅನ್ಯಜಾತೀಯ ಪಡೆಯುವ ಜ್ಞಾನಪೀಠದ ಮಹಾ ಬಹುಮಾನ ಬೇಕಾಬಿಟ್ಟಿಯಾಗಿ ಕಂಡೂ ಕಾಣದಂತೆ ಮೂಲೆಯಲ್ಲಿ ಅಚ್ಚಾಗುತ್ತದೆ. ಸಂಪಾದಕೀಯವಂತು ಸಮುದಾಯ ಪ್ರಜ್ಞೆಯ ಪ್ರತಿಬಿಂಬವಾಗಿರದೆ ವ್ಯಕ್ತಿ ಪ್ರಜ್ಞೆಯ ವಿಕೃತ ಪ್ರತೀಕವಾಗಿರುತ್ತದೆ. ಕಾವ್ಯ ಮತ್ತು ಪತ್ರಿಕೆ ರಾಷ್ಟ್ರದ ಆಸ್ತಿಯಾಗುವ ತನಕ ಲೋಕ್ಷ ಕ್ಷೇಮ ಮೊಲದ ಕೊಡಾಗುತ್ತದೆ" [ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ; ಪುಟ ೨೬].

ದೇಜಗೌ ಅವರು ವ್ಯಕ್ತಿ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಎಷ್ಟು ಸ್ಫುಟವಾಗಿ ಸ್ಪಷ್ಟವಾಗಿ ಪದಗಳ ಪಂಜರದಲ್ಲಿ ಸೆರೆಹಿಡಿದು ಕೊಡಬಲ್ಲರೆಂಬುದಕ್ಕೆ ಒಂದು ನಿದರ್ಶನ: 'ವಿಶ್ವವಿದ್ಯಾನಿಲಯದಲ್ಲಿ ವ್ಯಕ್ತಿ ಮಹಿಮೆಯಿಂದ ಕನ್ನಡಕ್ಕೆ ಗೌರವ ತಂದವರಲ್ಲಿ ಕುವೆಂಪು ಪ್ರಮುಖರಾಗಿದ್ದಾರೆ. ಅಧ್ಯಾಪಕರಾಗುವ ಹೊತ್ತಿಗೆ ಅವರ ಕಾವ್ಯದ ಕಂಪು ಕನ್ನಡ ನಾಡಿನ ಸಂದಿಗೊಂದಿಗಳಲ್ಲೆಲ್ಲ ಹಬ್ಬಿತ್ತು; ಅವರ ತಪೋಮಯ ಜೀವನದ ವಿಷಯವಾಗಿ ಕನ್ನಡಿಗರಲ್ಲಿ ಅಪಾರ ಗೌರವ ಮೂಡುತ್ತಿತ್ತು. ಅವರನ್ನು ಹತ್ತಿರದಿಂದ ನೋಡಬೇಕೆಂಬ, ಅವರ ಕಾವ್ಯವಾಣಿಯನ್ನು ಕೇಳಬೇಕೆಂಬ, ಅವರೊಡನೆ ಮಾತಾಡುವ ಸುಯೋಗ ದೊರಕಿಸಿಕೊಳ್ಳಬೇಕೆಂಬ ಕಾತರತೆ ತರುಣರ ಹೃದಯದಲ್ಲಿ ಮಿಡಿಯುತ್ತಿತ್ತು. ಬೇಸಿಗೆ ರಜ ಮುಗಿದು ಕಾಲೇಜು ಬಾಗಿಲು ತೆರೆದ ದಿನ ಕುವೆಂಪು ಅವರನ್ನು ನೋಡುವ ಸಲುವಾಗಿ, ಅವರ ದಾರಿಯನ್ನೇ ಕಾಯುತ್ತ ಹೊಸದಾಗಿ ಬಂದ ವಿದ್ಯಾರ್ಥಿಗಳು ಮರದಡಿಯಲ್ಲಿ, ವರಾಂಡದಲ್ಲಿ, ಪಡಸಾಲೆಯಲ್ಲಿ, ಮಹಡಿಯ ಹಂತದ ಬಳಿ, ಕಾಲೇಜಿನ ದ್ವಾರ ಪ್ರದೇಶದಲ್ಲಿ ಸಾಲು ಸಾಲಾಗಿ ಗುಂಪುಗುಂಪಾಗಿ ಬಿಡುಗಣ್ಣರಾಗಿ ನಿಂತಿರುತ್ತಿದ್ದರು. ಗುಂಗುರು ಗುಂಗುರಾದ ದುಂಬಿಗುರುಳಿನ, ಕೇವಲ ತಪಸಾಧ್ಯವಾದ ಪ್ರತಿಭಾಜ್ಯೋತಿಯಿಂದ ದೀಪ್ತಗೊಂಡ ಹೊಳಹುಗಣ್ಣುಗಳ ಮನಮೋಹಕವಾದ ದೀರ್ಘನಾಸಿಕದ ಹೊಳೆಹೊಳೆಯುವ ಹೊಂಬಣ್ಣದ ದೈಹಿಕ ಕಾಂತಿಯ ನೀಳವಾದ ಮುಚ್ಚುಕೋಟಿನ, ಸೋರೆ ಹೂಬಣ್ಣದ ಕಚ್ಚೆ ಪಂಚೆಯ, ಮಟ್ಟಿತರವಾದ ಸುಪುಷ್ಟಗಾತ್ರವನ್ನು ನೋಡಿದ ಕೂಡಲೇ ತರುಣರ ಹೃದಯ ಭಾವಾವೇಶದಿಂದ ಪುಳಕಗೊಂಡಂತಾಗುತ್ತಿತ್ತು. ಸ್ಥಿರದೃಷ್ಟಿಯ ಗಂಭೀರ ಗಮನದ ಅಚಂಚಲ ಮನಸ್ಸಿನ ಸದೃಢವ್ಯಕ್ತಿ ಕಾಲೇಜಿನ ಕೋಣೆಯಲ್ಲಿ ಅಂತರ್ಗತವಾದನಂತರ ಗುಂಪು ನಿಧಾನವಾಗಿ ಕರಗುತ್ತಿತ್ತು.' [ಗಂಗೋತ್ರಿ : ಕುವೆಂಪು ಅಭಿನಂದನ ಗ್ರಂಥ, ೧೯೬೮ ಪುಟ ೫೩]

ಪ್ರಾ. ದೇ. ಜವರೇಗೌಡರಿಗೆ ಈಗ ತಾನೆ ಐವತ್ತು ತುಂಬಿದೆ. ಕನ್ನಡಾಂಬೆ ಅವರಿಗೆ ಸುದೀರ್ಘ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ಸಮೃದ್ಧವಾಗಿ ಕರುಣಿಸಲಿ. ಪ್ರೊ. ಜವರೇಗೌಡರ ಸಮರ್ಥ ಸಬಲ ದಕ್ಷ ಮತ್ತು ಸದೃಢ ನೇತೃತ್ವದಲ್ಲಿ ಜಾತ್ರೆ ಹೊರಟಿರುವ ಕನ್ನಡದ ತೇರು ಸರ್ವಭಾಷಾಮಯಿಯಾ ವಿಶ್ವಸರಸ್ವತಿಯ ಪ್ರಪಂಚವೇದಿಕೆಯ ಸಿರಿಗುಡಿಗೆ ನಿರಾಂತಂಕವಾಗಿ ಸೇರಲಿ, "ಏರಲಿ, ಬಾವುಟ ಹಾರಿಸಲಿ!" ಮಹಾಕವಿ ಕುವೆಂಪುರವರ ಈ ಹಾರೈಕೆ ಕನ್ನಡಾಭಿಮಾನಿಗಳೆಲ್ಲರ ಒಕ್ಕೊರಲ ಬಯಕೆ.

ಕನ್ನಡ ನಾಡಿನ ಗುಡಿಗಳಸಕೆ ಹೊಸ
ಬಣ್ಣವನೀತನು ಹಾಕುವನು
ಹೊನ್ನಿನ ಕಿರಣದ ಹಂದರ ಬಿಗಿಯುತೆ
ಕನ್ನಡಿಗರನಲ್ಲಿರಿಸುವನು
ಎಲ್ಲರ ಎದೆಗಳ ಬೆರಸುವನು.

—ಆನಂದಕಂದ

ಒಂದು ಪ್ರತ್ಯಕ್ಷದರ್ಶಿ ವರದಿ:

ಮೈಸೂರಿನಲ್ಲಿ ನಡೆದ ರಾಷ್ಟ್ರಕವಿ ಕುವೆಂಪು ಸನ್ಮಾನ ಸಮಾರಂಭ

ಕೊ. ಶ್ರೀ.

ದಿನಾಂಕ ಜುಲೈ ೨೭. ಅಂದು ಮೈಸೂರು ನಗರದಲ್ಲಿ ಹಬ್ಬದ ಸಂಭ್ರಮ. ಆ ದಿನ ಕುವೆಂಪು ಅವರ ಮಿತ್ರರೂ, ಶಿಷ್ಯರೂ, ಅಭಿಮಾನಿಗಳೂ ಸೇರಿ ಮಹಾರಾಜಾ ಕಾಲೇಜಿನ ಶತಮಾನೋತ್ಸವ ಸ್ಮಾರಕ ಭವನದಲ್ಲಿ ರಾಷ್ಟ್ರಕವಿಗೆ ಅಭಿನಂದನಾ ಸಮಾರಂಭವನ್ನು ವೈಭವದಲ್ಲಿ ಏರ್ಪಡಿಸಿದ್ದರು.

ಕವಿವರ್ಯರ ಜೀವನ ಹಾಗೂ ಕೃತಿಗಳನ್ನು ಪರಿಚಯ ಮಾಡಿಕೊಡುವ, ಅವರ ನಿಕಟವರ್ತಿಗಳೂ ಅಭಿಮಾನಿಗಳೂ ಆದ ವಿದ್ವಾಂಸಲೋಕ ಬರೆದ **'ಗಂಗೋತ್ರಿ'** ಎಂಬ ಬೃಹದ್ ಸಂಪುಟವನ್ನು ಅರ್ಪಿಸಲು ಮೈಸೂರಿನ ನಾಗರಿಕರೂ, ಹೊರಗಿನಿಂದ ಉತ್ಸವಕ್ಕೆ ಬಂದಿದ್ದ ಆಮಂತ್ರಿತರೂ ಅಧಿಕಸಂಖ್ಯೆಯಲ್ಲಿ ಅಲ್ಲಿ ನೆರೆದಿದ್ದರು. ಎಲ್ಲೆಲ್ಲೂ ತಳಿರು ತೋರಣ; ಎಲ್ಲೆಲ್ಲೂ ರಂಗವಲ್ಲಿ. ಪ್ರೇಕ್ಷಕರ ಉತ್ಸಾಹ ಸಭೆಗೆ ಹಬ್ಬದ ವಾತಾವರಣವುಂಟುಮಾಡಿತ್ತು.

ಸರ್ವಾಲಂಕೃತವಾಗಿದ್ದ ಸಭಾಭವನದಲ್ಲಿ ವೇದಿಕೆಯ ಮೇಲೆ ಸರ್ವಶ್ರೀ ಡಿ. ಎಲ್. ನರಸಿಂಹಾಚಾರ್, ನ. ಭದ್ರಯ್ಯ, ಹೊಂಬೇಗೌಡ, ಕುವೆಂಪು, ರಾಮಕೃಷ್ಣ ಹೆಗ್ಗಡೆ ಮತ್ತು ದೇ. ಜವರೇಗೌಡರು ಉಪಸ್ಥಿತರಿದ್ದರು.

ಐದೂವರೆ ಗಂಟೆಗೆ ಸರಿಯಾಗಿ ಕಾರ್ಯಕ್ರಮವು ರಾಜ್ಯದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಆರಂಭದಲ್ಲಿ ಸಂಗೀತವಿದೂಷಿ ಶ್ರೀಮತಿ ಗೌರಿ ಮುತ್ತುಸ್ವಾಮಿ ಅವರಿಂದ ಪ್ರಾರ್ಥನೆಯಾಯಿತು.

ಅನಂತರ ದೇಜಗೌ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ಹೀಗೆ ನುಡಿದರು :

"ಇಂದು ಮೈಸೂರು ಜನರಿಗೆ ಏಕೆ, ಕನ್ನಡಿಗರಿಗೆ ಹಬ್ಬದ, ಸಂಭ್ರಮದ ದಿನ. ಇಂದು ಮಹಾಕವಿ ಕುವೆಂಪು ಅವರಿಗೆ ಅವರ ಶಿಷ್ಯರೂ, ಅಭಿಮಾನಿಗಳೂ ಸೇರಿಕೊಂಡು **ಗಂಗೋತ್ರಿ** ಗ್ರಂಥವನ್ನು ಅರ್ಪಿಸಲಿದ್ದೇವೆ. ಗಂಗೋತ್ರಿ ಅಭಿನಂದನಾ ಗ್ರಂಥದ ಇತಿಹಾಸ ೧೯೫೪ರಷ್ಟು ಹಳೆಯದು. ಇಲ್ಲಿರುವ ಗೆಳೆಯರಾದ ಕೋ.ಚೆ. ಮತ್ತು ಹಿರಿಯರಾದ ಹೊಂಬೇಗೌಡರಿಗೆ ಆ ವಿಷಯ ಗೊತ್ತಿದೆ. ಕುವೆಂಪುರವರ ರಾಮಾಯಣ ದರ್ಶನ ಮೇರುಕೃತಿಯು ಪ್ರಕಟವಾದಾಗ ಇಂಥ ಗ್ರಂಥವೊಂದನ್ನು ಅವರಿಗೆ ಅರ್ಪಿಸಲು ಅವರ ಮಿತ್ರರು ನಿಶ್ಚಯಿಸಿದರು. ಆದರೆ ಹಲವು ಕಾರಣಗಳಿಂದ ಈ ಗ್ರಂಥದ ಸಮರ್ಪಣೆ ನಿಧಾನವಾಯಿತು. ಈ ಅವಧಿಯಲ್ಲಿ ಕವಿವರ್ಯರಿಗೆ ರಾಷ್ಟ್ರಕವಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಸಾಹಿತ್ಯ ಅಕಾಡಮಿ ಬಹುಮಾನ, ಜ್ಞಾನಪೀಠದ ಸನ್ಮಾನಗಳು ದೊರಕಿದುವು. ಕಳೆದೈದು ವರ್ಷಗಳಿಂದಲೂ ಗೆಳೆಯರಾದ ಕೋ. ಚೆ. ಅವರೂ ಕಟ್ಟೀಮನಿಯವರೂ ಈ ಗ್ರಂಥದ ಬಗೆಗೆ ಆಸಕ್ತಿ ವಹಿಸಿ ಮೇಲಿಂದ ಮೇಲೆ ಈ ಬಗೆಗೆ 'ಕಾಟ'ವೆನ್ನುವ ಮಟ್ಟಿಗೆ ವಿಚಾರಿಸುತ್ತಿದ್ದರು. ಇದರ ಬಗೆಗೆ ಹೊಂಬೇಗೌಡರ 'ವಿಚಾರಣೆ'ಗೆ ಹೆದರಿ ಅವರನ್ನು ಬಹುಕಾಲ ನೋಡದೆ ತಪ್ಪಿಸಿಕೊಂಡಿದ್ದುಂಟು.

ಆದರೆ ಮಿತ್ರರೆಲ್ಲರ ಸಹಕಾರ ಸಹಾಯಗಳಿಂದ ಈ ಬೃಹದ್ ಗ್ರಂಥವು ಕೆಲವು ತಿಂಗಳ ಹಿಂದೆ ಸಿದ್ಧವಾದರೂ ಉತ್ಸವಕ್ಕಾಗಿ ನಾವು ಇದುವರೆಗೆ ಕಾಯಬೇಕಾಯಿತು. ಈ ಮಧ್ಯೆ ಕುವೆಂಪು ಅವರ ಮನೆಯವರಿಗೆ ಆರೋಗ್ಯ ಚೆನ್ನಾಗಿರಲಿಲ್ಲ; ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರು ಹಾಗೂ ರಾಜ್ಯದ ಹಣಕಾಸಿನ ಸಚಿವರಾದ ಶ್ರೀ ರಾಮಕೃಷ್ಣ ಹೆಗ್ಗಡೆ ಅವರನ್ನು ಅತಿಥಿಗಳಾಗಿ ದೊರಕಿಸಿಕೊಳ್ಳಲು ನಾವು ಇಷ್ಟು ಕಾಲ ಕಾಯಬೇಕಾಯಿತು. ಇದಕ್ಕಾಗಿ ನಾವು ವಿಷಾದಿಸಬೇಕಾಗಿಲ್ಲ. ಇಂದು ನಮ್ಮ ಆಸೆ ಈಡೇರಿದೆ. ಶ್ರೀ ಹೊಂಬೇಗೌಡರೇ ಖುದ್ದು ಆಸಕ್ತಿ ವಹಿಸಿ, ಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನು ಈ ಸಮಾರಂಭಕ್ಕೆ ಒದಗಿಸಿಕೊಟ್ಟಿದ್ದಾರೆ. ಅವರಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು.

ಇಂಥ ಹೆಬ್ಬೊತ್ತಿಗೆ ಸಿದ್ಧವಾಗಲು ಎಷ್ಟು ಕಷ್ಟವೆಂಬುದು ತಮಗೆ ತಿಳಿದಿರಬೇಕು. ಮೊದಲು ಹತ್ತಾರು ಸಾವಿರ ರೂಪಾಯಿಗಳ ವೆಚ್ಚದ ಯೋಜನೆ ಹಾಕಿಕೊಂಡಿದ್ದೆವು.

ಆದರೆ ಗ್ರಂಥದ ಗಾತ್ರ ಬೆಳೆದಂತೆಲ್ಲ ಇದು ಏನೇನೂ ಸಾಲದೆಂಬ ಅರಿವು ನಮಗಾಯಿತು. ಇಂಥ ಸಮಯದಲ್ಲಿ ಮೆ|| ಗೀತಾ ಬುಕ್ ಹೌಸಿನ ಮಾಲಿಕರಾದ ಶ್ರೀ ಸತ್ಯನಾರಾಯಣ ಅವರು ಈ ಗ್ರಂಥವನ್ನು ಪ್ರಕಟಿಸಲು ಹೆಮ್ಮೆಯಿಂದ ಮುಂದೆ ಬಂದರು.

ಈ ಸಮಯದಲ್ಲಿ ಮತ್ತೊಂದು ಯೋಚನೆ ಹೊಳೆಯಿತು. ಮಹಾಕವಿಗಳ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಈ ಸಂದರ್ಭದಲ್ಲಿ ಏಕೆ ರೂಪಿಸಬಾರದೆಂಬ ವಿಚಾರ ಬಂದಿತು. ಅದು ಇಷ್ಟರಲ್ಲೇ ಕಾರ್ಯಗತವಾಗುವುದೆಂದು ತಿಳಿಸಲು ಹರ್ಷಿಸುತ್ತೇನೆ.

ಕವಿವರ್ಯರಿಗೆ ಇದಾವುದೂ ಇಷ್ಟವೂ ಅಲ್ಲ, ಬೇಕೂ ಇಲ್ಲ. ಅವರನ್ನು ಈ ಸಮಾರಂಭಕ್ಕಾಗಿ ಒಲಿಸಿ, ಇಲ್ಲಿಗೆ ಕರೆತರಬೇಕಾದರೆ 'ಖೆಡ್ಡ'ಮಾಡಿ ಕರೆತರಬೇಕಾಯಿತು. ಅವರಿಗೆ ಇದಾವ ಸಮಾರಂಭಗಳಲ್ಲೂ ಆಸಕ್ತಿ ಇಲ್ಲ. ಇತ್ತೀಚೆಗೆ ಅವರು ಲೌಕಿಕದ ವ್ಯವಹಾರದಿಂದ ಹೆಚ್ಚು ಹೆಚ್ಚು ನಿವೃತ್ತರಾಗಿರುವಂತೆ ತೋರುತ್ತಾರೆ. ಅವರು 'ಉದಯರವಿ' ಇಂದ 'ಚಿತ್ರಕೂಟ', 'ಚಿತ್ರಕೂಟ' ದಿಂದ 'ಉದಯರವಿ'ಗೆ ಓಡಾಡುತ್ತಾರೆ, ಅಷ್ಟೆ. ಅವರು ಭರತ ಖಂಡದಲ್ಲಿ ಕನ್ನಡ ನಾಡು ಸಂಸ್ಕೃತಿ, ಸಾಹಿತ್ಯಗಳ ಸ್ಥಾನಮಾನವನ್ನು ಪ್ರಾಂತೀಯತೆಯ ಮಟ್ಟದಿಂದ ರಾಷ್ಟ್ರೀಯತೆಗೆ ಎತ್ತಿದ್ದಾರೆ. ಅಷ್ಟೇ ಅಲ್ಲ, ಕುವೆಂಪು ಅವರು ಮಾನಸಗಂಗೋತ್ರಿ ಎಂಬ ಮಹಾಕಾವ್ಯ ಸೃಷ್ಟಿಸಿದ್ದಾರೆ. ರಾಜ್ಯದಲ್ಲಿ ಕನ್ನಡಕ್ಕೆ ಪ್ರೋತ್ಸಾಹ ಸಿಕ್ಕಬೇಕು, ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕು ಎಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರೂ, ಸರಕಾರದಲ್ಲಿ, ಸಾರ್ವಜನಿಕರಲ್ಲಿ ಈ ಬಗ್ಗೆ ಆಗಬೇಕಾದ ಎಚ್ಚರ ಕಾಣುತ್ತಿಲ್ಲ. 'ಇದೊಂದು ಕೆಲಸವೇ ಲೌಕಿಕವಾಗಿ ನನಗೆ ಇರುವುದು' ಎಂದು ಅವರು ಹೇಳುತ್ತಿದ್ದಾರೆ. ರಾಜ್ಯ ಸರಕಾರವು ಕನ್ನಡವನ್ನು ರಾಜ್ಯ ಭಾಷೆಯಾಗಿ ಘೋಷಿಸಿ ದಿಟ್ಟತನದ ಹೆಜ್ಜೆ ಇಟ್ಟಿದ್ದರೂ ವ್ಯವಹಾರದಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನಮಾನದೊರಕದೆ, ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಆಗದೆ ಅವರಿಗೆ ವಿಶ್ರಾಂತಿ ಇಲ್ಲ, ನಿವೃತ್ತಿ ಇಲ್ಲ. ಅವರ ನೂರು ಕನಸುಗಳನ್ನು ನನಸುಮಾಡಲು, ಕುವೆಂಪು ಹೆಸರಿನ ಸಂಸ್ಥೆಯೊಂದು ಸದ್ಯದಲ್ಲೇ ಜನ್ಮ ತಾಳಲಿದೆ. ಇದಕ್ಕೆ ನ. ಭದ್ರಯ್ಯ ಹೊಂಬೇಗೌಡರಂತಹ ಗಣ್ಯರು ಸಹಕಾರ ನೀಡಿರುವುದು ಸ್ತುತ್ಯ ಸಂಗತಿ.

ಗಂಗೋತ್ರಿಯಂಥ ಸಂಭಾವನಾಗ್ರಂಥ ಕನ್ನಡದಲ್ಲೇ ಏಕೆ, ಇಂಗ್ಲಿಷ್ ಮುಂತಾದ ಇತರ ಭಾಷೆಗಳಲ್ಲೂ ಅಪೂರ್ವವೆಂದು ಸ್ನೇಹಿತರು ಹೇಳುತ್ತಿದ್ದಾರೆ. ಇದರಲ್ಲಿ ರಾಜಾಕಾರದ ಸಾವಿರದ ನೂರಐವತ್ತಾರು ಪುಟಗಳಿದ್ದು ಅದರಲ್ಲಿ ಕವಿವರ್ಯರನ್ನು ಕುರಿತು ನಲವತ್ತಕ್ಕೂ ಹೆಚ್ಚಿನ ಮಂದಿ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ. ಈ ಬೃಹದ್ ಗ್ರಂಥ ಪ್ರತಿಯೊಬ್ಬರ ಮನೆಯಲ್ಲಿ ರಾರಾಜಿಸುವಂತಾಗಲಿ.

ಈ ಸಮಾರಂಭದ ಅಂಗವಾಗಿ ಕಳೆದ ಮೂರು ದಿನಗಳಿಂದಲೂ ಭಾಷಣಗಳನ್ನೂ, ಸಂಗೀತವನ್ನೂ ಕೇಳಿ ಆನಂದಿಸಿದ್ದೇವೆ.* ಇಂದು ಬೆಳಿಗ್ಗೆ ನಡೆದ ಕವಿಗೋಷ್ಠಿಯೂ

---

* ವಿಚಾರಗೋಷ್ಠಿ ೧

೨೫-೭-೧೯೬೮ನೆಯ ಗುರುವಾರ
ಕಾಲ: ಬೆಳಗ್ಗೆ ೯-೦೦ರಿಂದ ೧೨-೦೦
'ಕಾನೂರು ಹೆಗ್ಗಡಿತಿ': ಡಾ. ಯು. ಆರ್. ಅನಂತಮೂರ್ತಿ
'ಮಲೆಗಳಲ್ಲಿ ಮದುಮಗಳು': ಶ್ರೀ ಎಂ. ರಾಮರಾವ್
ಸಣ್ಣ ಕತೆಗಳು: ಶ್ರೀ ಸುಧಾಕರ
ಅಧ್ಯಕ್ಷರು: ಡಾ. ಜಿ. ವರದರಾಜರಾವ್

ವಿಚಾರಗೋಷ್ಠಿ ೨

ಕಾಲ: ಸಂಜೆ ೪-೩೦ರಿಂದ ೭-೩೦
ನಾಟಕಗಳು: ಡಾ. ಎಚ್. ತಿಪ್ಪೇರುದ್ರಸ್ವಾಮಿ
ವಿಚಾರಧಾರೆ: ಶ್ರೀ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ವಿಮರ್ಶೆ: ಶ್ರೀ ಸಿ. ಪಿ. ಕೃಷ್ಣಕುಮಾರ್
ಕಥನಕವನಗಳು: ಶ್ರೀ ಜೀ. ಶಂ. ಪರಮಶಿವಯ್ಯ
ಅಧ್ಯಕ್ಷರು: ಡಾ. ಹಾ. ಮಾ. ನಾಯಕ

ವಿಚಾರಗೋಷ್ಠಿ ೩

೨೬-೭-೧೯೬೮ನೆಯ ಶುಕ್ರವಾರ
ಕಾಲ: ಬೆಳಗ್ಗೆ ೯-೦೦ರಿಂದ ೧೨-೦೦
ಭಾವಗೀತೆಗಳು: (i) ಡಾ. ಪ್ರಭುಶಂಕರ
(ii) ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ
'ಶ್ರೀರಾಮಾಯಣದರ್ಶನಂ': ಶ್ರೀ ಎಸ್. ನಾರಾಯಣಶೆಟ್ಟಿ
ಅಧ್ಯಕ್ಷರು: ಶ್ರೀ ಉ. ಕಾ. ಸುಬ್ಬರಾಯಾಚಾರ್

ಕೃತಿವಾಚನ – ಗಾಯನ

ಕಾಲ: ಸಂಜೆ ೪-೩೦ರಿಂದ ೭-೩೦
ನಾಟಕವಾಚನ: ಶ್ರೀ ಎಸ್. ಪಂಚಾಕ್ಷರಿ
ಶ್ರೀರಾಮಾಯಣದರ್ಶನಂ ವಾಚನ: ಶ್ರೀಮತಿ ಗೌರಮ್ಮ ನಾಗರಾಜ್
ಕೃತಿಗಾಯನ: (i) ಸಂಗೀತ ಮತ್ತು ನೃತ್ಯ ಕಾಲೇಜಿನ ವಿದ್ಯಾರ್ಥಿನಿಯರು
(ii) ಶ್ರೀಮತಿ ಚೊಕ್ಕಮ್ಮ

ಯಶಸ್ವಿಯಾಗಿತ್ತು. ಕೊನೆಯ ದಿನದ ಈ ಸಮಾರಂಭದ ಯಶಸ್ವಿಗಾಗಿ ಹಲವು ಮಿತ್ರರು ನೆರವಾಗಿದ್ದಾರೆ."

ಎಂದು ಹೇಳಿ ಶ್ರೀರಾಮಾಯಣ ದರ್ಶನ ಗ್ರಂಥ ಓದಿ ನಾಸ್ತಿಕರಾಗಿದ್ದವರು ಆಸ್ತಿಕರಾದ ಹೊಂಬೇಗೌಡರನ್ನು ಅಧ್ಯಕ್ಷತೆವಹಿಸಿ ಕಾರ್ಯಕ್ರಮ ನಡೆಸಿಕೊಡಲು ಪ್ರಾರ್ಥಿಸಿ, ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟು ತಮ್ಮ ಭಾಷಣ ವನ್ನು ಮುಗಿಸಿದರು.

ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಸಮಾರಂಭಕ್ಕೆ ಬಂದಿದ್ದ ಶುಭಸಂದೇಶಗಳನ್ನು ಓದಿದರು.

ಸರ್ವಶ್ರೀ ವಿ. ಕೃ. ಗೋಕಾಕ, ಜಿ. ಪಿ. ರಾಜರತ್ನಂ, ವಿ. ಸೀ., ಎ. ಎನ್. ಉಪಾಧ್ಯೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿ. ಕೆ. ವೆಂಕಟರಾಮಯ್ಯ, ಬಸವರಾಜ ಕಟ್ಟೀಮನಿ, ಶಿವಮೂರ್ತಿ ಶಾಸ್ತ್ರಿ, ಕಿಂಜ್ಞಣ ರೈ, ಆದಿ ಚುಂಚನಗಿರಿ, ಸುತ್ತೂರು, ತರಳಬಾಳು ಮಠಗಳ ಶ್ರೀ ಗಳವರು ಸಂದೇಶಗಳನ್ನು ಕಳುಹಿಸಿದ್ದರು.

ಅನಂತರ ದೇವಂಗಿ ಚಂದ್ರಶೇಖರ ಮತ್ತು ಇತರರಿಂದ ಲಘು ಸಂಗೀತ ನಡೆಯಿತು.

ಕುವೆಂಪು ಅವರ ಆತ್ಮೀಯಗೆಳೆಯರೂ, ಸಹಪಾಠಿಗಳೂ ಆಗಿದ್ದ ಆಚಾರ್ಯ ಡಿ. ಎಲ್. ನರಸಿಂಹಾಚಾರ್ ಅವರು ಮಾತನಾಡಿ ತಮ್ಮ ಗೌರವವನ್ನು ಕವಿಮಿತ್ರರಿಗೆ ಸಲ್ಲಿಸಿದರು.

"ಇಂದು ನನಗೆ ಪರಮಾನಂದವಾಗಿದೆ. ಈ ಸಮಾ ರಂಭಕ್ಕೆ ಕೂಡಲೇ ಒಪ್ಪಿಕೊಂಡೆ, ನಿಜ. ಬೇರೆ ಯೋಚನೆ ಇಲ್ಲದೆ, ದೇಹಾರೋಗ್ಯದ ಭೀತಿ ಬಿಟ್ಟು ಇಲ್ಲಿಗೆ ಬಂದಿದ್ದೇನೆ.

ಕವಿ ಸಮ್ಮೇಳನ

೨೭-೭-೧೯೬೮ನೆಯ ಶನಿವಾರ

ಕಾಲ : ಬೆಳಗ್ಗೆ ೯-೦೦ರಿಂದ ೧೨-೦೦

ಅಧ್ಯಕ್ಷರು : ಶ್ರೀ ಪು. ತಿ. ನರಸಿಂಹಾಚಾರ್

ಕವಿಗಳು : ಶ್ರೀಗಳಾದ

ಜಿ. ವರದರಾಜರಾವ್, ಯು. ಆರ್. ಅನಂತಮೂರ್ತಿ, ಎಂ. ರಾ ಮ ರಾ ವ್, ಎಚ್. ತಿಪ್ಪೇರುದ್ರಸ್ವಾಮಿ, ಸಿ. ಜಿ. ಪುರು ಷೋತ್ತಮ್, ಎಸ್. ಅನಂತನಾರಾಯಣ, ಜಿ. ಎಚ್. ನಾಯಕ್ ಎಚ್. ಎಂ. ಚನ್ನಯ್ಯ, ಎಸ್. ನಾರಾಯಣ ಶೆಟ್ಟಿ, ಜೀ. ಶಂ. ಪರಮಶಿವಯ್ಯ, ಸಿ. ಪಿ. ಕೃಷ್ಣಕುಮಾರ್, ಶ್ರೀಕೃಷ್ಣ ಆಲನಹಳ್ಳಿ, ರಾಮದಾಸ್, ರಾಮಚಂದ್ರದೇವ, ಎಂ. ಬಿ. ನಟರಾಜ್, ಕೆ. ಶಿವರಾಮ ಐತಾಳ, ಕೆ. ಭೈರವಮೂರ್ತಿ, ಕಾಳೇಗೌಡ ನಾಗವಾರ, ನಂ. ತಪಸ್ವೀಕುಮಾರ್, ಎಚ್. ಜಿ. ಲಕ್ಕಪ್ಪಗೌಡ, ಎಚ್. ಜಿ. ಮಹದೇವಯ್ಯ.

ಕೆ. ವಿ. ಪುಟ್ಟಪ್ಪನವರು ನನ್ನ ಆತ್ಮೀಯ ಗೆಳೆಯರು. ಇಂಥ ಸನ್ಮಾನ ಸಮಾರಂಭಗಳು ಜನಾಂಗದ ಇತಿಹಾಸ ದಲ್ಲಿ ಸಾವಿರ ವರ್ಷಕ್ಕೆ ಒಮ್ಮೆ ಬರಬಹುದು. ಹಿಂದೆ ಅರಿ ಕೇಸರಿಯ ಸ್ಥಾನದಲ್ಲಿ ಮಹಾಕವಿ ಪಂಪನಿಗೆ ಇಂಥ ಗೌರವ ಲಭಿಸಿದ್ದರೆ ಈಗ ಕುವೆಂಪು ಅವರಿಗೆ ಅದು ನಡೆಯುತ್ತಿದೆ. ಹಿಂದೆ ಪಂಪ ಮಹಾಕವಿಗೆ ನಡೆದ ಗೌರವವನ್ನು ನಾವು ಪುಸ್ತಕದಿಂದ ಅರಿತಿದ್ದರೆ– ಅದು ಜ್ಞಾನಗಮ್ಯವಾಗಿದ್ದರೆ– ಇಂದು ಕುವೆಂಪು ಅವರಿಗೆ ಸಲ್ಲುತ್ತಿರುವ ಸನ್ಮಾನ ಕ್ಷಕ್ಷುಗಮ್ಯ ವಾಗಿದೆ. ನಾವು ಇಲ್ಲಿ ಒಂದು ಅಸಾಧಾರಣ ಚೈತನ್ಯವನ್ನು ಅಭಿನಂದಿಸಲು ಸೇರಿದ್ದೇವೆ.

ಕೆ. ವಿ. ಪುಟ್ಟಪ್ಪನವರು ಮಹಾ ಕವಿಗಳು. ಅವರು ಸಾಮಾನ್ಯ ಮನುಷ್ಯರಾಗದೆ ಮಹಾನ್ ವ್ಯಕ್ತಿಗಳಾಗಿ ದ್ದಾರೆ. ಅವರ ಸ್ನೇಹ ವಿಶ್ವಾಸಗಳಿಗೆ ನಾನು ಪಾತ್ರನಾಗಿ ದ್ದೇನೆ. ಅವರ ಸ್ನೇಹ ಪ್ರಕಟವಾಗಿ ಪ್ರದರ್ಶನವಾಗುವು ದಲ್ಲ, ಅಂತರಂಗದಲ್ಲಿ ನಿಗೂಢವಾಗಿ ಇರುವುದು. ಆದರೆ ಅಷ್ಟೇ ಪ್ರಗಾಢವಾದ ಸ್ನೇಹ ಅವರದು: ಶಬ್ದಮಣಿದರ್ಪಣ ವನ್ನು ಅವರೊಂದಿಗೆ ಓದುತ್ತಿದ್ದಾಗ ನನಗೆ ಇದರ ಅನುಭವ ವಾಗಿದೆ. ಕೇಶಿರಾಜ ಒಳ್ಳೆಯ ಮನುಷ್ಯ. ಆದರೆ ಕಷ್ಟ ವಾಗಿ ಪುಸ್ತಕ ಬರೆಯದಿದ್ದರೆ ಪುಟ್ಟಪ್ಪನವರಂತಹ ಮೇಧಾವಿ ಗಳ ಸ್ನೇಹ ನನಗೆ ಹೇಗೆ ದೊರಕುತ್ತಿತ್ತು? ೧೯೨೭ರಲ್ಲಿ ನಾನು ಎಂ. ಎ. ಸೇರಲು ಮೈಸೂರಿಗೆ ಬಂದೆ. ಆ ವೇಳೆಗೇ ಪುಟ್ಟಪ್ಪನವರು ಕವಿಗಳಂತೆ, ಚೆನ್ನಾಗಿ ಪದ್ಯ ಬರೆಯುತ್ತಾ ರಂತೆ ಎಂಬ ಪ್ರತೀತಿ ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಹಾಗೂ ಅಧ್ಯಾಪಕರಲ್ಲಿತ್ತು. ಆಗ ಪುಟ್ಟಪ್ಪನವರು ತೆಳ್ಳಗೆ ಬೆಳ್ಳಗೆ ಇದ್ದರು. ಗುಂಗುರು ಕೂದಲು. ಖಾದಿ ಜುಬ್ಬ ಧರಿ ಸುತ್ತಿದ್ದರು. ಆ ವೇಳೆಗೇ ಅವರು The Beginners Muse ಎಂಬ ಇಂಗ್ಲಿಷ್ ಕವನ ಸಂಕಲನವನ್ನು ಪ್ರಕಟಿಸಿ ದ್ದರು. ಅದನ್ನು ನಾನು ಓದಿದ್ದೆ. ಅವರು ನನ್ನ ಸಹ ಪಾಠಿಗಳಾದ ಮೇಲೆ ನಮ್ಮಿಬ್ಬರ ಸ್ನೇಹಕ್ಕೆ ಬೆಸುಗೆ ಬಿದ್ದದ್ದು ಕೇಶಿರಾಜನ ಶಬ್ದಮಣಿದರ್ಪಣದಿಂದ. ಅಂದಿನಿಂದ ಇಂದಿನ ವರೆಗೆ ಸುಮಾರು ಐವತ್ತು ವರ್ಷಗಳ ಕಾಲ ಅವರ ಸ್ನೇಹ ವನ್ನು ಸವಿದಿದ್ದೇನೆ. ಅವರು ಆಡಂಬರಕ್ಕೆ ಹೋಗುವವರಲ್ಲ. ಕೈಲಿ ಸಾಧ್ಯವಾದರೆ ಸಹಾಯ ಮಾಡುತ್ತಾರೆ. ಇತ್ತೀಚೆಗೆ ಅವರು ಲೌಕಿಕದಲ್ಲಿದ್ದರೂ ನಿರ್ಲಿಪ್ತರೆಂಬ ಭಾವ ಹೆಚ್ಚಾಗು ತ್ತಿದೆ. ಕೊನೆಗೆ ಅವರು ಎಲ್ಲಿ ಅವಧೂತರಾಗಿಬಿಡುತ್ತಾರೋ ಎಂಬ ಶಂಕೆಯೂ ಮೂಡುತ್ತಿದೆ. ಇಂಥ ಅಲೌಕಿಕ, ಅಸಾ ಧಾರಣ ವ್ಯಕ್ತಿಗಳ ಸ್ನೇಹ ನನ್ನ ಜೀವನದ ಪುಣ್ಯವೆಂದು ಭಾವಿಸಿದ್ದೇನೆ.

ಪುಟ್ಟಪ್ಪನವರು ಹೆಚ್ಚು ಮಾತನಾಡುವುದಿಲ್ಲ ಎಂಬ ಭಾವನೆಯುಂಟು. ಮಿತಭಾಷಿತ್ವ ಅವರಲ್ಲಿ ಒಂದು ಗುಣ ವಾಗಿದೆ. ಕಾವ್ಯದಲ್ಲಿ ಅದು ಅಪರಿಮಿತವಾಗಿದೆ. ಅವರ ಕಾವ್ಯದಲ್ಲಿ ಕಾಣುವ ಪ್ರಾಸಾಧಿಕವಾಣಿ-ವಾಗ್ಝರಿ-ಭಗವ ದತ್ತವಾದುದು. ಅವರ ಮನಸ್ಸು ಎಂತೋ ಕಾವ್ಯಕರ್ಮವೂ ಊರ್ಧ್ವಗಾಮಿ. ಇದೇ ಅವರ ವ್ಯಕ್ತಿತ್ವದಲ್ಲಿ ಪ್ರಧಾನಾಂಶ. ಅವರು ನಮ್ಮೆಲ್ಲರಂತೆ ಸಾಮಾನ್ಯರಾಗಿದ್ದರೆ, ಇಷ್ಟೆಲ್ಲ ಪೂಜೆ, ಆರಾಧನೆ, ಅಭಿನಂದನೆ ಏಕೆ? ಅವರು ಇತರರು ಸಾಧಿಸ ಲಾದುದುದನ್ನು ಸಾಧಿಸಿದ್ದಾರೆ. ಅವರನ್ನು ಎಲ್ಲರೂ ವಿಶೇಷಶಕ್ತಿಯ ಪ್ರತಿಭಾವಂತ ಮಹಾಕವಿ ಎಂದು ಪ್ರಶಂಸಿ ಸುತ್ತಿದ್ದಾರೆ. ಅವರಲ್ಲಿ ಕಾಣುವ ಈ ಮಹಿಮೆ ಯಾವುದು?

ಪುಟ್ಟಪ್ಪನವರ ಕಾವ್ಯವನ್ನು ಭಾರತೀಯ ಹಾಗೂ ಪಾಶ್ಚಿಮಾತ್ಯರ ಮಾನದಂಡದಿಂದ ಅಳೆದು, ತೂಗಿದರೂ ಅವರು ಮಹಾಕವಿ ಎಂದು ಜಯಶೀಲರಾಗುತ್ತಾರೆ. ಮಹಾ ಕವಿ ಎಂದರೆ ಯಾರು? ಅವನ ಕಾವ್ಯದಲ್ಲಿ ನಾವು ನಿರೀಕ್ಷಿಸು ವುದೇನು? ಈ ಪ್ರಶ್ನೆಗೆ ನಮ್ಮ ಕನ್ನಡದ ಕವಿಯೊಬ್ಬ ಹೀಗೆ ಉತ್ತರ ಕೊಡುತ್ತಾನೆ. ಮಹಾಕೃತಿ ನಿರ್ಮಾಣ ಮಾಡು ವವನೇ ಮಹಾಕವಿ. ಅವನಲ್ಲಿ ವರಶಬ್ದ, ಮಾತಿನಲ್ಲಿ ಜಾಣ ತನ, ಅಲಂಕಾರ, ಅರ್ಥದರ್ಶಿಯಾದ ಯುಕ್ತಿ ಪ್ರೌಢಿಮೆ ಗಳಿರುತ್ತವೆ. ಅವನು ನೀತಿವಿದ. ರಸಿಕರು ಮೈಮರೆಸುವ ಕಾವ್ಯಸಮಾಧಿ ಆತನ ಕೊಡುಗೆ. ಹಲವು ಭಾಷೆಗಳಲ್ಲಿ ನಿಷ್ಣಾತರಾದ ಕಾವ್ಯರಸಿಕರನ್ನೂ ತಲೆತೂಗಿಸುವಂತೆ ಮಾಡುವವನೇ ಮಹಾಕವಿ; ಅವನ ಕೃತಿಯೇ ಮಹಾ ಕಾವ್ಯ.

ಪುಟ್ಟಪ್ಪನವರಂತೆ ಕಾವ್ಯವನ್ನು ಯಾರು ಬರೆಯಬಲ್ಲರು? ಅವರ ಕಾವ್ಯದಲ್ಲಿ ಕಾಣುವ ಮೃದುಮಧುರ ಪದಬಂಧ, ಬಗೆಯ, ಭಾವದ ಐಸಿರಿ, ಭಾವದ ರಸಪ್ರವಾಹ, ಕಾವ್ಯಾ ಲಂಕಾರ, ಉಕ್ತಿಚಮತ್ಕಾರಗಳ ವೈಭವವು ಸಹೃದಯ ರನ್ನು ರೋಮಾಂಚನಗೊಳಿಸಿ ಸಂತೋಷದ ಕಣ್ಣೀರನ್ನು ಕೋಡಿವರಿಸುತ್ತದೆ.

ಪಾಶ್ಚಿಮಾತ್ಯ ಕಾವ್ಯವಿಮರ್ಶಕರ ಮಾನದಂಡದಿಂದ ಅಳೆದು ನೋಡಿದರೂ ಪುಟ್ಟಪ್ಪನವರು ಮಹಾಕವಿಗಳಾಗಿ ತೇರ್ಗಡೆ ಹೊಂದುತ್ತಾರೆ.

ಮಹಾಕವಿಯ ಮನಸ್ಸು ಮಹಾಸಾಗರದಂತೆ ಎಂದು ಒಬ್ಬ ಪಾಶ್ಚಿಮಾತ್ಯ ಕವಿ ವರ್ಣಿಸಿದ್ದಾನೆ. ಅದು ಅಷ್ಟೇ ಆಳ, ಅಷ್ಟೇ ವಿಶಾಲ, ಅಷ್ಟೇ ಗಂಭೀರ. ಮಹಾ ಸಾಗರದಲ್ಲಿ ಕಾಣುವ ಭಾವವೈಚಿತ್ರವೆಲ್ಲವನ್ನು ಮಹಾಕವಿಯ ಮನಸ್ಸಿ ನಲ್ಲಿ ಕಾಣುತ್ತೇವೆ. ಕವಿಯ ಮನಸ್ಸು ರಸದ ಅನೇಕ ಭಾವತರಂಗಗಳಿಂದ ಪ್ರಕ್ಷುಬ್ಧಗೊಂಡ ಮಹಾಸಾಗರ. ಸಮುದ್ರದ ರೌದ್ರಾವೇಶ, ಪ್ರಶಾಂತತೆ, ನೊರೆತೆರೆಗಳ ಉನ್ಮೀ ಲನ-ಎಲ್ಲವೂ ಮಹಾಕವಿಯ ಮನಸ್ಸಿನಲ್ಲಿ ಗೋಚರಿಸುತ್ತದೆ. That mind is called genius. That is Mr. Puttappa.

ಮಹಾಕಾವ್ಯವು ಯಾರಿಂದ ಯಾವ ಕಾಲದಲ್ಲಿ ರಚಿತ ವಾಯಿತೆಂಬುದು ಮುಖ್ಯವಲ್ಲ. ಸಮಸ್ತ ಮಾನವ ಜನಾಂಗಕ್ಕೆ ಸರ್ವಕಾಲದಲ್ಲಿ ಭಾವಸ್ಪಂದನ ಮಾಡುವ ಗುಣ—ವಿಶ್ವವ್ಯಾಪಕ ಗುಣ-ಅದರಲ್ಲಿ ಇದ್ದರೆ ಅದು ಮಹಾ ಕಾವ್ಯವೆನಿಸಿಕೊಳ್ಳುತ್ತದೆ. ಕವಿಯ ಪರಿಪಕ್ವವಾದ ಜೀವನ ದೃಷ್ಟಿ ಅದರಲ್ಲಿರುತ್ತದೆ. ಅಂಥ ಮಹಾಕೃತಿ ಪುಟ್ಟಪ್ಪ ನವರು ಬರೆದಿರುವ ಶ್ರೀರಾಮಾಯಣ ದರ್ಶನ. ಈ ಮಹಾ ಕಾವ್ಯದಲ್ಲಿ ಉಪನಿಷತ್ ದರ್ಶನದಿಂದ ತೊಡಗಿ ಅರವಿಂದರ ತತ್ವದರ್ಶನದವರೆಗೆ ಭಾರತೀಯ ಜ್ಞಾನಗಂಗೆ ಹರಿದು ಬಂದಿದೆ.

ಮಹಾಕಾವ್ಯದ ಇನ್ನೊಂದು ಲಕ್ಷಣವೆಂದರೆ ಅದನ್ನು ಎಷ್ಟು ಜನ ಓದಿದರೂ, ಎಷ್ಟು ಸಲ ಓದಿದರೂ, ಅದು ಹೊಸ ಹೊಸ ಭಾವನೆಗಳನ್ನು ಮೂಡಿಸಬೇಕು. ಶ್ರೀ ರಾಮಾಯಣ ದರ್ಶನ ಅಂಥ ಕಾವ್ಯ. ಮಹಾಕಾವ್ಯವನ್ನು 'ದೇವರ ಪೆಪ್ಪರುಮೆಂಟ್'ಎಂದು ಪುಟ್ಟಪ್ಪನವರು ಒಂದೆಡೆ ಕರೆದಿದ್ದಾರೆ.

ಶ್ರೀರಾಮಾಯಣ ದರ್ಶನದಲ್ಲಿ ಈ ಮಾತಿಗೆ ನಿದರ್ಶನ ವಾಗಿ ಅನೇಕ ಪ್ರಸಂಗಗಳನ್ನು ನೋಡಬಹುದು. ಜಟಾ ಯುವಿನ ರೆಕ್ಕೆಗಳನ್ನು ರಾವಣನು ಕತ್ತರಿಸಿದಾಗ ಅದು ನೆಲಕ್ಕೆ ಬೀಳುವ ರುದ್ರರಮಣೀಯ ದೃಶ್ಯ ಇವುಗಳಲ್ಲಿ ಒಂದು. ಕವಿಯ ಅಕ್ಷಯವಾದ ರಸಾವೇಶ ಶ್ರೀರಾಮಾ ಯಣ ದರ್ಶನದುದ್ದಕ್ಕೂ ಕಾಣಬರುತ್ತದೆ.

ಮಹಾಕಾವ್ಯದ ಇನ್ನೊಂದು ಗುಣ ಅದರ ಚಿರಯೌವನ. ಅದಕ್ಕೆ ಮುಪ್ಪಿಲ್ಲ, ಸಾವಿಲ್ಲ. ಮತ್ತೆ ಮತ್ತೆ ಓದಿದಾಗ ಹೊಸ ಭಾವ ಸಂಚಾರವಾಗುತ್ತದೆ. ಅದರದು ಒಂದು ತೆರನಾದ ಸ್ಥಿರ ಯೌವನ. ಉನ್ನತ ಆದರ್ಶಗಳ ಹೆಗ್ಗಣಿ ಅದು. ಮಾನವನನ್ನು ಊರ್ಧ್ವಮುಖಿಯನ್ನಾಗಿ ಮಾಡುವ, ಮನ ಸ್ಸಿನ ಚಿತ್ತಕ್ಷೋಭೆಯನ್ನೂ ವಿಕಲತೆಯನ್ನೂ ಹೋಗಲಾಡಿಸಿ ಶಾಂತಿ,ಸಮಾಧಾನಗಳನ್ನು ತಂದುಕೊಟ್ಟು ಅದನ್ನು ಆನಂದ ದಲ್ಲಿ ಮುಳುಗಿಸುವುದೇ ಮಹಾಕಾವ್ಯ. ಶ್ರೀರಾಮಾಯಣ ದರ್ಶನದಿಂದ ನಮಗೆ ಉಂಟಾಗುವ ಆನಂದ ಇಂಥದು.

ಇಂಥ ಮಹಾಕಾವ್ಯವನ್ನು ಸೃಷ್ಟಿಸಿದ ಕವಿಯನ್ನು ಮಹಾಚೈತನ್ಯವನ್ನು ನಾವೇಕೆ ಪೂಜಿಸಬಾರದು? ಗೌರವಿ ಸಬಾರದು?

ಭಗವಂತನು ಕವಿಗಳಿಗೆ ಕವಿ ಎನ್ನುತ್ತಾರೆ. ಎಲ್ಲರಿಗಿಂತ ಮೇಲೆ ಅವನು ಇರುವಾಗ ಪ್ರಾಪಂಚಿಕ ಕವಿಯನ್ನೇಕೆ ವಂದಿಸಬೇಕು? ಈ ಪ್ರಶ್ನೆಗೆ ಉತ್ತರ: ಭಗವಂತನು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದರೆ ಅವನ ಅಂಶವನ್ನು ಮಹತ್ತರವಾಗಿ ಹೊಂದಿರುವ ಈ ಲೌಕಿಕ ಕವಿಯು ನಮ್ಮ ಕಣ್ಣಿಗೆ ಕಾಣುತ್ತಾನೆ. ಈ ವಿಭೂತಿ ಪುರುಷನಿಗೆ ಮಾಡುವ ಸನ್ಮಾನ, ಪೂಜೆ, ಆ ಮಹಾ ವಿಭೂತಿಗೂ ಸಲ್ಲುತ್ತದೆ.

ಪುಟ್ಟಪ್ಪನವರಿಗೆ ಸಲ್ಲುತ್ತಿರುವ ಈ ಕವಿಪೂಜೆ ದೇವ ದೇವನಿಗೆ ಸಲ್ಲುತ್ತಿರುವ ಆರಾಧನೆ ಎಂದು ಡಿ. ಎಲ್. ನರ ಸಿಂಹಾಚಾರ್ಯರು ಹೇಳಿ ಮಹಾಕವಿಗೆ ತಮ್ಮ ಗೌರವ ವನ್ನು ಸಲ್ಲಿಸಿದರು.

ಅನಂತರ ನ. ಭದ್ರಯ್ಯನವರು ಕುವೆಂಪುರವರ ವ್ಯಕ್ತಿತ್ವ ವನ್ನು ಕುರಿತು ಮಾತನಾಡಿದರು.

ಪರ್ವತವನ್ನು ದೂರದಿಂದ ನೋಡಿ ಅಳೆಯಬಹುದೆನಿಸಿ ಅಳೆಯಲು ಗಜಕಡ್ಡಿಯೊಡನೆ ಹತ್ತಿರ ಹೋದಾಗ ಯಾವ ಭಾವನೆ ಮೂಡುವುದೋ ಕುವೆಂಪುರವರ ವ್ಯಕ್ತಿತ್ವವನ್ನು ಅಳೆಯಲು ಹೊರಟಾಗ ಆ ಮಹಾಮೇರುವನ್ನು ವರ್ಣಿಸಲು ತೊಡಗುವಾಗ ಅಂತಹದೇ ಭಾವನೆ ಮೂಡುತ್ತಿದೆ. ನನಗೆ ಸಾಗರವನ್ನು ಕಂಡಾಗ ಕುವೆಂಪು ಅವರ ನೆನಪಾಗುತ್ತದೆ. ಅದರ ಗಾಂಭೀರ್ಯ, ವೈಶಾಲ್ಯ ಮತ್ತು ಆಳ ಎಲ್ಲವೂ ಅವರನ್ನೇ ನೆನಪು ತರುತ್ತದೆ. ಅವರು ಕನ್ನಡಕ್ಕೆ ಚೈತನ್ಯವನ್ನು ತಂದಿದ್ದಾರೆ. ನಾಡನ್ನು ಉದ್ಧಾರ ಮಾಡಿದ್ದಾರೆ. ಕನ್ನಡವು ಬೆಳೆದರೆ ಮಾತ್ರ ಜನತೆಯ ಉದ್ಧಾರವೆಂದು ಮನಗೊಂಡು ಅದಕ್ಕಾಗಿ ಅವರು ಬಹಳವಾಗಿ ದುಡಿದಿದ್ದಾರೆ. ಇದು ನಮ್ಮ ಭಾಗ್ಯ.

ಅವರ ಮಾತು, ಕವಿತೆ, ಪ್ರಬಂಧ, ಕಾದಂಬರಿ, ನಾಟಕ ಗಳಲ್ಲಿ ಒಂದೊಂದರಲ್ಲೂ ಮಂತ್ರಶಕ್ತಿ ಇದೆ. ಅವುಗಳಲ್ಲಿ ಮಹಾಶಕ್ತಿ ಅಡಗಿದೆ. ಅದರ ಸಾಧನೆಯನ್ನು ಕುರಿತು ನಾವು ಅಭಿನಂದಿಸುವುದೆಂದರೆ, ಇದು ನಮ್ಮ ಅಲ್ಪತನವನ್ನು ತೋರಿಸೀತು. ಅವರಿಂದ ಋಣಿಯಾದ ನಾವು ನಮ್ಮ ಕರ್ತವ್ಯವನ್ನು ನೆನೆದು ಅವರನ್ನು ಅಭಿನಂದಿಸುತ್ತೇವೆ. ಒಂದು ರೀತಿಯಲ್ಲಿ ಅವರನ್ನು ಅಭಿನಂದಿಸುವುದರಿಂದ ನಮ್ಮನ್ನು ನಾವೇ ಅಭಿನಂದಿಸಿಕೊಂಡಂತೆ. ಕೇವಲ ಮಾತಿ ನಿಂದ ಕುವೆಂಪುರವರ ಮಹಾ ಕಾರ್ಯವನ್ನು ವರ್ಣಿಸಿ ಅಭಿನಂದಿಸಲು ಸಾಧ್ಯವಿಲ್ಲ, ನಾವು ಅವರ ಆಕಾಂಕ್ಷೆ–ಬಯಕೆ, ಗುರಿ ಏನೆಂಬುದನ್ನು ಅರಿತು ನಾವು ಇರುವ ಕ್ಷೇತ್ರಗಳಲ್ಲಿ ಅದರ ಸಾಧನೆಗಾಗಿ ದುಡಿದರೆ ಮಾತ್ರ ಅವರಿಗೆ ಅಭಿನಂದನೆ. ಅವರ ಆಶಯವು ಸಾಮಾಜಿಕ, ರಾಜಕೀಯ, ಸರಕಾರ ಕ್ಷೇತ್ರಗಳಲ್ಲಿ ಈಡೇರಿದಾಗ ಅವರಿಗೆ ಸಂತೋಷ; ಆಗ ಅವರಿಗೆ ಅಭಿನಂದನೆ. ಕುವೆಂಪು ಅವರು ಇಂಥ ಅಭಿನಂದನೆಗಳನ್ನು ನಿರೀಕ್ಷಿಸಿಯೂ ಇಲ್ಲ; ಅದನ್ನು ಅವರು ಬಯಸುವುದೂ ಇಲ್ಲ. ಎಲ್ಲ ನದಿಗಳೂ ಪ್ರಕೃತಿಯ ನಿಯಮದಂತೆ ಸಾಗರದ ಕಡೆಗೆ ನುಗ್ಗುವಂತೆ ಈ ಮಹಾವ್ಯಕ್ತಿಗೆ ಲೌಕಿಕ ಮರ್ಯಾದೆ, ಸನ್ಮಾನಗಳು ದೊರೆತಿವೆ; ನಾವು ಇದರಿಂದ ಸ್ಫೂರ್ತಿಗೊಳ್ಳಲು ಇಲ್ಲಿ ಈ ಉತ್ಸವದಲ್ಲಿ ಭಾಗಿಯಾಗಿದ್ದೇವೆ—ಎಂದು ಭದ್ರಯ್ಯನವರು ಕುವೆಂಪು ಅವರ ಗುಣಗಾನ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಣಕಾಸಿನ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮಾತನಾಡಿ ಇದೊಂದು ಅಪೂರ್ವ ಸಮಾರಂಭವೆಂದರು.

ಇಲ್ಲಿ ಅನೇಕ ಜನ ವಿದ್ವಾಂಸರು ಸಿದ್ಧಪಡಿಸಿದ ಈ **ಗಂಗೋತ್ರಿ** ಯನ್ನು ಒಪ್ಪಿಸುವುದು ಅಸಾಧಾರಣ ಗೌರವ ವೆಂದು ತಿಳಿದಿದ್ದೇನೆ. ಈ ಕಾರ್ಯಕ್ಕೆ ನಾನು ಅಳುಕಿ ನಿಂದಲೇ ಒಪ್ಪಿದೆ. ಏಕೆಂದರೆ ಇಂತಹ ಸಾರಸ್ವತ ಸಮಾ ರಂಭದಲ್ಲಿ ಭಾಗವಹಿಸುವ ಅರ್ಹತೆ ನನ್ನಲ್ಲಿಲ್ಲ. ನ್ಯಾಯಾ ಧೀಶರಾದ ಹೊಂಬೇಗೌಡರು ಅಪ್ಪಣೆ ಕೊಡಿಸಿದರೆಂದು ನಾನು ಒಪ್ಪಿಕೊಂಡೆ. ಇದು ನನ್ನ ಅದೃಷ್ಟ. ಕವಿವರ್ಯರ ನಿಕಟವರ್ತಿಗಳು ಅವರ ಕೃತಿಗಳನ್ನು ಚೆನ್ನಾಗಿ ಅಭ್ಯಸಿ ದವರೂ ಈ ಸಂಭಾವನಾ ಗ್ರಂಥಕ್ಕೆ ಲೇಖನಗಳನ್ನು ಬರೆದಿ ದಿದ್ದಾರೆ. ಇಂಥ ಕೃತಿಯನ್ನು ಅವರಿಗೆ ಅರ್ಪಿಸುವುದು ಸಂತೋಷದ ವಿಚಾರ.

ಕುವೆಂಪು ಕನ್ನಡನಾಡಿನ ಕಳಶ. ಕನ್ನಡ ನಾಡನುಡಿ ಸಾಹಿತ್ಯಕ್ಕೆ ಅಖಿಲ ಭಾರತದಲ್ಲಿ ಸ್ಥಾನ ಲಭಿಸಿದ್ದರೆ ಅದರ ಕೀರ್ತಿ ಕುವೆಂಪುಗೆ ಸಲ್ಲುತ್ತದೆ. ಈ ಮಾತು ಅತಿಶಯೋಕ್ತಿ ಯಲ್ಲ. ಉತ್ತರ ಭಾರತದಲ್ಲಿರುವವರಿಗೆ ದಕ್ಷಿಣದಲ್ಲಿ ತಮಿಳು ಹೊರತು ಬೇರೆ ಭಾಷೆ ಇದೆ ಎಂಬ ಅರಿವು ಇರುವು ದಿಲ್ಲ. ಮಲೆಯಾಳಿ ಜನರು ಭಾರತಾದ್ಯಂತ ಹಬ್ಬಿರುವುದ ರಿಂದ ಅವರ ಸಾಹಿತ್ಯದ ಬಗೆಗೆ ಕೊಂಚ ತಿಳಿದಿರಬಹುದು. ಆದರೆ ಕನ್ನಡನಾಡು ಲಿಪಿ ಸಾಹಿತ್ಯಗಳ ಬಗ್ಗೆ ಶೇಕಡ ತೊಂಬತ್ತೈದು ಭಾಗದಷ್ಟು ಜನರಿಗೆ ಗೊತ್ತಿಲ್ಲ. ಅಖಿಲ ಭಾರತದ ನಕ್ಷೆಯಲ್ಲಿ ಕನ್ನಡಕ್ಕೆ ಒಂದು ಸ್ಥಾನ ಸಿಕ್ಕಿರುವುದು ಕುವೆಂಪು ಅವರಿಂದ ಎಂದು ನಾನು ಅಭಿಮಾನದಿಂದ ಹೇಳುತ್ತೇನೆ.

ನಾನು ಸಾಹಿತಿಯಲ್ಲ; ಇಲ್ಲಿ ಸಾಹಿತ್ಯ ವಿಮರ್ಶೆಯನ್ನು ನಾನು ಮಾಡುತ್ತಿಲ್ಲ. ಆದರೆ ಕುವೆಂಪು ಅವರ ಕಾದಂಬರಿ, ನಾಟಕ, ಕವನ – ಹೀಗೆ ಅವರ ಕೃತಿಗಳನ್ನು ಓದಿದ್ದೇನೆ.

ಒಬ್ಬ ಸಾಮಾನ್ಯ ನಾಗರಿಕನಂತೆ ಹೇಳುವುದಾದರೆ ಅವರಿಂದ ಹಿರಿದಾದ ಸೇವೆ ಕನ್ನಡ ಜನಕ್ಕೆ ಕನ್ನಡ ಸಂಸ್ಕೃತಿಗಳಿಗೆ ದೊರೆತಿದೆ. ಕನ್ನಡ ಶಿಕ್ಷಣಮಾಧ್ಯಮವಾಗಲು ವಿರೋಧವಿದ್ದಾಗ ಅದು ಶಿಕ್ಷಣ ಮಾಧ್ಯಮವಾಗಲು ಆಗ್ರಹಪಟ್ಟವರು ಅವರು; ಕನ್ನಡವು ರಾಜ್ಯ ಭಾಷೆಯಾಗಲು, ಕರ್ಣಾಟಕ ಏಕೀಕರಣವಾಗಲು, ರಾಜ್ಯಕ್ಕೆ ಕರ್ಣಾಟಕವೆಂದು ಹೆಸರಿಡಲು ಕನಸು ಕಂಡವರು ಅವರು.

ಒಮ್ಮೆ ರಾಜ್ಯದ ಮುಖ್ಯ ಮಂತ್ರಿಗಳು ಬರೆದಿದ್ದ ಪತ್ರಕ್ಕೆ ಅವರು ಉತ್ತರ ಬರೆಯುತ್ತಾ ಎರಡು ವಿಷಯಗಳಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

(೧) ಕನ್ನಡವನ್ನು ರಾಜ್ಯದ ಭಾಷೆಯಾಗಿ ಮಾಡಬೇಕು.

(೨) ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಇಡಬೇಕು.

ಅವರ ಕನಸುಗಳಲ್ಲಿ ಒಂದು ನೆರವೇರಿದೆ. ಬೇಗನೆ ಅವರ ಇನ್ನೊಂದು ಕನಸೂ ಈಡೇರಬಹುದಾಗಿದೆ.

ಕುವೆಂಪು ಅವರು ಹೇಗೆ ಸಾಹಿತಿಗಳೋ ಹಾಗೇ ದಾರ್ಶನಿಕರು; ತಪಸ್ವಿಗಳು. ಅವರ ಮಾತು ಸತ್ಯವಾಗುತ್ತದೆ. ಸಾಹಿತಿಗಳಲ್ಲಿ ಇನ್ನೊಂದು ವರ್ಗವೂ ಇದೆ. ಅವರು ಭಾಷಣ ಮಾಡುತ್ತಾರೆ; ಬರೆಯುತ್ತಾರೆ. ಆದರೆ ಅವರ ಸಾಹಿತ್ಯಕ್ಕೂ, ಅವರ ಆಡಿದ ಮಾತಿಗೂ, ವೈಯಕ್ತಿಕ ಜೀವನಕ್ಕೂ ಅಜಗಜಾಂತರ ವ್ಯತ್ಯಾಸ ಕಾಣುತ್ತೇವೆ. ಯಾವ ಪಾವಿತ್ರ್ಯತೆ ಅವರ ಕೃತಿಯಲ್ಲಿದೆಯೋ ಅದು ಅವರ ದೈನಂದಿನ ಜೀವನದಲ್ಲಿ ಅಷ್ಟಾಗಿ ಕಾಣುವುದಿಲ್ಲ.

ಆದರೆ ಕುವೆಂಪುರವರು ಹಾಗಲ್ಲ: ಅವರ ಆಸೆ ಆಕಾಂಕ್ಷೆಗಳು ಏನಿದ್ದರೂ ಕನ್ನಡದ ಏಳಿಗೆಗಾಗಿ. ಇದರ ಹೊರತು ಅವರಿಗೆ ಬೇರೆ ಮಹಾತ್ವಾಕಾಂಕ್ಷೆಯಿಲ್ಲ. ಅವರು ತಮ್ಮ ಶ್ರೀರಾಮಾಯಣ ದರ್ಶನದ ಮೂಲಕ ಮುಂದಿನ ನೂರಾರು ಪೀಳಿಗೆಯು ನೆನಪಿಡುವಂತಹ, ಕೃಜ್ಞತೆಯಿಂದ ಸ್ಮರಿಸುವಂತಹ **ದೇಣಿಗೆ**ಯನ್ನು ನೀಡಿದ್ದಾರೆ. ಇಂಥ ಮಹಾಕವಿಯು ಯುಗಕ್ಕೆ ಒಬ್ಬರು ಹುಟ್ಟಬಹುದು. ಇಂಥ ಮೇರುಕೃತಿ ಯುಗಕ್ಕೆ ಒಮ್ಮೆ ಬರಬಹುದು. ನಾವು ನಮ್ಮೆದುರಿಗೇ ಇಂಥ ಸಾಹಿತಿಯನ್ನು ನೋಡುತ್ತಿದ್ದೇವೆ; ಅವರ ಮಹಾಕಾವ್ಯವನ್ನು ಓದುತ್ತಿದ್ದೇವೆ. ಅವರ ಸನ್ಮಾನ ಸಮಾರಂಭದಲ್ಲಿ ಭಾಗ ವಹಿಸುತ್ತಿದ್ದೇವೆ. ಇದು ನಮ್ಮೆಲ್ಲರ ಪುಣ್ಯ.

ಕನ್ನಡನಾಡು ಒಂದಾಗಿ ಹನ್ನೆರಡು ವರ್ಷಗಳಾಗಿವೆ. ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದುದಕ್ಕಿಂತ ಸಾಹಿತಿಗಳ ಪ್ರೇರಣೆ ಪ್ರಯತ್ನಗಳು ಏಕೀಕರಣವನ್ನು ಸಾಧಿಸಿತೆಂದು ನಾನು ತಿಳಿದಿದ್ದೇನೆ. ಆ ಪ್ರಜ್ಞೆಯನ್ನು ಉಪಯೋಗಿಸಿಕೊಂಡು ರಾಜಕಾರಣಿಗಳು ನಾಡನ್ನು ಒಂದಾಗಿ ಮಾಡಿದ್ದಾರೆ. ಸಾಹಿತಿಗಳ ಒಕ್ಕೊರಲಿನ ಕೂಗು ಇಲ್ಲದಿದ್ದರೆ ಈ ಪ್ರಯತ್ನ ಈಡೇರುತ್ತಿರಲಿಲ್ಲ. ಆದರೆ ಸಾಹಿತಿಗಳು ಕಂಡ ಕನ್ನಡನಾಡಿನ ಕನಸು ಎಷ್ಟರಮಟ್ಟಿಗೆ ನನಸಾಗಿದೆ? ಎಂಬ ಪ್ರಶ್ನೆ ಉಳಿಯುತ್ತದೆ.

ನಾನು ರಾಜಕೀಯಹಲ್ಲಿ ದುಡಿಯುತ್ತಿರುವ ಒಬ್ಬ ಸಾಮಾನ್ಯ ಮನುಷ್ಯ. ಅದು ಅಷ್ಟೊಂದು ಪರಿಶುದ್ಧವಾಗಿದೆ ಎಂದು ಹೇಳಲಾರೆ. ಅಲ್ಲಿ ವ್ಯಾಮೋಹ, ಆಸೆಗಳು ಹೆಚ್ಚು. ಅಸತ್ಯ, ಅಪ್ರಮಾಣಿಕತೆ, ವಿಶ್ವಾಸಘಾತುಕತನಗಳಿಗೆ ಅಲ್ಲಿ ಅವಕಾಶವಿದೆ. ಆದರೆ ಸಾಹಿತ್ಯದಲ್ಲಿ ಅವುಗಳಿಗೆ ಎಳ್ಳಷ್ಟೂ ಅವಕಾಶವಿರಬಾರದು. ಕನ್ನಡ ನಾಡಿನ ಬಗ್ಗೆ ನಾವು ಕಟ್ಟಿದ ಕನಸು ನಿರೀಕ್ಷಿಸಿದ್ದಷ್ಟು ಕೈಗೂಡದಿದ್ದರೆ-ಸಾಹಿತಿಗಳ ಕ್ಷಮೆ ಕೋರಿ ಹೇಳುವುದಾದರೆ-ಸಾಹಿತಿಗಳ ಅಲಕ್ಷ್ಯವೇ ಕಾರಣ. ದೇಶದಲ್ಲಿ ಸಾಮಾಜಿಕ ಪ್ರಜ್ಞೆ ಉಂಟುಮಾಡುವ ಕೆಲಸ ಸಾಹಿತಿಗಳಿಂದ ಆಗಬೇಕು. ಹಾಳು ಮಾಡುವ ಕೆಲಸ ರಾಜಕಾರಣಿಗಳಿಂದ ಆಗಬಹುದು. ಆದರೆ ಸಾಮಾಜಿಕ ಸಾಂಸ್ಕೃತಿಕ, ಶೈಕ್ಷಣಿಕ ಪ್ರಗತಿಗಳು ಸಾಮಾಜಿಕ ಪ್ರಜ್ಞೆಯನ್ನು ಅವಲಂಬಿಸಿವೆ.

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಮ್ಮ ದೇಶದ ಆಡಳಿತ ನಡೆಯುತ್ತಿದೆ ಎಂಬುದು ತಮಗೂ ತಿಳಿದಿದೆ. ಯಾವ ದೇಶದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಜನ ವಿದ್ಯಾವಂತರಲ್ಲವೋ ಅಲ್ಲಿ ಪ್ರಜಾಪ್ರಭುತ್ವವು ಪ್ರಾರಂಭದ ದೆಸೆಯಲ್ಲಿ ಯಶಸ್ವಿಯಾಗಿ ಕೆಲಸ ಮಾಡಲಾರದು. ದೇಶದಲ್ಲಿ ಸಾಮಾಜಿಕ ಪ್ರಜ್ಞೆ ಇರುವ ಮಟ್ಟಿಗೆ ಅದರ ಯಶಸ್ಸು. ಈ ಪದ್ಧತಿ ಮುರಿದುಬೀಳುವ ಪ್ರಸಂಗ ಬಂದರೆ ಮುಂದಿನ ಪೀಳಿಗೆಯು ಇಂದಿನ ಸಾಹಿತಿಗಳನ್ನೂ, ಬುದ್ಧಿಜೀವಿಗಳನ್ನೂ ಎಂದಿಗೂ ಕ್ಷಮಿಸಲಾರದು. ಸಾಹಿತಿಗಳು ಸ್ವತಂತ್ರರು. ಇವರಿಗೆ ರಾಜಕೀಯದಲ್ಲಿನ ಜಾಡ್ಯಗಳ ಪ್ರಭಾವ ಬೀಳಬಾರದು. ಕನ್ನಡ ನಾಡಿನಲ್ಲಿ ಈ ವಿಷಯವನ್ನು ಪ್ರಾಮಾಣಿಕವಾಗಿ ವಿಚಾರಿಸಿದರೆ ವ್ಯಥೆಯಾಗುತ್ತದೆ.

ಕನ್ನಡ ನಾಡು ಏಕೀಕರಣವಾಗಿ, ಹನ್ನೆರಡುವರ್ಷಗಳಾದರೂ ಯಾವ ಭಾವೈಕ್ಯವುಂಟಾಗಬೇಕಾಗಿತ್ತೊ ಅದು ಇನ್ನೂ ಸಾಧಿಸಿಲ್ಲ. ಅನೇಕ ಯೋಜನೆಗಳನ್ನು ನಾವು ಕಾರ್ಯಗತ ಮಾಡಿರಬಹುದು. ರಸ್ತೆ, ಶಾಲೆ, ಕಾಲೇಜು ಆಸ್ಪತ್ರೆಗಳನ್ನು ಮಾಡಿರಬಹುದು; ಜನರಲ್ಲಿ ಕನ್ನಡತನ,

ಭಾವೈಕ್ಯತೆಗಳು ಇದುವರೆಗೆ ಮೂಡಿಲ್ಲ. ಉತ್ತರ ಕರ್ನಾಟಕದವರು, ಮಂಗಳೂರಿನವರು, ಹೈದರಾಬಾದಿನವರು, ಹಳೆ ಮೈಸೂರಿನವರೆಂಬ ಮಾತನ್ನು ಇನ್ನೂ ಕೇಳುತ್ತೇವೆ. ರಾಜ್ಯದ ನೌಕರರ ಸಂಭಾಷಣೆಯನ್ನು ಕದ್ದು ಕೇಳಿದರೆ, ತಮ್ಮ ತಮ್ಮ ಸ್ಥಾನ ಬೆಳೆಸಿಕೊಳ್ಳುತ್ತಿರುವ ಪ್ರಯತ್ನ ಮಾಡುತ್ತಿರುವಂತೆ ತೋರುತ್ತದೆ.

ಸಾಹಿತಿಗಳಲ್ಲಿ ಹೀಗಾಗಬಾರದು. ಸಾಹಿತಿಗಳು ಬುದ್ಧಿಜೀವಿಗಳು. ಕನ್ನಡ ನಾಡಿನ ನಿಜವಾದ ಏಕೀಕರಣ ಭಾವೈಕ್ಯಗಳು ರಾಜಕಾರಣಿಗಳಿಂದ ಸಾಧ್ಯವಿಲ್ಲ. ಏಕೆಂದರೆ ಅಲ್ಲಿನ ಉದ್ದಿಶ್ಯ : ಅಧಿಕಾರವನ್ನು ಹೇಗೆ ಪಡೆಯುವುದು, ಅದನ್ನು ಹೇಗೆ ಉಳಿಸಿಕೊಳ್ಳುವುದು, ಅವರಿಗೆ ಇದರಲ್ಲೇ ಸಮಯವೆಲ್ಲ ಕಳೆದು ಹೋಗುತ್ತದೆ. ಅವರಲ್ಲಿ ಸಾರಸ್ವತ ಲೋಕದ ಪಾಂಡಿತ್ಯ ನೂರರಲ್ಲಿ ಒಂದು ಪಾಲು ಇರುವುದಿಲ್ಲ ಇದ್ದರೂ ಅವರ ಶಕ್ತಿ ಎಲ್ಲವೂ ಸ್ವಾರ್ಥ ಸಾಧನೆಗೆ ಮೀಸಲಾಗುತ್ತದೆ. ಅದರಿಂದ ನಾಡು ನುಡಿಗಳ ಸೇವೆ ಸಾಧ್ಯವಿಲ್ಲ. ಪ್ರತಿಯೊಬ್ಬನೂ ಜನಪ್ರಿಯತೆಯನ್ನು ಗಳಿಸಬೇಕೆಂದು ಹೋಗುತ್ತಾನೆ. ರಾಜಕಾರಣಿಯಲ್ಲಿ ತನ್ನ ಮೇಲ್ಮೆಯನ್ನು ಹೆಚ್ಚಿಸಿಕೊಳ್ಳುವ ಜನಪ್ರಿಯತೆಯ ರೋಗ-cheap popularity–ಇಲ್ಲದಿದ್ದರೆ ರಾಜಕೀಯದಲ್ಲಿ ನಮ್ಮಿಂದ ಹೆಚ್ಚಿನ ಕೆಲಸ ಆಗುತ್ತಿತ್ತೋ ಏನೋ !

ಕನ್ನಡ ನಾಡಿನ ಬಗ್ಗೆ ಕುವೆಂಪು ಮತ್ತಿತರ ಸಾಹಿತಿಗಳು ಯಾವ ಕನಸು ಕಂಡರೋ ಅದು ಕೈಗೂಡುವಂತೆ ನಿಮ್ಮಿಂದ ಸಹಾಯವಾಗಬೇಕೆಂದು ನಾನು ಸಾಹಿತಿಗಳಲ್ಲಿ ಪ್ರಾರ್ಥಿಸುತ್ತೇನೆ.

ದೇಶ ಸ್ವಾತಂತ್ರ್ಯಗಳಿಸಿ ಇಪ್ಪತ್ತು ವರ್ಷಗಳಾಗಿದ್ದರೂ ಮೂಲಭೂತವಾಗಿ ಅದು ಹಿಂದುಳಿದೇ ಇದೆ. ಸ್ವೀಡನ್ ದೇಶವು ಐವತ್ತು ಅರವತ್ತು ವರ್ಷಗಳ ಹಿಂದೆ ದಾರಿದ್ರ್ಯದಲ್ಲಿ ತೊಳಲಾಡುತ್ತಿತ್ತು. ಇಂದು ಆ ರಾಷ್ಟ್ರವು ಅತ್ಯಂತ ಸಮೃದ್ಧ ದೇಶವಾಗಿದೆ. ಅಮೆರಿಕಾಕ್ಕಿಂತಲೂ ಅಲ್ಲಿನ ಜನ ಜೀವನ ಮಟ್ಟ ಹೆಚ್ಚಿದೆ. ಅಲ್ಲಿನ ಯೋಜನೆಗಳು ಬೇರೆ ಯಾವ ದೇಶಗಳಲ್ಲೂ ಇಲ್ಲ.

ನಾವು ನಮ್ಮ ಜಗಳ, ಸ್ವಾರ್ಥ ಸಾಧನೆಗಳಲ್ಲಿ ಮುಳುಗಿ ದೇಶದ ಕ್ಷೇಮ ಚಿಂತನೆಯನ್ನು ಮರೆತಿದ್ದೇವೆ. ಮೊದಲು ಭಾರತ – ಅನಂತರ ಮೈಸೂರು ಎಂಬುದನ್ನು ಮರೆಯಬಾರದು. ದೇಶದ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ಕೆಲಸ ನಮ್ಮಿಂದ ನಡೆಯಬಾರದು. ರಾಷ್ಟ್ರದ ಭಾಗ ಮೈಸೂರು ರಾಜ್ಯವೆಂಬುದನ್ನು ನಾವು ಮರೆಯಬಾರದು.

ರಾಷ್ಟ್ರದ ಕೆಲಸ ಮೊದಲು, ಸ್ವಂತದ ಕೆಲಸ ಅನಂತರ ಎಂದು ತಿಳಿದು ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ರಾಷ್ಟ್ರಸೇವೆ ಮಾಡಲು ಸಾಧ್ಯವಿದೆ. ಆಗ ಮಾತ್ರ ಕನ್ನಡ ನಾಡುನುಡಿಯ ಹಿತಸಾಧನೆಯಾಗುವುದರೊಂದಿಗೆ ಭಾರತದ ಹಿತಸಾಧನೆಯೂ ಆದೀತು.

ಎಂದು ಹೇಳಿ ಅರ್ಥ ಸಚಿವರು ಕುವೆಂಪು ಅವರಿಗೆ ಗಂಗೋತ್ರಿ ಸಂಭಾವನಾ ಗ್ರಂಥವನ್ನು ಸಮರ್ಪಿಸಿದರು.

ಅನಂತರ ಮಹಾಕವಿ ಕುವೆಂಪು ಅವರಿಗೆ ನೂರಾರು ಸಂಘಸಂಸ್ಥೆಗಳ ಪರವಾಗಿ ಪುಷ್ಪಮಾಲೆಯನ್ನು ಅರ್ಪಿಸಲಾಯಿತು.

ಕುವೆಂಪುರವರ ಪತ್ನಿಯ ತವರು ಮನೆಯ ಕಡೆಯಿಂದ ಶ್ರೀ ಪುಟ್ಟಯ್ಯನಾಯ್ಕರು ಹಾರವನ್ನು ಅರ್ಪಿಸಿದರು. ನಾಳಿನ ಜನತೆಯ ಪ್ರತಿನಿಧಿಯಾಗಿ ಶ್ರೀ ನಾರಾಯಣ ಶೆಟ್ಟರು ಚಿರಂಜೀವಿಪುಷ್ಪಮಾಲೆ ಅರ್ಪಿಸಿದರು.

ಇದೊಂದು ದೇವತೆಗಳೂ ಅಸೂಯೆ ಪಡುವಂತಹ ದೃಶ್ಯ! ಅಸಂಖ್ಯಾತ ಪುಷ್ಪಮಾಲೆಗಳ ರಾಶಿಯಲ್ಲಿ ಮುಳುಗಿ ಹೋಗಿದ್ದ ಕುವೆಂಪುರವರು ಎದ್ದುನಿಂತು ಸಮಾರಂಭವನ್ನು ಏರ್ಪಡಿಸಿದ್ದ ಮಿತ್ರರ ವಿಶ್ವಾಸಕ್ಕೆ ತಮ್ಮ ಕೃತಜ್ಞತೆಯನ್ನು ಸೂಚಿಸಿ ತನಗಾದ ಸಂತೋಷವನ್ನು ವ್ಯಕ್ತಪಡಿಸಿದರು.

ಶ್ರೀ ರಾಮಾಯಣ ದರ್ಶನದಲ್ಲಿ ಒಂದು ಪ್ರಸಂಗ ಬರುತ್ತದೆ. ಆಂಜನೇಯನು ವಿಭೀಷಣನೊಡನೆ ರಾಮ ವಿಜಯದ ವಾರ್ತೆಯನ್ನು ಸೀತಾದೇವಿಗೆ ತಿಳಿಸಲೆಂದು ಬರುತ್ತಾನೆ. ಸೀತೆ ತನ್ನ ಮನಸ್ಸಿನ ಕಳವಳವನ್ನು ತ್ರಿಜಟೆಗೆ ವ್ಯಕ್ತಪಡಿಸುತ್ತಾ

" ರವಿದೂತನೈತಂದನೌ, ಕೆಳದಿ,
ರವಿಕುಲೇಶ್ವರ ದೂತನೇ ಕಿನ್ನು ನೈತರನೋ "

ಎಂದು ಹೇಳಿ

" ಪೊರಗಿಣಿಕಿ ನೋಡು, ಸಖಿ! ಅಶೋಕವನಿಕಾ ವೀಥಿ
ಧನ್ಯಮಾದುದೆ ದಿವ್ಯ ಚರಣ ಧೂಳಿಯೊಳಿಂದು ? "

ಎಂದು ವಿನಂತಿಸುತ್ತಾಳೆ.

ಆ ಮಾತಿಗೆ ತ್ರಿಜಟೆ ಹೊರಗೆ ಹೋಗಿ ಬಂದವರನ್ನು ನವಿಲೆಂದು ಭ್ರಮಿಸಿ

" ಏನಿಲ್ಲ, ತಾಯಿ ನವಿಲೆರಡು ಮೇವರಿಸಿ ಚರಿಸಿಹವಲ್ಲಿ "

ಎನ್ನುತ್ತಾಳೆ.

ಆಗ ಆಂಜನೇಯನು ಕಾಣಿಸಿಕೊಂಡು

" ಹರಸೆಮ್ಮ ನಮ್ಮ ! ರಾಮನ ನುಡಿಯ ತಂದೆವು
ನಿವೇದಿಸಲ್ ನಿನ್ನಡಿಯ ಗುಡಿಗೆ ! "

ಎಂದು ಹೇಳುತ್ತಾನೆ. ಶ್ರೀ ರಾಮನ ವಿಜಯವಾರ್ತೆಯನ್ನು ತಿಳಿಸುತ್ತಾನೆ.

ಈ ಮಾತನ್ನು ಕೇಳಿ ಸೀತೆ ಶಿಲಾಪ್ರತಿಮೆಯಂತೆ ನಿಲ್ಲುತ್ತಾಳೆ.

" ಇದೇಂ ದೇವಿ,
ಮಾರ್ನುಡಿಯದೆನಗೆ, ಚಿಂತಿಸುತಿರ್ಪೆ ಮಡುಮುಳಗಿ ? "

ಎಂದು ಆಂಜನೇಯನು ಹೇಳುತ್ತಾನೆ.

ಸೀತೆಯು ಅದಕ್ಕೆ

" ಪತಿವಿಜಯಮಂ
ಸವಿದುದು ಸುವಾರ್ತೆಯಂ ಶ್ರುತಿ. ತಡುಕುತಿವೆ ಮತಿ
ಸರಸ್ವತಿಯ ಭಂಡಾರಮಂ ಪಡಿನುಡಿಯನರಸಿ.
ನುಡಿಯೊಡತಿಗಿಂದಡಸಿದೊಂದು ಕಡು ಬಡತನಕೆ
ಕಿನಿಸಿ ನಾಂ ನಿರ್ವಾಕ್ಯೆಯಾದೆ ! ವಾಕ್ಕೋವಿದಂ
ನೀಂ, ಪ್ಲವಂಗೋತ್ತಮ ; ಅವಾಙ್ಮಾನದರ್ಥಮಂ
ಗ್ರಹಿಸಲ್ ಸಮರ್ಥನಾ ಕತದಿನವ್ಯರ್ಥಮೀ
ನನ್ನ ವಾಗ್ ದಾರಿದ್ರ್ಯಮುಂ "

ಎಂದು ಉತ್ತರ ಕೊಡುತ್ತಾಳೆ.

" ಶ್ರೀಪೂರ್ಣಮಾ
ನಿನ್ನ ರಿಕ್ತತೆ ದಿಟಂ ! ವಾಗ್ದೇವಿಯೊಡೆಯಂಗೆ
ತಾನೊಡೆಯನಾದಾತನಿಗೆ ಲಕ್ಷ್ಮಿ ನೀನಲ್ತೆ ?
ನಿನಗವಳ ಭಂಡಾರಮುಂ ಬಡತನಮೆ ವಲಂ | "

ಎಂದು ಆ ವಾಕ್ಕೋವಿದನು ಉದ್ಗಾರ ತೆಗೆಯುತ್ತಾನೆ.

ನನಗೆ ಇಂದು ಇಂಥ ಅನುಭವವಾಗಿದೆ. ನಾನು ಇಂಥ ಅನೇಕ ಸಮಾರಂಭಗಳನ್ನು ಕಂಡಿದ್ದೇನೆ ; ಅನುಭವಿಸಿದ್ದೇನೆ. ಇಂಥ ಹೂವಿನ ರಾಶಿಯನ್ನು (ಇದಕ್ಕೂ ಹೆಚ್ಚಿನದನ್ನು ಮಂಡ್ಯದಲ್ಲಿ) ನೋಡಿದ್ದೇನೆ. ಹೂ ಇಷ್ಟು ಭಾರವೆಂದು ನಾನು ತಿಳಿದಿರಲಿಲ್ಲ. ಇಂದಿನ ಸಮಾರಂಭದ ವೈಶಿಷ್ಟ್ಯತೆ ನನ್ನನ್ನು ಚಕಿತನನ್ನಾಗಿ ಮಾಡಿದೆ.

ನನ್ನ ತಾರುಣ್ಯಕಾಲದಲ್ಲಿ ಮಿತ್ರರಾಗಿದ್ದ–ಈಗಲೂ ಮಿತ್ರರಾಗಿರುವ – ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರ ಮಾತನ್ನು ಕೇಳಿ ಸ್ಥಂಭಿತನಾಗಿದ್ದೇನೆ. ನರಸಿಂಹಾಚಾರ್ಯರು ಸರಳರು, ಪಂಡಿತರು, ಮೇಲಾಗಿ ಸಹೃದಯರು. ಅವರ ಕಾಲುಭಾಗದ ವ್ಯವಹಾರವು ಒಣಗಿರುವ ಓಲೆಗರಿಯಲ್ಲಿ ಎಂಬ ಭಾವನೆ ಇದೆ. ನನಗೂ ಅವರಿಗೂ ಸಂಬಂಧತಂದ ಗ್ರಂಥ ಶಬ್ದಮಣಿದರ್ಪಣ. ವ್ಯಾಕರಣ ಸಾಹಿತ್ಯ ಭಾಷೆಗಳಿಗೆ ಆಧಾರ ತಾನೇ. ನಾನು ಆಗಾಗ್ಗೆ ಅವರ ಮನೆಗೆ ಹೋಗುತ್ತಿದ್ದೆ–ವ್ಯಾಕರಣದ ನೆಪದಲ್ಲಿ. ಅದಕ್ಕೆ ಪ್ರತಿಫಲವಾಗಿ ನಾನು ಅವರಿಗೆ ನಶ್ಯ ಹಾಕುವುದನ್ನು ಕಲಿಸಿದೆ. ಆ ಚಟವನ್ನು ನಾನು ಈಗ ಬಿಟ್ಟಿದ್ದರೂ ಅದು ಅವರನ್ನು ಇನ್ನೂ ಬಿಟ್ಟಿಲ್ಲ. ಅವರು ವಯಸ್ಸಿನಲ್ಲಿ ಕೊಂಚ ಚಿಕ್ಕವರೆಂಬ ಭಾವನೆಯೂ ಇರಲಿಲ್ಲ. ಇತ್ತೀಚಿಗೆ ಅವರಿಗೆ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ಆಮಂತ್ರಣ ಪತ್ರದಲ್ಲಿ ಅವರ ಹೆಸರನ್ನು ನೋಡಿ ಅವರಿಗೇಕೆ ತೊಂದರೆ ಕೊಟ್ಟಿದ್ದೀರಿ ಎಂದು ಆಕ್ಷೇಪಿಸಿದೆ. ಅವರು ಇಲ್ಲಿಗೆ ಬಂದ ಮೇಲೂ ಉದ್ವೇಗ ಹಾಗೂ ಆವೇಶಗಳಿಂದ ಮಾತನಾಡದೆ, ತಣ್ಣಗೆ ಮಾತನಾಡಲು ಪ್ರಾರ್ಥಿಸಿದ್ದೆ.

ಅವರು ಇಂದು ಅಪೂರ್ವರೀತಿಯಲ್ಲಿ ನನ್ನ ಬಗೆಗೆ ಮಾತನಾಡಿದ್ದಾರೆ. ಅವರು ಮಹಾಕವಿ ಮಹಾಕಾವ್ಯಗಳ ಬಗ್ಗೆ ಇಂಗ್ಲಿಷ್ ಕನ್ನಡ ಸಾಹಿತ್ಯಗಳಿಂದ ವಿಪುಲವಾಗಿ ಉದ್ಧರಿಸಿ ವ್ಯಾಖ್ಯಾನ ಮಾಡಿದ್ದಾರೆ. ಅವರು ಅರಿಕೇಸರಿಯ ಆಸ್ಥಾನದ ಸಮಾರಂಭದ ಸೂಚನೆ ಕೊಟ್ಟರು. ಅದು ನನ್ನನ್ನು ಚಕಿತನನ್ನಾಗಿ ಮಾಡಿತು.

ನನ್ನ ವಿಷಯವಾಗಿ ಅವರು ಅದ್ಭುತವಾದ ರೀತಿಯಲ್ಲಿ ಪ್ರಶಂಸೆಯ ಮಾತು ಆಡಿದ್ದಾರೆ. ಅದರ ಸತ್ಯಾಸತ್ಯತೆಯ ವಿಚಾರವನ್ನು ನಾನಿಲ್ಲಿ ಮಾಡುತ್ತಿಲ್ಲ. ಅವರ ವಿಶ್ವಾಸವನ್ನು ನಾನಿಲ್ಲಿ ಬೆಲೆ ಕಟ್ಟುತ್ತಿಲ್ಲ. ಅವರ ಆಂತರಂಗದ ವಿಶ್ವಾಸವನ್ನು ನಾನು ಬಲ್ಲೆ. ಅವರು ನನ್ನ ಬಗೆಗೆ ಹೇಳಿದ್ದ ಒಂದು ಸಂಗತಿಯನ್ನು (ನಾನು ಯಾರಿಗೂ ಹೇಳಬಾರದೆಂದಿದ್ದ ಸಂಗತಿ) ಬಹಿರಂಗಪಡಿಸುತ್ತಿದ್ದೇನೆ.

ಒಂದು ದಿನ ಅವರಿದ್ದ ಮನೆಗೆ ನಾನು ಆಶ್ರಮದಿಂದ ಸುಮಾರು ಎಂಟೂವರೆ ಗಂಟೆಗೆ ಹೋದೆ. (ಆಗ ಆಶ್ರಮ ಕೃಷ್ಣಮೂರ್ತಿಪುರಂ ಬಡಾವಣೆಯಲ್ಲಿತ್ತು). ನಾವು ಒಟ್ಟಿಗೆ ಸೇರಿದಾಗ ವ್ಯಾಕರಣವಲ್ಲದೆ ಇನ್ನೂ ಅನೇಕ ವಿಷಯವನ್ನು ಕುರಿತು ಮಾತನಾಡುತ್ತಿದ್ದವು. ವ್ಯಾಕರಣ ಒಂದು ನೆಪ. ಉಪನಿಷತ್ತಿನಿಂದ ತೊಡಗಿ ಅರವಿಂದರ ಬರವಣಿಗೆಯವರೆಗೆ, ಶ್ರೀ ರಾಮಕೃಷ್ಣ ವಿವೇಕಾನಂದರವರೆಗೆ ಮಾತನಾಡುತ್ತಿದ್ದೆವು. ಅವರು ಏನೋ ಮಾತನಾಡುತ್ತಿದ್ದವರು ಒಣಗಿದ ಬಾಳೆಎಲೆಪಟ್ಟಿಯಲ್ಲಿದ್ದ ನಶ್ಯವನ್ನು ತೆಗೆದುಕೊಂಡು ನನ್ನ ಕಡೆ ನೋಡಿ ಹಠಾತ್ತನೆ "I say you are my guru" ಎಂದರು. ನಾನು ಬೆಪ್ಪಾಗಿ ಅವರ ಕಡೆ ನೋಡಿದೆ. ಅವರು ಮುಂದುವರೆದು ಹೇಳಿದರು. "I can see your face burning like a fire-ball in fornt of me." ಅವರು ತಮ್ಮ ಪ್ರತಿಭೆಯಲ್ಲಿ ಕಂಡಿದ್ದ ಆ ಅನುಭವ ನನಗೆ ಆಗ ಅರ್ಥವಾಗದೆ ಆಶ್ಚರ್ಯವಾಯಿತು. ಅದರ ಅರ್ಥ ನನಗೆ ಇಂದು ಆಗುತ್ತಿದೆ. ಇಂದಿನ ಅವರ ಈ ಎಲ್ಲ ಶ್ಲಾಘನೆ ನನಗೆ ಪ್ರಿಯವಲ್ಲ. ಆದರೂ ಇಂಥ ಹೊಗಳಿಕೆಯನ್ನು ಜೀರ್ಣಿಸಿಕೊಳ್ಳುವ ಉಪಾಯ ಹಾಗೂ ಶಕ್ತಿ ಗುರುಕೃಪೆಯಿಂದ ನನಗೆ ಲಭ್ಯವಾಗಿದೆ.

ನಾನು ಒಂದು ಕಡೆ ಹೀಗೆ ಬರೆದಿದ್ದೇನೆ :

“ ಮನ್ಮನೋಮಂದಿರಕೆ ಓ
ಲೋಕಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ !
ತುಳಿಯೆ ನಿಮ್ಮ ಪದತಲ
ದಲದಲದಲ ಅರಳ್ವುದೆನ್ನ
ಶಿರ : ಕಮಲ ಕುಟ್ಮಲ !

ತಮೋತಿಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ ;
ಋತದ ಶಿವದ ಆನಂದದ
ಚಿತ್ ವಿಭೂತಿ ತೊಳಗಲಿ.
ಮನ್ಮನೋಮಂದಿರಕೆ, ಓ
ಲೋಕಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ !

ಲೋಕಗುರುಗಳೆಲ್ಲ ಸೇರಿ ಶ್ರೀ ರಾಮಾಯಣ ದರ್ಶನವನ್ನು ನಿರ್ಮಿಸಿದ್ದಾರೆ. ಇಂದಿನ ಶ್ಲಾಘನೆ ಎಲ್ಲವೂ ಆ ಲೋಕ ಗುರುಗಳಿಗೆ ಸಲ್ಲುತ್ತದೆ. ಇಂದು ನನಗೆ ಕಾಣಿಸುವುದು ನನ್ನ ಮುಂದಿರುವ ಆ ಗುರುಗೋಷ್ಠಿ. ಅವರ ಕೃಪೆ ಬರಲಿ ; ಅವರ ಆಶೀರ್ವಾದ ಐತರಲಿ. ಈ ಅರ್ಥದಲ್ಲಿ ಈ ಶ್ಲಾಘನೆ ಆ ಪಂಪನಿಗೂ ಸಲ್ಲುತ್ತದೆ. ರಾಮಾಯಣ ದರ್ಶನದಂತಹ ರಚನೆ ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುವುದು ಲೋಕ ದೃಷ್ಟಿಯೇ ಹೊರತು, ಪೂರ್ಣದೃಷ್ಟಿಯಲ್ಲಲ್ಲ. ಉದಾಹರಣೆಗೆ ನಲ್ಲಿಯಲ್ಲಿ ಬರುವ ನೀರಿಗೆ ಜಲಾಶಯ ಕಾರಣವೆಂಬ ಸಂಗತಿ ಮಗುವಿಗೆ ಸಾಮಾನ್ಯವಾಗಿ ತಿಳಿಯದು. ನಲ್ಲಿಯೇ ನೀರು ಕೊಡುತ್ತದೆಂಬ ಭಾವನೆ ಅದರದು. ಅದೇ ರೀತಿಯಲ್ಲಿ ಈ ಕೃತಿ ನನ್ನಿಂದ ನಿರ್ಮಾಣವಾಯಿತೆಂಬ ಸಂಗತಿ ಪೂರ್ಣ ಸತ್ಯವಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆಯವರು ವಿಶ್ವಾಸದ ಜತೆಗೆ ಒಂದು ಎಚ್ಚರಿಕೆಯ ಮಾತನ್ನೂ ಆಡಿದ್ದಾರೆ. ಅವರ ಮಾತಿನ ರೀತಿ, ಬಿಕ್ಕಟ್ಟು, ಕೇಳಿದಾಗ ಅವರು ರಾಜಕಾರಣಿಗಳನ್ನು ವರ್ಣಿಸಿರುವಂತೆ ಅವರಿಲ್ಲ ಎಂಬ ಭಾವನೆ ಬರುತ್ತದೆ. ಅವರು ನಿರ್ದಾಕ್ಷಿಣ್ಯವಾಗಿ ಕೆಲವು ವಿಷಯಗಳನ್ನು ಮುಂದಿಟ್ಟಿದ್ದಾರೆ. ರಾಜಕೀಯದಲ್ಲಿರುವ ಈರ್ಷೆ, ಮತ್ಸರ ದ್ವೇಷ, ಆಸುರೀ ಪ್ರವೃತ್ತಿ, ಪರನಿಂದೆಗಳು ಸಾಹಿತ್ಯ ಲೋಕಕ್ಕೆ ಬಂದರೆ ಅದರಿಂದ ಅನಾಹುತವಾಗುತ್ತದೆ. ಸಾಹಿತಿಗಳ ಕೆಲಸ ವಿರಸವಲ್ಲ; ಸಾಮರಸ್ಯವನ್ನು ತರುವುದು. ಸಾಹಿತಿಗಳಲ್ಲಿ ಪರಸ್ಪರ ನಿಂದೆ ಕೂಡದು.

ಕನ್ನಡ ನಾಡು ಏಕೀಕರಣವಾಗಿ ಹನ್ನೆರಡು ವರ್ಷಗಳಾದರೂ ಇನ್ನೂ ಭಾವೈಕ್ಯವಾಗಿಲ್ಲವೆಂದು ಹಳಿದುಕೊಳ್ಳುವುದು ಸರಿಯಲ್ಲ; ಈ ಬಗ್ಗೆ ನಿರಾಶೆಗೆ ಕಾರಣವಿಲ್ಲ. ವ್ಯಕ್ತಿ ಜೀವನದಲ್ಲಿ ಹನ್ನೆರಡು ವರ್ಷ ಹೆಚ್ಚಿನದಾದರೂ ರಾಷ್ಟ್ರದ ಜೀವನದಲ್ಲಿ ಇದು ದೊಡ್ಡದಲ್ಲ. ರಾಷ್ಟ್ರದಲ್ಲಿ ಭಾವೈಕ್ಯತೆಯನ್ನು ಸಾಧಿಸಲು ಪ್ರಯತ್ನಗಳು ನಡೆಯುತ್ತಿವೆ. ಸರ್ವೋದಯ, ಗ್ರಾಮದಾನ ಚಳುವಳಿಗಳ ಮೂಲಕ ಗಲಾಟೆ ಇಲ್ಲದೆ ನಿಶಬ್ದವಾಗಿ ಸಾಮರಸ್ಯದ ಕಾರ್ಯ ನಡೆಯುತ್ತಿದೆ. ಪ್ರವಾಹಕ್ಕೆ ಇಳಿಯದೆ ದೂರದ ದಡದಲ್ಲಿ ನಿಂತು ನೋಡಿದರೆ ಹೋರಾಟದ ಜತೆಗೆ ಬೇರೆಯದನ್ನೂ ಕಾಣುತ್ತೇವೆ. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಸಾಮರಸ್ಯ ಉಂಟಾಗುತ್ತಿದೆ. ಕನ್ನಡನುಡಿ, ಸಾಹಿತ್ಯ ಪರಿಷತ್ತಿನ ಗೋಷ್ಠಿಗಳಲ್ಲಿ ಸಾಮರಸ್ಯ ಹತ್ತಿರ ಬರುತ್ತಿದೆ. ಸಾಹಿತಿಗಳ ಮಟ್ಟದಲ್ಲಿ ಹೇಳುವುದಾದರೆ ನಾವು ಹತ್ತಿರ ಹತ್ತಿರ ಬರುತ್ತಿದ್ದೇವೆ. ಅಸೂಯೆ, ಮಹತ್ವಾಕಾಂಕ್ಷೆ ಹೋರಾಟಗಳು ಸೃಷ್ಟಿಯಲ್ಲಿನ ವಿಕಾಸದ ಹಂತಗಳಾಗಿ ಕಾಣುತ್ತವೆ. ಇದು ನಡೆಯಬೇಕೆಂದು ಹೇಳುತ್ತಿಲ್ಲ. ಸಾಹಿತಿಗಳಲ್ಲಿ ಸಾಮರಸ್ಯ ಬರುತ್ತಿದೆ.

ಒಮ್ಮೊಮ್ಮೆ ನಾನು ಸಿಟ್ಟಿನಿಂದ ಹೇಳುವುದುಂಟು : ಈ ರಾಜ್ಯಕ್ಕೆ ಮೈಸೂರು ಎನ್ನುವ ಹೆಸರು ಇರುವವರೆಗೆ ಮುಕ್ತಿ ಇಲ್ಲ ಎಂದು. ಹೆಸರಿನಲ್ಲಿ ಏನಿದೆ ಎನ್ನಬಹುದು. ಹೆಸರಿನಲ್ಲಿ ಎಲ್ಲವೂ ಇದೆ ಎಂದು ನಾನು ಹೇಳುತ್ತೇನೆ. ಹೆಸರಿನಿಂದ ಬಹಳ ಕೆಲಸ ನಡೆಯುತ್ತದೆ. ಕೆಲವು ಆಸೆಗಳು ಪ್ರಕೃತಿ ನಿಯಮದ ಪ್ರಕಾರ ಸಿದ್ಧಿ ಪಡೆಯಲೇಬೇಕು. ಕರ್ಣಾಟಕವೆನ್ನುವುದು ಜನಮನದ ಅಭೀಪ್ಸೆ. ಅದು ಈಡೇರಲೇ ಬೇಕು. ಸಾಹಿತಿಗಳ ಹಾರೈಕೆಯ ಜತೆಗೆ ರಾಜಕಾರಣಿಗಳ ಪ್ರಯತ್ನವೂ ಸೇರಿ ಕನ್ನಡ ನಾಡಿನ ಏಕೀಕರಣವಾಯಿತು. ಇದಕ್ಕೆ ಒಂದು ಹೆಸರು ಇಡುವ ಕೆಲಸ ಇನ್ನೂ ಉಳಿದಿದೆ. ಇದೆಲ್ಲ ಏಕೆ ಬೇಕೆನ್ನಬಹುದು. ಒಂದು ಸಾಂಸ್ಕೃತಿಕ ಜೀವನದಿಂದ ನಮ್ಮ ಜನರ ಆತ್ಮ ವಿಕಾಸಹೊಂದಿ ಪರಿಪೂರ್ಣತೆಯ ಕಡೆಗೆ ಹೋಗಲು ಇದರಿಂದ ಪ್ರೇರಣೆ ದೊರಕುತ್ತದೆ.

‘ ಮನುಷ್ಯ ಜಾತಿ ತಾನೊಂದೆ ವಲಂ ’ ಎಂದು ಸಾವಿರ ವರ್ಷಗಳ ಹಿಂದೆ ಮಹಾಕವಿ ಪಂಪ ಸಾರಿದ್ದಾನೆ. ಇದು ಇನ್ನೂ ಧ್ಯೇಯವಾಕ್ಯವಾಗಿಯೇ ಉಳಿದಿದೆ. ಇದನ್ನು ಒಪ್ಪಿದರೆ ಸಾಧನೆಯ ಮಾರ್ಗ ಗೋಚರಿಸುತ್ತದೆ. ಸಾಮಾಜಿಕ ಪ್ರಜ್ಞೆಯನ್ನು ಸಾಹಿತಿಗಳು ಎಚ್ಚರಿರಬೇಕೆಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದರು. ಸಾಹಿತಿಗಳು ಕಾದಂಬರಿಕಾರರು–ಸಮಾಜದ ಒಳ್ಳೆಯದು ಕೆಟ್ಟದ್ದನ್ನೂ ಚಿತ್ರಿಸಿ ತೋರಿಸುತ್ತಿದ್ದಾರೆ. ರೇಡಿಯೋ ಹಾಗೂ ನಾಟಕಗಳಲ್ಲಿ ನಮ್ಮ ದೌರ್ಬಲ್ಯವನ್ನು ಸೂಚಿಸಿ ಅದರಿಂದ ಪಾರಾಗುವಂತೆ

ಸೂಚನೆ ನೀಡುತ್ತಿದ್ದಾರೆ. ಇದು ಕನ್ನಡ ನಾಡಿನಲ್ಲಿ ಮಾತ್ರವಲ್ಲ ಭಾರತದಲ್ಲೆಡೆಯಲ್ಲೂ ನಡೆಯುತ್ತಿದೆ ಎಂಬುದನ್ನು Contemporary literatureನಂಥ ಬರವಣಿಗೆಗಳಲ್ಲಿ ನೋಡಬಹುದು. ಗುಜರಾತಿನ ಶ್ರೀ ಜೋಶಿಯವರಿಗೂ ಜ್ಞಾನಪೀಠದ ಸನ್ಮಾನ ದೊರಕಿತು. ಕನ್ನಡದಲ್ಲೂ ಈ ಸಮನ್ವಯದ ಕಾರ್ಯ ನಡೆಯುತ್ತಿದೆ. ಡಿ.ವಿ.ಜಿ., ಮಾಸ್ತಿ, ವಿ.ಸೀ., ಬೇಂದ್ರೆ, ಕಾರಂತ–ಹೀಗೆ ಒಬ್ಬೊಬ್ಬರೂ ಈ ಬಗ್ಗೆ ಮಹತ್ವದ ಕಾರ್ಯ ಮಾಡಿದರೆ ಅದರ ಮಟ್ಟವೇನು ಕಡಿಮೆಯೆ? ಶ್ರೀ ರಾಮಾಯಣ ದರ್ಶನವು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಪರಿವರ್ತಿತವಾದರೆ ಅದಕ್ಕೆ ವಿಶ್ವಖ್ಯಾತಿ ಬರುವುದೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಪ್ಪಣೆ ಕೊಡಿಸಿದರು. ಮೂಲದ ಸ್ವಾರಸ್ಯ, ಭಾಷೆ, ಭಾವಕ್ಕೆ ಊನವಿಲ್ಲದಂತೆ ಅನುವಾದಗೊಂಡಾಗ ಮಾತ್ರ ಅದು ಸಾಧ್ಯವಾಗುತ್ತದೆ.

ಇಂದು ಪಾಶ್ಚಾತ್ಯ ಸಾಹಿತ್ಯದಲ್ಲಿ ಹೊಸ ಹೊಸ ರೂಪ ಕಾಣಿಸಿಕೊಳ್ಳುತ್ತಿದೆ. ಅವರು ನೂತನತೆಯನ್ನು ಅಗಾಧ ವಿಶೇಷತೆಯಿಂದ ಅನುಭವಿಸುವಂತೆ ತೋರುತ್ತದೆ. ಅವರ ಸಾಹಿತ್ಯ ನಿರ್ಮಾಣ ಒಂದು ಕೈಗಾರಿಕೆಯಾಗಿ ಬೆಳೆದಿದೆ. ಹೊಸ ಹೊಸ ಕಂಪನಿಗಳು ಹುಟ್ಟಿಕೊಳ್ಳುತ್ತಿವೆ. ಅಲ್ಲಿ ಸಾಹಿತ್ಯ ಒಂದು ಲಾಭದಾಯಕ ಉದ್ಯಮವೆನಿಸಿದೆ. ಅಲ್ಲಿ ಒಂದು ದುಷ್ಟ ಪ್ರವೃತ್ತಿ ತಲೆ ಹಾಕಿದೆ. ಹಳೆಯ ಪುಸ್ತಕವನ್ನು, ಕವಿಗಳನ್ನು ಬೈಯದೆ ಹೊಸ ಪುಸ್ತಕವು ಮಾರಾಟವಾಗುವಂತಿಲ್ಲ. ಈ ಬಗೆಯ ಮನೋಭಾವ ನಮ್ಮಲ್ಲೂ ಬರಲಾರಂಭಿಸಿದೆ. ಹಳೆಯದರ ಸತ್ವ ಸಾರವನ್ನು ಹೀರಿಕೊಂಡು ನೂತನತೆಯನ್ನು ನಾವು ಸಾಧಿಸಬೇಕು. ಪ್ರಾಚೀನತೆಯ ಸಾರಸತ್ವವನ್ನು ಹೀರಿ ಅರ್ವಾಚೀನತೆ ಬೆಳೆಯಬೇಕು.

ಇಂದಿಗೂ ವರ್ಡ್ಸ್‌ವರ್ತ್ ಮಹಾಕವಿಯ ಓಡ್ ಆಗಲೀ ಟಿಂಟರ್ನ್ ಅಬೆ ಕವನವನ್ನಾಗಲೀ ಓದಿದರೆ ಹಿಂದೆ ಆಗುತ್ತಿದ್ದಷ್ಟೇ ಸಂತೋಷವಾಗುತ್ತದೆ. ಕವನ ಹಳೆಯದಾಯಿತೆಂದು ಅದರ ಸ್ವಾರಸ್ಯ ಹಳಸುವುದೇ? ಭಾರತೀಯರಿಗೆ ತಮ್ಮತನ ತಿಳಿದುದೂ ಪಾಶ್ಚಿಮಾತ್ಯ ಸಾಹಿತ್ಯದ ಅಭ್ಯಾಸದಿಂದಲೇ ಎಂಬುದನ್ನು ಮರೆಯಬಾರದು. ಸಾಹಿತ್ಯ ಸತ್ವ ಸರ್ವಕಾಲೀನವಾದುದು. ಕಾಲಕಳೆದಂತೆ ಅದರ ಅಂತಃಸತ್ವ ಕಡಮೆಯಾಗುವುದಿಲ್ಲ. ಉದಾಹರಣೆಗೆ ಚಿನ್ನವು ಯಥೇಚ್ಛವಾಗಿ ದೊರೆತರೆ ಅದರ ಬೆಲೆ ಕಡಮೆಯಾಗಬಹುದೇಹೊರತು ಅದರ ಚಿನ್ನತನಕ್ಕೆ ಕುಂದಿಲ್ಲ. ಒಮ್ಮೆ ಓದಿದಾಗ ರೋಮಾಂಚನಗೊಳಿಸಿದ ಕವನ ಮತ್ತೆ ಓದಿದಾಗ ಸಪ್ಪೆ ಎನಿಸಬಹುದು. ಆದರೆ ಅದರ ಅಂತಃಸತ್ವಕ್ಕೆ ಕುಂದಿಲ್ಲ. ಪಂಪ ರನ್ನರಲ್ಲಿ ಕೆಲವು ವಿಷಯಗಳು ನಮಗೆ ಹಿಡಿಸದಿದ್ದರೂ ಅವರಲ್ಲಿನ ಸನಾತನತೆ ನಮಗೆ ಹಿಡಿಸಲೇಬೇಕು. ಪಂಪನಿಂದ ಇಂದಿನವರೆಗಿನ ನಮ್ಮ ಕವಿಗಳ ಸತ್ವವನ್ನು ಕನ್ನಡದಲ್ಲಿ ಇಂದೂ ನೋಡುವಂತಾಗಬೇಕು.

ಹಿಂದೆ ಕನ್ನಡ ಎಂ.ಎ. ಆದವರಿಗೆ ಬೆಲೆ ಇರಲಿಲ್ಲ. ಈಗ ಬೆಲೆ ಬರುತ್ತಿದೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಸ್ಥಾನ ಮಾನ ಹೆಚ್ಚುತ್ತಿದೆ. ಅವು ಕನ್ನಡದ ಕೆಲಸ ಕೈಗೊಂಡಿವೆ. ಬೆಂಗಳೂರು ಕರ್ಣಾಟಕ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡಿಗರೇ ವೈಸ್‌ಚಾನ್ಸಲರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿಜವಾದ ಭಾರತೀಯರಾಗಿರುವ ಶ್ರೀಮಾಲಿ ಇದ್ದಾರೆ. ಅವರು ಯಾವ ಕನ್ನಡಿಗನೂ ಹೆಮ್ಮೆಪಡುವಂತಹ ಕಾರ್ಯವನ್ನು ಮಾನಸಗಂಗೋತ್ರಿಯಲ್ಲಿ ಮಾಡುತ್ತಿದ್ದಾರೆ. ಕನ್ನಡದ ಕೆಲಸಕ್ಕೆಲ್ಲ ಅವರು ಪ್ರೇರಕ ಶಕ್ತಿಯಾಗಿದ್ದಾರೆ.

ಇಂದು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಮಾಧ್ಯಮವು ಯಾವುದಿರಬೇಕೆಂಬುದರ ಬಗ್ಗೆ ಜಿಜ್ಞಾಸೆ ನಡೆದಿದೆ. ವಿದೇಶೀ ಬಂಡವಾಳದ ಸಹಾಯದಿಂದ ಇಂಗ್ಲಿಷಿನ ಸಲುವಾಗಿ ಚಳುವಳಿ ನಡೆಸುವವರು ಮಾತೃಭಾಷೆಯ ವಿರುದ್ಧವಾಗಿ ಬರೆಯುತ್ತಿದ್ದಾರೆ, ಮಾತನಾಡುತ್ತಿದ್ದಾರೆ. ನೂರಕ್ಕೆ ನೂರು ವಿದ್ಯಾರ್ಥಿಗಳು ಇಂಗ್ಲಿಷನ್ನು ತೆಗೆದುಕೊಳ್ಳಲಿ, ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ಅದು Compulsory ಭಾಷೆಯಾಗಬಾರದು. ವಿದ್ಯಾರ್ಥಿಗಳಿಗೆ ಅದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕೇ ಹೊರತು ಅದು ಬಲಾತ್ಕಾರದ ಭಾಷೆ ಆಗಿರಬಾರದು. ಈ ಬಲಾತ್ಕಾರಧ ಅಂಶವನ್ನು ತೆಗೆದುಹಾಕಲಿ, ಇಂಗ್ಲಿಷಿಗೆ ನನ್ನ ವಿರೋಧವಿಲ್ಲ.

ನಾನು ಇಂಗ್ಲಿಷಿನ ಪರಮಾರಾಧಕ. ಕನ್ನಡದ ಹತ್ತುಪಟ್ಟು ಇಂಗ್ಲಿಷ್ ಗ್ರಂಥಗಳನ್ನು ಓದುತ್ತಿದ್ದೇನೆ. ಸ್ವಂತವಾಗಿ ಆರಿಸಿಕೊಂಡು ಇಂಗ್ಲಿಷ್ ಕಲಿತವನಾದರೆ ಅವನಿಂದ ದೇಶಕ್ಕೆ ಉಪಕಾರ. ಆದರೆ ಬಲಾತ್ಕಾರ ಸಲ್ಲದು.

ಈಗ ತ್ರಿಭಾಷಾ ಸೂತ್ರವನ್ನು ನಮ್ಮ ಮೇಲೆ ಹೊರಿಸುವ ಪ್ರಯತ್ನ ನಡೆದಿದೆ. ಇದು ಅನಾವಶ್ಯಕ. ಇಲ್ಲಿ ಮೂರು ಭಾಷೆಗಳೂ ಬಲಾತ್ಕಾರದ್ದಾಗುತ್ತವೆ. ಇದು ಅನ್ಯಾಯ. ವಿದ್ಯಾರ್ಥಿಗಳಲ್ಲಿ ನೂರಕ್ಕೆ ತೊಂಭತ್ತು ಮಂದಿಗೆ ತಮ್ಮ ಸ್ವಂತಭಾಷೆ–ಮಾತೃಭಾಷೆ–ಸಾಕಾಗುತ್ತದೆ. ಕೆಲವರು ಇಂಗ್ಲಿಷಿನ ಪರವಾಗಿ ವಾದಿಸುವುದುಂಟು. ಅದು ಪ್ರಭಾವಶಾಲಿಯಾದ ಭಾಷೆ; ಪ್ರಬುದ್ಧ ಭಾಷೆ. ಸಾಹಿತ್ಯ, ತತ್ವ ಎಲ್ಲವೂ ಅದರಲ್ಲಿ ಸಮೃದ್ಧವಾಗಿದೆ ಎಂದು ಪುಸ್ತಕಗಳ

ಮಾರುಕಟ್ಟೆಯ ದೃಷ್ಟಿಯಿಂದಲೂ, ಪ್ರಕಟಣ ಉದ್ಯಮದ ದೃಷ್ಟಿಯಿಂದಲೂ ಇಂಗ್ಲಿಷ್ ಬೇಕಾಗಿದೆ. ಆದರೆ ಪರೀಕ್ಷೆ ಫಲಿತಾಂಶಗಳು ಹೇಳುವುದು ತದ್ವಿರುದ್ಧ ಸಂಗತಿ. ಅಲ್ಲಿ ನಮ್ಮ ವಿದ್ಯಾರ್ಥಿಯ ಮಾರಣ ಹೋಮವಾಗುತ್ತಿದೆ.

ಇಂಗ್ಲಿಷನ್ನಾಗಲೀ, ಹಿಂದಿಯನ್ನಾಗಲೀ ಹೊರಗಟ್ಟಬೇಕೆಂದು ನಾನು ಹೇಳುತ್ತಿಲ್ಲ. ಇಂಗ್ಲಿಷ್ ಬಲಿಷ್ಠ ಭಾಷೆ. ಅದನ್ನು ಅಳಾಗಿರಿಸಿಕೊಳ್ಳಿರಿ. ಅದಕ್ಕೆ ಕಾಲು ಮುರಿಯಿರಿ ಹೇಳಿದ ಕೆಲಸ ಮಾಡಿಕೊಂಡು ಬಿದ್ದಿರುತ್ತದೆ. ಹಿಂದಿಗೆ ಸ್ವಾತಂತ್ರ್ಯ ಕೊಡುವುದು ಬೇಡ. ಆದರ ಸೊಂಟ ಮುರಿಯಿರಿ. ಅದರಿಂದ ನಮಗೆ ಅಪಾಯವಿಲ್ಲ. ಒಬ್ಬ ಕುಂಟ ಇನ್ನೊಬ್ಬ ಹೆಳವ. ಆಗ ನಮ್ಮ ಭಾಷೆಯ ಏಳ್ಗೆಗೆ ಕುಂದಿರುವುದಿಲ್ಲ. ಅವು ನಮ್ಮ ಮೈಮೇಲೆ ಬೀಳುವುದಿಲ್ಲ. ಈ ತ್ರಿಭಾಷಾ ಸೂತ್ರವನ್ನು ತಾವು ಖಂಡಿತ ಒಪ್ಪಬಾರದು. ಅದರಿಂದ ರಾಷ್ಟ್ರಘಾತವಾದೀತು.

ಎಂದ ಮಾತ್ರಕ್ಕೆ ಕನ್ನಡವನ್ನು ಬಲಾತ್ಕಾರ ಭಾಷೆಯನ್ನಾಗಿ ಮಾಡಲು ನಾನು ಹೇಳುತ್ತಿಲ್ಲ. ಅದು ಪ್ರಥಮ ಭಾಷೆಯಾಗಿರಲಿ; ಮಾತೃಭಾಷೆಗೆ ಸಿಕ್ಕಬೇಕಾದ ಎಲ್ಲ ಗೌರವವೂ ಅದಕ್ಕೆ ದೊರಕಲಿ. ಇಂದು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ವಿಷಯ. ಅಂಥ ಗುರುಮುಖಿ ಲಿಪಿಯಲ್ಲಿ ಪಂಜಾಬಿ ಭಾಷೆಯನ್ನು ಕಲಿಸುವ ಪ್ರಯತ್ನ ಪಂಜಾಬಿನಲ್ಲಿ ನಡೆಯುತ್ತಿರುವಾಗ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡವನ್ನು ರಾಜ್ಯ ಭಾಷೆಮಾಡಲು ನಾವೇಕೆ ಹೆದರಬೇಕು ?

ನಮ್ಮಲ್ಲಿ ಕೆಲವರಿಗೆ ಕನ್ನಡ ಬರುವುದಿಲ್ಲ; ಅಂತಹವರು ಇಂಗ್ಲಿಷಿನಲ್ಲಿ ಮಾತನಾಡಲಿ. ಆದರೆ ಕನ್ನಡ ಬಲ್ಲವರೂ ಸ್ಥಳೀಯ ವಿಷಯ ಮಾತನಾಡುವಾಗ ಕನ್ನಡದಲ್ಲಿ ಏಕೆ ಮಾತನಾಡಬಾರದು ಎಂದನಿಸುತ್ತದೆ. ಕೆಲವು ವರ್ಷಗಳ ಹಿಂದೆ ರಾಜ್ಯಪಾಲರಾಗಿ ಹಂಗಾಮಿಯಾಗಿ ಅಧಿಕಾರ ಸ್ವೀಕರಿಸಿದ್ದ ನಿಟ್ಟೂರು ಶ್ರೀನಿವಾಸರಾಯರು ಮಿಲಿಟರಿ ಪೆರೇಡಿನಲ್ಲಿ ಕನ್ನಡದಲ್ಲಿ ವಂದನೆ ಸ್ವೀಕರಿಸಿ ಮಾತನಾಡಿದರು. ಅದನ್ನು ಕೇಳಿ ನನ್ನ ಹೊಟ್ಟೆಗೆ ಹಾಲು ಹೊಯ್ದಷ್ಟು ಸಂತೋಷವಾಯಿತು. ಇದೇ ವಿಷಯವನ್ನು ಅವರಿಗೂ ಬರೆದು ತಿಳಿಸಿದೆ.

ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಯಾಗಿದ್ದಾಗ, ಇಲ್ಲಿ ನಡೆದ ಜಾಗತಿಕ ವೈದ್ಯ ಸಮ್ಮೇಳನದಲ್ಲಿ ನಾನು ಕನ್ನಡದಲ್ಲಿ ಮಾತನಾಡಿ ಅದರ ಭಾಷಾಂತರ ಪ್ರತಿಗಳನ್ನು ಇಂಗ್ಲಿಷ್‌ನಲ್ಲಿ ಹಂಚಿದೆ. ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯೊಂದೇ ಅಲ್ಲ. ಕನ್ನಡವೂ ಇದೆ ಎಂದು ಅವರಿಗೆ ಗೊತ್ತಾಗಲೆಂದು ಹಾಗೆ ಮಾಡಿದೆ, ಅಷ್ಟೆ.

ಕನ್ನಡ ನಮ್ಮ ಮಾತೃ ಭಾಷೆ. ಎಲ್ಲರೂ ಕನ್ನಡದಲ್ಲಿ ವ್ಯವಹರಿಸುವಾಗ ಆತ್ಮೀಯತೆ ಬರುತ್ತದೆ. ಬಲಾತ್ಕಾರದಿಂದ ಭಾಷೆಯನ್ನು ಕಲಿಯಬೇಕಾದರೆ ಮಕ್ಕಳ ಕೊಲೆಯಾಗುತ್ತದೆ.

ನಮ್ಮ ಯುವಕರು ರಷ್ಯಕ್ಕೆ, ಜರ್ಮನಿಗೆ ಹೋಗಿ ಬರಬೇಕಾದರೆ ಅವರು ಅದನ್ನು ಸ್ವೇಚ್ಛೆಯಿಂದ ಕಲಿತಾರು. ಈ ಸ್ವಾತಂತ್ರ್ಯವನ್ನೇಕೆ ಅವರಿಗೆ ಕೊಡಬಾರದು ? ನನಗೆ ಅನಿಸುತ್ತಿರುವುದಿಷ್ಟು: ಇಂಗ್ಲಿಷಿನಿಂದ ಆದಾಯ ಪಡೆಯುತ್ತಿರುವವರು ಇಂಗ್ಲಿಷ್ ಹೋದರೆ ತಮ್ಮ ಆದಾಯ ಕಡಮೆ ಬೀಳುವುದೆಂದು ಕನ್ನಡವನ್ನು ವಿರೋಧಿಸುತ್ತಿದ್ದಾರೆ, ಅಷ್ಟೆ.

ನಮ್ಮ ವಿದ್ಯಾರ್ಥಿಗಳ ವಿಷಯವನ್ನು ತೆಗೆದುಕೊಳ್ಳಿ. ಕನ್ನಡದಲ್ಲಿ ಉತ್ತರ ಬರೆದು ಪಾಸಾದ ವಿದ್ಯಾರ್ಥಿ ಇಂಗ್ಲಿಷಿನಲ್ಲಿ ಉತ್ತರ ಬರೆದು ಭಾಷಾ ಹತೋಟಿಯಿಲ್ಲದೆ ಫೇಲಾಗುತ್ತಿದ್ದಾನೆ. ಮಹನೀಯರಿಗಿಂತ ಮಹಿಳೆಯರಿಗೆ ಇಂಗ್ಲಿಷ್ ಹೆಚ್ಚು ಪ್ರಿಯವೆಂದು ಕೇಳಿದ್ದೇನೆ. ಕನ್ನಡ ಬೇಡವಾದರೆ ಬಿಡಿ. ಆದರೆ ತ್ರಿಭಾಷಾ ಸೂತ್ರಕ್ಕೆ ಸಮ್ಮತಿ ನೀಡಿ ಇಂಗ್ಲಿಷನ್ನು ಬಲಾತ್ಕಾರದ ಭಾಷೆ ಮಾಡಬೇಡಿ. ಹಿಂದಿ ಅಧಿಕೃತ ಭಾಷೆಯಾಗಲಿ ಬೇಡವೆನ್ನುವುದಿಲ್ಲ. ಅದಕ್ಕಾಗಿ ಏಕೆ ಬಲಾತ್ಕಾರ ಎಂದು ನನ್ನ ಪ್ರಶ್ನೆ. ಕೇವಲ ನೌಕರಿ, ಅಧಿಕಾರ, ಸಂಬಳ ಈ ದೃಷ್ಟಿಯಿಂದ ಅಲ್ಲದೆ ಆತ್ಮ, ಸಂಸ್ಕೃತಿ, ರಸಪುಷ್ಟಿ, ಈ ದೃಷ್ಟಿಯಿಂದಲೂ ಆಸ್ವಾದನ ಮಾಡಲು ನಮಗೆ ಭಾಷೆ ಯಾವುದು ಬೇಕು ? ಉತ್ತರ ಸ್ಪಷ್ಟವಾಗಿದೆ. ಅದು ಮಾತೃಭಾಷೆ.

ನಮ್ಮನ್ನು ದಾರಿ ತಪ್ಪಿಸುತ್ತಿರುವ ಇಂಗ್ಲಿಷ್ ಪತ್ರಿಕೆಗಳು, ಅದರಿಂದ ಆದಾಯ ಪಡೆದವರು, ವಿದೇಶಿ ದುಡ್ಡಿನಿಂದ ಚಳುವಳಿ ನಡೆಸುವವರು ಈ ಬಗ್ಗೆ ವಿಚಾರಿಸಲೆಂದು ನನ್ನ ಪ್ರಾರ್ಥನೆ. ನಾನು ಅವಧೂತನಾಗಿ ಹೋಗುತ್ತಿದ್ದೇನೆ ಎಂದು ಶ್ರೀ ನರಸಿಂಹಾಚಾರ್ಯರು ಹೇಳಿದರು. ನಾನು ಅವಧೂತನಾಗಿ ಹೋಗುವುದಿಲ್ಲ. **ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವತನಕ, ಕನ್ನಡಕ್ಕಾಗಿ ದುಡಿಯುವುದು, ವ್ಯಕ್ತಿಗಳನ್ನು ಪ್ರಚೋದಿಸುವುದು ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಶ್ಶಕ್ತಿಯನ್ನು ಅಥವಾ ಪ್ರಾರ್ಥನಾಶಕ್ತಿಯನ್ನು ಕನ್ನಡ ಸೇವೆಗಾಗಿ ಮೀಸಲಿಡುತ್ತೇನೆ-**

ಎಂದು ಹೇಳಿ "ಹಳೆಯ ಸಾಲತೀರಿಸಲು ಬಂದಿದ್ದೇನೆ" ಎಂದು ತಿಳಿಸಿ ಸಹೃದಯರನ್ನು ಕೃತಜ್ಞತೆಯಿಂದ ಸ್ಮರಿಸಿದರು.

" ಕವಿ ವಿಭೂತಿಗೆ ನಮೋ! ಕೃತಿವಿಭೂತಿಗೆ ನಮೋ!
ದರ್ಶನಧ್ವನಿರಸಾವೃತ ಪಾನದಾನಂದದಿಂ
ಲೋಕ ಶೋಕವನಳಿಸಿ ಭುವನತ್ರಯಂಗಳಂ
ತಣಿಪನಂದನ ತಪೋದೀಕ್ಷೆಯಂ ಕೊಂಡೆಸಪ
ರಸಋಷಿಗೆ ಯೋಗಮತಿಗೆ ಸಹೃದಯ ವಿಭೂತಿಗೆ ನಮೋ!"

ಅಧ್ಯಕ್ಷತೆ ವಹಿಸಿದ್ದ ಶ್ರೀ ಹೊಂಬೇಗೌಡರು ಮಾತನಾಡುತ್ತಾ ತಮ್ಮ ಹಾಗೂ ಕುವೆಂಪು ಅವರ ಸ್ನೇಹ ಸಂಬಂಧವನ್ನು ಸ್ಮರಿಸಿದರು.

ಸಂಸಾರ ವೃಕ್ಷದಲ್ಲಿ ದೊರಕುವ ಫಲಗಳು ಎರಡು: ಒಂದು ಕಾವ್ಯ ರಸಾಸ್ವಾದನ, ಇನ್ನೊಂದು ಸಜ್ಜನ ಸಲ್ಲಾಪ. ಕುವೆಂಪುರವರ ಸಾಹಿತ್ಯ ವ್ಯಾಸಂಗದಿಂದ ಈ ಫಲಗಳ ರಸಾಸ್ವಾದನೆ ನನಗೆ ದೊರಕಿದೆ. ನಾನು ಅವರನ್ನು ಕಿಶೋರ ಚಂದ್ರವಾಣಿಯಾಗಿದ್ದ ಕಾಲದಿಂದಲೂ ಬಲ್ಲೆ. ೧೯೩೦ರ ಸುಮಾರಿನಲ್ಲಿ ಕುವೆಂಪುರವರು ಕಾಹಿಲೆ ಬಿದ್ದರಂತೆ. ಆ ಸಮಯದಲ್ಲಿ ಶಿಷ್ಯವಾತ್ಸಲ್ಯ ಪ್ರೇರಿತರಾಗಿ ಅವರ ವಿದ್ಯಾಗುರುಗಳಾಗಿದ್ದ ಎ. ಆರ್. ಕೃಷ್ಣಶಾಸ್ತ್ರಿಗಳು ಅಂದು ಪಾಠವನ್ನೇ ಮಾಡಲಿಲ್ಲವಂತೆ. ತಮ್ಮ ಕವಿ ಶಿಷ್ಯನಮೇಲೆ ಅವರಿಗೆ ಅಷ್ಟೊಂದು ಆದರ, ಅಭಿಮಾನ. ಪ್ರಬುದ್ಧ ಕರ್ನಾಟಕ ಎ. ಆರ್. ಕೃ. ಅವರ ಕೂಸು. ಅದರ ಪ್ರಥಮ ಪುಟದಲ್ಲಿ ಕುವೆಂಪುರವರ ಕವನದ ಕುಂಕುಮವಿಲ್ಲದೆ ಅದು ಹೊರಗೆ ಬರುತ್ತಿರಲಿಲ್ಲ. ಅವರ ಕೃಷ್ಣಕರ್ಣ ಸಂವಾದ ಸಮುದ್ರಲಂಘನ ಕೃತಿಗಳು ಆಗಿನ ಅರ್ಥಸಾಧಕ ಪತ್ರಿಕೆಯಲ್ಲಿ ೧೯೨೯–೩೦ರಷ್ಟು ಹಿಂದೆಯೇ ಓದಿ ಮೆಚ್ಚಿಕೊಂಡಿದ್ದೇನೆ. ನಾನು ಹುಟ್ಟು ನಾಸ್ತಿಕ. ಶ್ರೀ ರಾಮಾಯಣ ದರ್ಶನ ಕಾವ್ಯವನ್ನು ಓದಿದ ಮೇಲೆ ನಾನು ಆಸ್ತಿಕನಾದೆ. ಇಂದು ಇಂತಹ ಮಹಾಕವಿಯನ್ನು ಗೌರವಿಸುತ್ತಿರುವುದು ನಮ್ಮನ್ನು ನಾವು ಗೌರವಿಸಿಕೊಂಡಂತೆ.

ಎಂದು ಮುಕ್ತಕಂಠದಿಂದ ಕುವೆಂಪು ಅವರ ಕನ್ನಡ ಸೇವೆಯನ್ನು ಸ್ಮರಿಸಿ ಸಮಾರಂಭವನ್ನು ಏರ್ಪಡಿಸಿದ ಕಾರ್ಯಕರ್ತರನ್ನು ವಂದಿಸಿದರು.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಡಾ. ಹಾ.ಮಾ. ನಾಯಕ ಅವರು ಒಂದು ದಶಕದ ಹಿಂದೆ ನಡೆಯಬೇಕಾಗಿದ್ದ ಈ ಸನ್ಮಾನ ಸಮಾರಂಭವನ್ನು ಇಷ್ಟು ತಡವಾಗಿ ಆದರೂ ನಡೆಸಲು ಸಾಧ್ಯವಾದುದಕ್ಕಾಗಿ ತೃಪ್ತಿಯ ಭಾವವನ್ನು ವ್ಯಕ್ತಪಡಿಸಿ, ಈ ಕಾರ್ಯದಲ್ಲಿ ನೆರವಾದ ಎಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಿದರು.

ರಾಷ್ಟ್ರಗೀತೆಯೊಡನೆ ಚಿರಸ್ಮರಣೀಯವಾದ ಈ ಸಮಾರಂಭವು ಮುಕ್ತಾಯವಾಯಿತು.

ಗುರುಕೃಪೆ

●

ಕನ್ನಡದ ಕಲ್ಕೆಗಾತುರದಿಂದ ಎದೆನುಡಿಯೆ
ತುಂಬು ಹರಕೆಯನಿತ್ತು ಬೆಂಬಲದ ಕೈನೀಡಿ
ಶಿಷ್ಯವಾತ್ಸಲ್ಯದಲಿ ಬಾಯ್ತುಂಬ ಕೊಂಡಾಡಿ
ಸರಿ ದಾರಿ ತೋರ್ದುದನು ನಾನೆಂದಿಗೂ ಮರೆಯೆ.

ಸವಿಮಮತೆ ಮೈವೆತ್ತಿಹುದು ಮಾತು ಮಾತಿನಲಿ
ನಡೆ, ನುಡಿಗೆ ಕನ್ನಡಿಯ ಹಿಡಿದಂತೆ ಬಿಂಬಿಸಿರೆ
ಪೂರ್ಣಪಾಂಡಿತ್ಯದಲಿ ಘನಮೌನ ಶೋಭಿಸಿರೆ.

ಸತ್ಯ ಸರಳತೆ ಬೆರೆತು ಬೆಳಗಿಹವು ಬಾಳಿನಲಿ.
ದೈವಕೃಪೆ ಗುರುಕೃಪಾರೂಪದಲಿ ಮೈದೋರಿ
ಮಂದಬುದ್ಧಿಯ ತಿದ್ದಿ ಶುದ್ಧಿಗೊಳಿಸಿದುದಿಂತು.

ಭಗ್ನಹೃದಯಕೆ ಭರವಸೆಯ ನೀಡಿದುದು ನಿಂತು
ಗುರುಕರುಣೆಗೆಣೆಯಿಲ್ಲ; ಸಕಲರಕ್ಷಣಕಾರಿ!
ಕನ್ನಡದ ಹಂಬಲಕೆ ಕೈನೀರೆರೆದ ಗುರುವೆ
ಕೈಮುಗಿವೆ, ಕೈಮುಗಿವೆ, ನಿಮ್ಮಡಿಗಳಿಗೆ ಮಣಿವೆ.

('ಜೀವನ' ಕೃಪೆಯಿಂದ)

●

ಡಾ. ಜಿ. ವರದರಾಜರಾವ್

ವಿಮರ್ಶನರಂಗ

ರಾಮಕರ್ಣಾಮೃತ—(ಮೂಲ ತಾತ್ಪರ್ಯ ಮತ್ತು ಟಿಪ್ಪಣಿಗಳೊಡನೆ) ಲೇಖಕರು ಮತ್ತು ಸಂಪಾದಕರು : ಶ್ರೀ ಬಿ. ಎಸ್. ಕಪನಿಪತಯ್ಯ, ಬಿ.ಎ. ಪ್ರ: ಶ್ರೀ ಎಂ. ಎಸ್. ಶ್ರೀನಿವಾಸಯ್ಯ ಕೋಟಿ ಮಳವಳ್ಳಿ, ಮಂಡ್ಯ ಜಿಲ್ಲೆ ಪುಟ ೧೯೩, ಬೆಲೆ ೪–೦೦.

ಸುಮಾರು ೪೦೦ ಶ್ಲೋಕಗಳಿಗೂ ಅಧಿಕ ಸಂಖ್ಯೆಯ ಸ್ತೋತ್ರಗಳಿರುವ ಲಲಿತವಾದ ಸ್ತೋತ್ರಗ್ರಂಥವಿದು. ರಾಮಮಹಿಮಾಖಂಡ, ರಾಮವೈಭವಖಂಡ, ರಾಮಯೋಗಖಂಡ, ರಾಮತತ್ತ್ವಖಂಡ ಮತ್ತು ಸಶೇಷಫಲಖಂಡ ಎಂಬುದಾಗಿ ವಿಷಯಗಳಿಗನುಸಾರವಾಗಿ ಸಂಪಾದಕರು ಸ್ತೋತ್ರಗಳನ್ನು ವಿಂಗಡಿಸಿಕೊಂಡಂತೆ ಕಾಣುತ್ತದೆ. ೧೯೩೯ನೆಯ ಇಸವಿಯಲ್ಲಿ ಶ್ರೀ ಟಿ. ಎನ್. ಕೃಷ್ಣಯ್ಯ ಶೆಟ್ಟಿಯವರು ಶ್ರೀ ರಾಮಕರ್ಣಾಮೃತವೆಂಬ ಒಂದು ಸ್ತೋತ್ರ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದರಲ್ಲಿರುವಂತೆ ಪದ್ಯಗಳ ಅನುಪೂರ್ವಿ ಇದರಲ್ಲಿಲ್ಲ. ಪದ್ಯಗಳು ಬಹಳ ವ್ಯತ್ಯಸ್ತವಾಗಿರುವುದರಿಂದ ಈ ಹೆಸರಿನ ಗ್ರಂಥವು ವಿಭಿನ್ನರೀತಿಯಲ್ಲಿತ್ತೆಂದು ಊಹಿಸಬೇಕಾಗಿದೆ.

ಶ್ರೀ ಶಂಕರಭಗವತ್ಪಾದರು ಈ ಗ್ರಂಥವನ್ನು ರಚಿಸಿದರೆಂಬುದು ವಿಶ್ವಾಸಾರ್ಹವಲ್ಲ. ಆಚಾರ್ಯರ ಸೌಂದರ್ಯ ಲಹರಿ, ಶಿವಾನಂದಲಹರಿ ಮುಂತಾದ ಸ್ತೋತ್ರಗಳ್ನೋದಿದವರು ಇದು ಆಚಾರ್ಯ ವಿರಚಿತವೆಂಬುದನ್ನು ಎಂದಿಗೂ ಒಪ್ಪಲಾರರು. ಶ್ರೀ ಶಂಕರಾಚಾರ್ಯರ ಅರ್ಥಪ್ರೌಢಿಯಿಂದ ತುಳುಕುವ, ಭಕ್ತಿ ಭಾರದಿಂದ ಬಳುಕುವ, ಅನನ್ಯ ಸಾಧಾರಣವಾದ ಲಲಿತಪದಬಂಧವುಳ್ಳ ವಾಗ್ಧೋರಣೆಯೇ ಬೇರೆಯದು. ಶಂಕರಾಚಾರ್ಯರೆಂಬ ಹೆಸರಿನ ಯಾರಾದರೊಬ್ಬ ಮಠಾಧಿಪತಿಗಳು ಈ ಗ್ರಂಥದ ಕರ್ತೃಗಳಾಗಿರಬಹುದು ಅಥವಾ ಬೇರೆಬೇರೆಯವರಿಂದ ಶ್ರೀ ರಾಮ ಸ್ತೋತ್ರಗಳನ್ನು ಯಾರಾದರೂ ಒಂದು ಗ್ರಂಥವನ್ನಾಗಿ ಸಂಗ್ರಹಿಸಿರಬಹುದು.

ಹೇಗಿದ್ದರೂ, ಸಂಪಾದಕರಾದ ಶ್ರೀ ಬಿ. ಎಸ್. ಕಪನೀಪತಯ್ಯನವರ ಪ್ರಯತ್ನ ಶ್ಲಾಘನೀಯವಾದುದು. ಉತ್ತಮವಾದ ಕಾಗದದಲ್ಲಿ ಸುಂದರಮುದ್ರಾಕ್ಷರಗಳಿಂದ ಅಚ್ಚು ಮಾಡಿರುವ ಈ ಪುಸ್ತಕವು ಶ್ರೀ ರಾಮ ಭಕ್ತರನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ. ಕನ್ನಡಲಿಪಿಯಲ್ಲಿರುವ ಶ್ಲೋಕಗಳಿಗೆ ಕನ್ನಡದಲ್ಲಿ ಸರಳಾನುವಾದವನ್ನು ಮಾಡಿದ್ದಾರೆ. ಸಾಮಾನ್ಯವಾದ ಸಂಸ್ಕೃತಜ್ಞಾನವಿರತಕ್ಕವರೂ ಅನುವಾದವನ್ನೋದುತ್ತ ಶ್ಲೋಕದ ಭಾವಾರ್ಥವನ್ನು ಗ್ರಹಿಸಬಹುದು. ಶ್ಲೋಕಗಳನ್ನು ಬಾಯಿಪಾಠಲಿಚ್ಛಿಸುವ ಭಕ್ತರಿಗೂ ಅರ್ಥಾನುಸಂಧಾನಪೂರ್ವಕವಾಗಿ ಹಾಡಲಿಚ್ಛಿಸುವ ಗಾಯಕರಿಗೂ ಇದು ಅತ್ಯಂತ ಉಪಯುಕ್ತವಾಗಿದೆ. ಪದಲಾಲಿತ್ಯವು ಸಕಲರನ್ನೂ ಆಕರ್ಷಿಸುತ್ತದೆ.

'ರಾಮಯೋಗಖಂಡ'ದಲ್ಲಿ ಶ್ರೀ ರಾಮನು ಯೋಗಗಮ್ಯನೆಂದು ಸ್ತುತಿಸಿದೆ. ಅನುವಾದಕರು ಈ ಪ್ರಕರಣದಲ್ಲಿ ಷಟ್‌ಚಕ್ರಗಳ ವಿವರವನ್ನು ಕೊಟ್ಟು ಶ್ಲೋಕದ ಭಾವವನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. 'ರಾಮತತ್ತ್ವ' ಎಂಬ ಪ್ರಕರಣದಲ್ಲಿ ಅದ್ವೈತಸಾರವನ್ನು ವಿಶದವಾಗಿ ನಿರೂಪಿಸಿದ್ದಾರೆ. ಶ್ರೀ ರಾಮನು 'ತತ್ತ್ವಮಸ್ಯಾದಿಲಕ್ಷ್ಯ'ನೆಂದು ಹೇಳಿ ಅದಕ್ಕೆ ಉಪಷ್ಟಂಭಕವಾಗಿ ವೇದಾಂತಸಾರವನ್ನು ಗ್ರಂಥಕರ್ತರು ವಿವರಿಸಿದ್ದಾರೆ. ಈ ಸ್ತೋತ್ರಗ್ರಂಥಕ್ಕೂ ತತ್ತ್ವವಿವೇಚನೆಗೂ ನೇರವಾದ ಸಂಬಂಧವೇನೂ ಕಾಣದು. ಆದರೂ ಈ ವಿವೇಚನೆಯು ಜಿಜ್ಞಾಸುಗಳಿಗೆ ಅತ್ಯಂತ ಉಪಯುಕ್ತವಾಗಿದೆ.

ಕಡೆಯಲ್ಲಿ ಶ್ರೀ ಕಪನೀಪತಯ್ಯನವರು 'ಆತ್ಮರಾಮ ಪೂಜಾದ್ವಾದಶಮಂಜರಿ, ಯೋಗಚಕ್ರಾತ್ಮಕ ನಿರ್ಗುಣ ಧ್ಯಾನ' ಎಂಬ ತಮ್ಮದೇ ಆದ ಎರಡು ಕನ್ನಡ ಕವಿತೆಗಳನ್ನು ಜೋಡಿಸಿದ್ದಾರೆ. ಶ್ರೀ ರಾಮ ಭಕ್ತಿಯು ಪ್ರಸಾರವಾಗಲೆಂದು ಸದುದ್ದೇಶದಿಂದಲೇ ಬರೆದು ಪ್ರಕಟಿಸಿರುವ ಈ ಗ್ರಂಥವನ್ನು ಭಾವುಕರಾದ ಕನ್ನಡಿಗರು ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಶ್ರೀ ಕಪನೀಪತಯ್ಯನವರಿಗೆ ಹೃತ್ಪೂರ್ವಕವಾದ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

ಈ ಸಂದರ್ಭದಲ್ಲಿ ಕೆಲವು ನ್ಯೂನತೆಗಳನ್ನು ನಾವು ಹೇಳದಿದ್ದರೆ ಗ್ರಂಥಾವಲೋಕನವು ಪೂರ್ಣವಾಗದು.

ಶ್ರೀ ಕೃಷ್ಣಕರ್ಣಾಮೃತವೆಂಬ ಸ್ತೋತ್ರಗ್ರಂಥ ಒಂದು ಪ್ರಸಿದ್ಧವಾಗಿದೆಯಷ್ಟೆ. ಅಲ್ಲಿ ವ್ಯಕ್ತವಾಗುವ ಕಾವ್ಯ ಸೌಂದರ್ಯವನ್ನು ರಾಮಕರ್ಣಾಮೃತದಲ್ಲಿ ನಾವು ಕಾಣೆವು. ಅದಕ್ಕೆ ಇದನ್ನು ಹೋಲಿಸುವುದು ಶಕ್ಯವಿಲ್ಲ. ಮೂಲಶ್ಲೋಕಗಳಲ್ಲಿರುವ ಕೆಲವು ಅಶುದ್ಧ ಪ್ರಯೋಗಗಳನ್ನು ಗಮನಿಸಿದರೆ, ವಿಶಕಲಿತವಾದ ಶ್ಲೋಕಗಳನ್ನು ಯಾರೋ ಸಂಗ್ರಹಿಸಿರಬಹುದೆಂಬ ಊಹೆಯೇ ದೃಢವಾಗುತ್ತದೆ.

ಉದಾಹರಣೆಗಳು :

ಪುಟ ೯ – ನಮಸ್ತೇಂದುನಿಭಾನನಾಯ

ಪುಟ ೪೬ – ದದತು ಶ್ರೀರಾಮಕಲ್ಪದ್ರುಮಃ
ಪುಟ ೯೭ – ವಂದೇಂದು ನಿಭಾನನಾಯ
೯೬ನೆಯ ಪುಟದಲ್ಲಿ 'ಶ್ರೀ ರಾಮೋ ರಘುನಾಯಕೋ...'

ಎಂಬ ಪದ್ಯದಲ್ಲಿ 'ರಘುನಾಯಕ, ರಘುವರ, ರಘುಪುಂಗವ, ರಘುಕುಲೋತ್ತಂಸ, ರಘೂಣಾಂಪತಿಃ' ಎಂಬುದಾಗಿ ಒಂದೇ ಅರ್ಥದ ಪದಪುಂಜಗಳು ಕಾವ್ಯಮಾರ್ಗದಲ್ಲಿ ನೀರಸ ವಾಗುತ್ತವೆ.

ಹೀಗೆಯೇ ಅನನ್ವಿತಾರ್ಥವುಳ್ಳ ಶಬ್ದಜಾಲಗಳು ಹೇರಳ ವಾಗಿ ಗೋಚರಿಸುತ್ತವೆ. ಅಧ್ಯಾಹಾರಾದಿಗಳನ್ನು ಮಾಡಿ ಕೊಂಡು ಕ್ಲೇಶದಿಂದ ಪಂಕ್ತಿಯನ್ನು ಯೋಜಿಸಬೇಕಾಗು ತ್ತದೆ. ೭೮ನೆಯ ಪುಟದಲ್ಲಿ ಭರತನನ್ನು ಕೈಕಾಸುತನೆಂದು ಹೇಳಲಾಗಿದೆ. ಕೈಕೇಯಿಯನ್ನು ಕೈಕಾ ಎನ್ನುವುದು ಸರಿ ಯಾದೀತೆ?

ಕನ್ನಡ ಅನುವಾದಲ್ಲಿಯೂ ಪ್ರಮಾದಗಳು ಸಂಭವಿಸಿವೆ. ಉದಾಹರಣೆಗೆ, ೪೧ನೆಯ ಪುಟದಲ್ಲಿ 'ಮೈಥಿಲೀ ನೇತ್ರ ಚಂದ್ರಃ' ಎಂಬ ಶಬ್ದಕ್ಕೆ 'ಸೀತೆ ಎಂಬ ನೇತ್ರಕ್ಕೆ ಚಂದ್ರ ನಂತೆ ಸುಖದಾಯಕನಾದ, ಎಂದು ಅರ್ಥ ಹೇಳಿದ್ದಾರೆ.

ಅನಭಿಜ್ಞರಾದ ಭಾವುಕರ ಬಾಯಲ್ಲಿ ಬಂದು ಶ್ಲೋಕ ಗಳು ತಾಳದಪ್ಪಿವೆ. ಅನುವಾದಕರು ಶ್ಲೋಕಗಳ ಶುದ್ಧೀ ಕರಣಕ್ಕೆ ಮೊದಲ ಪ್ರಯತ್ನ ಮಾಡಿದ್ದರೆ ಗ್ರಂಥದ ಉಪಯೋಗ ಇನ್ನೂ ಹೆಚ್ಚುತ್ತಿತ್ತು. ಅನುವಾದವನ್ನೊಮ್ಮೆ ವಿದ್ವಾಂಸರಿಂದ ಶೋಧನೆಮಾಡಿಸಿದ್ದರೆ ಉತ್ತಮ ಫಲವು ಲಭಿಸುತ್ತಿತ್ತು. ಮುಂದಿನ ಮುದ್ರಣದಲ್ಲಿ ಈ ಅಂಶಗಳನ್ನು ಸರಿಪಡಿಸಿದರೆ, ಭಕ್ತವೃಂದಕ್ಕೆ ನಿಜವಾಗಿಯೂ ಉಪಯುಕ್ತ ವಾಗುವ ಒಳ್ಳೆಯ ಗ್ರಂಥವಿದು.

ಎನ್. ರಂಗನಾಥಶರ್ಮಾ

ಕನ್ನಡ ಭಾಷೆಯ ಚರಿತ್ರೆ—ಲೇಖಕರು ಮತ್ತು ಪ್ರಕಾಶಕರು: ಪ್ರಹ್ಲಾದ ಗೋವಿಂದ ಕುಲಕರ್ಣಿ, ೨೦೦/೩೩, ಹಿಂದವಾಡಿ, ಬೆಳಗಾಂ. ಡೆಮ್ಮಿ ೧/೮ ಪುಟ: ೧೪+೫೪೭. ಬೆಲೆ: ಸಾದಾಪ್ರತಿ ರೂ. ೨೦–೦೦, ಕ್ಯಾಲಿಕೋ ಪ್ರತಿ ರೂ. ೨೪–೦೦

ಕನ್ನಡದಲ್ಲಿ ಹಿಂದಿನಿಂದಲೇ ರಸಾತ್ಮಕ ಸಾಹಿತ್ಯ ರಚನೆ ಯಾದಂತೆಲ್ಲ, ಶಾಸ್ತ್ರ ಸಾಹಿತ್ಯವೂ ನಿರ್ಮಾಣವಾಗಿದೆ. ಉಪಲಬ್ಧ ಕನ್ನಡ ಗ್ರಂಥಗಳಲ್ಲಿ ಮೊದಲನೆಯದೆನಿಸುವ ಕವಿರಾಜಮಾರ್ಗ ಒಂದು ಶಾಸ್ತ್ರಗ್ರಂಥವೇ ಆಗಿರುವುದು ಸರ್ವವಿದಿತ. ಅಲಂಕಾರ–ಛಂದಸ್ಸು–ರಸ–ವ್ಯಾಕರಣಾದಿ ಶಾಸ್ತ್ರ ಗ್ರಂಥಗಳು ಜನಸಾಮಾನ್ಯಕ್ಕೆ ಶುಷ್ಕವೆನಿಸಬಹುದು. ಆದರೆ ಭಾಷೆಯ ಮತ್ತು ಸಾಹಿತ್ಯದ ಸರಿಯಾದ ಅಧ್ಯಯ ನಕ್ಕೆ ಇವು ಅನಿವಾರ್ಯ. ಶಾಸ್ತ್ರ ಪರಿಜ್ಞಾನದಿಂದ ಆಗಿರುವ ರಚನೆಗಳಲ್ಲಿ ಹಿಡಿತವೂ, ಖಚಿತತೆಯೂ, ವಿಚಾರ ಶೀಲತೆಯೂ, ಸಮನ್ವಯತೆಯೂ ಉಂಟಾಗಲು ತಕ್ಕ ಪ್ರೇರಣೆ ದೊರಕುವುದರಿಂದ ಶಾಸ್ತ್ರ ಗ್ರಂಥಗಳು ಅಷ್ಟೇ ಮಾನ್ಯತೆಗೆ ಅರ್ಹವಾಗಿವೆ. ಇಂತಹ ಶಾಸ್ತ್ರಗ್ರಂಥಗಳಲ್ಲಿ ಭಾಷೆಗೆ ಸಂಬಂಧಿಸಿದುದು ವ್ಯಾಕರಣ ಶಾಸ್ತ್ರವೊಂದೇ ಅಲ್ಲ. ವೈಯಾಕರಣರು "ಪ್ರಯೋಗ ಶರಣ"ರಾದುದರಿಂದ ಅವರ ರಚನೆಗೆ ಭಾಷೆಯಲ್ಲಿ, ಭಾಷೆಯ ಸಾಹಿತ್ಯದಲ್ಲಿ ಪ್ರಚಲಿತ ವಿರುವ ಪದಪ್ರಯೋಗಗಳೇ ಆಧಾರ. ಈ ಪದಪ್ರಯೋಗ ಗಳ ನೆಲೆಯಿಂದ ರೂಪಿತವಾದುದು ಭಾಷಾಶಾಸ್ತ್ರ. ಈ ಬಗೆಯ ಆವಶ್ಯಕತೆಯನ್ನು ಈಡೇರಿಸುವ ಕೆಲವು ಗ್ರಂಥ ಗಳೂ ಕೆಲವಾರು ಲೇಖನಗಳೂ ಈಗಾಗಲೇ ಕನ್ನಡದಲ್ಲಿ ಬಂದಿವೆ. ಅಂಥವುಗಳಲ್ಲಿ ಪ್ರಸ್ತುತ ಗ್ರಂಥವೂ ಒಂದು ಉತ್ತಮವಾದ ಆವಶ್ಯಕ ರಚನೆ.

ಈ ಗ್ರಂಥದಲ್ಲಿ ಬರುವ ಅಧ್ಯಾಯಗಳನ್ನು ಐದು ಕಾಂಡ ಗಳಾಗಿ ವಿಭಾಗಿಸಲಾಗಿದೆ. ಅವು ಪ್ರಸ್ತಾವನಾಕಾಂಡ, ವರ್ಣಕಾಂಡ, ಶಬ್ದಕಾಂಡ, ಪದಸಿದ್ಧಿಕಾಂಡ, ಪರಿಶಿಷ್ಟ ಎಂಬವು.

'ಪ್ರಸ್ತಾವನಾಕಾಂಡ'ದಲ್ಲಿ ಕನ್ನಡದ ಅಸ್ತಿತ್ವ, ವ್ಯುತ್ಪತ್ತಿ, ಸ್ಥಾನ, ಬೆಳವಣಿಗೆ, ಭಾಷೆಯ ಅವಸ್ಥಾಭೇದ– ಮುಂತಾದ ಸಾಧಾರಣ ವಿಷಯಗಳನ್ನು ಸಾಧಾರವಾಗಿ ವಿವರಿಸಲಾಗಿದೆ. 'ವರ್ಣಕಾಂಡ'ವೆಂಬುದು ಕನ್ನಡ ಲಿಪಿ, ವರ್ಣಮಾಲೆ, ಶುದ್ಧಗೆ, ಅವಸ್ಥಾಭೇದದಿಂದಾದ ವರ್ಣ ವ್ಯತ್ಯಾಸ–ಎಂಬೀ ವಿಚಾರಗಳ ನಿರೂಪಣೆಗಳನ್ನು ಒಳ ಗೊಂಡಿದೆ. 'ಶಬ್ದಕಾಂಡ'ದಲ್ಲಿ ಬೀಜಶಬ್ದಗಳು, ದೇಶ್ಯ ಶಬ್ದಗಳ ಬೆಳವಣಿಗೆ, ಶಬ್ದಸ್ವರೂಪ, ಸರ್ವನಾಮಗಳು, ವಿಶೇಷಣಗಳು, ಅವ್ಯಯಗಳು, ಸಾಧಿತ ಶಬ್ದಗಳು, ತತ್ಸಮ– ತದ್ಭವ–ಅನ್ಯದೇಶ್ಯಗಳು ಎಂಬಿವುಗಳ ಸುಬೋಧ ವಿವರಣೆ ಇದೆ. 'ಪದಸಿದ್ಧಿಕಾಂಡ'ದಲ್ಲಿ ನಾಮಪದ, ವಿಭಕ್ತಿ ಪ್ರತ್ಯಯಗಳು, ಕ್ರಿಯಾಪದಗಳು, ಸಾಪೇಕ್ಷ–ಸಂಯುಕ್ತ ಕ್ರಿಯಾರೂಪಗಳು, ಸಂಧಿಕಾರ್ಯ–ಇವುಗಳನ್ನು ಸಮರ್ಪಕ ವಾಗಿ ವಿವರಿಸಲಾಗಿದೆ. ಕೊನೆಯ ಪರಿಶಿಷ್ಟ ಕಾಂಡದಲ್ಲಿ ವಾಕ್ಯರಚನೆ (ಶೈಲಿ) ಇತರ ಭಾಷೆಗಳಿಗೆ ಕನ್ನಡದ ಕೊಡುಗೆ, ಭಾರತೀಯ ವರ್ಣಮಾಲೆಯ ಇತಿಹಾಸ–ಎಂಬ ವಿಚಾರಗಳ ವಿವೇಚನೆಯನ್ನು ಕಾಣಬಹುದು.

ವ್ಯಾಕರಣ–ಭಾಷೆ–ಭಾಷಾಚರಿತ್ರೆಗಳ ಪ್ರೀತಿನಿಷ್ಠ ಅಧ್ಯ ಯನದಿಂದ ಲೇಖಕರು ಗಳಿಸಿದ ಅನುಭವದ ಸಾರವು

ಇಲ್ಲಿದೆ. ಕನ್ನಡದ ಸೋದರ ಭಾಷೆಗಳೊಡನೆಯೂ ಮರಾಠಿ ಸಂಸ್ಕೃತಗಳೊಡನೆಯೂ ತೌಲನಿಕ ವಾದ ವಿವೇಚನೆ ಇಲ್ಲಿ ನಡೆದಿದೆ. ಇದರಿಂದ ಕನ್ನಡದಮೇಲೆ ಪ್ರೀತಿ-ಗೌರವಗಳು ಉಂಟಾಗುವುದಲ್ಲದೆ, ವ್ಯಾಸಂಗ ಮಾಡುವವರಿಗೆ ಇದು ಅತಿ ಉಪಯುಕ್ತವೆನಿಸುವುದು. ಅಭಿಪ್ರಾಯಪುಷ್ಟಿಗಾಗಿ ಆಧಾರಗಳನ್ನು ಕೊಡುವಲ್ಲಿ, ನಿರ್ಣಯವನ್ನು ಮಂಡಿಸುವಲ್ಲಿ ತೂಕತಪ್ಪದೆ, ಸರಳವಾಗಿ ತಿಳಿಸುತ್ತ ಲೇಖಕರು ತಮ್ಮ ಸ್ವಚ್ಛ ಹೃದಯವನ್ನೂ ಸೂಕ್ಷ್ಮಮತಿಯನ್ನೂ ವಿವೇಕವನ್ನೂ ಪ್ರಾಮಾಣಿಕತೆಯನ್ನೂ ಪ್ರಕಟಪಡಿಸಿದ್ದಾರೆ. ಗೊತ್ತಿಲ್ಲದುದನ್ನು ಗೊತ್ತಿರುವಂತೆ ನಟಿಸಿ, ಅಧಿಕಾರವಾಣಿಯಿಂದ ಬರೆವ ಹವ್ಯಾಸ ಇಲ್ಲಿಲ್ಲ. ಇದು ದುಡುಕಿ ಬರೆದ ಗ್ರಂಥವಲ್ಲ; ಟಿಪ್ಪಣಿ-ನೋಟ್ಸುಗಳ ವಿಸ್ತರಣವೂ ಅಲ್ಲ. ದೀರ್ಘಕಾಲದಿಂದ ಗಳಿಸಿದ ಬೆಳೆಸಿದ ಅನುಭವದ ಬೀಜ ಮೊಳೆಕೆಯೊಡೆದು, ವಿವಿಧ ವಿದ್ವಜ್ಜನರ ಸದ್ಗ್ರಂಥಗಳ ರಸ ಪೋಷಣೆಯಿಂದ ಬೆಳೆದು ನಿಂತ ಪಂಚಶಾಖೆಗಳ ವೃಕ್ಷದಂತಿರುವ ಪುಸ್ತಕವಿದು. ಕನ್ನಡಿಗರ ಪಂಚಶಾಖೆಗೆ (ಕೈಗೆ) ಭೂಷಣವಾಗಲು ಅರ್ಹತೆ ಪಡೆದಿದೆ.

ಟಿ. ಕೇಶವಭಟ್ಟ

ಇಂಥವರೂ ಇದ್ದಾರೆ : ಲೇ. : ಶ್ರೀ ಎಸ್. ಅನಂತನಾರಾಯಣ ಪ್ರ.: ಶ್ರೀಮತಿ ವಸಂತ, ಗಂಗಾತರಂಗ, ಸರಸ್ವತಿ ಪುರಂ, ಮೈಸೂರು-೫. ಬೆಲೆ : ಸಾಮಾನ್ಯ ಪ್ರತಿ ರೂ. ೨-೦೦, ಕ್ಯಾಲಿಕೊ ಪ್ರತಿ ರೂ. ೩-೦೦

'ಇಂಥವರೂ ಇದ್ದಾರೆ' ಹನ್ನೆರಡು ಹರಟೆಗಳು ಮತ್ತು ವ್ಯಕ್ತಿ ಚಿತ್ರಗಳ ಸಂಗ್ರಹ. ಶ್ರೀ ಅನಂತನಾರಾಯಣರ ಸಾಹಿತ್ಯ ವ್ಯವಸಾಯ ವಿಶಾಲವಾದುದು. ಅವರ ಪಳಗಿದ ಲೇಖನಿ ನಮ್ಮನ್ನು ನಿರಾಶೆಗೊಳಿಸುವುದಿಲ್ಲ. ಒಂದೆರಡು ಹರಟೆಗಳನ್ನು ಬಿಟ್ಟರೆ ಎಲ್ಲವೂ ಸಹೃದಯರ ಚಿತ್ತವನ್ನು ಅಪಹರಿಸಿ ಲೇಖಕರ ಭಾವನಾಲಹರಿಯೊಡನೆ ಕರೆದೊಯ್ಯುತ್ತವೆ. ವ್ಯಕ್ತಿಚಿತ್ರಗಳನ್ನು ಆತ್ಮೀಯತೆಯಿಂದ ಚಿತ್ರಿಸಿರುವುದರಿಂದ ಹಿತವಾಗಿವೆ.

'ಸೋಮಾರಿತನ' ಹರಟೆಯ ಸರ್ವ ಲಕ್ಷಣಗಳನ್ನೂ ಹೊತ್ತಿದೆ. ಸೋಮಾರಿತನವನ್ನು ನೀಗಿಕೊ ಎಂದು ಹೇಳಿದ ಗೆಳೆಯರ ಸಲಹೆಯ ವ್ಯಾಖ್ಯಾನ ಮಾಡುತ್ತಾ, ವ್ಯತ್ಯಾಸವೇ ಜೀವನದ ಚಿಹ್ನೆ ಎಂಬ ನಿಲುಗಡೆಗೆ ಬರುತ್ತಾರೆ ಪ್ರಬಂಧಕಾರರು. ಸತ್ಯ, ಶಿವ, ಸೌಂದರ್ಯಗಳು ಬದಲಾಗುವುದಿಲ್ಲ. ಅಂತೆಯೆ ನಾನು ಎಂದು ಹೇಳಿಕೊಂಡು ಪ್ರಬಂಧಕಾರರು ಸತ್ಯ, ಸೌಂದರ್ಯಗಳು ತಮಗೆ ಅನ್ವಯವಾಗದಿದ್ದರೂ 'ಶಿವ' (ಸ್ಥಾಣು) ಅನ್ವಯವಾಗುವುದರಿಂದ ಮತ್ತು ದೇವರ ಎಲ್ಲ ಲಕ್ಷಣಗಳೂ ಇರುವುದರಿಂದ ತಾವೂ ದೇವರೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಓದುಗರಿಗೂ ಹೌದೇನೊ ಎನ್ನಿಸುತ್ತದೆ. ಹಾಗೆಯೆ ಮಾನವರಂತೆ ಏಕೆ ವರ್ತಿಸುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದಕ್ಕೆ ಉತ್ತರ ಸಿದ್ಧವಿದೆ-ಮಾನವನಾಗಿ ಹುಟ್ಟಿದ ಮೇಲೆ ಮಾನವ ಸಹಜವಾದ ದೌರ್ಬಲ್ಯವನ್ನು ಪ್ರದರ್ಶಿಸಬೇಕಲ್ಲವೆ? ದೌರ್ಬಲ್ಯ ಶ್ರೀರಾಮನನ್ನೂ ಬಿಡಲಿಲ್ಲ ಎಂದಮೇಲೆ ಇನ್ನೇನು? ಆ ದೌರ್ಬಲ್ಯದ ಒಂದು ಲಕ್ಷಣ ಮರೆವು! . . . ಹೀಗೆ ತಮ್ಮ ಲೇಖನಿಯನ್ನು ಹರಿಯಬಿಟ್ಟು, ಸ್ವಾರಸ್ಯವಾಗಿ ತಮ್ಮ ವಾದವನ್ನು ಪುಷ್ಟೀಕರಿಸುತ್ತಾ, ಕೊನೆಗೆ ಎಲ್ಲರೂ ಸೋಮಾರಿಗಳಾಗುವುದು ಲೋಕಕ್ಕೆ ಕ್ಷೇಮ ಎಂದು ಸ್ವಾರಸ್ಯವಾಗಿ ಮುಕ್ತಾಯ ಮಾಡಿದ್ದಾರೆ.

ಕಿರಿದಾದರೂ ಸ್ವಾರಸ್ಯವಾದ ಹರಟೆಯೆಂದರೆ 'ದಂತಕಥೆ' ಇದು ದಂತದ ಕಥೆಯಿಂದ ಅಂದರೆ ಹರಿಹರ ರಾಘವಾಂಕರ ದಂತಕಥೆಯಿಂದ ಪ್ರಾರಂಭವಾಗಿ ಹಲ್ಲಿನ ಪ್ರಾಮುಖ್ಯತೆಯನ್ನು ಸಾರುತ್ತದೆ. ಹಲ್ಲು ಮಾಡುವ ಕೆಲಸವನ್ನೇ 'ಹಲ್ಲರ್' ಮಾಡುವುದರಿಂದ ಅದಕ್ಕೆ ಆ ಹೆಸರು ಬಂದಿದೆ ಎಂದು ಹೇಳಿರುವುದು ಚಮತ್ಕಾರಿಕವಾಗಿದೆ. ರಾಮುವಿನ ಜೊತೆಯಲ್ಲಿ ಫೋಟೋ ತೆಗೆಸಿಕೊಂಡ ಪ್ರಸಂಗ ಮತ್ತು ರಾಮುವಿನ ಜವಾನ ಹಲ್ಲು ಕಿತ್ತು ತೊಳೆದು ಪುನಃ ವಸಡಿಗೆ ಸೇರಿಸಲು ಹೋದ ಪ್ರಸಂಗಗಳು ಚೆನ್ನಾಗಿವೆ.

ವಯಸ್ಸಾದವರೆಲ್ಲರೂ ತಮ್ಮ ಕಾಲವೇ - ಬಾಲ್ಯದ ಜೀವನವೇ - ಶ್ರೇಷ್ಠವಾಗಿತ್ತೆಂದು ಈಗ ಕಾಲ ಕೆಟ್ಟು ಹೋಗಿದೆಯೆಂದೂ ಹಳಿಯುವುದು ವಾಡಿಕೆ. ಈ ಪೂರ್ವಗ್ರಹ ಅಭಿಪ್ರಾಯ ಅವರ ಕಣ್ಣನ್ನು ಸಂಪೂರ್ಣವಾಗಿ ಕುರುಡು ಮಾಡಿರುತ್ತದೆ. ರೈಲಿನಿಂದ ನಾನಾ ರೀತಿಯ ಪ್ರಯೋಜನಗಳನ್ನು ಪಡೆಯುವ ವ್ಯಕ್ತಿಗಳೇ ಅದನ್ನು ಹಳಿಯುವುದು ಕೃತಘ್ನತೆಯ ಲಕ್ಷಣವಲ್ಲದೆ ಮತ್ತೇನು? ಸೌಂದರ್ಯದ ಒಂದು ಲಕ್ಷಣ ಉಪಯೋಗ. ರೈಲಿನಿಂದ ಎಷ್ಟೊಂದು ರೀತಿಯ ಉಪಯೋಗವಿದೆ! ಹೀಗೆ ಹರಟೆಯಲ್ಲಿ ಬರುವ ಲೇಖಕರು ಮತ್ತು ರಾಮಾನುಜರಿಗೆ ರೈಲಿನ ಬಗ್ಗೆ ಇದ್ದ ಭಾವನೆಗಳ ಚಿತ್ರ ಚೆನ್ನಾಗಿದೆ.

'ಕನಸುಗಾರರು' ಹರಟೆ ಕನಸಿನಿಂದಾಗಿ ಪ್ರಿಯರ ಬಗ್ಗೆ ಪ್ರೇಯಸಿಗುಂಟಾದ ಅಸಮಾಧಾನದಿಂದ ಪ್ರಾರಂಭವಾಗುತ್ತದೆ. ಅನಂತರ ಕನಸಿನ ನಾನಾ ಅವಸ್ಥೆಗಳನ್ನು - ಬಾಲ್ಯದಲ್ಲಿ, ಯೌವನದಲ್ಲಿ, ಮುಪ್ಪಿನಲ್ಲಿ ಕಾಣುವ ಕನಸು

(೩೨ನೆಯ ಪುಟ ನೋಡಿ

ಸಂಪಾದಕೀಯ

ದಿವಂಗತ ರಾಜಸೇವಾಸಕ್ತ ಡಿ. ಸಿ. ಸುಬ್ಬರಾಯಪ್ಪನವರು

ಕನ್ನಡಮ್ಮನ ಗುಡಿಯಾದ ಸಾಹಿತ್ಯ ಪರಿಷತ್ತಿನಲ್ಲಿ ದೇವಿಯ ಆರಾಧನೆಯಲ್ಲಿ ತೊಡಗಿದವರು. ಹಲವು ಮಂದಿ. ಕೆಲವರು ಮಹಾಪಂಡಿತರಾಗಿ, ತಮ್ಮ ಉದ್ದಾಮ ಸಾಹಿತ್ಯ ಕೃತಿಗಳಿಂದ ದೇವಿಯ ಕಂಠಾಭರಣವಾಗಿ ಮೆರೆದರೆ, ಮತ್ತೆ ಕೆಲವರು ತಮ್ಮ ಬಾಳನ್ನೆಲ್ಲ ದೇವಿಯ ಪಾದಚರಣಗಳಿಗೆ ಅರ್ಪಿಸಿ ಪ್ರಚಾರದ ಸದ್ದಿಲ್ಲದೆ ವನಸುಮದಂತೆ ದುಡಿದವರು. ಇಂಥವರಲ್ಲಿ ಬಿ. ಎಂ. ಶ್ರೀಕಂಠಯ್ಯನವರು ಮೊದಲನೆಯ ವರ್ಗಕ್ಕೆ ಸೇರಿದರೆ ಡಿ. ಸಿ. ಸುಬ್ಬರಾಯಪ್ಪನವರು ಎರಡನೆಯ ವರ್ಗಕ್ಕೆ ಸೇರುತ್ತಾರೆ.

ಬಿ. ಎಂ. ಶ್ರೀಕಂಠಯ್ಯನವರೂ, ಡಿ. ಸಿ. ಸುಬ್ಬರಾಯಪ್ಪನವರೂ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದವರು. ಇಬ್ಬರೂ ಕನ್ನಡಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು. ಆದರೆ ಅವರಿಬ್ಬರ ಮಾರ್ಗಗಳೂ ವಿಭಿನ್ನವಾಗಿದ್ದವು. ಬಿ. ಎಂ. ಶ್ರೀಕಂಠಯ್ಯನವರು ಮೈಸೂರು ವಿಶ್ವವಿದ್ಯಾನಿಲಯವನ್ನು ಸೇರಿ ಆಚಾರ್ಯ ಪದವಿಯನ್ನು ಪಡೆದು ತಮ್ಮ ಇಂಗ್ಲಿಷ್ ಗೀತೆಗಳು, ಅಶ್ವತ್ಥಾಮನ್ ಮುಂತಾದ ಕೃತಿಗಳಿಂದ ಹೊಸಗನ್ನಡ ಸಾಹಿತ್ಯದ ಶಿಲ್ಪಿಗಳಲ್ಲಿ ಒಬ್ಬರಾಗಿ ಮೆರೆದರೆ, ಡಿ. ಸಿ. ಸುಬ್ಬರಾಯಪ್ಪನವರು ಕನ್ನಡದಲ್ಲಿ ಪ್ರಥಮ ಶ್ರೇಣಿಯನ್ನು ಪಡೆದರೂ, ಸಾಹಿತ್ಯ ಕೃತಿಯನ್ನು ರಚಿಸುವ ಗೋಜಿಗೆ ಹೋಗದೆ ಸರಕಾರದ ಸೇವೆಯನ್ನು ಸೇರಿ ಅದರಲ್ಲೇ ದಕ್ಷ ಅಧಿಕಾರಿಗಳೆಂಬ ಕೀರ್ತಿಗೆ ಪಾತ್ರರಾದರು.

ಹೀಗಿದ್ದರೂ ಇವರಿಬ್ಬರೂ ರಾಜಸೇವಾಪ್ರಸಕ್ತರೆಂಬ ಗೌರವದ ಬಿರುದಿಗೆ ಪಾತ್ರರಾದುದು ವಿಧಿಯ ವೈಚಿತ್ರವೇ ಸರಿ.

ಡಿ. ಸಿ. ಸುಬ್ಬರಾಯಪ್ಪನವರು ದೇವಾಂಗ ಜನಾಂಗಕ್ಕೆ ಸೇರಿದವರು. ವಿಶ್ವೇಶ್ವರಯ್ಯನವರಂಥ ದಕ್ಷವ್ಯಕ್ತಿಗಳ ಅಭಿಮಾನಕ್ಕೆ ಪಾತ್ರರಾಗಿ ಅಧಿಕಾರದಲ್ಲಿ ಹಂತಹಂತವಾಗಿ ಮೇಲೇರಿದರೂ ಅವರು ತಮ್ಮ ಕನ್ನಡತನವನ್ನಾಗಲಿ, ಕನ್ನಡ ಸಾಹಿತ್ಯದ ಮೇಲಣ ಅಭಿಮಾನವನ್ನಾಗಲೀ ಮರೆಯಲಿಲ್ಲ.

ಅವರು ತಮ್ಮ ಇಡೀ ಬಾಳನ್ನು ಸಾರ್ವಜನಿಕ ಸೇವೆಗೆ ಮೀಸಲಾಗಿ ಇಟ್ಟಿದ್ದರು. ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬಸಪ್ಪ-ಇಂದಿನ ರೇಣುಕಾಚಾರ್ಯ-ಕಾಲೇಜು, ದೊಡ್ಡಣ್ಣ ಶೆಟ್ಟರ ಮತ್ತು ಬಿ. ಕೆ. ಮರಿಯಪ್ಪನವರ ಧರ್ಮ ಸಂಸ್ಥೆಗಳು, ಹರಿಜನ ಹಾಸ್ಟಲ್, ಅಖಿಲ ಕರ್ನಾಟಕ ಮಕ್ಕಳಕೂಟ--ಮೊದಲಾದ ವಿದ್ಯಾಸಂಸ್ಥೆಗಳ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿದ್ದುಕೊಂಡು ತಮ್ಮ ಸೇವೆಯನ್ನು ಸಲ್ಲಿಸಿದರು.

ಇದಕ್ಕೂ ಮಿಗಿಲಾಗಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅನೇಕ ವರ್ಷಗಳು ಕಾರ್ಯದರ್ಶಿಯಾಗಿಯೂ, ಕೋಶಾಧಿಕಾರಿಗಳಾಗಿಯೂ ಇದ್ದುಕೊಂಡು ದಕ್ಷ ರೀತಿಯಲ್ಲಿ ಸೇವೆ ಸಲ್ಲಿಸಿದರು. ದೇವರಾಜ ಬಹದ್ದೂರ್ ಧರ್ಮನಿಧಿ, ರಾಜ್ಯದ ಪಠ್ಯಪುಸ್ತಕ ಸಮಿತಿಗಳಲ್ಲಿ ಸದಸ್ಯರಾಗಿ ನಿಷ್ಠೆಯಿಂದ ನಾಡುನುಡಿಗಳ ಸೇವೆ ಸಲ್ಲಿಸಿದರು.

ಅವರು ತಮ್ಮ ಅಪರ ವಯಸ್ಸಿನಲ್ಲೂ ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಯಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಇಂಥ ಸಾಹಿತ್ಯಾಭಿಮಾನಿಗಳೂ, ಸಜ್ಜನರೂ, ದಕ್ಷ ಅಧಿಕಾರಿಗಳೂ ತೀರಿಕೊಂಡುದು ಕನ್ನಡ ನಾಡಿಗೆ, ಅದರಲ್ಲೂ ಸಾಹಿತ್ಯ ಪರಿಷತ್ತಿಗೆ ಅಪಾರ ನಷ್ಟ ಉಂಟಾಗಿದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

ಪರಿಷತ್ತಿನ ಸುದ್ದಿಗಳು

ಪರಿಷದಧ್ಯಕ್ಷರ ಚುನಾವಣೆ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಚುನಾವಣೆಯ ಕಾರ್ಯಕ್ರಮ, ಶ್ರೀ ತಿ. ತಾ. ಶರ್ಮರವರು ಹೈಕೋರ್ಟಿಗೆ ಸಲ್ಲಿಸಿರುವ ರಿಟ್ ಅರ್ಜಿಯ ಪರಿಣಾಮವಾಗಿ ಮುಂದು ಹೋಗಬೇಕಾಯಿತು. ಆ ಬಗ್ಗೆ ಪರಿಷತ್ತಿನ ಕಾರ್ಯಸಮಿತಿ ದಿನಾಂಕ ೧೮-೮-೬೮ರಲ್ಲಿ ನಡೆಸಿದ ಪ್ರಯತ್ನ ಮತ್ತು ಮಾಡಿದ ನಿರ್ಣಯವನ್ನು ಈ ಕೆಳಗೆ ಕೊಟ್ಟಿದೆ:

(೫) "ಮೈಸೂರು ಸಂಸ್ಥಾನದ ಹೈಕೋರ್ಟಿನಲ್ಲಿ ವಿಚಾರಣೆಯಾಗುತ್ತಿರುವ ಪರಿಷದಧ್ಯಕ್ಷರ ಸ್ಥಾನದ ಚುನಾವಣಾ ಸಂಬಂಧವಾಗಿ ಶ್ರೀ ತಿ. ತಾ. ಶರ್ಮರವರ ವಕೀಲರಾದ ಶ್ರೀ ಎಂ. ರಾಮಾಜೋಯಿಸರವರೂ ಪರಿಷತ್ತಿನ ವಕೀಲರಾದ ಶ್ರೀ ಹೆಚ್. ಬಿ. ದಾತಾರ್ ಅವರೂ ಪರಿಷದಧ್ಯಕ್ಷರಿಗೆ ಬರೆದಿದ್ದ ಕಾಗದಗಳನ್ನೂ ಅದಕ್ಕೆ ಉತ್ತರವಾಗಿ ಪರಿಷದಧ್ಯಕ್ಷರು ಕಳುಹಿಸಿದ್ದ ಕಾಗದವನ್ನೂ ಪರಿಶೀಲಿಸಲಾಯಿತು. ವಿಷಯ ದೀರ್ಘವಾಗಿ ಚರ್ಚೆಯಾಗಿ, ಪರಿಷತ್ತಿನಂತಹ ಘನತೆವೆತ್ತ ಸಂಸ್ಥೆಯ ವ್ಯವಹಾರಗಳು ಕೋರ್ಟಿನ ಹೊರಗಡೆ ಇತ್ಯರ್ಥವಾಗುವುದು ಆವಶ್ಯಕವೂ ಗೌರವಯುತವೂ ಆಗಿರುವುದರಿಂದ ಆ ಉದ್ದೇಶವನ್ನು ಸಾಧಿಸಲು ಕಾರ್ಯಸಮಿತಿಯ ಪ್ರತಿನಿಧಿಗಳು ಶ್ರೀ ತಿ. ತಾ. ಶರ್ಮರನ್ನು ಕಂಡು ಮಾತನಾಡಬೇಕೆಂದು ಗೊತ್ತುಮಾಡಿ ಕೆಲಕಾಲ ಸಭೆಯನ್ನು ಮುಂದೂಡಲಾಯಿತು. ಈ ವಿರಾಮದಲ್ಲಿ ಕಾರ್ಯಸಮಿತಿಯ ಸದಸ್ಯರುಗಳಾದ ಶ್ರೀ ಅ. ನ. ಕೃಷ್ಣರಾಯರು, ಶ್ರೀ ಕೃಷ್ಣಮೂರ್ತಿ ಪುರಾಣಿಕರು, ಶ್ರೀ ಕಾ. ಸ. ಧರಣೇಂದ್ರಯ್ಯನವರು, ಶ್ರೀ ಸೂರ್ಯನಾರಾಯಣ ಚಡಗ ಅವರು ಮತ್ತು ಡಾ. ರಾಮಕೃಷ್ಣ ಅವರುಗಳು ಶ್ರೀ ತಿ. ತಾ. ಶರ್ಮರವರನ್ನು ಅವರಿದ್ದಲ್ಲಿಗೆ ಹೋಗಿ ಭೇಟಿಮಾಡಿ ಮಾತುಕತೆ ನಡೆಸಿದರು. ಆದರೆ, ಶ್ರೀ ತಿ. ತಾ. ಶರ್ಮರವರು, ತಾವು ಕೋರ್ಟಿಗೆ ಹಾಜರು ಮಾಡಿರುವ ಮನವಿಯಲ್ಲಿ ಇರುವಂತೆ ತಮ್ಮ ನಿಲುವಿನಲ್ಲಿ ಯಾವ ಬದಲಾವಣೆಗೂ ಅವಕಾಶವಿಲ್ಲವೆಂದು ಖಂಡಿತವಾಗಿ ಹೇಳಿದ್ದರಿಂದ ಪ್ರತಿನಿಧಿಗಳು ಮಾಡಿದ ಸಂಧಾನ ವಿಫಲವಾಯಿತು. ಮುಂದೂಡಿದ್ದ ಕಾರ್ಯಸಮಿತಿ ಪುನಃ ಸಭೆಸೇರಿ ಈ ಕೆಳಗಿನಂತೆ ನಿರ್ಣಯಮಾಡಿತು."

"ಶ್ರೀ ತಿ. ತಾ. ಶರ್ಮರವರು ತಮ್ಮ ನಿಲುವಿನಲ್ಲಿ ಯಾವ ಬದಲಾವಣೆಯನ್ನೂ ಮಾಡಲು ಒಪ್ಪದೆ ಇರುವುದರಿಂದ ಪರಿಷತ್ತಿನ ಕಾರ್ಯಸಮಿತಿಯವರು ಅಧ್ಯಕ್ಷ ಚುನಾವಣೆಯ ವ್ಯವಹಾರವನ್ನು ಕೋರ್ಟಿನ ಹೊರಗಡೆ ಇತ್ಯರ್ಥ ಮಾಡಲು ಮಾಡಿದ ಪ್ರಯತ್ನಗಳು ವಿಫಲವಾಗಿವೆ. ಆದುದರಿಂದ ಪರಿಷತ್ತಿನ ವಕೀಲರಾದ ಶ್ರೀ. ಹೆಚ್. ಬಿ. ದಾತಾರ್ ಅವರು ಈ ವಿಷಯವನ್ನು ಕೋರ್ಟಿನ ಗಮನಕ್ಕೆ ತಂದು ಕೋರ್ಟಿನಲ್ಲಿ ಮೊಕದ್ದಮೆಯನ್ನು ಮುಂದುವರೆಸಿ ಪರಿಷತ್ತಿನ ನಿರ್ಣಯಗಳ ಒಪ್ಪಿಗೆಗೆ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ನಡಸಬೇಕೆಂದು ಪ್ರಾರ್ಥಿಸತಕ್ಕದ್ದು."

* * *

ಪರಿಷತ್ತಿಗೆ ಶ್ರೀ ತುಷಾರ್‌ಕಾಂತಿ ಘೋಷ್ ಅವರ ಭೇಟಿ

ದಿನಾಂಕ ೬-೮-೧೯೬೮ರ ಸಂಜೆ ಕಲ್ಕತ್ತೆಯ "ಅಮೃತ್ ಬಜಾರ್" ಪತ್ರಿಕೆಯ ಪ್ರಧಾನ ಸಂಪಾದಕರೂ ವಂಗ ಭಾಷೆಯ ಹಿರಿಯ ಲೇಖಕರೂ ಆದ ಶ್ರೀ ತುಷಾರ್ ಕಾಂತಿ ಘೋಷ್ ಅವರನ್ನು ಪರಿಷತ್ತಿಗೆ ಬರಮಾಡಿಕೊಂಡು ಸತ್ಕರಿಸಲಾಯಿತು. ಪರಿಷತ್ತಿನ ಅಧ್ಯಕ್ಷರು ಮುಖ್ಯ ಅತಿಥಿಗಳನ್ನೂ ಆಹ್ವಾನಿತರನ್ನೂ ಸ್ವಾಗತಿಸಿದ ನಂತರ ಶ್ರೀ ಘೋಷ್ ಅವರು ಕನ್ನಡದಲ್ಲಿರುವ ಹಳೆಯ ಗ್ರಂಥಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಕಟಿಸಿ, ಪ್ರಚುರಗೊಳಿಸಿ ಜನತೆಯಲ್ಲಿ ಸಾಹಿತ್ಯದ ಪ್ರಾಚೀನ ವೈಭವವನ್ನು ಪುನರುಜ್ಜೀವನಗೊಳಿಸಲುಬೇಕೆಂದೂ ವಂಗ ಸಾಹಿತ್ಯದಲ್ಲಿ ಈ ಕಾರ್ಯ ಬಹಳ ಸಮರ್ಪಕವಾಗಿ ನಡೆದಿದೆಯೆಂದೂ ತಿಳಿಸಿದರು. ಕಡೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರು ಎಲ್ಲರಿಗೂ ವಂದನೆಗಳನ್ನರ್ಪಿಸಿದರು.

* * *

ಆಚಾರ್ಯ ಬಿ. ಎಂ. ಶ್ರೀ ಅವರ ಕೃತಿಗಳು

ದಿನಾಂಕ ೪-೮-೧೯೬೮ನೆಯ ಭಾನುವಾರ ಸಂಜೆ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ದಿ|| ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರ ಕೃತಿಗಳ ಬಗ್ಗೆ

ಶ್ರೀ ಎಸ್. ಅನಂತನಾರಾಯಣ ಅವರು ಉಪನ್ಯಾಸ ಮಾಡಿದರು. ಇದು ಗಾಂಧಿ ಸಾಹಿತ್ಯ ಸಂಘದಲ್ಲಿ ಕವಿ-ಕೃತಿ ಸ್ಮರಣೆಯ ೧೮ನೆಯ ಉಪನ್ಯಾಸ.

* * *

ಶ್ರೀ ಬುರ್ಲಿ ಬಿಂಧುಮಾಧವ ಅವರ ಕೃತಿಗಳು

ದಿನಾಂಕ ೧೧-೮-೧೯೬೮ನೆಯ ಭಾನುವಾರ ಸಂಜೆ ರಾಜಾಜಿನಗರದ ಸಪ್ತರ್ಷಿಧಾಮದಲ್ಲಿ ಶ್ರೀ ಬುರ್ಲಿ ಬಿಂದು ಮಾಧವ ಅವರ ಕೃತಿಗಳನ್ನು ಕುರಿತು ಶ್ರೀ ಸುರೇಂದ್ರದಾನಿಯವರು ಉಪನ್ಯಾಸ ಮಾಡಿದರು. ಡಾ| ರಂ. ಶ್ರೀ. ಮುಗಳಿಯವರು ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕವಿ-ಕೃತಿ ದರ್ಶನದ ಅಂಗವಾಗಿ ನಡೆದ ಈ ಕಾರ್ಯಕ್ರಮವು ಸಪ್ತರ್ಷಿಧಾಮದ ೩೭ನೆಯ ಕಾರ್ಯಕ್ರಮವಾಗಿತ್ತು.

* * *

ರತ್ನ ಪರೀಕ್ಷೆ

ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ 'ರತ್ನ' ಪರೀಕ್ಷೆ ಬೆಂಗಳೂರು, ಹಲಗೇರಿ, ಬಾದಾಮಿ, ಧಾರವಾಡ, ಶಿವಮೊಗ್ಗ ಮತ್ತು ರಾಯಚೂರು ಈ ಕೇಂದ್ರಗಳಲ್ಲಿ ಸೆಪ್ಟೆಂಬರ್ ೨೩ನೆಯ ದಿನಾಂಕದಿಂದ ೨೯ನೆಯ ದಿನಾಂಕ ಪೂರ್ತಿ ಏಳು ದಿನಗಳೂ ಅನುಕ್ರಮವಾಗಿ ಪ್ರತಿದಿನ ಮಧ್ಯಾಹ್ನ ೨ ಗಂಟೆಯಿಂದ ೫ ಗಂಟೆಯವರೆಗೆ ನಡೆಯುವುದಾಗಿದೆ.

ವಿದ್ಯಾರ್ಥಿಗಳ ಪ್ರವೇಶಪತ್ರವನ್ನು ಸೆಪ್ಟೆಂಬರ್ ಮೊದಲನೆಯ ವಾರದಲ್ಲಿ ಹಲಗೇರಿ ಮತ್ತು ಬಾದಾಮಿ ಕೇಂದ್ರದ ವಿದ್ಯಾರ್ಥಿಗಳಿಗೆ ಆ ಊರಿನ 'ರತ್ನ' ಪರೀಕ್ಷೆಯ ವ್ಯವಸ್ಥಾಪಕರಿಗೂ ಮತ್ತು ಇತರ ಕೇಂದ್ರಗಳ ವಿದ್ಯಾರ್ಥಿಗಳಿಗೆ ಆ ಊರಿನ 'ರತ್ನ' ಪರೀಕ್ಷೆಯ ವ್ಯವಸ್ಥಾಪಕರಿಗೂ ಮತ್ತು ಇತರ ಕೇಂದ್ರಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿಯೂ ಕಳುಹಿಸಲಾಗುವುದು.

ರತ್ನ ಪರೀಕ್ಷೆ: ೧೯೬೮

ವೇಳಾಪಟ್ಟಿ

ಪರೀಕ್ಷೆ ಪ್ರತಿದಿನ ಮಧ್ಯಾಹ್ನ ೨ರಿಂದ ೫ ಗಂಟೆಯವರೆಗೆ ನಡೆಯುವುದು

ತಾ|| ೨೩-೯-೧೯೬೮	ಸೋಮವಾರ	ಪತ್ರಿಕೆ ೧	ಪದ್ಯ ಸಾಹಿತ್ಯ
ತಾ|| ೨೪-೯-೧೯೬೮	ಮಂಗಳವಾರ	ಪತ್ರಿಕೆ ೨	ಗದ್ಯ ಸಾಹಿತ್ಯ
ತಾ|| ೨೫-೯-೧೯೬೮	ಬುಧವಾರ	ಪತ್ರಿಕೆ ೩	ನಾಟಕ ಸಾಹಿತ್ಯ
ತಾ|| ೨೬-೯-೧೯೬೮	ಗುರುವಾರ	ಪತ್ರಿಕೆ ೪	ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯ ವಿಮರ್ಶೆಯ ಮೂಲತತ್ತ್ವಗಳು
ತಾ|| ೨೭-೯-೧೯೬೮	ಶುಕ್ರವಾರ	ಪತ್ರಿಕೆ ೫	ಕನ್ನಡ ವ್ಯಾಕರಣ ಮತ್ತು ಭಾಷಾ ಚರಿತ್ರೆ
ತಾ|| ೨೮-೯-೧೯೬೮	ಶನಿವಾರ	ಪತ್ರಿಕೆ ೬	ಛಂದಸ್ಸು ಮತ್ತು ಅಲಂಕಾರ ಶಾಸ್ತ್ರ
ತಾ|| ೨೯-೯-೧೯೬೮	ಭಾನುವಾರ	ಪತ್ರಿಕೆ ೭	ಸಂಸ್ಕೃತ

ವಿಮರ್ಶನರಂಗ : ೨೮ನೆಯ ಪುಟದಿಂದ

ಗಳನ್ನು ಹೇಳಿ ಬದುಕನ್ನು ಒಂದು ಕನಸಾಗಿ ಮಾಡಿ, ಆ ಕನಸನ್ನು ನೈಜಗೊಳಿಸಬೇಕು ಎಂದು ಮುಕ್ತಾಯವಾಗುತ್ತದೆ. 'ನೆನಪು' ಪ್ರಬಂಧದಲ್ಲಿ ಬರುವ ಮರೆವಿನ ಪ್ರಸಂಗಗಳು ಆಪ್ಯಾಯಮಾನವಾಗಿವೆ.

'ಪ್ರಣಯ ಪ್ರಯಾಸ', 'ಪರಮಾನಂದ', 'ನಾನು ಅಧ್ಯಕ್ಷನಾದೆ', 'ಇಂಥವರೂ ಇದ್ದಾರೆ', 'ಜೇಬುಗಳ್ಳರು' ಹರಟೆಗಳಲ್ಲಿ ಅತಿಶಯೋಕ್ತಿ ಕಂಡುಬರುತ್ತದೆ. ಆದರೂ ಅವು ರಂಜಕವಾಗಿವೆ. 'ಪ್ರಣಯ ಪ್ರಯಾಸ'ದಲ್ಲಿ ರೇಡಿಯೋವಿನಲ್ಲಿ ಪ್ರೇಮಗೀತೆಗಳನ್ನು ಕೇಳಿ, ಸಿನಿಮಾದಲ್ಲಿ ನಾಯಕ ನಾಯಿಕೆಯರು ಅನುರಕ್ತರಾಗುವುದನ್ನು ನೋಡಿ, ತಾನೂ ಅಂತೇ ಪ್ರೇಮಿಸಬೇಕೆಂದು ಮೂರುಬಾರಿ ಪ್ರಯತ್ನಪಟ್ಟು ಕೊನೆಗೆ ಹೊಲ ಕಾಯುವ ಹುಡುಗಿ ಎಸೆದ ಕಲ್ಲಿನಿಂದ ಒಂದು ಕಣ್ಣು ಕಳೆದುಕೊಂಡ ನಿರೂಪಣೆ ರಂಜಕವಾಗಿದೆ. 'ಪರಮಾನಂದ'ನಂತಹ ವಿಚಿತ್ರ ರೀತಿಯ ವ್ಯಕ್ತಿಗಳು ಸಮಾಜದಲ್ಲಿ ಹಲವು ಜನ. ಪರಮಾನಂದ ಗೋಲ್ಡ್‌ಸ್ಮಿತ್‌ನ 'ಬೋಟಿಟ್ಸ್'ನನ್ನು ಜ್ಞಾಪಕಕ್ಕೆ ತರುತ್ತಾನೆ. 'ನಾನು ಅಧ್ಯಕ್ಷನಾದೆ' ಹರಟೆ ಚೆನ್ನಾಗಿದ್ದರೂ ಅದರಲ್ಲಿ ಬಂದಿರುವ ಉತ್ಪ್ರೇಕ್ಷೆಗಳು ಅತಿಶಯೋಕ್ತಿ ಎಂದು ಎನಿಸುತ್ತೆ. 'ಪರಮಾನಂದ' ಒಂದು ರೀತಿಯ ವ್ಯಕ್ತಿಯಾದರೆ 'ರಾಜು' ಮತ್ತೊಂದು ರೀತಿಯ ವ್ಯಕ್ತಿ. 'ಕೈಲಾಸಂ'ರವರ 'ಟೊಳ್ಳು ಗಟ್ಟಿ'ಯ ಪುಟ್ಟುವಿನಂಥವನು. ಪುಟ್ಟುವಿಗೆ ಓದಿನಲ್ಲಾದರೂ ಮೊದಲ ದರ್ಜೆ ಕಟ್ಟಿಟ್ಟಬುತ್ತಿಯಾಗಿತ್ತು. ಆದರೆ ರಾಜುವಿಗೆ ಅದೂ ಇಲ್ಲ. ಬರೀ ಒಣ ಹೆಮ್ಮೆ ಮಾತ್ರ. 'ಇಂಥವರೂ ಇದ್ದಾರೆ'ಯ ರಾಜು ಅಂಥವನೊಬ್ಬ. ಅಂಥ ವ್ಯಕ್ತಿತ್ವ ಬೆಳಸಿಕೊಳ್ಳಲು ತಂದೆ ತಾಯಿಯರೂ ಕಾರಣರಾಗುತ್ತಾರೆ ಎಂಬುದು ವಿಷಾದಿಸಬೇಕಾದ ಸಂಗತಿ.

ಪ್ರಬಂಧದ ಕೊನೆಯಲ್ಲಿ ಬರುವ ಕೆಲವು ಅತ್ಯುಕ್ತಿಗಳನ್ನು ಬಿಟ್ಟರೆ 'ಜೇಬುಗಳ್ಳರು' ಒಂದು ಉತ್ತಮವಾದ ಪ್ರಬಂಧ. ಜೇಬುಗಳ್ಳರನ್ನು ಹಿಡಿಯಬೇಕಾಗಿದ್ದ ಪೋಲೀಸರೇ ಜೇಬುಗಳ್ಳತನ ಮಾಡಿದ ವಿಚಾರವನ್ನು ಹಾಸ್ಯವಾಗಿ ಹೇಳಿದ್ದರೂ ಅದು ಇಂದಿನ ಪರಿಸಿತ್ಥಿಯ ವಾಸ್ತವಿಕ ಚಿತ್ರ ಎಂದಿನಿಸುತ್ತದೆ.

'ಕ್ರಿಕೆಟ್ ಹುಚ್ಚು' ಮತ್ತು 'ಮಿಥ್ಯ ಮಿಮಾಂಸೆ' ದೀರ್ಘವಾಗಿವೆ. ಇವುಗಳಲ್ಲಿ ಬರುವ ವ್ಯಕ್ತಿ ಚಿತ್ರಗಳು ಆತ್ಮೀಯವಾಗಿವೆ. 'ಮಿಥ್ಯಮಿಮಾಂಸೆ'ಯಲ್ಲಿ ಜಿ.ಜಿ.ಕೃಷ್ಣ ಬಿಳಿ ಜಿರಲೆ ಕೃಷ್ಣ–ಸಂಪತ್ತುವಿನ ಅಂತರ್ಜಾತೀಯ ವಿವಾಹದ ಬಗ್ಗೆ ಹೇಳಿದ ಸುಳ್ಳು ಸೊಗಸಾಗಿದೆ. ಸುಳ್ಳು ಹೇಳುವುದೂ ಒಂದು ಕಲೆ. ಅದನ್ನು ಲೇಖಕರು 'ಮಿಥ್ಯ ಮಿಮಾಂಸೆ'ಯಲ್ಲಿ ಸೊಗಸಾಗಿ ಪ್ರತಿಪಾದಿಸಿದ್ದಾರೆ.

ಪ್ರಬಂಧ ಸಾಹಿತ್ಯ ಕನ್ನಡದಲ್ಲಿ ಬೆಳೆಯಲು ಪ್ರಾರಂಭವಾಗಿ ಮೂವತ್ತೈದು–ನಾಲ್ವತ್ತು ವರ್ಷಗಳಾಗಿದ್ದರೂ ಹುಲುಸಾದ ಬೆಳೆ ಬಂದಿಲ್ಲ. ಇಂತಹ ಸನ್ನಿವೇಶದಲ್ಲಿ ಬಂದ ಹರಟೆಗಳು ಮತ್ತು ವ್ಯಕ್ತಿಚಿತ್ರಗಳನ್ನೊಳಗೊಂಡ 'ಇಂಥವರೂ ಇದ್ದಾರೆ' ಸ್ವಾಗತಾರ್ಹ ಕೃತಿ. ಇಂತಹ ಕೃತಿಗಳು ಹೆಚ್ಚಾಗಿ ಬರಲಿ ಎಂದು ಹಾರೈಸೋಣ.

ಹು. ಕಾ. ಜಯದೇವ

ಹಡಗೆಟ್ಟ ಹಳ್ಳಿ—ಲೇ : ಮಿರ್ಜಿಅಣ್ಣಾರಾಯ ಸಂ: ಬಾಲಚಂದ್ರ ಘಾಣೇಕರ, ಪ್ರ: ಪ್ರತಿಭಾಗ್ರಂಥಮಾಲೆ ಧಾರವಾಡ–೧; ಪುಟಗಳು: ೧೬೩ ; ಬೆಲೆ : ರೂ. ೨-೦೦

ಇದು ಹಳ್ಳಿಯ ನಿಜವಾದ ಜೀವನವನ್ನು ಚಿತ್ರಿಸುವ ಒಂದು ಸುಂದರ ಕಾದಂಬರಿ. ಇದನ್ನು ಕಾದಂಬರಿ ಎನ್ನುವುದಕ್ಕಿಂತಲೂ ಒಬ್ಬ ಹಳ್ಳಿ ಮಾಸ್ತರನ ಸುಗ್ಗಿಯ ಏಳು ದಿನಗಳ ಒಂದು ದಿನಚರಿ ಎನ್ನಬಹುದು. ಆದರ್ಶವಾದಿಯಾಗಿ ವಿದ್ಯಾರ್ಥಿಗಳಿಗೆ ನೈಜ ವಿದ್ಯಾದಾನ ಮಾಡಬೇಕೆಂಬ ಹಂಬಲದಿಂದ ದುಡಿಯುತ್ತಿರುವ ಒಬ್ಬ ಮಾಸ್ತರನಿಗೆ, ಆ ಹಳ್ಳಿಯ ದೇಶಭಕ್ತರುಗಳು, ಸರಪಂಚರುಗಳು, ಸಹಕಾರ ಸಂಘಗಳವರು, ತನಿಖೆ ನಡೆಸುವ ಪೋಲಿಸು ಖಾತೆ ಇವರುಗಳು ಕೊಡುವ ಕಿರುಕುಳಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಮಾಸ್ತರನ ಹೆಂಡತಿಯ ಪಾತ್ರ ಅಚ್ಚುಕಟ್ಟಾಗಿದೆ. ಮಾಸ್ತರನು ರಾಜಕೀಯ ಗೊಂದಲಗಳಿಂದ ದೂರವಿರಬೇಕೆಂದು ಬಯಸಿದರೂ ಅವನನ್ನು ಬಿಡದೆ ಒಬ್ಬರಾದಮೇಲೊಬ್ಬರು ಪಾಠಮಾಡಲೂ ಅವಕಾಶ ಕೊಡದೆ ಕಾಡುವ ದೃಶ್ಯಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಸರಳವಾದ ಶೈಲಿ ಓದುಗರ ಮನ ಮುಟ್ಟುವಂತಿದೆ. ಒಟ್ಟಿನಲ್ಲಿ ಹಳ್ಳಿಯನ್ನೇ ನೋಡದೆ ಕಾಲ್ಪನಿಕವಾಗಿ ಹಳ್ಳಿ ಎಂದರೆ ಹಚ್ಚಹಸಿರು ನೆಲ, ಬೆಳೆದು ನಿಂತ ಪೈರುಗಳು; ಅಲ್ಲಿಯ ಜನರೆಂದರೆ ನಿಷ್ಕಪಟ ಜೀವಿಗಳು ಎಂದು ಚಿತ್ರಿಸಿರುವ ಅನೇಕ ಕಾದಂಬರಿಗಳಿಗಿಂತ ಇದು ಬಹಳ ಉತ್ತಮವಾಗಿದೆ.

ಮಂಜುಳಾ

ಲಯ, ಹೊಳೇನರಸಿಪುರ, ಪುಟ : ೨೭, ಆಕಾರ : ಕ್ರೌ. ಅಷ್ಟದಳ, ೧೯೬೬.

ಅಪರೋಕ್ಷಾನುಭೂತಿ (ಶ್ರೀ ಶಂಕರಾಚಾರ್ಯ ವಿರಚಿತ) ಅನು : ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು, ಪುಟ : ೯+೧೧೬, ೧೯೬೭.

ಶ್ರೀ ಶಾಂಕರ ವೇದಾಂತದ ಮೂಲ ತತ್ವಗಳು ಸಂಪಾ. : ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು, ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸಿಪುರ, ಪುಟ: ೪+೧೦೬, ೧೯೬೭.

ಕೇಷೋಪನಿಷತ್ತು ಅನು. : ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು, ಪ್ರ : ಅಧ್ಯಾತ್ಮ ಕಾರ್ಯಾಲಯ ಹೊಳೆನರಸೀಪುರ, ಪುಟ : ೧೦+೧೭೭. ೧೯೬೭.

ಆತ್ಮಬೋಧ ಅನು. : ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು, ಪ್ರ: ಅಧ್ಯಾತ್ಮ ಕಾರ್ಯಾಲಯ, ಹೊಳೆನರಸಿಪುರ, ಪುಟ - ೫+೩೮, ೧೯೬೭.

ವಿಮರ್ಶೆ

ಸರಸ್ವತೀ ತತ್ವ ಲೇ : ನರಸಿಂಗರಾವ್ ಮಾನ್ವಿ, ಸಂ. : ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, ಪುಟ : ೧೭೭+೪, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೩-೦೦ ೧೯೬೮.

ಸಾಹಿತ್ಯ ಸಂಪ್ರದಾಯ ಮತ್ತು ಹೊಸ ಮಾರ್ಗ ಲೇ. : ಸೀತಾರಾಮಯ್ಯ ವಿ., ಪ್ರ : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ: ೨+೧೪೫+೨, ಬೆಲೆ: ರೂ. ೪-೦೦, ೧೯೬೭.

ವಚನ ಸಾಹಿತ್ಯ

ಶರಣರ ವಿಚಾರ ಧಾರೆ ಲೇ. : ನಂಜುಂಡಯ್ಯ ಎಸ್. ಪ್ರ : ಶರಣ ಮಂಡಲಿ ಪ್ರಕಾಶನ, ತ್ಯಾಗರಾಜ ರಸ್ತೆ, ಮೈಸೂರು-೪, ಪುಟ: ೧೦+೧೦೨, ಆಕಾರ: ಕ್ರೌ. ಅಷ್ಟದಳ ಬೆಲೆ: ರೂ. ೧-೫೦, ೧೯೬೭.

ದೇವ ಮಾನವ ಲೇ: ಫಿವಾರಿ ಮ. ಗು., ಪ್ರ : ಗುರು ಪಾದ ಪ್ರಕಾಶನ, ಬೆಳಗಾವಿ, ಪುಟ : ೮+೫೫, ಆಕಾರ : ಕ್ರೌ. ಅಷ್ಟದಳ, ಬೆಲೆ: ರೂ. ೧-೨೫, ೧೯೬೮.

ಅನುಭವ ಮಂಟಪ ಲೇ : ಮಹಾದೇವಯ್ಯ, ಪ್ರ : ಶ್ರೀ ಶರಣ ಬಸವೇಶ್ವರ ಪ್ರಕಾಶನ, ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ, ಪುಟ; ೩೧, ಆಕಾರ : ಕ್ರೌ. ಅಷ್ಟದಳ, ಬೆಲೆ: ೦-೬೦ ಪೈಸೆ., ೧೯೬೮.

ಶೂನ್ಯ ಸಿಂಹಾಸನ ಲೇ. : ಲಿಂಗಣ್ಣಯ್ಯ ಓ. ಎನ್. ಪ್ರ : ಬಿ. ಎನ್. ಗಂಗಾಧರಶಾಸ್ತ್ರಿ, ೪೧೯೪, ವಿ.ಪಿ. ಬಡಾವಣೆ, ಚಿತ್ರದುರ್ಗ, ಪುಟ : ೪೪+೩೪೬, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧೦-೦೦, ೧೯೬೮.

ಉಪನ್ಯಾಸ ಗ್ರಂಥಮಾಲೆ

ಬಸವಣ್ಣನವರ ವ್ಯಕ್ತಿತ್ವ ಹಾಗು ಜೀವನ ಸಿದ್ಧಿ ಲೇ: ವಿವಿಧ ಬರಹಗಾರರು, ಪುಟ: ೮+೧೨೨, ಬೆಲೆ: ೧-೨೫ ೧೯೬೭.

ರಸಾಯನ ಕಿಣ್ವಗಳು ಲೇ : ರಾವ್ ಎಂ.ಎಸ್.ಎಸ್. ಪುಟ : ೭+೬೭, ಬೆಲೆ: ೦-೨೫ ಪೈಸೆ, ೧೯೬೭.

ಹೃದಯಾಘಾತ ಲೇ: ಡಾ| ಶಂಕರ್, ಪಿ.ಎಸ್. ಪುಟ: ೬+೭೬, ಬೆಲೆ: ೦-೨೫, ೧೯೬೭.

ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು ಲೇ: ಡಾ| ಬಿಂದೂರ ಎಂ. ಜಿ., ಪುಟ: ೭+೭೩, ಬೆಲೆ: ೦-೨೫, ೧೯೬೨.

ಯೋಜನೆಗಳೇಕೆ ಬೇಕು? ಲೇ: ಯಮ್ಮಿ ಎಸ್. ಎಸ್. ಪುಟ: ೬+೫೦, ಬೆಲೆ: ೦-೨೫, ೧೯೬೭

ಸಗರ ನಾಡಿನ ಶಿವಶರಣೆಯರು ಲೇ: ಶಿವಾನಂದ ವ್ಹಿ. ಪುಟ: ೧೧+೭೦, ಬೆಲೆ: ೦-೨೫, ೧೯೬೭.

ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ ಲೇ: ರಾಜಶೇಖರ, ಭೂಸನೂರಮಠ, ಪುಟ : ೭+೭೬, ಬೆಲೆ: ೦-೨೫, ೧೯೬೮

ವಿಜಯನಗರದ ನಿರ್ಣಾಯಕ ಯುದ್ಧ (ರಕ್ಕಸತಂಗಡಿ) ಲೇ: ಕೋದಂಡ ಎಸ್.ಬಿ. ಪುಟ : ೫+೬೫, ಬೆಲೆ: ೦-೨೫ ೧೯೬೮.

ಬಸವಣ್ಣನವರನ್ನು ಕುರಿತ ಶಾಸನಗಳು ಲೇ: ಕಲಬುರ್ಗಿ ಎಂ. ಎಂ. ಪುಟ: ೪+೭೮, ಬೆಲೆ: ೦-೨೫, ೧೯೬೮.

ಆಧುನಿಕ ಭಾಷಾ ವಿಜ್ಞಾನ ಲೇ: ಕುಳ್ಳಿ, ಜೆ. ಎಸ್. ಪುಟ : ೬+೫೯, ಬೆಲೆ: ೦-೨೫, ೧೯೬೮.

Reg. No. B. G. 4—September 1968

Lincensed to Post without
pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಕನ್ನಡ ನುಡಿ

ಅಕ್ಟೋಬರ್ ೧೯...

ಸಂಪುಟ ೩೦

ಸಂಚಿಕೆ ೧೦

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,

ಸ್ವೀಕಾರ

ಕಾದಂಬರಿ

ವನವಾಸಿ; ಮೂಲ ಲೇಖಕರು : ಗುರುದತ್, ಭಾವಾನುವಾದ: ಶಿವಶಂಕರ, ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಗವಿಪುರಂ ಮಾರ್ಗ, ಕೆಂಪೇಗೌಡನಗರ, ಬೆಂಗಳೂರು-೧೯; ಪುಟ: ೮+೧೪೦; ಬೆಲೆ: ರೂ, ೨-೫೦, ೧೯೬೮.

ನಡೆ ಮುಂದೆ ಗೋವಿಂದ; ಲೇ: ಅನಂತರಾವ, ಕೆ. ಭೋಸಗೆ; ಪ್ರ: ಮಕ್ಕಳ ಸಾಹಿತ್ಯ ಮಂಟಪ, ಶಾಂತಿ ಸೇವಾಸದನ, ಸೇಡಬಾಳ; ಪುಟ: ೧೦+೧೦೭; ಬೆಲೆ: ರೂ. ೧-೦೦, ೧೯೬೮.

ಅವಳ ಬಾಳು; ಲೇ: ಪ್ರೇಮಾಭಟ್, ಪ್ರ: ಎಸ್. ಆರ್. ಪ್ರಕಾಶನ, ಬಳೇಪೇಟೆ, ಬೆಂಗಳೂರು-೨; ಪುಟ: ೧೯೪; ಬೆಲೆ: ರೂ. ೨-೫೦, ೧೯೬೭.

ನಾರಾಯಣರಾವ್; ಲೇ: ತೆಲುಗು ಮೂಲ; ಅಡವಿ ಬಾಪುರಾಜು; ಕನ್ನಡ ಅನುವಾದ: ಜಾನಕಿರಾಮಯ್ಯ, ಕಾರುಪಲ್ಲಿ; ಪ್ರ: ಸಾಹಿತ್ಯ ಅಕಾದೆಮಿ, ನವದೆಹಲಿ; ಪುಟ: ೮+೬೧೩; ಬೆಲೆ: ರೂ. ೧೨-೦೦, ೧೯೬೮.

ಮಂಜಿನ ಜೀವನ; ಲೇ: ರಮಾಕಾಂತ, ಪ್ರ: ಸಮಾಜ ಪುಸ್ತಕಾಲಯ, ಧಾರವಾಡ; ಪುಟ: ೨೪೦; ಬೆಲೆ: ರೂ. ೩-೦೦, ೧೯೬೮.

ಕವನ

ಪರಿವೃತ್ತ; ಲೇ: ತ್ರಿಮೂರ್ತಿ, ಪ್ರ: ಸಂಪದ ಪ್ರಕಾಶನ, ೫೬, ಇಂದಿರಾನಗರ, ಬೆಂಗಳೂರು-೮; ಪುಟ: ೪೭; ಬೆಲೆ: ರೂ. ೧-೫೦, ೧೯೬೮.

ಸಮುದ್ರಗೀತೆಗಳು; ಲೇ: 'ವಿನಾಯಕ', ಪ್ರ: ಸುರುಚಿ ಪ್ರಕಾಶನ; ಸರಸ್ವತೀಪುರಂ, ಮೈಸೂರು-೫; ಪುಟ: ೧೫+೧೦೩; ಬೆಲೆ: ರೂ. ೩-೦೦, ೧೯೬೮.

ಉದಯರವಿ; ಲೇ: ಚಂದ್ರಶೇಖರ ಹೊಳ್ಳ, ಉಪ್ಪುಂದ ಪ್ರ: ಕನ್ನಡ ಕಲಾಸಂಘ, ಅಂಚೆ ತಂತಿ ಬಳಗ, ಮೈಸೂರು; ಪುಟ: ೧೧+೪೩: ಬೆಲೆ: ರೂ. ೧-೦೦, ೧೯೬೮.

ಹಳ್ಳಿಯ ಪದಗಳು; ಲೇ: ಕೆ. ವಿರೂಪಾಕ್ಷಗೌಡ ಮತ್ತು ಮುದೆನೂರ ಸಂಗಣ್ಣ; ಪ್ರ: ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ; ಪುಟ: ೭೦+೩; ಬೆಲೆ: ರೂ. ೨-೦೦, ೧೯೬೮.

ತ್ರಿಶೂಲ; ಲೇ: ಸತ್ಯಾನಂದ, ಪ್ರ: ಅನುಭವ ಮಂಟಪ ಪ್ರಕಾಶನ, ರಾಯಚೂರು; ಪುಟ: ೪+೬+೨+೧೧೬+೪; ಬೆಲೆ: ರೂ. ೨-೦೦, ೧೯೬೮.

ಜೀವನ ಚರಿತ್ರೆ

ಯುಗಾವತಾರ; ಲೇ: ಶೇಷಾದ್ರಿ, ಹೊ. ವೆ. ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಗವೀಪುರಂ ಮಾರ್ಗ, ಕೆಂಪೇಗೌಡ ನಗರ, ಬೆಂಗಳೂರು-೧೯; ಪುಟ: ೧೦+೩೧೫; ಬೆಲೆ: ರೂ. ೫-೦೦, ೧೯೬೭.

ಕೊಳ್ಳದ ಯೋಗಿ; ಲೇ: ಘಿವಾರಿ, ಮು. ಗು. ಪ್ರ: ಗುರುಪಾದ ಪ್ರಕಾಶನ, ನಂ. ೩೬೪/೪, ಶಹಾಪೂರ ರೋಡ, ಬೆಳಗಾವಿ; ಪುಟ: ೧೧+೩೬; ಬೆಲೆ: ರೂ. ೧-೦೦, ೧೯೬೮.

ಕಲಿಯುಗದ ಕಲ್ಪವೃಕ್ಷ ಪವಾಡಪುರುಷ ಶ್ರೀ ಪರಪ್ಪ ಸ್ವಾಮಿಗಳು; ಲೇ: ಪುಟ್ಟರಾಜು, ಪ್ರ: ಪುಟ್ಟರಾಜು, ೧೫೫, ಕಿಲಾರಿರಸ್ತೆ, ಬೆಂಗಳೂರು-೨; ಪುಟ: ೨+೪೨; ಬೆಲೆ: ಉಚಿತ, ೧೯೬೮.

ಕಂಚಿ ಮಹಾಮುನಿ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಜಗದ್ಗುರು; ಲೇ: ಪಟ್ಟಾಭಿರಾಮನ್, ಕೆ. ಪ್ರ: ಶಂಕರ ಸೇವಾಸಂಘ, ಕೋಲಾರ; ಪುಟ: ೨೫; ಬೆಲೆ: ೧೯೬೮.

ಜೋತಿಷ್ಯ

A Guide to Astrology on Jyothisha Rahasyam; Author: Lakshminarasimhiah, B. K. Pub: Author & Publisher, No. 327, 5th Cross, Dayanandanagar, Bangalore-21 Pages: 6+130; Cost: Rs. 7-50, 1967.

ಫಲಜ್ಯೋತಿಷ್ಯಸಾರ ಸಂಗ್ರಹ; ಲೇ: ಕೃಷ್ಣಪ್ಪ, ಕೆ.ವಿ. ಪ್ರ: ಜ್ಯೋತಿಷ್ಯ ಸಂಶೋಧನಕೇಂದ್ರ, ಬೆಂಗಳೂರು-೧೯ ಪುಟ: ೫೬, ಬೆಲೆ: ರೂ. ೧-೦೦, ೧೯೬೮.

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಸಂಪುಟ : ೩೧

ಸಂಚಿಕೆ : ೧೦

ಅಕ್ಟೋಬರ್ ೧೯೬೮

ಈ ಸಂಚಿಕೆಯಲ್ಲಿ . . .

ಮೋಹಿನಿ

ವೃಕ್ಷರಾಜ

❋

ಯೋಧನೆ ಏನುಂಟು ನಿನ್ನ ಮನದ ಚಿಂತೆ
ಏಕಿಂತು ಏಕಾಂತದಲಿ ನಡೆದೆ?
ಮುದುಡಿವೆ ದಳಗಳು ತಾವರೆಕೊಳದೊಳು
ಕೋಗಿಲೆ ಕುಕಿಲಿರಿವ ಸದ್ದಿಲ್ಲ

ಯೋಧನೆ ಏನುಂಟು ನಿನ್ನ ಮನದ ಚಿಂತೆ
ಇಂತೇಕೆ ಬಳಲಿ ಬೆಂಡಾಗಿರುವೆ?
ಗೂಡನು ಧಾನ್ಯದಿ ತುಂಬಿಕೊಂಡಿವೆ ಇರುವೆ
ಕಳೆದಿದೆ ಈಗಲೆ ಸುಗ್ಗಿಕಾಲ

ಮೂಡಿವೆ ಮುಖದಲಿ ಚಿಂತೆಯ ಗೆರೆಗಳು
ಸಾಲುಗಟ್ಟಿವೆ ಬೆವರಿನ ಹನಿ
ಬಿಳಿಚಿಕೊಂಡಿದೆ ಮುಖ ಇಳಿದು ಗಲ್ಲಗಳು
ಬಾಡಿವೆ ಕೆಂಪು ರಂಗನು ಕಳೆದು

ತರುಣಿಯೋರ್ವಳನು ಕಂಡೆ ನಾ ಹೊಲದಲಿ
ದಿವ್ಯಸುಂದರಿ ಕಿನ್ನರಿಯವಳು
ಕುರುಳ ರಾಶಿಯು ದೀರ್ಘಚಪಲೆಯಾಬಾಲೆ
ಅವ್ಯಕ್ತಸೆಳೆತವಾ ಕಂಗಳಲಿ

ಕೈಗೊಂದು ಕಂಕಣ ತಲೆಗೊಂದು ಕಿರೀಟ
ನಡುವಿಗೊಂದು ಡಾಬು ಹೂವಿನಲಿ
ನೋಡಿ ಅವಳು ನನ್ನತ್ತ ಮಧುರದನಿಯಲಿ
ಕೂಗಿದಳು ಒಲವಿನಲಿದ್ದಂತೆ

ಕೂಡಿಸಿಕೊಂಡೆ ನಾ ಕುದುರೆ ಮೇಲವಳ
ದಿನಪೂರ ಕಾಣಲಿಲ್ಲ ಮತ್ತೇನ
ನನ್ನತ್ತ ತಿರುಗಿ ಮುಖದಲಿ ಮುಖವಿಟ್ಟು
ಹಾಡಿದಳವಳು ಗಂಧರ್ವಗಾನ

ನೀಡಿದಳೆನಗವಳು ಗೆಡ್ಡೆಗೆಣಸನು
ಅಟವಿಜೇನಮೃತಪಾನ
ನುಡಿದಳು ಖಂಡಿತ ದೇವಭಾಷೆಯಲಿ
ದಿಟ ನಿನ್ನ ನಾ ಪ್ರೀತಿಸುವೆನೆಂದು

ಕರೆದೊಯ್ದು ತನ್ನ ಮನೆಗವಳೆನ್ನ ಅತ್ತಳು
ನಿಡುಸುಯ್ದಳು ಪ್ರೇಮ ತೋರಿದಳು
ಎರಡು ಕಂಗಳಿಗೆನ್ನ ತುಟಿಗಳ ತಾಗಿಸಿ
ನೀಡಿದೆ ನಾಲ್ಕು ಸವಿಮುತ್ತುಗಳ

ಮೋಡಿಹಾಕಿ ನಿದ್ದೆತಂದಳೆನಗೆ ಮಲಗಿಸಿ
ಕಂಡೆನಾಗ ಭೀಕರದ ಕನಸ
ಕಂಡಿರಲಿಲ್ಲ ನಾನೆಂದೂ ಅಂಥ ಘೋರ ಕನಸ
ನಡುಗುಡ್ಡೆಯ ದೇಶದ ಮಾನಿಸ

ಕಳೆಗುಂದಿದ ರಾಜರಾಜಕುಮಾರರ ಕಂಡೆ
ಮೃತ್ಯುಕಳೆಯುವರ ಮುಖದಲಿ
ಸಿಲುಕಿರುವೆ ನೀ ಪ್ರೇಮರಕ್ಕಸಿಯ ಪಾಶದಿ
ಅಯ್ಯೋ ಎಂದು ಮರುಗಿದರವರು

ಎಚ್ಚರಿಸಿದರು ಅಗಲದಿ ತೆರೆದ ಬಾಯಲಿ
ಒಣತುಟಿಯಲಿ ಅರೆಮಬ್ಬಿನಲಿ
ಎಚ್ಚರಗೊಳ್ಳಲು ತರುಣಿ ಇಲ್ಲ ಗುಹೆ ಇಲ್ಲ
ನಾನಿಲ್ಲಿ ನಡುಗುಡ್ಡೆ ತಪ್ಪಲಲಿ

ಇದೆ ಕಾರಣದಿಂದೆ ಸಂಚರಿಸುತಿಹೆನಿಂತು
ಏಕಾಂಗಿಯಾಗಿ ಅಲೆಯುವೆನಿಲ್ಲಿ
ಮುದುಡಿವೆ ದಳಗಳು ತಾವರೆಕೊಳದೊಳು
ಕೋಗಿಲೆ ಇಲ್ಲವಾದರೂ ಚಿಂತಿಲ್ಲ

[Keats: La Belle Dame Sans Merci]

ಮಾಯಕಾರಿ

ವಿ. ಎಸ್. ಎಲ್.

'ಏನಯ್ಯ ಸರದಾರ! ಮುಖದಲ್ಲಿ ಕಳೆಯಿಲ್ಲ?'
ಎಂದು ಪ್ರಶ್ನಿಸಿದನವನ ದಾರಿಗನು ಒಬ್ಬ.
ಏನಹೇಳಲಿ ಅಯ್ಯ, ದೇವನೊಬ್ಬನೆ ಬಲ್ಲ
ನಿನ್ನೆ! ಎನಗಾಯಿತು ಹಿರಿದೊಂದು ಹಬ್ಬ.

ಅವಳ ಜಾಲಕೆ ಸಿಕ್ಕಿ ನಾನಾದೆ ಶತಮೂಢ
ಪೂರ್ಣವನು ಕೇಳು ಬೆರಗುಗೊಳ್ಳಲುಬೇಡ!
ಇದೇ ಬೀಸುವ ಗಾಳಿ, ಇದೇ ಚಿಗುರದ ಮರವು
ಚಳಿಗೆ ತತ್ತರಿಸಿ ಮುದುರಿತ್ತು ನರವು.

ತುರುಗವನು ಏರಿ ನಾ ಬಿಡದೆ ತಿರುಗುತಲಿದ್ದೆ
ಚಳಿಯ ಲೆಕ್ಕಿಸದೆ ಈ ಗಿರಿಯ ತಪ್ಪಲಲಿ;
ಅಂತೆ ತಿರುಗುತಲವಳ ಜಾಲದಲಿ ನಾ ಬಿದ್ದೆ!
ಆಕೆಯಾದರೊ ಎಂಥ ಚದುರೆ! – ಮಲ್ಲಿ!!

ನಾ ಬರುವುದ ಕಂಡು ಬಗ್ಗಿದಳು ಗಿಡದಲ್ಲಿ
ಮುಗ್ಧಳು ತಾ ಹೂವ ಕೊಯ್ವತೆರದಿ
ಕಂಡೊಡನೆ ನಾನವಳ, ಸಾರಿದೆನು ವೇಗದಲಿ
ಉರಿವದೀಪಕೆ ಹುಳುವು ಬಿದ್ದಂತೆ ಭರದಿ.

ವನದೇವಿಯೋ ಎಂಬ ಭ್ರಮೆಯಲ್ಲಿ ಬಿದ್ದೆ ನಾ
ಸಂದೇಹ ಬಂದು ತಾ ಸುಳಿಯೆ ಮನದಲ್ಲಿ;
ಎನ್ನ ಮುಖವನು ಕಂಡು ಕರೆದಳು, 'ಪ್ರಿಯನೆ ಬಾ'
ಮತ್ತೊಮ್ಮೆ ನಕ್ಕು ನಿಜ ಕಣ್ಣಂಚಿನಲ್ಲಿ.

ಪುಟ್ಟ ಪಾದದ್ವಯಕೆ ಕೊಟ್ಟಿರುವ ಮೆರುಗೇನು
ಮನವ ಮೋಹಿಸುವಂಥ ಬಿಳುಪಯ್ಯ ಬಿಳುಪು
ಆ ನೀಲವೇಣಿಯನು ಬಣ್ಣಿಸಲು ತಪ್ಪೇನು?
ಕಣ್ಣಿನೊಳೊ ಸೆಳೆವಂಥ ಹೊಳಪಯ್ಯ ಹೊಳಪು.

ಹೂವಮುಡಿಸಿದೆನು ನಾನವಳ ಮುಡಿಗೆ,
ಕಣ್ಣೀರ ಸುರಿಸುತ ಎರಗಿದಳೆನ್ನಡಿಗೆ;
'ನಿನ್ನ ನಾ ಪ್ರೀತಿಸುವೆ ಕೈಬಿಡದಿರು ಎನ್ನ'
ಎಂದು ಗೋಗರೆದಳು ಬಿಡದೆ ನನ್ನ.

ಮರುಳಾದೆ ನಾನವಳ ಕಳ್ಳ ಕಣ್ಣೀರಿಗೆ
ಕೈಬಿಡೆನು ನಾ ನಿನ್ನ, ಅಳಬೇಡ ಎಂದೆ.
ಅರೆಚಣಕೆ ನಕ್ಕು, ಮುತ್ತಿಟ್ಟಳೆನಗೆ
ಸರಿ, ಇನ್ನು ಹೋಗೋಣ ಎದ್ದೇಳು ಎಂದೆ.

ತುರಗವನು ಮೊದಲೇರಿ ಕರೆದೆ ನಾನವಳ
ಬಾಗುತ್ತ ಬಳುಕುತ್ತ ಬಂದಳವಳು
ಬೆನ್ನ ಹಿಂದೆ ಕುಳಿತು ಕೊಟ್ಟಳು ಮಧುವನ್ನು
ಅರಿತಿದ್ದಳವಳು ಎನ್ನ ಮನದ ಹದವನ್ನು.

ಅತ್ತಲೂ ಇತ್ತಲೂ ಬಾಗುತ್ತ ಹಾಡಿದಳು,
ಮಧುರವಾದಂಥ ಸಂಗೀತವನ್ನು;
ಸಿಹಿಗೆಣಸುಕೊಟ್ಟು, ತಿನ್ನೆಂದು ಕಾಡಿದಳು
ಅರಿಯದಾದೆನು ನಾನವಳ 'ಸಂಗೀತ'ವನ್ನು.

ಕರೆದೊಯ್ದಳು ಎನ್ನ, ತನ್ನ ಗವಿಯೊಳಗೆ
ಅರಮನೆಯದು! ಅದನು ಎಂತು ಬಣ್ಣಿಸಲಿ ನಾನು!
ಇದ್ದೆನೋ ಇಲ್ಲವೋ ನಾನೀ ಬುವಿಯೊಳಗೆ
ಬಲೆಯೊಳಗೆ ಸಿಕ್ಕಿಬಿದ್ದಿತ್ತು ಮೀನು.

ಅಲ್ಲಿ ಸತ್ಕರಿಸಿ ಮಲಗಿಸಿ ಎನ್ನನು
ನಿದ್ರೆಬರುವಂತೆ ಮಾಡಿದಳು ಲಲ್ಲೆ;
ಜೋಗುಳವ ಹಾಡಿದಳೊ ಏನುಮಾಡಿದಳೋ ಎನ್ನ
ನಿದ್ರೆಯಲಿ ಮುಳುಗಿದ್ದೆ! ನಾನೇನ ಬಲ್ಲೆ.

ಕನಸೊಂದ ಕಂಡೆ! ಭಯವ ಹುಟ್ಟಿಸುತ್ತಿತ್ತು!
ಸತ್ತಸೈನಿಕರೆಲ್ಲ ಎದ್ದು ಬಂದಂತಿತ್ತು!
ಕೂಗಿದರು ಅವರಲ್ಲ. "ಎದ್ದೇಳು ಮೂಢ!
ದಯೆಯಿಲ್ಲದ ನಾರಿಯಿವಳು, ಅಸುನೀಗಬೇಡ!"

ಭಯವಾಗಿ ಕಣ್ತೆರೆದೆ! ಅಲ್ಲಿ ಕಂಡದ್ದೇನು?!
ಈ ಗಿರಿಯ ತಪ್ಪಲಲಿ ಬಿದ್ದಿದ್ದೆ ನಾನು!
ಅವಳ ಅರಮನೆಯಿಲ್ಲ, ಆ ನಾರಿಯೂ ಇಲ್ಲ!
ಎಲ್ಲ ಏನಾದರೋ ದೇವನೇ ಬಲ್ಲ.

ಅವಳ ಕಾಣದೆ ನಾನು ಅರಸಿ ಕಂಗೆಟ್ಟೆ,
ಎಲ್ಲಿ ಹೋದಳೋ ಏನೊ ಆ ಮಾಯಕಾರಿ?
ಅವಳ ಅರಸುತಲಿಹೆನು ಅನ್ನನೀರುಗಳ ಬಿಟ್ಟು
ತಿಳಿಯಿತೆ ಸಂಗತಿಯು? ಇನ್ನು ಹಿಡಿ ನಿನ್ನ ದಾರಿ.

[Keats ಕವಿಯ 'La Belle Dame Sans Merci' ಎಂಬ ಪದ್ಯದ ಭಾವಾನುವಾದ]
ಒಂದೇ ಮೂಲದಿಂದ ಹೊರಹೊಮ್ಮಿದ ಇನ್ನೊಂದು ಪಾಕ ಇದು.

ಇತ್ತೀಚಿನ ಕೆಲವು ಕನ್ನಡ ಕಾದಂಬರಿಗಳು

'ಸುಮನಾ'

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿ ಬಹುಜನ ಪ್ರಿಯವಾದುದು. ಅದರ ನೆಲಸು (canvas) ವಿಸ್ತಾರ ವಾದುದರಿಂದ ಬದುಕಿನ ಆಳ, ವಿಸ್ತಾರ, ವೈವಿಧ್ಯಗಳನ್ನು ಹೆಚ್ಚು ಸಮರ್ಪಕವಾಗಿ, ಹೆಚ್ಚು ಯಥಾರ್ಥವಾಗಿ ಪರಿಣಾಮಕಾರಿಯಾಗುವಂತೆ ಚಿತ್ರಿಸಲು ಕಾದಂಬರಿಯಲ್ಲಿ ಅವಕಾಶವಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೂ ಕಳೆದ ಮೂರು ನಾಲ್ಕು ದಶಕಗಳಲ್ಲಿ ಕಾದಂಬರಿಯ ಬೆಳೆ ಹುಲುಸಾಗಿಯೇ ಬೆಳೆದಿದೆಯೆಂದರೆ ತಪ್ಪಾಗದು. ನಮ್ಮ ಜನತೆಯ ರುಚಿ, ಪ್ರವೃತ್ತಿ, ಮನಸ್ಸು ಅತ್ತ ಓಲುತ್ತಿದೆಯಾದ್ದರಿಂದ ದಿನೇ ದಿನೇ ಕಾದಂಬರಿಗಳ ಸಂಖ್ಯೆಯೂ ಗಮನಾರ್ಹವಾಗಿ ಹೆಚ್ಚುತ್ತಿದೆ. ಹಲವಾರು ಲೇಖಕರು ತಮ್ಮ ಕೃತಿಗಳಿಂದ ಕಾದಂಬರಿ ಕ್ಷೇತ್ರವನ್ನು ಸುಪುಷ್ಟಗೊಳಿಸಿದ್ದಾರಾದರೂ ಈಚೆಗೆ ಹೊಸ ಕೊರಲುಗಳ ಹೊಸ ದನಿಗಳು ಹೆಚ್ಚಾಗಿ ಕೇಳಿಬರುತ್ತಿವೆ. ಒಂದು ವಿಧದಲ್ಲಿ ಇದು ಸಾಹಿತ್ಯದ ಪುರೋಭಿವೃದ್ಧಿಯ ಪ್ರಗತಿಯ ದಿಸೆಯಲ್ಲಿ ಶುಭಸೂಚನೆಯೇ ಆದರೂ ಹಿರಿಯ ಪ್ರಜ್ಞಾವಂತ ಕಾದಂಬರಿಕಾರರ ಕೃತಿ ರಚನೆಗಳಿಗೆ ಇತ್ತೀಚಿನವರ ಕೃತಿಗಳನ್ನು ಹೋಲಿಸಿದಾಗ, ಮೌಲ್ಯವಿವೇಚನೆಗೆ ತೊಡಗಿದಾಗ, ನಿರಾಶೆ ಮೂಡುತ್ತದೆ. ಹಿರಿಯ ಕಾದಂಬರಿಕಾರರ ಉತ್ತಮ ರಚನೆಗಳಲ್ಲಿ ಕಾಣಬಹುದಾದ ಬದುಕಿನ, ಸಮಾಜ ಜೀವನದ ವಿವಿಧ ಮಜಲುಗಳ ಆಳವಾದ ಅನುಭವಪೂರ್ಣವಾದ ವಿಸ್ತೃತ ಜೀವನ ವಿಮರ್ಶೆಯಾಗಲಿ, ಬದುಕಿನ ಮೌಲ್ಯಗಳನ್ನು ಕುರಿತ ವಿವೇಚನೆಯಾಗಲಿ ಇಂದಿನ ಬಹುಪಾಲು ಲೇಖಕರ ಬರವಣಿಗೆಯಲ್ಲಿ ಕಾಣಸಿಗದಿರುವುದು ವಿಷಾದದ ಸಂಗತಿ. ಅತಿ ಹಗುರವಾದ, ಹಳಸಲಾದ ಬಡಕಲು ವಸ್ತುಗಳನ್ನೇ ಕಾದಂಬರಿಗಳ ಸಾರಸರ್ವಸ್ವವಾಗಿ ತುಂಬಿ, ಕೇವಲ ಚರ್ವಿತಚರ್ವಣಸ್ಥಿತಿಗೆ ಬಂದಂತಿದೆ. ಇದು ಸಾಹಿತ್ಯಪ್ರಗತಿಗೆ ಕುಠಾರಪ್ರಾಯವಾಗದಿದ್ದಲ್ಲಿ ಹೆಚ್ಚಿನ ಉಪಕಾರವಾದೀತು.

ಕಳೆದ ಎರಡು ಮೂರು ದಶಕಗಳಲ್ಲಿ ಹೊರಬಿದ್ದ ಕಾದಂಬರಿಗಳತ್ತ ಕಣ್ಣು ಹೊರಳಿಸಿದಾಗ ಹಲವಾರು ಉತ್ತಮ ಕಾದಂಬರಿಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಅವುಗಳು ನಿಜಕ್ಕೂ ನಮ್ಮ ಸಾಹಿತ್ಯವನ್ನು ಸಾಕಷ್ಟು ಸುಂದರವಾಗಿಸಿವೆ. 'ಮರಳಿ ಮಣ್ಣಿಗೆ', 'ನಂಬಿದವರ ನಾಕ ನರಕ', 'ನಿಸರ್ಗ', 'ಗ್ರಾಮಾಯಣ', ಗಳಲ್ಲಿನ ಬದುಕಿನ ವಿಸ್ತಾರವಾಗಲಿ, ವೈವಿಧ್ಯವಾಗಲಿ, 'ಸಮೀಕ್ಷೆ', 'ಅಳಿದಮೇಲೇ' ಗಳಲ್ಲಿನ ಬದುಕಿನ ಮೌಲ್ಯಗಳ ವಿಮರ್ಶೆಯಾಗಲಿ, ವಿವೇಚನೆಯಾಗಲಿ, 'ಬೆಟ್ಟದ ಜೀವ'ದ ಮಾನುಷ ಪೌರುಷದ ಹಿರಿಯ ಸವಾಲಿನ ಶಕ್ತಿಯಾಗಲಿ, 'ಹೆಗ್ಗಡತಿ'ಯ ಮಣ್ಣಿನ ವಾಸನೆ ಹಾಗೂ ಸಹಜ ವಾಸ್ತವ ಜನಜೀವದ, ರಮ್ಯ ಪ್ರಕೃತಿ ಚಿತ್ರಣಗಳಾಗಲೀ 'ಸಮರಸವೇ ಜೀವನ'ದ ಕೌಟುಂಬಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿರಸ ಅಶಾಂತಿಗಳ ಸಮರಸದ ಚಿತ್ರಣವಾಗಲಿ ಇಂದು ಕಾದಂಬರಿಗಳಲ್ಲಿ ಕಾಣುತ್ತಿಲ್ಲ. ಇದಕ್ಕೆ ಇಂದಿನ ಕಾದಂಬರಿಕಾರರಲ್ಲಿ ಹಲವರ ಜೀವನಾನುಭವದ ಕೊರತೆ ಕಾರಣವಾದರೆ, ಬದಲಾಗುತ್ತಿರುವ ಸಮಾಜದ ರೀತಿ-ನೀತಿಗಳೂ, ಬದುಕಿನ ನಂಬಿಕೆ-ವಿಶ್ವಾಸಗಳೂ, ಹೆಚ್ಚುತ್ತಿರುವ ಬೌದ್ಧಿಕತೆಯೂ ನೆರವಾಗುತ್ತಿವೆ. ಬದುಕನ್ನು ಕುರಿತ ಇಂದಿನ ಜನಾಂಗದ ದೃಷ್ಟಿಯೇ ಸಂಪೂರ್ಣವಾಗಿ ಬದಲಾಯಿಸಿರುವುದರಿಂದ ಸಾಹಿತ್ಯದಲ್ಲಿಯೂ ಅದರ ಪ್ರಭಾವ ಬಿದ್ದಿದೆ.

೨

ಮೊದಲು ಹಿರಿಯ ಲೇಖಕರ ಕೆಲವು ಇತ್ತೀಚಿನ* ಕೃತಿಗಳನ್ನು ಪರಿಶೀಲಿಸಬಹುದು. 'ಕಾನೂರು ಹೆಗ್ಗಡತಿ' ಯನ್ನು ಕೊಟ್ಟ ಕುವೆಂಪು ಅವರು ಗಾತ್ರದಲ್ಲಿ 'ಹೆಗ್ಗಡತಿ'

---

*ಈ ಲೇಖನದ ತಲೆಬರಹ 'ಇತ್ತೀಚಿನ ಕೆಲವು ಕನ್ನಡ ಕಾದಂಬರಿ' ಗಳು, ಎಂದಿದೆಯಾದ್ದರಿಂದ ಈಚೆಗೆ ಪ್ರಕಟವಾದ ಕೆಲವು ಪ್ರಮುಖ ಕಾದಂಬರಿಗಳನ್ನು ಇಲ್ಲಿ ವಿವೇಚಿಸಬೇಕಾಗುತ್ತದೆ ಸ್ಥೂಲವಾಗಿಯಾದರೂ. ಆದರೆ ಈ ಸಮೀಕ್ಷೆ ಸಂಪೂರ್ಣವೆಂದು ಭಾವಿಸಲಾಗದು. ಏಕೆಂದರೆ ಇತ್ತೀಚಿನ ಎಂದ ಮಾತ್ರಕ್ಕೆ ಅದರ ಅವಧಿಯ ಪರಿಮಿತಿಯನ್ನು ನಿರ್ಣಯಿಸುವುದಾಗಲಿ ಅದನ್ನು ಅಳೆಯುವುದಾಗಲಿ ಅವಶ್ಯವಾಗುತ್ತದೆ. ಎರಡನೆಯದಾಗಿ ಈಚಿನ ಹಲವು ಕೃತಿಗಳನ್ನೆಲ್ಲ ಇಲ್ಲಿ ವಿವೇಚಿಸಲಾಗುವುದೂ ಇಲ್ಲ; ಏಕೆಂದರೆ ಕಾದಂಬರಿಗಳ ಹಾಗೂ ಅದನ್ನು ಬರೆಯುವವರ ಸಂಖ್ಯೆ ದಿನ ದಿನಕ್ಕೂ ಹೆಚ್ಚುತ್ತಿದೆ. ಅದುದರಿಂದ, ಯಾವೊಬ್ಬ ಸಾಹಿತಿಯನ್ನಾಗಲಿ, ಎಲ್ಲರ ಎಲ್ಲ ಕೃತಿಗಳನ್ನಾಗಲಿ ಚರ್ಚಿಸುವುದು ಇಲ್ಲಿನ ಪರಿಮಿತಿಗೆ ಒಳಪಡದ ಸಂಗತಿ.—ಲೇ.

ಗಿಂತ ಒಂದೂವರೆ ಪಾಲು ಹಿರಿದಾದ 'ಮದುಮಗಳ'ನ್ನು ನೀಡಿದ್ದಾರೆ. ಇದರ ಕಥಾವಸ್ತುವೂ 'ಹೆಗ್ಗಡತಿ'ಗೆ "ಡಿಟ್ಟೊ" ಎನಿಸಿಕೊಳ್ಳುತ್ತದೆ: ಆದರೆ ಒಂದು ವ್ಯತ್ಯಾಸ; 'ಹೆಗ್ಗಡತಿ'ಯ ಮನಸೆಳೆವ ಪ್ರಕೃತಿ ರಮ್ಯತೆಯ ಚಿತ್ರಣ ಇಲ್ಲಿಯೂ ಮೈದೋರಿದೆಯಾದರೂ ಅಲ್ಲಿನ ಆದರ್ಶತೆ, ಬದುಕಿನ ಉನ್ನತ ಮೌಲ್ಯಗಳ ವಿವೇಚನೆಯಲ್ಲಿನ ನೂರರಲ್ಲಿ ಹತ್ತು ಪಾಲೂ ಕಾಣದೆ ಕಣ್ಮರೆಯಾಗಿ, ಕೇವಲ ಸಹಜತೆಗೆ, ವಾಸ್ತವತೆಗೆ—ಅದರ ಅತಿಗೆ—ಸಾಕ್ಷಿಯಾಗಿದೆ. ಸಾಹಿತ್ಯವನ್ನು ಸಾಫಲ್ಯಗೊಳಿಸುವ 'ಮಣ್ಣಿನ ವಾಸನೆ' ಯೇನೊ ಇಲ್ಲಿ ಬೇಕಾದಷ್ಟಿದೆ; ಆದರೆ ಹಚ್ಚ ಹಸಿಯದಾಗಿದೆಯಾಗಿ ಪರಿಪಕ್ವ ಬೆಳೆಯನ್ನು ನೀಡಲು ಅಷ್ಟು ಯಶಸ್ವಿಯಾಗದೇನೋ . . . ಕಾದಂಬರಿಕಾರರ ವೈಯಕ್ತಿಕ ಸಿದ್ಧಿಯ ಬಗೆಗೆ ಒಂದು ಮಾತು ಹೇಳಬಹುದು. 'ಹೆಗ್ಗಡತಿಯ ಭಾಷಾ ಶೈಲಿಗೂ 'ಮದುಮಗಳ' ಶೈಲಿಗೂ ಕಾಣುವ ವ್ಯತ್ಯಾಸ, ವಿಭಿನ್ನತೆ, ಬದಲಾವಣೆ, ಕುವೆಂಪು ಅವರ ರಚನಾತ್ಮಕ ಸಾಮರ್ಥ್ಯದ ಬೆಳವಣಿಗೆಯ ಊರ್ಧ್ವ ಮುಖತೆಯನ್ನು ಸೂಚಿಸುತ್ತದೆ. 'ಮದುಮಗಳ' ಭಾಷಾ ಶೈಲಿ ಕನ್ನಡದ ಅತ್ಯುತ್ತಮ ಶೈಲಿಗಳಲ್ಲೊಂದಾಗಿದೆ.

ತಮ್ಮ ಅಮೂಲ್ಯ ಕೃತಿಗಳಿಂದ, ಹಲವಾರು ದಿಕ್ಕುಗಳಿಗೆ ದಾರಿ ತೋರಿಸಿದವರಲ್ಲಿ ಕಾರಂತರು ಪ್ರಮುಖರು; ಇತ್ತೀಚಿಗೆ 'ಇನ್ನೊಂದೇ ದಾರಿ'ಯನ್ನೂ ಪ್ರಕಟಿಸಿದ್ದಾರೆ, ಸಂಪ್ರದಾಯದಲ್ಲಿ ಶ್ರದ್ಧೆ, ನಂಬಿಕೆ, ಅದರ ವಿರುದ್ಧವಾಗಿ ನಿಲ್ಲುವ ಆಧುನಿಕ ವೈಚಾರಿಕ ಮನಸ್ಸಿನ ಅಶ್ರದ್ಧೆ, ಇವುಗಳ ನಡುವಣ ಘರ್ಷಣೆ ಇಲ್ಲಿ ನಿರೂಪಿತವಾಗಿವೆ. ಮಧ್ಯೆ ಹಾಸುಹೊಕ್ಕಾಗಿ ಸುತ್ತ ಬಲೆಯನ್ನು ನೆಯ್ದುಕೊಳ್ಳುವಂತೆ ಬಾಳಿನ ಬಳ್ಳಿಯನ್ನು ಹಬ್ಬಿಸಿದ್ದಾರೆ. ಕಾರಂತರ ಯಶಸ್ಸು ಯಾವೊಂದಕ್ಕೂ ಒಲಿಯದೆ, ಎರಡರಲ್ಲಿಯೂ ಸಮಾನ ಶ್ರದ್ಧೆಯನ್ನು ಕಲ್ಪಿಸಿ, ಅರ್ಥವಂತಿಕೆಯನ್ನು ಹೆಚ್ಚಿಸುವುದರಲ್ಲಿದೆ. ಅವರ ಎಲ್ಲ ರಚನೆಗಳಲ್ಲಿ ಬಹುಪಾಲು ಕಂಡುಬರುವ ಬದುಕನ್ನು ಕುರಿತ ಗಹನ ವಿವೇಚನೆ. ಅದರ ವಿಸ್ತಾರದ ಒಂದೊಂದೇ ಮುಖದ ಸ್ಥೂಲಪರಿಚಯ, ಒಳಿತು—ಕೆಡಕುಗಳ ಪೂರ್ವಾಪರ ವಿವೇಚನೆ, ಪ್ರಕೃತಿಯ ಸಜೀವ ಸಾನ್ನಿಧ್ಯದ ವರ್ಣನೆ ಇಲ್ಲಿಯೂ ಕಂಡುಬರುತ್ತದೆ. ಅವರ ಕೆಲವು ಕಾದಂಬರಿಗಳಲ್ಲಿನಂತೆಯೇ ಇದಕ್ಕೂ ಅನಿರೀಕ್ಷಿತ ಆತುರದ ಮುಕ್ತಾಯ. ಕಾರಂತರ ಯಾವ ಕೃತಿಯನ್ನಾಗಲಿ ಸಪ್ಪೆ ಎನ್ನಲಾಗುವುದಿಲ್ಲವೆಂಬುದನ್ನು ಈ ಕಾದಂಬರಿಯೂ ಹೆಚ್ಚು ಸಮರ್ಥಿಸುತ್ತದೆ.

* * *

'ಶಾಪ' 'ಮೂರಾಬಟ್ಟೆ' ಮಾಲಿಕೆಯ ಸುದೀರ್ಘ ಕಥಾನಕವನ್ನು ನೀಡಿದ ಇನಾಮುದಾರ ಅವರು 'ಊರ್ವಶಿ' ಯನ್ನು ಸೃಷ್ಟಿಸಿದ್ದಾರೆ. ಊರ್ವಶಿಯ ಚೆಲುವು ಮೋಹಕ, ಮಾದಕವಾದುದಾದರೂ ಆ ಚೆಲುವಿನ ಹಿಂದೆಯೇ ಸರ್ವನಾಶ ಮಾಡಬಲ್ಲ ಶಕ್ತಿಯಿದೆ. ಸಾಕಷ್ಟು ಭದ್ರವಿಲ್ಲದ ಬುನಾದಿಯ ಮೇಲೆ ಕಟ್ಟಿರುವ ಈ ಕಾದಂಬರಿಯ ತತ್ವಗಳ ವಿವೇಚನೆಯ ಹಂದರ ಅಷ್ಟು ಯಶಸ್ವಿಯಾಗಿಲ್ಲವಾದರೂ, ಕಾದಂಬರಿಯ ರಂಜನೆ ಕಡಮೆಯ ದರ್ಜೆಯದೇನಲ್ಲ.

೩

ಈಚಿನ ಹೊಸ ದನಿಗಳಲ್ಲಿ ಹೆಚ್ಚು ಯಶಸ್ಸು ಗಳಿಸಿದವರಲ್ಲಿ ಎಸ್. ಎಲ್. ಭೈರಪ್ಪನವರು ಒಬ್ಬರು. ಅವರ ಆರು ಕಾದಂಬರಿಗಳು ಈವರೆಗೆ ಪ್ರಕಟವಾಗಿವೆಯಾದರೂ, 'ವಂಶವೃಕ್ಷ' ಗುಣ-ಗಾತ್ರಗಳೆರಡರಲ್ಲಿಯೂ ಉತ್ತಮವೆನಿಸಿಕೊಂಡಿದೆ. ಸಂಪ್ರದಾಯಲ್ಲಿ ಅಚಲಶ್ರದ್ಧೆ, ಅವಿರತಭಕ್ತಿ ವಿಶ್ವಾಸ; ಅದಕ್ಕೆ ಅನುಗುಣವಾಗಿ ಹೊಂದಿಯೊ ಹೊಂದಿಕೊಳ್ಳದೆಯೊ ನಡೆವ ಆಧುನಿಕ ವೈಜ್ಞಾನಿಕ ಮನಸ್ಸು ಪರಸ್ಪರ ಸಂಘರ್ಷಣೆಯ, ಜಿಜ್ಞಾಸಾ ಮನೋವೃತ್ತಿಯ ಹಿನ್ನಲೆ—ಇವುಗಳ ವರ್ತುಲದಲ್ಲಿ ಭೈರಪ್ಪನವರು ತಮ್ಮ ಸತ್ಯದ ನೆಲೆಯನ್ನು ಕಾಣಲು ಹೊರಟಿದ್ದಾರೆ. 'ವಂಶವೃಕ್ಷ'ದ ಬಗೆಗಿದ್ದ ಅಭಿಮಾನ, ಹೆಮ್ಮೆಗಳಿಂದ ನಿರಾಧಾರವಾಗಿ ನುಚ್ಚುನೂರಾಗುವ ಶ್ರೋತ್ರಿಯಾಗಲಿ, ಆ 'ವೃಕ್ಷ' ದಿಂದ ಹೊರಬಿದ್ದರೂ ಪುನಃ ಅಲ್ಲಿಗೇ ಸೇರಿದ್ದ ಕಾತ್ಯಾಯನಿಯಾಗಲಿ ಸೇರಿದವರಾದರೂ ತಮ್ಮ ಜೀವನ ಪಥದಿಂದ ನಿರ್ಗಮಿಸುವ ಸದಾಶಿವರಾಯ, ರಾಜಾರಾಯನಾಗಲಿ ಯಾರೊಬ್ಬರೂ ಆ ವಂಶವೃಕ್ಷದವರಾಗರೆಂದು ಗೋಚರಿಸಿದರೂ ಸದಾಶಿವರಾಯನ ಮಗ ಪೃಥ್ವಿಯೊಬ್ಬ ಮಾತ್ರ ಆ ವಂಶವೃಕ್ಷಕ್ಕೆ ಸೇರಬಲ್ಲ ಅರ್ಹತೆಯನ್ನು ಪಡೆದವನೆಂಬ ಸತ್ಯ ಸ್ಥಾಪಿತವಾಗುತ್ತದೆ. ಆದರೂ ಶ್ರೋತ್ರಿಯ ಚಿತ್ರಣದಲ್ಲಿ ಕಂಡುಬರುವ ಅಸದೃಶ ಗುಣಸಂಪನ್ನತೆ, ವ್ಯಕ್ತಿತ್ವದ ಹಿರಿಮೆ, ಅವರ ಅರ್ಥವಂತಿಗೆ, ಸೌಜನ್ಯ, ಸೌಶೀಲ್ಯ, ಸಂಪ್ರದಾಯ ಶ್ರದ್ಧೆ—ಇವು ಚಿತ್ರಿತವಾಗಿರುವ ರೀತಿ ಯಾವ ಲೇಖಕನಿಗಾದರೂ ಸಫಲತೆಯನ್ನು ನೀಡಬಲ್ಲದು. ಶ್ರೋತ್ರಿ ಗೆದ್ದು ಸೋತರೆ, ಕಾತ್ಯಾಯನಿ ಸೋತು ಗೆಲ್ಲುತ್ತಾಳೆ. ಆದರೆ, ಕಾದಂಬರಿಯು ಹೆಚ್ಚು ಅಡಕವಾಗಿರುವಂತಿದ್ದರೆ ಇನ್ನೂ ಹೆಚ್ಚಿನ ಪರಿಣಾಮ ಬೀರಬಹುದಾಗುತ್ತಿತ್ತೆನ್ನಿಸುತ್ತದೆ. ಪ್ರತೀಕಾತ್ಮಕವೆನ್ನಿಸಿದ್ದರೂ ಅವರ 'ಜಲಪಾತ' ಅಷ್ಟು ಯಶಸ್ವಿಯಾದಂತಿಲ್ಲ; ರಚನೆಯ ತಂತ್ರವೂ ಅಷ್ಟೇ

ಸಡಿಲ; ಪುನರುಕ್ತಿ ಹೆಚ್ಚು. ಇತ್ತೀಚಿನ 'ನಾಯಿ ನೆರಳು' ಜನ್ಮಜನ್ಮಾಂತರದ ಸಂಸ್ಕಾರ, ಸಂಬಂಧಗಳಿಗೆ ಸಂಬಂಧಿಸಿದುದು. ಮೂರು ಜನ್ಮಗಳ ಸಂಬಂಧ ಇಲ್ಲಿ ಉತ್ತಮವಾಗಿ ಚಿತ್ರಿತವಾಗಿದ್ದರೂ, ಸಹಜತೆಯ ಪ್ರಶ್ನೆಯನ್ನು ಮೂಡಿಸುತ್ತದೆ. ಬದುಕಿನ ವಿವಿಧ ಮುಖಗಳನ್ನು ವೈಚಾರಿಕ ಮನೋಭಾವದಿಂದ ದಾರ್ಶನಿಕ ಮನೋಭಾವದಿಂದ ಕಾಣಬಲ್ಲ ಭೈರಪ್ಪನವರ ದೃಷ್ಟಿ ಹೊಸ ಆಸೆಯನ್ನು ಮೂಡಿಸುತ್ತದೆ.

ಹೊಸ ದೃಷ್ಟಿಯನ್ನೇ ಬೆನ್ನೆಲುಬಾಗುಳ್ಳ ಅನಂತಮೂರ್ತಿಯವರ 'ಸಂಸ್ಕಾರ' ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಸರ್ವವಿಧದಲ್ಲಿಯೂ ಹೊಸದಾದ ಬೆಳಸು. ಸತ್ತ ವ್ಯಕ್ತಿಯೊಬ್ಬನ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಸಂಪ್ರದಾಯ ಶ್ರದ್ಧಾಳುಗಳೆನಿಸಿಕೊಂಡ ಕೆಲವು ಬ್ರಾಹ್ಮಣ ಪ್ರಮುಖರು ತಮ್ಮ ತಮ್ಮ ಬಾಳಿನ ಸ್ವವಿಮರ್ಶೆಯಲ್ಲಿ ತೊಡಗಿ ವಿವೇಚಿಸಿದಾಗ ಸತ್ತವನ ತಕ್ಕಡಿಯೇ ಮೇಲಾದ ಕಥಾವಸ್ತು ಇಲ್ಲಿನದು. ಇಲ್ಲಿನ ವಿಮರ್ಶೆಯ ತೀಕ್ಷ್ಣತೆ ವಿಶಿಷ್ಟವಾದುದು. ಬಹು ಸಮರ್ಥವಾದ ಭಾಷಾ ಶೈಲಿ ಅದಕ್ಕೆ ಹೆಚ್ಚು ನೆರವಾಗಿದೆ. ಕಾದಂಬರಿಯ ವಸ್ತು, ನಿರ್ವಹಣೆ ಅಥವಾ ಅದರ ಪರಿಣಾಮಗಳಿಗಿಂತ ಹೆಚ್ಚಾಗಿ ಆ ಭಾಷೆಯ ಬಿಗಿ, ಕಾಂತಿ ಗಮನ ಸೆಳೆಯುತ್ತವೆ. ಅದರ ಸಿದ್ಧಿ ನಿರೂಪಣೆಯಲ್ಲಿರುವಂತಿದೆ. ಈಚಿನ ಬಹು ಯಶಸ್ವೀ ಕೃತಿಗಳಲ್ಲೊಂದಾಗಿದೆ ಇದು.

ಹೆಚ್ಚು ಕಡಮೆ ಇದೇ ಜಾತಿಗೆ ಸೇರಬಲ್ಲ ಇನ್ನೊಂದು ಕಾದಂಬರಿ (ಕರೆಯಬಹುದಾದರೆ?) ಶೌರಿಯವರ 'ಹಳದಿ ಮೀನು'. ರಾಮಾನುಜನರು ತಮ್ಮ ಹಿನ್ನುಡಿಯಲ್ಲಿ ಪ್ರಾಮಾಣಿಕವಾಗಿ ಹೇಳಿದಂತೆ "ಈ ಬರೆಹ ಒಂದು ಕೇಂದ್ರ ಪ್ರತೀಕದ ಸುತ್ತ ತಿರುಗುತ್ತದೆ. ಈ ಪ್ರತೀಕ ತಿರುಗುವ ಸ್ಫಟಿಕ. ಇಲ್ಲಿ ಕತೆಹೇಳುವ ಪ್ರಯತ್ನವಿಲ್ಲ–ಆದರೂ, ನಮಗೆ ಕಾದಂಬರಿಯನ್ನು ಮುಗಿಸಿದಾಗ ಕಾಣುವುದು, ಭಾಸವಾಗುವುದು ಕೇವಲ ಗಿರಗಿರನೆ ಸುತ್ತುವ ವರ್ತುಲ ಮಾತ್ರ; ಅದರ ತುಂಬೆಲ್ಲ ಬರಿಯ ಶೂನ್ಯತೆ . . ." ಆದರೆ ಪತ್ರಿಕೋದ್ಯಮಿ, ಅವನ ಸಹೋದ್ಯೋಗಿಯಾದ ಆ 'ಅವಳು', ಅವಳನ್ನು ತಮ್ಮ ಪ್ರಭಾವ ವರ್ತುಲಕ್ಕೆ ಸೆಳೆಯುವುದರಲ್ಲಿ ಸಮರ್ಥರಾಗುತ್ತಾರೆ. ಈ ಕಾದಂಬರಿಯ ಪಾತ್ರಧಾರಿಗಳ ಚರ್ಯೆ ಅವರಷ್ಟೇ ವಿಚಿತ್ರವಾಗಿರುವಾಗ, ನಮಗೂ ಸ್ವಲ್ಪ ವಿಚಿತ್ರವೇ ಎನಿಸೀತು! ಹೀಗಾಗಿ, ಇದು ಯಾವ ಮೌಲ್ಯಗಳನ್ನೂ ಸಂಸ್ಥಾಪಿಸುವುದಂತಿರಲಿ, ಕೊನೆಗೆ ವಿಚಾರಗಳನ್ನು ಬಡಿದೆಬ್ಬಿಸುವುದೂ ಇಲ್ಲ.

೪

ಇತ್ತೀಚಿನ ಕಾದಂಬರಿಗಳೆಂದರೆ ಮೇಲೆ ಹೇಳಿದವುಗಳಷ್ಟೆ ಎಂದಲ್ಲ. ಇವೆಲ್ಲೊ ಒಂದೆರಡು ಮಾದರಿಗಳು ಮಾತ್ರ. ಒಲೆಯ ಮೇಲೆ ಅಟ್ಟಿರುವ ಅನ್ನ ಬೆಂದಿದೆಯೆ ಇಲ್ಲವೇ ಎಂಬುದನ್ನು ಪರೀಕ್ಷಿಸಲು ಒಂದೆರಡು ಅಗುಳನ್ನು ಹಿಚುಕಿ ನೋಡಿದರೆ ಸಾಕು ಎಂಬ ಪಾಕಸಂಬಂಧಿ. ಸತ್ವಸಾಹಿತ್ಯ ಜಗತ್ತಿನಲ್ಲಿ ಎಷ್ಟರಮಟ್ಟಿಗೆ ಸ್ಥಾಪಿತವಾಗಬಲ್ಲದೆಂಬುದು ಸಂದೇಹದ ಸಂಗತಿ. ಏಕೆಂದರೆ, ಹಲವಾರು ಪ್ರಕಟಿತವಾಗಿರುವ ಕಾದಂಬರಿಗಳು ಅವನ್ನು ಸಮರ್ಥಿಸುವಂತಿವೆ. ಬಹುಮಂದಿ ಕಾದಂಬರಿಕಾರರು ತಮ್ಮ ಚೊಚ್ಚಿಲ ಕೃತಿಗಳನ್ನು 'ಅರ್ಪಿಸು'ತ್ತಲೇ ಇದ್ದಾರೆ; ಅವು ಆಯಾ ಲೇಖಕರ ಮೊದಲ ಪ್ರತಿಗಳಾದುದರಿಂದ ಏನೇ ಬರೆದರೂ ಅದಕ್ಕೆ 'ವಿನಾಯತಿ' ತೋರಿಸುವ ಪದ್ಧತಿಯೂ ಬೆಳೆದು ಬಂದಿದೆ. ಅದರ ಗಣತಿಯೂ ಅಪರಿಮಿತವಾದುದರಿಂದ ಯಾವುದನ್ನೂ ದೀರ್ಘವಾಗಿ ವಿವೇಚಿಸಲೂ ಆಗುವುದಿಲ್ಲ; ಅಗತ್ಯವೂ ಇಲ್ಲವೆನ್ನಬಹುದು. ಕೆಲವರ ರಚನೆಗಳಂತೂ ಯಥಾಪ್ರಕಾರದ 'ಬಾಜಾರಿ ಮಾಲು'ಗಳು; ಅವುಗಳ ಹೆಸರು ಮತ್ತು ರಕ್ಷಾಪುಟದ ಅಂದಚೆಂದಗಳೇ ಅವುಗಳ ಸಾರಸರ್ವಸ್ವ; ಕೀಳು ರಂಜನೆಗಾಗಿಯೇ ಬರೆದವು ಅಥವಾ ಸಾಕಷ್ಟು ಹದ ಸಾಲದವು. ಮನೆಯ ಮನದ ಕಿಟಕಿ ಬಾಗಿಲುಗಳನ್ನು ವಿಶಾಲವಾಗಿ ತೆರೆದು ಹೆಚ್ಚು ಗಾಳಿ ಬೆಳಕುಗಳನ್ನು ಪಡೆದು ಸುಪುಷ್ಟವಾಗಿ ಬೆಳೆಯುವ ಮುನ್ನ ಅವನ್ನು ಪರೀಕ್ಷಿಸಬಾರದು.

ಒಂದು ಗಮನಾರ್ಹ ಸಂಗತಿಯೆಂದರೆ ಈಚಿಗೆ ಮಹಿಳಾ ಲೇಖಕಿಯರ ಕೃತಿಗಳು ಹೆಚ್ಚುತ್ತಿರುವುದು (ಅಂತೆಯೇ ಕರ್ತೃಗಳ ಸಂಖ್ಯೆ) ಈವರೆಗೆ ಇದ್ದ ಕೊರತೆಯನ್ನು ನಿವಾರಿಸುವತ್ತ ಇದು ಶುಭಸೂಚನೆ ಎನಿಸಿದಾಗ್ಯೂ ರಚನೆಯ ಗುಣದೋಷಗಳನ್ನು ವಿವೇಚಿಸಿದಾಗ ನಿರಾಸೆ ಕಾದಿಟ್ಟದ್ದು ಎನ್ನಬೇಕಾಗುತ್ತದೆ. ದಿ|| ತ್ರಿವೇಣಿ, ಜಯಲಕ್ಷ್ಮಿಯರ ಕಾದಂಬರಿಗಳಲ್ಲಿನ ಸಾರ್ವತ್ರಿಕ ಮನೋರಂಜನೆಯನ್ನೇನೊ ಈಚಿನವರ ಕಾದಂಬರಿಗಳು ತಪ್ಪದೆ ದೊರಕಿಸುವುದರಲ್ಲಿ ಯಶಸ್ವಿಯಾಗುತ್ತಿವೆಯಾದರೂ, ಯಾವೊಂದು ಕಾದಂಬರಿಯೂ ನಾಲ್ಕು ಕಾಲ ನಿಲ್ಲಬಲ್ಲ ಯೋಗ್ಯತೆಯನ್ನು, ಸತ್ವವನ್ನು ಪಡೆದು ಹುಟ್ಟುತ್ತಿಲ್ಲ. ಅನುಭವೀ ಲೇಖಕಿಯರೆನಿಸಿಕೊಂಡವರಲ್ಲಿಯೂ ಕೆಲವರು—ವಾಣಿ, ಇಂದಿರಾ, ಉಷಾದೇವಿ, ಎಂ. ಸಿ. ಪದ್ಮಾ ಅದೇ ಮೆಟ್ಟಿಲುಗಳನ್ನು ಹತ್ತುತ್ತಲೊ ಇಳಿಯುತ್ತಲೊ ಇದ್ದಾರೆ. ಇಂದಿರಾ ಅವರ ಇತ್ತೀಚಿನ 'ಕಲಾದರ್ಶಿ'ಯನ್ನು ವಿಮರ್ಶಕರೊಬ್ಬರು ಬರ್ನಾರ್ಡ್

ಷಾರ 'ಪಿಗ್‌ಮೇಲಿಯನ್'ಗೆ ಹೋಲಿಸಿದವರಾದರೂ ಅದರ ಸಾಫಲ್ಯತೆಯನ್ನು ಕುರಿತು ವಿವೇಚಿಸಲಿಲ್ಲ ಮಾತ್ರ. ಅನುಪಮಾ ಒಬ್ಬರು ಸ್ವಲ್ಪಮಟ್ಟಿಗೆ ಈ ಅಪವಾದಗಳಿಗೆ ಹೊರತಾಗಿದ್ದಾರಾದರೂ 'ಅನಂತ ಗೀತೆ' 'ನೂಲುನೇಯ್ದ ಚಿತ್ರ'ಗಳ ತೂಕದ ಕಾದಂಬರಿಗಳನ್ನೇಕೊ ಕಡಮೆ ಮಾಡು ತ್ತಿದ್ದಾರೆ.

ಈ ಬಳಗಕ್ಕೆ ಸೇರಿದ ಹೊಸಬರಲ್ಲಿ 'ಕಾವೇರಿಯ ಆರ್ತ ರವ'ದ ಪಂಕಜಾ, 'ಬಾಳಬೆಳಕು', 'ಜೋಡಿ ಹಕ್ಕಿ'ಗಳ 'ಶಾರದೆ' ಮತ್ತು 'ಡಾ|| ಅಘೋರ'ದ ಮಲ್ಲಿಕಾ ಗಮನಾ ರ್ಹರಾಗಿದ್ದಾರೆ. ಶ್ರೀಮತಿ ಪಂಕಜ ಅವರ ಸುದೀರ್ಘ ವಾದ ಕಾದಂಬರಿಯ ನೆಲಸು, ನಿರೂಪಣೆ, ನಿರ್ವಹಣೆ ಸಾಕಷ್ಟು ಬೇಸರವನ್ನೂ ಭ್ರಮೆಯನ್ನೂ ತರಬಲ್ಲುದು. ಹರಿಹರಕವಿ ನಾರದರನ್ನು ಬಲವಂತವಾಗಿ ಸೂಳೆಗೇರಿಗೆ ಎಳೆತಂದಂತೆ, (ಗಿರಿಜಾ ಕಲ್ಯಾಣ) ಈ ಕಾದಂಬರಿಕಾರ್ತಿ ಯರು 'ಗೋಪಿ'ಯನ್ನು ಅನಾವಶ್ಯಕವಾಗಿ ಎಳೆತರುತ್ತಾರೆ. ಶಾರದೆಯವರ ಕಾದಂಬರಿಗಳೆರಡರಲ್ಲಿ ವಿಶೇಷವೇನೂ ಇಲ್ಲ ದಿದ್ದರೂ ಶೈಲಿ ನಿರೂಪಣೆಗಳಲ್ಲಿ ಪಂಕಜಾರವರಿಗಿಂತ ಹೆಚ್ಚು ಯಶಸ್ವಿಗಳಾಗಿದ್ದಾರೆ; ಶ್ರದ್ಧೆ ವಹಿಸಿ ಬರೆಯುವವರಾದರೆ ಭರವಸೆಯನ್ನು ಮೂಡಬಲ್ಲರೆನಿಸುವಂತಿದೆ. 'ಅಘೋರ' ಗಾತ್ರದಲ್ಲಿಯಂತೂ ಘೋರವಾಗಿದೆ; ಆದರೆ ಎಲ್ಲ ಕೊರತೆ ಗಳನ್ನೂ ತುಂಬಿಕೊಂಡಂತಿದೆ.

ಇನ್ನು ದಿನ, ವಾರ, ಮಾಸ ಪತ್ರಿಕೆಗಳಲ್ಲಿಯೂ ಕಾದಂ ಬರಿಗಳು ಕಾಣಿಸಿಕೊಳ್ಳುತ್ತಿವೆ. ಇಲ್ಲಿಯೂ ಹಿಂದಿನದೇ ಹಾಡು ಕೇಳಿಸುತ್ತಿದೆಯಾದರೂ ಆಗೊಮ್ಮೆ ಈಗೊಮ್ಮೆ ಉತ್ತಮ ರಾಗವೂ ಕೇಳಿಸುತ್ತಿವೆ. ರಾಜಪುರೋಹಿತರ 'ಸುಳಿಗಾಳಿ' ಮತ್ತು ಈಗ 'ಪ್ರಜಾವಾಣಿ'ಯಲ್ಲಿ ಧಾರಾ ವಾಹಿಯಾಗಿ ಬರುತ್ತಿರುವ 'ಫಿಲಾಸದ ವಂಶ'ದಲ್ಲಿನ ವಾದ ವಿವಾದಗಳ ಮಧ್ಯೆ ಕಥೆಯೂ ಮುಂದುವರಿಯುತ್ತದೆ; ಅಷ್ಟು ದೀರ್ಘವಾಗಿ ನ್ಯಾಯಾಲಯದ ವಾದ-ವಿವಾದಗಳ ಚಿತ್ರಣ ಅಷ್ಟು ಜೀವಂತವಾಗಿ ಯಾವ ಕಾದಂಬರಿಯ ಲ್ಲಿಯೂ ಮೂಡಿರಲಿಲ್ಲವೆನ್ನಬೇಕು. ಕಾದಂಬರಿಯ ಮುಕ್ತಾಯವನ್ನಂತೂ ಕಾದು ನೋಡಬೇಕು.

ಭಾಷಾಂತರ, ಅನುವಾದ ರೂಪದಲ್ಲಿಯೂ ತೆಲುಗು, ತಮಿಳು, ಮಲೆಯಾಳಿಗಳಿಂದ—ಹೆಚ್ಚಾಗಿ ಆ ಭಾಷೆಗಳ ಲ್ಲಿಯೂ ಮಹಿಳಾ ಲೇಖಕಿಯರು ಬರೆದ ಎರವಲು ತಂದ ಕಾದಂಬರಿಗಳೂ ಹೆಚ್ಚು ಸಂಖ್ಯೆಯಲ್ಲಿ ಬರುತ್ತಿವೆ. ಅನು ವಾದಕರು ತಮ್ಮ ಅನುವಾದ ಕಾರ್ಯದಲ್ಲಿ ಯಶಸ್ವಿಗಳಾಗಿ ದ್ದರೆ ಪ್ರಾಮಾಣಿಕರಾದರೆ ಈ ಕಾದಂಬರಿಗಳು ಗುಣದಲ್ಲಿ ಕನ್ನಡವನ್ನೇ ಹೆಚ್ಚು ಹೋಲುತ್ತವೆಯಾದ್ದರಿಂದ ಏನಿಲ್ಲ ವೆಂದರೂ ಕನ್ನಡ ಕಾದಂಬರಿ ಲೇಖಕ-ಲೇಖಕಿವರ್ಗದವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳಬಹುದು; 'ಪರವಾಗಿಲ್ಲ ನಾವೇ ವಾಸಿ' ಎಂಬ 'ಲೇಬಲ್' ಅಂಟಿಸಿಕೊಂಡವು ಹಲವು.

ಆದರೆ ಸಾರ್ವತ್ರಿಕವಾಗಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಇತ್ತೀಚಿಗೆ ಕಂಡು ಬರುವ ಕೊರತೆಯೆಂದರೆ ಸಮರ್ಥವಾದ ವಸ್ತುವಿನ ಆಯ್ಕೆಯ ಅಭಾವ; ಅದನ್ನು ಸಮರ್ಪಕವಾಗಿ ನಿರ್ವಹಿಸಲಾಗದ ದೌರ್ಬಲ್ಯ. ಹೆಚ್ಚು ಪಾಲು ಪ್ರಕಟ ಗೊಳ್ಳುತ್ತಿರುವ ಕಾದಂಬರಿಗಳಲ್ಲೆಲ್ಲ ಕಂಡು ಬರುವುದು ಬಾಳಿನ ಒಂದು ಘಟ್ಟ ಮಾತ್ರವೆನಿಸುವ 'Romance'— ಅದರಲ್ಲಿಯೂ ಇಲ್ಲಿ ಚಿತ್ರಿತವಾಗಿರುವುದು 'Cheap Romance'—ಅಥವಾ ಪ್ರೀತಿ, ಪ್ರೇಮ, ಪ್ರಣಯ— ಅದರ ಪುನರಾವರ್ತನೆ, ಏರುತಗ್ಗುಗಳು, ಬೆಳವಣಿಗೆ ಪರಿ ಣಾಮಗಳು ಮಾತ್ರ ಅಲ್ಲೊಂದು ಇಲ್ಲೊಂದು ಇದಕ್ಕೆ ಅಪ ವಾದವಾದ ಕೃತಿಗಳು ಕಾಣುತ್ತಿವೆಯಾದರೂ, ಅಲ್ಲಿಯೂ ನಿರೀಕ್ಷಿಸಿದ ಗುರಿಮುಟ್ಟುವುವು ಯಾವುವೂ ಕಡಿಮೆ. ಮಾನವನ ಬದುಕು ಇಷ್ಟಕ್ಕೇ ಸೀಮಿತವಾದುದಲ್ಲ. ಅರ್ಥ ಪೂರ್ಣ ಮಾನವ ಬಾಳಿನ ವೈಶಾಲ್ಯದಲ್ಲಿ ಇದು ಒಂದು ಘಟ್ಟ ಮಾತ್ರ (ಇದರ ಚಿತ್ರಣದಲ್ಲಿಯೂ ಮಲೆಯಾಳಿಯ 'ಚೆಮ್ಮೀನ್' ಬಂಗಾಳಿಯ 'ಜೀಬನ್ ಸಂಗೀತ್', ಡ್ಯೂಮಾ (Jr.)ನ 'ಕೆಮಿಲಿ', ಹಿಂದಿಯ ಧರ್ಮವೀರ ಭಾರತೀಯವರ 'ಗುನಾಹೋನ್ ಕಿ ದೇವತಾ' ದರ್ಜೆಯ ಕೃತಿಗಳು ಕನ್ನಡದಲ್ಲಿ ಇನ್ನೂ ಹುಟ್ಟದಿರುವುದು ದುರದೃಷ್ಟ ಕರ). ಈ ಒಲವು, ಪ್ರವೃತ್ತಿ ಕಾದಂಬರಿಕಾರ್ತಿಯರಲ್ಲಿ ಹೆಚ್ಚು ಕಾಣುವುದು ಸೋಜಿಗದ ಸಂಗತಿ.

ಇನ್ನೊಂದು ವಿಶೇಷ ಪ್ರವೃತ್ತಿಯೆಂದರೆ ಚಲನಚಿತ್ರಕ್ಕೆ ಅಳವಡಿಸಿಕೊಳ್ಳಲಾಗುವಂತೆ ಆ ಬಗೆಯಲ್ಲಿಯ ಕಾದಂಬರಿ ಗಳನ್ನು ಬರೆಯುವ ಚಟ ಹೆಚ್ಚಾಗುತ್ತಿದೆ (ಅದೇ ಉದ್ದೇಶ ದಿಂದ ಪ್ರಕಟವಾಗುತ್ತಿರುವ ಕಾದಂಬರಿಗಳ ಸಂಖ್ಯೆಯೂ ಕಡಮೆಯದಲ್ಲ!) ಸಾಹಿತ್ಯಕೃತಿ ನಾಲ್ಕು ಕಾಲ ಶಾಶ್ವತ ವಾದುದಾಗಿರಬೇಕು. ತೀರ ಹಗುರವಲ್ಲದೆ, ಆದರೆ ತೀರ ಗಹನವಾಗಿ ಗೊಡ್ಡು ವೇದಾಂತವೆನಿಸದಂತೆ ಇರಬೇಕು. ಬಾಳನ್ನು ಆಳವಾಗಿ ಅರಿಯುವ ಪ್ರವೃತ್ತಿ, ಅದರ ವಿವಿಧ ಮುಖಗಳನ್ನು ಮಜಲುಗಳನ್ನು ಕಾಣುವ, ಕಂಡುದನ್ನು ಅನುಭವದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ, ಪರೀಕ್ಷಿಸಿ ಒಪ್ಪಿ ದುದನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಗೊಳಿಸಿ ಅದಕ್ಕೆ ಭಾಷೆಯ ಆಭರಣವನ್ನು ತೊಡಿಸುವ ಮನೋಭಾವ ಬೆಳೆಯಬೇಕು.

ಕೀಟ್ಸ್ ಕವಿಯ "ಗ್ರೀಕ್ ಕರಂಡದ ಮೇಲಿನ ಪ್ರಗಾಥ"

(Ode on the Grecian urn)

ಎಸ್. ಕೃಷ್ಣಭಟ್ಟ

ಕಲೆಯ ಸೃಷ್ಟಿಗೇ ಆದ್ಯತೆ ಕೊಡುವುದಕ್ಕಾಗಿ ಇಂಗ್ಲೆಂಡಿನಲ್ಲಿ ಆದ ರಮ್ಯಪಂಥದ ಪುನರುತ್ಥಾನಕಾಲದ (Period of the Romantic Revival) ನೆನಪು ಬಂದ ಕೂಡಲೆ ನಮ್ಮ ಕಣ್ಣ ಮುಂದೆ ಬರುವ ಕೆಲವೇ ಕವಿಗಳಲ್ಲಿ ಜಾನ್ ಕೀಟ್ಸ್ ಒಬ್ಬನು. ಬಹುಮಟ್ಟಿಗೆ ಹತ್ತೊಂಭತ್ತನೇ ಶತಮಾನದ ಆದಿಭಾಗಕ್ಕೆ ಸೇರಿದ ಈತನು ಜೀವಿಸಿದ್ದುದು ಕೇವಲ ಇಪ್ಪತ್ತಾರು ವರ್ಷಗಳು ಮಾತ್ರ. ಆದರೆ ಇಷ್ಟು ಅಲ್ಪ ಅವಧಿಯಲ್ಲಿ ಈತನಿಂದ ಇಂಗ್ಲಿಷ್ ಕಾವ್ಯ ಪ್ರಪಂಚಕ್ಕೆ ಸಂದಿರುವ ಕಾಣಿಕೆ ಅಮರವಾದುದು. ಲಂಡನ್‌ನಲ್ಲಿ ಜನಿಸಿದ ಇವನು ವೈದ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೂ ಇವನ ಹೃದಯಾಂತರಾಳದಲ್ಲಿದ್ದ ಸಾಹಿತ್ಯದ ಒಲವೇ ಮೇಲಕ್ಕೆ ಬಂದು, ರಮ್ಯ ಪಂಥದ ಪೀಳಿಗೆಗೆ ಓರ್ವ ಶ್ರೇಷ್ಠ ಕವಿಯನ್ನು ದೊರಕಿಸಿ ಕೊಟ್ಟಿತು. ತಾನು ಬರೆದ "ಎಂಡಿಮಿಯಾನ್" (Endymion) ಕಾವ್ಯವು ಉಗ್ರ ಟೀಕೆಗೆ ಒಳಗಾದರೂ ಅಷ್ಟಾಗಿ ಧೈರ್ಯಗುಂದದೆ, ಈತನು ಕೆಲವು ಉತ್ತಮ ಪ್ರಗಾಥಗಳನ್ನೂ, "ಈವ್ ಆಫ್ ಸೇಂಟ್ ಆ್ಯಗ್ನಿಸ್" ಮುಂತಾದ ಇತರ ಅನೇಕ ಶ್ರೇಷ್ಠ ಕಾವ್ಯಗಳನ್ನೂ ಸಹೃದಯರಿಗೆ ಅರ್ಪಿಸಿದನು. ಕೊನೆಗಾಲದಲ್ಲಿ ಕ್ಷಯ ರೋಗಕ್ಕೆ ತುತ್ತಾದ ಮೇಲೆ ಇಟಲಿಗೆ ಪ್ರಯಾಣ ಮಾಡಿ ರೋಮ್‌ನಲ್ಲಿ ದಿವಂಗತನಾದನು. ಈತನ ಅಕಾಲ ಮರಣದಿಂದ ಅತಿಯಾಗಿ ಸಂತಾಪಗೊಂಡ ಸಮಕಾಲೀನ ಕವಿ ಶೆಲ್ಲಿಯ ಕಂಬನಿಯು ("ಆಡೊನಿಸ್" ಕಾವ್ಯದಲ್ಲಿ) ಇವನ ಕವಿತಾ ಪ್ರತಿಭೆಯ ಮೇಲೆ ಚೆನ್ನಾಗಿ ಬೆಳಕನ್ನು ಚೆಲ್ಲುವುದು.

ಪ್ರಾಚೀನ ಸಾಹಿತ್ಯದಲ್ಲಿ "ಪ್ರಗಾಥ" ಅಥವಾ "Ode-ಓಡ್" ಎಂಬುದು ಒಂದು ಹಾಡಬಲ್ಲ ಗೀತೆ. ಈಗಿನ ಅರ್ಥದಲ್ಲಿ ಇದು ಉದಾತ್ತ ವಸ್ತು ಹಾಗೂ ಶೈಲಿಯನ್ನೊಳಗೊಂಡ ಪ್ರಾಸಬದ್ಧ (ಕೆಲವು ಮಾತ್ರ ಪ್ರಾಸವಿಲ್ಲದ) ಗೀತ; ಅಲ್ಲದೆ ಇದು ಬಹುಮಟ್ಟಿಗೆ ಸಂಬೋಧನೆಯ ರೂಪದಲ್ಲಿರುತ್ತದೆ. ಮತ್ತು ಸಾಮಾನ್ಯವಾಗಿ ೧೫೦ ಸಾಲುಗಳಿಗಿಂತ ಹೆಚ್ಚಾಗಿರುವುದಿಲ್ಲ. "ಪಿಂಡಾರಿಕ್ ಓಡ್"ನಂತಹ ವಿವಿಧ ಜಾತಿಯ ಗ್ರೀಕ್ ಪ್ರಗಾಥಗಳನ್ನು ಇಂಗ್ಲಿಷ್ ಕವಿಗಳು ಅನುಕರಣೆ ಮಾಡಿದರು. ಈ ಪ್ರಗಾಥಗಳಲ್ಲಿ ಸಾಮಾನ್ಯವಾಗಿ ಬರುವ ಮೂರು ಪದ್ಯಗಳನ್ನು ಕ್ರಮವಾಗಿ ಸ್ಟ್ರೋಫೆ, ಆ್ಯಂಟಿ ಸ್ಟ್ರೋಫೆ ಮತ್ತು ಈಪೋಡ್‌ಗಳೆಂದು ಮೂರು ಭಾಗವಾಗಿ ವಿಂಗಡಿಸಿದರು; ಛಂದಸ್ಸಿನಲ್ಲಿ ಮೂರನೆಯದು ಮೊದಲನೆಯ ಮತ್ತು ಎರಡನೆಯ ಪದ್ಯಗಳಿಗಿಂತ ಸ್ವಲ್ಪ ಬೇರೆಯಾಗಿರುವುದು. ಆದರೆ, ಹೊರೇಸನು ಅನುಕರಿಸಿದ ಓಡ್‌ನಲ್ಲಿ ದೀರ್ಘ ಛಂದಸ್ಸಿನಿಂದ ಕೂಡಿದ ಒಂದೇ ಜಾತಿಯ ಪದ್ಯಗಳಿರುವುವು. ಜಟಿಲ ಛಂದೋ ರೂಪಗಳು, ಸಂಗೀತ ಶಾಸ್ತ್ರ ಹಾಗೂ ನರ್ತನದ ಜಟಿಲ ನಡೆಗಳ ಸಾಮರಸ್ಯದಿಂದ ಓಡ್ ರಚನೆಯು ಕಲಾತ್ಮಕವಾಗಿ ಬೆಳೆಯಿತು. ಕ್ರಮೇಣ ಅನೇಕ ಬದಲಾವಣೆಗಳನ್ನು ಹೊಂದುತ್ತಾ ಬಂದು, ಕೆಲವು ಸ್ವಚ್ಛಂದ ಛಂದೋ ರೂಪಗಳಿಂದ ಅನಿಯತ ಪ್ರಗಾಥಗಳಾದುವು. ಹಾಗೆಯೇ, ಗಾಯನದ, ನರ್ತನದ ಗುಣ ಕಡಮೆಯಾಗುತ್ತಾ ಬಂದು, ಪ್ರಗಾಥ ಓದುಗಬ್ಬವಾಯಿತು.

ಪ್ರಗಾಥಗಳ ರಚನೆಯಲ್ಲಿ ಕೀಟ್ಸ್ ಕವಿಯು ಹೊರೇಸನ ಪದ್ಧತಿಯನ್ನು ಅನುಕರಿಸಿದ್ದರೂ, ಅನುಕರಣೆಯ ವಿಧಾನದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ತೋರಿಸಿದ್ದಾನೆ. ಈತನು ಕಾವ್ಯ ಪ್ರಪಂಚಕ್ಕೆ ಸಲ್ಲಿಸಿದ ಕೆಲವು ಅಮೂಲ್ಯ ಪ್ರಗಾಥಗಳಲ್ಲಿ (Ode to autumn, Ode to a nightingale, Ode on a Grecian urn ಇತ್ಯಾದಿ.) ಈತನು ಸೃಷ್ಟಿಸಿರುವ ಚಿತ್ರ, ಕಲಾಭಿಜ್ಞತೆ, ಇಂದ್ರಿಯಗಳ (senses) ಕಡೆ ಇವನ ಒಲವು—ಮುಂತಾದುವುಗಳನ್ನು ಕಾಣಬಹುದು. ಇವುಗಳಲ್ಲಿ ಇಂದ್ರಿಯಗಳಿಗೆ ಪ್ರಾಧಾನ್ಯ ಕೊಟ್ಟರೂ, ಆಲೋಚನೆಯ ಅಭಾವ ಕಾಣಿಸುವುದಿಲ್ಲ. ಇದರ ಪರಿಣಾಮವಾಗಿ, ಕವಿಗಿರುವ ಪ್ರಕೃತಿಯ ಹಂಬಲ ಇನ್ನೂ ತೀಕ್ಷ್ಣವಾಗಿದೆ; ಇದರ ಸಹಾಯದಿಂದ ಕವಿಯು ಜೀವನದ ನಿಷ್ಠುರ ಸತ್ಯದಿಂದ ಪಾರಾಗಲು ಪ್ರಯತ್ನಿಸು

ತ್ತಾನೆ; ಸಂವೇದನೆಯು ಕವಿಯನ್ನು ದುಃಖರಹಿತವಾದ ಒಂದು ಸ್ವಪ್ನಲೋಕಕ್ಕೆ ಒಯ್ಯುತ್ತದೆ. ಈ ಕವಿಯ ಪ್ರಕಾರ, ಒಂದು ಸುಂದರ ನೋಟ, ಹೂಗಳ ಸುಗಂಧ, ನೈಟಿಂಗ್‌ಗೇಲ್ ಪಕ್ಷಿಯ ಇಂಚರ, ಒಂದು ಪುಷ್ಪದಳದ ಮೃದುಸ್ಪರ್ಶ ಅಥವಾ ಮಧುಪಾನದ ರುಚಿ ಈ ಕೆಲಸ ವನ್ನು ಮಾಡಬಲ್ಲುದು. ಕೀಟ್ಸ್‌ನು ಪ್ರಕೃತಿಯ ಸೌಂದ ರ್ಯಕ್ಕೆ ಮನಸೋತರೂ, ವರ್ಡ್ಸ್‌ವರ್ತ್‌ನಂತೆ ಜೀವನದ ದುಃಖಪರಂಪರೆಯನ್ನು ಈ ಸೌಂದರ್ಯಕ್ಕೆ ಸಂಪರ್ಕಪಡಿಸುವ ಗೋಜಿಗೆ ಹೋಗಲಿಲ್ಲ; ಏಕೆಂದರೆ, ಪ್ರಕೃತಿ ಸೌಂದರ್ಯದ ಸಹಾಯ ಈ ಕವಿಗೆ ದುಃಖಪೂರಿತ ಜಗತ್ತಿನಿಂದ ಪಾರಾ ಗಲು ಅವಶ್ಯಕ.

"ಗ್ರೀಕ್ ಕರಂಡದ ಮೇಲಿನ ಪ್ರಗಾಥ" (Ode on a Grecian urn) ವು ಕೀಟ್ಸ್ ಕಲಾತ್ಮಕ ಲೇಖನಿಯಿಂದ ಸೃಷ್ಟಿಯಾದ ಕಾವ್ಯರತ್ನಗಳಲ್ಲೊಂದು. ಹೆಸರೇನೋ ಗ್ರೀಕ್ ಕರಂಡವನ್ನು ಸೂಚಿಸಿದರೂ, ಇಲ್ಲಿ ಕವಿ ತನ್ನ ದೃಷ್ಟಿಗೆ ಬಿದ್ದಿರಬಹುದಾದ ಯಾವ ಒಂದು ವಿಶಿಷ್ಟ ಕರಂಡ ದಿಂದಲೂ ಸ್ಫೂರ್ತಿಗೊಂಡಿಲ್ಲ. ಈತನ ಕಣ್ಣಿಗೆ ಹಬ್ಬವ ನ್ನುಂಟುಮಾಡಿರಬಹುದಾದ ಅನೇಕ ಕರಂಡಗಳ ಸೌಂದರ್ಯ ಹಾಗೂ ಗ್ರೀಕ್ ಕಲೆಯಲ್ಲಿ ಕವಿಗಿದ್ದ ಅಭಿರುಚಿ—ಇವುಗಳ ಸುಂದರ ಸಂಗಮ ಕವಿಯ ಮನಸ್ಸಿನಲ್ಲಿ ಆಗಿರಬೇಕು. ಅಗೋಚರವಾದ ಕಲೆ ಮತ್ತು ಪ್ರಕೃತಿಗಿಂತ ಅದಕ್ಕೆ ಇರುವ ಹೆಚ್ಚುಗಾರಿಕೆ ಇವುಗಳ ಮನೋಹರ ವರ್ಣನೆಯದು.

ಈ ಪ್ರಗಾಥದಲ್ಲಿರುವ ಐದು ಪದ್ಯಗಳಲ್ಲಿ ಮೊದಲನೆ ಯದು ಕವಿ ಆನಂದಿಸಿದ ಗ್ರೀಕ್ ಕರಂಡದ ಸೌಂದರ್ಯದ ಪರಿಚಯವನ್ನು ಮಾಡಿಸುತ್ತದೆ. ಕರಂಡವು ನಿರ್ಮಾಣ ವಾಗಿ ಎಷ್ಟೋ ಕಾಲ ಸಂದಿದ್ದರೂ, ಅದು ತನ್ನ ಸೌಂದರ್ಯ ವನ್ನು ಸಂರಕ್ಷಿಸಿಕೊಂಡು ಬಂದಿದೆ. ಯಾರಿಗೂ ಅದರ ರಹಸ್ಯ ತಿಳಿಯದೇ ಇರುವುದರಿಂದ ಇದುವರೆಗೂ ಅದರ ಸೌಂದರ್ಯ ಹಾಗೂ ಗೂಢತೆ ಹಾಗೆಯೇ ಇವೆ. ಅದರ ಮೇಲೆ ಕೆತ್ತಿರುವ ವನದ ಮನೋಹರ ದೃಶ್ಯವು ಕಾವ್ಯದಲ್ಲಿ ವರ್ಣಿತವಾಗಬಹುದಾದ ಯಾವುದೇ ವಸ್ತುವಿಗಿಂತ ಹೆಚ್ಚು ಸುಂದರವಾಗಿದೆ. ಅದರ ಮೇಲಿನ ಕೆತ್ತನೆಯು ಕವಿಯನ್ನು ಆಕರ್ಷಿಸುವುದಲ್ಲದೆ ವಿಸ್ಮಯಗೊಳಿಸುತ್ತದೆ. ಈ ವಿಸ್ಮಯದ ಪರಿಣಾಮವಾಗಿ ಕವಿಯ ಮನಸ್ಸಿನಲ್ಲಿ ಕೆಲವು ವಿಚಾರಗಳು ಉದ್ಭವವಾಗುತ್ತವೆ. ಇವೆಲ್ಲಾ ಯಾವುದರ ವಿಷಯವಾಗಿ ಕೆತ್ತಲ್ಪಟ್ಟಿವೆ? ಈ ಚಿತ್ರದಲ್ಲಿ ಕಾಣುವ ಜನರೆಲ್ಲಾ ಯಾರು? ಇವರು ಮಾನವರೋ, ದೇವತೆಗಳೋ ಅಥವಾ ಮಾನವ-ದೇವತೆಗಳೋ? ಈ ಕಣಿವೆಯು ಟೆಂಪಿಯೋ ಅಥವಾ ಆರ್ಕೆಡಿಯೋ? ನಲ್ಲರು ಬೆನ್ನಟ್ಟಿಕೊಂಡು ಬರುತ್ತಿರುವ ಈ ನಲ್ಲೆಯರು ಯಾರು? ಇಲ್ಲಿ ಏಕೆ ಗಾಯಕರು ತಮ್ಮ ವಾದ್ಯಗಳೊಂದಿಗೆ ಇದ್ದಾರೆ?

ಎರಡನೇ ಪದ್ಯದಲ್ಲಿ ನಾವು ಕಾಣುವುದು—ನಮ್ಮ ಜೀವ ನದಲ್ಲಿನ ವಸ್ತುಗಳ ಅಲ್ಪಾಯುಷ್ಯಕ್ಕಿಂತ ಭಿನ್ನವಾಗಿ ಕಲೆ ಯಲ್ಲಿ ಅವುಗಳಿಗೆ ಕೊಟ್ಟಿರುವ ಶಾಶ್ವತ ಸ್ವರೂಪ. ಕರಂಡದ ಮೇಲೆ ಕೊಟ್ಟಿರುವ ಚಿತ್ರಗಳಲ್ಲಿ ಇರುವ ಒಂದೇ ಒಂದು ಕೊರತೆಯೆಂದರೆ ಸತ್ಯತೆ; ಆದರೆ, ಕಷ್ಟ, ಬದಲಾವಣೆ ಅಥವಾ ಸಾವಿಗೆ ಸಿಗದಂತಾಗುವ ಅಲೌಕಿಕ ಸುಖವು ಅವು ಗಳಿಗೆ ಉಂಟು. "ಶ್ರುತಗಾನಂ ಮಧುರಂ, ಅಶ್ರುತಗಾನಂ ಮಧುರತರಂ" ಎಂಬ ಕೀಟ್ಸ್‌ನ ಸುಪ್ರಸಿದ್ಧ ವಾಕ್ಯ ಇಲ್ಲಿ ಬರುತ್ತದೆ. ಚಿತ್ರದಲ್ಲಿರುವ ಯುವಕ ಗಾಯಕನು ಎಂದೆಂದಿಗೂ ಗಾಯನವನ್ನು ನಿಲ್ಲಿಸುವುದಿಲ್ಲ. ಹಾಗೆಯೇ ಅಲ್ಲಿನ ಮರಗಳ ಎಲೆಗಳೂ ಉದುರುವುದಿಲ್ಲ. ಚಿತ್ರದ ಪ್ರೇಮಿಯು ಎಂದೆಂದಿಗೂ ತನ್ನ ಪ್ರೇಯಸಿಯನ್ನು ಚುಂಬಿ ಸಲಾರನು; ಆದರೂ ಈಕೆಯ ಚಿರಸೌಂದರ್ಯ ಹಾಗೂ ಪ್ರೇಮವಿರುವುದರಿಂದ ಇವನು ದುಃಖಪಡಬೇಕಾಗಿಲ್ಲ.

ಕರಂಡದ ಮೂರ್ತಿಗಳಿಗೆ ಎಲ್ಲಾ ರೀತಿಯ ಸುಖಾನು ಭವವಿರುವುದನ್ನು ಕವಿ ಮೂರನೇ ಪದ್ಯದಲ್ಲಿ ವಿವೇಚಿಸಿ ದ್ದಾನೆ. ಇಲ್ಲಿ ಚಿತ್ರಿತವಾದ ಮರಗಳಿಗೆ ಯಾವಾಗಲೂ ವಸಂತಕಾಲ. ಮನೋಹರ ಗಾಯಕನು ಯಾವಾಗಲೂ ಹೊಸದಾಗಿರುವ ಗೀತೆಗಳನ್ನು ಅನವರತವೂ ಹಾಡುವನು. ಧೀರ ಪ್ರೇಮಿಯ ಉತ್ಸಾಹ ಕುಂದುವುದೇ ಇಲ್ಲ; ಹಾಗೆಯೇ ಅವನ ಪ್ರೇಮಕ್ಕೆ ತೃಪ್ತಿಯೆನ್ನುವುದೂ ಇಲ್ಲ.

ನಾಲ್ಕನೇ ಪದ್ಯದಲ್ಲಿ ಕವಿಯ ಗಮನ ಕರಂಡದ ಬೇರೊಂದು ಚಿತ್ರದ ಕಡೆಗೆ ಹೋಗುತ್ತದೆ. ಅರ್ಚಕನೊ ಬ್ಬನು ಒಂದು ಎಳೆಯ ಹಸುವನ್ನು ಬಲಿಕೊಡುವುದಕ್ಕಾಗಿ ಒಯ್ಯುತ್ತಿದ್ದಾನೆ. ಇದನ್ನು ನೋಡಲು ಒಂದು ಚಿಕ್ಕ ಊರಿನ ಜನರೆಲ್ಲಾ ತಮ್ಮ ತಮ್ಮ ಮನೆಗಳನ್ನು ಬಿಟ್ಟು ಬಂದಿದ್ದಾರೆ. ಅಲ್ಲಿಗೆ ಯಾರೂ ಹಿಂತಿರುಗಲಾರರಾದ್ದರಿಂದ ಆ ಊರು ಶಾಶ್ವತವಾಗಿ ನಿಶ್ಶಬ್ದವಾಗಿರುವುದೆಂದು ಕವಿಗೆ ಗೋಚರವಾಗುತ್ತದೆ.

ಐದನೇ ಪದ್ಯದಲ್ಲಿ, ಜನರು ಹಾಗೂ ಲಲನೆಯರು, ಮರ ಗಳು ಮತ್ತು ಶಾಖೆಗಳಿಂದ ಕೂಡಿದ ಕರಂಡವನ್ನು ಸಂಬೋ ಧಿಸುತ್ತಾ, ಅದು ಅನಂತತೆಯ ಸಮಸ್ಯೆಯಷ್ಟೇ ರಹಸ್ಯ ಗರ್ಭಿತವಾಗಿರುವುದನ್ನು ಕವಿ ಕಾಣುತ್ತಾನೆ. ಜನತೆಗೆ ಅದರ ಸಂದೇಶವೂ ನಿರ್ದಿಷ್ಟವಾಗಿದೆ. ನಮ್ಮ ಕಷ್ಟ ಕಾರ್ಪಣ್ಯಗಳ ನಡುವೆಯೂ ಕೂಡ, "ಸೌಂದರ್ಯವೇ ಸತ್ಯ,

ಸತ್ಯವೇ ಸೌಂದರ್ಯ" ಎಂದು ಕಿವಿಮಾತನಾಡುತ್ತಾ ಕರಂಡವು ಮಾನವನ ನಿಜವಾದ ಮಿತ್ರನಾಗಿ ಉಳಿಯುವುದು; ನಮಗೆ ಬರುವ ಈ ಆಲೋಚನೆಯೇ ಶಾಂತಿ ಹಾಗೂ ಸುಖಕಾರಕ. ಅಲ್ಲದೆ ಭೂಮಿಯ ಮೇಲೆ ಪ್ರತಿಯೊಬ್ಬನೂ ಇಷ್ಟು ತಿಳಿದರೆ ಸಾಕೆಂದು ಕರಂಡದ ಉಪದೇಶ.

ಕೀಟ್ಸ್‌ನ ಈ ಸುಂದರ ಕವನದ ರಸವನ್ನು ಅನುಭವಿಸುವುದರ ಜೊತೆಯಲ್ಲೇ ಸಹೃದಯರಿಗೆ ಕೆಲವು ಹೆಚ್ಚಿನ ಸಂಗತಿಗಳೂ ಕಾಣುತ್ತವೆ. ಜೀವನದ ಸೌಂದರ್ಯ ಹಾಗೂ ಚಟುವಟಿಕೆಗಳ ಸಾರ ಮೊದಲನೇ ಪದ್ಯದಲ್ಲಿರುವ ಕವನದಲ್ಲಿ ಅಡಕವಾಗಿದೆ. ಈ ಕವಿಯ ಇನ್ನೊಂದು ಪ್ರಶ್ನೆಗಳಲ್ಲಿ ನೈಟಿಂಗೇಲ್ ಪಕ್ಷಿಯು ಇಡೀ ಪಕ್ಷಿ ಜಾತಿಯ ಚಿಹ್ನೆಯಾದರೆ, ಇಲ್ಲಿ ಗ್ರೀಕ್ ಕರಂಡವು ಕಲೆಯ ದ್ಯೋತಕ; ಅಲ್ಲದೆ, ಅದು ಕಲೆಯ ಅನಂತತೆ ಹಾಗೂ ಸೌಂದರ್ಯ-ಸತ್ಯದ ಸಮತೆಯನ್ನು ಬೋಧಿಸುತ್ತದೆ. ಹಾಗೆಯೇ ನವಗಾಯನ ಮಾಡುತ್ತಿರುವ ಗಾಯಕ, ಚಿರಯೌವನವುಳ್ಳ ವೃಕ್ಷಗಳು, ನಲ್ಲೆಯನ್ನು ಚುಂಬಿಸಲು ನಲ್ಲನ ಸತತ ಪ್ರಯತ್ನ ಹಾಗೂ ಆಕೆಯ ಚಿರಸೌಂದರ್ಯ—ಇಂಥ ಮನೋಹರ ಚಿತ್ರಗಳ ಪರಂಪರೆಯನ್ನೇ ಇಲ್ಲಿ ನೋಡುತ್ತೇವೆ. ಹೀಗೆ, ಕವನದಲ್ಲಿ ಬೇರೆ ಎಲ್ಲಾ ಇಂದ್ರಿಯಗಳಿಗಿಂತ ಕಣ್ಣಿಗೇ ಹಬ್ಬ. ಜೊತೆಯಲ್ಲಿ, 'ಶ್ರುತಗಾನಂ ಮಧುರಂ, ಅಶ್ರುತಗಾನಂ ಮಧುರತರಂ' ಎಂಬಂಥ ಮರೆಯಲಾಗದ ವಾಕ್ಯಗಳು. ಇಷ್ಟೇ ಅಲ್ಲದೆ, ಗ್ರೀಕ್ ಕಲೆಯ ವರ್ಣನೆ ಹಾಗೂ ಮಧ್ಯಯುಗದ ಭಾವನಾಪರವಶತೆಯಿಂದ ಕವನದ ವೈಶಿಷ್ಟ್ಯಕ್ಕೆ ಮೆರುಗು ಬಂದಿದೆ.

ಮದ್ರಾಸಿನಲ್ಲಿ ಕನ್ನಡಿಗರು

●

ನಾವಿರುವೆವಿಲ್ಲಿ ನಾಲ್ಕು ಲಕ್ಷಕ್ಕೂ ಮಿಗಿಲು
ಆದರೂ ನಮಗಿಲ್ಲ ನಮದೊಂದು ಗೂಡು!
ಅಣ್ಣತಮ್ಮದಿರೆಂದು ಕಂಡು ಕರೆವವರಿಲ್ಲ
ಕೇಳುವವರಾರಿನ್ನು ನಮ್ಮ ಪಾಡು!!

ಬಹುಕಾಲದಿಂ ನೆಲೆಸಿ ಬಂದವರು ನಾವಿಲ್ಲಿ
ಆದರೂ ಅರಿತಿಲ್ಲ ತಾಯ್ನುಡಿಯ ಗರಿಮೆ!
ಕಂಡ ಭಾಷೆಯ ಕಲಿತು; ನಮ್ಮದನೆ ತೊರೆದು
ಮೈಮರೆತು ಮೆರೆಯುವುದೆ ನಮ್ಮ ಹಿರಿಮೆ!!

ಕಲಿತರಾಯಿತು ಬಿಡಿರಿ ಕನ್ನಡವನೇನಂತೆ
ಏನಿಹುದು ಅದರಲ್ಲಿ ಬರಿಯ ಬೊಂತೆ!
ಕಲಿತರೂ ನಡೆಯದಿಹ ಕಾಸು ಈ ನೆಲವಲ್ಲಿ
ಬರಿದೇಕೆ ಹೊರಲಿಂದು ಕನ್ನಡದ ಕಂತೆ!!

ಕನ್ನಡದ ಇನಿವಾತ ಕೇಳೆ ಕಿವಿ ಕಾದಿಹುದು
ತಪ್ಪಿಯಾದರೂ ನುಡಿವರೊಬ್ಬರನು ಕಾಣೆ!
ಕನ್ನಡಿಗ ನಾನೆಂಬ ಅಭಿಮಾನದಿಂ ನಡೆವ
ಒಬ್ಬ ಬಂಧುವ ಕಾಣೆ ದೇವರಾಣೆ!!

●

ಕೆ. ಆರ್. ಗಣೇಶರಾವ್

ಶುದ್ಧಾಕ್ಷರಂ

ಫೋನೀಂ—Phoneme

ಎಂ. ಜಿ. ವೆಂಕಟೇಶಯ್ಯ

೧

ಭಾಷಾಶಾಸ್ತ್ರದ ಅಭ್ಯಾಸವು ನಮಗೆ ಹಿಂದಿನ ಕಾಲದಿಂದಲೂ ಬಂದ ಒಂದು ಅಭ್ಯಾಸ. ಅದನ್ನು ಈಗಿನಂತೆ ಭಾಷಾಶಾಸ್ತ್ರ (Linguistics) ಎಂದು ಕರೆಯುತ್ತಿರಲಿಲ್ಲ. ಅದನ್ನು ಶಬ್ದಾಗಮ (Pholology) ಎಂದು ಕರೆಯುತ್ತಿದ್ದರು. ಹಿಂದೂದೇಶದಲ್ಲಿನ ಋಷಿಗಳ ಮತವನ್ನು ಬಿಟ್ಟರೆ, ಬೇರೆ ದೇಶದಲ್ಲಿನ ಪಂಡಿತರಿಗೆ ಪ್ರಪಂಚದಲ್ಲಿನ ಎಲ್ಲಾ ಭಾಷೆಗಳನ್ನೂ ಒಂದು ಶಾಸ್ತ್ರೀಯವಾದ ದೃಷ್ಟಿಯಿಂದ (ಅಥವಾ ಒಂದೇ ದರ್ಶನದ ಮೂಲಕ) ಅಭ್ಯಾಸ ಮಾಡಬಹುದು ಎನ್ನಿಸಿರಲಿಲ್ಲ. ಆದುದರಿಂದ ಇಪ್ಪತ್ತನೆಯ ಶತಮಾನಕ್ಕೆ ಹಿಂದೆ ಫಿಲಾಲಜಿ, ವ್ಯಾಕರಣ ಚರಿತ್ರೆಗಳ ವ್ಯಾಸಂಗ, ಮುಂತಾದುವುಗಳಿತ್ತಾಗಲಿ, ಭಾಷಾಶಾಸ್ತ್ರ (Linguistics) ವು ಇರಲಿಲ್ಲವೆಂದೇ ಹೇಳಬೇಕು.

ಶಬ್ದಾಗಮ ವ್ಯಾಕರಣ ಸೂತ್ರಗಳ ನಿರ್ದಿಷ್ಟಗಮನ ಇವುಗಳನ್ನು ಪೂರ್ಣವಾಗಿ ನೋಡಬೇಕಾದರೆ, ಸಂಸ್ಕೃತ ವ್ಯಾಕರಣಾದಿಗಳನ್ನು ಪರಿಶೀಲಿಸಬೇಕೆಂಬುದೇ ಆಗಿನ ಹಲವು ದೊಡ್ಡ ದೊಡ್ಡ ವಿದ್ವಾಂಸರ ಅಭಿಪ್ರಾಯವಾಗಿತ್ತು. ಶಬ್ದಾಗಮದ ವಿಚಾರವಾಗಿ ಜ್ಞಾನವು ಅತ್ಯುನ್ನತ ಮಟ್ಟದಲ್ಲಿ ನಮಗೆ ಗೋಚರವಾಗಬೇಕಾದರೆ ಅದು ಸಂಸ್ಕೃತದಲ್ಲಿಯೇ ಎಂಬುದು ಕೂಡ ತತ್ವಜ್ಞರ ಅಭಿಪ್ರಾಯವಾಗಿತ್ತು. ಉಪಸರ್ಗ ಪ್ರತ್ಯಯಾದಿಗಳ ಸವಿಸ್ತಾರ ಪ್ರಯೋಗದ ರೀತಿಯನ್ನು ಪರಿಶೀಲಿಸುವಾಗ, ಈಗಿನ ಭಾಷಾಶಾಸ್ತ್ರಜ್ಞರ ಮಾರ್ಫೀಂ (Morpheme) ಸೂಕ್ಷ್ಮ ರೂಪವನ್ನು ಪಾಣಿನಿಯ ವ್ಯಾಕರಣದಲ್ಲಿ ನಾವು ಕಾಣಬಹುದೆಂದು ಅನೇಕ ಪಾಶ್ಚಿಮಾತ್ಯ ಪಂಡಿತರು ನುಡಿದಿದ್ದಾರೆ.[1]

ಚಿಹ್ನೆಗಳ ವಿವರ

ಮಾತಿನ ಸಮುದಾಯದಲ್ಲಿ ನಾವು **ವಾಕ್ಯ**ಗಳನ್ನು ವಿಂಗಡಿಸುತ್ತೇವೆ; ವಾಕ್ಯಗಳಲ್ಲಿ ಪದಗಳನ್ನು ವಿಂಗಡಿಸುತ್ತೇವೆ. ಪದಗಳಲ್ಲಿ ಕಂಡುಬರುವ ಉಪಸರ್ಗ ವಿಭಕ್ತಿ ಪ್ರತ್ಯಯಾದಿಗಳನ್ನು ಮಾರ್ಫೀಂ (Morpheme) ಗಳೆಂದು ಹೇಳುತ್ತೇವೆ. ಅವುಗಳಲ್ಲಿನ ಪ್ರತ್ಯೇಕ ವರ್ಣಗಳನ್ನು ಭಾಷಾ ಶಾಸ್ತ್ರಜ್ಞರು ಫೋನೀಂ (Phoneme) ಎಂಬುದಾಗಿ ಕರೆಯುತ್ತಾರೆ. ಈ ಫೋನಿಂಗಳಲ್ಲಿನ ಸೂಕ್ಷ್ಮ ಭಾಗಗಳನ್ನು ಫೋನ್ಸ್ (Phones) ಎಂದು ವಿಂಗಡಿಸುತ್ತಾರೆ.

ವಾಕ್ಯ :—ರಾಮನು ರಾವಣನನ್ನು ಕೊಂದನು.

ಪದ :—ಮೂರು ಪದಗಳು (೧) ರಾಮನು (೨) ರಾವಣನನ್ನು (೩) ಕೊಂದನು.

(ಇದರಂತೆ ವಿಭಾಗಿಸುವುದು ನಮ್ಮ ಕೆಲಸಕ್ಕೆ ಸುಲಭವಾಗಿ ಅನುಕೂಲವಾಗುತ್ತದೆಂದು ಹೀಗೆ ಮಾಡಲಾಗಿದೆ. ಈ ಪದ ವಿಭಾಗವನ್ನು Dr. G. K. Zipf ರವರು ಹೇಳಿದ್ದಾಗಲಿ, ಮಿಕ್ಕ ವ್ಯಾಕರಣ ದರ್ಶನ ತತ್ವಜ್ಞರು ಒಪ್ಪುವುದಿಲ್ಲ).

ಪದದ ಭಾಗಗಳು :—

ರಾಮನು= ರ + ಆ + ಮ + ಅ + ನ + ಉ

'ನ' ಉಚ್ಚಾರಣೆಗಾಗಿ ಸೇರಿಸಿಕೊಂಡಿರುವ ಅಂಶವಾದುದರಿಂದ ಅದನ್ನು ಫೋನೀಂ (Phoneme) ಎನ್ನುವುದಿಲ್ಲ; 'ಉ' ಎಂಬುದು ಇಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯವಾದುದರಿಂದ ಅದನ್ನು ಮಾರ್ಫೀಂ (Morpheme) ಎನ್ನಬೇಕು;

---

1. The work of the Indian linguistic scholrs is distinguished historically by two features, the excellence of their phonetic descriptions of Sanskrit, both as regards its accuracy and the sys tematic terms in which theystated it and their ability to carry formal analysis below the word in terms corresponding to modern morpheme . . . [General Linguistics, An Introductory Survey, R. H. Robbins, Longmans, 1965. p. 378]

ಮಿಕ್ಕವು, ರ, ಆ, ಮ ಅ,—ಈ ನಾಲ್ಕು ಫೋನೀಂ (Phoneme) ಗಳಾಗುತ್ತವೆ.

೨

ಕೇಶಿರಾಜನ ಶಬ್ದಮಣಿದರ್ಪಣದಲ್ಲಿ, ಅಕ್ಕರ, ವರ್ಣ, ಕಾರ[2] ಮುಂತಾದ ಪದಗಳು ಈಗಿನ ಫೋನೀಂ (Phoneme) ಎಂಬ ಪದದ ಅರ್ಥವನ್ನು ಸೂಚಿಸುತ್ತದೆ.

ಅಕ್ಕರಮೆಂದುಂ ವರ್ಣಮೆಂದುಂ ಶುದ್ಧಾಕ್ಷರಕ್ಕೆ ಪರ್ಯಾಯನಾಮಂ ಬರೆಯಲು ಮುಚ್ಚರಿಸಲುಂ ಬಾರದು ವಕ್ಷರಂಗಳಲ್ತವು ಮೊಟಗು ಮೊದಲಾದ ಪಲತೆಱದ ಧ್ವನಿಗಳ್[3]. ಆದುದರಿಂದ 'ಕಾರ' ಎಂಬುದನ್ನು ನಾವು ಫೋನಿಂ (Phoneme) ಎಂಬ ಪದದ ಬದಲಾಗಿ ಉಪಯೋಗಿಸಬಹುದೆಂದು ತೋರುತ್ತದೆ.

ರಾಮ ಲಕ್ಷ್ಮಣರು ಮಾತನಾಡುವಾಗ, ರಾಮನ ಮಾತನ್ನು ಕೇಳುತ್ತಾನೆ. ಅವರು ಕನ್ನಡವನ್ನೇ ಮಾತನಾಡುತ್ತಾರೆ ಎಂದುಕೊಂಡು, ಅವರ ಮಾತಿನ **ಕ**ಕಾರ ಬರುತ್ತದೆ ಎಂದುಕೊಂಡು, ರಾಮನ ಮಾತು ಲಕ್ಷ್ಮಣನಿಗೆ ಹೇಗೆ ಬೋಧೆಯಾಗುತ್ತದೆ ಎಂಬುದನ್ನು ನೋಡೋಣ.

(೧) ರಾಮನ ಬಾಯಿಯಿಂದೀಚೆಗೆ ಬಂದ **ಕ**ಕಾರವು ಎಲ್ಲಿಂದ ಹುಟ್ಟುತ್ತದೆ. "ಅನುಕೂಲ ಪವನನಿಂ, ಜೀವನಿಪ್ಪದಿಂ ನಾಭಿಮೂಲದೊಳ್ . . ." ಹುಟ್ಟುತ್ತದೆ. ನಾಭಿಯಲ್ಲಿಯೆ **ಕ** ಆಗುತ್ತದೆಯೆ? ಇಲ್ಲ. ಬಾಯಿಯಲ್ಲಿ **ಕ** ಆಗುತ್ತದೆಯೆ? ಅನುಮಾನ. ಅದು ಬಾಯಿಯಿಂದೀಚೆಗೆ ಬಂದ ಮೇಲೆ ರಾಮನ ಸುತ್ತಮುತ್ತಲಿನ ವಾತಾವರಣದಲ್ಲಿ **ಕ** ಆಗುತ್ತದೆ. ಅದು ಲಕ್ಷ್ಮಣನಿಗೆ ರಾಮನ ಬಾಯಿಯಿಂದಲೇ ಬಂದಂತೆ ತೋರುತ್ತದೆ.

(೨) ನಾವು ಉಸಿರನ್ನು ಬಿಡುವಾಗ ನಾನಾ ವಿಧವಾಗಿ ಸಂಕುಚಿತ ಮಾಡುತ್ತೇವೆ; ಒತ್ತುತ್ತೇವೆ, ಅದರಂತೆ, ರಾಮನು **ಕ** ಎನ್ನುವುದಕ್ಕೆ ಹೇಗೆ ಸಂಕುಚಿತ ಮಾಡಿ, ಬಾಯಿಯಲ್ಲಿ ಯಾವ ಭಾಗಕ್ಕೆ ತಗುಲಿಸಬೇಕೋ ಅದಕ್ಕೆ ತಗುಲಿಸಿ, ಹೇಗೆ ಬಿಡಬೇಕೋ ಹಾಗೆ ಬಿಡುತ್ತಾರೆ. ಮೂಗಿನ ಸಹಾಯವು ಹೆಚ್ಚಾಗಿದ್ದರೆ, ಅವನು ಬಿಡುವ ಕದಲ್ಲಿ ಅನುನಾಸಿಕದ ಛಾಯೆ ಇರಬಹುದು. ಅವನು ಬಿಡುವ ಉಸಿರಿನಿಂದ ವಾತಾವರಣದಲ್ಲಿನ ಗಾಳಿಯಲ್ಲಿ ತರಂಗಗಳುಂಟಾಗಿ ಆ ತರಂಗಗಳು ಮುಂದಕ್ಕೆ ಸರಿದಂತೆ ಕಾಣುತ್ತವೆ. ಒಂದೇ ತರಂಗವೆನ್ನುವುದಕ್ಕಾಗುವುದಿಲ್ಲ. **ಕ** ಎನ್ನಬೇಕೆಂದು ರಾಮನು ಉಸಿರುಬಿಟ್ಟಾಗ ನೂರಾರು ತರಂಗಗಳು ಏಳಬಹುದು. ಅವುಗಳ ಒಟ್ಟು ಸಮೂಹ **ಕ**; ಇದನ್ನು ಸಂಕ್ಷೇಪವಾಗಿ ಸೂಚಿಸಲು, ಅವುಗಳನ್ನು ಕ-ಕಾರತರಂಗ ಅಥವಾ ಕಾರತರಂಗ ಎನ್ನಬಹುದು.

(೩) ಈ **ಕಾರ-ತರಂಗ** ಮುಂದುವರಿದು ಲಕ್ಷ್ಮಣನ ಕಿವಿಯನ್ನು ಹೊಕ್ಕು, ಕಿವಿಯ ವಪೆ (Ear-drum) ಗೆ ತಗುಲಿ, ಅದರಲ್ಲಿ ಚಲನೆಯನ್ನುಂಟುಮಾಡುತ್ತದೆ.

(೪) ಕಿವಿಯಲ್ಲಿ ತೋರಿಬರುವ ಅನೇಕಾನೇಕ ತರಂಗಗಳಲ್ಲಿ ಲಕ್ಷ್ಮಣನ ಮೆದುಳು ಕ-ಕಾರತರಂಗಗಳನ್ನು ಗುರ್ತಿಸಿ, ಅದನ್ನು ಕನ್ನಡ ಕ-ಕಾರವೆಂಬುದನ್ನು ಅರಿತು ರಾಮನ ಮಾತನ್ನು ಅರ್ಥ ಮಾಡಿಕೊಳ್ಳುತ್ತಾನೆ. ಲಕ್ಷ್ಮಣನಿಗೆ ಕನ್ನಡ ಭಾಷೆಯ ಅರಿವಿಲ್ಲದಿದ್ದರೆ, ಕಾರತರಂಗಗಳು ಅವನ ಕರ್ಣೇಂದ್ರಿಯಲ್ಲಿ ತರಂಗಗಳನ್ನೆಬ್ಬಿಸಿದರೂ, ಅವು ಅಲ್ಲಿ ಆಡುತ್ತಿದ್ದರೂ, ಕನ್ನಡ ಕಾರದ ಅರಿವಾಗುವುದಿಲ್ಲ.

ಕಾರದ ಕೆಲವು ವೈಶಿಷ್ಟ್ಯ ಗುಣಗಳು

(೧) ಪ್ರಪಂಚದಲ್ಲಿ ಭಾಷೆಗಳಲ್ಲೆಲ್ಲಾ ಕಾರಗಳುಂಟು.

(೨) ಅವುಗಳನ್ನು ಪರಿಶೀಲಿಸಿ ಗಣನೆಗೆ ತೆಗೆದುಕೊಂಡರೆ, ಸಾಮಾನ್ಯವಾಗಿ ಹದಿನೈದಕ್ಕಿಂತ ಕಡಮೆಯಿಲ್ಲದೆಯೂ, ಐವತ್ತಕ್ಕಿಂತ ಅಧಿಕವಿಲ್ಲದೆಯೂ ಇರುತ್ತವೆಯೆಂದು ಹೇಳಬೇಕು. ಅನೇಕ ವ್ಯವಹಾರಿಕ ಭಾಷೆಗಳಲ್ಲಿ ಮೂವತ್ತರ ಸುಮಾರಿಗೆ ಇರಬಹುದೆಂದು ತತ್ವಜ್ಞರ ಅಭಿಪ್ರಾಯ.

(೩) ಉಚ್ಚಾರಣೆಗೂ ಬರೆಯುವ ಚಿಹ್ನೆಗೂ ಒಂದೊಂದು ಸಲ ಕಾರಗಳಲ್ಲಿ ವ್ಯತ್ಯಾಸವು ಕಂಡುಬರಬಹುದು; ಒಂದೇ ಚಿಹ್ನೆಯು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಉಚ್ಚಾರವನ್ನು ಪಡೆದಿರಬಹುದು. ಆದುದರಿಂದ ತತ್ವಜ್ಞರು ಡಿ. ಜೋನ್ಸ್ (D. Jones) ರವರ ಚಿಹ್ನೆಗಳನ್ನು ಉಪಯೋಗಿಸುವುದು ವಾಡಿಕೆಯಲ್ಲಿದೆ.[4]

(೪) ಸಾವಿರಾರು ವರ್ಷಗಳಿಂದ ಪಂಡಿತ ಪಾಮರರಲ್ಲಿ ವ್ಯವಹಾರದಲ್ಲಿರುವ ಭಾಷೆಯಲ್ಲಿ, ಕೆಲವು ಕಾರಗಳು ಮಾಯವಾಗುವುದೂ ಉಂಟು. ಉದಾಹರಣೆಗಾಗಿ ಕನ್ನಡದಲ್ಲಿ—ಐ ಕಾರ, ಱ ಕಾರಗಳು. ಹೊಸ ಕಾರಗಳು ಬರು

---

2. ಕೇಶಿರಾಜನ ಶಬ್ದಮಣಿದರ್ಪಣ, ಸೂತ್ರ ೪. ವೃತ್ತಿ. ಅಕ್ಷರ ಸಂಜ್ಞಾ ಪ್ರಕರಣಂ.

3. ibid ಸೂತ್ರ ೨. ವೃತ್ತಿ. ಅಕ್ಷರ ಸಂಜ್ಞಾ ಪ್ರಕರಣಂ ಕರ್ಣಾಟಕ ಸಾಹಿತ್ಯ ಪರಿಷತ್ತು ೧೯೩೦

4. (1) Out lines of English Phonetics and (2) Pronouncing Dictionary, London, 1948.

ವುದೂ ಉಂಟು. (ಇದಕ್ಕೆ ಬೇರೆ ಭಾಷೆಯ ಸಂಪರ್ಕವೇ ಮುಖ್ಯ ಕಾರಣವೆನ್ನಬಹುದು.)

(೫) ಒಂದು ಭಾಷೆಯನ್ನು ಮಾತನಾಡುವವರ 'ದನಿ' ಬೇರೆಯಾಗಬಹುದು. ಆದರೆ ನುಡಿಯುವ ಕಾರಗಳು ಒಂದೇ ಆಗಿರುತ್ತವೆ. ಕನ್ನಡದ ಉದಾಹರಣೆಯನ್ನು ತೆಗೆದುಕೊಂಡರೆ, ಮಂಗಳೂರು, ಧಾರವಾಡ, ಕೊಯಮುತ್ತೂರಿನ ಕನ್ನಡಿಗರು ಮಾತನಾಡುವ 'ದನಿ' ಬೇರೆಯಾಗಿದ್ದರೂ, ಅವರ ಮಾತುಗಳಲ್ಲಿ ನಮಗೆ ಕೇಳಿಬರುವ ಕನ್ನಡ ಕಾರಗಳು ಒಂದೇ ಆಗಿರುತ್ತವೆ.

(೬) ಕಾರ-ವೆಂದು ಗುರ್ತಿಸಬೇಕಾದರೆ ಅದರ ಸಾಮಾನ್ಯ ಗುಣಗಳು ಎರಡೆನ್ನಬಹುದು—(೧) ಒಂದು ಪದದಿಂದ ಅದನ್ನು ತೆಗೆದುಹಾಕಿದರೆ ಅದರ ಅರ್ಥವು ಬೇರೆಯಾಗಬೇಕು ಅಥವಾ ಮಾಯವಾಗಬೇಕು. (೨) ಅದರ ಬದಲಾಗಿ ಮತ್ತೊಂದು ವರ್ಣವನ್ನು ಪಯೋಗಿಸಿದರೆ, ಅದರ ಅರ್ಥವು ಮಾಯವಾಗಬೇಕು ಅಥವಾ ಬೇರೆ ಅರ್ಥವಾಗಬೇಕು.

೩

"ಶಬ್ದದ್ರವ್ಯಂಜನಿಯಿಸುಗುಂ" ಎಂದಾಗ ಶಬ್ದವು ದ್ರವ್ಯವೆಂದು ಹೇಳಿದಂತಾಯಿತು. ದ್ರವ್ಯವೆಂದು ಹೇಳಿದ ಕೂಡಲೆ ಶಬ್ದದ ಗುಣಗಳಲ್ಲಿ ದ್ರವ್ಯತ್ವವನ್ನು ನಾವು ತಿಳಿದುಕೊಳ್ಳಬೇಕೆಂದಾಯಿತು. ದ್ರವ್ಯತ್ವವೆಂದರೆ ಗಮನವುಂಟು ಎಂಬುದಕ್ಕೆ ಯಾವ ಸಂಶಯವೂ ಇಲ್ಲ. ಈ ಗಮನವೇ ಒಂದು ಮಾನಕವುಳ್ಳದು ಎಂಬುದಕ್ಕೆ ಚಿಹ್ನೆಯಾಗಿ ತೆಗೆದುಕೊಳ್ಳಬಹುದು. ಇಲ್ಲಿ 'ಮಾನಕ' ಎಂಬ ಪದಕ್ಕೆ ಆಂಗ್ಲೇಯ ಭಾಷೆಯಲ್ಲಿನ ಮಾಸ್ (Mass) ಎಂದರ್ಥ ಮಾಡಬೇಕೆಂದು ಸೂಚಿಸುತ್ತೇನೆ.[5] ಈ ಮಾನಕದ ವಿಚಾರವನ್ನು ನಾವು ಪರಿಶೀಲಿಸುವಾಗ ಅದು ನಾಲ್ಕು ಮಾನ (Four-Dimensional)ವುಳ್ಳ ಪ್ರಪಂಚಕ್ಕೆ ಸೇರಿದ್ದೆಂಬುದನ್ನು ನಾವು ಮರೆಯಲಾಗದು.


5. We have already said that a moving body has a greater mass than is possessed by the same body at rest. Now the moving body, in virtue of its motion, has acquired a certain amount of energy—kinetic energy, as it is called. According to Einstein this energy has mass . . . All forms of energy have mass . . . [An Outline of Modern knowledge. Ed. Dr. Rose. Victor Gollancy, London, oct, 1935 Edn. p. 102]

ಕಾರ-ಪ್ರಪಂಚ

ಭೌತಿಕ ರಸಾಯನಿಕ ಶಾಸ್ತ್ರಗಳ ದೃಷ್ಟಿಯು ಸಾಮಾನ್ಯವಾಗಿ ಮೂರು ಮಾನ (Three-Diamensional) ಗಳ ವಾತಾವರಣಕ್ಕೆ ಸೇರಿದ್ದು. ಶಬ್ದ ದ್ರವ್ಯದ ಪ್ರಪಂಚವನ್ನು ಆ ಮಾನಗಳಿಂದ ಅಳೆಯಲು ಪ್ರಯತ್ನಪಟ್ಟರೆ ಆ ಪ್ರಯತ್ನದಿಂದ ಅದರ ಸ್ವರೂಪವು ನಮಗೆ ನಿಜವಾಗಿ ಕರಗತವಾಗಲಾರದು. ಅದರ ವಿಶಿಷ್ಟ ಆಕಾರವನ್ನು ಈಗ ಪ್ರಚಾರದಲ್ಲಿರುವ ರೇಖಾಗಣಿತ (Euclidean Geometry) ದ ಮೂಲಕ ವಿಶದಪಡಿಸಲು ಸಾಧ್ಯವಿಲ್ಲವೆಂದೇ ಹೇಳಬೇಕಾಗಿದೆ.

ಇದನ್ನು ಸ್ಥೂಲವಾಗಿ ನಾವು ಅರ್ಥಮಾಡಿಕೊಳ್ಳಬೇಕಾದರೆ ಜೋರ್ಡನ್(Monsieur Jordan—a French Mathematician)ರವರ ಟೊಪಾಲಜಿ (Topology) ತತ್ವದ ಮೂಲಕ ನೋಡಬೇಕು. ಇದೊಂದು ನೂತನ ರೇಖಾಶಾಸ್ತ್ರ.

ಇದರ ಪ್ರಚಾರಕ್ಕಾಗಿ ಒಂದು ಗೆರೆ (Line) ಗೆ ಇಕ್ಕೆಡೆಗಳಲ್ಲಿ ಅಂತ್ಯ ಅಂಶಗಳಿಲ್ಲ. (a line has no end points). ಗೆರೆಯಿಂದ ತೆಗೆದ ಒಂದು ತುಂಡಿಗೆ ಎರಡು ಅಂತ್ಯ ಅಂಶಗಳಿವೆ (a line *segment* has two points); ಒಂದು ಬೆಳಕಿನ ಕಿರಣಕ್ಕೆ (a Ray has *one* point) ಒಂದೇ ಅಂಶವಿದೆ. ಈ ರೇಖಾ ಶಾಸ್ತ್ರದಲ್ಲಿ, ಯೂಕ್ಲಿಡಿಯನ್ ಪ್ರಪಂಚದಲ್ಲಿ ನಾವು ಕಾಣುವ ತ್ರಿಕೋಣಾದಿಗಳು ನಿರ್ದಿಷ್ಟವಾಗಿಲ್ಲ. ಜೋರ್ಡನ್ ರೇಖೆಯೆಂದರೆ, ಅದು ಯಾವ ಆಕಾರದಲ್ಲಾದರೂ ಇರಬಹುದು. ಆದರೆ ಯಾವ **ಪಾಯಿಂಟಿ**ನಿಂದ ಅದು ಹೊರಡುತ್ತದೋ ಅದಕ್ಕೆ ಅದು ಬಂದು ಪುನಃ ಸೇರಿಕೊಳ್ಳಬೇಕು. ಇಂಥಾ ರೇಖೆಯು ವಾತಾವರಣವನ್ನು ಎರಡು ಭಾಗವಾಗಿ ವಿಂಗಡಿಸುತ್ತದೆ. ಒಂದು ಭಾಗ ಒಳಗಿನದು, ಮತ್ತೊಂದು ಹೊರಗಿನದು. ಇವುಗಳನ್ನು ಅಂತರ್ಭವನ ಬಹಿಸ್ಪರಿಧಿಗಳೆಂದು ಕರೆಯಬಹುದು.



ಭ=ಅಂತರ್ಭವನ, ಪ=ಬಹಿಸ್ಪರಿಧಿ.

ಜೋರ್ಡನ್ ರೇಖೆಯ ಮುಖ್ಯವಾದ ಒಂದು ಗುಣ,

ಭ ಪಗಳಿಗೆ ಯಾವ ಸಂಬಂಧವೂ ಇಲ್ಲದಂತೆ ಅವುಗಳನ್ನು ಬೇರೆ ಮಾಡುವುದು.[6]

ಅಂತರ್ಭವನದಲ್ಲಿ ಶಬ್ದ ಪ್ರವಕ್ಕೆ ಸಂಬಂಧಪಟ್ಟ ತರಂಗಾದಿಗಳು ಅಡಗಿಕೊಂಡಿವೆ. ಅವು ಯಾವ ರೀತಿಯಲ್ಲಿರಬಹುದು, ಎಂಬುದನ್ನು ಬೇರೆ ಲೇಖನದಲ್ಲಿ ತಿಳಿಸಲಾಗುತ್ತದೆ. ಸಧ್ಯದಲ್ಲಿ ಅದರ ದಿಶೆಯಿದೆಂಬುದನ್ನು ಮಾತ್ರ ಗುರ್ತಿಸಿದರೆ ಸಾಕು.

ಆಕಾರವು ಎಲ್ಲಿಯವರೆಗೂ ವಿಚ್ಛಿನ್ನವಾಗದೆ ಇರುತ್ತದೆಯೋ ಎಂದರೆ, ಪ ಭಗಳಿಗೆ ಭೇದ ಪ್ರಪಂಚವು ಮಾಯವಾಗದೆ ಇರುವವರೆಗೂ, ಕಾರ-ಪ್ರಪಂಚದ ತರಂಗಗಳಿಗೆ ಸ್ವರೂಪ ಬದಲಾವಣೆಯಾಗುವುದಿಲ್ಲ.

ಆದರೆ ಕಾರ ಪ್ರಪಂಚದ ಬದಲಾವಣೆಗೆ ಇದೊಂದೇ ಕಾರಣವಲ್ಲ. ಇನ್ನೂ ಅನೇಕವಿದ್ದಂತೆ ತೋರುತ್ತದೆ. ಅವುಗಳನ್ನು ಕೂಡ ಮುಂದಿನ ಲೇಖನಗಳಲ್ಲಿ ವಿಶದಪಡಿಸಲು ಪ್ರಯತ್ನಪಡಬಹುದು.

ಈ ಚಿತ್ರದಲ್ಲಿ ತೋರಿಸಿರುವ ಆಕಾರದಲ್ಲಿಯೇ ಇರಬೇಕೆಂಬುದೇನೂ ಇಲ್ಲ; ಯಾವ ವಿಧವಾದ ಆಕಾರದಲ್ಲಾದರೂ ಇರಬಹುದು. ಆದರೆ ಒಂದು ಭಾಷೆಯ ಕಾರಗಳೆಲ್ಲವೂ ಈ ಜೋರ್ಡನ್ ರೇಖೆಯ ಮೂಲಕವಾಗಿ, ಅಂತರ್ಭವನ (ಭ)ದಲ್ಲಿಯೇ ತಮ್ಮ ಕಾರ್ಯಗಳನ್ನು ನಡೆಸುತ್ತವೆ. ಕನ್ನಡದಲ್ಲಿ ಈ ತರಂಗ ವಿಶೇಷಗಳನ್ನು ಹೇಗೆ ನಾವು ಟೊಪಾಲಜಿ (Topology) ಗಣಿತದ ಮೂಲಕ ಚಿತ್ರಿಸಬಹುದು ಎನ್ನುವುದೇ ಒಂದು ಸಂಶೋಧನ ಲೇಖನವಾಗಬಹುದು.

೪

ಕಾರಕಗಳನ್ನು ಕನ್ನಡದಲ್ಲಿ ಸ್ವರ ವ್ಯಂಜನ ಯೋಗವಾಹಗಳೆಂದು ವಿಭಾಗಿಸಬಹುದು. ಸ್ವರಗಳನ್ನು ಯಾವ ಕಾರಣಗಳ ಸಹಾಯವಿಲ್ಲದೆಯೆ ಉಚ್ಚರಿಸಬಹುದು; ಅವು ಸ್ವತಃ ಸುಲಭಗಾಮಿಗಳು.

ವ್ಯಂಜನಗಳ ಉಚ್ಚಾರಣೆಯು ಅಷ್ಟು ಸುಲಭವಲ್ಲ: ಆದುದರಿಂದ ಅವುಗಳನ್ನುಚ್ಚರಿಸಲು ಸ್ವರಗಳ ಸಹಾಯವನ್ನು ಪಡೆಯುತ್ತೇವೆ. ಕ್-ಎಂಬುದನ್ನು, ಸ್ವರಸಹಿತವಾಗಿ, ಕ ಎಂದು ಕಕಾರವೆನ್ನುತ್ತೇವೆ.

ಕ-ಕಾರವೆನ್ನದೆ ಕ ಎಂದು ತೋರಿಸಿದಾಗ ಅದರಲ್ಲಿ (ಕ-ಕಾರ + ಅಕಾರ=ಕ-ಕಾರ) ಎರಡು ಕಾರಗಳನ್ನು ಗುರುತಿಸುತ್ತೇವೆ.

ಈ ವಿಚಾರದಲ್ಲಿ (ಎಂದರೆ ಕ ಎನ್ನುವಾಗ, ನಾವು ಉಚ್ಚರಿಸುವ ಕ್+ಅ;) ಸಂಶೋಧನೆಯನ್ನು ಈಗ್ಗೆ ಹಲವು ವರ್ಷಗಳಿಂದ ಪ್ರೊ. ಸಿ. ಆರ್. ಶಂಕರನ್‌ರವರು ನಡೆಸುತ್ತಿದ್ದಾರೆ.[7]

ಅವರ ಪ್ರಶ್ನೆಗಳು ಹೀಗಿವೆ? ಕ-ಎನ್ನುವಾಗ ವ್ಯಂಜನದ ಉಚ್ಚಾರವು ಎಲ್ಲಿಗೆ ನಿಲ್ಲುತ್ತದೆ? ಸ್ವರದ ಉಚ್ಚಾರವು ಎಲ್ಲಿಂದ ಪ್ರಾರಂಭವಾಗುತ್ತದೆ?

ತಮಿಳಿನಲ್ಲಿ 'ಆಯತಂ' ಎಂಬುದರ ವಿಚಾರವಾಗಿ ಅವರು ಪರಿಶೀಲನೆ ಮಾಡುತ್ತಿದ್ದಾಗ, ಈ ವಿಚಾರದ ಮಹತ್ವವು ಅವರಿಗೆ ಗೋಚರವಾದಂತೆ ತೋರುತ್ತದೆ. ಆಯತಂ-ಎಂಬುದನ್ನು ಒಂದು ಕಾರ-ವಾಗಿ (Phoneme) ಪರಿಗಣಿಸಬಹುದೆ—ಎಂಬ ವಿಚಾರಕ್ಕೆ ದೃಷ್ಟಿಕೊಡುತ್ತಿದ್ದ ಕಾಲಕ್ಕೆ, ಅದೇ ಅಂಶವು ಸೂಕ್ಷ್ಮರೂಪದಿಂದ ಎಲ್ಲ ಕಡೆಯಲ್ಲಿಯೂ ಇರಬಹುದೆಂದು ಅವರಿಗೆನ್ನಿಸಿದಂತೆ ತೋರಿತು. ಕೂಡಲೆ ಅವರು ಅದರ ಸೂತ್ರದ ದಾರಿಯನ್ನೇ ಹಿಡಿದು ತಮ್ಮ ಅಲ್ಪ ಫೋನಿಂ (α-Phoneme) ವಿಚಾರವನ್ನು ಹೊರಗೆಡಹಿದರು.

ಅವರ ಪರಿಶೀಲನೆಯ ವಿಚಾರವಾಗಿ ಅತಿ ಮುಖ್ಯವಾದ ಅಂಶಗಳನ್ನು ಸೂಕ್ಷ್ಮವಾಗಿ ಇಲ್ಲಿ ವಿವರಿಸಲಾಗಿದೆ:—

(೧) ಕ-ಎಂದಾಗ ಅದನ್ನು ಕ+ಅ=ಕ ಅ ಎಂದು; ಕ-ಕಾರ ಅಕಾರಗಳನ್ನು ಮಾತ್ರ ಹೇಳುತ್ತೇವೆ. ಇದು ಸರಿಯಲ್ಲ.

(೨) ಕ-ಎಂದಾಗ,ಅದನ್ನು ಕ÷[↑]+ಅ=ಕ ಎಂದು; ಕ-ಕಾರ, [↑] ಅಲ್ಪ ಫೋನೀಂ, ಅಕಾರ, ಈ

---

6. A simple closed curve in the plane divides the plane into exactly two regions, one inside the curve and one out-side. Even if the plane is a sheet of rubber that is drastically deformed by stretching, shrinking, or twisting (everything is fair except tearing this property exists—[A Parent's Guide to the New Mathematics. Evelyn Sharp. Pocket Books Inc. New York, Feb. p. 110.]

7. Sri C. R. Shankaran, Reader in Dravidiian phonetics Deccan College Post Graduate and Research Institute, Poona 6.

ಮೂರನ್ನೂ ಹೇಳಬೇಕು. ಏಕೆಂದರೆ ಕ-ಕಾರಕ್ಕೂ ಅಕಾರಕ್ಕೂ ಮಧ್ಯೆ ಅವುಗಳನ್ನು ಕೂಡಿಸಲು [↑] ಆಲ್ಫ ಫೋನೀಂ ಇದೆ.

(೩) ಆಲ್ಫ ಫೋನೀಂ ನಮಗೆ ಗೋಚರವಾಗುತ್ತದೆಯೆ? ಇಲ್ಲ. ಏಕೆಂದರೆ ಅದನ್ನು ಗುರುತಿಸಲು ಸಾಧ್ಯವಾಗುವ ಸೂಕ್ಷ್ಮ ಯಂತ್ರಗಳು ನಮಗಿನ್ನೂ ಸಿಕ್ಕಿಲ್ಲ.

(೪) ಕ-ಕಾರಕ್ಕೂ ಅಕಾರಕ್ಕೂ ಮಧ್ಯೆ ಶೂನ್ಯವಿದ್ದೀತೆ? ಶೂನ್ಯವಿಲ್ಲ. ಚಾಕ್ಷುಷವಾಗಿ ಅದು ನಮಗೆ ಕಾಣದಿದ್ದರೂ ಅದು ಮನಸ್ಸಿಗೆ ಗೋಚರವಾಗುವ ಒಂದು ಅಂಶ.

(೫) ಹಾಗಾದರೆ ಅದು ಕೇವಲ ವ್ಯಕ್ತಿಗತ (Subjective) ವಾಗುವುದಿಲ್ಲವೆ? ದ್ರವ್ಯಗತ (Objective) ಎಂದು ತೋರಿಸುವುದಕ್ಕೆ ಹೇಗೆ ಸಾಧ್ಯ? ಅನಿರ್ವಚನೀಯವಾದರೆ ಅದು ಇಲ್ಲವೇ ಇಲ್ಲ ಎಂದು ಹೇಳುವುದಕ್ಕಾದೀತೆ? ಕೇವಲ ವ್ಯಕ್ತಿಗತವಾಗಿ ಕಾಣುವುದು ಆಲ್ಫ ಫೋನಾಯಿಡ್ (α-Phonoid); ಅದೇ ಚಾಕ್ಷುಷವಾಗಿ ನಮಗೆ ಗೋಚರವಾದರೆ (α-Phoneme).

(೬) ಹಾಗಾದರೆ ಅದರ ಉಪಯೋಗವೇನು? ಮಹತ್ವವೇನು? ಈ ಆಲ್ಫ ಫೋನೀಂನಿಂದಲೇ ಕ-ಕಾರವೂ ಅಕಾರವೂ ಸಂಯೋಗವಾಗುವುದು. ಈ ಆಲ್ಫ ಫೋನೀಂ ಸಂಯೋಗ ಗುಣವನ್ನು ಪರೀಕ್ಷಿಸಿದರೆ ಅನೇಕ ಅಂಶಗಳು ಕಾಣಬಹುದು. ಈ ಆಲ್ಫ ಫೋನೀಂ (Alpha-phoneme) ಕಾರಗಳನ್ನು ಕೂಡಿಸುವುದರಿಂದ, ಭಾಷೆಯಲ್ಲಿ ಕಾರಗಳ ಸಮೂಹಗಳು ಒಟ್ಟುಗೂಡಿದಾಗ ಆ ಸಮುಚಯದ, (ಅಥವಾ ದ್ವಯದ) ಆಕಾರ ಸ್ವರೂಪಗಳನ್ನು ವಿವರಿಸಲು ಇದರ ಪರಿಶೀಲನೆಯಿಂದ ಸಾಧ್ಯವಾಗಬಹುದು ಎಂಬುದು ರೆಮೆಲ್‌ರವರ ಮತ.[8]

---

8. Though it does not seem to solve the fundamental problems in phonetics, the α-P.T. proves quite interesting with regard to constructive phonological theories[On The Alphaphonoid (Alpa.phoneme) Theorry–M. Remmel —TERMINOLOGIA INDICA 1 : 52-66 (1967) Tartu University, ESTONIA. U. S. S. R.]

ಶ್ರೀವಾಗ್ದೇವಿಗೆ

ಶ್ರೀವಾಗ್ದೇವಿಗೆ ಶಬ್ದದಿ
ನಾನಾವಿಂದ್ರಿಯದ ವಿಷಯಮುಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದ್ಯಗೆ ಶಾಸ್ತ್ರಮುಖದೊಳವತನಪ್ಪೆಂ.

(ಶಬ್ದದಿಂ) ಕಿವಿಗೆ ಕೇಳಿಸುವ ಧ್ವನಿಯಿಂದ (ಆ ಆ ಇಂದ್ರಿಯದ) ಕಣ್ಣು ಕಿವಿ ಮೂಗು ನಾಲಗೆ ಚರ್ಮ ಇವುಗಳ (ವಿಷಯಮುಂ) ಸಂಬಂಧವಾದ ರೂಪು ಶಬ್ದ ಗಂಧ ರಸ ಸ್ಪರ್ಶಗಳನ್ನು (ಶ್ರೋತ್ರದೊಳ್ ಉದ್ಭಾವಿಪ) ಕಿವಿಯೊಂದರಲ್ಲಿಯೇ ಅಭಿವ್ಯಕ್ತವನ್ನಾಗಿ ಮಾಡುವ ಶ್ರೀವಾಗ್ದೇವಿಗೆ, ನಿರ್ಮಲಮೂರ್ತಿಗೆ, (ಇಳಾವಂದ್ಯಗೆ) ಲೋಕದವರೆಲ್ಲ ವಂದಿಸುವವಳಿಗೆ (ಶಾಸ್ತ್ರಮುಖದೊಳ್) ಶಬ್ದಮಣಿದರ್ಪಣವೆಂಬ ಶಾಸ್ತ್ರಗ್ರಂಥದ ಪ್ರಾರಂಭದಲ್ಲಿ (ಅವನತನ್ ಅಪ್ಪೆನ್) ನಮಸ್ಕಾರಮಾಡಿದವನಾಗುತ್ತೇನೆ.

ಕೇಶಿರಾಜ

‘ ಈ ಸಭೆಯೊಳ್ ಅಗ್ರಪೂಜೆಗಾರ್ ತಕ್ಕರ್ ’

ಪಂಪಭಾರತದಲ್ಲಿ ಒಂದು ಪ್ರಸಂಗ

ಎಂ. ಎಸ್. ಸ್ವಾಮಿ

ಇಂದ್ರಪ್ರಸ್ಥದಲ್ಲಿ ಧರ್ಮರಾಜನು ತನ್ನ ನಾಲ್ವರು ತಮ್ಮಂದಿರನ್ನು ಬೆರಸು ಸತ್ಕಥಾಸಂಕೀರ್ತನೆಯಲ್ಲಿ ಸುಖವಾಗಿ ರಾಜ್ಯಭಾರ ಮಾಡುತ್ತಿರುವ ಸಮಯದಲ್ಲಿ ನಾರದ ಮಹರ್ಷಿಗಳು ಅಲ್ಲಿಗೆ ಬಂದು, ‘ ರಾಜಸೂಯ ’ ಯಾಗವನ್ನು ಮಾಡಬೇಕೆಂದೂ ಅದರಿಂದ ಇಹದಲ್ಲಿ ಶ್ರೇಯಸ್ಸು; ಪರದಲ್ಲಿರುವ ಪಾಂಡುರಾಜನಿಗೆ ಪ್ರೇಯಸ್ಸುಗಳೆರಡೂ ಲಭಿಸುವವೆಂದೂ ಯಜ್ಞದ ಮಹತ್ವವನ್ನು ಬೋಧಿಸಿ ಅಲ್ಲಿಂದ ಹೊರಟರು. ಇಂತಹ ಮಹಾಯಜ್ಞವನ್ನು ಕೈಕೊಳ್ಳಬೇಕಾದರೆ ಕೃಷ್ಣಪರಮಾತ್ಮನ ನೆರವು ಇಲ್ಲದೆಯೆ ಆಗುತ್ತದೆಯೇ? ತಡಮಾಡದೆ ಯುಧಿಷ್ಟಿರನು ದೂತರನ್ನು ಅಟ್ಟಿ, ದ್ವಾರಾವತಿಯಿಂದ ಶ್ರೀಕೃಷ್ಣನನ್ನು ಬರಮಾಡಿಕೊಂಡು ಆತನ ಸಂಪೂರ್ಣ ಅನುಗ್ರಹವನ್ನು ಪಡೆದು ರಾಜಸೂಯಯಾಗ ಮಾಡಲು ಸಂಕಲ್ಪಿಸಿದನು.

ಯಜ್ಞಕ್ಕೆ ಬೇಕಾಗುವ ಈ ಭೂಮಂಡಳದ ಮೇಲಿರುವ ಸಮಸ್ತ ವಸ್ತು-ವಾಹನಾದಿ ಅಪಾರ ವೈಭವವನ್ನು ತರಲು ಆತನ ನಾಲ್ಕು ಮಂದಿ ತಮ್ಮಂದಿರು ಅಷ್ಟದಿಕ್ಪಾಲಕರನ್ನು ಜಯಿಸಲು ಹೊರಟರು. ಭೀಮನು ಜರಾಸಂಧಾದಿ ಲೋಕಕಂಟಕರಾದ ಅತುಲ ವಿಕ್ರಮ ಬಾಹುಬಳರನ್ನು ಸಂಹರಿಸಿ, ಇಂದ್ರನನ್ನು ಜಯಸಲು ಪೂರ್ವದಿಕ್ಕಿನತ್ತ ನಡೆದನು. ಅದರಂತೆ ಕುಬೇರನನ್ನು ಗೆದೆಯಲು ಉತ್ತರದಿಕ್ಕಿಗೆ ಅರ್ಜುನನೂ ಯಮನ ಮೇಲೆ ವಿಜಯಗಳಿಸಲು ದಕ್ಷಿಣಕ್ಕೆ ನಕುಲನೂ ವರುಣನ ಮೇಲೆ ಪರಾಕ್ರಮ ಸಾಧಿಸಲು ಪಶ್ಚಿಮಕ್ಕೆ ಸಹದೇವನೂ ದಂಡಯಾತ್ರೆಯನ್ನು ಕೈಕೊಂಡರು. ಅಷ್ಟದಿಕ್ಪಾಲಕರನ್ನು ಜಯಸಿದ ತರುವಾಯ ಕಾಶ್ಮೀರ, ಹಿಮವಂತ, ಹೇಮಕೂಟ, ಗಂಧಮಾಗದ ಮೊದಲಾದ ಛಪ್ಪನ್ನ ದೇಶಗಳ ಅರಸರಿಂದ ಕಪ್ಪಕಾಣಿಕೆಯನ್ನು ತೆಗೆದುಕೊಂಡು ಸಾಗರಪರಿವೇಷ್ಟಿತ ವಸುಮತಿಯಲ್ಲಿರುವ ಅಮೂಲ್ಯವಾದ ಸಮಸ್ತ ಸಂಪತ್ತನ್ನು ಸ್ವಾಧೀನಪಡಿಸಿಕೊಂಡು ಯಜ್ಞಕ್ಕೆ ಅನುವು ಮಾಡಿಕೊಡುತ್ತಾರೆ.

ದೇವೇಂದ್ರನ ವೈಭವವನ್ನೇ ನಾಚಿಸುತ್ತಿರುವ ಈ ರಾಜಸೂಯಯಾಗಕ್ಕೆ ಯಜಮಾನನಾದ ಧರ್ಮಜನು ಹಸ್ತಿನಾವತಿಯಿಂದ ಧೃತರಾಷ್ಟ್ರ, ವಿದುರ, ಗಾಂಗೇಯ, ದ್ರೋಣ, ಅಶ್ವತ್ಥಾಮ, ಕೃಪ, ಬಾಹ್ಲೀಕ, ಸೋಮದತ್ತ, ಭಗದತ್ತ, ಭೂರಿಶ್ರವಃ, ಕರ್ಣ, ಶಲ್ಯ, ಶಕುನಿ, ಸೈಂಧವ, ದುರ್ಯೋಧನ, ದುಶ್ಯಾಸನರೇ ಮೊದಲಾದ ಬಂಧು-ಬಾಂಧವರನ್ನೂ ಶಿಶುಪಾಲರೇ ಮುಂತಾದ ಅರಸರನ್ನೂ ವ್ಯಾಸ, ಜಮದಗ್ನಿ ವಸಿಷ್ಠರೇ ಇತ್ಯಾದಿ ಬ್ರಹ್ಮಋಷಿಗಳನ್ನೂ ಆಮಂತ್ರಿಸಿದನು. ಯಜ್ಞಸಭಾಮಂಟಪದಲ್ಲಿ ಅವರೆಲ್ಲರೂ ತಮ್ಮ ತಮ್ಮ ಉಚಿತಾಸನದಲ್ಲಿ ವಿರಾಜಮಾನರಾದರು. ರಾಜಾಧಿರಾಜರಿಂದಲೂ ಅತಿರಥಮಹಾರಥರಿಂದಲೂ ದೇವಪೂಜ್ಯರಾದ ಮಹರ್ಷಿಗಳಿಂದಲೂ ಶೌರ್ಯ ಧೈರ್ಯಾದಿಗಳಲ್ಲಿ ಪರಸ್ಪರ ಸಮಸ್ಕಂಧರಾಗಿರುವ ಈ ಸಭೆಯಲ್ಲಿ ಯಾರಿಗೆ ಮೊದಲು ಅರ್ಘ್ಯಪೂಜೆಯನ್ನು ಸಲ್ಲಿಸಬೇಕೆಂಬುದು ಧರ್ಮಜನಿಗೆ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಒಂದು ವೇಳೆ ಸಮಕಟ್ಟನರಿಯದೆ ಯಾರಿಗೋ ಅರ್ಘ್ಯವನ್ನು ನೀಡಿದರೆ ಅದರಿಂದ ಏನು ಪ್ರಮಾದ ಸಂಭವಿಸಬಹುದೋ ಎಂಬ ಶಂಕೆ ಆತನನ್ನು ಕಾಡುತ್ತದೆ. ಮುಂದೆ ಏನುಮಾಡಬೇಕೆಂದು ತೋಚದವನಾಗುತ್ತಾನೆ.

ಇದು ಮೂಲ ಮಹಾಭಾರತದಲ್ಲಿ ಬರುವ ಒಂದು ಪ್ರಸಂಗ. ಅನೇಕ ಕವಿಗಳ ಕಾವ್ಯಗಳಿಗೆ ಈ ಸನ್ನಿವೇಶ ಕಥಾವಸ್ತುವಾಯಿತು. ಅವರ ಕವಿತಾಪ್ರತಿಭಾ ವಿಕಾಸಕ್ಕೆ ಅದೊಂದು ಆಡೊಂಬಲವಾಯಿತು. ಮಾಘ ಕವಿಯಂತೂ ಇದೇ ಸನ್ನಿವೇಶವನ್ನು ತೆಗೆದುಕೊಂಡು ತನ್ನ ಪ್ರತಿಭಾ ಸಾಮರ್ಥ್ಯದಿಂದ ಒಂದು ಮಹಾಕಾವ್ಯವನ್ನೇ ರಚಿಸಿದನು. ಕನ್ನಡ ಕವಿಗಳಾದ ಪಂಪ ಮತ್ತು ನಾರಣಪ್ಪರು ಈ ಪ್ರಸಂಗವನ್ನು ತಮ್ಮ ಕಾವ್ಯಗಳಲ್ಲಿ ತೆಗೆದುಕೊಂಡಿದ್ದಾರೆ. ಭಗವದ್ಭಕ್ತನಾದ ನಾರಣಪ್ಪನು ಎಲ್ಲವೂ ಭಗವಿದಿಚ್ಛೆಯೆಂಬಂತೆ ಈ ಸನ್ನಿವೇಶವನ್ನು ಲೀಲಾಜಾಲವಾಗಿ ಚಿತ್ರಿಸಿ ಕೃತಾರ್ಥನಾಗಿದ್ದಾನೆ. ಆದರೆ ಈ ಪ್ರಸಂಗದಲ್ಲಿ ಪಂಪನು ತೋರಿದ ವೈಖರಿಯೇ ಬೇರೆ. ಆತನ ಕಾವ್ಯಕ್ರತು ಶ

ಹಿಡಿದ ಜಾಡೇ ಒಂದು ಹೊಸ ಬಗೆ. ಇಲ್ಲಿ ಪಂಪನಿಗೆ ಧಾರ್ಮಿಕ ತತ್ತ್ವವಿಚಾರ ಬೇಕಿಲ್ಲ; ಲೌಕಿಕ ಗುಣಸ್ವಭಾವ ಮುಖ್ಯ. ಈ ಸನ್ನಿವೇಶದಲ್ಲಿ ನಡೆಯುವ ಧರ್ಮ-ಅಧರ್ಮಗಳ ತಾಕಲಾಟ, ದೈವೀ-ಆಸುರೀಶಕ್ತಿಗಳ ಹೋರಾಟವನ್ನು ಲೌಕಿಕದಲ್ಲಿಯೂ ಕಾಣಬೇಕೆಂಬುದು ಪಂಪನ ದರ್ಶನ. ಅಂತೆಯೇ ಲೌಕಿಕದ ಕೆಲವು ಮಾನವರಲ್ಲಿ ಹುದುಗ್ಗಿದ ಅದಮ್ಯ ಶಕ್ತಿಯನ್ನು ಶಿಶುಪಾಲನಂತಹ ಪಾತ್ರಗಳಲ್ಲಿ ಜೀವ ತುಂಬಿ ಅವುಗಳನ್ನು ಸಹಜವಾಗಿ ಚಿತ್ರಿಸಲು ಆತನು ಹೊರಟಿದ್ದಾನೆ. ಆದಕಾರಣ ಈ ಸಂದರ್ಭವನ್ನು ಪಂಪನು ಲೌಕಿಕ ದೃಷ್ಟಿಯಿಂದ ನಿರ್ಮಿಸಿ, ಭಾವಕ್ಕೆ ತಕ್ಕಂತಹ ದೇಶೀ ಭಾಷೆಯನ್ನು ಪ್ರಯೋಗಿಸಿ ಚಿತ್ತಾಕರ್ಷಕವಾಗುವಂತೆ ಒಳ್ಳೆಯ ಕಲಾತ್ಮಕವಾಗಿ ಒಂದು ಸುಂದರವಾದ ಚಿತ್ರವನ್ನು ನಿರ್ಮಿಸಿ ಆತನು ಕೃತಕೃತ್ಯನಾಗಿದ್ದಾನೆ. ಹಾಗಾದರೆ ಪಂಪನ ಆ ಸಂದರ್ಭವನ್ನು ಕೊಂಚ ನೋಡೋಣ:

ನಾರದರು ಆಕಾಶದಿಂದಿಳಿದು ಧರ್ಮಜನ ಹತ್ತಿರ ಬರುತ್ತಾರೆ. ಎಂತಹ ಸುಂದರವಾದ ಚಿತ್ರ ಆದು:

ಬೆಳಗುಗಳೆಲ್ಲಮೊಂದುರುಳಿಯಾಗಿ ನಭಸ್ಥಳದಿಂದಮಾ ಮಹೀ |
ತಳಕಿೞಿದಪು೯ದೆಂದು ಮನುಜಾಕೃತಿಯೊಂದು
ಮುನೀಂದ್ರನೆಂದು ಕ ॥
ಜ್ಞೊಳಿಸೆ ಮುನೀಂದ್ರರೊಳ್ ಕಮಳಸಂಭವ ನಂದನನೆಂದು
ನೋಟಕರ್ |
ತಳವೆಳಗಾಗೆ ಸಾರೆವರೆ ನೀರಿದ ಮಾರ್ಗದಿನಂದು ನಾರದಂ ॥

ಪರಂಜ್ಯೋತಿಯೇ ಮೂರ್ತಿವೆತ್ತಂತೆ ಬಂದ ನಾರದರು ಯುಧಿಷ್ಠಿರನಿಗೆ ರಾಜಸೂಯಯಾಗವನ್ನು ಮಾಡುವಂತೆ ಹೇಳಿ ಹೊರಡುತ್ತಾರೆ.[1] ಧರ್ಮಜನು ಅವರ ಮಾತಿನಂತೆ ಯಜ್ಞಕ್ಕೆ ಸಕಲ ಸಿದ್ಧತೆಯನ್ನು ಮಾಡುತ್ತಾನೆ. ಆ ಯಾಗ ಸಭಾಮಂಟಪಕ್ಕೆ ಪ್ರತಿಷ್ಠಿತರು ಆಸೀನರಾಗಿದ್ದಾರೆ. ಆಗ ಧರ್ಮಜನು ಈ ಸಭೆಯಲ್ಲಿ ಯಾರು ಅಗ್ರಪೂಜೆಗೆ ಯೋಗ್ಯರಾಗಿದ್ದಾರೆಂದು ವಯೋವೃದ್ಧರೂ ಜ್ಞಾನವೃದ್ಧರೂ ಆದ ಭೀಷ್ಮಾಚಾರ್ಯರನ್ನು ಕೇಳಿದಾಗ ಅವರು:

ಬಲಿಯಂ ಕಟ್ಟಿದವನಾವನ್-ಈ ಧರಣಿಯಂ ವಿಕ್ರಾಂತದಿಂದಂ
ರಸಾ |
ತಲದಿಂದೆತ್ತಿದವನಾವನ್-ಅಂದು ನರಸಿಂಹಾಕಾರದಿಂ
ದೈತ್ಯನಂ ॥
ಚಲದಿಂ ಸೀಳ್ದವನಾವನ್-ಅಬ್ಧಿಮಥನ ಪ್ರಾರಂಭದೊಳ್
ಮಂದರಾ |
ಚಲಮಂ ತಂದವನಾವನ್-ಅವನೇ ವಲಂ, ತಕ್ಕಂ; ಪೆಜರ್
ತಕ್ಕರೇ ॥

ಎಂದು ಕೃಷ್ಣಪರಮಾತ್ಮನ ವಿರಾಡ್ರೂಪವನ್ನು ಹಾಗೂ ಆತನ ಪರಾಕ್ರಮದ ಅರಿವನ್ನೂ ಮಾಡಿಕೊಡುತ್ತಾರೆ. ಇದರಿಂದ ಸಂತುಷ್ಟನಾದ ಧರ್ಮಜನು ಇನ್ನೇನು ಕೃಷ್ಣನಿಗೆ ಅ ಘ್ಯೋ೯ ದ ಕ ನ್ನು ಧಾರೆಯೆರೆಯಬೇಕೆನ್ನುವಷ್ಟರಲ್ಲಿ 'ಮಹಾಪ್ರಳಯ ಜಲನಿಧಿನಾದ'ದಂತೆ ಗುಡು ಗುಡು ಗುಡುಗಿ ಚೇದಿರಾಜನಾದ ಶಿಶುಪಾಲನು ಕೋಪಾವಿಷ್ಟನಾಗಿ-'ಕಳೆ! ಕಳೆ! ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ' ಎಂದು ಸಭೆಯೆಲ್ಲವೂ ಕಂ ಪಿ ಸು ವಂ ತೆ ಗರ್ಜಿಸುತ್ತಾನೆ.

ಇಷ್ಟಕ್ಕೆ ಅವನ ವೀರಾವೇಶ ನಿಲ್ಲಲಿಲ್ಲ. ಧರ್ಮಜನನ್ನೊಮ್ಮೆ ಕೆಂಗಣ್ಣಿನಿಂದ ನೋಡಿ, ಕೆಣಕಿ ನುಡಿಯುತ್ತಾನೆ: ಕುಲವೃದ್ಧರೆಂದೂ ಕುರುವೃದ್ಧರೆಂದೂ ಸತ್ಯಸಂಧರೆಂದೂ ನೆರೆನಂಬಿದ್ದ ಈ ಸಭೆಯಲ್ಲಿ ಭೀಷ್ಮಾಚಾರ್ಯರು ಅಂತಸ್ಥನರಿಯದೆ ಹಾಗೆ ನುಡಿದರೆಂದ ಮಾತ್ರಕ್ಕೆ ನೀನೂ ಅದರಂತೆ ನಡೆದುಕೊಳ್ಳುವದು ಯೋಗ್ಯವೇ? ಹರಿಯಲ್ಲಿ ಭಕ್ತಿ-ಗೌರವಗಳು ನಿನ್ನ ಮನದಲ್ಲಿದ್ದರೆ ನಿನ್ನ ಮನೆಯಲ್ಲಿ ಆತನಿಗೆ ಪೂಜೆ ಸಲ್ಲಿಸು. ಆದರೆ, 'ಯಜ್ಞದೊಳ್ ಈ ಮನುಜಾಧೀಶ್ವರ ಸಭೆಯೊಳ್ ನೆನೆಯಲುಮಾಗದು ದುರಾತ್ಮನಂ ಬೆಸಗೊಳ್ವಾ'. ದೇವಾಧಿದೇವತೆಗಳನ್ನು ಪಾದಕ್ಕೆರಗಿಸಿ, ಭೂಮಂಡಳದ ರಾಜಾಧಿರಾಜರನ್ನೆಲ್ಲ ಪರಾಭವಗೊಳಿಸಿ ಶೌರ್ಯಾವಷ್ಟಂಭಕನಾದ ಈ ಶಿಶುಪಾಲನಿರಲು ಗೋವಳಿಗನಿಗೆ ಈ ತುರುಗಾರನಿಗೆ ಪೂಜೆಯನ್ನು ಸಲ್ಲಿಸಿ, ಚಕ್ರವರ್ತಿಗಳ ಕೊರಳಲ್ಲಿ ನಿಂದೆಯನ್ನು ಕಟ್ಟಬೇಕೆಂದು ಬಯಸಿದೆಯೇನೋ? ಈ ಸಭೆಯಲ್ಲಿ ಸಮುಕಟ್ಟನರಿಯದೆ ಕೃಷ್ಣನಿಗೆ ಅರ್ಘ್ಯವನ್ನು ನೀಡುವದಾದರೆ ಅಮೃತವನ್ನುಂಡು ಆಮೇಲೆ ಗೋಮೂತ್ರದಿಂದ ಬಾಯಿಮುಕ್ಕುಳಿಸಿದಂತೆ ಅದು ಸಾಕಲ್ಯಕ್ಕೂ ಅಹಿತವಾಗುವದು, ಜಾಗ್ರತೆ-ಎಂದು ಕೋಪಾಟೋಪದಿಂದ ಧರ್ಮಜನನ್ನು ಕ್ರಮವಾಗಿ ಕೈತೆಗೆದುಕೊಳ್ಳುತ್ತಾನೆ. ಇನ್ನು ಮುಂದಿನ ಅವನ ಮಾತನ್ನು ಕೇಳಿ. ಅದನ್ನು ಪಂಪನ ಮಾತಿನಲ್ಲಿಯೇ ಹೇಳಬೇಕು. ಹಾಗಾದರೆ ಅವನ ಸತ್ತ್ವ ಹಾಗೂ ದೇಶಿಯ ಶಕ್ತಿ ಗೊತ್ತಾಗುತ್ತದೆ—

ಕುಡುವೇಳ್ವನ, ಕುಡುವನ, ಕುಡೆ |
ಪಡೆವನ ಪೆಂಪೇಂ ನೆಗೞ್ತೆವಡೆಗುಮೋ; ಪೇೞ್ವಂ ॥
ಕೊಡುವೇೞ್ಗೆಮ, ಕುಡುವಣ್ಣಂ |
ಕುಡುಗೆಮ, ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ ॥

---

1 ಅಲ್ಲಿಂದ ಹೊರಟ ನಾರದರು ದ್ವಾರಕೆಗೆ ಹೋಗಿ ಅಲ್ಲಿ ಕೃಷ್ಣನನ್ನು ಕಂಡು ಎಲ್ಲ ವಿಷಯವನ್ನು ತಿಳಿಸುತ್ತಾರೆಂದು ಮೂಲ ಮಹಾಭಾರತದಲ್ಲಿ ಬರುತ್ತದೆ. ಈ ಪ್ರಸಂಗವನ್ನು ಪಂಪನೇಕೆ ಕೈಬಿಟ್ಟನೋ ತಿಳಿಯದು.

(ಅರ್ಘ್ಯವನ್ನು) ಕೊಡು ಅಂತ ಹೇಳುವವನು, ಕೊಡುವವನು, ಅದನ್ನು ತೆಗೆದುಕೊಳ್ಳುವವನು–ಇವರೆಲ್ಲರು ಎಷ್ಟು ಕುದುರೆಯ ಮೇಲೆ ಹತ್ತಿಬರುತ್ತಾರೋ ಒಂದು ಕೈನೋಡೆ ಬಿಡುತ್ತೇನೆ. ಹೇಳುವವನು ಕೊಡು ಅಂತ ಹೇಳಲಿ; ಕೊಡುವ ಮಗ ಕೊಡಲಿ; ಆದರೆ ಅದನ್ನು ತೆಗೆದುಕೊಳ್ಳುವ ಗಂಡಸು ಅವನಾರೋ ಬರಲಿ–ಎಂದು ದಿನನಿತ್ಯದ ಬದುಕಿನಲ್ಲಿ ಹೇಳುವ ಆಡುಮಾತಿನ ದೇಶಿಯನ್ನೇ ಪಂಪ ಸಾಹಿತ್ಯ ಪೀಠಕ್ಕೇರಿಸಿ ಅದರ ಸೊಬಗನ್ನು ವರ್ಧಿಸಿದ್ದಾನೆ.

ಶ್ರೀ ಕೃಷ್ಣನನ್ನು ಕುರಿತು ಶಿಶುಪಾಲನು ಹೇಳುವ ಮೂದಲಿಕೆಯಂತೂ ಎಂತಹವನಿಗೂ ರೋಷವನ್ನು ತಾರದೇ ಇರದು. ಆದರೆ ಆ ಮೂದಲಿಕೆಯಲ್ಲಿ ಏನು ನವಿರು; ಎಂತಹ ಕಾವ್ಯಾರಾಮ: 'ಮನೆ ನಿನಗೆ ನಂದಗೋಪಾಲನ ಮನೆ; ತುಱುಗಾರ್ತಿ ನಿನಗೆ ಮನೆವೆಂಡತಿ' ಹೀಗಿರುವಾಗ ಚಕ್ರವರ್ತಿಗಳ ಸಭೆಯಲ್ಲಿ ಅದರಲ್ಲೂ ನನ್ನ ಸನ್ನಿಧಾನದಲ್ಲಿ ಯುಧಿಷ್ಠಿರನು ಕೊಡುವ ಅರ್ಘ್ಯೋದಯಕ್ಕೆ ಬೊಗಸೆಯೊಡ್ಡುತ್ತಿರುವದು ನಿನ್ನ ಮೈಸೊಕ್ಕಲ್ಲವೇ? 'ಧನುಜಾಂತಕ' ಎಂಬ ಬಿರುದು ನಿನಗೇಕೆ ಬಂತೋ ನಾ ಬೇರೆ ಕಾಣೆ. ಪ್ರಾಯಶಃ ನನ್ನಂತಹ ವಿದ್ವಿಷ್ಟ ವಿದ್ರಾವಣನು ಆಗ ಹುಟ್ಟದ್ದಿಲ್ಲವೆಂದು ಕಾಣುತ್ತದೆ. ಈಗ ಅರ್ಘ್ಯವನ್ನು ಸ್ವಿಕರಿಸಿದ್ದೇ ಆದರೆ ನಿನ್ನ ಬಿಸಿ ನೆತ್ತರನ್ನು ಕುಡಿದು, ನೀನು ಧರಿಸಿದ ಬಿರುದನ್ನು ಅಳಿಸಿಬಿಡದಿದ್ದರೆ ನನ್ನ ಹೆಸರು ಶಿಶುಪಾಲನೇ ಅಲ್ಲ. ನಿನ್ನನ್ನು ತ್ರಿವಿಕ್ರಮನೆಂದೂ ಲೋಕವೆಲ್ಲ ಕೊಂಡಾಡುತ್ತದೆ. ನೀನಾವ ಬಂಟನೋ? ಹಿಂದಕ್ಕೆ ಮುಚಕಂದನೆಂಬುವನಿಗೆ ಶರಣಾಗತನಾಗಲಿಲ್ಲವೇ? ಜರಾಸಂಧನಿಗೆ ಹೆದರಿ, ಸಮುದ್ರಮಧ್ಯದಲ್ಲಿ ಮನೆಕಟ್ಟಿಕೊಂಡಿರುವುದು ಸುಳ್ಳೇ? ಮೀನು, ಆಮೆ, ಹಂದಿ ಎಂದು ಮೊದಲಾಗಿ ಡೊಂಬರಾಟವಾಡಲಿಲ್ಲವೇ? ನೀನು ಗೋವುಕಾದ ವಿಷಯ ಯಾರಿಗೆ ತಿಳಿಯದು? ಎಂದು ವಾಚಾಮಗೋಚರವಾಗಿ ಬಯ್ಯುತ್ತಾನೆ.

ಇದನ್ನು ಕೇಳುತ್ತಿದ್ದಂತೆ ಸಭೆಯಲ್ಲಿದ್ದವರೆಲ್ಲರೂ ಹೇಡಿಯ ಮೇಲೆ ಹಾವು ಹರಿಸಿದಂತೆ ಭಯಗ್ರಸ್ಥರಾಗಿ ಪಿಳಿಪಿಳಿ ಕಣ್ಣನ್ನಷ್ಟೇ ಬಿಟ್ಟು ನೋಡುತ್ತಿದ್ದಾರೆ. ಯಾರಿಗೂ ಶಕ್ತಿಯಿಲ್ಲ. ಇಷ್ಟಾದರೂ ಕೃಷ್ಣನು ಉದ್ವೇಗಗೊಳ್ಳದೆ, ಯಾವ ವಿಕಾರಕ್ಕೂ ಎಡೆಯಾಗದೆ, ಮಂದಸ್ಮಿತನಾಗಿ ಶಿಶುಪಾಲನ ಬೈಗಳನ್ನು ಸ್ವಾಗತಿಸುತ್ತಿದ್ದಾನೆ. ಆತನಿಗೆ ಗೊತ್ತು, ಶಿಶುಪಾಲನ ಜುಟ್ಟು ತನ್ನ ಕೈಯಲ್ಲಿದೆಯೆಂದು. ಶಿಶುಪಾಲನ ಅಟಾಟೋಪ ಇಳಿದಮೇಲೆ ಶಾಂತಚಿತ್ತನಾಗಿ ಕೃಷ್ಣನು ಹೀಗೆ ಹೇಳುತ್ತಾನೆ:

> ನಿನ್ನಯ ತಾಯ್ ಸಾತ್ವತಿಯುಂ।
> ನಿನ್ನಂ ತಂದೆನ್ನ ತೊಡೆಯಮೇಲಿಱಿಪುವುದುಂ॥
> ನಿನ್ನ ಲಲಾಟದ ಕಣ್ಣದು।
> ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೆಯ್ಯೊಳ್॥

ಎಂದು ಅರಿತ ನಿನ್ನ ತಾಯಿ ಈ ಕಿರಿಯನು ಕೇಡು ನುಡಿದರೂ ನೂರರವರೆಗೆ ಮನ್ನಿಸಬೇಕೆಂದು ನನ್ನೊಂದಿಗೆ ವಚನವನ್ನು ತೆಗೆದುಕೊಂಡಳು. ಈ ಮಾತು ಸುಳ್ಳಾದರೆ ಭೀಷ್ಮ, ದ್ರೋಣ, ಧರ್ಮಜ, ದುರ್ಯೋಧನಾದಿಗಳು ಆಗ ಇದ್ದರು. ಅವರನ್ನು ಕೇಳಿ ನೋಡು. ನೂರರವರೆಗೂ ಬಯ್ಯಿ; ನಿನ್ನನ್ನು ಕ್ಷಮಿಸುತ್ತೇನೆ–ಎಂದು ಕೃಷ್ಣನು ನಡೆದ ವೃತ್ತಾಂತವನ್ನು ಗಮನಕ್ಕೆ ತಂದುಕೊಡುತ್ತಾನೆ.

ಸಾವು ಸನ್ನಿಹಿತವಾಗಿದ್ದ ಶಿಶುಪಾಲನಿಗೆ ಕೃಷ್ಣನ ಹಿತನುಡಿ ರುಚಿಸುವದೇ? ಮನ ಬಂದಂತೆ ಹೀನಾಯಮಾನವಾಗಿ ಬಯ್ಯುತ್ತಾನೆ. ಬೈಗಳು ನೂರು ಮುಟ್ಟಿದ್ದೇ ತಡ ಶ್ರೀಕೃಷ್ಣನು ಕಾಲಭೈರವನಾಗಿ ಅರ್ಘ್ಯವನ್ನೆತ್ತಿದ್ದ ತಳಿಗೆಯಿಂದಲೇ ಶಿಶುಪಾಲನ ಶಿರಸ್ಸನ್ನು ಛೇದಿಸುತ್ತಾನೆ. ರುಂಡ ಅಟ್ಟೆಯನ್ನು ಬಿಟ್ಟು ತಳಿಗೆಯಲ್ಲಿ ಕುಳಿತಿದ್ದರೂ ಅದು ಕಿಲಕಿಲನೆ ನಗುತ್ತಿತು! ಏನಾಶ್ಚರ್ಯ! ಶಿಶುಪಾಲನ ಕಲಿತನ, ಪರಾಕ್ರಮ ಎಂತಹ ರುದ್ರಭಯಂಕರ!

ಶಿಶುಪಾಲನ ಭೀಕರ ವಧೆಯ ಈ ಪ್ರಸಂಗವು ನಮ್ಮ ಕಣ್ಮುಂದೆ ಕಟ್ಟಬೇಕಾದರೆ ಪಂಪನ ಕಾವ್ಯವನ್ನು ಓದಿದಾಗ ಮಾತ್ರ ಸಾಧ್ಯ. ಆತನು ನಿರ್ಮಿಸಿದ ಸನ್ನಿವೇಶ ಪ್ರಯೋಗಿಸಿದ ಭಾಷೆಗಳು ರಸಾನುಭೂತಿಯನ್ನು ತರುತ್ತವೆ ಮತ್ತೆ ಮತ್ತೆ ಕಾವ್ಯವನ್ನು ಓದಬೇಕೆನಿಸುತ್ತದೆ.

ಕರ್ಣಾರ್ಜುನ ಮತ್ತು ಬಿತ್ತಿದ ಬೆಳೆ

ಕಾರಂತರ ನಾಟಕಗಳು

ಎಚ್. ವಿ. ಶ್ರೀನಿವಾಸ ಶರ್ಮ

ಕರ್ಣಾರ್ಜುನ

ಕಾರಂತರು ಬರೆದ ಕರ್ಣಾರ್ಜುನ ನಾಟಕ ಆ ಕಾಲಕ್ಕೆ ಅದೆಷ್ಟು ವರ್ಷ ಹಿಂದಿನಿಂದ ಮೂಲೆಯಲ್ಲೇ ಬೆಳಕು ಕಾಣದೆ ಮುದುರಿ ಬಿದ್ದಿತ್ತೋ ಏನೋ. ಅಂತು ಕನ್ನಡಿಗರ ಮುಂದೆ ಕಷ್ಟ ಸಾಧ್ಯವಾಗಿಯೇ ಹೊರ ಬಂದದ್ದು ಸಾಹಸವೆ. ಆರಂಭದ ನಾಟಕಗಳ ಗುಂಪಿಗೆ ಇದು ಸೇರುವುದರಿಂದ ಅವರು ಆಗಿನ ಆದರ್ಶಗಳನ್ನು ತೋರಿಸಲು ಕೆಲವೆಡೆಗಳಲ್ಲಿ ಭಾವಾತಿರೇಕಕ್ಕೂ ಹೋಗಿರುವುದು ಸಹಜ. ಆದರಿಂದಲೇ ಇಡೀ ನಾಟಕದ ಹಲವೆಡೆಗಳಲ್ಲಿ ಸಂಭಾಷಣೆ ಪುಟಗಟ್ಟಲೆ ಹರಿದು ಹೋಗುವ ಸಂಭವ ಬರುವುದುಂಟು. ಈ 'ಕರ್ಣಾರ್ಜುನ'ಕ್ಕಿಂತ ಈ ದೋಷ 'ಬಿತ್ತಿದ ಬೆಳೆ' ಯಲ್ಲಿ ಅತಿಯಾಗಿ ನಿಲ್ಲುತ್ತದೆ ಎನ್ನಬಹುದು. ಹಲವು ಸಲ ಸಂಭಾಷಣೆ ಹೋಗಿ ಭಾಷಣವಾಗುವುದೋ ಏನೋ ಎನ್ನಿಸಿ ಬಿಡುವುದೂ ಉಂಟು. ಈ ಮಾತನ್ನು ಕೇಳಿದ ನಾಟಕ ಕಾರರು ಪ್ರತಿಭಟಿಸಿ ನಿಂತರೂ ಹಾಗೆ ಹೇಳದಿರಲು ಅನಿ ವಾರ್ಯವೆನಿಸದೇ ಇಲ್ಲ. ಅಭಿನಯಿಸುವ, ಆಡಿ ತೋರಿಸುವ ಪ್ರತಿಭೆಯನ್ನು ತಿಳಿದವರು ಎಷ್ಟೇ ಸ್ವಾರಸ್ಯವಾಗಿ ರಂಗದ ಮೇಲೆ ತಂದರೂ ಆರಾಮ ಕುರ್ಚಿಯಮೇಲೆ ಕುಳಿತ ವಿಮರ್ಶಕನನ್ನು ಮಾತ್ರ ಮೆಚ್ಚಿಸಿದರೆ ಸಾಲದು. ದೃಶ್ಯ ಇಲ್ಲವೆ ಶ್ರವ್ಯ ಯಾವುದೇ ಸಾಹಿತ್ಯವಾದರೂ ಜನಮನ ರಂಜನೆ ಪಡೆಯುವುದರ ಮೇಲೆ ಸಾಹಿತಿಯ ಅಳಿವು ಉಳಿವು. ತನ್ನ ಆತ್ಮತೃಪ್ತಿಗಾಗಿ ಕಲೆಯ ನಿರ್ಮಾಣ ಎಂಬ ವಾದ. ವಿದ್ದರೂ, ಸರ್ವಜನರ ಆತ್ಮತೃಪ್ತಿಯೂ ಅದರಲ್ಲಿ ಬೆರೆತರೆ ಅದು ಸಾಹಿತ್ಯ ಸಮಾರಾಧನೆ. ಬಡಿಸಿದವನ ಆತ್ಮತೃಪ್ತಿ ಗಾಗಿ ಊಟವಲ್ಲವಷ್ಟೆ. ನಿಜ, ದೀರ್ಘ ಸಂಭಾಷಣೆ ಬರು ವುದು ಅನಿವಾರ್ಯ. ಆದರೆ ಕ್ವಚಿತ್ತಾಗಿ, ಅವಶ್ಯಕವೆನಿಸಿದ ಕಡೆ ಪೋಷಕವಾಗಿ ಬರದೆ ಇಡೀ ನಾಟಕದಲ್ಲೇ ಅದು ಮನೆ ಮಾಡಿದರೆ ಅದನ್ನು 'ನಾಟಕ ಕಾದಂಬರಿ' ಎನ್ನಬೇಕಾ ದೀತು. ಪ್ರೇಕ್ಷಕರ ತಾಳ್ಮೆ ಹರಿದು ಹೋದೀತು. ದೃಶ್ಯಕ್ಕೆ ಬದಲು ಶ್ರವ್ಯಕ್ಕೆ ಅದು ಯೋಗ್ಯವಾದೀತು ಎಂಬ ಶಂಕೆ ಮೂಡುವುದು ಸಹಜ.

'ಕರ್ಣಾರ್ಜುನ' ನಾಟಕದಲ್ಲಿ ದೀರ್ಘ ಸಂಭಾಷಣೆಯ ಸಂದರ್ಭಗಳು ಕ್ವಚಿತ್ತಾಗಿ ಬಂದಿರುವುದು ಕಂಡುಬರುತ್ತದೆ. ಸಮಗ್ರ ಭಾರತದ ಕತೆಯ ಸಿಂಹಾವಲೋಕನ ಇಲ್ಲಿ ನಡೆ ದಿದೆ ಎನ್ನಬಹುದು. ೨೫ ದೃಶ್ಯಗಳಿರುವ ೫ ಅಂಕಗಳ ಬೃಹತ್ ನಾಟಕ. ಕೌರವ ಪಾಂಡವರ ಶಸ್ತ್ರವಿದ್ಯಾ ಪ್ರದ ರ್ಶನದಿಂದ ಆರಂಭವಾಗಿ ಕರ್ಣನ ಸಾವಿನಲ್ಲಿ ನಾಟಕ ಕೊನೆಯಾಗುತ್ತದೆ. ಆರಂಭದಲ್ಲಿ ಕರ್ಣಾರ್ಜುನರ ಶಸ್ತ್ರ ಅಸ್ತ್ರ ವಿದ್ಯೆಯ ಪ್ರದರ್ಶನ ನಡೆಯುವಂದೇ ಪರಸ್ಪರ ವೈರ ಬೆಳೆದು ನಾಟಕದ ಬೆಳವಣಿಗೆಗೆ ಪೋಷಕವಾದ ಪ್ರತಿ ಜ್ಞೆಯೂ ಅದೇ ಸ್ಥಳದಲ್ಲಿ ನಡೆಯುತ್ತದೆ "... ನಾನು ನಿನ್ನೊಬ್ಬನನ್ನಾದರೂ ನನ್ನ ಶಸ್ತ್ರಪಾಶದಿಂದ ಬಿಗಿದು ಕುಣಿಸಿ ದಣಿಯಬಲ್ಲೆ" ಎಂದು ಅರ್ಜುನನ ಪ್ರತಿಜ್ಞೆ ಯಾದರೆ "... ನೀನು ನನ್ನನ್ನು ಕುಣಿಸಿ ದಣಿಸುವೆಯಾ ದರೆ ನಾನು ನಿನ್ನನ್ನು ನನ್ನ ಪಾದತಳದಲ್ಲಿ ಮಣಿಸೆನೆ ?" ಇದು ಕರ್ಣನ ವೀರ ಪ್ರತಿಜ್ಞೆ.

ಭಾರತದ ಕತೆಯನ್ನೇ ಚಾಚೂ ತಪ್ಪದೆ ಕರ್ಣ, ಅರ್ಜು ನರ ಇಡೀ ಜೀವನ, ಸಾಹಸ, ಶೌರ್ಯ, ಗುಣಾವಗುಣಗಳಿಗೆ ಸಂಬಂಧಿಸಿದಂತೆ ದೃಶ್ಯ ದೃಶ್ಯಗಳನ್ನು ಜೋಡಿಸಿಕೊಂಡು ಹೋಗುತ್ತಿದ್ದರೂ, ಅಲ್ಲಲ್ಲಿ ತುಸು ಬದಲಾವಣೆಗಳೂ ಕಾಣ ಬಂದು, ಕೆಲವು ಪಾತ್ರಗಳ ವಿಕಾಸದ ಕಡೆ ಕಾರಂತರು ಆಗಲೇ ಪ್ರಯತ್ನಿಸಿ ತೋರಿಸಿದರೆಂದೇ ಹೇಳಬಹುದು. ಅದ ರಲ್ಲಿ ಕುಂತಿಯ ಪಾತ್ರ, ಅವಳ ಮಾನಸಿಕ ಹೊಯ್ದಾಟ, ಉಭಯ ಸಂಕಟ ನಾಟಕದಲ್ಲಿ ಚೆನ್ನಾಗಿ ಅರಳಿರುವುದು ಮೇಲೆದ್ದು ಕಾಣಿಸದೇ ಇಲ್ಲ. ಕರ್ಣ ಎಲ್ಲರಿಗೂ ಪೂರ್ವ ಪರಿಚಿತ ಇಲ್ಲಿ. ಕುಂತಿಗೆ ಮಾತ್ರ ಆರಂಭದಿಂದಲೂ ಅವನು ತನ್ನ ಪುತ್ರನೆಂಬುದು ಗೊತ್ತು. ಪ್ರೇಮ ಸ್ಪರ್ಧೆಯ ಸ್ವರೂಪ ಮೀರಿ ವೈರ ಸ್ಪರ್ಧೆಯ ಘಟ್ಟವನ್ನು ಮುಟ್ಟುವ ಪ್ರಸಂಗವನ್ನು ಕಂಡ ಕುಂತಿ ಒಡೆದ ಗಾಜನ್ನು ಕೂಡಿಸುವ ಪ್ರಯತ್ನ ಮಾಡುತ್ತಾಳೆ. ಅವಳ ಮನೋವೇದನೆಗೆ ಅತ್ಯು ತ್ತಮವಾದ ಸಾಹಿತ್ಯ ರುಚಿಯನ್ನೇ ಕಾರಂತರು ಒಂದು ಪೂರ್ಣ ದೃಶ್ಯದಲ್ಲೇ ನಿವೇದಿಸುತ್ತಾರೆ. ಅವಳ ಪಾತ್ರ

ಪ್ರೇಕ್ಷಕರ ಮನಸ್ಸಿನಮೇಲೆ ಅಚ್ಚೊತ್ತಿ ನಿಂತು ಕೊನೆಯಲ್ಲಿ 'ಅಯ್ಯೋ ಪಾಪ' ಎನ್ನಿಸುವ ಕರುಣಾವಸ್ಥೆಗೆ ಒಯ್ಯುತ್ತದೆ. ಲಾಕ್ಷಾಗೃಹದಹನ, ಏಕಚಕ್ರನಗರವಾಸ, ಕರ್ಣ ಇಂದ್ರರ ಭೇಟಿ, ಸ್ವಯಂವರ, ಇವುಗಳಿಗೆ ದೃಶ್ಯಗಳನ್ನು ಹಂಚಿ ನಡೆದ ನಾಟಕಕಾರರು ಪಾಶುಪತ ಅಸ್ತ್ರ ಸಂಪಾದನೆಗೆ ಇಡೀ ಮೂರನೆ ಅಂಕವನ್ನೇ ಮೀಸಲಾಗಿಡುತ್ತಾರೆ. ಸಂಧಿ ವಿಫಲವಾಗಿ ಯುದ್ಧ ಕೈಗಟ್ಟುವುದು, ಕುಂತಿಯ ಸರಳಬೇಡಿಕೆ, ರಣರಂಗದಲ್ಲಿ ಗೀತೋಪದೇಶ, ಪ್ರತಿಜ್ಞಾ ಪೂರೈಕೆ, ಕರ್ಣನ ಸಾವು-ಹೀಗೆ ನಾಟಕದ ಬೆಳವಣಿಗೆ ಸಾಗಿ ತನ್ನ ಗುರಿ ಮುಟ್ಟುತ್ತದೆ.

ಆದರೆ ಹಲಕೆಲವು ಎಡೆಗಳಲ್ಲಿ ನಾಟಕಕಾರರ ಪ್ರತಿಭೆ ಮಿಂಚಿ ಹೊಳೆದು ಹೋಗುವುದೂ ಹೊಸ ಹೊಸ ಕಲ್ಪನೆ ಅಡ್ಡ ಹಾಯುವುದೂ ಅನಿವಾರ್ಯ. ಕೃಷ್ಣ ದುರ್ಯೋಧನನಿಗೆ ಅಪರಿಚಿತನೋ ಏನೋ ಎನ್ನಿಸುತ್ತದೆ. ಸ್ವಯಂವರ ಮಂಟಪದಲ್ಲಿ ನಡೆಯುವ ಸಂಭಾಷಣೆಯನ್ನು ನೋಡಿದರೆ.

ಕೃಷ್ಣ : ಆಹಾ, ಈ ಸಮಯದಲ್ಲಿ ಆ ಪಾರ್ಥನಿರುತ್ತಿದ್ದರೆ?

ದುರ್ಯೋ : ಕರ್ಣಾ ಇವನಾವ ಪಾಂಡವ ಪಕ್ಷಪಾತಿಯು ?

ಕರ್ಣ : ಆವನು ದ್ವಾರಕಾಧೀಶನಾದ ಕೃಷ್ಣನಲ್ಲವೆ? ಅವನಿಗೆ ಮೊದಲಿನಿಂದಲೂ ಪಾಂಡವರ ಮೇಲೆ ಪ್ರೇಮವಂತೆ . . ." ಇಲ್ಲಿ ಕರ್ಣನಿಂದ ಪರಿಚಯವಾಗುವುದನ್ನು ಕಾಣಬಹುದು. ಲಾಕ್ಷಾಗೃಹ ದಹನವಾದಮೇಲೆ ಮೂರನೇ ಅಂಕದಲ್ಲಿ ಕರ್ಣನು ಕಾಣುವ ಕನಸು ಪಾಂಡವರ ಅಭ್ಯುದಯದ ಮುನ್ಸೂಚನೆಯೋ ಎಂಬಂತೆ ಕಾಣುತ್ತದೆ. ಶ್ವೇತಾಂಬರಧಾರಿಗಳಾದ ಐವರು ಸಿಂಹಾಸನವನ್ನೇರಿದಂತೆ ಕನಸು ಕಾಣುವ ದೃಶ್ಯ, ಕರ್ಣನ ಮನಸ್ಸಿಗೆ ನಾಟುವಂತೆ ದುರ್ಯೋಧನನಿಗೆ ಹಿಡಿಸುವುದಿಲ್ಲ. ಅದು ಹಾಸ್ಯಾಸ್ಪದವಾಗುತ್ತದೆ. ಸಂಧಿಯ ಕಾಲದಲ್ಲಿ ದಿಕ್ಕೇ ತೋಚದೆ ದುರ್ಯೋಧನ ಹಿರಿಯ ಸಂಕಟದಲ್ಲಿ ಅಳುಮೋರೆ ಮಾಡಿ ಹಿರಿಯರ ಮಾತಿಗೆ ಕಟ್ಟುಬಿದ್ದು ಒದ್ದಾಡುತ್ತಿರುವಾಗ ಕರ್ಣ ಕೊಟ್ಟ ಧೈರ್ಯ, ಅವನ ಪ್ರಚೋದನಾ ಸಂಭಾಷಣೆ ಬಲು ರಮ್ಯವಾಗಿದೆ. ಹೊಸ ತೆರನಾಗಿದೆ. ಕರ್ಣಾವಸಾನದ ಕಡೆಗಳಿಗೆಯ ಸನ್ನಿವೇಶ ಹೃದಯಂಗಮವಾಗಿದೆ. ಅರ್ಜುನ ತನ್ನ ಸಾಹಸವನ್ನು ಆರ್ಭಟದಿಂದ ಒದರುತ್ತಿರುವುದನ್ನು ಕೇಳಿ ಕುಂತಿ ರಣರಂಗಕ್ಕೆ ಹಾರಿ ಬಂದು, "ಮಗೂ ಬಾಯಿ ಮುಚ್ಚು ವೈರಿಯ ಪಂಚಪ್ರಾಣವು ಹಾರಲಿಲ್ಲ; ಈಗ ಹಾರಿದುದು ನಿನ್ನ ಹೆತ್ತಾಕೆಯ ಪಂಚಪ್ರಾಣ" ಎನ್ನುತ್ತಾಳೆ. ಕರ್ಣನ ಪರಿಚಯದಿಂದ ಅರ್ಜುನನ ಪಶ್ಚಾತ್ತಾಪ. ಕರ್ಣನ ಪ್ರತಿಜ್ಞೆಯೂ ಪೂರೈಸಿತೋ ಎಂಬಂತೆ ಅರ್ಜುನನತ್ತ ಅವನ ಪಾದದ ಬಳಿ ತಲೆಯನ್ನು ಇಡುವುದೂ ಈ ಪಾಪದ ಪ್ರಾಯಶ್ಚಿತ್ತಕ್ಕೆ ಅರ್ಜುನ ಆತ್ಮಹತ್ಯಕ್ಕೆ ಮುಂದೆ ಬರುವುದೂ, ಧರ್ಮರಾಯ, ಕುಂತಿ ಇವರ ಉಮ್ಮಳ—ಈ ಸಂಸಾರಿಕ ಬೆಸುಗೆಯ ಹೃದಯಂಗಮ ಅಂತ್ಯವನ್ನು 'ಕರ್ಣಾರ್ಜುನ'ದಲ್ಲಿ ಚೆನ್ನಾಗಿ ತಂದಿದ್ದಾರೆ.

ಇತರ ನಾಟಕಗಳಿಗಿಂತ ಇಲ್ಲಿ ಪೌರಾಣಿಕ ನಾಟಕದ ನೆಳಲು ಅಲ್ಲಲ್ಲೇ ಹಾದು ಹೋಗುವುದನ್ನು ಗುರುತಿಸಬಹುದು. ಪ್ರೌಢ ಶೈಲಿ, ಗಂಭೀರ ಹಾಗೂ ಬಿಗಿಯಾದ ಮಾತು ಉಚಿತವಾಗಿದೆ. ಇಷ್ಟಾದರೂ ರಂಗಮಂಟಪದಲ್ಲಿ ತರಲು ಸ್ವಲ್ಪ ತೊಡಕೇನೋ ಎನ್ನಿಸುತ್ತದೆ. ಕಾರಣ, ಪುಟ್ಟ ಪುಟ್ಟ ದೃಶ್ಯಗಳು, ಭಾರತದ ಕತೆಯನ್ನು ಭಟ್ಟಿ ಇಳಿಸಲು ಹೋಗಿ, ದೃಶ್ಯ ದೃಶ್ಯಗಳನ್ನು ಜೋಡಿಸಿರುವ ಕ್ರಮ, ರಂಗಮಂಟಪದ ಸೌಲಭ್ಯಕ್ಕೆ ಸ್ವಲ್ಪ ದೂರವಾಗುವುದು ಸಹಜ. ಸುಮಾರು ಇಪ್ಪತ್ತು ಪಾತ್ರಗಳಿರುವ ಈ ನಾಟಕವನ್ನು ಈ ಕಾಲಕ್ಕೆ ಅದರಲ್ಲೂ ಇಂತಹ ನಾಟಕಗಳಿಂದಲೇ ದೂರವಿರುವ ಕಲಾಸಂಘಗಳು ಪ್ರಯತ್ನಪಡುವುದೇ ಅಸಾಧ್ಯವೆನಿಸಿದರೂ ಮನಸ್ಸು ಮಾಡಿದರೆ ಈ ನಾಟಕವನ್ನು ರಂಗಮಂಟಪದಮೇಲೆ ತರಬಹುದು. ಪ್ರದರ್ಶಿಸಿ ನೋಡಬಹುದು ಎನ್ನಿಸುತ್ತದೆ.

ಬಿತ್ತಿದ ಬೆಳೆ

ಐದು ಅಂಕದ ಸುದೀರ್ಘವಾದ ನಾಟಕ 'ಬಿತ್ತಿದ ಬೆಳೆ' ಯಲ್ಲಿ ಕಾಣುವುದು ಮುಖ್ಯವಾಗಿ ಎರಡು ಸಂಸಾರಗಳ ನಡುವಣ ಸಂಬಂಧ ಚಿತ್ರ. ಎರಡೂ ಶ್ರೀಮಂತ ಮನೆತನ. ಇವರಿಬ್ಬರ ನಡುವೆ ಬಡಸಂಸಾರ ಒಂದು. ಈ ಸಂಸಾರ ಚಿತ್ರವನ್ನು ಹೀಗೆ ಬಿಡಿಸಬಹುದು.

೧. ಲಾಯರ್ :

ಶಂಕರರಾವ್ + ವಸಂತಿ

ಡಾ. ಸುಧಾಕರ | ಸದಾಶಿವ | ಚಿದಾನಂದ | ಶ್ರೀಮತಿ

೨. ಡಾಕ್ಟರ್ :

ರಾಮರಾವ್ + ಸುಲೋಚನಾಬಾಯಿ

ರಾಜಾರಾಮ | ಶೇವಂತಿ | ಸೀಮಂತಿನಿ

೩. ಬಡವ ಶೇಷಗಿರಿಯ ಮಗ ಕ್ಯಾಪ್ಟನ್ ಲಕ್ಷ್ಮಣ.

ಇವೆರಡು ಸಂಸಾರದ ಇಷ್ಟೊಂದು ವ್ಯಕ್ತಿಗಳ ವ್ಯಕ್ತಿತ್ವ ಚಿತ್ರಣವನ್ನು ತೋರಿಸಲು ಹೊರಟ ಕಾರಂತರು, ಶ್ರೀಮಂತರ ಆಡಂಬರಕ್ಕೆ ಜನ ಮರುಳಾಗಿ, ಅವರು ಬಿತ್ತಿದ ಬೀಜವೇ ಮರವಾಗಿ ಹೇಗೆ ಬೆಳೆದು ನಿಲ್ಲುತ್ತದೆ, ಅದರ ಫಲವನ್ನು ಅವರು ಹೇಗೆ ಅನುಭವಿಸುತ್ತಾರೆ ಎಂಬ ತತ್ವ ವನ್ನು ಹೆಣೆದು ತೋರಿಸಿದ ನಾಟಕ 'ಬಿತ್ತಿದ ಬೆಳೆ', ನಾಟಕಕ್ಕೆ ತಕ್ಕ ಹೆಸರು. ಶಂಕರರಾಯರ ಮನೆಯಲ್ಲಿ ಉಂಡು ಬೆಳೆಯುತ್ತಾ, ವಿದ್ಯೆಕಲಿಯುತ್ತಿದ್ದ ಬಡ ಹುಡುಗ ಲಕ್ಷ್ಮಣ. ರಾಯರ ಮಗಳು ಶ್ರೀಮತಿಯಲ್ಲಿ ಅನುರಾಗ ಬೆಳೆಸುತ್ತಾನೆ. ಮನೆಯವರಿಗೆ ಇಷ್ಟವಾದರೂ ಸುಧಾಕರ ಶ್ರೀಮಂತರ ಹೆಮ್ಮೆಗೆ ಉಬ್ಬಿ, ಅವರಿಬ್ಬರ ಮದುವೆಗೆ ಅಡ್ಡಿ ಯಾಗಿ ನಿಲ್ಲುತ್ತಾನೆ. ಹಣ, ಅಂತಸ್ತುಗಳಿಲ್ಲದ ತಿರುಕ ಹುಡುಗ, ಭಿಕ್ಷಾನ್ನದ ಹುಡುಗನಿಗೆ ತಂಗಿಯನ್ನು ಕೊಡಲು ನಿರಾಕರಿಸುತ್ತಾನೆ. ಇಂಥವ ಸುಧಾಕರ ಮುಂದೆ ಡಾ. ರಾಮರಾಯರ ಮಗಳು ಶೀವಂತಿಯನ್ನು ಮದುವೆಯಾಗಿ, ಮೈದುನ ರಾಜಾರಾಯನಿಗೆ ತನ್ನ ತಂಗಿಯನ್ನೇ ಕೊಡುವು ದಲ್ಲದೆ, ಮಾನವ ಮನೆಯನ್ನೇ ಸೇರಿ ತಂದೆಯ ಮನೆಯನ್ನೆ ದೂರಿ ಓಡಿಸಿ ಬಿಡುತ್ತಾನೆ. ಮನೆಬಿಟ್ಟು ಹೋದ ಲಕ್ಷ್ಮಣ ಮಿಲಿಟರಿಗೆ ಸೇರಿ ಕ್ಯಾಪ್ಟನ್ ಎನ್ನಿಸಿಕೊಂಡು, ತಂದೆಯ ವ್ಯವಹಾರ ವ್ಯಾಪಾರಗಳಿಗೆ ಸಹಾಯ ನೀಡಿ, ದೊಡ್ಡ ಧನಿಕನಾಗುವಂತೆ ಮಾಡುತ್ತಾನೆ. ಶ್ರೀಮಂತ ವರ್ಗಕ್ಕೆ ಸೇರಿದ ಲಕ್ಷ್ಮಣನೂ ಎಲ್ಲರ ದೃಷ್ಟಿಯಲ್ಲಿ ಗೌರವ, ಅಂತಸ್ತು ಗಳನ್ನು ಸಂಪಾದಿಸುತ್ತಾನೆ. ಮೊದಲು ಯಾರಿಗೆ ತಂಗಿ ಯನ್ನು ಕೊಡಲು ನಿರಾಕರಿಸಿದ್ದನೋ, ಅದೇ ಲಕ್ಷ್ಮಣನಿಗೆ ತನ್ನ ನಾದಿನಿಯನ್ನು ಕೊಡಲು ಸುಧಾಕರ ಪ್ರಯತ್ನಿಸು ತ್ತಾನೆ. ಕಾರಣ ಈಗವನು ಕ್ಯಾಪ್ಟನ್ ಲಕ್ಷ್ಮಣ; ಮೇಲಾಗಿ ಶ್ರೀಮಂತ. ದುರದೃಷ್ಟವಶದಿಂದ ಶಂಕರ ರಾಯರ ಸಂಪತ್ತೆಲ್ಲಾ ಹೋಗಿ ಬಡತನ ಬಂದಾಗಲೂ ಸುಧಾಕರ ಅತ್ತ ತಲೆ ಹಾಕಿ ನೋಡುವುದಿಲ್ಲ. ಆದರೆ ಶೇಷಗಿರಿಯೇ ಧನಸಹಾಯ ಮಾಡಿ ಗೌರವ ಉಳಿಸುತ್ತಾನೆ.

ಹಿಂದೆ ಆದ ಅವಮಾನವೇ ಕಾರಣವಾಗಿ ಲಕ್ಷ್ಮಣನ ಜೀವನದಲ್ಲಿ ಪರಿವರ್ತನೆಯಾಗುತ್ತದೆ. ಶ್ರೀಮಂತರು ತೋರಿಸಿದ ನಿಕೃಷ್ಟ ಭಾವನೆ, ತಿರಸ್ಕಾರಗಳೇ ಬಿತ್ತಿದ ಬೀಜವಾಗಿ ಸೇಡಾಗಿ ಬೆಳೆದು ನಿಲ್ಲುತ್ತದೆ. ಸುಧಾಕರನ ಷಡ್ಡಕನಾಗಿ ನಿಲ್ಲಲು ಒಪ್ಪಿ ಕೊನೆಗೆ ತಕ್ಕ ಸೇಡನ್ನು ತೀರಿಸಿ ಕೊಳ್ಳುತ್ತಾನೆ. ಅವರು ಬೆಳೆದ ಬೆಳೆಯನ್ನು ಅವರಿಗೇ ಉಣಿಸುತ್ತಾನೆ. ಸದಾಶಿವನೇ ಸೀಮಂತಿನಿಯನ್ನು ವಿವಾಹ ವಾಗಬೇಕಾಗುತ್ತದೆ. ಇದು ನಾಟಕದ ಹಂದರ.

ಈ ನಾಟಕದಲ್ಲಿ ಬೀಗರು ಬೀಗರಲ್ಲಿ (ಶ್ರೀಮಂತರಲ್ಲಿ) ಬರುವ ವೈಷಮ್ಯ, ಹೋರಾಟ ಚೆನ್ನಾಗಿ ಚಿತ್ರಿತವಾಗಿದೆ. ಮನಸ್ತಾಪ, ಗೌರವ ಅಂತಸ್ತುಗಳಿಗಾಗಿ ನಿತ್ಯ ಹೋರಾಟ. ಅದರಿಂದ ಆಗುವ ದುಷ್ಪರಿಣಾಮ ನಾಟಕದಲ್ಲಿ ಒಂದು ರಮ್ಯ ಚಿತ್ರಣ. ಕಾಲಕ್ಕೆ ತಕ್ಕಂತೆ ಜೀವನವೂ ಬದಲಾವಣೆ ಯಾಗಬೇಕೆಂಬ ತತ್ವವನ್ನು ಕಾರಂತರು ಇಲ್ಲಿ ತೋರಿಸಲು ಪ್ರಯತ್ನಿಸುತ್ತಾರೆ. ಮದುವೆಯ ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿಗೆ ತಮ್ಮ ಜೀವನ ಗೆಳೆಯನನ್ನು ಆರಿಸುವ ಶಕ್ತಿ ಅವರಿಗೆ ಇರಬೇಕು. ಗೊಡ್ಡು ಸಂಪ್ರದಾಯವನ್ನು ಕಳೆದು ಹಾಕುವ ಸಂದಿಗ್ಧ ಕಾಲದಲ್ಲಿ ನಾಟಕ ರಚನೆಯಾದಂತೆ ಕಾಣುತ್ತದೆ. ಹಣಕ್ಕಾಗಿ ಕೊಡುವ ಬೆಲೆ ಎಷ್ಟೆಂಬುದು ಎದ್ದು ಕಾಣುತ್ತದೆ. ಶಂಕರರಾಯ ಯಾರನ್ನೂ ನಿರಾಕರಿ ಸಿದ್ದರೋ ಆ ಲಕ್ಷ್ಮಣನ ತಂದೆ ಶೇಷಗಿರಿಯಿಂದಲೇ ತಮ್ಮ ಬಡತನ ಕಾಲದಲ್ಲಿ ಗೌರವವನ್ನೂ ಉಳಿಸಿಕೊಳ್ಳಲು ಹಣ ಸಹಾಯ ಪಡೆಯಬೇಕಾಗುತ್ತದೆ. ಈ ಸನ್ನಿವೇಶ ಬಲು ಮನೋಜ್ಞವಾಗಿದೆ. ಆಗ ಅವರಿಗೆ ಮಾನವತ್ವ ಏನೆಂಬುದು ತಿಳಿಯುತ್ತದೆ. ಲಕ್ಷ್ಮಣ ಕುಡುಕನಾಗಿ ತನ್ನ ಹಿಂದಿನ ಸೇಡನ್ನು ತೀರಿಸಿಕೊಳ್ಳಲು ತಾನೇ ಪ್ರೀತಿಸಿದ್ದ ಶ್ರೀಮತಿಯ ಮೇಲೆ ಎರಗುವುದು ನಾಟಕದಲ್ಲಿ ಅಷ್ಟೇನೂ ಸೂಕ್ತವಾಗಿಲ್ಲ ವೇನೋ ಎನ್ನಿಸುತ್ತದೆ. ಸದಾಶಿವನ ಪಾತ್ರ ಬಲು ಸೌಮ್ಯ. ವಿವೇಕಶಾಲಿ, ಹಾಗೂ ವಿಶಾಲಮತಿಯಾಗಿ ನಾಟಕದ ಉದ್ದಕ್ಕೂ ಕಾಣುತ್ತಾನೆ. ತಂದೆಯ ಐಶ್ವರ್ಯ ಕರಗಿದಾಗ ತಾನೇ ಧೈರ್ಯ, ಸ್ಥೈರ್ಯ ತೋರಿಸಿ ತಂದೆಗೆ ಬೆಂಬಲವಾಗಿ ನಿಲ್ಲುತ್ತಾನೆ.

ಆದರೆ, ನಾಟಕ ಇಷ್ಟೆಲ್ಲಾ ರಮಣೀಯವಾಗಿ ಇದ್ದರೂ ಓದಲು ಮಾತ್ರ ಅರ್ಹವೇನೋ ಎನಿಸುತ್ತದೆ. 'ನಾಟಕೀಯತೆ' ಇದೆ ಎನ್ನುವುದಕ್ಕಿಂತ 'ಕಾದಂಬರಿ'ಯ ಛಾಯೆ ಮೂಡಿದೆ ಎನ್ನಬಹುದು. ನಾಟಕೀಯತೆ ಇಲ್ಲದ ಕಾದಂಬರಿ ಇಲ್ಲ ಎನ್ನಿಸಿದರೂ, ಕಾದಂಬರಿಯ ಸ್ವರೂಪ ಪಡೆದ ನಾಟಕವಿರಲಾರದಷ್ಟೆ. ನಾಟಕ ಇಲ್ಲವೆ ಕಾದಂ ಬರಿ ಪ್ರತ್ಯೇಕ ಶುದ್ಧ ಸಾಹಿತ್ಯವಾಗಿ ಉಳಿದರೆ ಚಂದ ಎಂದರೆ ತಪ್ಪಾಗಲಾರದು. 'ಬಿತ್ತಿದ ಬೆಳೆ'ಯಲ್ಲಿ ಉತ್ತಮ ನಟ ಎಷ್ಟೇ ಅಭಿನಯ ತಂದು ತೋರಿಸಿದರೂ ಪ್ರೇಕ್ಷಕನ ಮನಃತೃಪ್ತಿ ಕಾಣುವುದು ಅಸಾಧ್ಯವೆನಿಸಬಹುದು. ಈ ಕಾರಣದಿಂದ ನಾಟಕ ರಂಗದ ಮೇಲೆ ಅಷ್ಟಾಗಿ ನಿಲ್ಲಲಾಗದೆ ಹೋಗಿದೆ ಎಂದರೆ ಅತಿಶಯೋಕ್ತಿಯಲ್ಲ.

ತುಳು ಸಾಳುವರ ಆಸ್ಥಾನದಲ್ಲಿದ್ದ ಕನ್ನಡ ಕವಿಗಳ ಕಾಲವಿಚಾರ

ಸೂರ್ಯನಾಥ ಕಾಮತ್

ಸಾಳ್ವ, ಕೋಟೀಶ್ವರ, ಆದಿಯಪ್ಪ, ಅಭಿನವ ವಾದಿವಿದ್ಯಾನಂದ ಮುಂತಾದ ಕನ್ನಡ ಕವಿಗಳ ವಿಚಾರ ನಾವು ಕೇಳಿದ್ದೇವೆ. ಈ ಎಲ್ಲ ಕವಿಗಳು ಉತ್ತರ ಕನ್ನಡ ಜಿಲ್ಲೆಯ ಗೇರಸೊಪ್ಪೆ ಮತ್ತು ಹಾಡುವಳ್ಳಿಗಳಲ್ಲಿ ಆಳುತ್ತಿದ್ದ ಸಾಳುವ ರಾಜರುಗಳ ಆಸ್ಥಾನದಲ್ಲಿ ಮೆರೆದವರು.

ಚಂದ್ರಗಿರಿ ನದಿಯಿಂದ ಕಾಳಿ ನದಿಯವರೆಗಿನ ಕರಾವಳಿ ಪ್ರದೇಶವು ಬಹಳ ಹಿಂದಿನಿಂದ ತುಳುವ ಎಂದು ಹೆಸರು ಪಡೆದಿತ್ತು. ವಿಜಯನಗರ ಸಾಮ್ರಾಜ್ಯದ ಆರು ಪ್ರಧಾನ ಪ್ರಾಂತಗಳಲ್ಲಿ ತುಳುವ ಒಂದಾಗಿತ್ತು. ಹೀಗಾಗಿ ಈ ಭಾಗದಲ್ಲಿ ಆಳುತ್ತಿದ್ದ ಸಾಳುವರನ್ನು ತುಳು ಸಾಳುವರೆಂದು ಕರೆದಿದೆ. ವಿಜಯನಗರದಲ್ಲಿ ಆಳಿದ್ದ ತುಳುವ ಸಾಮ್ರಾಟರು ಉತ್ತರ ಕನ್ನಡ ಜಿಲ್ಲೆಯ ಈ ಸಾಳುವ ಮನೆತನದ ಶಾಖೆಗೆ ಸೇರಿದವರು. ಸಾಳುವ ನರಸಿಂಹನ ಸಾಳುವ ವಂಶಕ್ಕೂ ತಮ್ಮ ಸಾಳುವ ವಂಶಕ್ಕೂ ಇರುವ ಭೇದವನ್ನು ಸ್ಪಷ್ಟೀಕರಿಸಲು ಸಾಮ್ರಾಟ್ ನರಸನಾಯಕ ಮತ್ತು ಅವನ ಪುತ್ರರಾದ ವೀರನರಸಿಂಹ, ಕೃಷ್ಣದೇವ ಮತ್ತು ಅಚ್ಯುತರಾಯರು ತಮ್ಮನ್ನು ತುಳುವರೆಂದು ಕರೆದುಕೊಂಡರು.

ಈ ತುಳುವ ವಂಶದ ಮೂಲ ಶಾಖೆಯು ಗೇರಸೊಪ್ಪೆ ಮತ್ತು ಹಾಡುವಳ್ಳಿಗಳಲ್ಲಿ ಆಳುತ್ತಿತ್ತು. ಎರಡೂ ಕಡೆಗಳಲ್ಲಿ ಪ್ರತ್ಯೇಕ ರಾಜರಿದ್ದರು.

ಗೇರಸೊಪ್ಪೆಯು ಹೊನ್ನಾವರದಿಂದ ೧೨ ಮೈಲಿ ದೂರದಲ್ಲಿ ಶರಾವತಿ ನದಿಯ ಇಕ್ಕೆಲ್ಲಗಳಲ್ಲಿ ಹಬ್ಬಿರುವ ಒಂದು ಹಾಳೂರು. ನದಿಯ ಬಲದಂಡೆಯಲ್ಲಿ ೧೦–೨೦ ಮನೆಗಳಿರುವ ಗೇರಸೊಪ್ಪೆಯೆಂಬ ಒಂದು ಹಳ್ಳಿ. ಎಡದಂಡೆಯಲ್ಲಿ ಬಸ್ತಿಕೇರಿ ಎಂಬ ಹಳೆಯ ರಾಜಧಾನಿ. ಈಗ ಅಲ್ಲಿರುವುದು ಒಂದು ಸುಂದರವಾದ ಚತುರ್ಮುಖ ಬಸದಿ ಹಾಗು ಅನೇಕ ಬಸದಿ, ಮಂದಿರ, ಮನೆಗಳ ಹಾಳುಸುರಿವ ಅವಶೇಷಗಳು. ಹಿಂದೆ ಇದು ಕ್ಷೇಮಪುರ, ನಗಿರೆ, ಭಲ್ಲಾತಕಿಪುರ ಮುಂತಾದ ಹೆಸರುಗಳಿಂದ ಖ್ಯಾತವಾದ ಒಂದು ಲಕ್ಷಕ್ಕೂ ಮೀರಿದ ಜನವಸತಿಯ ರಾಜಧಾನಿ.

ಇಂಥದೇ ಇನ್ನೊಂದು ರಾಜಧಾನಿ ಭಟ್ಕಳದಿಂದ ಹತ್ತು ಮೈಲಿ ದೂರದಲ್ಲಿರುವ ಹಾಡುವಳ್ಳಿ. ಹಿಂದೆ ಸಂಗೀತಪುರ ಎಂದು ಖ್ಯಾತವಾದ ನಗರ. ಈ ಎರಡೂ ಸ್ಥಳಗಳಲ್ಲಿ ಹಿಂದೆ ಎರಡು ರಾಜಮನೆತನಗಳು ಎರಡು ರಾಜ್ಯಗಳನ್ನು ಕಟ್ಟಿಕೊಂಡಿದ್ದರು. ಇಬ್ಬರೂ ಸಾಳುವ ವಂಶದವರು. ಇಬ್ಬರೂ ದಾಯಾದಿಗಳು. ಸುಮಾರು ೧೨ರಿಂದ ೧೬ನೆಯ ಶತಮಾನದವರೆಗೆ ನಡೆದ ಇವರ ಆಳ್ವಿಕೆಯ ಕಾಲದಲ್ಲಿ ಎರಡೂ ಮನೆತನಗಳ ನಡುವೆ ಸದಾ ಜಗಳ, ಯುದ್ಧ. ಕೊನೆಗೆ ೧೬ನೇ ಶತಮಾನದ ಕೊನೆಗೆ ಎರಡೂ ಮನೆತನಗಳು ಒಂದಾಗಿ ಒಬ್ಬಳೇ ರಾಣಿ ಚನ್ನಭೈರಾದೇವಿ ಎಂಬುವಳ ಕೈಗೆ ಎರಡೂ ರಾಜ್ಯಗಳು ಬಂದುವು. ಅರ್ಧಶತಮಾನಕ್ಕೂ ಹೆಚ್ಚುಕಾಲ ಆಳಿದ ಅವಳ ಕಾಲದಲ್ಲೇ ಎರಡೂ ರಾಜ್ಯಗಳು ಇಕ್ಕೇರಿಯಲ್ಲಿ ಸೇರಿಹೋಗಿ ತುಳುನಾಡಿನ ಸಾಳುವ ಮನೆತನಕ್ಕೆ ಇತಿಶ್ರೀಯಾಯಿತು.

ಆರೇಳು ಶತಮಾನಗಳ ಕಾಲ ಆಳಿದ ಈ ರಾಜಮನೆತನಗಳು, ಕಲೆ, ಶಿಲ್ಪ, ಸಾಹಿತ್ಯಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರೆಂಬುದಕ್ಕೆ ಹಾಡುವಳ್ಳಿ, ಭಟ್ಕಳ, ಗೇರಸೊಪ್ಪೆ ಮತ್ತು ಸುತ್ತಣ ಊರುಗಳಲ್ಲಿರುವ ಬಸದಿ, ಮಾನಸ್ತಂಭ, ದೇಗುಲ, ಮಂಟಪಗಳೂ ಆರಂಭದಲ್ಲಿ ಸೂಚಿಸಿದ ಕವಿಗಳ ಕೃತಿಗಳೂ ಸಾಕ್ಷಿ.

"ಕವಿಚರಿತ್ರೆ"ಕಾರರಾದ ಆರ್. ನರಸಿಂಹಾಚಾರ್ಯರು ಈ ಕವಿಗಳ ಬಗ್ಗೆ ತಮ್ಮ ಗ್ರಂಥದಲ್ಲಿ ಸಾಕಷ್ಟು ವಿವರ ನೀಡಿದ್ದಾರೆ. ಆದರೆ ಅವರುಗಳ ಕಾಲಗಳ ಬಗ್ಗೆ ಹೇಳಿದ ವಿಚಾರವನ್ನಿಲ್ಲಿ ಪರಿಶೀಲಿಸಲಾಗಿದೆ.

ಕೋಟೀಶ್ವರನು ಹಾಡುವಳ್ಳಿಯ ರಾಜರ ಆಸ್ಥಾನದಲ್ಲಿದ್ದ ಕವಿ. ಭಾಮಿನಿ ಷಟ್ಪದಿಯಲ್ಲಿ ಬರೆದಿರುವ 'ಜೀವಂಧರ ಷಟ್ಪದಿ' ಅವನ ಕಾವ್ಯ. ಸಂಗೀತಪುರ (ಹಾಡುವಳ್ಳಿ) ಯ ದೊರೆ ಹೈವರಾಯನ ಪುತ್ರ ಸಂಗಮರಾಯನ ಕಾಲದಲ್ಲಿ ತಾನು 'ಜೀವಂಧರ ಷಟ್ಪದಿ'ಯನ್ನು ಬರೆದುದಾಗಿ ಅವನು ತನ್ನ ಕಾವ್ಯದಲ್ಲಿ ಹೇಳಿದ್ದಾನೆ. ಕಾವ್ಯದಲ್ಲಿ ತಿಳಿಸಿರುವ ಸಂವತ್ಸರದ ಆಧಾರದಿಂದ ಆತನ ಕಾಲವನ್ನು ಕ್ರಿಸ್ತಶಕ ೧೫೦೦ ಎಂದು ಆರ್. ನರಸಿಂಹಾಚಾರ್ಯರು ನಿರ್ಣಯಿಸಿದ್ದಾರೆ (ಕ. ಚ. II. ಪು. ೧೪೫). ಆದರೆ ಕವಿಚರಿತೆಯ ಮೂರನೆ ಸಂಪುಟದಲ್ಲಿ ಆರ್. ನರಸಿಂಹಾಚಾರ್ಯರು ತಾವು

ಹಿಂದೆ ನಿರ್ಣಯಿಸಿದ್ದ ಕಾಲ ತಪ್ಪೆಂದು ಹೇಳಿ, ಕೋಟೀಶ್ವರನ ಕಾಲ ಕ್ರಿಸ್ತಶಕ ೧೫೬೦ ಎಂದು ಹೇಳಿದ್ದಾರೆ (ಕ. ಚ. III, ಮುನ್ನುಡಿ ಪು. ೯೯). ಹಾಡುವಳ್ಳಿಯ ರಾಜಮನೆತನದ ಬಗ್ಗೆ ಈಗ ಅನೇಕ ಶಾಸನಗಳು ಉಪಲಬ್ಧವಾಗಿದ್ದು, ಅವುಗಳ ಆಧಾರದಿಂದ ಹಾಡುವಳ್ಳಿ ರಾಜರ ವಂಶವೃಕ್ಷ ಸಿದ್ಧವಾಗಿದೆ. ಅದರಂತೆ ಹಾಡುವಳ್ಳಿಯ ದೈವಭೂಪನ ಮಗನಾದ ಸಂಗಮ ಅಥವಾ ಸಂಗಿರಾಯನ ಆಳ್ವಿಕೆಯ ಕಾಲವು ಕ್ರಿಸ್ತಶಕ ೧೪೦೮ರಿಂದ ೧೪೪೯ ಎಂದಾಗುತ್ತದೆ. [ಆಧಾರ ; ಕರ್ನಾಟಕ್ ಇನ್ಸ್‌ಕ್ರಿಪ್ಸನ್ಸ್ I. ಪು. ೯೧. ೩೯ ಆಫ್ ೧೯೩೯-೪೦ ಹಾಗೂ ೩೮, ೫೧, ೫೨ ಮತ್ತು ೫೦ ಆಫ್ ೧೯೩೯-೪೦.]

ಇವುಗಳ ಆಧಾರದಿಂದ ಆರ್. ನರಸಿಂಹಾಚಾರ್ ಅವರು ೧೫೦೦ ಅಥವಾ ೧೫೬೦ ಎಂದು ನಿರ್ಣಯಿಸಿರುವ ಕವಿಯ ಕಾಲವನ್ನು ಸಂಗಮಭೂಪನ ಆಳ್ವಿಕೆಗೆ ಸರಿಹೊಂದಿಸುವುದಾದಲ್ಲಿ ಅದು ಕ್ರಿಸ್ತಶಕ ೧೪೪೦ಕ್ಕೆ ಸರಿಹೋಗಬೇಕು.

ಕೋಟೀಶ್ವರನು ತಾನು ಗ್ರಂಥ ರಚಿಸಿದ್ದ ಸಂವತ್ಸರವನ್ನು ತಿಳಿಯಪಡಿಸಿದ್ದರ ಆಧಾರದಿಂದ ಆರ್. ನರಸಿಂಹಾಚಾರ್ ಅವರು ಅವನ ಕಾಲವನ್ನು ೧೫೦೦ ಅಥವಾ ೧೫೬೦ ಎಂದು ಹೇಳಿದ್ದರೂ ಆ ಸಂವತ್ಸರವನ್ನವರು ಹೆಸರಿಸಿಲ್ಲ. ಆದರೆ ೧೫೦೦ ಮತ್ತು ೧೫೬೦ಕ್ಕೆ ಸರಿಹೋಗುವ ಸಂವತ್ಸರವು ರೌದ್ರಿ ಇಲ್ಲವೆ ದುರ್ಮುಖಿ ಇರಬಹುದು. ನಮಗೆ ಆ ಸಂವತ್ಸರದ ಹೆಸರು ತಿಳಿದಿಲ್ಲವಾದರೂ, ಅರುವತ್ತು ವರ್ಷಗಳ ಆವರ್ತಕ್ಕೆ ಹೊಂದಿಸಿ ಸಂಗಮಭೂಪನ ಕಾಲದಲ್ಲಿ ಕೋಟೀಶ್ವರನು ತನ್ನ ಗ್ರಂಥ ರಚಿಸಿದ ವರ್ಷ ಕ್ರಿಸ್ತಶಕ ೧೪೪೦ ಎಂದು ಖಚಿತವಾಗಿ ಹೇಳಬಹುದು.

ಸಾಂಗತ್ಯದಲ್ಲಿ "ಧನ್ಯಕುಮಾರ ಚರಿತ್ರೆ" ಎಂಬ ಕಾವ್ಯವನ್ನು ಬರೆದ ಆದಿಯಪ್ಪನು ಗೆರಸೊಪ್ಪೆ ರಾಜರ ಆಸ್ಥಾನದಲ್ಲಿದ್ದ ಕವಿ. ಗೆರಸೊಪ್ಪೆಯ ರಾಜ ಭೈರವರಾಯನ ಕಾಲದಲ್ಲಿ, ರಾಜನ ಗುರು ವೀರಸೇನರ ಆಜ್ಞೆಯಂತೆ ತಾನು ಧನ್ಯಕುಮಾರ ಚರಿತೆಯನ್ನು ಬರೆದುದಾಗಿ ಕವಿ ಹೇಳಿದ್ದಾನೆ. ಆರ್. ನರಸಿಂಹಾಚಾರ್ ಅವರು ಕವಿಯ ಕಾಲವನ್ನು ಕ್ರಿಸ್ತಶಕ ೧೬೫೦ ಎಂದು ಹೇಳಿದ್ದಾರೆ. [ಕ. ಚ. II. ಪು. ೪೧೪-೧೫].

ಗೆರಸೊಪ್ಪೆಯ ರಾಜರ ವಂಶವೃಕ್ಷವನ್ನೂ ಶಾಸನಗಳ ಆಧಾರದಿಂದ ಈಗ ಸಿದ್ಧಪಡಿಸಲಾಗಿದೆ. ಇದರಂತೆ ಗೆರಸೊಪ್ಪೆಯಲ್ಲಿ ಇಬ್ಬರು ಭೈರವರಾಯರು ಆಳಿದ್ದರು. ಇವರಿಬ್ಬರೂ ಸಹೋದರರಾಗಿದ್ದು ಒಬ್ಬರ ನಂತರ ಒಬ್ಬರು ಆಳಿದರು. ಇವರಲ್ಲಿ ಮೊದಲನೆಯವನ ಕಾಲ ಕ್ರಿ. ಶ. ೧೪೩೮ರಿಂದ ೧೪೬೨. [ಕ. ಇ. I. ಪು. ೧೩೬ ; ೫೬ ಆಫ್ ೧೯೩೭-೪೦ ; ಮತ್ತು ಮೂಡಬಿದರೆಯ ೧೪೬೨ರ ಶಾಸನ—ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ VII, ೨೦೩]. ಸಹೋದರನಾದ ಇಮ್ಮಡಿ ಭೈರವರಾಯನ ಕಾಲ ೧೪೬೨ರಿಂದ ೧೪೭೧. [ಕ.ಇ. I. ೯೦ ಮತ್ತು ೬೧ ಆಫ್ ೧೯೩೯-೪೦].

ಕವಿ ಆದಿಯಪ್ಪನು ಈ ಇಬ್ಬರ ಪೈಕಿ ಒಬ್ಬರ ಆಸ್ಥಾನದಲ್ಲಿದ್ದ. ಆದರೆ ಇಮ್ಮಡಿ ಭೈರವರಾಯನ ಬಗ್ಗೆ ಇರುವ ಎಲ್ಲ ಉಲ್ಲೇಖಗಳಲ್ಲಿ 'ಇಮ್ಮಡಿ' ಎಂಬ ವಿಶೇಷಣವು ಸದಾ ಸೇರಿಕೊಂಡಿದೆ. ಆದಿಯಪ್ಪನು ತನ್ನ ಸಮಕಾಲೀನ ರಾಜನನ್ನು ಕೇವಲ ಭೈರವರಾಯ ಎಂದಿದ್ದಾನೆ. ಹೀಗಾಗಿ ಆದಿಯಪ್ಪನು ಮೊದಲ ಭೈರವರಾಯನ ಕಾಲದಲ್ಲೇ ಇದ್ದನೆಂದು ಭಾವಿಸಬೇಕು. ಆಗ ಕವಿಯ ಕಾಲವು ೧೪೩೮ರಿಂದ ೬೨, ಎಂದರೆ ೧೫ನೆ ಶತಮಾನದ ಮಧ್ಯಭಾಗ ಎಂದು ಊಹಿಸಬಹುದು.

ಸಾಳ್ವನು ಗೆರಸೊಪ್ಪೆಯ ರಾಜರ ಆಶ್ರಯದಲ್ಲಿದ್ದ ಇನ್ನೊಬ್ಬ ಕನ್ನಡ ಕವಿ. ಈತನು 'ಸಾಳ್ವ ಭಾರತ'ವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿರುವನಲ್ಲದೆ ಧ್ವನಿಶಾಸ್ತ್ರದ ಬಗ್ಗೆ "ಶಾರದಾ ವಿಲಾಸ", ಆಯುರ್ವೇದದ ಬಗ್ಗೆ "ವೈದ್ಯ ಸಾಂಗತ್ಯ" ಮತ್ತು ನವರಸಗಳ ಬಗ್ಗೆ "ರಸರತ್ನಾಕರ" ಎಂಬ ಕೃತಿಗಳನ್ನು ರಚಿಸಿದ ಘನಪಂಡಿತ.

ತಾನು ಗೆರಸೊಪ್ಪೆಯ ರಾಜ ಸಾಳ್ವಮಲ್ಲ ಅಥವಾ ಮಲ್ಲಿರಾಯನ ಆಸ್ಥಾನದಲ್ಲಿ ಇದ್ದುದಾಗಿ ಕವಿಯು ತನ್ನ ಭಾರತದಲ್ಲಿ ಹೇಳಿಕೊಂಡಿರುವನಲ್ಲದೆ, ರಾಜನ ಉತ್ತರಾಧಿಕಾರಿ ದೇವರಾಯನನ್ನೂ ತುಂಬ ಹೊಗಳಿದ್ದಾನೆ.

ಆರ್. ನರಸಿಂಹಾಚಾರ್ ಅವರು ಸಾಳ್ವನು ೧೫೫೦ರಲ್ಲಿದ್ದನೆಂದು ಹೇಳಿದ್ದಾರೆ. [ಕ. ಚ. II. ೨೪೩-೪೪]. ಆದರೆ ಮಲ್ಲಿರಾಯನ ಕಾಲವು ೧೪೬೨ರಿಂದ ೧೪೮೦ ಎಂದು ಶಾಸನಗಳಿಂದ ಗೊತ್ತಾಗಿದೆ. [ಗೆರಸೊಪ್ಪೆಯ ಸಿಂಹಾಸನಕ್ಕಾಗಿ ೧೪೬೨ರಲ್ಲಿ ಇಮ್ಮಡಿ ಭೈರವ ಮತ್ತು ಮಲ್ಲಿರಾಯರ ನಡುವೆ ಪೈಪೋಟಿ ನಡೆದು ಮಲ್ಲಿರಾಯನು ಹೊನ್ನಾವರದಲ್ಲಿ ೧೪೬೨ರಿಂದ ೧೪೭೧ರ ವರೆಗೂ ಅನಂತರ ಗೆರಸೊಪ್ಪೆಯಲ್ಲೂ ಆಳಿದನು. [ಸೌ. ಇ. ಇ. III. ೨೦೭ ; ಕ.ಇ. I. ಪು. ೪೧೭-೧೮ ೬೦, ೬೧, ೬೨ ಮತ್ತು ೬೩ ಆಫ್ ೧೯೩೯-೪೦]. ಗೆರಸೊಪ್ಪೆಗೆ ಮಲ್ಲಿರಾಯನು ೧೪೭೧ರ ನಂತರ ಬಂದುದರಿಂದಲೂ ಅವನ ನಂತರ ೧೪೮೦ರಿಂದ ದೇವರಾಯನು ಆಳಿದ್ದರಿಂದಲೂ ಸಾಳ್ವನು ೧೪೭೧ರ ನಂತರ ಕಾವ್ಯ ರಚಿಸಿರಬೇಕು. ಹೀಗಾಗಿ ಸಾಳ್ವ ಕವಿಯ

ಕಾಲವು ೧೫೫೦ ಆಗಿರದೆ, ೧೫ನೆ ಶತಕದ ಕೊನೆಯ ಭಾಗವೆಂದು ಹೇಳಬಹುದು.

೧೪೮೦ರ ನಂತರ ಗೆರಸೊಪ್ಪೆಯಲ್ಲಿ ಆಳಿದ ದೇವರಾಯ ಹಾಗೂ ಅವನ ಅನಂತರ ಆಳಿದ ಅವನ ಸೋದರಳಿಯ ಕೃಷ್ಣದೇವರಾಯನ ಕಾಲದಲ್ಲಿದ್ದ ಇನ್ನೊಬ್ಬ ಕನ್ನಡ ಕವಿ ಹಾಗೂ ಹಿರಿಯ ಜೈನಪಂಡಿತನೆಂದರೆ "ಕಾವ್ಯಸಾರ"ದ ಸಂಗ್ರಾಹಕ ಅಭಿನವ ವಾದಿವಿದ್ಯಾನಂದ. ವಿಜಯ ಸಂವತ್ಸರದಲ್ಲಿ ತಾನು ಗೆರಸೊಪ್ಪೆಯ ಕೃಷ್ಣದೇವನ ಆಸ್ಥಾನದಲ್ಲಿ ಈ ಕೃತಿಯನ್ನು ಪೂರೈಸಿದುದಾಗಿ ಆತ "ಕಾವ್ಯಸಾರ"ದಲ್ಲಿ ಹೇಳಿದ್ದರಿಂದ ಆತನ ಕಾಲ ಕ್ರಿ. ಶ. ೧೫೩೩ ಎಂದು ಆರ್. ನರಸಿಂಹಾಚಾರ್ ಹೇಳಿದ್ದಾರೆ. [ಕ. ಚ. II. ೨೨೭-೨೮]. ಈ ಕಾಲ ಸರಿಯಾದುದು. ಏಕೆಂದರೆ ಗೆರಸೊಪ್ಪೆಯ ಕೃಷ್ಣದೇವ ಆಳಿದುದು ಕ್ರಿ. ಶ. ೧೫೨೫ರಿಂದ ೧೫೪೮ರ ವರೆಗೆ. [ಆಧಾರ: ಕ. ಇ. ೭೧, ೭೨ ಆಫ್ ೧೯೩೯-೪೦; ಎನ್ಯುವಲ್ ರಿಪೋರ್ಟ್ ಆಫ್ ಕನ್ನಡ ರಿಸರ್ಚ್ (೧೯೩೯-೪೦) ಪು. ೪೬].

ವಾದಿ ವಿದ್ಯಾನಂದನ ಬಗ್ಗೆ ವಿವರ ಒದಗಿಸುವ ಒಂದು ತಾರೀಕಿಲ್ಲದ ಶಾಸನವೂ ಇದೆ. ಶಿವಮೊಗ್ಗ ಜಿಲ್ಲೆಯ ನಗರದಲ್ಲಿ ದೊರೆತ ಈ ಶಾಸನ [ಎಪಿಗ್ರಾಫಿಯಾ ಕರ್ನಾಟಕಾ VIII, Nr. ೪೬]ವನ್ನು ರಚಿಸಿದ ಕವಿಯ ಹೆಸರು ವರ್ಧಮಾನ. ತನ್ನ ಗುರುವನ್ನು ಕಾರ್ಕಳದ ದೊರೆ ಪಾಂಡ್ಯನೃಪನು ಪೂಜಿಸುತ್ತಿರುವುದಾಗಿ ವರ್ಧಮಾನನು ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಹೀಗಾಗಿ ಈ ಕವಿ ಕಾರ್ಕಳದವನಿರಬೇಕೆಂದು ಊಹಿಸಲು ಅವಕಾಶವಿದೆ.

ಕಾರ್ಕಳದಲ್ಲಿನ ಪಾಂಡ್ಯನೃಪನ (ಇವನು ಮೊದಲು ಕಳಸದಲ್ಲಿ ಆಳಿದ ಸಾಂತಾರರ ವಂಶದವನು) ಕಾಲದಲ್ಲಿ 'ನಾಗಕುಮಾರರ ಚರಿತೆ'ಯನ್ನು ರಚಿಸಿದ ಬಾಹುಬಲಿ ಎಂಬ ಕವಿಗೆ ವರ್ಧಮಾನ ಎಂಬ ಮಗನಿದ್ದನೆಂದೂ ತಂದೆಯ ಅಪೂರ್ಣವಾದ ಕೃತಿಯನ್ನು ಈತನು ಮುಗಿಸಿದನೆಂದೂ 'ಕವಿಚರಿತೆ'ಯಲ್ಲಿ ಹೇಳಿದೆ. [ಕ. ಚ. II. ಪು. ೨೮೯].

ವಾದಿವಿದ್ಯಾನಂದನ ಕಾಲ, ಹಾಗೂ ಕಾರ್ಕಳದಲ್ಲಿ ಆಗ ಆಳುತ್ತಿದ್ದ ಪಾಂಡ್ಯನೃಪನ ಕಾಲ (ವೀರಪಾಂಡ್ಯ III ೧೫೩೧-೬೫)ಗಳನ್ನು ಗಮನಿಸಿದರೆ, ಈ ಶಾಸನದ ರಚಯಿತನು 'ನಾಗಕುಮಾರ ಚರಿತೆ'ಯನ್ನು ಪೂರ್ಣಗೊಳಿಸಿದ ವರ್ಧಮಾನನೇ ಇರಬೇಕೆಂದು ಭಾವಿಸಲು ಅವಕಾಶವಿದೆ.

ಸೂರ್ಯೋದಯ

◆

ಮೂಡಣದ ಬಾನಿನೊಳು ಹೊಂಗದಿರ ಸೂಸುತ್ತೆ
ಬಂದನದೊ! ನೇಸರನು ಮೇಲೇರಿ
ಜಗದ ತಮವನು ಕಳೆದು ಹೊಸ ಬೆಳಕು ನೀಡುತ್ತೆ
ಬಾಲ ಭಾಸ್ಕರ ತಾನು ಮೋದಬೀರಿ ೧

ಹಕ್ಕಿ ಹರುಷದಿ ಹಾಡಿ ಸ್ವಾಗತವ ಬಯಸುತಿವೆ
ತರುರಾಜಿ ಅಲರಮಳೆ ಸುರಿಸುತಿಹುದು
ಹೊಳೆ-ಹೊಳೆವಗಿರಿ-ಶಿಖರ ಛತ್ರಚಾಮರ ಪಿಡಿದು
ಎಳೆನೇಸರನ ಸೇವೆ ಮಾಡುತಿಹುದು ೨

ಇನಿಯನಾ ದರುಶನಕೆ ನಸುನಾಚಿ ಚೆಮ್ಮೊಗದಿ
ಮೂಡಣದ ನವಯುವತಿ ಶೋಭಿಸುವಳು
ಅರುಣ ವಸನವ ಧರಿಸಿ ಹೊಸ ಹರುಷವನು ತಾಳಿ
ಹೊಂದಳಿಗೆಯಾರತಿಯ ಬೆಳಗುತಿಹಳು ೩

ದಿನ-ದಿನಕು ಹೊಸ ಹುರುಪು ದಿನದಿನಕು ಹೊಸ ಕಳೆಯು
ಎಂದಿನಿಂದಲು ಅವನೆ ಬಂದೆ ಬರುವ
ಚಣ-ಚಣಕು ಬೆಳೆಯುತಿಹ ಬಾಂದಳವನೇರುತಿಹ
ಮನೆ-ಮನೆಗು ತೇಜವನು ಬೀರುತಿರುವ ೪

ನಿಶೆಯಳಿದು ಬೆಳಗಾಯ್ತು ಎಳೆನೇಸರುದಯಿಸಿದ
ಎಲ್ಲೆಲ್ಲಿಯೂ ಬೆಳಕು ತುಂಬಿರುವದು
ಆದರೇಂ? ಮಾನವನ ಹೃದಯಾಂತರಾಳದಲಿ
ಕಾಳ್ಗತ್ತಲೆಯು ತುಂಬಿ ನಿಂತಿರುವದು ೫

ಅಳಿಯಾಸೆ, ಮರೆಮೋಸ ಜಾತೀಯತೆಯ ವಿಷವು
ಮನಸಿನಾ ಮಾಲಿನ್ಯವದು ತೊಲಗಲಿ
ನವ ಭಾನುವಿನ ಹೊಚ್ಚ ಹೊಸತಾದ ಹೊಂಗಿರಣ
ಮನುಜನಾ ಹೃದಯದಲಿ ಇಳಿದು ಬರಲಿ ೬

◆

ಪ್ರ. ವಿ. ಕರ್ಜಗಿ

ವಿಷಾದಯೋಗ

(ಮಾರ್ಚಿ ಸಂಚಿಕೆಯಿಂದ ಮುಂದುವರಿದುದು)

ಮ. ಸು. ಕೃಷ್ಣಮೂರ್ತಿ

ಗೀತೆಯಲ್ಲಿ ಸ್ಥಿತಪ್ರಜ್ಞನನ್ನು ವರ್ಣಿಸುತ್ತ ಅವನು ಸುಖ ಬಂದಾಗ ಹಿಗ್ಗದೆ ದುಃಖ ಬಂದಾಗ ಕುಗ್ಗದೆ ಇರುವನು ಎಂದು ಹೇಳಿದೆ. ಆದರೆ ಸುಖದುಃಖಗಳ ಮನೋವಿಕಾರಗಳಿಲ್ಲದವನು ಮನುಷ್ಯನಲ್ಲ, ಕಲ್ಲುಬೊಂಬೆ. ದುಃಖ ಬಂದಾಗ ಅಳದೆ ಸುಖ ಬಂದಾಗ ನಗದೆ ಇರುವ ಮನುಷ್ಯ ಮನುಷ್ಯನಲ್ಲ, ಮತ್ತೇನು ಬೇಕಾದರೂ ಆಗಬಹುದು. ಮನುಷ್ಯನ ಸಜೀವತೆ ಇರುವುದು ಅವನ ಮನೋವೇಗಗಳಲ್ಲಿ, ಭಾವೈಕ್ಯತೆಯಲ್ಲಿ. ಮನೋವೇಗಗಳಿಲ್ಲದೆ ಹೋದರೆ ನೆನಪು, ಊಹೆ, ಬುದ್ಧಿ ಮೊದಲಾದ ಶಕ್ತಿಗಳಿದ್ದೂ ಮನುಷ್ಯ ಜಡನಾಗುತ್ತಾನೆ. ಇಂಥ ಜಡತೆ ನನಗೆ ಬೇಡ. ಸುಖ ಬಂದಾಗ ನಾನು ಮಳೆಗಾಲದ ನದಿಯಂತೆ ತುಂಬಿ ಹರಿದು ಲೋಕವೆಲ್ಲವನ್ನು ತಣಿಸಬಯಸುತ್ತೇನೆ. ದುಃಖ ಬಂದಾಗ ಮೋಡವೆನಿಸಿ ಲೋಕದ ಮೇಲೆಲ್ಲ ಕವಿದು ಒರಗಿ ಕರಗಿ ಚಿರದಗ್ಧ ವಸುಧೆಯ ಮೇಲೆ ಸುಧೆಯ ಮಳೆ ಕರೆಯ ಬಯಸುತ್ತೇನೆ. ಸುಖ ದುಃಖಗಳಿಂದ ಅತೀತವಾದ ಸ್ಥಿತಪ್ರಜ್ಞತೆ ನನಗೆ ಬೇಡ. ಅದರಿಂದ ಬರುವ ಮೋಕ್ಷಕ್ಕೆ ದೂರದಿಂದಲೇ ನಮಸ್ಕಾರ. ಕಂಬನಿಯಿಲ್ಲದ ಸ್ವರ್ಗವೂ ನನಗೆ ಬೇಡ. ಅಮೃತವೂ ಬೇಡ. ನನಗೆ ಕಂಬನಿಯೇ ಅಮೃತ. ಪರರ ದುಃಖವನ್ನು ಕಂಡು ಮಂಜಿನ ಹಾಗೆ ಕರಗದ ದೇವ ಅವನ ದೇವತ್ವ ಯಾರಿಗೆ ಬೇಕು! ಈ ದೃಷ್ಟಿಯಲ್ಲಿ ಸ್ವರ್ಗ ನರಕಕ್ಕಿಂತ ಘೋರ. ಪಂಪನ ಆದಿಪುರಾಣದಲ್ಲಿ ಪುರುಪರಮೇಶ್ವರನ ಭವಾವಳಿಯಲ್ಲಿ ಒಂದು ಪ್ರಸಂಗ ಬರುತ್ತದೆ. ಪುರುದೇವ ಲಲಿತಾಂಗ ದೇವನಾಗಿದ್ದಾಗ ಅವನು ತಾನು ಮಾಡಿದ ಪುಣ್ಯದ ಫಲವಾಗಿ ಸ್ವರ್ಗವನ್ನೈದುತ್ತಾನೆ. ಆದರೆ ಜೈನರ ಸ್ವರ್ಗದಲ್ಲಿ ದೇವತೆಗಳೂ ಅಮರರಲ್ಲ. ಅವನ ಆಯುಷ್ಯ ಮುಗಿಯುತ್ತ ಬರುತ್ತದೆ. ಇನ್ನೇನು ಆರು ತಿಂಗಳಲ್ಲಿ ಅವನ ಸಾವು ಎನ್ನುವಾಗ ಅವನ ಕೊರಳ ಮಾಲೆ ಒಣಗುತ್ತ ಬರುತ್ತದೆ. ಆಗ ಯಮಪಾಶದಿಂದ ನನ್ನನ್ನು ಕಾಪಾಡಿ ಎಂದು ಅವನು ದೇವಲೋಕದವರೆಲ್ಲರನ್ನೂ ಬೇಡುತ್ತಾನೆ. ಅವನ ಮೊರೆಯನ್ನು ಕೇಳಬೇಕು :

> ಸುರತರು ನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ
> ತರ ಸುರತಾಲಯಂಗಳಿರ, ಚಾರುವಿಲೋಲಕಟಾಕ್ಷಪಾತ ಸೌಂ
> ದರಪರಿವಾರ ದೇವಿಯರಿರಾ, ಕಡುಕಯ್ದು ಕೃತಾಂತನಿಂತು ನಿ
> ರ್ದಯನೆಳೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ

ಅವನ ಮೊರೆಯನ್ನು ಕೇಳಿಯೂ ಮನಕರಗದ ಕಂಬನಿ ಮಿಡಿಯದ ಆ ದೇವತೆಗಳ ಬಾಳು ವ್ಯರ್ಥ! ದುಃಖಿಗೆ ದುಃಖಿ ನೆರಂ, ಸುಖಿಯಲ್ಲ.

ದುಃಖವಿಲ್ಲದ ಸ್ವರ್ಗ ಸೌಖ್ಯವನ್ನು ಹಳಿಯುತ್ತಾ ಆಂಗ್ಲ ಕವಿ ಬ್ರೌನಿಂಗ್ ಒಂದು ಕವಿತೆ ಬರೆದಿದ್ದಾನೆ. ಅದರಲ್ಲಿ ಒಬ್ಬ ಸ್ವರ್ಗದಿಂದ ಹಿಂತಿರುಗಿ ಬಂದು ತನ್ನ ಗೆಳೆಯರೊಡನೆ ಹೇಳುತ್ತಾನೆ. ಈ ಭೂಲೋಕದ ಬಾಳು ಆ ಸ್ವರ್ಗದ ಬಾಳಿಗಿಂತ ಸಾವಿರ ಪಾಲು ಮೇಲು. ಸ್ವರ್ಗದಲ್ಲೇನೋ ಯಾವುದಕ್ಕೂ ಕಡಮೆಯಿಲ್ಲ. ಅದಲು ಬದಲಿಲ್ಲ, ಅಲ್ಲಿ ಎಲ್ಲರೂ ಸುಖಿ. ಯಾರೂ ದುಃಖಿಗಳೇ ಇಲ್ಲ. ಎಲ್ಲವೂ ಪರಿಪೂರ್ಣ. ನಾನು ದಿಗ್ಭ್ರಮೆಗೊಂಡೆ. ನನಗೆ ಬೇಕಾದದ್ದು ವೈವಿಧ್ಯ, ಭಿನ್ನತೆ. ಆದರೆ ಇಲ್ಲೇನೂ ಇಲ್ಲ, ಇನ್ನುಮೇಲೆ ನನಗೆ ಸ್ವರ್ಗವಲ್ಲ, ಭೂಮಿಯ ಮೇಲೆ ನಿವಾಸ.

ಒಬ್ಬ ಶತಮಾನಗಟ್ಟಳೆ ಸ್ವರ್ಗದಲ್ಲಿದ್ದ. ಆನಂದವನ್ನು ಚೆನ್ನಾಗಿ ಉಪಭೋಗಿಸಿದ. ಆದರೆ ಪುಣ್ಯ ಕ್ಷೀಣವಾದ ಮೇಲೆ ಮರ್ತ್ಯ ಲೋಕಕ್ಕೆ ಮರಳಲೇಬೇಕು. ಆದ್ದರಿಂದ ಅವನು ಅಲ್ಲಿಂದ ಕಾಲ್ತೆಗೆಯಬೇಕಾಯಿತು. ಆದರೆ ಸ್ವರ್ಗದಲ್ಲಿ ಅವನ ವಿಯೋಗಕ್ಕೆ ಕಂಬನಿಗರೆಯುವರು ಯಾರೂ ಇಲ್ಲ. ಅಪ್ಸರೆಯೇನೋ ಪ್ರೀತಿಸಬಲ್ಲಳು. ಆದರೆ ಅವಳಿಗೆ ಪ್ರೇಮದ ವೇದನೆ ತಿಳಿಯದು. ವಿರಹದಲ್ಲಿರುವ ಮಿಲನಾಕಾಂಕ್ಷೆಯ ಅರಿವು ಇಲ್ಲ. ವಿಚ್ಛೇದದ ದುಃಖವಂತೂ ಅವರಿಗೆ ಇಲ್ಲವೇ ಇಲ್ಲ. ಇದರಿಂದ ಬೇಸತ್ತು ಅವನು ಹೇಳುತ್ತಾನೆ : "ಅಯ್ಯಾ ವಜ್ರ ಹೃದಯದ ದೇವತೆಗಳಿರಾ, ಈ ಸ್ವರ್ಗ ನಿಮಗೇ ಇರಲಿ, ಇಗೋ ನಮಸ್ಕಾರ."

ಇಂಥದೇ ಮಾತುಗಳು ಕವೀಂದ್ರ ರವೀಂದ್ರನಾಥರ "ಸ್ವರ್ಗದಿಂದ ಬೀಳ್ಕೊಡುಗೆ" ಎಂಬ ಕವಿತೆಯಲ್ಲಿ ಬರುತ್ತವೆ : "ಎಲೆ ದೇವಗಣಗಳೇ, ಎಲೆ ದೇವಿಯರೇ, ಈ ದೇವಪುರದಲ್ಲಿ ನಾನೂ ದೇವತೆಗಳಂತೆ ಕೋಟ್ಯಂತರ ವರ್ಷದಿಂದ ಇದ್ದೇನೆ. ಈ ಅಂತಿಮ ವಿಚ್ಛೇದ ಮುಹೂರ್ತದಲ್ಲಿ ಸ್ವರ್ಗದ ನಿವಾಸಿಗಳ ವಿಮೋಚನ ಪ್ರಾಂತದಲ್ಲಿ ಕೊಂಚವಾದರೂ

ಅಶ್ರುರೇಖೆ ಕಂಡೀತು ಎಂದು ಆಶಿಸಿದ್ದೆ. ಎಲೆ ಸುರ ಲೋಕವೇ ಆನಂದವಾಗಿರು. ನಗುನಗುತ್ತಿರು. ಎಲೆ ದೇವ ಗಣಗಳೇ, ಪೀಯೂಷವನ್ನು ಪಾನ ಮಾಡುತ್ತಿರಿ. ಈ ಊರು ಸೌಖ್ಯದ ಆಧಾರ. ಮರ್ತ್ಯರಾದ ನಾವು ಇಲ್ಲಿ ಪರದೇಶಿಗಳು. ನನ್ನ ಪ್ರಿಯ ಮರ್ತ್ಯಭೂಮಿ ಸ್ವರ್ಗವೇನೂ ಅಲ್ಲ. ಅದು ಅಮೂಲ್ಯ ಪವಿತ್ರ ಮಾತೃಭೂಮಿ. ಎರಡು ದಿನಗಳ ಕಾಲ ಇಲ್ಲವೆ ಎರಡು ದಂಡಕಾಲ ನಾನು ತಾಯಿಯನ್ನು ಬಿಟ್ಟು ಬಂದರೆ ಆಕೆಯ ನಯನಗಳಿಂದ ಕಂಬನಿಯ ಕೋಡಿ ಹರಿಯುತ್ತಿರುತ್ತದೆ. ಎಲ್ಲರನ್ನೂ ಪ್ರೇಮದಿಂದ ಅಪ್ಪಿ ಮುದ್ದಿಸಬಯಸುತ್ತಾಳೆ ಜನನಿ. ಆಕೆ ನಮ್ಮ ಧೂಳಿಧೂಸರಿತ ಮಲಿನ ಅಂಗವನ್ನು ಪ್ರೇಮದಿಂದ ಆಲಿಂಗಿಸಿದಾಗ ಎಲೆ ದೇವಗಣಗಳೇ, ಆಗ ನಿಮ್ಮ ಸ್ವರ್ಗದಲ್ಲಿ ಅಮೃತಧಾರೆ ಹರಿಯಲಿ. ನಮ್ಮ ಮರ್ತ್ಯದಲ್ಲಿ ಸುಖ ದುಃಖ ಮಿಶ್ರಿತ ಪ್ರೇಮಧಾರೆ ನಿರಂತರ ಹರಿಯುತ್ತಿರಲಿ. ಅದರ ಅಶ್ರುಧಾರೆ ಸ್ವರ್ಗದ ಎಲ್ಲ ಭಾಗಗಳನ್ನೂ ತೋಯಿಸಿ ಎಂದೆಂದಿಗೂ ಶ್ಯಾಮಲಗೊಳಿಸಲಿ. ನನ್ನನ್ನು ಕಂಡು ಅದು ಯಾರೋ ಚಿರಪರಿಚಿತ ಮನೆಗೆ ಬಂದು ಪ್ರೇಮದಿಂದ ಕರೆದು ಮೈದಡವಿ ಕೂರಿಸಿಕೊಳ್ಳುವಳು. ಅನಂತರ ಆಕೆ ಹಗಲಿರುಳೂ ತಲೆದಸಿಯಲ್ಲಿ ನಿಂತು ಜಾಗರಣೆ ಮಾಡುತ್ತಿರುತ್ತಾಳೆ. ಈ ಕಳವಳ, ಈ ವ್ಯಾಕುಲತೆ ಈ ಆಶಂಕೆ ಸ್ವರ್ಗದಲ್ಲಿ ಎಲ್ಲಿ ಕಂಡುಬಂದೀತು?

ಇಂಥದೇ ಅರ್ಥ ಬರುವ ಮಾತುಗಳನ್ನು ನಂಜುಂಡಕವಿ 'ಕುಮಾರ ಸಾಂಗತ್ಯ'ದಲ್ಲಿ ಹೇಳಿದ್ದಾನೆ. ಮಾತಂಗಿಯ ಮಂದಿಗಳು ಕುಮಾರ ರಾಮನಿಗೆ ಸ್ವರ್ಗದ ಸೌಖ್ಯ ಎಂಥ ಭ್ರಾಂತಿ ಎಂಬುದನ್ನು ಹೀಗೆ ಹೇಳುತ್ತಾನೆ:

ಮುಳಿಸಿಲ್ಲ ಮುದ್ದಾಟವಿಲ್ಲ ಮೋಹನವಿಲ್ಲ
ಗಳರವವಿಲ್ಲೊಲ್ಮೆಯಿಲ್ಲ
ನೆಳಲು ನೆಳಲು ಸೋಂಕಿದಂತೆ ದೇವಸ್ತ್ರೀಯ
ರೊಳಗೆ ದೇವರ್ಕಳ ಕೂಟ ॥

ಕೋಪವಿಲ್ಲದ, ಮೋಹವಿಲ್ಲದ ಕಂಬನಿಯಿಲ್ಲದ ಸ್ವರ್ಗ ನಿಜಕ್ಕೂ ಹೇಯ. ನನಗೆ ಕಂಬನಿಯೇ ಅಮೃತ. ದೇವರು ಆನಂದಮಯ ಎನ್ನುತ್ತಾರೆ. ಆದರೆ ನನಗೆ ಆತ ದುಃಖಮಯ ಎನ್ನಿಸುತ್ತದೆ. ನಾನು ದೇವರನ್ನು ದಿವ್ಯ ಮಂದಿರದಲ್ಲಿ, ಪುಣ್ಯಕ್ಷೇತ್ರಗಳಲ್ಲಿ ಕಾಣಲಾರೆ. ನನ್ನ ದೇವರು ಇರುವುದು ದೀನರ ಭಗ್ನ ಕುಟೀರಗಳಲ್ಲಿ, ದಲಿತರ ನೋವಿನಲ್ಲಿ, ರೋಗಿಗಳ ನರಳಿಕೆಯಲ್ಲಿ, ಅನಾಥರ ನಿಟ್ಟುಸಿರಿನಲ್ಲಿ. ದುಃಖ ಪ್ರಸರಣ ಶೀಲ. ಅದು ಒಳಗಿರಬಯಸುವುದಿಲ್ಲ ಹೊರಕ್ಕೆ ಚಿಮ್ಮಲೆತ್ನಿಸುತ್ತದೆ. ಆದರೆ ದುಃಖವನ್ನು ಒಬ್ಬರೇ ಅನುಭವಿಸಬೇಕು. ಸುಖವನ್ನು ಹಂಚಿ ಅನುಭವಿಸಬೇಕು ಎಂದು ಬಲ್ಲವರು ಹೇಳುತ್ತಾರೆ. ಆದರೆ ಲೋಕ ರೂಢಿ ಇದಕ್ಕೆ ವಿರೋಧ. ಸುಖ ತನ್ನೊಬ್ಬನಿಗೆ ಮಾತ್ರ ಇರಲಿ ಎನ್ನುವ ಜನರೇ ಹೆಚ್ಚು. ಒಬ್ಬ ಶೆಟ್ಟಿ ಮನೆಯಲ್ಲಿ ತೊಲೆಯಮೇಲೆ ದುಡ್ಡಿಟ್ಟಿದ್ದನಂತೆ. ಅದನ್ನು ತೆಗೆದುಕೊಳ್ಳಲು ಕೈಹಾಕಿದಾಗ ಅವನ ಕೈಯನ್ನು ಚೇಳು ಕುಟುಕಿತು. ಹಣ ಇತರರಿಗೆ ಬೇಡ ನನಗೆ ಮಾತ್ರ ಇರಲಿ ಎಂದು. 'ತುಂಬ ಚೆನ್ನಾಗಿದೆ ನೀವೂ ಕೈ ಇಡಿ, ಎಂದು ತನ್ನ ಗೆಳೆಯರನ್ನೆಲ್ಲ ಕರೆದು ಅವರು ಕೈಯಿಟ್ಟು ಕುಟುಕಿಸಿಕೊಳ್ಳುವಂತೆ ಮಾಡಿದನಂತೆ. ಅವರೆಲ್ಲ ಸಮಾನ ಧರ್ಮಿಗಳು. ಒಬ್ಬರೂ ಗುಟ್ಟು ಬಿಟ್ಟುಕೊಡದೆ ಕೈ ಕುಟುಕಿಸಿಕೊಳ್ಳುತ್ತ, ಮುಂದಿನವರನ್ನು ಕರೆಯುತ್ತ ಹೋದರಂತೆ. ಇಂಥ ಹಿಂಸಾ ಚಕ್ರಭ್ರಮಣೆಯಲ್ಲೇ ಅವರಿಗೆ ಆನಂದ. ದುಃಖವೇ ಆನಂದವೆಂದೆನಲ್ಲವೆ? ಆದ್ದರಿಂದ ನನ್ನ ದುಃಖ ನನಗೇ ಇರಲಿ, ಇತರರಿಗೆ ಬೇಡ.

ದುಃಖ ಪ್ರಸರಣ ಶೀಲ ಮಾತ್ರವೇ ಅಲ್ಲ ಕಾರ್ಯಶೀಲವೂ ಹೌದು. ಆನಂದವುಂಟಾದಾಗ ಮನುಷ್ಯನ ಎಲ್ಲ ಚಟುವಟಿಕೆಗಳೂ ಸ್ತಬ್ಧಗೊಳ್ಳುತ್ತವೆ. ಏಕೆಂದರೆ ಆನಂದದಲ್ಲಿ ಉನ್ಮಾದದ ಅಂಶ ಹೆಚ್ಚು. ಅಲ್ಲಿ ಎಲ್ಲ ಇಂದ್ರಿಯಗಳೂ ಆ ಮತ್ತಿನಲ್ಲಿ ಮುಳುಗಿಹೋಗಿ ನಿಷ್ಕ್ರಿಯವಾಗುತ್ತವೆ. ಆದರೆ ದುಃಖ ಹಾಗಲ್ಲ. ನಮ್ಮ ಕ್ರತುಶಕ್ತಿಯನ್ನು ತೀವ್ರಗೊಳಿಸುತ್ತದೆ. ವಾಲ್ಮೀಕಿಯ ದುಃಖದಿಂದ ನಮ್ಮ ಆದಿಕಾವ್ಯ ರಾಮಾಯಣ ಹುಟ್ಟಿತು. ಅರ್ಜುನನ ವಿಷಾದದಿಂದ ಭಗವದ್ಗೀತೆ ಮೂಡಿತು. ಬುದ್ಧನ ವಿಷಾದದಿಂದ ಬೌದ್ಧಧರ್ಮ ಮೂಡಿತು. ಧ್ರುವ ತನ್ನ ವಿಷಾದದಿಂದ ಧ್ರುವಪದವಿಯನ್ನು ಪಡೆದನು.

ಜಗತ್ತಿನಲ್ಲಿ ಏನೆಲ್ಲ ಮಧುರವೋ, ದಿವ್ಯವೋ, ಭೂರವೋ ಅದರ ಹಿಂದೆ ನೋವಿದೆ. ಷೆಲ್ಲಿಯ ಪ್ರಕಾರ ನಮ್ಮ ಮಧುರತಮ ಗೀತೆ, ವಿಷಾದಗೀತೆ: "Out sweetest songs are those that tell of saddest thoughts."

ಲೋಕದಲ್ಲಿ ನಗೆಗಿಂತ ಕಂಬನಿ ಹೆಚ್ಚಾಗಿದೆಯೆಂದಲ್ಲವೆ? ಆದ್ದರಿಂದಲೇ ಲೋಕ ಉಳಿದಿರುವುದು. ಲೋಕದ ಎಲ್ಲ ಕಾಳಿಕೆಯನ್ನು ಕಳೆಯುವ ತೀರ್ಥ ಕಂಬನಿ. ಕಂಬನಿ ದೇವರು ಮಾನವನಿಗೆ ಕೊಟ್ಟ ಅಮೂಲ್ಯ ನಿಧಿ ಎಂದು ಧನ್ಯತೆಯ ಭಾವವನ್ನು ತಳೆಯೋಣ.

ವಿಮರ್ಶನರಂಗ

ಸಹೃದಯ ಸ್ಫುರಣ : ಲೇ : ಸಂಗಮನಾಥ ಜಿ. ಹಂಡಿ ; ಪ್ರಕಾಶಕರು : ಶೈಲಜಾ ಪ್ರಕಾಶನ, ಬಿಜಾಪುರ ; ಪುಟಗಳು : ೧೪೨ ಬೆಲೆ : ರೂ. ೩-೫೦.

ಬಿಜಾಪುರದ ಸಂಗನ ಬಸವೇಶ್ವರ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಸಂಗಮನಾಥ ಜಿ. ಹಂಡಿ ಅವರು ಬರೆದ ವಿಮರ್ಶೆಯ ಸಂಕಲನ ಸಹೃದಯ ಸ್ಫುರಣ. ಇಲ್ಲಿ ಕನ್ನಡ ದಿಗ್ಗಜಗಳಾದ ಪಂಪ, ಚಾಮುಂಡರಾಯ, ಬಸವಣ್ಣ, ಅಭಿನವಪಂಪ, ಜನ್ನ, ರಾಘವಾಂಕ, ಷಡಕ್ಷರ ದೇವ ಮೊದಲಾದ ಕವಿಗಳಿಂದ ಮಹತ್ವದ ವಿಷಯಗಳನ್ನು ಆರಿಸಿಕೊಂಡು ಬರೆದ ಲೇಖನಗಳನ್ನು ಕೂಡಿಸಿದ್ದಾರೆ. ಪಂಪಭಾರತದಲ್ಲಿ ಸೂರ್ಯೋದಯ, ಸೂರ್ಯಾಸ್ತಗಳು, ಕೇವಲ ವರ್ಣನಾಭಾಗವಾಗಿ ಕಾವ್ಯದಲ್ಲಿ ಮೂಡಿ ಬರದೆ ಕರ್ಣ, ಅರ್ಜುನ, ಭೀಮ, ದುರ್ಯೋಧನ ಮೊದಲಾದ ವ್ಯಕ್ತಿಗಳ ಜೀವನದ ಘಟನೆಗಳನ್ನು ಪ್ರತಿಮಿಸುವ ಅದ್ಭುತ ಸಂಕೇತಗಳಾಗಿ ಬಂದಿವೆ. ಪಂಪನಲ್ಲಿ ಬರುವ ಸುಮಾರು ೩೦ಕ್ಕೂ ಹೆಚ್ಚಿನ ಸೂರ್ಯೋದಯ, ಸೂರ್ಯಾಸ್ತಗಳ ಉಲ್ಲೇಖನವನ್ನು ಅವರು ಉಲ್ಲೇಖಿಸಿ ಸರ್ವಸಾಕ್ಷಿಯಾದ ಸೂರ್ಯನು ಹೇಗೆ ಪಾತ್ರಗಳ ಬಾಳಿನ ಏಳಿಗೆ ಅವನತಿಗಳನ್ನು ಸೂಚಿಸುತ್ತಾನೆ ಎಂಬುದನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ.

ಮಹಾಕವಿ ಕಾಳಿದಾಸನ ಶಾಕುಂತಲ ನಾಟಕದಲ್ಲಿ ನಿಸರ್ಗವು ಹಿನ್ನೆಲೆಯಾಗಿ ನಿಂತು ಯಾವ ಮಹತ್ವದ ಪಾತ್ರವನ್ನು ವಹಿಸುವುದೋ ಅಂತಹದೇ ಪಾತ್ರವನ್ನು ಪಂಪ ಭಾರತದಲ್ಲಿ ದಿನಕರನು ವಹಿಸುತ್ತಾನೆ. ದೂರ್ವಾಸರಿಂದ ಪಡೆದ ಮಂತ್ರದ ಮಹಿಮೆಯನ್ನು ಪರೀಕ್ಷಿಸಲು ಕುಂತಿಯು ಕೈಗೊಂಡ ಪ್ರಯತ್ನದ ಫಲವಾಗಿ ಕರ್ಣನ ಉದಯವಾಗುವುದು. ಆದರೆ ಕರ್ಣನು ಬಾಳಿನುದ್ದಕ್ಕೂ ವಿಧಿವಿಲಾಸಕ್ಕೆ ಬಲಿಯಾಗಿ ಬೆಂದು ಇಂಧನವಾಗುತ್ತಾನೆ. ಅಂಗರಾಜ್ಯಕ್ಕೆ ಅಭಿಷಕ್ತನಾದ ಕರ್ಣನನ್ನು ನೋಡಿ ಸೂರ್ಯನು "ಇದು ಐಶ್ವರ್ಯದ ಪಟ್ಟವಲ್ಲ, ನಿನ್ನ ವಿನಾಶದ ಚಟ್ಟ" ಎಂದು ಸಾರಿ ಹೇಳುವಂತೆ ಮುಳುಗುತ್ತಾನಂತೆ. ಅನಂತರ ಕುಂತಿಯು ಕರ್ಣನಿಂದ ವರವನ್ನು ಬೇಡಲು ಬಂದಾಗ ಸೂರ್ಯನು ಅವಳನ್ನು ಎಚ್ಚರಿಸಲೆಂಬಂತೆ ಮೂಡುತ್ತಾನೆ. ಅವನು ಸತ್ತಾಗ ದುಃಖದಿಂದ ಮುಖ ಮರೆಮಾಡಿಕೊಂಡು ಮುಳುಗಿದಂತೆ ಸೂರ್ಯನು ಚಿತ್ರಿತನಾಗಿದ್ದಾನೆ. ಅಂತೆಯೇ ಅರ್ಜುನನು ಸೈಂಧವನನ್ನು ಕೊಲ್ಲುವ ಪ್ರಸಂಗದಲ್ಲಿ ವರ್ಣಿತನಾಗಿರುವ ಸೂರ್ಯೋದಯ ಸೂರ್ಯಾಸ್ತಗಳು ಅರ್ಥಗರ್ಭಿತವಾಗಿದೆ ; ಕವಿತಾಗುಣಾರ್ಣವನಾದ ಪಂಪನು ನಿಸರ್ಗದ ಸಹಜ ವ್ಯಾಪಾರಗಳನ್ನು ಮನಂಬಗುವಂತೆ ವರ್ಣಿಸಿದ್ದಾನೆ.

ಕವಿಯೂ ಕಲಿಯೂ ಆಗಿದ್ದ ಸಂಯುಕ್ತ್ವ ಚೂಡಾಮಣಿ ಚಾಮುಂಡರಾಯ, ರಾಚಮಲ್ಲ, ರನ್ನ, ನಾಗವರ್ಮರು ಮಿತ್ರರಾಗಿ ಜಿನಸೇನಾಚಾರ್ಯರ ಶಿಷ್ಯರಾಗಿದ್ದರೆಂದು ಲೇಖಕರು ಊಹಿಸಿರುವುದು ಸ್ವಾರಸ್ಯವಾಗಿದೆ. ಅಭಿನವ ಪಂಪನ ರಾವಣನು ಅನೇಕ ಸದ್ಗುಣಗಳನ್ನು ಹೊಂದಿದ್ದರೂ ತನ್ನ ಏಕೈಕ ದುರ್ಗುಣದಿಂದಾಗಿ ಹೇಗೆ ದುರಂತನಾಯಕನಾಗುತ್ತಾನೆ ಎಂಬುದನ್ನು ಲೇಖಕರು ಮನನೀಯವಾಗಿ ಚಿತ್ರಿಸಿದ್ದಾರೆ. ಅಂಥದೇ ಇನ್ನೊಂದು ಪಾತ್ರ ಜನ್ನನ ಅಮೃತಮತಿ. ಅಯೋಧ್ಯೆಯ ಮಹಾರಾಜನೂ 'ನೋಡುವ ಕಂಗಳ ಸಿರಿ ಮಾತಾಡುವ ಬಾಯ್ಗಳ ರಸಾಯನ, ಕೂಡುವ ತೋಳ್ಗಳ ಪುಣ್ಯವಂತ'ನಾದ ಯಶೋಧರನನ್ನು ವಿವಾಹವಾಗಿದ್ದರೂ ಅಮೃತಮತಿ ಅವನನ್ನು ಬಿಟ್ಟು ಜಗತ್ತಿನ ಅಸಹ್ಯವೆಲ್ಲ ಮೈಗೂಡಿದಂತಿದ್ದ ಗಜವೆಂಡಿಗನಾದ ಅಷ್ಟವಂಕನನ್ನು ಒಲಿದ ಜಾರಿಣಿಯಾದ ಚಿತ್ರಣವು ಕನ್ನಡ ಸಾಹಿತ್ಯದಲ್ಲೇ ಒಂದು ಅಪೂರ್ವವಾದ ಚಿತ್ರಣ. ವಿಧಿ ಅವಳನ್ನು ಹೇಗೆ ಕೊಂದು ಕೂಗಿತು ಎಂಬುದನ್ನು ಅರಿಯಬೇಕಾದರೆ ನಾವು ಕಾವ್ಯಕ್ಕೆ ಶರಣು ಬರಬೇಕು.

ಕನ್ನಡ ಕವಿಗಳ ಪ್ರತಿಭಾ ಸಂಸ್ಪರ್ಶದಿಂದ ಸಾಮಾನ್ಯ ಗಾಳಿಯು ಮಂದಾನಿಲವಾಗುತ್ತದೆ. ಇದಕ್ಕೆ ಎಷ್ಟು ವೈವಿಧ್ಯಮಯ ಹೆಸರುಗಳು. ಮಲಯಾನಿಲ, ಪಶ್ಚಿಮಾನಿಲ, ತಂಬೆಲರು, ಮೆಲ್ಲಲರು, ವೇಗದೂರ ಸಮೀರ, ತೆಂಕಣ ಗಾಳಿ, ಮಂದಮಾರುತ, ಮಂದಗಮನ ಪವನ ಒಂದೇ ಎರಡೇ ? ಪಂಪನಿಂದ ತೊಡಗಿ ಕುವೆಂಪು ಅವರ ವರೆಗೆ ನಮ್ಮ ಕವಿಗಳು ಮಂದಾನಿಲವನ್ನು ವರ್ಣಿಸಿರುವ ವೈಖರಿಯನ್ನು ಕಾವ್ಯದಲ್ಲಿ ಓದಿಯೇ ಅನುಭವಿಸಬೇಕು. ಕವಿ ಆಂಡಯ್ಯನು ತಂಗಾಳಿಯನ್ನು ಕಾಮನ ಆನೆಯನ್ನಾಗಿ ಬಹು ಸುಂದರವಾಗಿ ಚಿತ್ರಿಸಿದ್ದಾನೆ. ಇನ್ನೊಮ್ಮೆ ಅದು ಕಾಮದೇವನ ಎಳೆಮಾವಿನ ತೇರಾಗುತ್ತದೆ.

ಇಲ್ಲಿ ಬಂದಿರುವ ಪಂಪನ ದುರ್ಯೋಧನ, ಚಾಮುಂಡ ರಾಯನ ಮಂಡೋದರಿ, ಅಭಿನವ ಪಂಪನ ರಾವಣ, ರಾಘವಾಂಕನ ಪದ್ಮಾವತಿ, ಜನ್ನನ ಅಮೃತಮತಿ, ಪದ್ಮಣಾಂಕನ ಕೆರೆಯ ಪದ್ಮರಸ, ಷಡಕ್ಷರದೇವನ ತಿರುಕೊಳಲು ನಾಚಿ ಮೊದಲಾದ ಪಾತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವರ ವ್ಯಕ್ತಿತ್ವಗಳನ್ನು ಸುಂದರವಾಗಿ ಪರಿಚಯ ಮಾಡಿ ಕೊಟ್ಟಿದ್ದಾರೆ ಲೇಖಕರು.

ಪಾತ್ರ ಚಿತ್ರಣದ ಕಲೆ ಹಂಡಿಯವರಿಗೆ ಸಹಜವಾಗಿ ವಶವಾಗಿದೆ. ಪಂಪನ ದುರ್ಯೋಧನನಲ್ಲಿ ಎದ್ದುಕಾಣುವ ಛಲ; ಕರ್ಣ ಹಾಗೂ ಸಹೋದರರಲ್ಲಿ ಇಟ್ಟಿದ್ದ ಅನುಪಮ ಪ್ರೇಮ, ವೀರಪಕ್ಷಪಾತ, ಇವುಗಳು ಅವನನ್ನು ಮಹಾನುಭಾವಪಟ್ಟಕ್ಕೇರಿಸುತ್ತದೆ.

ಸಂಗಮನಾಥ ಹಂಡಿಯವರ ಶೈಲಿಯಲ್ಲಿ ಮೊನೆ ಇದೆ; ಕಾವ್ಯದ ಬನಿ ಇದೆ. ಎಷ್ಟೋ ಬಾರಿ ಅವರ ಶೈಲಿಯು ಹಳೆಗನ್ನಡದ ಪದಪುಂಜಗಳಿಂದ ಕೂಡಿ ಗಹನ ಗಂಭೀರವಾಗುತ್ತದೆ. ಆದರೂ ಬರವಣಿಗೆಯಲ್ಲಿ ತೊಡಕಿಲ್ಲ, ವಿಚಾರದಲ್ಲಿ ಕ್ಲಿಷ್ಟತೆ ಇಲ್ಲ. ತಮ್ಮ ಪ್ರಥಮ ಕೃತಿ ಸಹೃದಯ ಸ್ಫುರಣದಿಂದ ಕನ್ನಡ ನಾಡಿನ ಕಾವ್ಯ ರಸಿಕರ ಹೃದಯವನ್ನು ಗೆದ್ದಿರುವ ಸಂಗಮನಾಥ ಹಂಡಿಯವರಿಗೆ ವಿಮರ್ಶಾ ಪ್ರಪಂಚದಲ್ಲಿ ಉಜ್ವಲವಾದ ಭವಿಷ್ಯವಿದೆ ಎಂಬುದರಲ್ಲಿ ಸಂಶಯವಿಲ್ಲ. ಸಹೃದಯ ಸ್ಫುರಣ ಸಾಹಿತ್ಯಾಭ್ಯಾಸಿಗಳಿಗೆ ಒಂದು ಸ್ವಾಗತಾರ್ಹವಾದ ಕೃತಿ.

* * *

ನಾವು ಓದುವುದೇನು ?: ಲೇ: ವಿವಿಧ ಲೇಖಕರು; ಪ್ರಕಾಶಕರು: ಸಾಹಿತ್ಯ ಮಂಟಪ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ; ಪುಟಗಳು: ೮೩+೫; ಬೆಲೆ: ೧ ರೂಪಾಯಿ.

ಧಾರವಾಡ–ಹುಬ್ಬಳ್ಳಿಯ ಲೇಖಕ ಬಳಗದವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಒಂದು ಸ್ತುತ್ಯವಾದ ಪ್ರಯೋಗ ಈ ಗ್ರಂಥ. ಸಾಹಿತ್ಯಕ ವಿಷಯಗಳ ಬಗ್ಗೆ ಚರ್ಚೆ ವಿಮರ್ಶೆ ಉಪನ್ಯಾಸ ಪುಸ್ತಕ ಪ್ರಕಟಣೆ ಕಾವ್ಯ ವಾಚನ ಮೊದಲಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಸದ್ದುಗದ್ದಲವಿಲ್ಲದೆ ರಚನಾತ್ಮಕ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡುತ್ತ ಬಂದಿರುವ ಸಾಹಿತ್ಯ ಮಂಟಪವು ಇದೀಗ ತಾವು ಓದುವ ಪುಸ್ತಕಗಳನ್ನು ಕುರಿತು ಸದಸ್ಯರು ಬರೆದ ಪ್ರಬಂಧಗಳನ್ನು ಈ ಸಂಕಲನದಲ್ಲಿ ಪ್ರಕಟಿಸಿದೆ.

ಸರ್ವಶ್ರೀ ವಿ. ಜಿ. ಕುಲಕರ್ಣಿ, ಎಂ. ಎಸ್. ಖುಷಭೇಂದ್ರಸ್ವಾಮಿ, ವರದರಾಜ ಹುಯಿಲಗೋಳ, ಗೋ. ವೆಂ. ಚುಳಕಿ, ಬಿ. ಎ. ಉಡುಪಿ, ಭೀಮರಾವ ಬೀಡಿ, ಎಸ್. ಎಸ್. ಗದಗಕರ, ಹಳಪೇಟೆ ಚಿಂತಾಮಣಿ ಸಿ. ಎಸ್. ಕುಲಕರ್ಣಿ, ಕೆ. ಎಸ್. ಸವಣೂರ, ದ. ರಾ. ಬೇಂದ್ರೆ ಮತ್ತು ಶ್ರೀಮತಿಯರಾದ ಶಾಂತಾದೇವಿ ಕಣವಿ, ಸರಸ್ವತೀದೇವಿ ಗೌಡರು ಇವರು ತಾವು ಓದುತ್ತಿರುವ ಗ್ರಂಥಗಳನ್ನು ಕುರಿತು, ಹರಟೆಯ ಶೈಲಿಯಲ್ಲಿ ತಮ್ಮ ಅನುಭವಗಳನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ.

ಗ್ರಂಥ ವ್ಯಾಸಂಗದಿಂದ ನಾವು ನಿರೀಕ್ಷಿಸುವುದು ಏನನ್ನು ?

ಮನರಂಜನೆಯೇ, ಹೃದಯ ಬುದ್ಧಿಗಳ ಸಂಸ್ಕಾರವೇ? ವಿಷಯ ಸಂಗ್ರಹಣೆಯೇ ಅಥವಾ ಸದಭಿರುಚಿಯ ಬೆಳವಣಿಗೆ ಮತ್ತು ವಿಶಾಲ ದೃಷ್ಟಿಯ ಸಲುವಾಗಿಯೇ? ಒಬ್ಬೊಬ್ಬರು ಒಂದೊಂದು ರೀತಿಯಾಗಿ ತಮ್ಮ ಓದಿನ ಚಟವನ್ನು ಬಯಲು ಮಾಡಿದ್ದಾರೆ. “ಬಿಡುವಿನ ದಿನಗಳು ಬರಬೇಕು, ಬಿಡುವಿಲ್ಲದ ಪುಸ್ತಕ ಓದಬೇಕು, ಓದುವಾಗ ಬದುಕಿನ ಬೆಳುದಿಂಗಳಲ್ಲಿ ತೇಲಬೇಕು” ಎಂಬ ಕನಸನ್ನು ಒಬ್ಬರು ತೋರಿಕೊಂಡರೆ ಆನಂದದ ವಿಲಾಸಕ್ಕಾಗಿ ತಮ್ಮ ಓದೆಂದು ಹೇಳಿದ್ದಾರೆ ಇನ್ನೊಬ್ಬರು. ಮತ್ತೊಬ್ಬರು ತಾವು ಓದುವ ವಿಷಯಗಳ ದೊಡ್ಡ ಪಟ್ಟಿಯನ್ನೇ ಕೊಟ್ಟು ಕಳೆದ ಒಂದೂವರೆ ತಿಂಗಳಿನಲ್ಲಿ ಓದಿದ ಪುಸ್ತಕಗಳ ದೊಡ್ಡ ಯಾದಿಯನ್ನೇ ನಮ್ಮವರಿಗೆ ಇಟ್ಟಿದ್ದಾರೆ. ಪ್ಯಾರೇಲಾಲರ ಮಹಾತ್ಮ ಗಾಂಧಿಯಿಂದ ತೊಡಗಿ ಫ್ರಾನ್ಸ್ ಅಲೆಗ್ಸಾಂಡರ್ ಸ್ಟಬ್‌ರ ದಿ ಕ್ರಿಮಿನಲ್, ದಿ ಜಡ್ಜ್, ದಿ ಪಬ್ಲಿಕ್ ಎಂಬ ಸಮಾಜ ಶಾಸ್ತ್ರದವರೆಗೆ ಅವರು ಓದಿರುವ ಪುಸ್ತಕಗಳ ಪಟ್ಟಿ ನೋಡಿದರೆ ಅವರ ವಾಚನಾಭಿರುಚಿ ನಮ್ಮನ್ನು ಬೆರಗುಗೊಳಿಸದೆ ಇರದು.

ಬೇಂದ್ರೆ ಅವರು ಈಗ ತಾವು ಓದುತ್ತಿರುವುದು ಕೇವಲ ನಿತ್ಯಾನಂದರ ಗ್ರಂಥಗಳನ್ನು ಮಾತ್ರ ಎಂದಿದ್ದಾರೆ. ನಿತ್ಯಾನಂದರು ಕನ್ನಡಿಗರು. ಅವರು ಬರೆದಿರುವ ಚಿದಾಕಾಶ ಗೀತೆ, ಇಂಗ್ಲೀಷ್ ಮರಾಠಿ ಭಾಷೆಗೆ ಅನುವಾದವಾಗಿದೆ. “ಪುಸ್ತಕದ ಹುಳ ಆದ ನಾನು ಅವರ ವಾಙ್ಮಯದಲ್ಲಿ ಸುಳಿದಾಡುತ್ತಿದ್ದೇನೆ ಎಂದು ಉದ್ಗಾರ ತೆಗೆದಿದ್ದಾರೆ. ಸಾಹಿತಿಗಳೂ ಸಾಹಿತ್ಯಾಭಿಮಾನಿಗಳೂ ಕುತೂಹಲಕ್ಕಾದರೂ ಓದಲೇಬೇಕಾದ ಪುಸ್ತಕ ಇದೆಂದರೆ ಅತಿಶಯೋಕ್ತಿಯಲ್ಲ.

* * *

ಶಿವಾನಂದಲಹರಿ: ಕನ್ನಡಕ್ಕೆ ಹೇಳಿದವರು: ಮೇವುಂಡಿ ಮಲ್ಲಾರಿ; ಪ್ರಕಾಶಕರೂ ಅವರೇ; ಪುಟಗಳು: ೫೪; ಬೆಲೆ: ರೂ. ೨–೦೦.

ಶ್ರೀಮಚ್ಛಂಕರ ಭಗವತ್ಪಾದರು ಸಂಸ್ಕೃತದಲ್ಲಿ ಬರೆದಿರುವ ಶಿವಾನಂದಲಹರಿಯು ಈಗಾಗಲೆ ಹಲವು ರೂಪಗಳನ್ನು ಹೊತ್ತು ಕನ್ನಡದಲ್ಲಿ ಮೈತಾಳಿದೆ. ಆದರೆ ಮಲ್ಲಾರಿಯವರ ಅನುವಾದ ಒಂದು ವಿಶಿಷ್ಟ ಬಗೆಯದು. ಶ್ರೀಯುತರು ಶಿವಾನಂದಲಹರಿಯ ನೂರು ಪದ್ಯಗಳನ್ನು ಮೂಲದ ಭಾವ, ಪದಬಂಧ, ಓಜಸ್ಸು, ಭಕ್ತಿಸ್ತೋತ್ರಗಳು ಕನ್ನಡದಲ್ಲೂ ಹೊಯ್ ಕೈಯಾಗಿ ಮೈವೆತ್ತುವಂತೆ ಮಲ್ಲಾರಿಲಹರಿಯಾಗಿ ಅನುವಾದಿಸಿ ಒಂದು ಪವಾಡವನ್ನೇ ಮೆರೆದಿದ್ದಾರೆ.

ಸಾಮಾನ್ಯವಾಗಿ ಭಾಷಾಂತರಕಾರರನ್ನು ಕೊಲೆಗಾರರೆಂದು ಮೂದಲಿಸುವುದುಂಟು. ಭಾಷಾಂತರವು ಒಂದು ಕ್ಲಿಷ್ಟವಾದ ದೊಡ್ಡ ಕಲೆ. "ಅನುವಾದಕನಿಗೆ ಉಭಯ ಭಾಷೆಗಳ ಮೇಲೆ ಪ್ರಭುತ್ವವಿರಬೇಕಾಗುತ್ತದೆ. ಮೂಲವನ್ನು ಸರಿಯಾಗಿ ಓದಿ ಅದರ ಆಶಯವನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳಬೇಕಾಗುತ್ತದೆ. ಅದನ್ನು ಇನ್ನೊಂದು ಭಾಷೆಗೆ ಪರಿವರ್ತಿಸಬೇಕಾದರೆ ಆ ನುಡಿಗೆ ಒಗ್ಗುವಂತೆ ಅದನ್ನು ಅರಳಿಸಬೇಕಾಗುತ್ತದೆ. ಭಾಷಾಂತರಕಾರನಿಗೆ ಒಂದು ದೃಷ್ಟಿಯಿಂದ ಸ್ವಾತಂತ್ರ್ಯವೇ ಇಲ್ಲ. ಎರಡು ಕಡೆಗಳಿಂದ ಬಂಧನ, ಅತ್ತ ಮೂಲ ಮಾತೃಕೆಯ ಚೌಕಟ್ಟು ಅವನನ್ನು ಬಂಧಿಸಿದರೆ ಇತ್ತ ಅನುವಾದ ಭಾಷೆಯ ಕಟ್ಟುನಿಟ್ಟುಗಳು ಬಂಧಿಸುತ್ತದೆ. ಎರಡರ ತಾಳಮೇಳಗಳನ್ನು ನೋಡಿಕೊಂಡು ಕೃತ್ರಿಮತೆಗೆ ಎಡೆ ಇಲ್ಲದಂತೆ ಭಾಷಾಂತರಿಸಬೇಕು ಅವನು. ಇದು ಉತ್ತಮ ಭಾಷಾಂತರಕಾರನ ಲಕ್ಷಣ" ಎಂದು ಸೂತ್ರ ರೂಪದಲ್ಲಿ ಭಾಷಾಂತರ ಕಲೆಯ ಬಗ್ಗೆ ಪ್ರೊ. ಆರ್. ಸಿ. ಹಿರೇಮಠ ಅವರು ಹೇಳಿರುವ ಮಾತುಗಳನ್ನು ಮಲ್ಲಾರಿಯವರು ತಮ್ಮ ಮಲ್ಲಾರಿಲಹರಿಯಲ್ಲಿ ಸಾರ್ಥಕ ಪಡಿಸಿದ್ದಾರೆ. ಅವರ ಮನಸ್ಸು ಭಕ್ತಿಗೆ ಮಿಡಿಯುತ್ತದೆ. ಅವರಿಗೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳ ಸೂಕ್ಷ್ಮಪರಿಜ್ಞಾನವಿದೆ. ಹೀಗಾಗಿ ಮಲ್ಲಾರಿ ಗೀತೆಯು ಕನ್ನಡ ಸಾಹಿತ್ಯಕ್ಕೆ ಒಂದು ಭಾವಸ್ಪರ್ಶಿ ಕೊಡುಗೆಯಾಗಿದೆ.

ಈ ಕೃತಿಯನ್ನು ಲೇಖಕರು ೧೯೫೬ರಲ್ಲಿ ಕನ್ನಡಿಸಲು ಆರಂಭಿಸಿ ಕನ್ನಡ ವಾಚಕರ ಸುದೈವದಿಂದಲೆಂಬಂತೆ ಈಚೆಗೆ ಮುಗಿಸಿ ಪ್ರಕಟಿಸಿದ್ದಾರೆ. ಈ ಮಲ್ಲಾರಿಲಹರಿಯ ಒಂದು ವೈಶಿಷ್ಟ್ಯವೆಂದರೆ ಮೂಲದ ಶಂಕರಲಹರಿ (ಶಿವಾನಂದಲಹರಿ)ಯನ್ನು ಕೊಟ್ಟಿರುವುದು. ಈ ಅನುವಾದವನ್ನು ಓದುತ್ತಿದ್ದರೆ ಜಗನ್ನಾಥ ಪಂಡಿತನ ಗಂಗಾಲಹರಿಯ ಜ್ಞಾಪಕ ಬರುತ್ತದೆ. (ಅದನ್ನು ಕನ್ನಡಕ್ಕೆ ಅನುವಾದಿಸಿರುವವರು ಪಂಡರೀನಾಥಾಚಾರ್ಯ ಗಲಗಲಿ) ಇದೊಂದು ಕನ್ನಡ ಸಾಹಿತ್ಯದಲ್ಲಿ ಅಪರೂಪವಾಗಿ ಬಂದಿರುವ ಸಫಲ ಭಾಷಾಂತರ ಕಾವ್ಯ. ಎಲ್ಲ ಕನ್ನಡಿಗರ ಮನೆಮನೆಗಳಲ್ಲೂ ಆಶ್ರಯಪಡೆಯಬೇಕಾದ ಒಂದು ಅಮೂಲ್ಯ ಕೃತಿ ಇದು.

* * *

ಮಹಾಕವಿ ಹರಿಹರ ದರ್ಶನ : ಲೇ : ಶಾಂತಯ್ಯ ಕೆಂಪಯ್ಯಮಠ, ಪ್ರಕಾಶಕರು : ಶರಣ ಪ್ರಕಾಶನ ಪಂಚಾಂಗಮಠ, ಸುರಪುರ ಗುಲ್ಬರ್ಗ, ಪುಟ : ೧೪೪, ಬೆಲೆ : ರೂ. ೯–೨೫.

ಕನ್ನಡ ಸಾಹಿತ್ಯದಲ್ಲಿ ಮಹಾಕವಿ ಎಂದು ಹೆಸರಾದ ಹರಿಹರನದು ಎತ್ತರದ ಸ್ಥಾನ. ಇವನು ಕನ್ನಡದ ಸಾಹಿತ್ಯಕ್ಕೆ ಹೊಸದೊಂದು ನಿಟ್ಟನ್ನು ತೋರಿಸಿದವನು. ಅವನ ನೂರಾರು ರಗಳೆಗಳಲ್ಲಿ ಮಲುಹಣದೇವಚರಿತೆ, ಮಹಾದೇವಿಯಕ್ಕನ ರಗಳೆ, ನಂಬಿಯಣ್ಣನ ರಗಳೆ ಇವುಗಳನ್ನು ಕುರಿತು ಬರೆದ ಪರಿಚಯಾತ್ಮಕ ಲೇಖನಗಳೂ ಗಿರಿಜಾ ಕಲ್ಯಾಣ, ರಕ್ಷಾಶತಕ, ಚೆನ್ನಯ್ಯಗಳ ಮಹಾತ್ಮ್ಯ ಕುರಿತು ಬರೆದಿರುವ ವಿಮರ್ಶಾ ಲೇಖನಗಳ ಸಂಗ್ರಹವೇ ಹರಿಹರ ದರ್ಶನ. ಲೇಖಕರು ಕವಿಯ ಕಾವ್ಯ ಜೀವನವನ್ನು ಕುರಿತು ಪುಟ್ಟದಾದ ಪೀಠಿಕೆಯೊಂದನ್ನು ಬರೆದಿದ್ದಾರೆ. ಸಿದ್ಧಯ್ಯ ಪುರಾಣಿಕರು ಈ ಕೃತಿಗೆ ಮುನ್ನುಡಿಯ ತಿಲಕವನ್ನು ಇಟ್ಟಿದ್ದಾರೆ. ಇಲ್ಲಿ ಲೇಖಕರು ಆಯ್ದುಕೊಂಡಿರುವ ಮಲುಹಣ, ಮಹಾದೇವಿಯಕ್ಕ, ನಂಬಿಯಣ್ಣನ ರಗಳೆಗಳು ಹರಿಹರನ ಶಕ್ತಿಯನ್ನು ಅರಿಯಲು ಪ್ರಾತಿನಿಧಿಕವಾದವುಗಳೇ ಸರಿ. ಈ ಕೃತಿಗಳಲ್ಲಿ ಶೃಂಗಾರ, ಶಾಂತರಸಗಳ ಸಂಗಮವಿದೆ. ಲೇಖಕರು ತಮ್ಮ ಕಥಾನಾಯಕರ ರಾಗ ವಿರಾಗಗಳನ್ನು ಮನಮುಟ್ಟುವಂತೆ ಔಚಿತ್ಯವರಿತು ವಿವರಿಸಿದ್ದಾರೆ. ಅವರ ಆಳವಾದ ಅಭ್ಯಾಸ ನಿಷ್ಪಕ್ಷಪಾತ ವಿಮರ್ಶೆ ಕೃತಿಯ ಮೌಲ್ಯವನ್ನು ಅಳೆಯುವುದರಲ್ಲಿ ತೋರಿಸುವ ಎಚ್ಚರ ಹಾಗೂ ಪ್ರಮಾಣಿಕತೆಗಳು ಗ್ರಂಥದ ಸಫಲತೆಗೆ ಸಾಕ್ಷಿಯಾಗಿವೆ. ಈ ಪ್ರಬಂಧಗಳನ್ನು ಲೇಖಕರು ತಮ್ಮ ಪ್ರಥಮ ಪ್ರಯತ್ನವೆಂದು ಹೇಳಿಕೊಂಡಿದ್ದರೂ ಬರವಣಿಗೆಯಲ್ಲಿ ಪಕ್ವತೆ ಪ್ರೌಢಿಮೆಗಳು ಎದ್ದು ಕಾಣುತ್ತವೆ. ಇವರಿಂದ ಹರಿಹರ ಕವಿಯ ಸಮಸ್ತ ಕೃತಿಗಳನ್ನು ಕುರಿತ ಪ್ರೌಢ ಗ್ರಂಥ ಒಂದನ್ನು ನಿರೀಕ್ಷಿಸಬಹುದಾಗಿದೆ.

ಕೊ. ಶ್ರೀ.

ಸುದ್ದಿ ಸಂಗ್ರಹ

ಕನ್ನಡದ ಕೃತಿ ರಶಿಯನ್ ಭಾಷೆಗೆ

ಭಾರತದ ಹದಿನಾಲ್ಕು ಪ್ರಮುಖ ಭಾಷೆಗಳಲ್ಲಿ ಒಂದಾಗಿದ್ದರೂ, ಸುಮಾರು ಎರಡೂವರೆ ಕೋಟಿ ಜನರು ಕನ್ನಡವನ್ನು ಮಾತೃಭಾಷೆಯಾಗಿ ಬೆಳಸುತ್ತಿದ್ದರೂ, ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯದ ಸೊಲ್ಲು ಕೇಳುವುದು ವಿರಳ. ಕನ್ನಡ ನಾಡಿನ ಸುಪ್ರಸಿದ್ಧ ಲೇಖಕರಲ್ಲಿ ಒಬ್ಬರಾದ ನಿರಂಜನ ಅವರ ವಿಮೋಚನೆ ಕಾದಂಬರಿಯು ರಶಿಯನ್ ಭಾಷೆಗೆ ಅನುವಾದವಾಗಲಿದ್ದು, ಅದರ ಒಂದು ಲಕ್ಷ ಪ್ರತಿಗಳು ಮುದ್ರಣವಾಗಲಿದೆ ಎಂದು ತಿಳಿದುಬಂದಿದೆ. ಈ ಮೊದಲು ಶ್ರೀ ಭಾರತೀಪ್ರಿಯರ ಮೋಚಿ ಕತೆಯು ಇಂಗ್ಲಿಷ್ ಮೂಲಕ ರಶಿಯಾ ಭಾಷೆಗೆ ಅನುವಾದಿತವಾಗಿರುವ ಸಂಗತಿಯನ್ನು ಇಲ್ಲಿ ನೆನೆಯಬಹುದು. ಇದು ಕನ್ನಡಿಗರೆಲ್ಲರೂ ಸಂತೋಷಪಡಬಹುದಾದ ವಾರ್ತೆ.

ಅಧ್ಯಾಪಕರಿಗೆ ರಾಷ್ಟ್ರಪ್ರಶಸ್ತಿ

ಪ್ರಸಕ್ತ ವರ್ಷದ ರಾಷ್ಟ್ರ ಪ್ರಶಸ್ತಿಗಳಲ್ಲಿ ಕನ್ನಡ ನಾಡಿನ ಐವರು ಅಧ್ಯಾಪಕರಿಗೆ ಈ ಸನ್ಮಾನ ದೊರೆತಿರುವುದು ಹರ್ಷ ಸಂಗತಿಯಾಗಿದೆ. ದೆಹಲಿಯಲ್ಲಿ ರಾಷ್ಟ್ರಪತಿ ಪ್ರಶಸ್ತಿಗಳನ್ನು ಅಂದರೆ ಅರ್ಹತಾ ಪತ್ರದ ಜೊತೆಯಲ್ಲಿ ನಗದು ಐನೂರು ರೂಪಾಯಿಗಳ ಬಹುಮಾನವನ್ನು ನೀಡಲಾಗುವುದು.

ಪ್ರಶಸ್ತಿ ವಿಜೇತರು ಸರ್ವಶ್ರೀ ಬಿ. ಶ್ರೀ. ಪಾಂಡುರಂಗ ರಾವ್, ಡಿ. ಎಸ್. ಚಾಗುಲೆ, ಎಸ್. ಗುರುಸ್ವಾಮಿದೀಕ್ಷಿತ್ ಶ್ರೀಮತಿ ಜೊಸಫಿನ್ ಫರ್ನಾಂಡಿಸ್ ಮತ್ತು ಶ್ರೀ ಸಿ. ಜಿ. ಅಮ್ಮಣ್ಣ ಅವರು. ಇವರಲ್ಲಿ ಶ್ರೀ ಬಿ. ಶ್ರೀ. ಪಾಂಡುರಂಗ ರಾಯರು ಕನ್ನಡದಲ್ಲಿ ಬಾಲಸಾಹಿತ್ಯದ ಶ್ರೇಷ್ಠ ಲೇಖಕರಲ್ಲಿ ಒಬ್ಬರಾಗಿರುವುದಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಲವು ವರ್ಷಗಳು ಕಾರ್ಯದರ್ಶಿಯಾಗಿ ದುಡಿದಿದ್ದಾರೆ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಚಿನ್ನದ ಹಬ್ಬ

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಕನ್ನಡ ನಾಡಿನ ಪುನರುಜ್ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವ ಸಂಸ್ಥೆ. ಈ ಬಗೆಯ ಸಾಹಿತ್ಯ ಸಂಘಗಳಿಗೆಲ್ಲಾ ಮಾತೃ ಸಂಸ್ಥೆಯೆಂದೇ ಹೇಳಬೇಕು. ಕನ್ನಡ ಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರಾದ ಆಚಾರ್ಯ ದಿ|| ಎ. ಆರ್. ಕೃಷ್ಣಶಾಸ್ತ್ರಿಗಳು ನಟ್ಟು ಬೆಳಸಿದ ಈ ವೃಕ್ಷದ ಆಶ್ರಯದಿಂದ ಅಸಂಖ್ಯಾತ ಸಾಹಿತಿಗಳು ಬೆಳಕಿಗೆ ಬಂದಿದ್ದಾರೆ.

ಈ ಸಂಘದ ಸುವರ್ಣ ಮಹೋತ್ಸವವು ಈ ವರ್ಷ ನೆರವೇರಲಿದ್ದು, ಅದರ ಕಾರ್ಯಕ್ರಮಗಳು ಇಡೀ ಒಂದು ವರ್ಷ ಪೂರ್ತ ಜರುಗಲಿವೆ. ಕಾರ್ಯಕ್ರಮಗಳಲ್ಲಿ ಕವಿಸಮ್ಮೇಳನದಿಂದ ಗ್ರಂಥಪ್ರಕಟನೆಯವರೆಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕಳೆದ ತಿಂಗಳು ಸಂಘದ ಹಳೆಯ ಸದಸ್ಯರಾದ ಪ್ರೊ. ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಈ ಚಿನ್ನದ ಹಬ್ಬದ ಕಾರ್ಯಕ್ರಮಗಳ ಉದ್ಘಾಟನೆ ರಾಜ್ಯದ ಮುಖ್ಯ ಮಂತ್ರಿ ಶ್ರೀ ವೀರೇಂದ್ರಪಾಟೀಲರಿಂದ ನೆರವೇರಿತು.

ಈ ಸಂದರ್ಭದಲ್ಲಿ ಸಂಘದ ಪ್ರಥಮ ಕಾರ್ಯದರ್ಶಿಯಾಗಿದ್ದ ಶ್ರೀ ದೇಶಪಾಂಡೆ ಗುರುರಾಯರನ್ನೂ, ನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ, ಡಾ. ಎ. ವೆಂಕಟ ಸುಬ್ಬಯ್ಯನವರನ್ನೂ ಗೌರವಿಸಲಾಯಿತು.

ಬಿ. ಶಿವಮೂರ್ತಿ ಶಾಸ್ತ್ರಿಗಳಿಗೆ 'ದೇವಗಂಗೆ' ಅರ್ಪಣೆ

ಹಲವು ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಕರ್ಣಾಟಕ ಏಕೀಕರಣಕ್ಕಾಗಿ ದುಡಿದವರೂ, ಸುಪ್ರಸಿದ್ಧ ಪತ್ರಿಕಾಕರ್ತರೂ ಲೇಖಕರೂ, ಆಗಿರುವ ಪಂಡಿತ ರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಅವರಿಗೆ ೧೯೬೩ರಲ್ಲಿ ನಡೆದ ಷಷ್ಟ್ಯಬ್ದಿ ಸಮಾರಂಭದ ಸವಿನೆನಪಿಗಾಗಿ ಈ ತಿಂಗಳು ಕನ್ನಡ ಸಾರಸ್ವತ ಲೋಕದ ವಿದ್ವಾಂಸರು ಬರೆದಿರುವ **ದೇವಗಂಗೆ** ಎನ್ನುವ ಗ್ರಂಥವನ್ನು ಅರ್ಪಿಸಲಾಯಿತು.

ಕರ್ಣಾಟಕ ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಡಾ. ಅಡಕೆ, ಡಾ. ವಿ. ಕೃ. ಗೋಕಾಕ, ಶ್ರೀಗಳಾದ ಮರಿಯಪ್ಪಭಟ್ಟ, ಕಡಿದಾಳ ಮಂಜಪ್ಪ, ದೇ. ಜವರೇಗೌಡ, ಭೀಮಸೇನರಾಯರು, ಎಸ್. ಎಸ್. ಮಾ[illegible] ವಾಡ, ಹೆಚ್. ಎಂ. ಶಂಕರನಾರಾಯಣರಾಯರು ಮುಂತಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಆಶೀರ್ವಚನ ಮಾಡಿದರು.

ಸಂಪಾದಕೀಯ

ಐದನೆಯ ಸಂಚಿಕೆಯ ಬಿಡುಗಡೆ

ಕನ್ನಡ-ಕನ್ನಡ ನಿಘಂಟಿನ ಐದನೆಯ ಸಂಚಿಕೆಯು ಕಳೆದ ತಿಂಗಳು ಹದಿನೈದರಂದು ಬಿಡುಗಡೆಯಾಯಿತು. ಅಂದರೆ ಇಲ್ಲಿಯವರೆಗೆ ಈ ನಿಘಂಟಿನ ಸಂಕ್ಷಿಪ್ತಸೂಚಿಯೂ ಸೇರಿ ಒಟ್ಟು ೫೫೭ ಪುಟಗಳು ಅಚ್ಚಾದಂತಾಯಿತು. ನಿಘಂಟಿನ ಸಿದ್ಧತೆ ಮತ್ತು ಮುದ್ರಣ ಎರಡೂ ಈಗ ಒಂದು ಕ್ರಮವನ್ನು ಪಡೆದಂತಾಯಿತು. ಇನ್ನು ಮುಂದೆ ಈ ನಿಘಂಟಿನ ಸಂಚಿಕೆಗಳು ಮತ್ತಷ್ಟು ಬೇಗ ಬೇಗ ಹೊರಬರುವಂತೆ ಏರ್ಪಾಟುಗಳಾಗುತ್ತಿವೆ. ಇವು ಸಫಲವಾಗಲೆಂದು ನಮ್ಮ ಹಾರೈಕೆ.

ನಿಘಂಟು ನಿಧಾನವಾಗಿ ಪ್ರಕಟವಾಗುತ್ತಿದೆ ಎಂದು ಹೇಳುವವರ ಮನಸ್ಸಿನಲ್ಲಿ ಈ ಗ್ರಂಥ ತಮ್ಮ ಉಪಯೋಗಕ್ಕೆ ಬೇಗ ಸಿಕ್ಕುತ್ತಿಲ್ಲವಲ್ಲ ಎಂಬ ವ್ಯಥೆಯಿದೆಯೆನ್ನುವುದು ಈ ಕಾರ್ಯದಲ್ಲಿ ನಿರತರಾಗಿರುವವರೆಲ್ಲರಿಗೂ ಗೊತ್ತು. ಆದರೆ ಇಂಥ ಕಾರ್ಯವನ್ನು ಬೇಗ ಮಾಡಿ ಪೂರೈಸಿಬಿಡುವ ಮನೋವೃತ್ತಿಯಿಂದ ಕೈಗೊಳ್ಳಬಾರದು. ಮಾಡಿದ ಕಾರ್ಯ ಆಧಾರಭೂತವಾಗಿರಬೇಕು ; ಅದನ್ನು ಪರಿಶೀಲಿಸುವವರ ಪ್ರಯೋಜನಕ್ಕೆ ಬರಬೇಕು. ನೂರು ಕಾಲ ಶಾಶ್ವತವಾಗಿರಬೇಕು ; ವ್ಯಯ ಮಾಡಿದ ಹಣಕ್ಕೆ ತಕ್ಕ ಪ್ರತಿಫಲ ಸಿಕ್ಕಿರಬೇಕು ಎಂಬೆಲ್ಲ ದೃಷ್ಟಿಯಿಂದ ಈ ಕಾರ್ಯ ನಡೆಯುತ್ತಿದೆ. ಇಂಥ ಕಾರ್ಯದಲ್ಲಿ ನುರಿತವರಿಗೆ ಇದರ ಕಷ್ಟ ಗೊತ್ತು. ಅದರ ಅನುಭವವಿಲ್ಲದವರು ಹಾಸ್ಯ ಮಾಡಬಹುದು. ಆದರೆ ಈ ಕೆಲಸ ನಿಧಾನವಾದಷ್ಟೂ ಹೆಚ್ಚು ಪ್ರಮಾಣಭೂತವಾಗಿರುತ್ತದೆ ಎಂಬುದನ್ನು ನಂಬಬೇಕು.

ಆದರೆ ಈಗ ನಿಷ್ಕಾರಣವಾಗಿ ಯಾವ ತಡವೂ ಆಗುತ್ತಿಲ್ಲ. ಈಗ ಸರಕಾರದ ಮುಂದಿರುವ ಅಧಿಕ ಸಂಖ್ಯೆಯ ಕೆಲಸಗಾರರ ಬೇಡಿಕೆಗೆ ಒಪ್ಪಿಗೆ ದೊರೆತಕೂಡಲೆ ಈ ಕಾರ್ಯ ಮತ್ತಷ್ಟು ವೇಗಗೊಳ್ಳುತ್ತದೆಂದು ಧಾರಾಳವಾಗಿ ಹೇಳಬಹುದು. ಕನ್ನಡ ಪ್ರೇಮಿಗಳು ಸ್ವಲ್ಪ ಸಹಾನುಭೂತಿಯಿಂದ ಈ ವಿಚಾರವನ್ನು ಪರಿಶೀಲಿಸುವಂತಾಗಲಿ.

ಪರಿಷತ್ತಿನ ಸುದ್ದಿಗಳು

ಸಂತಾಪಸೂಚಕ ಸಭೆ

ದಿನಾಂಕ ೪-೯-೧೯೪೮ರಂದು ಪರಿಷತ್ತಿನ ಆಜೀವ ಸದಸ್ಯರೂ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿದ್ದು ಪರಿಷತ್ತಿಗೆ ಬಹುಮುಖದ ಸೇವೆ ಸಲ್ಲಿಸಿದವರೂ ಆಗಿದ್ದ ರಾಜಸೇವಾಸಕ್ತ ಶ್ರೀ ಡಿ. ಸಿ. ಸುಬ್ಬರಾಯಪ್ಪ ಅವರ ನಿಧನದ ಪ್ರಯುಕ್ತ ಪರಿಷತ್ತಿನಲ್ಲಿ ಸಂತಾಪಸೂಚಕ ಸಭೆ ನಡೆಯಿತು. ಪರಿಷದಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಕೆ. ಟಿ. ಬನಶಂಕರಮ್ಮನವರು ಮತ್ತು ಶ್ರೀ ಹೀ. ಚಿ. ಶಾಂತವೀರಯ್ಯನವರೂ ದಿವಂಗತರಿಗೆ ಕನ್ನಡದ ಬಗ್ಗೆ ಇದ್ದ ಅಭಿಮಾನ, ಪಾಂಡಿತ್ಯ, ಶ್ರದ್ಧೆ ಮತ್ತು ಮಾಡಿದ ಸೇವೆಗಳನ್ನು ಕುರಿತು ಮಾತನಾಡಿದರು. ಅನಂತರ ಈ ಕೆಳಗಿನ ಸಂತಾಪಸೂಚಕ ನಿರ್ಣಯವನ್ನು ಸಭೆ ಮೌನದಿಂದ ಎದ್ದು ನಿಂತು ಅಂಗೀಕರಿಸಿತು.

ನಿರ್ಣಯ

ಉಜ್ವಲ ಕನ್ನಡಾಭಿಮಾನಿಗಳೂ ವಯೋವೃದ್ಧರೂ ಕನ್ನಡ ಭಾಷಾ ಸೇವಕರೂ ಸರ್ಕಾರದ ದಕ್ಷರಾದ ಅಧಿಕಾರಿಗಳಾಗಿದ್ದವರೂ ಅನೇಕ ಧರ್ಮ ಸಂಸ್ಥೆಗಳಲ್ಲಿದ್ದುಕೊಂಡು ಮಾರ್ಗದರ್ಶನವನ್ನು ನೀಡುತ್ತಿದ್ದವರೂ ನಡೆನುಡಿಯಲ್ಲಿ ಶಿಸ್ತು ಸಂಯಮಗಳಿಗೆ ಆದರ್ಶರಾಗಿ ನಡೆದುಕೊಂಡವರೂ ಪರಿಷತ್ತಿನ ಆಜೀವ ಸದಸ್ಯರೂ ಕಾರ್ಯದರ್ಶಿಗಳೂ ಕೋಶಾಧಿಕಾರಿಗಳೂ ಆಗಿದ್ದು ದಕ್ಷಸೇವೆ ಸಲ್ಲಿಸಿದವರೂ ಇಂಗ್ಲಿಷ್-ಕನ್ನಡ ನಿಘಂಟು, ಕನ್ನಡ-ಕನ್ನಡ ನಿಘಂಟುಗಳ ಸಂಪಾದಕ ಸಮಿತಿಗಳ ಸದಸ್ಯರಾಗಿದ್ದು ಉತ್ತಮ ಭಾಷಾ ಜ್ಞಾನ ಪಾಂಡಿತ್ಯಗಳಿಂದ ನಿಷ್ಠಾವಂತರಾಗಿ ಬಹುಕಾಲ ದುಡಿದವರೂ ಮಕ್ಕಳ ಕೂಟಕ್ಕೆ ತಂದೆಯಂತೆ ತನುಮನಧನಗಳಿಂದ ಪ್ರೇಮ ಔದಾರ್ಯಗಳನ್ನು ಧಾರೆಯೆರೆದವರೂ ಶ್ರದ್ಧಾಳುಗಳೂ ನಿಷ್ಠಾವಂತರೂ ತುಂಬು ಜೀವನ ನಡಸಿದವರೂ ಆದ ರಾಜಸೇವಾಸಕ್ತ ಶ್ರೀ ಡಿ. ಸಿ. ಸುಬ್ಬರಾಯಪ್ಪನವರ ನಿಧನದಿಂದ ಕನ್ನಡಕ್ಕೆ ಕನ್ನಡ ನಾಡಿಗೆ ಸಾಹಿತ್ಯ ಪರಿಷತ್ತಿಗೆ ಅಪಾರ ನಷ್ಟವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇರಿರುವ ಈ ಸಭೆಯು ಈ ಮೂಲಕ ತೀವ್ರ ಸಂತಾಪವನ್ನು ವ್ಯಕ್ತಪಡಿಸುವುದಲ್ಲದೆ ದಿವಂಗತರ ಆತ್ಮಕ್ಕೆ ಭಗವಂತನು ಸದ್ಗತಿಯನ್ನೀಯಲೆಂದೂ ಅವರ ಕುಟುಂಬ ವರ್ಗದವರಿಗೆ ಈ ನಷ್ಟವನ್ನು ಸಹಿಸುವ ಶಕ್ತಿಯನ್ನು ದಯಪಾಲಿಸಲೆಂದೂ ಪ್ರಾರ್ಥಿಸುತ್ತದೆ.

ಪರಿಷತ್ತಿನ ಆಶ್ರಯದಲ್ಲಿ ನಡೆದ ಸಭೆಗಳು

ದಿನಾಂಕ ೮-೯-೧೯೬೮ರಂದು ರಾಜಾಜಿನಗರದ ವಿದ್ಯಾವರ್ಧಕ ಸಂಘದಲ್ಲಿ 'ಪಂಡಿತರತ್ನಂ ಪದ್ಮಶ್ರೀ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಮತ್ತು ಅವರ ಸಾಹಿತ್ಯ ಸೇವೆ'-ಎಂಬ ವಿಷಯವಾಗಿ ಶ್ರೀ ಹೀ. ಚಿ. ಶಾಂತವೀರಯ್ಯನವರು ಉಪನ್ಯಾಸ ಮಾಡಿದರು. ಶ್ರೀ ಕೆ. ಎಂ. ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ ೨೫-೯-೧೯೬೮ರಂದು ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ 'ದಿ|| ವ್ಯಾಕರಣದ ಬಿ. ಮಲ್ಲಪ್ಪನವರ ಮತ್ತು ದಿ|| ಚನ್ನಬಸಪ್ಪ ಬಸಲಿಂಗಪ್ಪ, ಧಾರವಾಡ ಅವರುಗಳ ಸಾಹಿತ್ಯ ಸೇವೆ' ಎಂಬ ವಿಷಯವಾಗಿ ಪಂಡಿತರತ್ನಂ ಪದ್ಮಶ್ರೀ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರು ಉಪನ್ಯಾಸ ಮಾಡಿದರು.

೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಗುಲ್ಬರ್ಗದ ಪೌರಸಭಾಧ್ಯಕ್ಷರಾದ ಶ್ರೀ ನೀಲಕಂಠ ಪಾಟೀಲರವರು, ಲೋಕಸಭಾ ಸದಸ್ಯರಾದ ಶ್ರೀ ಪಾಟೀಲ ಪುಟ್ಟಪ್ಪನವರು ಮತ್ತು ಮೈಸೂರು ವಿಧಾನ ಪರಿಷತ್ತಿನ ಶ್ರೀ ಬಸವರಾಜ ಕಟ್ಟೀಮನಿ ಅವರುಗಳೊಡನೆ ಬಂದು ಈ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗುಲ್ಬರ್ಗ ಪಟ್ಟಣದಲ್ಲಿ ನಡೆಸಬೇಕೆಂದು ಆಹ್ವಾನ ನೀಡಿದಂತೆ ಪರಿಷತ್ತಿನ ಕಾರ್ಯಸಮಿತಿಯು ಅವರ ಆಹ್ವಾನವನ್ನು ಸಂತೋಷದಿಂದ ಒಪ್ಪಿಕೊಂಡಿದೆ. ಗುಲ್ಬರ್ಗದಲ್ಲಿ ಮುಂದಿನ ೪೬ನೆಯ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಭರದಿಂದ ಸಾಗುತ್ತಿವೆ.

ಸ್ತೋತ್ರಗಳು

ಗುರುರಾಜ ಕಾವ್ಯಸಾರ; ಲೇ: ಡಾ|| ವಸಂತ ರಂಗನಾಥ ಮುಥಾಲಿಕ ದೇಸಾಯಿ ; ಪ್ರ : ಜಾಗೃತ ಕರ್ನಾಟಕ ಪಬ್ಲಿಕೇಷನ್ಸ್, ೩, ಗೋವಿಂದಾಶ್ರಮ, ಎಲ್. ಜಿ. ರೋಡು, ಮುಂಬಯಿ-೨೮ ; ಪುಟ : ೬+೪೩ ; ಬೆಲೆ : ರೂ. ೧-೦೦, ೧೯೬೬.

ಗುರುರಾಜ ಕಾವ್ಯಸುಧೆ; ಲೇ : ಡಾ|| ವಸಂತ ರಂಗನಾಥ ಮುತಾಲಿಕ ದೇಸಾಯಿ, ಪ್ರ : ಜಾಗೃತಕರ್ನಾಟಕ ಪಬ್ಲಿಕೇಷನ್ಸ್, ೩, ಗೋವಿಂದಾಶ್ರಮ, ಎಲ್.ಜಿ. ರೋಡು, ಮುಂಬಯಿ-೨೮; ಬೆಲೆ: ರೂ. ೧-೦೦, ೧೯೬೭.

ಗುರುರಾಜ ಕಾವ್ಯದರ್ಶನ ; ಲೇ: ಡಾ|| ವಸಂತ ರಂಗನಾಥ ಮುತಾಲಿಕ ದೇಸಾಯಿ ; ಪ್ರ : ಜಾಗೃತಕರ್ನಾಟಕ ಪಬ್ಲಿಕೇಷನ್ಸ್, ೩, ಗೋವಿಂದಾಶ್ರಮ, ಎಲ್.ಜಿ. ರೋಡು, ಮುಂಬಯಿ-೨೮ ; ಪುಟ : ೬+೪೫ ; ಬೆಲೆ : ರೂ. ೧-೦೦, ೧೯೬೬.

ಹನುಮಾನ್ ಗೀತೆಗಳು ; ಲೇ : ನಾಗರಾಜಾರಾಯ, ತಾ. ಶ್ರೀ. ಪ್ರ : ಶ್ರೀ ಹನುಮಾನ್ ಸಂಘ, ನಂ. ೧೫೦, ಬಾಪು ಸುಬ್ಬರಾವ್ ರಸ್ತೆ, ಶ್ರೀರಾಂಪೇಟೆ, ಮೈಸೂರು-೧ ; ಪುಟ : ೫+೫೨ ; ಬೆಲೆ : ರೂ. ೦-೬೦.

ಇತರ ಗ್ರಂಥಗಳು

ಗ್ರಂಥ ಪರಿಚಯ ; ಕನ್ನಡ ಪುಸ್ತಕ ಪ್ರದರ್ಶನಕೇಂದ್ರ, ೫ನೆ ಮೈನ್‌ರಸ್ತೆ, ಗಾಂಧಿನಗರ, ಬೆಂಗಳೂರು-೯ ; ಪ್ರ: ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ, ಮದರಾಸ್-೧೦ ; ಪುಟ: ೨+೧೧೨ ; ಬೆಲೆ ೧೯೬೮.

ಅಮೆರಿಕಾದ ಶಿಕ್ಷಣ ; ಇಂಗ್ಲಿಷ್ ಅನು : ಅನಂತ ನಾರಾಯಣ, ಎಸ್. ಪ್ರ : ಗಂಗಾತರಂಗ, ಸರಸ್ವತೀಪುರಂ, ಮೈಸೂರು-೫; ಪುಟ: ೧೪೨; ಬೆಲೆ: ರೂ. ೪-೦೦, ೧೯೬೬.

ನಾನು ಓದುವುದೇನು ? ಲೇ : ವಿವಿಧ ಲೇಖಕರು, ಪ್ರ: ಸಾಹಿತ್ಯ ಮಂಟಪ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ; ಪುಟ : ೩+೪೨+೫ ; ಬೆಲೆ : ರೂ. ೧-೦೦.

ನುಡಿರತ್ನ ಕೋಶ : ಸಂಗ್ರ ; ವೆಂಕಟರಮಣಯ್ಯ, ಟಿ. ಎ. ನ್ಯಾಷನಲ್ ಲೈಬ್ರೆರಿ, ಕಲ್ಕತ್ತ ; ಪ್ರ : ಗೀತಾ ಬುಕ್ ಹೌಸ್, ಮೈಸೂರು ; ಪುಟ : ೧೮೮ ; ಬೆಲೆ : ರೂ. ೩-೦೦; ೧೯೬೭.

ಬಸವ ವಚನಾಮೃತ (ಮರಾಠಿ ಅನುವಾದ) ; ಅನು : ಜಯದೇವಿ ತಾಯಿ, ಲಿಗಾಡೆ ; ಪ್ರ : ಅನ್ನದಾನಯ್ಯ ಪುರಾಣಿಕ, ಜನರಲ್ ಸೆಕ್ರೆಟೆರಿ, ಬಸವ ಸಮಿತಿ, ಬೆಂಗಳೂರು ; ಪುಟ: ೫೪ ; ಬೆಲೆ: ರೂ. ೦-೫೦, ೧೯೬೮.

ಹೂಗೊನೆ ; (ಶಿಕ್ಷಕರ ಮತ್ತು ಮಕ್ಕಳ ಸಂಯುಕ್ತ ಪತ್ರಿಕೆ) ಪ್ರಥಮ ಕುಸುಮ ೧೯೬೭ ; ಪ್ರ : ಕೇಂದ್ರ ಮಾಧ್ಯಮಿಕ ಶಾಲೆ, ಯಾಳಗಿ, ತಾಲ್ಲೂಕು ; ಸುರಪುರ, ಜಿಲ್ಲೆ, ಗುಲಬರ್ಗ ; ಪುಟ : ೧೬+೯೧ ; ೧೯೬೭.

ಆಹಾರ ವಿಜ್ಞಾನ ; (ಪ್ರೋಟೀಸ್) ವಿಶೇಷಾಂಕ ; ಸಂ : ಪಿ. ಎಸ್. ಬಾಲಕೃಷ್ಣನ್, ಕೇಂದ್ರ ಆಹಾರ ವಿಜ್ಞಾನ ಅಧ್ಯಕ್ಷರ ಪರವಾಗಿ ಉದ್ಯೋಗಿಕ ಸಂಶೋಧನ ಸಲಹೆ ಮತ್ತು ವಿಸ್ತರಣಶಾಖೆ, ಪುಟ : ೧೦೪, ೧೯೬೭.

ಭೂಮಿ ಜನಾಂಗ ಮತ್ತು ಚರಿತ್ರೆ; ಲೇ : ಮೂಲ ಲೇಖಕರು ; ಎಲಿಜಬೆತ್, ಎಸ್. ಅನು : ನಾರಾಯಣ್, ಹೆಚ್. ವಿ. ಪ್ರ: ಸುದರ್ಶನಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ : ೧೨೮ ; ಬೆಲೆ : ರೂ. ೧-೫೦, ೧೯೬೭.

ಚಾಮರಾಜೋಕ್ತೀ ವಿಲಾಸವೆಂಬ ಕನ್ನಡ ರಾಮಾಯಣ ಸಂಪುಟ : ೧; ಸಂ : ರಂಗನಾಥ ಶರ್ಮ, ಎಸ್. ಪ್ರ : ಶ್ರೀಮದ್ರಾಮಾಯಣ ಮಹಾ ಭಾರತಾದಿ ಪ್ರಕಟನ ಸಮಿತಿ, ಬೆಂಗಳೂರು-೪ ; ಪುಟ : ೫೩೮ ; ಬೆಲೆ: ರೂ. ೧೨-೦೦, ೧೯೬೭.

ಚಾಮರಾಜೋಕ್ತೀ ವಿಲಾಸವೆಂಬ ಕನ್ನಡ ರಾಮಾಯಣ ಸಂಪುಟ : ೨; ಸಂ : ರಂಗನಾಥ ಶರ್ಮ, ಎಸ್. ಪ್ರ : ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟನ ಸಮಿತಿ, ಬೆಂಗಳೂರು-೪ ; ಪುಟ: ೧೦೩೨ ; ಬೆಲೆ: ರೂ. ೧೨-೦೦, ೧೯೬೮.

ಭಾರತಿ ; ಭಾರತಿಪ್ರೌಢಶಾಲೆಯ ಜಾನಪದ ಸಂಚಿಕೆ ; ೧೯೬೭-೬೮ ; ಸಂ : ಕಾಳೇಗೌಡ ನಾಗವಾರ ; ಪ್ರ : ಭಾರತೀ ವಿದ್ಯಾಸಂಸ್ಥೆ, ಕಾಳಮುದ್ದನ ದೊಡ್ಡಿ, ಮಂಡ್ಯ ಜಿಲ್ಲೆ ; ಪುಟ : ೬೩ ; ೧೯೬೭-೬೮.

ಯೋಗದ ಮೂಲಾಕಾರ ; ಮೂಲ ಲೇಖಕರು : ಶ್ರೀ ಅರವಿಂದರು, ಅನು : ಜಾಗಿರದಾರ, ಎಂ. ಆರ್. ಪ್ರ : ಸಿಂಪಿ ಲಿಂಗಣ್ಣ, ವಿಜಾಪುರ ಜಿಲ್ಲಾ, ಅರವಿಂದ ಮಂಡಳ, ಅಲಸಂಗಿ; ಪುಟ: ೨+೨+೧೫೬; ಬೆಲೆ: ರೂ. ೨-೦೦, ೧೯೬೭.

Reg. No. B. G. 4—October 1968

Lincensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಕನ್ನಡ ನುಡಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,
ಬೆಂಗಳೂರು-೧೮

ಸ್ವೀಕಾರ

ಕಾದಂಬರಿ

ನಾರಿ: ಹಿಂದಿ ಕಾದಂಬರಿಯ ಅನುವಾದ; ಲೇ: ಸಿಯಾ ರಾಮುಶರಣ ಗುಪ್ತ; ಪ್ರ: ಸಾಹಿತ್ಯ ಅಕಾದೆಮಿ, ಸದರನ್ ರೀಜನಲ್ ಕಚೇರಿ, ೧೫, ಕೆಥೆಡ್ರೆಲ್ ರೋಡು, ನುಂಗಂಬಾಕಂ, ಮದರಾಸ್,೩೪, ಪುಟ: ೧೬೪, ಬೆಲೆ: ರೂ. ೭-೦೦, ೧೯೬೮.

ನಾಟ್ಯರಾಣಿ ಶಾಂತಲಾ ಲೇ: ಮೂರ್ತಿ, ಮ. ನ. ಪ್ರ: ಗೀತಾ ಪಬ್ಲಿಕೇಷನ್ಸ್, ಬಳೇಪೇಟೆ ಚೌಕ, ಬೆಂಗಳೂರು-೨, ಪುಟ: ೬೦೫, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧೦-೦೦, ೧೯೬೮.

ಪ್ರೀತಿಪ್ರಾತರು ಲೇ: ನಾಗೇಂದ್ರರಾವ್, ಎಂ. ಎಸ್. ಪ್ರ: ನಲಂದಾ ಸಾಹಿತ್ಯ ಪ್ರಕಾಶನ, ೧೦೦/೩, ಟಾಟಾ ಸಿಲ್ಕ್ ಫಾರಂ, ೩ನೇ ಬ್ಲಾಕ್, ಬಸವನಗುಡಿ, ಬೆಂಗಳೂರು-೪, ಪುಟ: ೨೦೨; ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ.೩-೦೦, ೧೯೬೮.

ನಾಟಕ

ಸಂಚಾರತಿ ಹಿಂದಿ ಅನುವಾದ, ಮೂಲ ಲೇ: ತುಕಾರಾಮು, ಡಿ. ಆರ್. ಅನು: ಜಲಧರ, ಗುಳೇದಗುಡ್ಡ, ಪ್ರ: ಸಿಂಪೀ ಲಿಂಗಣ್ಣ, ಅರವಿಂದ ಗ್ರಂಥಾಲಯ, ಚಡಚಣ, ಪುಟ: ೯+೧೨೦; ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೫೦, ೧೯೬೮.

ಷಟ್ಪದಿ

ಹರಿಶ್ಚಂದ್ರ ಸಾಂಗತ್ಯ ಲೇ: ಸಿ. ಪಿ. ಕೆ. ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬, ಪ್ರ: ಸುರುಚಿ ಪ್ರಕಾಶನ, ಸರಸ್ವತೀ ಪುರಂ, ಮೈಸೂರು-೫, ಪುಟ: xxxix+೧೪೪, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೩-೭೫, ೧೯೬೭.

ಬಾಲಸಾಹಿತ್ಯ

ಸಚಿತ್ರ ಮಕ್ಕಳ ಭಾಗವತ: ಲೇ: ನಾಗೇಶ, ಪ್ರ: ಸಮಾಜ ಪುಸ್ತಕಾಲಯ, ಧಾರವಾಡ, ಪುಟ: ೧೫೮, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೮೦, ೧೯೬೮.

ಸಣ್ಣ ಕತೆ

ನಗೆ ತಂದ ಸಂದೇಶ ವಿವಿಧ ಲೇಖಕರಿಂದ, ಪ್ರ: ಡಿ.ಎ. ನಂಜುಂಡಸ್ವಾಮಿ, "ರೂಪಶ್ರೀ" ಪ್ರಕಾಶನ, ವಿಶ್ವೇಶ್ವರಪುರಂ, ಬೆಂಗಳೂರು-೪, ಪುಟ: ೮+೧೭೬, ಬೆಲೆ: ರೂ. ೨-೫೦, ೧೯೬೬.

ಜೀವನ ಚರಿತ್ರೆ

ಶ್ರೀ ಯಾಜ್ಞವಲ್ಕ್ಯ ಲೇ: ವೆಂಕಟಾಚಲಯ್ಯ, ಪ್ರ: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು, (ದ.ಕ.), ಪುಟ: ೪೦, ಬೆಲೆ: ರೂ. ? ೧೯೬೭.

English

Maharajah of Magic: Author: Sorcar, P.C. Publisher: All India Magic Circle, 276-1, Behary Avenue, Ballyganj, Calcutta-19, Pages: 93 + 26, Price: Rs. 15-00, 1966.

ಉಪನ್ಯಾಸ ಗ್ರಂಥಮಾಲೆ

ಕಂಗೊಳಿಸುವ ಕಟೀಲು ಲೇ: ಉಡುಪ, ಕೊ. ಅ. ಪ್ರ: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದ.ಕ.) ಪುಟ: ೪೭, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೦-೫೦, ೧೯೬೮.

ಭಾರತದ ಸಮಸ್ಯೆ ಲೇ: ಸಿಂಪಿ ಲಿಂಗಣ್ಣ, ಪ್ರ: ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ ಜಿಲ್ಲೆ, ಪುಟ: ೮+೧೧೦, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೫೦, ೧೯೬೮.

ಮಾನವ ಕುಲದ ಸಂಸ್ಮರಣೀಯ ಸಾಧನೆಗಳು ಲೇ: ಕೋಡದ, ಎಸ್. ಬಿ. ಪ್ರ: ಕೋಡದ, ಎಸ್.ಬಿ. ಪಂಚಮುಖಿ ಬಿಲ್ಡಿಂಗ್, ಮಾಳಮಡ್ಡಿ, ಧಾರವಾಡ-೧, ಪುಟ: ೯೬, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೨-೦೦, ೧೯೬೮.

ಆದರ್ಶ ಜೈನ ಮಹಿಳೆಯರು ಲೇ: ಕಮಲಾ, ಹಂಪನಾ. ಪ್ರ: ಎಸ್. ಬಿ. ವಸಂತರಾಜಯ್ಯ, ಕಾರ್ಯದರ್ಶಿ, ಶ್ರೀ ಮಹಾವೀರ ಮಿಶನ್, ಶಂಕರಪುರಂ, ಬೆಂಗಳೂರು-೪, ಪುಟ: ೨೦, ಆಕಾರ: ಕ್ರೌ. ಅಷ್ಟದಳ, ಬೆಲೆ: ? ೧೯೬೮.

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ನಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಸಂಪುಟ : ೩೧

ಸಂಚಿಕೆ : ೧೧

ನವೆಂಬರ್ ೧೯೬೮

●

ಈ ಸಂಚಿಕೆಯಲ್ಲಿ . . .

ದೇವ - ಮಾನವ ಶಿಲ್ಪಿ

●

ದೇವ - ಮಾನವ ಶಿಲ್ಪಿ ಧರೆಗಿಳಿದು ಬಾ
ಶಾಂತಿ ಸಮತೆಯ ಕಲಿಸೆ ಅವತರಿಸು ಬಾ

ಸುತ್ತಲೂ ಮುಸುಕಿರುವ ಹಿಂಸೆ ಹಾಲಾಹಲದಿ
ನಂಜುಂಡ ನೀನಾಗಿ ಮೈದಳೆದು ಬಾ
ಲೋಕ ಜೀವನ ತಪ್ತಸಾಗರದ ಮಡಿಲಿನಲಿ
ಶಾಂತಿ - ಶಶಿಯಂದದಲಿ ನೀ ಬೆಳಗು ಬಾ
ದೇವ - ಮಾನವ ಶಿಲ್ಪಿ ಧರೆಗಿಳಿದು ಬಾ

ಎಮ್ಮೆದೆಯ ವಲ್ಮೀಕದಲ್ಲಿ ನೆಲೆಸಿರುವಂಥ
ಹಿಂಸೆ ದ್ವೇಷಾ ಸರ್ಪಸಂಹರಿಸು ಬಾ
ಮನುಜರೆಲ್ಲರು ಒಂದೆ; ಮನುಜಕುಲ ಒಂದೆಂಬ
ಮಾನವೀಯತೆಯನ್ನು ಮೇಲೆತ್ತು ಬಾ
ದೇವ - ಮಾನವ ಶಿಲ್ಪಿಧರೆಗಿಳಿದು ಬಾ

ರಾಮ - ರಾಜ್ಯದ ಕನಸ ನನಸಾಗಿಸಲು ಇಂದು
ರಾಮ - ದೂತನೆ ನೀನು ಸಂಭವಿಸು ಬಾ
ಕ್ರಿಸ್ತ - ಬುದ್ಧರ ಮಾರ್ಗ ಮತ್ತೆ ತೋರುತಲಿಂದು
ಲೋಕ - ಹೃನ್ಮೈತ್ರಿಯನು ಸಾಧಿಸಲು ಬಾ
ದೇವ - ಮಾನವಶಿಲ್ಪಿ ಧರೆಗಿಳಿದು ಬಾ
ಶಾಂತಿ - ಸಮತೆಯ ಕಲಿಸೆ ಅವತರಿಸು ಬಾ

●

ಕೆ. ಆರ್. ಗಣೇಶರಾವ್

'ಸೌಂದರ್ಯ ಕಣಜದ ಸೂರೆ' – ಬೇಲೂರ ಬಾಲೆಯರು

೧

ಬೇಲೂರಿಗೆ ಬಂದವರಿಗೆಲ್ಲ
ಒಂದೇ ಔತಣ ;
ಸೌಂದರ್ಯ ಕಣಜದ ಸೂರೆ.

೨

ತನ್ನ ರೂಹಿಗೆ ಮರುಳುಗೊಂಡು
ನಿಂತಿರುವಳು ಮುಗ್ಧೆ,
ಕೈಲಿ ಕನ್ನಡಿವಿಡಿದು.
ಕೊರಳಮಣಿ ಮಾಲೆ ಪದಕ
ಚುಚ್ಚುತಿದೆ ರವಿರಶ್ಮಿಗೆ ;
ಮುತ್ತಿನ ಮೂಗತಿ
ಮುತ್ತೈದೆತನ ತಂದಿತ್ತಿದೆ.
ಅರಳೋಲೆ ಕೆನ್ನೆ ಸರಪಳಿ
ಗೆಜ್ಜೆಲೋಲೆ . . .
ಕೈಯೊಳಗೆ ಕರಿಬಳೆ ಕಡಗ
ಕಾಲ್ಗೆ ಬಿಗಿದಿಹ ಅಂದುಗೆ
ಚರಿಷ್ಣು ಚೈನು.
ಆಭರಣಭರಿತ ಬೆಡಗಿ
ನಿಂತಿಹಳು ಸೌಂದರ್ಯದಿಂದ,
ನಲ್ಲನಾಗಮನ ಬಯಸಿ–
ನೋಡಿ ನೋಡಿ ರೂಪುತಿದ್ದಿ
ಕಾದಿಹಳು ಕೈಲಿ ಕನ್ನಡಿವಿಡಿದು
. . . . ಮದನಿಕೆ.

೩

ವೃಶ್ಚಿಕ ಬಂದಡಗಲು
ಮಾನಭಂಗವೆಣಿಸದೆ
ಸೀರೆಕಳೆದೊಗೆದ,
ಭಯಾಕುಲೆಯ ಅರಕ್ತಮುಖ,
ಎನಿತು ಬೆಡಗು !
ಸುಂದರಿಯು ಅನಾದರಿಸಿ
ಓಡಿಬಂದಡಗಿರಲು
ಚೇಳಾಗಿ ಬಂದು–
ಸುಖಸವಿಯುತಿಹನೆ
. . . . ಮದನ ?
ಓಹ್ ! ಶಿಲ್ಪಿತಲೆಯೆ
ಬ್ರಹ್ಮನೇನು ಜಾಡ್ಯಬುದ್ಧಿ.

೪

ದರಹಸಿತ ಹುಸಿನಗೆ
ಕೊಂಕು ಕೊರಳಬೆಡಗು–
ಹೊಂದಿ ಕುಣಿದಿಹಳು ಬೇಲೂರ ಬಾಲೆ.
ಬಾಯಿಬಿಟ್ಟು ಹಾಡಲಿಲ್ಲ,
ಬೆರಳ ಮಾಟದಲಿ ಮನಹಿಡಿಸಿ
ಗೆಜ್ಜೆಗಲ್ಲೆನೆ ತಾಳತಾಳಕೆ
ಹೆಜ್ಜೆ ಜರುಗುತಿದೆ ನಿರಂತರ.
ಭರತಮುನಿ ಬೆರಳು
ಮೂಗಿಗೇರಿತು !
ನಮ್ಮೂರ ಹಿರಿಹೆಣ್ಣು
'ಶಾಂತಲೆ'ಯೊಡಗೂಡಿ
ಮೆರದಿಹ ನಚ್ಚಣಿಯ
ನಾಟ್ಯವೈಭವಕೆ.

೫

'ಕೇಳ್ದ ದನಿಗಿನ್ನ ನೆನಹಿನ ಧ್ವನಿ
ಅತಿ ಸಿಹಿ'
ಎಂಬ ಅಮರ ಕವಿವಾಣಿ
ಚಿರಸ್ಥಾಯಿ ಇಲ್ಲಿ.
ಕನ್ನಡ ತಾಯ ಹಿರಿಮಗಳು
ಜಗದೊಳಗೆಲ್ಲ ಬೆಳಗಿ
ಹುಟ್ಟುಮನೆಗೆ ಹೂವು ತಂದಿಹಳು ;
ಕರುನಾಡ ಶಿಲ್ಪಕೀರ್ತಿ !
ಬೇಲೂರ ಸಹೋದರಿ.

೬

ಏಳೆಂಟು ಶತಕಗಳೂ
ಬೇಲೂರ್ಗೆ ಬಂದವರಿಗೆಲ್ಲ
ಒಂದೇ ಔತಣ
ಹಸಿತ ಹುಸಿನಗೆ
ನೃತ್ಯ–ಭೂರಿ ಭೋಜನ.

ಮಧುರ

ಸಾಹಿತಿಯೊಡನೆ ಸಂಭಾಷಣೆ

ಡಾ|| ಕೆ. ಶ್ರೀಕಂಠಯ್ಯ

[೧೯೬೭ನೇ ನವೆಂಬರ್ ೧೪ನೇ ತಾರೀಖು ಕೊಳ್ಳೇಗಾಲದ ಕನ್ನಡ ಸಾಹಿತ್ಯ ಸಂಘದ ಉದ್ಘಾಟನೆ ಸಂದರ್ಭ; ಕನ್ನಡ ರಾಜ್ಯೋತ್ಸವದ ದಿನಾಚರಣೆಗೆಂದು ಬಂದಿದ್ದ ಶ್ರೀ ಎಸ್. ವಿ. ಪರಮೇಶ್ವರಭಟ್ಟರೊಡನೆ ನಡೆಸಿದ ಒಂದು ಸಂಭಾಷಣೆ. ಕೇವಲ ನೆನಪಿನ ಆಧಾರದಿಂದ ಬರೆದಿದೆ.—ಲೇ.]

ನಾನು: ಪರಮೇಶ್ವರಭಟ್ಟರೆ, ತಾವು ನಮ್ಮಲ್ಲಿಗೆ ಬಂದುದು ತುಂಬಾ ಸಂತೋಷ. ನನ್ನ ಕೆಲವು ಪ್ರಶ್ನೆಗಳಿಗೆ ತಾವು ಬೇಸರಿಸದೆ ಉತ್ತರ ಕೊಡಬೇಕು.

ಪರಮೇಶ್ವರಭಟ್ಟರು: ಆಗಬಹುದು.

ನಾನು: ಶ್ರವಣಬೆಳಗೊಳದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಕವಿಗೋಷ್ಠಿಯ ನಿಮ್ಮ ಅಧ್ಯಕ್ಷ ಭಾಷಣ ಬಹಳ ಚೆನ್ನಾಗಿತ್ತು. ಅದನ್ನು ಓದಿ ಪ್ರೊ. ಬಿ. ಎಂ. ಶ್ರೀ ಮತ್ತು ಪ್ರೊ. ಎಸ್. ವಿ. ರಂಗಣ್ಣನವರ ಉಪನ್ಯಾಸಗಳ ನೆನಪಾಯಿತು. ಕನ್ನಡದಲ್ಲಿ ಈ ರೀತಿಯಾಗಿ ಪ್ರೌಢವಾದ, ತುಲನಾತ್ಮಕವಾದ ಸಾಹಿತ್ಯ ಸೃಷ್ಟಿಯಾಗುತ್ತಿರುವುದು ಸಂತೋಷ.

ಭಟ್ಟರು: ನೀವು ವೈದ್ಯರಾದರೂ ಸಾಹಿತ್ಯದಲ್ಲಿ ಅಭಿರುಚಿ ಇದ್ದಂತೆ ತೋರುತ್ತದೆ. ಎಷ್ಟೋ ವೇಳೆ ಡಾಕ್ಟರಿಗೂ, ವಕೀಲರುಗಳಿಗೂ, ಇನ್ನು ಇತರ ಉದ್ಯಮಶೀಲರಿಗೂ ಇರುವ ಸಾಹಿತ್ಯದ ಗೀಳು ತರುಣ ಸಾಹಿತಿಗಳಿಗೂ ಇರುವುದಿಲ್ಲ. ನಾವು ನಮ್ಮ ಹಿರಿಯರು ಈ ಕ್ಷೇತ್ರದಲ್ಲಿ ಸಾಧಿಸಿದ ಕೆಲಸದಲ್ಲಿ ಕಾಲುಪಾಲನ್ನು ಮಾಡಿರುವುದಿಲ್ಲ. ಆದರೂ ದೊಡ್ಡ ಸಾಹಿತಿಗಳು ಎನ್ನಿಸಿಕೊಂಡುಬಿಡುತ್ತೇವೆ ಅಲ್ಲವೆ? ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಮೊಟ್ಟ ಮೊದಲು ಹೊರತಂದ "ಸಂಸ್ಕೃತ ನಾಟಕ"ದಂಥ ಹೊತ್ತಗೆಯನ್ನು ಆರಂಭದಲ್ಲೇ ಅವರಲ್ಲದೆ ಇನ್ನು ಯಾರು ತಾನೇ ತರಲು ಸಾಧ್ಯ! ಎಷ್ಟು ಆಳವಾದ ಪಾಂಡಿತ್ಯ ಅವರದು. ಅವರ ಸಾಹಿತ್ಯ ಅಕಾಡೆಮಿಯ ಗೌರವ ಪಡೆದ "ಬಂಕಿಮಚಂದ್ರ" ಸಾಮಾನ್ಯ ಗ್ರಂಥವೆ? ಬಂಗಾಳಿ ಭಾಷೆಯಲ್ಲೇ ಆ ಗ್ರಂಥಕ್ಕೆ ಸರಿಸಾಟಿಯಾಗಿ ನಿಲ್ಲುವಂಥದ್ದು ಇಲ್ಲ ಎಂದು ಬಲ್ಲವರು ಹೇಳುತ್ತಾರೆ. ನಾವೇನು ಮಾಡಿದ್ದೇವೆ? ಇಲ್ಲೋ ಅಲ್ಲೋ ಸ್ವಲ್ಪ ಹರಕು ಮುರಕು ಓದಿದ್ದೇವೆ–ಬರೆದಿದ್ದೇವೆ ಅಷ್ಟೆ.

ನಾನು: ಶ್ರವಣಬೆಳುಗೊಳದ ಕವಿಗೋಷ್ಠಿಯ ವಿಷಯವಾಗಿ ನಿಮ್ಮ ಅನುಭವವನ್ನು ಸ್ವಲ್ಪ ಹೇಳುತ್ತೀರಾ?

ಭಟ್ಟರು: ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರಿಗೆ ನೀಡಿದ ಸನ್ಮಾನ ಅದ್ಭುತವಾಗಿತ್ತು. ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರವರು ವೇದಿಕೆಯ ಮೇಲೆ ಬಂದು ಮಾತನಾಡಿದವರೇ ಅಲ್ಲ. ಅವರು ಯಾವಾಗಲೂ ಭಾವಜೀವಿ. ಚಿಂತನ ಮಂಥನದಲ್ಲೇ ಕಾಲ ಕಳೆಯುವವರು. ಅವರು ಅಂದು ಬಹಳ ಅದ್ಭುತವಾಗಿ, ಗೊರೂರನ್ನು ಪರಿಚಯ ಮಾಡಿಕೊಟ್ಟರು. ಅವರನ್ನು ಹೇಮಾವತಿಯ ಸುಪುತ್ರನೆಂದು ಕರೆದರು. ಎಂಥ ಭವ್ಯವಾದ ಹೋಲಿಕೆ! ನಾನಂತೂ ಪು. ತಿ. ನ. ಅವರು ಅಷ್ಟರಮಟ್ಟಿಗೆ ವೇದಿಕೆಯ ಮೇಲೆ ಬಂದು ನಿಂತು ಮಾತನಾಡಿದುದನ್ನು ಕೇಳಿಯೆ ಇರಲಿಲ್ಲ.

ಶ್ರೀ ಗೊರೂರರ ಉತ್ತರವು ಬಹಳ ಸ್ವಾರಸ್ಯವಾಗಿತ್ತು. ಅವರು ಮೊದಲೇ ಹಾಸ್ಯಗಾರರು. ಮಾತಿಗೆ ನಿಂತರೆ ಕೇಳಬೇಕೆ? ಅವರು ಬಾಲ್ಯದ ಒಂದು ಕಥೆ ಹೇಳಿದರು. ನಮಗೆಲ್ಲ ಅದನ್ನು ಕೇಳಿ ಹೊಟ್ಟೆ ಹುಣ್ಣಾಗುವಂತೆ ನಗು ಬಂತು.

ಅವರು ಇನ್ನೂ ಚಿಕ್ಕ ಹುಡುಗರಾಗಿದ್ದಾಗ, ಹೇಮಾವತಿ ತೀರಕ್ಕೆ ಆಡಲು ಹೋಗಿದ್ದರಂತೆ. ಅಲ್ಲಿ ಅವರ ತಂದೆ ಸಂಧ್ಯಾವಂದನೆ ಮಾಡುತ್ತಿದ್ದರಂತೆ. ಅವರು ಅಲ್ಲಿದ್ದಾರೆ ಅಂತ ಇವರಿಗೆ ಗೊತ್ತಿಲ್ಲ. ಮಗ ಬಂದಿದಾನೆ ಅಂತ ಅವರಿಗೂ ಗೊತ್ತಿಲ್ಲ. ಅಲ್ಲಿ ಒಂದು ಕುದುರೆ ಹುಲ್ಲು ಮೇಯುತ್ತಾ ಇತ್ತಂತೆ. ಬೆಳಗ್ಗೆ ಹೊತ್ತು. ಗೊರೂರರು ಮೈಮೇಲೆ ಹಾಕಿಕೊಂಡಿದ್ದ ಟವಲನ್ನೇ ಆ ಕುದುರೆಗೆ ಕಡಿವಾಣವಾಗಿ ಹಾಕಿ, ಕುದುರೆ ಸವಾರಿ ಮಾಡಹತ್ತಿದರಂತೆ. ಆದರೆ ಅದಕ್ಕೆ ಮುಂದಿನ ಎರಡು ಕಾಲುಗಳನ್ನು ಹಗ್ಗದಲ್ಲಿ ಕಟ್ಟಿಬಿಟ್ಟಿದ್ದರಂತೆ (ಅದು ಆಮೇಲೆ ಗೊತ್ತಾಯಿತಂತೆ.) ಅದು ಮುಂದಿನ ಎರಡು ಕಾಲುಗಳನ್ನು ಒಟ್ಟೊಟ್ಟಿಗೆ ಎತ್ತಿ ಹಾಕುತ್ತಾ,

ಕುಣಿಯುತ್ತಾ, ಹೊರಡಲು ಉದ್ಯುಕ್ತವಾಯಿತಂತೆ! ಅಷ್ಟು ಹೊತ್ತಿಗೆ, ಇನ್ನೊಂದು ಸ್ವಾರಸ್ಯ ನಡೆಯಿತು. ಆ ಸಮಯದಲ್ಲಿ ಎಲ್ಲೋ ಇದ್ದ ಒಂದು ಹೆಣ್ಣು ಕುದುರೆ ಕೆನೆಯಿತಂತೆ. ಅದರ ಸ್ವರ ಕೇಳಿ ಇವರು ಕುಳಿತಿದ್ದ ಕುದುರೆ, ಕುಪ್ಪಳಿಸಿಕೊಂಡು ಅಲ್ಲಿಗೆ ಇವರನ್ನು ಕರೆದುಕೊಂಡು ಹೋಯಿತಂತೆ.

ಕೊನೆಗೆ ಕುದುರೆ ಕುಪ್ಪಳಿಸುತ್ತಾ, ಬಂದು ಒಂದು ಕಡೆ ನಿಂತುಕೊಂಡಿತಂತೆ. ಅದೂ ಎಲ್ಲಿ? ಇವರ ತಂದೆಯ ಮುಂದೇನೆ!! ಮುಂದಿನ ಎರಡು ಕಾಲುಗಳನ್ನು ಎತ್ತಿ ನಿಂತುಕೊಂಡು ಬಿಟ್ಟಿತಂತೆ!! ಹೇಗಿದೆ ನೋಡಿ ತಂದೆ ಮಕ್ಕಳ ಸಂದರ್ಶನ? ಮಗ ಕುದುರೆಯ ಮೇಲೆ! ಅಪ್ಪ ಕೆಳಗೆ!! ಆಗ ಅವರ ತಂದೆ ಮಗನನ್ನು ಎಲ್ಲಾದರೂ ಬಿದ್ದು ಹಲ್ಲುಗಿಲ್ಲು ಮುರಿದುಕೊಂಡಿದ್ದರೆ ಏನಾಗ್ತಿತ್ತು ಅಂತ ಬೈದರಂತೆ.

ನಾನು: ನವ್ಯ ಕಾವ್ಯಪಂಥದ ಬಗೆಗೆ ನಿಮ್ಮ ಅಭಿಪ್ರಾಯವೇನು?

ಭಟ್ಟರು: ನವ್ಯ ಪಂಥ ಅಂತ ಹೆಸರಿಟ್ಟುಕೊಂಡು ಕೆಲವರು ಬರೀತಾ ಇದ್ದಾರೆ ನಿಜ. ನನಗೇನೂ ಹಿಡಿಸಲಿಲ್ಲ. ಶ್ರೀಯುತ ಪುಟ್ಟಪ್ಪನರೇ ಹೇಳುತ್ತಾರೆ. ನಮ್ಮ ಮನೇಲೇ ಎರಡು ಪಂಥಗಳಿವೆ ಅಂತ. ಪುಟ್ಟಪ್ಪನವರದೇ ಒಂದು ಪಂಥವಂತೆ. ಶ್ರೀಯುತ ಪೂರ್ಣಚಂದ್ರ ತೇಜಸ್ವಿಯವರದೇ ಒಂದು ಪಂಥವಂತೆ. ಆಧುನಿಕ ಆಂಗ್ಲ ಕವಿಗಳ ಜಾಡು ಹಿಡಿದು ನಮ್ಮವರು ನವ್ಯ ಪಂಥ ಅಂತ ಬರೆಯೋಕೆ ಶುರು ಹಚ್ಚಿದ್ದಾರೆ. ಕಾಲವೇನೋ ಬದಲಾಗಬೇಕಾದ್ದೇ. ಹಾಗೇ ಸಾಹಿತ್ಯಾನೂ ಬದಲಾಗುತ್ತಾ ಹೋಗುತ್ತೆ. ಆದರೆ ನವ್ಯ ಪಂಥದ ಆಂಗ್ಲ ಕವಿಗಳು ಯಾವ ಸಂದರ್ಭಗಳಲ್ಲಿ ಅವುಗಳನ್ನು ಬರೆದರೋ ಅದು ನಮಗೆ ಅನ್ವಯಿಸುವುದಿಲ್ಲ. ಆಗ ಎರಡನೇ ಯುದ್ಧ ಆಗಿತ್ತು. ಮನೆ ಮಠಗಳೆಲ್ಲಾ ಎಷ್ಟೋ ಉರಿದುಹೋಗಿತ್ತು! ಮಾನಸಿಕ ಕ್ಲೇಶ ಎಷ್ಟಾಗಿತ್ತೋ ಯಾರಿಗೆ ಗೊತ್ತು? ಏನು ಸಂದರ್ಭ ಬಂದವೋ ಅವರು ಬರೆದರು. ಅವರು ಬರೆದರು ಅಂತ ನಾವು ಬರೆಯುವುದೆ? ಒಟ್ಟಿನಲ್ಲಿ ಹೇಳುವುದಾದರೆ ಈ ನವ್ಯ ಪಂಥ ಅನ್ನೋದು ಎತ್ತ ಕಡೆ ಸಾಗುತ್ತಿದೆಯೋ ಹೇಳೋದಂತೂ ಕಷ್ಟ. ಒಂದೊಂದು ಸಾರಿ ಆ ನವ್ಯ ಪಂಥದ ಕಥೆ ಕವನಗಳು ಬರೆದೋರಿಗೇ ಗೊತ್ತಿದೆಯೋ ಇಲ್ಲವೋ ಅನುಮಾನ ಬರುತ್ತದೆ. ಚಿತ್ರ ಕಲೆಯಲ್ಲೂ ಅಷ್ಟೆ. ಸುಮ್ಮನೆ ಎರಡು ಗೀಚು ಗೀಚಿ, ಒಂದು ಬಣ್ಣ ಕೊಟ್ಟು ಇದೊಂದು ನವ್ಯ ಚಿತ್ರ ಅಂತಾ ಹೇಳುತ್ತಾರೆ. ಎಷ್ಟೋ ಸಲ ಆ ಚಿತ್ರ ಬಿಡಿಸಿದವರು, ಯಾರದ್ದೋ ಚಿತ್ರಕಾರನ ನವ್ಯಪಂಥದ ಅನುಕರಣೆ ಮಾಡಿದ್ದೇನೆ ಅಂತ ಹೇಳ್ಕೋತಾರೆ ಆ ಪ್ರತಿಭಾವಂತ. ಪ್ರತಿಭಾವಂತ ಮೂಲ ಚಿತ್ರಕಾರನಿಗೆ ಅದನ್ನು ತೋರಿಸಿ ಕೇಳಿದರೆ, ನನ್ನ ಅಭಿಪ್ರಾಯ ಹಾಗಿಲ್ಲ ಅಂತ ಅವನು ಹೇಳಬಹುದು. ಹಾಗಾಗಿದೆ ನಮ್ಮ ನವ್ಯ ಮಾರ್ಗ.

ನಾನು: ಕಾರಂತರ ವಿಷಯ ಹೇಗೆ?

ಭಟ್ಟರು: ಶ್ರೀಯುತರು ಮಾತಿನವರಲ್ಲ, ಕೃತಿಯವರು. ಸದ್ದಿಲ್ಲದಂತೆ ಅಗಾಧವಾದ ಕೆಲಸ ಮಾಡುತ್ತಿದ್ದಾರೆ. ಈಗ ಇಂಗ್ಲಿಷ್-ಕನ್ನಡ ಡಿಕ್ಷನರಿ ಕೆಲಸಕ್ಕೆ ಆಗಾಗ್ಗೆ ಮೈಸೂರಿಗೆ ಬರುತ್ತಿರುತ್ತಾರೆ. ಅವರ ಸಹವಾಸ ಕಷ್ಟ. ನೋಡಿ! ಒಂದು ವಿಷಯ ಜ್ಞಾಪಕಕ್ಕೆ ಬರುತ್ತೆ. ಅವರ ಹತ್ತಿರ ವಿಷಯ ತಿಳಿದುಕೊಳ್ಳದೆ ಮಾತನಾಡಿದರೆ ಪೆಚ್ಚು ತಿನ್ನಬೇಕಾಗುತ್ತೆ. ಎಲ್ಲೋ ಒಂದು ಕಡೆ ಅವರನ್ನು ಒಂದು ಸಂಘಕ್ಕೆ ಬರಮಾಡಿಕೊಂಡು, ಅವರ ಪರಿಚಯ ಮಾಡುವವರು—ಶ್ರೀಮಾನ್ ಕಾರಂತರು ಇಂಥಿಂಥ ಪುಸ್ತಕಗಳನ್ನು ಬರೆದಿದ್ದಾರೆ, ಇತ್ಯಾದಿ ಅಂತ ಎಲ್ಲಾ ಹೊಗಳಿಬಿಟ್ಟರಂತೆ. ಶ್ರೀಮಾನ್ ಕಾರಂತರಿಗೆ, ಉತ್ತರಕೊಡುವ ಸರದಿಬಂದಾಗ, ಅವರು ಖಂಡ ತುಂಡವಾಗಿ, 'ಏನ್ರೀ! ನೀವು ನನ್ನ ಪರಿಚಯವನ್ನೇನೋ ಅದ್ಭುತವಾಗಿ ಮಾಡಿಬಿಟ್ಟಿರಿ. ನೀವು ಹೇಳಿದಿರಲ್ಲಾ, ನಾನು ಬರೆದ ಆ ಗ್ರಂಥಗಳನ್ನೆಲ್ಲಾ ಓದಿದ್ದೀರಾ? ಓದಿದ್ದರೆ ಸರಿ! ಇಲ್ಲದಿದ್ದರೆ ವ್ಯರ್ಥವಾಗಿ ಹೇಳುವುದು ಸರಿಯಲ್ಲ. ಓದಿ, ಆಮೇಲೆ ಪರಿಚಯ ಮಾಡಿಕೊಡಿ, ಅಂತ ಎರಡೇ ಮಾತಾಡಿ ಕುಳಿತುಬಿಟ್ಟರಂತೆ! ಈಗೀಗ ಸಾಹಿತ್ಯ ಅಕೆಡೆಮಿ ಎನ್ನಿಸಿಕೊಳ್ಳುವಂಥ ಸಂಸ್ಥೆಗಳಲ್ಲೂ ಹೀಗೆ ನಡೆಯುತ್ತೆ. ಯಾವುದೋ ಭಾಷೆಯ ಗ್ರಂಥಗಳನ್ನು ಆಮೂಲಾಗ್ರವಾಗಿ ಓದಿ ಪರಿಚಯ ಮಾಡಿಕೊಂಡಿರೋದಿಲ್ಲ ಪುಣ್ಯಾತ್ಮರು!! ಇಲ್ಲಷ್ಟು ಅಲ್ಲಷ್ಟು ಓದಿರುತ್ತಾರೆ ಆ ಗ್ರಂಥಗಳನ್ನು. ಆದರೂ ಆ ಪುಸ್ತಕ ಗೌರವಕ್ಕೆ ಯೋಗ್ಯವಾಗಿದೆ ಅಂತ ತೀರ್ಪು ಕಳುಹಿಸಿಬಿಡುತ್ತಾರೆ. ನಾವು ಯಾವುದು ಮಾತನಾಡಬೇಕಾದರೂ, ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಂಡು ಮಾತನಾಡಬೇಕು. ಇನ್ನೊಂದು ವಿಷಯ ಹೇಳ್ತೇನೆ ಕೇಳಿ. ನಮಗೆ ಯಾರನ್ನು ಹೇಗೆ ಗೌರವಿಸಬೇಕು ಅನ್ನೋದೇ ಗೊತ್ತಿರುವುದಿಲ್ಲ. ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ನಿವೃತ್ತರಾದ ಮೇಲೆ, ಅವರ ಒಂದು ಭಾವಚಿತ್ರವನ್ನು ಅನಾವರಣ ಮಾಡಬೇಕೂಂತ ಶ್ರೀಮಾನ್ ಅ.-ಅವರು ಅವರ ಮನೆಗೆ

ಹೋಗಿ ಕೇಳಿದರಂತೆ, ನಾವೆಲ್ಲಾ ಸೇರಿ ನಿಮ್ಮ ಒಂದು ಭಾವಚಿತ್ರ ಅನಾವರಣ ಮಾಡಬೇಕೆಂದಿದ್ದೇವೆ, ನಿಮ್ಮಲ್ಲಿ ಯಾವುದಾದರೂ ಒಂದು ನಿಮ್ಮ ಭಾವಚಿತ್ರವಿದ್ದರೆ ದಯೆಯಿಟ್ಟುಕೊಡಿ, ಅಂತ. ಆಗ ಶಾಸ್ತ್ರಿಗಳು ಹೇಳಿದರಂತೆ 'ಹೋಗಯ್ಯ—ನಾನು ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ನನ್ನ ಚಿತ್ರ ನಾನೇ ಕೊಡಬೇಕೆ? ಬೇಕಾದರೆ ನೀವೇ ತೆಗೆಸಿಟ್ಟುಕೊಳ್ಳಿ' ನೋಡಿ ಹೀಗಿದೆ ನಮ್ಮ ಪಾಡು.

ನಾನು: ಕನ್ನಡವನ್ನು ಭಾಷಾ ಮಾಧ್ಯಮವನ್ನಾಗಿ ಮಾಡಲು ನಿಮ್ಮ ಅಭಿಪ್ರಾಯವೇನು ಈ ಭಾಷಾ ಗೊಂದಲದಲ್ಲಿ ಕನ್ನಡಿಗರ ಪಾತ್ರವೇನು?

ಭಟ್ಟರು: ಕನ್ನಡ ನಮ್ಮ ಮಾತೃಭಾಷೆಯಲ್ಲವೇ? ಅದೇ ಭಾಷಾ ಮಾಧ್ಯಮವಾಗಬೇಕು. ಬಿ. ಎಂ. ಶ್ರೀಯವರು ಮೊದಲೇ ಹೇಳಿಲ್ಲವೇ "ಮೊದಲು ತಾಯ ಹಾಲು ಕುಡಿದು" ಅಂತ. ಕನ್ನಡ ಬೋಧಕ ಭಾಷೆಯಾಗಬೇಕು ಅನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ಏಕೆಂದರೆ ಇಂಗ್ಲಿಷ್ ಸ್ಥಿತಿ ಏನಾಗುತ್ತಿದೆ ಅನ್ನೋದು ಇತ್ತೀಚೆಗೆ ಎಲ್ಲರಿಗೂ ಗೊತ್ತಿದೆ. ಸಣ್ಣಪುಟ್ಟ ಐರೋಪ್ಯ ಪ್ರದೇಶಗಳಲ್ಲಿ ನಮ್ಮ ಮೈಸೂರು ಸೀಮೆಗಿಂತಲೂ ಚಿಕ್ಕವಾಗಿರುವ ದೇಶಗಳಲ್ಲಿ ಆಯಾ ಮಾತೃ ಭಾಷೆಯಲ್ಲೇ ಎಲ್ಲಾ ವ್ಯವಹಾರವಂತೆ. ಡೆನ್ಮಾರ್ಕ್‌ನಲ್ಲಿ ಡೇನಿಷ್ ಭಾಷೆಗೆ ಪ್ರಾಧಾನ್ಯ. ಎಷ್ಟು ಸಣ್ಣ ದೇಶ ಅದು! ಪ್ರಪಂಚದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿಲ್ಲವೆ ಅದು. ಹಾಗೇ ರಷ್ಯ, ಜಪಾನ್, ಇತ್ಯಾದಿ ದೇಶಗಳಲ್ಲೂ ಕೂಡ. ಚೀನಾ ದೇಶದಿಂದ ಬ್ರಿಟಿಷ್ ದ್ವೀಪಗಳಿಗೆ ತಾಂತ್ರಿಕ ವಿಷಯಗಳ ಹೆಚ್ಚಿನ ವ್ಯಾಸಂಗಕ್ಕಾಗಿ, ಜನರನ್ನು ಆ ಸರ್ಕಾರ ಕಳುಹಿಸುತ್ತದಂತೆ. ಅಲ್ಲಿ ಚೀನಾದವರು ಇಂಗ್ಲಿಷ್ ಮೂಲಕ, ತಾಂತ್ರಿಕ ವಿಷಯಗಳನ್ನೆಲ್ಲಾ ಕಲಿತುಕೊಳ್ಳುತ್ತಾರಂತೆ. ಆಮೇಲೆ ಎದೆ ಮೇಲೆ ಒಂದು ಪ್ರಕಟನೆ ಬರೆದು-ಕೊಂಡು ಓಡಾಡುತ್ತಿರುತ್ತಾರಂತೆ: "I learn English, but I don't speak English" ಅಂತ. ಹೇಗಿದೆ ಭಾಷಾಭಿಮಾನ? ಅಷ್ಟೇ ಏಕೆ ನಮ್ಮ ನೆರೆ ರಾಜ್ಯ ತಮಿಳರನ್ನು ತೆಗೆದುಕೊಳ್ಳಿ—ಅಲ್ಲಿ ಎಲ್ಲಾ ವ್ಯವಹಾರ, ಪ್ರಕಟನೆಗಳು, ಮಾತೃಭಾಷೆ ತಮಿಳಿನಲ್ಲೇ. ಇಲ್ಲೊಂದು ಸ್ವಾರಸ್ಯ ಹೇಳುತ್ತೇನೆ, ನೋಡಿ. ಮೊನ್ನೆ ಮೈಸೂರಿನ ವಸ್ತುಪ್ರದರ್ಶಕ್ಕೆ ನಮ್ಮ ಮನೆಯವರೆಲ್ಲಾ ಹೋಗಿದ್ದರು. ಅಲ್ಲಿ ತಮಿಳುನಾಡಿನಲ್ಲಿ ತಯಾರಾದ 'ಕಟರನ್' ಬಟ್ಟೆಗಳನ್ನು ಕೊಂಡುಕೊಂಡು ಬಂದು, ಮನೆಯಲ್ಲಿ ಒಂದೊಂದು ರೂಮಿಗೆ ಒಂದೊಂದು ಕಟರನ್ ಹಾಕಿದರು. ಬಟ್ಟೆಯೇನೋ ಚೆನ್ನಾಗಿತ್ತು. ಆದರೆ ಅದರ ಮೇಲಿದ್ದ ಚಿತ್ರ ಯಾವುದು? ಭಾಷೆ ಯಾವುದು ಗೊತ್ತೆ? ಮಹಾಬಲಿಪುರ, ಕಂಚಿ, ಮಧುರೆ ದೇವಸ್ಥಾನದ ಗೋಪುರಗಳ ಶಿಲ್ಪಾಕೃತಿ ಮತ್ತು ತಮಿಳಿನಲ್ಲಿ ಅದರ ವಿವರಣೆ. ಮೈಸೂರು ವಸ್ತು ಪ್ರದರ್ಶನದಲ್ಲಿ ಕನ್ನಡನಾಡಿನಲ್ಲಿ ಮಾನಸಗಂಗೋತ್ರಿಯ ಕನ್ನಡ ಉಪನ್ಯಾಸಕರ ಮನೆಯಲ್ಲಿ ತಮಿಳು ವಿರಚಿತ ಕಟರನ್ ಬಟ್ಟೆ ಬಂತು ಅಂದರೆ ಎಷ್ಟು ಹಾಸ್ಯಾಸ್ಪದವಾಯಿತು ನೋಡಿ. ಅದೇ ನಮ್ಮವರು ಬೇಲೂರಿನದೋ, ಹಳೇಬೀಡಿನದೋ, ಶ್ರವಣಬೆಳಗೊಳದ್ದೋ ಚಿತ್ರ ಮಾಡಿಸಿ, ಕರ್ಟನ್ ಬಟ್ಟೆಗಳಿಗೋ, ಟೇಬಲ್ ಕ್ಲಾತ್‌ಗಳಿಗೊ ಮುದ್ರಿಸಿ, ಏತಕ್ಕೆ ಕನ್ನಡದ ವಿವರಣೆ ಕೊಡಬಾರದು?

ನಾನು: ಹಾಗಾದರೆ ರಾಜಾಜಿ ಇತ್ಯಾದಿ ಕೆಲವರು ಇಂಗ್ಲಿಷ್ ಇರಬೇಕು ಎಂದು ಹೇಳುತ್ತಿದ್ದಾರೆ. ಅವರಿಗೆ ದೂರದರ್ಶಿತ್ವವಿಲ್ಲವೇ?

ಭಟ್ಟರು: ಅದೇ ರಾಜಾಜಿ ಇನ್ನೊಂದು ಕಡೆ ಹೇಳಿದ್ದಾರೆ ಜ್ಞಾಪಕವಿದೆಯೇನು? ಇಂಗ್ಲಿಷ್ ಭಾಷೆ ಕಾಲಿಗೆ ಹಾಕಿಕೊಳ್ಳುವ ಮೆಟ್ಟು ಇದ್ದ ಹಾಗೆ. ಮನೆಯಿಂದ ಹೊರಗೆ ಹೋಗುವುದಕ್ಕೆ ಮೆಟ್ಟಿಲ್ಲದೆ ಹೋಗೋಕ್ಕೆ ಆಗೊಲ್ಲತಾನೆ! ನಮ್ಮ ಕಾಲುಗಳಿಗೆ ರಕ್ಷಣೆ ಕೊಡಬೇಕು. ಕಲ್ಲು, ಮುಳ್ಳುಗಳಿಂದ—ಹೊರಗಡೆ ಹೋದರೆ ಸಂಪರ್ಕಕ್ಕೆ ಬೇಕು. ಆದರೆ ಮನೆಯಲ್ಲೂ ಮೆಟ್ಟು ಹಾಕಿಕೊಂಡು ಬರುವುದಕ್ಕಾಗುತ್ತದೆಯೆ? ಅದು ಶುದ್ಧ ಆಭಾಸ ಅಲ್ಲವೆ? ಅದೂ ದೇವರ ಮನೆಗೆ ಹೋದರಂತೂ ಇನ್ನೂ ಆಭಾಸ ಅಲ್ಲವೆ? ನಮ್ಮ ಗುರುಗಳು ಎ. ಆರ್. ಕೃ. ಆಗಾಗ ಹೇಳುತ್ತಾ ಇದ್ದರು—'ಯಾವ ಪದಾರ್ಥ ಎಲ್ಲೆಲ್ಲಿ ಇರಬೇಕೋ ಅಲ್ಲಲ್ಲಿ ಇರಬೇಕು. ಆದರೆ ಎಲ್ಲಾ ಪದಾರ್ಥಾನೂ ಬೇಕು ಅಂತ.' ನಮಗೆ ಹಸುವೂ ಬೇಕು, ನಾಯಿಯೂ ಬೇಕು, ಕತ್ತೆಯೂ ಬೇಕು. ಆದರೆ ಹಸು ಸ್ಥಾನದಲ್ಲಿ ನಾಯಿ ಇಡೋಕೆ ಆಗುತ್ತದೆಯೆ? ಅಥವಾ ಇನ್ನೊಂದು ಇಡೋಕೆ ಆಗುತ್ತದೆಯೆ? ಹಾಗೆ ಭಾಷೇನೂ. ನಮಗೆ ಎಲ್ಲಾ ಭಾಷೆಯೂ ಬೇಕು. ಆದರೆ ಎಷ್ಟು ಬೇಕೋ ಅಷ್ಟು. ಪ್ರಾಧಾನ್ಯತೆ ಮಾತೃಭಾಷೆಗೆ ಕೊಡಬೇಕಾದ್ದು ನಮ್ಮ ಕರ್ತವ್ಯ. ಅಷ್ಟೇಕೆ? ನಾವು ಇಂಗ್ಲಿಷ್, ಇಂಗ್ಲಿಷ್ ಅಂತ ಕೇಳ್ತೇವೆ? ರಾಬರ್ಟ್ ಕ್ಲೈವ್ ಬದಲು, ನಮ್ಮ ದೇಶಕ್ಕೆ ಡ್ಯೂಪ್ಲೆ ಬಂದಿದ್ದರೆ, ನಾವೆಲ್ಲಾ ಇಷ್ಟು ಹೊತ್ತಿಗೆ ಫ್ರೆಂಚ್ ಭಾಷೆ ಕಲಿಯುತ್ತಿದ್ದೆವು. ಪ್ಲಾಸಿ ಕದನವಾಯಿತು—ಸ್ವಲ್ಪ ಹಿಂಚು

ಮುಂಚಾಯಿತು ಅಷ್ಟೆ. ನಮಗೆ ಇಂಗ್ಲಿಷ್ ಹೆಚ್ಚಾಗಿ ಪರಿಚಯವಾಗಿದೆ. ಆದ್ದರಿಂದ ಅದಕ್ಕೆ ಒಲಿದುಕೊಂಡಿದ್ದೇವೆ. ನಾಳೆ ಬೇರೆ ಭಾಷೆಗೆ ಒಲಿದರೆ ಅದಕ್ಕೂ ಅಷ್ಟೇ ಸ್ಥಾನ ಸಿಗುತ್ತೆ. ಫ್ರೆಂಚ್‌ನಲ್ಲಿ ಒಳ್ಳೊಳ್ಳೆ ಸಾಹಿತ್ಯ ಇಲ್ಲವೇನು? ಇಂಗ್ಲಿಷ್ ಸಾಹಿತ್ಯಕ್ಕಿಂತ ಅದ್ಭುತವಾದ ಸಾಹಿತ್ಯ ಇದೆ. ಆ ಇತರ ಭಾಷೆಗಳಲ್ಲಿ ನಮಗೆ ಪ್ರವೇಶವಿಲ್ಲ ಅಷ್ಟೆ. ಅದಕ್ಕೆ ಇಂಗ್ಲಿಷ್ ಒಂದಕ್ಕೆ ಹತ್ತಿಕೊಂಡು ಕೂತಿರೋದು. ನಾವು ಪರಭಾಷೆಯನ್ನೇನೋ ಕಲಿಯಬೇಕು. ಆದರೆ ಅದರಲ್ಲಿರುವ ಅಂತಸ್ಸತ್ವವನ್ನು ನಮ್ಮ ಭಾಷೆ ಕಡೆ ತಿರುಗಿಸಬೇಕು. ಜವಹರಲಾಲ್ ನೆಹರು, ಇಂಗ್ಲಿಷ್ ಸಾಹಿತ್ಯ ಎಷ್ಟರಮಟ್ಟಿಗೆ ಅಭ್ಯಾಸ ಮಾಡಿದ್ದರು ಬಲ್ಲಿರಾ? ಯಾವ ಸಾಹಿತಿಯೂ ಅಷ್ಟರಮಟ್ಟಿಗೆ ಅಭ್ಯಾಸ ಮಾಡಿರಲಾರ. ಗಾಂಧೀಜಿಯವರ ಇಂಗ್ಲಿಷ್ ಭಾಷೆ ಏನು ಸಾಮಾನ್ಯವೇ? ಆದರೆ ಅವರೆಲ್ಲಾ ತಮ್ಮ ಅಭಿಪ್ರಾಯಗಳನ್ನು ಯಾವ ಭಾಷೆಯಲ್ಲಿ ಪ್ರಚಾರ ಮಾಡಿದರು! ಹಿಂದಿ ಭಾಷೆಯಲ್ಲಿ ಅಲ್ಲವೇ? ಏತಕ್ಕೋಸ್ಕರ? ಅದು ನಮ್ಮ ಜನಕ್ಕೆ ಒಗ್ಗುತ್ತೆ ಎಂದು ಅಲ್ಲವೆ? ಹಿಂದೆ ಬುದ್ಧ ಏನು ಮಾಡಿದ? ಸಂಸ್ಕೃತದಲ್ಲಿ ಎಲ್ಲವನ್ನೂ ಓದಿ ತಿಳಿದುಕೊಂಡನು. ಅದನ್ನು ದೇಶ ಭಾಷೆ ಪಾಳಿ ಭಾಷೆಯಲ್ಲಿ ಹೇಳಿದ. ಏಕೆ? ನಮ್ಮ ಜನಾಂಗಕ್ಕೆ ಚೆನ್ನಾಗಿ ಹಿಡಿಸಲಿ ಎಂದು. ಅವರಿಗೇನು? ಸಂಸ್ಕೃತದಲ್ಲಿ ಹೇಳುವುದಕ್ಕೆ ಬರುತ್ತಿರಲಿಲ್ಲವೇ? ಬಸವಣ್ಣನವರು ಏನು ಮಾಡಿದರು? ವ್ಯಾಸರಾಯರು ಏನು ಮಾಡಿದರು? ಅವರಿಗೇನು ಸಂಸ್ಕೃತ ಬರುತ್ತಿರಲಿಲ್ಲವೇ? ಕನ್ನಡ ಭಾಷೆಯಲ್ಲಿ ತತ್ವವನ್ನು ಉಪದೇಶ ಮಾಡಿದರೆ ಜನಸಾಮಾನ್ಯರಿಗೆ ಚೆನ್ನಾಗಿ ಹಿಡಿಸುತ್ತೆ ಎಂದು ತಮ್ಮ ಧರ್ಮಬೋಧೆಯನ್ನು ದೇಶಭಾಷೆಗಳಲ್ಲೂ ಮಾಡಿದರು. ನಮ್ಮ ಭಾಷೆಯಲ್ಲಿ ಹೇಳಿದರೆ ಜನಗಳಿಗೆ ವಿಷಯ ತಿಳಿಯುತ್ತೆ. ಮತ್ತೊಂದು ಭಾಷೆಯನ್ನು ಅಭ್ಯಾಸ ಮಾಡಬೇಕು. ಆದರೆ ಮಾತೃಭಾಷೆಯಲ್ಲಿ ಅದನ್ನು ತಿಳಿಸಬೇಕು. ಆಗ ಅದು ಮೈಗೆ ಒಗ್ಗುತ್ತೆ.

ನಾನು: ಹಾಗಾದರೆ ಸಂಸ್ಕೃತ ಭಾಷೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಭಟ್ಟರು: ಸಂಸ್ಕೃತ ಭಾಷೆ ನೆರವು ಕನ್ನಡಕ್ಕೆ ಬೇಕು. ಅದು ಪೋಷಕ ಭಾಷೆ. ಆದರೆ ಈಗ ಏನಾಗಿ ಹೋಗಿದೆ ಅಂದರೆ, ಸಂಸ್ಕೃತದಲ್ಲಿರುವ ಬಹುಪಾಲು ಸಾಹಿತ್ಯ, ವೇದ, ಪುರಾಣ, ಉಪನಿಷತ್ತು, ರಾಮಾಯಣ, ಮಹಾಭಾರತ ಎಲ್ಲವೂ ಹೆಚ್ಚುಕಡಿಮೆ ಕನ್ನಡಕ್ಕೆ ಬಂದುಬಿಟ್ಟಿವೆ. ವೇದದಲ್ಲಿ "ಋಗ್ವೇದ ಸಂಹಿತೆ" ಪದಶಃ ಅರ್ಥ ಸ್ವರ ಪ್ರಸ್ತಾರದೊಂದಿಗೆ ಇಂಗ್ಲಿಷ್ – ಕನ್ನಡ, ಎರಡರಲ್ಲೂ ವಿವರಣೆಗಳೊಡನೆ ಬಂದಿದೆ. ನನಗೆ ಅನ್ನಿಸುತ್ತೆ, ಕನ್ನಡಕ್ಕೆ ಸಂಸ್ಕೃತದಿಂದ ಮುಖ್ಯವಾದದ್ದೆಲ್ಲಾ ಬಂದುಬಿಟ್ಟಿದೆ ಎಂದು. ಭಗವದ್ಗೀತೆಯಂತೂ ಎಲ್ಲಾ ಭಾಷೆಯಲ್ಲೂ ಬಂದುಬಿಟ್ಟಿದೆ. ಆದ್ದರಿಂದ ಈಚಿನ ಪೀಳಿಗೆಯವರು ಸಂಸ್ಕೃತವನ್ನು ಅಷ್ಟಾಗಿ ಹಚ್ಚಿಕೊಂಡು ಹೋಗುವ ಪ್ರಮೇಯವಿಲ್ಲ. ಅವರ ಕೆಲಸ ಸುಲಭವಾಗಿದೆ. ಪ್ರೌಢ ವ್ಯಾಸಂಗಕ್ಕೆ ಸಂಸ್ಕೃತ ಬೇಕಾಗಬಹುದು. ಜನಸಾಮಾನ್ಯನಿಗೆ ಸಂಸ್ಕೃತದಿಂದ ತಿಳಿಯಬೇಕಾದ್ದೆಲ್ಲಾ ಬಂದುಬಿಟ್ಟಿದೆ.

ಈಗಿನ ಗೊಂದಲ ಪರಿಸ್ಥಿತಿಯಲ್ಲಿ ನಮ್ಮ ದೇಶವನ್ನು ಕಾಪಾಡಬೇಕಾದರೆ, ಸಾಹಿತ್ಯ, ಧರ್ಮ. ಇವೆರಡರಿಂದ ಮಾತ್ರ ಸಾಧ್ಯ. ಧರ್ಮದಿಂದಲೇ ಭಾರತವು ಭಾವೈಕ್ಯತೆಯನ್ನು ಹಿಂದೆ ಸಾಧಿಸಿದ್ದು—ಈಗ ಸಾಧಿಸುತ್ತಾ ಇರುವುದು. ಅದಕ್ಕೇ ಪೂರ್ವಿಕರು ಹೇಳುತ್ತಾ ಇದ್ದರು. ಕಾಶಿಯಿಂದ ಗಂಗೆ ತಂದರೆ, ರಾಮೇಶ್ವರದಲ್ಲಿ ಸ್ವಲ್ಪ ಬಿಡು, ಇಲ್ಲಿಂದ ಮಣ್ಣು ತೆಗೆದುಕೊಂಡು ಹೋಗಿ ಅಲ್ಲಿ ಬಿಟ್ಟು ಬಾ ಎಂದು. ರಾಮಾಯಣ, ಮಹಾಭಾರತ, ವೇದ, ಪುರಾಣ, ಇತಿಹಾಸ, ಇವೆಲ್ಲಾ ನಮ್ಮನ್ನು ಒಂದುಗೂಡಿಸಿವೆ. ಶ್ರೀ ಮಲೈಮಹದೇಶ್ವರನ ಬೆಟ್ಟದ ಜಾತ್ರೆಗೆ ಅಷ್ಟೊಂದು ಲಕ್ಷೋಪಲಕ್ಷಜನ ಹೋಗುತ್ತಾರೆ. ಒಂದೇ ಒಂದು ದೃಷ್ಟಿಯಿಂದ ಆ ದೇವರ ದರ್ಶನಕ್ಕೆ ಹೋಗುತ್ತಾರೆ. ಅವರು ಯಾವ ಜಾತಿಯವರೇ ಆಗಲಿ, ಯಾವ ಭಾಷೆಯನ್ನೇ ಆಡುತ್ತಾ ಇರಲಿ ಎಷ್ಟೇ ಕಷ್ಟವಾಗಲಿ, ಅವರ ಗುರಿ ಒಂದೇ–ದೇವರ ದರ್ಶನ. ಒಂದು ಜಾನಪದ ಸಾಹಿತ್ಯ ಹೇಳಿದಾಗ ಮೈರೋಮಾಂಚನಗೊಳ್ಳುತ್ತೆ. ಒಂದು ರಾಮಾಯಣ, ಮಹಾಭಾರತ ಕಥೆ ಹೇಳಿದರೆ, ಕುರುಕ್ಷೇತ್ರದ ಹೆಸರು ಹೇಳಿದರೆ, ನಮಗೆ ರೋಮಾಂಚನವಾಗುತ್ತೆ. ಈ ಕೆಲಸ ರಾಜಕೀಯದಿಂದ ಸಾಧ್ಯವೇ? ಇದು ದೇಶಭಾಷೆಗಳಾದ ಸಾಹಿತ್ಯದಿಂದ ಸಾಧ್ಯ. ಕನ್ಯಾಕುಮಾರಿಯಿಂದ ಹಿಮಾಲಯದ ತನಕ ಇರುವ ಜನರ ಭಾವೈಕ್ಯತೆಯನ್ನು, ದೇಶಾಭಿಮಾನವನ್ನು ಸ್ಫುರಣಗೊಳಿಸುವ ಸೋಪಾನ ಅದು.

ಅದ್ಭುತ ಸಾಹಿತ್ಯ ಶಕ್ತಿಯ

ಸೊಮರ್‌ಸೆಟ್ ಮಾಮ್

ದಯಾನಂದ ತೊರ್ಕೆ

ಇಂಗ್ಲಿಷ್ ಸಾಹಿತ್ಯದ ಓದುಗರು ಮಾಮ್ ಹೆಸರನ್ನರಿತಿರುವದು ಸಾಮಾನ್ಯವಾದ ವಿಷಯ. ಆದರೆ ಮಾಮ್ ಕೇವಲ ಆಂಗ್ಲ ಸಾಹಿತ್ಯ ಪ್ರೇಮಿಗಳಿಗಷ್ಟೇ ಸೀಮಿತರಾದವರಲ್ಲ. ಇಪ್ಪತ್ತನೆಯ ಶತಮಾನದ ಬಹುಶ್ರುತ ಪ್ರತಿಭೆಯ ಈ ಸಾಹಿತಿ ಎಲ್ಲರಿಗೂ ಸುಪರಿಚಿತನು. ಇವರ ಅನೇಕ ಕಥೆಗಳು, ನಾಟಕಗಳು, ಕಾದಂಬರಿಗಳು ಜನಪ್ರಿಯತೆ ಗಳಿಸಿವೆಯಷ್ಟೇ ಅಲ್ಲ; ಹಲವಾರು ಕೃತಿಗಳು ಜಗತ್ತಿನ ಅನೇಕಾನೇಕ ಭಾಷೆಗಳಿಗೆ ತರ್ಜುಮೆಗೊಂಡಿವೆ; ಕಾದಂಬರಿಗಳು ಚಲಚಿತ್ರಗಳಾಗಿವೆ ; ನಾಟಕಗಳು ರಂಗಭೂಮಿಗಳ ಮೇಲೆ ಬೆಳಗಿವೆ. ಹೀಗಾಗುವದು ಸಾಮಾನ್ಯವಾದ ಮಾತಲ್ಲ. ಒಬ್ಬ ಸಾಹಿತಿಯ ಪ್ರತಿಭೆಗೆ ಸಿಗಬಹುದಾದ ಉತ್ತುಂಗ ಗೌರವ ಇದು.

ಅದ್ಭುತ ಪಾಂಡಿತ್ಯದ ಸಾಹಿತಿ ಸೊಮರ್‌ಸೆಟ್ ಮಾಮ್ ತಮ್ಮ ೯೧ ವರ್ಷಗಳ ಜೀವಿತದ ಅವಧಿಯಲ್ಲಿ ಗಳಿಸಿದ ಕೀರ್ತಿ ಅಪಾರವಾದದ್ದು. ವಿಲಿಯಂ ಸೊಮರ್‌ಸೆಟ್ ಮಾಮ್ (ಇದು ಇವರ ಪೂರ್ಣ ನಾಮಧೇಯ) ಹುಟ್ಟಿದ್ದು ವಕೀಲರ ಮನೆತನದಲ್ಲಿ. ನ್ಯಾಯಶಾಸ್ತ್ರದಲ್ಲಿ ಪ್ರಸಿದ್ಧಗೊಂಡ ಮನೆತನ ಇದು. ಇವರ ಅಜ್ಜ ನ್ಯಾಯಶಾಸ್ತ್ರ ಪಂಡಿತ. ಲಾ ಸೊಸಾಯಿಟಿಯ ಸಂಸ್ಥಾಪಕರಲೊಬ್ಬ; ಅನೇಕ ಕಾಯಿದೆ ಪುಸ್ತಕಗಳ ಜನ್ಮದಾತ. ತಂದೆ ಪ್ಯಾರಿಸಿನಲ್ಲಿಯ ಬ್ರಿಟಿಷ್ ರಾಯಭಾರಿ ಕಚೇರಿಯಲ್ಲಿ ಕಾಯಿದೆ ಸಲಹೆಗಾರರಾಗಿದ್ದವರು. ಸೊಮರ್‌ಸೆಟ್ ಮಾಮ್‌ರ ಜನ್ಮ ೧೮೭೪ರ ಜನೆವರಿ ೨೫ರಂದು ಪ್ಯಾರಿಸಿನಲ್ಲೇ ಆಯಿತು.

ಪ್ಯಾರಿಸಿನಲ್ಲಿ ಮಾಮ್-ತಂದೆ-ತಾಯಿಯ ಜೊತೆ ಹತ್ತು ವರುಷ ಕಾಲ ಸುಖವಾಗಿ ಕಳೆದರು. ಅನಂತರ ತಂದೆ ಸಾವನ್ನಪ್ಪಿದ್ದರಿಂದ ಮಾಮ್ ತಾಯಿಯೊಡನೆ ಇಂಗ್ಲೆಂಡಿಗೆ ಬರಬೇಕಾಯಿತು. ಇಲ್ಲಿಯೇ ಮಾಮ್‌ರ ವಿದ್ಯಾಭ್ಯಾಸ ಪ್ರಾರಂಭವಾದುದು. ಕ್ರಮೇಣ ಆಂಗ್ಲ ಸಾಹಿತ್ಯದಲ್ಲಿ ಆಸಕ್ತಿ ಚಿಗುರತೊಡಗಿತು. ವಿದ್ಯೆಯ ಪ್ರಾರಂಭಿಕ ಮೆಟ್ಟಿಲನ್ನೇರಿ ಜರ್ಮನಿಯ ಹೀಡನ್‌ಬರ್ಗ್ ವಿಶ್ವವಿದ್ಯಾನಿಲಯ ಸೇರಿದಾಗ ಇವರಲ್ಲಿ ಚಿಗುರಿದ್ದ ಸಾಹಿತ್ಯಾಭ್ಯಾಸದ ಚಟ ಹೆಮ್ಮರವಾಗಿ ಬೆಳೆಯತೊಡಗಿತು. ಆದರೆ ಒಂದು ಆಶ್ಚರ್ಯದ ಮಾತೆಂದರೆ, ಮಾಮ್ ಹೀಡನ್‌ಬರ್ಗ್ ಸೇರಿದ್ದು ಸಾಹಿತ್ಯಾಭ್ಯಾಸಿಯಾಗಿ ಅಲ್ಲ; ವೈದ್ಯಕೀಯದ ಓದಿಗಾಗಿ. ಆದರೆ ಮನಸ್ಸು ಸಿಲುಕಿದ್ದು ಸಾಹಿತ್ಯದಲ್ಲಿ. ಹೀಗಾಗಿ ವೈದ್ಯಕೀಯದಲ್ಲಿ ಆಸಕ್ತಿಯೇ ಉಳಿಯದಾಯಿತು.

ಆದರೂ ಮಾಮ್ ಓದು ಪೂರ್ತಿಗೊಳಿಸಿ "ಡಾಕ್ಟರ್" ಆಗಿ ಬಂದು ೧೮೯೭ರಲ್ಲಿ ಲಂಡನ್ನಿನ ಸೇಂಟ್ ಥಾಮಸ್ ಹಾಸ್ಪಿಟಲ್ಲಿನಲ್ಲಿ ಹೆಚ್ಚಿನ ತರಬೇತಿಗಾಗಿ ಸೇರಿದರು. ಅಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಇವರ ಮೊದಲನೆಯ ಕಾದಂಬರಿ "ಲಿಝು ಆಫ್ ಲ್ಯಾಂಬೆಥ್" (Liza of Lambeth) ಪ್ರಕಟಗೊಂಡಿತು (೧೮೯೭). ಒಂದೆಡೆ ರೋಗಿಗಳ ಸೇವೆ–ಇನ್ನೊಂದೆಡೆ ಸಾಹಿತ್ಯ ಸೇವೆ. ಇದು ಮಾಮ್‌ರ ಕರ್ತವ್ಯ ಕಾರ್ಯಗಳ ಸಂಗಮವಾಯಿತು. ಮೊದಲನೆಯ ಕಾದಂಬರಿಯಲ್ಲಿ ಚಿತ್ರಿತವಾದದ್ದು ತಾನು ಕಂಡ ರೋಗಿಗಳ ವಿವಿಧ ಮುಖದ ಜೀವನ ಕಥೆ. ಇವರ ಉದ್ಯೋಗ ಈ ದೃಷ್ಟಿಯಿಂದ ತುಂಬ ಸಹಾಯಕವೇ ಆಯಿತೆನ್ನಬೇಕು. ಕಂಡ ಜೀವಂತ ಜನಗಳಿಂದ ಕೃತಿಯಲ್ಲೂ ಜೀವ ಮೂಡಿತು. ಲಿಝಾ ಆಫ್ ಲ್ಯಾಂಬೆಥ್ ಅಪೂರ್ವ ಯಶಸ್ಸು ಗಳಿಸಿತು. ಇದರಿಂದ ಮಾಮ್ ಅವರಿಗೆ ಕೀರ್ತಿ ಲಭಿಸಿತು.

ಮೊದಲನೆಯ ಕೃತಿಯ ಯಶಸ್ಸಿನಿಂದ ಉತ್ಸಾಹಗೊಂಡ ಮಾಮ್ ತಮ್ಮ ಆಸಕ್ತಿಯನ್ನೆಲ್ಲ ಸಾಹಿತ್ಯದೆಡೆ ಕೇಂದ್ರೀಕರಿಸಿ ವೈದ್ಯಕೀಯ ಉದ್ಯೋಗಕ್ಕೆ ಶರಣು ಹೊಡೆದರು. ಇಲ್ಲಿಂದ ಮುಂದೆ ಇವರ ಜೀವನ ಸಾಹಿತ್ಯ ಸಂಗ್ರಾಮದಲ್ಲಿ ತೊಡಗಿತು. ಇದರಿಂದ ಆಂಗ್ಲ ಸಾಹಿತ್ಯದ ಭಾಗ್ಯ ತೆರೆದಂತಾಯಿತು.

ಮಾಮ್ ವಿಶ್ವಪ್ರೇಮಿ. ಜಗತ್ತಿನ ಜನರೆಲ್ಲ ತನ್ನವರೆಂಬ ಭಾವನೆ ಇವರದು. ಎಲ್ಲ ಬಗೆಯ ಜನರೊಡನೆ ಹತ್ತಿರದ ಸಂಪರ್ಕ ಬೆಳೆಸಿಕೊಳ್ಳಲು ಹಲವು ದೇಶಗಳನ್ನು ಸಂದರ್ಶಿಸಿದರು. ಈ ರೀತಿ ಜಗತ್ತಿನಾದ್ಯಂತ ಸುತ್ತಾಟ

ಪ್ರಾರಂಭವಾದದ್ದು ಇವರು ಸಾಹಿತ್ಯದಲ್ಲಿ ಪಾದಾರ್ಪಣ ಮಾಡಿದಾಗಿನಿಂದಲೇ. ಈ ವಿಶ್ವಪರ್ಯಟನದ ಅನುಭವ ದಿಂದ ಸಾಹಿತ್ಯದಲ್ಲಿ ತುಂಬ ಸಹಾಯವಾಯಿತು. ವಿಶ್ವದ ಘಟನೆಗಳು, ಬಹುಬಗೆಯ ಜೀವನದ ಕಥೆಗಳು ಕೃತಿಗಳ ನಿರ್ಮಾಣಕ್ಕೆ ಆಹಾರವನ್ನೊದಗಿಸಿದವು. ಇದರಿಂದಾಗಿ ಕೃತಿಗಳಲ್ಲಿ ನೈಜತೆ ಮೂಡಿತು.

ಲೇಖನ ಕಾರ್ಯ ಹೂವಿನ ಹಾಸಿಗೆಯಲ್ಲ. ಈ ಕಠೋರ ಸತ್ಯದ ಅರಿವು ಮಾಮ್ ಅವರಿಗೂ ಆಗದಿರಲಿಲ್ಲ. ಮೊದಲ ನೆಯ ಕೃತಿ (ಕಾದಂಬರಿ) ಜನಪ್ರಿಯತೆ ಗಳಿಸಿದರೂ ಹಣ ಗಳಿಸಿ ಕೊಡದಾಯಿತು. ಹೀಗಾಗಿ ಇವರು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿಕೊಳ್ಳಬೇಕಾಯಿತು. ಸಾಹಿತ್ಯವನ್ನು ನಂಬಿ ವೈದ್ಯಕೀಯ ವೃತ್ತಿಗೆ ಶರಣು ಹೊಡೆದಿದ್ದ ಮಾಮ್ ಕೊನೆಗೆ ಉದರ ನಿರ್ವಹಣೆಗಾಗಿ ಹಣ ಸಂಪಾದಿಸಲು ನಾಟಕಗಳನ್ನು ಬರೆದು, ಕಂಪನಿಗಳಿಗೆ ಮಾರಬೇಕಾಯಿತು.

ಇವರ ಭಾಗ್ಯದ ಬಾಗಿಲು ತೆರೆದದ್ದು ೧೯೦೭ರಲ್ಲಿ. ಲಂಡನ್ನಿನ ನಾಟಕ ಕಂಪನಿಯೊಂದು "ಕಚಡಾ" ನಾಟಕಗಳನ್ನಾಡಿ ದಿವಾಳಿಯೆದ್ದು ಕುಳಿತಿತ್ತು. ಅದು ಮತ್ತೆ ಚೇತರಿಸಿಕೊಳ್ಳಬೇಕಾದರೆ ಹೆಸರಾಂತ ಸಾಹಿತಿಯ ಉತ್ತಮ ನಾಟಕವನ್ನಾಡಿದರೇ ಸಾಧ್ಯ ಎಂಬ ಸ್ಥಿತಿ ಅದಕ್ಕೆ. ಆಗ ಮಾಮ್‌ರ "ಲೇಡಿ ಫ್ರೆಡರಿಕ್" ನಾಟಕ ಅದರ ಗಮನ ಸೆಳೆಯಿತು. ನಾಟಕ ಕಂಪನಿಯವರು ಮಾಮ್‌ರ ಬಳಿಗೆ ಧಾವಿಸಿದರು. ಆದರೆ ಮಾಮ್ ಈ ವ್ಯವಹಾರದಲ್ಲಿ ಸಾಕಷ್ಟು ಜಿಗುಟುತನವನ್ನೇ ತೋರಿಸಿದರು. ಇದರ ಪರಿಣಾಮವಾಗಿ ಕಂಪನಿಯೊಡನೆ ಒಳ್ಳೇ ವ್ಯಾಪಾರವೇ ಕುದುರಿತು. ಮಾಮ್‌ಗೆ ಕೈತುಂಬ ಹಣ ಸಂಪಾದನೆಯಾದುದಲ್ಲದೆ ಕಂಪನಿಯೂ ಚೇತರಿಸಿಕೊಂಡಿತು.

ಮುಂದೆ ಹಲವು ನಾಟಕ ಕಂಪನಿಯ ಮತ್ತು ಸಿನೇಮಾದ ಜನ ಮಾಮ್‌ರ ಮನೆ ಬಾಗಿಲಿಗೆ ಎಡತಾಕತೊಡಗಿದರು. ಇವರಿಗೆಲ್ಲ ಮಾಮ್ ಬರೆದ ನಾಟಕ, ಕಥೆಗಳೇ ಬೇಕು. ಇದಕ್ಕಾಗಿ ಅವರು ಇವರು ಕೇಳಿದಷ್ಟು ಹಣ ಕೊಡಲೂ ಸಿದ್ಧರಾಗಿದ್ದರು. ಲಕ್ಷ್ಮಿ ಒಲಿದಿರುವಾಗಲೇ ಸಿಕ್ಕಷ್ಟನ್ನು ಸಂಪಾದಿಸಿಕೊಳ್ಳಬೇಕೆಂದು ಮಾಮ್ ಅಂದುಕೊಂಡರು. ಸಾಹಿತಿಯಾದವನಿಗೆ ಇಂಥ ಭಾಗ್ಯ ಬರುವದು ಅಪರೂಪ. ಕೃತಿಗಳು ದುಬಾರಿಯಾಗಿದ್ದರೂ ನಿರ್ಮಾಪಕರು ಹಿಂದೇಟು ಹಾಕದೆ ಬೇಡಿದಷ್ಟನ್ನು ತೆತ್ತು ತೆಗೆದುಕೊಳ್ಳುತ್ತಿದ್ದುದರಿಂದ ಅದು ಚೇತೋಹಾರಿಯಾಯಿತು. ಹಣ ಸಂಪಾದಿಸತೊಡಗಿದ ಮಾಮ್‌ರ ಜೀವನ ಸುಗಮವಾಗಿ ಸಾಗತೊಡಗಿತು.

ಮಾಮ್‌ರ "ಆಫ್ ಹ್ಯೂಮನ್ ಬಾಂಡೇಜ್" (Of Human Bondage) ಅತ್ಯುತ್ತಮವಾದ ಕಾದಂಬರಿಗಳಲ್ಲೊಂದು. ಇದು ಪ್ರಕಟವಾಗಿದ್ದು ೧೯೧೫ರಲ್ಲಿ. ಆದರೆ ಇವರು ನಿಜವಾದ ಕೀರ್ತಿ ಗಳಿಸಿದ್ದು ಇಪ್ಪತ್ತು ವರ್ಷಗಳ ನಂತರ. ಅಲ್ಲಿಯವರೆಗೂ ಈ ಕೃತಿಯ ಬಗೆಗೆ ಜನರಲ್ಲಿ ಹಿರಿಯ ಭಾವನೆ ಮೂಡಿರಲಿಲ್ಲ. ಆದರೆ ೧೯೩೫ರಲ್ಲಿ ಅಮೆರಿಕೆಯ ಲೇಖಕನೊಬ್ಬ ಇದನ್ನು ಓದಿ ಅತ್ಯುತ್ತಮವಾಗಿ ವಿಮರ್ಶೆ ಬರೆದು ಪ್ರಕಟಿಸಿದಾಗ ಆಂಗ್ಲ ಜನ ಎಚ್ಚತ್ತರು. ಅನೇಕ ಸಾಹಿತಿಗಳು ಇದರ ಮೇಲೆ ಉದ್ದಾಮ ವಿಮರ್ಶೆ ಬರೆದರು. ಇದರಿಂದಾಗಿ "ಆಫ್ ಹ್ಯೂಮನ್ ಬಾಂಡೇಜ್" ಇಂಗ್ಲಿಷ್ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಗಳಿಸಿತು.

ಮಾಮ್‌ರವರಿಗೆ ಭಾರತವೆಂದರೆ ತುಂಬ ಪ್ರೀತಿ. ಭಾರತ ದೇಶ, ಭಾರತ ಸಂಸ್ಕೃತಿಗಳನ್ನಿವರು ತುಂಬ ಮೆಚ್ಚಿಕೊಂಡಿದ್ದರೆನ್ನುವುದಕ್ಕೆ ಇವರ "ಲೇಖಕನ ಟಿಪ್ಪಣಿ ಪುಸ್ತಕ" (A Writer's Note Book) ವೇ ಸಾಕ್ಷಿ. ಇದರಲ್ಲಿ ಇವರು ಈ ದೇಶದ ಬಗೆಗೆ ತುಂಬ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದಾರೆ. ತಾವಿಲ್ಲಿ ಕಳೆದ ಸುಂದರ ದಿನಗಳ ನೆನಪನ್ನು ಚಿತ್ರಿಸಿದ್ದಾರೆ. ಎರಡನೆಯ ಮಹಾ ಯುದ್ಧದ ನಂತರ ಮತ್ತು ಅದಕ್ಕೂ ಮುಂಚೆ ಒಮ್ಮೆ ಅವರು ಭಾರತಕ್ಕೆ ಬಂದಿದ್ದರು.

ಮೊದಲನೆಯ ಯುದ್ಧದ ಹೊತ್ತಿಗೆ ಇವರು ಫ್ರಾನ್ಸಿನಲ್ಲಿದ್ದು ಸಂಚಾರಿ ವೈದ್ಯಕೀಯ ಪಥವೊಂದರಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ಅನಂತರ ಸ್ವಿಜರ್ಲಂಡ್ ಮತ್ತು ರಶಿಯಾಗಳಲ್ಲೂ ವೈದ್ಯಪಥದಲ್ಲಿ ಸೇವೆ ಸಲ್ಲಿಸಿದ್ದುಂಟು. ಈ ಹೊತ್ತಿಗಾದ ಅನುಭವವೇ "Ashenden" ಪುಸ್ತಕವಾಗಿ ಬಂದದ್ದು.

ಯುದ್ಧಾನಂತರ ಮಾಮ್ ಫ್ರಾನ್ಸಿನ ದಕ್ಷಿಣ ರಾಜ್ಯದ ಹಳ್ಳಿಯೊಂದರಲ್ಲಿ ವಾಸ್ತವ್ಯ ಹೂಡಿದರು. ೨ನೆಯ ಮಹಾ ಯುದ್ಧ ಪ್ರಾರಂಭವಾಗುವವರೆಗೂ ಅವರು ಅಲ್ಲಿ ಇದ್ದರು. ಈ ಮಧ್ಯೆ ಬ್ರಿಟಿಷ್ ಸರ್ಕಾರದ ಕೇಳಿಕೆಯ ಮೇರೆಗೆ ಫ್ರೆಂಚ್-ಇಂಗ್ಲಿಷ್ ಬಾಂಧವ್ಯದ ಮೇಲೆ ಬೆಳಕು ಚಲ್ಲುವ ಗ್ರಂಥವೊಂದನ್ನು ಬರೆದುಕೊಟ್ಟರಲ್ಲದೆ ಫ್ರೆಂಚ್ ಇತಿಹಾಸವನ್ನು ತಿಳಿಸುವ ಹೊತ್ತಿಗೆಯನ್ನೂ ಸಿದ್ಧಪಡಿಸಿದರು.

ಫ್ರಾನ್ಸಿನ ಸ್ವಾತಂತ್ರ್ಯ ಯುದ್ಧದ ನಂತರ ಮಾಮ್ ಆಂಗ್ಲ ನಿರಾಶ್ರಿತರೊಡನೆ ಫ್ರಾನ್ಸ್ ದೇಶವನ್ನು ತ್ಯಜಿಸಿ ಹೊರಬೀಳಬೇಕಾಯಿತು. "ಸ್ಟ್ರಿಕ್ಟ್‌ಲಿ ಪರ್ಸನಲ್" (Strictly Personal) ಎಂಬ ಪುಸ್ತಕದಲ್ಲಿ ಅವರು ಆಗಿನ ತಮ್ಮ ಅನುಭವವನ್ನು ಬರೆದಿದ್ದಾರೆ. ನಾಝಿಗಳ ಆಕ್ರ

ಮಣದ ದೌರ್ಜನ್ಯಗಳನ್ನು ವರ್ಣಿಸುವ ಈ ಪುಸ್ತಕ ಬಹು ಜನಪ್ರಿಯತೆಯನ್ನು ಗಳಿಸಿತು.

ಫ್ರಾನ್ಸಿನಿಂದ ಹೊರಬಿದ್ದ ಮಾಮ್ ಮತ್ತೆ ಇಂಗ್ಲಂಡಿಗೆ ಹೋದರೂ ಸ್ವಲ್ಪ ದಿನದಲ್ಲಿ ಅಮೇರಿಕೆಗೆ ತೆರಳಿ ಅಲ್ಲಿ ನೆಲೆಸಿದರು.

ಮಾಮ್‌ರ ನಾಟಕಗಳಲ್ಲಿ ಮೂರು ವಿಧಾನಗಳಿವೆ. ಹಾಸ್ಯ, ಗಾಂಭೀರ್ಯ ಮತ್ತು ವಿಡಂಬನೆ ಇವುಗಳನ್ನು ನಾವು ಬೇರೆ ಬೇರೆಯಾಗಿ ಕಾಣುತ್ತೇವೆ. ಹಾಸ್ಯಕ್ಕೆ "The Letter", ಗಾಂಭೀರ್ಯಕ್ಕೆ "The Sacred Flame" ಮತ್ತು ವಿಡಂಬನೆಗೆ "Shepply" ಈ ಕೃತಿಗಳನ್ನು ಉದಾಹರಿಸಬಹುದು. "ಅವರ್ ಬೆಟರ್ಸ್" (Our Betters) ಇದು ಆಧುನಿಕ ನಾಟಕಕ್ಕೆ ಒಂದು ಅತ್ಯುತ್ತಮವಾದ ಉದಾಹರಣೆ. ನಾಟಕಗಳಷ್ಟೇ ಅಲ್ಲ; ಇವರ ಕಥೆ, ಕಾದಂಬರಿಗಳೂ ಆಧುನಿಕ ಬರೆವಣಿಗೆಯನ್ನು ಚೆನ್ನಾಗಿ ನಿರೂಪಿಸುತ್ತವೆ.

ಇವರ ಕೊನೆಯ ಕಾದಂಬರಿ "ಕೆಟಲಿನ್" (Catalion) ಬೆಳಕು ಕಂಡದ್ದು ೧೯೪೮ರಲ್ಲಿ. ಈ ಹೊತ್ತಿಗಾಗಲೇ ಇವರು ತಮ್ಮ ದೀರ್ಘ ಬಾಳಿನ ಅನುಭವದ ಹೊತ್ತಗೆ ಮತ್ತು ಇನ್ನಿತರ ಸಾಮಾಜಿಕ ಲೇಖನಗಳನ್ನು ಬರೆದು ಮುಗಿಸಿದ್ದರು. ಕೊನೆ ಕೊನೆಗೆ ಇವರಿಗೆ ಕಥೆ-ಕಾದಂಬರಿಗಳ ನಿರ್ಮಾಣದಲ್ಲಿ ಅಷ್ಟಾಗಿ ಆಸಕ್ತಿ ಉಳಿಯದಾಯಿತು. ಹೀಗಾಗಿ ೧೯೪೮ರ ಕೃತಿಯೇ ಕೊನೆಯದು.

ಸಾಹಿತ್ಯದಿಂದ ಮೊದಲು ಸಂಕಷ್ಟಗಳನ್ನನುಭವಿಸಿದರೂ ಮಾಮ್ ಸಂಪತ್ತು ಗಳಿಸಿದ್ದು ಸಾಹಿತ್ಯದಿಂದಲೇ. ಸರಸ್ವತಿಯು ಲಕ್ಷ್ಮಿಯ ಬೆನ್ನೇರಿ ಬಂದು ಕುಳಿತಿದ್ದಳು ಇವರಲ್ಲಿ. ಇವರು ಗಳಿಸಿದ ಸಂಪತ್ತು ಎಷ್ಟಾಯಿತೆಂದರೆ ಕೊನೆಗಿವರು ಹೆಚ್ಚು ಉಳಿದ ೧.೩೩ ಲಕ್ಷ ರೂಪಾಯಿಗಳನ್ನು (೧೦,೦೦೦ ಡಾಲರ್) ತಾನು ಕಲಿತ ಶಾಲೆಗೆ ಮತ್ತು ಕಾಲೇಜಿಗೆ ದತ್ತಿ ಕೊಟ್ಟರು. ಈಗ ಆ ವಿದ್ಯಾಸಂಸ್ಥೆಗಳು ಈ ಹಣದಿಂದ ಬರುವ ಬಡ್ಡಿಯನ್ನು ಆಂಗ್ಲ ಸಾಹಿತ್ಯದಲ್ಲಿ ಮೇಲಿನ ರ್‍ಯಾಂಕು ಗಳಿಸುವ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಕೊಡುತ್ತಿವೆ.

ಮಾಮ್ ಅವರಿಗೆ ಜಗತ್ತಿನ ಅನೇಕ ಸಂಘ-ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಪದವಿಗಳನ್ನಿತ್ತು ಗೌರವಿಸಿವೆ. ಹಿಡನ್‌ಬರ್ಗ್ ವಿಶ್ವವಿದ್ಯಾನಿಲಯ ಗೌರವ ಸೆನೇಟರ್ ಪದವಿಯಿತ್ತು ಗೌರವಿಸಿತು. ೧೯೬೧ರಲ್ಲಿ ಇವರು ಸಾಹಿತ್ಯ ಕೂಟದ ಸದಸ್ಯರಾದರು. ಈ ಸದಸ್ಯತ್ವ ಒಬ್ಬ ಸಾಹಿತಿ ಪಡೆಯಬಹುದಾದ ಒಂದು ಅತ್ಯುಚ್ಚ ಗೌರವ.

ಎರಡು ವರ್ಷಗಳ ಹಿಂದಷ್ಟೇ ಮಾಮ್ ಈ ಲೋಕ ತ್ಯಜಿಸಿ ಹೋದರು. ಆದರೆ ಇವರ ನೆನಪು ತಲೆತಲಾಂತರದಲ್ಲಿ ಸಾಹಿತ್ಯ ಪ್ರೇಮಿಗಳಿಗೆ ಚಿರಂತನವಾಗುಳಿಯುವದರಲ್ಲಿ ಸಂಶಯವಿಲ್ಲ.

[ಮಾಮ್ ಬರೆದ The Razors Edge ಕಾದಂಬರಿಯು ಭಾರತದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿದ್ದು ಅವರ ಜನಪ್ರಿಯ ಕಾದಂಬರಿಗಳಲ್ಲಿ ಒಂದಾಗಿದೆ.—ಸಂ.]

ಭವಸಾರ ಮನೋಭಾವ

ಪೂಸುವ ಬೂದಿಗಂಗಭವನಂ ಭವಸಾರನನಾರ್ದು ಸುಟ್ಟ ಭೂ
ತೇಶನ ಬುದ್ಧಿಗುದ್ದವಜಿಇದಾಂ ಪೊಗಟಿಂ ಪೊಗಟ್ವೆಂ ಮನೋಜನಂ
ಕೇಸುರಿಯಂತೆ ಪರ್ಬಿ ಪಟುವಾಗಿ ಪೊದಟ್ಟೂಳುರ್ದಂತರಂಗಮಂ
ಕಾಸಿ ಕಪಾಲಿಯಂ ಪಿಡಿದೊಜಿಲ್ದರೆವೆಣ್ಣನೆ ಮಾಡಿಬಿಟ್ಟನಂ

ಪೂಸಿಕೊಳ್ಳುವ ಬೂದಿಗೋಸ್ಕರವಾಗಿ (ಭವಸಾರನಾದ) ಇಹಜನ್ಮವನ್ನು ಸಾರವತ್ತಾಗಿ ಮಾಡುವ (ಅಂಗಭವನಂ) ಮನ್ಮಥನನ್ನು (ಆರ್ದು) ಅಟ್ಟಹಾಸದಿಂದ ಕೂಗಿ ಸುಟ್ಟ (ಭೂತೇಶನ) ಈಶ್ವರನ ಬುದ್ಧಿಗೆ (ಉದ್ದವಜಿಇದು) ಸಾಷ್ಟಾಂಗ ಪ್ರಣಾಮಮಾಡಿ (ನಾನು ಅವನನ್ನು) ಹೊಗಳುವುದಿಲ್ಲ. (ಅದಕ್ಕೆ ಬದಲಾಗಿ) ಕೆಂಪಾದ ಉರಿಯಂತೆ ಹಬ್ಬಿ, (ಪಟು) ಸಮರ್ಥವಾಗಿ, (ಪೊದಟ್ಟು) ಹರಡಿಕೊಂಡು, (ಅಳುರ್ದು) ವ್ಯಾಪಿಸಿಕೊಂಡು, (ತನ್ನನ್ನು ಸುಟ್ಟ ಅದೇ ಭೂತೇಶನ) ಅಂತರಂಗವನ್ನು ಕಾಯಿಸಿ, (ಕಪಾಲಿಯಂ) ವಿರಾಗಿಯಾಗಿ ಕಪಾಲವನ್ನು ಹಿಡಿದಿದ್ದ ಅವನನ್ನು ಹಿಡಿದು, (ಒಜಿಲ್ದು) ಜಯಕಾರವನ್ನು ಕೂಗಿ, ಅರ್ಧನಾರಿಯನ್ನಾಗಿ ಮಾಡಿಬಿಟ್ಟವನನ್ನು, (ಮನೋಜನಂ) ಮನ್ಮಥನನ್ನು (ಪೊಗಟ್ವೆಂ) ಹೊಗಳುತ್ತೇನೆ!

ನೇಮಿಚಂದ್ರ

ಸುರಂಗ ಕವಿಯ ಕಾಲನಿರ್ಣಯ

'ಕುಶಲಾನುಜ'

'ತ್ರಿಷಷ್ಟಿಪುರಾತನ ಚಾರಿತ್ರಂ' ಎಂಬ ಕಾವ್ಯದ ಕರ್ತೃ ಕವಿಚಕ್ರವರ್ತಿ ಸುರಂಗ. ಕವಿ ಈ ಕೃತಿಯಲ್ಲಿ ಎಲ್ಲಿಯೂ ತನ್ನ ಕಾಲದ ವಿಷಯವನ್ನೆತ್ತಿಲ್ಲ. ಇವನು ಹಿಂದಣ ಕನ್ನಡ ಕವಿಗಳಲ್ಲಿ ಯಾರ ಹೆಸರನ್ನೂ ಹೇಳಿಲ್ಲ. ಇವನ ಹೆಸರು ಮತ್ತಾವ ಕನ್ನಡ ಕವಿಗಳೂ ಹೇಳಿದಂತೆ ಕಂಡು ಬರುವುದಿಲ್ಲ. ಆದುದರಿಂದ ಕವಿಚರಿತೆಕಾರರು 'ಇವನ ಕಾಲವನ್ನು ನಿರ್ಧರಿಸುವುದಕ್ಕೆ ಆವ ಆಧಾರವೂ ಇಲ್ಲ' ಎಂದಿದ್ದಾರೆ. ಆದರೆ ಸುರಂಗನು ಕವಿಸಂಪ್ರದಾಯದಂತೆ 'ಕುಕವಿನಿಂದೆ'ಯನ್ನು ಮಾಡುವ ವೇಳೆ ಸರ್ವಜ್ಞನನ್ನು ಪ್ರಾಸ್ತಾವಿಕವಾಗಿ ಹೆಸರಿಸಿದ್ದಾನೆ ಎಂಬುದನ್ನು ಇಲ್ಲಿ ಸ್ಮರಿಸ ಬಹುದಾಗಿದೆ.

ಕುಕವಿನಿಂದೆ ಮಾಡದ ಕವಿಯಿಲ್ಲ. ಇದಕ್ಕೆ ಸುರಂಗನೂ ಅಪವಾದವಲ್ಲ. 'ಕಾಗೆ ಮೆಚ್ಚದೊಡೆ ಕೋಕಿಳನಾದದ ಪೆರ್ಮೆ ಮಾಣ್ಬುದೇ.' ಅದೇ ರೀತಿಯಲ್ಲಿ ದುರ್ಜನರು ತನ್ನ ಕಾವ್ಯವನ್ನು ಹೀನೈಸಿದರೂ ಸಜ್ಜನರು ತನ್ನ ಕೃತಿಯನ್ನು ಆದರಿಸುವರೆಂಬ ನಂಬಿಕೆ, ಆತ್ಮವಿಶ್ವಾಸ ಕವಿಗಿದೆ. ಆದರೆ ಕೆಲವೊಮ್ಮೆ ದುರ್ಜನರ ಮಾತೇ ಮೇಲಾಗಿ 'ಸತ್'ಗಿಂತಲೂ 'ಅಸತ್ತಿ'ಗೇ ಹೆಚ್ಚು ಬೆಲೆ ಬರುವುದುಂಟು ಎಂದು ಸಮರ್ಥಿ ಸುವುದಕ್ಕಾಗಿ :

ಎರಡುಂ ನಾಲಗೆಯವನನ
ವರತಂ ಕಿವಿಯೊತ್ತಿರಲ್ಕೆ ಸರ್ವಜ್ಞಂ ವಾ
ಗ್ವರನಂ ಪರಿಭವಿಸಿದನೆನೆ
ಧರೆಯೊಳ್ ದುರ್ಜನರ ದೆಸೆಯೊಳಾವಂ ಬಾಳ್ವಂ

॥೧-೨೩॥

ಎಂದಿದ್ದಾನೆ ಕವಿ. ಪ್ರಸ್ತುತ ನಮಗೆ ಬೇಕಾದುದು ಕವಿ ತನ್ನ ಕೃತಿಯಲ್ಲಿ ಸರ್ವಜ್ಞನನ್ನು ನೆನೆಸಿದ್ದು. ಆದರೆ ಕೆಲವು ಪಂಡಿತರು ಈ ಪದ್ಯಕ್ಕೆ ವಿಪರೀತ ವ್ಯಾಖ್ಯಾನ ಕೊಡುವುದ ರಿಂದ ಈ ಪದ್ಯವನ್ನು ವ್ಯಾಖ್ಯಾನಿಸುವುದು ಅಪ್ರಸ್ತುತವಲ್ಲ.

ಎರಡು ನಾಲಗೆಯುಳ್ಳವನೇ (ಹಾವು) ಈ ದುರ್ಜನರ ನಿಂದೆಯನ್ನು ಎದುರಿಸಲಾರದೆ ಅನವರತವಾಗಿ ಕಿವಿ ಮುಚ್ಚಿ ಕೊಂಡನು. (ಹಾವಿಗೆ ಕಿವಿಯಿಲ್ಲವೆಂಬುದು ಪ್ರಸ್ತುತ ಗಮ ನಾರ್ಹ ಸಂಗತಿ) ಎಂದಮೇಲೆ ಒಂದೇನಾಲಗೆಯುಳ್ಳ ಮಾನ ವನಂತೂ ದುರ್ಜನರನ್ನು ಪ್ರತಿಭಟಿಸುವುದು ಅಸಾಧ್ಯವೆಸರಿ. ಸರ್ವಜ್ಞನ ಬಿರುನುಡಿಗೆ ಪಕ್ಕಾಗದ ಮಂದಿ ಇಲ್ಲ. ದೇವತೆ ಗಳಾದ ಬ್ರಹ್ಮ ವಿಷ್ಣು ಮಹೇಶ್ವರಾದಿಗಳೆಲ್ಲರೂ ಅವನ ಅಣಕವಾತಿಗೆ, ಅಪಹಾಸ್ಯಕ್ಕೆ ಗುರಿಯಾದವರೇ. ವಾಗೀಶ ನಿಗೇ ಈ ದುರ್ಜನನಾದ ಸರ್ವಜ್ಞನಿಂದ ಪರಿಭವವಾಯಿ ತೆಂದ ಮೇಲೆ ಉಳಿದ ಹುಲುಮಾನವನ ಪರಿಸ್ಥಿತಿಯೇನು ? ಮಾತನ್ನು ಹುಟ್ಟಿಸಿದವನೇ ಬ್ರಹ್ಮ. ಅವನಿಗೂ ಮಾತಿ ನಿಂದ ದುರ್ಜನರನ್ನು ಸೋಲಿಸಲಾಗಲಿಲ್ಲ; ಬದಲಾಗಿ ತಾನೇ ಸೋತು ಸುಕ್ಕಾದನು. 'ಧರೆಯೊಳ್ ದುರ್ಜನರ ದೆಸೆಯೊಳಾವಂ ಬಾಳ್ವಂ?' ಎಂಬ ಲೋಕೋಕ್ತಿಯಿಂದ ಸಾಮಾನ್ಯ ಉಕ್ತಿಯನ್ನು ಪುಷ್ಟೀಕರಿಸಿ ಸುಂದರವಾದ ಅರ್ಥಾಂತರನ್ಯಾಸವನ್ನು ಸೆಣೆದಿದ್ದಾನೆ ಕವಿ.

ಸುರಂಗಕವಿ ಸ ರ್ವ ಜ್ಞ ನಿ ಗಿಂ ತ ಪೂರ್ವದವನಲ್ಲ ವೆಂಬುದು ಗಟ್ಟಿಮಾತು. ಸುರಂಗನು ಸರ್ವಜ್ಞನ ಅನಂ ತರದವನಿದ್ದು, ಕವಿಗೆ ಸರ್ವಜ್ಞನಲ್ಲಿ ಗೌರವಭಾವವಿದ್ದಿಲ್ಲ; ಬದಲಾಗಿ ಆತ 'ನಿಂದಕ' ಎಂಬ ಹೀನಭಾವನೆಯಿತ್ತು. ಸುರಂಗನು ಸರ್ವಜ್ಞನ ಸಮಕಾಲೀನನೋ ಅಥವಾ ಅನಂತರದವನೋ ಆಗಿದ್ದಿರಬೇಕು. ಕವಿ ಹರಿಹರನಿಂದ ಬಹಳಷ್ಟು ಪ್ರಭಾವಿತನಾಗಿದ್ದಾನೆ. ಅವನ ಭಾವಗಳನ್ನೂ, ಹೆಚ್ಚೇಕೆ ಕೆಲವು ಪದಪುಂಜಗಳನ್ನೂ ಯಥಾವತ್ತಾಗಿ ಎತ್ತಿ ಕೊಂಡಿದ್ದಾನೆ ಕವಿ ಚಕ್ರವರ್ತಿ ಸುರಂಗ! ಷಡಕ್ಷರಿಗೂ (ಕ್ರಿ. ಶ. ೧೬೫೫) ಇವನಿಗೂ ಹಲವು ಕಡೆ ಹೋಲಿಕೆಗಳು ದೊರೆಯುತ್ತವೆ ಎಂದು ಕವಿಚರಿತೆಕಾರರು ಹೇಳಿದುದು ಪ್ರಸ್ತುತ ಗಮನಾರ್ಹ. ಸರ್ವಜ್ಞನ ಕಾಲ ಸು. ಕ್ರಿ. ಶ. ೧೭೦೦ ಎಂದು ಕವಿಚರಿತೆಕಾರರು ಊಹಿಸಿದರೆ ಸರ್ವಜ್ಞನ ವಚನಸಂಕಲನಕಾರರಾದ ಉತ್ತಂಗಿ ಚೆನ್ನಪ್ಪನವರು ಇವನ ಕಾಲವನ್ನು ಕ್ರಿ. ಶ. ೧೬೦೦ರಷ್ಟು ಹಿಂದೆ ತಳ್ಳಿದ್ದಾರೆ. ಸುರಂಗನ ಕಾಲವನ್ನು ಕವಿಚರಿತೆಕಾರರು ಸು. ಕ್ರಿ. ಶ. ೧೫೦೦ರೆಂದೂ, ಷಡಕ್ಷರ ಕವಿಯ ಕಾಲವನ್ನು ಕ್ರಿ. ಶ. ೧೬೫೫ ಎಂದೂ, ಸರ್ವಜ್ಞನ ಕಾಲವನ್ನು ಮೇಲೆ ನಿರೂಪಿ ಸಿದಂತೆ ಸು. ಕ್ರಿ. ಶ. ೧೭೦೦ ಎಂದೂ ಹೇಳಿದ್ದಾರೆ. ಪ್ರಕೃತ

ಸುರಂಗನು ಸರ್ವಜ್ಞನ ಹೆಸರನ್ನು ಹೇಳಿರುವುದರಿಂದ ಅವನ ಅನಂತರದವನಿದ್ದು, ಷಡಕ್ಷರಕವಿಗಿಂತ ಈಚಿನವನಾಗುತ್ತಾನೆ. ಆದುದರಿಂದ ಸುರಂಗ ಕವಿಯ ಕಾಲವನ್ನು ಕ್ರಿ. ಶ. ಹದಿನೇಳು ಹದಿನೆಂಟನೆಯ ಶತಮಾನಕ್ಕೆ ಒಯ್ಯುವುದು ಸೂಕ್ತವಾಗಿದೆ.

ಭಾಷೆಯ ಆಧಾರದಿಂದಲೂ ಕವಿಯ ಕಾಲವನ್ನು ಊಹಿಸಲೆಡೆಯಿದೆ. ಡಾ. ಆರ್. ಸಿ. ಹಿರೇಮಠರವರು ಈ ಕಾವ್ಯದಲ್ಲಿ ಬರುವ ಅರ್ವಾಚೀನ ದೇಸಿ ಪದಗಳಲ್ಲಿ ಕೆಲವನ್ನು ಪಟ್ಟಿ ಮಾಡಿಕೊಟ್ಟು, ಕವಿಯು ಈ ಕಾವ್ಯವನ್ನು ಹದಿನೈದು ಹದಿನಾರನೆಯ ಶತಮಾನದಲ್ಲಿ ರಚಿಸಿರಬಹುದೆಂದು ಊಹಿಸಿದುದು ಪ್ರಸ್ತುತ ಗಮನಾರ್ಹ.[1] ಭಾಷೆಯ ತಳಹದಿಯ ಮೇಲೆ ಕಾಲನಿರ್ಣಯ ಮಾಡುವುದಿದ್ದರೂ ಕವಿಯ ಕಾಲವನ್ನು ಮೇಲೆ ಸೂಚಿಸಿದಂತೆ ನಿರ್ಧರಿಸಲು ಆತಂಕವಿಲ್ಲ.

೧ ತ್ರಿ. ಪು. ಮುನ್ನುಡಿ : ಪುಟ ೭೨–೭೩.

ಶ್ರೀ ಗೋಮಟೇಶ್ವರ

ಓ ಗೋಮಟೇಶ್ವರಾ ನಿನ್ನ ಮಹಿಮೆ
ಯನು ಎನಿತು ವರ್ಣಿಸಲಿ
ಶತಮಾನಗಳು ಕಳೆದರೂ
ಅಚ್ಚಳಿಯದೆ ಉಳಿದಿದೆ ಅಮರಕೀರ್ತಿ

ಪೂರ್ವಪಶ್ಚಿಮ, ಉತ್ತರ ದಕ್ಷಿಣ
ದಿಗದಿಗಂತದಲಿ ಹಬ್ಬಿದೆ ವೈಭವ
ಜಾತಿಮತ್ಸರಗಳನು ಹೊಡೆದು
ವಿಶ್ವಬಂಧುತ್ವವನು ಸಾರಿದಿ

ನೀತಿಯನು ತಿಳಿದು ನಡೆವಂಗೆ
ಮುಕ್ತಿ ದೊರಕುವದು
ತಿಲಮಾತ್ರ ಸಂಶಯವಿಲ್ಲ
ಮಾನವಾ ದಿವ್ಯ ಮೂರ್ತಿಯ ನೋಡು

ಪಾಪವನು ತೊರೆದು ಪುಣ್ಯವನು ಮಾಡು
ಗೋಮಟೇಶ್ವರನ ಹಾಗೆ ಬೆಳೆಯಲಿ
ಗಗನಕೆ ಕೀರ್ತಿ ಅನವರತ
ಅದುವೇ ಬಯಸುವ ಮಾನವಗುಂ

ಶ್ರವಣಬೆಳಗೊಳಕೆ ಬನ್ನಿ ಬನ್ನಿ
ನೋಡಿ ನೋಡಿ ಭವ್ಯ ಮೂರ್ತಿ
ಎನಿತು ನೋಡಿದರೂ ಅಮಿತಾನಂದ
ನಿತ್ಯ ನೂತನ ಶಿಲ್ಪಕೃತಿ

ಮಾನವನಾಗಿ ಜನಿಸಿ
ದೇವಮಾನವನಾದಿ ನೀ
ಸರ್ವರಿಗೂ ಮಂಗಲವನ್ನೀಯುವಾ
ಎಂದು ನಿರ್ಮಲ ಹೃದಯದಿ ಬೇಡುವಾ

ಎಸ್. ಡಿ., ನೋಟಗಿ

ಉದಯೋನ್ಮುಖ ಸಾಹಿತಿಗೆ ಒಂದು ಕಿವಿಮಾತು

ಸಾವಿತ್ರೀದೇವಿ

ಇಂದು ಕನ್ನಡ ಸಾಹಿತ್ಯದ ಬೆಳಸು ಸಮೃದ್ಧವಾಗಿದೆ. ಆದರೆ ಕಥೆ ಕಾದಂಬರಿಗಳ ಹೆಸರಿನಲ್ಲಿ ಅನೇಕ ಪುಸ್ತಕಗಳು ಹಣಬೆ ಗಳಂತೆ ಪುಟಪುಟನೆ ಹುಟ್ಟಿಕೊಳ್ಳುತ್ತಿವೆ! ಡಾ. ಹಾ.ಮಾ. ನಾಯಕರ ಮಾತಿನಲ್ಲಿ ಹೇಳುವುದಾದರೆ ಕನ್ನಡದ ಕಥೆಗೆ ಗಾತ್ರ ಬಂದಿದೆಯೇ ಹೊರತು ಗುಣಬಂದಿಲ್ಲ. ಹೀಗೆ ಗಾತ್ರದ ದೃಷ್ಟಿಯಿಂದ ಸದ್ಯದ ಅಭಾವದ ಪರಿಸ್ಥಿತಿಯಲ್ಲಿ, ಅಮೂ ಲ್ಯವಾದ ಕಾಗದ ಅಚ್ಚಿನ ಮನೆಯಲ್ಲಿ ಮೈ-ಮುಖಕ್ಕೆ ಮಸಿ ಬಳಿಸಿಕೊಂಡು, ಗಣನೆಗೆ ಬಾರದ ಪುಸ್ತಕಗಳ ರೂಪ ದಲ್ಲಿ ಹಾಳಾಗುತ್ತಿರುವುದು ದುರ್ದೈವದ ಸಂಗತಿ. ಇಂಥ ತಿರುಳಿಲ್ಲದ ಸಾಹಿತ್ಯದ ಪ್ರಕಟಣೆಗೆ ಹೊಣೆ ಯಾರು?

ಪ್ರಕಾಶಕರು ಸ್ವತಃ ಸಾಹಿತಿಗಳೋ ಅಥವಾ ಸಾಹಿತ್ಯ ವನ್ನು ದಕ್ಷತೆಯಿಂದ ಸಂಪಾದನ ಮಾಡುವ ಶಕ್ತಿ ಉಳ್ಳ ವರೋ ಆಗಿರಬೇಕು ಎನ್ನುವುದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ. ತಾವು ಏನು ಬರೆದರೂ ಪ್ರಕಾಶನಕ್ಕೆ ತರುವ ಪ್ರಕಾಶಕರು ಇದ್ದಾರೆ ಎನ್ನುವ ಕಾರಣದಿಂದಲೋ ಏನೋ ಇಂದಿನ ಕೆಲವು ಲೇಖಕರು ಪರಿಣಾಮಕಾರಿಯಾದ ಸಾಹಿತ್ಯವನ್ನು ರಚಿಸುವ ಕಡೆಗೆ ಗಮನವನ್ನು ಹರಿಸುತ್ತಿಲ್ಲ. ಭಾಷೆಯ ಶುದ್ಧೀಕರಣದ ಕಡೆಗೂ ಗಮನ ಕೊಡುತ್ತಿಲ್ಲ. ಕಥೆ ಎಂದರೆ ಕಥೆ ಏನು ಬರೆದರೂ ನಡೆದೀತು ಎನ್ನುವ ಮನೋಭಾವವನ್ನು ಪ್ರಕಟಪಡಿಸುವ ತ್ರಾಣವಿಲ್ಲದ, ಪ್ರಾಣವಿಲ್ಲದ ಕಥೆಗಳು ಹೇರಳವಾಗಿ ಹೊರಬೀಳುತ್ತಿವೆ. ಕೆಲವು ವರ್ಷಗಳಿಂದೀಚೆಗೆ ಸಣ್ಣ ಕಥೆಗಳು, ನೀಳ್ಗತೆಗಳು, ಕಾದಂಬರಿಗಳು, ನಾಟಕಗಳು, ವಿಚಾರಾತ್ಮಕ ಲೇಖನಗಳು ಇತ್ಯಾದಿ, ಸ್ತ್ರೀ ಪುರುಷ ಲೇಖಕರಿಂದ ಲೆಕ್ಕವಿಲ್ಲದಷ್ಟು ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯ. ಹೀಗೆ, ಕನ್ನಡ ಸಾಹಿತ್ಯದ ಮುನ್ನಡೆ ನಾನಾ ಕ್ಷೇತ್ರಗಳನ್ನು ಅತಿ ತೀವ್ರ ಗತಿಯಿಂದ ಆಡರುತ್ತಾ ಇರುವುದೂ ಗಮನಾರ್ಹ. ಇವುಗಳ ಮಹಾಪೂರವನ್ನು ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ, ವಾರ್ಷಿಕ ಸಂಚಿಕೆಗಳಲ್ಲಿ ನೋಡುತ್ತೇವೆ.

ಈಚಿನ ದಶಕಗಳಲ್ಲಿ ಕಾದಂಬರಿಗಳು ಹೇರಳವಾಗಿ ಪ್ರಕಟಗೊಂಡಿವೆ, ಪ್ರಕಟಗೊಳ್ಳುತ್ತಿವೆ. ಆದರೆ ಹುಟ್ಟುತ್ತಿರು ವಂತೆಯೇ ಸಾಯುವ ಸಾಹಿತ್ಯ ರಚನೆಯಿಂದ ಯಾವ ಪುರುಷಾರ್ಥವನ್ನೂ ಸಾಧಿಸಿದಂತೆ ಆಗುವುದಿಲ್ಲ. ಈ ದಿಶೆ ಯಲ್ಲಿ ಪರಿಣಾಮಕಾರಿಯಾದ ಸಾಹಿತ್ಯ ಹುಟ್ಟಲಿಲ್ಲ ಎಂದು ಯಾರೂ ಹೇಳುವುದಿಲ್ಲ. ಆದರೆ ಜಳ್ಳು-ಪೊಳ್ಳನ್ನು ಉರುಬಿ ತೆಗೆದನಂತರ, ಗಟ್ಟಿ ಕಾಳುಗಳಾಗಿ ಕಾಣ ಸಿಗುವ ಉತ್ತಮ ಸಾಹಿತ್ಯ, ವಿರಳವಾಗಿರುವುದು ಮಾತ್ರ ವಿಷಾದಕರ.

ಪ್ರಗತಿ ಪಥದಲ್ಲಿ ಸಾಗುತ್ತಿರುವ ಇಂದಿನ ತರುಣ ಲೇಖ ಕರು ತಾಳ್ಮೆಯಿಂದ, ವಿವೇಚನೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಮುನ್ನಡಿ ಇಟ್ಟರೆ, ಪ್ರಗತಿಪರ ದೇಶ ಭಾಷೆಗಳು ಎನಿಸಿ ಕೊಂಡಿರುವ ಯಾವ ಭಾಷೆಯ ಸಾಹಿತ್ಯವನ್ನೂ ಮೀರಿಸ ಬಲ್ಲರು. ಇಂದಿನ ಉತ್ಸಾಹೀ ಸಾಹಿತಿಗಳು ಸಾಹಿತ್ಯ ಕ್ಷೇತ್ರದ ವಿವಿಧ ದಿಕ್ಕುಗಳಿಗೆ ನಾಗಾಲೋಟದಿಂದ ಓಡು ತ್ತಿರುವುದು ಶುಭ ಸೂಚನೆ. ಆದರೆ ಓಡುವವರಿಗೆ ತಮ್ಮ ಗುರಿಯ ಮೇಲೆ ಲಕ್ಷ್ಯವಿರಬೇಕು ಎನ್ನುವುದನ್ನು ಮರೆಯ ಬಾರದು. 'ಗುರಿ' ಇಲ್ಲದ ಓಟ ಮೈ-ಕೈ ಸೋಲಿಸಿ ಕೊನೆಗೆ ಎಲ್ಲೋ ಒಂದುಕಡೆ ಅಜ್ಞಾತನಾಗಿ ಮುದುಡಿಕೊಳ್ಳುವಂತೆ ಮಾಡೀತು. ಅದಾಗದಂತೆ ಉದಯೋನ್ಮುಖ ಸಾಹಿತಿಗಳು ಎಚ್ಚರ ವಹಿಸಬೇಕಾದುದು ಅವರ ಮನೋಧಾರ್ಢ್ಯವನ್ನು ಅವಲಂಬಿಸಿದೆ.

ಸಾಹಿತಿ ಜನ ಜೀವನದ ಜೀವನಾಡಿ. ಸಾಹಿತ್ಯ ಅದರ ಮಿಡಿತ. ಸಾಹಿತಿಯ ಕೈಗೆ ಸಿಗುವ ವಸ್ತು, ಕುಂಬಾರನ ಕೈಯಲ್ಲಿನ ಹಸಿ ಅರ್ಲುವಿನಂತೆ. ಅದನ್ನು ಹೇಗೆ ಬೇಕಾ ದರೂ ರೂಪಿಸುವ ರೂಪಿಸಿಕೊಳ್ಳುವ ಸಾಮರ್ಥ್ಯ, ಕೈ ಚಳಕ ಸಾಹಿತಿಯಲ್ಲಿ ಅಡಗಿರುತ್ತದೆ. ಒಂದು ವ್ಯಕ್ತಿತ್ವವನ್ನು ಅಥವಾ ಸಮಯ ಸನ್ನಿವೇಶಗಳನ್ನು ಪರಿಣಾಮಕಾರಿ ಯಾಗಿ ನಿರೂಪಿಸುವ ಕಲೆಯನ್ನು ಸಾಧಿಸಿಕೊಂಡ ಲೇಖ ಕರು ಯಶಸ್ವಿಯಾದ ಬರಹಗಾರರಾಗುವುದರಲ್ಲಿ ಸಂದೇಹವಿಲ್ಲ.

ಹಲವಾರು ವ್ಯಕ್ತಿತ್ವಗಳನ್ನು ಒಳಗೊಂಡ ಅನೇಕ ಭಾವನೆಗಳ ಕಲಸುಮೇಲೋಗರ ಒಂದು ಕಥೆ ಎಂದು ಬಲ್ಲ ವರು ಹೇಳುತ್ತಾರೆ. ಅದಕ್ಕೆ ಉಪ್ಪು, ಕಾರ ಹದವಾಗಿ ಬೆರೆಸಿ ಓದುಗನ ಹಸಿವು ಕೆರಳುವಂತೆ, ಹಿತಮಿತವಾಗಿ ಬಡಿ ಸುವ ಕಲೆಯನ್ನು ಅರಿತವನು ಕಥೆಗಾರ; ಓದುಗರ ಭಿನ್ನ

ರುಚಿಗಳಿಗೆ ಹೊಂದಿಕೊಳ್ಳುವಂತೆ ಬಳಸುವ ಪದಾರ್ಥಗಳು, ಮನುಷ್ಯನ ಸ್ವಭಾವಜನ್ಯವಾದಕರುಣೆ, ವಾತ್ಸಲ್ಯ, ಸಿಟ್ಟು-ಸೆಡವು, ತೃಪ್ತಿ-ಅತೃಪ್ತಿ, ಕಾಮ, ಮೋಹ, ಮೋಸ, ಕಾಪಟ್ಯ ಇತ್ಯಾದಿ ಎಲ್ಲರಲ್ಲೂ ಕಾಣುವ ಒಂದಲ್ಲ ಒಂದು ರೀತಿಯ ವಿಕಾರಗಳು. ಹದವರಿತ ಸಾಹಿತಿಯಿಂದ ಅವು ಅವನ ಸಾಹಿತ್ಯ ಕೃತಿಯಲ್ಲಿ ಹೇರಳವಾಗಿಯೋ ಮಿತವಾಗಿಯೋ ಬಳಸಲ್ಪಡುತ್ತವೆ.

ಓದುಗರ ರುಚಿ ಭಿನ್ನವಾಗಿ ಇರುವುದು ಸಹಜ. ಕೆಲವರಿಗೆ ರುಚಿಸುವ ಕಥಾವಸ್ತು ಇನ್ನೂ ಕೆಲವರಿಗೆ ರುಚಿಸದೇ ಇರಬಹುದು. ಆದರೆ, ಲೋಕವು ಭಿನ್ನರುಚಿಗಳ ತವರು; ಓದುಗರ ಹೊಗಳಿಕೆ, ತೆಗಳಿಕೆಗಳ ಕಡೆಗೆ ಗಮನ ಹರಿಸದೆ, ತನ್ನ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು ವಂಚನೆ ಇಲ್ಲದೆ ಹೊರಗೆಡಹುವ ಬರಹಗಾರರು, ಉತ್ತಮ ಸಾಹಿತ್ಯಕಾರರು ಎನಿಸಿಕೊಳ್ಳುತ್ತಾರೆ.

ಭಿನ್ನ ರುಚಿಗಳನ್ನು ಹೊಂದಿರುವ ಓದುಗರನ್ನು ಪ್ರಸನ್ನಗೊಳಿಸುವುದು ಕಬ್ಬಿಣದ ಕಡಲೆಯನ್ನು ಕುಟ್ಟಿ, ಹಿಟ್ಟು ಮಾಡುವಂತೆ ನಿರಾಶಾದಾಯಕ ಪ್ರಯತ್ನ ಎನ್ನುವುದು ನಿಜ. ಭಿನ್ನ ರುಚಿಗಳಿಗೆ ಹೊಂದಿಕೊಂಡ ಜನ ಮೆಚ್ಚುಗೆಯನ್ನು ಪಡೆಯುವ ಸಾಹಿತ್ಯ ಸಾಮಾನ್ಯ ಸಾಹಿತ್ಯವೆ? ಅಂತಹ ಶ್ರೇಷ್ಠ ಸಾಹಿತ್ಯ ರಚಿಸಿ,ಲೋಕಮಾನ್ಯತೆ ಪಡೆದಿರುವ ನಮ್ಮ ದೇಶದ ಪ್ರಾಚೀನ, ಆಧುನಿಕ ಕವಿಶ್ರೇಷ್ಠರ ಕೃತಿರತ್ನಗಳು ಚಿರನೂತನವಾಗಿ ಚಿರಂಜೀವಿಗಳಾಗಿ ಉಳಿದಿವೆ.

ಉದಯೋನ್ಮುಖ ಸಾಹಿತಿಗಳು ಬರೆಯಬೇಕು ನಿಜ. ಬರೆಯುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಆದರೆ, ಬರಹವನ್ನು ಕೀಳುಮಟ್ಟಕ್ಕೆ ಇಳಿಸಬಾರದು. ಈ ವಿಷಯದಲ್ಲಿ ತರುಣ ಸಾಹಿತಿಗಳಿಗೆ ಒಂದು ಕಿವಿಮಾತು ಹೇಳಲು ಬಯಸುತ್ತೇನೆ.

'ಸಾಹಿತ್ಯ' ಎನ್ನುವ ವಸ್ತು ಜನಜೀವನದ ತ್ರೈಕಾಲಿಕ ಜ್ಞಾನ ಭಾಂಡಾರ; ಜನತೆಯ ಸಂಸ್ಕೃತಿ ಸಂಸ್ಕಾರಗಳ ಮಾರ್ಗದರ್ಶಿನಿ. ಒಂದು ಜನಾಂಗದ ಒಳಿತು ಕೆಡಕುಗಳಿಗೆ ರಾಜಕಾರಣಿಯಷ್ಟೇ ಸಾಹಿತ್ಯಕಾರನೂ ಹೊಣೆಗಾರ ಎನ್ನುವುದನ್ನು ಇಂದಿನ ಬರಹಗಾರರು ನೆನಪಿನಲ್ಲಿಡಬೇಕು. ಸಾಹಿತ್ಯ ಪರಮಪೂಜ್ಯವಾದ ವಸ್ತು, ಅದನ್ನು ಹೊಲಸಾಗಿಸುವುದು ಮಹಾಪಾಪ. ಯಾವ ವಿದ್ಯಾಧಿದೇವತೆಗೆ, ಗೌರವಾನ್ವಿತ ಉಡುಪನ್ನು ತೊಡಿಸಿ, ಗೌರವಿಸಬೇಕಾಗಿದೆಯೋ ಆ ವಿದ್ಯಾಧಿದೇವತೆಯ ಅವಹೇಳನ, ಅವಮಾನವನ್ನು ಇಂದಿನ ಕೆಲವು ಬರಹಗಳಲ್ಲಿ ಕಾಣುತ್ತಿದ್ದೇವೆ. ಅಗ್ಗದ ಸಾಹಿತ್ಯ ರಚಿಸಿ, ಮನುಷ್ಯನ ಮನೋದೌರ್ಬಲ್ಯಗಳನ್ನು ಇನ್ನಷ್ಟು ಬಲಹೀನ ಮಾಡಬೇಕೆ?

ಬರಹಗಾರರು ಜನತೆಯ ಹಿತಚಿಂತಕರು. ಸಾಹಿತಿ ಯಾವ ಪದಾರ್ಥವನ್ನು ಅಚ್ಚುಕಟ್ಟಾಗಿ ಓದುಗನ ಮುಂದಿಟ್ಟರೆ, ಅವನು ಉಣ್ಣುತ್ತಾನೆ. ಉಂಡವನ ಆರೋಗ್ಯ ಕೆಟ್ಟರೆ ಅದು, ಸಾಹಿತಿ ಹೊಣೆ ಅರಿಯದೆ ಮಾಡಿ ಬಡಿಸಿದ ಪದಾರ್ಥದ ಫಲ! ಇಂತಹ ಮೈ-ಮನಸ್ಸುಗಳನ್ನು ಕೆಡಿಸುವ ಸಾಹಿತ್ಯ ರಚನೆ, ಇಂದಿನ ಬುದ್ಧಿ ಜೀವಿಗಳಿಂದ ಖಂಡಿತ ಆಗಬಾರದು.

ಕೆಳಮಟ್ಟದ ಪ್ರೇಮಾಲಾಪ, ಹೊಲಸು ನಡೆ-ನುಡಿಗಳು ಜನತೆಗೆ ಮೆಚ್ಚು ಎಂದುಕೊಂಡ ಸಾಹಿತಿ, ಜನಾನುರಾಗಿಯಾಗಲು ಅಂತಹ ಸಾಹಿತ್ಯವನ್ನು ರಚಿಸಿ, ಅವರನ್ನು ಇನ್ನಷ್ಟು ಕೆಳಗೆ ಜಗ್ಗುವುದರಲ್ಲಿ ಯಾರ ಹಿತ ಅಡಗಿದೆ? ಪ್ರಣಯ ಪ್ರಸಂಗಗಳು ನಿಷೇಧವಲ್ಲ, ಶೃಂಗಾರ ರಸ ಪ್ರಧಾನವಾದ ದೇಶ-ವಿದೇಶಗಳ ಪ್ರಾಚೀನ, ಆಧುನಿಕ ಸಾಹಿತ್ಯ, ಜಗತ್‌ಪ್ರಸಿದ್ಧಿಯಾಗಿವೆ, ಜನಪ್ರಿಯವಾಗಿವೆ. ಆದರೆ ಅವು **ಗೌರವದ ಎಲ್ಲೆಯನ್ನು** ಮೀರಿಲ್ಲ ಎನ್ನುವುದನ್ನು ಇಂದಿನ ತರುಣ ಬರಹಗಾರರು ಗಮನಿಸಬೇಕು.

ಎಂತಹ ಪ್ರಣಯ ಪ್ರಸಂಗವೇ ಇರಲಿ, ಸಭ್ಯತೆಯ ಪರಿಧಿಯಲ್ಲಿ ಓದುಗನ ಮನಸ್ಸು ಮಧುರವಾಗುವಂತಹ ನಿರೂಪಣೆ ಹೊಂದಿರುವ ಸಾಹಿತ್ಯಕ್ಕೆ ಮನ್ನಣೆ ಉಂಟು; ಇದನ್ನು ಲೇಖಕರು ಅರಿತು ಕೀಳು ಸಾಹಿತ್ಯ ರಚನೆಯ ಕಡೆಗೆ ಗಮನ ಹರಿಸಿದರೆ, ಅದು ಅವರ ದೌರ್ಬಲವಲ್ಲವೆ? ಜನತೆಯನ್ನು ಮೆಚ್ಚಿಸುವ ಸಲುವಾಗಿ, ಅವರ ಮಟ್ಟಕ್ಕೆ ಸಾಹಿತಿ, ತಾನು ಇಳಿಯಬೇಕೆ? ಓದುಗನನ್ನು ತನ್ನ ಮಟ್ಟಕ್ಕೆ ಅದೆಷ್ಟೇ ಉನ್ನತವಾಗಿರಲಿ, ಬರಹಗಾರನು ಎಳೆದೊಯ್ಯಲು ಶ್ರಮಿಸುವುದು ಶ್ಲಾಘನೀಯ. ತಮ್ಮ ಹೊಣೆಯನ್ನು ಅರಿತ ಲೇಖಕರು, ಜನತೆಯ ಮಾರ್ಗದರ್ಶಕರು. ಆಗ ಸಾಹಿತಿಯ ಶ್ರಮ ಸಾರ್ಥಕವೆನಿಸಿಕೊಳ್ಳುತ್ತದೆ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಸುವರ್ಣ ಮಹೋತ್ಸವ

ಆರ್. ನಿರ್ಮಲ

ಕನ್ನಡ ವಿದ್ಯಾರ್ಥಿಗಳ ಹಿತಕ್ಕಾಗಿ ಐವತ್ತು ವಸಂತಗಳು ಶ್ರಮಿಸಿರುವ ಕರ್ಣಾಟಕ ಸಂಘದ ಚಿನ್ನದ ಹಬ್ಬದ ಉದ್ಘಾಟನೆಯನ್ನು ನಮ್ಮ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಅವರು ನೆರವೇರಿಸಿದರು. ಕರ್ಣಾಟಕ ಸಂಘ ಸಾಗಿಬಂದಿರುವ ಐವತ್ತು ವರ್ಷಗಳ ಎಣಿಕೆಯಲ್ಲಿ ಮಾತ್ರ ಅದರ ಹಿರಿಮೆ ಇಲ್ಲ. ಈ ಐವತ್ತು ವರ್ಷಗಳಲ್ಲಿ ಅದು ಕನ್ನಡ ವಿದ್ಯಾರ್ಥಿಕುಲ ಹೆಮ್ಮೆಪಟ್ಟುಕೊಳ್ಳಬಹುದಾದ ಅನೇಕ ಕೆಲಸಗಳನ್ನು ಮಾಡಿದೆ. ಕನ್ನಡ ಭಾಷಾ ಸಾಹಿತ್ಯಗಳ ಪ್ರಗತಿಗೆ ವಿಶೇಷ ರೀತಿಯಲ್ಲಿ ಸೇವೆ ಸಲ್ಲಿಸಿದೆ.

ಸಂಘದ ಸ್ಥಾಪಕರಾದ ಶ್ರೀಮಾನ್ ಎ. ಆರ್. ಕೃಷ್ಣ ಶಾಸ್ತ್ರಿಗಳ ಪ್ರೋತ್ಸಾಹದಿಂದ ಉತ್ತೇಜಿತರಾಗಿ, ವಿದ್ಯಾರ್ಥಿಗಳ ಸಹಕಾರದ ಮೂರ್ತರೂಪವಾಗಿ ಮುಂದೆ ಬಂದು, ಮೊದಲ ಕಾರ್ಯದರ್ಶಿಯಾಗಿ ಆಯ್ಕೆಗೊಂಡು, ಪ್ರಾರಂಭ ದೆಸೆಯಲ್ಲಿ ಸಂಘದ ಧ್ಯೇಯ ಸಾಧನೆಯಲ್ಲಿ ನೆರವಾದ ಶ್ರೀ ಗುರುರಾವ್ ದೇಶಪಾಂಡೆಯವರನ್ನೂ, ಸಾಹಿತ್ಯ ಶಾಸ್ತ್ರದ ವಿಷಯಗಳಲ್ಲೂ, ವೇದ ಶಬ್ದಗಳ ಸಂಶೋಧನೆಯಲ್ಲೂ ಹೆಚ್ಚಿನ ಪರಿಶ್ರಮಗಳಿಸಿರುವ ಹಿರಿಯರಾದ ಶ್ರೀ ಎ. ವೆಂಕಟ ಸುಬ್ಬಯ್ಯನವರನ್ನೂ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಯದಲ್ಲಿ ಸಂಘವು ಸನ್ಮಾನಿಸಿತು. ನಾವು ಅರ್ಪಿಸುವ ಕಾಣಿಕೆಯಿಂದಲೇ ನಾಡಿನ ಹಿರಿಯರ ಯಶಸ್ಸು ಬೆಳೆಯಬೇಕಾಗಿಲ್ಲ ; ಆದರೆ ಅದರಿಂದ ನಾವು ಪುಷ್ಟಿಗೊಂಡು ಬೆಳೆಯಬೇಕಾಗಿದೆ. ನಾಡಿನ ಹಿರಿಯರನ್ನು ಗೌರವಿಸಿ, ಅವರ ಸೇವೆಯನ್ನು ನೆನೆದುಕೊಂಡು, ಅವರ ಜ್ಞಾನದ ಪೂರ್ಣಫಲವನ್ನು ಪಡೆದುಕೊಂಡು ನಾವು ಸತ್ವಶಾಲಿಗಳಾಗಬೇಕಾಗಿದೆ. ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಈ ದಿಶೆಯಲ್ಲಿ ಇತರ ವಿದ್ಯಾರ್ಥಿ ಸಂಸ್ಥೆಗಳಿಗೆ ಮಾರ್ಗದರ್ಶಿಯಾಗಿದೆ.

ಬಂಗಾರದ ಹಬ್ಬದ ಅಂಗವಾಗಿ ಸಂಘವು ನೂರ್ಕಾಲ ನೆನೆಯುವಂತಹ ಕಾರ್ಯಕ್ರಮಗಳ ಯೋಜನೆಯನ್ನು ತನ್ನ ಮುಂದಿಟ್ಟುಕೊಂಡಿದೆ. ವಿದ್ಯಾರ್ಥಿ ಕವಿಸಮ್ಮೇಳನ, ಸಂಘದ ಪ್ರಕಟನೆಗಳ ಪ್ರದರ್ಶನ, ಸುವರ್ಣ ಮಹೋತ್ಸವದ ವಿಶೇಷ ಸಂಚಿಕೆ, ವಿಜ್ಞಾನ-ಸಾಹಿತ್ಯಗಳನ್ನು ಕುರಿತ ವಿಚಾರ ಸಂಕಲಗಳನ್ನು ಹೊರತರುವ ಸಿದ್ಧತೆಯಲ್ಲಿ ಸಂಘ ನಿರತವಾಗಿದೆ. ಈಗ ಬಿ.ಎ. ಮಟ್ಟದಲ್ಲಿ ಕನ್ನಡ ಐಚ್ಛಿಕ ವಿಭಾಗದಲ್ಲಿ ಅತ್ಯುತ್ತಮ ಸ್ಥಾನ ಗಳಿಸುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗೆ ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳ ಹೆಸರಿನಲ್ಲಿ ಸುವರ್ಣ ಪದಕವನ್ನು ನೀಡುತ್ತಿರುವಂತೆ, ಕನ್ನಡ ಎಂ. ಎ. ಯಲ್ಲಿ ಅತ್ಯುತ್ತಮ ಸ್ಥಾನ ಗಳಿಸುವ ವಿದ್ಯಾರ್ಥಿಗೆ ಸುವರ್ಣ ಮಹೋತ್ಸವದ ಸ್ಮಾರಕ ಪದಕವನ್ನು ಪ್ರತಿವರ್ಷವೂ ನೀಡಲಿದೆ. ಈ ಸತ್ವಯುತ ಕಾರ್ಯಕಲಾಪಗಳು ಸಂಘದ ಐವತ್ತು ವರ್ಷಗಳ ತುಂಬು ಬಾಳಿಗೆ ದ್ಯೋತಕವಾಗಿದೆ.

ತನ್ನ ಕನಸನ್ನು ನನಸು ಮಾಡಿಕೊಳ್ಳಲು ಶ್ರೀಮಾನ್ ಕೃಷ್ಣಶಾಸ್ತ್ರಿಗಳಿಗೆ ಕರ್ಣಾಟಕ ಸಂಘ ಮೊದಲ ಕಾರ್ಯಕ್ಷೇತ್ರವಾಯಿತು. ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅವರಿತ್ತ ಶಾಶ್ವತ ಕೃತಿಗಳು ಕನ್ನಡಿಗರೆದೆಯಲ್ಲಿ ನೆಲೆಸಿವೆ. ಪ್ರತಿಭಾಶಾಲಿಗಳನ್ನು ಗುರುತಿಸಿ, ಅವರ ಏಳಿಗೆಗಾಗಿ ಕಳಕಳಿ ವಹಿಸಿ, ಅನೇಕ ಉತ್ತಮ ಕೃತಿಗಳ ರಚನೆಗೆ ಸ್ಫೂರ್ತಿಯನ್ನಿತ್ತ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು, ಎಂದೂ ಕನ್ನಡ ಜನಮನದಿಂದ ಮರೆಯಾಗದ ವ್ಯಕ್ತಿ.

ಪ್ರತಿಭಾಶಾಲಿ ವಿದ್ಯಾರ್ಥಿಗಳ ಉತ್ತಮ ಬರಹಗಳನ್ನು ಪ್ರಕಟಿಸುವ ಸಲುವಾಗಿ, ಶುಚಿರುಚಿಯಾದ ಹಿತಮಿತವಾದ ಸಾಹಿತ್ಯದ ಉಣಿಸನ್ನು ಉಣಬಡಿಸುವುದಕ್ಕಾಗಿ, ಹಿರಿಯ ಸಾಧನೆಗಾಗಿ ಕಿರಿಯ ವಿದ್ಯಾರ್ಥಿಗಳಲ್ಲಿ ಶಕ್ತಿ ತುಂಬಿ ಪ್ರೋತ್ಸಾಹಿಸುವುದಕ್ಕಾಗಿ ಕರ್ಣಾಟಕ ಸಂಘ ೧೯೧೮ರಲ್ಲಿ ಸ್ಥಾಪಿತವಾಯಿತು. ಇದರ ಸ್ಥಾಪನೆಗಾಗಿ, ಮುನ್ನಡೆಗಾಗಿ ಕೃಷ್ಣಶಾಸ್ತ್ರಿಗಳು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅದನ್ನು ಇಂದಿನ ಜನಾಂಗ ನಂಬಲೂ ಕಷ್ಟವಾಗಬಹುದು. ಕೃಷ್ಣಶಾಸ್ತ್ರಿಗಳು ಅದೇ ತಾನೆ ಅಧ್ಯಾಪಕ ವೃತ್ತಿಗೆ ಕಾಲಿಟ್ಟಿದ್ದವರು. ಸಂಘದ ಉದ್ದೇಶವನ್ನು ಅಂದಿನ ಹಿರಿಯರು ಲಘುವಾಗಿ ಕಾಣಲಿಲ್ಲವಾದರೂ, ಆ ಒಂದು ಉನ್ನತ ಧ್ಯೇಯವನ್ನು ಒಂದು ವಿದ್ಯಾರ್ಥಿ ಸಂಸ್ಥೆ ಸಾಧಿಸಬಲ್ಲುದೇ—ಎಂಬ ಶಂಕೆಯನ್ನು ವ್ಯಕ್ತಗೊಳಿಸಿ, ಪ್ರೋತ್ಸಾಹಿಸುವ ಬದಲು ನಿರಾಶೆಯ ಮಾತುಗಳನ್ನೇ ಆಡಿದರು. ಹಿಡಿದದ್ದನ್ನು ಸಾಧಿ

ಸುವ ದೃಢತೆ, ನೂರು ಎಡರುತೊಡರುಗಳು ಬಂದರೂ ಎದುರಿಸುವ ಧೈರ್ಯ, ಕಾರ್ಯಸಾಧನೆಗಾಗಿ ದುಡಿಯುವಶಕ್ತಿ, ವಿದ್ಯಾರ್ಥಿಗಳ ಉತ್ಸಾಹ, ಇವುಗಳಿಂದ ಶಾಸ್ತ್ರಿಗಳು ಸಂಘ ಸ್ಥಾಪನೆಗೆ ಹಿರಿಯರ ಒಪ್ಪಿಗೆ ಪಡೆದರು, ಆಶೀರ್ವಾದ ಪಡೆದರು.

ಕನ್ನಡ ಪರಿಷತ್ತಿನ ಅಭಿವೃದ್ಧಿಗಾಗಿ ಶ್ರಮಿಸಿ ಎಲ್ಲರ ಮನ್ನಣೆಗೆ ಪಾತ್ರರಾಗಿದ್ದ ಪ್ರೊ|| ಬೆಳ್ಳಾವೆ ವೆಂಕಟನಾರಣಪ್ಪನವರು ಅದರ ಅಧ್ಯಕ್ಷರಾದರು. ಭೌತಶಾಸ್ತ್ರದ ಈ ಪ್ರಾಧ್ಯಾಪಕರು ಸಂಘದ ಮೊದಲ ಅಧ್ಯಕ್ಷರಾದರೆ, ಇಂಗ್ಲಿಷ್ ಪ್ರಾಧ್ಯಾಪಕರಾದ ಶ್ರೀ ಬಿ. ಎಂ. ಶ್ರೀಯವರು ಸಂಘದ ಎರಡನೆಯ ಅಧ್ಯಕ್ಷರಾದರು. ಈ ಕನ್ನಡಾಭಿಮಾನಿಗಳು ಸಂಘದ ಪುಷ್ಟಿಗೆ ನೆರವಾದರು. ಇಂದು ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರಾಂತ ಪ್ರೊ|| ಎಸ್‌ವಿ.ರಂಗಣ್ಣ, ಪ್ರೊ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಶ್ರೀ ಸಿ. ಕೆ. ವೆಂಕಟರಾಮಯ್ಯ, ಶ್ರೀ ಪಿ. ಕೃಷ್ಣರಾವ್ ಇಂತಹ ವಿದ್ಯಾರ್ಥಿಗಳು ಗುರುಗಳ ಶ್ರಮದಲ್ಲಿ ಪಾಲುಗೊಂಡರು.

ಬರೆಯಬಲ್ಲ ಶಕ್ತ ವಿದ್ಯಾರ್ಥಿಗಳ ಬರಹಗಳನ್ನು ಪ್ರಕಟಿಸುವ ಉದ್ದೇಶಕ್ಕಾಗಿ ಸ್ಥಾಪಿತವಾದ ಸಂಘ, ತನ್ನ ಉದ್ದೇಶ ಸಾಧನೆಗಾಗಿ ಅವರಿವರ ನೆರವನ್ನು ಬೇಡುತ್ತ, ವ್ಯರ್ಥವಾಗಿ ಕಾಲವನ್ನು ದೂಡುತ್ತ ಕುಳಿತುಕೊಳ್ಳಲಿಲ್ಲ. ತಾನು ಹುಟ್ಟಿದ ಮರುವರ್ಷವೇ ಪ್ರಬುದ್ಧ ಕರ್ಣಾಟಕವನ್ನು ಹೊರಡಿಸಿತು. ಸ್ವಾವಲಂಬಿಯಾಗಿಯೆ ಪತ್ರಿಕೆಯನ್ನು ನಡೆಸಿಕೊಂಡು ಬಂದಿತು. ಶ್ರೀ ಕೃಷ್ಣಶಾಸ್ತ್ರಿಗಳ ಸಂಪಾದಕತ್ವದಲ್ಲಿ ಪ್ರಬುದ್ಧ ಕರ್ಣಾಟಕವು ಪ್ರೌಢ ಪತ್ರಿಕೆಯಾಯಿತು. ಅದರಲ್ಲಿ ತಮ್ಮ ಲೇಖನಗಳು ಪ್ರಕಟವಾಗುವುದು ಲೇಖಕರ ಹೆಮ್ಮೆಗೆ ಕಾರಣವಾಯಿತು. ಶ್ರೀ ಎಸ್. ವಿ. ರಂಗಣ್ಣ, ಶ್ರೀ ಸಿ. ಕೆ. ವೆಂಕಟರಾಮಯ್ಯ, ಶ್ರೀ ಪಿ. ಕೃಷ್ಣರಾವ್ ಮುಂತಾದವರು ಪ್ರಬುದ್ಧ ಕರ್ಣಾಟಕದ ಆರಂಭದ ಸಂಚಿಕೆಗಳಲ್ಲಿ ಬರೆದ ಅಂದಿನ ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳು.

ಲೇಖನಗಳ ವ್ಯವಸಾಯ ಮಾತ್ರ ಪ್ರಬುದ್ಧ ಕರ್ಣಾಟಕದ ಕಾರ್ಯಕ್ಷೇತ್ರವಾಗಿರಲಿಲ್ಲ. ಪುಸ್ತಕಗಳ ಪ್ರಕಟನೆಯನ್ನೂ ಸಂಘ ವಹಿಸಿಕೊಂಡಿತು; ಯಶಸ್ವಿಯಾಗಿ ನಿರ್ವಹಿಸಿತು. ಪ್ರಬುದ್ಧ ಕರ್ಣಾಟಕದ ಲೇಖನಗಳು ಭಾಗಗಳಲ್ಲಿ ಬಿಡಿಬಿಡಿಯಾಗಿ ಉಳಿಯಬಾರದೆಂದು, ಪುಸ್ತಕಗಳನ್ನಾಗಿಸಲು ಸರಿಯಾಗುವಂತೆ ಮುದ್ರಿಸಿ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿತು. ಇದಲ್ಲದೆ ಸ್ವತಂತ್ರ ಗ್ರಂಥಗಳ ಪ್ರಕಟನೆಗೂ ಸಂಘ ಕೈ ಹಾಕಿತು. ಕೆಲವು ಪುಸ್ತಕಗಳನ್ನು ಪತ್ರಿಕೆಯ ಚಂದಾದಾರರಿಗೆ ಉಚಿತವಾಗಿ ಹಂಚಿತು. ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು, ಉಮರನ ಒಸಗೆ, ಸುಬ್ಬಣ್ಣ, ಮೈಸೂರು ದೇಶದ ವಾಸ್ತುಶಿಲ್ಪ, ನಾಗರಿಕ ಮುಂತಾದ ಗ್ರಂಥಗಳೆಲ್ಲ ಮೊದಲು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಗೊಂಡು, ಅನಂತರ ಮೊದಲ ಬಾರಿಗೆ ಸಂಘದಿಂದಲೇ ಪುಸ್ತಕ ರೂಪ ಪಡೆದುವು. ಶ್ರೀ ಕುವೆಂಪು ಅವರ ರಾಮಾಯಣ ದರ್ಶನದ ಕೆಲವು ಭಾಗಗಳನ್ನು ಸಚಿತ್ರವಾಗಿ ಮೊದಲು ಪ್ರಕಟಿಸಿ ಪರಿಚಯ ಮಾಡಿಕೊಟ್ಟದ್ದು "ಪ್ರಬುದ್ಧ ಕರ್ಣಾಟಕ."

ಪ್ರಬುದ್ಧ ಕರ್ಣಾಟಕಕ್ಕಾಗಿ ದುಡಿದು ಅಶ್ವಿನೀ ದೇವತೆಗಳೆಂದು ಹೆಸರಾಂತ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳೂ, ಶ್ರೀ ಟಿ. ಎಸ್. ವೆಂಕಣ್ಣಯ್ಯನವರೂ, ಅಂದಿನ ಕನ್ನಡ ಜನತೆಯಲ್ಲಿ ಕನ್ನಡದ ಬಗೆಗಿದ್ದ ಜಾಡ್ಯವನ್ನು ಪರಿಹರಿಸುವ ವೈದ್ಯರಾದರು. ಸಂಘದ ಆರಂಭ ಕಾಲದಲ್ಲಿಯೇ ಕನ್ನಡಿಗರಾದ ಭೌತಶಾಸ್ತ್ರದ ಅಧ್ಯಾಪಕರ ಕೈಯಲ್ಲಿ ಸಾಪೇಕ್ಷಕ ಸಿದ್ಧಾಂತ (Theory of relativity)ದ ಬಗ್ಗೆ ಕನ್ನಡದಲ್ಲಿ ಭಾಷಣವನ್ನು ಏರ್ಪಡಿಸಿತ್ತು. ಜನತೆಯಲ್ಲಿ ಸಾಹಿತ್ಯದ ಒಲವನ್ನು ಕನ್ನಡದ ಅಭಿಮಾನವನ್ನು ತುಂಬಿ ಬದುಕನ್ನು ಬಂಗಾರವಾಗಿಸಲು ಶ್ರಮಿಸಿತ್ತು.

ಇಂದು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆಯಾಗಿ ಹೊರಡುತ್ತಿರುವ ಪ್ರಬುದ್ಧ ಕರ್ಣಾಟಕವೊಂದೇ ಕರ್ಣಾಟಕ ಸಂಘದ ಕೊಡುಗೆಯಲ್ಲ. ವಿದ್ವಾಂಸರಿಂದ ಭಾಷಣ, ಜೈಮಿನಿ ಷಡಕ್ಷರಿಗಳ ಗ್ರಂಥಗಳ ವಾಚನ, ಆಧುನಿಕ ಕನ್ನಡ ಕವನಗಳ ವಾಚನ, ವಿದ್ಯಾರ್ಥಿಗಳ ಚರ್ಚಾಕೂಟ, ವಿಜ್ಞಾನದ ಪ್ರಾಧ್ಯಾಪಕರ ತಿಳಿಗನ್ನಡದ ಭಾಷಣ, ಹಿರಿಯರ ಸತ್ಕಾರ ಇವು ಎಂದಿನಿಂದಲೂ ಸಂಘದ ಕಾರ್ಯಕ್ಷೇತ್ರದೊಳಗೆ ಸೇರಿದ್ದವು.

೧೯೩೬ರಲ್ಲಿ ಹಲವು ಲೇಖಕರಿಂದ 'ಮುದ್ದಣ' ಕವಿ ಪ್ರಶಸ್ತಿಯನ್ನು ಬರೆಸಿ ಸಂಘ ಪ್ರಕಟಿಸಿತು. ಅಂದು ಆ ಸಂಪ್ರದಾಯದ ಅಂಕುರಾರ್ಪಣೆಯಾಗಿ ಆ ದಿಶೆಯಲ್ಲಿ ಇಂದು ಕನ್ನಡನಾಡಿನ ಹಲವು ಹಿರಿಯ ಕವಿಗಳ 'ಕವಿ ಪ್ರಶಸ್ತಿ'ಗಳು ಪ್ರಕಟವಾಗಿದೆ. ಸಾಹಿತ್ಯದ ಪ್ರೌಢ ವಿದ್ಯಾರ್ಥಿಗೂ ಜನಸಾಮಾನ್ಯನಿಗೂ ಅನೇಕ ವಿಷಯಗಳಲ್ಲಿ ತಿಳಿವಳಿಕೆಯನ್ನು ಹೆಚ್ಚಿಸಲು ನೆರವಾಗಿದೆ.

ಕರ್ಣಾಟಕ ಸಂಘಕ್ಕಾಗಿ ತಮ್ಮಕ್ಕರೆಯ ನೀರನ್ನೆಣಿಸಿದವರನ್ನೆಲ್ಲ ನೆನೆಯ ಹೊರಟರೆ ಈ ಲೇಖನ ನಾಲ್ಕುಪಟ್ಟು ಬೆಳೆದೀತೆಂಬ ಭಯದಿಂದ ಕೈಬಿಡಬೇಕಾಗಿದೆ. ಕರ್ಣಾಟಕ ಸಂಘದ ಬಾಳುವೆಯಲ್ಲಿ ಬಹುದೊಡ್ಡಪಾತ್ರವನ್ನು ನಿರ್ವಹಿಸಿದ, ನಿರ್ವಹಿಸುತ್ತಿರುವ ಶ್ರೀ ಜಿ.ಪಿ.ರಾಜರತ್ನಂರ ನೇತೃತ್ವ

ದಲ್ಲಿ ನಡೆದ ಕೆಲವು ಕಾರ್ಯಕಲಾಪಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಮೂರು ವಿಭಾಗಗಳಲ್ಲಿ ಪುಸ್ತಕ ಪ್ರಕಟನೆಯ ಕಾರ್ಯ ಮುಂದುವರೆಯಿತು. ನಾಡಿನ ಹಿರಿಯರ ಗ್ರಂಥಗಳು–'ಬಲ್ಲವರ ಬರಹ'ಗಳ ಹೆಸರಿನ ಮಾಲೆಯಲ್ಲಿ 'ಸ್ಮರಣೆ' 'ಮೊನ್ನವನ್ನ' ಇತ್ಯಾದಿ ಗ್ರಂಥಗಳೂ, 'ಕಾಲೇಜ್ ಬರವಣಿಗೆ' ಮಾಲೆಯಲ್ಲಿ 'ನಮ್ಮ ನಮ್ಮವರು', 'ಚಿನ್ನದ ದೋಸೆ', 'ಮಕ್ಕಳ ಮಾತು', 'ಪಚ್ಚೆಯ ತೆನೆ', 'ಜನಪ್ರಿಯ ವಿಜ್ಞಾನ', 'ನಮ್ಮ ಬೇಂದ್ರೆಯವರು', 'ಚಿತ್ರದುರ್ಗದ ಬೆಟ್ಟ'—ಇತ್ಯಾದಿ ಗ್ರಂಥಗಳೂ, ಪಠ್ಯ ಪುಸ್ತಕಗಳನ್ನು ಕುರಿತು, ಸಂಘದಲ್ಲಿ ಏರ್ಪಡಿಸುವ ವಿಶೇಷ ಉಪನ್ಯಾಸಗಳನ್ನೊಳಗೊಂಡ 'ಜ್ಞಾಪಕ ರೂಪ' ಮಾಲೆಯಲ್ಲಿ 'ವೇಣೀ ಸಂಹಾರ ನಾಟಕದ ಜ್ಞಾಪಕರೂಪ' ಮುಂತಾದ ಹಲವಾರು ಕೃತಿಗಳು ಪ್ರಕಟವಾಗಿವೆ. ಇವುಗಳನ್ನೆಲ್ಲ ವಿದ್ಯಾರ್ಥಿಗಳ ಚಂದಾ ಹಣದಿಂದಲೇ ಪ್ರಕಟಿಸಿರುವುದು ಹೆಮ್ಮೆಯ ವಿಷಯ. ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಆಸಕ್ತಿಯನ್ನು ಮೂಡಿಸುವುದು, ಅಭ್ಯಾಸದಲ್ಲಿ ಹೆಚ್ಚಿನ ನೆರವನ್ನು ವಿದ್ವಾಂಸರಿಂದ ನೀಡಿಸುವುದು, ಅವುಗಳನ್ನೆಲ್ಲ ಅಂದಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮಾತ್ರ ಸೀಮಿತವಾಗಿಸದೆ, ಮುಂಬರುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪುಸ್ತಕ ರೂಪದಲ್ಲಿಡುವುದು, ಇವು ಸಂಘದ ವ್ಯಾಪಕ ದೃಷ್ಟಿಯ ಪರಿಚಯ ಮಾಡಿಕೊಡುತ್ತವೆ. ನಮ್ಮ ವಿದ್ಯಾರ್ಥಿ ಸಂಘದ ಸಾರ್ಥಕತೆಯನ್ನು ಹಿರಿಮೆಯನ್ನು ಆಡಂಬರದ ಮಾತುಗಳಲ್ಲಿ ಹೇಳಬೇಕಾಗಿಲ್ಲ. ಸಂಘದ ಒಂದೊಂದು ಕೃತಿಯೂ ಅದಕ್ಕೆ ಸಾಕ್ಷಿ.

ಸಂಘವು ಎಡರು ತೊಡರುಗಳಲ್ಲಿ ಎದೆಕೊಟ್ಟು ತಮ್ಮ ಶ್ರೀರಕ್ಷೆಯ ತಂಪನ್ನಿತ್ತ ತನ್ನ ಜನ್ಮದಾತ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ೧೯೫೦ರಲ್ಲಿ 'ಬಾಲಸರಸ್ವತಿ' ಪುಸ್ತಕವನ್ನು ಶ್ರೀ ಜಿ. ಪಿ. ರಾಜರತ್ನಂ ಅವರ ಮುಂದಾಳ್ತನದಲ್ಲಿ ಅಚ್ಚುಹಾಕಿಸಿ, ಅರ್ಪಿಸಿದೆ. ಸಂಘದ ಇಂಥ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಕ್ರಿಯಾಶಕ್ತಿಯನ್ನು ಸದಾ ಪ್ರಚೋದಿಸುವಂತಾಗಿದೆ. ಈಗ ಹನ್ನೊಂದು ವರ್ಷಗಳ ಹಿಂದೆ, ಚಿ. ನ. ಮಂಗಳ ಅವರ ಸದ್‌ಬಯಕೆಗೆ ನೆರವಿತ್ತು ಆ ವರ್ಷ ಕಾಲೇಜಿನಿಂದ ಬೀಳ್ಕೊಂಡ ವಿದ್ಯಾರ್ಥಿಗಳು, ಶ್ರೀ ವಿ. ಸೀತಾರಾಮಯ್ಯನವರ ಪ್ರೋತ್ಸಾಹ ಸಹಕಾರಗಳಿಂದ ರಾಜರತ್ನಂ ಸಾಹಿತ್ಯವನ್ನು ಕುರಿತು ಬರೆದ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಅವರಿಗೆ ಬೀಳ್ಕೊಡುಗೆಯ ಕಾಣಿಕೆಯನ್ನಿತ್ತರು.

ಸ್ವಾವಲಂಬಿಯಾದ ಕರ್ಣಾಟಕಸಂಘ ತನ್ನ ಹಣವನ್ನು ಸದ್ವಿನಿಯೋಗ ಮಾಡುವುದರಲ್ಲಿ ಆಸಕ್ತಿ ವಹಿಸಿದೆ. ವಿದ್ಯಾರ್ಥಿ ವೇತನಗಳನ್ನಿತ್ತಿದೆ. ಬಡ ವಿದಾರ್ಥಿಗಳಿಗೆ ನೆರವು ನೀಡಿದೆ. ಅನೇಕ ಪಾರಿತೋಷಕಗಳನ್ನು ನೀಡುತ್ತಿದೆ. ನ್ಯಾಷನಲ್ ಲೈಬ್ರರಿಗೆ ಅನೇಕ ಉಪಯುಕ್ತಗ್ರಂಥಗಳನ್ನಿತ್ತು ಭಂಡಾರದ ಗ್ರಂಥ ಸಂಪತ್ತನ್ನು ಹೆಚ್ಚಿಸಿದೆ. ವಿಶ್ವವಿದ್ಯಾನಿಲಯದ ಗ್ರಂಥ ಭಂಡಾರದಲ್ಲಿ ಶ್ರೀಗಂಧ ಕುಟಿಯನ್ನು ಸ್ಥಾಪಿಸಿದೆ. ಅಲ್ಲಿ ಕನ್ನಡ ನವೋದಯ ಸಾಹಿತ್ಯದ ಆಚಾರ್ಯರಾದ ಎ. ಆರ್. ಕೃ. ಅವರ ಗ್ರಂಥ ಭಂಡಾರದ ಅನೇಕ ಕೃತಿಗಳನ್ನು ಸಂಗ್ರಹಿಸಿದೆ. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳ ಉಪಯುಕ್ತಗ್ರಂಥಗಳನ್ನು ಕಲೆಹಾಕಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸಿದೆ.

ಕರ್ಣಾಟಕ ಸಂಘಕ್ಕಾಗಿ ಕೆಲಸ ಮಾಡಿದವರ ಅದರ ಫಲವಾಗಿ ಕರ್ಣಾಟಕ ಸಂಘದಿಂದ ಮೂಡಿಬಂದ ಕೃತಿಗಳ ದರ್ಶನ ಮಾಡಿದರೆ, ಇದು ವಿದ್ಯಾರ್ಥಿಗಳಿಗಷ್ಟೇ ಮೀಸಲಾದ ಸಂಘವಲ್ಲ, ಕನ್ನಡನಾಡಿನ ಒಂದು ಹಿರಿಯ ಸಾರಸ್ವತ ಸಂಪತ್ತನ್ನು ಒಳಗೊಂಡಿರುವ, ಕನ್ನಡಿಗರೆಲ್ಲರ ಸಂಸ್ಥೆ ಎಂಬುದು ವಿದಿತವಾಗುತ್ತದೆ. ಕನ್ನಡಮ್ಮನ ಪದತಲದಲ್ಲಿ ಸಂಘದ ಸೇವೆ ಇನ್ನೂ ನೂರ್ಮಡಿಯಾಗಿ ಸಲ್ಲಲಿ.

ದ್ರಾವಿಡ ಭಾಷಾ ವಿಜ್ಞಾನ*

(ಗ್ರಂಥಾವಲೋಕನ)

ಎಂ. ವಿ. ಸೀತಾರಾಮಯ್ಯ

ಮನುಷ್ಯನನ್ನು ಮೃಗವರ್ಗದಿಂದ ಬೇರ್ಪಡಿಸುವ ವಿಶಿಷ್ಟ ಲಕ್ಷಣಗಳಲ್ಲಿ ಭಾಷೆ ಅತ್ಯಂತ ಮುಖ್ಯವಾದುದು. ಮಾನವ ಸಂಸ್ಕೃತಿ ಮತ್ತು ನಾಗರಿಕತೆಗಳ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಮಹತ್ತರವಾದುದು. ಜಗತ್ತಿನ ಭಾಷೆಗಳನ್ನು ಲಿಪಿಯುಳ್ಳ ಭಾಷೆ, ಲಿಪಿಯಿಲ್ಲದ ಭಾಷೆ ಎಂದು ಸ್ಥೂಲವಾಗಿ ಪರಿಗಣಿಸಬಹುದು. ಯಾವ ಭಾಷೆಯೇ ಆಗಲಿ ಲಿಪಿರಹಿತ ಎಂದ ಮಾತ್ರಕ್ಕೆ ಅದರಲ್ಲಿ ಸಾಹಿತ್ಯವಿಲ್ಲ, ಅದಕ್ಕೆ ವ್ಯಾಕರಣವಿಲ್ಲ ಎಂದು ತಿಳಿಯಕೂಡದು. 'ಅಪೌರುಷೇಯ' ವೇದಗಳು (ಶ್ರುತಿ) ಗ್ರಂಥಸ್ಥವಾದದ್ದು ಬಹುಕಾಲದ ಮೇಲೆ. ಆದ್ದರಿಂದ, ಭಾಷಾಶಾಸ್ತ್ರಜ್ಞನ ದೃಷ್ಟಿಯಲ್ಲಿ ಎಲ್ಲ ಭಾಷೆಗಳೂ ಸರ್ವಸಮ; ಶಾಸ್ತ್ರೀಯ ಪರಿಶೀಲನೆಗೆ ಅರ್ಹ. ಸಂಸ್ಕೃತ ಮೇಲಲ್ಲ, ಕನ್ನಡ ಕೀಳಲ್ಲ; ಕನ್ನಡ ಹೆಚ್ಚಿನದಲ್ಲ, ತುಳು ಕಡಮೆಯದಲ್ಲ. ಆಧುನಿಕ ಪಾಶ್ಚಾತ್ಯ ಭಾಷಾ ವಿಜ್ಞಾನಿಗಳು ಸಂಸ್ಕೃತ ವರ್ಣಮಾಲೆಯನ್ನು ಬಹುಮಟ್ಟಿಗೆ ಪರಿಪೂರ್ಣ, ಶಾಸ್ತ್ರೀಯ ಎಂದು ಗುರುತಿಸಿದ್ದಾರೆ; ಪಾಣಿನಿಯನ್ನು ಭಾಷಾಶಾಸ್ತ್ರದ ಆದ್ಯ ಆಚಾರ್ಯನೆಂದು ಗೌರವಿಸಿದ್ದಾರೆ. ಶಾಸ್ತ್ರೀಯ ಪರಿಶೀಲನೆಯ ವ್ಯಾಪ್ತಿಗೆ ದಕ್ಕಿದ ಎಲ್ಲ ಭಾಷೆಗಳನ್ನೂ ವ್ಯಾಸಂಗ ಮಾಡದೆಯೆ ಅವರು ಆ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ದೀರ್ಘಕಾಲಿಕವಾದ, ವ್ಯಾಪಕವಾದ, ತೌಲನಿಕ ವ್ಯಾಸಂಗದ ಫಲವಾಗಿ ಪ್ರಪಂಚದ ಎಲ್ಲ ಭಾಷೆಗಳಿಗೂ ಅನ್ವಯಿಸುವ ಧ್ವನಿನಿಯಮಗಳೂ (phonetic laws), ಭಾಷಾ ವಿಜ್ಞಾನದ ಮೂಲ ತತ್ತ್ವಗಳೂ ರೂಪಗೊಂಡಿವೆ. ಯಾವುದೇ ಭಾಷೆಯ ನಿಜವಾದ ಸ್ವರೂಪವನ್ನು ಕೂಲಂಕಷವಾಗಿ ಅರಿಯಬೇಕಾದರೆ ಈ ತತ್ತ್ವಗಳ ಪರಿಜ್ಞಾನ ಆವಶ್ಯಕ. ಇವುಗಳನ್ನು ಚೆನ್ನಾಗಿ ತಿಳಿಸಿದರೆ, ಭಾಷಾ ಪ್ರಪಂಚದಲ್ಲಿ ಭಾಷೆಗಳ ಪರಸ್ಪರ ಸಂಬಂಧವನ್ನು ಗುರುತಿಸಲು ಅನುಕೂಲವಾಗುತ್ತದೆ. ನಮ್ಮ ಸುದೈವದಿಂದ, ಪಾಶ್ಚಾತ್ಯ ವಿದ್ವಾಂಸರೂ ಭಾರತೀಯ ವಿದ್ವಾಂಸರೂ ಅನೇಕ ದಶಕಗಳ ಕಾಲ ನಡಸಿದ ಭಾಷಾ ತಪಸ್ಯೆಯ ಪರಿಣಾಮವಾಗಿ, ಭಾರತೀಯ ಭಾಷೆಗಳ ತೌಲನಿಕ ವ್ಯಾಸಂಗದ ಅಮೂಲ್ಯ ಫಲ ನಮಗೆ ದೊರಕಿದೆ. ಭಾರತೀಯ ಭಾಷೆಗಳ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಬೇಕಾದಷ್ಟಿದೆ; ಆಗಿರುವಷ್ಟು ಕೆಲಸ ಕಡಮೆಯ ಪ್ರಮಾಣದ್ದಲ್ಲ, ಹೆಮ್ಮೆಪಡುವಂತಿದೆ. ಭಾರತದ ಕೆಲವು ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾ ವಿಜ್ಞಾನದ ಅಧ್ಯಯನಕ್ಕಾಗಿಯೇ ಪ್ರತ್ಯೇಕ ವಿಭಾಗ ಏರ್ಪಟ್ಟಿರುವುದು, ಭಾರತದಲ್ಲಿ ಭಾಷಾ ವಿಜ್ಞಾನದ ಅಭ್ಯಾಸದಲ್ಲಿ ಆಗಿರುವ ಮುನ್ನಡೆಯ ಕುರುಹಾಗಿದೆ; ಪ್ರಕೃತ, ನಮ್ಮ ಅವಲೋಕನಕ್ಕೆ ಒಳಪಟ್ಟ, ಶ್ರೀ ಹಂಪ. ನಾಗರಾಜಯ್ಯನವರ 'ದ್ರಾವಿಡ ಭಾಷಾ ವಿಜ್ಞಾನ' ಗ್ರಂಥವು, ಬೆಳೆಯುತ್ತಿರುವ ಭಾರತೀಯ ಭಾಷಾ ವಿಜ್ಞಾನ ಸಾಹಿತ್ಯ ಸಂಪತ್ತಿಗೆ ಕನ್ನಡದ ಒಂದು ಬೆಲೆಯುಳ್ಳ ಕೊಡುಗೆಯಾಗಿದೆ.

'ದ್ರಾವಿಡ ಭಾಷಾ ವಿಜ್ಞಾನ'ದಂತಹ ಗ್ರಂಥಗಳು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿರುವುದು ಬಹು ವಿರಳ. ಮೇಲೆ ನಿರ್ದೇಶಿಸಿರುವ ವ್ಯಾಸಂಗದ ಫಲವೆಲ್ಲ ಬಹುಮಟ್ಟಿಗೆ ಇಂಗ್ಲಿಷು ಭಾಷೆಯಲ್ಲಿ ಬರೆದ ಗ್ರಂಥಗಳಲ್ಲೂ ಪ್ರೌಢ ಲೇಖನಗಳಲ್ಲೂ ಅಡಗಿವೆ; (ಪು. ೪೬೭–೪೭೭) ದೃಷ್ಟಿಸಿದರೆ ಇಂಗ್ಲಿಷಿನಲ್ಲಿರುವ ಬರಹಗಳ ವ್ಯಾಪ್ತಿ ವೈಭವ ವೇದ್ಯವಾಗುತ್ತದೆ. ಭಾಷಾ ವಿಜ್ಞಾನದ ತಿಳಿವಳಿಕೆಯ ಪ್ರಯೋಜನ ಭಾರತದ ಜನಕ್ಕೆ ಅವರವರ ಪ್ರಾಂತ ಭಾಷೆಗಳ ಮೂಲಕ ದೊರೆಯಬೇಕಾಗಿದೆ. ಎಲ್ಲ ಭಾರತೀಯ ಭಾಷೆಗಳ ಸಮ್ಯಕ್ ಜ್ಞಾನವಲ್ಲದಿದ್ದರೂ, ಅವುಗಳ ವಿಷಯವಾಗಿ ಸಮಾಚೀನ ಜ್ಞಾನ ಪ್ರತಿಯೊಬ್ಬ ವಿದ್ಯಾವಂತ ಭಾರತೀಯನಿಗಾದರೂ ಇರಬೇಕಾದದ್ದು ಅತ್ಯಗತ್ಯ. ಏಕೆಂದರೆ ವಿದ್ಯಾವಂತರೆನ್ನಿ

---

* 'ದ್ರಾವಿಡ ಭಾಷಾ ವಿಜ್ಞಾನ' (Dravidian Linguistics); ಲೇಖಕರು: ಶ್ರೀ ಹಂಪ ನಾಗರಾಜಯ್ಯ ಎಂ. ಎ., ಕನ್ನಡ ಅಧ್ಯಾಪಕರು, ಸರ್ಕಾರದ ಕಾಲೇಜು, ಬೆಂಗಳೂರು; ಪ್ರಕಾಶಕರು: ಹರ್ಷವರ್ಧನ ಪ್ರಕಾಶನ, ಬೆಂಗಳೂರು; ಪುಟಗಳು XVI+೪೯೮; ಬೆಲೆ: ಸಾಮಾನ್ಯ ಪ್ರತಿ ರೂ. ೨೦. ಉತ್ತಮ ಪ್ರತಿ ರೂ. ೨೫.

ಸಿಕೊಂಡವರು ಕೂಡ ಭಾಷೆಗಳ ವಿಚಾರದಲ್ಲಿ ಸರಿಯಾದ ತಿಳಿವಳಿಕೆಯನ್ನು ಹೊಂದಿರದಿದ್ದರೆ, ಭಾಷೆಗಳ ವಿಚಾರದಲ್ಲಿ ಅಪಸಿದ್ಧಾಂತಗಳಿಗೆ ಜೋತು ಬಿದ್ದು ಅಪಾಯಕಾರಿ ಅಭಿಪ್ರಾಯಗಳನ್ನು ಅಧಿಕಾರವಾಣಿಯಿಂದೆಂಬಂತೆ ಪ್ರಚಾರ ಮಾಡುವ ಅವಿವೇಕಕ್ಕೆ ತೊಡಗಬಹುದು. ಇಂಥ ಪ್ರವೃತ್ತಿಗಳು ಜನಮನವನ್ನು ಒಂದುಗೂಡಿಸುವ ಬದಲು ಒಡೆಯುವ ದುಷ್ಟಶಕ್ತಿಗಳಾಗಿ ಪರಿಣಮಿಸಬಹುದು. ಆಧುನಿಕ ಭಾಷಾಶಾಸ್ತ್ರ ಜ್ಞಾನವಿಲ್ಲದ ಸಂಸ್ಕೃತ ಭಾಷಾ ಪಂಡಿತರೂ ಅಭಿಮಾನಿಗಳೂ ಕನ್ನಡ ಸಂಸ್ಕೃತದಿಂದ ಹುಟ್ಟಿದ್ದು ಎಂದು ಒಂದು ಕಡೆ ವಾದಿಸಿದರೆ, ಉಗ್ರ ಭಾಷಾಭಿಮಾನಕ್ಕೆ ಪಕ್ಕಾದ ತಮಿಳು ಬಾಂಧವರು ಕನ್ನಡ ತಮಿಳಿನಿಂದ ಹುಟ್ಟಿದ್ದು ಎಂದು ಘೋಷಿಸುತ್ತಾರೆ. ಇಂಥ ಹೇಳಿಕೆಗಳ ಹಿಂದೆ ಕೆಲವೊಮ್ಮೆ ರಾಜಕೀಯ ಕುಬುದ್ಧಿಯ ಆಟವೂ ಇರುತ್ತದೆ. ಕೊಂಕಣಿ ಮರಾಠಿಯ ಉಪಭಾಷೆ ಎಂಬ ಈಚಿನ ಕೂಗು ಒಂದು ನಿದರ್ಶನ. ಕನ್ನಡದ ಬಗ್ಗೆಯೂ ದ್ರಾವಿಡ ಭಾಷೆಗಳ ಬಗ್ಗೆಯೂ ಅಪಸಿದ್ಧಾಂತಗಳೂ ತಪ್ಪು ಕಲ್ಪನೆಗಳೂ ಗೂಢಮೂಲವಾಗಿಯೋ ಹೊಸದಾಗಿ ತಲೆಯೆತ್ತಿಯೋ ಅವುಗಳ ಹಿತಕ್ಕೆ ಧಕ್ಕೆ ತರುವಂತಹ ಇಂದಿನ ಪರಿಸ್ಥಿತಿಯಲ್ಲಿ ಹಂಪನಾ ಅವರ 'ದ್ರಾವಿಡ ಭಾಷಾ ವಿಜ್ಞಾನ'ದಂತಹ ಪ್ರಮಾಣಭೂತ ಗ್ರಂಥದ ಉಪಯುಕ್ತತೆ ಎಷ್ಟೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ಭಾಷಾ ವಿಜ್ಞಾನದ ಮೂಲ ತತ್ತ್ವಗಳು ಬಹುಮಟ್ಟಿಗೆ ಪ್ರಪಂಚದ ಎಲ್ಲ ಭಾಷೆಗಳಿಗೂ ಅನ್ವಯಿಸುವಂತೆ ರೂಪಗೊಂಡಿದ್ದು, ಭಾಷಾ ವಿಜ್ಞಾನವು-ಇತರ ಎಲ್ಲ ವಿಜ್ಞಾನ ವಿಷಯಗಳಂತೆ-ಒಂದು ವಿಶ್ವವ್ಯಾಪ್ತಿಯುಳ್ಳ ಶಿಕ್ಷಣ ವಿಷಯ (Discipline) ವಾಗಿ ಪರಿಣಮಿಸಿದೆ. ಆ ಮೂಲ ತತ್ವಗಳನ್ನು ಪರಿಚಯ ಮಾಡಿಕೊಡುವ ಉಪಯುಕ್ತ ಗ್ರಂಥವೊಂದನ್ನು ಡಾ|| ಎಂ. ಚಿದಾನಂದ ಮೂರ್ತಿಯವರು ಕನ್ನಡಿಗರಿಗೆ ಒದಗಿಸಿಕೊಟ್ಟು ಉಪಕಾರ ಮಾಡಿದ್ದಾರೆ (೧೯೬೫). ಅದಕ್ಕೂ ಮುಂಚೆ ಪ್ರಕಟವಾದ (೧೯೬೪), ಡಾ|| ಆರ್. ವೈ. ಧಾರವಾಡಕರ್ ಅವರ 'ಕನ್ನಡ ಭಾಷಾ ಶಾಸ್ತ್ರ' ಕನ್ನಡ ಭಾಷೆಯ ಸ್ವರೂಪವನ್ನು ಪ್ರಮುಖವಾಗಿ ವಿವೇಚಿಸಿರುವ ಪ್ರೌಢಪ್ರಬಂಧ (Doctoral Thesis) ; ಇದರಲ್ಲಿ ದಕ್ಷಿಣ ದ್ರಾವಿಡ ಭಾಷೆಗಳ ಉಲ್ಲೇಖ ಹಿನ್ನೆಲೆಯಾಗಿ ಬಂದಿದೆ. ಈ ಎರಡು ಪುಸ್ತಕಗಳ ವಿಷಯವ್ಯಾಪ್ತಿಗೆ ಸೇರದ ವಿಷಯವನ್ನು ಮುಖ್ಯವಾಗಿ ಆಧರಿಸಿ, ಅವುಗಳಿಗೆ ಪೂರಕವಾಗುವಂತೆ ರಚಿಸಿರುವ ಒಂದು ಸಮರ್ಥ ವಿವೇಚನೆಯ ಗ್ರಂಥವಾಗಿದೆ, ಶ್ರೀ ಹಂಪನಾ ಅವರ 'ದ್ರಾವಿಡ ಭಾಷಾ ವಿಜ್ಞಾನ'.

ಮೊದಲ ಅಧ್ಯಾಯ ಹಿನ್ನೆಲೆ (ಪು. ೧-೨೦). ಇದರಲ್ಲಿ, ಜಗತ್ತಿನ ಹಿರಿಯ ಭಾಷಾ ವರ್ಗಗಳ ಪಂಕ್ತಿಯಲ್ಲಿ ೫ನೆಯ ಅಥವಾ ೬ನೆಯ ಸ್ಥಾನವನ್ನು ಪಡೆದಿರುವ ದ್ರಾವಿಡ ಭಾಷಾ ವರ್ಗದ ಸ್ಥೂಲ ಪರಿಚಯ; ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆಗಳು (ಆಧುನಿಕ ಸಂಶೋಧನೆಗಳಿಂದ ಸ್ಥಿರಪಟ್ಟಿರುವಂತೆ ಅವುಗಳ ಸಂಖ್ಯೆ ೨೩, ೫ ಅಲ್ಲ) ಮೂಲ ದ್ರಾವಿಡ ಭಾಷೆಯಿಂದ ಕವಲೊಡೆದು ಬೆಳೆದು ಬಂದ ಬಗೆ-ಇವನ್ನು ಕುರಿತ ಸ್ವಾರಸ್ಯವಾದ ನಿರೂಪಣೆಯಿದೆ. ಚಾಕ್ಷುಷ ಅಥವಾ ಸಾಹಿತ್ಯ ಸಂಪನ್ನ ದ್ರಾವಿಡ ಭಾಷೆಗಳ ವಿಕಾಸವನ್ನು ತೋರಿಸುವ ನಕ್ಷೆಯಲ್ಲಿ, ತೆಲುಗು ಅತ್ಯಂತ ಪ್ರಾಚೀನವಾಗಿ ಕಂಡುಬರುತ್ತಿರುವುದು ಗಮನಾರ್ಹ. ಕನ್ನಡ ತಮಿಳುಗಳು ಜೊತೆ ಜೊತೆಯಾಗಿ ಬೆಳೆದು ಬಂದಿದ್ದು, ಮಲೆಯಾಳವು ತಮಿಳಿನಿಂದ ಜನ್ಯ ಎಂದು ವ್ಯಕ್ತಪಡುತ್ತದೆ. (ತಮಿಳು-ಮಲೆಯಾಳಗಳ ತೌಲನಿಕ ವ್ಯಾಸಂಗ ಇನ್ನೂ ಆಳವಾಗಿ ವ್ಯಾಪಕವಾಗಿ ಬೆಳೆಯಬೇಕಾಗಿದೆ). ಈ ಬೆಳವಣಿಗೆಯ ಕ್ರಮವನ್ನು ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದರೆ, ದ್ರಾವಿಡ ಭಾಷಾ ವಿಜ್ಞಾನದ ಪರಿಚಯವಿಲ್ಲದವರಿಗೆ ಅದು ಹೆಚ್ಚು ಮನದಟಾಗುತ್ತಿತ್ತು. ತಮಿಳಿನಿಂದ ಮಲೆಯಾಳ ರೂಪಗೊಂಡಿದೆ ಎಂದು ತೋರಿಸುವ ಕವಲಿನಲ್ಲಿ (ಪು. ೯) 'ತಮಿಳಿನಿಂದ ತಮಿಳು ಹುಟ್ಟಿದೆ' ಎಂದು ಭಾಸವಾಗುತ್ತದೆ. ಇದು ಸರಿಯೆ? ತೌಲನಿಕ ಭಾಷಾ ವಿಜ್ಞಾನದ ಕಡೆಗೆ ನಮ್ಮವರ ದೃಷ್ಟಿ ಹೊರಳಲು ಪಾಶ್ಚಾತ್ಯ ವಿದ್ವಾಂಸರ ಸಂಶೋಧನೆಗಳೇ ಕಾರಣ ಎಂಬುದು ನಿಜವಾದರೂ, "ನಮ್ಮ ಹಿಂದಿನ ಕವಿಗಳಿಗೂ ಲಾಕ್ಷಣಿಕರಿಗೂ (ಉದಾ. ಕವಿರಾಜ ಮಾರ್ಗಕಾರ, ಪಂಪ, ಆಂಡಯ್ಯ, ರತ್ನಾಕರ) ಭಾಷೆಯನ್ನು ಕುರಿತು ಪ್ರತ್ಯೇಕವಾಗಿ ವಿಚಾರ ಮಾಡುವ ಪ್ರಜ್ಞೆ ಇತ್ತು ಎಂಬುದರ ಕಡೆಗೆ ಲೇಖಕರು ಓದುಗರ ಗಮನ ಸೆಳೆದಿರುವುದು ಉಚಿತವಾಗಿದೆ. ಆದರೆ, ನಮ್ಮ ಅಭಿಪ್ರಾಯದಲ್ಲಿ, ಲಾಕ್ಷಣಿಕರಲ್ಲಿ ಮಾತ್ರ ಅಂತಹ ಭಾಷಾ ವಿಚಾರ ಪ್ರಜ್ಞೆ ಇದ್ದಿತು ಎಂದು ತಿಳಿಯುವುದು ಹೆಚ್ಚು ಸಮಂಜಸ; ಕವಿಗಳಲ್ಲಿ ಕಂಡುಬರುವುದು ಭಾಷಾ ಪಾಂಡಿತ್ಯ, ಭಾಷೆಯ ಮೇಲಣ ಅಭಿಮಾನ. ದ್ರಾವಿಡ ಭಾಷೆಗಳ ವಿಚಾರದಲ್ಲಿ ಪ್ರಮುಖ ಪ್ರಾರಂಭಿಕ ಪರಿಶೀಲನೆ ಪರಿಶೋಧನೆಗಳನ್ನು ನಡಸಿದವ ಹೆಸರುಗಳನ್ನು ಸ್ಮರಿಸುವ ಸಂದರ್ಭದಲ್ಲಿ ಶ್ರೀರಂಗಪಟ್ಟಣ ಕೃಷ್ಣಮಾಚಾರಿಯವರ ಹೆಸರನ್ನು ನೆನೆದಿರುವುದು ಸಂತೋಷದ ಸಂಗತಿ. ಅದೇ ರೀತಿಯಲ್ಲಿ, 'ದ್ರಾವಿಡ ಭಾಷೆಗಳ

ಸಂಸ್ಕೃತ ಜನ್ಯವಲ್ಲ; ಪ್ರತ್ಯೇಕ ವರ್ಗವು' ಎಂದು ಸಾಧಾರವಾಗಿ ಪ್ರಸ್ಥಾಪನೆ ಮಾಡಿದ ಶ್ರೇಯಸ್ಸು ಡಾ|| ಕಾಲ್ಡ್ವೆಲ್ಲರಿಗೆ ಸಲ್ಲುತ್ತದೆ ಎಂಬ ಹಂಪನಾ ಅವರ ಅಭಿಪ್ರಾಯ ಸರ್ವಥಾ ಮಾನ್ಯವಾದುದು; ಆತ "ಕನ್ನಡದ ವಿಚಾರದಲ್ಲಿ ತಿಳಿದದ್ದು ತೀರ ಕಡಮೆ" ಎಂಬುದು ಸತ್ಯಸಂಗತಿಯಾದರೂ, "ಇದಕ್ಕಾಗಿ ವಿಷಾದಪಡಬೇಕಾಗಿದೆ" ಎಂಬ ಹೆಚ್ಚಿನ ಟೀಕೆ (ಪು. ೧೬) ಅಪ್ರಕೃತವಾಗಿತ್ತು ಎಂದೆನಿಸುತ್ತದೆ. ಈ ಬಗೆಗೆ ಜೂಲ್ಸ್ ಬ್ಲಾಕ್ (Jules Block) ವ್ಯಕ್ತಪಡಿಸಿರುವ ಅಭಿಪ್ರಾಯ ಸಮರ್ಪಕ ವಿವರಣೆಯನ್ನು ಒಳಗೊಂಡಿದೆ: "Caldwell based his work mainly on Tamil, and was justified in doing so, not only on account of opportunity but also by the antiquity of this language and the purity of its ancient aspect." (The Grammatical Structure of Dravidian Languages, p. XXX). ಅಷ್ಟು ಮಾತ್ರವಲ್ಲ; ದ್ರಾವಿಡ ಭಾಷೆಗಳ ವ್ಯಾಸಂಗ ವಿಷಯದಲ್ಲಿ ಕಾಲ್ಡ್ವೆಲ್ ಅವರ ಸೇವೆಯನ್ನು ಈ ಮಹನೀಯ ಮುಕ್ತಕಂಠದಿಂದ ಪ್ರಶಂಸೆ ಮಾಡಿರುವುದೂ ಗಮನಾರ್ಹವಾಗಿದೆ: "As early as 1856, Robert Caldwell knew how to determine the great characteristics of the Comparitive Grammer of the Dravidian with such sureness that if one were to confine oneself to the essential part of it, it could be said that what has since been done only adds to his work without replacing it. This absence of renewal is undoubtedly one of the causes of the relative effacement of Caldwell's name in the history of linguistics." ಅಷ್ಟೇಕೆ? ಶ್ರೀ ಹಂಪನಾ ಅವರ ಗ್ರಂಥವೇ ಅನೇಕ ಅಂಶಗಳಲ್ಲಿ ಕಾಲ್ಡ್ವೆಲ್ಲರ ಗ್ರಂಥಕ್ಕೆ ಗಣ್ಯಪ್ರಮಾಣದಲ್ಲಿ ಋಣಿಯಾಗಿದೆ.

ಎರಡನೆಯ ಅಧ್ಯಾಯ (ಪು. ೨೧-೪೪) 'ದ್ರಾವಿಡರು ಯಾರು?' ಎಂಬ ವಿಚಾರ ವಿಮರ್ಶೆಗೆ ಮೀಸಲಾಗಿದೆ. ಆರ್ಯರು ಭರತಖಂಡಕ್ಕೆ ಬರುವುದಕ್ಕಿಂತ ಮೊದಲೇ ಇಲ್ಲಿ ನೆಲಸಿದ್ದ ಮೂಲನಿವಾಸಿಗಳು ದ್ರಾವಿಡರು ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರೆ, ಇನ್ನು ಕೆಲವರು ಆರ್ಯರಂತೆಯೇ ದ್ರಾವಿಡರೂ ಸಹ ಹೊರಗಿನಿಂದ ಬಂದವರು ಎಂದು ತೀರ್ಮಾನಿಸಲು ಪ್ರಯತ್ನಿಸಿದ್ದಾರೆ. ಹರಪ್ಪ-ಮೊಹೆಂಜೊದಾರೋ ಎಂಬ ಪ್ರದೇಶದ ಭೂಶೋಧನೆಯಿಂದ ಹೊರಪಟ್ಟ ಸೈಂಧವ ಸಂಸ್ಕೃತಿ ಸ್ಪಷ್ಟ ದ್ರಾವಿಡ ಲಕ್ಷಣಗಳನ್ನು ಹೊಂದಿರುವುದು, ದ್ರಾವಿಡರು ಭಾರತದ ಪೂರ್ವನಿವಾಸಿಗಳು ಎಂಬ ಊಹೆಗೆ ಪೋಷಕವಾಗಿದೆ. ಅಂತೂ, ಇದು ವಾದಗ್ರಸ್ತ ವಿಷಯವಾಗಿಯೇ ಉಳಿದಿದೆ. ಈ ಸಂಬಂಧದ ಎಲ್ಲ ವಿವರಗಳನ್ನೂ ಲೇಖಕರಾದ ನಾಗರಾಜಯ್ಯನವರು ಶ್ರಮವಹಿಸಿ ಸಂಗ್ರಹಿಸಿ ನಮ್ಮ ಮುಂದಿಟ್ಟಿದ್ದಾರೆ. ದ್ರಾವಿಡ ಭಾಷೆಗಳ ಪ್ರಾಚೀನತೆಯನ್ನು ನಿಷ್ಕರ್ಷಿಸಲು ದ್ರಾವಿಡರ ಪೂರ್ವೇತಿಹಾಸದ ಸಮೀಕ್ಷೆ ಅಗತ್ಯ. ಈ ಸಮೀಕ್ಷೆಯನ್ನು ಸಮರ್ಪಕವಾಗಿ ನಡಸಿರುವ ಲೇಖಕರು, ದ್ರಾವಿಡ ಭಾಷೆಗಳು ಸುಮಾರು ೩೫೦೦ ವರ್ಷಗಳ ಪ್ರಾಚೀನತೆಯುಳ್ಳವು ಎಂಬ ಅಭಿಮಾನಾಸ್ಪದ ಸಂಗತಿಯ ಕಡೆಗೂ, ಅಷ್ಟು ಪೂರ್ವದಲ್ಲಿಯೇ ದ್ರಾವಿಡ ಭಾಷೆಗಳಿಂದ ಅನೇಕ ಪದಗಳು (ಉದಾ. ಮಟಚಿ ಎಂದರೆ ಮಿಡಿತೆ, ಅಕ್ಕಿ, ನೀರ್, ಮೀನ್) ಸಂಸ್ಕೃತ ಮತ್ತು ಪಾಳಿ ಭಾಷೆಗಳಿಗೆ ಹೋಗಿ ಸೇರಿದ್ದುವೆಂಬ ಅಂಶದ ಕಡೆಗೂ ನಮ್ಮ ಗಮನ ಸೆಳೆದಿದ್ದಾರೆ.

ದ್ರಾವಿಡ ಭಾಷೆಗಳು ಜಗತ್ತಿನ ಬೇರೆ ಯಾವುದಾದರೂ ಅನ್ಯಭಾಷಾವರ್ಗಕ್ಕೆ ಸೇರಿವೆಯೆ, ಇಲ್ಲವೆ ಅವುಗಳದೇ ಒಂದು ಸ್ವತಂತ್ರ ಪ್ರತ್ಯೇಕ ವರ್ಗವೇ ಎಂಬ ಪ್ರಶ್ನೆಯ ಚರ್ಚೆ ೩ನೆಯ ಅಧ್ಯಾಯದಲ್ಲಿ ನಡೆದಿದೆ. ದ್ರಾವಿಡ ಭಾಷಾ ಕುಟುಂಬ ಸಿಥಿಯನ್-ಮಂಗೋಲಿಯನ್ ಭಾಷಾ ಕುಟುಂಬದೊಡನೆ ಹೋಲಿಕೆಯನ್ನು ಹೊಂದಿದೆ ಎಂಬ ವಾದವನ್ನು ಮಂಡಿಸಿದವರು ಡಾ|| ಕಾಲ್ಡ್ವೆಲ್; ಈ ವಾದವನ್ನು ಕೆಲವು ವಿದ್ವಾಂಸರು (ಗ್ರಿಯರ್‌ಸನ್, ಸ್ಟೆನ್ ಕೋನೋ, ಆರ್. ನರಸಿಂಹಾಚಾರ್) ವಿರೋಧಿಸಿದ್ದಾರೆ. ಲೇಖಕರು ಮೊದಲು ದ್ರಾವಿಡ ಭಾಷಾ ವರ್ಗದ ಪ್ರತ್ಯೇಕತಾ ವಾದವನ್ನು ಎತ್ತಿ ಹಿಡಿದು (ಪು. ೪೧), ಆಮೇಲೆ ಟಿ. ಬರೋ ಅವರು ಕಾಲ್ಡ್ವೆಲ್ ಅವರ ವಾದವನ್ನು ಅಂಗೀಕರಿಸಿರುವುದನ್ನು ಪ್ರಸ್ತಾವಿಸಿ, "ಕಾಲ್ಡ್ವೆಲ್ಲನ ವಿಶೇಷ ವ್ಯಾಸಂಗದ ಫಲ ವ್ಯರ್ಥವಲ್ಲ" ಎಂದಿರುವಲ್ಲಿ ಪೂರ್ವಾಪರ ವಿರೋಧ ಕಂಡುಬರುತ್ತದೆ. ಈ ಅಂಶ ಪುನಃ ಪರಿಶೀಲನೆಗೆ ಒಳಪಡುವುದು ಒಳ್ಳೆಯದು.

ದ್ರಾವಿಡ ಭಾಷಾ ವರ್ಗದಲ್ಲಿ ಕನ್ನಡ, ತಮಿಳು, ತೆಲುಗು, ಮಲೆಯಾಳಿ-ಇವು ತಮ್ಮದೇ ಆದ ಪ್ರತ್ಯೇಕ ಲಿಪಿಗಳನ್ನು ಉಳ್ಳ ಚಾಕ್ಷುಷ ಭಾಷೆಗಳು, ಕನ್ನಡ ತೆಲುಗು ಲಿಪಿಗಳ ನಡುವೆ ಬಹುಮಟ್ಟಿನ ಸಾದೃಶ್ಯವಿದೆ. ಈ ಚಾಕ್ಷುಷ ದ್ರಾವಿಡ ಲಿಪಿಗಳೂ ಭಾರತದ ಇತರ ಭಾಷೆಗಳ (ಸಂಸ್ಕೃತ, ಬಂಗಾಳಿ, ಗುಜರಾತಿ ಇತ್ಯಾದಿ) ಲಿಪಿಗಳೂ (ಅಶೋಕ ಶಾಸನಗಳ) ಬ್ರಾಹ್ಮೀ ಲಿಪಿಯಿಂದ ವಿಕಾಸ ಹೊಂದಿವೆ ಎಂಬ ಅಭಿಪ್ರಾಯಕ್ಕೆ ಬಹುಮಂದಿ ವಿದ್ವಾಂಸರ

ಮನ್ನಣೆ ದೊರೆತಿದೆ. ಈ ಸಂಬಂಧವಾದ ವಾದ ವಿವಾದಗಳನ್ನು (ಅಧ್ಯಾಯ ೪ರಲ್ಲಿ) ಸಂಗ್ರಹಿಸುವ ಸಂದರ್ಭದಲ್ಲಿಯೇ ಕನ್ನಡ ಲಿಪಿಯ ವೈಶಿಷ್ಟ್ಯವನ್ನೂ ಪ್ರಕೃತೋಚಿತವಾಗಿ, ಅಭಿಮಾನಾಸ್ಪದವಾಗಿ, ವರ್ಣಿಸಿದ್ದಾರೆ, (ಪು.೬೧-೬೩) ಹಂಪನಾ ಅವರು.

ದ್ರಾವಿಡ ಭಾಷೆಗಳನ್ನಾಡುವ ಸಂಖ್ಯಾ ವಿವರಗಳನ್ನು ವಿವರಿಸಿದ ಮೇಲೆ (ಅಧ್ಯಾಯ ೫), ಲೇಖಕರು ಕನ್ನಡ ಭಾಷೆಯ ಸ್ಥೂಲ ವಿವೇಚನೆಗೆ (ಅಧ್ಯಾಯ ೫-೭) ತಮ್ಮ ವಿಶೇಷ ಗಮನವನ್ನು ಹರಿಸಿದ್ದಾರೆ. ಈ ವಿವೇಚನೆಯಲ್ಲಿ,-ಕರುನಾಡು-ಕರ್ನಾಟಕ-ಕರ್ಣಾಟಕ-ಕನ್ನಡ ಈ ಪದಗಳ ಪ್ರಾಚೀನ, ಉಲ್ಲೇಖ, ಆ ಪದಗಳ ರೂಪನಿಷ್ಪತ್ತಿ, 'ಕರ್ನಾಟಕ-ಕರ್ಣಾಡಕ' ರೂಪದ್ವಯಗಳ ಸಾಧುತ್ವದ ಬಗೆಗೆ ಮೂರು ದಶಕಗಳ ಹಿಂದೆ ನಡೆದ ವಾಗ್ವಾದದ ಸಂಗತಿ, ಕನ್ನಡ ನುಡಿಯ ಪ್ರಾಚೀನತೆ, ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳ ಪ್ರಯೋಗ ವಿಚಾರ-ಇವೇ ಮುಂತಾದ ಕೆಲವು ಸ್ವಾರಸ್ಯವುಳ್ಳ ವಿಷಯಗಳನ್ನು ಕುರಿತು ಬೇರೆ ಬೇರೆ ವಿದ್ವಾಂಸರು ಮಾಡಿರುವ (ಸಾಧಾರವೋ ನಿರಾಧಾರವೋ ಆದ) ಊಹಾತ್ಮಕ ವಾದಗಳನ್ನು ನಿರೂಪಿಸಿ, "ಇದುವರೆಗಿನ ಈ ಎಲ್ಲ ವಿವರಣೆಗಳೂ-ಕೇವಲ ಒಂದೆರಡು ನಿರೂಪಣೆಗಳ ಹೊರತಾಗಿ-ಅಸಮರ್ಪಕ ಅಸಾಧುವೆಂದು ತೋರುತ್ತದೆ" ಎಂದು ಹೇಳಿ "ಕರ್ನಾಡು (ಕಪ್ಪು ದೇಶ) ಕನ್ನಡ ಆಗಿದೆಯೆಂಬುದೇ ಸರಿಯಾದ ನಿಷ್ಪತ್ತಿ" ಎಂಬ ವಾದಕ್ಕೆ ತಮ್ಮ ಅನುಮೋದನೆಯನ್ನು ಸೂಚಿಸಿದ್ದಾರೆ.

ಮೊದಲ ನಾಲ್ಕು ಅಧ್ಯಾಯಗಳ ೯೨ ಪುಟಗಳ ವಿಷಯ ನಿರೂಪಣೆ ಹಿನ್ನೆಲೆಯ ಸ್ವರೂಪದ್ದು. ದ್ರಾವಿಡ ಭಾಷಾ ವಿಜ್ಞಾನದ ನಿಜವಾದ ಜಿಜ್ಞಾಸೆ ಮುಂದಿನ ಅಧ್ಯಾಯಗಳಲ್ಲಿ ನಡೆದಿದೆ. ೫-೬ ಅಧ್ಯಾಯದಲ್ಲಿ ಕನ್ನಡ ವರ್ಣಮಾಲೆಯ ಚರಿತ್ರೆಯ ವರ್ಣನೆಯಿದೆ. ೬ನೆಯ ಅಧ್ಯಾಯದಿಂದ ೧೧-ಡ ಅಧ್ಯಾಯಗಳ ಪೂರ್ತಿ (ಪು. ೧೦೭-ಪು, ೨೦೮) ಇತರ ದ್ರಾವಿಡ ಭಾಷೆಗಳ ಎಂದರೆ ತಮಿಳು, ಮಲೆಯಾಳ, ತೆಲುಗು, ಕೊಡಗು ಭಾಷೆ, ತುಳು, ಗೋಂದಿ, ತೊದ, ಬ್ರಾಹೂಇ, ಕುಈ, ಕುವಿ, ಪೆಂಗು, ಪರ್ಜಿ, ಮಲ್ತೊ, ಒಲ್ಲಾರಿ, ಕೊರಗ, ಗದಬ, ಕೊಯ, ಕೊಂಡ, ಬಡಗ, ಕೋತ, ಕುರುಖ್, ನಾಯ್ಕಿ-ಈ ಭಾಷೆಗಳ ವರ್ಣನಾತ್ಮಕ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಲೇಖಕರು. ಈ ಅಧ್ಯಾಯಗಳಲ್ಲಿ, ಲೇಖಕರು ತುಲನಾತ್ಮಕ ಭಾಷಾ ವಿಜ್ಞಾನ ಪ್ರಪಂಚದಲ್ಲಿ ನಡೆದಿರುವ ಅತ್ಯಂತ ಈಚಿನ ಸಂಶೋಧನೆಗಳ ಪ್ರಯೋಜನದ ಫಲವನ್ನು ಸಂಗ್ರಹ ರೂಪದಲ್ಲಿ ಓದುಗರಿಗೆ ಒದಗಿಸಿ ಕೊಟ್ಟಿರುತ್ತಾರೆ. ದ್ರಾವಿಡ ಭಾಷೆಗಳ ಪರಸ್ಪರ ಕೌಟುಂಬಿಕ ಸಂಬಂಧವನ್ನು ಮುಖ್ಯ ವ್ಯಾಕರಣಾಂಶಗಳ ಮತ್ತು ಧ್ವನಿಮಾಸಾದೃಶ್ಯಗಳ ಆಧಾರದ ಮೇಲೆ ಅರಿಯಲು ಇಷ್ಟು ಸಾಕೆಂದು ತೋರುತ್ತದೆ. ಪರಿಚಯಗಳು ಎಷ್ಟೇ ಸಂಗ್ರಹವಾಗಿದ್ದರೂ, ಲೇಖಕರ ವ್ಯಾಪಕವಾದ ಅಧ್ಯಯನಕ್ಕೆ ಅವು ಸಾಕ್ಷಿಗಳಾಗಿವೆ.

೧೨ರಿಂದ ೧೯ ಅಧ್ಯಾಯಗಳವರೆಗೆ, ದ್ರಾವಿಡ ಭಾಷೆಗಳ ವ್ಯಾಕರಣ ಪ್ರಕ್ರಿಯೆಗಳನ್ನು-ಎಂದರೆ, ವಿಭಕ್ತಿ ಪ್ರತ್ಯಯಗಳ ವ್ಯವಸ್ಥೆ, ಸರ್ವನಾಮಗಳು, ಘೋಷ ಹಾಗೂ ಅಘೋಷ ಧ್ವನಿ, ವಚನ, ಗುಣವಾಚಕಗಳು, ನಿಷೇಧಾರ್ಥಕ ಪ್ರತ್ಯಯಗಳು, ಕರ್ಮಣಿ ಪ್ರಯೋಗ- ಈ ವಿಚಾರಗಳನ್ನು ತುಲನಾತ್ಮಕವಾಗಿ, ಸೂಕ್ಷ್ಮಾಂಶಗಳಿಗೆಲ್ಲ ಗಮನ ಕೊಟ್ಟು, ಸ್ವತಂತ್ರ ದೃಷ್ಟಿಯಿಂದ ಚೆನ್ನಾಗಿ ವಿವೇಚನೆ ಮಾಡಿದ್ದಾರೆ.

ಕೆಲವೆಡೆಗಳಲ್ಲಿ, ಲೇಖಕರ ಹೇಳಿಕೆಗಳು ತಪ್ಪಾಗಿ ಕಂಡು ಬರುತ್ತವೆ, ಇಲ್ಲವೆ ಸಂದೇಹಾಸ್ಪದಗಳಾಗಿ ಕಂಡುಬರುತ್ತವೆ; ತೀರ್ಮಾನಗಳು ಭಿನ್ನಾಭಿಪ್ರಾಯಕ್ಕೆ ಎಡೆಗೊಡುತ್ತವೆ. ಉದಾಹರಣೆಗೆ, ಕನ್ನಡ ವರ್ಣಮಾಲೆಯ ವಿವೇಚನೆಯಲ್ಲಿ, ಬಿಂದುವನ್ನು ಗೌಣ ಅನುನಾಸಿಕ ಎಂದು ಕರೆದು ಅದಕ್ಕೆ ಭಿನ್ನಧ್ವನಿಮಾದ ಸ್ಥಾನ ಕೊಟ್ಟಿರುವುದು ಚರ್ಚಾಸ್ಪದ. ಅದಕ್ಕೆ ಲಿಪಿ ಮೌಲ್ಯವೆ ಹೊರತು, ಧ್ವನಿ ಮೌಲ್ಯ ಸಲ್ಲದು. " ಕವಿರಾಜಮಾರ್ಗದಲ್ಲಿ. . . ಪ್ರಥಮಾ ವಿಭಕ್ತಿಯನ್ನು ಒಪ್ಪಿಕೊಂಡು ಅದಕ್ಕೆ ಒಂದು ಪ್ರತ್ಯಯವನ್ನೂ ಹೇಳಿದೆ " (ಪು. ೨೧೨) ಎಂಬ ಉಲ್ಲೇಖವಾಗಲಿ, "ಹಳಗನ್ನಡದಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯ-ಮ್ ಎಂಬುದಾಗಿಹೇಳಿದೆ. ಕವಿರಾಜ ಮಾರ್ಗದಲ್ಲಿ-(ಅ) ನ್ ಎಂದಿದೆ." ಎಂಬ ಹೇಳಿಕೆಗೆ ಸಮರ್ಥನೆಯಾಗಲಿ ಆ ಗ್ರಂಥದಲ್ಲಿ ದೊರೆಯುವುದಿಲ್ಲ. "ಪ್ರಥಮಾ ವಿಭಕ್ತಿ ಮತ್ತು ಪ್ರಥಮೇತರ ವಿಭಕ್ತಿ ಎಂಬ ವಿಭಾಗ ಸಮಂಜಸ" ಎಂಬ ಸಿದ್ಧಾಂತ ತೀರ ಸರಳವಾಗಿ ಕಾಣುತ್ತದೆ. ಪಂಚಮೀ ವಿಭಕ್ತಿಯ ಪ್ರತ್ಯಯದ ಮಾತಿರಲಿ; ದ್ರಾವಿಡ ಭಾಷೆಗಳಲ್ಲಿ ಪಂಚಮೀ ವಿಭಕ್ತಿಯೇ ಇಲ್ಲ-ಎಂಬುದು ಸರ್ವಸಾಮಾನ್ಯವಾಗಿ ಎಲ್ಲ ದ್ರಾವಿಡ ಭಾಷಾಶಾಸ್ತ್ರಜ್ಞನ ಅಭಿಪ್ರಾಯ. ಲೇಖಕರೂ ಇದನ್ನೇ ಅನುಮೋದಿಸಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಪಂಚಮೀ ವಿಭಕ್ತಿಯ ವಿಚಾರ ಪುನಃ ಪರಾಮರ್ಶೆ ಮಾಡ ಬೇಕಾದದ್ದು. "ಷಷ್ಠಿ ವಿಭಕ್ತೀ ಪ್ರತ್ಯಯವಾಗಿ ಕೆಲವೊಮ್ಮೆ -ಅತ್ತು,-ಅತು ಪ್ರತ್ಯಯಗಳಾಗಿ ಸೇರುವುದು ಕಂಡು ಬರುತ್ತದೆ" ಎಂಬ ಮಾತೂ ವಿಚಾರಣೀಯ. 'ಘೋ

ಹಾಗೂ ಅಘೋಷ ಧ್ವನಿ' ಎಂಬ ೧೪ನೆಯ ಅಧ್ಯಾಯವನ್ನು 'ಪೂರ್ವ ದ್ರಾವಿಡ ಧ್ವನಿ ವ್ಯವಸ್ಥೆ' ಎಂಬ ೨೦ನೆಯ ಅಧ್ಯಾಯದ ಮುಂದೆ ಸೇರಿಸುವುದು ಉಚಿತವೆಂದು ತೋರುತ್ತದೆ. ಈ ೨೦ನೆಯ ಅಧ್ಯಾಯವೂ, ಇದರ ಮುಂದಿನ ೭ ಅಧ್ಯಾಯಗಳೂ (ಚಕಾರ, ಪಕಾರ, ಟಕಾರ, ತಕಾರ, ರೇಫ ಮತ್ತು ಶಕಟರೇಫ, ಕಕಾರ ಮತ್ತು ಚಕಾರ, ಳಕಾರ, ವ/ಬಕಾರ-ಈ ವರ್ಣಗಳ ಚರಿತ್ರೆಯನ್ನು ಕುರಿತವು) ಈ ಗ್ರಂಥದ ವೈಶಿಷ್ಟ್ಯಪೂರ್ಣ ಭಾಗವಾಗಿದ್ದು, ಹಂಪ. ನಾಗರಾಜಯ್ಯನವರ ಆಳವಾದ ಅಧ್ಯಯನಕ್ಕೂ ವಿಚಾರ ವಿಮರ್ಶನ ಸಾಮರ್ಥ್ಯಕ್ಕೂ ಸಾಕಷ್ಟು ನಿದರ್ಶನಗಳನ್ನು ಒಳಗೊಂಡಿವೆ. ಪಕಾರ ಚರಿತ್ರೆಯನ್ನು ನಿರೂಪಿಸುತ್ತ ಬಹುಮಟ್ಟಿಗೆ ಕನ್ನಡದ ವೈಶಿಷ್ಟ್ಯ ಎನ್ನಬಹುದಾದ 'ಹ'ಕಾರದ ವಿಚಾರವನ್ನು ಲೇಖಕರು ಬಹುಸಮರ್ಥವಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ಈ ಹಕಾರ-'ಇದು ದೇಶಿಯೊಳ್ ಚೆಲ್ವು'-ಎಂದು ಕೇಶಿರಾಜನಿಂದ ಮೆಚ್ಚಿಗೆ ಪಡೆದಿದೆ. ಆದರೂ, ಲೇಖಕರು ಹೇಳಿರುವಂತೆ 'ಹ'ಕಾರ ದ್ರಾವಿಡ ಧ್ವನಿಯಲ್ಲ. "ಪಕಾರ ಹಕಾರವಾದುದರಿಂದ ಸಾಮಾನ್ಯ ಜನತೆಗೆ ಅನುಕೂಲಕ್ಕಿಂತಲೂ ಅನನುಕೂಲವೇ ಹೆಚ್ಚಾಯಿತು" ಎಂಬ ಲೇಖಕರ ವ್ಯಥೆಗೆ ಕಾರಣವೇನೂ ಇಲ್ಲ. ಸಾಮಾನ್ಯ ಜನ ಹಕಾರದೆಡೆಯಲ್ಲಿ ಸ್ವರೋಚ್ಚಾರ ಮಾಡಿ, ಭಾಷಾ ವಿಜ್ಞಾನಿಗಳಿಗೆ (ಧ್ವನಿ ಶಾಸ್ತ್ರಜ್ಞರಿಗೆ) ಗ್ರಾಸವನ್ನು ಒದಗಿಸಿದ್ದಾರೆ! ಅಲ್ಲದೆ, ಈ ಮಾರ್ಪಾಡು, ಹಿಂದೆ ಕೂಡ ಜನರಿಂದ ಆದದ್ದೆ ಹೊರತು, ಪಂಡಿತರಿಂದಾಗಲಿ ಕವಿಗಳಿಂದಾಗಲಿ ಅಲ್ಲ. ಕನ್ನಡದ ಹಕಾರೋಚ್ಚಾರಕ್ಕೆ ಸಂಸ್ಕೃತ-ಪ್ರಾಕೃತದ ಪ್ರಭಾವ ಕಾರಣ (ತದ್ಭವಗಳ ವಿಷಯದಲ್ಲಿ); ಕನ್ನಡ ದೇಶ್ಯ ಪದಗಳಲ್ಲಿಯೇ ಆಗಿರುವ ಮಾರ್ಪಾಟನ್ನು (ಪಾಲು-ಹಾಲು, ಪಾಡು-ಹಾಡು, ಪಡೆ-ಹಡೆ, ಇತ್ಯಾದಿ) ಬೇರೊಂದು ಕಾರಣ ಕೊಟ್ಟು ವಿವರಿಸಬೇಕಾಗುತ್ತದೆ. ಅಲ್ಪಪ್ರಾಣ ಮಹಾಪ್ರಾಣವಾಗಿ, ಆಮೇಲೆ ಹಕಾರವಾಗಿರಬಹುದು ಎಂಬ ವಿದ್ವಾಂಸರ ನಿಲುವನ್ನು ಲೇಖಕರು ಸಂದೇಹಾತ್ಮಕವಾಗಿ ಸ್ವೀಕರಿಸಿ, ಹಕಾರ ಪರಿವರ್ತನೆಯ ವಿಚಾರವನ್ನು ಬಹು ಎಚ್ಚರಿಕೆಯಿಂದ ವಿವೇಚಿಸಿದ್ದಾರೆ. ಇದು ಮೆಚ್ಚತಕ್ಕ ಅಂಶ. (ಹೀಗಿದ್ದರೂ ಹಕಾರದ ವಿಚಾರದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗೆ ಅವಕಾಶವಿದೆಯೆಂದು ತೋರುತ್ತದೆ). ಇನ್ನುಳಿದ ವರ್ಣಗಳ (ಧ್ವನಿಮಾಗಳ) ವಿವೇಚನೆಯಲ್ಲಿಯೂ ಲೇಖಕರು ತೋರಿಸಿರುವ ಶಾಸ್ತ್ರಪ್ರಜ್ಞೆ ಶ್ಲಾಘನೀಯವಾಗಿದೆ. ಅವರು ಬಹುಮಟ್ಟಿಗೆ ಇತರ ವಿದ್ವಾಂಸರ ಸಂಶೋಧನೆಗಳ ಫಲವನ್ನೂ, ಅಭಿಪ್ರಾಯಗಳನ್ನೂ, ತೀರ್ಮಾನಗಳನ್ನೂ ತಮ್ಮ ಗ್ರಂಥಲೇಖನಕ್ಕೆ ಆಧಾರ ಸಾಮಗ್ರಿಯಾಗಿ ಬಳಸಿಕೊಂಡಿದ್ದರೂ, ಸ್ವತಂತ್ರ ವಿಚಾರವನ್ನು ಮಾಡದೆ ಇಲ್ಲ. ಉದಾಹರಣೆಗೆ, ದ್ರಾವಿಡ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಬಹು ಗಟ್ಟಿಗರೆನ್ನಿಸಿಕೊಂಡಿದ್ದ ಎಲ್. ವಿ. ರಾಮಸ್ವಾಮಿ ಅಯ್ಯರ್ ಅವರು ರೇಫ-ಶಕಟರೇಫಗಳು ಒಂದೇ ಧ್ವನಿಮಾ ಎಂದಿರುವುದನ್ನು ಲೇಖಕರು ಖಂಡಿಸಿರುವುದು ಸರಿಯಾಗಿದೆ. ಕನ್ನಡ ಕೈಪಿಡಿಯಲ್ಲಿ ದಿವಂಗತರಾದ ಬಿ. ಎಂ. ಶ್ರೀ. ಯವರೂ ಟಿ. ಎಸ್. ವೆಂ. ಅವರೂ ವ್ಯಕ್ತಪಡಿಸಿರುವ ಕೆಲವು ಅಭಿಪ್ರಾಯಗಳನ್ನು ಹಂಪನಾ ಅವರು ವಿಚಾರದ ಬೆಳಕಿನಲ್ಲಿ ಪರೀಕ್ಷಿಸಿದ್ದಾರೆ.

'ಉಪಭಾಷಾ ಪರಿವೀಕ್ಷಣೆ' (ಅಧ್ಯಾಯ ೨೧) ಎಂಬುದು ಒಂದು ಜೀವಂತ ವಿಷಯವನ್ನು ಕುರಿತು ವಿವೇಚಿಸಿರುವ ಉಪಯುಕ್ತವಾದ ಗ್ರಂಥಭಾಗ. ಲೇಖಕರು ಬಿಜಾಪುರದ ಕನ್ನಡ, ಸೋಲಿಗರ ಕನ್ನಡ, ಸೇಡಬಾಳದ ಕನ್ನಡ ಮುಂತಾಗಿ ಕೆಲವು 'ಕನ್ನಡಂಗಳ' ಸ್ವರೂಪವನ್ನು ದಿಗ್ದರ್ಶನಾರ್ಥವಾಗಿ ಪರಿಚಯ ಮಾಡಿಕೊಟ್ಟಿರುವುದು ಸ್ವಾಗತಾರ್ಹ.

ಶ್ರೀ ಹಂಪ. ನಾ. ಅವರ 'ದ್ರಾವಿಡ ಭಾಷಾ ವಿಜ್ಞಾನ' ಗ್ರಂಥದಲ್ಲಿ ಸಣ್ಣಪುಟ್ಟ ಲೋಪದೋಷಗಳು ಇಲ್ಲವೆಂದಲ್ಲ. ಅವೆಲ್ಲ ಗೌಣ. ಮುನ್ನುಡಿಯಲ್ಲಿ ಪ್ರೊ|| ದೇ. ಜವರೇಗೌಡರು ಹೇಳಿರುವಂತೆ, "ಹಂಪನಾ ಅವರು ಅತ್ಯಂತ ಶ್ರೇಯಸ್ಕರವಾದ ಈ ಕೃತಿರಚನೆಯ ಮೂಲಕ ಭಾಷಾಋಣವನ್ನೂ", (ಗ್ರಂಥವನ್ನು ದಿ|| ತೀ. ನಂ. ಶ್ರೀ. ಯವರಿಗೆ ಅರ್ಪಿಸುವುದರ ಮೂಲಕ) "ಗುರು ಋಣವನ್ನೂ ತೀರಿಸಿದ್ದಾರೆ. ಪ್ರೌಢವಾದ ವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಎಷ್ಟು ಲಲಿತವಾಗಿ ಬರೆಯಬಹುದೆಂಬುದಕ್ಕೆ ಈ ಕೃತಿ ಅಮೂಲ್ಯ ನಿದರ್ಶನ." ದ್ರಾವಿಡ ಭಾಷಾ ವಿಜ್ಞಾನವನ್ನು ಹೊಸದಾಗಿ ವ್ಯಾಸಂಗ ಮಾಡಲಿಚ್ಛಿಸುವವರಿಗೆ ಇದೊಂದು ಉತ್ತಮ ಪ್ರವೇಶಿಕೆ; ವ್ಯಾಸಂಗ ಮಾಡಿರುವವರಿಗೆ ವಿಚಾರ ಪ್ರಚೋದಕ.

ವಿಮರ್ಶನರಂಗ

ನುಡಿರತ್ನ ಕೋಶ : ಸಂಗ್ರಹಕಾರರು : ಟಿ. ವಿ. ವೆಂಕಟರಮಣಯ್ಯ ; ಪ್ರ : ಗೀತಾಬುಕ್ ಹೌಸ್, ಮೈಸೂರು. ಪುಟ : ೧೮೬. ಬೆಲೆ : ೩-೦೦.

ಈಗಾಗಲೆ ಕನ್ನಡ ಗಾದೆಗಳ ಕೋಶ ಗ್ರಂಥದಿಂದ ಬೆಳಕಿಗೆ ಬಂದಿರುವ, ಕಲ್ಕತ್ತೆಯ ನ್ಯಾಶನಲ್ ಲೈಬ್ರರಿಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ಟಿ. ವಿ. ವೆಂಕಟರಮಣಯ್ಯನವರು ತಮ್ಮ ಬಹುದಿನಗಳ ಶ್ರಮದ ಫಲವಾಗಿ ಸಂಗ್ರಹಿಸಿ ಕೊಟ್ಟಿರುವ ನುಡಿರತ್ನ ಕೋಶವು ಕನ್ನಡಿಗರಿಗೆ ಒಂದು ಬೆಲೆಯುಳ್ಳ ಕಾಣಿಕೆಯಾಗಿದೆ. ಈ ದಿಶೆಯಲ್ಲಿ ಒಂದು ದಶಕದ ಹಿಂದೆ ಕೆಲಸ ಮಾಡಿದ ಶ್ರೀ ಉಮಾಪತಿ ಅವರ ಆಣಿಮುತ್ತುಗಳು ಗ್ರಂಥವು ತಮಗೆ ಪ್ರೇರಣೆ ಕೊಟ್ಟಿರುವುದಾಗಿ ಗ್ರಂಥಕರ್ತರು ನುಡಿದಿದ್ದಾರೆ. ಇತ್ತೀಚೆಗೆ ಶ್ರೀ ವೀರಭದ್ರಪ್ಪ ಸಜ್ಜನಶೆಟ್ಟಿ ಎಂಬುವರು ಜಾಗತಿಕ ಸತ್ಯಗಳು ಎಂಬ ಗ್ರಂಥವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ನುಡಿರತ್ನ ಕೋಶದಲ್ಲಿ ಅಕಾರಾದಿಯಾಗಿ ಅದೃಷ್ಟದಿಂದ ಹಿಡಿದು ಕ್ಷಮೆಯವರೆಗೆ ಸುಮಾರು ಮುನ್ನೂರು ವಿಷಯಗಳಿಗೆ ಸಂಬಂಧಿಸಿದಂತೆ ಇಂಗ್ಲಿಷ್, ಸಂಸ್ಕೃತ, ಕನ್ನಡಗಳಿಂದ ಆರಿಸಿದ ನುಡಿಮುತ್ತುಗಳನ್ನು ಕೊಟ್ಟಿದ್ದಾರೆ. ಸಂಬಂಧಪಟ್ಟ ವಿಷಯಗಳ ಬಗೆಗೆ ಜಗತ್ತಿನ ವಿಚಾರವಂತರ ಚಿಂತನೆಗಳ, ಅಭಿಪ್ರಾಯಗಳನ್ನು ಶ್ರಮವಿಲ್ಲದೆ ತಿಳಿದುಕೊಳ್ಳಲು ಪದಕೋಶವನ್ನು ನೀಡಿದ್ದಾರೆ. ಗಂಡಸು ಹೆಂಗಸು ಶೀರ್ಷಿಕೆಯ ಅಡಿಯಲ್ಲಿ ರೂಸೋ, ಬರ್ನಾರ್ಡ್, ಆಸ್ಕರ್‌ವೈಲ್ಡ್, ಖಲೀಲ್ ಗಿಬ್ರಾನ್ ಮೊದಲಾದ ಪಾಶ್ಚಿಮಾತ್ಯರ ಸುಭಾಷಿತಗಳೊಂದಿಗೆ, ಗಾಂಧೀಜಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಕೂರ್ ಮೊದಲಾದ ಭಾರತೀಯರ ವಿಚಾರಗಳನ್ನೂ ಕೊಟ್ಟಿರುವುದಲ್ಲದೆ, ನಾ. ಕಸ್ತೂರಿ, ತ್ರಿವೇಣಿ ಅವರ ಅಭಿಪ್ರಾಯಗಳಿಗೂ ಎಡೆ ಕೊಟ್ಟಿದ್ದಾರೆ. ಆದರೆ ವಿಷಯಗಳ ಲೇಖಕರ ಆಯ್ಕೆಯಲ್ಲಿ ಕೆಲವು ಕಡೆ ಆಕರಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವು ಕಡೆ ಈ ಆಕರಗಳನ್ನೂ ಕೊಟ್ಟಿಲ್ಲ. (ಪುಟ ೩೦ ವೈಯ್ಯಾರ).

ಆದರೂ ಲೇಖಕರು ಬಹಳ ಶ್ರಮ ವಹಿಸಿ ಸಂಗ್ರಹಿಸಿರುವ ಈ ನುಡಿರತ್ನ ಕೋಶವು ಕನ್ನಡಿಗರ ಗ್ರಂಥ ಭಂಡಾರಗಳಿಗೆ ಭೂಷಣವಾಗುವುದರಲ್ಲಿ ಸಂದೇಹವಿಲ್ಲ.

* * *

'ದಕ್ಷಿಣ ಭಾರತದ ಸಂತರು': ಲೇ : ವಿ. ನಾ. ಪ್ರ. ಸಂಪಾದಕರು, 'ಆರಾಧನೆ', ಶ್ರೀ ಮಾರಿಕಾಂಬ ದೇವಸ್ಥಾನ, ಶಿರಸಿ (ಉ. ಕ.), ಪುಟಗಳು ೧೧೨. ಬೆಲೆ ರೂ. ೧-೨೫.

ನಮ್ಮ ಭಾರತದಲ್ಲಿ ಅನಾದಿ ಕಾಲದಿಂದಲೂ ಅಸಂಖ್ಯಾತ ಸಾಧುಸಂತರೂ, ಮಹಾಪುರುಷರೂ ಆಗಿ ಹೋಗಿದ್ದಾರೆ. ಭಾರತದ ಭಕ್ತಿಪಂಥಕ್ಕೆ ದಕ್ಷಿಣದ ಸಂತಶ್ರೇಷ್ಠರು ನೀಡಿರುವ ಕೊಡುಗೆ ವಿಶಿಷ್ಟವಾದುದು. ಕೆಲವು ಪಂಡಿತರ ಅಭಿಪ್ರಾಯದಂತೆ ಭಕ್ತಿವಾಹಿನಿಯು ದಕ್ಷಿಣದಲ್ಲಿ ಹುಟ್ಟಿ ಉತ್ತರಕ್ಕೆ ಪ್ರವಹಿಸಿತಂತೆ. ಶಂಕರ, ರಾಮಾನುಜ, ಮಧ್ವ, ಬಸವೇಶ್ವರರ ಭಕ್ತಿಸಾಹಿತ್ಯ, ಅದಕ್ಕೂ ಮೊದಲು ದಕ್ಷಿಣದ ಭಕ್ತಶ್ರೇಷ್ಠರಾದ ಆಳ್ವಾರರು ನಾಯಿಮಾರರೂ ತಮ್ಮ ಭಕ್ತಿಯ ವಾಙ್ಮಯದಿಂದ ಬಂಗಾಳದ ಚೈತನ್ಯ, ಕಬೀರ, ತುಳಸೀದಾಸರ ಮೇಲೂ, ಪ್ರಭಾವ ಮುದ್ರೆಯನ್ನು ಒತ್ತಿರುವರೆಂದು ವಿದ್ವಾಂಸರ ಊಹೆ.

ಪ್ರಕೃತ ಗ್ರಂಥದಲ್ಲಿ ಶ್ರೀ ವಿ. ನಾ. ಅವರು ಬರೆದಿರುವ ಹದಿನಾಲ್ಕು ಸಂತರ ಸೂಕ್ಷ್ಮವಾದ ಪರಿಚಯವಿದೆ. ಕೆಲವರು ಐತಿಹಾಸಿಕ ಕಾಲಕ್ಕೆ ಸೇರಿದವರಾದರೆ, ಮತ್ತೆ ಕೆಲವರು ಪುರಾತನರೂ ಇದ್ದಾರೆ. ಇನ್ನು ಕೆಲವರು ಆಧುನಿಕ ಕಾಲಕ್ಕೆ ಸೇರಿದ್ದಾರೆ. ಈ ಎಲ್ಲ ಸಂತರ ಸಾಧನೆ ದೇವರು ಇದ್ದಾನೆ ಎಂಬುದನ್ನು ತೋರಿಸುವುದೇ ಆಗಿದೆ. ಇವುಗಳನ್ನು ಐತಿಹಾಸಿಕ ಕ್ರಮದಲ್ಲಿ ಜೋಡಿಸಿದ್ದರೆ ಚೆನ್ನಾಗಿತ್ತು. ಶ್ರೀ ವಿ. ನಾ. ಅವರ ಬರವಣಿಗೆ ಸೀಯಾಳದಷ್ಟು ಸಿಹಿ. ನಿರೂಪಣೆಯು ಸಹಜ ಸುಂದರ. ಅವರಿಗೆ ಕವಿಯ ಹೃದಯವಿದೆ. ಹೀಗಾಗಿ ಅವರ ಗದ್ಯದ ಬರವಣಿಗೆಯಲ್ಲಿ ಕಾವ್ಯದ ರಸ ಪುಟಿಸುತ್ತದೆ. ಇಂತಹ ಸುಂದರ ಸಂಕಲನಕ್ಕೆ ಕವಿ ಅಂಬಿಕಾತನಯರಿಂದ ಶ್ರೀಮುಖದ ಮೆಚ್ಚಿಗೆ ದೊರೆತಿದ್ದರೆ ಆಶ್ಚರ್ಯವಿಲ್ಲ.

ಈ ಗ್ರಂಥದಲ್ಲಿ ತಿರುಜ್ಞಾನ ಸಂಬಂಧ ಪೊಯಗೈ, ಪೂತಥಾಳ್ವಾರ, ಪೇಳಆಳ್ವಾರ, ಕುಲಶೇಖರ, ಶ್ರೀ ಆಂಡಾಳ್ ವಿಪ್ರನಾರಾಯಣ, ಅವ್ವೆಯ್ಯಾರ್ ಮಾಣಿಕ್ಯವಾಚಕರು ಮೊದಲಾದ ತಮಿಳುನಾಡಿನ ಸಂತರ, ಶಂಕರಾಚಾರ್ಯ, ರಾಮಾನುಜಾಚಾರ್ಯ ಮೊದಲಾದ ಅದ್ವೈತ ಮತ್ತು ವಿಶಿಷ್ಟಾದ್ವೈತ ಮತಸ್ಥಾಪಕರ ಜೀವನ ಚರಿತ್ರೆಗೂ ಅರವಿಂದ, ರಮಣ ಮೊಲಾದ ಜೀವಜ್ಯೋತಿಗಳಿಗೂ ಎಡೆ

ದೊರೆತಿದೆ. ಇಲ್ಲಿ ಉಚಿತವಾದ ಅನುಕ್ರಮಣಿಕೆ ಇಲ್ಲದೆ ಓದುಗರಿಗೆ ಕಲಸುಮೇಲೋಗರದ ಸವಿಯೂಟ ಉಂಡಂತಾಗುತ್ತದೆ. ಶ್ರೀ ವಿ. ನಾ. ಅವರು ಮುಂದಿನ ಸಂಸ್ಕರಣದಲ್ಲಿ ಈ ಕುಂದನ್ನು ಸರಿಪಡಿಸುವರೆಂದು ನಿರೀಕ್ಷಿಸುತ್ತೇವೆ. ಶಿರಸಿಯ ಶ್ರೀ ಮಾರಿಕಾಂಬ ಪ್ರಕಾಶನದವರು ಇಂತಹ ಉತ್ತಮ ಗ್ರಂಥವನ್ನು ಪ್ರಕಟಿಸಿ ಕೊರತೆಯಿರುವ ಕನ್ನಡ ಸಂತಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡಿಗೆಯನ್ನು ನೀಡಿದ್ದಾರೆ. ಅದರ ವ್ಯವಸ್ಥಾಪಕರು ಅಭಿನಂದನಾರ್ಹರು.

ಕೊ. ಶ್ರೀ.

ಮಾರ್ಗದರ್ಶಿ : ಇಂಗ್ಲಿಷ್ ಮೂಲ. ಆರ್. ಕೆ. ನಾರಾಯಣ್, ಕನ್ನಡ ಅನುವಾದ : ಚಿ. ನ. ಮಂಗಳ, ಸಾಹಿತ್ಯ ಆಕೆಡೆಮಿ, ನವದೆಹಲಿ. ಮುದ್ರಕರು ಪ್ರತಿಭಾ ಮುದ್ರಣ, ಧಾರವಾಡ, ಮಾರಾಟಗಾರರು : ಸಮಾಜಪುಸ್ತಕಾಲಯ ಪುಟಗಳು ೨೫೩. ಬೆಲೆ ರೂ. ೫-೫೦.

ಮಾಲ್ಗುಡಿಯ ಹಿನ್ನೆಲೆಯಲ್ಲಿ ಚಿತ್ರಿತವಾಗಿರುವ ಕಾದಂಬರಿ ಇದು. ವ್ಯಾಪಾರಿಯ ಮಗನಾಗಿದ್ದ ರಾಜು ಅದರಲ್ಲಿ ಆಸಕ್ತಿ ವಹಿಸದೆ ಮಾರ್ಗದರ್ಶಿಯಾಗಲು ಹೆಚ್ಚು ಇಷ್ಟಪಡುತ್ತಾನೆ. ತಂದೆಯನಂತರ ಅಂಗಡಿಯನ್ನು ಬೇರೆಯವರಿಗೊಪ್ಪಿಸಿ ಪ್ರವಾಸಿಗಳ ಹಿಂದೆ ತಿರುಗಿ, ಅವರಿಗೆ ಸೌಕರ್ಯಗಳನ್ನೊದಗಿಸುವುದರಲ್ಲಿ ಹೆಚ್ಚು ಆಸಕ್ತಿ ವಹಿಸಿರುತ್ತಾನೆ. ಅಷ್ಟರಲ್ಲಿ ಸಂಶೋಧನೆಗಾಗಿ ಬಂದ ಮಾರ್ಕೊವಿನ ಹೆಂಡತಿ ರೋಜಿ ತನ್ನ ಗಂಡನಿದ್ದೂ ಒಂಟಿತನವನ್ನು ಸಹಿಸಲಾರದೆ ಇವನ ಸಹವಾಸ ಬಯಸುತ್ತಾಳೆ. ಮಾರ್ಕೊ ಹೆಂಡತಿಯನ್ನು ಅನುಮಾನದಿಂದ ಕಂಡು ಅವಳನ್ನು ಅಲ್ಲೇ ಉಳಿಸಿ ತನ್ನ ಊರಿಗೆ ಹೊರಟುಹೋಗುತ್ತಾನೆ. ಆಗ ರೋಜಿ ವಿಧಿಯಿಲ್ಲದೆ ಇವರ ಮನೆಗೆ ಬರುತ್ತಾಳೆ. ರಾಜು ತನ್ನ ಸಂಬಂಧಿಕರ ಹಾಗೂ ತಾಯಿಯ ನಿಂದೆಗಳನ್ನು ನಿರ್ಲಕ್ಷಿಸಿ ರೋಜಿಗೆ ನಾಟ್ಯಾಭ್ಯಾಸ ಮಾಡಿಸಿ ಅವಳನ್ನು ಮುಂದಕ್ಕೆ ತರುತ್ತಾನೆ. ಇದರೊಂದಿಗೆ ರಾಜುವಿನ ಉತ್ಪಾದನೆಯೂ ಅಧಿಕವಾಗುತ್ತದೆ. ಆದರೆ ಮಾರ್ಕೊವಿನಿಂದ ಬಂದ ಪತ್ರವನ್ನು ರೋಜಿಗೆ ತೋರಿಸದೆ ಅವನ ಮೇಲಿನ ಅಸೂಯೆಯಿಂದ ಅವಳ ರುಜುವನ್ನು ಮಾಡಿ ಪೋಸ್ಟ್ ಮಾಡುತ್ತಾನೆ. ಇದರಿಂದಾಗಿ ಅವನು ಫೋರ್ಜರಿ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ರೋಜಿಯ ಪ್ರಯತ್ನಗಳಾವುದೂ ಸಫಲವಾಗದೆ ಎರಡು ವರ್ಷ ಕಠಿಣ ಶಿಕ್ಷೆಗೊಳಗಾಗುತ್ತಾನೆ. ಜೈಲಿನಿಂದ ಬಿಡುಗಡೆಯಾದ ಮೇಲೆ ಕೆಲವು ದಿನ ಹಳ್ಳಿಯಲ್ಲಿದ್ದಾಗ ಅವರು ತೋರಿದ ಗೌರವದಿಂದಾಗಿ ಹೊಟ್ಟೆಯ ಪಾಡಿಗಾಗಿ ತಾನೂ ಒಬ್ಬ ಸಾಧುವಿನಂತೆ ನಟಿಸುತ್ತಾನೆ. ಕೊನೆಗೆ ಮಳೆ ಬರಲು ಉಪವಾಸ ಮಾಡುವುದಾಗಿ ಹೇಳಿ ನದಿಯ ಮಧ್ಯದಲ್ಲಿನ ಮಂಟಪದಲ್ಲಿ ಉಪವಾಸದಿಂದ ಸೊರಗಿ ಕುಸಿಯುತ್ತಾನೆ. ಇದಿಷ್ಟು ಕಾದಂಬರಿಯ ಹಂದರ.

ಜೈಲಿನಿಂದ ಬಿಡುಗಡೆಯಾಗಿ ಬಂದ ರಾಜುವಿನೊಂದಿಗೆ ಆರಂಭವಾಗಿರುವ ಕತೆಯಿದು. ಅವನ ಹಿಂದಿನ, ಮತ್ತು ಅಂದಿನ ನೆನಪುಗಳನ್ನು ಒಟ್ಟಿಗೆ ತುಲನಾತ್ಮಕವಾಗಿ ಸೃಷ್ಟಿಸಿರುವುದೇ ಈ ಕಾದಂಬರಿಯ ವೈಶಿಷ್ಟ್ಯ. ಸರಯೂ ನೂಲದ ಪ್ರಕೃತಿಯ ಚಿತ್ರಣ ಸೊಗಸಾಗಿದೆ. ಕೊನೆಯಲ್ಲಿ ರೋಜಿ ತನ್ನ ಗಂಡನ ಬಗ್ಗೆ ತಾಳುವ ಮನೋಭಾವ ಹಿಂದೂ ಸಂಸ್ಕೃತಿಯ ಪ್ರತೀಕವಾಗಿದೆ. ಒಟ್ಟಿನಲ್ಲಿ ಇದು ಒಂದು ಉತ್ತಮ ಕಾದಂಬರಿ. ಇಂಗ್ಲಿಷಿನಲ್ಲಿ ಬಂದಿರುವುದರಿಂದ ಇದಕ್ಕೆ ಇನ್ನೂ ಹೆಚ್ಚಿನ ಮೌಲ್ಯ ಬಂದಿದೆ. ಚಲನಚಿತ್ರವಾಗಿ ರೂಪಾಂತರ ಹೊಂದಿರುವುದು ಈ ಕಾದಂಬರಿಯ ಇನ್ನೊಂದು ಹಿರಿಮೆ. ಅನುವಾದ ಕಾರ್ಯವನ್ನು ಚಿ. ನ. ಮಂಗಳ ಅವರು ಸ್ತುತ್ಯವಾಗಿ ನಿರ್ವಹಿಸಿದ್ದಾರೆ.

*   *   *

ಕೆಸರಿನ ತಾವರೆ : ಬರೆದವರು ರಾ. ಸು. ಮಣಿ. ಪ್ರಕಾಶಕರು : ಪ್ರತಿಭಾ ಗ್ರಂಥಮಾಲೆ, ಧಾರವಾಡ. ಮಾರಾಟಗಾರರು : ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ. ಪುಟಗಳು ೨೩೬. ಬೆಲೆ ರೂ. ೨-೫೦.

ಕೆಸರಿನ ತಾವರೆಯ ನಾಯಕ ಪಾಪಣ್ಣ ತಂದೆಯ ದಬ್ಬಾಳಿಕೆಯಿಂದ ನೊಂದು, ದೂರದ ನೆಂಟರಾದ ಸೋಮಣ್ಣ ವಿಮಲೆಯನ್ನರಸಿ ಬೆಂಗಳೂರಿಗೆ ಹೊರಡುತ್ತಾನೆ. ಸರಿಯಾದ ವಿಳಾಸವಿಲ್ಲದೆ ಅಲೆದು ಬೇಸತ್ತು ದಿಕ್ಕು ತೋಚದೆ ಹೋದಾಗ ಸೋಮಣ್ಣನ ದರ್ಶನವಾಗುತ್ತದೆ. ಆದರ್ಶ ಗೃಹಿಣಿ ವಿಮಲೆಯನ್ನು ನೋಡಿದಾಗ ಪಾಪಣ್ಣನಿಗೆ ಸೋದರಿ ಭಾವನೆ ಬರುವುದು ಅಸಹಜವೇನಲ್ಲ. ಸೋಮಣ್ಣನ ದಯದಿಂದ ಪೋಲೀಸು ಖಾತೆಯಲ್ಲಿ ಪಾಪಣ್ಣನಿಗೆ ಕೆಲಸ ಸಿಕ್ಕಿ ತನ್ನ ಶ್ರದ್ಧೆ, ನಿಷ್ಠೆಗಳಿಂದ ಮೇಲೇರಿ ಸಬ್ ಇನ್‌ಸ್ಪೆಕ್ಟರ್ ಆಗಿ ವಿಮಲಳ ತಂಗಿ ಶೈಲಳನ್ನು ಮದುವೆಯಾಗುವನು. ವಿಮಲೆಯು ಖಾಯಿಲೆ ಬಿದ್ದಾಗ ಪಾಪಣ್ಣ ಮಾಡಿದ ವಿಪರೀತ ಉಪಚಾರದಿಂದಾಗಿ ಸೋಮಣ್ಣ, ಹಾಗೂ ಮನೆಯ ಪ್ರತಿಯೊಬ್ಬರೂ ಇವನ ಬಗೆಗೆ ಸಂಶಯ ತಾಳುತ್ತಾರೆ. ಮಡದಿ ಶೈಲಳು ಸಹ ಇದೇ

ಭಾವನೆಗೆ ಎಡೆಗೊಡುತ್ತಾಳೆ. ಇದಕ್ಕೆ ಪುಟವಿಟ್ಟಂತೆ ಬೊಂಬಾಯಿಯಿಂದ ಆ ಮನೆಯ ಬಂಧುವೊಬ್ಬನು ಬರೆದ ಪತ್ರದಿಂದ ಮತ್ತಷ್ಟು ಕೋಲಾಹಲವಾಗುತ್ತದೆ. ಇಷ್ಟೆಲ್ಲಾ ಅನರ್ಥಗಳಾದ ಮೇಲೆ ಸೋಮಣ್ಣನಿಂದ ತನ್ನ ವರ್ತನೆಯ ಬಗ್ಗೆ ಕ್ಷಮೆ ಬೇಡಿ ಒಂದು ಕಾಗದ ಬರುತ್ತದೆ. ಇದಿಷ್ಟು ಕಾದಂಬರಿಯ ಹಂದರ.

ಕತೆಯಲ್ಲಿ ಮುಂದೋಟವಿದೆ. ಇಲ್ಲಿ ನೈಜತೆಗಿಂತ ಆದರ್ಶವೇ ಹೆಚ್ಚಾಗಿದೆ. ಸರಳವಾದ ಶೈಲಿ. ಒಟ್ಟಿನಲ್ಲಿ ಈಗ ಬರುತ್ತಿರುವ ಪ್ರಣಯ ಕಾದಂಬರಿಗಳಿಗಿಂತ ಉತ್ತಮವಾದ ಕಾದಂಬರಿ.

ಮಂಜುಳಾ

ಕಂಗೊಳಿಸುವ ಕಟೀಲು: ಆಕೃತಿ ಕ್ರೌನ್ ೧/೮, ಪುಟ: ೪೮, ಬೆಲೆ: ೧-೫೦, ಲೇ: ಕೊ. ಅ. ಉಡುಪ, ಪ್ರಕಾಶಕರು: ಯುಗ ಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ.ಕ.

ದಕ್ಷಿಣ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿದ್ದು, ಶ್ರೀ ದುರ್ಗಾಪರಮೇಶ್ವರಿಯ ಅಧಿಷ್ಠಾನವಾಗಿರುವ ಕಟೀಲಿನ ಧರ್ಮ ಸೇವೆಗಳ ಪರಿಚಯ ಕೊಡುವ ಪುಸ್ತಕವಿದು. ಲೇಖಕರು ಇದರಲ್ಲಿ ಧರ್ಮಾಭಿಮಾನ, ನಾರೀ ಶಕ್ತಿ ಮತ್ತು ದುರ್ಗಾಭಕ್ತಿ, ಸ್ಥಾನೀಯ ಐತಿಹ್ಯ, ಕಾಮ್ಯವ ಕರುಣಿಪ ಕಟೀಲು, ದೇವಿಯ ಭಕ್ತವೃಂದ, ಬ್ರಹ್ಮಕಲಶ, ಕಟೀಲು ಮೇಳದ ಬಯಲಾಟ, ಕಟೀಲು ಶಾಲೆ, ದೇವಾಲಯದ ವಿಶೇಷೋತ್ಸವಗಳು, ವಾರ್ಷಿಕ ಉಂಬಳಿಗಳು-ಎಂಬ ಹೆಸರಲ್ಲಿ ತಮ್ಮ ಹತ್ತು ಲೇಖನಗಳನ್ನು ಕೂಡಿಸಿದ್ದಾರೆ. ಈ ಲೇಖನಗಳನ್ನು ಪ್ರಬಂಧಗಳು, ಐತಿಹ್ಯಗಳು, ವರದಿಗಳು-ಎಂದು ವರ್ಗೀಕರಿಸಬಹುದು. ಕೆಲವು ವಿಶೇಷ ಚಿತ್ರಗಳು, ಉತ್ಸವ ವಿವರಗಳು, ಸೇವಾಕಾರ್ಯಗಳು ಮತ್ತು ಅವನ್ನು ಮಾಡಿಸಲು ತಗಲುವ ವೆಚ್ಚ-ಇತ್ಯಾದಿಗಳನ್ನು ಈ ಪುಸ್ತಕದಲ್ಲಿ ಕೊಟ್ಟಿದೆ.

* * *

ಭಾರತದ ಸಮಸ್ಯೆ: ಪುಟ: ೮+೧೧೩. ಬೆಲೆ: ೧-೫೦, ಲೇಖಕರು: ಸಿಂಪಿ ಲಿಂಗಣ್ಣ, ಪ್ರಕಾಶಕರು: ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ ಜಿಲ್ಲೆ.

ಮಹಾಪುರುಷ ಶ್ರೀ ರಾಮತೀರ್ಥರು ಭಾರತದ-ಸಮಸ್ಯೆಗಳ ಕುರಿತು ದೇಶವಿದೇಶಗಳಲ್ಲಿ ಮಾಡಿರುವ ಉಪನ್ಯಾಸಗಳ ಒಂದು ಸಂಕಲನವಿದು. ಭಾರತದ ಸಮಸ್ಯೆ, ಭವಿಷ್ಯತ್ತು, ಸದ್ಯದ ಅಗತ್ಯ, ಪ್ರಾಚೀನ ದಿವ್ಯದೃಷ್ಟಿ, ವ್ಯಾವಹಾರಿಕ ಜ್ಞಾನ ಅಥವಾ ಯೋಗ, ಯಶಃಪ್ರಾಪ್ತಿಯ ಗುಟ್ಟು, ಉತ್ಕರ್ಷವಾದ ದಾರಿ-ಎಂಬೀ ಏಳು ಉಪನ್ಯಾಸಗಳು ಉಜ್ವಲವಾದ ರಾಷ್ಟ್ರೀಯ ಸಂಸ್ಕೃತಿ ಶೀಲಗಳನ್ನು ಜಾಗೃತಿಗೊಳಿಸುವಂಥವು—

"ರಾಮತೀರ್ಥಂ ದಯಾನಂದಂ ವಿವೇಕಾನಂದ
ಮೇವ ಚ
ಏತೇಷಾಂ ಸ್ಮರಣಂ ನಿತ್ಯಮಾವಿರ್ಭವತಿ ಪೌರುಷಂ"

ಎಂಬ ಶ್ಲೋಕೋಕ್ತಿ ಸುಳ್ಳಲ್ಲ. ಸಾವಿರಾರು ವರ್ಷಗಳ ದಾಸ್ಯ ದೈನ್ಯ ಜೀವನದಲ್ಲಿ ತೊಳಲಿ ಚೇತರಿಸಲಾರದೆ ಇನ್ನೂ ಬಿದ್ದುಕೊಂಡಂತೆಯೇ ಇರುವ ನಮ್ಮ ಸಮಾಜದ ಅಧೈರ್ಯ, ಅಜ್ಞಾನ, ಸ್ವಾರ್ಥ, ಅಂಧ ವಿಶ್ವಾಸಾದಿಗಳನ್ನು ತೊಲಗಿಸಿ, ಪೌರುಷವನ್ನೂ ಪುರುಷಾರ್ಥ ಜೀವನವನ್ನೂ ಉಂಟುಮಾಡಲು ಈ ಬಗೆಯ ಸಾಹಿತ್ಯವು ನೆರವಾಗಬಲ್ಲುದು. ಇದೇ ರೀತಿ ಇನ್ನಿತರ ಭಾರತೀಯ ಮಹಾಪುರುಷರ ಸಚೇತನ ವಾಣಿಯನ್ನು ಇದೇ ಗ್ರಂಥಮಾಲೆಯ ಮೂಲಕ ಓದುಗರು ಪಡೆವಂತಾಗಲಿ.

* * *

ಪ್ರಾಚೀನ ಹಿಂದೂ ರಾಜ್ಯಪದ್ಧತಿ: ಪುಟ: ಕೌನ್: ೧/೮-೭೩, ಬೆಲೆ: ೧-೫೦, ಲೇಖಕರು: ಎಂ. ಎಸ್. ನಂಜುಂಡಸ್ವಾಮಿ, ಎಂ.ಎ. ಪ್ರಕಾಶಕರು: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು.

ಭಾರತದಲ್ಲಿ ರಾಜ್ಯಭಾರ ವ್ಯವಸ್ಥೆ ವೇದಕಾಲದಿಂದಲೇ ಪ್ರಚಲಿತವಾಗಿ ಬಂದುದು. ಅಂದಿನಿಂದ ಈಚೆಗೆ ಇತಿಹಾಸ ಕಾಲದ ವರೆಗಿನ ಬೇರೆ ಬೇರೆ ಕಾಲಖಂಡಗಳಲ್ಲಿ ರಾಜ್ಯ ಪದ್ಧತಿ ಹೇಗಿತ್ತೆಂಬುದನ್ನು ಸಂಕ್ಷೇಪವಾಗಿ ಈ ಪುಸ್ತಕವು ತಿಳಿಸುತ್ತದೆ. ಇದರಲ್ಲಿ ಪ್ರಕವಾಗಿರುವ ಲೇಖಕರ ಅಧ್ಯಯನ ಪರಿಶ್ರಮ ಹೆಚ್ಚಿನ ಮಟ್ಟಿಗೆ ಮೌರ್ಯರ ಕಾಲದಿಂದ ಅಥವಾ ಬುದ್ಧನ ಕಾಲದಿಂದ ಈಚಿನದು. ವೇದಕಾಲದ ವಿಚಾರಗಳನ್ನೂ ಸ್ವಲ್ಪ ಮಟ್ಟಿಗೆ ಹೇಳಿದ್ದಾರೆ. "ಹೀಗಿದ್ದಿತು, ಹಾಗಿದ್ದಿತು" ಎಂದು ಹೇಳುವಲ್ಲಿ, ವೇದದಲ್ಲಾದರೆ ಯಾವ ಮಂಡಲ, ಸೂಕ್ತ ವಿಚಾರವನ್ನು ತಿಳಿಸುತ್ತದೆ. ಎಂಬುದು ಒಂದೆಡೆಯೂ ಇಲ್ಲ. ಇತಿಹಾಸದ ವಿಷಯವನ್ನು ಹೇಳುವಾಗಲೂ ಇಷ್ಟೆ. ಕೆಲವೆಡೆ "...ಹೀಗೆಂದು ಭಾವಿಸಲಾಗಿದೆ" ಎನ್ನುತ್ತಾರೆ. ಹಾಗೆ ಭಾವಿಸಿದವರು ಯಾರೆಂಬುದು ಇಲ್ಲ. ಒಟ್ಟಿನಲ್ಲಿ ವಿವರಗಳಿಗೆ ಆಧಾರ ನಿರೂಪಣೆ ಸಾಕಷ್ಟಿಲ್ಲವೆನ್ನಬಹುದು. ಭಾರತದಲ್ಲಿ ಅತಿ

ಪ್ರಾಚೀನ ಕಾಲದಲ್ಲಿ ರಾಜ್ಯಪದ್ಧತಿ ರಹಿತವಾದೊಂದು ಸುವ್ಯವಸ್ಥೆಯಿತ್ತೆಂಬುದಕ್ಕೆ ಆಧಾರವಿದೆ—

" ನ ರಾಜ್ಯಂ ನೈವ ರಾಜಾಸೀತ್ ನ ದಂಡೋ
ನಚದಾಂಡಿಕಃ
ಧರ್ಮೇಣೈವ ಪ್ರಜಾಸ್ಸರ್ವೇ ರಕ್ಷಂತಿ ಸ್ಮ ಪರಸ್ಪರಂ "

ಈ ಬಗೆಯ ಕಾಲದ ಸ್ಥಿತಿ ಎಂಥದೆಂಬುದನ್ನು ಶೋಧಿಸಿ, ಇಂತಹ ಪುಸ್ತಕದಲ್ಲಿ ತಿಳಿಸಬೇಕಿತ್ತು. ಋಗ್ವೇದದಲ್ಲಿ (೫-೬೬-೬) " ಬಹುಪಾಯ್ಯಸ್ವರಾಜ್ಯ "ವನ್ನು ತಿಳಿಸಿದೆ. ಈ ರಾಜ್ಯಪದ್ಧತಿಯ ಸ್ವರೂಪವು—"A Government of the people, for the people and by the people " ಎಂಬ ಆಧುನಿಕ ಪ್ರಜಾಪ್ರಭುತ್ವದ ಅರ್ಥದಿಂದಲೇ ಕೂಡಿದೆ. ಈ ಬಗೆಯ ವಿವರಣೆ ಈ ಪುಸ್ತಕದಲ್ಲಿ ಸೇರದೆ ಅಸಮರ್ಪಕವಾಗಿದೆ. ಭಾರತೀಯ ಪ್ರಾಚೀನ ಗ್ರಂಥಗಳ ಹೆಚ್ಚಿನ ಅಧ್ಯಯನದಿಂದ, ಆಧಾರಗಳನ್ನು ಕೊಟ್ಟು ವಿವರಿಸುವ ಈ ಬಗೆಯದೊಂದು ಗ್ರಂಥವು ಕನ್ನಡಿಗರಿಗೆ ಆವಶ್ಯಕ. ಆ ದಿಶೆಯ ರಚನೆಗೆ ಈ ಕಿರುಹೊತ್ತಿಗೆ ಒಂದು ಕೆಳ ಮೆಟ್ಟಲು. ಈ ಮಟ್ಟಿಗೆ ಲೇಖಕರು ಅಭಿನಂದನಾರ್ಹರು.

ಟಿ. ಕೇಶವ ಭಟ್ಟ

ಪ್ರೇಮಾವತಿ : ಲೇ. : ನವಗಿರಿನಂದ, ಪ್ರ. : ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ : ೨೭೨, ಬೆಲೆ : ೩–೦೦

ಕಾದಂಬರಿಯ ಒಂದು ಹುಚ್ಚುಹೊಳೆ ಹರಿದಾಗ ಸಾಮಾನ್ಯ ಓದುಗನಿಗೆ ಸಹಜವಾಗಿಯೇ ಉತ್ತಮ ಕಾದಂಬರಿಗಳನ್ನು ಆರಿಸುವಾಗ ಭ್ರಮೆಯಾಗುವುದು. ಸದ್ಯದ ಕಾದಂಬರಿ ವಸ್ತು, ವಿನ್ಯಾಸ, ಕಥಾ ತಂತ್ರ ಈ ದೃಷ್ಟಿಯಿಂದ ಒಂದು ಒಳ್ಳೆಯ ಬೋಧಪ್ರದವಾದ ಕೃತಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಮನೆತನದ ತರುಣಿಯೊಬ್ಬಳು ಪ್ರೇಮವೆಂಬ ಭ್ರಾಂತಿಗೆ ಸಿಕ್ಕಿ ಸಿನೆಮಾ ಮೋಹಕ್ಕೊಳಗಾಗಿ, ಪಡಬಾರದಪಾಡು ಪಟ್ಟು, ದುರ್ದೆಶೆ, ದುರ್ಗತಿ ಹೊಂದಿ ಪಶ್ಚಾತ್ತಾಪದಿಂದ ಪರಿಶುದ್ಧಳಾಗಿ ಸ್ವಗೃಹಕ್ಕೆ ಮರಳುವುದೇ ಕಥಾ ವಸ್ತು. ಸಾಮಾನ್ಯವಾಗಿ ಸದ್ಯದ ಯಾವುದೇ ಸಂಸಾರದಲ್ಲಿ ನಡೆಯಬಹುದಾದ ಘಟನೆಗಳನ್ನೂ ಲೇಖಕರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಹೊರ ಕವಚ ಆಕರ್ಷಕವಾಗಿದ್ದರೂ ಪುಸ್ತಕದಲ್ಲಿ ಅಚ್ಚುದೋಷಗಳು ವಿಪರೀತವಾಗಿದೆ. ಎಲ್ಲಾ ಲೈಬ್ರರಿಯಲ್ಲೂ ಇರಬೇಕಾದ ಪುಸ್ತಕ.

* * *

ಕಪ್ಪು ಗುಲಾಬಿ ೪ಳ : ಲೇ. : ಮೂಲ : ಟೆಂಪೋರಾವ್, ಅನುವಾದ : ತಾ. ರಾ. ನಾಗರಾಜ, ಪ್ರ. : ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ : ೧೩೫, ಬೆಲೆ : ರೂ. ೧–೫೦

ಇದೊಂದು ಅಂತರ್ ದೇಶೀಯ ಅಪರಾಧಿಗಳ ಪತ್ತೇದಾರಿ ಪ್ರಸಂಗ. ಯಾವುದೋ ತಂಡ ಭಾರತದಲ್ಲಿ ಸೇರಿ ಮತ್ತೊಂದು ದೇಶದವರಿಗಾಗಿ ಗೂಢಚರ್ಯೆ ನಡೆಸುತ್ತಿರುವುದು. ಅದರ ನಾಯಕ (ನಾಯಕಿ ?) ನ ಗುರ್ತು ಕಪ್ಪು ಗುಲಾಬಿ ೪ಳ. ಭಾರತದ ಗೃಹಮಂತ್ರಿಗಳು ಈ ತಂಡವನ್ನು ಪತ್ತೆ ಮಾಡಲು ' ಪರಶುರಾಮ ' ಎಂಬ ನುರಿತ ಪತ್ತೇದಾರರನ್ನು ಕಳುಹಿಸುವರು. ಆದರೆ ಪತ್ತೇದಾರರು ' ಕಪ್ಪು ಗುಲಾಬಿ ೪ಳ " ಪತ್ತೇ ಹಚ್ಚುವಾಗ ಸ್ವತಃ ಅವರಿಗೇ ಆಶ್ಚರ್ಯವಾಗುವಂಥಾ ವಿಷಯಗಳು ಹೊರಬೀಳುವುದು.

ಪತ್ತೇದಾರಿ ಪ್ರಕೃತಿ, ಗುನ್ಹೆ, ಅಪರಾಧ, ಖೂನಿ, ಕೊಲೆ ಇತ್ಯಾದಿಗಳ ವಿಚಾರದಲ್ಲಿ ಆಸಕ್ತಿಯುಳ್ಳ ವಾಚಕರಿಗೆ ಇದು ಖಂಡಿತವಾಗಿ ರುಚಿಸುವುದು.

ಆಕರ್ಷಕವಾದ ಹೊರಕವಚ, ಉತ್ತಮ ಕಾಗದ ಮತ್ತು ಮುದ್ರಣ ಇವು ಈ ಪುಸ್ತಕದ ವಿಶಿಷ್ಟ ಗುಣಗಳು.

* * *

ಸಂಜೆ ಮಲ್ಲಿಗೆ (ಕಥಾ ಸಂಕಲನ) : ಲೇ. : ಶ್ರೀಮತಿ ಶಾಂತಾದೇವಿ ಕಣವಿ, ಪ್ರ. : ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು–೨, ಪುಟ : ೧೧೪, ಬೆಲೆ : ರೂ. ೨–೫೦

' ಸಂಜೆಮಲ್ಲಿಗೆ ' ಹದಿನಾಲ್ಕು ಕಥೆಗಳ ಒಂದು ಸಂಕಲನ. ' ಅರಿಕೆ 'ಯಲ್ಲಿ ಇದು ತಮ್ಮ ಪ್ರಥಮ ಕಥಾ ಸಂಕಲನವೆಂದು ಹೇಳಿಕೊಂಡಿದ್ದಾರೆ. ಲೇಖಕಿ ಕಣವಿಯವರಿಗೆ ಜೀವನವನ್ನು ಅದರಲ್ಲೂ ಸಾಮಾನ್ಯ ಸಾಂಸಾರಿಕ ಜೀವನವನ್ನು ಚಿತ್ರಿಸುವ ಕಲೆ ಸಿದ್ಧಿಸಿದೆ. ಭಾಷೆಯಲ್ಲಿ ಸುತ್ತಿಲ್ಲ. ನೇರ, ಸರಳ ; ಶೈಲಿ ಸಹಜ ಸುಂದರ, ಮನಮುಟ್ಟುವ ನಿರೂಪಣೆ ಇವು ಈ ಕಥೆಗಳ ವೈಶಿಷ್ಟ್ಯತೆ.

ತೀರ ಸಾಮಾನ್ಯವಾದ ವಿಚಾರವೂ ಸಹಾ ಲೇಖಕಿಯ ಸಿದ್ಧಹಸ್ತದಿಂದ ರೂಪಾಂತರ ಹೊಂದಿ ಸುಂದರ ಕಥೆಯಾಗಿ ಪರಿವರ್ತನ ಹೊಂದುತ್ತದೆ. ಕಥೆಗಳಲ್ಲಿ ಉತ್ತರ ಕರ್ನಾಟಕದ ಜನಜೀವನ, ಆಹಾರ, ಸಂಸ್ಕೃತಿ ಈ ವಿಚಾರಗಳೂ ಆಕರ್ಷಕವಾಗಿ ಮೂಡಿಬಂದಿವೆ.

ಕತೆಯ ಓಟ ನವಿರಾಗಿ, ಸದ್ದು ಗದ್ದಲವಿಲ್ಲದೆ ಪ್ರಶಾಂತ ಸಾಗರದಂತೆ ಹರಿದುಹೋಗುವುದು. ಅನಾವಶ್ಯಕ ಭಾವ ಪ್ರಚೋದನೆಗಳಿಗೆ ಇಲ್ಲಿ ಅವಕಾಶವಿಲ್ಲ. ಆದರೂ ಲೇಖಕಿ ಶಾಂತಾದೇವಿಯವರು ಕಥಾತಂತ್ರ ಮತ್ತು ಶೈಲಿಗಳಲ್ಲಿ ವೈವಿಧ್ಯತೆಗೆ ಎಡೆಗೊಡಬೇಕು. ಇಲ್ಲದಿದ್ದರೆ ಏಕನಾದದ ಶ್ರುತಿಯಂತೆ ಒಂದೇ ಧ್ವನಿ ಮಿಡಿಯುತ್ತ ಬೇಸರ ತಂದೀತು ಸೊಗಸಾದ ಮುದ್ರಣ,ಉತ್ತಮವಾದ ಹೊರಕವಚ. ಯಾವ ಪುಸ್ತಕ ಭಂಡಾರದಲ್ಲೂ ಶೋಭಿಸೀತು.

* * *

ರಾಜೀವಪುರ : ಲೇ. : ಯಂ. ಜಿ. ಭೀಮರಾಯರು, ಪ್ರ : ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೨೧೯, ಬೆಲೆ: ರೂ. ೩–೦೦

ಬಸ್ಸು ಬರಲಿಲ್ಲವೆಂದು ಕಾಯುತ್ತಿದ್ದಾಗ ಅಲ್ಲಿದ್ದ ಮುದುಕರೊಬ್ಬರು ಹೇಳಿದ ಕಥೆ ರಾಜೀವಪುರ. ಕಥೆಯೇನು ಒಂದು ಚಿಕ್ಕ ಮಹಾಭಾರತ. ಕಾದಂಬರಿಯ ಪಾತ್ರಗಳೆಲ್ಲಾ ನಮಗೆ ಸುರಪರಿಚಿತರೇ, ನಮ್ಮ ಸುತ್ತಮುತ್ತಲಿನ ಜನ. ಹಲವು ಸಲ ನಾವೇ ಆ ಪಾತ್ರಗಳಾಗಿರಬಹುದು. ನಮ್ಮ ಭಾರತದ ಯಾವದೊಂದು ಗ್ರಾಮವೂ ರಾಜೀವಪುರ ವಾಗಿರಬಹುದು.

ತಾವು ಜಗತ್ತಿನ ರಂಗದಿಂದ ಹೊರಗಾಗಿ ನಿಂತು ಕೇವಲ ಪ್ರೇಕ್ಷಕರಂತೆ ನಡೆದಿದ್ದುದನ್ನು ವಿವರಿಸುತ್ತಾ ಹೋಗುತ್ತಾರೆ, ನಿರ್ವಿಕಾರವಾಗಿ ಲೇಖಕರು. ಹೀಗೇಕಾಯಿತು ? ಎಂದು ಎಷ್ಟೋ ಸಲ ನಮಗೆ ನಾವೇ ಕೇಳಿಕೊಳ್ಳುತ್ತೇವೆ. ಈ ಕಾದಂಬರಿಯಲ್ಲಿ ಓದುಗನನ್ನು ಹಿಡಿದಿಡಬಹುದಾದ ಎಲ್ಲಾ ಅಂಶಗಳೂ ಇವೆ.

ಕೆಲವು ಸಲ ಪಾತ್ರಗಳು ಅತಿಯಾಯಿತೇನೋ ಎಂದು ಭಾಸವಾಗುತ್ತದೆ. ಹಲವು ಸಲ ಪಾತ್ರಗಳ ಹೆಸರುಗಳನ್ನೇ ನಾವು ಮರೆಯುವಂತಾಗುವುದು. ಆದರೆ ಅಕ್ಷರಸ್ಖಾಲಿತ್ಯ ಅಚ್ಚುದೋಷ ಇವುಗಳಿಂದ ಪುಸ್ತಕ ಆವೃತವಾಗಿದೆ. ಲೇಖಕರು ಈ ದೆಶೆಯಲ್ಲಿ ಸ್ವಲ್ಪ ಶ್ರಮಿಸಿದರೆ ಉತ್ತಮ. ಉತ್ತಮ ದರ್ಜೆಯ ಕಾದಂಬರಿಗಳ ಸಾಲಿನಲ್ಲಿ ಈ ರಾಜೀವ ಪುರವನ್ನು ಸೇರಿಸಬಹುದು.

* * *

ತಲೆಮಾರಿನ ಹಿಂದೆ: ಲೇ. : ಸಿಂಪಿ ಲಿಂಗಣ್ಣ, ಪ್ರ. : ಶ್ರೀ ಅರವಿಂದ ಗ್ರಂಥಾಲಯ, ಚಡಚಣ ಜಿಲ್ಲೆ, ವಿಜಾಪುರ, ಪುಟ: ೧೪೦, ಬೆಲೆ; ರೂ. ೧-೭೫.

ನಮ್ಮವರ ಹಿಂದಿನ ಸಂಸ್ಕೃತಿ ಮತ್ತು ಕಲೆ ಕಾಲ ಗರ್ಭದಲ್ಲಿ ಅಡಗಿಹೋಯಿತು. ಕಂಡೂ ಕಂಡೂ ನಾವು ಕೈಯೊಳಗಿನಿಂದ ಕಳೆದುಕೊಂಡು ಕುಳಿತೆವು. ನಾವೇನೂ ಕಲಿಯಲಿಲ್ಲ. ಲೇಖಕರು ಹಿಂದಿನ ತಲೆಮಾರಿನ ಒಂದು ಸುಂದರ ಸುಪುಷ್ಟ ಚಿತ್ರವನ್ನು ನಮ್ಮ ಮುಂದೆ ಬಿಡಿಸಿದ್ದಾರೆ. ಶ್ರೀ ಸಿಂಪಿಯವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಸುಮಾರು ನಲವತ್ತು ವರ್ಷಗಳ ಅನುಭವ. ಅವರು ವಿಷಯ ನಿರೂಪಿಸುವ ಥಾಟಿ, ಶಬ್ದಗಳ ಥಳಕು, ಹಾಸ್ಯದ ಝಳಕು, ನಮ್ಮ ಮುಂದೆ ಸುಮಾರು ಒಂದು ತಲೆಮಾರಿನ ಹಿಂದೆ ಹಳ್ಳಿಯ ರಸಭರಿತವಾದ ಒಂದು ಜೀವನ ಚಿತ್ರವನ್ನು ಮೂಡಿಸುತ್ತದೆ.

ಆಗಿನ ಕಾಲದ ಜನರ ಶುದ್ಧ ಅಂತರಂಗ, ಸರಳ ಜೀವನ ಪ್ರಾಮಾಣಿಕ ವ್ಯವಹಾರ, ಜೀವನವನ್ನು ಅವರು ನೋಡುತ್ತಿದ್ದ ದೃಷ್ಟಿ ಸಾಮಾಜಿಕ ಮನೋಭಾವ ಇವೆಲ್ಲಾ ನಮ್ಮ ಕಣ್ಣುಮುಂದೆ ಬಂದು ನಿಂತಂತೆ ಉಲ್ಲೇಖಿಸಿದ್ದಾರೆ. ಶೈಲಿ ಸುಂದರ, ನಿರೂಪಣೆ ಸರಳ, ಭಾಷೆ ಸಹಜ ಮತ್ತು ಮಧುರ ಈ ಗುಣಗಳು ಈ ಪುಸ್ತಕವನ್ನು ಒಂದು ಮಾದರಿ ಹೊತ್ತಿಗೆಯನ್ನಾಗಿ ಮಾಡಿದೆ. ಪಠ್ಯಪುಸ್ತಕ ಸಮಿತಿಯವರು ಇಂತಹ ಪುಸ್ತಗಳತ್ತ ಗಮನ ಹರಿದರೆ ಉತ್ತಮ.

ಉತ್ತಮವಾದ ತಪ್ಪಿಲ್ಲದ ಮುದ್ರಣ. ಆಡಂಬರರಹಿತ ವಾದ ಅಚ್ಚುಕಟ್ಟು ಈ ಪುಸ್ತಕದ ವಿಶೇಷ ಗುಣಗಳು. ಕನ್ನಡ ಸಾಹಿತ್ಯಕ್ಕೆ ಬೆಲೆಯುಳ್ಳ ಕೊಡುಗೆ

ಡಿ. ಮಾಧವಮೂರ್ತಿ

ಜಾನ್ ಕೆನಡಿ: ಲೇಖಕರು: (ಮೂಲ) ಶ್ರೀ ಜೇಮ್ಸ್‌ಮೆಕ್ ಗ್ರೆಗರ್ ಬರ್ನ್ಸ್, ಅನುವಾದಕರು: ಶ್ರೀ ಪಿ. ಎಸ್. ಭಟ್ಟ, ಪ್ರಕಾಶಕರು: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ನಿಯಮಿತ, ಬೆಂಗಳೂರು–೧೮, ಪುಟಗಳು: ೨೩೩, ಬೆಲೆ: ರೂ. ೭-೦೦,

ಜಾನ್ ಫಿಟ್‌ಜೆರಾಲ್ಡ್ ಕೆನಡಿ ಇಪ್ಪತ್ತನೆಯ ಶತಮಾನದ ಜಗತ್ತಿನ ಜನನಾಯಕರಲ್ಲಿ ಒಬ್ಬರಾಗಿ, ವಿಶ್ವದ ಕ್ಷಿತಿಜದ ಧ್ರುವತಾರೆಯಾಗಿ ಬೆಳಗಿದ್ದಾರೆ. ಇವರ ಉಜ್ವಲ ಜೀವನ ಪೂರ್ಣ ಬೆಳಗುವ ಮುನ್ನವೇ ೧೯೬೩ ನವಂಬರ್ ೨೨ರಂದು ಹಂತಕನ ಗುಂಡಿಗೆ ಬಲಿಯಾಗಿ ನಂದಿಹೋಯಿತು.

ಪ್ರಸಕ್ತ ಜೀವನ ಚರಿತ್ರೆಯ ಮೂಲಕರ್ತೃ ಶ್ರೀ ಜೇಮ್ಸ್ ಮೆಕ್‌ಗ್ರೆಗರ್‌ಬರ್ನ್ಸ್ ವಿಲಿಯಂ ಕಾಲೇಜಿನ ರಾಜಕೀಯ ವಿಜ್ಞಾನದ ಪ್ರಾಧ್ಯಾಪಕರು. ಕೆನಡಿಯವರ ಫೈಲುಗಳ

ಅವರ ಕುಟುಂಬದ ದಾಖಲೆಗಳು ಮತ್ತು ಕಾಗದಪತ್ರಗಳನ್ನು ಪರಿಶೋಧಿಸಲು ಇವರಿಗೆ ಪೂರ್ಣ ಅವಕಾಶ ಸಿಕ್ಕಿತ್ತು. ಕೆನಡಿ, ಅವರ ಸಂಸಾರದ ಸದಸ್ಯರು, ಮಿತ್ರರು ಮತ್ತು ರಾಜಕೀಯ ಸಹಯೋಗಿ – ವಿರೋಧಿಗಳು ಇವರೊಡನೆ ಅನೇಕ ದಿನ ವ್ಯವಹರಿಸಿ ಕೆನಡಿಯವರ ಜೀವನದ ಒಂದು ಪ್ರಥಮ ಸಮಗ್ರ ಚರಿತ್ರೆಯನ್ನು ಹೊರತಂದಿದ್ದಾರೆ.

ಅಮೇರಿಕಾದ ಬಹುಮುಖ್ಯ ವ್ಯಕ್ತಿಯ ಈ ಜೀವನ ಚರಿತ್ರೆಯಲ್ಲಿ ಕೆಲವಂಶ ಹಿನ್ನೆಲೆ, ಆತನ ಬಾಲ್ಯ ಮತ್ತು ರಾಜಕೀಯ ಮುನ್ನಡೆ, ಪೆಸಿಫಿಕ್ ಯುದ್ಧದಲ್ಲಿ ಆತ ತೋರಿಸಿದ ಧೈರ್ಯ ಸಾಹಸಗಳು, ಅವರು ಬರೆದ ಎರಡು ಜನಪ್ರಿಯ ಗ್ರಂಥಗಳು, ಆತನ ಗೃಹ ಮತ್ತು ರಾಜಕೀಯ ಜೀವನದ ಅಂಶಗಳನ್ನು ಹೊರಗೆಡವಿದ್ದಾರೆ. ಅದರಲ್ಲೂ ಆತನ ಬಾಲ್ಯ ಮತ್ತು ಉನ್ನತ ಗುಣಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ಮೂಲಕ್ಕೆ ಚ್ಯುತಿ ಬಾರದಂತೆ ಅನುವಾದವೂ ಸುಂದರವಾಗಿದೆ. ಬೆಳ್ಳಿಯ ಕಾಗದ, ಅಚ್ಚುಕಟ್ಟಾದ ತಪ್ಪಿಲ್ಲದ ಮುದ್ರಣಗಳಿಂದ ಈ ಗ್ರಂಥ ಅಭ್ಯಾಸೀ ರಾಜಕೀಯ ಜಿಜ್ಞಾಸುಗಳಿಗೆ ಸಂಗ್ರಹಿಸಲು ಯೋಗ್ಯವಾಗಿದೆ.

* * *

ನಾಲ್ಕು ಕಾವ್ಯ ಕಥೆಗಳು : ಲೇ. : ನಾಲ್ಕಾರು ಲೇಖಕರು, ಪ್ರ.: ಶ್ರೀ ವಾಗ್ವಿಲಾಸ ಪ್ರಕಾಶನ, ಬೆಂಗಳೂರು–೧೦, ಪುಟ: ೬೫. ಬೆಲೆ: ೦–೮೦ ಪೈಸೆ.

ಹನ್ನೆರಡರಿಂದ ಹದಿನೈದು ವರ್ಷಗಳ ವಯೋಮಾನವುಳ್ಳ ಮಕ್ಕಳಿಗಾಗಿ ರಚಿತವಾದ ಈ ಸಂಕಲನದಲ್ಲಿ ನಾಲ್ಕು ಕಾವ್ಯ ಕಥೆಗಳಿವೆ. ಹರಿಶ್ಚಂದ್ರ ಕಾವ್ಯ, ಕುಮಾರಸಂಭವ, ಬಾಣನ ಕಾದಂಬರೀ ಮತ್ತು ಮಾರ್ಕಂಡೇಯ ಪುರಾಣಗಳಿಂದ ಆಯ್ದು ಮಕ್ಕಳಿಗೆ ಅರ್ಥವಾಗುವ ಸುಲಭ ಸರಳ ಭಾಷಾ ಶೈಲಿಗೆ ಅಳವಡಿಸಿ ಮಕ್ಕಳ ಮನೋರಂಜನ ಮತ್ತು ಸದಭಿರುಚಿಗಳಿಗೆ ಅಣಿಗೊಳಿಸಿದ್ದಾರೆ.

ಇದರಲ್ಲಿ ಕೊನೆಯದಾದ 'ಚಂದ್ರಮತಿ'ಯ ಕಥೆ ಪ್ರಚಲಿತ ಹರಿಶ್ಚಂದ್ರ ಕಾವ್ಯದ ಚಂದ್ರಮತಿಗಿಂತಲೂ ಹೆಚ್ಚು ವಿವರಗಳಿಂದ ಕೂಡಿದೆ. ಈ ಭಾಗದ ಕಥಾಂಶ ನಮಗೆ ನಿಶ್ಚಯವಾಗಿಯೂ ಹೊಸದು.

ಮಕ್ಕಳ ಎಳೆಯ ಮನಸ್ಸಿನ ಮೇಲೆ ಪ್ರಭಾವ ಬೀರುವ ಇಂತಹ ಕಥಾ ಸಂಕಲನಗಳು ನಮ್ಮಲ್ಲಿ ಹೆಚ್ಚುಹೆಚ್ಚಾಗಿ ಬೆಳೆಯುವಂತೆ ನಮ್ಮ ಜನತೆ ಮತ್ತು ಸರ್ಕಾರ ಈ ನಿಟ್ಟಿನಲ್ಲಿ ದೃಷ್ಟಿ ಹರಿಸಿ ಪ್ರೋತ್ಸಾಹ ನೀಡಬೇಕು. ಈ ಪ್ರಕಾಶನದಿಂದ ಇನ್ನು ಅನೇಕ ಬಾಲ ಸಾಹಿತ್ಯ ಹೊತ್ತಿಗೆಗಳು ಬರಲಿ. ಅದಕ್ಕೆ ಕನ್ನಡ ಜನತೆಯ ಪ್ರೀತಿಯ ಸ್ವಾಗತವಿದೆ.

* * *

ಸಂಸಾರ ಚಿತ್ರ: ಲೇ. : ಆನಂದಕಂದ, ಪ್ರ. : ಸಾಹಿತ್ಯ ಭಂಡಾರ, ಹುಬ್ಬಳ್ಳಿ, ಪುಟ : ೧೬೩. ಬೆಲೆ : ರೂ. ೩-೦೦

'ಸಂಸಾರ ಚಿತ್ರ' ಒಂಭತ್ತು ಕಥೆಗಳ ಒಂದು ಸಂಕಲನ. ಕನ್ನಡದಲ್ಲಿ ಇದು ನಾಲ್ಕನೆಯ ಆವೃತ್ತಿ ಕಂಡ ಜನಪ್ರಿಯ ಹೊತ್ತಿಗೆ.

ತಂಗಿ ಮಣಿಮಾಲೆಯ ಆ ಮುಚ್ಚಿದ 'ಹೆಣ್ಣಿನಕಣ್ಣ'ನ್ನು ತೆರೆಯಲೆತ್ನಿಸಿ ತನ್ನ ಸುಖ ತ್ಯಾಗ ಮಾಡಿದ, ಸಾಹಿತ್ಯ ಸಂಸ್ಕಾರದಿಂದ ಪರಿಷ್ಕೃತಳಾದ ರೋಹಿಣಿ, 'ಜೀವದ ಹೂವಿನ' ಪೂಜೆಯನ್ನೇ ಬಯಸಿದ ಪ್ರಭು ಸತ್ಯ ನಾರಾಯಣಸ್ವಾಮಿ, ನಿಸ್ಸಹಾಯಕರಾಗಿ, ನಿರಾಶರಾಗಿ ಕೈಚೆಲ್ಲಿ ಕುಳಿತ ತಾಯಿ, ಮಗಳ ನೆರವಿಗೆ ಬಂದ 'ಅನಾಥ ಬಂಧು' ಗೋವಿಂದ, 'ಮಂಜಿನ ನೀರಿ'ನ ರಂಗರಾಯರು, ಹುಡಿಯಾಗಿ 'ಬಾಡಿಬಿದ್ದ ಹೂ' ಗೌರಿ, ಸಂಸಾರ ಸುಖ ಜೀವನಕ್ಕೆ ಕಾರಣಳಾದ 'ಆ ಹೆಂಗಸು'. 'ನೀನು ಪುಟ್ಟನ ತಾಯಿ'ಯೆಂದು ತನ್ನ ತಾಯನ್ನು ಹುಡುಕಲು ಹೋದ ಕುಮಾರ, ಮಾತೃವಾತ್ಸಲ್ಯದ 'ಹುಚ್ಚುಬ್ರಹ್ಮಚರ್ಯ' ಸಾಧಕನಾದ ಗೋಪಾಲನನ್ನು ಆಕರ್ಷಿಸಿದ 'ಆ ಸಟ್ಟುಗಲ್ಲ' ವೇಣು ಇವೆಲ್ಲಾ ಒಂಭತ್ತು ಕಥೆಗಳ ಜೀವಾಳ.

ಶ್ರೀ ಆ ನ ಂ ದ ಕ ಂ ದ ರು ಮಾನವ ಹೃದಯದ ಭಾವನಾ ತರಂಗಗಳಲ್ಲಿ ಮೃದುಮಧುರ ಸಂಗೀತವನ್ನು ಸೃಷ್ಟಿ ಮಾಡುವ ಚೈತನ್ಯವುಳ್ಳವರು. ಹಲವಾರು ಸಲ ಭಾವಾವೇಶಗಳ ಸುಳಿ ಅಲೆಯು ಕಟ್ಟೆಯೊಡೆದು ನಿಂತಾಗ ಮನಸ್ಸಿನ ತುಮಲ ದಡ ಮೀರಿದಾಗ ಅತಿಯಾಯಿತೇನೋ ಎಂಬ ಅಳುಕು ಸಹಜವಾಗಿಯೇ ಉದ್ಭವಿಸುವುದು. ಶೈಲಿಯಲ್ಲಿ ಚಾತುರ್ಯವಿದೆ. ನವ್ಯದ ನವುರಿಲ್ಲ. ವಸ್ತುವಿನ್ಯಾಸದಲ್ಲಿ ಸಹಜತೆಯಿದ್ದರೂ ಗುರಿಮುಟ್ಟುವ ಆವೇಶವಿಲ್ಲ. ಒಟ್ಟಿತಲ್ಲಿ 'ಸಂಸಾರ ಚಿತ್ರ' ಒಂದು ಉತ್ತಮ ಕಥಾ ಸಂಕಲನ.

* * *

ಸಿಗೋರ (ಕಥೆ) ಲೇ. : ಭಾರತೀಸುತ. ಆಕೃತಿ ಡೆಮ್ಮಿ ೧/೮, ಪುಟ : ೮೦, ಬೆಲೆ : ರೂ. ೧–೦೦.

ಒಳ್ಳೆಯ ಕತೆ–ಕಾದಂಬರಿ–ಪಠ್ಯಪುಸ್ತಕ ಲೇಖಕರಾಗಿರುವ "ಭಾರತೀಸುತ"ರು ಶಿಶು ಸಾಹಿತ್ಯರಚನೆಯಲ್ಲಿಯೂ

ನುರಿತವರು. ಅವರು ಬರೆದ ಒಂದು ಸಿಂಹದ ನೀಳ್ಗತೆಯಿದು. ಕ್ರೌರ್ಯ-ಶೌರ್ಯಗಳೇ ಮೂರ್ತಿವೆತ್ತ "ಸಿಗೋರ"ನು ಕಾಡಿನಲ್ಲಿ ಜಿಂಕೆ, ಕಾಡುಕೋಣ, ಜಿರಾಫೆಗಳನ್ನಲ್ಲದೆ ಇತರ ಸಿಂಹಗಳನ್ನೂ ಮುರಿಯುವಷ್ಟು ಬಲಶಾಲಿಯಾಗಿತ್ತು. ಕ್ರಮೇಣ ಅದು ಹಳ್ಳಿಗೀಳಿದು ನರಭಕ್ಷಣೆ ಮಾಡುವಷ್ಟು ಮುಂದುವರಿದು ಕೊನೆಗೆ ಕೊಲ್ಲಲ್ಪಟ್ಟಿತು-ಎಂಬಲ್ಲಿಗೆ ಕತೆಗೆ ಕೊನೆ. ಸರಳ, ಸುಲಭ ವಾಕ್ಯಗಳ ಈ ಕಥಾ ರಚನೆ ಚಿಕ್ಕವರಿಗೆ ಯೋಗ್ಯವಾಗಿದ್ದು ಅವರಲ್ಲಿ ಸಿಂಹದ ಪರಿಚಯವನ್ನು ಭಾವನಾತ್ಮಕವಾಗಿ ಉಂಟು ಮಾಡಲು ಮತ್ತು ಭಾಷಾಭಿವೃದ್ಧಿ ಮಾಡಲು ಸಹಾಯಕವಾಗುವುದು. ಪುಸ್ತಕವು ಸಚಿತ್ರವಾಗಿದೆ. ಮುದ್ರಣವು ಸ್ಫುಟವಾಗಿ ಸುಂದರವಾಗಿ ಆಕರ್ಷಕವಾಗಿದೆ.

* * *

ಭಗವಾನ್ ಬಾಹುಬಲಿ : ಲೇ. : ಹೆಚ್. ಬಿ. ರಮೇಶ್, ಪ್ರ. ಶ್ರೀಮತಿ ಲಕ್ಷ್ಮೀ ರಮೇಶ್, ಹಾಸನ, ಪುಟ : ೩೪, ಬೆಲೆ: ೦-೫೦ ಪೈಸೆ.

ಕೆಲವು ದಿನಗಳ ಹಿಂದೆ ಶ್ರವಣಬೆಳಗೊಳದಲ್ಲಿ ಶ್ರೀ ಗೋಮಟೇಶ್ವರ ಸ್ವಾಮಿಯ ಮಹಾಮಸ್ತಕಾಭಿಷೇಕ ನಡೆಯಿತು. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಈ ಮಹಾ ಸಮಾರಂಭಕ್ಕೆ ಭಾರತದ ನಾನಾ ಭಾಗಗಳಿಂದ ಭಕ್ತರ ತಂಡ ನೆರೆಯಿತು. ಈ ಜನಸ್ತೋಮದ ಆರಾಧ್ಯ ದೈವವಾದ ಈ ಉನ್ನತ ಮೂರ್ತಿಯ ಐತಿಹ್ಯವೇನು ? ಈತನು ಯಾರು ? ಈ ಸಣ್ಣ ಹೊತ್ತಿಗೆಯಲ್ಲಿ ಈ ಕ್ಷೇತ್ರದ ಆರಾಧ್ಯ ಮೂರ್ತಿ ಬಾಹುಬಲಿ ಈ ವಿಚಾರಗಳನ್ನು ಒಳಗೊಂಡ ಒಂದು ಸಂಕ್ಷಿಪ್ತ ವಿವರಣೆ ಇದೆ.

ಬಹುಶಃ ಅವಸರದಲ್ಲಿ ಅಚ್ಚು ಮಾಡಿಸಿದ ಕಾರಣವಿರಬೇಕು ತಿದ್ದುಪಡಿಯ ಪಟ್ಟಿಯಲ್ಲಿ ತೋರಿಸುವುದಕ್ಕಿಂತ ಹೇರಳವಾಗಿ ಅಚ್ಚುದೋಷಗಳಿವೆ. ಲೇಖಕರು ಸ್ವಲ್ಪ ಶ್ರಮವಹಿಸಿದ್ದರೆ 'ಭಗವಾನ್ ಬಾಹುಬಲಿ'ಯನ್ನು ಮುದ್ರಾರಾಕ್ಷಸನಿಂದ ಪಾರುಮಾಡಬಹುದಿತ್ತು ! ಆಸಕ್ತಿಯುಳ್ಳ ಆಸ್ತಿಕರಿಗೆ ರುಚಿಸಬಲ್ಲ ಪುಸ್ತಕ.

* * *

ಯೋಜನೆಗಳೇಕೆ ಬೇಕು ? ಲೇ : ಶ್ರೀ ಎಸ್. ಎಸ್. ಯಮ್ಮಿ ಎಂ. ಎ., ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೫೦. ಬೆಲೆ ೨೫ ಪೈಸೆ.

ಹೃದಯಾಘಾತ : ಲೇ : ಡಾ|| ಪಿ. ಎಸ್. ಶಂಕರ್ ಎಂ. ಡಿ. ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪುಟಗಳು ೭೬. ಬೆಲೆ ೨೫ ಪೈಸೆ.

ರಾಸಾಯನಿಕ ಕಿಣ್ವಗಳು : ಲೇ : ಶ್ರೀ ಎಂ.ಎಸ್.ಎಸ್.ರಾವ್, ಎಂ. ಎಸ್ ಸಿ. ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪುಟಗಳು ೬೭. ಬೆಲೆ ೨೫ ಪೈಸೆ.

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗು ಪ್ರಕಟಣ ಶಾಖೆಗಳ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವ ವಿಚಾರವನ್ನು ಮಾಲೆಯ ಮುನ್ನುಡಿಯಲ್ಲಿ ಉಪಕುಲಪತಿಗಳು ಕಾಣಿಸಿದ್ದಾರೆ.

ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರಗಳಲ್ಲಿನ ಜಿಲ್ಲೆಗಳಲ್ಲಿ ತಜ್ಞ ಪ್ರಾಧ್ಯಾಪಕರಿಂದ ಸಾಹಿತ್ಯ ವಿಜ್ಞಾನ ಸಾಮಾಜಿಕ ಶಾಸ್ತ್ರ ಇತ್ಯಾದಿ ವಿಷಯಗಳ ಮೇಲೆ ಉಪನ್ಯಾಸ ಕೊಡುವಂತೆ ಏರ್ಪಡಿಸಿ, ಆ ಉಪನ್ಯಾಸಗಳನ್ನು ಸಂಗ್ರಹಿಸಿ ಗ್ರಂಥ ರೂಪದಲ್ಲಿ ಬರೆಯಿಸಿ ಸುಲಭ ಬೆಲೆಗೆ ಕನ್ನಡ ಜನತೆಗೆ ವಿದ್ಯಾದಾನ ಮಾಡುತ್ತಿರುವುದು ಪ್ರಶಂಸನೀಯವಾದ ಸಂಗತಿ. ಈಗಾಗಲೇ ಈ ಮಾಲೆಯಲ್ಲಿ ಸಾವಿರಾರು ಪುಸ್ತಕಗಳು ಖರ್ಚಾಗಿರುವುದು ಈ ಯೋಜನೆಯ ಜನಪ್ರಿಯತೆಗೆ ಸಾಕ್ಷಿ.

" ಯೋಜನೆಗಳೇಕೆ ಬೇಕು ? " ಎಂಬ ಹೊತ್ತಿಗೆಯಲ್ಲಿ, ಯೋಜನೆಗಳ ಜನ್ಮಕಾರಣ, ಸಮಾಜವಾದ ಮತ್ತು ಸಹಕಾರದ ಪರಸ್ಪರ ಸಂಬಂಧ, ಮಾರುಕಟ್ಟೆಯ ಮುಖಾಂತರ ನಡೆಯುವ ಆರ್ಥಿಕವ್ಯವಸ್ಥೆ, ಯೋಜನೆಯ ಮಾರ್ಗದರ್ಶನ, ಮಾರುಕಟ್ಟೆ ಮತ್ತು ಯೋಜನೆ, ಬೆಲೆಗಳನ್ನು ನಿರ್ದಿಷ್ಟಪಡಿಸುವ ಕ್ರಮ ಯೋಜನೆಯನ್ನು ರೂಪಿಸುವ ವಿಧಾನ, ಹಿಂದುಳಿದ ರಾಷ್ಟ್ರಗಳ ಯೋಜನೆ – ಈ ವಿಚಾರಗಳನ್ನು ಬಹಳ ಸಂತೋಷವಾಗಿ ಮನಮುಟ್ಟುವಂತೆ ಸರಳ ಭಾಷೆಯಲ್ಲಿ ನಿರೂಪಿಸಿದ್ದಾರೆ. ನಮ್ಮ ಸದ್ಯದ ಪಂಚವಾರ್ಷಿಕ ಯೋಜನೆಗಳ ಒಂದು ಪ್ರಗತಿ ಚಿತ್ರವನ್ನು ಲೇಖಕರು ಕೊಟ್ಟಿದ್ದರೆ ಚೆನ್ನಾಗಿತ್ತು. ಮುಖ್ಯವಾಗಿ ಯೋಜನೆಗಳ ವಿಚಾರವಾಗಿ ಜನಸಾಮಾನ್ಯನಿಗೆ ಇದು ಕೈಗನ್ನಡಿಯಂತಿದೆ.

" ಹೃದಯಾಘಾತ " ಎಂಬ ಈ ಚಿಕ್ಕ ಪುಸ್ತಕದಲ್ಲಿ, ಹೃದಯ ಮತ್ತು ರಕ್ತಪರಿಚಲನೆ, ಹೃದಯದ ರೋಗಗಳು, ಕುತೂಹಲ ಕೆರಳಿಸಿದ ಸಾವು, ಕಿರೀಟ ರಕ್ತಪರಿಚಲನೆ, ಕಿರಿ

ದಾದ ಕಿರೀಟ ನಾಳ, ರೋಗಗಳು, ನಿರೋಧಕ ಕ್ರಮಗಳು ಈ ವಿಷಯಗಳ ಮೇಲೆ ಒಂದು ಸಮಗ್ರ ಉಪನ್ಯಾಸವನ್ನು ಲೇಖಕರು ಈ ಪುಸ್ತಕ ರೂಪದಲ್ಲಿ ಇತ್ತಿದ್ದಾರೆ. ಜೀವನ್ದದ ಎಷ್ಟೋ ವೈಪರೀತ್ಯಗಳನ್ನು ನಾವು ಹೃದಯಕ್ಕೆ ಸಂಬಂಧಿಸಿದಂತೆ ಮಾತನಾಡುತ್ತೇವೆ. ಉದಾ: ಹೃದಯ ಒಡೆಯಿತು, ಹೃದಯ ತಾಕಿತು, ಹೃದಯವನ್ನು ಕಲಕಿತು, ಹೃದಯದಿಂದ ದೂರವಾದನು, ಹೃದಯ ಹಿಗ್ಗಿತು, ಕುಗ್ಗಿತು, ಇತ್ಯಾದಿ. ಆದರೆ ಇವೆಲ್ಲವೂ ಕೇವಲ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳನ್ನು ನಾವೂ ಹೃದಯಕ್ಕೆ ಆರೋಪಿಸಿ ಮಾತನಾಡುತ್ತೇವೆ.

ಹೃದಯ ಸ್ತಂಭನ, ಹೃದಯಾಘಾತ ಇವು ದಿನ ಬೆಳಗಾದರೆ ಕೇಳುವ ಸುದ್ದಿಗಳಾದ ಇಂದಿನ ಪರಿಸ್ಥಿತಿಯಲ್ಲಿ ಈ ಪುಸ್ತಕದ ಉಪಯುಕ್ತತೆಯನ್ನು ಎಷ್ಟು ಹೇಳಿದರೂ ಅಲ್ಪವೆ.

"ರಾಸಾಯನಿಕ ಕಿಣ್ವಗಳು", ಜೀವ ವಿಜ್ಞಾನ, ಹಾಗು ಜೀವರಸಾಯನ ಶಾಸ್ತ್ರಗಳ ಬಗೆಗೆ ಓದುಗರಲ್ಲಿ ಆಸಕ್ತಿ ಕೆರಳಿಸಬಹುದಾದ ಕಿರುಹೊತ್ತಿಗೆ. ಕಿಣ್ವಗಳು ಮತ್ತು ಅವುಗಳ ಗುಣಧರ್ಮಗಳು, ಅವುಗಳ ವರ್ಗೀಕರಣ, ರಚನೆ ಇತಿಹಾಸ, ಸ್ವರೂಪ ಮತ್ತು ಕ್ರಿಯೆ, ಎನ್‌ಜೈಮುಗಳನ್ನು ಮೊಟಕುಗೊಳಿಸುವ ವಸ್ತು, ಕಿಣ್ವಗಳ ಪ್ರಾಮುಖ್ಯತೆಗೆ ಕಾರಣ, ಇತ್ಯಾದಿ ವಿಚಾರಗಳಲ್ಲಿ ಒಂದು ಸ್ಥೂಲ ಪರಿಚಯ ಈ ಪುಸ್ತಕದಲ್ಲಿದೆ. ವಿಷಯ ಪ್ರತಿಪಾದನೆ ಮತ್ತು ಸಮೀಕ್ಷೆ ಸರಳವೂ ಪರಿಪೂರ್ಣವೂ ಆಗಿರಬೇಕೆಂದು ಲೇಖಕರು ಶ್ರಮಿಸಿದ್ದರೂ ಅವರಿಗೆ ಗುರಿ ಮುಟ್ಟಲು ಕಠಿಣವೇ ಆಗಿದೆ.

ಕೆಲವು ಕ್ಲಿಷ್ಟ ಪಾರಿಭಾಷಿಕ ಶಬ್ದಗಳು ಮತ್ತು ವಿಧಾನಗಳು ಕಬ್ಬಿಣದ ಕಡಲೆಯೇ ಆಗಿ ಉಳಿಯುತ್ತವೆ.

ಕರ್ನಾಟಕ ವಿಶ್ವವಿದ್ಯಾಲಯದವರು ಈ ಮಹತ್ತರವಾದ ಪ್ರಯತ್ನವನ್ನು ಕೈಕೊಂಡಿರುವುದು ಪ್ರಶಂಸನೀಯವಾದ ಸಂಗತಿ. ಅವರ ಈ ಪ್ರಸಾರ ಕಾರ್ಯ ಹತ್ತು ಪಟ್ಟು ಹೆಚ್ಚು ಬೆಳೆಯಲಿ. ಇದೇ ನಮ್ಮ ಹಾರೈಕೆ.

ಕೆ. ಎಸ್. ಸೂಳಿಬೆಲೆ

ಬುದ್ಧಿವಂತರು : ಲೇ. : ಬಿ. ಭಾರತಿದೇವಿ, ಆಕೃತಿ : ಡೆಮ್ಮಿ ೮/೧, ಪುಟ : ೩೬, ಬೆಲೆ : ರೂ. ೧–೦೦

ಮಕ್ಕಳ ಸಾಹಿತ್ಯದಲ್ಲಿ ಕಥೆಯ ಸ್ಥಾನ ಹಿರಿದು. ಮಕ್ಕಳಲ್ಲಿ ಮನೋರಂಜನೆಯನ್ನು ಉಂಟುಮಾಡಿ, ಜಾಣ್ಮೆಯನ್ನು ಮೂಡಿಸಿ, ನೀತಿಯನ್ನು ಪೋಷಿಸಿ, ಭಾಷಾ ಜ್ಞಾನವನ್ನು ಬೆಳಸಲು ಕತೆಗಳದು ಮಹತ್ವದ ಪಾತ್ರವಾಗುತ್ತದೆ. ಪಂಚತಂತ್ರ, ಹಿತೋಪದೇಶ, ಜಾತಕ ಕಥೆಗಳು, ಇಸೋಪನ ಕಥೆಗಳು ಮುಂತಾದುವೆಲ್ಲ ಈ ಕಾರ್ಯವನ್ನು ಹಿಂದಿನ ಕಾಲದಿಂದಲೇ ಮಾಡುತ್ತ ಬಂದಿವೆ. ಪ್ರಸ್ತುತ ಪುಸ್ತಕವು ಅದೇ ಸರಣಿಯಲ್ಲಿ ಇರುವಂಥದು. ಇದರಲ್ಲಿ ಜೇನು ತಿಂದ ನರಿ, ಮಹೋಪಕಾರಿ ಬಾನಕ್ಕಿ, ಮೊಸಳೆಗಳನ್ನು ಕೊಂದ ಆಮೆ, ಬಲಿದಾನ ನೀಡಿದ ಬೋಧಿಸತ್ವ, ಬೇಸ್ತುಬಿದ್ದ ಮುದಿತೋಳ–ಎಂಬೀ ಐದು ಕಥೆಗಳಿವೆ. ಮಕ್ಕಳಿಗಲ್ಲದೆ, ಮಕ್ಕಳಿಗೆ ಕತೆ ಹೇಳಬಯಸುವವರೆಲ್ಲರಿಗೂ ಮೆಚ್ಚಿಕೆಯಾಗಬಲ್ಲವು. ಕತೆಗಳು ಸಚಿತ್ರವಾಗಿ, ಸುಂದರವಾಗಿವೆ. ಮುಖಪತ್ರ, ಕಾಗದ, ಮುದ್ರಣಗಳು ಸೊಗಸಾಗಿವೆ.

* * *

ಕೂಡಿ ದುಡಿಯೋಣ : ಲೇ. : ಕುಮಾರ ವೆಂಕಣ್ಣ, ಆಕೃತಿ : ಡೆಮ್ಮಿ ೧/೮, ಪುಟ : ೪೦, ಬೆಲೆ : ರೂ. ೧–೦೦

ಇದೊಂದು ಹಳ್ಳಿಯ ಬಾಳನ್ನು ಚಿತ್ರಿಸುವ ಕಥನ. ಒಬ್ಬೊಬ್ಬರಿಗೆ ಸಹಕರಿಸಿ ದುಡಿಯುತ್ತಿದ್ದುದರಿಂದ ಅಭಿವೃದ್ಧಿಗೆ ಬಂದ ಹಳ್ಳಿ, ಬರುತ್ತಾ ಹಳ್ಳಿಗರು ಪೇಟೆಯ ವ್ಯಾಮೋಹಕ್ಕೆ ಬಲಿಯಾಗಿ ಹಳ್ಳಿಯನ್ನು ನಿರ್ಲಕ್ಷಿಸಿದುದರಿಂದ ಹಳ್ಳಿಯ ಬಾಳು ಹಾಳಾಯಿತು. ಪುನಃ ಅವರಲ್ಲಿ ವಿಚಾರವು ಮೂಡಿ ಸಹಕಾರ ಪದ್ಧತಿಯನ್ನು ಬೆಳೆಸಿ, ಸಂಘವನ್ನು ಸ್ಥಾಪಿಸಿ ಜನರು ಪರಸ್ಪರವಾಗಿ ಸೇರಿ ದುಡಿದು ಹಳ್ಳಿಯನ್ನು ಸಮೃದ್ಧಿಗೊಳಿಸಿದರು–ಎಂಬುದು ಇಲ್ಲಿ ಕಥನವಸ್ತು. ಹೀಗೆ ಈ ಪುಸ್ತಕವೊಂದು ಹಳ್ಳಿಯಲ್ಲಿ ಸಹಕಾರ ಪದ್ಧತಿಯ ಪ್ರಚಾರ ಸಾಹಿತ್ಯ. ರೈತರ ಜೀವನಕ್ಕೆ ಬೆಳಕನ್ನೀವ ಇಂಥ ಪುಸ್ತಕಗಳು ಬಹಳ ಉಪಯುಕ್ತವಾಗುವುವು. ಸರಳಭಾಷೆ ಸಚಿತ್ರ ವಿವರಣೆ, ಸುಂದರ ಮುದ್ರಣ–ಇವು ಈ ಪುಸ್ತಕದ ವೈಶಿಷ್ಟ್ಯಗಳು.

* * *

ಸುಕುಮಾರ (ಮಾಸ ಪತ್ರಿಕೆ) : ಸಂಪಾ. : ಜಿ. ಎಂ. ಉಮಾಪತಿಶಾಸ್ತ್ರಿ, ಪ್ರ. : ಶ್ರೀ ಶಿವಯೋಗಿಮಂದಿರ ಸಂಸ್ಥೆ, ವಾರ್ಷಿಕ ಚಂದಾ : ರೂ. ೬–೦೦, ಬಿಡಿ ಸಂಚಿಕೆ : ೦–೫೦ ಪೈಸೆ.

ಸುಕುಮಾರ ಮಾಸ ಪತ್ರಿಕೆಯ ಹದಿನೇಳನೆಯ ಸಂಪುಟದ ನಾಲ್ಕನೆಯ ಸಂಚಿಕೆಯಾಗಿ ಜನವರಿ ೧೯೬೮ನೆಯ ಪತ್ರಿಕೆ ನಮ್ಮ ಕೈಗೆ ಬಂದಿದೆ. ಇದು ಡಾ|| ಸುಂಕಾಪುರ, ಶ್ರೀ ಚೆನ್ನವೀರ ಕಣವಿ ಮುಂತಾದವರ ಲೇಖನಗಳಿಂದ, ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮತ್ತು ಆಚಾರ್ಯ

ಬುದ್ಧರಕ್ಷಿತ ಥೇರಾ-ಇವರುಗಳು ಬಸವಣ್ಣನವರ ಅಷ್ಟ ಶತಮಾನೋತ್ಸವದಲ್ಲಿ ಮಾಡಿದ ಭಾಷಣ ಸಾಹಿತ್ಯದಿಂದ ಸುಶೋಭಿತವಾಗಿದೆ. ಹಲವು ಕವನಗಳೂ ಇದರಲ್ಲಿವೆ. ಬಿಡಿಸ್ವರ ವಚನಗಳನ್ನೂ ಕೊಡಲಾಗಿದೆ. ಶ್ರೀ ಕುಮಾರ ಯೋಗಿಗಳ ಜನ್ಮಶತಮಾನೋತ್ಸವದ ಸ್ಮಾರಕವಾಗಿ ಶ್ರೀ ಕುಮಾರಜ್ಯೋತಿಯವರ ಪಾದಯಾತ್ರೆಯ ವರದಿಯಿಂದ ಅಡಕವಾಗಿದೆ. ಪತ್ರಿಕೆಯದು ನೀತಿ, ಶೈವತತ್ವ, ಸಂಶೋಧನೆ, ವಿಮರ್ಶೆಗಳಿಗೆ ಮೀಸಲಾಗಿದ್ದು, ತರಿಸಿಟ್ಟುಕೊಳ್ಳಲು ಯೋಗ್ಯವಾಗಿದೆ. ಸಂಪಾದನ-ಮುದ್ರಣಗಳು ತೃಪ್ತಿಕರವಾಗಿವೆ.

ಟಿ. ಕೇಶವ ಭಟ್ಟ

ಕನ್ನಡ ಸುದ್ದಿ

ಕನ್ನಡ ರಾಜ್ಯೋತ್ಸವ-ಸಾಹಿತ್ಯ ಪ್ರಚಾರ ಸಮಿತಿ

ಆಶ್ರಯದಲ್ಲಿ

ಗ್ರಂಥ ಪ್ರದರ್ಶನ ನಡೆಯುವ ಸ್ಥಳಗಳು

★ **ಭಾರತೀಯ ಕನ್ನಡಿಗರ ಸಂಘ**
ಶ್ರೀಮತಿ ಅಂಕಮ್ಮನವರ ಛತ್ರ, ತೇರುಬೀದಿ
ಅಲಸೂರು ೧-೧೧-೧೯೬೮ರಿಂದ ೩-೧೧-೧೯೬೮ರ ವರೆಗೆ

★ **ಕನ್ನಡ ಸಾಹಿತ್ಯ ಪರಿಷತ್ತು**
ಚಾಮರಾಜಪೇಟೆ ೪-೧೧-೧೯೬೮ರಿಂದ ೬-೧೧-೧೯೬೮ರ ವರೆಗೆ

★ **ಗಾಂಧಿ ಸಾಹಿತ್ಯ ಸಂಘ**
ಮಲ್ಲೇಶ್ವರ ೭-೧೧-೧೯೬೮ರಿಂದ ೧೦-೧೧-೧೯೬೮ರ ವರೆಗೆ

★ **ಗ್ರಂಥ ಪ್ರದರ್ಶನ**
★ **ಪುಸ್ತಕಗಳ ಮಾರಾಟ**
★ **ಕೂಪನ್‌ಗಳ ಹಂಚಿಕೆ**
★ **ಮನೆ ಬಾಗಿಲಿಗೇ ಪುಸ್ತಕ**
(ಮಲ್ಲೇಶ್ವರ ಪ್ರದೇಶದಲ್ಲಿ)

ಸಂಪಾದಕೀಯ

ಕನ್ನಡ ರಾಜ್ಯೋತ್ಸವ

ಕನ್ನಡ ರಾಜ್ಯವು ಒಂದಾಗಿ ಇಂದಿಗೆ ಹದಿಮೂರು ವರ್ಷಗಳು ತುಂಬಿದುವು. ಹದಿನಾಲ್ಕನೆಯ ವರ್ಷದಲ್ಲಿ ನಾವು ಕಾಲಿಡುತ್ತಿದ್ದೇವೆ. ರಾಜ್ಯದಲ್ಲೆಲ್ಲ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ನಡೆಸುತ್ತಿದ್ದೇವೆ. ಇವೆಲ್ಲ ಸಂತಸದ ವಿಷಯವೇ ಎಂಬುದರಲ್ಲಿ ಸಂದೇಹವೇ ಇಲ್ಲ.

ಆದರೆ ನಾಡು ಒಂದಾದ ಮೇಲೆ ಆಗಬೇಕಾಗಿದ್ದ ಕಾರ್ಯಗಳಲ್ಲಿ ಎಷ್ಟು ಭಾಗ ನಡೆದಿದೆ ಎಂಬುದನ್ನು ಪರಿಶೀಲಿಸಿದರೆ ಮನಸ್ಸಿಗೆ ನೆಮ್ಮದಿಗಿಂತ ನೋವೇ ಹೆಚ್ಚಾಗುತ್ತದೆ. ಅಕ್ಕಪಕ್ಕದ ಪ್ರಾಂತಗಳಲ್ಲಿ ಭಾಷೆಗೂ ಸಾಹಿತ್ಯಕ್ಕೂ ತತ್ಸಂಬಂಧವಾದ ಕಾರ್ಯಗಳಿಗೂ ಸರಕಾರದ ಪ್ರೋತ್ಸಾಹವೂ ಸಾರ್ವಜನಿಕ ಸಹಕಾರವೂ ವಿಪುಲವಾಗಿ ದೊರೆಯುತ್ತಿವೆ. ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ, ತಮಿಳು ನಾಡಿನಲ್ಲಿ ನಡೆದಿರುವಷ್ಟು ವಿದ್ವತ್ಕಾರ್ಯವನ್ನು ಮಾಡುವುದು ನಮ್ಮಲ್ಲಿ ಇನ್ನೂ ಸಾಧ್ಯವಾಗಿಲ್ಲ. ಮಲೆಯಾಳದಲ್ಲಂತೂ ಸಾಹಿತ್ಯಬಂಧುಗಳು ಯಾರ ಸಹಾಯವೂ ಇಲ್ಲದೆಯೇ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲವರಾಗಿದ್ದಾರೆ. ಇದನ್ನೆಲ್ಲ ಕಂಡಾಗ ಕನ್ನಡ ಸಾಹಿತ್ಯ ಪರಿಷತ್ತಿಗೆ ನೋವಾಗದೆ ಇರುವುದು ಸಾಧ್ಯವಿಲ್ಲ.

ಮೊದಲನೆಯದಾಗಿ ಕನ್ನಡ ಸಾಹಿತ್ಯ ಪರಿಷತ್ತು ಅನೇಕ ವರ್ಷಗಳು ಸಾಹಿತ್ಯ ಸಮ್ಮೇಳನಗಳಲ್ಲಿ ಸೂಚಿಸಿ ಸೂಚಿಸಿ ಹೇಳಲಾಗಿರುವ ಪ್ರಾರ್ಥನೆ–ನಾಡಿಗೆ ಕರ್ಣಾಟಕವೆಂಬ ಹೆಸರಿಡಬೇಕೆಂಬುದು ಇನ್ನೂ ಸಾಧ್ಯವಾಗಿಲ್ಲ. ಇಂಥ ಮುಖ್ಯ ವಿಷಯಗಳಲ್ಲಿ ಮುಂದಾಳುಗಳು ಕೈಕಟ್ಟಿ ಕುಳಿತಿರಬಾರದು.

ಎರಡನೆಯದು ಭಾಷೆಗೆ ನೀಡಬೇಕಾದ ಪ್ರಾಧಾನ್ಯ. ಇದು ಸ್ವಲ್ಪ ಸ್ವಲ್ಪವಾಗಿ ಜನಪ್ರಿಯತೆಯನ್ನು ಗಳಿಸಿಕೊಳ್ಳುತ್ತಿದೆ. ಶಾಲಾ ಕಾಲೇಜುಗಳಲ್ಲಿ ಮಾಧ್ಯಮದ ಪ್ರಶ್ನೆ ಇನ್ನೂ ಬೃಹದಾಕಾರವಾದ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ಉಳಿದಿದೆ.

ಸಾಹಿತ್ಯ–ಸಂಸ್ಕೃತಿಯ ಕಾರ್ಯಕ್ಕೆ ಇರಬೇಕಾದ ಧನಸಹಾಯ ರಾಜ್ಯದೊಳಗೆ ಸಾಕಷ್ಟು ಸಂಗ್ರಹವಾಗುತ್ತಿಲ್ಲ. ವಿದ್ವತ್ಸಂಪ್ರದಾಯಗಳು ಕಳಚಿಬೀಳುತ್ತಿವೆಯೋ ಏನೋ ಎನ್ನುವಂತೆ ಆಗಾಗ ಸನ್ನಿವೇಶಗಳು ಉದ್ಭವವಾಗುತ್ತಿವೆ. ನಾಡಿನ ವಿದ್ವತ್ಸಂಪ್ರದಾಯವು ಮುಂದುವರಿಯುವಂತೆ, ನಿಜವಾದ ವಿದ್ವತ್ತಿಗೆ ಪ್ರೋತ್ಸಾಹ ದೊರೆಯುವಂತೆ, ವಿದ್ವಜ್ಜನರು ಸಹಾಯಕ್ಕಾಗಿ ಪ್ರಾರ್ಥನಾಪತ್ರವನ್ನು ಸಲ್ಲಿಸಬೇಕಾಗದಿರುವಂತೆ ನಮ್ಮ ಸಾರ್ವಜನಿಕ ನಡವಳಿಕೆ ಬಲಗೊಳ್ಳಬೇಕು.

ರಾಜ್ಯೋತ್ಸವ ಸಂದರ್ಭದಲ್ಲಿ ನಮ್ಮ ಬರಹಗಾರರು ಬರಹದಿಂದಲೇ ಬಾಳಲು ಸುಲಭವಾಗುವಂತೆ ಮಾಡಲು ನಮ್ಮ ಜನ ಒಂದು ಪ್ರತಿಜ್ಞೆಯನ್ನು ಕೈಗೊಳ್ಳಬಲ್ಲರಾದರೆ – ನಮ್ಮ ಸಾಹಿತ್ಯದ ಅಭಿವೃದ್ಧಿಗೆ ಮತ್ತಾವ ಆಶಯವೂ ಬೇಕಿಲ್ಲ. ಅಂದು ನಾಡು ಆನಂದಮಯ ವಾತಾವರಣವನ್ನೇ ನಿರ್ಮಾಣ ಮಾಡಬಲ್ಲದು.

ಅಂಥ ದಿನ ಬೇಗ ಬರಲಿ. ಈ ರಾಜ್ಯೋತ್ಸವದ ಆನಂದ, ನಾಡಿನ ಮೂಲೆ ಮೂಲೆಗಳಲ್ಲೂ ಮೆರೆದು ಮುಂದಿರುವ ನಮ್ಮ ಕಾರ್ಯಭಾರವನ್ನು ಹಗುರವನ್ನಾಗಿ ಮಾಡಲಿ.

ಕನ್ನಡ ತಾಯ್ ಗೆಲ್ಗೆ, ಬಾಳ್ಗೆ.

ಪರಿಷತ್ತಿನ ಸುದ್ದಿಗಳು

ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರ ದತ್ತಿನಿಧಿಯ ಕಾರ್ಯಕ್ರಮ

ದಿನಾಂಕ ೩೦-೯-೧೯೬೮ನೆಯ ಸೋಮವಾರ ಮಧ್ಯಾಹ್ನ ೩ ಘಂಟೆಗೆ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಸಭಾಂಗಣದಲ್ಲಿ ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರ ದತ್ತಿನಿಧಿಯ ಕಾರ್ಯಕ್ರಮದ ಅಂಗವಾಗಿ ದೇವರ ನಾಮಗಳ ಸ್ಪರ್ಧೆಯು ನಡೆಯಿತು. ಈ ಸ್ಪರ್ಧೆಯಲ್ಲಿ ೬೨ಮಂದಿ ಹೆಣ್ಣುಮಕ್ಕಳು ಭಾಗವಹಿಸಿದ್ದರು. ವೈಣಿಕವಿದ್ವಾನ್ ಶ್ರೀ ಎಲ್. ರಾಜಾರಾಯರೂ ಗಮಕವಿದ್ವಾನ್ ಶ್ರೀ ಜಿ. ಎ. ಅನಂತ ಪದ್ಮನಾಭಯ್ಯನವರೂ ಮತ್ತು ಶ್ರೀಮತಿ ಎಂ. ಎನ್. ಲೀಲಾವತಿ ಅವರೂ ಸ್ಪರ್ಧೆಯ ತೀರ್ಪುಗಾರರಾಗಿದ್ದು ಉಪಕಾರ ಮಾಡಿದರು. ಸ್ಪರ್ಧೆ ಮುಗಿದನಂತರ ಸರಸ್ವತಿ ಪೂಜೆ ನಡೆಯಿತು. ಸಭೆಗೆ ದಯಮಾಡಿಸಿದ್ದ ಸುಮಂಗಲಿಯರಿಗೆ ಮಂಗಳ ದ್ರವ್ಯವನ್ನೂ, ಎಲ್ಲರಿಗೂ ಪ್ರಸಾದವನ್ನೂ ವಿನಿಯೋಗಿಸಲಾಯಿತು.

ಯೋಗ್ಯತಾನುಕ್ರಮದಲ್ಲಿ, ಬಹುಮಾನಗಳಿಸಿದ ಹೆಣ್ಣುಮಕ್ಕಳ ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ.

ಕುಮಾರಿಯರಾದ—

೧. ಕೆ. ಎನ್. ಜಯಲಕ್ಷ್ಮಿ, ೨. ಎಚ್. ಎ. ಪರಿಮಳ, ೩. ಎನ್. ಲಕ್ಷ್ಮೀದೇವಿ, ೪. ಆರ್. ಗಾಯಿತ್ರಿ, ೫. ಎಸ್. ವಿ. ಗೀತಾ.

ಇದಲ್ಲದೆ ಶ್ರೀ ಕೈವಾರ ರಾಜಾರಾಯರು ಕೊಟ್ಟ ವಿಶೇಷ ಬಹುಮಾನ ಕುಮಾರಿ ಎಚ್. ಎಸ್. ಕುಸುಮ ಅವರಿಗೆ ದೊರಕಿತು.

ತೀರ್ಪುಗಾರರಲ್ಲೊಬ್ಬರಾದ ವೈಣಿಕ ವಿದ್ವಾನ್ ಎಲ್. ರಾಜಾರಾಯರಿಂದ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು. ಮಹಿಳಾಶಾಖೆಯ ವ್ಯವಸ್ಥಾಪಕಿಯರಲ್ಲೊಬ್ಬರಾದ ಶ್ರೀಮತಿ ಕೆ. ಟಿ. ಬನಶಂಕರಮ್ಮನವರಿಂದ ವಂದನಾರ್ಪಣೆಯಾಯಿತು.

ಪರಿಷತ್ತಿನ ಆಶ್ರಯದಲ್ಲಿ ನಡೆದ ಸಭೆಗಳು

ದಿನಾಂಕ ೧೩-೧೦-೧೯೬೮ರಂದು ರಾಜಾಜಿನಗರದ ವಿದ್ಯಾವರ್ಧಕ ಸಂಘದಲ್ಲಿ ಉಪನ್ಯಾಸಮಾಲೆಯ ೩೬ನೆಯ ಕಾರ್ಯಕ್ರಮ, ಕವಿ-ಕೃತಿದರ್ಶನದ ಅಂಗವಾಗಿ "ಪ್ರೊ|| ವಿ. ಎಂ. ಇನಾಂದಾರ್ ಅವರ ಕೃತಿಗಳು" ಎಂಬ ವಿಷಯವಾಗಿ ಉಪನ್ಯಾಸಗಳು ನಡೆದುವು. ಇನಾಂದಾರರ ವ್ಯಕ್ತಿತ್ವವನ್ನು ಕುರಿತು ಡಾ|| ಎಚ್. ಎನ್. ಕಟ್ಟಿ ಅವರೂ ಇನಾಂದಾರರ ಕಾದಂಬರಿಗಳನ್ನು ಕುರಿತು ಶ್ರೀ ಎಚ್. ಕೆ. ರಾಮಚಂದ್ರಮೂರ್ತಿಯವರೂ ಉಪನ್ಯಾಸ ಮಾಡಿದರು. ಶ್ರೀ ಆರ್. ವಿ. ಕುಲಕರ್ಣಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಗಮಕ 'ಪ್ರವೇಶ' ಮತ್ತು 'ಪ್ರೌಢ' ಪರೀಕ್ಷೆಗಳು

ಗಮಕ 'ಪ್ರವೇಶ' ಮತ್ತು 'ಪ್ರೌಢ' ಪರೀಕ್ಷೆಗಳನ್ನು ೧೯೬೯ನೆಯ ಜನವರಿ ತಿಂಗಳಿನಲ್ಲಿ ನಡೆಸಬೇಕೆಂದು ಗೊತ್ತಾಗಿದೆಯಷ್ಟೆ. ಆ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳು ೧೯೬೮ನೆಯ ಡಿಸೆಂಬರ್ ೧೫ನೆಯ ದಿನಾಂಕದೊಳಗಾಗಿ ಪರೀಕ್ಷಾ ಶುಲ್ಕವನ್ನು ಪರಿಷತ್ತಿಗೆ ತಲಪಿಸಬೇಕಾಗಿ ಕೋರಿದೆ. ಈ ಬಗ್ಗೆ ಗಮಕ ಅಧ್ಯಾಪಕರುಗಳು ತಮಗೆ ಎಷ್ಟು ಆವೇದನಾ ಪತ್ರಗಳನ್ನು ಕಳುಹಿಸಬೇಕೆಂಬುದನ್ನು ಬೇಗನೆ ತಿಳಿಸಬೇಕು. ಸ್ವಂತ ವ್ಯಾಸಂಗಿಗಳು ಪರಿಷತ್ತಿನಿಂದ ಆವೇದನಾ ಪತ್ರಗಳನ್ನು ಪಡೆದು ಪರೀಕ್ಷಾ ಶುಲ್ಕದೊಡನೆ ಪರಿಷತ್ತಿಗೆ ತಲಪಿಸಬೇಕು. ಪ್ರವೇಶಧನ 'ಪ್ರವೇಶ' ಪರೀಕ್ಷೆಗೆ ರೂ. ೩-೦೦. ಸ್ವಂತವ್ಯಾಸಂಗಿಗಳಿಗೆ ರೂ. ೪-೦೦. ಪ್ರೌಢ ಪರೀಕ್ಷೆಗೆ ರೂ. ೧೨-೦೦.

ಚುನಾವಣೆ ವಿಚಾರ

ಹೈಕೋರ್ಟಿನ ವಿಚಾರಣೆಯಲ್ಲಿದ್ದ ಪರಿಷದಧ್ಯಕ್ಷರ ಚುನಾವಣೆಯ ವಿಚಾರ ಮುಕ್ತಾಯವಾಗಿದ್ದು ಅದರ ಅಧಿಕೃತ ತೀರ್ಪು ಕೈಸೇರಿಲ್ಲದಿರುವುದರಿಂದ ಅದರ ವಿವರವನ್ನು ಮುಂದೆ ಕೊಡಲಾಗುವುದು. ಆ ಸಂಬಂಧದಲ್ಲಿ ಪರಿಷದಧ್ಯಕ್ಷರು ಕೋರ್ಟಿಗೆ ಹಾಜರುಪಡಿಸಿದ ಅಫಿಡೇವಿಟ್ಟನ್ನು ಈ ಕೆಳಗೆ ಕೊಟ್ಟಿದೆ.

AFFIDAVIT

W. P. 1493 of 1968

Herein, I, G. Venkatasubbiah, S/o G. Thimmanniah do hereby solemnly affirm and state as under:

1. I am the President of the Kannada Sahitya Parishat and Editor of Kannada Nudi. Pending this writ petition an article has been published as news item regarding proceedings of this case. Petitioner has objected to the tenor of the publication and the Court also expressed the view that this was not proper. Hence, I express my regret for the publication.

Bangalore
Dated 11-10-1968

Sd/–G. Venkatasubbiah
DEPONENT

ಬೆಳ್ಳಕ್ಕಿ ಲೇ: ಪುಂಡಲೀಕ ಪಾಟೀಲ, ಪ್ರ: ಕಲಾ ಸಾಹಿತ್ಯ ಕುಟೀರ, ಬೆಳಗಾಂವಿ, ಗಾಂಧಿನಗರ, ಪುಟ: ೨೨, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೦-೭೦, ೧೯೬೮.

ಶ್ರೀಮಚ್ಛಂಕರ ಭಗವತ್ಪಾದರ ರಾಮಕರ್ಣಾಮೃತ ಲೇ: ಕಪನೀಪತಯ್ಯ, ಬಿ. ಎಸ್. ಪ್ರ: ಎಂ. ಎಸ್. ಶ್ರೀನಿವಾಸಯ್ಯ, ಕಾಫೀಪುಡಿ ವ್ಯಾಪಾರಿಗಳು, ಮಳವಳ್ಳಿ, ಮಂಡ್ಯ ಜಿಲ್ಲೆ, ಪುಟ: ೨೦+೧೯೪, ಬೆಲೆ: ರೂ. ೪-೯೦, ೧೯೬೮.

ಕನ್ನಡ ಪಡೆನುಡಿಗಳ ಕೋಶ ಲೇ: ವೆಂಕಟರಮಣಯ್ಯ, ಟಿ. ವಿ. ಪ್ರ: ಸಮಾಜ ಪುಸ್ತಕಾಲಯ, ಧಾರವಾಡ-೧, ಪುಟ: ೧೬+೨೮೦, ಆಕಾರ: ಅಷ್ಟದಳ, ಬೆಲೆ: ರೂ. ೪-೦೦, ೧೯೬೭.

ಪ್ರಾಚೀನ ಹಿಂದೂ ರಾಜ್ಯ ಪದ್ಧತಿ ಲೇ: ಸಂಜುಂಡಸ್ವಾಮಿ, ಎ. ಎಸ್. ಪ್ರ: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು, ಪುಟ: ೭೧, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೫೦, ೧೯೬೫.

ಕವಿರಾಜಮಾರ್ಗಂ ಶ್ರೀ ವಿಜಯಕೃತ, ಸಂ: ಸೀತಾರಾಮಯ್ಯ, ಎಂ. ವಿ. ಪ್ರ: ಕರ್ಣಾಟಕ ಸಂಘ, ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು, ಪುಟ: ೪೩೨, ಬೆಲೆ: ರೂ. ೧೫-೦೦, ೧೯೬೮.

ಮಾಸಿಕ, ತ್ರೈಮಾಸಿಕ, ವಾರ್ಷಿಕ ಪತ್ರಿಕೆಗಳು

ಕವಿತಾ (ಮಾಸಪತ್ರಿಕೆ) ಸಂ: ಬಾಲಕೃಷ್ಣ, ಕಿ. ನ. ಪ್ರ: ಸಾಕ್ಷಿ ಮತ್ತು ಕವಿತಾ, ಸಾಗರ ಮುದ್ರಣ, ಸಾಗರ, ಮೈಸೂರು ರಾಜ್ಯ, ಪುಟ: ೩೨; ೧೯೬೮.

ಸಾಕ್ಷಿ (ತ್ರೈಮಾಸಿಕ ಪತ್ರಿಕೆ) ಸಂ: ಗೋಪಾಲಕೃಷ್ಣ ಅಡಿಗ, ಪ್ರ: ಸಾಕ್ಷಿ ಮತ್ತು ಕವಿತಾ, ಸಾಗರ ಮುದ್ರಣ, ಸಾಗರ, ಮೈಸೂರು ರಾಜ್ಯ, ಪುಟ: ೯೦, ವಾರ್ಷಿಕ ಚಂದಾ, ರೂ. ೧೫-೦೦, ೧೯೬೮.

ಸಂಧ್ಯಾಜ್ಯೋತಿ (ವಾರ್ಷಿಕ ಪತ್ರಿಕೆ) ಆಚಾರ್ಯ ಪಾಠಶಾಲಾ ಸಂಜೆ ಕಾಲೇಜು, ನರಸಿಂಹರಾಜಾ ಕಾಲೋನಿ, ಬೆಂಗಳೂರು-೧೯, ಪುಟ: ೪೦+೧೮+೩+೨, ೧೯೬೮.

ಸ್ಮರಣ ಸಂಚಿಕೆ ಸುವರ್ಣ ಮಹಸ್ಮರಣ, ಲೇ: ಮ. ಅ. ಕೃಷ್ಣಸ್ವಾಮಿ, ಪ್ರ: ಸ್ಮರಣ ಸಂಚಿಕೆಯ ಸಮಿತಿ ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಶೇಷಾದ್ರಿರಸ್ತೆ, ಬೆಂಗಳೂರು-೯, ಪುಟ: ೮೨, ಬೆಲೆ: ರೂ. ೧-೦೦, ೧೯೬೮.

ವಾರ್ಷಿಕ ಸಂಚಿಕೆ ಸುಜಾತ ವಾರ್ಷಿಕ ಸಂಚಿಕೆ ೧೯೬೮, ಪ್ರ: ಕರ್ನಾಟಕ ಸಂಘ, ಎಚ್. ಎಂ. ಟಿ. ಜಾಲಹಳ್ಳಿ, ಬೆಂಗಳೂರು-೩೧, ಪುಟ: ೭೨, ೧೯೬೮.

ಕಲಾ ವಿಕಾಸ ತೃತೀಯ ವಾರ್ಷಿಕ ಸ್ಮರಣ ಸಂಚಿಕೆ, ಪ್ರ: ಉದಯಭಾನು ಕಲಾ ಸಂಘ, ಕೆಂಪೇಗೌಡನಗರ, ಬೆಂಗಳೂರು-೧೯, ಪುಟ: ೩೫, ೧೯೬೮.

ವಿಮರ್ಶೆ

ಸಮಕಾಲೀನ ಭಾರತೀಯ ಸಾಹಿತ್ಯ ಲೇಖನಮಾಲೆ, ಅನು: ನರಸಿಂಹಾಚಾರ್, ಪು.ತಿ. ಪ್ರ: ಸಾಹಿತ್ಯ ಅಕಾದೆಮಿ, (Southern Regional Office, 15, Cathedral Road, Nungambakkam,) Madras-34, ಪುಟ: ೩೯೬, ಬೆಲೆ: ರೂ. ೧೦-೦೦, ೧೯೬೮.

ಕಾವ್ಯಾನುಶೀಲನ ಲೇ: ರಾ. ಗೌ. ಪ್ರ: ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು-೫, ಪುಟ: ೨+೧೪೬, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೩-೦೦, ೧೯೬೮.

ರಾಜಾಜಿಯವರ ಕಥನ ಕಲಾಸಿದ್ಧಿ ಲೇ: ಭಟ್, ಕೆ. ಎನ್. ಶಿರಾಡಿಪಾಲ್, ಪ್ರ: ವಿಚಾರ ಸಾಹಿತ್ಯಮಾಲೆ, ಪೋಸ್ಟ್: ಕಡಿರುದ್ಯಾವರ (ದ.ಕ.) ಪುಟ: ೫೮, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೧-೦೦, ೧೯೬೮.

ಸಾಹಿತ್ಯ ಹಾಗೂ ಸಂಶೋಧನೆ ಲೇ: ವೆಂಕಟರಾಯಾಚಾರ್ಯ, ಕೆ. ಸುರತ್ಕಲ್ಲು, ಪ್ರ: ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು, (ದ. ಕ.), ಪುಟ: ೧೨+೧೦೦, ಆಕಾರ: ಕ್ರೌ. ಅಷ್ಟದಳ, ಬೆಲೆ: ರೂ. ೩-೦೦, ೧೯೬೮.

ತತ್ವ

ಕಬೀರ ವಚನಾವಲಿ, ಹಿಂದೀ ಕನ್ನಡ ಅನುವಾದ: ಬೇಂದ್ರೆ, ದ.ರಾ. ಪ್ರ: ಸಾಹಿತ್ಯ ಅಕಾದೆಮಿ, ನವದೆಹಲಿ, ಪುಟ: ೧೯೮, ಬೆಲೆ: ರೂ. ೬-೦೦, ೧೯೬೮.

Reg. No. B. G. 4—November 1968

Licensed to Post without pre-payment, Licence No. 1



ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮



ಸಂಪಾದಕ

ಜಿ. ವೆಂಕಟಸುಬ್ಬಯ್ಯ

ಸಂಪಾದಕ ಮಂಡಳಿ

ಶ್ರೀನಿವಾಸರಾವ್ ಕೊರಟಿ

ಆರ್. ರಾಜಪ್ಪ

ಕನ್ನಡ ನುಡಿ

ಡಿಸೆಂಬರ್ ೧೯೭೮

ಸಂಪುಟ ೪೧
ಸಂಚಿಕೆ ೧೨

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ.

ಸ್ತ್ರೀ ಕಾ ರ

ಕಾದಂಬರಿ

ನಯನಾ ; ಲೇ : ಜ್ಞಾನಾನಂದ, ಜಿ. ಪ್ರ : ರಘುಸುತ ಪ್ರಸನ್ನ ಪ್ರಕಾಶನ, ೫(೩) ಮಂಜುನಾಥ ಲೇ ಔಟ್, ೧೮ನೇ ಕ್ರಾಸ್, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು-೩ ; ಪುಟ : ೧೩೫, ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೨-೦೦, ೧೯೬೮.

ಸರಸ್ವತಿ ; ಅವತಾರ ; ಲೇ : ಉಮಾಪ್ರಿಯ ; ಪ್ರ : ರಘುಸುತ ಪ್ರಸನ್ನ ಪ್ರಕಾಶನ, ೫(೩), ಮಂಜುನಾಥ ಲೇ ಔಟ್, ೧೮ನೇ ಕ್ರಾಸ್, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು-೩ ; ಪುಟ : ೧೩೦, ಆಕಾರ : ಕ್ರೌನ್ ಅಷದಳ ; ಬೆಲೆ : ರೂ. ೨-೦೦, ೧೯೬೮.

ರಕ್ತಮಾಂಗಲ್ಯ ; (ಹಿಂದಿ ಅನುವಾದ) ಲೇ: ಸನದಿ, ಬಿ.ಎ., ಪ್ರ : ನೃಪತುಂಗ ಪ್ರಕಾಶನ, ಕಲಬುರ್ಗಿ ; ಪುಟ: ೫+೮೮ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೧-೫೦, ೧೯೬೮.

ಮಹಾಕವಿ ಕಾಳಿದಾಸ ; ಲೇ : ಪದ್ಮನಾಭ ಸೋಮಯಾಜಿ ; ಪ್ರ : ಶ್ರೀ ಪ. ಸು. ಭಟ್ಟರು, ಮೇನೇಜಿಂಗ್ ಡೈರೆಕ್ಟರು, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು-೧೮ ; ಪುಟ : ೨೮೩ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೫-೦೦, ೧೯೬೮.

ಕವನ

ಜೀವನರಥ ; ಲೇ : ಸೌ|| ಇಂದುಮತಿ ಬಿ. ವಿಭೂತಿ ; ಪ್ರ : ಸೌ|| ಇಂದುಮತಿ ಬಿ. ವಿಭೂತಿ, ಔರಂಗಾಬಾದ್ ; ಪುಟ: ೫೮ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ: ರೂ. ೧-೫೦, ೧೯೬೮.

ಪ್ರತಿಬಿಂಬ ; ಲೇ : ಸನದಿ, ಬಿ.ಎ., ಪ್ರ : ಶರತ್ ಪ್ರಕಾಶನ ಮಂದಿರ, ೨೮೯, ಶಿವಕುಂಜ, ಶ್ಯಾಮ ಪ್ರಸಾದ ಬೀದಿ, ಬೆಳಗಾವಿ ; ಪುಟ : ೬+೫೮ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೧-೫೦, ೧೯೬೭.

ಹಸ್ತಾಕ್ಷರ ; ಲೇ : ಮಧ್ಯಸ್ಥ, ನೀ. ನಾ. ಪ್ರ : ಜಲಂಧರ ಪ್ರಕಟಣಾಲಯ, ಪುಸ್ತಕ ಪ್ರಕಾಶಕರು, ಸಾಗರ, ಶಿವಮೊಗ್ಗ ಜಿಲ್ಲೆ ; ಪುಟ : ೯೦ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೧-೫೦, ೧೯೬೮.

ವಚನ ಸಾಹಿತ್ಯ

ಬಿಡಿಸ್ವರ ವಚನಗಳು ; ಲೇ : ಉಮಾಪತಿ ಶಾಸ್ತ್ರಿ, ಜಿ. ಎಂ. ಪ್ರ : ಶಾರದಾ ಭವನ ಪ್ರಕಾಶನ, ಬಾಗಲಕೋಟೆ ; ಪುಟ : ೧೨+೨೭ ; ಬೆಲೆ : ರೂ. ೧-೦೦, ೧೯೬೮.

ಸಿದ್ಧರಾಮೇಶ್ವರ ಚರಿತ್ರ ; ಲೇ : ಕವಿ ರಾಘವಾಂಕ ಪಂಡಿತ ; ಪ್ರ : ಮುತ್ಯಪ್ಪ ಸಿದ್ದಪ್ಪ, ಮಂಗಾಣೆ, ಶ್ರೀ ಸಿದ್ಧೇಶ್ವರ ಪ್ರಕಾಶನ ಮಂಡಳಿ, ಸೊಲ್ಲಾಪುರ ; ಪುಟ : ೧೪೭ ; ಬೆಲೆ : ರೂ. ೫-೦೦, ೧೯೬೭.

" ಸರ್ವಾಂತರಾತ್ಮನ " ವಚನಗಳು ; ಲೇ : ಚಂದ್ರಶೇಖರ ವಿ. ಬಡಿಗಣ್ಣನವರ ; ಪ್ರ : ವಿ. ವಿ. ಬಡಿಗಣ್ಣನವರ ಬಂಧುಗಳು, ಗದಗ ; ಪುಟ : ೩೨ ; ಬೆಲೆ : ರೂ. ೦-೪೦, ೧೯೬೮.

ಬಸವ ಪ್ರಕಾಶ ; ಲೇ : ಶಾಂತಾದೇವಿ ಮಾಳವಾಡ ; ಪ್ರ : ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು-೫ ; ಪುಟ : ೧೦+೨೬೪ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೫-೫೦, ೧೯೬೮.

ಸಣ್ಣ ಕತೆ

ತೀರ ; ಲೇ : ಈಶ್ವರಚಂದ್ರ ; ಪ್ರ : ಸಂಪದ ಪ್ರಕಾಶನ, ೫೬, ಇಂದಿರಾನಗರ, ಬೆಂಗಳೂರು-೧೮ ; ಪುಟ : ೮+೧೫೫ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೩-೦೦, ೧೯೬೮.

ಹೂಕನ್ನಿಕೆ ; ಲೇ : ಪುಂಡಲೀಕ ಪಾಟೀಲ ; ಪ್ರ : ಕಲಾಶ್ರೀ ಸಾಹಿತ್ಯ ಕುಟೀರ, ಗಾಂಧೀನಗರ, ಬೆಳಗಾವಿ ; ಪುಟ : ೬೦ ; ಬೆಲೆ : ರೂ. ೧-೨೫, ೧೯೬೮.

ಪ್ರವಾಸ

ಮೇಲುಕೋಟೆ ಮತ್ತು ವೇಂದಾತಾಚಾರ್ಯರು ; ಲೇ : ಶ್ರೀನಿವಾಸಯ್ಯಂಗಾರ್, ಪ್ರ : ಚಿ|| ಸೌ|| ಪದ್ಮಾ, ಪದ್ಮಾಲಯ ಬಂಧುಗಳು, ಶ್ರೀ ಗೋದಾ ಮಂದಿರಂ, ಮಲ್ಲೇಶ್ವರಂ, ಬೆಂಗಳೂರು-೩ ; ಪುಟ : ೪+೪ ; ಬೆಲೆ : ರೂ. ೦-೨೫, ೧೯೬೮.

ಉಪನ್ಯಾಸ ಗ್ರಂಥಮಾಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪುರಾಣ ಜಿಜ್ಞಾಸೆ ; ಲೇ : ಹೆಗಡೆ, ಎಲ್. ಆರ್. ಪುಟ : ೮೦+೩ ; ಬೆಲೆ : ರೂ. ೦-೭೫, ೧೯೬೮.

(೩ನೆಯ ರಕ್ಷಾಪುಟ ನೋಡಿ)

ಕನ್ನಡ ನುಡಿ

'ಕನ್ನಡ ನುಡಿ' ಕರ್ಣಾಟಕದ ಗೆಜೆಟಿಯರ್ ಆಗಬೇಕು

—ಬಿ.ಎಂ.ಶ್ರೀ

ಸಂಪುಟ : ೩೧

ಸಂಚಿಕೆ : ೧೨

ಡಿಸೆಂಬರ್ ೧೯೬೮

ಈ ಸಂಚಿಕೆಯಲ್ಲಿ . . .

ವಸಂತ

ಈ ಕೊಳಲನೂದು
ಮೌನವಾಗಿಹುದು.
ಬೆಳಗು ಬೈಗುಗಳನು
ಹಕ್ಕಿ ಮುದಗೊಳಿಪುದು ;
ಕಣಿವೆಕಣಿವೆಗಳಲ್ಲು
ಕೋಗಿಲೆಯ ಕುಹು ಕುಹೂ,
ಸಾನಂದಭರಿತ-
ಬಾನಾಡಿ ಬಾನಲ್ಲಿ,
ಆನಂದ, ಆನಂದ, ಹೊಸವರುಷ ಬರಲೆಂದು.

ಪುಟ್ಟ ಹುಡುಗನ ಮೊಗದ-
ತುಂಬೆಲ್ಲ ಆನಂದ ;
ಸುರಸ ಸುಂದರಿ ಈಕೆ
ಹಾಲುಗಲ್ಲದ ಬಾಲೆ ;
ಹಕ್ಕಿಗಳು ಉಲಿಯುತಿವೆ,
ಅಂತೆಯೇ ನೀನು ;
ಸಂತಸದ ಕೇಕೆಗಳು.
ಕಂದರಾನಂದ,
ಆನಂದ, ಆನಂದ, ಹೊಸವರುಷ ಬರಲೆಂದು.

ಮುದ್ದಿನಾ ಕುರಿಮರಿಯೆ
ಇಲ್ಲಿರುವೆ ನಾನು,
ಎನ್ನ ಬಿಳಿ ಕುತ್ತಿಗೆಗೆ
ಸವಿಮುತ್ತನೊತ್ತು ;
ನಿನ್ನ ಮೃದು ಉಣ್ಣೆಯನು
ತಡಹುತ್ತ ನಾನು,
ನಿನ್ನ ಮೃದು ಮೊಗಕೊಂದು
ಸವಿ ಮುತ್ತನೀವೆ.
ಆನಂದ, ಆನಂದ
ವರುಷ ಸ್ವಾಗತಕೆಂದು ನಮಗಿಂದು ಆನಂದ.

—"ಸೇನಾನಿ"

William Blake ಕವಿಯ 'Spring' ಎಂಬ ಕವನದ ಭಾವಾನುವಾದ

ಕುಳ್ಳ

ಬೃಹತ್ತೇ,
ನಿನ್ನ ತಲೆ, ಕಾಲುಗಳ ಎಣಿಸೆಣಿಸಿ ನಾ ಸೋತೆ
ಕೊನೆಗೆ ಉಗುರನು ಕೂಡ ಕಾಣಲಿಲ್ಲ.
ದೊಡ್ಡವರು–ಚಿಕ್ಕವರು, ಶತ್ರುಗಳು–ಸ್ನೇಹಿತರು,
ಯಾರೂ ಕಾಣರು––ಅವರಿಗಾಗೊಡವೆಯಿಲ್ಲ.

ಯಾವುದೋ ಗ್ರಂಥದಲಿ
ಯಾರದೋ ಲಿಪಿಯಲ್ಲಿ
ಏನೇನನೋದಿದರೂ ತೃಪ್ತಿ ಸಿಕ್ಕುವುದಿಲ್ಲ.
ಎಲ್ಲೆಲ್ಲೂ ಬರಿಹೊಗೆ
ಸಿಗರೇಟು ಸುಟ್ಟಹೊಗೆ
ಎಳೆದೆಳೆದು ಬಿಟ್ಟ ಹೊಗೆ
ಸಾರವೇ ಅಲ್ಲಿಲ್ಲ–ಬರಿಸುರುಳಿ ಸುಟ್ಟಂತೆ
ನೀನಿಲ್ಲ,
ಒಳಗೆ,
ಹೊರಗೆ–

ಆನಂದ ನೀನಂತೆ–ವ್ಯೋಮ ವ್ಯಾಪಿಯು ಅಂತೆ
ಮಾನವನ ಜೀವನದಿ, ಆನಂದವೆನ್ನುವುದೇ
ಆಗಸದ ಹೂವು!

ಆಕಾಶದೆತ್ತರಕೆ ಬೆಳೆಯಬಲ್ಲೆನೆ–ನಾನು?
ನೀನಲ್ಲ ವಾಮನ–
ನನ್ನ ಇರುವು!
ಬುಡದಲ್ಲಿ ಬರಿನೋವು
ಕೊಂಬೆ ಕೊಂಬೆಗೆ ಮುಳ್ಳು
ಇದನೆಲ್ಲ ತುಳಿತುಳಿದು
ಮೇಲೇರಲಾದೀತೆ?
ಬದುಕಿ ಉಳಿದು!
ಇಲ್ಲವೆನೆ–
ಆ ಹೂವು ಬಾಗೀತೆ–ಬಿಗುಮಾನ ಕಳೆದು.
(ನಿಲವಿಲ್ಲದ ರೂಪ, ಕಳೆಯಲ್ಲಿ ವೇದಿಸುವವನ ಪರಿ ರಾಮನಾಥ)
ಹೂವಲ್ಲ ಭಗವಂತ–ಅದರ ಪರಿಮಳವಂತೆ
ಎಂದಮೇಲದಕೇನು–ತಲೆ, ಬಾಲ, ಕಿವಿಯುಂಟೆ?
ಈ ವಿಧಿಯ ಕೋಟಲೆಯನದಕೆ ಹೇಳಿದರೇನು?
ಮುಳ್ಳಿರಿದ ಮೈಯಿಂದ ರಕ್ತ ಸುರಿಸಿದರೇನು?
ಹಣವಿರದೆ ಬೇಡಿದರೆ ಹೆಂಡ ಸಿಕ್ಕುವುದಿಲ್ಲ!
ಭಗವಂತ ಮಾತ್ರ,
ತೆಂಗಿಗೆ . . .!
ಅಡಿಕೆಗೆ . . .!

ಆರ್. ಕೆ. ದಿವಾಕರ

ಆರ್. ಎಸ್. ಪಂಚಮುಖಿ ಅವರ ಕನ್ನಡ ಸೇವೆ

ಮಂಜುಳಾ

ವಿದ್ಯಾರತ್ನ ವಿದ್ಯಾಭೂಷಣ ರಾಘವೇಂದ್ರಾಚಾರ್ಯ ಸ್ವಾಮಿರಾಯಾಚಾರ್ಯ ಪಂಚಮುಖಿ ಅವರ ಹೆಸರು ಕೇಳದಿರುವ ವಿದ್ಯಾವಂತ ಕನ್ನಡಿಗರು ಇಲ್ಲ; ಆದರೆ ಅವರ ಬಗ್ಗೆ ತಿಳಿದಿರುವವರು ಮಾತ್ರ ವಿರಳ.

ಶ್ರೀ ಪಂಚಮುಖಿ ಅವರಿಗೆ ಕಳೆದ ನರಸಿಂಹ ಜಯಂತಿಗೆ ಎಪ್ಪತ್ತು ವರ್ಷಗಳು ತುಂಬುತ್ತವೆ; ಅವರು ಧಾರವಾಡದ ಕನ್ನಡ ಸಂಶೋಧನಸಂಸ್ಥೆಯ ಡೈರೆಕ್ಟರ್ ಆಗಿ, ಕರ್ಣಾಟಕ ಇತಿಹಾಸ ಮಂಡಲದ ಪ್ರಮುಖ ಸಂಪಾದಕರಾಗಿ, ಭಾರತೀಯ ಸಾಹಿತ್ಯ ಸಂಸ್ಕೃತಿಗಳಿಗೆ ಸಲ್ಲಿಸಿರುವ ಸೇವೆಗಿಂತಲೂ ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಹರಿದಾಸ ವಾಙ್ಮಯಕ್ಕೆ ಸಲ್ಲಿಸಿರುವ ಸೇವೆ ಮಿಗಿಲಾದುದು. ಅವರು ೧೯೩೩ರಲ್ಲಿ ಎಪಿಗ್ರಾಫಿಕಲ್ ಡಿಪಾರ್ಟ್‌ಮೆಂಟ್ [ಶಿಲಾಲೇಖ ಇಖಾಖೆ] ಸೇರಿದಾಗಿನಿಂದ ಇಲ್ಲಿಯವರೆಗೆ ಕನ್ನಡನಾಡಿನ ನೂರಾರು ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಅವರು ಒಪ್ಪಿಸಿರುವ ವರದಿಗಳು ಪುರಾತನತ್ವ ಸಂಗತಿಗಳಿಗೆ ಅಮೂಲ್ಯ ಗಣಿಗಳಾಗಿವೆ. ಅವು ವಸ್ತು ಪ್ರದರ್ಶನಾಲಯಗಳಿಗೆ ಮೋಡಿ, ನಾಗರಿ, ಕನ್ನಡ ಮತ್ತು ಪರ್ಷಿಯನ್ ಭಾಷೆಗಳಲ್ಲಿನ ಉಪಯುಕ್ತವಾದ ಐತಿಹಾಸಿಕ ದಾಖಲೆಗಳು, ಜನಪದ ಸಾಹಿತ್ಯ ಮೊದಲಾದುವುಗಳಿಂದ ಕೂಡಿದ್ದು ಆಕರ ಗ್ರಂಥಗಳಾಗಿವೆ. ಆದರೆ ಪಂಚಮುಖಿಯವರು ಕನ್ನಡಿಗರಿಗೆ ಹೆಚ್ಚು ಪರಿಚಿತವಾಗಿರುವುದು ಅವರ ಹರಿದಾಸ ಸಾಹಿತ್ಯದಿಂದ. ಕನ್ನಡ ನಾಡಿನ ಪ್ರಾಚೀನ ಇತಿಹಾಸವನ್ನು ಕುರಿತು ಈಚೆಗೆ ಅವರು ಇನ್ನೊಂದು ಗ್ರಂಥ ಬರೆದಿದ್ದಾರೆ. ಇದೊಂದು ಸೇವೆಯೇ ಕನ್ನಡ ಸಾಹಿತ್ಯದಲ್ಲಿ ಅವರ ಹೆಸರನ್ನು ಪ್ರಾತಃಸ್ಮರಣೀಯರ ಮಾಲೆಯಲ್ಲಿ ನಿಲ್ಲಿಸಲು ಸಾಕು.

ಆರ್. ಎಸ್. ಪಂಚಮುಖಿಯವರು ಕನ್ನಡ ನಾಡಿನ ಸುಪ್ರಸಿದ್ಧವಾದ ಆಚಾರ್ಯ ವಂಶಕ್ಕೆ ಸೇರಿದವರು. ಅವರ ಹಿಂದಿನವರು ವಿಜಯನಗರದ ಸ್ಟ್ರಾಮ್ರಾಟ್ ಹರಿಹರನಿಂದ ತಮ್ಮ ಶಾಸ್ತ್ರ, ಪಾಂಡಿತ್ಯ, ವಿದ್ಯಾನಿಪುಣತೆಗಳಿಗಾಗಿ ಜಹಗೀರುಗಳನ್ನು ಪಡೆದಿದ್ದರಂತೆ. ಅವರ ತಾತ ಹೇಮಾದ್ರಿ ಆಚಾರ್ಯರು ವಾರಣಾಸಿಯಲ್ಲಿ ನೆಲಸಿದ್ದಾಗ ಅವರ ಗುರುಕುಲದಲ್ಲಿ ತರ್ಕ, ವೇದಾಂತ ವ್ಯಾಕರಣಗಳನ್ನು ಕಲಿಯುತ್ತಿದ್ದ ನೂರಾರು ವಿದ್ಯಾರ್ಥಿಗಳಿದ್ದರಂತೆ. ಈ ಹೇಮಾದ್ರಿ ಆಚಾರ್ಯರ ಮಕ್ಕಳೇ ಸ್ವಾಮಿರಾಯಾಚಾರ್ಯರು. ಈ ಸ್ವಾಮಿರಾಯಾಚಾರ್ಯ–ಸರಸ್ವತೀಬಾಯಿ ದಂಪತಿಗಳಿಗೆ ಎರಡನೆಯ ಮಗನಾಗಿ, ಪಂಚಮುಖಿಯವರು ೧೮೯೮ನೇ ಮೇ ೭ರಂದು ಜನಿಸಿದರು.

ಪಂಚಮುಖಿಯವರು ಉಪನಯನ ಸಂಸ್ಕಾರ ಮುಗಿದ ಕೂಡಲೇ ತಮ್ಮ ಪೂಜ್ಯ ತಂದೆಯಿಂದ ಶಾಸ್ತ್ರಗಳಲ್ಲಿ ಪ್ರವೇಶವನ್ನು ಪಡೆದರು. ಇಂಗ್ಲಿಷ್ ಶಿಕ್ಷಣದ ಸಲುವಾಗಿ ಅವರು ಬಾಗಲಕೋಟೆಯ ಜಾಲಿಹಾಳದ ಶಾಲೆಯನ್ನು ಸೇರಿದರು. ಮುಂದೆ ಅವರ ವಿದ್ಯಾಭ್ಯಾಸವು ಧಾರವಾಡದ ವಿಕ್ಟೋರಿಯ ಹೈಸ್ಕೂಲ್, ಕರ್ಣಾಟಕ ಕಾಲೇಜುಗಳಲ್ಲಿ ಮುಂದುವರೆಯಿತು. ಅವರು ತಮ್ಮ ಬಿ.ಎ. ಮುಗಿಸಲು ೧೯೨೧ರಲ್ಲಿ ಪುಣೆಯ ದಖನ್ ಕಾಲೇಜನ್ನು ಸೇರಿದರು. ಆದರೆ ಮಹಾತ್ಮಾ ಗಾಂಧಿಜಿಯವರ ಪ್ರಭಾವಕ್ಕೆ ಬಿದ್ದು ಅಸಹಕಾರ ಚಳುವಳಿಯಿಂದಾಗಿ ಕಾಲೇಜನ್ನು ತ್ಯಜಿಸಿದರು. ಮುಂದೆ ಮಹಾತ್ಮಾಜಿಯವರು ಚೌರಿ–ಚೌರ ಘಟನೆಯಿಂದಾಗಿ ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡಾಗ ಪಂಚಮುಖಿಯವರು ಮತ್ತೆ ಕರ್ಣಾಟಕ ಕಾಲೇಜಿಗೆ ಸೇರಿ ಬಿ.ಎ. ಪರೀಕ್ಷೆಯನ್ನು ಪ್ರಥಮ ತರಗತಿಯಲ್ಲಿ ತೇರ್ಗಡೆಯಾದರು. ಮುಂದೆ ಅವರು ವೇದಾಂತ ಮತ್ತು ಕನ್ನಡ ವಿಷಯಗಳನ್ನು ಆರಿಸಿಕೊಂಡು ಎಂ.ಎ. ಪದವೀಧರರಾದರು. ಇದಾದ ಕೂಡಲೇ ೧೯೨೩ರಲ್ಲಿ ಉದಕಮಂಡಲದ ಪುರಾತನತ್ವ ಇಲಾಖೆಯಲ್ಲಿ ನೌಕರಿಗೆ ಸೇರಿದರು. ಅವರು ಶ್ರೇಷ್ಠ ಜರ್ಮನ್ ವಿದ್ವಾಂಸರಾದ ಡಾ. ಹಲ್ಷ ಅವರ ನೇತೃತ್ವದಲ್ಲಿ ಕೆಲಸ ಮಾಡಿ ಪರಿಣತರಾಗಿದ್ದ ಹೆಚ್. ಕೃಷ್ಣಶಾಸ್ತ್ರಿ, ಕೆ. ವಿ. ಸುಬ್ರಹ್ಮಣ್ಯ ಅಯ್ಯರ್ ಮೊದಲಾದ ಮೇಧಾವಿಗಳ ಕೈಯಲ್ಲಿ ಪ್ರಾಚ್ಯ ಸಂಶೋಧನೆಯ ಕಾರ್ಯದಲ್ಲಿ ತರಪೇತಿಯನ್ನು ಪಡೆದರು.

ಈ ಕಾಲದಲ್ಲೇ ಪಂಚಮುಖಿಯವರು ಎನ್. ಲಕ್ಷ್ಮೀನಾರಾಯಣರಾಯರ ಜತೆಯಲ್ಲಿ ಕೆಲಸ ಮಾಡಿ, ಉತ್ತರ ಕರ್ಣಾಟಕದ ಮೂಲೆ ಮೂಲೆಗಳನ್ನು ಸುತ್ತಿದರು. ಕರ್ಣಾಟಕ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಹೊಸ ಬೆಳಕು ಚೆಲ್ಲುವಂತಹ ಅನೇಕ ಅಮೂಲ್ಯವಾದ ಶಾಸನಗಳನ್ನು ಸಂಗ್ರಹಿಸಿದರು. ಹೀಗೆ ಅವರು ತಮ್ಮ ಉದ್ಯೋಗ ಅವಧಿಯಲ್ಲಿ ತಮಿಳು, ತೆಲುಗು ಶಾಸನ ವಿಭಾಗಗಳಲ್ಲಿ ಕೆಲಸ ಮಾಡಿ ವಿದ್ವಾಂಸ ಲೋಕಕ್ಕೆ ಚಿರಪರಿಚಿತರಾದರು.

೧೯೩೭ರಲ್ಲಿ ಕಾಂಗ್ರೆಸ್ ಪಕ್ಷವು ಮುಂಬೈ ರಾಜ್ಯದ ಅಧಿಕಾರವನ್ನು ಸ್ವೀಕರಿಸಿದಾಗ ಸುದೈವದಿಂದ ಗುಜರಾತ್, ಮಹಾರಾಷ್ಟ್ರ, ಮತ್ತು ಕರ್ಣಾಟಕ ವಿಭಾಗಗಳ ಸಲುವಾಗಿ ಮೂರು ಸಂಶೋಧನ ಕೇಂದ್ರಗಳು ಏರ್ಪಟ್ಟವು. ಅವುಗಳಲ್ಲಿ ಕರ್ಣಾಟಕ ಸಂಶೋಧನ ಕೇಂದ್ರವನ್ನು ಆರಂಭ ಮಾಡಿ, ಕಾರ್ಯ ನಡೆಸುವ ಹೊಣೆಗಾರಿಕೆ ಪಂಚಮುಖಿ ಅವರ ಪಾಲಿಗೆ ಬಂದಿತು. ಅವರು ಈ ಸಂಶೋಧನ ಸಂಸ್ಥೆಯ ಮಾರ್ಗದರ್ಶಕರಾಗಿ ಸಲ್ಲಿಸಿದ ಸೇವೆ ಕನ್ನಡಿಗರು ಬಹುಕಾಲ ನೆನೆಯುವಂಥದು. ಈ ಅವಧಿಯಲ್ಲಿ ಅವರು ಮಾಡಿದ ಸಂಶೋಧನೆಗಳಲ್ಲಿ, ಬಾದಾಮಿಯ ಬೆಟ್ಟದಲ್ಲಿನ ಮೊದಲನೆ ಪುಲಿಕೇಶಿಯ ಶಾಸನ ಉಲ್ಲೇಖನಾರ್ಹ. ಅವರ ಒತ್ತಾಸೆಯ ಫಲವಾಗಿ ಪ್ರಾಗೈತಿಹಾಸ ಕಾಲದ ಅನೇಕ ವಸ್ತುಗಳು-ಮಡಕೆ ಚೂರುಗಳು, ಮಣಿಗಳು, ನಾಣ್ಯಗಳು, ಪ್ರಾಚೀನ ಹಾಗೂ ಶಿಲಾಯುಗದ ಅನೇಕ ವಸ್ತುಗಳು ಸಂಗ್ರಹವಾಗಿ ಕರ್ಣಾಟಕ ವಸ್ತುಪ್ರದರ್ಶನಾಲಯ ರೂಪಗೊಂಡಿತು.

ಆರ್. ಎಸ್. ಪಂಚಮುಖಿಯವರು ಪುರಾತನತ್ವ ಶಾಸ್ತ್ರದಲ್ಲಿ ನಿಪುಣರಾಗಿದ್ದಂತೆಯೇ ಕನ್ನಡ, ಸಂಸ್ಕೃತ ಸಾಹಿತ್ಯಗಳಲ್ಲೂ ಉದ್ದಾಮ ಪಂಡಿತರಾಗಿದ್ದಾರೆ. ಅವರ ಪಾಂಡಿತ್ಯವನ್ನು ಮನಗಂಡು ೧೯೪೮ರಲ್ಲಿ ವಾರಣಾಸಿಯ ಅಖಿಲಭಾರತ ಧರ್ಮ ಮಹಾಮಂಡಲದವರು ವಿದ್ಯಾರತ್ನ ಎಂಬ ಬಿರುದನ್ನೂ, ಶ್ರೀ ರಾಘವೇಂದ್ರಸ್ವಾಮಿ ಮಠದ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರು ೧೯೬೭ರಲ್ಲಿ ವಿದ್ಯಾಭೂಷಣ ಎಂಬ ಬಿರುದನ್ನೂ ಅವರಿಗೆ ಕೊಟ್ಟು ಗೌರವಿಸಿದ್ದಾರೆ.

ಪಂಚಮುಖಿಯವರು ಸಲ್ಲಿಸಿರುವ ಸಾಹಿತ್ಯ ಸೇವೆ ಉಲ್ಲೇಖನಾರ್ಹವಾದುದು. ಅವರು ಇದುವರೆವಿಗೆ ಚಂದ್ರರಾಜನ ಮದನತಿಲಕ, ಕವಿ ಜಿಹ್ವಾಬಂಧನ, ಕುಮಾರ ವ್ಯಾಸನದೆಂದು ಹೇಳಲಾಗಿರುವ ಐರಾವತ ಮೊದಲಾದ ಕನ್ನಡ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಸಂಸ್ಕೃತದಲ್ಲಿ ಅಹೋಬಲ ಕವಿಯ ವಿರೂಪಾಕ್ಷ ವಸಂತೋತ್ಸವ ಎಂಬ ಚಂಪೂ ಗ್ರಂಥವನ್ನು ಸಂಪಾದಿಸಿದ್ದಾರೆ. ಅಲ್ಲದೆ ಇಂಗ್ಲಿಷಿನಲ್ಲೂ, ಕನ್ನಡದಲ್ಲೂ ನೂರಾರು ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದಾರೆ.

ಅವರ ಗ್ರಂಥಗಳಲ್ಲೆಲ್ಲಾ ಕನ್ನಡಿಗರ ಅಭಿಮಾನ ಗೌರವಗಳಿಗೆ ಪಾತ್ರವಾಗಿರುವ ಶ್ರೇಷ್ಠ ಗ್ರಂಥವೆಂದರೆ ಹರಿದಾಸ ಸಾಹಿತ್ಯ. ಇದು ರಾಯಲ್ ಅಷ್ಟದಳಾಕೃತಿಯಲ್ಲಿ ೪೦೦ ಪುಟಗಳಿಗೂ ಮಿಕ್ಕಿರುವ ಗ್ರಂಥ. ಕನ್ನಡ ಸಾಹಿತ್ಯ ಪರಿಷತ್ತಿನವರು ೧೯೬೬ರಲ್ಲಿ ಇದನ್ನು ಪ್ರಕಟಿಸಿದ್ದಾರೆ. ಇದಕ್ಕೆ ಲೇಖಕರೇ ಇಂಗ್ಲಿಷಿನಲ್ಲಿ ಒಂದು ದೀರ್ಘವಾದ ಉಪೋದ್ಘಾತವನ್ನು ಬರೆದಿದ್ದಾರೆ.

ಕರ್ಣಾಟಕದಲ್ಲಿ ಭಕ್ತಿ ಪಂಥದ ಉಗಮ ಮತ್ತು ವಿಕಾಸ ಮುಖ್ಯವಾಗಿ ಹರಿದಾಸರ ವಿಷ್ಣುಭಕ್ತಿಯ ಕಥನವೇ ಈ ಗ್ರಂಥದ ವಸ್ತು. ಕನ್ನಡನಾಡಿನಲ್ಲಿ ಆಗಿಹೋದ ದಾಸ ಕೂಟಕ್ಕೆ ಸೇರಿದ ನರಹರಿತೀರ್ಥರು, ಶ್ರೀಪಾದರಾಯರು, ವ್ಯಾಸತೀರ್ಥರು, ಪುರಂದರದಾಸರು, ಕನಕದಾಸರು, ರಾಘವೇಂದ್ರ ತೀರ್ಥರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಪ್ರಸನ್ನ ವೆಂಕಟದಾಸರೇ ಮೊದಲಾಗಿ ಎಲ್ಲ ಪ್ರಮುಖ ಹರಿದಾಸರ ವಾಙ್ಮಯವನ್ನು ಈ ಗ್ರಂಥದಲ್ಲಿ ವೈಜ್ಞಾನಿಕವಾಗಿ ವಿವೇಚಿಸಿದ್ದಾರೆ. ಇದೊಂದು ಪಂಚಮುಖಿಯವರು ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟಿರುವ ಬೆಲೆಯುಳ್ಳ ಕಾಣಿಕೆಯಾಗಿದೆ. ಇದಲ್ಲದೆ ಪಂಚಮುಖಿಯವರು ಕನ್ನಡದಲ್ಲಿ ಕರ್ಣಾಟಕ ಜನಪದ ಗೀತೆಗಳು, ಸಂಸ್ಕೃತಿ ಸಂಗ್ರಾಮ, ಪುರಂದರದಾಸರ ಜೀವನ ಚರಿತ್ರೆ, ದೈತ್ಯ ಭಕ್ತ ಪ್ರಹ್ಲಾದ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಅವರ ಲೇಖನಿಯಿಂದ ಹೊರಬಿದ್ದಿರುವ ಗ್ರಂಥ ರತ್ನವೆಂದರೆ ಕರ್ಣಾಟಕದ ಇತಿಹಾಸ. ಈ ಗ್ರಂಥವು ಅವರ ಮಹತ್ತರ ಸಾಧನೆಯಾಗಿದೆ.

ಕನ್ನಡನಾಡಿನ ಇತಿಹಾಸವನ್ನು ಕುರಿತು ಬರೆಯುವುದರಲ್ಲಿ ಇದುವರೆವಿಗೆ ಫ್ಲೀಟರು [ಡೈನಾಸ್ಟೀಸ್ ಆಫ್ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್] ಭಾಂಡಾರ್‌ಕರರು [ಹಿಸ್ಟರಿ ಆಫ್ ದಿ ಡೆಕನ್] ಮತ್ತು ಲೂಯಿ ರೈಸರು [ಮೈಸೂರ್ ಅಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್‌ಷನ್ಸ್] ಕೆಲವೊಂದು ಪ್ರಯತ್ನ ಮಾಡಿದ್ದಾರೆ. ಆದರೆ ಅವರು ಯಾರೂ ಸಮಗ್ರ ಕರ್ಣಾಟಕದ ಇತಿಹಾಸವನ್ನು ಇಷ್ಟು ವಿವರವಾಗಿ ಬರೆದಿರುವಂತೆ ತೋರುವುದಿಲ್ಲ. ಈ ದಿಸೆಯಲ್ಲಿ ಶ್ರೀ ಲಕ್ಷ್ಮೀನಾರಾಯಣರಾಯರ ಕರ್ಣಾಟಕದ ಅರಸು ಮನೆತನಗಳು, ದೇಶಪಾಂಡೆಯವರ ಕರ್ಣಾಟಕ ಸಾಮ್ರಾಜ್ಯ ಗ್ರಂಥಗಳು ಉಲ್ಲೇಖನಾರ್ಹವಾಗಿದ್ದರೂ, ಪಂಚಮುಖಿಯವರ ಕರ್ಣಾಟಕ ಇತಿಹಾಸ ಗ್ರಂಥವು ವಿಷಯ ವ್ಯಾಪ್ತಿಯಲ್ಲಾಗಲೀ ಸಮಗ್ರತೆಯಲ್ಲಾಗಲೀ ಈ ಎಲ್ಲ ಗ್ರಂಥಗಳನ್ನು ಮೀರಿಸುವ ಒಂದು ಅಪೂರ್ವ ಗ್ರಂಥ.

ಕನ್ನಡನಾಡಿನ ಉದಯವಾಗಿ—ಅಖಂಡ ಕರ್ಣಾಟಕದ ನಿರ್ಮಾಣವಾಗಿ-ಹನ್ನೆರಡು ವರ್ಷಗಳು ಕಳೆದಿದ್ದರೂ ಇನ್ನೂ ನಾಡಿನ ಇತಿಹಾಸವನ್ನು ಸಮಗ್ರವಾಗಿ, ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ತಿಳಿಸುವ ಪ್ರಯತ್ನವನ್ನು ಇದುವರೆವಿಗೆ ಸರ್ಕಾರವಾಗಲೀ, ಸಾರ್ವಜನಿಕ ಸಂಸ್ಥೆಗಳಾ

ಗಲೀ ಕೈಗೊಳ್ಳದಿರುವುದು ವಿಷಾದಕರ. ಪರಿಷತ್ತಿನವರು ಪ್ರಕಟಿಸಿರುವ ಕನ್ನಡನಾಡಿನ ಚರಿತ್ರೆ ಈ ದಿಸೆಯಲ್ಲಿ ಇಟ್ಟಿರುವ ಸಣ್ಣ ಹೆಜ್ಜೆ ಎನ್ನಬಹುದಾಗಿದೆ. ಈ ಕೊರತೆಯನ್ನು ತುಂಬಲು ಶ್ರೀ ಪಂಚಮುಖಿಯವರು ತಮ್ಮ ವೃದ್ಧಾಪ್ಯದಲ್ಲಿ ಈ ಕಾರ್ಯದಲ್ಲಿ ಪ್ರವರ್ತರಾಗಿರುವುದು ಕನ್ನಡಿಗರ ಸುದೈವ.

ಆರ್. ಎಸ್. ಪಂಚಮುಖಿಯವರು ೩ ಸಂಪುಟಗಳಲ್ಲಿ ಸುಮಾರು ಮೂರು ಸಾವಿರ ಪುಟಗಳಲ್ಲಿ—ಕರ್ಣಾಟಕದ ಇತಿಹಾಸವನ್ನೂ ಸಾಂಸ್ಕೃತಿಕ ಜೀವನದ ಗತವೈಭವವನ್ನೂ ಕನ್ನಡಿಗರಿಗೆ ಪರಿಚಯ ಮಾಡಿಕೊಡಲು ಇಲ್ಲಿ ಹೊರಟಿದ್ದಾರೆ. ಇತಿಹಾಸ ಪೂರ್ವ ಕಾಲದಿಂದ ಹತ್ತನೆಯ ಶತಮಾನದವರೆಗೆ ಕನ್ನಡನಾಡನ್ನು ಆಳಿದ ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟರ ಇತಿಹಾಸವನ್ನೂ ಆ ಕಾಲದ ಸಾಂಸ್ಕೃತಿಕ ಜೀವನವನ್ನೂ ಈ ಪ್ರಥಮ ಸಂಪುಟದಲ್ಲಿ ಕೊಟ್ಟಿದ್ದಾರೆ. ಮುಂದೆ ಇಂತಹ ಮೂರು ಸಂಪುಟಗಳು ಪ್ರಕಟವಾಗಲಿವೆ. ಇವುಗಳಿಗೆ ಕನ್ನಡನಾಡಿನ ಜನತೆ ಯೋಗ್ಯ ಪ್ರೋತ್ಸಾಹ ಕೊಟ್ಟು ಪಂಚಮುಖಿಯವರಿಂದ ಈ ಕೆಲಸವನ್ನು ಆಗಮಾಡಿಸಿಕೊಳ್ಳಬೇಕಾಗಿದೆ.

ಪಂಚಮುಖಿಯವರು ಕರ್ಮಯೋಗಿಗಳು. ತಮ್ಮ ಅಪರ ವಯಸ್ಸಿನಲ್ಲೂ ತಾವು ಪ್ರೋತ್ಸಾಹಿಸಿ, ಬೆಳೆಸಿದ ಧಾರವಾಡದ ಇತಿಹಾಸ ಮಂಡಲದ ಹಿತಚಿಂತನೆಯಲ್ಲೇ ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆ ಅವರ ನೇತೃತ್ವದಲ್ಲಿ ಬೆಳ್ಳಿ ಹಬ್ಬವನ್ನು ಮುಗಿಸಿ ಇದೀಗ ಚಿನ್ನದ ಹಬ್ಬವನ್ನು ವೈಭವದಲ್ಲಿ ಆಚರಿಸಲಿದೆ.

ಪಂಚಮುಖಿಯವರು ಸರಳರೂ, ಸಜ್ಜನರೂ ಆದ ವಿದ್ವಾಂಸರು. ಸೌಜನ್ಯವೇ ಮೂರ್ತಿವೆತ್ತಂತೆ ಅವರ ನಡೆನುಡಿ-ಇವೆ. ಅವರು ಉದ್ದಾಮ ವಿದ್ವಾಂಸರಾದರೂ ಅವರಲ್ಲಿ ಮಗುವಿನ ಮುಗ್ಧತನ, ನಿಷ್ಕಾಪಟ್ಯ ತುಂಬಿವೆ. ಅವರು ತುಂಬು ಸಂಸಾರದಲ್ಲಿದ್ದರೂ ಸಂನ್ಯಾಸಿಯಂತೆ ಜೀವನ ನಡೆಸುತ್ತಿದ್ದಾರೆ. ಇಂತಹ ಸಾಹಿತ್ಯ ತಪಸ್ವಿಯಿಂದ ಇನ್ನೂ ಹೆಚ್ಚಿನ ಸಾಹಿತ್ಯ ಸೇವೆ ಮಾಡಿಸಿಕೊಳ್ಳುವುದು ಕನ್ನಡಿಗರ ಮೇಲೆ ಬಿದ್ದಿರುವ ಹೊಣೆಯಾಗಿದೆ.

ಚಿಂತನ

●

ಮುಲುಕಿ ಕುಳಿತ ಅಡ್ನಾಡಿ ಮುದಿ ಮನಸು
ಮೋಡಗಳ ನೆರಳಾಟದಡಿಯಲ್ಲಿ
ರೆಕ್ಕೆಯಿಕ್ಕಿ ಹಾರುವ ಹಕ್ಕಿ ಕಂಡು
ಕರಿನಾಯ ಬಿಳಿಕೊರಗ ತಬ್ಬಿ ತಬ್ಬಿಬ್ಬಾಗಿದ್ದ ಕೈ
ಒಮ್ಮೆಗೇ ಕಕ್ಕಾವಿಕ್ಕಿ;
ವಿಚಾರ ಹರಿಗೋಲು ವಸ್ತು ಸ್ಥಿತಿ ಮೀರಿ
ಚೂಟಿ ಏಟು ತತ್ವ 'ಥಾಟು' ಮೀಟಿ
ಗೋಟಡಿಕೆ ತಿಂದೊಗರು ಬಾಯಿಗೆ
ಬುರುಡೆ ಬಿಸಿಯೇರಿದೆ
ಚಲನ ಶಕ್ತಿ ಉಬ್ಬಿ ಕಸುಬು ಹೊಸದಾಗಿದೆ.

●

ದೊಡ್ಡರಂಗೇಗೌಡ

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ

ತಿ. ತಾ. ಶರ್ಮ

ನವದೆಹಲಿಯಲ್ಲಿರುವ ಸಂಶೋಧನ ಸಾಹಿತ್ಯ

೧೯೫೪ನೆಯ ನವೆಂಬರ್ ಹನ್ನೊಂದನೆಯ ತಾರೀಖಿನ ದಿನ ನಾನು ದೆಹಲಿಯಲ್ಲಿರುವ National Archaivesಗೆ ಹೋಗಿ, ಅದರ ಮುಖ್ಯಾಧಿಕಾರಿಗಳಾಗಿದ್ದ ಡಾ|| ಸಾಲ್ತೊರೆಯವರನ್ನು ಕಂಡು ಮಾತನಾಡಿದೆ. ಆಗ ನಾನು ಮೈಸೂರು ಸರ್ಕಾರದ ಪರವಾಗಿ "ಸ್ವಾತಂತ್ರ್ಯ ಸಂಗ್ರಾಮೇತಿಹಾಸ" ಬರೆಯಲು ಸಾಧನ ಸಾಮಗ್ರಿಗಳನ್ನು ಹುಡುಕುತ್ತಿದ್ದೆ. ನವದೆಹಲಿಯ "ನ್ಯಾಷನಲ್ ಆರ್ಕೀವ್ಸ್" ಸಹ ಅಂತಹ ಪ್ರಾಚೀನ ಆಧಾರ ಗ್ರಂಥಗಳ, ಸಾಕ್ಷ್ಯ ಸಾಹಿತ್ಯದ ಸಂಗ್ರಹಾಲಯ.

ನಾನು—ನನಗೆ ಅವಶ್ಯಕವಾದ ಆಧಾರ ಸಾಹಿತ್ಯವೇನಿದೆ ಇಲ್ಲಿ?

ಅವರು—ಕನ್ನಡದಲ್ಲೇ ಹೇಳುತ್ತೇನೆ ಕೇಳಿ: ೧೭೪೮ರಿಂದ ಮೊದಲು ಮಾಡಿ ೧೯೪೭ರ ವರೆಗೆ ಎಲ್ಲ ಕಾಗದ ಪತ್ರಗಳೂ ಇವೆ. ಕಡತಗಳೊಂದೊಂದನ್ನೂ ತಿರುವಿ ಹಾಕಿದಲ್ಲದೆ ನಿಮಗೇನು ಬೇಕೋ ಅದು ಸಿಗುವ ಹಾಗಿಲ್ಲ. ೧೮೮೧ರಿಂದಾರಂಭಿಸಿ "ರೆಸಿಡೆನ್ಸಿ ರೆಕಾರ್ಡು"ಗಳಿವೆ. ಒಂದೆರಡು ವಾರಗಳು ನೀವು ಕೂತರೂ ಏನೂ ಆಗುವುದಿಲ್ಲ. ಯಾರಾದರೊಬ್ಬರು ಬಂದು ೩-೪ ತಿಂಗಳು ಇಲ್ಲಿ ಕೂತು, ಸಾವಕಾಶವಾಗಿ ಕಡತಗಳೊಂದೊಂದನ್ನೂ ಪರೀಕ್ಷಿಸಿ, ಪರಿಶೀಲನ ಮಾಡಿ, ಬೇಕಾದ ಭಾಗಗಳನ್ನು ಪ್ರತಿ ಮಾಡಿಕೊಳ್ಳಬಹುದು.

ಎಂದು ಹೇಳಿ, ತಮ್ಮ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದವರ ಪರಿಚಯ ಮಾಡಿಕೊಟ್ಟರು. ಅವರ ಸಹಾಯದಿಂದ ಅಲ್ಲಿ, ಇಲ್ಲಿ, ಕೆಲವು ಭಾಗಗಳನ್ನು ನೋಡಿದೆ. ಆಗಲೇ ನನಗೆ ಅಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ವೆಂಕಟ ದೇಶಿಕಾಚಾರ್ಯರ ಪರಿಚಯವಾದದ್ದು. ಅವರೊಂದಿಗೆ ಮಾತುಕತೆ ನಡೆಸಿದಾಗ ಅವರು–

"ಬುದ್ಧಿವಂತರಾದವರೊಬ್ಬರನ್ನು ಕೆಲವು ತಿಂಗಳ ಕಾಲ ಇಲ್ಲಿಗೆ ಕಳಿಸಿಕೊಡಿ. ಅವರು ನೋಡಲಿ; ಏನು ಬೇಕಾದರೂ ಪ್ರತಿ ಮಾಡಿಕೊಳ್ಳಲಿ. ಟೈಪು ಮಾಡಿಸುವ ಏರ್ಪಾಟಿದೆ; ಪುಟಕ್ಕೆ ಆರಾಣೆ. Photo-stat ಮಾಡಿಸಬಹುದು; ಎಂಟು ಆಣೆ ಆಗಬಹುದು. ಇಲ್ಲಿ ಅಮೂಲ್ಯವಾದ ಐತಿಹಾಸಿಕ ಸಾಹಿತ್ಯವಿದೆ. ನಮ್ಮ ಜನರೇಕೆ ಇದರ ಪ್ರಯೋಜನ ಪಡೆಯುವುದಿಲ್ಲ?"

ಎಂದು ಅವರು ವ್ಯಾಕುಲಪಟ್ಟರು. ಇಂದಿಗೂ ಆ ಸಂಸ್ಥೆಯ ಪ್ರಯೋಜನ ಪಡೆಯುವ ಆಶೆ ನಮ್ಮ ಸರ್ಕಾರಕ್ಕಾಗಲೀ, ಸಾರ್ವಜನಿಕ ಸಂಸ್ಥೆಗಳಿಗಾಗಲಿ, ಅಂಕುರವಾಗಲಿಲ್ಲ.

ಮದರಾಸಿನ ಪ್ರಾಚೀನ ಹಸ್ತಪ್ರತಿಗಳ ಗ್ರಂಥ ಭಂಡಾರ ಬಹಳ ಪ್ರಸಿದ್ಧವಾದದ್ದು. ಅಲ್ಲೂ ಕರ್ನಾಟಕ ಇತಿಹಾಸಕ್ಕೂ, ಕನ್ನಡ ಭಾಷಾ ಸಾಹಿತ್ಯಕ್ಕೂ ಸಂಬಂಧಪಟ್ಟ ಸಾಹಿತ್ಯ ಅಪಾರವಾಗಿದೆ. ಕೆಲವು ತಾಡೆವಾಲೆ ಪುಸ್ತಕ ಪತ್ರಗಳು ಹುಳು ತಿಂದು ಹೋಗುತ್ತಿವೆ. ನಮ್ಮ ಸರ್ಕಾರ, ನಮ್ಮ ವಿಶ್ವವಿದ್ಯಾನಿಲಯಗಳು, ಇವುಗಳ "ಜೀರ್ಣೋದ್ಧಾರ" ಮಾಡಬಹುದಲ್ಲ? ಮೈಸೂರಿನ "ಮಾನಸಗಂಗೋತ್ರಿ"ಯಲ್ಲಿ ಅಲ್ಲಿನ ಅಮೂಲ್ಯ, ಅಪೂರ್ವ ಗ್ರಂಥಗಳ "ಮೈಕ್ರೊ ಫಿಲಂ" ಪ್ರತಿಗಳನ್ನು ಮಾಡಿಸಿ ಇಡಬಹುದಲ್ಲ.

ರೂವಾರಿ ನೇಮೋಜ

ಅರಸೀಕೆರೆಯಲ್ಲಿ ಜಿನಾಲಯವೊಂದಿದೆ. ಇದಕ್ಕೆ "ಸಹಸ್ರಕೂಟ ಜಿನಾಲಯ"ವೆಂದು ಹೆಸರು. ಮೂಲ ಸ್ವಾಮಿಯ ಪೀಠದ ಸುತ್ತ ಕನ್ನಡ ಶಾಸನವಿದೆ. ಅದರಿಂದ "ಶ್ರೀಮತು ವಸುಧೈಕಬಾಂಧವಂ ರೇಚಿಮಯ್ಯ ದಣ್ಣನಾಯಕರುಂ, ಗೌರಾದೇವಿಯರುಂ, ತಮ್ಮ ನೋಂಪಿಯುದ್ಯಾಂಪನೆ ನಿಮಿತ್ತಮಾಗಿ ಸಹಸ್ರಕೂಟ ಜಿನಾಲಯದ ಪ್ರತಿಷ್ಠೆಯಂ" ಮಾಡಿಸಿದರೆಂದು ತಿಳಿದುಬರುತ್ತದೆ. ಕೊಲ್ಲಾಪುರದ ಶುಭ

ಚಂದ್ರದೇವರ ಶಿಷ್ಯರಾದ ಶ್ರೀ ಸಾಗರನಂದಿ ಸಿದ್ಧಾಂತ ದೇವರಿಗಾಗಿ ಇದನ್ನು ನಿರ್ಮಿಸಲಾಯಿತು. ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದಲ್ಲಿ—ಸುಮಾರು ಕ್ರಿ. ಶ. ೧೨೦೦ರಲ್ಲಿ, ಇದು ನಿರ್ಮಾಣವಾಗಿರಬೇಕು.[1]

ಇದೇ ಜಿನಾಲಯದ ಗರ್ಭಗೃಹದ ವಾಯವ್ಯ ದಿಕ್ಕಿನ ಕಂಬದ ಮೇಲಿನ ಶಾಸನವಿದು :[2]

" ಭರದಿಂ ಜೋಳದ ಕೂಳುವೆಣ್ಣೆಯುಮ
ನುಂಡಂತತ್ಯಾಸ್ತೆಯಿಂ ಪ
ನ್ನೆರಡುವರ್ಷಂ ಕೂಡಿ ಸಹಸ್ರಕೂಟ
ಗ್ರಿಹಮಂ ಶ್ರೀರೇಚಿದಣ್ಣೇಶನಿಂ
ಪರಿಪೂರ್ಣ ಬ್ರತನಾಗಿ ಮಾಡಿಸಿದನೀ
ಸಿದ್ಧಾಂತಿಕಾಗ್ರ್ಯಂಗೆ ಸಾ
ಗರಣಂದಿ ಪ್ರತಿಪಾಳಕಂಗೆ ದೊರೆಯಾ
ರಾರಬ್ಧ ನಿರ್ವಾದಲೆ "

ಇಷ್ಟು ಮಾತ್ರವಲ್ಲ. ಸಹಸ್ರಕೂಟ ಜಿನಾಲಯವನ್ನು ನಿರ್ಮಿಸಿದ ಶಿಲ್ಪಿ "ಸವಣಬಲ್ಲರದೇವ ರೂವಾರಿನೇಮೋಜ!"

ರೇಚಿದಂಡನಾಥ ಜೋಳದ ಅನ್ನ ಬೆಣ್ಣೆ ಮಾತ್ರ ಸೇವಿಸಿ, ಹನ್ನೆರಡು ವರ್ಷಗಳ **ಕಾಲ ವ್ರತಮಾಡಿ**, ಈ ಜಿನಾಲಯ ಸ್ಥಾಪಿಸಿದ!

ಪಿರಿಯಾಪಟ್ಟಣದ ಲಗ್ಗೆ

ಗೋವಿಂದ ವೈದ್ಯ "ಕಂಠೀರವ ನರಸರಾಜ ವಿಜಯ" ವೆಂಬ ಗ್ರಂಥ ರಚಿಸಿದ್ದಾನೆ. ಇತಿಹಾಸಕಾರರಿಗೆ ಅಮೂಲ್ಯ ಆಧಾರ ಗ್ರಂಥವಿದು. ಕ್ರಿ. ಶ. ೧೬೪೮ರಲ್ಲಿ ರಚಿತವಾದುದು.

ಗ್ರಂಥದ ೨೬ ಸಂಧಿಗಳಲ್ಲಿ ೪, ೧೧, ೧೨, ೧೩, ೧೪, ೧೫, ೧೬, ೧೭, ೧೮, ೧೯ ಈ ಹತ್ತು ಸಂಧಿಗಳು ಹದಿನೇಳನೆಯ ಶತಮಾನದ ದಕ್ಷಿಣ ಭಾರತ ಅದರಲ್ಲೂ ಮೈಸೂರು ಇತಿಹಾಸದ ಹಲವು ಘಟನೆಗಳಿಗೆ ಸಂಬಂಧಪಟ್ಟವು. ಕರ್ನಾಟಕಕ್ಕೆ ರಣದುಲ್ಲಾಖಾನ ಬಂದುದು, ಶ್ರೀರಂಗ ಪಟ್ಟಣ, ರಾಮಗಿರಿ, ಪಿರಿಯಾಪಟ್ಟಣಗಳ ಮುತ್ತಿಗೆ-ಲಗ್ಗೆ, ವಿಷಮ ಯುದ್ಧಕ್ಕೆ ಸಂಬಂಧಪಟ್ಟ ಸಂಧಿಗಳ ಪೂರ್ಣ ಪ್ರಯೋಜನವನ್ನು ಇತಿಹಾಸಕಾರರೂ, ಸಾಹಿತಿಗಳೂ, ಕಲಾವಿದರೂ, ಮಾಡಿಕೊಳ್ಳಬೇಕು. ಆ ಸಂಗ್ರಾಮ ಕಾಲದ ಜೀವನ ಚಿತ್ರಗಳು ಕಣ್ಣಿಗೆ ಕಟ್ಟಿದಂತಿವೆ. ಸರಳ-ಶಕ್ತಿಯುತ ಭಾಷೆ. ಪರ್ಶಿಯನ್, ಉರ್ದು, ಮಾತುಗಳಿಗಂತೂ ಲೆಕ್ಕವೇ ಇಲ್ಲ, ಆ ಮಾತುಗಳನ್ನೆಲ್ಲ ಸಮಯವರಿತು, ಗೋವಿಂದವೈದ್ಯ ಬಳಸಿದ್ದಾನೆ.

" ಪಿರಿದು ಸಂತೋಷದೆ ಪಾತ್ಸ್ಯಾವು ಖಾನಗೆ
ಸರಿ ಲಸಕರಿ ತನವಿತ್ತು
ತುರಗದಳವ ಕೂಡಿಕೊಟ್ಟು ಕರ್ಣಾಟವ
ನಿರದೆ ಸಾಧಿಸು ಹೋಗೆಂದ."

ಕವಿಯು ನೂರಾರು ಉರ್ದು, ಪರ್ಶಿಯನ್ ಮಾತುಗಳನ್ನು ಮಾತ್ರ ಬಳಸಿ ತೃಪ್ತನಾಗಿಲ್ಲ. ಶಬ್ದ ಚಿತ್ರಗಳಿಗೂ ಜೀವಕಳೆ ಕೊಡಲು, ಸಹಜತೆಯನ್ನು ಸ್ಥಿರಪಡಿಸಲು ಇಂತಹ ಪದ್ಯಗಳನ್ನು ರಚಿಸಿದ್ದಾನೆ. ಪಿರಿಯಾಪಟ್ಟಣದ ಲಗ್ಗೆಯನ್ನು ವರ್ಣಿಸುತ್ತ, ಹೇಳುವುದನ್ನಾಲಿಸಿ :

*" ಅರೆ ಬಾಂಚೋದು ಗಂಡಿಯಕು ಕುಚ್ ನಹಿ ದೇವು
ಸಿರಮಾರು ಮಾರು ಮಾರೆನುತ
ತುರಕಮಾತಿನಲಬ್ಬರಿಸಿ ಬೊಬ್ಬಿಡುತಾಗ
ಸರಿಗ ರಾವುತರೇರಿದರು "

" ದಿಲ್ಲರನ ಸಾಹೇಬು ಅಬ್ ತುಮೆ ಜಾನಪರ್
ಖಿಲ್ಕೀ ಆಸಬಿ ಚೋಡ್ಕೆ
ಡಲ್ಕ ತಲವಾರಿವೇ ಮರಗಯೇತೋ ಹಮೇ
ಹಲ್ಕ ಹೋಯೇಂಗೆ ರಾಜಾಕು."

೩೦೦ ವರ್ಷಗಳ ಹಿಂದೆಯೇ ಕನ್ನಡ ಕವಿಯೊಬ್ಬ ತಲೆ ತೂಗಿಸಬೇಕಾದಂತಹ ಧೈರ್ಯ ತೋರಿಸಿ, ಸಾಹಸ ಮಾಡಿ, ಪ್ರಯೋಗ ಪರಾಕ್ರಮ ಪ್ರಕಟಿಸಿದ್ದಾನೆ.

ಪಾರಿಭಾಷಿಕ ಪ್ರಯೋಗಗಳು

ಅನೇಕ ಕನ್ನಡ ಶಿಲಾ ಶಾಸನಗಳಲ್ಲಿ ಈ ಬಗೆಯ ಪ್ರಯೋಗಗಳು ಕಂಡುಬರುತ್ತವೆ :

(೧) ಕ್ರಿ. ಶ. ೮೮೩ರ ರಾಷ್ಟ್ರಕೂಟ (ಇಮ್ಮಡಿ) ಅಕಾಲ ವರ್ಷದ ಶಾಸನದಲ್ಲಿ "ಸಕಲ ರಾಜ್ಯಮ್ ಅಭಿವೃದ್ಧಿಗೆ ಸಲುತ್ತುಮಿರೆ" ರಾಜ್ಯಭಾರ ಮಾಡಿದನಂತೆ.

1. No. 197 Ep. Carn. Vol XV, Hassan Dist.
2. No, 201 ,, ,,

* ಕಂಠೀರವ ನರಸರಾಜ ವಿಜಯಂ, ಸಂಧಿ ೧೮, ಪದ್ಯ ೯೪,೯೫ ಪುಟ ೩೪೧, ೩೪೨,

(೨) " ಶ್ರೀ ತೈಲಪರಸರ್ ತರ್ದ್ದವಾಡಿ ಸಾಸಿರಮುಮ ಗಣುಗ ಜೀವಿತಮಾಳುತ್ತ" ಇರಲಾಗೆಂದಿದೆ ಇನ್ನೊಂದು ಶಾಸನದಲ್ಲಿ.

(೩) ಕ್ರಿ. ಶ. ೯೬೯ರಲ್ಲಿ ಬರೆದ ಚೊಟ್ಟಿಗದೇವನ ಶಾಸನದಲ್ಲಿ "ನಿರಾಕುಳಮಾಳುತ್ತಿರೆ" ಎಂದಿದೆ.

(೪) ೯೭೦ರಲ್ಲಿ ಹುಟ್ಟಿದ ನಿತ್ಯವರ್ಷ ಯಶಕೆನಲ್ಲಾತ ಚೊಟ್ಟಿಗದೇವನ ಶಾಸನದಲ್ಲಿ "ಕೊನ್ತದ ಪೆರ್ಗ್ಗಡಿಯ್ಯಂ ಪಗ್ಗಿಗೊಳವಗಚಳ ಪ್ರವೃತ್ತಿಯಿನ್ನಾಳುತ್ತುಮಿರೆ" ಎಂದು ಹೇಳಿದೆ.

(೫) ಕ್ರಿ. ಶ. ೧೦೦೬ರಲ್ಲಿ ಬರೆದ ಇರಿವ ಬೆಡಂಗ ಸತ್ಯಾಶ್ರಯನ ಶಾಸನದಲ್ಲಿ "ಮಾಸವಾಡಿ ನೂಱ ನಾಲ್ವತ್ತುಮಂ ಬೀಳವೃತ್ತಿಯಿನಾಳುತ್ತಮಿರೆ" ಎಂದಿದೆ.

(೬) ಆರನೆಯ ವಿಕ್ರಮಾದಿತ್ಯನ ಕಾಲದ, ಕ್ರಿ. ಶ. ೧೦೯೫ರಲ್ಲಿ ಬರೆದ ಶಾಸನದಲ್ಲಿ

" ಶ್ರೀಮದ್ಯುವರಾಜ ಮಲ್ಲಿಕಾರ್ಜುನದೇವರ್
ತರ್ದ್ದವಾಡಿ ಸಾಯಿರಮುಮಂ ತ್ರೈಭೋಗಾ
ಭ್ಯನ್ತರ ಸಿದ್ಧಿಯಿನಾಳುತ್ತುಮಿರೆ "

ಎಂಬುದಾಗಿ ಹೇಳಿದೆ.

(೭) ಕ್ರಿ. ಶ. ೧೧೦೫ರಲ್ಲಿ ಹುಟ್ಟಿದ ಶಾಸನದಲ್ಲಿ "ಅಜ್ಜಿಗಾವುಣ್ಡಂ ಕಣಿವೂರನೇಕ ಭೋಗದಿನಾಳುತ್ತಿರ್ದು" ಎಂಬದಾಗಿದೆ.

ಅಣುಗಜೀವಿತ, ನಿರಾಕುಳ, ಅಚಳ ಪ್ರವೃತ್ತಿ, ಬೀಳವೃತ್ತಿ, ತ್ರೀಭೋಗಾಭ್ಯನ್ತರಸಿದ್ಧಿ, ಏಕಭೋಗ-ಈ ಮಾತುಗಳಿಗೆಲ್ಲ ನಿಕರವಾದ ಅರ್ಥವನ್ನು ಕೊಟ್ಟು, ತಿಳಿದುಕೊಳ್ಳಬೇಕಾಗಿದೆ. ಇವೆಲ್ಲ ರಾಜಕೀಯ ಪಾರಿಭಾಷಿಕ ಶಬ್ದಗಳೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ'

ಹೇಮಾದ್ರಿ, ಹೇಮಾಡದೇವ, ಹೇಮಾದ್ರಿ ಪಂಡಿತ— ಹೀಗೆ ನಾನಾ ರೀತಿಯಿಂದ ಈತನನ್ನು ಕರೆಯಲಾಗಿದೆ. ಇವನು ಬರೆದ ಅನೇಕ ಸಂಸ್ಕೃತ ಗ್ರಂಥಗಳಲ್ಲಿ "ಚತುರ್ವರ್ಗ ಚಿಂತಾಮಣಿ" ಎಂಬುದು ಬಹಳ ಪ್ರಖ್ಯಾತವಾದದ್ದು. ಈತ ಧರ್ಮ ಶಾಸ್ತ್ರಕಾರ ಮಾತ್ರವಲ್ಲ, ಉತ್ತಮ ವಾಸ್ತುಶಿಲ್ಪ ಶಾಸ್ತ್ರಕೋವಿದನೂ ಆಗಿದ್ದಂತೆ ಕಂಡುಬರುತ್ತದೆ. ದ್ರಾವಿಡ ಮಾರ್ಗ, ಹೊಯ್ಸಳ ಮಾರ್ಗ, ಪಲ್ಲವ ಮಾರ್ಗ, ಎಂಬ ವಾಸ್ತುಶಿಲ್ಪ ಮಾರ್ಗಗಳಂತೆಯೇ "ಹೇಮಾಡಪಂಥಿ" ಅಥವಾ "ಹೇಮಾಡ ಮಾರ್ಗ"ವೆಂಬುದೂ ಒಂದು. ಆದರೆ ಇದು ವ್ಯಾಪಕವಾಗಲಿಲ್ಲ. ಆದರೂ ಈ ಮಾರ್ಗದಲ್ಲಿ "ಅತ್ಯಾಧುನಿಕ ದೃಷ್ಟಿಕೋಣ" ಉಂಟೆಂಬುದು ಹಲವರ ಅಭಿಪ್ರಾಯ. ಹದಿನಾಲ್ಕನೆಯ ಶತಮಾನದಲ್ಲಿ ಯಾದವರ ಆಳ್ವಿಕೆಯಲ್ಲಿ ಹೇಮಾದ್ರಿಯು ಮಹಾ ಪ್ರಧಾನನೂ, ದಂಡನಾಯಕನೂ, ಆಗಿದ್ದಂತೆ ತಿಳಿದುಬರುತ್ತದೆ.

ಗೋವೆಯ, ಉಗೆಂ ಎಂಬಲ್ಲಿ ಹೇಮಾಡದೇವನ ಮಂದಿರವೊಂದಿದೆ. ಶಿಲಾಮೂರ್ತಿ ; ಈ ಮಂದಿರವು ಆತನ ಸ್ಮಾರಕವೆಂದು ಭಾವಿಸಲಾಗಿದೆ.

*" ಹೇಮಾದ್ರಿಯು ವತ್ಸಗೋತ್ರಿ ಬ್ರಾಹ್ಮಣನಾಗಿದ್ದು ಶ್ರೀಕೃಷ್ಣನ ನಿಸ್ಸೀಮ ಭಕ್ತನೆಂದೂ ಹೇಳುತ್ತಾರೆ. ಇನ್ನು ಕೆಲವರು ಆತನು ಹುಟ್ಟು ಮರಾಠಿ ಬ್ರಾಹ್ಮಣನಾಗಿದ್ದನೆಂದೂ, ಕರ್ನಾಟಕದಲ್ಲಿ ಬಂದು ನೆಲೆಸಿದವನೆಂದೂ ಅಭಿಪ್ರಾಯಪಡುತ್ತಾರೆ. ಪ್ರಸಿದ್ಧ ಸಂಶೋಧಕ ರಾಜವಾಡೆಯರೊಬ್ಬರೇ ಆತನು ಗೌಡಬ್ರಾಹ್ಮಣನೆಂದು ಸೂಚಿಸಿದ್ದಾರೆ."

*" ಹೇಮಾಡ ದೇವಮಂದಿರ ಹಳೆಯದು ; ಊರ್ಜಿತಾವಸ್ಥೆಯಲ್ಲಿಲ್ಲದಂತೆ ಕಾಣುತ್ತದೆ. ಒಳಗೆ ಹೋದಾಗ ಕಾಣುವುದು ಕಲ್ಲಿನ ಮೇಲೆ ಮೂರ್ತಿಯನ್ನು ಕೊರೆಯಲಾಗಿದೆ. ತಲೆಯ ಮೇಲೆ ಒಂದು ಕಿರೀಟವೂ, ಭುಜದಲ್ಲಿ ಜನಿವಾರವೂ, ಬಲಗೈಯಲ್ಲಿ ರಾಜದಂಡವೂ, ಎಡಗೈ ಮೇಲೆ ಶಾಲೂ, ಇದೆ. ಈ ಮುಖ್ಯ ಮೂರ್ತಿಯ ಎಡಬದಿಗೆ ಛತ್ರವನ್ನು ಹಿಡಿದೆತ್ತಿ ನಿಂತ ಸೇವಕನ ಚಿತ್ರವೂ, ಬಲಬದಿಗೆ ಕಿರೀಟ ಹಾಗೂ ಯಜ್ಞೋಪವೀತ ಧರಿಸಿದ ಮತ್ತೊಂದು ಮೂರ್ತಿಯೂ ಇದೆ. ಹೇಮಾದ್ರಿಯ ಪ್ರಿಯಮಿತ್ರನೂ, ಸಂಗಾತಿಯೂ ಆದ ಕವಿ ಬೊಪ್ಪದೇವನದು ಈ ಬಲಕ್ಕಿರುವ ಆಕೃತಿಯಾಗಿರಬಹುದು.

ಕಿಟೆಲನ ಮೂಲಪ್ರತಿ ಎಲ್ಲಿದೆ ?

ರೆವರೆಂಡ್ ಕಿಟೆಲನ ಕನ್ನಡ ನಿಘಂಟು ಲೋಕಪ್ರಸಿದ್ಧವಾದದ್ದು. ಇದು ಅಚ್ಚಾದದ್ದು ೧೮೯೪ರಲ್ಲಿ. ಬಹಳ

---

* ದೇವಭೂಮಿ ಗೋಮಂತಕ, ಶಾ. ಮಂ. ಕೃಷ್ಣರಾಯ ಪುಟ. ೧೧೫, ೧೧೬,

ಮಾಡಿ ನೋಡಿದರೆ ಬರ್ಲಿನ್ ನಗರದಲ್ಲೇ ಮುದ್ರಣ ಕಾರ್ಯ ನಡೆದಿರಬೇಕು. ನಿಘಂಟುವಿನಲ್ಲಿ–

London	Basel	Leipzig
Luzac & Co.	Missions buchh Andlung	O. Harrassowitz

ಎಂಬದಾಗಿ ಮೂರು ನಗರಗಳ ಹೆಸರುಗಳಿವೆ. ಮಂಗಳೂರಿನ

Basel Mission Book
and Tract Depository

ಎಂದೂ ಅಚ್ಚಾಗಿದೆ. ಅಂದರೆ ಇವೆಲ್ಲ ನಿಘಂಟು ಸಿಗುವ ಸ್ಥಳಗಳೆಂದೋ, ಪ್ರಕಟವಾದ ಸ್ಥಳಗಳೆಂದೋ, ಸೂಚಿಸುತ್ತವೆ.

ರೆವರೆಂಡ್ ಕಿಟೆಲ್ ಸಿದ್ಧಗೊಳಿಸಿದ ಮೂಲಪ್ರತಿಯೆಲ್ಲಿದೆ ಯೆಂಬುದನ್ನು ಕುರಿತು ಶೋಧನೆ ನಡೆಸಬೇಕಾದದ್ದು ಅವಶ್ಯಕ.

* "The Rev. Mr. Bronson in 1868 published his ASSAMESE ENGLISH Dictionary, which had for its basis the Bengali-Assamese Dictionary in manuscript by Jaduram Bourua, or possibly the manuscript of Ruchiram Kamrupi prepared in 1810 and now preserved in the India Office Liberary, London."

"ಇಂಡಿಯ ಆಫೀಲ್ ಲೈಬ್ರರಿ"ಗೆ ಈಗ "ಕಾಮನ್ ವೆಲ್ತ್ ಲೈಬ್ರರಿ" ಎಂದು ಹೆಸರು. ಅಲ್ಲೇನಾದರೂ ಕಿಟೆಲರ ಹಸ್ತಪ್ರತಿ ಸಿಗಬಹುದೋ ?

* Assamese Literature, Birincli Kumar Bourua, P. E. N. Books. P. 47.

ಓ! ಕನ್ನಡ ಕುವರಾ

★

ನುಡಿ ಕನ್ನಡ ನಡೆ ಕನ್ನಡ
ಕುಡಿ ಕನ್ನಡ ಮಿಡಿಕನ್ನಡ
ಪಿಡಿ ಕನ್ನಡ ಪಡೆ ಕನ್ನಡ
ನರನರದಲಿ ಮಿಡಿ ಕನ್ನಡ
ಓ! ಕನ್ನಡ ಕುವರಾ

ಕನ್ನಡದ ನಡೆ-ನುಡಿ ಚೆನ್ನು
ಕನ್ನಡದ ಕುಡಿ-ಮಿಡಿ ಹೊನ್ನು
ಕನ್ನಡದ ಸಿರಿಸೊಬಗತಿ ಚೆನ್ನು
ಚೆನ್ನು ಕನ್ನಡವೆಲ್ಲ ಚೆನ್ನೆನ್ನು
ಓ! ಕನ್ನಡ ಕುವರಾ

★

ಸಂಗನೇಶ ಶಿರಶ್ಯಾಡ

ಕನ್ನಡ ಬಿಂದು ಫೋನೀಂ

ಎಂ. ಜಿ. ವೆಂಕಟೇಶಯ್ಯ

[ಕನ್ನಡದಲ್ಲಿ ಈಗ ನಾವು ಉಪಯೋಗಿಸುತ್ತಿರುವ ಬಿಂದು ಅಥವಾ ಅನುಸ್ವಾರವು ಕನ್ನಡ ಫೋನಿಂ(Phoneme)ಗಳಲ್ಲಿ ಒಂದು ಎಂಬುದನ್ನು ಸೂಚಿಸುವುದೇ ಈ ಲೇಖನದ ಗುರಿ.]

ಕನ್ನಡ ಕೈಪಿಡಿಯಲ್ಲಿರುವ ವ್ಯಾಕರಣ ಭಾಗದ II. ಅಕ್ಷರ ಪ್ರಕರಣದಲ್ಲಿ I. ಕನ್ನಡ ವರ್ಣಮಾಲೆ ಹೀಗೆ ಕೊಡಲಾಗಿದೆ.

(i) ಸ್ವರಗಳು :—ಅ ಆ, ಇ ಈ, ಉ ಊ, ಎ ಏ ಐ, ಒ ಓ ಔ = ೧೨

(ii) ವ್ಯಂಜನಗಳು :—ವರ್ಗೀಯ : ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
= ೨೫

ಅವರ್ಗೀಯ : ಯ ರ ಲ ವ ಸ ಹ ಳ ಱ ೞ = ೯

(iii) ಅನುಸ್ವಾರ :—ಂ = ೧

೪೭

ಬಿಂದುವಿಗೆ ಉಚ್ಚಾರಣೆಯುಂಟೆ ?

ಅನುಸ್ವಾರಕ್ಕೆ ಕನ್ನಡದಲ್ಲಿ ಒಂದು ನಿಯತವಾದ ಉಚ್ಚಾರವಿಲ್ಲ. ಪದಾಂತ್ಯದಲ್ಲಿ ಇದರ ಉಚ್ಚಾರವು **ಮ್** ಪದ ಮಧ್ಯದಲ್ಲಿ ಬರಹದ ಸೌಲಭ್ಯಕ್ಕಾಗಿ ಅನುಸ್ವಾರವನ್ನು ಬರೆದರೂ ಅದರ ನಿಜವಾದ ಉಚ್ಚಾರಣೆ ತನ್ನ ಮುಂದಿರುವ ವ್ಯಂಜನ ವರ್ಗಕ್ಕೆ ಸೇರಿದ ಅನುನಾಸಿಕದ್ದು. ಅಂಕ=ಅಙ್ಕ, ಅಂಜೆ=ಅಞ್ಜೆ, ಉಂಟು=ಉಣ್ಟು ಇತ್ಯಾದಿ. ಪದಾಂತ್ಯದಲ್ಲಿ ಮ್, ನ್, ಗಳಿಗೆ ಬದಲಾಗಿ ಅನುಸ್ವಾರವನ್ನು ಉಪಯೋಗಿಸುವುದು ಬಹಳ ಹಿಂದಿನ ಕಾಲದಲ್ಲಿಯೇ ಬಳಕೆಗೆ ಬಂದಿತ್ತು (ಪುಟ ೬) ಅನುಸ್ವಾರೋಬಿನ್ದುಃ ‖[1]

ಅಂ–ಎಂಬಲ್ಲಿ ಅಕಾರದ ಮೇಲಿರುವುದಕ್ಕೆ ಅನುಸ್ವಾರವೆಂತಲೂ, ಬಿಂದುವೆಂತಲೂ, ಸೊನ್ನೆ ಎಂತಲೂ ಹೆಸರು[2]

ಅನುಸ್ವಾರವು ತಮಿಳಿನಲ್ಲಿಲ್ಲವೆಂದು ಹೇಳುತ್ತ, Dr. Caldwell ಹೀಗೆ ಬರೆದಿದ್ದಾರೆ—" . . .; and it has not adopted the anusvara or abscure nasal of Sanskrit. Much use is made of nasals in Tamil; but these nasals are firm, decided sounds, not "echoes" and are classed amongst consonants by native grammarians."[3]

ಬಿಂದುವಿನ ವಿಚಾರವಾಗಿ ಕರ್ಣಾಟಕ ವ್ಯಾಕರಣೋಪನ್ಯಾಸ ಮಂಜರಿಯಲ್ಲಿ ಹೀಗಿದೆ :

"ಅಚ್ಚ ತಮಿಳಿನಲ್ಲಿ (c) ಅನುಸ್ವಾರವಿಲ್ಲ. ನತ್ವವನ್ನು ಸೂಚಿಸುವ ಬಿಂದು ಮಾತ್ರವಿದೆ. ಅನುನಾಸಿಕಗಳೆಲ್ಲವೂ ತಮಿಳಿನಲ್ಲಿ ವ್ಯಂಜನಗಳು . . .

. . . ಕನ್ನಡದಲ್ಲಿ ಸಂಸ್ಕೃತದ ಅನುಸ್ವಾರವಿಲ್ಲ. ಕನ್ನಡ ಬಿಂದುವಿಗೆ ಸಹಜವಾಗಿ **ಮ್** ಎಂಬುಚ್ಚಾರಣೆಯೆಂದೂ ಈ ಬಿಂದುವಿನ ಪರದಲ್ಲಿ ಸ್ವರವು ಬಂದಾಗ ಅದಕ್ಕೆ **ನ** ಕಾರೋಚ್ಚಾರಣೆ ಬರುವುವೆಂದೂ, ವರ್ಗೀಯಾಕ್ಷರಗಳು ಪರವಾದಾಗ ಆಯಾ ವರ್ಗದ ಪಂಚಮ ವರ್ಣೋಚ್ಚಾರಣೆಯು ಅದಕ್ಕೆ ಬರುವುದೆಂದೂ ಕರ್ಣಾಟಕ ವ್ಯಾಕರಣ ಗ್ರಂಥಗಳು ತಿಳಿಸುವುವು. ವರ್ಗಪಂಚಮಗಳ ಉಚ್ಚಾರಣೆಯನ್ನುಳ್ಳ ಬಿಂದುವು ಅನುಸ್ವಾರವೆನ್ನಿಸಿಕೊಳ್ಳಲಾರದು. ನಿಜವಾದ ಅನುಸ್ವಾರದ ಉಚ್ಚಾರಣೆಯಲ್ಲಿ ವರ್ಗ ಪಂಚಮ

1. ಕರ್ಣಾಟಕ ಭಾಷಾಭೂಷಣ—1884 Edn. p. 6.

2. ಹೊಸಗನ್ನಡ ನುಡಿಗನ್ನಡಿ—Basel Mission Book and Tract Depository, Mangalore 1882.

3. A Comparative Grammar of the Dravidian Languages—Caldwell, 1875 Edn. p. 12.

ಗಳ ಸಂಬಂಧವೇ ಇಲ್ಲ. ಹೀಗಿರುವುದರಿಂದ ಕನ್ನಡದಲ್ಲಿ ಅನುಸ್ವಾರವಿದೆ ಎಂದು ಹೇಳಲಾಗುವುದಿಲ್ಲ. ಕನ್ನಡದ ಬಿಂದುವು ಅನುನಾಸಿಕದ ಸಂಜ್ಞೆಯಾಗಿದೆ. ವರ್ಗ ಪಂಚ ಮಗಳನ್ನು ಬರೆಯುವ ಕಷ್ಟ ತಪ್ಪಿದೆ. ಅನುಸ್ವಾರವು ವ್ಯಂಜನವಲ್ಲ, ಮತ್ತು ಅದರ ಉತ್ಪತ್ತಿ ಸ್ಥಾನ ನಾಸಿಕೆ . . ."

ನಾವು ಮಾತನಾಡುವಾಗ ಒಂದೊಂದು ಸಲ ಹೀಗೆ ಉತ್ತರವನ್ನು ಕೊಡುತ್ತೇವೆ :

"ಏನಯ್ಯಾ ಬರುತ್ತೀಯಾ ?"

"ಊಂ."

ಇದನ್ನು ಉಚ್ಚರಿಸುವಾಗ "ಊಮ್" ಎನ್ನುತ್ತೇವೆಯೆ ? ಇಲ್ಲ. ಅದು ಬರೀ "ಊ" ನೆ ? ಅಲ್ಲ ಇವೆರಡಕ್ಕೂ ಮಧ್ಯೆಯಿರುವ ಒಂದು ಉಚ್ಚಾರಣೆ. ಈ ಉಚ್ಚಾರಣೆಯೆ **ಬಿಂದು**ವಿನ ಉಚ್ಚಾರಣೆ ಎಂದರೆ ತಪ್ಪಾಗಲಾರದು.

ಈ ಉಚ್ಚಾರಣೆ ವಿಚಾರವಾಗಿ ಕನ್ನಡ ಕೈಪಿಡಿ (೧೯೩೫ Edn ಪುಟ ೩೧೭)ಯಲ್ಲಿ ಹೀಗಿದೆ: "ಅನುಸ್ವಾರಯುಕ್ತವಾದ ಓಂಕಾರವನ್ನು ತೆಗೆದುಕೊಂಡು ಮೇಲೆ ವಿವರಿಸಿರುವ ವಿಷಯಗಳನ್ನು ಅನ್ವಯಿಸೋಣ. ಅನುಸ್ವಾರವೆಂದರೆ ಉತ್ತರ ಸ್ವರ (after sound) ಎಂದು ಅರ್ಥವಾಗುವುದು. ಇದು ಸ್ವರದ ಮುಂದೆಯೇ ಇರುವುದು. ಇದರ ಉತ್ಪತ್ತಿ ಸ್ಥಾನ ನಾಸಿಕೆ. ಇದನ್ನು ಯಾವ ಸ್ವರದ ಮುಂದೆ ಬೇಕಾದರೂ ಸೇರಿಸಬಹುದು. **ಓಂ** ಎಂಬುದಲ್ಲಿರುವ ಓಕಾರವು ಕಂಠೌಷ್ಠಗಳಲ್ಲಿ ಹುಟ್ಟುತ್ತದೆ. ಓಂಕಾರ ಧ್ವನಿಯು ಕಂಠ ಔಷ್ಠ ಮತ್ತು ನಾಸಿಕೆಗಳ ಸಹಾಯದಿಂದ ಆಗುತ್ತದೆ. ಓಂಕಾರವನ್ನು ನಿಲ್ಲಿಸುವಾಗ ತುಟಿಯನ್ನು ಮುಚ್ಚುವುದರಿಂದ ಮ್ ಎಂಬುದು ಹುಟ್ಟುತ್ತದೆ. ಓಂಕಾರವು, ಅ-ಉ-ಮ್- ಎಂಬುವುಗಳ ಸಂಯೋಜನದಿಂದ' ಬಂದಿವೆ ಯೆಂದು ಹೇಳುವ ಪದ್ಧತಿಯು ಹೀಗೆ ಹುಟ್ಟಿದೆ."

ಕೆಲವು ಶಬ್ದಗಳನ್ನು ಬಿಂದುವಿಲ್ಲದೆ ಪ್ರಯೋಗಿಸಬಹುದೆ?

ಕನ್ನಡದಲ್ಲಿ ಪ್ರಥಮಾವಿಭಕ್ತಿಗೆ ಪ್ರತ್ಯಯವಾವುದೂ ಇಲ್ಲ ; ಏಕವಚನದಲ್ಲಿ ಪ್ರಕೃತಿಯೂ ಬಹುವಚನದಲ್ಲಿ ಬಹುವಚನ ಪ್ರತ್ಯಯದಿಂದ ಕೂಡಿದ ಪ್ರಕೃತಿಯೂ ಪ್ರಥಮಾ ವಿಭಕ್ತಿಯ ಅರ್ಥವನ್ನು ಸೂಚಿಸುತ್ತವೆ. ಏಕವಚನದಲ್ಲಿ ನ್, ಮ್ ಎಂಬಿವು ಕೆಲವು ಶಬ್ದಗಳ ಕೊನೆಯಲ್ಲಿರುತ್ತವೆ. (ಇವನ್ನು ಬಿಂದುವಾಗಿ ಬರೆಯುವುದು ಬರವಣಿಗೆಯ ವಿಷಯ) ಇವು ವಿಭಕ್ತಿ ಪ್ರತ್ಯಯಗಳಲ್ಲ ಎಂಬುದನ್ನು ಸಕಾರಣವಾಗಿಯೇ ವಿವರಿಸಿದೆ. ಈ ಬಗೆಯ ಶಬ್ದಗಳನ್ನು ಬಿಂದುವಿಲ್ಲದೆ ಪ್ರಯೋಗಿಸುವುದು ತಪ್ಪೆಂದು ಹಳಗನ್ನಡ ವ್ಯಾಕರಣಗಳಲ್ಲಿ ಹೇಳಲಾಗಿದೆ.

ಬಿಂದುವು ಸ್ವರವೆ ಅಥವಾ ವ್ಯಂಜನವೆ ?

ಬಿಂದುವಿನ ವಿಚಾರವಾಗಿ **ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ**ಯಲ್ಲಿ ಶ್ರೀ ಕುಂಡಲಗಿರಿಯಾಚಾರ್ಯರ ವ್ಯಾಖ್ಯಾನ ಹೀಗಿದೆ :

". . . ಲೋಕದಲ್ಲಿ ವರ್ಣಗಳು ಸಾಮಾನ್ಯವಾಗಿ ಮೂಲ ವರ್ಣಗಳೆಂದೂ ಸಂಯುಕ್ತ ವರ್ಣಗಳೆಂದೂ ಎರಡು ತೆರನಾಗಿ ವಿಭಾಗಿಸಲ್ಪಟ್ಟಿರುವುವು. ಇವುಗಳಲ್ಲಿ ಮೂಲ ವರ್ಣಗಳು ಎಂದರೆ ವರ್ಣಾಂತರಗಳ ಸಮ್ಮೇಳನವಿಲ್ಲದೆ ಲೋಕದಲ್ಲಿ ವರ್ಣವೆಂಬ ವ್ಯವಹಾರಕ್ಕೆ ವಿಷಯವಾದ—ಅ ಆ, ಇ ಈ, ಮೊದಲಾದ ಸ್ವರ ವರ್ಣಗಳೂ ಕ್ ಖ್ . . . ಮೊದಲಾದ ಸ್ವರ ಸಹಾಯವಿಲ್ಲದ ವ್ಯಂಜನ ವರ್ಣಗಳೂ ಯೋಗವಾಹಗಳೆಂಬ ಅನುಸ್ವಾರ ವಿಸರ್ಗ ಜಿಹ್ವಾಮೂಲೀಯ ಉಪಧ್ಮಾನೀಯಗಳೂ ಎಂದು ತಿಳಿಯಬೇಕು. ಸಂಯುಕ್ತ ವರ್ಣಗಳೆಂದರೆ, ಈ ಮೂಲ ವರ್ಣಗಳಿಗೆ ನಾನಾ ಬಗೆಯಾಗಿ ಸ್ವರಗಳನ್ನಾಗಲಿ ವ್ಯಂಜನಗಳನ್ನಾಗಲಿ ಸೇರಿಸಿ ಉಚ್ಚರಿಸುವ —ರಾಷ್ಟ್ರ, ಕೃಷ್ಣ-ಮೊದಲಾದ ಪದಗಳಲ್ಲಿರುವ ಅಕ್ಷರಗಳೆಂದು ತಿಳಿಯತಕ್ಕದ್ದು.

"ಇವುಗಳಲ್ಲಿ ಮೂಲ ವರ್ಣಗಳು ಸಾಮಾನ್ಯವಾಗಿ ಸ್ವರಗಳೆಂದೂ ವ್ಯಂಜನಗಳೆಂದೂ ಯೋಗವಾಹಗಳೆಂದೂ ಮೂರು ತೆರನಾಗಿ ವ್ಯವಹರಿಸಲ್ಪಡುವುವು. **ಸ್ವರ**ಗಳೆಂದರೆ **ಸ್ವಯಂ** (ಇತರ ವರ್ಣಗಳ ಸಹಾಯಂ ವಿನಾ) ರಾಜಂತೇ ಸ್ಪಷ್ಟೋಚ್ಚಾರಣೇನ ಪ್ರಕಾಶಂತೇ ಇತಿ ಸ್ವರಾಃ ಎಂಬ ವ್ಯುತ್ಪತ್ತಿಯಿಂದ ಯಾವ ವರ್ಣಗಳ ಸಹಾಯವೂ ಇಲ್ಲದೆ ಸ್ವತಂತ್ರವಾಗಿ ಉಚ್ಚರಿಸಲ್ಪಟ್ಟರೂ ಸ್ಪಷ್ಟ ಬೋಧೆಯಾಗುವ ವರ್ಣಗಳೆಂದು ತಿಳಿಯಬೇಕು. **ವ್ಯಂಜನ**ಗಳೆಂದರೆ —ವ್ಯಂಜಂತಿ (ಪ್ರಕಾಶಂತೇ ಸ್ವರ ಸಹಾಯೇನ) ಇತಿ ವ್ಯಂಜನಾನಿ—ಎಂಬ ವ್ಯುತ್ಪತ್ತಿಯಿಂದ ಸ್ವರ ಸಹಾಯದಿಂದಲೆ ಸ್ಪಷ್ಟವಾಗಿ ಉಚ್ಚರಿಸುವುದಕ್ಕೆ ಬರುವ ವರ್ಣಗಳೆಂದು ತಿಳಿಯಬೇಕು. **ಯೋಗವಾಹ**ಗಳೆಂದರೆ— ಯೋಗೇನ (ಇತರ ಸಂಬಂಧೇನ) ವಾಹಯಂತಿ (ಪ್ರಯೋಗ ನ್ನಿರ್ವಾಹ ಯಂತಿ) ಇತಿ ಯೋಗವಾಹಾಃ ಎಂಬ ವ್ಯುತ್ಪತ್ತಿಯಿಂದ ಸ್ವತಂತ್ರವಾಗಿ ಉಚ್ಚರಿಸುವುದಕ್ಕೆ ಬಾರದೆ ಸ್ವರದೊಡನೆ ಸೇರಿ ಪ್ರಯೋಗವನ್ನು ನಿರ್ವಹಿಸುವ ಅನುಸ್ವಾರ

[ಂ] ವಿಸರ್ಗ [ಃ] ಜಿಹ್ವಾಮೂಲೀಯ [ೱಕ್] ಉಪಧ್ಮಾನೀಯ [ೲಪ್] ಗಳೆಂದು ತಿಳಿಯಬೇಕು. ಪಾಣಿನಿ ವ್ಯಾಕರಣದಲ್ಲಿ ಇವನ್ನು **ಅಯೋಗವಾಹ**ಗಳೆಂದು ವ್ಯವಹರಿಸಿರುವರು. ಅಯೋಗವಾಹವೆಂದರೆ, ವರ್ಣಮಾಲೆಯಲ್ಲಿ ಪಾಠವು ಇಲ್ಲದೆ ಪಾಠ ಮಾಡಿರುವ ಯಾವ ವರ್ಣಗಳಲ್ಲಿಯೂ ಅಂತರ್ಭಾವವನ್ನು ಹೇಳುವುದಕ್ಕೆ ಆಗದೆ ಪ್ರಯೋಗಮಾತ್ರದಲ್ಲಿದ್ದು ಶಬ್ದಗಳ ಸಾಧುತ್ವವನ್ನು ಬೋಧಿಸುವ ಅನುಸ್ವಾರ ಮೊದಲಾದುವುಗಳೆಂದು ತಿಳಿಯಬೇಕು . . . ಇಂತಹ ಯೋಗವಾಹಗಳಲ್ಲಿ ಅನುಸ್ವಾರ ವಿಸರ್ಗಗಳು ಸ್ವರ ಸಹಾಯವಿಲ್ಲದೆ ಉಚ್ಚರಿಸಲಿಕ್ಕೆ ಬಾರದಿರುವುದರಿಂದ ಇವು ಸ್ವರಗಳಲ್ಲಿ ಸೇರುವುದೆಂದೂ ಜಿಹ್ವಾಮೂಲೀಯ, ಉಪಧ್ಮಾನೀಯಗಳು, ಕ ಖ ಪ ಫ ಎಂಬ ವರ್ಣಗಳ ಸಹಾಯವಿಲ್ಲದೆ ಇರುವುದಿಲ್ಲವಾದುದರಿಂದ ಇವು ವ್ಯಂಜನದಲ್ಲಿ ಸೇರುವುವೆಂದೂ ಹೇಳಿ ಮೂಲ ವರ್ಣಗಳು ಎರಡೇ ಬಗೆಯಾಗಿರುವುವೆಂದು ಕಾತಂತ್ರ ವ್ಯಾಕರಣದಲ್ಲಿ ಹೇಳಲ್ಪಟ್ಟಿದೆ. ಪತಂಜಲಿ ಭಾಷ್ಯದಲ್ಲಿ ಇವುಗಳನ್ನು ವರ್ಣಮಾಲೆಯಲ್ಲಿ **ಅ** ಕಾರದ ಮೇಲಾಗಲಿ **ಶ, ಷ, ಸ** ಗಳ ಮಧ್ಯದಲ್ಲಾಗಲಿ ಪಾಠ ಮಾಡಿಕೊಂಡು ಅಚ್ (ಸ್ವರ) ಎಂದಾಗಲಿ, ಹಲ್ (ವ್ಯಂಜನ) ಎಂದಾಗಲಿ ವ್ಯವಹರಿಸಬಹುದೆಂದು ಹೇಳಲ್ಪಟ್ಟಿದೆ. **ಶಬ್ದಮಣಿದರ್ಪಣ** ದಲ್ಲಿ ಇದೇ ಅರ್ಥವನ್ನು ಬೋಧಿಸುವಂತೆ—

ಸ್ವರ ಪರದೊಳಿರ್ಪ ತೆರದಿಂ
ದುರು ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ |
ಪರಿಕಿಸೆ ಬಿಂದು ವಿಸರ್ಗಂ
ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್
ಸೂ. || ೧೨ ||

ಎಂದು ಹೇಳಲ್ಪಟ್ಟಿರುವುದು. ಇಲ್ಲಿ ಜಿಹ್ವಾಮೂಲೀಯ ಉಪಧ್ಮಾನೀಯಗಳು ಹೇಳಲ್ಪಡದಿದ್ದರೂ ಅವು ವಿಸರ್ಗದ ರೂಪಾಂತರವಾದುದರಿಂದ ಅವನ್ನೂ ಹೇಳಿದಂತೆಯೆ ತಿಳಿಯಬೇಕು."

ಪದಾಂತ್ಯದಲ್ಲಿ ಅನುಸ್ವಾರ [ಂ] ದ ಉಚ್ಚಾರಣೆ

ಪದಾಂತ್ಯದಲ್ಲಿ ಅನುಸ್ವಾರದ ಉಚ್ಚಾರಣೆ **ಮ್** ಎಂದು ತೋರುತ್ತದೆ.

"ಅನುಸ್ವಾರಕ್ಕೆ ಕನ್ನಡದಲ್ಲಿ ಒಂದು ನಿಯತವಾದ ಉಚ್ಚಾರವಿಲ್ಲ. ಪದಾಂತ್ಯದಲ್ಲಿ ಇದರ ಉಚ್ಚಾರವು **ಮ್**"[7]

ಪದ ಮಧ್ಯದಲ್ಲಿನ ಅನುಸ್ವಾರ [ಂ] ದ ಉಚ್ಚಾರಣೆ

ಪದ ಮಧ್ಯದಲ್ಲಿ ಪ್ರಯೋಗಿಸಲ್ಪಡುವ ಅನುಸ್ವಾರಕ್ಕೆ ಒಂದೇ ಸ್ಥಿರವಾದ ಉಚ್ಚಾರಣೆ ಎಂದು ಹೇಳಲಾಗುವುದಿಲ್ಲ.

ಸಂಖ್ಯೆ, ಬಿಂಕ, ತೆಂಕಣ ಮುಂತಾದ ಪದಗಳಲ್ಲಿರುವ ಅನುಸ್ವಾರದ ಉಚ್ಚಾರಣೆಯು ಆಯಾ ವರ್ಗದ ಪಂಚಮ ವರ್ಣೋಚ್ಚಾರಣೆಯನ್ನು ಸೂಚಿಸುತ್ತದೆ.

ಬರೆಯುವ ಸೌಲಭ್ಯಕ್ಕಾಗಿ ಆಯಾ ಪಂಚಮ ವರ್ಣಗಳನ್ನುಪಯೋಗಿಸುವುದಕ್ಕೆ ಬದಲಾಗಿ ಅನುಸ್ವಾರವನ್ನು ಉಪಯೋಗಿಸುತ್ತೇವೆ.† ಇಲ್ಲವಾದರೆ ಹೀಗೆ ಬರೆಯಬೇಕಾಗಿ ಬರಬಹುದು ;

ಬಿಜ್ಞವೆತ್ತೆಸೆವ ಇಚ್ಚೆಯ
ಸಜ್ಝಳಮುಂತೊಣ್ಣುಗೆಡೆವ ಶುಕ ಶಾರಿಕೆಯುಂ |[8]

ದ್ವಿತ್ವಾಕ್ಷರಕ್ಕೆ ಬದಲಾಗಿ ಉಪಯೋಗಿಸಿರುವ ಅನುಸ್ವಾರ [ಂ]

ಮಂಣು ಎಂಬಲ್ಲಿ ದ್ವಿತ್ವಾಕ್ಷರಕ್ಕೆ ಬದಲಾಗಿ ಂಣು ಬರೆಯಲ್ಪಟ್ಟಿದೆ. ಹೀಗೆ ಅನುಸ್ವಾರ ಪ್ರಯೋಗ ಮಾಡಬಹುದೆಂದು ಕನ್ನಡ ವ್ಯಾಕರಣಗಳಲ್ಲಿ ನಿರೂಪಿಸಿಲ್ಲ ; ಪ್ರಾಯಶಃ ಇದು ಇತ್ತೀಚಿಗೆ ಲಿಪಿ ಸಂಶೋಧನೆಯಿಂದ ಬಂದಿದ್ದರೂ ಬಂದಿರಬಹುದು.

"ಹೆಣ್ಣು ಎಂಬುದನ್ನು **ಹೆಂಣು,** ಎಂದು ; ಮಣ್ಣು ಎಂಬುದನ್ನು **ಮಂಣು** ಎಂದು, ಬರೆಯುವುದು ಅನುಚಿತ. ದ್ವಿತ್ವವನ್ನು ತೋರಿಸುವುದಕ್ಕೆ ಹಿಂದೆ ಒಂದು ಚುಕ್ಕೆಯನ್ನು ಕೊಡುತ್ತಿದ್ದರೆಂದೂ (ಉ. ದಾ. ಹೆ.ಣು) ಕಾಲಕ್ರಮದಲ್ಲಿ ಆ ಚುಕ್ಕೆ ಸೊನ್ನೆಯಾಯಿತೆಂದೂ ಸಂಶೋಧಕರು ಹೇಳಿದರು. ೧೫, ೧೬ನೆಯ ಶತಮಾನಗಳ ಹಸ್ತಲಿಖಿತ ಗ್ರಂಥಗಳಲ್ಲಿಯೂ, ಈಚೆಗೆ ಮುದ್ರಿತವಾದ ದರ್ಪಣಶಾಸನ ಗ್ರಂಥಗಳಲ್ಲಿಯೂ ಈ ದೋಷವೂ ಕಾಣಬರುತ್ತದೆ. ಚುಕ್ಕೆ ಹೋಗಿ ಸೊನ್ನೆಯಾದದ್ದು ಅನುಚಿತ ಎಂಬುದನ್ನು ಬಗೆಯದ ಸಾಮಾನ್ಯರು ಈಗಲೂ ಈ ದ್ವಿತ್ವಾಕ್ಷರಗಳ ಬರಹ

---

7. ಕನ್ನಡ ಕೈಪಿಡಿ—೧೯೩೮. ಪುಟ ೫

† There is no absolute identity. This is pointed out in the next para by the enunciation [ಂ] that cannot be used as ಙ ; ಮಂಣು ಮಣ್ಣು.

8. ಶಬ್ದಸ್ಮೃತಿ—ಸಂಜ್ಞಾ ಪ್ರಕರಣಂ. ಉ. ದಾ. ಸೂ ೫

ದಲ್ಲಿ ಸೊನ್ನೆಯನ್ನು ಉಪಯೋಗಿಸುತ್ತಾರೆ. ಇದು ಕೇವಲ ಭಾಷೆಯ ಅಪಹಾಸ."[9]

ಕೇವಲ ನಾಸಿಕೋಚ್ಚಾರಣೆಯನ್ನು ಸೂಚಿಸುವ ಅನುಸ್ವಾರ [ಂ]

ಸಂಯುತ, ಸಾಂವೆ, ಇತ್ಯಾದಿ ಪದಗಳ ಅನುಸ್ವಾರ [ಂ] ದ ಉಚ್ಚಾರಣೆಯನ್ನು ನೋಡೋಣ. ಕೇವಲ ದ್ವಿತ್ವ ವನ್ನು ಅದು ಸೂಚಿಸುವುದಾದರೆ—

ಸಂಯುತ = ಸಯ್ಯುತ
ಸಾಂವೆ = ಸಾವ್ವೆ

ವರ್ಗದ ಪಂಚಮಾಕ್ಷರವನ್ನು ಸೂಚಿಸುತ್ತದೆ ಎಂಬೋಣವೆ? ಯ, ವ, ಇವು ಅವರ್ಗೀಯ ವ್ಯಂಜನಗಳು.

ಕರ್ಣಾಟಕ ಭಾಷಾ ಭೂಷಣದಲ್ಲಿ—ವಿಭಾಷೆಯಾ ಯವಲಾಃ ಎಂಬ ೯ (ಒಂಭತ್ತನೆಯ) ಸೂತ್ರವಿದೆ. ಅದರಿಂದ ಯ, ವ, ಲಗಳು ವಿಕಲ್ಪವಾಗಿ ಅನುನಾಸಿಕಗಳೂ ಆಗುವುವು, ನಿರನುಸಾಸಿಗಳೂ ಆಗುವುವು ಎಂಬುದನ್ನು ನಾವು ಗ್ರಹಿಸಿ ಬಿಂದುವು ನಾಸಿಕೋಚ್ಚಾರಣೆಯನ್ನು ಸೂಚಿಸುತ್ತದೆ ಎಂದು ಹೇಳಬೇಕು.

ಬಿಂದುವು ಕನ್ನಡ ಶುದ್ಧಾಕ್ಷರವೆ?

ಅನುಸ್ವಾರ ಅಥವಾ ಬಿಂದುವು ಕೇವಲ ಸನ್ನೆಗಳ ಗುಂಪಿಗೆ (— . , ; : ! ?) ಸೇರಿಸಬಹುದೆ? ಇವುಗಳಿಗೆ ವರ್ಣೋಚ್ಚಾರಣೆಯಿಲ್ಲವಾದುದರಿಂದ **ಬಿಂದು** ವನ್ನು ಈ ಗುಂಪಿಗೆ ಸೇರಿಸಲಾಗುವುದಿಲ್ಲ.

ಹಾಗಾದರೆ **ಬಿಂದು**ವಿನ ವರ್ಣೋಚ್ಚಾರಣೆ ಏನು?

ಅನುಸ್ವಾರಕ್ಕೆ ಪ್ರತ್ಯೇಕವಾದ ಉಚ್ಚಾರಣೆ ಉಂಟು. ಅದಕ್ಕೆ ಕನ್ನಡ ಭಾಷೆಯಲ್ಲಿ ಪ್ರಾಧಾನ್ಯವೂ ಉಂಟು.

" ತಮಿಳು ವೈಯಾಕರಣಿಗಳು ಅನುಸ್ವಾರಕ್ಕಾದೇಶವಾಗಿ ಬರುವ ವರ್ಗಪಂಚಮವು ನಿತ್ಯವೆಂದೆಣಿಸಿದುದರಿಂದ ಅವರ ಲಿಪಿಯಲ್ಲಿ ಅನುಸ್ವಾರಕ್ಕೆ ಸ್ಥಾನ ದೊರೆತಿಲ್ಲ. ಕನ್ನಡದಲ್ಲಿ ಅನುಸ್ವಾರಕ್ಕೆಯೆ ಪ್ರಾಧಾನ್ಯತೆ ದೊರೆತಿದೆ. ಆದುದರಿಂದ ಅಚ್ಚಗನ್ನಡದಲ್ಲಿಯೂ ಇನ್ನಿತರ ದ್ರಾವಿಡ ಭಾಷೆಗಳಲ್ಲಿಯೂ ಅನುಸ್ವಾರವಿದೆಯೆಂದು ಹೇಳುವುದೇ ಯುಕ್ತವು."[10]

ಕನ್ನಡದಲ್ಲಿ ಆರು ಅನುನಾಸಿಕ ಧ್ವನಿಗಳಿವೆ.

" [ಮ್]—ಉಭಯೋಷ್ಠ್ಯ—Bilabial
[ನ್]—ದಂತ್ಯ —Dental
[ಣ್]—ಮೂರ್ಧನ್ಯ —Retroflex
[ಙ್]—ಕಂಠ್ಯ ಅಥವಾ ಮೃದುತಾಲವ್ಯ—Velar
[N] (ಬಿಂದು)-ಜಿಹ್ವಾಫಲಕ-Blade-alveolar"[11] ಧ್ವನಿ

ಶುದ್ಧಾಕ್ಷರ ಅಥವಾ ವರ್ಣವೆಂದರೆ—ಅರ್ಥಾಭಿವ್ಯಂಜಕ ಶಬ್ದಕ್ಕೆ ಸಮವಾಯಿ ಕಾರಣವಾದ ಬಾಯಲ್ಲಿ ಹುಟ್ಟುವ ಶಬ್ದಗಳು.[12]

ಸಂಸಾರಿ, ಅಂಸ, ಅಂಹತಿ, ಮುಂತಾದ ಪದಗಳಲ್ಲಿನ ಬಿಂದುವನ್ನು ತೆಗದುಹಾಕಿದರೆ ಆ ಪದಗಳ ಅರ್ಥ ಮಾಯವಾಗುತ್ತದೆ. ಅ-ಎಂಬುದಕ್ಕೆ ಬಿಂದುವನ್ನು ಸೇರಿ ಅಂ-ಮಾಡಿದರೆ ಅದರ ಅರ್ಥ ಅತಿ ಎಂದಾಗುತ್ತದೆ. ಈ ಗುಣಗಳು ಕಂಡುಬರುವುದರಿಂದ **ಬಿಂದು**ವನ್ನು ಕನ್ನಡದಲ್ಲಿ ಫೋನೀಂ (Phoneme) ಎಂದೇ ಪರಿಗಣಿಸಬೇಕು.[13]

* * *

ಕನ್ನಡವನ್ನು ನಾವು ಬರೆಯುವಾಗ ಬಿಂದುವನ್ನು ಸಾಮಾನ್ಯವಾಗಿ ಉಪಯೋಗಿಸುತ್ತೇವೆ. ಅದು ಯಾವ ಯಾವ ಸಂದರ್ಭಗಳಲ್ಲಿ ಪ್ರಾಪ್ತವಾಗುತ್ತದೆ ಎಂಬ ಅರಿವು ನಮಗೆ ಸಾಮಾನ್ಯವಾಗಿರುವುದಿಲ್ಲ. ಅದರ ಪ್ರಯೋಗವನ್ನು ನಾವು ಈ ರೀತಿಯಾಗಿ ವಿಂಗಡಿಸಬಹುದು:

(೧) ಪದಾಂತ್ಯದಲ್ಲಿ, ಹೊಸಗನ್ನಡದಲ್ಲಿ ಇದು ಸಾಮಾನ್ಯವಾಗಿ ಇಲ್ಲ.

(೨) ಪದ ಮಧ್ಯದಲ್ಲಿ

(ಕ) ದ್ವಿತ್ವಾಕ್ಷರಕ್ಕೆ ಬದಲಾಗಿ. ಅಚ್ಚ ವ್ಯಾಕರಣ ಪಕ್ಷಪಾತಿಗಳು ಇದನ್ನೊಪ್ಪುವುದಿಲ್ಲ.

---

9. ಕೆಲವು ಕನ್ನಡ ವ್ಯಾಕರಣ ವಿಚಾರಗಳು—ಪಂಡಿತ ಮ. ಪ್ರ. ಪೂಜಾರರವರು—Kannada Research Institute, Dhrawar, 1952

10. ಕನ್ನಡ ಭಾಷೆಯ ಚರಿತ್ರೆ—ಪ್ರ. ಗೋ. ಕುಲಕರಣಿ—p-೧೪೫-೧೪೮ ನೋಡಿ.

11. ದ್ರಾವಿಡ ಭಾಷಾ ವಿಜ್ಞಾನ—ಹಂಪ. ನಾಗರಾಜಯ್ಯ—ಬೆಂಗಳೂರು-p-೧೦೫,

12. ಕರ್ಣಾಟಕ ವ್ಯಾಕರಣೋಪನ್ಯಾಸ ಮಂಜರಿ, ತೃತಿಯೋಪನ್ಯಾಸ-p-೩೦.

13. ಕನ್ನಡನುಡಿ—ಅಕ್ಟೋಬರ್ ೧೯೬೮ ಪುಟ ೧೩.

(ಖ) ವರ್ಗೀಯ ವ್ಯಂಜನಗಳ ಅನುನಾಸಿಕಗಳ ಬದಲಾಗಿ, ಅನೇಕ ಸಲ ಉಪಯೋಗಿಸುತ್ತೇವೆ.

(ಗ) ಕೇವಲ ನಾಸಿಕೋಚ್ಚಾರಣೆಯನ್ನು ಸೂಚಿಸುವುದಕ್ಕೆ. ಇದು ಸ, ಹ ಮುಂತಾದವುಗಳ ಹಿಂದೆ ಹೊಸಗನ್ನಡದಲ್ಲಿಯೂ ಬರುತ್ತದೆ.

(೩) ಪದದ ಆದಿಯಲ್ಲಿ. ಕನ್ನಡ ಭಾಷೆಯಲ್ಲಿ ಇಂಥಾ ಬಿಂದುವಿನ ಪ್ರಯೋಗವಿಲ್ಲ.

ಹೊಸಗನ್ನಡದಲ್ಲಿ ಮೇಲಿನ ಪ್ರಯೋಗಗಳು ಹೇಗೆ ಪ್ರಾಪ್ತವಾಗುತ್ತವೆ ಎಂಬುದನ್ನು ತಿಳಿದುಕೊಳ್ಳಲು **ಸಂಭಾವನೆ** ಗ್ರಂಥದಲ್ಲಿನ ಚರಿತ್ರೆಯ ರೀತಿ (ಶ್ರೀ ಕಂದಾಡೆ ಕೃಷ್ಣಯ್ಯಂಗಾರರು, ಪು. ೮೫೩-೫೭. ಸುಮಾರು ೮೫೦೦ ಫೋನೀಂಸಸಮೂಹ)ಮತ್ತು ಗೃಹಸುಖ(ಶ್ರೀಮತಿ ಪ. ಸೀತಾದೇವಿಯವರು. ಪು. ೫೧೯-೫೨೫ ಸುಮಾರು ೮೫೦೦ ಫೋನೀಂ ಸಮೂಹ) ಲೇಖನಗಳನ್ನು ತೆಗೆದುಕೊಂಡು ಈ ಕೆಳಗಿನ ಪಟ್ಟಿಯಲ್ಲಿ ಬಿಂದುವಿನ ಸಾಪೇಕ್ಷ ಪುನರಾವೃತಿ (Relative Frequency of occurence) ಯನ್ನು ತೋರಿಸಲಾಗಿದೆ.

ಬಿಂದುವಿನ ಪಟ್ಟಿ—೧

		ಬಿಂದುವಿನ ಪ್ರಯೋಗ	(ಚ)	(ಗು)
೧		ಪದದ ಅಂತ್ಯದಲ್ಲಿ	೦	೦
೨		ಪದದ ಮಧ್ಯದಲ್ಲಿ		
	(ಕ)	ದ್ವಿತ್ವಾಕ್ಷರಕ್ಕೆ ಬದಲಾಗಿ		
	(ಖ)	ವರ್ಗೀಯ ವ್ಯಂಜನಕ್ಕೆ „	೦	೦
		[ಙ]	೧೦	೯
		[ಞ]	೩	೨
		[ಣ]	೨೬	೨೫
		[ನ]	೧೦೭	೧೨೭
		[ಮ]	೩೦	೨೬
೩	(ಗ)	ಅನುನಾಸಿಕಕ್ಕೆ ಸೂಚನೆಯಾಗಿ	೫	೧೩
೪		ಪದ ಆದಿಯಲ್ಲಿ	೦	೦
		ಒಟ್ಟು	೧೮೧	೨೦೨

ಬಿಂದುವಿನ ಉಚ್ಚಾರಣೆ ನಮಗೇಕೆ ಗೋಚರವಾಗಿಲ್ಲ ?

ಶೇಕಡ ೯೩ಕ್ಕಿಂತ ಹೆಚ್ಚಾಗಿ (ಗು) ನಲ್ಲಿಯೂ ಶೇಕಡ ೯೭ಕ್ಕಿಂತ ಹೆಚ್ಚಾಗಿ (ಚ) ನಲ್ಲಿಯೂ ವರ್ಗೀಯಾಕ್ಷರಕ್ಕೆ ಬದಲಾಗಿ ಉಪಯೋಗಿಸಿರುವುದು ಕಂಡುಬರುತ್ತದೆ. ಇದರಿಂದ ಬಿಂದುವಿಗೇ ಬೇರೆ ಉಚ್ಚಾರಣೆಯಿರಬಹುದೆಂಬ ಅಂಶವು ನಮಗೆ ಗೋಚರವಾಗದೆ ಹೋಗಿದೆ.

ಮತ್ತೊಂದು ವಿಚಾರವನ್ನೂ ಮೇಲಿನ ಪಟ್ಟಿಯಿಂದ ನಾವು ಪರಿಶೀಲಿಸಬಹುದು. ಈ ಎರಡು ಲೇಖನಗಳಲ್ಲಿ ಅನುಸ್ವಾರವನ್ನು ಪ್ರಯೋಗಿಸಿರುವ ರೀತಿಯಲ್ಲಿ ವ್ಯತ್ಯಾಸವು ಕಂಡುಬರುತ್ತದೆಯೆ ?

ಬಿಂದುವಿನ ಪಟ್ಟಿ—೨

Sl. No.	ಬದಲಾಗಿ	← Actual →		Total	←Expected→	
		ಚ	ಗ		ಚ'	ಗ'
೧	[ನ]	೧೦೭	೧೨೭	೨೩೪	೧೧೦.೬	೧೨೩.೪
೨	[ಮ]	೩೦	೨೬	೫೬	೨೬.೫	೨೯.೫
೩	[ಣ]	೨೬	೨೫	೫೧	೨೪.೧	೨೬.೯
೪	ಮಿಕ್ಕವು	೧೮	೨೪	೪೨	೧೯.೮	೨೨.೨
	ಒಟ್ಟು	೧೮೧	೨೦೨	೩೮೩	೧೮೧.೦	೨೦೨.೦

Degrees of freedom = 3.

Chi-squared (χ^2)=0·72)

P=·80ಗಿಂತ ಹೆಚ್ಚು [No Significant Difference]

ಮೇಲಿನ ಅಂಕೆಗಳಿಂದ ಪರಿಶೀಲನೆಗೆ ತೆಗೆದುಕೊಂಡಿರುವ ಎರಡು ಲೇಖನಗಳಲ್ಲಿ ಬೇರೆ ಬೇರೆ ಬರಹಗಾರರು ಅವುಗಳನ್ನು ಬರೆದಿದ್ದರೂ **ಬಿಂದುವನ್ನು ಪ್ರಯೋಗಿಸಿರುವ ರೀತಿಯಲ್ಲಿ ಗಣ್ಯವಾದ ವ್ಯತ್ಯಾಸವಿಲ್ಲ.**

ಓ ನನ್ನ ಕನ್ನಡ

•

ಪುಣ್ಯಕೋಟಿ ಕರೆದ ಹಾಲು-ಕನ್ನಡ
ಸ್ವರ್ಣವೃಷ್ಟಿ ಮೆರೆದನಾಡು-ಕನ್ನಡ . . . ಓ ನನ್ನ ಕನ್ನಡ!

ಹಿರಿಯತನದ ಹಿತದನುಡಿಯು
ಸಿರಿಯತನದ ಚೆಲುವ ನೆಲೆಯು
ಕಲೆಯ ಬಲೆಯ ಕವಿಯ ಗುಡಿಯು
ಭರತವರ್ಷಹರ್ಷ ಕುಡಿಯು-ಕನ್ನಡ . . .

ಸ್ನೇಹ ಹೃದಯ ಸೇತು ಬಂಧ
ರಾಮಕಾರ್ಯ ತನ್ನದೆಂದ
ಧರ್ಮದೃಷ್ಟಿ ಪ್ರೇಮದಿಂದ
ಪರಿಮಳಿಸುವ ನೆಲದಸ್ಪಂದ-ಕನ್ನಡ . . .

ಪಂಪರನ್ನ ಹರಿಹರಾದಿ
ಕುವರವ್ಯಾಸಗಾರು ಜೋಡಿ
ತ್ರಿಪದಿ ಕವಿಯ-ಗಂಡುಗಾಡಿ
ದಾಸವಾಣಿಗೇಯ ನೋಡಿ-ಕನ್ನಡ . . .

ಬಸವಬಂದ-ವಚನದಿಂದ
ಹೊಸತುಗಾಳಿ ತುಂಬಿಕೊಂಡ
ಒಸಗೆಯೊರೆವ ಬೆಳಕುತಂದ
ಅದರ ಛಂದ-ಅದರ ಗಂಧ-ಕನ್ನಡ . . .

ಶಿಲ್ಪಕಲೆಯ ರಮ್ಯತೋಟ
ವಿಜಯವಿಠಲ ಶಿಲೆಯಮಾಟ
ಭುವನಭವ್ಯ ಗೋಳಗುಮಟ
ಗೊಮ್ಮಟೇಶ ಹೆಮ್ಮೆಮುಕುಟ-ಕನ್ನಡ . . .

ಸಹಜಪ್ರೀತಿ ಸರಳನೀತಿ
ಮಲೆತ ಕೇಡ ಸದೆವ ಶಕ್ತಿ
ನಡೆಯ-ನುಡಿಯ ಗರಿಮೆ-ಗರತಿ
ಬಾಳಮುದದ ಹೊನಲಕೀರ್ತಿ-ಕನ್ನಡ . . .

ಹಾಗೆ ಹೀಗೆ ಬಾಯಿಮಂತ್ರ
ಮಾಡುತಿಹುದು ಬರಿಕುತಂತ್ರ
ಗರಗರಗರ ತಿರುಗುಯಂತ್ರ
ಹೀಗೆ ಇಂದು ನಾವತಂತ್ರ-ಕನ್ನಡ . . .

ಭರತಮಾತೆಗಿವಳು ಪ್ರೀತೆ
ನಮ್ಮ ತಾಯಿ ವಿಶ್ವಖ್ಯಾತೆ
ಒಂದುಗೂಡಿ ದುಡಿವ ದೀಕ್ಷೆ
ಕೊಡುವಹೆಮ್ಮೆ-ಪಡೆವರಕ್ಷೆ-ಕನ್ನಡ . . .

ಅಲ್ಲ ಇದುವೆ ಬರಿಯ ಕವಿತೆ
ಇಲ್ಲಿ ಕೇಳಿ ಮರೆಯಲಿಕ್ಕೆ
ಸಾಕ್ಷಿ ಇದಕೆ ನಮ್ಮ ಚರಿತೆ
ಸಾಕ್ಷಿ ನಾವೆ-ಸದ್ಯ ಸ್ಥಿತಿಗೆ-ಓ ನನ್ನ ಕನ್ನಡ

ಪುಣ್ಯಕೋಟಿ ಕರೆದ ಹಾಲು-ಕನ್ನಡ
ಸ್ವರ್ಣವೃಷ್ಟಿ ಮೆರೆದ ನಾಡು-ಕನ್ನಡ

•

ಇಟಗಿ ರಾಘವೇಂದ್ರ

ಒಂದು ಸಮೀಕ್ಷೆ:

ಕಳೆದ ಎರಡು ವರ್ಷಗಳ ಕಾವ್ಯ

ಚಂದ್ರಶೇಖರ ಕಂಬಾರ

೧೯೬೫-೬೬ ಈ ಅವಧಿಯಲ್ಲಿ ಬಂದ ಪ್ರತಿಯೊಂದು ಕವನ ಸಂಕಲನವನ್ನು ನೋಡಿದ್ದೇನೆಂಬ ನಂಬುಗೆಯೇನೂ ನನಗಿಲ್ಲ. ನೋಡಬೇಕಾದ್ದು ನ್ಯಾಯವಾದರೂ ನನಗೆ ಸಾಧ್ಯವಿದ್ದಷ್ಟನ್ನು, ಮಹತ್ವದ್ದೆನಿಸಿದ್ದನ್ನು ನೋಡಿ ಈ ಕವಿತೆಗಳ ಹಿನ್ನೆಲೆಗಿರುವ ಮನೋಧರ್ಮವನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಈ ಅವಧಿಯಲ್ಲಿ, ಕಾವ್ಯಕೃಷಿ ವಿಪುಲವಾಗಿಯೇ ಬಂದಿದೆ. ಶ್ರೀ ಬೇಂದ್ರೆಯವರ 'ಮರ್ಯಾದೆ', ಶ್ರೀ ಕಣವಿ ಅವರ 'ನೆಲಮುಗಿಲು', ಶ್ರೀ ಜಿ. ಎಸ್. ಶಿವರುದ್ರಪ್ಪ ಅವರ 'ತೆರೆದದಾರಿ' ಮುಂತಾದವುಗಳ ಜೊತೆಗೆ 'ಸಂಕ್ರಮಣ' ಕಾವ್ಯ ವಿಶೇಷಾಂಕವೂ ಇದೇ ಅವಧಿಯಲ್ಲಿ ಬಂದಿತು. ಈ ಮೂರೂ ತಲೆಮಾರಿನ ಕವಿಗಳು ಒಂದರ್ಥದಲ್ಲಿ ಭಿನ್ನಮನೋಧರ್ಮದವರಾಗಿದ್ದು ಕವಿತೆ ಬರೆಯುತ್ತಿರುವುದು, ಅವರವರ ರಸಿಕರ ಸ್ವಾಗತ ಅವರವರಿಗೆ ಎಂದಿನಂತೆ ಇದ್ದದ್ದು ಸಂತೋಷದ ಸಂಗತಿಯಾಗಿದೆ. ಶ್ರೀ ಬೇಂದ್ರೆಯವರು ಮಾಡುತ್ತಿರುವ ಛಂದಸ್ಸಿನ ಹೊಸ ಹೊಸ ಪ್ರಯೋಗಗಳು ದರಿದ್ರ ಛಂದಸ್ಸಿನ ನಮಗೆ ಸ್ಫೂರ್ತಿದಾಯಕವಾಗಿವೆ. 'ಮರ್ಯಾದೆ'ಯಲ್ಲಿ 'ತುಂಬಿತ್ತು ಹಾಲಸೇರಿ' 'ಚಂದುಮಾಮಾ'ದಂಥ ಉತ್ತಮ ಕವಿತೆಗಳು ಇವೆ. 'ಚಂದುಮಾಮಾ' ಎಳೆತನದ ನೆನಪೊಂದು ಮರುಕಳಿಕೆಯ ನೆವವಾಗಿ ಕಾವ್ಯನಾಯಕ ಕನಸಿನ ಲೋಕಕ್ಕೆ ಸ್ಥಳಾಂತರವಾಗುತ್ತಾನೆ. ಕನಸಿನ ಲೋಕದ ದೈವಿಕತೆ ಮುಂದಿನ ಪದ್ಯದಲ್ಲಿ ಖಚಿತವಾಗಿ, ಕೊನೆಯ ಪದ್ಯದಲ್ಲಿ ಸ್ಥಳಾಂತರದ ಅರಿವಾಗಿ ದೈವಿಕ ಲೋಕದ ಆ ಬೆಳಕು ತಾನಿದ್ದ ಲೋಕಕ್ಕೂ ಇಳಿದು ಬರಲಿ ಎಂಬ ಆಶಯದೊಂದಿಗೆ ಕವಿತೆ ಮುಗಿಯುತ್ತದೆ. ಎರಡೂ ಲೋಕಗಳ ಅರಿವು ಅಷ್ಟೇ ಸತ್ಯವಾಗಿರುವುದೇ ವಸ್ತುವನ್ನು ಭಾವುಕತೆಯಿಂದ ದೂರವಾಗಿಸಿದೆ. ಇಲ್ಲಿಯ ಲಯ ಗತ್ತುಗಳು ವಸ್ತುವಿನೊಂದಿಗಿನ ತಲ್ಲೀನತೆಯನ್ನು ಸೂಚಿಸಿದರೆ ಸಾಲಾಗಿ ಬಂದ ಪ್ರತಿಮೆ ಅಲಂಕಾರಗಳು ವಸ್ತುವಿನ ಬೌದ್ಧಿಕ ಮಗ್ಗುಲನ್ನು ಬೆಳಗುತ್ತವೆ. 'ಅರಳುಮರಳಿ'ನ ನಂತರ ಶ್ರೀ ಬೇಂದ್ರೆಯವರು ವರ್ಷಕ್ಕೊಂದು ಸಂಕಲನ ಪ್ರಸಿದ್ಧಿಸುತ್ತಲೇ ಬಂದಿದ್ದಾರೆ. ಒಂದೊಂದು ಸಂಕಲನದಲ್ಲಿಯೂ ಕೊನೆಯ ಪಕ್ಷ ೨-೩ ಆದರೂ ಉತ್ತಮ ಕವಿತೆಗಳನ್ನು ಕೊಡುತ್ತಲೇ ಬಂದಿರುವುದರಿಂದ 'ಅರಳುಮರಳಿ'ನ ನಂತರದ ಶ್ರವಣಬೆಳಗೊಳದ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಲೇಖನ ಬೇಂದ್ರೆ ನಮ್ಮ ಪಾಲಿಗೆ ನಿಷ್ಪ್ರಯೋಜಕರೆಂಬಂಥ ಮಾತುಗಳನ್ನು ಇನ್ನೊಮ್ಮೆ ಗಮನಿಸುವಂತಾಗಿದೆ.

ಶ್ರೀ ಚೆನ್ನವೀರ ಕಣವಿ ಅವರ 'ನೆಲಮುಗಿಲು' ಇದೇ ಅವಧಿಯಲ್ಲಿ ಪ್ರಕಟವಾದುದನ್ನು ಆಗಲೇ ಹೇಳಿದ್ದೇನೆ. ಇದರಲ್ಲಿ 'ಜಗದೇಕಮಲ್ಲ' ಎನ್ನುವ ಕವಿತೆ ಉತ್ತಮವಾಗಿದೆ. ನಾಡ ನಾಯಕನೊಬ್ಬನನ್ನು ನಾಯಕ ಮತ್ತು ಓದುಗರ ಮಧ್ಯದಲ್ಲಿ ಕವಿ ನಿಂತುಕೊಂಡು ಪರಿಚಯಮಾಡಿಕೊಡುತ್ತ ಹೇಳುವ ಮಾತುಗಳು ನಾಯಕನ ಬಗೆಗಿನ ಕವಿಯ ಧೋರಣೆಯನ್ನು ಸೂಚಿಸುತ್ತ ವಾಚ್ಯವಾಗಿ ಅಥವಾ ವಕ್ರವಾಗಿ ಬರುವ ವಿವರಗಳ ಅಂತ್ಯದಲ್ಲಿ 'ಕಳಿಸಿರಿವನನು ಮೊದಲು ದೂರದ ಹಿಮಾಲಯಕೆ | ಅಲ್ಲಿಯೇ ಹಿಡಿದಿರಲಿ ಜಯಪತಾಕೆ' ಎಂದು ಕೊನೆಗೊಂಡಾಗ ಹಿಂದಿನ ವಿವರಗಳೆಲ್ಲ ಇನ್ನೊಂದು ಹೊಳಪನ್ನು ಹೊಂದುತ್ತವೆ. ಇಂಥ ಭಾಷೆ ವಿಡಂಬನ ಕವನಗಳಿಗೂ ಭಾಷಾಂತರಗಳಿಗೂ ಅನುರೂಪವಾಗುವಂತೆ ಅಥವಾ ಒಪ್ಪುವಂತೆ ಸ್ವಂತ ಕವನಗಳಿಗೆ ಅನುರೂಪವಾಗುವುದಿಲ್ಲ. ಭಾಷೆ ಲಯಗಳ ಮೇಲಿನ ಶ್ರೀ ಕಣವಿಯವರ ಹಿಡಿತ ಅಸಾಧಾರಣವಾದುದಾದರೂ ಸ್ವಲ್ಪ ಹೆಚ್ಚುಕಮ್ಮಿ ಬಿಟ್ಟು ಈ ಸಾಮರ್ಥ್ಯವೆಲ್ಲ ಹಿಂದೆ 'ಭಾವಜೀವಿ', 'ಕಾವ್ಯಾಕ್ಷಿ'ಯಲ್ಲೇ ಕಂಡು ಬಂದಿರುವಂಥಾದ್ದು. ಆದ್ದರಿಂದಲೇ ಶ್ರೀ ಕಣವಿಯವರ ಹಿಂದಿನ ಕವಿತೆಗಳ ಬಗೆಗೆ ಹೇಳಿದ ಶ್ರೀ ಕೆ. ಡಿ. ಕುರ್ತುಕೋಟಿಯವರ ಅನೇಕ ಮಾತುಗಳು ಈ ಸಂಕಲನಕ್ಕೂ ಸರಿಯಾಗಿಯೇ ಅನ್ವಯವಾಗುತ್ತವೆ. "ಅನುಭವಗಳ ಸರಳತೆ ಹಾಗೂ ಆತ್ಮೀಯತೆಗಳೇ ಕಾರಣವಾಗಿ ಕಣವಿಯವರ ಕಾವ್ಯದ ಮಾಧ್ಯಮ ವರ್ಣನೆಯಾಗಿದೆ"—(ಮನ್ವಂತರ ೨) 'ಕುವೆಂಪು ಅವರ ನಿಸರ್ಗ

ಪ್ರೀತಿ, ಮಧುರಚೆನ್ನರ ಜಾನಪದ ಸತ್ವ ಹಾಗೂ ಕೆ. ಎಸ್. ಎನ್. ಅವರ ಸುಕುಮಾರತೆ' ಈ ಗುಣಗಳು ಈಗಲೂ, ಈ ಸಂಕಲನದಲ್ಲಿ ಅದೇ ಪ್ರಮಾಣದಲ್ಲಿವೆ.

ಶ್ರೀ ಜಿ. ಎಸ್. ಶಿವರುದ್ರಪ್ಪ ಅವರ 'ತೆರೆದದಾರಿ' ಇದೇ ಅವಧಿಯಲ್ಲಿ ಪ್ರಕಟವಾಯಿತು. ಅವರ ಅನುಭವದ ಸಮೃದ್ಧಿಯನ್ನಾಗಲಿ, ಪ್ರಾಮಾಣಿಕತೆಯನ್ನಾಗಲಿ ಯಾರೂ ಪ್ರಶ್ನಿಸುವಂತಿಲ್ಲ. ಉದಾಹರಣೆಗೆ 'ಶಾಕುಂತಲ ಸಂಧ್ಯೆ' ಯೆಂಬ ತೀರ ಚಿಕ್ಕದಾದ ಕವಿತೆಯನ್ನೇ ನೋಡಬಹುದು. ಇದು ಸಂಧ್ಯಾ ಸಮಯದ ಕುಶಲ ವರ್ಣನೆಯೊಂದು ಮಾತ್ರ. ನೋಡಿದಾಗ ಶಕುಂತಲೆಗೆ ಸಂಬಂಧಪಟ್ಟ ವಿವರಗಳು ಉಪಮೆಗಳಂತೆ ಕೊನೆಯ ಪದ್ಯದವರೆಗೆ ಮುಟ್ಟುತ್ತವೆ. ಅದರೊಂದಿಗೇ ಶಕುಂತಲೆಯಕಥೆ ಬಿಚ್ಚಿಕೊಳ್ಳುತ್ತ ಕಾವ್ಯವಸ್ತುವಿನ ಜಟಿಲತೆಯನ್ನು ಜಾಸ್ತಿಯಾಗಿಸುತ್ತ ಕೊನೆಯ ಪದ್ಯದಲ್ಲಿ ಮೂಲಪ್ರತಿಮೆಯೊಂದಿಗೆ ಒಂದಾಗುತ್ತದೆ. ನಿವಾರಿಸಬಾರದ ಶಾಪವೊಂದರಿಂದ ತನಗೇ ಅನ್ಯಳಾದ ಅಥವಾ ದುಷ್ಯಂತನಿಗೆ ಅನ್ಯಳಾದ ಶಕುಂತಲೆಯ ವಿರಹದ ಅನುತಾಪದೊಂದಿಗೆ ಕವಿತೆ ಕೊನೆ ಮುಟ್ಟುತ್ತದೆ. ಇಷ್ಟೆಲ್ಲ ಘಟಿಸುವುದು ಪ್ರಕೃತಿಯಲ್ಲಿ ; ಅತ್ತ ಕತ್ತಲೂ ಅಲ್ಲದ ಇತ್ತ ಬೆಳಕೂ ಅಲ್ಲದ ಸಂಧಿ ಸಮಯದಲ್ಲಿ ; ಕಳಕೊಂಡ ವೇದನೆ ತೀವ್ರವಾದಾಗ 'ಅಸಹಾಯಕ ತಾರೆ ಬಳಗ ಹನಿಗಣ್ಣೊಳು ನೀರವ'. ಈ ಸಂಕಲನದ ಅನೇಕ ಕವಿತೆಗಳಲ್ಲಿ ಶಿವರುದ್ರಪ್ಪನವರ ಇಂಥ ಸಾಮರ್ಥ್ಯವನ್ನು ನೋಡಬಹುದಾಗಿದೆ. ಶ್ರೀ ಅಡಿಗರ ನಂತರದ ತಲೆಮಾರಿನವರಾದ ಇವರು ಕಾವ್ಯ ಬರೆಯುವುದೊಂದು ಪರೀಕ್ಷೆಯ ಕಾಲವಾಗಿತ್ತು. ಹಾಗೆ ನೋಡಿದರೆ ಅಡಿಗರ ಒಂದೊಂದು ಕವಿತೆಯೂ ಒಂದೊಂದು Type ಆಗುವ ಸಂಭವವಿತ್ತು. ಆದರೆ ಹಿಂದಿನ ಕವಿಗಳ ಪ್ರಭಾವ ಗಟ್ಟಿಮುಟ್ಟಾಗಿರುವುದರಿಂದ ಇವರಿಬ್ಬರೂ ಒಂದರ್ಥದಲ್ಲಿ ಪಾರಾದರೆಂದು ಹೇಳಬಹುದು. ಇದೇ ತಲೆಮಾರಿನವರಾದ ಶ್ರೀ ಬಿ.ಎ. ಸನದಿ ಅವರ ಧ್ರುವಬಿಂಧು, ಶ್ರೀ ಎಂ. ಅಕಬರ ಅಲಿ ಅವರ 'ಸುಮನಸೌರಭ'ಇದೇ ಅವಧಿಯಲ್ಲಿ ಬಂದುವು. ಶ್ರೀ ಅಡಿಗರ ನವ್ಯತಂತ್ರವನ್ನು ಫ್ಯಾಶನ್ನಿನಂತೆ ಸ್ವೀಕರಿಸಿದವರು ಇವರು. ನವ್ಯತಂತ್ರವನ್ನು ಬಳಸಲಿಕ್ಕೂ ಆಳವಾದ ತತ್ವವೊಂದು ಹಿನ್ನೆಲೆಗಿದ್ದುದನ್ನು ಇವರು ಅರ್ಥೈಸಿಕೊಂಡರೆಂದು ಹೇಳುವುದೇ ಕಷ್ಟವಾಗಿದೆ. ನವ್ಯತೆ ಎಂದರೆ ಒಂದು ಹೊಸ ಶೈಲಿಯೆಂಬಷ್ಟಕ್ಕೆ ಸೀಮಿತವಾದ ಸಿದ್ಧ ಶೈಲಿಯೊಂದನ್ನು ಒಮ್ಮೆ ತಯಾರು ಮಾಡಿ ಕುಳಿತುಬಿಟ್ಟರು. ಪರಿಣಾಮವೆಂದರೆ ಯಾವ ವಿಷಯದ ಬಗೆಗೂ ಸುಲಭವಾಗಿ ನವ್ಯಕಾವ್ಯ ರಚನೆ ಮಾಡಬಲ್ಲವರಾದರು. ಕೆಲವು ಸಲ ಅನುಭವ ಜಟಿಲವಾಗಿದ್ದರೂ ಕಾವ್ಯಪ್ರತಿಮೆ ಜಟಿಲವಾಗಿದ್ದಕ್ಕೆ ಇದೇ ಕಾರಣವಾಗಿದೆ. ಅಡಿಗರ ನಂತರ ಬಂದಂಥ ಇವರು ಅಡಿಗರಿಗೂ ಅಡಿಗರ ಹಿಂದಿನವರಿಗೂ ರಸಸೇತುವೆ ಕಟ್ಟುವುದರಲ್ಲಿಯೇ ಮಗ್ನರಾದರು. ಮೂಲತಃ ಇವರೆಲ್ಲರ ಮನೋಭಾವ ರೊಮ್ಯಾಂಟಿಕ್ ಆದದ್ದೇ ಇದಕ್ಕೆ ಕಾರಣವಾಗಿರಬಹುದು. ಆದ್ದರಿಂದ ನಿಜವಾದ ಸಂಕ್ರಮಣಕಾವ್ಯ ಇವರದ್ದೇ ಹೊರತು ನನ್ನ ತಲೆಮಾರಿನವರದಲ್ಲ.

'ಸಂಕ್ರಮಣ' ಕಾವ್ಯ ಸಂಚಿಕೆಯಲ್ಲಿ ಪ್ರಕಟವಾದ ನನ್ನ ತಲೆಮಾರಿನ ಕವಿಗಳೇ ನಾಲ್ವತ್ತೆಂಟು ಜನ ಇದ್ದಾರೆ. ಹೊಸ ಹೆಸರು ಇನ್ನೂ ಗೋಚರಿಸುತ್ತಲೇ ಇವೆ. ನಾನೂ ಇವರ ಪೈಕಿಯೇ ಒಬ್ಬನಾದ್ದರಿಂದ ಇವರ ಕಾವ್ಯದ ನೆಲೆಬೆಲೆಗಳನ್ನು ನಿರ್ಣಯಿಸುವುದು ಕಷ್ಟ. ಅಲ್ಲದೆ ಒಬ್ಬ ಕವಿ ಎಷ್ಟೇ ಪ್ರಾಮಾಣಿಕನಾಗಿದ್ದರೂ ತನ್ನ ಸರಿಕರ ಬಗ್ಗೆ ಮಾತನಾಡುವಾಗ ಒಂದಿಲ್ಲೊಂದು ರೀತಿಯಲ್ಲಿ ತನ್ನನ್ನೇ ವೈಭವಿಸಿಕೊಳ್ಳುತ್ತಿರುತ್ತಾನೆ ಅಥವಾ ಒಬ್ಬನ ಯಶಸ್ಸನ್ನು ಹೊಗಳಿದರೆ ಅಥವಾ ಒಬ್ಬನ ಸೋಲನ್ನು ಸಮರ್ಥಿಸಿದರೆ ಎಲ್ಲಿಯೋ ಗೆಲುವುಸೋಲುಗಳನ್ನು ಸಮರ್ಥಿಸುತ್ತಿರುತ್ತಾನೆ. ಇನ್ನೂ ಒಂದುಮಾತೆಂದರೆ ಇವರೆಲ್ಲ ಬೆಳವಣಿಗೆಯ ನಿರ್ದಿಷ್ಟ ನಿಲುವನ್ನು ಮುಟ್ಟದವರು, ಇನ್ನೂ ಬೆಳೆಯುತ್ತಿರುವವರು. ದುರ್ದೈವದ ಸಂಗತಿ ಎಂದರೆ ಹೊರಬಂದ ಒಂದೊಂದು ಕಥೆ ಕಾದಂಬರಿ ನಾಟಕಗಳನ್ನು ತೆಗೆದುಕೊಂಡು ವಿಶ್ಲೇಷಿಸಿ ಬೆಲೆಕಟ್ಟಿ ಅದರ ಅರ್ಥಪೂರ್ಣತೆಯನ್ನು ಕಾಣುವ ಪ್ರಯತ್ನಗಳು ನಡೆದಿದ್ದರೂ ಹೊಸಬರ ಕವಿತೆಗಳ ಬಗೆಗೆ ಇಂಥ ಪ್ರಯತ್ನಗಳಾಗದೇ ಇರುವುದು. ಬೇಂದ್ರೆ ಅಡಿಗರ ಗುಂಗು ವಿಮರ್ಶಕರನ್ನು ಇನ್ನೂ ಬಿಟ್ಟಿಲ್ಲ. ಕವಿತೆ ಕೈಗೆ ಬರುವುದಷ್ಟೇ ತಡ ಇದರಲ್ಲಿ ಬೇಂದ್ರೆ ಎಷ್ಟು? ಅಡಿಗರೆಷ್ಟು? ಎಂದು ತಕ್ಕಡಿ ಹಿಡಿದು ಕೂಡುತ್ತಾರೆ. ಬೇಂದ್ರೆ ಅಡಿಗರ ಯಶಸ್ಸುಗಳು ಅವರ ಮನಸ್ಸಿನಲ್ಲಿ ನಿರ್ದಿಷ್ಟ ನಿರೀಕ್ಷೆಗಳನ್ನು ಹುಟ್ಟಿಸಿದ್ದು ಅದು ಮಾದರಿಗಳಾಗುವ ಸೂಚನೆ ಕಂಡುಬಂದುದರಿಂದಲೇ ಈ ಮಾತನ್ನು ಒತ್ತಿ ಹೇಳುತ್ತಿದ್ದೇನೆ. ಅಂದರೆ, ಇದು, ನಮ್ಮ ಇಂದಿನ ಪ್ರಾಮಾಣಿಕ ಕವಿತೆಗಳನ್ನು ಹಿರಿಯರ ಯಶಸ್ವೀ ಕವಿತೆಗಳೊಂದಿಗೆ ಹೋಲಿಸಬಾರದೆಂದು ವಿಮರ್ಶಕರ ಸಹಾನುಭೂತಿಗಾಗಿ ಮಾಡುವ ಪ್ರಾರ್ಥನೆಯಲ್ಲ. ನನ್ನ ವಾದವಿಷ್ಟು : ಶ್ರೀ ಬೇಂದ್ರೆ ಶ್ರೀ ಅಡಿಗರಿಗಿಂತ ಭಿನ್ನವಾದ ಕಾವ್ಯಸಂದರ್ಭದಲ್ಲಿ ನಾವು ಬರೆಯುತ್ತಿದ್ದೇವೆ ಎನ್ನುವುದು ಹೋಲಿಸಿ ಬೆಲೆ ಕಟ್ಟುವಾಗ ಸಂದರ್ಭಗಳ ಈ ಭಿನ್ನತೆಯನ್ನು ಮರೆಯಬಾರದು–ಎಂದು. ಅಂದರೆ ಬೇಂದ್ರೆ ಅಡಿಗರ ಹಾಗೆ ನಾನು ಬರೆಯಲಾರೆನೋ

ಹಾಗೆ ಬೇಂದ್ರೆ ಅಡಿಗರೂ ನನ್ನಂತೆ ಬರೆಯಲಾರರು–ಎಂದು.

ಹಿಂದೆ ದೇಶ ಪ್ರೇಮ, ಅಧ್ಯಾತ್ಮ ಆದರ್ಶ ಮುಂತಾದ ತಕ್ಷಣ ಮನಸ್ಸನ್ನು ಸೆರೆಹಿಡಿಯಬಲ್ಲ ಅಸಲು ವಿಷಯಗಳ ಬಗೆಗೆ ಕಾವ್ಯ ಬರೆಯುವುದಷ್ಟೇ ತಡ ಸುಲಭವಾಗಿ ಕವಿಯಾಗಿ ಬಿಡಬಹುದಾಗಿತ್ತು. ಹೀಗೆಯೇ ಎಷ್ಟೋ ಜನ ಕವಿಗಳು ಕವಿ ಪದವಿ ಗಿಟ್ಟಿಸಿಕೊಂಡು ಉಪಕಾರ ಬುದ್ಧಿಯಿಂದ ಸುತ್ತಲಿನ ಸಮಾಜದೊಂದಿಗೆ ಒಪ್ಪಂದ ಮಾಡಿಕೊಂಡು ಅವರು ಬೇಡಿದಂಥ, ಉದಾ: ಪಂಚಶೀಲ, ಸ್ವಾತಂತ್ರ್ಯ, ಪಂಚವಾರ್ಷಿಕ ಯೋಜನೆ, ಬೇಕುಬೇಡಾದವರನ್ನು ವ್ಯಂಗ್ಯ ಧಾಟಿಯಲ್ಲಿ ಚುರುಕಾಗಿ ಬೈಯುವ ಹೊಗಳುವ ಕವಿತೆ ಬರೆದು ಸರ್ಕಾರೀ ಕವಿಗಳಾದರು. ಆ ಪರಿಸ್ಥಿತಿ ಈಗ ಉಳಿದಿಲ್ಲವೆಂಬುದನ್ನು ಗಮನಿಸಬೇಕು.

ಈಗಿನವರ ಭಾವಪ್ರಪಂಚ ಬದುಕಿನ ಬಗೆಗಿನ ಪ್ರವೃತ್ತಿ ಮೂಲಭೂತವಾಗಿ ಭಿನ್ನವಾಗಿದೆ. ಹಿಂದಿನವರಿಗಾದರೆ ಸಮಸ್ಯೆಗಳಿಗೆ ಮೊದಲಿನಿಂದಲೇ ಸಿದ್ಧವಾದ ಉತ್ತರಗಳಿದ್ದವು. ಹಿಂದಿನವರ ಇಂಥ ಅಸಲು ಉತ್ತರಗಳಲ್ಲಿ ಈಗಿನವರಿಗೆ ನಂಬುಗೆಯಿಲ್ಲ. ಸಂಪ್ರದಾಯವು ಅನುಕೂಲತೆಗಳನ್ನು ವ್ಯಕ್ತಿಯ ಎದುರು ಹರಡಿ ಸುಲಭ ಒಪ್ಪಂದವೊಂದರಿಂದ ವ್ಯಕ್ತಿಯ ಸ್ವಾತಂತ್ರ್ಯವನ್ನು ಕ್ರಿಯಾಶೀಲತೆಯನ್ನು ಮೊಟಕುಗೊಳಿಸಿ ತನ್ನ ಬುಟ್ಟಿಗೆ ಹಾಕಿಕೊಳ್ಳುತ್ತದೆ. ಅದರ ಪ್ರಕ್ರಿಯೆಗಳೆಲ್ಲ ಅನುಭವಗಳಿಂದ ನುಣ್ಣಿಸಲ್ಪಟ್ಟಿದ್ದು ಅದಕ್ಕೆ ತನ್ನನ್ನು ತಾನು ಅರ್ಪಿಸುವುದರಿಂದ ವ್ಯಕ್ತಿಗೆ ಐಹಿಕವಾದ ಲಾಭಗಳಿವೆ; ನಿಜ. ಆದರೆ ಸ್ವೋಪಜ್ಞತೆ ಜಾಗೃತವಾಗಿರುವ, ಆತ್ಮಸಾಕ್ಷಾತ್ಕಾರಕ್ಕಾಗಿ ಹಂಬಲಿಸುವ ಜೀವಕ್ಕೆ ಇದೂ ಒಂದು ಬಂಧನವಾಗಿ, ಈ ಬಂಧನದಿಂದ ಬಿಡುಗಡೆ ಹೊಂದುವ, ತನ್ನ ದಾರಿಯಲ್ಲಿ ತನ್ನನ್ನು ಕಾಣುವ ಪ್ರಯತ್ನವನ್ನು ಮುಂದರಿಸಬಯಸುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಾಗಿದ್ದರೆ ಎಲ್ಲರಿಗೂ ಸಮಾನವಾದ, ಎಲ್ಲರೂ ಪಾಲುಗೊಳ್ಳಬಹುದಾದ ಸ್ವಾತಂತ್ರ್ಯ ಹೋರಾಟವೇ ಮುಂತಾದ ಸಾಮಾನ್ಯ ಭಾವಪ್ರಪಂಚ ಇದ್ದುದರಿಂದ ಅದರ ಬಗೆಗಿನ ಕವಿತೆ ತಕ್ಷಣವೇ ಅರ್ಥವಾಗುತ್ತಿತ್ತು. ಅಂಥ ಸಾಮಾನ್ಯ ಭಾವಪ್ರಪಂಚ ನಮಗುಳಿದಿಲ್ಲ. ಇಂದಿನ ಕವಿ ಹೊಸಭಾವ ಪ್ರಪಂಚವೊಂದನ್ನು ಸಮಕಾಲೀನ ಬೌದ್ಧಿಕ ನಿಲುವಿನಲ್ಲಿ ಸೃಷ್ಟಿಸಿಕೊಳ್ಳುತ್ತಿದ್ದಾನೆ. ಈ ಕವಿಗಳ ಬೌದ್ಧಿಕತೆ ಇನ್ನೂ ಶೈಕ್ಷಣಿಕವಾಗಿದೆಯೆಂಬ ಶ್ರೀ ಕುರ್ತಕೋಟಿ ಅವರ ಮಾತನ್ನು ಒಪ್ಪುವುದೇ ಅಸಾಧ್ಯವಾಗಿದೆ. ಅದು ಬದುಕಿನ ದೃಷ್ಟಿಯಾಗುತ್ತಿದೆ, ಅಂತಸ್ಸತ್ವವಾಗುತ್ತಿದೆಯೆಂದು ಅನ್ನಿಸುತ್ತದೆ. ಹಿಂದಿನ ಭಾವಭೂಮಿಕೆ ಇಲ್ಲದ್ದರಿಂದ, ಹೊಸಭಾವ ಪ್ರಪಂಚದ ಸೃಷ್ಟಿ ಮುನ್ನಡೆದಿರುವುದರಿಂದ ಯಾವೊಬ್ಬ ಕವಿಯ ಸಿದ್ಧಿ ಸಾಧನೆಗಳು ಅವನು ಪೂರ್ವದವನೇ ಇರಲಿ ಪಶ್ಚಿಮದವನೇ ಆಗಿರಲಿ ನಮಗೆ ಅಥವಾ ನನಗೆ ಆದರ್ಶ ಅಥವಾ ಮಾದರಿಯಾಗಿಲ್ಲ. ಹತ್ತು ಜನ ಹುಡುಗರು ತಮ್ಮದೇ ಆದ ಹತ್ತು ರೀತಿಗಳಲ್ಲಿ ಅನ್ವೇಷಣೆ ನಡೆಸಿರುವುದರಿಂದ ಇವರನ್ನು ಅರ್ಥೈಸಿಕೊಳ್ಳಲು ಸಾಮಾನ್ಯವಾದ ಸುಳಿಯೊಂದು ಸಿಗದಿರುವುದರಿಂದ ಓದುಗರಿಗೂ ಕಾವ್ಯಕ್ಕೂ ನಡುವೆ ಕಂದಕ ಬೀಳುವುದು ಸಹಜವಾಗಿಯೇ ಇದೆ. ಶ್ರೀ ಬೇಂದ್ರೆಯವರಾದರೂ ಪೂರ್ತಿಯಾಗಿ ಮೊದಮೊದಲು ಎಲ್ಲಿ ತಿಳಿದಿದ್ದರು?

ಈ ಅನ್ವೇಷಣೆ ಬದುಕಿನ ನೂರೆಂಟು ವಿಕೃತಿಗಳನ್ನು ಒಪ್ಪಿ, ಈ ವಿಕೃತಿಗಳ ಮೂಲಕವೇ ನಡೆಯುವಂಥಾದ್ದು. ಬದುಕಿನಲ್ಲಿ ಒಳಿತೂ ಇದೆ ಎಂದು ಯಾರೋ ಹೇಳಿದರೆ ನಮ್ಮ ಪಾಲಿಗದು ಇರುವುದಿಲ್ಲ—ಖುದ್ದಾಗಿ ನಾವೇ ಅನ್ನಿಸಿಕೊಳ್ಳುವುದರಿಂದ. ಹಿಂದಿನ ಕವಿಗಳಿಗೆ ಜೀವನಾನುಭವವನ್ನು ಪ್ರವೇಶಿಸಲು ಪ್ರಕೃತಿ ಪ್ರವೇಶ ದ್ವಾರವಾದರೆ ಇಂದಿನವರಿಗೆ ಕಾಮ ಅಂಥ ಪ್ರವೇಶದ್ವಾರವಾದರೆ ತಪ್ಪೇನಿದೆ? ಬಟ್ಟೆ ಕಳಚಿದೊಡನೆಯೇ ಬತ್ತಲಾಗುವುದು ಸಾಧ್ಯವಿದ್ದಿದ್ದರೆ ಎಲ್ಲರೂ ಬಾಹುಬಲಿಯಾಗುತ್ತಿದ್ದರು, ಅದು ಸಾಧ್ಯವಾಗದಿದ್ದುದೇ ಇಂದಿನ ಕವಿಯ ಸಮಸ್ಯೆಯಾಗಿದೆ.

ಹಿರಿಯರೆ ಮತ್ತು ಸ್ನೇಹಿತರೆ, ಈ ಮಾತುಗಳನ್ನು ನಾನು ಯಾವೊಂದು ಪಂಗಡದ ವಕಾಲತ್ತು ವಹಿಸಲಿಕ್ಕಾಗಿ ಆಡಲಿಲ್ಲವೆಂಬುದನ್ನು ಗಮನದಲ್ಲಿಡಲು ವಿನಂತಿಸಿಕೊಳ್ಳುತ್ತೇನೆ. ನನ್ನ ಸರಿಕರಲ್ಲಿ ದೋಷಗಳಿಲ್ಲವೆಂದಲ್ಲ. ಇವರಲ್ಲಿ ಅನೇಕರು ಕನ್ನಡ ಕಾವ್ಯ ಪರಂಪರೆಯೊಂದಿಗಿನ ಸಂಬಂಧವನ್ನು ಕಳೆದುಕೊಂಡವರು; ಬೇಂದ್ರೆ ಪುಟ್ಟಪ್ಪನವರಿಂದ ಕೂಡ ಅಲ್ಲ–ಅಡಿಗರಿಂದಲೇ ತಮ್ಮ ಕಾವ್ಯಾಭ್ಯಾಸ ಪ್ರಾರಂಭಿಸಿದವರಿದ್ದಾರೆ; ಮುಕ್ತ ಛಂದಸ್ಸೆಂದರೆ ಕವಿತೆ ಬರೆಯುವ ಸುಲಭೀಕರಣವೆಂದು ನಂಬಿದವರಿದ್ದಾರೆ; ಹಿರಿಯರು ಮಡಿಯಾಗಿಟ್ಟ ಭಾವನೆಗಳನ್ನು ವಿಕಾರಗೊಳಿಸಿ shock ಕೊಟ್ಟು ಸೇಡು ತೀರಿಸಿಕೊಳ್ಳುವ ಮನೋಭಾವನೆಯವರಿದ್ದಾರೆ. ಆದರೆ ಈ ಮಾತುಗಳು ಶ್ರೀಯುತರುಗಳಾದ ಜಿ. ಎಸ್. ಸಿದ್ಧಲಿಂಗಯ್ಯ, ಎಚ್. ಎಮ್. ಚನ್ನಯ್ಯ, ಪೂಚಂತೇ, ಸುಮತೀಂದ್ರ ನಾಡಿಗ, ಲಂಕೇಶ, ಚಂದ್ರಶೇಖರ ಪಾಟೀಲ, ಯು. ಆರ್. ಅನಂತಮೂರ್ತಿ, ಕೆ. ಎಸ್. ನಿಸಾರ್ ಅಹಮ್ಮದ್ ಇವರಿಗೆ ಅನ್ವಯವಾಗುವುದಿಲ್ಲ. ಹೊಸದಾಗಿ ಬರೆಯುತ್ತಿರುವವರಲ್ಲಿ ಶ್ರೀ ಕೃಷ್ಣ ಆಲನಹಳ್ಳಿ ಅವರ

ಸಾಧನೆ ಗಮನಾರ್ಹವಾದುದು. ಅನುಭವಕ್ಕೆ ತಕ್ಕ ಭಾಷೆಯನ್ನು ನಿರ್ಮಿಸಿಕೊಳ್ಳುವುದರಲ್ಲಿ ಅವರು ತೋರಿದ ಎಚ್ಚರಿಕೆ ಯಾರನ್ನಾದರೂ ತಲೆದೂಗಿಸುವಂಥಾದ್ದು. ಮುನ್ನುಡಿಯಲ್ಲಿ ಶ್ರೀ ಅಡಿಗರು "ಈ ಎಲ್ಲ ಕವನಗಳಲ್ಲೂ-ಇರುವ ಕವನಗಳ ಸಂಖ್ಯೆ ತುಂಬ ಕಡಮೆಯಾಗಿದ್ದರೂ-ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಿದ್ದಾರೋ ಎಂದು ಅನ್ನಿಸಿ ಒಟ್ಟಿನಲ್ಲಿ ಇಡೀ ಪುಸ್ತಕ ಓದಿ ಮುಗಿಸಿದಾಗ ಏಕತಾನತೆಯ ಅನುಭವ ಬರುತ್ತದೆ" ಎಂದು ಹೇಳಿದ್ದಾರೆ. ಈ ಮಾತನ್ನು ಒಪ್ಪುವುದು ಕಷ್ಟವಾಗಿದೆ. ಸಂಕಲನದ ಯಾವೊಂದು ಕವಿತೆಯೂ ಅನುಭವವನ್ನು ಸಮಗ್ರವಾಗಿ ಹಿಡಿಯಲು ಶಕ್ತವಾಗಿಲ್ಲ. ಅಂದರೆ ಅನುಭವದ ಕವಿ ಕಂಡ, ಪರಿಮಿತ ಮಗ್ಗುಲೊಂದನ್ನು ಮಾತ್ರ ಕವಿ ಕಾಣಿಸುತ್ತಾರೆ ಅಥವಾ ಇಷ್ಟು ಬೇಗನೆ ಈ ಮಾತನ್ನು ಹೊಸಬರ ಬಗೆಗೆ ಆಡಬಾರದೇನೋ.

(೧೯೬೭ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ೪೬ನೇ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಲೇಖನ—ಲೇ.)

ಭಾಷೆ

ಭಾಷೆಯು ಐಕ್ಯವನ್ನುಂಟುಮಾಡುವ ಒಂದು ಶಕ್ತಿ. ಇದರ ಮೂಲಕ, ನಮ್ಮೊಳಗೆ ಅಡಗಿರುವ ಮನಸ್ಸು ಬೇರೆಯವರ ಮನಸ್ಸುಗಳೊಡನೆ ಸಂಪರ್ಕವನ್ನು ಹೊಂದಲು ಸಮರ್ಥವಾಗುತ್ತದೆ. ಭಾಷೆಯ ಮೂಲಕ ಬಂದ ಮನಸ್ಸು ಹಲವಾರು ಮನಸ್ಸುಗಳೊಡನೆ ಸೇರಬಹುದು. ನಮ್ಮ ವಿಚಾರಗಳನ್ನು ನಾವು ಬೇರೆಯುವರಿಗೆ ತಿಳಿಸಬಲ್ಲೆವು. ಅದರಿಂದ ಪ್ರತಿಯೊಂದು ಮನಸ್ಸು ವಿಕಾಸವಾಗುತ್ತದೆ. ವಿಚಾರದ ಏಕತನವೆಂಬ ಈ ಸಂಪತ್ತು ಮನುಷ್ಯನ ಬುದ್ಧಿಯ ಬಡತನವನ್ನು ತಳ್ಳಿಹಾಕಿದೆ.

ರವೀಂದ್ರನಾಥ ಠಾಕೂರ್

* *

ಭಾಷೆಯಿಂದ ನಾವು ಮೂರು ವಿಧದ ಪ್ರಯೋಜನವನ್ನು ಹೊಂದುತ್ತೇವೆ: ಮರೆಮಾಚುವುದು, ಬೆರಗುಗೊಳಿಸುವುದು, ಭ್ರಾಂತಿಗೊಳಿಸುವುದು, ಇವೇ ಭಾಷೆಯ ಉತ್ಪತ್ತಿ, ಸ್ಥಿತಿ, ಲಯಗಳ ಗುಟ್ಟು. ಯಾವ ಭಾಷೆಯ ಮುಖೇನವಾದರೂ ಚತುರರು ಈ ಉದ್ದೇಶಗಳನ್ನು ಸಾಧಿಸಬಹುದು.

ನಾ. ಕಸ್ತೂರಿ

ಗಾಂಧೀ ವಿಚಾರ:

ಮಾತೃಭಾಷೆಯ ರಕ್ಷಣೆ ಮತ್ತು ವಿಕಾಸ

ಸಂಗ್ರಾಹಕ: **ಮ. ಗ. ಶೆಟ್ಟಿ**

ಇಂದು ನಮ್ಮ ದೇಶದ ಹಿಂದೂ ಮುಸಲಮಾನ, ಪಾರ್ಶಿ ಇತ್ಯಾದಿ ಜನರು ಸ್ವದೇಶದ ವಿಷಯವಾಗಿ ವಿಚಾರ ಮಾಡಲು ಪ್ರಾರಂಭಿಸಿದ್ದಾರೆ. ನನ್ನ ದೇಶ ನನ್ನದು ಎಂದು ಹೇಳುವ ಹಕ್ಕು ನಿಮಗೆ ದೊರೆಯುಬೇಕಾದರೆ ನಿಮ್ಮ ಅಂತಃ ಕರಣದಲ್ಲಿ ನಮ್ಮ ಭಾಷೆಯ ವಿಷಯವಾಗಿ ಪ್ರೇಮ ಮತ್ತು ಆದರವು ನಿರ್ಮಾಣವಾಗಬೇಕು.

ಇಂಗ್ಲಂಡಕ್ಕೆ ಹೋದ ಗುಜರಾತಿ ವಿದ್ಯಾರ್ಥಿಗಳಿಗೆ ಅಲ್ಲಿ ಗುಜರಾತಿ ಪುಸ್ತಕ ಓದಲು ವೇಳೆ ಉಳಿಸುವುದು ಕಠಿಣವಲ್ಲ. ಯಾರಿಗೆ ತಮ್ಮ ದೇಶದ ಸೇವೆ ಮಾಡುವ ಮನಸ್ಸಿದೆಯೋ ಯಾರಿಗೆ ಏನಾದರೂ ಸಾಮಾಜಿಕ ಕೆಲಸ ಮಾಡುವ ಇಚ್ಛೆ ಇದೆಯೋ ಅಂಥವರು ತಮ್ಮ ಮಾತೃ ಭಾಷೆಗಾಗಿ ಕೆಲ ಹೊತ್ತು ಕಾದಿಡಬೇಕು.

ಪರದೇಶಗಳಿಗೆ ಹೋಗುವ ವಿದ್ಯಾರ್ಥಿಗಳು ಅಲ್ಲಿ ತಮ್ಮ ತಮ್ಮ ಭಾಷೆಯಲ್ಲಿಯೇ ವ್ಯವಹಾರ ಸಾಗಿಸಬೇಕೆಂದು ನಾನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅವರು ಈ ಕರ್ತವ್ಯವನ್ನು ನಿರ್ವಹಿಸಿದರೆ ಭಾರತದ ಪ್ರಗತಿಯಾಗಲು ಏನೇನೂ ಸಂದೇಹವಿಲ್ಲ.

ಗುಜರಾತಿ ಜನರು ತಮ್ಮ ತಮ್ಮಲ್ಲಿ ಸಂಭಾಷಣೆ ಮಾಡಲು ಇಂಗ್ಲಿಷಿನ ಉಪಯೋಗ ಮಾಡುವುದು ತುಂಬ ದುರದೃಷ್ಟಕರವಾದುದು. ಇಂಗ್ಲಿಷಿನ ಮೋಹದಿಂದ ನೀವು ನಿಮ್ಮ ಭಾಷೆಯನ್ನು ದರಿದ್ರವನ್ನಾಗಿ ಮಾಡಿರುವಿರಿ ಮತ್ತು ಸ್ವಭಾಷೆಯ ಅವಮಾನವನ್ನು ಮಾಡಿ ನೀವು ಸ್ವತಃ ನಿಮ್ಮ ಅಧಃಪಾತವನ್ನು ಮಾಡಿರುವಿರಿ.

ಗುಜರಾತಿಗಿಂತ ಇಂಗ್ಲೀಷಿನಲ್ಲಿಯೇ ನನಗೆ ನನ್ನ ವಿಚಾರಗಳನ್ನು ಚೆನ್ನಾಗಿ ವ್ಯಕ್ತಪಡಿಸಲು ಬರುತ್ತದೆಯೆನ್ನುವವರನ್ನು ಕಂಡಾಗ ನನಗೆ ಕೆಂಡದಂಥ ಕೋಪ ಬರುತ್ತದೆ. ಮಾತೃ ಭಾಷೆಯ ಅಪಮಾನ ಮಾಡುವವರಿಂದ ಎಂದಾದರೂ ದೇಶದ ನಿಜವಾದ ಕಲ್ಯಾಣ ಸಾಧಿಸಲಾದೀತೇ? ಗುಜರಾತಿನ ಜನ ಹೆರವರ ಭಾಷೆಯನ್ನು ಸ್ವೀಕರಿಸಿ ಸ್ವಭಾಷೆಯನ್ನು ಬಿಟ್ಟುಬಿಡಬೇಕು ಎನ್ನುವ ವಿಚಾರವೇ ನನಗೆ ಅಸಹ್ಯಕರವಾಗಿದೆ. ಹಾಗೆ ಆಗುವುದಾದರೆ ಸ್ವಭಾಷೆಯನ್ನು ತ್ಯಾಗ ಮಾಡುವ ಜನ ದೇಶದ್ರೋಹಿ ಮತ್ತು ಸ್ವಜನ ದ್ರೋಹಿಯಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಜನರ ಶೀಲಸ್ವಭಾವ ಅವರವರ ಭಾಷೆಯಲ್ಲಿ ಪ್ರಕಟವಾಗುತ್ತದೆ. ಅದರಿಂದ ಗುಜರಾತಿ, ಬಂಗಾಲಿ, ಉರ್ದು, ಮರಾಠಿ ಇತ್ಯಾದಿ ಭಾಷಾ ಮಂಡಳಗಳು ಸ್ಥಾಪಿತವಾಗುತ್ತಿವೆ. ಭವಿಷ್ಯದ ದೃಷ್ಟಿಯಿಂದ ಇದೊಂದು ಸುಲಕ್ಷಣವಾಗಿದೆ. ಪರದೇಶಗಳಿಗೆ ಹೋಗುವ ತರುಣರು ತಮ್ಮ ಕೈಯಿಂದ ಸ್ವಭಾಷೆಯ ಕೊಲೆಯಪಾತಕ ಘಟಿಸದಂತೆ ಎಚ್ಚರಿಕೆ ವಹಿಸಬೇಕು. (ಗುಜರಾತ ಲಿಟರರಿ ಎಸೋಸಿಯೇಶನ್‌ದ ರಾಜಕೋಟೆಯಲ್ಲಿ ನೆರೆದ ಮೂರನೆಯ ಅಧಿವೇಶನದ ಭಾಷಣದಿಂದ.)

ಭಾರತದಲ್ಲಿರುವ ಅನೇಕ ಸಮೃದ್ಧ ಭಾಷೆಗಳ ಪುನರುಜ್ಜೀವನ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಕೋರ್ಟು, ಕಚೇರಿ, ಶಾಲೆ, ಸಚಿವಾಲಯಗಳಲ್ಲಿ ಪ್ರಾಂತಿಕ ಭಾಷೆಗಳಿಗೆ ಸ್ಥಾನ ದೊರೆಯಲು ಬಹಳ ವರ್ಷ ಹಿಡಿಯಬಹುದು ಎಂದು ಹೇಳುವುದು ನಮ್ಮ ಮಾನಸಿಕ ಜಡತೆಯ ಕುರುಹಾಗಿದೆ. (ಹರಿಜನ ೨೧-೯-೪೭)

ಯಾವುದೇ ಪ್ರಾಂತ ತನ್ನ ಭಾಷೆಯನ್ನು ಬಿಟ್ಟುಕೊಟ್ಟು ಅನ್ಯಭಾಷೆಯನ್ನು ವ್ಯವಹಾರಕ್ಕಾಗಿ ಬಳಸುವಂಥ ದುರ್ದೈವದ ವಿಷಯ ಇನ್ನೊಂದಿಲ್ಲ. ತಮಿಳುನಾಡಿನಲ್ಲಿ ಹೀಗೆ ಬಳಸಲಾಗುತ್ತದೆಯೆಂದು ವಾರ್ತೆ ಇದೆ. ಅನೇಕ ಪ್ರವಾಸಿಗಳು ಹೋಗಿಬಂದವರ ಅಭಿಪ್ರಾಯವೂ ಹಾಗೇ ಇದೆ. ಆದರೆ ಈಗ ಅಲ್ಲಿ ಬದಲಾವಣೆಯಾಗುತ್ತಿದೆ. ಸುಶಿಕ್ಷಿತರು ತಮ್ಮ ಸಂಪರ್ಕ ಬಹುಜನ ಸಮಾಜದೊಡನೆ ಹೆಚ್ಚು ಹೆಚ್ಚಾಗಬೇಕೆಂದು ಬಯಸಿದಂತೆಲ್ಲ ಮಾತೃ ಭಾಷೆಯನ್ನು ಆಶ್ರಯಿಸುವ ಪ್ರವೃತ್ತಿ ಅತ್ಯಂತ ವೇಗದಿಂದ ಬೆಳೆಯುತ್ತ ಹೋಗುವುದು. (ಹರಿಜನ ೧೫-೮-೩೭.)

ಮಾತೃ ಭಾಷೆಯಿಂದಲೇ ಶಿಕ್ಷಣ ಕೊಡುವುದಾದರೆ

ತಾವು ಏನು ಮಾಡಬೇಕೆಂದು ಇಂದಿನಿಂದಲೇ ಯೋಚಿಸಬೇಕು. ಈ ಸಂದರ್ಭದಲ್ಲಿ ನನಗೆ ಗೋಚರವಾಗುವ ವಿಷಯವನ್ನು ನಿಮ್ಮ ಎದುರಿಗೆ ಇಡುತ್ತೇನೆ.

೧. ಇಂಗ್ಲಿಷು ಬಲ್ಲ ಸುಶಿಕ್ಷಿತರು ತಮ್ಮ ಪರಸ್ಪರ ವ್ಯವಹಾರದಲ್ಲಿ ಇಂಗ್ಲೀಷು ಬಳಸದೆ ಮಾತೃ ಭಾ ಷೆ ಯ ನ್ನು ಬಳಸಬೇಕು.

೨. ಇಂಗ್ಲಿಷು ಮತ್ತು ಮಾತೃಭಾಷೆಯನ್ನು ಚೆನ್ನಾಗಿ ಅರಿತವರು ಇಂಗ್ಲೀಷಿನಲ್ಲಿಯ ಸುಂದರ ವಿಚಾರ ಮತ್ತು ಪುಸ್ತಕಗಳನ್ನು ಮಾತೃಭಾಷೆಗೆ ತರಬೇಕು.

೩. ಶಿಕ್ಷಣ ಸಂಸ್ಥೆಗಳು ತಮ್ಮ ತಮ್ಮ ಪಠ್ಯ ಪುಸ್ತಕಗಳನ್ನು ತಯಾರಿಸಬೇಕು.

೪. ಪ್ರಾಂತಿಕ ಭಾಷೆಯ ಮಾಧ್ಯಮವುಳ್ಳ ಶಾಲೆಗಳನ್ನು ತೆರೆಯಲು ಶ್ರೀಮಂತರು ಧನ ಸಹಾಯ ನೀಡಬೇಕು.

೫. ಮೇಲ್ಕಾಣಿಸಿದ ಪ್ರಯತ್ನಗಳನ್ನು ಮಾಡುತ್ತಿರುವಾಗಲೇ ಸಭೆ ಪರಿಷತ್ತು ಮತ್ತು ಶೈಕ್ಷಣಿಕ ಸಂಸ್ಥೆಗಳು ಸರ್ವ ಶಿಕ್ಷಣವೂ ಮಾತೃಭಾಷೆಯ ಮೂಲಕವೇ ನಡೆಯಬೇಕೆಂದು ಚಳವಳಿ ಮಾಡಬೇಕು. ನ್ಯಾಯಾಲಯ ಮತ್ತು ವಿಧಾನ ಸಭೆಗಳ ಕಾರ್ಯಕಲಾಪ ಮಾತೃಭಾಷೆಯಲ್ಲಿ ನಡೆಯಬೇಕು. ಜನತೆಯೊಡನೆ ಸಂಬಂಧ ಬರುವ ವಿಷಯಗಳೆಲ್ಲ ಮಾತೃಭಾಷೆಯಲ್ಲಿ ನಡೆಯಬೇಕು. ಇಂದು ಇಂಗ್ಲಿಷು ಚೆನ್ನಾಗಿ ಬಂದವರೇ ಅಧಿಕಾರ ಸ್ಥಾನ ಹೊಂದಿರುತ್ತಾರೆ. ಈ ಪರಿಸ್ಥಿತಿ ಬದಲಾಗಬೇಕು. ಇಂಗ್ಲೀಷು ಭಾಷೆಯ ಜ್ಞಾನದ ವಿಷಯವನ್ನು ಬದಿಗೊತ್ತಿ ಗುಣವಂತರಾದವರನ್ನು ಅಧಿಕಾರಿಗಳನ್ನಾಗಿ ನಿಯಮಿಸಬೇಕು. ರಾಜ್ಯಕಾರಭಾರಕ್ಕೆ ಆವಶ್ಯಕವುಳ್ಳ ಜ್ಞಾನವನ್ನು ಉಮೇದುವಾರರಿಗೆ ಮಾತೃಭಾಷೆಯಲ್ಲಿ ಕೊಡಬೇಕು. ಅದಕ್ಕಾಗಿ ಸರ್ಕಾರಕ್ಕೆ ಶಿಷ್ಟ ಮಂಡಳಗಳನ್ನು ಕಳಿಸಬೇಕು. ಮಾತೃಭಾಷೆಗೆ ಮನ್ನಣೆಯಿತ್ತಾಗ–ರಾಜ್ಯಭಾಷೆಯ ಸ್ಥಾನ ಅದಕ್ಕೆ ದೊರೆತಾಗ ಅದರಲ್ಲಿಯ ಕಲ್ಪನಾತೀತ ಸಾಮರ್ಥ್ಯದ ಸಾಕ್ಷಾತ್ಕಾರ ನಿಮಗಾಗುವುದು. (ದ್ವಿತೀಯ ಗುಜರಾತಿ ಶಿಕ್ಷಣ ಪರಿಷತ್ತು ೨೦–೧೦–೪೭.)

ಪರಭಾಷೆಯ ಆಶ್ರಯ ಮಾಡುವ ಈ ಪ್ರವೃತ್ತಿ ನಿಮಗೆ ಇನ್ನಾವ ದೇಶದಲ್ಲಿಯೂ ನೋಡಲು ಸಿಗಲಾರದು. ದಕ್ಷಿಣ ಆಫ್ರಿಕೆಯಂತಹ ಚಿಕ್ಕ ದೇಶದಲ್ಲಿ ಇಂಗ್ಲಿಷು ಮತ್ತು ಡಚ್ಚ ಭಾಷೆಯವರಲ್ಲಿ ಜಗಳ ಪ್ರಾರಂಭವಾಗಿತ್ತು. ಕೊನೆಗೆ ಇಂಗ್ಲಿಷರು ಮತ್ತು ಡಚ್ಚರಲ್ಲಿ ಒಪ್ಪಂದವಾಗಿ ಎರಡೂ ಭಾಷೆಗಳಿಗೆ ಸರಿಯಾದ ಸ್ಥಾನ ಕೊಡಬೇಕೆಂದು ತೀರ್ಮಾನವಾಯಿತು. ಶೂರರಾದ ಡಚ್ಚ ಜನರು ತಮ್ಮ ಮಾತೃಭಾಷೆಯ ತ್ಯಾಗ ಮಾಡಲು ಸಿದ್ಧರಿರಲಿಲ್ಲ. (ನವಜೀವನ ೧೨–೪–೩೧)

ನೀವು ಮಾತೃಭಾಷೆಯ ಅನಾದರ ಮಾಡಿದ್ದೀರಿ. ಈ ಪಾಪದ ಕಡುಫಲವನ್ನು ನೀವು ಅನುಭವಿಸಲೇ ಬೇಕಾದೀತು. ನಿಮ್ಮ ಹಾಗೂ ನಿಮ್ಮ ಮನೆಯ ಜನರ ನಡುವೆ ಎಂತಹ ಕಂದಕ ನಿರ್ಮಾಣವಾಗಿದೆಯೆಂದು ನೋಡಿಕೊಳ್ಳಿ. ನೀವು ಶಾಲೆಯಲ್ಲಿ ಕಲಿತುದು–ನಿಮ್ಮ ತಾಯಂದಿರಿಗೆ ಅರ್ಥವಾಗುವುದಿಲ್ಲ. ನೀವೂ ಅವರಿಗೆ ತಿಳಿಸಿ ಹೇಳುವುದಿಲ್ಲ. ತಿಳಿಸಿ ಹೇಳಲು ಸಮರ್ಥರಾಗಿರುವುದಿಲ್ಲ. ನಿಮಗೆ ದೊರೆಯುವ ಶಿಕ್ಷಣದ ಪ್ರಚಾರ ಮತ್ತು ಪ್ರಸಾರ ನಿಮ್ಮ ಮನೆಯಲ್ಲಿ ಆಗುತ್ತಿಲ್ಲ. ಇಂತಹ ದುಸ್ಸಹವಾದ ಪರಿಣಾಮ ಇಂಗ್ಲಿಷು ಕುಟುಂಬದಲ್ಲಿ ನಾವು ಎಂದೆಂದಿಗೂ ನೋಡಲಾರೆವು. ಇಂಗ್ಲಂಡ ಮತ್ತು ಇನ್ನಿತರ ಪ್ರದೇಶಗಳಲ್ಲಿ ಮಾತೃ ಭಾಷೆಯಲ್ಲಿಯೇ ಶಿಕ್ಷಣವಿರುವುದರಿಂದ ಶಾಲೆಯಲ್ಲಿ ಕಲಿಯುವುದನ್ನು ಮಕ್ಕಳು ತಮ್ಮ ತಾಯಿತಂದೆಗಳಿಗೆ ಹೇಳುತ್ತಾರೆ. ಅವರು ಕಲಿತುದು ಮನೆಯಲ್ಲಿ ಕೆಲಸ ಮಾಡುವ ಇನ್ನಿತರರಿಗೂ ಅರ್ಥವಾಗುತ್ತದೆ. ವಿದ್ಯೆಯು ಹವೆಯಂತೆ ಸಹಜವಾಗಿ ಎಲ್ಲೆಡೆ ಹಬ್ಬಲು ಕಾರಣವಾಗಿದೆ. ಆದರೆ ಕಂಜೂಷಿಯಾದ ಮನುಷ್ಯನು ತನ್ನ ಹಣವನ್ನು ಭೂಮಿಯಲ್ಲಿ ಹು ಗಿ ದಿ ಟ್ಟು ನಿಷ್ಪ್ರಯೋಜಕಗೊಳಿಸುವಂತೆ ಇಂದಿನ ಸುಶಿಕ್ಷಿತರು ತಾವು ಕಲಿತುದನ್ನು ತಮ್ಮಲ್ಲಿಯೇ ಇಟ್ಟುಕೊಂಡು ಇತರರಿಗೆ ಅದರ ಲಾಭವನ್ನು ಒದಗಿಸುತ್ತಿರುವುದಿಲ್ಲ. (೧೯೧೭ರಲ್ಲಿ ಭಾ ಗ ಲ ಪು ರ ದ ಲ್ಲಿ ಸೇರಿದ ವಿದ್ಯಾರ್ಥಿ ಸಮ್ಮೇಲನದಲ್ಲಿ ಮಾಡಿದ ಭಾಷಣದಿಂದ.)

ತಾಯ್ನುಡಿಯ ಅನಾದರವೆಂದರೆ ತಾಯಿಯ ಅಪಮಾನ ಮಾಡಿದಂತೆಯೇ ಸೈ. ಮಾತೃಭಾಷೆಯ ಅ ಪ ಮಾ ನ ಮಾಡುವವನು ಸ್ವದೇಶ ಭಕ್ತನೆಂದು ಕರೆಯಿಸಿಕೊಳ್ಳುವುದು ಹೇಗೆ? ನೀವು ನಿಮ್ಮ ತಾಯ್ನುಡಿಯ ಉನ್ನತಿಯನ್ನು ಸಾಧಿಸದಿದ್ದರೆ ಇಂಗ್ಲಿಷಿನಲ್ಲಿಯೇ ತಾವು ಚೆನ್ನಾಗಿ ವಿಚಾರ ಪ್ರಕಟ ಮಾಡುವೆವೆಂಬ ಹೆಮ್ಮೆಯನ್ನು ನೀವು ಪಟ್ಟುಕೊಳ್ಳು ವದಾದರೆ–ಪರಭಾಷೆಯಲ್ಲಿಯೇ ತಮ್ಮ ವಿಚಾರ ವಿಕಾಸವಾಗುವದೆಂಬ ಭರವಸೆಯಿದ್ದರೆ ನೀವು ಎ ೦ ದೆ ೦ ದಿ ಗೂ ಗುಲಾಮರಾಗಿಯೇ ಇರುವಿರಿ. ನಿಮ್ಮ ಭಾಷೆಯಲ್ಲಿ ನಿಮ್ಮ ಎಲ್ಲ ವಿಚಾರ ಪ್ರಕಟಿಸುವ ಶಕ್ತಿ ಬಾರದ ಹೊರತು, ಭೌತಿಕ ವಿಜ್ಞಾನ ಮತ್ತು ಶಾಸ್ತ್ರಗಳನ್ನು ಮಾತೃಭಾಷೆಯಿಂದ ತಿ ಸಲು ಸಾಧ್ಯವಾಗುವದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರಕ್ಕೆ ಹೊಸ ಜ್ಞಾನ ದೊರೆಯಲಾರದು.

೧. ಎಲ್ಲರಿಗೂ ಹೊಸ ಹೊಸ ವಿಷಯದ ತಿಳುವಳಿಕೆ ಅವಶ್ಯವಾಗಿದೆ.
೨. ಎಲ್ಲರಿಗೂ ಇಂಗ್ಲೀಷು ಕಲಿಯಲು ಸಾಧ್ಯವಿಲ್ಲ.
೩. ಇಂಗ್ಲೀಷು ಕಲಿತವರಿಗಷ್ಟೇ ಹೊಸ ಜ್ಞಾನ ದೊರೆಯುವುದಾದರೆ ಎಲ್ಲರಿಗೂ ಎಂದೆಂದೂ ಜ್ಞಾನದ ಲಾಭವಾಗಲಾರದು. (ವಿಚಾರಸೃಷ್ಟಿ ೧೯೧೭.)

ಮಾತೃಭಾಷೆಯಲ್ಲಿ ಅಥವಾ ರಾಷ್ಟ್ರಭಾಷೆ ಹಿಂದುಸ್ತಾನಿಯಲ್ಲಿ ಪ್ರೇಮವಿಲ್ಲವೋ ಅಂತಹವರು ಸ್ವರಾಜ್ಯದ ಸೈನಿಕರೆಂದು ಕರೆಯಿಸಿಕೊಳ್ಳಲು ಅರ್ಹರಲ್ಲ. ತಾಯ್ನುಡಿಯ ಬಗ್ಗೆ ಅನಾದರ ತೋರುವವರಿಗೆ ದೇಶಪ್ರೇಮಿಯೆಂದು ಕರೆಯಿಸಿಕೊಳ್ಳಲು ಅಧಿಕಾರವಿಲ್ಲ. ನಾನು ನಿಮಗೆ ಸ್ವ-ಜನರಲ್ ಬೋಥಾ ಅವರ ಸ್ವಾರಸ್ಯಕರ ಘಟಣೆ ನೆನಪಿಗೆ ತರಲು ಬಯಸುತ್ತೇನೆ. ಅವರು ಇಂಗ್ಲಂಡಿಗೆ ಹೋದಾಗ ತಮಗೆ ಇಂಗ್ಲಿಷು ಬರುತ್ತಿದ್ದರೂ ರಾಜರೊಡನೆ ತರ್ಜುಮೆಕಾರರ ನೆರವಿನಿಂದ ತಮ್ಮ ಭಾಷೆಯಾದ ಡಚ್ಚದಲ್ಲಿಯೇ ಮಾತನಾಡುವ ಹಟ ಹಿಡಿದರು. ರಾಜರೂ ಅದರ ಬಗ್ಗೆ ಸಿಟ್ಟು ತಳಿಯದೆ, ಡಚ್ಚ ದೇಶದ ರಾಯಭಾರಿಯು ಹಾಗೆ ನಡೆಯುವುದು ಯೋಗ್ಯವೆಂದು ಭಾವಿಸಿ ಅವರ ಗೌರವ ಮಾಡಿದರು. ನಿಮಗೂ ನಿಮ್ಮ ಮಾತೃಭಾಷೆಯ ಬಗ್ಗೆ ಇದೇ ರೀತಿ ಅಭಿಮಾನವಿರುವುದು ಯೋಗ್ಯವಾಗಿದೆ. (ಯಂಗ ಇಂಡಿಯಾ ೧೦-೧೦-೨೯)

ತಾಯ್ನುಡಿಯ ದರ್ಜೆಯನ್ನು ಹೆಚ್ಚಿಸುವುದಕ್ಕಾಗಿ ಕೋರ್ಟ್ ಕಚೇರಿಯ ಕೆಲಸವನ್ನು ಆಯಾ ರಾಜ್ಯದ ಭಾಷೆಯಲ್ಲಿ ನಡೆಯಬೇಕೆಂದು ನನ್ನ ಬಯಕೆಯಾಗಿದೆ. ಪ್ರಾಂತಿಕ ಕಾಯಿದೆ ಮಂಡಳಗಳ ಕೆಲಸಕಾರ್ಯಗಳು ಆಯಾ ಪ್ರಾಂತಿಕ ಭಾಷೆಯಲ್ಲಿ ನಡೆಯಬೇಕು. ಕಾಯಿದೆ ಮಂಡಳಗಳ ಸದಸ್ಯರು ಮನಸ್ಸು ಮಾಡಿದರೆ ಒಂದು ತಿಂಗಳೊಳಗಾಗಿ ತಮ್ಮ ರಾಜ್ಯದ ಭಾಷೆಯನ್ನು ಅರಿತುಕೊಳ್ಳುವರು. (ಹರಿಜನ ಸೇವಕ ೯-೭-೩೯)

ಹೊಸ ಲಿಪಿ ಅಥವಾ ಭಾಷೆಯನ್ನು ಕಲಿಯಲು ನಾವು ಹೆದರುತ್ತೇವೆ. ಆದರೆ ಹಿಂದುಸ್ತಾನದ ಯಾವುದೇ ಭಾಷೆಯನ್ನು ಕಲಿಯುವುದು-ಲಿಪಿಯನ್ನು ಬರೆಯುವುದು ಕೈಯಲ್ಲಿಯ ನೆಲ್ಲೀಕಾಯಿಯಂತೆ ತೀರ ಸುಲಭ. ಹಿಂದೀ ಅಥವಾ ಹಿಂದುಸ್ತಾನಿ ಬರುವವರಿಗೆ ಮರಾಠಿ, ಗುಜರಾತಿ, ಬಂಗಾಲಿ ಇತ್ಯಾದಿ ಕಲಿಯಲು ತೊಂದರೆಯೇನಿದೆ? ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳಿಯ ಬಗ್ಗೆಯೂ ನನ್ನ ಅಭಿಪ್ರಾಯ ಹಾಗೆಯೇ ಇದೆ. ಅವುಗಳಲ್ಲಿ ಅನೇಕ ಸಂಸ್ಕೃತ ತತ್ಸಮ ಮತ್ತು ತದ್ಭವ ಶಬ್ದಗಳಿವೆ. ನಮ್ಮ ನಮ್ಮ ಭಾಷೆಯ ಬಗ್ಗೆ ನಿಜವಾದ ಪ್ರೇಮ ನಮಗೆ ಹುಟ್ಟಿದಾಗಲೇ ಈ ಎಲ್ಲ ಭಾಷೆಗಳನ್ನು ಸುಲಭವಾಗಿ ಕಲಿತುಕೊಳ್ಳಬಹುದು. (ಹರಿಜನ ೧-೨-೪೨)

ನೀವು ಲಿಪಿಯ ಪ್ರಶ್ನೆಯನ್ನು ಬದಿಗಿಟ್ಟರೂ ನೆರೆಹೊರೆಯವರ ಭಾಷೆಯನ್ನು ಸುಲಭವಾಗಿ ಕಲಿಯಬಹುದು. ನಿಮ್ಮ ಮನಸ್ಸು ಚೈತನ್ಯಮಯವಾಗಿದ್ದರೆ, ಮಿದುಳು ದಣಿಯದಿದ್ದರೆ ವಿಶೇಷ ಕಷ್ಟವಿಲ್ಲದೆ ನೀವು ಬೇಕಾದಷ್ಟು ಲಿಪಿಗಳನ್ನು ಕಲಿಯಬಹುದು. ಭಾಷೆಯ ಅಭ್ಯಾಸ ಅತ್ಯಂತ ಮನೋರಂಜಕವೂ ಉತ್ಸಾಹವರ್ಧಕವೂ ಆಗಿರುತ್ತದೆ. ಭಾಷೆಯ ಅಧ್ಯಯನವೂ ಒಂದು ಕಲೆ. ಆ ದೃಷ್ಟಿಯಿಂದಲೂ ಅದಕ್ಕೆ ಮಹತ್ವವಿದೆ. (ಹರಿಜನ ೧೩-೫-೪೨)

ಸಂಸ್ಕೃತ ಕಲಿಯುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವೇ ಆಗಿದೆ. ಹಿಂದುಗಳಂತೂ ಸರಿಯೇ, ಮುಸಲ್ಮಾನರೂ ಕಲಿಯಬೇಕು. ಯಾಕೆಂದರೆ ಅವರ ಪೂರ್ವಜರು ರಾಮಕೃಷ್ಣರೇ ಆಗಿದ್ದಾರೆ. ಅದರಂತೆ ಮುಸಲ್ಮಾನರೊಡನೆ ಸಂಬಂಧವಿಡಲು ಅವರ ಭಾಷೆಯನ್ನು ಕಲಿಯುವುದು ಹಿಂದುಗಳ ಕರ್ತವ್ಯವಾಗಿದೆ. ನಾವು ಇಂದು ಒಬ್ಬರಿನ್ನೊಬ್ಬರ ಭಾಷೆಯಿಂದ ದೂರ ಸರಿಯಲು ಬಯಸುತ್ತಿರುವುದರಿಂದ ನಾವು ಹುಚ್ಚರೆಂದು ಕರೆಯಿಸಿಕೊಳ್ಳುತ್ತಿದ್ದೇವೆ. (ನವಜೀವನ ೨೭-೩-೨೭)

ನವಜೀವನ ಟ್ರಸ್ಟ್ ಅಹಮದಾಬಾದ ಅವರ ಸೌಜನ್ಯದಿಂದ.

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯವರ ದುಃಖಕ್ಕೆ ಅಳುವವರ
ಮೆಚ್ಚ ನಮ್ಮ ಕೂಡಲಸಂಗಮದೇವಾ.

ಬಸವಣ್ಣನವರು

ಸುದ್ದಿ ಸಂಗ್ರಹ

ಕನ್ನಡ ರಾಜ್ಯೋತ್ಸವ – ಸಾಹಿತ್ಯ ಪ್ರಚಾರ ಸಮಿತಿಯ ಸ್ತುತ್ಯಕಾರ್ಯ

ಈ ವರ್ಷ ಸಾಹಿತ್ಯ ಪ್ರಚಾರ ಸಮಿತಿಯವರು ಶ್ರೀ ರಂ. ಶ್ರೀ. ಮುಗಳಿ ಮತ್ತು ಜಿ. ನಾರಾಯಣ ಅವರ ನೇತೃತ್ವದಲ್ಲಿ ಹೊಸ ರೀತಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು.

ರಾಜ್ಯೋತ್ಸವದ ಉದ್ಘಾಟನೆಯನ್ನು ಶ್ರೀ ವೀರೇಂದ್ರ ಪಾಟೀಲರು ನೆರವೇರಿಸಿದರು. ಅಲಸೂರಿನ ಭಾರತೀಯ ಕನ್ನಡಿಗರ ಸಂಘದ ಆಶ್ರಯದಲ್ಲಿ ನಡೆದ ಗ್ರಂಥಪ್ರದರ್ಶನದ ಉದ್ಘಾಟನೆಯನ್ನು ವಿ. ಕೃ. ಗೋಕಾಕ ಅವರು ಮಾಡಿದರು. ಶ್ರೀ ಪುಟ್ಟಸ್ವಾಮಿ ಅವರು ಅಧ್ಯಕ್ಷತೆ ವಹಿಸಿದ್ದರು.

ಮೂರು ದಿನಗಳ ಅನಂತರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಗ್ರಂಥ ಪ್ರದರ್ಶನದ ಉದ್ಘಾಟನೆಯನ್ನು ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ನೆರವೇರಿಸಿದರು. ಶ್ರೀ ಸಿದ್ಧಯ್ಯ ಪುರಾಣಿಕರು ಅಧ್ಯಕ್ಷರಾಗಿದ್ದರು.

ಕಡೆಯದಾಗಿ ಗಾಂಧೀ ಸಾಹಿತ್ಯ ಸಂಘದ ಆಶ್ರಯದಲ್ಲಿ ನಡೆದ ಗ್ರಂಥಪ್ರದರ್ಶನವನ್ನು ಶ್ರೀ ಸಿದ್ದವನಹಳ್ಳಿ ಕೃಷ್ಣ ಶರ್ಮರ ಅಧ್ಯಕ್ಷತೆಯಲ್ಲಿ ಶ್ರೀ ಎಂ. ರಾಜಶೇಖರಮೂರ್ತಿ ಅವರು ನೆರವೇರಿಸಿದರು.

ಮನೆಮನೆಗೂ ಕನ್ನಡ ಗ್ರಂಥಗಳನ್ನು ಒಯ್ದು ಮಾರಾಟ ಮಾಡುವ ಕಾರ್ಯಕ್ರಮವನ್ನು ಶ್ರೀ ಕೆ. ವಿ. ಶಂಕರಗೌಡರು ಉದ್ಘಾಟಿಸಿದರು. ಶ್ರೀ ಟಿ. ಕೆ. ತುಕೋಳರು ಅಧ್ಯಕ್ಷತೆ ವಹಿಸಿದ್ದರು.

ಮಲ್ಲೇಶ್ವರದ ಎಂ. ಇ. ಡಬ್ಲ್ಯು. ಎಸ್. ಆವರಣದಲ್ಲಿ ನಡೆದ ಕನ್ನಡ ಕಾರ್ಯಕರ್ತರ ಸಮ್ಮೇಳನದಲ್ಲಿ ತಂಡದ ನಾಯಕರಿಂದ ವಿಚಾರ ವಿನಿಮಯವಾಯಿತು. ಪ್ರಾಯೋಗಿಕವಾಗಿ ನಡೆದ ಈ ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ಕನ್ನಡ ನಾಡಿನ ಮೂರು ವಿಶ್ವವಿದ್ಯಾನಿಲಯಗಳೂ, ಎಲ್ಲ ಪ್ರಮುಖ ಪ್ರಕಾಶಕರೂ ಸಹಕರಿಸಿ ಸಾಹಿತ್ಯ ಪ್ರಚಾರ ಸಮಿತಿಯವರು ಕೈಗೊಂಡಿದ್ದ ಕಾರ್ಯ ಯಶಸ್ವಿಯಾಗಲು ಕಾರಣರಾದರು.

ಶ್ರೀ ಗೋಪಾಲಕೃಷ್ಣ ಅಡಿಗರಿಗೆ ಸನ್ಮಾನ

ಉಡುಪಿಯ ಕರ್ಣಾಟಕ ಸಂಘದವರು ಕಳೆದ ನವೆಂಬರ್ ಲನೇ ದಿನಾಂಕದಿಂದ ೧೧ನೇ ಭಾನುವಾರದವರೆಗೆ ಈ ತಲೆಮಾರಿನ ಪ್ರಮುಖ ಕವಿಗಳಾದ ಶ್ರೀ ಗೋಪಾಲಕೃಷ್ಣ ಅಡಿಗ ಅವರಿಗೆ ಐವತ್ತು ವರ್ಷ ತುಂಬಿದ ಸಂದರ್ಭದಲ್ಲಿ ಉಡುಪಿಯಲ್ಲಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಒಂದು ವಿಚಾರ ಸಂಕೀರ್ಣ ಏರ್ಪಟ್ಟಿದ್ದು ಶ್ರೀಯುತರುಗಳಾದ ಕೀರ್ತಿನಾಥ ಕುರ್ತುಕೋಟಿ, ಡಾ. ಯು. ಆರ್. ಅನಂತಮೂರ್ತಿ, ಡಾ. ಎಂ. ಜಿ. ಕೃಷ್ಣಮೂರ್ತಿ, ಬಿ. ದಾ ಮೋ ೯ ದ ರ ರಾ ವ್, ಬನ್ನಂಜೆ ಗೋವಿಂದಾಚಾರ್ಯ, ಸುಮತೀಂದ್ರ ನಾಡಿಗ, ರಾಮದಾಸ್, ಜಿ. ಎಚ್. ನಾಯಕ, ಡಾ. ಶಾಂತಿನಾಥ ದೇಸಾಯಿ, ಜಿ. ಎಂ. ಗಿರಿ, ಯಶವಂತ ಚಿತ್ತಾಲ, ಡಿ. ರಘುನಾಥರಾವ್, ಪಾ. ಲ. ಸುಬ್ರಹ್ಮಣ್ಯಂ, ಡಿ. ಎಸ್. ರಾಯ್ಕರ್, ಕಿ. ರಂ. ನಾಗರಾಜ, ಪಿ. ಲಂಕೇಶ ಮುಂತಾದವರು ಭಾಗವಹಿಸಿದ್ದರು. ಕೊನೆಯ ದಿನ ಅಡಿಗರನ್ನು ಗೌರವಿಸಿ ನಿಧಿ ಅರ್ಪಿಸಲಾಯಿತು. ಕಲ್ಕತ್ತೆಯಿಂದ ಪ್ರಕಟವಾದ ಅಡಿಗರ ಇಂಗ್ಲಿಷ್ ಕವನ ಸಂಗ್ರಹವನ್ನು ಪ್ರೊ. ನಿಸ್ಸಿಮ್ ಎಝೆಕೀಲ್ ಅವರು ಬಿಡುಗಡೆ ಮಾಡಿದರು.

ಗಾಂಧೀ ಸಾಹಿತ್ಯ ಸಂಘದ ಬೆಳ್ಳಿ ಹಬ್ಬ

ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಸದ್ದು ಗದ್ದಲವಿಲ್ಲದೆ ಗಾಂಧಿ ಸಾಹಿತ್ಯ ಪ್ರಚಾರ, ಗಾಂಧಿ ತತ್ವಗಳ ಅನುಷ್ಠಾನ ಕಾರ್ಯದಲ್ಲಿ ಕೆಲಸ ಮಾಡುತ್ತ ಬಂದಿರುವ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘವು ಮೂರು ದಿನಗಳ ಕಾಲ ಬೆಳ್ಳಿ ಹಬ್ಬದ ಕಾರ್ಯಕ್ರಮವೇರ್ಪಡಿಸಿತ್ತು. ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸಂಪದ್ಗಿರಿರಾಯರು 'ಸಂತಸ' ಸ್ಮಾರಕ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸ್ವಾಮಿ ಪ್ರಬುದ್ಧಾನಂದರಿಂದಲೂ, ಡಾ. ವಿ.ಕೃ. ಗೋಕಾಕರಿಂದಲೂ ಭಾಷಣಗಳು ಆದವು. ಗುರುಗುಹಗಾನನಿಲಯ, ಸುದರ್ಶನ ಕಲಾಮಂದಿರದವರಿಂದ ಮನೋರಂಜನೆಯ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು.

ಕರ್ನಾಟಕ ವಿಶ್ವವಿದ್ಯಾಲಯದ ಕೆಲವು ಕನ್ನಡ ಪ್ರಕಟಣೆಗಳು

ಕನ್ನಡ ನಾಡಿನ ಇಂದಿನ ಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳು ಬಹು ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗಿದೆ. ವಿಶ್ವವಿದ್ಯಾಲಯದ ಕನ್ನಡ ಶಾಖೆಯ ಶಿಕ್ಷಕ ವರ್ಗದವರಲ್ಲದೆ ಇತರ ಎಲ್ಲ ವಿಷಯಗಳ ಅಧ್ಯಾಪಕರೂ ಕನ್ನಡದ ಜ್ಞಾನಕೋಶವನ್ನು ತುಂಬಬೇಕಾಗಿದೆ. ಇತರ ಸಾಮಾನ್ಯ ಪ್ರಕಟಣಕಾರರು ಮಾಡಲಾರದ ಪ್ರಯತ್ನವನ್ನು ವಿಶ್ವವಿದ್ಯಾಲಯಗಳು ತಮ್ಮ ಹಿಂದಿರುವ ಧನಬಲದಿಂದ ಮಾಡಬಹುದಾಗಿದೆ. ಇದಕ್ಕೆ ಮುಖ್ಯವಾದ ಮಾರ್ಗದರ್ಶನ, ಉತ್ಸಾಹೀ ಕಾರ್ಯಕರ್ತ ಮತ್ತು ಕನ್ನಡ ಸತ್ವದಲ್ಲಿ ಪೂರ್ಣಶ್ರದ್ಧೆಯುಳ್ಳ ಲೇಖಕ ಸಮೂಹ ಇವಿಷ್ಟೂ ಅತ್ಯಗತ್ಯವಾಗುತ್ತದೆ. ಕನ್ನಡದ ಅದೃಷ್ಟದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಈ ಮೂರು ಚೈತನ್ಯಗಳೂ ಹೊಂದಿಕೊಂಡು ಈಗ ಕಾರ್ಯಮುಖವಾಗಿವೆ. ಹಿಂದಿನ ಉಪಕುಲಪತಿಗಳಾಗಿದ್ದ ಶ್ರೀ ಡಿ. ಸಿ. ಪಾವಟೆ ಅವರು ಹೆಸರಾಂತ ಆಡಳಿತಗಾರರು, ಅತ್ಯುತ್ತಮ ಕಾಣ್ಕೆಯುಳ್ಳ ಯೋಜನಾ ನಿರ್ಮಾಪಕರು. ಇವರ ತರುವಾಯ ಈಗ ಅಧಿಕಾರದಲ್ಲಿರುವ ಶ್ರೀ ಎ. ಎಸ್. ಅಡಕೆಯವರೂ ಅಷ್ಟೇ ಉತ್ಸಾಹಶೀಲರು. ಎಲ್ಲ ಕಾರ್ಯವನ್ನೂ ಸ್ವಂತ ಪರಿಶೀಲನೆಯಲ್ಲಿಟ್ಟುಕೊಂಡು ದಕ್ಷ ನಿರ್ವಹಣೆಯನ್ನು ಮಾಡುತ್ತಿರುವವರು ಕನ್ನಡದ ಹೆಸರಾಂತ ಕವಿ ಚನ್ನವೀರಕಣವಿಯವರು. ಲೇಖಕ ದಳವೇ ಇವರ ಸಹಾಯಕ್ಕೆ ನಿಂತಿರುವಂತಿದೆ. ಹೀಗಿರುವುದರಿಂದ ಕೆಲವೇ ವರ್ಷಗಳಲ್ಲಿ ನಡೆದಿರುವ ಲೇಖನ ಪ್ರಕಟಣ ಕಾರ್ಯ ಓದುಗನಿಗೆ ಜ್ಞಾನದರಾಶಿಯಾಗಿ ಸಿಕ್ಕಿದೆ. ಪ್ರಕಟಣಕಾರನಿಗೆ ಆಶ್ಚರ್ಯವಾಗುವಂತಿದೆ. ಈ ಎಲ್ಲ ಸತ್ಕಾರ್ಯಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಅಭಿನಂದಿಸಿ ಈಚೆಗೆ ಪ್ರಕಟವಾದ ಕೆಲವು ಗ್ರಂಥಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಗಳಲ್ಲಿ ಮೂರು ರೀತಿಯ ಗ್ರಂಥಗಳಿವೆ. ಮೊದಲನೆಯದು "ಉಪನ್ಯಾಸ ಗ್ರಂಥ ಮಾಲೆ." ಈ ಮಾಲೆಯಲ್ಲಿ ಈಗಾಗಲೇ ಸುಮಾರು ಎಂಬತ್ತು ಗ್ರಂಥಗಳು ಪ್ರಕಟವಾಗಿವೆ. ಅನೇಕ ವಿಷಯಗಳನ್ನು ಕುರಿತು ಈ ಪುಟ್ಟ ಪುಟ್ಟ ಪುಸ್ತಕಗಳು ತಿಳಿವಳಿಕೆಯನ್ನು ಕೊಡುತ್ತವೆ.

ಶ್ರೀ ಬಿ. ಎಸ್. ಕುಲಕರ್ಣಿಯವರು ಬರೆದಿರುವ 'ಆಂಡಯ್ಯ' ಎಂಬ ಪುಸ್ತಕದಲ್ಲಿ ಸಂಗ್ರಹವಾದ ಕಬ್ಬಿಗರ ಕಾವದ ಪರಿಚಯವಿದೆ. ಶ್ರೀ ಎಸ್. ಎ. ಹೊಸಮನಿಯವರ 'ಬೆಳವಲನಾಡಿನ ಬೆಳೆಗಳು" ನಮ್ಮ ದೇಶದ ಉತ್ತರ ಜಿಲ್ಲೆಗಳಲ್ಲಿ ಬೆಳೆಯುವ ಬೆಳೆಗಳ ಸ್ಥೂಲ ವಿವರಣೆಯಿದೆ. ರೈತನಿಗೆ ಉಪಯೋಗವಾಗುವ ಅನೇಕ ಕಿರು ಪರಿಚಯಗಳು ಈ ಪುಸ್ತಕದಲ್ಲಿವೆ. ಜಾನಪದ ಕಥೆಗಳನ್ನು ಕುರಿತ ಶ್ರೀ ಎಲ್. ಆರ್. ಹೆಗ್ಗಡೆಯವರ ಹೊತ್ತಗೆಯಲ್ಲಿ ಜಾನಪದ ಕಥೆಗಳ ಚರಿತ್ರೆಯೂ ಕೆಲವು ಕಥೆಗಳ ಸ್ವಾರಸ್ಯ ನಿರೂಪಣೆಯೂ ಉತ್ತಮವಾದ ರಂಜಕ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ. ಶ್ರೀ ಕಲ್ಯಾಣಿಮಠ ಅವರ ವ್ಯವಸಾಯ ವಿಷಯಕವಾದ "ಸುಧಾರಿಸಿದ ಬೇಸಾಯ" ವಿಚಾರ ಪ್ರಚೋದಕವಾದ ಹೊತ್ತಗೆ. ರೈತರಿಗೆ ಇದು ಸಹ ಹತ್ತಿರ ಇರಬೇಕಾದ ಕೈಪಿಡಿ.

'ಕನ್ನಡ ನಾಡಿನ ಐತಿಹಾಸಿಕ ಮಹಾಪುರುಷರು' ಡಾ|| ಗೋಪಾಲ್ ಅವರ ಕಿರು ಹೊತ್ತಗೆ. ನಮ್ಮ ನಾಡಿನ ಹಿರಿಮೆಗೆ ಕಾರಣರಾದ ಹಲವರು ಐತಿಹಾಸಿಕ ವ್ಯಕ್ತಿಗಳ ಕಥೆಯಾಗಿದೆ. ಇದು ಬರಿಯ ಕಥೆಯಾಗಿರದೆ ವಿಚಾರ ಪ್ರಚೋದಕವಾದ ಬರವಣಿಗೆಯಾಗಿದೆ.

ಶ್ರೀ ಗುಂಜಾಳರು ಗ್ರಂಥಲಾಯದ ಬಗ್ಗೆ ಸಂಪೂರ್ಣ ಪರಿಚಯ ಅನುಭವ ಇರುವ ಕೆಲವರಲ್ಲಿ ಒಬ್ಬರು. ತಮ್ಮ ಅನುಭವವನ್ನು 'ಗ್ರಂಥಾಲಯದ ಅಂತರಂಗ' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಗ್ರಂಥಾಲಯಗಳನ್ನು ಉಪಯೋಗಿಸಬೇಕೆಂಬ ಪ್ರತಿಯೊಬ್ಬರಿಗೂ (ಅದರಲ್ಲೂ ವಿದ್ಯಾರ್ಥಿಗಳಿಗೆ) ಇದು ಬಹು ಅಗತ್ಯವಾಗಿ ಓದಬೇಕಾದ ಪುಸ್ತಕ.

ಶ್ರೀಮತಿ ವನಮಾಲಾ ಆಚಾರ್ ಅವರ 'ಸ್ತ್ರೀ ಮತ್ತು ಶಿಕ್ಷಣ' ಶಿಕ್ಷಣ ಕ್ಷೇತ್ರದ ಒಂದು ಸಮಸ್ಯೆಯನ್ನು ಅನೇಕ ಮುಖಗಳಿಂದ ಪರಿಶೀಲಿಸುವ ಪುಸ್ತಕ. ಇದರಲ್ಲಿ ಸ್ತ್ರೀಗೆ ಶಿಕ್ಷಣವು ಪುರುಷರಿಗೆ ಹೇಗೆ ಅಗತ್ಯವೋ ಹಾಗೆಯೇ ಎಲ್ಲ

ಕ್ಷೇತ್ರಗಳಲ್ಲಿಯೂ ಅವಶ್ಯಕ ಎಂಬುದನ್ನು ಸಕಾರಣವಾಗಿ ನಿರೂಪಿತವಾಗಿದೆ.

'ಜಾಗತಿಕ ಸರಕಾರ' ಒಂದು ವಿಚಾರ ಸಂಗ್ರಹದ ಗ್ರಂಥ. ಪ್ರಪಂಚದಲ್ಲಿ ಒಂದು ಸರಕಾರವಿರುವುದರ ಆಲೋಚನೆ ಬಹು ಹಳೆಯದು. ಅದು ಇದ್ದರೆ ಹೇಗಿರಬೇಕೆಂಬ ಬಗ್ಗೆ ಇಲ್ಲಿಯವರೆಗಿನ ಅನೇಕ ಪ್ರಮುಖರ ಅಭಿಪ್ರಾಯ ಸಂಗ್ರಹಣೆ ಮತ್ತು ವಿಮರ್ಶೆ. ಇಂದಿನ ಅಂಥ ಪ್ರಯತ್ನವೊಂದರ ಕಾರ್ಯನಿರ್ವಹಣೆಯ ರೀತಿಯ ವಿವರಣೆ. ಇದೂ ಕೂಡ ಸರಳವಾಗಿ ಬರೆದ ಗ್ರಂಥ.

ಶ್ರೀ ಎಚ್. ಎಂ. ಮರುಳಸಿದ್ದಯ್ಯನವರ 'ಸಮುದಾಯ ಸಂಘಟನೆ' ಎಂಬುದು Cammunity Development ಎಂಬುದನ್ನು ಕುರಿತ ಕನ್ನಡ ಗ್ರಂಥ. ಇದರಲ್ಲಿಯೂ 'ಕಮ್ಯೂನಿಟಿ'ಯನ್ನು ಕುರಿತು ಅನೇಕ ಸಮಸ್ಯೆಗಳು ಸರಳವಾಗಿ ನಿರೂಪಿಸಲ್ಪಟ್ಟಿವೆ. ಇದರಲ್ಲಿ ಒಂದು ಸಣ್ಣ ಶಬ್ದ ಕೋಶವೂ ಇದ್ದು ಕೆಲವು ಇಂಗ್ಲಿಷ್ ಪದಗಳಿಗೆ ಕನ್ನಡ ಪದಗಳನ್ನೂ ಕೊಡಲಾಗಿದೆ. ಇದು ಇಂಥ ಬರವಣಿಗೆಯಲ್ಲಿ ಅತ್ಯಾವಶ್ಯಕವೆಂಬುದನ್ನು ಲೇಖಕರು ಮನಗಂಡಿದ್ದಾರೆ.

ಡಾ|| ರಿತ್ತಿಯವರು 'ಅಶೋಕನ ಧರ್ಮ ಶಾಸನಗಳು' ಎಂಬ ಪುಸ್ತಕದಲ್ಲಿ ಅಶೋಕನ ಎಲ್ಲಾ ಶಾಸನಗಳ ನೇರವಾದ ಸರಳವಾದ ಪರಿಚಯವಿದೆ. 'ಪ್ರಾಚೀನ ಭಾರತದ ರಾಜ್ಯ ಪದ್ಧತಿ' ಎನ್ನುವುದು ಶ್ರೀ ಸಿ. ವಿ. ರಂಗಸ್ವಾಮಿಯವರ ರಚನೆ. ಇದು ಭಾರತದ ಮತ್ತು ವಿಶೇಷವಾಗಿ ಕರ್ನಾಟಕದ ರಾಜ್ಯಪದ್ಧತಿಗಳನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡುತ್ತದೆ. ಇವರು ಕೊಟ್ಟಿರುವ 'ಗ್ರಂಥ ಋಣ' ಭಾಗವು ಮುಂದಿನ ಅಭ್ಯಾಸಕ್ಕೆ ಸಹಾಯಕವಾಗಿದೆ.

ಶ್ರೀ ಎಸ್. ಎಸ್. ಕಬ್ಬಿನ ಅವರು ಅಕ್ಕಮಹಾದೇವಿಯನ್ನೂ, ಮೀರಾಬಾಯಿಯನ್ನೂ ಹೋಲಿಸಿ ಅವರಿಬ್ಬರ ಜೀವನದ ಮುಖ್ಯ ಸಂಗತಿಗಳ ಮೂಲಕ ಅವರ ಅನುಭಾವಿಕ ಜೀವನದ ಪರಿಚಯ ಮಾಡಿಕೊಟ್ಟಿದ್ದಾರೆ. ಇದು ಒಳ್ಳೆಯ ವಿಮರ್ಶಾತ್ಮಕ ಗ್ರಂಥ.

ಇಂಥದೇ ಇನ್ನೊಂದು ಉತ್ತಮ ಹೊತ್ತಗೆ "ಪುರಾಣ ಜಿಜ್ಞಾಸೆ." ಈ ಪುಸ್ತಕದಲ್ಲಿ ಶ್ರೀ ಎಲ್. ಆರ್. ಹೆಗ್ಗಡೆಯವರು ಪ್ರಪಂಚದ ಪುರಾಣಗಳ ಮೂಲಭೂತವಾದ ಚೈತನ್ಯವನ್ನು ಅರ್ಥ ಮಾಡಿಕೊಂಡು ಅದರ ಪರಿಚಯವನ್ನು ಒದಗಿಸಿದ್ದಾರೆ. ಪುರಾಣಗಳನ್ನು ಓದುವ ಬೇರೆ ಬೇರೆ ಮನೋವೃತ್ತಿಗಳ ಸೂಕ್ಷ್ಮ ಪರಿಚಯವಿದೆ. ಆಳವಾದ ಅಭ್ಯಾಸವನ್ನು ಇದರಲ್ಲಿ ನಾವು ಮನಗಾಣಬಹುದು.

ಶ್ರೀ ವಿ. ಎಸ್. ಕುಲಕರ್ಣಿಯವರು 'ಭಾರತದಲ್ಲಿ ಶೈಕ್ಷಣಿಕ ಪ್ರಯೋಗ' ಎಂಬ ಹೆಸರಿನ ಪುಸ್ತಕದಲ್ಲಿ ನಮ್ಮ ದೇಶದಲ್ಲಿ ಶಿಕ್ಷಣವನ್ನು ಭಾರತೀಯವನ್ನಾಗಿ ಮಾಡುವ ಪ್ರಯತ್ನಗಳನ್ನು ಕುರಿತು ಚಾರಿತ್ರಿಕವಾದ ವಿವರಣೆಯನ್ನು ನೀಡಿದ್ದಾರೆ.

ಶ್ರೀ ಎ. ಸಿ. ಕಲ್ಯಾಣಿಮಠ ಅವರು ಮಿಶ್ರತಳಿ ಬೆಳೆಗಳು ಹೇಗೆ ಅಧಿಕ ಉತ್ಪನ್ನವನ್ನು ಕೊಡಬಲ್ಲವು ಎಂಬುದನ್ನು ತಮ್ಮ ಪುಸ್ತಕದಲ್ಲಿ ವಿಸ್ತರಿಸಿದ್ದಾರೆ.

ಶ್ರೀ ಬಸವರಾಜ ಶಿರೂರ ಅವರು 'ಹರಿಹರನ ಗಿರಿಜಾ ಕಲ್ಯಾಣ' ಎಂಬ ಚಿಕ್ಕ ಹೊತ್ತಗೆಯಲ್ಲಿ ಹರಿಹರನು ನಿಜವಾಗಿ ಮಹಾಕವಿಯೆಂಬುದನ್ನು ಸ್ಥಾಪಿಸಲು ಕಾರಣಗಳನ್ನು ನೀಡಿದ್ದಾರೆ.

ಡಾ|| ಪಿ. ಎಸ್. ಶಂಕರ್ ಅವರ 'ಹೊಟ್ಟೆಯ ಹುಣ್ಣು' ತುಂಬ ಉಪಯುಕ್ತವಾದ ವೈದ್ಯ ವಿಷಯ ಗ್ರಂಥ. ಇದರಲ್ಲಿ ಭಾಷೆ ಸರಳ, ವಿಷಯ ಪ್ರೌಢ. ಜನಸಾಮಾನ್ಯಕ್ಕೆ ಹೇಗೆ ಇಂಥ ವಿಷಯ ನಿರೂಪಣೆಗಳಿಂದ ಹೆಚ್ಚು ಪ್ರಯೋಜನವಿದೆಯೆಂಬುದನ್ನು ಇಂಥ ಪುಸ್ತಕವನ್ನೋದುವುದರಿಂದ ನಾವು ಅರಿತುಕೊಳ್ಳಬಹುದು.

ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥ ಮಾಲೆಯಲ್ಲಿ ವಿಷಯ ವೈವಿಧ್ಯವಿದೆ, ನಿರೂಪಣಾ ಶೈಲಿಯಲ್ಲಿ ಸರಳತೆಯಿದೆ. ಎಲ್ಲ ಲೇಖಕರೂ ತಮ್ಮ ಶೈಲಿಯ ಪ್ರಕಾಶಕ್ಕಿಂತ ಹೆಚ್ಚಾಗಿ ಓದುಗನಿಗೆ ಹೇಗೆ ಸಹಾಯಕರಾಗಬಹುದೆಂಬುದನ್ನು ನೆನಪಿನಲ್ಲಿಟ್ಟಿದ್ದಾರೆ. ಆದುದರಿಂದಲೇ ಬರಹದಲ್ಲಿ ಸರಳತೆಯು ಸ್ಪಷ್ಟವಾಗಿದೆ. ಈ ಮಾಲೆಯಿಂದ ವಿಶ್ವವಿದ್ಯಾನಿಲಯದ ಒಂದು ವಿಶಿಷ್ಟ ಕಾರ್ಯ ನೆರವೇರುತ್ತಿದೆಯೆಂಬುದರಲ್ಲಿ ಅನುಮಾನವಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಗಳಲ್ಲಿ ಎರಡನೆಯ ರೀತಿಯದು : 'ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ.' ಈ ಗುಂಪಿನ ಪುಸ್ತಕಗಳು ಒಂದು ಸಾಹಿತ್ಯ ವಿಷಯವನ್ನು ಆರಿಸಿಕೊಂಡು ಆ ವಿಷಯದಲ್ಲಿ ಬೇರೆ ಬೇರೆ ವಿದ್ವಾಂಸರ ದೃಷ್ಟಿಗಳನ್ನು ಕ್ರೋಢೀಕರಿಸುವ ಪ್ರಯತ್ನ ಮಾಡುತ್ತವೆ. ಒಂದು ರೀತಿಯಲ್ಲಿ ಈ ಪುಸ್ತಕಗಳಿಂದ ಒಂದೇ ಲೇಖಕ ಅಥವಾ ಕೃತಿಯ ಬಗ್ಗೆ ಬೇರೆ ಬೇರೆಯವರ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದು ಸ್ವಾಗತಾರ್ಹವಾಗಿದೆ. ಕನ್ನಡದಲ್ಲಿ ವಿಮರ್ಶೆಯು ಸ್ಪಷ್ಟವಾದ ಸ್ವರೂಪವನ್ನು ಪಡೆಯುತ್ತಿರುವ ಈ ಸಂದರ್ಭದಲ್ಲಿ ಈ ಪ್ರಯತ್ನವು

ಸಫಲವಾಗುತ್ತದೆ. ಈ ರೀತಿಯ ಪುಸ್ತಕಗಳಲ್ಲಿ 'ನಿಜಗುಣ ಶಿವಯೋಗಿ', 'ರನ್ನ', 'ಪಂಪ' ಈ ಮೂವರ ವ್ಯಕ್ತಿತ್ವ ಮತ್ತು ಅವರ ಕೃತಿ ಪರಿಚಯಗಳು ನಡೆದಿವೆ. ಇವುಗಳಲ್ಲಿ ಅನೇಕ ಹಿರಿಯರು ಕಿರಿಯರು ಲೇಖನಗಳನ್ನು ಬರೆದಿದ್ದಾರೆ. ಇವು ಸಾಹಿತ್ಯಾಭಾಸಿಗಳಿಗೆ ತುಂಬ ಪ್ರಯೋಜನವಾಗಿವೆ. ಈ ಪ್ರಕಟಣೆಗಳಲ್ಲಿ **ಮೂರನೆಯ** ರೀತಿಯ ಗ್ರಂಥಗಳು "ವಿಶೇಷೋಪನ್ಯಾಸಮಾಲೆ"ಯ ಗ್ರಂಥಗಳು. ಇವುಗಳಲ್ಲಿ ಕನ್ನಡದಲ್ಲಿ ನಾಲ್ಕು ಗ್ರಂಥಗಳು, ಇಂಗ್ಲಿಷಿನಲ್ಲಿ ಒಂಬತ್ತು ಗ್ರಂಥಗಳು ಪ್ರಕಟವಾಗಿವೆ. ಕನ್ನಡದಲ್ಲಿ ಷಡಕ್ಷರಿಯನ್ನು ಕುರಿತು ಮೊದಲ ಗ್ರಂಥ. ಇದರಲ್ಲಿ ಆ ಕವಿಯ ಗ್ರಂಥಗಳ ಪರಿಚಯವಿದೆ. ಎರಡನೆಯದು ಶ್ರೀ ವಿ. ಸೀತಾರಾಮಯ್ಯನವರ "ಸಂಪ್ರದಾಯ ಮತ್ತು ಹೊಸ ಮಾರ್ಗ" ಎಂಬ ಗ್ರಂಥವು ಬಹು ಉಪಯುಕ್ತವಾದ ಗ್ರಂಥ. ಇದರಲ್ಲಿ ಲೇಖಕರು ಯಾವ ಪ್ರಧಾನ ವಿಷಯದಲ್ಲಿ, ರೀತಿಯಲ್ಲಿ, ದೃಷ್ಟಿಯಲ್ಲಿ, ಮೌಲ್ಯ ನಿರ್ಣಯದಲ್ಲಿ ನಮ್ಮ ಸಂಪ್ರದಾಯದ ಅಂಗವಾಗಿ ಹುಟ್ಟಿ ಬೆಳೆದುವೋ ಅವುಗಳ ಪರಿಚಯವನ್ನೇ ಸ್ಥೂಲವಾಗಿ'ಮಾಡಿಕೊಟ್ಟಿದ್ದಾರೆ. ಇಲ್ಲಿಯ ವಿಷಯ ವೈವಿಧ್ಯ ಅಪಾರವಾಗಿದೆ. ಅವುಗಳ ಮೇಲೆ ಬೀರಿರುವ ಚಾರಿತ್ರಿಕ ನೋಟ ವಿಷಯ ಸಂಗ್ರಹ ಬಹು ಸಹಾಯಕವಾಗಿದೆ. ಸಾಹಿತ್ಯದ ಒಂದು ಅಂಶವನ್ನು ನಿರೂಪಿಸಬೇಕಾದರೆ ಎಷ್ಟು ವಿದ್ವತ್ತು ಕೆಲಸ ಮಾಡಿದೆ ಎನ್ನುವುದನ್ನು ಇಲ್ಲಿ ನಾವು ತಿಳಿದುಕೊಳ್ಳಬಹುದು. ಇದೊಂದು ಉತ್ತಮ ಗ್ರಂಥ. ಸಾಹಿತಿಗಳು ಅತ್ಯಾವಶ್ಯಕವಾಗಿ ಸಂಗ್ರಹಿಸಬೇಕಾದದ್ದು.

'ಕನ್ನಡ ರಂಗಭೂಮಿಯ ಪುರೋಭಿವೃದ್ಧಿಯನ್ನು ಕುರಿತು ಶ್ರೀರಂಗರು ಬರೆದಿರುವ ಗ್ರಂಥವೂ ಅಷ್ಟೆ. ನಮ್ಮ ರಂಗಭೂಮಿಯ ಇತಿಹಾಸ, ಆಧುನಿಕ ರಂಗಭೂಮಿಯ ಚೈತನ್ಯ, ವ್ಯವಸಾಯ ನಾಟಕ, ವಿಲಾಸಿ ನಾಟಕ ಮಂಡಲಿಗಳು, ಮತ್ತು ಈ ರಂಗಭೂಮಿಯ ಮುನ್ನೋಟ, ಇವುಗಳನ್ನು ಕುರಿತು ಸವಿಮರ್ಶವಾಗಿ ವಸ್ತುವನ್ನು ಸಂಗ್ರಹಿಸಿದೆ. ಇದು ನಮ್ಮ ನಾಟಕ ವಿಲಾಸಿಗಳು, ಕಿರಿಯ ನಾಟಕಕಾರರು ಓದಲೇ ಬೇಕಾದ ಗ್ರಂಥ. ಇದರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಾಟಕಕ್ಕೆ ಹೇಗೆ ಪ್ರಾಧಾನ್ಯವಿರಬೇಕೆಂಬುದನ್ನು ನಿರೂಪಿಸಲಾಗಿದೆ. ವಿಚಾರ ಸಾಹಿತ್ಯ ನಿರ್ಮಾಣವನ್ನು ಕುರಿತ ಶಿವರಾಮ ಕಾರಂತರ ಗ್ರಂಥದಲ್ಲಿಯೂ ಇವೇ ಗುಣಗಳಿವೆ.

ಹೀಗೆ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥ ಪ್ರಕಟಣೆಯ ಕಾರ್ಯ ತುಂಬ ಸ್ತುತ್ಯವಾದ ರೀತಿಯಲ್ಲಿ ನಡೆಯುತ್ತಿದೆ. ಈ ಕಾರ್ಯವನ್ನು ನಡೆಸುತ್ತಿರುವಲ್ಲಿ ಡೈರೆಕ್ಟರ್ ಆದ ಶ್ರೀ ಚನ್ನವೀರ ಕಣವಿಯವರ ಕಲ್ಪನೆ, ಮಾರ್ಗದರ್ಶನ, ಕಾರ್ಯಸಾಧನೆಗಳನ್ನು ಕನ್ನಡಿಗರೆಲ್ಲರೂ ಮೆಚ್ಚಬೇಕು. ಈ ಗ್ರಂಥ ಸಂಕಲನ ಬೆಳೆದು ನಾಡಿನ ಎಲ್ಲ ಮೂಲೆಗಳಲ್ಲಿಯೂ ಸಿಗುವಂತಾಗಿ, ನಮ್ಮ ನಾಡಿನ ಮೂಲೆ ಮೂಲೆಗಳಲ್ಲೂ ಜ್ಞಾನ ಬೆಳಗುವಂತಾಗಲಿ. ಕರ್ನಾಟಕ ವಿಶ್ವವಿದ್ಯಾಲಯದ 'ಅರಿವೇ ಗುರು' ಎಂಬ ತಾರಕಮಂತ್ರ ಯಶಸ್ವಿಯಾಗಲಿ.

ಜಿ. ವೆಂಕಟಸುಬ್ಬಯ್ಯ

★ ★ ★

ಭಾರತಿ : ಸಂಪಾದಕರು, ಕಾಳೇಗೌಡ, ನಾಗವಾರ; ಭಾರತಿ ವಿದ್ಯಾಸಂಸ್ಥೆ, ಕಾಳಮುದ್ದನ ದೊಡ್ಡಿ, ಮಂಡ್ಯ ಜಿಲ್ಲೆ. ಪು. ೭೩.

ಭಾರತೀಯ ಪ್ರೌಢಶಾಲೆಯ ನಾಲ್ಕನೆ ಬೆಳೆಯಾದ 'ಭಾರತಿ'ಯನ್ನು 'ಜಾನಪದ' ಸಂಚಿಕೆಯಾಗಿ ತರುವ ಪ್ರಯತ್ನ ಮೆಚ್ಚತಕ್ಕದ್ದೆ. ಅದಕ್ಕೆ ಕಾರಣ ಹೈಸ್ಕೂಲ್ ವಿದ್ಯಾರ್ಥಿಗಳು ಜಾನಪದ ಸಾಹಿತ್ಯದ ನುಡಿಮುತ್ತುಗಳನ್ನು ಅರಸಿ ಆರಿಸಿ ಒಂದೆಡೆ ಕೂಡಿಕೊಡಲು ವಹಿಸಿರುವ ಶ್ರಮ. ಇವರನ್ನು ಈ ದಿಶೆಯಲ್ಲಿ ಕರೆದೊಯ್ಯುತ್ತಿರುವ ಅಧ್ಯಾಪಕರೂ ಪ್ರಶಂಸನೀಯರು. ಇಲ್ಲಿ ಬರುವ ಹಾಡುಗಳನ್ನು ಹಾಡಿರುವುದೂ ಉಂಟು.

ಇದಲ್ಲದೆ ಇಲ್ಲಿ ನಾಗವಾರರ 'ನಮ್ಮ ಮಾಧ್ಯಮ' ಲೇಖನವು ಕನ್ನಡದ ಬಗೆಗಿರುವ ತಿರಸ್ಕಾರ; ಅಲ್ಲಿರುವ ಕೆಚ್ಚು, ವಿಪುಲತೆಗಳನ್ನು ಸೂಚಿಸಿ ಅದರ ಬೆಳವಣಿಗೆಗೆ ಜನತೆ, ಸಮಾಜ, ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಹೇಳಲಾಗಿದೆ.

ಷೇಕ್ಸ್‌ಪಿಯರ್ ಕವಿಯ ಮಹೋನ್ನತ ಸೃಷ್ಟಿ 'ಕಿಂಗ್ ಲಿಯರ್' ಬಗೆಗಿನ ಲೇಖನ ಓದಲರ್ಹವಾಗಿದೆ. ಇಲ್ಲಿ ಸೂಕ್ಷ್ಮವಾಗಿ ನಾಟಕದ ವಸ್ತು, ಪಾತ್ರಗಳ ಮನೋಭಾವದ ಪರಿಚಯ ಮಾಡಿಕೊಡಲಾಗಿದೆ. ಇಂದಿನ ಶಿಕ್ಷಣದಲ್ಲಿನ ಲೋಪದೋಷಗಳು ಅದರ ನಿವಾರಣೆಯನ್ನು ಸೂಕ್ಷ್ಮವಾಗಿ ವಿವೇಚಿಸಿದ್ದಾರೆ ಶ್ರೀ ವೇಣುಗೋಪಾಲ್‌ರವರು.

ಒಟ್ಟಿನಲ್ಲಿ ಬೆಳೆಯುಸಿರಿ ಮೊಳಕೆಯಲ್ಲಿ ಎಂಬ ಮಾತು ಈ ಕೃತಿಯಲ್ಲಿ ಸತ್ಯವಾಗಿದೆ.

ಆರ್. ರಾಚಪ್ಪ

ಪರಿಷತ್ತಿನ ಚುನಾವಣೆಗಳು

ದಿನಾಂಕ ೨೪-೩-೧೯೬೮ರಲ್ಲಿ ಸೇರಿದ ಕಾರ್ಯಸಮಿತಿಯು ೨೪-೬-೧೯೬೮ರ ಒಳಗಾಗಿ ಚುನಾವಣೆಗಳನ್ನು ನಡೆಸಬೇಕೆಂದು ಗೊತ್ತು ಮಾಡಿತು. ಅದರಂತೆ ಶ್ರೀ ಬಿ. ಕೆ. ರಾಮಚಂಪ್ರರಾಯರು ಚುನಾವಣಾಧಿಕಾರಿಯಾಗಿ ನೇಮಕವಾಗಿ ಆ ಕಾರ್ಯಗಳನ್ನು ಮುಂದುವರೆಸುತ್ತಿದ್ದರು. ಆ ವಿಷಯವು ಏಪ್ರಿಲ್-ಮೇ-೧೯೬೮ರ "ಕನ್ನಡನುಡಿ" ಸಂಚಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿಂದ ಮುಂದೆ ದಿನಾಂಕ ೧೯-೫-೧೯೬೮ರಲ್ಲಿ ಸೇರಿದ್ದ ಕಾರ್ಯಸಮಿತಿಯು ಆ ದಿನದವರೆಗೆ ಆ ಬಗ್ಗೆ ನಡೆದಿದ್ದ ಕಾರ್ಯಕಲಾಪಗಳನ್ನೂ ಮತ್ತು ಆ ಸಂಬಂಧವಾಗಿ ಪರಿಷತ್ತಿಗೆ ಬಂದಿದ್ದ ಆಕ್ಷೇಪಣೆಗಳನ್ನೂ ವಿಚಾರ ಮಾಡಿ, ಚುನಾವಣೆಗಳನ್ನು ಮುಂದುವರೆಸತಕ್ಕದ್ದೆಂದು ತೀರ್ಮಾನಿಸಿತು. ಈ ತೀರ್ಮಾನ ಸರಿಯಿಲ್ಲವೆಂದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀ ತಿ. ತಾ. ಶರ್ಮರವರು ಹೈಕೋರ್ಟಿಗೆ ರಿಟ್ ಅರ್ಜಿಯನ್ನು ದಾಖಲು ಮಾಡಿದರು. ಪರಿಷತ್ತಿನಂತಹ ಘನತೆವೆತ್ತ ಸಂಸ್ಥೆಯ ವ್ಯವಹಾರಗಳು ಕೋರ್ಟಿನ ಹೊರಗಡೆ ಇತ್ಯರ್ಥವಾಗುವುದು ಆವಶ್ಯಕವೂ ಗೌರವಯುತವೂ ಆಗುವುದೆಂದು ಆ ದಿಸೆಯಲ್ಲಿ ಪ್ರಯತ್ನಗಳು ಮುಂದುವರೆದು ಪರಿಷತ್ತಿನ ವಕೀಲರಾದ ಶ್ರೀ ದಾತಾರರ ಸಲಹೆಯನ್ನು ಪಡೆದು ಅವರ ಸಲಹೆಯಂತೆ, ಕಾರ್ಯಸಮಿತಿ ತಾನು ೧೯-೫-೧೯೬೮ರಲ್ಲಿ ಚುನಾವಣೆಗಳನ್ನು ಮುಂದುವರೆಸುವಂತೆ ಮಾಡಿದ್ದ ನಿರ್ಣಯವನ್ನೂ ಮತ್ತು ತತ್ಸಂಬಂಧವಾಗಿ ಮಾಡಿದ ಇತರ ನಿರ್ಣಯಗಳನ್ನೂ ವಾಪಸು ತೆಗೆದುಕೊಂಡಿತು. ಸೆಪ್ಟಂಬರ್' ೬೮ರ "ಕನ್ನಡನುಡಿ"ಯಲ್ಲಿ ಪ್ರಕಟಿಸಿದ್ದ ಕಾರ್ಯಸಮಿತಿ ನಿರ್ಣಯವು ಆಕ್ಷೇಪಣೀಯವೆಂದು ಕೋರ್ಟು ಅಭಿಪ್ರಾಯಪಟ್ಟಿದ್ದರಿಂದ ಅದಕ್ಕಾಗಿ ವಿಷಾದವನ್ನೂ ಸೂಚಿಸಲಾಯಿತು. (ನವೆಂಬರ್ ೧೯೬೮ರ ಕನ್ನಡನುಡಿ) ಕಡೆಯದಾಗಿ ದಿನಾಂಕ ೧೪-೧೦-೧೯೬೮ರಲ್ಲಿ ಕೋರ್ಟು ಕೊಟ್ಟ ತೀರ್ಪನ್ನು ಈ ಕೆಳಗೆ ಕೊಟ್ಟಿದೆ:

JUDGEMENT

Mr. Datar says that on his advice tendered to the Kannada Sahitya Parishat which is respondent 1 in this Writ Petition that the impugned resolution passed by the Executive Committee of the Parishat was without competents the Executive Committee of the Parishat has passed a resolution rescinding the impugned resolution and proposing to draw up a fresh calendar of elections. Mr. Rama Jois states that the petitioner who is satisfied with the rescission of the resolution does not press this writ petition, and so, there is nothing more to be done in this writ petition.

During the pendency of this Writ Petition when it was brought to our notice that the President of the Parishat who is also the editor of a Journal called Kannada Nudi has published a news item which savoured of a comment on the proceeding pending in this writ petition, the President of the Parishat offered to express his regret for the publication, and to-day an affidavit has been produced before us which records that regret. Mr. Datar also says that this affidavit will be published in the Kannada Nudi. So it is not necessary for us to take any further notice of this matter.

No costs.

(Sd.) A. R. SOMNATH IYER, *Judge.*
(Sd.) AHMED ALI KHAN, *Judge.*

"TRUE COPY"

(Sd.) K. NARASINGARAO,
Section Officer, 23-11-1968
High Court of Mysore, Bangalore.

ಈ ಕೋರ್ಟಿನ ವ್ಯವಹಾರದಲ್ಲಿ ಆಗಾಗ ಸೂಕ್ತ ಸಲಹೆಗಳನ್ನು ಕೊಟ್ಟು ತುಂಬ ಅಭಿಮಾನದಿಂದಲೂ ದಕ್ಷತೆಯಿಂದಲೂ ಕಾರ್ಯ ನಿರ್ವಹಿಸಿದ ಪರಿಷತ್ತಿನ ವಕೀಲರಾದ ಸುಪ್ರೀಂ ಕೋರ್ಟ್ ಅಡ್ವೊಕೇಟ್ ಶ್ರೀ ಬಿ. ಎನ್. ದಾತಾರ್ ಎಲ್‌ಎಲ್.ಬಿ., ಅವರಿಗೆ ಪರಿಷತ್ತು ತುಂಬ ಕೃತಜ್ಞವಾಗಿದೆ.

ಸಂಪಾದಕೀಯ

ಸಾಹಿತ್ಯ ಪ್ರಚಾರ ಕಾರ್ಯ

ಈ ಸಲದ ರಾಜ್ಯೋತ್ಸವ ಸಮಯದಲ್ಲಿ ಬೆಂಗಳೂರು ನಗರದಲ್ಲಿ ಒಂದು ನೂತನ ಪ್ರಯೋಗವು ನಡೆದು ನಾಡಿನ ಎಲ್ಲ ಜನರ ಗಮನವನ್ನು ಸೆಳೆದಿದೆ. ಡಾ. ಆರ್. ಎಸ್. ಮುಗಳಿ ಮತ್ತು ನಗರದ ಮಾಜಿ ಮೇಯರ್ ಆದ ಶ್ರೀ ಜಿ. ನಾರಾಯಣ ಅವರ ನೇತೃತ್ವದಲ್ಲಿ ಹತ್ತು ದಿನಗಳ ಕಾಲ ಸಾಹಿತ್ಯ ಪ್ರಚಾರ ಕಾರ್ಯ ನಡೆಯಿತು. ನಗರದ ಮೂರು ಭಾಗಗಳಲ್ಲಿ ಕನ್ನಡ ಗ್ರಂಥಪ್ರದರ್ಶನ ನಡೆಯಿತು. ಸಾಮಾನ್ಯವಾಗಿ ನೋಡಸಿಗದ ಅನೇಕ ಗ್ರಂಥಗಳು ಈ ಪ್ರದರ್ಶನದಲ್ಲಿ ಕಣ್ಣಿಗೆ ಬಿದ್ದವು. ಸಾಹಿತಿಗಳಲ್ಲಿ ಅನೇಕರು ಈ ಪ್ರದರ್ಶನದ ಪ್ರಯೋಜನವನ್ನು ಪಡೆದುಕೊಂಡರು.

ಉತ್ಸವದ ಹತ್ತನೆಯ ದಿನ ಮಲ್ಲೇಶ್ವರದ ಹತ್ತು ರಸ್ತೆಗಳನ್ನು ಆರಿಸಿಕೊಂಡು ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ಮನೆಮನೆಗೆ ಪುಸ್ತಕಗಳನ್ನು ಒಯ್ದು ಮಾರಾಟ ಮಾಡಲಾಯ್ತು. ಈ ಕಾರ್ಯದ ಅನುಭವ ಪುಸ್ತಕ ಮಾರಿದವರಿಗೂ ಕೊಂಡವರಿಗೂ ಇಬ್ಬರಿಗೂ ಹೊಸದು.

ಅನುಭವಗಳು ಹೇಗೆ ಇರಲಿ ಈ ಪ್ರಯತ್ನದಿಂದ ಒಂದು ಸತ್ಯ ಮಾತ್ರ ಹೊರ ಬಿದ್ದಿದೆ. ನಮ್ಮ ಜನರಿಗೆ ಸಾಹಿತ್ಯದ ಬಗ್ಗೆ ಆಸಕ್ತಿಯಿಲ್ಲದಿಲ್ಲ. ಸಾಹಿತ್ಯವು ಕೈಗೆ ಸಿಕ್ಕುವಂತೆ, ಜೋಬಿಗೆ ಎಟುಕುವಂತೆ ಏರ್ಪಾಟಾದರೆ ಕನ್ನಡಿಗರು ಇತರರಿಗೆ ಹಿಂದೆ ಬೀಳುವುದಿಲ್ಲ. ಇದನ್ನರಿತು ನಮ್ಮ ಮುಂದಿನ ಕಾರ್ಯಗಳು ಸಿದ್ಧವಾಗಬೇಕಾಗಿದೆ.

ಕನ್ನಡದ ಎಲ್ಲ ಮುದ್ರಿತ ಪುಸ್ತಕಗಳೂ ಒಂದು ಕಡೆ ಸಿಕ್ಕುವಂತೆ ಏರ್ಪಾಟಾಗಬೇಕು. ರಾಜಧಾನಿಯಲ್ಲಿಯೇ ಇದು ಮೊದಲು ಸಾಧ್ಯವಾದರೆ ಆ ಬಳಿಕ ಇತರ ಕಡೆಗಳಲ್ಲಿಯೂ ಸಾಧ್ಯವಾಗುತ್ತದೆ. ಇದಕ್ಕೆ ಒಂದು ಮಾರಾಟದ ಸಂಸ್ಥೆ ರೂಪುಗೊಳ್ಳಬೇಕು. ಸರಕಾರದ, ಲೇಖಕರ, ಪ್ರಕಟಣಕಾರರ ಸಹಾಯ ಅದಕ್ಕೆ ಒದಗಬೇಕು. ಈ ದಿಶೆಯಲ್ಲಿ ಜನ ಮುಂದನ್ನು ರೂಪಿಸಬೇಕು.

ಸಾಹಿತ್ಯ ಪ್ರಚಾರ ಸಮಿತಿಯು ಅನುಭವವನ್ನು ಮೂಲವಾಗಿಟ್ಟುಕೊಂಡು ಈ ಕಡೆ ಕಾರ್ಯವು ಮುಂದುವರಿದರೆ ಫಲಕಾರಿಯಾಗುತ್ತದೆಂಬುದು ಬಹುಜನರ ಅಭಿಪ್ರಾಯ.

ಅಂತೂ ಈ ನೂತನ ಪ್ರಯೋಗವನ್ನು ನಡೆಸಿದವರೆಲ್ಲರೂ ಅಭಿನಂದನ ಯೋಗ್ಯರು. ಅದರಲ್ಲಿಯೂ ಕಾರ್ಯಕ್ರಮದ ಪ್ರತಿಯೊಂದು ಹಂತವನ್ನೂ ರೂಪಿಸಿ ನಿರ್ವಹಿಸಿದ ಕಾರ್ಯಾಧ್ಯಕ್ಷ ಶ್ರೀ ಜಿ. ನಾರಾಯಣ ಅವರನ್ನು ನಾಡು ಅಭಿನಂದಿಸಬೇಕು.

ಶ್ರೀ ಬಸವರಾಜ ಕಟ್ಟೀಮನಿಯವರಿಗೆ ಸೋವಿಯತ್ ದೇಶದ ನೆಹರು ಪ್ರಶಸ್ತಿ

ಕಟ್ಟೀಮನಿಯವರು ನಮ್ಮ ಕಾದಂಬರಿಕಾರರಲ್ಲಿ ಮುಖ್ಯರಾದವರಲ್ಲಿ ಒಬ್ಬರು. ನಿಷ್ಠಾವಂತ ಲೇಖಕರಾದ ಇವರ ಬರೆಹದಲ್ಲಿ ಒಂದು ತೀಕ್ಷ್ಣತೆಯಿದೆ. ಹೇಳಿದ್ದನ್ನು ಹೃದಯಕ್ಕೆ ಮುಟ್ಟಿಸುವ ಮೊನಚಿದೆ. ಅವರ ಅನೇಕ ಕಾದಂಬರಿಗಳಲ್ಲಿ ಅವರ ಶೈಲಿಯ ಬಿಗಿ, ನಿರೂಪಣೆಯ ನೇರ ಕಂಡು ಬರುತ್ತದೆ. ದೀನ, ದಲಿತ ಜನರ ಬಗ್ಗೆ ಅನುಕಂಪ ತೋರಿಸುವ ಈ ಸಾಹಿತಿಗೆ ಸ್ವಂತ ಅನುಭವವೇ ಈ ತೀಕ್ಷ್ಣವಾದ ಅಭಿವ್ಯಕ್ತಿಯನ್ನೀ ತಂದಿದೆಯೆನ್ನಬೇಕು.

ಕೆಲವರು ಕಾದಂಬರಿಕಾರರಂತೆ ಇವರು ಹೊತ್ತಿಗೊಂದು ತತ್ವಕ್ಕೆ ಅಂಟಿಕೊಳ್ಳುವವರಲ್ಲ. ಆರು ಕಾಸಿಗೆ ಅತ್ತೆ ಕಡೆಗೆ ಮೂರು ಕಾಸಿಗೆ ಮಾವನ ಕಡೆಗೆ ಉಯ್ಯಾಲೆಯಾಡುವವರಲ್ಲ. ನಂಬಿದ್ದನ್ನು ನೇರವಾಗಿ ನುಡಿಯುವ ಸರಳ ಆದರೆ ನಿರ್ದಿಷ್ಟವಾದ ಗುರಿಯುಳ್ಳವರು ; ಶುದ್ಧವಾದ ಅಂತರಂಗ ಉಳ್ಳವರು. ಅಂಥವರು ; ಈ ಗೌರವವನ್ನು ಪಡೆದಿರುವುದು ಸ್ವಾಗತಾರ್ಹವಾಗಿದೆ. ಶ್ರೀಯುತರ ರಷ್ಯಾ ಪ್ರವಾಸವು ಶುಭಕರವಾಗಿದ್ದು, ಅವರ ಅನುಭವವು ಹೆಚ್ಚಿ ಕನ್ನಡಕ್ಕೆ ಇನ್ನೂ ಅನೇಕ ಕಾದಂಬರಿಗಳು "ಜ್ವಾಲಾಮುಖಿಯ ಮೇಲೆ ಮತ್ತು ಜರತಾರಿ ಜಗದ್ಗುರು"ಗಳಂಥ ಸ್ವಾರಸ್ಯವಾದ, ಆದರೆ ಸತ್ಯನಿರೂಪಣೆಯುಳ್ಳ ಗ್ರಂಥಗಳು ಹೊರಬರಲಿ ಎಂದು 'ನುಡಿ' ಹಾರೈಸುತ್ತದೆ.

ಪರಿಷತ್ತಿನ ಸುದ್ದಿಗಳು

ರಾಜ್ಯೋತ್ಸವ ಸಂದರ್ಭದಲ್ಲಿ
ಕನ್ನಡ ನಾಡಿನಲ್ಲಿ ಪರಿಷದಧ್ಯಕ್ಷರ ಪ್ರವಾಸ

ಸಾಹಿತ್ಯ ಪ್ರಚಾರಕ್ಕಾಗಿಯೂ, ಅಖಿಲ ಕರ್ಣಾಟಕ ವ್ಯಾಪ್ತಿಯುಳ್ಳ ಪರಿಷತ್ತಿನ ಹೊಸ ನಿಬಂಧನೆಗಳ ಪರಿಚಯ ಮಾಡಿಕೊಡುವುದಕ್ಕಾಗಿಯೂ ಜಿಲ್ಲಾ ಪ್ರತಿನಿಧಿಗಳು ಪರಿಷತ್ತಿನ ಕಾರ್ಯ ಸಮಿತಿಗೆ ಆರಿಸಿ ಬರಲು ಮತ್ತು ಪರಿಷತ್ತಿನ ಶಾಖಾ ಸಂಸ್ಥೆಗಳನ್ನು ತೆರೆಯಲು ಅನುಕೂಲಿಸುವಂತೆ ಜಿಲ್ಲೆಗಳಲ್ಲಿ ಸದಸ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕಾಗಿಯೂ ಗುಲ್ಬರ್ಗದಲ್ಲಿ ಈ ವರುಷ ನಡೆಸಬೇಕೆಂದಿರುವ ಸಾಹಿತ್ಯ ಸಮ್ಮೇಳನದ ಬಗ್ಗೆ ಮಾತುಕತೆಗಳನ್ನು ನಡೆಸುವುದಕ್ಕಾಗಿಯೂ, ಜಿಲ್ಲೆಗಳ ವಿದ್ಯಾಧಿಕಾರಿಗಳನ್ನು ಭೇಟಿಮಾಡಿ ವಿದ್ಯಾ ಇಲಾಖೆಯ ಡೈರೆಕ್ಟರ ಹುಕುಮಿನಂತೆ ಜಿಲ್ಲೆಯ ಎಲ್ಲ ಪ್ರೌಢಶಾಲೆಗಳೂ ಕನ್ನಡಕ-ನ್ನಡ ನಿಂಘಟುವನ್ನು ಕೊಳ್ಳಲು ಚಂದಾ ಕಳುಹಿಸುವಂತೆ ಪ್ರಾರ್ಥಿಸುವುದಕ್ಕಾಗಿಯೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಕನ್ನಡ ನಾಡಿನಲ್ಲಿ ಪ್ರವಾಸ ಮಾಡಿದರು. ಈ ಸಲದ ರಾಜ್ಯೋತ್ಸವ ನಾಡಿನಲ್ಲೆಲ್ಲ ಹೆಚ್ಚು ಪರಿಣಾಮಕಾರಿಯಾಗುವಂತೆ ಕರ್ಣಾಟಕದ ವಿವಿಧ ಭಾಗಗಳಲ್ಲಿ ನಡೆದ ರಾಜ್ಯೋತ್ಸವದಲ್ಲಿ ಅವರು ಪಾಲ್ಗೊಂಡಿದ್ದು ಜನ ಸಾಮಾನ್ಯರನ್ನೂ ಸಾಹಿತಿಗಳನ್ನೂ ಕಂಡು ಪರಿಷತ್ತಿನ ಬಗ್ಗೆಯೂ ಸಾಹಿತ್ಯ ಸಮಸ್ಯೆಗಳ ಚಟುವಟಿಕೆಗಳ ಬಗ್ಗೆಯೂ ಪರಸ್ಪರ ವಿಚಾರ ವಿನಿಮಯ ನಡಸಿದರು.

ಬಳ್ಳಾರಿಯಲ್ಲಿ ಕನ್ನಡ ಸಂಘದ ಆಶ್ರಯದಲ್ಲಿ ಭಾಷಣ ಮಾಡಿ ನಾಡಿನ ಹಿತವನ್ನು ರಕ್ಷಿಸುವುದರಲ್ಲಿ ಸಾಹಿತಿಗಳ ಕರ್ತವ್ಯವನ್ನು ವಿವರಿಸಿದರು. ಪರಿಷತ್ತಿನ ಚಟುವಟಿಕೆಗಳ ಬಗ್ಗೆ ವಿವರವನ್ನು ನೀಡಿದರು. ಗಮಕ ವಿದ್ವಾನ್ ರಾಮಾಶಾಸ್ತ್ರಿಗಳು ಅಧ್ಯಕ್ಷರಿಗೆ ಸಂತೋಷಕೂಟವನ್ನು ಏರ್ಪಡಿಸಿದ್ದರು.

ರಾಯಚೂರಿನಲ್ಲಿ ನಮ್ಮ ಕಾರ್ಯಸಮಿತಿಯ ಸದಸ್ಯರಾದ ಡಾ. ಎನ್. ರಾಮಕೃಷ್ಣರಾಯರ ನೇತೃತ್ವದಲ್ಲಿ ಸಕಲ ಸಿದ್ಧತೆಗಳೂ ನಡೆದಿದ್ದವು. ಪೌರಸಭಾಧ್ಯಕ್ಷರಾದ ಡಾ. ಸಂಗಮೇಶ್ವರ ಸರದಾರರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಸಂಘದ ಕಟ್ಟಡದಲ್ಲಿ ಸಭೆ ಸೇರಿದ್ದಿತು. ರಾಯಚೂರಿನ ಜನರು ಅತಿ ಉತ್ಸಾಹದಿಂದ ಪರಿಷತ್ತಿನ ಬಗ್ಗೆ ತಿಳಿವಳಿಕೆಯನ್ನು ಪಡೆದರು. ರಾತ್ರಿ ಪುರಸಭಾ ಸಮಿತಿಯ ಪರವಾಗಿ ಅಧ್ಯಕ್ಷರಿಗೆ ಔತಣ ಕೂಟದ ಸತ್ಕಾರ ನಡೆಯಿತು. ಪುರಸಭಾ ಕಮಿಷನರ್ ಆದ ಕಾದಂಬರಿಕಾರ ಜಯತೀರ್ಥ ರಾಜಪುರೋಹಿತರು, ಕವಿಗಳಾದ ಶಾಂತರಸ ಅವರು, ಹಮ್‌ದರ್ದ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಡಾ. ಹುಣಸ್ಯಾಳ್ ಅವರು ರಾಯಚೂರಿನ ಇತರ ಪುರಪ್ರಮುಖರೂ ಔತಣದಲ್ಲಿ ಭಾಗವಹಿಸಿದ್ದರು. ಸಾಹಿತಿಗಳ ಕೂಟದಲ್ಲಿ ಚರ್ಚೆ ನಡೆಯಿತು. ಹಮ್‌ದರ್ದ್ ಶಾಲೆಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಅಧ್ಯಕ್ಷರು ಭಾಷಣಮಾಡಿದರು. ಕಾದಂಬರಿಕಾರರೂ ನಾಟಕಕಾರರೂ ಆದ ಜಯತೀರ್ಥ ರಾಜಪುರೋಹಿತರು ಅಧ್ಯಕ್ಷರಿಗೆ ಸತ್ಕಾರವನ್ನೇರ್ಪಡಿಸಿದ್ದರು.

ಬೀದರಿನಲ್ಲಿ ಕರ್ನಾಟಕ ಪ್ರೌಢಶಾಲೆಯಲ್ಲಿ ಬಿ. ವಿ. ಬಿ. ಕಾಲೇಜಿನ ಪ್ರಿನ್ಸಿಪಾಲರಾದ ಬಿ. ಟಿ. ನಾಸನೂರ್ ಅವರ ಅಧ್ಯಕ್ಷತೆಯಲ್ಲಿ ಅಧ್ಯಕ್ಷರ ಭಾಷಣವಾಯಿತು. ಪ್ರೊ. ಅಲಗೂರ್ ಶ್ರೀ ಸಿಂಪಿ ಲಿಂಗಣ್ಣ, ಶೇಷಗಿರಿರಾವ್ ಕಸ್ತೂರಿ, ಪಂಚಾಕ್ಷರಿ, ಹನುಮಂತಪ್ಪ ಪಾಟೀಲ್ ಮುಂತಾದ ಸಾಹಿತಿಮಿತ್ರರು, ಸಾಹಿತ್ಯಕಾರ್ಯದ ಬಗ್ಗೆ ಚರ್ಚಿಸಿದರು.

ಗುಲ್ಬರ್ಗದಲ್ಲಿ ಪುರಸಭಾಧ್ಯಕ್ಷರಾದ ಶ್ರೀ ನೀಲಕಂಠರಾವ್ ಪಾಟೀಲ್ ಅವರ ನೇತೃತ್ವದಲ್ಲಿಯೂ, ಕನ್ನಡ ಸಾಹಿತ್ಯ

ಸಂಘದ ಅಧ್ಯಕ್ಷರಾದ ತವಗ ಭೀಮಸೇನರಾಯರ ನೇತೃತ್ವದಲ್ಲಿಯೂ, ಅನೇಕ ಕಾರ್ಯಕ್ರಮಗಳು ನಡೆದುವು. ರಾಜ್ಯ ಸಚಿವರಾದ ಶ್ರೀ ಮಹಮ್ಮದಾಲಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯೋತ್ಸವ ಸಮಯದಲ್ಲಿ ಪರಿಷದಧ್ಯಕ್ಷರು ಭಾಷಣಮಾಡಿ, ನಾಡಿನ ಹಿರಿಮೆಯನ್ನು ಕನ್ನಡ ಸಾಹಿತ್ಯದ ಹಿರಿಮೆಯನ್ನು ವಿಸ್ತರಿಸಿ, ನಾಡಿಗೆ ಕರ್ಣಾಟಕವೆಂಬ ಹೆಸರು ರಾಜಕಾರಣಿಗಳ ಸಹಕಾರದಿಂದ ಬೇಗ ಲಭಿಸಲಿ ಎಂದು ಹಾರೈಸಿದರು. ಡಿವಿಜನಲ್ ಕಮಿಷನರ್ ಆದ ಶ್ರೀ ರಹಮತ್ತುಲ್ಲಾ ಅವರೂ, ಡೆಪ್ಯುಟಿ ಕಮಿಷನರಾದ ಶ್ರೀ ಸಿದ್ದಿಕಿ ಅವರೂ ಸಮಾರಂಭದಲ್ಲಿ ಭಾಗವಹಿಸಿದರು.

ಗುಲ್ಬರ್ಗದ ಸಾಹಿತಿಗಳಾದ ಶ್ರೀ ಬಿ. ಎ. ಸನದಿ, ಶ್ರೀ ರಾಘವೇಂದ್ರ ಇಟಗಿ, ಶ್ರೀ ತವಗ ಭೀಮಸೇನರಾವ್, ಶ್ರೀ ಗ್ರಾಮಪುರೋಹಿತ ಇವರುಗಳೊಡನೆ ಅನೇಕ ಸಾಹಿತ್ಯ ವಿಷಯಗಳ ಚರ್ಚೆ ನಡೆಯಿತು.

ಮಹಾರಾಷ್ಟ್ರ ಸಾಹಿತ್ಯ ಮಂಡಳಕ್ಕೆ ಪರಿಷದಧ್ಯಕ್ಷರು ಡಾ. ಕೇಸ್ಕರ್ ಅವರೊಡನೆ ಭೇಟಿ ನೀಡಿದರು. ಆ ಮಂಡಳದವರು ನೀಡಿದ ಸತ್ಕಾರದಲ್ಲಿ ಭಾಗವಹಿಸಿದರು.

ಕನ್ನಡ ಸಾಹಿತ್ಯ ಸಂಘದಲ್ಲಿ ಡಾ. ಕೇಸ್ಕರ್ ಅವರು, ಶ್ರೀ ಬಿ. ಎ. ಸನದಿಯವರು ಅನುವಾದಮಾಡಿರುವ 'ಉಗ್ರ' ಅವರ ಕಾದಂಬರಿ ರಕ್ತಮಾಂಗಲ್ಯ ಎಂಬ ಗ್ರಂಥವನ್ನು ಬಿಡುಗಡೆಮಾಡಿದರು. ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅಂದು ಅಧ್ಯಕ್ಷತೆ ವಹಿಸಿದ್ದರು.

ಧಾರವಾಡದಲ್ಲಿ ವಿದ್ಯಾವರ್ಧಕ ಸಂಘದಲ್ಲಿ ಅಧ್ಯಕ್ಷರು ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದರು. ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿ ವಿವರಣೆ ಪಡೆದರು. ಸಂಘದ ಅಧ್ಯಕ್ಷರಾದ ಪ್ರೊ. ವಿ. ಜಿ. ಕುಲಕರ್ಣಿಯವರು ಅಧ್ಯಕ್ಷರಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು. ಅಧ್ಯಕ್ಷರು ಶ್ರೀ ಶಂ.ಬಾ. ಜೋಷಿ ಅವರನ್ನು ಕಂಡು, ಅವರಿಗೆ ರಾಜ್ಯದ ಸಾಹಿತ್ಯ ಅಕಾಡೆಮಿಯ ಸನ್ಮಾನ ಸಂದುದಕ್ಕಾಗಿ ಅಭಿನಂದಿಸಿ ಪರಿಷತ್ತಿನ ಪರವಾಗಿ ಸನ್ಮಾನಮಾಡಿದರು.

ಧಾರವಾಡದ ಕರ್ಣಾಟಕ ಹೈಸ್ಕೂಲಿನಲ್ಲಿ ಧಾರವಾಡದ ಹೈಸ್ಕೂಲುಗಳ ಮುಖ್ಯೋಪಾಧ್ಯಾಯರನ್ನು ಸಭೆಸೇರಿಸಿ ನಿಘಂಟಿನ ಬಗೆ ಅಧ್ಯಕ್ಷರು ವಿವರನೀಡಿದರು. ಆ ಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಬಂಗೇರಾ ಅವರೂ, ಶ್ರೀ ವರದರಾಜ ಹುಯಲಗೋಳ್ ಅವರೂ ತುಂಬ ಸಹಾಯ ಮಾಡಿದರು. ಈ ಶಾಲೆಗೆ ಹಿಂದೆ ಕಿಟ್ಟೆಲ್ ಅವರು ಮುಖ್ಯೋಪಾಧ್ಯಾಯರಾಗಿದ್ದರೆಂದೂ, ಜೇಗ್ಲರ ಅವರೂ ಕೆಲವುಕಾಲ ಅಧ್ಯಾಪಕರಾಗಿದ್ದರೆಂಬುದೂ ಈ ಸಂದರ್ಭದಲ್ಲಿ ಪರಿಷದಧ್ಯಕ್ಷರ ನೆನಪಿಗೆಬಂದು ಸನ್ನಿವೇಶ ಕೃತಜ್ಞತಾ ಪೂರ್ಣವಾಗಿತ್ತು. ಎಲ್ಲ ಮುಖ್ಯ ಅಧ್ಯಾಪಕರೂ ನಿಘಂಟಿಗೆ ಮುಂಗಡ ಹಣ ಕಳುಹಿಸುವುದಾಗಿ ಭರವಸೆ ನೀಡಿದ್ದಾರೆ. ಮುಖ್ಯಾಧ್ಯಾಪಕರ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಿ. ಎಸ್. ಕುಲಕರ್ಣಿಯವರು ಈ ಸಮಯದಲ್ಲಿ ತುಂಬ ಸಹಾಯಮಾಡಿದರು.

ಶಿವಮೊಗ್ಗದಲ್ಲಿ ಹೊಸೂಡಿ ವೆಂಕಟಶಾಸ್ತ್ರಿಗಳ ಸಭಾಭವನದಲ್ಲಿ ಅಧ್ಯಕ್ಷರು ಭಾಷಣಮಾಡಿದರು. ಹೊಸೂಡಿ ದತ್ತಾತ್ರಿ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚಿದಂಬರ ಶಾಸ್ತ್ರಿಗಳು, ಶ್ರೀ ವೆಂಕಟರಾಮಾಶಾಸ್ತ್ರಿಗಳು, ಶ್ರೀ ನರಸಿಂಹಮೂರ್ತಿಗಳು ಮುಂತಾಗಿ ಊರಿನ ಹಿರಿಯರೂ ಸಾಹಿತಿಗಳೂ ಸಭೆಯಲ್ಲಿ ಭಾಗವಹಿಸಿದ್ದರು.

ಈ ಎಲ್ಲ ಕಡೆಗಳಲ್ಲಿಯೂ ಪರಿಷದಧ್ಯಕ್ಷರು ಜಿಲ್ಲಾ ಶಿಕ್ಷಣಾಧಿಕಾರಿಗಳನ್ನೂ, ಡಿ. ಡಿ. ಪಿ. ಐ. ಅವರನ್ನೂ ಕಂಡು ಕನ್ನಡ-ಕನ್ನಡ ನಿಘಂಟಿಗೆ ಮುಂಗಡ ಹಣ ಸಂದಾಯ ಮಾಡುವಂತೆ ಪ್ರಾರ್ಥಿಸಿದರು. ಎಲ್ಲ ಅಧಿಕಾರಿಗಳು ಮನಸಾರ ಒಪ್ಪಿ ಎಲ್ಲ ಶಾಲೆಗಳಿಗೂ ಆ ರೀತಿ ಅಪ್ಪಣೆ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ.

ಈ ಪ್ರವಾಸ, ಸಭೆ, ಸಮಾರಂಭಗಳು ಚರ್ಚಾಕೂಟಗಳಿಂದ ಕನ್ನಡ ಜನತೆಗೆ ಪರಿಷತ್ತಿನಲ್ಲಿರುವ ಅಪಾರವಾದ ಅಭಿಮಾನವು ಸಾಹಿತ್ಯ ಸಮಸ್ಯೆಗಳ ಬಗ್ಗೆ ಶ್ರದ್ಧೆ ಕುತೂಹಲಗಳೂ ವ್ಯಕ್ತವಾದುವು. ಈ ಜನರ ಸಂಪರ್ಕವನ್ನು ಹೀಗೆಯೇ ಬೆಳಸಿಕೊಂಡು ಮುಂದುವರಿಸಿಕೊಂಡು ಬರುವುದು ಅವಶ್ಯಕವಾಗಿದೆ.

ಅಧ್ಯಕ್ಷರು ಮಾಡಿದ ಈ ಪ್ರವಾಸದಲ್ಲಿ ಅವರನ್ನು ಕಂಡು ಸಹಕಾರವನ್ನು ನೀಡಿದ ಎಲ್ಲರಿಗೂ ಪರಿಷತ್ತು ಕೃತಜ್ಞವಾಗಿದೆ.

* * *

ಪರಿಷನ್ಮಂದಿರದಲ್ಲಿ ಕನ್ನಡ ರಾಜ್ಯೋತ್ಸವ

ದಿನಾಂಕ ೧-೧೧-೧೯೬೮ರಂದು ಪರಿಷನ್ಮಂದಿರದಲ್ಲಿ ಕನ್ನಡ ರಾಜ್ಯೋತ್ಸವದ ಮೊದಲದಿನದ ಕಾರ್ಯಕ್ರಮವು ನೆರವೇರಿತು. ನಗರದ ಮಾಜಿ ಮೇಯರ್ ಶ್ರೀ ಜಿ. ನಾರಾಯಣ ಅವರು ಉತ್ಸವದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಶಂಕರಪ್ಪನವರು ಉಪನ್ಯಾಸಮಾಡಿದರು. ಜ್ಞಾನ ಜ್ಯೋತಿ ಕಲಾವಿದರಿಂದ ನವರತ್ನರಾಂ ವಿರಚಿತ "ಮಿಾನಿನ ಹೆಜ್ಜೆ" ಎಂಬ ನಾಟಕವನ್ನು ಅಭಿನಯಿಸಲಾಯಿತು.

ಎರಡನೆಯ ದಿನ, ೩-೧೧-೬೮ರಂದು ನ್ಯಾಯಮೂರ್ತಿ ಶ್ರೀ ಟಿ.ಕೆ. ತುಕೋಳ್ ಅವರ ಅಧ್ಯಕ್ಷತೆಯಲ್ಲಿ ಡಾ|| ರಂ.ಶ್ರೀ. ಮುಗಳಿಯವರು ಮುಖ್ಯ ಅತಿಥಿಗಳಾಗಿದ್ದರು.

ಪರಿಷತ್ತಿನ ಆಶ್ರಯದಲ್ಲಿ ನಡೆದ ಸಭೆಗಳು

ದಿನಾಂಕ ೯-೧೧-೧೯೬೮ರಂದು ರಾಜಾಜಿನಗರದ ವಿದ್ಯಾವರ್ಧಕ ಸಂಘದಲ್ಲಿ ಪ್ರೊ|| ಎ. ಎನ್. ಮೂರ್ತಿ ರಾಯರ ಕೃತಿಗಳ ಬಗ್ಗೆ ಉಪನ್ಯಾಸವನ್ನೇರ್ಪಡಿಸಿತ್ತು. ನಾಟಕ ಮತ್ತು ವಿಮರ್ಶೆಗಳನ್ನು ಕುರಿತು ಶ್ರೀ ಎಲ್. ಎಸ್. ಶೇಷಗಿರಿರಾಯರೂ, ಪ್ರಬಂಧಗಳು ಮತ್ತು ವ್ಯಕ್ತಿತ್ವವನ್ನು ಕುರಿತು ಶ್ರೀ ವಿ. ಎಂ. ಇನಾಂದಾರರೂ ಮಾತನಾಡಿದರು. ಇದು ಕವಿ-ಕೃತಿ ದರ್ಶನದ ೩೬ನೆಯ ಕಾರ್ಯಕ್ರಮ.

ದಿನಾಂಕ ೨೩-೧೦-೧೯೬೮ರಂದು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ೨೧ನೆಯ ಕವಿ-ಕೃತಿ ಸ್ಮರಣೆಯ ಅಂಗ ವಾಗಿ ಕರ್ನಾಟಕ ಕವಿಕೇಸರಿ, ಆಸ್ಥಾನ ವಿದ್ವಾನ್ ದಿ|| ಬೆಳ್ಳಾವೆ ನರಹರಿಶಾಸ್ತ್ರಿಗಳ ಸಾಹಿತ್ಯ ಸೇವೆಯನ್ನು ಕುರಿತು ಶ್ರೀ ಆರ್. ರಾಚಪ್ಪನವರು ಉಪನ್ಯಾಸ ಮಾಡಿದರು ಮತ್ತು ದಿನಾಂಕ ೨೪-೧೧-೧೯೬೮ರಂದು ೨೨ನೆಯ ಕವಿ-ಕೃತಿ ಸ್ಮರಣೆಯ ಅಂಗವಾಗಿ ವಚನ ವಾಙ್ಮಯ ವಿಶಾರದ ದಿ|| ಎಂ. ಆರ್. ಶ್ರೀನಿವಾಸಮೂರ್ತಿಗಳ ಸಾಹಿತ್ಯ ಸೇವೆಯನ್ನು ಕುರಿತು ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಉಪನ್ಯಾಸ ಮಾಡಿದರು. ಕು|| ಜನ್ನ ಮತ್ತು ಗೆಳೆಯರಿಂದ 'ನಾಗರಿಕ' ನಾಟಕದ ಕೆಲವು ಭಾಗಗಳ ವಾಚನ ನಡೆಯಿತು.

ಪ್ರಕಟನೆ: 'ಆಧುನಿಕ ಗದ್ಯಸಾಹಿತ್ಯ'

ಪರಿಷತ್ತಿನ ಪ್ರಕಟಣೆಯಾದ 'ಆಧುನಿಕ ಗದ್ಯ ಸಾಹಿತ್ಯ'ದ ಮೂರನೆಯ ಮುದ್ರಣವನ್ನು ಎರಡು ಭಾಗಗಳಾಗಿ ಪ್ರಕಟಿಸಲಾಗುತ್ತಿದೆ. ಲಲಿತ ಸಾಹಿತ್ಯವನ್ನು ಕುರಿತ ಮೊದಲ ಭಾಗ ಈಗ ಮಾರಾಟಕ್ಕೆ ಸಿದ್ಧವಾಗಿದೆ. ಇದರ ಬೆಲೆ ರೂ. ೩-೦೦. ಎರಡನೆಯ ಭಾಗವಾದ 'ವಿಚಾರ ಸಾಹಿತ್ಯ' ಇನ್ನೊಂದು ವಾರದಲ್ಲಿ ಪ್ರಕಟವಾಗುತ್ತದೆ.

ಗಮಕ ಪ್ರವೇಶ ಪರೀಕ್ಷೆ ೧೯೬೮

ಪರಿಷತ್ತು ನಡೆಸುವ ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳಿಗೆ ತರಗತಿ ನಡೆಯುವ ಆಯಾ ಕೇಂದ್ರಗಳಿಂದಲೂ ಸ್ವಂತ ವ್ಯಾಸಂಗಿಗಳಿಂದಲೂ ಇದೇ ಡಿಸೆಂಬರ್ ತಿಂಗಳ ೧೫ನೆಯ ದಿನಾಂಕದೊಳಗಾಗಿ ಪರೀಕ್ಷಾಶುಲ್ಕವನ್ನು ಪರಿಷತ್ತಿನ ಕಚೇರಿಗೆ ಕಳುಹಿಸಬೇಕು. ಪರೀಕ್ಷಾ ಶುಲ್ಕ ಪ್ರವೇಶ ಪರೀಕ್ಷೆಗೆ ಸ್ವಂತ ವ್ಯಾಸಂಗಿಗಳಿಗೆ ರೂ. ೪-೦೦, ಉಳಿದವರಿಗೆ ರೂ. ೩-೦೦, ಪ್ರೌಢ ಪರೀಕ್ಷೆಗೆ ರೂ. ೧೨-೦೦.

೧೯೬೮ನೇ ಸಾಲಿನ ಜಾಣ ಪರೀಕ್ಷೆ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಯುವ "ಜಾಣ" ಪರೀಕ್ಷೆಯು ದಿನಾಂಕ ೨೮-೧೨-೧೯೬೮ ಮತ್ತು ೨೯-೧೨-೧೯೬೮ ಈ ಎರಡು ದಿನಗಳಲ್ಲಿಯೂ ಪ್ರತಿ ದಿನ ಬೆಳಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯವರೆಗೂ ಪುನಃ ಮಧ್ಯಾಹ್ನ ೨ ರಿಂದ ೫ರ ವರೆಗೂ, ೧. ಇಲಕಲ್, ೨. ಕನ್ನೊಳ್ಳಿ, ೩. ಕಲಾದಗಿ, ೪. ತಿಕೋಟಾ, ೫. ತುರಮುರಿ, ೬. ನವಲಗುಂದ, ೭. ಬಬಲೇಶ್ವರ, ೮. ಬಸವನ ಬಾಗೇವಾಡಿ, ೯. ಬಾಳಗೋಡ, ೧೦. ಬೂದಿಹಾಳ, ೧೧. ಬೆಂಗಳೂರು, ೧೨. ಯಲಿವಾಳ, ೧೩. ರೋಣ, ೧೪. ಶಿರೂರ, ೧೫. ಸಾಲೋಟಗಿ, ೧೬. ಹಳೇಶಿಡೇನೂರ, ೧೭. ಹಾರ್ಸಿಕಟ್ಟಾ, ೧೮. ಹಾಸನ, ೧೯. ಹೊನಗನಹಳ್ಳಿ ಈ ೧೯ ಕೇಂದ್ರಗಳಲ್ಲಿ ನಡೆಯುತ್ತವೆ.

ಪರಿಷತ್ತಿನ ಕಚೇರಿಯಿಂದ ಡಿಸೆಂಬರ್ ೭ನೆಯ ದಿನಾಂಕ ದೊಳಗಾಗಿ ಪ್ರವೇಶ ಪತ್ರಗಳು ರವಾನೆಯಾಗುವುವಾಗಿದೆ. ವಿದ್ಯಾರ್ಥಿಗಳು ಯಾವ ಊರಿನ ವ್ಯವಸ್ಥಾಪಕರ ಮುಖಾಂತರ ಅಭ್ಯರ್ಥನಾ ಪತ್ರಗಳನ್ನು ಕಳುಹಿಸಿರುವರೋ ಆ ವ್ಯವಸ್ಥಾಪಕರಿಂದ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಪಡೆಯಬಹುದು. ಪ್ರತ್ಯೇಕವಾಗಿ ಅಭ್ಯರ್ಥನಾ ಪತ್ರಗಳನ್ನು ಕಳುಹಿಸಿರುವವರಿಗೆ ಅವರ ವಿಳಾಸಕ್ಕೇ ಪ್ರವೇಶ ಪತ್ರಗಳನ್ನು ಕಳುಹಿಸಲಾಗುವುದು.

* * *

ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆಯ ಐವತ್ತೆರಡನೆಯ ವಾರ್ಷಿಕಾಧಿವೇಶನ

ಕನ್ನಡ ಸಾಹಿತ್ಯ ಪರಿಷತ್ತಿನ ಐವತ್ತೆರಡನೆಯ ಸಕಲ ಸದಸ್ಯರ ವಾರ್ಷಿಕಾಧಿವೇಶನವು ದಿನಾಂಕ ೨೭-೧೦-೧೯೬೮ ರಂದು ಬೆಳಗ್ಗೆ ೯-೩೦ ಗಂಟೆಗೆ ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಸೇರಿದ್ದಿತು. ಸಭೆಗೆ ೭೮ ಮಂದಿ ಸದಸ್ಯರು ಆಗಮಿಸಿದ್ದರು.

ಗೌರವ ಕಾರ್ಯದರ್ಶಿಗಳಾದ ಹಂಪ. ನಾಗರಾಜಯ್ಯನವರು ಈಗ ಸಭೆ ಪ್ರಾರಂಭವಾಗಿದೆ; ಪರಿಷದಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷರಾಗಿದ್ದು ಈ ಸಭೆಯನ್ನು ನಡೆಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ-ಎಂದರು.

ಶ್ರೀ ಜಿ. ವೆಂಕಟಸುಬ್ಬಯ್ಯನವರು ಬಂದಿದ್ದ ಸದಸ್ಯರೆಲ್ಲರಿಗೂ ಸ್ವಾಗತವನ್ನು ಕೋರಿ ಕಾರ್ಯಸೂಚಿಯನ್ನು ಓದಿದರು. ಅನಂತರ ಈ ಸಭೆಯ ಕಾರ್ಯಕಲಾಪಗಳನ್ನು ಕುರಿತು ಕೆಲವು ಪತ್ರಗಳು ಬಂದಿರುವುವೆಂದೂ ಶ್ರೀಯುತರಾದ ಜಿ. ಅಶ್ವತ್ಥನಾರಾಯಣ, ಆ. ಸತ್ಯಪಾಲ, ಜಿ. ಆರ್. ಸೀತಾರಾಮ್ ಮತ್ತು ಬಿ. ಎನ್. ವೆಂಕಟೇಶ್—ಇವರುಗಳು ಕ್ರಿಯಾಲೋಪವನ್ನು ಸೂಚಿಸಿರುವರೆಂದೂ ಈ ವಾರ್ಷಿಕ ಸಭೆಯ ತಿಳಿವಳಿಕೆ ಪತ್ರವನ್ನು ಕಳುಹಿಸುವಾಗ ಕಾರ್ಯಸೂಚಿಯಲ್ಲಿ ೩ನೇ ನಿಯಮದಂತೆ ಇರಬೇಕಾಗಿದ್ದ (೬)ನೆಯ ವಿಷಯ ಅಂದರೆ ಚುನಾವಣೆಗೆ ಸಂಬಂಧಿಸಿದ್ದು ಹೈಕೋರ್ಟಿನ ಪರಿಶೀಲನೆಯಲ್ಲಿತ್ತು. ಆಗ ಆ ವಿಷಯವನ್ನು ಕಾರ್ಯಸೂಚಿಯಲ್ಲಿ ತಡೆಹಿಡಿದುದು ಸರಿಯಾಗಿತ್ತು. ಆದರೆ ಸಭೆ ನಡೆಯುತ್ತಿರುವ ಈ ದಿವಸದ ಹೊತ್ತಿಗೆ ಕೋರ್ಟಿನ ತೀರ್ಪು ತಿಳಿದಿರುವುದರಿಂದ ಈ ಸಭೆಯಲ್ಲಿ ಆ (೬)ನೆಯ ವಿಷಯವನ್ನು ಬಿಡುವುದು ಸರಿಯಲ್ಲ. ಆ (೬)ನೆಯ ವಿಷಯವನ್ನು ಕಾರ್ಯಸೂಚಿಯಲ್ಲಿ ಸೇರಿಸಬೇಕಾದರೆ ಪೂರ್ವಭಾವಿಯಾಗಿ ಚುನಾವಣೆಯ ಕ್ರಮ (ಮತ ಪತ್ರಗಳ ಎಣಿಕೆಯನ್ನು ಬಿಟ್ಟು) ನಡೆದಿರಬೇಕಾಗುತ್ತದೆ. ಆದುದರಿಂದ ಈ ಸಭೆಯನ್ನು ಈಗ ನಡೆಸದೆ (೬)ನೆಯ ವಿಷಯದ ಬಗ್ಗೆ ತಕ್ಕ ಕಾರ್ಯಕ್ರಮ ನಡೆಸಿ ಅದನ್ನೂ ಕಾರ್ಯಸೂಚಿಯಲ್ಲಿ ಸೇರಿಸಿ ಸಭೆ ಕೂಡಿಸಬೇಕು. ಹಾಗಿಲ್ಲದೆ ಈಗ ಸಭೆ ನಡೆಸುವುದು ಕ್ರಿಯಾಲೋಪವಾಗಿರುವುದರಿಂದ ಈ ಸಭೆಯನ್ನು ಮುಂದುವರೆಸತಕ್ಕದ್ದು—ಎಂದು ತಿಳಿಸಿರುತ್ತಾರೆ ಎಂಬುದಾಗಿ ವಿವರಿಸಿ ಆ ಬಗ್ಗೆ ಕ್ರಿಯಾಲೋಪವನ್ನು ಸೂಚಿಸಿರುವವರು ಮಾತನಾಡಬೇಕೆಂದು ಕೋರಿದರು. ಶ್ರೀ ಅಶ್ವತ್ಥನಾರಾಯಣ, ಶ್ರೀ ಜಿ. ಆರ್. ಸೀತಾರಾಮ್, ಶ್ರೀ ಬಿ. ಎನ್. ವೆಂಕಟೇಶ್, ಶ್ರೀ ಸತ್ಯಪಾಲ್ ಅವರುಗಳು ಕ್ರಿಯಾಲೋಪವನ್ನು ಸಮರ್ಥಿಸಿ ಮಾತನಾಡಿದರು. ಶ್ರೀ ಶ್ರೀವತ್ಸರವರು ಈ ಸಭೆಯನ್ನು ಮುಂದುವರೆಸಿ ಆ ಮುಂದುವರೆಸಿದ ಸಭೆಯಲ್ಲಿ ಚುನಾವಣೆ ನಡೆಸಬೇಕೆಂದರು. ಶ್ರೀ ಕೋಟಿ ಭಾಸ್ಕರರಾಯರು, ಶ್ರೀ ಪಿ.ಎನ್.ರೆಡ್ಡಿಯವರು, ಶ್ರೀ ಸೂಲಿಬೆಲೆ, ಶ್ರೀ ಎಸ್. ಎಂ. ದೇಸಾಯಿ-ಇವರುಗಳು ಕ್ರಿಯಾಲೋಪವನ್ನು ವಿರೋಧಿಸಿ ಈಗ ಕಾರ್ಯಸೂಚಿಯಲ್ಲಿರುವಂತೆ ಕಾರ್ಯವನ್ನು ನಡೆಸುವುದರಿಂದ ಕ್ರಿಯಾಲೋಪದ ಪ್ರಶ್ನೆ ಬರುವುದಿಲ್ಲವೆಂದು ಹೇಳಿದರು. ಈ ಮಧ್ಯೆ ಶ್ರೀ ಸಿ. ಕೆ. ನಾಗರಾಜರಾಯರು ಪರಿಷತ್ತಿನ ಈಗಿನ ನಿಬಂಧನೆಗಳೇ ಅಸ್ತಿತ್ವದಲ್ಲಿಲ್ಲವೆಂದರು. ಅಧ್ಯಕ್ಷರು ಈಗಿನ ನಿಯಮಗಳು ಸಕಲ ಸದಸ್ಯ ಸಭೆಯಲ್ಲಿ ತೀರ್ಮಾನವಾಗಿ ರಿಜಿಸ್ಟ್ರಾರರವರಿಂದ ಒಪ್ಪಿಗೆಯಾಗಿರುವುದರಿಂದ ಅಸ್ತಿತ್ವದಲ್ಲಿದೆ ಎಂದು ತೀರ್ಪನ್ನು (ರೂಲಿಂಗ್) ಕೊಟ್ಟರು. ಶ್ರೀ ಜಿ. ಆರ್. ಸೀತಾರಾಮ್ ಅವರು ಕ್ರಿಯಾಲೋಪದ ಬಗ್ಗೆ "ರೂಲಿಂಗ್" ಕೊಡಬೇಕೆಂದು ಸೂಚಿಸಿದಂತೆ ಅಧ್ಯಕ್ಷರು ಕ್ರಿಯಾಲೋಪವನ್ನು ತಳ್ಳಿಹಾಕಿರುವುದಾಗಿ ಹೇಳಿದರು.

ಕಾರ್ಯಸೂಚಿಯ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವ ಮೊದಲು ನಿಧನ ಹೊಂದಿದ ಕನ್ನಡದ ಪ್ರಮುಖ ವ್ಯಕ್ತಿಗಳ ಬಗ್ಗೆ ಗೌರವ ಸಲ್ಲಿಸಬೇಕೆಂದು ಶ್ರೀ ಮ. ನ. ರಾಮನರಸಯ್ಯನವರು ಸೂಚಿಸಿದರು. ಅದರಂತೆ ಧರ್ಮಸ್ಥಳದ ಮುಖ್ಯಾಧಿಕಾರಿಗಳಾಗಿದ್ದ ರತ್ನವರ್ಮ ಹೆಗ್ಗಡೆಯವರು, ವೈಕುಂಠ ಬಾಳಿಗಾ ಅವರು, ಎಸ್. ವಿ. ಕೃಷ್ಣಮೂರ್ತಿರಾಯರು, ಡಿ. ಸಿ. ಸುಬ್ಬರಾಯಪ್ಪನವರು, ಮೌಲ್ವಿ ಖಾಸಿಂ ಸಾಹೇಬ್—ಇವರುಗಳ ನಿಧನದ ಬಗ್ಗೆ ಸಭೆಯು ಎರಡುನಿಮಿಷ ಮೌನದಿಂದೆದ್ದುನಿಂತಿದ್ದು ಗೌರವವನ್ನು ಸೂಚಿಸಿತು. ಅನಂತರ ಸಭೆ ಕಾರ್ಯಸೂಚಿಯ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡಿತು.

ಶ್ರೀ ಜಿ. ಅಶ್ವತ್ಥನಾರಾಯಣ ಮತ್ತು ಶ್ರೀ ಸಿ. ಕೆ. ನಾಗರಾಜರಾಯರು ವರ್ಷದ ಹತ್ತು ತಿಂಗಳ ವೆಚ್ಚ ನಡೆದಮೇಲೆ ಅದರ ಅಂದಾಜನ್ನು ಸಭೆಯ ಒಪ್ಪಿಗೆಗೆ ಇಡುವುದರಲ್ಲಿ ಅರ್ಥವಿಲ್ಲವೆಂದು ಹೇಳಿದರು.

ದತ್ತಿ ನಿಧಿಯ ಉದ್ದೇಶಗಳಂತೆ ನಡೆಯಬೇಕಾದ ಕಾರ್ಯ ವಿವರಗಳ ಬಗ್ಗೆ ಚರ್ಚೆಯಾಗಿ ಶ್ರೀ ಜಿ.ಅಶ್ವತ್ಥನಾರಾಯಣ, ಶ್ರೀ ಶ್ರೀವತ್ಸ, ಶ್ರೀ ಎಸ್. ಶಂಕರಪ್ಪನವರು, ಶ್ರೀ ಸೆ. ಲ. ಬೈರಣ್ಣನವರು, ಶ್ರೀ ಕೆ. ಎಲ್. ಸುಬ್ಬರಾಯರು, ಶ್ರೀ ಸಿ. ಕೆ. ನಾಗರಾಜರಾಯರು, ಮೊದಲಾದವರು ಮಾತನಾಡಿದರು. ದಾತೃಗಳ ಉದ್ದೇಶವನ್ನು ಪ್ರಕಟಿಸಿ ಅದರಂತೆ ಕಾರ್ಯ ನಡೆಸಬೇಕೆಂದು ಸೂಚಿಸಿದರು.

ಪರಿಷತ್ತಿನ ಗ್ರಂಥ ಭಂಡಾರ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದೂ, ಸಾಕಷ್ಟು ಪುಸ್ತಕಗಳನ್ನು ಸೇರಿಸುತ್ತಿಲ್ಲವೆಂದೂ, ಪುಸ್ತಕಗಳ ಪಟ್ಟಿ (Catalogue) ತಯಾರಿಸಿಲ್ಲವೆಂದೂ, ಸಂಶೋಧನಾತ್ಮಕ ವಿಚಾರಪೂರಿತ ಪುಸ್ತಕಗಳನ್ನು ಸೇರಿಸಬೇಕೆಂದೂ, ಹರಿದುಹೋಗಿರುವ ಗ್ರಂಥಗಳಿಗೆ ರಟ್ಟು ಕಟ್ಟಿಸಬೇಕೆಂದೂ, ಎರವಲು ಕೊಡುವುದನ್ನು ನಿಯಮಬದ್ಧವಾಗಿ ಏರ್ಪಾಟು ಮಾಡಬೇಕೆಂದೂ—ಸಲಹೆ ಮಾಡಿ ಶ್ರೀಗಳಾದ ಜಿ. ಅಶ್ವತ್ಥನಾರಾಯಣ, ಹಾ. ಸು. ನಾಗೇಂದ್ರ, ಬಿ. ಪಿ. ನರಸಿಂಹಮೂರ್ತಿ, ಬ. ನ. ಸುಂದರ ರಾವ್, ಬುದ್ಧಿ ಶೆಟ್ಟಿ—ಮುಂತಾದವರು ಮಾತನಾಡಿದರು.

ಶ್ರೀ ಜಿ. ನಾರಾಯಣ ಅವರು ವಾರ್ಷಿಕಾಧಿವೇಶನದಲ್ಲಿ ಪರಿಷತ್ತಿನ ಕಾರ್ಯಸಮಿತಿ ಸದಸ್ಯರು ವೇದಿಕೆಯಮೇಲೆ ಹಾಜರಿರಬೇಕೆಂದೂ, ನಿಘಂಟು ಬೇಗ ಬೇಗ ಅಚ್ಚಾಗಬೇಕೆಂದೂ, ಅಚ್ಚುಕೂಟದಲ್ಲಿ ನಿಘಂಟು ಕೆಲಸದ ಜೊತೆಗೆ ಸಾಹಿತಿಗಳ ಪುಸ್ತಕಗಳನ್ನೂ ಅಚ್ಚು ಮಾಡಬೇಕೆಂದೂ ನಿಘಂಟಿನ ಮುದ್ರಣಕ್ಕಾಗಿ ತಗಲುವ ವೆಚ್ಚವನ್ನು ಸರ್ಕಾರಕ್ಕೆ ತಿಳಿಸಿ ಆ ಹಣವನ್ನು ಅವರು ಕೊಡಲು ಒಪ್ಪದಿದ್ದರೆ ಅವರು ಅದನ್ನು ಬೇರೆ ಎಲ್ಲಿಯಾದರೂ ಅಚ್ಚು ಮಾಡಿಕೊಳ್ಳುವಂತೆ ಹೇಳಬೇಕೆಂದೂ ಸೂಚಿಸಿದರು. ಪರಿಷತ್ತಿನ ಅಚ್ಚುಕೂಟ ತನ್ನ ವೆಚ್ಚವನ್ನು ಸಂಪಾದಿಸಿ ಪರಿಷತ್ತಿಗೂ ಸಂಪಾದಿಸಿ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದೂ ಹೇಳಿದರು.

ಇದಲ್ಲದೆ ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಮಾಡಿದರು. ಕಾರ್ಯ ಸಮಿತಿ ತೀರ್ಮಾನಗಳನ್ನು ನುಡಿಯಲ್ಲಿ ಪ್ರಕಟಿಸಬೇಕು, ರಾಜ್ಯೋತ್ಸವವನ್ನು ಇನ್ನೂ ಹೆಚ್ಚು ವಿಜೃಂಭಣೆಯಿಂದ ಆಚರಿಸಬೇಕು, ಉಪಸಮಿತಿಯ ವರದಿಗಳನ್ನು ಪ್ರಕಟಿಸಬೇಕು, ಪೂರ್ವಭಾವಿಯಾಗಿ ಪರಿಷತ್ತಿನಲ್ಲಿ ಕಾರ್ಯಕ್ರಮಗಳನ್ನು ಏರ್ಪಾಟುಮಾಡಿ ಎಲ್ಲ ಸದಸ್ಯರಿಗೂ ತಿಳಿಸಬೇಕು, ಪುಸ್ತಕಗಳನ್ನು ಕೊಳ್ಳಲು ೩,೦೦೦ ರೂ. ತೆಗೆದಿಡಬೇಕು, 'ರತ್ನ' ಪರೀಕ್ಷೆಗೆ ಮಾನ್ಯತೆ ದೊರಕಿಸಿ ಕೊಡಬೇಕು. ಪುರಾತನ ಕಾವ್ಯಗಳ ಕಾವ್ಯವಾಚನ ನಡೆಯಬೇಕು, ಕಾಳಿದಾಸ ಜಯಂತಿ, ಭಾಷಣ ಕಲಾ ತರಗತಿಗಳನ್ನು ನಡಸಬೇಕು, ಸಿಬ್ಬಂದಿಯವರಿಗೆ ಬೋನಸ್ಸನ್ನು ಕೊಡಬೇಕು ಇವೇ ಮೊದಲಾದ ಸೂಚನೆಗಳನ್ನು ಮಾಡಿದರು.

ಕೋಶಾಧಿಕಾರಿಗಳು ೧೯೬೭ರಲ್ಲಿ ಸೆಪ್ಟೆಂಬರ್ ಕೊನೆಯವರೆಗೆ ನಡೆದಿದ್ದ ಆಯವ್ಯಯಗಳ ಪಟ್ಟಿಯನ್ನೋದಿದರು. ವರದಿಯಲ್ಲಿ ನಮೂದಿಸಿರುವ ಅಂಕಿ ಅಂಶಗಳನ್ನು ವಾಸ್ತವವಾಗಿ ೯ ತಿಂಗಳು ನಡೆದಿರುವ ಅಂಕಿಅಂಶಗಳಿಗನುಗುಣವಾಗಿ ತಕ್ಕ ಬದಲಾವಣೆಗಳನ್ನು ಮಾಡಿಕೊಳ್ಳುವುದಾಗಿ ತಿಳಿಸಿದರು. ಅಲ್ಲದೆ ಲೆಕ್ಕಪತ್ರಗಳ ಶೋಧಕರು ಎತ್ತಿದ್ದ ಆಕ್ಷೇಪಣೆಗಳಿಗೆ ಉತ್ತರವನ್ನು ತಿಳಿಸಿದುದಲ್ಲದೆ ಸದಸ್ಯರು ಆಗಾಗ ಪ್ರಸ್ತಾಪಿಸಿದ ಲೆಕ್ಕಗಳ ಸಂಬಂಧವಾದ ಅಂಕಿಅಂಶಗಳಿಗೆ ಸೂಕ್ತವಾದ ಸಮರ್ಥನೆ ನೀಡಿದರು.

ಸದಸ್ಯರ ಸೂಚನೆ ಟೀಕೆಗಳಿಗೆ ಉತ್ತರಕೊಡುತ್ತಾ ಅಧ್ಯಕ್ಷರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರು ಈ ರೀತಿ ಹೇಳಿದರು :

"ಪರಿಷತ್ತು ಹುಟ್ಟಿ ೫೩ ವರ್ಷವಾಯಿತು. ಪ್ರತಿ ವಾರ್ಷಿಕಾಧಿವೇಶನದಲ್ಲೂ ವ್ಯಂಗ್ಯವಾದ ಟೀಕೆ ಆಕ್ಷೇಪಣೆಗಳು ಬರುತ್ತಲೇ ಇವೆ. ಇದು ತಪ್ಪಲ್ಲ. ಆದರೆ ಆಗಿರುವ ಕೆಲಸದ ಬಗ್ಗೆ ಯಾರೂ ಒಂದು ಒಳ್ಳೆಯ ಮಾತನ್ನು ಹೇಳಲಿಲ್ಲವಲ್ಲ ಎಂದು ವ್ಯಸನವಾಗಿದೆ ಅಷ್ಟೆ. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಪರಿಷತ್ತಿನ ಬಗ್ಗೆ ಆದರಾಸಕ್ತಿಗಳು ಹೆಚ್ಚಿವೆ. ಪರಿಷತ್ತಿನ ಅಂತಃಶ್ಶಕ್ತಿ ಹೆಚ್ಚಿದೆ. ಕೇಂದ್ರದ ಮಂತ್ರಿಗಳಲ್ಲಿ ರಾಜ್ಯದ ರಾಜಕೀಯ ನಿಪುಣರಲ್ಲಿ ನಾನು ಮಾತನಾಡಿದ್ದೇನೆ. ಅವರೆಲ್ಲರೂ ಪರಿಷತ್ತಿನ ಬಗ್ಗೆ ಆಸ್ಥೆ ತಳೆದಿದ್ದಾರೆ. ಮೇಲಿಂದ ಮೇಲೆ ಅವರನ್ನು ಭೇಟಿಯಾಗಿ ಅವರಿಂದ ಪ್ರಯೋಜನ ಪಡೆಯಬೇಕು. ದತ್ತಿ ಹಣದ ಬಡ್ಡಿ ಬರದಿದ್ದರೂ ಕೂಡ ದತ್ತಿ ಕಾರ್ಯಕ್ರಮಗಳು ಈಗ ಹೆಚ್ಚು ವ್ಯವಸ್ಥಿತವಾಗಿ ನಡೆದಿವೆ. ಭಾಸ್ಕರರಾವ್ ಸ್ಪರ್ಧೆಯಲ್ಲಿ ಈ ಸಲ ಶ್ರೀ ಬಿ. ಗಂಗಾಧರ ಮೂರ್ತಿ ಅವರಿಗೆ ಬಂಗಾರದ ಪದಕ ಕೊಟ್ಟಿದೆ. ಸಮ್ಮೇಳನಗಳನ್ನು ನಡಸುವಾಗ ಇದ್ದ ಉತ್ಸಾಹ ಅನಂತರ

ಇರುವುದಿಲ್ಲ. ಹೀಗಾಗಿ ಯಾವ ಸಮ್ಮೇಳನದ ಲೆಕ್ಕವೂ ಫೈಸಲಾಗಿಲ್ಲ. ಶ್ರವಣಬೆಳಗೊಳದ ಸಮ್ಮೇಳನದ ಕಾರ್ಯಕರ್ತರಾದ ಶ್ರೀ ಟಿ. ತೋಂಟದಾರ್ಯರು ಇನ್ನೂ ಲೆಕ್ಕಪತ್ರಗಳನ್ನು ಒಪ್ಪಿಸಿಲ್ಲ. ಚನ್ನರಾಯಪಟ್ಟಣ, ಹಾಸನದಲ್ಲಿ ವಸೂಲಾದ ಮತ್ತು ವೆಚ್ಚವಾದ ವಿವರವನ್ನು ಅಲ್ಲಿಯ ಕಾರ್ಯಕರ್ತರು ಕೊಟ್ಟು ಉಳಿದ ರೂ. ೧,೦೦೦ನ್ನೂ ಸಹ ಪರಿಷತ್ತಿಗೆ ಕೊಟ್ಟಿದ್ದಾರೆ. ಈ ಅನುಭವದಿಂದ ಗುಲ್ಬರ್ಗ ಸಮ್ಮೇಳನ ನಡೆಸಲು ಮುಂಗಡ ರೂ. ೧೦,೦೦೦ ಕೊಡಬೇಕೆಂದು ತಿಳಿಸಿದ್ದೇನೆ. ಪರಿಷತ್ತಿನಲ್ಲಿ ಹೆಚ್ಚು ಕಾರ್ಯಕ್ರಮಗಳಾಗಬೇಕು. ಅದು ನಿಜ. ಆದರೆ ಅದಕ್ಕೆ ಹಣ ಒದಗಿಸುವುದು ಹೇಗೆ? ಈ ನಾಲ್ಕು ವರ್ಷಗಳಲ್ಲಿ ಖರ್ಚನ್ನು ಕಡಿಮೆ ಮಾಡಿ ಪರಿಷತ್ತು ತನ್ನ ಕಾಲ ಮೇಲೆ ನಿಲ್ಲುವಂತೆ ಮಾಡಿದ್ದೇನೆ. ಪುಸ್ತಕ ಭಂಡಾರವನ್ನು ಉತ್ತಮಗೊಳಿಸಬೇಕಾಗಿದೆ. ಸಾಕಷ್ಟು ಪುಸ್ತಕಗಳನ್ನು ಕೊಳ್ಳಲಾಗಿದೆ. ಅದರ ವ್ಯವಸ್ಥೆಗೂ ಹಣಬೇಕು. ಲೈಬ್ರರಿ ಪರೀಕ್ಷೆ ಮಾಡಿರುವವರೊಬ್ಬರನ್ನು ಅಲ್ಲಿ ನಿಯಮಿಸಬೇಕಾಗಿದೆ. ಈಗ ಶ್ರೀ ನಾರಾಯಣ್ ಅವರು ಗ್ರಂಥ ಪ್ರದರ್ಶನವನ್ನೇರ್ಪಡಿಸಿ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಆ ಪ್ರದರ್ಶನದಲ್ಲಿ ನಾವು ಪುಸ್ತಕಗಳನ್ನು ಕೊಳ್ಳಲು ಸಹಾಯವಾಗುತ್ತದೆಂದು ನಂಬಿದ್ದೇನೆ. ಸರ್ಕಾರದ ಸಹಾಯ ದ್ರವ್ಯ. ನಿಘಂಟುವಿಗೆ ಬೇಕಾದ ವೆಚ್ಚದ ಬಗ್ಗೆ ಗ್ರಾಂಟು ಈ ವರ್ಷದ ಹತ್ತು ತಿಂಗಳು ಕಳೆಯುತ್ತಾ ಬಂದರೂ ಬಂದಿಲ್ಲ. ಬ್ಯಾಂಕಿನಲ್ಲಿ ಸಿಗುವಷ್ಟು ಓವರ್ ಡ್ರಾಫ್ಟ್ ತೆಗೆದುದಾಗಿದೆ. ಇದರಿಂದ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳೂ ಸ್ಥಗಿತವಾಗಿವೆ. ನಾನೂ ಶ್ರೀ ರಾಜಾರಾಯರೂ ದಿನಾ ಕಚೇರಿಗೆ ಹೋಗಿ ಬರುತ್ತಿದ್ದೇವೆ. ಬಹುಶಃ ಮುಂದಿನ ತಿಂಗಳ ಕೊನೆಯೊಳಗಾಗಿ ಅವು ಬರಬಹುದು.

ರತ್ನಪರೀಕ್ಷೆ ವಿಚಾರ ಸಾರ್ವಜನಿಕರಿಗೆ ತಿಳಿದಿರಲಾರದು. ಈಗ ಹೈಸ್ಕೂಲುಗಳಲ್ಲಿ ಕನ್ನಡ ವಿಭಾಗದಲ್ಲಿ ಶೇಕಡ ಮೂವತ್ತೈದು ನಂಬರು ತೆಗೆದುಕೊಂಡ ವಿಜ್ಞಾನ ಪದವೀಧರರು ಕನ್ನಡ ಪಾಠ ಹೇಳುತ್ತಿದ್ದಾರೆ. ಅದು ತಪ್ಪಬೇಕೆಂದು ರತ್ನಪರೀಕ್ಷೆ ಪ್ರಾರಂಭಮಾಡಿದೆವು. ಅದಕ್ಕೆ ಸರ್ಕಾರದ ಮನ್ನಣೆಯೇನೋ ದೊರಕಿತು. ಆದರೆ ಅದಕ್ಕೆ ವಿಶ್ವವಿದ್ಯಾನಿಲಯದಲ್ಲಿ ಒಪ್ಪಿಗೆ ಸಿಕ್ಕುವುದು ಕಷ್ಟ. ರತ್ನಪರೀಕ್ಷೆ ಮಾಡಿದವರಿಗೆ ಮಾಧ್ಯಮಿಕಶಾಲೆಯಲ್ಲಿ ಪಾಠಹೇಳುವಂತೆಯೂ ಎರಡು ಬಡ್ತಿ ಕೊಡುವಂತೆಯೂ ವಿದ್ಯಾ ಇಲಾಖೆಯ ಡೈರೆಕ್ಟರನ್ನು ಕೇಳಲಾಗಿದೆ. ವಿಶ್ವವಿದ್ಯಾಲಯದಲ್ಲಿ ಕನ್ನಡವನ್ನು ಬಿಟ್ಟು ಬೇರೆ ಭಾಷೆಯನ್ನು ಎರಡನೆಯ ಭಾಷೆಯಾಗಿ ತೆಗೆದುಕೊಂಡು ತೇರ್ಗಡೆಯಾದ ಪದವೀಧರರು ರತ್ನಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ, ಅಂತಹವರು ಕನ್ನಡ ಎಂ. ಎ. ಪರೀಕ್ಷೆಗೆ ಕೂಡಬಹುದೆಂದು ಶಿಫಾರಸು ಮಾಡಿದೆ.

ಕಾರ್ಯಕ್ರಮದ ಆಹ್ವಾನಪತ್ರಿಕೆ ಎಲ್ಲ ಸದಸ್ಯರಿಗೆ ಕಳಿಸಬೇಕಾದರೆ ವರ್ಷಕ್ಕೆ ರೂ. ೫೦೦೦ ಖರ್ಚು ಆಗುತ್ತದೆ. ಪರಿಷತ್ತಿನ ಕಾರ್ಯಕ್ರಮಗಳಿಗೆ ಹೆಚ್ಚುಮಂದಿ ಬರುತ್ತಿಲ್ಲ. ಗಮಕ ವಾಚನಕ್ಕೆ ೨೦-೨೫ ಮಂದಿ ಇರುತ್ತಾರೆ. ಭಾಷಣ ಕಲಾತರಗತಿಗಳಿಗೆ ಬರುತ್ತಿದ್ದ ಸಹಾಯ ದ್ರವ್ಯ ನಿಂತು ಹೋಗಿದೆ. ಸದಸ್ಯ ಸಂಸ್ಥೆಗಳಿಗೆ ಬಾಡಿಗೆಯಲ್ಲಿ ರಿಯಾಯಿತಿ ಕೊಡಬೇಕೆಂದು ಸೂಚನೆಬಂದಿದೆ. ಈಗಿನ ನಮ್ಮ ಅನುಭವ ಬಹಳ ಕಟುವಾಗಿದೆ. ನಮ್ಮಲ್ಲಿ ಒಂದು ಮನೆ ಪ್ಲಾಟ್ ಇದೆ. ಸಾವಿರಾರುರೂಪಾಯಿ ಅದಕ್ಕೆ ವೆಚ್ಚವಾಗಿದೆ. ಬಾಡಿಗೆಗೆ ತೆಗೆದುಕೊಂಡವರು ಪರದೆಯನ್ನು ಬ್ಲೇಡಿನಲ್ಲಿ ಕೊಯ್ಯುತ್ತಾರೆ. ಹಗ್ಗವನ್ನು ಕಿತ್ತು ತೆಗೆದುಕೊಂಡು ಹೋಗುತ್ತಾರೆ. ಅಚ್ಚುಕಟ್ಟಾಗಿಟ್ಟಿರುವ ವಸ್ತುಗಳನ್ನು ಕಿತ್ತುಹಾಕಿ ಪುನಃ ಮೊದಲಿನಂತೆ ಇಡದೆ ಹೊರಟು ಹೋಗುತ್ತಾರೆ. ಬೆಲೆ ಬಾಳುವ ಬಲ್ಬುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಬೀಡಿ ಸಿಗರೇಟು ಸೇದಿ ಅದರ ತುಂಡುಗಳನ್ನು ವೇದಿಕೆ ತುಂಬ ಎಸೆದಿರುತ್ತಾರೆ. ಹೀಗೆಲ್ಲ ಆದರೆ ಏನು ಮಾಡಬೇಕು ಎನ್ನುವುದು ತಿಳಿಯುವುದಿಲ್ಲ. ಬೇರೆ ಕಡೆ ಮಾಡುವಂತೆ ಮುಂಗಡ ಹಣ ಪಡೆದು ಆ ಬಗ್ಗೆ ನಷ್ಟ ತುಂಬಬೇಕಾಗುತ್ತದೆ. ಅದನ್ನು ಯೋಚಿಸುತ್ತಿದ್ದೇವೆ.

ಈಗಿನ ರಂಗಮಂಟಪದ ಬಗ್ಗೆ ನನಗೂ ಸಮಾಧಾನವಿಲ್ಲ. ಅದರ ಎತ್ತರ ಹೆಚ್ಚಬೇಕು. ಸಭಾಮಂದಿರವೇ ಚಿಕ್ಕದು. ಅದನ್ನು ದೊಡ್ಡದು ಮಾಡಲು ಅವಕಾಶವಿಲ್ಲ. ಈಗಿನ ಸಭಾಮಂದಿರವನ್ನು ಗ್ರಂಥಭಂಡಾರ ಮಾಡಿ ಬೇರೆ ರಂಗಮಂದಿರವನ್ನು ಕಟ್ಟಿಸಬೇಕು. ಆಗ ರಂಗಮಂದಿರದ ವ್ಯವಸ್ಥೆ ಸರಿಹೋಗಬಹುದು. ಅದರ ಉಪಯೋಗದ ವಿಚಾರದಲ್ಲಿ ಅಧ್ಯಕ್ಷರಿಗೆ ವ್ಯವಹಾರ ದೃಷ್ಟಿಯಿಂದ ಸ್ವಾತಂತ್ರ್ಯ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ನಾರಾಯಣ ಅವರು ಸೂಚಿಸಿದಂತೆ ಕಾರ್ಯಸಮಿತಿ ಸದಸ್ಯರು ವಾರ್ಷಿಕಾಧಿವೇಶನ ಕಾಲದಲ್ಲಿ ಹಾಜರಿರುವಂತೆ ತಿಳಿಸುತ್ತೇನೆ. ಅವರು ಯಾವ ಮಾತನ್ನಾಡಿದರೂ ಮುಂಚಿತವಾಗಿ ಯೋಚಿಸಿ ಮಾತನಾಡುವವರು. ನಿಘಂಟು ಬೇಗನೆ ಪ್ರಕಟವಾಗಬೇಕೆನ್ನುವುದು ಎಲ್ಲರೂ

ಒಪ್ಪುವ ಮಾತೇ. ಆದರೆ ನಿಘಂಟು ಬಹಳ ತೊಡಕಿನ ಕೆಲಸ. ಅಚ್ಚುಮಾಡುವ ಮೊದಲು ೮-೧೦ ಸಲ ಪ್ರೂಫಿನಲ್ಲಿ ತಿದ್ದುಪಾಟು ನಡೆಯುತ್ತಿದೆ. ಅದನ್ನು ಕಡಿಮೆಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ವರ್ಷಕ್ಕೊಂದು ಸಂಚಿಕೆ ಬರುತ್ತಿದ್ದುದು ಈಗ ಆರು ತಿಂಗಳಿಗೊಂದರಂತೆ ಬರುತ್ತಿದೆ. ಇನ್ನು ಮುಂದೆ ಮೂರು ತಿಂಗಳಿಗೊಮ್ಮೆ ತರಲು ಪ್ರಯತ್ನಿಸುತ್ತೇವೆ - ಸಂಪಾದಕ ಸಮಿತಿಯವರೆಲ್ಲಾ ದೊಡ್ಡ ವಿದ್ವಾಂಸರು, ಕಾಲವ್ಯವಧಾನವಿಲ್ಲದವರು. ಅವರನ್ನು ಬಿಟ್ಟರೆ ಬೇರೆ ಯಾರೂ ಸಿಗಲಾರರು. ಬೇಕಾದ ಪ್ರಯತ್ನ ನಡೆಸಿ ನಿಘಂಟನ್ನು ಬೇಗ ತರಲು ಪ್ರಯತ್ನಿಸೋಣ. ಆದರೆ ಅದು ಬೇರೆ ಕಡೆ ಅಚ್ಚಾಗುವಂತೆ ಮಾಡುವುದು ಬೇಡ."

ಶ್ರೀ ಕೋಟಿ ಭಾಸ್ಕರರಾಯರು: ನಮ್ಮಲ್ಲಿ ಯಾರೂ ಒಂದು ಒಳ್ಳೆಯ ಮಾತನ್ನಾಡಲಿಲ್ಲವೆಂದು ಹೇಳಿದಿರಿ. ನಮಗೆ ನಿಮ್ಮ ವಿಚಾರದಲ್ಲಿ, ನಿಮ್ಮ ಕಾರ್ಯ ನಿರ್ವಹಣೆಯಲ್ಲಿ ಪರಿಷತ್ತಿನಲ್ಲಿ ಆದರ ಗೌರವವಿದೆ. ಆದರೆ ಅಂಕಿ ಅಂಶಗಳನ್ನು ಚರ್ಚೆಮಾಡುವಾಗ ಹೀಗೆ ಆಗುವುದು ಸಹಜ. ಅದಕ್ಕಾಗಿ ತಾವು ಬೇಜಾರು ಪಟ್ಟುಕೊಳ್ಳಬೇಡಿ ಎಂದು ಹೇಳಿ ಸದಸ್ಯರ ಅಚ್ಚಾದ ಹೆಸರುಗಳ ಹಿಂದೆ 'ಶ್ರೀ' ಎನ್ನುವುದು ಅಚ್ಚಾಗಿಲ್ಲ. ಅದನ್ನು ಸೇರಿಸಿರಿ ಎಂದು ಸೂಚಿಸಿದರು. ಅಧ್ಯಕ್ಷರು ಒಪ್ಪಿಕೊಂಡರು.

ಶ್ರೀ ತೋ. ಸು. ಸುಬ್ರಹ್ಮಣ್ಯಂ ಅವರು ವರದಿ ಒಪ್ಪಬಹುದೆಂದು ಸೂಚಿಸಿದರು. ಶ್ರೀ ಕೆ. ಎನ್. ಶ್ರೀಹರಿಯವರು ಅದನ್ನು ಅನುಮೋದಿಸಿದರು. ೧೯೬೭ರ ವರದಿ, ಲೆಕ್ಕಪತ್ರಗಳು ಮತ್ತು ೧೯೬೮ರ ಅಂದಾಜು ಪತ್ರಿಕೆಗಳನ್ನು ಮತಕ್ಕೆ ಹಾಕಿದಾಗ ಎಲ್ಲ ಸದಸ್ಯರು ಪರವಾಗಿಯೂ ಒಬ್ಬರು ವಿರೋಧವಾಗಿಯೂ ಮತ ನೀಡಿದರು. ಅವು ಸ್ವೀಕೃತವಾದ ಬಗ್ಗೆ ಅಧ್ಯಕ್ಷರು ಸದಸ್ಯರಿಗೆ ವಂದನೆಗಳನ್ನು ಸಮರ್ಪಿಸಿದರು.

ಮುಂದಿನ ವರ್ಷಕ್ಕೆ (೧೯೬೮) ಶ್ರೀ ಡಿ. ಎಸ್. ರಂಗನಾಥ್ ಅವರನ್ನು ಲೆಕ್ಕಪರಿಶೋಧಕರನ್ನಾಗಿ ನಿಯಮಿಸಬೇಕೆಂಬ ಸೂಚನೆಯನ್ನು ಸಭೆ ಅಂಗೀಕರಿಸಿತು.

ಸದಸ್ಯರಾದ ಶ್ರೀ ಜಿ. ಚನ್ನಪ್ಪ ಮತ್ತು ಶ್ರೀ ಯಳಸಂಗಿ ಕಲ್ಲಣ್ಣ ಸಭೆಯಲ್ಲಿ ಹಾಜರಿಲ್ಲದುದರಿಂದ ಅವರು ಕಳುಹಿಸಿದ್ದ ಸೂಚನೆಗಳನ್ನು ತೆಗೆದುಕೊಳ್ಳಲಾಗಲಿಲ್ಲ.

ಅಧ್ಯಕ್ಷರು ಕೊನೆಯದಾಗಿ ಚುನಾವಣೆಯ ಪ್ರಶ್ನೆಯನ್ನು ತೆಗೆದುಕೊಳ್ಳುವಂತೆ ಕೇಳಿದರು. ಕೋರ್ಟಿನಿಂದ ತೀರ್ಪಿನ ಪ್ರತಿ ದೊರಕದೆ ಇರುವುದನ್ನೂ ಸಾಮಾನ್ಯ ಸದಸ್ಯತ್ವದ ಅವಧಿ ಡಿಸೆಂಬರ್ ತಿಂಗಳ ಕೊನೆಗೆ ಮುಗಿಯುವುದನ್ನೂ, ಹೊಸದಾಗಿ ಸದಸ್ಯರಾಗಿ ಸೇರಲು ಅಭಿಮಾನಿಗಳಿಗೆ ಸಾಕಷ್ಟು ಕಾಲಾವಕಾಶ ಕೊಡಬೇಕೆಂಬ ವಿಷಯವನ್ನೂ ಮತ್ತು ಅಂತಹ ಸದಸ್ಯರಿಗೆ ಸದಸ್ಯತ್ವದ ಹಕ್ಕುಗಳು ದೊರೆಯಬೇಕಾದರೆ ಚುನಾವಣಾ ತಾರೀಖಿಗೆ ೯೦ ದಿವಸಗಳ ಹಿಂದಿನಿಂದಲಾದರೂ ಅವರು ಸದಸ್ಯರಾಗಿರಬೇಕೆಂಬುದನ್ನೂ ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ತೀರ್ಮಾನಿಸಬೇಕೆಂದು ಹೇಳಿದರು.

ಚರ್ಚೆಯಾದಮೇಲೆ ಶ್ರೀ ಜಿ. ಆರ್. ಸೀತಾರಾಂ ಅವರು ಈ ಕೆಳಗಿನ ನಿರ್ಣಯವನ್ನು ಸೂಚಿಸಿದರು:

"ಹೈಕೋರ್ಟಿನ ತೀರ್ಮಾನಕ್ಕೆ ವಿರೋಧವಿಲ್ಲದಂತೆ ಪರಿಷತ್ತಿನ ಚುನಾವಣೆಗಳನ್ನು ೧೯೬೯ನೆಯ ಏಪ್ರಿಲ್ ತಿಂಗಳು ಮುಗಿಯುವುದರೊಳಗಾಗಿ ನಡಸತಕ್ಕದ್ದೆಂದು ಈ ಸಕಲ ಸದಸ್ಯರ ಸಭೆಯು ಪರಿಷತ್ತಿನ ಕಾರ್ಯಸಮಿತಿಗೆ ಆದೇಶ ನೀಡುತ್ತದೆ."

ಶ್ರೀ ಮ. ನ. ರಾಮನರಸಯ್ಯನವರು ನಿರ್ಣಯವನ್ನು ಅನುಮೋದಿಸಿದರು.

ಸದಸ್ಯರ ಕರತಾಡನಗಳೊಡನೆ ಈ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಅನಂತರ ಗೌರವ ಕಾರ್ಯದರ್ಶಿಗಳಾದ ಶ್ರೀ ಹಂಪ. ನಾಗರಾಜಯ್ಯನವರು ಸಭೆ ನಡೆಯಲು ಸಹಕರಿಸಿದ, ಉತ್ಸಾಹದಿಂದ ಸಭೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರಿಗೂ ಪರಿಷತ್ತಿನ ಬಗ್ಗೆ ಅವರು ತೋರಿರುವ ಅಭಿಮಾನ ವಿಶ್ವಾಸಗಳಿಗಾಗಿ ವಂದನೆಗಳನ್ನು ಅರ್ಪಿಸಿದರು.

ಸಭೆ ಮುಕ್ತಾಯವಾಯಿತು.

ಭಾರತದಲ್ಲಿ ಶೈಕ್ಷಣಿಕ ಪ್ರಯೋಗ ; ಲೇ : ಕುಲಕರ್ಣಿ, ವಿ. ಎಸ್. ಪುಟ : ೫+೭೧ ; ಬೆಲೆ : ರೂ. ೦-೨೫, ೧೯೬೮.

ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು ; ಲೇ : ಕಲ್ಯಾಣಿಮಠ, ಪ್ರೊ|| ಎ. ಸಿ. ; ಪುಟ : ೬+೮೬ ; ಬೆಲೆ : ರೂ. ೦-೭೫, ೧೯೬೮.

ಹೊಟ್ಟೆಯ ಹುಣ್ಣು ; ಲೇ : ಶಂಕರ್, ಡಾ|| ಪಿ. ಎಸ್. ಪುಟ : ೭+೫೪ ; ಬೆಲೆ : ರೂ. ೦-೨೫, ೧೯೬೮.

ಹರಿಹರನ ಗಿರಿಜಾಕಲ್ಯಾಣ ; ಲೇ : ಶಿರೂರ, ಬಸವ ರಾಜ ; ಪುಟ : ೫+೭೨ ; ಬೆಲೆ : ರೂ. ೦-೨೫, ೧೯೬೮.

ಸಾಹಿತ್ಯ : ಸಂಪ್ರದಾಯ ಮತ್ತು ಹೊಸಮಾರ್ಗ ; ಲೇ : ಸೀತಾರಾಮಯ್ಯ, ವಿ. ; ಪುಟ : ೭+೧೪೫+೨ ; ಬೆಲೆ : ರೂ. ೪-೦೦, ೧೯೬೭.

ವಿಚಾರ ಸಾಹಿತ್ಯ ನಿರ್ಮಾಣ ; ಲೇ : ಕಾರಂತ, ಶಿವರಾಮ, ಕೆ. ; ಪುಟ : ೩+೮೧ ; ಬೆಲೆ : ರೂ. ೨-೦೦, ೧೯೬೮.

ಕರ್ಣಾಟಕ ವಿಶ್ವವಿದ್ಯಾಲಯ, ಧಾರವಾಡ

ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು ; ಲೇ : ಬೇಂದ್ರೆ, ದ.ರಾ. ; ಪುಟ : ೩+೮೧ ; ಬೆಲೆ : ರೂ. ೩-೦೦, ೧೯೬೮.

ಕನ್ನಡ ರಂಗಭೂಮಿಯ ಪುರೋಭಿವೃದ್ಧಿ ; ಲೇ : ರಂಗಾಚಾರ್ಯ ಆದ್ಯ ; ಪುಟ : ೨+೬೭ ; ಬೆಲೆ : ರೂ. ೨-೫೦, ೧೯೬೮.

ಅಯನ ಪತ್ರಿಕೆ

ಕರ್ನಾಟಕ ಭಾರತಿ ; (ರಾಜ್ಯೋದಯ ಸಂಚಿಕೆ) ಸಂ : ಶ್ರೀ ಸಿ. ಎಸ್. ಕಣವಿ, ಡೈರೆಕ್ಟರ್, ಎಕ್ಸ್‌ಟೆನ್‌ಷನ್ ಸರ್ವಿಸ್, ಕರ್ನಾಟಕ ಯೂನಿವರ್ಸಿಟಿ, ಧಾರವಾಡ ; ಪುಟ : ೪+೨೨೮+೬ ; ಬೆಲೆ : ವಾರ್ಷಿಕ ಸಂಚಿಕೆ ೫-೦೦, ಬಿಡಿ ಸಂಚಿಕೆ ೧ಕ್ಕೆ ೩-೦೦, ೧೯೬೮.

ನಾಟಕ

ಸುಖ ಸಂಸಾರ ; ಲೇ : ಪುಂಡಲೀಕ ಪಾಟೀಲ ; ಪ್ರ : ಕಲಾಶ್ರೀ ಸಾಹಿತ್ಯ ಕುಟೀರ, ಗಾಂಧಿನಗರ, ಬೆಳಗಾವಿ ; ಪುಟ : ೩೦ ; ಬೆಲೆ : ರೂ. ೦-೬೦, ೧೯೬೮.

ಕ್ಷೇತ್ರದರ್ಶನ (ಪ್ರವಾಸ)

ಬೆಳ್ಳಿಗಾವೆ ಕ್ಷೇತ್ರ ದರ್ಶನ ; ಲೇ : ವಿವಿಧ ಬರಹಗಾರರು ; ಪ್ರ : ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವ ಸಮಾರಂಭ ಆಚರಣಾ ಸಮಿತಿ, ಶಿವಮೊಗ್ಗ ಜಿಲ್ಲೆ ; ಪುಟ : ೪೮ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೧-೦೦, ೧೯೬೮.

ತುಂಗಾ ತರಂಗ ಭಾಗ ೧ ಮತ್ತು ೨ : ಸಂ ; ಜಯ ತೀರ್ಥ ರಾಜಪುರೋಹಿತ ; ಪ್ರ : ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಗಳು, ಕಲಬುರ್ಗಿ ; ಪುಟ : ೧೭೪ ; ಬೆಲೆ : ರೂ. ೧೯೬೮.

ತುಂಗಭದ್ರ ಒಂದು ಆಶಾಕಿರಣ ; ಸಂ : ನರಸಿಂಗ ರಾಯರು ; ಪ್ರ : ತುಂಗಭದ್ರಾ ಯೋಜನೆಯ ಆಡಳಿತಾಧಿ ಕಾರಿಗಳು, ಕಲಬುರ್ಗಿ ; ಪುಟ : ೧೦೫, ೧೯೬೮.

ಪ್ರಬಂಧ

ನನ್ನೂರು ; ಲೇ : ನಾಗೇಗೌಡ, ಎಚ್. ಎಲ್. ; ಪ್ರ : ದಿ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್, ಮಣಿಪಾಲ (ದ.ಕ.) ; ಪುಟ : ೧೭+೩೬೩ ; ಬೆಲೆ : ರೂ. ೮-೦೦, ೧೯೬೮.

ರಾಮಾಯಣ

ಶ್ರೀ ರಾಮಚರಿತ ಮಾನಸ (ತುಳಸೀ ರಾಮಾಯಣ) ; ಅನು : ಗುರುನಾಥ ಜೋಶಿ ; ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ; ಪುಟ : ೮+೨೭೬ ; ಆಕಾರ : ಕ್ರೌನ್ ಅಷ್ಟದಳ ; ಬೆಲೆ : ರೂ. ೪-೦೦, ೧೯೬೮.

Reg. No. B. G. 4—December 1968
Licensed to Post without pre-payment, Licence No. 1

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು-೧೮